ಸುಶ್ರುತ ಸಂಹಿತಾ

ಉತ್ತರಾರ್ಧ

ಅನುವಾದಕರು ಮತ್ತು ಸಂಪಾದಕರು :

ಪಂಡಿತ ಎಸ್. ಎಲ್. ಭಟ್ಟಾಚಾರ್ಯ

ಪರಿಷ್ಕರಣ : ಎಲ್. ಅಶ್ವತ್ಥನಾರಾಯಣ

7-10-1987

ಫೋನ್ : 607520
ವೇದಾಂತ ಬುಕ್ ಹೌಸ್,
ಉಮಾ ಟಾಕೀಸ್ ಬಳಿ,
ಬೆಂಗಳೂರು-560 018.

ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಸುಶ್ರುತ ಸಂಹಿತಾ (ಉತ್ತರಾರ್ಧ)

ಪಠ್ಯ ಪುಸ್ತಕಮಾಲೆ–೭೪

ಪ್ರಧಾನ ಸಂಪಾದಕರು
ಡಾ. ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.,

ಸುಶ್ರುತ ಸಂಹಿತಾ

(ಉತ್ತರಾರ್ಧ)

ಅನುವಾದಕರು : **ಪಂಡಿತ ಎಸ್. ಎಲ್. ಭಟ್ಟಾಚಾರ್ಯ**
ಪರಿಷ್ಕರಣ : ಎಲ್. ಅಶ್ವತ್ಥನಾರಾಯಣ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೭೩

SUSHRUTHA SAMHITA (part II), Translated and edited by Pandit N. L. Bhattacharya, revised by L. Ashwathanarayana, second edition published by the Director, Prasaranga, Mysore–570012, demy octavo, pp. xiv+1044 price Rs. 25–00

ಎರಡನೆಯ (ಮೈಸೂರು ವಿಶ್ವವಿದ್ಯಾನಿಲಯದಿಂದ ಮೊದಲನೆಯ) ಮುದ್ರಣ : ೧೯೭೩

ಹಕ್ಕುಗಳು : ಎಲ್. ಅಶ್ವತ್ಥನಾರಾಯಣ.

ಬೆಲೆ : ರೂ. 25–00

ಪ್ರಕಾಶಕರು : ಡೈರೆಕ್ಟರ್, ಪ್ರಸಾರಾಂಗ, ಮೈಸೂರು–570012

ಮುದ್ರಣ : ಶ್ರೀ ವಿಜಯಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು–570001

ಪ್ರಕಾಶಕರ ಮಾತು

ಭಾರತೀಯ ವೈದ್ಯ ಪದ್ಧತಿಯ ಆಧಾರ ಗ್ರಂಥಗಳಲ್ಲಿ ಒಂದು ಸುಶ್ರುತ ಸಂಹಿತಾ. ಮೊದಲನೆಯ ಸಾರಿಗೆ ಇದನ್ನು ಕನ್ನಡಕ್ಕೆ ಅನುವಾದ ಮಾಡಿ ಕನ್ನಡ ಲಿಪಿಯಲ್ಲಿ ಮೂಲ ಶ್ಲೋಕಗಳು, ಟಿಪ್ಪಣಿಗಳೊಂದಿಗೆ ಈಗ 25 ವರ್ಷಗಳ ಹಿಂದೆ ಪ್ರಕಟಿಸಲಾಗಿತ್ತು. ಆಯುರ್ವೇದ ವಿದ್ವಾನ್ ಪಂಡಿತ ಎನ್. ಎಲ್. ಭಟ್ಟಾಚಾರ್ಯರು ಬಹು ಪ್ರಯಾಸದಿಂದ ಅದನ್ನು ಸಂಪಾದಿಸಿ ಪ್ರಕಟಿಸಿದ್ದರು. ಆದರೆ ಆ ಮುದ್ರಣದ ಪ್ರತಿಗಳೆಲ್ಲವೂ ಮುಗಿದು ಹೋಗಿದ್ದು ಬಹಳ ವರ್ಷಗಳಿಂದ ವಿದ್ಯಾರ್ಥಿಗಳಿಗೆ ಪಠ್ಯ ಕೃತಿಯಿಲ್ಲದೆ ಬಹಳವಾಗಿ ಬೇಡಿಕೆ ಬರುತ್ತಿದ್ದುದರಿಂದ ಈಗ ಮತ್ತೆ ಅದನ್ನು ಪ್ರಕಟಿಸಿದೆ. ಮೈಸೂರಿನ ಆಯುರ್ವೇದ ಕಾಲೇಜಿನಲ್ಲಿ ದ್ರವ್ಯಗುಣ ವಿಭಾಗದಲ್ಲಿ ಉಪಪ್ರಾಧ್ಯಾಪಕರೂ, ಶ್ರೀ ಭಟ್ಟಾಚಾರ್ಯರ ಮಕ್ಕಳೂ ಆದ ಶ್ರೀ ಎಲ್. ಅಶ್ವತ್ಥನಾರಾಯಣ ಅವರು ಇದನ್ನು ಪ್ರಕಟಿಸಲು ಅನುಮತಿ ಕೊಟ್ಟಿರುವುದಕ್ಕಾಗಿ ಅವರಿಗೆ ಕೃತಜ್ಞರಾಗಿದ್ದೇವೆ.

ಪಠ್ಯಪುಸ್ತಕವಾದ್ದರಿಂದ ಬಹಳ ಬೇಗ ಮುದ್ರಣ ಮುಗಿಯಬೇಕಾಗಿ ಬಂದಿತು. ಈ ತುರುತನ್ನು ಅರಿತು ಕೇವಲ ಆರು ತಿಂಗಳ ಅವಧಿಯಲ್ಲಿ ಈ ಪುಸ್ತಕವನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟಿರುವ ಶ್ರೀ ಮೀರಾ ಪ್ರಿಂಟರ್ಸ್ ಒಡೆಯರಾದ ಶ್ರೀ ಕೆ. ಪಿ. ಪುಟ್ಟಸ್ವಾಮಿ ಅವರಿಗೆ ಕೃತಜ್ಞತೆಗಳು.

ಮೈಸೂರು-12
25-7-1973

ಪ್ರಭುಶಂಕರ
ನಿರ್ದೇಶಕ

ಅರಿಕೆ

ನಮಾಮಿ ಧನ್ವಂತರಿಮಾದಿದೇವಂ ಸುರಾಸುರೈರ್ವಂದಿತ ಪಾದ ಪದ್ಮಮ್
ಲೋಕೇಜರಾರುಗ್ಭಯಮೃತ್ಯುನಾಶಂ ದಾತಾರಮೀಶಂ ವಿವಿಧೌಷಧಾನಾಮ್

ಚಿಕಿತ್ಸಾಸ್ಥಾನ, ಕಲ್ಪಸ್ಥಾನ ಮತ್ತು ಉತ್ತರಸ್ಥಾನ ಎಂಬ ಮೂರು ಸ್ಥಾನಗಳಿಂದ ಕೂಡಿದ ಸುಶ್ರುತ ಸಂಹಿತೆಯ ಈ ಭಾಗವನ್ನು ಉತ್ತರಾರ್ಧವೆಂದು ಪರಿಗಣಿಸಿ ಮುದ್ರಿಸಲಾಗಿದೆ. ಚಿಕಿತ್ಸಾಸ್ಥಾನದಲ್ಲಿ 40 ಅಧ್ಯಾಯಗಳೂ 1886 ಶ್ಲೋಕಗಳೂ ಇವೆ. ಇದರಲ್ಲಿ ಶಲ್ಯ, ಶಾಲಾಕ್ಯ ತಂತ್ರಕ್ಕೆ ಸಂಬಂಧಿಸಿದ ವ್ರಣ, ಭಗ್ನ, ಅರ್ಶಸ್, ಅಶ್ಮರೀ, ಭಗಂದರ, ಕುಷ್ಠ, ಪ್ರಮೇಹ, ಪ್ರಮೇಹ ಪಿಡಿಕಾ, ಮಧುಮೇಹ, ಉದರ, ವಿಸರ್ಪ, ಗ್ರಂಥಿ ಇತ್ಯಾದಿ ರೋಗ ವಿಜ್ಞಾನ ಮತ್ತು ಅವುಗಳನ್ನು ನಿವಾರಣೆ ಮಾಡಬೇಕಾದ ಚಿಕಿತ್ಸಾಕ್ರಮಗಳನ್ನೂ, ಮೂಢಗರ್ಭ, ಶೂಕರೋಗ, ಮುಖರೋಗ, ಪಂಚಕರ್ಮರೋಗ ವಿಜ್ಞಾನ ಮತ್ತು ಚಿಕಿತ್ಸೆಗಳನ್ನೂ ವಿವರಿಸಲಾಗಿದೆ. ಸಾಮಾನ್ಯವಾಗಿ ಚಿಕಿತ್ಸಾಸ್ಥಾನದಲ್ಲಿ 30 ಅಧ್ಯಾಯಗಳು ಇರಬೇಕು. ಇಲ್ಲಿ 40 ಅಧ್ಯಾಯಗಳಲ್ಲಿ ವಿಷಯವನ್ನು ತಿಳಿಸಲಾಗಿದೆ. ಚರಕ ಸಂಹಿತೆಯಲ್ಲಾಗಲೀ, ಅಷ್ಟಾಂಗ ಹೃದಯ ಸಂಹಿತಾದಲ್ಲಾಗಲೀ ಇರುವ ಚಿಕಿತ್ಸಾಸ್ಥಾನದಲ್ಲಿ ಇಷ್ಟು ವಿಷಯಗಳು ಕಂಡುಬರುವುದಿಲ್ಲ.

ಆಹಾರ ಪಾನೀಯಗಳಲ್ಲಿ ವಿಷಬೆರೆತರೆ ಕಂಡುಬರುವ ಲಕ್ಷಣಗಳೂ ಮತ್ತು ಅದರ ನಿವಾರಣೆಗೆ ಮಾಡಬೇಕಾದ ಉಪಾಯಗಳೂ, ನಾಗರಹಾವು, ಇಲಿ, ಲೂತ, ಕೀಟಗಳು ಮುಂತಾದ ವಿಷಪ್ರಾಣಿಗಳು ಕಚ್ಚಿದರೆ ಉಂಟಾಗುವ ಲಕ್ಷಣಗಳೂ ಮತ್ತು ಅದರ ಪರಿಹಾರ ಕ್ರಮಗಳೂ "ಕಲ್ಪಸ್ಥಾನ"ದ 8 ಅಧ್ಯಾಯಗಳಲ್ಲಿ 560 ಶ್ಲೋಕಗಳಲ್ಲಿ ಹೇಳಲ್ಪಟ್ಟಿವೆ.

76 ವಿಧ ನೇತ್ರರೋಗಗಳು, 28 ಕರ್ಣರೋಗಗಳು, 31 ಮೂಗಿನ ರೋಗಗಳು, 11 ತಲೆಯ ರೋಗಗಳು, 72 ಬಾಯಿ ರೋಗಗಳು ಮತ್ತು ಶಿರಸ್‌ಗೆ ಸಂಬಂಧಿಸಿದ 67 ರೋಗಗಳೂ ಸೇರಿ 285 ರೋಗಗಳ ಲಕ್ಷಣ ಮತ್ತು ಅವುಗಳ ಚಿಕಿತ್ಸಾಕ್ರಮಗಳು ಒಟ್ಟು 66 ಅಧ್ಯಾಯಗಳು 2317 ಶ್ಲೋಕಗಳಲ್ಲಿ ಅಡಗಿ "ಉತ್ತರಸ್ಥಾನ" ವೆನಿಸಿಕೊಳ್ಳುತ್ತದೆ. 1961 ರಲ್ಲಿ ಈ ಉತ್ತರಾರ್ಧವನ್ನು ಮುದ್ರಿಸಿ ಪ್ರಕಟಿಸಲಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾದ ಶ್ರೀಮಾನ್ ಪ್ರಭುಶಂಕರ ಮತ್ತು ಉಪನಿರ್ದೇಶಕರಾದ ಶ್ರೀಮಾನ್ ಆರ್. ಎಲ್. ಅನಂತ ರಾಮಯ್ಯ ಇವರ ಸಹಕಾರದಿಂದ ಮತ್ತು ಮೈಸೂರಿನ ಸರ್ಕಾರಿ ಆಯುರ್ವೇದ

ಕಾಲೇಜಿನ ಪ್ರಿನ್ಸಿಪಾಲ್‌ರವರ ಉಪಯುಕ್ತ ಸಲಹೆ ಮತ್ತು ಪ್ರೋತ್ಸಾಹದಿಂದ ಇದು ಮುದ್ರಿತವಾಗಿ ಪ್ರಕಾಶಿತವಾಗಿದೆ. ಮೈಸೂರು ಶ್ರೀ ಮೀರಾ ಮುದ್ರಣಾಲಯದ ಮಾಲೀಕರಾದ ಶ್ರೀಮಾನ್ ಕೆ. ಪಿ. ಪುಟ್ಟಸ್ವಾಮಿಯವರ ಉತ್ಸಾಹ ಮತ್ತು ಜವಾಬ್ದಾರಿಯಿಂದ ಈ ಉತ್ತರಾರ್ಧವೂ ಕೂಡ ಬಲುಬೇಗ ಮುದ್ರಣವಾಗಿದೆ. ಇದರ ಮುದ್ರಣದಲ್ಲಿ ಸಹಕರಿಸಿರುವ ಸರ್ವರಿಗೂ ಭಗವಂತನು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಎಲ್. ಅಶ್ವತ್ಥನಾರಾಯಣ
ಅಸಿಸ್ಟೆಂಟ್ ಪ್ರೊಫೆಸರ್
(ದ್ರವ್ಯಗುಣ ವಿಭಾಗ)

ಜಿ. ಸಿ. ಐ. ಎಮ್. ಕಾಲೇಜು, ಮೈಸೂರು.
ತಾ 30.7.1973.

ವಿಷಯಾನುಕ್ರಮಣಿಕೆ

೧. ಚಿಕಿತ್ಸಾಸ್ಥಾನ

ಅಧ್ಯಾಯ		ಪುಟ
1.	ದ್ವಿವ್ರಣೀಯ ಚಿಕಿತ್ಸೆ	೧
2.	ಸದ್ಯೋವ್ರಣ ಚಿಕಿತ್ಸೆ	೩೧
3.	ಭಗ್ನ ಚಿಕಿತ್ಸೆ	೪೭
4.	ವಾತವ್ಯಾಧಿ ಚಿಕಿತ್ಸೆ	೬೦
5.	ಮಹಾವಾತವ್ಯಾಧಿ ಚಿಕಿತ್ಸೆ	೭೧
6.	ಅರ್ಶೋರೋಗ ಚಿಕಿತ್ಸೆ	೯೦
7.	ಅಶ್ಮರೀ ಚಿಕಿತ್ಸೆ	೧೦೫
8.	ಭಗಂದರ ಚಿಕಿತ್ಸೆ	೧೧೫
9.	ಕುಷ್ಠರೋಗ ಚಿಕಿತ್ಸೆ	೧೨೫
10.	ಮಹಾಕುಷ್ಠ ಚಿಕಿತ್ಸೆ	೧೪೧
11.	ಪ್ರಮೇಹ ಚಿಕಿತ್ಸೆ	೧೫೦
12.	ಪ್ರಮೇಹಪಿಡಕಾ ಚಿಕಿತ್ಸೆ	೧೫೭
13.	ಮಧುಮೇಹ ಚಿಕಿತ್ಸೆ	೧೬೩
14.	ಉದರ ಚಿಕಿತ್ಸೆ	೧೬೯
15.	ಮೂಢಗರ್ಭ ಚಿಕಿತ್ಸೆ	೧೭೯
16.	ವಿದ್ರಧಿ ಚಿಕಿತ್ಸೆ	೧೮೯
17.	ವಿಸರ್ಪ-ನಾಡೀ-ಸ್ತನರೋಗ ಚಿಕಿತ್ಸೆ	೧೯೬
18.	ಗ್ರಂಥಿ-ಅಪಚಿ-ಅರ್ಬುದ-ಗಳಗಂಡ ಚಿಕಿತ್ಸೆ	೨೦೫
19.	ವೃದ್ಧಿ-ಉಪದಂಶ-ಶ್ಲೀಪದ ಚಿಕಿತ್ಸೆ	೨೧೫
20.	ಕ್ಷುದ್ರರೋಗ ಚಿಕಿತ್ಸೆ	೨೨೫
21.	ಶೂಕರೋಗ ಚಿಕಿತ್ಸೆ	೨೩೪
22.	ಮುಖರೋಗ ಚಿಕಿತ್ಸೆ	೨೩೭
23.	ಶೋಫ ಚಿಕಿತ್ಸೆ	೨೪೯
24.	ಅನಾಗತಾಬಾಧ ಪ್ರತಿಷೇಧ ಚಿಕಿತ್ಸೆ	೨೫೪

ಅಧ್ಯಾಯ ಪುಟ

25. ಮಿಶ್ರಕ ಚಿಕಿತ್ಸೆ ೨೭೮
26. ಕ್ಷೀಣಬಲೀಯ ವಾಜೀಕರಣ ಚಿಕಿತ್ಸೆ ೨೮೪
27. ಸರ್ವೋಪಘಾತ ಶಮನೀಯ ರಸಾಯನಗಳು ೨೯೧
28. ಮೇಧಾಯುಷ್ಕಾಮೀಯ ರಸಾಯನ ಚಿಕಿತ್ಸೆ ೨೯೭
29. ಸ್ವಭಾವವ್ಯಾಧಿ ಪ್ರತಿಷೇಧನೀಯ ರಸಾಯನ ೩೦೫
30. ಸಂತಾಪನಾಶಕ ರಸಾಯನ ೩೧೪
31. ಸ್ನೇಹೌಪಯೋಗಿಕ ಚಿಕಿತ್ಸೆ ೩೨೨
32. ಸ್ವೇದಾವಚಾರಣೀಯ ಚಿಕಿತ್ಸೆ ೩೩೫
33. ವಮನ ವಿರೇಚನ ಸಾಧ್ಯೋಪದ್ರವ ಚಿಕಿತ್ಸೆ ೩೪೨
34. ವಮನ ವಿರೇಚನ ವ್ಯಾಪಚ್ಚಿಕಿತ್ಸೆ ೩೫೫
35. ನೇತ್ರಬಸ್ತಿ ಪ್ರಮಾಣ ವಿಭಾಗ ಚಿಕಿತ್ಸೆ ೩೬೬
36. ನೇತ್ರಬಸ್ತಿವ್ಯಾಪಚ್ಚಿಕಿತ್ಸೆ ೩೭೫
37. ಅನುವಾಸನ-ಉತ್ತರಬಸ್ತಿ ಚಿಕಿತ್ಸೆ ೩೮೪
38. ನಿರೂಹ ಬಸ್ತಿಕ್ರಮ-ಚಿಕಿತ್ಸೆ ೪೦೪
39. ಆತುರೋಪದ್ರವ ಚಿಕಿತ್ಸೆ ೪೨೫
40. ಧೂಮ-ನಸ್ಯ-ಕಬಳಗ್ರಹ ಚಿಕಿತ್ಸೆ ೪೩೪

೨. ಕಲ್ಪಸ್ಥಾನ

1. ಅನ್ನಪಾನ ರಕ್ಷಾಕಲ್ಪ ೪೫೧
2. ಸ್ಥಾವರ ವಿಷ ವಿಜ್ಞಾನ ೪೬೫
3. ಜಂಗಮ ವಿಷ ವಿಜ್ಞಾನ ೪೭೫
4. ಸರ್ಪದಷ್ಟ ವಿಷ ವಿಜ್ಞಾನ ೪೮೪
5. ಸರ್ಪದಷ್ಟ ವಿಷ ಚಿಕಿತ್ಸಾಕಲ್ಪ ೪೯೭
6. ದುಂದುಭಿಸ್ವನೀಯಕಲ್ಪ ೫೧೨
7. ಮೂಷಿಕ ವಿಷ ಚಿಕಿತ್ಸಾಕಲ್ಪ ೫೧೮
8. ಕೀಟವಿಷ ಕಲ್ಪ ೫೨೯

೩. ಉತ್ತರ ತಂತ್ರ

1. ಔಪದ್ರವಿಕಾಧ್ಯಾಯ ೫೫೩
2. ಸಂಧಿಗತರೋಗ ವಿಜ್ಞಾನ ೫೬೨

ಅಧ್ಯಾಯ			ಪುಟ
3.	ವರ್ತ್ಮಗತರೋಗ ವಿಜ್ಞಾನ	....	೫೬೪
4.	ಶುಕ್ಲಗತರೋಗ ವಿಜ್ಞಾನ	....	೫೬೯
5.	ಕೃಷ್ಣಗತರೋಗ ವಿಜ್ಞಾನ	....	೫೭೧
6.	ಸರ್ವಾಕ್ಷಿಗತರೋಗ ವಿಜ್ಞಾನ	....	೫೭೩
7.	ದೃಷ್ಟಿಗತರೋಗ ವಿಜ್ಞಾನ	....	೫೭೯
8.	ಚಿಕಿತ್ಸಾ ಪ್ರವಿಭಾಗ	....	೫೮೯
9.	ವಾತಾಭಿಷ್ಯಂದ ಚಿಕಿತ್ಸೆ	....	೫೯೨
10.	ಪಿತ್ತಾಭಿಷ್ಯಂದ ಚಿಕಿತ್ಸೆ	....	೫೯೭
11.	ಶ್ಲೇಷ್ಮಾಭಿಷ್ಯಂದ ಚಿಕಿತ್ಸೆ	....	೬೦೧
12.	ರಕ್ತಾಭಿಷ್ಯಂದ ಚಿಕಿತ್ಸೆ	....	೬೦೫
13.	ಲೇಖ್ಯರೋಗ ಚಿಕಿತ್ಸೆ	....	೬೧೪
14.	ಛೇದ್ಯರೋಗ ಚಿಕಿತ್ಸೆ	....	೬೧೭
15.	ಭೇದ್ಯರೋಗ ಚಿಕಿತ್ಸೆ	....	೬೧೯
16.	ಪಕ್ಷ್ಮಕೋಪರೋಗ ಚಿಕಿತ್ಸೆ	....	೬೨೪
17.	ದೃಷ್ಟಿಗತರೋಗ ಪ್ರತಿಷೇಧ	....	೬೨೬
18.	ಕ್ರಿಯಾಕಲ್ಪ ವಿಧಾನ	....	೬೪೪
19.	ನಯನಾಭಿಘಾತ ಚಿಕಿತ್ಸೆ	....	೬೬೨
20.	ಕರ್ಣಗತರೋಗ ವಿಜ್ಞಾನ	....	೬೬೮
21.	ಕರ್ಣಗತರೋಗ ಪ್ರತಿಷೇಧ	....	೬೭೧
22.	ನಾಸಾಗತರೋಗ ವಿಜ್ಞಾನ	....	೬೮೦
23.	ನಾಸಾಗತರೋಗ ಚಿಕಿತ್ಸೆ	....	೬೮೪
24.	ಪ್ರತಿಶ್ಯಾಯ ಚಿಕಿತ್ಸೆ	....	೬೮೭
25.	ಶಿರೋರೋಗ ವಿಜ್ಞಾನ	....	೬೯೪
26.	ಶಿರೋರೋಗ ಚಿಕಿತ್ಸೆ	....	೬೯೮
27.	ನವಗ್ರಹಾಕೃತಿ ವಿಜ್ಞಾನ	....	೭೦೫
28.	ಸ್ಕಂದಗ್ರಹ ಪ್ರತಿಷೇಧ	....	೭೧೦
29.	ಸ್ಕಂದಾಪಸ್ಮಾರಗ್ರಹ ಚಿಕಿತ್ಸೆ	....	೭೧೩
30.	ಶಕುನಿಗ್ರಹ ಪ್ರತಿಷೇಧ	....	೭೧೫
31.	ರೇವತೀಗ್ರಹ ಪ್ರತಿಷೇಧ	....	೭೧೭

ಅಧ್ಯಾಯ			ಪುಟ
32.	ಪೂತನಾಗ್ರಹ ಪ್ರತಿಷೇಧ	....	೭೧೯
33.	ಅಂಧಪೂತನಾಗ್ರಹ ಪ್ರತಿಷೇಧ	....	೭೨೧
34.	ಶೀತಪೂತನಾಗ್ರಹ ಪ್ರತಿಷೇಧ	....	೭೨೩
35.	ಮುಖಮಂಡಿಕಾಗ್ರಹ ಪ್ರತಿಷೇಧ	....	೭೨೫
36.	ನೈಗಮೇಷಗ್ರಹ ಪ್ರತಿಷೇಧ	....	೭೨೭
37.	ಗ್ರಹೋತ್ಪತ್ತಿ ವಿಚಾರ	....	೭೨೯
38.	ಯೋನಿವ್ಯಾಪಚ್ಚಿಕಿತ್ಸೆ	....	೭೩೩
39.	ಜ್ವರ ಚಿಕಿತ್ಸೆ	....	೭೩೯
40.	ಅತಿಸಾರ ಚಿಕಿತ್ಸೆ	....	೭೯೪
41.	ಶೋಷರೋಗ ಚಿಕಿತ್ಸೆ	....	೮೨೩
42.	ಗುಲ್ಮರೋಗ ಚಿಕಿತ್ಸೆ	....	೮೩೫
43.	ಹೃದ್ರೋಗ ಚಿಕಿತ್ಸೆ	....	೮೫೭
44.	ಪಾಂಡುರೋಗ ಚಿಕಿತ್ಸೆ	....	೮೬೧
45.	ರಕ್ತಪಿತ್ತ ಚಿಕಿತ್ಸೆ	....	೮೬೯
46.	ಮೂರ್ಛಾರೋಗ ಚಿಕಿತ್ಸೆ	....	೮೭೮
47.	ಪಾನಾತ್ಯಯ ಚಿಕಿತ್ಸಾ ವಿಧಾನಗಳು	....	೮೮೩
48.	ತೃಷ್ಣಾ ಚಿಕಿತ್ಸೆ	....	೮೯೯
49.	ಛರ್ದಿ ಚಿಕಿತ್ಸೆ	....	೯೦೬
50.	ಹಿಕ್ಕಾ (ಬಿಕ್ಕಳಿಕೆ) ಚಿಕಿತ್ಸೆ	....	೯೧೨
51.	ಶ್ವಾಸ ಚಿಕಿತ್ಸೆ	....	೯೧೮
52.	ಕಾಸ ಚಿಕಿತ್ಸೆ	....	೯೨೬
53.	ಸ್ವರಭೇದ ಚಿಕಿತ್ಸೆ	....	೯೩೫
54.	ಕ್ರಿಮಿರೋಗ ಚಿಕಿತ್ಸೆ	....	೯೩೯
55.	ಉದಾವರ್ತ ಚಿಕಿತ್ಸೆ	....	೯೪೫
56.	ವಿಷೂಚಿಕಾ ಚಿಕಿತ್ಸೆ	....	೯೫೪
57.	ಅರೋಚಕ ಚಿಕಿತ್ಸೆ	....	೯೫೮
58.	ಮೂತ್ರಾಘಾತ ಚಿಕಿತ್ಸೆ	....	೯೬೫
59.	ಮೂತ್ರಕೃಚ್ಛ್ರ ಚಿಕಿತ್ಸೆ	....	೯೭೬
60.	ಅಮಾನುಷೋಪಸರ್ಗ ಚಿಕಿತ್ಸೆ	....	೯೮೧

ಅಧ್ಯಾಯ   ಪುಟ

61. ಅಪಸ್ಮಾರ ಚಿಕಿತ್ಸೆ ೯೭೨
62. ಉನ್ಮಾದ ಚಿಕಿತ್ಸೆ ೧೦೦೦
63. ರಸಭೇದ ಚಿಕಿತ್ಸೆ ೧೦೦೬
64. ಸ್ವಸ್ಥವೃತ್ತ ಕಥನ ೧೦೧೨
65. ತಂತ್ರಯುಕ್ತಿ ವಿಚಾರ ೧೦೨೫
66. ದೋಷಭೇದ ವಿಕಲ್ಪ ೧೦೩೫

ಸುಶ್ರುತ ಸಂಹಿತಾ

(ಉತ್ತರಾರ್ಧ)

|| ಶ್ರೀ ಧನ್ವನ್ತರಯೇ ನಮಃ ||

ಸುಶ್ರುತಸಂಹಿತಾ—ಚಿಕಿತ್ಸಿತಸ್ಥಾನಮ್

ಪ್ರಥಮೋಽಧ್ಯಾಯಃ

ಅಥಾತೋ ದ್ವಿವ್ರಣೀಯ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಅರ್ಥ—ಶಾರೀರಸ್ಥಾನವನ್ನು ವಿವರಿಸಿದ ಮೇಲೆ ಚಿಕಿತ್ಸಾ ಸ್ಥಾನವನ್ನು ವಿವರಿಸಲು ಮನಸ್ಸುಮಾಡಿದ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶವನ್ನು ಮಾಡಿದಂತೆಯೇ ಈ ಅಧ್ಯಾಯದಲ್ಲಿ ದ್ವಿವ್ರಣ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಗದ್ಯ—ದ್ವೌ ವ್ರಣೌ ಭವತಃ ಶಾರೀರ ಆಗನ್ತುಕಶ್ಚೇತಿ । ತಯೋಃ ಶಾರೀರಃ ಪವನ ಪಿತ್ತ ಕಫ ಶೋಣಿತ ಸನ್ನಿಪಾತನಿಮಿತ್ತಃ ; ಆಗನ್ತುರಪಿ ಪುರುಷ ಪಶುಪಕ್ಷಿವ್ಯಾಳ ಸರೀಸೃಪ ಪ್ರಪತನ ಪೀಡನ ಪ್ರಹಾರಾಗ್ನಿ ಕ್ಷಾರ ವಿಷತೀಕ್ಷ್ಣೌಷಧ ಶಕಲ ಕಪಾಲಶೃಙ್ಗ ಚಕ್ರೇಷು ಪರಶು ಶಕ್ತಿಕುನ್ತಾದ್ಯಾಯುಧಾಭಿಘಾತನಿಮಿತ್ತಃ । ತತ್ರ ತುಲ್ಯೇ ವ್ರಣಸಾಮಾನ್ಯೇ ದ್ವಿಕಾರಣೋತ್ಥಾನಪ್ರಯೋಜನ ಸಾಮರ್ಥ್ಯಾತ್ ದ್ವಿವ್ರಣೀಯ ಇತ್ಯುಚ್ಯತೇ ||೩||

ಅರ್ಥ—ಮೊದಲು ರೋಗವನ್ನು ಪರೀಕ್ಷಿಸಿ ನಿರ್ಧರಮಾಡಿಕೊಂಡು ಅನಂತರ ಆ ರೋಗ ನಿವಾರಣೆಗೆ ಉಪಯುಕ್ತವಾದ ಚೂರ್ಣ ಕಲ್ಕ ಕ್ವಾಥ ಮೊದಲಾದ ಔಷಧ ಯೋಗಗಳನ್ನು ಸಿದ್ಧಮಾಡಿಟ್ಟುಕೊಂಡಮೇಲೆ ಜ್ಞಾನಪೂರ್ವಕವಾಗಿ ರೋಗಿಗೆ ಚಿಕಿತ್ಸಾ ಕ್ರಮದಂತೆ ಉಪಚರಿಸಬೇಕು. ಇದಕ್ಕಾಗಿಯೇ ನಿದಾನ ಸ್ಥಾನದಲ್ಲಿ ರೋಗಿಗಳಿಗೆ ಲಕ್ಷಣಪೂರ್ವಕವಾಗಿ ಉತ್ಪತ್ತಿ ಕಾರಣವನ್ನು ವಿವರಿಸಿ ರೋಗವು ಶರೀರದ ಯಾವ ಭಾಗದಲ್ಲಿ ಉಂಟಾಗಿರುತ್ತದೆಂಬ ಜ್ಞಾನವನ್ನು ಪಡೆಯಲು ಶಾರೀರಸ್ಥಾನವನ್ನು ವಿವರಿಸಲಾಯಿತು. ಅನಂತರ ಆ ರೋಗದ ಚಿಕಿತ್ಸೆಯನ್ನು ಪ್ರಾರಂಭಿಸಲು ಅಪೇಕ್ಷಿಸಿದ ಸುಶ್ರುತನು ಈ ತನ್ತ್ರವು ಶಲ್ಯಾಂಗ ಪ್ರಧಾನವಾದ್ದರಿಂದ ವ್ರಣ ಚಿಕಿತ್ಸೆಯನ್ನು ಮಾಡುವ ಅಭಿಲಾಷೆಯಿಂದ ಮೊದಲು ದ್ವಿವ್ರಣ ಸಂಬನ್ಧವಾದ ಚಿಕಿತ್ಸೆಯನ್ನು ವಿವರಿಸುತ್ತಾನೆ. ಚಿಕಿತ್ಸೆಯಲ್ಲಿ ಆಸುರೀ, ಮಾನುಷೀ, ದೈವೀ ಎಂದು ಮೂರು ವಿಧಾನಗಳುಂಟು ; ಪಾದರಸವೇ ಪ್ರಧಾನವಾಗಿದ್ದು ಲೋಹ-ರಸ-ಉಪರಸ-ರತ್ನ-ಉಪರತ್ನಾದಿಗಳ ಪ್ರಯೋಗದಿಂದ ರೋಗ ನಿವಾರಣೆ ಮಾಡುವ ವಿಧಾನಕ್ಕೆ ದೈವೀ ಚಿಕಿತ್ಸೆಯೆನ್ನುತ್ತಾರೆ ; ಶಸ್ತ್ರಕ್ಷಾರಾಗ್ನಿಗಳಿಂದ ಛೇದನ ಭೇದನ ವ್ಯಧನ ಬಂಧನಗಳನ್ನೂ ಕ್ಷಾರಾಗ್ನಿಗಳಿಂದ ದಾಹವನ್ನೂ (ಸುಡು

ವುದು) ಮಾಡುವ ಕರ್ಮಗಳಿಗೆ ಆಸುರೀ ಚಿಕಿತ್ಸೆಯೆನ್ನುತ್ತಾರೆ ; ಜಪ ಹೋಮ ನಿಯಮ ಪ್ರಾಯಶ್ಚಿತ್ತಾದಿಗಳ ಮೂಲಕವೂ ಷಡ್ರಸಯುಕ್ತ ಔಷಧಿಗಳ ಮೂಲಕವೂ ರೋಗ ನಿವಾರಣೆಯನ್ನು ಮಾಡುವ ವಿಧಾನಕ್ಕೆ ಮಾನುಷೀ ಚಿಕಿತ್ಸೆಯೆನ್ನುತ್ತಾರೆ ; ಈ ಕಲಿಯುಗ ದಲ್ಲಿ ಮನುಷ್ಯರಿಗೆ ಸ್ವಲ್ಪವೇ ಬಲವಿರುವುದರಿಂದ ಮಾನುಷೀಚಿಕಿತ್ಸೆಯೇ ಶ್ರೇಷ್ಠವಾದು ದೆಂದು ಕೆಲವರ ಮತವು. ಶರೀರದಲ್ಲಿ ಧಾತು ವೈಷಮ್ಯದಿಂದುಂಟಾದ ರೋಗಗಳನ್ನು ಧಾತುಸಾಮ್ಯತೆಯುಂಟಾಗುವಂತೆ ಮಾಡುವ ಪ್ರಯೋಗವೇ ಚಿಕಿತ್ಸೆಯೆಂದು ವೈದ್ಯರು ಅಭಿಪ್ರಾಯಪಡುತ್ತಾರೆ ; ಯಾವ ಪ್ರಯೋಗದಿಂದ ಪ್ರಕೋಪಗೊಂಡ ದೋಷಗಳು ಶಮನಗೊಂಡು ಮತ್ತಾವ ಬೇರೆ ರೋಗವನ್ನುಂಟುಮಾಡುವುದಿಲ್ಲವೋ ಅದೇ ಉತ್ತಮ ವಿಧಾನದ ಚಿಕಿತ್ಸೆಯು ; ಒಂದು ರೋಗವನ್ನು ಗುಣಪಡಿಸಿ ಮತ್ತೊಂದನ್ನುಂಟು ಮಾಡುವ ವಿಧಾನವು ಯೋಗ್ಯವಾದುದಲ್ಲ ; ಚಿಕಿತ್ಸೆಮಾಡುವ ವೈದ್ಯನಿಗೆ ಕೆಲವರಿಂದ ಅರ್ಥವೂ (ಹಣ), ಕೆಲವರೊಡನೆ ಸ್ನೇಹವೂ, ಕೆಲವು ಚಿಕಿತ್ಸೆಯಿಂದ ಧರ್ಮವೂ, ಕೆಲವು ಸಂದರ್ಭದಲ್ಲಿ ಪ್ರಖ್ಯಾತಿಯೂ, ಕೆಲವುಸಾರಿ ಕರ್ಮಕುಶಲತೆಯೂ ಉಂಟಾಗುತ್ತವೆ ಯಾಗಿ ಚಿಕಿತ್ಸೆ ಮಾಡುವುದರಿಂದ ಅನೇಕ ವಿಧ ಪ್ರಯೋಜನಗಳುಂಟಾಗುತ್ತವೆ. ರೋಗಿ, ದೂತ, ವೈದ್ಯ, ದೀರ್ಘಾಯುಸ್ಸು, ದ್ರವ್ಯಗಳು (ಚಿಕಿತ್ಸೋಪಕರಣಗಳು), ಸೇವಕ, ಯೋಗ್ಯೌಷಧಗಳು, ಇವೇ ಚಿಕಿತ್ಸೆಯ ಮುಖ್ಯಾಂಗಗಳೆಂದು ಹೇಳುತ್ತಾರೆ. ಅಹಿತಾಹಾರವಿಹಾರ ಸೇವನೆಯಿಂದ ವಾತಪಿತ್ತಕಫದೋಷಗಳು ಪ್ರಕೋಪಗೊಂಡು, ಬಹಿರ್ಮಾರ್ಗವನ್ನು ಸೇರಿ ನಿಜವ್ರಣಗಳನ್ನುಂಟುಮಾಡುತ್ತವೆ ; ದೊಣ್ಣೆ, ಕಲ್ಲು ಶಸ್ತ್ರಾದಿಗಳು ಶರೀರದ ಮೇಲೆ ಬೀಳುವುದು, ಹಗ್ಗ ಮೊದಲಾದವುಗಳಿಂದ ಶರೀರಾಂಗ ಗಳನ್ನು ಬಿಗಿಯುವುದು, ಮೇಲಕ್ಕೆ ನೆಗೆಯುವುದು, ಹಳ್ಳದ ಮೇಲೆ ಹಾರುವುದು, ಎತ್ತರ ದಿಂದ ಕೆಳಕ್ಕೆ ಬೀಳುವುದು. ಹುಲಿ, ಸಿಂಹಾದಿ ದುಷ್ಟ ಪ್ರಾಣಿಗಳು ಉಗುರಿನಿಂದ ಪರಚಿ ಹಲ್ಲುಗಳಿಂದ ಕಚ್ಚುವುದು, ವಿಷಸರ್ಪ ಮೊದಲಾದುವು ಕಡಿಯುವುದು ಇವೇ ಮೊದಲಾದ ಬಾಹ್ಯ ಉಪಘಾತಗಳಿಂದ ಮೊದಲು ವ್ಯಥೆಯುಂಟಾಗಿ ಅನಂತರ ವಾತಾದಿ ದೋಷಗಳು ಪ್ರಕೋಪಗೊಳ್ಳುತ್ತವೆ. ಈ ರೀತಿಯಲ್ಲಿ ಶಾರೀರ ಮತ್ತು ಆಗಂತು ಎಂಬುದಾಗಿ ಎರಡು ವಿಧ ವ್ರಣಗಳುಂಟಾಗುತ್ತವೆ. ಇವುಗಳ ಪೈಕಿ ಶಾರೀರ ವ್ರಣವು ವಾತ ಪಿತ್ತ ಕಫ ರಕ್ತ ಸನ್ನಿಪಾತ ದೋಷಗಳಿಂದುಂಟಾಗುತ್ತದೆ ; ಆಗಂತು ವ್ರಣವಾದರೋ ಮನುಷ್ಯ, ಪಶು, ಪಕ್ಷಿ, (ಕಾಗೆ, ಗರುಡ, ಹದ್ದು ಮೊದಲಾದುವು) ಹುಲಿ, ಕರಡಿ, ಸಿಂಹ ಮೊದಲಾದ ದುಷ್ಟಜಂತುಗಳು, ಕೃಷ್ಣಸರ್ಪ, ಮೀನು, ಮೊಸಳೆ ಮೊದಲಾದ ಹರಿದಾಡುವ ಪ್ರಾಣಿಗಳು ಕಚ್ಚುವುದರಿಂದಲೂ, ಹಾರುವುದು, ನೆಗೆಯುವುದು ಇತ್ಯಾದಿ ವ್ಯಾಪಾರ ಗಳಿಂದಲೂ, ದೊಣ್ಣೆ, ಕತ್ತಿ, ಕಲ್ಲು ಮೊದಲಾದುವು ಮೈಮೇಲೆ ಬೀಳುವುದರಿಂದಲೂ, ಪೆಟ್ಟಾಗುವುದು, ಶರೀರವನ್ನು ಬಲವಾಗಿ ಹಿಂಡುವುದು, ಹೊಡೆಯುವುದು, ಅಗ್ನಿಕ್ಷಾರ ಗಳಿಂದ ಸುಡುವುದು, ವಿಷ ಮತ್ತು ತೀಕ್ಷ್ಣೌಷಧಗಳು (ಗೇರು, ಕಳ್ಳಿಯ ಹಾಲು

ಮೊದಲಾದವು) ಮೈಮೇಲೆ ಬೀಳುವುದು, ಮೂಳೆಯ ಚೂರು, ಹೆಂಚಿನ ಬಕ್ಕರೆ, ಕೊಂಬು, ತ್ರಿಶೂಲ, ಚಕ್ರಾಯುಧ, ಬಾಣ, ಕೊಡಲಿ, ಮಚ್ಚು, ಭರ್ಜಿ, ಈಟಿ, ಭಲ್ಲೆ ಮೊದಲಾದ ಆಯುಧಗಳು ಶರೀರದ ಮೇಲೆ ಬೀಳುವುದರಿಂದುಂಟಾಗುತ್ತದೆ. ಈ ಎರಡು ವಿಧ ಕಾರಣಗಳೂ ಸಮಾನವಾದ ವ್ರಣವನ್ನುಂಟುಮಾಡುವುದರಿಂದ ದ್ವಿವ್ರಣೀಯ ವೆಂಬ ಹೆಸರುಂಟಾಗಿರುತ್ತದೆ.

ಗ—ಸರ್ವಸ್ಮಿನ್ನೇವಾಗನ್ತು ವ್ರಣೇ ತತ್ಕಾಲಮೇವ ಕ್ಷತೋಷ್ಮಣಃ ಪ್ರಸೃತಸ್ಯೋಪ ಶಮಾರ್ಥಂ ಚ ಮಧು ಘೃತ ಪ್ರಯೋಗ ಇತ್ಯೇತತ್ ದ್ವಿಕಾರಣೋತ್ಥಾನ ಪ್ರಯೋಜನಮ್, ಉತ್ತರಕಾಲಂ ತು ದೋಷೋಪಪ್ಲವವಿಶೇಷಾತ್ ಶಾರೀರವತ್ ಪ್ರತೀಕಾರಃ ||೪||

ದೋಷೋಪಪ್ಲವವಿಶೇಷಃ ಪುನಃ ಸಮಾಸತಃ ಪಞ್ಚದಶ ಪ್ರಕಾರಃ, ಪ್ರಸರಣ ಸಾಮ ರ್ಥ್ಯಾತ್ ಯಥೋಕ್ತೋ ವ್ರಣಪ್ರಶ್ನಾಧಿಕಾರೇ । ಶುದ್ಧತ್ವಾತ್ ಷೋಡಶ ಪ್ರಕಾರ ಇತ್ಯೇಕೇ ||೫|| ತಸ್ಯ ಲಕ್ಷಣಂ ದ್ವಿವಿಧಂ—ಸಾಮಾನ್ಯಂ ವೈಶೇಷಿಕಂ ಚ । ತತ್ರ ಸಾಮಾನ್ಯಂ ರುಕ್ । 'ವ್ರಣ' ಗಾತ್ರ ವಿಚೂರ್ಣನೇ, ವ್ರಣಯತೀತಿ ವ್ರಣಃ । ವಿಶೇಷ ಲಕ್ಷಣಂ ಪುನರ್ವಾ ತಾದಿ ಲಿಙ್ಗವಿಶೇಷಃ ||೬||

ಅರ್ಥ—ಎಲ್ಲಾ ವಿಧಗಳಾದ ಆಗಂತು ವ್ರಣಗಳಲ್ಲೂ ಅಭಿಘಾತದಿಂದ ರಕ್ತಸ್ರಾವ ವಾಗಲು ಪ್ರಾರಂಭಿಸಿದಾಗಲೇ ಶರೀರಸಂಘರ್ಷಣದಿಂದುಂಟಾದ ಶಾಖವು ಮುನ್ನುಗ್ಗುವು ದನ್ನು ತಡೆದು ಶಮನಗೊಳಿಸಲು ಪಿತ್ತಶಮನಗೊಳಿಸಲು ಮಾಡುವಂತೆಯೇ ಶೀತೋಪ ಚಾರವಿಧಾನಾನುಷ್ಠಾನವೂ, ಅಭಿಘಾತ ವಿಶೇಷಗಳಿಂದ ಎರಡು ಭಾಗ ಮಾಡಲ್ಪಟ್ಟ ಶರೀರಾವಯವಗಳು ಪುನಃ ಸೇರಿ ಒಂದಾಗುವಂತೆ ಮಾಡಲು ಜೇನುತುಪ್ಪ ಮತ್ತು ತುಪ್ಪಗಳ ಪ್ರಯೋಗವೂ ಇವೆರಡೂ (ಚ ಎಂಬ ಪದದಿಂದ ಗಾಯದಿಂದ ಹೊರಡುವ ಶಾಖವನ್ನು ಪರಿಹರಿಸಿ ಮಾರ್ಗದ ಕಡೆಯಿಂದ ಪ್ರಕೋಪ ಹೊಂದುವ ವಾತ ರಕ್ತಗಳನ್ನು ಶಮನಗೊಳಿಸುವುದಕ್ಕಾಗಿಯೂ) ಎರಡು ವಿಧಗಳಾದ ಕಾರಣಗಳಿಂದ ಉತ್ಪನ್ನವಾದ ವ್ರಣ ಪರಿಹಾರ ಕಾರಣಗಳೆಂದು ತಿಳಿಯಬೇಕು ; ೭ ದಿನಗಳವರೆಗೆ ಸದ್ಯೋವ್ರಣದ ಕಾಲವು ; ಅನಂತರ ವಾತಾದಿ ದೋಷಗಳಿಂದ ವ್ರಣವು ದೂಷಿಸಲ್ಪಡುವುದರಿಂದ ಈ ಆಗನ್ತುವ್ರಣಗಳಿಗೂ ಶಾರೀರ ವ್ರಣಗಳ ಚಿಕಿತ್ಸೆಯನ್ನೇ ಮಾಡಬೇಕು. ವಾತಾದಿ ದೋಷಗಳೂ ರಕ್ತವೂ ಪ್ರತ್ಯೇಕವಾಗಿಯೂ, ಮಿಶ್ರವಾಗಿಯೂ ೧೫ ಪ್ರಕಾರಗಳಾಗು ತ್ತವೆ. ಈ ಭೇದಗಳು ಅವುಗಳು ಶರೀರದಲ್ಲಿ ಮುನ್ನುಗ್ಗುವುದಕ್ಕೆ ತಕ್ಕಂತೆಯೇ ಆಗು ತ್ತವೆ ; ವ್ರಣಪ್ರಶ್ನಾಧ್ಯಾಯದಲ್ಲಿ ಈ ಭೇದಗಳನ್ನು ವಿವರಿಸಿರುತ್ತಾರೆ ; ಶುದ್ಧ ವ್ರಣವು ಒಂದು ವಿಧವಾದುದನ್ನು ಸೇರಿಸಿ ೧೬ ವಿಧ ವ್ರಣಗಳೆಂದು ಕೆಲವರು ಹೇಳುತ್ತಾರೆ ; ವ್ರಣವು ಸಾಮಾನ್ಯ ವಿಶೇಷಗಳೆಂಬ ಎರಡು ವಿಧ ಲಕ್ಷಣಗಳನ್ನುಳ್ಳದ್ದು ; ಎರಡು ವಿಧ ವ್ರಣಗಳಿಗೂ ಪೀಡೆಯುಂಟಾಗುವುದು ಸಮಾನಲಕ್ಷಣವು ; ವ್ರಣವೆಂದರೆ ಶರೀರ ವೈವರ್ಣ್ಯವನ್ನುಂಟುಮಾಡಿ ಚಿಕಿತ್ಸೆ ಮಾಡಿ ಗುಣಪಡಿಸಿದರೂ ಹರಿದುಹೋದ ಶರೀರ

ಭಾಗಗಳು ಒಂದಾಗಿ ಸೇರಿಕೊಂಡರೂ ರೋಗಿಯು ಬದುಕಿರುವವರೆಗೂ ವ್ರಣದಿಂದ ಉಂಟಾದ ಕಲೆಯು ಚರ್ಮದಿಂದ ಹೋಗುವುದೇ ಇಲ್ಲವಾದ್ದರಿಂದಲೇ 'ವ್ರಣ' ಎಂದು ಹೆಸರಾಯಿತು ; ವಾತಾದಿ ದೋಷಲಕ್ಷಣಗಳೇ ವ್ರಣದಲ್ಲಿ ಕಂಡುಬರುವ ವಿಶೇಷ ಲಕ್ಷಣಗಳೆಂದು ತಿಳಿಯಬೇಕು ; ಇವು ಅಶುದ್ಧ ವ್ರಣಗಳು ; ಸಕಲ ದೋಷ ಲಕ್ಷಣಗಳೂ ಇಲ್ಲದವು ಶುದ್ಧವ್ರಣಗಳು. ಇವು ೧೫ ವಿಧಗಳು :—ವಾತ, ಪಿತ್ತ, ಕಫ, ರಕ್ತ, ವಾತಪಿತ್ತ, ವಾತಕಫ, ಪಿತ್ತಕಫ, ವಾತರಕ್ತ, ಪಿತ್ತರಕ್ತ, ಕಫಶೋಣಿತ, ವಾತಪಿತ್ತರಕ್ತಗಳು, ವಾತಕಫರಕ್ತ, ಪಿತ್ತಕಫರಕ್ತ, ತ್ರಿದೋಷಗಳು, ವಾತಪಿತ್ತಕಫರಕ್ತಗಳು.

೧—ತತ್ರ ಶ್ಯಾವಾರುಣಾಭಸ್ತನುಃ ಶೀತಃ ಪಿಚ್ಛಿಲೋಽಲ್ಪಸ್ರಾವೀ ರೂಕ್ಷಃ ಚಟಚಟಾಯನಶೀಲಃ ಸ್ಫುರಣಾಯಾಮ ತೋದಭೇದವೇದನಾಬಹುಳೋ ನಿರ್ಮಾಂಸಶ್ಚೇತಿ ವಾತಾತ್.

ಕ್ಷಿಪ್ರಜಃ ಪೀತನೀಲಾಭಃ ಕಿಂಶುಕೋದಕಾಭೋಷ್ಣಸ್ರಾವೀ ದಾಹಪಾಕ ರಾಗ ವಿಕಾರೀ ಪೀತಪಿಡಕಾಜುಷ್ಟಶ್ಚೇತಿ ಪಿತ್ತಾತ್.

ಪ್ರತತಚಣ್ಡಕಣ್ಡೂಬಹುಳಃ ಸ್ಥೂಲೋ ಘನಃ ಸ್ತಬ್ಧಸಿರಾಸ್ನಾಯುಜಾಲಾವತತಃ ಕಠಿನಃ ಪಾಣ್ಡ್ವವಭಾಸೋ ಮನ್ದವೇದನಃ ಶುಕ್ಲಶೀತಸಾನ್ದ್ರಪಿಚ್ಛಿಲಾಸ್ರಾವೀ ಗುರುಶ್ಚೇತಿಕಫಾತ್.

ಪ್ರವಾಳದಳನಿಚಯಪ್ರಕಾಶಃ ಕೃಷ್ಣಸ್ಫೋಟಪಿಡಕಾಜಾಲೋಪಚಿತಸ್ತುರಙ್ಗಸ್ಥಾನಗನ್ಧಃ ಸವೇದನೋ ಧೂಮಾಯನಶೀಲೋ ರಕ್ತಸ್ರಾವೀ ಪಿತ್ತಲಿಙ್ಗಶ್ಚೇತಿ ರಕ್ತಾತ್ ;

ತೋದದಾಹಧೂಮಾಯನ ಪ್ರಾಯಃ ಪೀತಾರುಣಾಭಾಸಸ್ತದ್ವರ್ಣಸ್ರಾವೀ ಚೇತಿ ವಾತಪಿತ್ತಾಭ್ಯಾಮ್.

ಕಣ್ಡೂಯನಶೀಲಃ ಸನಿಸ್ತೋದೋ ದಾರುಣೋ ಮುಹುರ್ಮುಹುಃ ಶೀತಪಿಚ್ಛಿಲಸ್ರಾವೀ ಚೇತಿ ವಾತಶ್ಲೇಷ್ಮಭ್ಯಾಮ್.

ಅರ್ಥ—ಅವುಗಳ ಪೈಕಿ ಹೊಗೆಯ ಬಣ್ಣ, ಬಿಳುಪು ಮಿಶ್ರವಾದ ಕೆಂಪು ಬಣ್ಣವುಳ್ಳ ತೆಳುವಾದ, ತಣ್ಣಗೆ ಅಂಟಂಟಾಗಿ ಸ್ವಲ್ಪ ಸ್ರಾವವಿರುವ ರೂಕ್ಷವಾದ ಚಟಚಟವೆಂದು ಸದ್ದಾಗುತ್ತಾ ಮೇಲಕ್ಕೆ ಅದುರುವುದು, ಚುಚ್ಚುವುದು, ಕೊರೆಯುವುದು ಮೊದಲಾದ ವಾತವೇದನೆಯುಳ್ಳ ಮಾಂಸರಹಿತವಾದ ವ್ರಣವು ವಾತಜನ್ಯವೆಂದೂ ;

ಬಲು ಬೇಗ ವ್ರಣವುಂಟಾಗಿ ಹಳದಿ, ನೀಲಿ ಬಣ್ಣವುಳ್ಳುದಾಗಿ ಮುತ್ತುಗದ ಕಷಾಯದ ಹಾಗೆ ಇದ್ದು ಬಿಸಿಯಾದ ದ್ರವಸ್ರಾವವುಳ್ಳದಾಗಿ ಉರಿಯುತ್ತಲೂ ಪಾಕವಾಗಿಯೂ ಕೆಂಪುವರ್ಣವುಳ್ಳದ್ದಾಗಿ ಹಳದಿ ಬಣ್ಣದ ಬೊಕ್ಕೆಗಳಿಂದ ಆವರಿಸಲ್ಪಟ್ಟಿದ್ದರೆ ಪಿತ್ತಜವೆಂದೂ, ಅಗಲವಾಗಿ ಹರಡಿ ಅತ್ಯಂತ ನವೆಯಿಂದ ಕೂಡಿ ದಪ್ಪನಾಗಿಯೂ ಗಟ್ಟಿಯಾಗಿಯೂ ಚಲನವಿಲ್ಲದೆ, ಸಿರೆ, ಸ್ನಾಯುಗಳ ಬಲೆಯಂತೆ ಹೆಣೆದುಕೊಂಡು ಗಟ್ಟಿಯಾಗಿ ಬಿಳುಪಾಗಿ

ಸ್ವಲ್ಪ ನೋವುಳ್ಳದಾಗಿ ಬಿಳುಪಾಗಿ ತಣ್ಣಗಿರುವ ಅಂಟಾದ ಸ್ರಾವದಿಂದ ಕೂಡಿ ಭಾರವಾಗಿದ್ದರೆ ಕಫಜನ್ಯವೆಂದೂ ;

ಹವಳದ ಕುಡಿಗಳಿಂದ ವ್ಯಾಪ್ತವಾದಂತೆ ಕರಿಗುಳ್ಳಿ ಬೊಕ್ಕೆಗಳ ಸಮೂಹದಿಂದ ಮುಚ್ಚಲ್ಪಟ್ಟು ಕುದುರೆಯ ಲಾಯದ ವಾಸನೆಯಂತೆ ನೋವಿನಿಂದ ಕೂಡಿದ, ಹೊಗೆ ಹೊರಕ್ಕೆ ಹೊರಟಂತೆ ತೋರುವ ರಕ್ತವನ್ನು ಸುರಿಸುತ್ತಾ ಪಿತ್ತದೋಷ ಲಕ್ಷಣಗಳಿದ್ದರೆ ರಕ್ತಜನ್ಯವೆಂದೂ ;

ಚುಚ್ಚುವುದೂ, ಉರಿಯುವುದೂ, ಹೊಗೆ ಹೊರಟಂತಾಗುವುದೂ, ಹಳದಿ, ರಕ್ತ ಮಿಶ್ರವಾದ ಬಿಳುಪು ಬಣ್ಣವುಳ್ಳದಾಗಿ ಅದೇ ಬಣ್ಣದ ಸ್ರಾವವುಳ್ಳದಾಗಿದ್ದರೆ ವಾತಪಿತ್ತ ಜನ್ಯವೆಂದೂ ;

ನವೆ, ಒಡೆತ, ಕಾಠಿನ್ಯತೆಗಳುಳ್ಳದಾಗಿ ಕ್ಷಣಕ್ಷಣಕ್ಕೂ ತಣ್ಣಗೂ ಗರಣೆ ಗರಣೆಯಾಗಿಯೂ ಕೀವನ್ನು ಸುರಿಸುತ್ತಿದ್ದರೆ ವಾತಕಫಜನ್ಯವೆಂದೂ ;

ಗ—ಗುರುಃ ಸದಾಹಃ ಉಷ್ಣಃ ಪೀತಪಾಣ್ಡುಸ್ರಾವೀಚೇತಿಪಿತ್ತಶ್ಲೇಷ್ಮಭ್ಯಾಮ್ ; ರೂಕ್ಷಸ್ತನುಸ್ತೋದಬಹುಳಃ ಸುಪ್ತ ಇವ ಚ ರಕ್ತಾರುಣಾಭಸ್ತದ್ವರ್ಣಸ್ರಾವೀಚೇತಿವಾಸಶೋಣಿತಾಭ್ಯಾಮ್ ; ಘೃತ ಮಣ್ಡಾಭೋ ಮೀನಧಾವನ ತೋಯಗನ್ಧಿರ್ಮೃದುರ್ವಿಸರ್ಪ್ಯೃಷ್ಣ ಕೃಷ್ಣಸ್ರಾವೀಚೇತಿ ಪಿತ್ತಶೋಣಿತಾಭ್ಯಾಮ್ ; ರಕ್ತೋ ಗುರುಃ ಪಿಚ್ಛಿಲಃ ಕಣ್ಡೂಪ್ರಾಯಃ ಸ್ಥಿರೋ ರಕ್ತಪಾಣ್ಡುಸ್ರಾವೀಚೇತಿ ಶ್ಲೇಷ್ಮಶೋಣಿತಾಭ್ಯಾಮ್ ; ಸ್ಫುರಣತೋದದಾಹಧೂಮಾಯನ ಪ್ರಾಯಃ ಪೀತತನುರಕ್ತಸ್ರಾವೀ ಚೇತಿ ವಾತಪಿತ್ತಶೋಣಿತೇಭ್ಯಃ, ಕಣ್ಡೂಸ್ಫುರಣ ಚುಮಚುಮಾಯನಪ್ರಾಯಃ ಪಾಣ್ಡುಘನರಕ್ತಾ ಸ್ರಾವೀ ಚೇತಿ ವಾತಶ್ಲೇಷ್ಮಶೋಣಿತೇಭ್ಯಃ ; ದಾಹಪಾಕರಾಗ ಕಣ್ಡೂಪ್ರಾಯಃ ಪಾಣ್ಡುಘನರಕ್ತಾಸ್ರಾವೀ ಚೇತಿ ಶ್ಲೇಷ್ಮಪಿತ್ತಶೋಣಿತೇಭ್ಯಃ : ತ್ರಿವಿಧವರ್ಣವೇದನಾಸ್ರಾವ ವಿಶೇಷೋಪೇತಃ ಪವನಪಿತ್ತ ಕಫೇಭ್ಯಃ ; ನಿರ್ದಹನ ನಿರ್ಮಥನ ಸ್ಫುರಣತೋದ ದಾಹಪಾಕರಾಗ ಕಣ್ಡೂಸ್ವಾಪ ಬಹುಳೋ ನಾನಾವರ್ಣವೇದನಾ ಸ್ರಾವ ವಿಶೇಷೋಪೇತಃ ಪವನ ಪಿತ್ತಕಫಶೋಣಿತೇಭ್ಯಃ ; ಜಿಹ್ವಾತಲಾಭೋ ಮೃದುಃ ಸ್ನಿಗ್ಧಃ ಶ್ಲಕ್ಷ್ಣೋ ವಿಗತವೇದನಃ ಸುವ್ಯವಸ್ಥಿತೋ ನಿರಾಸ್ರಾವಶ್ಚೇತಿ ಶುದ್ಧೋವ್ರಣ ಇತಿ ||೭||

ಅರ್ಥ—ಭಾರವಾಗಿ ಉರಿಯುಳ್ಳದಾಗಿ ಬಿಸಿಯಾಗಿ ಹಳದಿ ಮತ್ತು ಬಿಳುಪು ವರ್ಣದ ಪೂಯಸ್ರಾವವಾಗುತಿದ್ದರೆ ಪಿತ್ತಶ್ಲೇಷ್ಮಜನ್ಯವು ; ರೂಕ್ಷವಾಗಿ ತೆಳ್ಳಗೆ ಚುಚ್ಚುವಿಕೆ ಹೆಚ್ಚಾಗಿದ್ದು ಸ್ಪರ್ಶಜ್ಞಾನವಿಲ್ಲದೆ ರಕ್ತ ಮತ್ತು ಬಿಳುಪು ಮಿಶ್ರವಾದ ಕೆಂಪುವರ್ಣವುಳ್ಳದಾಗಿ ಅದೇ ವರ್ಣದ ಕೀವನ್ನು ಸುರಿಸುತ್ತಿದ್ದರೆ ವಾತರಕ್ತ ಜನ್ಯವು ; ತಿಳಿಯಾದ ತುಪ್ಪದಂತೆಯೂ ಮೀನು ತೊಳೆದ ನೀರಿನ ವಾಸನೆಯುಳ್ಳದಾಗಿಯೂ ಮೆತ್ತಗಿದ್ದು ಮುಂದೆ ಮುಂದೆ ಚಲಿಸುತ್ತಾ ಕರಿಯ ಬಣ್ಣದ ಕೀವನ್ನು ಸೋರಿಸುತಿದ್ದರೆ ಪಿತ್ತರಕ್ತಜನ್ಯವು ; ಕೆಂಪಗೆ ಭಾರವಾಗಿ ಅಂಟಂಟಾಗಿ ನವೆಯುಳ್ಳದಾಗಿಯೂ ಚಲನೆಯಿಲ್ಲದೆ ಕೆಂಪು ಮತ್ತು ರಕ್ತ ಮಿಶ್ರವಾದ ಬಿಳಿಯ ವರ್ಣದ ಕೀವನ್ನು ಸುರಿಸುತಿದ್ದರೆ ಕಫರಕ್ತಜನ್ಯವು ; ಒಳಗೆ

ಅದುರುವಿಕೆ, ಚುಚ್ಚುವಿಕೆ, ಉರಿ ಹೊಗೆ ಹೊರಡುವಂತೆ ತೋರುವ ಹಳದಿ ಬಣ್ಣದ ತೆಳುವಾದ ರಕ್ತಸ್ರಾವವಿದ್ದರೆ ವಾತಪಿತ್ತ ರಕ್ತಜನ್ಯವು ; ನವೆ, ಅದುರುವಿಕೆ, ಸಾಸಿವೆಯ ಕಲ್ಕವನ್ನು ಲೇಪಿಸಿದರೆ ಉಂಟಾಗುವಂತೆ ಚುಮು ಚುಮುಗುಟ್ಟುತ್ತಾ ರಕ್ತಮಿಶ್ರವಾದ ಬಿಳುಪು ವರ್ಣದ ಗಟ್ಟಿಯಾದ ರಕ್ತಸ್ರಾವವುಳ್ಳದಾದರೆ ವಾತಕಫ ರಕ್ತಜನ್ಯವು ; ಉರಿ, ಪಾಕ, ಕೆಂಪುಬಣ್ಣ, ನವೆಗಳು ಅಧಿಕವಾಗಿದ್ದು ಪಾಂಡುವರ್ಣದ ಘನವಾದ ರಕ್ತಸ್ರಾವ ವಿದ್ದರೆ ಕಫಪಿತ್ತ ರಕ್ತಜನ್ಯವು, ತ್ರಿದೋಷಗಳ ವರ್ಣಗಳೂ ವೇದನೆಗಳೂ ಸ್ರಾವಗಳೂ ಇದ್ದರೆ ತ್ರಿದೋಷಜನ್ಯವೆಂದೂ, ಅಧಿಕವಾದ ಉರಿ, ಅಧಿಕ ಮಥನ ಮಾಡಿದಂತೆ (ಕಡೆದಂತೆ) ನೋವು, ಅದುರುವಿಕೆ, ಚುಚ್ಚುವಿಕೆ, ಉರಿಪಾಕ, ಕೆಂಪುಬಣ್ಣ, ನವೆ, ಸ್ಪರ್ಶ ಹಾನಿ ಇವುಗಳು ಅಧಿಕವಾಗಿದ್ದು ನಾನಾ ಬಣ್ಣಗಳೂ, ವೇದನೆಗಳೂ, ವಿವಿಧ ಸ್ರಾವಗಳೂ ಇದ್ದರೆ ತ್ರಿದೋಷಗಳೂ ಮತ್ತು ರಕ್ತವೂ ಮಿಶ್ರವಾಗಿ ಉಂಟಾಗಿರುತ್ತೆಂದೂ ; ನಾಲಿಗೆಯ ತಳದಂತೆ ಸ್ವಚ್ಛವಾಗಿ ಮೆತ್ತಗೂ, ಹೊಳಪುಳ್ಳದಾಗಿ, ನುಣುಪಾಗಿ ನೋವಿಲ್ಲದೆ ಹಳ್ಳ ತಗ್ಗುಗಳಿಲ್ಲದೆಯೂ ಸ್ರಾವವಿಲ್ಲದೆಯೂ ಇದ್ದರೆ ಶುದ್ಧವ್ರಣವೆಂದೂ ತಿಳಿಯಬೇಕು ; ಈ ರೀತಿಯಾಗಿ ಶುದ್ಧ ವ್ರಣವನ್ನೂ ಸೇರಿಸಿ ೧೬ ವಿಧ ಲಕ್ಷಣಗಳನ್ನೂ ವಿವರಿಸಲಾಗಿರುತ್ತೆ.

ಗ—ತಸ್ಯ ವ್ರಣಸ್ಯ ಷಷ್ಟಿರುಪಕ್ರಮಾಭವನ್ತಿ । ತದ್ಯಥಾ :—ಅಪಕರ್ಷಣಮಾಲೇಪಃ ಪರಿಷೇಕೋಽಭ್ಯಙ್ಗಃ ಸ್ವೇದೋವಿಮ್ಲಾಪನಮುಪನಾಹಃ ಪಾಚನಂ ವಿಸ್ರಾವಣಂ ಸ್ನೇಹೋ ವಮನಂ ವಿರೇಚನಂ ಛೇದನಂ ಭೇದನಂ ದಾರಣಂ ಲೇಖನಮೇಷಣಮಾಹರಣಂ ವ್ಯಧನಂ ವಿಸ್ರಾವಣಂ ಸೀವನಂ ಸನ್ಧಾನಂ ಪೀಡನಂ ಶೋಣಿತಾಸ್ಥಾಪನಂ ನಿರ್ವಾಪಣಮುತ್ಕಾರಿಕಾ ಕಷಾಯೋ ವರ್ತಿಃ ಕಲ್ಕಃ ಸರ್ಪಿಸ್ತೈಲಂ ರಸಕ್ರಿಯಾವಚೂರ್ಣನಂ ವ್ರಣಧೂಪನಮುತ್ಸಾದನಮವಸಾದನಂ ಮೃದುಕರ್ಮ ದಾರುಣಕರ್ಮ ಕ್ಷಾರಕರ್ಮಾಗ್ನಿಕರ್ಮ ಕೃಷ್ಣಕರ್ಮ ಪಾಣ್ಡುಕರ್ಮ ಪ್ರತಿಸಾರಣಂ ರೋಮಸಂಜನನಂ ಲೋಮಾಪಹರಣಂ ಬಸ್ತಿಕರ್ಮೋತ್ತರ ವಸ್ತಿಕರ್ಮ ಬನ್ಧಃ ಪತ್ರದಾನಂ ಕ್ರಿಮಿಘ್ನಂ ಬೃಂಹಣಂ ವಿಷಘ್ನ ಶಿರೋವಿರೇಚನಂ, ನಸ್ಯಂ, ಕವಳಧಾರಣಂ ಧೂಮೋ ಮಧು ಸರ್ಪಿರ್ಯನ್ತ್ರಮಾಹಾರೋ ಕ್ಷಾರವಿಧಾನಮಿತಿ ॥೮॥

ಅರ್ಥ—ವ್ರಣಕ್ಕೆ ೬೦ ವಿಧಗಳಾದ ಉಪಚಾರಗಳನ್ನು ಮಾಡಬೇಕಾಗುತ್ತದೆ. ಯಾವುವೆಂದರೆ-೧ ಊಟಮಾಡುವುದು, ೨ ಯಥೋಕ್ತೌಷಧಿಗಳನ್ನು ದ್ರವದಿಂದ ಅರೆದು ವ್ರಣದ ಮೇಲೆ ಬಳಿಯುವುದು, ೩ ಉಕ್ತಶೀತೋಷ್ಣಕಷಾಯಗಳನ್ನು ವ್ರಣದ ಮೇಲೆ ನಿದಾನವಾಗಿ ಸುರಿಯುವುದು, ೪ ತೈಲಾದಿಗಳನ್ನು ಮೇಲೆ ಬಳಿಯುವುದು, ೫ ಬೆವರು ಬರುವಂತೆ ಯತ್ನಿಸುವುದು, ೬ ಕೈಬೆರಳಿನಿಂದಾಗಲೀ ಗುಂಡುಸಲಾಕೆಯಿಂದಾಗಲೀ ವ್ರಣದ ಮೇಲೆ ಉಜ್ಜಿ ವ್ರಣವು ಹರಡುವಂತೆ ಮಾಡುವುದು, ೭ ಕಾದ ಹಿಟ್ಟನ್ನೋ ಅಪೂಪಾದಿಗಳನ್ನೋ ಬಿಸಿಮಾಡಿ ವ್ರಣದ ಮೇಲಿಟ್ಟು ಕಟ್ಟುವುದು, ೮ ವ್ರಣವು ಪಕ್ವವಾಗುವಂತೆ ಮಾಡುವುದು, ೯ ವ್ರಣದೊಳಗಿರುವ ಕೀವು ಮತ್ತು ದುಷ್ಟ ರಕ್ತಗಳನ್ನು ಹೊರಕ್ಕೆ ಸುರಿಸುವುದು, ೧೦ ರೋಗಿಗೆ ಸ್ನೇಹಪಾನ, ೧೧ ವಮನ, ೧೨ ವಿರೇಚನಗಳನ್ನು

ಮಾಡಿಸುವುದು, ೧೩ ವ್ರಣವನ್ನು ಕತ್ತರಿಸುವುದು, ೧೪ ಕೊರೆಯುವುದು ೧೫ ಒಡೆಯುವುದು ೧೬ ಕೆರೆಯುವುದು, ೧೭ ಕೀವನ್ನು ಏಷಣಿ, ಶಲಾಕೆಯಿಂದ ಹುಡುಕಿ ಹೊರಕ್ಕೆ ತರುವುದು ೧೮ ದುರ್ಮಾಂಸವನ್ನು ಕತ್ತರಿಸಿ ಹೊರಕ್ಕೆ ತರುವುದು, ೧೯ ಶಲಾಕೆಯ ತುದಿಯಿಂದ ಚುಚ್ಚುವುದು, ೨೦ ಕೀವನ್ನು ಸುರಿಸುವುದು ೨೧ ಹೊಲಿಯುವುದು, ೨೨ ಸ್ರಾವವನ್ನು ನಿಲ್ಲಿಸುವುದು ೨೩ ಹಿಸುಕುವುದು, ೨೪ ರಕ್ತವನ್ನು ತಡೆಗಟ್ಟುವುದು, ೨೫ ದಾಹೋಪಶಮನ ಮಾಡುವುದು, ೨೬ ಎಳ್ಳು, ಅಗಸೆಬೀಜ, ಸಾಸಿವೆ, ಮತ್ತು ಹರಳುಬೀಜಗಳನ್ನು ಶೇರಿಸಿದ ಉತ್ಕಾರಿಕೆಗಳನ್ನು ಅಥವಾ ಕಲ್ಕವನ್ನು ವ್ರಣಕ್ಕೆ ಲೇಪಿಸುವುದು ೨೭ ಈಶ್ವರಿ, ಅಂಕೋಲೆ, ಜಾಜಿ ಮೊದಲಾದ ಶೋಥಹರ ಕಷಾಯಗಳ ಸೇಕ ೨೮ ನಾರಂಬೇಳಿ, ಮಧುನಾಶಿನಿ ಮೊದಲಾದ ವ್ರಣಶೋಧನದ್ರವ್ಯಗಳನ್ನು ಸೇರಿಸಿದ ವರ್ತಿಪ್ರಯೋಗ, ೨೯ ಅಜಗನ್ಧಾದಿ ಶೋಧನ ದ್ರವ್ಯಗಳ ಕಲ್ಕಲೇಪನ. ೩೦ ಎಕ್ಕದ ಬೇರು, ತ್ರಿಫಲೆ, ಮತ್ತು ಶೋಧನದ್ರವ್ಯಗಳಿಂದ ತಯಾರಿಸಿದ ತುಪ್ಪ ೩೧ ಉತ್ತರಣೆ ಮೊದಲಾದ ಶೋಧನವರ್ತಿ ನಿರ್ದಿಷ್ಟ ದ್ರವ್ಯಗಳಿಂದ ತಯಾರಿಸಿದ ತೈಲವು ೩೨ ಸಾಲಸಾರಾದಿ ಗಣದ್ರವ್ಯ ಮತ್ತು ಇತರ ಶೋಧನದ್ರವ್ಯಗಳ ಕಷಾಯದಿಂದ ಗಟ್ಟಿಯಾಗಿ ಕಾಯಿಸಿದ ರಸಕ್ರಿಯೆ ೩೩ ಶೋಥಹರ ಚೂರ್ಣದಿಂದ ವ್ರಣದಮೇಲೆ ಚುಮುಕಿಸುವುದು, ೩೪ ಗುಗ್ಗುಳು, ರಾಳು ಮೊದಲಾದ ವ್ರಣಹರ ದ್ರವ್ಯಗಳಿಂದ ವ್ರಣಕ್ಕೆ (ಧೂಪ) ಹೊಗೆ ತಾಕಿಸುವುದು, ೩೫ ಶುಷ್ಕವ್ರಣಗಳಿಗೆ ಉತ್ತರಣೆ ಅಶ್ವಗಂಧಾದಿಗಳನ್ನು ಲೇಪಿಸಿ ಮೃದುಮಾಡಿ ಬಗ್ಗಿಸುವುದು (ಮಾಂಸ ವೃದ್ಧಿ ಮಾಡುವುದು) ೩೬ ದುಷ್ಟ ಮಾಂಸಗಳನ್ನು ಕತ್ತರಿಸುವುದು, ೩೭ ಮೆತ್ತಗೆ ಮಾಡುವುದು, ೩೮ ಗಟ್ಟಿಯಾಗುವಂತೆ ಮಾಡುವುದು, ೩೯ ಕ್ಷಾರ ೪೦ ಅಗ್ನಿಗಳಿಂದ ದುರ್ಮಾಂಸವನ್ನು ಸುಡುವುದು, ೪೧ ಶುಕ್ಲತ್ವ ನಿವಾರಣೆಗಾಗಿ ಕೃಷ್ಣಕರ್ಮ, ೪೨ ಕಪ್ಪಾಗಿದ್ದರೆ ಬೆಳ್ಳಗೆ ಮಾಡುವುದು, ೪೩ ಪ್ರತಿಸಾರಣ, ೪೪ ರೋಮವುಂಟಾಗುವಂತೆಯೂ, ೪೫ ರೋಮವು ಉದುರುವಂತೆಯೂ ಮಾಡುವುದು, ೪೬ ಬಸ್ತಿಕರ್ಮ, ೪೭ ಮೂತ್ರಾಘಾತಾದಿ ದೋಷಜನ್ಯ ವ್ರಣದಲ್ಲಿ ಉತ್ತರ ಬಸ್ತಿ, ೪೮ ಬಂಧನ, ೪೯ ದೋಷಾನುಸಾರ ಔಷಧ ಪತ್ರಗಳಿಂದ ವ್ರಣಬಂಧನವು, ೫೦ ಕ್ರಿಮಿಘ್ನಕರ್ಮ, ೫೧ ಬೃಂಹಣ, ೫೨ ವಿಷಹರಣ ಕರ್ಮ, ೫೩ ಶಿರೋವಿರೇಚನ, ೫೪ ನಸ್ಯ, ೫೫ ಕವಳ ಗ್ರಹ, ೫೬ ಧೂಮಪಾನ, ೫೭ ಮಧುಸರ್ಪಿಗಳನ್ನು ಲೇಪಿಸಿ ವ್ರಣದ ಬಿಸಿಯನ್ನು ತಗ್ಗಿಸಿ ಸಂಧಾನ ಮಾಡುವುದು, ೫೮ ಯಂತ್ರದಾನ ಮಾಡಿ ವ್ರಣಬಂಧನ, ೫೯ ವ್ರಣಿತನಿಗೆ ಪಥ್ಯಾಹಾರ ಸೇವನೆ, ೬೦ ಗ್ರಹರಾಕ್ಷಾದ್ಯಿಗಳಿಂದ ವ್ರಣರಕ್ಷೋಪಾಯ ಎಂದು ೬೦ ವ್ರಣೋಪಚಾರಗಳು ಹೇಳಿವೆ.

೧—ತೇಷು ಕಷಾಯೋ ವರ್ತಿಃ ಕಲ್ಕಃ ಸರ್ಪಿಸ್ತೈಲಂ ರಸಕ್ರಿಯಾಽವಚೂರ್ಣನಮಿತಿ ಶೋಧನರೋಪಣಾನಿ । ತೇಷು ಅಷ್ಟೌ ಶಸ್ತ್ರಕೃತ್ಯಾಃ । ಶೋಣಿತಾಸ್ಥಾಪನಂ ಕ್ಷಾರೋಽಗ್ನಿರ್ಯನ್ತ್ರಮಾಹಾರೋರಕ್ಷಾವಿಧಾನಂ ಬನ್ಧವಿಧಾನಂ ಚೋಕ್ತಾನಿ । ಸ್ನೇಹಸ್ವೇದನ ವಮನವಿರೇಚನ

ವಸ್ತ್ಯುತ್ತರವಸ್ತಿ ಶಿರೋವಿರೇಚನ ನಸ್ಯಧೂಮಕಬಳಧಾರಣಾನ್ಯನ್ಯತ್ರ ವಕ್ಷ್ಯಾಮಃ । ಯದನ್ಯದವಶಿಷ್ಟಮುಪಕ್ರಮಜಾತಂ ತದಿಹ ವಕ್ಷ್ಯಾಮಸ್ತೇ ॥೯॥

ಅರ್ಥ—ಅವುಗಳ ಪೈಕಿ ಕಷಾಯ, ವರ್ತಿ, ಕಲ್ಕ, ಸರ್ಪಿ, ತೈಲ, ರಸಕ್ರಿಯಾ, ಅವಚೂರ್ಣನಗಳು ಶೋಧದ ರೋಪಣಗಳು । ಛೇದನ, ಭೇದನ, ಲೇಖನ, ಏಷಣ, ಆಹರಣ, ವ್ಯಧನ, ವಿಸ್ರಾವಣ, ಸೀವನಗಳೆಂಬ ಎಂಟು ವಿಧ ಉಪಕ್ರಮಗಳು ಶಸ್ತ್ರದಿಂದ ಮಾಡಲ್ಪಡತಕ್ಕವು ; ಶೋಣಿತಾಸ್ಥಾಪನವು (ಕಷಾಯ, ಶೀತಕ್ರಿಯಾ, ಪಚನದಹನಗಳೆಂಬ ೪ ವಿಧಗಳು ಸೂತ್ರಸ್ಥಾನದಲ್ಲಿ ಶೋಣಿತ ವರ್ಣನೀಯಾಧ್ಯಾಯದಲ್ಲಿ) ವಿವರಿಸಲ್ಪಟ್ಟಿವೆ ; ಪಾನೀಯ ಪ್ರತಿಸಾರಣ ಭೇದದಿಂದ, ೨ ವಿಧಕ್ಷಾರಗಳನ್ನೂ ವಿವರಿಸಲಾಗಿರುತ್ತದೆ ; ಅಗ್ನಿಕರ್ಮ, ಯಂತ್ರವಿಧಾನ, ಆಹಾರ ವಿಧಿಗಳನ್ನು ವ್ರಣಿತೋಪಾಸನೀಯಾಧ್ಯಾಯದಲ್ಲೂ, ರಕ್ಷಾ ವಿಧಾನವು (ಗುಗ್ಗುಳು ಮೊದಲಾದ ಧೂಪಗಳು, ಲಕ್ಷ್ಮೀಗುಹಾತಿ ಗುಹಾದ್ಯೌಷಧ ಧಾರಣಗಳೆಂದು) ೨ ವಿಧ ಕೃತ್ಯಗಳ ನಿವಾರಣೆಗಾಗಿ ಮಂತ್ರೋಚ್ಚಾರಣೆ ಮೊದಲಾದವುಗಳನ್ನು ಅಗ್ರೋಪಹರಣೀಯಾಧ್ಯಾಯದಲ್ಲೂ, ಬನ್ಧನ ವಿಧಾನವನ್ನು ವ್ರಣಾಲೇಪನಾಧ್ಯಾಯದಲ್ಲೂ ಹೇಳಿರುತ್ತೇವೆ ; ಸ್ನೇಹನ, ಸ್ವೇದನ, ವಮನ, ವಿರೇಚನ, ಬಸ್ತಿ, ಉತ್ತರಬಸ್ತಿ, ಶಿರೋವಿರೇಚನ, ನಸ್ಯ, ಧೂಮ, ಕಬಳ ಗ್ರಹಗಳನ್ನು ಪಂಚಕರ್ಮನಿರ್ದೇಶದಲ್ಲಿ ಹೇಳಲಾಗುತ್ತದೆ ; ಉಳಿದ ೨೮ ವಿಧಗಳಾದ ಉಪಕ್ರಮಗಳನ್ನು ನಿನಗೋಸ್ಕರ ಇಲ್ಲಿ ಹೇಳುತ್ತೇವೆ.

ಗ.—ಷಡ್ವಿಧಃ ಪ್ರಾಗುಪದಿಷ್ಟಃ ಶೋಫಃ, ತಸ್ಯೈಕಾದಶೋಪಕ್ರಮಾಭವನ್ತಿ ಅಪತರ್ಪಣಾದಯೋ ವಿರೇಚನಾನ್ತಾಃ, ತೇ ಚ ವಿಶೇಷೇಣ ಶೋಥಪ್ರತೀಕಾರಾವರ್ತನ್ತೇ, ವ್ರಣಭಾವಮಾಪನ್ನಸ್ಯ ಚ ನ ವಿರುಧ್ಯನ್ತೇ, ಶೇಷಾಸ್ತುಪ್ರಾಯೇಣ ವ್ರಣಪ್ರತೀಕಾರಹೇತವ ಏವ ॥೧೦॥
ಅಪತರ್ಪಣಸ್ತು ಆದ್ಯ ಉಪಕ್ರಮ ಏಷ ಸರ್ವಶೋಫಾನಾಂ ಸಾಮಾನ್ಯಃ ಪ್ರಧಾನತಮಶ್ಚ ॥೧೧॥

ಅರ್ಥ—ಹಿಂದೆ ಆರು ವಿಧ ಶೋಫಗಳನ್ನೂ ಹೇಳಿರುತ್ತೇವೆ ; ಅವುಗಳಿಗೆ ಮೊದಲು ಅಪತರ್ಪಣವೂ ಅನಂತರ ವಿರೇಚನದವರೆಗಿನ ೧೧ ವಿಧ ಚಿಕಿತ್ಸಾವಿಧಾನಗಳೂ ಉಂಟು. ಅವುಗಳು ವಿಶೇಷವಾಗಿ ಶೋಫಹರಗಳಾಗುತ್ತವೆ ; ವ್ರಣವಾಗಿ ಪರಿಣಮಿಸುವ ಶೋಫಕ್ಕೆ ವಿರೋಧಕಾರಿಗಳಲ್ಲ ; ಉಳಿದವು ವ್ರಣನಿವಾರಣೆಯನ್ನು ಮಾಡತಕ್ಕವುಗಳೇ ಆಗಿವೆ ; ಲಂಘನವು (ಆಹಾರವನ್ನು ಸೇವನೆ ಮಾಡದಿರುವುದು) ೧೫ ವಿಧಗಳಾದ ಶೋಫಗಳಿಗೂ ಮೊದಲು ಅನುಸರಿಸಬೇಕಾದ ಚಿಕಿತ್ಸಾ ವಿಧಾನವು. ಮತ್ತು ರೋಗವನ್ನು ಬೇಗ ಗುಣಮಾಡುವುದರಿಂದ ಮುಖ್ಯವಾದ ಚಿಕಿತ್ಸೆಯು.

ಟಿಪ್ಪಣಿ : ವಾತಶೋಥದ ಆಮಾವಸ್ಥೆಯಲ್ಲಿ ಲಂಘನ ಮಾಡಿಸಬೇಕು.

ದೋಷೋಚ್ಛ್ರಾಯೋಪಶಾನ್ತ್ಯರ್ಥಂ ದೋಷಾನದ್ಧಸ್ಯ ದೇಹಿನಃ ।

ಅವೇಕ್ಷ್ಯದೋಷಂ ಪ್ರಾಣಂ ಚ ಕಾರ್ಯಂ ಸ್ಯಾದಪತರ್ಪಣಮ್ ॥೧೨॥

ಅರ್ಥ—ಆಮದೋಷವು ಅತಿಪ್ರಮಾಣದಿಂದ ಸಂಚಯವಾಗಿರುವ ಪುಷ್ಟವಾದ ಶರೀರವುಳ್ಳ ಮನುಷ್ಯನಿಗೆ ದೋಷದ ಆಧಿಕ್ಯವನ್ನು ನಿವಾರಿಸುವುದಕ್ಕಾಗಿ ದೋಷಬಲವನ್ನೂ ರೋಗಿಯ ಶಕ್ತಿಯನ್ನೂ ನಿರ್ಧರಿಸಿ ಲಂಘನವನ್ನು ಮಾಡಿಸಬೇಕು.

ಊರ್ಧ್ವಮಾರುತತೃಷ್ಣಾಕ್ಷುನ್ಮುಖಶೋಷಶ್ರಮಾನ್ವಿತೈಃ ।
ನ ಕಾರ್ಯಂ ಗರ್ಭಿಣೀ ವೃದ್ಧಬಾಲ ದುರ್ಬಲಭೀರುಭಿಃ ॥೧೩॥

ಅರ್ಥ—ಊರ್ಧ್ವವಾತ, ಹಸಿವೆ, ಬಾಯಾರಿಕೆ, ಮುಖ ಒಣಗಿ ಶ್ರಮವುಳ್ಳವರೂ, ಗರ್ಭಿಣಿ, ಬಾಲಕರು, ಮುದುಕರು, ಬಲಹೀನರು, ಅಂಜುಪುರುಕರು ಇವರುಗಳು ಉಪವಾಸವನ್ನು ಮಾಡಬಾರದು.

ಟಿಪ್ಪಣಿ : ಊರ್ಧ್ವಮಾರುತ-ಶ್ವಾಸಕಾಸಾದಿ ರೋಗಿಗಳು ; ಉದಾನವ್ಯಾನ ವಾಯುಗಳ ಪ್ರಕೋಪದಿಂದ ಊಟ ಮಾಡಿರಲಿ, ಹಸಿದುಕೊಂಡಿರಲಿ, ಮಲಗಿರಲಿ ಯಾರು ಅತಿಯಾಗಿ ತೇಗುತ್ತಾರೋ ಅವರನ್ನು ಊರ್ಧ್ವವಾತಪೀಡಿತರೆನ್ನುತ್ತಾರೆ ; ಇನ್ನು ಕೆಲವರು ಊರ್ಧ್ವವಾತವೆಂದರೆ ವಾತಕೃತ ಆಕ್ಷೇಪಕಾದಿ ರೋಗಗಳೆನ್ನುತ್ತಾರೆ ; ಶ್ರಮಾನ್ವಿತೈಃ ಎನ್ನುವುದಕ್ಕೆ ಕೆಲವರು "ಭ್ರಮಾನ್ವಿತೈಃ" ಎಂದು ಹೇಳುತ್ತಾರೆ ; ಭ್ರಮೆಯು ನಿರಾಮ ವಾತಪಿತ್ತಗಳಿಂದುಂಟಾಗುತ್ತದೆ ; ಆಮವಾತ ಪಿತ್ತಕೃತ ಮಾರ್ಗಾವರಣದಿಂದುಂಟಾದ ಭ್ರಮರೋಗದಲ್ಲಿ ಲಂಘನಮಾಡಿಸಬೇಕು.

ಶೋಫೇಷೂತ್ಥಿತಮಾತ್ರೇಷು ವ್ರಣೇಷೂಗ್ರರುಜೇಷು ಚ ।
ಯಥಾಸ್ವೈರೌಷಧೈರ್ಲೇಪಂ ಪ್ರತ್ಯೇಕಂ ಚೈವ ಕಾರಯೇತ್ ॥೧೪॥
ಯಥಾ ಪ್ರಜ್ವಲಿತೇ ವೇಶ್ಮನ್ಯಮ್ಬು ಸಾ ಪರಿಷೇಚನಮ್ ।
ಕ್ಷಿಪ್ರಂ ಪ್ರಶಮಯತ್ಯಗ್ನಿಮೇವಮಾಲೇಪನಂ ರುಜಃ ॥೧೫॥
ಪ್ರಹ್ಲಾದನೇ ಶೋಧನೇ ಚ ಶೋಫಸ್ಯ ಹರಣೇತಥಾ ।
ಉತ್ಸಾದನೇ ರೋಪಣೇಚ ಲೇಪಃ ಸ್ಯಾತ್ತು ತದರ್ಥಕೃತ್ ॥೧೬॥

ಅರ್ಥ—ಶೋಫವುಂಟಾದ ಕೂಡಲೇ ಹಾಗೆಯೇ ತೀವ್ರ ವೇದನೆಯುಳ್ಳ ವ್ರಣದಲ್ಲೂ ಆಯಾಯ ಔಷಧಿಗಳಿಂದ ತಯಾರಿಸಿದ ಲೇಪನವನ್ನು ಮಾಡಬೇಕು ; ಮನೆಯು ಬೆಂಕಿಯಿಂದ ಹತ್ತಿಕೊಂಡ ಕೂಡಲೇ ನೀರನ್ನು ಸುರಿದರೆ ಬೆಂಕಿಯು ತಣ್ಣಗಾಗುವಂತೆಯೇ ಆ ಲೇಪನದಿಂದ ನೋವು ನಿವಾರಣೆಯಾಗುವುದು ಮಾತ್ರವೇ ಅಲ್ಲ. ಸುಖವುಂಟಾಗುತ್ತದೆ ; ದೋಷರೂಪವಾದ ಕೀವೂ ದುಷ್ಟರಕ್ತವೂ ಸುರಿದು ವ್ರಣಶೋಧನೆಯಾಗುತ್ತದೆ ; ಶೋಫವು ಹೋಗಿಬಿಡುತ್ತದೆ, ದೋಷಗಳು ಆಳದಲ್ಲಿದ್ದರೆ ಲೇಪದಿಂದ ಮೇಲಕ್ಕೆ ತುಂಬಿಕೊಂಡು ಬರುತ್ತವೆ. ವ್ರಣವು ಮಾಯುತ್ತದೆ. "ಚ" ಎಂಬುದರಿಂದ ವ್ರಣಸ್ಥಾನದಲ್ಲಿ ಸರಿಯಾದ ಚರ್ಮದ ಬಣ್ಣವೇ ಉಂಟಾಗುತ್ತದೆ. ಇವುಗಳಿಂದ ಮನಃಶಾಂತಿಯೂ ಸುಖಾನುಭವವೂ ಉಂಟಾಗುತ್ತವೆ.

ಗ—ವಾತಶೋಫೇ ತು ವೇದನೋಪಶಮಾರ್ಥಂ ಸರ್ಪಿಸ್ತೈಲಧಾನ್ಯಾಮ್ಲ ಮಾಂಸರಸ ವಾತಹರೌಷಧನಿಃಕ್ವಾಥೈರಶೀತೈಃ ಪರಿಷೇಕಾ೯ ಕುರ್ವೀತ ; ಪಿತ್ತ ರಕ್ತಾಭಿಘಾತ ವಿಷನಿಮಿತ್ತೇಷು ಕ್ಷೀರಘೃತಮಧುಶರ್ಕರೋದಕೇಕ್ಷುರಸಮಧುರೌಷಧ ಕ್ಷೀರವೃಕ್ಷ ನಿಃಕ್ವಾಥೈರನುಷ್ಣೈಃ ಪರಿಷೇಕಾ೯ ಕುರ್ವೀತ ; ಶ್ಲೇಷ್ಮಶೋಫೇ ತು ತೈಲ ಮೂತ್ರಕ್ಷಾರೋದಕಸುರಾಶುಕ್ತ ಕಫಘ್ನೌಷಧನಿಃಕ್ವಾಥೈರಶೀತೈಃ ಪರಿಷೇಕಾ೯ ಕುರ್ವೀತ ॥೧೭॥ ಯಥಾಮ್ಬುಭಿಃ ಸಿಚ್ಯಮಾನಃ ಶಾನ್ತಿಮಗ್ನಿರ್ನಿಯಚ್ಛತಿ । ದೋಷಾಗ್ನಿರೇವಂ ಸಹಸಾ ಪರಿಷೇಕೇಣ ಶಾಮ್ಯತಿ ॥೧೮॥

ಅರ್ಥ—ವಾತಶೋಫದಲ್ಲಿ ವೇದನೆಯನ್ನು ನಿವಾರಣೆ ಮಾಡುವುದಕ್ಕಾಗಿ ತುಪ್ಪ, ತಿಲತೈಲ, ಕಲಗಚ್ಚು, ಮಾಂಸರಸ, ವಾತಹರೌಷಧ ದ್ರವ್ಯಗಳ ಕಷಾಯ ಇವುಗಳನ್ನು ಸುಖೋಷ್ಣವಾಗಿರುವಂತೆ ಮಾಡಿ ಶೋಫದ ಮೇಲೆ ನಿದಾನವಾಗಿ ಸುರಿಯಬೇಕು ; ಪಿತ್ತ, ರಕ್ತ, ಅಭಿಘಾತಗಳಿಂದುಂಟಾದ ಶೋಥದಲ್ಲಿ ಹಾಲು, ತುಪ್ಪ, ಜೇನುತುಪ್ಪ, ಸಕ್ಕರೆ ಮಿಶ್ರ ಮಾಡಿದ ನೀರು, ಕಬ್ಬಿನರಸ, ಮಧುರೌಷಧ ಕಷಾಯ, ಅತ್ತಿ, ಆಲ ಮೊದಲಾದ ಕ್ಷೀರ ವೃಕ್ಷಗಳ ಕಷಾಯವನ್ನು ತಣ್ಣಗೆಮಾಡಿ ಶೋಥದ ಮೇಲೆ ನಿದಾನವಾಗಿ ಸೇಚಿಸಬೇಕು ; ಕಫಶೋಫದಲ್ಲಿ ತೈಲ, ಗೋಮೂತ್ರ, ಕ್ಷಾರಮಿಶ್ರಮಾಡಿದ ನೀರು, ಸುರೆ, ಶುಕ್ತ, ಕಫ ಹರೌಷಧಗಳ ಕಷಾಯ ಇವುಗಳನ್ನು ಬಿಸಿಯಾಗಿರುವಂತೆ ಶೋಫದ ಮೇಲೆ ಪರಿಷೇಚನ ಮಾಡಬೇಕು (ನಿದಾನವಾಗಿ ಸುರಿಯುತ್ತಿರಬೇಕು.) ಬೆಂಕಿಯಮೇಲೆ ನೀರನ್ನು ಚುಮುಕಿಸುತ್ತಾ ಇದ್ದರೆ ಅದು ಶಮನವಾಗುವಂತೆಯೇ ಶೋಫದೊಳಗಿರುವ ದೋಷಾಗ್ನಿಯೂ ಹಾಗೆಯೇ ಪರಿಷೇಚನದಿಂದ ಬೇಗನೆ ಶಮನವಾಗುತ್ತದೆ.

ಗ—ಅಭ್ಯಙ್ಗಸ್ತು ದೋಷಮಾಲೋಕ್ಯೋಪಯುಕ್ತೋ ದೋಷೋಪಶಮಂ ಮೃದುತಾಂ ಚ ಕರೋತಿ ॥೧೯॥

ಸ್ವೇದವಿಮ್ಲಾಪನಾದೀನಾಂ ಕ್ರಿಯಾಣಾಂ ಪ್ರಾಕ್ಸ ಉಚ್ಯತೇ ।
ಪಶ್ಚಾತ್ಕರ್ಮಸು ಚಾದಿಷ್ಟಃ ಸ ಚ ವಿಸ್ರಾವಣಾದಿಷು ॥೨೦॥

ಅರ್ಥ—ದೋಷಪ್ರಕೋಪಗಳಿಗೆ ತಕ್ಕಂತೆ ಅಂದರೆ ವಾತ, ಕಫದೋಷಗಳಲ್ಲಿ ತೈಲ ದಿಂದಲೂ, ಪಿತ್ತ, ರಕ್ತ, ವಿಷಜನ್ಯ ಶೋಫಗಳಲ್ಲಿ ಶತಧೌತಾದಿ ಘೃತಗಳಿಂದಲೂ ಅಭ್ಯಂಗ ಮಾಡಿಸಿದರೆ ದೋಷಶಮನವಾಗುತ್ತದಲ್ಲದೆ ಮೃದುತ್ವವುಂಟಾಗುತ್ತದೆ ; ಅಭ್ಯಂಗವೆಂದರೆ ತೈಲಘೃತಾದಿಗಳಿಂದ ಮರ್ದನ ಮಾಡುವುದು ; ಈ ಅಭ್ಯಂಗವನ್ನು ಸ್ವೇದವಿಮ್ಲಾಪನ ಮೊದಲಾದ ಏಳುವಿಧ ವ್ರಣೋಪಕ್ರಮಗಳಿಗೆ ಮುಂಚೆಯೂ, ವಿಸ್ರಾವಣಾದಿ ಸೇಚನಾಂತ ಪಶ್ಚಾತ್ಕರ್ಮಗಳಲ್ಲಿಯೂ ಕೂಡ ಮಾಡಬೇಕು.

ರುಜಾವತಾಂ ದಾರುಣಾನಾಂ ಕಠಿನಾನಾಂ ತಥೈವ ಚ ।
ಶೋಫಾನಾಂ ಸ್ವೇದನಂ ಕಾರ್ಯಂ ಯೇ ಚಾಪ್ಯೇವಂ ವಿಧಾ ವ್ರಣಾಃ ॥೨೧॥

ಅರ್ಥ—ವಾತ ಕಫವೇದನೆಯಿಂದ ಕೂಡಿದ ಮತ್ತು ವಾತಪ್ರಕೋಪದಿಂದ ರೂಕ್ಷ ವಾಗಿಯೂ ಬಿರಿದು ಚೂರಾಗಿಯೂ ಗಟ್ಟಿಯಾಗಿಯೂ ಇರುವ ಶೋಫಗಳಿಗೂ, ಇದೇ ವಿಧಗಳಾದ ವ್ರಣಗಳಿಗೂ ಸ್ವೇದನ ಕರ್ಮವನ್ನು ಮಾಡಿಸಬೇಕು.

ಸ್ಥಿರಾಣಾಂ ರುಜತಾಂ ಮನ್ದಂ ಕಾರ್ಯಂ ವಿಮ್ಲಾಪನಂ ಭವೇತ್ ।
ಅಭ್ಯಜ್ಯಸ್ವೇದಯಿತ್ವಾತು ವೇಣುನಾ ವಾ ಶನೈಃಶನೈಃ ॥೨೨॥
ವಿಮರ್ದಯೇದ್ಭಿಷಕ್ ಪ್ರಾಜ್ಞಸ್ತಲೇನಾಂಗುಷ್ಠಕೇನ ವಾ ।

ಅರ್ಥ—ಬುದ್ಧಿವಂತನಾದ ವೈದ್ಯನು ಗಟ್ಟಿಯಾದ ಕಫಾಧಿಕ್ಯದಿಂದ ಸ್ವಲ್ಪವೇ ನೋವುಳ್ಳ ಶೋಫಗಳಿಗೆ ಅಭ್ಯಂಗಸ್ವೇದ ಕರ್ಮಗಳನ್ನು ಮಾಡಿಸಿದ ಮೇಲೆ ಬೆತ್ತದಿಂದಾಗಲೀ, ಅಂಗೈ ಅಂಗಾಲುಗಳಿಂದಲಾಗಲೀ ಹೆಬ್ಬೆಟ್ಟನಿಂದಾಗಲೀ ಶೋಫವನ್ನು ಸ್ವಲ್ಪ ಸ್ವಲ್ಪ ಬಿಟ್ಟುಬಿಟ್ಟು ಮರ್ದನ ಮಾಡುತ್ತಾ ಊದು ಕರಗುವಂತೆ ಮಾಡಬೇಕು ; ಈವಿಧಾನಕ್ಕೆ ವಿಮ್ಲಾಪನವೆಂದು ಹೆಸರು.

ಶೋಫಯೋರುಪನಾಹಂತು ಕುರ್ಯಾದಾಮವಿದಗ್ಧಯೋಃ
ಅವಿದಗ್ಧಃ ಶಮಂ ಯಾತಿ ವಿದಗ್ಧಃ ಪಾಕಮೇತಿ ಚ ॥೨೩॥

ಅರ್ಥ—ಆಮಾವಸ್ಥೆ, ವಿದಗ್ಧಾವಸ್ಥೆಯಲ್ಲಿರುವ ಶೋಫಗಳಿಗೆ ಉಪನಾಹವನ್ನು ಮಾಡಿಸಬೇಕು ; ಆಮಶೋಫವು ಶಮನವಾಗುತ್ತದೆ, ವಿದಗ್ಧಶೋಫವು ಪಕ್ವವಾಗುತ್ತದೆ.

ನಿವರ್ತತೇ ನ ಯಃ ಶೋಫೋ ವಿರೇಕಾನ್ತೈರುಪಕ್ರಮೈಃ ।
ತಸ್ಯ ಸಂಪಾಚನಂ ಕುರ್ಯಾತ್ ಸಮಾಪೃತ್ಯೌಷಧಾನಿ ತು ॥೨೪॥
ದಧಿತಕ್ರಸುರಾಶುಕ್ತಧಾನ್ಯಾಮ್ಲೈರ್ಯೋಜಿತಾನಿ ತು ।
ಸ್ನಿಗ್ಧಾನಿ ಲವಣೀಕೃತ್ಯ ಪಚೇದುತ್ಕಾರಿಕಾಂ ಶುಭಾಮ್ ॥೨೫॥
ಸೈರಣ್ಡ ಪತ್ರಯಾ ಶೋಫಂ ನಾಹಯೇದುಷ್ಣಯಾ ತಯಾ ।
ಹಿತಂ ಸಂಭೋಜನಂ ಚಾಪಿ ಪಾಕಾಯಾಭಿಮುಖೋ ಯದಿ ॥೨೬॥

ಅರ್ಥ—ಲಂಘನಾದಿ ವಿರೇಚನಾಂತವಾಗಿ ಮಾಡಿದ ವ್ರಣೋಪಕ್ರಮಗಳಿಂದ ಶೋಥವು ನಿವಾರಣೆಯಾಗದಿದ್ದರೆ ಶೋಥವು ಚೆನ್ನಾಗಿ ಪಾಕವಾಗುವಂತೆ ಪ್ರಯತ್ನಿಸಬೇಕು ; ಮಿಶ್ರಕಾಧ್ಯಾಯದಲ್ಲಿ ಹೇಳಿರುವಂತೆ ಸಮಭಾಗದಿಂದ ಶಣಬೀಜ ಮೂಲಕ ಬೀಜಾದಿಗಳನ್ನು ಅವುಗಳ ನಾಲ್ಕರಷ್ಟು ಪ್ರಮಾಣದಲ್ಲಿ ಮೊಸರು ಮೊದಲಾದ ದ್ರವ ದ್ರವ್ಯಗಳನ್ನೂ ಶೇರಿಸಿ ಕಲ್ಕಮಾಡಿ ಸ್ಪಷ್ಟವಾಗಿ ಲವಣವನ್ನು ಶೇರಿಸಿ ಉತ್ಕಾರಿಕೆಯನ್ನು (ಹೋಳಿಗೆ) ಬೇಯಿಸಿ ಉಪನಾಹಯೋಗ್ಯವಾಗಿರುವಂತೆ ತಯಾರಿಸಿ ಸುಖೋಷ್ಣವಾಗಿರುವಂತೆ ಹರಳೆಲೆಯ ಮೇಲಿಟ್ಟು ಅದನ್ನು (ವ್ರಣದ) ಶೋಫದ ಮೇಲೆ ಮುಚ್ಚಿ ಕಟ್ಟಬೇಕು ; ಶೋಫವು ಪಾಕಾವಸ್ಥೆಗೆ ಬರುವುದಾದರೆ ಹೆಚ್ಚಾಗಿ ಕಫವೃದ್ಧಿಯನ್ನು ಮಾಡದ ಉಷ್ಣ ಸ್ನಿಗ್ಧಗಳಾದ ಹಿತಕರಗಳಾದ ಆಹಾರಗಳನ್ನು ಭೋಜನ ಮಾಡಿಸಬೇಕು.

ಟಿಪ್ಪಣಿ : ಶಣಬಿನ ಬೀಜ ಮೂಲಂಗಿಯ ಬೀಜ ಮೊದಲಾದ ವ್ರಣಹರದ್ರವ್ಯಗಳನ್ನು ಮೊಸರು, ಮಜ್ಜಿಗೆ, ಸುರೆ, ಶುಕ್ತ, ಧಾನ್ಯಾಮ್ಲಗಳಲ್ಲೊಂದರಿಂದ ಅರೆದು ಕಲ್ಕಮಾಡಿ ತಕ್ಕಷ್ಟು ಲವಣವನ್ನು ಮಿಶ್ರಮಾಡಿ ಹೋಳಿಗೆಯಂತೆ ಮಾಡಿ ಪಕ್ವಮಾಡಿದ

ನಂತರ ಶೋಫದಮೇಲೆ ಇರಿಸಿ ಶಾಖ ಕೊಡುವ ವಿಧಾನಕ್ಕೆ ಉಪನಾಹ ಸ್ವೇದವೆಂದು ಹೆಸರು.

ವೇದನೋಪಶಮಾರ್ಥಾಯ ತಥಾ ಪಾಕಶಮಾಯಚ ।
ಅಚಿರೋತ್ಪತಿತೇ ಶೋಫೇ ಕುರ್ಯಾಚ್ಛೋಣಿತಮೋಕ್ಷಣಮ್ ||೨೭||

ಅರ್ಥ—ಶೋಫವುಂಟಾದ ಕೂಡಲೇ ನೋವು ಕಡಿಮೆಯಾಗುವುದಕ್ಕಾಗಿಯೂ ಪಾಕವು ಶಮನವಾಗುವುದಕ್ಕಾಗಿಯೂ ಶೋಫದಿಂದ ರಕ್ತಸ್ರಾವ ಮಾಡಿಸುವುದಕ್ಕಾಗಿಯೂ ಜಿಗುಳೆಯನ್ನು ಕಚ್ಚಿಸಬೇಕು ಅಥವಾ ಸಿರಾಮೋಕ್ಷಣ ಮಾಡಿಸಬೇಕು.

ಸಶೋಫೇ ಕಠಿನೇ ಶ್ಯಾವೇ ಸರಕ್ತೇ ವೇದನಾವತಿ ।
ಸಂರಬ್ಧೇ ವಿಷಮೇ ವಾಪಿ ವ್ರಣೇ ವಿಸ್ರಾವಣಂ ಹಿತಮ್ ||೨೮||
ಸವಿಷೇ ಚ ವಿಶೇಷೇಣ ಜಲೌಕೋಭಿಃ ಪದೈಸ್ತಥಾ
ವೇದನಾಯಾಃ ಪ್ರಶಾನ್ತ್ಯರ್ಥಂ ಪಾಕಸ್ಯಾಪ್ರಾಪ್ತಯೇ ತಥಾ ||೨೯||

ಅರ್ಥ—ಶೋಫವು ಗಟ್ಟಿಯಾಗಿಯೂ, ಕಪ್ಪಾಗಿಯೂ, ರಕ್ತದಿಂದುಂಟಾದ ನೋವಿನಿಂದ ಕೂಡಿದ್ದು, ಬುಡವು ಅಗಲವಾಗಿಯೂ, ಹಳ್ಳತಿಟ್ಟಾಗಿ (ಉಬ್ಬು ತಗ್ಗು) ಯೂ, ವಿಷಮಿಶ್ರವಾಗಿಯೂ ಇದ್ದರೆ ವೇದನೆಯು ನಿವಾರಣೆಯಾಗುವುದಕ್ಕೂ ವ್ರಣವು ಪಾಕವಾಗದಿರುವುದಕ್ಕಾಗಿಯೂ ಜಿಗುಳೆಯನ್ನು ಕಚ್ಚಿಸಿಯಾಗಲೀ ಸಿರಾಮೋಕ್ಷಣವನ್ನು ಮಾಡಿಸಿಯಾಗಲೀ ಅತಿಶಯವಾಗಿ ರಕ್ತವನ್ನು ಸ್ರಾವಣ ಮಾಡಿಸಬೇಕು.

ಸೋಪದ್ರವಾಣಾಂ ರೂಕ್ಷಾಣಾಂ ಕೃಶಾನಾಂ ವ್ರಣಶೋಷಿಣಾಂ ।
ಯಥಾಸ್ವಮೌಷಧೈಃ ಸಿದ್ಧಂ ಸ್ನೇಹಪಾನಂ ವಿಧೀಯತೇ ||೩೦||

ಅರ್ಥ—ಮೈನಡುಕ, ಪಕ್ಷಾಘಾತ ಮೊದಲಾದ ವಿಕಾರಗಳಿಂದ ಪೀಡಿತರಾಗಿರುವ ವ್ರಣಶೋಥ ರೋಗಿಗಳಿಗೆ, ರೂಕ್ಷದೇಹವುಳ್ಳವರಿಗೆ, ಕೃಶರಿಗೆ ವ್ರಣದಿಂದ ಕ್ಷೀಣರಾದವರಿಗೆ ದೋಷಕ್ಕೆ ತಕ್ಕ ಔಷಧಿಗಳಿಂದ ತಯಾರಿಸಿದ ಸ್ನೇಹವನ್ನು ಪಾನಮಾಡಿಸಬೇಕು ; ವೇದನೆಯೆಂದರೆ ಪಕ್ಷಾಘಾತಾದಿ ರೋಗಗಳೆಂದು ತಿಳಿಯಬೇಕು. ವ್ರಣದ ಗಂಧ, ವರ್ಣ, ಸ್ರಾವ, ವೇದನ, ಆಕೃತಿಗಳೆಂಬ ೫ ವಿಧಗಳಾದ ವ್ರಣೋಪಕ್ರಮಗಳಲ್ಲ.

ಉತ್ಸನ್ನಮಾಂಸಶೋಫೇ ತು ಕಫಜುಷ್ಟೇ ವಿಶೇಷತಃ ।
ಸಂಕ್ಲಿಷ್ಟಶಾವರುಧಿರೇ ವ್ರಣೇ ಪ್ರಚ್ಛರ್ದನಂ ಹಿತಮ್ ||೩೧||
ವಾತಪಿತ್ತಪ್ರದುಃಷ್ಟೇಷು ದೀರ್ಘಕಾಲಾನುಬನ್ಧಿಷು ।
ವಿರೇಚನಂ ಪ್ರಶಂಸನ್ತಿ ವ್ರಣೇಷು ವ್ರಣಕೋವಿದಾಃ ||೩೨||

ಅರ್ಥ—ಮಾಂಸವು ವೃದ್ಧಿಯಾಗಿ ವಿಶೇಷವಾಗಿ ಕಫಯುಕ್ತವಾದ ಶೋಫದಲ್ಲೂ ದುಷ್ಟವಾದ ಸ್ವಲ್ಪ ಕಪ್ಪುಬಣ್ಣವುಳ್ಳ ರಕ್ತದಿಂದ ಕೂಡಿದ ವ್ರಣದಲ್ಲೂ ರೋಗಿಗೆ ವಮನ ಮಾಡಿಸಿದರೆ ಹಿತವಾಗುತ್ತದೆಂದೂ, ವಾತಪಿತ್ತ ದೋಷಗಳಿಂದ ದೂಷಿತಗಳಾಗಿ ಬಹಳ ದಿನಗಳಿಂದಲೂ ಆಶ್ರಯಿಸಿಕೊಂಡಿರುವ ವ್ರಣಗಳಲ್ಲಿ ವಿರೇಚನ ಮಾಡಿಸಿದರೆ ಹಿತವಾಗುತ್ತದೆಂದೂ (ವ್ರಣಚಿಕಿತ್ಸೆಯಲ್ಲಿ ಕುಶಲರಾದ) ಶಸ್ತ್ರವೈದ್ಯಪ್ರವೀಣರು ಪ್ರಶಂಸಿಸುತ್ತಾರೆ.

ಅಪಾಕೇಷು ತು ರೋಗೇಷು ಕಠಿನೇಷು ಸ್ಥಿರೇಷು ಚ ।
ಸ್ನಾಯುಕೋಥಾದಿಷು ತಥಾ ಭೇದನಂ ಪ್ರಾಪ್ತಮುಚ್ಯತೇ ||೩೩||
ಅನ್ತಃ ಪೂಯೇಷ್ವವಕ್ತ್ರೇಷು ತಥೈವೋತ್ಸಙ್ಗವತ್ಸ್ವಪಿ ।
ಗತಿಮತ್ಸು ಚ ರೋಗೇಷು ಭೇದನಂ ಪ್ರಾಪ್ತಮುಚ್ಯತೇ ||೩೪||

ಅರ್ಥ—ಪಾಕವಿಲ್ಲದ ಅಧಿಮಾಂಸಾದಿಗಳಲ್ಲೂ ಅಥವಾ ಅಲ್ಪಪಾಕವುಳ್ಳಂಥಾ ವಲ್ಮೀಕಾದಿಗಳೂ ಗಟ್ಟಿಯಾಗಿ ಸ್ಥಿರವಾಗಿರುವ (ಚಲನೆಯಿಲ್ಲದ) ಸ್ನಾಯು ಸಿರಾ ಧಮನ್ಯಾದಿಗಳು ಕೋಥವಾಗಿದ್ದಾಗಲೂ ಶಸ್ತ್ರದಿಂದ ಭೇದನ ಮಾಡುವುದು ಯೋಗ್ಯ ವಾದದ್ದು ; ಮುಖವಿಲ್ಲದೆ ಕೀವು ಸೇರಿರುವ ವ್ರಣಗಳನ್ನೂ ಮೇಲೆ ಮಾಂಸವೃದ್ಧಿಯಾಗಿರು ವುವುಗಳನ್ನೂ ಸಣ್ಣ ರಂಧ್ರವಿರುವ ವ್ರಣಗಳನ್ನೂ ಭೇದನಮಾಡುವುದು ಯೋಗ್ಯ ವಾದದ್ದು.

ಬಾಲವೃದ್ಧಾಸಹಕ್ಷೀಣಭೀರೂಣಾಂ ಯೋಷಿತಾಮಪಿ ।
ಮರ್ಮೋಪರಿ ಚ ಜಾತೇಷು ರೋಗೇಷೂಕ್ತೇಷು ದಾರಣಮ್ ||೩೫||
ಸುಪಕ್ವೇ ಪಿಶಿತೇ ಶೋಫೇ ಪೀಡನೈರುಪಪೀಡಿತೇ ।
ಪಾಕೋದ್ವೃತೇಷು ದೋಷೇಷು ತತ್ರು ಕಾರ್ಯಂ ವಿಜಾನತಾ ||
ಸುಪಿಷ್ಟೈರ್ದಾರಣದ್ರವ್ಯೈರ್ಯುಕ್ತೈಃ ಕ್ಷಾರೇಣ ವಾ ಪುನಃ ||೩೬||

ಅರ್ಥ—ಬಾಲಕರು, ಮುದುಕರು, ಸಾಮರ್ಥ್ಯವಿಲ್ಲದವರು, ಕೃಶರು, ಅಂಜು ಬುರುಕರು, ಹೆಂಗಸರು ಇವರುಗಳಿಗೂ ಮರ್ಮಗಳ ಮೇಲೆ ಹುಟ್ಟಿದ ರೋಗಗಳಲ್ಲೂ (ವ್ರಣಗಳಲ್ಲೂ) ಚೆನ್ನಾಗಿ ಮಾಂಸಪಾಕವಾಗಿರುವ ಶೋಫಗಳಲ್ಲೂ, ಪೀಡನದ್ರವ್ಯಗಳಿಂದ ದೋಷಗಳು ಪಾಕಾವಸ್ಥೆಗೆ ಬರುತ್ತಿರುವಾಗಲೂ ವ್ರಣದಾರಣಯೋಗ್ಯ ದ್ರವ್ಯಗಳಿಂದಾ ಗಲೀ ಯವಕ್ಷಾರಾದಿ ಕ್ಷಾರಗಳಿಂದಾಗಲೀ ವ್ರಣವನ್ನು (ಶೋಫವನ್ನು) ಪೀಡಿಸಬೇಕು.

ಕಠಿನಾ ಸ್ಥೂಲವೃತ್ತೌಷ್ಠಾ ದೀರ್ಘಮಾಣಾ ಪುನಃಪುನಃ ।
ಕಠಿನೋತ್ಸನ್ನಮಾಂಸಾಂಶ್ಚ ಲೇಖನೇನಾಚರೇದ್ಭಿಷಕ್ ||೩೭||
ಸಮಂ ಲಿಖೇತ್ಸುಲಿಖಿತಂ ಲಿಖೇನ್ನಿರವಶೇಷತಃ ।
ವರ್ತ್ಮನಾನುಪ್ರಮಾಣೇನ ಸಮಂ ಶಸ್ತ್ರೇಣ ನಿರ್ಲಿಖೇತ್ ||೩೮||
ಕ್ಷೌಮಂ ಪ್ಲೋತಂ ಪಿಚುಂ ಫೇನಂ ಯಾವಶೂಕಂ ಸಸೈನ್ಧವಂ ।
ಕರ್ಕಶಾನಿ ಚ ಪತ್ರಾಣಿ ಲೇಖನಾರ್ಥೇ ಪ್ರದಾಪಯೇತ್ ||೩೯||

ಅರ್ಥ—ಮಾಂಸ ಕಡಿಮೆಯಾಗಿ ಗಟ್ಟಿಯಾಗಿರುವ, ಮುಖಭಾವವು ದಪ್ಪವಾಗಿಯೂ ಗುಂಡಗೂ ಇರುವ, ಪದೇ ಪದೇ ಸೀಳುತ್ತಿರುವ, ಗಟ್ಟಿಯಾಗಿ ಮೇಲೆದ್ದಿರುವ ಮಾಂಸವುಳ್ಳ ವ್ರಣಗಳನ್ನು ಶಸ್ತ್ರದಿಂದ ಕತ್ತರಿಸಬೇಕು ; ಹೇಗೆಂದರೆ ಕಠಿನ ಸ್ಥೂಲವೃತ್ತೌಷ್ಠವ್ರಣಗಳನ್ನು ಸಮವಾಗಿಯೂ, ಪುನಃಪುನರ್ದೀರ್ಯಮಾಣ (ಹರಿಯುತ್ತಿರುವ) ವ್ರಣವನ್ನು ಸಮೂಲವಾಗಿಯೂ, ಕಠಿನೋನ್ನತ ಮಾಂಸವ್ರಣವನ್ನು ವ್ರಣಪಾರ್ಶ್ವಕ್ಕೆ ತಕ್ಕಂತೆಯೂ ಶಸ್ತ್ರದಿಂದ ಕತ್ತರಿಸಬೇಕು. ಪಾರಿಜಾತ ತೇಗ ಮೊದಲಾದ ಮರಗಳ ತರಿತರಿಯಾದ ಎಲೆ

ಗಳಿಂದ ಉಜ್ಜಬಾರದೆಂದರ್ಥ. ಶಸ್ತ್ರವಿಲ್ಲದಿದ್ದರೆ ಅಗಸೇವಸ್ತ್ರ, ತರಿಯಾದ (ಒರಟು) ಬಟ್ಟೆ, ಹತ್ತಿಯ ಮುದ್ದೆ, ಸಮುದ್ರದ ನೊರೆ, ಯವಕ್ಷಾರ, ಸೈಂಧವ, ತೇಗ, ಪಾರಿಜಾತ, ಎತ್ತುನಾಲಿಗೆಗಳ ಒರಟೆಲೆ ಇವುಗಳನ್ನು ಲೇಖನ ಕರ್ಮಕ್ಕೆ ಉಪಯೋಗಿಸಬೇಕು.

ನಾಡೀವ್ರಣಾನ್ ಶಲ್ಯಗರ್ಭಾನುನ್ಮಾರ್ಗ್ಯುತ್ಸಙ್ಗಿನಂ ಶಸ್ಯೈಃ ।
ಕರೀರವಾಲಾಙ್ಗುಳಿಭಿರೇಷಣ್ಯಾ ವ್ಯೈಷಯೇದ್ಭಿಷಕ್ ॥೪೦॥
ನೇತ್ರವರ್ತ್ಮಗುದಾಭ್ಯಾಸನಾಡ್ಯೋಽವಕ್ತ್ರಾಃ ಸಶೋಣಿತಾಃ ।
ಚುಚ್ಚೂಪೋದಕಜೈಃ ಶ್ಲಕ್ಷ್ಣೈಃ ಕರೀರೈರೇಷಯೇತ್ಸ್ರುತಾಃ ॥೪೧॥

ಅರ್ಥ—ನಾಡೀವ್ರಣ, ಶಲ್ಯವು ಅಡಗಿರುವ ವ್ರಣ, ಉನ್ಮಾರ್ಗೀ (ಭಗಂದರ) ಉತ್ಸಂಗಿವ್ರಣಗಳಲ್ಲಿ ವೈದ್ಯನು ಮೃದುವಾದ ಬಿದಿರಿನ ಅಂಕುರ, ಆನೆಯ ಅಥವಾ ಕುದುರೆಯ ಬಾಲದ ಕೂದಲು, ಏಷಣಿಗಳು, ಬೆರಳು, ಶಲಾಕಾಶಸ್ತ್ರ ಇವುಗಳನ್ನು ವ್ರಣದೊಳಗೆ ನುಗ್ಗಿಸಿ ಮಧ್ಯಭಾಗವನ್ನು ನಿರ್ಧರಿಸಬೇಕು ; ಕಣ್ಣು, ರೆಪ್ಪೆ, ಗುದದ ಸಮೀಪ, ಬಾಯಿಲ್ಲದ ವ್ರಣಗಳು ಇವನ್ನೂ, ರಕ್ತಸ್ರಾವ ಮಾಡುವ ವ್ರಣಗಳನ್ನೂ ಚುಂಚುಳಿಕೆಯ ನಾಳ, ಬಸಳೆಯಹಂಬು, ಬಿದರುಕಳಲೆ ಇವುಗಳ ಮೃದುವಾದ ನಾಳಗಳನ್ನು ನುಗ್ಗಿಸಿ ವ್ರಣದ ಮಧ್ಯಭಾಗವನ್ನು ನಿರ್ಧರಿಸಬೇಕು.

ಸಂವೃತಾಸಂವೃತಾಸ್ಯೇಷು ವ್ರಣೇಷು ಮತಿಮಾನ್ ಭಿಷಕ್ ।
ಯಥೋಕ್ತಮಾಹರೇಚ್ಛಲ್ಯಂ ಪ್ರಾಪ್ಯೋದ್ಧರಣಲಕ್ಷಣಮ್ ॥೪೨॥
ರೋಗೇ ವ್ಯಧನಸಾಧ್ಯೇ ತು ಯಥೋದ್ದೇಶಂ ಪ್ರಮಾಣತಃ ।
ಶಸ್ತ್ರಂನಿಪಧ್ಯಾತ್ ದೋಷಂ ಚ ಸ್ರಾವಯೇತ್ ಕೀರ್ತಿತಂ ಯಥಾ ॥೪೩॥
ಅಪಾಕೋಪದ್ರುತಾ ಯೇ ಚ ಮಾಂಸಸ್ಥಾ ವಿವೃತಾಶ್ಚ ಯೇ ।
ಯಥೋಕ್ತಂ ಸೀವನಂ ತೇಷು ಕಾರ್ಯಂ ಸನ್ಧಾದಮೇವ ಚ ॥೪೪॥

ಅರ್ಥ—ಬುದ್ಧಿವಂತನಾದ ಶಸ್ತ್ರವೈದ್ಯನು ವ್ರಣಮುಖವು ಮುಚ್ಚಿಕೊಂಡಿರಲಿ ಅಥವಾ ಹಿಗ್ಗಿರಲಿ (ಅಗಲಿಸಿರಲಿ) ವ್ರಣದಲ್ಲಿ ಅಡಗಿರುವ ಶಲ್ಯವನ್ನು ಹೊರಗಡೆಗೆ ಹೇಗೆ ತೆಗೆಯಬೇಕೆಂದು ಯೋಚಿಸಿ ಶಲ್ಯಹರಣ ವಿಧಾನದಲ್ಲಿ ಹೇಳಿರುವ ಮೇರೆಗೆ ತೆಗೆಯಬೇಕು ; ಉದಕೋದರ, ಮೂತ್ರವೃದ್ಧಿ ಮೊದಲಾದ ವ್ಯಧನಸಾಧ್ಯ ರೋಗಗಳಲ್ಲಿ ಆಳತೆಯ ಪ್ರಕಾರ ವ್ರಣದ ವ್ಯಧನಸ್ಥಾನವನ್ನು ಗುರುತುಮಾಡಿ ಶಸ್ತ್ರವನ್ನು ಉಕ್ತವಿಧಾನದಂತೆ ೪ ಅಥವಾ ೨ ಅಂಗುಳಿಗಳಷ್ಟು ಆಳವಾಗಿ ಚುಚ್ಚಿ ತಕ್ಕಷ್ಟು ಪ್ರಮಾಣದಿಂದಲೇ ದೋಷವನ್ನು ಹೊರಕ್ಕೆ ಸುರಿಯುವಂತೆ ಮಾಡಬೇಕು ; ಮಾಂಸ ಪಾಕವಿಲ್ಲದ ಮಾಂಸಖಂಡಗಳನ್ನು ಸೇರಿಸಿ ಹೊಲಿಯಬೇಕು ; ಅಂದರೆ ವ್ರಣವು ದೊಡ್ಡದಾದರೆ ಹೊಲಿಯಬೇಕು, ಸಣ್ಣದಾದರೆ ವ್ರಣಮುಖದ ಎರಡು ಕೊನೆಗಳನ್ನೂ ಕೂಡಿಸಬೇಕು.

ಪೂಯಗರ್ಭಾನಣುದ್ವಾರಾನ್ ವ್ರಣಾನ್ ಮರ್ಮಗತಾನಪಿ ।
ಯಥೋಕ್ತೈಃ ಪೀಡನದ್ರವ್ಯೈಃ ಸಮನ್ತಾತ್ಪರಿಪೀಡಯೇತ್ ॥೪೫॥
ಶುಷ್ಯಮಾಣಮುಪೇಕ್ಷೇತ ಪ್ರಲೇಹಂ ಪೀಡನಂ ಪ್ರತಿ ।

ನ ಚಾಭಿಮುಖಮಾಲಿಂಪೇತ್ ತಥಾ ದೋಷಃ ಪ್ರಸಿಚ್ಯತೇ ||೪೬||
ತೈಸ್ತೈರ್ನಿಮಿತ್ತೈರ್ಬಹುಧಾ ಶೋಣಿತೇ ಪ್ರಸ್ರುತೇ ಭೃಶಮ್ ।
ಕಾರ್ಯಂ ಯಥೋಕ್ತಂ ವೈದ್ಯೇನ ಶೋಣಿತಸ್ಥಾಪನಂ ಭವೇತ್ ||೪೭||

ಅರ್ಥ—ಕೀವು ಅಡಗಿರುವ ಸಣ್ಣ ಬಾಯಿಯಿರುವ ಮರ್ಮಸ್ಥಾನಗಳಲ್ಲಿರುವ ವ್ರಣಗಳನ್ನು ಮಿಶ್ರಕಾಧ್ಯಾಯದಲ್ಲಿ ಹೇಳಿರುವ ಪಿಚ್ಛಿಲದ್ರವ್ಯಗಳನ್ನುಪಯೋಗಿಸಿ ಸುತ್ತಲೂ ಹಿಂಡಿ ಕೀವನ್ನು ಹೊರಡಿಸಬೇಕು ; ವ್ರಣವು ಒಣಗುತ್ತಿದ್ದರೆ ಪ್ರದೇಹ ಪೀಡನಗಳನ್ನು ಮಾಡಬಾರದು ; ವ್ರಣದಿಂದ ದೋಷವು ತಾನಾಗಿ ಸ್ರಾವವಾಗುತ್ತಿರುವಾಗ ವ್ರಣಮುಖಕ್ಕೆ ಎದುರಾಗಿ ಲೇಪನೌಷಧಗಳನ್ನು ತಿಕ್ಕಬಾರದು ; ಸಿರಾವ್ಯಧನ ಮೊದಲಾದವುಗಳಿಂದ ಹೆಚ್ಚಾಗಿ ರಕ್ತಸ್ರಾವವಾದರೆ ವೈದ್ಯನು ರಕ್ತಸ್ರಾವವನ್ನು ತಡೆಗಟ್ಟಲು ಸಂಧಾನ (ರಕ್ತಸ್ರಾವವಾಗದಂತೆ ಮಾಡುವುದು) ಸ್ಕಂದನ (ರಕ್ತವು ಗಡ್ಡೆಕಟ್ಟುವಂತೆ ಮಾಡುವುದು) ಪಾಚನ (ಆಮದೋಷವನ್ನು ಪಾಕವಾಗುವಂತೆ ಮಾಡುವುದು, ದಹನ (ಅಗ್ನಿಕರ್ಮ) ಗಳೆಂಬ ೪ ವಿಧಾನಗಳನ್ನು ಅನುಸರಿಸಬೇಕು.

ದಾಹಪಾಕಜ್ವರವತಾಂ ವ್ರಣಾನಾಂ ಪಿತ್ತಕೋಪತಃ ।
ರಕ್ತೇನ ಚಾಭಿಭೂತಾನಾಂ ಕಾರ್ಯಂ ನಿರ್ವಾಪಣಂ ಭವೇತ್ ||೪೮||
ಯಥೋಕ್ತೈಃ ಶೀತಲದ್ರವ್ಯೈಃ ಕ್ಷೀರಪಿಷ್ಟೈರ್ಘೃತಪ್ಲುತೈಃ ।
ದಿಹ್ಯಾದಬಹಲಾನ್ ಲೇಪಾನ್ ಸುಶೀತಾಂಶ್ಚಾವಚಾರಯೇತ್ ||೪೯||

ಅರ್ಥ—ಪಿತ್ತಪ್ರಕೋಪದಿಂದ ಉರಿ, ಪಾಕ, ಜ್ವರಗಳುಂಟಾಗಿರುವ ಮತ್ತು ರಕ್ತದೋಷಾಧಿಕವಾಗಿರುವ ವ್ರಣಗಳ ವೇದನೆಯನ್ನು ಕಡಿಮೆಮಾಡಲು ಮಿಶ್ರಕಾಧ್ಯಾಯದಲ್ಲಿ ಹೇಳಿರುವ ಶೀತವೀರ್ಯದ್ರವ್ಯಗಳನ್ನು ಹಾಲಿನಿಂದ ಅರೆದು ಕಲ್ಕಮಾಡಿ ತುಪ್ಪ ಮಿಶ್ರಮಾಡಿ ತಣ್ಣಗೆ ತೆಳುವಾಗಿ ಸವರಬೇಕು.

ವ್ರಣೇಷು ಕ್ಷೀಣಮಾಂಸೇಷು ತನುಸ್ರಾವಿಷ್ವಪಾಕಿಷು ।
ತೋದಕಾಠಿನ್ಯಪಾರುಷ್ಯಶೂಲವೇಪಥುಮತ್ಸು ಚ ।
ವಾತಘ್ನವರ್ಗೇಽಮ್ಲಗಣೇ ಕಾಕೋಲ್ಯಾದಿಗಣೇ ತಥಾ ||೫೦||
ಸ್ನೈಹಿಕೇಷು ಚ ಬೀಜೇಷು ಪಚೇದುತ್ಕಾರಿಕಾಂ ಶುಭಾಮ್ ।
ತೇಷಾಂ ಚ ಸ್ವೇದನಂ ಕಾರ್ಯಂ ಸ್ಥಿರಾಣಾಂ ವೇದನಾವತಾಮ್ ||೫೧||
ದುರ್ಗನ್ಧಾನಾಂ ಕ್ಲೇದವತಾಂ ಪಿಚ್ಛಿಲಾನಾಂ ವಿಶೇಷತಃ ।
ಕಷಾಯೈಃ ಶೋಧನಂ ಕಾರ್ಯಂ ಶೋಧನೈಃ ಪ್ರಾಗುದೀರಿತೈಃ ||೫೨||

ಅರ್ಥ—ಮಾಂಸ ಕ್ಷೀಣವಾಗಿ ಸ್ವಲ್ಪ ಸ್ರಾವವುಳ್ಳ ಪಾಕವಾಗದ, ಚುಚ್ಚುವಿಕೆ, ಕಠಿಣತೆ, ಸ್ಪರ್ಶಕ್ಕೆ ತರಿತರಿಯಾಗಿರುವ, ನೋವು, ಅದುರುವಿಕೆಯುಳ್ಳ ವ್ರಣಗಳಿಗೆ (ಇವುಗಳಲ್ಲಿ ವಾತಾಧಿಕ್ಯವಿರುತ್ತದೆ) ಕಾಕೋಲ್ಯಾದಿ, ಭದ್ರದಾರ್ವಾದಿ ಗಣದ್ರವ್ಯಗಳನ್ನು ಸೌವೀರ, ತುಷೋದಕಗಳಿಂದಲೂ, ಎಳ್ಳು, ಅಗಸೆಬೀಜ, ಹರಳು ಮೊದಲಾದ ತೈಲ ಬೀಜಗಳನ್ನು ಆಮ್ಲದ್ರವ್ಯಗಳಿಂದಲೂ ಅರೆದು ಕಲ್ಕಮಾಡಿ ಹೋಳಿಗೆಗಳನ್ನು ಬೇಯಿಸಿ

ಸ್ವೇದವನ್ನು ಮಾಡಿಸಬೇಕು. ಚಲಿಸದೆ ನೋಯುತ್ತಿರುವ, ದುರ್ವಾಸನೆ, ಸ್ರಾವ ಮತ್ತು ವಿಶೇಷವಾಗಿ ಜಿಬಿಗುಟ್ಟುವ ವ್ರಣಗಳನ್ನು ಈಶ್ವರಿ, ಅಂಕೋಲೆ, ಜಾಜಿಸೊಪ್ಪು ಮೊದಲಾದ ಶೋಧನದ್ರವ್ಯಗಳ ಕಷಾಯದಿಂದ ತೊಳೆದು ಶೋಧನೆ ಮಾಡಬೇಕು.

ಶೋಧನದ್ರವ್ಯ ಯುಕ್ತಾಭಿರ್ವರ್ತಿಭಿಸ್ತಾ ಯಥಾಕ್ರಮಂ ।
ಅನ್ತಃಶಲ್ಯಾನಣು ಮುಖಾರ್ನಗಮ್ಭೀರಾನ್ ಮಾಂಸಸಂಶ್ರಿತಾನ್
ಪೂತಿಮಾಂಸಪ್ರತಿಚ್ಛನ್ನಾನ್ ಮಹಾದೋಷಾಂಶ್ಚ ಶೋಧಯೇತ್ ।
ಕಲ್ಕೀಕೃತೈರ್ಯಥಾಲಾಭಂ ವರ್ತಿದ್ರವ್ಯೈಃ ಪುರೋದಿತೈಃ ||೫೪||
ಪಿತ್ತಪ್ರದುಷ್ಟಾನ್ ಗಮ್ಭೀರಾನ್ ದಾಹಪಾಕಪ್ರಪೀಡಿತಾನ್ ।
ಕಾರ್ಪಾಸೀ ಫಲಮಿಶ್ರೇಣ ಜಯೇತ್ ಶೋಧನಸರ್ಪಿಷಾ ||೫೫||
ಉತ್ಸನ್ನಮಾಂಸಾನಸ್ನಿಗ್ಧಾನ್ ಸಲ್ಪಸ್ರಾವಾನ್ ವ್ರಣಾಂ ಸ್ತಥಾ ।
ಸರ್ಷಪಸ್ನೇಹಯುಕ್ತೇನ ಧೀಮಾಂಸ್ತೈಲೇನ ಶೋಧಯೇತ್ ||೫೬||

ಅರ್ಥ—ವ್ರಣದೊಳಗೆ ಶಲ್ಯವು ಅಡಗಿರುವುದು, ವ್ರಣಮುಖವು ಸಣ್ಣಗಿರುವುದು, ಶಲ್ಯವು ಆಳದಲ್ಲಿಯೂ, ಮಾಂಸದೊಳಗೂ ಸೇರಿರುವುದು ಈ ರೀತಿಯಾದ ವ್ರಣಗಳಿಗೆ ಮಿಶ್ರಕಾಧ್ಯಾಯದಲ್ಲಿ ಹೇಳಿದ ಅಜಗಂಧಾ, ಅಜಶೃಂಗೀ ಮೊದಲಾದ ಶೋಧನದ್ರವ್ಯಗಳಿಂದ ತಯಾರಿಸಿದ ಸಣ್ಣದಾದ, ಮಧ್ಯಪ್ರಮಾಣದ, ದಪ್ಪವಾದ ವರ್ತಿಗಳನ್ನು ಮಾಡಿ ಉಪಯೋಗಿಸಬೇಕು ; ದುರ್ವಾಸನೆಯುಳ್ಳ ಮಾಂಸದಿಂದ ಮುಚ್ಚಿದ ಮುಖವುಳ್ಳ, ಮಹಾ ದೋಷಪೀಡಿತಗಳಾದ (ವಾತ ಕಫ ದೋಷಗಳು) ವ್ರಣಗಳಿಗೆ ಶೋಧನದ್ರವ್ಯಗಳಿಂದ ತಯಾರಿಸಿದ ವರ್ತಿಗಳನ್ನು ನುಗ್ಗಿಸಿ ಶೋಧನೆ ಮಾಡಬೇಕು ; ಪಿತ್ತದುಷ್ಟಗಳಾದ ಆಳವಾಗಿರುವ ಉರಿಯೂ ಮಾಂಸಪಾಕವೂ ಉಳ್ಳ ವ್ರಣಗಳಿಗೆ ಹತ್ತಿಯ ಕಾಯಿಯ ಕಲ್ಕಮಿಶ್ರ ಮಾಡಿದ ಶೋಧನಘೃತಗಳನ್ನುಪಯೋಗಿಸಿ ನಿವಾರಿಸಬೇಕು ; ಬುದ್ಧಿವಂತನಾದವೈದ್ಯನು ಮಾಂಸವು ಉಬ್ಬಿರುವ ರೂಕ್ಷವಾಗಿ ಸ್ವಲ್ಪ ಸ್ರಾವವುಳ್ಳ ವ್ರಣಗಳನ್ನು, ಸಾಸಿವೆಯೆಣ್ಣೆಯಲ್ಲಿ ಪೂಯಹರ ದ್ರವ್ಯಗಳನ್ನು ಸೇರಿಸಿ ತಯಾರಿಸಿದ ತೈಲದಿಂದ ಶೋಧನೆ ಮಾಡಬೇಕು.

ತೈಲೇನಾಶುಧ್ಯಮಾನಾನಾಂ ಶೋಧನೀಯಾಂ ರಸಕ್ರಿಯಾಮ್ ।
ವ್ರಣಾನಾಂ ಸ್ಥಿರಮಾಂಸಾನಾಂ ಕುರ್ಯಾದ್ದ್ರವ್ಯೈರುದೀರಿತೈಃ ||೫೭||
ಕಷಾಯೇ ವಿಧಿವತ್ತೇಷಾಂ ಕೃತೇ ವ್ಯಾಮಿಶ್ರಯೇತ್ಪುನಃ ।
ಸುರಾಷ್ಟ್ರಜಾಂ ಸಕಾಸೀಸಾಂ ದದ್ಯಾತ್ ಚಾಪಿ ಮನಃ ಶಿಲಾಮ್ ||೫೮||
ಹರಿತಾಳಂ ಚ ಮತಿಮಾನ್ ತತಸ್ತಾಮವಚಾರಯೇತ್ ।
ಮಾತುಲುಙ್ಗರಸೋಪೇತಾಂ ಕ್ಷೌದ್ರಾಮತಿ ಮರ್ದಿತಾಮ್ ||೫೯||
ವ್ರಣೇಷು ದತ್ವಾ ತಾಂ ತಿಷ್ಠೇತ್ ತ್ರೀಂಸ್ತ್ರೀಂಶ್ಚ ದಿವಸಾನ್ ಪರಮ್ ।

ಅರ್ಥ—ಮೇಲೆ ಹೇಳಿದ ತೈಲದಿಂದ ಶುದ್ಧಿಯಾಗದಿರುವ ಸ್ಥಿರಮಾಂಸವುಳ್ಳ ವ್ರಣಗಳಿಗೆ ಮಿಶ್ರಕಾಧ್ಯಾಯದಲ್ಲಿ ಹೇಳಿರುವ ಶಾಲಸಾರಾದಿ ದ್ರವ್ಯಗಳಿಂದ ತಯಾರಿಸಿದ ರಸಕ್ರಿಯೆಯನ್ನು ಪ್ರಯೋಗಿಸಬೇಕು ; ಮೇಲೆ ಹೇಳಿದ ಶಾಲಸಾರಾದಿ ಗಣೋಕ್ತ ದ್ರವ್ಯಗಳಿಗೆ ೧೬ ರಷ್ಟು ನೀರು ಸೇರಿಸಿ ನಾಲ್ಕರಲ್ಲಿ ಒಂದು ಪಾಲು ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿಕೊಂಡು ಅದಕ್ಕೆ ಪಟಿಕ, ಅನ್ನಭೇದಿ, ಮಣಿಶಿಲೆ, ಅರಿದಳಗಳನ್ನು ಕಷಾಯದ ೧೬ ರ ೧ ಪಾಲಿನಷ್ಟು ಸೇರಿಸಿ ಪುನಃ ಪಾಕಮಾಡಬೇಕು ; ರಸಕ್ರಿಯೆಯಾದನಂತರ ಕೆಳಕ್ಕಿಳಿಸಿಕೊಂಡು ಮಾದಳರಸವನ್ನೂ ಜೇನುತುಪ್ಪವನ್ನೂ ಸೇರಿಸಿ ಮರ್ದನೆಮಾಡಿಟ್ಟುಕೊಂಡು ವ್ರಣಕ್ಕೆ ಬಳಿಯಬೇಕು ; ಇವು ಮೂರುದಿನಗಳವರೆಗಿರಬೇಕು ; ಹೆಚ್ಚು ದಿವಸಗಳವರೆಗೆ ಬಿಟ್ಟದ್ದರೆ ಮಾಂಸವು ಕಿತ್ತು ಬೀಳುತ್ತದೆ.

ಗಮ್ಭೀರಾನ್ಮೇದಸಾಜುಷ್ಟಾನ್ ದುರ್ಗನ್ಧಾಂಶ್ಚೂರ್ಣಶೋಧನೈಃ ||೬೦||
ಉಪಾಚರೇದ್ಭಿಷಕ್ ಪ್ರಾಜ್ಞಃ ಶ್ಲಕ್ಷ್ಣೈಃ ಶೋಧನವರ್ತಿಜೈಃ |
ಶುದ್ಧಲಕ್ಷಣಯುಕ್ತಾನಾಂ ಕಷಾಯಂ ರೋಪಣಂ ಹಿತಮ್ ||೬೧||
ತತ್ರ ಕಾರ್ಯಂ ಯಥೋದ್ದಿಷ್ಟೈರ್ದ್ರವ್ಯೈರ್ವೈದ್ಯೇನ ಜಾನತಾ |
ಅವೇದನಾನಾಂ ಶುದ್ಧಾನಾಂ ಗಮ್ಭೀರಾಣಾಂ ತಥೈವಚ ||೬೨||
ಹಿತಾ ರೋಪಣವರ್ತ್ಯಙ್ಗಕೃತಾ ರೋಪಣವರ್ತಯಃ |

ಅರ್ಥ—ಬುದ್ಧಿಶಾಲಿಯಾದ ವೈದ್ಯನು ಆಳವಾಗಿ ಮೇದಸ್ಸಿನಿಂದ ಕೂಡಿರುವ ದುರ್ವಾಸನೆಯುಳ್ಳ ವ್ರಣಗಳನ್ನು ಕಾಸೀಸಾದಿ ಶೋಧನದ್ರವ್ಯಗಳನ್ನು ನುಣ್ಣಗೆ ಚೂರ್ಣಮಾಡಿ ನಾರಂಬೇಳಿ ಮೊದಲಾದ ದ್ರವ್ಯಗಳಿಂದ ವರ್ತಿಮಾಡಿ ಪ್ರಯೋಗಿಸಬೇಕು ; ತಿಳಿದಿರುವ ವೈದ್ಯನು ಶುದ್ಧವ್ರಣಗಳನ್ನು ಅವುಗಳ ಲಕ್ಷಣಗಳಿಂದ ಗೊತ್ತುಮಾಡಿ ವಟಾದಿ ಕ್ಷೀರವೃಕ್ಷಗಳ ಕಷಾಯದಿಂದ ತೊಳೆದರೆ ವ್ರಣವು ಮಾಯುತ್ತದೆ ; ನೋವಿಲ್ಲದ ಗಮ್ಭೀರವಾದ ಶುದ್ಧ ವ್ರಣಗಳಿಗೂ ಸೋಮಾ, ಅಮೃತಾ, ಅಶ್ವಗಂಧಾ ಮತ್ತು ಕಾಕೋಳ್ಯಾದಿ ಗಣದ್ರವ್ಯಗಳಿಂದ ತಯಾರಿಸಿದ ರೋಪಣವರ್ತಿಗಳು ಹಿತಕರಗಳು.

ಅಪೇತಪೂತಿ ಮಾಂಸಾನಾಂ ಮಾಂಸಸ್ಥಾನಾಮರೋಹತಾಮ್ ||೬೩||
ಕಲ್ಕಃ ಸಂರೋಹಣಃ ಕಾರ್ಯಸ್ತಿಲಜೋ ಮಧುಸಂಯುತಃ |
ಸಮಾಧುರ್ಯಾತ್ತಥೌಷ್ಣ್ಯಾಚ್ಚ ಸ್ನೇಹಾಚ್ಚಾನಿಲನಾಶನಃ ||೬೪||
ಕಷಾಯ ಭಾವಾನ್ಮಾಧುರ್ಯಾತ್ ತಿಕ್ತತ್ವಾಚ್ಚಾಪಿ ಪಿತ್ತಹೃತ್ |
ಔಷ್ಣ್ಯಾತ್ ಕಷಾಯ ಭಾವಾಚ್ಚ ತಿಕ್ತತ್ವಾಚ್ಚ ಕಫೇ ಹಿತಃ ||೬೫||
ಶೋಧಯೇದ್ರೋಪಯೇಚ್ಚಾಪಿ ಯುಕ್ತಃ ಶೋಧನರೋಪಣೈಃ |
ನಿಮ್ಬಪತ್ರಮಧುಭ್ಯಾಂ ತು ಯುಕ್ತಃ ಸಂಶೋಧನಃ ಸ್ಮೃತಃ ||೬೬||
ಪೂರ್ವಾಭ್ಯಾಂ ಸರ್ಪಿಷಾ ಚಾಪಿ ಯುಕ್ತಃ ಸಂರೋಪಣೋ ಭವೇತ್ |

ತಿಲವದ್ಯವಕಲ್ಕಂತು ಕೇಚಿದಾಹುರ್ಮನೀಷಿಣಃ ॥೬೭॥
ಶಮಯೇದವಿದಗ್ಧಂ ಚ ವಿದಗ್ಧಮಪಿಪಾಚಯೇತ್ ।
ಪಕ್ವಂ ಭಿನತ್ತಿ ಭಿನ್ನಂ ಚ ಶೋಧಯೇದ್ರೋಪಯೇತ್ತಥಾ ॥೬೮॥

ಅರ್ಥ—ವ್ರಣದಿಂದ ಹೊರಕ್ಕೆ ಬಂದು ಕೊಳೆತ ಮಾಂಸವುಳ್ಳ ವ್ರಣಗಳಿಗೂ ಮಾಂಸದಲ್ಲೇ ವ್ರಣವುಂಟಾಗಿ ಮಾಯದಿರುವುದಕ್ಕೂ ಎಳ್ಳಿನ ಕಲ್ಕಕ್ಕೆ ಜೇನುತುಪ್ಪ ಮಿಶ್ರಮಾಡಿ ಲೇಪಿಸಿದರೆ ಮಾಯುತ್ತವೆ; ತಿಲಕಲ್ಕವು ಸಿಹಿಯಾಗಿಯೂ, ಉಷ್ಣವೀರ್ಯ ವುಳ್ಳದಾಗಿಯೂ, ಸ್ನೇಹಗುಣವುಳ್ಳದ್ದಾಗಿಯೂ ಇರುವಕಾರಣ ವಾತದೋಷವನ್ನೂ ಕಷಾಯ, ತಿಕ್ತ, ಮಧುರ ರಸವುಳ್ಳ ಕಾರಣ ಪಿತ್ತವನ್ನೂ ಉಷ್ಣವೀರ್ಯ ತಿಕ್ತಕಷಾಯ ರಸವುಳ್ಳ ಕಾರಣ ಕಫವನ್ನೂ ನಿವಾರಿಸುತ್ತದೆ; ಶೋಧನದ್ರವ್ಯದೊಡನೆ ಪ್ರಯೋಗಿಸಿದರೆ ವ್ರಣಶೋಧನೆಯನ್ನೂ ರೋಪಣದ್ರವ್ಯದೊಡನೆ ಪ್ರಯೋಗಿಸಿದರೆ ವ್ರಣರೋಪಣವನ್ನೂ ಮಾಡುತ್ತದೆಯಾಗಿ ಯೋಗವಾಹಿಯಾದದ್ದು; ಇದು ಬೇವಿನ ಎಲೆ ಜೇನುತುಪ್ಪ ದೊಡನೆ ಸೇರಿ ಪ್ರಯೋಗಿಸಲ್ಪಟ್ಟರೆ ಸಂಶೋಧನವಾಗುತ್ತದೆ; ತಿಲನಿಂಬ ಪತ್ರಗಳ ಕಲ್ಕಕೆ ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ಪ್ರಯೋಗಿಸಿದರೆ ವ್ರಣರೋಪಣವಾಗುತ್ತದೆ; ಎಳ್ಳಿನಕಲ್ಕದಂತೆಯೇ ಯವಧಾನ್ಯದ ಕಲ್ಕವೂ ತ್ರಿದೋಷಹರವೆಂದು ಕೆಲವು ವೈದ್ಯರು ಅಭಿಪ್ರಾಯಪಡುತ್ತಾರೆ; ಆದರೆ ಜೆಜ್ಜಟ ಗಯದಾಸರು ತಿಲಯುಕ್ತಯವಕಲ್ಕವು ವಿಮ್ಲಾಪನ, ಪಾಚನ, ಪಾಟನ, ಶೋಧನ, ರೋಪಣಗಳೆಂಬ ೫ ವಿಧ ವ್ರಣೋಪಕ್ರಮಗಳಲ್ಲೂ ಉಪಯೋಗವಾಗುತ್ತದೆಂದು ಅಭಿಪ್ರಾಯಪಡುತ್ತಾರೆ; ಹೇಗೆಂದರೆ—ವ್ರಣವು ಪ್ರಾರಂಭ ವಾಗಿ ವಿದಾಹವಿಲ್ಲದಿರುವಾಗ ವ್ರಣಶಮನವನ್ನೂ, ವಿದಾಹಾವಸ್ಥೆಯಲ್ಲಿರುವ ವ್ರಣವನ್ನು ಪಾಕವಾಗುವಂತೆಯೂ, ಪಕ್ವವ್ರಣವನ್ನು ಭೇದಿಸುವಂತೆಯೂ ಭಿನ್ನವ್ರಣವನ್ನು ಶೋಧನ ವಾಗುವಂತೆಯೂ, ಶೋಧನವಾದ ವ್ರಣವನ್ನು ರೋಪಣವಾಗುವಂತೆಯೂ ಮಾಡುತ್ತದೆ.

ಪಿತ್ತರಕ್ತವಿಷಾಗನ್ತೂನ್ ಗಮ್ಭೀರಾನಪಿ ಚ ವ್ರಣಾನ್ ।
ರೋಪಯೇತ್ ರೋಪಣೀಯೇನ ಕ್ಷೀರಸಿದ್ಧೇನ ಸರ್ಪಿಷಾ ॥೬೯॥
ಕಫವಾತಾಭಿಭೂತಾನಾಂ ವ್ರಣಾನಾಂ ಮತಿಮಾನ್ ಭಿಷಕ್ ।
ಕಾರಯೇದ್ರೋಪಣಂ ತೈಲಂ ಭೇಷಜೈಸ್ತದ್ಯಥೋದಿತೈಃ ॥೭೦॥

ಅರ್ಥ—ಶಸ್ತ್ರಾದಿ ಅಭಿಘಾತದಿಂದುಂಟಾದ ವ್ರಣಗಳು ೭ ದಿನಗಳಿಗೆ ಮೊದಲೇ ಆಗನ್ತುವಾಗುತ್ತವೆ; ಈ ಆಗನ್ತುವ್ರಣಗಳನ್ನೂ ಪಿತ್ತರಕ್ತವಿಷಜನಿತ ವ್ರಣಗಳನ್ನೂ ಗಂಭೀರವ್ರಣಗಳನ್ನೂ ರೋಪಣದ್ರವ್ಯಗಳ ಕಷಾಯ ಹಾಲು, ತುಪ್ಪಗಳನ್ನು ಸೇರಿಸಿ ತಯಾರಿಸಿದ ಘೃತಪ್ರಯೋಗದಿಂದ ರೋಪಣ (ಮಾಯುವಂತೆ) ಮಾಡಬೇಕು; ಬುದ್ಧಿವಂತನಾದ ವೈದ್ಯನು ಕಫ ವಾತ ದೋಷಗಳಿಂದ ಪೀಡಿತವಾದ ವ್ರಣಗಳಿಗೆ ಕಾಲಾನುಸಾರಿ (ಅಗಿಲು) ಮೊದಲಾದ ರೋಪಣದ್ರವ್ಯಗಳನ್ನು ಸೇರಿಸಿ ತಯಾರಿಸಿದ ತೈಲವನ್ನು-

ಪಯೋಗಿಸಿ ರೋಪಣ ಮಾಡಿಸಬೇಕು—(ತೈಲವು ಕಫವಾತಹರವು ; ಘೃತವು ಪಿತ್ತ, ರಕ್ತ ದೋಷಹರವು.)

ಅಬನ್ಧ್ಯಾನಾಂ ಚಲಸ್ಥಾನಂ ಶುದ್ಧಾನಾಂ ಚ ಪ್ರದುಷ್ಯತಾಮ್ ।
ದ್ವಿಹರಿದ್ರಾಯುತಾಂ ಕುರ್ಯಾತ್ ರೋಪಣಾರ್ಥಾಂ ರಸಕ್ರಿಯಾಮ್ ॥
ಸಮಾನಾಂ ಸ್ಥಿರಮಾಂಸಾನಾಂ ತ್ವಕ್‌ಸ್ಥಾನಾಂ ರೋಪಣಂ ಭಿಷಕ್ ॥೭೧॥
ಚೂರ್ಣಂ ವಿದಧ್ಯಾನ್ಮತಿಮಾನ್ ಪ್ರಾಕ್ಸ್ಥಾನೋಕ್ತೋ ವಿಧಿರ್ಯಥಾ ॥೭೨॥
ಶೋಧನೋ ರೋಪಣಶ್ಚೈವ ವಿಧಿರ್ಯೋಽಯಂ ಪ್ರಕೀರ್ತಿತಃ ।
ಸರ್ವವ್ರಣಾನಾಂ ಸಾಮಾನ್ಯೇನೋಕ್ತೋದೋಷ ವಿಶೇಷತಃ ॥೭೩॥
ಏಷ ಆಗಮಸಿದ್ಧತ್ವಾತ್ ತಥೈವ ಫಲದರ್ಶನಾತ್ ।
ಮನ್ತ್ರವತ್ಸಂ ಪ್ರಯೋಕ್ತವ್ಯೋ ನ ಮೀಮಾಂಸ್ಯಃ ಕಥಞ್ಚನ ॥೭೪॥
ಸಬುದ್ಧ್ಯಾ ಚಾಪಿ ವಿಭಜೇತ್ ಕಷಾಯಾದಿಷು ಸಪ್ತಸು ।
ಭೇಷಜಾನಿ ಯಥಾಯೋಗಂ ಯಾನ್ಯುಕ್ತಾನಿ ಪುರಾಮಯಾ ॥೭೫॥

(ಬನ್ಧನಾನರ್ಹಗಳು)

ಅರ್ಥ—ಪಿತ್ತ ರಕ್ತ ವಿಷಾಭಿಘಾತಜ ವ್ರಣಗಳನ್ನು ಬಂಧಿಸುವುದಿಲ್ಲ ; ಚೇಷ್ಟಾಯುಕ್ತ ಸಂಧಿಗಳಲ್ಲಿನ ವ್ರಣಗಳು ಚಲನವುಳ್ಳವು ; ಇವು ಶುದ್ಧ ವ್ರಣಗಳಾದರೂ ದೋಷದುಷ್ಟಗಳಾಗುತ್ತವೆ. ಇವುಗಳಿಗೆ ನ್ಯಗ್ರೋಧಾದಿ ದ್ರವ್ಯಗಳಿಗೆ ೮ ರಷ್ಟು ನೀರನ್ನೂ ತ್ರಿಫಲಾದಿಗಳಿಗೆ ೪ ರಷ್ಟು ನೀರನ್ನೂ ಸೇರಿಸಿ ಕ್ರಮವಾಗಿ ಎಂಟು ಒಂದು ನಾಲ್ಕು ಒಂದು ಪಾಲು ಕಷಾಯವನ್ನು ಉಳಿಸಿ ಶೋಧಿಸಿದ ಕಷಾಯಕ್ಕೆ ಅರಿಶಿನ ಮತ್ತು ಮರದರಿಶಿನದ ಕಲ್ಕವನ್ನು ೧೬ ನೇ ೧ ಅಂಶದಷ್ಟು ಸೇರಿಸಿ ರಸಕ್ರಿಯೆಯನ್ನು ಮಾಡಿಟ್ಟುಕೊಂಡು ಸಮ ವ್ರಣ, ಸ್ಥಿರಮಾಂಸವುಳ್ಳ ಮತ್ತು ಚರ್ಮದ ಮೇಲಿನ ವ್ರಣಗಳಿಗೆ ಲೇಪಿಸಿದರೆ ರೋಪಣವಾಗುತ್ತದೆ ; ಸೂತ್ರಸ್ಥಾನೋಕ್ತ ತ್ರಿಫಲಾರೋಧ್ರಾದಿಗಳ ಚೂರ್ಣವನ್ನು ಉದುರಿಸಿದರೆ ವ್ರಣರೋಪಣವಾಗುತ್ತದೆ ; ಇದುವರೆಗೆ ಹೇಳಿದ ವ್ರಣಶೋಧನ, ರೋಪಣವಿಧಾನಗಳು ಸಕಲ ವಿಧಗಳಾದ ನಿಜ, ಮತ್ತು ಆಗನ್ತುವ್ರಣಗಳನ್ನು ನಿವಾರಿಸುತ್ತವೆ. ಈ ವಿಧಾನವು ಶಾಸ್ತ್ರಸಮ್ಮತವಾದದ್ದು ಮತ್ತು ಪ್ರತ್ಯಕ್ಷಫಲಲಾಭವುಂಟಾಗುತ್ತದೆಯಾದ ಕಾರಣ ಯಾವಗಲೂ ಅನುಮಾನ ಪಡದೆ ಮನ್ತ್ರಪುನಶ್ಚರಣೆ ಮಾಡುವಂತೆಯೇ ಭಕ್ತಿಯಿಂದ ಪಠನ ಮಾಡತಕ್ಕದ್ದು ; ಕಷಾಯ, ವರ್ತಿ, ಕಲ್ಕ, ಸರ್ಪಿ, ತೈಲ, ರಸಕ್ರಿಯಾ, ಚೂರ್ಣಗಳೆಂಬ ಏಳುವಿಧ ಔಷಧಗಳನ್ನೂ ಹಿಂದೆ ಮಿಶ್ರಕಾಧ್ಯಾಯದಲ್ಲಿ ಹೇಳಿರುವ ದ್ರವ್ಯಗಳಿಂದಲೇ ಸ್ವಬುದ್ಧಿಯಿಂದ ವಿಚಾರಿಸಿ ತಯಾರಿಸಬೇಕು.

ಅದ್ಯೇದ್ವೇಪಞ್ಚಮೂಲ್ಯೌ ತು ಗಣೋ ಯಶ್ಚಾನಿಲಾಪಹಃ ।
ಸ ವಾತದುಷ್ಟೇ ದಾತವ್ಯಃ ಕಷಾಯಾದಿಷು ಸಪ್ತಸು ॥೭೬॥
ನ್ಯಗ್ರೋಧಾದಿರ್ಗಣೋ ಯಸ್ತು ಕಾಕೋಳ್ಯಾದಿಶ್ಚ ಯಃ ಸ್ಮೃತಃ ।

ತೌ ಪಿತ್ತದುಷ್ಟೇ ದಾತವ್ಯೌ ಕಷಾಯಾದಿಷು ಸಪ್ತಸು ||೭೭||
ಆರಗ್ವಧಾದಿಸ್ತುಗಣೋ ಯಶ್ಚೋಷ್ಣಃ ಪರಿಕೀರ್ತಿತಃ ।
ತೌ ದೇಯೌ ಕಫದುಷ್ಟೇ ತು ಸಂಸೃಷ್ಟೇ ಸಂಯುತಾಗಣಾಃ ||೭೮||

ಅರ್ಥ—ಹ್ರಸ್ವಪಞ್ಚಮೂಲ, ಮಹಾಪಞ್ಚಮೂಲಗಳು ಮತ್ತು ವಾತಹರದ್ರವ್ಯ ಗಣಗಳು ಇವುಗಳನ್ನು ವಾತದುಷ್ಟವ್ರಣಗಳಲ್ಲಿ ಕಷಾಯತೈಲಘೃತಾದಿ ೭ ವಿಧ ಔಷಧ ಕಲ್ಪನೆಗಳ ಮೂಲಕ ಪ್ರಯೋಗಿಸಬೇಕು ; ನ್ಯಗ್ರೋಧಾದಿ ಗಣ ಮತ್ತು ಕಾಕೋಲ್ಯಾದಿ ಗಣದ್ರವ್ಯಗಳಿಂದ ಕಷಾಯಘೃತ ತೈಲಾದಿ ೭ ವಿಧ ಔಷಧಕಲ್ಪನೆಗಳನ್ನು ಮಾಡಿ ಪಿತ್ತ ದುಷ್ಟ ವ್ರಣದಲ್ಲಿ ಪ್ರಯೋಗಿಸಬೇಕು ; ಉಷ್ಣವೀರ್ಯಗಳಾದ ಆರಗ್ವಧಾದಿ ದ್ರವ್ಯಗಳಿಂದ ಕಷಾಯಘೃತಾದಿಗಳನ್ನು ತಯಾರಿಸಿ ಕಫದುಷ್ಟವ್ರಣಗಳಲ್ಲಿ ಪ್ರಯೋಗಿಸಬೇಕು.

ವಾತಾತ್ಮಕಾನುಗ್ರರುಜಾನ್ ಸಾಸ್ರಾವಾನಪಿ ಚ ವ್ರಣಾನ್ ।
ಸಕ್ಷೌಮಯವಸರ್ಪಿರ್ಭಿರ್ಧೂಪನಾಙ್ಗೈಶ್ಚ ಧೂಪಯೇತ್ ||೭೯||
ಪರಿಶುಷ್ಕಾಲ್ಪಮಾಂಸಾನಾಂ ಗಮ್ಭೀರಾಣಾಂ ತಥೈವಚ ।
ಕುರ್ಯಾದುತ್ಸಾದನೀಯಾನಿ ಸರ್ಪಿಃಷ್ಯಾಲೇಪನಾನಿಚ ||೮೦||

ಅರ್ಥ—ವಾತಿಕಗಳಾಗಿ ಅಧಿಕ ನೋವುಳ್ಳ ಸ್ರಾವಯುಕ್ತ ವ್ರಣಗಳನ್ನು ಉಣ್ಣೆ, ಯವೆ, ತುಪ್ಪಗಳೊಡನೆ ಮಿಶ್ರಮಾಡಿದ ಧೂಪದ ದ್ರವ್ಯಗಳಿಂದ ಧೂಪನಮಾಡಿಸಬೇಕು ; ಒಣಗಿದ (ವಾತಿಕ) ಅಲ್ಪಮಾಂಸವುಳ್ಳ, ಗಂಭೀರವ್ರಣಗಳಗೆ (ರಕ್ತಪಿತ್ತಾತ್ಮಕಗಳು) ಮೇಲಕ್ಕೆ ಬರಮಾಡಲು ಉತ್ಸಾದನಸರ್ಪಿಗಳಿಂದ (ಅಪಾಮಾರ್ಗಾಶ್ವಗಂಧಾದಿಘೃತ) ಲೇಪಿಸಬೇಕು.

ಮಾಂಸಾಶಿನಾಂ ಚ ಮಾಂಸಾನಿ ಭಕ್ಷಯೇದ್ವಿಧಿವನ್ನರಃ ।
ವಿಶುದ್ಧಮನಸಸ್ತಸ್ಯ ಮಾಂಸಂ ಮಾಂಸೇನ ವರ್ಧತೇ ||೮೧||

ಅರ್ಥ—ಮಾಂಸಾಹಾರಿಗಳಾದ ಹುಲಿಸಿಂಹಾದಿ ಪ್ರಾಣಿಗಳ ಮಾಂಸವನ್ನು ನಿತ್ಯೋಪಯೋಗಿ ಪ್ರಾಣಿಮಾಂಸವೆಂದು ತಿಳಿಸಿ ರೋಗಿಗೆ ಶೋಕ ಕ್ರೋಧಾದಿಗಳುಂಟಾಗ ದಂತೆ ಮನಸ್ಸು ಶುದ್ಧವಾಗಿರುವಂತೆ ಮಾಡಿದ ಮೇಲೆ ಉಪಯೋಗಿಸುತ್ತಾ ಬಂದರೆ ಮಾಂಸವೃದ್ಧಿಯಾಗುತ್ತದೆ.

ಉತ್ಸನ್ನಮೃದುಮಾಂಸಾನಾಂ ವ್ರಣಾನಾಮವಸಾದನಮ್ ।
ಕುರ್ಯಾದ್ದ್ರವ್ಯೈರ್ಯಥೋದ್ದಿಷ್ಟೈಶ್ಚೂರ್ಣಿತೈರ್ಮಧುನಾ ಸಹ ||೮೨||
ಕಠಿನಾನಾಮಮಾಂಸಾನಾಂ ದುಷ್ಟಾನಾಂ ಮಾತರಿಶ್ವನಾ ।
ವೃದ್ಧಿಕ್ರಿಯಾ ವಿಧಾತವ್ಯಾ ಶೋಣಿತಂ ಚಾಪಿ ಮೋಕ್ಷಯೇತ್ ||೮೩||
ವಾತಘ್ನೌಷಧ ಸಂಯುಕ್ತೈಃ ಸ್ನೇಹೈಃ ಸ್ವೇದಾಂಶ್ಚ ಕಾರಯೇತ್ ।

ಅರ್ಥ—ಮೇಲಕ್ಕೆ ಉಬ್ಬಿದ ಮೃದುಮಾಂಸವು ಅನ್ನಭೇದಿ, ಅರಿದಳ ಮೊದಲಾದವು ಗಳ ಚೂರ್ಣವನ್ನು ಅವುಗಳ ಮೇಲೆ ಉದುರಿಸಿದರೆ ಅಥವಾ ಜೇನುತುಪ್ಪದಲ್ಲಿ ರಂಗಳಿಸಿ

ಲೇಪಿಸಿದರೆ ಕರಗುತ್ತದೆ ; ವಾತಕೋಪದಿಂದ ಗಟ್ಟಿಯಾಗಿ ಅಲ್ಪಮಾಂಸವುಳ್ಳ ವ್ರಣವನ್ನು ಮಧುರ, ಸ್ನಿಗ್ಧ, ಲವಣಮಿಶ್ರವಾದ ಕಾಕೋಲ್ಯಾದಿ ವಾತಹರ ದ್ರವ್ಯಗಳಿಂದ ತಯಾರಿಸಿದ ಸ್ನೆಹಸೇಕಗಳಿಂದ ಮೆತ್ತಗೆ ಮಾಡಬೇಕು ; ವಾತವು ರಕ್ತವನ್ನು ಆಶ್ರಯಿಸಿದರೆ ರಕ್ತ ಮೋಕ್ಷಣವನ್ನೂ ಕಫದೊಡನೆ ಸೇರಿದ್ದರೆ ಸ್ನೇಹಸೇಕಾದಿಗಳನ್ನೂ ಮಾಡಬೇಕು.

ವ್ರಣೇಷು ಮೃದುಮಾಂಸೇಷು ದಾರುಣೀಕರಣಂ ಹಿತಮ್ ||೮೪||
ಧವಪ್ರಿಯಙ್ಗ್ವಶೋಕಾನಾಂ ರೋಹಿಣ್ಯಾಶ್ಚ ತ್ವಚಸ್ತಥಾ ।
ತ್ರಿಫಲಾಧಾತಕೀಪುಷ್ಪರೋಧ್ರಸರ್ಜರಸಾನ್ ಸಮಾನ್ ||೮೫||
ಕೃತ್ವಾ ಸೂಕ್ಷ್ಮಾಣಿ ಚೂರ್ಣಾನಿ ವ್ರಣಂ ತೈರವಚೂರ್ಣಯೇತ್ ।
ಉತ್ಸನ್ನಮಾಂಸಾನ್ ಕಠಿನಾನ್ ಕಣ್ಡೂಯುಕ್ತಾಂಶ್ಚಿರೋತ್ಥಿತಾನ್ ।
ತಥೈವ ಖಲು ದುಃಶೋಧ್ಯಾನ್ ಶೋಧಯೇತ್ ಕ್ಷಾರಕರ್ಮಣಾ ||೮೬||
ಸ್ರವತೋಽಶ್ಮಭವಾನ್ಮೂತ್ರಂ ಯೇ ಚಾನ್ಯೇ ರಕ್ತವಾಹಿನಃ ।
ಸಃ ಶೇಷಚ್ಛಿನ್ನಸಂಧೀಂಶ್ಚ ಸಾಧಯೇದಗ್ನಿಕರ್ಮಣಾ ||೮೭||

ಅರ್ಥ—ಮೃದುಮಾಂಸವಿರುವ ವ್ರಣಗಳಲ್ಲಿ ಮಾಂಸವು ಗಟ್ಟಿಯಾಗುವಂತೆ ಮಾಡಲು ದಿಂಡಿಗ, ಪ್ರೇಙ್ಖಣ (ನೆಳಲು), ಅಶೋಕ, ಕಹಿಸೋರೆ ಇವುಗಳ ತೊಗಟೆ ಮತ್ತು ಸಿಪ್ಪೆಗಳನ್ನು ಪುಡಿಮಾಡಿ ವ್ರಣದ ಮೇಲೆ ಉದುರಿಸುತ್ತಿರಬೇಕು ; ವ್ರಣದ ಮಾಂಸವು ಮೇಲಕ್ಕೆ ಉಬ್ಬಿ ಗಟ್ಟಿಯಾಗಿ ನವೆಯುಳ್ಳದಾಗಿದ್ದು ಬಹಳ ಹಿಂದಿನಕಾಲದ ವ್ರಣವಾಗಿದ್ದರೆ ಮತ್ತು ಶೋಧನೆ ಮಾಡುವುದಕ್ಕಾಗದಿದ್ದರೆ ಕ್ಷಾರಕರ್ಮದಿಂದ ಶೋಧಿಸಬೇಕು ; (ದುಷ್ಟಮಾಂಸವನ್ನು ಕರಗಿಸಬೇಕು.) ಅಶ್ಮರೀಹರಣ ಮಾಡುವಾಗ ಶಸ್ತ್ರದಿಂದ ಭೇದಿಸಿದ ಕಾರಣ ಉಂಟಾದ ವ್ರಣದಲ್ಲಿ ಮೂತ್ರಸ್ರಾವವಾಗುತ್ತಿದ್ದರೆ ಅಂತಹ ವ್ರಣವನ್ನೂ, ರಕ್ತಸ್ರಾವವುಳ್ಳ ವ್ರಣವನ್ನೂ ಪೂರ್ತಿ ಕತ್ತರಿಸಿದ ಅಸ್ಥಿಸಂಧಿಗಳನ್ನೂ ಅಗ್ನಿ (ಕರ್ಮದಿಂದ) ಯಿಂದ ಸುಡಬೇಕು. ಅಶ್ಮರಿಯನ್ನು ಶಸ್ತ್ರಚಿಕಿತ್ಸೆಯಿಂದ ಹೊರಕ್ಕೆ ತೆಗೆದ ಏಳುದಿನಗಳ ಮೇಲೆ ವ್ರಣದ ರಂಧ್ರವು ಸರಿಯಾಗಿ ಕೂಡಿಕೊಳ್ಳದಿದ್ದರೆ ಮೂತ್ರವು ಮೂತ್ರನಾಳದಿಂದ ಸುರಿಯುವುದಿಲ್ಲ. ವ್ರಣರಂಧ್ರದಿಂದಲೇ ಸೋರುತ್ತದೆ ; ಆದರೆ ಸದ್ಯೋವ್ರಣದಲ್ಲಿ ಮೂತ್ರಸ್ರಾವವಾಗುತ್ತಿದ್ದರೆ ಆ ವ್ರಣವನ್ನು ಬೆಂಕಿಯಿಂದ ಸುಡಬಾರದು.

ದುರೂಢತ್ವಾತ್ತು ಶುಕ್ಲಾನಾಂ ಕೃಷ್ಣಕರ್ಮ ಹಿತಂ ಭವೇತ್ ||೮೮||
ಭಲ್ಲಾತಕಾನ್ ವಾಸಯೇತ್ತು ಕ್ಷೀರೇ ಪ್ರಾಙ್ಮೂತ್ರಭಾವಿತಾನ್
ತತೋ ದ್ವಿಧಾ ಭೇದಯಿತ್ವಾ ಲೌಹಕುಮ್ಭೇ ನಿಧಾಪಯೇತ್ ||೮೯||
ಕುಮ್ಭೇಽನ್ಯಸ್ಮಿನ್ನಿಖಾತೇ ತು ತಂ ಕುಮ್ಭಮಥಯೋಜಯೇತ್ ।
ಮುಖಂ ಮುಖೇನ ಸನ್ಧಾಯ ಗೋಮಯೈರ್ದಾಹಯೇತ್ತತಃ ||೯೦||
ಯಃ ಸ್ನೇಹಶ್ಚ್ಯವತೇ ತಸ್ಮಾದ್ಗ್ರಾಹಯೇತ್ತಂ ಶನೈರ್ಭಿಷಕ್ ।
ಗ್ರಾಮ್ಯಾನೂಪಶಫಾನ್ ದಗ್ಧ್ವಾ ಸೂಕ್ಷ್ಮಚೂರ್ಣಾನಿ ಕಾರಯೇತ್ ||೯೧||

ತೈಲೇನಾನೇನ ಸಂಸೃಷ್ಟಂ ಶುಕ್ಲಮಾಲೇಪಯೇದ್ವ್ರಣಮ್ ।
ಭಲ್ಲಾತಕವಿಧಾನೇನ ಸಾರಸ್ನೇಹಾಂಸ್ತು ಕಾರಯೇತ್ ॥೯೨॥
ಯೇ ಚ ಕೇಚಿತ್ಫಲಸ್ನೇಹಾ ವಿಧಾನಂ ತೇಷು ಕೀರ್ತಿತಮ್

ಅರ್ಥ—ವ್ರಣವು ಮಾದುಹೋದ ಮೇಲೆ ವ್ರಣಸ್ಥಾನದ ಚರ್ಮವು ಸರಿಯಾದ ಬಣ್ಣಕ್ಕೆ ತಿರುಗಲು ಮಾಡಬೇಕಾದ ಪಶ್ಚಾತ್ಕರ್ಮವನ್ನು ಹೇಳುತ್ತಾರೆ :—ಶುಕ್ಲವರ್ಣದ ಚರ್ಮವನ್ನು ನೋಡಿದರೆ ಮನಸ್ಸಿಗೆ ಜುಗುಪ್ಸೆಯುಂಟಾಗುತ್ತದೆಯಾಗಿ ಕೃಷ್ಣವರ್ಣದ್ದಾಗುವಂತೆ ಮಾಡುವ ವಿಧಾನವು ಹಿತಕರವು ; ಇದಕ್ಕಾಗಿ ಗೋಮೂತ್ರದಲ್ಲಿ ಗೇರುಬೀಜಗಳನ್ನು ಭಾವನೆ ಮಾಡಿದ ಮೇಲೆ ಅವನ್ನು ಹಾಲಿನಲ್ಲಿ ೭ ದಿನ ಭಾವನೆ ಮಾಡಬೇಕು ; ಅನಂತರ ಅವುಗಳನ್ನು ಎರಡೆರಡಾಗಿ ಕತ್ತರಿಸಿ ಕಬ್ಬಿಣದ ಬಿಂದಿಗೆಗೆ ತುಂಬಿ ನೆಲದಲ್ಲಿ ಕತ್ತಿನವರೆಗೆ ಹೂತಿರುವ ಮತ್ತೊಂದು ಬಿಂದಿಗೆಯ ಮುಖಕ್ಕೆ ಸಣ್ಣಸಣ್ಣ ರಂಧ್ರಗಳುಳ್ಳ ಜಾಲರಿಯನ್ನು ಬಿಗಿದು ಇವೆರಡು ಬಿಂದಿಗೆಗಳ ಮುಖಗಳೂ ಒಂದಕ್ಕೊಂದು ಸಂಧಿಸುವಂತೆ ಮಾಡಿ ಚೀರುಮಣ್ಣು ಮಾಡಬೇಕು ; ಮೇಲಿನ ಕುಂಭವು ಮುಚ್ಚುವಂತೆ ಬೆರಣಿಗಳ ರಾಶಿಯನ್ನು ಮಾಡಿ ಬೆಂಕಿ ಹತ್ತಿಸಿದರೆ ಮೆಲ್ಲಮೆಲ್ಲಗೆ ತೈಲವು ಮೇಲಿನ ಬಿಂದಿಗೆಯಿಂದ ಕೆಳಗಿನ ಬಿಂದಿಗೆಗೆ ತೊಟ್ಟಿಕ್ಕುತ್ತದೆ ; ಈ ರೀತಿಯಲ್ಲಿ ಸಂಗ್ರಹಿಸಿದ ತೈಲಕ್ಕೆ ಕುದುರೆ ಮೊದಲಾದ ಗ್ರಾಮ್ಯಪಶುಗಳ ಮತ್ತು ಎಮ್ಮೆ ಮೊದಲಾದ ಅನೂಪಪಶುಗಳ ಕಾಲಿನ ಗೊರಸುಗಳನ್ನು ಸುಟ್ಟು ತಯಾರಿಸಿದ ಮಸಿಯ ಚೂರ್ಣವನ್ನು ಸೇರಿಸಿ ರಂಗಳಿಸಿ ಬಿಳಿಯದಾದ ವ್ರಣವಿಭಾಗಗಳಿಗೆ ಲೇಪಿಸಬೇಕು ; ಗೇರುತೈಲದ ವಿಧಾನದಂತೆಯೇ ಶುಕ್ಲ ಚರ್ಮಭಾಗವನ್ನು ಕಪ್ಪುಮಾಡುವುದಕ್ಕಾಗಿ ದೇವದಾರ್ವಾದಿ ಸಾರಸ್ನೇಹವನ್ನೂ ಮಗ್ಗಾರೆ ಕಾಯಿ, ತಾರೆ ಕಾಯಿಗಳಿಂದ ಫಲಸ್ನೇಹವನ್ನೂ ತಯಾರಿಸಿ ಮೇಲೆ ಹೇಳಿದ ಪ್ರಾಣಿಗಳ ಗೊರಸುಗಳನ್ನು ಸುಟ್ಟು ಬಂದ ಮಸಿಯ ಚೂರ್ಣವನ್ನು ಮಿಶ್ರಮಾಡಿ ಲೇಪಿಸಬೇಕು.

ದುರೂಢತ್ವಾತ್ತು ಕೃಷ್ಣಾನಾಂ ಪಾಣ್ಡುಕರ್ಮಹಿತಂ ಭವೇತ್ ॥೯೩॥
ಸಪ್ತರಾತ್ರಂ ಸ್ಥಿತಂ ಕ್ಷೀರೇ ಛಾಗಲೇ ರೋಹಿಣೀಫಲಮ್ ।
ತೇನೈವಪಿಷ್ಟಂ ಸುಶ್ಲಕ್ಷ್ಣಂ ಸವರ್ಣಕರಣಂ ಹಿತಮ್ ॥೯೪॥
ನವಂ ಕಪಾಲಿಕಾಚೂರ್ಣಂ ವೈದುಲಂ ಸರ್ಜನಾಮ ಚ ।
ಕಾಸೀಸಂ ಮಧುಕಂ ಚೈವ ಕ್ಷೌದ್ರಯುಕ್ತಂ ಪ್ರಲೇಪಯೇತ್ ॥೯೫॥
ಕಪಿತ್ಥಮುದ್ಧೃತೇ ಮಾಂಸೇ ಮೂತ್ರೇಣಾಜೇನ ಪೂರಯೇತ್ ।
ಕಾಸೀಸಂ ರೋಚನಾಂ ತುತ್ಥಂ ಹರಿತಾಳಂ ಮನಃಶಿಲಾಮ್ ॥೯೬॥
ವೇಣುನಿರ್ಲೇಖನಂ ಚಾಪಿ ಪ್ರಪುನ್ನಾಡರಸಾಞ್ಜನಮ್ ।
ಅಧಸ್ತಾದರ್ಜುನಸ್ಯೈತನ್ಮಾಂಸಂ ಭೂಮೌ ನಿಧಾಪಯೇತ್ ॥೯೭॥
ಮಾಸಾದೂರ್ಧ್ವಂ ತತಸ್ತೇನ ಕೃಷ್ಣಮಾಲೇಪಯೇದ್ವ್ರಣಮ್ ।

ಅರ್ಥ—ಕಪ್ಪಾಗಿರುವ ವ್ರಣಭಾಗವನ್ನು ಪಾಣ್ಡುಕರ್ಮದಿಂದ ಸವರ್ಣವನ್ನಾಗಿ

ಮಾಡುವ ವಿಧಾನವನ್ನು ತಿಳಿಸುತ್ತಾರೆ. ಚರ್ಮವು ಅತಿ ಕಪ್ಪಾಗಿದ್ದರೂ ಮನಸ್ಸಿಗೆ ವಿಷಾದವಾಗುತ್ತದೆ, ಅದರ ಪರಿಹಾರಕ್ಕಾಗಿ ಪಾಣ್ಡುಕರ್ಮಮಾಡಿ ಚರ್ಮದ ಸ್ವಾಭಾವಿಕ ಬಣ್ಣವುಂಟಾಗುವಂತೆ ಮಾಡಬೇಕು ; ಅದಕ್ಕಾಗಿ ಆಡಿನ ಹಾಲಿನಲ್ಲಿ ಏಳುದಿನಗಳವರೆಗೆ ಭಾವನೆ ಮಾಡಿದ ಅಣಿಲೆಕಾಯಿ (ಕೆಲವರು ಕಹಿಸೋರೆಹಣ್ಣು ಎಂದು ಹೇಳುತ್ತಾರೆ.)ಗಳನ್ನು ಆಡಿನ ಹಾಲಿನಿಂದಲೇ ಅರೆದು ಕಲ್ಕಮಾಡಿ ಬಳಿದರೆ ಸ್ವಾಭಾವಿಕ ಚರ್ಮದ ಬಣ್ಣವುಂಟಾಗುತ್ತದೆ, ಬೇಯಿಸದಿರುವ ಒಣಗಿದ ಮಡಕೆಯ ಚೂರನ್ನು ನುಣ್ಣಗೆ ಪುಡಿಮಾಡಿ ಹಬ್ಬೆಯ ಬೇರಿನ ಚೂರ್ಣ, ಸರ್ಜಮರದ ತೊಗಟೆ, ಅನ್ನಭೇದಿ, ಗೋರೋಚನ, ಮೈಲುತುತ್ಥ, ಅರಿದಳ, ಮಣಶಿಲೆ, ಬಿದಿರಿನ ಮೇಲಿನ ಸಿಪ್ಪೆ, ಚಗತೆಯ ಬೀಜ, ರಸಾಂಜನ ಇವುಗಳ ಸೂಕ್ಷ್ಮ ಚೂರ್ಣಗಳನ್ನು ಒಟ್ಟು ಸೇರಿಸಿ ಮತ್ತಿಯಮರದ ಬುಡದ ಕೆಳಗಿನ ಭೂಮಿಯಲ್ಲಿ ಒಂದು ತಿಂಗಳವರೆಗೆ ಹೂತಿಟ್ಟು ತಿಂಗಳಾದ ಮೇಲೆ ಭೂಮಿಯಿಂದ ಹೊರಕ್ಕೆ ತೆಗೆದು ಕಪ್ಪಾದ ವ್ರಣದ ಮೇಲೆ ಲೇಪಿಸಬೇಕು.

ಕುಕ್ಕುಟಾಣ್ಡ ಕಪಾಲಾನಿ ಕಥಕಂ ಮಧುಕಂ ಸಮಮ್ ॥೯೮॥
ತಥಾ ಸಮುದ್ರಮಣ್ಡೂಕೀಮಣಿ ಚೂರ್ಣಂ ಚ ದಾಪಯೇತ್ ।
ಗುಟಿಕಾಮೂತ್ರಪಿಷ್ಟಾಸ್ತಾ ವ್ರಣಾನಾಂ ಪ್ರತಿಸಾರಣಮ್ ॥೯೯॥

ಅರ್ಥ—ಕೋಳಿಯಮೊಟ್ಟೆಯ ಮೇಲಿನ ಚಿಪ್ಪು, ಚಿಲ್ಲದಬೀಜ, ಅತಿಮಧುರ, ಇವು ಸಮಭಾಗ ನೀರಿನಲ್ಲಿ ಸಿಕ್ಕುವ ಕ್ಷುದ್ರಶಂಖಗಳು (ಮುತ್ತಿನಚಿಪ್ಪು ಎಂದು ಬ್ರಹ್ಮದೇವನ ಮತ, ಮುತ್ತಿನ ಚೂರ್ಣವೆಂದು ಜೆಜ್ಜಟನ ಮತ) ಇವೆಲ್ಲವನ್ನೂ ಚೂರ್ಣಮಾಡಿ ಗೋಮೂತ್ರದಿಂದ ಅರೆದು ಗುಳಿಗೆಗಳನ್ನು ಮಾಡಿಟ್ಟುಕೊಂಡು ವ್ರಣ ಚರ್ಮವನ್ನು ಉಜ್ಜಬೇಕು ; ಸರಿಯಾದ ಬಣ್ಣ ಬರುತ್ತದೆ.

ಹಸ್ತಿದನ್ತಮಸೀಂ ಕೃತ್ವಾ ಮುಖ್ಯಂ ಚೈವ ರಸಾಞ್ಜನಮ್ ।
ರೋಮಾಣ್ಯೇತೇನ ಜಾಯನ್ತೇ ಲೇಪಾತ್ಪಾಣಿತಲೇಷ್ವಪಿ ॥೧೦೦॥
ಚತುಷ್ಪದಾನಾಂ ತ್ವಗ್ರೋಮಖುರಶೃಙ್ಗಾಸ್ಥಿಭಸ್ಮನಾ ।
ತೈಲಾಕ್ತಾ ಚೂರ್ಣಿತಾ ಭೂಮಿರ್ಭವೇದ್ರೋಮವತೀ ಪುನಃ ॥೧೦೧॥
ಕಾಸೀಸಂ ನಕ್ತಮಾಲಸ್ಯ ಪಲ್ಲವಾಂಶ್ಚೈವ ಸಂಹರೇತ್ ।
ಕಪಿತ್ಥರಸಪಿಷ್ಟಾನಿ ರೋಮಸಞ್ಜನನಂ ಪರಮ್ ॥೧೦೨॥

ಅರ್ಥ—ಆನೆಯ ಹಲ್ಲನ್ನು ಸುಟ್ಟು ಬಂದ ಮಸಿಯನ್ನೂ ರಸಾಞ್ಜನವನ್ನೂ ಆಡಿನ ಹಾಲಿನಲ್ಲಿ ಅರೆದು ಅಂಗೈಗಳಿಗೆ ಲೇಪಿಸಿದರೆ ರೋಮಗಳು ಹುಟ್ಟುತ್ತವೆ ; ಕುದುರೆ, ಹಸು, ಎಮ್ಮೆಮೊದಲಾದ ನಾಲ್ಕು ಕಾಲುಳ್ಳ ಪ್ರಾಣಿಗಳ ಚರ್ಮ, ಕೂದಲು, ಗೊರಸು, ಕೊಂಬು, ಮೂಳೆಗಳನ್ನು ಸುಟ್ಟು ಆ ಬೂದಿಯನ್ನು ಎಳ್ಳೆಣ್ಣೆಯಲ್ಲಿ ರಂಗಳಿಸಿ ಲೇಪಿಸಿದ ಶರೀರಭಾಗದಲ್ಲಿ ಮತ್ತೆ ರೋಮಗಳು ಹುಟ್ಟುತ್ತವೆ ; ಅನ್ನಭೇದಿ, ಮತ್ತು ಹೊಂಗೆಚಿಗುರುಗಳನ್ನು

ಬೇಲದಸೊಪ್ಪಿನ ರಸದಿಂದ ಅರೆದು ಕಲ್ಕಮಾಡಿ ಲೇಪಿಸಿದರೆ ಕೂದಲು ಹುಟ್ಟುತ್ತದೆ. ಇದು ಕೂದಲು ಬೆಳೆಯುವುದಕ್ಕೆ ಯೋಗ್ಯವಾದ ಔಷಧಿಯು.

ರೋಮಾಕೀರ್ಣೋಯಸ್ತು ನ ಸಮ್ಯಗುಪರೋಹತಿ ।
ಕ್ಷುರಕರ್ತರಿಸಂದಂಶೈಸ್ತಸ್ಯ ರೋಮಾಣಿ ನಿರ್ಹರೇತ್ ॥೧೦೩॥
ಶಙ್ಖಚೂರ್ಣಸ್ಯ ಭಾಗೌ ದ್ವೌ ಹರಿತಾಳಂ ಚ ಭಾಗಿಕಮ್ ।
ಶುಕ್ತೇನ ಸಹ ಪಿಷ್ಟಾನಿ ಲೋಮಶಾತನಮುತ್ತಮಮ್ ॥೧೦೪॥
ತೈಲಂ ಭಲ್ಲಾತಕಸ್ಯಾಥ ಸ್ನುಹೀಕ್ಷೀರಂ ತಥೈವ ಚ ।
ಪ್ರಗೃಹ್ಯೈಕತ್ರಮತಿಮಾನ್ ರೋಮಶಾತನಮುತ್ತಮಮ್ ॥೧೦೫॥
ಕದಳೀದೀರ್ಘವೃನ್ತಾಭ್ಯಾಂ ಭಸ್ಮಾಲಂ ಲವಣಂ ಶಮೀ ।
ಬೀಜಂ ಶೀತೋದಪಿಷ್ಟಂ ವಾ ರೋಮಶಾತನಮಾಚರೇತ್ ॥೧೦೬॥
ಆಗಾರಗೋಧಿಕಾಪುಚ್ಛಂ ರಮ್ಭಾಲಂ ಬೀಜಮೈಙ್ಗುದಮ್ ।
ದಗ್ಧ್ವಾ ತದ್ಭಸ್ಮತೈಲಾಮ್ಬು ಸೂರ್ಯಪಕ್ವಂ ಕಚಾನ್ತಕೃತ್ ॥೧೦೭॥

ಅರ್ಥ—ರೋಮಗಳು ಅಧಿಕವಾಗಿರುವ ವ್ರಣಗಳು ಸರಿಯಾಗಿ ಮಾಯದಿರುವಾಗ ಕ್ಷೌರದಕತ್ತಿ, ಕರ್ತರಿ, ಚಿಮುಟಗಳಿಂದ ಆ ರೋಮಗಳನ್ನು ಬೋಳಿಸಿಯೋ ಹಿರಿದೋ ತೆಗೆದುಬಿಡಬೇಕು ; ಶಙ್ಖಚೂರ್ಣ ೨ ಭಾಗ, ಅರಿದಳ ೧ ಭಾಗ, ಮುತ್ತಿನ ಚಿಪ್ಪಿನ ಚೂರ್ಣ ೧ ಭಾಗ ಈ ರೀತಿಯಾಗಿ ಸೇರಿಸಿ ನೀರಿನಲ್ಲಿ ಕಲಸಿದ ಕಲ್ಕವು ರೋಮಗಳನ್ನು ಉದುರಿಸಲು ಉತ್ತಮವಾಗಿದೆ. ಗೇರೆಣ್ಣೆ ಮತ್ತು ಮುಂಡುಗಳ್ಳಿಯ ಹಾಲುಗಳನ್ನು ರಂಗಳಿಸಿ ಬಳಿದರೆ ಕೂದಲು ಉದುರಿಹೋಗುತ್ತದೆ ; ಬಾಳೆಗೆಡ್ಡೆ ಹೆಮ್ಮರದ ತೊಕ್ಕುಗಳ ಭಸ್ಮ, ಅರಿದಳ, ಸೈಂಧವ, ಬನ್ನಿಯಬೀಜ ಇವುಗಳ ಚೂರ್ಣವನ್ನು ತಣ್ಣೀರಿನಲ್ಲಿ ಅರೆದು ಲೇಪಿಸಿದರೆ ಕೂದಲು ಉದುರುತ್ತದೆ ; ಕೆಂಪುಹಲ್ಲಿಯ ಬಾಲ, ಬಾಳೆಗೆಡ್ಡೆ, ಅರಿದಳ, ಇಂಗಳದ ಬೀಜ ಇವುಗಳನ್ನು ಸುಟ್ಟು ಆ ಭಸ್ಮವನ್ನು ತಿಲತೈಲ ಮತ್ತು ನೀರುಗಳಿಂದ ಕಲಸಿ (ಸೂರ್ಯಪುಟೆ) ಬಿಸಲಿನಲ್ಲಿಟ್ಟು ಪಾಕ ಮಾಡಿ ಲೇಪಿಸಿದರೆ ಕೂದಲು ಉದುರಿ ಬೀಳುತ್ತದೆ.

ವಾತದುಷ್ಟೋ ವ್ರಣೋ ಯಸ್ತು ರೂಕ್ಷಶ್ಚಾತ್ಯರ್ಥವೇದನಃ ।
ಅಧಃಕಾಯೇ ವಿಶೇಷೇಣ ತತ್ರಬಸ್ತಿರ್ವಿಧೀಯತೇ ॥೧೦೮॥
ಮೂತ್ರಾಘಾತೇ ಮೂತ್ರದೋಷೇ ಶುಕ್ರದೋಷೇಽಶ್ಮರೀವ್ರಣೇ ।
ತಥೈವಾರ್ತವದೋಷೇ ಚ ಬಸ್ತಿರಪ್ಯುತ್ತರೋ ಹಿತಃ ॥೧೦೯॥
ಯಸ್ಮಾತ್ ಶುಧ್ಯತಿ ಬನ್ಧೇನ ವ್ರಣೋ ಯಾತಿ ಚ ಮಾರ್ದವಮ್ ।
ರೋಹತ್ಯಪಿ ಚ ನಿಃಶಙ್ಕಸ್ತಸ್ಮಾದ್ಬನ್ಧೋ ವಿಧೀಯತೇ ॥೧೧೦॥

ಅರ್ಥ—ವಾತಪ್ರಕೋಪದಿಂದ ಅಧಃಕಾಯದಲ್ಲಿ ವಿಶೇಷವಾಗಿ ಉಂಟಾದ ವ್ರಣವು ರೂಕ್ಷವಾಗಿ ಅತ್ಯಂತ ವೇದನೆಯುಳ್ಳದ್ದಾದರೆ ನಿರೂಹಬಸ್ತಿಯನ್ನೂ ಸ್ನೇಹ ಬಸ್ತಿಯನ್ನೂ ಪ್ರಯೋಗಿಸಿದರೆ ಹಿತವಾಗುತ್ತದೆ ; ವ್ರಣನಿಮಿತ್ತದಿಂದ ಮೂತ್ರಘಾತ, ಮೂತ್ರದೋಷ,

ಶುಕ್ರದೋಷ, ಅಶ್ಮರೀವ್ರಣ, ಆರ್ತವದೋಷಗಳುಂಟಾದರೆ ಉತ್ತರ ಬಸ್ತಿಯನ್ನು ಪ್ರಯೋಗಿಸುವುದು ಹಿತಕರವು; ವ್ರಣದಿಂದ ದೋಷಗಳು ಸ್ರಾವವಾಗಿ ಮೃದುವಾಗುತ್ತದೆ, ಆಘಾತ–ನೊಣ ಸೊಳ್ಳೆಗಳು ಮುತ್ತುವುದು ಇವೇ ಮೊದಲಾದ ತೊಂದರೆಗಳಿಲ್ಲದೆ ಸುಖವಾಗಿ ವ್ರಣವು ಮಾಯುತ್ತದೆಯಾದಕಾರಣ ವ್ರಣವನ್ನು ಬಂಧನ ಮಾಡಬೇಕು ಎಂದು ವಿಧಿಸಿರುತ್ತಾರೆ.

ಶ್ಲೋ—ಸ್ಥಿರಾಣಾಮಲ್ಪಮಾಂಸಾನಾಂ ರೌಕ್ಷ್ಯಾದನುಪರೋಹತಾಮ್ ।
ಪತ್ರದಾನಂ ಭವೇತ್ಕಾರ್ಯಂ ಯಥಾದೋಷಂ ಯರ್ಥತು ಚ ॥೧೧೧॥
ಏರಣ್ಡಭೂರ್ಜಪೂತೀಕಹರಿದ್ರಾಣಾಂ ತು ವಾತಜೇ ।
ಪತ್ರಮಾಶ್ವಬಲಂ ಯಚ್ಚ ಕಾಶ್ಮರೀಪತ್ರಮೇವಚ ॥೧೧೨॥
ಪತ್ರಾಣಿ ಕ್ಷೀರವೃಕ್ಷಾಣಾಮೌದಕಾನಿ ತಥೈವ ಚ ।
ದೂಷಿತೇ ರಕ್ತಪಿತ್ತಾಭ್ಯಾಂ ವ್ರಣೇ ದದ್ಯಾದ್ವಿಚಕ್ಷಣಃ ॥೧೧೩॥
ಪಾಠಾಮೂರ್ವಾಗುಡೂಚೀನಾಂ ಕಾಕಮಾಚೀಹರಿದ್ರಯೋಃ ।
ಪತ್ರಂ ಚ ಶುಕನಾಸಾಯಾ ಯೋಜಯೇತ್ಕಫಜೇ ವ್ರಣೇ ॥೧೧೪॥
ಅಕರ್ಕಶಮವಿಚ್ಛಿನ್ನಮಜೀರ್ಣಂ ಸುಕುಮಾರಕಮ್ ।
ಅಜನ್ತುಜಗ್ಧಂ ಮೃದು ಚ ಪತ್ರಂ ಗುಣವದುಚ್ಯತೇ ॥೧೧೫॥
ಸ್ನೇಹಮೌಷಧಸಾರಂ ಚ ಪಟ್ಟವಸ್ತ್ರಾನ್ತರೀಕೃತಮ್ ।
ನಾದತ್ತೇ ಯತ್ತತಃ ಪತ್ರಂ ಲೇಪಸ್ಯೋಪರಿ ದಾಪಯೇತ್ ॥೧೧೬॥
ಶೈತ್ಯೋಷ್ಣಜನನಾರ್ಥಾಯ ಸ್ನೇಹಸಂಗ್ರಹಣಾಯಚ ।
ದತ್ತೌಷಧೇಷು ದಾತವ್ಯಂ ಪತ್ರಂ ವೈದ್ಯೇನ ಜಾನತಾ ॥೧೧೭॥

ಅರ್ಥ—ಚಲಿಸದಿರುವ ಸ್ವಲ್ಪ ಮಾಂಸವುಳ್ಳ ವ್ರಣಗಳು ರೂಕ್ಷತೆಯಿಂದ ಮಾಯದೆ ಇದ್ದರೆ ದೋಷಕ್ಕೆ ತಕ್ಕಂತೆಯೂ ಋತುವಿಗೆ ತಕ್ಕಂತೆಯೂ ಯೋಗ್ಯಗಳಾದ ಎಲೆಗಳನ್ನು ವ್ರಣಲೇಪನದ ಮೇಲೆ ಮುಚ್ಚಿ ಬಂಧನ ಮಾಡಬೇಕು; ವಾತಜ ವ್ರಣದಲ್ಲಿ ಹರಳೆಲೆ, ಭರ್ಜಪತ್ರೆ, ತವಸದೆಲೆ, ಅರಿಶಿನದೆಲೆ ಇವುಗಳನ್ನೂ, (ಅಶ್ವಬಲವೆಂದರೆ ಬಸಳೆಸೊಪ್ಪೆಂದು ಡಲ್ಹಣರೂ, ಮೇಥಿಕಾಕಾರವೃಕ್ಷವೆಂದು ಬ್ರಹ್ಮದೇವನೂ ಹೇಳುತ್ತಾರೆ) ಆ ಎಲೆಯನ್ನೂ ಶಿವನಿ, ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಮತ್ತು ತಾವರೆ ಎಲೆಗಳನ್ನೂ ರಕ್ತಪಿತ್ತ ವ್ರಣದಲ್ಲೂ; ಕಫವ್ರಣದಲ್ಲಿ ಅಗಳುಶುಂಠಿ, ಕೊರಟಿಗೆ ಅಮೃತವಳ್ಳಿ, ಗಣಿಕೆ, ಅರಿಶಿನ ಮತ್ತು ಮರದರಿಶಿನ ಮತ್ತು ಶುಕನಾಸ (ಹೆಮ್ಮರವೆಂದು ಈ ದೇಶದಲ್ಲೂ ಚರ್ಮಕಾರಘಟವೆಂದು ಕನ್ಯಾಕುಬ್ಜದಲ್ಲೂ ಚರ್ಮಕಾರಜವನ್ನೂ ಅಥವಾ ಪಲಾಶವೆಂದು ಮಾಲವದಲ್ಲೂ ಪ್ರಸಿದ್ಧವಾಗಿದೆ.) ಮೊದಲಾದ ಎಲೆಗಳನ್ನೂ ವ್ರಣಬಂಧನ ಮಾಡಲು ಉಪಯೋಗಿಸಬೇಕು; ಒರಟಾಗಿ, ಹರಿದು, ಅತಿ ಹಳೆಯದಾಗಿ, ಹುಳುಗಳು ತಿಂದಿರುವ ಎಲೆಗಳು ವ್ರಣಬಂಧನಕ್ಕೆ ಅಯೋಗ್ಯವಾದವುಗಳೆನ್ನುತ್ತಾರೆ; ವ್ರಣಲೇಪನದ ಮೇಲೆ ಪತ್ರಗಳನ್ನು ಮುಚ್ಚುವುದರಿಂದ ಸ್ನೇಹಗುಣವನ್ನೂ, ಔಷಧದ ಸಾರವನ್ನೂ ಹೊರಕ್ಕೆ ಪಟ್ಟ

ವಸ್ತ್ರಬಂಧನವು ಹೀರಿಕೊಳ್ಳದಂತೆ ಮಾಡುತ್ತದಲ್ಲದೆ ಕೇವಲ ವ್ರಣಕ್ಕೇ ಉಪಯೋಗವಾಗಲು ಸಹಕರಿಸುತ್ತದೆ. ಈ ಕಾರಣದಿಂದ ಕುಶಲನಾದ ಶಸ್ತ್ರವೈದ್ಯನು ವಾತಪಿತ್ತ ವ್ರಣದಲ್ಲಿ ಶೀತವುಂಟಾಗುವಂತೆಯೂ ವಾತ ಕಫ ಮತ್ತು ಕಫವ್ರಣಗಳಲ್ಲಿ ಶಾಖವೂ ಸ್ನೇಹವೂ ಉಂಟಾಗುವುದಕ್ಕೂ ವ್ರಣದ ಮೇಲೆ ಔಷಧಲೇಪನ ಮಾಡಿ ಅದನ್ನು ಮುಚ್ಚಲು ಯೋಗ್ಯ ಪತ್ರಗಳನ್ನು ಮುಚ್ಚಿ ವ್ರಣಬಂಧನಮಾಡಬೇಕು.

ಮಕ್ಷಿಕಾವ್ರಣಜಾತಸ್ಯ ನಿಃಕ್ಷಿಪನ್ತಿ ಯದಾ ಕ್ರಿಮೀನ್ ।
ಶ್ವಯಥುರ್ಭಕ್ಷಿತೇ ತೈಸ್ತು ಜಾಯತೇ ಭೃಶದಾರುಣಃ ॥೧೧೮॥
ತೀವ್ರಾ ರುಜೋ ವಿಚಿತ್ರಾಶ್ಚ ರಕ್ತಸ್ರಾವಾಶ್ಚ ಜಾಯತೇ ।
ಸುರಸಾದಿರ್ಹಿತಸ್ತತ್ರ ಧಾವನೇ ಪೂರಣೇ ತಥಾ ॥೧೧೯॥
ಸಪ್ತಪರ್ಣಕರಞ್ಜಾರ್ಕನಿಮ್ಬರಾಜಾದನತ್ವಚಃ ।
ಹಿತಾಗೋಮೂತ್ರ ಪಿಷ್ಟಾಶ್ಚ ಸೇಕಃ ಕ್ಷಾರೋದಕೇನ ವಾ ॥೧೨೦॥
ಪ್ರಚ್ಛಾದ್ಯಮಾಂಸಪೇಶ್ಯಾ ಚ ಕ್ರಿಮೀನಪಹರೇದ್ವ್ರಣಾತ್ ।
ವಿಂಶತಿಂ ಕ್ರಿಮಿಜಾತೀಂಸ್ತು ವಕ್ಷ್ಯಾಮ್ಯುಪರಿ ಭಾಗಶಃ ॥೧೨೧॥

ಅರ್ಥ—ನೊಣಗಳು ವ್ರಣದ ಮೇಲೆ ಕೂತು ಮೊಟ್ಟೆಗಳನ್ನಿಟ್ಟು ಅವು ಕ್ರಿಮಿಗಳಾಗಿ ವ್ರಣಭಕ್ಷಣೆ ಮಾಡಿದರೆ ಅತಿ ಕಷ್ಟಕರವಾದ ವ್ರಣಶೋಥವುಂಟಾಗಿ ಉರಿಯುವುದು, ನವೆಯಾಗುವುದು ಇವೇ ಮೊದಲಾದ ಬಾಧೆಗಳೂ, ರಕ್ತಸ್ರಾವವೂ ಉಂಟಾಗುತ್ತವೆ ; ಆಗ ವ್ರಣವನ್ನು ತೊಳೆಯುವುದಕ್ಕೆ ಸುರಸಾದಿ ಗಣದ್ರವ್ಯಗಳ ಕಷಾಯವನ್ನೂ ವ್ರಣದ ಒಳಭಾಗಕ್ಕೆ ತುಂಬಲು ಏಳಿಲೆಗ (ಮದ್ದಾಲೆತೊಗಟೆ), ಹೊಂಗೆಬೀಜ, ಎಕ್ಕದ ಬೇರಿನ ತೊಗಟೆ, ಬೇವಿನಸೊಪ್ಪು ಮತ್ತು ತೊಗಟೆ, ಮರಹಾಲೆ ತೊಗಟೆ ಇವುಗಳನ್ನು ಹಸುವಿನ ಗಂಜಳದಲ್ಲಿ ಅರೆದು ಕಲ್ಕಮಾಡಿ ಲೇಪಿಸಬೇಕು ; ಕ್ಷಾರಮಿಶ್ರ ಮಾಡಿದ ನೀರಿನಿಂದ ವ್ರಣದಮೇಲೆ ಸೇಚನೆ ಮಾಡಬೇಕು ; ವ್ರಣವನ್ನು ಶಸ್ತ್ರದಿಂದ ಕತ್ತರಿಸಿ ಮಾಂಸಖಂಡದಲ್ಲಿ ಅಡಗಿಕೊಂಡಿರುವ ಕ್ರಿಮಿಗಳನ್ನು ಹೊರಕ್ಕೆ ತೆಗೆಯಬೇಕು ; ಉತ್ತರಸ್ಥಾನದಲ್ಲಿ ೨೦ ಬಗೆಯ ಕ್ರಿಮಿಗಳನ್ನು ವಿವರಿಸುತ್ತೇವೆ.

ದೀರ್ಘಕಾಲಾತುರಾಣಾಂ ತು ಕೃಶಾನಾಂ ವ್ರಣಶೋಷಿಣಾಮ್ ।
ಬೃಂಹಣೀಯೋ ವಿಧಿಃ ಸರ್ವಃ ಕಾಯಾಗ್ನಿಂ ಪರಿರಕ್ಷತಾ ॥೧೨೨॥
ವಿಷಜುಷ್ಟಸ್ಯ ವಿಜ್ಞಾನು ವಿಷನಿಶ್ಚಯಮೇವ ಚ ।
ಚಿಕಿತ್ಸಿತಂ ಚ ವಕ್ಷ್ಯಾಮಿ ಕಲ್ಪೇತು ಪ್ರತಿಭಾಗಶಃ ॥೧೨೩॥

ಅರ್ಥ—ಅನೇಕ ಕಾಲದಿಂದ ವ್ರಣಪೀಡಿತರಾಗಿ ಕೃಶದೇಹವುಳ್ಳವರಾಗಿರುವವರಿಗೂ, ವ್ರಣದಿಂದ ಕ್ಷೀಣರಾದವರಿಗೂ ಶರೀರವನ್ನೂ ಕಾಯಾಗ್ನಿಯನ್ನೂ ಕಾಪಾಡಿಕೊಂಡು (ಶರೀರಬಲ, ಅಗ್ನಿಬಲಗಳು ಕ್ಷೀಣವಾಗದಂತೆ ಜಾಗರೂಕತೆಯಿಂದಿರಬೇಕು.) ಸಕಲವಾದ ದೇಹಬೃಂಹಣಕರ ವಿಧಾನಗಳನ್ನೂ ಅನುಸರಿಸಬೇಕು ; ವಿಷಪೀಡಿತ

ರೋಗಿಯ ಮತ್ತು ವಿಷದ ಲಕ್ಷಣಗಳನ್ನೂ ಚಿಕಿತ್ಸಾವಿಧಾನಗಳನ್ನೂ ಕಲ್ಪ ಸ್ಥಾನದಲ್ಲಿ ಪ್ರತ್ಯೇಕವಾಗಿ ವಿವರಿಸುತ್ತೇವೆ.

ಕಣ್ಡೂಮನ್ತಃ ಸಶೋಫಾಶ್ಚ ಯೇಚ ಜತ್ರೂಪರಿವ್ರಣಾಃ ।
ಶಿರೋವಿರೇಚನಂ ತೇಷು ವಿದಧ್ಯಾತ್ಕುಶಲೋ ಭಿಷಕ್ ॥೧೨೪॥
ರುಜಾವನ್ತೋಽನಿಲಾವಿಷ್ಟಾ ರೂಕ್ಷಾ ಯೇ ಚೋರ್ಧ್ವಜತ್ರುಜಾಃ ।
ವ್ರಣೇಷು ತೇಷು ಕರ್ತವ್ಯಂ ನಸ್ಯಂ ವೈದ್ಯೇನ ಜಾನತಾ ॥೧೨೫॥

ಅರ್ಥ—ಕುಶಲನಾದ ವೈದ್ಯನು ಜತ್ರುವಿನ (ಕತ್ತಿನ ಮೇಲ್ಭಾಗದಲ್ಲಿ) ನವೆಯಿಂದಲೂ ಶೋಫದಿಂದಲೂ ಕೂಡಿದ ವ್ರಣಗಳಿಗೆ ಶಿರೋವಿರೇಚನವನ್ನೂ ಜತ್ರುವಿನ ಮೇಲ್ಗಡೆಯ ವ್ರಣಗಳು ನೋವಿನಿಂದ ಕೂಡಿ ವಾತಪ್ರಕೋಪವುಳ್ಳವಾಗಿ ರೂಕ್ಷಗಳಾಗಿದ್ದರೆ ನಸ್ಯಕರ್ಮವನ್ನೂ ಮಾಡಿಸಬೇಕು.

ದೋಷಪ್ರಚ್ಯಾವನಾರ್ಥಾಯ ರುಜಾದಾಹಕ್ಷಯಾಯಚ ।
ಜಿಹ್ವಾದನ್ತಸಮುತ್ಥಸ್ಯ ಹರಣಾರ್ಥಂ ಮಲಸ್ಯ ಚ ॥೧೨೬॥
ಶೋಧನೋ ರೋಪಣಶ್ಚೈವ ವ್ರಣಸ್ಯ ಮುಖಜಸ್ಯ ವೈ ।
ಉಷ್ಣೋ ವಾ ಯದಿ ವಾ ಶೀತಃ ಕವಳಗ್ರಹ ಇಷ್ಯತೇ ॥೧೨೭॥
ಊರ್ಧ್ವಜತ್ರುಗತಾನ್ ರೋಗಾನ್ ವ್ರಣಾಂಶ್ಚ ಕಫವಾತಜಾನ್ ।
ಶೋಫಸ್ರಾವರುಜಾಯುಕ್ತಾನ್ ಧೂಮಪಾನೈರುಪಾಚರೇತ್ ॥೧೨೮॥
ಕ್ಷತೋಷ್ಮಣೋ ನಿಗ್ರಹಾರ್ಥಂ ಸನ್ಧಾನಾರ್ಥಂ ತಥೈವ ಚ ।
ಸದ್ಯೋವ್ರಣೇಷ್ವಾಯತೇಷು ಕ್ಷೌದ್ರಸರ್ಪಿರ್ವಿಧೀಯತೇ ॥೧೨೯॥
ಅವಗಾಢಾಸ್ತ್ವಣುಮುಖಾ ಯೇ ವ್ರಣಾಃ ಶಲ್ಯಪೀಡಿತಾಃ ।
ನಿವೃತ್ತಹಸ್ತೋದ್ಧರಣಾ ಯನ್ತ್ರಂ ತೇಷು ವಿಧೀಯತೇ ॥೧೩೦॥

ಅರ್ಥ—ಮುಖಪಾಕ (ಮುಖವ್ರಣ) ದ ದೋಷಹರಣ ಮಾಡಲು ತ್ರಿಫಲೆ ದ್ರಾಕ್ಷಾದಿಗಳ ಕಷಾಯದಿಂದಲೂ, ನೋವು, ಉರಿತಗಳು ನಿವಾರಣೆಯಾಗಲು ವಾತಪಿತ್ತಹರಗಳಾದ ಚಂದನ, ಲಾವಂಚ, ಪರ್ಪಾಟಕಾದಿಗಳ ಕಷಾಯದಿಂದಲೂ, ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯದಿಂದಲೂ, ವ್ರಣರೋಪಣವಾಗಲು ರೋಪಣದ್ರವ್ಯಗಳಾದ ಕಗ್ಗಲಿ, ಪಗಡೆತೊಗಟೆ ಮೊದಲಾದುವುಗಳ ಕಷಾಯದಿಂದಲೂ, ಹಲ್ಲು, ನಾಲಿಗೆಗಳಲ್ಲಿ ಮೆತ್ತಿರುವ ಮಲನಿವಾರಣೆಗಾಗಿ ಹೊಂಗೆ, ಕಗ್ಗಲಿ ಮೊದಲಾದುವುಗಳ ತೊಗಟೆಯ ಕಷಾಯ, ತಿಲತೈಲ, ಜೇನುತುಪ್ಪಗಳನ್ನೂ ದೋಷಪ್ರಕೋಪಕ್ಕೆ ತಕ್ಕಂತೆ ವಾತಕಫ ಕಫಗಳಲ್ಲಿ ಬಿಸಿಯಾಗಿಯೂ ವಾತಪಿತ್ತ, ಪಿತ್ತರಕ್ತಗಳಲ್ಲಿ ತಣ್ಣಗೂ ಶೀತಲವಾಗುವಂತೆಯೂ ಕವಳಗ್ರಹಗಳನ್ನು ಮಾಡಿಸಬೇಕು ; ಕತ್ತಿನಮೇಲಿನ ರೋಗಗಳಿಗೂ (ಕಾಸ, ಶ್ವಾಸ ಮೊದಲಾದುವು) ಕಫವಾತ ಜನಿತ ವ್ರಣಗಳಿಗೂ ಶೋಫಸ್ರಾವ ನೋವುಗಳಿಂದ ಪೀಡಿಸಲ್ಪಡುವಾಗ ಧೂಮಪಾನವನ್ನೂ ಮಾಡಿಸಬೇಕು ; ಅಭಿಘಾತ

ದಿಂದುಂಟಾದ ವ್ರಣದಲ್ಲಿ ಬಿಸಿಯನ್ನು ಹೋಗಲಾಡಿಸುವುದಕ್ಕೂ ವ್ರಣಭಾಗಗಳ ಚರ್ಮವು ಸರಿಯಾಗಿ ಸೇರಿಕೊಳ್ಳುವುದಕ್ಕೂ ಆಗತಾನೆ ಪೆಟ್ಟುಬಿದ್ದು ಅಗಲವಾಗಿ ವ್ರಣವುಂಟಾದರೆ ರಕ್ತಸ್ರಾವ ನಿಂತು ವ್ರಣದಲ್ಲಿ ಆಕ್ಷೇಪಕಾದಿ ವಿಕಾರಗಳುಂಟಾಗದಂತೆಯೂ ವ್ರಣವಾಗದಂತೆ ತಡೆಗಟ್ಟುವುದಕ್ಕಾಗಿಯೂ ಜೇನುತುಪ್ಪ ಮತ್ತು ತುಪ್ಪಗಳನ್ನು ಪ್ರಯೋಗಿಸಬೇಕು ; ವ್ರಣದೊಳಗಡೆ (ಆಳದಲ್ಲಿ) ಶಲ್ಯವು ಅಡಗಿಕೊಂಡಿದ್ದು ವ್ರಣಮುಖವು ಸಣ್ಣದಾಗಿ ಕೈಯಿಂದ ಶಲ್ಯವನ್ನು ಹೊರಕ್ಕೆ ತೆಗೆಯಲಾಗದಿದ್ದಾಗ ವ್ರಣವನ್ನು ಯನ್ತ್ರಣಮಾಡಿ ಶಲ್ಯಾಹರಣ ಮಾಡಬೇಕು.

ಲಘುಮಾತ್ರೋ ಲಘುಶ್ಚೈವ ಸ್ನಿಗ್ಧಉಷ್ಣೋಽಗ್ನಿದೀಪನಃ ।
ಸರ್ವವ್ರಣೇಭ್ಯೋ ದೇಯಸ್ತು ಸದಾಹಾರೋ ವಿಜಾನತಾ ॥೧೩೧॥
ನಿಶಾಚರೇಭ್ಯೋ ರಕ್ಷ್ಯಸ್ತು ನಿತ್ಯಮೇವ ಕ್ಷತಾತುರಃ ।
ರಕ್ಷಾವಿಧಾನೈರುದ್ದಿಷ್ಟೈರ್ಯಮೈಃ ಸ ನಿಯಮೈಸ್ತಥಾ ॥೧೩೨॥

ಅರ್ಥ—ರಕ್ತಶಾಲಿ, ಜಾಂಗಲಮಾಂಸ ಮೊದಲಾದುವು ಸ್ವಭಾವ ಲಘುಗುಣವುಳ್ಳ ದ್ರವ್ಯಗಳು, ಇವುಗಳನ್ನು ತಕ್ಕ ಪ್ರಮಾಣದಿಂದ (ರೋಗಿಗೆ ತೃಪ್ತಿಯಾಗದಂತೆ) ಸ್ನಿಗ್ಧವಾಗಿ, ಬಿಸಿಬಿಸಿಯಾಗಿ, ಅಗ್ನಿದೀಪನವಾಗಲು ಸಕಲವಿಧ ವ್ರಣಗಳಲ್ಲೂ ಭೋಜನ ಮಾಡಿಸ ಬೇಕು ; ವ್ರಣರೋಗಿಗೆ ರಾಕ್ಷಸಗ್ರಹಾದಿಗಳ ಬಾಧೆಯಿಲ್ಲದಂತೆ ಯಥೋಕ್ತಗಳಾದ ಕ್ಷಾರ ಕರ್ಮಗಳಿಂದಲೂ, ಇಂದ್ರಿಯ ಜಯಕ್ಕಾಗಿ ಯಮ ನಿಯಮಾದಿಗಳಿಂದಲೂ ಹಿತವಾಗು ವಂತೆ ಉಪಚರಿಸಬೇಕು.

ಷಣ್ಮೂಲೋಽಷ್ಟಪರಿಗ್ರಾಹೀಪಞ್ಚಲಕ್ಷಿತಃ ।
ಷಷ್ಟ್ಯಾ ವಿಧಾನೈರ್ನಿರ್ದಿಷ್ಟೈಶ್ಚತುರ್ಭಿಃ ಸಾಧ್ಯತೇ ವ್ರಣಃ ॥೧೩೩॥

ಅರ್ಥ—ವಾತ-ಪಿತ್ತ-ಕಫ-ರಕ್ತ-ಸನ್ನಿ ಪಾತ-ಆಗನ್ತುಗಳೆಂಬ ಆರು ಕಾರಣ ಗಳಿಂದಲೂ (ಸಂಸರ್ಗವೂ ಸನ್ನಿಪಾತದಲ್ಲೇ ಅಡಕವಾಗಿದೆ) ಚರ್ಮ, ಮಾಂಸ, ಸಿರೆ, ಸ್ನಾಯು, ಸನ್ಧಿ, ಅಸ್ಥಿ, ಕೋಷ್ಠ, ಮರ್ಮಗಳೆಂಬ ಎಂಟು ಸ್ಥಾನಗಳನ್ನಾಶ್ರೈಸಿಯೂ ವ್ರಣವುಂಟಾಗುತ್ತದೆ ; ವಾತ-ಪಿತ್ತ-ಕಫ-ಸನ್ನಿಪಾತ-ಆಗನ್ತುಗಳೆಂಬ ೫ ಲಕ್ಷಣಗ ಳುಳ್ಳದ್ದು ; (ಪಿತ್ತದಂತೆಯೇ ರಕ್ತಲಕ್ಷಣವನ್ನೂ ತಿಳಿಯಬೇಕು—ಅದರಿಂದಲೇ ರಕ್ತಲಕ್ಷಣ ವನ್ನು ಪ್ರತ್ಯೇಕವಾಗಿ ಹೇಳಿಲ್ಲ.) ಹಾಗೆಯೇ ಪಿತ್ತ ರಕ್ತ ಲಕ್ಷಣಗಳೇ ಆಗನ್ತು ವ್ರಣ ದಲ್ಲೂ ಕಾಣಬರುತ್ತವೆಯಾಗಿ ಆಗನ್ತುವಿಗೂ ಬೇರೆ ಲಕ್ಷಣಗಳನ್ನು ಹೇಳಿಲ್ಲ. ಗಂಧ-ವರ್ಣ-ಆಸ್ರಾವ-ವೇದನೆ-ಆಕಾರಗಳೆಂಬ ೫ ಲಕ್ಷಣಗಳೆಂದು ಕೆಲವು ವೈದ್ಯರ ಮತವು; ೬೦ ವ್ರಣವಿಧಾನಗಳನ್ನೂ ಹಿಂದೆಯೇ ವಿವರಿಸಲಾಗಿದೆ ; ವೈದ್ಯ-ರೋಗಿ-ಪರಿಚಾರಕ-ಔಷಧ ಗಳೆಂಬ ನಾಲ್ಕು ವಿಧಗಳಾದ ಚಿಕಿತ್ಸಾಪಾದಗಳಿಂದ ವ್ರಣವು ನಿವಾರಣೆಯಾಗುತ್ತದೆ.

ಯೋಽಲ್ಪಾಪಥಕೃತೋಯೋಗೋಬಹುಗ್ರನ್ಥಭಯಾನ್ಮಯಾ ।
ದ್ರವ್ಯಾಣಾಂ ತತ್ಸಮಾನಾನಾಂ ತತ್ಪ್ರಾಪಾಪೋನ ದುಷ್ಯತಿ ॥೧೩೪॥

ಅರ್ಥ—ಗ್ರಂಥವಿಸ್ತಾರವಾಗುತ್ತದೆಂಬ ಭಯದಿಂದ ಶೋಧನ ರೋಪಣಾದಿ ಕಾರ್ಯಗಳಿಗೆ ಉಪಯೋಗವಾಗತಕ್ಕ ಔಷಧಕಲ್ಪನಗಳನ್ನು ಕೆಲವು ಮಾತ್ರ ವಿವರಿಸಿರುತ್ತೇನೆ ; ಗುಣ-ವೀರ್ಯ-ವಿಪಾಕಗಳಲ್ಲಿ ಸಮಾನಗಳಾದ ದ್ರವ್ಯಗಳನ್ನು ಉಪಯೋಗಿಸಿ ವ್ರಣಶೋಧನರೋಪಣಾದಿ ಕರ್ಮಗಳನ್ನು ಮಾಡಿದರೆ ಯಾವ ದೋಷವೂ ಉಂಟಾಗುವುದಿಲ್ಲ.

ಪ್ರಸಙ್ಗಾಭಿಹಿತೋ ಯೋ ವಾ ಬಹುದುರ್ಲಭಭೇಷಜಃ ।
ಯಥೋಪಪತ್ತಿ ತತ್ರಾಪಿ ಕಾರ್ಯಮೇವ ಚಿಕಿತ್ಸಿತಮ್ ॥೧೩೫॥

ಅರ್ಥ—ವ್ರಣಚಿಕಿತ್ಸಾ ಪ್ರಸಂಗದಿಂದ ಹೇಳಿರುವ ದ್ರವ್ಯಗಳಲ್ಲಿಯೂ ಬಹುದುರ್ಲಭಗಳಾದ ದ್ರವ್ಯಗಳಲ್ಲಿಯೂ ಎಷ್ಟು ದ್ರವ್ಯಗಳು ದೊರೆಯುತ್ತವೆಯೋ ಅವುಗಳಿಂದ ಚಿಕಿತ್ಸೆ ನಡೆಸಬೇಕು.

ಟಿಪ್ಪಣಿ : ತ್ರಿದೋಷ ಶೋಫದಲ್ಲಿ ವಾತ-ಪಿತ್ತ-ಕಫಶೋಥಗಳಿಗೆ ಹೇಳಿದ ಔಷಧಗಣದ್ರವ್ಯಗಳ ಪೈಕಿ ಎಷ್ಟು ಸಿಕ್ಕುತ್ತದೋ ಅಷ್ಟು ದ್ರವ್ಯಗಳನ್ನು ಸೇರಿಸಿ ಪ್ರಯೋಗಿಸಿದರೆ ತ್ರಿದೋಷಹರವಾಗುತ್ತದೆ ; ಇದು ಪ್ರಸಂಗಕ್ಕೆ ತಕ್ಕಂತೆ ಹೇಳಿದಂತಾಯಿತು ; ಭದ್ರದಾರು ಗಣದಲ್ಲಿರುವ ದ್ರವ್ಯಗಳು ಅನೇಕಗಳಿವೆ ; ಅವುಗಳ ಪೈಕಿ ದೊರೆತಷ್ಟು ದ್ರವ್ಯಗಳನ್ನು ಶೇಖರಿಸಿ ಚಿಕಿತ್ಸೆಮಾಡಬೇಕು ; ಬಹುಭೇಷಜಕ್ಕೂ ದುರ್ಲಭಭೇಷಜಕ್ಕೂ ಉದಾಹರಣೆ —ಒಂದು ಔಷಧವು ಒಂದು ದೇಶದಲ್ಲೂ, ಒಂದು ಋತುವಿನಲ್ಲೂ ದೊರೆಯುವುದಿಲ್ಲ ; ಆಗ ಆ ದ್ರವ್ಯದ ಒಣಗಿದ ನಾರು ಬೇರು ತೊಗಟೆಗಳಲ್ಲಿ ಯಾವುದು ದೊರೆಯುತ್ತದೋ ಅದರಿಂದಲಾದರೂ ಚಿಕಿತ್ಸೆ ಮಾಡಬೇಕು ; (ಔಷಧಗಳನ್ನು ಸಕಾಲದಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕು.)

ಗಣೋಕ್ತಮಪಿ ಯದ್ದ್ರವ್ಯಂ ಭವೇದ್ವ್ಯಾಧಾವಯೌಗಿಕಮ್ ।
ತದುದ್ಧರೇದ್ಯೌಗಿಕಂ ತು ಪ್ರಕ್ಷಿಪೇದಪ್ಯಕೀರ್ತಿತಮ್ ॥೧೩೬॥
ಉಪದ್ರವಾಸ್ತು ವಿವಿಧಾ ವ್ರಣಸ್ಯ ವ್ರಣಿತಸ್ಯ ಚ ।
ತತ್ರ ಗನ್ಧಾದಯಃ ಪಞ್ಚ ವ್ರಣಸ್ಯೋಪದ್ರವಾಃ ಸ್ಮೃತಾಃ ॥೧೩೭॥
ಜ್ವರಾತಿಸಾರೌ ಮೂರ್ಛಾ ಚ ಹಿಕ್ಕಾಚ್ಛರ್ದಿರರೋಚಕಃ ।
ಶ್ವಾಸಕಾಸಾವಿಪಾಕಾಸ್ಚ ತೃಷ್ಣಾ ಚ ವ್ರಣಿತಸ್ಯ ವೈ ॥೧೩೮॥

ಅರ್ಥ—ಒಂದು ಔಷಧಯೋಗಕ್ಕೆ ಬೇಕಾಗುವ ದ್ರವ್ಯಗಳ ಪೈಕಿ ಯಾವುದಾದರೂ ವ್ಯಾಧಿಗೆ ವಿರುದ್ಧ (ಅನುಪಯೋಗವಾದುದಾದರೆ) ಅಥವಾ ವ್ಯಾಧಿವರ್ಧಕವಾದರೆ ಅದನ್ನು ಆ ಯೋಗದಿಂದ ತೆಗೆದು ಉಳಿದ ದ್ರವ್ಯಗಳಿಂದ ಚಿಕಿತ್ಸೆಮಾಡಬೇಕು ; ಅದೇ ರೀತಿಯಲ್ಲಿ ವ್ಯಾಧಿಹರಣ ಮಾಡುವ ದ್ರವ್ಯವನ್ನು, ಯೋಗದಲ್ಲಿ ಹೇಳದಿದ್ದರೂ ಯೋಗೋಕ್ತ ದ್ರವ್ಯಗಳೊಡನೆ ಸೇರಿಸಿ ಚಿಕಿತ್ಸೆಮಾಡಬೇಕು ; ಗಂಧವರ್ಣ-ಸ್ರಾವ-ವೇದನೆ-ಆಕಾರಗಳು ವ್ರಣದ ಉಪದ್ರವಗಳು ; ಜ್ವರ-ಅತಿಸಾರ-ಮೂರ್ಛೆ-ಹಿಕ್ಕಾ-

ಛರ್ದಿ-ಅರೋಚಕತೆ-ಶ್ವಾಸ-ಕಾಸ-ಅವಿಪಾಕ-ತೃಷ್ಣೆ. ಇವುಗಳನ್ನು ವ್ರಣರೋಗಿಯ ಉಪದ್ರವಗಳೆಂದು ತಿಳಿಯಬೇಕು. ಚಕಾರದಿಂದ ವಿಸರ್ಪಾದಿಗಳೂ ಉಪದ್ರವ ಗಳೆಂದರ್ಥವು.

ವ್ರಣಕ್ರಿಯಾಸ್ತ್ವೇವಮಾಸು ವ್ಯಾಸೇನೋಕ್ತಾಸ್ವಪಿ ಕ್ರಿಯಾಮ್ ।
ಭೂಯೋಪ್ಯುಪರಿ ವಕ್ಷ್ಯಾಮಿ ಸದ್ಯೋವ್ರಣ ಚಿಕಿತ್ಸಿತೇ ॥೧೩೯॥

ಅರ್ಥ—ಹಿಂದೆ ವಿಸ್ತಾರವಾಗಿ ವ್ರಣಕ್ರಿಯೆ (ಚಿಕಿತ್ಸಾಕ್ರಮ) ಗಳನ್ನು ವಿವರಿಸಿದ್ದರೂ ಮುಂದೆ ಸದ್ಯೋವ್ರಣಚಿಕಿತ್ಸೆಯಲ್ಲಿ ತಿರುಗಿ ವಿವರಿಸುತ್ತೇವೆ.

ಇತಿ ಶ್ರೀಸುಶ್ರುತಸಂಹಿತಾಯಾಂ ಚಿಕಿತ್ಸಾಸ್ಥಾನೇ ದ್ವಿವ್ರಣೀಯಚಿಕಿತ್ಸಾನಾಮಕ
ಪ್ರಥಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ
ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ದ್ವಿತೀಯೋಽಧ್ಯಾಯಃ

ಅಥಾತಃ ಸದ್ಯೋವ್ರಣ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀ ಧನ್ವನ್ತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಸದ್ಯೋವ್ರಣ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಧನ್ವನ್ತರಿರ್ಧರ್ಮಭೃತಾಂ ವರಿಷ್ಠೋ ವಾಗ್ವಿಶಾರದಃ |
ವಿಶ್ವಾಮಿತ್ರಾತ್ಮಜಮೃಷಿಂ ಶಿಷ್ಯಂ ಸುಶ್ರುತಮನ್ವಶಾತ್ ||೩||
ನಾನಾಧಾರಾಮುಖೈಃ ಶಸ್ತ್ರೈರ್ನಾನಾಸ್ಥಾನ ನಿಪಾತಿತೈಃ |
ನಾನಾರೂಪಾ ವ್ರಣಾ ಯೇ ಸ್ಯುಸ್ತೇಷಾಂ ವಕ್ಷ್ಯಾಮಿ ಲಕ್ಷಣಮ್ | ||೪||

ಅರ್ಥ—ಧರ್ಮಿಷ್ಠರಲ್ಲಿ ಶ್ರೇಷ್ಠನಾದ ವಾಗ್ವಿಶಾರದನಾದ (ನಿಪುಣನಾದ) ಶ್ರೀ ಧನ್ವನ್ತರಿದೇವನು ವಿಶ್ವಾಮಿತ್ರನ ಮಗನಾದ, ತನ್ನ ಶಿಷ್ಯನಾದ, ಋಷಿಸಮಾನನಾದ ಸುಶ್ರುತನನ್ನು ಕುರಿತು ವಿವಿಧಪ್ರಕಾರ ಅಲಗಿನ ಮುಖಭಾಗವುಳ್ಳ ಶಸ್ತ್ರಗಳು ಶರೀರದ ನಾನಾ ಭಾಗಗಳಲ್ಲಿ ಚುಚ್ಚಲ್ಪಡುವುದರಿಂದ ನಾನಾಕಾರಗಳಾದ ಮುಖವುಳ್ಳ ವ್ರಣಗಳುಂಟಾಗುತ್ತವೆಯಾಗಿ ಅವುಗಳ ಲಕ್ಷಣಗಳನ್ನು ಹೇಳುತ್ತೇನೆ ಕೇಳು ಎಂದನು.

ಆಯತಾಶ್ಚತುರಸ್ರಾಶ್ಚ ತ್ರ್ಯಸ್ರಾ ಮಣ್ಡಲಿನಸ್ತಥಾ |
ಅರ್ಧಚನ್ದ್ರಪ್ರತೀಕಾಶಾ ವಿಶಾಲಾಃ ಕುಟಿಲಾಸ್ತಥಾ ||೫||
ಶರಾವನಿಮ್ನಮಧ್ಯಾಶ್ಚ ಯವಮಧ್ಯಾಸ್ತಥಾಪರೇ |
ಏವಂಪ್ರಕಾರಾಕೃತಯೋ ಭವನ್ತ್ಯಾಗನ್ತವೋ ವ್ರಣಾಃ ||೬||
ದೋಷಜಾಪಾಸ್ಸ್ವಯಂ ಭಿನ್ನಾ ನ ತು ವೈದ್ಯನಿಮಿತ್ತಜಾಃ |

ಅರ್ಥ—ಆಗನ್ತುವ್ರಣಗಳು ಅಗಲವಾಗಿಯೂ, ಚೌಕೋಣ-ತ್ರಿಕೋಣ-ವರ್ತುಳಾಕಾರ-ಅರ್ಧಚಂದ್ರಾಕಾರವುಳ್ಳವಾಗಿಯೂ, ಡೊಂಕಾಗಿಯೂ, ಕೆಲವು ಶ್ರಾವೆಗಳಂತೆ ಮಧ್ಯದಲ್ಲಿ ಆಳವಾಗಿಯೂ, ಮತ್ತೆ ಕೆಲವು ಮಧ್ಯದಲ್ಲಿ ಯವಧಾನ್ಯದಂತೆ ಆಕಾರವುಳ್ಳವಾಗಿಯೂ ಇರುತ್ತವೆ, ದೋಷಪಾಕದಿಂದ ತಾವಾಗಿಯೇ ಒಡೆದಿರುವ ವ್ರಣಗಳೂ ಅದೇ ರೀತಿಯಾಗಿರುತ್ತವೆ, ಆದರೆ ವೈದ್ಯರು ಶಸ್ತ್ರದಿಂದ ಪಾಟನ ಮಾಡಿದಂತಿರುವುದಿಲ್ಲ ; ಏಕೆಂದರೆ ವೈದ್ಯರು ತಮಗೆ ಚಿಕಿತ್ಸೆಗೆ ಅನುಕೂಲಿಸುವಂತೆ ವ್ರಣವಿರುವ ಶರೀರಭಾಗಕ್ಕೆ ತಕ್ಕಂತೆ ಶಸ್ತ್ರದಿಂದ ವ್ರಣಪಾಟನವನ್ನು ಮಾಡುತ್ತಾರೆ.

ಭಿಷಗ್ವ್ರಣಾಕೃತಿಜ್ಞೋ ಹಿ ನ ಮೋಹಮಧಿಗಚ್ಛತಿ ||೭||
ಭೃಶಂ ದುರ್ದರ್ಶರೂಪೇಷು ವ್ರಣೇಷು ವಿಕೃತೇಷ್ವಪಿ |

ಅನೇಕಾಕೃತಿರಾಗನ್ತುಃ ಸ ಭಿಷಗ್ಭಿಃ ಪುರಾತನೈಃ ||೮||
ಸಮಾಸತೋ ಲಕ್ಷಣತಃ ಷಡ್ವಿಧಃ ಪರಿಕೀರ್ತಿತಃ |
ಛಿನ್ನಂ ಭಿನ್ನಂ ತಥಾ ವಿದ್ಧಂ ಕ್ಷತಂ ಪಿಚ್ಚಿತಮೇವ ಚ ||೯||
ಘೃಷ್ಟಮಾಹುಸ್ತಥಾ ಷಷ್ಠಂ ತೇಷಾಂ ವಕ್ಷ್ಯಾಮಿ ಲಕ್ಷಣಂ |

ಅರ್ಥ—ವ್ರಣದ ಆಕಾರಗಳನ್ನು ಪರಿಶೀಲಿಸಿ ತಿಳಿದಿರುವ ಶಸ್ತ್ರವೈದ್ಯನು ಹಸುವಿನ ಕೊಂಬಿನಂತೆ ಉನ್ನತವಾಗಿ ಬೆಳೆದ ಮಾಂಸವುಳ್ಳ ಕಾರಣ ಅತಿ ಭಯಂಕರವಾದ ಆಕಾರವುಳ್ಳ, ವಿಕಾರ ವ್ರಣಗಳನ್ನು ನೋಡಿದರೂ ಹೆದರಿ ಮೋಸಹೊಂದುವುದಿಲ್ಲ. ಅನೇಕ ಆಕಾರಗಳುಳ್ಳವಾದರೂ ಆಗನ್ತುವ್ರಣಗಳನ್ನು ಪೂರ್ವಿಕರಾದ ವೈದ್ಯಶ್ರೇಷ್ಠರು ಅವುಗಳ ಲಕ್ಷಣಗಳಿಗೆ ತಕ್ಕಂತೆ ಛಿನ್ನ, ಭಿನ್ನ, ವಿದ್ಧ, ಕ್ಷತ, ಪಿಚ್ಚಿತ, ಮತ್ತು ಘೃಷ್ಟ ಎಂದು ಆರು ವಿಧಗಳನ್ನಾಗಿ ವಿಂಗಡಿಸುತ್ತಾರೆ ; ಇನ್ನುಮುಂದೆ ಅವುಗಳ ಲಕ್ಷಣಗಳನ್ನು ಹೇಳುತ್ತೇನೆ.

ತಿರಶ್ಚೀನ ಋಜುರ್ವಾಪಿ ಯೋ ವ್ರಣಶ್ಚಾಯತೋ ಭವೇತ್ ||೧೦||
ಗಾತ್ರಸ್ಯಪಾತನಂ ಚಾಪಿ ಛಿನ್ನಮಿತ್ಯುಪದಿಶ್ಯತೇ |
ಕುನ್ತಶಕ್ತ್ಯೃಷ್ಟಿಖಡ್ಗಾಗ್ರವಿಷಾಣಾದಿಭಿರಾಶಯಃ ||೧೧||
ಹತಃ ಕಿಞ್ಚಿತ್‌ಸ್ರವೇತ್ ತದ್ಧಿ ಭಿನ್ನಲಕ್ಷಣಮುಚ್ಯತೇ |

ಅರ್ಥ—ಶಸ್ತ್ರಪಾತದಿಂದ ಅಡ್ಡಲಾಗಿ, ನೇರವಾಗಿ, ಉದ್ದವಾಗಿ, ವ್ರಣವುಂಟಾಗಿ ಕೈಕಾಲು ಮೊದಲಾದ ಶರೀರಾವಯವಗಳು ಕತ್ತರಿಸಿ ತುಂಡಾಗಿ ಅಥವಾ ಸ್ವಲ್ಪಭಾಗ ಮಾತ್ರ ಶರೀರಕ್ಕೆ ತಗಲಿಕೊಂಡಿದ್ದರೆ ಛಿನ್ನವ್ರಣವೆಂದು ಹೇಳಲ್ಪಡುತ್ತದೆ, ಭಲ್ಲಾಯುಧ, ತ್ರಿಶೂಲಾಯುಧ, ಈಟಿ, ಕತ್ತಿ ಇವುಗಳ ತುದಿಯಿಂದಾಗಲೀ ಕೊಂಬು ಮೊದಲಾದ ಆಶಯಗಳು ಚುಚ್ಚಲ್ಪಟ್ಟು ಅವುಗಳಿಂದ ರಕ್ತಸ್ರಾವವಾದರೆ ಭಿನ್ನವ್ರಣವೆನ್ನುತ್ತಾರೆ.

ಸ್ಥಾನಾನ್ಯಾಮಾಗ್ನಿಪಕ್ವಾನಾಂ ಮೂತ್ರಸ್ಯ ರುಧಿರಸ್ಯ ಚ ||೧೨||
ಹೃದುಂಡುಕಃ ಫುಪ್ಪುಸಶ್ಚ ಕೋಷ್ಠ ಇತ್ಯಭಿಧೀಯತೇ |
ತಸ್ಮಿನ್ ಭಿನ್ನೇ ರಕ್ತಪೂರ್ಣೇ ಜ್ವರೋದಾಹಶ್ಚ ಜಾಯತೇ ||೧೩||
ಮೂತ್ರಮಾರ್ಗಗುದಾಸ್ಯೇಭ್ಯೋ ರಕ್ತಂ ಘ್ರಾಣಾಚ್ಚ ಗಚ್ಛತಿ |
ಮೂರ್ಛಾಶ್ವಾಸತೃಡಾಧ್ಮಾನಮ ಭಕ್ತಚ್ಛನ್ದ ಏವ ಚ ||೧೪||
ವಿಣ್ಮೂತ್ರವಾತ ಸಙ್ಗಶ್ಚ ಸ್ವೇದಾಸ್ರಾವೋಽಕ್ಷಿರಕ್ತತಾ |
ಲೋಹಗನ್ಧಿತ್ವಮಾಸ್ಯಸ್ಯ ಗಾತ್ರದೌರ್ಗನ್ಧ್ಯಮೇವ ಚ ||೧೫||
ಹೃಚ್ಛೂಲಂ ಪಾರ್ಶ್ವಯೋಶ್ಚಾಪಿ ವಿಶೇಷಂ ಚಾತ್ರ ಮೇ ಶ್ರುಣು |

ಅರ್ಥ—ಹೊಟ್ಟೆ, ಗ್ರಹಣಿ, ಸಣ್ಣ ಮತ್ತು ದೊಡ್ಡಕರುಳು, ಮೂತ್ರಕೋಶ ಯಕೃತ್ಪ್ಲೀಹಗಳು, ಹೃದಯ, ಮಲಾಶಯ, ಶ್ವಾಸಕೋಶ ಇವುಗಳೆಲ್ಲಾ ಶೇರಿ ಕೋಷ್ಠವೆಂದೂ ಹೆಸರು. ಮೇಲಿನ ಕಾರಣಗಳಿಂದ ಈ ಕೋಷ್ಠವು ಒಡೆದು ರಕ್ತವು ತುಂಬಿ ಜ್ವರ, ನೈ ಉರಿತಗಳುಂಟಾಗಿ ಮೂತ್ರನಾಳ, ಗುದ, ಬಾಯಿ, ಮೂಗುಗಳಿಂದಲೂ, ಹೊಕ್ಕಳ ಕೆಳಗಾದರೆ ಗುದ, ಮೂತ್ರದ್ವಾರಗಳಿಂದಲೂ, ಹೊಕ್ಕಳ ಮೇಲಾದರೆ ಬಾಯಿ,

ಮೂಗುಗಳಿಂದಲೂ ರಕ್ತಸ್ರಾವವಾಗುವುದು, ಜ್ಞಾನತಪ್ಪುವುದು, ಉಬ್ಬಸ, ನೀರಡಿಕೆ, ಹೊಟ್ಟೆಯುಬ್ಬರ, ಅರುಚಿ, ಮಲಮೂತ್ರ ಅಪಾನವಾತಗಳು ತಡೆತ ಹೆಚ್ಚಾಗಿ ಮೈ ಬೆವರುವುದು, ಕಣ್ಣು ಕೆಂಪಾಗುವುದು, ಬಾಯಿ ಮೈಗಳಿಂದ ರಕ್ತದವಾಸನೆ, ಎದೆ ಮತ್ತು ಪಕ್ಕೆಗಳ ನೋವು ಈ ಲಕ್ಷಣಗಳುಂಟಾಗುತ್ತವೆ.

ಆಮಾಶಯಸ್ಥೇ ರುಧಿರೇ ರುಧಿರಂ ಛರ್ದಯೇತ್ಪುನಃ ||೧೬||
ಆಧ್ಮಾನಮತಿಮಾತ್ರಂ ಚ ಶೂಲಂ ಚ ಭೃಶದಾರಣಮ್ |
ಪಕ್ವಾಶಯಗತೇ ಚಾಪಿರುಜೋ ಗೌರವಮೇವಚ ||೧೭||
ಶೀತತಾಚಾಪ್ಯಧೋನಾಭೇಃಖೇಭ್ಯೋಽರಕ್ತಸ್ಯ ಚಾಗಮಃ |
ಅಭಿನ್ನೇಽಪ್ಯಾಶಯೇಽನ್ತ್ರಾಣಾಂಖೈಃ ಸೂಕ್ಷ್ಮೈರನ್ತ್ರಪೂರಣಮ್ ||೧೮||
ಪಿಹಿತಾಸ್ಯೇ ಘಟೇ ಯದ್ವತ್ ಲಕ್ಷ್ಯತೇ ತಸ್ಯಗೌರವಮ್ |

ಅರ್ಥ—ಅವುಗಳಲ್ಲಿ ಕಾಣುವ ವ್ಯತ್ಯಾಸಗಳನ್ನು ವಿವರಿಸುತ್ತೇನೆ, ಕೇಳು—ಜಠರದಲ್ಲಿ ರಕ್ತವು ಜಮಾವಣೆಯಾದರೆ ಪುನಃ ಪುನಃ ರಕ್ತವಮನ, ಅತಿಯಾದ ಹೊಟ್ಟೆನೋವು, ಪಕ್ವಾಶಯದಲ್ಲಿ ರಕ್ತಸೇರಿದರೆ ನೋವೂ ಮೈಭಾರವೂ, ಹೊಕ್ಕಳ ಕೆಳಭಾಗವು ತಣ್ಣಗಾಗಿ ರೋಮಕೂಪಗಳಿಂದ ರಕ್ತಸ್ರಾವ ಉಂಟಾಗುತ್ತದೆ ; ಆಶಯಗಳು ಭಿನ್ನವಾಗಿದ್ದರೂ ಕರುಳುಗಳ ಸೂಕ್ಷ್ಮರನ್ಧ್ರಗಳ ಮೂಲಕ, ಬಾಯಿಮುಚ್ಚಿದ ಮಡಕೆಯನ್ನು ನೀರಿನಲ್ಲಿರಿಸಿದರೆ ಮಡಕೆಯ ಸೂಕ್ಷ್ಮಛಿದ್ರಗಳಿಂದ ಮಡಕೆಯೊಳಕ್ಕೆ ನೀರು ಜಿನುಗಿ ತುಂಬಿಕೊಳ್ಳುವಂತೆಯೇ, ರಕ್ತವು ಜಿನುಗುತ್ತಾ ಕರುಳುಗಳಲ್ಲಿ ತುಂಬಿಕೊಳ್ಳುತ್ತದೆಯಾಗಿ ಕರುಳು ಭಾರವಾಗುತ್ತದೆಂಬುದನ್ನು ರೋಗಿಯು ತಿಳಿಯುತ್ತಾನೆ

ಸೂಕ್ಷ್ಮಾಸ್ಯಶಲ್ಯಾಭಿಹಿತಂ ಯದಙ್ಗಂತ್ವಾಶಯಾದ್ವಿನಾ ||೧೯||
ಉತ್ತುಣ್ಡಿತಂ ನಿರ್ಗತಂ ವಾ ತದ್ವಿದ್ಧಮಿತಿನಿರ್ದಿಶೇತ್ |
ನಾತಿಚ್ಛಿನ್ನಂ ನಾತಿಭಿನ್ನಮುಭಯೋರ್ಲಕ್ಷಣಾನ್ವಿತಮ್ ||೨೦||
ವಿಷಮಂ ವ್ರಣಮಙ್ಗೇಯತ್ತತ್ಕ್ಷತಂ ತ್ವಭಿನಿರ್ದಿಶೇತ್ |
ಪ್ರಹಾರಪೀಡನಾಭ್ಯಾಂತು ಯದಙ್ಗಂ ಪೃಥುತಾಂ ಗತಮ್ ||೨೧||
ಸಾಸ್ಥಿ ತತ್ಪಿಚ್ಚಿತಂ ವಿದ್ಯಾತ್ ಮಜ್ಜರಕ್ತಪರಿಪ್ಲುತಮ್ |
ವಿಗತತ್ವಗ್ಯದಙ್ಗಂ ಹಿ ಸಂಘರ್ಷಾದನ್ಯಥಾಪಿ ವಾ ||೨೨||
ಉಷಾಸ್ರಾವಾನ್ವಿತಂ ತತ್ತು ಘೃಷ್ಟಮಿತ್ಯುಪದಿಶ್ಯತೇ |

ಅರ್ಥ—ಆಮಾಶಯಾದಿ ಸ್ಥಾನಗಳನ್ನು ಬಿಟ್ಟು ಬೇರೆ ಶರೀರಭಾಗದಲ್ಲಿ ಮೊನಚಾಗಿರುವ ಶಲಾಕೆ ಮತ್ತು ಇತರ ಶಲ್ಯಗಳು ಚುಚ್ಚಿ ರಂಧ್ರಮಾಡಿ ಹೊರಕ್ಕೆ ಬಂದರೆ ವ್ರಣದ ರಂಧ್ರವು ಚರ್ಮ ಮಾಂಸಗಳಿಂದ ಮುಚ್ಚಲ್ಪಟ್ಟು ಸ್ವಲ್ಪಮಾತ್ರವೇ ಕಾಣುತ್ತಿದ್ದರೆ ಅದನ್ನು ವಿದ್ಧವ್ರಣವೆಂದು ನಿರ್ಧರಿಸಬೇಕು ; ಅತಿಯಾಗಿ ತುಂಡಾಗದೆಯೂ ಅತಿಯಾಗಿ

ಮಾಂಸವು ಕತ್ತರಿಸದೆಯೂ ಭಿನ್ನಭಿನ್ನ ವ್ರಣಗಳೆರಡರ ಲಕ್ಷಣಗಳೂ ಇದ್ದು ವ್ರಣಸ್ಥಾನವು ಉಬ್ಬುತಗ್ಗಾಗಿದ್ದರೆ ಕ್ಷತವ್ರಣವೆಂದು ಹೆಸರು ; ಶರೀರದ ಮೇಲೆ ದೊಣ್ಣೆ ಮೊದಲಾದುವುಗಳಿಂದ ಪೆಟ್ಟುಬಿದ್ದು ಅಥವಾ ಯಂತ್ರಣ ಮಾಡಿ ನೋವಾಗಿ ಮೂಳೆಸಹಿತ ಊದಿದ್ದು ವ್ರಣವು ಮಜ್ಜೆ ಮತ್ತು ರಕ್ತಗಳಿಂದ ವ್ಯಾಪ್ತವಾಗಿದ್ದರೆ ಪಿಚ್ಚಿತವೆಂದು ಹೆಸರು ; ಚರ್ಮವು ಗೋಡೆ, ಬಾಗಿಲು ಮೊದಲಾದ ವಸ್ತುಗಳೊಡನೆ ಉಜ್ಜಲ್ಪಟ್ಟು ಕಿತ್ತುಹೋಗಿ ಉರಿಯುತ್ತಲೂ ದ್ರವವನ್ನು ಸ್ರಾವಮಾಡುತ್ತಲೂ ಇದ್ದರೆ ಘೃಷ್ಟವ್ರಣವೆನ್ನುತ್ತಾರೆ.

ಭಿನ್ನೇ ಭಿನ್ನೇ ತಥಾವಿದ್ಧೇ ಕ್ಷತೇ ವಾಽಸೃಗತಿಸ್ರವೇತ್ ॥೨೩॥
ರಕ್ತಕ್ಷಯಾದ್ರುಜಸ್ತತ್ರ ಕರೋತಿ ಪವನೋ ಭೃಶಮ್ ।
ಸ್ನೇಹಪಾನಂ ಹಿತಂ ತತ್ರ ತತ್ಸೇಕೋ ವಿಹಿತಸ್ತಥಾ ॥೨೪॥
ವೇಸವಾರೈಃ ಸಕೃಶರೈಃ ಸುಸ್ನಿಗ್ಧೈಶ್ಚೋಪನಾಹನಮ್ ।
ಧಾನ್ಯಸ್ವೇದಾಂಶ್ಚ ಕುರ್ವೀತ ಸ್ನಿಗ್ಧಾನ್ಯಾಲೇಪನಾನಿ ಚ ॥೨೫॥
ವಾತಘ್ನೌಷಧಸಿದ್ಧೈಶ್ಚ ಸ್ನೇಹೈರ್ಬಸ್ತಿರ್ವಿಧೀಯತೇ ।

ಅರ್ಥ—ಭಿನ್ನ–ಭಿನ್ನ–ವಿದ್ಧ–ಕ್ಷತವ್ರಣಗಳಲ್ಲಿ ಅತಿಯಾಗಿ ರಕ್ತಸ್ರಾವವಾಗಿ ರಕ್ತಕ್ಷಯ, ವಾತಪ್ರಕೋಪ, ಅತಿಯಾಗಿ ನೋವುಂಟಾಗುತ್ತದೆ ; ಇವುಗಳಲ್ಲಿ ಸ್ನೇಹ ಪಾನ ಮಾಡಿಸುವುದು ಹಿತಕರವಾದದ್ದು ; ಸುಖೋಷ್ಣ ಮಾಡಿದ ಸ್ನೇಹಗಳನ್ನು ನಿಧಾನವಾಗಿ ಧಾರೆಯಂತೆ ವ್ರಣದಮೇಲೆ ಸುರಿಸುವುದರಿಂದ ಹಿತವಾಗುತ್ತದೆ ; ವೇಸವಾರಗಳನ್ನೂ ಕೃಶರಗಳನ್ನೂ ಸ್ನೇಹಮಿಶ್ರಣ ಮಾಡಿದ ವ್ರಣದಮೇಲೆ ಇರಿಸಿ ಬಂಧನ ಮಾಡಬೇಕು. ಉದ್ದು ಮೊದಲಾದ ಧಾನ್ಯಗಳನ್ನುಕುದಿಸಿ ಸುಖೋಷ್ಣವಾಗಿರುವಂತೆ ವ್ರಣಗಳ ಮೇಲಿಟ್ಟು ಶಾಖತಟ್ಟುವಂತೆ ಮಾಡಬೇಕು ; ಸ್ನಿಗ್ಧಲೇಪನಗಳನ್ನೂ ಮಾಡಬೇಕು ; ವಾತಹರೌಷಧಿಗಳೊಡನೆ ತಯಾರಿಸಿದ ಸ್ನೇಹಗಳನ್ನು ಮಿಶ್ರಮಾಡಿ ಬಸ್ತಿಕರ್ಮವನ್ನು ಮಾಡಿಸಬೇಕು.

ಪಿಚ್ಚಿತೇ ಚ ವಿಘೃಷ್ಟೇ ಚ ನಾತಿಸ್ರವತಿ ಶೋಣಿತಮ್ । ॥೨೬॥
ಆಗಚ್ಛತಿ ಭೃಶಂತಸ್ಮಿನ್ ದಾಹಃಪಾಕಶ್ಚ ಜಾಯತೇ ।
ತಸ್ಮೋಷ್ಮಣೋನಿಗ್ರಹಾರ್ಥಂ ತಥಾ ದಾಹಪ್ರಪಾಕಯೋಃ ॥೨೭॥
ಶೀತಮಾಲೇಪನಂ ಕಾರ್ಯಂ ಪರಿಷೇಕಶ್ಚ ಶೀತಲಃ ।
ಷಟ್ಸ್ವೇತೇಷು ಯಥೋಕ್ತೇಷು ಭಿನ್ನಾದಿಷು ಸಮಾಸತಃ ॥೨೮॥
ಜ್ಞೇಯಂ ಸಮುರ್ಪಿತಂ ಸರ್ವಂ ಸದ್ಯೋವ್ರಣಚಿಕಿತ್ಸಿತಮ್ ।

ಅರ್ಥ—ಪಿಚ್ಚಿತ, ವಿಘೃಷ್ಟವ್ರಣಗಳಲ್ಲಿ ರಕ್ತವು ಹೆಚ್ಚಾಗಿ ಸುರಿಯುವುದಿಲ್ಲ ; ರಕ್ತವು ಸ್ರಾವವಾಗಿ ಹೊರಕ್ಕೆ ಬಾರದಕಾರಣ ವ್ರಣಗಳಲ್ಲಿ ಉರಿತವೂ ಪಾಕವೂ ಉಂಟಾಗುತ್ತವೆ. ಉರಿಯನ್ನೂ ಪಾಕವನ್ನೂ ಉಷ್ಣವನ್ನೂ ತಡೆಗಟ್ಟುವುದಕ್ಕಾಗಿ ವ್ರಣದ ಮೇಲೆ ತಣ್ಣಗಿರುವ ಲೇಪನವನ್ನೂ ಶೀತವೀರ್ಯದ್ರವ್ಯಗಳ ಕಷಾಯಸೇಚನವನ್ನೂ ಮಾಡಿಸಬೇಕು ; ಭಿನ್ನ ಮೊದಲಾದ ಆರುವಿಧ ವ್ರಣಗಳಿಗೂ ಸಂಕ್ಷೇಪವಾಗಿ ಸದ್ಯೋವ್ರಣಚಿಕಿತ್ಸೆಯೇ ಹೇಳಲ್ಪಟ್ಟಿರುತ್ತದೆಂದು ತಿಳಿಯಬೇಕು.

ಅತ ಊರ್ಧ್ವಂ ಪ್ರವಕ್ಷ್ಯಾಮಿ ಭಿನ್ನಾನಾಂ ತು ಚಿಕಿತ್ಸಿತಂ ॥೨೯॥
ಯೇ ವ್ರಣಾ ವಿವೃತಾಃ ಕೇಚಿಚ್ಛಿರಃ ಪಾರ್ಶ್ವಾದವಲಮ್ಬಿನಃ ।
ತಾನ್ ಸೀವ್ಯೇದ್ವಿಧಿನೋಕ್ತೇನ ಬಧ್ನೀಯಾದ್ಗಾಢಮೇವ ಚ ॥೩೦॥

ಅರ್ಥ—ಇನ್ನುಮುಂದೆ ಭಿನ್ನವ್ರಣಗಳ ಚಿಕಿತ್ಸೆಯನ್ನು ಹೇಳುತ್ತೇನೆ ; ಪಕ್ಕಗಳಲ್ಲೂ ತಲೆಯಲ್ಲೂ ಉಂಟಾಗುವ ಅಗಲವಾದ ಮುಖವುಳ್ಳ ವ್ರಣಗಳನ್ನು ಶಾಸ್ತ್ರೋಕ್ತಕ್ರಮದಿಂದ ನೇರವಾಗಿ ಗಟ್ಟಿಯಾದ ಸ್ನಾಯುಗಳಿಂದ ಬಿಗಿಯಾಗಿ ವ್ರಣಮುಖಭಾಗಗಳನ್ನು ಕೂಡಿಸಿ ಹೊಲಿಯಬೇಕು.

ಕರ್ಣಂ ಸ್ಥಾನಾದಪಹೃತಂ ಸ್ಥಾಪಯಿತ್ವಾ ಯಥಾಸ್ಥಿತಂ ।
ಸೀವ್ಯೇದ್ಯಥೋಕ್ತಂ ತೈಲೇನ ಸ್ರೋತಶ್ಚಾಭಿಪ್ರತರ್ಪಯೇತ್ ॥೩೧॥
ಕೃಕಾಟಿಕಾನ್ತೇ ಭಿನ್ನೇ ತು ಗಚ್ಛತ್ಯಪಿ ಸಮೀರಣೇ ।
ಸಮ್ಯಕ್ ನಿವೇಶ್ಯ ಬಧ್ನೀಯಾತ್ ಸೀವ್ಯೇಚ್ಚಾಪಿ ನಿರನ್ತರಂ ॥೩೨॥
ಆಜೇನ ಸರ್ಪಿಷಾ ಚೈವ ಪರೀಷೇಕಂ ತು ಕಾರಯೇತ್ ।
ಉತ್ತಾನೋಽನ್ನಂ ಸಮಶ್ನೀಯಾತ್ ಶಯೀತ ಚ ಸುಯನ್ತ್ರಿತಃ ॥೩೩॥

ಅರ್ಥ—ಅಭಿಘಾತದಿಂದ ಕಿವಿಯು ಸ್ಥಳಬಿಟ್ಟು ಸ್ವಲ್ಪ ಮಾತ್ರ ತಗುಲಿಕೊಂಡು ಹರಿದುಹೋಗಿದ್ದರೆ ಮೊದಲಿದ್ದಂತೆ ಸರಿಮಾಡಿಟ್ಟು ಕ್ರಮವಾಗಿ ಹೊಲಿದು ಕರ್ಣಸ್ರೋತಸ್ಸಿಗೆ ವಾತಹರೌಷಧಸಿದ್ಧವಾದ ತೈಲದಿಂದ ಪೂರಣಮಾಡಬೇಕು ; ಕೃಕಾಟಿಕಾಸ್ಥಿಯು ತುದಿಯಲ್ಲಿ ಕತ್ತರಿಸಿ ಒಳಗಿನಿಂದ ವಾತವು ಹೊರಟುಬರುತ್ತಿದ್ದರೆ ಆ ಮೂಳೆಯನ್ನು (ಹೆಡತಲೆಯ ಮೂಳೆಯನ್ನು) ಮೊದಲಿನಂತೆ ಸರಿಮಾಡಿಟ್ಟು ಸುತ್ತಲೂ ಹೊಲಿಯಬೇಕು ; ಆಡಿನ ತುಪ್ಪವನ್ನು ವ್ರಣದ ಮೇಲೆ ನಿಧಾನವಾಗಿ ಸುರಿಯಬೇಕು ; ಭದ್ರವಾಗಿ ವ್ರಣಬನ್ಧನ ಮಾಡಿದ ಮೇಲೆ ಮುಖವನ್ನು ಮೇಲೆಮಾಡಿ ಅಂಗತ್ತಲಾಗಿಯೇ ಮಲಗಿಕೊಂಡಿದ್ದು-ಭೋಜನ, ಶಯನ, ಮೂತ್ರ-ಪುರೀಷೋತ್ಸರ್ಗಾದಿಗಳನ್ನು ಮಾಡಬೇಕು.

ಶಾಖಾಸು ಪತಿತಾಂಸ್ತಿರ್ಯಕ್ ಪ್ರಹಾರಾನ್ ವಿವೃತಾನ್ಭೃಶಂ ।
ಸೀವ್ಯೇತ್ ಸಮ್ಯಕ್ ನಿವೇಶ್ಯಾಶು ಸನ್ಧ್ಯಸ್ಥೀನನುಪೂರ್ವಶಃ ॥೩೪॥
ಬದ್ಧ್ವಾ ವೇಲ್ಲಿತಕೇನಾಶು ತತಸ್ತೈಲೇನ ಸೇಚಯೇತ್ ।
ಚರ್ಮಣಾ ಗೋಫಣಾಬನ್ಧಃ ಕಾರ್ಯೋಽಯೋ ವಾಹಿತೋ ಭವೇತ್ ॥೩೫॥
ಪೃಷ್ಠೇ ವ್ರಣೋ ಯಸ್ಯ ಭವೇದುತ್ತಾನಂ ಶಾಯಯೇತ್ತು ತಂ ।
ಅತೋಽನ್ಯಥಾ ಚೋರಸಿಜೇ ಶಾಯಯೇತ್ಪುರುಷಂ ವ್ರಣೇ ॥೩೬॥

ಅರ್ಥ—ಕೈಕಾಲುಗಳಿಗೆ ಅಡ್ಡವಾಗಿ ಪೆಟ್ಟುಬಿದ್ದು ಮೂಳೆಗಳು ಕೀಲುಜಾರಿ ಬೇರೆಬೇರೆಯಾಗಿ ತಿರುಗಿದ್ದರೆ ಆ ಮೂಳೆಗಳನ್ನು ಮೊದಲಿದ್ದಂತೆ ಮಾಡಿ ಸೇರಿಸಿ ವೇಲ್ಲಿತಕಬನ್ಧದಿಂದ ಬಿಗಿದುಕಟ್ಟಿ ಅದರಮೇಲೆ ಸಿದ್ಧವಾದ ತೈಲದಿಂದ ಸೇಚನೆ ಮಾಡಿ ಚರ್ಮದಿಂದ ಗೋಫಣಾಬನ್ಧವನ್ನು (ಕೋಪಿನ ಬಂಧದಂತೆ) ಅಥವಾ ಆ ವ್ರಣದ ಸ್ಥಾನಕ್ಕೆ

ಯೋಗ್ಯವಾದ ಬಂಧವನ್ನು ಮಾಡಿ ಭದ್ರಪಡಿಸಬೇಕು ; ಬೆನ್ನಿನಲ್ಲಿ ವ್ರಣವುಳ್ಳವರನ್ನು ಅಂಗತ್ತಲಾಗಿಯೂ (ಮುಖ ಮೇಲೆ ಮಾಡಿ) ಎದೆಯಲ್ಲಿ ವ್ರಣವಿದ್ದರೆ ಮುಖ ಕೆಳಗೆ ಮಾಡಿಯೂ (ಬೋರಲಾಗಿಯೂ) ಮಲಗಿಸಿದರೆ ಕೀವು, ದುಷ್ಟರಕ್ತಾದಿಗಳು ಹೊರಕ್ಕೆ ಸುರಿಯುತ್ತವೆ.

ಛಿನ್ನಾಂ ನಿಃಶೇಷತಃ ಶಾಖಾಂ ದಗ್ಧ್ವಾ ತೈಲೇನ ಬುದ್ಧಿಮಾನ್ ।
ಬಧ್ನೀಯಾತ್ ಕೋಶಬನ್ಧೇನ ಪ್ರಾಪ್ತಂ ಕಾರ್ಯಂ ಚ ರೋಪಣಂ ॥೩೭॥
ಚನ್ದನಂ ಪದ್ಮಕಂ ರೋಧ್ರಮುತ್ಪಲಾನಿ ಪ್ರಿಯಂಗವಃ ।
ಹರಿದ್ರಾಂ ಮಧುಕಂ ಚೈವ ಪಯಃಸ್ಯಾದತ್ರಚಾಷ್ಟಮಮ್ ॥೩೮॥
ತೈಲಮೇಭಿರ್ವಿಪಕ್ವಂ ತು ಪ್ರಧಾನಂ ವ್ರಣರೋಪಣಂ ।

ಅರ್ಥ—ತೊಡೆ ಮತ್ತು ತೋಳುಗಳ ಮೂಳೆಗಳು ಪೂರ್ಣವಾಗಿ ತುಂಡಾಗಿದ್ದರೆ ಬುದ್ಧಿವಂತನಾದ ವೈದ್ಯನು ಕಾದತೈಲದಿಂದ ಶಾಖಾಮೂಳೆಗಳನ್ನು ಸುಟ್ಟು ಕೋಶಬನ್ಧದಿಂದ ವ್ರಣವನ್ನು ಬಿಗಿದು ವ್ರಣರೋಪಣವನ್ನು ಮಾಡಬೇಕು ; ಶ್ರೀಗಂಧ, ಪದ್ಮಕ, ರೋಧ್ರ, ನೈದಿಲೆಹೂವು, ನೆಲ್ಲು, ಅರಿಶಿನ, ಅತಿಮಧುರ, ಹಾಲು ಇವುಗಳೊಡನೆ ತೈಲವನ್ನು ತಯಾರಿಸಿ ಲೇಪಿಸಿದರೆ ವ್ರಣಗಳು ಮಾಯುತ್ತವೆ.

ಚನ್ದನಂ ಕರ್ಕಟಾಖ್ಯಾ ಚ ಸಹೇ ಮಾಂಸ್ಯಾಹ್ವಯಾಮೃತೇ ॥೩೯॥
ಹರೇಣವೋ ಮೃಣಾಳಂ ಚ ತ್ರಿಫಲಾಪದ್ಮಕೋತ್ಪಲಂ ।
ತ್ರಯೋದಶಾಙ್ಗಂ ತ್ರಿವೃತಮೇತದ್ವಾಪಯಸಾನ್ವಿತಂ ॥೪೦॥
ತೈಲಂ ವಿಪಕ್ವಂಸೇಕಾರ್ಥೇ ಹಿತಂ ತು ವ್ರಣರೋಪಣೇ ।

ಅರ್ಥ—ಕೆಂಪುಗಂಧ, ಕರ್ಕಾಟಕಶೃಂಗೀ, ಕಾಡುಉದ್ದು, ಕಾಡುಹೆಸರು, ಜಟಾಮಾಂಸಿ, ಅಮೃತಬಳ್ಳಿ, ರೇಣುಕಬಿತ್ತ, ಲಾಮಂಚ, ತ್ರಿಫಲೆ, ಪದ್ಮಕ, ನೈದಿಲೆ ಈ ೧೩ ದ್ರವ್ಯಗಳ ಕಷಾಯ, ತುಪ್ಪ-ಎಳ್ಳೆಣ್ಣೆ-ವಸೆ ಮತ್ತು ಸ್ನೇಹದ ೪ ರಷ್ಟು ಹಾಲು ಇವುಗಳನ್ನು ತೈಲಪಾಕವಿಧಾನದಿಂದ ತಯಾರಿಸಿ ಆ ತೈಲದಿಂದ ಸೇಚನೆ ಮಾಡಿದರೆ ವ್ರಣವು ಮಾಯುತ್ತದೆ.

ಅತ ಊರ್ಧ್ವಂ ಪ್ರವಕ್ಷ್ಯಾಮಿ ಛಿನ್ನಾನಾಂ ತು ಚಿಕಿತ್ಸಿತಂ ॥೪೧॥
ಭಿನ್ನಂ ನೇತ್ರಮಕರ್ಮಣ್ಯಮಭಿನ್ನಂ ಲಮ್ಬತೇ ತು ಯತ್ ।
ತನ್ನಿವೇಶ್ಯ ಯಥಾಸ್ಥಾನಮವ್ಯಾವಿದ್ಧಶಿರಂ ಶನೈಃ ॥೪೨॥
ಪೀಡಯೇತ್ಪಾಣಿನಾ ಸಮ್ಯಕ್ ಪದ್ಮಪತ್ರಾನ್ತರೇಣ ಚ ।
ತತೋಽಸ್ಯ ತರ್ಪಣಂ ಕಾರ್ಯಂ ನಸ್ಯಂ ಚಾನೇನ ಸರ್ಪಿಷಾ ॥೪೩॥
ಆಜಂ ಘೃತಂ ಕ್ಷೀರಪಾತ್ರಂ ಮಧುಕಂ ಚೋತ್ಪಲಾನಿ ಚ ।
ಜೀವಕರ್ಷಭಕೌ ಚೈವ ಪಿಷ್ಟ್ವಾ ಸರ್ಪಿರ್ವಿಪಾಚಯೇತ್ ॥೪೪॥
ಸರ್ವನೇತ್ರಾಭಿಘಾತೇ ತು ಸರ್ಪಿರೇತತ್ ಪ್ರಶಸ್ಯತೇ ।

ಅರ್ಥ—ಇನ್ನುಮುಂದೆ ಭಿನ್ನವೆಂಬ ಸದ್ಯೋವ್ರಣಭೇದದ ಚಿಕಿತ್ಸೆಯನ್ನು ಹೇಳುತ್ತೇವೆ ; ಕಣ್ಣುಗುಡ್ಡೆಯು ಒಡೆದುಹೋದರೆ ಪದಾರ್ಥಗಳನ್ನು ನೋಡುವುದಕ್ಕೆ ಆಗುವುದಿಲ್ಲ ; ಕಣ್ಣುಗುಡ್ಡೆಯು ಕಳಚಿಬಿದ್ದು ನೇತಾಡುತ್ತಿದ್ದರೆ, ವೈದ್ಯನು ಅದನ್ನು ಮೊದಲಿದ್ದಂತೆಯೇ ಅದರ ಸ್ಥಳದಲ್ಲಿಟ್ಟು ಸರಿಪಡಿಸಿ ರೋಗಿಯನ್ನು ಅಂಗತ್ತಲಾಗಿ ಮಲಗಿಸಿ ತಲೆಯನ್ನು ಅಲ್ಲಾಡಿಸದಂತೆ ಹೇಳಿ ತಾವರೆಯ ಎಲೆಯನ್ನು ಕಣ್ಣಿನ ಮೇಲಿಟ್ಟು ತನ್ನ ಅಂಗೈಯಿಂದ ಮೆಲ್ಲಗೆ ಅದುಮಿ ಸರಿಪಡಿಸಿ ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ಕಣ್ಣಿಗೆ ಲೇಪಿಸಿ ಅನಂತರ ಈ ಕೆಳಗೆ ಹೇಳುವ ಘೃತದಿಂದ ನೇತ್ರತರ್ಪಣವನ್ನೂ ನಸ್ಯ ಕರ್ಮವನ್ನೂ ಮಾಡಿಸಬೇಕು. ಹೇಗೆಂದರೆ—ಅತಿಮಧುರ-ನೈದಿಲೆಗೆಡ್ಡೆ-ಜೀವಕ-ಋಷಭಕ ಇವುಗಳನ್ನು ಸಮಪ್ರಮಾಣದಿಂದ ಅರೆದು ಒಂದು ಪಲ ಆಡಿನ ತುಪ್ಪ, ೪ ಪಲ ಹಸುವಿನ ತುಪ್ಪ ೨ ಪ್ರಸ್ಥ ಹಾಲನ್ನು ಕೂಡಿಸಿ ತೈಲಪಾಕ ಮಾಡಬೇಕು ; ಒಂದು ಆಢಕ ಹಾಲಿಗೆ ಆಡಿನ ತುಪ್ಪ ೮ ಪಲ, ಅತಿಮಧುರಾದಿಗಳು ಎರಡೆರಡು ಪಲಗಳು, ಹಸುವಿನ ತುಪ್ಪ ೮ ಪಲ, ಹಸುವಿನ ಹಾಲು ಅಳತೆಯ ೨ ಸೇರುಗಳಷ್ಟನ್ನು ಸೇರಿಸಿ ಘೃತ ಪಾಕ ಮಾಡಬೇಕು ; ಈ ಘೃತವು ಸಕಲ ವಿಧಗಳಾದ ನೇತ್ರಾಭಿಘಾತಗಳಲ್ಲೂ ಪ್ರಶಸ್ತವಾದದ್ದು.

ಟಿಪ್ಪಣಿ : ಕೆಲವರು ಆಡಿನ ತುಪ್ಪ ಮತ್ತು ಹಸುವಿನ ತುಪ್ಪಗಳು ಸಮಪ್ರಮಾಣದಿಂದ ಇರಬೇಕು (ಎರಡೂ ಸೇರಿ ೧ ಪ್ರಸ್ಥ) ಅತಿಮಧುರ ಮೊದಲಾದವುಗಳ ಕಲ್ಕವು ಘೃತದ ಕಾಲುಭಾಗ (೪ ಪಲಗಳು) ವೂ, ಹಾಲು ೧ ಆಢಕ ಅಂದರೆ ಘೃತದ ೪ ರಷ್ಟೂ ಇರಬೇಕು ಈ ರೀತಿಯಾಗಿ ಸೇರಿಸಿ ಘೃತಪಾಕ ಮಾಡಬೇಕು ಎನ್ನುತ್ತಾರೆ ; ಮತ್ತೆ ಕೆಲವರು ದ್ರವದ್ರವ್ಯವು ಯೋಗದಲ್ಲಿ ಹೇಳಿರುವ ಪ್ರಮಾಣಕ್ಕೆ ಎರಡರಷ್ಟಿರಬೇಕೆನ್ನುತ್ತಾರೆ ; (ಅಳತೆಯ ೪ ಸೇರುಗಳಾಗುತ್ತವೆ.) ಆದರೆ ಗಯೀ ಎಂಬ ಆಚಾರ್ಯರು ಆಡಿನ ತುಪ್ಪ ೧ ಪ್ರಸ್ಥ ಹಸುವಿನ ತುಪ್ಪ ೧ ಪ್ರಸ್ಥ ಹಸುವಿನ ಹಾಲು ೧ ಆಢಕ, ಅತಿಮಧುರಾದಿ ದ್ರವ್ಯಗಳ ಕಲ್ಕ ತುಪ್ಪದ ಕಾಲುಭಾಗ ಅಂದರೆ ೮ ಪಲಗಳು ಎನ್ನುತ್ತಾರೆ.

ಉದರಾನ್ಮೇದಸೋ ವರ್ತಿರ್ನಿರ್ಗತಾ ಯಸ್ಯ ದೇಹಿನಃ ॥೪೫॥
ಕಷಾಯಭಸ್ಮಮೃತ್ತಿಕೇರ್ಶಾಂ ಬದ್ಧ್ವಾ ಸೂತ್ರೇಣ ಸೂತ್ರವಿತ್ ।
ಅಗ್ನಿತಪ್ತೇನ ಶಸ್ತ್ರೇಣ ಛಿನ್ದ್ಯಾನ್ಮಧುಸಮಾಯುತಂ ॥೪೬॥
ಬದ್ಧ್ವಾ ವ್ರಣಂ ಸುಜೀರ್ಣೇsನ್ನೇ ಸರ್ಪಿಷಃ ಪಾನಮಿಷ್ಯತೇ ।
ಸ್ನೇಹಪಾನಾದೃತೇ ಚಾಪಿ ಪಯಃಪಾನಂ ವಿಧೀಯತೇ ॥೪೭॥
ಶರ್ಕರಾಮಧುಯಷ್ಟಿಭ್ಯಾಂ ಲಾಕ್ಷಯಾ ವಾ ಶ್ವದಂಷ್ಟ್ರಯಾ ।
ಚಿತ್ರಾಸಮನ್ವಿತಂ ಚೈವ ರುಜಾದಾಹವಿನಾಶನಂ ॥೪೮॥

ಅರ್ಥ—ಉದರಗುಹೆಯಿಂದ ಬತ್ತಿಯಂತೆ ಮೇದಸ್ಸು ಹೊರಕ್ಕೆ ಬರುತ್ತಿದ್ದರೆ ಸರ್ಜ ವೃಕ್ಷದ ಮತ್ತು ಮತ್ತಿಮರದ ತೊಗಟೆಯ ಕಷಾಯ ಅವುಗಳ ಭಸ್ಮ ಮತ್ತು ಜೇಡಿಮಣ್ಣು

ಗಳಿಂದಲೇ ಮೇದೋವರ್ತಿಯನ್ನು ಲೇಪಿಸಿ ವರ್ತಿಯ ಬುಡವನ್ನು ದಾರದಿಂದ ಬಿಗಿದ ಕಾದಶಸ್ತ್ರದಿಂದ ಕತ್ತರಿಸಬೇಕು ; ಕಾಯಿಸದಿರುವ ಶಸ್ತ್ರದಿಂದ ಛೇದಿಸಿದರೆ ವ್ರಣವಾಗಿ ಪಾಕವುಂಟಾಗುತ್ತದೆ, ಮತ್ತು ಹೊರಗೆ ಬಂದ ಮೇದೋವರ್ತಿಯನ್ನು ಉದರದೊಳಕ್ಕೆ ತಳ್ಳಿದರೂ ಪ್ರವೇಶಿಸದಿದ್ದರೆ ಅಥವಾ ಒಳಗೆ ಪ್ರವೇಶಿಸಿದ್ದರೂ ಹೊರಕ್ಕೆ ಬಂದುಬಿಟ್ಟರೆ ಆಗ ಅದನ್ನು ಕತ್ತರಿಸಿ ವ್ರಣಕ್ಕೆ ಜೇನುತುಪ್ಪವನ್ನು ಬಳಿದು ಬಂಧನ ಮಾಡಬೇಕು ; ಭೋಜನ ಮಾಡಿದ ಆಹಾರವು ಸರಿಯಾಗಿ ಜೀರ್ಣಿಸಿದ್ದರೆ ರೋಗಿಗೆ ಘೃತವನ್ನು ಪಾನಮಾಡಿಸಿ ಸಕ್ಕರೆ, ಅತಿಮಧುರ, ಅರಗು, ನೆಗ್ಗಿಲು, ಹರಳೆಣ್ಣೆ ಮತ್ತು ಹಾಲು ಇವನ್ನು ಮಿಶ್ರಮಾಡಿ ಪಾನಮಾಡಿಸಿದರೆ ನೋವೂ ಉರಿಯೂ ನಿವಾರಣೆಯಾಗುತ್ತವೆ.

ಟಿಪ್ಪಣಿ : ಕ್ಷೀರಪಾಕ ಮಾಡಬೇಕಾದರೆ ದ್ರವ್ಯದ ೮ ರಷ್ಟು ಹಾಲನ್ನೂ ಹಾಲಿನ ೪ ರಷ್ಟು ನೀರನ್ನೂ ಸೇರಿಸಿ ಹಾಲು ಮಾತ್ರ ಉಳಿಯುವಂತೆ ಕಾಯಿಸಬೇಕು ; ವೃದ ವಾಗ್ಭಟನು ಒಂದೇ ಯೋಗವನ್ನು ಹೇಳುತ್ತಾನೆ ;—ಹೇಗೆಂದರೆ ಜೇನುತುಪ್ಪವನ್ನು ವ್ರಣಕ್ಕೆ ಬಳಿದು ದಾರದಿಂದ ಬಂಧಿಸಿ ಆಹಾರವು ಜೀರ್ಣಿಸಿದ ಮೇಲೆ ಘೃತವನ್ನಾಗಲೀ ಅತಿ ಮಧುರ, ಸಕ್ಕರೆ, ಹರಳೆಣ್ಣೆ, ಅರಗು, ನೆಗ್ಗಲು ಇವುಗಳನ್ನು ಸೇರಿಸಿ ಕಾಯಿಸಿದ ಹಾಲನ್ನು ಕುಡಿದರೆ ನೋವೂ ಉರಿಯೂ ನಿವಾರಣೆಯಾಗುತ್ತದೆ. ಮತ್ತು ಅತಿಮಧುರವನ್ನು ಸೇರಿಸಿ ಕ್ಷೀರಪಾಕ ವಿಧಾನದಿಂದ ಕಾಯಿಸಿದ ಹಾಲಿಗೆ ಸಕ್ಕರೆ, ಹರಳೆಣ್ಣೆಯನ್ನು ಸೇರಿಸಿ ಪಾನಮಾಡಿಸಬೇಕು ; ಇದೂ ಒಂದು ಯೋಗವು ; ನೆಗ್ಗಿಲಸಮೂಲದಿಂದ ಕಾಯಿಸಿದ ಹಾಲಿಗೆ ಅರಗು ಹರಳೆಣ್ಣೆಗಳನ್ನು ಸೇರಿಸಿ ಪಾನಮಾಡಿಸುವುದು ಎರಡನೆಯ ಯೋಗವು ; ಪ್ರತಿದಿನವೂ ಹಾಲಿಗೆ ೪ ಪಲ ಸಕ್ಕರೆ, ಹರಳೆಣ್ಣೆ ಅಥವಾ ಅರಗಿನ ಕಷಾಯ ಪ್ರತಿಯೊಂದೂ ಒಂದು ಕರ್ಷದಷ್ಟು ಸೇರಿಸಿ ಪಾನಮಾಡಬೇಕೆಂದು ಅರ್ಥವು.

ಆಟೋಪೋ ಮರಣಂ ವಾಸ್ಯಾತ್ ಶೂಲೋವ್ಯಾಚ್ಛಿದ್ಯಮಾನಯಾ ।
ಮೇದೋಗ್ರನ್ಥಾ ಚ ಯುಕ್ತ್ಯೈಲಂ ವಕ್ಷ್ಯತೇ ತಚ್ಚ ಯೋಜಯೇತ್ ॥೪೯॥
ತ್ವಚೋಽತೀತ್ಯಸಿರಾದೀನಿಭಿತ್ತ್ವಾವಾ ಪರಿಹೃತ್ಯ ವಾ ।
ಕೋಷ್ಠೇ ಪ್ರತಿಷ್ಠಿತಂ ಶಲ್ಯಂ ಕುರ್ಯಾದುಕ್ತಾನುಪದ್ರವಾನ್ ॥೫೦॥
ತತ್ರಾನ್ತರ್ಲೋಹಿತಂ ಪಾಣ್ಡುಂ ಶೀತಪಾದಕರಾನನಂ
ಶೀತೋಚ್ಛ್ವಾಸಂ ರಕ್ತನೇತ್ರಮಾನದ್ಧಂ ಚ ವಿವರ್ಜಯೇತ್ ॥೫೧॥

ಅರ್ಥ—ಮೇದೋಗ್ರಂಥಿಯನ್ನು ಶಸ್ತ್ರದಿಂದ ಕತ್ತರಿಸದಿದ್ದರೆ ಹೊಟ್ಟೆಯಲ್ಲಿ ಶಬ್ದವೂ, ನೋವೂ, ಮರಣವೂ ಸಂಭವಿಸುತ್ತದೆ ; ಮೇದೋಗ್ರಂಥಿ ಚಿಕಿತ್ಸೆಯಲ್ಲಿ ಹೇಳುವ ಎರಡುವಿಧ ಹೊಂಗೆ ಮೊದಲಾದ ದ್ರವ್ಯಗಳಿಂದ ತಯಾರಿಸಿದ ತೈಲವನ್ನುಪಯೋಗಿಸಬೇಕು ; ಕೋಷ್ಠದಲ್ಲಿ ಸೇರಿಕೊಂಡಿರುವ ಶಲ್ಯವು ಜಠರದಲ್ಲಿ ಶಬ್ದ. ಹೊಟ್ಟೆಯುಬ್ಬರ, ವಿದ್ರಧಿ ಮೊದಲಾದ ಉಪದ್ರವಗಳನ್ನು ಉಂಟುಮಾಡುತ್ತದೆ, ಮೊದಲು ಚರ್ಮ

ವನ್ನು ಸೀಳಿ, ಸಿರಾಸ್ನಾಯುಸನ್ಧಿ, ಅಸ್ಥಿ, ಸ್ನಾಯು ಮೊದಲಾದುವುಗಳನ್ನು ಕೊರೆದು ಕೋಷ್ಠದಲ್ಲಿ ನಿಂತು ಆಟೋಪ, ಆನಾಹ, ವಿದ್ರಧ್ಯಾದಿ ಉಪದ್ರವಗಳನ್ನುಂಟುಮಾಡುತ್ತದೆ; ಕೋಷ್ಠದೊಳಗೆ ರಕ್ತವು ಸೇರಿ ಮೈ ಬಿಳುಪಾಗಿ, ಕಾಲು ಕೈ ಮುಖಗಳು ತಣ್ಣಗಿದ್ದರೆ, ತಣ್ಣಗೆ ನಿಶ್ವಾಸವನ್ನು ಬಿಡುತ್ತಲೂ ಕಣ್ಣು ಕೆಂಪು ಆಗಿ ದೋಷಗಳೂ ಮಲಗಳೂ ತಮ್ಮ ಮಾರ್ಗದಿಂದ ಹೊರಕ್ಕೆ ಬಾರದಿದ್ದರೆ ಆ ರೋಗಿಯನ್ನು ವರ್ಜಿಸಬೇಕು ; (ಅಸಾಧ್ಯವು).

ಆಮಾಶಯಸ್ಥೇ ರುಧಿರೇ ವಮನಂ ಪಥ್ಯಮುಚ್ಯತೇ ।
ಪಕ್ವಾಶಯಸ್ಥೇ ದೇಯಂಚ ವಿರೇಚನಮಸಂಶಯಂ ॥೫೧॥
ಆಸ್ಥಾಪನಂ ಚ ನಿಃ ಸ್ನೇಹಂ ಕಾರ್ಯಮುಷ್ಣೈರ್ವಿಶೋಧನೈಃ ।
ಯವಕೋಲಕುಲತ್ಥಾನಾಂ ನಿಃ ಸ್ನೇಹೇನ ರಸೇನ ಚ ॥೫೨॥
ಭುಞ್ಜೀತಾನ್ನಂ ಯವಾಗೂಂವಾ ಪಿಬೇತ್ಸೈನ್ಧವಸಂಯುತಾಂ ।
ಅತಿನಿಃಸ್ರುತರಕ್ತೋವಾ ಭಿನ್ನಕೋಷ್ಠಃಪಿಬೇದಸೃಕ್ ॥೫೩॥
ಸ್ವಮಾರ್ಗಪ್ರತಿಪನ್ನಾಸ್ತು ಯಸ್ಯವಿಣ್ಮೂತ್ರಮಾರುತಾಃ ।
ವ್ಯುಪದ್ರವಃ ಸ ಭಿನ್ನೇಽಪಿ ಕೋಷ್ಠೇಜೀವತಿಮಾನವಃ ॥೫೪॥

ಅರ್ಥ—ಆಮಾಶಯದಲ್ಲಿ ರಕ್ತವು ಸೇರಿದ್ದರೆ ವಮನೌಷಧಿಯು ಹಿತಕರವು ; ಪಕ್ವಾಶಯದಲ್ಲಿ ರಕ್ತವು ತುಂಬಿದ್ದರೆ ಅನುಮಾನ ಮಾಡದೆ ವಿರೇಚನೌಷಧವನ್ನುಪ್ರಯೋಗಿಸಬೇಕು, ಮತ್ತು ಸ್ನೇಹವನ್ನು ಸೇರಿಸದೆ ಉಷ್ಣವಿರೇಚನದ್ರವ್ಯಗಳ ಕಷಾಯದಿಂದ ಆಸ್ಥಾಪನವನ್ನು ಮಾಡಬೇಕು ; ಯವಧಾನ್ಯ, ಎಲಚಿಹಣ್ಣು, ಹುರುಳಿ ಕಟ್ಟುಗಳೊಡನೆ ಜಿಡ್ಡನ್ನು ಮಿಶ್ರಮಾಡದೆ ಅನ್ನವನ್ನು ಭೋಜನ ಮಾಡಿಸಬೇಕು ; ಸೈಂಧವಲವಣಯುಕ್ತವಾದ ಯವಾಗೂವನ್ನು ಕುಡಿಸಲೇಬೇಕು ; ಕೋಷ್ಠವು ಭೇದಿಸಲ್ಪಟ್ಟು ಅತಿಯಾಗಿ ರಕ್ತಸ್ರಾವವಾದರೆ ಆ ರೋಗಿಗೆ ಇತರರ ಶುದ್ಧರಕ್ತವನ್ನು ಕುಡಿಸಬೇಕು ; ಯಾವನಿಗೆ ಮನುಷ್ಯನಿಗೆ ಮಲಮೂತ್ರ ಅಪಾನವಾತಗಳು ತಮ್ಮ ತಮ್ಮ ಮಾರ್ಗಗಳಲ್ಲಿ ಜಮಾಯಿಸಿ ಜ್ವರ, ಹೊಟ್ಟೆಯುಬ್ಬರ ಮುಂತಾದ ಉಪದ್ರವಗಳಿಲ್ಲದಿದ್ದರೆ ಕೋಷ್ಠವು ಭೇದಿಸಲ್ಪಟ್ಟಿದ್ದರೂ ರೋಗಿಯು ಬದುಕುತ್ತಾನೆ.

ಅಭಿನ್ನಮನ್ತ್ರಂ ನಿಷ್ಕ್ರಾನ್ತಂ ಪ್ರವೇಶ್ಯಂ ನಾನ್ಯಥಾಭವೇತ್ ।
ಪಿಪೀಲಿಕಾಶಿರೋಗ್ರಸ್ತಂ ತದಪ್ಯೇಕೇ ವದನ್ತಿ ತು ॥೫೬॥
ಪ್ರಕ್ಷಾಳ್ಯ ಪಯಸಾ ದಿಗ್ಧಂ ತೃಣಶೋಣಿತಪಾಂಸುಭಿಃ ।
ಪ್ರವೇಶಯೇತ್ ಕೃತ್ತನಖೋ ಘೃತೇನಾಕ್ತಂ ಶನೈಃ ಶನೈಃ । ॥೫೭॥
ಪ್ರವೇಶಯೇತ್ ಕ್ಷೀರಸಿಕ್ತಂ ಶುಷ್ಕಮನ್ತ್ರಂ ಘೃತಾಪ್ಲುತಂ ।
ಅಙ್ಗುಳ್ಯಾಭಿಮೃಶೇತ್ ಕಣ್ಠಂ ಜಲೇನೋದ್ವೇಜಯೇದಪಿ । ॥೫೮॥
ಹಸ್ತಪಾದೇಷು ಸಂಗೃಹ್ಯ ಮುತ್ಥಾಪ್ಯ ಸಮುಹಾಬಲಾಃ ।
ಭವತ್ಯನ್ತಃ ಪ್ರವೇಶಸ್ತು ಯಥಾ ನಿರ್ಧುನುಯುಸ್ತಥಾ ॥೫೯॥

ತಥಾನ್ತ್ರಾಣಿ ವಿಶನ್ತ್ಯನ್ತಃ ಸ್ವಾಂ ಕಲಾಂ ಪೀಡಯನ್ತಿ ಚ ।
ವ್ರಣಾಲ್ಪತ್ವಾದ್ಬಹುತ್ವಾದ್ವಾ ದುಷ್ಪ್ರವೇಶಂ ಭವೇತ್ತು ಯತ್ ॥೬೦॥
ತದಾಪಾಟ್ಯ ಪ್ರಮಾಣೇನ ಭಿಷಗನ್ತ್ರಂ ಪ್ರವೇಶಯೇತ್ ।
ಯಥಾಸ್ಥಾನಂ ನಿವಿಷ್ಟೇ ಚ ವ್ರಣಂ ಸೀವ್ಯೇದತನ್ದ್ರಿತಃ ॥೬೧॥
ಸ್ಥಾನಾದಪೇತಮಾದತ್ತೇ ಪ್ರಾಣಾರ್ನ್ ಗುಮ್ಫಿತಮೇವವಾ ।
ವೇಷ್ಟಯಿತ್ವಾ ತು ಪಟ್ಟೇನ ಘೃತಸೇಕಂ ಪ್ರದಾಪಯೇತ್ ॥೬೨॥
ಘೃತಂ ಪಿಬೇತ್ ಸುಖೋಷ್ಣಂ ಚ ಚಿತ್ರಾತೈಲಸಮನ್ವಿತಂ ।
ಮೃದುಕ್ರಿಯಾರ್ಥಂ ಶಕೃತೋ ವಾಯೋಶ್ಚಾಧಃ ಪ್ರವೃತ್ತಯೇ ॥೬೩॥
ತತಸ್ತೈಲಮಿದಂ ಕುರ್ಯಾದ್ರೋಪಣಾರ್ಥಂ ಚಿಕಿತ್ಸಕಃ ।
ತ್ವಚೋಽಶ್ವಕರ್ಣಧವಯೋರ್ಮೇಚಕೀಮೇಷಶೃಙ್ಗಯೋಃ ॥೬೪॥
ಶಲ್ಲಕ್ಯರ್ಜುನಯೋಶ್ಚಾಪಿ ವಿದಾರ್ಯಾಃ ಕ್ಷೀರಿಣಾಂ ತಥಾ ।
ಬಲಾಮೂಲಾನಿ ಚಾಹೃತ್ಯ ತೈಲಮೇತೈರ್ವಿಪಾಚಯೇತ್ ॥೬೫॥
ವ್ರಣಂ ಸಂರೋಪಯೇತ್ತೇನ ವರ್ಷಮಾತ್ರಂ ಯತೇತ ಚ ।

ಅರ್ಥ—ಕೋಷ್ಠಗತ ಅನ್ತ್ರವು ಹರಿದುಹೋಗದೆ, ಹೊರಗಡೆಯ ಚರ್ಮವು ಅಭಿಘಾತದಿಂದ ಹರಿದುಹೋದಕಾರಣ, ಹೊರಕ್ಕೆ ಹೊರಟುಕೊಂಡು ಬಂದಿದ್ದರೆ ಅದನ್ನು ಅದೇ ಮಾರ್ಗದಿಂದ ಹಿಂದಕ್ಕೆ ಹೋಗುವಂತೆ ಬೆರಳುಗಳಿಂದ ನೂಕಬೇಕು ; ಅನ್ತ್ರವು (ಕರುಳು) ಹರಿದುಹೋಗಿ ಹುಲ್ಲು-ರಕ್ತ-ಧೂಳುಗಳು ಮೆತ್ತಿಕೊಂಡಿದ್ದರೆ ವೈದ್ಯನು ಅವನ್ನು ಹಾಲಿನಿಂದ ತೊಳೆದು ಶುದ್ಧಿಮಾಡಿ ಉಗುರುಗಳನ್ನು ಕತ್ತರಿಸಿದ ತನ್ನ ಕೈಬೆರಳುಗಳನ್ನು ತೊಳೆದುಕೊಂಡು ಕಟ್ಟೆರುವೆ (ದಪ್ಪ ಇರುವೆ)ಗಳಿಂದ ಶೀಳಿದ ಕರುಳಿನ ಎರಡೂ ಭಾಗಗಳೂ ಶೇರಿಕೊಳ್ಳುವಂತೆ ಕಚ್ಚಿಸಿ (ತುಪ್ಪ ಜೇನುತುಪ್ಪಗಳಿಂದ ಲೇಪಿಸಿದ ಕರುಳುಭಾಗಗಳನ್ನು ಇರುವೆಗಳು ಕಚ್ಚುತ್ತವೆ). ಅವುಗಳ ಹಿಂಭಾಗಗಳನ್ನು ಕತ್ತರಿಯಿಂದ ಕತ್ತರಿಸಿ ಅನಂತರ ತುಪ್ಪವನ್ನು ಬಳಿದು ಬೆರಳುಗಳಿಂದ ಮೆಲ್ಲಮೆಲ್ಲಗೆ ಕರುಳುಗಳನ್ನು ಒಳಕ್ಕೆ ತಳ್ಳಿ ತನ್ನ ಸ್ಥಳದಲ್ಲಿ ಸೇರಿಸಿಕೊಳ್ಳುವಂತೆ ಮಾಡಬೇಕು ; ಹಾಗೆ ಕರುಳು ತನ್ನ ಸ್ಥಳದಲ್ಲಿ ಮೊದಲಿನಂತೆ ಸೇರಿಸಿಕೊಳ್ಳದಿದ್ದರೆ ಬೆರಳಿನಿಂದ ರೋಗಿಯ ಗಂಟಲನ್ನು ಮುಟ್ಟದರೆ ಅಥವಾ ಹೆದರಿಸಿದರೆ ಸರಕ್ಕನೆ ಕರುಳು ಒಳಕ್ಕೆ ಎಳೆದುಕೊಳ್ಳಲ್ಪಡುತ್ತದೆ ; ಅಥವಾ ಅತ್ಯಂತ ಬಲವಾದವರು ರೋಗಿಯನ್ನು ನಿಲ್ಲಿಸಿ ಅವನ ಎರಡು ಕಾಲುಗಳನ್ನೂ ಭುಜಗಳನ್ನೂ ಭದ್ರವಾಗಿ ಹಿಡಿದು ಎತ್ತಿ ಕೊಡವಿದರೆ (ಎಡಬಲಗಳಿಗೆ ಅಲ್ಲಾಡಿಸಬೇಕು) ಕರುಳು ಸರಕ್ಕನೆ ಒಳಕ್ಕೆ ನುಗ್ಗಿ ತನ್ನ ಸ್ಥಳಕ್ಕೆ ಸೇರಿಕೊಳ್ಳುತ್ತದೆ ; ಕರುಳು ಒಣಗಿದ್ದರೆ ಹಾಲಿನಿಂದ ಅದ್ದಿ ಮೆತ್ತಗೆ ಮಾಡಿ ತುಪ್ಪವನ್ನು ಬಳಿದು ಒಳಗಡೆಗೆ ನೂಕಬೇಕು ; ಈ ವಿಧವಾದ ಪ್ರಯೋಗಗಳಿಂದ ಕರಳು ಒಳಗಡೆಗೆ ಸೇದಿಕೊಳ್ಳುವುದಲ್ಲದೆ ಪುರೀಷಧರಾ ಕಲೆಯನ್ನೂ ಪೀಡಿಸುತ್ತದೆ (ಅದರ ಮೇಲೆ ಒತ್ತಡವನ್ನುಂಟುಮಾಡುತ್ತದೆ) ; ವ್ರಣ

ಮುಖವು ಕಿರಿದಾಗಿದ್ದು ಹೊರಗೆ ಬಂದಿರುವ ಕರುಳು ದೊಡ್ಡದಾಗಿದ್ದು ಒಳಕ್ಕೆ ಹೋಗಿಸುವುದು ಕಷ್ಟವಾದರೆ ತಕ್ಕಷ್ಟು ಅಗಲವಾಗಿ ವ್ರಣಮುಖವನ್ನು ಕತ್ತರಿಸಿ ಕರುಳನ್ನು ಒಳಕ್ಕೆ ನುಗ್ಗಿಸಬೇಕು ; ಕರುಳು ತನ್ನ ಸ್ಥಾನದಲ್ಲಿ ಸೇರಿಕೊಂಡ ಮೇಲೆ ಸಾವಕಾಶ ಮಾಡದೆ ವ್ರಣಮುಖವನ್ನು ಹೊಲಿದುಬಿಡಬೇಕು ಎಂಬುದಾಗಿ ಕೆಲವು ವೈದ್ಯರು ಅಭಿಪ್ರಾಯಪಡುತ್ತಾರೆ, ಕರುಳು ತನ್ನ ಸ್ಥಾನವನ್ನು ಬಿಟ್ಟು ಹೊರಕ್ಕೆ ಹೊರಟುಕೊಂಡಿದ್ದರೂ ಅಥವಾ ಒಂದು ಪದರು ಮತ್ತೊಂದರಲ್ಲಿ ನುಸುಳಿದ್ದರೂ ಅತ್ಯಂತ ಬಾಧೆಯನ್ನೂ ಕಡೆಗೆ ಮರಣವನ್ನೂ ಉಂಟುಮಾಡುತ್ತದೆ; ವ್ರಣದ ಮೇಲೆ ದಪ್ಪ ಪಟ್ಟೆಯನ್ನು ಬಿಗಿದು ಸುಖೋಷ್ಣವಾದ ತುಪ್ಪವನ್ನು ಅದರ ಮೇಲೆ ನಿಧಾನವಾಗಿ ಸೇಚನೆಮಾಡಿ ಹರಳೆಣ್ಣೆ ಮಿಶ್ರಮಾಡಿದ ಸುಖೋಷ್ಣವಾದ ತುಪ್ಪವನ್ನು ರೋಗಿಗೆ ಕುಡಿಸಿದರೆ ಮಲವು ಮೆತ್ತಗಾಗುತ್ತದೆ, ಅಪಾನವಾತವೂ ಹೊರಕ್ಕೆ ಬರುತ್ತದೆ; ಅನಂತರ ವೈದ್ಯನು ವ್ರಣರೋಪಣಮಾಡುವುದಕ್ಕಾಗಿ ಅಶ್ವಕರ್ಣ, ದೂದಿ, ದಿಂಡಲು, ಕರ್ಕಾಟಕಶೃಂಗಿ, ನಾಯಿಬೇಲ,ಮತ್ತಿ ಇವುಗಳ ತೊಗಟೆ, ನೆಲಗುಂಬಳಗಡ್ಡೆ, ಕ್ಷೀರವೃಕ್ಷಗಳ ತೊಗಟೆ, ಕಳ್ಳಂಗಡಲೆಯ ಬೇರು ಇವೆಲ್ಲಾ ಸೇರಿ ಒಂದು ಆಢಕದಷ್ಟಕ್ಕೆ ೪ ಆಢಕ ನೀರನ್ನು ಹಾಕಿ ೪ನೇ ಒಂದು ಪಾಲು ಕಷಾಯವನ್ನು ನಿಲ್ಲಿಸಿ ಶೋಧಿಸಿಟ್ಟುಕೊಂಡು ಆ ಕಷಾಯ ಒಂದು ಆಢಕ, ತಿಲತೈಲ ೧ ಪ್ರಸ್ಥ, ಮೇಲೆ ಹೇಳಿದ ದ್ರವ್ಯಗಳ ಚೂರ್ಣ ೧ ಕುಡುವದಷ್ಟನ್ನು ಕಲ್ಕಮಾಡಿ ಸೇರಿಸಿ ತೈಲಪಾಕಮಾಡಿಟ್ಟುಕೊಂಡು ವ್ರಣಕ್ಕೆ ಲೇಪಿಸಿದರೆ ಅದು ಮಾಯುತ್ತದೆ; ರೋಗಿಯು ಮೈಥುನ ವ್ಯಾಯಾಮಾದಿ ಸಾಹಸಕಾರ್ಯಗಳನ್ನು ಒಂದು ವರ್ಷ ಪೂರ್ತಿಯಾಗುವವರೆಗೂ ಮಾಡಕೂಡದು.

ಪಾದೌ ನಿರಸ್ತ ಮುಷ್ಕಸ್ಯ ಜಲೇನ ಪ್ರೋಕ್ಷ್ಯ ಚಾಕ್ಷಿಣೀ ॥೬೬॥
ಪ್ರವೇಶ್ಯ ತುನ್ನಸೇವನ್ಯಾ ಮುಷ್ಕೌ ಸೀವ್ಯೇತ್ ತತಃಪರಂ ।
ಕಾರ್ಯೋ ಗೋಫಣಿಕಾಬನ್ಧಃ ಕಟ್ಯಾಮಾವೇಶ್ಯ ಯನ್ತ್ರಕಂ ॥೬೭॥
ನ ಕುರ್ಯಾತ್ ಸ್ನೇಹಸೇಕಂ ಚ ತೇನ ಕ್ಲಿದ್ಯತಿ ಹಿ ವ್ರಣಃ ।
ಕಾಲಾನುಸಾರ್ಯಗುರ್ವೇಲಾಜಾತೀಚನ್ದನಪದ್ಮಕೈಃ ॥೬೮॥
ಶಿಲಾದಾರ್ವ್ಯಮೃತಾತುತ್ಥೈಸ್ತೈಲಂ ಕುರ್ವೀತರೋಪಣಂ ।

ಅರ್ಥ—ಆಗನ್ತು ಕಾರಣದಿಂದ ಅಂಡಕೋಶವು ಹರಿದುಹೋಗಿ ಬೀಜಗಳು ಹೊರಗೆ ನೇತಾಡುತ್ತಿದ್ದರೆ ರೋಗಿಯ ಕಾಲುಗಳನ್ನೂ ಕಣ್ಣುಗಳನ್ನೂ ನೀರಿನಿಂದ ತೊಳೆದು ತುನ್ನಸೇವನಿಯಿಂದ (ಇಕ್ಕಳಭೇದ) ಬೀಜಗಳನ್ನು ಒಳಕ್ಕೆ ನುಗ್ಗಿಸಿ ಅಂಡಕೋಶವನ್ನು ಹೊಲಿದು ಸೊಂಟಕ್ಕೆ ಪಟ್ಟೆಯನ್ನು ಬಿಗಿದು ಗೋಫಣಾಬಂಧವನ್ನು ಮಾಡಬೇಕು. ಸ್ನೇಹಲೇಪನವನ್ನೂ ಕಷಾಯದಿಂದ ವ್ರಣಸೇಚನೆಯನ್ನೂ ಮಾಡಬಾರದು. ಮಾಡಿದರೆ ವ್ರಣದಿಂದ ದ್ರವವು ಜಿನುಗುತ್ತದೆ; ಗ್ರಂಥಿಕತಗರ, ಅಗಿಲು, ಏಲಕ್ಕಿ, ಜಾಜಿಕಾಯಿ–

ಶ್ರೀಗಂಧ–ಪದ್ಮಕ–ಮಣಶಿಲೆ–ಮರದರಿಶಿನ–ಅಮೃತವಳ್ಳಿ–ಮಯೂರತುತ್ಥ ಇವುಗಳನ್ನು ಸೇರಿಸಿ ಪಾಕ ಮಾಡಿದ ತೈಲದಿಂದಲೇಪನ್ನ ಮಾಡಿದರೆ ವ್ರಣವು ಮಾಯುತ್ತದೆ.

ಶಿರಸೋಽಪಹೃತೇ ಶಲ್ಯೇ ಬಾಲವರ್ತಿಂ ಪ್ರವೇಶಯೇತ್ ||೧೯||
ಬಾಲವರ್ತ್ಯಾಮದತ್ತಾಯಾಂ ಮಸ್ತುಲುಙ್ಗಂ ವ್ರಣಾತ್‌ಸ್ರವೇತ್ |
ಹನ್ಯಾದೇನಂ ತತೋವಾಯುಸ್ತಸ್ಮಾದೇಪಮುಪಾಚರೇತ್ ||೨೦||
ವ್ರಣೇ ರೋಹತಿ ಚೈಕೈಕಂ ಶನೈರ್ಬಾಲಮುಪಕ್ಷಿಪೇತ್ |

ಅರ್ಥ—ಸಲಾಕಿಯಿಂದ ತಲೆಯಮೇಲೆ ಚುಚ್ಚುವುದರಿಂದ ವ್ರಣವುಂಟಾದರೆ ವ್ರಣದಿಂದ ಶಲ್ಯವನ್ನು ಹೊರಕ್ಕೆ ತೆಗೆದು ಕೂದಲಿನಿಂದ ಮಾಡಿದ ಒತ್ತಿಯನ್ನು ಆ ವ್ರಣರಂಧ್ರದೊಳಕ್ಕೆ ನುಗ್ಗಿಸಿಡಬೇಕು; ಈ ರೀತಿಯಾಗಿ ಬಾಲವರ್ತಿಯನ್ನು ವ್ರಣರಂಧ್ರದೊಳಕ್ಕೆ ನುಗ್ಗಿಸದಿದ್ದರೆ ತಲೆಗೆ ಬಲವನ್ನುಂಟುಮಾಡುವ ಹೆತ್ತತುಪ್ಪದಂತಿರುವ ಮಸ್ತುಲುಙ್ಗವೆಂಬ ಸ್ನೇಹವಿಶೇಷವು ವ್ರಣರಂಧ್ರದಿಂದ ಹೊರಕ್ಕೆ ಸುರಿದು ಅಲ್ಲಿ ವಾತವು ಪ್ರಕೋಪವಾಗಿ ರೋಗಿಯನ್ನು ಕೊಂದುಬಿಡುತ್ತದೆ; ವ್ರಣವು ಮಾಗಿಬಿಟ್ಟರೆ ಬಾಲವರ್ತಿಯಿಂದ ಒಂದೊಂದನ್ನಾಗಿ ಕೂದಲನ್ನು ಹಿರಿದುಬಿಡಬೇಕು.

ಗಾತ್ರಾತ್ ವ್ಯಪಹೃತೇಽನ್ಯಸ್ಮಾತ್ ಸ್ನೇಹವರ್ತಿಂ ಪ್ರವೇಶಯೇತ್ ||೨೧||
ಕೃತೇ ನಿಃ ಶೋಣಿತೇ ಚಾಪಿ ವಿಧಿಃ ಸದ್ಯಃಕ್ಷತೇ ಹಿತಃ |
ದೂರಾವಗಾಢಾಃ ಸೂಕ್ಷ್ಮಾಃ ಸ್ಯುರ್ಯೇ ವ್ರಣಾಸ್ತಾ್ ವಿಶೋಣಿತಾ್ ||೨೨||
ಕೃತ್ವಾ ಸೂಕ್ಷ್ಮೇಣ ನೇತ್ರೇಣ ಚಕ್ರತೈಲೇನ ತರ್ಪಯೇತ್ |

ಅರ್ಥ—ಶಲ್ಯವನ್ನು ಹೊರಕ್ಕೆ ತೆಗೆದು ಶರೀರದ ಬೇರೆಕಡೆಯಲ್ಲಿ ಹೊಸದಾಗಿ ವ್ರಣವನ್ನು ಮಾಡಿ ಅದರ ಮೂಲಕ ಚಕ್ರತೈಲದಲ್ಲಿ ಅದ್ದಿದ ವರ್ತಿಯನ್ನು ಶಲ್ಯವ್ರಣಕ್ಕೆ ನುಗ್ಗಿಸಿ ರಕ್ತಸ್ರಾವ ನಿಂತಮೇಲೆ ಸದ್ಯೋವ್ರಣಕ್ಕೆ ಚಿಕಿತ್ಸೆ ಮಾಡಬೇಕು. ಅಂದರೆ ತುಪ್ಪ ಜೇನುತುಪ್ಪಗಳನ್ನು ರಂಗಳಿಸಿ ವ್ರಣವು ಮಾಯುವುದಕ್ಕಾಗಿ ಲೇಪಿಸಬೇಕು.

ಸಮಙ್ಗಾಂ ರಜನೀಂಪದ್ಮಾಂ ತ್ರಿವರ್ಗಂ ತುತ್ಥಮೇವ ಚ | ||೨೩||
ವಿಡಙ್ಗಂ ಕಟುಕಾಂ ಪಥ್ಯಾಂ ಗುಡೂಚೀಂ ಸಕರಞ್ಜಕಾಂ |
ಸಂಹೃತ್ಯ ವಿಪಚೇತ್ಕಾಲೇ ತೈಲಂ ರೋಪಣಮುತ್ತಮಂ ||೨೪||
ತಾಳೀಸಂ ಪದ್ಮಕಂ ಮಾಂಸೀ ಹರೇಣ್ವಗುರುಚನ್ದನಂ |
ಹರಿದ್ರೇ ಪದ್ಮಬೀಜಾನಿ ಸೋಶೀರಂ ಮಧುಕಂ ಚ ತೈಃ ||೨೫||
ಪಕ್ವಂ ಸದ್ಯೋವ್ರಣೇಷೂಕ್ತಂ ತೈಲಂ ರೋಪಣಮುತ್ತಮಂ |

ಅರ್ಥ—ಮಂಜಿಷ್ಠೆ, ಅರಿಶಿನ, ಭಾರಂಗಿ, ತ್ರಿಫಲೆ, ನೈಲ್‌ತುತ್ತ, ವಿಡಂಗ, ಕಟುಕರೋಹಿಣಿ, ಅಣಿಲೆಕಾಯಿ, ಅಮೃತವಳ್ಳಿ, ಹೊಂಗೆಯಬೀಜ ಇವನ್ನು ಸೇರಿಸಿ

ತಯಾರಿಸಿದ ತೈಲವು ವ್ರಣವನ್ನು ಮಾಯಿಸುವುದರಲ್ಲಿ ಶ್ರೇಷ್ಠವಾದದ್ದು ; ತಾಳೀಸಪತ್ರೆ, ಪದ್ಮಕ, ಜಟಾಮಾಂಸಿ, ರೇಣುಕೆಬೀಜ, ಅಗಿಲು, ರಕ್ತಚಂದನ, ಅರಿಶಿನ, ಮರದರಿಶಿನ, ತಾವರೆಬೀಜ, ಲಾವಂಚ, ಅತಿಮಧುರ ಇವುಗಳನ್ನು ಸೇರಿಸಿ ಪಾಕ ಮಾಡಿದ ತೈಲವು ಶ್ರೇಷ್ಠವಾದ ರೋಪಣಕಾರಿಯು.

ಕ್ಷತೇ ಕ್ಷತವಿಧಿಃ ಕಾರ್ಯಃ ಪಿಚ್ಚಿತೇ ಭಗ್ನವದ್ವಿಧಿಃ ||೭೬||
ಘೃಷ್ಟೇ ರುಜೋನಿಗೃಹ್ಯಾಶು ಚೂರ್ಣೈರುಪಚರೇದ್ವ್ರಣಂ |
ವಿಶ್ಲಿಷ್ಟದೇಹಂ ಪತಿತಂ ಮಥಿತಂ ಹತಮೇವಚ ||೭೭||
ವಾಸಯೇತ್ ತೈಲಪೂರ್ಣಾಯಾಂ ದ್ರೋಣ್ಯಾಂ ಮಾಂಸರಸಾಶಿನಂ |
ಅಯಮೇವ ವಿಧಿಃ ಕಾರ್ಯಃ ಕ್ಷೀಣೇ ಮರ್ಮಹತೇ ತಥಾ ||೭೮||
ರೋಪಣೇ ಸಪರೀಷೇಕೇ ಪಾನೇ ಚ ವ್ರಣಿನಾಂ ಸದಾ |
ತೈಲಂ ಘೃತಂ ವಾ ಸಂಯೋಜ್ಯ ಶರೀರರ್ತೂನವೇಕ್ಷ್ಯ ಹಿ ||೭೯||
ಘೃತಾನಿ ಯಾನಿ ವಕ್ಷ್ಯಾಮಿ ಯತ್ನತಃ ಪಿತ್ತವಿದ್ರಧೌ |
ಸದ್ಯೋವ್ರಣೇಷು ದೇಯಾನಿ ತಾನಿ ವೈದ್ಯೇನ ಜಾನತಾ ||೮೦||
ಸದ್ಯಃ ಕ್ಷತವ್ರಣಂ ವೈದ್ಯಃ ಸಶೂಲಂ ಪರಿಷೇಚಯೇತ್ |
ಸರ್ಪಿಷಾ ನಾತಿಶೀತೇನ ಬಲಾತೈಲೇನ ವಾ ಪುನಃ ||೮೧||

ಅರ್ಥ—ಕ್ಷತವ್ರಣದಲ್ಲಿ ಕ್ಷೌದ್ರಘೃತತೈಲಾಭ್ಯಂಗಾದಿ ವಿಧಾನಗಳನ್ನೂ ಪಿಚ್ಚಿತ ವ್ರಣದಲ್ಲಿ (ಮೂಳೆಯು ಮುರಿದು ಮಜ್ಜೆರಕ್ತಗಳಿಂದ ಕೂಡಿ ವ್ರಣವು ಉಬ್ಬಿದ್ದರೆ) ಬನ್ಧನ, ಸೇಕ, ರೂಕ್ಷಾಹಾರ ಭೋಜನ ಮೊದಲಾದ ಅಸ್ಥಿಭಗ್ನದ ಉಪಚಾರಗಳನ್ನು ಮಾಡಬೇಕು ; ಘೃಷ್ಟವ್ರಣದಲ್ಲಿ (ಚರ್ಮವು ತರಚಿಹೋಗಿದ್ದರೆ) ಜೇನುತುಪ್ಪ, ಮಧುರ ಶೀತಲ ದ್ರವ್ಯಗಳನ್ನು ಲೇಪಿಸಿ ನೋವನ್ನು ನಿವಾರಣೆ ಮಾಡಿ ಶಾಲ, ಸರ್ಜ, ಅರ್ಜು ನಾದಿಗಳ ಚೂರ್ಣವನ್ನು ವ್ರಣದಮೇಲೆ ಉದುರಿಸಬೇಕು ; ಕೀಲುಜಾರಿ ಮೂಳೆಗಳು ಬೇರೆಯಾಗಿರುವುದು, ಮಥಿತ, ಹತ ವ್ರಣಗಳಲ್ಲಿ ರೋಗಿಯನ್ನು ತೈಲತುಂಬಿದ ದೋಣಿ (ಹಂಡೆ) ಯಲ್ಲಿ ಕೂರಿಸಿ ಮಾಂಸರಸ ಮಿಶ್ರಮಾಡಿದ ಆಹಾರವನ್ನು ಭೋಜನಮಾಡಿಸ ಬೇಕು ; ಕ್ಷೀಣದೇಹವುಳ್ಳವರಿಗೂ, ಮರ್ಮಕ್ಕೆ ಪೆಟ್ಟುಬಿದ್ದವರಿಗೂ ಇದೇ ವಿಧಾನಗಳನ್ನು ಮಾಡಿಸಬೇಕು ; ವ್ರಣರೋಗಿಗಳಿಗೆ ರೋಪಣೆ, ಪರಿಷೇಚನೆ ಮತ್ತು ಪಾನಗಳಿಗೆ ಅವರ ಶರೀರಕ್ಕೆ ಅನುಗುಣವಾಗಿಯೂ ಋತುವಿಗೆ ಅನುಗುಣವಾಗಿಯೂ ತೈಲವನ್ನೂ ತುಪ್ಪ ವನ್ನೂ ಪ್ರಯೋಗಿಸಬೇಕು ; ಬುದ್ಧಿಶಾಲಿಯಾದ ವೈದ್ಯನು ಪಿತ್ತವಿದ್ರಧಿಯ ಚಿಕಿತ್ಸೆ ಯಲ್ಲಿ ಹೇಳುವ ಘೃತಗಳನ್ನು ಸದ್ಯೋವ್ರಣದಲ್ಲೂ ಪ್ರಯೋಗಿಸಬೇಕು ; ಶೂಲೆಯಿಂದ ಕೂಡಿದ ಸದ್ಯಃಕ್ಷತ ವ್ರಣದ ಮೇಲೆ ಸುಖೋಷ್ಣವಾದ ಘೃತದಿಂದಾಗಲೀ ಬಲಾತೈಲ ದಿಂದಾಗಲೀ ಸೇಚನೆ ಮಾಡಬೇಕು.

ಸಮಙ್ಗಾಂರಜನೀಂಪದ್ಮಾಂ ಪಥ್ಯಾಂತುತ್ಥಂ ಸುವರ್ಚಲಾಂ ।
ಪದ್ಮಕಂ ರೋಧ್ರಮಧುಕಂ ವಿಡಙ್ಗಾನಿ ಹರೇಣುಕಂ ||೮೨||
ತಾಲೀಸಪತ್ರಂ ನಳದಂ ಚನ್ದನಂ ಪದ್ಮಕೇಸರಂ ।
ಮಞ್ಜಿಷ್ಠೋಶೀರಲಾಕ್ಷಾಶ್ಚ ಕ್ಷೀರಿಣಾಂ ಚಾಪಿ ಪಲ್ಲವಾನ್ ||೮೩||
ಪ್ರಿಯಾಳಬೀಜಂ ತಿನ್ದುಕ್ಯಾಸ್ತರುಣಾನಿ ಫಲಾನಿ ಚ
ಯಥಾಲಾಭಂ ಸಮಾಹೃತ್ಯ ತೈಲಮೇಭಿರ್ವಿಪಾಚಯೇತ್ ||೮೪||
ಸದ್ಯೋವ್ರಣಾನಾಂ ಸರ್ವೇಷಾಮದುಷ್ಟಾನಾಂ ತು ರೋಪಣಂ ।
ಕಷಾಯಮಧುರಾಃ ಶೀತಾಃ ಕ್ರಿಯಾಃ ಸ್ನಿಗ್ಧಾಶ್ಚ ಯೋಜಯೇತ್ ||೮೫||
ಸದ್ಯೋವ್ರಣಾನಾಂ ಸಪ್ತಾಹಂ ಪಶ್ಚಾತ್ಪೂರ್ವೋಕ್ತಮಾಚರೇತ್ ।

ಅರ್ಥ—ಮಂಜಿಷ್ಠೆ, ಅರಿಶಿನ, ಭಾರ್ಗಿ, ಅಣಿಲೆಶಿಪ್ಪೆ, ಮೈಲ್‌ತುತ್ತ, ಸುವರ್ಚಲವಣ, ಪದ್ಮಕ, ಲೋಧ್ರ, ಅತಿಮಧುರ, ವಿಡಂಗ, ರೇಣುಕೆಬೀಜ, ತಾಳೀಸಪತ್ರೆ, ಮುಡಿವಾಳ, ಕೆಂಪುಗನ್ಧ, ತಾವರೆಕುಸುಮ, ಮಂಜಿಷ್ಠೆ, ಲಾಮಜ್ಜ, ಅರಗು, ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಚಿಗುರೆಲೆಗಳು, ಚಾರುಪೊಪ್ಪು, ತೂಪರದ ಎಲೆ, ಕಾಯಿ, ಇವುಗಳಲ್ಲಿ ದೊರೆತಷ್ಟು ಪದಾರ್ಥಗಳನ್ನು ಸೇರಿಸಿ ತೈಲಪಾಕವಿಧಾನದಿಂದ ತಯಾರಿಸಿದ ತೈಲವನ್ನು ಎಲ್ಲಾ ಸದ್ಯೋವ್ರಣಗಳಿಗೂ ಲೇಪಿಸಿದರೆ ವ್ರಣರೋಪಣವಾಗುತ್ತದೆ ; ಸದ್ಯೋವ್ರಣಗಳಿಗೆ ಏಳುದಿವಸಗಳವರೆಗೆ ಕಷಾಯ ಮಧುರರಸದ್ರವ್ಯಗಳಿಂದ ಶೀತಲ ಸ್ನಿಗ್ಧ ಕ್ರಿಯೆಗಳನ್ನುಪಯೋಗಿಸಿ ಅನಂತರ ದ್ವಿವ್ರಣೀಯ ಚಿಕಿತ್ಸೆಯಲ್ಲಿ ಹೇಳಿರುವಂತೆ ಚಿಕಿತ್ಸೆ ಮಾಡಬೇಕು.

ದುಷ್ಟವ್ರಣೇಷು ಕರ್ತವ್ಯಮೂರ್ಧ್ವಂ ಚಾಧಶ್ಚ ಶೋಧನಂ ||೮೬||
ವಿಶೋಷಣಂ ತಥಾಹಾರಃ ಶೋಣಿತಸ್ಯ ಚ ಮೋಕ್ಷಣಂ ।
ಕಷಾಯಂ ರಾಜವೃಕ್ಷಾದೌ ಸುರಸಾದೌ ಚ ಧಾವನಂ ||೮೭||
ತಯೋರೇವ ಕಷಾಯೇ ತು ತೈಲಂ ಶೋಧನಮಿಷ್ಯತೇ ।
ಕ್ಷಾರಕಲ್ಪೇನ ವಾ ತೈಲಂ ಕ್ಷಾರದ್ರವ್ಯೇಷು ಸಾಧಿತಂ ||೮೮||

ಅರ್ಥ—ದುಷ್ಟವ್ರಣಗಳಲ್ಲಿ ರೋಗಿಗೆ ವಮನವಿರೇಚನೌಷಧಗಳ ಪ್ರಯೋಗದಿಂದ ಊರ್ಧ್ವಾಧೋ ದೇಹಭಾಗಗಳನ್ನು ಶುದ್ಧಿಮಾಡಿಸಿ, ವ್ರಣವು ಶೋಷಿಸುವಂತೆ ರೂಕ್ಷಾಹಾರ, ರಕ್ತಸ್ರಾವಣ, ಕಕ್ಕೆಮರದ ಕಷಾಯದಿಂದಲೂ ಸುರಸಾದಿ ಗಣದ್ರವ್ಯಗಳ ಕಷಾಯದಿಂದಲೂ ವ್ರಣವನ್ನು ತೊಳೆಯುವುದಲ್ಲದೆ ಅವೆರಡು ಕಷಾಯಗಳಿಂದ ತಯಾರಿಸಿದ ತೈಲದಿಂದಲೂ ಅಥವಾ ಯವಕ್ಷಾರ ಮೊದಲಾದ ಕ್ಷಾರದ್ರವ್ಯಗಳಿಂದ ತಯಾರಿಸಿದ ತೈಲದಿಂದಲೂ ವ್ರಣವನ್ನು ಲೇಪಿಸಿ ದೋಷಶೋಧನೆಯನ್ನು ಮಾಡಬೇಕು.

ದ್ರವನ್ತೀಚಿರಬಿಲ್ವಶ್ಚ ದನ್ತೀಚಿತ್ರಕಮೇವ ಚ
ಪೃಥ್ವೀಕಾ ನಿಮ್ಬಪತ್ರಾಣಿ ಕಾಸೀಸಂ ತುತ್ಥಮೇವ ಚ ||೮೯||

ತ್ರಿವೃತ್ತೇಜೋವತೀ ನೀಲೀ ಹರಿದ್ರೇ ಸೈನ್ಧವಂ ತಿಲಾಃ ।
ಭೂಮಿಕದಮ್ಬಃ ಸುವಹಾ ಶುಕಾಖ್ಯಾ ಲಾಙ್ಗಲಾಹ್ವಯಾ ॥೯೦॥
ನೈಪಾಲೀ ಜಾಲಿನೀ ಚೈವ ಮದಯನ್ತೀ ಮೃಗಾದನೀ
ಸುಧಾಮೂರ್ವಾರ್ಕಕೀಟಾರೀ ಹರೀತಾಲಕರಞ್ಜಕಾ ॥೯೧॥
ಯಥೋಪಪತ್ತಿ ಕರ್ತವ್ಯಂ ತೈಲಮೇತೈಸ್ತು ಶೋಧನಂ
ಘೃತಂ ವಾ ಯದಿ ವಾ ಪ್ರಾಪ್ತಂ ಕಲ್ಕಾಃ ಶಂಶೋಧನಾಸ್ತಥಾ ॥೯೨॥

ಅರ್ಥ—ಇಲಿಕಿವಿಸೊಪ್ಪು, ಹೊಂಗೆಬೀಜ, ಜಾಪಾಳದ ತೊಗಟೆ, ಚಿತ್ರಮೂಲ, ದಪ್ಪಜೀರಿಗೆ (ಏಲಕ್ಕಿ ಎಂದು ಕೆಲವರ ಮತ), ಬೇವಿನಸೊಪ್ಪು, ಅನ್ನಭೇದಿ, ಮೈಲ್ ತುತ್ತ, ತಿಗಡೆ, ಗಂಗುಂಡೆಬೀಜ, ನೀಲಿಸೊಪ್ಪು, ಅರಿಶಿನ, ಮರದರಿಶಿನ, ಸೈಂಧಲವಣ ಎಳ್ಳು, ಬೋಳದರಗ, ಲಕ್ಕಿ, ಬಾಗೆ, ಕೋಳಿಕುಟುಮನಗಡ್ಡೆ, ಮಣಶಿಲೆ, ಹೀರೆ, ಕಾಡು ಮಲ್ಲಿಗೆ, ದಾಸವಾಳ, ಮುಂಡುಗಳ್ಳಿ, ಕೊರಟಿಗೆ, ಎಕ್ಕ, ವಿಡಂಗ, ಅರಿದಳ, ಹೊಂಗೆಯ ಬಿತ್ತ, ಇವುಗಳಲ್ಲಿ ದೊರೆತಷ್ಟು ಪದಾರ್ಥಗಳಿಂದ ತೈಲಪಾಕ ಮಾಡಿ ವ್ರಣ ಲೇಪನ ಮಾಡಿದರೆ ವಾತದೋಷವು ಶೋಧನೆಯಾಗುತ್ತದೆ, ಹೀಗೆಯೇ ಇವುಗಳಿಂದ ತಯಾರಿಸಿದ ಘೃತವೂ ಕಲ್ಕವೂ ಪಿತ್ತಜನ್ಯವ್ರಣವನ್ನು ಶೋಧನೆ ಮಾಡುತ್ತವೆ.

ಸೈನ್ಧವಂ ತ್ರಿವೃದೇರಣ್ಡ ಪತ್ರಕಲ್ಕಸ್ತು ವಾತಿಕೇ ।
ತ್ರಿವೃದ್ಧರಿದ್ರಾಮಧುಕಕಲ್ಕಃ ಪೈತ್ತೇ ತಿಲೈರ್ಯುತಃ ॥೯೩॥
ಕಫಜೇ ತಿಲತೇಜೋಹ್ವಾ ದನ್ತೀಸ್ವರ್ಜೀಕಚಿತ್ರಕಾಃ ।
ದುಷ್ಟವ್ರಣವಿಧಿಃ ಕಾರ್ಯೋ ಮೇಹಕುಷ್ಠವ್ರಣೇಷ್ವಪಿ ॥೯೪॥
ಷಡ್ವಿಧಃ ಪ್ರಾಕ್ ಪ್ರದಿಷ್ಟೋಯಃ ಸದ್ಯೋವ್ರಣ ವಿನಿಶ್ಚಯಃ ।
ನಾತಃ ಶಕ್ಯಂ ಪರಂ ವಕ್ತುಮಪಿ ನಿಶ್ಚಿತವಾದಿಭಿಃ ॥೯೫॥

ಅರ್ಥ—ಸೈನ್ಧವ, ತಿಗಡೆ, ಹರಳೆಲೆ ಇವುಗಳ ಕಲ್ಕವನ್ನು ವಾತಿಕ ವ್ರಣದಲ್ಲೂ, ತಿಗಡೆ, ಅರಿಶಿನ, ಅತಿಮಧುರ, ಎಳ್ಳು ಇವನ್ನು ಮಿಶ್ರಮಾಡಿದ ಕಲ್ಕವು ಪಿತ್ತವ್ರಣದಲ್ಲೂ, ಎಳ್ಳು, ಗಂಗುಂಡೆಬೀಜ, ಜಾಪಾಳದ ತೊಗಟೆ, ಸರ್ಜಕ್ಷಾರ, ಚಿತ್ರಮೂಲ ಇವುಗಳ ಕಲ್ಕವು ಕಫಜವ್ರಣದಲ್ಲೂ ದುಷ್ಟವ್ರಣವಿಧಾನದಂತೆಯೇ ಪ್ರಯೋಗಿಸಬೇಕು. ಮೇಹ ಕುಷ್ಠವ್ರಣಗಳಲ್ಲಿಯೂ ಇದೇ ವಿಧಾನಗಳನ್ನು ಅನುಸರಿಸಬೇಕು. ಹಿಂದೆ ನಿರ್ದಿಷ್ಟ ಮಾಡಿದ ಆರುವಿಧ ಸದ್ಯೋವ್ರಣ ವಿಭಾಗಗಳಿಗಿಂತಲೂ ಹೆಚ್ಚಿನ ವಿಭಾಗಗಳನ್ನು ವ್ರಣ ನಿರ್ಣಯ ಮಾಡಿದ ವೈದ್ಯರಿಂದಲೂ ಹೇಳಲು ಸಾಧ್ಯವಾಗುವುದಿಲ್ಲ.

ಉಪಸರ್ಗೈರ್ನಿಪಾತೈಶ್ಚ ತತ್ತುಪಣ್ಡಿತಮಾನಿನಃ ।
ಕೇಚಿತ್ ಸಂಯೋಜ್ಯ ಭಾಷ್ಯನ್ತೇ ಬಹುಧಾ ಮಾನಗರ್ವಿತಾಃ ॥೯೬॥
ಬಹು ತದ್ಭಾಷಿತಂ ತೇಷಾಂ ಷಟ್ಸ್ವೇವಾವತಿಷ್ಠತೇ ।
ವಿಶೇಷಾ ಇವ ಸಾಮಾನ್ಯೇ ಷಟ್ತ್ವಂತು ಪರಮಂ ಮತಂ ॥೯೭॥

ಅರ್ಥ—ಅಹಂಕಾರಿಗಳಾದ ಅಜ್ಞರು ಸಂಭಿನ್ನ, ಸುಚ್ಛಿನ್ನ ಇತ್ಯಾದಿ ಉಪಸರ್ಗ ಗಳನ್ನು ಸೇರಿಸಿ ವ್ರಣಗಳು ಅನೇಕ ವಿಧಗಳೆಂದು ಹೇಳಿದರೂ ಸಾಮಾನ್ಯ ಧರ್ಮವುಳ್ಳ ವಸ್ತುಗಳೊಳಗೆ ವಿಶೇಷ ಧರ್ಮದ ವಸ್ತುವನ್ನೂ ಪರಿಗಣಿಸುವಂತೆಯೇ ಅವೆಲ್ಲಾ ಈ ಆರು ವಿಧಗಳಲ್ಲೇ ಅಂತರ್ಭವಿಸಿರುತ್ತದೆಂಬುದೇ ಮುಖ್ಯ ಸಿದ್ಧಾಂತವು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಸದ್ಯೋವ್ರಣಚಿಕಿತ್ಸಾನಾಮಕ ದ್ವಿತೀಯಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ತೃತೀಯೋಽಧ್ಯಾಯಃ

ಅಥಾತೋ ಭಗ್ನಾನಾಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀ ಧನ್ವನ್ತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಭಗ್ನಚಿಕಿತ್ಸೆಯನ್ನು ವಿವರಿಸಿ ಹೇಳುತ್ತೇವೆ.

ಅಲ್ಪಾಶಿನೋಽನಾತ್ಮವತೋ ಜನ್ತೋರ್ವಾತಾತ್ಮಕಸ್ಯ ಚ ।
ಉಪದ್ರವೈರ್ವಾ ಜುಷ್ಟಸ್ಯ ಭಗ್ನ ಕೃಚ್ಛ್ರೇಣ ಸಿಧ್ಯತಿ ||೩||

ಅರ್ಥ—ಅಲ್ಪಾಹಾರಿಗಳಿಗೂ, ಇಂದ್ರಿಯನಿಗ್ರಹ ಮಾಡದಿರುವವರಿಗೂ, ವಾತ ಪ್ರಕೃತಿಯ ಮನುಷ್ಯರಿಗೂ ಉಂಟಾದ ಭಗ್ನವು ಜ್ವರ, ಆಧ್ಮಾನ, ಮೂತ್ರ, ಮಲಗಳ ತಡೆತ ಮೊದಲಾದ ಉಪದ್ರವಗಳಿಂದ ಕೂಡಿದ್ದರೆ ಕಷ್ಟಸಾಧ್ಯವಾದದ್ದು.

ಲವಣಂ ಕಟುಕಂ ಕ್ಷಾರಮಮ್ಲಂ ಮೈಥುನಮಾತಪಂ ।
ವ್ಯಾಯಾಮಂ ಚ ನ ಸೇವೇತ ಭಗ್ನೋ ರೂಕ್ಷಾನ್ನಮೇವ ಚ ||೪||
ಶಾಲಿಮಾಂಸರಸಃ ಕ್ಷೀರಂ ಸರ್ಪಿರ್ಯೂಷಃ ಸತೀನಜಃ ।
ಬೃಂಹಣಂ ಚಾನ್ನಪಾನಂ ಸ್ಯಾದ್ದೇಯಂ ಭಗ್ನಾಯ ಜಾನತಾ ||೫||

ಅರ್ಥ—ಅಸ್ಥಿಭಗ್ನ (ಮೂಳೆ ಮುರಿದಿರುವ) ರೋಗಿಯು ಉಪ್ಪು–ಖಾರ–ಕ್ಷಾರ–ಹುಳಿರಸವುಳ್ಳ ಪದಾರ್ಥಗಳನ್ನೂ ಮೈಥುನ–ಬಿಸಿಲು–ಕಷ್ಟಕೆಲಸ–ರೂಕ್ಷಾನ್ನಗಳನ್ನೂ ಸೇವಿಸಬಾರದು ; ಕೆಂಪುಭತ್ತದ ಅಕ್ಕಿಯ ಅನ್ನ–ಮಾಂಸರಸ–ಹಾಲು–ತುಪ್ಪ–ಬಟಾಣಿಯ ಕಟ್ಟು–ಪುಷ್ಟಿಕರವಾದ ಅನ್ನಪಾನ ಇವುಗಳನ್ನು ಭಗ್ನರೋಗಿಗೆ ಕೊಡಬೇಕು.

ಮಧೂಕೋದುಮ್ಬರಾಶ್ವತ್ಥಪಲಾಶಕಕುಭತ್ವಚಃ ।
ವಂಶಸರ್ಜವಟಾನಾಂ ವಾ ಕುಶಾರ್ಥಮುಪಸಂಹರೇತ್ ||೬||
ಆಲೇಪನಾರ್ಥಂ ಮಞ್ಜಿಷ್ಠಾಂ ಮಧುಕಂ ರಕ್ತಚನ್ದನಂ ।
ಶತಧೌತಘೃತೋನ್ಮಿಶ್ರಂ ಶಾಲಿಪಿಷ್ಟಂ ಚ ಸಂಹರೇತ್ ||೭||

ಅರ್ಥ—ಭಗ್ನವಾದ ಮೂಳೆಗಳನ್ನು ನೇರವಾಗಿ ಜೋಡಿಸಿ ಅಲುಗಿ ಸ್ಥಳ ಬದಲಾಗದಂತೆ ಮಾಡಲು ಅದರ ಸುತ್ತಲೂ ಮುಚ್ಚುವ ಬಂಧನಕ್ಕೆ "ಕುಶಾ" ಎನ್ನುತ್ತಾರೆ ; ಇದಕ್ಕಾಗಿ ಬಿದಿರು, ಹಿಪ್ಪೆ, ಅತ್ತಿ, ಅರಳಿ, ಮುತ್ತುಗ, ಮತ್ತಿ, ಸರ್ಜವೃಕ್ಷ, ಆಲ ಮೊದಲಾದುವುಗಳ ತೊಗಟೆಗಳನ್ನು ಶೇಖರಿಸಿಟ್ಟುಕೊಳ್ಳಬೇಕು ; ವ್ರಣದಮೇಲೆ ಲೇಪಿಸುವುದಕ್ಕಾಗಿ ಮಂಜಿಷ್ಠೆ, ಅತಿಮಧುರ, ಕೆಂಪುಗಂಧಗಳ ಚೂರ್ಣವನ್ನೂ ಅಕ್ಕಿಯ ಹಿಟ್ಟನ್ನೂ ಶತಧೌತಘೃತದಲ್ಲಿ ಕಲಸಿ ಇಟ್ಟುಕೊಂಡಿರಬೇಕು.

ಸಪ್ತಾಹಾದಥ ಸಪ್ತಾಹಾತ್ ಸೌಮ್ಯೇಷ್ವೃತುಷು ಬಂಧನಂ ।
ಸಾಧಾರಣೇಷು ಕರ್ತವ್ಯಂ ಪಞ್ಚಮೇ ಪಞ್ಚಮೇಽಹನಿ ||೮||
ಆಗ್ನೇಯೇಷು ತ್ರ್ಯಹಾತ್ ಕುರ್ಯಾದ್ಭಗ್ನದೋಷವಶೇನ ವಾ।
ತತ್ರಾತಿಶಿಥಿಲಂ ಬದ್ಧೇ ಸನ್ಧಿಸ್ಥೈರ್ಯಂ ನ ಜಾಯತೇ ||೯||
ಗಾಢೇನಾಪಿ ತ್ವಗಾದೀನಾಂ ಶೋಫೋರುಕ್‌ಪಾಕ ಏವ ಚ ।
ತಸ್ಮಾತ್ ಸಾಧಾರಣಂ ಬನ್ಧಂ ಭಗ್ನೇ ಶಂಸನ್ತಿ ತದ್ವಿದಃ ||೧೦||
ನ್ಯಗ್ರೋಧಾದಿ ಕಷಾಯಂತು ಸುಶೀತಂ ಪರಿಷೇಚನೇ ।
ಪಞ್ಚಮೂಲೀವಿಪಕ್ವಂ ತು ಕ್ಷೀರಂ ಕುರ್ಯಾತ್ ಸವೇದನೇ ||೧೧||
ಸುಖೋಷ್ಣಮವಚಾರ್ಯಂ ವಾ ಚಕ್ರತೈಲಂ ವಿಜಾನತಾ ।

ಅರ್ಥ—ಶೀತಲಗಳಾದ ಹೇಮಂತಶಿಶಿರ ಕಾಲದಲ್ಲಿ ೭ ದಿನಗಳಿಗೊಂದುಸಾರಿ ಭಗ್ನ ವ್ರಣಗಳಿಗೆ ಬನ್ಧನಮಾಡಬೇಕು; ಸಾಧಾರಣ ವರ್ಷಾಶರತ್ ಕಾಲದಲ್ಲಿ ೫ ದಿನಗಳಿಗೊಂದು ಸಾರಿಯಂತೆಯೂ ಅತ್ಯುಷ್ಣಗಳಾದ ವಸಂತ ಗ್ರೀಷ್ಮ ಕಾಲದಲ್ಲಿ ೩ ದಿನಗಳಗೊಂದು ಸಾರಿಯಂತೆಯೂ ವ್ರಣಬನ್ಧನವನ್ನು ಮಾಡಬೇಕು; ಅಥವಾ ಭಗ್ನವ್ರಣದ ದೋಷಪ್ರಕೋಪಕ್ಕೆ ತಕ್ಕಂತೆ ಕಾಲನಿರ್ಣಯ ಮಾಡಿ ಬನ್ಧನಮಾಡಬೇಕು; ಬನ್ಧನವು ಅತಿ ಸಡಿಲವಾದರೆ ಮುರಿದ ಮೂಳೆಗಳು ಸ್ಥಿರವಾಗಿ ಸೇರಿಕೊಳ್ಳುವುದಿಲ್ಲ; ಅತಿ ಬಿಗಿಯಾಗಿ ವ್ರಣಬನ್ಧನ ಮಾಡಿದರೆ ಚರ್ಮ ಮಾಂಸಾದಿಗಳು ಊದಿಕೊಂಡು ನೋವೂ ವ್ರಣಪಾಕವೂ ಉಂಟಾಗುತ್ತವೆ; ಆದಕಾರಣ ಶಸ್ತ್ರಚಿಕಿತ್ಸಾ ಪ್ರವೀಣರು ಅಸ್ಥಿಭಂಗದಲ್ಲಿ ಸಾಧಾರಣ ಬನ್ಧವೇ ಉತ್ತಮವೆಂದು ಹೊಗಳುತ್ತಾರೆ; ಪಿತ್ತಪ್ರಕೃತಿಯವರಿಗೆ ಅಸ್ಥಿಗಳು ಸರಿಯಾಗಿ ಸೇರಿಕೊಂಡು ವ್ರಣಪಾಕವಾಗದಿರುವುದಕ್ಕಾಗಿ ಆಲ-ಅತ್ತಿ- ಮೊದಲಾದ ಕ್ಷೀರವೃಕ್ಷಗಳ ಕಷಾಯವನ್ನು ತಣ್ಣಗೆಮಾಡಿ ವ್ರಣದಮೇಲೆ ಸೇಚನೆ (ನಿಧಾನವಾಗಿ ಸುರಿಸುವುದು) ಮಾಡಬೇಕು. ವಾತದೋಷವು ಹೆಚ್ಚಾಗಿ ಪಿತ್ತದೊಡನೆ ಸೇರಿ ನೋವನ್ನುಂಟುಮಾಡಿದರೆ ಬಿಲ್ವಾದಿ ಪಞ್ಚಮೂಲಗಳೊಡನೆ ಪಾಕಮಾಡಿದ ಹಾಲಿನಿಂದ ವ್ರಣಪರಿಷೇಕವನ್ನು ಮಾಡಬೇಕು: ಅಥವಾ ಬುದ್ಧಿವಂತನಾದ ವೈದ್ಯನು ದೋಷಗಳನ್ನು ಪರೀಕ್ಷಿಸಿ ವಾತಕಫ ಪ್ರಕೃತಿಯುಳ್ಳ ಅಸ್ಥಿಭಗ್ನ ರೋಗಿಗೆ ವ್ರಣವು ನೋಯುತ್ತಿದ್ದು ತಣ್ಣಗಿದ್ದರೆ ಆಗತಾನೆ ಹಿಂಡಿತೆಗೆದ ಎಳ್ಳೆಣ್ಣೆ (ಚಕ್ರತೈಲ) ಯನ್ನು ವ್ರಣದ ಮೇಲೆ ಧಾರೆಯಾಗಿ ಸುರಿಯಬೇಕು; ಇತರರು ಅಣು ವಿಧಾನದಿಂದ ತಯಾರಿಸಿ ಪಾಕಮಾಡದಿರುವ ತಿಲತೈಲಕ್ಕೆ ಚಕ್ರತೈಲವೆನ್ನುತ್ತಾರೆ.

ವಿಭಜ್ಯ ಕಾಲಂದೋಷಂ ಚ ದೋಷಘ್ನೌಷಧಸಂಯುತಂ ||೧೨||
ಪರಿಷೇಕಂ ಪ್ರದೇಹಂ ಚ ವಿದಧ್ಯಾಚ್ಛೀತಮೇವಚ ।
ಗೃಷ್ಟಿಕ್ಷೀರಂ ಸಸರ್ಪಿಷ್ಕಂ ಮಧುರೌಷಧ ಸಾಧಿತಂ ||೧೩||
ಶೀತಲಂ ಲಾಕ್ಷಯಾ ಯುಕ್ತಂ ಪ್ರಾತರ್ಭಗ್ನಃ ಪಿಬೇನ್ನರಃ ।

ಸವ್ರಣಸ್ಯ ತು ಭಗ್ನಸ್ಯ ವ್ರಣಂ ಸರ್ಪಿರ್ಮಧೂತ್ತರೈಃ ||೧೪||
ಪ್ರತಿಸಾರ್ಯಃ ಕಷಾಯೈಸ್ತು ಶೇಷಂ ಭಗ್ನವದಾಚರೇತ್ |
ಪ್ರಥಮೇ ವಯಸಿ ತ್ವೇವಂ ಭಗ್ನಂ ಸುಕರಮಾದಿಶೇತ್ ||೧೫||
ಅಲ್ಪದೋಷಸ್ಯ ಜನ್ತೋಸ್ತು ಕಾಲೇಚ ಶಿಶಿರಾತ್ಮಕೇ |
ಪ್ರಥಮೇ ವಯಸಿ ತ್ವೇವಂ ಮಾಸಾತ್ ಸನ್ಧಿಃ ಸ್ಥಿರೋ ಭವೇತ್ ||೧೬||
ಮಧ್ಯಮೇ ದ್ವಿಗುಣಾತ್ಕಾಲಾದುತ್ತರೇ ತ್ರಿಗುಣಾತ್ಸ್ಮೃತಃ |

ಅರ್ಥ—ಶೀತೋಷ್ಣ ಕಾಲಗಳನ್ನೂ ಪ್ರಕುಪಿತದೋಷಗಳನ್ನೂ ವಿಂಗಡಿಸಿಕೊಂಡು ದೋಷಹರೌಷಧಗಳಿಂದ ಬಿಸಿಯಾದ ಅಥವಾ ಶೀತಲವಾದ ವ್ರಣಪರಿಷೇಕಗಳನ್ನೂ ಲೇಪನಗಳನ್ನೂ ಪ್ರಯೋಗಿಸಬೇಕು ; ಕಾಕೋಳ್ಯಾದಿ ಮಧುರದ್ರವ್ಯಗಳು ೧ ತೊಲ, ೮ ತೊಲ ಹಾಲು, ೩೨ ತೊಲ ನೀರನ್ನು ಸೇರಿಸಿ ೮ ತೊಲ ಹಾಲು ಮಾತ್ರ ನಿಲ್ಲುವಂತೆ ಕಷಾಯಮಾಡಿ ಶೋಧಿಸಿಕೊಂಡು ತುಪ್ಪ ಮಿಶ್ರಮಾಡಿ ತಣ್ಣಗಿರುವಾಗ ೧ ತೊಲ ಅರಗಿನ ಚೂರ್ಣವನ್ನು ಸೇರಿಸಿ ಬೆಳಗಿನ ಹೊತ್ತು ಭಗ್ನವ್ರಣರೋಗಿಗೆ ಕುಡಿಸಬೇಕು ; ಅಸ್ಥಿಭಗ್ನವ್ರಣವನ್ನು ತುಪ್ಪ ಜೇನ-ತುಪ್ಪಗಳಿಂದ ಮಿಶ್ರಮಾಡಿದ ಕ್ಷೀರವೃಕ್ಷಗಳ ತೊಗಟೆಯ ಕಲ್ಕದಿಂದ ಲೇಪಿಸಿ ಮೇಲೆ ಹೇಳಿದಂತೆಯೇ ಆಹಾರ ಮತ್ತು ಉಪಚಾರಗಳನ್ನು ಅನುಸರಿಸಬೇಕು (ಅಸ್ಥಿಭಗ್ನೋಪಚಾರವೆಂದರ್ಥ) ; ಬಾಲ್ಯವಯಸ್ಸಿನವರಿಗೆ ಅಸ್ಥಿಭಂಗವುಂಟಾದರೆ (ಮೂಳೆಯು ಮುರಿದರೆ) ಮೇಲೆ ಹೇಳಿದಂತೆ ಆಚಾರಾಹಾರೋಪಚಾರಕ್ರಮಗಳನ್ನು ಆಚರಿಸಿದರೆ ಸುಖಸಾಧ್ಯವಾಗುತ್ತದೆಂದೂ ಅಲ್ಪದೋಷವುಳ್ಳವನಿಗೆ ಶೀತಕಾಲದಲ್ಲಾದರೆ ಸುಖಸಾಧ್ಯವೆಂದೂ ಹೇಳಬೇಕು. ಬಾಲ್ಯವಯಸ್ಸಿನವರಿಗೆ ಮೂಳೆಯು ಮುರಿದರೆ ಮೇಲಿನಂತೆ ಚಿಕಿತ್ಸೆ ಮಾಡಿದರೆ ಒಂದು ತಿಂಗಳಲ್ಲಿ ಮೂಳೆಗಳು ಸೇರಿಕೊಂಡು ಮೊದಲಿನಂತೆ ಸ್ಥಿರವಾಗುತ್ತವೆ ; ಮಧ್ಯವಯಸ್ಕರಿಗೆ (೧೬ ರಿಂದ ೪೦ ವರ್ಷ ವಯಸ್ಸುಳ್ಳವರಿಗೆ) ಅಸ್ಥಿಭಗ್ನವಾದರೆ ಮೇಲಿನ ಕ್ರಮದಿಂದ ಉಪಚರಿಸಿದರೆ ಎರಡು ತಿಂಗಳ ಕಾಲದಲ್ಲಿ ಅಸ್ಥಿಗಳು ಸೇರಿಕೊಂಡು ಬಲವಾಗುತ್ತವೆ ; ೪೦ ವರ್ಷಗಳ ಮೇಲ್ಪಟ್ಟವರಿಗೆ ಅಸ್ಥಿಭಗ್ನವುಂಟಾದರೆ ಮೇಲಿನ ಕ್ರಮದಂತೆ ಉಪಚರಿಸಿದರೆ ಮೂರು ತಿಂಗಳಲ್ಲಿ ಮೂಳೆಗಳು ಸೇರಿಕೊಂಡು ಬಲವಾಗುತ್ತವೆ.

ಅವನಾಮಿತಮುನ್ನಹ್ಯೇದುನ್ನತಂ ಚಾವಪೀಡಯೇತ್ ||೧೭||
ಆಞ್ಛೇದತಿಕ್ಷಿಪ್ತಮಧೋಗತಂ ಚೋಪರಿವರ್ತಯೇತ್ |
ಆಞ್ಛನೈಃ ಪೀಡನೈಶ್ಚೈವ ಸಂಕ್ಷೇಪೈರ್ಬನ್ಧನೈಸ್ತಥಾ ||೧೮||
ಸನ್ಧೀಞ್ ಶರೀರೇ ಸರ್ವಾಂಸ್ತು ಚಲಾನಪ್ಯಚಲಾನಪಿ |
ಏತೈಸ್ತು ಸ್ಥಾಪನೋಪಾಯೈಃ ಸ್ಥಾಪಯೇನ್ಮತಿಮಾನ್ ಭಿಷಕ್ ||೧೯||

ಅರ್ಥ—(ಸನ್ಧಿಚ್ಯುತವ್ರಣಚಿಕಿತ್ಸೆ) ಅಸ್ಥಿಸನ್ಧಿಯಲ್ಲಿ ಮೂಳೆಯು ತನ್ನ ಸ್ಥಳವನ್ನು ಬಿಟ್ಟು ಕೆಳಕ್ಕೆ ಜಾರಿದ್ದರೆ ಬುದ್ಧಿವಂತನಾದ ವೈದ್ಯನು ಅದನ್ನು ಮೇಲಕ್ಕೆ ನೂಕಿ ಸಂ

ಪಡಿಸಬೇಕು; ಮೇಲಕ್ಕೆ ನುಗ್ಗಿದ್ದರೆ ಆ ಮೂಳೆಯು ಕೆಳಕ್ಕೆ ಬಂದು ತನ್ನ ಜಾಗದಲ್ಲಿ ನಿಲ್ಲುವಂತೆ ಮಾಡಬೇಕು ; ಚಲಿಸುವ ಮತ್ತು ಚಲಿಸದೆ ಬಿಗಿಯಾಗಿರುವ ಶರೀರದಲ್ಲಿರುವ ಸಕಲ ಸನ್ಧಿಗಳನ್ನೂ, ಮೇಲೆ ಹೇಳಿದ ಸನ್ಧಿಗಳು ಸೇರಿಕೊಳ್ಳುವಂತೆ ಮಾಡುವ ಉಪಾಯ ಗಳಿಂದ ಸಡಿಲಿಸಿದ, ಸ್ಥಳಬಿಟ್ಟು ಬೇರೆಕಡೆಗೆ ನುಗ್ಗಿರುವ ಮೂಳೆಗಳನ್ನು ಸರಿಪಡಿಸಬೇಕು. ಸನ್ಧಿಯನ್ನು ಬಿಟ್ಟು ಅತಿಯಾಗಿ ಜಾರಿದ ಮೂಳೆಯನ್ನು ಹಿಂದಕ್ಕೆ ಎಳೆದು ಸರಿಯಾದ ಸ್ಥಾನಕ್ಕೆ ಬಂದು ಸೇರುವಂತೆಯೂ ಕೆಳಕ್ಕೆ ಜಾರಿದ್ದರೆ ಮೇಲೆ ಬರುವಂತೆ ತಳ್ಳಿಯೂ ಇದೇ ರೀತಿ ಎಳೆದು ತಳ್ಳುವುದು ಹಿಡಿದು ಮೇಲೆತ್ತುವುದು ಅಗಲಿಸಿದ್ದರೆ ಸಂಕೋಚಿಸು ವಂತೆ ಬನ್ಧನ ಮಾಡುತ್ತಲೂ ವ್ರಣವನ್ನುಪಚರಿಸಬೇಕು.

ಉತ್ಪಿಷ್ಟಮಥ ವಿಶ್ಲಿಷ್ಟಂ ಸನ್ಧಿಂ ವೈದ್ಯೋ ನ ಘಟ್ಟಯೇತ್ ।
ತಸ್ಯ ಶೀತಾಃ ಪರಿಷೇಕಾಃ ಪ್ರದೇಹಾಂಶ್ಚಾವಚಾರಯೇತ್ ॥೨೦॥
ಅಭಿಘಾತೇ ಹೃತೇ ಸನ್ಧಿಃ ಸ್ವಾಂ ಯಾತಿ ಪ್ರಕೃತಿಂ ಪುನಃ ।
ಘೃತದಿಗ್ಧೇನಪಟ್ಟೇನ ವೇಷ್ಟಯಿತ್ವಾ ಯಥಾವಿಧಿ ॥೨೧॥
ಪಟ್ಟೋಪರಿಕುಶಾಃ ದತ್ವಾ ಯಥಾವತ್ ಬನ್ಧಮಾಚರೇತ್ ।

ಅರ್ಥ—ಜಜ್ಜಿಹೋದ ಮತ್ತು ಮೂಳೆಗಳು ಸಡಿಲಿಸಿರುವ ಅಸ್ಥಿಸನ್ಧಿಗಳನ್ನು ವೈದ್ಯನು ಅಲ್ಲಾಡಿಸದೆ ತಣ್ಣಗಿರುವ ಕಷಾಯದಿಂದ ಸೇಚನವನ್ನೂ ಕಲ್ಕದಿಂದ ಲೇಪನ ವನ್ನೂ ಮಾಡಿದರೆ ಅಭಿಘಾತದಿಂದ ಮೂಳೆಗಳು ಪುಡಿಪುಡಿಯಾಗಿ ಸಂಧಿನಾಶವಾಗಿದ್ದರೂ ಪುನಃ ಮೊದಲಿನಂತೆಯೇ ಸನ್ಧಿಯುಂಟಾಗುತ್ತದೆ ; ಆ ಸಂಧಿಗೆ ತುಪ್ಪ ಬಳಿದ ಪಟ್ಟಿಯನ್ನು ಸುತ್ತಿ ಅದರಮೇಲೆ ಕ್ಷೀರವೃಕ್ಷಗಳ ತೊಗಟೆಗಳಿಂದ ತಯಾರಿಸಿದ ಕುಶಗಳನ್ನು (ಹೊದಿಕೆ ಗಳನ್ನು) ಮುಚ್ಚಿ ಸರಿಯಾದ ಬನ್ಧನಗಳನ್ನು ಮಾಡಬೇಕು.

ಪ್ರತ್ಯಙ್ಗಭಗ್ನಸ್ಯವಿಧಿರತ ಊರ್ಧ್ವಂ ಪ್ರವಕ್ಷ್ಯತೇ ॥೨೨॥
ನಖಸನ್ಧಿಂ ಸಮುತ್ಪಿಷ್ಟಂ ರಕ್ತಾನುಗತಮಾರಯಾ ।
ಅವಮಥ್ಯಸ್ರುತೇ ರಕ್ತೇ ಶಾಲಿಪಿಷ್ಟೇನ ಲೇಪಯೇತ್ ॥೨೩॥
ಭಗ್ನಾಂವಾಸನ್ಧಿಮುಕ್ತಾಂ ವಾ ಸ್ಥಾಪಯಿತ್ವಾಙ್ಗುಳೀಂ ಸಮಾಂ ।
ಅಣುನಾವೇಷ್ಟ್ಯಪಟ್ಟೇನ ಘೃತಸೇಕಂ ಪ್ರದಾಪಯೇತ್ ॥೨೪॥

ಅರ್ಥ—ಇನ್ನುಮುಂದೆ ಉಗುರು ಮೊದಲು ತಲೆಯವರೆಗಿನ ಪ್ರತಿಯೊಂದು ಅಂಗ ದಲ್ಲೂ ಉಂಟಾಗುವ ಭಗ್ನಚಿಕಿತ್ಸಾವಿಧಾನಗಳನ್ನು ಹೇಳುತ್ತೇವೆ. ಉಗರು ಕಣ್ಣು ಜಜ್ಜಿ ರಕ್ತದುಷ್ಟಿಯಾಗಿದ್ದರೆ ಮೋಚಿಗಳು ಚರ್ಮವನ್ನು ಹೊಲಿಯುವ ಆರೆಯಿಂದ (ದಪ್ಪ ಸೂಜಿ) ಚುಚ್ಚಿ ದುಷ್ಟರಕ್ತವನ್ನು ಹೊರಕ್ಕೆ ಸುರಿಸಿ ನೀರಿನಿಂದ ಕಲಸಿದ ಅಕ್ಕಿಹಿಟ್ಟನ್ನು ವ್ರಣಕ್ಕೆ ಬಳಿಯಬೇಕು ; ಬೆರಳಗಿಣ್ಣುಗಳು ಮುರಿದು ಪುಡಿಯಾದರೆ ಅಥವಾ ಕೀಲುಜಾರಿ ದ್ದರೆ ಬೆರಳನ್ನು ನೇರವಾಗಿಟ್ಟು ತೆಳುವಾದ ಬಟ್ಟೆಯನ್ನು ಸುತ್ತಿ ಅದರ ಮೇಲೆ ತುಪ್ಪವನ್ನು ಸೇಚನೆಮಾಡಬೇಕು (ಬೆರಳಗಿಣ್ಣುಗಳನ್ನು ಕೆಳಕ್ಕೆ ಬಗ್ಗಿಸಿಯೂ ಮೇಲಕ್ಕೆ ಎತ್ತಿಯೂ

ನೋಡಿ ಒಂದಕ್ಕೊಂದು ಸರಿಯಾಗಿ ಸೇರಿಕೊಳ್ಳುವಂತೆ ಮಾಡಿ ಬಟ್ಟೆಯನ್ನು ಸುತ್ತ ಬೇಕು.

ಅಭ್ಯಜ್ಯ ಸರ್ಪಿಷಾ ಪಾದಂ ತಲಭಗ್ನಂ ಕುಶೋತ್ತರಮ್
ವಸ್ತ್ರಪಟ್ಟೇನ ಬಧ್ನೀಯಾತ್ ನ ಚ ವ್ಯಾಯಾಮಮಾಚರೇತ್ ||೨೫||
ಅಭ್ಯಜ್ಯಾಯಾಮಯೇತ್ ಜಙ್ಘಾಮೂರುಂ ಚ ಸುಸಮಾಹಿತಃ |
ದತ್ವಾ ವೃಕ್ಷತ್ವಚಃ ಶೀತಾ ವಸ್ತ್ರಪಟ್ಟೇನ ವೇಷ್ಟಯೇತ್ ||೨೬||
ಮತಿಮಾಂಶ್ಚಕ್ರಯೋಗೇನ ಆಞ್ಛೇದೂರ್ವಸ್ಥಿ ನಿರ್ಗತಮ್ |
ಸ್ಫುಟಿತಂ ಪಿಚ್ಚಿತಂ ಚಾಪಿ ಬಧ್ನೀಯಾತ್ ಪೂರ್ವವದ್ಭಿಷಕ್ ||೨೭||
ಆಞ್ಛೇದೂರ್ಧ್ವಮಧೋವಾಪಿ ಕಟೀಭಗ್ನಂ ತು ಮಾನವಂ |
ತತಃ ಸ್ಥಾನಸ್ಥಿತೇ ಸನ್ಧೌ ಬಸ್ತಿಭಿಃ ಸಮುಪಾಚರೇತ್ ||೨೮||

ಅರ್ಥ—ಅಂಗಾಲುಮೂಳೆಗಳು ಮುರಿದಿದ್ದರೆ ಕಾಲನ್ನು ತುಪ್ಪದಿಂದ ಲೇಪಿಸಿ ಕ್ಷೀರ ವೃಕ್ಷಗಳ ತೊಗಟೆಯ ಕುಶದಲ್ಲಿಟ್ಟು ಬಟ್ಟೆಯ ಪಟ್ಟೆಯಿಂದ ಬಿಗಿದು ಕಟ್ಟಬೇಕು; ವ್ಯಾಯಾಮ ಮೊದಲಾದವನ್ನು ಮಾಡಬಾರದು; ಮೊಣಕಾಲು, ತೊಡೆಗಳ ಮೂಳೆಗಳು ಮುರಿದಿದ್ದರೆ ಅವುಗಳಿಗೆ ತುಪ್ಪವನ್ನು ಸವರಿ ಹಸಿಯಾದ ಕ್ಷೀರವೃಕ್ಷಗಳ ತೊಗಟೆಗಳನ್ನು ಅವುಗಳ ಮೇಲಿಟ್ಟು ಬಟ್ಟೆಯ ಪಟ್ಟೆಯಿಂದ ಬಿಗಿದು ಕಟ್ಟಬೇಕು; ಕುಶಲನಾದ ವೈದ್ಯನು ತೊಡೆಯ ಮೂಳೆಯು ಮುರಿದು ಹೊರಕ್ಕೆ ಚಾಚಿಕೊಂಡು ಸೀಳಿದ್ದರೆ ಮೂಳೆ ಮುರಿದು ಮಾಂಸವು ಉಬ್ಬಿ ನೋವಾದರೆ ಮೇಲೆ ಹೇಳಿದಂತೆ ಮೂಳೆಯನ್ನು ನೇರಮಾಡಿ ಗುಂಡಾದ ಕುಶವನ್ನು ಅದರ ಮೇಲಿಟ್ಟು ಬಟ್ಟೆಯ ಪಟ್ಟೆಯಿಂದ ಬಿಗಿಯಬೇಕು. ಸೊಂಟ ಮುರಿದ ಮನುಷ್ಯನಿಗೆ ಮುರಿದ ಮೂಳೆಯು ಮೇಲಕ್ಕೆ ನುಗ್ಗಿದ್ದರೆ ಕೆಳಕ್ಕೂ ಕೆಳಗಡೆಗೆ ಹೊರಟದ್ದರೆ ಮೇಲಕ್ಕೂ ಹೋಗುವಂತೆ ತಳ್ಳಿ ಬಟ್ಟೆಯ ಪಟ್ಟೆಯನ್ನು ಬಿಗಿಯಬೇಕು; ಮೂಳೆಗಳು ತಮ್ಮ ತಮ್ಮ ಸ್ಥಾನಗಳಿಗೆ ಸೇರಿಕೊಂಡ ಅನಂತರ ಸ್ನೇಹಬಸ್ತಿಯನ್ನು ಪ್ರಯೋಗಿಸ ಬೇಕು; ನಡುವಿನ ಕಪಾಲಾಸ್ಥಿಯು ಮುರಿದುಹೋದರೆ, ಸನ್ಧಿಯು ಜಾರಿದ್ದರೆ, ಮೂಳೆ ಗಳು ಸ್ಥಾನವನ್ನು ಬಿಟ್ಟು ಬೇರ್ಪಟ್ಟಿದ್ದರೆ, ಸಂಧಿ ಚ್ಯುತವಾದರೆ ತ್ಯಜಿಸಬೇಕೆಂದು ಹೇಳಿದ್ದರೂ ಯಾಪ್ಯವೆಂದು ತಿಳಿಯಬೇಕು. ಇದರಿಂದ ತಿಳಿಯಬೇಕಾದುದೇನೆಂದರೆ ಕಪಾಲಾಸ್ಥಿಗಳು ಭಿನ್ನವಾದರೆ ತ್ಯಜಿಸಬೇಕು; ಸಂಧಿಗಳು ಜಾರಿದ್ದರೆ,ಸನ್ಧಿಯ ಮೂಳೆ ಗಳು ಸಡಿಲಿಸಿದ್ದರೆ ಯಾಪ್ಯವು; ವರ್ಜಯೇತ್ ಎಂದು ಕೃಚ್ಛ್ರಸಾಧ್ಯತ್ವವನ್ನು ಹೇಳು ವುದಕ್ಕಾಗಿಯೇ ವಿನಃ ತ್ಯಜಿಸಬೇಕೆಂಬ ಅಭಿಪ್ರಾಯದಿಂದಲ್ಲವೆಂದು ತಿಳಿಯಬೇಕು.

ಪರ್ಶುಕಾಸ್ವಥ ಭಗ್ನಾಸು ಘೃತಾಭ್ಯಕ್ತಸ್ಯ ತಿಷ್ಠತಃ |
ದಕ್ಷಿಣಾಸ್ವಥವಾ ವಾಮಾಸ್ವನುಮೃಜ್ಯ ನಿಬನ್ಧನೀಃ ||೨೯||
ತತಃ ಕವಲಿಕಾಂ ದತ್ವಾ ವೇಷ್ಟಯೇತ್ ಸುಸಮಾಹಿತಃ |
ತೈಲಪೂರ್ಣೋಕಟಾಹೇ ವಾ ದ್ರೋಣ್ಯಾಂ ಶಾಯಯೇನ್ನರಮ್ ||೩೦||

ಅರ್ಥ—ಪಕ್ಕೆಲುಬುಗಳು ಮುರಿದಿದ್ದರೆ ಅವುಗಳನ್ನು ಬಿಗಿದುಹಿಡಿದಿರುವ ಬಲ ಗಡೆಯ ಅಥವಾ ಎಡಭಾಗದ ಮಾಂಸರಜ್ಜುಗಳಿಗೆ ಬಿದಿರಿನ, ಅಥವಾ ಹಬ್ಬೆಹಂಬಿ ನಿಂದ ಮಾಡಿದ ಅಥವಾ ಬಟ್ಟೆಯ ಕವಳಿಕೆಗಳನ್ನು (ಸಣ್ಣ ಸಣ್ಣ ಮೆತ್ತನೆಯ ದಿಂಬುಗಳು) ಅವಲಂಬನ (ಟೇಕೆ) ಕೊಟ್ಟು ತುಪ್ಪದಿಂದ ರೋಗಿಯ ದೇಹವನ್ನೆಲ್ಲಾ ಚೆನ್ನಾಗಿ ಲೇಪಿಸಿ ನಿಲ್ಲಿಸಿ ಹಿಡಿದುಕೊಂಡು ದಪ್ಪವಾದ ಬಟ್ಟೆಯ ಪಟ್ಟಿಯಿಂದ ಬಿಗಿದು ತೈಲ ತುಂಬಿದ ಕೊಪ್ಪರಿಗೆಯಲ್ಲಾಗಲೀ ಅಥವಾ ದೋಣಿಯಲ್ಲಾಗಲೀ (ಟಬ್ಬು) ರೋಗಿಯನ್ನು ಮಲಗಿಸಬೇಕು.

ಮುಸಲೇನೋತ್ಕ್ಷಿಪೇತ್ ಕಕ್ಷಾಮಾಂಸಸನ್ಧೌ ವಿಸಂಹತೇ ।
ಸ್ಥಾನಸ್ಥಿತಂ ಚ ಬಧ್ನೀತ ಸ್ವಸ್ತಿಕೇನ ವಿಚಕ್ಷಣಃ ॥೩೧॥
ಕೌರ್ಪರಂ ತು ತಥಾ ಸನ್ಧಿಮಙ್ಗುಷ್ಠೇನಾನುಮಾರ್ಜಯೇತ್ ।
ಅನುಮೃಜ್ಯ ತತಃ ಸನ್ಧಿಂ ಪೀಡಯೇತ್ ಕೂರ್ಪರಾಚ್ಚ್ಯುತಮ್ ॥೩೨॥
ಪ್ರಸಾರ್ಯಾಕುಞ್ಚಯೇಚ್ಚೈನಂ ಸ್ನೇಹಸೇಕಂ ಚ ದಾಪಯೇತ್ ।
ಏವಂ ಜಾನುನಿ ಗುಲ್ಫೇ ಚ ಮಣಿಬನ್ಧೇ ಚ ಕಾರಯೇತ್ ॥೩೩॥

ಅರ್ಥ—ಅಂಸಸಂಧಿಯು (ಬಾಹು ಪಕ್ಕೆ ತಲೆಗಳು ಕೂಡುವ ಸಂಧಿ) ಜಾರಿ ಚಲಿಸ ದಿದ್ದರೆ ಕೊಂಕಳೊಳಗೆ ಒನಕೆಯನ್ನು ನುಗ್ಗಿಸಿ ಮೇಲಕ್ಕೆ ಎತ್ತಲು ಬಾಹುವಿನ, ಮೂಳೆಯು (ಪ್ರಗಂಡಾಸ್ಥಿಯು) ತನ್ನ ಜಾಗಕ್ಕೆ ಸೇರಿಕೊಳ್ಳುತ್ತದೆ ; ಆ ಸಮಯದಲ್ಲಿ ಜಾಣನಾದ ಶಸ್ತ್ರವೈದ್ಯನು ಸ್ವಸ್ತಿಕ ಬನ್ಧದಿಂದ (8 ಈ ಆಕಾರದ ಬನ್ಧನ) ಕಟ್ಟಬೇಕು ; ಮೊಳಕೈ ಸನ್ಧಿಯು ಜಾರಿ ಮೂಳೆಗಳು ಸ್ಥಳದಿಂದ ಹೊರಕ್ಕೆ ಕಳಚಿಕೊಂಡಿದ್ದರೆ ಕೈಯ್ಯಿನ ಹೆಬ್ಬೆಟ್ಟಿನಿಂದ ತೋಳಿನ ಮಧ್ಯಭಾಗವನ್ನು ಹಿಸುಕುತ್ತಾ ಜಾರಿಬಿದ್ದಿರುವ ಮೂಳೆಯನ್ನು ಕೂರ್ಪರ ಸಂಧಿಗೆ ಕೂಡಿಸಿ ಕೈಗಳನ್ನು ಮುಂದಕ್ಕೆ ಚಾಚುತ್ತಲೂ ಹಿಂದಕ್ಕೆ ಎಳೆದು ಕೊಳ್ಳುತ್ತಲೂ ಸಂಧಿಯು ಚಲಿಸುವಂತೆ ಮಾಡಿ ಸ್ನೇಹವನ್ನೂ, ಸುಖೋಷ್ಣವಾಗಿರುವಂತೆ ಕಷಾಯ ಸೇಚನೆಯನ್ನೂ ಮಾಡಬೇಕು ; ಇದೇ ರೀತಿಯಾಗಿ ಮಂಡಿ, ಕಣಕಾಲು, ಕಂಕಣ ಸಂಧಿಗಳನ್ನೂ (ಜಾನು–ಗುಲ್ಫ–ಮಣಿಬನ್ಧ) ಉಪಚರಿಸಬೇಕು.

ಉಭೇ ತಲೇ ಸಮೇ ಕೃತ್ವಾ ತಲಭಗ್ನಸ್ಯ ದೇಹಿನಃ ।
ಬಧ್ನೀಯಾದಾಮತೈಲೇನಪರಿಷೇಕಂ ಚ ಕಾರಯೇತ್ ॥೩೪॥
ಪ್ರಾಗ್ಗೋಮಯಮಯಂ ಪಿಂಡಂ ಧಾರಯೇನ್ಮೃಣ್ಮಯಂ ತತಃ ।
ಹಸ್ತೇ ಜಾತಬಲೇ ಚಾಪಿ ಕುರ್ಯಾತ್ ಪಾಷಾಣಧಾರಣಂ ॥೩೫॥

ಅರ್ಥ—ಅಂಗೈಗಳಲ್ಲಿರುವ ಮೂಳೆಗಳು ಮುರಿದಿದ್ದರೆ ಆ ರೋಗಿಯ ಎರಡು ಅಂಗೈ ಗಳನ್ನೂ ನೇರಮಾಡಿ ಬಂಧನದಿಂದ ಕಟ್ಟಿ ಹಸಿಯ ತೈಲದಿಂದ ನಿಧಾನವಾಗಿ ಸೇಕ ಮಾಡಿಸಬೇಕು ; ಕೆಲವರು ಒಂದು ಅಂಗೈಯನ್ನೂ ಒಂದು ಅಂಗಾಲನ್ನೂ ಎಂದು ಹೇಳು ತ್ತಾರೆ ; ಮೊದಮೊದಲು ಹಸುವಿನ ಸಗಣಿಯ ಉಂಡೆಯನ್ನೂ ಕ್ರಮಕ್ರಮವಾಗಿ

ಮಣ್ಣಿನ ಉಂಡೆಯನ್ನೂ ಬಿಗಿದು ಹಿಡಿದುಕೊಳ್ಳುತ್ತಾ ಕೈಗೆ ಬಲ ಬಂದಮೇಲೆ ಕಲ್ಲಿನ ಚೆಂಡನ್ನು ಹಿಡಿದುಕೊಳ್ಳಬೇಕು.

ಸನ್ನಮುನ್ನಮಯೇತ್ ಸ್ವಿನ್ನಮಕ್ಷಕಂ ಮುಸಲೇನ ತು ।
ತಥೋನ್ನತಂ ಪೀಡಯೇಚ್ಚ ಬಧ್ನೀಯಾದ್ಗಾಢಮೇವಚ ॥೩೬॥
ಊರುವಚ್ಚಾಪಿ ಕರ್ತವ್ಯಂ ಬಾಹುಭಗ್ನಚಿಕಿತ್ಸಿತಮ್ ।

ಅರ್ಥ—ಅಂಸಸನ್ಧಿಯ ಮೇಲಿನ ಅಕ್ಷಕವೆಂಬ ಮೂಳೆಯು ಕೆಳಕ್ಕೆ ಜಗ್ಗಿದ್ದರೆ ಒನಕೆಯನ್ನು ಆ ಮೂಳೆಯ ಕೆಳಗಿಟ್ಟು ಮೇಲಕ್ಕೆ ಎತ್ತಬೇಕು ; ಮೇಲಕ್ಕೆ ನುಗ್ಗಿದ್ದರೆ ಮೇಲ್ಗಡೆಯಿಂದ ಒನಕೆಯನ್ನು ತಳ್ಳಿ ಮೂಳೆಯನ್ನು ಕೆಳಕ್ಕೆ ಬರುವಂತೆ ಮಾಡಿ ಬಲವಾದ ಪಟ್ಟಿಯಿಂದ ಕಟ್ಟಿ ಬಿಗಿಮಾಡಬೇಕು ; ತೋಳಿನ ಮೂಳೆಯು ಮುರಿದುಹೋದರೆ ಮುರಿದ ತೊಡೆಯ ಮೂಳೆಗೆ ಮಾಡುವಂತೆಯೇ ಚಿಕಿತ್ಸೆಮಾಡಿ ಉಪಚರಿಸಬೇಕು.

ಗ್ರೀವಾಯಾಂತು ವಿವೃತ್ತಾಯಾಂ ಪ್ರವಿಷ್ಟಾಯಾಮಧೋಽಪಿಚ ॥೩೭॥
ಅವಟಾವಥ ಹನ್ವೋಶ್ಚ ಪ್ರಗೃಹ್ಯೋನ್ನಮಯೇನ್ನರಮ್ ।
ತತಃ ಕುಶಾಃ ಸಮಂದತ್ವಾ ವಸ್ತ್ರಪಟ್ಟೇನವೇಷ್ಟಯೇತ್ ॥೩೮॥
ಉತ್ತಾನಂ ಶಾಯಯೇಚ್ಚೈನಂ ಸಪ್ತರಾತ್ರಮತಂದ್ರಿತಃ ।
ಹನ್ವಸ್ಥಿನೀ ಸಮಾನೀಯ ಹನುಸನ್ಧೌ ವಿಸಂಹತೇ ॥೩೯॥
ಸ್ವೇದಯಿತ್ವಾ ಸ್ಥಿತೇ ಸಮ್ಯಕ್ ಪಞ್ಚಾಙ್ಗೀಂ ವಿತರೇದ್ಭಿಷಕ್ ।
ವಾತಘ್ನಮಧುರೈಃ ಸರ್ಪಿಃ ಸಿದ್ಧಂ ನಸ್ಯೇ ಚ ಪೂಜಿತಮ್ ॥೪೦॥

ಅರ್ಥ—ಕತ್ತು ಸೊಟ್ಟಾದರೆ ಅಥವಾ ಕೆಳಕ್ಕೆ ಕುಗ್ಗಿದ್ದರೆ ವೈದ್ಯನು ಒಂದು ಕೈಯಲ್ಲಿ ತಲೆಯ ಹಿಂದುಗಡೆಯನ್ನೂ ಇನ್ನೊಂದು ಕೈಯಲ್ಲಿ ಹನುಸಂಧಿಯನ್ನೂ (ದವಡೆಯನ್ನೂ) ಹಿಡಿದು ಕತ್ತನ್ನು ಮೇಲಕ್ಕೆ ಎತ್ತಿ ಸಮವಾಗಿ ಕುಶದಲ್ಲಿಟ್ಟು ಅದರ ಮೇಲೆ ಬಟ್ಟೆಯ ಪಟ್ಟಿಯನ್ನು ಬಿಗಿದು ರೋಗಿಯನ್ನು ಏಳುರಾತ್ರಿಗಳವರೆಗೂ ಅಂಗತ್ತ ಮಲಗಿಸಿ ಜಾಗರೂಕತೆಯಿಂದ ನೋಡಿಕೊಳ್ಳಬೇಕು ; ಹನುಸಂಧಿಗಳು ಜಾರಿದ್ದರೆ ದವಡೆಯ ಮೂಳೆಗಳನ್ನು ಮೇಲಕ್ಕೆ ಎತ್ತಿ ಸರಿಯಾದ ಸ್ಥಳಕ್ಕೆ ಸೇರಿಸಿ ಸ್ವೇದ ಮಾಡಿಸಿ ಅವು ಸರಿಯಾಗಿ ಸೇರಿಕೊಂಡ ಮೇಲೆ ಪಂಚಾಙ್ಗೀ ಎಂಬ ಬಂಧದಿಂದ ಬಿಗಿಯಬೇಕು ; ವಾತಹರಗಳಾದ ಮತ್ತು ಸಿಹಿರಸವುಳ್ಳ ದ್ರವ್ಯಗಳಿಂದ ತಯಾರಿಸಿದ ಘೃತವು ನಸ್ಯಕರ್ಮಕ್ಕೆ ಶ್ರೇಷ್ಠವಾದದ್ದು ;

ಅಭಗ್ನಾಂಶ್ಚಲಿತಾನ್ ದನ್ತಾನ್ ಸರಕ್ತಾನವಪೀಡಯೇತ್ ।
ತರುಣಸ್ಯ ಮನುಷ್ಯಸ್ಯ ಶೀತೈರಾಲೇಪಯೇದ್ಬಹಿಃ ॥೪೧॥
ಸಿಕ್ತಾಮ್ಬುಭಿಸ್ತತಃ ಶೀತೈಃ ಸನ್ಧಾನೀಯೈರುಪಾಚರೇತ್ ।
ಉತ್ಪಲಸ್ಯಚ ನಾಳೀನ ಸಕ್ಷೀರಪಾಂ ವಿಧೀಯತೇ ॥೪೨॥
ಜೀರ್ಣಸ್ಯ ತು ಮನುಷ್ಯಸ್ಯ ವರ್ಜಯೇಚ್ಚಲಿತಾನ್ ದ್ವಿಜಾನ್ ।

ಅರ್ಥ—ಅಭಿಘಾತದಿಂದ ಹಲ್ಲುಗಳು ಮುರಿಯದೆ ಅಲ್ಲಾಡುತ್ತಾ ರಕ್ತವು ಸ್ರಾವವಾಗುತ್ತಿದ್ದರೆ ರೋಗಿಯು ತರುಣನಾದರೆ ಶೀತಕಷಾಯವನ್ನು ಬಾಯಿಗೆ ಹಾಕಿ ಮುಕ್ಕಳಿಸಬೇಕು ; ಹೊರಗಡೆ ಶೀತಲದ್ರವ್ಯಗಳ ಕಲ್ಕದಿಂದ ಲೇಪನ ಮಾಡಬೇಕು. ರಕ್ತಸ್ರಾವವನ್ನು ನಿಲ್ಲಿಸುವ ತಣ್ಣಗಿರುವ ಕಷಾಯಗಳನ್ನು ಹಲ್ಲುಗಳಿಗೆ ಸೇಚನೆಮಾಡಿ ಉಪಚರಿಸಬೇಕು ; ಕೊಳವೆಯಂತೆ ಇರುವ ನೈದಿಲೆಯ ದಂಟನಿಂದ ರೋಗಿಗೆ ಹಾಲನ್ನು ಕುಡಿಸಬೇಕು ; ವೃದ್ಧನಿಗೆ ಹಲ್ಲುಗಳು ಅಲ್ಲಾಡುತ್ತಿದ್ದರೆ ತ್ಯಜಿಸಬೇಕು.

ಟಿಪ್ಪಣಿ : ಸನ್ಧಾನೀಯಗಳು–ತುಪ್ಪ–ಜೇನುತುಪ್ಪ ನ್ಯಗ್ರೋಧಾದಿ ಕ್ಷೀರವೃಕ್ಷಗಳ ತೊಗಟೆಯ ಕಷಾಯ ಕಲ್ಕ-ಚೂರ್ಣಗಳು.

ನಾಸಾಂ ಸನ್ನಾಂ ವಿವೃತ್ತಾಂ ವಾ ಋಜ್ವೀಂ ಕೃತ್ವಾ ಶಲಾಕಯಾ ||೪೩||
ಪೃಥಙ್ನಾಸಿಕಯೋರ್ನಾಡ್ಯೌ ದ್ವಿಮುಖೌ ಸಂಪ್ರವೇಶಯೇತ್
ತತಃ ಪಟ್ಟೇನ ಸಂವೇಷ್ಟ್ಯ ಘೃತಸೇಕಂ ಪ್ರದಾಪಯೇತ್ ||೪೪||

ಅರ್ಥ—ಅಭಿಘಾತದಿಂದ ಒಳಕ್ಕೆ ನುಗ್ಗಿ ಸೊಟ್ಟಾಗಿರುವ ಮೂಗಿನ ಹೊಳ್ಳೆಗಳನ್ನು ಶಲಾಕಾಯಂತ್ರದಿಂದ ನೇರವಾಗಿ ಮಾಡಿ ಎರಡೆರಡು ಮುಖವುಳ್ಳ ಎರಡೆರಡು ನಳಿಕೆಗಳನ್ನು ಒಂದೊಂದು ಮೂಗಿನ ಹೊಳ್ಳೆಯೊಳಕ್ಕೆ ನುಗ್ಗಿಸಿ ವಸ್ತ್ರದ ಪಟ್ಟೆಯಿಂದ ಬಿಗಿದು ಕಟ್ಟಿ ಸುಖೋಷ್ಣವಾದ ತುಪ್ಪದಿಂದ ಸೇಚನೆ ಮಾಡಬೇಕು.

ಟಿಪ್ಪಣಿ—ಮೂಗು ಒಳಕ್ಕೆ ಹೋಗಿದ್ದರೆ ಶಲಾಕೆಯಿಂದ ಮೇಲಕ್ಕೆ ಎತ್ತಬೇಕು ; ಸೊಟ್ಟಾಗಿದ್ದರೆ ನೇರಮಾಡಬೇಕು ; ಒಳಮುಖ ಹೊರಮುಖವುಳ್ಳ ಶಲಾಕೆಗಳನ್ನು ಎರಡು ಮೂಗಿನ ಹೊಳ್ಳೆಗಳಿಗೂ ಸಿಕ್ಕಿಸಿದರೆ ಸುಖವಾಗಿ ಶ್ವಾಸೋಚ್ಛ್ವಾಸಗಳು ಸಾಗುತ್ತವೆ.

ಭಗ್ನಂ ಕರ್ಣಂಚ ಬಧ್ನೀಯಾತ್ ಸಮಂಕೃತ್ವಾ ಘೃತಪ್ಲುತಮ್
ಸದ್ಯಃ ಕ್ಷತವಿಧಾನಂಚ ತತಃ ಪಶ್ಚಾತ್ಸಮಾಚರೇತ್ ||೪೫||
ಮಸ್ತುಲುಙ್ಗಾದ್ವಿನಾ ಭಿನ್ನೇ ಕಪಾಲೇ ಮಧುಸರ್ಪಿಷೀ
ದತ್ವಾತತೋ ನಿಬಧ್ನೀಯಾತ್ ಸಪ್ತಾಹಂ ಚ ಪಿಬೇತ್ ಘೃತಂ ||೪೬||
ಪತನಾದಭಿಘಾತಾದ್ವಾಶೂನಮಙ್ಗಂಯದಕ್ಷತಂ
ಶೀತಾಃ ಪ್ರದೇಹಾಃ ಸೇಕಾಂಶ್ಚ ಭಿಷಕ್‌ತಸ್ಯಾವಚಾರಯೇತ್ ||೪೭||

ಅರ್ಥ—ಅರ್ಧ ಹರಿದುಹೋದ ಕಿವಿಯನ್ನು ನೇರಮಾಡಿ ತುಪ್ಪದಿಂದ ನೆನೆಸಿ ಪಟ್ಟಿಕಟ್ಟಿ ಸದ್ಯೋವ್ರಣ ಚಿಕಿತ್ಸೆಯನ್ನು ಮಾಡಬೇಕು ; ತಲೆಬುರುಡೆಯು ಒಡೆದು ಮಸ್ತುಲುಂಗವು ಸ್ರಾವವಾದರೆ ಹಿಂದೆ ಹೇಳಿದಂತೆ ಕೂದಲಿನ ಬತ್ತಿಯನ್ನು ವ್ರಣದಲ್ಲಿಟ್ಟು ತುಪ್ಪ ಜೇನುತುಪ್ಪಗಳನ್ನು ಮಿಶ್ರಮಾಡಿ ವ್ರಣಕ್ಕೆ ಬಳಿದು ವ್ರಣಬನ್ಧನ ಮಾಡಿ ಏಳುದಿನಗಳವರೆಗೆ ತುಪ್ಪವನ್ನು ಕುಡಿಸಬೇಕು. ಕೆಳಕ್ಕೆ ಬೀಳುವುದರಿಂದಾಗಲೀ ಮೈಮೇಲೆ ಪೆಟ್ಟು

ಬಿದ್ದದ್ದರಿಂದಾಗಲೀ ಗಾಯವಾಗದೆ ನೈಊದಿದರೆ ವೈದ್ಯನು ಅದರ ಮೇಲೆ ತಣ್ಣಗೆ ಲೇಪನವನ್ನೂ ಕಷಾಯಸೇಚನವನ್ನೂ ಮಾಡಬೇಕು.

ಅಥ ಜಙ್ಘೋರುಭಗ್ನಾನಾಂ ಕಪಾಟಶಯನಂ ಹಿತಮ್ ।
ಕೀಲಕಾ ಬನ್ಧನಾರ್ಥಂ ಚ ಪಞ್ಚ ಕಾರ್ಯಾ ವಿಜಾನತಾ ॥೪೮॥
ಯಥಾ ನ ಚಲನಂ ತಸ್ಯ ಭಗ್ನಸ್ಯ ಕ್ರಿಯತೇ ತಥಾ ।
ಸನ್ಧೇರುಭಯತೋ ದ್ವೌದ್ವೌ ತಲೇ ಚೈಕಶ್ಚ ಕೀಲಕಃ ॥೪೯॥

ಅರ್ಥ—ಮೊಣಕಾಲಿನ ಮತ್ತು ತೊಡೆಯ ಮೂಳೆಗಳು ಮುರಿದಿದ್ದರೆ ಮುರಿದ ತೊಡೆ ಮತ್ತು ಮೊಣಕಾಲುಗಳು ಅಲುಗಾಡದಂತೆ ಕಪಾಟಶಯನ ಮಾಡಿಸಬೇಕು. ಅಂದರೆ ಅವುಗಳು ಕೂಡುವಷ್ಟು ಅಗಲವಾಗಿಯೂ ಕಾಲಿನಿಂದ ತೊಡೆಯವರೆಗಿನಷ್ಟು ಉದ್ದವಿರುವಂತೆ ಹಲಗೆಯನ್ನು ಮಾಡಿಸಿ ಅದರ ಮೇಲೆ ಮುರಿದ ತೊಡೆ ಮುಂಗಾಲುಗಳನ್ನು ನೇರವಾಗಿಟ್ಟು ಗುಲ್ಫಸಂಧಿಯ ಎಡಬಲಗಳಲ್ಲಿ ಎರಡು ಕೀಲು (ತಡೆಗಟ್ಟು)ಗಳನ್ನೂ ಮಂಡಿಯ ಎಡಬಲಗಳಲ್ಲೆರಡು ಕಟ್ಟುಗಳನ್ನೂ ಅಂಗಾಲಿನಲ್ಲೊಂದು ಕಟ್ಟನ್ನೂ ಕಟ್ಟಬೇಕು ; (ಇದು ಮುಂಗಾಲು ಮೂಳೆ ಮುರಿದಿದ್ದರೆ ಮಾಡುವ ವಿಧಾನ.) ತೊಡೆಯ ಮೂಳೆ ಮುರಿದಿದ್ದರೆ ಮಂಡಿಯ ಎಡಬಲಗಳಲ್ಲಿ ಎರಡು ಕಟ್ಟುಗಳನ್ನೂ ತೊಡೆಯ ಸಂದಿಯ ಎಡಬಲಗಳಲ್ಲಿ ಎರಡು ಕಟ್ಟುಗಳನ್ನೂ ಅಂಗಾಲಿನಲ್ಲಿ ಒಂದು ಕಟ್ಟನ್ನೂ ಹೀಗೆ ೫ ಕಟ್ಟುಗಳನ್ನೂ, ಒಂದೇಸಾರಿ ತೊಡೆಯ ಮೂಳೆಯೂ ಮುಂಗಾಲಿನ ಮೂಳೆಗಳೂ ಮುರಿದಲ್ಲಿ ಗುಲ್ಫಸಂಧಿ (ಕುಣಕಾಲು-ಕುಣಿಕೆ)ಯ ಎಡಬಲಗಳಲ್ಲಿ ಎರಡು ಕಟ್ಟುಗಳು ಮಂಡಿಯ ಎಡಬಲಗಳಲ್ಲಿ ಎರಡು ತೊಡೆಯ ಸಂಧಿಯ ಎಡಬಲಗಳಲ್ಲಿ ಎರಡು ಕಟ್ಟುಗಳು ಅಂಗಾಲಿನಲ್ಲೊಂದು ಕಟ್ಟು ಈ ರೀತಿ ೭ ಕಟ್ಟುಗಳಾಗುತ್ತವೆ. ಈಗಿನ ಕಾಲದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಎಂಬ ಮಣ್ಣಿನ ಕಲ್ಕದಿಂದ ತೊಡೆ ಕಾಲುಗಳು ಮುಚ್ಚುವಂತೆ ಉದ್ದವಾದ ಕೊಳವೆಯ ಆಕಾರದ ಮುಸುಕನ್ನು ಮಾಡುತ್ತಾರೆ. ಈ ರೀತಿಯ ಉಪಾಯದಿಂದ ಹಲಗೆಯನ್ನು ಹಿಡಿದು ಅತ್ತಿತ್ತ ಚಲಿಸಿದರೂ ಭಗ್ನವಾದ ಅವಯವಗಳಿಗೆ ಬಾಧಕವುಂಟಾಗುವುದಿಲ್ಲ.

ಶ್ರೋಣ್ಯಾಂ ವಾ ಪೃಷ್ಠವಂಶೇ ವಾ ವಕ್ಷಸ್ಯಕ್ಷಕಯೋಸ್ತಥಾ ।
ಭಗ್ನಸನ್ಧಿವಿಮೋಕ್ಷೇಷು ವಿಧಿಮೇನಂ ಸಮಾಚರೇತ್ ॥೫೦॥

ಅರ್ಥ—ಮೊಣಕಾಲು ಮತ್ತು ತೊಡೆಯ ಮೂಳೆಗಳು ಮುರಿದರೆ ಕಪಾಟ ಶಯನ ಕೀಲಕನಿಯಮನ ಮೊದಲಾದ ವಿಧಾನಗಳನ್ನೇ ಸೊಂಟ, ಬೆನ್ನುಮೂಳೆ, ಎದೆಯಮೂಳೆಗಳು, ಅಕ್ಷಕವೆಂಬ ಭುಜಸನ್ಧಿಯ ಮೇಲ್ಭಾಗ, ಕೊಂಕಳು ಮೊದಲಾದವುಗಳ ಮೂಳೆಗಳು ಮುರಿದಾಗಲೂ ಸನ್ಧಿಚ್ಯುತವಾಗಿರುವಾಗಲೂ ಆಚರಿಸಬೇಕು.

ಸನ್ಧೀಂಶ್ಚಿರವಿಮುಕ್ತಾಂಸ್ತುಸ್ನಿಗ್ಧಾನ್ ಸ್ವಿನ್ನಾನ್ ಮೃದೂಕೃತಾನ್ ।
ಉಕ್ತೈರ್ವಿಧಾನೈರ್ಬುದ್ಧ್ಯಾಚ ಸಮ್ಯಕ್ ಪ್ರಕೃತಿಮಾನಯೇತ್ ॥೫೧॥

ಕಾಣ್ಡಭಗ್ನೇ ಪ್ರರೂಢೇ ತು ವಿಷಮೋಲ್ಬಣ ಸಂಹಿತೇ ।
ಆಪೋಥ್ಯ ಶಮಯೇದ್ಭಗ್ನಂ ತತೋ ಭಗ್ನವದಾಚರೇತ್ ॥೫೨॥
ಕಲ್ಪಯೇತ್ ನಿರ್ಗತಂ ಶುಷ್ಕಂ ವ್ರಣಾನ್ತೇಽಸ್ಥಿ ಸಮಾಹಿತಃ ।
ಸನ್ಧ್ಯನ್ತೇ ವಾ ಕ್ರಿಯಾಂ ಕುರ್ಯಾತ್ ಸವ್ರಣೇ ವ್ರಣಭಗ್ನವತ್ ॥೫೩॥
ಊರ್ಧ್ವಕಾಯೇ ತು ಭಗ್ನಾನಾಂ ಮಸ್ತಿಷ್ಕಂ ಕರ್ಣಪೂರಣಮ್ ।
ಘೃತಪಾನಂ ಹಿತಂ ನಸ್ಯಂ ಪ್ರಶಾಖಾಸ್ವನುವಾಸನಮ್ ॥೫೪॥

ಅರ್ಥ— ಬಹಳಕಾಲದವರೆಗೆ ಜಾರಿರುವ ಅಸ್ಥಿಸಂಧಿಗಳನ್ನು ಸ್ನೇಹ, ಸ್ವೇದಗಳಿಂದ ಮೆತ್ತಗೆ ಮಾಡಿ ಮೇಲೆ ಹೇಳಿದಂತೆಯೂ ತನ್ನ ಬುದ್ಧಿಯಿಂದ ಯೋಚನೆ ಮಾಡಿಯೂ ಅವುಗಳು ಇದ್ದಂತೆಯೇ (ಸ್ವಭಾವಸ್ಥಿತಿಗೆ ಬರುವಂತೆ) ಉಪಚರಿಸಬೇಕು. ಮೂಳೆಯು ಮುರಿದುಹೋದ ಮೇಲೆ ಸರಿಯಾಗಿ ಕೂಡಿಕೊಳ್ಳದೆ ಬೆಳೆದು ಹೋದರೆ ಹೆಚ್ಚುಕಡಿಮೆ ಯಾಗಿ ಅಂದರೆ ಉಬ್ಬುತಗ್ಗಾಗಿಯೂ ಡೊಂಕಾಗಿಯೂ ಸೇರಿಕೊಂಡಿದ್ದರೆ ಅವುಗಳನ್ನು ಕಿತ್ತು ಬೇರ್ಪಡಿಸಿ ನೋವನ್ನು ಶಮನಗೊಳಿಸಿ ಅಸ್ಥಿಭಗ್ನಕ್ಕೆ ಹೇಳಿದಂತೆಯೂ ಚಿಕಿತ್ಸೆ ಮಾಡಬೇಕು. ಮೂಳೆಯು ಹೊರಕ್ಕೆ ಚಾಚಿಕೊಂಡು ಒಣಗಿದ್ದರೆ (ವ್ರಣವು ಮಾದ್ಯ ಹೋಗಿದ್ದರೆ) ಮೂಳೆಯ ತುದಿಭಾಗವನ್ನು ಸನ್ಧಿಯ ಹತ್ತಿರದಲ್ಲಿ ಬೇರೊಂದುಕಡೆ ವ್ರಣ ವಾಗದಂತೆ ಜಾಗರೂಕತೆಯಿಂದ ಕತ್ತರಿಸಬೇಕು. ಸನ್ಧಿಯ ತುದಿಯಲ್ಲಿ ವ್ರಣವುಂಟಾ ದರೆ ವ್ರಣಚಿಕಿತ್ಸೆಯನ್ನೂ ಅಸ್ತಿಭಗ್ನ ಚಿಕಿತ್ಸೆಯನ್ನೂ ಮಾಡಬೇಕು. ತಲೆಯಲ್ಲಿನ ಮೂಳೆಗಳು ಒಡೆದುಹೋದರೆ ಶಿರೋಬಸ್ತಿ, ಕರ್ಣಪೂರಣ (ಕಿವಿಗೆ ಬಲಾದಿತೈಲಗಳನ್ನು ತುಂಬುವುದು) ಗಳನ್ನೂ ತೋಳುಗಳ ಮೂಳೆಗಳು ಮುರಿದಿರುವಾಗ ಘೃತಪಾನ-ನಸು ಮತ್ತು ಅನುವಾಸನಬಸ್ತಿಗಳನ್ನೂ ಮಾಡುವುದು ಹಿತಕರ.

ಟಿಪ್ಪಣಿ—ಮಸ್ತಿಷ್ಕ್ಯಂ ಎಂದೂ ಪಾಠಾನ್ತರವು. ಮೊಣಕಾಲು, ಮಂಡಿ, ತೋಳುಗಳ ಮೂಳೆಗಳು ಮುರಿದಿದ್ದರೆ ನಸ್ಯಕರ್ಮ ಮಾಡಿಸಬೇಕು, ಗಯೀ ಎಂಬ ವ್ಯಾಖ್ಯಾತೃವಿನ ಮತಾನುಸಾರ ಪ್ರಶಾಖಾ ಎಂದರೆ ‘ಬಸ್ತಿ’ ಎಂದು ತಿಳಿಯಬೇಕು.

॥೫೫॥
ಅತ ಊರ್ಧ್ವಂ ಪ್ರವಕ್ಷಾಮಿ ತೈಲಂ ಭಗ್ನಸ್ಯ ಸಾಧಕಮ್
ರಾತ್ರೌ ರಾತ್ರೌ ತಿಲಾನ್ ಕೃಷ್ಣಾನ್ ವಾಸಯೇದಸ್ಥಿರೇ ಜಲೇ
॥೫೬॥
ದಿವಾ ದಿವಾ ಶೋಷಯಿತ್ವಾ ಗವಾಂ ಕ್ಷೀರೇಣ ಭಾವಯೇತ್
ತೃತೀಯಂ ಸಪ್ತರಾತ್ರಂ ವಾ ಭಾವಯೇನ್ಮಧುಕಾಮ್ಬುನಾ
॥೫೭॥
ತತಃ ಕ್ಷೀರೇ ಪುನಃ ಪೀತಾನ್ ಸುಶುಷ್ಕಾಂಶ್ಚೂರ್ಣಯೇದ್ಭಿಷಕ್
ಕಾಕೋಲ್ಯಾದಿಂ ಸಯಷ್ಟ್ಯಾಹ್ವಂ ಮಞ್ಜಿಷ್ಠಾಂ ಸಾರಿವಾಂ ತಥಾ
॥೫೮॥
ಕುಷ್ಠಂ ಸರ್ಜರಸಂ ಮಾಂಸೀಂ ಸುರದಾರುಂ ಸಚಂದನಮ್
ಶತಪುಷ್ಪಾಂ ಚ ಸಂಚೂರ್ಣ್ಯ ತಿಲಚೂರ್ಣೇನ ಯೋಜಯೇತ್
॥೫೯॥
ಪೀಡನಾರ್ಥಂ ಚ ಕರ್ತವ್ಯಂ ಸರ್ವಗನ್ಧಶೃತಂ ಪಯಃ
ಚತುರ್ಗುಣೇನ ಪಯಸಾ ತತ್ತೈಲಂ ವಿಪಚೇದ್ಭಿಷಕ್

ಏಲಾಮಂಶುಮತೀಂ ಪತ್ರಂ ಜೀವಕಂ ತಗರಂ ತಥಾ ||೬೦||
ರೋಧ್ರಂ ಪ್ರಪೌಣ್ಡರೀಕಂ ಚ ತಥಾ ಕಾಲಾನುಸಾರಿಣಮ್ ।
ಸ್ಪೃರೇಯಕಂ ಕ್ಷೀರಶುಕ್ಲಾಮನನ್ತಾಂ ಸಮಧೂಳಿಕಾಮ್ ।
ಪಿಷ್ಟ್ವಾ ಶೃಂಗಾಟಕಂ ಚೈವ ಪೂರ್ವೋಕ್ತಾನ್ಯೌಷಧಾನಿ ಚ ||೬೧||
ಏಭಿಸ್ತದ್ದ್ವಿಪಚೇತ್ತೈಲಂ ಶಾಸ್ತ್ರವಿನ್ಮೃದುನಾಗ್ನಿನಾ
ಏತತ್ತೈಲಂ ಸದಾ ಪಥ್ಯಂ ಭಗ್ನಾನಾಂ ಸರ್ವಕರ್ಮಸು ||೬೨||
ಆಕ್ಷೇಪಕೇ ಪಕ್ಷಘಾತೇ ತಾಲುಶೋಷೇ ತಥಾರ್ದಿತೇ
ಮನ್ಯಾಸ್ತಮ್ಭೇಶಿರೋರೋಗೇ ಕರ್ಣಶೂಲೇ ಹನುಗ್ರಹೇ ||೬೩||
ಬಾಧಿರ್ಯೇ ತಿಮಿರೇ ಚೈವ ಯೇಚ ಸ್ತ್ರೀಷು ಕ್ಷಯಂ ಗತಾಃ
ಪಥ್ಯಂ ಪಾನೇ ತಥಾಭ್ಯಙ್ಗೇ ನಸ್ಯೇ ಬಸ್ತಿಷು ಭೋಜನೇ ||೬೪||
ಗ್ರೀವಾಸ್ಕನ್ಧೋರಸಾಂ ವೃದ್ಧಿರಮುನೈವೋಪಜಾಯತೇ
ಮುಖಂ ಚ ಪದ್ಮಪ್ರತಿಮಂ ಸ ಸುಗಂಧಿ ಸಮೀರಣಂ ||೬೫||
ಗನ್ಧತೈಲಮಿದಂ ನಾಮ್ನಾ ಸರ್ವವಾತವಿಕಾರನುತ್
ರಾಜಾರ್ಹಮೇತತ್ಕರ್ತವ್ಯಂ ರಾಜ್ಞಾಮೇವ ವಿಚಕ್ಷಣೈಃ ||೬೬||
ಶೋಧನೇತಿ ಪಾಠಾನ್ತರಮ್.

ಅರ್ಥ—ಬಸ್ತಿಕರ್ಮ, ಕರ್ಣಪೂರಣೆ, ಪಾನ, ನಸ್ಯ, ಅನುವಾಸನಗಳಿಗೆ ಯೋಗ್ಯವಾದ ಗಂಧತೈಲವಿಧಾನವನ್ನು ಹೇಳುತ್ತಾರೆ. ಅನಂತರ ಮುರಿದ ಮೂಳೆಗಳು ಒಟ್ಟಿಗೆ ಕೂಡಿಕೊಂಡು ಮೊದಲಿನಂತೆ ಆಗಿ ಬೆಳೆದುಕೊಳ್ಳಲು ಸಹಾಯವಾಗುವುದಕ್ಕಾಗಿ ಗಂಧತೈಲವನ್ನು ಹೇಳುತ್ತೇನೆ—ಕರಿಯ ಎಳ್ಳಿನ ಮೂಟೆಯನ್ನು ರಾತ್ರಿಯವೇಳೆ ಹರಿಯುವ ನೀರಿನಲ್ಲಿ ನೆನೆಸುತ್ತಲೂ, ಹಗಲುವೇಳೆ ಬಿಸಲಿನಲ್ಲಿ ಹರಡಿ ಒಣಗಿಸುತ್ತಲೂ ಮೊದಲಿನ ೭ ದಿನಗಳು ಭಾವನೆ ಮಾಡುತ್ತಲೂ ಒಣಗಿಸುತ್ತಲೂ ಬರಬೇಕು ; ಎರಡನೆಯ ಸಪ್ತಾಹದಲ್ಲಿ ಹಸುವಿನ ಹಾಲಿನಲ್ಲಿ ಭಾವನೆ ಮಾಡುತ್ತಲೂ ಒಣಗಿಸುತ್ತಲೂ, ಮೂರನೆಯ ಸಪ್ತಾಹದಲ್ಲಿ ಅತಿಮಧುರದ ಕಷಾಯದಲ್ಲಿ ಭಾವನೆ ಮಾಡುತ್ತಲೂ ಒಣಗಿಸುತ್ತಲೂ ನಾಲ್ಕನೆಯ ಸಪ್ತಾಹ ಪುನಃ ಹಾಲಿನಲ್ಲಿ ಭಾವನೆ ಮಾಡುತ್ತಲೂ ಒಣಗಿಸುತ್ತಲೂ ಬಂದು ಚೆನ್ನಾಗಿ ಒಣಗಿದ ಮೇಲೆ ಪುಡಿಮಾಡಿದ ಈ ಚೂರ್ಣದ ಮೂರುಭಾಗದೊಡನೆ ಕಾಕೋಲ್ಯಾದಿ ಗಣದ್ರವ್ಯಗಳು, ಅತಿಮಧುರ, ಮಂಜಿಷ್ಠೆ, ಸೊಗದೆಬೇರು, ಚಂಗಲ್‌ಕೋಷ್ಠ, ರಾಳು, ಜಟಾಮಾಂಸಿ, ದೇವದಾರು, ಶ್ರೀಗಂಧ, ಸಬ್ಬಸಿಗೆಬೀಜ, ಇವೆಲ್ಲವುಗಳ ಚೂರ್ಣ ಒಂದು ಭಾಗವನ್ನು ಸೇರಿಸಿ, ೧ ಭಾಗ ಏಲಾದಿಗಣದಲ್ಲಿ ಹೇಳಿದ ದ್ರವ್ಯಗಳು, ೮ ಭಾಗ ಹಾಲು, ೩೨ ಭಾಗ ನೀರು ಇವುಗಳಲ್ಲಿ ಹಾಕಿ ಹಾಲುಮಾತ್ರ ನಿಲ್ಲುವಂತೆ ಕಾಯಿಸಿದ ಮೇಲೆ ಶೋಧಿಸಿದ ಬಿಸಿಹಾಲಿನಲ್ಲಿ ಮೇಲೆ ಹೇಳಿದ ಚೂರ್ಣಗಳನ್ನು ನೆನೆಸಿ ಗಾಣದಲ್ಲಿ ತಿರುಗಿಸಿ ತೈಲವನ್ನು ತೆಗೆಯಬೇಕು ; ಈ ತೈಲದ ನಾಲ್ಕರಷ್ಟು ಹಾಲನ್ನು ಕೂಡಿಸಿ ಕೊಪ್ಪರಿಗೆಯಲ್ಲಿ ಸುರಿದು ಏಲಕ್ಕಿ, ಮೂರೆಲೆಹೊನ್ನೆ, ಲವಂಗಪತ್ರೆ, ಜೀವಕ, ತಗರ,

ರೋಧ್ರ, ಪ್ರಪೌಣ್ಡರೀಕ, ಅಗಿಲು, ಮುಳ್ಳುಗೋರಂಟೆ, ಹಾಲುನೆಲಗುಂಬಳ, ಸೊಗದೆ ಬೇರು, ಕೊರಟಿಗೆಹಂಬು (ನೀರಿನಲ್ಲಿ ಬೆಳೆಯುವ ಅತಿಮಧುರವೆಂದು ಕೆಲವರ ಮತ) ಮುಮ್ಮೂಲಿಗೆಡ್ಡೆ ಇವುಗಳ ಜೊತೆಗೆ ಮೇಲೆ ಹೇಳಿದ ಕಾಕೋಳ್ಯಾದಿ ಶತಪುಷ್ಪದವರೆಗಿನ ದ್ರವ್ಯಗಳನ್ನೂ ಸೇರಿಸಿ ತೈಲದ ನಾಲ್ಕನೆಯ ಒಂದಂಶದಷ್ಟನ್ನೂ ಕೊಪ್ಪರಿಗೆಗೆ ಹಾಕಿ ಮಂದಾಗ್ನಿಯಿಂದ ಪಾಕಮಾಡಿ ತಳಹತ್ತದಂತೆ ಸೌಟನಿಂದ ತೊಳಸುತ್ತಾ ಹದವಾಗಿ ನೋಡಿ ತೈಲವನ್ನು ಶೋಧಿಸಿ ಭದ್ರವಾಗಿಡಬೇಕು. (ಅಸ್ಥಿಭಗ್ನ) ಸಂಧಿಚ್ಯುತಿ ಮೊದಲಾದ ಎಲ್ಲಾ ವಿಧಾನಗಳಲ್ಲೂ ಪ್ರಯೋಜನಕಾರಿಯಾದ ಈ ಸುಗಂಧತೈಲವನ್ನು ಕೆಲವರು ಅಣುತೈಲವೆಂದೂ ಹೇಳುತ್ತಾರೆ. ಆಕ್ಷೇಪಕ, ಪಕ್ಷವಧೆ, ತಾಲುಶೋಷ, ಅರ್ದಿತ, ಮನ್ಯಾಸ್ತಂಭ, ತಲೆನೋವು, ಕಿವಿಶೂಲೆ, ಹನುಗ್ರಹ, ಬಾಧಿರ್ಯ, ತಿಮಿರ ಮೊದಲಾದ ರೋಗಗಳಲ್ಲೂ, ಸ್ತ್ರೀಸಂಗದಿಂದ ಕ್ಷೀಣರಾದವರಿಗೂ ಪಾನ-ಅಭ್ಯಂಗ-ನಸ್ಯ-ಬಸ್ತಿ-ಭೋಜನದೊಡನೆ (ಕೆಲವರು ಶೋಧನಕರ್ಮಗಳಲ್ಲಿ ಎಂದು ಹೇಳುತ್ತಾರೆ.) ಈ ತೈಲವನ್ನುಪಯೋಗಿಸಿದರೆ ಹಿತವಾಗುತ್ತದೆ ; ಇದರ ಅಭ್ಯಂಗದಿಂದ ಕತ್ತು, ಹೆಗಲು, ಎದೆಗಳು ವೃದ್ಧಿಯಾಗುತ್ತವೆ ; ತಾವರೆಹೂವಿನ ಹಾಗೆ ಮುಖದ ವರ್ಣವು ಸುಂದರವಾಗುತ್ತದೆ, ಸುವಾಸನೆಯುಳ್ಳ ನಿಃಶ್ವಾಸವುಂಟಾಗುತ್ತದೆ ; ಸಕಲವಿಧ ವಾತರೋಗಗಳನ್ನೂ ನಿವಾರಿಸುತ್ತದೆ ; ಪಂಡಿತರು ರಾಜರಿಗೆ ಯೋಗ್ಯವಾದ ಈ ತೈಲವನ್ನು ತಯಾರಿಸಿ ಪ್ರಯೋಗಿಸಬೇಕು. ಅಧಿಕವಾದ ಸಾಮಗ್ರಿ ಸಲಕರಣೆಗಳಿಂದಲೂ ಅತಿಪ್ರಯಾಸದಿಂದಲೂ ಸಾವಧಾನಚಿತ್ತದಿಂದಲೂ ತಯಾರಿಸಬೇಕಾದ ಕಾರಣ ರಾಜರುಗಳು ಪ್ರಯೋಗಿಸಲು ಅರ್ಹವಾದದ್ದು. ಇತರರು ಉಪಯೋಗಿಸಿದರೂ ಬಾಧಕವಿಲ್ಲ. ಆದರೆ ಬಹಳ ವ್ಯಯವಾಗುತ್ತದೆ, ಹೆಚ್ಚು ಕಾಲವೂ ಬೇಕಾಗುತ್ತದೆ. ತಯಾರಿಸಲು ಸ್ಥಿರಚಿತ್ತತೆಯೂ, ಬುದ್ಧಿಕೌಶಲ್ಯವೂ, ಕಾರ್ಯದಕ್ಷತೆಯೂ ಆವಶ್ಯಕವಾದದ್ದು.

ತ್ರಪುಸಾಕ್ಷಪ್ರಿಯಾಲಾನಾಂ ತೈನಾನಿ ಮಧುರೈಃಸಹ ।
ವಸಾಂ ದತ್ವಾ ಯಥಾಲಾಭಂ ಕ್ಷೀರೇದಶಗುಣೇ ಪಚೇತ್ ॥೬೭॥
ಸ್ನೇಹೋತ್ತಮಮಿದಂ ಚಾಶು ಕುರ್ಯಾದ್ಭಗ್ನಪ್ರಸಾಧನಮ್ ।
ಪಾನಾಭ್ಯಙ್ಜನನಸ್ಯೇಷು ಬಸ್ತಿಕರ್ಮಣಿ ಸೇಚನೇ । ॥೬೮॥
ಭಗ್ನಂ ನೈತಿಯಥಾ ಪಾಕಂ ಪ್ರಯತೇತ ತಥಾ ಭಿಷಕ್ ।
ಪಕ್ವಮಾಂಸಸಿರಾಸ್ನಾಯು ತದ್ಧಿಕೃಚ್ಛ್ರೇಣ ಸಿಧ್ಯತಿ ॥೬೯॥
ಭಗ್ನಂಸನ್ಧಿಮನಾವಿದ್ಧಮಹೀನಾಙ್ಗಮನುಲ್ಬಣಂ ।
ಸುಖಚೇಷ್ಟಾಪ್ರಚಾರಂ ಚ ಸಂಹಿತಂ ಸಮ್ಯಗಾದಿಶೇತ್ ॥೭೦॥

ಅರ್ಥ—ಸೌತೆಬೀಜ ತಾರೆಬೀಜ ಚಾರಪೂಪ್ಪು ಇವುಗಳ ತೈಲಗಳ ಜೊತೆಗೆ ಕಾಕೋಳ್ಯಾದಿ ಗಣದ್ರವ್ಯಗಳಲ್ಲಿ ದೊರೆತಷ್ಟು ದ್ರವ್ಯಗಳ ಕಲ್ಕ ನಾಲ್ಕರಲ್ಲೊಂದು ಪಾಲಿನಷ್ಟು ಸೇರಿಸಿ, ದೊರೆತಷ್ಟು ಪ್ರಾಣಿಗಳ ವಸೆಯನ್ನು ತೈಲದಷ್ಟೇ ಸೇರಿಸಿ ತೈಲವಸೆಗಳ ೧೦

ರಷ್ಟು ಹಾಲನ್ನು ಹಾಕಿ ಹದವರಿತು ಪಾಕಮಾಡಿಟ್ಟುಕೊಳ್ಳಲು ಉತ್ತಮವಾದ ಸ್ನೇಹವು; ಪಾನ, ಅಭ್ಯಂಗ, ಸಸ್ಯಕರ್ಮ, ಬಸ್ತಿಕರ್ಮ, ಪರಿಷೇಕಗಳಲ್ಲಿ ಪ್ರಯೋಗಿಸಿದರೆ ಮುರಿದ ಮೂಳೆಗಳು ಮೊದಲಿನಂತೆಯೇ ಸೇರಿಕೊಂಡು ಬೆಳೆಯುತ್ತವೆ ; ವೈದ್ಯನು ಮೂಳೆಮುರಿದವರಿಗೆ ಅವು ಪಾಕವಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ; ಮಾಂಸ, ಸಿರೆ, ಸ್ನಾಯುಗಳು, ಪಾಕವಾದರೆ ಆ ಭಗ್ನವು ಗುಣವಾಗುವುದು ಬಲು ಕಷ್ಟವಾಗುತ್ತದೆ ; ಅಸ್ಥಿಸಂಧಿಗಳಲ್ಲಿ ನೋವು ಕಾಣಿಸದೆಯೂ ಮೂಳೆಗಳು ಮೇಲಕ್ಕೆ ಉಬ್ಬಿಕೊಳ್ಳದೆಯೂ ಅವಯವವು ಸಂಕುಚಿತವಾಗದೆಯೂ ಡೊಂಕಾಗದೆಯೂ ಸುಖವಾಗಿ ಮುಂದಕ್ಕೆ ನೀಡುವುದು ಹಿಂದಕ್ಕೆ ಎಳೆದುಕೊಳ್ಳುವುದು ಇತ್ಯಾದಿ ಕಾರ್ಯಗಳನ್ನು ಬಾಧೆಯಿಲ್ಲದೆ ಮಾಡಿಕೊಳ್ಳುವುದಾದರೆ ಆ ಮುರಿದ ಮೂಳೆಗಳು ಸರಿಯಾಗಿ ಕೂಡಿ ಬೆಳೆದಿವೆಯೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಾಸ್ಥಾನೇ ಭಗ್ನಚಿಕಿತ್ಸಾನಾಮಕ ತೃತೀಯಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ಚತುರ್ಥೋಽಧ್ಯಾಯಃ

ಅಥಾತೋ ವಾತವ್ಯಾಧಿ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ವಾತವ್ಯಾಧಿ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಆಮಾಶಯಗತೇ ವಾತೇ ಛರ್ದಯಿತ್ವಾ ಯಥಾಕ್ರಮಮ್ ।
ದೇಯಃ ಷಡ್ಧರಣೋಯೋಗಃ ಸಪ್ತರಾತ್ರಂ ಸುಖಾಮ್ಬುನಾ ||೩||
ಚಿತ್ರಕೇನ್ದ್ರಯವೇ ಪಾಠಾ ಕಟುಕಾತಿವಿಷಾ ಭಯಾ ।
ವಾತವ್ಯಾಧಿಪ್ರಶಮನೋ ಯೋಗಃ ಷಡ್ಧರಣಃ ಸ್ಮೃತಃ ||೪||

ಅರ್ಥ—ಆಮಾಶಯದಲ್ಲಿ ವಾಯುವು ಸೇರಿದ್ದರೆ ರೋಗಿಗೆ ವಮನಮಾಡಿಸಿದ ಮೇಲೆ ೭ ದಿನಗಳವರೆಗೆ ಕ್ರಮವಾಗಿ ಷಟ್‌ಧರಣಯೋಗದಲ್ಲಿ ಹೇಳಿರುವ ಚೂರ್ಣವನ್ನು ಸುಖೋಷ್ಣವಾದ ನೀರಿನಲ್ಲಿ ಬೆರೆಸಿ ಕುಡಿಸಬೇಕು; ಚಿತ್ರಮೂಲ, ಕೊಡಶಿಗೆ ಬೀಜ, ಅಗಳುಶುಂಠಿ, ಕಟುಕರೋಹಿಣಿ, ಅತಿಬಜೆ, ಅಣಿಲೆಸಿಪ್ಪೆ ಈ ಯೋಗಕ್ಕೆ ಷಡ್ಧರಣಯೋಗವೆಂದೂ ವಾತವ್ಯಾಧಿ ನಿವಾರಕವೆಂದೂ ತಿಳಿಯಬೇಕು.

ಟಿಪ್ಪಣಿ—ಷಟ್‌ಧರಣಯೋಗಃ—ಚಿತ್ರಕ ಮುಂತಾದ ಆರುದ್ರವ್ಯಗಳೂ ಒಂದೊಂದು ಧರಣ ಪ್ರಮಾಣದಿಂದ (೪ ಮಾಷಗಳಿಗೆ ೧ ಧರಣವು) ಒಟ್ಟು ಸೇರಿದರೆ ಷಡ್ಧರಣಗಳಾಗುತ್ತವೆ; ೬ ಧರಣಗಳು ೨೪ ಮಾಷಕಗಳು $= 21 \times 6 = 126$ ನಿಷ್ಪಾವಗಳು. ಹೇಗೆ ಈ ಷಟ್‌ಧರಣಗಳನ್ನು ೭ ದಿನಗಳು ಕೊಡಬೇಕು? ಎಂದರೆ ಒಂದು ದಿನಕ್ಕೆ ೧ ಕರ್ಷದಷ್ಟು ಚೂರ್ಣವನ್ನು ಪ್ರಯೋಗಿಸಿದರೆ ೬ ದಿನಗಳ ಪ್ರಯೋಗದಿಂದ ೧೪ ನಿಷ್ಪಾವಗಳು ಉಳಿಯುತ್ತವೆ; ೭ ನೆಯ ದಿನವೂ ೧೪ ನಿಷ್ಪಾವ ಪ್ರಮಾಣದಷ್ಟು ಚೂರ್ಣವನ್ನು ಪ್ರಯೋಗಿಸಬೇಕೆಂದೇ ಅಭಿಪ್ರಾಯವು; ವಾತವ್ಯಾಧಿ ಪ್ರಶಮನಃ—ಆಮಾಶಯದಲ್ಲಿರುವ ವಾತವ್ಯಾಧಿಯೆಂದು ತಿಳಿಯಬೇಕು; ಆಕ್ಷೇಪಕಾದಿ ವಾತವ್ಯಾಧಿಗಳಲ್ಲ.

ಪಕ್ವಾಶಯಗತೇ ಚಾಪಿ ದೇಯಂ ಸ್ನೇಹವಿರೇಚನಮ್ ।
ಬಸ್ತಯಃ ಶೋಧನೀಯಾಶ್ಚ ಪ್ರಾಶ್ಯಾಶ್ಚ ಲವಣೋತ್ತರಾಃ ||೫||

ಅರ್ಥ—ಪಕ್ವಾಶಯದಲ್ಲಿರುವ ವಾತವನ್ನು ನಿರ್ಹರಣಮಾಡಲು ತಿಲ್ವಕಘೃತ ಮೊದಲಾದ ಸ್ನೇಹಮಿಶ್ರವಾದ ವಿರೇಚನೌಷಧಿಗಳನ್ನೂ, ಶೋಧನದ್ರವ್ಯಗಳ ಕಷಾಯಕ್ಕೆ

ಆ ದ್ರವ್ಯಗಳ ಕಲ್ಕವನ್ನೂ ಮಿಶ್ರಮಾಡಿ ಬಸ್ತಿಪ್ರಯೋಗಗಳನ್ನೂ, ಲವಣಪ್ರಧಾನವಾಗಿರುವ ಸ್ನೇಹಗಳನ್ನೂ ಕಲ್ಯಾಣಕ ಲವಣ ಮೊದಲಾದುವುಗಳನ್ನೂ ಕುಡಿಸಬೇಕು.

ಟಿಪ್ಪಣಿ—ಗಯೀ ಎಂಬ ಆಚಾರ್ಯರು—ಪಿತ್ತಾಶಯ-ವಾತಾಶಯಗಳೆಂಬ ಭೇದದಿಂದ ಪಕ್ವಾಶಯವು ಎರಡುವಿಧವು; ಪಿತ್ತಾಶಯದಲ್ಲಿ ವಾತವು ಸೇರಿದರೆ ತಿಲ್ವಕ (ರೋಧ್ರ) ಸಿದ್ಧವಾದ ಸ್ನೇಹವನ್ನಾಗಲೀ ಹರಳೆಣ್ಣೆಯನ್ನಾಗಲೀ ಕುಡಿಸಿ ವಿರೇಚನ ಮಾಡಿಸಬೇಕು; ವಾತಾಶಯದಲ್ಲಿ ಮಲ, ಕಫ, ಪಿತ್ತಗಳಿಂದ ಆವರಿಸಿರುವ ವಾತದೋಷಗಳಿಗೆ ಕ್ರಮವಾಗಿ ಅಂದರೆ ಮಲದಿಂದ ವಾತವು ಆವರಿಸಲ್ಪಟ್ಟಿದ್ದರೆ ವಿದಾರಿಯ ಕಲ್ಕ ಸ್ನೇಹ-ಉಷ್ಣವಾಗಿರುವ ಕ್ಷಾರಮಿಶ್ರಮಾಡಿದ ಬಸ್ತಿದಾನವನ್ನೂ; ಕಫದಿಂದ ವಾಯುವು ಆವರಿಸಲ್ಪಟ್ಟಿದ್ದರೆ ಕ್ಷಾರವನ್ನು ಹೆಚ್ಚಾಗಿ ಸೇರಿಸಿರುವ ಬಿಸಿಯಾದ ಬಸ್ತಿದಾನವನ್ನೂ ಪಿತ್ತವು ವಾತವನ್ನಾವರಿಸಿದ್ದರೆ ತಿಗಡೆ ಮತ್ತು ನೆಲಗುಂಬಳ ಕಲ್ಕವನ್ನು ಗೋಮೂತ್ರದಲ್ಲಿ ಕದರಿ ಕ್ಷಾರಮಿಶ್ರ ಮಾಡಗೆ ಶೀತಲವಾದ ಬಸ್ತಿಯನ್ನು ಪ್ರಯೋಗ ಮಾಡಬೇಕು.

ಕಾರ್ಯೋ ಬಸ್ತಿಗತೇ ಚಾಪಿ ವಿಧಿರ್ಬಸ್ತಿವಿಶೋಧನಃ ।
ಶ್ರೋತ್ರಾದಿಷು ಪ್ರಕುಪಿತೇ ಕಾರ್ಯಶ್ಚಾನಿಲಹಾ ಕ್ರಮಃ ॥೬॥
ಸ್ನೇಹಾಭ್ಯಙ್ಗೋಪನಾಹಾಶ್ಚ ಮರ್ದನಾಲೇಪನಾನಿ ಚ ।
ತ್ವಙ್ಮಾಂಸಾಸೃಕ್‌ಸಿರಾಂ ಪ್ರಾಪ್ತೇ ಕುರ್ಯಾಚ್ಚಾಸೃಗ್ವಿಮೋಕ್ಷಣಮ್ ॥೭॥
ಸ್ನೇಹೋಪನಾಹಾಗ್ನಿ ಕರ್ಮಬನ್ಧನೋನ್ಮರ್ದನಾನಿ ಚ
ಸ್ನಾಯುಸನ್ಧ್ಯಸ್ಥಿಸಂಪ್ರಾಪ್ತೇ ಕುರ್ಯಾದ್ವಾಯಾವತನ್ದ್ರಿತಃ ॥೮॥

ಅರ್ಥ—ಮೂತ್ರಾಶಯ (ಬಸ್ತಿಯಲ್ಲಿ)ದಲ್ಲಿ ವಾತ ವೃದ್ಧಿಯಾದರೆ ಮೂತ್ರಾಘಾತ ಮತ್ತು ಅಶ್ಮರೀ ಚಿಕಿತ್ಸೆಯಲ್ಲಿ ಹೇಳಿರುವಂತೆ ಬಸ್ತಿಶೋಧನವನ್ನೂ ಕಿವಿ-ಚರ್ಮ-ಮೂಗು-ನಾಲಿಗೆ ಮತ್ತು ನೇತ್ರಗಳಲ್ಲಿ ವಾತಕೋಪವಾಗಿದ್ದರೆ ಸ್ನೇಹ-ಸ್ವೇದ-ಅಭ್ಯಂಗ ಮೊದಲಾದ ದೋಷದೂಷ್ಯಗಳಿಗೆ ವಿರುದ್ಧಗಳಾದ ಚಿಕಿತ್ಸೆಗಳನ್ನೂ ಮಾಡಬೇಕು. ಇಂದ್ರಿಯಗಳಿಗೆ ವಿರೋಧವುಂಟಾಗದ ಕಣ್ಣುಗಳಿಗೆ ಹಾಲುತುಪ್ಪಗಳಿಂದ ತರ್ಪಣವನ್ನೂ, ಕಿವಿಗೆ ತೈಲದಿಂದ ತರ್ಪಣವನ್ನೂ ಮಾಡಬೇಕು. ತ್ವಗ್ಗತವಾಯುವಿಗೆ ಮನಸ್ಸಿಗೆ ಹಿತವಾದ ಅನ್ನಪಾನಗಳನ್ನು ಕೊಡಿಸಬೇಕು; ರಕ್ತಗತವಾಯುವಿಗೆ ರಕ್ತಸ್ರಾವವನ್ನು ಮಾಡಿಸಬೇಕು; ಮಾಂಸ-ಸಿರೆಗಳಿಗೆ ವ್ಯಾಪಿಸಿರುವ ವಾತದೋಷದಲ್ಲಿ ರಕ್ತಮೋಕ್ಷಣವನ್ನು ಮಾಡಿಸಬೇಕು; ಸ್ನಾಯು-ಸನ್ಧಿ-ಅಸ್ಥಿಗಳಲ್ಲಿ ಅಡಗಿದ್ದರೆ ತಡಮಾಡದೆ ಸ್ನೇಹಪಾನ-ಅಭ್ಯಂಗ-ಉಪನಾಹ-ಅಗ್ನಿಕರ್ಮ-ಬನ್ಧನ-ಮರ್ದನ ಲೇಪನಗಳನ್ನು ಮಾಡಿಸಬೇಕು.

ಸಿರುದ್ಧೇಽಸ್ಥನಿ ವಾ ವಾಯೌ ಪಾಣಿಮನ್ಥೇನದಾಪಿತೇ
ನಾಡೀಂ ದತ್ವಾಸ್ಥನಿ ಭಿಷಕ್ ಚೂಷಯೇತ್ಪವನಂ ಬಲೀ ॥೯॥
ಶುಕ್ರಪ್ರಾಪ್ತೇಽನಿಲೇ ಕಾರ್ಯಂ ಶುಕ್ರದೋಷಚಿಕಿತ್ಸಿತಮ್

ಅರ್ಥ—ಮೂಳೆಯು ಒಳಗೆ ವಾಯುವು ಸೇರಿಕೊಂಡು ಹೊರಗೆ ಬರಲಾಗದೆ ತಡೆಯಲ್ಪಟ್ಟಿದ್ದರೆ ಬಲಶಾಲಿಯಾದ ವೈದ್ಯನು ಚರ್ಮಮಾಂಸಗಳನ್ನು ಕತ್ತರಿಸಿ "ಆರಾ" ಶಸ್ತ್ರದಿಂದ ಮೂಳೆಯನ್ನು ಕೊರೆದು ಕೈಗಳಿಂದ ಉಜ್ಜಿ ಎರಡುಕಡೆಯೂ ರಂಧ್ರವಿರುವ ನಳಿಗೆಯನ್ನು ಸಿಕ್ಕಿಸಿ ಮೂಳೆಯಲ್ಲಿರುವ ವಾಯುವನ್ನು ಬಾಯಿನಿಂದ ಹೀರಬೇಕು. ವಾತವು ಶುಕ್ರವನ್ನು ಆಶ್ರಯಿಸಿ ಪ್ರಕೋಪಗೊಂಡಿದ್ದರೆ ಶುಕ್ರಶೋಣಿತ ಶುದ್ಧಿವಿಧಾನಗಳನ್ನೂ ವಾಜೀಕರಣೋಕ್ತಗಳಾದ ಮತ್ತು ಮೂತ್ರದೋಷಹರಗಳಾದ ಚಿಕಿತ್ಸೆಗಳನ್ನೂ ಮಾಡಿಸಬೇಕು.

ಅವಗಾಹಕುಟೀಕರ್ಷೂಪ್ರಸ್ತರಾಭ್ಯಙ್ಗಬಸ್ತಿಭಿಃ ||೧೦||
ಜಯೇತ್ಸರ್ವಾಙ್ಗಜಂ ವಾತಂ ಸಿರಾಮೋಕ್ಷೈಶ್ಚ ಬುದ್ಧಿಮಾನ್
ಏಕಾಙ್ಗಜಂ ಚ ಮತಿಮಾನ್ ಶೃಙ್ಗ್ಯಶ್ಚಾವಸ್ಥಿತಂ ಜಯೇತ್ ||೧೧||
ಬಲಾಸಪಿತ್ತರಕ್ತೈಸ್ತು ಸಂಸೃಷ್ಟಮವಿರೋಧಿಭಿಃ

ಅರ್ಥ—ಬುದ್ಧಿಶಾಲಿಯಾದ ವೈದ್ಯನು ಸರ್ವಾಂಗ ವಾತರೋಗಪೀಡಿತನಿಗೆ ಅವಗಾಹ-ಕುಟೀ-ಕರ್ಷೂ-ಪ್ರಸ್ತರಸ್ವೇದಗಳಿಂದಲೂ ಅಭ್ಯಂಗ-ಬಸ್ತಿಕರ್ಮ-ಸಿರಾಮೋಕ್ಷಣಗಳಿಂದಲೂ, ಏಕಾಂಗವಾತರೋಗವನ್ನು ಶೃಂಗಗಳಿಂದಲೂ ಚಿಕಿತ್ಸೆ ಮಾಡಬೇಕು. ಏಕೆಂದರೆ ಸರ್ವಾಂಗವಾತವು ಶರೀರದಲ್ಲೆಲ್ಲಾ ಚಲಿಸುತ್ತಿರುತ್ತದೆ; ಏಕಾಂಗವಾತವಾದರೋ ಒಂದೇ ಕಡೆಯಲ್ಲಿ ಸೇರಿರುತ್ತದೆ, ಕಫ, ಪಿತ್ತ, ರಕ್ತಗಳೊಡನೆ ಮಿಶ್ರವಾಗಿರುವ ವಾತದೋಷಕ್ಕೆ ಪರಸ್ಪರ ವಿರೋಧವುಂಟಾಗದಂತೆ ಚಿಕಿತ್ಸೆಮಾಡಬೇಕು.

ಟಿಪ್ಪಣಿ—(1) ಅವಗಾಹಸ್ವೇದ—ಬಿಸಿಯಾಗಿರುವ ವಾತಹರ ಕಷಾಯವನ್ನು ತುಂಬಿದ ದೋಣಿಗಳಲ್ಲಿ ರೋಗಿಯನ್ನು ಕೂರಿಸಿ ಬೆವರಿಸುವ ವಿಧಾನವು (ದ್ರವ ಸ್ವೇದವು) (2) ಕುಟೀಸ್ವೇದ—೪ ಗೋಡೆಗಳ ಮಧ್ಯೆ ನೆಲದಮೇಲೆ ಬೆಂಕಿಯನ್ನಿಟ್ಟು ಚೆನ್ನಾಗಿ ಕಾದಮೇಲೆ ಬೆಂಕಿಯನ್ನು ತೆಗೆದುಹಾಕಿ ಹೊಗೆಯೂ ಬೆಂಕಿಯೂ ಇಲ್ಲದಂತೆ ಮಾಡಿ ವಾತಹರ ಕಷಾಯವನ್ನು ನೆಲದಮೇಲೆ ಸುರಿದು ರೋಗಿಗೆ ಹಬೆತಟ್ಟುವಂತೆ ಮಾಡುವ ಕ್ರಮವು. (ಊಷ್ಮಸ್ವೇದವೆನ್ನುತ್ತಾರೆ.)

(3) ಕರ್ಷೂಃ—ಒಬ್ಬ ಪುರುಷನಷ್ಟು ಉದ್ದವಿರುವಂತೆ ಅಗಲವಾಗಿ ಹಳ್ಳವನ್ನು ಮಾಡಿ ಬೆಂಕಿಹತ್ತಿಸಿ ಕಾದಮೇಲೆ ವಾತಹರ ದ್ರವ್ಯಗಳ ಕಷಾಯದಿಂದ ಬೆಂಕಿಯನ್ನು ಆರಿಸಿ ಅದರ ಮೇಲೆ ರೋಗಿಯನ್ನು ಮಲಗಿಸಿ ಬೆವರಿಸುವ ವಿಧಾನವು (ಇದೂ ಊಷ್ಮಸ್ವೇದ ವಿಶೇಷವು.)

(4) ಪ್ರಸ್ತರಸ್ವೇದ—ಭತ್ತವನ್ನು ನೀರಿನಿಂದ ಬೇಯಿಸಿ ನೆಲದಮೇಲೆ ಹರಡಿ ಅದರ ಮೇಲೆ ಹಿತವಾಗುವಂತೆ ರೋಗಿಯನ್ನು ಮಲಗಿಸಿ ಬೆವರಿಸುವ ವಿಧಾನವು.

ಇವುಗಳೆಲ್ಲಾ ರೋಗಿಯ ಸರ್ವಾಂಗಗಳಿಗೂ ಸ್ವೇದಕರ್ಮವನ್ನು ಮಾಡಿಸುವ ಕಾರಣ ಸರ್ವಾಂಗ ವಾತರೋಗದಲ್ಲಿ ಹಿತಕರಗಳಾಗುತ್ತವೆ.

(5) ಉಪನಾಹಸ್ವೇದವು ಶರೀರದ ಯಾವುದಾದರೊಂದು ಅವಯವಕ್ಕೆ ಮಾಡಲ್ಪಡುತ್ತದೆ. (6) ತಾಪಸ್ವೇದವು ರೂಕ್ಷತೆಯನ್ನುಂಟುಮಾಡುತ್ತದೆ. ಸರ್ವಾಂಗಗಳಲ್ಲೂ ವಾತಪ್ರಕೋಪವಾಗುವುದು. ಪ್ರಾಯಶಃ ಧಾತುಕ್ಷಯದಿಂದಲೇ ಆಗುತ್ತವೆಯಾದರೂ ಪ್ರಕುಪಿತವಾತವು ರಕ್ತವನ್ನೇ ಆಶ್ರಯಿಸಿರುವ ಕಾರಣ ರಕ್ತಮೋಕ್ಷಣವೂ ಯೋಗ್ಯವಾದ ಚಿಕಿತ್ಸೆಯು ; ಸ್ನೇಹಸ್ವೇದಾದಿಗಳಿಂದ ವಾತ ಶಮನವಾಗದಿದ್ದರೆ ರಕ್ತಮೋಕ್ಷಣವನ್ನು ಮಾಡಿಸಬೇಕು ; ಏಕಾಂಗ ವಾತರೋಗದಲ್ಲೂ ಮೇಲೆ ಹೇಳಿದ ಅವಗಾಹಾದಿ ಸ್ವೇದವಿಧಾನಗಳನ್ನು ಆಚರಿಸಿದ ಮೇಲೆ ಸ್ಥಾನದಿಂದ ಚಲಿತವಾದ ವಾತವನ್ನು ಶೃಂಗದಿಂದ ಹೊರಕ್ಕೆ ಹೀರಿಬಿಡಬೇಕು.

ಸುಪ್ತಿವಾತೇ ತ್ವಸೃಙ್ಮೋಕ್ಷಂ ಕುರ್ಯಾತ್ತು ಬಹುಶೋ ಭಿಷಕ್ ||೧೨||
ದಿಹ್ಯಾಚ್ಚ ಲವಣಾಗಾರಧೂಮೈಸ್ತೈಲಸಮನ್ವಿತೈಃ |
ಪಞ್ಚಮೂಲೀಶೃತಂ ಕ್ಷೀರಂ ಫಲಾಮ್ಲೋ ರಸ ಏವ ಚ ||೧೩||
ಸುಸ್ನಿಗ್ಧೋ ಧಾನ್ಯಯಷೋ ವಾ ಹಿತೋ ವಾತವಿಕಾರಿಣಾಮ್ |

ಅರ್ಥ—ವೈದ್ಯನು ಸುಪ್ತಿವಾತರೋಗಿಗೆ ಪದೇಪದೇ ರಕ್ತಮೋಕ್ಷಣವನ್ನು ಮಾಡಿ ಸೈಂಧವ-ಇಲ್ಲಣಗಳ ಪುಡಿಗೆ ತೈಲವನ್ನು ಮಿಶ್ರಮಾಡಿ ಲೇಪಿಸಬೇಕು ; ವಾತ ರೋಗಿಗಳಿಗೆ ಬಿಲ್ವಪಞ್ಚಮೂಲಗಳಿಂದ ತಯಾರಿಸಿದ ಹಾಲನ್ನೂ, ದಾಳಿಂಬೆ, ಮಾದಳದ ಹಣ್ಣುಗಳ ಹುಳಿರಸವನ್ನೂ ಸ್ನೇಹಮಿಶ್ರಮಾಡಿದ ಹುರುಳಿಕಟ್ಟು, ಮಾಂಸರಸಗಳನ್ನೂ ಕುಡಿಸಿದರೆ ಹಿತವಾಗುತ್ತದೆ.

ಕಾಕೋಲ್ಯಾದಿಃ ಸವಾತಘ್ನಃ ಸರ್ವಾಮ್ಲದ್ರವ್ಯಸಂಯುತಃ ||೧೪||
ಸಾನೂಪೋದಕಮಾಂಸಸ್ತು ಸರ್ವಸ್ನೇಹಸಮನ್ವಿತಃ |
ಸುಖೋಷ್ಣಃ ಸ್ಪಷ್ಟಲವಣಃ ಸಾಲ್ವಣಃ ಪರಿಕೀರ್ತಿತಃ ||೧೫||
ತೇನೋಪನಾಹಂ ಕುರ್ವೀತ ಸರ್ವದಾ ವಾತರೋಗಿಣಂ |

ಅರ್ಥ—ಕಾಕೋಲ್ಯಾದಿ ಗಣದ್ರವ್ಯಗಳು, ವಾತಹರಗಳಾದ ದಶಮೂಲಾದಿಗಳು ಧಾನ್ಯಾಮ್ಲ-ದಾಡಿಮಾಮ್ಲ ಮೊದಲಾದ ಸಕಲ ಹುಳಿಪದಾರ್ಥಗಳು, ಅನೂಪಮಾಂಸ-ಮತ್ಸ್ಯ ಮೊದಲಾದ ಉದಕಪ್ರಾಣಿ ಮಾಂಸ ಇವುಗಳನ್ನು ಸೇರಿಸಿ ಲವಣವು ಅಧಿಕವಾಗಿರುವಂತೆಯೂ ಬಿಸಿಯಾಗಿರುವಂತೆಯೂ ವಾತರೋಗಗಳಿಗೆ ಸರ್ವದಾ ಉಪನಾಹಸ್ವೇದವನ್ನು ಮಾಡಿಸಬೇಕು ; ಇದಕ್ಕೆ ಸಾಲ್ವಣಸ್ವೇದವೆನ್ನುತ್ತಾರೆ.

ಟಿಪ್ಪಣಿ—ವಾತಹರಗಳು—ಭದ್ರದಾರ್ವಾದಿಗಣ—ವಿದಾದಿಗಂಧಾದಿಗಣ ದ್ರವ್ಯಗಳು, ಅಮ್ಲದ್ರವ್ಯಗಳು-ಶುಕ್ತ-ಕಾಞ್ಜಿಕ-ಸುರಾ-ಸೌವೀರಕ-ದಧಿಮಸ್ತು ಮೊದಲಾದುವುಗಳು ; ಕೆಲವರು ದಾಡಿಮಾದಿಗಳೆನ್ನುತ್ತಾರೆ ; ಆನೂಪ—ಕೂಲಚರ ; ಔದಕೋಕ್ತ—ಪಾದಿ, ಮೀನು ಇವುಗಳು ; ಸರ್ವಸ್ನೇಹಗಳು ಅಂದರೆ ತುಪ-ಎಣ್ಣೆ-ವಸೆ-ಮಜ್ಜೆಗಳು ಉಪನಾಹ-ಬನ್ಧನ ಇವುಗಳು ; ಮಾಂಸವೂ, ಔಷಧಗಳೂ, ಸಮಪ್ರಮಾಣ

ದಲ್ಲಿರಬೇಕು ; ಹುಳಿರಸ ತೋರುವಷ್ಟು ಪ್ರಮಾಣದಲ್ಲಿ ಹುಳಿದ್ರವ್ಯಗಳನ್ನೂ ನಾಲ್ಕು ಸ್ನೇಹಗಳನ್ನೂ ಮಿಶ್ರಮಾಡಬೇಕು.

ಕುಞ್ಚಮಾನಂ ರುಜಾರ್ತಂ ವಾ ಗಾತ್ರಂ ಸ್ತಬ್ಧಮಥಾಪಿ ವಾ ||೧೬||
ಗಾಢಂ ಪಟ್ಟೈರ್ನಿಬಧ್ನೀಯಾತ್ ಕ್ಷೌಮಕಾರ್ಪಾಸಕೌರ್ಣಿಕೈಃ ।
ಬಿಡಾಲಕುಲೇನ್ದ್ರಾಣಾಂ ಚರ್ಮಗೋಣ್ಯಾಂ ಮೃಗಸ್ಯ ವಾ ||೧೭||
ಪ್ರವೇಶಯೇದ್ವಾ ಸ್ವಭ್ಯಕ್ತಂ ಸಾಲ್ವಣೇನೋಪನಾಹಿತಮ್ ।
ಸ್ಕನ್ಧವಕ್ಷಸ್ತ್ರಿಕಪ್ರಾಪ್ತಂ ವಾಯುಂ ಮನ್ಯಾಗತಂ ತಥಾ ||೧೮||
ವಮನಂ ಹನ್ತಿ ನಸ್ಯಂ ಚ ಕುಶಲೇನ ಪ್ರಯೋಚಿತಮ್ ।
ಶಿರೋಗತಂ ಶಿರೋಬಸ್ತಿರ್ಹನ್ತಿ ವಾ ಸೃಗ್ವಿಮೋಕ್ಷಣಮ್ ||೧೯||
ಸ್ನೇಹಮಾತ್ರಾ ಸಹಸ್ರಂ ತು ಧಾರಯೇತ್ತತ್ರ ಯೋಗತಃ ।
ಸರ್ವಾಙ್ಗಗತಮೇಕಾಙ್ಗಸ್ಥಿತಂ ವಾಽಪಿ ಸಮೀರಣಮ್ ||೨೦||
ರುಣದ್ಧಿ ಕೇವಲೋ ಬಸ್ತಿರ್ವಾಯುವೇಗವಿಪಾಚಲಃ ।

ಶಿರಾಗತ ವಾಯುವಿನಿಂದ ಸೆಳೆಯಲ್ಪಟ್ಟ (ಸಂಕುಚಿತವಾದ) ನೋವಿನಿಂದ ಬಿಗಿದು ಹಿಡಿದಿರುವ ದೇಹಭಾಗವನ್ನು ರೇಷ್ಮೆ–ಹತ್ತಿ–ಉಣ್ಣೆ (ಕುರಿಯ ತುಬಟ) ಪಟ್ಟೆಗಳಿಂದ ಬಿಗಿದು ಕಟ್ಟಬೇಕು ; ಸ್ನೇಹಗಳಿಂದ ಚೆನ್ನಾಗಿ ಲೇಪಿಸಿದ ಶರೀರಭಾಗವನ್ನು ಸಾಲ್ವಣ ಸ್ವೇದಕರ್ಮದಿಂದ ಬೆವರಿಸಿ ಬೆಕ್ಕು ಮುಂಗುಸಿ–ನೀರುಬೆಕ್ಕು ಅಥವಾ ಜಿಂಕೆಯ ಚರ್ಮ (ಕೃಷ್ಣಾಜಿನ) ದಿಂದ ಮಾಡಿದ ಚೀಲದೊಳಗೆ ನುಗ್ಗಿಸಿಡಬೇಕು ; ಜಾಣನಾದ ವೈದ್ಯನಿಂದ ಪ್ರಯೋಗಿಸಲ್ಪಟ್ಟ ವಮನೌಷಧದಿಂದಲೂ ಶಿರೋವಿರೇಚನದಿಂದಲೂ ಹೆಗಲು–ಎದೆ–ತ್ರಿಕಪ್ರದೇಶಗಳಲ್ಲಿ ಪ್ರಕೋಪಗೊಂಡ ವಾಯುವೂ ಮನ್ಯಾಗತ (ಹೆಕ್ಕತ್ತು) ವಾಯುವೂ ನಿವಾರಣೆಯಾಗುತ್ತವೆ ; ಶಿರೋಬಸ್ತಿ ಅಥವಾ ರಕ್ತಮೋಕ್ಷಣ ಕ್ರಿಯೆಯಿಂದ ತಲೆಗೇರಿದ ವಾಯುವೂ ನಿವಾರಣೆಯಾಗುತ್ತದೆ ; ಶಿರೋಬಸ್ತಿಯನ್ನು ಮಾಡುವಾಗ ತಲೆಯ ಮೇಲೆ ಸುಖೋಷ್ಣವಾಗಿ ಧಾರಾರೂಪವಾಗಿ ಸುರಿಯಲ್ಪಟ್ಟ ಘೃತವನ್ನು ಒಂದು ಸಾವಿರ ಮಾತ್ರಕಾಲದವರೆಗೂ ತಲೆಯ ಮೇಲಿಟ್ಟಿರಬೇಕು ; ಪರ್ವತವು ವಾಯುವಿನ ವೇಗವನ್ನು ತಡೆದು ಬಿಡುವಂತೆಯೇ ಶಿರೋಬಸ್ತಿಪ್ರಯೋಗದಿಂದ ಸರ್ವಾಂಗಗತವಾದ ಮತ್ತು ಏಕಾಂಗಗತವಾಯುವು ನಿವಾರಿಸಲ್ಪಡುತ್ತದೆ.

ಸ್ನೇಹಃ ಸ್ವೇದಸ್ತಥಾಭ್ಯಙ್ಗೋ ಬಸ್ತಿಃ ಸ್ನೇಹವಿರೇಚನಮ್ ||೨೧||
ಶಿರೋಬಸ್ತಿಃ ಶಿರಃಸ್ನೇಹೋ ಧೂಮಃ ಸ್ನೈಹಿಕ ಏವ ಚ ।
ಸುಖೋಷ್ಣಃ ಸ್ನೇಹಗಂಡೂಷೋ ನಶ್ಯಂ ಸ್ನೈಹಿಕಮೇವ ಚ ||೨೨||
ರಸಾಃ ಕ್ಷೀರಾಣಿ ಮಾಂಸಾನಿ ಸ್ನೆಹಾಃ ಸ್ನೇಹಾನ್ವಿತಂ ಚ ಯತ್ ।
ಭೋಜನಾನಿ ಫಲಾಮ್ಲಾನಿ ಸ್ನಿಗ್ಧಾನಿ ಲವಣಾನಿ ಚ ||೨೩||

ಸುಖೋಷ್ಣಾಶ್ಚ ಪರೀಷೇಕಾಸ್ತಥಾ ಸಂವಾಹನಾನಿ ಚ ।
ಕುಙ್ಕುಮಾಗರುಪತ್ರಾಣಿ ಕುಷ್ಠೈಲಾ ತಗರಾಣಿ ಚ ॥೨೪॥
ಕೌಶೇಯೌರ್ಣಿಕರೋಮಾಣಿ ಕಾರ್ಪಾಸಾನಿ ಗುರೂಣಿ ಚ
ನಿವಾತಾತಪಯುಕ್ತಾನಿ ತಥಾ ಗರ್ಭಗೃಹಾಣಿ ಚ ॥೨೫॥
ಮೃದ್ವೀಶಯ್ಯಾಗ್ನಿ ಸನ್ತಾಪೋ ಬ್ರಹ್ಮಚರ್ಯಂ ತಥೈವ ಚ
ಸಮಾಸೇನೈವಮಾದೀನಿ ಯೋಜ್ಯಾನ್ಯನಿಲರೋಗಿಷು ॥೨೬॥

ಸ್ನೇಹ, ಸ್ವೇದ, ಅಭ್ಯಂಗ, ಬಸ್ತಿಕರ್ಮ, ಸ್ನೇಹವಿರೇಚನ, ಶಿರೋಬಸ್ತಿ, ತಲೆಗೆ ಸ್ನೇಹ ಕರ್ಮ, ಧೂಮಪಾನ, ಸುಖೋಷ್ಣವಾಗಿ ಸ್ನೇಹದಿಂದ ಮಿಶ್ರಮಾಡಿದ ಗಂಡೂಷ, ಸ್ನೈಹಿಕ-ನಸ್ಯಕರ್ಮ, ಮಾಂಸರಸ-ಹಾಲು-ಮಾಂಸಗಳನ್ನು ಸ್ನೇಹಮಿಶ್ರ ಮಾಡಿ ಸೇವಿಸುವುದು ; ಮುರ್ಗಿನಹುಳಿಗೆ ಸ್ನೇಹ, ಲವಣಗಳನ್ನು ಮಿಶ್ರಮಾಡಿದ ಆಹಾರ, ಭೋಜನ ಇವು ಹಿತಕರಗಳು ; ದಾಳಿಂಬೆ, ಮಾದಳಗಳ ಹುಳಿಯನ್ನು ಸೇರಿಸಿ ಸುಖೋಷ್ಣ ಕಷಾಯಗಳಿಂದ ಸೇಚನೆ ಮಾಡಬೇಕು ; ಮೈಗೆ ಹಿತವಾಗುವಂತೆ ಕೈಗಳಿಂದ ಅಂಗಗಳನ್ನು ಒತ್ತಬೇಕು, ಕಾಲಿನಿಂದ ತುಳಿಯಬೇಕು ; ಕುಂಕುಮ ಕೇಸರಿ-ಅಗಿಲು -ಲವಂಗಪತ್ರೆ-ಚಂಗಲ್‌ಕೋಷ್ಠ-ಏಲಕ್ಕಿ-ಗ್ರಂಥಿಕತಗರ ಇವುಗಳ ಚೂರ್ಣವನ್ನು ಉದುರಿಸಿ ಸುವಾಸನೆಯನ್ನುಂಟುಮಾಡಿರುವ ರೇಷ್ಮೆಬಟ್ಟೆಗಳು ಕಂಬಳಿ-ಶಾಲು-ಹತ್ತಿಬಟ್ಟೆ ಇವುಗಳನ್ನು ಮೈ ಬೆಚ್ಚಗಾಗುವಂತೆ ಹೊದಿಸಬೇಕು ; ಬಿರುಗಾಳಿ ಮತ್ತು ಬಿಸಲಿನ ಝಳಗಳು ಇಲ್ಲದ ಮಧ್ಯಭಾಗದ ಮನೆಯಲ್ಲಿ ಮೃದುವಾದ ಹಾಸಿಗೆಯಲ್ಲಿ ಮಲಗಿಸಬೇಕು. ಬಟ್ಟೆಯನ್ನು ಮುದುರಿ ಬೆಂಕಿಯ ಹತ್ತಿರ ಹಿಡಿದು ಬೆಚ್ಚಗೆ ಮಾಡಿ ನೋಯುವ ಶರೀರದ ಭಾಗಗಳಿಗೆ ಶಾಖ ತಗುಲಿಸಬೇಕು ; ರೋಗಿಯು ಬ್ರಹ್ಮಚರ್ಯವನ್ನು ಅನುಸರಿಸಬೇಕು. (ಸ್ತ್ರೀಯರ ವಿಷಯಕವಾದ ಯೋಚನೆ-ಸ್ಪರ್ಶ-ಸಂಭಾಷಣೆಗಳನ್ನು ತ್ಯಜಿಸಬೇಕು.)

ತ್ರಿವೃದ್ದನ್ತೀಸುವರ್ಣಕ್ಷೀರೀಸಪ್ತಲಾಶಙ್ಖಿನೀ ತ್ರಿಫಲಾವಿಡಙ್ಗಾನಾಮಕ್ಷಸಮಾಃ ಕಲ್ಕಾ ಬಿಲ್ವಮಾತ್ರಃ ಕಲ್ಕಸ್ತಿಲ್ವಕಮೂಲಕಮ್ಪಿಲ್ಲಕಯೋಸ್ತ್ರಿಫಲಾರಸದಧಿಪಾತ್ರೇ ದ್ವೇ ದ್ವೇ ಘೃತಪಾತ್ರಮೇಕಂ ತದೈಕಧ್ಯಂ ಸಂಸೃಜ್ಯವಿಪಚೇತ್ ; ತಿಲ್ವಕಸರ್ಪಿರೇತತ್ ಸ್ನೇಹವಿರೇಚನಮುಪದಿಶನ್ತಿ ವಾತರೋಗೇಷು ತಿಲ್ವಕವಿಧಿರೇವಾಶೋಕರಮ್ಯಕಯೋರ್ದ್ರಷ್ಟವ್ಯಃ ॥೨೭॥

ತಿಗಡೆಬೇರು-ಜಾಪಾಳದ ತೊಗಟೆ-ಮರಳುಮ್ಮತ್ತ (ದತ್ತೂರಿ)-ಅರಿಸಿನ-ಹಾಲಿನ ಮುಂಡುಗಳ್ಳಿ-ಈಶ್ವರೀಬೇರು-ತ್ರಿಫಲೆ-ವಿಡಂಗ ಇವು ಪ್ರತಿಯೊಂದನ್ನೂ ಒಂದೊಂದು ಕರ್ಷದಷ್ಟು ಪ್ರಮಾಣದಂತೆ ಸೇರಿಸಿ ನೀರಿನಲ್ಲಿ ಅರೆದು ಕಲ್ಕಮಾಡಿ ರೋಧ್ರದ ಬೇರಿನ ತೊಗಟೆ, ಕಪಿಲೆಯ ಹಿಟ್ಟು ಇವೂ ಒಂದೊಂದು ಕರ್ಷಪ್ರಮಾಣ, ತ್ರಿಫಲಾಕಷಾಯ, ಮೊಸರು ಇವು ಪ್ರತಿಯೊಂದೂ ಎರಡೆರಡು ಆಢಕಗಳು (೪ ಅಳತೆಯ ಸೇರುಗಳು), ಹಸುವಿನ ತುಪ್ಪ ೨ ಅಳತೆಯ ಸೇರಿನಷ್ಟು ಇವೆಲ್ಲವನ್ನೂ ಸೇರಿಸಿ ಪಾಕಮಾಡಿದ ಘೃತಕ್ಕೆ

ತಿಲ್ವಕಘೃತವೆಂದು ಹೆಸರು. ಇದು ವಾತರೋಗಿಗಳಿಗೆ ಹಿತಕರ ಎಂದು ವೈದ್ಯರು ಅಭಿಪ್ರಾಯಪಡುತ್ತಾರೆ ; ತಿಲ್ವಕಘೃತವನ್ನು ತಯಾರಿಸುವಂತೆಯೇ ಅಶೋಕ, ರಮ್ಯಕ ಘೃತಗಳನ್ನೂ ತಯಾರಿಸಬೇಕು. (ರಮ್ಯಕ—ಪರ್ವತನಿಮ್ಬಃ, ಪಟೋಲ ಇತಿ ಸುಧಾ.)

ಟಿಪ್ಪಣಿ : ಕಷಾಯ-ಮೊಸರು-ತುಪ್ಪ ಇವೆಲ್ಲಾ ದ್ರವಗಳಾದ್ದರಿಂದ ಪ್ರತಿಯೊಂದೂ ಎರಡರಷ್ಟು ಪ್ರಮಾಣದಂತೆ ಇರಬೇಕೆಂದು ಅಭಿಪ್ರಾಯವು.

ತಿಲಪರಿಪೀಡನೋಪಕರಣಕಾಷ್ಠಾನ್ಯಾಹೃತ್ಯಾನಲ್ಪಕಾಲಂ ತೈಲಪರಿಪೀತಾನ್ಯಣೂನಿ ಖಣ್ಡಶಃ ಕಲ್ಪಯಿತ್ವಾವಕ್ಷುದ್ಯ ಮಹತಿ ಕಟಾಹೇ ಪಾನೀಯೇ ಆಪ್ಲಾವ್ಯ ಕ್ವಾಥಯೇತ್ ; ತತಃ ಸ್ನೇಹಮಮ್ಬುಪೃಷ್ಠಾದ್ಯದುದೇತಿ ತತ್ ಸರಕಪಾಣ್ಯೋರನ್ಯತರೇಣಾದಾಯ ವಾತಘ್ನೌಷಧಪ್ರತೀವಾಪಂ ಚ ಸ್ನೇಹಪಾಕಕಲ್ಪೇನ ವಿಪಚೇದೇತದಣುತೈಲಮುಪದಿಶನ್ತಿ ವಾತರೋಗೇಷು ; ಅಣುಭ್ಯಸ್ತೈಲದ್ರವ್ಯೇಭ್ಯೋ ನಿಷ್ಪಾದ್ಯತೇ ಇತ್ಯಣುತೈಲಮ್ ॥೨೮॥

ಅಣುತೈಲವಿಧಾನವು—ಚಕ್ರ, ದೊಣ್ಣೆಗಳು, ಅಗಲವಾದ ಆಳವಾದ ತಟ್ಟೆಗಳು ಇವೇ ಮೊದಲಾದ ಎಳ್ಳಿನಿಂದ ತೈಲವನ್ನು ಹಿಂಡಿಕೊಳ್ಳಲು ಅನುಕೂಲಿಸುವ ಸಲಕರಣ ಸಾಮಗ್ರಿಗಳನ್ನು ಸಿದ್ಧಮಾಡಿಕೊಂಡು ತೈಲವನ್ನು ತೆಗೆಯಬೇಕಾದ ದ್ರವ್ಯಗಳನ್ನು ತೈಲದಲ್ಲಿ ಬಹಳ ಹೊತ್ತು ನೆನೆಸಿ ಅತಿಸಣ್ಣವಾಗಿ ಕತ್ತರಿಸಿ ಕುಟ್ಟಿ, ತಿರುವಿ ದೊಡ್ಡ ಕೊಪ್ಪರಿಗೆಗೆ ತುಂಬಿ ನೀರು ಹಾಕಿ ಕದರಿ ಒಲೆಯ ಮೇಲಿಟ್ಟು ಕಾಯಿಸಬೇಕು ! ನೀರಿನ ಮೇಲೆ ತೇಲುವ ತೈಲವನ್ನು ಶ್ರಾವೆಯಿಂದಾಗಲೀ ಕೈಯ್ಯಿನಿಂದಾಗಲೀ ತೆಗೆದು ಬೇರೊಂದು ಪಾತ್ರೆಗೆ ಹಾಕಿ ವಾತಹರಗಳಾದ ದೇವದಾರ್ವಾದಿ ದ್ರವ್ಯಗಳ ಕಲ್ಕವನ್ನು ಸೇರಿಸಿ ತೈಲಪಾಕವಿಧಾನದಿಂದ ತಯಾರಿಸಿದರೆ ಅಣುತೈಲವೆಂದು ಹೆಸರು; ಇದನ್ನು ವಾತರೋಗಗಳಲ್ಲಿ ಪ್ರಯೋಗಿಸಬೇಕೆಂದು ವೈದ್ಯರು ಉಪದೇಶಮಾಡುತ್ತಾರೆ ; ಅತಿ ಸಣ್ಣವಾಗಿ ಕತ್ತರಿಸಿದ ತೈಲದ್ರವ್ಯಗಳಿಂದುಂಟಾಗುವುದರಿಂದ ಅಣುತೈಲವೆಂದು ವ್ಯವಹರಿಸುತ್ತಾರೆ.

ಟಿಪ್ಪಣಿ : ಸ್ನೇಹಪಾಕವಿಧಾನ—ಸ್ನೇಹದ್ರವ್ಯದ ನಾಲ್ಕನೆಯ ಒಂದುಪಾಲು ಕಲ್ಕವೂ, ಸ್ನೇಹದ ನಾಲ್ಕರಷ್ಟು ದ್ರವದ್ರವ್ಯಗಳೂ ಸೇರಿ ಪಾಕಮಾಡಲ್ಪಡಬೇಕು ; ದ್ರವಗಳೆಂದರೆ ತೈಲದೊಡನೆ ಸೇರಿಸತಕ್ಕ ಕಷಾಯ—ಮಾಂಸರಸ-ಹಾಲು-ಧಾನ್ಯದಕಟ್ಟು-ಮೊಸರಿನತಿಳಿ ಮೊದಲಾದುವೆಂದು ತಿಳಿಯಬೇಕು ; ಇವು ಪ್ರತಿಯೊಂದನ್ನೂ ಸ್ನೇಹಕ್ಕೆ ಸಮನಾದ ಪ್ರಮಾಣದಿಂದ ಸೇರಿಸಬೇಕು.

ಅಥ ಮಹಾಪಞ್ಚ ಮೂಲಕಾಷ್ಠೈರ್ಬಹುಭಿರವದಹ್ಯಾವನಿಪ್ರದೇಶಮುಷಿತಮುಷಿತಮೇಕರಾತ್ರಮುಪಶಾನ್ತೇಽಗ್ನಾವಪೋಹ್ಯ ಭಸ್ಮ ನಿವೃತ್ತಾಂ ಭೂಮಿಂ ವಿದಾರಿಗನ್ಧಾದಿ ಸಿದ್ಧೇನ ತೈಲಘಟಶತೇನ ತುಲ್ಯಪಯಸಾಭಿಷಿಚ್ಯೈಕರಾತ್ರಮವಸ್ಥಾಪ್ಯ ತತೋ ಯಾವತೀ ಮೃತ್ತಿಕಾ ಸ್ನಿಗ್ಧಾ ಸ್ಯಾತ್ ತಾಮಾದಾಯೋಷ್ಣೋದಕೇನ ಮಹತಿ ಕಟಾಹೇಽಭ್ಯಾಸಿಞ್ಚೇತ್ ; ತತ್ರ ಯತ್ತೈಲಮುಪತಿಷ್ಠೇತ್ ತತ್ಪಾಣಿಭ್ಯಾಂ ಪರ್ಯಾದಾಯ ಸ್ವನುಗುಪ್ತಂ ನಿದಧ್ಯಾತ್ ; ತತಸ್ತೈಲಂ ವಾತಹರೌಷಧಕ್ವಾಥಮಾಂಸರಸಕ್ಷೀರಾಮ್ಲಭಾಗಸಹಸ್ರೇಣ ಸಹಸ್ರಪಾಕಂ ವಿಪಚೇತ್

ಯಾವತಾಕಾಲೇನ ಶಕ್ನೋತಿ ಪಕ್ತುಂ, ಪ್ರತಿವಾಪಶ್ಚಾತ್ರ ಹೈಮವತಾ ದಕ್ಷಿಣಾಪಥಗಾಶ್ಚ ಗನ್ಧಾ ವಾತಘ್ನಾನಿ ಚ, ತಸ್ಮಿನ್ ಸಿದ್ಧ್ಯತಿ ಶಙ್ಖಾನಾಧ್ಮಾಪಯೇತ್ ದುನ್ದುಭಿಂ ಘಾತಯೇತ್ ಛತ್ರಂ ಸಾಧು ಧಾರಯೇದ್ವಾಲವ್ಯಜನೈಶ್ಚ ವೀಜಯೇತ್, ಬ್ರಾಹ್ಮಣಸಹಸ್ರಂ ಭೋಜಯೇತ್, ತತ್ ಸಾಧುಸಿದ್ಧಮವತಾರ್ಯ ಸೌವರ್ಣೇ ರಾಜತೇ ಮೃಣ್ಮಯೇ ವಾ ಪಾತ್ರೇ ಸ್ವನುಗುಪ್ತಂ ನಿದಧ್ಯಾತ್ ; ತದೇತತ್ ಸಹಸ್ರಪಾಕಮಪ್ರತಿವಾರವೀರ್ಯಂ ರಾಜಾರ್ಹಂ ತೈಲಂ ; ಏವಂ ಭಾಗ ಶತವಿಪಕ್ವಂ ಶತಪಾಕಮ್ ||೫||

ಸಹಸ್ರಪಾಕತೈಲವು—ಬಿಲ್ವ, ತಗ್ಗಿ, ಹೆಮ್ಮರ, ಶಿವನಿ, ಪಾದರಿಗಳೆಂಬ ಮಹಾ ಪಂಚಮೂಲಗಳ ಕಡ್ಡಿಗಳನ್ನು ನೆಲದ ಮೇಲೆ ಹರಡಿ ಬೆಂಕಿಯಿಂದ ಸುಟ್ಟು, ನೆಲವು ಕಪ್ಪಾಗಿ ಒಂದು ರಾತ್ರಿ ಕಳೆದು ಬೆಂಕಿಯು ಆರಿದಮೇಲೆ ಆ ಬೂದಿಯನ್ನೆಲ್ಲಾ ಹೊರಕ್ಕೆ ತೆಗೆದು ಶುದ್ಧಿಮಾಡಿದ ಭೂಮಿಯ ಮೇಲೆ ವಿದಾರಿಗಂಧಾದಿ ಲಘುಪಂಚಮೂಲಗಳಿಂದ ತಯಾರಿಸಿದ ೧೦೦ ದ್ರೋಣಗಳಷ್ಟು ತಿಲತೈಲಕ್ಕೆ ಸಮನಾಗಿ ಹಾಲನ್ನು ಬೆರೆಸಿ ಆ ಸುಟ್ಟ ನೆಲದ ಮೇಲೆ ಸುರಿದು ಒಂದು ರಾತ್ರಿ ಕಳೆದನಂತರ ತೈಲವನ್ನು ಹೀರಿ ಮೆತ್ತಗಾದ ಮಣ್ಣನ್ನು ಅಗೆದು ದೊಡ್ಡ ಕೊಪ್ಪರಿಗೆಯಲ್ಲಿ ಸುರಿದು ಅದರ ಮೇಲೆ ಬಿಸಿನೀರನ್ನು ಹಾಕಬೇಕು ; ನೀರಿನ ಮೇಲೆ ತೇಲುವ ಎಣ್ಣೆಯನ್ನು ಕೈಯ್ಯಿಂದ ಹಿಡಿದು ಬೇರೊಂದು ಪಾತ್ರೆಗೆ ತುಂಬಿ ಭದ್ರವಾಗಿಟ್ಟು ತೈಲಕ್ಕೆ ಭದ್ರದಾರ್ವಾದಿ ದ್ರವ್ಯಗಳ ಕಷಾಯ, ಮಾಂಸ ರಸ, ಹಾಲು, ಕಾಂಜಿಕ ಮೊದಲಾದ ಹುಳಿದ್ರವ್ಯಗಳು ಒಟ್ಟು ೧೦೦೦ ಭಾಗಗಳಷ್ಟನ್ನು ಸೇರಿಸಿ ೧೦೦೦ ಸಾರಿ ಪಾಕಮಾಡಿ ಗಂಧದ್ರವ್ಯಗಳ ಕಲ್ಕವನ್ನು ಪ್ರತಿವಾಪ ಮಾಡಬೇಕು. (ಪಾಕದೊಳಕ್ಕೆ ಸೇರಿಸಬೇಕು.) ಅವುಗಳು ಯಾವುವೆಂದರೆ—ಉತ್ತರಾಪಥದಲ್ಲಿ(ಹಿಮಾಲಯ) ದೊರೆಯುವ ಕಸ್ತೂರಿ, ಕಚೋರ, ಚಂಗಲ್ ಕೋಷ್ಠ, ಜಟಾಮಾಂಸಿ, ಸರಳ ದೇವದಾರು, ಸ್ನಿಗ್ಧದೇವದಾರು, ಮುರಾ, ದಾಲ್ಚಿನ್ನಿ ಮೊದಲಾದುವು. ದಕ್ಷಿಣಾಪಥದಲ್ಲಿ ದೊರೆಯುವ ಶ್ರೀಗಂಧ, ಜಾಜಿಕಾಯಿ, ತಕ್ಕೋಲ, ಲವಂಗ ಮೊದಲಾದುವು ; ಇವುಗಳೆಲ್ಲಾ ತೈಲದ ನಾಲ್ಕನೆಯ ಒಂದು ಭಾಗದಷ್ಟಿರಬೇಕು, ಮತ್ತು ವಾತಹರಗಣದಲ್ಲಿ ಹೇಳಿರುವ ಸಬ್ಬಸಿಗೆ, ಸೋಪು ಮೊದಲಾದುವು ಎಂದು ತಿಳಿಯಬೇಕು ; ಇವೆಲ್ಲವನ್ನೂ ತೈಲಪಾಕವಾಗುತ್ತಿರುವಾಗ ಅಚಿಂತ್ಯ ವೀರ್ಯವುಳ್ಳ ಕಾರಣ ಶಂಖವನ್ನು ಊದಿಸಬೇಕು ; ತಮಟೆಯನ್ನು ಬಡಿಸಬೇಕು ; ತೈಲದ ಮೇಲೆ ಛತ್ರಿಯನ್ನು ಹಿಡಿಸಿರಬೇಕು ; ಚಾಮರವನ್ನು ಬೀಸಬೇಕು ; ಸಹಸ್ರ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು ; ಈ ರೀತಿ ಸರಿಯಾಗಿ ತಯಾರಿಸಲ್ಪಟ್ಟ ತೈಲವನ್ನು ಕೆಳಕ್ಕೆ ಇಳಿಸಿ ಶೋಧಿಸಿಕೊಂಡು ಚಿನ್ನ, ಬೆಳ್ಳಿಪಾತ್ರೆಗಳಲ್ಲಾಗಲಿ ಪಳಗಿದ ಮಣ್ಣಿನ ಗುಡಾಣಗಳಲ್ಲಿ ಆಗಲಿ ತುಂಬಿ ಆ ಪಾತ್ರೆಗಳಿಗೆ ಬಾಯಿಕಟ್ಟುಗಳನ್ನು ಬಿಗಿದು ಭದ್ರವಾಗಿ ಶೇಖರಿಸಿಟ್ಟುಕೊಳ್ಳಬೇಕು. ಈ ತೈಲಕ್ಕೆ ಸಹಸ್ರಪಾಕತೈಲವೆಂದು ಹೆಸರು ; ಅತ್ಯಧಿಕವೀರ್ಯವುಳ್ಳದ್ದು.

ರಾಜರುಗಳು ಉಪಯೋಗಿಸಲು ಯೋಗ್ಯವಾದದ್ದು. ಹೀಗೆ ೧೦೦ ಭಾಗಗಳನ್ನು ಕಾಯಿಸಿದರೆ ಶತಪಾಕತೈಲವೆನ್ನುತ್ತಾರೆ. ಇದನ್ನು ಗಯಿಯು ಒಪ್ಪುವುದಿಲ್ಲ.

ಟಿಪ್ಪಣಿ : ಭೂಭಾಗದ ಮೇಲೆ ಬಿಲ್ವಾದಿ ಕಾಷ್ಠಗಳನ್ನು ಹರಡಿ ಚೆನ್ನಾಗಿ ಸುಟ್ಟ ಮೇಲೆ ಬೂದಿಯನ್ನೂ ಕೆಂಡವನ್ನೂ ಹೊರಕ್ಕೆ ತೆಗೆದುಹಾಕಿ ಬೆಂದ ಭೂಮಿಯ ಮೇಲೆ ನೀರನ್ನು ಚಿಮುಕಿಸಿದರೆ ಹಬೆಯೆದ್ದು ಭೂಮಿಯು ಚೂರುಚೂರಾಗಿ ಬಿರಿಯುತ್ತದೆ ; ಹೀಗೆ ಬಿರಿದು ರಾತ್ರಿಯಲ್ಲಿ ನೆಲವು ತಣ್ಣಗಾದ ಮೇಲೆ ವಿದಾರಿಗಂಧಾದಿಗಳಿಂದ ತಯಾರಿಸಿದ ತೈಲದೊಡನೆ ಹಾಲನ್ನು ಮಿಶ್ರಮಾಡಿ ಬಿರಿದ ನೆಲದ ಮೇಲೆ ಸುರಿಸಿ ನೆಲವು ತೈಲವನ್ನೂ ಹಾಲನ್ನೂ ಹೀರಿಕೊಂಡು ಮೆತ್ತಗಾಗುತ್ತದೆ ; ಆಗ ಮಣ್ಣನ್ನು ಕೆರೆದುಕೊಳ್ಳಲು ಸುಲಭವಾಗುತ್ತದೆ ; ಗಯದಾಸನ ಮತದಂತೆ ನೆಲದ ಮಣ್ಣಿನ ಮೇಲೆ ಬಿಸಿನೀರು ಹಾಕಿ ಮೇಲೆ ತೇಲುವ ತೈಲವನ್ನು ಶರಾವೆಯಿಂದಾಗಲೀ ಕೈಯ್ಯಿಂದಾಗಲೀ ಎತ್ತಿ ಬೇರೆ ಪಾತ್ರೆಗೆ ತುಂಬಿಡಬೇಕು ; ಈ ತೈಲದಷ್ಟೇ ಪ್ರಮಾಣದ ಕಷಾಯ, ಮಾಂಸರಸ, ಹಾಲು, ಕಾಂಜಿಕಗಳನ್ನು ಸೇರಿಸಿ ಪಾಕಮಾಡಬೇಕು ; ಅಂದರೆ ತೈಲದ ೪ರಷ್ಟು ದ್ರವ ದ್ರವ್ಯಗಳಿರಬೇಕೆಂದು ಅರ್ಥವಾಗುತ್ತದೆ. ಈ ರೀತಿ ೧೦೦೦ ಸಾರಿ ತೈಲವನ್ನು ಪಾಕ ಮಾಡಬೇಕು ; ತೈಲವು ಪ್ರತಿಪಾಕದಲ್ಲೂ ಕ್ಷೀಣವಾಗುತ್ತದೆಂದು ಕೆಲವರು ಹೇಳುತ್ತಾರೆ ಮತ್ತು ತೈಲದ ಪ್ರಮಾಣಕ್ಕಿಂತಲೂ ೧೦೦೦ ಪಾಲಿನಷ್ಟು ಕ್ವಾಥ, ಮಾಂಸರಸ, ಹಾಲು, ಕಾಂಜಿಕಾದಿಗಳನ್ನು ಸೇರಿಸಿ ಒಂದೇ ಸಾರಿ ಪಾಕಮಾಡಬೇಕೆಂದು ಜೆಜ್ಜಟಾಚಾರ್ಯರ ಮತವು ; ಪ್ರತಿಪಾಕದಲ್ಲೂ ಹಾಲನ್ನು ಸೇರಿಸುವ ಕಾರಣ ಕ್ಷೀಣಿಸಿದ ತೈಲಭಾಗವು ಸರಿಯಾಗುತ್ತದೆಂದು ಗಯದಾಸಾಚಾರ್ಯರಮತ. ಮತ್ತು ಪ್ರತಿಸಲವೂ ಪಾಕಮಾಡುವಾಗ ತೈಲಕ್ಕೆ ಸಮಭಾಗ ಕ್ವಾಥ, ಮಾಂಸರಸ, ಹಾಲು, ಕಾಂಜಿಕಗಳನ್ನು ಸೇರಿಸುತ್ತಾ ೧೦೦೦ ಸಾರಿ ಪಾಕಮಾಡಬೇಕೆಂದು ಅಭಿಪ್ರಾಯಪಡುತ್ತಾರೆ. ಮಹಾಚಾರ್ಯರುಗಳ ಮತಗಳು ಪ್ರಾಮಾಣಿಕಗಳಾದ ಕಾರಣ ಈ ಎರಡು ವಿಧಗಳಾದ ತೈಲಪಾಕ ಕ್ರಮಗಳಿಗೂ ನಾವು ಮನ್ನಣೆ ಕೊಡಬೇಕು.

ಗನ್ಧರ್ವಹಸ್ತಕಮುಷ್ಕಕನಕ್ತಮಾಲಾಟರೂಷಕಪೂತೀಕಾರಗ್ವಧಚಿತ್ರಕಾದೀನಾಂ ಪತ್ರಾಣಿ ಆರ್ದ್ರಾಣಿ ಲವಣೇನ ಸಹೋದೂಖಲೇಽವಕ್ಷುದ್ಯಸ್ನೇಹಘಟೇ ಪ್ರಕ್ಷಿಪ್ಯಾವಲಿಪ್ಯ ಗೋಶಕೃದ್ಭಿರ್ದಾಹಯೇತ್ ; ಏತತ್ಪತ್ರಲವಣಮುಪದಿಶನ್ತಿ ವಾತರೋಗೇಷು—ಇತಿ ಪತ್ರಲವಣಮ್ ॥೩೦॥

ಹರಳೆಲೆ, ಬಿಳಿಬೂರಗ (ದೂದಿ), ಹೊಂಗೆ, ಆಡುಸೋಗೆ, ತವಸ–ಕಕ್ಕೆ, ಚಿತ್ರಮೂಲ ವೊದಲಾದುವುಗಳ ಹಸಿಯ ಸೊಪ್ಪನ್ನು ಸೈಂಧವಲವಣದೊಡನೆ ಒರಳಿಗೆ ಹಾಕಿ ನುಣ್ಣಗೆ ಅರೆದು ತುಪ್ಪದ ಮಡಕೆಯ (ಪಳಗಿದ ಮಡಕೆ) ಒಳಗಡೆ ಲೇಪಿಸಿ ಮಡಕೆಯ ಬಾಯಿಗೆ ಮುಚ್ಚಳ ಮುಚ್ಚಿ ಚೀರುಮಣ್ಣು ಮಾಡಿ ಬೆರಣಿಯಲ್ಲಿ ಹೂತಿಟ್ಟು ಬೆಂಕಿಯನ್ನು ಹಾಕಿ, ಬೆರಣಿಯು ಉರಿದು ಬೂದಿಯಾದಮೇಲೆ ಮಡಕೆಯನ್ನು ಹೊರಕ್ಕೆ ತೆಗೆದು

ಬಾಯ ಮುಚ್ಚಳವನ್ನು ತೆಗೆದು ಮಡಕೆಯೊಳಗಿರುವ ಲವಣವನ್ನು ಪುಡಿಮಾಡಿಟ್ಟು ಕೊಂಡು ವಾತರೋಗಗಳಲ್ಲಿ ಪ್ರಯೋಗಿಸಬೇಕೆಂದು ಹೇಳುತ್ತಾರೆ. ಇದು ಪತ್ರಲವಣದ ವಿಧಾನವು

ಏವಂ ಸ್ನುಹೀಕಾಣ್ಡವಾರ್ತಾಕುಶಿಗ್ರುಲವಣಾನಿ ಸಂಕ್ಷುದ್ಯ ಘಟಂ ಪೂರಯಿತ್ವಾ ಸರ್ಪಿಸ್ತೈಲವಸಾಮಜ್ಜಭಿಃ ಪ್ರಕ್ಷಿಪ್ಯಾವಲಿಪ್ಯ ಗೋಶಕೃದ್ಭಿರ್ದಾಹಯೇತ್ ; ಏತತ್ ಸ್ನೇಹಲವಣಮುಪದಿಶನ್ತಿ ವಾತರೋಗೇಷು । ಇತಿ ಕಾಣ್ಡಲವಣಮ್ ||೩೧||

ಹೀಗೆಯೇ ಮುಂಡುಗಳ್ಳಿಯ ಬೇರು, ಬದನೆಯ ಬೇರು, ನುಗ್ಗೆಯ ತೊಗಟೆ, ಸೈಂಧವಲವಣಗಳನ್ನು ಪುಡಿಮಾಡಿ ಪಳಗಿದ ಮಡಕೆಗೆ ತುಂಬಿ ತುಪ್ಪ, ಎಣ್ಣೆ, ವಸೆ, ಮಜ್ಜೆಗಳನ್ನು ಸೇರಿಸಿ ಮಡಕೆಯ ಬಾಯಿಗೆ ಮುಚ್ಚಳವನ್ನು ಮುಚ್ಚಿ ಚೀರುಮಾಡಿ ಬೆರಣಿಯಲ್ಲಿ ಹೂತು ಬೆಂಕಿಹತ್ತಿಸಿ, ಚೆನ್ನಾಗಿ ಬೆಂದು ಬೂದಿಯಾಗಿ ತಣ್ಣಗಾದನಂತರ ಹೊರಕ್ಕೆ ತೆಗೆದು ಮಡಕೆಯ ಬಾಯನ್ನು ಬಿಚ್ಚಿ, ಒಳಗಿರುವ ಲವಣವನ್ನು ಶೇಖರಿಸಿಟ್ಟುಕೊಂಡು ವಾತರೋಗಿಗಳಿಗೆ ಪ್ರಯೋಗಿಸಬೇಕು. ದ್ರವ್ಯಗಳಿಗೆ ಸಮಭಾಗ ಲವಣವನ್ನೂ ೪ ವಿಧ ಸ್ನೇಹಗಳನ್ನೂ ಒಟ್ಟುಗೂಡಿಸಬೇಕು.

ಗಂಡೀರಪಲಾಶಕುಟಜಬಿಲ್ವಾರ್ಕಸ್ನುಹ್ಯಪಾಮಾರ್ಗ ಪಾಟಲಪಾರಿಭದ್ರಕನಾದೇಯಿಾಕೃಷ್ಣಗನ್ಧಾನೀಪನಿರ್ದಹನ್ಯಟರೂಷಕನಕ್ತಮಾಲಕಪೂತಿಕ ಬೃಹತೀಕಣ್ಟಕಾರಿಕಾಭಲ್ಲಾತಕೇಙ್ಗುದೀವೈಜಯನ್ತೀಕದಲೀಬಾಪ್ಪದ್ವಯೇ ಕ್ಷುರಕೇನ್ದ್ರಯವಾರುಣೀಶ್ವೇತಮೋಕ್ಷಕಾಶೋಕಾ ಇತ್ಯೇವಂ ವರ್ಗಂ ಸಮೂಲಪತ್ರಶಾಕಮಾರ್ದ್ರಮಾಹೃತ್ಯ ಲವಣೇನ ಸಹ ಸಂಸೃಷ್ಟಂ ಪೂರ್ವವತ್ ದಗ್ಧ್ವಾ ಕ್ಷಾರಕಲ್ಪೇನ ಪರಿಸ್ರಾವ್ಯ ವಿಪಚೇತ್ ; ಪ್ರತಿವಾಪಶ್ಚಾತ್ರ ಹಿಂಗ್ವಾದಿಭಿಃ ಪಿಪ್ಪಲ್ಯಾದಿಭಿರ್ವಾ । ಇತ್ಯೇತತ್ ಕಲ್ಯಾಣಕಲವಣಂ ವಾತರೋಗೇಷು ಗುಲ್ಮಪ್ಲೀಹಾಗ್ನಿಸಙ್ಗಾಜೀರ್ಣಾರ್ಶೋಽರೋಚಕಾರ್ತಾನಾಂ ಕಾಸಾದಿಭಿರುಪದ್ರುತಾನಾಂ ಚೋಪದಿಶನ್ತಿ ಪಾನಭೋಜನೇಷ್ವಿತಿ ||೩೨||

ಭವತಿ ಚಾತ್ರ

ವಿಷ್ಯನ್ದನಾದುಷ್ಣಭಾವಾದ್ದೋಷಾಣಾಂ ಚ ವಿಪಾಚನಾತ್ ।
ಸಂಸ್ಕಾರಪಾಚನಾಚ್ಛೇದಂ ವಾತರೋಗೇಷು ಶಸ್ಯತೇ ||೩೩||

ಮುಂಡುಗಳ್ಳಿಬೇರು–ಕಚೋರ (ಕರ್ಪೂರಶುಂಠಿ)–ಕೊಡಸಿಗೆತೊಗಟೆ-ಬಿಲ್ವಪತ್ರೆಯ ಬೇರು-ಎಕ್ಕದ ಬೇರು–ಮುಂಡುಗಳ್ಳಿ–ಉತ್ತರಣೆ–ಪಾದರಿ–ಬೇವು–ನೀರಲ್ಲಿ ಬೆಳೆಯುವ ನೆರಳೆ–ನುಗ್ಗೆ–ದೊಡ್ಡ ಈಚಲು–ಕೊರಟಿಗೆಹಂಬು-ಆಡುಸೋಗೆ–ಹೊಂಗೆ–ತವಸ-ಹೆಗ್ಗುಳ್ಳ-ನೆಲಗುಳ್ಳ–ಗೇರು–ಇಂಗಳ–ಥಗ್ಗಿ–ಬಾಳೆ–ಹಿಂಗು-ನಾಡೀಹಿಂಗು–ಕೊಳವಳಿಕೆ-ಹಾವುಮೆಕ್ಕೆ–ಬಿಳಿ ಮುಳ್ಳುಳ್ಳ ಮುತ್ತುಗ–ಅಶೋಕ (ಇಬ್ಬಡೆ) ಇವುಗಳ ಹಸಿಯ ಬೇರು–ಎಲೆಗಳು-ಕೊಂಬೆ ಇವುಗಳನ್ನು ಕತ್ತರಿಸಿಯೂ ಅವೆಲ್ಲವುಗಳಿಗೂ ಸಮವಾಗಿ ಸೈಂಧವಲವಣವನ್ನೂ ಪಳಗಿದ ಮಡಕೆಗೆ ತುಂಬಿ ಬಾಯಿಗೆ ಶರಾವೆಯನ್ನಿಟ್ಟು ಚೀರುಮಣ್ಣುಮಾಡಿ ಕಾಡುಬೆರಣಿಯ ರಾಶಿಯಲ್ಲಿ ಹೂಳಿಟ್ಟು ಬೆಂಕಿಯನ್ನು ಹತ್ತಿಸಬೇಕು. ಬೆರಣಿಯು ಸುಟ್ಟು ಬೂದಿಯಾಗಿ

ತಣ್ಣಗಾದ ಮೇಲೆ ಮಡಕೆಯನ್ನು ತೆಗೆದು ಬಾಯನ್ನು ಬಿಚ್ಚಿ ಲವಣವನ್ನೂ ಭಸ್ಮವನ್ನೂ ಬೇರೆಬೇರೆ ಮಾಡಿಟ್ಟುಕೊಂಡು ಭಸ್ಮವನ್ನು ನೀರಿನಲ್ಲಿ ಕದರಿ ಶೋಧಿಸಿಕೊಂಡು ಆ ನೀರಿಗೆ ಈ ಸೈಂಧವಲವಣವನ್ನೂ ಅದರ ಕಾಲುಭಾಗದಷ್ಟು ಹಿಂಗ್ವಾದಿಗಳನ್ನೂ ಪಿಪಲ್ಯಾದಿಗಳನ್ನೂ ಪ್ರತೀವಾಪಮಾಡಿ (ಮಿಶ್ರಮಾಡಿ) ಕ್ಷಾರಪಾಕದಂತೆ ಮಂದಾಗ್ನಿಯಿಂದ ಕುದಿಸಬೇಕು ; ಈ ರೀತಿಯಲ್ಲಿ ತಯಾರಿಸಿದರೆ **ಕಲ್ಯಾಣ ಕಲವಣ**ವೆಂದು ಹೆಸರು ; ಇದನ್ನು ವಾತರೋಗಗಳಲ್ಲಿ ಪ್ರಯೋಗಿಸಬೇಕು ; ಗುಲ್ಮ-ಪ್ಲೀಹವೃದ್ಧಿ-ಅಗ್ನಿಮಾಂದ್ಯ-ಅಜೀರ್ಣ-ಅರ್ಶೋರೋಗ-ಅರೋಚಕತೆ-ಕಾಸ ಮೊದಲಾದುವುಗಳಿಂದ ಪೀಡಿತರು ಪಾನ ಮತ್ತು ಭೋಜನಗಳೊಡನೆ ಇದನ್ನು ಮಿಶ್ರಮಾಡಿ ಸೇವಿಸಬೇಕು. ಈ ಲವಣ ಪ್ರಯೋಗದಿಂದ ದೋಷಸ್ರಾವವೂ ಉಷ್ಣಗುಣದಿಂದ ದೋಷಪಾಕವೂ ಆಗುತ್ತದೆ ; ಸಂಸ್ಕಾರದಿಂದಲೂ ಪಾಕದಿಂದಲೂ ವಾತರೋಗಗಳಲ್ಲಿ ಉತ್ತಮ ಫಲಪ್ರದವು.

ಟಿಪ್ಪಣಿ : **ಅಜೀರ್ಣ**—ಅಲಸಕ, ವಿಷೂಚಿಕೆಗಳು ; **ಕಾಸ**—ಶ್ವಾಸ, ಹಿಕ್ಕಾ ಮೊದಲಾದ ಕಫವಾತರೋಗಗಳು ; **ಪ್ರತೀವಾಪ**—ಹಿಂಗ್ವಾದಿಗಳಿಂದೂ, ಪಿಪ್ಪಲ್ಯಾದಿಗಳಿಂದೂ, ಇವೆರಡೂ ಮಿಶ್ರಮಾಡಿದವುಗಳಿಂದೂ ಬೇರೆ ಬೇರೆ ಮತಾಂತರಗಳಿವೆ.

ಇತಿ ಶ್ರೀಸುಶ್ರುತಸಂಹಿತಾಯಾಂ ಚಿಕಿತ್ಸಾಸ್ಥಾನೇ ವಾತವ್ಯಾಧಿಚಿಕಿತ್ಸಾನಾಮಕ ಚತುರ್ಥಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ ॥

ಪಞ್ಚಮೋಽಧ್ಯಾಯಃ

ಅಥಾತೋ ಮಹಾವಾತವ್ಯಾಧಿಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿ ದಂತೆಯೇ ಮಹಾವಾತವ್ಯಾಧಿಚಿಕಿತ್ಸೆಯನ್ನು ವಿವರಿಸುತ್ತೇವೆ.

ದ್ವಿವಿಧಂ ವಾತಶೋಣಿತಮುತ್ತಾನಮವಗಾಢಂ ಚೇತ್ಯೇಕೇಭಾಷನ್ತೇ ; ತತ್ತು ನ ಸಮ್ಯಕ್, ಕುಷ್ಠವದುತ್ತಾನಂ ಭೂತ್ವಾ ಕಾಲಾನ್ತರೇಣಾವಗಾಢೀಭವತಿ, ತಸ್ಮಾನ್ನ ದ್ವಿವಿಧಮ್ ||೩||

ತತ್ರ ಬಲವದ್ವಿಗ್ರಹಾದಿಭಿಃ ಪ್ರಕುಪಿತಸ್ಯ ವಾಯೋರ್ಗುರೂಷ್ಣಾಧ್ಯಶನಶೀಲಸ್ಯ ಪ್ರದುಷ್ಟಂ ಶೋಣಿತಂ ಮಾರ್ಗಮಾವೃತ್ಯ ವಾತೇನ ಸಹೈಕೀಭೂತಂ ಯುಗಪದ್ವಾತರಕ್ತನಿಮಿತ್ತಾಂ ವೇದನಾಂ ಜನಯತೀತಿ ವಾತರಕ್ತಮ್ ; ತತ್ತು ಪೂರ್ವಂ ಹಸ್ತಪಾದಯೋರವಸ್ಥಾನಂ ಕೃತ್ವಾ ಪಶ್ಚಾದ್ದೇಹಂ ವ್ಯಾಪ್ನೋತಿ । ತಸ್ಯ ಪೂರ್ವರೂಪಾಣಿ ತೋದದಾಹಕಣ್ಡೂಶೋಫಸ್ತಮ್ಭತ್ವಕ್ಪಾರುಷ್ಯಸಿರಾಸ್ನಾಯುಧಮನಿಸ್ಪನ್ದನಸಕ್ಥಿದೌರ್ಬಲ್ಯಾನಿ ಶ್ಯಾವರಕ್ತಮಣ್ಡಲೋತ್ಪತ್ತಿಶ್ಚ ಕಸ್ಮಾತ್ಪಾಣಿಪಾದತಲಾಙ್ಗುಲಿಗುಲ್ಫಮಣಿಬನ್ಧಪ್ರಭೃತಿಷು ।ತತ್ರ ಅಪ್ರತಿಕಾರಿಣೋಽಪಚಾರಿಣಶ್ಚ ರೋಗೋ ವ್ಯಕ್ತಃ, ತಸ್ಯ ಲಕ್ಷಣಮುಕ್ತಮ್ ; ತತ್ರಾಪ್ರತೀಕಾರಿಣೋ ವೈಕಲ್ಯಂ ಭವತಿ ||೪||

ಭವತಿ ಚಾತ್ರ

ಪ್ರಾಯಶಃ ಸುಕುಮಾರಾಣಾಂ ಮಿಥ್ಯಾಹಾರವಿಹಾರಿಣಾಮ್
ಸ್ಥೂಲಾನಾಂ ಸುಖಿನಾಂ ಚಾಪಿ ವಾತರಕ್ತಂ ಪ್ರಕುಪ್ಯತಿ ||೫||

ವಾತರಕ್ತವು ಬಹಿರಾಶ್ರಯ-ಅಂತರಾಶ್ರಯಭೇದಗಳಿಂದ ಎರಡು ವಿಧಗಳಾಗಿದೆ ಎಂದು ಕೆಲವು ವೈದ್ಯರು ಹೇಳುತ್ತಾರೆ ; ಚರ್ಮವನ್ನೂ ಮಾಂಸವನ್ನೂ ಆಶ್ರಯಿಸಿರುವುದು ಬಾಹ್ಯವೆಂದೂ ಇತರ ಧಾತುಗಳನ್ನಾಶ್ರಯಿಸಿರುವುದು ಗಂಭೀರವೆಂದೂ ತಿಳಿಯಬೇಕು ; ಹಿಂದಿನ ಅಧ್ಯಾಯದಲ್ಲಿ ಕ್ಷುದ್ರವಾತರೋಗಗಳ ಚಿಕಿತ್ಸೆಯನ್ನು ಹೇಳಿ ದುಃಸಾಧ್ಯಗಳಾದ್ದರಿಂದ ಅಸಾಧ್ಯಗಳೆಂದೂ ವಾತಪ್ರಾಬಲ್ಯವಾದ ಕಾರಣ ವಾತರಕ್ತ ಎಂಬ ಹೆಸರುಳ್ಳ ರೋಗಗಳನ್ನು ಈ ಅಧ್ಯಾಯದಲ್ಲಿ ವಿವರಿಸುತ್ತಾರೆ ; ವಾತರಕ್ತವು ಎರಡು ವಿಧವೆಂಬುದು ಸರಿಯಲ್ಲ ; ಕುಷ್ಠರೋಗದಂತೆ ಮೊದಲು ಚರ್ಮಮಾಂಸಗಳನ್ನಾಶ್ರಯಿಸಿ ಉತ್ತಾನವೆಂಬ ಹೆಸರುಂಟಾಗಿ ಕಾಲಕಳೆದಮೇಲೆ ಆಳವಾಗಿ ಹರಡಿ ಗಂಭೀರವೆಂದು ಕರೆಯಲ್ಪಡುತ್ತದೆಯಾಗಿ ಒಂದೇ ವಿಧವು. ಅವುಗಳಲ್ಲಿ ಬಲಿಷ್ಠರೊಡನೆ ಕುಸ್ತಿ ಮಾಡುವುದು ಮೊದಲಾದ ಕಾರಣಗಳಿಂದ ವಾತಪ್ರಕೋಪವುಂಟಾಗಿರುವ ಪುರುಷನಿಗೆ ದುಷ್ಟರಕ್ತ

ದಿಂದ ಮಾರ್ಗರೋಧವುಂಟಾಗಿ ವಾತವೂ ರಕ್ತವೂ ಪರಸ್ಪರ ಸೇರಿಕೊಂಡು ಏಕಕಾಲದಲ್ಲಿ ಕುಪಿತಗಳಾದ ವಾತರಕ್ತಗಳಿಂದ ವೇದನೆಗಳು ಉಂಟಾಗುತ್ತವೆಯಾಗಿ ವಾತರಕ್ತವೆಂಬ ಹೆಸರುಂಟಾಗಿದೆ ; ಹೀಗೆ ದುಷ್ಟವಾತರಕ್ತಗಳು ಮೊದಲು ಕೈಕಾಲುಗಳಲ್ಲಿ ಸೇರಿಕೊಂಡು ಕ್ರಮಕ್ರಮವಾಗಿ ದೇಹವನ್ನೆಲ್ಲಾ ಆಕ್ರಮಿಸುತ್ತವೆ ; ಇದರ ಪೂರ್ವರೂಪಗಳು—ಚುಚ್ಚು ವುದು- ಉರಿಯುವುದು, ನವೆ-ಶೋಫ, ಅಸ್ಥಿಸಂಧಿಗಳಲ್ಲಿ ಚಲನೆತಪ್ಪುವಿಕೆ, ಚರ್ಮ ಬಿರು ಸಾಗುವುದು, ಸಿರೆಗಳು–ಸ್ನಾಯುಗಳು–ಧಮನಿಗಳು ಅದುರುವುದು, ತೊಡೆಯಲ್ಲಿ ಬಲ ಹಾನಿ, ಕಪ್ಪು-ರಕ್ತಬಣ್ಣದ ಗುಂಡಾದ ವ್ರಣಗಳು ಹಠಾತ್ತಾಗಿ ಅಂಗೈ ಅಂಗಾಲುಗಳಲ್ಲೂ ಬೆರಳುಗಳಲ್ಲೂ ಕುಣಿಕಾಲು (ಗುಲ್ಫಸಂಧಿ), ಕೈಕಂಕಣ ಮೊದಲಾದುವುಗಳಲ್ಲುಂಟಾಗು ತ್ತವೆ ; ಪೂರ್ವರೂಪದಲ್ಲಿ ಇವುಗಳಿಗೆ ಚಿಕಿತ್ಸೆಮಾಡದೆ ಅಪಥ್ಯಸೇವನೆಮಾಡುತ್ತಾ ಉದಾ ಸೀನ ಮಾಡಿದರೆ ರೋಗವು ವ್ಯಕ್ತಲಕ್ಷಣಗಳನ್ನುಂಟುಮಾಡುತ್ತದೆ ; ಈ ರೋಗದ ಲಕ್ಷಣ ಗಳನ್ನು ತಿಳಿಸಿರುತ್ತದೆ. ಈಗಲೂ ಉದಾಸೀನತೆ ಮಾಡಿದರೆ ಅಂಗವಿಕಾರಗಳುಂಟಾಗು ತ್ತವೆ ಮತ್ತು ಅಸಾಧ್ಯವಾಗುತ್ತದೆಂದು ತಿಳಿಯಬೇಕು ; ಈ ವಿಚಾರದಲ್ಲಿ ಉದಾಹೃತವಾಗಿ ರುವ ಶ್ಲೋಕದ ಅರ್ಥವೇನೆಂದರೆ—ಸುಕುಮಾರರಿಗೂ, ಮಿಥ್ಯಾಹಾರವಿಹಾರ ಮಾಡುವ ವರಿಗೂ, ಸ್ಥೂಲದೇಹವುಳ್ಳವರಿಗೂ, ಸುಖಜೀವನಮಾಡುವವರಿಗೂ (ಕಷ್ಟಪಡದೆ ಕುಳಿತ ಸ್ಥಳದಲ್ಲಿರುವವರು) ವಾತರಕ್ತವು ಪ್ರಕೋಪಿಸುತ್ತದೆ. ವ್ಯಾಯಾಮ ಮಾಡುವವರಿಗೂ ಮಿಥ್ಯಾಹಾರವಿಹಾರಿಗಳಿಗೂ ದೋಷಪ್ರಕೋಪವುಂಟಾಗುವುದಿಲ್ಲ, ಅಥವಾ ಸ್ವಲ್ಪ ಪ್ರಕೋಪವಾದರೂ ರೋಗವುಂಟಾಗುವುದಿಲ್ಲವೆಂದು ತಿಳಿಯಬೇಕು.

ತತ್ರ ಪ್ರಾಣಮಾಂಸಕ್ಷಯಪಿಪಾಸಾಜ್ವರಮೂರ್ಛಾಶ್ವಾಸಕಾಸಸ್ತಮ್ಭಾರೋಚಕಾವಿಪಾಕ ವಿಸರಣ ಸಂಕೋಚನೈರನುಪದ್ರುತಂ ಬಲವನ್ತಮಾತ್ಮವನ್ತಮುಪಕರಣವನ್ತಂ ಚೋಪಕ್ರಮೇತ್ ||೬||

ಅವರಲ್ಲಿ ಪ್ರಾಣ ಮತ್ತು ಮಾಂಸಗಳು ಕ್ಷೀಣವಾಗಿ ನೀರಡಿಕೆ, ಜ್ವರ, ಜ್ಞಾನ ತಪ್ಪುವುದು, ಉಬ್ಬಸ, ಕೆಮ್ಮು ಇರುತ್ತವೆ. ಚಲನೆಯಿಲ್ಲದ ಶರೀರಾವಯವಗಳುಳ್ಳ ಅರುಚಿ, ಆಹಾರ ಪಾಕವಾಗದಿರುವುದು, ಅತಿಸಾರ, ಅಂಗಗಳು ಸೇದಿರುವುದು ಇವುಗಳಿಂದ ಪೀಡಿತನಾಗದ ಬಲಶಾಲಿಯಾಗಿಯೂ ಜಿತೇಂದ್ರಿಯನಾಗಿಯೂ ಸಕಲವಿಧ ಸಲಕರಣೆ ಗಳಿಂದ ಕೂಡಿಯೂ ಇರುವ ವಾತರಕ್ತರೋಗಿಗೆ ಚಿಕಿತ್ಸೆ ಮಾಡಲು ಪ್ರಯತ್ನಿಸಬೇಕು.

ತತ್ರ ಆದಾವೇವ ಬಹುವಾತರೂಕ್ಷಮ್ಲಾನಾಙ್ಗಾದೃತೇ ಮಾರ್ಗಾವರಣಾದ್ದುಷ್ಟಶೋಣಿತ ಮಸಕೃದಲ್ಪಾಲ್ಪಮವಸಿಞ್ಚೇದ್ವಾತಕೋಪಭಯಾತ್ ; ತತೋ ವಮನಾದಿಭಿರುಪಕ್ರಮೈರುಪ ಪಾದ್ಯ ಪ್ರತಿಸಂಸೃಷ್ಟಭಕ್ತಂ ವಾತ ಪ್ರಬಲೇ ಪುರಾಣಘೃತಂ ಪಾಯಯೇತ್ ; ಅಜಾಕ್ಷೀರಂ ಚಾರ್ಧತೈಲಂ ಮಧುಕಕಾಕ್ಷಯುಕ್ತಂ, ಶೃಗಾಲವಿನ್ನಾಸಿದ್ಧಂ ವಾ ಶರ್ಕರಾಮಧುಮಧುರಂ, ಶುಣ್ಠೀ ಶೃಙ್ಗಾಟಕಕಸೇರುಕಸಿದ್ಧಂ ವಾ, ಶ್ಯಾಮಾರಾಸ್ನಾಸುಷವೀಶೃಗಾಲವಿನ್ನಾಪೀಲುಶತಾವರೀಶ್ವದಂಷ್ಟ್ರಾ ದ್ವಿಪಞ್ಚಮೂಲೀಸಿದ್ಧಂ ವಾ ; ದ್ವಿಪಞ್ಚಮೂಲೀಶ್ವಾಥಾಷ್ಟಗುಣಸಿದ್ಧೇನ ಚ ಪಯಸಾ ಮಧುಕ

ಮೇಷಶೃಙ್ಗೀಶ್ವದಂಷ್ಟ್ರಾಸರಳಭದ್ರದಾರುವಚಾಸುರಭಿಕಲ್ಕಪ್ರತೀವಾಪಂ ತೈಲಂ ಪಾಚಯಿತ್ವಾ ಪಾನಾದಿಷೂಪಯುಞ್ಜೀತ, ಶತಾವರೀಮಯೂರಕಕಿಣಿಹ್ಯಜಮೋದಮಧುಕಕ್ಷೀರವಿದಾರೀಬಲಾತಿಬಲಾತೃಣಪಞ್ಚಮೂಲೀಕ್ವಾಥಸಿದ್ಧಂ ವಾ ಕಾಕೋಳ್ಯಾದಿಪ್ರತೀವಾಪಂ, ಬಲಾತೈಲಂ ಶತಪಾಕಂ ವೇತಿ ; ವಾತಹರಮೂಲಸಿದ್ಧೇನ ಚ ಪಯಸಾ ಪರಿಷೇಚನಮ್ಮ್ಲೈರ್ವಾ ಕುರ್ವೀತ ; ಯವಮಧುಕೈರಣ್ಡತಿಲವರ್ಷಾಭೂಭಿರ್ವಾ ಪ್ರದೇಹಃ ಕಾರ್ಯಃ, ತತ್ರ ಚೂರ್ಣಿತೇಷು ಯವಗೋಧೂಮತಿಲಮುದ್ಗಮಾಷೇಷು ಪ್ರತ್ಯೇಕಶಃ ಕಾಕೋಳೀಕ್ಷೀರಕಾಕೋಳೀಜೀವಕರ್ಷಭಕಬಲಾಬಿಸಮೃಣಾಲಶೃಗಾಲವಿನ್ನಾಮೇಷಶೃಙ್ಗೀಪ್ರಿಯಾಳಶರ್ಕರಾಕಶೇರುಕಸುರಂಭಿವಚಾಕಲ್ಕಮಿಶ್ರೇಷೂಪನಾಹಾರ್ಥಂ ಸರ್ಪಿಸ್ತೈಲವಸಾಮಜ್ಜಂ ದುಗ್ಧಸಿದ್ಧಾಃ ಪಞ್ಚಪಾಯಸಾಃ ವ್ಯಾಖ್ಯಾತಾಃ, ಸ್ನೈಹಿಕಫಲಸಾರೋತ್ಕಾರಿಕಾ ವಾ, ಚೂರ್ಣಿತೇಷು ಯವಗೋಧೂಮತಿಲಮುದ್ಗಮಾಷೇಷು ವಿಚಿತ್ರಮತ್ಸ್ಯಪಿಶಿತವೇಸವಾರೋ ವಾ ; ಬಿಲ್ವಪೇಶಿಕಾತಗರದೇವದಾರುಸರಳರಾಸ್ನಾಹರೇಣುಕುಷ್ಠಶತಪುಷ್ಪಾಸುರಾದಧಿಮಸ್ತುಯುಕ್ತ ಉಪನಾಹೋ ಮಾತುಲುಙ್ಗಮ್ಲಸೈನ್ಧವಘೃತಮಿಶ್ರಃ, ಮಧುಶಿಗ್ರುಮೂಲಮಾಲೇಪೇ, ತಿಲಕಲ್ಕಶ್ಚೇತಿ ವಾತಪ್ರಬಲೇ ||೭||

ದೋಷದೂಷ್ಯಗಳ ಪೈಕಿ ಮೊದಲು ದೂಷ್ಯಗಳ ಚಿಕಿತ್ಸೆಯನ್ನು ಹೇಳುತ್ತಾರೆ. ವಾತದೋಷದಿಂದ ಬಹಳ ರೂಕ್ಷ ಮತ್ತು ಕ್ಷೀಣದೇಹವುಳ್ಳವರನ್ನು ಬಿಟ್ಟು ಉಳಿದ (ದುಷ್ಟರಕ್ತದಿಂದ ವಾಯುವಿನ ಮಾರ್ಗವು ತಡೆಯಲ್ಪಟ್ಟ ಕಾರಣ ರಕ್ತಪ್ರಕೋಪವಾಗಿರುವ) ವಾತರಕ್ತರೋಗಿಗಳಿಗೆ ಸ್ವಲ್ಪಸ್ವಲ್ಪವಾಗಿ ರಕ್ತಮೋಕ್ಷಣವನ್ನು ಮಾಡಿಸಬೇಕು. ಒಂದೇ ಸಾರಿ ಹೆಚ್ಚು ಪ್ರಮಾಣದಿಂದ ರಕ್ತವನ್ನು ತೆಗೆದರೆ ವಾತಪ್ರಕೋಪವಾಗುವ ಭಯವುಂಟಾಗುತ್ತದೆ. ಇನ್ನು ದೋಷಗಳಿಗೆ ಚಿಕಿತ್ಸೆಮಾಡಬೇಕು. ಹೇಗೆಂದರೆ—ವಮನ ವಿರೇಚನಾಸ್ಥಾಪನಾನುವಾಸನ ಮೊದಲಾದ ಶೋಧನಕರ್ಮಗಳನ್ನು ಮಾಡಿಸಿ ಪೇಯ-ವಿಲೇಪಿ ಮೊದಲಾದುವುಗಳ ಪ್ರಯೋಗದಿಂದ ಕ್ರಮವಾಗಿ ಆಹಾರವನ್ನು ಭೋಜನ ಮಾಡುವಂತೆ ಮಾಡಿದ ಮನುಷ್ಯನಿಗೆ ವಾತ ಪ್ರಬಲವಾಗಿದ್ದರೆ ಪುರಾಣ ಘೃತವನ್ನು ಕುಡಿಸಬೇಕು ; ಕೈಗಳಿಗೆ ಬಂದಿರುವ ವಾತರಕ್ತರೋಗಿಗೆ ಊರ್ಧ್ವದೇಹದಲ್ಲಿ ದೋಷಗಳು ಪ್ರಬಲವಾಗಿರುತ್ತವೆ. ಅವುಗಳಿಗೆ ಕಫಪಿತ್ತಗಳ ಸಂಬಂಧವಿರುವುದರಿಂದ ವಮನವಿರೇಚನಗಳನ್ನು ಮಾಡಿಸಿದ ಮೇಲೆ ಪುರಾಣಘೃತವನ್ನು ಕುಡಿಸಬೇಕು ; ಕಾಲುಗಳಲ್ಲಿ ವಾತರಕ್ತವುಂಟಾದರೆ ವಾತದೋಷವೇ ಅಧಿಕವಾಗಿ ಸಂಬಂಧಿಸಿರುತ್ತದೆಯಾಗಿ ಆಸ್ಥಾಪನೆ ಮಾಡಿಸಿದನಂತರ ಅನುವಾಸನೆ ಮಾಡಿಸಬೇಕು ; ಇದು ಮೊದಲನೆಯ ದಿನದ ಶುದ್ಧಿಕ್ರಮವು ; ಅನಂತರ ಆರು ದಿನಗಳವರೆಗೆ ಪೇಯಾಪಾನ ಮೊದಲಾದ ಪಥ್ಯಕ್ರಮವನ್ನು ಮಾಡಿಸಿ, ಎಂಟನೆಯ ದಿವಸ ಸ್ನೇಹಪಾನ ಮಾಡಿಸುವುದಕ್ಕಾಗಿ ಭೋಜನ ಮಾಡಿಸಬೇಕು ; ಒಂಬತ್ತನೆಯ ದಿವಸ ಪುರಾಣಘೃತವನ್ನು ಪಾನಮಾಡಿಸಬೇಕು ; ಈ ರೀತಿ ಒಂಬತ್ತನೆಯ ದಿವಸದ ಲಾಗಾಯ್ತು ಉಕ್ತೌಷಧಿಗಳಿಂದ ತಯಾರಿಸಿದ ಪುರಾಣಘೃತವನ್ನು ಪಾನ ಮಾಡಿಸಬೇಕು ; ಆ ದಿನ ಹಾಲು ೨ ಭಾಗ, ತಿಲತೈಲ ೧ ಭಾಗ, ಸ್ವಲ್ಪ ಅತಿಮಧುರದ

ಚೂರ್ಣವನ್ನು ಸೇರಿಸಿ ಪುರಾಣಘೃತವನ್ನು ಪಾನಮಾಡಿಸಬೇಕು ; ಮೂರಲೆಹೊನ್ನೆ ೧ ಭಾಗ, ಆಡಿನ ಹಾಲು ೨ ಭಾಗ, ತಿಲತೈಲ ೧ ಭಾಗ, ಪುರಾಣಘೃತ ೧ ಭಾಗವನ್ನೂ ಸೇರಿಸಿ ತಯಾರಿಸಿ ಸಕ್ಕರೆ, ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು. ಶುಂಠಿ, ಕೊತ್ತಿಗೆಡ್ಡೆ, ಮುಮುಳ್ಳಲೆಗೆಡ್ಡೆ(ಶೃಂಗಾಟಕ)ಗಳನ್ನು ಸೇರಿಸಿಯಾಗಲೀ, ತಿಗಡೆ, ರಾಶ್ಮೆ (ಸುಷವೀ : ಕಾಡುಹಾಗಲ-ಕರಿಜೀರಿಗೆ ಎಂದು ಕೆಲವರ ಮತ ; ಪಾನೀಯವಲ್ಲಿ ಎಂದು ಡಲ್ಹಣರ ಮತ), ಮೂರೆಲೆಹೊನ್ನೆ-ಬಗಿನಿ-ಆಷಾಡಿಬೇರು-ನೆಗ್ಗಿಲು-ದಶಮೂಲ ಇವುಗಳಿಂದ ತಯಾರಿಸಿಯಾಗಲೀ ಪಾನಮಾಡಿಸಬೇಕು ; ದಶಮೂಲಕಷಾಯಕ್ಕೆ ಅರಷ್ಟು ಹಾಲನ್ನು ಸೇರಿಸಿ ಅತಿಮಧುರ, ಮಧುನಾಶಿನಿ ಅಥವಾ ಗೆರ್ಶೆಹಂಬು-ನೆಗ್ಗಿಲುಸಮೂಲ-ಸರಳ ದೇವದಾರು-ತುಪ್ಪದೇವದಾರು-ಬಜೆ-ರಾಶ್ಮೆ ಇವುಗಳ ಕಲ್ಕವನ್ನು ಪ್ರತಿವಾಪಮಾಡಿ ತಿಲತೈಲವನ್ನು ಸೇರಿಸಿ ತಯಾರಿಸಿದ ತೈಲವನ್ನು ಪಾನಾಭ್ಯಂಗಗಳಿಗೆ ಉಪಯೋಗಿಸಬೇಕು ; ಅಥವಾ ಆಷಾಡಿಬೇರು-ಉತ್ತರಣೆಸಮೂಲ (ಬಿಳಿ ಮತ್ತು ಕೆಂಪು ಉತ್ತರಣೆಗಳೆರಡು), ಅಜಮೋದ-ಅತಿಮಧುರ-ಹಾಲು, ನೆಲಗುಂಬಳಗಡ್ಡೆ-ಕಳ್ಳಂಗಡಲೆ-ಬೋಳಂಗಡಲೆ- ತೃಣಪಂಚಮೂಲ (ದರ್ಭೆ-ಕಾಶದರ್ಭೆ- ಲಾಳ-ಕಬ್ಬು- ಭತ್ತದಬೇರು) ಇವುಗಳ ಕಷಾಯದೊಡನೆ ಕಾಕೋಳ್ಯಾದಿಗಳ ಕಲ್ಕವನ್ನು ಪ್ರತಿವಾಪಮಾಡಿ ತಯಾರಿಸಿದ ತೈಲವನ್ನಾಗಲೀ, ಅಥವಾ ಕಳ್ಳಂಗಡಲೆಯ ಬೇರಿನ ಕಷಾಯಕ್ಕೆ ಅದರ ಕಲ್ಕವನ್ನು ಸೇರಿಸಿ ೧೦೦ ಸಾರಿ ಪಾಕಮಾಡಿದ ಬಲಾತೈಲವನ್ನಾಗಲೀ ಪಾನಾಭ್ಯಂಗಗಳಿಗೆ ಉಪಯೋಗಿಸಬೇಕು ; ಇವು ಅಂತಃಪರಿಮಾರ್ಜನೆಯ ಯೋಗಗಳು ; ಅಂದರೆ ಶರೀರದೊಳಗಿನ ದೋಷಗಳನ್ನು ಶುದ್ಧಿಮಾಡುತ್ತವೆಂದರ್ಥವು ; ಇನ್ನು ಬಹಿಃ ಪರಿಮಾರ್ಜನ ವಿಧಾನಗಳನ್ನು ಹೇಳುತ್ತಾರೆ. ಹೇಗೆಂದರೆ—ವಾತಹರಗಳಾದ ದಶಮೂಲ ಕಷಾಯದಿಂದಾಗಲೀ ಸುರಾ-ಸೌವೀರಕ-ಧಾನ್ಯಾಮ್ಲ ಮೊದಲಾದ ಅಮ್ಲ ದ್ರವ್ಯಗಳಿಂದಾಗಲೀ ಸ್ನಾನ ಮಾಡಿಸಬೇಕು ; ಯವಧಾನ್ಯ-ಅತಿಮಧುರ-ಹರಳಬೇರು-ಎಳ್ಳು-ಕೊಮ್ಮೆಬೇರು ಇವುಗಳ ಕಲ್ಕದಿಂದ ಮೈಗೆ ಲೇಪನಮಾಡಬೇಕು ; ಯವಧಾನ್ಯ-ಗೋಧಿ-ಎಳ್ಳು-ಹೆಸರು-ಉದ್ದು ಇವುಗಳ ಚೂರ್ಣವನ್ನು ಕಾಕೋಳಿ-ಕ್ಷೀರಕಾಕೋಳಿ-ಜೀವಕ-ಋಷಭಕ-ಕಳ್ಳಂಗಡಲೆ-ಬೋಳಂಗಡಲೆ - ತಾವರೆಯದಂಟು - ಮೂರೆಲೆಹೊನ್ನೆ - ಗೆರ್ಶೆಹಂಬು - ಚಾರುಪೊಪ್ಪು-ಸಕ್ಕರೆ-ಕೊತ್ತಿ ಗೆಡ್ಡೆ-ರಾಶ್ಮೆ-ಬಜೆ ಇವುಗಳ ಕಲ್ಕವನ್ನು ಮಿಶ್ರಮಾಡಿ ತುಪ್ಪ-ಎಣ್ಣೆ-ವಸೆ-ಮಜ್ಜೆ-ಹಾಲುಗಳನ್ನು ಮಿಶ್ರಮಾಡಿ ಬೇರೆಬೇರೆ ತಯಾರಿಸಿದ ಪಾಯಸರೂಪದ * ವಿಧಗಳಾದ ಉಪನಾಹಗಳನ್ನು ವಿವರಿಸಲಾಯಿತು. (ಇವು ಅತಿನೀರಾಗಿಲ್ಲದೆಯೂ ಅತಿಗಟ್ಟಿಯಾಗಿರದೆಯೂ ಹಾಲನ್ನು ಸೇರಿಸಿಯೂ ತಯಾರಿಸಲ್ಪಡುವುದರಿಂದ ಪಾಯಸಗಳೆಂದು ವ್ಯವಹರಿಸಲ್ಪಡುತ್ತವೆ ; ತುಪ್ಪ-ಎಣ್ಣೆ ಮೊದಲಾದ ಸ್ನೇಹದ್ರವ್ಯಗಳು ಸೇರಿದ್ದರೂ ಹಾಲೇ ಹೆಚ್ಚಾಗಿ ಸೇರಿ ಸಂಸ್ಕರಿಸಲ್ಪಡುತ್ತವೆಯಾಗಿ ಪಾಯಸವೆಂಬ ಸಂಜ್ಞೆ.) ಎಳ್ಳು-ಹರಳು ಬೀಜ- ಸೀಮೆ ಅಗಸೆ ಬೀಜ-ತಾರೇಬೀಜ ಇವುಗಳನ್ನು ಹಾಲಿನಿಂದ ಅರೆದು ಕಲ್ಕಮಾಡಿ

ಹೋಳಿಗೆಯನ್ನು ತಯಾರಿಸಿ ವ್ರಣಗಳಿಗೆ ಉಪನಾಹ (ವ್ರಣಪ್ರದೇಶದಲ್ಲಿಟ್ಟು ಶಾಖಕೊಡಬೇಕು) ಮಾಡಬೇಕು ; ಯವಧಾನ್ಯ-ಗೋಧಿ-ಎಳ್ಳು-ಹೆಸರು-ಉದ್ದು ಇವುಗಳ ಚೂರ್ಣದೊಡನೆ ರೋಹಿತ-ಚಿಲಚಿಮ ಮೊದಲಾದ ಮೀನುಗಳ ಮಾಂಸವನ್ನೂ ಅನೂಪದೇಶದ ಪ್ರಾಣಿಗಳ ಮಾಂಸವನ್ನೂ ಮಿಶ್ರಮಾಡಿ ತಯಾರಿಸಿದ ವೇಸವಾರದಿಂದಲೂ, ಬಿಲ್ವಪತ್ರೆಯ ಎಳೆಯ ಕಾಯಿ-ತಗರ-ತುಪ್ಪದೇವದಾರು-ಸರಳದೇವದಾರು-ರಾಶ್ನೆ-ರೇಣುಕೆಬೀಜ-ಚಂಗಲ್‌ಕೋಷ್ಠ, ಸಬ್ಬಸಿಗೆಬೀಜ ಇವುಗಳನ್ನು ಸುರೆ-ಮೊಸರುಕಟ್ಟು-ಮೊಸರು ಇವುಗಳಲ್ಲೊಂದರಿಂದ ಅರೆದು ತಯಾರಿಸಿದ ಕಲ್ಕದೊಡನೆ ಮಾದಳದ ಹುಳಿರಸ-ಸೈಂಧವ ಚೂರ್ಣ-ತುಪ್ಪಗಳನ್ನು ಮಿಶ್ರಮಾಡಿ ತಯಾರಿಸಿದ ಹೋಳಿಗೆಯಿಂದಾಗಲೀ ವ್ರಣಕ್ಕೆ ಉಪನಾಹ ಮಾಡಬೇಕು ; (ಸುಖೋಷ್ಣವಾದ ಹೋಳಿಗೆಯನ್ನು ವ್ರಣದ ಮೇಲಿಟ್ಟು ಬಿಗಿಯಾಗಿ ಕಟ್ಟಬೇಕು.) ಕೆಂಪುನುಗ್ಗೆಯ ತೊಗಟೆಯ ಕಲ್ಕವನ್ನಾಗಲೀ ಎಳ್ಳಿನ ಕಲ್ಕವನ್ನಾಗಲೀ ವ್ರಣಕ್ಕೆ ಲೇಪಿಸಬೇಕು. (ಇದು ವಾತವೇ ಅಧಿಕಪ್ರಮಾಣದಿಂದ ಪ್ರಕೋಪಗೊಂಡ ವಾತರಕ್ತದ ಚಿಕಿತ್ಸೆಯು.)

ಪಿತ್ತಪ್ರಬಲೇ ದ್ರಾಕ್ಷಾರೇವತಕಟ್ಫಲಪಯಸ್ಯಾಮಧುಕಚನ್ದನಕಾಶ್ಮರ್ಯಕಷಾಯಂ ಶರ್ಕರಾಮಧುಮಧುರಂ ಪಾಯಯೇತ್ ; ಶತಾವರೀ ಮಧುಕಪಟೋಲತ್ರಿಫಲಾಕಟುರೋಹಿಣೀಕಷಾಯಂ, ಗುಡೂಚೀಕಷಾಯಂ ವಾ ; ಪಿತ್ತಜ್ವರಹರಂ ಚಂದನಾದಿ ಕಷಾಯಮ್ ಶರ್ಕರಾಮಧುಮಧುರಮ್ ; (ಮಧುರ) ತಿಕ್ತ ಕಷಾಯಸಿದ್ಧಂ ವಾ ಸರ್ಪಿಃ ; ಬಿಸಮೃಣಾಲಭದ್ರಶ್ರಿಯ ಪದ್ಮಕ ಕಷಾಯೇಣಾರ್ಧಕ್ಷೀರೇಣ ಪರಿಷೇಕಃ ; ಕ್ಷೀರೇಕ್ಷುರಸಮಧುಶರ್ಕರಾತಣ್ಡುಲೋದಕೈರ್ವಾ ದ್ರಾಕ್ಷೇಕ್ಷುಕಷಾಯಮಿಶ್ರೈರ್ಮಸ್ತುಮದ್ಯಧಾನ್ಯಾಮ್ಲೈಃ ; ಜೀವನೀಯಸಿದ್ಧೇನ ವಾ ಸರ್ಪಿಷಾಭ್ಯಙ್ಗಃ ; ಶತಧೌತಘೃತೇನ ವಾ ; ಕಾಕೋಲ್ಯಾದಿ ಕಲ್ಕವಿಪಕ್ವೇನ ಸರ್ಪಿಷಾ ; ಶಾಲಿಷಷ್ಟಿಕನಳವಞ್ಜುಳತಾಳೀಸಶೃಙ್ಗಾಟಕಗಲೋಡ್ಯಗೌರೀಗೈರಿಕಶೈವಲಪದ್ಮಕಪದ್ಮಪತ್ರ ಪ್ರಭೃತಿಭಿರ್ಧಾನ್ಯಾಮ್ಲಪಿಷ್ಟೈಃ ಪ್ರದೇಹೋ ಘೃತಮಿಶ್ರಃ । ವಾತಪ್ರಬಲೇಽಪ್ಯೇಷ ಸುಖೋಷ್ಣಃ ಪ್ರದೇಹಃ ಕಾರ್ಯಃ ||೮||

ರಕ್ತಪ್ರಬಲೇಽಪ್ಯೇವಂ, ಬಹುಶಶ್ಚ ಶೋಣಿತಮವಸೇಚಯೇತ್, ಶೀತತಮಾಶ್ಚ ಪ್ರದೇಹಾಃ ಕಾರ್ಯಾ ಇತಿ ||೯||

ಪಿತ್ತಾಧಿಕವಾದ ವಾತರಕ್ತರೋಗಿಗೆ ದ್ರಾಕ್ಷಿ-ಕಕ್ಕೆಚಿಗುರು-ಕಿರಿಯಶಿವನಿ-ಹಾಲು-ನೆಲಗುಂಬಳ-ಅತಿಮಧುರ-ಕೆಂಪುಗಂಧ-ಶಿವನಿಹಣ್ಣು ಇವುಗಳ ಕಷಾಯಕ್ಕೆ ಸಕ್ಕರೆ, ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು ; ಆಷಾಡಿ-ಅತಿಮಧುರ-ಕಹಿಪಡವಲ-ತ್ರಿಫಲೆ-ಕಟುಕರೋಹಿಣೀ ಇವುಗಳ ಕಷಾಯವನ್ನಾಗಲೀ ಅಮೃತವಳ್ಳಿಯ ಕಷಾಯವನ್ನಾಗಲೀ ಕುಡಿಸಬೇಕು ; ಪಿತ್ತಜ್ವರಹರವಾದ ಚಂದನಾದಿ ಕಷಾಯಕ್ಕೆ ಸಕ್ಕರೆ, ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು ; ಸಿಹಿ-ಕಹಿ-ಒಗರು ರಸವುಳ್ಳ ಪದಾರ್ಥಗಳನ್ನು ಸೇರಿಸಿ ತಯಾರಿಸಿದ ಘೃತಪಾನವನ್ನು ಮಾಡಿಸಬೇಕು ; ತಾವರೆದಂಟು-ಶ್ರೀಗಂಧ-ಪದ್ಮಕಗಳ ಕಷಾಯಕ್ಕೆ ಅರ್ಧಭಾಗದಷ್ಟು ಹಾಲನ್ನು ಮಿಶ್ರಮಾಡಿ ವ್ರಣದ ಮೇಲೆ

ಸುರಿಸಬೇಕು ; ಹಾಲು-ಕಬ್ಬಿನರಸ, ಜೇನುತುಪ್ಪ-ಸಕ್ಕರೆ-ಅಕ್ಕಿತೊಳೆದ ನೀರುಗಳಿಂದಾಗಲೀ, ದ್ರಾಕ್ಷಿ, ಕಬ್ಬುಗಳ ಕಷಾಯವನ್ನು ಮಿಶ್ರಮಾಡಿದ ಮೊಸರುಕಟ್ಟು-ಮದ್ಯ-ಕಲಗಚ್ಚುಗಳಿಂದಲಾಗಲೀ ಪರಿಷೇಕಮಾಡಿಸಬೇಕು. ನಳಿಕೆಯ (ಮೂಲಕ ಮೈಮೇಲೆ ನಿಧಾನವಾಗಿ ಸುರಿಯಬೇಕು) ; ಜೀವನೀಯಗಣ ದ್ರವ್ಯಗಳಿಂದ ತಯಾರಿಸಿದ ಘೃತದಿಂದ ಅಭ್ಯಂಗ ಮಾಡಿಸಬೇಕು, ಶತಧೌತಘೃತದಿಂದಾಗಲೀ ಕಾಕೋಲ್ಯಾದಿಗಣ ದ್ರವ್ಯಗಳಿಂದ ತಯಾರಿಸಿದ ಘೃತದಿಂದಾಗಲಿ ಅಭ್ಯಂಗವನ್ನು ಮಾಡಿಸಿ, ಷಷ್ಟಿಕಶಾಲಿ-ದೇವನಾಳ-ನೀರಂಜಿತೊಗಟೆ-ತಾಳೀಸಪತ್ರೆ-ಮೂರುಮೂಲೆಗೆಡ್ಡೆ (ಸಿಂಗಾಡೆ)-ತಾವರೆಬೀಜ-ಅರಿಶಿನ-ಶಾವಿ-ಪಾಚಿ-ಪದ್ಮಕ-ತಾವರೆ ಎಲೆ ಮೊದಲಾದುವನ್ನು ಕಲಗಚ್ಚಿನಿಂದ ಅರೆದು ಕಲ್ಕ ಮಾಡಿ ತುಪ್ಪವನ್ನು ಮಿಶ್ರಮಾಡಿ ವ್ರಣಕ್ಕೆ ಲೇಪಿಸಬೇಕು ; ವಾತವು ಅಧಿಕವಾಗಿದ್ದರೆ ಇದನ್ನೇ ಬಿಸಿಮಾಡಿ ಸುಖೋಷ್ಣವಾಗಿ ಲೇಪಿಸಬೇಕು ; ದುಷ್ಟರಕ್ತವು ಅಧಿಕವಾಗಿದ್ದರೂ ಇದೇ ರೀತಿ ಮಾಡಬೇಕು, ಅಧಿಕವಾಗಿ ರಕ್ತಸ್ರಾವವನ್ನು ಮಾಡಿಸಬೇಕು. ಅತ್ಯಂತ ತಣ್ಣಗಿರುವ ಲೇಪಗಳನ್ನು ಬಳಿಯಬೇಕು.

ಶ್ಲೇಷ್ಮಪ್ರಬಲೇ ತ್ವಾಮಲಕರಿಹರಿದ್ರಾಕಷಾಯಂ ಮಧುಮಧುರಂ ಪಾಯಯೇತ್ ; ತ್ರಿಫಲಾಕಷಾಯಂ ವಾ ; ಮಧುಕಶೃಙ್ಗವೇರಹರೀತಕೀತಿಕ್ತರೋಹಿಣೀಕಲ್ಕಂ ವಾ ಸಕ್ಷೌದ್ರಂ ತೋಯೇನ ; ಗುಡಹರೀತಕೀಂ ವಾ ಭಕ್ಷಯೇತ್ ; ತೈಲಮೂತ್ರಕ್ಷಾರೋದಕಸುರಾಶುಕ್ತಕಫಘ್ನೌಷಧನಿಃಕ್ವಾಥೈಃ ಚ ಪರಿಷೇಕಃ, ಆರಗ್ವಧಾದಿಕಷಾಯೈರ್ವೋಷ್ಣೈಃ ; ಮಸ್ತು ಮೂತ್ರ ಸುರಾಶುಕ್ತಮಧುಕಸಾರಿವಾಪದ್ಮಕಸಿದ್ಧಂ ವಾ ಘೃತಮಭ್ಯಙ್ಗಃ ; ತಿಲಸರ್ಷಪಾತಸೀಯವಚೂರ್ಣಾನಿ ಶ್ಲೇಷ್ಮಾತಕಕಪಿತ್ಥಮಧುಶಿಗ್ರುಮಿಶ್ರಾಣಿ ಕ್ಷಾರಮೂತ್ರಪಿಷ್ಟಃ ಪ್ರದೇಹಃ ; ಶ್ವೇತಸರ್ಷಪಕಲ್ಕಃ, ಶಿಲಾಶ್ವಗಂಧಾಕಲ್ಕಃ, ಪ್ರಿಯಾಳಸೇಲುಕಪಿತ್ಥತ್ವಕ್‌ಕಲ್ಕಃ, ಮಧುಶಿಗ್ರು ಪುನರ್ನವಾಕಲ್ಕಃ, ವ್ಯೋಷತಿಕ್ತಾಪೃಥಕ್ಪರ್ಣೀಬೃಹತೀಕಲ್ಕ ಇತ್ಯೇ (ಕೇ) ತೇ ಪಞ್ಚಪ್ರದೇಹಾಃ ಸುಖೋಷ್ಣಾಃ ಕ್ಷಾರೋದಕಪಿಷ್ಟಾಃ ; ಶಾಲಪರ್ಣೀ ಪೃಶ್ನಿಪರ್ಣೀ ಬೃಹತ್ಯೌ ವಾ ಕ್ಷೀರಪಿಷ್ಟಾಸ್ತೃಣಮಿಶ್ರಾಃ[1] ||೧೦||

ಸಂಸರ್ಗೇ ಸನ್ನಿಪಾತೇ ಚ ಕ್ರಿಯಾಪಥಮುಕ್ತಂ ಮಿಶ್ರಂ ಕುರ್ಯಾತ್ ||೧೧||

ಕಫಾಧಿಕವಾಗಿರುವ ವಾತರಕ್ತರೋಗಿಗೆ ನೆಲ್ಲಿಕಾಯಿ-ಅರಿಶಿನಗಳ ಕಷಾಯಕ್ಕೆ ಜೇನುತುಪ್ಪವನ್ನು ಸೇರಿಸಿ ಕುಡಿಸಬೇಕು ; ತ್ರಿಫಲಾ ಕಷಾಯವನ್ನಾಗಲೀ ಜೇನು ತುಪ್ಪ ಮಿಶ್ರಮಾಡಿ ಕುಡಿಸಬೇಕು ; ಅತಿಮಧುರ, ಹಸಿಶುಂಠಿ, ಅಣಿಲೆಕಾಯಿ, ಕಟುಕರೋಹಿಣೀ ಇವುಗಳ ಕಲ್ಕಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ನೀರಿನಲ್ಲಿ ಕದರಿ ಕುಡಿಸಬೇಕು ; ಅಣಿಲೆಕಾಯಿಯ ಚೂರ್ಣವನ್ನು ತಿನ್ನಿಸಬೇಕು ; ಎಳ್ಳೆಣ್ಣೆ-ಅಥವಾ ಬೆಲ್ಲ ಮಿಶ್ರಮಾಡಿ ಹಸುವಿನ ಗಂಜಳ-ಕ್ಷಾರವನ್ನು ಕರಗಿಸಿದ ನೀರು-ಮದ್ಯ-ಶುಕ್ತ ಬಿಸಿಯಾದ ಕಫಹರದ್ರವ್ಯಗಳ ಕಷಾಯ ಇವುಗಳಿಂದ ಸ್ನಾನಮಾಡಿಸಬೇಕು ; ಕಕ್ಕೆಯ ತೊಗಟೆಯ ಕಷಾಯದಿಂದ

---

1 'ಮೂತ್ರತೋಯಯೋರನ್ಯತರೇಣ' ಇತಿ ಪಾಠಾನ್ತರಮ್ ।

ನ್ನೈಗೆ ಸ್ನಾನಮಾಡಿಸಬೇಕು ; ಮೊಸರುಕಟ್ಟು- ಗೋಮೂತ್ರ-ಸುರೆಯೆಂಬ ಮದ್ಯ-ಶುಕ್ತ ವೆಂಬ ಸಂಧಾನ ಪದಾರ್ಥ, ಅತಿಮಧುರ-ಸೋಗದೆಬೇರು-ಪದ್ಮಕ ಇವುಗಳನ್ನು ಸೇರಿಸಿ ತಯಾರಿಸಿದ ಘೃತದಿಂದ ಅಭ್ಯಂಗವನ್ನು ಮಾಡಿಸಬೇಕು ; ಎಳ್ಳು-ಸಾಸಿವೆ-ಸೀಮೆ ಅಗಸೆ ಬೀಜ-ಯವೆಯ ಚೂರ್ಣಗಳೊಡನೆ ಚಳ್ಳೆಹಣ್ಣು-ಬೇಲದ ಹಣ್ಣು-ಕೆಂಪು ನುಗ್ಗೆ ತೊಗ ಟೆಯ ಕಲ್ಕ-ಯವಕ್ಷಾರ ಇವನ್ನು ಗೋಮೂತ್ರದಿಂದ ಕಲ್ಕಮಾಡಿ ವ್ರಣಲೇಪನಮಾಡ ಬೇಕು ; ಬಿಳಿಯ ಸಾಸಿವೆಯ ಕಲ್ಕದಿಂದಾಗಲೀ ಎಳ್ಳು ಮತ್ತು ಅಶ್ವಗಂಧಿಬೇರುಗಳ ಕಲ್ಕ ದಿಂದಾಗಲೀ ವ್ರಣಲೇಪನವನ್ನು ಮಾಡಬೇಕು ; ಚಾರಪೊಪ್ಪು, ಚಳ್ಳೆ, ಬೇಲದ ತೊಗಟೆ, ಕೆಂಪು ನುಗ್ಗೆಯ ತೊಗಟೆ, ಕೊಮ್ಮೆಬೇರು ಇವುಗಳ ಕಲ್ಕ ; ತ್ರಿಕಟು-ಕಟುಕರೋಹಿಣೀ- ಒಂದೆಲೆ ಹೊನ್ನೆ-ಹೆಗ್ಗುಳ್ಳಗಳ ಕಲ್ಕ ; ಇವುಗಳ ಈ ■ ವಿಧ ಕಲ್ಕಗಳನ್ನೂ ಕ್ಷಾರಗಳನ್ನು ಕರಗಿಸಿದ ನೀರಿನಲ್ಲಿ ಕಲಸಿ ಬಿಸಿಮಾಡಿ ವಾತರಕ್ತವ್ರಣದ ಮೇಲೆ ಬಳಿಯಬೇಕು ; ಅಥವಾ ಮೂರೆಲೆಹೊನ್ನೆ-ಒಂದೆಲೆಹೊನ್ನೆ-ಹೆಗ್ಗುಳ್ಳ-ನೆಲಗುಳ್ಳ ಇವುಗಳನ್ನು ಹಾಲಿನಲ್ಲಿ ಅರೆದು ಕಲ್ಕಮಾಡಿ ತರ್ಪಣೌಷಧಿ ಮಿಶ್ರಮಾಡಿ ಕಫಜನಿತ ವಾತರಕ್ತವ್ರಣಕ್ಕೆ ಲೇಪಿಸಬೇಕು ; ಸಂಸರ್ಗಸನ್ನಿಪಾತಜನಿತ ವಾತರಕ್ತದೋಷಗಳಿಗೆ ಮೇಲೆ ಹೇಳಿದ ಮಿಶ್ರದೋಷ-ಸನ್ನಿ ಪಾತದೋಷಗಳ ಚಿಕಿತ್ಸೆಗಳನ್ನು ಮಾಡಬೇಕು.

ಸರ್ವೇಷು ಚ ಗುಡಹರೀತಕೀಮಾಸೇವೇತ, ಪಿಪ್ಪಲೀರ್ವಾ ಕ್ಷೀರಪಿಷ್ಟಾ ವಾರಿಪಿಷ್ಟಾ ವಾ ಪಞ್ಚಾಭಿವೃದ್ಧ್ಯಾ ದಶಾಭಿವೃದ್ಧ್ಯಾ ವಾ ಪಿಬೇತ್ ಕ್ಷೀರೌದನಾಹಾರೋ ದಶರಾತ್ರಂ, ಭೂಯಶ್ಚ ಅಪಕರ್ಷಯೇತ್ ಏವಂ ಯಾವತ್ ಪಞ್ಚದಶವೇತಿ, ತದೇತತ್ಪಿಪ್ಪಲೀವರ್ಧಮಾನಕಂ ವಾತ ಶೋಣಿತವಿಷಮಜ್ವರಾರೋಚಕಪಾಣ್ಡುರೋಗಪ್ಲೀಹೋದರಾರ್ಶಃ ಕಾಸಶ್ವಾಸಶೋಫಶೋಷಾತಿ ಸಾರಹೃದ್ರೋಗೋದರಾಣ್ಯಪಹನ್ತಿ ; ಜೀವನೀಯಪ್ರತೀವಾಪಂ ಸರ್ಪಿಃ ಪಯಸಾ ಪಾಚಯಿತ್ವಾ ಭ್ಯಞ್ಜೀತ್ ; ಸಹಾಸಹದೇವಾಚನ್ದನಮೂರ್ವಾಮುಸ್ತಾಪ್ರಿಯಾಳಶತಾವರೀಕಶೇರುಪದ್ಮಕ- ಮಧುಕಶತಪುಷ್ಪಾಕುಷ್ಠಾನಿ ಕ್ಷೀರಪಿಷ್ಟಃ ಪ್ರದೇಹೋಘೃತಮಣ್ಡಯುಕ್ತಃ ಸ್ಥೈರೇಯಕಾಟರೂಷಕ ಬಲಾಜೀವನ್ತೀಸುಷವೀಕಲ್ಕೋ ವಾ ಭಾಗಕ್ಷೀರಪಿಷ್ಟಃ[1], ಕಾಶ್ಮರ್ಯಮಧುಕತರ್ಪಣಕಲ್ಕೋ ವಾ ; ಮಧೂಚ್ಛಿಷ್ಟಮಞ್ಜಿಷ್ಠಾ ಸರ್ಜರಸಸಾರಿವಾಕ್ಷೀರಸಿದ್ಧಂ ಪಿಣ್ಡತೈಲಮಭ್ಯಙ್ಗಃ ; ಸರ್ವೇಷು ಚ ಪುರಾಣಘೃತಮಾಮಲಕರಸವಿಪಕ್ವಂ ವಾ ಪಾನಾರ್ಥೇ ; ಜೀವನೀಯಸಿದ್ಧಂ ಪರಿಷೇಕಾರ್ಥೇ ; ಕಾಕೋಳ್ಯಾದಿಕ್ವಾಥಕಲ್ಕಸಿದ್ಧಂ ವಾ, ಸುಷವೀಕ್ವಾಥಸಿದ್ಧಂ ವಾ, ಕಾರವೇಲ್ಲಕಕ್ವಾಥಮಾತ್ರಸಿದ್ಧಂ ವಾ, ಬಲಾತೈಲಂ ವಾ ಪರಿಷೇಕಾವಗಾಹಬಸ್ತಿಭೋಜನೇಷು ; ಶಾಲಿಷಷ್ಟಿಕಯವಗೋಧೂಮಾನ್ನ ಮನವಂ ಭುಞ್ಜೀತ ಪಯಸಾ ಜಾಙ್ಗಲರಸೇನ ವಾ ಮುದ್ಗಯೂಷೇಣ ವಾ ನವ್ಲೇನ ; ಶೋಣಿತಮೋಕ್ಷಂ ಚಾಭೀಕ್ಷ್ಣಂ ಕುರ್ವೀತ ; ಉಚ್ಛ್ರಿತದೋಷೇ ಚ ವಮನವಿರೇಚನಾಸ್ಥಾಪ ನಾನುವಾಸನಕರ್ಮ ಕರ್ತವ್ಯಮ್ ||೧೨||

[1] 'ಭಾಗಕ್ಷೀರಪಿಷ್ಟಃ ಗೋಕ್ಷೀರಪಿಷ್ಟಃ' ಇತಿ ಪಾಠಾನ್ತರಮ್ |

ಪಟೋಲತ್ರಿಫಲಾಭೀರುಗುಡೂಚೀಕಟುಕಾಕೃತಮ್ ।
ಕ್ವಾಥಂ ಪೀತ್ವಾ ಜಯತ್ಯಾಶು ವಾತಶೋಣಿತಜಾಂ ರುಜಮ್ ॥೧೩॥

ಸನ್ನಿಪಾತದೋಷದಿಂದುಂಟಾದ ವಾತರಕ್ತರೋಗಿಯು ಬೆಲ್ಲದೊಡನೆ ಮಿಶ್ರ ಮಾಡಿದ ಅಣಿಲೆಕಾಯಿ ಚೂರ್ಣವನ್ನು ಸೇವಿಸಬೇಕು ; ಅಥವಾ ▪ ಅಥವಾ ೧೦ ಪಿಪ್ಪಲಿಗಳನ್ನು ದಿನದಿನಕ್ಕೂ ಹೆಚ್ಚಿಸುತ್ತಾ ೧೦ ದಿನಗಳವರೆಗೆ ಅವುಗಳನ್ನು ಹಾಲಿನಲ್ಲಾಗಲೀ ನೀರಿನಲ್ಲಾಗಲೀ ಅರೆದು ಕಲ್ಕಮಾಡಿ ಹಾಲಿನಲ್ಲಿ ಕದರಿ ಕುಡಿದು ಹಾಲು–ಅನ್ನವನ್ನು ಭೋಜನಮಾಡುತ್ತಲೂ ಹಾಗೆಯೇ ಪುನಃ ೧೦ ದಿನಗಳವರೆಗೂ ಕಮ್ಮಿ ಮಾಡುತ್ತಲೂ ಪ್ರಯೋಗಿಸುತ್ತಾ ಹಾಲು–ಅನ್ನಗಳನ್ನು ಭೋಜನಮಾಡಬೇಕು ; ಈ ಪಿಪ್ಪಲೀವರ್ಧಮಾನಕಯೋಗವನ್ನು ಪ್ರಯೋಗಿಸಿದರೆ ವಾತರಕ್ತ, ವಿಷಮಜ್ವರ, ಅರೋಚಕತೆ, ಪಾಂಡುರೋಗ, ಪ್ಲೀಹವೃದ್ಧಿ, ಅರ್ಶೋರೋಗ–ಕಾಸ–ಶ್ವಾಸ (ಉಬ್ಬಸ)–ಶೋಫೆ–ರಾಜಯಕ್ಷ್ಮ (ಕ್ಷಯರೋಗ)–ಅತಿಸಾರ–ಹೃದ್ರೋಗ–ಉದರ ರೋಗಗಳು ನಿವಾರಣೆಯಾಗುತ್ತವೆ ; ಕಾಕೋಲ್ಯಾದಿಗಣದ್ರವ್ಯಗಳ ಕಲ್ಕವನ್ನು ಪ್ರತಿವಾಪ ಮಾಡಿ ತಯಾರಿಸಿದ ಘೃತದಿಂದ ಅಭ್ಯಂಗಮಾಡಿಕೊಳ್ಳಬೇಕು ; ಕಾಡುದ್ದು–ತುರುಬೆ–ರಕ್ತಗಂಧ–ಕೊರಟಗೆ–ಕೊನ್ನಾರಿಗೆಡ್ಡೆ–ಚಾರಪೊಪ್ಪು–ಆಷಾಡಿಬೇರು–ಕೊತ್ತಿಗೆಡ್ಡೆ –ಪದ್ಮಕ–ಅತಿಮಧುರ– ಸಬ್ಬಸಿಗೆಬೀಜ–ಚಂಗಲ್‌ಕೋಷ್ಠ ಇವುಗಳನ್ನು ಹಾಲಿನಿಂದ ಅರೆದು ಕಲ್ಕಮಾಡಿ ತಿಳಿಯಾದ ತುಪ್ಪವನ್ನು ಮಿಶ್ರಮಾಡಿ ಮೈಗೆ ಲೇಪಿಸಬೇಕು ; ಅಥವಾ ಮುಳ್ಳುಗೋರಂಟಿಸೊಪ್ಪು–ಆಡುಸೋಗೆ–ಕಳ್ಳಂಗಡಲೆ–ತುರುವೆ–ಸಿಹಿಹಾಲೆ–ಕಾಡುಹಾಗಲ ಇವುಗಳ ಸೊಪ್ಪುಗಳನ್ನು ಆಡಿನ ಹಾಲಿನಲ್ಲಿ ಅರೆದು ಕಲ್ಕಮಾಡಿಯಾಗಲೀ ಶಿವನಿಹಣ್ಣು–ಅತಿಮಧುರ ಯವಚೂರ್ಣಗಳನ್ನು ಹಾಲಿನಿಂದ ಅರೆದು ಕಲ್ಕಮಾಡಿಯಾಗಲೀ ಲೇಪನಮಾಡಬೇಕು ; ಜೇನುಮೇಣ–ಮಂಜಿಷ್ಠೆ–ರಾಳು–ಸೊಗದೆಬೇರು ಇವುಗಳೊಡನೆ ಹಾಲನ್ನೂ ತೈಲವನ್ನೂ ಸೇರಿಸಿ ತಯಾರಿಸಿದರೆ ಪಿಂಡತೈಲವೆನ್ನುತ್ತಾರೆ ; ಇದರಿಂದ ಅಭ್ಯಂಗಮಾಡಬೇಕು ; ನೆಲ್ಲಿಕಾಯಿರಸದೊಡನೆ ಪುರಾಣಘೃತವನ್ನು ಪಾಕಮಾಡಿ ಎಲ್ಲಾ ವಿಧಗಳಾದ ವಿಸರ್ಪ ರೋಗಗಳಲ್ಲೂ ಪಾನ ಮಾಡಬೇಕು ; ಜೀವನೀಯದ್ರವ್ಯಗಳಿಂದ ತಯಾರಿಸಿದ ಕಷಾಯದಿಂದ ಸ್ನಾನ ಮಾಡಬೇಕು ಅಥವಾ ಕಾಕೋಲ್ಯಾದಿಗಣದ್ರವ್ಯಗಳ ಕಷಾಯದಿಂದಾಗಲೀ ಹಾಗಲ ಸೊಪ್ಪಿನ ಕಷಾಯ, ಕರಿಯ ಜೀರಿಗೆಯ ಕಷಾಯದಿಂದಾಗಲೀ ಸ್ನಾನಮಾಡಬೇಕು ; ಬಲಾತೈಲವನ್ನು ಮೈಮೇಲೆ ಸೇಚನೆಮಾಡುವುದಕ್ಕೂ ಅವಗಾಹನಕ್ಕೂ (ಶರೀರವನ್ನು ಮುಳುಗಿಸಿ ಕೂಡುವುದು.) ಬಸ್ತಿಕರ್ಮಕ್ಕೂ ಆಹಾರದೊಡನೆಯೂ ಉಪಯೋಗಿಸಬೇಕು ; ಶಾಲ್ಯೋದನವನ್ನು ಹುಳಿ ಮಿಶ್ರಮಾಡದೆಯೇ, ಹಳೆಯ ಯವಧಾನ್ಯ ಗೋಧೂಮಗಳ ಅನ್ನವನ್ನು ಹುಳಿ ಮಿಶ್ರಮಾಡದೆಯೇ ಹಾಲಿನೊಡನೆಯಾಗಲೀ ಆಡು ಮೊದಲಾದ ಬೈಲುದೇಶದ ಪ್ರಾಣಿಗಳ ಮಾಂಸರಸದೊಡನೆಯಾಗಲೀ ಹೆಸರಿನ ಕಟ್ಟಿನೊಡನೆಯಾಗಲೀ ಭೋಜನಮಾಡಬೇಕು ; ರಕ್ತಮೋಕ್ಷಣವನ್ನು ಪದೇಪದೇ ಮಾಡಿಸಬೇಕು ;

ದೋಷಗಳು ಪ್ರಕೋಪವಾದರೆ ವಮನ-ವಿರೇಚನ-ಆಸ್ಥಾಪನ-ಅನುವಾಸನ ಬಸ್ತಿಕರ್ಮ ಗಳನ್ನು ಮಾಡಿಸಬೇಕು ; ಕಹಿಪಡವಲ-ತ್ರಿಫಲೆ-ಆಷಾಡಿಬೇರು-ಅಮೃತವಳ್ಳಿ-ಕಟುಕ ರೋಹಿಣಿ ಇವುಗಳ ಕಷಾಯವನ್ನು ಕುಡಿಸಿದರೆ ಶೀಘ್ರಕಾಲದಲ್ಲೇ ವಾತರಕ್ತರೋಗದ ವೇದನೆಗಳು ನಿವಾರಣೆಯಾಗುತ್ತವೆ.

ಭವನ್ತಿ ಚಾತ್ರ

ಏವಮಾದ್ಯೈಃ ಕ್ರಿಯಾಯೋಗೈರಚಿರೋತ್ಪತಿತಂ ಸುಖಮ್ ।
ವಾತಾಸೃಕ್ ಸಾಧ್ಯತೇ ವೈದ್ಯೈರ್ಯಾಪ್ಯತೇ ತು ಚಿರೋತ್ಥಿತಮ್ ॥೧೪॥
ಉಪನಾಹಪರೀಷೇಕಪ್ರದೇಹಾಭ್ಯಙ್ಗನಾನಿ ಚ ।
ಶರಣಾನ್ಯಪ್ರವಾತಾನಿ ಮನೋಜ್ಞಾನಿ ಮಹಾನ್ತಿ ಚ ॥೧೫॥
ಮೃದುಗಣ್ಡೋಪಧಾನಾನಿ ಶಯನಾನಿ ಸುಖಾನಿ ಚ ।
ವಾತರಕ್ತೇ ಪ್ರಶಸ್ಯನ್ತೇ ಮೃದುಸಂವಾಹನಾನಿ ಚ ॥೧೬॥

ಬುದ್ಧಿವಂತರಾದ ವೈದ್ಯರು ಮೇಲೆ ವಿವರಿಸಿರುವ ಚಿಕಿತ್ಸಾವಿಧಾನಗಳಿಂದ ಚಿಕಿತ್ಸೆ ಮಾಡಿದರೆ ಹೊಸದಾಗಿ ಹುಟ್ಟಿದ ವಾತರಕ್ತರೋಗವು ಸುಖವಾಗಿ ಗುಣವಾಗುತ್ತದೆ ; ಬಹುದಿನಗಳ ಹಿಂದೆ ಪ್ರಾಪ್ತವಾಗಿದ್ದರೆ ಯಾಪ್ಯವು, ಅಂದರೆ ಚಿಕಿತ್ಸಾಕ್ರಮಗಳನ್ನು ಅನು ಸರಿಸಿದರೆ ಅದರ ಬಾಧೆಯು ಕಡಮೆಯಾಗುತ್ತದೆ. ಮತ್ತೆ ಕೆಲವು ಕಾಲದಮೇಲೆ ಪುನಃ ಸಂಭವಿಸುತ್ತದೆ, ನಿಶ್ಶೇಷವಾಗಿ ಗುಣವಾಗುವುದಿಲ್ಲವೆಂದು ತಿಳಿಯಬೇಕು ; ವಾತರಕ್ತ ರೋಗಿಗೆ ಉಪನಾಹಸ್ವೇದ-ಸಿದ್ಧೌಷಧ ಕಷಾಯಗಳಿಂದ ಸ್ನಾನ-ಲೇಪನ-ಅಭ್ಯಂಗ ಗಳನ್ನು ಮಾಡಿಸಿ ಎದುರುಗಾಳಿ ಬೀಸದಿರುವ ಮನೋಹರವಾದ ದೊಡ್ಡ ಮನೆಯಲ್ಲಿ ಮೆತ್ತಗಿರುವ ತಲೆದಿಂಬು, ಸುಖವಾದ ಹಾಸಿಗೆಗಳು, ಮೆತ್ತಗೆ ಹಿತವಾಗುವಂತೆ ಮೈ ಅವ ಯವಗಳನ್ನು ಕೈಗಳಿಂದ ಹಿಸುಗುವುದು, ಕಾಲಿನಿಂದ ತುಳಿಸುವುದು, ಇವು ಆವಶ್ಯಕ ಗಳೆಂದು ವೈದ್ಯಶ್ರೇಷ್ಠರು ಶ್ಲಾಘಿಸುತ್ತಾರೆ.

ವ್ಯಾಯಾಮಂ ಮೈಥುನಂ ಕೋಪಮುಷ್ಣಾಮ್ಲಲವಣಾಶನಮ್ ।
ದಿವಾಸ್ವಪ್ನಮಭಿಷ್ಯನ್ದಿ ಗುರು ಚಾನ್ನಂ ವಿವರ್ಜಯೇತ್ ॥೧೭॥

ವಾತರಕ್ತ ಪೀಡಿತನಾದವನು ವ್ಯಾಯಾಮ-ಮೈಥುನ ಮೊದಲಾದ ಶರೀರಾ ಯಾಸವನ್ನೂ ಕೋಪ ಮೊದಲಾದ ಮನಸ್ಸನ್ನು ಕೆಡಿಸುವ ವಿಷಯಗಳನ್ನೂ ಬಿಸಿಯಾದ, ಹುಳಿ, ಉಪ್ಪು, ರಸದ್ರವ್ಯಗಳ ಸೇವನೆಯನ್ನೂ ಹಗಲುನಿದ್ರೆಯನ್ನೂ ಮೊಸರು ಮೊದ ಲಾದ ಅಭಿಷ್ಯಂದವಮಾಡುವ ಮತ್ತು ಗುರುವಾದ (ಬೇಗ ಜೀರ್ಣವಾಗದ) ಆಹಾರ ವನ್ನೂ ತ್ಯಜಿಸಬೇಕು.

ಅಪತಾನಕಿನಮಸ್ರಸ್ತಾಕ್ಷಮವಕ್ರಭ್ರೂವಮಸ್ತಬ್ಧಮೇಢ್ರಮಸ್ವೇದನಮವೇಪನಮಪ್ರಲಾಪಿನ ಮಖಟ್ವಾಪಾತಿನಮಬಹಿರಾಯಾಮಿನಂ ಚೋಪಕ್ರಮೇತ್ ತತ್ರ ಪ್ರಾಗೇವ ಸ್ನೇಹಾಭ್ಯಕ್ತಂ ಸ್ವಿನ್ನ ಶರೀರಮವಪೀಡನೇನ ತೀಕ್ಷ್ಣೇನೋಪಕ್ರಮೇತ್, ಶಿರಃ ಶುದ್ಧ್ಯರ್ಥಮ್ ; ಅನನ್ತರಂ ಚ ವಿದಾರಿ

ಗನ್ಧಾದಿಕ್ವಾಥಮಾಂಸರಸಕ್ಷೀರದಧಿಪಕ್ವಂ ಸರ್ಪಿರಚ್ಛಂ ಪಾಯಯೇತ್ ; ತಥಾ ಹಿ ನಾತಿಮಾತ್ರಂ ವಾಯುಃ ಪ್ರಸರತಿ ; ತತೋ ಭದ್ರದಾರ್ವಾದಿವಾತಘ್ನಗಣಮಾಹೃತ್ಯ ಸಯವಕೋಲಕುಲತ್ಥಮ್ ಸಾನೂಪೌದಕಮಾಂಸಂ ಪಂಚವರ್ಗಮೇಕತಃ ಪ್ರಕ್ವಾಥ್ಯ ತಮಾದಾಯ ಕಷಾಯಮಮ್ಲಕ್ಷೀರೈಃ ಸಹೋನ್ಮಿಶ್ರ್ಯ ಸರ್ಪಿಸ್ತೈಲವಸಾಮಜ್ಜಭಿಃ ಸಹ ವಿಪಚೇತ್ ಮಧುರಕಪ್ರತೀವಾಪಂ, ತದೇತತ್ ತ್ರೈವೃತಮಪತಾನಕಿನಾಂ ಪರೀಷೇಕಾವಗಾಹಾಭ್ಯಙ್ಗಪಾನಭೋಜನಾನುವಾಸನನಸ್ಯೇಷು ವಿದಧ್ಯಾತ್ ; ಯಥೋಕ್ತೈಶ್ಚ ಸ್ವೇದವಿಧಾನೈಃ ಸ್ವೇದಯೇತ್ ; ಬಲೀಯಸಿ ವಾತೇ ಸುಖೋಷ್ಣತುಷಬುಸಕರೀಷಪೂರ್ಣೇ ಕೂಪೇ ನಿದಧ್ಯಾದಾಮುಖಾತ್, ತಪ್ತಾಯಾಂ ವಾ ಅಙ್ಗಾರಚುಲ್ಯಾಂ ತಪ್ತಾಯಾಂ ವಾ ಶಿಲಾಯಾಂ ಸುರಪರಿಷಿಕ್ತಾಯಾಂ ಪಲಾಶದಳಚ್ಛನ್ನಾಯಾಂ ಶಾಯಯೇತ್ ; ಕೃಶರಾವೇಸವಾಸಪಾಯಸೈರ್ವಾ ಸ್ವೇದಯೇತ್ ; ಮೂಲಕೋರುಬೂಕಸ್ಫೂರ್ಜಾರ್ಜಕಾರ್ಕಸಪ್ತಲಾಶಙ್ಖಿನೀಸ್ವರಸಸಿದ್ಧಂ ತೈಲಮಪತಾನಕಿನಾಂ ಪರಿಷೇಕಾದಿಷು ಉಪಯೋಜ್ಯಮ್ ; ಅಭ್ಯುಕ್ತವತಾ ಪೀತಮಮ್ಲಂ ದಧಿಮರಿಚವಚಾಯುಕ್ತಮಪತಾನಕಂ ಹನ್ತಿ, ತೈಲಸರ್ಪಿರ್ವಸಾಕ್ಷೌದ್ರಾಣಿ ಚ ; ಏತತ್ ಶುದ್ಧವಾತಾಪತಾನಕವಿಧಾನಮುಕ್ತಮ್ । ಸಂಸೃಷ್ಟೇ ಸಂಸೃಷ್ಟಂ ಕರ್ತವ್ಯಮ್ ; ವೇಗಾನ್ತರೇಷು ಚಾವಪೀಡಂ ದದ್ಯಾತ್ ; ತಾಮ್ರಚೂಡಕರ್ಕಟಕೃಷ್ಣಮತ್ಸ್ಯಶಿಶುಮಾರವರಾಹವಸಾಶ್ಚಾಸೇವೇತ ; ಕ್ಷೀರಾಣಿ ವಾ ವಾತಹರಸಿದ್ಧಾನಿ ; ಯವಕೋಲಕುಲತ್ಥಮೂಲಕದಧಿಘೃತತೈಲಸಿದ್ಧಾಂ ವಾ ಯವಾಗೂಮ್ ; ಸ್ನೇಹವಿರೇಚನಾಸ್ಥಾಪನಾನುವಾಸನೈಶ್ಚೈನಂ ದಶರಾತ್ರಾಹೃತವೇಗಮುಪಕ್ರಮೇತ್ ವಾತವ್ಯಾಧಿಚಿಕಿತ್ಸಿತಂ ಚಾವೇಕ್ಷೇತ, ರಕ್ಷಾಕರ್ಮ ಚ ಕುರ್ಯಾದಿತಿ ||೧೮||

ಅಪತಾನಕವಾತದಿಂದ ಪೀಡಿತನಾದವನಿಗೆ ಕಣ್ಣುಗುಡ್ಡೆ ಹೊರಕ್ಕೆ ಚಾಚದೆ, ಹುಬ್ಬುಗಳು ಸೊಟ್ಟಾಗದೆ, ಶಿಶ್ನ ಬಿಗಿಹಿಡಿಯದೆ, ಮೈಬೆವರದೆ, ನಡುಗದೆ, ಅಸಂಬದ್ಧ ಮಾತುಗಳನ್ನಾಡದೆ, ಮಂಚದಿಂದ ಕೆಳಕ್ಕೆ ಬೀಳದೆ ಅಪತಾನಕವೇಗವುಂಟಾದರೆ ರೋಗಿಯು ತಾನಿದ್ದ ಸ್ಥಳದಿಂದ ಚಿಮ್ಮಿ ಬೇರೆ ಕಡೆಗೆ ಹಾರಿಸಲ್ಪಡುತ್ತಾನೆ. ಮುಖವು ಹಿಂದಕ್ಕೆ ತಿರುಗದಿದ್ದರೆ ಆಗ **ಮಾತ್ರ** ಚಿಕಿತ್ಸೆಮಾಡಬೇಕು. ಮೊದಲು ಸ್ನೇಹದಿಂದ ಮೈಗೆಲ್ಲಾ ಅಭ್ಯಂಗ, ಸ್ವೇದಕರ್ಮಗಳನ್ನು ಮಾಡಿಸಿ ಚುರುಕಾದ ಅವಪೀಡನ, ನಸ್ಯ ಪ್ರಯೋಗವನ್ನು ಮಾಡಬೇಕು. ಇದರಿಂದ ತಲೆಯು ಶುದ್ಧಿಯಾಗುತ್ತದೆ. ಅನಂತರ ಒಂದೆಲೆಹೊನ್ನೆ ಮೊದಲಾದ ಹ್ರಸ್ವಪಂಚಮೂಲಗಳ ಕಷಾಯ, ಮಾಂಸರಸ, ಹಾಲು, ಮೊಸರುಗಳೊಡನೆ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ವಾಯುವು ಹೆಚ್ಚಾಗಿ ಹರಡುವುದಿಲ್ಲ ; ಅನಂತರ ಭದ್ರದಾರ್ವಾದಿವಾತಹರದ್ರವ್ಯಗಳು, ಯವಧಾನ್ಯ, ಎಲಚಿ ಹಣ್ಣು, ಹುರುಳಿ, ಅನೂಪಪ್ರಾಣಿಗಳ ಮಾಂಸ, ಉದಕದಲ್ಲಿ ಸಂಚರಿಸುವ ಮೀನು, ಆಮೆ ಮೊದಲಾದ ಪ್ರಾಣಿಗಳ ಮಾಂಸ ಮತ್ತು ಪಂಚವರ್ಗಮಾಂಸ (ಕೂಲಚರಗಳು, ಪ್ಲವಗಳು, ಕೋಶಸ್ಥಗಳು, ಪಾದಿಗಳು, ಮತ್ಸ್ಯಗಳು) ಇವೆಲ್ಲವನ್ನೂ ಒಟ್ಟಿಗೆ ಕೂಡಿಸಿ ಕುದಿಸಿದ ಕಷಾಯವನ್ನು ಶೋಧಿಸಿ ಆದರೊಡನೆ ಕಾಂಜಿಕ ಮೊದಲಾದ ಅಮ್ಲವರ್ಗದ ದ್ರವ್ಯ

ಗಳನ್ನೂ ಹಾಲು, ತುಪ್ಪ, ಒಳ್ಳೆಣ್ಣೆ, ವಸೆ, ಮಜ್ಜೆಗಳನ್ನೂ ಕಾಕೋಳ್ಯಾದಿ ಮಧುರ ದ್ರವ್ಯಕಲ್ಕವನ್ನೂ ಸೇರಿಸಿ ಸರಿಯಾಗಿ ಪಾಕಮಾಡಿ ಶೋಧಿಸಿಟ್ಟುಕೊಳ್ಳುವುದು ; ಇದಕ್ಕೆ ತ್ರ್ಯೈವೃತಘೃತವೆಂದು ಹೆಸರು. ಇದನ್ನು ಅಪತಾನಕರೋಗಿಗಳಿಗೆ ಮೈಮೇಲೆ ಚುಮುಕಿಸುವುದಕ್ಕೂ ಶರೀರಭಾಗವನ್ನು ಅದ್ದಿ ಮುಳುಗಿಸುವುದಕ್ಕೂ ಮೈಗೆ ಬಳಿಯುವುದಕ್ಕೂ ಪಾನಮಾಡುವುದಕ್ಕೂ ಅನ್ನದೊಡನೆ ಕಲಸಿ ಭೋಜನಮಾಡುವುದಕ್ಕೂ ಅನುವಾಸನ ಬಸ್ತಿಯಲ್ಲಿ ಉಪಯೋಗಿಸುವುದಕ್ಕೂ ನಸ್ಯಕರ್ಮಕ್ಕೂ ಉಪಯೋಗಿಸಬೇಕು. ಸ್ವೇದ ವಿಧಾನದಲ್ಲಿ ಹೇಳಿದಂತೆ ಪ್ರಯೋಗಿಸಿ ಮೈಬೆವರುವಂತೆ ಮಾಡಬೇಕು ; ವಾತದೋಷವು ಪ್ರಬಲವಾಗಿದ್ದರೆ ನೆಲದಲ್ಲಿ ಉದ್ದವಾಗಿಯೂ ಅಗಲವಾಗಿಯೂ ಆಳವಾಗಿಯೂ ಇರುವಂತೆ ಹಳ್ಳ ತೆಗೆದು ಸುಖೋಷ್ಣವಾಗಿ ಕಾಯಿಸಿದ ಹೊಟ್ಟು, ಗೋಧಿಯ ಹೊಟ್ಟು, ಕಾಡು ಬೆರಣಿಗಳನ್ನು ತುಂಬಿ ರೋಗಿಯನ್ನು ಅದರ ಮೇಲೆ ಮಲಗಿಸಬೇಕು (ಬೋರಲಾಗಿ, ಮುಖ ಕೆಳಗೆ ಮಾಡಿಕೊಂಡಿರಬೇಕು) ; ಅಥವಾ ಕಾಯಿಸಿದ ಕೆಂಡತುಂಬಿದ ಒಲೆಯ ಮೇಲೆ ಅಥವಾ ಚಪ್ಪಡಿಕಲ್ಲಿನ ಮೇಲೆ ಸುರಾ ಎಂಬ ಮದ್ಯವನ್ನು ಚಿಮುಕಿಸಿ ಅದರ ಮೇಲೆ ಮುತ್ತುಗದ ಎಲೆಗಳನ್ನು ಹರಡಿ ಅದರ ಮೇಲೆ ರೋಗಿಯನ್ನು ಮಲಗಿಸಬೇಕು ; ಎಳ್ಳು, ಅಕ್ಕಿ, ಉದ್ದುಗಳಿಂದ ತಯಾರಿಸಿದ ಕಲ್ಕಕ್ಕೆ ಕೃಶರವೆನ್ನುತ್ತಾರೆ. ಈ ಕೃಶರ, ವೇಸವಾರ, ಪಾಯಸಗಳನ್ನು ಬಿಸಿಮಾಡಿ ರೋಗಿಗೆ ಶಾಖವುಂಟಾಗುವಂತೆ ಮಾಡಿ ಬೆವರಿಸಬೇಕು. ಮೂಲಂಗಿಬೀಜ, ಹರಳುಬೀಜ, ಕಾಮಕಸ್ತೂರಿ (ಬಿಳಿದು, ಕರಿದು ಎರಡುಬಗೆ), ಎಕ್ಕ, ಅರಸಿನಮುಂಡುಗಳ್ಳಿ, ಈಶ್ವರಿ ಇವುಗಳ ಸ್ವರಸಗಳನ್ನು ಸೇರಿಸಿ ತಯಾರಿಸಿದ ತೈಲವನ್ನು ಅಪತಾನಕರೋಗಿಗೆ ಸ್ನಾನ, ಅಭ್ಯಂಗಾದಿಗಳಿಗೆ ಪ್ರಯೋಗಿಸಬೇಕು ; ಅನ್ನವನ್ನು ತಿನ್ನುವುದಕ್ಕಿಂತ ಮುಂಚಿತವಾಗಿಯೇ ಮೆಣಸು, ಬಜೆ ಇವುಗಳ ಚೂರ್ಣವನ್ನು ಹುಳಿಮೊಸರಿಗೆ ಮಿಶ್ರಮಾಡಿ ಕುಡಿಸಿದರೆ ಅಪತಾನಕವು ನಿವಾರಣೆಯಾಗುತ್ತದೆ; ಇದೇ ರೀತಿಯಾಗಿ ಮೊಸರಿಗೆ ತಿಲತೈಲ, ತುಪ್ಪ, ವಸೆ, ಜೇನುತುಪ್ಪಗಳನ್ನು ಸೇರಿಸಿ ಕುಡಿಸಿದರೂ ಅಪತಾನಕವಾತಹರವಾಗುತ್ತದೆ. ಇದು ಶುದ್ಧವಾತಾಪತಾನಕಚಿಕಿತ್ಸಾವಿಧಾನವು ; ಸಂಸರ್ಗದೋಷದಿಂದ ಉಂಟಾದ ಅಪತಾನಕರೋಗಿಗೆ ಮಿಶ್ರದೋಷಚಿಕಿತ್ಸೆಯನ್ನು ಮಾಡಬೇಕು ; ವೇಗವು ನಿಂತಮೇಲೆ ಅವಪೀಡಘೃತಪಾನವನ್ನು ಮಾಡಿಸಬೇಕು ; ಕೋಳಿ, ನಳ್ಳಿ, ಕರಿಯ ಮೀನು, ತಿಮಿಂಗಿಲ, ಹಂದಿ ಇವುಗಳ ಕೊಬ್ಬನ್ನು ರೋಗಿಗೆ ಕೊಡಿಸಬೇಕು ; ಅಥವಾ ಯವಧಾನ್ಯ, ಎಲಚಿಹಣ್ಣು, ಹುರುಳಿ, ಮೂಲಂಗಿ, ಮೊಸರು, ತುಪ್ಪ, ತೈಲಗಳನ್ನು ಸೇರಿಸಿ ತಯಾರಿಸಿದ ಗಂಜಿಯನ್ನಾಗಲೀ ಕುಡಿಸಬೇಕು ; ಅಪತಾನಕವೇಗವು ಶಾಂತವಾದಮೇಲೆ ಹತ್ತು ದಿನಗಳವರೆಗೆ ಸ್ನೇಹ ವಿರೇಚನ, ಆಸ್ಥಾಪನ, ಅನುವಾಸನಕರ್ಮಗಳಿಂದ ರೋಗಿಗೆ ಉಪಚರಿಸಬೇಕು. ವಾತ ವ್ಯಾಧಿಪೀಡಿತನಿಗೆ ಮಾಡತಕ್ಕ ಚಿಕಿತ್ಸಾ ವಿಧಾನಗಳನ್ನೂ (ಬೃಂಹಣ) ಅನುಸರಿಸ

ಬೇಕು ; ಅಗ್ರೋಪಹರಣೀಯಾಧ್ಯಾಯ ಮತ್ತು ವ್ರಣಿತೋಪಾಸನೀಯಾಧ್ಯಾಯಗಳಲ್ಲಿ ಹೇಳಿರುವಂತೆ ರಕ್ಷಾಕರ್ಮಗಳನ್ನೂ ಮಾಡಿಸಬೇಕು.

ಪಕ್ಷಾಘಾತೋಪದ್ರುತಮಮ್ಲಾನಗಾತ್ರಂ ಸರುಜಮಾತ್ಮವನ್ತಮುಪಕರಣವನ್ತಂ ಚೋಪ ಕ್ರಮೇತ್ । ತತ್ರ ಪ್ರಾಗೇವ ಸ್ನೇಹಸ್ವೇದೋಪಪನ್ನಂ ಮೃದುನಾ ಶೋಧನೇನ ಸಂಶೋಧ್ಯಾನು ವಾಸ್ಯಾಸ್ಥಾಪ್ಯ ಚ ಯಥಾಕಾಲಮಾಕ್ಷೇಪಕವಿಧಾನೇನೋಪಚರೇತ್, ವೈಶೇಷಿಕಶ್ಚಾತ್ರ ಮಸ್ತಿಷ್ಕ ಶಿರೋಬಸ್ತಿಶ್ಚಾಣುತೈಲಮಭ್ಯಙ್ಗಾರ್ಥೇ ಶಾಲ್ವಣಮುಪನಾಹಾರ್ಥೇ ಬಲಾತೈಲಮನುವಾಸ ನಾರ್ಥೇ, ಏವಮತನ್ದ್ರಿತಸ್ತ್ರೀಂಶ್ಚತುರೋ ವಾ ಮಾಸಾನ್ ಕ್ರಿಯಾಪಥಮುಪಸೇವೇತ ||೧೯||

ಮನ್ಯಾಸ್ತಮ್ಭೇಽಪ್ಯೇತದೇವ ವಿಧಾನಂ ವಿಶೇಷತೋ ವಾತಶ್ಲೇಷ್ಮಹರೈರ್ನಸ್ಯೈ ರೂಕ್ಷ ಸ್ವೇದೈಶ್ಚೋಪಚರೇತ್ ||೨೦||

ಪಕ್ಷವಧರೋಗಿಯು ಶರೀರ ಕ್ಷೀಣವಾಗದಿದ್ದರೆ ನೋವಿನಿಂದ ಪೀಡಿತನಾಗಿ ಜಿತೇಂದ್ರಿಯನಾಗಿ ಉಪಕರಣಗಳಿಂದ ಕೂಡಿದವನಾದರೆ (ಚಿಕಿತ್ಸೋಪಯೋಗಿಯಂತ್ರ ಮೊದಲಾದ ಸಲಕರಣೆಗಳನ್ನು ಒದಗಿಸಿಕೊಟ್ಟರೆ) ಚಿಕಿತ್ಸೆಮಾಡಲು ಯತ್ನಿಸಬೇಕು ; ಆ ರೋಗಿಗೆ ಮೊದಲು ಸ್ನೇಹಸ್ವೇದಕರ್ಮಗಳನ್ನು ಮಾಡಿಸಿ ಮೃದುವಾದ ಶೋಧನೌಷಧ ಗಳಿಂದ ದೋಷಶೋಧನೆಮಾಡಿ ಅನುವಾಸನ ಮತ್ತು ಆಸ್ಥಾಪನಬಸ್ತಿಗಳನ್ನು ಪ್ರಯೋ ಗಿಸಿ ಸಮಯಾನುಸಾರ ಆಕ್ಷೇಪಕಚಿಕಿತ್ಸಾವಿಧಾನದಂತೆ ಉಪಚರಿಸಬೇಕು. ಆದರೆ ಈ ರೋಗಿಗೆ ವಿಶೇಷವಾಗಿ ಮಸ್ತಿಷ್ಕಶಿರೋಬಸ್ತಿಯನ್ನು (ಅಂದರೆ ಸ್ನೇಹದಿಂದ ನೆನೆಸಿದ ಪಿಚು (ಹತ್ತಿಯ ಮುದ್ದೆ), ಪ್ಲೋತ (ದಪ್ಪವಾದ ಹತ್ತಿಬಟ್ಟೆಯ ತುಂಡು) ಗಳನ್ನು ನೆತ್ತಿಯಲ್ಲಿಟ್ಟರಬೇಕು ; ಅಣುತೈಲದಿಂದ ಅಭ್ಯಂಗವನ್ನೂ, ಉಪನಾಹಕ್ಕೆ ಶಾಲ್ವಣ ವಿಧಾ ನದ ಸ್ವೇದವನ್ನೂ ಅನುವಾಸನ ಬಸ್ತಿದಾನಕ್ಕೆ ಬಲಾತೈಲವನ್ನೂ ಉಪಯೋಗಿಸಬೇಕು ; ಈ ಕ್ರಮದಿಂದಲೇ ವೈದ್ಯನು ಜಾಗರೂಕತೆಯಿಂದ ೩-೪ ತಿಂಗಳವರೆಗೆ ರೋಗಿಗೆ ಉಪ ಚಾರ ಮಾಡಿಸಬೇಕು! ಮನ್ಯಾಸ್ತಂಭದಲ್ಲೂ (ಕತ್ತು ತಿರುಗದೆ ಬಾಧೆಯಾಗುತ್ತಿದ್ದರೆ) ಇದೇ ರೀತಿಯಾಗಿ ಪಕ್ಷಾಘಾತಚಿಕಿತ್ಸಾವಿಧಾನಗಳನ್ನೇ ಆಚರಿಸಬೇಕು ; ಆದರೆ ವಿಶೇಷ ವಾಗಿ ವಾತಕಫಹರಗಳಾದ ನಸ್ಯಕರ್ಮಗಳಿಂದಲೂ ರೂಕ್ಷ ಸ್ವೇದಗಳಿಂದಲೂ ಉಪಚರಿಸ ಬೇಕು.

ಅಪತನ್ತ್ರಕಾತುರಂ ನಾಪತರ್ಪಯೇತ್ ; ವಮನಾನುವಾಸನಾಸ್ಥಾಪನಾನಿ ನ ನಿಷೇವೇತ, ವಾತಶ್ಲೇಷ್ಮೋಪರುದ್ಧೋಚ್ಛ್ವಾಸಂ ತೀಕ್ಷ್ಣೈಃ ಪ್ರಧ್ಮಾಪನೈರ್ಮೋಕ್ಷಯೇತ್, ತುಮ್ಬುರು ಪುಷ್ಕರಾಹ್ವಹಿಂಗ್ವಮ್ಲವೇತಸ ಪಥ್ಯಾಲವಣತ್ರಯಂ ಯವಕ್ವಾಥೇನ ಪಾತುಂ ಪ್ರಯಚ್ಛೇತ್ ; ಪಥ್ಯಾಶತಾರ್ಧೇ ಸೌವರ್ಚಲದ್ವಿಪಲೇ ಚತುರ್ಗುಣೇ ಪಯಸಿ ಸರ್ಪಿಃ ಪ್ರಸ್ಥಂ ಸಿದ್ಧಂ ವಾತ ಶ್ಲೇಷ್ಮಾಪನುಚ್ಚ ಕರ್ಮ ಕುರ್ಯಾತ್ ||೨೧||

ಅಪತಂತ್ರಕರೋಗಿಗೆ ಲಂಘನ, ವಮನ, ಅನುವಾಸನ, ಆಸ್ಥಾಪನಕರ್ಮಗಳನ್ನು ಮಾಡಿಸಬಾರದು ; ವಾತಕಫಗಳಿಂದ ಉಚ್ಛ್ವಾಸವು ತಡೆಯಲ್ಪಟ್ಟರೆ ಚುರುಕಾದ ನಸ್ಯ

ಪ್ರಯೋಗ ಮತ್ತು ತೀಕ್ಷ್ಣಧೂಮಪಾನಗಳಿಂದ ನಿವಾರಿಸಬೇಕು. ಗೌಳದ ೧೫ೀಜ, ಪುಷ್ಕರಮೂಲ, ಹಿಂಗು, ವಾಟೆಹುಳಿ, ಅಣಿಲೆಸಿಪ್ಪೆ, ಸೈಂಧವ, ಸೌವರ್ಚಲ, ಬಿಡಲವಣ ಗಳು ಇವುಗಳ ಚೂರ್ಣವನ್ನು ಯವಧಾನ್ಯದ ಕಷಾಯದಲ್ಲಿ ಹಾಕಿ ಕುಡಿಯಲು ಕೊಡ ಬೇಕು; ೫೦ ಅಣಿಲೆಕಾಯಿ, ೨ ಪಲಗಳಷ್ಟು ಸೌವರ್ಚಲವಣ, ಇವುಗಳ ೪ ಭಾಗದಷ್ಟು ಹಾಲು, ೧ ಪ್ರಸ್ಥ ತುಪ್ಪ ಇವುಗಳನ್ನು ಪಾಕಮಾಡಿ ತಯಾರಿಸಿದ ಘೃತವನ್ನು ಪಾನ ಮಾಡಿಸಬೇಕು; ಮತ್ತು ವಾತಕಫಹರಗಳಾದ ಚಿಕಿತ್ಸೆಯನ್ನು ಮಾಡಬೇಕು.

ಅರ್ದಿತಾತುರಂ ಬಲವನ್ತಮುಪಕರಣವನ್ತಂ ಚ ವಾತವ್ಯಾಧಿವಿಧಾನೇನೋಪಚರೇತ್, ವೈಶೇಷಿಕೈಶ್ಚ ಮಸ್ತಿಷ್ಕಶಿರೋಬಸ್ತಿನಸ್ಯಧೂಮೋಪನಾಹನಾಡೀಸ್ವೇದಾದಿಭಿಃ, ತತಃ ಸತೃಣಂ ಮಹಾಪಞ್ಚಮೂಲಂ ಕಾಕೋಳ್ಯಾದಿಂ ವಿದಾರಿಗನ್ಧಾದಿಮೌದಕಾನೂಪಮಾಂಸಂ ತಥೈವೌದಕ- ಕನ್ದಾಂಶ್ಚ ಸಂಹೃತ್ಯ ದ್ವಿಗುಣೋದಕೇ ಕ್ಷೀರದ್ರೋಣೇ ನಿಃಕ್ವಾಥ್ಯ ಪಾದಾವಶಿಷ್ಟಮವತಾರ್ಯ ಪರಿಸ್ರಾವ್ಯ ತೈಲಪ್ರಸ್ಥೇನೋನ್ಮಿಶ್ರ್ಯ ಪುನರಗ್ನಾವಧಿಶ್ರಯೇತ್, ತತಸ್ತೈಲಂ ಕ್ಷೀರಾನುಗತಮವ ತಾರ್ಯ ಶೀತೀಭೂತಮ (ಭಿಮ) ಥ್ನೀಯಾತ್ ತತ್ರ ಯಃ ಸ್ನೇಹಉತ್ತಿಷ್ಠೇತ್ ತಮಾದಾಯ ಮಧು ರೌಷಧಸಹಾಕ್ಷೀರಯುಕ್ತಂ ವಿಪಚೇತ್, ಏತತ್ ಕ್ಷೀರತೈಲಮರ್ದಿತಾತುರಾಣಾಂ ಪಾನಾಭ್ಯಙ್ಗಾದಿ ಷೂಪಯೋಜ್ಯಮ್; ತೈಲಹೀನಂ ಕ್ಷೀರಸರ್ಪಿರಕ್ಷಿತರ್ಪಣಮಿತಿ ||೨೨||

ಅರ್ದಿತವಾತರೋಗಿಯು ಬಲಿಷ್ಠನಾಗಿ ಚಿಕಿತ್ಸೋಪಕರಣಗಳುಳ್ಳವನಾಗಿದ್ದರೆ ವಾತರೋಗಚಿಕಿತ್ಸೆಯಂತೆ ಉಪಚರಿಸಬೇಕು; ಮುಖ್ಯವಾಗಿ ಈ ರೋಗಿಗೆ ಶಿರೋಬಸ್ತಿ, ಮಸ್ತಿಷ್ಕಶಿರೋಬಸ್ತಿ (ತುಪ್ಪದಿಂದ ಹತ್ತಿಮುದ್ದೆ, ದಪ್ಪ ಬಟ್ಟೆಯ ತುಂಡುಗಳನ್ನು ನೆತ್ತಿ ಯಲ್ಲಿಟ್ಟು ಮುಚ್ಚಿರಬೇಕು), ನಸ್ಯಕರ್ಮ–ಧೂಮಪಾನ–ಉಪನಾಹಸ್ವೇದ–ಸ್ನೇಹ- ನಾಡೀಸ್ವೇದಾದಿಗಳಿಂದ ಉಪಚರಿಸಬೇಕು; ಅನಂತರ ತೃಣಪಂಚಮೂಲ–ಬಿಲ್ವಾದಿ ಪಂಚಮೂಲ– ಕಾಕೋಳ್ಯಾದಿಗಣದ್ರವ್ಯ – ವಿದಾರಿಗಂಧಾದಿಗಣದ್ರವ್ಯ – ಉದಕಮಾಂಸ –ಅನೂಪಮಾಂಸ–ನೀರಿನಲ್ಲಿ ಬೆಳೆಯುವ ತಾವರೆಗಡ್ಡೆ ಮೊದಲಾದುವನ್ನೂ ಅವುಗಳ ಎರಡರಷ್ಟು ನೀರನ್ನೂ ಸೇರಿಸಿ ೧/೪ ಭಾಗ ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿದ ಕಷಾಯದೊಡನೆ ತಿಲತೈಲ ೧ ಪ್ರಸ್ಥವನ್ನು ಸೇರಿಸಿ ಪುನಃ ಬೆಂಕಿಯಿಂದ ಕಾಯಿಸಿ ಹಾಲಿ ನೊಡನೆ ಸೇರಿರುವ ತೈಲವನ್ನು ಕೆಳಕ್ಕೆ ಇಳಿಸಿಕೊಂಡು ಅದು ತಣ್ಣಗಾದಮೇಲೆ ಕಡೆ ಗೋಲಿನಿಂದ ಕಡೆದರೆ ಬರುವ ಸ್ನೇಹವನ್ನು ಸಂಗ್ರಹಮಾಡಿ ಕಾಕೋಳ್ಯಾದಿ ಮಧುರೌ ಷಧಗಳನ್ನು ಸೇರಿಸಿ ಹಾಲನ್ನೂ ಮಿಶ್ರಮಾಡಿ ಚೆನ್ನಾಗಿ ಪಾಕಮಾಡಬೇಕು; ಈ ಕ್ಷೀರ ತೈಲವನ್ನು ಅರ್ದಿತವಾತದಿಂದ ಪೀಡಿತರಾದ ರೋಗಿಗಳಿಗೆ ಪಾನ–ಅಭ್ಯಂಗ ಮೊದಲಾದ ಕ್ರಮಗಳಿಂದ ಪ್ರಯೋಗಿಸಬೇಕು; ತೈಲವಿಲ್ಲದ ಹಾಲುತುಪ್ಪಗಳು ಅಕ್ಷಿತರ್ಪಣಕ್ರಿಯೆಗೆ ಉಪಯೋಗವಾದುವೆಂದು ತಿಳಿಯಬೇಕು.

ಗೃಧ್ರಸೀವಿಶ್ವಾಚೀಕ್ರೋಷ್ಟುಕಶಿರಃಖಞ್ಜಪಙ್ಗುಲವಾತಕಣ್ಟಕಪಾದದಾಹಪಾದಹರ್ಷಾವ ಬಾಹುಕಬಾಧಿರ್ಯಧಮನೀಗತವಾತರೋಗೇಷು ಯಥೋಕ್ತಂ ಯಥೋದ್ದೇಶಂ ಚ ಸಿರಾವ್ಯಧಂ ಕುರ್ಯಾತ್ ಅನ್ಯತ್ರಾವಬಾಹುಕಾತ್, ವಾತವ್ಯಾಧಿಚಿಕಿತ್ಸಿತಂ ಚಾವೇಕ್ಷ್ಯ ||೨೩||

ಗೃಧ್ರಸೀ, ವಿಶ್ವಾಚೀ, ಕ್ರೋಷ್ಟುಕಶಿರ, ಖಂಜ, ಪಂಗು, ವಾತಕಂಟಕ, ಪಾದ ದಾಹ, ಪಾದಹರ್ಷ, ಅವಬಾಹುಕ, ಬಾಧಿರ್ಯ, ಧನುರ್ನೀಗತವಾತ ಈ ರೋಗಗಳಲ್ಲಿ ಅವಬಾಹುಕ ರೋಗವನ್ನು ಬಿಟ್ಟು ಉಳಿದ ಎಲ್ಲಾ ರೋಗಗಳಲ್ಲೂ ಆಯಾಯ ರೋಗ ಸ್ಥಾನಗಳಲ್ಲಿರುವ ಸಿರೆಗಳನ್ನು ಗೊತ್ತುಮಾಡಿಕೊಂಡು ವಾತರೋಗಕ್ಕೆ ಮಾಡುವ ಸ್ನೇಹ ಸ್ವೇದಾದಿ ಉಪಚಾರಗಳನ್ನು ಮಾಡಿದನಂತರ ಸಿರಾವ್ಯಧಮಾಡಿ ದುಷ್ಟರಕ್ತವನ್ನು ನಿರ್ಹರಣಮಾಡಬೇಕು. ಅವಬಾಹುಕರೋಗವು ಕಫವಾತಗಳಿಂದ ಕಫಸ್ಥಾನದಲ್ಲಿ ಉಂಟಾಗುವುದರಿಂದ ವಾತರೋಗಚಿಕಿತ್ಸೆಯಲ್ಲಿ ಹೇಳುವ ಸ್ನೇಹ-ಸ್ವೇದೋಪಚಾರಗಳು ನಿಷಿದ್ಧವು ; ಧಾತುಕ್ಷಯನಿಮಿತ್ತವಾದ ವಾತಪ್ರಕೋಪದಿಂದ ಅವಬಾಹುಕ ರೋಗ ವುಂಟಾಗುತ್ತದೆಯಾಗಿ ಸಿರಾವ್ಯಧವನ್ನು ಮಾಡಕೂಡದು ; ರೂಕ್ಷಸ್ವೇದ, ನಸ್ಯಾದಿಗಳನ್ನು ಪ್ರಯೋಗಿಸಬೇಕು ; ಶೋಷಯುಕ್ತ ಅವಬಾಹುಕದಲ್ಲೂ ಸಿರಾವ್ಯಧ ಮಾಡಬೇಕೆಂದು ಹೇಳುತ್ತಾರೆ. ಗೃಧ್ರಸೀ ಮೊದಲಾದ ರೋಗಗಳಲ್ಲಿ ವಾತರೋಗಚಿಕಿತ್ಸೆಗಳಾದ ಸ್ನೇಹ ಸ್ವೇದಕರ್ಮಗಳನ್ನು ಮಾಡಿಸಿದಮೇಲೆ ಸಿರಾವ್ಯಧವನ್ನು ಮಾಡಿಸಬೇಕು.

ಕರ್ಣಶೂಲೇ ತು ಶೃಙ್ಗವೇರರಸಂ ತೈಲಮಧುರಸಂಸೃಷ್ಟಂ ಸೈಂಧವೋಪಹಿತಂ ಸುಖೋಷ್ಣಂ ಕರ್ಣೇ ದದ್ಯಾತ್ ; ಅಜಾಮೂತ್ರಮಧುತೈಲಾನಿ ವಾ ; ಮಾತುಲುಙ್ಗದಾಡಿಮಾತಿನ್ತಿಡೀಕಸ್ವರಸಮೂತ್ರಸಿದ್ಧಂ ತೈಲಂ, ಶುಕ್ತಸುರಾಮೂತ್ರತಕ್ರಲವಣಸಿದ್ಧಂ ವಾ, ನಾಡೀಸ್ವೇದೈಶ್ಚ ಸ್ವೇದಯೇತ್, ವಾತವ್ಯಾಧಿಚಿಕಿತ್ಸಿತಂ ಚಾವೇಕ್ಷೇತ, ಭೂಯಶ್ಚೋತ್ತರೇ ವಕ್ಷ್ಯಾಮಃ ||೨೪||

ತೂಣೀಪ್ರತೂಣ್ಯೋಃ ಸ್ನೇಹಲವಣಮುಷ್ಣೋದಕೇನ ಪಾಯಯೇತ್, ಪಿಪ್ಪಲ್ಯಾದಿ ಚೂರ್ಣಂ ವಾ ಹಿಙ್ಗುಯವಕ್ಷಾರಪ್ರಗಾಢಂ, ಸರ್ಪಿರ್ಬಸ್ತಿಭಿಶ್ಚೈನಮುಪಕ್ರಮೇತ್ ||೨೫||

ಕರ್ಣಶೂಲದಲ್ಲಿ ಹಸೀ ಶುಂಠಿಯ ರಸಕ್ಕೆ ತಿಲತೈಲ-ಜೇನುತುಪ್ಪಗಳನ್ನು ಸೇರಿಸಿ ಸೈಂಧನಲವಣದ ಪುಡಿಯನ್ನು ಹಾಕಿ ಸುಖೋಷ್ಣವಾಗುವಂತೆ ಕಾಯಿಸಿ ಕಿವಿಗೆ ತುಂಬ ಬೇಕು ; ಆಡಿನ ಮೂತ್ರ, ಜೇನುತುಪ್ಪ, ಎಳ್ಳೆಣ್ಣೆಗಳನ್ನಾಗಲೀ ಬಿಸಿಮಾಡಿ ಕಿವಿಗೆ ತುಂಬ ಬೇಕು ; ಮಾದಳ-ದಾಳಿಂಬೆ-ಹುಣಿಸೆಹಣ್ಣುಗಳ ರಸಕ್ಕೆ ಗೋಮೂತ್ರ ತಿಲತೈಲಗಳನ್ನು ಸೇರಿಸಿ ಪಾಕಮಾಡಿದ ತೈಲವನ್ನಾಗಲೀ ಶುಕ್ತ (ಕಂದಮೂಲಫಲಾದಿಗಳಿಂದ ತಯಾರಿಸಿದ ಹುಳಿದ್ರವ), ಮದ್ಯ, ಮಜ್ಜಿಗೆ-ಗೋಮೂತ್ರ--ಸೈಂಧವ ಇವುಗಳನ್ನು ಮಿಶ್ರಮಾಡಿ ತಯಾರಿಸಿದ ತೈಲವನ್ನಾಗಲೀ ಕಿವಿಗೆ ತುಂಬಬೇಕು ; ನಾಡೀ ಸ್ವೇದವನ್ನೂ ವಾತ ರೋಗೋಕ್ತ ಸ್ನೇಹಸ್ವೇದಗಳನ್ನೂ ಮಾಡಬೇಕು ; ಪುನಃ ಕರ್ಣರೋಗಚಿಕಿತ್ಸೆಯನ್ನು ಉತ್ತರತಂತ್ರದಲ್ಲಿ ಹೇಳುತ್ತೇವೆ ; ತೂಣೀ, ಪ್ರತೂಣೀ ರೋಗಗಳಲ್ಲಿ ತಿಲತೈಲಕ್ಕೆ ಸೈಂಧನಲವಣವನ್ನು ಸೇರಿಸಿ ಬಿಸಿನೀರನ್ನೂ ಮಿಶ್ರಮಾಡಿ ಕುಡಿಸಬೇಕು ; ಹಿಪ್ಪಲಿ ಮೊದ ಲಾದುವುಗಳ ಚೂರ್ಣದೊಡನೆ ಹಿಂಗು-ಯವಕ್ಷಾರಗಳನ್ನು ಹೆಚ್ಚಾಗಿ ಸೇರಿಸಿ ಬಿಸಿನೀರಿನಲ್ಲಿ

ಕದರಿ ಕುಡಿಸಬೇಕು. ಘೃತಪಾನ ಮತ್ತು ಆಸ್ಥಾಪನಾನ್ವಾಸನ, ಉತ್ತರಬಸ್ತಿಗಳನ್ನು ಪ್ರಯೋಗಿಸಬೇಕು.

ಆಧ್ಮಾನೇ ತು ಅಪತರ್ಪಣಪಾಣಿತಾಪದೀಪನಚೂರ್ಣಫಲವರ್ತಿಕ್ರಿಯಾಪಾಚನೀಯದೀಪನೀಯಬಸ್ತಿಭಿರುಪಾಚರೇತ್ । ಲಙ್ಘನಾನಂತರಂ ಚಾನ್ನಕಾಲೇ ಧಾನ್ಯಕಜೀರಕಾದಿದೀಪನಸಿದ್ಧಾನಿ ಅನ್ನಾನಿ । ಪ್ರತ್ಯಾಧ್ಮಾನೇ ಛರ್ದನಾಪತರ್ಪಣದೀಪನಾನಿ ಕುರ್ಯಾತ್ ॥೨೬॥

ಅಷ್ಠೀಲಾಪ್ರತ್ಯಷ್ಠೀಲಯೋರ್ಗುಲ್ಮಾಭ್ಯನ್ತರವಿದ್ರಧಿವತ್ ಕ್ರಿಯಾವಿಭಾಗ ಇತಿ ॥೨೭॥

ಆಧ್ಮಾನರೋಗದಲ್ಲಿ ಲಂಘನಮಾಡಿಸಬೇಕು, ಅಂಗೈಯನ್ನು ಬೆಂಕಿಯಿಂದ ಕಾಯಿಸಿ ಹೊಟ್ಟೆಯ ಮೇಲೆ ಇರಿಸುತ್ತಿರಬೇಕು, ಪಂಚಕೋಲ ಮೊದಲಾದ ಅಗ್ನಿದೀಪನ ಚೂರ್ಣವನ್ನೂ, ಫಲವರ್ತಿಕ್ರಿಯೆ, ಪಾಚನೀಯ-ದೀಪನೀಯ ಬಸ್ತಿಗಳ ಪ್ರಯೋಗಗಳಿಂದ ರೋಗಿಗೆ ಉಪಚರಿಸಬೇಕು ; ಲಂಘನ ಮಾಡಿಸಿದ ಮೇಲೆ ಭೋಜನಕಾಲದಲ್ಲಿ ಕೊತ್ತುಂಬರಿ, ಜೀರಿಗೆ ಮೊದಲಾದ ಅಗ್ನಿದೀಪನದ್ರವ್ಯಗಳಿಂದ ತಯಾರಿಸಿದ ಅನ್ನವನ್ನು ಕೊಡಿಸಬೇಕು ; ಪ್ರತ್ಯಾಧ್ಮಾನರೋಗಿಗೆ ವಮನ, ಲಂಘನ, ದೀಪನಗಳನ್ನು, ಅಷ್ಠೀಲಾ, ಪ್ರತ್ಯಷ್ಠೀಲಾ ರೋಗಗಳಲ್ಲಿ ಗುಲ್ಮ ಮತ್ತು ಅಂತರ್ವಿದ್ರಧಿಗಳನ್ನೂ ಚಿಕಿತ್ಸಾವಿಧಾನಗಳ ಪ್ರಯೋಗಿಸಬೇಕು.

ಹಿಙ್ಗುತ್ರಿಕಟುವಚಾಜಮೋದಾಧಾನ್ಯಾಜಗನ್ಧಾದಾಡಿಮತಿನ್ತಿಡೀಕಪಾಠಾಚಿತ್ರಕಯವಕ್ಷಾರಸೈನ್ಧವಬಿಡಸೌವರ್ಚಲಸ್ವರ್ಜಿಕಾಪಿಪ್ಪಲೀಮೂಲಾಮ್ಲವೇತಸಶಠೀಪುಷ್ಕರಮೂಲಹಪುಷಾಚವ್ಯಾಜಾಜೀಪಥ್ಯಾಶ್ಚೂರ್ಣಯಿತ್ವಾ ಮಾತುಲುಙ್ಗಾಮ್ಲೇನ ಬಹುಶಃ ಪರಿಭಾವ್ಯಾಕ್ಷಮಾತ್ರಾಂ ಗುಟಿಕಾಂ ಕಾರಯೇತ್, ತತಃ ಪ್ರಾತರೇಕೈಕಾಂ ವಾತವಿಕಾರೀ ಭಕ್ಷಯೇತ್, ಅಥೈಷಾ[1] ಗುಲ್ಮೋದರಾರೋಚಕಹೃದ್ರೋಗಾಧ್ಮಾನಪಾರ್ಶ್ವೋದರಬಸ್ತಿಶೂಲಾನಾಹಮೂತ್ರಕೃಚ್ಛ್ರಪ್ಲೀಹಾರ್ಶಸ್ತೂಣೀಪ್ರತಿತೂಣೀರಪಹನ್ತಿ ॥೨೮॥

ಕೇವಲೋ ದೋಷಯುಕ್ತೋ ವಾ ಧಾತುಭಿರ್ವಾವೃತೋಽನಿಲಃ ।
ವಿಜ್ಞೇಯೋ ಲಕ್ಷಣೋಹಾಭ್ಯಾಂ ಚಿಕಿತ್ಸಾ ಚಾವಿರೋಧತಃ ॥೨೯॥

ಹಿಂಗು, ತ್ರಿಕಟು, ಬಜೆ, ವಾದಕ್ಕಿ, ಕೊತ್ತುಂಬರಿ, ನಾರಂಬೇಳೆ, ದಾಳಿಂಬೆಹಣ್ಣು –ಹುಣಿಸೆಹಣ್ಣು-ಅಗಳುಶುಂಠಿ–ಚಿತ್ರಮೂಲ–ಯವಕ್ಷಾರ–ಸೈಂಧವ-ಬಿಡ-ಸೌವರ್ಚಲವಣಗಳು–ಸರ್ಜಕ್ಷಾರ-ಮೋಡಿ-ಓಟೆಹುಳಿ, ಕರ್ಪೂರಶುಂಠಿ-ಪುಷ್ಕರಮೂಲ-ಹೆಬ್ಬೆಬೇರು-ಚವ್ಯ (ಗಜಹಿಪ್ಪಲಿಯ ಬೇರು), ಅಣಿಲೆಕಾಯಿ ಸಿಪ್ಪೆ ಇವು ಪ್ರತ್ಯೇಕ ಸಮಭಾಗಗಳನ್ನು ಸೇರಿಸಿ ಚೂರ್ಣಮಾಡಿ ಶೋಧಿಸಿ ಮಾದಳದ ಹುಳಿರಸದಿಂದ ಅನೇಕ ಸಾರಿ ಭಾವನೆಮಾಡಿ ಕರ್ಷಪ್ರಮಾಣದ (೪/೩ ರೂಪಾಯಿ ತೂಕದ) ವಟಕಗಳನ್ನು ಮಾಡಿಟ್ಟುಕೊಂಡು ಪ್ರಾತಃಕಾಲದಲ್ಲಿ ದಿನಕ್ಕೆ ಒಂದು ವಟಕದಂತೆ ವಾತರೋಗಿಗೆ ತಿನ್ನಿಸಬೇಕು ; ಇದರ ಪ್ರಯೋಗ

---

1 'ಏಷ ಯೋಗಃ ಕಾಸಶ್ವಾಸಗುಲ್ಮೋ' ಇತಿ ಪಾಠಾನ್ತರಮ್ । ಭವನ್ತಿ ಚಾತ್ರ ।

ದಿಂದ ಕಾಸ-ಶ್ವಾಸ-ಗುಲ್ಮ-ಉದರ-ಅರುಚಿ-ಹೃದ್ರೋಗ-ಅಧ್ಮಾನ, ಪಾರ್ಶ್ವಶೂಲೆ-ಹೊಟ್ಟೆ-ಬಸ್ತಿಶೂಲೆ-ಆನಾಹ-ಮೂತ್ರ ಕೃಚ್ಛ್ರ-ಪ್ಲೀಹವೃದ್ಧಿ- ಅರ್ಶೋರೋಗ - ತೂಣಿ-ಪ್ರತಿತೂಣಿಗಳು ನಿವಾರಣೆಯಾಗುತ್ತವೆ ; ಗಯದಾಸಾಚಾರ್ಯರು ಅಜಗಂಧಾ ಎಂದರೆ ಹೊಲದಲ್ಲಿ ಬೆಳೆಯುವ ವಾದಕ್ಕಿ ಎಂದು ಅಭಿಪ್ರಾಯಪಡುತ್ತಾರೆ ; ಮೇಲಿನ ಅಂಶಗಳನ್ನು ಪುಷ್ಟೀಕರಿಸುವ ಶ್ಲೋಕಗಳಿವೆ ; ಅವುಗಳ ಅರ್ಥವೇನೆಂದರೆ—ಶುದ್ಧವಾತ ; ಪಿತ್ತ-ಕಫ ಮಿಶ್ರವಾತ ; ರಸರಕ್ತಾದಿ ಧಾತುಗಳಿಂದ ಆವರಿಸಲ್ಪಟ್ಟ ವಾತ ಇವುಗಳನ್ನು ಲಕ್ಷಣಗಳಿಂದಲೂ ಊಹೆಯಿಂದಲೂ ನಿರ್ಧರಿಸಿ ಒಂದಕ್ಕೊಂದಕ್ಕೆ ವಿರೋಧವುಂಟಾಗದಂತೆ ಚಿಕಿತ್ಸೆಯನ್ನು ಮಾಡಬೇಕು.

ಟಿಪ್ಪಣಿ—ವಾತಲಕ್ಷಣ—ತೋದಭೇದಾದಿಗಳು ಕಪ್ಪು, ಅರುಣವರ್ಣ, ನಡುಕ ಇತ್ಯಾದಿ. ಪಿತ್ತಲಕ್ಷಣ—ಚೋಷದಾಹಾದಿಗಳು ಪೀತವರ್ಣ ಮೊದಲಾದುವು ; ಕಫಲಕ್ಷಣ—ನವೆ–ಶೋಫ–ಪ್ರಸೇಕ–ಬಿಳಿಯ ಬಣ್ಣ ಮೊದಲಾದುವು ; ಊಹೆಯೆಂದರೆ ಕೇಳದಿರುವ ವಿಚಾರವನ್ನು ಸಂದರ್ಭಗಳನ್ನು ನೋಡಿ ನಿರ್ಧರಿಸುವುದು ; ಪಿತ್ತ–ಕಫ ಧಾತುಗಳಿಂದ ವಾತವು ಆವರಿಸಲ್ಪಡುವುದು ಸಂಗತವಾದದ್ದು ; ಏಕೆಂದರೆ ಅವುಗಳೆಲ್ಲಾ ಮೂರ್ತದ್ರವ್ಯಗಳು (ಅವುಗಳಿಗೊಂದೊಂದು ಆಕಾರವುಂಟು) ; ಆದರೆ ಆಕಾರವಿಲ್ಲದ ಪ್ರಾಣ ಮೊದಲಾದ ೫ ವಿಧ ವಾತಗಳಿಗೆ ಪರಸ್ಪರ ಆವರಣ-ಆವರಕತ್ವಗಳುಂಟಾಗುವುದು ಹೇಗೆ ಎಂದು ಪ್ರಶ್ನೆಯುಂಟಾದರೆ ಅದಕ್ಕೆ ಈ ರೀತಿಯಾಗಿ ಸಮಾಧಾನಮಾಡಬೇಕು. ಹೇಗೆಂದರೆ—ಪ್ರಾಣೋದಾನಗಳೆರಡಕ್ಕೂ ಗುರುತರವಾದ ಆವರಣವನ್ನೂ ಧಾತ್ವಾವರಣಗಳ ಪೈಕಿ ಮೇದಸ್ಸಿನಿಂದ ಆವೃತವಾದ ವಾತಕ್ಕೆ ಗುರುತರವಾದ ಆವರಣವನ್ನೂ ಗಮನಿಸಬೇಕು ; ಪ್ರಾಣವೂ ಉದಾನವೂ ಮೇಲ್ಮುಖವಾಗಿಯೇ ಸಂಚರಿಸುತ್ತವೆ ; ಅಪಾನವು ಕೆಳಗಡೆಗೇ ಸಂಚರಿಸುತ್ತದೆ ; ಹೀಗೆ ಊರ್ಧ್ವಗಾಮಿಗಳಾದ ಪ್ರಾಣೋದಾನಗಳು ಅಪಾನದ ಗತಿಯನ್ನು ತಡೆಯುವುದರಿಂದ ಆವರಕಗಳೆನಿಸುತ್ತವೆ ; ಅಥವಾ ಈ ಎರಡು ವಾತಗಳೂ ಎದುರುಬದುರಾಗಿ ಸಂಚರಿಸುವಾಗ ಒಟ್ಟುಗೂಡಿ ಬಲವಾದದ್ದು ದುರ್ಬಲವಾದದ್ದನ್ನು ತಡೆಯುವುದರಿಂದ ದುರ್ಬಲವಾತವು ತನ್ನ ಮಾರ್ಗದಲ್ಲಿ ಸಂಚರಿಸಲಾಗದೆ ಹಿಂದಕ್ಕೆ ಸುಗ್ಗಿದರೆ ಆವೃತವಾತವೆನಿಸುತ್ತದೆ.

ರುಜಾವಸ್ತಂ ಘನಂ ಶೀತಂ ಶೋಫಂ ಮೇದೋಯುತೋಽನಿಲಃ ।
ಕರೋತಿ ಯಸ್ಯ ತಂ ವೈದ್ಯಃ ಶೋಥವತ್ಸಮುಪಾಚರೇತ್ ॥೩೦॥

ಮೇದೋವೃತವಾತಲಕ್ಷಣಗಳನ್ನೂ ಚಿಕಿತ್ಸೆಯನ್ನೂ ಹೇಳುತ್ತಾರೆ—ಯಾವ ಮನುಷ್ಯನಿಗೆ ಮೇದಸ್ಸಿನಿಂದ ಆವರಿಸಲ್ಪಟ್ಟ ವಾತದಿಂದ ನೋವಿನಿಂದ ಕೂಡಿದ ಗಟ್ಟಿಯಾದ ತಣ್ಣಗಿರುವ ಶೋಫವುಂಟಾಗುತ್ತದೆಯೋ ಅದನ್ನು ಶೋಥ ಚಿಕಿತ್ಸೆಯಂತೆ ಉಪಚರಿಸಬೇಕು.

ಕಫಮೇದೋವೃತೋ ವಾಯುರ್ಯದೋರೂ ಪ್ರತಿಪದ್ಯತೇ ।
ತದಾಙ್ಗ ಮರ್ದಸ್ತೈಮಿತ್ಯರೋಮಹರ್ಷರುಜಾಜ್ವರೈಃ ॥೩೧॥
ನಿದ್ರಯಾ ಚಾರ್ದಿತೌ ಸ್ತಬ್ಧೌ ಶೀತಲಾವಪ್ರಚೇತನೌ ।
ಗುರುಕಾವಸ್ಥಿರಾವೂರೂ ನ ಸ್ವಾವಿವ ಚ ಮನ್ಯತೇ ॥೩೨॥
ತಮೂರುಸ್ತಮ್ಭಮಿತ್ಯಾಹುರಾಢ್ಯವಾತಮಥಾಪರೇ ।
ಸ್ನೇಹವರ್ಜಂ ಪಿಬೇತ್ತತ್ರ ಚೂರ್ಣಂ ಷಡ್ಧರಣಂ ನರಃ ॥೩೩॥
ಹಿತಮುಷ್ಣಾಮ್ಬುನಾ ತದ್ವತ್ ಪಿಪ್ಪಲ್ಯಾದಿಗಣೈಃ ಕೃತಮ್ ।
ಲಿಹ್ಯಾದ್ವಾ ತ್ರೈಫಲಂ ಚೂರ್ಣಂ ಕ್ಷೌದ್ರೇಣ ಕಟುಕಾನ್ವಿತಮ್ ॥೩೪॥
ಮೂತ್ರೈರ್ವಾ ಗುಗ್ಗುಳುಂ ಶ್ರೇಷ್ಠಂ ಪಿಬೇದ್ವಾಪಿ ಶಿಲಾಜತು ।
ತತೋ ಹನ್ತಿ ಕಫಾಕ್ರಾನ್ತಂ ಸಮೇದಸ್ಕಂ ಪ್ರಭಞ್ಜನಮ್ ॥೩೫॥
ಹೃದ್ರೋಗಮರುಚಿಂ ಗುಲ್ಮಂ ತಥಾಭ್ಯನ್ತರವಿದ್ರಧಿಮ್ ।
ಸಕ್ಷಾರಮೂತ್ರಸ್ವೇದಾಂಶ್ಚ ರೂಕ್ಷಾಣ್ಯುತ್ಸಾದನಾನಿ ಚ ॥೩೬॥
ಕುರ್ಯಾದ್ದಿಹ್ಯಾಚ್ಚ ಮೂತ್ರಾಢ್ಯೈಃ ಕರಞ್ಜಫಲಸರ್ಷಪೈಃ ।
ಭೋಜ್ಯಾಃ ಪುರಾಣಶ್ಯಾಮಾಕಕೋದ್ರವೋದ್ದಾಲಶಾಲಯಃ ॥೩೭॥
ಶುಷ್ಕಮೂಲಕಯೂಷೇಣ ಪಟೋಲಸ್ಯ ರಸೇನ ವಾ ।
ಜಾಙ್ಗಲೈರಘೃತೈರ್ಮಾಂಸೈಃ ಶಾಕೈಶ್ಚಾಲವಣೈರ್ಹಿತೈಃ ॥೩೮॥
ಯದಾ ಸ್ಯಾತಾಂ ಪರಿಕ್ಷೀಣೇ ಭೂಯಿಷ್ಠೇ ಕಫಮೇದಸೀ ।
ತದಾ ಸ್ನೇಹಾದಿಕಂ ಕರ್ಮ ಪುನರತ್ರಾವಚಾರಯೇತ್ ॥೩೯॥

ಕಫಮೇದಸ್ಸುಗಳಿಂದ ಆವರಿಸಲ್ಪಟ್ಟ ವಾಯುವು ತೊಡೆಗಳಲ್ಲಿ ಸೇರಿ ಮೈ ಕತ್ತರಿಸುವಂತೆ ನೋವು, ತೊಡೆಗಳು ಅಲುಗಾಡದಂತಾಗುವುದು, ರೋಮಾಂಚವಾಗುವುದು, ನೋವು, ಜ್ವರ, ನಿದ್ರೆಗಳಿಂದ ಪೀಡಿತನಾಗಿ ತೊಡೆಗಳಲ್ಲಿ ನೋವು, ನಿಶ್ಚಲನೆ, ಶೀತಲತ್ವ, ಸ್ಪರ್ಶಜ್ಞಾನವಿಲ್ಲದಿರುವುದು, ಭಾರ–ಕಠಿಣವಿಲ್ಲದಿರುವಿಕೆ (ಮೆತ್ತಗಿರುವುದು), ಸ್ಪರ್ಶಜ್ಞಾನವಿಲ್ಲದಕಾರಣ ತನ್ನ ತೊಡೆಗಳಲ್ಲ ಅನ್ಯರ ವಸ್ತು ಎಂಬುದಾಗಿ ತಿಳಿಯುತ್ತಾನೆ. ಈ ವ್ಯಾಧಿಗೆ ಊರುಸ್ತಂಭವೆನ್ನುತ್ತಾರೆ; ಇತರರು ಇದನ್ನು ಆಢ್ಯವಾತರೋಗವೆನ್ನುತ್ತಾರೆ; ಈ ರೋಗಿಯು ತುಪ್ಪ-ತಿಲತೈಲ-ವಸೆ--ಮಜ್ಜೆಗಳೆಂಬ ೪ ವಿಧ ಸ್ನೇಹಗಳನ್ನೂ ಹಾಲು--ಮಾಂಸರಸ ಮೊದಲಾದ ಸ್ನೇಹಕಾರಕ ದ್ರವ್ಯಗಳನ್ನೂ ತ್ಯಜಿಸಬೇಕು; ಕಫಮೇದಸ್ಸುಗಳಿಗೆ ಅತಿರೂಕ್ಷವಾದ ಚಿಕಿತ್ಸೆಯನ್ನು ಮಾಡಬೇಕಾದ್ದರಿಂದ ಷಡ್ಧರಣಚೂರ್ಣವನ್ನು (ಕಟುಕರೋಹಿಣಿ--ಅತಿಬಜೆ–ಅಗಳು ಶುಂಠಿ-ಚಿತ್ರಮೂಲ--ಕೊಡಶಿಗೆಬಿತ್ತ--ಅಣಿಲೆಸಿಪ್ಪೆ) ಸ್ನೇಹಮಿಶ್ರಮಾಡದೆ ಬಿಸಿನೀರಿನಲ್ಲಿ ಕದರಿ ಕುಡಿಸಬೇಕು; ಹಿಪ್ಪಲಿ ಮೊದಲಾದ ದ್ರವ್ಯಗಳ ಚೂರ್ಣವನ್ನಾಗಲೀ ಅಥವಾ ತ್ರಿಫಲಾ, ಕಟುಕರೋಹಿಣಿಗಳ ಚೂರ್ಣವನ್ನು ಜೇನುತುಪ್ಪದಲ್ಲಿ ಕಲೆಸಿ ನೆಕ್ಕಿಸಬೇಕು; ಗೋಮೂತ್ರದಲ್ಲಿ ಶುದ್ಧಗುಗ್ಗುಳುವನ್ನಾಗಲೀ ಶಿಲಾಜತುವನ್ನಾಗಲೀ ಕದರಿ ಕುಡಿಸಬೇಕು; ಇವು ಕಫಮೇದಸ್ಸುಗಳಿಂದ ಆವೃತವಾಗಿ

ರುವ ವಾತವನ್ನು ನಿವಾರಿಸುತ್ತವೆ. ಕ್ಷಾರಮಿಶ್ರಮಾಡಿದ ಗೋಮೂತ್ರದಿಂದ ಸ್ವೇದಕರ್ಮ ವನ್ನೂ ರೂಕ್ಷ ದ್ರವ್ಯಗಳ ಚೂರ್ಣದಿಂದ ತೊಡೆಗಳ ಉದ್ವರ್ತನವನ್ನೂ (ಉಜ್ಜಿಸಬೇಕು) ಹೊಂಗೆ ಬೀಜ ಮತ್ತು ಸಾಸಿವೆಗಳನ್ನು ಗೋಮೂತ್ರದಿಂದ ಅರೆದು ಕದರಿ ತೊಡೆಗಳಿಗೆ ಲೇಪನವನ್ನೂ ಮಾಡಿಸಬೇಕು ; ಹಳೆಯ ಸಾವೆ-ಹಾರಕ-ಉದ್ದಾಲಕ (ಕಾಡುಗೋಧಿ) ಗಳ ಅನ್ನವನ್ನು ಒಣಗಿದ ಮೂಲಂಗಿಯ ಕಟ್ಟಿನಿಂದಾಗಲೀ ಪಡವಲಕಾಯಿಯ ಸ್ವರಸ ದೊಡನೆಯಾಗಲೀ ಭೋಜನಮಾಡಿಸಬೇಕು ; ತುಪ್ಪ ಮಿಶ್ರಮಾಡದೆ ಜಾಂಗಲ ಮಾಂಸ ವನ್ನೂ, ಲವಣ ಮಿಶ್ರಮಾಡದೆ ಸೊಪ್ಪಿನ ಪಲ್ಯಗಳನ್ನೂ ಆಹಾರದೊಡನೆ ತಿನ್ನಿಸಬೇಕು ; ಈ ಕಾರ್ಯಗಳಿಂದ ಕಫಮೇದಸ್ಸುಗಳು ಅಧಿಕಪ್ರಮಾಣದಿಂದ ಕ್ಷೀಣಿಸಿದರೆ ಸ್ನೇಹ ಸ್ವೇದಾದಿ ಕರ್ಮಗಳನ್ನು ಆಚರಿಸಬಹುದು.

ಸುಗನ್ಧಿಃ ಸುಲಘುಃ ಸೂಕ್ಷ್ಮಸ್ತೀಕ್ಷ್ಣೋಷ್ಣಃ ಕಟುಕೋ ರಸೇ ।
ಕಟುಪಾಕಃ ಸರೋ ಹೃದ್ಯೋ ಗುಗ್ಗುಳುಃ ಸ್ನಿಗ್ಧಪಿಚ್ಛಿಲಃ ॥೪೦॥
ಸನವೋ ಬೃಂಹಣೋ ಬಲ್ಯಃ ಪುರಾಣಸ್ತ್ವಪಕರ್ಷಣಃ ।
ತೈಕ್ಷ್ಣ್ಯಾದೌಷ್ಣ್ಯಾತ್ಕಫವಾತಘ್ನಃ ಸರತ್ವಾನ್ಮಲಪಿತ್ತನುತ್ ॥೪೧॥
ಸೌಗನ್ಧ್ಯಾತ್ ಪೂತಿಕೋಷ್ಠಘ್ನಃ ಸೌಕ್ಷ್ಮ್ಯಾಚ್ಚಾನಲದೀಪನಃ ।
ತಂ ಪ್ರಾತಸ್ತ್ರಿಫಲಾದಾರ್ವೀಪಟೋಲಕುಶವಾರಿಭಿಃ ॥೪೨॥
ಪಿಬೇದಾಪ್ಯ ವಾ ಮೂತ್ರೈಃ ಕ್ಷಾರೈರುಷ್ಣೋದಕೇನ ವಾ ।
ಜೀರ್ಣೇ ಯೂಷರಸಕ್ಷೀರೈರ್ಭುಞ್ಜಾನೋ ಹನ್ತಿ ಮಾಸತಃ ॥೪೩॥
ಗುಲ್ಮಂ ಮೇಹಮುದಾವರ್ತಮುದರಂ ಸಭಗನ್ದರಮ್ ।
ಕ್ರಿಮಿಕಣ್ಡ್ವರುಚಿಶ್ವಿತ್ರಾಣ್ಯರ್ಬುದಗ್ರಂಥಿಮೇವ ಚ ॥೪೪॥
ನಾಡ್ಯಾಢ್ಯವಾತಶ್ವಯಥುಕುಷ್ಠದುಷ್ಟವ್ರಣಾಂಶ್ಚ ಸಃ ।
ಕೋಷ್ಠಸನ್ಧ್ಯಸ್ಥಿಗಂ ವಾಯುಂ ವೃಕ್ಷಮಿನ್ದ್ರಾಶನಿರ್ಯಥಾ ॥೪೫॥

ಗುಗ್ಗುಳುವಿನ ಪ್ರಯೋಗ—ಗುಗ್ಗುಳವು ಸುವಾಸನೆಯುಳ್ಳದ್ದು, ತುಂಬಾಲಘು ವಾದದ್ದು(ಸುಲಭವಾಗಿ ಜೀರ್ಣಿಸುತ್ತದೆ). ಸೂಕ್ಷ್ಮ ಸ್ರೋತಸ್ಸುಗಳಿಗೂ ವ್ಯಾಪಿಸುತ್ತದೆ ; ಚುರುಕಾದದ್ದು ; ಉಷ್ಣವೀರ್ಯವುಳ್ಳದ್ದು ; ರಸವಿಪಾಕಗಳೆರಡರಲ್ಲೂ ಕಟುವಾದದ್ದು ; ಮಲವನ್ನು ಜಾರಿಸುವ ಸ್ವಭಾವವುಳ್ಳದ್ದು ; ಹೃದಯಕ್ಕೆ ಬಲವನ್ನುಂಟುಮಾಡು ತ್ತದೆ ; ಸ್ನಿಗ್ಧವಾಗಿಯೂ ಪಿಚ್ಛಿಲ (ಅಂಟು)ವಾಗಿಯೂ ಇದೆ ; ಹೊಸದಾದರೆ ದೇಹವನ್ನು ದಪ್ಪಮಾಡುತ್ತದೆ; ಹಳೆಯದಾದರೆ ಅತಿಯಾಗಿ ಕಫವನ್ನು ಲೇಖನಮಾಡುತ್ತದೆ (ಕೆರೆಯು ತ್ತದೆ, ದೇಹವು ಕ್ಷೀಣಿಸುತ್ತದೆ). ಚುರುಕುಗುಣ, ಉಷ್ಣವೀರ್ಯಗಳಿಂದ ವಾತಕಫ ಹರಣವನ್ನೂ ಸರಗುಣದಿಂದ ಮಲವನ್ನೂ ಪಿತ್ತವನ್ನೂ ಕ್ಷೀಣಮಾಡಿ (ಸ್ವಪ್ರಮಾಣಕ್ಕೆ ತರುತ್ತದೆ), ಸುವಾಸನೆಯಿಂದ ದುರ್ವಾಸನೆಯುಳ್ಳ ಕೋಷ್ಠವನ್ನು ಶುದ್ಧಿಗೊಳಿಸುತ್ತದೆ. ಸೂಕ್ಷ್ಮಗುಣದಿಂದ ಅಗ್ನಿವೃದ್ಧಿಯನ್ನುಂಟುಮಾಡುತ್ತದೆ ; ಪ್ರಾತಃಕಾಲದಲ್ಲಿ ತ್ರಿಫಲಾ

ಕಷಾಯ, ಮರದರಿಶಿನದ ಕಷಾಯ, ಪಟೋಲದ ಕಷಾಯ, ದರ್ಭೆಯ ಕಷಾಯ ದೊಡನೆಯಾಗಲೀ ಗೋವಿನ ಮೂತ್ರದಲ್ಲಿ ಕದರಿಯಾಗಲೀ ಕರಗಿಸಿ ಕುಡಿಸಿ, ಇದು ಜೀರ್ಣವಾದನಂತರ ದ್ವಿದಳ ಧಾನ್ಯಗಳ ಕಟ್ಟು-ಮಾಂಸರಸ-ಹಾಲು ಇವುಗಳನ್ನು ಮಿಶ್ರ ಮಾಡಿದ ಅನ್ನವನ್ನು ತಿನ್ನಬೇಕು ; ಈ ರೀತಿ ಒಂದು ತಿಂಗಳವರೆಗೆ ಸೇವಿಸಿದರೆ ಗುಲ್ಮ-ಮೇಹ-ಉದಾವರ್ತ (ಮಲಬಂಧ), ಭಗಂದರ, ಕ್ರಿಮಿರೋಗ-ನವೆ-ಅರೋಚಕತೆ-ಬಿಳಿಯ ತೊನ್ನು-ದುರ್ಮಾಂಸದ ಗಂಟು-ಮೇದೋಗ್ರಂಥಿಗಳು-ನಾಡಿವ್ರಣಗಳು-ಊರುಸ್ತಂಭ ರೋಗ-ಶೋಥ-ಕುಷ್ಠರೋಗ-ದುಷ್ಟವ್ರಣಗಳು-ಕೋಷ್ಠ-ಸಂಧಿ ಮತ್ತು ಮೂಳೆಗಳಲ್ಲಿ ಆವರಿಸಿರುವ ವಾಯು ಇವುಗಳೆಲ್ಲಾ ಸಿಡಿಲು ಬಿದ್ದ ಮರವು ನಾಶವಾಗುವಂತೆ ನಿವಾರಣೆ ಯಾಗುತ್ತವೆ.

ಟಿಪ್ಪಣಿ : ತ್ರಿಫಲೆ-ದಾರ್ವಿ-ಪಟೋಲಗಳು ಮೂರೂ ಸೇರಿ ಒಂದು ಯೋಗ, ಕುಶದಿಂದ ಯೋಗವು ; ಪಾನಭೋಜನಗಳು ವಾತಪಿತ್ತ ಕಫದೋಷಗಳಿಗೆ ತಕ್ಕಂತೆಯೂ, ರೋಗಿಯ ಪ್ರಕೃತಿಗೆ ತಕ್ಕಂತೆಯೂ, ಅವನ ಸಾತ್ಮ್ಯಕ್ಕೆ ತಕ್ಕಂತೆಯೂ ಕಲ್ಪಿಸಲ್ಪಡ ತಕ್ಕವು.

ಇತಿ ಶ್ರೀಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಮಹಾವಾತವ್ಯಾಧಿ
ಚಿಕಿತ್ಸಾನಾಮಕ ಪಞ್ಚಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ
ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ ||

ಷಷ್ಠೋऽಧ್ಯಾಯಃ

ಅಥಾತೋಽರ್ಶಸಾಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ ಸುಶ್ರುತಾಯ ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಅರ್ಶೋರೋಗದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಚತುರ್ವಿಧೋಽರ್ಶಸಾಂ ಸಾಧನೋಪಾಯಃ । ತದ್ಯಥಾ—ಭೇಷಜಂ, ಕ್ಷಾರೋಽಗ್ನಿಃ, ಶಸ್ತ್ರಮಿತಿ । ತತ್ರ ಅಚಿರಕಾಲಜಾತಾನಿ ಅಲ್ಪದೋಷಲಿಙ್ಗೋಪದ್ರವಾಣಿ ಭೇಷಜಸಾಧ್ಯಾನಿ, ಮೃದುಪ್ರಸೃತಾವಗಾಢಾನಿ ಉಚ್ಛ್ರಿತಾನಿ ಕ್ಷಾರೇಣ, ಕರ್ಕಶಸ್ಥಿರಪೃಥುಕಠಿನಾನಿ ಅಗ್ನಿನಾ, ತನುಮೂಲಾನಿ ಉಚ್ಛ್ರಿತಾನಿ ಕ್ಲೇದವನ್ತಿ ಚ ಶಸ್ತ್ರೇಣ । ತತ್ರ ಭೇಷಜಸಾಧ್ಯಾನಾಮರ್ಶಸಾಮದೃಶ್ಯಾನಾಂ ಚ ಭೇಷಜಂ ಭವತಿ, ಕ್ಷಾರಾಗ್ನಿಶಸ್ತ್ರಸಾಧ್ಯಾನಾಂ ತು ವಿಧಾನಮುಚ್ಯಮಾನಮುಪಧಾರಯ ||೩||

ಅರ್ಶಸ್ಸುಗಳನ್ನು ನಿವಾರಣೆಮಾಡಲು ನಾಲ್ಕು ವಿಧಾನಗಳಿವೆ. ಹೇಗೆಂದರೆ—ಔಷಧಗಳು, ಕ್ಷಾರಗಳು, ಅಗ್ನಿ ಕರ್ಮ, ಶಸ್ತ್ರಪ್ರಯೋಗಗಳಿಂದು ; ಅವುಗಳಲ್ಲಿ ಸ್ವಲ್ಪಕಾಲದಲ್ಲಿ ಉತ್ಪನ್ನವಾಗಿರುವ ಸ್ವಲ್ಪವಾದ ದೋಷಲಕ್ಷಣಗಳೂ ಸ್ವಲ್ಪವೇ ಉಪದ್ರವಗಳೂ ಉಳ್ಳ ಅರ್ಶೋರೋಗಗಳನ್ನು ಔಷಧಪ್ರಯೋಗದಿಂದ ನಿವಾರಿಸಬಹುದು ; ಮೆತ್ತಗಿದ್ದು ವಿಸ್ತಾರವಾಗಿ ಹಬ್ಬಿ ಬುಡದಲ್ಲಿ ದಪ್ಪವಾಗಿ ಬರುಬರುತ್ತಾ ಸಣ್ಣಗಾಗುತ್ತಾ ಆಳವಾಗಿ ಶರೀರದೊಳಗೆ ನುಗ್ಗಿ ಹೊರಗಡೆಗೆ ಹೊರಟಿರುವ ಅರ್ಶಸ್ಸುಗಳನ್ನು ಕ್ಷಾರಪ್ರಯೋಗದಿಂದಲೂ, ಒರಟಾಗಿ ಅಳ್ಳಾಡದೆ ಅಗಲವಾಗಿ ಗಟ್ಟಿಯಾಗಿದ್ದರೆ ಅಗ್ನಿ ಕರ್ಮದಿಂದಲೂ (ಅಗ್ನಿಯಿಂದ ಸುಡಬೇಕು), ಬುಡದಲ್ಲಿ ಸಣ್ಣವಾಗಿ ಮೇಲಕ್ಕೆ ಎದ್ದು ಹರಡಿ ದ್ರವವನ್ನು ಜಿನುಗಿಸುತ್ತಿದ್ದರೆ ಶಸ್ತ್ರದಿಂದ ಕತ್ತರಿಸಿಯೂ ನಿವಾರಿಸಬೇಕು ; ಇವುಗಳಲ್ಲಿ ಔಷಧಸಾಧ್ಯಗಳಾದ ಮತ್ತು ಕಣ್ಣಿಗೆ ಕಾಣಿಸದಿರುವ ಅರ್ಶಸ್ಸುಗಳಿಗೆ ಔಷಧಪ್ರಯೋಗವನ್ನು ಮಾಡಬೇಕು ; ಕ್ಷಾರ-ಅಗ್ನಿ-ಶಸ್ತ್ರಕರ್ಮಗಳಿಂದ ನಿವಾರಣೆ ಮಾಡತಕ್ಕ ವಿಧಾನವನ್ನು ಹೇಳುತ್ತೇನೆ ; ಸಾವಧಾನಮನಸ್ಸುಳ್ಳವನಾಗಿ ಕೇಳು.

ತತ್ರ ಬಲವನ್ತಮಾತುರಮರ್ಶೋಭಿರುಪದ್ರುತಮುಪಸ್ನಿಗ್ಧಂ ಪರಿಸ್ವಿನ್ನಮನಿಲವೇದನಾಭಿವೃದ್ಧಿಪ್ರಶಮಾರ್ಥಂ ಸ್ನಿಗ್ಧಮುಷ್ಣಮಲ್ಪಮನ್ನಂ ದ್ರವಪ್ರಾಯಂ ಭುಕ್ತವನ್ತಮುಪವೇಶ್ಯ ಪ್ರತ್ಯಾಸಂವೃತೇ ಶುಚೌ ದೇಶೇ ಸಾಧಾರಣೇ ವ್ಯಭ್ರೇ ಸಮೇ ಕಾಲೇ ಫಲಕೇ ಶಯ್ಯಾಯಾಂ ವಾ ಪ್ರತ್ಯಾದಿತ್ಯಗುದಮನ್ಯಸ್ಯೋತ್ಸಙ್ಗೇ ನಿಷಣ್ಣಪೂರ್ವಕಾಯಮುತ್ತಾನಂ ಕಿಞ್ಚಿದುನ್ನತಕಟಿಕಂ ವಸ್ತ್ರಕವ್ಯಾಬದ್ಧ ... ಪರಿಕ್ಷಿಪ್ತಗ್ರೀವಾಸಕ್ಥಂ ಪರಿಕರ್ಮಿಭಿಃ ಸುಪರಿಗೃಹೀತಮಸ್ಯ

ನ್ದನಶರೀರಂ ಕೃತ್ವಾ ತತೋಽಸ್ಮಿನ್ ಘೃತಾಭ್ಯಕ್ತಂ ಯನ್ತ್ರಮೃಜ್ವಣುಮುಖಂ ಪಾಯೌ ವೀಕ್ಷ್ಯ ಶಲಾಕಯೋತ್ಪೀಡ್ಯ ಪಿಚುವಸ್ತ್ರಯೋರನ್ಯತರೇಣ ಪ್ರಮೃಜ್ಯ ಕ್ಷಾರಂ ಪಾತಯೇತ್ ; ಪಾತಯಿತ್ವಾ ಚ ಪಾಣಿನಾ ಯನ್ತ್ರದ್ವಾರಂ ಪಿಧಾಯ ವಾಕ್‌ಶತಮಾತ್ರಮುಪೇಕ್ಷೇತ ತತಃ ಪ್ರಮೃಜ್ಯ ಕ್ಷಾರಬಲಂ ವ್ಯಾಧಿಬಲಂ ಚಾವೇಕ್ಷ್ಯ ಪುನರಾಲೇಪಯೇತ್ ; ಅಥಾರ್ಶಃ ಪಕ್ವಜಾಮ್ಬವಪ್ರತೀಕಾಶಮಭಿಸಮೀಕ್ಷ್ಯಾವಸನ್ನಮೀಷನ್ನತಮುಪಾವರ್ತಯೇತ್ ; ಕ್ಷಾರಂ ಪ್ರಕ್ಷಾಳಯೇತ್ ಧಾನ್ಯಾಮ್ಲೇನ ದಧಿಮಸ್ತುಶುಕ್ತಫಲಾಮ್ಲೈರ್ವಾ ; ತತೋ ಯಷ್ಟೀಮಧುಕಮಿಶ್ರೇಣ ಸರ್ಪಿಷಾ ನಿರ್ವಾಪ್ಯ ಯನ್ತ್ರಮಪನೀಯೋತ್ಥಾಪ್ಯಾತುರಮುಷ್ಣೋದಕೋಪವಿಷ್ಟಂ ಶೀತಾಭಿರದ್ಭಿಃ ಪರಿಷಿಞ್ಚೇದಶೀತಾಭಿರಿತ್ಯೇಕೇ ; ತತೋ ನಿರ್ವಾತಮಾಗಾರಂ ಪ್ರವೇಶ್ಯ ಆಚಾರಿಕಮಾದಿಶೇತ್. ಸಾವಶೇಷಂ ಪುನರ್ದಹೇತ್ ; ಏವಂ ಸಪ್ತರಾತ್ರಾತ್ಸಪ್ತರಾತ್ರಾದೇಕೈಕಮುಪಕ್ರಮೇತ ; ತತ್ರ ಬಹುಷು ಪೂರ್ವಂ ದಕ್ಷಿಣಂ ಸಾಧಯೇತ್, ದಕ್ಷಿಣಾದ್ವಾಮಂ, ವಾಮಾತ್ಪೃಷ್ಠಜಮ್, ತತೋಽಗ್ರಜಮಿತಿ ||೪||

ತತ್ರ ವಾತಶ್ಲೇಷ್ಮನಿಮಿತ್ತಾನಿ ಅಗ್ನಿಕ್ಷಾರಾಭ್ಯಾಂ ಸಾಧಯೇತ್ ; ಕ್ಷಾರೇಣೈವ ಮೃದುನಾ ಪಿತ್ತರಕ್ತನಿಮಿತ್ತಾನಿ ||೫||

ವೃದ್ಧನಲ್ಲದೆ ಅತಿಯಾಗಿ ಶಕ್ತಿಹೀನನಾಗಿರದೆ ಮನಶ್ಶಕ್ತಿ (ದೃಢಮನಸ್ಕನಾದ) ಯುಳ್ಳ ಅರ್ಶೋರೋಗಿಗೆ ಸ್ನೇಹಸ್ವೇದಕರ್ಮಗಳನ್ನು ಮಾಡಿಸಿ ವಾತವೇದನೆಗಳು ಶಮನವಾಗುವುದಕ್ಕಾಗಿ ಸ್ನಿಗ್ಧವಾಗಿಯೂ ಬಿಸಿಯಾಗಿಯೂ ಇರುವ ಸ್ವಲ್ಪಮಾತ್ರ ಅನ್ನವನ್ನೂ ದ್ರವವೇ ಹೆಚ್ಚಾಗಿ ಇರುವಂತೆ ಭೋಜನಮಾಡಿಸಿ ಅತಿಬೇಸಿಗೆಯೂ ಅಲ್ಲದ ಅತಿಶೀತವೂ ಅಲ್ಲದ ಸಾಧಾರಣ ಕಾಲದಲ್ಲಿ ಶುಚಿಯಾಗಿರುವ, ಎದುರುಗಾಳಿ ಬೀಸದ, ಬಿಸಲೂ ಇಲ್ಲದ ಹೆಚ್ಚು ಜನ ಸಂಚರಿಸದಿರುವ ಪ್ರದೇಶದಲ್ಲಿ ಕೂರಿಸಿ ಸೂರ್ಯನಿಗೆ ಮೋಡವು ಮುಚ್ಚದಿರುವಾಗ ಹಲಗೆಯ ಮೇಲಾಗಲೀ ಹಾಸಿಗೆಯಲ್ಲಾಗಲೀ ಸೂರ್ಯನ ಬೆಳಕಿಗೆ ರೋಗಿಯ ಗುದವು ಬರುವಂತೆ ಮಾಡಿ ; ಮತ್ತೊಬ್ಬರ ತೊಡೆಯ ಮೇಲೆ ಮೇಲ್ಮುಖ ಮಾಡಿ ಮಲಗಿಸಿ ಸೊಂಟವನ್ನು ಸ್ವಲ್ಪ ಮೇಲಕ್ಕೆತ್ತುವಂತೆ ದಿಂಬನ್ನು ಊರಿಕೊಟ್ಟು ಬಟ್ಟೆಕಂಬಳಿಗಳ ಮೇಲೆ ಕೂರಿಸಿ ಬಟ್ಟೆಯ ಪಟ್ಟೆಯಿಂದ ರೋಗಿಯ ಕತ್ತನ್ನೂ ತೊಡೆಗಳನ್ನೂ ಅಲ್ಲಾಡದಂತೆ ಬಿಗಿದು ಸೇವಕರು ಬಿಗಿಯಾಗಿ ಹಿಡಿದುಕೊಂಡು ದೇಹವನ್ನು ಅತ್ತಿತ್ತ ಕಡೆ ಅಲ್ಲಾಡಿಸದಂತೆ ಮಾಡಿದಮೇಲೆ ಅರ್ಶೋಹರಣ ಯಂತ್ರದ ಮುಖಕ್ಕೆ ತುಪ್ಪವನ್ನು ಬಳಿದು ಅವನು ಮುಲುಕುತ್ತಿರುವಾಗ ಮೆಲ್ಲಮೆಲ್ಲಗೆ ಅರ್ಶೋಯಂತ್ರವನ್ನು ಗುದದೊಳಕ್ಕೆ ನುಗ್ಗಿಸಿ ಒಳಕ್ಕೆ ಹೋದಮೇಲೆ ಅರ್ಶಸ್ಸನ್ನು ನೋಡಿ ಶಲಾಕೆಯಿಂದ ಅರ್ಶಸ್ಸನ್ನು ಅಮುಕಿ ಪಿಚು, ಬಟ್ಟೆಗಳೊಂದರಿಂದ ಒರಸಿ (ಕ್ಲೇದ, ಕೊಳೆಗಳನ್ನು ಹೊರಡಿಸಿ) ಅದರ ಮೇಲೆ ಕ್ಷಾರವನ್ನು ತಗುಲಿಸಬೇಕು ! ಕ್ಷಾರಪಾತ ಮಾಡಿದಮೇಲೆ ಯಂತ್ರದ ಮುಖವನ್ನು ಕೈಯಿಂದ ಮುಚ್ಚಿ ೧೦೦ ದೀರ್ಘಾಕ್ಷರಗಳನ್ನು ಉಚ್ಚರಿಸುವಷ್ಟು ಕಾಲವಾದ ಮೇಲೆ ತೊಳೆದು, ವ್ಯಾಧಿಬಲವನ್ನು ತಿಳಿದು ಪುನಃ ಕ್ಷಾರವನ್ನು ಲೇಪಿಸಬೇಕು ; ಅರ್ಶಸ್ಸ

ಕಳಿತ ನೇರಳೆಹಣ್ಣಿನಂತೆ ಕಪ್ಪುಬಣ್ಣಕ್ಕೆ ತಿರುಗಿದ್ದನ್ನು ನೋಡಿ, ಸ್ವಲ್ಪ ಸಂಕೋಚಿಸಿ ಬಗ್ಗಿರುವುದನ್ನು ಸುತ್ತಲೂ ತಿರುಗಿಸಿ ಕಲಗಚ್ಚು–ಮೊಸರುಕಟ್ಟು–ಶುಕ್ತ–ಫಲಗಳ ಹುಳಿರಸ ಇವುಗಳಲ್ಲೊಂದರಿಂದ ಕ್ಷಾರಲೇಪನವನ್ನು ತೊಳೆದು ಅತಿಮಧುರದ ಚೂರ್ಣವನ್ನು ತುಪ್ಪದಲ್ಲಿ ಕಲೆಸಿ ಅರ್ಶಸ್ಸಿಗೆ ಬಳಿಯಬೇಕು ; ಅನಂತರ ಯಂತ್ರವನ್ನು ಬಿಚ್ಚಿ ರೋಗಿಯನ್ನು ಮೇಲಕ್ಕೆ ಎಬ್ಬಿಸಿ ಬಿಸಿನೀರಿನ ತೊಟ್ಟಿಯಲ್ಲಿ ಕೂರಿಸಿ ತಣ್ಣೀರನ್ನು ಮೈಮೇಲೆ ಚುಮುಕಿಸಬೇಕು (ಕೆಲವರು ಸುಖೋಷ್ಣವಾದ ನೀರನ್ನು ಮೈಮೇಲೆ ಚುಮುಕಿಸಬೇಕೆನ್ನುತ್ತಾರೆ). ಅನಂತರ ಎದುರುಗಾಳಿ ಬೀಸದಿರುವ ಕೊಠಡಿಯಲ್ಲಿ ರೋಗಿಯನ್ನು ಮಲಗಿಸಿ ಪಥ್ಯಕರಗಳಾದ ಆಹಾರಾಚಾರಗಳನ್ನು ಪ್ರಯೋಗಿಸಬೇಕು ; ಅರ್ಶಸ್ಸು ಶೇಷವಾಗಿ ನಿಂತರೆ ಪುನಃ ಕ್ಷಾರಪಾತನಮಾಡಿಸಬೇಕು ; ಈ ರೀತಿಯಾಗಿ ಏಳು ದಿನಕ್ಕೆ ಒಂದು ಅರ್ಶಸ್ಸನ್ನು ಕ್ಷಾರಪಾತನಮಾಡಿ ನಿವಾರಿಸಬೇಕು ; ಅನೇಕ ಅರ್ಶಸ್ಸುಗಳಿದ್ದರೆ (ದುರ್ಮಾಂಸಾಂಕುರಗಳು) ಮೊದಲು ಬಲಭಾಗದ ಅರ್ಶಸ್ಸನ್ನು ಚಿಕಿತ್ಸೆಮಾಡಿ ಕ್ರಮವಾಗಿ ಎಡಭಾಗದ ಅರ್ಶಸ್ಸುಗಳನ್ನೂ ಚಿಕಿತ್ಸೆಮಾಡಬೇಕು ; ಎಡಭಾಗದ ಅರ್ಶಸ್ಸುಗಳನ್ನು ನಿವಾರಣೆಮಾಡಿ ಹಿಂಭಾಗದಲ್ಲಿರುವುವನ್ನೂ ಕಡೆಗೆ ಮುಂಭಾಗದವನ್ನೂ ಚಿಕಿತ್ಸಿಸಬೇಕು.

ಟಿಪ್ಪಣಿ : ಬಲವನ್ತಂ—ಅರ್ಶೋರೋಗಿಯು ಪ್ರಾಯಿಕವಾಗಿ ದುರ್ಬಲನಾಗಿಯೇ ಇರುತ್ತಾನೆ ; ಆದರೆ ಇಲ್ಲಿ ಬಲವೆಂದರೆ ವೃದ್ಧನಲ್ಲದೆ, ಅತಿಕ್ಷೀಣವಾಗದಿರುವ ಸ್ಥಿರಮನಸ್ಸುಳ್ಳವನೆಂದು ತಿಳಿಯಬೇಕು ; ಅಭುಕ್ತವತಃ ಶಸ್ತ್ರಾದಿಕರ್ಮಕುರ್ವೀತ ಎಂದು ಸೂತ್ರಸ್ಥಾನದಲ್ಲಿ ಹೇಳಿರುತ್ತದೆ ; ಇಲ್ಲಿ ಸ್ನಿಗ್ಧಮನ್ನಂ ದ್ರವಪ್ರಾಯಂ ಭುಕ್ತವಂತನಿಗೆ ಅರ್ಶೋಹರಣಮಾಡಬೇಕೆಂದು ಹೇಳಿರುತ್ತದೆ. ಇದಕ್ಕೆ ಕೆಲಸರು ಶಸ್ತ್ರಕರ್ಮಕ್ಕೆ ಮೊದಲು ೩–೪ ದಿನಗಳ ಹಿಂದೆ ಸ್ನೇಹನದ್ರವ್ಯ ಮಿಶ್ರವಾದ ಭೋಜನಮಾಡಿಕೊಂಡಿದ್ದು ಶಸ್ತ್ರಕರ್ಮಮಾಡುವ ದಿನ ಭೋಜನಮಾಡಕೂಡದೆಂದೂ ಅಭಿಪ್ರಾಯಪಡುತ್ತಾರೆ ; ಮತ್ತೆ ಕೆಲವರು ಭೋಜನಮಾಡಿದಮೇಲೆ ಶಸ್ತ್ರಕರ್ಮಮಾಡಿದರೆ ಬಿಕ್ಕಳಿಕೆ, ಶ್ವಾಸ ಮೊದಲಾದ ಉಪದ್ರವಗಳುಂಟಾಗುತ್ತವೆಂದು ಹೇಳುತ್ತಾರೆ ; ಶಸ್ತ್ರಕರ್ಮಕ್ಕೆ ಮೊದಲು ರೋಗಿಗೆ ಭೋಜನಮಾಡಿಸಿರಬೇಕು ಎಂದು ಹೇಳಿ 'ಅಭುಕ್ತವತಃ ಕರ್ಮಕುರ್ವೀತ' ಎಂದು ಸೂತ್ರಸ್ಥಾನದಲ್ಲಿ ಹೇಳಿರುವುದು ಮುಖಾಶ್ರಿತ ಅರ್ಶೋರೋಗದಲ್ಲಿ ಶಸ್ತ್ರಕರ್ಮ ಮಾಡಬೇಕಾದಾಗಲೆಂದು ಅಭಿಪ್ರಾಯಪಡುತ್ತಾರೆ. ಕ್ಷಾರಪಾತಮಾಡುವಾಗ ೩ ವಿಧಗಳಾದ ಕ್ಷಾರಮಾತ್ರೆಗಳುಂಟು : ಪಿತ್ತಾರ್ಶಸ್ಸುಗಳಲ್ಲಿ ಉಗುರಿನಷ್ಟು ದಪ್ಪವಾಗಿಯೂ, ಕಫಾರ್ಶಸ್ಸುಗಳಲ್ಲಿ ಅದರ ಎರಡರಷ್ಟು ದಪ್ಪವಾಗಿಯೂ, ವಾತಾರ್ಶಸ್ಸುಗಳಲ್ಲಿ ಅದರ ಮೂರರಷ್ಟು ದಪ್ಪವಾಗಿಯೂ (ಮೂರು ಉಗುರಿನ ದಪ್ಪ) ಇರಬೇಕು ; ವ್ಯಾಧಿಬಲವನ್ನು ಉತ್ತಾನ, ಅವಗಾಢಭೇದಗಳಿಂದಲೂ, ಕ್ಷಾರಬಲವನ್ನು ತೀಕ್ಷ್ಣೋಷ್ಣಗಳಾದ ಔಷಧದ್ರವ್ಯಗಳಿಗೆ ಅನುಸಾರವಾಗಿಯೂ ತಿಳಿಯಬೇಕು. ಕ್ಷಾರದಗ್ಧಲಕ್ಷಣ—ವಾತಾರ್ಶಸ್ಸಿನಲ್ಲಿ ದಗ್ಧಮಾಡಿದರೆ ನೇರಳೆಹಣ್ಣಿನ ಅಥವಾ ಶಿವನಿಹಣ್ಣಿನ ಬಣ್ಣವೂ, ಪಿತ್ತಾರ್ಶಸ್ಸಿನಲ್ಲಿ—

ದುಂಬಿ-ನವಿಲುಕಂಠದಂತೆ ವಿವಿಧವರ್ಣಮಿಶ್ರವಾಗಿಯೂ, ಕಫಾರ್ಶಸ್ಸಿನಲ್ಲಿ—ಹೆಗ್ಗುಳ್ಳದ ಹೂವಿನಂತೆ ಮಾಸಲುಕೆಂಪು ಬಣ್ಣವುಳ್ಳದ್ದೆಂದೂ ತಿಳಿಯುಬೇಕು ; ಕಫವಾತಗಳ ಸಂಬಂಧವುಳ್ಳ ಅರ್ಶೋರೋಗಿಯನ್ನು ಉಷ್ಣೋದಕದಲ್ಲಿ ಕೂರಿಸಬೇಕು; ಕೇವಲ ರಕ್ತಪಿತ್ತ ಸಂಬಂಧದಲ್ಲಿ ತಣ್ಣೀರಿನಲ್ಲಿ ಕೂರಿಸಬೇಕು ಎಂದು ತಿಳಿಯಬೇಕು. ವಾತಕಫೋತ್ಥಗಳಾದ ಅರ್ಶಸ್ಸುಗಳನ್ನು ಅಗ್ನಿಕ್ಷಾರಗಳಿಂದಲೂ, ಪಿತ್ತರಕ್ತಗಳಿಂದುಂಟಾದುವನ್ನು ಮೃದುಕ್ಷಾರ ಗಳಿಂದಲೂ ಲೇಪಿಸಿ ನಿವಾರಿಸಬೇಕು.

ತತ್ರ ವಾತಾನುಲೋಮ್ಯಮನ್ನರುಚಿರಗ್ನಿದೀಪ್ತಿರ್ಲಾಘವಂ ಬಲವರ್ಣೋತ್ಪತ್ತಿರ್ಮನಸ್ತುಷ್ಟಿರಿತಿ ಸಮ್ಯಗ್ದಗ್ಧಲಿಙ್ಗಾನಿ ; ಅತಿದಗ್ಧೇ ತು ಗುದಾವದರಣಂ ದಾಹೋಮೂರ್ಛಾಜ್ವರಃ ಪಿಪಾಸಾಶೋಣಿತಾತಿಪ್ರವೃತ್ತಿಸ್ತನ್ನಿಮಿತ್ತಾಶ್ಚೋಪದ್ರವಾ ಭವನ್ತಿ ; ಶ್ಯಾವಾಲ್ಪವ್ರಣತಾಕಣ್ಡೂರನಿಲವೈಗುಣ್ಯಮಿನ್ದ್ರಿಯಾಣಾಮಪ್ರಸಾದೋ ವಿಕಾರಸ್ಯ ಚಾಶಾನ್ತಿರ್ಹೀನದಗ್ಧೇ ||೬||

ಅರ್ಶಸ್ಸು ಕ್ಷಾರದಿಂದ ಸರಿಯಾಗಿ ಸುಡಲ್ಪಟ್ಟದ್ದರೆ ವಾತವು ತನ್ನ ಮಾರ್ಗದಿಂದ ಚಲಿಸುತ್ತದೆ ; ಆಹಾರದಲ್ಲಿ ರುಚಿ ತೋರುತ್ತದೆ ; ಅಗ್ನಿದೀಪ್ತಿಯಾಗಿ ಶರೀರಕ್ಕೆ ಬಲ ಬರುತ್ತದೆ, ಚರ್ಮದಲ್ಲಿ ಕಾಂತಿಯೂ ಮನಸ್ಸಿನಲ್ಲಿ ತೃಪ್ತಿಯೂ ಉಂಟಾಗುತ್ತದೆ ; ಗುದ ಮಾಂಸವು ಸೀಳಿರುವುದು, ಉರಿತ, ಜ್ಞಾನನಾಶ-ಜ್ವರ-ನೀರಡಿಕೆ-ಅತಿಯಾದ ರಕ್ತಸ್ರಾವ, ಅದರಿಂದುಂಟಾಗುವ ಉಪದ್ರವಗಳು ಅವು ಅತಿಯಾಗಿ ಕ್ಷಾರದಗ್ಧವಾದ ಅರ್ಶಸ್ಸುಗಳ ಲಕ್ಷಣಗಳು; ವ್ರಣ ಸ್ವಲ್ಪಮಾತ್ರವೇ ಹುಣ್ಣಾಗುವುದು, ನವೆಯಾಗುವುದು, ವಾತಪ್ರಕೋಪವುಂಟಾಗುವುದು, ಕಪ್ಪಾಗುವುದು, ಇಂದ್ರಿಯಗಳು ಸ್ವಚ್ಛವಾಗಿರದೆ ರೂಪ-ಶಬ್ದ ಮೊದಲಾದ ಇಂದ್ರಿಯಾರ್ಥಗಳು ಸರಿಯಾಗಿ ಅನುಭವಕ್ಕೆ ಬಾರದಿರುವುದು, ರೋಗನಿವಾರಣೆಯಾಗದಿರುವುದು ಇವು ಅರ್ಶಸ್ಸನ್ನು ಕ್ಷಾರಾಗ್ನಿಗಳಿಂದ ಹೀನಮಾತ್ರೆಯಲ್ಲಿ ಸುಡುವುದರಿಂದ ಕಾಣುವ ಲಕ್ಷಣಗಳೆಂದು ತಿಳಿಯುಬೇಕು.

ಮಹಾನ್ತಿ ಚ ಪ್ರಾಣವತಶ್ಛಿತ್ವಾ ದಹೇತ್, ನಿರ್ಗತಾನಿ ಚಾತ್ಯರ್ಥಂ ದೋಷಪೂರ್ಣಾನಿ ಯನ್ತ್ರಾದ್ವಿನಾ ಸ್ವೇದಾಭ್ಯಙ್ಗಸ್ನೇಹಾವಗಾಹೋಪನಾಹವಿಶ್ರಾವಣಾಲೇಪಕ್ಷಾರಾಗ್ನಿಶಸ್ತ್ರೈರುಪಾಚರೇತ್ । ಪ್ರವೃತ್ತರಕ್ತಾನಿ ಚ ರಕ್ತಪಿತ್ತವಿಧಾನೇನ ; ಭಿನ್ನಪುರೀಷಾಣಿ ಚಾತೀಸಾರವಿಧಾನೇನ, ಬದ್ಧವರ್ಚಾಂಸಿ ಸ್ನೇಹಪಾನವಿಧಾನೇನೋದಾವರ್ತವಿಧಾನೇನ ವಾ ; ಏಷ ಸರ್ವಸ್ಥಾನಗತಾನಾಮರ್ಶಸಾಂ ದಹನಕಲ್ಪಃ ||೭||

ಬಲಿಷ್ಠರಿಗೆ ದಪ್ಪನಾಗಿರುವ ಅರ್ಶಸ್ಸನ್ನು ಶಸ್ತ್ರದಿಂದ ಕತ್ತರಿಸಿ ಕಾದ ಶಲಾಕೆಯಿಂದ ಸುಡಬೇಕು ; ದೋಷಪೂರ್ಣವಾಗಿ ಹೊರಕ್ಕೆ ಹೊರಟಿರುವ ಅರ್ಶಸ್ಸುಗಳನ್ನು ಯಂತ್ರಗಳಿಂದ ಬಿಗಿಯದೆ ಸ್ವೇದ, ಅಭ್ಯಂಗ, ಸ್ನೇಹಪಾನ, ಅವಗಾಹಸ್ನಾನ, ಉಪನಾಹ ಸ್ವೇದ, ರಕ್ತಸ್ರಾವಣ, ಕಲ್ಕಲೇಪಕ್ಷಾರ ಮತ್ತು ಕಾದ ಶಲಾಕೆಯಿಂದ ಸುಡುವುದು, ಶಸ್ತ್ರದಿಂದ ಕತ್ತರಿಸುವುದು ಇವುಗಳಿಂದ ಉಪಚರಿಸಬೇಕು ; ರಕ್ತಸ್ರಾವವಾಗುತ್ತಿದ್ದರೆ ರಕ್ತಪಿತ್ತಕ್ಕೆ ಮಾಡುವಂತೆ ಶೀತೋಪಚಾರವನ್ನೂ ರಕ್ತವನ್ನು ತಡೆಗಟ್ಟುವ ವಿಧಾನ

ವನ್ನೂ ಮಾಡಬೇಕು. ಮಲವು ಒಡೆದು ಭೇದಿಯಾಗುತ್ತಿದ್ದರೆ ಅತಿಸಾರ ಚಿಕಿತ್ಸೆಯನ್ನೂ ಮಲಬದ್ಧವಾಗಿದ್ದರೆ ಸ್ನೇಹಪಾನ ಮತ್ತು ಉದಾವರ್ತಹರಣ ವಿಧಾನಗಳಿಂದಲೂ ಚಿಕಿತ್ಸೆಮಾಡಬೇಕು ; ಇದು ಸಕಲ ಶರೀರಭಾಗಗಳಲ್ಲಿ ಹುಟ್ಟಿದ ಅರ್ಶಸ್ಸುಗಳನ್ನೂ ಕ್ಷಾರ ಮತ್ತು ಅಗ್ನಿಗಳಿಂದ ಸುಡುವ ಕ್ರಮವು.

ಆಸಾದ್ಯ ಚ ದರ್ವೀಕೂರ್ಚಕಶಲಾಕಾನಾಮನ್ಯತಮೇನ ಕ್ಷಾರಂ ಪಾತಯೇತ್ । ಭ್ರಷ್ಟ ಗುದಸ್ಯ ತು ವಿನಾ ಯನ್ತ್ರೇಣ ಕ್ಷಾರಾದಿಕರ್ಮಪ್ರಯುಞ್ಜೀತ । ಸರ್ವೇಷು ಚ ಶಾಲಿಷಷ್ಟಿಕ ಯವಗೋಧೂಮಾನ್ನಂ ಸರ್ಪಿಃಸ್ನಿಗ್ಧಮುಪಸೇವೇತ ಪಯಸಾ ನಿಮ್ಬಯೂಷೇಣ ಪಟೋಲಯೂಷೇಣ ವಾ, ಯಥಾ ದೋಷಂ ಶಾಕೈರ್ವಾಸೂತಣ್ಡುಲೀಯಕಜೀವನ್ತ್ಯುಪೋದಿಕಾಶ್ವಬಲಾ ಬಾಲಮೂಲಕಪಾಲಙ್ಕ್ಯಸನಚಿಲ್ಲೀಚುಚ್ಚೂಕಲಾಯವಲ್ಲೀಭಿರನ್ಯೈರ್ವಾ । ಯಚ್ಚಾನ್ಯದಪಿ ಸ್ನಿಗ್ಧ ಮಗ್ನಿದೀಪನಮರ್ಶೋಘ್ನಂ ಸೃಷ್ಟಮೂತ್ರಪುರೀಷಂ ಚ ತದುಪಸೇವೇತ ॥೮॥

ಸಣ್ಣ ಸೌಟು (ಮಿಳ್ಳೆ), ಕುಂಚೇವು, ಶಲಾಕೆಗಳಲ್ಲೊಂದರಿಂದ ಕ್ಷಾರವನ್ನು ಅರ್ಶಸ್ಸಿನಮೇಲೆ ಹಾಕಬೇಕು ; ಗುದಭ್ರಂಶರೋಗಿಗೆ ಯಂತ್ರಗಳಿಂದ ಬಂಧನಮಾಡದೆ ಕ್ಷಾರ, ಅಗ್ನಿಕರ್ಮಗಳನ್ನು ಮಾಡಬೇಕು ; ಅರ್ಶೋರೋಗಿಗಳಿಗೆ ಅರವತ್ತು ದಿನಗಳಲ್ಲಿ ಬೆಳೆಯುವ ಅಕ್ಕಿಯ ಅನ್ನ, ಯವಾನ್ನ, ಗೋಧೂಮಾನ್ನಗಳನ್ನು ತುಪ್ಪ, ಹಾಲು, ಬೇವಿನ ಕಷಾಯ, ಕಹಿಪಡವಲದ ಕಷಾಯಗಳೊಡನೆ ಭೋಜನಮಾಡಿಸಬೇಕು ; ದೋಷಗಳಿಗೆ ತಕ್ಕಂತೆ ಯೋಗ್ಯಗಳಾದ ಸೊಪ್ಪುಗಳು ಅಂದರೆ ಚಕ್ಕೋತ, ಕಿರಕುಸಾಲೆ, ಸಿಹಿಹಾಲೆ, ಬಸಳೆ, ತುರುವೆ, ಎಳೆಯಮೂಲಂಗಿ, ಸುರುಸುರಕೆ, ಕೆಂಪುಹೊನ್ನೆ, ಹರವೆ ಸೊಪ್ಪು, ಚುಂಚುಳಿಕೆಸೊಪ್ಪು, ಬಟಾಣಿ ಮೊದಲಾದ ಸೊಪ್ಪುಗಳ ಕಟ್ಟುಗಳೊಡನೆ ಭೋಜನಮಾಡಿಸಬೇಕು ; ಸ್ನಿಗ್ಧವಾಗಿಯೂ ಅಗ್ನಿದೀಪನವಾಗಿಯೂ ಅರ್ಶಸ್ಸನ್ನು ನಿವಾರಿಸತಕ್ಕುದಾಗಿಯೂ ಮಲಮೂತ್ರಗಳನ್ನು ವಿಸರ್ಜಿಸತಕ್ಕುದಾಗಿಯೂ ಇರುವ ಇತರ ಅನ್ನಪಾನಗಳನ್ನೂ ಸೇವಿಸಬೇಕು.

ದಗ್ಧೇಷು ಚಾರ್ಶಃ ಸ್ವಭ್ಯಕ್ತೋsನಲಸನ್ಧುಕ್ಷಣಾರ್ಥಮನಿಲಪ್ರಕೋಪಸಂರಕ್ಷಣಾರ್ಥಂ ಚ ಸ್ನೇಹಾದೀನಾಂ ಸಾಮಾನ್ಯತೋ ವಿಶೇಷತಸ್ತು ಕ್ರಿಯಾಪಥಮುಪಸೇವೇತ । ಸರ್ಪಿಂಪಿ ಚ ದೀಪನೀಯವಾತಹರಸಿದ್ಧಾನಿಹಿಙ್ಗ್ವಾದಿಭಿಶ್ಚೂರ್ಣೈಃ ಪ್ರತಿಸಂಸೃಜ್ಯ ಪಿಬೇತ್ । ಪಿತ್ತಾರ್ಶಃಸು ಪೃಥಕ್ಪರ್ಣ್ಯಾದೀನಾಂ ಕಷಾಯೇಣ ದೀಪನೀಯಪ್ರತಿವಾಪಂ ಸರ್ಪಿಃ, ಶೋಣಿತಾರ್ಶಃಸು ಮಞ್ಜಿಷ್ಠಾಮುರುಙ್ಗ್ಯಾದೀನಾಂ ಕಷಾಯೈಃ, ಶ್ಲೇಷ್ಮಾರ್ಶಃಸು ಸುರಸಾದೀನಾಂ ಕಷಾಯೈಃ ಸರ್ಪಿಃ । ಉಪದ್ರವಾಂಶ್ಚ ಯಥಾ ಸ್ವಮುಪಾಚರೇತ್ ॥೯॥

ಪರಂ ಚ ಯತ್ನಮಾಸ್ಥಾಯ ಗುದೇ ಕ್ಷಾರಾಗ್ನಿಶಸ್ತ್ರಾಣ್ಯವಚಾರಯೇತ್, ತದ್ವಿಭ್ರಮಾದ್ಧಿ ಷಾಣ್ಢ್ಯಶೋಫದಾಹಮದಮೂರ್ಛಾಟೋಪಾನಾಹಾತೀಸಾರಪ್ರವಾಹಣಾನಿ ಭವನ್ತಿ ಮರಣಂ ವಾ ॥೧೦॥

ಕ್ಷಾರ ಮತ್ತು ಅಗ್ನಿಗಳಿಂದ ಸುಟ್ಟಮೇಲೆ ಅರ್ಶಸ್ಸುಗಳಿಗೆ ತುಪ್ಪವನ್ನು ಬಳಿದು ಅಗ್ನಿವೃದ್ಧಿಗಾಗಿಯೂ ವಾತಪ್ರಕೋಪವಾಗದಿರುವುದಕ್ಕಾಗಿಯೂ ದೀಪನೀಯಘೃತ

ಗಳನ್ನೂ ಭದ್ರದಾರ್ವಾದಿಗಳಿಂದ ತಯಾರಿಸಿದ ವಾತಹರಘೃತಗಳನ್ನೂ ಹಿಂಗ್ವಾದಿ ಚೂರ್ಣವನ್ನೂ ಸೇರಿಸಿ ಕುಡಿಸಬೇಕು; ಪಿತ್ತಾರ್ಶಸ್ಸುಗಳಲ್ಲಿ ಒಂದೆಲೆಹೊನ್ನೆ ಮೊದಲಾದುವುಗಳ ಕಷಾಯಕ್ಕೆ ಪಿಪ್ಪಲ್ಯಾದಿದೀಪನದ್ರವ್ಯಗಳ ಚೂರ್ಣವನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸಬೇಕು; ರಕ್ತಾರ್ಶಸ್ಸುಗಳಲ್ಲಿ ಮಂಜಿಷ್ಠೆ, ಕೆಂಪುನುಗ್ಗೆ ಮೊದಲಾದುವುಗಳ ಕಷಾಯದೊಡನೆ ತಯಾರಿಸಿದ ಘೃತವನ್ನೂ ಶ್ಲೇಷ್ಮಾರ್ಶಸ್ಸುಗಳಲ್ಲಿ ಸುರಸಾದಿ ಕಷಾಯಸಿದ್ಧಘೃತವನ್ನೂ ಕುಡಿಸಬೇಕು; ಜ್ವರ, ಗುಲ್ಮ ಮೊದಲಾದ ಉಪದ್ರವಗಳಿಗೆ ಆಯಾಯ ರೋಗಗಳಿಗೆ ತಕ್ಕಂತೆ ಚಿಕಿತ್ಸೆಮಾಡಬೇಕು; ಕ್ಷಾರಾಗ್ನಿಗಳಿಂದ ಅರ್ಶಸ್ಸುಗಳನ್ನು ಸುಡುವುದು ಅತಿತೀಕ್ಷ್ಣವಾದ ಚಿಕಿತ್ಸೆಯಾದ ಕಾರಣ ಗುದದಲ್ಲಿ ಕ್ಷಾರಪಾತನ-ಅಗ್ನಿದಾಹ-ಶಸ್ತ್ರಕರ್ಮಗಳನ್ನು ಮಾಡಿಸುವಾಗ ಅತಿ ಜಾಗರೂಕತೆಯಿಂದಿರಬೇಕು; ಕ್ಷಾರಾಗ್ನಿಶಸ್ತ್ರಕರ್ಮಗಳು ಸರಿಯಾಗಿ ಪ್ರಯೋಗಿಸಲ್ಪಡದಿದ್ದರೆ ಷಂಡತ್ವ-ಶೋಫ-ದಾಹ-ಮತ್ತತೆ-ಮೂರ್ಛೆ-ಹೊಟ್ಟೆಯಲ್ಲಿ ವಾಯುವು ಗುಡುಗುಟ್ಟುತ್ತಾ ಓಡಾಡುವುದು-ಹೊಟ್ಟೆಯುಬ್ಬರ-ಅತಿಸಾರ-ಆಮಶಂಕೆ ಮೊದಲಾದ ರೋಗಗಳುಂಟಾಗಿ ಕಡೆಗೆ ಮರಣವೂ ಸಂಭವಿಸುತ್ತದೆ.

ಅತ ಊರ್ಧ್ವಂ ಯನ್ತ್ರಪ್ರಮಾಣಮುಪದೇಕ್ಷ್ಯಾಮಃ । ತತ್ರ ಯನ್ತ್ರಂ ಲೌಹಂ ದಾನ್ತಂ ಶಾರ್ಙ್ಗಂ ವಾರ್ಕ್ಷಂ ವಾ ಗೋಸ್ತನಾಕಾರಂ ಚತುರಙ್ಗುಳಾಯತಂ ಪಞ್ಚಾಙ್ಗುಳಪರಿಣಾಹಂ ಪುಂಸಾಂ ಷಡಙ್ಗುಳಪರಿಣಾಹಂ ನಾರೀಣಾಂ ತಲಾಯತಂ ತದ್ದ್ವಿಚ್ಛಿದ್ರಂ ದರ್ಶನಾರ್ಥಮೇಕಂ ಏಕಚ್ಛಿದ್ರಂ ತು ಕರ್ಮಣಿ । ಏಕದ್ವಾರೇ ಹಿ ಶಸ್ತ್ರಕ್ಷಾರಾಗ್ನೀನಾಮತಿಕ್ರಮೋ ನ ಭವತಿ । ಛಿದ್ರಪ್ರಮಾಣಂ ತು ತ್ರ್ಯಙ್ಗುಳಾಯತಮಙ್ಗುಷ್ಠೋದರಪರಿಣಾಹಂ ಯದಙ್ಗುಳಮವಶಿಷ್ಟಂ ತಸ್ಯಾರ್ಧಾಙ್ಗುಳಮುದರ್ಧಾಙ್ಗುಲೋಚ್ಛ್ರಿತೋಪರಿವೃತ್ತಕರ್ಣಿಕಮೇಷ ಯನ್ತ್ರಾಕೃತಿಸಮಾಸಃ ॥೧೧॥

ಇನ್ನುಮುಂದೆ ಯಂತ್ರದ ಪ್ರಮಾಣವನ್ನು ವಿವರಿಸಲಾಗುತ್ತದೆ; ಲೋಹ, ಆನೆಯ ಮತ್ತು ಜಿಂಕೆಯ ಕೊಂಬು, ಮರಗಳಿಂದ ಹಸುವಿನ ಮೊಲೆಯ ಆಕಾರವುಳ್ಳ (ಕೊಳವೆಯಂತೆ) ೪ ಅಂಗುಳಿಗಳಷ್ಟು ಉದ್ದವಾಗಿ, ೫ ಅಂಗುಳಿಗಳಷ್ಟು ಎತ್ತರವಾಗಿ ಗಂಡಸರಿಗೂ ಹೆಂಗಸರಿಗೂ ೬ ಅಂಗುಳಿಗಳಷ್ಟು ಅಗಲವಾಗಿ ಪಾರ್ಶ್ವಭಾಗದಲ್ಲಿ ಎರಡು ರಂಧ್ರಗಳಿರುವ ಯಂತ್ರವನ್ನು ಮಾಡಿಟ್ಟುಕೊಳ್ಳಬೇಕು; ಒಂದು ರಂಧ್ರದಿಂದ ವ್ರಣವನ್ನು ನೋಡುತ್ತ ಇನ್ನೊಂದು ರಂಧ್ರದಲ್ಲಿ ಶಸ್ತ್ರಕರ್ಮಮಾಡಲು ಅನುಕೂಲವಾಗುತ್ತದೆ; ಒಂದೇ ರಂಧ್ರವುಳ್ಳ ಅರ್ಶಸ್ಸನ್ನು ನೋಡುವ ಯಂತ್ರದಲ್ಲಿ ಶಸ್ತ್ರಕ್ಷಾರ ಮತ್ತು ಅಗ್ನಿ ಕರ್ಮಗಳನ್ನು ಮಾಡುವಾಗ ಶಸ್ತ್ರಾದಿ ಕರ್ಮಗಳಿಂದ ವ್ರಣವಿಸ್ತಾರವಾಗುವುದಿಲ್ಲ; ರಂಧ್ರವು ಪ್ರಮಾಣದಲ್ಲಿ ೩ ಅಂಗುಲಿ ಎತ್ತರವಾಗಿಯೂ ಹೆಬ್ಬೆಟ್ಟಿನ ಮಧ್ಯಭಾಗದಷ್ಟು ಅಗಲವಾಗಿಯೂ ಇರಬೇಕು; ಉಳಿದ ಒಂದು ಅಂಗುಳಿಪ್ರಮಾಣದಲ್ಲಿ ಬುಡದಿಂದ ಅರ್ಧ ಅಂಗುಳದ ಮೇಲೆ ಒಂದು ಸುತ್ತು ಕಟ್ಟನ್ನು ಬಿಗಿದಿರಬೇಕು; ಇದು

ಸಂಕ್ಷೇಪವಾಗಿ ಯಂತ್ರದ ಆಕಾರವಿವರಣೆಯು. ವಿಸ್ತಾರವಾಗಿ ವಿವರಿಸಬೇಕಾದರೆ ಶರೀರದ ನಾನಾ ಭಾಗಗಳಲ್ಲಿ ಉಂಟಾದ ಅರ್ಶಸ್ಸುಗಳಿಗೆ ಅನುಗುಣವಾಗಿ ಕೊಳವೆಗಳನ್ನು ಮಾಡಿಸಿ ಛಿದ್ರಗಳನ್ನು ಶಸ್ತ್ರಕ್ಷಾರಾಗ್ನಿ ಕರ್ಮಮಾಡಲು ತಡೆಯುಂಟಾಗದಂತೆ ತಯಾರು ಮಾಡಿಸಿಕೊಳ್ಳಬೇಕು.

ಅತ ಊರ್ಧ್ವಮರ್ಶಸಾಮಾಲೇಪಾನ್ ವಕ್ಷ್ಯಾಮಃ—ಸ್ನುಹೀಕ್ಷೀರಯುಕ್ತಂಹರಿದ್ರಾಚೂರ್ಣಮಾಲೇಪಃ ಪ್ರಥಮಃ, ಕುಕ್ಕುಟಪುರೀಷಗುಞ್ಜಾಹರಿದ್ರಾಪಿಪ್ಪಲೀಚೂರ್ಣಮಿತಿ ಗೋಮೂತ್ರಪಿತ್ತಪಿಷ್ಟೋ ದ್ವಿತೀಯಃ, ದನ್ತೀಚಿತ್ರಕಸುವರ್ಚಿಕಾಲಾಙ್ಗಲೀಕಲ್ಕೋ ವಾ ಗೋಪಿತ್ತಪಿಷ್ಟಸ್ತೃತೀಯಃ, ಪಿಪ್ಪಲೀಸೈನ್ಧವಕುಷ್ಠಶಿರೀಷಫಲಕಲ್ಕಃ ಸ್ನುಹೀಕ್ಷೀರಪಿಷ್ಟೋಽರ್ಕಕ್ಷೀರಪಿಷ್ಟೋ ವಾ ಚತುರ್ಥಃ ! ಕಾಸೀಸಹರಿತಾಲಸೈನ್ಧವಾಶ್ವಮಾರಕವಿಡಙ್ಗ ಪೂತೀಕಕೃತವೇಧನಜಮ್ಬ್ವರ್ಕೋತ್ತಮಾರಣೀದನ್ತೀಚಿತ್ರಕಾಲರ್ಕಸ್ನುಹೀಪಯಸ್ಸು ತೈಲಂ ವಿಪಕ್ವಮಭ್ಯಞ್ಜನೇನ ಅರ್ಶಃ ಶಾತಯತಿ ||೧೨||

ಇನ್ನುಮುಂದೆ ಅರ್ಶಸ್ಸುಗಳಿಗೆ ಐದು ವಿಧ ಲೇಪನಗಳನ್ನು ಹೇಳುತ್ತೇವೆ—ಮುಂಡುಗಳ್ಳಿ ಹಾಲಿನಲ್ಲಿ ಅರಿಶಿನ ಪುಡಿಯನ್ನು ಕದರಿ ಲೇಪಿಸುವುದು ; ಕೋಳಿಯ ಹಿಕ್ಕೆ, ಗುಲಗಂಜಿಪೊಪ್ಪು, ಅರಿಶಿನ, ಹಿಪ್ಪಲಿ ಇವುಗಳ ಚೂರ್ಣಕ್ಕೆ ಗೋಮೂತ್ರ ಮತ್ತು ಗೋರೋಚನಗಳನ್ನು ಸೇರಿಸಿದ ಕಲ್ಕವನ್ನು ಲೇಪಿಸುವುದು ; ಜಾಪಾಳದ ತೊಗಟೆ, ಚಿತ್ರಮೂಲ-ಸೌವರ್ಚಲವಣ-ಕೋಳಿಕುಟುಮನಗೆಡ್ಡೆಗಳಿಗೆ ಗೋರೋಚನವನ್ನು ಸೇರಿಸಿ ಕಲ್ಕಮಾಡಿ ಲೇಪನಮಾಡುವುದು ; ಹಿಪ್ಪಲಿ, ಸೈಂಧವಲವಣ, ಚಂಗಲ್‌ಕೋಷ್ಠ, ಬಾಗೇಬೀಜ, ಮುಂಡುಗಳ್ಳಿಯ ಹಾಲು ಅಥವಾ ಎಕ್ಕದ ಹಾಲನ್ನು ಸೇರಿಸಿ ಕಲ್ಕಮಾಡಿ ಲೇಪಿಸುವುದು ; ಅನ್ನಭೇದಿ, ಅರಿದಳ, ಸೈಂಧವಲವಣ, ಕಣಿಗಲೆ ಬೇರು-ವಿಡಂಗ-ತಸವದ ತೊಕ್ಕು-ಹೀರೆಸೊಪ್ಪು ಅಥವಾ ಕಾಯಿ-ನೇರಳೆತೊಕ್ಕು, ಎಕ್ಕದಹಾಲು-ನೆಲನೆಲ್ಲಿ-ಜಾಪಾಳ-ಚಿತ್ರಮೂಲ-ಬಿಳಿಯ ಎಕ್ಕದ ಹಾಲು-ಮುಂಡಗಳ್ಳಿಯ ಹಾಲು ಇವುಗಳನ್ನೂ ತಿಲತೈಲವನ್ನೂ ಪಾಕವಿಧಾನದಿಂದ ತಯಾರಿಸಿ ಲೇಪಿಸಿದರೆ ಅರ್ಶಸ್ಸುಗಳು ಉದುರಿಬೀಳುತ್ತವೆ.

ಅತ ಊರ್ಧ್ವಮದೃಶ್ಯೇಷು ಅರ್ಶಃಸು ಯೋಗಾನ್ ಪಾತನಾರ್ಥಂ ವಕ್ಷ್ಯಾಮಃ—ಪ್ರಾತಃಪ್ರಾತರ್ಗುಡಹರೀತಕೀಮಾಸೇವೇತ, ಬ್ರಹ್ಮಚಾರೀ ಗೋಮೂತ್ರದ್ರೋಣಸಿದ್ಧಂ ವಾ ಹರೀತಕೀಶತಂ ಪ್ರಾತಃಪ್ರಾತರ್ಯಥಾ ಬಲಮುಪಯುಞ್ಜೀತ ಕ್ಷೌದ್ರೇಣ, ಅಪಾಮಾರ್ಗಮೂಲಂ ವಾ ತಣ್ಡುಲೋದಕೇನ ಸಕ್ಷೌದ್ರಮಹರಹಃ ಶತಾವರೀಮೂಲಕಲ್ಕಂ ವಾ ಕ್ಷೀರೇಣ, ಚಿತ್ರಕಚೂರ್ಣಯುಕ್ತಂ ವಾ ಸೀಧುಪರಾರ್ಧ್ಯಂ | ಭಲ್ಲಾತಚೂರ್ಣಯುಕ್ತಂ ವಾ ಸಕ್ತುಮನ್ಥಮಲವಣಂ ತಕ್ರೇಣ, ಕಲಶೀಮಾನ್ತಶ್ಚಿತ್ರಕಮೂಲಕಲ್ಕಾವಲಿಪ್ತೇ ನಿಷಿಕ್ತಂ ತಕ್ರಮಮ್ಲಮನಮ್ಲಂ ವಾ ಪಾನಭೋಜನೇಷೂಪಯುಞ್ಜೀತ, ಏಷ ಏವ ಭಾರ್ಗ್ಯಾಸ್ಫೋತಾಯಮಾನ್ಯಾಮಲಕಗುಡೂಚೀಷು ತಕ್ರಕಲ್ಪಃ, ಪಿಪ್ಪಲೀ ಪಿಪ್ಪಲೀಮೂಲಚವ್ಯಚಿತ್ರಕವಿಡಙ್ಗಶುಣ್ಠೀಹರೀತಕೀಷು ಚ ಪೂರ್ವವದೇವ

ನಿರನ್ನೋ ವಾ ತಕ್ರಮುಹರಹರ್ವಾಸಮುಪಸೇವೇತ, ಶೃಙ್ಗವೇರಪುನರ್ನವಾಚಿತ್ರಕಕಷಾಯಸಿದ್ಧ ವಾ ಪಯಃ, ಕುಟಜಮೂಲತ್ವಕ್‌ಫಾಣಿತಂ ವಾ ಪಿಪ್ಪಲ್ಯಾದಿ ಪ್ರತೀವಾಪಂ ಕ್ಷೌದ್ರೇಣ, ವಾತವ್ಯಾಧ್ಯುಕ್ತಂ ಹಿಙ್ಗ್ವಾದಿಚೂರ್ಣಮುಪಸೇವೇತ ತಕ್ರಾಹಾರಃ ಕ್ಷೀರಾಹಾರೋ ವಾ, ಕ್ಷಾರಲವಣಾಂಶ್ಚಿತ್ರಕಮೂಲಕ್ಷಾರೋದಕಸಿದ್ಧಾನ್ ವಾ ಕುಲ್ಮಾಷಾನ್‌ಭಕ್ಷಯೇತ್, ಚಿತ್ರಕಮೂಲಕ್ಷಾರೋದಕಸಿದ್ಧಂ ವಾ ಪಯಃ, ಪಲಾಶತರುಕ್ಷಾರಸಿದ್ಧಾನ್ ವಾ ಕುಲ್ಮಾಷಾನ್, ಪಾಟಲಾಪಾಮಾರ್ಗ ಬೃಹತೀಪಲಾಶಕ್ಷಾರಂ ವಾ ಪರಿಸ್ರುತಮುಹರಹರ್ಘೃತಸಂಸೃಷ್ಟಂ, ಕುಟಜವನ್ದಾಕೀಮೂಲಕಲ್ಕಂ ವಾ ತಕ್ರೇಣ, ಚಿತ್ರಕಪೂತೀಕನಾಗರಕಲ್ಕಂ ವಾ ಪೂತೀಕಕ್ಷಾರೇಣ ಕ್ಷಾರೋದಕಸಿದ್ಧಂ ವಾ ಸರ್ಪಿಃ ಪಿಪ್ಪಲ್ಯಾದಿಪ್ರತೀವಾಪಂ, ಕೃಷ್ಣತಿಲಪ್ರಸೃತಂ ಪ್ರಕುಞ್ಚಂ ವಾ ಪ್ರಾತಃಪ್ರಾತರನುಸೇವೇತ ಶೀತೋದಕಾನುಪಾನಂ, ಏಭಿರಭಿವರ್ಧತೇಽಗ್ನಿರರ್ಶಾಂಸಿ ಚೋಪಶಾಮ್ಯನ್ತಿ ||೧೩||

ಇನ್ನುಮುಂದೆ ಕಾಣಿಸದಿರುವ ಅರ್ಶಸ್ಸುಗಳು ಬೀಳುವುದಕ್ಕೆ ಔಷಧಯೋಗಗಳನ್ನು ಹೇಳುತ್ತೇವೆ—ಪ್ರತಿದಿನ ಪ್ರಾತಃಕಾಲದಲ್ಲಿ ಬೆಲ್ಲ ಮಿಶ್ರಮಾಡಿದ ಅಣಿಲೆಕಾಯಿ ಚೂರ್ಣವನ್ನು ಸೇವಿಸಬೇಕು ; ಬ್ರಹ್ಮಚರ್ಯವನ್ನು ಪಾಲಿಸುತ್ತಾ ಸ್ತ್ರೀಸಂಗವನ್ನು ತ್ಯಾಗಮಾಡಿ ಒಂದು ದ್ರೋಣ (ಅಳತೆಯ ೮ ಸೇರು) ಗೋಮೂತ್ರದಲ್ಲಿ ೧೦೦ ಅಣಿಲೆಕಾಯಿಗಳನ್ನು ಬೇಯಿಸಿ ಒಣಗಿಸಿ ಚೂರ್ಣಮಾಡಿಟ್ಟುಕೊಂಡು ಪ್ರತಿದಿನವೂ ಪ್ರಾತಃಕಾಲದಲ್ಲಿ ಶಕ್ತಿಗೆ ತಕ್ಕಂತೆ ಆ ಚೂರ್ಣವನ್ನು ಜೇನುತುಪ್ಪದೊಡನೆ ಕಲೆಸಿ ತಿನ್ನಬೇಕು ; ಉತ್ತರಣೆಯ ಬೇರಿನ ಚೂರ್ಣವನ್ನು ಕಲಗಚ್ಚಿನಲ್ಲಿ ಕದರಿಯಾಗಲೀ ಆಷಾಡಿಬೇರಿನ ಕಲ್ಕಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಹಾಲಿನಲ್ಲಿ ಕದರಿಯಾಗಲಿ ಪ್ರತಿದಿನವೂ ಕುಡಿಯಬೇಕು. ಬೆಲ್ಲವು ಅಗ್ನಿಮಾಂದ್ಯಕರ ; ಆದರೆ ಅದನ್ನು ಅಣಿಲೆಕಾಯಿ ಚೂರ್ಣದೊಡನೆ ಸೇವಿಸಿದರೆ ಅಗ್ನಿವೃದ್ಧಿಯನ್ನುಂಟುಮಾಡುತ್ತದೆ. ಮಲ ಗಟ್ಟಿಯಾಗಿ ಅಗ್ನಿಮಾಂದ್ಯವುಳ್ಳವರು ಬ್ರಹ್ಮಚರ್ಯಮಾಡುವವರಿಗೆ ರೂಕ್ಷತೆಯುಂಟಾಗಿರುತ್ತದೆಯಾಗಿ ಗೋಮೂತ್ರದೊಡನೆ ಅಣಿಲೆಕಾಯಿ ಚೂರ್ಣವನ್ನು ಪಾನಮಾಡಿದರೆ ಮಲವು ದ್ರವವಾಗಿ ಪ್ರವರ್ತಿಸುತ್ತದೆ ; ಪಿತ್ತರಕ್ತಾರ್ಶಸ್ಸಿನಲ್ಲಿ ಉತ್ತರಣೆ ಬೇರಿನ ಕಲ್ಕವನ್ನು ಕಲಗಚ್ಚಿನಲ್ಲಿ ಕದರಿ ಕುಡಿಸಬೇಕು ; ವಾತಪಿತ್ತಾರ್ಶಸ್ಸಿನಲ್ಲಿ ರಕ್ತ ಸಂಬಂಧವಿದ್ದರೆ ಆಷಾಡಿಬೇರಿನ ಕಲ್ಕವನ್ನು ಜೇನುತುಪ್ಪ ಮಿಶ್ರಮಾಡಿ ಹಾಲಿನಲ್ಲಿ ಕದರಿ ಕುಡಿಸಬೇಕು ; ಕಫಾರ್ಶಸ್ಸಿನಲ್ಲಿ ಅಗ್ನಿಮಾಂದ್ಯವೂ ಮಲಬದ್ಧತೆಯೂ ಇದ್ದರೆ ಚಿತ್ರಮೂಲದ ಚೂರ್ಣವನ್ನು ಉಪ್ಪನ್ನು ಹಾಕದೆ ಮಜ್ಜಿಗೆಯಲ್ಲಿ ಕದರಿ ಕುಡಿಸಬೇಕು ; ಅಥವಾ ಗೇರುಬಿತ್ತದ ಚೂರ್ಣ ೧ ಕರ್ಷದಷ್ಟು, ಬೆಲ್ಲ, ಪರಾಧ್ಯರ್ಗಳನ್ನು ಮಿಶ್ರಮಾಡಿ ಮಜ್ಜಿಗೆಯಲ್ಲಿ ಕದರಿ ಲವಣವನ್ನು ಸೇರಿಸದೆ ಕುಡಿಯಬೇಕು ; ಅಥವಾ ೧ ಭಾಗ ಭಲ್ಲಾತಕಚೂರ್ಣಕ್ಕೆ ೧೬ ಭಾಗ ಯವಚೂರ್ಣವನ್ನು ಮಿಶ್ರಮಾಡಿ ಮಜ್ಜಿಗೆಯಲ್ಲಿ ಅತಿಗಟ್ಟಿಯಾಗದಂತೆಯೂ ಅತಿನೀರಾಗದಂತೆಯೂ ಕದರಿ ಕುಡಿಯಬೇಕು; ಅಥವಾ ಪಳಗಿದ ಮಡಕೆಯ ಒಳಭಾಗದಲ್ಲಿ ಚಿತ್ರಮೂಲದ ಕಲ್ಕವನ್ನು ಬಳಿದು

ತುಂಬಿದ ಹುಳಿಯಾದ ಅಥವಾ ಸಿಹಿಯಾದ ಮಜ್ಜಿಗೆಯನ್ನು ಕುಡಿಯಬೇಕು, ಅನ್ನದೊಡನೆ ಸೇರಿಸಿಯೂ ಸೇವಿಸಬೇಕು ; ವಾತಕಫದಿಂದುಂಟಾದ ಶುಷ್ಕಾರ್ಶಸ್ಸಿನಲ್ಲಿ ಚಿತ್ರಕಕಲ್ಕಲೇಪಮಾಡಿ ತಯಾರಿಸಿದ ಮಜ್ಜಿಗೆಯಂತೆಯೇ ಗಂಟುಭಾರ್ಗಿ, ಸೊಗದೆ ಬೇರು, ವಾದಕ್ಕಿ, ನೆಲ್ಲಿಕಾಯಿ, ಅಮೃತವಳ್ಳಿಯ ಕಲ್ಕ ಇವುಗಳಲ್ಲೊಂದನ್ನು ಮಡಕೆ ಯೊಳಕ್ಕೆ ಬಳಿದು ತಯಾರಿಸಿದ ಮಜ್ಜಿಗೆಯನ್ನು ಪಾನಭೋಜನಗಳ ಮೂಲಕ ಸೇವಿಸ ಬೇಕು ; ಹಿಪ್ಪಲಿ–ಮೋಡಿ–ಚವ್ಯ–ಚಿತ್ರಮೂಲ–ವಿಡಂಗ–ಶುಂಠಿ–ಅಣಿಲೆಕಾಯಿಸಿಪ್ಪೆ ಇವುಗಳಲ್ಲಿ ಪ್ರತಿಯೊಂದರಿಂದಲೂ ತಕ್ರವಿಧಾನದ ಪ್ರಯೋಗವನ್ನು ಮಾಡಬೇಕು ; ಅಥವಾ ಅರ್ಶೋರೋಗಿಯು ಅನ್ನವನ್ನು ತಿನ್ನದೆ ಪ್ರತಿದಿನವೂ ಮಜ್ಜಿಗೆಯನ್ನು ಕುಡಿಯುತ್ತಾ ಒಂದು ತಿಂಗಳವರೆಗೆ ತಕ್ರಪ್ರಯೋಗವನ್ನು ಮಾಡಬೇಕು ; ಇನ್ನು ರಕ್ತಪಿತ್ತದಿಂದುಂಟಾದ ಆರ್ದ್ರ ಅರ್ಶೋರೋಗಿಗಳಿಗೆ ಕ್ಷೀರಪ್ರಯೋಗವನ್ನು ಹೇಳು ತ್ತಾರೆ ; ಹಸಿಶುಂಠಿ–ಕೊಮ್ಮೆಬೇರು-ಚಿತ್ರಮೂಲ ಇವುಗಳ ಕಷಾಯದೊಡನೆ ತಯಾರಿ ಸಿದ ಹಾಲನ್ನು ಕುಡಿಸಬೇಕು ! ಕೊಡಶಿಗೆತೊಗಟೆ ಮತ್ತು ಕಾಕಂಬಿ ಮಿಶ್ರಮಾಡಿ ಹಾಲಿನಲ್ಲಿ ಕದರಿಯಾಗಲೀ ಅಥವಾ ಹಿಪ್ಪಲಿ, ಮೋಡಿ ಮೊದಲಾದ ಚೂರ್ಣ ಮಿಶ್ರ ಮಾಡಿದ ಹಾಲಿಗೆ ಜೇನುತುಪ್ಪವನ್ನು ಸೇರಿಸಿಯಾಗಲೀ ಕುಡಿಸಿದರೆ ಕಫವಾತ ಮಿಶ್ರಿತ ರಕ್ತಾರ್ಶೋರೋಗಿಗಳಿಗೆ ಹಿತವಾಗುತ್ತದೆ ; ೧೦೦ ಪಲಗಳಷ್ಟು ಕೊಡಶಿಗೆಯ ಬೇರಿನ ತೊಗಟೆಯನ್ನು ಕಾಕಂಬಿಯೊಡನೆ ಮಿಶ್ರಮಾಡಿ ೬ ಪಲ ಪಿಪ್ಪಲ್ಯಾದಿಚೂರ್ಣವನ್ನೂ ತಕ್ಕಷ್ಟು ಜೇನುತುಪ್ಪವನ್ನೂ ಮಿಶ್ರಮಾಡಿ ಕಫಪಿತ್ತಾನುಬಂಧವುಳ್ಳ ರಕ್ತಾರ್ಶೋರೋಗಿ ಗಳಿಗೆ ಕುಡಿಸಬೇಕು ; ಹಿಂಗ್ವಷ್ಟಕ ಚೂರ್ಣವನ್ನು ಜೇನುತುಪ್ಪದೊಡನೆ ಮಿಶ್ರ ಮಾಡಿ ಸೇವಿಸಿ ಮಜ್ಜಿಗೆ–ಅನ್ನವನ್ನು ತಿಂದರೆ ಕಫಪಿತ್ತಮಿಶ್ರವಾದ ರಕ್ತಾರ್ಶಸ್ಸೂ ನಿವಾರಣೆಯಾಗುತ್ತದೆ ; ಯವಕ್ಷಾರ, ಸೈಂಧವಲವಣ, ಚಿತ್ರಮೂಲ, ಕ್ಷಾರೋದಕ ಇವುಗಳಿಂದ ತಯಾರಿಸಿದ ಯವಚೂರ್ಣವನ್ನು ತಿನ್ನಬೇಕು. (ಯವಾನ್ನಕ್ಕೆ ಕುಲ್ಮಾಷವೆಂದು ಹೆಸರು.) ಚಿತ್ರಮೂಲದ ಕ್ಷಾರೋದಕವನ್ನು ಸೇರಿಸಿ ತಯಾರಿಸಿದ ಹಾಲನ್ನು ವಾತಪಿತ್ತಾನುಬಂಧವುಳ್ಳ ರಕ್ತಾರ್ಶೋರೋಗಿಗೆ ಕುಡಿಸಬೇಕು ; ಮುತ್ತುಗ, ಉತ್ತರಣೆ, ಹೆಗ್ಗುಳ್ಳ ಮತ್ತು ಪಾದರಿ ಮರಗಳ ಕ್ಷಾರೋದಕವನ್ನು ಶೋಧಿಸಿ ತುಪ್ಪ ಮಿಶ್ರಮಾಡಿ ಪ್ರತಿದಿನವೂ ಕುಡಿಸಬೇಕು ; ಅಥವಾ ಕೊಡಶಿಗೆ ತೊಗಟೆ, ಬದನಿಕೆ ಬೇರು ಇವುಗಳ ಮಜ್ಜಿಗೆಯಲ್ಲಿ ಕದರಿ ಕುಡಿಸಬೇಕು ; ಚಿತ್ರಮೂಲ–ತವಸದ ತೊಗಟೆ-ಶುಂಠಿ ಇವುಗಳ ಕಲ್ಕವನ್ನು ತವಸದ ಕ್ಷಾರೋದಕದಲ್ಲಿ ಕದರಿಯಾಗಲೀ. ಕ್ಷಾರೋದಕ ಪಿಪ್ಪಲ್ಯಾದಿ ಚೂರ್ಣದ ಪ್ರತೀವಾಪಗಳಿಂದ ತಯಾರಿಸಿದ ಘೃತವನ್ನಾಗಲೀ ಕುಡಿಸಬೇಕು. ತವ ಸದ ಕ್ಷಾರೋದಕ ೧ ಆಢಕ ಅಥವಾ ೨ ಅಳತೆ ಸೇರಿನಷ್ಟನ್ನು ಸೇರಿಸಿ ಅಥವಾ ಪಾದ ರಿಯ ಕ್ಷಾರೋದಕ ೧ ಆಢಕದಷ್ಟನ್ನು ಸೇರಿಸಿ, ಘೃತ ೧ ಪ್ರಸ್ಥದಷ್ಟು ಸೇರಿಸಿ, ಪಾಕಕಾಲ ದಲ್ಲಿ ೧ ಕುಡವ ಪಿಪ್ಪಲ್ಯಾದಿ ಚೂರ್ಣವನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸ

ಬೇಕು. ಪ್ರಾತಃಕಾಲದಲ್ಲಿ ೨ ಪಲ ಅಥವಾ ೧ ಪಲದಷ್ಟು ಕರಿಯ ಎಳ್ಳನ್ನು ತಿಂದು ತಣ್ಣೀರನ್ನು ಕುಡಿಯಬೇಕು ; ಇವುಗಳಿಂದ ಅಗ್ನಿವೃದ್ಧಿಯಾಗುತ್ತದೆ ಮತ್ತು ಅರ್ಶೋರೋಗಗಳೂ ಶಮನವಾಗುತ್ತವೆ ; ಇವು ರೂಕ್ಷಕೋಷ್ಠವುಳ್ಳ ವಾತಾರ್ಶಸ್ಸಿನಲ್ಲಿ ಪ್ರಯೋಗಿಸಲ್ಪಡತಕ್ಕವು ; ತುಪ್ಪ, ಹಾಲು, ಮಧುರಪದಾರ್ಥಗಳನ್ನು ಭೋಜನಮಾಡಿಸಬೇಕು. ಅರ್ಧ ಬೆಂದ ಗೋಧಿ, ಕಡಲೆ ಮೊದಲಾದ ಧಾನ್ಯಗಳಿಗೆ ಕುಲ್ಮಾಷವೆಂದು ಹೆಸರು.

ದ್ವಿಪಞ್ಚಮೂಲೀದನ್ತೀಚಿತ್ರಕಪಥ್ಯಾನಾಂ ತುಲಾಮಾಹೃತ್ಯ ಜಲಚತುರ್ದ್ರೋಣೇ ವಿಪಾಚಯೇತ್, ತತಃ ಪಾದಾವಶಿಷ್ಟಂ ಕಷಾಯಮಾದಾಯ ಸುಶೀತಂ ಗುಡತುಲಯಾ ಸಹೋನ್ಮಿಶ್ರ್ಯ ಘೃತಭಾಜನೇ ನಿಃಕ್ಷಿಪ್ಯಮಾಸಮುಪೇಕ್ಷೇತ ಯವಪಲ್ಲೇ ; ತತಃ ಪ್ರಾತಃ ಪ್ರಾತರ್ಮಾತ್ರಾಂ ಪಾಯಯೇತ, ತೇನಾರ್ಶೋಗ್ರಹಣೀದೋಷಪಾಣ್ಡುರೋಗೋದಾವರ್ತಾರೋಚಕಾನ ಭವನ್ತಿ ದೀಪ್ತೋಽಗ್ನಿಶ್ಚ ಭವತಿ ||೧೪||

ದಶಮೂಲ-ಜಾಪಾಳದ ತೊಗಟೆ-ಚಿತ್ರಮೂಲ-ಅಣಿಲೆಕಾಯಿಗಳು ಪ್ರತ್ಯೇಕ ೧೦೦ ಪಲಗಳಷ್ಟನ್ನು ೪ ದ್ರೋಣಗಳಷ್ಟು ನೀರಿನಲ್ಲಿ ಹಾಕಿ ೧ ದ್ರೋಣದಷ್ಟು ಕಷಾಯವು ನಿಲ್ಲುವಂತೆ ಕಾಯಿಸಿ ಶೋಧಿಸಿ ತಣ್ಣಗಾದ ಕಷಾಯಕ್ಕೆ ೧೦೦ ಪಲಗಳಷ್ಟು ಬೆಲ್ಲವನ್ನು ಸೇರಿಸಿ ತುಪ್ಪ ಬಳಿದು ಪಳಗಿಸಿದ ಮಡಕೆಯಲ್ಲಿ ತುಂಬಿ ಯವ ಧಾನ್ಯಗಳ ಮಧ್ಯೆ ಹೂತಿಟ್ಟು ೧ ತಿಂಗಳ ಕಾಲ ಉದಾಸೀನನಾಗಿದ್ದು ಅನಂತರ ಪ್ರತಿದಿನವೂ ೧ ಪಲದಂತೆ ಪಾನಮಾಡಿದರೆ ಅರ್ಶಸ್ಸು-ಗ್ರಹಣೀದೋಷ-ಪಾಂಡುರೋಗ-ಉದಾವರ್ತ-ಅರೋಚಕತೆ ಇವುಗಳುಂಟಾಗುವುದಿಲ್ಲ, ಅಗ್ನಿದೀಪನವಾಗುತ್ತದೆ ; ಇದಕ್ಕೆ ದಂತ್ಯರಿಷ್ಟವೆಂದು ಹೆಸರು.

ಪಿಪ್ಪಲೀಮರಿಚವಿಡಙ್ಗೈಲವಾಲುಕಲೋಧ್ರಾಣಾಂ ದ್ವೇ ದ್ವೇ ಪಲೇ ಇನ್ದ್ರವಾರುಣ್ಯಾಃ ಪಞ್ಚಪಲಾನಿ, ಕಪಿತ್ಥಮಧ್ಯಸ್ಯ ದಶ, ಪಥ್ಯಾಫಲಾನಾಮರ್ಧಪ್ರಸ್ಥಃ ಪ್ರಸ್ಥೋ ಧಾತ್ರೀಫಲಾನಾಮೇತದೈಕಧ್ಯಂ ಜಲಚತುರ್ದ್ರೋಣೇ ವಿಪಾಚ್ಯ ಪಾದಾವಶೇಷಂ ಪರಿಸ್ರಾವ್ಯ ಸುಶೀತಂ ಗುಡತುಲಾದ್ವಯೇನೋನ್ಮಿಶ್ರ್ಯ ಘೃತಭಾಜನೇ ನಿಃಕ್ಷಿಪ್ಯ ಪಕ್ಷಮುಪೇಕ್ಷೇತ ಯವಪಲ್ಲೇ ; ತತಃ ಪ್ರಾತಃಪ್ರಾತರ್ಯಥಾ ಬಲಮುಪಯುಞ್ಜೀತ । ಏಷ ಖಲ್ವರಿಷ್ಟಃ ಪ್ಲೀಹಾಗ್ನಿಸಂಗಾರ್ಶೋಗ್ರಹಣೀಹೃತ್ಪಾಣ್ಡುರೋಗಶೋಫಕುಷ್ಠಗುಲ್ಮೋದರಕ್ರಿಮಿಹರೋ ಬಲವರ್ಣಕರಶ್ಚೇತಿ ||೧೫||

ತತ್ರ ವಾತಪ್ರಾಯೇಷು ಸ್ನೇಹಸ್ವೇದವಮನವಿರೇಚನಾಸ್ಥಾಪನಾನುವಾಸನಮುಪ್ರತಿಷಿದ್ಧಮ್ ; ಪಿತ್ತಜೇಷು ವಿರೇಚನಂ, ಏವಂ ರಕ್ತಜೇಷು ಸಂಶಮನಂ, ಕಫಜೇಷು ಶೃಙ್ಗವೇರಕುಳತ್ಥೋಪಯೋಗಃ, ಸರ್ವದೋಷಹರಂ ಯಥೋಕ್ತಂ ಸರ್ವಜೇಷು, ಯಥಾ ಸ್ವೌಷಧಸಿದ್ಧಂ ವಾ ಪಯಃ ಸರ್ವೇಷ್ವಿತಿ ||೧೬||

(ಅಭಯಾರಿಷ್ಟ) ಹಿಪ್ಪಲಿ-ಮೆಣಸು-ವಿಡಂಗ-ಏಲಾವಾಲುಕವೆಂಬ ಗಂಧದ್ರವ್ಯ-ಶಾವರಲೋಧ್ರ ಇವು ಪ್ರತಿಯೊಂದೂ ಎರಡೆರಡು ಪಲಗಳು, ಹಾವುಮೆಕ್ಕೆಸಮೂಲ ೫ ಪಲಗಳು (ಹಾವುಮೆಕ್ಕೆಯು ಅತ್ಯಂತ ಕಹಿರಸವುಳ್ಳ ಕಾರಣ ೨ ೧/೨ ಪಲಗಳಷ್ಟನ್ನು

ಮಾತ್ರ ಹಾಕಬೇಕೆಂದು ವೃದ್ಧವೈದ್ಯರು ಅಭಿಪ್ರಾಯಪಡುತ್ತಾರೆ), ಬೇಲದ ಕಾಯಿಯ ತಿರುಳು ೧೧ ಪಲಗಳು, ಅಣಿಲೆಕಾಯಿ ಸಿಪ್ಪೆ ೮ ಪಲಗಳು, ನೆಲ್ಲಿಕಾಯಿ ೧ ಪ್ರಸ್ಥ ಇವೆಲ್ಲ ವನ್ನೂ ೪ ದ್ರೋಣ ನೀರಿನಲ್ಲಿ ಹಾಕಿ ೧ ದ್ರೋಣ ನಿಲ್ಲುವಂತೆ ಕಷಾಯಮಾಡಿ ಶೋಧಿಸಿ ಕೊಂಡು ತುಪ್ಪದ ಮಡಕೆಗೆ ತುಂಬಿ ೨೦೦ ಪಲ ಬೆಲ್ಲವನ್ನು ಸೇರಿಸಿ ಒಂದು ಪಕ್ಷಕಾಲದ ವರೆಗೂ ಯವಧಾನ್ಯದ ಮಧ್ಯದಲ್ಲಿ ಹೂಳಿಟ್ಟು ಅನಂತರ ರೋಗಿಯ ಶಕ್ತಿಗೆ ಅನುಸಾರ ವಾಗಿ ಪ್ರತಿದಿನವೂ ಬೆಳಗಿನ ಹೊತ್ತಿನಲ್ಲಿ ಉಪಯೋಗಿಸಬೇಕು ; ಈ ಅಭಯಾರಿಷ್ಟವು ಪ್ಲೀಹವೃದ್ಧಿ, ಅಗ್ನಿಮಾಂದ್ಯ, ಅರ್ಶೋರೋಗ, ಗ್ರಹಣಿ, ಹೃದ್ರೋಗ, ಪಾಣ್ಡುರೋಗ, ಶೋಫ, ಕುಷ್ಠ, ಗುಲ್ಮ, ಉದರ, ಕ್ರಿಮಿರೋಗ ಇವುಗಳನ್ನು ನಿವಾರಿಸುತ್ತದೆ ; ಬಲ ವನ್ನೂ ವರ್ಣವನ್ನೂ ಹೆಚ್ಚಿಸುತ್ತದೆ ; ಅವುಗಳಲ್ಲಿ ವಾತಿಕ ಅರ್ಶೋರೋಗಗಳಲ್ಲಿ ಸ್ನೇಹ –ಸ್ವೇದ–ವಮನ–ವಿರೇಚನ–ಆಸ್ಥಾಪನ–ಅನುವಾಸನ ಕರ್ಮಗಳನ್ನು ನಿಷೇಧಿಸುವುದಿಲ್ಲ ; ಪಿತ್ತದಿಂದ ಉಂಟಾದ ಅರ್ಶಸ್ಸಿನಲ್ಲಿ ವಿರೇಚನವನ್ನೂ, ಕಫಾರ್ಶಸ್ಸಿನಲ್ಲಿ ಹಸಿಯಶುಂಠಿ ಮತ್ತು ಹುರುಳಿಗಳನ್ನೂ ಉಪಯೋಗಿಸಬಹುದು ; ರಕ್ತಾರ್ಶಸ್ಸಿನಲ್ಲಿ ಸಂಶಮನಕ್ರಿಯೆ ಯನ್ನೂ ತ್ರಿದೋಷೋತ್ಥ ಅರ್ಶಸ್ಸುಗಳಲ್ಲಿ ಸರ್ವದೋಷಹರಗಳಾದ ಔಷಧಿಗಳನ್ನಾಗಲೀ ದೋಷಗಳಿಗೆ ತಕ್ಕಂತೆ ಆಯಾಯ ದೋಷಹರದ್ರವ್ಯಗಳನ್ನು ಸೇರಿಸಿ ತಯಾರಿಸಿದ ಹಾಲ ನ್ನಾಗಲೀ ಕೊಡಬೇಕು.

ಅತ ಊರ್ಧ್ವಂ ಭಲ್ಲಾತಕವಿಧಾನಮುಪದೇಕ್ಷ್ಯಾಮಃ । ಭಲ್ಲಾತಕಾನಿ ಪರಿಪಕ್ವಾನಿ ಅನು ಪಹತಾನ್ಯಾಹೃತ್ಯ ತತ ಏಕಮಾದಾಯ ದ್ವಿಧಾ ತ್ರಿಧಾ ಚತುರ್ಧಾ ವಾ ಭೇದಯಿತ್ವಾ ಕಷಾಯ ಕಲ್ಪೇನ ವಿಪಾಚ್ಯ ತಸ್ಯ ಕಷಾಯಸ್ಯ ಶುಕ್ತಿಮನುಷ್ಣಾಂ ಘೃತಾಭ್ಯಕ್ತತಾಲುಜಿಹ್ವೌಷ್ಠಃ ಪ್ರಾತಃ ಪ್ರಾತರುಪಸೇವೇತ ತತೋಽಪರಾಹ್ಣೇ ಕ್ಷೀರಂ ಸರ್ಪಿರೋದನ ಇತ್ಯಾಹಾರಃ ; ಏವಮೇಕೈಕಾಂ ವರ್ಧಯೇತ್ ಯಾವತ್ಪಞ್ಚೇತಿ ; ತತಃ ಪಞ್ಚ ಪಞ್ಚಾಭಿವರ್ಧಯೇತ್ ಯಾವತ್ಸಪ್ತತಿರಿತಿ ಪ್ರಾಪ್ಯ ಚ ಸಪ್ತತಿಮಪಕರ್ಷಯೇದ್ಭೂಯಃ ಪಞ್ಚ ಪಞ್ಚ ಯಾವತ್ಪಞ್ಚೇತಿ, ಪಞ್ಚಭ್ಯಶ್ಚೈ ಕೈಕಂ ಯಾವದೇಕಮಿತಿ । ಏವಂ ಭಲ್ಲಾತಕಸಹಸ್ರಮುಪಯುಜ್ಯ ಸರ್ವಕುಷ್ಠಾರ್ಶೋಭಿರ್ವಿ ಮುಕ್ತೋ ಬಲವಾನ್ ಅರೋಗಃ ಶತಾಯುರ್ಭವತಿ ॥೧೭॥

ಇನ್ನುಮುಂದೆ ಗೇರುಬೀಜವನ್ನು ಉಪಯೋಗಿಸು ವಕ್ರಮವನ್ನು ವಿವರಿಸುತ್ತೇವೆ. —ಹಣ್ಣಾಗಿ ಕ್ರಿಮಿಭಕ್ಷಣೆ ಮಾಡದಿರುವ, ಕೆಟ್ಟುಹೋಗದ ಗೇರುಬೀಜಗಳನ್ನು ಒಂದನ್ನು ೨–೩–೪ ಪಾಲುಗಳನ್ನಾಗಿ ಕತ್ತರಿಸಿ ಕಷಾಯಮಾಡಿ, ಪ್ರತಿದಿನವೂ ಅಂಗಳು–ನಾಲಿಗೆ– ತುಟಿಗಳಿಗೆ ತುಪ್ಪವನ್ನು ಬಳಿದುಕೊಂಡು ತಣ್ಣಗಿರುವ ಒಂದು ಪಲದಷ್ಟು ಕಷಾಯವನ್ನು ಕುಡಿದು, ಮಧ್ಯಾಹ್ನದಮೇಲೆ ಹಾಲು, ತುಪ್ಪ ಮಿಶ್ರಮಾಡಿದ ಅನ್ನವನ್ನು ಭೋಜನ ಮಾಡಬೇಕು. ಈ ಮೇರೆಗೆ ದಿನಕ್ಕೆ ಒಂದೊಂದರಂತೆ ೫ ಗೇರುಬೀಜವಾಗುವವರೆಗೂ ಹೆಚ್ಚಿಸಿಕೊಂಡು ಸೇವಿಸಬೇಕು ; ಅನಂತರ ದಿನಕ್ಕೆ ೫ ರಂತೆ ೭೦ ಗೇರುಬೀಜಗಳು ಪೂರೈಸುವವರೆಗೂ ಹೆಚ್ಚಿಸುತ್ತಾ ಬಂದು ಪುನಃ ೫ ರಂತೆ ಕಡಮೆ ಮಾಡಿಕೊಂಡು ಸೇವಿ

ಸುತ್ತಾ ೫ ಗೇರುಬೀಜಗಳು ನಿಲ್ಲುವವರೆಗೂ ಅಭ್ಯಾಸ ಮಾಡಬೇಕು ; ಅನಂತರ ೫ ಗೇರು ಚೂರ್ಣದ ಪ್ರತೀವಾಪಗಳಿಂದ ತಯಾರಿಸಿದ ಘೃತವನ್ನಾಗಲೀ ಕುಡಿಸಬೇಕು. (ತವಸದ ಕ್ಷಾರೋದಕ ೧ ಆಢಕ ಅಥವಾ ೨ ಅಳತೆ ಸೇರಿನಷ್ಟನ್ನು ಸೇರಿಸಿ ಅಥವಾ ಪಾದರಿಯ ಕ್ಷಾರೋದಕ ೧ ಆಢಕದಷ್ಟನ್ನು ಸೇರಿಸಿ, ಘೃತ ೧ ಪ್ರಸ್ಥದಷ್ಟು ಸೇರಿಸಿ, ಪಾಕಕಾಲದಲ್ಲಿ ೧ ಕುಡವ ಪಿಪ್ಪಲ್ಯಾದಿ ಚೂರ್ಣವನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸಬೇಕು.) ಪ್ರಾತಃಕಾಲದಲ್ಲಿ ೨ ಪಲ ಅಥವಾ ೧ ಪಲದಷ್ಟು ಕರಿಯ ಎಳ್ಳನ್ನು ತಿಂದು ತಣ್ಣೀರನ್ನು ಕುಡಿಯಬೇಕು ! ಇವುಗಳಿಂದ ಅಗ್ನಿವೃದ್ಧಿಯಾಗುತ್ತದೆ ಮತ್ತು ಅರ್ಶೋರೋಗಗಳೂ ಶಮನವಾಗುತ್ತದ ! ಇವು ರೂಕ್ಷಕೋಷ್ಠವುಳ್ಳ ವಾತಾರ್ಶಸ್ಸಿನಲ್ಲಿ ಪ್ರಯೋಗಿಸಲ್ಪಡತಕ್ಕವು ! ತುಪ್ಪ, ಹಾಲು, ಮಧುರಪದಾರ್ಥಗಳನ್ನು ಭೋಜನಮಾಡಿಸಬೇಕು. ಅರ್ಧ ಬೆಂದ ಗೋಧಿ, ಕಡಲೆ ಮೊದಲಾದ ಧಾನ್ಯಗಳಿಗೆ ಕುಲ್ಮಾಷವೆಂದು ಹೆಸರು.

ಬೀಜಗಳಲ್ಲಿ ದಿನಕ್ಕೆ ಒಂದೊಂದರಂತೆ ಕಡಮೆ ಮಾಡಿಕೊಂಡು ಒಂದು ಬೀಜ ನಿಲ್ಲುವವರೆಗೂ ಸೇವಿಸುತ್ತಾ ಈ ರೀತಿಯಾಗಿ ೧೦೦ ಗೇರುಬೀಜಗಳನ್ನು ಉಪಯೋಗಿಸಿದರೆ ಸಕಲವಿಧಗಳಾದ ಕುಷ್ಠರೋಗಗಳೂ ಮತ್ತು ಅರ್ಶೋರೋಗಗಳೂ ನಿವೃತ್ತವಾಗಿ ಬಲಶಾಲಿಯಾಗಿ ರೋಗವಿಲ್ಲದೆ ನೂರು ವರ್ಷ ಕಾಲ ಬದುಕುತ್ತಾನೆ.

ಟಿಪ್ಪಣಿ : ಗೇರುಬೀಜಗಳನ್ನು ಜ್ಯೇಷ್ಠಮಾಸ (ಗ್ರೀಷ್ಮರ್ತುವಿನಲ್ಲಿ) ದಲ್ಲಿ ಸಂಗ್ರಹಣ ಮಾಡಿಟ್ಟುಕೊಳ್ಳಬೇಕು ! ಅವುಗಳನ್ನು ಯವೆಯೆಂಬ ಧಾನ್ಯದ ರಾಶಿಯಲ್ಲಾಗಲೀ ಉದ್ದಿನರಾಶಿಯಲ್ಲಾಗಲೀ, ಹೂತಿಟ್ಟು ಮಾರ್ಗಶೀರ್ಷ-ಪುಷ್ಯಮಾಸಗಳಲ್ಲಿ (ಹೇಮಂತರ್ತು) ಹೊರಕ್ಕೆ ತೆಗೆದು ಉಪಯೋಗಿಸಬೇಕು ! ೧ ರಿಂದ ೫ ರವರೆಗೆ ಒಂದೊಂದು ಗೇರುಬೀಜವನ್ನು ಹೆಚ್ಚಿಸಿಕೊಂಡು ಅನಂತರ ದಿನ ೧ ಕ್ಕೆ ೫ ರಂತೆ ೭೦ ರವರೆಗೆ ಹೆಚ್ಚಿಸುತ್ತಲೂ ಪುನಃ ೫-೫ ರಂತೆ ಕಡಮೆ ಮಾಡುತ್ತಲೂ ೫ ನಿಲ್ಲುವವರೆಗೆ ತಿಂದು ಅನಂತರ ಒಂದೊಂದನ್ನಾಗಿ ಕಡಮೆ ಮಾಡಿದರೆ ೩೫ ದಿನಗಳಲ್ಲಿ ೧೦೦೦ ಗೇರುಬೀಜಗಳಾಗುತ್ತವೆ ; ಇವುಗಳ ಪೈಕಿ ಮೊದಲಿನ ೪ ದಿನಗಳಲ್ಲಿ ಸಂಸ್ಕಾರ ಮಾತ್ರ ಉಂಟಾಗುತ್ತದೆ ! ಕಡೆಯ ೪ ದಿವಸಗಳನ್ನು ಭಲ್ಲಾತಕಸಂಸ್ಕಾರವನ್ನು ಹಿಂತಿರುಗಿಸುವ ಕಾರಣ ವೃದ್ಧರು ಈ ೮ ದಿನಗಳನ್ನೂ ಲೆಕ್ಕಕ್ಕೆ ಪರಿಗಣಿಸುವುದಿಲ್ಲ. ಭಲ್ಲಾತಕ ಪ್ರಯೋಗದ ವಿಧಾನದಲ್ಲಿ ಮೂರು ಭೇದಗಳಿವೆ ! ಶರೀರಬಲದೋಷಗಳಿಗೆ ಅನುಸಾರವಾಗಿ ೧೦೦ ಭಲ್ಲಾತಕಗಳನ್ನು ಸೇವಿಸುವುದು ಅತಿ ಉತ್ತಮಪಕ್ಷವು ! ೭೦ ಗೇರುಬೀಜಗಳನ್ನು ಸೇವಿಸುವುದು ಮಧ್ಯಮಪಕ್ಷವು ! ೩೦ ನ್ನು ಮಾತ್ರ ಸೇವಿಸುವುದು ಕನಿಷ್ಠಪಕ್ಷವು. ತಂತ್ರಾಂತರಗಳಲ್ಲಿ ಹೇಳಿರುವ ಕ್ರಮಗಳೇನೆಂದರೆ ಮೊದಲನೆಯ ದಿನ ೧೦ ಗೇರುಬೀಜಗಳನ್ನು ಜಜ್ಜಿ ಅದರ ೮ ರಷ್ಟು ನೀರಿಗೆ ಹಾಕಿ ೧/೮ ಉಳಿಯುವಂತೆ ಕಷಾಯ ಕಾಯಿಸಿ ಹಾಲು, ತುಪ್ಪಗಳನ್ನು ಬಾಯಿಗೆ ಒಳಿದುಕೊಂಡು ಕುಡಿಯಬೇಕು ! ಮೂರನೆಯ ದಿನದಿಂದ ದಿನಕ್ಕೆ ಒಂದೊಂದರಂತೆ ೩೦ ರವರೆಗೂ ಹೆಚ್ಚಿಸುತ್ತಾ ಬಂದು ಪುನಃ ದಿನಕ್ಕೆ ಒಂದೊಂದರಂತೆ ಕಡಮೆ

ಮಾಡುತ್ತಾ ೧೦ ಗೇರುಬೀಜ ಉಳಿಯುವವರೆಗೂ ಇಳಿಸಬೇಕು ! ಇದರ ಮೇಲೆ ಗೇರು ಬೀಜವನ್ನು ಹೆಚ್ಚಿಸಕೂಡದು ! ಇದರಿಂದ ೧೦೦೦ ಗೇರುಬೀಜಗಳಿಗಿಂತ ಹೆಚ್ಚು ಗೇರು ಬೀಜಗಳನ್ನು ಪ್ರಯೋಗಿಸಬಾರದು. ಪಾರಂಪರ್ಯೋಪದೇಶವನ್ನು ವಿವರಿಸಲಾಗುತ್ತದೆ: ೩೦ ರಾತ್ರಿಗಳ ಸೈಕಿ ೭ ದಿನಗಳು ದಿನಕ್ಕೆ ೩೦ ರಂತೆ ಪ್ರಯೋಗಿಸಬೇಕು! ಅನಂತರ ದಿನಕ್ಕೆ ಒಂದೊಂದರಂತೆ ಹತ್ತು ಗೇರುಬೀಜಗಳು ನಿಲ್ಲುವವರೆಗೂ ಕಡಮೆ ಮಾಡುತ್ತಾ ಬರಬೇಕು; ಇನ್ನೊಂದು ದಿನವೂ ೧೦ ಗೇರುಬೀಜಗಳನ್ನೇ ಉಪಯೋಗಿಸಬೇಕು ; ಈ ರೀತಿಯಾಗಿ ೧೦೦೦ ಗೇರುಬೀಜಗಳ ಪ್ರಯೋಗಗಳನ್ನು ವಿವರಿಸಿದಂತಾಯಿತು ; ಪೂರ್ಣವಾಗಿ ಕುಷ್ಠ ರೋಗವನ್ನಾಗಲೀ ಅರ್ಶೋರೋಗವನ್ನಾಗಲೀ ನಿರ್ಮೂಲಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಕಾಕಣಕಕುಷ್ಠವು ಆದಿಬಲಪ್ರವೃತ್ತವಾದ ಕಾರಣದಿಂದಲೂ ತ್ರಿದೋಷಜನಿತ ಅರ್ಶಸ್ಸೂ ಜನ್ಮಕಾಲದಲ್ಲಿ ಉಂಟಾದ್ದರಿಂದಲೂ ಅಸಾಧ್ಯವಾದವು ; ರಕ್ತಪಿತ್ತಜನಿತ ಅರ್ಶಸ್ಸುಗಳಲ್ಲಿಯೂ ಗೇರುಬೀಜವನ್ನು ಉಪಯೋಗಿಸಬೇಕಾಗುತ್ತಾದ್ದರಿಂದ ಅವು ಅಸಾಧ್ಯಗಳೆಂದು ತಿಳಿಯಬೇಕು. ತುವರಕ, ಭಲ್ಲಾತಕಗಳಿಗೆ ಬಿಸಿ ನಿಷಿದ್ಧವಾದ ಕಾರಣ ಸ್ವಲ್ಪ ಕಾದಾರಿದ ನೀರನ್ನೇ ಕುಡಿಯಬೇಕು.

ದ್ವಿವ್ರಣೀಯೋಕ್ತೇನ ವಿಧಾನೇನ ಭಲ್ಲಾತಕನಿಶ್ಚ್ಯುತಿತಂ ಸ್ನೇಹಮಾದಾಯ ಪ್ರಾತಃ ಪ್ರಾತಃ ಶುಕ್ತಿಮಾತ್ರಮುಪಯುಞ್ಜೀತ, ಜೀರ್ಣೇ ಪೂರ್ವವದಾಹಾರಃ ಫಲಪ್ರಕರ್ಷಶ್ಚ । ಭಲ್ಲಾತಕಮಜ್ಜಭ್ಯೋ ವಾ ಸ್ನೇಹಮಾದಾಯಾಪಕೃಷ್ಟದೋಷಃ ಪ್ರತಿಸಂಸೃಷ್ಟಭಕ್ತೋ ನಿವಾತ ಮಾಗಾರಂ ಪ್ರವಿಶ್ಯ ಯಥಾಬಲಂ ಪ್ರಸೃತಿಂ ಪ್ರಸೃತಿಂ ಪ್ರಕುಞ್ಚಂ ಚೋಪಯುಞ್ಜೀತ ; ತಸ್ಮಿನ್ನ ಜೀರ್ಣೇ ಕ್ಷೀರಂ ಸರ್ಪಿರೋದನ ಇತ್ಯಾಹಾರಃ, ಏವಂ ಮಾಸಮುಪಯುಜ್ಯ ಮಾಸತ್ರಯ ಮಾದಿಷ್ಟಾಹಾರೋ ರಕ್ಷೇದಾತ್ಮಾನಂ । ತತಃ ಸರ್ವೋಪತಾಪಾನಪಹೃತ್ಯ ವರ್ಣವಾನ್ ಬಲವಾನ್ ಶ್ರವಣಗ್ರಹಣಧಾರಣಶಕ್ತಿಸಂಪನ್ನೋ ವರ್ಷಶತಾಯುರ್ಭವತಿ ; ಮಾಸೇ ಮಾಸೇ ಚ ಪ್ರಯೋಗೇ ವರ್ಷಶತಂ ವರ್ಷಶತಮಾಯುಷೋಽಭಿವೃದ್ಧಿರ್ಭವತಿ, ಏವಂ ದಶಮಾಸಾನುಪಯುಜ್ಯ ವರ್ಷ ಸಹಸ್ರಾಯುರ್ಭವತಿ ॥೧೮॥

ದ್ವಿವ್ರಣಚಿಕಿತ್ಸೆಯಲ್ಲಿ ವಿವರಿಸಿರುವಂತೆ ರೋಗಿಗೆ ಉಪಚರಿಸಬೇಕು ; ಪ್ರತಿ ದಿವ ಸವೂ ಪ್ರಾತಃಕಾಲದಲ್ಲಿ ಗೇರುಬೀಜದಿಂದ ತೆಗೆದ ಎಣ್ಣೆಯನ್ನು ೧:ಪಲ ಪ್ರಮಾಣ ದಷ್ಟನ್ನು ರೋಗಿಗೆ ಕುಡಿಸಿ ಅದು ಜೀರ್ಣವಾದಮೇಲೆ ಯವೆಯು ಅನ್ನ ಮೊದಲಾಗಿ ಹಿಂದೆ ಹೇಳಿದ ಆಹಾರಕ್ರಮುವನ್ನು ಅನುಸರಿಸಿದರೆ ಅಧಿಕಫಲವುಂಟಾಗುತ್ತದೆ ; ಸ್ನೇಹ ಸ್ವೇದವಮನಗಳನ್ನು ಆರು ದಿನಗಳವರೆಗೆ ಸೇವಿಸಿ ಸಂಸ್ಕೃತನಾಗಬೇಕು. ಏಳನೆಯ ದಿನ ವಿರೇಚನೌಷಧವನ್ನು ಸೇವಿಸಿ, ಎಂಟನೆಯ ದಿವಸ ನಿತ್ಯಭೋಜನವನ್ನು ಮಾಡಿ ಒಂಬತ್ತನೆಯ ದಿನ ರೋಗಿಯ ಶರೀರದ ಬಲಕ್ಕನುಗುಣವಾಗಿಯೂ ರೋಗ (ದೋಷ ಪ್ರಕೋಪ) ಬಲಕ್ಕೆ ಅನುಗುಣವಾಗಿಯೂ ೨ ಪಲ ಅಥವಾ ೧ ಪಲಪ್ರಮಾಣದಷ್ಟು ಗೇರು ಬೀಜದಿಂದ ತೆಗೆದ ತೈಲವನ್ನೂ ೮ ರಷ್ಟು ಜೇನುತುಪ್ಪವನ್ನೂ ೨ ರಷ್ಟು ತುಪ್ಪವನ್ನೂ

ಸೇರಿಸಿ ರೋಗಿಯ ತಾಲು ನಾಲಿಗೆ-ತುಟಿಗಳಿಗೆ ತುಪ್ಪವನ್ನು ಲೇಪನಮಾಡಿ ಕುಡಿಸಬೇಕು ; ಇದು ಜೀರ್ಣಿಸಿದಮೇಲೆ ಹಾಲು-ತುಪ್ಪ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು ; ಈ ರೀತಿಯಾಗಿ ಒಂದು ತಿಂಗಳವರೆಗೆ ಉಪಯೋಗಿಸಿದ ಮೇಲೆ ೩ ತಿಂಗಳವರೆಗೆ ಶೀತೋದಕಪಾನ ಮೊದಲಾದ ಉಪಚಾರ ಕ್ರಮಗಳನ್ನು ಅನುಸರಿಸಬೇಕು ; ಕ್ರೋಧ-ಭಯ ಮೊದಲಾದುವುಗಳನ್ನು ತ್ಯಜಿಸಬೇಕು ; ಅನಂತರ ಎಲ್ಲಾ ವಿಧಗಳಾದ ಸಂತಾಪಗಳಿಂದ ಬಿಡಲ್ಪಟ್ಟ ಶರೀರದ ಬಣ್ಣ ವೃದ್ಧಿಯಾಗಿ ಬಲಶಾಲಿಯಾಗಿ ಶಬ್ದಗ್ರಹಣ, ಶಾಸ್ತ್ರಗ್ರಹಣ, ಧಾರಣಶಕ್ತಿ (ಗ್ರಹಣಮಾಡಿದ ವಿಷಯಗಳನ್ನು ಮರೆತುಬಿಡದೆ ಜ್ಞಾಪಕದಲ್ಲಿಡುವುದು) ಯುಳ್ಳವನಾಗಿ ೧೦೦ ವರ್ಷಗಳವರೆಗಿನ ಆಯುಸ್ಸುಳ್ಳವನಾಗುತ್ತಾನೆ. ಒಂದೊಂದು ತಿಂಗಳಿನಂತೆ ಈ ವಿಧಾನವನ್ನು ಅನುಷ್ಠಾನಮಾಡಿದರೆ (ಅನುಸರಿಸಿದರೆ) ೧೦೦-೧೦೦ ವರ್ಷಗಳ ಕಾಲ ಆಯುಃವೃದ್ಧಿಯಾಗುತ್ತದೆ. ಈ ರೀತಿ ೧೦ ತಿಂಗಳವರೆವಿಗೆ ಈ ವಿಧಾನವನ್ನು ಅನುಸರಿಸಿದರೆ ಸಹಸ್ರಾಯುಃವಾಗುತ್ತಾನೆ. (೧೦೦೦ ವರ್ಷ ಬದುಕುತ್ತಾನೆ.)

ಭವನ್ತಿ ಚಾತ್ರ—

ಯಥಾ ಸರ್ವಾಣಿ ಕುಷ್ಠಾನಿ ಹತಃ ಖದಿರಬೀಜಕೌ ।
ತಥೈವಾರ್ಶಾಂಸಿ ಸರ್ವಾಣಿ ವೃಕ್ಷಕಾರುಷ್ಕರೌ ಹತಃ ॥೧೯॥
ಸಾಧ್ಯಾನಾಪ್ಯತಿವರ್ತನ್ತೇ ಪ್ರಮೇಹಾ ರಜನೀಂ ಯಥಾ ।
ಕ್ಷಾರಾಗ್ನಿಂ ನಾತಿವರ್ತನ್ತೇ ತಥಾ ದೃಶ್ಯಾಗುದೋದ್ಭವಾಃ ॥೨೦॥

ಖದಿರಾದಿಗಳು ಕುಷ್ಠಾದಿರೋಗಗಳನ್ನು ನಿವಾರಣೆಮಾಡುತ್ತವೆ ಎಂಬ ವಿಚಾರದಲ್ಲಿ ಪುರಾತನವಾದ ಆಗಮನಿರ್ದಿಷ್ಟ ಶ್ಲೋಕಗಳ ಅರ್ಥವೇನೆಂದರೆ ಕಗ್ಗಲಿಯೂ ಕೊಡಶಿಗೆಯೂ ಸಕಲಕುಷ್ಠಗಳನ್ನೂ ನಿವಾರಿಸುವಂತೆಯೇ ಸಕಲವಿಧ ಅರ್ಶೋರೋಗಗಳನ್ನೂ ಕೊಡಶಿಗೆಯೂ ಮತ್ತು ಗೇರುಬೀಜಗಳೂ ನಿವಾರಣೆಮಾಡುತ್ತವೆ ; ಅಂದರೆ ಗೇರುಬೀಜದಿಂದ ವಾತಕಫಜನಿತ ಅರ್ಶಸ್ಸೂ ಕೊಡಶಿಗೆತೊಗಟೆ ಮತ್ತು ಬೀಜಗಳಿಂದ ರಕ್ತಪಿತ್ತಗಳಿಂದುಂಟಾದ ಅರ್ಶೋರೋಗವೂ ನಿವಾರಣೆಯಾಗುತ್ತದೆ ; ಆದರೆ ತ್ರಿದೋಷಜನಿತ ಸನ್ನಿಪಾತಾರ್ಶಸ್ಸು ನಿವಾರಣೆಯಾಗುವುದಿಲ್ಲ ; ಹೀಗೆಯೇ ಕುಷ್ಠರೋಗಗಳಲ್ಲೂ ಸಾಧ್ಯಾಸಾಧ್ಯವಿಭಾಗಗಳನ್ನು ಮಾಡಿಕೊಳ್ಳಬೇಕು ; ಅರಿಸಿನಪ್ರಯೋಗದಿಂದ ವಾತಜನ್ಯಗಳಾದ ಸರ್ಪಿರ್ಮೇಹ-ವಸಾಮೇಹ-ಕ್ಷೌದ್ರಮೇಹ--ಹಸ್ತಿಮೇಹಗಳೆಂಬ ೪ ವಿಧಗಳನ್ನು ಬಿಟ್ಟು ಉಳಿದ ೧೬ ವಿಧಗಳಾದ ಪ್ರಮೇಹರೋಗಗಳೂ ನಿವಾರಣೆಯಾಗುತ್ತವೆ ; ಹಾಗೆಯೇ ಬಾಹ್ಯಗಳಾದ ಅರ್ಶೋರೋಗಗಳೂ ಕ್ಷಾರ ಮತ್ತು ಅಗ್ನಿ ಕರ್ಮಗಳಿಂದ ಗುಣವಾಗುತ್ತವೆ.

ಘೃತಾನಿ ದೀಪನೀಯಾನಿ ಲೇಹಾಯಸ್ಕೃತಯಃ ಸುರಾಃ ।
ಆಸವಾಶ್ಚ ಪ್ರಯೋಕ್ತವ್ಯಾ ವೀಕ್ಷ್ಯ ದೋಷಸಮುಚ್ಛ್ರಿತಿಮ್ ॥೨೧॥

ಪ್ರಕುಪಿತದೋಷಗಳ ಉಲ್ಬಣಕ್ಕೆ ತಕ್ಕಂತೆ ಅರ್ಶೋರೋಗಗಳಲ್ಲಿ ಅಗ್ನಿದೀಪಕಗಳಾದ ಚಿತ್ರಕಘೃತ ಮೊದಲಾದುವುಗಳನ್ನೂ ಮಹಾಕುಷ್ಠ, ಮಧುಮೇಹಾದಿ ಚಿಕಿತ್ಸೆಗಳಲ್ಲಿ ಹೇಳಿರುವ ನವಾಯಸಚೂರ್ಣ-ಅಯಸ್ಕೃತಿಗಳು-ಪೈಷ್ಟಿಕಗೌಡಿಕಾದಿ ವಿವಿಧ ಸುರೆಗಳನ್ನೂ, ನಾನಾವಿಧೌಷಧಕಷಾಯದೊಡನೆ ಬೆಲ್ಲ-ಧಾತಕೀಕುಸುಮಗಳನ್ನು ಸೇರಿಸಿ ಮುಚ್ಚಿಟ್ಟು ಸಂಧಾನಮಾಡಿರುವ ಆಸವಗಳನ್ನೂ ಪ್ರಯೋಗಮಾಡಬೇಕು.

ವೇಗಾವರೋಧಸ್ತ್ರೀಪೃಷ್ಠಯಾನಾನ್ಯುತ್ಕಟುಕಾಸನಮ್ ।
ಯಥಾಸ್ವಂ ದೋಷಲಂ ಚಾನ್ನಮರ್ಶಃಸು ಪರಿವರ್ಜಯೇತ್ ॥೨೨॥

ವಾತಮೂತ್ರಪುರೀಷಾದಿಗಳು ಸ್ವಭಾವದಿಂದಲೇ ತನ್ನ ತನ್ನ ಮಾರ್ಗಗಳಿಂದ ಪ್ರವೃತ್ತಿಯಾಗುವ ವೇಗಗಳು ; ಇವುಗಳನ್ನು ತಡೆಯುವುದು, ಸ್ತ್ರೀಸಂಗ, ಆನೆ, ಕುದುರೆಗಳ ಮೇಲೆ ಕೂತು ಸವಾರಿಮಾಡುವುದು, ಕುಕ್ಕುರುಗಾಲಿನಲ್ಲಿ ಕೂರುವುದು (ಎರಡು ಪಾದಗಳನ್ನೂ ನೆಲದ ಮೇಲೂರಿ ಮುಂಡಿಗಳನ್ನು ಮಡಿಸಿ ಮೇಲಕ್ಕೆ ಮಾಡಿ ಕೂಡುವುದು) ದೋಷಪ್ರಕೋಪಮಾಡುವ ಅನ್ನಸೇವನೆ ಇವುಗಳನ್ನು ಅರ್ಶೋರೋಗಿಯು ತ್ಯಜಿಸಬೇಕು.

ಇತಿ ಶ್ರೀಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇಽರ್ಶಶ್ಚಿಕಿತ್ಸಾನಾಮಕ ಷಷ್ಠಾಧ್ಯಾಯಸ್ಯ
ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ
ಕರ್ಣಾಟಕಭಾಷಾವಿವೃತಿಃ ॥

ಸಪ್ತಮೋಽಧ್ಯಾಯಃ

ಅಥಾತೋಽಶ್ಮರೀ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆ ಅಶ್ಮರೀಚಿಕಿತ್ಸೆಯನ್ನು ವಿವರಿಸುತ್ತೇವೆ.

ಅಶ್ಮರೀ ದಾರುಣೋವ್ಯಾಧಿರನ್ತಕಪ್ರತಿಮೋ ಮತಃ |
ಔಷಧೈಸ್ತರುಣ ಸಾಧ್ಯಃ ಪ್ರವೃದ್ಧಚ್ಛೇದಮರ್ಹತಿ ||೩||
ತಸ್ಯ ಪೂರ್ವೇಷು ರೂಪೇಷು ಸ್ನೇಹಾದಿಕ್ರಮ ಇಷ್ಯತೇ |
ತೇನಾಸ್ಯಾಪಚಯಂ ಯಾನ್ತಿ ವ್ಯಾಧೇರ್ಮೂಲಾನ್ಯಶೇಷತಃ ||೪||

ಅಶ್ಮರಿಯು ಅತಿಭಯಂಕರವಾದ ರೋಗವು, ಯಮನಿಗೆ ಸಮಾನವಾದದ್ದು ಅಂದರೆ ಮರಣವನ್ನುಂಟುಮಾಡತಕ್ಕದ್ದು ; ತರುಣಾವಸ್ಥೆಯಲ್ಲಿದ್ದರೆ ಔಷಧಿಗಳಿಂದಲೇ ಗುಣಪಡಿಸಬಹುದು, ವೃದ್ಧಿಯಾದರೆ ಶಸ್ತ್ರದಿಂದ ಭೇದಿಸಬೇಕಾಗುತ್ತದೆ. ಅದರ ಪೂರ್ವ ರೂಪಗಳಲ್ಲಿ ಸ್ನೇಹಸ್ವೇದಾದಿ ಕ್ರಮಗಳು ಯೋಗ್ಯವಾದುವು. ಅದರಿಂದ ವ್ಯಾಧಿಯ ಬುಡಗಳೇ ಕ್ಷೀಣಿಸಿಹೋಗುತ್ತವೆ.

ಪಾಷಾಣಭೇದೋ ವಸುಕೋ ವಶಿರಾಶ್ಯನ್ತಕೌ ತಥಾ |
ಶತಾವರೀ ಶ್ವದಂಷ್ಟ್ರಾ ಚ ಬೃಹತೀ ಕಣ್ಟಕಾರಿಕಾ ||೫||
ಕಪೋತವಙ್ಕ್ಯಾರ್ತಗಳಃ ಕಚ್ಛಕೋಶೀರಕುಬ್ಜಕಾಃ |
ವೃಕ್ಷಾದನೀ ಭಲ್ಲುಕಶ್ಚ ವರುಣಃ ಶಾಕಜಂ ಫಲಮ್ ||೬||
ಯವಾಃ ಕುಳತ್ಥಾಃ ಕೋಲಾನಿ ಕತಕಸ್ಯ ಫಲಾನಿ ಚ |
ಊಷಕಾದಿಪ್ರತೀವಾಪಮೇಷಾಂ ಕ್ವಾಥೈರ್ಘೃತಂ ಕೃತಮ್ ||೭||
ಭಿನತ್ತಿ ವಾತಸಂಭೂತಾಮಶ್ಮರೀಂ ಕ್ಷಿಪ್ರಮೇವ ತು |
ಕ್ಷಾರಾನ್ ಯವಾಗೂರ್ಯೂಷಾಂಶ್ಚ ಕಷಾಯಾಣಿ ಪಯಾಂಸಿ ಚ ||೮||
ಭೋಜನಾನಿ ಚ ಕುರ್ವೀತ ವರ್ಗೇಽಸ್ಮಿನ್ ವಾತನಾಶನೇ |

ಹಿಟ್ಟುಳಿಕ, ಶಿವಮಲ್ಲಿಗೆ, ಉತ್ತರಣೆ, ಆರೆಮರ (ಕಂಚುವಾಳಭೇದ), ಆಷಾಡಿ ಬೇರು, ನೆಗ್ಗಿಲುಸಮೂಲ, ಹೆಗ್ಗುಳ್ಳ-ನೆಲಗುಳ್ಳಗಳು, ನಾಯಿಬೇಲದ ತೊಗಟೆ-ಆರ್ತಗಳ (ಮತ್ತಿ ತೊಗಟೆ ಎಂದೂ ಆವರಿಕೆಯ ತೊಗಟೆ ಎಂದೂ), ಕಚಕ (ಮತ್ತಿಮರದ ತೊಗಟೆ), ಲಾಮಂಚ-ಕುಬ್ಜಕ (ಗುಲಾಬಿ ಹೂವು, ಕೆಲವರು ಗುಲಗಂಜಿ ಎನ್ನುತ್ತಾರೆ), ಬಂದಣಿಗೆ-ಹೆಮ್ಮರದ ತೊಗಟೆ-ಮಟ್ಟನಾವು, ತೇಗದ ಹಣ್ಣು, ಯವಧಾನ್ಯ-ಹುರುಳಿ-

ಎಲಚಿ ಹಣ್ಣು-ಚಿಲ್ಲದ ಬೀಜ ಇವುಗಳ ಕಷಾಯಕ್ಕೆ ಊಷಕಾದಿಗಣ ದ್ರವ್ಯಗಳ ಪ್ರತೀವಾಪ ಮಾಡಿ ತಯಾರಿಸಿದ ಘೃತವನ್ನು ಸೇವಿಸಿದರೆ ಜಾಗ್ರತೆಯಾಗಿ ವಾತಜನಿತ ಅಶ್ಮರಿಯು ನಾಶವಾಗುತ್ತದೆ ; ಈ ವಾತಹರದ್ರವ್ಯವರ್ಗದಲ್ಲಿ ಹೇಳಿದ ದ್ರವ್ಯಗಳಿಂದ ತಯಾರಿಸಿದ ಕ್ಷಾರ ೧ ಕರ್ಷದಷ್ಟನ್ನು ಮಸ್ತು ಮೊದಲಾದ ಬಸ್ತಿಶೋಧನದ್ರವ್ಯಗಳ ೪ ಪಲಗಳಲ್ಲಿ ಕದರಿ ಕುಡಿಸಬೇಕು ; ೨ ಅಥವಾ ೩ ಕರ್ಷಕ್ಷಾರಗಳನ್ನು ಆರರಷ್ಟು ಅಥವಾ ಎಂಟರಷ್ಟು ನೀರಿನಲ್ಲಿ ಕರಗಿಸಿ ಶೋಧಿಸಿ ಕುಡಿಸಬೇಕು ; ೪ ಪಲ ದ್ರವದಿಂದ ಯವಾಗೂ-ಯೂಷ-ಕಷಾಯ-ಕ್ಷೀರಗಳನ್ನು ತಯಾರಿಸಿ ಕುಡಿಸಬೇಕು ಮತ್ತು ಈ ಕ್ಷಾರ ಮಿಶ್ರಮಾಡಿದ ಅನ್ನವನ್ನೇ ಭೋಜನ ಮಾಡಿಸಬೇಕು.

ಕುಶಃಕಾಶಃ ಶರೋಗುನ್ದ್ರಾ ಉತ್ಕಟೋಮೋರಟೋಽಶ್ಮಭಿತ್ ||೯||
ವರೀ ವಿದಾರೀ ವಾರಾಹೀ ಶಾಲೀಮೂಲತ್ರಿಕಣ್ಟಕಮ್ ।
ಭಲ್ಲೂಕಃ ಪಾಟಲಾಪಾಠಾ ಪತ್ತೂರೋಽಥ ಕುರುಣ್ಟಕಾ ||೧೦||
ಪುನರ್ನವಾ ಶಿರೀಷಶ್ಚ ಕೃಥಿತಾಸ್ತೇಷು ಸಾಧಿತಮ್ ।
ಘೃತಂ ಶಿಲಾಜಮಧುಕಬೀಜೈರಿನ್ದೀವರಸ್ಯ ಚ ||೧೧||
ತ್ರಪುಸೈರ್ವಾರುಕಾದೀನಾಂ ಬೀಜೈಶ್ಚಾವಾಪಿತಂ ಶುಭಮ್ ।
ಭಿನತ್ತಿ ಪಿತ್ತಸಂಭೂತಾಮಶ್ಮರೀಂ ಕ್ಷಿಪ್ರಮೇವ ತು ||೧೨||
ಕ್ಷಾರಾನ್ ಯವಾಗೂರ್ಯೂಷಾಂಶ್ಚ ಕಷಾಯಾಣಿ ಪಯಾಂಸಿ ಚ ।
ಭೋಜನಾನಿ ಚ ಕುರ್ವೀತ ವರ್ಗೇಽಸ್ಮಿನ್ ಪಿತ್ತನಾಶನೇ ||೧೩||

ದರ್ಭೆ-ವಿಶ್ವಾಮಿತ್ರ ದರ್ಭೆ (ಕಾಶಿಹುಲ್ಲು)-ಲಾಳ-ಶುಂಠಿಹುಲ್ಲು-ದೊಡ್ಡಲಾಳ-ಕೊರಟಗೆ-ಹಿಟ್ಟುಳಿಕ-ಆಷಾಡಿ-ನೆಲಗುಂಬಳ-ಹಂದಿಗಡ್ಡೆ-ಬತ್ತದ ಬೇರು-ನೆಗ್ಗಿಲು ಸಮೂಲ-ಹೆಮ್ಮರ-ಪಾದರಿ-ಅಗಳುಶುಂಠಿ-ಹೊಮ್ಮುಗಳು-ಮುಳ್ಳುಗೋರಂಟಿ-ಕೊಮ್ಮೆ-ಬಾಗೆ ಇವುಗಳ ಕಷಾಯದಲ್ಲಿ ತುಪ್ಪವನ್ನು ಶಿಲಾಜತು-ಅತಿಮಧುರ-ನೇರಳೆ ಬೀಜ-ಸೌತೆ-ಮಿಣಿಕೆ ಮೊದಲಾದ ಮೂತ್ರಫಲಗಳ ಬೀಜಗಳ ಚೂರ್ಣವನ್ನು ಪ್ರತಿವಾಪಮಾಡಿ ತಯಾರಿಸಿದ ಘೃತವನ್ನು ಕುಡಿಸಿದರೆ ಅತಿಜಾಗ್ರತೆಯಾಗಿ ಪಿತ್ತಜನಿತ ಅಶ್ಮರಿಯು ನಿವಾರಣೆಯಾಗುತ್ತದೆ.

ಟಿಪ್ಪಣಿ—ಉತ್ಕಟಃ—ಸಿಪ್ಪೆಯ ಮೇಲೆ ಒಡೆದಿರುವುದು (ಉದ್ಗತಃ ಕಟ ಆವರಣ ಆವರಕಃ ಯಸ್ಮಿನ್ನಿತಿ) ದಾಲಚಿನ್ನಿ ; ಮೋರಟಃ—ಕಬ್ಬಿನ ಬೇರು ; ಪತ್ತೂರಃ, ಕುರುಣ್ಟಕಾ ಇವೆರಡೂ ಪತ್ತೂರಭೇದ (ಹೊಮ್ಮುಗಳು) ಎಂದು ಸುಧಾಟೀಕೆಯಲ್ಲಿ ಹೇಳಿದೆ.

ಗಣೋ ವರುಣಕಾದಿಸ್ತು ಗುಗ್ಗುಲ್ವೇಲಾಹರೇಣವಃ ।
ಕುಷ್ಠಭದ್ರಾದಿಮರಿಚಚಿತ್ರಕೈಃ ಸಸುರಾಹ್ವಯೈಃ ||೧೪||
ಏತೈಃ ಸಿದ್ಧಮಜಾಸರ್ಪಿರೂಷಕಾದಿಗಣೇನ ಚ ।
ಭಿನತ್ತಿ ಕಫಸಂಭೂತಾಮಶ್ಮರೀಂ ಕ್ಷಿಪ್ರಮೇವ ತು ||೧೫||

ಕ್ಷಾರಾನ್ ಯವಾಗೂರ್ಯೂಷಾಂಶ್ಚ ಕಷಾಯಾಣಿ ಪಯಾಂಸಿ ಚ ।
ಭೋಜನಾನಿ ಚ ಕುರ್ವೀತ ವರ್ಗೇಽಸ್ಮಿನ್ ಕಫನಾಶನೇ ॥೧೬॥

ವರುಣಾದಿಗಣದ್ರವ್ಯಗಳು-ಗುಗ್ಗುಳು-ಏಲಕ್ಕಿ-ರೇಣುಕೆಯ ಬೀಜ-ಚಂಗಲ್ ಕೋಷ್ಠ -ದೇವದಾರ್ವಾದಿಗಣದ್ರವ್ಯಗಳು-ಮೆಣಸು-ಚಿತ್ರಮೂಲ ಇವುಗಳ ಕಷಾಯದೊಡನೆ ಆಡಿನ ತುಪ್ಪವನ್ನೂ ಊಷಕಾದಿಗಣ ದ್ರವ್ಯಗಳ ಚೂರ್ಣವನ್ನೂ ಹಾಕಿ ತಯಾರಿಸಿದ ಘೃತವನ್ನು ಕುಡಿಸಿದರೆ ಜಾಗ್ರತೆಯಾಗಿ ಕಫಜನಿತ ಅಶ್ಮರಿಯ ನಿವಾರಣೆಯಾಗುತ್ತದೆ ; ಕಫಹರಗಣದ್ರವ್ಯಗಳೊಡನೆ ಕ್ಷಾರಗಳನ್ನೂ ಯವಾಗೂವನ್ನೂ (ಗಂಜಿ)-ದ್ವಿದಳಧಾನ್ಯಗಳ ಕಟ್ಟು-ಕಷಾಯ-ಹಾಲು-ಅನ್ನ ಇವುಗಳನ್ನೂ ಸೇವಿಸಬೇಕು.

ಪಿಚುಕಾಜತ್ರುಕ್ಕೋಲಕತಕಶಾಕೇನ್ದೀವರಜೈಃ ಫಲೈಃ ।
ಚೂರ್ಣಿತೈಃ ಸಗುಡಂ ತೋಯಂ ಶರ್ಕರಾಶಮನಂ ಪಿಬೇತ್ ॥೧೭॥
ಕ್ರೌಞ್ಚೋಷ್ಟ್ರರಾಸಭಾಸ್ಥೀನಿ ಶ್ವದಂಷ್ಟ್ರಾ ತಾಲಮೂಲಿಕಾ ।
ಅಜಮೋದಾಕದಂಬಸ್ಯ ಮೂಲಂ ನಾಗರಮೇವ ಚ ॥೧೮॥
ಪೀತಾನಿ ಶರ್ಕರಾಂ ಭಿನ್ದ್ಯುಃ ಸುರಯೋಷ್ಣೋದಕೇನ ವಾ ।
ತ್ರಿಕಣ್ಟಕಸ್ಯ ಬೀಜಾನಾಂ ಚೂರ್ಣಂ ಮಾಕ್ಷಿಕಸಂಯುತಮ್ ॥೧೯॥
ಅವಿಕ್ಷೀರೇಣ ಸಪ್ತಾಹಮಶ್ಮರೀಭೇದನಂ ಪಿಬೇತ್ ।

ಹತ್ತೀ ಹರಳು-ಅಂಕೋಲೆ ಬೀಜ-ಚಿಲ್ಲದ ಬೀಜ-ನೈದಿಲೆಯ ಬೀಜ (ಹೊನ್ನೆ ಗಳೆಂದು ಕೆಲವರ ಮತ) ಇವುಗಳ ಚೂರ್ಣಕ್ಕೆ ಎರಡರಷ್ಟು ಬೆಲ್ಲವನ್ನು ಸೇರಿಸಿ ಬಿಸಿ ನೀರಿನಲ್ಲಿ ಕದರಿ ಕುಡಿಸಿದರೆ ಶರ್ಕರಾಶ್ಮರಿಯನ್ನು ನಿವಾರಣೆಮಾಡುತ್ತದೆ. ಕ್ರೌಂಚಪಕ್ಷಿ-ಒಂಟೆ-ಕತ್ತೆ ಇವುಗಳ ಮೂಳೆಗಳು, ನೆಗ್ಗಿಲುಸಮೂಲ-ನೆಲತಾಳೆಗೆಡ್ಡೆ-ವಾದಕ್ಕಿ-ಈಚಲ ಬೇರು-ಶುಂಠಿ ಇವುಗಳ ಚೂರ್ಣವನ್ನು ಮದ್ಯದಲ್ಲಾಗಲೀ ಬಿಸಿನೀರಿನಲ್ಲಾಗಲೀ ಕದರಿ ಕುಡಿಸಿದರೆ ಮೂತ್ರಶರ್ಕರೆಯು ಕರಗಿ ಬೀಳುತ್ತದೆ; ನೆಗ್ಗಿಲಮುಳ್ಳುಗಳನ್ನು ಚೂರ್ಣ ಮಾಡಿ ಕುರಿಯ ಹಾಲಿನಲ್ಲಿ ಕದರಿ ಜೇನುತುಪ್ಪ ಬೆರಸಿ ಏಳು ದಿನಗಳು ಕುಡಿದರೆ ಅಶ್ಮರಿಯು ಪುಡಿಪುಡಿಯಾಗಿ ಉದುರಿ ಮೂತ್ರದೊಡನೆ ಹೊರಕ್ಕೆ ಬರುತ್ತದೆ.

ದ್ರವ್ಯಾಣಾಂ ತು ಘೃತೋಕ್ತಾನಾಂ ಕ್ಷಾರೋಽವಿಮೂತ್ರಗಾಲಿತಃ ॥೨೦॥
ಗಾಮ್ಯಸತ್ವಶಕೃತ್ ಕ್ಷಾರೈಃ ಸಂಯುಕ್ತಃ ಸಾಧಿತಃ ಶನೈಃ ।
ತತ್ರೋಷಕಾದಿರಾವಾಪಃ ಕಾರ್ಯಸ್ತ್ರಿಕಟುಕಾನ್ವಿತಃ ॥೨೧॥
ಏಷ ಕ್ಷಾರೋಽಶ್ಮರೀಂ ಗುಲ್ಮಂ ಶರ್ಕರಾಂ ಚ ಭಿನತ್ತ್ಯಪಿ ।
ತಿಲಾಪಾಮಾರ್ಗಕದಲೀಪಲಾಶಯವವಲ್ಕಜಃ ॥೨೨॥
ಕ್ಷಾರ ಪೇಯೋಽವಿಮೂತ್ರೇಣ ಶರ್ಕರಾನಾಶನಃ ಪರಃ
ಪಾಟಲಾಕರವೀರಾಣಾಂ ಕ್ಷಾರಮೇವಂ ಸಮಾಚರೇತ್ ॥೨೩॥

ಶ್ವದಂಷ್ಟ್ರಾಯಷ್ಟಿಕಾಬ್ರಾಹ್ಮೀಕಲ್ಕಂ ವಾಕ್ಷಸಮಂ ಪಿಬೇತ್
ಸಹೈಡಕಾಖ್ಯೌ ಪೇಯೌ ವಾ ಶೋಭಾಞ್ಜನಕವಾರ್ಕವೌ ||೨೪||

ವಾತ-ಪಿತ್ತ-ಕಫಹರಗಳಾದ ಗಣದ್ರವ್ಯಗಳಲ್ಲಿ ಸಿಕ್ಕುವಷ್ಟು ದ್ರವ್ಯಗಳನ್ನು ಒಟ್ಟು ಕೂಡಿಸಿ ತಿಲನಾಳಾದಿಗಳಿಂದ ಹತ್ತಿಸಿ ಕ್ಷಾರಪಾಕವಿಧಾನದಿಂದ ತಯಾರಿಸಿದ ಕ್ಷಾರವನ್ನು ಗ್ರಾಮ್ಯಪಶುಗಳಾದ ಕುದುರೆ ಮೊದಲಾದ ಪ್ರಾಣಿಗಳ ಪುರೀಷವನ್ನು ಸುಟ್ಟು ತಯಾರಿಸಿದ ಕ್ಷಾರದೊಡನೆ ಮಿಶ್ರಮಾಡಿ ಆರು ಪಾಲಿನಷ್ಟು ಕುರಿಯ ಗಂಜಳದಲ್ಲಿ ಕದರಿ ಶೋಧಿಸಿ ಕಾಯಿಸುತ್ತಿರುವಾಗ ಊಷಕಾದಿಗಣೋಕ್ತದ್ರವ್ಯಚೂರ್ಣವನ್ನೂ ತ್ರಿಕಟು ಚೂರ್ಣವನ್ನೂ ಸಮವಾಗಿ ಸೇರಿಸಿ ನಿದಾನವಾಗಿ ತಯಾರಿಸಿದ ಕ್ಷಾರವನ್ನು ಸೇವಿಸಿದರೆ ಗುಲ್ಮ-ಅಶ್ಮರೀ-ಶರ್ಕರೆಗಳು ಭೇದಿಸುತ್ತವೆ ; ಎಳ್ಳುಕಡ್ಡಿ-ಉತ್ತರಣೆಸಮೂಲ-ಬಾಳೆಗೆಡ್ಡೆ-ಮುತ್ತುಗದ ಬುಡ-ಯವೆಯ ಹೊಟ್ಟು ಇವುಗಳನ್ನು ಸುಟ್ಟು ಬಂದ ಬೂದಿಯನ್ನು ನೀರಿನಲ್ಲಿ ಕದರಿ ಶೋಧಿಸಿ ತಯಾರಿಸಿದ ಕ್ಷಾರ ೨ ಅಥವಾ ೩ ಕರ್ಷದಷ್ಟನ್ನು ಆರರಷ್ಟು ಕುರಿಯ ಮೂತ್ರದಲ್ಲಿ ಕದರಿ ಕುಡಿಸಿದರೆ ಮೂತ್ರ ಶರ್ಕರೆಯು ಕತ್ತರಿಸಿ ಬಿದ್ದು ಶಮನವಾಗುತ್ತದೆ ; ಇದೇ ರೀತಿಯಾಗಿ ಪಾದರಿ, ಕಣಿಗಲೆ, ಕ್ಷಾರಗಳನ್ನು ತಯಾರಿಸಬೇಕು ; ಇದರಿಂದ ವಾತ ಕಫದಿಂದುಂಟಾದ ಅಶ್ಮರಿಯಲ್ಲಿ ಸಿಹಿಯಾದ ಆಹಾರದೊಡನೆ ಹಾಲು-ತುಪ್ಪಗಳನ್ನು ಮಿಶ್ರಮಾಡಿ ಭೋಜನ ಮಾಡಬೇಕೆಂದು ತಿಳಿಯಬೇಕು ; ನೆಗ್ಗಿಲುಸಮೂಲ-ಅತಿಮಧುರ-ಒಂದೆಲಗ ಇವುಗಳ ಕಲ್ಕ ೧ ಕರ್ಷದಷ್ಟನ್ನು ಕುರಿಯ ಮೂತ್ರದಲ್ಲಿ ಕದರಿ ಕುಡಿಯಬೇಕು ; ನುಗ್ಗೆಸೊಪ್ಪು ಅಥವಾ ಬೇರಿನ ತೊಗಟೆ, ಗರುಗದಸೊಪ್ಪು ಇವುಗಳ ಕಲ್ಕವನ್ನು ಕುರಿಯ ಮೂತ್ರದಲ್ಲಿ ಕದರಿ (೧ ಕರ್ಷ ಕಲ್ಕ, ಅದರ ೬ ರಷ್ಟು ಆವಿಯ ಮೂತ್ರವಿರುವಂತೆ ಮಾಡಿ) ಕುಡಿಯಬೇಕು.

ಕಪೋತವಙ್ಕಾಮೂಲಂ ವಾ ಪಿಬೇದಮ್ಲೈಃ ಸುರಾದಿಭಿಃ |
ತತ್ಸಿದ್ಧಂ ವಾ ಪಿಬೇತ್ ಕ್ಷೀರಂ ವೇದನಾಭಿರುಪದ್ರುತಃ ||೨೫||
ಹರೀತಕ್ಯಾತಿಸಿದ್ಧಂ ವಾ ವರ್ಷಾಭೂಸಿದ್ಧಮೇವ ವಾ |
ಸರ್ವಥೈವೋಪಯೋಜ್ಯಃ ಸ್ಯಾದ್ಗಣೋ ವೀರತರಾದಿಕಃ ||೨೬||
ಘೃತೈಃ ಕ್ಷಾರೈಃ ಕಷಾಯೈಶ್ಚ ಕ್ಷೀರೈಃ ಸೋತ್ತರಬಸ್ತಿಭಿಃ |
ಯದಿ ನೋಪಶಮಂ ಗಚ್ಛೇಚ್ಛೇದಸ್ತತ್ರೋತ್ತರೋ ವಿಧಿಃ ||೨೭||
ಕುಶಲಸ್ಯಾಪಿ ವೈದ್ಯಸ್ಯ ಯತಃ ಸಿದ್ಧಿರಿಹಾಧ್ರುವಾ |
ಉಪಕ್ರಮೋ ಜಘನ್ಯೋಽಯಮತಃ ಸ ಪರಿಕೀರ್ತಿತಃ ||೨೮||
ಅಕ್ರಿಯಾಯಾಂ ಧ್ರುವೋ ಮೃತ್ಯುಃ ಕ್ರಿಯಾಯಾಂ ಸಂಶಯೋ ಭವೇತ್ |
ತಸ್ಮಾದಾಪೃಚ್ಛ್ಯ ಕರ್ತವ್ಯಮೀಶ್ವರಂ ಸಾಧುಕಾರಿಣಾ ||೨೯||

ನಾಯಿಬೇಲದ ಬೇಕಾನ ತೊಗಟೆ (ಕಪೋತವಙ್ಕಾ ಎಂದರೆ ಸಲ್ಲಕೀ ಎಂದೂ, ಗಿರಿಕರ್ಣಿಕೆಯ ಎಲೆಯಂತಿರುವ ಮಧ್ಯದೇಶದಲ್ಲಿರುವ ವೃಕ್ಷವೆಂದೂ ಡಲ್ಹಣರ ಮತ)ಯ

ಕಲ್ಕವನ್ನು ಹುಳಿಮದ್ಯದಲ್ಲಿ ಕದರಿಯಾಗಲೀ ಹಾಲಿನಲ್ಲಿ ಕಾಯಿಸಿಯಾಗಲೀ ಕುಡಿಸಿದರೆ ಅಶ್ಮರೀವೇದನೆಯು ನಿವಾರಣೆಯಾಗುತ್ತದೆ (ವಾತಜನಿತ ಅಶ್ಮರಿಯು) ; ಅಣಿಲೆ-ತಾರೆ-ನೆಲ್ಲಿಕಾಯಿಗಳ ಚೂರ್ಣವನ್ನು ಸೇರಿಸಿ ಕ್ಷೀರಪಾಕಮಾಡಿ ಕುಡಿಸಿದರೆ ಪಿತ್ತಜ ಅಶ್ಮರಿಯ ವೇದನೆಗಳು ನಿವಾರಣೆಯಾಗುತ್ತವೆ ; ಕೊಮ್ಮೆಬೇರನ್ನು ಕ್ಷೀರ ವಿಧಾನದಿಂದ ತಯಾರಿಸಿ ಕುಡಿಸಿದರೆ ವಾತಕಫಜನಿತ ಅಶ್ಮರಿಯ ವೇದನೆಗಳು ನಿವಾರಣೆಯಾಗುತ್ತವೆ ; ವೀರತರ್ವಾದಿಗಣೋಕ್ತದ್ರವ್ಯಗಳಿಂದ ತಯಾರಿಸಿದ ಘೃತ–ಕಷಾಯ-ಯವಾಗೂ-ಭೋಜನ ಮತ್ತು ಅವಗಾಹನಸ್ವೇದಾದಿಗಳ ಉಪಯೋಗದಿಂದ ಸಕಲವಿಧವಾದ ಅಶ್ಮರಿಯೂ ನಿವಾರಣೆಯಾಗುತ್ತದೆ ; ಈ ರೀತಿಯಾಗಿ ಘೃತ-ಕ್ಷಾರ-ಕಷಾಯ-ಸಿದ್ಧಕ್ಷೀರಪಾನ-ಉತ್ತರಬಸ್ತಿ ಪ್ರಯೋಗ ಇವುಗಳಿಂದಲೂ ಶಮನವಾಗದಿದ್ದರೆ ಮುಂದೆ ಶಸ್ತ್ರದಿಂದ ಕತ್ತರಿಸಲೇಬೇಕು. ಏಕೆಂದರೆ ಜಾಣನಾಗಿ ಕರ್ಮದಕ್ಷನಾದ ವೈದ್ಯನಾದರೂ ಶಾಸ್ತ್ರದಲ್ಲಿ ನಿಶ್ಚಯಜ್ಞಾನವಿದ್ದರೂ ಇತಂಹ ಸಂದರ್ಭದಲ್ಲಿ ಕರ್ಮಸಿದ್ಧಿಯು ಸಂಶಯದಿಂದ ಕೂಡಿದ್ದಾಗಿರುತ್ತದೆ ; ಆದಕಾರಣ ಜಘನ್ಯವಾದ (ಅತಿಹೇಯವಾದ-ಕ್ರೂರವಾದ) ಈ ಶಸ್ತ್ರಕರ್ಮವನ್ನು ಹೇಳುತ್ತೇವೆ ; ಮರ್ಮವನ್ನು ಭೇದಿಸಿದರೆ ತುಂಬಾ ದುಃಖವುಂಟಾಗುತ್ತದೆ ಅಥವಾ ಮರಣವೇ ಸಂಭವಿಸುತ್ತದೆ ; ಶಸ್ತ್ರದಿಂದ ಭೇದನಮಾಡದಿದ್ದರೆ ಖಂಡಿತವಾಗಿ ಮರಣವುಂಟಾಗುತ್ತದೆ. ಭೇದಿಸಿದರೆ ಸಂಶಯ ಒಂದು ವೇಳೆ ಬದುಕಿದರೂ ಬದುಕಬಹುದು ; ಆದಕಾರಣ ಆ ದೇಶದ ರಾಜನ ಅಪ್ಪಣೆಯನ್ನು ಪಡೆದು ರೋಗಿಗೆ ಸುಖವಾಗಲೆಂಬ ಮನಸ್ಸುಳ್ಳ ಶಸ್ತ್ರವೈದ್ಯನು ಜಾಗರೂಕತೆಯುಳ್ಳವನಾಗಿ ಶಸ್ತ್ರದಿಂದ ಅಶ್ಮರಿಯನ್ನು ಭೇದಮಾಡಬೇಕು.

ಅಥ ರೋಗಾನ್ವಿತಮುಪಸ್ನಿಗ್ಧಮಪಕೃಷ್ಟದೋಷಮೀಷತ್ಕರ್ಶಿತಮಭ್ಯಕ್ತಸ್ವಿನ್ನಶರೀರಂ ಭುಕ್ತವನ್ತಂ ಕೃತಬಲಿಮಙ್ಗಲಸ್ವಸ್ತಿವಾಚನಮಗ್ರೋಪಹರಣೀಯೋಕ್ತೇನ ವಿಧಾನೇನೋಪಕಲ್ಪಿತಸಮ್ಭಾರಮಾಶ್ವಾಸ್ಯ, ತತೋ ಬಲವನ್ತಮವಿಕ್ಲವಮಾಜಾನುಸಮೇ ಫಲಕೇ ಪ್ರಾಗುಪವೇಶ್ಯ ಪುರುಷಂ, ತಸ್ಯೋತ್ಸಙ್ಗೇ ನಿಷಣ್ಣಪೂರ್ವಕಾಯಮುತ್ತಾನಮುನ್ನತಕಟೀಕಂ ವಸ್ತ್ರಾಧಾರಕೋಪವಿಷ್ಟಂ ಸಙ್ಕುಚಿತಜಾನುಕೂರ್ಪರಮಿತರೇಣ ಸಹಾವಬದ್ಧಂ ಸೂತ್ರೇಣ ಶಾಟಕೈರ್ವಾ, ತತಃ ಸ್ವಭ್ಯಕ್ತನಾಭಿಪ್ರದೇಶಸ್ಯ ವಾಮಪಾರ್ಶ್ವಂ ವಿಮೃದ್ಯ ಮುಷ್ಟಿನಾವಪೀಡಯೇದಧೋನಾಭೇರ್ಯಾವದಶ್ಮರ್ಯಧಃ ಪ್ರಪನ್ನೇತಿ, ತತಃ ಸ್ನೇಹಾಭ್ಯಕ್ತೇ ಕ್ಲೃಪ್ತನಖೇ ವಾಮಹಸ್ತಪ್ರದೇಶಿನೀಮಧ್ಯಮೇ ಪಾಯೌ ಪ್ರಣಿಧಾಯಾನುಸೇವನೀಮಾಸಾದ್ಯ ಪ್ರಯತ್ನಬಲಾಭ್ಯಾಂ ಪಾಯುಮೇಢ್ರಾನ್ತರಮಾನೀಯ, ನಿರ್ವಲೀಕಮನಾಯತಮವಿಷಮಂ ಚ ಬಸ್ತಿಂ ಸನ್ನಿವೇಶ್ಯ, ಭೃಶಮುತ್ಪೀಡಯೇತ್ ಅಙ್ಗುಲಿಭ್ಯಾಮ್ ಯಥಾ ಗ್ರನ್ಥಿರಿವೋನ್ನತಂ ಶಲ್ಯಂ ಭವತಿ ||೩೦||

ಸ ಚೇದ್ಗೃಹೀತಶಲ್ಯೇ ತು ವಿವೃತಾಕ್ಷೋ ವಿಚೇತನಃ |
ಹತವಲ್ಲಮ್ಬಶೀರ್ಷಶ್ಚ ನಿರ್ವಿಕಾರೋ ಮೃತೋಪಮಃ ||೩೧||
ನ ತಸ್ಯ ನಿರ್ಹರೇಚ್ಛಲ್ಯಂ ಸ ನಿರ್ಹರೇತ್ತು ಮ್ರಿಯೇತ ಸಃ |
ವಿನಾ ತ್ವೇತೇಷು ರೂಪೇಷು ನಿರ್ಹರ್ತುಂ ಸಮುಪಾಚರೇತ್[1] ||೩೨||

---

[1] 'ಪ್ರಯತೇತವೈ' ಇತಿ ಪಾಠಾನ್ತರಮ್ |

ಅಶ್ಮರೀಛೇದಮಾಡಬೇಕಾದರೆ ರೋಗಿಗೆ ಸ್ನೇಹನಮಾಡಿಸಿ ದೋಷಹರಣ ಮಾಡಿಸಿ ದೇಹಕ್ಷೀಣನಾದರೆ ತೈಲಾಭ್ಯಂಗಸ್ವೇದಭೋಜನಗಳನ್ನು ಮಾಡಿಸಬೇಕು ; ಅತಿ ಕ್ಷೀಣನಾದರೆ ಶಸ್ತ್ರಕರ್ಮವನ್ನು ಸಹಿಸಲಾರನು ; ಕೃಶನಾಗಿದ್ದರೆ ಬಸ್ತ್ಯಾಶಯವು ಸಣ್ಣಗಿರುತ್ತದೆಯಾಗಿ ಅಶ್ಮರಿಯು ಸಿಕ್ಕುವುದಿಲ್ಲ ; ಆದ್ದರಿಂದ ಶೋಧನದಿಂದ ಸ್ವಲ್ಪ ಮಟ್ಟಿಗೆ ದೇಹವು ಕ್ಷೀಣವಾಗಿರಬೇಕು ; ಭೂತಬಲಿಶಾಂತಿಪುಣ್ಯಾಹಸ್ವಸ್ತಿವಾಚನಗಳನ್ನು ಮಾಡಿಸಿ ಅಗ್ರೋಪಹರಣೀಯಾಧ್ಯಾಯದಲ್ಲಿ ಹೇಳಿರುವಂತೆ ಸಕಲಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು ರೋಗಿಯನ್ನು ಸಮಾಧಾನಮಾಡಿ, ಬಲಿಷ್ಠನಾಗಿ ಆಯಾಸವಿಲ್ಲದ ಪುರುಷನನ್ನು ಮಂಡಿಮಟ್ಟಕ್ಕೆ ಎತ್ತರವಾಗಿರುವ ಹಲಗೆಯುಳ್ಳ ಕಾಲುಮಣೆ (ಬೆಂಚು)ಯ ಮೇಲೆ ಪೂರ್ವದಿಕ್ಕಿಗೆ ಮುಖಮಾಡಿ ಕೂರಿಸಿ ಅವನ ತೊಡೆಯಮೇಲೆ ರೋಗಿಯ ಬೆನ್ನು ಬರುವಂತೆ ಮೇಲ್ಮುಖಮಾಡಿ ಮಲಗಿಸಿ ಸೊಂಟಕ್ಕೆ ಬಟ್ಟೆಯ ಗಂಟನ್ನು ಹಾಕಿ ಮೇಲಕ್ಕೆ ಎಬ್ಬಿಸಿ ಮಂಡಿಯನ್ನೂ ಮೊಳಕೈಗಳನ್ನೂ ಸಂಕುಚಿಸುವಂತೆ ಮಾಡಿ ಈ ಅವಯವಗಳನ್ನು ಇವನನ್ನು ಹೊತ್ತಿರುವವನ ದೇಹಕ್ಕೆ ಹಗ್ಗದಿಂದಾಗಲೀ ಬಟ್ಟೆಯಿಂದಾಗಲೀ ಬಿಗಿದು ರೋಗಿಯ ಹೊಕ್ಕಳಿಗೆ ತೈಲವನ್ನು ಬಳಿದು ಎಡಭಾಗವನ್ನು ಹಿಸುಕಿ ಹೊಕ್ಕಳ ಕೆಳಗೆ ಮುಷ್ಟಿಯಿಂದ ಗುದ್ದುತ್ತಾ ಅಶ್ಮರಿಯು ಕೆಳಕ್ಕೆ ಇಳಿಯುವಂತೆ ಮಾಡಬೇಕು ; ಅನಂತರ ತನ್ನ ಕೈಬೆರಳುಗಳ ಉಗುರುಗಳನ್ನು ಕತ್ತರಿಸಿ ಶುಚಿಮಾಡಿಕೊಂಡ ವೈದ್ಯನು ತೈಲವನ್ನು ಸವರಿದ ತನ್ನ ಎಡದ ಕೈ ತರ್ಜನಿ ಮತ್ತು ಮಧ್ಯದ ಬೆರಳುಗಳನ್ನು ರೋಗಿಯ ಗುದದೊಳಕ್ಕೆ ನುಗ್ಗಿಸಿ ಸೇವನಿಯನ್ನು ಸೋಕಿಸಿ ಪ್ರಯತ್ನಪುರಸ್ಸರವಾಗಿ ಪಾಯುವಿಗೂ ಶಿಶ್ನಕ್ಕೂ ಮಧ್ಯೆ ಬರುವಂತೆ ನೂಕಿ ಬಸ್ತ್ಯಾಶಯವು ಸುಕ್ಕುಬೀಳದಂತೆಯೂ ಉದ್ದವಾಗದಂತೆಯೂ ಸೊಟ್ಟಾಗದಂತೆಯೂ ಮಾಡಿಟ್ಟು ಆವೆರಡು ಬೆರಳುಗಳಿಂದ ಬಲವಾಗಿ ಹಿಸುಕಿ ಅಶ್ಮರಿ ಮೇಲೇರುವಂತೆ ಮಾಡಬೇಕು ; ಶಲ್ಯರೂಪದ ಅಶ್ಮರಿಯನ್ನು ವೈದ್ಯನು ಬೆರಳುಗಳಿಂದ ಹಿಡಿದು ಹಿಸುಕುವಾಗ ರೋಗಿಯು ಕಣ್ಣುಗಳನ್ನು ಅಗಲಿಸಿ ಚೇತನರಹಿತನಾಗಿ ಸತ್ತವನಂತೆ ತಲೆಯನ್ನು ನೇತಾಡುವಂತೆ ಬಗ್ಗಿಸಿ ಅಂಗಚಲನೆಯಿಲ್ಲದೆ ಸತ್ತ ಹೆಣದಂತೆ ಆದರೆ ಅಂಥವನಿಗೆ ಶಲ್ಯರೂಪವಾದ ಅಶ್ಮರಿಯನ್ನು ಹೊರಕ್ಕೆ ತೆಗೆದುಬಿಡಬಾರದು ; ತೆಗೆದರೆ ಸತ್ತೇ ಹೋಗುತ್ತಾನೆ ; ಈ ರೀತಿಯಾದ ಚಿಹ್ನೆಗಳ್ಯಾವುದೂ ಇಲ್ಲದಿದ್ದರೆ ತೆಗೆಯಲು ಪ್ರಯತ್ನಿಸಬೇಕು.

ಸವ್ಯೇ ಪಾರ್ಶ್ವೇ ಸೇವನೀಂ ಯವಮಾತ್ರೇಣ ಮುಕ್ತ್ವಾವಚಾರಯೇತ್, ಶಸ್ತ್ರಮಶ್ಮರೀ ಪ್ರಮಾಣಂ, ದಕ್ಷಿಣತೋ ವಾ ಕ್ರಿಯಾಸೌಕರ್ಯಹೇತೋರಿತ್ಯೇಕೇ ; ಯಥಾ ನ ಭಿದ್ಯತೇ ಚೂರ್ಣ್ಯತೇ ವಾ ತಥಾ ಪ್ರಯತೇತ, ಚೂರ್ಣಮಲ್ಪಮಪ್ಯವಸ್ಥಿತಂ ಹಿ ಪುನಃ ಪರಿವೃದ್ಧಿಮೇತಿ, ತಸ್ಮಾತ್ ಸಮಸ್ತಾಮಗ್ರವಕ್ತ್ರೇಣಾದದೀತ ; ಸ್ತ್ರೀಣಾಂ ತು ಬಸ್ತಿಪಾರ್ಶ್ವಗತೋ ಗರ್ಭಾಶಯಃ ಸನ್ನಿಕೃಷ್ಟಃ, ತಸ್ಮಾತ್ತಾಸಾಮುತ್ಸಙ್ಗವತ್ ಶಸ್ತ್ರಂ ಪಾತಯೇತ್, ಅತೋಽನ್ಯಥಾಖಲ್ವಾಸಾಂ ಮೂತ್ರಸ್ರಾವೀ ವ್ರಣೋ ಭವೇತ್, ಪುರುಷಸ್ಯ ವಾ ಮೂತ್ರಪ್ರಸೇಕಕ್ಷಣನಾನ್ಮೂತ್ರಕ್ಷರಣಮ್ ;

ಅಶ್ಮರೀವ್ರಣಾದೃತೇ ಭಿನ್ನೋ ಪಸ್ತಿರೇಕಧಾ ನ ಭವತಿ, ದ್ವಿಧಾ ಭಿನ್ನಬಸ್ತಿರಾಶ್ಮರಿಕೋ ನ ಸಿದ್ಧ್ಯತಿ ; ಅಶ್ಮರೀವ್ರಣನಿಮಿತ್ತಮೇಕಧಾಭಿನ್ನಬಸ್ತಿಃ ಜೀವತಿ ಕ್ರಿಯಾಭ್ಯಾಸಾತ್ ಶಾಸ್ತ್ರ ವಿಹಿತಚ್ಛೇದಾತ್ ನಿಃಸ್ಯನ್ದಪರಿವೃದ್ಧತ್ವಾಚ್ಚ ಶಲ್ಯಸ್ಯೇತಿ । ಉದ್ಧೃತಶಲ್ಯಂ ತೂಷ್ಣೋದಕ ದ್ರೋಣ್ಯಾಮವತಾರ್ಯ ಸ್ವೇದಯೇತ್, ತಥಾ ಹಿ ಬಸ್ತಿರಸೃಜಾ ನ ಪೂರ್ಯತೇ ; ಪೂರ್ಣೇ ವಾ ಕ್ಷೀರವೃಕ್ಷಕಷಾಯಂ ಪುಷ್ಪನೇತ್ರೇಣ ವಿದಧ್ಯಾತ್ ॥೩೩॥

ಭವತಿ ಚಾತ್ರ

ಕ್ಷೀರವೃಕ್ಷಕಷಾಯಂ ತು ಪುಷ್ಪನೇತ್ರೇಣ ಯೋಜಿತಮ್ ।
ನಿರ್ಹರೇದಶ್ಮರೀಂ ತೂರ್ಣಂ ರಕ್ತಂ ಬಸ್ತಿಗತಂ ಚ ಯತ್ ॥೩೪॥

ಮೂತ್ರಮಾರ್ಗವಿಶೋಧನಾರ್ಥಂ ಚಾಸ್ಮೈ ಗುಡಸೌಹಿತಂ ವಿತರೇತ್ ; ಉದ್ಧೃತ್ಯ ಚೈನಂ ಮಧುಘೃತಾಭ್ಯಕ್ತವ್ರಣಂ ಮೂತ್ರವಿಶೋಧನದ್ರವ್ಯಸಿದ್ಧಾಮುಷ್ಣಾಂ ಸಘೃತಾಂ ಯವಾಗೂಂ ಪಾಯಯೇದುಭಯಕಾಲಂ ತ್ರಿರಾತ್ರಂ ; ತ್ರಿರಾತ್ರದೂರ್ಧ್ವಂ ಗುಡಪ್ರಗಾಢೇನ ಪಯಸಾ ಮುದ್ಗೋದನಮಲ್ಪಂ ಭೋಜಯೇತ್ ದಶರಾತ್ರಮಸ್ಯ[1] ಗ್ವಿಶುದ್ಧ್ಯರ್ಥಂ ವ್ರಣ ಕ್ಲೇದನಾರ್ಥಂ ಚ ; ದಶರಾತಾದೂರ್ಧ್ವಂ ಫಲಾಮ್ಲೈರ್ಜಾಙ್ಗಲರಸೈರುಪಾಚರೇತ್ ; ತತೋ ದಶರಾತ್ರಂ ಚೈನಮಪ್ರಮತ್ತಃ ಸ್ವೇದಯೇತ್ ಸ್ನೇಹೇನ ದ್ರವಸ್ವೇದೇನ ವಾ, ಕ್ಷೀರವೃಕ್ಷಕಷಾ ಯೇಣ ಚಾಸ್ಯ ವ್ರಣಂ ಪ್ರಕ್ಷಾಳಯೇತ್ ; ರೋಧ್ರಮಧುಕಮಞ್ಜಿಷ್ಠಾಪ್ರಪೌಣ್ಡರೀಕಕಲ್ಕೈ ರ್ವ್ರಣಂಪ್ರತಿಗ್ರಾಹಯೇತ್, ಏತೇಷ್ವೇವ ಹರಿದ್ರಾಯುತೇಷು ತೈಲಂ ಘೃತಂ ವಾ ವಿಪಕ್ವಂ ವ್ರಣಾಭ್ಯಞ್ಜನಮಿತಿ ; ಸ್ಯಾನಶೋಣಿತಂ ಚೋತ್ತರಬಸ್ತಿಭಿರುಪಾಚರೇತ್ ; ಸಪ್ತರಾತ್ರಾಚ್ಚ ಸ್ವಮಾರ್ಗಮಪ್ರತಿಪದ್ಯಮಾನೇ ಮೂತ್ರೇ ವ್ರಣಂ ಯಥೋಕ್ತೇನ ವಿಧಿನಾ ದಹೇದಗ್ನಿನಾ ; ಸ್ವಮಾರ್ಗಪ್ರತಿಪನ್ನೇ ಚೋತ್ತರಚ್ಛಯಾ ವಾ ಮೂತ್ರಮಾರ್ಗಪ್ರತಿಪನ್ನಾಮನ್ತರಾಸಕ್ತಾಂ ಶುಕ್ರಾ ಶ್ಮರೀಂ ಶರ್ಕರಾಂ ವಾ ಸ್ರೋತಸಾಪಹರೇತ್ ಏವಂ ಚಾಶಕ್ಯೇ ವಿದಾರ್ಯ ವಾ ನಾಡೀಂ ಶಸ್ತ್ರೇಣ ಬಡಿಶೇನೋದ್ಧರೇತ್ । ರೂಢವ್ರಣಶ್ಚಾಙ್ಗನಾಶ್ವನಗನಾಗರಥದ್ರುಮಾನ್ನಾರೋಹೇತ ವರ್ಷಂ ನಾಪ್ಸು ಪ್ಲವೇತ ಭುಞ್ಜೀತ ವಾ ಗುರು ॥೩೫॥

ಮೂತ್ರವಹಶುಕ್ರವಹಮುಷ್ಕಸ್ರೋತೋ ಮೂತ್ರಪ್ರಸೇಕಸೇವನೀಯೋನಿಗುದಬಸ್ತೀನ್ ಪರಿಹರೇತ್ । ತತ್ರ ಮೂತ್ರವಹಚ್ಛೇದಾತ್ ಮರಣಂ ಮೂತ್ರಪೂರ್ಣಬಸ್ತೇಃ ; ಶುಕ್ರವಹ ಚ್ಛೇದಾನ್ಮರಣಂ ಕ್ಲೈಬ್ಯಂ ವಾ ; ಮುಷ್ಕಸ್ರೋತ ಉಪಘಾತಾತ್ ಧ್ವಜಭಙ್ಗಃ ; ಮೂತ್ರ ಪ್ರಸೇಕಕ್ಷಣನಾತ್ ಮೂತ್ರಪ್ರಕ್ಷರಣಮ್ ; ಸೇವನೀಯೋನಿಚ್ಛೇದಾತ್ ರುಜಃ ಪ್ರಾದುರ್ಭಾವಃ, ಬಸ್ತಿಗುದವಿದ್ಧಲಕ್ಷಣಮ್ ಪ್ರಾಗುಕ್ತಮಿತಿ ॥೩೬॥

ಭವತಶ್ಚಾತ್ರ

ಮರ್ಮಾಣ್ಯಷ್ಟಾವಸಂಬುದ್ಧ್ಯ ಸ್ರೋತೋಜಾನಿ ಶರೀರಿಣಾಮ್ ।
ವ್ಯಾಪಾದಯೇದ್ಬಹೂನ್ಮರ್ತ್ಯಾನ್ ಶಸ್ತ್ರಕರ್ಮಾಪಟುರ್ಭಿಷಕ್ ॥೩೭॥

---

[1] 'ಮೂತ್ರಮಸ್ಯ' ಇತಿ ಪಾಠಾನ್ತರಮ್ ।

ಸೇವನೀ ಶುಕ್ರಹರಣೀ ಸ್ರೋತಸೀ ಫಲಯೋರ್ಗುದಮ್ ।
ಮೂತ್ರಸೇಕಂ ಮೂತ್ರವಹಂ ಮೂತ್ರಬಸ್ತಿ[1] ಸ್ತಥಾಷ್ಟಮಃ ॥೩೮॥

ಸೇವನಿಯ ಎಡಭಾಗದಲ್ಲಿ ಯವಧಾನ್ಯದಷ್ಟು ಪ್ರದೇಶವನ್ನು ಬಿಟ್ಟು ಶಸ್ತ್ರದಿಂದ ಚುಚ್ಚಿ ಅಶ್ಮರಿಯಷ್ಟೇ ಪ್ರಮಾಣದ ರಂಧ್ರವನ್ನು ಮಾಡಬೇಕು ; ಕೆಲಸದ ಸೌಕರ್ಯ ಕ್ಕಾಗಿ ಸೇವನಿಯ ಬಲಗಡೆಯಲ್ಲೂ ಶಸ್ತ್ರಚ್ಛೇದನಮಾಡಬೇಕೆಂದು ಕೆಲವರ ಮತ ; ಅಶ್ಮರಿಯು ಒಡೆಯದಂತೆಯೂ ಪುಡಿಯಾಗದಂತೆಯೂ ಎಚ್ಚರಿಕೆಯಿಂದಿರಬೇಕು ; ಏಕೆಂದರೆ ಸ್ವಲ್ಪಮಾತ್ರವು ನಿಂತರೂ ಅದೇ ಪುನಃ ವೃದ್ಧಿಯಾಗುತ್ತದೆ ; ಆದಕಾರಣ ಸರ್ಪಫಣಾಮುಖವುಳ್ಳ ಶಸ್ತ್ರದಿಂದ ಅಶ್ಮರಿಯನ್ನು ಪೂರ್ತಿಯಾಗಿ ಕತ್ತರಿಸಿ ಹೊರಕ್ಕೆ ತಂದುಬಿಡಬೇಕು ; ಸ್ತ್ರೀಯರಿಗೆ ಬಸ್ತ್ಯಾಶಯದ ಪಕ್ಕದಲ್ಲೇ ಗರ್ಭಾಶಯವಿದೆ ; ಬಲು ಹತ್ತಿರದಲ್ಲಿದೆಯಾಗಿ ಅವರಿಗೆ ಗರ್ಭಾಶಯಕ್ಕೆ ತಗಲದಿರುವಂತೆ (ಮೇಲ್ಗಡೆಗೆ ನುಗ್ಗದಂತೆ) ಶಸ್ತ್ರವನ್ನು ಪ್ರಯೋಗಿಸಬೇಕು ; ಆಳವಾಗಿ ಶಸ್ತ್ರವು ಪ್ರವೇಶಿಸಿ ಅಶ್ಮರಿಯನ್ನು ಕತ್ತರಿಸಿದರೆ ಬಸ್ತಿಯ ಪಾರ್ಶ್ವದ ಚರ್ಮಕ್ಕೆ ಅಂಟಿಕೊಂಡಿರುವ ಗರ್ಭಾಶಯದ ಚರ್ಮವೂ ಮಾಂಸವೂ ಕತ್ತರಿಸಲ್ಪಟ್ಟು ಗರ್ಭಾಶಯದೊಳಕ್ಕೆ ಮೂತ್ರಸ್ರಾವಮಾಡುವ ವ್ರಣವುಂಟಾ ಗುತ್ತದೆ ; ಪುರುಷರಿಗೂ ಮೂತ್ರಮಾರ್ಗದ ಬುಡದಲ್ಲಿ ಅಂಟಿಕೊಂಡಿರುವ ಸ್ರೋತಸ್ಸು ಕತ್ತರಿಸಿಹೋದರೆ ಮೂತ್ರವು ತಡೆಯಿಲ್ಲದೆ ಸ್ರವಿಸುತ್ತಲೇ ಇರುತ್ತದೆ ; ಅಶ್ಮರಿಯನ್ನು ತೆಗೆಯಲು ಶಸ್ತ್ರಪಾತಮಾಡಿದ್ದರಿಂದ ಉಂಟಾದ ವ್ರಣವಲ್ಲದೆ ಬೇರೆ ಬಸ್ತಿ ಭಾಗವು ಹರಿದುಹೋದರೆ ರೋಗಿಯು ಬದುಕುವುದಿಲ್ಲ. ಎರಡು ಭಾಗಗಳಲ್ಲಿ ಬಸ್ತ್ಯಾಶ ಯವು ಹರಿದುಹೋಗಿರುವ ಅಶ್ಮರೀಪೀಡಿತರೋಗಿಯು ಸಾಯುತ್ತಾನೆಂಬುದು ಖಂಡಿತ ವಾದ ವಿಚಾರವು. ಅಶ್ಮರಿಯನ್ನು ಹೊರಕ್ಕೆ ತೆಗೆಯಲು ಶಸ್ತ್ರಪ್ರಯೋಗದಿಂದುಂಟಾದ ಬಸ್ತ್ಯಾಶಯದ ಒಂದು ಭಾಗದ ಭೇದನವು ಶಾಸ್ತ್ರವಿಹಿತವಾಗಿದ್ದು ಅಪಾಯಕರವಲ್ಲದ್ದ ರಿಂದಲೂ ಮೂತ್ರಸ್ಯಂದದಿಂದಲೇ ಅಶ್ಮರಿಯುಂಟಾಗಿ ಶಲ್ಯರೂಪದಿಂದ ಪರಿಣಾಮ ಹೊಂದಿದ್ದರಿಂದಲೂ ಮೂತ್ರಸ್ಯಂದದಿಂದಲೇ ಅಶ್ಮರಿಯುಂಟಾಗಿ ಶಲ್ಯರೂಪದಿಂದ ಪರಿ ಣಾಮ ಹೊಂದಿದ್ದರಿಂದಲೂ (ಅಶಾಸ್ತ್ರೀಯವಾಗಿ ಶಸ್ತ್ರಭೇದನ ಮಾಡಿ ಅಶ್ಮರಿಯನ್ನು ತೆಗೆದರೆ ಮೂತ್ರವೆಲ್ಲಾ ಒಂದೇ ಸಾರಿ ಸುರಿದುಹೋಗುತ್ತದೆ. ಅದರ ವೃದ್ಧಿಗಾಗಿ ಯವಾಗೂಕ್ಷೀರಗುಡಗಳನ್ನು ಪ್ರಯೋಗಿಸಬೇಕಾಗುತ್ತದೆ.) ಈಗ ಅಶ್ಮರಿಯನ್ನು ಹೊರಕ್ಕೆ ತೆಗೆದನಂತರ ಮೂತ್ರವು ಸರಿಯಾಗಿ ಸ್ರಾವವಾಗುವುದರಿಂದ ರೋಗಿಯು ಬದುಕುತ್ತಾನೆ. ಅನಂತರ ರೋಗಿಯನ್ನು ಸುಖೋಷ್ಣವಾದ ನೀರನ್ನು ತುಂಬಿದ ತೊಟ್ಟಿಯಲ್ಲಿ ಕೂರಿಸಿ ಸ್ವೇದಮಾಡಿಸಬೇಕು ; ಬಸ್ತ್ಯಾಶಯದಲ್ಲಿ ರಕ್ತವು ತುಂಬಿಕೊಳ್ಳುವು ದಿಲ್ಲ ; ರಕ್ತ ತುಂಬಿದರೂ ಕ್ಷೀರವೃಕ್ಷಕಷಾಯದಿಂದ ಉತ್ತರಬಸ್ತಿಯನ್ನು ಪ್ರಯೋಗ

1 'ಯೋನಿರ್ಬಸ್ತಿಃ' ಇತಿ ಪಾಠಾನ್ತರಮ್ ।

ಮಾಡಬೇಕು. ಇದೇ ಅರ್ಥ-ಬರುವ ಆಧಾರಶ್ಲೋಕದ ಅರ್ಥ ಏನೆಂದರೆ—ಉತ್ತರಬಸ್ತಿಯಿಂದ ಪ್ರಯೋಗಿಸಿದ ಕ್ಷೀರವೃಕ್ಷಕಷಾಯವು ಬೇಗನೆ ಅಶ್ಮರಿಯನ್ನೂ ಬಸ್ತಿಯಲ್ಲಿ ಸೇರಿರುವ ರಕ್ತವನ್ನೂ ನಿವಾರಣೆಮಾಡುತ್ತದೆ. ರೋಗಿಗೆ ಮೂತ್ರಮಾರ್ಗಶುದ್ಧಿಗಾಗಿ ಬೆಲ್ಲ ಮಿಶ್ರಮಾಡಿದ ಅನ್ನವನ್ನು ತಿನ್ನಿಸಬೇಕು. ಅಶ್ಮರಿಯನ್ನು ತೆಗೆದುಹಾಕಿದ ಮೇಲೆ ಜೇನು ತುಪ್ಪ-ತುಪ್ಪಗಳಿಂದ ವ್ರಣಕ್ಕೆ ಅಭ್ಯಂಗಮಾಡಿ ಮೂತ್ರಶುದ್ಧಿಮಾಡುವ ತೃಣಪಂಚಮೂಲ-ಕೂಷ್ಮಾಂಡ-ಪಾಷಾಣಭೇದ-ನೆಗ್ಗಿಲುಸಮೂಲ, ಸೌತೆಬೀಜ ಮೊದಲಾದುವುಗಳನ್ನು ಸೇರಿಸಿ ತಯಾರಿಸಿದ ಬಿಸಿಯಾದ ತುಪ್ಪ ಮಿಶ್ರಮಾಡಿದ ಯವಾಗೂ (ಗಂಜಿ) ವನ್ನು ದಿನಕ್ಕೆ ಎರಡು ವೇಳೆಯಂತೆ ಮೂರು ದಿನಗಳವರೆಗೆ ಕುಡಿಸಬೇಕು ; ಅನಂತರ ಮೂತ್ರವೂ ರಕ್ತವೂ ಶುದ್ಧಿಯಾಗುವುದಕ್ಕಾಗಿ ಹತ್ತು ದಿನಗಳವರೆಗೆ ಹಾಲು-ಬೆಲ್ಲ ಮಿಶ್ರಮಾಡಿ ಹೆಸರು ಮಿಶ್ರಮಾಡಿದ ಅನ್ನವನ್ನು ಸ್ವಲ್ಪಸ್ವಲ್ಪ ಭೋಜನಮಾಡಿಸಬೇಕು ; ಅನಂತರ ಹುಳಿಯಾದ ದಾಳಿಂಬೆ, ಮಾದಳ ಮೊದಲಾದ ಹಣ್ಣುಗಳಿಂದಲೂ ಜಾಂಗಲ ಮಾಂಸದಿಂದಲೂ ೧೦ ದಿವಸಗಳವರೆಗೆ ಉಪಚರಿಸಿದ ರೋಗಿಗೆ ಜಾಗರೂಕತೆಯಿಂದ ಸ್ವೇದ-ಸ್ನೇಹ-ದ್ರವಸ್ವೇದ-ಕ್ಷೀರವೃಕ್ಷ ಕಷಾಯದಿಂದ ವ್ರಣಕ್ಷಾಳನಗಳನ್ನು ಮಾಡಿಸಬೇಕು ; ರೋಧ್ರ-ಅತಿಮಧುರ-ಮಂಜಿಷ್ಠೆ-ಪ್ರಪೌಂಡರೀಕಗಳ ಕಲ್ಕದಿಂದ ವ್ರಣವನ್ನು ಲೇಪನಮಾಡಿಸಬೇಕು ; ಇವುಗಳೊಡನೆ ಅರಿಶಿನವನ್ನೂ ಸೇರಿಸಿ ತಯಾರಿಸಿದ ತೈಲ-ಘೃತಗಳಿಂದ ವ್ರಣಕ್ಕೆ ಅಭ್ಯಂಗಮಾಡಿಸಬೇಕು ; ರಕ್ತವು ಗಡ್ಡೆಯಾಗಿದ್ದರೆ ಉತ್ತರಬಸ್ತಿಯನ್ನು ಪ್ರಯೋಗಿಸಬೇಕು ; ೭ ದಿನಗಳಮೇಲೆ ಮೂತ್ರವು ಸ್ವಮಾರ್ಗದಿಂದ ಸ್ರಾವವಾಗದಿದ್ದರೆ ವ್ರಣವನ್ನು ಅಗ್ನಿಯಿಂದ ಸುಡಬೇಕು ; ಮೂತ್ರವು ಸ್ವಮಾರ್ಗದಿಂದಲೇ ಸ್ರಾವವಾದರೆ ಕಾಕೋಳ್ಯಾದಿಮಧುರೌಷಧಕಷಾಯದಿಂದ ಉತ್ತರಬಸ್ತಿ, ಆಸ್ಥಾಪನ-ಅನುವಾಸನಬಸ್ತಿ ಪ್ರಯೋಗಗಳನ್ನು ಮಾಡಿಸಬೇಕು ; ಮೂತ್ರಸ್ರೋತಸ್ಸನ್ನು ಛೇದಿಸಿ ಅಕಸ್ಮಾತ್ತಾಗಿ ಮೂತ್ರಮಾರ್ಗಕ್ಕೆ ಬಂದು ಸಿಕ್ಕಿರುವ ಶುಕ್ರಾಶ್ಮರಿಯನ್ನೂ ಶರ್ಕರೆಯನ್ನೂ ಹೊರಕ್ಕೆ ತೆಗೆಯಬೇಕು ; ಅಸಾಧ್ಯವಾದರೆ ನಾಡಿಯನ್ನು ಸೀಳಿ ಬಡಿಶದಿಂದ ಚುಚ್ಚಿ ತೆಗೆದುಬಿಡಬೇಕು ; ವ್ರಣವು ಮಾದಮೇಲೆ ಒಂದು ವರ್ಷದವರೆಗೆ ಸ್ತ್ರೀಸಂಗ, ಕುದುರೆ—ಆನೆ-ರಥ-ಬೆಟ್ಟ-ಮರಗಳ ಮೇಲೆ ಹತ್ತುವುದು, ನೀರಿನಲ್ಲಿ ಈಜುವುದು, ಗುರು ಪದಾರ್ಥಗಳನ್ನು ಊಟಮಾಡುವುದು ಇವನ್ನು ಬಿಡಬೇಕು. ಮೂತ್ರವಾಹಿ-ಶುಕ್ರವಾಹಿ-ಅಂಡಕೋಶಕ್ಕೆ ಬರುವ ಸ್ರೋತಸ್ಸುಗಳನ್ನೂ ಮೂತ್ರಸ್ರಾವಮಾಡುವ ಸ್ರೋತಸ್ಸು-ಗುದಶಿಶ್ನಗಳ ಮಧ್ಯದ ಸೇವನಿ-ಯೋನಿ-ಗುದ-ಬಸ್ತ್ಯಾಶಯ ಇವುಗಳಲ್ಲಿ ಶಸ್ತ್ರಕರ್ಮವನ್ನು ಮಾಡಬಾರದು ; ಮೂತ್ರವಾಹಿಸ್ರೋತಸ್ಸನ್ನು ಛೇದಿಸಿದರೆ ಮರಣವುಂಟಾಗುತ್ತದೆ ; ಮೂತ್ರ ತುಂಬಿದ ಬಸ್ತಿಯನ್ನೂ ಶುಕ್ರವಾಹಿಸ್ರೋತಸ್ಸನ್ನೂ ಛೇದಿಸಿದರೆ ಮರಣವೂ, ಅಥವಾ ಷಂಡತ್ವವೂ, ಅಂಡಕೋಶದ ಸ್ರೋತಸ್ಸನ್ನು ಛೇದಿಸಿದರೆ ಧ್ವಜಭಂಗವೂ, ಮೂತ್ರ

ಪ್ರಸೇಕಮಾಡುವ ಸ್ರೋತಸ್ಸನ್ನು ಭೇದಿಸಿದರೆ ಮೂತ್ರಸ್ರಾವವೂ, ಸೇವನೀ ಮತ್ತು ಯೋನಿಭೇದಮಾಡಿದರೆ ಅಧಿಕವಾದ ನೋವೂ ಉಂಟಾಗುತ್ತದೆ ; ಬಸ್ತ್ಯಾಶಯ ಮತ್ತು ಗುದಗಳನ್ನು ಭೇದಿಸಿದರೆ ಉಂಟಾಗುವ ಲಕ್ಷಣಗಳನ್ನು ಹಿಂದೆಯೇ ವಿವರಿಸಿರುತ್ತೆ. ಇನ್ನು ಈ ವಿಚಾರದ ಸಂಗ್ರಹಶ್ಲೋಕಗಳ ಅರ್ಥವನ್ನು ತಿಳಿಸಲಾಗುತ್ತದೆ. ಶಸ್ತ್ರಕರ್ಮಾಭ್ಯಾಸವಿಲ್ಲದ ವೈದ್ಯನು ಮನುಷ್ಯರ ಶರೀರದಲ್ಲಿ ಗುದ, ಶಿಶ್ನಗಳ ಮಧ್ಯದಲ್ಲಿರುವ ಸೇವನಿ, ಶುಕ್ರವಿಸರ್ಜನೆಮಾಡುವ ಮತ್ತು ಎರಡು ಅಂಡಕೋಶಗಳಿಂದ ಹೊರಡುವ ಸ್ರೋತಸ್ಸುಗಳು, ಗುದ, ಮೂತ್ರವನ್ನು ವಿಸರ್ಜಿಸುವ ಮತ್ತು ಮೂತ್ರವಹನ ಮಾಡುವ ಸ್ರೋತಸ್ಸುಗಳು, ಮೂತ್ರವನ್ನು ತುಂಬುವ ಬಸ್ತ್ಯಾಶಯ ಈ ಎಂಟು ಮರ್ಮ ಸ್ಥಾನಗಳನ್ನು ತಿಳಿದುಕೊಳ್ಳದೆ ಶಸ್ತ್ರಚಿಕಿತ್ಸೆಯನ್ನು ಮಾಡಿದರೆ ಅನೇಕ ಜನರನ್ನು ಕೊಂದುಬಿಡುತ್ತಾನೆ. ಆದ ಕಾರಣ ಗುರುಗಳು ಮಾಡುವ ಶಸ್ತ್ರಕರ್ಮಗಳನ್ನು ಪ್ರತ್ಯಕ್ಷವಾಗಿ ನೋಡಿಯೂ ಗುರುಗಳ ಎದುರಿನಲ್ಲಿ ಶಸ್ತ್ರಕರ್ಮಗಳನ್ನು ಮಾಡಿ ಕರ್ಮಕುಶಲನಾಗಿಯೂ ಇರುವವೈದ್ಯನೇ ಶಸ್ತ್ರಕರ್ಮ ಮಾಡಲು ಅರ್ಹನಾದವನು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇಽಶ್ಮರೀಚಿಕಿತ್ಸಾನಾಮಕ ಸಪ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ ॥

ಅಷ್ಟಮೋಽಧ್ಯಾಯಃ

ಅಥಾತೋ ಭಗಂದರಾಣಾಂಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ॥೧॥

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಭಗಂದರಗಳ ಚಿಕಿತ್ಸೆಯನ್ನು ಹೇಳುತ್ತೇವೆ.

ಪಞ್ಚ ಭಗನ್ದರಾಃ ವ್ಯಾಖ್ಯಾತಾಸ್ತೇಷು ಅಸಾಧ್ಯಃ ಶಮ್ಬೂಕಾವರ್ತಃ ಶಲ್ಯನಿಮಿತ್ತಶ್ಚೇತಿ ; ಶೇಷಾಃ ಕೃಚ್ಛ್ರಸಾಧ್ಯಾಃ ॥೩॥

ಐದು ಭಗಂದರಗಳು ವಿವರಿಸಲ್ಪಟ್ಟಿವೆ. ಅವುಗಳ ಪೈಕಿ ಶಂಬೂಕಾವರ್ತವೂ, ಉನ್ಮಾರ್ಗಿಯೂ (ಶಲ್ಯನಿಮಿತ್ತವಾದದ್ದೂ) ಅಸಾಧ್ಯಗಳು, ಉಳಿದವು ಕೃಚ್ಛ್ರಸಾಧ್ಯಗಳೆಂದು ತಿಳಿಯಬೇಕು.

ತತ್ರ ಭಗನ್ದರಪಿಡಕೋಪದ್ರುತಮಾತುರಮಪತರ್ಪಣಾದಿ ವಿರೇಚನಾನ್ತೇನ ಏಕಾದಶವಿಧಾನೋಪಕ್ರಮೇಣೋಪಕ್ರಮೇತಾ ಪಕ್ವ ಪಿಡಕಮ್, ಪಕ್ವೇಷು ಚೋಪಸ್ನಿಗ್ಧಮವಗಾಹ ಸ್ವಿನ್ನಂ ಶಯ್ಯಾಯಾಂ ಸನ್ನಿವೇಶ್ಯಾಶಯಮಿವ ಯನ್ತ್ರಯಿತ್ವಾ ಭಗನ್ದರಂ ಸಮೀಕ್ಷ್ಯ ಪರಾಚೀನಮವಾಚೀನಂ ವಾ, ತತಃ ಪ್ರಣಿಧಾಯೈಷಿಣೀಮುನ್ನಮ್ಯಾಸಾಶಯಮುದ್ಧರೇತ್ ಶಸ್ತ್ರೇಣ । ಅನ್ತರ್ಮುಖೇ ಚೈವಂ ಸಮ್ಯಗ್ಯನ್ತ್ರಂ ಪ್ರಣಿಧಾಯ ಪ್ರವಾಹಮಾಣಸ್ಯ ಭಗನ್ದರಮುಖಮಾಸಾದ್ಯೈಷಣೀಂ ದತ್ವಾ ಶಸ್ತ್ರಂ ಪಾತಯೇತ್ । ಆಸಾದ್ಯವಾಗ್ನಿಕ್ಷಾರಂ ಚೇತ್ಯೇತತ್ ಸಾಮಾನ್ಯಂ ಸರ್ವೇಷು । ವಿಶೇಷತಸ್ತು—॥೪॥

ನಾಡ್ಯನ್ತರೇ ವ್ರಣಾನ್ ಕುರ್ಯಾದ್ಭಿಷಕ್ತು ಶತಪೋನಕೇ ।
ತತಸ್ತೇಷೂಪರೂಢೇಷು ಶೇಷಾ ನಾಡೀರುಪಾಚರೇತ್ ॥೫॥

ಈ ಪೈಕಿ ಭಗಂದರಪಿಡಿಕೆಗಳಿಂದ ಪೀಡಿತನಾದ ರೋಗಿಗೆ ಲಂಘನ ಮೊದಲು, ವಿರೇಚನವೇ ಕಡೆಯಾದ ೧೧ ವಿಧ ಚಿಕಿತ್ಸೋಪಚಾರಗಳಿಂದ ಪಿಡಿಕೆಯು ಪಕ್ವಾವಸ್ಥೆಗೆ ಬರುವವರೆಗೂ ಉಪಚರಿಸಬೇಕು ; ಪಿಡಿಕೆಗಳು ಪಾಕವಾದ ಮೇಲೆ ರೋಗಿಗೆ ಘೃತದಿಂದ ಶರೀರವನ್ನು ಲೇಪಿಸಿ ಸುಖೋಷ್ಣವಾದ ನೀರಿನಲ್ಲಿ ಶರೀರವನ್ನು ಮುಳುಗಿಸಿ ಬೆವರಿಸಿದ ನಂತರ ಹೊರಗೆ ತಂದು ಹಾಸಿಗೆಯಲ್ಲಿ ಕೂರಿಸಿ ಚಿಕಿತ್ಸೆಮಾಡಲು ಅನುಕೂಲವಾಗುವಂತೆ ಶರೀರವನ್ನು ಬಿಗಿಮಾಡಿ ಪಟ್ಟಿಗಳಿಂದ ಕಟ್ಟಿ ಭಗಂದರ ವ್ರಣವು ಹೊರಗಡೆಗೆ ನುಗ್ಗಿರುತ್ತದೋ ಅಥವಾ ಒಳಕ್ಕೆ ಹೊಕ್ಕಿರುತ್ತದೋ ಎಂದು ಕಣ್ಣಿನಿಂದ ನೋಡಿ ಏಷಣಿಯನ್ನು (ಶಲಾಕೆ) ರಂಧ್ರದೊಳಕ್ಕೆ ನುಗ್ಗಿಸಿ ಮೇಲಕ್ಕೆತ್ತಿ ಶಸ್ತ್ರದಿಂದ ವ್ರಣಮುಖವನ್ನು ಕತ್ತರಿಸಬೇಕು ; ವ್ರಣಮುಖವು ಒಳಗಡೆಗೆ ನುಗ್ಗಿದ್ದರೆ ಯಂತ್ರವನ್ನು ಸರಿಯಾಗಿ

ಕಟ್ಟಿ ರೋಗಿಯು ಮುಲುಕಿದಾಗ ಏಷಣಿಯನ್ನು ಭಗಂದರದ ಮುಖಕ್ಕೆ ಎಳೆದು ಶಸ್ತ್ರದಿಂದ ಕತ್ತರಿಸಬೇಕು, ಅಥವಾ ಕ್ಷಾರವನ್ನು ಹಾಕಿಯಾಗಲೀ ಅಗ್ನಿಯಿಂದಾಗಲೀ ವ್ರಣವನ್ನು ಸುಡಬೇಕು ; ಇದು ಎಲ್ಲಾ ವಿಧದ ಭಗಂದರಗಳಲ್ಲೂ ಮಾಡಬೇಕಾದ ಸಾಮಾನ್ಯ ವಿಧಾನವು. ವಿಶೇಷವಿಧಾನವಾವುದೆಂದರೆ—ವೈದ್ಯನು ಶತಪೋನಕವೆಂಬ ಭಗಂದರ ರೋಗದಲ್ಲಿ ಎರಡು ನಾಡೀವ್ರಣಗಳ ಮಧ್ಯೆ ವ್ರಣಭೇದಮಾಡಿ ಕೀವನ್ನು ಹೊರಕ್ಕೆ ಹೊರಡಿಸಿ ಉಪಚರಿಸಿ ಆ ವ್ರಣವು ಮಾದಮೇಲೆ ಇತರ ನಾಡಿವ್ರಣಗಳನ್ನೂ ಹೀಗೆಯೇ ಉಪಚರಿಸಿ ಚಿಕಿತ್ಸೆಮಾಡಬೇಕು.

ಗತಯೋಽನ್ಯೋನ್ಯಸಂಬದ್ಧಾ ಬಾಹ್ಯಾಚ್ಛೇದ್ಯಾಸ್ತ್ವನೇಕಧಾ ।
ನಾಡೀರನಭಿಸಂಬದ್ಧಾ ಯಚ್ಛಿನತ್ಯೇಕಧಾ ಭಿಷಕ್ ॥೬॥
ಸ ಕುರ್ಯಾದ್ವಿವೃತಂ ಜನ್ತೋರ್ವ್ರಣಂ ಗುದವಿದಾರಣಮ್ ।
ತಸ್ಯ ತದ್ವಿವೃತಂ ಮಾರ್ಗಂ ವಿಣ್ಮೂತ್ರಮನುಗಚ್ಛತಿ ॥೭॥
ಆಟೋಪಗುಂದಶೂಲಂ ಚ ಕರೋತಿ ಪವನೋ ಭೃಶಮ್ ।
ತತ್ರಾಧಿಗತ ತನ್ತ್ರೋಽಪಿ ಭಿಷಙ್ಮೋಹ್ಯೇದಸಂಶಯಮ್ ॥೮॥
ತಸ್ಮಾನ್ನ ವಿವೃತಃ ಕಾರ್ಯೋ ವ್ರಣಸ್ತು ಶತಪೋನಕೇ ।

ಶತಪೋನಕವೆಂಬ ಭಗಂದರವ್ರಣದಲ್ಲಿ ನಾಡಿಗಳು ಒಳಗಡೆಯಲ್ಲಿ ಒಂದಕ್ಕೊಂದು ಸೇರಿಕೊಂಡಿರುತ್ತವೆ ; ಹೊರಗಡೆಯಲ್ಲಿ ಒಂದಕ್ಕೊಂದು ಬಿಟ್ಟು ಬೇರೆ ಬೇರೆ ಕಡೆಗೆ ಹೊರಟಿರುತ್ತವೆಯಾಗಿ ಹೊರಗೆ ಬೇಕಾದ ರೀತಿಯಲ್ಲಿ ಶಸ್ತ್ರದಿಂದ ಕತ್ತರಿಸಬಹುದು ; ವೈದ್ಯನು ಅವುಗಳನ್ನು ಒಂದೇ ಸಾರಿ ಎಲ್ಲವನ್ನೂ ಭೇದಿಸಿದರೆ ರೋಗಿಯ ಗುದದಿಂದ ಸೀಳಿರುವ ವ್ರಣದ ಬಾಯಿಯನ್ನು ಮತ್ತಷ್ಟು ಅಗಲ ಮಾಡಿದಂತಾಗಿ ಆ ಮಾರ್ಗದಿಂದಲೇ ಮಲಮೂತ್ರಗಳೂ ಹೊರಕ್ಕೆ ಹರಿದುಬರುತ್ತವೆ ; ವಾತವು ಪ್ರಕುಪಿತವಾಗಿ ಅಧಿಕವಾಗಿ ಶಬ್ದಮಾಡುತ್ತಾ ಸಂಚರಿಸುತ್ತದಲ್ಲದೆ ತುಂಬಾ ಶೂಲೆಯನ್ನು ಉಂಟುಮಾಡುತ್ತದೆ ; ಈ ಸಂದರ್ಭದಲ್ಲಿ ಚಿಕಿತ್ಸೆ ಮಾಡಲು ಶಲ್ಯತಂತ್ರದಲ್ಲಿ ನಿಪುಣನಾದ ವೈದ್ಯನಿಗೂ ಮೋಹವುಂಟಾಗುತ್ತದೆ ; (ನಿಜವಾದ ಕರ್ಮಜ್ಞಾನದಲ್ಲಿ ಅನುಮಾನವುಂಟಾಗುತ್ತದೆ ಅಂದರೆ ಏನು ಮಾಡಬೇಕೆಂಬುದು ಬುದ್ಧಿಗೆ ತೋರುವುದಿಲ್ಲ.) ಆದಕಾರಣ ಶತಪೋನಕದಲ್ಲಿ ವ್ರಣಮುಖವನ್ನು ಅಗಲ ಮಾಡಬಾರದು.

ವ್ಯಾಧೌ ತತ್ರ ಬಹುಚ್ಛಿದ್ರೇ ಭಿಷಜಾ ವೈ ವಿಜಾನತಾ ॥೯॥
ಅರ್ಧಲಾಙ್ಗಲಕಚ್ಛೇದಃ ಕಾರ್ಯೋ ಲಾಙ್ಗಲಕೋಽಪಿ ವಾ ।
ಸರ್ವತೋ ಭದ್ರಕೋ ವಾಽಪಿ ಕಾರ್ಯೋ ಗೋತೀರ್ಥಕೋಽಪಿ ವಾ ॥೧೦॥
ಸರ್ವತಃ ಸ್ರಾವಮಾರ್ಗಾಂಸ್ತು ದಹೇದ್ವೈದ್ಯಸ್ತಥಾಗ್ನಿನಾ ।
ಸುಕುಮಾರಸ್ಯ ಭೀರೋರ್ಹಿ ದುಷ್ಕರಃ ಶತಪೋನಕಃ ॥೧೧॥

ಅನೇಕ ರಂಧ್ರಗಳಿರುವ ವ್ರಣರೋಗದಲ್ಲಿ ತಿಳುವಳಿಕೆಯುಳ್ಳ ವೈದ್ಯನು ನೇಗಿಲಂತೆಯೂ ಅರ್ಧನೇಗಿಲ ಆಕಾರದಂತೆಯೂ ವ್ರಣವನ್ನು ಭೇದಿಸಬೇಕು ; ಸರ್ವತೋಭದ್ರ, ಗೋತೀರ್ಥಕಾರವಾಗಿಯಾಗಲೀ ವ್ರಣಭೇದಮಾಡಬೇಕು ; ಹಾಗೆಯೇ ಕೀವು ಸೋರುವ ವ್ರಣದ ಸ್ರೋತೋಮುಖಗಳನ್ನೆಲ್ಲಾ ಬೆಂಕಿಯಿಂದ (ಕಾದ ಶಲಾಕೆಯಿಂದ) ಸುಡಬೇಕು ; ಸುಕುಮಾರ ದೇಹವುಳ್ಳವರಿಗೂ ಹೆದರಿಕೆಯುಳ್ಳವರಿಗೂ ಶತಪೋನಕವು ಗುಣವಾಗುವುದಿಲ್ಲ.

ಟಿಪ್ಪಣಿ : ಲಾಂಗಲಚ್ಛೇದ—ಎರಡು ಪಕ್ಕಗಳನ್ನೂ ಸಮವಾಗಿ ಕತ್ತರಿಸಿ ನೇಗಿಲಿನಿಂದ ಉತ್ತಭೂಮಿಯಲ್ಲಿ ಹಳ್ಳವು ಇರುವಂತೆ ವ್ರಣಚ್ಛೇದವು ಮಾಡಲ್ಪಡಬೇಕು ; ಅರ್ಧಲಾಂಗಲಚ್ಛೇದ—ಒಂದು ಭಾಗ ಎತ್ತರವಾಗಿ ಮತ್ತೊಂದು ತಗ್ಗಾಗಿರುವಂತೆ ಭೇದಿಸಬೇಕು ; ಗುದವನ್ನು ಸೇವನಿಯನ್ನು ಬಿಟ್ಟು ಉಳಿದ ಭಾಗದಲ್ಲಿ ೪ ಭಾಗವಾಗುವಂತೆ ಭೇದಿಸಿದರೆ ಸರ್ವತೋಭದ್ರಕಭೇದವೆನ್ನುತ್ತಾರೆ ; ವ್ರಣವನ್ನು ಪಾರ್ಶ್ವದ ರಂಧ್ರದಿಂದ ಭೇದಿಸಿದರೆ ಗೋತೀರ್ಥಕ ಭೇದವು ; ಗೋವು ಹೋಗುತ್ತಾ ಮೂತ್ರಸ್ರಾವ ಮಾಡಿದಂತೆ ಸೊಟ್ಟಾಗಿ ಹಾವು ಹರಿದಂತೆ ಭೇದಮಾರ್ಗ ಕಾಣುವುದು ; ಗೋತೀರ್ಥವೆಂದರೆ ಗೋವಿನ ಯೋನಿಯೆಂದು ಕೆಲವರ ಮತ, ಅದರ ಆಕಾರದಂತೆ ವ್ರಣಭೇದನ ಮಾಡಬೇಕೆನ್ನುತ್ತಾರೆ ; ಮತ್ತೆ ಕೆಲವರು ಗೋತೀರ್ಥವೆಂದರೆ ಹಸುಗಳು ನೀರನ್ನು ಕುಡಿಯಲು ಮಾಡಿರುವ ಕಲ್ಲುತೊಟ್ಟಿಗಳ (ಗೋದಣಿಗೆ) ಆಕಾರದ ವ್ರಣಭೇದನ ಮಾಡಬೇಕೆಂದು ಅವರ ಅಭಿಪ್ರಾಯವು. ಅದರ ಗೊರಸಿನ (ಹೆಜ್ಜೆಯಂತೆ) ಆಕಾರದಂತೆ ವ್ರಣಭೇದನ ಮಾಡಬೇಕೆಂದರ್ಥವು.

ರುಜಾಸ್ರಾವಾಪಹಂ ತತ್ರ ಸ್ವೇದಮಾಶು ಪ್ರಯೋಜಯೇತ್ ।
ಸ್ವೇದದ್ರವ್ಯೈರ್ಯಥೋದ್ದಿಷ್ಟೈಃ ಕೃಶರಾಪಾಯಸಾದಿಭಿಃ ॥೧೨॥
ಗ್ರಾಮ್ಯಾನೂಪೌದಕೈರ್ಮಾಂಸ್ಯೆರ್ಲಾವಾದ್ಯೈರ್ವಾಪಿ ವಿಷ್ಕಿರೈಃ ।
ವೃಕ್ಷಾದನೀಮಥೈರಣ್ಡಂ ಬಿಲ್ವಾದಿಂ ಚ ಗಣಂ ತಥಾ ॥೧೩॥
ಕಷಾಯಂ ಸುಕೃತಂ ಕೃತ್ವಾ ಸ್ನೇಹಕುಮ್ಭೇ ನಿಷೇಚಯೇತ್ ।
ನಾಡೀಸ್ವೇದೇನ ತೇನಾಸ್ಯ ತಂ ವ್ರಣಂ ಸ್ವೇದಯೇದ್ಭಿಷಕ್ ॥೧೪॥
ತಿಲೈರಣ್ಡಾತಸೀಮಾಷಯವಗೋಧೂಮಸರ್ಷಪಾನ್ ।
ಲವಣಾನ್ಯಮ್ಲವರ್ಗಂ ಚ ಸ್ಥಾಲ್ಯಾಮೇವೋಪಸಾಧಯೇತ್ ॥೧೫॥
ಆತುರಂ ಸ್ವೇದಯೇತ್ತೇನ ತಥಾ ಸಿದ್ಧ್ಯತಿ ಕುರ್ವತಃ ।
ಸ್ವಿನ್ನಂ ಚ ಪಾಯಯೇದೇನಂ ಕುಷ್ಠಂ ಚ ಲವಣಾನಿ ಚ ॥೧೬॥
ವಚಾಹಿಂಗ್ವಜಮೋದಂ ಚ ಸಮಭಾಗಾನಿ ಸರ್ಪಿಷಾ ।
ಮಾರ್ದ್ವೀಕೇನಾಥವಾಮ್ಲೇನ ಸುರಾಸೌವೀರಕೇಣ ವಾ ॥೧೭॥

ತತೋಃ ಮಧುಕತೈಲೇನ ತಸ್ಯ ಸಿಞ್ಚೇದ್ಭಿಷಗ್ವ್ರಣಮ್ ।
ಶಿಷಿಞಃಪಚ್ಚೇದ್ಗುದಂ ಚಾಸ್ಯ ತೈಲೈರ್ವಾತರುಜಾಪಹೈಃ ॥೧೮॥
ವಿಧಿನಾನೇನ ವಿಣ್ಮೂತ್ರಂ ಸ್ವಮಾರ್ಗಮಧಿಗಚ್ಛತಿ ।
ಅನ್ಯೇ ಚೋಪದ್ರವಾಸ್ತೀವ್ರಾಃ ಸಿಧ್ಯನ್ತ್ಯತ್ರ ನ ಸಂಶಯಃ ॥೧೯॥
ಶತಪೋನಕ ಆಖ್ಯಾತ ಉಷ್ಟ್ರಗ್ರೀವೇ ಕ್ರಿಯಾಂ ಶೃಣು ।

(ವ್ರಣಪಶ್ಚಾತ್ಕರ್ಮ) ದೋಷಗಳಿಗೆ ತಕ್ಕಂತೆ ಉಪಯೋಗವಾಗುವ ಸ್ನೇಹದ್ರವ್ಯಗಳಿಂದಲೂ ತಿಲತಂಡುಲಮಾಷಗಳಿಂದ ತಯಾರಿಸಿದ (ಗಂಜಿಗೆ) ಕೃಶರ, (ಹಾಲಿನಲ್ಲಿ ಬೇಯಿಸಿದ ಅಕ್ಕಿಗೆ ಹಾಲು–ತುಪ್ಪ–ಸಕ್ಕರೆಗಳನ್ನು ಸೇರಿಸಿದರೆ) ಪಾಯಸ ಮೊದಲಾದುವುಗಳಿಂದ ಸ್ವೇದಮಾಡಿಸಿದರೆ ವ್ರಣದ ನೋವೂ ಮತ್ತು ಸ್ರಾವವೂ ನಿಂತುಬಿಡುತ್ತದೆ ; ಕೋಳಿ–ಆಡು ಮೊದಲಾದ ಗ್ರಾಮದಲ್ಲಿ ವಾಸಮಾಡುವ ಪ್ರಾಣಿಗಳ, ಕಾಡುಹಂದಿ ಮೊದಲಾದ ಅನೂಪದೇಶದ ಪ್ರಾಣಿಗಳ, ಲಾವನಹಕ್ಕಿ ಮೊದಲಾದ ವಿಷ್ಕಿರಪ್ರಾಣಿಗಳ ಮಾಂಸವನ್ನೂ, ಬದನಿಕೆ, ಹರಳುಬೇರು, ಬಿಲ್ವಪಂಚಮೂಲ ಇವುಗಳ ಕಷಾಯವನ್ನೂ ತುಪ್ಪದ ಮಡಕೆಯಲ್ಲಿ ತುಂಬಿಟ್ಟುಕೊಂಡು ವೈದ್ಯನು ನಾಡೀಸ್ವೇದವಿಧಾನದಿಂದ ವ್ರಣ ಸೇಚನೆ ಮಾಡಬೇಕು ; ಎಳ್ಳು–ಹರಳುಬೀಜ–ಸೀಮೆ ಅಗಸೆಬೀಜ–ಉದ್ದು–ಯವಧಾನ್ಯ ಗೋಧಿ–ಸಾಸಿವೆ ; ಲವಣಗಳು–ಕಲಗಚ್ಚು–ತಕ್ರ–ಸುರಾ ಮೊದಲಾದ ಅಮ್ಲವರ್ಗದ ದ್ರವ್ಯಗಳನ್ನು ದೊಡ್ಡ ಕುಂಭದಲ್ಲಿಟ್ಟು ಕುದಿಸಿ ರೋಗಿಗೆ ಸ್ವೇದಮಾಡಿಸಿದರೆ ವ್ರಣವು ಮಾಯುತ್ತದೆ ; ಸ್ವೇದವಾದಮೇಲೆ ರೋಗಿಗೆ ಚಂಗಲ್‌ಕೋಷ್ಠ–ಲವಣಗಳು–ಬಜೆ –ಹಿಂಗು–ವಾದಕ್ಕಿ ಇವನ್ನು ಸಮಭಾಗ ಸೇರಿಸಿ ತುಪ್ಪ–ದ್ರಾಕ್ಷಾಸವ–ದಾಳಿಂಬೆ ಅಥವಾ ಮಾದಳದ ರಸ–ಸುರೆ–ಕಲಗಚ್ಚು ಇವುಗಳ ಒಂದರಲ್ಲಿ ಸೇರಿಸಿ ಕುಡಿಸಬೇಕು ; ಅನಂತರ ಮಧುಯಷ್ಟಿತೈಲದಿಂದ ವ್ರಣದ ಮೇಲೆ ತೆಳ್ಳಗೆ ಚುಮುಕಿಸಬೇಕು. ವಾತವ್ಯಾಧಿಹರಗಳಾದ ತೈಲಗಳಿಂದ ರೋಗಿಯ ಗುದದ ಮೇಲೆ ಸೇಚನೆಮಾಡಬೇಕು ; ಈ ಉಪಚಾರದಿಂದ ಮಲಮೂತ್ರಗಳು ತಮ್ಮ ತಮ್ಮ ಮಾರ್ಗಗಳಿಂದ ವಿಸರ್ಜಿಸಲ್ಪಡುತ್ತವೆ ; ಆಧ್ಮಾನ ಗುದಭ್ರಂಶ ಮೊದಲಾದ ಇತರ ಉಪದ್ರವಗಳೂ ಗುಣವಾಗುವುದರಲ್ಲಿ ಸಂದೇಹವಿಲ್ಲ ; ಇಲ್ಲಿಯವರೆಗೆ ಶತಪೋನಕ ಚಿಕಿತ್ಸೆಯನ್ನು ವಿವರಿಸಿದ್ದಾಯಿತು, ಇನ್ನುಮುಂದೆ ಉಷ್ಟ್ರಗ್ರೀವವೆಂಬ ಭಗಂದರ ಭೇದಕ್ಕೆ ಮಾಡಬೇಕಾದ ಚಿಕಿತ್ಸಾಕ್ರಮವನ್ನು ಹೇಳುತ್ತೇನೆ ಕೇಳು. ॥೨೦॥

ಅಥೋಷ್ಟ್ರಗ್ರೀವಮೇಷಿತ್ವಾ ಛಿತ್ವಾಕ್ಷಾರಂ ನಿಪಾತಯೇತ್
ಪೂತಿಮಾಂಸವ್ಯಪೋಹಾರ್ಥಮಗ್ನಿರತ್ರ ನ ಪೂಜಿತಃ । ॥೨೧॥
ಅಥೈನಂ ಘೃತಸಂಸೃಷ್ಟೈಸ್ತಿಲೈಃ ಪಿಷ್ಟೈಃ ಪ್ರಲೇಪಯೇತ್
ಬಧ್ನಂ ತತೋನುಕುರ್ವೀತ ಪರಿಷೇಕಂ ತು ಸರ್ಪಿಷಾ । ॥೨೨॥
ತೃತೀಯೇ ದಿವಸೇ ಮುಕ್ತ್ವಾ ಯಥಾಸ್ವಂ ಶೋಧಯೇದ್ಭಿಷಕ್
ತತಃ ಶುದ್ಧಂ ವಿದಿತ್ವಾ ಚ ರೋಪಯೇತ್ತು ಯಥಾ ಕ್ರಮಮ್ ।

ಉಷ್ಟ್ರಗ್ರೀವವೆಂಬ ಭಗಂದರಭೇದವನ್ನು ಈಷಣಿಯೆಂಬ ಶಲಾಕೆಯಿಂದ ಚುಚ್ಚಿ ಒಳಗಿರುವ ಕೀವನ್ನು ಹೊರಕ್ಕೆ ತರಿಸಬೇಕು ; ವ್ರಣವನ್ನು ಭೇದಿಸಿ ಅದರ ಮೇಲೆ ಕ್ಷಾರ ದಿಂದ ಸುಟ್ಟರೆ ಕೊಳೆತ ಮಾಂಸವು ಕಿತ್ತು ಹೊರಕ್ಕೆ ಬಂದುಬಿಡುತ್ತದೆ : ಬೆಂಕಿಯಿಂದ ಸುಡಬೇಕಾಗಿಲ್ಲ (ಅಗ್ನಿಕರ್ಮ ಹಿತಕರವಲ್ಲ) ; ಅನಂತರ ಎಳ್ಳಿನ ಕಲ್ಕಕ್ಕೆ ತುಪ್ಪವನ್ನು ಮಿಶ್ರಮಾಡಿ ವ್ರಣಕ್ಕೆ ಲೇಪಿಸಿ ವ್ರಣಬಂಧನಮಾಡಿ ಸುಖೋಷ್ಣವಾದ ತುಪ್ಪದಿಂದ ಸೇಚನೆ ಮಾಡಬೇಕು ; ಮೂರನೆಯ ದಿನ ವ್ರಣದ ಕಟ್ಟನ್ನು ಬಿಚ್ಚಿ ಪಿತ್ತಹರದ್ರವ್ಯಗಳ ಕಷಾಯದಿಂದ ವ್ರಣಶೋಧನೆಮಾಡಿ ವ್ರಣವು ಶುದ್ಧಿಯಾಗಿದೆಯೆಂದು ತಿಳಿದಮೇಲೆ ವ್ರಣವು ಮಾಯುವಂತೆ ಔಷಧಪ್ರಯೋಗವನ್ನು ಮಾಡಬೇಕು.

ಉತ್ಕೃತ್ಯಾಸ್ರಾಪಮಾರ್ಗಂ ತು ಪರಿಸ್ರಾವಿಣಿ ಬುದ್ಧಿಮಾನ್
ಕ್ಷಾರೇಣ ವಾ ಸ್ರಾವಗತಿಂ ದಹೇದ್ಧುತವಹೇನ ವಾ ।
ಸುಖೋಷ್ಣೇನಾಣುತೈಲೇನ ಸೇಚಯೇದ್ಗುದಮಣ್ಡಲಮ್ ॥೨೪॥
ಉಪನಾಹಾಃ ಪ್ರದೇಹಾಶ್ಚ ಮೂತ್ರಕ್ಷಾರಸಮನ್ವಿತಾಃ ।
ವಾಮನೀಯೌಷಧೈಃ ಕಾರ್ಯಾಃ ಪರಿಷೇಕಾಶ್ಚ ಮಾತ್ರಯಾ ॥೨೫॥

ಪರಿಸ್ರಾವಿಯೆಂಬ ಭಗಂದರವನ್ನು ಜಾಣನಾದ ಶಸ್ತ್ರವೈದ್ಯನು ಆಸ್ರಾವ ಮಾರ್ಗ ವನ್ನು ಶಸ್ತ್ರದಿಂದ ಕತ್ತರಿಸಿ ಕ್ಷಾರದಿಂದಾಗಲೀ ಬೆಂಕಿಯಿಂದಾಗಲೀ ಸುಟ್ಟು ಅನಂತರ ಸುಖೋಷ್ಣವಾದ ಅಣುತೈಲದಿಂದ ಗುದಸೇಚನೆ ಮಾಡಬೇಕು ; ಗೋಮೂತ್ರ ಮತ್ತು ಯವಕ್ಷಾರ ಮಿಶ್ರಮಾಡಿದ ಉಪನಾಹಸ್ವೇದವನ್ನೂ ಲೇಪನವನ್ನೂ ಮಾಡಿ ಮದನಫಲ ಮೊದಲಾದ ವಮನದ್ರವ್ಯಗಳ ಕಷಾಯದಿಂದ ಸ್ವಲ್ಪ ಸ್ವಲ್ಪವಾಗಿ ವ್ರಣದ ಮೇಲೆ ಸೇಚನೆ ಮಾಡಬೇಕು.

ಮೃದುಭೂತಂ ವಿದಿತ್ವೈನಮಲ್ಪಸ್ರಾವರುಗನ್ವಿತಮ್ ।
ಗತಿಮನ್ವಿಷ್ಯ ಶಸ್ತ್ರೇಣ ಛಿನ್ದ್ಯಾತ್ ಖರ್ಜೂರಪತ್ರಕಮ್ ॥೨೬॥
ಚನ್ದ್ರಾರ್ಧಂ ಚನ್ದ್ರಚಕ್ರಂ ಚ ಸೂಚೀಮುಖಮವಾಙ್ಮುಖಮ್ ।
ಛಿತ್ವಾಗ್ನಿನಾ ದಹೇತ್ ಸಮ್ಯಗೇವಂ ಕ್ಷಾರೇಣ ವಾ ಪುನಃ ॥೨೭॥
ತತಃ ಸಂಶೋಧನೈರೇವಂ ಮೃದುಪೂರ್ವೈರ್ವಿಶೋಧಯೇತ್ ।

ಈ ರೀತಿ ಮೃದುವಾದ ವ್ರಣವನ್ನು (ಸ್ವಲ್ಪ ಶ್ರಾವ, ಸ್ವಲ್ಪ ವೇದನೆಯಿರುವುದನ್ನು ತಿಳಿದು) ಏಷಣಿಯಿಂದ ನಾಡಿಯ ಮಾರ್ಗವನ್ನು ಶೋಧಿಸಿ ಖರ್ಜೂರಪತ್ರದಂತೆ ಅಡ್ಡ ಲಾಗಿ ಕತ್ತರಿಸಬೇಕು ; ಸೂಚೀಮುಖದಂತೆ ಸಣ್ಣ ಮುಖವಿರುವ ವ್ರಣವನ್ನು ಅರ್ಧ ಚಂದ್ರಾಕಾರವಾಗಿಯಾಗಲೀ, ಪೂರ್ಣಚಂದ್ರನಂತೆ ಗುಂಡಾಗಿಯಾಗಲೀ, ಕೆಳಗಡೆ ಕತ್ತ ರಿಸಿ ಕ್ಷಾರದಿಂದಾಗಲೀ ಕಾದ ಸಲಾಕೆಯಿಂದಾಗಲೀ ಸುಟ್ಟು ಅನಂತರ ರೋಗಿಯ ಕೋಷ್ಠ ವನ್ನು ತಿಳಿದು ಮೃದು ಅಥವಾ ತೀಕ್ಷ್ಣ ವಿರೇಚನೌಷಧಗಳನ್ನು ಪ್ರಯೋಗಿಸಬೇಕು.

ಬಹಿರನ್ತರ್ಮುಖಶ್ಚಾಪಿ ಶಿಶೋರ್ಯಸ್ಯ ಭಗನ್ದರಃ ||೨೮||
ತಸ್ಯಾಹಿತಂ ವಿರೇಕಾಗ್ನಿ ಶಸ್ತ್ರಕ್ಷಾರಾವಚಾರಣಮ್ |
ಯದ್ಯನ್ಮೃದು ಚ ತೀಕ್ಷ್ಣಂ ಚ ತತ್ತತ್ತಸ್ಯಾವಚಾರಯೇತ್ ||೨೯||
ಆರಗ್ವಧನಿಶಾಕಾಲಾಚೂರ್ಣಂ ಮಧುಘೃತಾಪ್ಲುತಮ್ |
ಅಗ್ರವರ್ತಿಪ್ರಣಿಹಿತಂ ವ್ರಣಾನಾಂ ಶೋಧನಂ ಹಿತಮ್ ||೩೦||
ಯೋಗೋಽಯಂ ನಾಶಯತ್ಯಾಶು ಗತಿಂ ಮೇಘಮಿವಾನಿಲಃ |

ಮಗುವಿಗೆ ಪ್ರಾಪ್ತವಾದ ಅಂತರ್ಮುಖ ಮತ್ತು ಬಹಿರ್ಮುಖಗಳುಳ್ಳ ಭಗಂದರಗಳಲ್ಲಿ ವಿರೇಚನೌಷಧ–ಅಗ್ನಿ–ಶಸ್ತ್ರ–ಕ್ಷಾರಗಳನ್ನು ಪ್ರಯೋಗಿಸಬಾರದು ; ಮೃದು, ತೀಕ್ಷ್ಣೌಷಧಗಳನ್ನು ಪ್ರಯೋಗಿಸಬೇಕು ; ಕಕ್ಕೆಚಿಗುರು, ಅರಿಶಿನ, ಕರಿತಿಗಡೆ ಇವುಗಳ ಚೂರ್ಣವನ್ನು ತುಪ್ಪ, ಜೇನುತುಪ್ಪಗಳೊಡನೆ ಮಿಶ್ರಮಾಡಿ ಬಟ್ಟೆ ಚೂರಿಗೆ ಬಳಿದು ಬತ್ತಿ ಮಾಡಿ ವ್ರಣದೊಳಗಿಟ್ಟರೆ ಗಾಳಿಯು ಮೇಘಸಮೂಹವನ್ನು ಚದುರಿಸುವಂತೆ ನಾಡಿಯ ಗತಿಯನ್ನು ಬೇಗನೆ ನಾಶಮಾಡುತ್ತದೆ. (ನಾಡಿಯಿಂದ ಕೀವು ಮುಂದಕ್ಕೆ ನುಗ್ಗದಂತೆ ಮಾಡಿ ವ್ರಣವನ್ನು ಮಾಯಿಸುತ್ತದೆ ; ಇದಕ್ಕೆ ಅಗ್ರವರ್ತಿಯೆಂದು ಹೆಸರು.)

ಆಗನ್ತುಜೇ ಭಿಷಙ್ನಾಡೀಂ ಶಸ್ತ್ರೇಣೋತ್ಕೃತ್ಯ ಯತ್ನತಃ ||೩೧||
ಜಾಮ್ಬ್ವೋಷ್ಠೇನಾಗ್ನಿವರ್ಣೇನ ತಪ್ತಯಾ ವಾ ಶಲಾಕಯಾ |
ದಹೇದ್ಯಥೋಕ್ತಂ ಮತಿಮಾಂಸ್ತಂ ವ್ರಣಂ ಸುಸಮಾಹಿತಃ ||೩೨||
ಕ್ರಿಮಿಘ್ನಂ ಚ ವಿಧಿಂ ಕುರ್ಯಾತ್ ಶಲ್ಯಾನಯನಮೇವ ಚ |
ಪ್ರತ್ಯಾಖ್ಯಾಯೈಷ ಚಾರಭ್ಯೋ ವರ್ಜ್ಯಶ್ಚಾಪಿ ತ್ರಿದೋಷಜಃ ||೩೩||

ಆಗಂತುವಿನಿಂದುಂಟಾದ ಭಗಂದರದಲ್ಲಿ ವೈದ್ಯನು ಪ್ರಯತ್ನಪಟ್ಟು ನಾಡಿಯನ್ನು ಶಸ್ತ್ರದಿಂದ ಕತ್ತರಿಸಿ ನೇರಳೆಹಣ್ಣಿನಂತೆ ಮುಖವುಳ್ಳ ಜಾಮ್ಬವೋಷ್ಠದಿಂದಾಗಲೀ ಸಣ್ಣ ಮುಖವುಳ್ಳ ಶಲಾಕೆಯನ್ನಾಗಲೀ ಬೆಂಕಿಯಲ್ಲಿಟ್ಟು ಕಾಯಿಸಿ ಬಲು ಜಾಗರೂಕತೆಯಿಂದ ವ್ರಣವನ್ನು ಸುಡಬೇಕು ; ಕ್ರಿಮಿಹರಣವಿಧಾನವನ್ನೂ ಚುಚ್ಚಿದ್ದ ಶಲ್ಯವನ್ನು ಹೊರಕ್ಕೆ ತೆಗೆಯುವ ವಿಧಾನವನ್ನೂ ಮಾಡಬೇಕು ; ತ್ರಿದೋಷದಿಂದುಂಟಾದ ಭಗಂದರವನ್ನು ರೋಗಿಗೆ "ಈ ರೋಗವು ಗುಣವಾಗತಕ್ಕದ್ದಲ್ಲ" ಎಂದು ತಿಳಿಸಿ ಚಿಕಿತ್ಸೆಮಾಡದೆ ತ್ಯಜಿಸಬೇಕು.

ಏತತ್ಕರ್ಮ ಸಮಾಖ್ಯಾತಂಸರ್ವೇಷಾಮನುಪೂರ್ವಶಃ |
ಏಷಾಂ ತು ಶಸ್ತ್ರಪತನಾತ್ ವೇದನಾ ಯತ್ರಜಾಯತೇ ||೩೪||
ತತ್ರಾಣುತೈಲೇನೋಷ್ಣೇನ ಪರಿಷೇಕಃ ಪ್ರಶಸ್ಯತೇ |
ವಾತಘ್ನೌಷಧಸಂಪೂರ್ಣಾಂ ಸ್ಥಾಲೀಂ ಛಿದ್ರಶರಾವಿಕಾಮ್ ||೩೫||
ಸ್ನೇಹಾಭ್ಯಕ್ತಗುದಸ್ತಪ್ತಾಂ ಮಧ್ಯಾಸೀತ ಸಬಾಷ್ಪಕಾಮ್ |
ನಾಡ್ಯಾ ವಾಸ್ಯಾ ಹರೇತ್ ಸ್ವೇದಂ ಶಯಾನಸ್ಯ ರುಜಾಪಹಮ್ ||೩೬||
ಉಷ್ಣೋದಕೇಽವಗಾಹೋ ವಾ ತಥಾ ಶಾಮ್ಯತಿ ವೇದನಾ |

ಎಲ್ಲಾ ವಿಧದ ಭಗಂದರವ್ಯಾಧಿಗಳಿಗೂ ಶಸ್ತ್ರಪಾತದಿಂದುಂಟಾದ ವೇದನೆಗಳು ಶಮನವಾಗುವುದಕ್ಕಾಗಿ ಈ ಕೆಲಸಗಳನ್ನು ಕ್ರಮವಾಗಿ ವಿವರಿಸಲಾಯಿತು ; ಇವುಗಳಲ್ಲಿ ಸುಖೋಷ್ಣವಾದ ಅಣುತೈಲದಿಂದ ವ್ರಣದ ಮೇಲೆ ಪರಿಷೇಕ ಮಾಡಿದರೆ (ನಿಧಾನವಾಗಿ ಧಾರಾಕಾರವಾಗಿ ಸುರಿಸುವುದು) ಉತ್ತಮವು ; ವಾತಹರಗಳಾದ ಔಷಧಕಷಾಯಗಳಿಂದ ತುಂಬಿದ ಸ್ಥಾಲಿ (ಕತ್ತು ಸಣ್ಣ, ಹೊಟ್ಟೆ ದಪ್ಪವಾಗಿರುವ ಹೂಜಿ) ಅಥವಾ ರಂಧ್ರವುಳ್ಳ ಶ್ರಾವೆಯನ್ನು ಕೆಳಗೆ ಇಟ್ಟು ರೋಗಿಯ ಗುದಕ್ಕೆ ತೈಲವನ್ನು ಲೇಪಿಸಿ ಶ್ರಾವೆ ಅಥವಾ ಹೂಜಿಯಿಂದ ಹೊರಡುವ ಹೊಗೆಯು ಗುದಕ್ಕೆ ತಗಲುವಂತೆ ಮಾಡಬೇಕು. (ಹೂಜಿಯ ಮುಖಕ್ಕೆ ನಾಡಿಯನ್ನು ಸಿಕ್ಕಿಸಿ ಹೊಗೆಯನ್ನು ಅದರ ಮೂಲಕ ಗುದಕ್ಕೆ ತಗಲುವಂತೆ ಮಾಡಬೇಕು ; ರೋಗಿಯು ಮಂಚದ ಮೇಲೆ ಮಲಗಿರಬೇಕು ; ಕೆಳಗಿನಿಂದ ಹೊಗೆ ಬರುವಂತೆ ಮಾಡಬೇಕು ; ಅಥವಾ ಬಿಸಿನೀರಿನಲ್ಲಿ ರೋಗಿಯನ್ನು ಕತ್ತಿನವರೆಗೆ ಕೂರಿಸಿ ಬೆವರಿಸಬೇಕು ; ಇದರಿಂದ ನೋವು ನಿವಾರಣೆಯಾಗುತ್ತದೆ.)

ಕದಳೀಮೃಗಲೋಪಾಕಪ್ರಿಯಕಾಜಿನಸಂಭೃತಾನ್ ||೩೭||
ಕಾರಯೇದುಪನಾಹಾಂಶ್ಚ ಶಾಲ್ವಣಾದೀನ್ ವಿಚಕ್ಷಣಃ |
ಕಟುತ್ರಿಕಂ ವಚಾಹಿಙ್ಗುಲವಣಾನ್ಯಥ ದೀಪ್ಯಕಮ್ |
ಪಾಯಯೇಚ್ಚಾಮ್ಲ ಕೌಳತ್ಥಸುರಾಸೌವೀರಕಾದಿಭಿಃ ||೩೮||
ಜ್ಯೋತಿಷ್ಮತೀಲಾಙ್ಗಲಕೀಶ್ಯಾಮಾದನ್ತೀತ್ರಿವೃತ್ತಿಲಾಃ |
ಕುಷ್ಠಂ ಶತಾಹ್ವಾ ಗೋಲೋಮೀ ತಿಲ್ವಕೋ ಗಿರಿಕರ್ಣಿಕಾ ||೩೯||
ಕಾಸೀಸಂ ಕಾಞ್ಚನಕ್ಷೀರ್ಯೌ ವರ್ಗಃ ಶೋಧನ ಇಷ್ಯತೇ |

ಕದಳೀಮೃಗ (ಅತಿ ದೊಡ್ಡ ಬೆಕ್ಕಿನಷ್ಟು ಎತ್ತರ ಮತ್ತು ಆಕಾರದಲ್ಲಿ ಹುಲಿಯಂತಿರುವ, ಬಿಲದಲ್ಲಿ ವಾಸಮಾಡುವ ಪ್ರಾಣಿ), ಗುಳ್ಳೆನರಿ, ಪ್ರಿಯಕ (ಅಜಗರದಂತೆ ನುಣ್ಣಗೂ ಉದ್ದವಾಗಿಯೂ ಇರುವ ಜಂತು) ಇವುಗಳಲ್ಲಿ ದ್ರವ್ಯಗಳನ್ನು ಇಟ್ಟು ಉಪನಾಹಸ್ವೇದವನ್ನೂ ಸಾಲ್ವಣಸ್ವೇದವನ್ನೂ ಮಾಡಿಸಬೇಕು ; ತ್ರಿಕಟು–ಬಜೆ–ಹಿಂಗು–ಲವಣಗಳು–ವಾದಕ್ಕಿ ಮೊದಲಾದುವುಗಳ ಚೂರ್ಣವನ್ನು ಧಾನ್ಯಾಮ್ಲ (ಕಲಗಚ್ಚು) ಮೊದಲಾದ ಹುಳಿ ದ್ರವಗಳು, ಹುರುಳಿಕಟ್ಟು, ಮದ್ಯ, ಅಕ್ಕಿ ತೊಳೆದ ನೀರು ಮೊದಲಾದ ಹುಳಿ ಪದಾರ್ಥಗಳೊಡನೆ ಸೇರಿಸಿ ಕುಡಿಸಬೇಕು ; ಗಂಗುಂಡೆ ಬೀಜ, ಕೋಳಿಕುಟುಮನ ಗಡ್ಡೆ, ಕರಿಯ ತಿಗಡೆ, ಜಾಪಾಳದ ತೊಗಟೆ, ಬಿಳಿಯ ತಿಗಡೆ, ಎಳ್ಳು, ಚೆಂಗಲ್‌ಕೋಷ್ಠ, ಸಬ್ಬಸಿಗೆ ಬೀಜ, ಬಜೆ (ದೂರ್ವೆ- ಹಸಿಯ ಮೂಲಿಕೆ), ಪಟ್ಟೆಕಾರೋಧ್ರ, ಗಿರಿಕರ್ಣಿಕೆ, ಅನ್ನಭೇದಿ, ಮರಳುಮ್ಮತ್ತಿ ಇವು ಶೋಧನವರ್ಗದ ದ್ರವ್ಯಗಳು ; ಇವುಗಳ ಕಷಾಯದಿಂದ ಕ್ಷಾಳನೆ ಮಾಡಿದರೆ ಭಗಂದರವ್ರಣವು ಮಾಯುತ್ತದೆ.

ತ್ರಿವೃತ್ತಿಲಾನಾಗದನ್ತೀಮಞ್ಜಿಷ್ಠಾಃ ಪಯಸಾ ಸಹ ||೪೦||
ಉತ್ಸಾದನಂ ಭವೇದೇತತ್ ಸೈನ್ಧವಕ್ಷೌದ್ರಸಂಯುತಮ್ |

ರಸಾಞ್ಜನಂ ಹರಿದ್ರೇ ದ್ವೇ ಮಞ್ಜಿಷ್ಠಾ ನಿಮ್ಬಪಲವಾಃ ||೪೧||
ತ್ರಿವೃತ್ತೇಜೋವತೀದನ್ತೀ ಕಲ್ಕೋ ನಾಡೀವ್ರಣಾಪಹಃ ।
ಕುಷ್ಠಂ ತ್ರಿವೃತ್ತಿಲಾದನ್ತೀ ಮಾಗಧ್ಯಃ ಸೈನ್ಧವಂ ಮಧು ||೪೨||
ರಜನೀತ್ರಿಫಲಾತುತ್ಥಂ ಹಿತಂ ಸ್ಯಾದ್ವ್ರಣಶೋಧನಮ್ ।

ತಿಗಡೆಬೇರು–ಎಳ್ಳು–ಜಾಪಾಳದ ತೊಗಟೆ–ಮಂಜಿಷ್ಠೆ ಇವುಗಳನ್ನು ಹಾಲಿನಲ್ಲಿ ಅರೆದು ಸೈಂಧವ, ಜೇನುತುಪ್ಪಗಳನ್ನು ಮಿಶ್ರಮಾಡಿ ಹಳ್ಳ ಬಿದ್ದಿರುವ ಭಗಂದರ ವ್ರಣಕ್ಕೆ ಲೇಪಿಸಬೇಕು ; ರಸಾಂಜನ (ಮರದರಿಶಿನದ ತೊಕ್ಕಿನ ಕಷಾಯದಿಂದ ತಯಾರಿಸಿದ ರಸ ಕ್ರಿಯೆ), ಅರಿಸಿನ, ಮರದರಿಶಿನ, ಮಂಜಿಷ್ಠೆ, ಬೇವಿನ ಸೊಪ್ಪು, ತಿಗಡೆ, ಗಂಗುಂಡೆ ಬೀಜ, ಜಾಪಾಳದ ತೊಗಟೆ ಇವುಗಳ ಕಲ್ಕವನ್ನು ಲೇಪಿಸಿದರೆ ನಾಡೀವ್ರಣಗಳು ನಿವಾರಣೆಯಾಗುತ್ತವೆ ; ಚಂಗಲ್‌ಕೋಷ್ಠ–ತಿಗಡೆ–ಎಳ್ಳು–ಜಾಪಾಳದ ತೊಗಟೆ–ಹಿಪ್ಪಲಿ-ಸೈಂಧವ–ಜೇನುತುಪ್ಪ–ಅರಿಶಿನ-ತ್ರಿಫಲೆ–ಮೈಲ್‌ತುತ್ಥ ಇವುಗಳ ಕಲ್ಕದಿಂದ ವ್ರಣ ಶೋಧನೆಯಾಗುತ್ತದೆ.

ಮಾಗಧ್ಯೋ ಮಧುಕಂ ರೋಧ್ರಂ ಕುಷ್ಠಮೇಲಾಹರೇಣವಃ ||೪೩||
ಸಮಙ್ಗಾ ಧಾತಕೀ ಚೈವ ಸಾರಿವಾ ರಜನೀದ್ವಯಮ್ ।
ಪ್ರಿಯಙ್ಗವಃ ಸರ್ಜರಸಃ ಪದ್ಮಕಂ ಪದ್ಮಕೇಸರಮ್ ||೪೪||
ಸುಧಾಂ ವಚಾಂ ಲಾಙ್ಗಲಕೀಂ ಮಧೂಚ್ಛಿಷ್ಟಂ ಸಸೈನ್ಧವಮ್ ।
ಏತತ್ ಸಂಭೃತ್ಯ ಸಂಭಾರಾನ್ ತೈಲಂ ಧೀರೋ ವಿಪಾಚಯೇತ್ ||೪೫||
ಏತದ್ವೈ ಗಣ್ಡಮಾಲಾಸು ಮಣ್ಡಲೇಷ್ವಥ ಮೇಹಿಷು ।
ರೋಪಣಾರ್ಥಂ ಹಿತಂ ತೈಲಂ ಭಗನ್ದರವಿನಾಶನಮ್ ||೪೬||
ನ್ಯಗ್ರೋಧಾದಿಗಣಶ್ಚೈವ ಹಿತಃ ಶೋಧನರೋಪಣೇ ।
ತೈಲಂ ಘೃತಂ ವಾ ತತ್ಪಕ್ವಂ ಭಗನ್ದರವಿನಾಶನಮ್ ||೪೭||

ಹಿಪ್ಪಲಿ-ಅತಿಮಧುರ– ರೋಧ್ರ – ಚಂಗಲ್‌ಕೋಷ್ಠ–ಏಲಕ್ಕಿ–ರೇಣುಕೆಬೀಜ–ಮಂಜಿಷ್ಠೆ –ಧಾತಕೀಕುಸುಮ – ಸೊಗದೇಬೇರು-ಅರಿಶಿನ - ಮರದರಿಶಿನ-ನೆಳಲು-ರಾಳು-ಪದ್ಮಕ-ತಾವರೆಕುಸುಮ–ಮುಂಡುಗಳ್ಳಿಬೇರು-ಬಜೆ-ಕೋಳಿಕುಟುಮನ ಗೆಡ್ಡೆ–ಜೇನು ಮೇಣ-ಸೈಂಧವ ಇವುಗಳನ್ನು ಸೇರಿಸಿ ತೈಲಪಾಕಮಾಡಿಟ್ಟುಕೊಂಡು ಲೇಪಿಸಿದರೆ ಗಂಡ ಮಾಲೆ–ಮಂಡಲಕುಷ್ಠ–ಮೇಹವ್ರಣ-ಭಗಂದರ ಇವುಗಳು ನಿವಾರಣೆಯಾಗುತ್ತವೆ ; ಆಲ–ಅತ್ತಿ–ಅರಳಿ–ಗೋಣಿ-ನೀರಂಜಿ (ಕೆಲವರು ನೇರಳೆ ಎನ್ನುತ್ತಾರೆ) ಇವುಗಳ ತೊಗಟೆಯ ಕಷಾಯದಿಂದ ತೊಳೆದರೆ ವ್ರಣಗಳು ಶುದ್ಧಿಯಾಗಿ ಮಾಯುತ್ತವೆ ; ಈ ಕಷಾಯದಿಂದ ತಯಾರಿಸಿದ ತೈಲ ಅಥವಾ ಘೃತವನ್ನು ಪ್ರಯೋಗಿಸಿದರೆ ಭಗಂದರವು ನಿವಾರಣೆಯಾಗುತ್ತದೆ.

ತ್ರಿವೃದ್ದಸ್ತೀಹರದ್ರಾರ್ಕಮೂಲಂ ಲೋಹಾಶ್ವಮಾರಕೌ ।
ವಿಡಙ್ಗಸಾರಂ ತ್ರಿಫಲಾ ಸ್ನುಹ್ಯರ್ಕಪಯಸೀಮಧು ||೪೮||
ಮಧೂಚ್ಛಿಷ್ಟಸಮಾಯುಕ್ತೈಸ್ತೈಲಮೇತೈರ್ವಿಪಾಚಯೇತ್ ।
ಭಗನ್ದರವಿನಾಶಾರ್ಥಮೇತದ್ಯೋಜ್ಯಂ ವಿಶೇಷತಃ ||೪೯||
ಚಿತ್ರಕಾರ್ಕೌ ತ್ರಿವೃತ್ಪಾಠೇ ಮಲಪೂಂ ಹಯಮಾರಕಮ್ ।
ಸುಧಾಂ ವಚಾಂ ಲಾಙ್ಗಲಕೀಂ ಸಪ್ತಪರ್ಣಂ ಸುವರ್ಚಿಕಾಮ್ ||೫೦||
ಜ್ಯೋತಿಷ್ಮತೀಂ ಚ ಸಮ್ಭೃತ್ಯ ತೈಲಂ ಧೀರೋ ವಿಪಾಚಯೇತ್
ಏತದ್ಧಿ ಸ್ಯಂದನಂ ತೈಲಂ ಭೃಶಂ ದದ್ಯಾದ್ಭಗಂದರೇ ||೫೧||
ಶೋಧನಂ ರೋಪಣಂ ಚೈವ ಸವರ್ಣಕರಣಂ ತಥಾ
ದ್ವಿವ್ರಣೀಯಮವೇಕ್ಷೇತ ವ್ರಣಾವಸ್ಥಾಸು ಬುದ್ಧಿಮಾನ್ ||೫೨||

ತಿಗಡೆಬೇರು-ಜಾಪಾಳದ ತೊಗಟೆ-ಅರಿಶಿನ-ಎಕ್ಕದ ಬೇರು-ಅಗಿಲು-ಕಣಿಗಲೆ ಬೇರು-ವಿಡಂಗ-ತ್ರಿಫಲೆ-ಮುಂಡುಗಳ್ಳಿಯ ಹಾಲು-ಎಕ್ಕದ ಹಾಲು-ಜೇನುತುಪ್ಪ-ಜೇನು ಮೇಣ ಇವುಗಳನ್ನು ಸೇರಿಸಿ ತೈಲಪಾಕವಿಧಾನದಿಂದ ತೈಲವನ್ನು ತಯಾರಿಸಿ ಪ್ರಯೋಗಿಸಿದರೆ ಎಲ್ಲಾ ವ್ರಣಗಳೂ ಮುಖ್ಯವಾಗಿ ಭಗಂದರವೂ ನಿವಾರಣೆಯಾಗುತ್ತದೆ ; ಚಿತ್ರಮೂಲ-ಎಕ್ಕದ ಬೇರು-ತಿಗಡೆಬೇರು-ಅಗಳಶುಂಠಿ-ಕಲ್ಲತ್ತಿ-ಕಣಿಗಲೆ ಬೇರು-ಮುಂಡುಗಳ್ಳಿಬೇರು-ಬಜೆ-ಕೋಳಿಕುಟುಮನಗೆಡ್ಡೆ-ಏಳೆಲಗ (ಮದ್ದಾಲೆ ತೊಗಟೆ), ಸರ್ಜಕ್ಷಾರ-ಗಂಗುಂಡೆ ಬೀಜ ಇವುಗಳನ್ನು ಸೇರಿಸಿ ಪಾಕಮಾಡಿದ ತೈಲವನ್ನು ಸೇವಿಸಿದರೆ ಭಗಂದರಹರವು ; ಇದಕ್ಕೆ ಸ್ಯಂದನತೈಲವೆಂದು ಹೆಸರು. ಇದು ವ್ರಣವನ್ನು ಶೋಧಿಸಿ ಮಾಯುವಂತೆ ಮಾಡುತ್ತದೆ ; ಮತ್ತು ಸವರ್ಣವನ್ನುಂಟುಮಾಡುತ್ತದೆ ; ಬುದ್ಧಿಶಾಲಿಯಾದ ವೈದ್ಯನು ವ್ರಣದ ಅವಸ್ಥೆಗಳಲ್ಲಿ ದ್ವಿವ್ರಣೋಕ್ತ ಚಿಕಿತ್ಸಾವಿಧಾನಗಳನ್ನು ಅನುಸರಿಸಬೇಕು.

ಛಿದ್ರಾದೂರ್ಧ್ವಂ ಹರೇದೋಷ್ಠಮರ್ಶೋಯನ್ತ್ರಸ್ಯ ಯನ್ಮತಿತ್ ।
ತತೋ ಭಗನ್ದರೇ ದದ್ಯಾದೇತದರ್ಧೇನ್ದುಸನ್ನಿಭಮ್ ||೫೩||
ವ್ಯಾಯಾಮಂ ಮೈಥುನಂ ಕೋಪಂ ಪೃಷ್ಠಯಾನಂ ಗುರೂಣಿ ಚ ।
ಸಂವತ್ಸರಂ ಪರಿಹರೇದುಪರೂಢವ್ರಣೋ ನರಃ ||೫೪||

ಯಂತ್ರಜ್ಞಾನದಲ್ಲಿ ಕುಶಲನಾದ ವೈದ್ಯನು ಅರ್ಶೋಯಂತ್ರವನ್ನೇ ಭಗಂದರ ರೋಗದಲ್ಲೂ ಉಪಯೋಗಿಸಬೇಕು ; ಅರ್ಶೋಯಂತ್ರದ ಮೇಲ್ಭಾಗದ ರಂಧ್ರದ ಮೇಲಿರುವ ಕಟ್ಟನ್ನು ತೆಗೆದು ಭಗಂದರವನ್ನು ಬಿಗಿದು ಕಟ್ಟಬೇಕು. ಏಕೆಂದರೆ ಗುದೌಷ್ಠವನ್ನೇ ಛೇದಿಸಬೇಕಾಗುತ್ತದೆ ; ಅರ್ಧಚಂದ್ರಾಕಾರದಂತಿರಬೇಕು. ಭಗಂದರ ರೋಗಿಯು ರೋಗವು ಗುಣವಾಗಿ ವ್ರಣವೆಲ್ಲಾ ಮಾದುಹೋದರೂ ಒಂದು ವರ್ಷ ಕಾಲ ಪೂರ್ತಿಯಾಗಿ ಅಂಗಸಾಧನೆ, ಸ್ತ್ರೀಸಂಗ, ಕೋಪ, ಆನೆ-ಕುದುರೆ ಮೊದಲಾದ

ಪ್ರಾಣಿಗಳ ಬೆನ್ನಿನ ಮೇಲೆ ಕೂತು ಸವಾರಿಮಾಡುವುದನ್ನೂ ಗುರುಪದಾರ್ಥಗಳ ಸೇವನೆಯನ್ನೂ ಬಿಟ್ಟುಬಿಡಬೇಕು.

ಇತಿ ಶ್ರೀಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಭಗನ್ದರಚಿಕಿತ್ಸಾನಾಮಕ ಅಷ್ಟಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹ ಶರ್ಮಕೃತ ಕರ್ಣಾಟಕಭಾಷಾವಿವೃತಿಃ ||

ನವಮೋಽಧ್ಯಾಯಃ

ಅಥಾತಃ ಕುಷ್ಠರೋಗಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಕುಷ್ಠಚಿಕಿತ್ಸೆಯು ವಿವರಿಸಲ್ಪಡುತ್ತದೆ.

ವಿರುದ್ಧಾಧ್ಯಶನಾಸಾತ್ಮ್ಯವೇಗವಿಘಾತೈಃ ಸ್ನೇಹಾದೀನಾಂ ಚ ಅಯಥಾ ರಮ್ಭೈಃ ಪಾಪಕ್ರಿಯಯಾ ಪುರಾಕೃತಕರ್ಮಯೋಗಾಚ್ಚ ತ್ವಗ್ದೋಷೋ ಭವತಿ ||೩||

ತತ್ರತ್ವಗ್ದೋಷೀ ಮಾಂಸವಸಾದುಗ್ಧದಧಿತೈಲಕುಳತ್ಥಮಾಷನಿಷ್ಪಾವೇಕ್ಷುವಿಕಾರಾಮ್ಲ ವಿರುದ್ಧಾಧ್ಯಶನಾಜೀರ್ಣವಿದಾಹ್ಯಭಿಷ್ಯನ್ದೀನಿ ದಿವಾಸ್ವಪ್ನಂ ವ್ಯವಾಯಂ ಚ ಪರಿಹರೇತ್ ||೪||

ವಿರುದ್ಧವಾದ ಭೋಜನ, ಅಧ್ಯಶನ ಅಭ್ಯಾಸವಿಲ್ಲದ ಅನ್ನವನ್ನು ಆಹಾರ ಮಾಡುವುದು, ಮಲಮೂತ್ರಾದಿಗಳ ವೇಗಗಳನ್ನು ತಡೆವುದು, ಸ್ನೇಹಾದಿ ಕ್ರಿಯೆಗಳನ್ನು ನಡೆಸಿದ ಮೇಲೆ ಸರಿಯಾಗಿ ಪಥ್ಯಾಚರಣೆಗಳನ್ನು ಮಾಡದೆ ಇರುವುದು, ಪಾಪಕೆಲಸಗಳನ್ನು ತಿಳಿದು ತಿಳಿದೂ ಮಾಡುವುದು, ಪೂರ್ವಜನ್ಮದಲ್ಲಿ ಮಾಡಿದ ಪಾಪಕಾರ್ಯಗಳಿಗೆ ತಕ್ಕಂತೆಯೂ ಕುಷ್ಠರೋಗವುಂಟಾಗುತ್ತದೆ (ತ್ವಗ್ದೋಷವೆಂದರೆ ಇಲ್ಲಿ ಕುಷ್ಠರೋಗವೆಂದರ್ಥವು). ತ್ವಗ್ದೋಷಪೀಡಿತನು ಮಾಂಸ, ವಸೆ, ಹಾಲು, ಮೊಸರು, ತೈಲ, ಹುರುಳಿ, ಉದ್ದು ಅವರೆ, ಕಬ್ಬಿನಿಂದ ತಯಾರಾದ ಬೆಲ್ಲ, ಸಕ್ಕರೆ ಮೊದಲಾದುವನ್ನು ಸೇರಿಸಿ ತಯಾರಿಸಿದ ಭಕ್ಷ್ಯಭೋಜ್ಯಗಳು, ಹುಳಿ ಪದಾರ್ಥಗಳು, ವಿರುದ್ಧಾಹಾರ, ಅಧ್ಯಶನ ಅಜೀರ್ಣಪದಾರ್ಥ, ಅರ್ಧಬೆಂದದ್ದು, ವ್ಯಭಾರ, ಶೀತವಾಗುವ ಆಹಾರಗಳನ್ನೂ, ಹಗಲು ನಿದ್ರೆ, ಸ್ತ್ರೀಸಂಗ ಇವುಗಳನ್ನೂ ತ್ಯಜಿಸಬೇಕು.

ತತಃ ಶಾಲಿಷಷ್ಟಿಕ ಯವಗೋಧೂಮ ಕೋರದೂಷಶ್ಯಾಮಾಕೋದ್ದಾಲಕಾದೀನನ್ನಾನಿ ಭುಞ್ಜೀತ ; ಮುದ್ಗಾಢಕ್ಯೋರನ್ಯತರಯೂಷೇಣ ಸೂಪೇನ ವಾ ನಿಮ್ಬಪತ್ರಾರುಷ್ಕರ ವ್ಯಾಮಿಶ್ರೇಣ ಮಣ್ಡೂಕಪರ್ಣ್ಯವಲ್ಗುಜಾಟರೂಷಕರೂಪಿಕಾ ಪುಷ್ಪೈಃ ಸರ್ಪಿಃ ಸಿದ್ಧೈಃ ಸರ್ಷಪ ತೈಲಸಿದ್ಧೈರ್ವಾ ತಿಕ್ತವರ್ಗೇಣ ವಾ ಅಭಿಹಿತೇನ, ಮಾಂಸಸಾತ್ಮ್ಯಾಯ ವಾ ಜಾಙ್ಗಲಮಾಂಸ ಮಮೇದಸ್ಕಂ ವಿತರೇತ್ ; ತೈಲಂ ವಜ್ರಕಮಭ್ಯಙ್ಗಾರ್ಥೇ ಆರಗ್ವಧಾದಿಕಷಾಯ ಮುತ್ಸಾದನಾರ್ಥೇ ಪಾನಪರಿಷೇಕಾವಗಾಹಾದಿಷು ಚ ಖದಿರಕಷಾಯಮಿತ್ಯೇಷ ಆಹಾರಾಚಾರ ವಿಭಾಗಃ ||೫||

೬೦ ದಿನಗಳಲ್ಲಿ ಬೆಳೆದ ಬತ್ತ, ಹಳೆಯದಾದ ಯವಧಾನ್ಯ, ಗೋಧಿ, ಹಾರಕ, ಸಾಮೆ, ಕಾಡುಹಾರಕ ಇವುಗಳ ಅನ್ನವನ್ನು ಹೆಸರು ಮತ್ತು ತೊಗರಿಯಕಟ್ಟು ಮತ್ತು

ತೊವ್ವೆ, ಬೇವಿನಸೊಪ್ಪು ಮತ್ತು ಗೇರುಬೀಜಗಳನ್ನೂ ಸೇರಿಸಿ ಭೋಜನ ಮಾಡಬೇಕು. ಒಂಡೆಲಗ, ಬಾವಂಚಿಬೀಜ, ಆಡುಸೋಗೆಸೊಪ್ಪು, ಎಕ್ಕದಹೂವು, ತುಪ್ಪ ಅಥವಾ ಸಾಸಿವೆಯ ಎಣ್ಣೆಯನ್ನು ಸೇರಿಸಿ ತಯಾರಿಸಿದ ತೈಲ, ಚಗತೆ, ಬಾವಂಚಿ, ಕಹಿಪಡವಲ, ಬದನೆ ಮೊದಲಾದ ಕಹಿಪದಾರ್ಥಗಳನ್ನು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಬೇಕು. ಮಾಂಸವನ್ನು ಸೇವಿಸುವವರಿಗೆ ಕೊಬ್ಬನ್ನು ಸೇರಿಸದೆ ಜಾಂಗಲಪ್ರಾಣಿಗಳ ಮಾಂಸವನ್ನು ಕೊಡಿಸಬೇಕು. ವಜ್ರತೈಲವನ್ನು ಅಭ್ಯಂಗಕ್ಕೂ ಕಕ್ಕೆ ಮೊದಲಾದುವುಗಳ ಕಷಾಯವನ್ನು ಮೈಮೇಲೆ ಸುರಿದು ವ್ರಣವನ್ನು ಉಜ್ಜುವುದಕ್ಕೂ, ಕಗ್ಗಲಿತೊಗಟೆಯ ಕಷಾಯವನ್ನು ಪಾನ, ಸ್ನಾನ ಮತ್ತು ಅವಗಾಹನ ಸ್ನಾನಕ್ಕೂ ಉಪಯೋಗಿಸಬೇಕು. ಈ ರೀತಿಯಲ್ಲಿ ಕುಷ್ಠರೋಗಿಯು ಸೇವಿಸಬೇಕಾದ ಆಹಾರ ಮತ್ತು ಆಚಾರ ವಿಧಾನಗಳನ್ನು ತಿಳಿಸಲಾಗಿದೆ.

ತತ್ರ ಪೂರ್ವರೂಪೇಷೂಭಯತಃ ಸಂಶೋಧನಮಾಸೇವೇತ ತತ್ರ ತ್ವಕ್ಸಮ್ಪ್ರಾಪ್ತೇ ಶೋಧನಾಲೇಪನಾನಿ ಶೋಣಿತಪ್ರಾಪ್ತೇ ಸಂಶೋಧನಾಲೇಪನಕಷಾಯಪಾನಶೋಣಿತಾವಸೇಚನಾನಿ ಮಾಂಸಪ್ರಾಪ್ತೇ ಶೋಧನಾಲೇಪನಕಷಾಯಪಾನ ಶೋಣಿತಾವಸೇಚನಾರಿಷ್ಟಮನ್ಥಪ್ರಾಶಾಃ ಚತುರ್ಥಕರ್ಮಗುಣಪ್ರಾಪ್ತಂ ಯಾಪ್ಯಮಾತ್ಮವತಃ ಸಂವಿಧಾನವತಶ್ಚ ತತ್ರಸಂಶೋಧನಾತ್ ಶೋಣಿತಾವಸೇಚನಾಚ್ಚೋರ್ಧ್ವಂ ಭಲ್ಲಾತಶಿಲಾಜತುಗುಗ್ಗುಳ್ವಗುರುತುವರಕಖದಿರಾಸನಾಯಸ್ಕೃತಿ ವಿಧಾನಮಾಸೇವೇತ ಪಞ್ಚಮಂ ನೈವ ಚೋಪಕ್ರಮೇತ್ ||೬||

ಕುಷ್ಠರೋಗದ ಪೂರ್ವರೂಪಗಳಲ್ಲಿ ಶರೀರದ ಮೇಲ್ಭಾಗ ಕೆಳಭಾಗಗಳೆರಡರ ಸಂಶೋಧನಗಳನ್ನೂ ಚರ್ಮಗತವಾದರೆ ಶೋಧನ ಮತ್ತು ಲೇಪನಗಳನ್ನೂ ರಕ್ತಗತವಾದರೆ ಶೋಧನ, ಲೇಪನ, ಕಷಾಯಪಾನ, ರಕ್ತಮೋಕ್ಷಣಗಳನ್ನೂ ಮಾಡಿಸಬೇಕು. ಮಾಂಸಗತವಾದರೆ ಶೋಧನ, ಲೇಪನ, ಕಷಾಯಪಾನ, ರಕ್ತಮೋಕ್ಷಣ, ಅರಿಷ್ಟಪಾನಗಳನ್ನೂ ಇವು ತ್ವಗ್ಧಾತುವಿಗೆ ನಾಲ್ಕನೆಯ ಧಾತುವಾದ ಮೇದಸ್ಸನ್ನು ಆವರಿಸಿದ್ದರೆ ಶುಚಿತ್ವ ಆಚಾರಶೀಲತೆ ಪಥ್ಯಸೇವನೆಗಳನ್ನೂ ಅಂದರೆ ಸರಿಯಾದ ಆಹಾರಾಚಾರಗಳನ್ನು ನಡೆಸುವ ಮತ್ತು ಎಲ್ಲಾ ವಿಧದ ಉಪಕರಣಗಳನ್ನೂ ಸಿದ್ಧಪಡಿಸಿಕೊಂಡಿರುವ ಪುರುಷನಿಗೆ ಮೇಲೆ ವಿವರಿಸಿದಂತೆ ಸಂಶೋಧನಾದಿಗಳಿಂದಲೂ ಅಥವಾ ಮೇದಸ್ಸನ್ನು ಆವರಿಸಿ ವ್ರಣದಿಂದ ದುರ್ವಾಸನೆಯ ಕೀವು ಸೋರುವುದೂ ಕಂಡುಬಂದರೆ ಯಾಪ್ಯವೆಂದು ತಿಳಿಯಬೇಕು. ಸಂಶೋಧನೆಯಿಂದ ಮೇಲ್ಭಾಗದ ಕಫದೋಷವೂ ರಕ್ತಮೋಕ್ಷಣದಿಂದ ರಕ್ತದೋಷವೂ ವಿರೇಚನದಿಂದ ಪಿತ್ತದೋಷವೂ ಶುದ್ಧಿಯಾದನಂತರ ಗೇರುಬೀಜ, ಗುಗ್ಗುಳು, ಅಗುರು, ತುವರಕ, ಕಗ್ಗಲಿ, ಕೆಂಪು ಹೊನ್ನೆ, ಅಯಸ್ಕೃತಿ ವಿಧಾನ ಇವುಗಳನ್ನು ಸೇವನೆಮಾಡಬೇಕು. ಐದನೆಯದಾದ ಮೂಳೆಯನ್ನು ಆವರಿಸಿದ ಕುಷ್ಠರೋಗಕ್ಕೆ ಚಿಕಿತ್ಸೆಮಾಡದೆ ಅಸಾಧ್ಯವಾದಕಾರಣ ತ್ಯಜಿಸಬೇಕು.

ತತ್ರ ಪ್ರಥಮಮೇವ ಕುಷ್ಠಿನಂ ಸ್ನೇಹಪಾನ ವಿಧಾನೇನೋಪಪಾದಯೇತ್ ಮೇಷಶೃಙ್ಗೀ ಶ್ವದಂಷ್ಟ್ರಾ ಶಾಙ್ಗೇಷ್ಟಾಗುಡೂಚೀದ್ವಿಪಞ್ಚ ಮೂಲೀಸಿದ್ಧಂ ತೈಲಂ ಘೃತಂ ವಾ ವಾತ ಕುಷ್ಠಿನಾಂ ಪಾನಾಭ್ಯಙ್ಗ ಯೋರ್ವಿದಧ್ಯಾತ್ ಧವಾಶ್ವಕರ್ಣಕಕುಭ ಪಲಾಶಪಿಚುಮರ್ದಪರ್ಪಟಕ ಮಧುಕರೋಧ್ರಸಮಙ್ಗಾಸಿದ್ಧಂ ಸರ್ಪಿಃ ಪಿತ್ತಕುಷ್ಠಿನಾಂ ಪ್ರಿಯಾಳಶಾಲಾರಗ್ವಧನಿಮ್ಬಸಪ್ತಪರ್ಣ ಚಿತ್ರಕಮರಿಚವಚಾಕುಷ್ಠಸಿದ್ಧಂ ಶ್ಲೇಷ್ಮಕುಷ್ಠಿನಾಂ ಭಲ್ಲಾತಕಭಯಾವಿಡಙ್ಗಸಿದ್ಧಂ ವಾ ಸರ್ವೇಷಾಂ ತುವರಕತೈಲಂವೇತಿ ||೭||

ಮೊದಲು ವಮನ ಮೊದಲಾದ ಶೋಧನ ಕರ್ಮಗಳನ್ನು ಮಾಡಿಸಿ ಸ್ನೇಹಪಾನ ವಿಧಾನದಿಂದ ವಮನ ವಿರೇಚನರಕ್ತಮೋಕ್ಷಣಗಳಿಂದ ಉಪಚರಿಸಬೇಕು. ವಾತಕುಷ್ಠಿಗೆ ಮಧುನಾಶಿನಿ ಅಂದರೆ ಗೆರ್ಶಿಹಂಬು, ನೆಗ್ಗಿಲಸಮೂಲ, ತವಸದ ತೊಗಟೆ, ಅಮೃತವಳ್ಳಿ ಮತ್ತು ದಶಮೂಲಗಳಿಂದ ತಯಾರಿಸಿದ ತೈಲವನ್ನಾಗಲೀ ಘೃತನನ್ನಾಗಲೀ ಕುಡಿಸಿ ಅಭ್ಯಂಗಮಾಡಿಸಬೇಕು. ಪಿತ್ತಕುಷ್ಠರೋಗಿಗೆ ದಿಂಡಲು, ಧೂಪದಮರ, ಮತ್ತಿ, ಮುತ್ತುಗ, ಬೇವು, ಪರ್ಪಾಟಕ, ಹಿಪ್ಪೆ, ರೋಧ್ರ, ಮಂಜಿಷ್ಠೆ ಇವುಗಳಿಂದ ತಯಾರಿಸಿದ ತುಪ್ಪವನ್ನು ಕುಡಿಸಬೇಕು. ಕಫಕುಷ್ಠಿಗೆ ಚಾರುಪೊಪ್ಪು, ಸರ್ಜವೃಕ್ಷ, ಕಕ್ಕೆ, ಬೇವು, ಏಳೆಲಗ (ಮದ್ದಾಲೆ), ಚಿತ್ರಮೂಲ, ಮೆಣಸು, ಬಜೆ, ಚಂಗಲ್‌ಕೋಷ್ಠ ಇವುಗಳಿಂದ ತಯಾರಿದ ತೈಲ ಮತ್ತು ತುಪ್ಪಗಳನ್ನಾಗಲೀ, ಗೇರುಬೀಜ, ಅಣಿಲೆಸಿಪ್ಪೆ, ವಿಡಂಗಗಳಿಂದ ತಯಾರಿಸಿದ ತೈಲಘೃತಗಳನ್ನಾಗಲೀ ಪಾನ, ಅಭ್ಯಂಜನಗಳ ಮೂಲಕ ಉಪಯೋಗಿಸಬೇಕು. ಎಲ್ಲಾ ವಿಧದ ಕುಷ್ಠರೋಗದಲ್ಲಿಯೂ ತುವರಕತೈಲವನ್ನಾಗಲೀ ಗೇರಿನ ತೈಲವನ್ನಾಗಲೀ ಪಾನ, ಅಭ್ಯಂಗಗಳಿಗೆ ಉಪಯೋಗಿಸಬೇಕು.

ಸಪ್ತಪರ್ಣಾರಗ್ವಧಾತಿವಿಷಾಪಾಠಾಕಟುರೋಹಿಣ್ಯಮೃತಾತ್ರಿಫಲಾಪಟೋಲಪಿಚುಮರ್ದ ಪರ್ಪಟದುರಾಲ ಭಾತ್ರಾಯಮಾಣಾಮುಸ್ತಾಚನ್ದನಪದ್ಮಕಹರಿದ್ರೋಪಕುಲ್ಯಾ ವಿಶಾಲಾ ಮೂರ್ವಾಶತಾವರೀಸಾರಿವೇನ್ದ್ರಯವಾಟರೂಷಕಷಡ್ಗ್ರಂಥಾ ಮಧುಕಭೂನಿಮ್ಬಗ್ವಷ್ಟಿಕಾ ಇತಿ ಸಮಭಾಗಾಃ ಕಲ್ಕಃ ಸ್ಯಾತ್ ; ಕಲ್ಕಾತ್ ಚತುರ್ಗುಣಂ ಸರ್ಪಿಃ ಪ್ರಕ್ಷಿಪ್ಯ ತದ್ದ್ವಿಗುಣೋ ಧಾತ್ರೀಫಲರಸಪ್ತಚತುರ್ಗುಣಾ ಅಪಸ್ತದ್ಯೈಕಧ್ಯಂ ಸಮಾಲೋಡ್ಯ ವಿಪಚೇತ್ ; ಏತತ್ ಮಹಾ ತಿಕ್ತಕಂ ನಾಮ ಸರ್ಪಿಃ ಕುಷ್ಠವಿಷಮಜ್ವರರಕ್ತಪಿತ್ತಹೃದ್ರೋಗೋನ್ಮಾದಾಪಸ್ಮಾರಗುಲ್ಮಪಿಡಕಾ ಸೃಗ್ದರಗಗಳಣ್ಡ ಗಣ್ಡರೋಗ ವಿಸರ್ಪಪಾಣ್ಡುಕಣ್ಡೂಪಾಮಾದೀಂಶ್ಚ ಶಮಯೇದಿತಿ ||೮||

ತ್ರಿಫಲಾಟೋಲಪಿ ಚುಮನ್ದಾಟರೂಷಕ ಕಟುರೋಹಿಣೀ ದುರಾಲಭಾತ್ರಾಯಮಾಣಾ ಪರ್ಪಟಕಾಶ್ಚೇತೇಷಾಂ ದ್ವಿಪಲಿಕಾ ಭಾಗಾ ಜಲದ್ರೋಣೇ ಪ್ರಕ್ಷಿಪ್ಯ ಪಾದಾವಶೇಷಂ ಕಷಾಯ ಮಾದಾಯ ಕಲ್ಕಪೇಷ್ಯಾಣೀಮಾನಿ ಭೇಷಜಾನಿ ಅರ್ಧಪಲಿಕಾನಿ ತ್ರಾಯಮಾಣಾಮುಸ್ತೇನ್ದ್ರ ಯವಚನ್ದನ ಕಿರಾತತಿಕ್ತಾನಿ ಪಿಪ್ಪಲ್ಯಶ್ಚೇತಾನಿ ಘೃತಪ್ರಸ್ಥೇ ಸಮಾವಾಪ್ಯವಿಪಚೇತಃ ; ಏತತ್ ತಿಕ್ತಕಂ ನಾಮಸರ್ಪಿಃ ಕುಷ್ಠವಿಷಮಜ್ವರಗುಲ್ಮಾರ್ಶೋಗ್ರಹಣೀದೋಷಶೋಫಪಾಣ್ಡು ರೋಗ ವಿಸರ್ಪಪಾಣ್ಡ್ಯಶಮನಂ ಚೇತಿ ||೯||

ಏಳೆಲಗ (ಮದ್ದಾಲೆ), ಕಕ್ಕೆ, ಅತಿಬಜೆ, ಅಗಳುಶುಂಠಿ, ಕಟುಕರೋಹಿಣಿ, ಅಮೃತಬಳ್ಳಿ, ತ್ರಿಫಲೆ, ಕಹಿಪಡವಲ, ಬೇವು, ಪರ್ಪಾಷ್ಟಕ, ತುರುಚನಬಳ್ಳಿ, ಕಹಿದಸರಿ, ಕೊನ್ನಾರಿಗೆಡ್ಡೆ, ಶ್ರೀಗಂಧ, ಪದ್ಮಕ, ಅರಿಶಿನ, ಹಿಪ್ಪಲಿ, ದಾಸವಾಳಕ್ಕೆಬೇರು, ಕೊರಟಿಗೆ ಹಂಬು, ಆಷಾಡಿಬೇರು, ಸೊಗದೆಬೇರು, ಕೊಡಶಿಗೆಬೀಜ, ಆಡುಸೋಗೆ, ಬಜೆಕೊನೆ, ಅತಿಮಧುರ, ನೆಲಬೇವು, ಹಂದಿಗೆಡ್ಡೆ ಇವು ಪ್ರತಿಯೊಂದನ್ನೂ ಸಮಭಾಗದಿಂದ ಸೇರಿಸಿ ಕಲ್ಕಮಾಡಿ ಕಲ್ಕದ ೪ ರಷ್ಟು ತುಪ್ಪ ಅದರ ಎರಡರಷ್ಟುಭಾಗ ನೆಲ್ಲಿಯ ಕಾಯಿರಸ ಅದರ ೪ ರಷ್ಟು ನೀರು ಇವೆಲ್ಲವನ್ನೂ ದೊಡ್ಡಕಡಾಯಿಗೆ ಹಾಕಿ ಕುದಿಸಿದ ತುಪ್ಪಕ್ಕೆ ಮಹಾ ತಿಕ್ತಘೃತವೆಂದು ಹೆಸರು. ಇದರ ಪ್ರಯೋಗದಿಂದ ಕುಷ್ಠ, ವಿಷಮಜ್ವರ, ರಕ್ತಪಿತ್ತ, ಹೃದ್ರೋಗ, ಉನ್ಮಾದ, ಅಪಸ್ಮಾರ, ಗುಲ್ಮ, ಪಿಡಕೆಗಳು, ಪ್ರದರ, ಗಳಗಂಡ, ಗಂಡ ಮಾಲೆ, ವಿಸರ್ಪ, ಷಾಂಡ್ಯ, ನವೆ, ಕಜ್ಜಿ, ತುರಿ ಮೊದಲಾದುವು ನಿವಾರಣೆಯಾಗುತ್ತವೆ.

ತ್ರಿಫಲೆ, ಕಹಿಪಡಪಲ, ಬೇವು, ಆಡುಸೋಗೆ, ಕಟುಕರೋಹಿಣಿ, ತುರುಚನಬಳ್ಳಿ, ಕಹಿದಸರಿ, ಪರ್ಪಾಷ್ಟಕ ಇವು ಪ್ರತಿಯೊಂದೂ ಎರಡೆರಡು ಪಲಗಳನ್ನು ಎಂಟು ಅಳತೆಯ ನೀರಿನಷ್ಟು ನೀರಿನಲ್ಲಿ ಸೇರಿಸಿ ಕುದಿಸಿ ನಾಲ್ಕರಲ್ಲೊಂದು ಭಾಗದಷ್ಟನ್ನು ನಿಲ್ಲಿಸಿ ಶೋಧಿಸಿ ಕೊಂಡು ಈ ಕಷಾಯಕ್ಕೆ ಕಹಿದಸರಿ, ಕೊನ್ನಾರಿಗೆಡ್ಡೆ, ಕೊಡಶಿಗೆಬಿತ್ತ, ಶ್ರೀಗಂಧ, ನೆಲ ಬೇವು, ಹಿಪ್ಪಲಿ ಇವುಗಳು ಪ್ರತಿಯೊಂದನ್ನೂ ಅರ್ಧಪಲದಂತೆ ಚೂರ್ಣಿಸಿ ಒಂದು ಪ್ರಸ್ಥತುಪ್ಪದೊಡನೆ ಮೇಲಿನ ಕಷಾಯಕ್ಕೆ ಹಾಕಿ ಪಾಕಮಾಡಿದ ಘೃತವನ್ನು ಪ್ರಯೋ ಗಿಸಿದರೆ ಕುಷ್ಠ, ವಿಷಮಜ್ವರ, ಗುಲ್ಮ, ಅರ್ಶಸ್ಸು, ಗ್ರಹಣಿದೋಷ, ಶೋಫ, ವಾಯು ರೋಗ, ವಿಸರ್ಪ, ಷಾಂಡ್ಯಗಳು ಶಮನವಾಗುತ್ತವೆ, ಇದಕ್ಕೆ ತಿಕ್ತಕ ಘೃತವೆಂದು ಹೆಸರು.

ಅತೋಽನ್ಯತಮೇನ ಘೃತೇನ ಸ್ನಿಗ್ಧಸ್ವಿನ್ನಸ್ಯೈಕಾಂ ದ್ವೇ ತಿಸ್ರಶ್ಚತಸ್ರಃ ಪಞ್ಚ ವಾ ಸಿರಾ ವಿಧ್ಯೇತ್ ; ಮಣ್ಡಲಾನಿ ಚೋತ್ಸನ್ನಾನಿ ಅವಲಿಖೇತ್ ಅಭೀಕ್ಷ್ಣಂ ಪ್ರಚ್ಛಯೇದ್ವಾ ಸಮುದ್ರಫೇನಶಾತಕಗೋಜೀಕಾಕೋದುಮ್ಬರಿಕಾಪತ್ರೈರ್ವಾಘೃಷ್ಯಾಲೇಪಯೇತ್ ;ಲಾಕ್ಷಾಸರ್ಜ ರಸರಸಾಞ್ಜನ ಪ್ರಪುನ್ನಾಡಾವಲ್ಗುಜತೇಜೋವತ್ಯಶ್ವಮಾರಕಾರ್ಕಕುಟಜಾರೇವತ ಮೂಲಕಲ್ಕೈ ರ್ಮೂತ್ರಪಿಷ್ಟೈಃ ಪಿತ್ತಪಿಷ್ಟೈರ್ವಾ ಸ್ವರ್ಜಿಕಾತುತ್ಥಕಾಸೀಸವಿಡಙ್ಗಾಗಾರಧೂಮಚಿತ್ರಕಕಟುಕ ಸುಧಾಹರಿದ್ರಾಸೈನ್ಧವಕಲ್ಕೈರ್ವಾ ಏತಾನ್ಯೇವಾವಾಪ್ಯ ಕ್ಷಾರಕಲ್ಪೇನ ನಿಃಸ್ರುತೇಪಾಲಾಶೇಕ್ಷಾರೇ ಸುಧಾಹರಿದ್ರಾಸೈನ್ಧವಕಲ್ಕೈರ್ವಾ ಏತಾನ್ಯೇವಾವಾಪ್ಯ ಕ್ಷಾರಕಲ್ಪೇನ ನಿಃಸ್ರುತೇಪಾಲಾಶೇಕ್ಷಾರೇ ತತೋ ವಿಪಾಚ್ಯ ಫಾಣಿ ತಮಿವ ಸಂಜಾತಮವತಾರ್ಯಾಲೇಪಯೇತ್ ; ಜ್ಯೋತಿಷ್ಕಫಲಲಾಕ್ಷಾ ಮರಿಚಪಿಪ್ಪಲೀ ಸುಮನಃಪತ್ರೈರ್ವಾ ; ಹರಿತಾಮಲಮನಃಶಿಲಾರ್ಕಕ್ಷೀರತಿಲಶಿಗ್ರುಮರಿಚ ಕಲ್ಕೈರ್ವಾ ; ಸ್ವರ್ಜಿಕಾಕುಷ್ಠತುತ್ಥಕುಟಜಚಿತ್ರಕವಿಡಙ್ಗಮರಿಚಮನಃಶಿಲಾಕಲ್ಕೈರ್ವಾ ; ಹರೀತ ಕೀಕರಞ್ಜಿಕಾವಿಡಙ್ಗ ಸಿದ್ಧಾರ್ಥಕಲವಣರೋಚನಾವಲ್ಗುಜಹರಿದ್ರಾಕಲ್ಕೈರ್ವಾ ||೧೦||

ಇವುಗಳ ಪೈಕಿ ಯಾವುದಾದರೊಂದು ಘೃತವನ್ನು ಪಾನಮಾಡಿಸಿ ಸ್ನಿಗ್ಧದೇಹವುಳ್ಳ ರೋಗಿಗೆ ಸ್ವೇದಮಾಡಿಸಿ ೧, ೨, ೩, ೪, ೫ ಸಿರೆಗಳನ್ನು ಚುಚ್ಚಿ ರಕ್ತ ಸ್ರಾವಮಾಡಿ ಮೇಲಕ್ಕೆ ಉಬ್ಬಿರುವ ಮಂಡಲಕುಷ್ಠಗಳನ್ನು ಶಸ್ತ್ರದಿಂದ ಆಳವಾಗಿ ಕತ್ತರಿಸಬೇಕು. ಸಮುದ್ರದ ನೊರೆ, ತೇಗ, ಎತ್ತುನಾಲಿಗೆ, ಕಲ್ಲತ್ತಿ ಇವುಗಳ ಎಲೆಗಳಿಂದ ಕುಷ್ಠಸ್ಥಾನವನ್ನು ತಿಕ್ಕಿ ಅರಗು, ರಾಳು, ರಸಾಂಜನ, ಚಗತೆ, ಬಾವನ್ತಿ, ಗಂಗುಂಡೆ, ಕಣಿಗಲೆ, ಎಕ್ಕ, ಕೊಡಶಿಗೆ, ಕಕ್ಕೆ ಇವುಗಳ ಬೇರಿನ ತೊಗಟೆಗಳ ಕಲ್ಕವನ್ನು ಗೋಮೂತ್ರದಿಂದ ಅರೆದು ಅಥವಾ ಪಿತ್ತದಿಂದಲಾದರೂ ಅರೆದು ಲೇಪಿಸಬೇಕು. ಸರ್ಜಕ್ಷಾರ, ಮೈಲ್‌ತುತ್ಥ, ಅನ್ನಭೇದಿ, ವಿಡಂಗ, ಇಲ್ಲಣ, ಚಿತ್ರಮೂಲ, ಕಟುಕರೋಹಿಣಿ, ಮುಂಡುಗಳ್ಳಿಬೇರು, ಅರಿಶಿನ, ಸೈಂಧವ ಇವುಗಳ ಕಲ್ಕದಿಂದಾಗಲೀ ಅಥವಾ ಇವುಗಳನ್ನು ಚೂರ್ಣಿಸಿ ಕ್ಷಾರವಿಧಾನದಿಂದ ಕಾಯಿಸಿ ತಯಾರಿಸುವಾಗ ಪಾಕದ್ರವ್ಯದೊಡನೆ ಸೇರಿಸಿ (ಈ ದ್ರವ್ಯಗಳನ್ನು ಸೇರಿಸಿ ರಾಶಿಮಾಡಿ ಎಳ್ಳುಕಡ್ಡಿಗಳನ್ನು ಮುಚ್ಚಿ ಬೆಂಕಿಯನ್ನು ಹಾಕಿ ಹತ್ತಿಸಿ ಬೆಂದ ಚೂರ್ಣಕ್ಕೆ ಆರರಷ್ಟು ನೀರು ಹಾಕಿ ಕದರಿ ಬಟ್ಟೆಯಿಂದ ಶೋಧಿಸಿದ ದ್ರವಕ್ಕೆ ಸುವರ್ಚಲ, ತುತ್ಥ, ಕಾಸೀಸಾದಿ ಚೂರ್ಣ ೧/೩೨ ಭಾಗದಷ್ಟನ್ನು ಸೇರಿಸಿ ಕಾಯಿಸಿದ ರಸಕ್ರಿಯೆಯಿಂದ ಲೇಪಿಸಬೇಕು ಅಥವಾ ಗಂಗುಂಡೆಬೀಜ, ಅರಗು, ಮೆಣಸು, ಹಿಪ್ಪಲಿ, ಜಾಜಿಸೊಪ್ಪುಗಳ ಕಲ್ಕ. ಅರಿದಳ, ಮಣಶಿಲೆ, ಎಕ್ಕದಹಾಲು, ಎಳ್ಳು, ನುಗ್ಗೆಸೊಪ್ಪು, ಮೆಣಸು ಇವುಗಳನ್ನು ನೀರಿನಲ್ಲರೆದ ಕಲ್ಕ, ಸರ್ಜಕ್ಷಾರ, ಚಂಗಲ್‌ಕೋಷ್ಠ, ಮೈಲ್‌ತುತ್ಥ, ಕೊಡಶಿಗೆ, ಚಿತ್ರಮೂಲ, ವಿಡಂಗ, ಮೆಣಸು, ಮಣಶಿಲೆ ಇವುಗಳ ಕಲ್ಕ, ಅಣಿಲೆಕಾಯಿಸಿಪ್ಪೆ, ಹೊಂಗೆಬೀಜ, ವಿಡಂಗ, ಬಿಳಿಸಾಸಿವೆ, ಸೈಂಧವ, ಗೋರೋಚನ, ಬಾವಂತಿಯಬೀಜ, ಅರಿಶಿನ ಇವುಗಳ ಕಲ್ಕದಿಂದಲಾಗಲೀ ಕುಷ್ಠಲೇಪನಮಾಡಬೇಕು.

ಸರ್ವೇ ಕುಷ್ಠಾಪಹಾಃ ಸಿದ್ಧಾ ಲೇಪಾಃ ಸಪ್ತಪ್ರಕೀರ್ತಿತಾಃ ।
ವೈಶೇಷಿಕಾನತಸ್ತೂರ್ಧ್ವಂ ದದ್ರೂಶ್ವಿತ್ರೇಷು ಮೇ ಶೃಣು ॥೧೧॥
ಲಾಕ್ಷಾಕುಷ್ಠಂ ಸರ್ಷಪಾಃ ಶ್ರೀನಿಕೇತಂ ರಾತ್ರಿರ್ವ್ಯೋಷಂ ಚಕ್ರಮರ್ದಸ್ಯ ಬೀಜಮ್ ।
ಕೃತ್ವೈಕಸ್ಥಂ ತಕ್ರಪಿಷ್ಟಃ ಪ್ರಲೇಪೋ ದದ್ರೂಷೂಕ್ತೋ ಮೂಲಕಾದ್ಬೀಜಯುಕ್ತಃ
॥೧೨॥
ಸಿನ್ಧೂದ್ಭೂತಂ ಚಕ್ರಮರ್ದಸ್ಯ ಬೀಜಮಿಕ್ಷೂದ್ಭೂತಂ ಕೇಶರಂ ತಾರ್ಕ್ಷ್ಯಶೈಲಮ್ ।
ಪಿಷ್ಟೋ ಲೇಪೋಽಯಂ ಕಪಿತ್ಥಾದ್ರಸೇನ ದದ್ರೂಸ್ತೂರ್ಣಂ ನಾಶಯತ್ಯೇಷಯೋಗಃ
॥೧೩॥

ಅರ್ಥ—ನಿಶ್ಚಿತಫಲಸಿದ್ಧಿಯನ್ನು ಖ್ಯಾಪನೆಮಾಡುವುದಕ್ಕಾಗಿ ಕುಷ್ಠನಾಶಮಾಡುವ ಏಳು ಔಷಧಕಲ್ಪನೆಗಳನ್ನು ಹೇಳಿರುತ್ತಾರೆ. ಇನ್ನು ಮುಂದೆ ಮಂಡಲಕುಷ್ಠ, ಶ್ವಿತ್ರ (ಬಿಳಿತೊನ್ನು) ಗಳನ್ನು ನಿವಾರಿಸುವ ಔಷಧಕಲ್ಪನೆಗಳನ್ನು ಹೇಳುತ್ತೇನೆ ಕೇಳು—ಅರಗು,

ಚಂಗಲ್ ಕೋಷ್ಠ, ಬಿಳಿಸಾಸಿವೆ, ಸಾಂಬ್ರಾಣಿ, ಅರಿಶಿನ, ತ್ರಿಕಟು, ಚಗತೆಬೀಜ, ಮೂಲಂಗಿಯಬೀಜ ಇವೆಲ್ಲವನ್ನೂ ಮಜ್ಜಿಗೆಯಲ್ಲಿ ಅರೆದು ದದ್ರುಗಳಿಗೆ (ಕಜ್ಜಿ, ಕುರು) ಲೇಪಿಸಬೇಕು. ಸೈಂಧವ, ಚಗತೆಬೀಜ, ಜಿಲ್ಲ, ನಾಗಕೇಸರಿ, ರಸಾಂಜನ ಇವುಗಳನ್ನು ಬೇಲದ ರಸದಿಂದ ಅರೆದು ಲೇಪಿಸಿದರೆ ಕಜ್ಜಿಯು ಬೇಗನೆ ನಾಶವಾಗುತ್ತದೆ.

ಹೇಮಕ್ಷೀರೀ ವ್ಯಾಧಿಘಾತಃ ಶಿರೀಷೋ ನಿಮ್ಬಃ ಸರ್ಜೋ ವತ್ಸಕಃ ಸಾಜಕರ್ಣಃ ।
ಶೀಘ್ರಂ ತೀವ್ರಾನ್ನಾಶಯನ್ತೀಹ ದದ್ರೂಃ ಸ್ನಾನಾಲೇಪಾದ್ಘರ್ಷಣೇಷು ಪ್ರಯುಕ್ತಾಃ ॥೧೪॥

ಭದ್ರಾಸಂಜ್ಞೋದುಮ್ಬರೀಮೂಲತುಲ್ಯಂ ದತ್ವಾ ಮೂಲಂ ಕ್ಷೋದಯಿತ್ವಾ ಮಲಪ್ವಾಃ ।
ಸಿದ್ಧಂ ತೋಯಂ ಪೀತಮುಷ್ಣೇ ಸುಖೋಷ್ಣಂ ಸ್ಫೋಟರ್ಶ್ವಿತ್ರೇ ಪುಣ್ಡರೀಕೇ ಚ ಕುರ್ಯಾತ್ ॥೧೫॥

ದ್ವೈಪಂ ದಗ್ಧಂ ಚರ್ಮ ಮಾತಙ್ಗಜಂ ವಾ ಭಿನ್ನೇ ಸ್ಫೋಟೇ ತೈಲಯುಕ್ತಂ ಪ್ರಲೇಪಃ
ಪೂತಿಃ ಕೀಟೋ ರಾಜವೃಕ್ಷೋದ್ಭವೇನ ಕ್ಷಾರೇಣಾಕ್ತಃ ಶ್ವಿತ್ರಮೇಕೋ ನಿಹನ್ತಿ ॥೧೬॥

ಮರಳುಮ್ಮತ್ತದಬೀಜ, (ಮುಳ್ಳುದತ್ತೂರಗಿಡ ೧ ರಿಂದ ೩ ಅಡಿ ಎತ್ತರ ಬೆಳೆಯುತ್ತದೆ, ಎಲೆಗಳು ಮುಳ್ಳಿನಿಂದ ತುಂಬಿರುತ್ತವೆ, ಹಳದಿ ಹೂವಿನ ರೇಕುಗಳೂ ಹಳದಿ ಹಾಲೂ ಇರುತ್ತದೆ, ಕಾಯಿ ಎಳ್ಳಿನಕಾಯಿಯಂತೆ ಉದ್ದವಾಗಿ ಮುಳ್ಳುಗಳಿಂದ ತುಂಬಿರುತ್ತದೆ, ಅವು ಒಣಗಿದರೆ ಒಡೆದು ಸಾಸಿವೆಯಂತೆ ಕಹಿಯಾದ ಕಪ್ಪು ಕಾಳುಗಳು ತುಂಬಿರುತ್ತವೆ), ಕಕ್ಕೆಚಿಗುರು, ಬಾಗೆಬೀಜ, ಬೇವಿನತೊಗಟೆ ಮತ್ತು ಬೀಜ, ರಾಳು, ಕೊಡಶಿಗೆ ತೊಗಟೆ, ದೊಡ್ಡ ಸರ್ಜ (ಧೂಪದಮರ) ಇವುಗಳನ್ನು ಮಜ್ಜಿಗೆಯಲ್ಲಿ ಅರೆದು ಲೇಪಿಸುವುದು, ಉಜ್ಜುವುದು, ಇವುಗಳ ಕಷಾಯದಿಂದ ಸ್ನಾನ ಮಾಡುವುದು ಇವುಗಳಿಂದ ಬಲು ಬೇಗ ಕಜ್ಜಿ ಗುಣವಾಗುತ್ತದೆ. ಕಲ್ಲತ್ತಿ ಮತ್ತು ಗರಗತ್ತಿಗಳ ಬೇರಿನ ತೊಗಟೆಗಳು ೧ ಭಾಗಕ್ಕೆ ೧೬ ರಷ್ಟು ನೀರು ಸೇರಿಸಿ ನಾಲ್ಕನೆಯ ಒಂದು ಅಂಶ ನಿಲ್ಲುವಂತೆ ಕಷಾಯ ಕಾಯಿಸಿ ಬೇಸಿಗೆಯಲ್ಲಿ ಸುಖೋಷ್ಣವಾಗಿ ಕುಡಿದರೆ ಶ್ವಿತ್ರ ಮತ್ತು ಪುಂಡರೀಕ ಕುಷ್ಠಗಳಲ್ಲಿ ಮೈಮೇಲೆ ಬೊಬ್ಬೆಗಳೇಳುತ್ತವೆ. ಮೊದಲು ಸಾಸಿವೆಯ ಎಣ್ಣೆಯನ್ನು ಕುಷ್ಠಕ್ಕೆ ಬಳಿದಿರಬೇಕು. ಬೊಬ್ಬೆಯೆದ್ದಮೇಲೆ ಹಸುವಿನ ಮೊಸರು ಮತ್ತು ದಾಳಿಂಬೆಕಟ್ಟುಗಳೊಡನೆ ಅನ್ನವನ್ನು ತಿನ್ನಿಸಬೇಕು. ಚಿತ್ರಬಣ್ಣದ ಹುಲಿಯ ಅಥವಾ ಆನೆಯ ಚರ್ಮವನ್ನು ಸುಟ್ಟು ಆವರಿಕೆಯ ತೈಲದಲ್ಲಿ ರಂಗಳಿಸಿ ಮೇಲೆ ಹೇಳಿದ ಶ್ವಿತ್ರ ಮತ್ತು ಪುಂಡರೀಕ ಕುಷ್ಠದಮೇಲಿನ ಬೊಬ್ಬೆಗಳಿಗೆ ಲೇಪಮಾಡಬೇಕು. ಮಳೆಗಾಲದಲ್ಲಿ ಸಣ್ಣಗಿಡಗಳ ಮೇಲಿರುವ ಅವುಗಳ ಎಲೆಯನ್ನು ತಿನ್ನುವ ದೊಡ್ಡ ಹುಳುವನ್ನು ಕಕ್ಕೆಗಿಡದ ಕ್ಷಾರೋದಕದಲ್ಲಿ ಅರೆದು ಲೇಪಿಸಿದರೆ ಇದೊಂದೇಯೋಗವು ಶ್ವಿತ್ರನಾಶಕವೆಂದು ಪ್ರಸಿದ್ಧವಾಗಿದೆ. ಪೂತಿಕೀಟದ ಪ್ರಯೋಗವು ಶ್ವಿತ್ರನಾಶ ಮಾಡುವುದರಲ್ಲಿ ಶ್ರೇಷ್ಠವಾದದ್ದು. (ಈ ಕೀಟದ ವಾಸನೆಯು ಅಪಾನವಾತದಂತಿರುತ್ತದೆ).

ಕೃಷ್ಣಸ್ಯ ಸರ್ಪಸ್ಯಮಷೀ ಸುದಗ್ಧಾ ವೈಭೀತಕಂ ತೈಲಮಥ ದ್ವಿತೀಯಮ್ ।
ಏತತ್ ಸಮಸ್ತಂ ಮೃದಿತಂ ಪ್ರಲೇಪಾತ್ ಶ್ವಿತ್ರಾಣಿ ಸರ್ವಾಣ್ಯಪಹನ್ತಿ ಶೀಘ್ರಮ್ ॥೧೭॥

ಅಧ್ಯರ್ಧತೋಯೇ ಸುಮತಿಸ್ಸ್ರುತಸ್ಯ ಕ್ಷಾರಸ್ಯ ಕಲ್ಕೇನ ತು ಸಪ್ತಕೃತ್ವಃ ।
ತೈಲಂ ಶೃತಂ ತೇನ ಚತುರ್ಗುಣೇನ ಶ್ವಿತ್ರಾಪಹಂ ಮ್ರಕ್ಷಣಮೇತದಗ್ರ್ಯಮ್ ॥೧೮॥

ಕೃಷ್ಣಸರ್ಪವನ್ನು ಪುಟಪಾಕವಿಧಾನದಿಂದ ಸುಟ್ಟು ಕಪ್ಪುಬಣ್ಣಕ್ಕೆ ಬಂದಾಗ ಅದಕ್ಕೆ "ಮಸಿ" ಎನ್ನುತ್ತಾರೆ. ಸುಟ್ಟಬೂದಿಯು ಬೆಳ್ಳಗಾದರೆ ಕ್ಷಾರವೆನ್ನುತ್ತಾರೆ. ಈ ರೀತಿಯಾಗಿ ಸುಟ್ಟ ಕೃಷ್ಣಸರ್ಪದ ಮಸಿಯನ್ನು ತಾರೆಕಾಯಿನ ಎಣ್ಣೆಯಲ್ಲಿ ರಂಗಳಿಸಿ ಶ್ವಿತ್ರಕ್ಕೇ ಬಳಿದರೆ ಬೇಗನೆ ಶ್ವಿತ್ರನಿವಾರಣೆಯಾಗುತ್ತದೆ. ಈ ಕ್ಷಾರವನ್ನು ಕ್ಷಾರದ ಒಂದೂವರೆಯಷ್ಟು ಪ್ರಮಾಣದ ನೀರಿನಲ್ಲಿ ಕದರಿ ಏಳುಸಾರಿ ಶೋಧಿಸಿ ಕ್ಷಾರೋದಕ ೪ ಪಾಲು ತೈಲ ೧ ಪಾಲು ಸೇರಿಸಿ ತಯಾರಿಸಿದ ತೈಲವನ್ನು ಶ್ವಿತ್ರದ ಮೇಲೆ ಲೇಪಿಸಿದರೆ ಶ್ವಿತ್ರ ನಾಶವಾಗುತ್ತದೆ. ಕೃಷ್ಣಸರ್ಪ ಕ್ಷಾರದಿಂದ ತಯಾರಿಸಿದ ತೈಲವು ಶ್ರೇಷ್ಠವಾದ ಶ್ವಿತ್ರನಾಶಕವು.

ಘೃತೇನಯುಕ್ತಂ ಪ್ರಪುನಾಡಬೀಜಂ ಕುಷ್ಠಂ ಚ ಯಷ್ಟೀಮಧುಕಂ ಚ ಪಿಷ್ಟ್ವಾ ।
ಶ್ವೇತಾಯ ದದ್ಯಾದ್ಗೃಹಕುಕ್ಕುಟಾಯ ಚತುರ್ಥಭಕ್ತಾಯ ಬುಭುಕ್ಷಿತಾಯ ॥೧೯॥
ತಸ್ಯೋಪಸಂಗೃಹ್ಯ ಚ ತತ್ಪುರೀಷಮುತ್ಪಾಟಿತಂ ಸರ್ವತ ಏವ ಲಿಮ್ಪೇತ್ ।
ಅಭ್ಯನ್ತರಂ ಮಾಸಮಿಮಂ ಪ್ರಯೋಗಂ ಪ್ರಯೋಜಯೇಚ್ಛ್ವಿತ್ರಮಥೋ ನಿಹನ್ತಿ ॥೨೦॥

ಚಗತೆಯಬೀಜ, ಚೆಂಗಲ್‌ಕೋಷ್ಠ, ಅತಿಮಧುರ ಇವುಗಳ ಕಲ್ಕಕ್ಕೆ ತುಪ್ಪವನ್ನು ಮಿಶ್ರಮಾಡಿ ಒಂದುದಿನ ಪೂರ್ತಿ ಉಪವಾಸವಿದ್ದ ಎರಡನೆಯ ದಿನ ಹಗಲು ಆಹಾರವನ್ನು ಕೊಡದೆ ರಾತ್ರಿ (ಚತುರ್ಥ, ೪ ನೆಯ ಭೋಜನಕಾಲ) ಯವರೆಗೂ ಉಪವಾಸವಿಡಲ್ಪಟ್ಟ ಮನೆಯಲ್ಲಿ ಸಾಕಿದ ಬಿಳಿಬಣ್ಣದ ಕೋಳಿಗೆ ತಿನ್ನಿಸಬೇಕು. (ತುಂಬಾ ಹಸಿವೆಯಿಂದಿರುವ ಕಾರಣ ಕೋಳಿಯು ಕಲ್ಕವನ್ನು ಆತುರದಿಂದ ಗಬಗಬನೆ ತಿಂದುಬಿಡುತ್ತದೆ. ಅನಂತರ ಆ ಕೋಳಿಯ ಮಲವನ್ನು ಶೇಖರಿಸಿ ಇಟ್ಟುಕೊಂಡು ಹಿಂದೆ ಹೇಳಿದ ಮಲಯೂ (ಕಲ್ಲತ್ತಿ) ಯೋಗದಿಂದ ಶ್ವಿತ್ರವನ್ನು ಬೊಬ್ಬೆಬರಿಸಿ ಅದರ ಮೇಲೆ ಈ ಕೋಳಿಯ ಮಲವನ್ನು ಒಂದು ತಿಂಗಳವರೆಗೆ ತಿಕ್ಕುತ್ತಾ ಬಂದರೆ ಶ್ವಿತ್ರವು ನಾಶವಾಗುತ್ತದೆ.

ಕ್ಷಾರೇ ಸುದಗ್ಧೇ ಗಜಲೇಣ್ಡಜೇ ತು ಗಜಸ್ಯ ಮೂತ್ರೇಣ ಬಹುಸ್ರುತೇ ಚ ।
ದ್ರೋಣಪ್ರಮಾಣೇ ದಶಭಾಗಯುಕ್ತಂ ದತ್ವಾ ಪಚೇದ್ಬೀಜಮವಲ್ಗುಜಸ್ಯ ॥೨೧॥
ಏತದ್ಯದಾ ಚಿಕ್ಕಣತಾಮುಪೈತಿ ತದಾ ಸಮಸ್ತಾ ಗುಟಿಕಾ ವಿದಧ್ಯಾತ್ ।
ಶ್ವಿತ್ರಂ ಪ್ರಲಿಮ್ಪೇದಥ ಸಂಪ್ರಘೃಷ್ಯ ತಯಾ ವ್ರಜೇದಾಶು ಸವರ್ಣಭಾವಮ್ ॥೨೨॥

ಆನೆಯ ಲದ್ದಿಯನ್ನು ಸುಟ್ಟುಬಂದ ಕ್ಷಾರವನ್ನು ಆನೆಯ ಮೂತ್ರದಲ್ಲಿ ಕದರಿ ಬಹಳ ಸಾರಿ ಶೋಧಿಸಿ ೧ ದ್ರೋಣ (ಅಳತೆಯ ಸೇರು) ಈ ಕ್ಷಾರೋದಕಕ್ಕೆ ೧-೧೦

ಭಾಗದಷ್ಟು ಬಾವಂತಿಬೀಜವನ್ನು ಸೇರಿಸಿ ಪಾಕಮಾಡುತ್ತಾ ಅಂಟಾಗುತ್ತಾ ಬಂದಮೇಲೆ ಇಳಿಸಿ ಗುಳಿಗೆಗಳನ್ನು ಮಾಡಿಟ್ಟುಕೊಂಡು ಶ್ವಿತ್ರಕ್ಕೆ ಉಜ್ಜಿ ಲೇಪಿಸುತ್ತಾ ಬಂದರೆ ಶೀಘ್ರ ಕಾಲದಲ್ಲಿ ಶ್ವಿತ್ರವು ನಿವಾರಣೆಯಾಗಿ ಸ್ವಾಭಾವಿಕವಾದ ಚರ್ಮದ ವ್ರಣವುಂಟಾಗುತ್ತದೆ.

ಕಷಾಯಕಲ್ಪೇನ ಸುಭಾವಿತಂ ತು ದಳಿತ್ವಚಂ ಚೂತ ಹರೀತಕೀನಾಮ್ ।
ತಾಂ ತಾಮ್ರದೀಪೇ ಪ್ರಣಿಧಾಯ ಧೀಮಾ ವರ್ತಿಂ ವಟಕ್ಷೀರಸುಭಾವಿತಾಂ ತು ॥೨೩॥
ಆದೀಪ್ಯ ತಜ್ಜಾತಮಸೀಂ ಗೃಹೀತ್ವಾ ತಾಂ ಚಾಪಿ ಪಥ್ಯಾಮ್ಬುಸಿ ಭಾವಯಿತ್ವಾ ।
ಸಂಮ್ರಕ್ಷಿತಂ ತದ್ಬಹುಶಃ ಕಿಲಾಸಂ ತೈಲೇನ ಸಿಕ್ತಂ ಕಟುನಾ ಪ್ರಯಾತಿ ॥೨೪॥
ಆವಲ್ಗುಜಂ ಬೀಜಮಗ್ರ್ಯಂ ನದೀಜಂ ಕಾಕಾಹ್ವಾನೌದುಮ್ಬರೀಯಾ ಚ ಲಾಕ್ಷಾ ।

ಮಾವಿನ ಮತ್ತು ಅಣಿಲೆ ತೊಗಟೆಗಳನ್ನು ಕತ್ತರಿಸಿ ತಯಾರಿಸಿದ ಕಷಾಯದಲ್ಲೂ ಆಲದ ಹಾಲಿನಲ್ಲೂ ಚೆನ್ನಾಗಿ ಭಾವನೆಮಾಡಿದ ಹತ್ತಿಯ ಬತ್ತಿಯನ್ನು ಸಾಸಿವೆಯ ಎಣ್ಣೆಯಲ್ಲಿ ನೆನೆಸಿ ಹಚ್ಚಿದ ದೀಪದಿಂದ ಶೇಖರಿಸಿದ ಮಸಿಯನ್ನು ಅಣಿಲೆಯ ಕಷಾಯದಲ್ಲಿ ಭಾವನೆಮಾಡಿ ಸಾಸಿವೆಯ ಎಣ್ಣೆಯಲ್ಲಿ ರಂಗಳಿಸಿ ಕಿಲಾಸಕುಷ್ಠದ ಮೇಲೆ ಅನೇಕ ಸಾರಿ ಉಜ್ಜಿ ಲೇಪಿಸಿದರೆ ಅದು ನಿವಾರಣೆಯಾಗುತ್ತದೆ.

ಲೌಹಂ ಚೂರ್ಣಂ ಮಾಗಧೀ ತಾರ್ಕ್ಷ್ಯಶೈಲಂ ತುಲ್ಯಾಃ ಕಾರ್ಯಾಃ ಕೃಷ್ಣವರ್ಣಾಸ್ತಿಲಾಶ್ಚ ॥೨೫॥
ವರ್ತಿಂ ಕೃತ್ವಾ ತಾಂ ಗವಾಂ ಪಿತ್ತಪಿಷ್ಟಾಂ ಲೇಪಃ ಕಾರ್ಯಃ ಶ್ವಿತ್ರಿಣಾಂ ಶ್ವಿತ್ರಹಾರೀ ।
ಲೇಪಾತ್ ಪಿತ್ತಂ ಶೈಖಿನಂ ಶ್ವಿತ್ರಹಾರಿ ಹ್ರೀವೇರಂ ವಾ ದಗ್ಧಮೇತೇನ ಯುಕ್ತಮ್ ॥೨೬॥

ಬಾವಂತಿಯಬೀಜ, ಮಾಕ್ಷಿಕಧಾತು ಅಥವಾ ಹೇಮಮಾಕ್ಷಿಕ, ಕಲ್ಲತ್ತಿಯ ಕಾಯಿ, ಅರಗು, ಅಗಿಲುಗಂಧ, ಹಿಪ್ಪಲಿ, ರಸಾಂಜನ ಇವುಗಳೆಲ್ಲಕ್ಕೂ ಸಮವಾಗಿ ಕರಿಯ ಎಳ್ಳು, ಇವುಗಳ ಕಲ್ಕದ ಬತ್ತಿಯನ್ನು ಗೋರೋಚನದೊಡನೆ ಗಂಧ ತೆಗೆದು ಲೇಪಿಸಿದರೆ ಶ್ವಿತ್ರನಾಶವಾಗುತ್ತದೆ. ಹೀಗೆಯೇ ಮುಡಿವಾಳವನ್ನು ಸುಟ್ಟು ನವಿಲ ಪಿತ್ತದಲ್ಲಿ, ಅರೆದು ಲೇಪಿಸಿದರೆ ಶ್ವಿತ್ರಹರವಾಗುತ್ತದೆ.

ತುತ್ಥಾಲಕಟುಕಾವ್ಯೋಷಸಿಂಹಾರ್ಕಹಯಮಾರಕಾಃ ।
ಕುಷ್ಠಾವಲ್ಗುಜಭಲ್ಲಾತಕ್ಷೀರಿಣೀ ಸರ್ಷಪಾಃ ಸ್ನುಹೀ ॥೨೭॥
ತಿಲ್ವಕಾರಿಷ್ಟಪೀಲೂನಾಂ ಪತ್ರಾಣ್ಯಾರಗ್ವಧಸ್ಯ ವಾ ।
ಬೀಜಂ ವಿಡಙ್ಗಾಶ್ವಹನ್ತ್ರೋರ್ಹರಿದ್ರೇ ಬೃಹತೀ ದ್ವಯಮ್ ॥
ಆಭ್ಯಾಂ ಶ್ವಿತ್ರಾಣಿ ಯೋಗಾಭ್ಯಾಂ ಲೇಪಾನ್ನಶ್ಯನ್ತ್ಯಶೇಷತಃ ।

ಮೈಲ್‌ತುತ್ಥ, ಅರಿದಳ, ಕಟುಕರೋಹಿಣಿ, ತ್ರಿಕಟು, ಕೆಂಪು ನುಗ್ಗೆ, ಎಕ್ಕದ ಬೇರು, ಕಣಿಗಲೆಬೇರು, ಚಂಗಲ್‌ಕೋಷ್ಠ, ಬಾವಂತಿಬೀಜ, ಗೇರುಬೀಜ, ಮರಳುಮತ್ತಿ, ಬಿಳಿಸಾಸಿವೆ, ಮುಂಡುಗಳ್ಳಿಯಬೇರು, ಲೋಧ್ರ, ಬೇವು, ಒಗಿನೀ ತೊಗಟೆ, ಕಕ್ಕೆಯೆಲೆ,

ವಿಡಂಗ, ಕಣಿಗಲಬಿತ್ತ, ಅರಿಶಿನ, ಮರದರಿಶಿನ, ಹೆಗ್ಗುಳ್ಳ, ನೆಲಗುಳ್ಳ (ಈ ಎರಡು ಶ್ಲೋಕಗಳಿಂದ ಎರಡು ಯೋಗಗಳನ್ನು ವಿವರಿಸಿದೆ). ಇವುಗಳ ಕಲ್ಕವನ್ನು ಲೇಪಿಸಿದರೆ ಎಲ್ಲಾ ವಿಧದ ಶ್ವಿತ್ರಗಳೂ ನಾಶವಾಗುತ್ತವೆ.

ವಾಯಸೀ ಫಲ್ಗುತಿಕ್ತಾನಾಂ ಶತಂ ದತ್ವಾ ಪೃಥಕ್‌ಪೃಥಕ್ ||೨೯||
ದ್ವೇ ಲೋಹರಜಸಃ ಪ್ರಸ್ಥೇ ತ್ರಿಫಲಾ ತ್ರ್ಯಾಢಕಂ ತಥಾ |
ತ್ರಿದ್ರೋಣೇಽಪಾಂ ಪಚೇದ್ಯಾವದ್ಭಾಗೌ ದ್ವಾವಸನಾದಪಿ ||೩೦||
ಶಿಷ್ಟಂ ಚ ವಿಪಚೇದ್ಭೂಯ ಏತೈಃ ಶ್ಲಕ್ಷ್ಣಪ್ರಪೇಷಿತೈಃ |
ಕಲ್ಕೈರಿನ್ದ್ರಯವವ್ಯೋಷ ತ್ವಗ್ದಾರುಚತುರಙ್ಗುಳೈಃ ||೩೧||
ಪಾರಾವತಪದೀದನ್ತೀ ವಾ ಕುಚೀಕೇ ಸರಾಹ್ವಯೈಃ |
ಕಣ್ವಕಾರ್ಯಾ ಚ ತತ್ಪಕ್ವಂ ಘೃತಂ ಕುಷ್ಠಿಷು ಯೋಜಯೇತ್ || ||೩೨||
ದೋಷಧಾತ್ವಾ ಶ್ರಿತಂ ಪಾನಾದಭ್ಯಙ್ಗಾತ್ತ್ವಗ್ಗತಂ ತಥಾ |
ಅಪ್ಯಸಾಧ್ಯಂ ನೃಣಾಂ ಕುಷ್ಠಂ ನಾಮ್ನಾನೀಲಂ ನಿಯಚ್ಛತಿ ||೩೩||

ಎಲವು ಸಂಧಿಸಮೂಲ (ಕೆಲವರು ಕೆಂಪುಗಣಿಕೆ ಗಿಡವೆನ್ನುತ್ತಾರೆ), ಕಲ್ಲತ್ತಿಮರದ ತೊಗಟೆ, ಕಟುಕರೋಹಿಣೀ ಇವು ಪ್ರತಿಯೊಂದೂ ೧೦೦ ಪಲಗಳಷ್ಟು, ಕಬ್ಬಿಣದ ಅರಪುಡಿ ೨ ಪ್ರಸ್ಥ, ತ್ರಿಫಲೆ ೩ ಆಢಕದಷ್ಟು ಇವನ್ನು ೩ ದ್ರೋಣ ನೀರಿನಲ್ಲಿ ಅಂದರೆ ನೀರು ಎರಡರಷ್ಟು ಹಾಕಬೇಕಾಗುವುದರಿಂದ ೬ ದ್ರೋಣ ಅಥವಾ ಅಳತೆಯು ೪೮ ಸೇರು ನೀರಿನಲ್ಲಿ ಹಾಕಿ ೨ ಆಢಕದಷ್ಟು ಕೆಂಪುಹೊನ್ನೆ ತೊಗಟೆಯನ್ನು ಸೇರಿಸಿ ೧೨ ಸೇರು ಕಷಾಯವು ಉಳಿಯುವಂತೆ ಕಾಯಿಸಿ ಶೋಧಿಸಿದ ಕಷಾಯಕ್ಕೆ ಕೊಡಶಿಗೆ ಬೀಜ, ತ್ರಿಕಟು, ದಾಲ್ಚಿನ್ನಿ, ದೇವದಾರು, ಹರಳಬೇರು, ಎಲವುಸಂಧಿ (ಹಂಸಪಾದಿ), ಜಾಪಾಳದ ತೊಗಟೆ, ಬಾವಂತಿಬೀಜ, ಪಗಡೆತೊಗಟೆ, ನೆಲಗುಳ್ಳದಸಮೂಲ, ಇವುಗಳನ್ನು ಸಮಭಾಗದಿಂದ ಸೇರಿಸಿ ೩ ಪ್ರಸ್ಥದಷ್ಟನ್ನೂ ಅಳತೆಯ ೩ ಸೇರಿನಷ್ಟು ತುಪ್ಪವನ್ನೂ ಸೇರಿಸಿ ಹದವರಿತು ಪಾಕಮಾಡಿದ ತುಪ್ಪವನ್ನು ಕುಷ್ಠರೋಗಿಗೆ ಪ್ರಯೋಗಿಸಿದರೆ ಪಾನದಿಂದ ಧಾತುಗಳಲ್ಲಿರುವ ದೋಷಗಳನ್ನೂ ಅಭ್ಯಂಗದಿಂದ ಚರ್ಮದಲ್ಲಿರುವ ದೋಷಗಳನ್ನೂ ನಿವಾರಿಸಿ ಅಸಾಧ್ಯವಾದ ಕುಷ್ಠರೋಗವನ್ನೂ ನಾಶಮಾಡಿ ಚರ್ಮಕ್ಕೆ ಸ್ವಾಭಾವಿಕ ಬಣ್ಣ ವುಂಟಾಗುತ್ತದೆಯಾಗಿ ಇದಕ್ಕೆ **ನೀಲಘೃತವೆಂದು** ಹೆಸರು.

ತ್ರಿಫಲಾತ್ವಕ್ ತ್ರಿಕಟುಕಂ ಸುರಸಾ ಮದಯನ್ತಿಕಾ |
ವಾಯಸ್ಯಾರಗ್ವಧಾನಾಂ ಚ ತುಲಾಂ ಕುರ್ಯಾತ್ ಪೃಥಕ್‌ಪೃಥಕ್
ಕಾಕಮಾಚ್ಯರ್ಕವರುಣದನ್ತೀಕುಟಜ ಚಿತ್ರಕಾತ್ |
ದಾರ್ವೀನಿದಿಗ್ಧಿಕಾಭ್ಯಾಂ ತು ಪೃಥಗ್ದಶಪಲಂ ತಥಾ ||೩೪||
ತ್ರಿದ್ರೋಣೇಽಪಾಂ ಪಚೇದ್ಯಾವತ್ ಷಟ್‌ಪ್ರಸ್ಥಂ ಪರಿಶೇಷಿತಮ್ |
ಶಕೃದ್ರಸದಧಿಕ್ಷೀರಮೂತ್ರಾಣಾಂ ಪೃಥಗಾಢಕಮ್ ||೩೬||

ತದ್ವದ್ಘೃತಸ್ಯ ತತ್ಸಾಧ್ಯಂ ಭೂನಿಮ್ಬವ್ಯೋಷಚಿತ್ರಕೈಃ ।
ಕರಞ್ಜಫಲನೀಲಿಕಾಶ್ಯಾಮಾವಲ್ಗುಜಪೀಲುಭಿಃ ॥೩೭॥
ನೀಲಿನೀನಿಮ್ಬಕುಸುಮೈಃ ಸಿದ್ಧಂ ಕುಷ್ಠಾಪಹಂ ಘೃತಮ್ ।
ಮ್ರಕ್ಷಣಾದಙ್ಗಸಾವರ್ಣ್ಯಂ ಶ್ವಿತ್ರಾಣಾಂ ಜನಯೇನ್ನೃಣಾಮ್ ॥ ॥೩೮॥
ಭಗನ್ದರಂ ಕ್ರಿಮೀನರ್ಶೋ ಮಹಾನೀಲಂ ನಿಯಚ್ಛತಿ ।

ತ್ರಿಫಲೆ, ದಾಲ್ಚಿನ್ನಿ, ತ್ರಿಕಟು, ತುಳಸೀ, ತೇರಣದಸೊಪ್ಪು (ಎಲವು ಸಂಧಿ, ಮೊಲ್ಲೆ ಎಂದು ಕೆಲವರು) ಕಕ್ಕೆತೊಕ್ಕು ಚಿಗುರು ಇವು ಪ್ರತಿಯೊಂದೂ ೧೦೦ ಪಲಗಳು, ಗಣಿಕೆ, ಎಕ್ಕದಬೇರು, ಮಟ್ಟೆಮೂವು (ಮದಬಸಳೆ), ಜಾಪಾಳದ ತೊಗಟೆ, ಕೊಡಶಿಗೆ ತೊಗಟೆ, ಚಿತ್ರಮೂಲ, ಮರದರಿಶಿನ, ನೆಲಗುಳ್ಳದಸಮೂಲ ಇವು ಪ್ರತಿಯೊಂದೂ ೧೦ ಪಲಗಳು ಇವೆಲ್ಲವನ್ನೂ ಒಟ್ಟುಸೇರಿಸಿ ೩ ದ್ರೋಣ ನೀರಿನಲ್ಲಿ (೬ ದ್ರೋಣ ಅಥವಾ ೪೮ ಸೇರಿನಷ್ಟು) ಹಾಕಿ ಆರು ಪ್ರಸ್ಥ ನಿಲ್ಲುವಂತೆ ಕಷಾಯಮಾಡಿ ಶೋಧಿಸಿದ ಕಷಾಯದೊಡನೆ ಹಸುವಿನ ಸಗಣಿಯ ರಸ, ಮೊಸರು, ಹಾಲು, ಗಂಜಳ, ತುಪ್ಪ ಇವು ಪ್ರತಿಯೊಂದೂ ಒಂದೊಂದು ಆಢಕ (ಅಳತೆಯ ೨ ಸೇರಿನಷ್ಟು) ದಷ್ಟು ಸೇರಿಸಿ ನೆಲಬೇವು, ತ್ರಿಕಟು, ಚಿತ್ರಮೂಲ, ಹೊಂಗೆಬಿತ್ತ, ನೀಲಿಯಸಮೂಲ, ತಿಗಡೆ, ಬಾವಂತಿಬೀಜ, ಬಗಿನಿಬೇರು, ನೀಲಿ ಮತ್ತು ಬೇವಿನ ಹೂವು ಇವುಗಳ ಸಮಭಾಗದ ಕಲ್ಕ ೨ ಪ್ರಸ್ಥದಷ್ಟನ್ನು ಸೇರಿಸಿ ಹದವಾಗಿ ಮಧ್ಯಮಾಗ್ನಿಯಿಂದ ಪಾಕಮಾಡಿ ಶೋಧಿಸಿಟ್ಟುಕೊಳ್ಳಬೇಕು. ಇದನ್ನು ಶ್ವಿತ್ರರೋಗಿಗಳಿಗೆ ಮೈಗೆ ತಿಕ್ಕುತ್ತಾ ಬಂದರೆ ಚರ್ಮವು ಮೊದಲಿನಂತೆಯೇ ಸ್ವಾಭಾವಿಕ ಬಣ್ಣಕ್ಕೆ ಬರುತ್ತದೆ. ಭಗಂದರ, ಕ್ರಿಮಿ ಅರ್ಶಸ್ಸು ಇವುಗಳನ್ನು ನಿವಾರಣೆಮಾಡುತ್ತದೆ. ಇದಕ್ಕೆ ಮಹಾನೀಲಘೃತವೆಂದು ಹೆಸರು.

ಮೂತ್ರಂ ಗವ್ಯಂ ಚಿತ್ರಕವ್ಯೋಷಯುಕ್ತಂ ಸರ್ಪಿಃ ಕುಮ್ಭೇ ಕ್ಷೌದ್ರಯುಕ್ತಂ ಸ್ಥಿತಂ ಹಿ ।
ಪಕ್ಷಾದೂರ್ಧ್ವಂ ಶ್ವಿತ್ರಿಭಿಃ ಪೇಯಮೇತತ್ ಕುರ್ಯಾಚ್ಚಾಸ್ಮಿನ್ ಕುಷ್ಠದಿಷ್ಟಂ ವಿಧಾನಮ್ ॥೩೯॥

ಪೂತೀಕಾರ್ಕಸ್ನುಙ್ನರೇನ್ದ್ರದ್ರುಮಾಣಾಂ ಮೂತ್ರೈಃ ಪಿಷ್ಟಾಃ ಪಲ್ಲವಾಃ ಸೌಮನಾಶ್ಚ ।
ಲೇಪಃ ಶ್ವಿತ್ರಂ ಹನ್ತಿ ದದ್ರೂರ್ವ್ರಣಾಂಶ್ಚ ದುಷ್ಟಾನ್ಯರ್ಶಾಂಸಿ ಸೈಷ ನಾಡೀವ್ರಣಾಂಶ್ಚ ॥೪೦॥

ಅಸ್ಮಾದೂರ್ಧ್ವಂ ನಿಃಸೃತೇ ದುಷ್ಟರಕ್ತೇ ಜಾತಪ್ರಾಣಂ ಸರ್ಪಿಷಾ ಸ್ನೇಹಯಿತ್ವಾ ।
ತೀಕ್ಷ್ಣೈರ್ಯೋಗೈಶ್ಛರ್ದಯಿತ್ವಾ ಪ್ರಗಾಢಂ ಪಶ್ಚಾದ್ದೋಷಂ ನಿರ್ಹರೇಚ್ಚಾಪ್ರಮತ್ತಃ ॥೪೧॥

ದುರ್ವಾನ್ತೋ ವಾ ದುರ್ವಿರಿಕ್ತೋಽಪಿ ವಾ ಸ್ಯಾತ್ ಕುಷ್ಠೀ ದೋಷೈರುದ್ಧತೈರ್ವ್ಯಾಪ್ತದೇಹಃ ।
ನಿಃಸನ್ದಿಗ್ಧಂ ಯಾತ್ಯಸಾಧ್ಯತ್ವಮಾಶು ತಸ್ಮಾತ್ ಕೃತ್ಸ್ನಾನ್ನಿರ್ಹರೇತ್ತಸ್ಯ ದೋಷಾನ್ ॥೪೨॥

ಗೋಮೂತ್ರ, ಚಿತ್ರಮೂಲ ಮತ್ತು ತ್ರಿಕಟುಗಳ ಕಲ್ಕವನ್ನು ತುಪ್ಪ ಬಳಿದು ಪಳಗಿದ ಗುಡಾಣಕ್ಕೆ ತುಂಬಿ ಮೂತ್ರದಷ್ಟೇ ಪ್ರಮಾಣದ ಜೇನುತುಪ್ಪವನ್ನೂ ಸೇರಿಸಿ ಗುಡಾಣದ ಬಾಯಿಗೆ ಶರಾವೆಯನ್ನಿಟ್ಟು ಚೀರುಮಣ್ಣುಮಾಡಿಟ್ಟು ಒಂದು ಪಕ್ಷಕಾಲ ಕಳೆದ ಮೇಲೆ ಶ್ವಿತ್ರರೋಗಿಗೆ ಪ್ರಯೋಗಿಸಿ ಕುಷ್ಠರೋಗಿಗೆ ಮಾಡಬೇಕಾದ ಆಹಾರ ಉಪಚಾರಗಳನ್ನೇ ಆಚರಿಸಬೇಕು. ತವಸ, ಎಕ್ಕ, ಮುಂಡುಗಳ್ಳಿ, ಕಕ್ಕೆ, ಜಾಜಿ ಇವುಗಳ ಚಿಗುರನ್ನು ಗಂಜಳದಲ್ಲಿ ಅರೆದು ಕಲ್ಕಮಾಡಿ ಶ್ವಿತ್ರ, ಕಜ್ಜಿ, ವ್ರಣ, ದುಷ್ಟವ್ರಣ, ನಾಡೀವ್ರಣ ಅರ್ಶೋರೋಗಗಳಿಗೆ ಲೇಪಿಸಿದರೆ ಅವುಗಳೆಲ್ಲಾ ನಿವಾರಣೆಯಾಗುತ್ತವೆ. ಇವುಗಳನ್ನು ಪ್ರಯೋಗಿಸಿ ದುಷ್ಟರಕ್ತವನ್ನು ಸ್ರಾವಮಾಡಿಸಿ ಉಪಚರಿಸಿ ಬಲ ಬಂದಮೇಲೆ ಘೃತಪಾನ ಅಭ್ಯಂಗಗಳಿಂದ ಸ್ನೇಹಕರ್ಮಮಾಡಿಸಿ ಚುರುಕಾದ ವಮನೌಷಧದಿಂದಲೂ ವಿರೇಚನದಿಂದಲೂ ವಿಶೇಷವಾಗಿ ದೋಷಹರಣ ಮಾಡಿಸಬೇಕು. ಕುಷ್ಠರೋಗಿಗಳಿಗೆ ಪದೇ ಪದೇ ವಮನ, ವಿರೇಚನ, ರಕ್ತಮೋಕ್ಷಣಗಳನ್ನು ಮಾಡಿಸಿ ದೋಷಹರಣವಾಗುವಂತೆ ಜಾಗರೂಕರಾಗಿರಬೇಕು. ಅತಿ ಪ್ರಕುಪಿತ ದೋಷಗಳಿಂದ ಪೀಡಿತನಾದ ಕುಷ್ಠರೋಗಿಗೆ ಸರಿಯಾಗಿ ವಮನ ವಿರೇಚನಗಳಿಂದ ದೋಷಹರಣ ಮಾಡದಿದ್ದರೆ ಬಲುಬೇಗ ಅವನ ರೋಗವು ಅಸಾಧ್ಯವಾಗುವ ಕಾರಣ ಅವನ ದೋಷಗಳನ್ನು ಸಂಪೂರ್ಣವಾಗಿ ಹೊರಕ್ಕೆ ಹೊರಡಿಸಬೇಕು.

ಪಕ್ಷಾತ್ ಪಕ್ಷಾತ್ ಛರ್ದನಾನ್ಯಭ್ಯುಪೇಯಾನ್ಮಾಸಾನ್ಮಾಸಾತ್ ಸ್ರಂಸನಂ ಚಾಪಿ ದೇಯಮ್ ।
ಸ್ರಾವ್ಯಂ ರಕ್ತಂ ವತ್ಸರೇ ಹಿ ದ್ವಿರಲ್ಪಂ ನಸ್ಯಂ ದದ್ಯಾಚ್ಚ ತ್ರಿರಾತ್ರಾತ್ರಿರಾತ್ರಾತ್ ॥೪೩॥

ಪಥ್ಯಾವ್ಯೋಷಂ ಸೇಕ್ಷುಜಾತಂ ಸತೈಲಂ ಲೀಢ್ವಾ ಶೀಘ್ರಂ ಮುಚ್ಯತೇ ಕುಷ್ಠರೋಗಾತ್ ।
ಧಾತ್ರೀಪಥ್ಯಾಕ್ಷೋಪಕುಲ್ಯಾವಿಡಙ್ಗಾನ್ ಕ್ಷೌದ್ರಾಜ್ಯಾಭ್ಯಾಮೇಕತೋ ವಾ ವಲಿಹ್ಯಾತ್ ॥೪೪॥

ಪೀತ್ವಾ ಮಾಸಂ ವಾ ಪಲಾಂಶಾಂ ಹರಿದ್ರಾಂ ಮೂತ್ರೇಣಾನ್ತಂ ಪಾಪರೋಗಸ್ಯ ಗಚ್ಛೇತ್ ।
ಏವಂ ಪೇಯಶ್ಚಿತ್ರಕಃ ಶ್ಲಕ್ಷ್ಣಪಿಷ್ಟಃ ಪಿಪ್ಪಲ್ಯೋ ವಾ ಪೂರ್ವವನ್ಮೂತ್ರಯುಕ್ತಾಃ ॥೪೫॥

ತದ್ವತ್ ತಾರ್ಕ್ಷ್ಯಂ ಮಾಸಮಾತ್ರಂ ಚ ಪೇಯಂ ತೇನಾಜಸ್ರಂ ದೇಹಮಾಲೇಪಯೇಚ್ಚ ।
ಅರಿಷ್ಟತ್ವಕ್ ಸಪ್ತಪರ್ಣೀ ಚ ತುಲ್ಯಾ ಲಾಕ್ಷಾಮುಸ್ತಂ ಪಞ್ಚಮೂಲ್ಯೌ ಹರಿದ್ರೇ ॥೪೬॥

ಮಞ್ಜಿಷ್ಠಾ ಕೃಷ್ಣಾ ವಾಸಕೋ ದೇವದಾರು ಪಥ್ಯಾವಹ್ನೀ ವ್ಯೋಷಧಾತ್ರೀವಿಡಙ್ಗಮ್ ।
ಸಾಮಾನ್ಯಾಂಶಂ ಯೋಜಯಿತ್ವಾ ವಿಡಙ್ಗೈಶ್ಚೂರ್ಣಂ ಕೃತ್ವಾ ತತ್ಪಲೋನ್ಮಾನಮಶ್ನನ್ ॥೪೭॥

ಕುಷ್ಠಾಜ್ಜನ್ತುರ್ಮುಚ್ಯತೇ ತ್ರೈಫಲಂ ವಾ ಸರ್ಪಿರ್ದ್ರೋಣಂ ವ್ಯೋಷಯುಕ್ತಂ ಚ ಯುಞ್ಜ್ಯಾ ।
ಗೋಮೂತ್ರದ್ರೋಣಸಿದ್ಧೇಽಕ್ಷಪೀಡೇ ಸಿದ್ಧಂ ಸರ್ಪಿರ್ನಾಶಯೇಚ್ಚಾಪಿ ಕುಷ್ಠಮ್ ॥೪೮॥

ಆರಗ್ವಧೇ ಸಪ್ತಪರ್ಣೇ ಪಟೋಲೇ ಸವೃಕ್ಷಕೇ ನಕ್ತಮಾಲೇ ಸನಿಮ್ಬೇ ।
ಜೀರ್ಣಂ ಪಕ್ವಂ ತದ್ಧರಿದ್ರಾದ್ವಯೇನ ಹನ್ಯಾತ್ ಕುಷ್ಠಂ ಮುಷ್ಕಕೇ ಚಾಪಿ ಸರ್ಪಿಃ ॥೪೯॥

ಕುಷ್ಠರೋಗಿಗಳಿಗೆ ಪ್ರತಿಪಕ್ಷದಲ್ಲೂ ಒಂದು ಸಾರಿ ವಮನವನ್ನೂ, ತಿಂಗಳಿಗೆ ಒಂದು ಸಾರಿ ವಿರೇಚನವನ್ನೂ ವರ್ಷಕ್ಕೆ ಎರಡು ಸಾರಿ ರಕ್ತಮೋಕ್ಷಣವನ್ನೂ ಮೂರು ದಿನಗಳಿಗೊಂದು ಸಾರಿ ನಸ್ಯಕರ್ಮವನ್ನೂ ಮಾಡಿಸಬೇಕು. ಅಣಿಲೆಸಿಪ್ಪೆ, ತ್ರಿಕಟು, ಬೆಲ್ಲ ಇವುಗಳನ್ನು ಅರೆದು ಕಲ್ಕಮಾಡಿ ಎಳ್ಳೆಣ್ಣೆಯಲ್ಲಿ ಕಲೆಸಿ ನೆಕ್ಕಿಸಿದರೆ ಕುಷ್ಠರೋಗ ನಿವಾರಣೆಯಾಗುತ್ತದೆ ; ಅಥವಾ ತ್ರಿಫಲೆ, ಹಿಪ್ಪಲಿ, ವಿಡಂಗಗಳ ಚೂರ್ಣವನ್ನು ಜೇನು ತುಪ್ಪ ಮತ್ತು ತುಪ್ಪಗಳೊಡನೆ ಮಿಶ್ರಮಾಡಿ ನೆಕ್ಕಿಸಬೇಕು. ಒಂದು ಪಲ ಅರಿಶಿನವನ್ನು ಗೋಮೂತ್ರದಿಂದ ಅರೆದು ಕಲ್ಕಮಾಡಿ ಗೋಮೂತ್ರದಲ್ಲಿ ಕದರಿ ಒಂದು ಮಾಸ ಪೂರ್ತಿ ಯಾಗಿ ಪಾನಮಾಡಿಸಿದರೆ ಪಾಪರೋಗವು (ಕುಷ್ಠವು) ನಿವಾರಣೆಯಾಗುತ್ತದೆ. ಹೀಗೆಯೇ ಚಿತ್ರಮೂಲದ ತೊಗಟೆಯನ್ನೂ, ಹಿಪ್ಪಲಿಯನ್ನೂ ರಸಾಂಜನವನ್ನೂ ಗೋ ಮೂತ್ರದಲ್ಲಿ ಅರೆದು ಕದರಿಕುಡಿಸಿ ಇದರ ಕಲ್ಕವನ್ನುಮೈಗೆ ಸದಾ ಲೇಪಿಸುತ್ತಿರಬೇಕು. ಇವು ಪ್ರತಿಯೊಂದೂ ೧ ಪಲದಷ್ಟಿರಬೇಕು. ೧ ಮಾಸದವರೆಗೂ ಗೋಮೂತ್ರದಲ್ಲಿ ಕದರಿ ಕುಡಿಸಬೇಕೆಂದು ತಿಳಿಯುವುದು. ಬೇವಿನತೊಗಟೆ, ಏಳಿಲೆಗದ (ಮದ್ದಾಲೆಯ) ತೊಗಟೆ ಇವೆರಡೂ ಸಮಭಾಗ, ಅರಗು, ಕೊನ್ನಾರಿಗೆಡ್ಡೆ, ದಶಮೂಲ, ಅರಿಶಿನ, ಮರದರಿಶಿನ, ಮಂಜಿಷ್ಠೆ, ತಾರೆಕಾಯಿಸಿಪ್ಪೆ, ಆಡುಸೋಗೆಯ ಸೊಪ್ಪು, ದೇವದಾರು, ಅಣಿಲೆಕಾಯಿ ಸಿಪ್ಪೆ, ಚಿತ್ರಮೂಲ, ತ್ರಿಕಟು, ಬೀಜ ತೆಗೆದ ನೆಲ್ಲೀಕಾಯಿ, ವಿಡಂಗ ಇವೆಲ್ಲವನ್ನೂ ಸಮ ಪ್ರಮಾಣದಿಂದ ಚೂರ್ಣಮಾಡಿಟ್ಟುಕೊಂಡು ಪ್ರತಿದಿನವೂ ಈ ಚೂರ್ಣ ೧ ಪಲದಷ್ಟನ್ನು ಗೋಮೂತ್ರದಲ್ಲಿ ಕದರಿ ೧ ತಿಂಗಳು ಪೂರ್ತಾ ಕುಡಿಸಿದರೆ ಕುಷ್ಠರೋಗವು ನಿವಾರಣೆ ಯಾಗುತ್ತದೆ. ೧ ದ್ರೋಣ ಪ್ರಮಾಣ ತ್ರಿಫಲಾ ಘೃತಕ್ಕೆ ತ್ರಿಕಟುಚೂರ್ಣವನ್ನು ಮಿಶ್ರ ಮಾಡಿ ಸೇವಿಸುತ್ತಾ ಬಂದರೆ ಕುಷ್ಠರೋಗವು ನಿವಾರಿಸಲ್ಪಡುತ್ತದೆ. ೧ ದ್ರೋಣ ಗೋಮೂತ್ರದಲ್ಲಿ ಈಶ್ವರೀ ಕಲ್ಕವನ್ನೂ ತುಪ್ಪವನ್ನೂ ಸೇರಿಸಿ ಯಥಾವಿಧಿಯಾಗಿ ತಯಾ ರಿಸಿದ ಘೃತವನ್ನು ಪಾನಮಾಡಿಸಿದರೆ ಕುಷ್ಠಹರವು. ಕಕ್ಕೆ, ಏಳಿಲೆಗ, ಕಹಿಪಡವಲ, ಕೊಡಶಿಗೆ, ಹೊಂಗೆ, ಬೇವು, ಬಿಳಿಬೂರಗ ಇವುಗಳ ತೊಗಟೆಗಳ ಕಷಾಯದೊಡನೆ ಅರಿ ಶಿನ ಮತ್ತು ಮರದರಿಶಿನಗಳ ಕಲ್ಕವನ್ನೂ ಸೇರಿಸಿ ತಯಾರಿಸಿದ ಘೃತವನ್ನು ಪ್ರಯೋಗಿಸಿ ದರೆ ವಿಶೇಷವಾಗಿ ಪಿತ್ತಕುಷ್ಠರೋಗವು ನಿವಾರಣೆಯಾಗುತ್ತದೆ.

ರೋಧ್ರಾರಿಷ್ಟಂ ಪದ್ಮಕಂ ರಕ್ತಸಾರಃ ಸಪ್ತಾಹ್ವಾಕ್ಷೌ ವೃಕ್ಷಕೋ ಬೀಜಕಶ್ಚ ।
ಯೋಜ್ಯಾಃ ಸ್ನಾನೇ ದಹ್ಯಮಾನಸ್ಯ ಜನ್ತೋಃ ಪೇಯಾ ವಾ ಸ್ಯಾತ್ ಕ್ಷೌದ್ರಯುಕ್ತಾ ತ್ರಿಭಣ್ಡೀ ॥೫೦॥
ಖಾದೇತ್ ಕುಷ್ಠೀಮಾಂಸಶಾತೇ ಪುರಾಣಾನ್ ಮುದ್ಗಾನ್ ಸಿದ್ಧಾನ್ ನಿಮ್ಬತೋಯೇ ಸತೈಲಾನ್ ।
ನಿಮ್ಬಕ್ವಾಥಂ ಜಾತಸತ್ವಃ ಪಿಬೇದ್ವಾ ಕ್ವಾಥಂ ವಾರ್ಕಾಲರ್ಕಸಪ್ತಚ್ಛದಾನಾಮ್ ॥೫೧॥
ಜಗ್ಧೇಷ್ವಙ್ಗೇಷ್ವಶ್ವಮಾರಸ್ಯ ಮೂಲಂ ಲೇಪೋ ಯುಕ್ತಃ ಸ್ಯಾದ್ವಿಡಙ್ಗೈಃ ಸಮೂತ್ರೈಃ ।
ಮೂತ್ರೈಶ್ಚೈನಂ ಸೇಚಯೇದ್ಭೋಜಯೇಚ್ಚ ಸರ್ವಾಹಾರಾನ್ ಸಂಪ್ರಯುಕ್ತಾನ್ ವಿಡಙ್ಗೈಃ ॥೫೨॥
ಕಾರಞ್ಜಂ ವಾ ಸಾರ್ಷಪಂ ವಾ ಕ್ಷತೇಷು ಕ್ಷೇಪ್ಯಂ ತೈಲಂ ಶಿಗ್ರುಕೋಶಾಮ್ರಯೋರ್ವಾ ।
ಪಕ್ವಂ ಸರ್ವೈರ್ವಾ ಕಟೂಷ್ಣೈಃ ಸತಿಕ್ತೈಃ ಶೇಷಂ ಚ ಸ್ಯಾದ್ದುಷ್ಟವತ್ಸಂವಿಧಾನಮ್ ॥೫೩॥

ರೋಧ್ರಾರಿಷ್ಟಕ್ಕೆ ಸೇರುವ ದ್ರವ್ಯಗಳು : ಪದ್ಮಕ, ರಕ್ತಚಂದನ, ಮದ್ಧಾಲೆ, ತಾರೆ, ಕೊಡಶಿಗೆ, ಮಾದಳ ಇವುಗಳನ್ನು ನೀರಿನಲ್ಲಿ ಕುದಿಸಿ ಆರಿಸಿ ಪಿತ್ತಾಧಿಕ ಕುಷ್ಠದಲ್ಲಿ ಮೈ ಉರಿಯುವಂತೆ ತೋರಿದಾಗ ಸ್ನಾನಮಾಡಬೇಕು. ತಿಗಡೆಯ ಚೂರ್ಣ ವನ್ನು ಜೇನುತುಪ್ಪದಲ್ಲಿ ಕಲೆಸಿ ನೆಕ್ಕಬೇಕು. ಕುಷ್ಠರೋಗಿಯ ಅಂಗಗಳಿಂದ ಮಾಂಸ ಕಿತ್ತು ಹರಿದು ಹೋಗುತ್ತಿದ್ದರೆ ಬೇವಿನ ಕಷಾಯದಲ್ಲಿ ಹಳೇ ಹೆಸರನ್ನು ಬೇಯಿಸಿ ತಿಲ ತೈಲ ಮಿಶ್ರಮಾಡಿ ತಿನ್ನಬೇಕು. ಬಲವುಂಟಾದ ಮೇಲೆ ಬೇವಿನ ಕಷಾಯವನ್ನಾದರೂ ಕುಡಿಯಬೇಕು. ಕೈಕಾಲು ಬೆರಳು ಮೊದಲಾದ ಅವಯವಗಳು ಕ್ರಿಮಿಗಳಿಂದ ತಿನ್ನಲ್ಪ ಟ್ಟದ್ದರೆ ಕಣಿಗಲೆಬೇರಿನತೊಗಟೆ ಮತ್ತು ವಿಡಂಗಗಳನ್ನು ಗೋಮೂತ್ರದಿಂದ ಅರೆದು ಲೇಪಿಸಬೇಕು. ಗೋಮೂತ್ರವನ್ನು ಮೈಮೇಲೆ ಚುಮುಕಿಸಬೇಕು. ವಿಡಂಗ ಚೂರ್ಣ ವನ್ನು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಬೇಕು, ವ್ರಣಗಳ ಮೇಲೆ ಹೊಂಗೆ, ಸಾಸಿವೆ, ನುಗ್ಗೆ, ಕುಸುಬೆ ಎಣ್ಣೆಗಳನ್ನು ಬಳಿಯಬೇಕು, ಅಥವಾ ಮೆಣಸು ಮೊದಲಾದ ಕಟುರಸ ದ್ರವ್ಯಗಳನ್ನೂ ಬೇವು ಮೊದಲಾದ ಕಹಿರಸ ದ್ರವ್ಯಗಳನ್ನೂ ಸೇರಿಸಿ ತಯಾರಿಸಿದ ತೈಲವನ್ನು ಲೇಪಿಸಬೇಕು. ಉಳಿದ ಚಿಕಿತ್ಸೆಗಳನ್ನು ದುಷ್ಟವ್ರಣಗಳಿಗೆ ಮಾಡುವಂತೆಯೇ ನಡೆಸಬೇಕು (ಅಂದರೆ ಹೊಂಗೆ, ಸಾಸಿವೆ, ನುಗ್ಗೆ, ಕುಸುಬೆಬೀಜ, ಹೊನ್ನೆ ಇವುಗಳ ತೈಲಗಳನ್ನು ಸ್ವಾಭಾವಿಕವಾಗಿ ದುಷ್ಟವ್ರಣಗಳಿಗೆ ಪ್ರಯೋಗಿಸುತ್ತಾರೆಂದು ತಿಳಿಯಬೇಕು.

ಸಪ್ತಪರ್ಣಕರಞ್ಜಾರ್ಕಮಾಲತೀಕರವೀರಜಮ್ ।
ಸ್ನುಹೀಶಿರೀಷಯೋರ್ಮೂಲಂ ಚಿತ್ರಕಾಸ್ಫೋತಯೋರಪಿ ॥೫೪॥
ವಿಷಲಾಙ್ಗಲವಜ್ರಾಖ್ಯಕಾಸೀಸಾಲಮನಃ ಶಿಲಾಃ ।
ಕರಞ್ಜಬೀಜಂ ತ್ರಿಕಟು ತ್ರಿಫಲಾಂ ರಜನೀದ್ವಯಮ್ ॥೫೫॥

ಸಿದ್ಧಾರ್ಥಕಾರ್ಕ ವಿಡಙ್ಗಾನಿ ಪ್ರಪುನ್ನಾಡಂ ಚ ಸಂಹರೇತ್ |
ಮೂತ್ರಪಿಷ್ಟೈಃ ಪಚೇದ್ದೇತೈಸ್ತೈಲಂ ಕುಷ್ಠವಿನಾಶನಮ್ ||೫೬||
ಏತದ್ವಜ್ರಕಮಭ್ಯಙ್ಗಾನ್ನಾಡೀದುಷ್ಟವ್ರಣಾಪಹಮ್ |
ಸಿದ್ಧಾರ್ಥಕಃಕರಞ್ಜೌ ದ್ವೌ ದ್ವೇ ಹರಿದ್ರೇ ರಸಾಞ್ಜನಮ್ ||೫೭||
ಕುಟಜಶ್ಚ ಪ್ರಪುನ್ನಾಡಸಪ್ತಪರ್ಣೌ ವೃಗಾದನೀ |
ಲಾಕ್ಷಾ ಸರ್ಜರಸೋಽರ್ಕಶ್ಚ ಸಾಸ್ಫೋತಾರಗ್ವಧೌ ಸ್ನುಹೀ ||೫೮||
ಶಿರೀಷಸ್ತುವರಾಖ್ಯಸ್ತು ಕುಟಜಾರುಷ್ಕರೌ ವಚಾ |
ಕುಷ್ಠಂ ಕ್ರಿಮಿಘ್ನಂ ಮಞ್ಜಿಷ್ಠಾ ಲಾಙ್ಗಲೀ ಚಿತ್ರಕಂ ತಥಾ || ||೫೯||
ಮಾಲತೀ ಕಟುತುಮ್ಬಾ ಚ ಗನ್ಧಾಹ್ವಾ ಮೂಲಕಂ ತಥಾ |
ಸೈಂಧವಂ ಕರವೀರಶ್ಚ ಗೃಹಧೂಮಂ ವಿಷಂ ತಥಾ ||೬೦||
ಕಮ್ಪಿಲ್ಲಕಂ ಸಸಿನ್ದೂರಂ ತೇಜೋಹ್ವಾತುತ್ಥಕಾಷ್ಟಯೋ |
ಸಮಭಾಗಾನಿ ಸರ್ವಾಣಿ ಕಲ್ಕಪೇಷ್ಯಾಣಿ ಕಾರಯೇತ್ ||೬೧||
ಗೋಮೂತ್ರಂ ದ್ವಿಗುಣಂ ದದ್ಯಾತ್ತಿಲತೈಲಾಚ್ಚತುರ್ಗುಣಮ್ |
ಕಾರಞ್ಜಂ ವಾ ಮಹಾವೀರ್ಯಂ ಸಾರ್ಷಪಂ ವಾ ಮಹಾಗುಣಮ್ ||೬೨||
ಅಭ್ಯಙ್ಗಾತ್ ಸರ್ವಕುಷ್ಠಾನಿ ಗಣ್ಡಮಾಲಾಭಗನ್ದರಾನ್ |
ನಾಡೀದುಷ್ಟವ್ರಣಾನ್ ಘೋರಾನ್ ನಾಶಯೇನ್ನಾತ್ರ ಸಂಶಯಃ ||೬೩||

ಮಹಾವಜ್ರಕ ತೈಲವು : ಮದ್ಧಾಲೆ, ಹೊಂಗೆ, ಎಕ್ಕದಬೇರು, ಜಾಜಿಸೊಪ್ಪು, ಕಣಿಗಲೆಸೊಪ್ಪು, ಮುಂಡುಗಳ್ಳಿಯಬೇರು, ಬಾಗೆಯಬೇರು, ಚಿತ್ರಮೂಲ, ಸೊಗದೆ, ವತ್ಸನಾಭಿ, ಕೋಳಿಕುಟುಮನಗೆಡ್ಡೆ, ಮುಂಡುಗಳ್ಳಿಯಬೇರು, ಅನ್ನಭೇದಿ, ಅರಿದಳ, ಮಣಶಿಲೆ, ಹೊಂಗೆಬೀಜ, ತ್ರಿಕಟು, ತ್ರಿಫಲೆ, ಅರಿಶಿನ, ಮರದರಿಶಿನ, ಬಿಳಿಯಸಾಸಿವೆ, ವಿಡಂಗ, ಚಗತೆಯಬೀಜ ಇವುಗಳನ್ನೆಲ್ಲಾ ಸಮಭಾಗದಲ್ಲಿ ಸೇರಿಸಿ ಗೋಮೂತ್ರದಿಂದ ಅರೆದ ಕಲ್ಕವನ್ನು ಸೇರಿಸಿ ತಯಾರಿಸಿದ ತೈಲಕ್ಕೆ ವಜ್ರಕತೈಲವೆಂದು ಹೆಸರು. ಇದನ್ನು ಅಭ್ಯಂಗಮಾಡಿದರೆ ನಾಡೀವ್ರಣ ದುಷ್ಟವ್ರಣಗಳು ನಾಶವಾಗುತ್ತವೆ. ಬಿಳಿಯಸಾಸಿವೆ, ಹೊಂಗೆಯಬೀಜ, ಅರಿಶಿನ, ಮರದರಿಶಿನ, ಕೊಡಶಿಗೆಬೀಜ, ರಸಾಂಜನ, ಚಗತೆಯಬೀಜ, ಮದ್ಧಾಲೆತೊಗಟೆ, ದಾಸವಾಳಬೇರು, ಅರಗು, ರಾಳು, ಎಕ್ಕದಬೇರು, ಸೊಗದೆಬೇರು, ಕಕ್ಕೆಚಿಗುರು, ಮುಂಡುಗಳ್ಳಿಚಿಗುರು, ಬಾಗೆಬೀಜ, ತುವರಕಬೀಜ (ತೊಗಟೆ), ಕೊಡಶಿಗೆ ತೊಗಟೆ, ಗೇರುಬೀಜ, ಬಜೆ, ಚಂಗಲ್‌ಕೋಷ್ಠ, ವಿಡಂಗ, ಮಂಜಿಷ್ಠೆ, ಕೋಳಿಕುಟುಮನ ಗೆಡ್ಡೆ, ಚಿತ್ರಮೂಲ, ಸೈಂಧವ, ಕಣಿಗಲೆಬೇರಿನತೊಗಟೆ, ಜಾಜಿಸೊಪ್ಪು, ಗಂಧಕ, ಮೂಲಂಗಿಬೀಜ, ಇಲ್ಲಣ, ವತ್ಸನಾಭಿ, ಕಪಿಲೆಹಿಟ್ಟು, ಚಂದ್ರ, ಗಂಗುಂಡೆಬೀಜ, ಮೈಲ್ ತುತ್ತ ಇವುಗಳ ಸಮಭಾಗವನ್ನು ಸೇರಿಸಿದ ಕಲ್ಕದ ೪ ರಷ್ಟು ತಿಲತೈಲವನ್ನೂ ತೈಲದ ಎರಡರಷ್ಟು ಗೋಮೂತ್ರವನ್ನೂ (ಅಂದರೆ ದ್ರವವಾದಕಾರಣ ಪರಿಭಾಷೆಗೆ ಅನುಸಾರ ವಾಗಿ ದ್ವಿಗುಣವಿರಬೇಕು. ಒಟ್ಟಿನಲ್ಲಿ ತೈಲದ ನಾಲ್ಕರಷ್ಟು ಗೋಮೂತ್ರವಿರಬೇಕು).

ಸೇರಿಸಿ ತೈಲಪಾಕವಿಧಾನದಿಂದ ತಯಾರಿಸಬೇಕು. ಮಹಾವೀರ್ಯವತ್ತಾದ ಹೊಂಗೆ ಎಣ್ಣೆಯನ್ನು ಉಪಯೋಗಿಸಬೇಕೆಂದು ಕೆಲವರೂ, ಮಹಾಗುಣಕರವಾದ ಸಾಸಿವೆ ಎಣ್ಣೆಯನ್ನು ಉಪಯೋಗಿಸಬೇಕೆಂದು ಮತ್ತೆ ಕೆಲವರೂ ಅಭಿಪ್ರಾಯಪಡುತ್ತಾರೆ. ಈ ರೀತಿ ತಯಾರಿಸಿದ ತೈಲಕ್ಕೆ ಮಹಾವಜ್ರಕತೈಲವೆಂದು ಹೆಸರು. ಮಹಾಗುಣಕರವಾದದ್ದು. ಇದರ ಅಭ್ಯಂಗದಿಂದ ಸಕಲವಿಧಗಳಾದ ಕುಷ್ಠರೋಗಗಳೂ, ಗಂಡಮಾಲೆ, ಭಗಂದರ, ನಾಡೀವ್ರಣ, ದುಷ್ಟವ್ರಣ ಮೊದಲಾದ ಮಹಾಭಯಂಕರ ಚರ್ಮವ್ಯಾಧಿಗಳೂ ನಾಶವಾಗುತ್ತವೆ. ಇದರಲ್ಲಿ ಸಂದೇಹವೇ ಇಲ್ಲ.

ಪಿತ್ತಾವಾಪ್ಯೈರ್ಮೂತ್ರಪಿಷ್ಟೈಸ್ತೈಲಂ ಲಾಕ್ಷಾದಿಕೈಃ ಕೃತಮ್ ||೬೪||
ಸಪ್ತಾಹಂ ಕಟುಕಾಲಾಬ್ವಾಂ ನಿದಧೀತ ಚಿಕಿತ್ಸಕಃ |
ಪೀತವನ್ತಂ ತತೋ ಮಾತ್ರಾಂ ತೇನಾಭ್ಯಕ್ತಂ ಚ ಮಾನವಮ್ ||೬೫||
ಶೋಷಯೇದಾತಪೇ ತಸ್ಯ ದೋಷಾ ಗಚ್ಛನ್ತಿ ಸರ್ವಶಃ |
ಸ್ರುತದೋಷಂ ಸಮುತ್ಥಾಪ್ಯಂ ಸ್ನಾತಂ ಖದಿರವಾರಿಣಾ ||೬೬||
ಯವಾಗೂಂ ಪಾಯಯೇದೇನಂ ಸಾಧಿತಾಂ ಖದಿರಾಮ್ಬುನಾ |

ಅಂತಃಶೋಧನ ವಿಧಾನ : ಗೋಪಿತ್ತವನ್ನು ಗೋಮೂತ್ರದಿಂದ ಅರೆದು ಅದರ ೪ ರಷ್ಟು ತಿಲತೈಲವನ್ನೂ ಅದರ ೪ ರಷ್ಟು ಗೋಮೂತ್ರವನ್ನೂ ಸೇರಿಸಿ ಪ್ರತೀವಾಪಮಾಡಿ ತಯಾರಿಸಿದ ತೈಲವನ್ನು ಶೋಧಿಸಿ ಕಹಿಸೋರೆಯಬುರುಡೆಯಲ್ಲಿ ತುಂಬಿ ಏಳು ದಿನಗಳ ಮೇಲೆ ರೋಗಿಗೆ ೧ ಕರ್ಷ ಪ್ರಮಾಣದಷ್ಟು ತೈಲವನ್ನು ಕುಡಿಸಿ ಆ ತೈಲವನ್ನೇ ರೋಗಿಯ ದೇಹದಮೇಲೆ ಬಳಿದು ಬಿಸಿಲಿನಲ್ಲಿ ನಿಲ್ಲಿಸಿ ತೈಲವು ಹೀರುವಂತೆ ಮಾಡಲು ಪ್ರಕುಪಿತದೋಷಗಳು ಶರೀರದ ಮೇಲಕ್ಕೂ ಅಡ್ಡಲಾಗಿಯೂ ನುಗ್ಗುತ್ತವೆ. ಅನಂತರ ವಮನ ವಿರೇಚನಗಳಿಂದ ದೋಷಹರಣಮಾಡಿ ಕಗ್ಗಲಿ ಕಷಾಯದಿಂದ ಅಂದರೆ ಷಡಂಗಪಾನೀಯ ವಿಧಾನದಂತೆ ಕಾಯಿಸಿದ ನೀರಿನಿಂದ ಸ್ನಾನಮಾಡಿಸಿ ಕಗ್ಗಲಿ ಕಷಾಯದಿಂದ ತಯಾರಿಸಿದ ಯವಾಗುವನ್ನು (ಗಂಜಿಯನ್ನು) ಕುಡಿಸಬೇಕು. (ಲಾಕ್ಷಾ ಸರ್ಜರಸೇತ್ಯಾದಿ ದ್ರವ್ಯಕಲ್ಕವೆಂದರ್ಥ)

ಏವಂ ಸಂಶೋಧನೇ ವರ್ಗೇ ಕುಷ್ಠಘ್ನೇಷೌಧೇಷು ಚ ||೬೭||
ಕುರ್ಯಾತ್ ತೈಲಾನಿ ಸರ್ಪಿಂಷಿ ಪ್ರದೇಹೋದ್ಘರ್ಷಣಾನಿ ಚ |
ಪ್ರಾತಃ ಪ್ರಾತಶ್ಚ ಸೇವೇತ ಯೋಗಾನ್ ವೈರೇಚನಾನ್ ಶುಭಾನ್ ||೬೮||
ಪಞ್ಚ ಷಟ್ ಸಪ್ತಚಾಷ್ಟೌವಾಯ್ಯೈರುತ್ಥಾನಂ ನ ಗಚ್ಛತಿ |
ಕಾರಭಂ ವಾ ಪಿಬೇನ್ಮೂತ್ರಂ ಜೀರ್ಣೇ ತತ್ ಕ್ಷೀರಭೋಜನಮ್ ||೬೯||
ಜಾತಸತ್ವಾನಿ ಕುಷ್ಠಾನಿ ಮಾಸೈಃ ಷಡ್ಭಿರಪೋಹತಿ |

ಇದೇ ರೀತಿಯಲ್ಲಿ ಶೋಧನಗಣದ್ರವ್ಯಗಳಿಂದ ಕುಷ್ಠಹರ ದ್ರವ್ಯಗಳಿಂದ ತಯಾರಿಸಿದ ತೈಲಗಳಿಂದಲೂ, ಘೃತಗಳಿಂದಲೂ, ಕುಷ್ಠರೋಗಿಗೆ ಲೇಪವನ್ನೂ, ಉದ್ಘರ್ಷಣ (ಗಟ್ಟಿಯಾಗಿ ತಿಕ್ಕುವುದು)ವನ್ನೂ ಮಾಡಬೇಕು. ಶುಭಕರಗಳಾದ ವಿರೇಚನಾ

ಷಧಗಳನ್ನು ಪ್ರತಿದಿನ ಪ್ರಾತಃಕಾಲದಲ್ಲಿ ಕುಡಿಸಿ ಅವುಗಳಿಂದ ೫, ೬, ೭, ೮ ಸಾರಿಗಿಂತ ಹೆಚ್ಚಾಗಿ ಮಲಪ್ರವರ್ತನವಾಗಕೂಡದು (ಅಂದರೆ ಅಷ್ಟುವೇಳೆಗಳಿಗಿಂತಲೂ ಹೆಚ್ಚು ಸಾರಿ ಮಲವಿಸರ್ಜನೆಯಾದರೆ ರೋಗಿಗೆ ಬಲಹಾನಿಯುಂಟಾದೀತೆಂಬ ಭಯವು) ಅನಂತರ ಒಂಟೆಯ ಮೂತ್ರವನ್ನು ಪಾನಮಾಡಿಸಿ ಅದು ಜೀರ್ಣಿಸಿದಮೇಲೆ ಹಾಲು ಅನ್ನವನ್ನು ಭೋಜನಮಾಡಿಸಬೇಕು. ಈ ರೀತಿಯಾಗಿ ಉಪಚರಿಸಿದರೆ ಬೇರು ಬಿಟ್ಟು ದೃಢವಾಗಿರುವ ಕುಷ್ಠರೋಗವು ಆರುಮಾಸದಲ್ಲಿ ನಿವಾರಣೆಯಾಗುತ್ತದೆ.

ದಿದೃಕ್ಷುರನ್ತಂ ಕುಷ್ಠಸ್ಯ ಖದಿರಂ ಕುಷ್ಠಪೀಡಿತಃ ||೭೦||
ಸರ್ವಥೈವ ಪ್ರಯುಞ್ಜೀತ ಸ್ನಾನಪಾನಾಶನಾದಿಷು |
ಯಥಾ ಹನ್ತಿ ಪ್ರವೃದ್ಧತ್ವಾತ್ ಕುಷ್ಠಮಾತುರಮೋಜಸಾ ||೭೧||
ತಥಾ ಹನ್ತ್ಯುಪಯುಕ್ತಸ್ತು ಖದಿರಃ ಕುಷ್ಠಮೋಜಸಾ |

ಕುಷ್ಠರೋಗಿಯು ಕುಷ್ಠನಾಶವಾಗಲು ಇಚ್ಛೆಪಟ್ಟರೆ ಸ್ನಾನಪಾನ ಆಹಾರಗಳನ್ನು ಸರ್ವಪ್ರಕಾರದಿಂದಲೂ ಕಗ್ಗಲಿ ಕಷಾಯವನ್ನು ಮಿಶ್ರಮಾಡಿಯೇ ಸೇವಿಸಬೇಕು. ಕುಷ್ಠರೋಗವು ವೃದ್ಧಿಹೊಂದಿ ಬಲಗೊಂಡು ರೋಗಿಯನ್ನು ಕೊಲ್ಲುವಂತೆಯೇ ಸಕಲವಿಧದಿಂದಲೂ ಪ್ರಯೋಗಿಸಲ್ಪಟ್ಟ ಖದಿರವಿಧಾನವು ತನ್ನ ಪ್ರತಾಪದಿಂದ ಕುಷ್ಠ ರೋಗವನ್ನು ನಾಶಮಾಡುತ್ತದೆ.

ನೀಚರೋಮನಖೋಽಶ್ರಾನ್ತೋ ಹಿತಾಶೀ ಔಷಧತತ್ಪರಃ |
ಯೋಷಿನ್ಮಾಂಸ ಸುರಾವರ್ಜೀ ಕುಷ್ಠೀ ಕುಷ್ಠಮಪೋಹತಿ ||೭೧||

ಕುಷ್ಠರೋಗಿಯು ತಲೆಕೂದಲು ಗಡ್ಡಮೀಸೆಗಳು ಉಗುರುಗಳು ಉದ್ದವಾಗಿ ಬೆಳೆಯದಂತೆ ಆಗಾಗ ಅವುಗಳನ್ನು ಕತ್ತರಿಸಿಕೊಳ್ಳುತ್ತಿರಬೇಕು. ಹಿತಾಹಾರ, ಹಿತೌಷಧಗಳನ್ನು ಸೇವಿಸಲು ಉದಾಸೀನನಾಗಿರಬಾರದು. (ಕೆಲವರು ಜಿತೇಂದ್ರಿಯನಾಗಿರಬೇಕೆಂದು ಅರ್ಥಮಾಡುತ್ತಾರೆ). ಸ್ತ್ರೀಸಂಗ, ಮಾಂಸಭಕ್ಷಣ, ಮದ್ಯಪಾನಗಳನ್ನು ತ್ಯಾಗಮಾಡಿದರೆ ಕುಷ್ಠರೋಗದಿಂದ ನಿವಾರಣೆಹೊಂದುತ್ತಾನೆ.

ಇತಿ ಶ್ರೀಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಕುಷ್ಠಚಿಕಿತ್ಸಾನಾಮಕ ನವಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕಭಾಷಾವಿವೃತಿಃ

ದಶಮೋऽಧ್ಯಾಯಃ

ಅಥಾತೋ ಮಹಾಕುಷ್ಠಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಮಹಾಕುಷ್ಠ ಚಿಕಿತ್ಸೆಯನ್ನು ವಿವರಿಸುತ್ತೇವೆ. ಹಿಂದಿನ ಅಧ್ಯಾಯದಲ್ಲಿ ಚರ್ಮರಕ್ತಗಳನ್ನು ಮಾತ್ರ ವ್ಯಾಪಿಸಿರುವ ಕ್ಷುದ್ರಕುಷ್ಠಗಳ ಚಿಕಿತ್ಸೆಯನ್ನು ವಿವರಿಸಲಾಗಿತ್ತು. ಈಗ ಧಾತುಗಳನ್ನು ವ್ಯಾಪಿಸಿ ಬಾಧೆಪಡಿಸುವ ಕಾರಣ ಮಹಾಕುಷ್ಠಗಳೆಂದು ವ್ಯವಹರಿಸಲ್ಪಡುವ ೭ ವಿಧ ಕುಷ್ಠಗಳ ಚಿಕಿತ್ಸೆಯನ್ನು ವಿವರಿಸಲಾಗುತ್ತದೆಂದು ತಿಳಿಯಬೇಕು.

ಕುಷ್ಠೇಷು ಮೇಹೇಷು ಕಫಾಮಯೇಷು ಸರ್ವಾಙ್ಗ ಶೋಫೇಷು ಚ ದಾರುಣೇಷು ।
ಕೃಶತ್ವಮಿಚ್ಛತ್ಸು ಚ ಮೇದುರೇಷು ಯೋಗಾನಿಮಾನಗ್ರ್ಯ ಮತಿರ್ವಿದಧ್ಯಾತ್ ||೩||

ರೋಗಿಯ ಪ್ರಕೃತಿ, ವಯಸ್ಸು, ಬಲ, ಶರೀರ ಮೊದಲಾದುವುಗಳ ಅವಸ್ಥೆಯನ್ನು ತಿಳಿದಿರುವ ಬುದ್ಧಿಶಾಲಿಯಾದ ವೈದ್ಯನು ಕುಷ್ಠ, ಮೇಹ, ಕಫರೋಗ, ಅತಿ ಭಯಂಕರವಾದ ಸರ್ವಾಂಗಶೋಫ ಮತ್ತು ಅತಿ ದಪ್ಪಶರೀರವುಳ್ಳ ಕಾರಣ (ಕೊಬ್ಬು ತುಂಬಿ ದಪ್ಪವಾಗಿರುತ್ತದೆ) ದೇಹವು ಕೃಶವಾಗಬೇಕೆಂದು ಅಪೇಕ್ಷಿಸುವ ರೋಗಿಗಳಿಗೆ ಈ ಕೆಳಗೆ ಹೇಳುವ ಶ್ರೇಷ್ಠಗಳಾದ ಔಷಧಯೋಗಗಳನ್ನು ಪ್ರಯೋಗಿಸಬೇಕು.

ಕ್ಷುಣ್ಣಾನ್ ಯವಾನ್ನಿಃಪೂತಾನ್ ರಾತ್ರೌ ಗೋಮೂತ್ರಪರ್ಯುಷಿತಾನ್ ಮಹತಿ ಕಿಲಿಞ್ಜೇ ಶೋಷಯೇತ್ ; ಏವಂ ಸಪ್ತರಾತ್ರಂ ಭಾವಯೇತ್ ಶೋಷಯೇಚ್ಚ ; ತತಸ್ತಾನ್ ಕಪಾಲಭೃಷ್ಟಾನ್ ಶಕ್ತೂನ್ ಕಾರಯಿತ್ವಾ ಪ್ರಾತಃ ಪ್ರಾತರೇವ ಕುಷ್ಠಿನಂ ಪ್ರಮೇಹಿಣಂ ವಾ ಸಾಲಸಾರಾದಿಕಷಾಯೇಣ ಕಣ್ಟಕಿವೃಕ್ಷಕಷಾಯೇಣ ವಾ ಪಾಯಯೇತ್ ಭಲ್ಲಾತಕ ಪ್ರಪುನ್ನಾಡಾವಲ್ಗುಜಾರ್ಕಚಿತ್ರಕವಿಡಙ್ಗಮುಸ್ತಚೂರ್ಣಚತುರ್ಭಾಗಯುಕ್ತಾನ್ ; ಏವಮೇವ ಸಾಲಸಾರಾದಿಕಷಾಯಪರಿಪೀತಾನಾಮಾರಗ್ವಧಾದಿ ಕಷಾಯ ಪರಿಪೀತಾನಾಂ ವಾ ಗೋಶಕೃದ್ಭೂತಾನಾಂ ವಾ ಯವಾನಾಂ ಶಕ್ತೂನ್ ಕಾರಯಿತ್ವಾ ಭಲ್ಲಾತಕಾದೀನಾಂ ಚೂರ್ಣಾನ್ಯಾವಾಪ್ಯ ಖದಿರಾಸನಸಿಮ್ಬರಾಜ ವೃಕ್ಷರೋಹಿತಗುಡೂಚೀನಾಮನ್ಯತಮಸ್ಯ ಕಷಾಯೇಣ ಶರ್ಕರಾಮಧುರೇಣ ದ್ರಾಕ್ಷಾಯುಕ್ತೇನ ದಾಡಿಮವೇತಸಾಮ್ಲೇನ ಸೈನ್ಧವಲವಣಾನ್ವಿತೇನ ಪಾಯಯೇದೇಷ ಸರ್ವಮನ್ಥಕಲ್ಪಃ ||೪||

ಯಾವಕಾಂಶ್ಚ ಭಕ್ಷ್ಯಾನ್ಧಾನೋಲುಮ್ಬಕ ಕುಲ್ಮಾಷಾಪೂಪ ಪೂರ್ಣಕೋಶೋತ್ಕಾರಿಕಾ ಶಷ್ಕುಲಿಕಾ ಕುಣಾವೀಪ್ರಭೃತೀನ್ ಸೇವೇತ । ಯವವಿಧಾನೇನ ಗೋಧೂಮವೇಣುಯವಾನುಪಯುಞ್ಜೀತ ||೫||

ಯವೆಯನ್ನು ಒರಳಲ್ಲಿ ಹಾಕಿ ಹಾರಿ ಅಥವಾ ಒನಕೆಯಿಂದ ಕುಟ್ಟಿ ಅದರ ಮೇಲಿನ ಹೊಟ್ಟು ಹೋಗುವಂತೆ ಶುದ್ಧಿಮಾಡಿಸಿ ರಾತ್ರಿಯವೇಳೆ ಗೋಮೂತ್ರದಲ್ಲಿ ನೆನೆಸಿಟ್ಟು ಹಗಲಿನಹೊತ್ತು ದೊಡ್ಡದಾದ ಬಿದಿರಿನ ತಟ್ಟೆಯಲ್ಲಿ ಹರಡಿ ಒಣಗಿಸಬೇಕು. ಈ ರೀತಿಯಾಗಿ ಏಳುದಿನರಾತ್ರಿ ಭಾವನೆಮಾಡುತ್ತಲೂ ಹಗಲುಹೊತ್ತು ಬಿಸಿಲಿನಲ್ಲಿ ಒಣಗಿಸುತ್ತಲೂ ಬಂದು ಅನಂತರ ಅಗಲವಾದ ಹೆಂಚಿನಬಕ್ಕರೆಯಲ್ಲಿ ಹುರಿದು ಬೀಸಿದ ಈ ಹಿಟ್ಟನ್ನು ಪ್ರತಿದಿನ ಪ್ರಾತಃಕಾಲದಲ್ಲಿಯೂ ಸರ್ಜವೃಕ್ಷದ ಕಷಾಯದಲ್ಲಾಗಲೀ ಕಗ್ಗಲಿ, ಎಲಚಿ, ಗೊಬ್ಬಳಿ, ವಿಕಂಕತ (ಹಾಲುಮಾಣಿಕ ಅಥವಾ ತಂಡಸೀಗಿಡ) ಕರಮರ್ದ ಮೊದಲಾದ ಕಣ್ಟಕಿವೃಕ್ಷಗಳ ಕಷಾಯದಲ್ಲಿ ಕದರಿ ಅದರ ೪ ರಷ್ಟು ಗೇರು, ಚಗತೆ, ಬಾವಂತಿಬೀಜ, ಎಕ್ಕ, ಚಿತ್ರಮೂಲ, ವಿಡಂಗ ಮತ್ತು ಕೊನ್ನಾರಿಗೆಡ್ಡೆಗಳ ಚೂರ್ಣವನ್ನು ಸೇರಿಸಿ ಕುಷ್ಠ ಪ್ರಮೇಹ ರೋಗಿಗಳಿಗೆ ಕುಡಿಸಬೇಕು. ಇದೇ ರೀತಿಯಲ್ಲಿ ಶಾಲಸಾರಾದಿ ಕಷಾಯದಲ್ಲಾಗಲೀ, ಕಕ್ಕೆಬೇರು ಮೊದಲಾದುವುಗಳ ಕಷಾಯದಲ್ಲಾಗಲೀ, ಯವಧಾನ್ಯವನ್ನು ಹಸುವಿಗೆ ತಿನ್ನಿಸಿ ಅದರ ಸಗಣಿಯೊಡನೆ ಹೊರಕ್ಕೆ ಬಂದ ಯವೆಯನ್ನು ನೀರಿನಿಂದ ಜಾಲಾಡಿ ಹೊರಕ್ಕೆ ತೆಗೆದು ಒಣಗಿಸಿ ಹುರಿದು ಚೂರ್ಣಮಾಡಿ ಮೇಲ್ಕಂಡ ಶಾಲಸಾರಾದಿ ಕಷಾಯದಲ್ಲಿ ಭಾವನೆಮಾಡಿ, ಗೇರುಬೀಜ ಮೊದಲಾದುವುಗಳ ಚೂರ್ಣವನ್ನು ಸೇರಿಸಿ ಕಗ್ಗಲಿ, ಕೆಂಪುಹೊನ್ನೆ, ಬೇವು, ಕಕ್ಕೆ, ಬಿಳಿಬೂರುಗ, ಅಮೃತವಳ್ಳಿ ಇವೆಲ್ಲವುಗಳಲ್ಲಿ ಯಾವುದಾದರೊಂದರ ಕಷಾಯದಲ್ಲಿ ಕದರಿ ಸಕ್ಕರೆ ಜೇನುತುಪ್ಪಗಳೊಡನೆ ಮಿಶ್ರಮಾಡಿಯಾಗಲೀ ದ್ರಾಕ್ಷಿಯೊಡನೆ ಮಿಶ್ರಮಾಡಿಯಾಗಲೀ ಕುಡಿಸಬೇಕು. ದಾಳಿಂಬೆರಸ, ಓಟೆಹುಳಿ, ಸ್ವಲ್ಪ ಸೈಂಧವಲವಣಗಳನ್ನು ಮಿಶ್ರಮಾಡಿ ಕುಡಿಸಬೇಕು. ಈ ಕಲ್ಕಪ್ರಯೋಗವು ಸಕಲವಿಧ ಮನ್ಥಕಲ್ಪನಕ್ರಮವನ್ನು ಸೂಚಿಸುತ್ತದೆ. ಯವಚೂರ್ಣದಿಂದ ತಯಾರಿಸಿದ ಭಕ್ಷ್ಯಗಳನ್ನೂ ಯವಧಾನ್ಯವನ್ನೂ ಹುರಿದು ಅರಳಿನ ಚೂರ್ಣಕ್ಕೆ ಅಮ್ಲರಸ ಮಿಶ್ರಮಾಡಿ ಬೇಯಿಸಿದ ಭಕ್ಷ್ಯವಿಶೇಷವನ್ನೂ (ಇದಕ್ಕೆ ಕುಲ್ಮಾಷವೆಂದು ಹೆಸರು). ಹೋಳಿಗೆಯನ್ನೂ, ಹೆಸರು ಮೊದಲಾದ ದ್ವಿದಳಧಾನ್ಯದ ಬೆಂದಹಿಟ್ಟನ್ನು ಯವಧಾನ್ಯದ ಹಿಟ್ಟಿನಿಂದ ಮಾಡಿದ ಚೀಲದಲ್ಲಿಟ್ಟು ಮುಚ್ಚಿ ತುಪ್ಪ ಅಥವಾ ತೈಲದಲ್ಲಿ ಬೇಯಿಸಿ ತಯಾರಿಸಿದ ಜೋಂಡ ಅಥವಾ ಪೂರ್ಣಕೋಶವನ್ನೂ ಉತ್ಕಾರಿಕೆಗಳನ್ನೂ (ಕಜ್ಜಾಯ) ಚಕ್ಕುಲಿಗಳನ್ನೂ, ಯವದಿಂದ ತಯಾರಿಸಿದ ಹಪ್ಪಳಗಳನ್ನೂ (ಕುಣಾವೀ ಎಂದು ಹೆಸರು ತಿನ್ನಬೇಕು. ಇದೇರೀತಿ ಗೋಧಿ ಬಿದರಕ್ಕಿಗಳಿಂದಲೂ ಭಕ್ಷ್ಯಗಳನ್ನು ತಯಾರಿಸಿ ಸೇವಿಸಬೇಕು.

ಅರಿಷ್ಟಾನತೋ ವಕ್ಷ್ಯಾಮಃ ಪೂತೀಕಚವ್ಯ ಚಿತ್ರಕಸುರದಾರು ಸಾರಿವಾದನ್ತೀ ತ್ರಿಕಟುಕಾನಾಂ ಪ್ರತ್ಯೇಕಂ ಷಟ್ಪಲಿಕಾಭಾಗಾಃ ಬದರಕುಡವಾ ತ್ರಿಫಲಾಕುಡವ ಇತ್ಯೇತೇಷಾಂ ಚೂರ್ಣಾನಿ ತತಃ ಪಿಪ್ಪಲೀ ಮಧುಘೃತೈರಸ್ತಃ ಪ್ರಲಿಪ್ತೇ ಘೃತಭಾಜನೇ ಪ್ರಾಕ್ಕೃತಸಂಸ್ಕಾರೇ ಸಪ್ತೋದಕ ಕುಡವಾನಯೋರಜೋರ್ಧಕುಡವಮರ್ಧತುಲಾಂ ಚ ಗುಡಸ್ಯಾಭಿಹಿತಾನಿ ಚೂರ್ಣಾನಿ ಆವಾಪ್ಯ

ಸ್ವನುಗುಪ್ತಃ ಕೃತ್ವಾ ಯವಪಲ್ಲೇ ಸಪ್ತರಾತ್ರಂ ವಾಸಯೇತ್ ; ತತೋ ಯಥಾಬಲಮುಪಯುಞ್ಜೀತೈಷೋಽರಿಷ್ಟಃ ಕುಷ್ಠಮೇಹಮೇದಃ ಪಾಣ್ಡುರೋಗಶ್ವಯಥೂನಪಹನ್ತಿ ಏವಂ ಶಾಲಸಾರಾದೌನ್ಯಗ್ರೋಧಾದಾವಾರಗ್ವಧಾದೌ ಚಾರಿಷ್ಟಾನ್ ಕುರ್ವೀತ ||೬||

ಇನ್ನು ಮುಂದೆ **ಅರಿಷ್ಟವಿಧಾನಗಳನ್ನು** ಹೇಳುತ್ತೇವೆ. ತವಸದ ತೊಗಟೆ, ಚವ್ಯ ಚಿತ್ರಮೂಲ, ದೇವದಾರು, ಸೊಗದೆಬೇರು, ಜಾಪಾಳದತೊಗಟೆ, ತ್ರಿಕಟು ಇವು ಪ್ರತಿಯೊಂದೂ ೬ ಪಲಗಳಷ್ಟನ್ನೂ, ಎಲಚಿತೊಕ್ಕು ೧ ಕುಡವ, ತ್ರಿಫಲೆ ೧ ಕುಡವ ಇವೆಲ್ಲವನ್ನೂ ಚೂರ್ಣಿಸಿ ಹಿಪ್ಪಲಿ ಚೂರ್ಣವನ್ನು ತುಪ್ಪ ಜೇನುತುಪ್ಪಗಳೊಡನೆ ಮಿಶ್ರಮಾಡಿ ಲೇಪಿಸಿದ ಗುಡಾಣಕ್ಕೆ ತುಂಬಿ ೭ ಕುಡವ ನೀರನ್ನೂ ಅರ್ಧಕುಡವ ಕಬ್ಬಿಣದ ಅರಪುಡಿಯನ್ನೂ ೫೪ ಪಲ ಬೆಲ್ಲವನ್ನೂ ಆ ಗುಡಾಣಕ್ಕೆ ತುಂಬಿ ಅದರ ಬಾಯಿಗೆ ಮುಚ್ಚಳ ಮುಚ್ಚಿ ಭದ್ರಮಾಡಿ ಯವಧಾನ್ಯದ ರಾಶಿಯಲ್ಲಿ ಹೂಳಿಟ್ಟು ೭ ದಿನಗಳು ಕಳೆದನಂತರ ಹೊರಕ್ಕೆ ತೆಗೆದು ರೋಗಿಯ ಶಕ್ತಿಗೆ ತಕ್ಕಂತೆ ಈ **ಪೂತೀಕಾರಿಷ್ಟವನ್ನು** ಸೇವಿಸಿದರೆ ಕುಷ್ಠ, ಮೇಹ, ಮೇದೋವೃದ್ಧಿ, ಪಾಣ್ಡುರೋಗ, ಶೋಥ ಈ ರೋಗಗಳು ನಿವಾರಣೆಯಾಗುತ್ತವೆ. ಇದೇ ಕ್ರಮದಿಂದ ಶಾಲಸಾರಾದಿಗಣ, ನ್ಯಗ್ರೋಧಾದಿಗಣ, ಆರಗ್ವಧಾದಿಗಣ ದ್ರವ್ಯಗಳಿಂದಲೂ ಅರಿಷ್ಟಗಳನ್ನು ತಯಾರಿಸಬೇಕು.

ಆಸವಾನತೋ ವಕ್ಷ್ಯಾಮಃ ಪಲಾಶಭಸ್ಮಪರಿಸ್ರುತಸ್ಯ ಉಷ್ಣೋದಕಸ್ಯ ಶೀತೀಭೂತಸ್ಯ ತ್ರಯೋ ಭಾಗಾ ದ್ವೌ ಫಾಣಿತಸ್ಯೈಕಧ್ಯಮರಿಷ್ಟಕಲ್ಪೇನ ವಿದಧ್ಯಾತ್ । ಏವಂ ತಿಲಾದೀನಾಂ ಕ್ಷಾರೇಷು ಸಾಲಸಾರಾದೌ ನ್ಯಗ್ರೋಧಾದಾವಾರಗ್ವಧಾದೌ ಮೂತ್ರೇಷು ಚಾಸವಾನ್ ವಿದಧ್ಯಾತ್ ||೭||

ಇನ್ನುಮುಂದೆ **ಆಸವಗಳ ವಿಧಾನಗಳನ್ನು** ಹೇಳುತ್ತೇವೆ. ಬಿಸಿನೀರಿಗೆ ಮುತ್ತುಗದ ಭಸ್ಮವನ್ನು ಕದರಿ ಶೋಧಿಸಿ ತಣ್ಣಗಾದ ಮೇಲೆ ೩ ಭಾಗಕ್ಕೆ ೨ ಭಾಗ ಎಳೆ ಪಾಕ ಬಂದ ಬೆಲ್ಲವನ್ನು ಸೇರಿಸಿ ಅರಿಷ್ಟಕಲ್ಪದಂತೆ ಯವೆಯ ರಾಶಿಯಲ್ಲಿ ಹೂಳಬೇಕು. ಹೀಗೆಯೇ ಎಳ್ಳುಕಡ್ಡಿ ಮೊದಲಾದುವುಗಳ ಕ್ಷಾರಗಳಲ್ಲೂ ಶಾಲಸಾರಾದಿಕಷಾಯ, ನ್ಯಗ್ರೋಧಾದಿಕಷಾಯ, ಆರಗ್ವಧಾದಿಕಷಾಯ, ಗೋಮೂತ್ರ ಮೊದಲಾದುವುಗಳಲ್ಲಿ ತ್ರಿಫಲಾ ಚೂರ್ಣವನ್ನು ಸೇರಿಸಿ ಯವಧಾನ್ಯದ ರಾಶಿಯಲ್ಲಿ ೭ ದಿನಗಳವರೆಗೆ ಹೂಳಿಟ್ಟು ಅನಂತರ ರೋಗಗಳಿಗೆ ತಕ್ಕಂತೆ ಉಪಯೋಗಿಸಬೇಕು.

ಅಥ ಸುರಾವಕ್ಷ್ಯಾಮಃ ಶಿಂಶಪಾ ಖದಿರಯೋಃ ಸಾರಮಾದಾಯೋತ್ಪಾಟ್ಯಚೋತ್ತಮಾರಣೀ ಬ್ರಾಹ್ಮೀ ಕೋಶಾತಕೀ ಸ್ತತ್ಸರ್ವಮೇಕತಃ ಕಷಾಯಕಲ್ಪೇನ ವಿಪಾಚ್ಯೋದಕಮಾದದೀತ ಮಣ್ಡೋದಕಾರ್ಥಂ ಕಿಣ್ವಪಿಷ್ಟಮಭಿಷುಣುಯಾತ್ ಚ ಯಥೋಕ್ತಮೇವಂ ಸುರಾ ಸಾಲಸಾರಾದೌ ನ್ಯಗ್ರೋಧಾದಾವಾರಗ್ವಧಾದೌ ಚ ವಿದಧ್ಯಾತ್ ||೮||

ಇನ್ನುಮುಂದೆ ಸುರಾವಿಧಾನಗಳನ್ನು ಹೇಳುತ್ತೇವೆ. ಬೀಟೆ, ಕಗ್ಗಲಿಸಾರ (ಮಧ್ಯದ ಕೆಚ್ಚಿನಮರ) ಭಾಗವನ್ನು ಕತ್ತರಿಸಿ ಉತ್ತಮಾರಣಿ (ಥಗ್ಗಿಸೊಪ್ಪು) ಒಂದೆ

ಲಗ, ಹೀರೆಸೊಪ್ಪು ಇವೆಲ್ಲವನ್ನೂ ಸೇರಿಸಿ ಪಾಕಮಾಡಿ ಶೋಧಿಸಿದ ಕಷಾಯದೊಡನೆ ಮದ್ಯದ ಕೆಳಗಿನ ಮಡ್ಡಿಯನ್ನು ಸೇರಿಸಿ ದೊಡ್ಡ ಗುಡಾಣಕ್ಕೆ ತುಂಬಿ ಬಾಯಿಚೀರು ಮಾಡಿ, ಸಂಧಾನವಾಗಲು ದೊಡ್ಡ ಹಳ್ಳದಲ್ಲಿರಿಸಿ ಸುತ್ತಲೂ ಬೂದಿತುಂಬಿ ೧ ತಿಂಗಳಾದ ಮೇಲೆ ಹುಳಿಮುರಿದು ಉಪಯೋಗಿಸಲು ಯೋಗ್ಯವಾದ ಸುರೆಯು ತಯಾರಾಗಿರುತ್ತದೆ. ಇದೇ ರೀತಿ ಸಾಲಸಾರಾದಿ, ನ್ಯಗ್ರೋಧಾದಿ, ಆರಗ್ವಧಾದಿ ಕಷಾಯಗಳಿಂದಲೂ ಸುರಾ ಕಲ್ಪನ ವಿಧಾನವನ್ನು ತಯಾರುಮಾಡಬೇಕು.

ಟಿಪ್ಪಣಿ : ಶಿಂಶಪಾ ಖದಿರಸಾರಗಳು ೨ ಭಾಗ (ಈ ಸಾರಗಳೇ ಕುಷ್ಠಹರಗಳಾದ ಕಾರಣ) ಉತ್ತಮಾರಣಿ ಮೊದಲಾದುವು ೧ ಭಾಗ ಈ ರೀತಿ ಸೇರಿಸಿ ಇವು ೧೦೦ ಪಲ ಗಳಿಗೆ ೪ ದ್ರೋಣ ನೀರನ್ನು (೩೨ ಅಳತೆಯ ಸೇರು) ಸೇರಿಸಿ ೧ ದ್ರೋಣ ನಿಲ್ಲುವಂತೆ ಕಷಾಯಮಾಡಿ ಶೋಧಿಸಿದ ಕಷಾಯವನ್ನು ದೊಡ್ಡ ಗುಡಾಣಕ್ಕೆ ತುಂಬಿ ಸುರಾಬೀಜ (ಮದ್ಯದ ಕೆಳಗಿನ ಮಡ್ಡಿ) ಬೆಲ್ಲ, ಕಲ್ಕದ್ರವ್ಯಗಳು, ಧಾತಕಿಕುಸುಮ ಮೊದಲಾದುವನ್ನು ಯೋಗದಲ್ಲಿ ಹೇಳಿದಂತೆ ತಕ್ಕಪ್ರಮಾಣದಿಂದ ಸೇರಿಸಿ ಗುಡಾಣದ ಬಾಯಿಗೆ ಮುಚ್ಚಳ ಮುಚ್ಚಿ ಚೀರುಮಾಡಿಸಬೇಕು.

ಅತೋऽವಲೇಹಾನ್ವಕ್ಷ್ಯಾಮಃ ಖದಿರಾಸನನಿಮ್ಬರಾಜವೃಕ್ಷಸಾಲಸಾರಕ್ವಾಥೇ ತತ್ಸಾರ ಪಿಣ್ಡಾನ್ ಶ್ಲಕ್ಷ್ಣಪಿಷ್ಟಾನ್ ಪ್ರಕ್ಷಿಪ್ಯ ವಿಪಚೇತ್, ತತೋ ನಾತಿದ್ರವಂ ನಾತಿಸಾನ್ದ್ರಮವತಾರ್ಯ ತಸ್ಯ ಪಾಣಿತಲಪೂರ್ಣಮಪ್ರಾತರಾಶೋ ಮಧುಮಿಶ್ರಂ ಲಿಹ್ಯಾತ್ ಏವಂ ಸಾಲಸಾರಾದೌ ನ್ಯಗ್ರೋಧಾದಾವಾರಗ್ವಧಾದೌ ಚ ಲೇಹಾನ್ ಕಾರಯೇತ್ ||೯|| ಅತಶ್ಚೂರ್ಣಕ್ರಿಯಾಂ ವಕ್ಷ್ಯಾಮಃ–ಸಾಲಸಾರಾದೀನಾಂ ಸಾರಚೂರ್ಣ ಪ್ರಸ್ಥಮಾಹೃತ್ಯಾರಗ್ವಧಾದಿಕಷಾಯ ಪರಿಪೀತ ಮನೇಕಶಃ ಸಾಲಸಾರಾದಿ ಕಷಾಯೇಣೈವ ಪಾಯಯೇತ್ ಏವಂ ನ್ಯಗ್ರೋಧಾದೀನಾಂ ಫಲೇಷು ಪುಷ್ಪೇಷು ಆರಗ್ವಧಾದೀನಾಂ ಚೂರ್ಣಕ್ರಿಯಾಂ ಕಾರಯೇತ್ ||೧೦||

ಇನ್ನುಮುಂದೆ **ಅವಲೇಹ ವಿಧಾನಗಳನ್ನು ಹೇಳುತ್ತೇವೆ**—ಕಗ್ಗಲಿ, ಕೆಂಪು ಹೊನ್ನೆ, ಬೇವು, ಕಕ್ಕೆ, ಸರ್ಜವೃಕ್ಷ ಇವುಗಳ ಸಾರಭಾಗಗಳನ್ನು (ಮರದ ಮಧ್ಯಭಾಗ ಗಟ್ಟಿಭಾಗ) ಕತ್ತರಿಸಿ ಕಷಾಯಮಾಡಿ ಅವುಗಳ ಸಾರಭಾಗದ ಚೂರ್ಣವನ್ನು ಸೇರಿಸಿ ಈ ಕಷಾಯವು ಅತಿಗಟ್ಟಿಯಾಗದಂತೆಯೂ ಅತಿ ನೀರಾಗದಂತೆಯೂ ಕಾಯಿಸಿ ಕೆಳಕ್ಕೆ ಇರಿಸಿ ಕೊಂಡು ಅಂಗೈಯಲ್ಲಿ ಹಿಡಿಯುವಷ್ಟು ಪ್ರಮಾಣ ಲೇಹಕ್ಕೆ ಜೇನುತುಪ್ಪವನ್ನು ಸೇರಿಸಿ ನೆಕ್ಕಬೇಕು. ಹೀಗೆಯೇ ಸಾಲಸಾರಾದಿಗಳಿಂದಲೂ ನ್ಯಗ್ರೋಧಾದಿಗಳಿಂದಲೂ ಆರಗ್ವ ಧಾದಿಗಳಿಂದಲೂ ಲೇಹಗಳನ್ನು ಮಾಡಿಸಬೇಕು.

ಇನ್ನುಮುಂದೆ ಚೂರ್ಣಕ್ರಿಯಾವಿಧಾನಗಳನ್ನು ವಿವರಿಸುತ್ತೇವೆ–ಸಾಲಸಾರಾದಿಗಳ ಸಾರಭಾಗಗಳನ್ನು ಜಜ್ಜಿ ಪುಡಿಮಾಡಿದ ಚೂರ್ಣ ೧ ಪ್ರಸ್ಥವನ್ನು ಆರಗ್ವಧಾದಿ ಕಷಾಯ ದಲ್ಲಿ ಅನೇಕ ಸಾರಿ ಭಾವನೆಮಾಡಿ ಒಣಗಿಸಿ ೧ ಕರ್ಷಪ್ರಮಾಣ ಚೂರ್ಣವನ್ನು ೧ ಪಲ ಸಾಲಸಾರಾದಿ ಕಷಾಯದಲ್ಲಿ ಕದರಿ ಕುಡಿಸಬೇಕು. ಇದೇ ರೀತಿಯಾಗಿ ಆಲ ಮೊದ

ಲಾದವುಗಳ ಕಾಯಿ (ಹಣ್ಣು) ಗಳನ್ನೂ ಕಕ್ಕೆ ಮೊದಲಾದುವುಗಳ ಹೂವುಗಳನ್ನೂ ಚೂರ್ಣಮಾಡಿ ಸೇರಿಸಿ ಪ್ರಯೋಗಮಾಡಬೇಕು.

ಅತ ಊರ್ಧ್ವಮಯಸ್ಕೃತೀರ್ವಕ್ಷ್ಯಾಮಃ ತೀಕ್ಷ್ಣಲೋಹಪತ್ರಾಣಿ ತನೂನಿ ಲವಣ ವರ್ಗ ಪ್ರದಿಗ್ಧಾನಿ ಗೋಮಯಾಗ್ನಿ ಪ್ರತಪ್ತಾನಿ ತ್ರಿಫಲಾ ಸಾಲಸಾರಾದಿ ಕಷಾಯೇಣ ನಿರ್ವಾಪ ಯೇತ್ ಷೋಡಶವಾರಾ್, ತತಃ ಖದಿರಾಙ್ಗಾರತಪ್ತಾನಿ ಉಪಶಾನ್ತ ತಾಪಾನಿ ಸೂಕ್ಷ್ಮ ಚೂರ್ಣಾನಿ ಕಾರಯೇದ್ಗಾಢತಾನ್ತವ ಪರಿಸ್ರಾವಿತಾನಿ ತತೋ ಯಥಾಬಲಂ ಮಾತ್ರಾಂ ಸರ್ಪಿರ್ಮ ಧುಭ್ಯಾಂ ಸಂಸೃಜ್ಯೋಪಯುಞ್ಜೀತ ಜೀರ್ಣೇ ಯಥಾವ್ಯಾಧ್ಯನಮ್ಲ ಲವಣಮಾಹಾರಂ ಕುರ್ವೀತ, ಏವಂ ತುಲಾಮುಪಯುಜ್ಯ ಕುಷ್ಠಮೇಹಮೇದಃಶ್ವಯಥು ಪಾಣ್ಡುರೋಗೋನ್ಮಾದಾ ಪಸ್ಮಾರಾನಪಹತ್ಯ ವರ್ಷಶತಂ ಜೀವತಿ ತುಲಾಯಾಂ ತುಲಾಯಾಂ ವರ್ಷಶತ ಗುಣೋತ್ಕರ್ಷಃ ಏತೇನ ಸರ್ವಲೋಹೇಷು ಅಯಸ್ಕೃತಯೋ ವ್ಯಾಖ್ಯಾತಾಃ ||೧೧||

ಇನ್ನುಮುಂದೆ **ಅಯಸ್ಕೃತಿ ವಿಧಾನಗಳನ್ನು** ವಿವರಿಸುತ್ತೇವೆ ಉಕ್ಕಿನ ತಗಡುಗಳನ್ನು ತೆಳ್ಳಗೆ ಬಡಿದು ಲವಣವರ್ಗಗಳಿಂದ ಲೇಪಿಸಿ ಬೆರಣಿಯಲ್ಲಿಟ್ಟು ಕಾಯಿಸಿ ತ್ರಿಫಲೆ ಅಥವಾ ಸಾಲಸಾರಾತಿಗಳ ಕಷಾಯದಲ್ಲಿ ಅದ್ದಬೇಕು. ಹೀಗೆ ೧೬ ಸಾರಿ ಕಾಯಿಸಿ ಅದ್ದಿ ಅನಂತರ ಕಗ್ಗಲಿ ಕೆಂಡದಲ್ಲಿ ಕಾಯಿಸಿ ತಣ್ಣಗಾದಮೇಲೆ ಅದನ್ನು ಸಣ್ಣಗೆ ಪುಡಿಮಾಡಿ ತಂತಿಯ ವಂದರಿಯಲ್ಲಿ ಶೋಧಿಸಿಟ್ಟುಕೊಂಡು ಶಕ್ತ್ಯಾನುಸಾರ ತಕ್ಕ ಪ್ರಮಾಣದ ಚೂರ್ಣವನ್ನು ಜೇನುತುಪ್ಪ ತುಪ್ಪಗಳೊಡನೆ ಮಿಶ್ರಮಾಡಿ ಸೇವಿಸಿ ಅದು ಜೀರ್ಣಿಸಿದ ಮೇಲೆ ರೋಗಕ್ಕೆ ತಕ್ಕಂತೆ ಹುಳಿ, ಉಪ್ಪುಗಳನ್ನು ಸೇರಿಸದಿರುವ ಆಹಾರವನ್ನು ಭೋಜನಮಾಡಬೇಕು. ಹೀಗೆ ೧೦೦ ಪಲಗಳಷ್ಟು ಚೂರ್ಣವನ್ನು ಉಪಯೋಗಿಸಿದರೆ ಕುಷ್ಠ, ಮೇಹ, ಮೇದೋವೃದ್ಧಿ, ಶೋಥ, ಪಾಂಡುರೋಗ, ಉನ್ಮಾದ, ಅಪಸ್ಮಾರಗಳು ನಿವಾರಣೆಯಾಗಿ ೧೦೦ ವರ್ಷಗಳವರೆಗೆ ಬದುಕುತ್ತಾನೆ. ೧೦೦-೧೦೦ ಪಲಗಳನ್ನು ಉಪಯೋಗಿಸುತ್ತಾ ಬಂದಂತೆಯೇ ೧೦೦ ವರ್ಷಗಳ ಕಾಲ ಹೆಚ್ಚುತ್ತಾ ಬರುತ್ತದೆ. ಇದರಿಂದ ಸಕಲ ಲೋಹಗಳ ಆಯಸ್ಕೃತಿಗಳನ್ನು ಮಾಡುವ ಕ್ರಮವನ್ನು ತಿಳಿಸಿದಂತೆಯೇ ಆಯಿತು.

ತ್ರಿವೃಚ್ಚಿತ್ರಕಮಾಗ್ನಿ ಮನ್ಥಸಪ್ತಲಾಕೇವುಕ ಶಙ್ಖಿನೀತಿಲ್ವಕತ್ರಿಫಲಾ ಪಲಾಶ ಶಿಂಶಪಾನಾಂ ಸ್ವರಸಮಾದಾಯ ಪಾಲಾಶ್ಯಾಂ ದ್ರೋಣ್ಯಾಮಭ್ಯಾಸಿಚ್ಯ ಖದಿರಾಙ್ಗಾರತಪ್ತಮಯಃ ಪಿಣ್ಡಂ ತ್ರಿಸಪ್ತಕೃತ್ವೋ ನಿರ್ವಾಪ್ಯ ತಮಾದಾಯ ಪುನರಾಸಿಚ್ಯಸ್ಥಾಲ್ಯಾಂ ಗೋಮಯಾಗ್ನಿನಾ ವಿಪ ಚೇತ್ ಸಿಧ್ಯತಿ ಚಾಸ್ಮಿನ್ ಪಿಪ್ಪಲ್ಯಾದಿ ಚೂರ್ಣಭಾಗಂ ದ್ವಾ ಮಧುನಸ್ತಾವದ್ಘೃತಸ್ಯೇತಿ ದದ್ಯಾತ್ ತತಶ್ಚತುರ್ಥಭಾಗಾವಶಿಷ್ಟಮವತಾರ್ಯ ಪರಿಸ್ರಾವ್ಯ ಭೂಯೋಽಗ್ನಿತಪ್ತಾನಿ ಅಯಃ ಪತ್ರಾಣಿ ಪ್ರಕ್ಷಿಪೇತ್ ತತಃ ಪ್ರಶಾನ್ತಮಾಯಸೇ ಪಾತ್ರೇ ಸ್ವನುಗುಪ್ತಂ ನಿದಧ್ಯಾತ್ ತತೋ ಯಥಾಯೋಗಂ ಶುಕ್ತಿಂ ಪ್ರಕುಞ್ಚಂ ಚೋಪಯುಞ್ಜೀತ ಜೀರ್ಣೇ ಯಥಾವ್ಯಾಧ್ಯಾಹಾರ

ಮುಪಸೇವೇತ ಏಷೌಷಧಾಯಸ್ಕೃತಿರಸಾಧ್ಯಂ ಕುಷ್ಠಂ ಪ್ರಮೇಹಂ ವಾ ಸಾಧಯತಿ ಸ್ಥೂಲಮಪ ಕರ್ಷತಿ ಶೋಫಮುಪಹನ್ತಿ ಸನ್ನಮಗ್ನಿಮುದ್ಧರತಿ ವಿಶೇಷೇಣಚೋಪದಿಶ್ಯತೇ ರಾಜಯಕ್ಷ್ಮಿಣಃಂ ವರ್ಷಶತಾಯುಶ್ಚಾನಯಾ ಪುರುಷೋ ಭವತಿ ಸಾಲಸಾರಾದಿಕ್ವಾಥಮಾಸಿಚ್ಯ ಪಾಲಾಶ್ಯಾಂ ದ್ರೋಣ್ಯಾಮಯೋಘನಂ ತಪ್ತಂ ನಿರ್ವಾಪ್ಯ ಕೃತಸಂಸ್ಕಾರೇ ಕಲಶೇಽಭ್ಯಾಸಿಚ್ಯ ಪಿಪ್ಪಲ್ಯಾದಿ ಚೂರ್ಣಭಾಗಂ ಕ್ಷೌದ್ರಂ ಗುಡಮಿತಿ ಚ ದತ್ವಾ ಸ್ವನುಗುಪ್ತಂ ನಿದಧ್ಯಾತ್ ಏತಾಂ ಮಹೌಷಧಾಯ ಸ್ಕೃತಿಂ ಮಾಸಮರ್ಧಮಾಸಂ ವಾ ಸ್ಥಿತಾಂ ಯಥಾಬಲಮುಪಯುಞ್ಜೀತ ಏವಂ ನ್ಯಗ್ರೋಧಾದಾ ವಾರೇವತಾದಿಷು ಚ ವಿದಧ್ಯಾತ್ ||೧೨||

ಕರಿಯತಿಗಡೆ, ಲಾಲ್‌ತಿಗಡೆ, ಥಗ್ಗಿ, ಅರಿಶಿನಹಾಲಿನಮಂಡುಗಳ್ಳಿ, ಕೇಂಬುಕ (ಉತ್ತರದೇಶದ ಪ್ರಸಿದ್ಧವಾದ ಗೆಡ್ಡೆ), ಈಶ್ವರಿಬೇರು, ರೋಧ್ರ, ತ್ರಿಫಲೆ, ಮುತ್ತುಗ, ಬೀಟೆ ಇವುಗಳ ಸ್ವರಸವನ್ನು ಮುತ್ತುಗದಮರದ ದೋಣಿಗೆ ಸುರಿದು ಕಗ್ಗಲಿ ಕೆಂಡದಲ್ಲಿ ಕಬ್ಬಿಣದ ಚೆಂಡನ್ನು ಕೆಂಪಗೆ ಕಾಯಿಸಿ ೨೧ ಸಾರಿ ಅದ್ದಿ ಆ ಕಷಾಯ ೫೦೦ ಪಲ ದಷ್ಟನ್ನು ದೊಡ್ಡ ಕಡಾಯಿಗೆ ಹಾಕಿ ಬೆರಣಿಯಿಂದ ಪುನಃ ಕಾಯಿಸಿ ನಾಲ್ಕರಲ್ಲೊಂದು ಭಾಗದಷ್ಟನ್ನು ಶೋಧಿಸಿಕೊಂಡು ಬೆಂಕಿಯಿಂದ ಕಾಯಿಸಿದ ಕಬ್ಬಿಣದ ತಗಡುಗಳನ್ನು ಅದರಲ್ಲಿ ಅದ್ದಬೇಕು. ಇದೇ ಕಷಾಯದಿಂದ ಕಬ್ಬಿಣದ ತಗಡುಗಳನ್ನು ಅರೆದು ಕದರಿ ಕಬ್ಬಿಣದಷ್ಟೇ ಪ್ರಮಾಣ ಪಿಪ್ಪಲ್ಯಾದಿ ಚೂರ್ಣವನ್ನೂ ಅಷ್ಟೇ ತುಪ್ಪವನ್ನೂ ಅದರ ಎರಡರಷ್ಟು ಜೇನುತುಪ್ಪವನ್ನೂ ಸೇರಿಸಿ ಕಬ್ಬಿಣದ ಪಾತ್ರೆಯಲ್ಲಿ ತುಂಬಿ ರೋಗಿಯ ಶಕ್ತಿಗೆ ಅನುಸಾರಕ್ಕೆ ಕರ್ಷಪ್ರಮಾಣದ ಲಾಗಾಯಿತು ಒಂದು ಪಲದ ಪ್ರಮಾಣದಷ್ಟರ ವರೆಗೆ ಪ್ರಯೋಗಿಸಿ ಇದು ಜೀರ್ಣವಾದನಂತರ ರೋಗಕ್ಕೆ ತಕ್ಕಂತೆ ಆಹಾರ ಸೇವನೆ ಮಾಡಬೇಕು. ಈ ಅಯಸ್ಕೃತಿಯ ಪ್ರಯೋಗದಿಂದ ಅಸಾಧ್ಯ ಕುಷ್ಠ, ಪ್ರಮೇಹ, ಸ್ಥೌಲ್ಯ, ಶೋಫೆ, ಅಗ್ನಿಮಾಂದ್ಯ ಇವುಗಳೂ ಹೋಗಲಾಡಿಸಲ್ಪಡುತ್ತವೆ. ಮುಖ್ಯ ವಾಗಿ ರಾಜಯಕ್ಷ್ಮರೋಗಿಗಳಿಗೆ ಶ್ರೇಷ್ಠವಾದ ಪರಿಹಾರಕೌಷಧವು. ಇದರ ಸೇವನೆ ಯಿಂದ ಪುರುಷನು ರೋಗವಿಲ್ಲದೆ ೧೦೦ ವರ್ಷಗಳವರೆಗೆ ಬದುಕಿರುತ್ತಾನೆ. ಸಾಲ ಸಾರಾದಿ ಗಣದ್ರವ್ಯಗಳ ಕಷಾಯವನ್ನು ಹೊಸದಾಗಿ ತಯಾರಿಸಿದ ಮುತ್ತುಗದಮರದ ದೋಣಿಗೆ ತುಂಬಿ ಕಬ್ಬಿಣದ ಗೋಳವನ್ನು ಕೆಂಪಗೆ ಕಾಯಿಸಿ ಚಮ್ಮಟಿಗೆಯಿಂದ ಜಜ್ಜಿ ಈ ಕಷಾಯದಲ್ಲಿ ಅದ್ದಬೇಕು. ಈ ರೀತಿ ೨೧ ಸಾರಿ ಮಾಡಬೇಕು ಮತ್ತು ಕಬ್ಬಿಣದ ತಗಡನ್ನು ಈ ಕಷಾಯದಲ್ಲಿ ಅರೆದು ಕದರಿ ಬ್ಬಿಣದ ಪಾತ್ರೆಯಲ್ಲಿ ತುಂಬಿ ೧ ತಿಂಗಳು ಶೀತಪ್ರದೇಶದಲ್ಲೂ ಅರ್ಧತಿಂಗಳು ಉಷ್ಣಪ್ರದೇಶದಲ್ಲೂ ಇಟ್ಟಿದ್ದು ಅನಂತರ ಹಳೆಯ ಜೇನುತುಪ್ಪ ಕಷಾಯದ ನಾಲ್ಕನೆಯ ಭಾಗದಷ್ಟನ್ನೂ ಅಷ್ಟೇ ಪ್ರಮಾಣ ಹಳೇಬೆಲ್ಲ ವನ್ನೂ ಸೇರಿಸಿ ಭದ್ರವಾಗಿಟ್ಟಿರಬೇಕು. ಒಂದು ಅಥವಾ ಒಂದೂವರೆ ತಿಂಗಳಾದ ಮೇಲೆ ಈ ಮಹೌಷಧಾಯಸ್ಕೃತಿಯನ್ನು ರೋಗಿಯ ಬಲಕ್ಕೆ ತಕ್ಕಂತೆ ಉಪಯೋಗಿಸ ಬೇಕು. ಇದೇ ರೀತಿಯಾಗಿ ನ್ಯಗ್ರೋಧಾದಿಗಳಿಂದಾಗಲೀ ಅರಗ್ವಧಾದಿಗಳಿಂದಾಗಲೀ

ತಯಾರಿಸಿದ ದೋಣಿಗಳಲ್ಲಿ ಈ ಕಷಾಯವನ್ನಿಟ್ಟು ಅಯಸ್ಕೃತಿಗಳನ್ನು ತಯಾರಿಸಬೇಕು.

ಅತಃ ಖದಿರವಿಧಾನ ಮುಪದೇಕ್ಷ್ಯಾಮಃ ಪ್ರಶಸ್ತದೇಶಜಾತಮನುಪಹತಂ ಮಧ್ಯಮಂ ವಯಸಂ ಖದಿರಂ ಪರಿತಃ ಖಾನಯಿತ್ವಾ ಮಧ್ಯಮಮೂಲಂ ಛಿತ್ವಾಯೋಮಯಂ ಕುಮ್ಭಂ ತಸ್ಮಿನ್ನನ್ತರೇ ನಿದಧ್ಯಾದ್ಯ ರಸಗ್ರಹಣಸಮರ್ಥೋ ಭವತಿ, ತತಸ್ತಂ ಗೋಮಯಮೃದಾವಲಿಪ್ತಮವಕೀರ್ಯೇನ್ಧನೈರ್ಗೋಮಯ ವಿಶ್ರೈರಾದೀಪಯೇತ್ ಯಥಾಸ್ಯ ದಹ್ಯಮಾನಸ್ಯ ರಸಃ ಸ್ರವತಿ ಅಧಸ್ತಾತ್ ಯದಾ ಜಾನೀಯಾತ್ ಪೂರ್ಣಂ ಭಾಜನಮಿತಿ ಅಥೈನಮುದ್ಧೃತ್ಯ ಪರಿಸ್ರಾವ್ಯ ರಸಮನ್ಯಸ್ಮಿನ್ ಪಾತ್ರೇ ನಿಧಾಯಾನುಗುಪ್ತಂ ನಿದಧ್ಯಾತ್, ತತೋ ಯಥಾಯೋಗಂ ಮಾತ್ರಾಮಾಮಲಕರಸ ಮಧುಸರ್ಪಿರ್ಭಿಃ ಸಂಸೃಜ್ಯೋಪಯುಞ್ಜೀತ ಜೀರ್ಣೇಭಲ್ಲಾತಕ ವಿಧಾನವದಾಹಾರಃ ಪರಿಹಾರಶ್ಚ ಪ್ರಸ್ಥೇ ಚೋಪಯುಕ್ತೇ ಶತಂ ವರ್ಷಾಣಾಮಾಯುಷೋಽಭಿವೃದ್ಧಿರ್ಭವತಿ ಖದಿರ ಸಾರತುಲಾಮುದಕದ್ರೋಣೇ ವಿಪಾಚ್ಯ ಷೋಡಶಾಂಶಾವಶಿಷ್ಟಮವತಾರ್ಯಾನುಗುಪ್ತಂ ನಿದಧ್ಯಾತ್, ತಮಾಮಲಕ ಮಧುಸರ್ಪಿಭಿಃ ಸಂಸೃಜ್ಯೋಪಯುಞ್ಜೀತ ಏಷ ಏವ ಸರ್ವವೃಕ್ಷಸಾರೇಷು ಕಲ್ಪಃ ಖದಿರಸಾರಚೂರ್ಣ ತುಲಾ ಖದಿರಸಾರಕ್ವಾಥ ಮಾತ್ರಾಂ ವಾ ಪ್ರಾತಃ ಪ್ರಾತರುಪಸೇವೇತ ಖದಿರಸಾರಕ್ವಾಥಸಿದ್ಧಮಾವಿಕಂ ವಾ ಸರ್ಪಿಃ ಅಮೃತವಲ್ಲೀಸ್ವರಸಂ ಕ್ವಾಥಂ ವಾ ಪ್ರಾತಃ ಪ್ರಾತರುಪಸೇವೇತ ತತ್ಸಿದ್ಧಂ ವಾ ಸರ್ಪಿಃ ಅಪರಾಹ್ಣೇ ಸಸರ್ಪಿಷ್ಕಮೋದನಮಾಮಲಕಾಯೂಷೇಣ ಭುಞ್ಜೀತೈವಂ ಮಾಸಮುಪಯುಜ್ಯ ಸರ್ವಕುಷ್ಠೈರ್ವಿಮುಚ್ಯತೇ ಇತಿ ||೧೩||

ಇನ್ನುಮುಂದೆ **ಖದಿರವಿಧಾನ**ವನ್ನು ಉಪದೇಶಿಸುತ್ತವೆ—ಶುದ್ಧವಾದ ಪ್ರದೇಶದಲ್ಲಿ ಹುಟ್ಟಿದ, ಹುಳುಗಳಿಂದ ತಿನ್ನದೆಯೂ ಬೆಂಕಿ ಮೊದಲಾದುವುಗಳಿಂದ ಸುಟ್ಟುಹೋಗದೆಯೂ ಇರುವ ಮಧ್ಯವಯಸ್ಸಿನ ಕಗ್ಗಲಿಮರದ ಸುತ್ತಲೂ ಆಳವಾಗಿ ಅಗತೆ ಮಾಡಿಸಿ ಗೂಟಬೇರನ್ನು (ಮಧ್ಯಭಾಗದ್ದು) ಕಡಿದು ಅದರ ಕೆಳಗೆ ಕಬ್ಬಿಣದ ಪಾತ್ರೆಯನ್ನಿಟ್ಟು ಅದರೊಳಕ್ಕೆ ಮರದರಸ ಸುರಿಯುವಂತೆ ಮಾಡಿ ಸಗಣಿಮಣ್ಣನ್ನು ಗಿಡದ ಸುತ್ತಲೂ ಬಳಿದು ಮರದ ಸುತ್ತಲೂ ಸೌದೆ ಬೆರಣಿಗಳನ್ನು ತುಂಬಿ ಬೆಂಕಿ ಹತ್ತಿಸಬೇಕು. ಮರವು ಸುಡುತ್ತಿರುವಾಗ ಅದರ ರಸವು ಕೆಳಗೆ ಕಬ್ಬಿಣದ ಪಾತ್ರೆಯೊಳಕ್ಕೆ ಸುರಿದು ಪಾತ್ರೆ ತುಂಬಿತೆಂದು ತಿಳಿದು, ಆ ರಸ ತುಂಬಿದ ಪಾತ್ರೆಯನ್ನು ಹೊರಕ್ಕೆ ತೆಗೆದು ಆ ರಸವನ್ನು ಮತ್ತೊಂದು ಪಾತ್ರೆಗೆ ಶೋಧಿಸಿಕೊಂಡು ಮುಚ್ಚಳ ಮುಚ್ಚಿಡಬೇಕು. ಅನಂತರ ರೋಗಿಯ ಬಲಕ್ಕೆ ತಕ್ಕಂತೆ ನೆಲ್ಲಿಕಾಯಿರಸ, ಜೇನುತುಪ್ಪ, ತುಪ್ಪ ಮಿಶ್ರಮಾಡಿ ಪ್ರಯೋಗಿಸಬೇಕು. ಅದು ಜೀರ್ಣಿಸಿದಮೇಲೆ ಗೇರುಬೀಜದ ಪ್ರಯೋಗದಲ್ಲಿ ಹೇಳಿದಂತೆ ಆಹಾರ ಉಪಚಾರಗಳನ್ನು ಅನುಸರಿಸಬೇಕು. ಒಂದು ಪ್ರಸ್ಥ ಪ್ರಮಾಣದಷ್ಟನ್ನು ಸೇವಿಸಿದರೆ ೧೦೦ ವರ್ಷಗಳ ಕಾಲದ ಆಯುಸ್ಸು ಹೆಚ್ಚಾಗುತ್ತದೆ. ಕಗ್ಗಲಿಮರದ ಮಧ್ಯಭಾಗದ ಗಟ್ಟಿಮರವನ್ನು ಅಥವಾ ೧೦೦ ಪಲದಷ್ಟು ಕಾಚನ್ನು ೮ ಅಳತೆಸೇರು ನೀರಿಗೆ ಹಾಕಿ ೧/೧೬ ಭಾಗ ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿಟ್ಟುಕೊಂಡು ಇದರೊಡನೆ ನೆಲ್ಲೀಕಾಯಿರಸ,

ಜೇನುತುಪ್ಪ, ತುಪ್ಪಗಳನ್ನು ಮಿಶ್ರಮಾಡಿ ಸೇವಿಸಬೇಕು. ಎಲ್ಲಾ ಮರಗಳ ಮಧ್ಯ ಭಾಗದ ಗಟ್ಟಿಮರಗಳ (ಸಾರ) ಉಪಯೋಗವನ್ನೂ ಇದೇರೀತಿ ಮಾಡಬೇಕು. ಕಾಚಿನ ಚೂರ್ಣ ೧೦೦ ಪಲ ಅಥವಾ ಕಗ್ಗಲಿ ಕೆಚ್ಚಿನ ಕಷಾಯ ೧೦೦ ಪಲಗಳವರೆಗೆ ಪ್ರತಿ ದಿನವೂ ಪ್ರಾತಃಕಾಲದಲ್ಲಿ ಸೇವಿಸಬೇಕು. ಅಥವಾ ಖದಿರಸಾರಕ್ವಾಥದೊಡನೆ ತಯಾರಿಸಿದ ಕುರಿಯ ತುಪ್ಪವನ್ನಾಗಲೀ ಸೇವಿಸಬೇಕು. (ಕುರಿಯ ತುಪ್ಪವು ಅಪಥ್ಯವಾದರೂ ಸಂಯೋಗವಿಶೇಷದಿಂದ ಹಿತಕರವಾಗುತ್ತದೆ). ಅಮೃತವಳ್ಳಿಯ ಸ್ವರಸವನ್ನಾಗಲೀ ಕಷಾಯವನ್ನಾಗಲೀ ಅದರೊಡನೆ ತಯಾರಿಸಿದ ಘೃತವನ್ನಾಗಲೀ ಪ್ರತಿದಿನವೂ ಪ್ರಾತಃಕಾಲದಲ್ಲಿ ಸೇವನೆಮಾಡಿ ಮಧ್ಯಾಹ್ನ ಕಾಲದಲ್ಲಿ ನೆಲ್ಲೀಕಾಯಿನ ಕಟ್ಟಿಗೆ ತುಪ್ಪಮಿಶ್ರಮಾಡಿ ಅನ್ನದೊಡನೆ ಭೋಜನ ಮಾಡಬೇಕು. ಈ ರೀತಿಯಾಗಿ ಒಂದುಮಾಸಕಾಲ ಪ್ರಯೋಗ ಮಾಡಿದರೆ ಸಕಲವಿಧ ಕುಷ್ಠರೋಗಗಳೂ ನಿವಾರಣೆಯಾಗುತ್ತವೆಂದು ತಿಳಿಯಬೇಕು.

ಟಿಪ್ಪಣಿ—ಭಲ್ಲಾತಕಪ್ರಯೋಗದಲ್ಲಿ ಕ್ಷೀರವನ್ನು ಆಹಾರದೊಡನೆ ಸೇರಿಸಲಾಗಿದೆ. ಕ್ಷೀರಪ್ರಯೋಗವು ಕುಷ್ಠಕರವಾದರೂ ರಸಾಯನದ ಶಕ್ತಿಯನ್ನು ಯೋಜಿಸಲು ಸಾಧ್ಯವಾಗುವುದಿಲ್ಲವಾಗಿ ದೋಷವಲ್ಲ.

ಕೃಷ್ಣತಿಲ ಭಲ್ಲಾತಕತೈಲಾಮಲಕರಸ ಸರ್ಪಿಷಾಂ ದ್ರೋಣಂ ಸಾಲಸಾರಾದಿ ಕಷಾಯಸ್ಯ ಚ ತ್ರಿಫಲಾ ತ್ರಿಕಟುಕ ಪರೂಷಫಲಮಜ್ಜ ವಿಡಙ್ಗಫಲ ಸಾರ ಚಿತ್ರಕಾರ್ಕವಲ್ಗುಜಹರಿದ್ರಾದ್ವಯ ತ್ರಿವೃದ್ದನ್ತೀನ್ದ್ರಯವಯಷ್ಟೀ ಮಧುಕಾತಿವಿಷಾರಸಾಞ್ಜನ ಪ್ರಿಯಙ್ಗುನಾಂ ಪಾಲಿಕಾಭಾಗಾನ್ಸ್ಯೈಕಧ್ಯಂ ಸ್ನೇಹಪಾಕವಿಧಾನೇನ ಪಚೇತ್ ; ತತ್ಸಾಧುಸಿದ್ಧಮವತಾರ್ಯ ಪರಿಸ್ರಾವ್ಯಾನುಗುಪ್ತಂ ನಿದಧ್ಯಾತ್ ; ತತ ಉಪಸಂಸ್ಕೃತ ಶರೀರಃ ಪ್ರಾತಃಪ್ರಾತರುತ್ಥಾಯ ಪಾಣಿಶುಕ್ತಿಮಾತ್ರಂ ಕ್ವಾದ್ರೇಣ ಪ್ರತಿಸಂಸೃಜ್ಯೋಪಯುಞ್ಜೀತ ಜೀರ್ಣೇ ಮುದ್ಗಾಮಲಕಯೂಷೇಣಾಲವಣೇನ ಸರ್ಪಿಷ್ಮನ್ತಂ ಖದಿರೋದಕಸಿದ್ಧಂ ಮೃದ್ವೋದನಮಶ್ನೀಯಾತ್‌ಖದಿರೋದಕಸೇವೀ, ಇತ್ಯೇವಂ ದ್ರೋಣಮುಪಯುಜ್ಯ ಸರ್ವಕುಷ್ಠೈರ್ವಿಮುಕ್ತಃ ಶುದ್ಧತನುಃ ಸ್ಮೃತಿಮಾನ್ ವರ್ಷಶತಾಯುರರೋಗೀ ಭವತಿ ||೧೪||

ಭವತಿಚಾತ್ರ—

ಸುರಾಮನ್ಥಸವಾರಿಷ್ಟಾಂಲ್ಲೇಹಾಂಶ್ಚೂರ್ಣಾನ್ಯಯಸ್ಕೃತೀಃ ।
ಸಹಸ್ರಶೋಽಪಿ ಕುರ್ವೀತ ಬೀಜೇನಾನೇನ ಬುದ್ಧಿಮಾನ್ ||೧೫||

ಕರಿಯಎಳ್ಳು, ಗೇರೆಣ್ಣೆ, ನೆಲ್ಲೀಕಾಯಿರಸ, ತುಪ್ಪ ಸರ್ಜವೃಕ್ಷ ಮೊದಲಾದವುಗಳ ಕಷಾಯ ಇವು ಪ್ರತಿಯೊಂದೂ ಒಂದೊಂದು ದ್ರೋಣ (೮ ಅಳತೆಸೇರು), ತ್ರಿಫಲೆ, ತ್ರಿಕಟು, ದೊಡ್ಡ ಈಚಲ ಹಣ್ಣಿನ ತಿರುಳು, ವಿಡಂಗದಬೀಜ, ಚಿತ್ರಮೂಲ, ಎಕ್ಕದ ಬೇರು, ಬಾವಂತಿಬೀಜ, ಅರಿಶಿನ, ಮರದರಿಶಿನ, ತಿಗಡೆಬೇರು, ಜಾಪಾಳದತೊಗಟೆ, ಕೊಡಸಿಗೆ ಬೀಜ, ಅತಿಮಧುರ, ಅತಿಬಜೆ, ರಸಾಂಜನ, ಪ್ರೇಂಖಣ ಇವು ಪ್ರತಿಯೊಂದೂ ಒಂದೊಂದು ಪಲದಂತೆ ಸೇರಿಸಿ ಕಲ್ಕಮಾಡಿ ತೈಲಘೃತಗಳನ್ನು ಮಿಶ್ರಕಸ್ನೇಹ ವಿಧಾನ

ದಿಂದ ಪಾಕಮಾಡಿ ಶೋಧಿಸಿ ಭದ್ರನಾಗಿಟ್ಟುಕೊಳ್ಳಬೇಕು. ಕುಷ್ಠರೋಗಿಗೆ ಸ್ನೇಹ ಸ್ವೇದವಮನವಿರೇಚನಾದಿಗಳಿಂದ ದೇಹಶೋಧನೆಮಾಡಿ ಪೇಯಾದಿಕ್ರಮದಿಂದುಪಚರಿಸಿ ಸ್ವಾಭಾವಿಕ ಬಲವುಂಟಾದಮೇಲೆ ಪ್ರತಿದಿನ ಪ್ರಾತಃಕಾಲದಲ್ಲೂ ಒಂದೊಂದು ಪಲದಷ್ಟು ಘೃತವನ್ನು ಜೇನುತುಪ್ಪ ಮಿಶ್ರಮಾಡಿ ಪ್ರಯೋಗಿಸಿ, ಜೀರ್ಣವಾದಮೇಲೆ ಹೆಸರು, ನೆಲ್ಲೀ ಕಾಯಿಗಳ ಕಟ್ಟು, ತುಪ್ಪ ಇವನ್ನು ಮಿಶ್ರಮಾಡಿ ಉಪ್ಪನ್ನು ಸೇರಿಸದೆ ಕಗ್ಗಲಿಕಷಾಯ ದಿಂದ ತಯಾರಿಸಿದ ಅನ್ನವನ್ನು (ಮೃದುವಾಗಿರುವಂತೆ ತಯಾರಿಸಿ) ಭೋಜನಮಾಡಿಸಿ ಕಗ್ಗಲಿಕಷಾಯವನ್ನೇ ಸ್ನಾನಪಾನಗಳಿಗೆ ಉಪಯೋಗಮಾಡಬೇಕು. ಈ ರೀತಿ ೧ ದ್ರೋಣಸ್ನೇಹವನ್ನು ಉಪಯೋಗಿಸಿದರೆ ಸಕಲಕುಷ್ಠಗಳಿಂದಲೂ ನಿವಾರಣೆಹೊಂದಿ ಶುದ್ಧ ದೇಹವುಳ್ಳವನಾಗಿ ಜ್ಞಾಪಕಶಕ್ತಿಹೊಂದಿ ರೋಗವಿಲ್ಲದೆ ೧೦೦ ವರ್ಷಕಾಲ ಬದುಕುತ್ತಾನೆ. ಇದೇ ವಿಷಯದಲ್ಲಿರುವ ಅಧಾರ ಶ್ಲೋಕದ ಅರ್ಥವು :—ಮದ್ಯ, ಮಾಂಸ, ಆಸವ, ಅರಿಷ್ಟ, ಲೇಹ, ಚೂರ್ಣ, ಅಯಸ್ಕೃತಿಗಳನ್ನು ಬುದ್ಧಿವಂತನಾದ ವೈದ್ಯನು ಮೇಲಿನ ಆಧಾರದಂತೆ ಸಹಸ್ರವಿಧವಾಗಿ ತಯಾರಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಮಹಾಕುಷ್ಠಚಿಕಿತ್ಸಾನಾಮಕ ದಶ
ಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ
ಕೃತ ಕರ್ಣಾಟಕಭಾಷಾವಿವೃತಿಃ

ಏಕಾದಶೋಽಧ್ಯಾಯಃ

ಅಥಾತಃ ಪ್ರಮೇಹ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಭಗವಾನ್ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಪ್ರಮೇಹ ಚಿಕಿತ್ಸೆಯನ್ನು ವಿವರಿಸುತ್ತೇನೆ.

ದ್ವೌ ಪ್ರಮೇಹೌ ಸಹಜೋಽಪಥ್ಯನಿಮಿತ್ತಶ್ಚ ಭವತಃ। ತತ್ರ ಸಹಜೋ ಮಾತೃ ಪಿತೃ ಬೀಜದೋಷಕೃತಃ ಅಹಿತಾಹಾರಜೋಽಪಥ್ಯನಿಮಿತ್ತಃ ತಯೋಃ ಪೂರ್ವೇಣೋಪದ್ರುತಃ ಕೃಶೋ ರೂಕ್ಷೋಽಲ್ಪಾಶೀ ಪಿಪಾಸುರ್ಭೃಶಂ ಪರಿಸರಣಶೀಲಶ್ಚ ಭವತಿ ಉತ್ತರೇಣ ಸ್ಥೂಲೋ ಬಹ್ವಾಶೀ ಸ್ನಿಗ್ಧಃ ಶಯ್ಯಾಸನಸ್ವಪ್ನಶೀಲಃ ಪ್ರಾಯೇಣೇತಿ ತತ್ರ ಕೃಶಮನ್ನಪಾನ ಪ್ರತಿಸಂಸ್ಕೃತಾಭಿಃ ಕ್ರಿಯಾಭಿಶ್ಚಿಕಿತ್ಸೇತ ಸ್ಥೂಲಮಪತರ್ಪಣಯುಕ್ತಾಭಿಃ ||೩||

ಸರ್ವ ಏವ ಚ ಪರಿಹರೇಯುಃ ಸೌವೀರಕತುಷೋದಕ ಶುಕ್ತಮೈರೇಯಸುರಾಸವತೋಯ ಪಯಸ್ತೈಲ ಘೃತೇಕ್ಷುವಿಕಾರದಧಿಪಿಷ್ಟಾನ್ನಾಮ್ಲ ಪಾನಕಾನಿ ಗ್ರಾಮ್ಯಾನೂಪೌದಕಮಾಂಸಾನಿ ಚೇತಿ ||೪||

ಸಹಜಕಾರಣ ಮತ್ತು ಅಪಥ್ಯಸೇವನ ಕಾರಣಗಳಿಂದ ಎರಡು ವಿಧ ಪ್ರಮೇಹ ರೋಗಗಳುಂಟಾಗುತ್ತವೆ. ಅವುಗಳ ಪೈಕಿ ಸಹಜಪ್ರಮೇಹವು ಮಾತಾಪಿತೃಗಳ ಬೀಜ ದೋಷದಿಂದಲೂ ಅಪಥ್ಯಕಾರಣದ ಪ್ರಮೇಹವು ಅಹಿತಾಹಾರಗಳ ಸೇವನೆಯಿಂದ ಹುಟ್ಟುತ್ತವೆ. ಅವುಗಳಲ್ಲಿ ಮೊದಲನೆಯದಾದ ಮಾತಪಿತೃಗಳ ಬೀಜದೋಷದಿಂದುಂಟಾದ ಪ್ರಮೇಹರೋಗಿಯು ಕೃಶನಾಗಿ ಮತ್ತು ರೂಕ್ಷದೇಹದಿಂದ ಕೂಡಿ ಅಲ್ಪಪ್ರಮಾಣದ ಆಹಾರವನ್ನು ತಿನ್ನುತ್ತಾ ನೀರಡಿಕೆಯುಳ್ಳವನಾಗಿ ತುಂಬಾ ಸಂಚರಿಸುವ ಸ್ವಭಾವವುಳ್ಳವನಾಗಿರುತ್ತಾನೆ. ಅಪಥ್ಯಸೇವನೆಯಿಂದುಂಟಾದ ಪ್ರಮೇಹ ರೋಗಿಯು ಸ್ಥೂಲದೇಹವುಳ್ಳವನಾಗಿ ಹೆಚ್ಚಾಗಿ ಭೋಜನಮಾಡುವ ಸ್ವಭಾವವುಳ್ಳವನಾಗಿ ಸ್ನಿಗ್ಧವಾದ ಶರೀರವುಳ್ಳವನಾಗಿಯೂ ಪ್ರಾಯಿಕವಾಗಿ ಹಾಸಿಗೆಯಲ್ಲಿ ಮಲಗಿಕೊಂಡೋ ಸುಖವಾದ ಆಸನದಲ್ಲಿ ಕೂತುಕೊಂಡೋ ನಿದ್ರೆಮಾಡುತ್ತಲೋ ಇರುವ ಸ್ವಭಾವವುಳ್ಳವನಾಗಿರುತ್ತಾನೆ. ಇವರ ಪೈಕಿ ಕೃಶದೇಹವುಳ್ಳ ಪ್ರಮೇಹರೋಗಿಗೆ ಹಿತವಾದ ಅನ್ನಪಾನಗಳನ್ನು ಒದಗಿಸಿಕೊಟ್ಟು ಚಿಕಿತ್ಸೆಮಾಡಬೇಕು. ಸ್ಥೂಲದೇಹವುಳ್ಳ ಪ್ರಮೇಹ ರೋಗಿಗೆ ಅಪತರ್ಪಣಮಾಡಿಸುವ ಕ್ರಿಯೆಗಳಿಂದ ಉಪಚರಿಸಬೇಕು. ಎಲ್ಲಾ ವಿಧದ ಪ್ರಮೇಹಿಗಳೂ ಕಲಗಚ್ಚು ತುಷೋದಕ (ಹೊಟ್ಟು ಸಹಿತ ನೆನೆಸಿದ ಧಾನ್ಯದ ನೀರು) ಕಂದಮೂಲಾದಿಗಳಿಂದ ತಯಾರಿಸಿದ ಪಾನೀಯವಿಶೇಷ, ಮೈರೇಯಸುರಾ ಎಂಬ ಮದ್ಯಭೇದಗಳನ್ನೂ ಆಸವಗಳನ್ನೂ ನೀರನ್ನೂ

ಹಾಲು ಎಣ್ಣೆ ತುಪ್ಪ ಬೆಲ್ಲ ಮೊಸರು ಹಿಟ್ಟುಗಳು ಹುಳಿಪದಾರ್ಥಗಳು ಪಾನಕಗಳು, ಆಡು ಮೊದಲಾದ ಗ್ರಾಮ್ಯ ಪ್ರಾಣಿಗಳ ಎಮ್ಮೆ ಮೊದಲಾದ ಅನೂಪಪ್ರಾಣಿಗಳ ಮೀನು ಮೊಸಳೆ ಮೊದಲಾದ ಜಲಚರ ಪ್ರಾಣಿಗಳ ಮಾಂಸಗಳನ್ನು ತ್ಯಜಿಸಬೇಕು.

ತತಃ ಶಾಲಿಷಷ್ಟಿಕಯವಗೋಧೂಮ ಕೋದ್ರವೋದ್ದಾಲಕಾನನವರ್ಾಭುಞ್ಜೀತ ಚಣ ಕಾಢಕೀಕುಳತ್ಥಮುದ್ಗವಿಕಲ್ಪೇನ ತಿಕ್ತಕಷಾಯಾಭ್ಯಾಂ ಶಾಕಗಣಾಭ್ಯಾಂ ನಿಕುಮ್ಭೇಙ್ಗುದೀಸರ್ಷ ಪಾತಸೀ ತೈಲಸಿದ್ಧಾಭ್ಯಾಂ ಬದ್ಧಮೂತ್ರೈರ್ವಾ ಜಾಙ್ಗಲೈರ್ಮಾಂಸೈರಪಹತಮೇದೋಭಿರನಮ್ಲೈ ರಘೃತೈಶ್ಚೇತಿ ||೫||

ಪಥ್ಯಾಹಾರಗಳು—ಹಳೆಯದಾಗಿರುವ ೬೦ ದಿನದ ಅಕ್ಕಿ, ಯವೆ, ಗೋಧಿ, ಹಾರಕ, ಕಾಡುಹಾರಕ, ಕಡಲೆ, ತೊಗರಿ, ಹುರುಳಿ, ಹೆಸರು ಇವುಗಳ ಅನ್ನಕ್ಕೆ ಇವುಗಳ ಪೈಕಿ ಯಾವುದಾದರೊಂದರ ಕಟ್ಟನ್ನೂ ಕಹಿಕಷಾಯರಸವನ್ನೂ ಮಿಶ್ರಮಾಡಿ ಜಾಪಾಳ ಇಂಗಳ, ಸಾಸಿವೆ, ಸೀಮೇಅಗಸೆ ಇವುಗಳ ಎಣ್ಣೆಯಿಂದ ತಯಾರಿಸಿದ, ಹುಳಿರಸ ಮತ್ತು ತುಪ್ಪಗಳನ್ನು ಸೇರಿಸದ, ಏಣದಮಾಂಸ, ಜಾಂಗಲಮಾಂಸ, ಮೇದಸ್ಸನ್ನು ತೆಗೆದ ಇವನ್ನು ಸೇವಿಸಬೇಕು.

ತತ್ರಾದಿತ ಏವ ಪ್ರಮೇಹಿಣಂ ಸ್ನಿಗ್ಧಮನ್ಯತಮೇನ ತೈಲೇನ ಪ್ರಿಯಙ್ಗ್ವಾದಿ ಸಿದ್ಧೇನ ವಾ ಘೃತೇನ ವಾಮಯೇತ್ ಪ್ರಗಾಢಂ ವಿರೇಚಯೇಚ್ಚ ವಿರೇಚನಾದನಂತರಂ ಸುರಸಾದಿಕಷಾ ಯೇಣಾಸ್ಥಾಪಯೇತ್ ಮಹೌಷಧ ಭದ್ರದಾರು ಮುಸ್ತಾವಾಪೇನ ಮಧುಸೈನ್ಧವಯುಕ್ತೇನ ದಹ್ಯ ಮಾನಂ ಚ ನ್ಯಗ್ರೋಧಾದಿ ಕಷಾಯೇಣ ನಿಃಸ್ನೇಹೇನ ||೬||

ದಂತಿತೈಲ, ಸಾಸಿವೆಎಣ್ಣೆ, ಬೇವಿನಎಣ್ಣೆ, ಅಗಸೆಎಣ್ಣೆ ಇವುಗಳ ಪೈಕಿ ಯಾವು ದೊಂದು ತೈಲದಿಂದಾಗಲೀ ಪ್ರಿಯಂಗು ಮೊದಲಾದುವುಗಳಿಂದ ತಯಾರಾದ ಘೃತ ದಿಂದಾಗಲೀ ಪ್ರಮೇಹ ರೋಗಿಗೆ ಸ್ನೇಹಕರ್ಮಮಾಡಿಸಿ ಕಫಾಧಿಕ್ಯದಲ್ಲಿ ವಮನವನ್ನೂ ವಿರೇಚನವನ್ನೂ ಮಾಡಿಸಿ ಅನಂತರ ತುಳಸಿ ಗಣೋಕ್ತದ್ರವ್ಯಗಳ ಕಷಾಯಕ್ಕೆ ಶುಂಠಿ, ದೇವದಾರು, ಕೊನ್ನಾರಿ ಗೆಡ್ಡೆಗಳ ಚೂರ್ಣವನ್ನೂ ಜೇನುತುಪ್ಪ ಸೈಂಧವಗಳನ್ನೂ ಸೇರಿಸಿ ಆಸ್ಥಾನಬಸ್ತಿಯನ್ನು ಪ್ರಯೋಗಿಸಬೇಕು. ಉರಿಯುಳ್ಳದ್ದಾದರೆ ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯದಿಂದ ಸ್ನೇಹಮಿಶ್ರಮಾಡದೆಯೇ ಆಸ್ಥಾಪನೆ ಮಾಡಬೇಕು.

ತತಃ ಶುದ್ಧದೇಹಮಾಮಲಕರಸೇನ ಹರಿದ್ರಾಂ ಮಧುಸಂಯುಕ್ತಾಂ ಪಾಯಯೇತ್ ತ್ರಿಫಲಾ ವಿಶಾಲಾ ದೇವದಾರು ಮುಸ್ತಕಷಾಯಂ ವಾ ಸಾಲಕಪ್ಪಿಲ್ಲಕಮುಷ್ಕಕ ಕಲ್ಕಮಕ್ಷಮಾತ್ರಂ ವಾ ಮಧುಮಧುರಮಾಮಲಕರಸೇನ ಹರಿದ್ರಾಯುತಮ್ ಕುಟಜಕ ಪಿತ್ಥರೋಹಿತ ವಿಭೀತಕ ಸಪ್ತಪರ್ಣಪುಷ್ಪಕಲ್ಕಂ ವಾ ನಿಮ್ಬಾರಗ್ವಧಸಪ್ತಪರ್ಣಮೂರ್ವಾಕುಟಜ ಸೋಮವೃಕ್ಷಪಲಾಶಾನಾಂ ವಾ ತ್ವಕ್ಪತ್ರಮೂಲಫಲಪುಷ್ಪಕಷಾಯಾಣಿ ಏತೇ ಪಞ್ಚಪ್ರಯೋಗಾಃ ಸರ್ವಮೇಹಾನಾಮುಪಹ ನ್ತಾರೋ ವ್ಯಾಖ್ಯಾತಾಃ ||೭||

ದೇಹಶುದ್ಧಿಮಾಡಿಕೊಂಡಿರುವ ಮೇಹರೋಗಿಗೆ ಅರಶಿನ ಜೇನುತುಪ್ಪಗಳನ್ನು ಮಿಶ್ರ ಮಾಡಿದ ನೆಲ್ಲೀಕಾಯಿರಸವನ್ನಾಗಲೀ, ತ್ರಿಫಲೆ, ದಾಸವಾಳ, ದೇವದಾರು, ಕೊನ್ನಾರಿ ಗೆಡ್ಡೆ ಇವುಗಳ ಕಷಾಯವನ್ನಾಗಲೀ, ಸರ್ಜವೃಕ್ಷ, ಕಪಿಲೆಹಿಟ್ಟು, ಮುಳ್ಳುಮುತ್ತುಗ ಇವು ಗಳ ಕಲ್ಕ ೧ ಕರ್ಷಪ್ರಮಾಣಕ್ಕೆ ಜೇನುತುಪ್ಪ ನೆಲ್ಲೀಕಾಯಿರಸ ಅರಿಶಿನದ ಪುಡಿಗಳನ್ನು ಸೇರಿಸಿಯಾಗಲೀ ಕೊಡಸಿಗೆತೊಗಟೆ ಬೇಲ ಬಿಳಿಬೂರಗ ತಾರೆಕಾಯಿ ಮದ್ದಾಲೆತೊಗಟೆ ಇವುಗಳ ಹೂವುಗಳ ಕಲ್ಕವನ್ನು ಸೇರಿಸಿಯಾಗಲೀ ಬೇವು ಕಕ್ಕೆ ಮದ್ದಾಲೆ ಕೊರಟಿಗೆ ಕೊಡಸಿಗೆ ಬಳಿಕಗ್ಗಲಿ (ಬಿಳಿಜಾಲ) ಮುತ್ತುಗಗಳ ತೊಗಟೆ ಎಲೆ ಬೇರು ಹಣ್ಣು ಹೂವು ಇವುಗಳ ಕಷಾಯವನ್ನಾಗಲೀ ಈ ೫ ವಿಧ ಪ್ರಯೋಗಗಳಿಂದ ಸಕಲಮೇಹರೋಗಗಳೂ ನಿವಾರಣೆಯಾಗುತ್ತವೆಂದು ವಿವರಿಸಲ್ಪಟ್ಟಿರುತ್ತದೆ.

ವಿಶೇಷತ್ವಶಾತಊರ್ಧ್ವಂ—ತತ್ರೋದಕಮೇಹಿನಂ ಪಾರಿಜಾತಕಷಾಯಂ ಪಾಯಯೇತ್ ಇಕ್ಷುಮೇಹಿನಂ ವೈಜಯನ್ತೀಕಷಾಯಮ್ ಸುರಾಮೇಹಿನಂ ನಿಮ್ಬಕಷಾಯಮ್ ಸಿಕತಾಮೇಹಿ ನಮ್ ಚಿತ್ರಕಕಷಾಯಂ ಶನೈರ್ಮೇಹಿನಂ ಖದಿರಕಷಾಯಂ ಲವಣಮೇಹಿನಂ ಪಾಠಾಗುರು ಹರಿದ್ರಾಕಷಾಯಂ ಪಿಷ್ಟಮೇಹಿನಂ ಹರಿದ್ರಾದಾರುಹರಿದ್ರಾಕಷಾಯಂ ಸಾನ್ದ್ರಮೇಹಿನಂ ಸಪ್ತ ಪರ್ಣಕಷಾಯಂ ಶುಕ್ರಮೇಹಿನಂ ದೂರ್ವಾಶೈವಲಪ್ಲವಹಠಕರಞ್ಜ ಕಸೇರುಕಕಷಾಯಂ ಕಕು ಭಚನ್ದನಕಷಾಯಂ ವಾ ಫೇನಮೇಹಿನಂ ತ್ರಿಫಲಾರಗ್ವಧಮೃದ್ವೀಕಾಕಷಾಯಂ ಮಧುಮಧುರಮಿತಿ ಪೈತ್ತಿಕೇಷು ನೀಲಮೇಹಿನಂ ಶಾಲಸಾರಾದಿಕಷಾಯಮಶ್ವತ್ಥಕಷಾಯಂ ವಾ ಪಾಯಯೇತ್ ಹರಿದ್ರ ಮೇಹಿನಂ ರಾಜವೃಕ್ಷಕಷಾಯಂ ಅಮ್ಲಮೇಹಿನಂ ನ್ಯಗ್ರೋಧಾದಿಕಷಾಯಂ ಮಧುಮಿಶ್ರಂ ಕ್ಷಾರ ಮೇಹಿನಂ ತ್ರಿಫಲಾಕಷಾಯಂ ಮಞ್ಜಿಷ್ಠಾಮೇಹಿನಂ ಮಞ್ಜಿಷ್ಠಾಚನ್ದನಕಷಾಯಂ ಶೋಣಿತ ಮೇಹಿನಂ ಗುಡೂಚೀತಿನ್ದುಕಾಸ್ಥಿಕಾಶ್ಮರ್ಯಖರ್ಜೂರಕಷಾಯಂ ಮಧುಮಿಶ್ರಂ ಅತಊರ್ಧ್ವ ಮಸಾಧ್ಯೇಷ್ವಪಿ ಯೋಗಾನ್ ಯಾಪನಾರ್ಥಂ ವಕ್ಷ್ಯಾಮಃ ತದ್ಯಥಾ—ಸರ್ಪಿರ್ಮೇಹಿನಂ ಕುಷ್ಠ ಕುಟಜಪಾಠಾಹಿಙ್ಗುಕಟುರೋಹಿಣೀಕಲ್ಕಂ ಗುಡೂಚೀಚಿತ್ರಕಕಷಾಯೇಣ ಪಾಯಯೇತ್ ವಸಾ ಮೇಹಿನಮಗ್ನಿಮನ್ಥಕಷಾಯಂ ಶಿಂಶಪಾಕಷಾಯಂ ವಾ ಕ್ಷೌದ್ರಮೇಹಿನಂ ಖದಿರಕ್ರಮುಕಕಷಾಯಂ ಹಸ್ತಿಮೇಹಿನಂ ತಿನ್ದುಕಕಪಿತ್ಥಶಿರೀಷಪಲಾಶಪಾಠಾಮೂರ್ವಾದುಸ್ಪರ್ಶಾಕಷಾಯಂ ಮಧುಮಿಶ್ರಂ ಹಸ್ತ್ಯಶ್ವಶೂಕರೋಷ್ಟ್ರಾಸ್ಥಿಕ್ಷಾರಂ ಚೇತಿ ದಹ್ಯಮಾನಮೌದಕಕನ್ದಕ್ವಾಥಸಿದ್ಧಾಂ ಯವಾಗೂಂ ಕ್ಷೀರೇಕ್ಷುರಸಮಧುರಾಂ ಪಾಯಯೇತ್ ॥೮॥

ಇನ್ನುಮುಂದೆ ವಿಶೇಷಚಿಕಿತ್ಸೆಯನ್ನು ಹೇಳುತ್ತೇವೆ—(೧೦ ವಿಧ ಕಫಮೇಹಗಳಲ್ಲಿ ಉದಕಮೇಹಿಗೆ ಪಾರಿಜಾತದತೊಕ್ಕಿನ ಕಷಾಯವನ್ನೂ, ಇಕ್ಷುಮೇಹಿಗೆ ಛಗ್ಗಿಸೊಪ್ಪಿನ ಕಷಾಯವನ್ನೂ ಸುರಾಮೇಹಿಗೆ ಬೇವಿನತೊಗಟೆ ಕಷಾಯವನ್ನೂ ಸಿಕತಾಮೇಹಿಗೆ ಚಿತ್ರ ಮೂಲದ ಕಷಾಯವನ್ನೂ ನಿದಾನವಾಗಿ ಸ್ವಲ್ಪಸ್ವಲ್ಪ ಮೂತ್ರಿಸುವವನಿಗೆ ಕಗ್ಗಲಿ ತೊಗಟೆಯ ಕಷಾಯವನ್ನೂ ಲವಣಮೇಹಿಗೆ ಅಗಳುಶುಂಠಿ ಅಗಿಲು ಅರಶಿನಗಳ ಕಷಾಯ ವನ್ನೂ ಪಿಷ್ಟಮೇಹಿಗೆ ಅರಿಶಿನ ಮರದರಿಶಿನಗಳ ಕಷಾಯವನ್ನೂ ಸಾನ್ದ್ರಮೇಹಿಗೆ ಮದ್ದಾಲೆ ತೊಗಟೆಯ ಕಷಾಯವನ್ನೂ ಶುಕ್ರಮೇಹಿಗೆ ಎಳೆಯ ಗರಿಕೆಯಬೇರು ಪಾಚಿ

ಗೋಪಾಲದವನ (ಪ್ಲಕ್ಷ ಗೋಣಿತೊಕ್ಕು) ಜಲಕುಪ್ಪಿಯೆಂಬ (ಝೂನ್ಸಿ ಮೊದಲಾದ ಪ್ರದೇಶದಲ್ಲಿ ಸಿಕ್ಕುವ ನೀರಿನಿಂದ ತುಂಬಿರುವ ಸಣ್ಣ ಕಾಯಿ) ಹೊಂಗೆತೊಗಟೆ ಕೊತ್ತಿಗಡ್ಡೆ ಇವುಗಳ ಕಷಾಯವನ್ನೂ ಅಥವಾ ಮತ್ತಿತೊಗಟೆ ಶ್ರೀಗಂಧಗಳ ಕಷಾಯವನ್ನೂ, ಫೇನ ಮೇಹಿಗೆ ತ್ರಿಫಲೆ ಕಕ್ಕೆಚಿಗರು ದ್ರಾಕ್ಷಿ ಇವುಗಳ ಕಷಾಯವನ್ನೂ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು. ೬ ವಿಧ ಪಿತ್ತಮೇಹಗಳಲ್ಲಿ ನೀಲಮೇಹಿಗೆ ಸಾಲಸಾರಾದಿ ಗಣದ್ರವ್ಯಗಳ ಕಷಾಯವನ್ನಾಗಲೀ ಅರಳಿತೊಕ್ಕಿನ ಕಷಾಯವನ್ನಾಗಲೀ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು. ಹೀಗೆಯೇ ಹರಿದ್ರಾಮೇಹಿಗೆ ಕಕ್ಕೆತೊಗಟೆ ಚಿಗರುಗಳ ಕಷಾಯವನ್ನೂ ಅಮ್ಲಮೇಹಿಗೆ ಆಲ ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯವನ್ನೂ ಕ್ಷಾರಮೇಹಿಗೆ ತ್ರಿಫಲಾ ಕಷಾಯವನ್ನೂ ಮಾಂಜಿಷ್ಠಮೇಹಿಗೆ ಮಂಜಿಷ್ಠೆ ಮತ್ತು ಕೆಂಪು ಗಂಧಗಳ ಕಷಾಯವನ್ನೂ ರಕ್ತಮೇಹಿಗೆ ಅಮೃತವಳ್ಳಿ ತೂಪರೆಗಿಡದಕೆಚ್ಚು ಶಿವನಿತೊಗಟೆ ಖರ್ಜೂರ ಗಳ ಕಷಾಯವನ್ನೂ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು. ಇನ್ನು ಮುಂದೆ ಅಸಾಧ್ಯಗಳಾದ ೪ ವಿಧ ವಾತಮೇಹಗಳಿಗೆ (ಯಾಪನೆಗಾಗಿ) ಯೋಗಗಳನ್ನು ಹೇಳು ತ್ತೇವೆ. ಹೇಗೆಂದರೆ—ಸರ್ಪಿರ್ಮೇಹಿಗೆ ಚಂಗಲ್‌ಕೋಷ್ಠ ಕೊಡಸಿಗೆತೊಗಟೆ ಅಗಳು ಶುಂಠಿ ಹಿಂಗು ಕಟುಕರೋಹಿಣಿ ಇವುಗಳ ಕಲ್ಕವನ್ನು ಅಮೃತವಳ್ಳಿ ಚಿತ್ರಮೂಲಗಳ ಕಷಾಯದಲ್ಲಿ ಕದರಿಯೂ, ವಸಾಮೇಹಿಗೆ ಥಗ್ಗಿಸೊಪ್ಪಿನ ಕಷಾಯವನ್ನಾಗಲೀ ಬೀಟೆ ತೊಗಟೆಯ ಕಷಾಯವನ್ನಾಗಲೀ ಕ್ಷೌದ್ರಮೇಹಿಗೆ ಅರಶಿನಬಣ್ಣದ ಚೇಗಿರುವ (ಮಧ್ಯ ಭಾಗದ ಗಟ್ಟಿಮರ) ಕಗ್ಗಲಿಮರದ ಮತ್ತು ಅಡಿಕೆಗೋಟುಗಳ ಕಷಾಯವನ್ನೂ ಹಸ್ತಿ ಮೇಹಿಗೆ ತೂಪರೆಚಕ್ಕೆ ಬೇಲದತೊಗಟೆ ಬಾಗೆತೊಗಟೆ ಮುತ್ತುಗದತೊಗಟೆ ಅಗಳುಶುಂಠಿ ಕೊರಟಿಗೆ ಹಂಬು ತುರುಚನಬಳ್ಳಿ ಇವುಗಳ ಕಷಾಯಕ್ಕೆ ಜೇನುತುಪ್ಪ ಮಿಶ್ರಮಾಡಿ ಆನೆ ಕುದುರೆ ಹಂದಿ ಒಂಟೆ ಇವುಗಳ ಮೂಳೆಗಳನ್ನು ಸುಟ್ಟು ತಯಾರಿಸಿದ ಕ್ಷಾರವನ್ನು ಮಿಶ ಮಾಡಿಯಾಗಲೀ ಕುಡಿಸಬೇಕು. (ಆನೆ ಮೊದಲಾದುವುಗಳ ಮೂಳೆಗಳ ಕ್ಷಾರೋದಕವು ತಣ್ಣಗಿದ್ದರೂ ಒರಟಾಗಿಯೂ ಚುರುಕಾಗಿಯೂ ಇರುತ್ತದೆ). ಪ್ರಮೇಹಿಗಳಿಗೆ ಅಪ್ ಧಾತುವು ಕ್ಷೀಣವಾಗಿ ಅದಕ್ಕೆ ವಿರೋಧಿಯಾದ ಪಿತ್ತವೃದ್ಧಿಯಾಗುವುದರಿಂದ ಮೈಉರಿತವುಂಟಾಗುತ್ತದೆ.ಅವರಿಗೆ ತಾವರೆಗೆಡ್ಡೆ ಮೊದಲಾದ ಉದಕಕಂದಗಳ ಕ್ವಾಥದಿಂದ ತಯಾರಿಸಿದ ಯವಾಗುವಿಗೆ ಹಾಲು ಮತ್ತು ಕಬ್ಬಿನರಸಗಳನ್ನು ಸೇರಿಸಿ ಕುಡಿಸಬೇಕು.

ಟಿಪ್ಪಣಿ— ೧ ಕರ್ಷದ್ರವ್ಯವನ್ನು ೧ ಪ್ರಸ್ಥನೀರಿಗೆ ಹಾಕಿ ಅರ್ಧಭಾಗ ಇಂಗಿಸಿ ಪಾನಕ್ಕೂ ಪೇಯಾದಿಗಳನ್ನು ತಯಾರಿಸುವುದಕ್ಕೂ ಉಪಯೋಗಿಸಬೇಕು. ಹೀಗೆಯೇ ಷಡಂಗ ಪಾನೀಯವನ್ನು ತಯಾರಿಸುವ ವಿಧಾನವು. ಹಿಂದೆ ಯವಾಗೂ ಪಾನವನ್ನು ನಿಷೇಧಿಸಿರುತ್ತದೆಯಾದರೂ ಪಿತ್ತಮೇಹದಲ್ಲಿ ಹಾಲು ಕಬ್ಬಿನರಸಗಳನ್ನು ಸೇರಿಸಿ ಸಿಹಿ ಮಾಡಿದ ಯವಾಗುವನ್ನು ಕುಡಿಸಬೇಕು. ವಾತಕಫಮೇಹಿಗೆ ಯವಾಗೂ ಪಾನವು ನಿಷಿದ್ಧವಾದದ್ದು.

ತತಃ ಪ್ರಿಯಙ್ಗ್ವನನ್ತಾಯೂಥಿಕಾ ಪದ್ಮಾತ್ರಾಯನ್ತಿ ಕಾಲೋಹಿತಿಕಾಽಮ್ಬಷ್ಠಾದಾಡಿಮತ್ವಕ್ ಶಾಲಪರ್ಣೀಪದ್ಮತುಙ್ಗಕೇಸರಧಾತಕೀಬಕುಳ ಶಾಲ್ಮಲೀಶ್ರೀವೇಷ್ಟಕಮೋಚರಸೇಷ್ವರಿಷ್ಟಾನಯಸ್ಕೃತೀರ್ಲೇಹಾನಾಸವಾಂಕುರ್ವೀತ ಶೃಙ್ಗಾಟಕಗಿಲೋಡ್ಯಬಿಸಮೃಣಾಳ ಕಸೇರುಕಮಧೂಕಾಮ್ರಜಮ್ಬ್ವಸನತಿನಿಶಕಕುಭ ಕಟ್ವಙ್ಗರೋಧ್ರ ಭಲ್ಲಾತಕ ಚರ್ಮಿವೃಕ್ಷಗಿರಿಕರ್ಣಿಕಾ ಶೀತಶಿವನಿಚುಲದಾಡಿಮಾಜಕರ್ಣ ಹರಿವೃಕ್ಷ ರಾಜಾದನಗೋಪಘೋಣ್ಟಾವಿಕಙ್ಕತೇಷು ವಾ ಯವಾನ್ನವಿಕಾರಾಂಶ್ಚ ಸೇವೇತ, ಯಥೋಕ್ತ ಕಷಾಯಸಿದ್ಧಾಂ ಚಾಸ್ಮೈ ಯವಾಗೂಂ ಪ್ರಯಚ್ಛೇತ್ ಕಷಾಯಾಣಿ ವಾ ಪಾತುಮ್ ||೯||

ಮೇಹರೋಗಗಳಿಗೆ ಅರಿಷ್ಟಕಲ್ಪನೆಯನ್ನು ಹೇಳುತ್ತಾರೆ—ಪ್ರೇಂಖಣ ಸೊಗದೆ ಹಂಬು (ತುರುಚ) ಮೊಲ್ಲೆಮೊಗ್ಗು ಗಂಟುಪರಂಗಿ ತಾವರೆಹೂವು ಕಹಿದಸರಿ ಮಂಜಿಷ್ಠ ಅಮಟೆತೊಗಟೆ ದಾಳಿಂಬೆತೊಗಟೆ ಮೂರೆಲೆಹೊನ್ನೆ ತಾವರೆಕುಸುಮ ನಾಗಕೇಸರಿ ಧಾತಕೀಕುಸುಮ ಪಗಡೆತೊಗಟೆ ಬೂರಗದತೊಗಟೆ ಧೂಪದಮರದತೊಗಟೆ ಎಲುವದಹಗಿನು ಇವುಗಳಿಂದ ಅರಿಷ್ಟಗಳನ್ನೂ ಅಯಸ್ಕೃತಿಗಳನ್ನೂ ಲೇಹಗಳನ್ನೂ ಆಸವಗಳನ್ನೂ ತಯಾರಿಸಬೇಕು. ಮುಮ್ಮೂಲೆಗೆಡ್ಡೆ ತಾವರೆಬೀಜ ತಾವರೆದಂಟು ತಾವರೆಬೇರು ಕೊತ್ತಿಗೆಡ್ಡೆ ಅತಿಮಧುರ ಮಾವಿನಬೀಜ ನೇರಳೆಬೀಜ ಕೆಂಪುಹೊನ್ನೆ ಸ್ಯಂದನವೃಕ್ಷ ಮತ್ತಿ ಹೆಮ್ಮರ ರೋಧ್ರ ಗೇರು ಭುಜಪತ್ರೆ ಬಿಳಿಗಿರಿಕರ್ಣಿಕೆ ಸಬ್ಬಸಿಗೆಸೊಪ್ಪು ನೀರುಹಬ್ಬೆ ದಾಳಿಂಬೆ ತೊಗಟೆ ಧೂಪದಮರ ಕೊಡಶಿಗೆ ಮರಹಾಲೆ ಕಾಡುಎಲಚಿ ತಂಡಸಿಗಿಡ ಇವುಗಳಿಂದಲೂ ಅರಿಷ್ಟ ಅಯಸ್ಕೃತಿ ಮೊದಲಾದುವನ್ನು ತಯಾರಿಸಬೇಕು. ಯವಧಾನ್ಯದ ಅನ್ನವನ್ನು ಸೇವಿಸಬೇಕು. ಮೇಲಿನ ಕಷಾಯವನ್ನೂ ಆ ಕಷಾಯದಿಂದ ತಯಾರಿಸಿದ ಯವಾಗೂವನ್ನೂ ಕುಡಿಸಬೇಕು.

ಟಿಪ್ಪಣಿ—ಗಿಲೋಡ್ಯ ತಾವರೆಬೀಜ ಕೊಳವಳಿಕೆ ಎಂದೂ ಚರ್ಮಣ್ವತೀ ತೀರದಲ್ಲಿ ಮಳೆಗಾಲದಲ್ಲಿ ಬೆಳೆಯುವ ಸೆಣಬಿನ ಎಲೆಯಂತಿರುವಬಳ್ಳಿ (ಗಿಲಗಿಟ್) ಎಂದೂ ತಿನಿಶಃ ವಂಜುಳವೆಂದು ನಿಚುಲಃ (ನೀರಂಜಿಗಿಡ) ಹರಿವೃಕ್ಷಮರದರಿಶಿನ ರಾಜಾದನ ಚಾರಪೊಪ್ಪು ಗೋಪಘೋಂಟಾ ಸಣ್ಣಬೋರೆಗಿಡ ಶ್ರೀವೇಷ್ಟಕಃ ಸರಳನಿರ್ಯಾಸ (ನವನೀತ ಧೂಪ) ಮೋಚರಸ ಶಾಲ್ಮಲಿನಿರ್ಯಾಸ ಶೃಂಗಾಟಕಂ (ಜಲಮಧ್ಯೆತ್ರಿಕಣ್ಟಕಂ) ಮುಮ್ಮೂಲೆಗೆಡ್ಡೆ.

ಮಹಾಧನುಮಹಿತಾಹಾರಮೌಷಧದ್ವೇಷಿಣಮಿಾಶ್ವರಂ ವಾ ಪಾಠಾಽಭಯಾ ಚಿತ್ರಕ ಪ್ರಗಾಢಮನಲ್ಪಮಾಕ್ಷಿಕಮಸ್ನತಮಮಾಸವಂ ಪಾಯಯೇತ್ ಅಙ್ಗಾರಶೂಲ್ಯಾವದಂಶಂ ವಾ ಮಾಧ್ವೀಕಮಭೀಕ್ಷ್ಣಮ್-ವ ಧುಕಪಿತ್ಥಮರಿಚಾನುವಿದ್ಧಾನಿ ಚಾಸ್ಮೈಪಾನಾನ್ಯುಪಹರೇತ್ ಉಷ್ಟ್ರಾಶ್ವತರಖರಪುರೀಷಚೂರ್ಣಾನಿ ಚಾಸ್ಮೈದದ್ಯಾದಶನೇಷು। ಹಿಙ್ಗುಸೈನ್ಧವ ಯುಕ್ತೈರ್ಯೂಷೈಃ ಸಾರ್ಪೈಶ್ಚ ರಾಗೈರ್ಭೋಜಯೇತ್ । ಅವಿರುದ್ಧಾನಿ ಚಾಸ್ಮೈ ಪಾನಭೋಜನಾನ್ಯುಪಹರೇದ್ರಸವನ್ತಿ।

ಪ್ರವೃದ್ಧಮೇಹಾಸ್ತು ವ್ಯಾಯಾಮನಿಯುದ್ಧ ಕ್ರೀಡಾಗಜತುರಗ ರಥಪದಾತಿಚರ್ಯಾ ಪರಿಕ್ರಮಾಣಾನಿ ಅಸ್ತ್ರೋಪಾಸ್ತ್ರೇ ವಾ ಸೇವೇರನ್ ||೧೦||

ಧನಿಕರು, ರಾಜರು, ಅಹಿತಾಚಾರ ಮಾಡುವವರು, ಔಷಧದ್ವೇಷಿಗಳು ಕೂಡ ಅಗಳುಶುಂಠಿ, ಅಣಿಲೆಶಿಪ್ಪೆ, ಚಿತ್ರಮೂಲ ಇವುಗಳನ್ನೇ ಹೆಚ್ಚು ಪ್ರಮಾಣದಲ್ಲಿ ಸೇರಿಸಿ ತಯಾರಿಸಿದ ಆಸವಗಳಲ್ಲೊಂದನ್ನು ಹೆಚ್ಚಾಗಿ ಜೇನುತುಪ್ಪ ಮಿಶ್ರಮಾಡಿ ಕುಡಿಯಬೇಕು. ಕೆಂಡದಲ್ಲಿ ಬೇಯಿಸಿದ ಮಾಂಸವನ್ನು ತಿಂದು ಅಧಿಕ ಪ್ರಮಾಣದಿಂದ ಮಾಧ್ವೀಕಾಸವವನ್ನು ಕುಡಿಯಬೇಕು. (ತಂತಿಯ ಮುಳ್ಳಿಗೆ ಮಾಂಸದ ತುಂಡನ್ನು ಚುಚ್ಚಿ ಕೆಂಡದಲ್ಲಿ ಸುಡಬೇಕೆಂದು ಅರ್ಥವು). ಜೇನುತುಪ್ಪ, ಬೇಲದಹಣ್ಣು, ಮೆಣಸಿನಪುಡಿಗಳನ್ನು ಸೇರಿಸಿದ ಪಾನಕಗಳನ್ನು ಕುಡಿಯಬೇಕು. ಒಂಟೆ, ಹೇಸರಕತ್ತೆ, ಕತ್ತೆ ಇವುಗಳ ಲದ್ದಿಯ ಚೂರ್ಣವನ್ನು ಆಹಾರದೊಡನೆ ಸೇವಿಸಬೇಕು. ಹುರುಳಿ ಮೊದಲಾದುವುಗಳ ಕಟ್ಟಿಗೆ, ಸೈಂಧವ, ಸಾಸಿವೆಗಳನ್ನು ಮಿಶ್ರಮಾಡಿದ ರಾಗಖಾಂಡವಗಳೊಡನೆ ಭೋಜನ ಮಾಡಬೇಕು. ಅಹಿತವಲ್ಲದ ರಸವಿಲ್ಲದ ಪಾನಭೋಜನಗಳನ್ನು ಸೇವಿಸಬೇಕು. ಪ್ರವೃದ್ಧ ಮೇಹರೋಗಿಗಳು ವ್ಯಾಯಾಮ, ಕುಸ್ತಿ, ಆಟಪಾಟ, ಆನೆ, ಕುದುರೆ, ರಥ, ಪದಾತಿಗಳ ಸವಾರಿಯನ್ನೂ ಅಸ್ತ್ರಪ್ರಯೋಗಗಳನ್ನೂ ಮಾಡಬೇಕು.

ಅಧನಸ್ತು ಅಬಾನ್ಧವೋ ವಾ ಪಾದತ್ರಾಣಾತಪತ್ರವಿರಹಿತೋ ಭೈಕ್ಷ್ಯಾಶೀ ಗ್ರಾಮೈಕರಾತ್ರಾನುವಾಸೀ ಮುನಿರಿವ ಸಂಯತಾತ್ಮಾ ಯೋಜನಶತಮಧಿಕಂ ವಾ ಗಚ್ಛೇತ್ ಮಹಾಧನೋ ವಾ ಶ್ಯಾಮಕನೀವಾರ ವೃತ್ತಿರಾಮಲಕ ಕಪಿತ್ಥ ತಿನ್ದುಕಾಶ್ಮನ್ತಕ ಫಲಾಹಾರೋ ಮೃಗೈಃ ಸಹ ವಸೇತ್, ತನ್ಮೂತ್ರಶಕೃದ್ಭಕ್ಷೀ ಸತತಮನುವ್ರಜೇತ್ ಗಾಂ ಬ್ರಾಹ್ಮಣೋ ವಾ ಶಿಲೋಞ್ಛವೃತ್ತಿರ್ಭೂತ್ವಾ ಬ್ರಹ್ಮರಥಮುಪಧಾರಯೇತ್ ಪಠೇತ್ ಸತತಂ ಇತರಃ ಖನೇದ್ವಾ ಕೂಪಂ ಕೃಶಂ ತು ಸತತಂ ರಕ್ಷೇತ್ ||೧೧||

ಭವತಿ ಚಾತ್ರ—ಅಧನೋ ವೈದ್ಯಸಂದೇಶಾದೇವಂ ಕುರ್ವನ್ನತನ್ದ್ರಿತಃ । ಸಂವತ್ಸರಾದನಂತರಾದ್ವಾ ಪ್ರಮೇಹಾತ್ಪ್ರತಿಮುಚ್ಯತೇ ||೧೨||

ನಿರ್ಗತಿಕನೂ, ಬನ್ಧುಗಳಿಲ್ಲದ ಅನಾಥನೂ, ಪಾದರಕ್ಷೆ, ಛತ್ರಿಗಳಿಲ್ಲದೆ ನಡೆಯುತ್ತಾ ಭಿಕ್ಷೆಮಾಡಿಕೊಂಡು ದಿನಕ್ಕೆ ಒಂದು ಊರಿನಂತೆ ಸಂಚಾರಮಾಡುತ್ತಲೂ ಋಷಿಗಳಂತೆ ಜಿತೇನ್ದ್ರಿಯನಾಗಿ ೧೦೦ ಗಾವುದದವರೆಗೂ ಅದಕ್ಕಿಂತಲೂ ಹೆಚ್ಚಾಗಿಯೂ ನಡೆಯಬೇಕು. ಹಣವಂತನೂ ಕೂಡ ಸಾಮೆ, ನಿವಾರತೃಣ ಧಾನ್ಯಗಳನ್ನು ತಿಂದು ನೆಲ್ಲಿಕಾಯಿ, ಬೇಲದಹಣ್ಣು, ತೂಪರೆಹಣ್ಣು, ಅರಿಹಣ್ಣುಗಳನ್ನು ತಿನ್ನುತ್ತಾ ಜಿಂಕೆಗಳೊಡನೆ ವಾಸಮಾಡುತ್ತಾ ಅವುಗಳ (ಹಸುಗಳ) ಮಲಮೂತ್ರಗಳನ್ನೇ ಆಹಾರಪಾನಗಳನ್ನಾಗಿ ಸೇವಿಸಬೇಕು. ಸರ್ವದಾ ಹಸುಗಳೊಡನೆಯೇ ವಾಸಮಾಡಬೇಕು. ಬ್ರಾಹ್ಮಣನು ಶಿಲಾವೃತ್ತಿ (ನೆಲದಮೇಲೆ ಬಿದ್ದ ಧಾನ್ಯಗಳನ್ನೂ ಸಸ್ಯಗಳನ್ನೂ ಸೊಪ್ಪುಗಳನ್ನೂ ಆರಿಸಿ ತಂದು ತಿನ್ನುವುದಕ್ಕೆ ಶಿಲೆಯೆಂದು ಹೆಸರು), ಒಂದೊಂದು ಕಾಳಾಗಿ ನೆಲದಮೇಲೆ ಬಿದ್ದ

ಧಾನ್ಯಗಳನ್ನು ಆರಿಸಿ ಕೂಡಿಸುವುದಕ್ಕೆ ಶಿಲಃ ಎಂದು ಹೆಸರು. ನೆಲದಲ್ಲಿ ಬೆಳೆದಿರುವ ಸೊಪ್ಪನ್ನು ಕಿತ್ತು ಸೇವಿಸಿದರೆ ಉಂಛವೆಂದು ಹೆಸರು. ರಥದಲ್ಲಿ ಬ್ರಾಹ್ಮಣರನ್ನು ಕೂಡಿಸಿ ಎತ್ತು ಕುದುರೆಗಳನ್ನು ಕಟ್ಟದೆ ತಾನು ಎಳೆಯುವುದು ಬ್ರಹ್ಮರಥವೆಂದು ಹೆಸರು. ಅಥವಾ ವೇದಾಧ್ಯಯನ ಮಾಡುವುದೇ ಬ್ರಹ್ಮರಥವೆನಿಸುತ್ತದೆ. ನಿರ್ಧನನಾದ ಶೂದ್ರನು ವೈದ್ಯನ ಸಲಹೆಯಂತೆ ಹೀಗೆ ನಡೆದರೆ ಒಂದು ವರ್ಷದಮೇಲೆ ಅಥವಾ ಮೊದಲೇ ಪ್ರಮೇಹ ರೋಗದಿಂದ ಬಿಡಲ್ಪಡುತ್ತಾನೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಪ್ರಮೇಹಚಿಕಿತ್ಸಾ ನಾಮಕೈಕಾದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕ ಭಾಷಾವಿವೃತಿಃ

ದ್ವಾದಶೋಽಧ್ಯಾಯಃ

ಅಥಾತಃ ಪ್ರಮೇಹಪಿಡಕಾಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ॥೧॥

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಪ್ರಮೇಹಪಿಡಕಾಚಿಕಿತ್ಸೆಯು ವಿವರಿಸಲ್ಪಡುತ್ತದೆ.

ಶರಾವಿಕಾದ್ಯಾ ನವಪಿಡಕಾಃ ಪ್ರಾಗುಕ್ತಾಸ್ತಾಃ ಪ್ರಾಣವತೋಽಲ್ಪಾಸ್ತ್ವಙ್ಮಾಂಸಪ್ರಾಪ್ತಾಃ ಮೃದ್ವ್ಯೋಽಲ್ಪರುಜಃ ಕ್ಷಿಪ್ರಪಾಕಭೇದಿನ್ಯಶ್ಚ ಸಾಧ್ಯಾಃ ತಾಭಿರುಪದ್ರುತಂ ಪ್ರಮೇಹಿಣಮುಪಚರೇತ್ ॥೩॥

ಹಿಂದೆ ಹೇಳಿದ ಶರಾವಿಕಾದಿನೀಪಿಡಿಕೆಗಳೂ ಬಲಶಾಲಿಯಾದ ಮನುಷ್ಯನಿಗೆ ಸ್ವಲ್ಪಮಾತ್ರವಿದ್ದು ಚರ್ಮಮಾಂಸಗಳಿಗೆ ವ್ಯಾಪಿಸಿ ಮೆತ್ತಗಿದ್ದು ಸ್ವಲ್ಪಮಾತ್ರವೇ ನೋವಿದ್ದರೆ ಬೇಗ ಪಾಕವಾಗಿ ಒಡೆದುಹೋದರೆ ಸಾಧ್ಯವಾಗುತ್ತವೆ. ಆ ಪಿಡಿಕೆಗಳಿಂದ ಪೀಡಿತನಾದ ಪ್ರಮೇಹರೋಗಿಗೆ ಚಿಕಿತ್ಸೆಮಾಡಬೇಕು.

ಟಿಪ್ಪಣಿ : ಪ್ರಮೇಹವು ಪಿಡಿಕೆಗಳ ಪೂರ್ವರೂಪವು ಎಂದು ಬೇರೆ ಗ್ರಂಥಕಾರರ ಮತವು ಪಿಡಿಕೆಗಳಿಗೆ ಚಿಕಿತ್ಸೆಮಾಡಿದರೆ ಪ್ರಮೇಹಗಳಿಗೆ ಚಿಕಿತ್ಸೆಮಾಡಿದಂತೆಯೇ ಆಗುತ್ತದೆ. ಅಥವಾ ಪ್ರಮೇಹಚಿಕಿತ್ಸೆಯಿಂದಲೇ ಪಿಡಿಕಾಚಿಕಿತ್ಸೆಯನ್ನೂ ಮಾಡಿದಂತೆಯೇ ಆಗುತ್ತದೆಂದು ಬೇರೆ ತಂತ್ರಕಾರರ ಮತವು.

ತತ್ರ ಪೂರ್ವರೂಪೇಷು ಅಪತರ್ಪಣಂ ಕಷಾಯಂ ಬಸ್ತಮೂತ್ರಂ ಚೋಪದಿಶೇತ್ । ಏವಮಕುರ್ವತಸ್ತಸ್ಯ ಮಧುರಾಹಾರಸ್ಯ ಮೂತ್ರಂ ಸ್ವೇದಃ ಶ್ಲೇಷ್ಮಾ ಚ ಮಧುರೀಭವತಿ ಪ್ರಮೇಹಶ್ಚಾಭಿವ್ಯಕ್ತೋ ಭವತಿ ತತ್ರೋಭಯತಃ ಸಂಶೋಧನಮಾಸೇವೇತ । ಏವಮಕುರ್ವತಸ್ತಸ್ಯ ದೋಷಾಃ ಪ್ರವೃದ್ಧಾಃ ಮಾಂಸಶೋಣಿತಂ ಪ್ರದೂಷ್ಯ ಶೋಫಂ ಜನಯನ್ತ್ಯುಪದ್ರವಾನ್ವಾ ಕಾಂಶ್ಚಿತ್ ತತ್ರೋಕ್ತಃ ಪ್ರತೀಕಾರಃ ಸಿರಾಮೋಕ್ಷಶ್ಚ ಏವಮಕುರ್ವತಸ್ತಸ್ಯ ಶೋಫೋ ವೃದ್ಧೋಽತಿಮಾತ್ರರುಜೋ ವಿದಾಹಮಾಪದ್ಯತೇ ತತ್ರ ಶಸ್ತ್ರಪ್ರಣಿಧಾನಮುಕ್ತಂ ವ್ರಣಕ್ರಿಯೋಪಸೇವಾ ಚ ಏವಮಕುರ್ವತಸ್ತಸ್ಯ ಪೂಯೋಽಭ್ಯನ್ತರಮವದಾರ್ಯೋತ್ಸಙ್ಗಂ ಮಹಾನ್ತಮವಕಾಶಂ ಕೃತ್ವಾ ಪ್ರವೃದ್ಧೋ ಭವತ್ಯಸಾಧ್ಯಃ ತಸ್ಮಾದಾದಿತ ಏವ ಪ್ರಮೇಹಿಣಮುಪಕ್ರಮೇತ್ ॥೪॥

ಪೂರ್ವರೂಪಗಳಲ್ಲಿ ಲಂಘನ ಕಷಾಯ ಮತ್ತು ಆಡಿನ ಮೂತ್ರಪಾನವನ್ನು ಮಾಡಿಸಿ ಉಪಚರಿಸದೆ ಮೊದಲನೆಯ ಕ್ರಿಯಾಕಾಲದಲ್ಲೇ ಉದಾಸೀನತೆಯಿಂದ ಮಧುರಾಹಾರವನ್ನು ಭೋಜನಮಾಡುವ ರೋಗಿಗೆ ಮೂತ್ರವೂ ಸ್ವೇದವೂ ಕಫವೂ

ಮಧುರವಾಗಿ ಪರಿಣಮಿಸಿ ಪ್ರಮೇಹರೋಗವು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಕಾಲದಲ್ಲಿ ವಮನವಿರೇಚನೌಷಧಗಳನ್ನು ಸೇವನೆಮಾಡಬೇಕು. ಹೀಗೆ ಮಾಡದಿದ್ದರೆ ದೋಷಗಳು ಅಭಿವೃದ್ಧಿ ಹೊಂದಿ ಮಾಂಸರಕ್ತಗಳನ್ನು ಕೆಡಿಸಿ ಶೋಫವನ್ನೂ ಮತ್ತು ಕೆಲವು ಉಪದ್ರವಗಳನ್ನೂ ಉಂಟುಮಾಡುತ್ತವೆ. ಇಲ್ಲಿ ಸಿರಾಮೋಕ್ಷವೇ ಪ್ರತೀಕಾರವೆಂದು ಹೇಳುತ್ತಾರೆ. ಈ ರೀತಿಯಾಗಿ ಎರಡನೆಯ ಕ್ರಿಯಾಕಾಲದಲ್ಲೂ ಚಿಕಿತ್ಸೆಮಾಡದಿದ್ದರೆ ಶೋಫವು ವೃದ್ಧಿಯಾಗಿ ಅತಿಯಾಗಿ ನೋವನ್ನೂ ಉರಿತವನ್ನೂ ಉಂಟುಮಾಡುತ್ತದೆ. ಈ ಸಮಯದಲ್ಲಿ ಶಸ್ತ್ರದಿಂದ ಭೇದಭೇದಗಳನ್ನು ಮಾಡಿ ವ್ರಣೋಪಚಾರವನ್ನು ಮಾಡಬೇಕು. ಈ ಕಾಲದಲ್ಲೂ ಚಿಕಿತ್ಸೆಮಾಡದೆ ಉಪೇಕ್ಷಿಸಿದರೆ ಕೀವು ಜಮಾವಣೆಯಾಗಿ ಶರೀರದ ಒಳಗಡೆಗೆ ಇಳಿದು ಆಶ್ರಯಸ್ಥಾನವೆಲ್ಲಾ ಕೊಳೆತು ಅಗಲವಾದ ವ್ರಣವುಂಟಾಗಿ ಕೀವು ಸೇರಿ ಉಬ್ಬಿ ಅಸಾಧ್ಯವಾಗುತ್ತದೆಯಾದಕಾರಣ ಪ್ರಮೇಹ ರೋಗಿಗೆ ಮೊದಲಿನಿಂದಲೂ ಸರಿಯಾಗಿ ಚಿಕಿತ್ಸೆಮಾಡಿಸಬೇಕು.

ಟಿಪ್ಪಣಿ : ಪ್ರಮೇಹರೋಗಿಗೆ ಮೊದಲು ಉಪವಾಸಮಾಡಿಸಿ, ಆಲ, ಅತ್ತಿ ಮೊದಲಾದುವುಗಳ ಕಷಾಯ ಮತ್ತು ಆಡಿನ ಮೂತ್ರಗಳನ್ನು ಕುಡಿಸಬೇಕು. ಮೂತ್ರಾದಿಗಳು ಸಿಹಿಯಾಗುವ ೨ನೆಯ ಅವಸ್ಥೆಯಲ್ಲಿ ವಮನವಿರೇಚನ ಮೊದಲಾದ ಶೋಧನೌಷಧ ಪ್ರಯೋಗ ಉಪವಾಸ ಮೊದಲು ರಕ್ತಮೋಕ್ಷಣದ ಕೊನೆಯ ವರೆಗೆಶೋಧನವು. **೩ನೆಯ ಅವಸ್ಥೆಯಲ್ಲಿ** ಶಸ್ತ್ರಕ್ರಿಯೆ ಮತ್ತು ವ್ರಣೋಪಚಾರಗಳನ್ನು ಆಚರಿಸುವುದು. ಇಲ್ಲಿ ಶೋಫವು ವಿದಾಹಾವಸ್ಥೆಹೊಂದುವಕಾರಣ ಯಾಪ್ಯವು. **೪ನೆಯ ಅವಸ್ಥೆಯಲ್ಲಿ** ವ್ರಣವು ಕೀವು ತುಂಬಿ ಉಬ್ಬಿ ಆಳವಾಗಿ ಹಬ್ಬುತ್ತದೆಯಾಗಿ ಅಸಾಧ್ಯವು.

ಭಲ್ಲಾತಕಬಿಲ್ವಾಮ್ಬುಪಿಪ್ಪಲೀಮೂಲೌದಕೀರ್ಯಾವರ್ಷಾ ಭೂಪುನರ್ನವಾಚಿತ್ರಕಶಠೀಸ್ನುಹೀವರುಣಕಪುಷ್ಕರದನ್ತೀಪಥ್ಯಾದಶಪಲೋನ್ಮಿತಾಃ ಯವಕೋಲಕುಲತ್ಥಾಂಶ್ಚ ಪ್ರಾಸ್ಥಿಕಾಃ ಸಲಿಲದ್ರೋಣೇ ಸಂಕ್ವಾಥ್ಯ ಚತುರ್ಭಾಗಾವಶಿಷ್ಟೇऽವತಾರ್ಯ ವಚಾತ್ರಿವೃತ್ಕಮ್ಪಿಲ್ಲಕ ಭಾರ್ಗೀನಿಚುಲಶುಣ್ಠೀಗಜ ಪಿಪ್ಪಲೀವಿಡಙ್ಗ ಶಿರೀಷಾಣಾಂ ಭಾಗೈರರ್ಧಪಲಿಕೈರ್ಘೃತಪ್ರಸ್ಥಂ ವಿಪಾಚಯೇತ್ ಮೇಹಶ್ವಯಥು ಕುಷ್ಠಗುಲ್ಮೋದರಾರ್ಶಃ ಪ್ಲೀಹ ವಿದ್ರಧಿಪಿಡಕಾನಾಂ ನಾಶನಂ ನಾಮ್ನಾ ಧಾನ್ವನ್ತರಮ್ ||೫||

ಗೇರುಬೀಜ, ಬಿಲ್ವಪತ್ರೆಬೇರು, ಮಡಿವಾಳ, ಚವ್ಯ, ತವಸ, ಕೊಮ್ಮೆಬೇರು, ಬಿಳಿಕೊಮ್ಮೆ, ಚಿತ್ರಮೂಲ, ಕರ್ಪೂರಶುಂಠಿ, ನುಂಡುಗಳ್ಳಿ, ಮಟ್ಟಿಮಾವು (ಹುಳಿಮಾವಿನ ಚಕ್ಕೆ), ಪುಷ್ಕರಮೂಲ, ಜಾಪಾಳದತೊಗಟೆ, ಅಣಿಲೆಸಿಪ್ಪೆ ಇವು ಪ್ರತಿಯೊಂದೂ ೧೦ ಪಲಗಳು, ಯವೆ, ಎಲಚಿ ಹುರುಳಿ ಇವು ಒಂದೊಂದು ಪ್ರಸ್ಥ (ತೂಕದ ೨ ಸೇರು) ಇವುಗಳನ್ನೆಲ್ಲಾ ಅಳತೆಯ ೨ ಸೇರಿನಷ್ಟು ನೀರಿಗೆ ಹಾಕಿ ಕಷಾಯಮಾಡಿ ಒಂದು ಆಢಕ (೨ ಸೇರಿಗೆ) ಕ್ಕೆ ಸಿಲ್ಲಿಸಿ ಶೋಧಿಸಿದ ಆ ಕಷಾಯಕ್ಕೆ ಬಜೆ, ತಿಗಡೆ, ಕಪಿಲೆಹಿಟ್ಟು, ಗಂಟುಪರಂಗಿ, ಹಬ್ಬೆಬೇರು, ಶುಂಠಿ, ಗಜಹಿಪ್ಪಲಿ, ವಿಡಂಗ, ಬಾಗೇಬೀಜ ಇವು ಪ್ರತಿ

ಯೊಂದನ್ನೂ ಅರ್ಧಪಲದಂತೆ ಕಲ್ಕಮಾಡಿ ಒಂದು ಪ್ರಸ್ಥತುಪ್ಪವನ್ನು ಸೇರಿಸಿ ಪಾಕಮಾಡಿ ಶೋಧಿಸಿದ ಘೃತವನ್ನು ಪ್ರಯೋಗಿಸಿದರೆ ಮೇಹ, ಶೋಥ, ಕುಷ್ಠ, ಗುಲ್ಮ, ಉದರ, ಅರ್ಶಸ್ಸು, ಪ್ಲೀಹವೃದ್ಧಿ, ಬಾವು, ಪಿಟಕೆ ಇವುಗಳು ನಿವಾರಣೆಯಾಗುತ್ತವೆ. ಇದಕ್ಕೆ **ಧಾನ್ವನ್ತರಘೃತವೆಂದು** ಹೆಸರು.

ದುರ್ವಿರೇಚ್ಯಾ ಹಿ ಮಧುಮೇಹಿನೋ ಭವನ್ತಿ ಮೇದೋಽಭಿವ್ಯಾಪ್ತಶರೀರತ್ವಾತ್ ತಸ್ಮಾತ್ ತೀಕ್ಷ್ಣಮೇತೇಷಾಂ ಶೋಧನಂ ಕುರ್ವೀತ ಪಿಡಕಾಪೀಡಿತಾಃ ಸೋಪದ್ರವಾಃ ಸರ್ವಏವ ಪ್ರಮೇಹಾಃಮೂತ್ರಾದಿಮಾಧುರ್ಯೇ ಮಧುಗನ್ಧಸಾಮಾನ್ಯಾತ್ಪಾರಿಭಾಷಿಕೀಂ ಮಧುಮೇಹತಾಂ ಲಭನ್ತೇ ||೬|| ನ ಚೈತಾನ್ ಕಥಂಚಿದಪಿ ಸ್ವೇದಯೇತ್ ಮೇದೋಬಹುತ್ವಾದೇತೇಷಾಂ ವಿಶೀರ್ಯತೇ ದೇಹಃ ಸ್ವೇದೇನ ||೭|| ರಸಾಯನೀನಾಂ ಚ ದೌರ್ಬಲ್ಯಾತ್ ನೋರ್ಧ್ವಮುತ್ತಿಷ್ಠನ್ತಿ ಪ್ರಮೇಹಿಣಾಂ ದೋಷಾಃ ತತೋ ಮಧುಮೇಹಿನಾಮಧಃಕಾಯೇ ಪಿಡಕಾ ಪ್ರಾದುರ್ಭವನ್ತಿ ||೮||

ಮಧುಮೇಹ ರೋಗಿಗಳಿಗೆ ಮೇದಸ್ಸು ಅಭಿವೃದ್ಧಿಯಾಗಿ ಶರೀರವನ್ನೆಲ್ಲಾ ವ್ಯಾಪಿಸುವುದರಿಂದ ಸುಲಭವಾಗಿ ವಿರೇಚನವಾಗುವುದಿಲ್ಲ. ಆದಕಾರಣ ತೀಕ್ಷ್ಣ ವಿರೇಚನಗಳಾದ ಜಾಪಾಳ, ಮುಂಡುಗಳ್ಳಿಯಹಾಲು ಮೊದಲಾದುವನ್ನು ಪ್ರಯೋಗಿಸಬೇಕು. ಪಿಡಕೆಗಳಿಂದ ಪೀಡಿತರಾಗಿ ಉಪದ್ರವಗಳಿಂದ ನರಳುವ ಸಕಲ ಮೇಹರೋಗಗಳಲ್ಲೂ ಮೂತ್ರಾದಿಗಳು ಮಧುರವಾಗಿರುವುದರಿಂದ ಜೇನುತುಪ್ಪದ ವಾಸನೆಯೇ ಸಾಮಾನ್ಯವಾಗಿ ಉಂಟಾಗಿ ಮಧುಮೇಹವೆಂಬ ಪಾರಿಭಾಷಿಕವಾದ ಹೆಸರನ್ನೇ ಹೊಂದುತ್ತದೆ (ಅಂದರೆ ಮಧುಮೇಹವೆಂದೇ ಕರೆಯುತ್ತಾರೆ). ಇವರಿಗೆ ಯಾವ ರೀತಿಯಿಂದಲೂ ಸ್ವೇದಕರ್ಮವನ್ನು ಮಾಡಿಸಲೇಕೂಡದು. ಇವರ ದೇಹದಲ್ಲಿ ಅಧಿಕ ಪ್ರಮಾಣದಿಂದ ಮೇದಸ್ಸು ಸೇರಿರುವುದರಿಂದ ಸ್ವೇದಮಾಡಿಸಿದರೆ ಇವರ ದೇಹವು ಕ್ಷೀಣಿಸುತ್ತದೆ. ಪ್ರಮೇಹರೋಗಿಗಳಿಗೆ ರಸ, ಪಿತ್ತ, ಕಫ, ರಕ್ತವಾಹಿ ಧಮನಿಗಳು ದುರ್ಬಲ (ಬಲಹೀನ) ಗಳಾಗಿರುವುದರಿಂದಲೂ ಶರೀರಗತ ಸಕಲದ್ರವ್ಯಗಳನ್ನೂ ಅಪಾನ ಮತ್ತು ವ್ಯಾನವಾಯುಗಳು ಅನುಲೋಮನಾಳದ ಕೆಳಗಡೆಗೇ ಹರಿಯುವಂತೆ ಮಾಡುವುದರಿಂದಲೂ ಶರೀರದ ಮೇಲ್ಭಾಗದ ರಸಾದಿ ವಹನಧಮನಿಗಳು ಮೇಲ್ಮುಖವಾಗಿ ದ್ರವಗಳನ್ನು ತರಲಾರದ ಕಾರಣದಿಂದಲೂ ಶರೀರದ ಕೆಳಭಾಗದಲ್ಲಿ ಪಿಡಿಕೆಗಳುಂಟಾಗುತ್ತವೆ.

ಅಪಕ್ವಾನಾಂ ಪಿಡಕಾನಾಂ ಶೋಫವತ್ಪ್ರತೀಕಾರಃ ಪಕ್ವಾನಾಂ ವ್ರಣವದಿತಿ | ತೈಲಂ ತು ವ್ರಣರೋಪಣಾದೌ ಕುರ್ವೀತ ಆರಗ್ವಧಾದಿ ಕಷಾಯಮುತ್ಸಾದನಾರ್ಥೇ ಸಾಲಸಾರಾದಿ ಕಷಾಯಂ ಪರಿಷೇಚನೇ ಪಿಪ್ಪಲ್ಯಾದಿ ಕಷಾಯಂ ಪಾನಭೋಜನೇಷು ಪಾಠಾಚಿತ್ರಕಶಾರ್ಙ್ಗೇಷ್ಟಾಕ್ಷುದ್ರಾಬೃಹತೀ ಸಾರಿವಾಸೋಮವಲ್ಕಸಪ್ತಪರ್ಣಾರಗ್ವಧಕುಟಜಮೂಲಚೂರ್ಣಾನಿ ಮಧುಮಿಶ್ರಾಣಿ ಪ್ರಾಶ್ನೀಯಾತ್ ||೯|| ಸಾಲಸಾರಾದಿವರ್ಗಕಷಾಯಂ ಚತುರ್ಭಾಗಾವಶಿಷ್ಟಮವತಾರ್ಯ ಪರಿಸ್ರಾವ್ಯ ಪುನರುಪನೀಯ ಸಾಧಯೇತ್ ಸಿಧ್ಯತಿ ಚಾಸ್ಮಿಂಲ್ಲೋಧ್ರಕುಟಜಶಾರ್ಙ್ಗಷ್ಟಾ

ಕೃಷ್ಣಾಯಸ್ತಾಮ್ರ ಚೂರ್ಣಾನಿ ಆವಪೇತ್ ಏತದನುಪದಗ್ಧಲೇಹೀಭೂತಮವತಾರ್ಯಾನು ಗುಪ್ತಂ ನಿದಧ್ಯಾತ್ ತತೋ ಯಥಾಯೋಗಮುಪಯುಞ್ಜೀತ ಏಷಲೇಹಃ ಸರ್ವಮೇಹಾನಾಂ ಹನ್ತಾ ॥೧೦॥ ವ್ರಣರೋಪಣಮೇವಾದೌ ಇತಿ ಪಾಠಃ.

ಅಪಕ್ವಪಿಡಕೆಗಳಿಗೆ ಶೋಫಚಿಕಿತ್ಸೆಯಂತೆಯೂ ಪಕ್ವಪಿಡಕೆಗಳಿಗೆ ವ್ರಣಚಿಕಿತ್ಸೆಯಂತೆಯೂ ಉಪಚರಿಸಬೇಕು. ವ್ರಣವು ಮಾಯಲು ಮೈಗೆ ಉಜ್ಜುವುದಕ್ಕೆ ಕಕ್ಕೆ ಮೊದಲಾದುವುಗಳ ಕಷಾಯವನ್ನೂ ಸ್ನಾನಕ್ಕೆ ಸರ್ಜವೃಕ್ಷಾದಿಗಳ ಕಷಾಯವನ್ನೂ ಕುಡಿಯುವುದಕ್ಕೂ ಊಟದ ಜೊತೆಗೂ ಪಿಪ್ಪಲ್ಯಾದಿ ಕಷಾಯವನ್ನೂ ಉಪಯೋಗಿಸಬೇಕು. ಅಗಳು, ಶುಂಠಿ, ಚಿತ್ರಮೂಲ, ದೊಡ್ಡಹೊಂಗೆ, ನೆಲಗುಳ್ಳ, ಹೆಗ್ಗುಳ್ಳ, ಸೊಗದೆ ಬೇರು, ಬಿಳಿಕಗ್ಗಲಿ, ಮದ್ದಾಲೆ, ಕಕ್ಕೆ, ಕೊಡಸಿಗೆಬೇರು ಇವುಗಳ ಚೂರ್ಣವನ್ನು ಜೇನು ತುಪ್ಪದಲ್ಲಿ ರಂಗಳಿಸಿ ನೆಕ್ಕಿಸಬೇಕು. ಸರ್ಜವೃಕ್ಷಮೊದಲಾದ ಗಣದ ದ್ರವ್ಯಗಳಿಗೆ ೪ ರಷ್ಟು ನೀರು ಸೇರಿಸಿ ೧/೪ ಭಾಗ ಉಳಿಯುವಂತೆ ಕಷಾಯಮಾಡಿ ಶೋಧಿಸಿ ಪುನಃ ಆ ಕಷಾಯತುಂಬಿದ ಪಾತ್ರೆಯನ್ನು ಒಲೆಯಮೇಲಿಟ್ಟು ಕುದಿಸುತ್ತಿರುವಾಗ ನೆಲ್ಲೀಚೆಟ್ಟು, ರೋಧ್ರ, ನೆಳಲು, ಜಾಪಾಳದತೊಗಟೆ, ಕರೀಕಬ್ಬಿಣದ ಮತ್ತು ತಾಮ್ರದ ಅರಪುಡಿಯನ್ನು ಆ ಕಷಾಯಕ್ಕೆ ಸುರಿದು ತಳಹತ್ತಿ ಸೀದುಹೋಗದಂತೆ ತೊಳಸುತ್ತಾ ಲೇಹದಂತೆ ಪಾಕಬಂದಮೇಲೆ ಕೆಳಕ್ಕೆ ಇಳಿಸಿ ಭದ್ರವಾಗಿ ಶೇಖರಿಸಿಟ್ಟುಕೊಂಡು ರೋಗಕ್ಕೆ ಅನುಸಾರವಾಗಿ ಪ್ರಯೋಗಿಸಬೇಕು. ಈ ಲೇಹಪ್ರಯೋಗವು ಸಕಲವಿಧ ಮೇಹರೋಗಗಳನ್ನೂ ನಿವಾರಣೆಮಾಡುತ್ತದೆ.

ತ್ರಿಫಲಾಚಿತ್ರಕತ್ರಿಕಟುವಿಡಙ್ಗಮುಸ್ತಾನಾಂ ನವಭಾಗಾಸ್ತಾವನ್ತ ಏವ ಕೃಷ್ಣಾಯಶ್ಚೂರ್ಣಸ್ಯ ತತ್ಸರ್ವಮೇಕಧ್ಯಂ ಕೃತ್ವಾಯಥಾಯೋಗಂ ಮಾತ್ರಾಂ ಸರ್ಪಿರ್ಮಧುಭ್ಯಾಂ ಸಂಸೃಜ್ಯೋಪಯುಞ್ಜೀತ ಏತನ್ನವಾಯಸಮೇತೇನ ಜಾಠರ್ಯಂ ನ ಭವತಿ ಸನ್ನೋಽಗ್ನಿರಾಪ್ಯಾಯತೇ ದುರ್ನಾಮ ಶೋಫಪಾಣ್ಡುಕುಷ್ಠರೋಗಾವಿಪಾಕಕಾಸಶ್ವಾಸಪ್ರಮೇಹಾಶ್ಚ ನ ಭವನ್ತಿ ॥೧೧॥

ತ್ರಿಫಲೆ, ಚಿತ್ರಮೂಲ, ತ್ರಿಕಟು, ವಿಡಂಗ, ಕೊನ್ನಾರಿಗೆಡ್ಡೆ ಇವು ಒಂಭತ್ತು ಭಾಗಗಳು ಕರಿಕಬ್ಬಿಣದಪುಡಿ ೯ ಭಾಗ, ಯೋಗಕ್ಕೆ ತಕ್ಕಂತೆ ತುಪ್ಪ, ಜೇನುತುಪ್ಪ ಇವುಗಳನ್ನು ಸೇರಿಸಿ ಸೇವನೆಮಾಡಬೇಕು. ಇದಕ್ಕೆ "**ನವಾಯುಸಚೂರ್ಣಯೋಗ**" ವೆಂದು ಹೆಸರು. ಇದನ್ನು ಸೇವಿಸಿದರೆ ಸ್ಥೌಲ್ಯವುಂಟಾಗುವುದಿಲ್ಲ. ಮಂದಾಗ್ನಿಯು ವೃದ್ಧಿಯಾಗುತ್ತದೆ. ಅರ್ಶೋರೋಗ, ಶೋಫ, ಪಾಂಡುರೋಗ, ಕುಷ್ಠ, ಅಜೀರ್ಣ, ಕಾಸ, ಶ್ವಾಸ (ಉಬ್ಬಸ) ಪ್ರಮೇಹಗಳು ಉಂಟಾಗುವುದಿಲ್ಲ.

ಸಾಲಸಾರಾದಿನಿರ್ಯೂಹೇ ಚತುರ್ಥಾಂಶಾವಶೇಷಿತೇ ।
ಪರಿಸ್ರುತೇ ತತಃ ಶೀತೇ ಮಧುಮಾಕ್ಷಿಕಮಾವಪೇತ್ ॥೧೨॥
ಫಾಣಿತೀಭಾವಮಾಪನ್ನಂ ಗುಡಂ ಶೋಧಿತಮೇವ ಚ ।
ಶ್ಲಕ್ಷ್ಣಪಿಷ್ಟಾನಿ ಚೂರ್ಣಾನಿ ಪಿಪ್ಪಲ್ಯಾದಿಗಣಸ್ಯ ಚ ॥೧೩॥

ಏಕಧ್ಯಮಾವಪೇತ್ ಕುಮ್ಭೇ ಸಂಸ್ಕೃತೇ ಘೃತಭಾವಿತೇ ।
ಪಿಪ್ಪಲೀಚೂರ್ಣಮಧುಭಿಃ ಪ್ರಲಿಪ್ತೇನ್ತಃ ಶುಚೌ ದೃಢೇ ॥೧೪॥
ಶ್ಲಕ್ಷ್ಣಾನಿ ತೀಕ್ಷ್ಣಲೋಹಸ್ಯ ತತ್ರ ಪತ್ರಾಣಿ ಬುದ್ಧಿಮಾನ್ ।
ಖದಿರಾಙ್ಗಾರತಪ್ತಾನಿ ಬಹುಶಃ ಸನ್ನಿಪಾತಯೇತ್ ॥೧೫॥
ಸುಪಿಧಾನಂ ತು ತಂ ಕೃತ್ವಾ ಯವಪಲ್ಲೇ ನಿಧಾಪಯೇತ್ ।
ಮಾಸಾಂಸ್ತ್ರೀಂಶ್ಚತುರೋವಾಪಿ ಯಾವದಾಲೋಹಸಂಕ್ಷಯಾತ್ ॥೧೬॥
ತತೋ ಜಾತರಸಂ ತಂ ತು ಪ್ರಾತಃ ಪ್ರಾತರ್ಯಥಾಬಲಮ್ ।
ನಿಷೇವೇತ ಯಥಾಯೋಗಮಾಹಾರಂ ಚಾಸ್ಯ ಕಲ್ಪಯೇತ್ ॥೧೭॥
ಕಾರ್ಶ್ಯಕೃದ್ಬಲಿನಾಮೇಷ ಸನ್ನಸ್ಯಾಗ್ನೇಃ ಪ್ರಸಾಧಕಃ ।
ಶೋಫನುದ್ಗುಲ್ಮಹೃತ್ ಕುಷ್ಠಮೇಹಪಾಣ್ಡ್ವಾಮಯಾಪಹಃ ॥೧೮॥
ಪ್ಲೀಹೋದರಹರಃ ಶೀಘ್ರಂ ವಿಷಮಜ್ವರನಾಶನಃ ।
ಅಭಿಷ್ಯನ್ದಾಪಹರಣೋ ಲೋಹಾರಿಷ್ಟೋ ಮಹಾಗುಣಃ ॥೧೯॥

ಶಾಲಸಾರಾದಿ ಗಣದ್ರವ್ಯಗಳು ೧೦೦ ಪಲಗಳಷ್ಟನ್ನು ೪ ದ್ರೋಣ ನೀರಿಗೆ ಸೇರಿಸಿ ೧ ದ್ರೋಣ ನಿಲ್ಲುವಂತೆ ಕಷಾಯಮಾಡಿ ಬಟ್ಟೆಯಿಂದ ಶೋಧಿಸಿ ತಣ್ಣಗಾದ ಆ ಕಷಾಯಕ್ಕೆ ೫೦ ಪಲ ಜೇನುತುಪ್ಪವನ್ನೂ ೫೦ ಪಲ ಮಧ್ವಾಸವವನ್ನೂ ೫೦ ಪಲ ಬೆಲ್ಲವನ್ನೂ ಹಾಕಿ ಕರಗಿದಮೇಲೆ ಪುನಃ ಶೋಧಿಸಿ (ಬೆಲ್ಲದಲ್ಲಿರುವ ಹುಲ್ಲು ಕಸಗಳೆಲ್ಲಾ ಹೋಗಿ ಶುದ್ಧವಾಗುತ್ತದೆ.) ಪಿಪ್ಪಲ್ಯಾದಿ ಗಣದ್ರವ್ಯಗಳ ಚೂರ್ಣ ೨೫ ಪಲಗಳಷ್ಟನ್ನು ಸೇರಿಸಿ ಇವೆಲ್ಲವನ್ನೂ ಹಿಪ್ಪಲಿಚೂರ್ಣ ಜೇನುತುಪ್ಪಗಳನ್ನು ರಂಗಳಿಸಿ ಒಳಗಡೆಗೆ ಬಳಿದಿರುವ ಪಳಗಿದ ಗುಡಾಣಕ್ಕೆ ತುಂಬಿ ಅನೇಕಸಾರಿ ಕಗ್ಗಲಿಕೆಂಡದಲ್ಲಿ ಕಾಯಿಸಿ ತ್ರಿಫಲಾಕಷಾಯ ಅಥವಾ ಗೋಮೂತ್ರದಲ್ಲಿ ಅದ್ದಿ ಶುದ್ಧಿಮಾಡಿದ ನುಣುಪಾದ ೨೫ ಪಲ ಕಬ್ಬಿಣದ ತಗಡುಗಳನ್ನೂ ಆ ಗುಡಾಣದೊಳಕ್ಕೆ ಹಾಕಿ ಗುಡಾಣದ ಬಾಯಿಗೆ ಮುಚ್ಚಳ ಮುಚ್ಚಿ ಚೀರುಮಣ್ಣುಮಾಡಿ ಯವಧಾನ್ಯದ ಮಧ್ಯದಲ್ಲಿ ಹೂತಿಡಬೇಕು. ೩ ಅಥವಾ ೪ ಮಾಸಗಳವರೆಗೆ ಅಥವಾ ಕಬ್ಬಿಣವು ಪೂರ್ತಿಕರಗುವವರೆಗೂ ಕಾದಿದ್ದು ಅನಂತರ ಆ ಗುಡಾಣವನ್ನು ಹೊರಕ್ಕೆ ತೆಗೆದು ಮುಚ್ಚಳವನ್ನು ಬಿಚ್ಚಿ ಸರಿಯಾಗಿ ರಸೋತ್ಪತ್ತಿಯಾದ ಈ ಲೋಹಾರಿಷ್ಟವನ್ನು ಪ್ರತಿದಿನವೂ ಪ್ರಾತಃಕಾಲದಲ್ಲಿ ರೋಗಿಯ ಶಕ್ತಿಗೆ ತಕ್ಕಂತೆ ೨ ಕರ್ಷದಿಂದ ೧ ಪಲ ಪ್ರಮಾಣದಷ್ಟನ್ನು ಕುಡಿಸಿ ಅದು ಜೀರ್ಣವಾದ ಮೇಲೆ ಪಥ್ಯವಾದ ಆಹಾರವನ್ನು ಕೊಟ್ಟು ಭೋಜನಮಾಡಿಸಬೇಕು. ಇದರ ಉಪಯೋಗದಿಂದ ಮೇದೋವೃದ್ಧಿಯಿಂದ ದಪ್ಪಶರೀರವುಳ್ಳವರು ಕೃಶದೇಹವುಳ್ಳವರಾಗುತ್ತಾರೆ. ಅಗ್ನಿಮಾಂದ್ಯವಿದ್ದವರಿಗೆ ಅಗ್ನಿವೃದ್ಧಿಯಾಗುತ್ತದೆ. ಶೋಫ, ಗುಲ್ಮ, ಕುಷ್ಠ, ಮೇಹ, ಪಾಂಡುರೋಗ, ಪ್ಲೀಹವೃದ್ಧಿ, ಉದರರೋಗ ಇವು ಶೀಘ್ರವಾಗಿ ನಿವಾರಣೆಯಾಗುತ್ತವೆ. ವಿಷಮಜ್ವರ

ಮತ್ತು ನೇತ್ರದ ಅಭಿಷ್ಯಂದ ರೋಗಗಳು ನಾಶವಾಗುತ್ತವೆ. ಇದಕ್ಕೆ ಲೋಹಾರಿಷ್ಟ ವೆಂದು ಹೆಸರು ಮತ್ತು ಮಹಾಗುಣವುಳ್ಳದ್ದು.

ಪ್ರಮೇಹಿಣೋ ಯದಾಮೂತ್ರಮಪಿಚ್ಛಿಲಮನಾವಿಲಮ್ ।
ವಿಶದಂ ತಿಕ್ತಕಟುಕಂ ತದಾರೋಗ್ಯಂ ಪ್ರಚಕ್ಷತೇ ॥೨೦॥

ಪ್ರಮೇಹರೋಗಿಗಳ ಮೂತ್ರ ಗರಣೆಯಿಲ್ಲದೆ ಕೊಳೆಯಿಲ್ಲದೆ ನೀರಿನಂತೆ ತೆಳುವಾಗಿ ಕಹಿ, ಕಟುರಸವುಳ್ಳದ್ದಾದರೆ ಆರೋಗ್ಯವುಂಟಾಗಿರುತ್ತದೆಂದು (ಶುದ್ಧವೆಂದು) ಹೇಳ ಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಪ್ರಮೇಹಪಿಡಕಾ ಚಿಕಿತ್ಸಾನಾಮಕ ದ್ವಾದಶಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕ ಭಾಷಾವಿವೃತಿಃ

ತ್ರಯೋದಶೋಽಧ್ಯಾಯಃ

ಅಥಾತೋ ಮಧುಮೇಹ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವನ್ತರಿಯು ಶಿಷ್ಯ ಸುಶ್ರುತನಿಗೆ ಉಪದೇಶಿಸಿದಂತೆಯೇ **ಮಧುಮೇಹಚಿಕಿತ್ಸೆಯನ್ನು** ವಿವರಿಸುತ್ತೇವೆ.

ಮಧುಮೇಹಿತ್ವಮಾಪನ್ನಂ ಭಿಷಗ್ಭಿಃ ಪರಿವರ್ಜಿತಮ್ ।
ಯೋಗೇನಾನೇನ ಮತಿಮಾನ್ ಪ್ರಮೇಹಿಣಮುಪಾಚರೇತ್ ||೩||
ಮಾಸೇ ಶುಕ್ರೇ ಶುಚೌ ಚೈವ ಶೈಲಾಃ ಸೂರ್ಯಾಂಶುತಾಪಿತಾಃ ।
ಜತುಪ್ರಕಾಶಂ ಸ್ವರಸಂ ಶಿಲಾಭ್ಯಃ ಪ್ರಸವನ್ತಿ ಚ ||೪||
ಶಿಲಾಜತ್ವಿತಿ ವಿಖ್ಯಾತಂ ಸರ್ವವ್ಯಾಧಿವಿನಾಶನಮ್ ।

ಮಧುಮೇಹದ ಸ್ಥಿತಿಯನ್ನು ಹೊಂದಿ ವೈದ್ಯರಿಂದ ತ್ಯಜಿಸಲ್ಪಟ್ಟ ಪ್ರಮೇಹ ರೋಗಿಗೆ ಬುದ್ಧಿವಂತನಾದ ವೈದ್ಯನು ಈ ಕೆಳಗೆ ಹೇಳುವ ಔಷಧಯೋಗವಿಧಾನದಿಂದ ಉಪಚರಿಸಬೇಕು. ಜ್ಯೇಷ್ಠ ಮತ್ತು ಆಷಾಢ ಮಾಸಗಳಲ್ಲಿ ಪ್ರಚಂಡ ಸೂರ್ಯಕಿರಣಗಳಿಂದ ಕಾದುಹೋಗಿರುವ ಪರ್ವತಗಳ ಶಿಲೆಗಳಿಂದ ಅರಗಿನಂತಹ ಸ್ವರಸಗಳು ಹೊರಕ್ಕೆ ಸ್ರಾವವಾಗುತ್ತವೆ. ಆ ಸ್ವರಸವು ಶಿಲಾಜತುವೆಂದು ಪ್ರಸಿದ್ಧಿ ಹೊಂದಿರುತ್ತದೆ. ಮಧುಮೇಹಾದಿ ಸಕಲವ್ಯಾಧಿಗಳನ್ನೂ ಅದು ನಿವಾರಣೆಮಾಡುತ್ತದೆ.

ತ್ರಪ್ವಾದೀನಾಂ ತು ಲೋಹಾನಾಂ ಷಣ್ಣಾಮನ್ಯತಮಾನ್ವಯಮ್ ||೫||
ಜ್ಞೇಯಂ ಸ್ವಗನ್ಧತಶ್ಚಾಪಿ ಷಡ್ಯೋನಿಪ್ರಥಿತಂ ಕ್ಷಿತಾ ।
ಲೋಹಾದ್ಭವತಿ ತದ್ಯಸ್ಮಾತ್ ಶಿಲಾಜತು ಜತುಪ್ರಭಮ್ ||೬||
ತಸ್ಯ ಲೋಹಸ್ಯ ತದ್ವೀರ್ಯಂ ರಸಂ ಚಾಪಿ ಬಿಭರ್ತಿ ತತ್ ।
ತ್ರಪುಸೀಸಾಯಸಾದೀನಿ ಪ್ರಧಾನಾನ್ಯುತ್ತರೋತ್ತರಮ್ ||೭||
ಯಥಾ ತಥಾ ಪ್ರಯೋಗೇಽಪಿ ಶ್ರೇಷ್ಠೇ ಶ್ರೇಷ್ಠಗುಣಾಃ ಸ್ಮೃತಾಃ ।
ಯತ್ಸರ್ವಂ ತಿಕ್ತಕಟುಕಂ ಕಷಾಯಾನುರಸಂ ಸರಮ್ ||೮||
ಕಟುಪಾಕ್ಯುಷ್ಣವೀರ್ಯಂ ಚ ಶೋಷಣಂ ಛೇದನಂ ತಥಾ ।
ತೇಷು ಯತ್ ಕೃಷ್ಣಮಲಘು ಸ್ನಿಗ್ಧಂ ನಿಃಶರ್ಕರಂ ಚ ಯತ್ ||೯||
ಗೋಮೂತ್ರಗನ್ಧಿ ಯಚ್ಚಾಪಿ ತತ್ ಪ್ರಧಾನಂ ಪ್ರಚಕ್ಷತೇ ।

ತವರ, ಸೀಸ, ತಾಮ್ರ, ಬೆಳ್ಳಿ, ಚಿನ್ನ, ಕರಿಕಬ್ಬಿಣಗಳೆಂಬ ಆರುಲೋಹಗಳಲ್ಲಿ ಒಂದೊಂದು ಲೋಹದಿಂದಲೂ ಉತ್ಪನ್ನವಾದ್ದರಿಂದಲೂ ಆಯಾಯ ಲೋಹದ ಗಂಧ

ವನ್ನುಳ್ಳ ಕಾರಣದಿಂದಲೂ ಶಿಲಾಜತುವು ಆರು ವಿಧ ಉತ್ಪತ್ತಿಕಾರಣವುಳ್ಳದೆಂದು ಪ್ರಸಿದ್ಧಿ ಹೊಂದಿದೆ. ಅದು ಯಾವ ಲೋಹದಿಂದ ಹುಟ್ಟಿರುತ್ತದೋ ಆ ಲೋಹದ ವಾಸನೆ, ಬಣ್ಣ, ಪ್ರಭಾವ ವೀರ್ಯವುಳ್ಳದ್ದಾಗಿರುತ್ತದೆಂದು ತಿಳಿಯಬೇಕು. ತವರ, ಸೀಸ, ಕಬ್ಬಿಣ ಮೊದಲಾದುವುಗಳಲ್ಲಿ ಒಂದಕ್ಕಿಂತ ಮತ್ತೊಂದು ಮುಂದು ಮುಂದಿನವು ಶ್ರೇಷ್ಠ ವಾಗುವಂತೆಯೇ ಪ್ರಯೋಗದಲ್ಲೂ ಶ್ರೇಷ್ಠ ಗುಣಗಳೇ ಉಂಟಾಗುತ್ತವೆಂದು ತಿಳಿಯಬೇಕು. ಎಲ್ಲಾ ವಿಧದ ಶಿಲಾಜತುವೂ ತಿಕ್ತ, ಕಟು ಕಷಾಯರಸವುಳ್ಳದ್ದಾಗಿ ಮಲವನ್ನು ಜಾರಿಸಿ ಕಟುಪಾಕವಾಗಿ ಉಷ್ಣವೀರ್ಯವುಳ್ಳ ಕಾರಣ ದುಷ್ಟರಕ್ತಾದಿಗಳನ್ನು ಹೀರಿ ಕಫ ಗ್ರಂಥಿ ಗಳನ್ನು ಕತ್ತರಿಸುತ್ತದೆ. ಅವುಗಳಲ್ಲಿ ಯಾವುದು ಕಪ್ಪಾಗಿ ಭಾರವಾಗಿ ಸ್ನಿಗ್ಧವಾಗಿ ಮರಳುಕಲ್ಲುಗಳಿಲ್ಲದೆ ಗೋಮೂತ್ರದ ವಾಸನೆಯುಳ್ಳದ್ದಾಗಿರುತ್ತದೋ ಅದೇ ಮುಖ್ಯ ವಾದದ್ದೆಂದು ತಿಳಿಯಬೇಕು.

ತದ್ಭಾವಿತಂ ಸಾರಗುಣೈರ್ಹೃತದೋಷೋ ದಿನೋದಯೇ ||೧೦||
ಪಿಬೇತ್ ಸಾರೋದಕೇನೈವ ಶ್ಲಕ್ಷ್ಣಪಿಷ್ಟಯಥಾಬಲಮ್ |
ಜಾಙ್ಗಲೇನ ರಸೇನಾನ್ನಂ ತಸ್ಮಿನ್ ಜೀರ್ಣೇತು ಭೋಜಯೇತ್ ||೧೧||
ಉಪಯುಜ್ಯ ತುಲಾಮೇವಂ ಗಿರಿಜಾದಮೃತೋಪಮಾತ್ |
ವಪುರ್ವರ್ಣಬಲೋಪೇತೋ ಮಧುಮೇಹವಿವರ್ಜಿತಃ ||೧೨||
ಜೀವೇದ್ವರ್ಷಶತಂ ಪೂರ್ಣಮಜರೋಽಮರಸನ್ನಿಭಃ |
ಶತಂ ಶತಂ ತುಲಾಯಾಂ ತು ಸಹಸ್ರ ದಶತೌಲಿಕೇ ||೧೩||
ಭಲ್ಲಾತಕವಿಧಾನೇನ ಪರಿಹಾರವಿಧಿಃ ಸ್ಮೃತಃ |
ಮೇಹಂ ಕುಷ್ಠಮಪಸ್ಮಾರಮುನ್ಮಾದಂ ಶ್ಲೀಪದಂ ಗರಮ್ ||೧೪||
ಶೋಷಂ ಶೋಥಾರ್ಶಸೀ ಗುಲ್ಮಂ ಪಾಣ್ಡುತಾಂ ವಿಷಮಜ್ವರಮ್ |
ಅಪೋಹತ್ಯಚಿರಾತ್ಕಾಲಾತ್ ಶಿಲಾಜತು ನಿಷೇವಿತಮ್ ||೧೫||
ನ ಸೋಽಸ್ತಿ ರೋಗೋಽಯಂ ಚಾಪಿ ನಿಹನ್ಯಾನ್ನ ಶಿಲಾಜತು |
ಶರ್ಕರಾಂ ಚಿರಸಂಭೂತಾಂ ಭಿನತ್ತಿ ಚ ತಥಾಶ್ಮರೀಮ್ ||೧೬||
ಭಾವನಾಲೋಡನೇ ಚಾಸ್ಯ ಕರ್ತವ್ಯೇ ಭೇಷಜೈರ್ಹಿತೈಃ |

ಸಾಲಸಾರಾದಿಗಣದ್ರವ್ಯಗಳಿಗೆ ಎಂಟರಷ್ಟು ನೀರನ್ನು ಸೇರಿಸಿ ಒಂದು ಭಾಗ ನಿಲ್ಲುವಹಾಗೆ ಕಷಾಯಮಾಡಿ ಆ ಕಷಾಯದಲ್ಲಿ ಶಿಲಾಜತುವನ್ನು ೧೦ ದಿನ, ೨೦ ದಿನ, ೩೦ ದಿನಗಳು ಭಾವನೆಮಾಡಿಕೊಂಡು ಪ್ರತಿದಿನವೂ ಪ್ರಾತಃಕಾಲದಲ್ಲಿ ರೋಗಿಯ ಬಲಕ್ಕೆ ತಕ್ಕಷ್ಟು ಪ್ರಮಾಣದಲ್ಲಿ(೧ ಕರ್ಷದಿಂದ ೧ ಪಲದವರೆಗೆ ಕ್ರಮಕ್ರಮವಾಗಿ ಹೆಚ್ಚಿಸಬೇಕು.) ಸಾಲಸಾರಾದಿ ದ್ರವ್ಯಗಳ ಕಷಾಯದಲ್ಲಿ ಕದರಿ ಕುಡಿಸಿ ಅದು ಜೀರ್ಣವಾದ ಮೇಲೆ ಆಡು ಮೊದಲಾದ ಬೈಲುದೇಶದ ಪ್ರಾಣಿಗಳ ಮಾಂಸರಸ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು. ಈ ರೀತಿಯಾಗಿ ಅಮೃತ ಸಮಾನವಾದ ೧೦೦ ಪಲ ಶಿಲಾ

ಜತುವನ್ನು ಉಪಯೋಗಿಸಿದರೆ ಶರೀರ ಕಾಂತಿ, ಬಲ ಇವುಗಳ ವೃದ್ಧಿಯುಂಟಾಗಿ **ಮಧು ಮೇಹ ರೋಗದಿಂದ ನಿವೃತ್ತನಾಗಿ** ಒಂದುನೂರು ವರ್ಷಗಳವರೆಗೆ ಮುದಿತನವಿಲ್ಲದೆ ದೇವತೆಗಳಂತೆ ಬದುಕಿರುತ್ತಾನೆ. ಒಂದೊಂದು ತುಲಾಪ್ರಮಾಣದ ಶಿಲಾಜತುವನ್ನು ಸೇವಿಸಿದರೆ ೧೦೦ ವರ್ಷಗಳ ಕಾಲದಂತೆ ಹೆಚ್ಚುಹೆಚ್ಚಾಗಿ ಬದುಕುತ್ತಾನೆ. ೧೦ ತುಲೆ ಗಳಷ್ಟು (೧೦೦೦ ಪಲಗಳು) ಶಿಲಾಜತುಸೇವನೆಯಿಂದ ೧೦೦೦ ವರ್ಷಗಳವರೆಗೆ ಜೀವಿಸ ಬಹುದು. ಭಲ್ಲಾತಕ ಪ್ರಯೋಗದಲ್ಲಿ ಹೇಳಿರುವ ಸ್ನಾನ, ಪಾನ, ಭೋಜನ, ಉಪ ಚಾರ ವಿಧಾನಗಳನ್ನೇ ಶಿಲಾಜತು ಸೇವನೆಮಾಡುವಾಗಲೂ ಆಚರಣೆ ಮಾಡಬೇಕು. ಶಿಲಾಜತು ಸೇವನೆಮಾಡುವುದರಿಂದ ಪ್ರಮೇಹ, ಕುಷ್ಠ, ಅಪಸ್ಮಾರ, ಉನ್ಮಾದ, ಶ್ಲೀಪದ, ಕೈಮಸಗು (ದೂಷೀವಿಷ), ರಾಜಯಕ್ಷ್ಮ (ಕ್ಷಯ) ಶೋಫ, ಅರ್ಶಸ್ಸು, ಗುಲ್ಮ, ಪಾಂಡು ರೋಗ, ವಿಷಮಜ್ವರ ಇವುಗಳು ಬಲುಬೇಗನೆ ನಿವಾರಣೆಯಾಗುತ್ತವೆ. ಶಿಲಾಜತು ಸೇವನೆ ಯಿಂದ 'ಗುಣವಾಗದಿರುವ ರೋಗಗಳೇ ಇಲ್ಲ ಅಂದರೆ ಶಸ್ತ್ರಚಿಕಿತ್ಸೆಯಿಂದ ನಿವಾರಿಸಲು ಸಾಧ್ಯವಾಗದ ಹಳೆಯದಾದ ಬಹುಕಾಲದ ಅಶ್ಮರೀ, ಶರ್ಕರಾ ಮೊದಲಾದ ರೋಗಗಳೂ ಈ ಶಿಲಾಜತು ಸೇವನೆಯಿಂದ ನಾಶವಾಗುತ್ತವೆಂದು ಅರ್ಥ. ಯೋಗ್ಯವಾದ ಔಷಧ ದ್ರವ್ಯಗಳ ಕಷಾಯದಲ್ಲಿ ಶಿಲಾಜತುವನ್ನು ಭಾವನೆಮಾಡಿ ಅವುಗಳಲ್ಲೇ ಕದರಿ ಕುಡಿಸು ವುದು ಆವಶ್ಯಕ.

ಏವಂ ಚ ಮಾಕ್ಷಿಕಂ ಧಾತುಂ ತಾಪೀಜಮಮೃತೋಪಮಮ್|| ||೧೭||
ಮಧುರಂ ಕಾಞ್ಚನಾಭಾಸಮಮ್ಲಂ ವಾ ರಜತಪ್ರಭಮ್ |
ಪಿಬನ್ ಹನ್ತಿ ಜರಾಕುಷ್ಠಮೇಹಪಾಣ್ಡ್ವಾಮಯಕ್ಷಯಾನ್ ||೧೮||
ತದ್ಭಾವಿತಃ ಕಪೋತಾಂಶ್ಚ ಕುಳತ್ಥಾಂಶ್ಚ ವಿವರ್ಜಯೇತ್ |
ಪಞ್ಚಕರ್ಮಗುಣಾತೀತಂ ಶ್ರದ್ಧಾವನ್ತಂ ಜಿಜೀವಿಷುಮ್ || ||೧೯||
ಯೋಗೇನಾನೇನ ಮತಿಮಾನ್ ಸಾಧಯೇತ್ ಕುಷ್ಠಿನಂ ನರಮ್ |

ಶಿಲಾಜತುವಿನ ಪ್ರಯೋಗದಂತೆಯೇ ತಾಪೀ ನದಿಯದಡದಲ್ಲಿ ದೊರೆಯುವ ಅಮೃತಕ್ಕೆ ಸಮಾನವಾದ ಗುಣವುಳ್ಳ ಮಧುರ ರಸವುಳ್ಳ **ಹೇಮಮಾಕ್ಷಿಕವನ್ನೂ** ಹುಳಿರಸವುಳ್ಳ **ತಾರಮಾಕ್ಷಿಕವನ್ನೂ** ಸೇವಿಸಿದರೆ ವಾರ್ಧಕ್ಯ, ಕುಷ್ಠ, ಮೇಹ, ಪಾಂಡು ರೋಗ, ಕ್ಷಯರೋಗಗಳು ನಿವಾರಣೆಯಾಗುತ್ತವೆ. ಶಿಲಾಜತು ಮತ್ತು ಹೇಮಮಾಕ್ಷಿಕ ತಾರಮಾಕ್ಷಿಕಗಳನ್ನು ಸೇವನೆಮಾಡುವವರು ತಾವು ಬದುಕಿರುವವರೆಗೂ ಕಪೋತ **ಪಕ್ಷಿಯ ಮಾಂಸವನ್ನೂ ಹುರುಳಿಯನ್ನೂ** ತ್ಯಜಿಸಬೇಕು.

ವೃಕ್ಷಾಸ್ತ್ವರಕಾ ಯೇ ಸ್ಯುಃ ಪಶ್ಚಿಮಾರ್ಣವಭೂಮಿಷು ||೨೦||
ವೀಚೀತರಙ್ಗವಿಕ್ಷೇಪಮಾರುತೋದ್ಧೂತಪಲ್ಲವಾಃ ।
ತೇಷಾಂ ಫಲಾನಿ ಗೃಹ್ಣೀಯಾತ್ ಸುಪಕ್ವಾನ್ಯಮ್ಬುದಾಗಮೇ|| ||೨೪||
ಮಜ್ಜಸ್ತೇಭ್ಯೋಽಪಿ ಸಂಹೃತ್ಯ ಶೋಷಯಿತ್ವಾ ವಿಚೂರ್ಣ್ಯ ಚ |
ತಿಲವತ್ಪೀಡಯೇದ್ದ್ರೋಣ್ಯಾಂ ಸ್ರಾವಯೇದ್ವಾ ಕುಸುಮ್ಭವತ್|| ||೨೫||

ತತ್ತೈಲಂ ಸಂಭೃತಂ ಭೂಯಃ ಪಚೇತಾತೋಯಸಂಕ್ಷಯಾತ್ ।
ಅವತಾರ್ಯ ಕರೀಷೇ ಚ ಪಕ್ಷಮಾತ್ರಂ ನಿಧಾಪಯೇತ್॥ ॥೨೫॥
ಸ್ನಿಗ್ಧಃ ಸ್ವಿನ್ನೋ ಹೃತಮಲಃ ಪಕ್ಷಾದೂರ್ಧ್ವಂ ಪ್ರಯತ್ನತಃ ।
ಚತುರ್ಥ ಭಕ್ತಾನ್ತರಿತಃ ಶುಕ್ಲಾದೌ ದಿವಸೇ ಶುಭೇ ॥೨೪॥
ಮನ್ತ್ರಪೂತಸ್ಯ ತೈಲಸ್ಯ ಪಿಬೇನ್ಮಾತ್ರಾಂ ಯಥಾಬಲಮ್ ।
ತತ್ರ ಮನ್ತ್ರಂ ಪ್ರವಕ್ಷ್ಯಾಮಿ ಯೇನೇದಮಭಿಮನ್ತ್ರ್ಯತೇ ॥೨೫॥
ಮಜ್ಜಸಾರ ಮಹಾವೀರ್ಯ ಸರ್ವಾ ಧಾತೂ ವಿಶೋಧಯ ।
ಶಙ್ಖಚಕ್ರಗದಾಪಾಣಿಸ್ತ್ವಮಾಜ್ಞಾಪಯತೇಽಚ್ಯುತಃ ॥೨೬॥
ತೇನಾಸ್ಯೋರ್ಧ್ವಮಧಶ್ಚಾಪಿ ದೋಷಯಾನ್ತ್ಯಸಕೃತ್ ತತಃ ।
ಅಸ್ನೇಹಲವಣಾಂ ಸಾಯಂ ಯವಾಗೂಂ ಶೀತಲಾಂ ಪಿಬೇತ್ ॥೨೭॥
ಪಞ್ಚಾಹೇ ಪ್ರಪಿಬೇತ್ತೈಲಮನೇನ ವಿಧಿನಾ ನರಃ ।
ಪಕ್ಷಂ ಪರಿಹರೇಚ್ಚಾಪಿ ಮುದ್ಗಯೂಷೌದನಾಶನಃ ॥೨೮॥
ಪಞ್ಚಭಿರ್ದಿವಸೈರೇವಂ ಸರ್ವಕುಷ್ಠೈರ್ವಿಮುಚ್ಯತೇ ।
ತದೇವ ಖದಿರಕ್ವಾಥೇ ತ್ರಿಗುಣೇ ಸಾಧು ಸಾಧಿತಮ್ ॥೨೯॥
ನಿಹನ್ತಿ ಪೂರ್ವವತ್ ಪಕ್ವಂ ಪಿಬೇತ್ ಮಾಸಮತಂದ್ರಿತಃ ।
ತೇನಾಭ್ಯಕ್ತಶರೀರಶ್ಚ ಕುರ್ವೀತಾಹಾರಮೀರಿತಮ್ ॥೩೦॥
ಭಿನ್ನಸ್ವರಂ ರಕ್ತನೇತ್ರಂ ವಿಶೀರ್ಣಂ ಕ್ರಿಮಿಭಕ್ಷಿತಮ್ ।
ಅನೇನಾಶು ಪ್ರಯೋಗೇಣ ಸಾಧಯೇತ್ ಕುಷ್ಠಿನಂ ನರಮ್ ॥೩೧॥
ಸರ್ಪಿರ್ಮಧುಯುತಂ ಪೀತಂ ತದೇವ ಖದಿರಾಮ್ಬುನಾ ।
ಪಕ್ಷಿಮಾಂಸರಸಾಹಾರಂ ಕರೋತಿ ದ್ವಿಶತಾಯುಷಮ್ ॥೩೨॥
ತದೇವ ಸಸ್ಯೋ ಪಞ್ಚಾಶದ್ದಿವಸಾನ್ಪಯೋಜಿತಮ್ ।
ವಪುಷ್ಮನ್ತಂ ಶ್ರುತಿಧರಂ ಕರೋತಿ ತ್ರಿಶತಾಯುಷಮ್ ॥೩೩॥
ಶೋಧಯನ್ತಿ ನರಂ ಪೀತಾ ಮಜ್ಜಾನಸ್ತಸ್ಯ ಮಾತ್ರಯಾ ।
ಮಹಾವೀರ್ಯಸ್ತುವರಕಃ ಕುಷ್ಠಮೇಹಾಪಹಃ ಪರಃ ॥೩೪॥

ಪಶ್ಚಿಮ ಸಮುದ್ರದ ದಡದಲ್ಲಿ ತುವರಕವೆಂಬ ಒಂದು ಜಾತಿಯ ಮರಗಳು ಬೆಳೆಯುತ್ತವೆ. ಅವುಗಳ ಕೊಂಬೆಗಳು ಸಮುದ್ರದಕಡೆಗೆ ಹರಡಿವೆ. ಸಮುದ್ರದ ಅಲೆಗಳೆದ್ದು ಆ ಮರಗಳ ಎಲೆಗಳ ಮೇಲೆ ನುಗ್ಗಿ ಅವು ಕೆಳಕ್ಕೂ ಮೇಲಕ್ಕೂ ಹಾರುವಂತೆ ಸದಾ ಅಲ್ಲಾಡಿಸುತ್ತಾ ಇರುತ್ತವೆ. ಮಳೆಗಾಲದಲ್ಲಿ ಪಕ್ವವಾದ ಈ ಮರಗಳ ಹಣ್ಣುಗಳ ತಿರುಳನ್ನು ಸೇರಿಸಿ ಚೆನ್ನಾಗಿ ಒಣಗಿಸಿ ಚೂರ್ಣಮಾಡಿ ಗಾಣಕ್ಕೆ ಸುರಿದು ಎಳ್ಳಿನಂತೆ ತಿರುಗಿಸಿ ಎಣ್ಣೆಯನ್ನು ತೆಗೆಯಬೇಕು. ಅಥವಾ ಕುಸುಮೆ ಹೂವುಗಳನ್ನು ನೀರ ಮೇಲೆ ಸುರಿದು ಅದರಿಂದ ತೈಲವನ್ನು ಶೇಖರಿಸುವಂತೆಯೇ ಇವನ್ನೂ ನೀರಿಗೆ ಸುರಿದು ಮೇಲೆ ತೇಲಾಡುವ ತೈಲವನ್ನು ತುಂಬಿದ ಪಾತ್ರೆಯನ್ನು ಒಲೆಯಮೇಲಿಟ್ಟು ನೀರು ಇಂಗುವವರೆಗೂ ಕಾಯಿಸಿ

ಶೋಧಿಸಿದ ತೈಲವನ್ನು ಪಳಗಿದ ಮಡಕೆಗೆ ತುಂಬಿ ಮಡಕೆಯ ಬಾಯಿಗೆ ಶ್ರಾವೆಯನ್ನು ಮುಚ್ಚಿ ಚೀರುಮಾಡಿ ಆ ಮಡಕೆಯನ್ನು ಬೆರಣಿಯ ರಾಶಿಯಲ್ಲಿ ಹೂತಿಟ್ಟು ಒಂದು ಪಕ್ಷ ಕಾಲ ಕಳೆದಮೇಲೆ ತೆಗೆದು ಚೀರನ್ನು ಬಿಚ್ಚಿ ತೈಲವನ್ನು ಉಪಯೋಗಿಸಬೇಕು. ತೈಲ ಪ್ರಯೋಗಕ್ಕೆ ಮೊದಲು ಕುಷ್ಠರೋಗಿಗೆ ಸ್ನೇಹ, ಸ್ವೇದ, ವಮನ, ವಿರೇಚನಗಳಿಂದ ದೇಹ ಶುದ್ಧಿಮಾಡಿ ಪೇಯಾವಿಲೇಪಿ ಪಾನಗಳಿಂದ ಕ್ರಮಭೋಜನ ಮಾಡುವವರೆಗೂ ಸಂಸ್ಕಾರಿಸಿ ಹದಿನೈದು ದಿನಗಳು ಪೂರ್ತಿಯಾಗಿ ಶರೀರಕ್ಕೆ ಬಲವುಂಟಾದದ್ದನ್ನು ತಿಳಿದು ೧೬ ನೆಯ ದಿನದಿಂದ ಮೇಲೆ ಸಿದ್ಧಮಾಡಿಟ್ಟಿರುವ ತೈಲವನ್ನು ಪ್ರಯೋಗಮಾಡಬೇಕು. ಹೇಗೆಂದರೆ –ಮೊದಲನೆಯದಿನ ಎರಡು ಹೊತ್ತು ನಿತ್ಯಗಟ್ಲೆ ಭೋಜನವನ್ನೂ ಎರಡನೆಯದಿನ ಹಗಲು ಒಂದು ಹೊತ್ತು ಭೋಜನವನ್ನೂ ಮಾಡಿಸಿ ಆದಿನ ಸಾಯಂಕಾಲ ಭೋಜನವನ್ನು ಮಾಡಿಸದೆ ಬಿಸಿ ನೀರನ್ನಾಗಲೀ ದಾಳಿಂಬೆ ಮೊದಲಾದ ಯಾವುದಾದರೂ ಹಣ್ಣಿನ ಹುಳಿ ರಸವನ್ನು ಕುಡಿಸಿಯಾಗಲೀ ಮೂರನೆಯದಿನ ಬೆಳಗ್ಗೆ ಭೋಜನಕ್ಕೆ ಬದಲು ಒಂದು ಕರ್ಷ ಪ್ರಮಾಣ ಮೇಲ್ಕಂಡ ಸ್ನೇಹವನ್ನು ಕುಡಿಸಬೇಕು. ಈರೀತಿ ಮಾಡುವುದರಿಂದ ಚತುರ್ಥ ಭಕ್ತವು (ನಾಲ್ಕನೆಯಕಾಲದ ಭೋಜನವು ಇಲ್ಲದಂತಾಗುತ್ತದೆ) ಅಂತರಿಸುತ್ತದೆ (ಅಡಕ ವಾಗುತ್ತದೆ). ಹೀಗೆ ತೈಲಪಾನ ಮಾಡಬೇಕಾದರೆ ಶುಕ್ಲಪಕ್ಷದ ಶುಭದಿನ ರೋಗಿಯು "ಮಜ್ಜನಸಾರ, ಮಹಾವೀರ್ಯ! ಸಕಲಧಾತುಗಳ ದೋಷಗಳನ್ನೂ ಶೋಧಿಸುವಂತೆ ಶಂಖಚಕ್ರ ಗದೆಗಳನ್ನು ಧರಿಸಿರುವ ಅಚ್ಯುತನು ನಿನಗೆ ಅಪ್ಪಣೆಮಾಡುತ್ತಾನೆ" ಎಂಬ ಅರ್ಥವುಳ್ಳ ಮಂತ್ರವನ್ನು ಉಚ್ಚರಿಸಿ ದೇವರನ್ನು ಧ್ಯಾನಮಾಡುತ್ತಾ ತೈಲವನ್ನು ಕುಡಿಯ ಬೇಕು. ಇದರಿಂದ ದೋಷಗಳು ಮೇಲ್ಮುಖವಾಗಿ ವಮನದಿಂದಲೂ ಕೆಳಮುಖವಾಗಿ ವಿರೇಚನದಿಂದಲೂ ಅನೇಕಸಾರಿ ಹೊರಕ್ಕೆ ಬರುತ್ತವೆ. ಸಾಯಂಕಾಲದಲ್ಲಿ ಸ್ವಲ್ಪ ಉಪ್ಪು ತುಪ್ಪಮಿಶ್ರಮಾಡಿರುವ ತಣ್ಣಗಿರುವ ಯವಾಗುವನ್ನು (ಗಂಜಿಯನ್ನು) ಕುಡಿಯ ಬೇಕು. ಈ ರೀತಿಯಾಗಿ ೫ ದಿನಗಳವರೆಗೆ ತೈಲಪಾನವನ್ನು ಮಾಡಬೇಕು. ಅನಂತರ ಒಂದು ಪಕ್ಷದವರೆಗೂ ಕ್ರೋಧಶೋಕಾದಿಗಳನ್ನು ಬಿಟ್ಟು ಹೆಸರುಕಟ್ಟು ಮಿಶ್ರಮಾಡಿ ಕೊಂಡು ಅನ್ನವನ್ನು ಊಟಮಾಡಬೇಕು. ಈ ರೀತಿಯಾಗಿ ೫ ದಿನಗಳಲ್ಲಿ ಪ್ರಯೋಗಿಸಿದ ತುವರಕತೈಲಪಾನ ವಿಧಿಯಿಂದ ಸಕಲವಿಧ ಕುಷ್ಠಗಳೂ ನಿವಾರಣೆಯಾಗುತ್ತವೆ. ಈ ತೈಲವನ್ನೇ ಮೂರರಷ್ಟು ಕಗ್ಗಲಿ ಕಷಾಯದೊಡನೆ ಸೇರಿಸಿ ತಯಾರಿಸಿಟ್ಟುಕೊಂಡು ಜಿತೇಂದ್ರಿಯನಾಗಿ ಒಂದು ತಿಂಗಳು ಸೇವಿಸಿದರೆ ಹಿಂದಿನ ಯೋಗದಂತೆಯೇ ಸಕಲವಿಧ ಕುಷ್ಠಗಳೂ ನಿವಾರಣೆಯಾಗುತ್ತವೆ. ಆ ತೈಲವನ್ನೇ ಮೈಗೆಲ್ಲಾ ಬಳಿದುಕೊಂಡು ಪಥ್ಯಾ ಹಾರಮಾಡುತ್ತಾ ಬಂದರೆ ಧ್ವನಿಯೊಡೆದಿರುವ ಕಣ್ಣುಕೆಂಪೇರುವ ಮಾಂಸಪೇಶಿಗಳು ಕಿತ್ತುಹೋಗಿ ಕ್ರಿಮಿಗಳು ತಿಂದುಬಿಟ್ಟಿರುವ ಕುಷ್ಠರೋಗವು ಬೇಗ ನಿವಾರಣೆಯಾಗುತ್ತದೆ. ತುಪ್ಪ ಜೇನುತುಪ್ಪಗಳನ್ನು ಮಿಶ್ರಮಾಡಿದ ಈ ತೈಲವನ್ನು ಕಗ್ಗಲಿಯ ಕಷಾಯದೊಡನೆ ಸೇವಿಸಿದರೂ ಇದೇ ಗುಣಬರುತ್ತದೆ. ಈ ತೈಲವನ್ನು ಸೇವಿಸಿ ಪಕ್ಷಿಮಾಂಸ ರಸಮಿಶ್ರ

ಮಾಡಿದ ಆಹಾರವನ್ನು ಭೋಜನಮಾಡುತ್ತಾ ಬಂದರೆ ೨೦೦ ವರ್ಷಗಳಕಾಲ ಬದುಕುತ್ತಾನೆ. ಈ ತೈಲವನ್ನೇ ೫೦ ದಿನಗಳವರೆಗೂ ನಸ್ಯಪ್ರಯೋಗದಿಂದ ಸೇವಿಸಿದರೆ ೨೦೦ ವರ್ಷಗಳಕಾಲ ಬದುಕಿರಬಹುದು. ತುವರಕದ ತಿರುಳನ್ನು ಯೋಗ್ಯಪ್ರಮಾಣದಿಂದ ಸೇವಿಸಿದರೆ ದೇಹ ಶುದ್ಧಿಯಾಗುತ್ತದೆ. ಮಹಾವೀರ್ಯವುಳ್ಳ ಈ ತುವರಕಪ್ರಯೋಗವು ಕುಷ್ಠ, ಮೇಹ ರೋಗಗಳನ್ನು ನಿವಾರಣೆಮಾಡುವ ಯೋಗಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು.

ಸಾನ್ತರ್ಧೂಮಸ್ತಸ್ಯ ಮಜ್ಜಾ ತು ದಗ್ಧಃ ಕ್ಷಿಪ್ತಸ್ತೈಲೇ ಸೈನ್ಧವಂಚಾಞ್ಜನಂ ಚ ।
ಐಮರ್ಮ್ಯಂ ಹನ್ಯಾದರ್ಮನಕ್ತಾನ್ಧ್ಯಕಾಚಾ ನೀಲೀರೋಗಂ ತೈಮಿರಂ ಚಾಞ್ಜನೇನ ॥೩೫॥

ತುವರಕ ಮಜ್ಜೆಯನ್ನೂ ಸೈಂಧವ, ಸ್ರೋತೋಂಜನಗಳನ್ನೂ ಸೇರಿಸಿ ಒಂದು ಮಡಕೆಗೆ ತುಂಬಿ ಮುಚ್ಚಳಮುಚ್ಚಿ ಒಲೆಯಮೇಲಿಟ್ಟು ಕೆಳಗೆ ಉರಿಹಾಕಿ ಸುಟ್ಟುಬಂದ ಮಸಿಯನ್ನೂ ಅದೇ ಸೈಂಧವಲವಣವನ್ನೂ ಸ್ರೋತೋಂಜನವನ್ನೂ ತುವರಕತೈಲದಲ್ಲಿ ಹಾಕಿ ಚೆನ್ನಾಗಿ ರಂಗಳಿಸಿಟ್ಟುಕೊಂಡು ಕಣ್ಣಿಗೆ ಅಂಜನಹಾಕಿದರೆ ಪ್ರಸ್ತಾರ್ಯರ್ಮ, ಶುಕ್ಲಾರ್ಮ, ರಕ್ತಾರ್ಮ, ಮಾಂಸಾರ್ಮ, ಸ್ನಾಯ್ವರ್ಮಗಳೆಂಬ ೫ ವಿಧ ನೇತ್ರಾರ್ಮಗಳೂ ನಕ್ತಾಂಧ್ಯ ಎಂಬ ನೇತ್ರಕಾಚ, ನೀಲಿಕಾ, ತಿಮಿರ ರೋಗಗಳೂ ನಿವಾರಣೆಯಾಗುತ್ತವೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಮಧುಮೇಹ ಚಿಕಿತ್ಸಾ ನಾಮಕ ತ್ರಯೋದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಚತುರ್ದಶೋಽಧ್ಯಾಯಃ

ಅಥಾತೋ ಭಗಂದರಾಣಾಂಚಿಕಿತ್ಸಿತಂ ವಾಖ್ಯಾಸ್ಯಾಮಃ ||೧||

ಯಥೋಽವಾಚ ಭಗವಾರ್ನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಿಸಿದಂತೆಯೇ ಉದರ ರೋಗಗಳ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಅಷ್ಟೌ ಉದರಾಣಿ ಪೂರ್ವಮುದ್ದಿಷ್ಟಾನಿ, ತೇಷು ಅಸಾಧ್ಯಂ ಬದ್ಧಗುದಂ ಪರಿಸ್ರಾವಿ ಚ ಅವಶಿಷ್ಟಾನಿ ಕೃಚ್ಛ್ರಸಾಧ್ಯಾನಿ ಸರ್ವಾಣ್ಯೇವ ಪ್ರತ್ಯಾಖ್ಯಾಯೋಪಕ್ರಮೇತ ತೇಷು ಆದ್ಯಶ್ಚತುರ್ವರ್ಗೋ ಭೇಷಜಸಾಧ್ಯಃ ಕಾಲ ಪ್ರಕರ್ಷಾತ್ ಸರ್ವಾಣ್ಯೇವ ಶಸ್ತ್ರಸಾಧ್ಯಾನಿ ವರ್ಜಯಿತವ್ಯಾನಿ ವಾ ||೩||

ಎಂಟು ವಿಧ ಉದರ ರೋಗಗಳೆಂದು ನಿದಾನಸ್ಥಾನದಲ್ಲಿ ಹೇಳಿರುತ್ತದೆ. ಅವುಗಳಲ್ಲಿ ಬದ್ಧಗುದ ಮತ್ತು ಪರಿಸ್ರಾವ್ಯುದರಗಳು ಅಸಾಧ್ಯವಾದವು, ಉಳಿದವು ಕಷ್ಟ ಸಾಧ್ಯಗಳು. ಎಲ್ಲಾ ವಿಧದ ಉದರ ವ್ಯಾಧಿಗಳೂ ಅಸಾಧ್ಯವಾದುವೆಂದೇ ತಿಳಿಸಿ ಚಿಕಿತ್ಸೆಮಾಡಲು ಪ್ರಯತ್ನಿಸಬೇಕು. ಅವುಗಳ ಪೈಕಿ ವಾತ, ಪಿತ್ತ, ಕಫ, ದೂಷೀವಿಷನಿಮಿತ್ತಗಳಿಂದುಂಟಾದ ಮೊದಲಿನ ೪ ವಿಧಗಳನ್ನು ಔಷಧ ಪ್ರಯೋಗದಿಂದಲೇ ಗುಣಪಡಿಸಬಹುದು. ಔಷಧ ಮತ್ತು ಶಸ್ತ್ರಪ್ರಯೋಗಗಳಿಂದಲೂ ಸಾಧ್ಯವಾಗದ ಉದರ ರೋಗಗಳನ್ನು ತ್ಯಜಿಸಬೇಕು.

ಉದರೀ ತು ಗುರ್ವಭಿಷ್ಯನ್ದಿರೂಕ್ಷವಿದಾಹಿಸ್ನಿಗ್ಧಪಿಶಿತಪರಿಷೇಕಾವಗಾಹಾರ್ನ್ ಪರಿಹರೇತ್ ಶಾಲಿಷಷ್ಟಿಕಯವಗೋಧೂಮನೀವಾರಾರ್ನ್ ನಿತ್ಯಮಶ್ನೀಯಾತ್ ||೪||

ಉದರ ರೋಗಿಯು ಗುರುವಾದ ಮೈಭಾರವನ್ನುಂಟುಮಾಡುವ ಮೊಸರು ಮೊದಲಾದ ರೂಕ್ಷ ಅರ್ಥಬೆಂದು ಎದೆಯುರಿಯನ್ನುಂಟುಮಾಡುವ ಜಿಡ್ಡಾದ ಮಾಂಸ ಮಿಶ್ರಿತವಾದ ಆಹಾರಗಳನ್ನೂ ತಣ್ಣೀರಿನ ಸ್ನಾನವನ್ನೂ ತಣ್ಣೀರಿನಲ್ಲಿ ಮುಳುಗುವುದನ್ನೂ ಬಿಡಬೇಕು. ಪ್ರತಿ ದಿನವೂ ೬೦ ದಿನಗಳಲ್ಲಿ ಅಕ್ಕಿ, ಯವಧಾನ್ಯ, ಗೋಧಿ, ಗಂಡಕ್ಕಿ ಇವುಗಳ ಅನ್ನವನ್ನೇ ಭೋಜನಮಾಡಬೇಕು.

ತತ್ರ ವಾತೋದರಿಣಂ ವಿದಾರಿಗನ್ಧಾದಿಸಿದ್ಧೇನ ಸರ್ಪಿಷಾ ಸ್ನೇಹಯಿತ್ವಾ ತಿಲ್ವಕವಿಪಕ್ವೇನಾನುಲೋಮ್ಯ ಚಿತ್ರಾಫಲತೈಲಪ್ರಗಾಢೇನ ವಿದಾರಿಗನ್ಧಾಕಷಾಯೇಣ ಆಸ್ಥಾಪಯೇತ್ ಅನುವಾಸಯೇಚ್ಚ ಶಾಲ್ವಣೇನ ಚೋಪನಾಹಯೇದುದರಂ ಭೋಜಯೇಚ್ಚೈನಂ ವಿದಾರಿಗನ್ಧಾದಿಸಿದ್ಧೇನ ಕ್ಷೀರೇಣ ಜಾಙ್ಗಲರಸೇನ ಚ ಅಭೀಕ್ಷ್ಣಂ ಸ್ವೇದಯೇತ್ ||೫||

ಆ ಪೈಕಿ **ವಾತೋದರಿಯನ್ನು** ವಿದಾರಿಗಂಧಾದಿ ಗಣದ್ರವ್ಯಗಳಿಂದ ತಯಾರಿಸಿದ ಘೃತಪಾನದಿಂದ ಸ್ನಿಗ್ಧನನ್ನಾಗಿ ಮಾಡಿ ರೋಧ್ರಘೃತದಿಂದ ದೋಷಾನುಲೋಮನ

ಮಾಡಿಸಿ ಹರಳೆಣ್ಣೆಯನ್ನು ಹೆಚ್ಚಾಗಿ ಸೇರಿಸಿದ ವಿದಾರಿಗಂಧಾದಿಗಣ ದ್ರವ್ಯಗಳ ಕಷಾಯದಿಂದ ಆಸ್ಥಾಪನ ಮತ್ತು ಅನ್ವಾಸನ ಬಸ್ತಿಗಳನ್ನು ಪ್ರಯೋಗಿಸಿ ಶಾಲ್ವಣಸ್ವೇದದಿಂದ ಉದರಕ್ಕೆ ಸ್ವೇದಮಾಡಿಸಿ ವಿದಾರಿಗಂಧಾದಿ ದ್ರವ್ಯಗಳಿಂದ ತಯಾರಿಸಿದ ಹಾಲು ಮತ್ತು ಬಯಲುಪೇಶದ ಪ್ರಾಣಿಗಳ ಮಾಂಸರಸಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು. ಆಗಾಗ ವೈಯ್ಯನ್ನು ಬೆವರಿಸಬೇಕು.

ಟಿಪ್ಪಣಿ—ಉದರ ರೋಗಿಗಳಿಗೆ ಸ್ನೇಹಸ್ವೇದ ಕರ್ಮಗಳು ನಿಷಿದ್ಧಗಳಾದರೂ ಛಿದ್ರೋದರಿ ಉದಕೋದರಿಗಳನ್ನು ಬಿಟ್ಟು ಉಳಿದ ಉದರರೋಗಿಗಳಿಗೆ ದೋಷದ ಅವಸ್ಥೆಗಳಿಗೆ ತಕ್ಕಂತೆ ಸ್ನೇಹ, ಸ್ವೇದ, ಅಸ್ಥಾಪನಾನುವಾಸನಗಳನ್ನು ಮಾಡಿಸಬೇಕೆಂದೂ ಜಲೋದರವಾಗಿ ಪರಿಣಮಿಸಿದ್ದರೆ ಕೂಡದೆಂದೂ ಸುಶ್ರುತಾಚಾರ್ಯರ ಮತವು.

ಪಿತ್ತೋದರಿಣಂ ತು ಮಧುರಗಣವಿಪಕ್ವೇನ ಸರ್ಪಿಷಾ ಸ್ನೇಹಯಿತ್ವಾ ಶ್ಯಾಮಾತ್ರಿಫಲಾತ್ರಿವೃದ್ವಿಪಕ್ವೇನಾನುಲೋಮ್ಯ ಶರ್ಕರಾಮಧುಪ್ರಗಾಢೇನ ನ್ಯಗ್ರೋಧಾದಿ ಕಷಾಯೇಣಾಸ್ಥಾಪಯೇದನುವಾಸಯೇಚ್ಚ ಪಾಯಸೇನೋಪನಾಹಯೇದುದರಂ ಭೋಜಯೇಚ್ಚೈನಂ ವಿದಾರಿಗನ್ಧಾದಿಸಿದ್ಧೇನ ಪಾಯಸಾ ||೬||

ಪಿತ್ತೋದರಿಯನ್ನು ಕಾಕೋಳ್ಯಾದಿ ಮಧುರಗಣ ದ್ರವ್ಯಗಳನ್ನು ಸೇರಿಸಿ ತಯಾರಿಸಿದ ಘೃತಪಾನದಿಂದ ಸ್ನೇಹನವಾಗುವಂತೆ ಮಾಡಿ ತಿಗಡೆ ತ್ರಿಫಲೆ ಬಿಳಿತಿಗಡೆಗಳನ್ನು ಸೇರಿಸಿ ತಯಾರಿಸಿದ ಘೃತದಿಂದ ಅನುಲೋಮನ (ಮೃದುವಿರೇಚನ) ಮಾಡಿಸಿ ಆಲ, ಅರಳಿ ಮೊದಲಾದ ಕ್ಷೀರವೃಕ್ಷಗಳ ಕಷಾಯಕ್ಕೆ ಸಕ್ಕರೆ ಜೇನುತುಪ್ಪಗಳನ್ನು ಹೆಚ್ಚಾಗಿ ಸೇರಿಸಿ ಆಸ್ಥಾಪನ ಮತ್ತು ಸ್ನೇಹಬಸ್ತಿಗಳನ್ನು ಪ್ರಯೋಗಿಸಿ ಹಾಲಿನಲ್ಲಿ ಬೆಂದ ಅಕ್ಕಿಯಪಾಯಸದಿಂದ ಹೊಟ್ಟೆಯಮೇಲೆ ಶಾಖಬರುವಂತೆ ಉಪನಾಹಮಾಡಬೇಕು. ವಿಧಾರಿಗಂಧಾದಿ ದ್ರವ್ಯಗಳಿಂದ ತಯಾರಿಸಿದ ಹಾಲನ್ನು ಸೇರಿಸಿ ಭೋಜನಮಾಡಿಸಬೇಕು.

ಶ್ಲೇಷ್ಮೋದರಿಣಂ ಪಿಪ್ಪಲ್ಯಾದಿಕಷಾಯಸಿದ್ಧೇನ ಸರ್ಪಿಷೋಪಸ್ನೇಹ್ಯ ಸ್ನುಹೀಕ್ಷೀರವಿಪಕ್ವೇನಾನುಲೋಮ್ಯ ತ್ರಿಕಟುಕಮೂತ್ರಕ್ಷಾರತೈಲಪ್ರಗಾಢೇನ ಮುಷ್ಕಕಾದಿಕಷಾಯೇಣಾಸ್ಥಾಪಯೇದನುವಾಸಯೇಚ್ಚ ಶಣಾತಸೀಧಾತಕೀಕಿಣ್ವಸರ್ಷಪಮೂಲಕಬೀಜಕಲ್ಕೈಶ್ಚೋಪನಾಹಯೇದುದರಂ ಭೋಜಯೇಚ್ಚೈನಂ ತ್ರಿಕಟುಕಪ್ರಗಾಢೇನ ಕುಳತ್ಥಯೂಷೇಣಪಾಯಸೇನ ವಾ ಸ್ವೇದಯೇಚ್ಚಾಭೀಕ್ಷ್ಣಮ್ ||೭||

ದೂಷ್ಯೋದರಿಣಂ ತು ಪ್ರತ್ಯಾಖ್ಯಾಯ ಸಪ್ತಲಾಶಙ್ಖಿನೀಸ್ವರಸಸಿದ್ಧೇನ ಸರ್ಪಿಷಾ ವಿರೇಚಯೇತ್ ಮಾಸಮರ್ಧಂ ಮಾಸಂ ವಾ ಮಹಾವೃಕ್ಷಕ್ಷೀರಸುರಾಗೋಮೂತ್ರಸಿದ್ಧೇನ ವಾ ಶುದ್ಧಕೋಷ್ಠನ್ತು ಮದ್ಯೇನ ಅಶ್ವಮಾರಕಗುಞ್ಜಾಕಾಕಾದನೀಮೂಲಕಲ್ಕಂ ಪಾಯಯೇತ್ ಇಕ್ಷುಕಾಣ್ಡಾನಿ ವಾ ಕೃಷ್ಣಸರ್ಪೇಣ ದಂಶಯಿತ್ವಾ ಭಕ್ಷಯೇತ್ ವಲ್ಲೀಫಲಾನಿ ವಾ ಮೂಲಜಂ ಕನ್ದಜಂ ವಾ ವಿಷಮಾಸೇವಯೇತ್ ತೇನಾಗದೋ ಭವತ್ಯನ್ಯಂ ವಾ ಭಾವಮಾಪದ್ಯತೇ ||೮||

ಭವತಿ ಚಾತ್ರ–

ಕುಪಿತಾನಿಲಮೂಲತ್ವಾತ್ ಸಞ್ಚಿತತ್ವಾತ್ ಮಲಸ್ಯ ಚ ।
ಸರ್ವೋದರೇಷು ಶಂಸನ್ತಿ ಬಹುಶಸ್ತ್ವನುಲೋಮನಮ್ ॥೯॥

ಕಫೋದರಿಗೆ ಪಿಪ್ಪಲ್ಯಾದಿ ಗಣೋಕ್ತದ್ರವ್ಯಗಳಿಂದ ತಯಾರಿಸಿದ ಘೃತವನ್ನು ಪಾನ ಮಾಡಿಸಿ ಸ್ನಿಗ್ಧನನ್ನಾಗಿ ಮಾಡಿ ಮುಂಡುಗಳ್ಳಿಯ ಹಾಲಿನೊಡನೆ ತಯಾರಿಸಿದ ತುಪ್ಪದಿಂದ ಅನುಲೋಮನಮಾಡಿಸಿ ತ್ರಿಕಟು, ಗೋಮೂತ್ರ, ಯವಕ್ಷಾರ, ತಿಲತೈಲಗಳನ್ನು ಹೆಚ್ಚಾಗಿ ಸೇರಿಸಿ ಮುಷ್ಕಕಾದಿ ಗಣದ್ರವ್ಯಗಳ ಕಷಾಯದಿಂದ ಆಸ್ಥಾಪನಬಸ್ತಿ ಮತ್ತು ಸ್ನೇಹಬಸ್ತಿ ಗಳನ್ನು ಪ್ರಯೋಗಿಸಬೇಕು. ಶಣಬಿನಬೀಜ, ಶೀಮೆಅಗಸೆಬೀಜ, ಧಾತಕೀಹೂವು, ಮದ್ಯದಗಶಿ, ಸಾಸಿವೆ, ಮೂಲಂಗಿಬೀಜ ಇವುಗಳ ಕಲ್ಕದಿಂದ ಉದರಕ್ಕೆ ಉಪನಾಹನ ಸ್ವೇದವನ್ನು ಮಾಡಿಸಬೇಕು. ತ್ರಿಕಟುಚೂರ್ಣವನ್ನು ಹೆಚ್ಚಾಗಿ ಸೇರಿಸಿದ ಹುರಳಿಕಟ್ಟು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಿ ಹಾಲಿನಲ್ಲಿ ಬೆಂದ ಅಕ್ಕಿಯ ಪಾಯಸದಿಂದ ಉದರಕ್ಕೆ ಶಾಕ ಕೊಡಬೇಕು.

ದೂಷ್ಯೋದರಿಗೆ ರೋಗ ಗುಣವಾಗುವುದು **ಅಸಾಧ್ಯವೆಂದು** ಮೊದಲೇ ತಿಳಿಸಿ ಕಾಲಯಾಪನೆ ಮಾಡುವುದಕ್ಕಾಗಿಯೂ ವೇದನೆಯನ್ನು ಶಮನಗೊಳಿಸುವುದಕ್ಕಾಗಿಯೂ ಅರಶಿನ ಮುಂಡುಗಳ್ಳಿ, ಈಶ್ವರಿ ಬೇರುಗಳ ಸ್ವರಸಗಳೊಡನೆ ತಯಾರಿಸಿದ ತುಪ್ಪದಿಂದ ಅರ್ಧಮಾಸ ಅಥವಾ ಒಂದು ಮಾಸ ಪೂರ್ತಿಯಾಗಿ ವಿರೇಚನಮಾಡಿಸಬೇಕು. ಅಥವಾ ಮುಂಡುಗಳ್ಳಿಯ ಹಾಲು, ಮದ್ಯ, ಗೋಮೂತ್ರಗಳಿಂದ ತಯಾರಿಸಿದ ತುಪ್ಪದಿಂದ ವಿರೇಚನಮಾಡಿಸಿ ಕೋಷ್ಠಶುದ್ಧಿಯಾದಮೇಲೆ ಮದ್ಯಕ್ಕೆ ಕಣಿಗಲೆ ಗುಲಗಂಜಿ, ದೊಡ್ಡ ಗುಲಗಂಜಿಯ (ಮಂಜಾರೆಮಣಿ) ಬೇರುಗಳ ಕಲ್ಕವನ್ನು ಸೇರಿಸಿ ಕುಡಿಸಬೇಕು. ಸೌತೇ ಕಾಯಿ ಮೊದಲಾದ ವಲ್ಲೀಫಲಗಳನ್ನಾಗಲೀ ಕಬ್ಬಿನ ಬುಡವನ್ನಾಗಲೀ ಕೃಷ್ಣಸರ್ಪದಿಂದ ಕಚ್ಚಿಸಿ ತಿನ್ನಿಸಬೇಕು. ಮೂಲವಿಷವನ್ನಾಗಲೀ ಕಂದವಿಷವನ್ನಾಗಲೀ ತಿನ್ನಿಸಬೇಕು. ಅದರಿಂದ ವಿಷವು ನಿರ್ವಿಷವಾಗುತ್ತದೆ. ಅಥವಾ ರೋಗಿಯು ಸಾಯುತ್ತಾನೆ. ಈ ವಿಷ ಪ್ರಯೋಗ ಮಾಡುವಾಗ ರಾಜನ ಅಪ್ಪಣೆಯನ್ನು ಪಡೆದಿರಬೇಕು. ಎಲ್ಲಾ ವಿಧಗಳಾದ ಉದರ ರೋಗಗಳೂ ಮಲವೃದ್ಧಿಯಿಂದಲೂ ವಾತಪ್ರಕೋಪದಿಂದಲೂ ಉಂಟಾಗುತ್ತವೆ ಯಾದಕಾರಣ ಅವುಗಳಿಗೆ ಸಂಶೋಧನೆಯೇ ಪ್ರಶಸ್ತವಾದ ಚಿಕಿತ್ಸೆಯು. ಅದನ್ನೂ ಅಧಿಕ ಪ್ರಮಾಣದಿಂದ ವಾತಾನುಲೋಮನವಾಗುವಂತೆ ಮಾಡಿಸಬೇಕು.

ಅತಊರ್ಧ್ವಂ ಸಾಮಾನ್ಯಯೋಗಾನ್ ವಕ್ಷ್ಯಾಮಃ ತದ್ಯಥಾ–ಏರಣ್ಡತೈಲಮುಹರಹ ರ್ಮಾಸಂ ದ್ವೌ ವಾ ಕೇವಲಮೂತ್ರಯುಕ್ತಂ ಕ್ಷೀರಯುಕ್ತಂ ವಾ ಸೇವೇತ ಉದಕವರ್ಜೀ ಮಾಹಿಷಂ ವಾ ಮೂತ್ರಂ ಕ್ಷೀರೇಣ ನಿರಾಹಾರಃ ಸಪ್ತರಾತ್ರಂ ಉಷ್ಟ್ರೀಕ್ಷೀರಾಹಾರೋ ವಾನ್ನ ವಾರಿವರ್ಜೀ ಪಿಪ್ಪಲೀಂ ವಾ ಮಾಸಂ ಪೂರ್ವೋಕ್ತೇನ ವಿಧಾನೇನಾಸೇವೇತ ಸೈನ್ಧವಾಜಮೋ ದಾಯುಕ್ತಂ ವಾ ನಿಕುಮ್ಭತೈಲಂ ಆರ್ದ್ರಕಶೃಙ್ಗವೇರರಸಪಾತ್ರಶತಸಿದ್ಧಂ ವಾ ವಾತಶೂಲೇಷ್ವವ

ಚೂರ್ಣಂ ಶೃಙ್ಗವೇರರಸವಿಪಕ್ವಂ ಕ್ಷೀರಮಾಸೇವೇತಚ ವ್ಯಶೃಙ್ಗವೇರಕಲ್ಕಂ ವಾ ಪಯಸಾ ಸರಳ ದೇವದಾರುಚಿತ್ರಕಮೇವ ವಾ ಸುರಙ್ಗೀಶಾಲಪರ್ಣೀ ಶ್ಯಾಮಾಪುನರ್ನವಾಕಲ್ಕಂ ವಾ ಜ್ಯೋತಿಷ್ಕ ಫಲತೈಲಂ ವಾ ಕ್ಷೀರೇಣ ಸ್ವರ್ಜಿಕಾಹಿಙ್ಗುಮಿಶ್ರಂ ಪಿಬೇತ್ ಗುಡದ್ವಿತೀಯಾಂ ವಾ ಹರೀತಕೀಂ ಭಕ್ಷಯೇತ್ ಸ್ನುಹೀಕ್ಷೀರಭಾವಿತಾನಾಂ ವಾ ಪಿಪ್ಪಲೀನಾಂ ಸಹಸ್ರಂ ಕಾಲೇನ ಪಥ್ಯಾಕೃಷ್ಣಾ ಚೂರ್ಣಂ ವಾ ಸ್ನುಹೀಭಾವಿತಾಮುತ್ಕಾರಿಕಾಂ ಪಕ್ವಾಂ ದಾಪಯೇತ್ ಹರೀತಕೀಚೂರ್ಣಂ ಪ್ರಸ್ಥಮಾಢಕೇ ಘೃತಸ್ಯಾಙ್ಗಾರೇಷ್ವಭಿವಿಲಾಪ್ಯ ಖಜೇನಾಭಿಮಥ್ಯಾನುಗುಪ್ತಂ ಕೃತ್ವಾರ್ಧಮಾಸಂ ಯವಪಲ್ಲೇ ವಾಸಯೇತ್ ತತಶ್ಚೋದ್ಧೃತ್ಯ ಪರಿಸ್ರಾವ್ಯ ಹರೀತಕೀಕ್ವಾಥಾಮ್ಲದಧೀನ್ಯಾವಾಪ್ಯ ವಿಪಚೇತ್ ತದ್ಯಥಾಯೋಗಂ ಮಾಸಮರ್ಧಮಾಸಂ ವಾ ಪಾಯಯೇತ್ ಗವ್ಯೇಪಯಸಿ ಮಹಾ ವೃಕ್ಷಕ್ಷೀರಮಾವಾಪ್ಯ ವಿಪಚೇದ್ವಿಪಕ್ವಂ ಚಾವತಾರ್ಯ ಶೀತೀಭೂತಂ ಮನ್ಥಾನೇನಾಭಿಮಥ್ಯ ನವನೀತಮಾದಾಯ ಭೂಯೋ ಮಹಾವೃಕ್ಷಕ್ಷೀರೇಣೈವ ವಿಪಚೇತ ತದ್ಯಥಾಯೋಗಂ ಮಾಸಂಮಾಸಾರ್ಧಂ ವಾ ಪಾಯಯೇತ್ ಚವ್ಯಚಿತ್ರಕದನ್ತ್ಯತಿವಿಷಾಕುಷ್ಠಸಾರಿವಾ ತ್ರಿಫಲಾಜಮೋದ ಹರಿದ್ರಾಶಙ್ಖಿನೀತ್ರಿವೃತ್ತ್ರಿಕಟುಕಾನಾಮರ್ಧಕಾರ್ಷಿಕಾಭಾಗಾ ರಾಜವೃಕ್ಷಫಲಮಜ್ಜ್ಞಾನಾಮಷ್ಟೌ ಕರ್ಷಾಮಹಾವೃಕ್ಷಕ್ಷೀರಪಲೇ ದ್ವೇ ಗವಾಂ ಕ್ಷೀರಮೂತ್ರಯೋರಷ್ಟಾವಷ್ಟೌ ಪಲಾನಿ ಏತತ್ ಸರ್ವಂ ಘೃತಪ್ರಸ್ಥೇ ಸಮಾವಾಪ್ಯ ವಿಪಚೇತ್-ತದ್ಯಥಾಯೋಗಂ ಮಾಸಮರ್ಧಮಾಸಂ ವಾ ಪಾಯಯೇತ್ ಏತಾನಿತಿಲ್ವಕಘೃತಚತುರ್ಥಾನಿ ಸರ್ಪೀಂಷ್ಯುದರಗುಲ್ಮವಿದ್ರಧ್ಯಷ್ಠೀಲಾನಾಹ ಕುಷ್ಠೋನ್ಮಾದಾಪಸ್ಮಾರೇಷೂಪಯೋಜ್ಯಾನಿ ವಿರೇಚನಾರ್ಥಂ ಮೂತ್ರಾಸವಾರಿಷ್ಟಸುರಾಶ್ಚಾ ಭೀಕ್ಷ್ಣಂ ಮಹಾವೃಕ್ಷಕ್ಷೀರಸಂಭೃತಾಃ ಸೇವೇತ ವಿರೇಚನದ್ರವ್ಯಕಷಾಯಂ ವಾ ಶೃಙ್ಗವೇರದೇವ ದಾರು ಪ್ರಗಾಢಮ್ ||೧೦||

ಇನ್ನು ಮುಂದೆ ಸಾಮಾನ್ಯಯೋಗಗಳನ್ನು (ಔಷಧಕಲ್ಪನ) ಹೇಳುತ್ತೇವೆ. ಹೇಗೆಂದರೆ—ಹರಳೆಣ್ಣೆಯನ್ನು ಗೋಮೂತ್ರದೊಡನೆಯಾಗಲೀ ಹಾಲಿನೊಡನೆಯಾಗಲೀ ಪ್ರತಿ ದಿನವೂ ೧ ಮಾಸ ಅಥವಾ ೨ ಮಾಸಗಳವರೆಗೆ ಕುಡಿಸಬೇಕು. ನೀರನ್ನು ಕುಡಿಯಬಾರದು. ೨. ಎಮ್ಮೆಯ ಮೂತ್ರವನ್ನು ಹಸುವಿನ ಹಾಲಿನೊಡನೆ ಏಳು ದಿನಗಳವರೆಗೆ ಕುಡಿದು ಆಹಾರವನ್ನು ಸೇವಿಸಬಾರದು. ೩. ಅನ್ನನೀರುಗಳಿಲ್ಲದೆ ಒಂದುಮಾಸ ಪೂರ್ತಿಯಾಗಿ ಬರಿಯ ಒಂಟೆಯ ಹಾಲನ್ನೇ ಕುಡಿದುಕೊಂಡಿರಬೇಕು. ಅಥವಾ ಹಿಂದೆ ಹೇಳಿದಂತೆ ವರ್ಧಮಾನ ಪಿಪ್ಪಲಿಯನ್ನು ಸೇವಿಸಬೇಕು. ಜಾಪಾಳದ ತೈಲಕ್ಕೆ ಸೈಂಧವ ಲವಣವನ್ನೂ ವಾದಕ್ಕಿಯ ಚೂರ್ಣವನ್ನೂ ಸೇರಿಸಿ ಕುಡಿಯಬೇಕು. ವಾತಶೂಲೆಯಿದ್ದರೆ ಹಸಿಶುಂಠಿರಸ ೧ ಅಢಕಕ್ಕೆದಂತೀತೈಲ (ಕೆಲವರು ತಿಲತೈಲವೆನ್ನು ತ್ತಾರೆ) ವನ್ನು ೧ ಪ್ರಸ್ಥದಷ್ಟು ಸೇರಿಸಿ ತೈಲಪಾಕಮಾಡಿ ಸೇವಿಸಬೇಕು. ಹಸಿಶುಂಠಿರಸ ವನ್ನು ಹಾಲಿಗೆ ಸೇರಿಸಿ ಹಾಲುಮಾತ್ರ ನಿಲ್ಲುವಂತೆ ಕಾಯಿಸಿ ಕುಡಿಯಬೇಕು. ಚವ್ಯ, ಹಸಿಶುಂಠಿಗಳ ಕಲ್ಕವನ್ನು ಹಾಲಿಗೆ ಸೇರಿಸಿ ಕುಡಿಸಬೇಕು. ಸರಳದೇವದಾರು ಕಲ್ಕ ವನ್ನು ಹಾಲಿನಲ್ಲಿ ಕದರಿ ಕುಡಿಸಬೇಕು. ನುಗ್ಗೇಸೊಪ್ಪು, ಮೂರೆಲೆಹೊನ್ನೆ, ತಿಗಡೆ ಬೇರು, ಕೊಮ್ಮೇಬೇರು ಇವುಗಳ ಕಲ್ಕವನ್ನು ಹಾಲಿನಲ್ಲಿ ಕದರಿ ಕುಡಿಸಬೇಕು. ಹಾಲಿಗೆ

ಗಂಗುಂಡೆತೈಲ, ಹಿಂಗು, ಸರ್ಜಕ್ಷಾರಗಳನ್ನು ಮಿಶ್ರಮಾಡಿ ಕುಡಿಸಬೇಕು. ಅಣಿಲೆ ಚೂರ್ಣಕ್ಕೆ ಬೆಲ್ಲವನ್ನು ಮಿಶ್ರಮಾಡಿ ತಿನ್ನಿಸಬೇಕು. ಮುಂಡುಗಳ್ಳಿಯ ಹಾಲಿನಲ್ಲಿ ಭಾವನೆಮಾಡಿದ ೧೦೦೦ ಹಿಪ್ಪಲಿಗಳನ್ನು ಕಾಲಕ್ರಮವಾಗಿ ಸೇವಿಸಬೇಕು. ಅಣಿಲೆಸಿಪ್ಪೆ, ಹಿಪ್ಪಲಿಗಳ ಚೂರ್ಣವನ್ನು ಮುಂಡುಗಳ್ಳಿಯ ಹಾಲಿನಲ್ಲಿ ಭಾವನೆಮಾಡಿ ಹೋಳಿಗೆಯೊಡನೆ ಸೇವಿಸಬೇಕು. ಒಂದುಪ್ರಸ್ಥ ಅಣಿಲೆಕಾಯಿ ಚೂರ್ಣವನ್ನು ೧ ಆಢಕ ತುಪ್ಪದಲ್ಲಿ ಹಾಕಿ ಕರಗಿಸಿ ಸೌಟನಿಂದ ತೊಳಿಸಿ ಯವಧಾನ್ಯದ ರಾಶಿಯಲ್ಲಿ ಹೂತಿಟ್ಟು ೧ ಪಕ್ಷವಾದನಂತರ ಹೊರಕ್ಕೆ ತೆಗೆದು ಶೋಧಿಸಿದ ಆ ತುಪ್ಪವನ್ನು ಅಣಿಲೆಕಷಾಯ, ಹುಳಿ ಮೊಸರುಗಳನ್ನು ಸೇರಿಸಿ ಪಾಕಮಾಡಿಟ್ಟುಕೊಂಡು ೧ ತಿಂಗಳು ಅಥವಾ ೧೫ ದಿವಸದವರೆಗೆ ಕುಡಿಸಬೇಕು. ಹಸುವಿನ ಹಾಲಿಗೆ ೧/೪ ಭಾಗದಷ್ಟು ಮುಂಡುಗಳ್ಳಿಯ ಹಾಲನ್ನು ಸೇರಿಸಿ ಪಾಕಮಾಡಿ ಅದು ತಣ್ಣಗಾದಮೇಲೆ ಕಡೆಗೋಲಿನಿಂದ ಕಡೆದು ಬೆಣ್ಣೆಯನ್ನು ತೆಗೆದು ಪುನಃ ಮುಂಡುಗಳ್ಳಿ ಹಾಲಿನೊಡನೆ ಈ ಬೆಣ್ಣೆಯನ್ನು ಸೇರಿಸಿ ಘೃತಪಾಕ ಮಾಡಬೇಕು. ಈ ರೀತಿ ಪಕ್ವವಾದ ಘೃತವನ್ನು ರೋಗಿಯು ಶಕ್ತ್ಯನುಸಾರವಾಗಿ ಒಂದು ತಿಂಗಳು ಅಥವಾ ೧೫ ದಿವಸದವರೆಗೆ ಸೇವಿಸಬೇಕು. ಚವ್ಯ, ಚಿತ್ರಮೂಲ, ಜಾಪಾಳದತೊಗಟೆ, ಅತಿಬಜೆ, ಚಂಗಲ್‌ಕೋಷ್ಠ, ಸೊಗದೆಬೇರು, ತ್ರಿಫಲೆ, ಓಮು, (ವಾದಕ್ಕಿ), ಅರಿಶಿನ, ಈಶ್ವರಿಬೇರು, ತಿಗಡೆಬೇರು, ತ್ರಿಕಟು ಇವು ಪ್ರತಿಯೊಂದೂ ೧ ಕರ್ಷದಷ್ಟು ಚೂರ್ಣಿಸಿ ಕಕ್ಕೇಬೀಜದ ತಿರುಳು ೮ ಕರ್ಷಗಳಷ್ಟನ್ನೂ ಮುಂಡುಗಳ್ಳಿಯ ಹಾಲು ೨ ಪಲ, ಹಸುವಿನ ಹಾಲು ಗೋಮೂತ್ರಗಳು ಪ್ರತಿಯೊಂದೂ ೮–೮ ಪಲಗಳು, ತುಪ್ಪ ೧ ಪ್ರಸ್ಥ ಇವೆಲ್ಲವನ್ನೂ ಸೇರಿಸಿ ತಯಾರಾದ ತೈಲವನ್ನೂ ಘೃತವನ್ನೂ ಯೋಗಾನುಸಾರವಾಗಿ ೧ ತಿಂಗಳು ಅಥವಾ ೧೫ ದಿವಸದವರೆಗೆ ಕುಡಿಸಬೇಕು. ತಿಲ್ವಕಘೃತವೂ ಸೇರಿ ನಾಲ್ಕು ವಿಧಗಳಾದ ಘೃತಯೋಗಗಳೂ ಉದರಗುಲ್ಮ, ವಿದ್ರಧಿ, ಅಷ್ಠೀಲಾ, ಆನಾಹ, ಕುಷ್ಠ, ಉನ್ಮಾದ, ಅಪಸ್ಮಾರ ರೋಗಗಳಲ್ಲಿ ವಿರೇಚನಾರ್ಥವಾಗಿ ಉಪಯೋಗಿಸಲ್ಪಡುತ್ತವೆ. ಮುಂಡುಗಳ್ಳಿಯ ಹಾಲನ್ನು ಸೇರಿಸಿರುವ ಗೋಮೂತ್ರ, ಆಸವ, ಅರಿಷ್ಟ, ಮದ್ಯಗಳನ್ನು ಹೆಚ್ಚಾಗಿ ಸೇವಿಸಬೇಕು. ಅಥವಾ ಹಸಿಶುಂಠಿ ದೇವದಾರುಗಳನ್ನು ಹೆಚ್ಚಾಗಿ ಸೇರಿಸಿ ತಯಾರಿಸಿರುವ ವಿರೇಚನ ದ್ರವ್ಯಗಳ ಕಷಾಯವನ್ನಾಗಲೀ ಸೇವನೆಮಾಡಬೇಕು.

ವಮನವಿರೇಚನದ್ರವ್ಯಾಣಾಂ ಪಾಲಿಕಾಭಾಗಾಃ ಪಿಪ್ಪಲ್ಯಾದಿವಚಾದಿ ಹರಿದ್ರಾದಿಪರಿಪಠಿತಾನಾಂ ಚ ದ್ರವ್ಯಾಣಾಂ ಶ್ಲಕ್ಷ್ಣಪಿಷ್ಟಾನಾಂ ಯಥೋಕ್ತಾನಾಂ ಚ ಲವಣಾನಾಂ ತತ್ಸರ್ವಂ ಮೂತ್ರಗಣೇ ಪ್ರಕ್ಷಿಪ್ಯ ಮಹಾವೃಕ್ಷ ಕ್ಷೀರಪ್ರಸ್ಥಂ ಚ ಮೃದ್ವಗ್ನಿನಾ ಘಟ್ಟಯನ್ ವಿಪಚೇದಪ್ರದಗ್ಧಕಲ್ಕಮ್ ತತ್ಸಾಧುಸಿದ್ಧಮವತಾರ್ಯ ಶೀತೀಭೂತಮಕ್ಷಮಾತ್ರಾಂ ಗುಟಿಕಾಂ ವರ್ತಯೇತ್, ತಾಸಾಮೇಕಾಂ ದ್ವೇ ತಿಸ್ರೋ ವಾ ಗುಟಿಕಾ ಬಲಾಪೇಕ್ಷಯಾ ಮಾಸಾಂಸ್ತ್ರೀಂಶ್ಚತುರೋ ವಾ ಸೇವೇತ ವಿಷಾನಾಹವರ್ತಿಕ್ರಿಯಾವಿಶೇಷೇಣ ಮಹಾವ್ಯಾಧಿಷೂಪಯುಜ್ಯತೇ ; ಕೋಷ್ಠಜಾಂಶ್ಚ ಕ್ರಿಮೀನಪಹನ್ತಿ । ಕಾಸಶ್ವಾಸಕ್ರಿಮಿಕುಷ್ಠ ಪ್ರತಿಶ್ಯಾಯಾರೋಚಕಾವಿಪಾಕೋದಾವರ್ತಾಂಶ್ಚ ನಾಶಯತಿ

ಮದನಫಲಮಜ್ಜ ಕುಟಜ ಜೀಮೂತಕೇಕ್ಷ್ವಾಕುಧಾಮಾರ್ಗವತ್ರಿವೃತ್ತ್ರಿಕಟುಸರ್ಷಪಲವಣಾನಿ ಮಹಾವೃಕ್ಷಕ್ಷೀರಮೂತ್ರಯೋರನ್ಯತರೇಣ ಪಿಷ್ಟ್ವಾಙ್ಗುಷ್ಠಮಾತ್ರಾಂ ವರ್ತಿಂ ಕೃತ್ವೋದರಿಣಾನಾಹೇ ತೈಲಲವಣಾಭ್ಯಕ್ತಗುದಸ್ಯೈಕಾಂ ದ್ವೇ ವಾ ಪಾಯೌ ನಿದಧ್ಯಾತ್ । ಏಷಾನಾಹವರ್ತಿಕ್ರಿಯಾ ವಾತಮೂತ್ರಪುರೀಷೋದಾವರ್ತಾಧ್ಮಾನಾನಾಹೇಷು ವಿಧೇಯಾ ॥೧೧॥

ಅಗ್ನಿದೀಪಕ ಮತ್ತು ವಾತನಿರೋಧಕ ಮಲಾನುಲೋಮಕ ವರ್ತಿಯನ್ನು ಹೇಳುತ್ತಾರೆ—ಮಗ್ಗಾರೆಕಾಯಿ ಮೊದಲಾದ ವಮನ ದ್ರವ್ಯಗಳು, ತಿಗಡೆ ಮೊದಲಾದ ವಿರೇಚನ ದ್ರವ್ಯಗಳು, ಇವು ಪ್ರತಿಯೊಂದೂ ೧ ಪಲ, ಪಿಪ್ಪಲ್ಯಾದಿ ಗಣ ದ್ರವ್ಯಗಳು, ವಚಾದಿ ಗಣದ್ರವ್ಯಗಳು, ಹರಿದ್ರಾದಿ ಗಣದ್ರವ್ಯಗಳು ಇವು ಪ್ರತಿಯೊಂದೂ ೧ ಪಲ ಇವೆಲ್ಲವನ್ನೂ ನುಣ್ಣಗೆ ಕಲ್ಕಮಾಡಿ ಲವಣಗಳ ಗಣದಲ್ಲಿ ಹೇಳಿರುವುವೆಲ್ಲವನ್ನೂ ೧ ಪಲದಂತೆ ಮೂತ್ರವರ್ಗದಲ್ಲಿ ಹೇಳಿದ ೮ ವಿಧ ಮೂತ್ರಗಳನ್ನೂ ಒಟ್ಟು ಕಲ್ಕಕ್ಕೆ ೪ ರಷ್ಟು ಭಾಗ ಸೇರಿಸಿ ದೊಡ್ಡಪಾತ್ರೆಯಲ್ಲಿ ತುಂಬಿ ಮುಂಡುಗಳ್ಳಿಯಹಾಲು ೧ ಪ್ರಸ್ಥದಷ್ಟನ್ನು ಹಾಕಿ ಒಲೆಯ ಮೇಲಿಟ್ಟು ಮಂದಾಗ್ನಿಯಿಂದ ಕಾಯಿಸಿ ಸೌಟಿನಿಂದ ತೊಳಸುತ್ತಾ ತಳಭಾಗದಲ್ಲಿ ಕಲ್ಕವು ಸುಡದಂತೆ ಜಾಗರೂಕತೆಯಿಂದ ನೋಡಿಕೊಂಡು ಸರಿಯಾಗಿ ತಯಾರಾದ ಮೇಲೆ ಕೆಳಕ್ಕಿಳಿಸಿಕೊಂಡು ೧ ಕರ್ಷಪ್ರಮಾಣದ (೩/೪ ರೂಪಾಯಿ ತೂಕದ) ವಟಕಗಳನ್ನು ತಯಾರಿಸಬೇಕು. ಅವುಗಳಲ್ಲಿ ೧, ೨, ೩ ರಂತೆ, ಬಲಕ್ಕೆ ತಕ್ಕಂತೆ ೩ ಅಥವಾ ೪ ತಿಂಗಳುಗಳವರೆಗೆ ಸೇವಿಸಬೇಕು. ಇದಕ್ಕೆ **ಆನಾಹವರ್ತಿಕ್ರಿಯೆಯೆಂದು** ಹೆಸರು. ಇದನ್ನು ವಿಶೇಷವಾಗಿ ಮಹಾವ್ಯಾಧಿಗಳಲ್ಲಿ ಉಪಯೋಗಿಸಬೇಕು. ಕೋಷ್ಠದಲ್ಲಿರುವ ಕ್ರಿಮಿಗಳನ್ನು ನಾಶಮಾಡುತ್ತದೆ. ಕಾಸ, ಶ್ವಾಸ, ಕ್ರಿಮಿ, ಕುಷ್ಠ, ಪ್ರತಿಶ್ಯಾಯ (ನೆಗಡಿ), ಅರುಚಿ, ಅಜೀರ್ಣ, ಮಲಬಂಧಗಳನ್ನು ಹೋಗಲಾಡಿಸುತ್ತದೆ. ಮಗ್ಗಾರೆಕಾಯಿನ ಬೀಜಗಳು, ಕೊಡಶಿಗೆತೊಗಟೆ, ಹೀರೆಬೇರು, ಸೋರೆಕಾಯಿ, ತುಪ್ಪಹೀರೆಯಬೇರು, ತಿಗಡೆಬೇರು, ಹಿಪ್ಪಲಿ, ಮೆಣಸು, ಶುಂಠಿ, ಸಾಸಿವೆ, ಲವಣ ಇವುಗಳನ್ನು ಸಮಭಾಗ (ಪ್ರತಿಯೊಂದೂ ೧ ಪಲದಂತೆ ಸೇರಿಸಿ ಮುಂಡುಗಳ್ಳಿಯ ಹಾಲಿನಿಂದಾಗಲೀ ಅಥವಾ ಗೋಮೂತ್ರದಿಂದಾಗಲಿ) ಅರೆದು ಹೆಬ್ಬೆರಳ ದಪ್ಪಬತ್ತಿಯನ್ನು ಮಾಡಿಟ್ಟುಕೊಂಡು ಉದರರೋಗಿಗೆ ಹೊಟ್ಟೆ ಉಬ್ಬರಿಸಿರುವಾಗ ಗುದಭಾಗದಲ್ಲಿ ಸೈಂಧವ ಲವಣ ತಿಲತೈಲಗಳನ್ನು ರಂಗಳಿಸಿ ಬಳಿದ ನಂತರ ಒಂದು ಅಥವಾ ಎರಡು ಬತ್ತಿಗಳನ್ನು ಗುದದೊಳಕ್ಕೆ ನುಗ್ಗಿಸಿಡಬೇಕು. ಈ ಆನಾವರ್ತಿಯ ಪ್ರಯೋಗವನ್ನು ವಾತಮೂತ್ರ ಮಲಗಳ ತಡೆಯಿಂದುಂಟಾಗುವ ಉದಾವರ್ತ, ಆಧ್ಮಾನ, ಆನಾಹಗಳಲ್ಲಿ ಪ್ರಯೋಗ ಮಾಡಬೇಕು.

ಪ್ಲೀಹೋದರಿಣಃ ಸ್ನಿಗ್ಧಸ್ವಿನ್ನಸ್ಯ ದಧ್ನಾ ಭುಕ್ತವತೋ ವಾಮಬಾಹೌಕೂರ್ಪರಾಭ್ಯನ್ತರತಃ ಸಿರಾಂವಿಧ್ಯೇತ್ ವಿಮರ್ದಯೇತ್ ಪಾಣಿನಾ ಪ್ಲೀಹಾನಂ ರುಧಿರಸ್ಯನ್ದನಾರ್ಥಂ ತತಃ ಸಂಶುದ್ಧದೇಹಃ ಸಮುದ್ರ ಶುಕ್ತಿಕಾಕ್ಷಾರಂ ಪಯಸಾ ಪಾಯಯೇತ ಹಿಙ್ಗುಸೌವರ್ಚಿಕಾಕ್ಷಾರೇಣ ಸ್ರುತೇನ

ಪಲಾಶಕ್ಷಾರೇಣವಾ ಯವಕ್ಷಾರಂ ಪಾರಿಜಾತಕೇಕ್ಷುರಕಾಪಾಮಾರ್ಗಕ್ಷಾರಂ ವಾ ತೈಲಸಂಸೃಷ್ಟಮ್ ಶೋಭಾಞ್ಜನ ಕಷಾಯಂ ವಾ ಪಿಪ್ಪಲೀಸೈನ್ಧವಚಿತ್ರಕಯುಕ್ತಂ ಪೂತಿಕರಞ್ಜಕ್ಷಾರಂ ವಾಮ್ಲಸೃತಂ ಬಿಡಲವಣಪಿಪ್ಪಲೀಪ್ರಗಾಢಮ್ ||೧೨||

ಪ್ಲೀಹವೃದ್ಧಿಯಿಂದ ಉದರವು ದಪ್ಪವಾಗಿರುವ ರೋಗಿಗೆ ಸ್ನೇಹಸ್ವೇದಗಳನ್ನೂ ಮೊಸರಿನೊಡನೆ ಅನ್ನ ಭೋಜನವನ್ನೂ ಮಾಡಿಸಿ ಎಡಗಡೆಯ ತೋಳಿನ ಮೊಳಕೈ ಸಂಧಿಯಮೇಲಿನ ಸಿರೆಯನ್ನು ವೇಧಿಸಿ ರಕ್ತಮೋಕ್ಷಣವನ್ನು ಮಾಡಿಸಬೇಕು. ರಕ್ತವು ಚೆನ್ನಾಗಿ ಸ್ರಾವವಾಗುವುದಕ್ಕಾಗಿ ಅಂಗೈಯಿಂದ ಪ್ಲೀಹವನ್ನು ಹಿಸುಕಬೇಕು. ಶೋಧನೌಷಧಗಳನ್ನು ಸೇವಿಸಿ ದೇಹಶುದ್ಧಿಯಾದ ಮೇಲೆ ಸಮುದ್ರಶುಕ್ತಿಯ ಕ್ಷಾರವನ್ನು ಹಾಲಿನಲ್ಲಿ ಕದರಿ ಕುಡಿಸಬೇಕು. (ಮುತ್ತುಗದ ಕ್ಷಾರವನ್ನು ನೀರಿನಲ್ಲಿ ಕದರಿ ಬಹಳಸಾರಿ ಶೋಧಿಸಿ ಯವಕ್ಷಾರ ಮಿಶ್ರಮಾಡಿ ಕುಡಿಸಬೇಕು ಎಂದು ಅಧಿಕ ಪಾಠವಿದೆ.) ಹಿಂಗು ಸೌವರ್ಚ ಲವಣಗಳನ್ನು ಮಿಶ್ರಮಾಡಿದ ಮುತ್ತುಗದ ಕ್ಷಾರೋದಕವನ್ನು ಯವಕ್ಷಾರ ಮಿಶ್ರಮಾಡಿ ಕುಡಿಸಬೇಕು. ಪಾರಿಜಾತಕ್ಷಾರ, ಉತ್ತರಣೆಯಕ್ಷಾರಗಳನ್ನು ತಿಲತೈಲದಲ್ಲಿ ಕದರಿ ಕುಡಿಸಬೇಕು. ನುಗ್ಗೆ ತೊಗಟೆಯ ಕಷಾಯಕ್ಕೆ ಹಿಪ್ಪಲಿ, ಸೈಂಧವ, ಚಿತ್ರಮೂಲಗಳ ಚೂರ್ಣವನ್ನು ಮಿಶ್ರಮಾಡಿ ಕುಡಿಸಬೇಕು. ತನಸದಕ್ಷಾರವನ್ನು ಹುಳಿಕಲಗಚ್ಚಿನಲ್ಲಿ (ಅಮ್ಲದ್ರವಗಳಲ್ಲಿ) ಕದರಿ ಬಿಡಲವಣ ಹಿಪ್ಪಲಿ ಚೂರ್ಣಗಳನ್ನು ಹೆಚ್ಚಾಗಿ ಸೇರಿಸಿ ಕುಡಿಸಬೇಕು.

ಪಿಪ್ಪಲೀಪಿಪ್ಪಲೀಮೂಲಚಿತ್ರಕಶೃಙ್ಗವೇರಯವಕ್ಷಾರಸೈನ್ಧವಾನಾಂ ಪಾಲಿಕಾಭಾಗಾ ಘೃತಪ್ರಸ್ಥಂ ತತ್ತುಲ್ಯಂ ಕ್ಷೀರಂ ತದೈಕಧ್ಯಂ ವಿಪಾಚಯೇತ್ ಏತತ್ ಷಟ್ಪಲಕಂ ನಾಮಸರ್ಪಿಃ ಪ್ಲೀಹಾಗ್ನಿಷಙ್ಗಗುಲ್ಮೋದರೋದಾವರ್ತಶ್ವಯಥುಪಾಣ್ಡುರೋಗಕಾಸಶ್ವಾಸಪ್ರತಿಶ್ಯಾಯೋರ್ಧ್ವವಾತ ವಿಷಮಜ್ವರಾನಪಹನ್ತಿ ಮನ್ದಾಗ್ನಿರ್ವಾಹಿಙ್ಗ್ವಾದಿಕಂ ಚೂರ್ಣಮುಪಯುಞ್ಜೀತ ||೧೩||
ಯಕೃದ್ದಾಲ್ಯೇಽಪ್ಯೇಷ ಏವ ಕ್ರಿಯಾಭಾಗಃ ವಿಶೇಷತಸ್ತು ದಕ್ಷಿಣಬಾಹೌ ಸಿರಾವ್ಯಧಃ ||೧೪||

ಮಣಿಬನ್ಧಂ ಸಕೃನ್ನಾಮ್ಯ ವಾಮಾಙ್ಗುಷ್ಠಸಮೀರಿತಾಮ್ ।
ದಹೇತ್ ಸಿರಾಂ ಶರೇಣಾಶು ಪ್ಲೀಹ್ನೋ ವೈದ್ಯಃ ಪ್ರಶಾನ್ತಯೇ ॥

ಹಿಪ್ಪಲಿ, ಮೋಡಿ, ಚಿತ್ರಮೂಲ, ಶುಂಠಿ, ಯವಕ್ಷಾರ, ಸೈಂಧವಲವಣ ಇವು ಪ್ರತಿಯೊಂದೂ ೧ ಪಲ, ತುಪ್ಪ ಪ್ರಸ್ಥ, ೧ ಪ್ರಸ್ಥ ಹಾಲು ಇವೆಲ್ಲವನ್ನೂ ಸೇರಿಸಿ ಪಾಕ ಮಾಡಿಟ್ಟುಕೊಂಡರೆ ಷಟ್ಪಲಘೃತವೆಂದು ಹೆಸರು. ಇದರ ಸೇವನೆಯಿಂದ ಪ್ಲೀಹವೃದ್ಧಿ, ಅಗ್ನಿಮಾಂದ್ಯ, ಗುಲ್ಮ, ಉದರ, ಉದಾವರ್ತ, ಶೋಥ, ಪಾಂಡುರೋಗ, ಕಾಸ, ಶ್ವಾಸ (ಉಬ್ಬಸ), ನೆಗಡಿ, ಊರ್ಧ್ವವಾತ (ತೇಗು), ವಿಷಮಜ್ವರ ಇವುಗಳು ನಿವಾರಣೆಯಾಗುತ್ತವೆ. ಅಗ್ನಿಮಾಂದ್ಯವುಳ್ಳವರು ಹಿಂಗ್ವಾದಿ ಚೂರ್ಣವನ್ನು ಸೇವಿಸಬೇಕು. ಯಕೃತ್ ವೃದ್ಧಿಯಾಗಿ ಉದರ ದಪ್ಪವಾದರೆ ಇದೇ ರೀತಿಯಾಗಿ ಚಿಕಿತ್ಸಾ ವಿಧಾನವನ್ನು ಆಚರಿಸಬೇಕು. ಮುಖ್ಯವಾಗಿ ಬಲತೋಳಿನಲ್ಲಿ ಸಿರಾವ್ಯಧವನ್ನು ಮಾಡಬೇಕು. ಪ್ಲೀಹವೃದ್ಧಿ

ನಿವಾರಣೆಮಾಡಲು ಎಡಗೈ ಮಣಿಬಂಧವನ್ನು ಕೈಹೆರಡನ್ನು ಸ್ವಲ್ಪಮಡಿಸಿ ಎಡದ ಹೆಬ್ಬೆಟ್ಟಿನ ಕಡೆ ಉಬ್ಬಿದ ಸಿರೆಯನ್ನು ಕೆಂಪಗೆ ಸುಟ್ಟಿರುವ ಲಾಳದ ಕಡ್ಡಿಯ ಬೆಂಕಿಯಿಂದ ಸುಡಬೇಕು. (ಬರೆಹಾಕಬೇಕು) ಪ್ಲೀಹವು ಸಂಕೋಚವಾಗುತ್ತದೆ.

ಬದ್ಧಗುದೇ ಪರಿಸ್ರಾವಿಣಿ ಚ ಸ್ನಿಗ್ಧಸ್ವಿನ್ನಸ್ಯಾಭ್ಯಕ್ತಸ್ಯಾಧೋನಾಭೇರ್ವಾಮತಶ್ಚತುರಙ್ಗುಳಮಪಹಾಯ ರೋಮರಾಜ್ಯಾ ಉದರಂ ಪಾಟಯಿತ್ವಾ ಚತುರಙ್ಗುಳಪ್ರಮಾಣಾನಿ ಅನ್ತ್ರಾಣಿ ನಿಷ್ಕೃಷ್ಯ ನಿರೀಕ್ಷ್ಯ ಬದ್ಧಗುದಸ್ಯಾನ್ತ್ರಪ್ರತಿರೋಧಕರಮಶ್ಮಾನಂ ಬಾಲಂ ವಾಪೋಹ್ಯ ಮಲಜಾತಂ ವಾ ತತೋ ಮಧುಸರ್ಪಿರ್ಭ್ಯಾಮಭ್ಯಜ್ಯಾನ್ತ್ರಾಣಿ ಯಥಾಸ್ಥಾನಂ ಸ್ಥಾಪಯಿತ್ವಾ ಬಾಹ್ಯಂ ವ್ರಣಮುದರಸ್ಯ ಸೀವ್ಯೇತ್ ಪರಿಸ್ರಾವಿಣಿ ಅಪ್ಯೇವಮೇವ ಶಲ್ಯಮುದ್ಧೃತ್ಯಾನ್ತ್ರಸ್ರಾವಾನ್ ಸಂಶೋಧ್ಯ ತಚ್ಛಿದ್ರಮನ್ತ್ರಂ ಸಮಾಧಾಯ ಕಾಲಪಿಪೀಲಿಕಾಭಿರ್ದಂಶಯೇತ ದಷ್ಟೇ ಚ ತಾಸಾಂ ಕಾಯಾನಪಹರೇತ್ ನ ಶಿರಾಂಸಿ ತತಃ ಪೂರ್ವವತ್ ಸೀವ್ಯೇತ್ ಸನ್ಧಾನಂ ಚ ಯಥೋಕ್ತಂ ಕಾರಯೇತ್ ಯಷ್ಟೀಮಧುಕಮಿಶ್ರಯಾ ಚ ಕೃಷ್ಣಮೃದಾವಲಿಪ್ಯ ಬನ್ಧೇ ನೋಪಚರೇತ್ ತತೋ ನಿವಾತಮಾಗಾರಂ ಪ್ರವೇಶ್ಯಾಚಾರಿಕಮುಪದಿಶೇದ್ವಾಸಯೇಚ್ಚೈನಂ ತೈಲದ್ರೋಣ್ಯಾಂ ಸರ್ಪಿರ್ದ್ರೋಣ್ಯಾಂ ವಾ ಪಯೋ ವೃತ್ತಿಮಿತಿ ||೧೬||

ಬದ್ಧಗುದ ಮತ್ತು ಪರಿಸ್ರಾವ್ಯುದರ ರೋಗಗಳಲ್ಲಿ ಸ್ನೇಹಸ್ವೇದ ಅಭ್ಯಂಗಗಳನ್ನು ಮಾಡಿಸಿ ರೋಗಿಯ ಹೊಕ್ಕಳ ಕೆಳಕ್ಕೆ ನಾಲ್ಕು ಅಂಗುಳಿಗಳಷ್ಟು ಬಿಟ್ಟು ರೋಮರಾಜಿಗೆ ಎಡಭಾಗದಲ್ಲಿ ೪ ಅಂಗುಳಗಳಷ್ಟು ಹೊರಕ್ಕೆ ಅಡ್ಡಲಾಗಿ ಹೊಟ್ಟೆಯ ಮಾಂಸವನ್ನು ಸೀಳಿ ಕರುಳನ್ನು ಹೊರಕ್ಕೆ ತೆಗೆದು ಬದ್ಧಗುದರೋಗದಲ್ಲಿ ಕರುಳಿನಲ್ಲಿ ತಡೆತಟ್ಟಿರುವ ಕಲ್ಲು-ಕೂದಲು ಮಲಗಳನ್ನು ಹೊರಕ್ಕೆ ತೆಗೆದು ಜೇನುತುಪ್ಪ ಮತ್ತು ತುಪ್ಪಗಳನ್ನು ರಂಗಳಿಸಿ ಕರುಳಿಗೆ ಸುತ್ತಲೂ ಬಳಿದು ಕರುಳನ್ನು ಮೊದಲಿನಂತೆಯೇ ಅದರ ಜಾಗದಲ್ಲಿ ಸರಿಯಾಗಿ ಕೂಡಿಸಿ (ಸೇರಿಕೊಳ್ಳುವಂತೆ ಮಾಡಿ) ಉದರದ ಬಹಿರ್ಭಾಗದ ಚರ್ಮವನ್ನು ಹೊಲಿದು ಬಿಡಬೇಕು ; ಪರಿಸ್ರಾವ್ಯುದರದಲ್ಲೂ ಹೀಗೆಯೇ ಹೊಟ್ಟೆಯನ್ನು ಹೊಕ್ಕಳ ಕೆಳಗೆ ೪ ಅಂಗುಲದಲ್ಲಿ ರೋಮರಾಜಿಗೆ ಎಡಗಡೆಗೆ ಅಡ್ಡಲಾಗಿ ೪ ಅಂಗುಲ ಅಗಲವಾಗಿ ಚರ್ಮವನ್ನು ಸೀಳಿ ಕರುಳನ್ನು ಹೊರಕ್ಕೆ ತಂದು ಅದರಲ್ಲಿ ಸಿಕ್ಕಿಕೊಂಡಿರುವ ಶಲ್ಯಗಳನ್ನು ತೆಗೆದು, ಅನಂತರ ಸ್ರಾವಗಳನ್ನು ತೊಳೆದು ಹರಿದಿರುವ ಕರುಳುಗಳಿಗೆ ಕರಿಯಕಟ್ಟಿರುವೆಗಳನ್ನು ಕಚ್ಚಿಸಿ ರಂಧ್ರಗಳು ಕೂಡುವಂತೆ ಮಾಡಿ ಕತ್ತರಿಯಿಂದ ಇರುವೆಗಳ ತಲೆಯನ್ನು ಬಿಟ್ಟು ಬಾಕಿ ಶರೀರವನ್ನು ಕತ್ತರಿಸಿ ಮೊದಲಿನಂತೆ ಜೇನುತುಪ್ಪ ತುಪ್ಪಗಳನ್ನು ರಂಗಳಿಸಿ ಕರುಳ ಸುತ್ತಲೂ ಬಳಿದು ಕರುಳನ್ನು ತನ್ನ ಜಾಗದಲ್ಲಿ ಸೇರಿಸಿ ಚರ್ಮವನ್ನು ಹೊಲಿದು ಅತಿಮಧುರ ಮಿಶ್ರಮಾಡಿದ ಕರಿಯ ಜೇಡಿಮಣ್ಣಿನಿಂದ ವ್ರಣದಮೇಲೆ ಲೇಪಮಾಡಿ ವ್ರಣಬಂಧನವನ್ನು ಮಾಡಬೇಕು ; ಅನಂತರ ರೋಗಿಯನ್ನು ಎದುರುಗಾಳಿ ಬೀಸದಿರುವ ಕೊಠಡಿಯಲ್ಲಿ ಮಲಗಿಸಿ ಅಥವಾ ತೈಲತುಂಬಿದ ಅಥವಾ ತುಪ್ಪತುಂಬಿದ ದೋಣಿಯಲ್ಲಿ

ಕೂರಿಸಿ ವ್ರಣಿತನಿಗೆ ಮಾಡುವಂತೆಯೇ ಉಪಚರಿಸಿ ಹಾಲನ್ನೇ ಕುಡಿಸಬೇಕು. (ಇತರ ಆಹಾರಗಳನ್ನು ಕೊಡಬಾರದು).

ಉದಕೋದರಿಣಸ್ತು ವಾತಹರತೈಲಾಭ್ಯಕ್ತಸ್ಯ ಉಷ್ಣೋದಕಸಿನ್ನಸ್ಯಸ್ಥಿತಸ್ಯಾಪ್ತೈಃ ಸುಪರಿಗೃಹೀತಸ್ಯಾಕಕ್ಷಾತ್ಪರಿವೇಷ್ಟಿತಸ್ಯಾಧೋನಾಭೇರ್ವಾಮತಶ್ಚತುರಙ್ಗುಳಮುಪಹಾಯ ರೋಮರಾಜ್ಯಾ ವ್ರೀಹಿಮುಖೇನಾಙ್ಗುಷೋ । ದರಪ್ರಮಾಣಮವಗಾಢಂ ವಿಧ್ಯೇತ್ತತ್ರ ತ್ರಪ್ವಾದೀನಾಮನ್ಯತಮಸ್ಯನಾಡೀಂ ದ್ವಿದ್ವಾರಾಂ ಪಕ್ಷನಾಡೀಂ ವಾ ಸಂಯೋಜ್ಯ ಆದೋಷೋದಕಮವಸಿಞ್ಚೇತ್ ತತೋ ನಾಡೀಮಪಹೃತ್ಯ ತೈಲ ಲವಣೇ ನಾಭ್ಯಜ್ಯ ವ್ರಣಬನ್ಧೇನೋಪಚರೇತ್ ನ ಚೈಕಸ್ಮಿನ್ನೇವ ದಿವಸೇ ಸರ್ವಂ ದೋಷೋದಕಮುಪಹರೇತ್ ಸಹಸಾಪ್ಯಪಹೃತೇ ತೃಷ್ಣಾಜ್ವರಾಙ್ಗಮರ್ದಾತೀಸಾಶಶ್ವಾಸ ಪಾದದಾಹಾ ಉತ್ಪದ್ಯೇರನ್ನಾಪೂರ್ಯತೇ ವಾ ಭೃಶತರಮುದರಮಶಞ್ಜಾತ ಪ್ರಾಣಸ್ಯ ; ತಸ್ಮಾತ್ ತೃತೀಯ ಚತುರ್ಥಪಞ್ಚಮಷಷ್ಠಾಷ್ಟಮದಶಮದ್ವಾದಶಷೋಡಶರಾತ್ರಾಣಾ ಮನ್ಯತಮಮನ್ತರೀಕೃತ್ಯ ದೋಷೋದಕಮಲ್ಪಾಲಮವಸಿಞ್ಚೇತ್ ನಿಃಸ್ರುತೇ ಚ ದೋಷೇ ಗಾಢತರಮಾವಿಕಕೌಶೇಯಃ ಚರ್ಮಣಾಮನ್ಯತಮೇನ ಪರಿವೇಷ್ಟಯೇದುದರಂ ತಥಾನಾಧ್ಮಾಯತಿ ವಾಯುಃ ಷಣ್ಮಾಸಾಂಶ್ಚ ಪಯಸಾಭೋಜಯೇತ್ ಜಾಙ್ಗಲರಸೇನ ವಾತತ್ರ ತ್ರೀನ್ಮಾಸಾನರ್ಧೋದಕೇನ ಪಯಸಾ ಫಲಾಮ್ಲೇನ ಜಾಙ್ಗಲರಸೇನವಾವಶಿಷ್ಟಂ ಮಾಸತ್ರಯಮನ್ನಂ ಲಘುಹಿತಂ ವಾ ಸೇವೇತೈವಂ ಸಂವತ್ಸರೇಣಾಗದೋ ಭವತಿ ||೧೭||

ಉದಕೋದರರೋಗಿಗೆ ವಾತಹರಬಲಾತೈಲದಿಂದ ಶರೀರವನ್ನು ಲೇಪಿಸಿ ಬಿಸಿ ನೀರಿನಿಂದ ಸ್ವೇದಮಾಡಿಸಿ ಸ್ನೇಹಿತರಿಂದ ಶರೀರವನ್ನು ಹಿಡಿಸಿಕೊಂಡು ಕಂಕುಳವರೆಗೆ ವಸ್ತ್ರಧಾರಣೆಮಾಡಿಸಿ ಹೊಕ್ಕಳ ಕೆಳಗಡೆಗೆ ಎಡಭಾಗದಲ್ಲಿ ರೋಮರಾಜಿಯಿಂದ ೪ ಅಂಗುಳಿಯಷ್ಟು ಪ್ರದೇಶದಲ್ಲಿರುವ ಚರ್ಮವನ್ನು ವ್ರೀಹಿಮುಖದಿಂದ ಹೆಬ್ಬೆಟ್ಟಿನ ಹೊಟ್ಟೆಯಷ್ಟು ಆಳವಾಗಿ ಚುಚ್ಚಿ ಆ ರಂಧ್ರದಲ್ಲಿ ತವರ ಮೊದಲಾದ ಲೋಹಗಳಿಂದ ಮಾಡಿದ ಎರಡು ಮುಖಗಳುಳ್ಳ ಸಣ್ಣ ಕೊಳವೆಯನ್ನು ಸಿಕ್ಕಿಸಿ ಪಕ್ಷನಾಡಿಯನ್ನು ಸಿಕ್ಕಿಸಿ ದೋಷಮಿಶ್ರವಾದ ದ್ರವವು ಸೋರಿಹೋಗುವಂತೆ ಮಾಡಿ ಆ ಕೊಳವೆಯನ್ನು ಹೊರಕ್ಕೆ ತೆಗೆದು ತೈಲಲವಣಗಳನ್ನು ರಂಗಳಿಸಿ ವ್ರಣಕ್ಕೆ ಲೇಪಿಸಿ ವ್ರಣಬಂಧನ ಮಾಡಿ ಉಪಚರಿಸಬೇಕು. ಒಂದೇದಿನದಲ್ಲಿ ದೋಷವನ್ನೆಲ್ಲಾ ಪೂರ್ತಿಯಾಗಿ ಸುರಿಸಿ ಶೋಧನೆ ಮಾಡಬಾರದು ; ಅದರಿಂದ ಬಾಯಾರಿಕೆ ಜ್ವರ ಮೈಕತ್ತರಿಸಿದಂತೆ ನೋವು ಅತಿಸಾರ-ಉಬ್ಬಸ-ಅಂಗಾಲು ಉರಿತ ಮೊದಲಾದ ಉಪದ್ರವಗಳುಂಟಾಗುತ್ತವೆ ; ಬಲಹೀನನಾದ ಆ ರೋಗಿಗೆ ಪುನಃ ಬಲುಬೇಗನೆ ಹೊಟ್ಟೆಯಲ್ಲಿ ನೀರು ತುಂಬಿಬಿಡುತ್ತದೆ. ಆದ್ದರಿಂದ ೩-೪-೫-೬-೮-೧೦-೧೨-೧೬ ರಾತ್ರಿಗಳಪೈಕಿ ಯಾವುದಾದರೊಂದು ದಿನ ಮಧ್ಯೆಮಧ್ಯೆ ಬಿಟ್ಟುಬಿಟ್ಟು ಜಮಾಯಿಸಿರುವ ಉದಕವನ್ನು ಸ್ವಲ್ಪಸ್ವಲ್ಪವಾಗಿ ಸ್ರಾವ ಮಾಡಬೇಕು. ದೋಷೋದಕವು ಪೂರ್ತಿಯಾಗಿ ಸ್ರಾವವಾದಮೇಲೆ ಕುರಿಯ ತುಬಟದಿಂದ ಮಾಡಿದ ಕಂಬಳಿ-ರೇಷ್ಮೆ-ಚರ್ಮಗಳಲ್ಲೊಂದರ ಉದ್ದವಾದ ಪಟ್ಟೆಯಿಂದ ಹೊಟ್ಟೆಯನ್ನು ಬಿಗಿದುಕಟ್ಟಿದರೆ

ವಾಯುವು ವೃದ್ಧಿಯಾಗಿ ಹೊಟ್ಟೆಯುಬ್ಬರಿಸುವುದಿಲ್ಲ. ಈ ರೋಗಿಗೆ ಆರು ತಿಂಗಳವರೆಗೆ ಬರೀ ಹಾಲನ್ನೇ ಕುಡಿಸುತ್ತಲೂ ಅನಂತರ ೩ ತಿಂಗಳವರೆಗೆ ಜಾಂಗಲಮಾಂಸರಸದಿಂದ ಭೋಜನಮಾಡಿಸಬೇಕು. ಆ ಪೈಕಿ ೩ ತಿಂಗಳು ಅರ್ಧಭಾಗನೀರನ್ನು ಸೇರಿಸಿದ ಹಾಲು, ಹುಳಿಯಾದ ಹಣ್ಣುಗಳ ರಸ ಅಥವಾ ಜಾಂಗಲಮಾಂಸರಸದಿಂದಲೂ, ಉಳಿದ ೩ ತಿಂಗಳು ಲಘುವಾದ ಹಿತವಾದ ಅನ್ನ ಸೇವನೆಯಿಂದಲೂ ಉಪಚರಿಸಬೇಕು. ಹೀಗೆ ಒಂದು ವರ್ಷದಲ್ಲಿ ಆರೋಗ್ಯವನ್ನು ಪಡೆಯುತ್ತಾನೆ.

ಭವತಿಚಾತ್ರ—ಆಸ್ಥಾಪನೇ ಚೈವ ವಿರೇಚನೇ ಚ ಪಾನೇ ತಥಾಹಾರವಿಧಿಕ್ರಿಯಾಸು ।
ಸರ್ವೋದರಿಭ್ಯಃ ಕುಶಲೈಃ ಪ್ರಯೋಜ್ಯಂ ಕ್ಷೀರಂ ಶೃತಂ ಜಾಙ್ಗಲಜೋ ರಸೋ ವಾ ॥೧೮॥

ಉದರರೋಗಿಗಳಿಗೆ ಜಲಪಾನ ನಿಷೇಧವು. ಬುದ್ಧಿವಂತನಾದ ವೈದ್ಯನು ಎಲ್ಲಾ ವಿಧದ ಉದರರೋಗಿಗಳಿಗೂ ಆಸ್ಥಾಪನ, ವಿರೇಚನ, ಪಾನ, ಆಹಾರವಿಧಾನಗಳಲ್ಲಿ ಕಾದ ಹಾಲನ್ನಾಗಲೀ ಜಾಂಗಲ ಮಾಂಸ ರಸವನ್ನಾಗಲೀ ಪ್ರಯೋಗಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಉದರಚಿಕಿತ್ಸಾನಾಮ
ಚತುರ್ದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ
ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಪಞ್ಚದಶೋಽಧ್ಯಾಯಃ

ಅಥಾತೋ ಮೂಢಗರ್ಭಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಿಸಿದಂತೆಯೇ ಮೂಢಗರ್ಭ ಚಿಕಿತ್ಸೆಯನ್ನು ವಿವರಿಸುತ್ತೇವೆ.

ನಾತಃ ಕಷ್ಟತಮಮಸ್ತಿ ಯಥಾ ಮೂಢಗರ್ಭಶಲ್ಯೋದ್ಧರಣಮ್ ಅತ್ರ ಹಿ ಯೋನಿಯಕೃತ್ಪ್ಲೀಹಾನ್ತ್ರವಿವರಗರ್ಭಾಶಯಾನಾಂ ಮಧ್ಯೇ ಕರ್ಮ ಕರ್ತವ್ಯಂ ಸ್ಪರ್ಶೇನ ಉತ್ಕರ್ಷಣಾಪಕರ್ಷಣಸ್ಥಾನಾಪವರ್ತನೋತ್ಕರ್ತನ ಭೇದನ ಛೇದನ ಪೀಡನರ್ಜೂಕರಣದಾರಣಾನಿ ಚ ಏಕಹಸ್ತೇನ ಗರ್ಭಂ ಗರ್ಭಿಣೀಂ ಚಾಹಿಂಸತಾ ತಸ್ಮಾದಧಿಪತಿಮಾಪೃಚ್ಛ್ಯ ಪರಂ ಚ ಯತ್ನಮಾಸ್ಥಾಯೋಪಕ್ರಮೇತ ||೩||

ಗರ್ಭಾಶಯದಲ್ಲಿ ಪ್ರಸವವಾಗಲು ತಡೆಯುಂಟಾಗಿ ನಿಂತಿರುವ ಶಿಶುವನ್ನು ಹೊರಕ್ಕೆ ತೆಗೆಯುವುದಕ್ಕಿಂತಲೂ ಕಷ್ಟತಮವಾದ ಕಾರ್ಯವು (ಶರೀರದಿಂದ ಹೊರಕ್ಕೆ ತೆಗೆಯಬೇಕಾದ ಬೇರೆ ಯಾವ ವಿಧವಾದ ಶಲ್ಯವೂ) ಇರುವುದಿಲ್ಲ. ಅಂದರೆ ಮೂಢಗರ್ಭವನ್ನು ಸರಿಮಾಡಿ ಹೊರಕ್ಕೆ ತೆಗೆದುಬಿಡುವುದು ಅತ್ಯಂತ ಕಷ್ಟಕರವಾದ ಕಾರ್ಯವು. ಏಕೆಂದರೆ ಹಾಗೆ ಮೂಢವಾಗಿ ಗರ್ಭಾಶಯದಲ್ಲಿ ತಡೆಯಲ್ಪಟ್ಟಿರುವ ಶಿಶುವನ್ನು ತೆಗೆಯಬೇಕಾದರೆ ಬುದ್ಧಿಶಾಲಿಯಾದ ಶಸ್ತ್ರವೈದ್ಯನು ಯೋನಿ-ಯಕೃತ್-ಪ್ಲೀಹ-ಕರುಳುಗಳ ಮಧ್ಯಭಾಗ ಗರ್ಭಾಶಯ ಇವುಗಳ ಮಧ್ಯೆ ಜಾರಿಬಿದ್ದಿರುವ ಶಿಶುವಿನ ಸ್ಥಿತಿಯನ್ನು ತಿಳಿದುಕೊಂಡು (ತನ್ನ ಒಂದೇ ಕೈಯನ್ನು ಯೋನಿಯೊಳಕ್ಕೆ ನುಗ್ಗಿಸಿ ಸ್ಪರ್ಶಮಾಡಿ ತಿಳಿದುಕೊಂಡು) ಮಗುವಿಗೂ ಗರ್ಭಿಣಿಗೂ ನೋವಾಗದಂತೆ ಮಗುವನ್ನು ಮೇಲಕ್ಕೆ ಎತ್ತುವುದು, ಕೆಳಕ್ಕೆ ಇಳಿಸುವುದು, ನೇರಮಾಡಿ ತಿರುಗಿಸುವುದು ಮಗುವು ಸತ್ತಿದ್ದರೆ ನಾಭಿನಾಳವನ್ನು ಕತ್ತರಿಸುವುದು ಛೇದನ (ಕತ್ತರಿಸುವುದು) ಭೇದನ (ಕೊರೆಯುವುದು) ಹಿಸುಕುವುದು ನೇರಮಾಡುವುದು ಶೀಳುವುದು ಮೊದಲಾದ ಶಸ್ತ್ರಕರ್ಮಗಳನ್ನು ಮಾಡಬೇಕಾಗುತ್ತದೆ. ಆದಕಾರಣ ರಾಜನ ಅಪ್ಪಣೆಯನ್ನು ಪಡೆದು (ಕೆಲವರು ಗರ್ಭಿಣಿಯ ಗಂಡನ ಸಮ್ಮತಿಯನ್ನು ಪಡೆಯಬೇಕೆಂದು ಅರ್ಥಮಾಡುತ್ತಾರೆ. ಇವುಗಳಲ್ಲಿ ರಾಜನ ಅಪ್ಪಣೆಯೇ ಮುಖ್ಯವಾದದ್ದು.) ತುಂಬಾ ಪ್ರಯತ್ನದಿಂದ ಉಪಕ್ರಮಿಸಬೇಕು.

ತತ್ರ ಸಮಾಸೇನಷ್ಟವಿಧಾ ಮೂಢಗರ್ಭಗತಿರುದ್ದಿಷ್ಟಾ ಸ್ವಭಾವಗತಾ ಅಪಿ ತ್ರಯಃ ಸಙ್ಗಾ ಭವನ್ತಿ ಶಿರಸೋ ವೈಗುಣ್ಯಾದಂಸಯೋರ್ಜಘನಸ್ಯ ವಾ ||೪|| ಜೀವತಿ ತು ಗರ್ಭೇ ಸೂತಿಕಾಗರ್ಭನಿರ್ಹರಣೇ ಪ್ರಯೇತೇತ ನಿರ್ಹರ್ತುಮಶಕ್ಯೇ ಚ್ಛಾವನರ್ಮ ಮನ್ತ್ರಾನುಪ

ಶ್ರುಣುಯಾತ್ ತರ್ಾ ವಕ್ಷ್ಯಾಮಃ ॥೫॥ ಇಹಾಮೃತಂ ಚ ಸೋಮಶ್ಚ ಚಿತ್ರಭಾನುಶ್ಚ ಭಾಮಿನಿ । ಉಚ್ಚೈಃಶ್ರವಾಶ್ಚ ತುರಗೋ ಮನ್ದಿರೇ ನಿವಸನ್ತು ತೇ ॥೬॥ ಇದಮಮೃತಮಪಾಂ ಸಮುದ್ಧೃತಂ ವೈ ತವ ಲಘು ಗರ್ಭಮಿಮಂ ಪ್ರಮುಞ್ಚತು ಸ್ತ್ರೀ । ತದನಲಪವನಾರ್ಕವಾಸವಾಸ್ತೇ ಸಹ ಲವಣಾಮ್ಬುಧರೈರ್ದಿಶನ್ತು ಶಾನ್ತಿಮ್ ॥೭॥ ಮುಕ್ತಾಃ ಪಾಶಾ ವಿಪಾಶಾಶ್ಚ ಮುಕ್ತಾಃ ಸೂರ್ಯೇಣ ರಶ್ಮಯಃ ಮುಕ್ತಃ ಸರ್ವಭಯಾದ್ಗರ್ಭ ಏಹ್ಯೇಹಿ ಮಾ ಚಿರಂ ಸ್ವಾಹಾ ॥೮॥

ಸಂಕ್ಷೇಪವಾಗಿ ೮ ವಿಧ ಮೂಢಗರ್ಭಗತಿಗಳು ವಿವರಿಸಲ್ಪಟ್ಟಿವೆ. ಸ್ವಭಾವ ಪ್ರಸವದ ವೇಳೆಯಲ್ಲೂ ತಲೆಯು ವ್ಯತ್ಯಾಸವಾಗಿ ತಿರುಗುವುದು, ಹೆಗಲು ನಡುವಿನ ಭಾಗಗಳು ಸೊಟ್ಟಾಗಿ ಪ್ರಸವಕ್ಕೆ ತಡೆಯನ್ನುಂಟುಮಾಡುವುದರಿಂದ ೩ ವಿಧ ಗರ್ಭ ಸಂಗಗಳುಂಟಾಗುತ್ತವೆ. ಶಿಶುವು ಬದುಕಿದ್ದರೆ ಅದನ್ನು ಹೊರಕ್ಕೆ ತೆಗೆಯಲು ಪ್ರಯತ್ನಿಸಬೇಕು. ಹೊರಕ್ಕೆ ತೆಗೆಯಲು ಅಸಾಧ್ಯವಾದರೆ ಗರ್ಭಿಣಿಗೆ ಕೇಳಿಸುವಂತೆ ಚ್ಯಾವನ ಮಂತ್ರಗಳನ್ನು ಉಚ್ಚರಿಸಬೇಕು. ಆ ಮಂತ್ರಗಳ ಅರ್ಥವು ಈ ರೀತಿಯಾಗಿದೆ. "ಎಲೈ ಸ್ತ್ರೀಯೇ ! ಈ ಹೆರಿಗೆಯ ಮನೆಯಲ್ಲಿ ಅಮೃತವೂ ಚಂದ್ರನೂ ಅಗ್ನಿ ಪುರುಷನೂ ಉಚ್ಚೈಃ ಶ್ರವಸ್ಸೆಂಬ ಇಂದ್ರನ ಪಟ್ಟದ ಕುದುರೆಯೂ ವಾಸಮಾಡಿಕೊಂಡಿರಲಿ. ಸಮುದ್ರ ಮಥನಕಾಲದಲ್ಲಿ ಉತ್ಪನ್ನವಾದ ಈ ಅಮೃತಕುಂಭವು ನಿನ್ನ ಗರ್ಭದಲ್ಲಿರುವ ಶಿಶುವು ಸುಖವಾಗಿ ಪ್ರಸವಿಸಿ ಬರುವಂತೆ ಮಾಡಲಿ. ಅಗ್ನಿ, ವಾಯು, ಸೂರ್ಯ, ಇಂದ್ರ, ಲವಣಸಮುದ್ರ ಇವುಗಳೆಲ್ಲಾ ನಿನಗೆ ಸುಖಪ್ರಸವಕಾರಣದಿಂದ ಮನಃಶಾಂತಿಯನ್ನುಂಟುಮಾಡಲಿ. ಗರ್ಭದಲ್ಲಿರುವ ಶಿಶುವೇ ! ಪ್ರಸವಕ್ಕೆ ತಡೆಯಾಗಿದ್ದ (ಗರ್ಭಗರ್ಭಾಶಯಗಳನ್ನು ಬಿಗಿಹಿಡಿದಿದ್ದ ಮಾಂಸಗ್ರಂಥಿನಾಳ ಮೊದಲಾದುವು) ಪಾಶಬಂಧನರೂಪದ ತಡೆಗಳೆಲ್ಲಾ ಸಡಿಲಿಸಿರುತ್ತವೆ. ಸೂರ್ಯ ಚಂದ್ರರ ಕಿರಣಗಳ ಬಾಧೆಯೂ ತಪ್ಪಿರುತ್ತದೆ. ಎಲ್ಲಾ ವಿಧದ ಭಯಗಳೂ ನಿವಾರಣೆಯಾಗಿರುತ್ತವೆ. ಹೊರಕ್ಕೆ ಬಂದುಬಿಡು ತಡಮಾಡಬೇಡ."

ಔಷಧಾನಿ ಚ ವಿದಧ್ಯಾತ್ ಯಥೋಕ್ತಾನಿ ; ಮೃತೇ ಚೋತ್ತಾನಾಯಾ ಆಭುಗ್ನಸಕ್ಥ್ಯಾಃ ವಸ್ತ್ರಾಧಾರಕೋನ್ನಮಿತಕಟ್ಯಾ ಧನ್ವನ ನಗವೃತ್ತಿಕಾ ಶಾಲ್ಮಲೀಮೃತ್ಸ್ನ ಘೃತಾಭ್ಯಾಂ ಮ್ರಕ್ಷಯಿತ್ವಾ ಹಸ್ತಂ ಯೋನೌ ಪ್ರವೇಶ್ಯ ಗರ್ಭಮುಪಹರೇತ್ । ತತ್ರ ಸಕ್ಥಿಭ್ಯಾಮಾಗತಮನುಲೋಮಮೇವಾಞ್ಛೇತ ಏಕಸಕ್ಥ್ನಾ ಪ್ರಪನ್ನಸ್ಯೇತರ ಸಕ್ಥಿ ಪ್ರಸಾರ್ಯಾಪಹರೇತ್ ಸ್ಫಿಗ್ದೇಶೇನಾಗತಸ್ಯ ಸ್ಫಿಗ್ದೇಶಂ ಪ್ರಪೀಡ್ಯೋರ್ಧ್ವಮುತ್ಕ್ಷಿಪ್ಯ ಸಕ್ಥಿನೀ ಪ್ರಸಾರ್ಯಾಪಹರೇತ್ ತಿರ್ಯಗಾಗತಸ್ಯ ಪರಿಘಸ್ಯೇವ ತಿರಶ್ಚೀನಸ್ಯ ಪಶ್ಚಾದರ್ಧಮೂರ್ಧ್ವಮುತ್ಕ್ಷಿಪ್ಯ ಪೂರ್ವಾರ್ಧಮಪತ್ಯಪಥಂ ಪ್ರತ್ಯಾರ್ಜವಮಾನೀಯಾಪಹರೇತ್ ಪಾರ್ಶ್ವಾಪವೃತ್ತಶಿರಸಮಂ ಪೀಡ್ಯೋರ್ಧ್ವಮುತ್ಕ್ಷಿಪ್ಯ ಶಿರೋಽಪತ್ಯಪಥಮಾನೀಯಾಪಹರೇತ್ ಬಾಹುದ್ವಯಪ್ರತಿಪನ್ನಸ್ಯೋರ್ಧ್ವಮುತ್ಪೀಡ್ಯಾಂಸೌ ಶಿರೋಽನುಲೋಮಮಾನೀಯಾಪಹರೇತ್ ದ್ವಾವನ್ತ್ಯಾವಸಾಧ್ಯೌ ಮೂಢಗರ್ಭಾ ಏವಮಶಕ್ಯೇ ಶಸ್ತ್ರಮವಚಾರಯೇತ್ ॥೯॥

ಸಚೇತನಂ ಚ ಶಸ್ತ್ರೇಣ ನ ಕಥಂಚನ ದಾರಯೇತ್ । ದಾರ್ಯಮಾಣೋ ಹಿ ಜನನೀ ಮಾತ್ಮಾನಂ ಚೈವ ಘಾತಯೇತ್ ॥೧೦॥ (ಪ್ರಕ್ಷಿಪ್ತಶ್ಲೋಕಃ-ಅವಿಷಹ್ಯೇ ವಿಕಾರೇ ತು ಶ್ರೇಯೋ ಗರ್ಭಸ್ಯ ಪಾತನಮ್ । ನ ಗರ್ಭಿಣ್ಯಾ ವಿಪರ್ಯಾಸಃ ಪ್ರಾಪ್ತಕಾಲಂ ನ ಹಾಪಯೇತ್ ॥)

ಶಾರೀರಸ್ಥಾನದಲ್ಲಿ ಅಪರಾಪಾತನಕ್ಕಾಗಿ ಹೇಳಿರುವ ಹಾವಿನ ಪೊರೆ ಮಗ್ಗಾರೆ ಕಾಯಿ ಮೊದಲಾದ ಯೋನಿಧೂಪನ, ಕೋಳಿಕುಟುಮುನಗೆಡ್ಡೆ (ಅರ್ಕಕ್ಷೀರ) ಎಕ್ಕದ ಹಾಲು, ಮುಂಡುಗಳ್ಳಿಯಹಾಲು ಮೊದಲಾದ ಔಷಧಗಳಿಂದ ಮಗುವು ಹುಟ್ಟುವ ಉಪಾಯುಗಳನ್ನು ಮಾಡಲು ತಕ್ಕ ಔಷಧಗಳನ್ನು ಉಪಯೋಗಿಸಬೇಕು. ಮಗುವು ಸತ್ತಿದ್ದರೆ ಆ ಸ್ತ್ರೀಯನ್ನು ಮೇಲ್ಮುಖವಾಗಿ (ಅಂಗತ್ತಲಾಗಿ) ಮಲಗಿಸಿ ಮಂಡಿಗಳನ್ನು ಮಡಿಸಿ ತೊಡೆಗಳನ್ನು ಸಂಕೋಚಿಸಿಕೊಂಡಿರುವಂತೆ ಮಾಡಿ ಸೊಂಟಕ್ಕೆ ಬಟ್ಟೆಯ ಗಂಟನ್ನು ಊರೆಕೊಟ್ಟು ಮೇಲಕ್ಕೆತ್ತಿ ವೈದ್ಯನು ದಿಂಡಲು, ನಾಯಿಬೇಲ, ಬೂರಗದ ಮೇಣ, ಜೇಡಿಮಣ್ಣು, ತುಪ್ಪ ಇವುಗಳ ಕಲ್ಕದಿಂದ ತನ್ನ ಒಂದು ಕೈಯನ್ನು ಉಜ್ಜಿ ನುಣ್ಣಗಾಗುವಂತೆ ಮಾಡಿಕೊಂಡು ಯೋನಿಯೊಳಕ್ಕೆ ನುಗ್ಗಿಸಿ ಗರ್ಭದಲ್ಲಿರುವ ಮಗುವನ್ನು ಹಿಡಿದು ಹೊರಕ್ಕೆ ತರಬೇಕು. ಅವುಗಳಪೈಕಿ, (೧) ಎರಡು ತೊಡೆಗಳೂ ಯೋನಿ ಮಾರ್ಗ ದಲ್ಲಿ ಬಂದು ನುಗ್ಗಿದ್ದರೆ ನೇರವಾಗಿ ಹಿಡಿದು ಹೊರಕ್ಕೆ ಎಳೆದುಕೊಳ್ಳಬೇಕು. (೨) ಒಂದು ಕಾಲು ಮಾತ್ರ ಯೋನಿಯ ಹೊರಕ್ಕೆ ಬಂದಿದ್ದರೆ ಮತ್ತೊಂದನ್ನೂ ಹೊರಕ್ಕೆ ನೀಡಿಸಿ ತಂದು, ಎರಡು ತೊಡೆಗಳನ್ನೂ ಒಟ್ಟಿಗೆ ಹಿಡಿದು ಎಳೆದುಕೊಳ್ಳಬೇಕು. (೩) ಪಿರ್ರೆಗಳು ಯೋನಿದ್ವಾರದಲ್ಲಿ ಹೊರಟುಬಂದಿದ್ದರೆ ಆ ಪಿರ್ರೆಗಳನ್ನು ಹಿಸುಕಿ ಒಳಕ್ಕೆ ನುಗ್ಗಿಸಿ ಮೇಲಕ್ಕೆ ಎತ್ತಿ ತೊಡೆಗಳನ್ನು ನೀಡಿಸಿ ಹೊರಕ್ಕೆ ಎಳೆದುಕೊಳ್ಳಬೇಕು. ಈ ಮೂರು ವಿಧಾನ ಗಳಲ್ಲೂ ಕಾಲುಗಳಿಂದಲೇ ಶಿಶು ಜನನಮಾಡಿಸಬೇಕೆಂದು ತಿಳಿಯಬೇಕು. (೪) ಮಗು ವಿನ ದೇಹವು ಅಗಣಿಯ ಕಂಬದಂತೆ ಯೋನಿದ್ವಾರಕ್ಕೆ ಅಡ್ಡಲಾಗಿ ಬಂದು ಸಿಕ್ಕಿಕೊಂಡಿ ದ್ದರೆ ಮಗುವಿನ ಪಶ್ಚಾದ್ಭಾಗವನ್ನು (ನಡುವನ್ನು) ಮೇಲಕ್ಕೆ ಎತ್ತಿ ಪೂರ್ವ ದೇಹವು (ತಲೆಯಭಾಗವು) ಯೋನಿಯೊಳಕ್ಕೆ ಬರುವಂತೆ ಮಾಡಿ ನೇರವಾಗಿ ಹಿಡಿದೆಳೆದುಕೊಳ್ಳ ಬೇಕು. (೫) ತಲೆಯನ್ನು ಪಕ್ಕಕ್ಕೆ ಮಾಡಿ ಹೆಗಲು ಯೋನಿಯಲ್ಲಿ ನುಗ್ಗಿದ್ದರೆ ಹೆಗ ಲನ್ನು ಹಿಸುಕಿ ಮೇಲಕ್ಕೆ ಎತ್ತಿ ತಲೆಯನ್ನು ಯೋನಿದ್ವಾರಕ್ಕೆ ತಂದು ಹೊರಕ್ಕೆ ಎಳೆದ ಕೊಳ್ಳಬೇಕು. (೬) ಎರಡು ತೋಳುಗಳನ್ನೂ ಯೋನಿಯ ಹೊರಗಡೆಗೆ ನುಗ್ಗಿಸಿ ಬಾಕಿ ಶರೀರವು ಒಳಗೆ ಇದ್ದರೆ ಎರಡು ಹೆಗಲುಗಳನ್ನೂ ಮೇಲಕ್ಕೆ ಎತ್ತಿ ಹಿಡಿದು ತಲೆಯು ನೇರವಾಗಿ ಯೋನಿಗೆ ಬರುವಂತೆ ಮಾಡಿ ಹೊರಕ್ಕೆ ಎಳೆದುಕೊಳ್ಳಬೇಕು. ಈ ಮೂರು ವಿಧಾನಗಳಲ್ಲೂ ತಲೆಯಿಂದಲೇ ಶಿಶುಜನನ ಮಾಡಿಸಬೇಕೆಂದು ತಿಳಿಯಬೇಕು. ಉಳಿದ ಎರಡು ವಿಧಾನಗಳು ಅಸಾಧ್ಯಗಳು. (೭) ತಲೆ, ಕೈಗಳೂ, ಕಾಲುಗಳೂ ಒಟ್ಟಿಗೆ ಯೋನಿಗೆ ಗೂಟದಂತೆ ಚಾಚಿಕೊಂಡಿರುವುದು. (೮) ಒಂದು ಪಿರ್ರೆಯೂ ೧ ಕಾಲೂ ಗುದದಲ್ಲೂ, ಮತ್ತೊಂದು ಪಿರ್ರೆಯೂ, ೧ ಕಾಲೂ ಯೋನಿಯಲ್ಲೂ ನುಗ್ಗಿರು

ವುದು). ಎಂದು ತಿಳಿಯಬೇಕು. ಈ ರೀತಿಯಾಗಿರುವ ಶಿಶುವನ್ನು ಹೊರಕ್ಕೆ ಎಳೆದು ತರುವುದು ಅಸಾಧ್ಯವಾದರೆ ಶಸ್ತ್ರವನ್ನುಪ್ರಯೋಗಿಸಬೇಕು. ಮಗುವು ಬದುಕಿದ್ದರೆ ಶಸ್ತ್ರದಿಂದ ಕತ್ತರಿಸಿದಾಗ ಮಗುವಿಗೋ ತಾಯಿಗೋ ಮರಣವುಂಟಾಗುತ್ತದೆ. ಗರ್ಭಿಣಿಯು ಆ ಬಾಧೆಯನ್ನು ತಡೆಯಲಾಗದಿದ್ದರೆ ಗರ್ಭಪಾತನಮಾಡಿಸುವುದೇ ಹಿತಕರವು. ಇದಕ್ಕೆ ಬದಲಾಗಿ ಗರ್ಭಿಣಿಯನ್ನು ಕೊಲ್ಲಬಾರದು ; ಆದಕಾರಣ ಶಸ್ತ್ರಪ್ರಯೋಗ ಮಾಡಲೇಬೇಕಾದ ಕ್ರಿಯಾಕಾಲ ಒದಗಿದರೆ ಉದಾಸೀನ ಮಾಡದೆ ಕೂಡಲೇ ಶಸ್ತ್ರ ಪ್ರಯೋಗಮಾಡಿ ಗರ್ಭಿಣಿಯನ್ನು ಬದುಕಿಸಿಕೊಳ್ಳಬೇಕು. (ಶಿಶುವಿಗೆ ಮರಣವುಂಟಾದರೂ ಬಾಧಕವಲ್ಲವು.)

ತತ್ರ ಸ್ತ್ರಿಯಮಾಶ್ವಾಸ್ಯ ಮಂಡಲಾಗ್ರೇಣ ಅಙ್ಗುಳಿಶಸ್ತ್ರೇಣ ವಾ ಶಿರೋವಿದಾರ್ಯ ಶಿರಃ ಕಪಾಲಾನ್ಯಾಹೃತ್ಯ ಶಙ್ಕುನಾ ಗೃಹೀತ್ವೋರಸಿ ಕಕ್ಷಾಯಾಂ ವಾಪಹರೇತ್ ; ಅಭಿನ್ನೇ ಶಿರಸಿ ಚಾಕ್ಷಿಕೂಟೇ ಗಣ್ಡೇ ವಾ ; ಅಂಸಸಂಸಕ್ತಸ್ಯಾಂಸದೇಶೇ ಬಾಹುಂ ಛಿತ್ವಾ ದೃತಿಮಿವಾತತಂ ವಾತ ಪೂರ್ಣೋದರಂ ವಾ ವಿದಾರ್ಯ ನಿರಸ್ಯಾನ್ತ್ರಾಣಿ ಶಿಥಿಲೀಭೂತಮಾಹರೇತ್ ; ಜಘನ ಸಕ್ತಸ್ಯಜಘನಕಪಾಲಾನೀತಿ ||೧೧||

ಶಸ್ತ್ರದಿಂದ ಶಿಶುವನ್ನು ಕತ್ತರಿಸಿ ಹೊರಕ್ಕೆ ತರುವ ವಿಧಾನವನ್ನು ಹೇಳುತ್ತಾರೆ: ಗರ್ಭಿಣಿಯನ್ನು ಉಪಚರಿಸಿ ಸಮಾಧಾನಮಾಡಿ ಮಂಡಲಾಗ್ರ ಅಥವಾ ಅಂಗುಳಿ ಶಸ್ತ್ರದಿಂದ ಶಿಶುವಿನ ತಲೆಬುರುಡೆಯನ್ನು ಸೀಳಿ ತಲೆಚಿಪ್ಪುಗಳನ್ನು ಕತ್ತರಿಸಿ ತೆಗೆದು ಶಂಕುಯಂತ್ರದಿಂದ ಮಗುವಿನ ಎದೆಯಲ್ಲಾಗಲೀ ಕೊಂಕಳಲ್ಲಾಗಲೀ ಚುಚ್ಚಿ ಹೊರಕ್ಕೆ ತೆಗೆಯಬೇಕು. ತಲೆಯಬುರುಡೆಯು ಒಡೆಯದಿದ್ದರೆ ಕಣ್ಣಿನ ರಂಧ್ರ ದಲ್ಲಾಗಲೀ ಗಂಡದೇಶದಿಂದ (ಕೆನ್ನೆಯಲ್ಲಿರುವ ಶಂಮರ್ಮ) ಶಂಕುವಿನಿಂದಲಾಗಲಿ ಚುಚ್ಚಿ ಹಿಡಿದು ಹೊರಕ್ಕೆ ಎಳೆದುತರಬೇಕು. ಹೆಗಲು ಹೊರಟದ್ದರೆ ಆ ಭಾಗದ ತೋಳನ್ನು ಕತ್ತರಿಸಿ ಕೊಂಕಳಿಗೆ ಗರ್ಭಶಂಕುವನ್ನು ನೂಕಿ ಮಗುವನ್ನು ಚುಚ್ಚಿ ಹಿಡಿದು ಹೊರಕ್ಕೆ ಎಳೆದುಕೊಳ್ಳಬೇಕು. ಚರ್ಮದ ತಿದಿಯಂತೆ ವಾತದಿಂದ ಮಗುವಿನ ಹೊಟ್ಟೆ ಯುಬ್ಬರಿಸಿದ್ದರೆ ಹೊಟ್ಟೆಯನ್ನು ಸೀಳಿ ಕರುಳುಗಳನ್ನು ಕತ್ತರಿಸಿ ಹೊರಕ್ಕೆ ತೆಗೆದು ಸಡಿಲ ವಾದ ದೇಹವನ್ನು ಗರ್ಭಶಂಕುವಿನಿಂದ ಚುಚ್ಚಿ ಹೊರಕ್ಕೆ ಎಳೆದುಬಿಡಬೇಕು. ಸೊಂಟವು ಗರ್ಭದೊಳಗೆ ಸಿಕ್ಕಿಕೊಂಡಿದ್ದರೆ ಶಿಶುವಿನ ಪಿರ್ರಿಯ ಮೂಳೆಗಳನ್ನು ಕತ್ತರಿಸಿ ಕರುಳುಗಳನ್ನು ಹೊರಕ್ಕೆ ತೆಗೆದು ಶರೀರವನ್ನು ಗರ್ಭಶಂಕುವಿನಿಂದ ಚುಚ್ಚಿ ಹೊರಕ್ಕೆ ತೆಗೆದುಬಿಡಬೇಕು.

ಯದ್ಯದಙ್ಗಂ ಹಿ ಗರ್ಭಸ್ಯ ತಸ್ಯ ಸ್ವಜತಿ ತದ್ಭಿಷಕ್ |
ಸಮ್ಯಗ್ವಿನಿರ್ಹರೇತ್ ಛಿತ್ವಾ ರಕ್ಷೇನ್ನಾರೀಂ ಚ ಯತ್ನತಃ ||೧೨||
ಗರ್ಭಸ್ಯ ಗತಯಶ್ಚಿತ್ರಾ ಜಾಯನ್ತೇಽನಿಲಕೋಪತಃ |
ತತ್ರಾನಲ್ಪಮತಿರ್ವೈದ್ಯೋ ವರ್ತೇತ ವಿಧಿಪೂರ್ವಕಮ್ ||೧೩||
ನೋಪೇಕ್ಷೇತ ಮೃತಂ ಗರ್ಭಂ ಮೂಹೂರ್ತಮಪಿ ಪಣ್ಡಿತಃ |

ಸಹ್ಯಾಶು ಜನನೀಂ ಹನ್ತಿ ನಿರುಚ್ಛ್ವಾಸಂ ಪಶುಂ ಯಥಾ ||೧೪||
ಮಣ್ಡಲಾಗ್ರೇಣ ಕರ್ತವ್ಯಂ ಭೇದ್ಯಮನ್ತರ್ವಿಜಾನತಾ ।
ವೃದ್ಧಿಪತ್ರಂ ಹಿ ತೀಕ್ಷ್ಣಾಗ್ರಂ ನಾರೀಂ ಹಿಂಸ್ಯಾತ್ಕದಾಚನ ||೧೫||
ಅಥಾಪತನ್ತೀಮಪರಾಂ ಪಾತಯೇತ್ಪೂರ್ವವದ್ಭಿಷಕ್ ।
ಹಸ್ತೇನಾಪಹರೇದ್ವಾಪಿ ಪಾರ್ಶ್ವಾಭ್ಯಾಂ ಪರಿಪೀಡ್ಯ ವಾ ||೧೬||
ಧುನುಯಾಚ್ಚ ಮುಹುರ್ನಾರೀಂ ಪೀಡಯೇದ್ವಾಂಸ ಪಿಣ್ಡಿಕಾಮ್ ।
ತೈಲಾಕ್ತಯೋನೇರೇವಂ ತಾಂ ಪಾತಯೇನ್ಮತಿಮಾನ್ ಭಿಷಕ್ ||೧೭||
ಏವಂ ನಿರ್ಹೃತಶಲ್ಯಾಂ ತು ಸಿಞ್ಚೇದುಷ್ಣೇನ ವಾರಿಣಾ ।
ತತೋಽಭ್ಯಕ್ತಶರೀರಾಯಾ ಯೋನೌ ಸ್ನೇಹಂ ನಿಧಾಪಯೇತ್ ||೧೮||
ಏವಂ ಮೃದ್ವೀಭವೇದ್ಯೋನಿಸ್ತಚ್ಛೂಲಂ ಚೋಪಶಾಮ್ಯತಿ ।

ಶಿಶುವಿನ ಯಾವಯಾವ ಅಂಗಗಳು ಯೋನಿಯಲ್ಲಿ ತಡೆಯಲ್ಪಟ್ಟು ಪ್ರಸವವಾಗಲು ಅಡ್ಡಿಯುಂಟಾಗಿರುತ್ತದೋ ಆಯಾಯ ಅಂಗಗಳಲ್ಲಿ ಬುದ್ಧಿಶಾಲಿಯಾದ ವೈದ್ಯನು ಯತ್ನಪೂರ್ವಕವಾಗಿ ಶಸ್ತ್ರದಿಂದ ಸರಿಯಾಗಿ ಕತ್ತರಿಸಿ ಗರ್ಭಿಣಿಯನ್ನು ಬದುಕಿಸಬೇಕು. ವಾತ ಪ್ರಕೋಪದಿಂದ ಗರ್ಭಗತಿಗಳು ವಿಚಿತ್ರಗಳಾಗಿ ಪರಿಣಮಿಸುತ್ತವೆ. ಅಂತಹ ಸಂದರ್ಭಗಳಲ್ಲಿ ಅತಿಬುದ್ಧಿಶಾಲಿಯಾದ ವೈದ್ಯನು ಶಾಸ್ತ್ರವಿಧಿಯನ್ನು ಅನುಸರಿಸಿ ಅವುಗಳನ್ನು ನಿವಾರಣೆಮಾಡಬೇಕು. (ಜಾಣನಾದ ವೈದ್ಯನು) ಗರ್ಭದಲ್ಲೇ ಶಿಶುವು ಸತ್ತುಹೋಗಿದ್ದರೆ ಒಂದು ಮೂಹೂರ್ತಕಾಲದವರೆಗೂ ಉಪೇಕ್ಷಿಸಬಾರದು. ಮೃತಗರ್ಭವು ಉಚ್ಛ್ವಾಸ ಮಾಡದಂತೆ ಭದ್ರವಾಗಿ ಬಾಯಿಯನ್ನು ಹಿಡಿದ ಯಜ್ಞಪಶುವು ಕೂಡಲೇ ಸತ್ತುಹೋಗುವಂತೆಯೇ ಬಲುಬೇಗನೆ ತನ್ನ ತಾಯಿಯನ್ನು ಕೊಂದುಬಿಡುತ್ತದೆ. ಪ್ರಾಜ್ಞನಾದ ಶಸ್ತ್ರವೈದ್ಯನು ಗರ್ಭಾಶಯದಲ್ಲಿ ಸತ್ತಿರುವ ಮಗುವನ್ನು ಮಂಡಲಾಗ್ರಶಸ್ತ್ರದಿಂದಲೆ ಭೇದಿಸಬೇಕು. ತೀಕ್ಷ್ಣಾಗ್ರವುಳ್ಳ (ಮೊನಚಾದ) ವೃದ್ಧಿಪತ್ರವೆಂಬ ಶಸ್ತ್ರವು (ಚೂರಿಯು ಒಂದು ವೇಳೆ ಮಗುವನ್ನು ಕತ್ತರಿಸುವಾಗ ತಾಯಿಗೆ ಚುಚ್ಚಲೂ ಸಾಧ್ಯವು (ಅಕಸ್ಮಾತ್ ಚುಚ್ಚಿಕೊಳ್ಳಬಹುದು). ಅಪರಾಪಾತನವಾಗದಿದ್ದರೆ ವೈದ್ಯನು ಹಿಂದೆ ಹೇಳಿದಂತೆ ಕೃಷ್ಣಸರ್ಪದಪೊರೆ ಮೊದಲಾದುವುಗಳಿಂದ ಧೂಪನ, ಕೋಳಿಕುಟುಮನಗೆಡ್ಡೆಯ ಗಂಧವನ್ನು ಯೋನಿಗೂ, ಅಂಗೈ ಅಂಗಾಲು ಹೊಕ್ಕಳು ಮೊದಲಾದ ಸ್ಥಳಗಳಲ್ಲಿ ಲೇಪಿಸುವುದು, ಇವೇ ಮೊದಲಾದ ಚಿಕಿತ್ಸೆಗಳಿಂದ ಬೀಳಿಸಬೇಕು. ಆಕೆಯ ಪಕ್ಕೆಗಳನ್ನು ಹಿಸುಕಿ ಯೋನಿಯೊಳಕ್ಕೆ ಕೈಚಾಚಿ ಅಪರವನ್ನು ಹಿಡಿದು ಹೊರಕ್ಕೆ ತರಬೇಕು. ಆಕೆಯ ಶರೀರವನ್ನು ಹಿಡಿದು ಅನೇಕಸಾರಿ ಅಲ್ಲಾಡಿಸಿ ಕೊಡವಬೇಕು. ಹೆಗಲ ಮಾಂಸವನ್ನು ಹಿಸುಕಬೇಕು. ಅವಳ ಯೋನಿಯೊಳಕ್ಕೆ ಬಲಾತೈಲದಿಂದ ಅಭ್ಯಂಗಮಾಡಿಸಿದಮೇಲೆ ಅಪರಾಪಾತನ ಮಾಡಿಸಲು ಪ್ರಯತ್ನಿಸಬೇಕು. ಈ ರೀತಿ ಗರ್ಭಶಲ್ಯವು ನಿವಾರಣೆಯಾದ ಮೇಲೆ (ಮೃತಗರ್ಭವೂ ಅಪರವೂ ಹೊರಕ್ಕೆ ಬಂದಮೇಲೆ) ಬಿಸಿನೀರಿನಿಂದ ಯೋನಿ

ಸೇಚನಮಾಡಿಸಿ ಶರೀರಕ್ಕೆಲ್ಲಾ ತೈಲಾಭ್ಯಂಗಮಾಡಿಸಿ ಯೋನಿಯೊಳಕ್ಕೆ ಬಲಾತೈಲದಿಂದ ನೆನೆಸಿದ ಹತ್ತಿಯ ಮುದ್ದೆಯನ್ನು ತುಂಬಿಡಬೇಕು. ಈ ರೀತಿಯಾಗಿ ಯೋನಿಯೊಳಕ್ಕೆ ಸ್ನೇಹಸೇಚನೆ ಮಾಡಿಸುವುದರಿಂದ ಯೋನಿಮಾರ್ದವವುಂಟಾಗಿ ಶೂಲೆಯು ಶಮನವಾಗುತ್ತದೆ.

ಕೃಷ್ಣಾ ತನ್ಮೂಲಶುಣ್ಠ್ಯೇಲಾ ಹಿಙ್ಗುಭಾರ್ಗೀಃ ಸದೀಪ್ಯಕಾಃ ||೧೯||
ವಚಾಮತಿವಿಷಾಂ ರಾಸ್ನಾಂ ಚವ್ಯಂ ಸಞ್ಚೂರ್ಣ್ಯ ಪಾಯಯೇತ್
ಸ್ನೇಹೇನ ದೋಷಸ್ಯನ್ದಾರ್ಥಂ ವೇದನೋಪಶಮಾಯ ಚ ||೨೦||
ಕ್ವಾಥಂ ಚೈಷಾಂ ತಥಾ ಕಲ್ಕಂ ಚೂರ್ಣಂ ವಾ ಸ್ನೇಹ ವರ್ಜಿತಮ್ ।
ಶಾಕತ್ವಕ್ ಹಿಙ್ಗ್ವತಿವಿಷಾ ಪಾಠಾಕಟುಕರೋಹಿಣೀಃ ||೨೧||
ತಥಾ ತೇಜೋವತೀಂ ಚಾಪಿ ಪಾಯಯೇತ್ಪೂರ್ವವದ್ಭಿಷಕ್ ।
ತ್ರಿರಾತ್ರಂ ಪಞ್ಚಸಪ್ತಾಹಂ ತತಃ ಸ್ನೇಹಂ ಪುನಃ ಪಿಬೇತ್ ||೨೨||
ಪಾಯಯೇದ್ವಾಸವಂ ನಕ್ತಮರಿಷ್ಟಂ ವಾ ಸುಸಂಸ್ಕೃತಮ್ ।
ಶಿರೀಷಕಕುಭಾಭ್ಯಾಂ ಚ ತೋಯಮಾಚಮನೇ ಹಿತಮ್ ||೨೩||
ಉಪದ್ರವಾಶ್ಚ ಯೇಽನ್ಯೇಸ್ಯುಸ್ತಾನ್ ಯಥಾಸ್ವಮುಪಾಚರೇತ್ ।
ಸರ್ವತಃ ಪರಿಶುದ್ಧಾ ಚ ಸ್ನಿಗ್ಧಪಥ್ಯಾಲ್ಪಭೋಜನಾ ||೨೪||
ಸ್ವೇದಾಭ್ಯಙ್ಗಪರಾ ನಿತ್ಯಂ ಭವೇತ್ ಕ್ರೋಧವಿವರ್ಜಿತಾ ।
ಪಯೋ ವಾತಹರೈಃ ಸಿದ್ಧಂ ದಶಾಹಂ ಭೋಜನೇ ಹಿತಮ್ ||೨೫||
ರಸಂ ದಶಾಹಂ ಶೇಷೇತು ಯಥಾಯೋಗಮುಪಾಚರೇತ್ ।
ವ್ಯುಪದ್ರವಾಂ ವಿಶುದ್ಧಾಂ ಚ ಜ್ಞಾತ್ವಾ ಚ ಬಲವರ್ಣಿನೀಮ್
ಊರ್ಧ್ವಂ ಚತುರ್ಭ್ಯೋ ಮಾಸೇಭ್ಯೋ ವಿಸೃಜೇತ್ ಪರಿಹಾರಿತಃ ||೨೬||
ಯೋನಿಸನ್ತರ್ಪಣೇಽಭ್ಯಙ್ಗೇ ಪಾನೇ ಬಸ್ತಿಷು ಭೋಜನೇ
ಬಲಾತೈಲಮಿದಂ ವಾಸ್ಯೈದದ್ಯಾನಿಲವಾರಣಮ್ । ||೨೭||

ಮೂಢಗರ್ಭರೂಪದ ಶಲ್ಯವನ್ನು ತೆಗೆದಮೇಲೆ ಕೋಷ್ಠದಲ್ಲಿರುವ ರಕ್ತಕ್ಲೇದ ಮೊದಲಾದ ದೋಷಶಮನ ಮಾಡುವುದಕ್ಕಾಗಿಯೂ ಗರ್ಭಾಶಯದಲ್ಲಿ ನಿಂತಿರುವ ದುಷ್ಟರಕ್ತಕ್ಲೇದ ಮೊದಲಾದುವು ಸರಿಯಾಗಿ ಸ್ರಾವವಾಗಿ ಗರ್ಭಾಶಯವು ಶುದ್ಧಿಯಾಗುವುದಕ್ಕೂ ಮೂರು ದಿನಗಳವರೆಗೆ ಹಿಪ್ಪಲಿ, ಮೋಡಿ, ಶುಂಠಿ, ಏಲಕ್ಕಿ, ಹಿಂಗು, ಭಾರ್ಗಿ, ಓಮು (ವಾದಕ್ಕಿ), ಬಜೆ, ಅತಿಬಜೆ, ರಾಶ್ಮೆ, ಚವ್ಯ ಇವುಗಳ ಚೂರ್ಣವನ್ನು ಬಿಸಿನೀರಿನಲ್ಲಿ ಕದರಿ ಕುಡಿಸಿದ ನಂತರ ದೋಷಸ್ರಾವವಾಗುವುದಕ್ಕೂ ವೇದನೆಗಳು ಶಮನವಾಗುವುದಕ್ಕೂ ಇವುಗಳ ಕಷಾಯವನ್ನು ೭ ದಿನಗಳವರೆಗೆ ಸ್ನೇಹಮಿಶ್ರಮಾಡದೆಯೇ ಕುಡಿಸಬೇಕು. ಇವುಗಳ ಕಲ್ಕವನ್ನಾಗಲೀ ಚೂರ್ಣವನ್ನಾಗಲೀ ಸ್ನೇಹವನ್ನು ಸೇರಿಸದೆ ಬಿಸಿನೀರಿನಲ್ಲಿ ಕದರಿ ಕುಡಿಸಬೇಕು. ತೇಗದಮರದತೊಗಟೆ, ಹಿಂಗು, ಅತಿಬಜೆ, ಅಗಳು ಶುಂಠಿ, ಕಟುಕರೋಹಿಣಿ, ಗಂಗುಂಡೆಬೀಜ ಇವುಗಳ ಚೂರ್ಣ, ಕಲ್ಕ, ಕಷಾಯ

ವನ್ನಾಗಲೀ ೩, ೫, ೭ ದಿನಗಳವರೆಗೆ ಕುಡಿಸಿ ಅನಂತರ ಸ್ನೇಹಮಿಶ್ರಮಾಡಿದ ಹುರಳಿ ಮೊದಲಾದುವುಗಳ ಕಟ್ಟನ್ನು ಕುಡಿಸಬೇಕು. ರಾತ್ರಿಯ ಹೊತ್ತು ಸರಿಯಾಗಿ ತಯಾರಿಸಿದ ಆಸವಗಳನ್ನಾಗಲೀ ಅರಿಷ್ಟಗಳನ್ನಾಗಲೀ ಕುಡಿಸಬೇಕು. ಬಾಗೆ ಹೂವುಗಳನ್ನು ಸೇರಿಸಿ ಕಾಯಿಸಿದ ನೀರನ್ನು ಕುಡಿಸಬೇಕು. ಇತರ ಉಪದ್ರವಗಳಿಗೆ ತಕ್ಕಚಿಕಿತ್ಸೆಯನ್ನು ಮಾಡಿಸಬೇಕು. ಸರ್ವಶರೀರವೂ ಶುದ್ಧಿಯಾದ ಮೇಲೆ ಸ್ನಿಗ್ಧವಾಗಿ ಹಿತವಾದ ಆಹಾರವನ್ನು ಸ್ವಲ್ಪ ಪ್ರಮಾಣದಿಂದ ಭೋಜನಮಾಡಿಸಬೇಕು. ಸದಾ ಸ್ವೇದಕರ್ಮ ಅಭ್ಯಂಗಗಳನ್ನು ಆಚರಿಸಬೇಕು, ಕೋಪವನ್ನು ಬಿಡಬೇಕು. ಸಬ್ಬಸಿಗೆಬೀಜ ಮೊದಲಾದ ವಾತಹರ ದ್ರವ್ಯಗಳನ್ನು ಸೇರಿಸಿ ಪಾಕಮಾಡಿದ ಹಾಲನ್ನು ಮಿಶ್ರಮಾಡಿದ ಅನ್ನವನ್ನು ಮೊದಲಿನ ೧೦ ದಿನಗಳವರೆಗೂ, ಮಾಂಸರಸ ಮಿಶ್ರಮಾಡಿದ ಅನ್ನವನ್ನು ಅನಂತರ ೧೦ ದಿನಗಳವರೆಗೂ ಭೋಜನಮಾಡಿಸಿ ಅನಂತರ ಯೋಗಕ್ಕೆ ತಕ್ಕಂತೆ (ಅವಳ ಶರೀರಕ್ಕೆ ಹಿತವಾಗಿ) ಉಪಚರಿಸಬೇಕು. ಯಾವ ಉಪದ್ರವವೂ ಇಲ್ಲದೆ ದೇಹಶುದ್ಧವಾಗಿ ದೇಹಬಲ ವರ್ತ್ತುವರ್ಣಗಳುಂಟಾಗಿರುತ್ತವೆಂದು ಗೊತ್ತಾದರೆ ೪ ತಿಂಗಳಾದ ಮೇಲೆ ಹಿಂದೆ ಹೇಳಿದ ನಿಯಮಗಳನ್ನೆಲ್ಲಾ ಬಿಡಬೇಕು. ಯೋನಿವೃದ್ಧಿಗೂ ಅಭ್ಯಂಗ, ಪಾನ, ಬಸ್ತಿಕರ್ಮ, ಚಿಕಿತ್ಸಾ ಭೋಜನಗಳಲ್ಲಿ ವಾತನಿವಾರಣೆಯಾಗುವುದಕ್ಕಾಗಿ ಈ ಕೆಳಗೆ ಹೇಳುವ ಬಲಾತೈಲವನ್ನು ಪ್ರಯೋಗಿಸಬೇಕು.

ಬಲಾಮೂಲಕಷಾಯಸ್ಯ ದಶಮೂಲೀಕೃತಸ್ಯ ಚ ॥೨೮॥
ಯವಕೋಲಕುಳತ್ಥಾನಾಂ ಕ್ವಾಥಸ್ಯ ಪಯಸಸ್ತಥಾ ।
ಅಷ್ಟಾವಷ್ಟೌ ಶುಭಾಭಾಗಾಸ್ತೈಲಾದೇಕಸ್ತದೇಕತಃ ॥೨೯॥
ಪಚೇದಾವಾಪ್ಯ ಮಧುರಂ ಗಣಂ ಸೈನ್ಧವಸಂಯುತಮ್ ।
ತಥಾಗುರುಂ ಸರ್ಜರಸಂ ಸರಳಂ ದೇವದಾರು ಚ ॥೩೦॥
ಮಞ್ಜಿಷ್ಠಾಂ ಚನ್ದನಂ ಕುಷ್ಠಮೇಲಾಂ ಕಾಲಾನುಸಾರಿವಾಮ್ ।
ಮಾಂಸೀಂ ಶೈಲೇಯಕಂ ಪತ್ರಂ ತಗರಂ ಶಾರಿವಾಂ ವಚಾಮ್ ॥೩೧॥
ಶತಾವರೀಮಶ್ವಗನ್ಧಾಂ ಶತಪುಷ್ಪಾಂ ಪುನರ್ನವಾಮ್ ।
ತತ್ಸಾಧು ಸಿದ್ಧಂ ಸೌವರ್ಣೇ ರಾಜತೇ ಮೃಣ್ಮಯೇಽಪಿ ವಾ ॥೩೨॥
ಪ್ರಕ್ಷಿಪ್ಯ ಕಲಶೇ ಸಮ್ಯಕ್ ಸ್ವನುಗುಪ್ತಂ ನಿಧಾಪಯೇತ್ ।
ಬಲಾತೈಲಮಿದಂ ಖ್ಯಾತಂ ಸರ್ವವಾತವಿಕಾರನುತ್ ॥೩೩॥
ಯಥಾಬಲಮತೋ ಮಾತ್ರಾಂ ಸೂತಿಕಾಯೈ ಪ್ರದಾಪಯೇತ್ ।
ಯಾ ಚ ಗರ್ಭಾರ್ಥಿನೀ ನಾರೀ ಕ್ಷೀಣಶುಕ್ರಶ್ಚ ಯಃ ಪುಮಾನ್ ॥೩೪॥
ವಾತಕ್ಷೀಣೇ ಮರ್ಮಹತೇ ಮಥಿತೇಽಭಿಹತೇ ತಥಾ ।
ಭಗ್ನೇ ಶ್ರಮಾಭಿಪನ್ನೇ ಚ ಸರ್ವಥೈವೋಪಯುಜ್ಯತೇ ॥೩೫॥
ಏತದಾಕ್ಷೇಪಕಾದೀಂಶ್ಚ ವಾತವ್ಯಾಧೀನಪೋಹತಿ ।
ಹಿಕ್ಕಾಂ ಕಾಸಮಧೀಮನ್ಥಂ ಗುಲ್ಮಂ ಶ್ವಾಸಂ ಚ ದುಸ್ತರಮ್ ॥೩೬॥

ಷಣ್ಮಾಸಾನುಪಯುಂಜೀತ ತದನ್ತ್ರವೃದ್ಧಿಮಪೋಹತಿ ।
ಪ್ರತ್ಯಗ್ರಧಾತುಃ ಪುರುಷೋ ಭವೇಚ್ಚ ಸ್ಥಿರಯೌವನಃ ॥೩೭॥
ರಾಜ್ಞಾಮೇತದ್ಧಿ ಕರ್ತವ್ಯಂ ರಾಜಮಾತ್ರಾಶ್ಚ ಯೇ ನರಾಃ ।
ಸುಖಿನಃ ಸುಕುಮಾರಾಶ್ಚ ಧನಿನಶ್ಚಾಪಿ ಯೇ ನರಾಃ ॥೩೮॥

ಕಳ್ಳಂಗಡಲಿಬೇರಿನ ಕಷಾಯ, ದಶಮೂಲದಕಷಾಯ, ಯವಧಾನ್ಯ, ಎಲಚೀ ಹಣ್ಣು ಹುರುಳಿ ಇವುಗಳ ಕಷಾಯ, ಹಾಲು ಇವು ಪ್ರತಿಯೊಂದೂ ಎಂಟೆಂಟು ಭಾಗಗಳು, ಎಳ್ಳೆಣ್ಣೆ ಒಂದುಭಾಗ, ಕಾಕೋಳ್ಯಾದಿ ಮಧುರ ದ್ರವ್ಯಗಳ ಕಲ್ಕತೈಲದ ೧/೪ ಭಾಗ, ಸ್ವಲ್ಪ ಸೈಂಧವಲವಣ ಇವನ್ನು ದೊಡ್ಡದಾದ ಪಾತ್ರೆಯಲ್ಲಿ ಹಾಕಿ ಒಲೆಯಮೇಲಿಟ್ಟು ಆಗಿಲು, ರಾಳು, ದೇವದಾರು (೨ ವಿಧ) ಮಂಜಿಷ್ಠ, ರಕ್ತಚಂದನ, ಚಂಗಲ್‌ಕೋಷ್ಠ, ಏಲಕ್ಕಿ, ಗ್ರಂಥಿಕತಗರ, ಜಟಾಮಾಂಸಿ, ಕಲ್ಲುಹೂವು, ಲವಂಗಪತ್ರೆ, ತಗರ (ಕೆಲವರು ಹಾಲು ನೆಲಗುಂಬಳವೆನ್ನುತ್ತಾರೆ), ಸೊಗದೆಬೇರು, ಬಜೆ, ಆಷಾಡಿಬೇರು, ಅಶ್ವಗಂಧಿಯ ಬೇರು, ಸಬ್ಬಶಿಗೆಬೀಜ, ಕೊಮ್ಮೇಬೇರು ಇವುಗಳ ಚೂರ್ಣ ಇವುಗಳನ್ನು ಯೋಗದಲ್ಲಿ ಹೇಳಿದಂತೆ ಪಾಕಮಾಡಿ, ಅಂದರೆ ಕಳ್ಳಂಗಡಲಿಬೇರಿನ ಕಷಾಯ ಮೊದಲಾಗಿ ಹಾಲನ್ನು ಬಿಟ್ಟು ಉಳಿದ ದ್ರವ್ಯಗಳನ್ನು ಕಷಾಯಮಾಡಿ ೧/೪ ಭಾಗ ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿದ ಕಷಾಯಕ್ಕೆ ಹಾಲು ೮ ಭಾಗ ೧ ಭಾಗ ಕಲ್ಕ ಚೂರ್ಣಗಳು ಸೇರಿ ತೈಲದ ೧/೪ ಭಾಗದಷ್ಟನ್ನು ಸೇರಿಸಿ ಮಂದಾಗ್ನಿಯಿಂದ ಕಾಯಿಸಿ ಸೌಟಿನಿಂದ ತೊಳೆಸುತ್ತಾ ತಳಹತ್ತಿಕೊಳ್ಳದಂತೆ ಜಾಗರೂಕತೆಯಿಂದಿದ್ದು ತೈಲ ಮಾತ್ರ ನಿಲ್ಲುವಂತೆ ಪಾಕಮಾಡಿ ಬಂದ ತೈಲವನ್ನು ಶೋಧಿಸಿ ಚಿನ್ನ, ಬೆಳ್ಳಿ ಅಥವಾ ಮಣ್ಣಿನ ಬಿಂದಿಗೆಗೆ ತುಂಬಿ ಭದ್ರವಾಗಿಟ್ಟುಕೊಳ್ಳಬೇಕು. ಇದಕ್ಕೆ "ಬಲಾತೈಲವೆಂದು" ಪ್ರಸಿದ್ಧಿಯುಂಟಾಗಿದೆ. ಇದರ ಉಪಯೋಗದಿಂದ ಎಲ್ಲಾ ವಿಧದ ವಾತರೋಗಗಳೂ ನಿವಾರಣೆಯಾಗುತ್ತವೆ. ಬಾಣಂತಿಯರಿಗೆ ತಕ್ಕಪ್ರಮಾಣದಿಂದ ಈ ತೈಲವನ್ನು ಪ್ರಯೋಗಿಸಬೇಕು. ಮಕ್ಕಳಾಗಬೇಕೆಂದು ಅಪೇಕ್ಷಿಸುವ ಹೆಂಗಸರೂ ಕ್ಷೀಣಶುಕ್ರವುಳ್ಳ ಗಂಡಸರೂ, ವಾತದಿಂದ ಕ್ಷೀಣದೇಹವುಳ್ಳವರೂ, ಮರ್ಮಪೀಡಿತರೂ, ಮಥಿತ ಅಭಿಘಾತ, ಅಸ್ಥಿಭಗ್ನ, ಶ್ರಮಪೀಡಿತರು ಇವರೆಲ್ಲರೂ ಈ ತೈಲವನ್ನು ಉಪಯೋಗಿಸಿ ಲಾಭ ಪಡೆಯಬಹುದು. ಇದು ಆಕ್ಷೇಪಕ ಮೊದಲಾದ ಭಯಂಕರಗಳಾದ ವಾತರೋಗಗಳನ್ನೂ ನಿವಾರಿಸುತ್ತದೆ. ಬಿಕ್ಕಳಿಕೆ, ಉಬ್ಬಸ, ಅಧಿಮಂಥವೆಂಬ ನೇತ್ರರೋಗ, ಅಸಾಧ್ಯಗಳಾದ ಗುಲ್ಮ, ಶ್ವಾಸರೋಗ ಇವುಗಳನ್ನೂ ನಿವಾರಣೆಮಾಡುತ್ತದೆ. ಆರು ಮಾಸಗಳವರೆಗೆ ಈ ಬಲಾತೈಲವನ್ನು ಸೇವಿಸುತ್ತಾ ಬಂದರೆ ಕೋಷ್ಠಪ್ರಾಪ್ತವಾಗದಿರುವ (ಅಂದರೆ ಕರುಳಿನ ಭಾಗವು ಅಂಡಕೋಶದೊಳಕ್ಕೆ ನುಗ್ಗದಿದ್ದರೆ) ಅಂತ್ರವೃದ್ಧಿಯನ್ನು ಹೋಗಲಾಡಿಸುತ್ತದೆ. ಇದನ್ನು ಉಪಯೋಗಿಸಿದ ಪುರುಷನಿಗೆ ಧಾತುಗಳೆಲ್ಲವೂ ಹೊಸ ಹೊಸದಾಗಿ ವೃದ್ಧಿಯಾಗಿ ಸ್ಥಿರವಾದ ಯೌವನವುಂಟಾಗುತ್ತದೆ. ರಾಜರೂ ರಾಜರಂತೆ ಅನುಕೂಲವುಳ್ಳವರೂ ಸುಖ

ಪುರುಷರೂ ಸುಕುಮಾರದೇಹಿಗಳೂ ಹಣವಂತರೂ ಈ ತೈಲವನ್ನು ತಯಾರುಮಾಡಿಸಿ ಉಪಯೋಗಿಸಬೇಕು.

ಬಲಾಕಷಾಯಪೀತೇಭ್ಯಸ್ತಿಲೇಭ್ಯೋ ವಾಪ್ಯನೇಕಶಃ ।
ತೈಲಮುತ್ಪಾದ್ಯ ತತ್ಕಾ ಥಶತಪಾಕಕೃತಂ ಶುಭಮ್ ॥೩೯॥
ನಿವಾತೇ ನಿಭೃತಾಗಾರೇ ಪ್ರಯುಞ್ಜೀತ ಯಥಾಬಲಮ್ ।
ಜೀರ್ಣೇಽಸ್ಮಿನ್ ಪಯಸಾ ಸ್ನಿಗ್ಧಮಶ್ನೀಯಾತ್ ಷಷ್ಟಿಕೌದನಮ್ ॥೪೦॥
ಅನೇನ ವಿಧಿನಾ ದ್ರೋಣಮುಪಯುಜ್ಯಾನ್ನವಾರಿತಮ್ ।
ಭುಞ್ಜೀತ ದ್ವಿಗುಣಂ ಕಾಲಂ ಬಲವರ್ಣಾನ್ವಿತಸ್ತತಃ ॥೪೧॥
ಸರ್ವಪಾಪೈರ್ವಿನಿರ್ಮುಕ್ತಃ ಶತಾಯುಃ ಪುರುಷೋ ಭವೇತ್ ।
ಶತಂ ಶತಂ ತಥೋತ್ಕರ್ಷೋ ದ್ರೋಣೇ ದ್ರೋಣೇ ಪ್ರಕೀರ್ತಿತಃ ॥೪೨॥

ಕಳ್ಳಂಗಡಲೆಯಬೇರಿನ ಕಷಾಯದಲ್ಲಿ ಅನೇಕಸಾರಿ ಭಾವನೆಮಾಡಿದ ಎಳ್ಳಿನಿಂದ ತೈಲವನ್ನು ತೆಗೆಸಿ ಆ ಕಳ್ಳಂಗಡಲೆಯಬೇರಿನ ಕಷಾಯದೊಡನೆ ಈ ತಿಲತೈಲವನ್ನು ಸೇರಿಸಿ ನೂರುಸಾರಿಪಾಕಮಾಡಿಟ್ಟುಕೊಂಡು ಎದುರುಗಾಳಿಬೀಸದಿರುವ ವಿಶಾಲವಾದ ಮನೆಯಲ್ಲಿ ವಾಸಮಾಡುತ್ತಾ ತನ್ನ ಶಕ್ತಿಗೆ ತಕ್ಕಪ್ರಮಾಣದಿಂದ ಈ ತೈಲವನ್ನು ಪಾನಮಾಡಿ ಜೀರ್ಣವಾದ ನಂತರ ಸ್ನಿಗ್ಧವಾದ ಷಷ್ಟಿಕಾನ್ನವನ್ನು ಹಾಲಿನೊಡನೆ ಭೋಜನಮಾಡಬೇಕು. ಈ ರೀತಿಯಾಗಿ ಒಂದುದ್ರೋಣ (೮ ಅಳತೆಯ ಸೇರಿನಷ್ಟು) ತೈಲವನ್ನು ಉಪಯೋಗಿಸಿ ಮೇಲೆ ಹೇಳಿದಂತೆ ಹಾಲನ್ನವನ್ನು ಭೋಜನಮಾಡುತ್ತಾ ಅದರ ಎರಡರಷ್ಟು ಕಾಲ ಉಪಯೋಗಿಸಿದರೆ ಬಲ, ವರ್ಣಗಳಿಂದ ಕೂಡಿ ಸಕಲಪಾಪಗಳಿಂದಲೂ ಬಿಡಲ್ಪಟ್ಟು ೧೦೦ ವರ್ಷಗಳವರೆಗೂ ಜೀವಿಸುತ್ತಾನೆ. ಪ್ರತಿದ್ರೋಣ ಬಲಾತೈಲಾಭ್ಯಾಸದಿಂದ ೧೦೦ ವರ್ಷಗಳ ಆಯುಸ್ಸು ವೃದ್ಧಿಯಾಗುತ್ತದೆಂದು ಹೇಳುತ್ತಾರೆ.

ಬಲಾಕಲ್ಪೇನಾತಿಬಲಾ ಗುಡೂಚ್ಯಾದಿತ್ಯಪರ್ಣಿಷು ।
ಸೈರೇಯಕೇ ವೀರತರಾ ಶತಾವರ್ಯಾಂ ತ್ರಿಕಣ್ಟಕೇ ॥೪೩॥
ತೈಲಾನಿ ಮಧುಕೇ ಕುರ್ಯಾತ್ ಪ್ರಸಾರಣ್ಯಾಂ ಚ ಬುದ್ಧಿಮಾನ್ ।

ಬುದ್ಧಿವಂತನಾದ ವೈದ್ಯನು ಮೇಲೆ ಹೇಳಿದ ಬಲಾತೈಲ ವಿಧಾನದಂತೆಯೇ ತುರುವೆಬೇರು, ಅಮೃತವಳ್ಳಿ, ಸೂರ್ಯಕಾಂತಿ, ಮುಳ್ಳುಗೋರಂಟೆ, ಲಾಮಂಚ, ಆಷಾಡಿ, ನೆಗ್ಗಿಲು, ಅತಿಮಧುರ, ಹೆಸರಣೆ (ಕಳ್ಳನಗಿಡದಬೇರು) ಗಳಿಂದಲೂ ತೈಲಗಳನ್ನು ತಯಾರಿಸಬೇಕು.

ನೀಲೋತ್ಪಲಂ ವರೀಮೂಲಂ ಗವ್ಯೇ ಕ್ಷೀರೇ ವಿಪಾಚಯೇತ್ ॥೪೪॥
ಶತಪಾಕಂ ತತಸ್ತೇನ ತಿಲತೈಲಂ ಪಚೇದ್ಭಿಷಕ್ ।
ಬಲಾತೈಲಸ್ಯ ಕಲ್ಕಾಂಸ್ತು ಸುಪಿಷ್ಟಾಂಸ್ತತ್ರ ದಾಪಯೇತ್ ॥೪೫॥
ಸರ್ವೇಷಾಮೇವ ಜಾನೀಯಾದುಪಯೋಗಂ ಚಿಕಿತ್ಸಕಃ ।
ಬಲಾತೈಲವದೇತೇಷಾಂ ಗುಣಾಂಶ್ಚೈವ ವಿಶೇಷತಃ ॥೪೬॥

ನೈದಿಲೆಗೆಡ್ಡೆ, ಆಷಾಡಿ ಬೇರುಗಳನ್ನು ಹಸುವಿನ ಹಾಲಿನಲ್ಲಿ ಸೇರಿಸಿ ಕ್ಷೀರಪಾಕ ವಿಧಾನದಿಂದ ಪಾಕಮಾಡಿ ಅದರೊಡನೆ ತಿಲತೈಲವನ್ನು ಪಾಕಮಾಡಬೇಕು. ಈ ರೀತಿ ಯಾಗಿ ೧೦೦ ಸಾರಿ ಪಾಕಮಾಡಿ ಬಲಾತೈಲಕ್ಕೆ ಹಾಕುವ ಕಲ್ಕಗಳನ್ನೇ ಇವುಗಳಿಗೂ ಪಾಕಮಾಡುವಾಗ ಸೇರಿಸಬೇಕು. ವೈದ್ಯನು ಇವೆಲ್ಲಾ ತೈಲಗಳ ಉಪಯೋಗಗಳನ್ನೂ ಬಲಾತೈಲದಂತೆಯೇ ಮಾಡಬೇಕು. ಮತ್ತು ಇವುಗಳ ಗುಣಗಳು ವಿಶೇಷವಾಗಿ ಬಲಾ ತೈಲದಂತೆಯೇ ಇರುತ್ತವೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಮೂಢಗರ್ಭಚಿಕಿತ್ಸಾನಾಮ ಪಞ್ಚ
ದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹ
ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಷೋಡಶೋಽಧ್ಯಾಯಃ

ಅಥಾತೋ ವಿದ್ರಧೀನಾಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ವಿದ್ರಧಿಗಳ ಚಿಕಿತ್ಸೆಯನ್ನು ವಿವರಿಸಿ ಹೇಳುತ್ತೇವೆ.

ಉಕ್ತಾ ವಿದ್ರಧಯಃ ಷಡ್ಯೇ ತೇಷ್ವಸಾಧ್ಯಸ್ತು ಸರ್ವಜಃ ।
ಶೇಷೇಷ್ವಾಮೇಷು ಕರ್ತವ್ಯಾ ತ್ವರಿತಂ ಶೋಫವತ್ ಕ್ರಿಯಾ ||೩||

ನಿದಾನಸ್ಥಾನದಲ್ಲಿ ಆರು ವಿಧ ವಿದ್ರಧಿಗಳೆಂದು ಹೇಳಿದೆಯಷ್ಟೆ. ಅವುಗಳಲ್ಲಿ ತ್ರಿದೋಷಜನ್ಯ ವಿದ್ರಧಿಯು ಅಸಾಧ್ಯವಾದದ್ದು. ಉಳಿದ ೫ ವಿಧ ವಿದ್ರಧಿಗಳಲ್ಲೂ ಆಮಾವಸ್ಥೆಯಲ್ಲಿರುವಾಗಲೇ ಶೋಫರೋಗದಲ್ಲಿ ಮಾಡುವಂತೆಯೇ ಉಪವಾಸ ಮೊದಲು ಮಾಡಿ ವಿರೇಚನವೇ ಕಡೆಯದಾಗಿರುವ ೧೧ ವಿಧ ಚಿಕಿತ್ಸಾ ವಿಧಾನಗಳನ್ನು ಪ್ರಯೋಗಿಸಬೇಕು.

ವಾತಘ್ನಮೂಲಕಲ್ಕೈಸ್ತು ಘೃತತೈಲವಸಾಯುತೈಃ ।
ಸುಖೋಷ್ಣೋ ಬಹಲೋ ಲೇಪಃ ಪ್ರಯೋಜ್ಯೋ ವಾತವಿದ್ರಧೌ ||೪||
ಸಾನೂಪೌದಕಮಾಂಸಸ್ತು ಕಾಕೋಲ್ಯಾದಿಃ ಸತರ್ಪಣಃ ।
ಸ್ನೇಹಾಮ್ಲಸಿದ್ಧೋ ಲವಣಃ ಪ್ರಯೋಜ್ಯಶ್ಚೋಪನಾಹನೇ ||೫||
ವೇಶವಾರೈಃಸಕೃಶರೈಃ ಪಯೋಭಿಃ ಪಾಯಸೈಸ್ತಥಾ ।
ಸ್ವೇದಯೇತ್ಸತತಂ ಚಾಪಿ ನಿರ್ಹರೇಚ್ಚಾಪಿ ಶೋಣಿತಮ್ ||೬||
ಸಚೇದೇವಮುಪಕ್ರಾನ್ತಃ ಪಾಕಾಯಾಭಿಮುಖೋ ಯದಿ ।
ತಂ ಪಾಚಯಿತ್ವಾ ಶಸ್ತ್ರೇಣ ಭಿನ್ದ್ಯಾದ್ಭಿನ್ನಂ ಚ ಶೋಧಯೇತ್ ||೭||
ಪಞ್ಚಮೂಲಕಷಾಯೇಣ ಪ್ರಕ್ಷಾಳ್ಯ ಲವಣೋತ್ತರೈಃ ।
ತೈಲೈರ್ಭದ್ರಾದಿಮಧುಕಸಂಯುಕ್ತೈಃ ಪ್ರತಿಪೂರಯೇತ್ ||೮||
ವೈರೇಚನಿಕಯುಕ್ತೇನ ತ್ರೈವೃತೇನ ವಿಶೋಧ್ಯ ಚ ।
ಪೃಥಕ್ಪರ್ಣ್ಯಾದಿಸಿದ್ಧೇನ ತ್ರೈವೃತೇನ ಚ ರೋಪಯೇತ್ ||೯||

ದೇವದಾರು ಮೊದಲಾದ ಅಥವಾ ನುಗ್ಗೆಬೇರು ಮೊದಲಾದ ವಾತಹರ ಗಣ ದ್ರವ್ಯಗಳ ಬೇರಿನ ಕಲ್ಕದೊಡನೆ ತುಪ್ಪ, ತೈಲ, ವಸೆಗಳನ್ನು ಮಿಶ್ರಮಾಡಿ ಸುಖೋಷ್ಣವಾಗಿರುವಂತೆ ವಾತವಿದ್ರಧಿಯಲ್ಲಿ ದಪ್ಪವಾಗಿ ಲೇಪಿಸಬೇಕು. ಹಂದಿ ಮೊದಲಾದ ಮಲೆನಾಡಿನ ಪ್ರಾಣಿಗಳ ಮಾಂಸ ಮಿಶ್ರಮಾಡಿದ ಕಾಕೋಲ್ಯಾದಿ ಗಣದ್ರವ್ಯಗಳನ್ನೂ ವಿದಾರಿಗಂಧಾದಿಗಳನ್ನೂ ಕಲ್ಕಮಾಡಿ ಸ್ನೇಹ, ಅಮ್ಲ, ಲವಣ ಮಿಶ್ರಮಾಡಿ ಬಿಸಿಮಾಡಿ

ಉಪನಾಹಮಾಡಿಸಬೇಕು. ಸರ್ವಕಾಲದಲ್ಲೂ ವೇಸವಾರ (ತ್ರಿಕಟು, ಕೊತ್ತುಂಬರಿ, ಜೀರಿಗೆ, ದಾಳಿಂಬೆಹಣ್ಣು, ಮೋಡಿಗಳನ್ನು ಸೇರಿಸಿ ತಯಾರಿಸಿದ್ದು,) ಕೃಶರ, ಎಳ್ಳು, ಅಕ್ಕಿ, ಉದ್ದುಗಳನ್ನು ಸೇರಿಸಿ ತಯಾರಿಸಿದ ಗಂಜಿ, ಹಾಲು ಪಾಯಸಗಳಿಂದ ಸ್ವೇದ ವನ್ನು ರಕ್ತಮೋಕ್ಷಣವನ್ನೂ ಮಾಡಿಸಬೇಕು. ಈ ರೀತಿ ಉಪಚರಿಸುವುದರಿಂದ ಶೋಥವು ಪಾಕಾಭಿಮುಖವಾದರೆ ಶಸ್ತ್ರದಿಂದ ಒಡೆಸಿ ಕೀವು, ದುಷ್ಟರಕ್ತಗಳನ್ನು ಹೊರಕ್ಕೆ ಸುರಿಸಿ ಶುದ್ಧಿ ಮಾಡಬೇಕು. ಪಂಚಮೂಲ ಕಷಾಯಕ್ಕೆ ಸೈಂಧಲವಣವನ್ನು ಹಾಕಿ ವ್ರಣವನ್ನು ತೊಳೆದು ಭದ್ರದಾರು ಮೊದಲಾದ ದ್ರವ್ಯಗಳನ್ನು ಅತಿಮಧುರವನ್ನೂ ಸೇರಿಸಿ ತಯಾರಿಸಿದ ತೈಲದಿಂದ ವ್ರಣವನ್ನು ತುಂಬಬೇಕು. ವಿರೇಚನ ದ್ರವ್ಯಗಳನ್ನೂ ತಿಗಡೆಯನ್ನೂ ಸೇರಿಸಿ ತಯಾರಿಸಿದ ತೈಲವನ್ನು ಲೇಪಿಸಿ ದೋಷವು ಸ್ರಾವವಾಗುವಂತೆ ಮಾಡಿ ಒಂದೆಲೆಹೊನ್ನೆ ಮೊದಲಾದ ಹ್ರಸ್ವಪಂಚಮೂಲಗಳಿಂದ ತಯಾರಿಸಿದ ತೈಲ ಲೇಪನಮಾಡಿ ವ್ರಣವನ್ನು ಮಾಯಿಸಬೇಕು.

ಪೈತ್ತಿಕಂ ಶರ್ಕರಾಲಾಜಾಮಧುಕೈಃ ಸಾರಿವಾಯುತೈಃ ।
ಪ್ರದಿಹ್ಯಾತ್ ಕ್ಷೀರಪಿಷ್ಟೈರ್ವಾ ಪಯಸ್ಯೋಶೀರಚಂದನೈಃ ॥೧೦॥
ಪಾಕ್ಯೈಃ ಶೀತಕಷಾಯೈರ್ವಾ ಕ್ಷೀರೈರಿಕ್ಷುರಸೈಸ್ತಥಾ ।
ಜೀವನೀಯಘೃತೈರ್ವಾಪಿ ಸೇಚಯೇತ್ ಶರ್ಕರಾಯುತೈಃ ॥೧೧॥
ತ್ರಿವೃದ್ಧರೀತಕೀನಾಂ ಚ ಚೂರ್ಣಂ ಲಿಹ್ಯಾನ್ಮಧುದ್ರವಮ್ ।
ಜಲೌಕೋಭಿರ್ಹರೇಚ್ಚಾಸೃಕ್ ಪಕ್ವಂ ಚಾಪಾಟ್ಯ ಬುದ್ಧಿಮಾನ್ ॥ ॥೧೨॥
ಕ್ಷೀರವೃಕ್ಷಕಷಾಯೇಣ ಪ್ರಕ್ಷಾಳ್ಯೌದಕಜೇನ ವಾ ।
ತಿಲೈಃ ಸಯಷ್ಟಿಮಧುಕೈಃ ಸಕ್ಷೌದ್ರೈಃ ಸರ್ಪಿಷಾ ಯುತೈಃ ॥ ॥೧೩॥
ಉಪದಿಹ್ಯ ಪ್ರತನುನಾ ವಾಸಸಾ ವೇಷ್ಟಯೇದ್ವ್ರಣಮ್ ।
ಪ್ರಪೌಣ್ಡರೀಕಮಞ್ಜಿಷ್ಠಾಮಧುಕೋಶೀರಪದ್ಮಕೈಃ ॥೧೪॥
ಸಹರಿದ್ರೈಃ ಕೃತಂ ಸರ್ಪಿಃ ಸಕ್ಷೀರಂ ವ್ರಣರೋಪಣಮ್ ।
ಕ್ಷೀರಶುಕ್ಲಾಪೃಥಕ್ಪರ್ಣೀಸಮಙ್ಗಾರೋಧ್ರಚನ್ದನೈಃ ॥೧೫॥
ನ್ಯಗ್ರೋಧಾದಿಪ್ರವಾಲೇಷು ತೇಷಾಂ ತ್ವಕ್ಷ್ವಥವಾ ಕೃತಮ್ ।

ಪಿತ್ತವಿದ್ರಧಿಯನ್ನು ಸಕ್ಕರೆ, ಅರಳು, ಅತಿಮಧುರ, ಸೊಗದೆಬೇರು, ಹಾಲು, ನೆಲಗುಂಬಳ, ಲಾವಂಚ, ಕೆಂಪು, ಗಂಧ ಇವುಗಳ ಕಲ್ಕದಿಂದ ಲೇಪಿಸಬೇಕು. ಹಾಲು, ಕಬ್ಬಿನ ರಸಗಳನ್ನು ಬಿಸಿಮಾಡಿಯಾಗಲೀ ಅಥವಾ ತಣ್ಣಗಿರುವುದನ್ನಾಗಲೀ, ಜೀವನೀಯ ಗಣದ್ರವ್ಯಗಳನ್ನು ಸೇರಿಸಿ ತಯಾರಿಸಿದ ತುಪ್ಪಕ್ಕೆ ಸಕ್ಕರೆ ಸೇರಿಸಿ ವಿದ್ರಧಿಯಮೇಲೆ ಸೇಚನೆಮಾಡಬೇಕು (ಚುಮುಕಿಸಬೇಕು). ತಿಗಡೆ ಮತ್ತು ಅಣಿಲೆಕಾಯಿಗಳ ಚೂರ್ಣ ವನ್ನು ಜೇನುತುಪ್ಪ ಮಿಶ್ರಮಾಡಿ ನೆಕ್ಕಿಸಬೇಕು. ಜಿಗಣೆಯನ್ನು ಕಚ್ಚಿಸಿ ರಕ್ತಸ್ರಾವ ವನ್ನು ಮಾಡಿಸಬೇಕು. ಪಕ್ವವಿದ್ರಧಿಯನ್ನು ಶಸ್ತ್ರದಿಂದ ಕತ್ತರಿಸದೆ ಕ್ಷೀರವೃಕ್ಷ ಕಷಾಯದಿಂದ ತೊಳೆದು ಮಾಸಿನ ಮಾಂಸ, ಎಳ್ಳು, ಅತಿಮಧುರ, ಜೇನುತುಪ್ಪ,

ತುಪ್ಪಗಳನ್ನು ಸೇರಿಸಿ ಲೇಪನಮಾಡಿ ಅದರಮೇಲೆ ತೆಳುವಾದ ಬಟ್ಟೆಯನ್ನು ಮುಚ್ಚಿ ವ್ರಣಬಂಧನ ಮಾಡಬೇಕು. ಪ್ರಪೌಂಡರೀಕ, ಮಂಜಿಷ್ಠೆ, ಅತಿಮಧುರ, ಲಾವಂಚ, ಪದ್ಮಕ, ಅರಿಶಿನ, ಹಾಲು ಇವುಗಳನ್ನು ಸೇರಿಸಿ ತಯಾರಿಸಿದ ತುಪ್ಪವನ್ನು ಲೇಪನ ಮಾಡಿದರೆ ವ್ರಣರೋಪಣವಾಗುತ್ತದೆ. ಅಥವಾ ನೆಲಗುಂಬಳಗೆಡ್ಡೆ, ಒಂದೆಲೆಹೊನ್ನೆ, ಮಂಜಿಷ್ಠೆ, ರೋಧ್ರ, ರಕ್ತಚಂದನ, ಕ್ಷೀರವೃಕ್ಷಗಳ ಚಿಗುರು ಮತ್ತು ಅವುಗಳ ತೊಗಟೆಗಳನ್ನು ಸೇರಿಸಿ ತಯಾರಿಸಿದ ಘೃತಲೇಪನದಿಂದಲೂ ವ್ರಣರೋಪಣವಾಗುತ್ತದೆ.

ನಕ್ತಮಾಲಸ್ಯ ಪತ್ರಾಣಿ ತರುಣಾನಿ ಫಲಾನಿ ಚ ।
ಸುಮನಾಯಾಶ್ಚ ಪತ್ರಾಣಿ ಪಟೋಲಾರಿಷ್ಟಯೋಸ್ತಥಾ
ದ್ವೇ ಹರಿದ್ರೇ ಮಧೂಚ್ಛಿಷ್ಟಂ ಮಧುಕಂ ತಿಕ್ತರೋಹಿಣೀ ॥೧೭॥
ಪ್ರಿಯಙ್ಗುಃ ಕುಶಮೂಲಂ ಚ ನಿಚುಲಸ್ಯ ತ್ವಗೇವ ಚ ।
ಮಞ್ಜಿಷ್ಠಾ ಚಂದನೋಶೀರಮುತ್ಪಲಂ ಸಾರಿವಾ ತ್ರಿವೃತ್ ॥ ॥೧೮॥
ಏತೇಷಾಂ ಕಾರ್ಷಿಕೈರ್ಭಾಗೈರ್ಘೃತಪ್ರಸ್ಥಂ ವಿಪಾಚಯೇತ್ ।
ದುಷ್ಟವ್ರಣಪ್ರಶಮನಂ ನಾಡೀವ್ರಣವಿಶೋಧನಮ್ ॥೧೯॥
ಸದ್ಯಶ್ಛಿನ್ನವ್ರಣಾನಾಂ ಚ ಕರಞ್ಜಾದ್ಯಮಿದಂ ಶುಭಮ್ ।
ದುಷ್ಟವ್ರಣಾಶ್ಚ ಯೇ ಕೇಚಿದ್ಯೇ ಚೋತ್ಸನ್ನಪ್ಟಕ್ರಿಯಾ ವ್ರಣಾಃ ॥ ॥೨೦॥
ನಾಡ್ಯೋಗಮ್ಭೀರಿಕಾ ಯಾಶ್ಚ ಸದ್ಯಶ್ಛಿನ್ನಾಸ್ತಥೈವ ಚ ।
ಅಗ್ನಿಕ್ಷಾರಕೃತಾಶ್ಚೈವ ಯೇ ವ್ರಣಾ ದಾರುಣಾ ಅಪಿ ॥೨೧॥
ಕರಞ್ಜಾದ್ಯೇನ ಹವಿಷಾ ಪ್ರಶಾಮ್ಯನ್ತಿ ನ ಸಂಶಯಃ ।

ಹೊಂಗೆಯಲೆ, ಹೀಚುಕಾಯಿ, ಜಾಜಿಸೊಪ್ಪು, ಕಹಿಪಡವಲದ ಮತ್ತು ಬೇವಿನ ಸೊಪ್ಪು, ಅರಶಿನ, ಮರದರಿಶಿನ, ಜೇನುಮೇಣ, ಅತಿಮಧುರ, ಕಟುಕರೋಹಿಣಿ, ನೆಳಲು, ದರ್ಭೆಯಬೇರು, ಹಬ್ಬೆಯತೊಗಟೆ, ಮಂಜಿಷ್ಠೆ, ಕೆಂಪುಗಂಧ, ಲಾವಂಚ, ನೈದಿಲೆಗೆಡ್ಡೆ, ಸೊಗದೆಬೇರು, ತಿಗಡೆ, ಇವು ಪ್ರತಿಯೊಂದೂ ಒಂದೊಂದುಕರ್ಷ, ತುಪ್ಪ ೧ ಪ್ರಸ್ಥ ಇವುಗಳನ್ನು ಪಾಕಮಾಡಿ ತಯಾರಿಸಿದ ಘೃತವನ್ನು ಲೇಪಿಸಿದರೆ ದುಷ್ಟವ್ರಣ, ನಾಡೀವ್ರಣ, ಸದ್ಯಃಭಿನ್ನವ್ರಣ, ಆಳದಲ್ಲಿರುವ ನಾಡೀವ್ರಣ, ಅಗ್ನಿಕ್ಷಾರಗಳಿಂದ ಸುಟ್ಟವ್ರಣ ಮತ್ತು ದಾರುಣವ್ರಣಗಳು ಖಂಡಿತವಾಗಿಯೂ ನಿವಾರಿಸಲ್ಪಡುತ್ತವೆ. ಇದಕ್ಕೆ **ಕರಂಜಾದಿಘೃತ** ವೆಂದು ಹೆಸರು.

ಇಷ್ಟಿಕಾಸಿಕತಾಲೋಹಗೋಶಕೃತ್ತುಷಪಾಂಶುಭಿಃ ॥೨೨॥
ಮೂತ್ರೈರುಷ್ಣೈಶ್ಚ ಸತತಂ ಸ್ವೇದಯೇತ್ ಶ್ಲೇಷ್ಮವಿದ್ರಧಿಮ್ ।
ಕಷಾಯಪಾನೈರ್ವಮನೈರಾಲೇಪೈರುಪನಾಹನೈಃ ॥೨೩॥
ಹರೇದ್ದೋಷಾನಭೀಕ್ಷ್ಣಂ ಚಾಪ್ಯಲಾಬ್ವಾಸೃಕ್ ತಥೈವ ಚ ।
ಆರಗ್ವಧಕಷಾಯೇಣ ಪಕ್ವಂ ಚಾಪಾಟ್ಯ ಧಾವಯೇತ್ ॥೨೪॥

ಬಹಿರ್ಭಾಗದ ವಿದ್ರಧಿಯು ಪಕ್ವವಾದರೆ ಶಸ್ತ್ರದಿಂದ ಕೊರೆದು ವ್ರಣಚಿಕಿತ್ಸೆಯಂತೆ ಉಪಚರಿಸಬೇಕು. ಮೇಲ್ಗಡೆಯಿಂದಾಗಲೀ ಕೆಳಗಡೆಯಿಂದಲಾಗಲೀ ಕೀವೂ ದುಷ್ಟ ರಕ್ತಾದಿಗಳೂ ಸೋರಿದರೆ ವರುಣಾದಿ ಗಣದ್ರವ್ಯಗಳನ್ನಾಗಲೀ, ಕೆಂಪು ನುಗ್ಗೆಯ ಚೂರ್ಣವನ್ನಾಗಲೀ ಮೈರೇಯ ಸುರಾ ಆಮ್ಲ ಆಸವಗಳೊಡನೆ ಪಾನಮಾಡಿಸಬೇಕು. ನುಗ್ಗೆಯ ಬೇರಿನ ಕಷಾಯದಲ್ಲಿ ಬೇಯಿಸಿದ ಅನ್ನವನ್ನು ಬಿಳಿಸಾಸಿವೆ ಪುಡಿಯನ್ನು ಮಿಶ್ರಮಾಡಿ ಸೇವಿಸಬೇಕು. ಯವೆ, ಎಲಚಿ, ಹುರುಳಿಕಟ್ಟು ಇವುಗಳನ್ನು ಸೇರಿಸಿ ಅನ್ನವನ್ನು ತಿನ್ನಿಸಬೇಕು. ಪ್ರತಿದಿನವೂ ಪ್ರಾತಃಕಾಲದಲ್ಲಿ ರೋಧ್ರಘೃತವನ್ನು ಪಾನ ಮಾಡಿಸಿದರೆ ವಿದ್ರಧಿಯು ಶಮನವಾಗುತ್ತದೆ.

ಟಿಪ್ಪಣಿ : ಸರಿಯಾಗಿ ತಯಾರಿಸಿದ ಸುರೆಯನ್ನೂ ಆಸವವನ್ನೂ ಸೇರಿಸಿ ಪುನಃ ಸಂಧಾನಮಾಡಿದರೆ **ಮೈರೇಯವೆಂದು** ಹೆಸರು. ಸುರಾ, ಪಿಷ್ಟಮಯ ಮದ್ಯವು. ಆಸವವು ದ್ರವಾಧಿಕವಾದ ಮದ್ಯವು.

ನೋಪಗಚ್ಛೇದ್ಯಥಾ ಪಾಕಂ ಪ್ರಯತೇತ ತಥಾ ಭಿಷಕ್ ||೩೭||
ಪರ್ಯಾಗತೇ ವಿದ್ರಧೌ ತು ಸಿದ್ಧಿರ್ನೈಕಾನ್ತಿಕೀ ಸ್ಮೃತಾ ।

ವೈದ್ಯನು ವಿದ್ರಧಿಯು ಪಾಕವಾಗದಿರುವಂತೆ ಪ್ರಯತ್ನಪಡಬೇಕು. ವಿದ್ರಧಿಯು ಪಾಕವಾದರೆ ಗುಣವಾಗುವುದಿಲ್ಲ.

ಪ್ರತ್ಯಾಖ್ಯಾಯ ತು ಕುರ್ವೀತ ಮಜ್ಜಜಾತಂ ತು ವಿದ್ರಧಿಮ್ । ||೩೮||
ಸ್ನೇಹಸ್ವೇದೋಪಪನ್ನಾನಾಂ ಕುರ್ಯಾದ್ರಕ್ತಾವಸೇಚನಮ್
ವಿದ್ರಧ್ಯುಕ್ತಾಂ ಕ್ರಿಯಾಂ ಕುರ್ಯಾತ್ ಪಕ್ವೇ ವಾಸ್ಥಿ ತು ಭೇದಯೇತ್ ||೩೯||
ನಿಃಶಲ್ಯಮಥ ವಿಜ್ಞಾಯ ಕರ್ತವ್ಯಂ ವ್ರಣಶೋಧನಮ್ ।
ಧಾವೇತ್ ತಿಕ್ತಕಷಾಯೇಣ ತಿಕ್ತಂ ಸರ್ಪಿಸ್ತಥಾ ಹಿತಮ್ ||೪೦||
ಯದಿ ಮಜ್ಜಪರಿಸ್ರಾವೋ ನ ನಿವರ್ತೇತ ದೇಹಿನಃ ।
ಕುರ್ಯಾತ್ ಸಂಶೋಧನೀಯಾನಿ ಕಷಾಯಾದೀನಿ ಬುದ್ಧಿಮಾನ್ ||೪೧||
ಪ್ರಿಯಙ್ಗುಧಾತಕೀರೋಧ್ರಕಟ್ಫಲಂ ತಿನಿಶೈನ್ಧವಮ್ ।
ಏತೈಸ್ತೈಲಂ ವಿಪಕ್ತವ್ಯಂ ವಿದ್ರಧಿವ್ರಣರೋಪಣಮ್ ||೪೨||

ಮಜ್ಜಗತ ವಿದ್ರಧಿಯನ್ನು ಅಸಾಧ್ಯವೆಂದು ತಿಳಿಸಿ ಚಿಕಿತ್ಸೆಮಾಡಬೇಕು. ಸ್ನೇಹಸ್ವೇದಗಳಿಂದ ಸಂಸ್ಕಾರಮಾಡಿ ರಕ್ತ ಸ್ರಾವಮಾಡಿಸಿ ವಿದ್ರಧಿಗೆ ಮಾಡಬೇಕಾದ ಚಿಕಿತ್ಸೆಯನ್ನು ಮಾಡಬೇಕು. ಮೂಳೆಯಲ್ಲಿ ವಿದ್ರಧಿಯು ಪಾಕಹೊಂದಿದರೆ ಮೂಳೆಯನ್ನು ಕೊರೆದು ಕೀವನ್ನು ಹೊರಕ್ಕೆ ಸುರಿಸಬೇಕು. ಶಲ್ಯರೂಪವಾದ ಕೀವು ಹೊರಗೆ ಬಂದದ್ದನ್ನು ತಿಳಿದು ವ್ರಣಶೋಧನೆ ಮಾಡಬೇಕು. ತಿಕ್ತದ್ರವ್ಯಗಳ ಕಷಾಯದಿಂದ ವ್ರಣವನ್ನು ತೊಳೆಯಬೇಕು. ಅದೇ ರೀತಿಯಾಗಿ ತಿಕ್ತಘೃತ ಲೇಪನವೂ ಹಿತಕರವಾದದ್ದು. ಮಜ್ಜಧಾತುವು ಸ್ರಾವವಾಗುವುದು ನಿಲ್ಲದೆ ಹೋದರೆ ಬುದ್ಧಿ

ವಂತನಾದ ವೈದ್ಯನು ಸಂಶೋಧನಕರಗಳಾದ ಕಷಾಯಗಳಿಂದ ಕ್ಷಾಳನೆಮಾಡಿ ನಿಲ್ಲಿಸ ಬೇಕು. ನೆಳಲು ಧಾತಕೀಕುಸುಮ, ರೋಧ್ರ, ಕಿರಿಶಿವನಿ (ಕಾಯಫಲ), ತಿನಿಶವೆಂಬ (ರಥವೃಕ್ಷ), ಸೈಂಧವ ಇವುಗಳಿಂದ ತೈಲವನ್ನು ತಯಾರಿಸಿ ವಿದ್ರಧಿಗೆ ಅಭ್ಯಂಗಮಾಡಿಸಿ ದರೆ ವಿದ್ರಧಿಯು ಮಾಯವಾಗುತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ವಿದ್ರಧಿ ಚಿಕಿತ್ಸಾನಾಮ
ಷೋಡಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ
ಲಕ್ಷ್ಮೀನೃಸಿಂಹ ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಸಪ್ತದಶೋಽಧ್ಯಾಯಃ

ಅಥಾತೋ ವಿಸರ್ಪನಾಡೀಸ್ತನರೋಗಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ **ವಿಸರ್ಪ, ನಾಡೀವ್ರಣ, ಸ್ತನರೋಗಗಳ** ಚಿಕಿತ್ಸೆಯನ್ನು ವಿವರಿಸುತ್ತೇವೆ.

ಸಾಧ್ಯಾ ವಿಸರ್ಪಾಸ್ತ್ರಯ ಆದಿತೋ ಯೇ ನ ಸನ್ನಿಪಾತ ಕ್ಷತಜೌ ಹಿ ಸಾಧ್ಯೌ |
ಸಾಧ್ಯೇಷು ತತ್ಪೃಥ್ಯಗಣೈರ್ವಿದಧ್ಯಾತ್ ಘೃತಾನಿ ಸೇಕಾಂಶ್ಚ ತಥೋಪದೇಹಾನ್ ||೩||

ವಾತ ಪಿತ್ತ ಕಫ ಜನಿತಗಳಾದ ಮೂರುವಿಧ ವಿಸರ್ಪಗಳನ್ನೂ ಚಿಕಿತ್ಸೆಮಾಡಿ ಗುಣಪಡಿಸಬಹುದು. ಆದರೆ ಸನ್ನಿಪಾತ ಮತ್ತು ಕ್ಷತಜ ವಿಸರ್ಪಗಳು ಅಸಾಧ್ಯವಾದವು. ಸಾಧ್ಯವಾದುವುಗಳಲ್ಲಿ ಆಯಾಯ ದೋಷಹರಗಳಾದ ದ್ರವ್ಯಗಳಿಂದ ತಯಾರಿಸಿದ ಘೃತಗಳನ್ನೂ ಸೇಕಗಳನ್ನೂ ಪ್ರಯೋಗಮಾಡಬೇಕು.

ಮುಸ್ತಾಶತಾಹ್ವಾಸುರದಾರುಕುಷ್ಠಂ ವಾರಾಹಿಕುಸ್ತುಂಬುರು ಕೃಷ್ಣಗಂಧಾಃ |
ವಾತಾತ್ಮಕೇ ಚೋಷ್ಣಗಣಾಃ ಪ್ರಯೋಜ್ಯಾಃ ಸೇಕೇಷು ಲೇಪೇಷು ತಥಾ ಶೃತೇಷು ||೪||
ಯತ್ಪಞ್ಚಮೂಲಂ ಖಲು ಕಣ್ಟಕಾಖ್ಯಮಲ್ಪಂ ಮಹಚ್ಚಾಪ್ಯಥ ವಲ್ಲಿಜಂ ಚ |
ತಚ್ಚೋಪಯೋಜ್ಯಂ ಭಿಷಜಾ ಪ್ರದೇಹೇ ಸೇಕೇ ಘೃತೇ ಚಾಪಿ ತಥೈವ ತೈಲೇ ||೫||

ವಾತಜನ್ಯವಿಸರ್ಪಚಿಕಿತ್ಸೆ—ಕೊನ್ನಾರಿಗೆಡ್ಡೆ, ಸಬ್ಬಸಿಗೆ, ದೇವದಾರು, ಚಂಗಲ್ ಕೋಷ್ಠ, ಹಂದಿಗೆಡ್ಡೆ, ಕೊತ್ತುಂಬರಿ, ನುಗ್ಗೆ ಇವುಗಳನ್ನೂ, ಉಷ್ಣವೀರ್ಯಗಳಾದ ದೇವದಾರ್ವಾದಿ ಗಣದ್ರವ್ಯಗಳನ್ನೂ ಅಥವಾ ಪಿಪ್ಪಲ್ಯಾದಿ ಗುಣದ್ರವ್ಯಗಳನ್ನೂ ಸೇಕ, ಲೇಪ, ಘೃತಗಳ ಮೂಲಕ ಪ್ರಯೋಗಿಸಿದರೆ ವಾತವಿಸರ್ಪವು ನಿವಾರಣೆಯಾಗುತ್ತದೆ. ಕರಮರ್ದಕ, ತ್ರಿಕಂಟಕ, ಮುಳ್ಳುಗೋರಂಟೆ, ಆಷಾಡಿಬೇರು, ಗೃಧ್ರನಖಿ ಇವು ಕಂಟಕ ಪಂಚಮೂಲಗಳು. ಒಂದೆಲೆಹೊನ್ನೆ, ಮೂರೆಲೆಹೊನ್ನೆ, ಹೆಗ್ಗುಳ್ಳ, ನೆಲಗುಳ್ಳ, ನೆಗ್ಗಿಲು ಇವು ಹ್ರಸ್ವ ಪಂಚಮೂಲಗಳು. ಬಿಲ್ವನತ್ರೆ, ಥಗ್ಗಿ, ಹೆಮ್ಮರ, ಶಿವನಿ, ಪಾದರಿ ಇವು ಮಹಾಪಂಚ ಮೂಲಗಳು. ವಿದಾರೀ, ಸಾರಿವಾ, ರಜನೀ, ಗುಡೂಚೀ, ಅಜಶೃಂಗೀ ಇವು ವಲ್ಲೀ ಪಂಚಮೂಲಗಳು (ನೆಲಗುಂಬಳ, ಸೊಗದೆಹಂಬು, ಅರಿಶಿನ, ಅಮೃತಬಳ್ಳಿ, ಗರ್ಶೆಹಂಬು) ಇವುಗಳ ಕಲ್ಕದಿಂದ ಮೈಗೆ ಲೇಪನವನ್ನೂ, ಇವುಗಳ ಕಷಾಯದಿಂದ ಸ್ನಾನಪಾನಗಳನ್ನೂ, ಇವುಗಳನ್ನು ಸೇರಿಸಿ ತಯಾರಿಸಿದ ಘೃತತೈಲಗಳನ್ನು ಪಾನ, ಅಭ್ಯಂಗ, ನಸ್ಯಾದಿಗಳಿಗೂ ಉಪಯೋಗಿಸಬೇಕು.

ಕಸೇರುಶೃಙ್ಗಾಟಕಪದ್ಮಗುಂದ್ರಾಃ ಸಶೈವಲಾಃ ಸೋತ್ಪಲಕರ್ದಮಾಶ್ಚ | ವಸ್ತ್ರಾನ್ತರಾಃ

ಪಿತ್ತಕೃತೇ ವಿಸರ್ಪೇ ಲೇಪಾ ವಿಧೇಯಾಃ ಸಘೃತಾಃ ಸುಶೀತಾಃ ||೬|| ಹ್ರೀವೇರಲಾಮಜ್ಜಕಚನ್ದನಾನಿ ಸ್ರೋತೋಜಮುಕ್ತಾಮಣಿಗೈರಿಕಾಶ್ಚ | ಕ್ಷೀರೇಣ ಪಿಷ್ಟಾಃ ಸಘೃತಾಃ ಸುಶೀತಾ ಲೇಪಾಃ ಪ್ರಯೋಜ್ಯಾಸ್ತನವಃ ಸುಖಾಯ ||೭|| ಪ್ರಪೌಣ್ಡರೀಕಂ ಮಧುಕಂ ಪಯಸ್ಯಾ ಮಞ್ಜಿಷ್ಠಿಕಾ ಪದ್ಮಕಚನ್ದನೇ ಚ | ಸುಗನ್ಧಿಕಾ ಚೇತಿ ಸುಖಾಯ ಲೇಪಾಃ ಪೈತ್ತೇ ವಿಸರ್ಪೇ ಭಿಷಜಾ ಪ್ರಯೋಜ್ಯಾಃ ||೮|| ನ್ಯಗ್ರೋಧವರ್ಗ್ಯೈಃ ಪರಿಷೇಚನಂ ಚ ಘೃತಂ ಚ ಕುರ್ಯಾತ್ ಸ್ವರಸೇನ ತಸ್ಯ | ಶೀತೈಃ ಪಯೋಭಿಶ್ಚ ಮಧೂದಕೈಶ್ಚ ಸಶರ್ಕರೈರಿಕ್ಷುರಸೈಶ್ಚ ಸೇಕಃ ||೯||

ಕೊತ್ತಿಗೆಡ್ಡೆ, ಮೂರ್ನೂರಲೆಗೆಡ್ಡೆ (ನೀರಿನಲ್ಲೇ ಬೆಳೆಯುತ್ತೆ), ತಾವರೆಹೂವು, ಭದ್ರಮುಸ್ತೆ (ಶುಂಠಿಹುಲ್ಲೆಂದು ಕೆಲವರು), ಪಾಚಿ, ನೈದಿಲೆಗೆಡ್ಡೆ ಮಿಶ್ರವಾದ ಕೆಸರು, ಇವುಗಳ ಕಲ್ಕವನ್ನು ಬಟ್ಟೆಯ ಚೂರಿನಲ್ಲಿ (ಚೌಕದಲ್ಲಿ)ಟ್ಟು ಮಿಶ್ರಮಾಡಿ ತಣ್ಣಗೆ ಲೇಪಿಸಿದರೆ ಪಿತ್ತಜವಿಸರ್ಪವು ನಿವಾರಣೆಯಾಗುತ್ತದೆ. ಲಾವಂಚ, ಮುಡಿವಾಳ, ಶ್ರೀಗಂಧ, ಸ್ರೋತೋಂಜನ, ಮುತ್ತಿನಮಣಿ, ಕಾವಿಮಣ್ಣು ಇವುಗಳನ್ನು ಹಾಲಿನಲ್ಲಿ ಅರೆದು ತುಪ್ಪವನ್ನು ಮಿಶ್ರಮಾಡಿ ತಣ್ಣಗೆ ತೆಳುವಾಗಿ ಮೈಗೆ ಲೇಪಿಸಿದರೆ ಸುಖವಾಗುತ್ತದೆ. ಪ್ರಪೌಂಡರೀಕ, ಅತಿಮಧುರ, ಕ್ಷೀರವಿದಾರಿ (ನೆಲಗುಂಬಳಗೆಡ್ಡೆ) ಮಂಜಿಷ್ಠೆ, ಪದ್ಮಕ, ರಕ್ತಚಂದನ, ಉತ್ಪಲಸಾರಿವಾ (ಸೊಗದೆಬೇರು) ಇವುಗಳ ಲೇಪವನ್ನು ಪಿತ್ತವಿಸರ್ಪದಲ್ಲಿ ಪ್ರಯೋಗಿಸಬೇಕು. ಅದರಿಂದ ಸುಖವುಂಟಾಗುತ್ತದೆ. ವಟಾದಿ ಗಣದ್ರವ್ಯಗಳ ಕಷಾಯದಿಂದ ಮೈಮೇಲೆ ಸೇಚನೆಮಾಡಿಸಿಕೊಳ್ಳುವುದು. ಅವುಗಳ ಸ್ವರಸದಿಂದ ತುಪ್ಪವನ್ನು ತಯಾರಿಸಿ ಮೈಗೆ ಲೇಪಿಸಿ ಶೀತಲವಾದ ಹಾಲು, ಜೇನುತುಪ್ಪ, ನೀರು, ಸಕ್ಕರೆ, ಕಬ್ಬಿನರಸ ಇವುಗಳಿಂದ ಮೈಮೇಲೆ ಸೇಚನೆಮಾಡಿಸಲು ಪಿತ್ತದಿಂದುಂಟಾದ ಉರಿಯು ನಿವಾರಣೆಯಾಗುತ್ತದೆ.

ಘೃತಸ್ಯ ಗೌರೀಮಧುಕಾರವಿನ್ದರೋಧ್ರಾಮ್ಬುರಾಜಾದನಗೈರಿಕೇಷು |
ತಥಾರ್ಷಭೇಪದ್ಮಕಸಾರಿವಾಸು ಕಾಕೋಲಿಮೇದಾ ಕುಮುದೋತ್ಪಲೇಷು ||೧೦||
ಸಚನ್ದನಾಯಾಂ ಮಧುಶರ್ಕರಾಯಾಂ ದ್ರಾಕ್ಷಾಸ್ಥಿರಾ ಪೃಶ್ನಿಶತಾಹ್ವಯಾಸು | ಕಲ್ಕೀಕೃತಾಸೋದಕಮತ್ರ ದತ್ವಾ ನ್ಯಗ್ರೋಧವರ್ಗಸ್ಯತಥಾಸ್ಥಿರಾದೇಃ ||೧೧|| ಗಣಸ್ಯ ಬಿಲ್ವಾದಿಕಪಞ್ಚಮೂಲ್ಯಾಶ್ಚತು ಗುಣಂ ಕ್ಷೀರಮಥಾಪಿ ತದ್ವತ್ | ಪ್ರಸ್ಥಂ ವಿಪಕ್ವಂ ಪರಿಷೇಚನೇನ ಪೈತ್ತೀರ್ನಿಹನ್ಯಾತ್ತು ವಿಸರ್ಪನಾಡೀಃ ||೧೨|| ವಿಸ್ಫೋಟದುಷ್ಟವ್ರಣ ಶೀರ್ಷರೋಗಾ ಪಾಕಂ ತಥಾಸ್ಯಸ್ಯ ನಿಹನ್ತಿ ಪಾನಾತ್ | ಗ್ರಹಾರ್ದಿತೇ ಶೋಷಿಣಿ ಚಾಪಿ ಬಾಲೇ ಘೃತಂ ಹಿ ಗೌರ್ಯಾದಿಕಮೇತದಿಷ್ಟಮ್ ||೧೩||

ತುಪ್ಪವು ದ್ರವದ್ರವ್ಯವಾದಕಾರಣ ೧ ಪ್ರಸ್ಥವೆಂದರೆ ೨ ಪ್ರಸ್ಥಪ್ರಮಾಣವಿರಬೇಕೆಂದು ಅರ್ಥ—ಕಲ್ಕವು ೮ ಪಲಗಳಷ್ಟಿರಬೇಕಾಗುತ್ತದೆಯಾಗಿ ತುಪ್ಪ ೧ ಪ್ರಸ್ಥ ಅಂದರೆ ಎರಡರಷ್ಟನ್ನು ಸೇರಿಸಬೇಕು. ಅರಿಶಿನ, ಅತಿಮಧುರ, ತಾವರೆಹೂವು, ರೋಧ್ರ, ಮುಡಿವಾಳ, ರಾಜಾದನ, ಕಾವಿ, ಋಷಭಕ, ಪದ್ಮಕ, ಸೊಗದೇಹಂಬು (ಬೇರು),

ಕಾಕೋಳಿ, ಮೇದೆ, ನೈದಿಲೆಗೆಡ್ಡೆ, ನೈದಿಲೆಹೂವು, ಶ್ರೀಗಂಧ, ಜೇನುತುಪ್ಪದ ಸಕ್ಕರೆ, ದ್ರಾಕ್ಷಿ, ಮೂರೆಲೆಹೊನ್ನೆ, ಒಂದೆಲೆ ಹೊನ್ನೆ, ಸಬ್ಬಸಿಗೆಬೀಜ, ಆಲ ಮೊದಲಾದ ಕ್ಷೀರ ವೃಕ್ಷವರ್ಗ ದ್ರವ್ಯಗಳ ತೊಗಟೆಗಳು, ಹ್ರಸ್ವಪಂಚ ಮೂಲಗಳು, ಬಿಲ್ವಾದಿಪಂಚಮೂಲ್ಗಳು ಇವುಗಳ ೪ ರಷ್ಟು ಹಾಲು, ಅದರ ೪ ರಷ್ಟು ನೀರು, ಇವನ್ನು ಸೇರಿಸಿ ತುಪ್ಪವನು ತಯಾರಿಸಿ ಪಿತ್ತವಿಸರ್ಪರೋಗಿಗೆ ಲೇಪಿಸಿ ಆ ದ್ರವದಿಂದ ಸೇಚನೆಮಾಡಲು ವಿಸ್ಫೋಟ (ಸಿಡುಬು), ದುಷ್ಟವ್ರಣ, ತಲೆನೋವು ಮತ್ತು ಮುಖಪಾಕಗಳು ಹೋಗುತ್ತವೆ. ಗ್ರಹ ಪೀಡಿತರು, ಕ್ಷಯರೋಗಿ, ಬಾಲಕರು ಇವರಿಗೆ ಈ **ಗೌರ್ಯಾದಿ ಘೃತವು** ಹಿತಕರವಾದದ್ದು.

ಅಜಾಶ್ವಗನ್ಧಾ ಸರಳಾಸಕಾಲಾಸೈಕೈಷಿಕಾಚಾಪ್ಯಥವಾಜಶೃಙ್ಗೀ । ಗೋಮೂತ್ರಪಿಷ್ಟೋ ವಿಹಿತಃ ಪ್ರದೇಹೋಹನ್ಯಾದ್ವಿಸರ್ಪಂ ಕಫಜಂ ಸಶೀಘ್ರಮ್ ॥೧೪॥ ಕಾಲಾನುಸಾರ್ಯಾಗುರುಚೋಚಗುಞ್ಜಾ ರಾಸ್ನಾವ ಚಾಶೀತವೇಸ್ನ ಪರ್ಣ್ಯಃ । ಪಾಳನ್ಧಿಮುಞ್ಜಾತಮಹೀ ಕದಮ್ಬಾ ಹಿತಾವಿಸರ್ಪೇಷು ಕಫಾತ್ಮಕೇಷು ॥೧೫॥

ನಾರಂಬೇಳೆ, ಹಿರಿಯಮದ್ದಿನಬೇರು, ಸರಳದೇವದಾರು, ಕಾಸಮರ್ದ, ಅಷಾಡಿ ಬೇರು, ಗೆರ್ಶೆಹಂಬು (ಅಜಶೃಂಗೀ) ಇವನ್ನು ಗಂಜಳದಲ್ಲಿ ಅರೆದು ಕಲ್ಕಮಾಡಿ ಲೇಪಿಸಿದರೆ ಬಲುಬೇಗ **ಕಫವಿಸರ್ಪವು** ನಿವಾರಣೆಯಾಗುತ್ತದೆ. ತಗರ, ಅಗಿಲು, ದಾಲ್ಚಿನ್ನಿ, ಗುಲುಗಂಜಿ, ರಾಶ್ಮೆ, ಬಜೆ, ಸಬ್ಬಸಿಗೆ, ಹಾವುಮೆಕ್ಕೆಯಬೇರು, ತಿಗಡೆ, ಮುಂಜಾತವೆಂಬ ಗೆಡ್ಡೆ, ಬೋಳದರಗ ಇವುಗಳ ಕಲ್ಕಲೇಪನವು ಕಫಜವಿಸರ್ಪಹರವು.

ಗಣಸ್ತು ಯೋಜ್ಯೋ ವರುಣಪ್ರವೃತ್ತಃ ಕ್ರಿಯಾಸು ಸರ್ವಾಸು ವಿಚಕ್ಷಣೇನ ।
ಸಂಶೋಧನಂ ಶೋಣಿತಮೋಕ್ಷಣಂ ಚ ಶ್ರೇಷ್ಠಂ ವಿಸರ್ಪೇಷು ಚಿಕಿತ್ಸಿತಂ ಹಿ ॥೧೬॥
ಸರ್ವಾಂಶ್ಚ ಪಕ್ವಾನ್ ಪರಿಶೋಧ್ಯ ಧೀಮಾನ್ ವ್ರಣ ಕ್ರಮೇಣೋಪಚರೇದ್ಯಥೋಕ್ತಮ್ ।

ಬುದ್ಧಿವಂತನಾದ ವೈದ್ಯನು ವಿಸರ್ಪವನ್ನು ಸಂಶಮನ ಮಾಡಲು ವರುಣಾದಿಗಣ ದ್ರವ್ಯಗಳ ಕಲ್ಕ, ಚೂರ್ಣ, ಕಷಾಯಗಳನ್ನು ಉಪಯೋಗಿಸಬೇಕು. ವಮನ ವಿರೇಚನ ಗಳಿಂದ ದೇಹಶೋಧನೆಯೂ, ರಕ್ತಮೋಕ್ಷಣವೂ, ವಿಸರ್ಪರೋಗಗಳಲ್ಲಿ ಮಾಡಬೇಕಾದ ಉತ್ತಮ ಚಿಕಿತ್ಸೆಗಳು. ಧೈರ್ಯವಂತನಾದ ವೈದ್ಯನು ಪಕ್ವವಾದ ವಿಸರ್ಪಗಳನ್ನು ಶುದ್ಧಿಮಾಡಿ ರಕ್ತಪಿತ್ತ ಪ್ರಧಾನವಾದ ಕಾರಣ ಜಿಗುಳೆಗಳನ್ನು ಕಚ್ಚಿಸಿ ರಕ್ತಹರಣ ಮಾಡಿಸಿ ವ್ರಣಚಿಕಿತ್ಸೆಯಂತೆ ಉಪಚರಿಸಬೇಕು.

ನಾಡೀ ತ್ರಿದೋಷಪ್ರಭವಾ ನ ಸಿಧ್ಯೇತ್ ಶೇಷಾಶ್ಚತಸ್ರಃ ಪ್ರತಿಯತ್ನಸಾಧ್ಯಾಃ ॥೧೭॥ ತತ್ರಾನಿಲೋತ್ಥಾಮುಪನಾಹ್ಯ ಪೂರ್ವಮಶೇಷತಃ ಪೂಯಗತಿಂ ವಿದಾರ್ಯ । ತಿಲೈರಪಾಮಾರ್ಗ ಫಲೈಶ್ಚ ಪಿಷ್ಟ್ವಾ ಸಸೈನ್ಧವೈರ್ಬನ್ಧನಮತ್ರ ಕುರ್ಯಾತ್ ॥೧೮॥ ಪ್ರಕ್ಷಾಳನೇ ಚಾಪಿ ಸದಾ ವ್ರಣಸ್ಯ ಯೋಜ್ಯಂ ಮಹದ್ಯತ್ ಖಲು ಪಞ್ಚಮೂಲಮ್ । ಹಿಂಸ್ರಾಂ ಹರಿದ್ರಾಂ ಕಟುಕಾಂ ಬಲಾಂ ಚ ಗೋಜಿಹ್ವಿಕಾಂ ಚಾಪಿ ಸಬಿಲ್ವಮೂಲಾಮ್ ॥೧೯॥ ಸಂಹೃತ್ಯ ತೈಲಂ ವಿಪಚೇದ್ವ್ರಣಸ್ಯ ಸಂಶೋಧನಂ ಪೂರಣರೋಪಣಂ ಚ ।

ತ್ರಿದೋಷದಿಂದುಂಟಾದ ನಾಡೀವ್ರಣವು ಗುಣವಾಗುವುದಿಲ್ಲ. ಉಳಿದ ೪ ವಿಧ ನಾಡೀವ್ರಣಗಳನ್ನೂ ತುಂಬಾ ಪ್ರಯತ್ನದಿಂದ ಚಿಕಿತ್ಸೆಮಾಡಿ ಗುಣಪಡಿಸಬಹುದು. ಅವುಗಳೊಳಗೆ ವಾತದಿಂದುಂಟಾದ ನಾಡೀವ್ರಣವನ್ನು ಮೊದಲು ಉಪನಾಹಸ್ವೇದ ಮಾಡಿಸಿ ಕೀವು ನುಗ್ಗುವ ವ್ರಣಮಾರ್ಗವನ್ನು ಶೋಧನೆ ಮಾಡಿ ಎಳ್ಳು, ಉತ್ತರಣೆ ಬೀಜಗಳ ಕಲ್ಕಕ್ಕೆ ಸ್ವಲ್ಪ ಸೈಂಧವಲವಣವನ್ನು ಸೇರಿಸಿ ವ್ರಣಕ್ಕೆ ಲೇಪನ ಮಾಡಬೇಕು. ವ್ರಣವನ್ನು ಬಿಲ್ವಾದಿ ಪಂಚಮೂಲದ ಕಷಾಯದಿಂದಲೇ ಸದಾ ತೊಳೆಯಬೇಕು. ಜಟಾಮಾಂಸೀ, ಅರಿಶಿನ, ಕಟುಕರೋಹಿಣಿ, ಕಳ್ಳಂಗಡಲೆ, ಎತ್ತು ನಾಲಿಗೆಸೊಪ್ಪು, ಬಿಲ್ವಪತ್ರೆಬೇರು ಇವುಗಳನ್ನು ಸೇರಿಸಿ ತೈಲಪಾಕಮಾಡಿ ವ್ರಣಶೋಧನ, ರೋಪಣ, ಪೂರಣಗಳಿಗೆ ಉಪಯೋಗಿಸಬೇಕು (ಈ ದ್ರವ್ಯಗಳನ್ನು ೪ ರಷ್ಟು ನೀರಿನಲ್ಲಿ ಕುದಿಸಿ ೧/೪ ಭಾಗ ನಿಲ್ಲುವಂತೆಮಾಡಿ ಶೋಧಿಸಿಕೊಂಡು ಕಷಾಯದ ೧/೪ ಭಾಗ ತಿಲ ತೈಲವನ್ನೂ ತೈಲದ ೧/೪ ಭಾಗದಷ್ಟು ಮೇಲಿನ ಕಲ್ಕವನ್ನೂ ಸೇರಿಸಿ ತೈಲವನ್ನು ಮಾತ್ರ ನಿಲ್ಲಿಸಿಕೊಂಡು ವ್ರಣಕ್ಕೆ ಲೇಪಿಸಿದರೆ ದೋಷಗಳು ಸುರಿದು ವ್ರಣ ಭಾಗವು ತುಂಬಿ ಮಾಯುತ್ತದೆ.)

ಪಿತ್ತಾತ್ಮಿಕಾಂ ಪ್ರಾಗುಪನಾಹ್ಯ ಧೀಮಾನ್ ಉತ್ಕಾರಿಕಾಭಿಃ ಸಪಯೋಘೃತಾಭಿಃ ॥೨೦॥ ನಿಪಾತ್ಯ ಶಸ್ತ್ರಂ ತಿಲನಾಗದನ್ತೀಯಷ್ಟ್ಯಾಹ್ವಕಲ್ಕೈಃ ಪರಿಪೂರಯೇತ್ತಾಮ್ । ಪ್ರಕ್ಷಾಳನೇ ಚಾಪಿ ಸಸೋಮನಿಮ್ಬಾ ನಿಶಾಪ್ರಯೋಜ್ಯಾ ಕುಶಲೇನ ನಿತ್ಯಮ್ ॥೨೧॥ ಶ್ಯಾಮಾತ್ರಿಭಣ್ಡೀ ತ್ರಿಫಲಾಸು ಸಿದ್ಧಂ ಹರಿದ್ರಯೋರೋಧ್ರಕವೃಕ್ಷಯೋಶ್ಚ । ಘೃತಂ ಸದುಗ್ಧಂ ವ್ರಣತರ್ಪಣೇನ ಹನ್ಯಾದ್ಗತಿಂ ಕೋಷ್ಠಗತಾಪಿ ಯಾ ಸ್ಯಾತ್ ॥೨೨॥

ಪೈತ್ತಿಕನಾಡೀವ್ರಣದಲ್ಲಿ ಹೋಳಿಗೆಗಳಿಗೆ ಹಾಲು, ತುಪ್ಪಗಳನ್ನು ಬಳಿದು ವ್ರಣದ ಮೇಲೆ ಹಾಕಿ ಉಪನಾಹಸ್ವೇದಮಾಡಿಸಿ ಶಸ್ತ್ರದಿಂದ ವ್ರಣವನ್ನು ಭೇದಿಸಿ ಕೀವನ್ನು ಹೊರಕ್ಕೆ ಸುರಿಸಿ ವ್ರಣವನ್ನು ತೊಳೆದು ಎಳ್ಳು, ಹಾವುಮೆಕ್ಕೆಬೇರು, ಅತಿಮಧುರ ಇವುಗಳ ಕಲ್ಕವನ್ನು ಬಳಿದು ವ್ರಣದ ಹಳ್ಳವನ್ನು ತುಂಬಬೇಕು. ಪ್ರತಿದಿನವೂ ಸೋಮಲತೆ (ಅಥವಾ ಬಿಳಿಯ ಕಗ್ಗಲಿಯತೊಗಟೆ) ಬೇವಿನಸೊಪ್ಪು ಅಥವಾ ತೊಗಟೆ ಅರಿಶಿನ ಇವುಗಳ ಕಷಾಯದಿಂದಲೇ ವ್ರಣವನ್ನು ತೊಳೆಯಬೇಕು. ಕರಿತಿಗಡೆ, ಬಿಳಿ ಅಥವಾ ಕೆಂಪು ತಿಗಡೆ, ಅರಿಶಿನ, ಮರದರಿಶಿನ, ರೋಧ್ರ, ಕೊಡಶಿಗೆ ತೊಗಟೆಗಳ ಕಲ್ಕವನ್ನೂ ಹಾಲನ್ನೂ ಸೇರಿಸಿ ಘೃತವನ್ನು ತಯಾರಿಸಿ ವ್ರಣಕ್ಕೆ ಲೇಪಿಸಿ ವ್ರಣದಮೇಲೆ ಸೇಚನೆಮಾಡಿದರೆ ಕೋಷ್ಠಗತವಾದ ನಾಡಿಯಗತಿಯು ನಾಶವಾಗುತ್ತದೆ.

ನಾಡೀಂ ಕಫೋತ್ಥಾಮುಪನಾಹ್ಯ ಸಮ್ಯಕ್ ಕುಳತ್ಥಸಿದ್ಧಾರ್ಥಕಶಕ್ತುಕಿಣ್ವೈಃ । ಮೃದೂಕೃತಾಮೇಷ್ಯ ಗತಿಂ ವಿದಿತ್ವಾ ನಿಪಾತಯೇಚ್ಛಸ್ತ್ರಮಶೇಷಕಾರೀ ॥೨೩॥ ದದ್ಯಾದ್ವ್ರಣೇ ನಿಮ್ಬತಿಲಾನ್ ಸುಪಿಷ್ಟಾನ್ ಸುರಾಷ್ಟ್ರಜಾಸೈನ್ಧವಸಂಪ್ರಯುಕ್ತಾನ್ । ಪ್ರಕ್ಷಾಳನೇ ಚಾಪಿ ಕರಞ್ಜನಿಮ್ಬಜಾತ್ಯಕ್ಷಪೀಲುಸ್ವರಸಾಃ ಪ್ರಯೋಜ್ಯಾಃ ॥೨೪॥ ಸುವರ್ಚಿಕಾಸೈನ್ಧವಚಿತ್ರಕೇಷು ನಿಕುಮ್ಭತಾಲೀತಲ

ರೂಪಿಕಾಸು । ಫಲೇಷ್ವಪಾಮಾರ್ಗಭವೇಷು ಚೈವ ಕುರ್ಯಾತ್ಸಮೂತ್ರೇಷು ಹಿತಾಯ ತೈಲಮ್ ॥೨೫॥

ಕಫಜನ್ಯನಾಡೀವ್ರಣವನ್ನು ಹುರಳಿ, ಬಿಳಿಸಾಸಿವೆ, ಯವೆಯಹಿಟ್ಟು ಮದ್ಯದಗಶಿ ಇವುಗಳಿಂದ ಉಪನಾಹ ಸ್ವೇದವನ್ನು ಮಾಡಿಸಿ ಅದು ಮೆತ್ತಗಾದಮೇಲೆ ವೈದ್ಯನು ಏಷಣಿಯಿಂದ ನಾಡಿಯಮಾರ್ಗವನ್ನು ಶೋಧಿಸಿ, ಶಸ್ತ್ರದಿಂದ ವ್ರಣವನ್ನು ಛೇದಿಸಿ, ಬೇವಿನಸೊಪ್ಪು, ಎಳ್ಳು ಇವುಗಳ ಕಲ್ಕಕ್ಕೆ ಪಟಿಕ, ಸೈಂಧವಲವಣಗಳ ಚೂರ್ಣವನ್ನು ಮಿಶ್ರಮಾಡಿ ವ್ರಣಕ್ಕೆ ತುಂಬಬೇಕು. ಹೊಂಗೆ, ಬೇವು, ಜಾಜಿ, ತಾರೆ, ಬಗಿನಿ ಈ ಸೊಪ್ಪುಗಳ ಸ್ವರಸದಿಂದ ವ್ರಣಕ್ಷಾಳನ ಮಾಡಬೇಕು. ಸುವರ್ಚಲವಣ, ಸೈಂಧವ ಲವಣ, ಚಿತ್ರಮೂಲ, ಜಾಪಾಳದತೊಗಟೆ, ನೆಲನೆಲ್ಲಿಬೇರು, ಬಿಳಿಯ ಎಕ್ಕದಬೇರು, ಉತ್ತರಣೆಯಬೀಜ ಇವುಗಳ ಕಲ್ಕಕ್ಕೆ ಗೋಮೂತ್ರ ಮತ್ತು ತಿಲತೈಲವನ್ನು ಸೇರಿಸಿ ಪಾಕಮಾಡಿ ಲೇಪಿಸಬೇಕು.

ನಾಡೀಂ ತು ಶಲ್ಯಪ್ರಭವಾಂ ವಿದಾರ್ಯ ನಿರ್ಹೃತ್ಯ ಶಲ್ಯಂ ಪ್ರವಿಶೋಧ್ಯ ಮಾರ್ಗಮ್ । ಸಂಶೋಧಯೇತ್ ಕ್ಷೌದ್ರಘೃತಪ್ರಗಾಢೈಸ್ತಿಲೈಸ್ತತೋರೋಪಣಮಸ್ಯ ಕುರ್ಯಾತ್ ॥೨೬॥ ಕುಮ್ಭೀಕಖರ್ಜೂರಕಪಿತ್ಥಬಿಲ್ವವನಸ್ಪತೀನಾಂ ಚ ಶಲಾಟುವರ್ಗೇ । ಕೃತ್ವಾ ಕಷಾಯಾಂ ವಿಪಚೇತ್ತು ತೈಲಮಾವಾಪ್ಯ ಮುಸ್ತಾಸರಳಾಪ್ರಿಯಙ್ಗೂಃ ॥೨೭॥ ಸುಗನ್ಧಿಕಾಮೋಚರಸಾಹಿ ಪುಷ್ಪಂ ರೋಧ್ರಂ ವಿದಧ್ಯಾದಪಿ ಧಾತಕೀಂ ಚ । ಏತೇನ ಶಲ್ಯಪ್ರಭವಾ ಚ ನಾಡೀ ರೋಹೇದ್ವ್ರಣೋ ವಾ ಸುಖಮಾಶು ಚೈವ ॥೨೮॥

ಶಲ್ಯವು ದೇಹದೊಳಗೆ ಸಿಕ್ಕಿಕೊಂಡು ನಾಡೀವ್ರಣವನ್ನುಂಟುಮಾಡಿದರೆ ಶಸ್ತ್ರದಿಂದ ವ್ರಣವನ್ನು ಕೊರೆದು ಶಲ್ಯವನ್ನು ಹೊರಕ್ಕೆ ತೆಗೆದು ನಾಡಿಯ ಮಾರ್ಗವನ್ನು ಶೋಧಿಸಿ ಜೇನುತುಪ್ಪ, ತುಪ್ಪಗಳನ್ನು ಸೇರಿಸಿದ ಎಳ್ಳಿನ ಕಲ್ಕದಿಂದ ವ್ರಣಶೋಧನೆಯನ್ನು ಮಾಡಿ ಅನಂತರ ಜಾಪಾಳದಬೀಜ, ಖರ್ಜೂರ, ಬೇಲ, ಬಿಲ್ವಪತ್ರೆ, ಅತ್ತಿ, ಆಲ ಮೊದಲಾದ ಕ್ಷೀರವೃಕ್ಷಗಳ ಕಾಯಿಗಳನ್ನೂ ಸೇರಿಸಿ ಕಷಾಯಮಾಡಿ ಶೋಧಿಸಿದ ಕಷಾಯಕ್ಕೆ ೧/೪ ಭಾಗದಷ್ಟು ಎಳ್ಳೆಣ್ಣೆಯನ್ನೂ ಕೊನ್ನಾರಿಗೆಡ್ಡೆ, ಸರಳದೇವದಾರು, ನೆಳಲು, ಸೊಗದೆಬೇರು, ಬೂರಗದಮೇಣ, ನಾಗಕೇಸರಿ, ರೋಧ್ರ, ಧಾತಕೀಕುಸುಮ ಇವುಗಳ ಕಲ್ಕವನ್ನೂ ತೈಲದ ೧/೪ ಭಾಗದಷ್ಟನ್ನೂ ಸೇರಿಸಿ ಪಾಕಮಾಡಿದ ತೈಲದಿಂದ ಲೇಪಿಸಿದರೆ ಬೇಗನೆ ವ್ರಣವು ಸುಖವಾಗಿ ಮಾಯುತ್ತದೆ.

ಕೃಶ ದುರ್ಬಲ ಭೀರೂಣಾಂ ನಾಡೀ ಮರ್ಮಾಶ್ರಿತಾ ಚ ಯಾ ।
ಕ್ಷಾರಸೂತ್ರೇಣ ತಾಂ ಛಿನ್ದ್ಯಾನ್ನತು ಶಸ್ತ್ರೇಣ ಬುದ್ಧಿಮಾನ್ ॥ ॥೨೯॥
ಏಷಣ್ಯಾ ಗತಿಮನ್ವಿಷ್ಯ ಕ್ಷಾರಸೂತ್ರಾನುಸಾರಿಣೀಮ್ ।
ಸೂಚೀಂ ನಿದಧ್ಯಾದ್ಗತ್ಯನ್ತೇ ತಥೋನ್ನಮ್ಯಾಶು ನಿರ್ಹರೇತ್ ॥ ॥೩೦॥
ಸೂತ್ರಸ್ಯಾನ್ತಂ ಸಮಾನೀಯ ಗಾಢಂ ಬನ್ಧಂ ಸಮಾಚರೇತ್ ।

ತತಃ ಕ್ಷಾರಬಲಂ ವೀಕ್ಷ್ಯ ಸೂತ್ರಮನ್ಯತ್ ಪ್ರವೇಶಯೇತ್ ||೩೧||
ಕ್ಷಾರಾಕ್ತಂ ಮತಿಮಾರ್ಗ ವೈದ್ಯೋ ಯಾವನ್ನಚ್ಛಿದ್ಯತೇ ಗತಿಃ |
ಭಗನ್ದರೇಽಪ್ಯೇಷ ವಿಧಿಃ ಕಾರ್ಯೋ ವೈದ್ಯೇನ ಜಾನತಾ ||೩೨||
ಅರ್ಬುದಾದಿಷು ಚೋತ್ಕ್ಷಿಪ್ಯ ಮೂಲೇ ಸೂತ್ರಂ ನಿಧಾಪಯೇತ್ |
ಸೂಚೀಭಿರ್ಯವವಕ್ತ್ರಾಭಿರಾಚಿತಂ ವಾ ಸಮನ್ತತಃ ॥
ಮೂಲೇ ಸೂತ್ರೇಣ ಬಧ್ನೀಯಾತ್ ಭಿನ್ನೇ ಚೋಪಚರೇದ್ವ್ರಣಮ್ ||೩೩||

ದೇಹಕೃಶರು, ಬಲಹೀನರು, ಹೇಡಿಗಳು ಇವರಿಗೆ ಮರ್ಮಸ್ಥಾನದಲ್ಲಿ ನಾಡೀ ವ್ರಣವಿದ್ದರೆ ಕ್ಷಾರಕರಗಿದ ನೀರಿನಲ್ಲಿ ಅದ್ದಿ ಭಾವನೆಮಾಡಿದ ದಾರವನ್ನು ಪೋಣಿಸಿದ ಸೂಜಿಯನ್ನೊಳಗೊಂಡಿರುವ ಏಷಣೀಯಂತ್ರದಿಂದ ನಾಡೀಗತಿಯನ್ನು ಶೋಧಿಸಿ (ಶಸ್ತ್ರ ದಿಂದ ಕತ್ತರಿಸಬಾರದು), ಸೂಜಿಯನ್ನು ಹಿಂದಕ್ಕೆ ಬಗ್ಗಿಸಿ ಎಳೆದು ದಾರದತುದಿಯನ್ನು ಭದ್ರವಾಗಿ ಕಟ್ಟಬೇಕು. ಕ್ಷಾರದ ಶಕ್ತಿಯನ್ನು ಗೊತ್ತುಮಾಡಿ ಕ್ಷಾರದಲ್ಲಿ ಅದ್ದಿದ ಮತ್ತೊಂದು ದಾರವನ್ನು ನಾಡಿಯ ರಂಧ್ರದಲ್ಲಿ ನುಗ್ಗಿಸಬೇಕು. ಇದೇ ರೀತಿಯಾಗಿ ಭಗಂದರದಲ್ಲೂ ಏಷಣಿಯ ಮೂಲಕ ನಾಡಿಯ ಗತಿಯನ್ನು ತಿಳಿದುಕೊಳ್ಳಬೇಕು. ಅರ್ಬುದ ಮೊದಲಾದುವುಗಳಲ್ಲಿ ಬುಡವು ಸಣ್ಣದಾಗಿದ್ದರೆ ಅದನ್ನು ಕ್ಷಾರ ಸೂತ್ರದಿಂದ ಸುತ್ತಿ ಮೇಲಕ್ಕೆ ಎಬ್ಬಿಸಬೇಕು. ಯವಧಾನ್ಯದ ತುದಿಯಂತೆ ಮೊನಚಾಗಿರುವ ಸೂಜಿ ಗಳಿಂದ ವ್ರಣದ ಸುತ್ತಲೂ ಚುಚ್ಚಿ ಕ್ಷಾರ ಸೂತ್ರವನ್ನು ಆ ವ್ರಣದ ಸುತ್ತಲೂ ಸುತ್ತಿ ವ್ರಣವನ್ನು ಕತ್ತರಿಸಬೇಕು. ವ್ರಣದ ಬುಡದಲ್ಲಿ ದಾರವನ್ನು ಬಿಗಿದು ವ್ರಣವನ್ನು ಕತ್ತರಿಸಿ ವ್ರಣರೋಪಣವಾಗುವಂತೆ ಚಿಕಿತ್ಸೆಮಾಡಬೇಕು.

ಯಾ ದ್ವಿವ್ರಣೀಯೇಽಭಿಹಿತಾಸ್ತು ವರ್ತ್ಯಸ್ತಾಃ ಸರ್ವನಾಡೀಷು ಭಿಷಗ್ವಿದಧ್ಯಾತ್ | ಘೋಣ್ಟಾಫಲತ್ವಗ್ಲವಣಾನಿ ಲಾಕ್ಷಾ ಪೂಗೀಫಲಂಯ್ಯಾಲವಣಂ ಚ ಪತ್ರಮ್ ||೩೪|| ಸ್ನುಹ್ಯರ್ಕ ದುಗ್ಧೇನ ತು ಕಲ್ಕ ಏಷ ವರ್ತೀಕೃತೋ ಹನ್ತ್ಯಚಿರೇಣ ನಾಡೀಃ | ವಿಭೀತಕಾಮ್ರಾಸ್ಥಿವಟ ಪ್ರವಾಳಾ ಹರೇಣುಕಾ ಶಙ್ಖನಿಬೀಜಮಸ್ಯ ||೩೫|| ವಾರಾಹಿಕನ್ದಶ್ಚ ತಥಾ ಪ್ರದೇಯೋ ನಾಡೀಷು ತೈಲೇನ ಚ ಮಿಶ್ರಯಿತ್ವಾ | ಧತ್ತೂರಜಂ ಮದನಕೋ ದ್ರವಜಂ ಚ ಬೀಜಂ ಕೋಶಾ ತಕೀಶುಕನಸಾ ಮೃಗಭೋಜನೀ ಚ ||೩೬|| ಅಜಶೃಙ್ಗೀಟಬೀಜಕುಸುಮಂ ಗತಿಷು ಪ್ರಯೋಜ್ಯಂ ಲಾಕ್ಷೋದಕ ಹೃತಮಲಾಸು ವಿಕೃಷ್ಯ ಚೂರ್ಣಮ್ | ತಥಾಚ ಗೋಮಾಂಸಮಸೀ ಹಿತಾಯ ಕೋಷ್ಠಾಶ್ರಿತಸ್ಯಾದರತೋ ದಿಶನ್ತಿ ||೩೭|| ವರ್ತೀಕೃತಂ ಮಾಕ್ಷಿಕಸಂಪ್ರಯುಕ್ತಂ ನಾಡೀಘ್ನ ಮುಕ್ತಂ ಲವಣೋತ್ತಮಂ ವಾ | ದುಷ್ಟವ್ರಣೇ ಯದ್ವಿ ಹಿತಂ ಚ ತೈಲಂ ತತ್ಸರ್ವನಾಡೀಷು ಭಿಷಗ್ವಿದಧ್ಯಾತ್ ||೩೮|| ಚೂರ್ಣೀಕೃತೈರಥ ವಿಮಿಶ್ರಿತಮೇಭಿರೇವ ತೈಲಂ ಪ್ರಯುಕ್ತಮಚಿರೇಣ ಗತಿಂ ನಿಹನ್ತಿ | ಏಷ್ವೇವ ಮೂತ್ರಸಹಿತೇಷು ವಿದಾಯ ತೈಲಂ ತತ್ಸಾಧಿತಂ ಗತಿಮಪೋಹತಿ ಸಪ್ತರಾತ್ರಾತ್ ||೩೯|| ಪಿಣ್ಡೀತಕಸ್ಯ ತು ವರಾಹವಿಭಾವಿತಸ್ಯ ಮೂಲೇಷು ಕನ್ದಶಕಲೇಷು ಚ ಸಾಧಯೇಷು | ತೈಲಂ ಕೃತಂ ಗತಿಮಪೋಹತಿ ಶೀಘ್ರಮೇತತ್ ಕನ್ದೇಷು ಚಾಮರವರಾಯುಧ

ಸಾಹ್ವಯೇಷು ॥೪೦॥ ಭಲ್ಲಾತಕಾರ್ಕಮರಿಚೈರ್ಲವಣೋತ್ತಮೇನ ಸಿದ್ಧಂ ವಿಡಙ್ಗರಜನೀದ್ವಯ ಚಿತ್ರಕೈಶ್ಚ । ಸ್ಯಾನ್ಮಾರ್ಕವಸ್ಯ ಚ ರಸೇನ ನಿಹನ್ತಿ ತೈಲಂ ನಾಡೀಂ ಕಫಾನಿಲ ಕೃತಾಮಪಚೀಂ ವ್ರಣಾಂಶ್ಚ ॥೪೧॥

ದ್ವಿವ್ರಣೀಯ ಚಿಕಿತ್ಸೆಯಲ್ಲಿ ಹೇಳಿರುವ ವರ್ತಿಗಳನ್ನೇ ವೈದ್ಯನು ಸಕಲ ವಿಧ ಗಳಾದ ನಾಡೀವ್ರಣಗಳಲ್ಲೂ ಪ್ರಯೋಗಿಸಬೇಕು. ಎಲಚಿಹಣ್ಣು, ದಾಲ್ಚಿನ್ನಿ, ಸೈಂಧವ ಲವಣ, ಅರಗು, ಅಡಿಕೆ, ಕಾಗೆತೊಂಡೆಸೊಪ್ಪು, ಮುಂಡುಗಳ್ಳಿಯ ಹಾಲು, ಎಕ್ಕದ ಹಾಲು ಇವುಗಳ ಕಲ್ಕದಿಂದ ವರ್ತಿಮಾಡಿ ನಾಡೀವ್ರಣಗಳಲ್ಲಿ ಪ್ರಯೋಗಮಾಡಿದರೆ ವ್ರಣವು ಶೀಘ್ರದಲ್ಲೇ ನಿವಾರಣೆಯಾಗುತ್ತದೆ. ತಾರೆಬೀಜ, ಮಾವಿನಬೀಜ, ಆಲದ ಬಿಳಲು, ರೇಣುಕೆಬಿತ್ತ, ಈಶ್ವರೀಬಿತ್ತ, ಹಂದಿಗೆಡ್ಡೆ ಇವೆಲ್ಲವುಗಳ ಕ್ಷಾರವನ್ನು ತಿಲತೈಲ ದಿಂದ ರಂಗಳಿಸಿ ಪ್ರಯೋಗಿಸಿದರೆ, ನಾಡೀವ್ರಣಗಳು ಗುಣವಾಗುತ್ತವೆ. ಉಮ್ಮತ್ತಿ ಬೀಜ, ಮಗ್ಗಾರೆಬೀಜ, ಹಾರಕ, ಹೀರೆಬೀಜ, ಕಾಗೆತೊಂಡೆ ಮತ್ತು ದಾಸಮೆಕ್ಕೆಬೀಜ ಅಂಕೋಲೆಯಬೀಜ ಮತ್ತು ಹೂವು ಇವುಗಳ ಕಲ್ಕವನ್ನು ತಿಲತೈಲಮಿಶ್ರಮಾಡಿಯಾಗಲೀ ಲೇಪಿಸಬೇಕು. ಗೋಮಾಂಸವನ್ನು ಸುಟ್ಟು ತಯಾರಿಸಿದ ಕ್ಷಾರವನ್ನು ತೈಲದಲ್ಲಿ ರಂಗಳಿಸಿಯಾಗಲೀ ಸೈಂಧವಲವಣವನ್ನು ಜೇನುತುಪ್ಪದೊಡನೆ ಪಾಕಮಾಡಿಯಾಗಲೀ ದುಷ್ಟವ್ರಣ ಚಿಕಿತ್ಸೆಯಲ್ಲಿ ಹೇಳಿರುವ ದ್ರವಂತೀ, ಹೊಂಗೇಬೀಜ, ಮೊದಲಾದುವುಗಳಿಂದ ತಯಾರಿಸಿದ ತೈಲವನ್ನಾಗಲೀ ಮೇಲೆ ಹೇಳಿದ ಉಮ್ಮತ್ತಿ, ಮಗ್ಗಾರೆ, ಹಾರಕ, ದೇವ ದಾಳೀ, ಹಾವುಮೆಕ್ಕೆ, ಅಂಕೋಲೆ ಮೊದಲಾದುವುಗಳ ಬೀಜಗಳ ಚೂರ್ಣವನ್ನು ತಿಲ ತೈಲದಿಂದ ರಂಗಳಿಸಿಯಾಗಲೀ ಪ್ರಯೋಗಿಸಿದರೆ ನಾಡೀವ್ರಣವು ನಿವಾರಣೆಯಾಗುತ್ತದೆ. ಈ ಬೀಜಗಳ ಚೂರ್ಣವನ್ನು ಗೋಮೂತ್ರ ಮತ್ತು ತಿಲತೈಲಗಳೊಡನೆ ಪಾಕಮಾಡಿ ಪ್ರಯೋಗಿಸಿದರೆ ಏಳು ದಿನಗಳಲ್ಲೇ ನಾಡೀವ್ರಣವು ನಾಶವಾಗುತ್ತದೆ. ಮಗ್ಗಾರೆ ಗಿಡವು ಕರಿ, ಬಿಳಿ, ಕೆಂಪು ಹೂವುಗಳ ಭೇದದಿಂದ ಮೂರು ವಿಧವಾಗಿದೆ. ಇಲ್ಲಿ ಕರೀಹೂವಿನ ಮಗ್ಗಾರೆಗಿಡದ ಬೇರಿನ ಚೂರ್ಣವನ್ನು ಗನ್ಧನಾಕುಲೀ ಅಂದರೆ ಈಶ್ವರಿಯ ಬೇರಿನ ಸ್ವರಸ ಮತ್ತು ಮುಂಡುಗಳ್ಳಿ ಕಷಾಯಗಳಲ್ಲಿ ಭಾವನೆಮಾಡಿ ತಯಾರಿಸಿದ ತೈಲ ಪ್ರಯೋಗದಿಂದ ನಾಡೀವ್ರಣವು ಬಲುಬೇಗ ನಾಶವಾಗುತ್ತದೆ. ಗೇರುಬೀಜ, ಎಕ್ಕದ ಬೇರು, ಮೆಣಸು, ಸೈಂಧವಲವಣ, ವಾಯುವಿಡಂಗ, ಅರಿಶಿನ, ಮರದರಿಶಿನ, ಚಿತ್ರ ಮೂಲ ಇವುಗಳನ್ನು ಗರುಗದರಸದೊಡನೆ ತಯಾರಿಸಿದ ಸೇರಿಸಿ ತೈಲವನ್ನು ಪ್ರಯೋಗಮಾಡಿದರೆ ನಾಡೀವ್ರಣಗಳೂ ಕಫವಾತಗಳಿಂದುಂಟಾದ ಗಂಡಮಾಲೆಯೂ ವ್ರಣಗಳೂ ನಿವಾರಣೆ ಯಾಗುತ್ತವೆ.

ಸ್ತನ್ಯೇ ಗತೇ ವಿಕೃತಮಾಶು ಭಿಷಕ್ ತು ಧಾತ್ರೀಂ ಪೀತಾಂ ಘೃತಂ ಪರಿಣತೇಽಹನಿ ವಾಮ ಯೇತ್ತು । ನಿಮ್ಬೋದಕೇನ ಮಧುಮಾಗಧಿಕಾಯುತೇನ ಪಾನ್ತಾ ಗತೇಽಹನಿ ಚ ಮುದ್ಗರಸಾಶನಾ ಸ್ಯಾತ್ ॥೪೨॥ ಏವಂತ್ರ್ಯಹಂ ಚತುರಹಂ ಷಡಹಂ ವಮೇದ್ವಾ ಸರ್ಪಿಃ ಪಿಬೇತ್

ತ್ರಿಫಲಯಾ ಸಹ ಸಂಯುತಂ ಪಾ । ಭಾರ್ಗೀಂ ವಚಾಮತಿವಿಷಾಂ ಸುರದಾರು ಪಾಠಾಂ ಮುಸ್ತಾದಿಕಂ ಮಧುರಸಾಂ ಕಟುರೋಹಿಣೀಂ ಚ ॥೪೩॥ ಧಾತ್ರೀಂ ಪಿಬೇತ್ತು ಪಯಸಃ ಪರಿಶೋಧನಾರ್ಥಮಾರಗ್ವಧಾದಿಷು ವರಂ ಮಧುನಾ ಕಷಾಯಮ್ । ಸಾಮಾನ್ಯಮೇತದುಪದಿಷ್ಟಮತೋ ವಿಶೇಷಾದ್ದೋಷಾರ್ಥ ಪಯೋನಿಪತಿತಾರ್ಥ ಶಮಯೇದ್ಯಥಾಸ್ವಮ್ ॥೪೪॥

ಸ್ತನ್ಯವು ಕೆಟ್ಟುಹೋದರೆ ವೈದ್ಯನು ಧಾತ್ರಿಗೆ ಸಾಯಂಕಾಲದಲ್ಲಿ ಘೃತಪಾನ ಮಾಡಿಸಿ ಬೇವಿನಕಷಾಯಕ್ಕೆ ಜೇನುತುಪ್ಪ ಮತ್ತು ಹಿಪ್ಪಲಿಗಳ ಚೂರ್ಣವನ್ನು ಸೇರಿಸಿ ಕುಡಿಸಿ ವಮನಮಾಡಿಸಿ ಹೆಸರುಕಟ್ಟು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸ ಬೇಕು. ಅಂದರೆ ಒಂದೇ ದಿವಸ ವಮನಮಾಡಿಸಿದರೆ ಪೂರ್ತಿಯಾಗಿ ದೋಷಹರಣ ವಾಗುವುದಿಲ್ಲ. ಆದಕಾರಣ ಮಧ್ಯೆ ಮಧ್ಯೆ ದೋಷವನ್ನು ಉತ್ಕ್ಲೇಶಮಾಡುವುದಕ್ಕೂ (ಕೆರಳಿಸುವುದು) ಹೊರಕ್ಕೆ ಹೊರಡಿಸುವುದಕ್ಕೂ ಸ್ನೇಹಪಾನ ಸ್ವೇದಕರ್ಮ ವಮನಗಳು ಆವಶ್ಯಕವಾದದ್ದು. ಹಾಗೆ ನಿಶ್ಶೇಷವಾಗಿ ದೋಷಹರಣವಾಗಲು ೩ ದಿನ, ೪ ದಿನ ೬ ದಿನಗಳವರೆಗೆ ಸಾಯಂಕಾಲಗಳಲ್ಲಿ ಸ್ನೇಹಪಾನ, ಬೇವಿನಕಷಾಯದೊಡನೆ ಹಿಪ್ಪಲಿ ಚೂರ್ಣ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಿ ವಮನಮಾಡಿಸಬೇಕು. ದೋಷ ಗಳು ಪೂರ್ತಿಯಾಗಿ ನಿವಾರಣೆಯಾಗಿರುತ್ತೆಂದು ತಿಳಿದು ಆ ದಿವಸ ಹೆಸರುಕಟ್ಟು ಮಿಶ್ರ ಮಾಡಿದ ಅನ್ನವನ್ನು ಭೋಜನಮಾಡಬೇಕೆಂದು ಅರ್ಥವು. ದೋಷಶೇಷವಿರುವಾಗ್ಗ ಕೂಡದು. ಅನಂತರ ತ್ರಿಫಲಾಘೃತವನ್ನು ಕುಡಿಸಬೇಕು. ಅಥವಾ ಸ್ತನ್ಯಶುದ್ಧಿ ಯಾಗಲು ಭಾರ್ಗಿ, ಬಜೆ, ಅತಿಬಜೆ, ದೇವದಾರು, ಅಗಳುಶುಂಠಿ, ಮುಸ್ತಾದಿ ಗಣದ್ರವ ಗಳು, ಕೊರಟಗೆಹಂಬು, ಕಟುಕರೋಹಿಣಿ ಇವುಗಳ ಕಷಾಯವನ್ನಾಗಲೀ ಆರಗ್ವಧಾದಿ ಗಣದ್ರವ್ಯಗಳ ಕಷಾಯವನ್ನಾಗಲೀ ಜೇನುತುಪ್ಪ ಮಿಶ್ರಮಾಡಿ ಕುಡಿಸಲು ದೋಷಶಾಮ ಕವು. ಇದು ಸ್ತನ್ಯದೋಷಹರ ಸಾಮಾನ್ಯಚಿಕಿತ್ಸಾ ವಿಧಾನವು. ವಿಶೇಷವಾಗಿ ಯಾವ ದೋಷವು ಉಲ್ಬಣವಾಗಿರುತ್ತದೋ ಆ ದೋಷಹರಣ ದ್ರವ್ಯಗಳ ಕಷಾಯಾದಿಗಳನ್ನು ಉಪಯೋಗ ಮಾಡಬೇಕು.

ರೋಗಂ ಸ್ತನೋತ್ಥಿತಮವೇಕ್ಷ್ಯ ಭಿಷಗ್ವಿದಧ್ಯಾದ್ವಿದ್ರಧಾವಭಿಹಿತಂ ಬಹುಶೋ ವಿಧಾನಮ್ । ಸಂಪಚ್ಯಮಾನಮಪಿ ತಂ ತು ವಿನೋಪನಾಹೈಃ ಸಂಭೋಜನೇನ ಖಲು ಪಾಚ ಯಿತುಂ ಯತೇತ ॥೪೫॥ ಶೀಘ್ರಂ ಸ್ತನೋ ಹಿ ಮೃದುಮಾಂಸತಯೋಪನದ್ಧಃ ಸರ್ವಂ ಪ್ರಕೋಪಮುಪಯಾತ್ಯವದೀರ್ಯತೇ ಚ । ಪಕ್ವೇ ಚ ದುಗ್ಧಹರಿಣೀಃ ಪರಿಹೃತ್ಯ ನಾಡೀಃ ಕೃಷ್ಣಂ ಚ ಚೂಚುಕಯುಗಂ ವಿದಧೀತ ಶಸ್ತ್ರಮ್ ॥ ಆಮೇ ವಿದಾಹಿನಿ ತಥೈವ ಗತೇ ಚ ಪಾಕಂ ಧಾತ್ರ್ಯಾಃ ಸ್ತನೌ ಸತತಮೇವ ಚ ನಿರ್ದುಹೀತ ॥೪೬॥

ವೈದ್ಯನು ಸ್ತ್ರೀಯರ ಸ್ತನದಲ್ಲಿ ಉಂಟಾದ ರೋಗವನ್ನು ತಿಳಿದು ವಿದ್ರಧಿ ಚಿಕಿತ್ಸೆ ಯಲ್ಲಿ ವಿವರಿಸಿರುವ ವಿವಿಧ ವಿಧಾನಗಳನ್ನು ಪ್ರಯೋಗಮಾಡಬೇಕು. ಪಾಕವಾಗು ತ್ತಿದ್ದರೂ ಸ್ತನವಿದ್ರಧಿಗೆ ಉಪನಾಹ ಮಾಡಿಸಬಾರದು. ಸರಿಯಾಗಿ ಭೋಜನಗಳನ್ನು

ಮಾಡಿಸಿ ಪಾಕವಾಗುವಂತೆ ಪ್ರಯತ್ನಿಸಬೇಕು. ಸ್ತನವು ಮೃದುಮಾಂಸಗಳಿಂದ ಕೂಡಿದ ಅವಯವವಿಶೇಷವು. ಉಪನಾಹಸ್ವೇದವನ್ನು ಮಾಡಿಸಿದರೆ ದೋಷಗಳೆಲ್ಲಾ ಬಲುಜಾಗ್ರತೆಯಾಗಿ ಪ್ರಕೋಪವಾಗಿ ಮಾಂಸಪೇಶಿಗಳೆಲ್ಲಾ ಬಿರಿದುಹೋಗುತ್ತವೆ. ವಿದ್ರಧಿಪಾಕವಾದರೆ ಕ್ಷೀರವಹನಾಡಿಗಳನ್ನೂ ಕಪ್ಪಗಿರುವ ನೊಲೆಯ ತೊಟ್ಟುಗಳೆರಡನ್ನೂ ಬಿಟ್ಟು ಉಳಿದ ದುಷ್ಟಮಾಂಸಗಳನ್ನು ಶಸ್ತ್ರದಿಂದ ಕತ್ತರಿಸಬೇಕು. ವಿದಾಹವುಂಟಾಗದಿರುವುದಕ್ಕಾಗಿ ಆಮಾವಸ್ಥೆಯಲ್ಲೂ ಮಾಂಸಪಾಕವಾಗದಿರಲು ವಿದಾಹಾವಸ್ಥೆಯಲ್ಲೂ ನಾಡೀವ್ರಣವಾಗದಂತೆ ಮಾಡಲು ಪಕ್ವಾವಸ್ಥೆಯಲ್ಲೂ ಕೂಡ ಸ್ತನಗಳಿಂದ ಹಾಲನ್ನು ಹಿಂಡಿ ಸುರಿಸುತ್ತಿರಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ವಿಸರ್ಪನಾಡೀಸ್ತನರೋಗ ಚಿಕಿತ್ಸಾನಾಮ ಸಪ್ತದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹ ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಅಷ್ಟಾದಶೋऽಧ್ಯಾಯಃ

ಅಥಾತೋ ಗ್ರನ್ಥ್ಯಪಚ್ಯರ್ಬುದಗಳಗಣ್ಡ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆ ಗ್ರನ್ಥಿ, ಅಪಚಿ, ಅರ್ಬುದ, ಗಳಗಂಡರೋಗಗಳ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಗ್ರನ್ಥಿಷ್ವಥಾಮೇಷು ಭಿಷಗ್ವಿದಧ್ಯಾತ್ ಶೋಫಕ್ರಿಯಾಯಾಂ ವಿಹಿತಂ ವಿಧಿಜ್ಞಃ | ರಕ್ಷೇದ್ಬಲಂ ಚಾಪಿ ನರಸ್ಯ ನಿತ್ಯಂ ತದ್ರಕ್ಷಿತಂ ವ್ಯಾಧಿಬಲಂ ನಿಹನ್ತಿ ||೩||

ವೈದ್ಯನು ಗ್ರಂಥಿಗಳ ಆಮಾವಸ್ಥೆಯಲ್ಲಿ ಶೋಫರೋಗದಲ್ಲಿ ಹೇಳಿರುವ ಉಪವಾಸ ಮೊದಲು ವಿರೇಚನದವರೆಗಿನ ೧೧ ಉಪಚಾರಗಳನ್ನೂ ರೋಗಿಗೆ ಶಕ್ತಿಕಡಮೆಯಾಗದಂತೆ ನೋಡಿಕೊಂಡು ಪ್ರಯೋಗಿಸಬೇಕು. ರೋಗಿಗೆ ದೇಹಬಲವನ್ನು ಕಾಪಾಡಿದರೆ ವ್ಯಾಧಿಯ ಬಲವು ಕುಗ್ಗುತ್ತದೆ.

ತೈಲಂ ಪಿಬೇತ್ ಸರ್ಪಿರಥೋ ದ್ವಯಂ ವಾ ದತ್ವಾ ವಸಾಂ ವಾ ತ್ರಿವೃತಂ ವಿದಧ್ಯಾತ್ | ಅಪೇಹಿವಾತಾ ದಶಮೂಲಸಿದ್ಧಂ ವೈದ್ಯಶ್ಚತುಃ ಸ್ನೇಹಮಥೋ ದ್ವಯಂ ವಾ ||೪||

ವೈದ್ಯನು ಗ್ರಂಥಿರೋಗಿಗೆ ದೋಷಾನುಸಾರ ತೈಲ, ತುಪ್ಪ, ತೈಲಘೃತ, ತೈಲ ಘೃತವಸೆ (ತ್ರಿವೃತ್‌ಸ್ನೇಹ), ಪ್ರಸಾರಣೀತೈಲ, ದಶಮೂಲತೈಲ, ತೈಲಘೃತ, ವಸೆ, ಮಜ್ಜೆ (ಚತುಃಸ್ನೇಹ) ಅಥವಾ ತೈಲಘೃತ, ತೈಲವಸೆ, ತೈಲಮಜ್ಜೆ, ತುಪ್ಪವಸೆ, ತುಪ್ಪ ಮಜ್ಜೆ ಈ ರೀತಿ ಎರಡೆರಡನ್ನು ಸೇರಿಸಿ ಪಾನಮಾಡಿಸಬೇಕು. ಮೊದಲಿನ ಅರ್ಧ ಶ್ಲೋಕದಲ್ಲಿ ಬರಿಯತೈಲ, ಘೃತಗಳ ಪಾನವೂ ಕಡೆಯ ಅರ್ಧ ಶ್ಲೋಕದಲ್ಲಿ ಪ್ರಸಾರಿಣಿ ಅಥವಾ ದಶಮೂಲಗಳಿಂದ ತಯಾರಿಸಿದ ತೈಲ ಅಥವಾ ಘೃತಗಳ ಪಾನವೆಂದೂ ತಿಳಿಯಬೇಕು. ಗಯಿ ಎಂಬ ವೈದ್ಯಾಚಾರ್ಯನು—ಆಮಾವಸ್ಥೆಯ ಗ್ರಂಥಿರೋಗಿಗೆ ವಾತಾಧಿಕ್ಯದಲ್ಲಿ ವಾತಹರದ್ರವ್ಯಗಳ ಕಲ್ಕಕ್ವಾಥಗಳಿಂದ ತಯಾರಿಸಿದ ತೈಲವನ್ನೂ ಪಿತ್ತಜನಿತ ಗ್ರಂಥಿಯಲ್ಲಿ ಕಫಹರದ್ರವ್ಯಗಳ ಕಲ್ಕಕ್ವಾಥಗಳಿಂದ ತಯಾರಿಸಿದ ತೈಲವನ್ನೂ ಸಂಸರ್ಗಸನ್ನಿಪಾತಜನಿತ ಗ್ರಂಥಿಗಳಲ್ಲಿ ದೋಷಗಳ ಪ್ರಕೋಪಕ್ಕೆ ತಕ್ಕಂತೆ ಎರಡು, ಮೂರು, ನಾಲ್ಕು ಸ್ನೇಹಗಳನ್ನೂ ಆಯಾಯ ದೋಷಹರ ದ್ರವ್ಯಗಳ ಕಲ್ಕ ಕಷಾಯಗಳಿಂದ ತಯಾರಿಸಿ ಕುಡಿಸಬೇಕೆಂದು ಹೇಳುತ್ತಾನೆ. ಇವನ ಮತವು ಸಾಧುವಾದುದೆಂದು ತಿಳಿಯಬೇಕು.

ಹಿಂಸ್ರಾಥ ರೋಹಿಣ್ಯಮೃತಾಥ ಭಾರ್ಗೀ ಸ್ಯೋನಾಕಬಿಲ್ವಾಗುರು ಕೃಷ್ಣಗನ್ಧಾಃ | ಗೋಜೀ ಚ ಪಿಷ್ಟಾ ಸಹ ತಾಲಪತ್ರ್ಯಾ ಗ್ರನ್ಥೌ ವಿಧೇಯೋऽನಿಲಜೇ ಪ್ರಲೇಪಃ ||೫|| ಸ್ವೇದೋಪನಾಹಾನ್ ವಿವಿಧಾಂಶ್ಚ ಕುರ್ಯಾತ್ತಥಾ ಪ್ರಸಿದ್ಧಾನಪರಾಂಶ್ಚ ಲೇಪಾನ್ | ವಿದಾರ್ಯಾ ಪಾ

ಪಕ್ವಮಪೋಹ್ಯ ಪೂಯಂ ಪ್ರಕ್ಷಾಳ್ಯ ಬಿಲ್ವಾರ್ಕನರೇನ್ದ್ರತೋಯೈಃ ||೬|| ತಿಲೈಃ ಸಪಞ್ಚಾಙ್ಗುಳಪತ್ರಮಿಶ್ರೈಃ ಸಂಶೋಧಯೇತ್ ಸೈನ್ಧವಸಂಪ್ರಯುಕ್ತೈಃ | ಶುದ್ಧಂ ವ್ರಣಂ ವಾಪ್ಯುಪರೋಪಯೇಯುಸ್ತೈಲೇನ ರಾಸ್ನಾಸರಳಾನ್ವಿತೇನ ||೭|| ವಿಡಙ್ಗಯಷ್ಟೀಮಧುಕಾಮೃತಾಭಿಃ ಸಿದ್ಧೇನ ವಾ ಕ್ಷೀರಸಮನ್ವಿತೇನ ||೮||

ವಾತಜಗ್ರಂಥಿ ಚಿಕಿತ್ಸೆ—ಜಟಾಮಾಂಸಿ, ಕಟುಕರೋಹಿಣಿ, ಅಮೃತಬಳ್ಳಿ, ಗಂಟುಪರಂಗಿ, ಹೆಮ್ಮರದತೊಗಟೆ, ಬಿಲ್ವಪತ್ರೆಬೇರು, ಅಗಿಲುಗಂಧ, ನುಗ್ಗೆಯ ತೊಗಟೆ, ಎತ್ತುನಾಲಿಗೆ, ಸೊಪ್ಪು, ನೆಲತಾಳೆಗೆಡ್ಡೆ ಇವುಗಳ ಕಲ್ಕವನ್ನು ವಾತಗ್ರಂಥಿಗೆ ಲೇಪಿಸಬೇಕು. ಅನೇಕ ವಿಧ ಸ್ವೇದಗಳನ್ನೂ ಉಪನಾಹ (ಬಂಧನ)ಗಳನ್ನೂ ಮತ್ತು ಪ್ರಸಿದ್ಧಗಳಾದ ಇತರ ಲೇಪಗಳನ್ನೂ ಹಚ್ಚಬೇಕು. ಪಕ್ವವಾದರೆ ಅವನ್ನು ಸೀಳಿ ಕೀವನ್ನು ಹೊರಕ್ಕೆ ಹೊರಡಿಸಿ ಬಿಲ್ವಪತ್ರೆ, ಎಕ್ಕ, ಕಕ್ಕೆಬೇರುಗಳ ಕಷಾಯದಿಂದ ವ್ರಣವನ್ನು ತೊಳೆದು ಎಳ್ಳು, ಹರಳೆಲೆಗಳ ಕಲ್ಕಕ್ಕೆ ಸೈಂಧವಲವಣವನ್ನು ಮಿಶ್ರಮಾಡಿ ಲೇಪಿಸಿ ಕೀವನ್ನು ಹೊರಡಿಸಬೇಕು. ಹೀಗೆ ಶುದ್ಧವಾದ ವ್ರಣವನ್ನು ರಾಸ್ನೆ, ಸರಳದೇವದಾರುಗಳ ಚೂರ್ಣವನ್ನು ಎಳ್ಳೆಣ್ಣೆಯಲ್ಲಿ ರಂಗಳಿಸಿ ಲೇಪಿಸಿ ವ್ರಣವನ್ನು ಮಾಯಿಸಬೇಕು. ಅಥವಾ ವಿಡಂಗ, ಅತಿಮಧುರ, ಅಮೃತವಳ್ಳಿಗಳ ಕಷಾಯಕ್ಕೆ ಹಾಲನ್ನು ಸೇರಿಸಿ ತೈಲ ಪಾಕಮಾಡಿಟ್ಟುಕೊಂಡು ಲೇಪಿಸಿದರೆ ವ್ರಣರೋಪಣವಾಗುತ್ತದೆ.

ಜಲೌಕಸಃ ಪಿತ್ತಕೃತೇ ಹಿತಾಸ್ತು ಕ್ಷೀರೋದಕಾಭ್ಯಾಂ ಪರಿಷೇಚನಂ ಚ ||೮|| ಕಾಕೋಳಿವರ್ಗಸ್ಯ ಚ ಶೀತಲಾನಿ ಪಿಬೇತ್ಕಷಾಯಾಣಿ ಸಶರ್ಕರಾಣಿ ದ್ರಾಕ್ಷಾರಸೇನೇಕ್ಷುರಸೇನ | ವಾಪಿ ಚೂರ್ಣಂ ಪಿಬೇಚ್ಚಾಪಿ ಹರೀತಕೀನಾಮ್ ||೯|| ಮಧೂಕಜಮ್ಬ್ವರ್ಜುನವೇತಸಾನಾಂ ತ್ವಗ್ಭಿಃ ಪ್ರದೇಹಾನವಚಾರಯೇತ | ಸಶರ್ಕರೈರ್ವಾ ತೃಣಶೂನ್ಯಕನ್ದೈರ್ದಿಹ್ಯಾದಭೀಕ್ಷ್ಣಂ ಮುಚುಕುನ್ದಜೈರ್ವಾ ||೧೦|| ವಿದಾರ್ಯ ವಾ ಪಕ್ವಮಪೋಹ್ಯ ಪೂಯಂ ಧಾವೇತ್ ಕಷಾಯೇಣ ವನಸ್ಪತೀನಾಮ್ || ತಿಲೈಃ ಸಯಷ್ಟೀ ಮಧುಕೈರ್ವಿಶೋಧ್ಯ ಸರ್ಪಿಃ ಪ್ರಯೋಜ್ಯಂ ಮಧುರೈರ್ವಿಪಕ್ವಮ್ ||೧೧||

ಪಿತ್ತಗ್ರಂಥಿಗಳಿಗೆ ಜಿಗಣೆಕಚ್ಚಿಸಿ ದುಷ್ಟರಕ್ತವನ್ನು ಸ್ರಾವಮಾಡಿಸಬೇಕು. ಹಾಲು ಮಿಶ್ರಮಾಡಿ ಗ್ರಂಥಿಗಳ ಮೇಲೆ ಸೇಚನೆಮಾಡಬೇಕು. ಕಾಕೋಳ್ಯಾದಿ ಗಣ ದ್ರವ್ಯಗಳ ಕಷಾಯವನ್ನು ತಣ್ಣಗೆಮಾಡಿ ಸಕ್ಕರೆ ಸೇರಿಸಿ ಕುಡಿಸಬೇಕು. ದ್ರಾಕ್ಷಾಕಷಾಯಕ್ಕಾಗಲೀ ಕಬ್ಬಿನರಸಕ್ಕಾಗಲೀ ಅಣಿಲೆಚೂರ್ಣವನ್ನು ಮಿಶ್ರಮಾಡಿ ಕುಡಿಸಬೇಕು. ಹಿಪ್ಪೆ, ನೇರಳೆ, ಮತ್ತಿ, ನೀರಂಜಿಮರಗಳ ತೊಗಟೆಗಳ ಕಲ್ಕವನ್ನು ವ್ರಣಕ್ಕೆ ಲೇಪಿಸಬೇಕು. ತಾಳೆಗೆಡ್ಡೆಯ ಕಲ್ಕ ಅಥವಾ ಮುಚುಕುಂದ (ಮುಳ್ಳು ಅಧಿಕವಾದ ಎಲಚಿ)ದ ಗೆಡ್ಡೆಯ ಕಲ್ಕಕ್ಕೆ ಸಕ್ಕರೆ ಬೆರೆಸಿ ಲೇಪನಮಾಡಬೇಕು. ಪಕ್ವವಾದ ಗ್ರಂಥಿಯನ್ನು ಶಸ್ತ್ರದಿಂದ ಕತ್ತರಿಸಿ ಕೀವನ್ನು ಹೊರಡಿಸಿ ವಟಾದಿಪಂಚವಲ್ಕಲಗಳ ಕಷಾಯದಿಂದ ತೊಳೆಯಬೇಕು.

ಎಳ್ಳು, ಅತಿಮಧುರಗಳ ಕಲ್ಕವನ್ನು ಗ್ರಂಥಿಗೆ ಬಳಿದು ಕಾಕೋಳ್ಯಾದಿ ಮಧುರಗಣೌಷಧಿಗಳಿಂದ ತಯಾರಿಸಿದ ತುಪ್ಪವನ್ನು ಬಳಿಯಬೇಕು.

ಹೃತೇಷು ದೋಷೇಷು ಯಥಾನುಪೂರ್ವ್ಯಾ ಗ್ರನ್ಥೌ ಭಿಷಕ್ ಶ್ಲೇಷ್ಮಸಮುತ್ಥಿತೇ ತು ।
ಸ್ವಿನ್ನಸ್ಯ ವಿಮ್ಲಾಪನಮೇವ ಕುರ್ಯಾದಙ್ಗುಷ್ಠ ಲೋಹೋಪಲವೇಣುದಣ್ಡೈಃ ॥೧೧॥
ವಿಕಙ್ಕತಾರಗ್ವಧಕಾಕಣನ್ತೀ ಕಾಕಾದನೀ ತಾಪಸವೃಕ್ಷಮೂಲೈಃ । ಆಲೇಪಯೇತ್ಪಿಣ್ಡಫಲಾರ್ಕ
ಭಾರ್ಗೀ ಕರಞ್ಜ ಕಾಲಾಮದನೈಶ್ಚ ವಿದ್ವಾನ್ ॥೧೩॥

ಕಫಗ್ರಂಥಿಯಲ್ಲಿ ರೋಗಿಗೆ ಸ್ನೇಹಸ್ವೇದ ವಿಧಾನದಿಂದಲೂ ವಮನ ವಿರೇಚನ ಆಸ್ಥಾಪನಾನ್ವಾಸನ ಶಿರೋವಿಚೇನ ರಕ್ತಮೋಕ್ಷಣಗಳಿಂದಲೂ ಕಫ ಪಿತ್ತವಾತದೋಷಗಳನ್ನು ಹೊರಕ್ಕೆ ಹೊರಡಿಸಿದನಂತರ ಗ್ರಂಥಿಗೆ ಉಪನಾಹಾದಿಗಳಿಂದ ಸ್ವೇದಮಾಡಿಸಿ ಕೈಹೆಬ್ಬೆರಳು, ಲೋಹ, ಕಲ್ಲು, ಬಿದಿರುಕೋಲುಗಳಿಂದ ಗ್ರಂಥಿಯನ್ನು ಬಲವಾಗಿ ಉಜ್ಜಿ ಮೆತ್ತಗೆಮಾಡಬೇಕು. ಬುದ್ಧಿವಂತನಾದ ವೈದ್ಯನು ಹಾಲುಮಾಣಿಕಪೆಂಬ ಮುಳ್ಳುಗಿಡ, ಕಕ್ಕೆ, ಗುಲಗಂಜಿಬೇರು, ಕಾಗೆತೊಂಡೆಬೇರು, ಇಂಗಳದಬೇರು, ಇಂಗಳದ ಹಣ್ಣು, ಕಹಿಸೋರೆಬೇರು, ಎಕ್ಕದಬೇರು, ಗಂಟುಪರಂಗಿ, ಹೊಂಗೆಬೇರು, ಕರಿಯ ತಿಗಡೆ, ಮಗ್ಗಾರೆಕಾಯಿ ಇವುಗಳ ಕಲ್ಕದಿಂದ ಗ್ರಂಥಿಲೇಪನಮಾಡಬೇಕು.

ಅಮರ್ಮಜಾತಂ ಶಮಮಪ್ರಜಾತಮಪಕ್ವಮೇವಾಪಹರೇದ್ವಿದಾರ್ಯ । ದಹೇತ್ ಸ್ರುತೇ
ವಾಸೃಜಿ ಸಿದ್ಧಕರ್ಮಾ ಸದ್ಯಃಕ್ಷತೋಕ್ತಂ ಚ ವಿಧಿಂ ವಿದಧ್ಯಾತ್ ॥೧೪॥ ಯಾ ಮಾಂಸಕನ್ದ್ಯಃ
ಕಠಿನಾ ಬೃಹತ್ಯಸ್ತಾಸ್ವೇವ ಯೋಜ್ಯಶ್ಚ ವಿಧಿರ್ವಿಧಿಜ್ಞೈಃ । ಶಸ್ತ್ರೇಣ ವಾಪಾಟ್ಯ ಸುಪಕ್ವಮಾಶು
ಪ್ರಕ್ಷಾಳಯೇತ್ ಪಥ್ಯತಮೈಃ ಕಷಾಯೈಃ ॥೧೫॥ ಸಂಶೋಧನೈಸ್ತಂ ಚ ವಿಶೋಧಯೇಯುಃ
ಕ್ಷಾರೋತ್ತರೈಃ ಕ್ಷೌದ್ರಘೃತಪ್ರಗಾಢೈಃ । ಶುದ್ಧೇ ಚ ತೈಲಂ ತ್ವವಚಾರಣೀಯಂ ವಿಡಙ್ಗ ಪಾಠಾ
ರಜನೀವಿಪಕ್ವಮ್ ॥೧೬॥

ಮರ್ಮಸ್ಥಾನವನ್ನು ಬಿಟ್ಟು ಬೇರೆ ಶರೀರ ಭಾಗದಲ್ಲಿರುವ ಶಮನಹೊಂದದಿರುವ ಗ್ರಂಥಿಯನ್ನು ಆಮಾವಸ್ಥೆಯಲ್ಲೇ ಶಸ್ತ್ರದಿಂದ ಕತ್ತರಿಸಿ ತೆಗೆದುಬಿಡಬೇಕು. ಶಸ್ತ್ರಕರ್ಮದಲ್ಲಿ ಪ್ರವೀಣನಾದ ವೈದ್ಯನು ರಕ್ತಸ್ರಾವಮಾಡಿಸಿ ಕಾದಶಲಾಕೆಯಿಂದ ಆ ಗ್ರಂಥಿಯನ್ನು ಸುಟ್ಟು ಸದ್ಯಃಕ್ಷತ ಚಿಕಿತ್ಸಾವಿಧಾನದಂತೆ ಉಪಚರಿಸಬೇಕು. ಮಾಂಸಾಂಕುರಗಳು ಬೆಳೆದು ಬಲುಗಟ್ಟಿಯಾಗಿ ದಪ್ಪವಾಗಿ ಪಕ್ವವಾಗಿದ್ದರೆ ಬುದ್ಧಿಶಾಲಿಯಾದ ಶಸ್ತ್ರವೈದ್ಯನು ಶಸ್ತ್ರದಿಂದ ಅವುಗಳನ್ನು ಕತ್ತರಿಸಿ ಕಫಹರಗಳಾದ ಕಷಾಯದಿಂದ ತೊಳೆದು ಯವಕ್ಷಾರವು ಹೆಚ್ಚಾಗಿ ಸೇರಿರುವ ಶೋಧನೌಷಧಿಗಳಿಂದ ಕೀವು ದುಷ್ಟರಕ್ತಾದಿಗಳನ್ನು ಹೊರಕ್ಕೆ ಸುರಿಸಿ ಜೇನುತುಪ್ಪ ತುಪ್ಪ ಮಿಶ್ರಮಾಡಿ ಲೇಪಿಸಿ ಶುದ್ಧವಾದ ಗ್ರಂಥಿಗೆ ವಿಡಂಗ, ಅಗಳುಶುಂಠಿ, ಅರಿಶಿನಗಳನ್ನು ಸೇರಿಸಿ ತಯಾರಿಸಿದ ತೈಲವನ್ನು ಲೇಪಿಸಬೇಕು.

ಮೇದಃಸಮುತ್ಥೇ ತಿಲಕಲ್ಕದಿಗ್ಧಂ ದತ್ತ್ವೋಪರಿಷ್ಟಾತ್ ದ್ವಿಗುಣಂ ಪಟಾನ್ತಮ್ ।
ಹುತಾಶತಪ್ತೇನ ಮುಹುಃ ಪ್ರಮೃಜ್ಯಾಲ್ಲೋಹೇನ ಧೀಮಾನ್ ದಹನಂ ಹಿತಾಯ ॥೧೭॥

ಪ್ರಲಿಪ್ಯ ದಾರ್ವೀಮಥ ಲಾಕ್ಷಯಾ ವಾ ಪ್ರತಪ್ತಯಾ ಸ್ವೇದನಮಪ್ಯಕಾರ್ಯಮ್ । ನಿಪಾತ್ಯ ವಾ ಶಸ್ತ್ರಮುಪೋಹ್ಯ ಮೇದೋ ದಹೇತ್ ಸುಪಕ್ವಸ್ತ್ವಥವಾ ವಿದಾರ್ಯ ॥೧೮॥ ಪ್ರಕ್ಷಾಳ್ಯ ಮೂತ್ರೇಣ ತಿಲೈಃ ಸುಪಿಷ್ಟೈಃ ಸುವರ್ಚಿಕಾದ್ಯೈರ್ಹರಿತಾಲಮಿಶ್ರೈಃ । ಸಸೈನ್ಧವೈಃ ಕ್ಷೌದ್ರಘೃತಪ್ರಗಾಢೈಃ ಕ್ಷಾರೋತ್ತರೇರ್ರೈನಮಭಿಪ್ರಶೋಧ್ಯ ॥೧೯॥ ತೈಲಂ ವಿದಧ್ಯಾದ್ದ್ವಿಕರಞ್ಜಗುಂಜ್ಞಾವಂಶಾವಲೇಖೇಙ್ಗುದ ಮೂತ್ರಸಿದ್ಧಮ್ ।

ಮೇದೋಗ್ರಂಥಿಯನ್ನು ಎಳ್ಳಿನ ಕಲ್ಕದಿಂದ ಬಳಿದು ಅದರ ಮೇಲೆ ಎರಡು ಪದರು ಬಟ್ಟೆಯನ್ನು ಮುಚ್ಚಿ ಕಾದಕಬ್ಬಿಣದ ಗುಳ (ದಪ್ಪಸರಳು) ದಿಂದ ಕರಗಿಸಬೇಕು. (ಕಾದಕಬ್ಬಿಣದ ಸರಳನ್ನು ಬಟ್ಟೆಗೆ ತಗುಲಿಸದಂತೆ ಅದರಮೇಲೆ ಹಿಡಿದಿದ್ದರೆ ಇದರ ಶಾಖದಿಂದ ಎಳ್ಳಿನ ಲೇಪವು ಕಾದು ಮೇದಸ್ಸನ್ನು ಕರಗಿಸುತ್ತದೆ ; ಚರ್ಮವು ಸುಡುವುದಿಲ್ಲ.) ಮರದರಿಶಿನದ ಕಲ್ಕವನ್ನು ಗ್ರಂಥಿಗೆ ಬಳಿದು ಅದರಮೇಲೆ ಕರಗಿದ ಅರಗನ್ನು ತೊಟ್ಟಿಕ್ಕಿಸಿ ಬೆವರಿಸಬೇಕು. ಅಥವಾ ಪಕ್ವವಾಗಿದ್ದರೆ ಶಸ್ತ್ರದಿಂದ ಗ್ರಂಥಿಯನ್ನು ಸೀಳಿ ಮೇದಸ್ಸನ್ನು ಹೊರಕ್ಕೆ ಹೊರಡಿಸಿ ಕಾದಕಬ್ಬಿಣದ ಸಲಾಕೆಯಿಂದ ಸುಟ್ಟು ಅನಂತರ ಗೋಮೂತ್ರದಿಂದ ವ್ರಣವನ್ನು ತೊಳೆದು ಎಳ್ಳು, ಸೌವರ್ಚಲವಣ, ಅರಿದಳ, ಸೈಂಧವ ಲವಣ, ಯವಕ್ಷಾರ, ಇವುಗಳ ಕಲ್ಕಕ್ಕೆ ಹೆಚ್ಚಾಗಿ ಜೇನುತುಪ್ಪ ತುಪ್ಪಗಳನ್ನು ಸೇರಿಸಿ ರಂಗಳಿಸಿ ವ್ರಣಕ್ಕೆ ಲೇಪನಮಾಡಿ ದುಷ್ಟರಕ್ತ, ಮೇದಸ್ಸು, ಕೀವುಗಳು ಹೊರಕ್ಕೆ ಸುರಿಯುವಂತೆಮಾಡಿ, ಹೊಂಗೆ, ತವಸ, ಗುಲುಗಂಜಿ, ಬಿದಿರಿನತೊಗಟೆ, ಇಂಗಳ ಇವುಗಳ ಬೇರಿನ ಕಲ್ಕದಿಂದ ತಯಾರಿಸಿದ ತೈಲವನ್ನು ಬಳಿಯಬೇಕು.

ಜೀಮೂತಕೈಃ ಕೋಶವತೀಫಲೈಶ್ಚ ದನ್ತೀದ್ರವನ್ತೀತ್ರಿವೃತಾಸುಚೈ॥೨೦॥ವಿಸರ್ಪಿಃ ಕೃತಂ ಹನ್ತ್ಯಪಚೀಂ ಪ್ರವೃದ್ಧಾಂ ದ್ವಿಧಾಪ್ರವೃತ್ತಂ ತದುದಾರವೀರ್ಯಮ್ । ನಿರ್ಗುಣ್ಡಿಜಾತೀಬರಿಹಿಷ್ಮಯುಕ್ತಂ ಜೀಮೂತಕಂ ಮಾಕ್ಷಿಕಸೈನ್ಧವಾಢ್ಯಮ್ ॥೨೧॥ ಅಭಿಪ್ರತಪ್ತಂ ವಮನಂ ಪ್ರಗಾಢಂ ದುಷ್ಟಾಪಚೀಷೂತ್ತಮಮಾದಿಶನ್ತಿ । ಕೈಟರ್ಯಬಿಮ್ಬ್ಯಾಕರವೀರಸಿದ್ಧಂ ತೈಲಂ ಹಿತಂ ಮೂರ್ಧವಿರೇಚನಂ ಚ ॥೨೨॥ ಶಾಖೋಟಕಸ್ಯ ಸ್ವರಸೇನ ಸಿದ್ಧಂ ತೈಲಂ ಹಿತಂ ನಸ್ಯವಿರೇಚನೇಷು । ಮಧೂಕಸಾರಶ್ಚ ಹಿತೋऽವಪೀಡೇ ಫಲಾನಿ ಶಿಗ್ರೋಃಖರಮಞ್ಜರೀರ್ವಾ ॥೨೩॥ ಗ್ರನ್ಥೀನಮರ್ಮಪ್ರಭವಾನಪಕ್ವಾನುದ್ಧೃತ್ಯಚಾಗ್ನಿಂ ವಿಧಧೀತಪಶ್ಚಾತ್ । ಕ್ಷಾರೇಣ ವಾಪಿ ಪ್ರತಿಸಾರಯೇತ್ತಾ ಸಂಲಿಖ್ಯ ಶಸ್ತ್ರೇಣ ಯಥೋಪದೇಶಮ್ ॥೨೪॥

ದೇವದಾಳೀ, ಹೀರೆಕಾಯಿ, ಜಾಪಾಳದತೊಗಟೆ, ಸಣ್ಣಜಾಪಾಳ, ತಿಗಡೆಬೇರು, ಇವುಗಳನ್ನು ಸೇರಿಸಿ ತಯಾರಿಸಿದ ಘೃತಸೇವನೆಯಿಂದ ಅಂತರ್ಬಹಿರ್ಭಾಗಗಳಲ್ಲಿ ಉಂಟಾದ ಗಂಡಮಾಲೆಯು ನಾಶವಾಗುತ್ತದೆ. ಇದು ಶ್ರೇಷ್ಠಪ್ರಭಾವವುಳ್ಳ ಘೃತವು. ಲಕ್ಕಿಬೇರು, ಜಾಜಿಮೊಗ್ಗು, ಮುಡಿವಾಳ, ದೇವದಾಳಿ ಇವುಗಳ ಕಲ್ಕದೊಡನೆ ಜೇನು ತುಪ್ಪ ಸೈಂಧವಲವಣಗಳನ್ನು ಮಿಶ್ರಮಾಡಿ ಬಿಸಿಮಾಡಿ ದುಷ್ಟಗಂಡಮಾಲೆಗೆ ಪ್ರಯೋಗ ಮಾಡಬೇಕು. ಕರಿಬೇವು, ತೊಂಡೆಸೊಪ್ಪು, ಕಣಿಗಲೆಗಳನ್ನು ಸೇರಿಸಿ ತಯಾರಿಸಿದ

ತೈಲವು ಶಿರೋವಿರೇಚನಕ್ಕೆ ಉತ್ತಮವಾದದ್ದು. ತೇಗದತೊಗಟೆಯ ಸ್ವರಸದೊಡನೆ ತಯಾರಿಸಿದ ತೈಲವು ನಸ್ಯಕರ್ಮ ವಿರೇಚನೌಷಧಗಳಿಗೆ ಹಿತಕರವಾದದ್ದು. ಹಿಪ್ಪೆಯ ಗೋಂದು, ನುಗ್ಗೆಕಾಯಿ, ಉತ್ತರಣೆಬೀಜಗಳನ್ನು ಬಿಸಿನೀರಿನಿಂದ ಅರೆದು ಮೂಗಿಗೆ ನಸ್ಯಮಾಡಿಸಬೇಕು. ಮರ್ಮಪ್ರದೇಶವನ್ನು ಬಿಟ್ಟು ಶರೀರದ ಇತರ ಭಾಗಗಳಲ್ಲಿ ಎದ್ದಿರುವ ಗಂಟುಗಳನ್ನು ಶಸ್ತ್ರದಿಂದ ಭೇದಿಸಿ ಕಾದ ಶಲಾಕೆಯಿಂದ ಸುಡಬೇಕು. ಅಥವಾ ಯವಕ್ಷಾರದಿಂದ ಪ್ರತಿಸಾರಣ ಮಾಡಬೇಕು. ಅಥವಾ ಶಸ್ತ್ರದಿಂದ ಶಾಸ್ತ್ರವಿಹಿತವಾಗಿ ಕೊರೆದುಬಿಡಬೇಕು.

ಟಿಪ್ಪಣಿ : ಕಾಲಿನ ಹರಡಿನಿಂದ ಆ ಭಾಗದ ಕಿವಿಯವರೆಗೆ ಸರಿಯಾಗಿ ಅಳತೆ ಮಾಡಿದರೆ ಆ ಮನುಷ್ಯನ ಬೆರಳಿನಲ್ಲಿ ೭೬ ಅಂಗುಳಿಗಳಷ್ಟು ಉದ್ದವಾಗುತ್ತದೆ. ಇದರ ಎಂಟನೆಯ ಭಾಗವು ೯ ೧/೨ ಅಂಗುಳಿಗಳಷ್ಟಾಗುತ್ತದೆ. ಹೆಜ್ಜೆಯು ಗುಲ್ಫಸಂಧಿಯವರೆಗೆ ೩ ಅಂಗುಳಿಗಳು ಅದರ ಮೇಲೆ ೯ ೧/೨ ಅಂಗಳಿಗಳೆಂದರೆ ೧೨ ೧/೨ ಅಂಗುಳಿಗಳ ಮೇಲೆ ಇಂದ್ರಬಸ್ತಿಮರ್ಮವಿದೆ ಎಂದು ಅರ್ಥವಾಗುತ್ತದೆ. ಇದರ ಎತ್ತರ ೧/೨ ಅಂಗ.ಳಿ. ಹಿಮ್ಮಡಿಯಿಂದ ೧೩ ಅಂಗುಳಿಗಳ ಮೇಲಕ್ಕೆ ೧/೨ ಅಂಗುಲ ಪ್ರಮಾಣದ ಮಾಂಸಮರ್ಮವಿದೆ. ಕಾಲಾಂತರ ಪ್ರಾಣಹರಮರ್ಮವು ಇದಕ್ಕೆ ಪೆಟ್ಟು ತಗಲಿದರೆ ರಕ್ತಸ್ರಾವವಾಗುತ್ತದೆ. ಕಾಲಾಂತರ ಪ್ರಾಣಹರಮರ್ಮವು. ಇದಕ್ಕೆ ಪೆಟ್ಟು ತಗಲಿದರೆ ರಕ್ತಸ್ರಾವವಾಗುತ್ತದೆ. ೧ ನೇ ಶ್ಲೋಕದಿಂದ ಇಂದ್ರಬಸ್ತಿಯ ಕೆಳಗೆ ಅಂದರೆ ಹೆಜ್ಜೆಯಿಂದ ೧೨ ೧/೨ ಅಂಗುಳಿಯ ಮೇಲೆ ೧/೨ ಅಂಗುಳಿ ಎತ್ತರದಲ್ಲಿ ಇಂದ್ರವಸ್ತಿಮರ್ಮವೆಂದೂ ೧೨ ೧/೨ ಅಂಗುಳಿಗಳಲ್ಲಿ ಇಂದ್ರಬಸ್ತಿಯ ಕೆಳಗಿನ ೨ ಅಂಗುಳ ಪ್ರದೇಶದಲ್ಲಿ ಶಸ್ತ್ರದಿಂದ ಭೇದಿಸಬೇಕೆಂದೂ ಅರ್ಥವಾಗುತ್ತದೆ. ೨ನೆಯ ಶ್ಲೋಕದಿಂದ ಇಂದ್ರಬಸ್ತಿಯ ಮೇಲೆ ಅಂದರೆ ಹೆಜ್ಜೆಯಿಂದ ೧೩ ಅಂಗುಳಿಗಳ ಮೇಲೆ ೨ ಅಂಗುಳ ಪ್ರದೇಶದಲ್ಲಿ ಶಸ್ತ್ರದಿಂದ ಭೇದಿಸಬೇಕೆಂದೂ ಅರ್ಥವಾಗುತ್ತದೆ.

ಪಾರ್ಷ್ಣಿಂ ಪ್ರತಿ ದ್ವಾದಶ ಚಾಙ್ಗುಳಾನಿ ಮಿತ್ವೇನ್ದ್ರಬಸ್ತಿಂ ಪರಿವರ್ಜ್ಯ ಧೀಮಾ‌ ।
ವಿದಾರ್ಯ ಮತ್ಸ್ಯಾಣ್ಡನಿಭಾನಿ ವೈದ್ಯೋ ನಿಷ್ಕೃಷ್ಯ ಜಾಲಾನ್ಯನಲಂ ವಿದಧ್ಯಾತ್ ॥೨೫॥
ಆಗುಲ್ಫಕರ್ಣಾತ್ ಸುಮಿತಸ್ಯ ಜನ್ತೋಸ್ತಸ್ಯಾಷ್ಟಭಾಗಂ ಖಿಲಕಾದ್ವಿಭಜ್ಯ । ಘೋಣಾರ್ಜುವೇಧಃ
ಸುರರಾಜಬಸ್ತೇರ್ಹಿತ್ವಾಕ್ಷಮಾತ್ರಂ ತ್ವಪರೇವದನ್ತಿ ॥೨೬॥

ಕಾಲಿನ ಹಿಮ್ಮಡಿಯ ಮೇಲೆ ೧೨ ೧/೨ ಅಂಗುಳಿಗಳಷ್ಟು ದೂರ ಅಳತೆಮಾಡಿ ಇಂದ್ರಬಸ್ತಿಯೆಂಬ ಮರ್ಮಸ್ಥಾನವನ್ನು ಬಿಟ್ಟು ಅದರ ಮೇಲ್ಗಡೆಯಲ್ಲಿ ಶಸ್ತ್ರದಿಂದ ಕತ್ತರಿಸಿದರೆ ಮೀನಿನ ಮೊಟ್ಟೆಯಷ್ಟು ದಪ್ಪದ ಅಂಡಗಳು (ಮೊಟ್ಟೆಯಂತಿರುವ ಗ್ರಂಥಿಗಳು) ಸೇರಿ ಬಲೆಯ ಆಕಾರದಂತಿರುವ ದುರ್ಮಾಂಸ ಗ್ರಂಥಿಗಳನ್ನು ಶಸ್ತ್ರದಿಂದ ಕತ್ತರಿಸಿ ಕಾದಕಬ್ಬಿಣದ ಸಲಾಕೆಯಿಂದ ಸುಡಬೇಕು. ಮತ್ತೆ ಕೆಲವು ವೈದ್ಯರ ಮತದಲ್ಲಿ ಕಾಲಿನ

ಗುಲ್ಫ ಸಂಧಿ (ಹೆಜ್ಜೆಯೂ ಮೊಣಕಾಲೂ ಸೇರುವ ಸಂಧಿ)ಯ ಮೇಲೆ ೯ ೧/೨ ಅಂಗುಳಿಯಲ್ಲಿ ಇಂದ್ರಬಸ್ತಿ ಮರ್ಮವಿರುತ್ತದೆ. ಅದರ ಉದ್ದ ೨ ಅಂಗುಳಿ ಪ್ರಮಾಣವು. ಈಮರ್ಮವನ್ನು ಬಿಟ್ಟು ಅಂದರೆ ಹಿಮ್ಮಡಿಯಿಂದ ೧೩ ಅಂಗುಳಿಯಷ್ಟು ಪ್ರದೇಶದಲ್ಲಿ ಇಂದ್ರಬಸ್ತಿ ಮರ್ಮವಿದೆ. ಅಥವಾ ಗುಲ್ಫಸಂಧಿಯಮೇಲೆ ೯ ೧/೨ ಅಂಗುಳಿಯಲ್ಲಿರುತ್ತದೆ. ಇದರಿಂದ ಗೊತ್ತಾಗುವುದೇನೆಂದರೆ—ಮೊದಲನೆಯ ಶ್ಲೋಕದಿಂದ ಇಂದ್ರಬಸ್ತಿಮರ್ಮದ ಕೆಳಗೂ, ಎರಡನೆಯ ಶ್ಲೋಕದಿಂದ ಇಂದ್ರಬಸ್ತಿಮರ್ಮದ ಮೇಲ್ಭಾಗದಲ್ಲೂ ಹಿಮ್ಮಡಿಯಿಂದ ಮೇಲೆ ಹೊರಡುವ ಕಂಡರದ ೨ ಅಂಗುಳದಷ್ಟನ್ನು ಮಾತ್ರ ಕತ್ತರಿಸಬೇಕೆಂದು ತಿಳಿದು ಬರುತ್ತದೆ. ಅಪಚಿಯು (ಗಂಡಮಾಲೆಯು) ಶಮನವಾಗದಿದ್ದರೆ ಅಪಚಿಯು ಎಡಭಾಗದಲ್ಲಿದ್ದರೆ ಬಲತೊಡೆಯ ಕೆಳಗೆ ಮೊಣಕಾಲಿನ ಹಿಂದುಗಡೆ ಮಧ್ಯದಲ್ಲಿರುವ ಇಂದ್ರಬಸ್ತಿಯ ಮೇಲೆ ಅಥವಾ ಕೆಳಗೆ ೨ ಅಂಗುಳಿಯಷ್ಟು ಪ್ರದೇಶವನ್ನು ಬಿಟ್ಟು ಶಸ್ತ್ರಪಾತ ಮಾಡಬೇಕು. ಮತ್ತು ಮೀನಿನ ಮೊಟ್ಟೆಯಂತಿರುವ ಮೇದಸ್ಸಿನ ಗ್ರಂಥಿಸಮೂಹವನ್ನು ಹೊರಕ್ಕೆ ತೆಗೆದುಬಿಡಬೇಕು. ಅನಂತರ ಕಾದಸಲಾಕೆಯಿಂದ ಮೇದೋಗ್ರಂಥಿಗಳಿದ್ದ ಭಾಗವನ್ನು ಸುಡಬೇಕು.

ಮಣಿಬನ್ಧೋಪರಿಷ್ಟಾದ್ವಾ ಕುರ್ಯಾದ್ರೇಖಾತ್ರಯಂ ಭಿಷಕ್ । ಅಙ್ಗುಳ್ಯನ್ತರಿತಂ ಸಮ್ಯಗಪಚೀನಾಂ ನಿವೃತ್ತಯೇ ॥೨೭॥ ಚೂರ್ಣಸ್ಯ ಕಾಲೇಪ್ರಚಲಾಕಕಾಕಗೋಧಾಹಿಕೂರ್ಮಪ್ರಭವಾಂ ಮಷೀಂ ತು । ದದ್ಯಾಚ್ಚ ತೈಲೇನ ಸಹೇಙ್ಗುದೀನಾಂ ಯದ್ವಕ್ಷ್ಯತೇ ಶ್ಲೀಪದಿನಾಂ ಚ ತೈಲಮ್ ॥೨೮॥ ವಿರೇಚನಂ ಧೂಮಮುಪಾದದೀತ ಭವೇಚ್ಚ ನಿತ್ಯಂ ಯವಮುದ್ಗಭೋಜೀ ।

ಹನ್ವಸ್ಥಿಸಂಧಿ ಮತ್ತು ಹೆಕ್ಕತ್ತುಗಳ ಭಾಗದಲ್ಲಿರುವ ಗಂಡಮಾಲೆಗೆ (ಅಪಚಿಗೆ) ಜಂಘೆಯ ಇಂದ್ರಬಸ್ತಿಮೇಲೆ ಶಸ್ತ್ರದಿಂದ ಮೇದೋಗ್ರಂಥಿಯನ್ನು ಕತ್ತರಿಸಬೇಕೆಂದು ಹೇಳಿದೆ. ಕೊಂಕಳು ಮೊಣಕೈಗಳಲ್ಲುಂಟಾಗುವ ಅಪಚಿಗಳಿಗೆ ಬಾಹುಗತಶಸ್ತ್ರಕರ್ಮವನ್ನು ಹೇಳುತ್ತಾರೆ. ಕಂಕಣ ಮತ್ತು ಮೊಳಕೈ ಸಂಧಿಗಳ ಮಧ್ಯೆ ೧೬ ಅಂಗುಳಿಗಷ್ಟು ಭಾಗದಲ್ಲಿ ೯ ಅಂಗುಳಿಗಿಂತಲೂ ಸ್ವಲ್ಪ ಹೆಚ್ಚಿನ ಭಾಗದಲ್ಲಿ ೧ ಅಂಗುಳಿಯಷ್ಟು ಅಂತರದಲ್ಲಿ ೩ ರೇಖೆಗಳನ್ನು ಗುರ್ತಿಸಿ ಶಸ್ತ್ರದಿಂದ ಗೀರಿ ಕಾದಸಲಾಕಿಯಿಂದ ಸುಡಬೇಕು. ಚೂರ್ಣ ಪ್ರಯೋಗಮಾಡುವ ಕಾಲದಲ್ಲಿ ನವಿಲು, ಕಾಗೆ, ಉಡ, ಹಾವು, ಆಮೆಗಳನ್ನು ಸುಟ್ಟು ಬಂದ ಮಸಿಯನ್ನು ಇಂಗಳದ ತೈಲದಿಂದ ರಂಗಳಿಸಿ ವ್ರಣಕ್ಕೆ ಲೇಪಿಸಬೇಕು. ಅಥವಾ ಶ್ಲೀಪದ ರೋಗದಲ್ಲಿ ಹೇಳುವ ತೈಲದಿಂದಾಗಲೀ ಲೇಪಿಸಿ ವಿರೇಚನ ಮತ್ತು ಧೂಪಪಾನಗಳನ್ನು ಮಾಡಿಸಬೇಕು. ಯವಧಾನ್ಯ, ಹೆಸರು ಇವನ್ನು ಭೋಜನ ಮಾಡಬೇಕು.

ಕರ್ಕಾರುಕೈರ್ವಾರುಕನಾರಿಕೇಳ ಪ್ರಿಯಾಲಪಞ್ಚಾಙ್ಗುಳಬೀಜಚೂರ್ಣೈಃ ॥೨೯॥ ವಾತಾರ್ಬುದಂ ಕ್ಷೀರಘೃತಾಮ್ಬುಸಿದ್ಧೈರುಷ್ಣೈಃ ಸತೈಲೈರುಪನಾಹಯೇತ್ತು । ಕುರ್ಯಾಚ್ಚ ಮಾಂಸಾನ್ಯುಪನಾಹನಾನಿ ಸಿದ್ಧೈಶ್ಚ ಮಾಂಸೈರಥ ವೇಸವಾರೈಃ ॥೩೦॥ ಸ್ವೇದಂ ವಿದಧ್ಯಾತ್ಕುಶಲಸ್ತು

ನಾಡ್ಯಾಂ ಶೃಙ್ಗೇಣ ರಕ್ತಂ ಬಹುಶೋ ಹರೇಚ್ಚ । ವಾತಘ್ನನಿರ್ಯೂಹಪಯೋಽಮ್ಲಭಾಗೈಃ
ಸಿದ್ಧಂ ಶತಾಖ್ಯಂ ತ್ರಿವೃತಂ ಪಿಬೇದ್ವಾ ॥೩೧॥

ವಾತಾರ್ಬುದಕ್ಕೆ ಹಾಗಲ, ಸೌತೆ, ತೆಂಗು, ಚಾರಪೊಪ್ಪು, ಹರಳು ಇವುಗಳ ಬೀಜಗಳ ಚೂರ್ಣವನ್ನು ಹಾಲು ತುಪ್ಪ ನೀರುಗಳಿಂದ ಬೇಯಿಸಿ ತೈಲಮಿಶ್ರಮಾಡಿ ಬಟ್ಟೆಯ ತುಂಡಿನಲ್ಲಿಟ್ಟು ಸ್ವೇದಮಾಡಿಸಬೇಕು. ಅಥವಾ ಮಾಂಸ ವೇಸವಾರಗಳಿಂದ ಬಿಸಿಯಾಗಿ ಸ್ವೇದಮಾಡಿಸಬೇಕು. ಇದಲ್ಲದೆ ಬುದ್ಧಿಶಾಲಿಯಾದ ವೈದ್ಯನು ನಾಡೀಸ್ವೇದವನ್ನೂ, ಶೃಂಗದಿಂದ ಅನೇಕಸಾರಿ ರಕ್ತಸ್ರಾವವನ್ನೂ ಮಾಡಬೇಕು. ವಾತಹರ ಕಷಾಯಗಳೊಡನೆ (ಭದ್ರದಾರ್ವಾದಿ ಕಷಾಯಗಳು) ಹಾಲು, ಧಾನ್ಯಾಮ್ಲಾದಿಗಳನ್ನೂ ತುಪ್ಪ, ಎಣ್ಣೆ, ವಸೆಗಳನ್ನೂ ಸೇರಿಸಿ ೧೦೦ ಸಾರಿ ಪಾಕಮಾಡಿದ ಸ್ನೇಹವನ್ನೂ ಕುಡಿಸಬೇಕು.

ಸ್ವೇದೋಪನಾಹಾಮೃದವಸ್ತು ಪಥ್ಯಾಃ ಪಿತ್ತಾರ್ಬುದೇ ಕಾಯವಿರೇಚನಂ ಚ ।
ವಿಘೃಷ್ಯ ಚೋಡುಮ್ಬರಶಾಕಗೋಜೀ ಪತ್ರೈರ್ಭೃಶಂ ಕ್ಷೌದ್ರಯುತೈಃ ಪ್ರಲಿಮ್ಪೇತ್ ॥೩೨॥
ಶ್ಲಕ್ಷ್ಣೀಕೃತೈಃ ಸರ್ಜರಸಪ್ರಿಯಙ್ಗುಪತ್ತಙ್ಗರೋಧ್ರಾಞ್ಜನಯಷ್ಟಿಕಾಹ್ವೈಃ । ವಿಸ್ರಾವ್ಯ
ಚಾರಗ್ವಧಗೋಜಿಸೋಮಾಃ ಶ್ಯಾಮಾ ಚ ಯೋಜ್ಯಾಕುಶಲೇನ ಲೇಪೇ ॥೩೩॥ ಶ್ಯಾಮಾಗಿರಿಹ್ವಾ
ಞ್ಜನಕ್ಷೀರಸೇಷು ದ್ರಾಕ್ಷಾರಸೇಸಪ್ತಲಿಕಾರಸೇಚ । ಘೃತಂ ಪಿಬೇತ್ ಕ್ಲೀತಕಸಂ ಪ್ರಸಿದ್ಧಂ
ಪಿತ್ತಾರ್ಬುದೀತಜ್ಜಠರೀಚ ಜನ್ತುಃ ॥೩೪॥

ಪಿತ್ತಾರ್ಬುದರೋಗಿಗೆ ಮೃದುವಾದ ಸ್ವೇದ ಉಪನಾಹಗಳೂ ವಿರೇಚನವೂ ಹಿತಕರಗಳು. ಕಲ್ಲತ್ತಿ, ತೇಗ ಮತ್ತು ಎತ್ತುನಾಲಿಗೆಗಳ ಎಲೆಗಳಿಂದ ಅರ್ಬುದವನ್ನು ಉಜ್ಜಿ ರಾಳು, ನೆಳಲು, ಪತಂಗದಚಕ್ಕೆ, ರೋಧ್ರ, ಸ್ರೋತೋಂಜನ, ಅತಿಮಧುರ ಇವುಗಳ ನುಣುಪಾದ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ಲೇಪಿಸಬೇಕು. ಅಥವಾ ದೋಷಸ್ರಾವಣಮಾಡಿ, ಕಕ್ಕೆ, ಎತ್ತುನಾಲಿಗೆ, ಸೋಮಲತೆ (ಅಮೃತವಳ್ಳಿ) ತಿಗಡೆ ಇವುಗಳ ಕಲ್ಕವನ್ನು ಲೇಪಿಸಬೇಕು. ಬುದ್ಧಿವಂತನಾದ ವೈದ್ಯನು ತಿಗಡೆ, ಕಾವಿ, ಸ್ರೋತೋಂಜನ, ದ್ರಾಕ್ಷಾರಸ, ಅರಿಶಿನಬಣ್ಣದ ಹಾಲಿರುವ ಮುಂಡುಗಳ್ಳಿಯಬೇರು, ಅತಿಮಧುರ ಇವುಗಳೊಡನೆ ಘೃತವನ್ನು ಪಿತ್ತಾರ್ಬುದರೋಗಿಗೂ ಪಿತ್ತಜನಿತ ಉದರರೋಗಿಗೂ ಪಾನಮಾಡಿಸಬೇಕು.

ಶುದ್ಧಸ್ಯ ಜನ್ತೋಃ ಕಫಜೇಽರ್ಬುದೇ ತು ರಕ್ತೇಽವಸಿಕ್ತೇ ತು ತತೋಽರ್ಬುದಂ ತತ್ ।
ದ್ರವ್ಯಾಣಿ ಯಾನ್ಯೂರ್ಧ್ವಮಧಶ್ಚ ದೋಷಾನ್ಹರನ್ತಿತೈಃ ಕಲ್ಕಕೃತೈಃ ಪ್ರದಿಹ್ಯಾತ್ ॥೩೫॥
ಕಪೋತಪಾರಾವತವಿಡ್ವಿಮಿಶ್ರೈಃ ಸಕಾಂಸ್ಯನೀಲೈಃ ಶುಕಲಾಙ್ಗಲಾಖ್ಯೈಃ । ಮೂತ್ರೈಸ್ತು
ಕಾಕಾದನಿಮೂಲಮಿಶ್ರೈಃ ಕ್ಷಾರಪ್ರದಿಗ್ಧೈರಥವಾ ಪ್ರದಿಹ್ಯಾತ್ ॥೩೬॥ ನಿಷ್ಪಾವಪಿಣ್ಯಾಕಕುಲತ್ಥ
ಕಲ್ಕೈರ್ಮಾಂಸಪ್ರಗಾಢೈರ್ದಧಿಮಸ್ತುಯುಕ್ತೈಃ । ಲೇಪಂ ವಿದಧ್ಯಾತ್ ಕ್ರಿಮಯೋ ಯಥಾತ್ರ
ಮೂರ್ಛನ್ತಿ ಮುಞ್ಚನ್ತ್ಯಥ ಮಕ್ಷಿಕಾಶ್ಚ ॥೩೭॥ ಅಲ್ಪಾವಶಿಷ್ಟೇ ಕ್ರಿಮಿಭಿಃ ಕೃತೇ ಚ ಲಿಖೇತ್ತ
ತೋಽಗ್ನಿಂ ವಿದಧೀತ ಪಶ್ಚಾತ್ । ಯದಲ್ಪಮೂಲಂ ತ್ರಪುತಾಮ್ರಸೀಸಪಟ್ಟೈಃ ಸಮಾವೇಷ್ಟ್ಯ
ತದಾಯಸೈರ್ವಾ ॥೩೮॥ ಕ್ಷಾರಾಗ್ನಿಶಸ್ತ್ರಾಣ್ಯಕೃದ್ವಿದಧ್ಯಾತ್ ಪ್ರಾಣಾನಪಿಂಹನ್ ಭಿಷಗಪ್ರ

ಮತ್ತೈಃ । ಆಸ್ಫೋತಜಾತೀಕರವೀರಪತ್ರೈಃ ಕಷಾಯಮಿಷ್ಟಂ ವ್ರಣಶೋಧನಾರ್ಥಮ್ ॥೯॥ ಶುದ್ಧೇ ಚ ತೈಲಂ ವಿದಧೀತ ಭಾರ್ಗೀವಿಡಙ್ಗಪಾಠಾತ್ರಿಫಲಾವಿಪಕ್ವಮ್ । ಯದೃಚ್ಛಯಾ ಚೋಪಗತಾನಿಪಾಕಂ ಪಾಕಕ್ರಮೇಣೋಪಚರೇದ್ವಿಧಿಜ್ಞಃ ॥೧೦॥

ಕಫಜನಿತ ಅರ್ಬುದರೋಗಿಗೆ ವಮನ ವಿರೇಚನಗಳಿಂದ ದೇಹಶುದ್ಧಿಮಾಡಿಸಿ ರಕ್ತಸೇಚನೆಮಾಡಿಸಿ ವಮನ ವಿರೇಚನಯೋಗ್ಯಗಳಾದ ದ್ರವ್ಯಗಳ ಕಲ್ಕದಿಂದ ಅರ್ಬುದ ವನ್ನು ಲೇಪಿಸಬೇಕು. ಕಪೋತ ಮತ್ತು ಪಾರಿವಾಳಗಳ ಹಿಕ್ಕೆಗಳೊಡನೆ ಕಂಚಿನ ಕಿಲಬು, ಗಿಣಿಯಹಿಕ್ಕೆ, ಕೋಳಿಕುಟುವ:ನಗಡ್ಡೆ, ಕಾಗೆತೊಂಡೆಬೇರು ಇವುಗಳನ್ನು ಗೋಮೂತ್ರದಿಂದ ಅರೆದು ಆ ಕಲ್ಕಕ್ಕೆ ಯವಕ್ಷಾರವನ್ನು ಮಿಶ್ರಮಾಡಿ ಲೇಪನಮಾಡ ಬೇಕು. ಅವರೆ, ಎಳ್ಳುಹಿಂಡಿ, ಹುರುಳಿ ಇವುಗಳ ಕಲ್ಕದೊಡನೆ ಅಧಿಕಮಾಂಸವನ್ನು ಸೇರಿಸಿ ಮೊಸರಿನಕಟ್ಟು ಮಿಶ್ರಮಾಡಿ ಲೇಪಿಸಬೇಕು. ಈ ಲೇಪದಮೇಲೆ ಕ್ರಿಮಿಗಳು ಬಿದ್ದು ಪುನಃ ಮೊಟ್ಟೆಹಾಕಿ ನೊಣಗಳು ಮುತ್ತಿ ತಿಂದು ಸ್ವಲ್ಪಮಾತ್ರ ಅರ್ಬುದವು ಮೋಟಾಗಿ ನಿಂತರೆ ಅದನ್ನು ಕೆರೆದು ಕಾದಸಲಾಕೆಯಿಂದ ಸುಡಬೇಕು. ಅಥವಾ ಅದರ ಮೇಲೆ ತವರ, ತಾಮ್ರ, ಸೀಸ, ಕಬ್ಬಿಣದ ತಗಡುಗಳನ್ನು ಮುಚ್ಚಿ ಕಟ್ಟಬೇಕು. ವೈದ್ಯನು ಜಾಗರೂಕತೆಯಿಂದ ರೋಗಿಯ ಪ್ರಾಣಕ್ಕೆ ತೊಂದರೆಯುಂಟಾಗದಂತೆ ಅನೇಕ ಸಾರಿ ಕ್ಷಾರ, ಅಗ್ನಿದಾಹಗಳನ್ನೂ ಶಸ್ತ್ರದಿಂದ ಭೇದನನ್ನು ಮಾಡಿಸಬೇಕು. ಸೊಗದೆ, ಜಾಜಿ, ಕಣಿಗಲೆ ಸೊಪ್ಪುಗಳ ಕಷಾಯದಿಂದ ವ್ರಣವನ್ನು ತೊಳೆಯಬೇಕು. ವ್ರಣವು ಶುದ್ಧಿಯಾದಮೇಲೆ ಗಂಟುಪರಂಗಿ, ವಿಡಂಗ, ಅಗಳುಶುಂಠಿ, ತ್ರಿಫಲೆ ಇವುಗಳನ್ನು ಸೇರಿಸಿ ತಯಾರಿಸಿದ ತೈಲವನ್ನು ಲೇಪಿಸಬೇಕು. ಚಿಕಿತ್ಸಾಕ್ರಮವನ್ನು ತಿಳಿದ ವೈದ್ಯನು ತನಗೆ ತಾನೇ ಪಾಕವಾದ ವ್ರಣಗಳನ್ನು ಪಾಕವಿಧಾನದಿಂದಲೇ ಉಪಚರಿಸಬೇಕು.

ಮೇದೋಽರ್ಬುದಂ ಸ್ವಿನ್ನಮಥೋ ವಿದಾರ್ಯ ವಿಶೋಧ್ಯ ಸೀವ್ಯೇದ್ಗತರಕ್ತಮಾಶು । ತತೋ ಹರಿದ್ರಾಗೃಹಧೂಮರೋಧ್ರಪತಙ್ಗಚೂರ್ಣೈಃ ಸಮನಃಶಿಲಾಲೈಃ ॥೧೧॥ ವ್ರಣಂ ಪ್ರತಿಗ್ರಾಹ್ಯ ಮಧುಪ್ರಗಾಢೈಃ ಕರಞ್ಜತೈಲಂ ವಿದಧೀತ ಶುದ್ಧೇ । ಸಶೇಷದೋಷಾಣಿ ಹಿ ಯೋಽರ್ಬುದಾನಿ ಕರೋತಿ ತಸ್ಯಾಶು ಪುನರ್ಭವನ್ತಿ ॥೧೨॥ ತಸ್ಮಾದಶೇಷಾಣಿ ಸಮುದ್ಧರೇತ್ತು ಹನ್ಯುಃ ಸಶೇಷಾಣಿ ಯಥಾಡಿವಹ್ನಿಃ ।

ಮೇದೋವೃದ್ಧಿಯಿಂದುಂಟಾದ ಅರ್ಬುದವನ್ನು ಉಪನಾಹದಿಂದ ಸ್ವೇದಮಾಡಿ ಶಸ್ತ್ರದಿಂದ ಸೀಳಿ ರಕ್ತ ಮತ್ತು ಮೇದಸ್ಸುಗಳನ್ನು ಶೋಧಿಸಿ ವ್ರಣವನ್ನು ಹೊಲಿಯಬೇಕು. ಅನಂತರ ಅರಿಶಿನ. ಇಲ್ಲಣ, ರೋಧ್ರ, ಪತಂಗದಚಕ್ಕೆ, ಮಣಿಶಿಲೆ, ಅರಿದಳ, ಇವುಗಳ ಚೂರ್ಣವನ್ನು ಹೆಚ್ಚು ಜೇನುತುಪ್ಪದಿಂದ ರಂಗಳಿಸಿ ಲೇಪಿಸಿ ಶುದ್ಧಿಯಾದ ಮೇಲೆ ಹೊಂಗೆ ಎಣ್ಣೆಯಿಂದ ವ್ರಣಲೇಪನಮಾಡಬೇಕು. ಅರ್ಬುದವು ಸ್ವಲ್ಪ ಶೇಷ ನಿಂತರೂ ಪುನಃ ಬೆಂಕಿಯಂತೆ ವೃದ್ಧಿಹೊಂದಿ ಸರ್ವನಾಶವನ್ನೇ ಉಂಟುಮಾಡುತ್ತದೆಯಾಗಿ ಅದನ್ನು ಬುಡಸಹಿತವಾಗಿ ಹೊರಕ್ಕೆ ತೆಗೆದುಬಿಡಬೇಕು.

ಸಂಸ್ವೇದ್ಯ ಗಂಡಂ ಪವನೋತ್ಥಮಾದೌ ನಾಡ್ಯಾನಿಲಘ್ನೌಷಧಪತ್ರಭಙ್ಗೈಃ ||೪೩||
ಅಮ್ಲೈಃ ಸಮೂತ್ರೈರ್ವಿವಿಧೈಃ ಪಯೋಭಿರುಷ್ಣೈಃ ಸತೈಲೈಃ ಪಿಶಿತೈಶ್ಚ ವಿದ್ವಾನ್ | ವಿಸ್ರಾವ
ಯೇತ್ ಸ್ವಿನ್ನಮತನ್ದ್ರಿತಶ್ಚ ಶುದ್ಧಂ ವ್ರಣಂ ಚಾಪ್ಯುಪನಾಹಯೇತ್ತು ||೪೪|| ಶಣಾತಸೀ
ಮೂಲಕಶಿಗ್ರುಕಿಣ್ವ ಪ್ರಿಯಾಲಮಜ್ಜಾನುಯುತೈಸ್ತಿಲೈಸ್ತು | ಕಾಲಾಮೃತಾಶಿಗ್ರುಪುನರ್ನವಾರ್ಕ
ಗಜಾದಿನಾಮಾಕರಹಾಲಕುಷ್ಠೈಃ ||೪೫|| ಏಕೈಷಿಕಾ ವೃಕ್ಷಕತಿಲ್ವಕೈಶ್ಚ ಸುರಾಮ್ಲಪಿಷ್ಟೈ ರಸಕೃ
ದ್ವಿದಿಹ್ಯಾತ್ ||೪೬|| ತೈಲಂ ಪಿಬೇಚ್ಚಾಮೃತವಲ್ಲಿನಿಮ್ಬಹಂಸಾಹ್ವಯಾವೃಕ್ಷಕಪಿಪ್ಪಲೀಭಿಃ |
ಸಿದ್ಧಂ ಬಲಾಭ್ಯಾಂ ಚ ಸದೇವದಾರು ಹಿತಾಯ ನಿತ್ಯಂ ಗಳಗಂಡರೋಗೇ ||೪೭||

ವಾತದಿಂದ ಉಂಟಾದ ಗಳಗಂಡವನ್ನು ಮೊದಲು ಹರಳಿಲೆ ಮೊದಲಾದ ವಾತಹರ ಪತ್ರಗಳ ಕಷಾಯವನ್ನಾಗಲೀ ಕಾಂಜಿಕ, ಗೋಮೂತ್ರ, ಹಾಲು ಇವುಗಳನ್ನು ಬಿಸಿಮಾಡಿಯಾಗಲೀ ತೈಲ, ಮಾಂಸಗಳನ್ನು ಬಿಸಿಮಾಡಿಯಾಗಲೀ ಸ್ವೇದಮಾಡಿಸಿದ ನಂತರ ಶಸ್ತ್ರದಿಂದ ಭೇದಿಸಿ ದೋಷವು ಹೊರಕ್ಕೆ ಸುರಿಯುವಂತೆಮಾಡಿ ಶುದ್ಧವಾದ ವ್ರಣಕ್ಕೆ ಉಪನಾಹ ಮಾಡಿಸಬೇಕು. ಹೇಗೆಂದರೆ—ಶಣಬಿನಬೀಜ, ಸೀಮೆ ಅಗಸೆಯಬೀಜ, ಮೂಲಂಗಿಯಬೀಜ, ಮದ್ಯದಗಸ್ಟು, ಚಾರಪೊಪ್ಪು, ಎಳ್ಳು, ಜಟಾಮಾಂಸಿ, ಅಮೃತವಳ್ಳಿ, ನುಗ್ಗೆಬೀಜ, ಕೊಮ್ಮೆಬೇರು, ಎಕ್ಕದಬೇರು, ಗಜಹಿಪ್ಪಲಿ, ಮಗ್ಗಾರಿಕಾಯಿ, ಚಂಗಲ್‌ಕೋಷ್ಠ, ಕೆಂಪುತಿಗಡೆ, ಕೊಡಶಿಗೆಬೀಜ, ರೋಧ್ರ ಇವುಗಳನ್ನು ಮದ್ಯದಿಂದಲೂ ಹುಳಿ ಕಲಗಚ್ಚು ಮೊದಲಾದುವುಗಳಿಂದಲೂ ಅರೆದು ಕಲ್ಕಮಾಡಿ ಅನೇಕಾವರ್ತಿ ಗಳಗಂಡಕ್ಕೆ ಲೇಪನಮಾಡಬೇಕು. ಮತ್ತು ಅಮೃತವಳ್ಳಿ, ಬೇವು, ಹಂಸಪಾದೀಸೊಪ್ಪು, ಕೊಡಶಿಗೆ ತೊಗಟೆ, ಹಿಪ್ಪಲಿ, ಕಳ್ಳಂಗಡಲೆಬೇರು, ದೇವದಾರು ಇವುಗಳನ್ನೂ ಸೇರಿಸಿ ತೈಲಪಾಕ ಪಾನಮಾಡಿಸಬೇಕು.

ಸ್ವೇದೋಪನಾಹೈಃ ಕಫಸಂಭವಂ ತು ಸಂಸ್ವೇದ್ಯ ವಿಸ್ರಾವಣಮೇವ ಕುರ್ಯಾತ್ |
ತತೋಽಜಗನ್ಧಾತಿವಿಷಾವಿಶಲ್ಯಾವಿಷಾಣಿಕಾಕುಷ್ಠಶುಕಾಹ್ವಯಾಭಿಃ ||೪೮|| ಪಲಾಶಭಸ್ಮೋದಕ
ಪೇಷಿತಾಭಿರ್ದಿಹ್ಯಾತ್ ಸಗುಞ್ಜಾಭಿರಶೀತಲಾಭಿಃ | ದಶಾರ್ಧಸಂಖ್ಯೈರ್ಲವಣೈಶ್ಚ ಯುಕ್ತಂ
ತೈಲಂ ಪಿಬೇನ್ಮಾಗಧಿಕಾದಿಸಿದ್ಧಮ್ ||೪೯|| ಪ್ರಚ್ಛರ್ದನಂ ಮೂರ್ಧವಿರೇಚನಂ ಚ ಧೂಮಶ್ಚ
ವೈರೇಚನಿಕೋ ಹಿತಸ್ತು | ಪಾಕಕ್ರಮೋಽಪಿ ಸದಾ ವಿಧೇಯೋ ವೈದ್ಯೇನ ಪಾಕಂಗತಯೋಃ
ಕಥಞ್ಚಿತ್ ||೫೦|| ಕಟುತ್ರಿಕಕ್ಷೌದ್ರಯುತಾಃ ಸಮೂತ್ರಾ ಭಕ್ಷ್ಯಾ ಯವಾನ್ನಾನಿ ರಸಾಶ್ಚ
ಮೌದ್ಗಾಃ | ಸಶೃಙ್ಗವೇರಾಃ ಸಪಟೋಲನಿಮ್ಬಾ ಹಿತಾಯ ದೇಯಾ ಗಳಗಂಡರೋಗೇ ||೫೧||

ಕಫದಿಂದುಂಟಾದ ಗಳಗಂಡರೋಗವನ್ನು ಬಿಸಿಯಾದ ಕಷಾಯಗಳನ್ನು ಸುರಿದಾಗಲೀ ಹೋಳಿಗೆ ಹಿಟ್ಟು ಮೊದಲಾದುವನ್ನು ಬೇಯಿಸಿ ಗಳಗಂಡದಮೇಲೆ ಮುಚ್ಚಿಯಾಗಲೀ ಬೆವರಿಸಿ ಶಸ್ತ್ರದಿಂದ ಕತ್ತರಿಸಿ ದೋಷಗಳನ್ನು ಹೊರಡಿಸಿದ ಮೇಲೆ ನಾರಂಬೇಳಿ, ಅತಿಬಜೆ, ಕೋಳಿಕುಟುಮ, ಎಡಮುರಿಕಾಯಿ (ಕರ್ಕಾಟಕಶೃಂಗೀ), ಚಂಗಲ್‌ಕೋಷ್ಠ, ಹೆಮ್ಮರದತೊಗಟೆ ಇವುಗಳನ್ನು ಮುತ್ತುಗದ ಕ್ಷಾರಕದರಿಂದ ನೀರಿನಿಂದ

ಅರೆದು ಕಲ್ಕ ಮಾಡಿ ಗುಲಗಂಜಿಯ ಕಲ್ಕ ಪಂಚಲವಣಗಳನ್ನು ಸೇರಿಸಿ ಪಾಕಮಾಡಿದ ತೈಲದಿಂದ ಲೇಪಿಸಬೇಕು. ಪಿಪ್ಪಲಿ ಮೊದಲಾದ ಗಣದ್ರವ್ಯಗಳ ಚೂರ್ಣವನ್ನು ತೈಲವು ಪಾಕವಾಗುವಾಗ ಹಾಕಬೇಕು. ಆಕಸ್ಮಿಕವಾಗಿ ಪಾಕವಾದ ವಾತ ಕಫ ಗಳಗಂಡದಲ್ಲಿ ವಮನ, ವಿರೇಚನ, ಶಿರೋವಿರೇಚನ, ಧೂಮಪಾನಗಳನ್ನು ಮಾಡಿಸಬೇಕು. ಗಳಗಂಡ ಗಳ ಸಾಮಾನ್ಯ ಚಿಕಿತ್ಸಾವಿಧಾನವು–ತ್ರಿಕಟು, ಜೇನುತುಪ್ಪಗಳನ್ನು ಮಿಶ್ರಮಾಡಿದ ಭಕ್ಷ್ಯ ಗಳು, ಯವೆಯಅನ್ನ, ಶುಂಠಿ, ಬೇವು, ಕಹಿಪಡವಲಗಳನ್ನು ಸೇರಿಸಿ ತಯಾರಿಸಿದ ಹೆಸರುಕಟ್ಟು ಇವು ಹಿತಕರಗಳು.

ಮೇದಃಸಮುತ್ಥೇ ತು ಯಥೋಪದಿಷ್ಟಾಂ ವಿಧ್ಯೇಚ್ಛಿರಾಂ ಸ್ನಿಗ್ಧತನೋರ್ನರಸ್ಯ । ಶ್ಯಾಮಾಸುಧಾಲೋಹಪುರೀಷದನ್ತೀ ರಸಾಞ್ಜನೈಶ್ಚಾಪಿಹಿತಃ ಪ್ರದೇಹಃ ||೫೨|| ಮೂತ್ರೇಣ ವಾಲೋಡ್ಯಹಿತಾಯ ಸಾರಂ ಪ್ರಾತಃ ಪಿಬೇತ್ ಶಾಲಮಹೀರುಹಾಣಾಮ್ । ಶಸ್ತ್ರೇಣ ವಾ ಪಾಟ್ಯ ವಿದಾರ್ಯ ಚೈನಂ ಮೇದಃ ಸಮುದ್ಧೃತ್ಯ ಹಿತಾಯ ಸೀವ್ಯೇತ್ ||೫೩|| ಮಜ್ಜಾಜ್ಯ ಮೇದೋ ಮಧುಭಿರ್ದಹೇದ್ವಾ ದಗ್ಧೇ ಚ ಸರ್ಪಿರ್ಮಧು ಚಾವಚಾರ್ಯಮ್ । ಕಾಸೀಸತುತ್ಥೇ ಚ ತತೋಽತ್ರ ದೇಯೇ ಚೂರ್ಣೀಕೃತೇ ರೋಚನಯಾ ಸಮೇತೇ ||೫೪|| ತೈಲೇನ ಚಾಭ್ಯಜ್ಯ ಹಿತಾಯ ದದ್ಯಾತ್ ಸಾರೋದ್ಭವಂ ಗೋಮಯಜಂ ಚ ಭಸ್ಮ । ಹಿತಶ್ಚ ನಿತ್ಯಂ ತ್ರಿಫಲಾ ಕಷಾಯೋಗಾಢಶ್ಚ ಬನ್ಧೋ ಯವಭೋಜನಂ ಚ ||೫೫||

ಮೇದೋವೃದ್ಧಿಯಿಂದುಂಟಾದ ಗಳಗಂಡದಲ್ಲಿ ಊರುಸಂಧಿಯಲ್ಲಿರುವ ಸಿರೆಯನ್ನು ರೋಗಿಗೆ ಸ್ನೇಹಕರ್ಮಮಾಡಿಸಿದ ಮೇಲೆ ವೇಧಿಸಿ ತಿಗಡೆ, ಮುಂಡುಗಳ್ಳಿಹಾಲು, ಮಂಡೂರದಪುಡಿ (ಲೋಹಮಲ), ಜಾಪಾಳದತೊಗಟೆ, ರಸಾಂಜನ ಇವುಗಳ ಚೂರ್ಣ ದಿಂದ ಗಳಗಂಡವನ್ನು ತಿಕ್ಕಬೇಕು. ಸರ್ಜವೃಕ್ಷದ ಸಾರವನ್ನು ಬೆಳಗಿನಹೊತ್ತು ಗೋ ಮೂತ್ರದಲ್ಲಿ ಕದರಿ ಕುಡಿಸಬೇಕು. ಶಸ್ತ್ರದಿಂದ ಗಳಗಂಡವನ್ನು ಕತ್ತರಿಸಿ ಮೇದಸ್ಸನ್ನು ಹೊರಡಿಸಿ ಸುಖವಾಗಿ ಹೊಲಿಯಬೇಕು. ಮಜ್ಜೆ, ತುಪ್ಪ, ಮೇದಸ್ಸು, ಜೇನುತುಪ್ಪ ಇವುಗಳನ್ನು ಕಾಯಿಸಿ ಗಳಗಂಡವನ್ನು ಸುಟ್ಟು ತುಪ್ಪ ಜೇನುತುಪ್ಪಗಳನ್ನು ರಂಗಳಿಸಿ ಬಳಿಯಬೇಕು. ಅನ್ನಭೇದಿ, ಮೈಲ್‌ತುತ್ಥ, ಗೋರೋಚನ ಇವುಗಳನ್ನು ಸಮಭಾಗ ದಿಂದ ಪುಡಿಮಾಡಿ ವ್ರಣದಮೇಲೆ ಉದುರಿಸಬೇಕು. ವ್ರಣವನ್ನು ತೈಲದಿಂದ ಅಭ್ಯಂಗ ಮಾಡಿಸಿ ಕರಿಯಸರ್ಜ ಮತ್ತು ಗೋಮಯವನ್ನು ಸುಟ್ಟು ಬಂದ ಬೂದಿಯನ್ನು ವ್ರಣದ ಮೇಲೆ ಉದುರಿಸಬೇಕು. ಈ ಗಳಗಂಡ ಮೊದಲಾದ ರೋಗಗಳಲ್ಲಿ ವ್ರಣಕ್ಷಾಳ ನೆಗೆ ತ್ರಿಫಲಾ ಕಷಾಯವನ್ನು ಉಪಯೋಗಿಸಿ ವ್ರಣವನ್ನು ಬಿಗಿದು ಕಟ್ಟಬೇಕು. ಯವೆಯ ಅನ್ನವನ್ನೇ ಭೋಜನಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಗ್ರನ್ಥ್ಯಪಚ್ಯರ್ಬುದಗಳಗಂಡಚಿಕಿತ್ಸಾ
ನಾಮ ಅಷ್ಟಾದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ
ಶ್ರೀಲಕ್ಷ್ಮೀನೃಸಿಂಹ ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಏಕೋನವಿಂಶೋಽಧ್ಯಾಯಃ

ಅಥಾತೋ ವೃದ್ಧ್ಯುಪದಂಶಶ್ಲೀಪದಾನಾಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ವೃದ್ಧ್ಯುಪದಂಶಶ್ಲೀಪದಗಳ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಅನ್ತ್ರವೃದ್ಧ್ಯಾವಿನಾ ಪಡ್ವ್ಯಾ ವೃದ್ಧಯಸ್ತಾಸು ವರ್ಜಯೇತ್ ।
ಅಶ್ವಾದಿಯಾನಂ ವ್ಯಾಯಾಮಂ ಮೈಥುನಂ ವೇಗನಿಗ್ರಹಮ್ ||೩||
ಅತ್ಯಾಸನಂ ಚಂಕ್ರಮಣಮುಪವಾಸಂ ಗುರೂಣಿ ಚ ।

ಅನ್ತ್ರವೃದ್ಧಿಯನ್ನು ಬಿಟ್ಟು ಉಳಿದ ವಾತ, ಪಿತ್ತ, ಕಫ, ರಕ್ತ, ಮೇದಸ್ಸು, ಮೂತ್ರವೃದ್ಧಿಗಳೆಂಬ ಆರು ವಿಧ ವೃದ್ಧಿರೋಗಗಳಲ್ಲೂ ಕುದುರೆ, ಆನೆ, ರಥ ಮೊದಲಾದುವುಗಳ ಮೇಲೆ ಕೂತು ಸವಾರಿಮಾಡುವುದು, ಅಂಗಸಾಧನೆ, ಸ್ತ್ರೀಸಂಗ, ಮಲಮೂತ್ರ, ಅಧೋವಾತ ಮೊದಲಾದ ಸ್ವಾಭಾವಿಕಗಳಾದ ವೇಗಗಳನ್ನು ತಡೆಯುವುದು ಅತಿಯಾಗಿ ಕೂಡುವುದು, ಅತಿಯಾಗಿ ದಾರಿ ನಡೆಯುವುದು ಇವುಗಳನ್ನು ತ್ಯಜಿಸಬೇಕು.

ತತ್ಪ್ರುದಿತೋ ವಾತವೃದ್ಧೌ ತ್ರೈವೃತಸ್ನಿಗ್ಧಮಾತುರಮ್ ||೪||
ಸ್ವಿನ್ನಂ ಚೈನಂ ಯಥಾನ್ಯಾಯಂ ಪಾಯಯೇತ ವಿರೇಚನಮ್ ।
ಕೋಶಾಮ್ರ ತಿಲ್ವಕೈರಣ್ಡಫಲತೈಲಾನಿ ವಾ ನರಮ್ ||೫||
ಸಕ್ಷೀರಂ ವಾ ಪಿಬೇನ್ಮಾಸಂ ತೈಲಮೇರಣ್ಡಸಂಭವಮ್ ।
ತತಃ ಕಾಲೇಽನಿಲಘ್ನಾನಾಂ ಕ್ವಾಥೈಃ ಕಲ್ಕೈಶ್ಚ ಬುದ್ಧಿಮಾನ್ ||೬||
ನಿರೂಹಯೇನ್ನಿರೂಢಂ ಚ ಭುಕ್ತವನ್ತಂ ರಸೌದನಮ್ ।
ಯಷ್ಟೀಮಧುಕಸಿದ್ಧೇನ ತತಸ್ತೈಲೇನ ಯೋಜಯೇತ್ ||೭||
ಸ್ನೇಹೋಪನಾಹೌ ಕುರ್ಯಾಚ್ಚ ಪ್ರದೇಹಾಂಶ್ಚಾನಿಲಾಪಹಾನ್ ।
ವಿದಗ್ಧಂ ಪಾಚಯಿತ್ವಾ ವಾ ಸೇವನೀಂ ಪರಿವರ್ಜಯೇತ್ ||೮||
ಭಿನ್ದ್ಯಾತ್ ತತಃ ಪ್ರಭಿನ್ನಾಯಾಂ ಯಥೋಕ್ತಂ ಕ್ರಮಮಾಚರೇತ್ ।

ಈ ಪೈಕಿ ವಾತವೃದ್ಧಿಯು ಪ್ರಾರಂಭವಾದ ಲಾಗಾಯಿತು ತೈಲ, ತುಪ್ಪ, ವಸೆಗಳೆಂಬ ತ್ರಿವೃತ್ಸ್ನೇಹವನ್ನು ಕುಡಿಸಿ ಸ್ನಿಗ್ಧನಾದ ರೋಗಿಗೆ ಸ್ವೇದಕರ್ಮಮಾಡಿಸಿದ ನಂತರ ಕ್ರಮವಾಗಿ ಕೋಶಾಮ್ರ, ರೋಧ್ರ, ಹರಳುಬೀಜ ಇವುಗಳಿಂದ ತೆಗೆದ ತೈಲವನ್ನು ಕುಡಿಸಿ ವಿರೇಚನ ಮಾಡಿಸಬೇಕು. ಅಥವಾ ೧ ಮಾಸದವರೆಗೆ ಹಾಲಿನೊಡನೆ ಹರಳೆಣ್ಣೆಯನ್ನು ಮಿಶ್ರಮಾಡಿ ಕುಡಿಸಿ ಕಾಲಕಾಲಕ್ಕೆ ಸರಿಯಾಗಿ ವಾತಹರಗಳಾದ ಭದ್ರದಾರ್ವಾದಿ

ಗಳ ಕಷಾಯ ಕಲ್ಕಗಳನ್ನು ಸೇರಿಸಿ ನಿರೂಹಬಸ್ತಿಯನ್ನು ಪ್ರಯೋಗಿಸಿ ಆ ನಿರೂಹದ್ರವ್ಯವು ಹೊರಕ್ಕೆ ಬಂದಮೇಲೆ ಮಾಂಸದೊಡನೆ ಅನ್ನವನ್ನು ಭೋಜನ ಮಾಡಿಸಿ ಅತಿಮಧುರ ತೈಲದಿಂದ ಅನುವಾಸನಬಸ್ತಿಯನ್ನು ಪ್ರಯೋಗಿಸಿ ವಾತಹರ ಸ್ನೇಹಗಳ ಪಾನವನ್ನೂ ಉಪನಾಹಸ್ವೇದ ಪ್ರಲೇಪಗಳನ್ನೂ ಮಾಡಿಸಬೇಕು. ವಿದಗ್ಧಾವಸ್ಥೆಯಲ್ಲಿದ್ದರೆ ಪಕ್ವವಾಗುವಂತೆಮಾಡಿ ಸೇವನಿಯನ್ನು ಬಿಟ್ಟು ವೃದ್ಧಿಯನ್ನು ಶಸ್ತ್ರದಿಂದ ಭೇದಿಸಿ ದ್ವಿವ್ರಣೀಯ ಚಿಕಿತ್ಸೆಯಲ್ಲಿ ಹೇಳಿರುವಂತೆ ವ್ರಣೋಪಚಾರವನ್ನು ಮಾಡಬೇಕು.

ಪಿತ್ತಜಾಯಾಮಪಕ್ವಾಯಾಂ ಪಿತ್ತಗ್ರನ್ಥಿಕ್ರಮೋಹಿತಃ ॥೯॥
ಪಕ್ವಾಂ ವಾ ಭೇದಯೇದ್ಭಿನ್ನಾಂ ಶೋಧಯೇತ್ ಕ್ಷೌದ್ರಸರ್ಪಿಷಾ ।
ಶುದ್ಧಾಯಾಂ ಚ ಭಿಷಗ್ದದ್ಯಾತ್ತೈಲಂ ಕಲ್ಕಂ ಚ ರೋಪಣಮ್ ॥೧೦॥
ರಕ್ತಜಾಯಾಂ ಜಲೌಕೋಭಿಃ ಶೋಣಿತಂ ನಿರ್ಹರೇದ್ಭಿಷಕ್ ।
ಪಿಬೇದ್ವಿರೇಚನಂ ವಾಪಿ ಶರ್ಕರಾಕ್ಷೌದ್ರ ಸಂಯುತಮ್ ॥೧೧॥
ಪಿತ್ತಗ್ರನ್ಥಿಕ್ರಮಂ ಕುರ್ಯಾದಾಮೇ ಪಕ್ವೇ ಚ ಸರ್ವದಾ ।

ಅಪಕ್ವವಾದ ಪಿತ್ತವೃದ್ಧಿಯಲ್ಲಿ ಪಿತ್ತಗ್ರಂಥಿಗೆ ಮಾಡುವಂತೆ ರೋಪಣತೈಲ ಕಲ್ಕಗಳನ್ನು ಪ್ರಯೋಗಿಸಬೇಕು. 'ಪಕ್ವವಾದರೆ ಶಸ್ತ್ರದಿಂದ ಭೇದಿಸಿ ಜೇನುತುಪ್ಪ ತುಪ್ಪಗಳನ್ನು ಲೇಪಿಸಿ ದುಷ್ಟಕೀವು ರಕ್ತಗಳನ್ನು ಸುರಿಸಿ ವ್ರಣ ಶುದ್ಧಿಯಾಗುವಂತೆ ಮಾಡಿ ರೋಪಣತೈಲವನ್ನೂ ಕಲ್ಕವನ್ನೂ ಪ್ರಯೋಗಿಸಬೇಕು. ರಕ್ತಜನಿತ ವೃದ್ಧಿಯಲ್ಲಿ ವೈದ್ಯನು ಜಿಗುಳೆಯನ್ನು ವೃದ್ಧಿಗೆ ಕಚ್ಚಿಸಿ ರಕ್ತಹರಣ ಮಾಡಿಸಬೇಕು. ಸಕ್ಕರೆ, ಜೇನು ತುಪ್ಪಗಳನ್ನು ಮಿಶ್ರಮಾಡಿದ ವಿರೇಚನೌಷಧವನ್ನು ಕುಡಿಸಬೇಕು. ಆಮಾವಸ್ಥೆ ಪಕ್ವಾವಸ್ಥೆಗಳಲ್ಲಿ ಪಿತ್ತಗ್ರನ್ಥಿ ಚಿಕಿತ್ಸೆಯನ್ನೇ ಮಾಡಿಸಬೇಕು.

ವೃದ್ಧಿಂ ಕಫಾತ್ಮಿಕಾಮುಷ್ಣೈರ್ಮೂತ್ರಪಿಷ್ಟೈಃ ಪ್ರಲೇಪಯೇತ್ ॥೧೨॥
ಪೀತದಾರುಕಷಾಯಂ ಚ ಪಿಬೇನ್ಮೂತ್ರೇಣ ಸಂಯುತಮ್ ।
ವಿಮ್ಲಾಪನಾದೃತೇ ವಾಪಿ ಶ್ಲೇಷ್ಮಗ್ರಂಥಿಕ್ರಮೋ ಹಿತಃ ॥೧೩॥
ಪಕ್ವಾಯಾಂ ಚ ವಿಭಿನ್ನಾಯಾಂ ತೈಲಂ ಶೋಧನಮಿಷ್ಯತೇ ।
ಸುಮನಾರುಷ್ಕರಾಜಿತ್ಯಂಕೋಟಸಪ್ತಪರ್ಣೇಷು ಸಾಧಿತಮ್ ॥೧೪॥

ಕಫಜ ಅನ್ತ್ರವೃದ್ಧಿಯಲ್ಲಿ ಉಷ್ಣವೀರ್ಯಗಳಾದ ವಚಾದಿಗಣ, ಪಿಪ್ಪಲ್ಯಾದಿಗಣ, ಮುಷ್ಕಕಾದಿಗಣಗಳಲ್ಲಿ ಹೇಳಿದ ದ್ರವ್ಯಗಳನ್ನು ಗೋಮೂತ್ರದಿಂದ ಅರೆದು ಕಲ್ಕಮಾಡಿ ಲೇಪಿಸಬೇಕು. ಮರದರಿಶಿನದ ಕಷಾಯಕ್ಕೆ ಗೋಮೂತ್ರವನ್ನು ಸೇರಿಸಿ ಕುಡಿಸಬೇಕು. ವಿಮ್ಲಾಪನವನ್ನು (ಹೆಬ್ಬೆಟ್ಟು, ಬಿದುರುಕೋಲು ಮೊದಲಾದುವುಗಳಿಂದ ಗ್ರಂಥಿಯನ್ನು ಪೀಡಿಸಿ ಮೆತ್ತಗೆಮಾಡುವ ವಿಧಾನ) ಬಿಟ್ಟು ಉಳಿದ ಕಫ ಗ್ರಂಥಿಯ ಚಿಕಿತ್ಸೆ ಮಾಡಿಸುವುದು ಹಿತಕರವಾದದ್ದು. ಒಡೆದುಹೋದರೆ ಜಾಜಿ ಸೊಪ್ಪು, ಗೇರುಹರಳು,

ಅಂಕೋಲೆಬೇರಿನ ಚೂರ್ಣ, ಮದ್ಧಾಲೆತೊಗಟೆ ಇವುಗಳನ್ನು ಸೇರಿಸಿ ತಯಾರಿಸಿದ ತೈಲ ದಿಂದ ಶೋಧನೆ ಮಾಡಿಸಬೇಕು.

ಮೇದಃಸಮುತ್ಥಾಂ ಸಂಸ್ವೇದ್ಯ ಲೇಪಯೇತ್ ಸುರಸಾದಿನಾ ।
ಶಿರೋವಿರೇಕದ್ರವ್ಯೈರ್ವಾ ಸುಖೋಷ್ಣೈರ್ಮೂತ್ರಸಂಯುತೈಃ ॥೧೫॥
ಸ್ವಿನ್ನಾಂ ಚಾವೇಷ್ಟ್ಯ ಪಟ್ಟೇನ ಸಮಾಶ್ವಾಸ್ಯ ತು ಮಾನವಮ್ ।
ರಕ್ಷೇತ್ ಫಲೇ ಸೇವನೀಂ ಚ ವೃದ್ಧಿಪತ್ರೇಣ ದಾರಯೇತ್ ॥೧೬॥
ಮೇದಸ್ತತಃ ಸಮುದ್ಧೃತ್ಯ ದದ್ಯಾತ್ ಕಾಸೀಸಸೈನ್ಧವೇ ।
ಬಧ್ನೀಯಾಚ್ಚ ಯಥೋದ್ದಿಷ್ಟಂ ಶುದ್ಧೇ ತೈಲಂ ಚ ದಾಪಯೇತ್ ॥೧೭॥
ಮನಃಶಿಲಾಲಲವಣೈಃ ಸಿದ್ಧಮಾರುಷ್ಕರೇಷು ಚ ।

ಮೇದಸ್ಸಿನಿಂದುಂಟಾದ ಅನ್ತ್ರವೃದ್ಧಿಯನ್ನು ಸ್ವೇದಮಾಡಿಸಿ ಸುರಸಾದಿಗಣ ದ್ರವ್ಯ ಗಳ ಕಲ್ಕದಿಂದಾಗಲೀ ಶಿರೋವಿರೇಚನ ದ್ರವ್ಯಗಳನ್ನು (ಹಿಪ್ಪಲಿ, ವಿಡಂಗ, ಉತ್ತರಣೆ ಬೀಜ, ಬಾಗೆಬೀಜ, ಸಾಸಿವೆಗಳ ಚೂರ್ಣ) ಗೋಮೂತ್ರದಿಂದ ಕಲ್ಕಮಾಡಿ ಬೆಂಕಿಯಲ್ಲಿ ಕಾಯಿಸಿ ಸುಖೋಷ್ಣವಾಗುವಂತೆ ಲೇಪಿಸಬೇಕು. ಸ್ವೇದಮಾಡಿಸಿದ ನಂತರ ಗೋಮೂತ್ರ ಬಂಧದಿಂದ ಚರ್ಮಪಟ್ಟಿ ಅಥವಾ ಹತ್ತಿಬಟ್ಟೆಯಿಂದ ಬಿಗಿದು ರೋಗಿಯನ್ನು ಸಮಾಧಾನ ಮಾಡಿ ಅಂಡಕೋಶವನ್ನೂ ಸೀವನಿಯನ್ನೂ (ಗುದದಿಂದ ಶಿಶ್ನದವರೆಗಿರುವ ಹೊಲಿಗೆ) ಬಿಟ್ಟು ವೃದ್ಧಿಪತ್ರವೆಂಬ ಚೂರಿಯಿಂದ ವೃದ್ಧಿಯನ್ನು ಭೇದಿಸಿ ಮೇದಸ್ಸನ್ನು ಹೊರಕ್ಕೆ ತೆಗೆದು ಅನ್ನಭೇದಿ ಮತ್ತು ಸೈಂಧವಲವಣಗಳ ಪುಡಿಯನ್ನು ತುಂಬಿ ಪಟ್ಟಿ ಕಟ್ಟಬೇಕು. ಮೇದಸ್ಸು ಕರಗಿ ಸುರಿದು ವ್ರಣಶುದ್ಧಿಯಾದ ಮೇಲೆ ಮಣಶಿಲೆ, ಅರಿದಳ ಸೈಂಧವಗಳನ್ನು ಸೇರಿಸಿ ಗೇರೆಣ್ಣೆಯಲ್ಲಿ ತಯಾರಿಸಿದ ತೈಲವನ್ನು ಲೇಪಿಸಬೇಕು.

ಮೂತ್ರಜಾಂ ಸ್ವೇದಯಿತ್ವಾ ತು ವಸ್ತ್ರಪಟ್ಟೇನ ವೇಷ್ಟಯೇತ್ ॥೧೮॥
ಸೇವನ್ಯಾಃ ಪಾರ್ಶ್ವತೋಽಧಸ್ತಾದ್ವಿಧ್ಯೇತ್ ವ್ರೀಹಿಮುಖೇನ ತು ।
ಅಥಾತ್ರ ದ್ವಿಮುಖಾಂ ನಾಡೀಂ ದತ್ವಾ ವಿಸ್ರಾವಯೇದ್ಭಿಷಕ್ ॥೧೯॥
ಮೂತ್ರಂ ನಾಡೀಮಥೋದ್ಧೃತ್ಯ ಸ್ಥಗಿಕಾಬನ್ಧಮಾಚರೇತ್ ।
ಶುದ್ಧಾಯಾಂ ರೋಪಣಂ ದದ್ಯಾದ್ವರ್ಜಯೇದನ್ತ್ರಹೇತುಕೀಮ್ ॥೨೦॥
ಅಪ್ರಾಪ್ತಫಲಕೋಶಾಯಾಂ ವಾತವೃದ್ಧಿಕ್ರಮೋ ಹಿತಃ ।
ತತ್ರ ಯಾವಚ್ಛ್ಣಸ್ಥಾನಂ ದಹೇದರ್ಧೇನ್ದುವಕ್ತ್ರಯಾ ॥೨೧॥
ಸಮ್ಯಙ್ಮಾರ್ಗಾವರೋಧಾರ್ಥಂ ಕೋಶಪ್ರಾಪ್ತಾಂ ತು ವರ್ಜಯೇತ್ ।
ತ್ವಚಂ ಭಿತ್ವಾಙ್ಗುಷ್ಠಮಧ್ಯೇ ದಹೇಚ್ಚಾಙ್ಗವಿಪರ್ಯಯಾತ್ ॥೨೨॥
ಅನೇನೈವ ವಿಧಾನೇನ ವೃದ್ಧೀ ವಾತಕಫಾತ್ಮಿಕೇ ।
ಪ್ರದಹೇತ್ ಪ್ರಯತಃ ಕಿನ್ತು ಸ್ನಾಯುಚ್ಛೇದೋಽಧಿಕಸ್ತಯೋಃ ॥೨೩॥
ಶಙ್ಖೋಪರಿ ಚ ಕರ್ಣಾನ್ತೇ ತ್ಯಕ್ತ್ವಾ ಯತ್ನೇನ ಸೇವನೀಮ್ ।
ವ್ಯತ್ಯಾಸಾದ್ವಾ ಸಿರಾಂ ವಿಧ್ಯೇದನ್ತ್ರವೃದ್ಧಿನಿವೃತ್ತಯೇ ॥೨೪॥

ಮೂತ್ರವೃದ್ಧಿಯನ್ನು ಸ್ವೇದಮಾಡಿಸಿ ದಪ್ಪನಾದ ಬಟ್ಟೆಯ ಪಟ್ಟಿಯನ್ನು ಬಿಗಿದು ಕಟ್ಟಬೇಕು. ಸೇವನಿಯ (ಗುದದಿಂದ ಶಿಶ್ನದವರೆಗಿನ ಹೊಲಿಗೆಯಂತಿರುವ ಪ್ರದೇಶ) ಪಕ್ಕದಲ್ಲಿ ಕೆಳಗಡೆಯಲ್ಲಿ ವ್ರೀಹಿಮುಖಶಸ್ತ್ರದಿಂದ ಚುಚ್ಚಿ ಎರಡು ಮುಖವುಳ್ಳ ಕೊಳವೆಯನ್ನು ಸಿಕ್ಕಿಸಿ ಮೂತ್ರವನ್ನೆಲ್ಲಾ ಸುರಿಸಿ ಕೊಳವೆಯನ್ನು ತೆಗೆದು ಸ್ಥಗಿಕಾಬನ್ಧವನ್ನು ಕಟ್ಟಬೇಕು. ಮೂತ್ರದೋಷವಿಲ್ಲದಿದ್ದರೆ ವ್ರಣರೋಪಣಮಾಡಬೇಕು. ಅನ್ತ್ರವು ಜಾರಿ ಅಂಡಕೋಶಕ್ಕೆ ಇಳಿದರೆ ಅಸಾಧ್ಯವು. ಕರುಳುಭಾಗವು ಅಂಡಕೋಶಕ್ಕೆ ಇಳಿಯದಿದ್ದಾಗ ವಾತಿಕಅನ್ತ್ರವೃದ್ಧಿಚಿಕಿತ್ಸೆಯನ್ನು ಮಾಡಬೇಕು. ತೊಡೆಯಸಂಧಿಗೆ ಅನ್ತ್ರವು ಜಾರಿದ್ದರೆ ಅರ್ಧಚಂದ್ರಾಕೃತಿಯ ತಂತಿಯನ್ನು ಕಾಯಿಸಿ ಅನ್ತ್ರಕ್ಕೆ ಬರೆ ಎಳೆಯಬೇಕು. ಇದರಿಂದ ಅನ್ತ್ರವು ಹಿಂದಕ್ಕೆ ಸರಿದು ತನ್ನ ಸ್ಥಾನದಲ್ಲಿ ನಿಂತುಬಿಡುತ್ತದೆ. ಅಂಡಕೋಶಕ್ಕೆ ಬಂದರೆ ತ್ಯಜಿಸಬೇಕು. ಕೈಹೆಬ್ಬೆಟ್ಟಿನ ಮಧ್ಯದಲ್ಲಿ ಚರ್ಮವನ್ನು ಕತ್ತರಿಸಿ ಕಾದಸಲಾಕೆಯಿಂದ ಬರೆಹಾಕಬೇಕು. ಎಡಭಾಗದಲ್ಲಿ ಅಂಡವೃದ್ಧಿಯಾದರೆ ಬಲಗೈ ಹೆಬ್ಬೆಟ್ಟಿಗೂ ಬಲಭಾಗದಲ್ಲಿ ಅಂಡವೃದ್ಧಿಯಾದರೆ ಎಡಗೈಹೆಬ್ಬೆಟ್ಟಿಗೂ ಮೇಲೆ ಬರೆ ಹಾಕಬೇಕು. ಈ ರೀತಿಯಾಗಿ ವಾತಕಫದಿಂದುಂಟಾದ ವೃದ್ಧಿಯನ್ನು ಚಿಕಿತ್ಸೆಮಾಡಬೇಕು.

ಈ ರೀತಿ ಬರೆಹಾಕುವಾಗ ವೈದ್ಯನು ಬಲು ಜಾಗರೂಕನಾಗಿರಬೇಕು. ಸ್ನಾಯುಚ್ಛೇದವೇ ಅಧಿಕ ಫಲಕಾರಿಯಾದದ್ದು. ಇದಲ್ಲದೆ ಅನ್ತ್ರವೃದ್ಧಿನಿವಾರಣೆಯಾಗಲು ಶಂಖಮರ್ಮದ ಮೇಲಿನ (ಕಿವಿಯ ಮೇಲ್ಗಡೆಯಲ್ಲಿರುವ) ಸಿರೆಯನ್ನು ಹುಷಾರಾಗಿ ಶಂಖಮರ್ಮದ ಸೀವನಿಯನ್ನು ಬಿಟ್ಟು ವೇಧಿಸಬೇಕು. ಬಲಗಡೆ ಅನ್ತ್ರವೃದ್ಧಿಯಾದರೆ ಎಡಭಾಗದ ಕಿವಿಯ ಮೇಲಿನ ಸಿರೆಯನ್ನೂ ಎಡಗಡೆ ವೃದ್ಧಿಯಾದರೆ ಬಲಭಾಗದ ಕಿವಿಯ ಮೇಲಿರುವ ಸಿರೆಯನ್ನೂ ವ್ಯತ್ಯಾಸ ಕ್ರಮದಿಂದ ವೇಧಿಸಬೇಕು.

ಉಪದಂಶೇಷು ಸಾಧ್ಯೇಷು ಸ್ನಿಗ್ಧಸ್ವಿನ್ನಸ್ಯ ದೇಹಿನಃ |
ಸಿರಾಂ ವಿಧ್ಯೇದ್ ಮೇಢ್ರಮಧ್ಯೇ ಪಾತಯೇದ್ವಾ ಜಲೌಕಸಃ ||೨೫||
ಹರೇದುಭಯತಶ್ಚಾಪಿ ದೋಷಾನತ್ಯರ್ಥಮುಚ್ಛ್ರಿತಾನ್ |
ಸದ್ಯೋಽಪಹೃತದೋಷಸ್ಯ ರುಕ್ ಶೋಫಾವುಪಶಾಮ್ಯತಃ ||೨೬||
ಯದಿ ವಾ ದುರ್ಬಲೋ ಜನ್ತುರ್ನವಾಪ್ರಾಪ್ತಂ ವಿರೇಚನಮ್ |
ನಿರೂಹೇಣ ಹರೇತ್ತಸ್ಯ ದೋಷಾನತ್ಯರ್ಥಮುಚ್ಛ್ರಿತಾನ್ ||೨೭||

ಸಾಧ್ಯವಾಗುವ ಉಪದಂಶವ್ರಣಗಳಲ್ಲಿ ರೋಗಿಗೆ ಸ್ನೇಹಸ್ವೇದಗಳಿಂದ ಉಪಚರಿಸಿ ಅಧಿಕದೋಷವಿದ್ದು ರೋಗಿಯು ಬಲಾಢ್ಯನಾಗಿದ್ದರೆ ಅವನ ಮೇಢ್ರದ ಮಧ್ಯಭಾಗದಲ್ಲಿರುವ ಸಿರೆಯನ್ನು ಚುಚ್ಚಿ ದುಷ್ಟರಕ್ತವನ್ನು ಸೋರಿಸಬೇಕು. ಅಲ್ಪದೋಷವಿದ್ದು ರೋಗಿಯು ದುರ್ಬಲನಾದರೆ ಜಿಗುಳೆಯನ್ನು ಕಚ್ಚಿಸಿ ದುಷ್ಟರಕ್ತಹರಣ ಮಾಡಿಸಬೇಕು. ಅತಿಯಾಗಿ ಉಲ್ಬಣವಾಗಿರುವ ದೋಷಗಳನ್ನು ವಮನ ವಿರೇಚನಗಳ ಮೂಲಕವಾಗಿ

ಹೊರಕ್ಕೆ ತೆಗೆದು ದೋಷಗಳು ಶುದ್ಧಿಯಾದ ಕೂಡಲೇ ವೇದನೆಯೂ ಊದೂ ಶಮನ ವಾಗುತ್ತವೆ. ರೋಗಿಯು ದುರ್ಬಲನಾಗಿದ್ದರೆ ಅಥವಾ ವಿರೇಚನವನ್ನು ಪ್ರಯೋಗ ಮಾಡಲು ಆಗದಿದ್ದರೆ ಅತಿಯಾಗಿ ವೃದ್ಧಿಯಾಗಿರುವ ದೋಷಗಳನ್ನು ನಿರೂಹಬಸ್ತಿಯ ಪ್ರಯೋಗದಿಂದ ತೆಗೆದುಬಿಡಬೇಕು.

ಪ್ರಪೌಣ್ಡರೀಕಯಷ್ಟ್ಯಾಹ್ವ ವರ್ಷಾಭೂಕುಷ್ಠದಾರುಭಿಃ ।
ಸರಳಾಗುರುರಾಸ್ನಾಭಿರ್ವಾತಜಂ ಸಂಪ್ರಲೇಪಯೇತ್ ॥೨೮॥
ನಿಚುಲೈರಣ್ಡಬೀಜಾನಿ ಯವಗೋಧೂಮಸಕ್ತವಃ ।
ಏತೈಶ್ಚ ವಾತಜಂಸ್ನಿಗ್ಧೈಃ ಸುಖೋಷ್ಣೈಃ ಸಂಪ್ರಲೇಪಯೇತ್ ॥೨೯॥
ಪ್ರಪೌಣ್ಡರೀಕಪೂರ್ವೈಶ್ಚ ದ್ರವ್ಯೈಃ ಸೇಕಃ ಪ್ರಶಸ್ಯತೇ ।

ಪ್ರಪೌಂಡರೀಕ, ಅತಿಮಧುರ, ಕೊಮ್ಮೆ, ಚಂಗಲ್‌ಕೋಷ್ಠ, ದೇವದಾರು, ಸರಳ ದೇವದಾರು, ಅಗಿಲು, ರಾಸ್ನೆ, ಇವುಗಳ ಕಲ್ಕವನ್ನಾಗಲೀ ಹಬ್ಬೆ, ಹರಳುಬೀಜ ಯವೆಯ ಮತ್ತು ಗೋಧಿಯಹಿಟ್ಟು ಇವುಗಳ ಕಲ್ಕವನ್ನಾಗಲೀ ವಾತಿಕೋಪದಂಶಕ್ಕೆ ಸುಖೋಷ್ಣ ವಾಗಿ ಲೇಪಿಸಬೇಕು. ಪ್ರಪೌಂಡರೀಕ ಮೊದಲಾದ ದ್ರವ್ಯಗಳ ಕಷಾಯದಿಂದ ಸೇಚನೆ ಮಾಡಿದರೆ ಹಿತಕರವು.

ಗೈರಿಕಾಞ್ಜನಯಷ್ಟ್ಯಾಹ್ವ ಸಾರಿವೋಶೀರಪದ್ಮಕೈಃ ॥೩೦॥
ಸಚನ್ದನೋತ್ಪಲೈಃ ಸಿದ್ಧೈಃ ಪೈತ್ತಿಕಂ ಸಂಪ್ರಲೇಪಯೇತ್ ।
ಪದ್ಮೋತ್ಪಲಮೃಣಾಲೈಶ್ಚ ಸಸರ್ಜಾರ್ಜುನವೇತಸೈಃ ॥೩೧॥
ಸರ್ಪಿಃ ಸ್ನಿಗ್ಧೈಃ ಸಮಧುಕೈಃ ಪೈತ್ತಿಕಂ ಸಂಪ್ರಲೇಪಯೇತ್ ।
ಸೇಚಯೇಚ್ಚ ಘೃತಕ್ಷೀರಶರ್ಕರೇಕ್ಷು ಮಧೂದಕೈಃ ॥೩೨॥
ಅಥವಾಪಿ ಸುಶೀತೇನ ಕಷಾಯೇಣ ವಟಾದಿನಾ ।

ಪಿತ್ತಜಉಪದಂಶವನ್ನು ಕಾವಿ, ಸ್ರೋತೋಂಜನ, ಅತಿಮಧುರ, ಸೊಗದೆಬೇರು, ಲಾವಂಚ, ಪದ್ಮಕ, ಶ್ರೀಗಂಧ, ನೈದಿಲೆಗೆಡ್ಡೆ ಇವುಗಳ ಕಲ್ಕದಿಂದ ಲೇಪಿಸಬೇಕು. ತಾವರೆ, ನೈದಿಲೆಗೆಡ್ಡೆ, ತಾವರೆದಂಟು, ರಾಳು, ಮತ್ತಿತೊಗಟೆ, ನೀರಂಜಿಮರದ ತೊಗಟೆ ಇವುಗಳ ಕಲ್ಕಕ್ಕೆ ಅತಿಮಧುರದ ಚೂರ್ಣ, ತುಪ್ಪಗಳನ್ನು ಮಿಶ್ರಮಾಡಿ ಲೇಪನವನ್ನೂ ತುಪ್ಪ, ಹಾಲು, ಸಕ್ಕರೆಗಳನ್ನು ಕದರಿದ ನೀರು, ಕಬ್ಬಿನಹಾಲು, ಜೇನುತುಪ್ಪ ಮಿಶ್ರ ಮಾಡಿದ ನೀರು ಅಥವಾ ತಣ್ಣಗಿರುವ ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯ ಇವುಗಳನ್ನೂ ಸೇಚನೆಮಾಡಿಸಬೇಕು.

ಶಾಲಾಶ್ವಕರ್ಣಾಜಕರ್ಣಧವತ್ವಗ್ಭಿಃ ಕಫೋತ್ಥಿತಮ್ ॥೩೩॥
ಸುರಾಪಿಷ್ಟಾಭಿರುಷ್ಣಾಭಿಃ ಸತೈಲಾಭಿಃ ಪ್ರಲೇಪಯೇತ್ ।
ರಜನ್ಯತಿವಿಷಾ ಮುಸ್ತಾಸುರಸಾಸುರದಾರುಭಿಃ ॥೩೪॥
ಸಪತ್ರಪಾಠಾತ್ರೂರೈರಥವಾ ಸಂಪ್ರಲೇಪಯೇತ್ ।
ಸುರಸಾರಗ್ವಧಾದ್ಯೋಶ್ಚ ಕ್ವಾಥಾಭ್ಯಾಂ ಪರಿಷೇಚಯೇತ್ ॥೩೫॥

ಸರ್ಜವೃಕ್ಷ, ಧೂಪದಮರ, ಗೆರ್ಶಿಹಂಬು, ದಿಂಡಿಲುತೊಗಟೆ, ಇವುಗಳನ್ನು ಮದ್ಯದಿಂದ ಕಲ್ಕಮಾಡಿ ತೈಲಮಿಶ್ರಮಾಡಿ ಬಿಸಿಬಿಸಿಯಾಗಿ ಕಫೋಪದಂಶವನ್ನು ಲೇಪಿಸಬೇಕು. ಅಥವಾ ಅರಿಶಿನ, ಅತಿಬಜೆ, ಕೊರಟೆಗೆಹಂಬು, ತುಳಸಿ, ದೇವದಾರು, ಲವಂಗಪತ್ರೆ, ಅಗಳುಶುಂಠಿ, ಹೊಮ್ಮುಗಳು ಇವನ್ನು ಸುರೆಯಿಂದ ಅರೆದು ಕಲ್ಕಮಾಡಿ ಲೇಪಿಸಬೇಕು. ಸುರಸಾದಿ ಗಣದ್ರವ್ಯಗಳ ಅಥವಾ ಆರಗ್ವಧಾದಿ ಗಣೋಕ್ತದ್ರವ್ಯಗಳ ಈ ಕಷಾಯವನ್ನು ಉಪದಂಶವ್ರಣದಮೇಲೆ ನಿದಾನವಾಗಿ ಸುರಿಸಬೇಕು.

ಏವಂ ಸಂಶೋಧನಾಲೇಪಸೇಕಶೋಣಿತಮೋಕ್ಷಣೈಃ ।
ಪ್ರತಿಕುರ್ಯಾತ್ ಕ್ರಿಯಾಯೋಗೈಃ ಪ್ರಾಕ್‌ಸ್ಥಾನೋಕ್ತೈರ್ಹಿತೈರಪಿ ॥೩೬॥
ನಾಯಾತಿ ಚ ಯಥಾ ಪಾಕಂ ಪ್ರಯತೇತ ತಥಾ ಭಿಷಕ್ ।
ವಿದಗ್ಧೈಸ್ತು ಸಿರಾಸ್ನಾಯುತ್ವಙ್ಮಾಂಸೈಃ ಕ್ಷೀಯತೇ ಧ್ವಜಃ ॥೩೭॥
ಶಸ್ತ್ರೇಣೋಪಚರೇಚ್ಚಾಪಿ ಪಾಕಮಾಗತುಮಾಶು ವೈ ।
ತದಾಪೋಹ್ಯ ತಿಲೈಃ ಸರ್ಪಿಃ ಕ್ಷೌದ್ರಯುಕ್ತೈಃ ಪ್ರಲೇಪಯೇತ್ ॥೩೮॥
ಕರವೀರಸ್ಯ ಪತ್ರಾಣಿ ಜಾತ್ಯಾರಗ್ವಧಯೋಸ್ತಥಾ ।
ಪ್ರಕ್ಷಾಳನೇ ಪ್ರಯೋಜ್ಯಾನಿ ವೈಜಯನ್ತ್ಯರ್ಕಯೋರಪಿ ॥೩೯॥
ಸೌರಾಷ್ಟ್ರೀಂ ಗೈರಿಕಂ ತುತ್ಥಂ ಪುಷ್ಪಕಾಸೀಸಸೈನ್ಧವಮ್ ।
ರೋಧ್ರಂ ರಸಾಞ್ಜನಂ ದಾರ್ವೀಂ ಹರಿತಾಳಂ ಮನಃಶಿಲಾಮ್ ॥೪೦॥
ಹರೇಣುಕೈಲೇ ಚ ತಥಾ ಸೂಕ್ಷ್ಮಚೂರ್ಣಾನಿ ಕಾರಯೇತ್ ।
ತಚ್ಚೂರ್ಣಂ ಕ್ಷೌದ್ರಸಂಯುಕ್ತಮುಪದಂಶೇಷು ಪೂಜಿತಮ್ ॥೪೧॥

ಈ ರೀತಿಯಾದ ಸಂಶೋಧನೆ, ಲೇಪನ, ವ್ರಣಸೇಚನೆ, ರಕ್ತಮೋಕ್ಷಣಗಳಿಂದಲೂ ಸೂತ್ರಸ್ಥಾನದಲ್ಲೂ ದ್ವಿವ್ರಣೀಯ ಚಿಕಿತ್ಸೆಯಲ್ಲೂ ಹೇಳಿರುವಂತೆಯೂ ಉಪಚರಿಸಿ ಉಪದಂಶವು ಪಾಕವಾಗದಿರುವಂತೆ ಪ್ರಯತ್ನಮಾಡಿ ಚಿಕಿತ್ಸೆಮಾಡಬೇಕು. ವಿದಗ್ಧ ಪಾಕವಾದರೆ ಸಿರೆ, ಸ್ನಾಯು, ತ್ವಕ್, ಮಾಂಸಗಳು ಕೊಳೆತುಹೋಗಿ ಶಿಶ್ನವೇ ನಾಶವಾಗುತ್ತದೆ. ಪಾಕವಾಗುತ್ತಾ ಬಂದರೆ ಕೂಡಲೇ ಶಸ್ತ್ರದಿಂದ ವ್ರಣವನ್ನು ಶೀಳಿ ಕೀವನ್ನು ಹೊರಕ್ಕೆ ಸುರಿಸಬೇಕು. ಕೀವನ್ನು ಒರೆಸಿದಮೇಲೆ ಎಳ್ಳನ್ನು ಕಲ್ಕಮಾಡಿ ತುಪ್ಪ ಜೇನು ತುಪ್ಪದಿಂದ ಕಲಸಿ ವ್ರಣಕ್ಕೆ ಲೇಪನಮಾಡಬೇಕು. ಕಣಿಗಲೆ, ಜಾಜಿ, ಕಕ್ಕೆ, ಥಗ್ಗಿ, ಎಕ್ಕ ಇವುಗಳ ಎಲೆಗಳ ಕಷಾಯದಿಂದ ವ್ರಣವನ್ನು ತೊಳೆಯಬೇಕು. ಪಟಿಕ, ಕಾವಿ, ಮೈಲ್‌ತುತ್ಥ, ಪುಷ್ಪಕಾಸೀಸ, ಸೈಂಧವಲವಣ, ರೋಧ್ರ, ರಸಾಂಜನ, ಮರದರಿಶಿನ, ಅರಿದಳ, ಮಣಶಿಲೆ, ರೇಣುಕೆಬೀಜ, ಏಲಕ್ಕಿ ಇವುಗಳನ್ನೆಲ್ಲಾ ಕುಟ್ಟಿ ಅತಿ ಸೂಕ್ಷ್ಮವಾದ ಚೂರ್ಣಮಾಡಿಟ್ಟುಕೊಂಡು ಜೇನುತುಪ್ಪದಲ್ಲಿ ರಂಗಳಿಸಿ ಲೇಪಿಸುವುದು ಉಪದಂಶದಲ್ಲಿ ಶ್ರೇಷ್ಠವಾದ ಔಷಧಕಲ್ಪವೆಂದು ತಿಳಿಯಬೇಕು.

ಜಮ್ಬ್ವಾಮ್ರಸುಮನಾನಿಮ್ಬ ಶ್ವೇತಾಕಾಮ್ಬೋಜಿಪಲ್ಲವಾಃ ।
ಶಲ್ಲಕೀಬದರೀ ಬಿಲ್ವಪಲಾಶತಿನಿಶತ್ವಚಃ ॥೪೨॥

ಕ್ಷೀರಿಣಾಂ ಚ ತ್ವಚೋ ಯೋಜ್ಯಾಃ ಕ್ವಾಥೇ ತ್ರಿಫಲಯಾ ಸಹ ।
ತೇನ ಕ್ವಾಥೇನ ನಿಯತಂ ವ್ರಣಂ ಪ್ರಕ್ಷಾಳಯೇದ್ಭಿಷಕ್ ॥೪೩॥
ಅಸ್ಮಿನ್ನೇವ ಕಷಾಯೇ ತು ತೈಲಂ ಧೀರೋ ವಿಪಾಚಯೇತ್ ।
ಗೋಜೀತಡಜ್ಗಯಷ್ಟೀಭಿಃ ಸರ್ವಗಂಧೈಶ್ಚ ಸಂಯುತಮ್ ॥೪೪॥
ಏತತ್ ಸರ್ವೋಪದಂಶೇಷು ಶ್ರೇಷ್ಠಂ ರೋಪಣಮಿಷ್ಯತೇ ।

ನೇರಳೆ, ಮಾವು, ಜಾಜಿ, ಬೇವು, ಬಿಳಿ ಗಿರಿಕರ್ಣಿಕೆ, ಕಾಡುಉದ್ದು, ಇವುಗಳ ಎಲೆಗಳು, ನಾಯಿಬೇಲ, ಬಿಲ್ವ, ಮುತ್ತುಗ, ತೂಪರೆ ಇವುಗಳ ತೊಗಟೆಗಳು ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ತೊಗಟೆ ಮತ್ತು ತ್ರಿಫಲೆ ಇವುಗಳ ಕಷಾಯದಿಂದ ವ್ರಣವನ್ನು ತೊಳೆದು ಶುದ್ಧಿಮಾಡುತ್ತಿರಬೇಕು. ಈ ಕಷಾಯಕ್ಕೆ ಎತ್ತುನಾಲಿಗೆ, ವಿಡಂಗ, ಅತಿ ಮಧುರ, ಸರ್ವಗಂಧಗಳ (ಚಾತುರ್ಜಾತಕ, ಪಚ್ಚಕರ್ಪೂರ, ತಕ್ಕೋಲ, ಅಗಿಲು, ಕುಂಕುಮಕೇಸರಿ, ಲವಂಗ ಇವುಗಳಗೆ ಸರ್ವಗಂಧವೆಂದು ಹೆಸರು). ಚೂರ್ಣವನ್ನು ಪ್ರತೀವಾಪವಾಗಿ ಸೇರಿಸಿ ತೈಲಪಾಕವನ್ನು ಮಾಡಿಟ್ಟುಕೊಂಡು ಸಕಲವಿಧಗಳಾದ ಉಪದಂಶಗಳಿಗೂ ಪ್ರಯೋಗಿಸಿದರೆ ವ್ರಣರೋಪಣವಾಗುತ್ತದೆ.

ಸ್ವರ್ಜಿಕಾತುತ್ಥಕಾಸೀಸಂ ಶೈಲೇಯಂ ಚ ರಸಾಞ್ಜನಮ್ ॥೪೫॥
ಮನಃಶಿಲಾಸಮೈಶ್ಚೂರ್ಣಂ ವ್ರಣವೀಸರ್ಪನಾಶನಮ್ ।
ಗುನ್ದ್ರಾದಗ್ಧಾ ಕೃತಂ ಭಸ್ಮ ಹರಿತಾಳಂ ಮನಃಶಿಲಾ ॥೪೬॥
ಉಪದಂಶೇ ವಿಸರ್ಪಾಣಾಮೇತಚ್ಚಾನ್ತಿಕರಂ ಪರಮ್ ।
ಮಾರ್ಕವಸ್ತ್ರಿಫಲಾದನ್ತೀ ತಾಮ್ರಚೂರ್ಣಮಯೋರಜಃ ॥೪೭॥
ಉಪದಂಶಂ ನಿಹನ್ತ್ಯೇಷ ವೃಕ್ಷಮಿನ್ದ್ರಾಶನಿರ್ಯಥಾ ।
ಉಪದಂಶದ್ವಯೇऽಪ್ಯೇತಾಂ ಪ್ರತ್ಯಾಖ್ಯಾಯಾಚರೇತ್ ಕ್ರಿಯಾಮ್ ॥೪೮॥
ತಯೋರೇವ ಚ ಯಾ ಯೋಗ್ಯಾ ವೀಕ್ಷ್ಯದೋಷಬಲಾಬಲಮ್ ।

ಸರ್ಜಕ್ಷಾರ, ಮೈಲ್‌ತುತ್ಥ, ಅನ್ನಭೇದಿ, ಕಲ್ಲುಹೂವು, ರಸಾಂಜನ, ಮಣಿಶಿಲೆ ಇವುಗಳನ್ನು ಸಮಭಾಗ ಸೇರಿಸಿ ಚೂರ್ಣಮಾಡಿ ಪ್ರಯೋಗಿಸಿದರೆ ವ್ರಣ, ವಿಸರ್ಪಗಳು ನಾಶವಾಗುತ್ತವೆ. ಶುಂಠಿಹುಲ್ಲನ್ನು ಸುಟ್ಟು ಬಂದ ಬೂದಿಯೊಡನೆ ಅರಿದಾಳ, ಮಣಶಿಲೆ ಗಳನ್ನು ಸಮಭಾಗದಿಂದ ಸೇರಿಸಿ ಚೂರ್ಣಿಸಿ ಪ್ರಯೋಗಿಸಿದರೆ ಉಪದಂಶ ಮತ್ತು ವಿಸರ್ಪ ರೋಗಗಳು ನಿವಾರಣೆಯಾಗುತ್ತವೆ. ಗರುಗದಸೊಪ್ಪು, ತ್ರಿಫಲೆ, ಜಾಪಾಳದ ತೊಗಟೆ, ತಾಮ್ರದಪುಡಿ, ಕಬ್ಬಿಣದಪುಡಿ ಇವುಗಳ ಪ್ರಯೋಗದಿಂದ ಸಿಡಿಲುಬಿದ್ದ ಮರದಂತೆ ಉಪ ದಂಶವು ನಾಶವಾಗುತ್ತದೆ. ರಕ್ತಜ ಮತ್ತು ತ್ರಿದೋಷಗಳೆಂಬ ಎರಡು ವಿಧಗಳಾದ ಉಪದಂಶಗಳೂ ಅಸಾಧ್ಯಗಳಾದ್ದರಿಂದ ಅವುಗಳ ದೋಷಗಳ ಬಲಾಬಲಗಳನ್ನು ತಿಳಿದು ಉಚಿತವಾದ ಚಿಕಿತ್ಸೆಯನ್ನು ಮಾಡಬೇಕು.

ಉಪದಂಶೇ ವಿಶೇಷೇಣ ಶೃಣು ಭೂಯಸ್ತ್ರಿದೋಷಜೇ ||೪೯||
ದುಷ್ಟವ್ರಣವಿಧಿಂ ಕುರ್ಯಾತ್ ಕುಥಿತಂ ಮೇಹನಂ ತ್ಯಜೇತ್ |
ಜಂಬ್ವೌಷ್ಠೇನಾಗ್ನಿ ವರ್ಣೇನ ಪಶ್ಚಾಚ್ಛೇಷಂ ದಹೇದ್ಭಿಷಕ್ ||೫೦||
ಸಮ್ಯಗ್ದಗ್ಧಂ ಚ ವಿಜ್ಞಾಯ ಮಧುಸರ್ಪಿಃ ಪ್ರಯೋಜಯೇತ್ |
ಶುದ್ಧೇ ಚ ರೋಪಣಂ ದದ್ಯಾತ್ ಕಲ್ಕಂ ತೈಲಂ ಹಿತಂ ಚ ಯತ್ ||೫೧||

ಮೂರು ದೋಷಗಳ ಲಕ್ಷಣಗಳಿಂದ ಕೂಡಿದ ಉಪದಂಶದಲ್ಲಿ ಕೊಳೆತ ಶಿಶ್ನದ ಭಾಗವನ್ನು ಕತ್ತರಿಸಿ ತೆಗೆದು ದುಷ್ಟವ್ರಣ ಚಿಕಿತ್ಸೆಯನ್ನು ಮಾಡಿಸಬೇಕು. ಗಟ್ಟಿಯಾದ ಕೃಷ್ಣಪಾಷಾಣ ಶಿಲೆಯಿಂದ ನೇರಳೆಹಣ್ಣಿನ ತುದಿಯಂತೆ ಮುಖಭಾಗವುಳ್ಳ ಶಸ್ತ್ರವನ್ನು ಕೆಂಪಗೆ ಕಾಯಿಸಿ ಕೊಳೆತ ಮೇಹನದ ಭಾಗವನ್ನು ಕತ್ತರಿಸಿ ಉಳಿದ ಭಾಗವನ್ನು ಕಾದ ಸಲಾಕೆಯಿಂದ ಸುಡಬೇಕು. ಸರಿಯಾಗಿ ಸುಟ್ಟಿದೆಯೆಂಬುದನ್ನು ತಿಳಿದು ಜೇನುತುಪ್ಪ ಮತ್ತು ತುಪ್ಪಗಳನ್ನು ಪ್ರಯೋಗಿಸಬೇಕು. ಶುದ್ಧವ್ರಣಕ್ಕೆ ಹಿತಕರವಾದ ವ್ರಣ ರೋಪಣ ಕಲ್ಕ ಅಥವಾ ತೈಲವನ್ನು ಲೇಪನಮಾಡಬೇಕು.

ಸ್ನೇಹಸ್ವೇದೋಪಪನ್ನೇ ತು ಶ್ಲೀಪದೇಽನಿಲಜೇ ಭಿಷಕ್ |
ಕೃತ್ವಾ ಗುಲ್ಫೋಪರಿ ಸಿರಾಂ ವಿಧ್ಯೇತ್ತು ಚತುರಙ್ಗುಲೇ ||೫೨||
ಸಮಾಪ್ಯಾಯಿತದೇಹಂ ಚ ಬಸ್ತಿಭಿಃ ಸಮುಪಾಚರೇತ್ |
ಮಾಸಮೇರಣ್ಡಜಂ ತೈಲಂ ಪಿಬೇನ್ಮೂತ್ರೇಣ ಸಂಯುತಮ್ ||೫೩||
ಪಯಸೌದನಮಶ್ನೀಯಾತ್ ನಾಗರಕ್ವಥಿತೇನ ಚ |
ತ್ರೈವೃತಂ ಚೋಪಯುಞ್ಜೀತ ಶಸ್ತೋ ದಾಹಸ್ತಥಾಗ್ನಿನಾ ||೫೪||
ಗುಲ್ಫಸ್ಯಾಧಃ ಸಿರಾ ವಿಧ್ಯೇತ್ ಶ್ಲೀಪದೇ ಪಿತ್ತಸಂಭವೇ|
ಪಿತ್ತಘ್ನೀಂ ಚ ಕ್ರಿಯಾಂ ಕುರ್ಯಾತ್ ಪಿತ್ತಾರ್ಬುದವಿಸರ್ಪವತ್ ||೫೫||

ವೈದ್ಯನು ವಾತಿಕಶ್ಲೀಪದರೋಗಿಗೆ ಸ್ನೇಹಸ್ವೇದಗಳಿಂದ ಉಪಚರಿಸಿ ಅವನ ಗುಲ್ಫ ಸಂಧಿಯಮೇಲೆ (ಕುಣಕಾಲುಸಂಧಿ) ಅಂದರೆ ಕ್ಷಿಪ್ರಮರ್ಮದಮೇಲೆ ೪ ಅಂಗುಳಿ ಸ್ಪಷ್ಟ ವಾಗಿ ಕಾಣುವ ಸಿರೆಯನ್ನು ವೇಧಿಸಿ ಉಪಚರಿಸಿ ಸರಿಯಾದ ಬಲವುಂಟಾದ ಮೇಲೆ ಬಸ್ತಿ ಪ್ರಯೋಗ ಮಾಡಬೇಕು. ೧ ಮಾಸದವರೆಗೆ ಗೋಮೂತ್ರದೊಡನೆ ಹರಳೆಣ್ಣೆಯನ್ನು ಮಿಶ್ರಮಾಡಿ ಕುಡಿಸಬೇಕು. ಶುಂಠಿಯನ್ನು ಸೇರಿಸಿ ಪಾಕಮಾಡಿದ ಹಾಲನ್ನು ಅನ್ನಕ್ಕೆ ಹಾಕಿ ಭೋಜನಮಾಡಿಸಬೇಕು. ಶುಂಠಿಯ ಕಷಾಯದಲ್ಲಿ ತೈಲ, ಘೃತ, ವಸೆಗಳನ್ನು ಮಿಶ್ರಮಾಡಿ ಪಿತ್ತಶ್ಲೀಪದ ರೋಗಿಯು ಕುಡಿಯಬೇಕು. ಅಗ್ನಿಯಿಂದ ಶ್ಲೀಪದವನ್ನು ಸುಡಬೇಕು. ಗುಲ್ಫಸಂಧಿಯ ಕೆಳಗಿನ ಸಿರೆಯನ್ನು ವೇಧಿಸಿ ಪಿತ್ತಾರ್ಬುದ ಪಿತ್ತವಿಸರ್ಪ ಗಳಿಗೆ ಮಾಡುವಂತೆಯೇ ಪಿತ್ತಹರ ಚಿಕಿತ್ಸೆಯನ್ನು ಮಾಡಬೇಕು.

ಟಿಪ್ಪಣಿ : ಶ್ಲೀಪದದಲ್ಲಿ ರೂಕ್ಷಣಮಾಡಬೇಕು. ಸ್ನೇಹವೆಂದರೆ ಶೋಧನಾರ್ಥ ವಾಗಿ ೧ ಕರ್ಷ ಶುಂಠಿಗೆ ೮ ರಷ್ಟು ನೀರು ಸೇರಿಸಿ ೧/೪ ಉಳಿಯುವಂತೆ ಕಾಯಿಸಿ ತ್ರಿವೃ ತ್ಸ್ನೇಹವನ್ನು ಕುಡಿಯಬೇಕು.

ಸಿರಾಂ ಸುವಿದಿತಾಂ ವಿಧ್ಯೇದಙ್ಗುಷ್ಠೇ ಶ್ಲೈಷ್ಮಿಕೇ ಭಿಷಕ್ ।
ಮಧುಯುಕ್ತಾನಿ ಚಾಭೀಕ್ಷ್ಣಂ ಕಷಾಯಾಣಿ ಪಿಬೇನ್ನರಃ ॥೫೬॥
ಪಿಬೇದ್ವಾಪ್ಯಭಯಾಕಲ್ಕಂ ಮೂತ್ರೇಣಾನ್ಯತಮೇನ ಚ ।
ಕಟುಕಾಮಮೃತಾಂ ಶುಣ್ಠೀಂ ವಿಡಙ್ಗಂ ದಾರು ಚಿತ್ರಕಮ್ ॥೫೭॥
ಹಿತಂ ವಾ ಲೇಪನೇ ನಿತ್ಯಂ ಭದ್ರದಾರು ಸಚಿತ್ರಕಮ್ ।
ವಿಡಙ್ಗಮರಿಚಾರ್ಕೇಷು ನಾಗರೇ ಚಿತ್ರಕೇऽಥವಾ ॥೫೮॥
ಭದ್ರದಾರ್ವೇಲುಕಾಖ್ಯೇ ಚ ಸರ್ವೇಷು ಲವಣೇಷು ಚ ।
ತೈಲಂ ಪಕ್ವಂ ಪಿಬೇದ್ವಾಪಿ ಯವಾನ್ನಂ ಚ ಹಿತಂ ಸದಾ ॥೫೯॥
ಪಿಬೇತ್ ಸರ್ಷಪತೈಲಂ ವಾ ಶ್ಲೀಪದಾನಾಂ ನಿವೃತ್ತಯೇ ।
ಪೂತೀಕರಞ್ಜಪತ್ರಾಣಾಂ ರಸಂ ವಾಪಿ ಯಥಾ ಬಲಮ್ ॥೬೦॥
ಅನೇನೈವ ವಿಧಾನೇನ ಪುತ್ರಞ್ಜೀವಕಜಂ ರಸಮ್ ।
ಪ್ರಯುಞ್ಜೀತ ಭಿಷಕ್ಪ್ರಾಜ್ಞಃ ಕಾಲಸಾತ್ಮ್ಯವಿಭಾಗವಿತ್ ॥೬೧॥
ಕೇಮುಕಾಕನ್ದನಿರ್ಯಾಸಂ ಲವಣಂ ತ್ವಥ ಪಾಕಿಮಮ್ ।
ರಸಂ ದತ್ವಾಥ ಪೂರ್ವೋಕ್ತಂ ಪೇಯಮೇತದ್ಭಿಷಗ್ಜಿತರಸಮ್ ॥೬೨॥

ಕಫಜಶ್ಲೀಪದದಲ್ಲಿ ಅಂಗುಷ್ಠದಲ್ಲಿ ವ್ಯಕ್ತವಾಗಿ ಕಾಣುವ ಸಿರೆಯನ್ನು ವೇಧಿಸಿ ಕಷಾಯಗಳಿಗೆ ಜೇನುತುಪ್ಪವನ್ನು ಹೆಚ್ಚು ಪ್ರಮಾಣದಿಂದ ಸೇರಿಸಿ ಕುಡಿಸಬೇಕು. ಅಣಿಲೆಯ ಕಲ್ಕವನ್ನು ಯಾವುದಾದರೂ ಮೂತ್ರದಲ್ಲಿ ಕದರಿ ಕುಡಿಸಿ ಕಟುಕರೋಹಿಣಿ, ಅಮೃತವಳ್ಳಿ, ಶುಂಠಿ, ವಿಡಂಗ, ದೇವದಾರು, ಚಿತ್ರಮೂಲ ಇವುಗಳ ಕಲ್ಕವನ್ನಾಗಲೀ ದೇವದಾರು ಚಿತ್ರಮೂಲಗಳ ಕಲ್ಕವನ್ನಾಗಲೀ ಶ್ಲೀಪದಕ್ಕೆ ಲೇಪಿಸಿದರೆ ಹಿತಕರವು. ವಿಡಂಗ, ಮೆಣಸು, ಎಕ್ಕದಬೇರು, ಶುಂಠಿ, ಚಿತ್ರಮೂಲ, ದೇವದಾರು, ಏಲಾವಾಲುಕ ೫ ಲವಣ ಇವುಗಳನ್ನು ಸೇರಿಸಿ ತಯಾರಿಸಿದ ತೈಲವನ್ನು ಪಾನಮಾಡಿಸಬೇಕು. ಯವೆಯ ಅನ್ನವನ್ನು ತಿನ್ನಿಸಿ ಸಾಸಿವೆಯ ಎಣ್ಣೆಯನ್ನು ಕುಡಿಸಿದರೆ ಶ್ಲೀಪದವು ನಿವಾರಣೆಯಾಗುತ್ತದೆ ಅಥವಾ ಶಕ್ತ್ಯನುಸಾರ ತವಸದ ಎಲೆಯ ರಸವನ್ನಾಗಲೀ ಪುತ್ರಜೀವಿಯ ಕಷಾಯವನ್ನಾಗಲೀ ಕುಡಿಸಬೇಕು. ಕಾಲ, ಸಾತ್ಮ್ಯಗಳನ್ನು ತಿಳಿದಿರುವ ಬುದ್ಧಿವಂತನಾದ ವೈದ್ಯನು ಕೇವುಕವೆಂಬ ಗೆಡ್ಡೆಯ ಕೆಂಪು (ಗಜ್ಜರಿಗೆಡ್ಡೆ) ರಸಕ್ಕೆ ಬಿಡಲವಣವನ್ನು ಸೇರಿಸಿ ಕುಡಿಸಬೇಕು. ಅಥವಾ ಪುತ್ರಜೀವಕರಸಕ್ಕೆ ಕೇವುಕಗೆಡ್ಡೆಯ ರಸವನ್ನೂ ಬಿಡಲವಣವನ್ನೂ ಸೇರಿಸಿ ಕುಡಿಸಬೇಕು.

ಕಾಕಾದನ್ತೀಂ ಕಾಕಜಙ್ಘಾಂ ಬೃಹತೀಂ ಕಂಟಕಾರಿಕಾಮ್ ।
ಕದಮ್ಬಪುಷ್ಪೀಂ ಮನ್ದಾರೀಂ ಲಮ್ಬಾಂ ಶುಕನಸಾಂ ತಥಾ ॥೬೩॥
ದಗ್ಧ್ವಾ ಮೂತ್ರೇಣ ತದ್ಭಸ್ಮ ಸ್ರಾವಯೇತ್ ಕ್ಷಾರಕಲ್ಪವಿತ್ ।
ತತ್ರ ದದ್ಯಾತ್ ಪ್ರತೀವಾಪಂ ಕಾಕೋದುಮ್ಬರಿಕಾರಸಮ್ ॥೬೪॥
ಮದನಾಚ್ಚ ಫಲಾತ್ಕ್ವಾಥಂ ಶುಕಾಖ್ಯಾಸ್ವರಸಂ ತಥಾ ।

ಏಷ ಕ್ಷಾರಸ್ತು ಪಾನೀಯಃ ಶ್ಲೀಪದಂ ಹನ್ತಿ ಸೇವಿತಃ ||೬೫||
ಅಪಚೀಂ ಗಳಗಣ್ಡಂ ಚ ಗ್ರಹಣೀದೋಷಮೇವ ಚ |
ಭಕ್ತಸ್ಯಾನಶನಂ ಚೈವ ಹನ್ಯಾತ್ ಸರ್ವವಿಷಾಣಿ ಚ ||೬೬||
ಏಷ್ವೇವ ತೈಲಂ ಸಂಸಿದ್ಧಂ ನಸ್ಯಾಭ್ಯಙ್ಗೇಷು ಪೂಜಿತಮ್ |
ಏತಾನೇವಾಮಯಾನ್ ಹನ್ತಿ ಯೇ ಚ ದುಷ್ಟವ್ರಣಾನ್ನೃಣಾಮ್ ||೬೭||

ಕಾಗೆತೊಂಡೆ, ಎಲವುಸಂಧಿ, ಹೆಗ್ಗುಳ್ಳ, ನೆಲಗುಳ್ಳ, ಬೋಳದರಗ, ಬಿಳಿಯಎಕ್ಕ, ಕಹಿಸೋರೆ, ಹೆಮ್ಮರ ಇವುಗಳನ್ನು ಸುಟ್ಟು ಕ್ಷಾರಕಲ್ಪವಿಧಾನವನ್ನು ತಿಳಿದ ವೈದ್ಯನು ಈ ಭಸ್ಮವನ್ನು ಆರರಷ್ಟು ಗೋಮೂತ್ರದಲ್ಲಿ ಕದರಿ ಶೋಧಿಸಿಕೊಳ್ಳಬೇಕು. ಈ ರೀತಿಯಾಗಿ ೨೧ ಸಾರಿ ಗೋಮೂತ್ರದಲ್ಲಿ ಕದರಿ ಶೋಧಿಸಿಕೊಂಡ ಕ್ಷಾರವನ್ನು ಕಲ್ಲತ್ತಿಯ ಸ್ವರಸ, ಮಗ್ಗಾರೆಸ್ವರಸ, ಹೆಮ್ಮರದಸ್ವರಸ (ಕಷಾಯ) ಇವುಗಳಲ್ಲಿ ಪ್ರತೀವಾಪಮಾಡಿ ಕಾಯಿಸಿ ಪಾನೀಯ ಕ್ಷಾರವನ್ನು ತಯಾರಿಸಿ ಈ ಕ್ಷಾರವನ್ನು ಕುಡಿಸಿದರೆ ಶ್ಲೀಪದ ರೋಗವು ನಾಶವಾಗುತ್ತದೆ. ಗಂಡಮಾಲೆ, ಗಳಗಂಡ, ಗ್ರಹಣೀದೋಷ, ಅರುಚಿ, ಸಕಲವಿಧ ವಿಷ ಇವುಗಳೂ ನಾಶವಾಗುತ್ತವೆ. ಪಾನೀಯ ದ್ರವಗಳಲ್ಲಿ ೧ ಶಾಣ ಪ್ರಮಾಣದಷ್ಟು (೩/೧೬ ರೂಪಾಯಿ ತೂಕ) ಕ್ಷಾರವನ್ನು ಸೇರಿಸಬೇಕು. ಈ ದ್ರವ, ಗಳನ್ನು ಸೇರಿಸಿ ತೈಲವನ್ನು ತಯಾರಿಸಿ ನಸ್ಯ ಅಭ್ಯಂಗಗಳಿಗೆ ಉಪಯೋಗಿಸಿದರೆ ಮೇಲೆ ಹೇಳಿದ ರೋಗಗಳೂ ದುಷ್ಟವ್ರಣಗಳೂ ನಿವಾರಣೆಯಾಗುತ್ತವೆ. ಕಾಗೆತೊಂಡೆ ಮೊದ ಮೊದಲಾದುವುಗಳ ಕಷಾಯ, ಕಲ್ಲತ್ತಿಯಸ್ವರಸ, ಮಗ್ಗಾರೆಕಷಾಯ, ಹೆಮ್ಮರದ ಸ್ವರಸ ಗಳಲ್ಲಿ ಪ್ರತಿಯೊಂದೂ ಸಮಭಾಗ ತೈಲವು ೧ ಭಾಗವನ್ನು ಸೇರಿಸಿ ಪಾಕಮಾಡಬೇಕು.

ದ್ರವನ್ತೀಂ ತ್ರಿವೃತಾಂ ದನ್ತೀಂ ನೀಲೀಂ ಶ್ಯಾಮಾಂ ತಥೈವ ಚ |
ಸಪ್ತಲಾಂ ಶಙ್ಖಿನೀಂ ಚೈವ ದಗ್ಧ್ವಾ ಮೂತ್ರೇಣ ಗಾಲಯೇತ್ ||೬೮||
ದದ್ಯಾಚ್ಚ ತ್ರಿಫಲಾಕ್ವಾಥಮೇಷ ಕ್ಷಾರಸ್ತು ಸಾಧಿತಃ |
ಅಧೋ ಗಚ್ಛತಿ ಪೀತಸ್ತು ಪೂರ್ವೈಶ್ಚಾಪ್ಯಾಶಿಷಃ ಸಮಾಃ ||೬೯||

ಇಲಿಕಿವಿ (ಕಿರಿಜಾಪಾಳವೆಂದು ಕೆಲವರು), ತಿಗಡೆ, ಜಾಪಾಳದತೊಗಟೆ, ನೀಲಿಸ ಮೂಲ, ಕರಿಯತಿಗಡೆ, ಅರಿಶಿನಮುಂಡುಗಳ್ಳಿ, ಈಶ್ವರಿ ಇವುಗಳನ್ನು ಸುಟ್ಟು ಆ ಭಸ್ಮ ವನ್ನು ಗೋಮೂತ್ರದಲ್ಲಿ ಕದರಿ ಶೋಧಿಸಿ ತ್ರಿಫಲಾ ಕಷಾಯದೊಡನೆ ಕ್ಷಾರಪಾಕಮಾಡಿ ಕುಡಿಸಿದರೆ ಅಧೋಭಾಗಕ್ಕೆ ಹೋಗಿ ದೋಷಹರಣಮಾಡುತ್ತದೆ. ಹಿಂದೆ ಹೇಳಿದ ಕ್ಷಾರಪಾನದಿಂದುಂಟಾಗುವ ಗುಣಗಳೇ ಕ್ಷಾರಪಾನದಿಂದಲೂ ಉಂಟಾಗುತ್ತವೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ವೃದ್ಧ್ಯುಪದಂಶಶ್ಲೀಪದ ಚಿಕಿತ್ಸಾ ನಾಮೈಕೋನವಿಂಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನರಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ವಿಂಶತತಿಮೋಽಧ್ಯಾಯಃ

ಅಥಾತಃ ಕ್ಷುದ್ರರೋಗ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಕ್ಷುದ್ರರೋಗಗಳ ಚಿಕಿತ್ಸೆಯನ್ನು ವಿವರಿಸುತ್ತೇವೆ.

ತತ್ರಾಜಗಲ್ಲಿಕಾಮಾಮಾಂ ಜಲೌಕೋಭಿರುಪಾಚರೇತ್
ಶುಕ್ತಿಶಃಖ್ನೀಯವಕ್ಷಾರಕಲ್ಕೈಶ್ಚ ಲೇಪಯೇದ್ಭಿಷಕ್ ||೩||
ಶ್ಯಾಮಾಲಾಜ್ಗಲಕೀಪಾಠಾಕಲ್ಕೈರ್ವಾಪಿ ವಿಚಕ್ಷಣಃ
ಪಕ್ವಾಂ ವ್ರಣವಿಧಾನೇನ ಯಥೋಕ್ತೇನ ಪ್ರಸಾಧಯೇತ್ ||೪||

ಈ ಕ್ಷುದ್ರರೋಗಗಳ ಪೈಕಿ ಅಪಕ್ವವಾದ ಅಜಗಲ್ಲಿಕೆಯನ್ನು ಶುಕ್ತಿಕ್ಷಾರ, ಯವಕ್ಷಾರಗಳ ಕಲ್ಕಗಳಿಂದ ಲೇಪಿಸಿ ಜಿಗುಳೆಯನ್ನು ಕಚ್ಚಿಸಿ ರಕ್ತಸ್ರಾವವನ್ನು ಮಾಡಿಸಬೇಕು. ಅಥವಾ ತಿಗಡೆ, ಕೋಳಿಕುಟುಮ, ಅಗಳು ಶುಂಠಿ ಇವುಗಳ ಕಲ್ಕದಿಂದ ಲೇಪಿಸಿ ಪಕ್ವವಾಗಿದ್ದರೆ ವ್ರಣಚಿಕಿತ್ಸಾ ವಿಧಾನದಂತೆ ಪಾಟನಭೇದನಾದಿಗಳಿಂದ ಉಪಚರಿಸಬೇಕು. ಎಲ್ಲಾ ಶೋಫಗಳಿಗೂ ಆ ಲೇಪನವು ಮೊದಲನೆಯ ಚಿಕಿತ್ಸಾ ವಿಧಾನವು.

ಅನ್ಧಾಲಜೀಂ ಯವಪ್ರಖ್ಯಾಂ ಪನಸೀಂ ಕಚ್ಛಪೀಂ ತಥಾ
ಪಾಷಾಣಗರ್ದಭಂ ಚೈವ ಪೂರ್ವಂ ಸ್ವೇದೇನ ಯೋಜಯೇತ್ ||೫||
ಮನಃಶಿಲಾತಾಲಕುಷ್ಠದಾರುಕಲ್ಕೈಃ ಪ್ರಲೇಪಯೇತ್
ಪರಿಪಾಕಗತಾನ್ ಭಿತ್ವಾ ವ್ರಣವತ್ಸಮುಪಾಚರೇತ್ ||೬||

ಅಂಧಾಲಜಿ, ಯವಪ್ರಖ್ಯ, ಪನಸಿಕಾ, ಕಚ್ಛಪಿ, ಪಾಷಾಣಗರ್ದಭ, ಈ ರೋಗಗಳಿಗೆ ಮೊದಲು ಸ್ವೇದಮಾಡಿಸಿ ಮಣಶಿಲೆ, ಅರಿದಳ, ಚಂಗಲ್‌ಕೋಷ್ಠ, ದೇವದಾರು ಇವುಗಳ ಕಲ್ಕದಿಂದ ಲೇಪನಮಾಡಿಸಬೇಕು. ಚೆನ್ನಾಗಿ ಪಕ್ವವಾದರೆ ಶಸ್ತ್ರದಿಂದ ಭೇದಿಸಿ ವ್ರಣಚಿಕಿತ್ಸೆಯಂತೆ ಉಪಚರಿಸಬೇಕು.

ವಿವೃತಾಮಿನ್ದ್ರವೃದ್ಧಾಂ ಚ ಗರ್ದಭೀಂ ಜಾಲಗರ್ದಭಮ್
ಇರಿವೇಲ್ಲಾಂ ಗನ್ಧನಾಮ್ನೀಂ ಕಕ್ಷಾಂ ವಿಸ್ಫೋಟಕಾಂ ಸ್ತಥಾ ||೭||
ಪಿತ್ತಜಸ್ಯ ವಿಸರ್ಪಸ್ಯ ಕ್ರಿಯಯಾ ಸಾಧಯೇದ್ಭಿಷಕ್
ರೋಪಯೇತ್ಸರ್ಪಿಷಾ ಪಕ್ವಾನ್ ಸಿದ್ಧೇನ ಮಧುರೌಷಧೈಃ ||೮||

ವಿವೃತಾ, ಇನ್ದ್ರವೃದ್ಧಾ, ಗರ್ದಭೀ, ಜಾಲಗರ್ದಭ, ಇರಿವೇಲ್ಲ, ಗನ್ಧನಾಮ, ಕಕ್ಷಾ, ವಿಸ್ಫೋಟಕಗಳನ್ನು ವೈದ್ಯನು ಪಿತ್ತವಿಸರ್ಪಕ್ಕೆ ಮಾಡುವಂತೆಯೇ (ಶೀತಚಿಕಿತ್ಸೆ)

ಉಪಚರಿಸಬೇಕು. ಪಕ್ವವಾದವುಗಳನ್ನು ಮಧುರಗಳಾದ ಕಾಕೋಳ್ಯಾದಿ ಗಣದ್ರವ್ಯ ಗಳಿಂದ ತಯಾರಿಸಿರುವ ಘೃತಗಳಿಂದ ಲೇಪಿಸಿ ವ್ರಣವನ್ನು ಮಾಯಿಸಬೇಕು.

ಚಿಪ್ಯಮುಷ್ಣಾಮ್ಬುನಾ ಸಿಕ್ತಮುತ್ಕೃತ್ಯ ಸ್ರಾವಯೇದ್ಭಿಷಕ್
ಚಕ್ರತೈಲೇನ ಚಾಭ್ಯಜ್ಯ ಸರ್ಜಚೂರ್ಣೇನ ಚೂರ್ಣಯೇತ್ ||೯||
ಬನ್ಧೇನೋಪಚರೇಚ್ಚೈನಮಶಕ್ಯಂ ಚಾಗ್ನಿನಾ ದಹೇತ್
ಮಧುರೌಷಧಸಿದ್ಧೇನ ತತಸ್ತೈಲೇನ ರೋಪಯೇತ್ ||೧೦||
ಕುನಖೇ ವಿಧಿರಪ್ಯೇಷ ಕಾರ್ಯೋ ಹಿ ಭಿಷಜಾ ಭವೇತ್
ಉಪಾಚರೇದ್ಧನುಶಯೀಂ ಶ್ಲೇಷ್ಮವಿದ್ರಧಿವದ್ಭಿಷಕ್

ಚಿಪ್ಯ (ಉಗುರುಸುತ್ತು) ವನ್ನು ಬಿಸಿನೀರಿನಲ್ಲಿ ಅದ್ದಿ ಶಸ್ತ್ರದಿಂದ ಕತ್ತರಿಸಿ ಕೀವನ್ನೂ ದುಷ್ಟರಕ್ತವನ್ನೂ ಸುರಿಸಿ ಚಕ್ರತೈಲದಿಂದ ವ್ರಣಕ್ಕೆ ಅಭ್ಯಂಗ ಮಾಡಿಸಿ ಸರ್ಜ ಕ್ಷಾರದ ಚೂರ್ಣವನ್ನು ವ್ರಣದಮೇಲೆ ಉದುರಿಸಿ ಬಟ್ಟೆಯಿಂದ ಬಿಗಿದು ಕಟ್ಟಬೇಕು. ಅಸಾಧ್ಯವಾದರೆ ಕಾದಸಲಾಕೆಯಿಂದ ಸುಟ್ಟು ಅನಂತರ ಕಾಕೋಳ್ಯಾದಿ ಮಧುರ ಗಣ ದ್ರವ್ಯಗಳಿಂದ ತಯಾರಿಸಿದ ತೈಲವನ್ನು ಲೇಪಿಸಿ ವ್ರಣವು ಮಾಯುವಂತೆ ಮಾಡಬೇಕು. ತಿಳುವಳಿಕೆಯುಳ್ಳ ವೈದ್ಯನು ಕುನಖಿಗೂ ಇದೇ ಚಿಕಿತ್ಸಾಕ್ರಮಗಳನ್ನು ಆಚರಿಸಬೇಕು. ಅನುಶಯಿಯನ್ನು ಕಫವಿದ್ರಧಿಯಂತೆ ಚಿಕಿತ್ಸೆಮಾಡಬೇಕು.

ವಿದಾರಿಕಾಂ ಸಮಭ್ಯಜ್ಯ ಸ್ವಿನ್ನಾಂ ವಿಮ್ಲಾಪ್ಯ ಲೇಪಯೇತ್ ||೧೧||
ನಗರವೃತ್ತಿಕವರ್ಷಾಭೂಬಿಲ್ವಮೂಲೈಃ ಸುಪೇಷಿತೈಃ ।
ವ್ರಣಭಾವಗತಾಯಾಂ ವಾ ಕೃತ್ವಾ ಸಂಶೋಧನಕ್ರಿಯಾಮ್ ||೧೨||
ರೋಪಣಾರ್ಥಂ ಹಿತಂ ತೈಲಂ ಕಷಾಯಮಧುರೈಃ ಶೃತಮ್ ।
ಪ್ರಚ್ಛಾನೈರ್ವಾಜಲೌಕೋಭಿಃ ಸ್ರಾವ್ಯಾ ಪಕ್ವಾ ವಿದಾರಿಕಾ ||೧೩||
ಅಜಕರ್ಣೈಃ ಸಪಾಲಾಶೈರ್ಮೂಲಕಲ್ಕೈಃ ಪ್ರಲೇಪಯೇತ್ ।
ಪಕ್ವಾಂ ವಿದಾರ್ಯ ಶಸ್ತ್ರೇಣ ಪಟೋಲಪಿಚುಮನ್ದಯೋಃ ||೧೪||
ಕಲ್ಕೇನ ತಿಲಯುಕ್ತೇನ ಸರ್ಪಿರ್ಮಿಶ್ರೇಣ ಲೇಪಯೇತ್ ।
ಬಧ್ವಾ ಚ ಕ್ಷೀರವೃಕ್ಷಸ್ಯ ಕಷಾಯೈಃ ಖದಿರಸ್ಯ ಚ ||೧೫||
ವ್ರಣಂ ಪ್ರಕ್ಷಾಳಯೇಚ್ಛುದ್ಧಾಸ್ತತಸ್ತಾ ರೋಪಯೇತ್ ಪುನಃ ।

ವಿದಾರಿಕೆಯನ್ನು ಅಭ್ಯಂಗ, ಸ್ವೇದ, ವಿಮ್ಲಾಪನಗಳನ್ನು ಮಾಡಿಸಿ ನುಣ್ಣಗೆ ಅರೆದು ತಯಾರಿಸಿದ ನಾಯಿಬೇಲ, ಕ್ಷುದ್ರಕೊಮ್ಮೆ, ಬಿಲ್ವಪತ್ರೆಯ ಬೇರುಗಳ ಕಲ್ಕದಿಂದ ಲೇಪಿಸಬೇಕು. ವ್ರಣವನ್ನು ಶೋಧನೆಮಾಡಿ ಕಷಾಯಮಧುರ ದ್ರವ್ಯಗಳೊಡನೆ ತಯಾ ರಿಸಿದ ತೈಲದಿಂದ ಲೇಪಿಸಿ ಮಾಯಿಸಬೇಕು. ಅಪಕ್ವವಾದ ವಿದಾರಿಕೆಯನ್ನು ಶಸ್ತ್ರದಿಂದ ಕತ್ತರಿಸಿ ಅಥವಾ ಜಿಗುಳೆಯನ್ನು ಕಚ್ಚಿಸಿ ದುಷ್ಟರಕ್ತವನ್ನು ಸುರಿಸಬೇಕು. ಧೂಪದ ಮರ, ಮುತ್ತುಗಗಳ ಬೇರಿನ ತೊಗಟೆಯನ್ನು ಕಲ್ಕಮಾಡಿ ವ್ರಣಲೇಪನ ಮಾಡಬೇಕು. ಪಕ್ವವಾದರೆ ಶಸ್ತ್ರದಿಂದ ಕತ್ತರಿಸಿ ಕಹಿಪಡವಲ, ಬೇವು, ಎಳ್ಳು ಇವುಗಳ ಕಲ್ಕಕ್ಕೆ ತುಪ್ಪ

ಮಿಶ್ರಮಾಡಿ ಬಳಿದು ವ್ರಣಬಂಧನಮಾಡಿ ಕ್ಷೀರವೃಕ್ಷಗಳ ಮತ್ತು ಕಗ್ಗಲಿಯ ಕಷಾಯ ಗಳಿಂದ ವ್ರಣವನ್ನು ತೊಳೆದು ಮಾಯಿಸಬೇಕು.

ಮೇದೋರ್ಬುದವಿಧಾನೇನ ಸಾಧಯೇಚ್ಛರ್ಕರಾರ್ಬುದಮ್ ॥೧೬॥
ಕಚ್ಛೂಂ ವಿಚರ್ಚಿಕಾಂ ಪಾಮಾಂ ಕುಷ್ಠವತ್ ಸಮುಪಾಚರೇತ್ ।
ಲೇಪಶ್ಚ ಶಸ್ಯತೇ ಸಿಕ್ಥಶತಾಹ್ವಾಗೌರಸರ್ಷಪೈಃ ॥೧೭॥
ವಚಾದಾರ್ವೀಸರ್ಷಪೈರ್ವಾ ತೈಲಂ ವಾ ನಕ್ತಮಾಲಜಮ್ ।
ಸಾರತೈಲಮಥಾಭ್ಯಙ್ಗೇ ಕುರ್ವೀತ ಕಟುಕೈಃ ಶೃತಮ್ ॥೧೮॥

ಶರ್ಕರಾರ್ಬುದವನ್ನು ಮೇದೋರ್ಬುದ ಚಿಕಿತ್ಸಾವಿಧಾನದಂತೆಯೂ ಕಚ್ಛೂ (ದಪ್ಪ ಕಜ್ಜಿ), ವಿಚರ್ಚಿಕೆ, ಪಾಮಾ (ಇಸಬು) ಇವುಗಳನ್ನು ಕುಷ್ಠದಂತೆಯೂ ಚಿಕಿತ್ಸೆಮಾಡಿ ಜೇನುಮೇಣ, ಸಬ್ಬಸಿಗೆಬೀಜ, ಬಿಳಿಯ ಸಾಸಿವೆಗಳ ಕಲ್ಕದಿಂದಾಗಲೀ, ಬಜೆ, ಮರದರಿಶಿನ, ಸಾಸಿವೆಗಳ ಕಲ್ಕವನ್ನು ಹಸಿಯದಾದ ಹೊಂಗೆ ಎಣ್ಣೆಯಲ್ಲಿ ರಂಗಳಿಸಿಯಾಗಲೀ, ಬೀಟೆಮರ, ಅಗಿಲು, ಸರಳದೇವಾರ್ದಿ ತೈಲದೊಡನೆ ಪಿಪ್ಪಲ್ಯಾದಿ ಕಟುಕೌಷಧಗಳನ್ನು ಸೇರಿಸಿ ತಯಾರಿಸಿದ ತೈಲವನ್ನಾಗಲೀ ಅಭ್ಯಂಗಮಾಡಿಸಬೇಕು.

ಪಾದದಾರ್ಯಾಂ ಸಿರಾ ವಿಧ್ವಾ ಸ್ವೇದಾಭ್ಯಙ್ಗೌ ಪ್ರಯೋಜಯೇತ್ ।
ಮಧೂಚ್ಛಿಷ್ಟವಸಾಮಜ್ಜಸರ್ಜಚೂರ್ಣಘೃತೈಃ ಕೃತಃ ॥೧೯॥
ಯವಾಹ್ವಗೈರಿಕೋನ್ಮಿಶ್ರೈಃ ಪಾದಲೇಪಃ ಪ್ರಶಸ್ಯತೇ ।

ಪಾದದಾರಿಯಲ್ಲಿ ಪಾದಗಳಿಗೆ ಸ್ವೇದವನ್ನೂ ಅಭ್ಯಂಗವನ್ನೂ ಸಿರಾವ್ಯಧವನ್ನೂ ಮಾಡಿಸಬೇಕು. ಜೇನುಮೇಣ, ವಸೆ, ಮಜ್ಜೆ, ಸರ್ಜವೃಕ್ಷದಪುಡಿ, ತುಪ್ಪ ಇವುಗಳ ಜೊತೆಗೆ ಯವಕ್ಷಾರ, ಕಾವಿಗಳನ್ನು ಸೇರಿಸಿದ ಪಾದಲೇಪನವು ಉತ್ತಮವಾದದ್ದು.

ಪಾದೌ ಸಿಕ್ತ್ವಾರನಾಳೇನ ಲೇಪನಂ ಹ್ಯಲಸೇ ಹಿತಮ್ ॥೨೦॥
ಕಲ್ಕೀಕೃತೈರ್ನಿಮ್ಬತಿಲಕಾಸೀಸಾಲ್ಯೈಃ ಸಸೈನ್ಧವೈಃ ।
ಲಾಕ್ಷಾರಸೋಽಭಯಾವಾಪಿ ಕಾರ್ಯಂ ಸ್ಯಾದ್ರಕ್ತಮೋಕ್ಷಣಮ್ ॥೨೧॥
ಸಿದ್ಧಂ ರಸೇ ಕಣ್ಟಕಾರ್ಯಾಸ್ತೈಲಂ ವಾ ಸಾರ್ಷಪಂ ಹಿತಮ್ ।
ಕಾಸೀಸರೋಚನಶಿಲಾಚೂರ್ಣೈರ್ವಾ ಪ್ರತಿಸಾರಣಮ್ ॥೨೨॥
ಉದ್ಧೃತ್ಯ ದಗ್ಧ್ವಾ ಸ್ನೇಹೇನ ಜಯೇತ್ ಕದರಸಂಜ್ಞಕಮ್ ।

ಅಲಸವೆಂಬ ರೋಗದಲ್ಲಿ ಕಲಗಚ್ಚಿನಲ್ಲಿ ಕಾಲನ್ನು ತೊಳೆದು ಬೇವಿನಎಲೆ, ಎಳ್ಳು, ಅನ್ನಭೇದಿ, ಅರಿದಳ, ಸೈಂಧವಗಳನ್ನು ಕಲ್ಕಮಾಡಿ ಲೇಪಿಸಬೇಕು. ಅಥವಾ ಲಾಕ್ಷಾರಸ ಅಣಿಲೆಪುಡಿಯ ಕಲ್ಕವನ್ನಾಗಲೀ ಲೇಪಿಸಿ ರಕ್ತಮೋಕ್ಷಣವನ್ನು ಮಾಡಿಸಬೇಕು. ನೆಲಗುಳ್ಳದ ಕಷಾಯದೊಡನೆ ಸಾಸಿವೆ ಎಣ್ಣೆಯನ್ನು ಸೇರಿಸಿ ತಯಾರಿಸಿದ ತೈಲವನ್ನು ಲೇಪಿಸಬೇಕು. ಅನ್ನಭೇದಿ, ಗೋರೋಚನ, ಮಣಶಿಲೆ ಇವುಗಳ ಚೂರ್ಣವನ್ನು ಉದುರಿಸಬೇಕು. ಕದರವನ್ನು ಶಸ್ತ್ರದಿಂದ ಕತ್ತರಿಸಿ ಕಾದಸ್ನೇಹದಿಂದ ಸುಡಬೇಕು.

ಇಂದ್ರಲುಪ್ತಂ ಸಿರಾಂ ಮೂರ್ಧ್ನಿ ಸ್ನಿಗ್ಧಸ್ವಿನ್ನಸ್ಯ ಮೋಕ್ಷಯೇತ್ ||೨೩||
ಕಲ್ಕೈಃ ಸಮನಃಶಿಲಾಕಾಸೀಸತುತ್ಥಕೈಃ ।
ಕುಟನ್ನಟಾದಾರುಕಲ್ಕೈರ್ಲೇಪನಂ ವಾ ಪ್ರಶಸ್ಯತೇ ||೨೪||
ಪ್ರಚ್ಛಯಿತ್ವಾವಗಾಢಂ ವಾ ಗುಞ್ಜಾಕಲ್ಕೈರ್ಮುಹುರ್ಮುಹುಃ ।
ಲೇಪಯೇದುಪಶಾನ್ತ್ಯರ್ಥಂ ಕುರ್ಯಾದ್ವಾಪಿ ರಸಾಯನಮ್ ||೨೫||
ಮಾಲತೀಕರವೀರಾಗ್ನಿನಕ್ತಮಾಲ ವಿಪಾಚಿತಮ್ ।
ತೈಲಮಭ್ಯಞ್ಜನೇ ಶಸ್ತಮಿನ್ದ್ರಲುಪ್ತಾಪಹಂ ಪರಮ್ ||೨೬||

ಇಂದ್ರಲುಪ್ತ ರೋಗದಲ್ಲಿ ಸ್ನೇಹಸ್ವೇದಗಳನ್ನು ಮಾಡಿಸಿ ತಲೆಯಲ್ಲಿರುವ ಸಿರೆಯನ್ನು ವೇಧಿಸಬೇಕು. ಮಣಶಿಲೆ, ಅನ್ನಭೇದಿ, ಮೈಲುತುತ್ಥ, ಮೇಣಸುಗಳ ಚೂರ್ಣಗಳ ಕಲ್ಕವನ್ನಾಗಲೀ, ಹೆಮ್ಮರದತೊಗಟೆ, ಮರದರಿಶಿನಗಳ ಕಲ್ಕವನ್ನಾಗಲೀ ಲೇಪಿಸಬೇಕು. ಆಳವಾಗಿ ಚರ್ಮವನ್ನು ಕೆರೆದು ಆಗಾಗ ಗುಲಗಂಚಿಯ ಕಲ್ಕವನ್ನು ಲೇಪಿಸುತ್ತಿರಬೇಕು. ಉಪಶಮನವಾಗಲು ರಸಾಯನವನ್ನು ಸೇವಿಸಬೇಕು. ಜಾಜಿ, ಕಣಿಗಲೆ, ಚಿತ್ರಮೂಲ, ಹೊಂಗೆ ಇವುಗಳ ಸೊಪ್ಪು ಮತ್ತು ಕಾಯಿಗಳ ಕಲ್ಕವನ್ನು ಗೋಮೂತ್ರದಲ್ಲಿ ಅರೆದು ಸಾಸಿವೆ ಎಣ್ಣೆಯನ್ನೂ ಕಲ್ಕದ ೪ ರಷ್ಟು ತೈಲ, ತೈಲದ ೪ ರಷ್ಟು ಗೋಮೂತ್ರ ಇವುಗಳನ್ನು ಕೂಡಿಸಿ ತೈಲಮಾತ್ರವೇ ಉಳಿಯುವಂತೆ ಪಾಕಮಾಡಿ ಅಭ್ಯಂಗ ಮಾಡಿಸಿದರೆ ಇಂದ್ರಲುಪ್ತಹರವಾಗುತ್ತದೆ.

ಅರೂಂಷಿಕಾಂ ಹೃತೇರಕ್ತೇ ಸೇಚಯೇನ್ನಿಮ್ಬವಾರಿಣಾ ।
ಅಶ್ವಾತ್ಸೈನ್ಧವಯುಕ್ತೇನ ವಾಜಿವಿಷ್ಠಾರಸೇನ ತು ||೨೭||
ಹರಿತಾಲನಿಶಾನಿಮ್ಬಕಲ್ಕೈರ್ವಾ ಸಪಟೋಲಜೈಃ ।
ಯಷ್ಟೀನೀಲೋತ್ಪಲೈರಣ್ಡಮಾರ್ಕವೈರ್ವಾ ಪ್ರಲೇಪಯೇತ್ ||೨೮||

ತಲೆ ಅಗರುರೋಗಕ್ಕೆ (ಅರೂಂಷಿಕೆಯಲ್ಲಿ) ರಕ್ತಹರಣಮಾಡಿಸಿ ಬೇವಿನ ಕಷಾಯದಿಂದ ತೊಳೆದು ಕುದುರೆ ಲದ್ದಿಯ ರಸಕ್ಕೆ ಸೈಂಧವಲವಣವನ್ನು ಸೇರಿಸಿ ರಂಗಳಿಸಿ ಬಳಿಯಬೇಕು. ಅಥವಾ ಅರಿದಳ, ಅರಿಶಿನ, ಬೇವಿನಸೊಪ್ಪು, ಕಹಿಪಡವಲದಸೊಪ್ಪು ಇವುಗಳ ಕಲ್ಕದಿಂದಾಗಲೀ, ಅತಿಮಧುರ, ನೈದಿಲೆಗೆಡ್ಡೆ, ಹರಳೆಲೆ (ಬೀಜ), ಗರುಗ ಇವುಗಳ ಕಲ್ಕದಿಂದಾಗಲೀ ಲೇಪಿಸಬೇಕು.

ಸಿರಾಂ ದಾರುಣಕೇ ವಿಧ್ವಾ ಸ್ನಿಗ್ಧಸ್ವಿನ್ನಸ್ಯ ಮೂರ್ಧನಿ ।
ಅವಪೀಡಂ ಶಿರೋವಸ್ತಿಮಭ್ಯಙ್ಗಂ ಚ ಪ್ರಯೋಜಯೇತ್ ||೨೯||
ಕ್ಷಾಳನೇ ಕೋದ್ರವತೃಣಕ್ಷಾರತೋಯಂ ಪ್ರಶಸ್ಯತೇ ।
ಉಪರಿಷ್ಟಾತ್ಪ್ರವಕ್ಷ್ಯಾಮಿ ವಿಧಿಂ ಪಲಿತನಾಶನಮ್ ||೩೦||
ಮಸೂರಿಕಾಯಾಂ ಕುಷ್ಠಘ್ನಲೇಪನಾದಿಕ್ರಿಯಾ ಹಿತಾ ।
ಪಿತ್ತಶ್ಲೇಷ್ಮವಿಸರ್ಪೋಕ್ತಾ ಕ್ರಿಯಾ ವಾ ಸಂಪ್ರಶಸ್ಯತೇ ||೩೧||

ಜತುಮಣಿಂ ಸಮುತ್ಕೃತ್ಯ ಮಶಕಂ ತಿಲಕಾಲಕಮ್ ।
ಕ್ಷಾರೇಣ ಪ್ರದಹೇದ್ಯುಕ್ತ್ಯಾ ವಹ್ನಿನಾ ವಾ ಶನೈಃ ಶನೈಃ ॥೩೨॥

ದಾರುಣಕರೋಗದಲ್ಲಿ ಸ್ನೇಹಸ್ವೇದಮಾಡಿಸಿ ತಲೆಯಲ್ಲಿರುವ ಸಿರೆಯನ್ನು ವೇಧ ಮಾಡಿ ಅವಪೀಡ ನಸ್ಯ ಶಿರೋವಸ್ತಿ, ಅಭ್ಯಂಗಗಳನ್ನು ಮಾಡಿಸಬೇಕು. ಹಾರಕದ ಕಡ್ಡಿ ಯನ್ನು ಸುಟ್ಟು ಕ್ಷಾರಮಾಡಿ ಅದನ್ನು ನೀರಿನಲ್ಲಿ ಕದರಿ ವ್ರಣವನ್ನು ತೊಳೆದರೆ ಹಿತವಾಗು ತ್ತದೆ. ಪಲಿತಚಿಕಿತ್ಸೆಯನ್ನು ಪ್ರತ್ಯೇಕವಾಗಿ ಹೇಳುತ್ತೇವೆ. ಮಸೂರಿಕಾ ರೋಗದಲ್ಲಿ ಕುಷ್ಠರೋಗಹರಗಳಾದ ಲೇಪನ ಸೇಕಾದಿಗಳು ಹಿತಕರಗಳು ಅಥವಾ ಪಿತ್ತಕಫ ವಿಸರ್ಪ ಹರಗಳಾದ ಚಿಕಿತ್ಸೆಯು ಹಿತಕರವು. ಜತುಮಣಿಯನ್ನು ಶಸ್ತ್ರದಿಂದ ಕತ್ತರಿಸಬೇಕು. ಮಶಕತಿಲಕಾಲಕಗಳನ್ನು ಕ್ಷಾರದಿಂದಾಗಲೀ ಕಾದತಂತಿಯಿಂದಾಗಲೀ ಉಪಾಯದಿಂದ ಆಗಾಗ ಸುಡುತ್ತಿರಬೇಕು.

ನ್ಯಚ್ಛೇ ವ್ಯಙ್ಗೇ ಸಿರಾಮೋಕ್ಷೋ ನೀಲಿಕಾಯಾಂ ಚ ಶಸ್ಯತೇ ।
ಯಥಾಸ್ವಾಯಂ ಯಥಾಭ್ಯಾಸಂ ಲಾಲಾಟ್ಯಾದಿಸಿರಾವ್ಯಧಃ ॥೩೩॥
ಘೃಷ್ಟ್ವಾ ದಿಹ್ಯಾತ್ ತ್ವಚಂ ಪಿಷ್ಟ್ವಾ ಕ್ಷೀರಿಣಾಂ ಕ್ಷೀರಸಂಯುತಾಮ್ ।
ಬಲಾತಿಬಲಯಷ್ಟ್ಯಾಹ್ವರಜನೀರ್ವಾ ಪ್ರಲೇಪನಮ್ ॥೩೪॥
ಪಯಸ್ಯಾಗುರುಕಾಲೀಯಲೇಪನಂ ವಾ ಸಗೈರಿಕಮ್ ।
ಕ್ಷೌದ್ರಾಜ್ಯಯುಕ್ತಯಾ ಲಿಮ್ಪೇದ್ದಂಷ್ಟ್ರಯಾ ಸೂಕರಸ್ಯ ಚ ॥೩೫॥
ಕಪಿತ್ಥರಾಜಾದನಯೋಃ ಕಲ್ಕಂ ವಾ ಹಿತಮುಚ್ಯತೇ ।

ನ್ಯಚ್ಛ, ವ್ಯಂಗ, ನೀಲಿಕಾರೋಗಗಳಲ್ಲಿ ಸಿರಾಮೋಕ್ಷಣ ಮಾಡಿಸಿದರೆ ಹಿತಕರವು. ಆಯಾಯರೋಗಕ್ಕೆ ತಕ್ಕಂತೆಯೂ ರೋಗಕ್ಕೆ ಹತ್ತಿರವಿದ್ದಂತೆಯೂ ನೋಡಿ ಲಲಾಟಾದಿ ಪ್ರದೇಶಗಳಲ್ಲಿರುವ ಸಿರೆಗಳನ್ನು ಭೇದಮಾಡಬೇಕು. ಆಲ, ಅತ್ತಿ ಮೊದಲಾದ ಕ್ಷೀರವೃಕ್ಷ ಗಳ ತೊಗಟೆಯ ಕಲ್ಕವನ್ನಾಗಲೀ, ಕಳ್ಳಂಗಡಲೆ, ಬೋಳಂಗಡಲೆ, ಅತಿಮಧುರ, ಅರಿಶಿನ ಇವುಗಳ ಕಲ್ಕವನ್ನಾಗಲೀ ಹಾಲುನೆಲಗುಂಬಳಗೆಡ್ಡೆ, ಅಗಿಲು, ಕರಿ ಅಗಿಲು, ಕಾವಿ ಇವು ಗಳ ಕಲ್ಕಕ್ಕೆ ಜೇನುತುಪ್ಪ, ತುಪ್ಪಗಳನ್ನು ಮಿಶ್ರಮಾಡಿಯಾಗಲೀ ಹಂದಿಯ ದವಡೆಯ ಹಲ್ಲನ್ನು ಸಾಣೆಯಕಲ್ಲಿನಲ್ಲಿ ತೇದ ಗಂಧನನ್ನಾಗಲೀ ಬೇಲದ ಮತ್ತು ಮರಹಾಲೆ (ರಾಜಾ ದನ) ಯ ತೊಗಟೆಗಳ ಕಲ್ಕಕ್ಕೆ ಜೇನುತುಪ್ಪ, ತುಪ್ಪಗಳನ್ನು ಮಿಶ್ರಮಾಡಿಯಾಗಲೀ ಲೇಪಿಸಿದರೆ ಹಿತಕರವಾಗುತ್ತದೆ.

ಯೌವನೇ ಪಿಡಕಾಸ್ವೇಷ ವಿಶೇಷಾಚ್ಛರ್ದನಂ ಹಿತಮ್ ॥೩೬॥
ಲೇಪನಂ ಚ ವಚಾರೋಧ್ರಸೈನ್ಧವೈಃ ಸರ್ಷಪಾನ್ವಿತೈಃ ।
ಕುಸ್ತುಂಬರುವಚಾಲೋಧ್ರಕುಷ್ಠೈರ್ವಾ ಲೇಪನಂ ಹಿತಮ್ ॥೩೭॥
ಪದ್ಮಿನೀಕಣ್ಟಕೇ ರೋಗೇ ಛರ್ದಯೇನ್ನಿಮ್ಬವಾರಿಣಾ ।
ತೇನೈವ ಸಿದ್ಧಂ ಸಕ್ಷೌದ್ರಂ ಸರ್ಪಿಃ ಪಾನೇ ಪ್ರದಾಪಯೇತ್ ॥೩೮॥
ನಿಮ್ಬಾರಗ್ವಧಯೋಃ ಕ್ವಾಥೋ ಹಿತ ಉತ್ಸಾದನೇ ಭವೇತ್ ।

ಯುವಾನಪಿಡಕೆಯಲ್ಲಿ ವಿಶೇಷವಾಗಿ ವಮನಮಾಡಿಸಿ ಬಜೆ, ರೋಧ್ರ, ಸೈಂಧವ ಸಾಸಿವೆಗಳ ಕಲ್ಕದಿಂದಾಗಲೀ ಕೊತ್ತುಂಬರಿ, ಬಜೆ, ರೋಧ್ರ, ಚಂಗಲ್‌ಕೋಷ್ಠಗಳ ಕಲ್ಕದಿಂದಾಗಲೀ ಲೇಪನಮಾಡುವುದು ಹಿತಕರವು. ಪದ್ಮಿನೀಕಂಟಕರೋಗದಲ್ಲಿ ಬೇವಿನ ಕಷಾಯವನ್ನು ಪಾನಮಾಡಿಸಿ ವಮನಮಾಡಿಸಿ ಬೇವಿನ ಕಷಾಯದಿಂದ ತಯಾರಿಸಿದ ಘೃತಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು. ಬೇವು ಮತ್ತು ಕಕ್ಕೆಗಳ ಕಷಾಯದಿಂದ ಉಜ್ಜಿದರೆ ಹಿತವಾಗುತ್ತದೆ.

ಪರಿವೃತ್ತಿಂ ಘೃತಾಭ್ಯಕ್ತಾಂ ಸುಸ್ವಿನ್ನಾಮುಪನಾಹಯೇತ್ ||೩೯||
ತ್ರಿರಾತ್ರಂ ಪಞ್ಚರಾತ್ರಂ ವಾ ವಾತಘ್ನೈಃ ಶಾಲ್ವಣಾದಿಭಿಃ |
ತತೋಽಭ್ಯಜ್ಯ ಶನೈಶ್ಚರ್ಮ ಸ್ವೇದಯೇದುಪನಾಹನ್ಯೈಃ ||೪೦||
ಪ್ರವಿಷ್ಟೇಚಮಣೌ ಚರ್ಮ ಸ್ವೇದಯೇದುಪನಾಹನ್ಯೈಃ |
ದದ್ಯಾದ್ವಾತಹರಾನ್ ಬಸ್ತೀನ್ ಸ್ನಿಗ್ಧಾನ್ಯನ್ನಾನಿ ಭೋಜಯೇತ್ ||೪೧||
ವಪಾಟಿಕಾಂ ಜಯೇದೇವಂ ಯಥಾದೋಷಂ ಚಿಕಿತ್ಸಕಃ |

ಪ್ರವೃತ್ತಿಗೆ ತುಪ್ಪವನ್ನು ಬಳಿದು ಹೀನ ಮಧ್ಯಮೋತ್ತಮ ದೋಷೋಲ್ಬಣಕ್ಕೆ ತಕ್ಕಂತೆ ೩ ದಿನ, ೫ ದಿನಗಳವರೆಗೆ ವಾತಹರಗಳಾದ ಶಾಲ್ವಣಾದಿ ಸ್ವೇದವಿಧಾನಗಳಿಂದ ಚೆನ್ನಾಗಿ ಸ್ವೇದನಮಾಡಿಸಿ (ಬೆವರಿಸಿ) ಬಟ್ಟೆಯನ್ನು ಬಿಗಿದು ಕಟ್ಟಬೇಕು. ಅನಂತರ ಚರ್ಮದಮೇಲೆ ತುಪ್ಪವನ್ನು ಬಳಿದು ಉಪನಾಹಸ್ವೇದವನ್ನು ಮಾಡಿಸಬೇಕು. ವಾತ ಹರಗಳಾದ ಬಸ್ತಿಗಳನ್ನು ಪ್ರಯೋಗಿಸಿ ಸ್ನಿಗ್ಧವಾದ ಅನ್ನಗಳನ್ನು ಭೋಜನಮಾಡಿಸಬೇಕು. ಇದೇ ರೀತಿಯಾಗಿ ಅವಪಾಟಿಕೆಯನ್ನೂ ದೋಷಹರಣ ಚಿಕಿತ್ಸಾಕ್ರಮದಿಂದ ನಾಶಮಾಡ ಬೇಕು.

ನಿರುದ್ಧಪ್ರಕಶೇ ನಾಡೀಂ ಲೌಹೀಮುಭಯತೋಮುಖೀಮ್ ||೪೨||
ದಾರವೀಂ ವಾ ಜತುಕೃತಾಂ ಘೃತಾಭ್ಯಕ್ತಾಂ ಪ್ರವೇಶಯೇತ್ |
ಪರಿಷೇಕೇ ವಸಾ ಮಜ್ಜ ಶಿಶುಮಾರವರಾಹಯೋಃ ||೪೩||
ಚಕ್ರತೈಲಂ ತಥಾ ಯೋಜ್ಯಂ ವಾತಘ್ನದ್ರವ್ಯಸಂಯುತಮ್ |
ತ್ರ್ಯಹಾತ್ ತ್ರ್ಯಹಾತ್ ಸ್ಥೂಲತರಾಂ ಸಮ್ಯಕ್ ನಾಡೀಂ ಪ್ರವೇಶಯೇತ್ ||೪೪||
ಸ್ರೋತೋ ವಿವರ್ಧಯೇದೇವಂ ಸ್ನಿಗ್ಧಮನ್ನಂ ಚ ಭೋಜಯೇತ್ |
ಭಿತ್ವಾ ವಾ ಸೇವನೀಂ ಮುಕ್ತ್ವಾ ಸದ್ಯಃ ಕ್ಷತವದಾಚರೇತ್ ||೪೫||

ನಿರುದ್ಧಪ್ರಕಾಶರೋಗದಲ್ಲಿ ಎರಡು ಕಡೆಯೂ ರಂಧ್ರವುಳ್ಳ ಲೋಹದ, ಮರದ, ಅಥವಾ ಅರಗಿನ ಕೊಳವೆಗೆ ತುಪ್ಪಬಳಿದು ಶಿಶ್ನರಂಧ್ರದೊಳಗೆ ನುಗ್ಗಿಸಬೇಕು. ಮೊಸಳೆ, ಹಂದಿಗಳ ವಸೆ ಮತ್ತು ಮಜ್ಜೆಯನ್ನಾಗಲೀ ಚಕ್ರತೈಲವನ್ನಾಗಲೀ ವಾತಹರಗಳಾದ ಕಾಕೋಲ್ಯಾದಿ ಗಣದ್ರವ್ಯಗಳ ಕಷಾಯಕ್ಕೆ ಸೇರಿಸಿ ಶಿಶ್ನದಮೇಲೆ ಸೇಚನೆಮಾಡಬೇಕು. ೩ ದಿನಗಳಿಗೊಂದು ಸಾರಿಯಂತೆ ದಪ್ಪದಪ್ಪ ಕೊಳವೆಗಳನ್ನು ಶಿಶ್ನದೊಳಕ್ಕೆ ನುಗ್ಗಿಸಿ

ಮೂತ್ರದ್ವಾರವನ್ನು ಹಿಗ್ಗಲಿಸಬೇಕು. ಅಥವಾ ಸೇವನಿಯನ್ನು ಬಿಟ್ಟು ಜತುಮಣಿ ದ್ವಾರವನ್ನು ಶಸ್ತ್ರದಿಂದ ಕತ್ತರಿಸಿ ಸರಿಮಾಡಿ ಅನಂತರ ಸದ್ಯೋವ್ರಣಕ್ಕೆ ಮಾಡುವಂತೆ ಉಪಚರಿಸಬೇಕು.

ಸನ್ನಿರುದ್ಧಗುದಂ ರೋಗಂ ವಲ್ಮೀಕಂ ವಹ್ನಿರೋಹಿಣೀಮ್ ।
ಪ್ರತ್ಯಾಖ್ಯಾಯ ಯಥಾ ಯೋಗಂ ಚಿಕಿತ್ಸಿತಮಥಾಚರೇತ್ ||೪೬||
ವಿಸರ್ಪೋಕ್ತೇನ ವಿಧಿನಾ ಸಾಧಯೇದಗ್ನಿ ರೋಹಿಣೀಮ್ ।
ಸನ್ನಿರುದ್ಧಗುದೇ ಯೋಜ್ಯಾ ನಿರುದ್ಧಪ್ರಕಶಕ್ರಿಯಾ ||೪೭||
ಶಸ್ತ್ರೇಣೋತ್ಕೃತ್ಯ ವಲ್ಮೀಕಂ ಕ್ಷಾರಾಗ್ನಿಭ್ಯಾಂ ಪ್ರಸಾಧಯೇತ್ ।
ವಿಧಾನೇನಾರ್ಬುದೋಕ್ತೇನ ಶೋಧಯಿತ್ವಾ ಚ ರೋಪಯೇತ್ ||೪೮||
ವಲ್ಮೀಕಂ ತು ಭವೇದ್ಯಸ್ಯ ನಾತಿವೃದ್ಧಮಮರ್ಮಜಮ್ ।
ತತ್ರ ಸಂಶೋಧನಂ ಕೃತ್ವಾ ಶೋಣಿತಂ ಮೋಕ್ಷಯೇದ್ಭಿಷಕ್ ||೪೯||
ಕುಳತ್ಥಿಕಾಯಾಮೂಲೈಶ್ಚ ಗುಡೂಚ್ಯಾ ಲವಣೇನ ಚ ।
ಆರೇವತಶ್ಚ ಮೂಲೈಶ್ಚ ದನ್ತೀಮೂಲೈಸ್ತಥೈವ ಚ ||೫೦||
ಶಾಮಾಮೂಲೈಃ ಸಪಲಲೈಃ ಶಕ್ತುಮಿಶ್ರೈಃ ಪ್ರಲೇಪಯೇತ್
ಸುಸ್ನಿಗ್ಧೈಶ್ಚ ಸುಖೋಷ್ಣೈಶ್ಚ ಭಿಷಕ್ ತಮುಪನಾಹಯೇತ್ ||೫೧||
ಪಕ್ವಂ ವಾ ತದ್ವಿಜಾನೀಯಾತ್ ಗತೀಃ ಸರ್ವಾಯಥಾಕ್ರಮಮ್ ।
ಅಭಿಜ್ಞಾಯ ತತಶ್ಛಿತ್ವಾ ಪ್ರದಹೇನ್ಮತಿಮಾನ್ ಭಿಷಕ್ ||೫೨||
ಸಂಶೋಧ್ಯ ದುಷ್ಟಮಾಂಸಾನಿ ಕ್ಷಾರೇಣ ಪ್ರತಿಸಾರಯೇತ್ ।
ವ್ರಣಂ ವಿಶುದ್ಧಂ ವಿಜ್ಞಾಯ ರೋಪಯೇನ್ಮತಿಮಾನ್ ಭಿಷಕ್ ||೫೩||
ಸುಮನಾಗ್ರನ್ಥಯಶ್ಚೈವ ಭಲ್ಲಾತಕಮನಃ ಶಿಲೇ ।
ಕಾಲಾನುಸಾರೀ ಸೂಕ್ಷ್ಮೈಲಾ ಚನ್ದನಾಗುರುಣೀ ತಥಾ ||೫೪||
ಏತೈಃ ಸಿದ್ಧಂ ನಿಮ್ಬತೈಲಂ ವಲ್ಮೀಕೇ ರೋಪಣಂ ಹಿತಮ್ ।
ಪಾಣಿಪಾದೋಪರಿಷ್ಟಾತ್ತು ಛಿದ್ರೈರ್ಬಹುಭಿರಾವೃತಮ್ ||೫೫||
ವಲ್ಮೀಕಂ ಯತ್ಸಶೋಫಂ ಸ್ಯಾದ್ವರ್ಜ್ಯಂ ತತ್ತು ವಿಜಾನತಾ ।

ಸನ್ನಿರುದ್ಧಗುದ ವಲ್ಮೀಕ ಅಗ್ನಿರೋಹಿಣಿಗಳು ಅಸಾಧ್ಯರೋಗಗಳು. ಒಂದುಸಾರಿ ಮರಣಸೂಚಕ ದುರ್ಲಕ್ಷಣಗಳು ರೋಗಿಯಲ್ಲಿ ಕಂಡುಬಂದರೂ ದೈವಸುಯೋಗದಿಂದ ಜೀವಿಸುತ್ತಾನೆ ಎಂದು ತಿಳಿಸಿ ಯೋಗಾನುಸಾರವಾಗಿ ಚಿಕಿತ್ಸೆಮಾಡಬೇಕು. ವಿಸರ್ಪ ಚಿಕಿತ್ಸಾವಿಧಾನದಂತೆ ಅಗ್ನಿರೋಹಿಣಿಯನ್ನೂ ಸನ್ನಿರುದ್ಧಗುದವನ್ನೂ ನಿರುದ್ಧ ಪ್ರಕಶದ ಚಿಕಿತ್ಸೆಯಂತೆಯೂ ವಲ್ಮೀಕವನ್ನು ಶಸ್ತ್ರದಿಂದ ಕತ್ತರಿಸಿ ಕ್ಷಾರಕರ್ಮದಿಂದಲೂ ಅಗ್ನಿದಾಹ ದಿಂದಲೂ ಉಪಚರಿಸಿ ಅರ್ಬುದ ಚಿಕಿತ್ಸಾ ವಿಧಾನದಂತೆ ವ್ರಣಶೋಧನೆ ರೋಪಣೆಗಳನ್ನು ಮಾಡಿಸಬೇಕು. ಮರ್ಮಸ್ಥಾನವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಅತಿವೃದ್ಧಿಯಾಗದಿರುವ ವಲ್ಮೀಕರೋಗಿಗೆ ದೇಹಸಂಶೋಧನೆ ಮತ್ತು ರಕ್ತಮೋಕ್ಷಣಗಳನ್ನು ಮಾಡಿಸಿ ಹುರುಳಿ

ಗಿಡದಬೇರು, ಅಮೃತಬಳ್ಳಿ, ಸೈಂಧವಲವಣ, ಕಕ್ಕೆಬೇರು, ಜಾಪಾಳದ ಬೇರು, ತಿಗಡೆ ಬೇರು, ಎಳ್ಳು, ಯವೆಯಹಿಟ್ಟು ಇವನ್ನೆಲ್ಲಾ ಕಲ್ಕಮಾಡಿ ಲೇಪಿಸಬೇಕು. ಮತ್ತು ಇವುಗಳಿಗೆ ಸ್ನೇಹಮಿಶ್ರಮಾಡಿ ಸುಖೋಷ್ಣವಾಗಿ ಉಪನಾಹ ಸ್ವೇದವನ್ನು ಮಾಡಿಸಬೇಕು. ಪಕ್ವವಾದರೆ ಕ್ರಮವಾಗಿ ಆ ನಾಡೀಗತಿಗಳನ್ನು ಗೊತ್ತುಮಾಡಿ ಶಸ್ತ್ರದಿಂದ ಛೇದಿಸಿ ಅಗ್ನಿ ತಪ್ತ ಸಲಾಕೆಯಿಂದ ಸುಡಬೇಕು. ದುಷ್ಟಮಾಂಸಗಳನ್ನು ಕತ್ತರಿಸಿ ಕ್ಷಾರದಿಂದ ವ್ರಣ ವನ್ನು ಕೊರೆದು ವ್ರಣವು ಶುದ್ಧವಾದಮೇಲೆ ಮಾಯುವಂತೆ ಮಾಡಬೇಕು. ಜಾಜಿ ಸೊಪ್ಪು, ಪೋಡಿ, ಗೇರುಬೀಜ, ಮಣಶಿಲೆ, ಅಗಿಲು, ಸಣ್ಣಏಲಕ್ಕಿ, ಶ್ರೀಗಂಧ, ಅಗಿಲು ಗಂಧ ಇವುಗಳ ಕಲ್ಕದೊಡನೆ ಬೇವಿನಎಣ್ಣೆ ಸೇರಿಸಿ ತೈಲ ಪಾಕಮಾಡಿಟ್ಟುಕೊಂಡು ವಲ್ಮೀಕಕ್ಕೆ ಬಳಿದರೆ ವ್ರಣವು ಮಾಯುತ್ತದೆ. ಕೈಕಾಲುಗಳ ಮೇಲ್ಗಡೆಯಲ್ಲಿ ಅನೇಕ ರಂಧ್ರಗಳುಳ್ಳ ವಲ್ಮೀಕ ವ್ರಣವುಂಟಾಗಿ ಶೋಫವೂ ಕಂಡರೆ ಜಾಣನಾದ ವೈದ್ಯನು ಅದನ್ನು ತ್ಯಜಿಸಬೇಕು—(ಚಿಕಿತ್ಸೆ ಮಾಡಲೇಕೂಡದು.)

ಧಾತ್ರ್ಯಾಃ ಸ್ತನ್ಯಂ ಶೋಧಯಿತ್ವಾ ಬಾಲೇ ಸಾಧ್ಯಾಹಿಪೂತನಾ ||೫೬||
ಪಟೋಲಪತ್ರ ತ್ರಿಫಲಾರಸಾಞ್ಜನವಿಪಾಚಿತಮ್ ।
ಪೀತಂ ಘೃತಂ ನಾಶಯತಿ ಕೃಚ್ಛ್ರಾಮಪ್ಯಹಿಪೂತನಾಮ್ ||೫೭||
ತ್ರಿಫಲಾಕೋಲಖದಿರಕಷಾಯಂ ವ್ರಣರೋಪಣಮ್ ।
ಕಾಸೀಸರೋಚನಾತುತ್ಥ ಹರಿತಾಳರಸಾಞ್ಜನೈಃ ||೫೮||
ಲೇಪೋಽಮ್ಲಪಿಷ್ಟೋ ಬದರೀತ್ವಗ್ವಾ ಸೈನ್ಧವಸಂಯುತಾ ।
ಕಪಾಲತುತ್ಥಜಂ ಚೂರ್ಣಂ ಚೂರ್ಣಕಾಲೇ ಪ್ರಯೋಜಯೇತ್ ||೫೯||
ಚಿಕಿತ್ಸೇನ್ಮುಷ್ಕಕಚ್ಛೂಂ ಚಾಪ್ಯಹಿಪೂತನಪಾಮವತ್ ।

ಬಾಲಕರ ಅಹಿಪೂತನವೆಂಬ ವ್ಯಾಧಿಯಲ್ಲಿ ದಾದಿಯ ಸ್ತನ್ಯವನ್ನು ಶೋಧಿಸಿ ಕಹಿ ಪಡವಲದ ಸೊಪ್ಪು ತ್ರಿಫಲೆ ರಸಾಂಜನಗಳೊಡನೆ ತಯಾರಿಸಿದ ತುಪ್ಪವನ್ನು ಪಾನ ಮಾಡಿಸಿದರೆ ಹಿತಕರವು. ತ್ರಿಫಲೆ, ಕಗ್ಗಲಿತೊಗಟೆ, ಎಲಚಿಹಣ್ಣು ಅಥವಾ ಎಲೆ ಇವು ಗಳ ಕಷಾಯದಿಂದ ಸೇಚನೆಮಾಡಿದರೆ ವ್ರಣರೋಪಣವಾಗುತ್ತದೆ. ಅನ್ನಭೇದಿ, ಗೋರೋಜನ, ಮೈಲ್‌ತುತ್ಥ, ಅರಿದಳ, ರಸಾಂಜನ ಇವುಗಳನ್ನು ಹುಳಿ ಕಲಗಚ್ಚಿನಿಂದ ಅರೆದು ಅಥವಾ ಎಲಚಿತೊಗಟೆಯ ಕಲ್ಕಕ್ಕೆ ಸೈಂಧವಲವಣವನ್ನು ಮಿಶ್ರಮಾಡಿ ಅಥವಾ ಹೆಂಚಿನಬಕ್ಕರೆ, ಮೈಲ್‌ತುತ್ಥಗಳ ಚೂರ್ಣವನ್ನು ಉಪಯೋಗಿಸಿದರೆ ವ್ರಣಹರವು. ಅಂಡ ಕೋಶದ ಕಜ್ಜಿಯನ್ನು ಅಹಿಪೂತನ ಮತ್ತು ಪಾಮಾಗಳ ಚಿಕಿತ್ಸೆಯಂತೆಯೇ ಉಪಚರಿಸ ಬೇಕು.

ಗುದಭ್ರಂಶೇ ಗುದಂ ಸ್ವಿನ್ನಂ ಸ್ನೇಹಾಭ್ಯಕ್ತಂ ಪ್ರವೇಶಯೇತ್ ||೬೦||
ಕಾರಯೇದ್ಗೋಫಣಾಬನ್ಧಂ ಮಧ್ಯಚ್ಛಿದ್ರೇಣ ಚರ್ಮಣಾ ।
ವಿನಿರ್ಗಮಾರ್ಥಂ ವಾಯೋಶ್ಚ ಸ್ವೇದಯೇಚ್ಚ ಮುಹುರ್ಮುಹುಃ ||೬೧||

ಕ್ಷೀರಂ ಮಹಾಪಞ್ಚಮೂಲಂ ಮೂಷಿಕಾಂ ಚಾನ್ತ್ರವರ್ಜಿತಾಮ್ ।
ತತಸ್ತಸ್ಮಿನ್ ಪಚೇತ್ತೈಲಂ ವಾತಘ್ನೌಷಧಸಂಯುತಮ್ ।
ಗುದಭ್ರಂಶಮಿದಂ ಕೃಚ್ಛ್ರಂ ಪಾನಾಭ್ಯಙ್ಗಾತ್ ಪ್ರಸಾಧಯೇತ್ ||೬೨||

ಗುದಭ್ರಂಶದಲ್ಲಿ ಗುದಕ್ಕೆ ಸ್ವೇದಮಾಡಿಸಿ ಸ್ನೇಹವನ್ನು ಬಳಿದು ಒಳಕ್ಕೆ ತಳ್ಳಿ ನುಗ್ಗಿಸಿ ಮಧ್ಯಭಾಗದಲ್ಲಿ ರಂಧ್ರಮಾಡಿರುವ ಚಕ್ಕಳದ ಪಟ್ಟಿಯಿಂದ ಗೋಫಣಾಬಂಧ ವನ್ನು (ಹಸುವಿನ ಮುಖದಂತಿರುವ ತ್ರಿಕೋಣಾಕಾರದ) ಗುದಭಾಗದಲ್ಲಿ ಕಟ್ಟಬೇಕು. ಅಪಾನವಾಯುವು ಹೊರಕ್ಕೆ ಹೊರಡುವಂತೆ ಪದೇ ಪದೇ ಸ್ವೇದಮಾಡಿಸಬೇಕು. ದಪ್ಪ ಇಲಿಯ ಅಂತ್ರವನ್ನು ಹೊರಕ್ಕೆ ತೆಗೆದು ದೊಡ್ಡಮಡಕೆಗೆ ಹಾಕಿ ೧ ಪ್ರಸ್ಥ ಮಹಾ ಪಂಚ ಮೂಲದ ಕಷಾಯ, ೧ ಪ್ರಸ್ಥ ಹಾಲು ಮತ್ತು ೩ ಪ್ರಸ್ಥ ನೀರು ಇವನ್ನು ಸೇರಿಸಿ ಹಾಲು ಮಾತ್ರ ನಿಲ್ಲುವಂತೆ ಕಷಾಯವನ್ನು ಕಾಯಿಸಿ ಶೋಧಿಸಿದ ಕಷಾಯಕ್ಕೆ ೧ ಕುಡುವ ತೈಲ ವನ್ನೂ ವಾತಹರಗಳಾದ ಭದ್ರದಾರ್ವಾದಿ ಗಣದ್ರವ್ಯಗಳ ಕಲ್ಕ ೧ ಪಲದಷ್ಟು ಸೇರಿಸಿ ತೈಲಮಾತ್ರ ನಿಲ್ಲುವಂತೆ ಮಂದಾಗ್ನಿಯಿಂದ ಪಾಕಮಾಡಿ ಶೋಧಿಸಿದ ತೈಲವನ್ನು ಪಾನ ಅಭ್ಯಂಗಗಳಿಗೆ ಪ್ರಯೋಗಿಸಿದರೆ ಕೃಚ್ಛ್ರವಾದ ಗುದಭ್ರಂಶವೂ ನಿವಾರಣೆಯಾಗು ತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಕ್ಷುದ್ರರೋಗ ಚಿಕಿತ್ಸಾನಾಮ ವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹ ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಏಕವಿಂಶತಿತಮೋಽಧ್ಯಾಯಃ

ಅಥಾತಃ ಶೂಕರೋಗಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಿಸಿದಂತೆಯೇ ಶೂಕರೋಗ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಸಂಲಿಖ್ಯ ಸರ್ಷಪಿಂ ಸಮ್ಯಕ್ ಕಷಾಯೈರವಚೂರ್ಣಯೇತ್ |
ಕಷಾಯೇಷ್ವೇವ ತೈಲಂ ಚ ಕುರ್ವೀತ ವ್ರಣರೋಪಣಮ್ ||೩||
ಅಷ್ಠೀಲಿಕಾಂ ಜಲೌಕೋಭಿರ್ಗ್ರಾಹಯೇತ್ಕುಶಲೋ ಭಿಷಕ್ |
ತಥಾ ಚಾನುಪಶಾಮ್ಯನ್ತೀಂ ಕಫಗ್ರನ್ಥಿವದುದ್ಧರೇತ್ ||೪||

ಸರ್ಷಪಿಯೆಂಬ ಪಿಟಕೆಯನ್ನು ಶಸ್ತ್ರದಿಂದ ಕೆರೆದು ಕಷಾಯಗಳಿಂದ ಚೆನ್ನಾಗಿ ತೊಳೆದು ಕಷಾಯದ್ರವ್ಯಗಳ ಚೂರ್ಣವನ್ನು ಅವುಗಳಮೇಲೆ ಉದುರಿಸಬೇಕು. ಕಷಾಯದ್ರವ್ಯಗಳ ಚೂರ್ಣದ ೪ ರಷ್ಟು ನೀರನ್ನು ಸೇರಿಸಿ ೧/೪ ಪಾಲು ನಿಲ್ಲುವಂತೆ ಕಷಾಯವನ್ನು ಮಾಡಿ ಶೋಧಿಸಿದ ಕಷಾಯದ ೧/೪ ಭಾಗ ತೈಲವನ್ನೂ ತೈಲದ ೧/೪ ಭಾಗ ಕಷಾಯದ್ರವ್ಯದ ಕಲ್ಕವನ್ನೂ ಸೇರಿಸಿ ಪಾಕಮಾಡಿದ ತೈಲವನ್ನು ಲೇಪಿಸಿದರೆ ರೋಪಣವಾಗುತ್ತದೆ. ಬುದ್ಧಿವಂತನಾದ ವೈದ್ಯನು ಅಷ್ಠೀಲಿಕಾಗ್ರಂಥಿಗೆ ಜಿಗುಳೆಯನ್ನು ಕಚ್ಚಿಸಿ ರಕ್ತವನ್ನು ಸುರಿಸಬೇಕು. ಇದರಿಂದ ಶಮನವಾಗದಿದ್ದರೆ ಕಫಗ್ರಂಥಿಚಿಕಿತ್ಸೆಯನ್ನು ಮಾಡಬೇಕು. ಅಂದರೆ ಶಸ್ತ್ರದಿಂದ ಕತ್ತರಿಸಿ ವ್ರಣೋಪಚಾರವನ್ನು ಮಾಡಿಸಬೇಕು.

ಸ್ವೇದಯೇದ್ಗ್ರಥಿತಂ ಶಶ್ವನ್ನಾಡೀಸ್ವೇದೇನ ಬುದ್ಧಿಮಾನ್ |
ಸುಖೋಷ್ಣೈರುಪನಾಹೈಶ್ಚ ಸುಸ್ನಿಗ್ಧೈರುಪನಾಹಯೇತ್ ||೫||
ಕುಮ್ಭೀಕಾಂ ಪಾಕಮಾಪನ್ನಾಂ ಭಿನ್ದ್ಯಾಚ್ಛುದ್ಧಾಂ ತು ರೋಪಯೇತ್ |
ತೈಲೇನ ತ್ರಿಫಲಾರೋಧ್ರತಿನ್ದುಕಾಮ್ರಾತಕೇನ ತು ||೬||
ಗ್ರಾಹಯಿತ್ವಾ ಜಲೌಕೋಭಿರಲಜೀಂ ಸೇಚಯೇತ್ ತತಃ |
ಕಷಾಯೈಸ್ತೇಷು ಸಿದ್ಧಂ ಚ ತೈಲರೋಪಣಮಿಷ್ಯತೇ ||೭||
ಬಲಾತೈಲೇನ ಕೋಷ್ಣೇನ ಮೃದಿತಂ ಪರಿಷೇಚಯೇತ್ |
ಮಧುರೈಃ ಸರ್ಪಿಷಾಸ್ನಿಗ್ಧೈಃ ಸುಖೋಷ್ಣೈರುಪನಾಹಯೇತ್ ||೮||
ಸಂಮೂಢಪಿಡಕಾಂ ಕ್ಷಿಪ್ರಂ ಜಲೌಕೋಭಿರುಪಾಚರೇತ್ |
ಭಿತ್ವಾ ಪರ್ಯಾಗತಾಂ ಚಾಪಿ ಲೇಪಯೇತ್ ಕ್ಷೌದ್ರಸರ್ಪಿಷಾ ||೯||

ಗ್ರಥಿತವನ್ನು ಬುದ್ಧಿವಂತನಾದ ವೈದ್ಯನು ನಾಡೀಸ್ವೇದದಿಂದ ಸದಾ ಸ್ವೇದ ಮಾಡಿಸಿ ಸ್ನೇಹಮಿಶ್ರವಾದ ಉಪನಾಹಸ್ವೇದವನ್ನು ಮಾಡಿಸಬೇಕು. ಕುಮ್ಭೀಕಪಿಡಿಕೆಯು ಪಕ್ವವಾದರೆ ಶಸ್ತ್ರದಿಂದ ಛೇದಿಸಿ ಶೋಧನ ಕಷಾಯದಿಂದ ತೊಳೆದು ತ್ರಿಫಲೆ, ಲೋಧ್ರ, ತೂಪರೆಹಣ್ಣು, ಅಮಟೆಹಣ್ಣುಗಳನ್ನು ಸೇರಿಸಿ ಪಾಕಮಾಡಿದ ತೈಲ ಲೇಪನದಿಂದ ರೋಪಣಮಾಡಿಸಬೇಕು. ಅಲಜಿಯನ್ನು ಜಿಗುಳೆಕಚ್ಚಿಸಿ ರಕ್ತಸ್ರಾವಮಾಡಿಸಿ ಕಷಾಯದಿಂದ ತೊಳೆದು ಕಷಾಯದೊಡನೆ ಪಾಕಮಾಡಿದ ತೈಲವನ್ನು ಲೇಪಮಾಡಿ ಮಾಯಿಸಬೇಕು. ಸುಖೋಷ್ಣವಾದ ಬಲಾತೈಲವನ್ನು ಮೃದಿತದ ಮೇಲೆ ಸೇಚನೆ ಮಾಡಿ ಮಧುರ ದ್ರವ್ಯಗಳ ಕಲ್ಕಕ್ಕೆ ತುಪ್ಪವನ್ನು ಸೇರಿಸಿ ಬಿಸಿ ಮಾಡಿ ಉಪನಾಹ ಮಾಡಿಸಬೇಕು (ಮುಚ್ಚಿಕಟ್ಟಬೇಕು.). ಸಂಮೂಢ ಪಿಡಕೆಯನ್ನು ಜಿಗುಳೆ ಕಚ್ಚಿಸಿ ರಕ್ತಸ್ರಾವ ಮಾಡಿಸಿ ಪಕ್ವವಾದರೆ ಶಸ್ತ್ರದಿಂದ ಕತ್ತರಿಸಿ ಕೀವು ದುಷ್ಟರಕ್ತಗಳು ಸೋರಿದ ಮೇಲೆ ಜೇನುತುಪ್ಪ, ತುಪ್ಪಗಳನ್ನು ರಂಗಳಿಸಿ ಬಳಿಯಬೇಕು.

ಅವಮನ್ಥೇ ಗತೇ ಪಾಕಂ ಭಿನ್ನೇ ತೈಲಂ ವಿಧೀಯತೇ ।
ಧವಾಶ್ವಕರ್ಣಪತ್ತ್ರಙ್ಗಸಲ್ಲಕೀತಿನ್ದುಕೀಕೃತಮ್ ॥೧೦॥
ಕ್ರಿಯಾಂ ಪುಷ್ಕರಿಕಾಯಾಂ ತು ಶೀತಾಂ ಸರ್ವಾಂ ಪ್ರಯೋಜಯೇತ್ ।
ಜಲೌಕೋಭಿರ್ಹರೇಚ್ಛಾಸೃಕ್ ಸರ್ಪಿಷಾ ಚಾವಸೇಚಯೇತ್ ॥೧೧॥
ಸ್ಪರ್ಶಹಾನ್ಯಾಂ ಹರೇದ್ರಕ್ತಂ ಪ್ರದಿಹ್ಯಾನ್ಮಧುರೈರಪಿ ।
ಕ್ಷೀರೇಕ್ಷುರಸಸರ್ಪಿರ್ಭಿಃ ಸೇಚಯೇಚ್ಚ ಸುಶೀತಲೈಃ ॥೧೨॥

ಅವಮಂಥವು ಪಾಕವಾಗಿ ಭಿನ್ನವಾದರೆ ದಿಂಡಲು, ಧೂಪದಮರ, ಪತಂಗದಚಕ್ಕೆ ನಾಯಿಬೀಲ, ತೂಪರೆ ತೊಗಟೆಗಳನ್ನು ಸೇರಿಸಿ ತಯಾರಿಸಿದ ತೈಲವನ್ನು ಲೇಪಿಸಬೇಕು. ಪುಷ್ಕರಿಕೆಯಲ್ಲಿ ಲೇಪ, ಕಲ್ಕ, ಸೇಕಾದಿಗಳೆಲ್ಲಾ ತಣ್ಣಗೇ ಇರಬೇಕು. ಜಿಗುಳೆಯನ್ನು ಕಚ್ಚಿಸಿ ರಕ್ತಸ್ರಾವ ಮಾಡಿಸಿ ತುಪ್ಪದಿಂದ ಸೇಚನೆಮಾಡಬೇಕು. ಸ್ಪರ್ಶಹಾನಿಯಲ್ಲಿ ಸಿರೆಗಳಿಂದ ರಕ್ತಹರಣಮಾಡಿಸಿ ಮಧುರ ದ್ರವ್ಯಗಳ ಕಲ್ಕವನ್ನು ಲೇಪಿಸಿ ತಣ್ಣಗಿರುವ ಹಾಲು, ಕಬ್ಬಿನರಸ, ತುಪ್ಪಗಳನ್ನು ಅದರಮೇಲೆ ಸುರಿಸಬೇಕು.

ಪಿಡಕಾಮುತ್ತಮಾಖ್ಯಾಂ ಚ ಬಡಿಶೇನೋದ್ಧರೇದ್ಭಿಷಕ್ ।
ಉದ್ಧೃತ್ಯ ಮಧುಸಂಯುಕ್ತೈಃ ಕಷಾಯೈರವಚೂರ್ಣಯೇತ್ ॥೧೩॥
ರಸಕ್ರಿಯಾವಿಧಾತವ್ಯಾ ಲಿಖಿತೇ ಶತಪೋನಕೇ ।
ಪೃಥಕ್‌ಪರ್ಣ್ಯಾದಿಸಿದ್ಧಂ ಚ ದೇಯಂ ತೈಲಮನನ್ತರಮ್ ॥೧೪॥
ಕ್ರಿಯಾಂ ಕುರ್ಯಾದ್ಭಿಷಕ್ ಪ್ರಾಜ್ಞಸ್ತ್ವಕ್ಪಾಕಸ್ಯ ವಿಸರ್ಪವತ್ ।

ವೈದ್ಯನು "ಉತ್ತಮಾ" ಎಂಬ ಪಿಡಿಕೆಯನ್ನು ಬಡಿಶಯಂತ್ರದಿಂದ ಚುಚ್ಚಿ ತೆಗೆದು ಕಷಾಯರಸವುಳ್ಳ ಚೂರ್ಣಗಳಿಗೆ ಜೇನುತುಪ್ಪವನ್ನು ಬೆರೆಸಿ ಬಳಿಯಬೇಕು. ಶತಪೋನಕವನ್ನು ಶಸ್ತ್ರದಿಂದ ಕೆರೆದು ರಸಕ್ರಿಯೆಯಿಂದ ಲೇಪಿಸಿ ಒಂದೆಲೆಹೊನ್ನೆ ಮೊದಲಾದ

ಕ್ಷುದ್ರಪಂಚಮೂಲಗಳಿಂದ ತಯಾರಿಸಿದ ತೈಲವನ್ನು ಬಳಿಯಬೇಕು. ಬುದ್ಧಿವಂತನಾದ ವೈದ್ಯನು ತ್ವಕ್ಪಾಕವನ್ನು ವಿಸರ್ಪಚಿಕಿತ್ಸೆಯಂತೆ ಉಪಚರಿಸಬೇಕು.

ರಕ್ತವಿದ್ರಧಿವಚ್ಚಾಪಿ ಕ್ರಿಯಾ ಶೋಣಿತಜೇಽರ್ಬುದೇ ॥೧೫॥
ಕಷಾಯಕಲ್ಕಸರ್ಪೀಂಷಿ ತೈಲಂ ಚೂರ್ಣಂ ರಸಕ್ರಿಯಾ ।
ಶೋಧನಂ ರೋಪಣಂ ಚೈವ ವೀಕ್ಷ್ಯ ವೀಕ್ಷ್ಯಾವಚಾರಯೇತ್ ॥೧೬॥
ಯಥಾಸ್ವಂ ಸರ್ಪಿಷಃ ಪಾನಂ ಪಥ್ಯಂ ಚಾಪಿ ವಿರೇಚನಮ್ ।
ಹಿತಃ ಶೋಣಿತಮೋಕ್ಷಶ್ಚ ಯಚ್ಚಾಪಿ ಲಘುಭೋಜನಮ್ ॥೧೭॥
ಅರ್ಬುದಂ ಮಾಂಸಪಾಕಂ ಚ ವಿದ್ರಧಿಂ ತಿಲಕಾಲಕಮ್ ।
ಪ್ರತ್ಯಾಖ್ಯಾಯ ಪ್ರಕುರ್ವೀತ ಭಿಷಕ್ಸಮ್ಯಕ್ ಪ್ರತಿಕ್ರಿಯಾಮ್ ॥೧೮॥

ರಕ್ತಾರ್ಬುದದಲ್ಲಿ ರಕ್ತವಿದ್ರಧಿ ಚಿಕಿತ್ಸೆಯಂತೆಯೂ ಅಂದರೆ ಕಷಾಯ, ಕಲ್ಕ, ಘೃತ, ತೈಲ, ಚೂರ್ಣ, ರಸಕ್ರಿಯೆಗಳನ್ನು ಪ್ರಯೋಗಿಸಬೇಕು. ಶೋಧನ ರೋಪಣ ಗಳಿಗೆ ಅನುಕೂಲಿಸುವಂತೆ ಬುದ್ಧಿಪೂರ್ವಕವಾಗಿ ಆಲೋಚಿಸಿ ತಕ್ಕಂತೆ ಘೃತಪಾನ, ಹಿತ ಕರವಾದ ವಿರೇಚನ, ಲಘುಭೋಜನ ಇವುಗಳನ್ನು ಪ್ರಯೋಗಿಸಬೇಕು. ಅರ್ಬುದ, ಮಾಂಸಪಾಕ, ವಿದ್ರಧಿ, ತಿಲಕಾಲಕ ಇವುಗಳು ಅಸಾಧ್ಯಗಳೆಂದು ತಿಳಿಸಿ ಅನಂತರ ಸರಿ ಯಾಗಿ ಚಿಕಿತ್ಸಾಕ್ರಮಗಳನ್ನು ಅನುಸರಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಶೂಕರೋಗ ಚಿಕಿತ್ಸಾನಾಮೈಕ ವಿಂಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹ ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ದ್ವಾವಿಂಶತಿತಮೋಽಧ್ಯಾಯಃ

ಅಥಾತೋ ಮುಖರೋಗಾಣಾಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಮುಖರೋಗಗಳ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಚತುರ್ವಿಧೇನ ಸ್ನೇಹೇನ ಮಧೂಚ್ಛಿಷ್ಟಯುತೇನ ಚ ।
ವಾತಜೇಽಭ್ಯಞ್ಜನಂ ಕುರ್ಯಾನ್ನಾಡೀಸ್ವೇದಂ ಚ ಬುದ್ಧಿಮಾನ್ ||೩||
ಮತಿಮಾನೋಷ್ಠಕೋಪೇತು ಶಾಲ್ವಣಂ ಚೋಪನಾಹನೇ ।
ಮಸ್ತಿಷ್ಕೇ ಚೈವ ನಸ್ಯೇ ಚ ತೈಲಂ ವಾತಹರಂ ಹಿತಮ್ ||೪||
ಶ್ರೀವೇಷ್ಟಕಂ ಸರ್ಜರಸಂ ಸುರದಾರು ಸಗುಗ್ಗುಳು ।
ಯಷ್ಟೀಮಧುಕಚೂರ್ಣಂ ತು ವಿದಧ್ಯಾತ್ ಪ್ರತಿಸಾರಣಮ್ ||೫||
ಪಿತ್ತರಕ್ತಾಭಿಘಾತೋತ್ಥಂ ಜಲೌಕೋಭಿರುಪಾಚರೇತ್ ।
ಪಿತ್ತವಿದ್ರಧಿವಚ್ಚಾಪಿ ಕ್ರಿಯಾಂ ಕುರ್ಯಾದಶೇಷತಃ ||೬||
ಶಿರೋವಿರೇಚನಂ ಧೂಮಃ ಸ್ವೇದಃ ಕಬಳ ಏವ ಚ ।
ಹೃತೇ ರಕ್ತೇ ಪ್ರಯೋಕ್ತವ್ಯಮೋಷ್ಠಕೋಪೇ ಕಫಾತ್ಮಕೇ ||೭||
ತ್ರ್ಯೂಷಣಂ ಸ್ವರ್ಜಿಕಾಕ್ಷಾರೋ ಯವಕ್ಷಾರೋ ಬಿಡಂ ತಥಾ ।
ಕ್ಷೌದ್ರಯುಕ್ತಂ ವಿಧಾತವ್ಯಮೇತಚ್ಚ ಪ್ರತಿಸಾರಣಮ್ ||೮||
ಮೇದೋಜೇ ಸ್ವೇದಿತೇ ಭಿನ್ನೇ ಶೋಧಿತೇ ಜ್ವಲನೋ ಹಿತಃ ।
ಪ್ರಿಯಙ್ಗುತ್ರಿಫಲಾಲೋಧ್ರಂ ಸಕ್ಷೌದ್ರಂ ಪ್ರತಿಸಾರಣಮ್ ||೯||
ಏತದೋಷ್ಠಪ್ರಕೋಪಾನಾಂ ಸಾಧ್ಯಾನಾಂ ಕರ್ಮ ಕೀರ್ತಿತಮ್ ।

ಬುದ್ಧಿವಂತನಾದ ವೈದ್ಯನು ನಾಲ್ಕು ವಿಧಗಳಾದ ಸ್ನೇಹಗಳೊಡನೆ ಜೇನುಮೇಣವನ್ನೂ ಸೇರಿಸಿ ವಾತಿಕಓಷ್ಠಕೋಪದಲ್ಲಿ ಅಭ್ಯಂಗಮಾಡಿಸಿ ನಾಡೀಸ್ವೇದ ಶಾಲ್ವಣೋಪನಾಹವನ್ನು ಮಾಡಿಸಬೇಕು. ಶಿರೋಬಸ್ತಿ ನಸ್ಯಕರ್ಮಗಳಿಗೆ ವಾತಹರ ಬಲಾತೈಲಾದಿಗಳು ಹಿತಕರವು. ಸಾಂಬ್ರಾಣಿ, ರಾಳು, ದೇವದಾರು, ಗುಗ್ಗುಳ, ಅತಿಮಧುರ ಇವುಗಳ ಚೂರ್ಣದಿಂದ ಪ್ರತಿಸಾರಣಮಾಡಬೇಕು. (ಈ ಚೂರ್ಣವನ್ನು ನೆತ್ತಿಗೆ ಮೈಗೆ ಉಜ್ಜಬೇಕು. ಪಿತ್ತ, ರಕ್ತ, ಅಭಿಘಾತಗಳಿಂದುಂಟಾದ ಓಷ್ಠಕೋಪದಲ್ಲಿ ಜಿಗುಳೆಯನ್ನು ಕಚ್ಚಿಸಿ ರಕ್ತಸ್ರಾವವನ್ನು ಮಾಡಿಸಬೇಕು. ಪಿತ್ತ, ವಿದ್ರಧಿಚಿಕಿತ್ಸೆಯಂತೆಯೇ ಎಲ್ಲಾ ವಿಧಾನಗಳನ್ನು ಮಾಡಬೇಕು. ಕಫಜ ಓಷ್ಠಕೋಪದಲ್ಲಿ ರಕ್ತಮೋಕ್ಷಣವನ್ನು ಮಾಡಿಸಿ

ದನಂತರವೇ ಶಿರೋವಿರೇಚನ, ಧೂಮ, ಸ್ವೇದ, ಕವಳಗ್ರಹವನ್ನೂ ಮಾಡಬೇಕು. ತ್ರಿಕಟು, ಸರ್ಜಕ್ಷಾರ, ಯವಕ್ಷಾರ, ಹಿಂಗು, ಬಿಡಲವಣ ಇವುಗಳ ಚೂರ್ಣವನ್ನು ಜೇನು ತುಪ್ಪದಲ್ಲಿ ರಂಗಳಿಸಿ ಪ್ರತಿಸಾರಣಮಾಡಬೇಕು. ಮೇದೋಜ ಓಷ್ಠಕೋಪದಲ್ಲಿ ರೂಕ್ಷ ಸ್ವೇದಮಾಡಿ ಶಸ್ತ್ರದಿಂದ ಸೀಳಿ ಕೀವು ಮತ್ತು ದುಷ್ಟರಕ್ತಗಳನ್ನು ಸುರಿಸಿ ವ್ರಣಕ್ಷಾಳನ ಮಾಡಿದಮೇಲೆ ಕಾದಸಲಾಕಿಯಿಂದ ಸುಡಬೇಕು. ನೆಳಲು, ತ್ರಿಫಲೆ, ರೋಧ್ರಗಳ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಿಸಿ ಪ್ರತಿಸಾರಣೆ ಮಾಡಬೇಕು. ಇದುವರೆಗೆ ಹೇಳಿದ ವಿಧಾನಗಳು ಸಾಧ್ಯವಾಗತಕ್ಕ ಓಷ್ಠಕೋಪಚಿಕಿತ್ಸೆಯು.

ದನ್ತಮೂಲಗತಾನಾಂ ತು ರೋಗಾಣಾಂ ಕರ್ಮ ವಕ್ಷ್ಯತೇ ||೧೦||
ಶೀತಾದೇ ಹೃತರಕ್ತೇ ತು ತೋಯೇ ನಾಗರಸರ್ಷಪಾ |
ನಿಃ ಕ್ವಾಥ್ಯ ತ್ರಿಫಲಾಮುಸ್ತಂ ಗಂಡೂಷಃ ಸರಸಾಞ್ಜನಃ ||೧೧||
ಪ್ರಿಯಙ್ಗು ವಶ್ಚ ಮುಸ್ತಂ ಚ ತ್ರಿಫಲಾ ಚ ಪ್ರಲೇಪನಮ್ |
ನಸ್ಯಂ ಚ ತ್ರಿಫಲಾಸಿದ್ಧಂ ಮಧುಕೋತ್ಪಲಪದ್ಮಕೈಃ ||೧೨||
ದನ್ತಪುಪ್ಪುಟಕೇ ಕಾರ್ಯಂ ತರುಣೇ ರಕ್ತಮೋಕ್ಷಣಮ್ |
ಸಪಞ್ಚ ಲವಣಃ ಕ್ಷಾರಃ ಸಕ್ಷೌದ್ರಃ ಪ್ರತಿಸಾರಣಮ್ ||೧೩||
ಹಿತಃ ಶಿರೋವಿರೇಕಶ್ಚ ನಸ್ಯಂ ಸ್ನಿಗ್ಧಂ ಚ ಭೋಜನಮ್ |

ದಂತಮೂಲಗತ ರೋಗಗಳಿಗೆ ಮಾಡಬೇಕಾದ ಚಿಕಿತ್ಸಾವಿಧಾನವನ್ನು ಹೇಳು ತ್ತೇವೆ—ಶೀತಾದರೋಗದಲ್ಲಿ ರಕ್ತಹರಣಮಾಡಿಸಿ ನೀರಿನಲ್ಲಿ ಶುಂಠಿ ಮತ್ತು ಸಾಸಿವೆ ಗಳನ್ನು ಕುದಿಸಿ ತ್ರಿಫಲೆ, ಕೊನ್ನಾರಿ ಗೆಡ್ಡೆಗಳ ಕಷಾಯದಿಂದ ರಸಾಂಜನ ಮಿಶ್ರಮಾಡಿ ಬಾಯಿಮುಕ್ಕಳಿಸಿ ಪ್ರೇಂಖಣ, ಕೊನ್ನಾರಿಗೆಡ್ಡೆ, ತ್ರಿಫಲೆಗಳ ಲೇಪನವನ್ನೂ, ತ್ರಿಫಲಾ ಕಷಾಯಕ್ಕೆ ಅತಿಮಧುರ, ನೈದಿಲೆ, ಪದ್ಮಕಚೂರ್ಣವನ್ನು ಸೇರಿಸಿ ನಸ್ಯ ಕರ್ಮವನ್ನೂ ಮಾಡಿಸಬೇಕು. ತರುಣಾವಸ್ಥೆಯಲ್ಲಿ ರಕ್ತಮೋಕ್ಷಣವನ್ನು ಮಾಡಿಸಬೇಕು. ಪಂಚ ಲವಣಗಳು, ಯವಕ್ಷಾರ, ಸರ್ಜಕ್ಷಾರ, ಟಂಕಣಕ್ಷಾರಗಳ ಚೂರ್ಣವನ್ನು ಜೇನುತುಪ್ಪ ದೊಡನೆ ಮಿಶ್ರಮಾಡಿದ ಪ್ರತಿಸಾರಣ (ಲೇಪನಗಳು)ವೂ, ಶಿರೋವಿರೇಚನ, ನಸ್ಯ, ಕರ್ಮ, ಸ್ನಿಗ್ಧವಾದ ಅನ್ನಭೋಜನ ಇವುಗಳೂ ಹಿತಕರವು.

ವಿಸ್ರಾವಿತೇ ದನ್ತವೇಷ್ಟೇ ವ್ರಣಾಂಸ್ತು ಪ್ರತಿಸಾರಯೇತ್ ||೧೪||
ರೋಧ್ರಪತ್ತಙ್ಗಯಷ್ಟ್ಯಾಹ್ವಲಾಕ್ಷಾಚೂರ್ಣೈರ್ಮಧೂತ್ತರೈಃ |
ಗಂಡೂಷೇ ಕ್ಷೀರಿಣೋ ಯೋಜ್ಯಾಃ ಸಕ್ಷೌದ್ರಘೃತಶರ್ಕರಾಃ ||೧೫||
ಕಾಕೋಲ್ಯಾದೌ ದಶಕ್ಷೀರಸಿದ್ಧಂ ಸರ್ಪಿಶ್ಚ ನಸ್ಯತಃ |
ಸೌಷಿರೇ ಹೃತರಕ್ತೇ ತು ರೋಧ್ರಮುಸ್ತಾರಸಾಞ್ಜನೈಃ ||೧೬||
ಸಕ್ಷೌದ್ರೈಃ ಶಸ್ಯತೇ ಲೇಪೋ ಗಣ್ಡೂಷೇ ಕ್ಷೀರಿಣೋ ಹಿತಾಃ |
ಸಾರಿವೋತ್ಪಲಯಷ್ಟ್ಯಾಹ್ವ ಸಾವರಾಗುರುಚನ್ದನೈಃ ||೧೭||

ಕ್ಷೀರೇ ದಶಗುಣೇ ಸಿದ್ಧಂ ಸರ್ಪಿರ್ನಸ್ಯೇ ಚ ಪೂಜಿತಮ್ ।
ಕ್ರಿಯಾಂ ಪರಿದರೇ ಕುರ್ಯಾತ್ ಶೀತಾದೋಕ್ತಾಂ ವಿಚಕ್ಷಣಃ ॥೧೮॥

ದಂತವೇಷ್ಟವನ್ನು ಶಸ್ತ್ರದಿಂದ ಭೇದಿಸಿ ದುಷ್ಟರಕ್ತವನ್ನು ಸುರಿಸಿ ರೋಧ್ರ, ಪತಂಗದಚಕ್ಕೆ, ಅತಿಮಧುರ, ಅರಶಿನಗಳ ಚೂರ್ಣಕ್ಕೆ ಜೇನುತುಪ್ಪವನ್ನು ಹೆಚ್ಚಾಗಿ ಸೇರಿಸಿ ಲೇಪಿಸಬೇಕು. ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯಕ್ಕೆ ಜೇನುತುಪ್ಪ, ತುಪ್ಪ, ಸಕ್ಕರೆಗಳನ್ನು ಮಿಶ್ರಮಾಡಿ ಗಂಡೂಷವನ್ನೂ ಕಾಕೋಳ್ಯಾದಿ ಗಣದ್ರವ್ಯಗಳ ಕಲ್ಕಗಳಿಗೆ ೧೦ ರಷ್ಟು ಭಾಗ ಹಾಲನ್ನೂ ಒಂದುಭಾಗ ಕಲ್ಕಕ್ಕೆ ೪ ಭಾಗದಷ್ಟು ತುಪ್ಪವನ್ನೂ ಸೇರಿಸಿ ತಯಾರಿಸಿದ ಘೃತದಿಂದ ನಸ್ಯಕರ್ಮವನ್ನೂ ಮಾಡಿಸಬೇಕು. ದಂತಸೌಷಿರದಲ್ಲಿ ರಕ್ತಸ್ರಾವಮಾಡಿಸಿ ರೋಧ್ರ, ಕೊನ್ನಾರಿಗೆಡ್ಡೆ, ರಸಾಂಜನಗಳ ಕಲ್ಕಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಲೇಪಿಸಬೇಕು. ಕ್ಷೀರವೃಕ್ಷಗಳ ಕಷಾಯದಿಂದ ಗಂಡೂಷವನ್ನು ಮಾಡಿಸಬೇಕು. ಸೊಗದೆಬೇರು, ನೈದಿಲೆಗೆಡ್ಡೆ, ಅತಿಮಧುರ, ಲೋಧ್ರ, ಅಗಿಲು, ಶ್ರೀಗಂಧ ಇವುಗಳ ಕಲ್ಕಕ್ಕೆ ೧೦ ರಷ್ಟು ಹಾಲನ್ನು ಸೇರಿಸಿ ತಯಾರಿಸಿದ ಘೃತದಿಂದ ನಸ್ಯಪ್ರಯೋಗವು ಹಿತಕರವು. ಪರಿದರವೆಂಬ ವ್ಯಾಧಿಯಲ್ಲಿ ಬುದ್ಧಿವಂತನಾದ ವೈದ್ಯನು ಸೀತಾದರೋಗದ ಚಿಕಿತ್ಸೆಯನ್ನೇ ಮಾಡಬೇಕು.

ಸಂಶೋಧ್ಯೋಭಯತಃ ಕಾಯಂ ಶಿರಶ್ಚೋಪಕುಶೇ ತಥಾ ।
ಕಾಕೋದುಮ್ಬರಿಕಾಗೋಜೀಪತ್ರೈರ್ವಿಸ್ರಾವಯೇದಸೃಕ್ ॥೧೯॥
ಕ್ಷೌದ್ರಯುಕ್ತೈಶ್ಚ ಲವಣೈಃ ಸವ್ಯೋಷೈಃ ಪ್ರತಿಸಾರಯೇತ್ ।
ಪಿಪ್ಪಲೀಸರ್ಷಪಾಂಶ್ಚೈವ ನಾಗರಂ ನೈಚುಲಂ ಫಲಮ್ ॥೨೦॥
ಸುಖೋದಕೇನ ಸಂಸೃಷ್ಟಂ ಕಬಳಂ ಚಾಪಿ ಧಾರಯೇತ್ ।
ಘೃತಂ ಮಧುರಕೈಃ ಸಿದ್ಧಂ ಹಿತಂ ಕಬಳನಸ್ಯಯೋಃ ॥೨೧॥
ಶಸ್ತ್ರೇಣ ದಂತವೈದರ್ಭೇ ದಂತಮೂಲಾನಿ ಶೋಧಯೇತ್ ।
ತತಃ ಕ್ಷಾರಂ ಪ್ರಯುಞ್ಜೀತ ಕ್ರಿಯಾಃ ಸರ್ವಾಶ್ಚ ಶೀತಲಾಃ ॥೨೨॥
ಉದ್ಧೃತ್ಯಾಧಿಕದನ್ತಂ ತು ತತೋಽಗ್ನಿಮವಚಾರಯೇತ್
ಕ್ರಿಮಿದಂತಕವಚ್ಚಾಪಿ ವಿಧಿಃ ಕಾರ್ಯೋ ವಿಜಾನತಾ ॥೨೩॥

ಉಪಕುಶ ರೋಗದಲ್ಲಿ ವಮನ ವಿರೇಚನದಿಂದಲೂ ದೇಹಶುದ್ಧಿಯನ್ನು ಮಾಡಿಸಿ ಕಲ್ಲತ್ತಿ (ಗರಗತ್ತಿ), ಎತ್ತುನಾಲಿಗೆ ಎಲೆಗಳಿಂದ ತಿಕ್ಕಿ ರಕ್ತ ಸ್ರಾವಮಾಡಿಸಿ ಲವಣ, ತ್ರಿಕಟು ಚೂರ್ಣ ಜೇನುತುಪ್ಪಗಳನ್ನು ಮಿಶ್ರಮಾಡಿ ಉಜ್ಜಬೇಕು. ಹಿಪ್ಪಲಿ, ಸಾಸಿವೆ, ಶುಂಠಿ, ಹಬ್ಬೇಕಾಯಿಗಳನ್ನು ಕಲ್ಕಮಾಡಿ ಸುಖೋಷ್ಣವಾದ ನೀರಿನಲ್ಲಿ ಕದರಿ ಕಬಳ ಗ್ರಹಣ ಮಾಡಿಸಬೇಕು. ಕಾಕೋಳ್ಯಾದಿ ಮಧುರ ದ್ರವ್ಯಗಳಿಂದ ತಯಾರಿಸಿದ ಘೃತವು ಕವಳಗ್ರಹ ಮತ್ತು ನಸ್ಯಕರ್ಮಗಳಿಗೆ ಹಿತಕರವು. ದಂತವೈದರ್ಭದಲ್ಲಿ ಶಸ್ತ್ರದಿಂದ ಹಲ್ಲಿನ ಬುಡಗಳನ್ನು ಶೋಧಿಸಿ ಕ್ಷಾರಪ್ರಯೋಗವನ್ನು ಮಾಡಿ ಉಳಿದ ಎಲ್ಲಾ ವಿಧ

ಗಳಾದ ಶೀತೋಪಚಾರಗಳನ್ನೂ ಮಾಡಬೇಕು. ಅಧಿದಂತ ರೋಗದಲ್ಲಿ ವೈದ್ಯನು ಹೆಚ್ಚಾಗಿರುವ ಹಲ್ಲನ್ನು ಕಿತ್ತು ಕಾದಸಲಾಕೆಯಿಂದ ವ್ರಣವನ್ನು ಸುಟ್ಟು ಕ್ರಿಮಿದಂತ ಚಿಕಿತ್ಸೆಯಂತೆಯೇ ಉಪಚಾರಮಾಡಬೇಕು.

ಛಿತ್ವಾಧಿಮಾಂಸಂ ಸಕ್ಷೌದ್ರೈರೇಭಿಶ್ಚೂರ್ಣೈರುಪಾಚರೇತ್
ವಚಾತೇಜೋವತೀಪಾಠಾಸರ್ಜಿಕಾಯವಶೂಕಜೈಃ ॥೨೪॥
ಕ್ಷೌದ್ರದ್ವಿತೀಯಾಃ ಪಿಪ್ಪಲ್ಯಃ ಕವಳಶ್ಚಾತ್ರ ಕೀರ್ತಿತಃ
ಪಟೋಲತ್ರಿಫಲಾನಿಮ್ಬಕಷಾಯಶ್ಚಾತ್ರ ಧಾವನೇ ॥೨೫॥
ಹಿತಃ ಶಿರೋವಿರೇಕಶ್ಚ ಧೂಮೋ ವೈರೇಚನಶ್ಚ ಯಃ

ಅಧಿಮಾಂಸವನ್ನು ಶಸ್ತ್ರದಿಂದ ಕತ್ತರಿಸಿ ಬಜೆ, ಗಂಗುಂಡೆಬೀಜ, ಅಗಳಶುಂಠಿ, ಸರ್ಜಕ್ಷಾರ, ಯವಕ್ಷಾರಗಳ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ಲೇಪನವನ್ನೂ ಹಿಪ್ಪಲಿಯ ಚೂರ್ಣದೊಡನೆ ಜೇನುತುಪ್ಪವನ್ನು ಸೇರಿಸಿ ನೀರಿನಲ್ಲಿ ಕದರಿ ಕಬಳ ಗ್ರಹಣ ವನ್ನೂ, ಕಹಿಪಡವಲ, ತ್ರಿಫಲೆ, ಬೇವಿನಸೊಪ್ಪು ಇವುಗಳ ಕಷಾಯದಿಂದ ವ್ರಣಕ್ಷಾಳನ ವನ್ನೂ ಶಿರೋವಿರೇಚನವನ್ನೂ ವಿರೇಚಕ ಧೂಮಪಾನವನ್ನೂ ಮಾಡಿಸಬೇಕು.

ಸಾಮಾನ್ಯಂ ಕರ್ಮ ನಾಡೀನಾಂ ವಿಶೇಷಂ ಚಾತ್ರ ಮೇ ಶೃಣು ॥
(ನಾಡೀವ್ರಣಹರಂ ಕರ್ಮ ದಂತನಾಡೀಷು ಕಾರಯೇತ್) ಇತ್ಯಧಿಕಃ ಪಾಠಃ
ಯಂ ದನ್ತಮಧಿಜಾಯೇತ ನಾಡೀ ತಂ ದನ್ತಮುದ್ಧರೇತ್
"ಭಿ ಇತಿ ಪಾಠಾನ್ತರಂ"
ಛಿತ್ವಾ ಮಾಂಸಾನಿ ಶಸ್ತ್ರೇಣ ಯದಿ ನೋಪರಿಜೋ ಭವೇತ್ ॥೨೬॥
ಶೋಧಯಿತ್ವಾ ದಹೇದ್ವಾಪಿ ಕ್ಷಾರೇಣ ಜ್ವಲನೇನ ವಾ
ಭಿನತ್ತ್ಯುಪೇಕ್ಷಿತೇ ದನ್ತೇ ಹನುಕಾಸ್ಥಿಗತಿರ್ಧ್ರುವಮ್ ॥೨೮॥
ಸಮೂಲಂ ದಶನಂ ತಸ್ಮಾದುದ್ಧರೇದ್ಭಗ್ನಮಸ್ಥಿ ಚ
ಉದ್ಧೃತೇ ತೂತ್ತರೇ ದನ್ತೇ ಸಮೂಶೂಲೇಸ್ಥಿರಬನ್ಧನೇ ॥೨೯॥
ರಕ್ತಾತಿಯೋಗಾತ್ ಪೂರ್ವೋಕ್ತಾ ರೋಗಾ ಘೋರಾ ಭವನ್ತಿ ಹಿ
ಕಾಣಃ ಸಂಜಾಯತೇ ಜನ್ತುರರ್ದಿತಂ ಚಾಸ್ಯ ಜಾಯತೇ ॥೩೦॥
ಚಲಮಪ್ಯುತ್ತರಂ ದನ್ತಮತೋ ನಾಪಹರೇದ್ಭಿಷಕ್
ಧಾವನೇ ಜಾತಿಮದನಸ್ವಾದುಕಂಟಕಖಾದಿರಮ್ ॥೩೧॥
ಕಷಾಯಂ ಜಾತಿಮದನಕಟುಕಸ್ವಾದುಕಂಟಕೈಃ
ಯಷ್ಟ್ಯಾಹ್ವರೋಧ್ರಮಞ್ಜಿಷ್ಠಾಖದಿರೈಶ್ಚಾಪಿ ಯತ್ಕೃತಮ್ ॥೩೨॥
ತೈಲಂ ಸಂಶೋಧನಂ ತದ್ಧಿ ಹನ್ಯಾದ್ದನ್ತಗತಾಂ ಗತಿಮ್
ಕೀರ್ತಿತಾ ದನ್ತಮೂಲೇ ತು ಕ್ರಿಯಾ ದನ್ತೇಷು ವಕ್ಷ್ಯತೇ ॥೩೩॥

ವಾತಾದಿ ನಾಡೀವ್ರಣಗಳಿಗೆ ಹೇಳಿದ ಚಿಕಿತ್ಸೆಯನ್ನೇ ದಂತನಾಡೀ ವ್ರಣಗಳಿಗೂ ಪ್ರಯೋಗಿಸಬೇಕು. ಆದರೆ ಯಾವ ಹಲ್ಲಿನ ಸಮೀಪದಲ್ಲಿ (ಹಲ್ಲಿನಕೆಳಗೆ) ನಾಡೀವ್ರಣ

ವುಂಟಾಗುತ್ತದೆಯೋ ಆ ಹಲ್ಲು ಮೇಲ್ಗಡೆಯ ಸಾಲಿಗೆ ಸೇರದಿದ್ದರೆ ಒಸಡನ್ನು ಕತ್ತರಿಸಿ ಆ ಹಲ್ಲನ್ನು ಕಿತ್ತು ಅಲ್ಲಿರುವ ಕೀವು ದುಷ್ಟರಕ್ತವನ್ನು ಶೋಧಿಸಿ ಆ ಸ್ಥಳವನ್ನು ಕ್ಷಾರದಿಂದಾಗಲೀ ಕಾದಸಲಾಕೆಯಿಂದಾಗಲೀ ಸುಡಬೇಕು. ಉಪೇಕ್ಷೆಮಾಡಿ ಹಲ್ಲನ್ನು ಕೀಳದಿದ್ದರೆ ದವಡೆ ಹಲ್ಲಿನ ಕೆಳಗೆ ಕೆಳಗೆ ನಾಡೀವ್ರಣವುಂಟಾಗುವುದು ಖಂಡಿತ. ಆದಕಾರಣ ಬುಡ ಸಹಿತವಾಗಿ ಒಂದುವೇಳೆ ಮುರಿದಿದ್ದರೂ ಪೂರ್ತಾ ಹಲ್ಲನ್ನು ಕೀಳಬೇಕು. ಮೇಲಿನ ಸಾಲಿನ ಹಲ್ಲನ್ನು ಶೂಲೆಯುಳ್ಳದಾಗಿ ಬಂಧನವು (ಒಸಡು ಮಾಂಸವು) ಬಿಗಿಯಾಗಿದ್ದರೂ (ಬುಡಸಹಿತವಾಗಿ) ಕಿತ್ತುಹಾಕಿದರೆ ಅತಿಯಾಗಿ ರಕ್ತಸ್ರಾವವಾಗಿ ಹಿಂದೆ ಹೇಳಿದ ಘೋರ ವಾದ ವ್ಯಾಧಿಗಳುಂಟಾಗುತ್ತವೆ. ರೋಗಿಯು ಕುರುಡನಾಗುತ್ತಾನೆ. ಅರ್ದಿತ ವಾತ ರೋಗವುಂಟಾಗುತ್ತದೆ. ಮೇಲುಸಾಲಿನ ಹಲ್ಲು ಅಲ್ಲಾಡುತ್ತಿದ್ದರೂ ಕೀಳಬಾರದು. ಜಾಜಿಸೊಪ್ಪು, ಮಗ್ಗಾರೆಕಾಯಿ, ನೆಗ್ಗಿಲುಸಮೂಲ, ಕಗ್ಗಲಿ ತೊಗಟೆಗಳ ಕಷಾಯದಿಂದ ಬಾಯಿಮುಕ್ಕಳಿಸಬೇಕು. ಜಾಜಿಸೊಪ್ಪು, ಮಗ್ಗಾರೆಕಾಯಿ, ಕಟುಕರೋಹಿಣಿ, ನೆಗ್ಗಿಲುಸಮೂಲ, ಅತಿಮಧುರ, ರೋಧ್ರ, ಮಂಜಿಷ್ಠೆ,ಕಗ್ಗಲಿತೊಗಟೆಗಳನ್ನು ಸೇರಿಸಿ ತಯಾರಿಸಿ ತೈಲವನ್ನು ಪ್ರಯೋಗಿಸಿದರೆ ದಂತಗತ ನಾಡೀವ್ರಣವನ್ನು ಶೋಧನೆಮಾಡು ತ್ತದೆ. ದಂತಮೂಲದ ರೋಗಗಳ ಚಿಕಿತ್ಸೆಯನ್ನು ಹೇಳಿದ್ದಾಯಿತು. ದಂತರೋಗ ಗಳಿಗೆ ಮಾಡುವ ಚಿಕಿತ್ಸೆಯು ಹೇಳಲ್ಪಡುತ್ತದೆ.

ಸ್ನೇಹಾನಾಂ ಕವಳಾಃ ಕೋಷ್ಣಾಃ ಸರ್ಪಿಷಸ್ತ್ರೈವೃತಸ್ಯ ವಾ ।
ನಿರ್ಯೂಹಾಶ್ಚಾನಿಲಘ್ನಾನಾಂ ದನ್ತಹರ್ಷಪ್ರಮರ್ದನಾಃ ॥೩೪॥
ಸ್ನೈಹಿಕಶ್ಚ ಹಿತೋ ಧೂಮೋ ನಸ್ಯಂ ಸ್ನಿಗ್ಧಂ ಚ ಭೋಜನಮ್ ।
ರಸೋ ರಸಯವಾಗ್ವಶ್ಚ ಕ್ಷೀರಂ ಸನ್ತಾನಿಕಾ ಘೃತಮ್ ॥೩೫॥
ಶಿರೋಬಸ್ತಿರ್ಹಿತಶ್ಚಾಪಿ ಕ್ರಮೋ ಯಶ್ಚಾನಿಲಾಪಹಃ ।

ಸುಖೋಷ್ಣಗಳಾದ ಸ್ನೇಹಕಬಳಗ್ರಹಗಳೂ, ಘೃತತೈಲವಸೆಗಳೆಂಬ ತ್ರಿವೃತ್‌ಸ್ನೇಹದ ಕಬಳಗಳೂ, ವಾತಹರ ಕಷಾಯಗಳ ಕಬಳಗ್ರಹಗಳೂ ದಂತಹರ್ಷಕರಗಳು. ಸ್ನೇಹಯುಕ್ತ ಧೂಮಪಾನ ಮತ್ತು ನಸ್ಯಕರ್ಮಗಳೂ ಘೃತಮಿಶ್ರಮಾಡಿದ ಅನ್ನಗಳ ಭೋಜನವೂ, ಮಾಂಸರಸ, ಮಾಂಸರಸ ಮಿಶ್ರಿತವಾದ ಯವಾಗೂ, ಹಾಲು, ಹಾಲಿನಕೆನೆ, ತುಪ್ಪ ಇವು ಗಳ ಪಾನವೂ ಶಿರೋಬಸ್ತಿಕ್ರಿಯೆ ಮತ್ತು ವಾತನಾಶಕ ಚಿಕಿತ್ಸಾಕ್ರಮಗಳೂ ದಂತಹರ್ಷ ವನ್ನು ನಾಶಮಾಡುತ್ತವೆ.

ಅಹಿಂಸನ್ ದನ್ತಮೂಲಾನಿ ಶರ್ಕರಾಮುದ್ಧರೇದ್ಭಿಷಕ್ ॥೩೬॥
ಲಾಕ್ಷಾಚೂರ್ಣೈರ್ಮಧುಯುತೈಸ್ತತಸ್ತಾಃ ಪ್ರತಿಸಾರಯೇತ್ ।
ದನ್ತಹರ್ಷಕ್ರಿಯಾಂ ವಾಪಿ ಕುರ್ಯಾನ್ನಿರವಶೇಷತಃ ॥೩೭॥
ಕಪಾಲಿಕಾ ಕೃಚ್ಛ್ರತಮಾ ತತ್ರಾಪ್ಯೇಷಾ ಕ್ರಿಯಾ ಹಿತಾ ।

ಜಯೇದ್ವಿಸ್ರಾವಣೈಃ ಸ್ವಿನ್ನಮಚಲಂ ಕ್ರಿಮಿದನ್ತಕಮ್ ||೩೮||
ತಥಾವಪೀಡೈರ್ವಾತಘ್ನೈಃ ಸ್ನೇಹಗಂಡೂಷಧಾರಣೈಃ
ಭದ್ರದಾರ್ವಾದಿವರ್ಷಾಭೂಲೇಪೈಃ ಸ್ನಿಗ್ಧೈಶ್ಚ ಭೋಜನೈಃ ||೩೯||
ಚಲಮುದ್ಧೃತ್ಯ ಚ ಸ್ಥಾನಂ ವಿದಹೇಚ್ಛುಷಿರಸ್ಯ ಚ
ತತೋ ವಿದಾರೀಯಷ್ಟ್ಯಾಹ್ವಶೃಙ್ಗಾಟಕಕಸೇರುಕೈಃ ||೪೦||
ತೈಲಂ ದಶಗುಣೇ ಕ್ಷೀರೇ ಸಿದ್ಧಂ ನಸ್ಯೇ ಹಿತಂ ಭವೇತ್

ವೈದ್ಯನು ಹಲ್ಲುಗಳ ಬುಡಗಳಿಗೆ ಪೆಟ್ಟಾಗದಂತೆ ದಂತಶರ್ಕರೆಯನ್ನು ಕೆರೆದು ಅರಗಿನ ಪುಡಿಗೆ ಜೇನುತುಪ್ಪವನ್ನು ಮಿಶ್ರಮಾಡಿ ತಿಕ್ಕಬೇಕು. ಮತ್ತು ಸಂಪೂರ್ಣವಾಗಿ ದಂತ ಹರ್ಷ ಚಿಕಿತ್ಸೆಯ ಕ್ರಮವನ್ನು ಅನುಸರಿಸಬೇಕು. ದಂತಕಪಾಲಿಕೆಯು ಅತಿಕಷ್ಟಪ್ರದ ವಾದದ್ದು. ಅದಕ್ಕೂ ಇದೇ ರೀತಿ ಚಿಕಿತ್ಸೆಯನ್ನು ಮಾಡಿಸಿದರೆ ಹಿತವಾಗುತ್ತದೆ. ಚಲಿಸದಿರುವ ಕ್ರಿಮಿದಂತವನ್ನು ಸ್ರಾವಣದ್ರವ್ಯಗಳಿಂದ ದೋಷಹರಣ ಸ್ವೇದಕರ್ಮ ಅವಪೀಡನಸ್ಯ ವಾತಹರ ಕಷಾಯಗಳಿಂದ ಗಂಡೂಷಧಾರಣೆ ದೇವದಾರ್ವಾದಿ ಗಣ ದ್ರವ್ಯಗಳ ಮತ್ತು ಕೊಮ್ಮೆಬೇರಿನ ಕಲ್ಕದಿಂದ ಲೇಪನ ಸ್ನಿಗ್ಧಾನ್ನಭೋಜನ ಇವುಗಳಿಂದ ಉಪಚರಿಸಬೇಕು. ಕ್ರಿಮಿದಂತವು ಅಲ್ಲಾಡುತ್ತಿದ್ದರೆ ಕೀಳಿಸಬೇಕು. ದಂತಶುಷಿರದ ಸ್ಥಾನವನ್ನು ಕಾದಸಲಾಕೆಯಿಂದ ಸುಡಬೇಕು. ನೆಲಗುಂಬಳ, ಅತಿಮಧುರ, ಮೂರು ಮೂಲೆಗೆಡ್ಡೆ, ಕೊತ್ತಿಗೆಡ್ಡೆಗಳ ಕಲ್ಕದೊಡನೆ ೧೦ ರಷ್ಟು ಹಾಲನ್ನೂ ೪ ರಷ್ಟು ತೈಲವನ್ನೂ ಸೇರಿಸಿ ತಯಾರಿಸಿದ ತೈಲವು ನಸ್ಯಕರ್ಮಕ್ಕೆ ಹಿತವಾದದ್ದು.

ಹನುಮೋಕ್ಷೇ ಸಮುದ್ದಿಷ್ಟಾಂ ಕುರ್ಯಾಚ್ಚಾರ್ದಿತವತ್ಕ್ರಿಯಾಮ್ ||೪೧||
ಫಲಾನ್ಯಮ್ಲಾನಿ ಶೀತಾಮ್ಬು ರೂಕ್ಷಾನ್ನಂ ದಂತಧಾವನಮ್
ತಥಾತಿಕಠಿನಾನ್ ಭಕ್ಷ್ಯಾನ್ ದಂತರೋಗೀ ವಿವರ್ಜಯೇತ್ ||೪೨||
ಸಾಧ್ಯಾನಾಂ ದಂತರೋಗಾಣಾಂ ಚಿಕಿತ್ಸಿತಮುದೀರಿತಮ್

ಹನುಸಂಧಿಯು ಸಡಿಲಿದ್ದರೆ ಅರ್ದಿತರೋಗಿಗೆ ಮಾಡಬೇಕಾದ ಚಿಕಿತ್ಸಾವಿಧಾನ ಗಳನ್ನು ಮಾಡಿಸಬೇಕು. ಹುಳಿಯಾದ ಹಣ್ಣುಗಳ ರಸವನ್ನೂ ತಣ್ಣೀರನ್ನೂ ಹಲ್ಲುಗಳಿಗೆ ತಗಲಿಸುವುದು, ರೂಕ್ಷವಾದ ಅನ್ನವನ್ನು ತಿನ್ನುವುದು, ದಂತಧಾವನ (ದಂತಕಾಷ್ಠಗಳಿಂದ ಹಲ್ಲುಜ್ಜುವುದು), ಅತಿಗಟ್ಟಿಯಾದ ಚಕ್ಕುಲಿ ಮೊದಲಾದ ಭಕ್ಷ್ಯಗಳನ್ನು ಹಲ್ಲಿನಿಂದ ಕಡಿದು ತಿನ್ನುವುದು, ಇವನ್ನು ದಂತರೋಗಿಯು ತ್ಯಜಿಸಿಬಿಡಬೇಕು. ಈ ರೀತಿಯಾಗಿ ಸಾಧ್ಯ ವಾಗುವ ದಂತರೋಗಗಳ ಚಿಕಿತ್ಸೆಯು ಹೇಳಿರುತ್ತದೆ.

ಜಿಹ್ವಾಗತಾನಾಂ ಸಾಧ್ಯಾನಾಂ ಕರ್ಮ ವಕ್ಷ್ಯಾಮಿ ಸಿದ್ಧಯೇ ||೪೩||
ಓಷ್ಠಪ್ರಕೋಪೇಽನಿಲಜೇ ಯದುಕ್ತಂ ಪ್ರಾಕ್ ಚಿಕಿತ್ಸಿತಮ್ ।
ಕಂಟಕೇಷ್ವನಿಲೋತ್ಥೇಷು ತತ್ ಕಾರ್ಯಂ ಭಿಷಜಾ ಭವೇತ್ ||೪೪||
ಪಿತ್ತಜೇಷು ವಿಘೃಷ್ಟೇಷು ನಿಃಸೃತೇ ದುಷ್ಟಶೋಣಿತೇ ।

ಪ್ರತಿಸಾರಣಗಂಡೂಷನಸ್ಯಂ ಚ ಮಧುರಂ ಹಿತಮ್ ||೪೫||
ಕಂಟಕೇಷು ಕಫೋತ್ಥೇಷು ಲಿಖಿತೇಷ್ವಸೃಜಃ ಕ್ಷಯೇ ।
ಪಿಪ್ಪಲ್ಯಾದಿರ್ಮಧುಯುತಃ ಕಾರ್ಯಸ್ತು ಪ್ರತಿಸಾರಣೇ ||೪೬||
ಗೃಹ್ಣೀಯಾತ್ ಕವಳಾಂಶ್ಚಾಪಿ ಗೌರಸರ್ಷಪಸೈನ್ಧವೈಃ
ಪಟೋಲನಿಮ್ಬವಾರ್ತಾಕುಕ್ಷಾರಯೂಷೈಶ್ಚ ಭೋಜಯೇತ್ ||೪೭||
ಉಪಜಿಹ್ವಾಂ ತು ಸಂಲಿಖ್ಯ ಕ್ಷಾರೇಣ ಪ್ರತಿಸಾರಯೇತ್
ಶಿರೋವಿರೇಕಗಣ್ಡೂಷ ಧೂಮೈಶ್ಚೈನಮುಪಾಚರೇತ್ ||೪೮||
ಜಿಹ್ವಾಗತಾನಾಂ ಕರ್ಮೋಕ್ತಂ ತಾಲವ್ಯಾನಾಂ ಪ್ರವಕ್ಷ್ಯತೇ

ಸಾಧ್ಯವಾಗುವ ಜಿಹ್ವಾರೋಗಗಳಿಗೆ ಚಿಕಿತ್ಸೆಯನ್ನು ಹೇಳುತ್ತೇನೆ. ವೈದ್ಯನು ವಾತಕಂಟಕ ರೋಗದಲ್ಲಿ ವಾತಿಕಓಷ್ಠಕೋಪದ ಚಿಕಿತ್ಸೆಯನ್ನು ಮಾಡಿಸಬೇಕು. ಪಿತ್ತಕಂಟಕರೋಗದಲ್ಲಿ ಪಾರಿಜಾತ, ತೇಗ, ಗರಗತ್ತಿ, ಎತ್ತುನಾಲಿಗೆ ಇವುಗಳೊಂದರ ಎಲೆಯಿಂದ ಕಂಟಕವನ್ನು ಉಜ್ಜಿಸಿ ದುಷ್ಟರಕ್ತವನ್ನು ಸ್ರಾವಮಾಡಿಸಿ ಕಾಕೋಳ್ಯಾದಿ ಮಧುರ ಗಣದ್ರವ್ಯಗಳ ಕಲ್ಕಲೇಪನ ಕಷಾಯ:ಗಂಡೂಷ ಘೃತದಿಂದ ನಸ್ಯಕರ್ಮಗಳನ್ನು ಮಾಡಿಸಬೇಕು. ಕಫ ಕಂಟಕಗಳಲ್ಲಿ ಪಾರಿಜಾತಾದಿ ಪತ್ರಗಳಿಂದ ಉಜ್ಜಿಸಿ ರಕ್ತಸ್ರಾವವನ್ನು ಮಾಡಿಸಿದನಂತರ ಜೇನುತುಪ್ಪದಲ್ಲಿ ಪಿಪ್ಪಲ್ಯಾದಿ ಗಣದ್ರವ್ಯಗಳ ಚೂರ್ಣವನ್ನು ರಂಗಳಿಸಿ ಲೇಪಿಸಬೇಕು. ಬಿಳಿಸಾಸಿವೆ, ಸೈಂಧನಗಳ ಕಲ್ಕವನ್ನು ಕದರಿ ಕವಳಗ್ರಹಣವನ್ನೂ ಕಹಿ ಪಡವಲ, ಬೇವು, ಬದನೆ, ಯವಕ್ಷಾರಗಳನ್ನು ಸೇರಿಸಿ ತಯಾರಿಸಿದ ಯೂಷದಿಂದ ಭೋಜನವನ್ನೂ ಮಾಡಿಸಬೇಕು. ಉಪಜಿಹ್ವೆಯನ್ನು ಶಸ್ತ್ರದಿಂದ ಕತ್ತರಿಸಿ ಯವಕ್ಷಾರ ಚೂರ್ಣವನ್ನು ಜೇನುತುಪ್ಪದಿಂದ ರಂಗಳಿಸಿ ಲೇಪಿಸಬೇಕು. ಶಿರೋವಿರೇಚನ, ಗಂಡೂಷ, ಧೂಮಪಾನಗಳಿಂದ ರೋಗಿಗೆ ಚಿಕಿತ್ಸೆಮಾಡಬೇಕು. ಈ ರೀತಿಯಾಗಿ ಜಿಹ್ವಾರೋಗಗಳ ಚಿಕಿತ್ಸೆಯನ್ನು ತಿಳಿಸಿದ್ದಾಯಿತು. ಇನ್ನು ಮುಂದೆ ತಾಲುರೋಗಗಳ ಚಿಕಿತ್ಸೆಯನ್ನು ಹೇಳುತ್ತೇವೆ.

ಅಙ್ಗುಷ್ಠಾಙ್ಗುಳಿಸಂದಂಶೇನಾಕೃಷ್ಯ ಗಳಶುಂಡಿಕಾಮ್ ||೪೯||
ಛೇದಯೇನ್ಮಂಡಲಾಗ್ರೇಣ ಜಿಹ್ವೋಪರಿ ತು ಸಂಸ್ಥಿತಾಮ್
ನೋತ್ಕೃಷ್ಟಂ ಚೈವ ಹೀನಂ ಚ ತ್ರಿಭಾಗಂ ಛೇದಯೇದ್ಭಿಷಕ್ ||೫೦||
ಅತ್ಯಾದಾನಾತ್ ಸ್ರವೇದ್ರಕ್ತಂ ತನ್ನಿಮಿತ್ತಂ ಮ್ರಿಯೇತ ಚ ।
ಹೀನಚ್ಛೇದಾದ್ಭವೇಚ್ಛೋಫೋ ಲಾಲಾನಿದ್ರಾಭ್ರಮಸ್ತಮಃ ||೫೧||
ತಸ್ಮಾದ್ವೈದ್ಯಃ ಪ್ರಯತ್ನೇನ ದೃಷ್ಟಕರ್ಮಾ ವಿಶಾರದಃ ।
ಗಳಶುಣ್ಡೀಂ ತು ಸಂಛಿದ್ಯ ಕುರ್ಯಾತ್ಪ್ರಾಪ್ತಮಿಮಂ ಕ್ರಮಮ್ ||೫೨||
ಮರಿಚಾತಿವಿಷಾ ಪಾಠಾವಚಾಕುಷ್ಠ ಕುಟನ್ನಟೈಃ ।
ಕ್ಷೌದ್ರಯುಕ್ತೈಃ ಸಲವಣೈಸ್ತತಸ್ತಾಂ ಪ್ರತಿಸಾರಯೇತ್ ||೫೩||
ವಚಾಮತಿವಿಷಾಂ ಪಾಠಾಂ ರಾಸ್ನಾಂ ಕಟುಕರೋಹಿಣೀಮ್ ।

ನಿಃಕ್ವಾಥ್ಯ ಪಿಚುಮನ್ದಂ ಚ ಕವಲಂ ತತ್ರ ಯೋಜಯೇತ್ ||೩೪||
ಇಙ್ಗುದೀಕಿಣಿಹೀದನ್ತೀ ಸರಳಾಸುರದಾರುಭಿಃ |
ಪಞ್ಚಾಙ್ಗೀಂ ಕಾರಯೇತ್ಪಿಷ್ಟೈರ್ವರ್ತಿಂ ಗನ್ಧೋತ್ತರಾ ಶುಭಾಮ್ ||೩೫||
ತತೋ ಧೂಮಂ ಪಿಬೇಜ್ಜನ್ತುರ್ದ್ವಿರಹ್ನಃ ಕಫನಾಶನಮ್ |
ಕ್ಷಾರಸಿದ್ಧೇಷು ಮುದ್ಗೇಷು ಯೂಷಶ್ಚಾಪ್ಯಶನೇ ಹಿತಃ ||೩೬||
ತುಣ್ಡಿಕೇರ್ಯಧ್ರುಷೇ ಕೂರ್ಮೇ ಸಙ್ಘಾತೇ ತಾಲುಪುಪ್ಪುಟೇ |
ಏಷಏವ ವಿಧಿಃ ಕಾರ್ಯೋ ವಿಶೇಷಃ ಶಸ್ತ್ರಕರ್ಮಣಿ ||೩೭||

ಗಳಶುಂಡಿಯನ್ನು ಹೆಬ್ಬೆರಳು ತರ್ಜನಿಗಳಿಂದಾಗಲೀ ಸಂದಂಶಯಂತ್ರ (ಇಕ್ಕಳ) ದಿಂದಾಗಲೀ ಹಿಡಿದುಕೊಂಡು ಮಂಡಲಾಗ್ರಶಸ್ತ್ರದಿಂದ ನಾಲಗೆಯ ಮೇಲಿರುವ ಮಾಂಸ ವನ್ನು ಅತ್ಯಧಿಕವಾಗಿಲ್ಲದೆಯೂ ಅತಿ ನೋಟಾಗಿಲ್ಲದೆಯೂ ಮುಕ್ಕಾಲುಪಾಲಿನಷ್ಟನ್ನು ಕತ್ತರಿಸಬೇಕು. ಅತಿಮಾತ್ರಛ್ಛೇದದಿಂದ ಹೆಚ್ಚಾಗಿ ರಕ್ತಸ್ರಾವವಾದರೆ ರೋಗಿಯು ಸಾಯು ತ್ತಾನೆ. ಹೀನಪ್ರಮಾಣದಿಂದ ಕತ್ತರಿಸಿದ್ದರೆ ಊದು, ಜೊಲ್ಲು ಸುರಿಯುವುದು, ನಿದ್ರೆ, ತಲೆಸುತ್ತು ಕಣಕತ್ತಲು ಇವುಗಳು ಉಂಟಾಗುತ್ತವೆ. ಆದಕಾರಣ ಕರ್ಮಕಾಲದಲ್ಲಿದ್ದು ನೋಡಿ ಅನುಭವವುಳ್ಳ ವಿದ್ವಾಂಸನಾದ ಶಸ್ತ್ರವೈದ್ಯನು ಗಳಶುಂಡಿಯನ್ನು ಛೇದಿಸಿ ಈ ಮುಂದಿನ ಚಿಕಿತ್ಸಾಕ್ರಮವನ್ನು ಅನುಸರಿಸಬೇಕು. ಮೆಣಸು, ಅತಿಬಜೆ, ಅಗಳುಶುಂಠಿ, ಬಜೆ, ಚೆಂಗಲ್‌ಕೋಷ್ಠ, ಹೆಮ್ಮರದತೊಗಟೆ ಇವುಗಳ ಕಲ್ಕಕ್ಕೆ ಲವಣಗಳನ್ನೂ ಜೇನು ತುಪ್ಪವನ್ನೂ ಮಿಶ್ರಮಾಡಿ ಲೇಪಿಸಬೇಕು. ಬಜೆ, ಅತಿಬಜೆ, ರಾಸ್ನೆ, ಅಗಳುಶುಂಠಿ, ಕಟುಕರೋಹಿಣಿ, ಬೇವಿನತೊಗಟೆ ಇವುಗಳ ಕಷಾಯದಿಂದ ಕಬಳಗ್ರಹಣವನ್ನು ಮಾಡಿಸಬೇಕು. ಇಂಗಳ, ಗಿರಿಕರ್ಣಿಕೆ, ಜಾಪಾಳ, ಸರಳದೇವದಾರು, ತುಪ್ಪದೇವದಾರು ಇವುಗಳ ಕಲ್ಕಕ್ಕೆ "ಪಂಚಾಂಗೀ ಪಿಷ್ಟಿ"ಯೆಂದು ಹೆಸರು. ಇದಕ್ಕೆ ಹೆಚ್ಚು ಗಂಧದ್ರವ್ಯವನ್ನು ಸೇರಿಸಿ ಶುಭವರ್ತಿಯನ್ನು ಮಾಡಿಸಿ ದಿನಕ್ಕೆ ೨ ಸಾರಿ ಧೂಮ ಪಾನಮಾಡಿಸಿದರೆ ಕಫಹರಣವಾಗುತ್ತದೆ. ಕ್ಷಾರೋದಕದಲ್ಲಿ ಭಾವನೆ ಮಾಡಿದ ಹೆಸರಿನ ಕಟ್ಟನ್ನು ಅನ್ನಕ್ಕೆ ಸೇರಿಸಿ ಭೋಜನಮಾಡಿಸಿದರೆ ಹಿತಕರವು. ತುಂಡಿಕೇರಿ, ಅಧ್ರುಷ, ಕೂರ್ಮ, ತಾಲುಪುಪ್ಪುಟಗಳಲ್ಲೂ ಇದೇ ವಿಧಾನದ ಚಿಕಿತ್ಸೆಮಾಡಬೇಕು. ಆದರೆ ಶಸ್ತ್ರಕರ್ಮದಲ್ಲಿ ವ್ಯತ್ಯಾಸವುಂಟು. ಹೇಗೆಂದರೆ—ತುಂಡಿಕೇರಿ, ತಾಲುಪುಪ್ಪುಟಕಗಳನ್ನು ಛೇದನೆಮಾಡಬೇಕು. ಅಧ್ರುಷ, ಸಂಘಾತಗಳನ್ನು ಛೇದಿಸಬೇಕು. ಮಾಂಸಾಧಿಕ್ಯತೆ ಯಿಂದಲೂ ಅವಸ್ಥಾವಿಶೇಷದಿಂದಲೂ ಕೂರ್ಮವನ್ನು ಲೇಖನಮಾಡಬೇಕು ಮತ್ತು ಛೇದಿಸಲೂಬೇಕು.

ತಾಲುಪಾಕೇ ತು ಕರ್ತವ್ಯಂ ವಿಧಾನಂ ಪಿತ್ತನಾಶನಮ್ |
ಸ್ನೇಹಸ್ವೇದೌ ತಾಲುಶೋಷೇ ವಿಧಿಶ್ಚಾನಿಲನಾಶನಃ ||೩೮||
ಕೀರ್ತಿತಂ ತಾಲುಜಾನಾಂ ತು ಕಣ್ಠ್ಯಾನಾಂ ಕರ್ಮ ವಕ್ಷ್ಯತೇ |

ತಾಲುಪಾಕದಲ್ಲಿ ಪಿತ್ತಹರ ಚಿಕಿತ್ಸಾವಿಧಾನವನ್ನು ಮಾಡಬೇಕು. ತಾಲುಶೋಷದಲ್ಲಿ ಸ್ನೇಹಸ್ವೇದಗಳನ್ನೂ ವಾತಹರ ಚಿಕಿತ್ಸೆಗಳನ್ನೂ ಮಾಡಬೇಕು. ಈ ರೀತಿಯಾಗಿ ತಾಲುಗತರೋಗ ಚಿಕಿತ್ಸೆಯನ್ನು ವಿವರಿಸಿದ್ದಾಯಿತು. ಇನ್ನು **ಕಂಠರೋಗಗಳ** ಚಿಕಿತ್ಸೆಯನ್ನು ಹೇಳುತ್ತೇವೆ.

ಸಾಧ್ಯಾನಾಂ ರೋಹಿಣೀನಾಂ ತು ಹಿತಂ ಶೋಣಿತಮೋಕ್ಷಣಮ್ ॥೪೯॥
ಛರ್ದನಂ ಧೂಮಪಾನಂ ಚ ಗಣ್ಡೂಷೋ ನಸ್ಯಕರ್ಮ ಚ ।
ವಾತಿಕೀಂ ತು ಹೃತೇ ರಕ್ತೇ ಲವಣೈಃ ಪ್ರತಿಸಾರಯೇತ್ ॥೫೦॥
ಸುಖೋಷ್ಣಾನ್ ಸ್ನೇಹಗಣ್ಡೂಷಾನ್ ಧಾರಯೇಚ್ಚಾಪ್ಯಭೀಕ್ಷ್ಣಶಃ ।
ಪತ್ತಙ್ಗಶರ್ಕರಾಕ್ಷೌದ್ರೈಃ ಪೈತ್ತಿಕೀಂ ಪ್ರತಿಸಾರಯೇತ್ ॥೫೧॥
ದ್ರಾಕ್ಷಾಪರೂಷಕಕ್ವಾಥೌ ಹಿತೌ ಚ ಕವಳಗ್ರಹೇ ।
ಆಗಾರಧೂಮಕಟುಕೈಃ ಶ್ಲೈಷ್ಮಿಕೀಂ ಪ್ರತಿಸಾರಯೇತ್ ॥೫೨॥
ಶ್ವೇತಾವಿಡಂಗದನ್ತೀಷು ತೈಲಂ ಸಿದ್ಧಂ ಸಸೈನ್ಧವಮ್ ।
ನಸ್ಯಕರ್ಮಣಿ ಯೋಕ್ತವ್ಯಂ ತಥಾ ಕಬಳಧಾರಣೇ ॥೫೩॥
ಪಿತ್ತವತ್ಸಾಧಯೇದ್ವೈದ್ಯೋ ರೋಹಿಣೀಂ ರಕ್ತಸಂಭವಾಮ್ ।
ವಿಸ್ರಾವ್ಯ ಕಂಠಶಾಲೂಕಂ ಸಾಧಯೇತ್ತುಣ್ಡಿಕೇರಿವತ್ ॥೫೪॥
ಏಕಕಾಲಂ ಯವಾನ್ನಂ ಚ ಭುಞ್ಜೀತ ಸ್ನಿಗ್ಧಮಲ್ಪಶಃ ।
ಉಪಜಿಹ್ವಿಕವಚ್ಚಾಪಿ ಸಾಧಯೇದಧಿಜಿಹ್ವಿಕಾಮ್ ॥೫೫॥
ಏಕವೃನ್ದಂ ತು ವಿಸ್ರಾವ್ಯ ವಿಧಿಂ ಶೋಧನಮಾಚರೇತ್ ।
ಗಿಲಾಯುಶ್ಚಾಪಿ ಯೋ ವ್ಯಾಧಿಸ್ತಂ ಚ ಶಸ್ತ್ರೇಣ ಸಾಧಯೇತ್ ॥೫೬॥
ಅಮರ್ಮಸ್ಥಂ ಸುಪಕ್ವಂ ಚ ಭೇದಯೇದ್ಗಳವಿದ್ರಧಿಮ್ ।

ಸನ್ನಿಪಾತ ಭಿನ್ನವಾದ ಸಾಧ್ಯಗಳಾದ ವಾತಾದಿದೋಷಜಗಳಾದ **ರೋಹಿಣಿ**ಗಳಲ್ಲಿ ರಕ್ತಮೋಕ್ಷಣವು ಹಿತಕರವು. ವಮನ, ಧೂಮಪಾನ, ಗಂಡೂಷ, ನಸ್ಯಕರ್ಮಗಳು ಹಿತಕರಗಳು. **ವಾತಿಕರೋಹಿಣಿ**ಯಲ್ಲಿ ರಕ್ತಹರಣಮಾಡಿಸಿ ಲವಣಚೂರ್ಣಗಳಿಂದ ಉಜ್ಜಿಸಬೇಕು. ಸುಖೋಷ್ಣವಾಗಿರುವಂತೆ ಪದೇ ಪದೇ ಸ್ನೇಹಮಿಶ್ರಮಾಡಿ ಗಂಡೂಷಧಾರಣೆಯನ್ನು ಮಾಡಿಸಬೇಕು. **ಪಿತ್ತರೋಹಿಣಿ**ಯನ್ನು ಪತಂಗದಚಕ್ಕೆ (ಕೆಂಪುಗಂಧ), ಪುಡಿಸಕ್ಕರೆ, ಜೇನುತುಪ್ಪಗಳನ್ನು ಕಲಸಿ ಉಜ್ಜಿಸಬೇಕು. ದ್ರಾಕ್ಷಿ, ದೊಡ್ಡ ಖರ್ಜೂರಗಳ ಕಷಾಯದಿಂದ ಕವಳಗ್ರಹಣಮಾಡಿಸುವುದು ಹಿತಕರವು. **ಕಫಜ ರೋಹಿಣಿ**ಯನ್ನು ಇಲ್ಲಣ ತ್ರಿಕಟು ಮೊದಲಾದ ಕಟುರಸ ದ್ರವ್ಯಗಳಿಂದ ಉಜ್ಜಿಸಬೇಕು. ಬಿಳಿ ಗಿರಿಕರ್ಣಿಕೆ, ವಿಡಂಗ, ಜಾಪಾಳದ ತೊಗಟೆಗಳನ್ನು ಸೇರಿಸಿ ತಯಾರಿಸಿ ಸೈಂಧವ ಮಿಶ್ರಮಾಡಿದ ತೈಲವನ್ನು ನಸ್ಯಕರ್ಮಕ್ಕೂ ಕವಳಧಾರಣೆಗೂ ಉಪಯೋಗಿಸಬೇಕು. **ರಕ್ತಜರೋಹಿಣಿ**ಯನ್ನು ಪಿತ್ತರೋಹಿಣಿಯಂತೆಯೇ ಚಿಕಿತ್ಸೆಮಾಡಬೇಕು. **ಕಂಠಶಾಲೂಕ**ದಲ್ಲಿ ರಕ್ತಸ್ರಾವಣಮಾಡಿಸಿ ತುಂಡಿಕೇರಿಯಂತೆಯೇ ಚಿಕಿತ್ಸೆಮಾಡಬೇಕು,

ಒಂದೇ ಹೊತ್ತು ಸ್ವಲ್ಪಪ್ರಮಾಣದಿಂದ ಯವಾನ್ನವನ್ನು ಸ್ವಲ್ಪ ತುಪ್ಪಮಿಶ್ರಮಾಡಿ ಭೋಜನಮಾಡಬೇಕು. ಉಪಜಿಹ್ವಿಕೆಯ ಚಿಕಿತ್ಸೆಯಂತೆಯೇ ಅಧಿಜಿಹ್ವೆಗೂ ಚಿಕಿತ್ಸೆ ಮಾಡಿಸಿ ಗುಣಮಾಡಬೇಕು. ಏಕವೃಂದದಲ್ಲಿ ರಕ್ತಸ್ರಾವಮಾಡಿದನಂತರ ವಮನ ವಿರೇಚನಗಳಿಂದ ದೇಹಶುದ್ಧಿಮಾಡಿಸಬೇಕು. ಗಿಲಾಯುವನ್ನು ಶಸ್ತ್ರದಿಂದ ಛೇದಿಸಿ ಗುಣಪಡಿಸಬೇಕು. ಮರ್ಮಸ್ಥಳವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಹುಟ್ಟಿರುವ ಗಳವಿದ್ರಧಿ ಯನ್ನು ಚೆನ್ನಾಗಿ ಪಕ್ವಮಾಡಿ ಶಸ್ತ್ರದಿಂದ ಭೇದನಮಾಡಬೇಕು.

ವಾತಾತ್ಸರ್ವಸರಂ ಚೂರ್ಣೈರ್ಲವಣೈಃ ಪ್ರತಿಸಾರಯೇತ್ ||೬೭||
ತೈಲಂ ವಾತಹರೈಃ ಸಿದ್ಧಂ ಹಿತಂ ಕಬಳನಸ್ಯಯೋಃ |
ತತೋಽಸ್ಮೈ ಸ್ನೈಹಿಕಂ ಧೂಮಮಿಮಂ ದದ್ಯಾದ್ವಿಚಕ್ಷಣಃ ||೬೮||
ಶಾಲರಾಜಾದನೈರಣ್ಡ ಸಾರೇಂಗುದಿಮಧೂಕಜಾಃ ।
ಮಜ್ಜಾನೋ ಗುಗ್ಗುಳುಧ್ಯಾಮಮಾಂಸೀಕಾಲಾನುಸಾರಿವಾಃ ।
ಶ್ರೀಸರ್ಜರಸಶೈಲೇಯ ಮಧೂಚ್ಛಿಷ್ಟಾನಿ ವಾ ಹರೇತ್ ||೬೯||
ತತ್ಸರ್ವಂ ಸುಕೃತಂ ಚೂರ್ಣಂ ಸ್ನೇಹೇನಾಲೋಡ್ಯ ಯುಕ್ತಿತಃ |
ಟುಣ್ಡೂಕವೃನ್ತಂ ಸಕ್ಷೌದ್ರಂ ಮತಿಮಾಂಸ್ತೇನ ಲೇಪಯೇತ್ ||೭೦||
ಏಷ ಸರ್ವಸರೇ ಧೂಮಃ ಪ್ರಶಸ್ತಃಸ್ನೈಹಿಕೋ ಮತಃ |
ಕಫಘ್ನೋ ಮಾರುತಘ್ನಶ್ಚ ಮುಖರೋಗವಿನಾಶನಃ ||೭೧||
ಪಿತ್ತಾತ್ಮಕೇ ಸರ್ವಸರೇ ಶುದ್ಧಕಾಯಸ್ಯ ದೇಹಿನಃ ।
ಸರ್ವಃ ಪಿತ್ತಹರಃ ಕಾರ್ಯೋ ವಿಧಿರ್ಮಧುರಶೀತಲಃ ||೭೨||
ಪ್ರತಿಸಾರಣಗಂಡೂಷ ಧೂಮಸಂಶೋಧನಾನಿ ಚ |
ಕಫಾತ್ಮಕೇ ಸರ್ವಸರೇ ವಿಧಿಂ ಕುರ್ಯಾತ್ ಕಫಾಪಹಮ್ ||೭೩||
ಪಿಬೇದತಿವಿಷಾಂ ಪಾಠಾಂ ಮುಸ್ತಂ ಚ ಸುರದಾರು ಚ |
ರೋಹಿಣೀಂ ಕಟುಕಾಖ್ಯಾಂ ಚ ಕುಟಜಸ್ಯ ಫಲಾನಿ ಚ ||೭೪||
ಗವಾಂ ಮೂತ್ರೇಣ ಮನುಜೋ ಭಾಗೈರ್ಧರಣಸಂಮಿತೈಃ |
ಏಷ ಸರ್ವಾನ್ ಕಫಕೃತಾನ್ ರೋಗಾನ್ ಯೋಗೋಽಪಕರ್ಷತಿ ||೭೫||

ಸರ್ವವಿಧ ಮುಖರೋಗಗಳಲ್ಲಿಯೂ ವಾತಿಕವಾದರೆ ಪಂಚಲವಣಚೂರ್ಣದಿಂದ ವ್ರಣವನ್ನು ತಿಕ್ಕಿ ಭದ್ರದಾರ್ವಾದಿ ವಾತಹರ ತೈಲದಿಂದ ಕವಳಗ್ರಹ, ನಸ್ಯಕರ್ಮಗಳನ್ನು ಮಾಡಿಸಿದರೆ ಹಿತಕರವು. ಬುದ್ಧಿಶಾಲಿಯಾದ ವೈದ್ಯನು ಅನಂತರ ಶಾಲ, ರಾಜಾದನ (ಮರಹಾಲೆ), ಹರಳು, ದೊಡ್ಡ ಇಂಗಳದಹಣ್ಣು, ಹಿಪ್ಪೆಕಾಯಿ ತಿರುಳು, ಗುಗ್ಗುಳ, ಗಂಜಣಿಹುಲ್ಲು, ಜಟಾಮಾಂಸೀ, ಅಗಿಲು, ಲವಂಗ (ಶ್ರೀಃ), ರಾಳು, ಕಲ್ಲುಹೂವು, ಜೇನುಮೇಣ ಇವುಗಳನ್ನು ಯುಕ್ತಿಯಿಂದ ಚೂರ್ಣಮಾಡಿ ಕದರಿ ಹೆಮ್ಮರದ ತೊಗಟೆ ಯನ್ನೂ ಸೇರಿಸಿ ಅತಿ ಮಂದವಾಗಿಲ್ಲದೆಯೂ ಅತಿ ತೆಳುವಾಗದಂತೆಯೂ ಲೇಪಿಸಬೇಕು. ಇವುಗಳ ಧೂಮವೂ ಸಕಲಮುಖ ರೋಗಗಳಲ್ಲೂ ಶ್ರೇಷ್ಠವಾದದ್ದು. ಮತ್ತು ಸ್ನೇಹನ

ವನ್ನುಂಟುಮಾಡುತ್ತದೆ. ಕಫವನ್ನೂ ವಾತದೋಷವನ್ನೂ ಮುಖರೋಗಗಳನ್ನೂ ನಿವಾರಿಸುತ್ತದೆ. **ಪಿತ್ತಜಮುಖರೋಗದಲ್ಲಿ** ವಮನ ವಿರೇಚನಗಳಿಂದ ದೇಹವನ್ನು ಶುದ್ಧಿಮಾಡಿಸಿ ಪಿತ್ತಹರಗಳಾದ ಸಕಲವಿಧ ಮಧುರ ಶೀತವೀರ್ಯ ದ್ರವ್ಯಗಳಿಂದ ಪ್ರತಿಸಾರಣ (ಲೇಪ) ಗಂಡೂಷ, ಧೂಮ, ಸಂಶೋಧನಗಳನ್ನು ಮಾಡಿಸಬೇಕು. **ಕಫಜನ್ಯಸಕಲ** ಮುಖ ರೋಗಗಳಲ್ಲೂ ಕಫಹರಣ ಚಿಕಿತ್ಸೆಗಳನ್ನೇ ಮಾಡಬೇಕು. ಅತಿಬಜೆ, ಅಗಳುಶುಂಠಿ, ಕೊನ್ನಾರಿಗೆಡ್ಡೆ, ದೇವದಾರು, ಕಟುಕರೋಹಿಣಿ, ಕೊಡಶಿಗೆ ಬೀಜ ಇವುಗಳನ್ನು ಸಮಭಾಗವಾಗಿ ಚೂರ್ಣಿಸಿ ೧ ಶಾಣಚೂರ್ಣವನ್ನು ೧ ಪಲದಷ್ಟು ಪ್ರಮಾಣದ ಗೋಮೂತ್ರದಲ್ಲಿ ಕದರಿ ಕುಡಿಸಬೇಕು. ಈ ಔಷಧದ ಪ್ರಯೋಗದಿಂದ ಸಕಲವಿಧಗಳಾದ ಕಫಜನಿತ ರೋಗಗಳೂ ನಿವಾರಣೆಯಾಗುತ್ತವೆ.

> ಕ್ಷೀರೇಕ್ಷುರಸಗೋಮೂತ್ರದಧಿ ಮಸ್ತ್ವಮ್ಲಕಾಞ್ಜಿಕೈಃ ।
> ವಿದಧ್ಯಾತ್ ಕಬಳಾನ್ ವೀಕ್ಷ್ಯ ದೋಷಂ ತೈಲಘೃತೈರಪಿ ॥೭೬॥
> ರೋಗಾಣಾಂ ಮುಖಜಾತಾನಾಂ ಸಾಧ್ಯಾನಾಂ ಕರ್ಮಕೀರ್ತಿತಮ್
> ಅಸಾಧ್ಯಾ ಅಪಿ ವಕ್ಷ್ಯನ್ತೇ ರೋಗಾ ಯೇ ಯತ್ರ ಕೀರ್ತಿತಾಃ ॥೭೭॥
> ಓಷ್ಠಪ್ರಕೋಪಾ ವರ್ಜ್ಯಾಃ ಸ್ಯುರ್ಮಾಂಸರಕ್ತತ್ರಿದೋಷಜಾಃ ।
> ದನ್ತಮೂಲೇಷು ವರ್ಜ್ಯೌ ತು ತ್ರಿಲಿಙ್ಗಗತಿಸೌಷಿರಾ ॥೭೮॥
> ದನ್ತೇಷು ಚ ನ ಸಿಧ್ಯನ್ತಿ ಶ್ಯಾವದಾಲನಭಞ್ಜನಾಃ ।
> ಜಿಹ್ವಾಗತೇಷ್ವಲಾಸಸ್ತು ತಾಲವ್ಯೇಷ್ವರ್ಬುದಂ ತಥಾ ॥೭೯॥
> ಸ್ವರಘ್ನೋ ವಲಯೋ ವೃನ್ದೋ ಬಲಾಸಶ್ಚ ವಿದಾರಿಕಾ ।
> ಗಲೌಘೋ ಮಾಂಸತಾನಶ್ಚ ಶತಘ್ನೀ ರೋಹಿಣೀ ಗಳೇ ॥೮೦॥
> ಅಸಾಧ್ಯಾಃ ಕೀರ್ತಿತಾಹ್ಯೇತೇ ರೋಗಾ ನವದಶೈವ ಚ ।
> ತೇಷಾಂ ಚಾಪಿ ಕ್ರಿಯಾಂ ವೈದ್ಯಃ ಪ್ರತ್ಯಾಖ್ಯಾಯ ಸಮಾಚರೇತ್ ॥೮೧॥

ಹಾಲು, ಕಬ್ಬಿನರಸ, ಗೋಮೂತ್ರ, ಮೊಸರು, ಮೊಸರು ಕಟ್ಟು, ಹುಳಿ ಕಲಗಚ್ಚು, ತೈಲ, ಘೃತ ಇವುಗಳಿಂದ ದೋಷಗಳಿಗೆ ತಕ್ಕಂತೆ ವಿವೇಚಿಸಿ ಕವಳಗ್ರಹಣ ಮಾಡಿಸ ಬೇಕು. ಈ ರೀತಿಯಾಗಿ ಸಾಧ್ಯವಾಗುವ ಮುಖರೋಗಗಳ ಚಿಕಿತ್ಸಾ ವಿಧಾನಗಳನ್ನು ಹೇಳಿ ಮುಗಿಸಿರುತ್ತದೆ. ಅಸಾಧ್ಯಗಳಾದ ಮುಖರೋಗಗಳನ್ನೂ ಹೇಳುತ್ತೇವೆ. ಹೇಗೆಂದರೆ ಮಾಂಸ, ರಕ್ತ, ತ್ರಿದೋಷಗಳಿಂದುಂಟಾದ ೨ ಓಷ್ಠಕೋಪಗಳು, ತ್ರಿದೋಷಗತಿ, ಸುಷಿರ ಗಳೆಂಬ ೨ ದಂತಮೂಲ ರೋಗಗಳು, ಶ್ಯಾವ, ದಾಲನ, ಭಂಜನಗಳೆಂಬ ೩ ದಂತರೋಗ ಗಳು, ಜಿಹ್ವಾರೋಗಗಳಲ್ಲಿ ಅಲಾಸವು, ತಾಲುಗತ ರೋಗಗಳಲ್ಲಿ ಅರ್ಬುದವು, ಗಳರೋಗ ಗಳಲ್ಲಿ—ಸ್ವರಘ್ನ, ವಲಯ, ವೃದ್ಧ, ಬಲಾಸ, ವಿದಾರಿಕಾ, ಗಳೌಘ, ಮಾಂಸತಾನ, ಶತಘ್ನೀ, ರೋಹಿಣೀ ಈ ೧೯ ರೋಗಗಳೂ ಅಸಾಧ್ಯಗಳೆಂದು ನಿರ್ಧರಿಸಲ್ಪಟ್ಟವೆ. ವೈದ್ಯನು "ಚಿಕಿತ್ಸೆಮಾಡದಿದ್ದರೆ ಮರಣವು ಖಂಡಿತವಾಗಿಯೂ ಸಂಭವಿಸುತ್ತದೆ.

ಚಿಕಿತ್ಸೆಮಾಡಿದರೆ ಒಂದುವೇಳೆ ದೈವಯೋಗದಿಂದ ಬದುಕಲೂಬಹುದು. ಈ ಕಾರಣದಿಂದ ಚಿಕಿತ್ಸೆಮಾಡುವುದೇ ಉತ್ತಮವೆಂದು" ತಿಳಿಸಿ ಅನಂತರ ಪ್ರಯತ್ನಪೂರ್ವಕವಾಗಿ ಚಿಕಿತ್ಸೆಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಮುಖರೋಗ ಚಿಕಿತ್ಸಾ
ನಾಮ ದ್ವಾವಿಂಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ
ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ತ್ರಯೋವಿಂಶತಿತಮೋಽಧ್ಯಾಯಃ

ಅಥಾತಃ ಶೋಫಾನಾಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಶೋಫಚಿಕಿತ್ಸೆಯನ್ನು ವಿವರಿಸುತ್ತೇವೆ.

ಷಡ್ವಿಧೋಽವಯವಸಮುತ್ಥಃ ಶೋಫೋಽಭಿಹಿತೋ ಲಕ್ಷಣತಃ ಪ್ರತೀಕಾರತಶ್ಚ ಸರ್ವಸರಸ್ತು ಪಞ್ಚವಿಧಃ ತದ್ಯಥಾ—ವಾತಪಿತ್ತಶ್ಲೇಷ್ಮ ಸನ್ನಿಪಾತ ವಿಷನಿಮಿತ್ತಃ। ತತ್ರಾತಿತರ್ಪಿತಸ್ಯಾಧಗಮನಾದತಿಮಾತ್ರಮಭ್ಯವಹರತೋ ವಾ ಪಿಷ್ಟಾನ್ನಹರಿತಕಶಾಕಲವಣಾನಿ ಕ್ಷೀಣಸ್ಯ ವಾತಿಮಾತ್ರಮಮ್ಲಮುಪಸೇವಮಾನಸ್ಯ ಮೃತ್ಪಕ್ವಲೋಷ್ಟಕಟಶರ್ಕರಾನೂಪೌದಕ ಮಾಂಸಸೇವನಾದಜೀರ್ಣೇ ವಾ ಗ್ರಾಮ್ಯಧರ್ಮಸೇವನಾದ್ವಿರುದ್ಧಾಹಾರ ಸೇವನಾದ್ಧಸ್ತ್ಯಶ್ವೋಷ್ಟ್ರರಥ ಪದಾತಿಸಂಕ್ಷೋಭಣಾದ್ದೋಷಾ ಧಾತೂನ್ ಪ್ರದೂಷ್ಯ ಶ್ವಯಥುಮಾಪಾದಯನ್ತ್ಯಖಿಲೇ ಶರೀರೇ ||೩||

ಶರೀರದ ವಿವಿಧಾಂಗಗಳಲ್ಲಿ ಉತ್ಪನ್ನವಾದ ಅರುವಿಧ ಶೋಫಗಳ ಲಕ್ಷಣಗಳು ಚಿಕಿತ್ಸೆಗಳು ಹೇಳಲ್ಪಟ್ಟವು. ಸಕಲಶರೀರದಲ್ಲೂ ಸಂಚರಿಸುವ ವಾತ, ಪಿತ್ತ, ಶ್ಲೇಷ್ಮ, ಸನ್ನಿಪಾತ ವಿಷಗಳಿಂದ ಉಂಟಾಗತಕ್ಕ ೫ ವಿಧ ಶೋಫಗಳಲ್ಲಿ ಅತಿ ತೃಪ್ತಿಯಾಗುವಂತೆ ಭೋಜನಮಾಡಿ ದಾರಿ ನಡೆಯುವುದು, ಹಿಟ್ಟು, ಸೊಪ್ಪುಗಳು, ಕಾಯಿಪಲ್ಯ, ಉಪ್ಪು ಇವುಗಳನ್ನು ಅತಿಯಾಗಿ ಸೇವಿಸುವುದು, ಕೃಶನಾದವನು ಅತಿ ಪ್ರಮಾಣದಿಂದ ಹುಳಿ ರಸ ದ್ರವ್ಯಗಳನ್ನು ಸೇವಿಸುವುದು, ಮಣ್ಣು, ಬೆಂಕಿಯಿಂದ ಸುಟ್ಟ ಹೆಂಚಿನ ಅಥವಾ ಇಟ್ಟಿಗೆ, ಮಡಕೆ ಚೂರಿನ ಪುಡಿಗಳನ್ನೂ ಸುಟ್ಟ ಉಪ್ಪುಗಳನ್ನೂ ಎಮ್ಮೆ ಮೊದಲಾದ ಅನೂಪ ಪ್ರಾಣಿಗಳ ಮತ್ತು ಮೀನು ಮೊದಲಾದ ಉದಕಪ್ರಾಣಿಗಳ ಮಾಂಸವನ್ನೂ ಸೇವಿಸುವುದರಿಂದಲೂ, ಅಜೀರ್ಣ ಆಹಾರ ಸೇವನೆ, ಸ್ತ್ರೀಸಂಭೋಗ, ವಿರುದ್ಧಾಹಾರ ಸೇವನೆ, ಆನೆ, ಕುದುರೆ, ರಥಗಳ ಸವಾರಿ ಮತ್ತು ಕಾಲುನಡಿಗೆ, ದೇಹವು ಅಲುಗಾಡುವುದು ಇವುಗಳಿಂದಲೂ ದೋಷಗಳು ಪ್ರಕೋಪಗೊಂಡು ಧಾತುಗಳನ್ನು ಕೆಡಿಸಿ ಶರೀರದಲ್ಲೆಲ್ಲಾ ಶೋಥವನ್ನುಂಟುಮಾಡುತ್ತವೆ.

ತತ್ರ ವಾತಶ್ವಯಥುರರುಣಃ ಕೃಷ್ಣೋ ವಾ ಮೃದುರನವ
ಸ್ಥಿತಾಸ್ತೋದಾದಯಶ್ಚಾತ್ರ ವೇದನಾವಿಶೇಷಾಃ ||೪||
ಪಿತ್ತಶ್ವಯಥುಃ ಪೀತೋ ರಕ್ತೋ ವಾ ಶೀಘ್ರಾನುಸಾ
ರ್ಯೋಷಚೋಷಾದಯಶ್ಚಾತ್ರ ವೇದನಾವಿಶೇಷಾಃ ||೫||
ಶ್ಲೇಷ್ಮಶ್ವಯಥುಃ ಪಾಣ್ಡುಃ ಶುಕ್ಲೋ ವಾ ಸ್ನಿಗ್ಧಃ ಕಠಿನಃ
ಶೀತೋ ಮನ್ದಾನುಸಾರೀ ಕಣ್ಡ್ವಾದಯಶ್ಚಾತ್ರ ವೇದನಾವಿಶೇಷಾಃ ||೬||

ಸನ್ನಿಪಾತಶ್ವಯಥುಃ ಸರ್ವವರ್ಣವೇದನಃ ॥೭॥

ವಿಷನಿಮಿತ್ತಸ್ತು ಗರೋಪಯೋಗಾತ್ ದುಷ್ಟತೋಯಸೇವನಾತ್ ಪ್ರಕೋಥೋದಕಾವಗಾಹನಾತ್ ಸವಿಷಸತ್ವದಿಗ್ಧಚೂರ್ಣೇನಾವಚೂರ್ಣನಾದ್ವಾ ಸವಿಷಮೂತ್ರಪುರೀಷಶುಕ್ರಸ್ಪೃಷ್ಟಾನಾಂ ತೃಣಕಾಷ್ಠಾದೀನಾಂ ಸಂಸ್ಪರ್ಶನಾತ್ ಸ ತು ಮೃದುಃ ಕ್ಷಿಪ್ರೋತ್ಥೋSವಲಮ್ಬೀ ಚಲೋ ವಾ ದಾಹಪಾಕಪ್ರಾಯಶ್ಚ ಭವತಿ ॥೮॥ ಭವನ್ತಿ ಚಾತ್ರ—

ದೋಷಾಃ ಶ್ವಯಥುಮೂರ್ಧ್ವಂ ಹಿ ಕುರ್ವನ್ತ್ಯಾಮಾಶಯಸ್ಥಿತಾಃ ।
ಪಕ್ವಾಶಯಸ್ಥಾ ಮಧ್ಯೇ ಚ ವರ್ಚಃ ಸ್ಥಾನಗತಾಸ್ತ್ವಧಃ ॥೯॥
ಕೃತ್ಸ್ನಂ ದೇಹಮನುಪ್ರಾಪ್ತಾಃ ಕುರ್ಯುಃ ಸರ್ವಸರಂ ತಥಾ ।
ಶ್ವಯಥುರ್ಮಧ್ಯದೇಶೇ ಯಃ ಸ ಕಷ್ಟಃ ಸರ್ವಗಶ್ಚ ಯಃ ॥೧೦॥
ಅರ್ಧಾಙ್ಗೇSರಿಷ್ಟಭೂತಶ್ಚ ಯಶ್ಚೋರ್ಧ್ವಂ ಪರಿಸರ್ಪತಿ ।
ಶ್ವಾಸಃ ಪಿಪಾಸಾ ದೌರ್ಬಲ್ಯಂ ಜ್ವರಚ್ಛರ್ದಿರರೋಚಕಃ ॥೧೧॥
ಹಿಕ್ಕಾತಿಸಾರಕಾಸಾಶ್ಚ ಶೂನಂ ಸಂಕ್ಷಪಯನ್ತಿ ಹಿ ।
ಸಾಮಾನ್ಯತೋ ವಿಶೇಷಾಚ್ಚ ತೇಷಾಂ ವಕ್ಷ್ಯಾಮಿ ಭೇಷಜಮ್ ॥೧೨॥

ವಾತಜಶ್ವಯಥುವು ಬಿಳುಪು ಮಿಶ್ರವಾದ ಕೆಂಪುಬಣ್ಣ ಅಥವಾ ಕಪ್ಪುಬಣ್ಣವುಳ್ಳದಾಗಿಯೂ ಮೆತ್ತಗೂ ಇರುತ್ತದೆ. ಕೆಲವುವೇಳೆ ಹೆಚ್ಚಾಗಿಯೂ ಕೆಲವುವೇಳೆ ಕಡಮೆಯಾಗಿಯೂ ಇರುತ್ತದೆ. ಚುಚ್ಚುವುದು (ವಾಯುವು ಚಲನ ಸ್ವಭಾವವುಳ್ಳ ಕಾರಣದಿಂದ). **ಪಿತ್ತಜಶ್ವಯಥುವು** ಹಳದಿ ಅಥವಾ ಕೆಂಪು ಬಣ್ಣವುಳ್ಳದಾಗಿ ಬಲುವೇಗದಿಂದ ಹರಡುತ್ತಾ ಒಂದುಕಡೆಯಲ್ಲಾಗಲೀ ಎಲ್ಲಾ ಕಡೆಗಳಲ್ಲಾಗಲೀ ಉರಿತವುಳ್ಳದ್ದಾಗಿರುತ್ತದೆ. **ಕಫಜಶ್ವಯಥುವು** ಮಾಸಲು ಬಿಳುಪು ಅಥವಾ ಅಚ್ಚಬಿಳುಪು ವರ್ಣವುಳ್ಳದ್ದಾಗಿ ಮಿಂಚುತ್ತಾ ಗಟ್ಟಿಯಾಗಿ ತಣ್ಣಗೆ ಇದ್ದು ಮೆಲ್ಲಮೆಲ್ಲಗೆ ವೃದ್ಧಿಗೊಳ್ಳುತ್ತದೆ. ನವೆ, ಭಾರ ಮೊದಲಾದ ವೇದನೆಗಳಿರುತ್ತವೆ. **ಸನ್ನಿಪಾತಜಶ್ವಯಥುವಿ**ನಲ್ಲಿ ಎಲ್ಲಾ ಬಣ್ಣಗಳೂ, ಎಲ್ಲಾ ವೇದನೆಗಳೂ ಇರುತ್ತವೆ. ಕ್ರಿಮಿಸಗು ದೇಹಕ್ಕೆ ಸೇರುವುದು, ದುಷ್ಟನೀರನ್ನು ಕುಡಿಯುವುದು, ಕೊಳತುನಾರುವ ನೀರಿನಲ್ಲಿ ಸ್ನಾನಮಾಡುವುದು, ವಿಷಪ್ರಾಣಿ ದೇಹದ ಚೂರ್ಣವನ್ನು ಮೈಗೆ ತಿಕ್ಕುವುದು, ವಿಷಮಿಶ್ರವಾದ ಮೂತ್ರ, ಮಲ, ಶುಕ್ರಗಳು ಮೆತ್ತಿರುವ ಹುಲ್ಲು ಕಡ್ಡಿಗಳು ಶರೀರಕ್ಕೆ ತಗಲುವುದು ಇವುಗಳಿಂದ **ವಿಷನಿಮಿತ್ತ**ವಾದ **ಶ್ವಯಥು**ವುಂಟಾಗುತ್ತದೆ. ಈ ವಿಧದ ಶೋಫವು ಮೃದುವಾಗಿ ಬೇಗ ಉತ್ಪತ್ತಿಯಾಗಿ ನೇತಾಡುತ್ತಾ ಕೆಳಗಡೆಗೆ ಹರಿದು ನುಗ್ಗುವ ಸ್ವಭಾವವುಳ್ಳದಾಗಿಉರಿಯುತ್ತಲೂ ಪಾಕವಾಗುತ್ತಲೂ ಇರುತ್ತದೆ. ಈ ವಿಚಾರವಾಗಿ ಉದಾಹರಿಸಲ್ಪಟ್ಟಿರುವ ಶ್ಲೋಕಗಳ ಅರ್ಥವೇನೆಂದರೆ—ಆಮಾಶಯದಲ್ಲಿ ಜಮಾಯಿಸಿದ ದೋಷಗಳಿಂದ ಶರೀರದ ಮೇಲುಭಾಗದಲ್ಲೂ, ದೋಷಗಳು ಪಕ್ವಾಶಯದಲ್ಲಿ ಜಮಾಯಿಸಿದರೆ ದೇಹದ ಮಧ್ಯಭಾಗದಲ್ಲೂ, ಮಲಾಶಯದಲ್ಲಿ ಜಮಾಯಿಸಿದರೆ ದೇಹದ ಹೊಕ್ಕಳಿಂದ ಕೆಳಕ್ಕೂ, ದೇಹದಲ್ಲೆಲ್ಲಾ ದೋಷ

ಗಳು ಹರಡಿದ್ದರೆ ದೇಹದ ಎಲ್ಲಾ ಕಡೆಯಲ್ಲೂ ಶೋಥವು ಉಂಟಾಗುತ್ತದೆ. ದೇಹದ ಮಧ್ಯಭಾಗದಲ್ಲಿ ಉಂಟಾದ ಶೋಥವು **ಕಷ್ಟಸಾಧ್ಯವು**. ಸರ್ವಾಂಗಶೋಥವೂ, ಅರ್ಧ ಸಾರೀಶ್ವರನಂತೆ ದೇಹದ ಅರ್ಧಭಾಗದಲ್ಲಿ ಊದಿದ ಶೋಫವೂ **ಮರಣಸೂಚಕ**ಗಳು. ಪಾದದಲ್ಲಿ ಶೋಫವುಂಟಾಗಿ ಮೇಲ್ಗಡೆಗೆ ಹೆಚ್ಚುತ್ತಾ ಬಂದರೆ **ಗಂಡಸಿಗೂ**, ಮುಖದಲ್ಲಿ ಶೋಫವುಂಟಾಗಿ ಕೆಳಕ್ಕೆ ಹೆಚ್ಚುತ್ತಾ ಬಂದರೆ **ಹೆಂಗಸಿಗೂ** ಅರಿಷ್ಟಲಕ್ಷಣವು. ಇವು ಅಸಾಧ್ಯ ಲಕ್ಷಣಗಳೆಂದು ತಿಳಿಯಬೇಕು. ಸಾಮಾನ್ಯವಾಗಿ ಉಬ್ಬಸ, ಬಾಯಾರಿಕೆ, ದೌರ್ಬಲ್ಯ, ಜ್ವರ, ವಮನ, ಅರುಚಿ, ಬಿಕ್ಕಳಿಕೆ, ಅತಿಸಾರ, ಕೆಮ್ಮು ಇವು ಶೋಥರೋಗಿಯನ್ನು ದುರ್ಬಲನನ್ನಾಗಿ ಮಾಡುತ್ತವೆ. ಶೋಥರೋಗದ ವಿಶೇಷಲಕ್ಷಣಗಳನ್ನೂ ಅವುಗಳ ಚಿಕಿತ್ಸೆಯನ್ನೂ ಹೇಳುತ್ತೇವೆ.

ಶೋಫಿನಃ ಸರ್ವ ಏವ ಪರಿಹರೇಯುರಮ್ಲ ಲವಣದಧಿಗುಡವಸಾಪಯಸ್ತೈಲಘೃತಪಿಷ್ಟ
ಮಯಗುರೂಣಿ ||೧೩||

ತತ್ರ ವಾತಶ್ವಯಥೌ ತ್ರೈವೃತಮೇರಣ್ಡ ತೈಲಂ ವಾ ಮಾಸಮರ್ಧಮಾಸಂ ಪಾಯಯೇತ್ ನ್ಯಗ್ರೋಧಾದಿಕಷಾಯಸಿದ್ಧಂ ಸರ್ಪಿಃ ಪಿತ್ತಶ್ವಯಥೌ ಆರಗ್ವಧಾದಿಸಿದ್ಧಂ ಶ್ಲೇಷ್ಮಶ್ವಯಥೌ ಸನ್ನಿಪಾತಶ್ವಯಥೌ ಸ್ನುಹೀಕ್ಷೀರಪಾತ್ರಂ ದ್ವಾದಶಭಿರಮ್ಲಪಾತ್ರೈಃ ಪ್ರತಿ ಸಂಸೃಷ್ಟಂ ದನ್ತೀಪ್ರತೀವಾಪಂ ಸರ್ಪಿಃ ಪಾಚಯಿತ್ವಾ ಪಾಯಯೇತ್ ವಿಷನಿಮಿತ್ತೇ ಕಲ್ಪೇಷು ಪ್ರತೀಕಾರಃ ||೧೪||

ಎಲ್ಲಾ ಶೋಥರೋಗಿಗಳೂ ಹುಳಿ, ಉಪ್ಪು, ಮೊಸರು, ಬೆಲ್ಲ, ವಸೆ, ಹಾಲು, ತೈಲ, ತುಪ್ಪ, ಹಿಟ್ಟಿನ ರೊಟ್ಟಿ, ಅನ್ನ, ಮತ್ತು ಗುರುವಾದ ಆಹಾರ **ಇವುಗಳನ್ನು ತ್ಯಜಿಸಬೇಕು**. ಇವುಗಳ ಪೈಕಿ **ವಾತಶೋಥ**ದಲ್ಲಿ ತೈಲ, ಘೃತ, ವಸೆಗಳೆಂಬ ತ್ರಿವೃತ್ಸ್ನೇಹವನ್ನಾಗಲೀ, ಹರಳೆಣ್ಣೆಯನ್ನಾಗಲೀ ಒಂದುಮಾಸದ ಅಥವಾ ಅರ್ಧಮಾಸದವರೆಗೆ ಸೇವಿಸಬೇಕು. **ಪಿತ್ತಶೋಥ**ದಲ್ಲಿ ಆಲ, ಅರಳಿ ಮೊದಲಾದ ಕ್ಷೀರವೃಕ್ಷಗಳ ಕಷಾಯದಿಂದ ತಯಾರಿಸಿದ ತುಪ್ಪವನ್ನೂ, **ಕಫಶೋಥ**ದಲ್ಲಿ ಕಕ್ಕೆ ಮೊದಲಾದ ಗಣದಲ್ಲಿ ಹೇಳಿದ ದ್ರವ್ಯಗಳಿಂದ ತಯಾರಿಸಿದ ತುಪ್ಪವನ್ನೂ, **ಸನ್ನಿಪಾತ**ದಿಂದುಂಟಾದ ಶೋಥದಲ್ಲಿ ಮಂಡುಗಳ್ಳಿಯಹಾಲು ೧ ಕೊಳಗ. ಹುಳಿಕಲಗಚ್ಚು ೧೨ ಕೊಳಗ, ತುಪ್ಪ ೧ ಕೊಳಗ ಜಾಪಾಳದ ತೊಗಟೆ ೧ ಪ್ರಸ್ಥದಷ್ಟನ್ನು ಕಲ್ಕಮಾಡಿ ಸೇರಿಸಿ ಮಂದಾಗ್ನಿಯಿಂದ ಪಾಕಮಾಡಿ ತಯಾರಿಸಿದ ತುಪ್ಪವನ್ನೂ ಕುಡಿಸಬೇಕು. ವಿಷನಿಮಿತ್ತವಾಗಿ ಹುಟ್ಟಿದ ಶೋಥಕ್ಕೆ ಚಿಕಿತ್ಸೆಯನ್ನು ಕಲ್ಪಸ್ಥಾನದಲ್ಲಿ ವಿವರಿಸಲಾಗುತ್ತದೆ.

ಅಥಾತಃ ಸಾಮಾನ್ಯ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ–ತಿಲ್ವಕಘೃತಚತುರ್ಥಾನಿ ಯಾನ್ಯನ್ಯಾನ್ಯುದರೇಷು ತತೋಽನ್ಯತಮಮುಪಯುಜ್ಯಮಾನಂಶ್ವಯಥುಮುಪಹನ್ತಿ ಮೂತ್ರವರ್ತಿಕ್ರಿಯಾಂ ವಾ ಸೇವಯೇತ್ ನವಾಯಸಂ ವಾ ಹರಷವರ್ಧುನಾ ವಿಡಙ್ಗಾತಿವಿಷಾಕುಟಜಫಲಭದ್ರದಾರುನಾಗರಮರಿಚಚರ್ಣಂ ವಾ ಧರಣಮುಷ್ಣಾಂಬುನಾ ತ್ರಿಕಟುಕ್ಷಾರಾಯಶ್ಚೂರ್ಣಾನಿ ವಾ ತ್ರಿಫಲಾ

ಕಷಾಯೇಣ ಮೂತ್ರಂ ವಾ ತುಲ್ಯಕ್ಷೀರಂ ಹರೀತಕೀಂ ವಾ ತುಲ್ಯಗುಡಾಮುಪಯುಞ್ಜೀತ ದೇವದಾರುಶುಂಠೀಂ ವಾ ಗುಗ್ಗುಳುಂ ವಾ ಮೂತ್ರೇಣ ವರ್ಷಾಭೂಕಷಾಯಾನುಪಾನಂ ವಾ ತುಲ್ಯಗುಡಂ ಶೃಙ್ಗವೇರಂ ವಾ ವರ್ಷಾಭೂಕಷಾಯಂ ಮೂಲಕಲ್ಕಂ ವಾ ಸಶೃಙ್ಗವೇರಂ ಪಯೋಽನುಪಾನಮಹರಹರ್ಮಾಸಂ ವ್ಯೋಷವರ್ಷಾಭೂಕಷಾಯಸಿದ್ಧೇನ ವಾ ಸರ್ಪಿಷಾ ಮುದ್ಗೋಲುಮ್ಮಾರ್ಬ್ ಭಕ್ಷಯೇತ್ ಪಿಪ್ಪಲೀಪಿಪ್ಪಲೀಮೂಲ ಚವ್ಯಚಿತ್ರಕ ಮಯೂರವರ್ಷಾಭೂಸಿದ್ಧಂ ವಾ ಕ್ಷೀರಂ ಪಿಬೇತ್ ಮಹೌಷಧಮುರಙ್ಗೀಮೂಲಸಿದ್ಧಂ ವಾ ತ್ರಿಕಟುಕೈರಣ್ಡಮೂಲಶ್ಯಾಮಾಮೂಲಸಿದ್ಧಂ ವಾ ವರ್ಷಾಭೂಶೃಙ್ಗವೇರಸಹಾದೇವದಾರುಸಿದ್ಧಂ ವಾ ತಥಾ ಅಲಾಬೂವಿಭೀತಕ ಫಲಕಲ್ಕಂ ವಾ ತಣ್ಡುಲಾಮ್ಬುನಾ ಕ್ಷಾರಪಿಪ್ಪಲೀಮರಿಚಶೃಙ್ಗವೇರಾನುಸಿದ್ಧೇನ ಚ ಮುದ್ಗಯೂಷೇಣಾಲವಣೇನಾಲ್ಪಸ್ನೇಹೇನಭೋಜಯೇದ್ಯವಾನ್ನಂ ಗೋಧೂಮಾನ್ನಂ ವಾ ವೃಕ್ಷಕಾರ್ಕನ್ತಮಾಲನಿಮ್ಬವರ್ಷಾಭೂಕ್ವಾಥೈಶ್ಚ ಪರಿಷೇಕಃ ಸರ್ಷಪಸೌವರ್ಚಲಸೈನ್ಧವಶಾಙ್ಗ್ರಪ್ಟಾಭಿಶ್ಚ ಪ್ರದೇಹಃ ಕಾರ್ಯಃ ಯಥಾದೋಷಂ ಚ ವಿರೇಚನಾಸ್ಥಾಪನಾನಿ ತೀಕ್ಷ್ಣಾನಿ ಅಜಸ್ರಮುಪಸೇವೇತ ಸ್ನೇಹಸ್ವೇದೋಪನಾಹಾಶ್ಚ ಸಿರಾಭಿಶ್ಚಾಭೀಕ್ಷ್ಣಂ ಶೋಣಿತಮವಸೇಚಯೇದನ್ಯತ್ರೋಪದ್ರವಶೋಫಾದಿತಿ ||೧೫|| ಭವತಿಚಾತ್ರ—ಪಿಷ್ಟಾನ್ನಮಮ್ಲಂ ಲವಣಾನಿ ಮದ್ಯಂ ಮೃದಂ ದಿವಾಸ್ವಪ್ನಮಜಾಙ್ಗಲಂ ಚ । ಸ್ತ್ರಿಯೋ ಘೃತಂ ತೈಲಪಯೋಗುರೂಣಿ ಶೋಫಂ ಜಿಘಾಂಸುಃ ಪರಿವರ್ಜಯೇತ್ತು ||೧೬||

ಈಗ **ಶೋಥಸಾಮಾನ್ಯ ಚಿಕಿತ್ಸೆಯನ್ನು** ಹೇಳುತ್ತೇವೆ–ಉದರರೋಗದಲ್ಲಿ ಹೇಳಿರುವ ತಿಲ್ವಕಘೃತ ಮೊದಲಾದ ಯೋಗಗಳ ಪೈಕಿ ಒಂದು ಯೋಗವನ್ನು ಉಪಯೋಗಿಸಿದರೆ ಶ್ವಯಥು ಹರವು. ಮೂತ್ರವರ್ತಿ ಪ್ರಯೋಗವನ್ನು ಮಾಡಬೇಕು. ಪ್ರತಿದಿನವೂ ಜೇನುತುಪ್ಪದಲ್ಲಿ ರಂಗಳಿಸಿದ ನವಾಯಸಚೂರ್ಣವನ್ನಾಗಲೀ, ವಿಡಂಗ, ಅತಿಬಜೆ, ಕೊಡಶಿಗೆಬೀಜ, ದೇವದಾರು, ಶುಂಠಿ, ಮೆಣಸು ಇವುಗಳ ಚೂರ್ಣವನ್ನಾಗಲೀ, ೧ ಕರ್ಷ ಪ್ರಮಾಣದಷ್ಟನ್ನು ಬಿಸಿನೀರಿನಲ್ಲಿ ಕದರಿ ಕುಡಿಸಬೇಕು. ತ್ರಿಕಟು, ಯವಕ್ಷಾರ, ಕಬ್ಬಿಣದ ಪುಡಿಗಳನ್ನು ತ್ರಿಫಲಾ ಕಷಾಯದಲ್ಲಿ ಕುಡಿಸಬೇಕು. ಸಮಭಾಗ ಹಾಲು ಸೇರಿಸಿದ ಗೋಮೂತ್ರವನ್ನಾಗಲೀ, ಸಮಬೆಲ್ಲ ಮಿಶ್ರಮಾಡಿದ ಅಣಿಲೆ ಪುಡಿಯನ್ನಾಗಲೀ ಸೇವಿಸಬೇಕು. ದೇವದಾರು ಚೂರ್ಣ, ಶುಂಠಿಯಪುಡಿ ಅಥವಾ ಗುಗ್ಗುಳುವನ್ನಾಗಲೀ ಗೋಮೂತ್ರದಲ್ಲಿ ಕುಡಿಸಿ ಕೊಮ್ಮೆಯಕಷಾಯವನ್ನು ಅನುಪಾನಮಾಡಿಸಬೇಕು. ಸಮಬೆಲ್ಲ ಮಿಶ್ರಮಾಡಿದ ಶುಂಠಿಯಪುಡಿಯನ್ನಾಗಲೀ, ಕೊಮ್ಮೆಯ ಕಷಾಯದಲ್ಲಿ ಮೂಲಂಗಿಯ ಕಲ್ಕವನ್ನಾಗಲೀ ಕದರಿ ಕುಡಿದು ಶುಂಠಿಯಚೂರ್ಣ ಮಿಶ್ರಮಾಡಿದ ಹಾಲನ್ನು ಕುಡಿಸಬೇಕು. ಈ ರೀತಿ ೧ ಮಾಸದವರೆಗೆ ಕುಡಿಸಬೇಕು. ತ್ರಿಕಟು ಮತ್ತು ಕೊಮ್ಮೆಬೇರುಗಳನ್ನು ಹಾಲಿನಲ್ಲಿ ಕಾಯಿಸಿ ತುಪ್ಪ ಮತ್ತು ಹುರಿದ ಹೆಸರಿನಹಿಟ್ಟು ಇವನ್ನು ತಿನ್ನಿಸಬೇಕು. ಹಿಪ್ಪಲಿ, ಮೋಡಿ, ಚವ್ಯ, ಚಿತ್ರಮೂಲ, ಉತ್ತರಣೆ, ಕೊಮ್ಮೆಬೇರುಗಳನ್ನು ಸೇರಿಸಿ ಕಾಯಿಸಿದ ಅಥವಾ ಶುಂಠಿ, ನುಗ್ಗೇಸೊಪ್ಪುಗಳನ್ನು ಸೇರಿಸಿ ತಯಾರಿಸಿದ ಅಥವಾ ತ್ರಿಕಟು, ಹರಳು ಬೇರು, ತಿಗಡೆಬೇರುಗಳನ್ನು ಸೇರಿಸಿ ತಯಾರಿಸಿದ ಹಾಲನ್ನಾಗಲೀ ; ಕೆಂಪುಕೊಮ್ಮೆ

ಶುಂಠಿ, ಕಾಡುಉದ್ದು, ದೇವದಾರುಗಳೊಡನೆ ಪಾಕಮಾಡಿದ ಹಾಲನ್ನಾಗಲೀ, ಸೋರೆ ಮತ್ತು ತಾರೆಬಿತ್ತಗಳ ಪೊಪ್ಪನ್ನು ಅರೆದು ಆ ಕಲ್ಕವನ್ನು ಕಲಸಚ್ಚಿನಲ್ಲಿ ಕದರಿಯಾಗಲೀ ಕುಡಿಸಬೇಕು. ಯವಕ್ಷಾರ, ಹಿಪ್ಪಲಿ, ಮೆಣಸು, ಶುಂಠಿಗಳನ್ನು ಸೇರಿಸಿ ತಯಾರಿಸಿದ ಹೆಸರುಕಟ್ಟಿಗೆ ಉಪ್ಪು ಸೇರಿಸದೆ ಸ್ವಲ್ಪ ತುಪ್ಪ ಮಿಶ್ರಮಾಡಿ ಯವೆ ಅಥವಾ ಗೋಧಿಯ ಅನ್ನವನ್ನು ಭೋಜನಮಾಡಿಸಬೇಕು. ಕೊಡಶಿಗೆ, ಎಕ್ಕ, ಹೊಂಗೆ, ಬೇವು, ಕೊಮ್ಮೆಗಳ ಕಷಾಯದಿಂದ ಸ್ನಾನಮಾಡಿಸಬೇಕು. ಸಾಸಿವೆ, ಸೌವರ್ಚಲವಣ, ಸೈಂಧವ, ತವಸದ ತೊಗಟೆಗಳ ಚೂರ್ಣದಿಂದ ಮೈತಿಕ್ಕಿಸಬೇಕು. ಆಗಾಗ್ಯೆ ದೋಷಗಳಿಗೆ ಅನುಸಾರವಾಗಿ ತೀಕ್ಷ್ಣಗಳಾದ ವಿರೇಚನ ಆಸ್ಥಾಪನೆಗಳನ್ನು ಪ್ರಯೋಗಿಸಬೇಕು. ಸ್ನೇಹಸ್ವೇದ ಉಪನಾಹಗಳನ್ನು (ಸರ್ವಾಂಗ ಶೋಫದಲ್ಲಿ ವಿನಃ) ಸಿರಾಮೋಕ್ಷನಮಾಡಿಸಿ ರಕ್ತಸ್ರಾವವನ್ನೂ ಮಾಡಿಸಬೇಕು. ಮತ್ತೆ ಕೆಲವರು ಉಷ್ಣಸ್ನಿಗ್ಧರೂಕ್ಷಕ್ರಿಯೆಗಳಿಂದ ಶಮನವಾಗದಿದ್ದರೆ ಸಿರಾವ್ಯಧಮಾಡಿಸಬೇಕೆಂದು ಅಭಿಪ್ರಾಯಪಡುತ್ತಾರೆ. **ಶೋಥರೋಗಿಗೆ ಅಪಥ್ಯಗಳು** :–ಹಿಟ್ಟಿನಅನ್ನ, ಹುಳಿ, ಉಪ್ಪು, ಮದ್ಯ, ಮಣ್ಣು ತಿನ್ನುವುದು, ಹಗಲು ನಿದ್ರೆ, ಅನೂಪಮಾಂಸ, ಮೈಥುನ, ತುಪ್ಪ, ಎಣ್ಣೆ, ಹಾಲು, ಗುರುಪದಾರ್ಥಗಳು, ಬೆಲ್ಲ ಇವುಗಳು. (ಇವುಗಳನ್ನು ಶೋಥರೋಗಿಯು ತ್ಯಜಿಸಬೇಕು.)

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಶೋಫಚಿಕಿತ್ಸಾನಾಮ
ತ್ರಯೋವಿಂಶತಿತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ
ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಚತುರ್ವಿಂಶತಿತಮೋಽಧ್ಯಾಯಃ

ಅಥಾತೋಽನಾಗತಾಬಾಧ ಪ್ರತಿಷೇಧನೀಯಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ವಲ್ಪಮಾತ್ರದಿಂದುಂಟಾಗಿ ದುಃಖಕರವಲ್ಲದ ರೋಗಗಳನ್ನು ನಿವಾರಣೆ ಮಾಡುವ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಉತ್ಥಾಯೋತ್ಥಾಯ ಸತತಂ ಸ್ವಸ್ಥೇನಾರೋಗ್ಯಮಿಚ್ಛತಾ ।
ಧೀಮತಾ ಯದನುಷ್ಠೇಯಂ ತತ್ಸರ್ವಂ ಸಂಪ್ರವಕ್ಷ್ಯತೇ ||೩||

ಬುದ್ಧಿಶಾಲಿಯಾಗಿ ಆರೋಗ್ಯವಂತನಾಗಿರಬೇಕೆಂದು ಅಪೇಕ್ಷಿಸುವ ಪ್ರತಿಯೊಬ್ಬ ಸ್ವಸ್ಥಮನುಷ್ಯನೂ ಪ್ರತಿದಿನವೂ ಹಾಸಿಗೆಯಿಂದ ಎದ್ದು ಪುನಃ ರಾತ್ರಿ ಮಲಗುವವರೆಗೂ ಯಾವ ಕಾರ್ಯಗಳನ್ನು ಕೈಗೊಳ್ಳಬೇಕೋ ಆ ವಿಚಾರಗಳನೆಲ್ಲಾ ಈಗ ವಿವರಿಸುತ್ತೇವೆ.

ತತ್ರಾದೌ ದನ್ತಪವನಂ ದ್ವಾದಶಾಙ್ಗುಲಮಾಯತಮ್ ।
ಕನಿಷ್ಠಿಕಾಪರೀಣಾಹಮೃಜ್ವಗ್ರನ್ಥಿತಮವ್ರಣಮ್ ||೪||
ಅಯುಗ್ಮಗ್ರನ್ಥಿ ಯಚ್ಚಾಪಿ ಪ್ರತ್ಯಗ್ರಂ ಶಸ್ತಭೂಮಿಜಮ್ ।
ಅವೇಕ್ಷ್ಯರ್ತುಂ ಚ ದೋಷಂ ಚ ರಸಂ ವೀರ್ಯಂ ಚ ಯೋಜಯೇತ್ ||೫||
ಕಷಾಯಂ ಮಧುರಂ ತಿಕ್ತಂ ಕಟುಕಂ ಪ್ರಾತರುತ್ಥಿತಃ ।
ನಿಮ್ಬಶ್ಚ ತಿಕ್ತಕೇ ಶ್ರೇಷ್ಠಃ ಕಷಾಯೇ ಖದಿರಸ್ತಥಾ ||೬||
ಮಧೂಕೋ ಮಧುರೇ ಶ್ರೇಷ್ಠಃ ಕರಞ್ಜಃ ಕಟುಕೇ ತಥಾ ।
ಕ್ಷೌದ್ರವ್ಯೋಷತ್ರಿವರ್ಗಾಕ್ತಂ ಸತೈಲಂ ಸೈನ್ಧವೇನ ಚ ||೭||
ಚೂರ್ಣೇನ ತೇಜೋವತ್ಯಾಶ್ಚ ದನ್ತಾನ್ನಿತ್ಯಂ ವಿಶೋಧಯೇತ್ ।
ಏಕೈಕಂ ಘರ್ಷಯೇದ್ದನ್ತಂ ಮೃದುನಾ ಕೂರ್ಚಕೇನ ಚ ||೮||
ದನ್ತಶೋಧನಚೂರ್ಣೇನ ದನ್ತಮಾಂಸಾನ್ಯಬಾಧಯನ್ ।
ತದ್ದೌರ್ಗನ್ಧ್ಯೋಪದೇಹೌ ತು ಶ್ಲೇಷ್ಮಾಣಂ ಚಾಪಕರ್ಷತಿ ||೯||
ವೈಶದ್ಯಮನ್ನಾಭಿರುಚಿಂ ಸೌಮನಸ್ಯಂ ಕರೋತಿ ಚ ।
ನ ಖಾದೇದ್ಗಲತಾಲ್ವೋಷ್ಠಜಿಹ್ವಾರೋಗಸಮುದ್ಭವೇ ||೧೦||
ಅಥಾಸ್ಯಪಾಕೇ ಶ್ವಾಸೇ ಚ ಕಾಸಹಿಕ್ಕಾವಮೀಷು ಚ ।
ದುರ್ಬಲೋಽಜೀರ್ಣಭಕ್ತಶ್ಚ ಮೂರ್ಛಾರ್ತೋ ಮದಪೀಡಿತಃ ||೧೧||
ಶಿರೋರುಗಾರ್ತಸ್ತೃಷಿತಃ ಶ್ರಾನ್ತಃ ಪಾಕ (ನ) ಕ್ಲಮಾನ್ವಿತಃ ।
ಅರ್ದಿತೋ (ತೀ) ಕರ್ಣಶೂಲೀ ಚ ದನ್ತರೋಗೀ ಚ ಮಾನವಃ ||೧೨||

ಪ್ರತಿ ದಿನವೂ ಹಾಸಿಗೆಯಿಂದ ಎದ್ದಕೂಡಲೇ ಪ್ರತಿಯೊಬ್ಬನೂ ಮೊದಲು ಹಲ್ಲುಗಳನ್ನು ಉಜ್ಜಿ ಶುದ್ಧನಾದ ನೀರಿನಿಂದ ಬಾಯಿ ಮುಕ್ಕಳಿಸಿ ಮುಖವನ್ನು ತೊಳೆದುಕೊಳ್ಳಬೇಕು. ಹಲ್ಲುಗಳನ್ನು ಉಜ್ಜಲು ಶುದ್ಧವಾದ ಭೂಭಾಗದಲ್ಲಿ ಬೆಳೆದ ಒಗರು, ಕಹಿ, ಖಾರ, ಸಿಹಿ ರಸಗಳುಳ್ಳ ಮರಗಳ ಕೊಂಬೆಗಳಿಂದ ತುದಿಭಾಗವು ನೇರವಾಗಿ ಗಂಟುಗಳಿಲ್ಲದೆ ೧೨ ಅಂಗುಳದಷ್ಟು ಉದ್ದವಾಗಿ ಕಿರಿಬೆರಳಿನಷ್ಟು ದಪ್ಪನಾದ ಕಡ್ಡಿಗಳನ್ನು ಆಗ ತಾನೆ ಕತ್ತರಿಸಿ ಋತು, ದೋಷ, ರಸ ವೀರ್ಯಗಳಿಗೆ ತಕ್ಕಂತೆ ವಿಂಗಡಿಸಿ ತುದಿಯನ್ನು ಹಲ್ಲುಗಳಿಂದ ಅಗಿದು ಕುಂಚೇವಿನಂತೆ ಮಾಡಿ ಪ್ರತಿಯೊಂದು ಹಲ್ಲನ್ನೂ ಪ್ರತ್ಯೇಕವಾಗಿ ಉಜ್ಜಿ ಕೊಳೆ, ಕೀವುಗಳಿಲ್ಲದಂತೆ ಶೋಧಿಸಿ ಬಾಯಿ ಮುಕ್ಕಳಿಸಬೇಕು. ಒಗರು ರಸಕ್ಕೆ ಕಗ್ಗಲಿಯ, ಸಿಹಿ ರಸಕ್ಕೆ ಹಿಪ್ಪೆಯ, ಕಹಿ ರಸಕ್ಕೆ ಬೇವಿನ, ಖಾರ ರಸಕ್ಕೆ ಹೊಂಗೆಯ ಕಡ್ಡಿಗಳು ಉತ್ತಮವಾದುವು. ತ್ರಿಕಟು, ದಾಲ್ಚಿನ್ನಿ, ಲವಂಗಪತ್ರೆ, ಏಲಕ್ಕಿ, ಗಂಗುಂಡೆ ಬೀಜ, ಸೈಂಧವಲವಣ ಇವುಗಳ ಚೂರ್ಣವನ್ನು ಜೇನುತುಪ್ಪ, ಎಳ್ಳೆಣ್ಣೆ ಗಳಲ್ಲಿ ರಂಗಳಿಸಿ, ಕುಂಚೇವುಗಳಿಗೆ ಬಳಿದು ಹಲ್ಲುಗಳನ್ನು ಉಜ್ಜಿದರೆ ದಂತ ಮಾಂಸಗಳನ್ನು (ವಸಡನ್ನು) ನೋಯಿಸದೆ ಶುದ್ಧಿಮಾಡಿದರೆ ದುರ್ವಾಸನೆಯೂ, ಹಲ್ಲುಗಳಲ್ಲಿ ಮೆತ್ತಿರುವ ಕೊಳೆಯೂ, ಕಫವೂ ನಿವಾರಣೆಯಾಗುತ್ತವೆ. ಮುಖಶುದ್ಧಿಯೂ, ಅನ್ನದಲ್ಲಿ ರುಚಿಯೂ, ಸಂತೋಷವೂ (ಮನಶ್ಶಾಂತಿಯೂ) ಉಂಟಾಗುತ್ತವೆ. ಅಂಗಳು, ತುಟಿಗಳು, ನಾಲಿಗೆ ಇವುಗಳಲ್ಲಿ ಉಂಟಾದ ಆಸ್ಯಪಾಕವೂ ನಿವಾರಣೆಯಾಗುತ್ತದೆ. ಉಬ್ಬಸ, ಕೆಮ್ಮು, ಬಿಕ್ಕಳಿಕೆ, ವಮನಗಳಿರುವಾಗಲೂ ದುರ್ಬಲನೂ, ಅಜೀರ್ಣ ರೋಗಿಯೂ, ಮೂರ್ಛೆಮದಗಳಿಂದ ಪೀಡಿತನಾದವನೂ, ತಲೆನೋವುಳ್ಳವನೂ, ನೀರಡಿಕೆಯುಳ್ಳವನೂ, ಆಯಾಸವುಳ್ಳವನೂ, ಮದ್ಯಪಾನಮಾಡಿ ಬಳಲಿರುವವನೂ, ಅರ್ದಿತವಾತರೋಗದಿಂದ ಪೀಡಿತನಾದವನೂ, ಕಿವಿಶೂಲೆ, ಮತ್ತು ಹಲ್ಲು ನೋವುಗಳಿಂದ ಪೀಡಿತನಾದವನು ಇವರು ದಂತಕಾಷ್ಠವನ್ನು ಉಪಯೋಗಿಸಬಾರದು.

ಜಿಹ್ವಾನಿರ್ಲೇಖನಂ ರೌಪ್ಯಂ ಸೌವರ್ಣಂ ವಾರ್ಕ್ಷಮೇವ ಚ ।
ತನ್ಮಲಾಪಹರಂ ಶಸ್ತಂ ಮೃದು ಶ್ಲಕ್ಷ್ಣಂ ದಶಾಙ್ಗುಳಮ್ ॥೧೩॥
ಮುಖವೈರಸ್ಯ ದೌರ್ಗನ್ಧ್ಯ ಶೋಫಜಾಡ್ಯಹರಂ ಸುಖಮ್ ।
ದನ್ತದಾರ್ಢ್ಯಕರಂ ರುಚ್ಯಂ ಸ್ನೇಹಗಂಡೂಷಧಾರಣಮ್ ॥೧೪॥
ಕ್ಷೀರವೃಕ್ಷಕಷಾಯೈರ್ವಾ ಕ್ಷೀರೇಣ ಚ ವಿಮಿಶ್ರಿತೈಃ ।
ಭಿಲ್ಲೋದಕಕಷಾಯೇಣ ತಥೈವಾಮಲಕಸ್ಯ ವಾ ॥೧೫॥
ರಕ್ತಪಿತ್ತಕೃತಾನ್ ರೋಗಾನ್ ಸದ್ಯ ಏವ ವಿನಾಶಯೇತ್ ।
ಪ್ರಕ್ಷಾಳಯೇನ್ಮುಖಂ ನೇತ್ರೇ ಸ್ವಸ್ಥಃ ಶೀತೋದಕೇನ ವಾ ॥೧೬॥
ನೀಲಿಕಾಂ ಮುಖಶೋಷಂ ಚ ಪಿಡಕಾಂ ವ್ಯಙ್ಗಮೇವ ಚ ।

ನಾಲಿಗೆಯಲ್ಲಿ ಮೆತ್ತಿಕೊಂಡಿರುವ ಮಲವನ್ನು ಶುದ್ಧಿಮಾಡಲು ಮೆತ್ತಗೂ ನುಣು

ಪಾಗಿಯೂ ಇರುವ ೧೦ ಅಂಗುಳಿಗಳಷ್ಟು ಉದ್ದವಾದ ಬೆಳ್ಳಿ, ಚಿನ್ನ, ಮರ ಇವುಗಳ ಅಲಗುಗಳಿಂದ ನಾಲಿಗೆಯಮೇಲೆ ಕೆರೆಯಬೇಕು. ಇದಕ್ಕೆ ಜಿಹ್ವಾನಿರ್ಲೇಖನವೆಂದು ಹೆಸರು. ಎಳ್ಳೆಣ್ಣೆಯನ್ನು ಬಾಯಿಗೆ ತುಂಬಿಕೊಳ್ಳುವುದರಿಂದ ಬಾಯಿಯಲ್ಲಿನ ರುಚಿ ವ್ಯತ್ಯಾಸವೂ, ದುರ್ವಾಸನೆಯೂ, ಶೋಷವೂ ಜಡತೆಯೂ ನಿವಾರಣೆಯಾಗಿ ಸುಖಾನುಭವವುಂಟಾಗುತ್ತದೆ. ಹಲ್ಲುಗಳು ದೃಢವಾಗುತ್ತವೆ. ಆಲ, ಅತ್ತಿ ಮೊದಲಾದ ಕ್ಷೀರ ವೃಕ್ಷಗಳ ಕಷಾಯಕ್ಕೆ ಹಾಲನ್ನು ಸೇರಿಸಿಯಾಗಲೀ, ಭಿಲ್ಲೋದಕ (ರೋಧ್ರ) ಕಷಾಯದಿಂದಾಗಲೀ, ನೆಲ್ಲಿಕಾಯಿನ ಕಷಾಯದಿಂದಾಗಲೀ ಬಾಯನ್ನು ಮುಕ್ಕಳಿಸಿ ಕಣ್ಣುಗಳನ್ನು ತೊಳೆದುಕೊಳ್ಳಬೇಕು. ಆರೋಗ್ಯವಂತನು ತಣ್ಣೀರಿನಿಂದ ಮುಖವನ್ನೂ ಕಣ್ಣುಗಳನ್ನೂ ತೊಳೆದುಕೊಳ್ಳಬೇಕು. ಇದರಿಂದ ನೀಲಿಕೆಯೂ (ಕಪ್ಪುಮಚ್ಚೆಗಳು), ಮುಖವೊಣಗುವುದೂ, ಬೊಕ್ಕೆಗಳೂ, ಚಿಬ್ಬು, ರಕ್ತಪಿತ್ತದಿಂದುಂಟಾಗುವ ಉಪದ್ರವಗಳೂ ಕೂಡಲೇ ನಿವಾರಣೆಯಾಗುತ್ತವೆ.

ಟಿಪ್ಪಣಿ—ದಂತಕಾಷ್ಠದ ಉದ್ದವು ಬ್ರಾಹ್ಮಣನಿಗೆ ೧೨ ಅಂಗುಲವೂ ಕ್ಷತ್ರಿಯನಿಗೆ ೯ ಅಂಗುಳಿಯಷ್ಟೂ, ವೈಶ್ಯನಿಗೆ ೬ ಅಂಗುಳಿಯಷ್ಟೂ, ಶೂದ್ರನಿಗೆ ೪ ಅಂಗುಳಿಯಷ್ಟೂ ಉದ್ದವಿರಬೇಕೆಂದು ವಿಷ್ಣುವಿನ ಮತವು. ಹೆಂಗಸರಿಗೆ ೪ ಅಂಗುಳದಷ್ಟು ಉದ್ದವಿರಬೇಕೆಂದು ಗರ್ಗನಮತವು. ಕಾಷ್ಠಕ್ಕೆ ತಕ್ಕಂತೆಯೇ ಸರ್ಜಕಾಷ್ಠವನ್ನು ಹಲ್ಲಿಗೆ ಉಜ್ಜಿದರೆ ಧೈರ್ಯವೂ ಆಲದಿಂದ ಕಾಂತಿಯೂ, ಹೊಂಗೆಯಿಂದ ಯುದ್ಧದಲ್ಲಿ ಜಯಲಾಭವೂ, ಪ್ಲಕ್ಷದಿಂದ ದ್ರವ್ಯಲಾಭವೂ, ಎಲಚಿಯಿಂದ ಮಧುರಧ್ವನಿಯೂ, ಕಗ್ಗಲಿಯಿಂದ ಸೌಂದರ್ಯವೂ, ಬಿಲ್ವಪತ್ರದ ಕಾಷ್ಠದಿಂದ ಅಧಿಕಸಂಪತ್ತೂ, ಅತ್ತಿಕಾಷ್ಠದಿಂದ ವಾಕ್ಸಿದ್ಧಿಯೂ, ಬನ್ಧೂಕದಿಂದ (ನೀರುಬಾಳೆ) ಸ್ಥಿರಬುದ್ಧಿಯೂ, ಮುತ್ತುಗದಿಂದ ಸಿದ್ಧಿಯೂ, ಈಚಲಿಂದ ಸಕಲೈಶ್ವರ್ಯವೂ, ಮಾವಿನ ಕಡ್ಡಿಯಿಂದ ಆರೋಗ್ಯವೂ ಉತ್ತರಣೆ ಕಡ್ಡಿಯಿಂದ ಶ್ರವಣಶಕ್ತಿ, ಮೇಧಾಶಕ್ತಿ, ಜ್ಞಾನ, ಶುದ್ಧದೇಹವೂ, ಜ್ಞಾಪಕಶಕ್ತಿ, ಆಯುರ್ವೃದ್ಧಿ, ಸುಶೀಲತೆಯೂ, ಯಶಸ್ಸು, ಐಶ್ವರ್ಯ, ಸೌಂದರ್ಯಗಳೂ, ಎಕ್ಕದ ಕಡ್ಡಿಯಿಂದ ರೋಗನಾಶವೂ, ಮಾದಳಕಾಷ್ಠದಿಂದ ಚಿಂತಾನಾಶವೂ, ದಾಳಿಂಬೆ, ಲಕ್ಕಿ, ಕೊಡಸಿಗೆ, ಜಾಜಿ ಕಮರಕಗಳಿಂದ ದುಃಸ್ವಪ್ನನಾಶವೂ, ಮತ್ತಿಯ ಕಾಷ್ಠದಿಂದ ಆಯುಷ್ಮಂತನಾಗಿಯೂ ಪಲಿತ (ನರಕೂದಲು) ವಿಲ್ಲದವನಾಗಿಯೂ ಆಗುತ್ತಾನೆ. ಮತ್ತು ದ್ವಿಜರು ಅಷ್ಟಮಿ, ಚತುರ್ದಶಿ, ಪೂರ್ಣಿಮಾ, ಅಮಾವಾಸ್ಯೆ, ವ್ಯತೀಪಾತ, ಸಂಕ್ರಮಣಗಳ ದಿವಸಗಳಲ್ಲಿ ದಂತಕಾಷ್ಠವನ್ನು ಉಪಯೋಗಿಸಬಾರದು.

||೧೭||

ಸುಖಂ ಲಘು ನಿರೀಕ್ಷೇತ ದೃಢಂಪಶ್ಯತಿ ಚಕ್ಷುಷಾ
ಪುತಂ ಸ್ರೋತೋಽಞ್ಜನಂ ಶ್ರೇಷ್ಠಂ ವಿಶುದ್ಧಂ ಸಿನ್ಧುಸಂಭವಮ್ ||೧೮||
ದಾಹಕಣ್ಡೂಮಲಘ್ನಂ ಚ ದೃಷ್ಟಿಕ್ಲೇದರುಜಾಪಹಮ್
ಅಕ್ಷ್ಣೋರೂಪಾವಹಂ ಚೈವ ಸಹತೇ ಮಾರುತಾತಪೌ ।

ನ ನೇತ್ರರೋಗಾ ಜಾಯನ್ತೇ ತಸ್ಮಾದಞ್ಜನಮಾಚರೇತ್ ||೧೯||
ಭುಕ್ತವಾನ್ ಶಿರಸಾಸ್ನಾತಃ ಶ್ರಾನ್ತಚ್ಛರ್ದನನಾವನೈಃ |
ರಾತ್ರೌ ಜಾಗರಿತಶ್ಚಾಪಿ ನಾಞ್ಜ್ಯೋ ಜ್ವರಿತ ಏವ ಚ ||೨೦||

ಸಿಂಧುನದಿಯ ದಡದಲ್ಲಿ ದೊರೆಯುವ ಶುದ್ಧವಾದ ಸ್ರೋತೋಂಜನವನ್ನು ಕಣ್ಣುಗಳಿಗೆಚ್ಚಿದರೆ ಸುಖವಾಗಿ ಅತಿ ಸಣ್ಣ ವಸ್ತುವನ್ನೂ ಬರಿಕಣ್ಣಿನಿಂದಲೇ ಚೆನ್ನಾಗಿ ನೋಡಬಹುದು. ಉರಿತ, ನವೆ, ಕೊಳೆಗಳು ಪರಿಹಾರವಾಗುತ್ತವೆ. ಕಣ್ಣೀರು ಸೋರುವುದು ನೋವು ಕೊಳೆ (ಜಿಬರು) ಇವುಗಳು ನಿವಾರಣೆಯಾಗುತ್ತವೆ. ರೂಪ ದರ್ಶನ ಮಾಡಲು ಶಕ್ತಿಯುಂಟಾಗುತ್ತದೆ. ನೇತ್ರರೋಗಗಳೇ ಬರುವುದಿಲ್ಲ. ಆದಕಾರಣ ಕಣ್ಣಿಗೆ ಅಂಜನವನ್ನು ಹಾಕಬೇಕು. ಊಟ ಮಾಡಿದ ಮತ್ತು ತಲೆಗೆ ಸ್ನಾನಮಾಡಿದಮೇಲೆಯೂ, ಬಳಲಿರುವಾಗಲೂ, ವಮನಮಾಡಿದ ಮೇಲೆಯೂ, ನಸ್ಯಕರ್ಮ ಮಾಡಿದ ನಂತರವೂ, ರಾತ್ರಿ ಎಚ್ಚರವಾಗಿದ್ದವನೂ, ಜ್ವರಪೀಡಿತನೂ, ಅಂಜನವನ್ನು ಹಾಕಿಕೊಳ್ಳಬಾರದು.

ಕರ್ಪೂರಜಾತಿಕಕ್ಕೋಲಲವಙ್ಗಕಟುಕಾಹ್ವಯೈಃ |
ಸಚೂರ್ಣಪೂಗೈಃ ಸಹಿತಂ ಪತ್ರಂ ತಾಂಬೂಲಜಂ ಶುಭಮ್ ||೨೧||
ಮುಖವೈಶದ್ಯಸೌಗನ್ಧ್ಯಕಾನ್ತಿಸೌಷ್ಠವಕಾರಕಮ್ |
ಹನುದನ್ತಸ್ವರಮಲ ಜಿಹ್ವೇನ್ದ್ರಿಯವಿಶೋಧನಮ್ ||೨೨||
ಪ್ರಸೇಕಶಮನಂ ಹೃದ್ಯಂ ಗಳಾಮಯವಿನಾಶನಮ್ |
ಪಥ್ಯಂ ಸುಪ್ತೋತ್ಥಿತೇ ಭುಕ್ತೇ ಸ್ನಾತೇ ವಾನ್ತೇಚ ಮಾನವೇ ||೨೩||
ರಕ್ತಪಿತ್ತಕ್ಷತಕ್ಷೀಣ ತೃಷ್ಣಾ ಮೂರ್ಛಾಪರೀತಿನಾಮ್ |
ರೂಕ್ಷದುರ್ಬಲಮರ್ತ್ಯಾನಾಂ ನ ಹಿತಂ ಚಾಸ್ಯಶೋಷಿಣಾಮ್ ||೨೪||

ಪಚ್ಚಕರ್ಪೂರ, ಜಾಜಿಕಾಯಿ, ತಕ್ಕೋಲ, ಲವಂಗ, ಹಿಪ್ಪಲಿ, ಸುಣ್ಣ, ಅಡಿಕೆ, ವೀಳ್ಯದೆಲೆ ಇವು ಶುಭಕರಗಳು. ಮುಖವು ಸ್ವಚ್ಛವಾಗುತ್ತದೆ. ಸುವಾಸನೆ, ಕಾಂತಿ, ಸ್ಫುಟ ಇವು ಉಂಟಾಗುತ್ತವೆ. ದವಡೆ, ಹಲ್ಲು, ಸ್ವರ, ಮಲ, ನಾಲಿಗೆ ಇವು ಶುದ್ಧಿಯಾಗುತ್ತವೆ. ಬಾಯಿನಿಂದ ಜೊಲ್ಲು ಸುರಿಯುವುದು ನಿಂತುಬಿಡುತ್ತದೆ. ಹೃದಯಕ್ಕೆ ಬಲವನ್ನುಂಟುಮಾಡುತ್ತದೆ. ಗಂಟಲಿನ ರೋಗಗಳನ್ನು ನಿವಾರಣೆಮಾಡುತ್ತದೆ. ಮಲಗಿದ್ದು ಎಚ್ಚರಗೊಂಡಮೇಲೂ, ಭೋಜನ ಮಾಡಿದಮೇಲೂ, ಸ್ನಾನ ಮಾಡಿದಮೇಲೂ, ವಮನವಾದಮೇಲೂ ತಾಂಬೂಲವನ್ನು ಅಗಿಯುವುದು ಹಿತಕರವಾದದ್ದು. ರಕ್ತಪಿತ್ತ ರೋಗವುಳ್ಳವರೂ, ಕ್ಷತಕ್ಷೀಣರೂ, ಬಾಯಾರಿದವರೂ, ಜ್ಞಾನತಪ್ಪಿದವರೂ ರೂಕ್ಷದೇಹವುಳ್ಳವರೂ ಪಿತ್ತದೋಷಪೀಡಿತರೂ, ಮುಖವು ಒಣಗಿರುವವರೂ ತಾಂಬೂಲವನ್ನು ಸೇವನೆಮಾಡಕೂಡದು.

ಶಿರೋಗತಾಂಸ್ತಥಾ ರೋಗಾನ್ ಶಿರೋಽಭ್ಯಙ್ಗೋಽಪಕರ್ಷತಿ |
ಕೇಶಾನಾಂ ಮಾರ್ದವಂ ದೈರ್ಘ್ಯಂ ಬಹುತ್ವಂ ಸ್ನಿಗ್ಧಕೃಷ್ಣತಾಮ್ ||೨೫||

ಕರೋತಿ ಶಿರಸಸ್ತೃಪ್ತಿಂ ಸುತ್ವಕ್ತ್ವಮಪಿ ಚಾನನಮ್ ।
ಸನ್ತರ್ಪಣಂ ಚೇನ್ದ್ರಿಯಾಣಾಂ ಶಿರಸಃ ಪ್ರತಿಪೂರಣಮ್ ॥೨೬॥

ತಲೆಗೆ ತೈಲದಿಂದ ಮರ್ದನಮಾಡಿದರೆ ಶಿರೋ ರೋಗಗಳು ನಾಶವಾಗುತ್ತವೆ. ತಲೆಕೂದಲು ಮೃದುವಾಗಿಯೂ, ಉದ್ದವಾಗಿಯೂ, ಹೆಚ್ಚಾಗಿಯೂ, ಜಿಡ್ಡುಳ್ಳದಾಗಿಯೂ (ಮಿಂಚುತ್ತಲೂ), ಕಪ್ಪಾಗಿಯೂ ಆಗುತ್ತವೆ. ತಲೆಯು ತುಂಬುತ್ತದೆ. ಮುಖದ ಚರ್ಮವು ಕೋಮಲವಾಗುತ್ತದೆ. ಇಂದ್ರಿಯಗಳು ಪುಷ್ಟಿಯಾಗುತ್ತವೆ. ತಲೆಯು ದಪ್ಪವಾಗಿ ಬೆಳೆಯುತ್ತದೆ.

ಮಧುಕಂ ಕ್ಷೀರಶುಕ್ಲಾ ಚ ಸರಳಂ ದೇವದಾರು ಚ ।
ಕ್ಷುದ್ರಕಂ ಪಞ್ಚನಾಮಾನಂ ಸಮಭಾಗಾನಿ ಸಂಹರೇತ್ ॥೨೭॥
ತೇಷಾಂ ಕಲ್ಕಕಷಾಯಾಭ್ಯಾಂ ಚಕ್ರತೈಲಂ ವಿಪಾಚಯೇತ್ ।
ಸದೈವ ಶೀತಳಂ ಜನ್ತೋರ್ಮೂರ್ಧ್ನಿ ತೈಲಂ ಪ್ರದಾಪಯೇತ್ ॥೨೮॥

ಅತಿಮಧುರ, ಹಾಲು ನೆಲಗುಂಬಳ, ಸರಳದೇವದಾರು, ತುಪ್ಪದೇವದಾರು, ಲಘು ಪಂಚಮೂಲ (ಮೂರೆಲೆಹೊನ್ನೆ, ಒಂದೆಲೆಹೊನ್ನೆ, ಹೆಗ್ಗುಳ್ಳ, ನೆಲಗುಳ್ಳ, ನೆಗ್ಗಿಲು) ಇವುಗಳನ್ನು ಸಮಭಾಗದಿಂದ ಸೇರಿಸಿ ೧೦೦ ಪಲಗಳನ್ನು ೫೧೨ ಪಲ ನೀರಿನಲ್ಲಿ ಕಾಯಿಸಿ ೧೧೦ ಪಲಗಳಷ್ಟು ಕಷಾಯವನ್ನು ನಿಲ್ಲಿಸಿ ಬಟ್ಟೆಯಲ್ಲಿ ಶೋಧಿಸಿ ಮೇಲ್ಕಂಡ ದ್ರವ್ಯಗಳ ಕಲ್ಕ ೮ ಪಲಗಳಷ್ಟನ್ನೂ ೩೨ ಪಲ ಚಕ್ರತೈಲವನ್ನೂ (ಗಾಣದಿಂದಲೇ ಹಿಂಡಿ ತೆಗೆದ ಎಳ್ಳೆಣ್ಣೆ) ಸೇರಿಸಿ ತೈಲಪಾಕ ವಿಧಾನದಿಂದ ಕಾಯಿಸಿ ಸರ್ವಕಾಲದಲ್ಲೂ ತಲೆಗೆ ಅಭ್ಯಂಗಕ್ಕೆ ಉಪಯೋಗಿಸಬೇಕು.

ಕೇಶಪ್ರಸಾಧನೀ ಕೇಶ್ಯಾ ರಜೋಜನ್ತುಮಲಾಪಹಾ ।
ಹನುಮನ್ಯಾಶಿರಃಕರ್ಣಶೂಲಘ್ನಂ ಕರ್ಣಪೂರಣಮ್ ॥೨೯॥
ಅಭ್ಯಙ್ಗೋ ಮಾರ್ದವಕರಃ ಕಫವಾತನಿರೋಧನಃ ।
ಧಾತೂನಾಂ ಪುಷ್ಟಿಜನನೋ ಮೃಜಾವರ್ಣಬಲಪ್ರದಃ ॥೩೦॥

ಬಾಚಣಿಗೆಯಿಂದ ತಲೆಕೂದಲನ್ನು ಬಾಚುವುದರಿಂದ ತಲೆಕೂದಲು ಹೆಚ್ಚಾಗಿ ಬೆಳೆಯುತ್ತದೆ. ಧೂಳು, ಹೇನು, ಶೀರು ಮೊದಲಾದ ಕ್ರಿಮಿಗಳನ್ನೂ ಕೊಳೆಯನ್ನೂ ಹೋಗಲಾಡಿಸುತ್ತದೆ. ಕಿವಿಗಳಿಗೆ ತೈಲವನ್ನು ತುಂಬುವುದರಿಂದ ದವಡೆ, ಹೆಕ್ಕತ್ತು, ತಲೆ, ಕಿವಿಗಳಲ್ಲಿನ ಶೂಲೆಯು ನಿವಾರಣೆಯಾಗುತ್ತದೆ. ತೈಲದಿಂದ ಶರೀರ ಲೇಪನ ಮಾಡುವುದರಿಂದ ಚರ್ಮವು ಮೃದುವಾಗುತ್ತದೆ. ಕಫ ವಾತಗಳು ಪ್ರಕೋಪಗೊಳ್ಳುವುದಿಲ್ಲ. ಧಾತುಗಳು ಪುಷ್ಟಿಯಾಗುತ್ತವೆ. ಕೊಳೆಯು ನಿವಾರಣೆಯಾಗಿ ಚರ್ಮಕ್ಕೆ ಕಾಂತಿಯೂ ಬಲವೂ ಉಂಟಾಗುತ್ತದೆ.

ಸೇಕಃ ಶ್ರಮಘ್ನೋಽನಿಲಹೃದ್ಭಗ್ನಸನ್ಧಿಪ್ರಸಾಧಕಃ ।
ಕ್ಷತಾಗ್ನಿದಗ್ಧಾಭಿಹತವಿಘೃಷ್ಟಾನಾಂ ರುಜಾಪಹಃ ॥೩೧॥

ಜಲಸಿಕ್ತಸ್ಯ ವರ್ಧನ್ತೇ ಯಥಾ ಮೂಲೇಽಙ್ಕುರಾಸ್ತರೋಃ ।
ತಥಾ ಧಾತುವಿವೃದ್ಧಿರ್ಹಿ ಸ್ನೇಹಸಿಕ್ತಸ್ಯ ಜಾಯತೇ ॥೩೨॥
ಸಿರಾಮುಖೈರ್ರೋಮಕೂಪೈರ್ಧಮನೀಭಿಶ್ಚ ತರ್ಪಯನ್ ।
ಶರೀರಬಲಮಾಧತ್ತೇ ಯುಕ್ತಃ ಸ್ನೇಹೋಽವಗಾಹನೇ ॥೩೩॥
ತತ್ರ ಪ್ರಕೃತಿಸಾತ್ಮ್ಯರ್ತುದೇಶದೋಷವಿಕಾರವಿತ್ ।
ತೈಲಂ ಘೃತಂ ವಾ ಮತಿಮಾನ್ ಯುಞ್ಜ್ಯಾದಭ್ಯಙ್ಗಸೇಕಯೋಃ ॥೩೪॥

ಸುಖೋಷ್ಣವಾದ ಕಷಾಯದಿಂದಾಗಲೀ ಬಿಸಿನೀರಿನಿಂದಾಗಲೀ ಶರೀರದ ಸಕಲ ಅವಯವಗಳಿಗೆ ಸೇಚನೆಮಾಡುವುದರಿಂದ ಶ್ರಮವೂ ವಾತವೂ ಹರಣವಾಗುತ್ತದೆ. ಮುರಿದ ಮೂಳೆಗಳು ಸರಿಯಾಗಿ ಕೂಡಿಕೊಳ್ಳುತ್ತವೆ. ಘಾಯವಾದವರ, ಬೆಂಕಿಯಿಂದ ಸುಟ್ಟವರ, ಮೈಮೇಲೆ ಪೆಟ್ಟುಬಿದ್ದು ಚರ್ಮವು ತರೆದುಹೋಗಿರುವವರ (ಕಿತ್ತುಹೋದ) ನೋವು ನಿವಾರಣೆಯಾಗುತ್ತದೆ. ಮರದ ಬುಡಕ್ಕೆ ನೀರನ್ನು ಸುರಿದರೆ ಅದು ಚಿಗುರುವಂತೆಯೇ ಸುಖೋಷ್ಣವಾದ ಸ್ನೇಹವನ್ನು ಮೈಮೇಲೆ ನಿದಾನವಾಗಿ ನಳಿಕೆಗಳಿಂದಾಗಲೀ ಗಿಂಡಿಗಳಿಂದಾಗಲೀ ಸುರಿಯುವುದರಿಂದ ಧಾತುವೃದ್ಧಿಯುಂಟಾಗುತ್ತದೆ. ತೈಲ ತುಂಬಿದ ದೋಣಿಗಳಲ್ಲಿ ಕೂತು ದೇಹವನ್ನು ಮುಳುಗಿಸಿದರೆ ಆ ತೈಲವು ಸಿರೆಗಳ ಮುಖದಿಂದಲೂ ರೋಮಕೂಪಗಳಿಂದಲೂ ಧಮನಿಗಳ ಮೂಲಕವೂ ದೇಹವನ್ನು ತೃಪ್ತಿಗೊಳಿಸಿ ಬಲವನ್ನುಂಟುಮಾಡುತ್ತದೆ. ಆದಕಾರಣ ದೇಹಪ್ರಕೃತಿ, ಅಭ್ಯಾಸವಾಗಿರುವ ಪಥ್ಯಾಹಾರಗಳು, ಋತು, ದೇಶ, ದೋಷಪ್ರಕೋಪ, ರೋಗಸ್ಥಿತಿಗಳನ್ನು ತಿಳಿದಿರುವ ವೈದ್ಯನು ಅವರವರಿಗೆ ತಕ್ಕ ತೈಲವನ್ನಾಗಲೀ ಘೃತವನ್ನಾಗಲೀ ಅಭ್ಯಂಗ, ಸೇಚನೆಗಳಿಗೆ ಉಪಯೋಗಿಸಬೇಕು.

ಕೇವಲಂ ಹ್ಯಾಮದೋಷೇಷು ನ ಕಥಞ್ಚನ ಯೋಜಯೇತ್ ।
ತರುಣಜ್ವರ್ಯಜೀರ್ಣೀ ಚ ನಾಭ್ಯಕ್ತವ್ಯಾ ಕಥಞ್ಚನ ॥೩೫॥
ತಥಾ ವಿರಿಕ್ತೋ ವಾನ್ತಶ್ಚ ನಿರೂಢೋ ಯಶ್ಚ ಮಾನವಃ ।
ಪೂರ್ವಯೋಃ ಕೃಚ್ಛ್ರತಾವ್ಯಾಧೇರಸಾಧ್ಯತ್ವಮಥಾಪಿ ವಾ ॥೩೬॥
ಶೇಷಾಣಾಂ ತದಹಃ ಪ್ರೋಕ್ತಾ ಅಗ್ನಿಮಾಂದ್ಯಾದಯೋ ಗದಾಃ ।
ಸನ್ತರ್ಪಣಸಮುತ್ಥಾನಾಂ ರೋಗಾಣಾಂ ನೈವ ಕಾರಯೇತ್ ॥೩೭॥

ಆಮದೋಷಿಗಳಿಗೂ ತರುಣಜ್ವರಿತರಿಗೂ ಅಜೀರ್ಣಪೀಡಿತರಿಗೂ ಅಭ್ಯಂಗವನ್ನು ಮಾಡಿಸಬಾರದು. ಅದೇ ರೀತಿ ವಿರೇಚನ, ವಮನ, ನಿರೂಹಕರ್ಮಮಾಡಿಸಿಕೊಂಡಿರುವವರಿಗೂ ಕೂಡದು. ತರುಣಜ್ವರ ಮತ್ತು ಅಜೀರ್ಣಗಳಿಂದ ಪೀಡಿತರಿಗೆ ಅಭ್ಯಂಗ ಮಾಡಿಸಿದರೆ ವ್ಯಾಧಿಯು ಕಷ್ಟಸಾಧ್ಯವಾಗಿಯೂ ಅಥವಾ ಅಸಾಧ್ಯವಾಗಿಯೂ ಪರಿಣಮಿಸುತ್ತದೆ. ಉಳಿದವರಿಗೆ ಅಭ್ಯಂಗಮಾಡಿಸಿದರೆ ಆ ದಿನವೇ ಅಗ್ನಿಮಾಂದ್ಯಾದಿ

ರೋಗಗಳುಂಟಾಗುತ್ತವೆ. ಅತಿಯಾದ ಆಹಾರ ಸೇವನೆಯಿಂದ ರೋಗಪೀಡಿತರಾಗಿದ್ದರೆ ಅಂಥವರಿಗೆ ಸುತರಾಂ ಅಭ್ಯಂಗವನ್ನು ಮಾಡಿಸಲೇಬಾರದು.

ಶರೀರಾಯಾಸಜನನಂ ಕರ್ಮವ್ಯಾಯಾಮಸಂಜ್ಞಿತಮ್ ।
ತತ್‌ಕೃತ್ವಾ ತು ಸುಖಂ ದೇಹಂ ವಿಮೃದ್ನೀಯಾತ್ ಸಮನ್ತತಃ ॥೩೮॥
ಶರೀರೋಪಚಯಃ ಕಾನ್ತಿರ್ಗಾತ್ರಾಣಾಂ ಸುವಿಭಕ್ತತಾ ।
ದೀಪ್ತಾಗ್ನಿತ್ವಮನಾಲಸ್ಯಂ ಸ್ಥಿರತ್ವ ಲಾಘವಂ ಮೃಜಾ ॥೩೯॥
ಶ್ರಮಕ್ಲಮಪಿಪಾಸೋಷ್ಣಶೀತಾದೀನಾಂ ಸಹಿಷ್ಣುತಾ ।
ಆರೋಗ್ಯಂ ಚಾಪಿ ಪರಮಂ ವ್ಯಾಯಾಮಾದುಪಜಾಯತೇ ॥೪೦॥
ನ ಚಾಸ್ತಿ ಸದೃಶಂ ತೇನ ಕಿಞ್ಚಿತ್ ಸ್ಥೌಲ್ಯಾಪಕರ್ಷಣಮ್ ।
ನ ಚ ವ್ಯಾಯಾಮಿನಂ ಮರ್ತ್ಯಮರ್ದಯನ್ತ್ಯರಯೋ ಭಯಾತ್ ॥೪೧॥
ನ ಚೈನಂ ಸಹಸಾ ಕ್ರಮ್ಯ ಜರಾಸಮಧಿರೋಹತಿ ।
ಸ್ಥಿರೀ ಭವತಿ ಮಾಂಸಂ ಚ ವ್ಯಾಯಾಮಾಭಿರತಸ್ಯ ಚ ॥೪೨॥
ವ್ಯಾಯಾಮಕ್ಷುಣ್ಣ (ಸ್ವಿನ್ನ) ಗಾತ್ರಸ್ಯಪದ್ಭ್ಯಾಮುದ್ವರ್ತಿತಸ್ಯ ಚ ।
ವ್ಯಾಧಯೋ ನೋಪಸರ್ಪನ್ತಿ ಸಿಂಹಂ ಕ್ಷುದ್ರಮೃಗಾ ಇವ ॥೪೩॥
ವಯೋರೂಪಗುಣೈರ್ಹೀನಮಪಿ ಕುರ್ಯಾತ್ ಸುದರ್ಶನಮ್ ।
ವ್ಯಾಯಾಮಂ ಕುರ್ವತೋ ನಿತ್ಯಂ ವಿರುದ್ಧಮಪಿ ಭೋಜನಮ್ ॥೪೪॥
ವಿದಗ್ಧಮವಿದಗ್ಧಂ ವಾ ನಿರ್ದೋಷಂ ಪರಿಪಚ್ಯತೇ ।
ವ್ಯಾಯಾಮೋ ಹಿ ಸದಾಪಥ್ಯೋ ಬಲಿನಾಂ ಸ್ನಿಗ್ಧಭೋಜಿನಾಮ್ ॥೪೫॥
ಸ ಚ ಶೀತೇ ವಸನ್ತೇ ಚ ತೇಷಾಂ ಪಥ್ಯತಮಃ ಸ್ಮೃತಃ ।
ಸರ್ವೇಷ್ವೃತುಷ್ವಹರಹಃ ಪುಮ್ಭಿರಾತ್ಮಹಿತೈಷಿಭಿಃ ॥೪೬॥
ಬಲಸ್ಯಾರ್ಧೇನ ಕರ್ತವ್ಯೋ ವ್ಯಾಯಾಮೋ ಹನ್ತ್ಯತೋಽನ್ಯಥಾ ।
ಹೃದಿ ಸ್ಥಾನಸ್ಥಿತೋ ವಾಯುರ್ಯದಾ ವಕ್ತ್ರಂ ಪ್ರಪದ್ಯತೇ ॥೪೭॥
ವ್ಯಾಯಾಮಂ ಕುರ್ವತೋ ಜನ್ತೋಸ್ತದ್ಬಲಾರ್ಧಸ್ಯ ಲಕ್ಷಣಮ್ ।
ವಯೋಬಲಶರೀರಾಣಿ ದೇಶಕಾಲಾಶನಾನಿ ಚ ॥೪೮॥
ಸಮೀಕ್ಷ್ಯ ಕುರ್ಯಾದ್ವ್ಯಾಯಾಮಮನ್ಯಥಾ ರೋಗಮಾಪ್ನುಯಾತ್ ।
ಕ್ಷಯತೃಷ್ಣಾರುಚಿಚ್ಛರ್ದಿರಕ್ತಪಿತ್ತಭ್ರಮಕ್ಲಮಾಃ ॥೪೯॥
ಕಾಸಶೋಷಜ್ವರಶ್ವಾಸಾ ಅತಿವ್ಯಾಯಾಮಸಂಭವಾಃ ।
ರಕ್ತಪಿತ್ತೀ ಕೃಶಃ ಶೋಷೀ ಶ್ವಾಸಕಾಸಕ್ಷಯಾತುರಃ ॥೫೦॥
ಭುಕ್ತವಾನ್ ಸ್ತ್ರೀಷು ಚ ಕ್ಷೀಣೋ ಭ್ರಮಾರ್ತಶ್ಚ ವಿವರ್ಜಯೇತ್ ।

ಶರೀರಕ್ಕೆ ಆಯಾಸವನ್ನುಂಟುಮಾಡುವ ಕೆಲಸಕ್ಕೆ ವ್ಯಾಯಾಮವೆಂದು ಹೆಸರು. ವ್ಯಾಯಾಮವನ್ನು ಮಾಡಿದಮೇಲೆ ಶರೀರವನ್ನೆಲ್ಲಾ ಸುಖವಾಗುವಂತೆ ಹಿಸುಕಬೇಕು. ವ್ಯಾಯಾಮ ಮಾಡುವುದರಿಂದ ಶರೀರಾವಯವಗಳ ವೃದ್ಧಿಯೂ ಥಳಥಳ್ಯವೂ ಸ್ಪಷ್ಟತೆಯೂ ಅಗ್ನಿದೀಪ್ತಿಯೂ ಚಟುವಟಿಕೆಯೂ ಸ್ಥಿರಬುದ್ಧಿಯೂ ಲವಲವಿಕೆಯೂ ಕೊಳೆ

ಯಿಲ್ಲದೆಯೂ ದೇಹಶುದ್ಧಿ ಉಂಟಾಗುತ್ತವೆ. ಆಯಾಸ, ಇಂದ್ರಿಯದೌರ್ಬಲ್ಯ, ಬಾಯಾರಿಕೆ ಶೀತ ಉಷ್ಣಗಳು ಇವೇ ಮೊದಲಾದ ಕಷ್ಟಗಳನ್ನು ಸಹಿಸಿಕೊಳ್ಳುವಷ್ಟು ದಾರ್ಢ್ಯವೂ ಉಂಟಾಗುತ್ತದೆ. ದೇಹದಸ್ಥೌಲ್ಯವನ್ನು (ಕೊಬ್ಬುಹೆಚ್ಚಿ ಮೈದಪ್ಪವಾಗಿರುವುದು) ಕಡಮೆ ಮಾಡುವುದರಲ್ಲಿ ವ್ಯಾಯಾಮಕ್ಕೆ ಸಮಾನವಾದ ಮತ್ತೊಂದು ವಿಷಯವೂ ಇಲ್ಲ. ವ್ಯಾಯಾಮಮಾಡಿ ಬಲವುಳ್ಳ ಮನುಷ್ಯನನ್ನು ಕಂಡರೆ ಶತ್ರುಗಳು ಹೆದರುತ್ತಾರೆ. ಅವನು ಬೇಗ ಮುದುಕನಾಗುವುದಿಲ್ಲ. ವ್ಯಾಯಾಮ ಮಾಡುವುದರಲ್ಲೇ ಆಸಕ್ತನಾದವನ ಮಾಂಸಖಂಡಗಳು ಸ್ಥಿರವಾಗಿರುತ್ತವೆ. ಸಡಿಲವಾಗಿರದೆ ಬಿಗಿಯಾಗಿರುತ್ತವೆ. ವ್ಯಾಯಾಮಮಾಡಿ ಬಳಲಿದವನ ದೇಹವನ್ನು ಕಾಲುಗಳಿಂದ ತುಳಿವಾಗಲೀ ಕೈಗಳಿಂದ ಮೆತ್ತಗೆ ಹಿಸುಕಿಯಾಗಲೀ ಉಪಚರಿಸಿಕೊಂಡರೆ ಕ್ಷುದ್ರಜಂತುಗಳು ಸಿಂಹದ ಹತ್ತಿರ ಹೋಗಲು ಹೆದರಿಕೊಳ್ಳುವಂತೆಯೇ ರೋಗಗಳು ಸಂಭವಿಸುವುದಿಲ್ಲ. ವ್ಯಾಯಾಮ ಮಾಡತಕ್ಕವನು ಹೀನಗುಣವುಳ್ಳವನಾದರೂ ಸುಂದರ ಪುರುಷನಾಗುತ್ತಾನೆ. ವಿರುದ್ಧವಾದ ಅರ್ಥಬೆಂದಿರುವ ಅಥವಾ ಪೂರ್ತಾಬೆಂದಿರುವ ಆಹಾರವು ದೋಷವಿಲ್ಲದಂತೆ ಪಾಕವಾಗುತ್ತದೆ. ಬಲಿಷ್ಠರಾಗಿ ಸ್ನಿಗ್ಧವಾದ ಹಾಲು ತುಪ್ಪಗಳನ್ನು ಭೋಜನಮಾಡುವವರಿಗೆ ವ್ಯಾಯಾಮವು ಹಿತಕರವಾದದ್ದು. ಮತ್ತು ಶೀತಕಾಲ ವಸಂತಕಾಲಗಳಲ್ಲಿ ಅತ್ಯಂತ ಹಿತಕರವಾದದ್ದು. ತಮಗೆ ಹಿತವಾಗಬೇಕೆಂಬ ಅಭಿಪ್ರಾಯವುಳ್ಳವರು ಎಲ್ಲಾ ಋತುಗಳಲ್ಲೂ ತಮ್ಮ ಶಕ್ತಿಯಲ್ಲಿ ಅರ್ಧದಷ್ಟು ಮಟ್ಟಿನ ವ್ಯಾಯಾಮವನ್ನು ಮಾಡಬೇಕು. ಅದಕ್ಕೆ ಹೆಚ್ಚಾದರೆ ಕೊಂದುಬಿಡುತ್ತದೆ. ಎದೆಯಲ್ಲಿ ಸ್ವಸ್ಥಾನದಲ್ಲಿರುವ ವಾಯುವು ಬಾಯಿನ ಮೂಲಕವಾಗಿ ಹೊರಕ್ಕೆ ಬಂದರೆ ಅದು ಅವನ ಅರ್ಧಬಲವೆಂದು ತಿಳಿಯಬೇಕು. ವಯಸ್ಸು, ದೇಹಬಲ, ಶರೀರದ ಕೃಶತೆ ಮತ್ತು ಸ್ಥೌಲ್ಯತೆಗಳನ್ನು ಪರಿಶೀಲಿಸಿ ದೇಶ, ಕಾಲ, ಆಹಾರ ಮೊದಲಾದುವುಗಳನ್ನು ವಿಚಾರಮಾಡಿಯೇ ವ್ಯಾಯಾಮದ ಮಟ್ಟವನ್ನು ನಿರ್ಧರಿಸಬೇಕು. ಇದಕ್ಕೆ ಮೀರಿ ವ್ಯಾಯಾಮ ಮಾಡಿದರೆ ರೋಗವುಂಟಾಗುತ್ತದೆ. ಅತಿಯಾಗಿ ವ್ಯಾಯಾಮ ಮಾಡಿದರೆ ಕ್ಷಯ, ಬಾಯಾರಿಕೆ, ಅರೋಚಕತೆ, ವಮನ, ರಕ್ತಪಿತ್ತ, ತಲೆತಿರುಗುವಿಕೆ, ಇಂದ್ರಿಯಗಳ ದೌರ್ಬಲ್ಯ ಇವುಗಳುಂಟಾಗುತ್ತವೆ. ರಕ್ತಪಿತ್ತರೋಗಿಯೂ, ಕ್ಷೀಣದೇಹವುಳ್ಳವನೂ, ರಾಜಯಕ್ಷ್ಮರೋಗಿಯೂ ಉಬ್ಬಸ, ಕೆಮ್ಮು, ಧಾತುಕ್ಷೀಣತೆಯುಳ್ಳವನೂ, ಊಟಮಾಡಿದಮೇಲೂ ಸ್ತ್ರೀಸಂಗದಿಂದ ಕ್ಷೀಣಹೊಂದಿದ ಶರೀರವುಳ್ಳವನೂ ತಲೆತಿರುಗುವವನೂ ವ್ಯಾಯಾಮವನ್ನು ತ್ಯಜಿಸಬೇಕು.

ಉದ್ವರ್ತನಂ ವಾತಹರಂ ಕಫಮೇದೋವಿಲಾಪನಮ್ ||೫೧||
ಸ್ಥಿರೀಕರಣಮಙ್ಗಾನಾಂ ತ್ವಕ್‌ಪ್ರಸಾದಕರಂ ಪರಮ್ |

ಮೈಮೇಲಿನ ಕೊಳೆಯನ್ನೂ ಸ್ನೇಹವನ್ನೂ ನಿವಾರಣೆ ಮಾಡುವುದಕ್ಕಾಗಿ ತಯಾರಿಸಿರುವ ಉದ್ವರ್ತನ ಚೂರ್ಣದಿಂದ ಶರೀರವನ್ನು ತಿಕ್ಕಿದರೆ ವಾತವು ನಿವಾರಣೆಯಾಗು

ತ್ತದೆ. ಕಫವೂ ಕೊಬ್ಬೂ ಕರಗುತ್ತವೆ. ಅವಯವಗಳು ಭದ್ರವಾಗುತ್ತವೆ. ಚರ್ಮಕ್ಕೆ ಹೆಚ್ಚು ಥಾಳಥಾಳ್ಯ (ಮೆರಗು, ಹೊಳಪು) ವುಂಟಾಗುತ್ತದೆ.

ಸಿರಾಮುಖವಿವಿಕ್ತತ್ವಂ ತ್ವಕ್‌ಸ್ಥಸ್ಯಾಗ್ನೇಶ್ಚ ತೇಜನಮ್ ||೫೨||
ಉದ್ಘರ್ಷಣೋತ್ಸಾದನಾಭ್ಯಾಂ ಜಾಯೇಯಾತಾಮಸಂಶಯಮ್ |
ಉತ್ಸಾದನಾದ್ಭವೇತ್ ಸ್ತ್ರೀಣಾಂ ವಿಶೇಷಾತ್ ಕಾನ್ತಿಮದ್ವಪುಃ ||೫೩||
ಪ್ರಹರ್ಷಸೌಭಾಗ್ಯಮೃಜಾಲಾಘವಾದಿ ಗುಣಾನ್ವಿತಮ್ |
ಉದ್ಘರ್ಷಣಂ ತು ವಿಜ್ಞೇಯಂ ಕಣ್ಡೂಕೋಠಾನಿಲಾಪಹಮ್ ||೫೪||
ಊರ್ವೋಃ ಸಂಜನಯತ್ಯಾಶು ಫೇನಕಃ ಸ್ಥೈರ್ಯಲಾಘವೇ |
ಕಣ್ಡೂಕೋಠಾನಿಲಸ್ತಮ್ಭ ಮಲರೋಗಾಪಹಶ್ಚ ಸಃ ||೫೫||
ತೇಜನಂ ತ್ವಗ್ಗತಸ್ಯಾಗ್ನೇಃ ಸಿರಾಮುಖವಿರೇಚನಮ್ |
ಉದ್ಘರ್ಷಣಂ ತ್ವಿಷ್ಟಿಕಯಾ ಕಣ್ಡೂಕೋಠವಿನಾಶನಮ್ ||೫೬||

ಔಷಧ ಚೂರ್ಣಗಳಿಂದ ಶರೀರದ ಜಿಡ್ಡನ್ನು ತಿಕ್ಕುವುದು ಉದ್ಘರ್ಷಣವು. ಸ್ನೇಹ ಮಿಶ್ರಮಾಡಿದ ಕಲ್ಕದಿಂದ ಉಜ್ಜುವುದು ಉತ್ಸಾದನವು. ಇವುಗಳಿಂದ ಖಂಡಿತ ವಾಗಿಯೂ ಕ್ರಮವಾಗಿ ಸಿರೆಗಳ ಮುಖವು ಅಗಲವಾಗುವುದೂ ಚರ್ಮದಲ್ಲಿರುವ ಭ್ರಾಜ ಕಾಗ್ನಿಯ ವೃದ್ಧಿಯೂ ಉಂಟಾಗುತ್ತವೆ. ಸ್ತ್ರೀಯರಿಗೆ ಉತ್ಸಾದನೆಯಿಂದ ವಿಶೇಷವಾಗಿ ಶರೀರದಲ್ಲಿ ಹೊಳಪು ಉಂಟಾಗುತ್ತದೆ. ಉತ್ತೇಜನೆಯೂ (ಕಾಮವಿಕಾರವೂ, ಸೌಂದ ರ್ಯವೂ, ಥಾಳಥಾಳ್ಯವೂ (ಹೊಳಪೂ), ಲಘುತ್ವವೂ (ಮೈ ಹಗುರವಾಗುವುದು) ಇವೇ ಮೊದಲಾದ ಗುಣಗಳುಂಟಾಗುತ್ತವೆ. ಉದ್ಘರ್ಷಣದಿಂದ ನವೆ, ಬೊಕ್ಕೆ (ಪಿಟಿಕೆ)ಗಳು, ವಾತದೋಷಗಳು ನಿವಾರಣೆಯಾಗುತ್ತವೆ. ಸಮುದ್ರದ ನೊರೆಯಿಂದ ಉಜ್ಜಿದರೆ ಬೇಗನೆ ತೊಡೆಗಳು ಸ್ಥಿರವಾಗಿ ಹಗುರವಾಗುತ್ತವೆ. ನವೆ, ಪಿಟಿಕೆಗಳು, ವಾತದಿಂದ ಅಂಗ ಗಳು ಬಿಗಿದುಹಿಡಿದಿರುವುದು, ಮಲ (ಕೊಳೆ), ನೋವು ಇವುಗಳು ನಿವಾರಣೆಯಾಗು ತ್ತವೆ. ಇಟ್ಟಿಗೆಯಿಂದ ಉಜ್ಜಿದರೆ ಚರ್ಮದಲ್ಲಿರುವ ಭ್ರಾಜಕವೆಂಬ ಅಗ್ನಿಯು ದೀಪನ ವಾಗುತ್ತದೆ. ಸಿರಾಮುಖಗಳು ಮುಚ್ಚಿದ್ದರೆ ಅವನ್ನು ತೆರೆಯುವಂತೆ ಮಾಡಿ ಸಲೀಸಾಗಿ ದ್ರವವನ್ನು ಸ್ರಾವವಾಗುವಂತೆ ಮಾಡುತ್ತದೆ. ಮತ್ತು ನವೆಯನ್ನೂ ಪಿಡಿಕೆಗಳನ್ನೂ (ಪಿತ್ತದ ಗಂಧೆಗಳು, ಬೊಕ್ಕೆಗಳು) ನಾಶಮಾಡುತ್ತದೆ.

ನಿದ್ರಾದಾಹಶ್ರಮಹರಂ ಸ್ವೇದಕಣ್ಡೂತೃಷಾಪಹಮ್ |
ಹೃದ್ಯಂ ಮಲಹರಂ ಶ್ರೇಷ್ಠಂ ಸರ್ವೇನ್ದ್ರಿಯವಿಶೋಧನಮ್ ||೫೭||
ತನ್ದ್ರಾಪಾಪೋಪಶಮನಂ ತುಷ್ಟಿದಂ ಪುಂಸ್ತ್ವವರ್ಧನಮ್ |
ರಕ್ತಪ್ರಸಾದನಂ ಚಾಪಿ ಸ್ನಾನಮಗ್ನೇಶ್ಚ ದೀಪನಮ್ ||೫೮||
ಉಷ್ಣೇನ ಶಿರಸಃ ಸ್ನಾನಮಹಿತಂ ಚಕ್ಷುಷಃ ಸದಾ |
ಶೀತೇನ ಶಿರಸಃ ಸ್ನಾನಂ ಚಕ್ಷುಷ್ಯಮಿತಿ ನಿರ್ದಿಶೇತ್ ||೫೯||
ಶ್ಲೇಷ್ಮಮಾರುತಕೋಪೇ ತು ಜ್ಞಾತ್ವಾ ವ್ಯಾಧಿಬಲಾಬಲಮ್ |

ಕಾಮಮುಷ್ಣಂ ಶಿರಃಸ್ನಾನಂ ಭೈಷಜ್ಯಾರ್ಥಂ ಸಮಾಚರೇತ್ ||೬೦||
ಅತಿಶೀತಾಮ್ಬು ಶೀತೇ ಚ ಶ್ಲೇಷ್ಮಮಾರುತಕೋಪನಮ್ |
ಅತ್ಯುಷ್ಣಮುಷ್ಣಕಾಲೇ ಚ ಪಿತ್ತಶೋಣಿತವರ್ಧನಮ್ ||೬೧||
ತಚ್ಚಾತಿಸಾರ ಜ್ವರಿತಕರ್ಣಶೂಲಾನಿಲಾರ್ತಿಷು |
ಆಧ್ಮಾನಾರೋಚಕಾಜೀರ್ಣಭುಕ್ತವತ್ಸು ಚ ಗರ್ಹಿತಮ್ ||೬೨||
ಸೌಭಾಗ್ಯದಂ ವರ್ಣಕರಂ ಪ್ರೀತ್ಯೋಜೋಬಲವರ್ಧನಮ್ |
ಸ್ವೇದದೌರ್ಗನ್ಧ್ಯವೈವರ್ಣ್ಯ ಶ್ರಮಘ್ನಮನುಲೇಪನಮ್ ||೬೩||
ಸ್ನಾನಂ ಯೇಷಾಂ ನಿಷಿದ್ಧಂ ತು ತೇಷಾಮಪ್ಯನುಲೇಪನಮ್ |

ಸ್ನಾನದಿಂದ ನಿದ್ರೆ, ಉರಿತ, ಆಯಾಸ, ಬೆವರು, ನವೆ, ಬಾಯಾರಿಕೆ ಇವುಗಳು ನಿವಾರಿಸಲ್ಪಡುತ್ತವೆ. ಹೃದಯಕ್ಕೆ ಬಲವುಂಟಾಗುತ್ತದೆ. ಕೊಳೆಯನ್ನೂ ಎಲ್ಲಾ ಇಂದ್ರಿಯಗಳನ್ನೂ ಶುದ್ಧಿಗೊಳಿಸುತ್ತದೆ. ತೂಕಡಿಕೆ, ಪಾಪಗಳು ಶಮನವಾಗಿ ಮನಸ್ಸಿಗೆ ತೃಪ್ತಿಯುಂಟಾಗುತ್ತದೆ ಪುಂಸತ್ವ (ಶುಕ್ರವೃದ್ಧಿ) ವು ಹೆಚ್ಚುತ್ತದೆ. ರಕ್ತದೋಷವು ಶಮನಗೊಳ್ಳುತ್ತದೆ, ಅಗ್ನಿದೀಪ್ತಿಕರವು. ಸದಾ ಬಿಸಿನೀರಿನಿಂದ ತಲೆಗೆ ಸ್ನಾನಮಾಡಿದರೆ ಕಣ್ಣಿಗೆ ಕೆಡುಕಾಗುತ್ತದೆಂದು ತಿಳಿಯಬೇಕು. ಶ್ಲೇಷ್ಮ ವಾತಗಳು ಪ್ರಕೋಪವಾಗಿರುವಾಗ ರೋಗದ ಬಲಾಬಲಗಳನ್ನು ತಿಳಿದು ಚಿಕಿತ್ಸೆಯ ಸೌಕರ್ಯಕ್ಕಾಗಿ ಬಿಸಿನೀರಿನಿಂದ ಬೇಕಾದಷ್ಟು ಸ್ನಾನಮಾಡಬಹುದು. ಶೀತಕಾಲದಲ್ಲಿ ಅತಿ ತಣ್ಣಗಿರುವ ನೀರಿನಿಂದ ಸ್ನಾನ ಮಾಡಿದರೆ ಕಫ ವಾತಗಳು ಪ್ರಕೋಪವಾಗುತ್ತವೆ. ಬೇಸಿಗೆಯಲ್ಲಿ ಅತಿ ಬಿಸಿಯಾದ ನೀರಿನಿಂದ ಸ್ನಾನಮಾಡಿದರೆ ಪಿತ್ತರಕ್ತಗಳು ವೃದ್ಧಿಯಾಗುತ್ತವೆ. ಅತಿಸಾರ, ಜ್ವರ, ಕಿವಿ ಶೂಲೆ, ವಾತರೋಗ, ಹೊಟ್ಟೆಯುಬ್ಬರ, ಅರೋಚಕತೆಗಳಲ್ಲೂ, ಅಜೀರ್ಣ ರೋಗಿಗಳೂ ಭೋಜನವಾದ ಮೇಲೆಯೂ ಸ್ನಾನಮಾಡುವುದು ನಿಂದಿತವಾದದ್ದು. ಸುಗಂಧಲೇಪನವು ಸೌಂದರ್ಯವನ್ನೂ ಚರ್ಮಕ್ಕೆ ಬಣ್ಣವನ್ನೂ ಉಂಟುಮಾಡುತ್ತದೆ. ಪ್ರೀತಿಯನ್ನೂ ಓಜಸ್ಸನ್ನೂ ಬಲವನ್ನೂ ಹೆಚ್ಚಿಸುತ್ತದೆ. ಮೈಬೆವರು, ದುರ್ವಾಸನೆ, ವರ್ಣವಿಕಾರ, ಆಯಾಸಗಳನ್ನು ನಿವಾರಣೆಮಾಡುತ್ತದೆ. ಸ್ನಾನವು ಯಾರಿಗೆ ನಿಷೇಧವೆಂದು ಹೇಳಿರುತ್ತದೋ ಅವರಿಗೆ ಅನುಲೇಪನವೂ ಅಹಿತವಾದದ್ದು.

ರಕ್ಷೋಘ್ನಮಥ ಚೌಜಸ್ಯಂ ಸೌಭಾಗ್ಯಕರಮುತ್ತಮಮ್ ||೬೪||
ಸುಮನೋಽಮ್ಬರರತ್ನಾನಾಂ ಧಾರಣಂಪ್ರೀತಿವರ್ಧನಮ್ |
ಮುಖಾಲೇಪಾದ್ದೃಢಂ ಚಕ್ಷುಃ ಪೀನಗಣ್ಡಂ ತಥಾನನಮ್ ||೬೫||
ಅವ್ಯಙ್ಗಪೀಡಂ ಕಾನ್ತಂ ಭವತ್ಯಮ್ಬುಜಸನ್ನಿಭಮ್ |

ಹೂವುಗಳಮಾಲಿಕೆ, ವಸ್ತ್ರಗಳು, ರತ್ನದಹಾರ ಇವುಗಳನ್ನು ಧರಿಸಿದರೆ ರಕ್ಷೋಘ್ನವು (ಕ್ರಿಮಿಕೀಟಗಳ ಬಾಧೆ ತಪ್ಪುತ್ತದೆ) ಓಜಸ್ಸು ಹೆಚ್ಚುತ್ತದೆ. ಸೌಂದರ್ಯ ವೃದ್ಧಿಗೆ ಶ್ರೇಷ್ಠವಾದದ್ದು. ಮುಖಾಲೇಪನದಿಂದ ದೃಢವಾದ ಕಣ್ಣಿನ ಬಲವೂ ಉಬ್ಬಿದ ಕೆನ್ನೆ

ಗಳೂ ಮುಖವು ದುಂಡಾಗುವುದೂ ಬಂಗು ಪಿಡಿಕೆಗಳಿಲ್ಲದೆ ಮುಖವು ಸುಂದರವಾಗಿಯೂ ತಾವರೆಹೂವಿಗೆ ಸಮಾನವಾದ ಕಾಂತಿಯುಳ್ಳದೂ ಆಗುತ್ತದೆ (ಮುಖವುಮನೋಹರವಾಗಿ ಕಾಣುತ್ತದೆ).

ಪಕ್ಷ್ಮಲಂ ವಿಶದಂ ಕಾನ್ತಮಮಲೋಜ್ಜ್ವಲಮಣ್ಡಲಮ್ ||೬೬||
ನೇತ್ರಮಞ್ಜನ ಸಂಯೋಗಾದ್ಭವೇಚ್ಚಾಮಲತಾರಕಮ್ ।
ಯಶಸ್ಯಂ ಸ್ವರ್ಗ್ಯಮಾಯುಷ್ಯಂ ಧನಧಾನ್ಯವಿವರ್ಧನಮ್ ||೬೭||
ದೇವತಾತಿಥಿವಿಪ್ರಾಣಾಂ ಪೂಜನಂ ಗೋತ್ರವರ್ಧನಮ್ ।

ಕಣ್ಣುಗಳಿಗೆ ಅಂಜನವನ್ನು ಹಾಕುವುದರಿಂದ ಕಣ್ಣಿನ ರೆಪ್ಪೆಗಳ ತುದಿಯು ಕೂದಲು ಮೃದುವಾಗುತ್ತದೆ. ಕಣ್ಣುಗುಡ್ಡೆಗಳು ಸ್ವಚ್ಛವಾಗಿ ಮನೋಹರಗಳಾಗುತ್ತವೆ. ದೃಷ್ಟಿ ಮಂಡಲವು ಮಲರಹಿತವಾಗಿಯೂ ಹೊಳೆಯುತ್ತಲೂ ಇರುತ್ತದೆ. ಕಣ್ಣುಗುಡ್ಡೆಗಳು ಸ್ವಚ್ಛವಾಗುತ್ತವೆ. ದೇವತೆ, ಅತಿಥಿ, ಬ್ರಾಹ್ಮಣರನ್ನು ಪೂಜಿಸಿದರೆ ಯಶಸ್ಸು (ಖ್ಯಾತಿಯೂ) ಸ್ವರ್ಗಲೋಕಪ್ರಾಪ್ತಿಯೂ, ಆಯುರ್ವೃದ್ಧಿಯೂ, ಧನಧಾನ್ಯಗಳ ವೃದ್ಧಿಯೂ, ವಂಶ ವೃದ್ಧಿಯೂ ಉಂಟಾಗುತ್ತದೆ.

ಆಹಾರಃ ಪ್ರೀಣನಃ ಸದ್ಯೋ ಬಲಕೃದ್ದೇಹಧಾರಕಃ ||೬೮||
ಆಯುಸ್ತೇಜಃ ಸಮುತ್ಸಾಹಸ್ಮೃತ್ಯೋಜೋಽಗ್ನಿ ವಿವರ್ಧನಃ ।
ಪಾದಪ್ರಕ್ಷಾಳನಂ ಪಾದಮಲರೋಗಶ್ರಮಾಪಹಮ್ ||೬೯||
ಚಕ್ಷುಃಪ್ರಸಾದನಂ ವೃಷ್ಯಂ ರಕ್ಷೋಘ್ನಂ ಪ್ರೀತಿವರ್ಧನಮ್ ।
ನಿದ್ರಾಕರೋ ದೇಹಸುಖಶ್ಚಕ್ಷುಷ್ಯಃ ಶ್ರಮಸುಪ್ತಿನುತ್ ||೭೦||
ಪಾದತ್ವಙ್ಮೃದುಕಾರೀ ಚ ಪಾದಾಭ್ಯಙ್ಗಃ ಸದಾಹಿತಃ ।

ಆಹಾರ ಸೇವನೆಯಿಂದ ಮನಸ್ಸಿಗೆ ತೃಪ್ತಿಯೂ, ದೇಹಕ್ಕೆ ಬಲವೂ, ಆಯಸ್ಸು, ಕಾಂತಿ, ಉತ್ಸಾಹ (ಯಾವ ಕೆಲಸವನ್ನಾಗಲೀ ಮಾಡಬೇಕೆಂಬ ಆಶೆ) ಜ್ಞಾಪಕಶಕ್ತಿ, ಓಜಸ್ಸು (ಶುಕ್ರವೃದ್ಧಿ) ಜಠರಾಗ್ನಿಶಕ್ತಿ ಇವು ವೃದ್ಧಿಯಾಗುತ್ತವೆ. ಕಾಲುಗಳನ್ನು ಚೊಕ್ಕಟವಾಗಿ ತೊಳೆದುಕೊಳ್ಳುವುದರಿಂದ ಕಾಲಿನ ಕೊಳೆಯೂ, ಮಲವೃದ್ಧಿಯೂ ನಿವಾರಣೆಯಾಗಿ ಆಯುರ್ವೃದ್ಧಿಯೂ, ನೋವೂ, ಶ್ರಮ ಕಣ್ಣಿನ ರೋಗಗಳೂ ನಿವಾರಣೆ ಯಾಗುತ್ತವೆ. ವೃಷ್ಯವು ಕ್ರಿಮಿಗಳನ್ನು ನಾಶಪಡಿಸುತ್ತದೆ, ಪ್ರೀತಿಯನ್ನುಂಟುಮಾಡು ತ್ತದೆ, ಅಂಗಾಲುಗಳಿಗೆ ತೈಲಮರ್ದನೆಮಾಡಿದರೆ ನಿದ್ರೆಬರುತ್ತದೆ, ದೇಹಕ್ಕೆ ಸುಖವುಂಟಾಗು ತ್ತವೆ ಕಣ್ಣಿಗೆ ಹಿತಕರವು, ಆಯಾಸವೂ, ಸ್ಪರ್ಶಹಾನಿಯೂ ನಿವಾರಣೆಯಾಗುತ್ತವೆ. ಕಾಲುಗಳ ಚರ್ಮವು ಮೆತ್ತಗಾಗುತ್ತದೆ. ಆದಕಾರಣ ಸರ್ವದಾ ಹಿತಕರವಾದದ್ದು.

ಪಾದರೋಗಹರಂ ವೃಷ್ಯಂ ರಕ್ಷೋಘ್ನಂ ಪ್ರೀತಿವರ್ಧನಮ್ ||೭೧||
ಸುಖಪ್ರಚಾರಮೌಜಸ್ಯಂ ಸದಾ ಪಾದತ್ರಧಾರಣಮ್ ।
ಅನಾರೋಗ್ಯಮನಾಯುಷ್ಯಂ ಚಕ್ಷುಷೋರುಪಘಾತಕೃತ್ ||೭೨||

ಪಾದಾಭ್ಯಾಮನುಪಾನದ್ಭ್ಯಾಂ ಸದಾ ಚಂಕ್ರಮಣಂ ನೃಣಾಮ್ ।
ಪಾಪೋಪಶಮನಂ ಕೇಶನಖರೋಮಾಪಮಾರ್ಜನಮ್ ॥೭೩॥
ಹರ್ಷಲಾಘವಸೌಭಾಗ್ಯಕರ ಮುತ್ಸಾಹವರ್ಧನಮ್ ।
ಬಾಣವಾರಂ ಮೃಜಾವರ್ಣತೇಜೋಬಲವಿವರ್ಧನಮ್ ॥೭೪॥

ಪಾದರಕ್ಷೆಯನ್ನು ಸದಾ ಧರಿಸುವುದರಿಂದ ಪಾದರೋಗಗಳು ನಿವಾರಣೆಯಾಗುತ್ತವೆ. ಶುಕ್ರವೃದ್ಧಿಯುಂಟಾಗುತ್ತದೆ, ಕ್ರಿಮಿಹರವು, ಪ್ರೀತಿಕರವು (ಯಾವ ಕೆಲಸ ಮಾಡುವುದಕ್ಕೂ ಮನಸ್ಸಿಗೆ ಉಲ್ಲಾಸವುಂಟಾಗುತ್ತದೆ. ಸುಖವಾಗಿ ಸಂಚರಿಸಬಹುದು. ಓಜೋ ವೃದ್ಧಿಯಾಗುತ್ತದೆ. ಮನುಷ್ಯನು ಪಾದರಕ್ಷೆಯಿಲ್ಲದೆ ಸದಾ ಕಾಲದಲ್ಲೂ ಬರಿಯ ಕಾಲಿನಲ್ಲೇ ಸಂಚಾರಮಾಡುತ್ತಿದ್ದರೆ ಅನಾರೋಗ್ಯವೂ ಆಯುಃ ಕ್ಷೀಣತೆಯೂ ಕಣ್ಣಿಗೆ ಬಾಧೆಯೂ ಸಂಭವಿಸುತ್ತದೆ. ತಲೆ ಬಾಚಿಕೊಳ್ಳುವುದು, ಉಗುರು ಗಡ್ಡಮೀಸೆಗಳನ್ನು ಆಗಾಗ ಬೋಳಿಸುವುದು ಇವುಗಳಿಂದ ಪಾಪಹರವಾಗುತ್ತದೆ. ಮೈಗೆ ಕಂಚುಕವನ್ನು (ಅಂಗಿ, ಜುಬ್ಬ ಮೊದಲಾದ ಉಡುಪು) ಧರಿಸುವುದರಿಂದ ಸಂತೋಷ, ಮೈ ಹಗುರತೆ, ಸೌಂದರ್ಯ, ಉತ್ಸಾಹಗಳು (ಕೆಲಸಮಾಡಲು ಹೆಚ್ಚು ಆಸಕ್ತಿ) ಹೆಚ್ಚುತ್ತವೆ. ದೇಹಶುದ್ಧಿ, ಕಾಂತಿ, ತೇಜಸ್ಸು ಮುಖದಲ್ಲಿ ಕಾಣಬರುವ ಪ್ರಭೆ) ಬಲ ಇವುಗಳು ಹೆಚ್ಚಾಗುತ್ತವೆ. (ಶರೀರದಮೇಲೆ ಬಿಸಿಲಿನ ತಾಪವೂ ವಾಯುವಿನ ಬಾಧೆಯೂ ಮಳೆಹನಿ ಬೀಳುವುದೂ ಸೊಳ್ಳೆ ನೊಣಗಳ ಬಾಧೆಯೂ ಇಲ್ಲದಂತಾಗುತ್ತದೆ.)

ಪವಿತ್ರಂ ಕೇಶ್ಯಮುಷ್ಣೀಷಂ ವಾತಾತಪರಜೋಽಪಹಮ್ ।
ವರ್ಷಾನಿಲರಜೋಘರ್ಮಹಿಮಾದೀನಾಂ ನಿವಾರಣಮ್ ॥೭೫॥
ವರ್ಣ್ಯಂ ಚಕ್ಷುಷ್ಯಮೌಜಸ್ಯಂ ಶಙ್ಕರಂ ಛತ್ರಧಾರಣಮ್ ।
ಶುನಃ ಸರೀಸೃಪವ್ಯಾಳವಿಷಾಣಿಭ್ಯೋ ಭಯಾಪಹಮ್ ॥೭೬॥
ಶ್ರಮಸ್ಖಲನದೋಷಘ್ನಂ ಸ್ಥವಿರೇ ಚ ಪ್ರಶಸ್ಯತೇ ।
ಸತ್ತ್ವೋತ್ಸಾಹಬಲಸ್ಥೈರ್ಯ ಧೈರ್ಯವೀರ್ಯವಿವರ್ಧನಮ್ ॥೭೭॥
ಅವಷ್ಟಂಭಕರಂ ಚಾಪಿ ಭಯಘ್ನಂ ದಣ್ಡಧಾರಣಮ್ ।

ತಲೆಗೆ ರುಮಾಲು, ಪೇಟ ಮೊದಲಾದುವನ್ನು (ಶಿರೋವೇಷ್ಟಗಳು) ಧರಿಸುವುದರಿಂದ ತಲೆಗೆ ಕೊಳೆ ಸೇರದೆ ಶುಚಿಯಾಗಿರುತ್ತದೆ. ತಲೆಕೂದಲಿಗೆ ಹಿತಕರವು. ತಲೆಯ ಮೇಲೆ ಕೆಟ್ಟಗಾಳಿ ಬೀಸುವುದನ್ನೂ ಬಿಸಿಲು ಕಾಯುವುದನ್ನೂ ಧೂಳು ಮೊದಲಾದುವು ಬೀಳುವುದನ್ನೂ ತಡೆದುಬಿಡುತ್ತದೆ. ಛತ್ರಿಯನ್ನು ಹಿಡಿದು ಸಂಚರಿಸುವುದರಿಂದ ಮಳೆ, ಗಾಳಿ, ಧೂಳು, ಬಿಸಿಲು, ಮಂಜುಗಳ ಬಾಧೆಯು ಉಂಟಾಗುವುದಿಲ್ಲ. ಶರೀರದಬಣ್ಣ ಹೆಚ್ಚುತ್ತದೆ, ಕಣ್ಣಿಗೆ ಹಿತಕರವು, ಓಜಸ್ಸು ವೃದ್ಧಿಯಾಗುತ್ತದೆ, ಸುಖವುಂಟಾಗುತ್ತದೆ. ಕೈಯಲ್ಲಿ ದೊಣ್ಣೆಯನ್ನು ಹಿಡಿದು ಸಂಚರಿಸುವುದರಿಂದ ಹುಚ್ಚುನಾಯಿ, ದುಷ್ಟನಾಯಿ ಕೃಷ್ಣಸರ್ಪ, ಸಿಂಹ, ಹುಲಿ, ಮೊದಲಾದ ಕ್ಷುದ್ರಪ್ರಾಣಿಗಳ ಮತ್ತು ಎತ್ತು ಮೊದಲಾದ

ಕೊಂಬುಳ್ಳ ಪ್ರಾಣಿಗಳ ಭಯವು ನಿವಾರಣೆಯಾಗುತ್ತದೆ. ಶ್ರಮವೂ, ಬೀಳುವ ಹೆದರಿಕೆಯೂ ಉಂಟಾಗುವುದಿಲ್ಲ. ಮುಖ್ಯವಾಗಿ ಮುದುಕರಿಗೆ ಹಿತಕರವಾದದ್ದು. ಸತ್ವಗುಣವೂ, ಉತ್ಸಾಹವೂ, (ಕೆಲಸಮಾಡಲು ಕುತೂಹಲ), ದೇಹಶಕ್ತಿ, ಸ್ಥಿರಬುದ್ಧಿ, ಧೈರ್ಯ, ಪರಾಕ್ರಮಗಳೂ ಹೆಚ್ಚಾಗುತ್ತವೆ, ಭಯನಿವಾರಣೆಯಾಗುತ್ತದೆ.

ಆಸ್ಯಾ ವರ್ಣಕಫಸ್ಥೌಲ್ಯ ಸೌಕುಮಾರ್ಯಕರೀ ಸುಖಾ ||೭೮||
ಅಧ್ವಾವರ್ಣಕಫಸ್ಥೌಲ್ಯಸೌಕುಮಾರ್ಯ ವಿನಾಶನಃ ।
ಅತ್ಯಧ್ವಾ ವಿಪರೀತೋಽಸ್ಮಾಜ್ಜರಾದೌರ್ಬಲ್ಯಕೃಚ್ಚ ಸಃ ||೭೯||
ಯತ್ತು ಚಙ್ಕ್ರಮಣಂ ನಾತಿದೇಹಪೀಡಾಕರಂ ಭವೇತ್ ।
ತದಾಯುರ್ಬಲಮೇಧಾಗ್ನಿಪ್ರದಮಿನ್ದ್ರಿಯಬೋಧನಮ್ ||೮೦||

ಸುಖಾಸನದಿಂದ ಕೂತುಕೊಂಡರೆ ವರ್ಣ, ಕಫ, ಸ್ಥೌಲ್ಯ (ಮೇದೋವೃದ್ಧಿ), ಸೌಂದರ್ಯ, ಸುಖಗಳುಂಟಾಗುತ್ತವೆ. ದಾರಿಯಲ್ಲಿ ನಡೆಯುವುದರಿಂದ ವರ್ಣ, ಕಫ, ಸ್ಥೌಲ್ಯ, ಸೌಂದರ್ಯ ನಾಶವಾಗುತ್ತವೆ. ಅತಿಯಾಗಿ ದಾರಿನಡೆಯುವುದರಿಂದ ಮುದಿತನವೂ ಬಲಹಾನಿಯೂ ಉಂಟಾಗುತ್ತವೆ. ಶತಪಥ ತಿರುಗುವುದು, ಹಿಂದಕ್ಕೂ ಮುಂದಕ್ಕೂ ನಿದಾನವಾಗಿ ಸುತ್ತುವುದರಿಂದ ದೇಹಕ್ಕೆ ಹೆಚ್ಚು ಬಾಧೆಯುಂಟಾಗುವುದಿಲ್ಲ. ಆಯುಸ್ಸು, ಬಲ, ಬುದ್ಧಿಶಕ್ತಿವೃದ್ಧಿಯೂ ಇಂದ್ರಿಯಪಾಟವವೂ ಉಂಟಾಗುತ್ತವೆ.

ಶ್ರಮಾನಿಲಹರಂ ವೃಷ್ಯಂ ಪುಷ್ಟಿನಿದ್ರಾಧೃತಿಪ್ರದಮ್ ।
ಸುಖಂ ಶಯ್ಯಾಸನಂ ದುಃಖಂ ವಿಪರೀತಗುಣಂ ಮತಮ್ ||೮೧||
ವಾಲವ್ಯಜನಮೌಜಸ್ಯಂ ಮಕ್ಷಿಕಾದೀನಪೋಹತಿ ।
ಶೋಷದಾಹಶ್ರಮಸ್ವೇದ ಮೂರ್ಛಾಘ್ನೋ ವ್ಯಜನಾನಿಲಃ ||೮೨||
ಪ್ರೀತಿನಿದ್ರಾಕರಂ ವೃಷ್ಯಂ ಕಫವಾತಶ್ರಮಾಪಹಮ್ ।
ಸಂವಾಹನಂ ಮಾಂಸರಕ್ತತ್ವಕ್ಪ್ರಸಾದಕರಂ ಸುಖಮ್ ||೮೩||

ವಿಸ್ತಾರವಾದ ಹಾಸಿಗೆಯಲ್ಲಿ ತಲೆದಿಂಬು, ಮಗ್ಗುಲದಿಂಬುಗಳನ್ನು ಹಾಕಿಕೊಂಡು ಮಲಗುವುದರಿಂದ ಶ್ರಮದಿಂದ ಬರುವ ಶ್ವಾಸವು ನಿವಾರಣೆಯಾಗಿ ವೀರ್ಯವೃದ್ಧಿ, ದೇಹಪುಷ್ಟಿ, ನಿದ್ರೆ, ಧೈರ್ಯ (ಮನೋದಾರ್ಢ್ಯ) ಇವುಗಳುಂಟಾಗುತ್ತವೆ. ಸಂಕುಚಿತವಾದ ಹಾಸಿಗೆಯಲ್ಲಿ ಮಲಗಿದರೆ ಇದಕ್ಕೆ ವಿಪರೀತವಾದ ಗುಣಗಳುಂಟಾಗುತ್ತವೆ. ಚಾಮರದಿಂದಲೂ, ಬೀಸಣಿಗೆಯಿಂದಲೂ ಬೀಸಿಕೊಳ್ಳುವುದರಿಂದ ಓಜೋವೃದ್ಧಿಯಾಗುತ್ತದೆ. ನೊಣ ಮತ್ತು ಸೊಳ್ಳೆಗಳ ಬಾಧೆಯು ನಿವಾರಣೆಯಾಗುತ್ತದೆ. ಕ್ಷಯ, ಉರಿತ, ಆಯಾಸ, ಬೆವರು, ಪ್ರಜ್ಞೆತಪ್ಪಿರುವುದು ಇವೆಲ್ಲಾ ನಿವಾರಣೆಯಾಗುತ್ತವೆ. ಸಂವಾಹನದಿಂದ (ಮೈಯನ್ನು ಕಾಲಿನಿಂದ ಸೊಂಟದವರೆಗೆ ತುಳಿಸುವುದು. ಕೈಗಳಿಂದ ಅಮುಕುವುದು) ಕಾರ್ಯಮಾಡಬೇಕೆಂಬ ಇಚ್ಛೆಯೂ, ನಿದ್ರೆಯೂ ವೀರ್ಯವೃದ್ಧಿಯೂ ಉಂಟಾಗುತ್ತದೆ.

ಕಫ, ವಾತ, ಶ್ರಮಗಳು ನಿವಾರಣೆಯಾಗುತ್ತವೆ. ಮಾಂಸ, ರಕ್ತ, ಚರ್ಮಗಳು ಶುದ್ಧವಾಗಿ ದೇಹಸೌಖ್ಯವುಂಟಾಗುತ್ತದೆ.

ಪ್ರವಾತಂ ರೌಕ್ಷ್ಯವೈವರ್ಣ್ಯಸ್ತಮ್ಭಕೃದ್ದಾಹಪಕ್ತಿನುತ್ ।
ಸ್ವೇದಮೂರ್ಛಾಪಿಪಾಸಾಘ್ನಮಪ್ರವಾತಮತೋಽನ್ಯಥಾ ॥೮೪॥
ಸುಖಂ ವಾತಂ ಪ್ರಸೇವೇತ ಗ್ರೀಷ್ಮೇ ಶರದಿ ಮಾನವಃ ।
ನಿವಾತಂ ಹ್ಯಾಯುಷೇ ಸೇವ್ಯಮಾರೋಗ್ಯಾಯ ಚ ಸರ್ವದಾ ॥೮೫॥
ಆತಪಃ ಪಿತ್ತತೃಷ್ಣಾಗ್ನಿಸ್ವೇದಮೂರ್ಛಾಭ್ರಮಾಸ್ರಕೃತ್ ।
ದಾಹವೈವರ್ಣ್ಯಕಾರೀ ಚ ಛಾಯಾ ಚೈತಾನಪೋಹತಿ ॥೮೬॥
ಅಗ್ನಿರ್ವಾತಕಫಸ್ತಮ್ಭಶೀತವೇಪಥುನಾಶನಃ ।
ಆಮಾಭಿಷ್ಯನ್ದಜರಣೋ ರಕ್ತಪಿತ್ತಪ್ರದೂಷಣಃ ॥೮೭॥
ಪುಷ್ಟಿವರ್ಣಬಲೋತ್ಸಾಹಮಗ್ನಿದೀಪ್ತಿಮತನ್ದ್ರತಾಮ್ ।
ಕರೋತಿ ಧಾತುಸಾಮ್ಯಂ ಚ ನಿದ್ರಾ ಕಾಲೇ ನಿಷೇವಿತಾ ॥೮೮॥

ಬಿರುಗಾಳಿಯಲ್ಲಿ ಸಂಚರಿಸಿದರೆ ದೇಹವು ಒರಟಾಗುತ್ತದೆ. ಮೈಬಣ್ಣ ಬದಲಾಗಿ ಮೈಬಿಗಿತ, ಮೈಉರಿತ, ಜೀರ್ಣಶಕ್ತಿಯ ನಾಶವುಂಟಾಗುತ್ತದೆ. ಇದಕ್ಕೆ ಬದಲಾಗಿ ಸಾಧಾರಣವಾದ ಗಾಳಿಯನ್ನು ಸೇವಿಸಿದರೆ ಮೈಬೆವರುವುದೂ, ಜ್ಞಾನತಪ್ಪುವುದೂ, ನೀರಡಿಕೆ ಇವೂ ಪರಿಹಾರವಾಗುತ್ತವೆ. ಗ್ರೀಷ್ಮ (ಬೇಸಿಗೆ) ಮತ್ತು ಶರದೃತುಗಳಲ್ಲಿ ಸುಖವಾದ ತಂಗಾಳಿಯನ್ನು ಸೇವಿಸಬೇಕು. ಸದಾ ಕಾಲದಲ್ಲೂ ಎದುರು ಗಾಳಿಗೆ ಸಿಕ್ಕದೆ ಶುದ್ಧವಾದ ಗಾಳಿಬೀಸುವ ಸ್ಥಳದಲ್ಲಿದ್ದರೆ ಆಯುರ್ವೃದ್ಧಿಯೂ ಆರೋಗ್ಯವೂ ಉಂಟಾಗುತ್ತವೆ. ಬಿಸಿಲನ್ನು ಸೇವಿಸಿದರೆ ಪಿತ್ತ, ಬಾಯಾರಿಕೆ, ಹಸಿವೆ, ಮೈಬೆವರೂ, ಜ್ಞಾನತಪ್ಪುವುದೂ, ರಕ್ತವೃದ್ಧಿಯೂ, ಮೈಉರಿತವೂ, ಬಣ್ಣವ್ಯತ್ಯಾಸವೂ ಉಂಟಾಗುತ್ತವೆ. ನೆರಳಿನಲ್ಲಿದ್ದರೆ ಇವುಗಳೆಲ್ಲಾ ನಿವಾರಣೆಯಾಗುತ್ತವೆ. ಬೆಂಕಿಯನ್ನು ಕಾಯಿಸಿಕೊಳ್ಳುವುದರಿಂದ ವಾತ ಕಫ ವೃದ್ಧಿಯನ್ನೂ, ಮೈಬಿಗಿತವನ್ನೂ, ಶೀತಪೀಡೆಯನ್ನೂ, ಮೈನಡುಕವನ್ನೂ ಪರಿಹರಿಸಿಕೊಳ್ಳಬಹುದು. ಆಮದೋಷವೂ, ಅಭಿಷ್ಯಂದವೂ ನಿವಾರಣೆಯಾಗುತ್ತವೆ. ರಕ್ತಪಿತ್ತಗಳು ಕೆಟ್ಟುಹೋಗುತ್ತವೆ. ಸಕಾಲದಲ್ಲಿ ನಿದ್ರೆ ಮಾಡಿದರೆ ದೇಹಕ್ಕೆ ಪುಷ್ಟಿಯೂ, ಬಣ್ಣವೂ, ಬಲವೂ, ಉತ್ಸಾಹವೂ, ಕಾರ್ಯಮಾಡಬೇಕೆಂಬ ಕುತೂಹಲವೂ, ಅಗ್ನಿದೀಪನವೂ, ಎಚ್ಚರಿಕೆಯೂ, ಧಾತುಸಾಮ್ಯತೆಯೂ ಉಂಟಾಗುತ್ತವೆ.

ತತ್ರಾದಿತ ಏವ ನೀಚನಖರೋಮ್ಣಾ ಶುಚಿನಾ ಶುಕ್ಲವಾಸಸಾ ಲಘೂಷ್ಣೀಷಚ್ಛತ್ರೋಪಾನತ್ಕೇನ ದಣ್ಡಪಾಣಿನಾ ಕಾಲೇ ಹಿತಮಿತಮಧುರಪೂರ್ವಾಭಿಭಾಷಿಣಾ ಬನ್ಧುಭೂತೇನ ಭೂತಾನಾಂ ತು ಗುರುವೃದ್ಧಾನುಮತೇನ ಸುಸಹಾಯೇನಾನನ್ಯಮನಸಾ ಖಲೂಪಚರಿತವ್ಯಮ್ । ತದಪಿ ನ ರಾತ್ರೌ ನ ಕೇಶಾಸ್ಥಿಕಣ್ಟಕಾಶ್ಮತುಷಭಸ್ಮೋತ್ಕರಕಪಾಲಾಙ್ಗಾರಾಮೇಧ್ಯಸ್ಥಾನಬಲಿಭೂಮಿಷು ನ ವಿಷಮೇನ್ದ್ರಕೀಲಚತುಷ್ಪಥಶ್ವಭ್ರಾಣಾಮುಪರಿಷ್ಟಾತ್ ॥೮೯॥ ನ ರಾಜದ್ವಿಷ್ಟಪರು

ಷಪ್ಯೈ ಶೂನ್ಯಾನ್ಯನೃತಾನಿ ವದೇತ್ ನ ದೇವ ಬ್ರಾಹ್ಮಣ ಪಿತೃಪರಿವಾದಾಂಶ್ಚ ನ ನರೇನ್ದ್ರದ್ವಿಷ್ಟೋನ್ಮತ್ತ ಪತಿತಕ್ಷುದ್ರ ನೀಚಾಚಾರಾನುಪಾಸೀತ ॥೯೦॥

ಸದ್ವೃತ್ತವನ್ನು ಹೇಳುತ್ತಾರೆ—ಆರೋಗ್ಯವಾಗಿರಬೇಕೆಂದು ಅಪೇಕ್ಷಿಸುವವನು ಮೊದಲಿನಿಂದಲೂ ಉಗುರುಗಳನ್ನೂ ಗಡ್ಡಮೀಸೆಗಳನ್ನೂ ಕತ್ತರಿಸುತ್ತಾ ಶುಚಿಯಾಗಿದ್ದು ಬಿಳಿಯ ವಸ್ತ್ರವನ್ನುಟ್ಟು ಹಗುರವಾದ ಬಟ್ಟೆಯನ್ನು ತಲೆಗೆ ಕಟ್ಟಿಕೊಂಡು ಛತ್ರಿಯನ್ನು ಹಿಡಿದು ಪಾದರಕ್ಷೆಯನ್ನು ಮೆಟ್ಟಿಕೊಂಡು ಕೈಲಿ ದೊಣ್ಣೆಯನ್ನು ಹಿಡಿದುಕೊಂಡು ಸಮಯವೊದಗಿದಾಗ ಹಿತವಾಗಿಯೂ ಮಿತವಾಗಿಯೂ ಮಧುರವಾಗಿಯೂ ಮೊದಲೇ ಮಾತನ್ನು ಪ್ರಾರಂಭಿಸಿಯೂ ಪ್ರಾಣಿಗಳಿಗೆ ಬಂಧುವಿನಂತೆ ಆದರದಿಂದ ಗುರುವೃದ್ಧರಿಗೆ ಸಮ್ಮತವಾಗುವಂತೆ ಅನ್ಯರಿಗೆ ಸಹಾಯಮಾಡುವವನಾಗಿ ಒಂದೇ ಮನಸ್ಸಿನಿಂದ ಉಪಚರಿಸಬೇಕು. ಮುಖ್ಯವಾಗಿ ರಾತ್ರಿಕಾಲದಲ್ಲಿ ಕೂದಲು, ಮೂಳೆಗಳು, ಮುಳ್ಳು, ಕಲ್ಲುಗಳು, ಹೊಟ್ಟು, ಬೂದಿ, ಹೆಂಚಿನ ಚೂರುಗಳು, ಹುಲ್ಲಿನಮೆದೆ, ಇವುಗಳ ರಾಶಿ, ಇದ್ದಲು ಅಮೇಧ್ಯಸ್ಥಾನ, ಬಲಿಹಾಕುವ ಸ್ಥಳಗಳಲ್ಲೂ, ಹಳ್ಳದಿಣ್ಣೆಗಳಿರುವ ಭೂಭಾಗಗಳಲ್ಲೂ ಇಂದ್ರಕೀಲದಲ್ಲೂ (ಯೂಪಸ್ತಂಭನನ್ನು ನೆಟ್ಟಿರುವ ಯಜ್ಞಭೂಮಿ), ೪ ದಾರಿಗಳು ಕೂಡುವ ಸ್ಥಳದಲ್ಲೂ ಹಳ್ಳಗಳಮೇಲೂ ಸಂಚರಿಸಬಾರದು. ರಾಜನಿಗೆ ಹಿತವಿಲ್ಲದ ಕಠಿಣವಾದ ಚಾಡಿ ಮಾತುಗಳನ್ನೂ, ದೇವರು ಬ್ರಾಹ್ಮಣರು, ಪಿತೃಗಳಲ್ಲಿ ದೋಷಕರವಾದ ಮಾತುಗಳನ್ನೂ ಆಡಬಾರದು. ರಾಜರಿಂದ ದ್ವೇಷಿಸಲ್ಪಡುವ ಮತ್ತು ರಾಜರನ್ನು ದ್ವೇಷಿಸುವವರೊಡನೆಯೂ, ಹುಚ್ಚರೊಡನೆಯೂ ಕರ್ಮಭ್ರಷ್ಟರೊಡನೆಯೂ, ಲಘುವಾದ ವ್ಯಾಪಾರವುಳ್ಳವರೊಡನೆ (ಹಲ್ಕಾಜನರು) ಯೂ, ದುಷ್ಟವಾದ ಆಚಾರವುಳ್ಳವರೊಡನೆಯೂ ಸಂಭಾಷಣೆ ಮಾಡಬಾರದು.

ವೃಕ್ಷಪರ್ವತಪ್ರಪಾತ ವಿಷಮವಲ್ಮೀಕದುಷ್ಟವಾಜಿ ಕುಞ್ಜರಾದ್ಯಧಿರೋಹಣಾನಿ ಪರಿಹರೇತ್ ; ಪೂರ್ಣನದೀ ಸಮುದ್ರಾವಿದಿತಪಲ್ವಲಶ್ವಭ್ರ ಕೂಪಾವತರಣಾನಿ ಭಿನ್ನಶೂನ್ಯಾಗಾರ ಶ್ಮಶಾನ ವಿಜನಾರಣ್ಯವಾಸಾಗ್ನಿಸಂಭ್ರಮವ್ಯಾಳಭುಜಙ್ಗಕೀಟ ಸೇವಾಗ್ರಾಮಾಘಾತಕಲಹ ಶಸ್ತ್ರಸನ್ನಿಪಾತಾಗ್ನಿ ಸಂಭ್ರಮವ್ಯಾಳಸರೀಸೃಪಶೃಙ್ಗಸನ್ನಿಕರ್ಷಾಂಶ್ಚ ॥೯೧॥

ಮರ, ಬೆಟ್ಟ, ಜೊಡ್ಡಝರಿ (ಬೆಟ್ಟದಿಂದ ಕೆಳಕ್ಕೆ ಹರಿಯುವ ನೀರಿನಪ್ರವಾಹ), ಹಳ್ಳದಿಣ್ಣೆಗಳಿರುವ ಸ್ಥಳ, ಹುತ್ತ, ದುಷ್ಟಕುದುರೆ, ಆನೆ ಮೊದಲಾದುವುಗಳ ಮೇಲೆ ಸವಾರಿಮಾಡುವುದು ಇವುಗಳನ್ನು ತ್ಯಜಿಸಬೇಕು. ತುಂಬಿ ಹರಿಯುತ್ತಿರುವ ಹೊಳೆ, ಸಮುದ್ರಗಳಲ್ಲಿ ಈಜಬಾರದು. ಆಳ ತಿಳಿಯದಿರುವ ನೀರು ತುಂಬಿದ ಹಳ್ಳ, ಆಳವಾದ ಹಳ್ಳ, ಭಾವಿಗಳಿಗೆ ಇಳಿಯಬಾರದು. ಮುರಿದುಬಿದ್ದಿರುವ, ಜನವಾಸವಿಲ್ಲದ ಮನೆ, ಶ್ಮಶಾನ, ಜನಶೂನ್ಯವಾದ ಅರಣ್ಯಗಳಲ್ಲಿ ವಾಸಮಾಡಬಾರದು. ಉರಿಯುವ ಬೆಂಕಿಯನ್ನು ದಾಟಬಾರದು. ಹುಲಿ, ಸಿಂಹ ಮೊದಲಾದ ಕಾಡುಪ್ರಾಣಿಗಳು, ಹಾವುಗಳು, ನಾಗರಹಾವು ಇವುಗಳ ಸಹವಾಸಮಾಡಬಾರದು. ಮಾರಿಕೋಪದ್ರವಾದಿಗಳಿಗೂ,

ಜಗಳಗಳಲ್ಲೂ ಶಸ್ತ್ರಯುದ್ಧ ಅಗ್ನಿಲಂಘನಾದಿಗಳನ್ನೂ ಕೃಷ್ಣಸರ್ಪವನ್ನೂ ಶೀತನಿವಾರಣೆ ಗಾಗಿ ಬೆಂಕಿಜ್ವಾಲೆಯ ಎದುರಿಗೆ ಹೋಗುವುದನ್ನೂ ಕೊಂಬುಳ್ಳ ಗೂಳಿ ಎಮ್ಮೆಗಳ ಎದು ರಾಗಿ ಹೋಗುವುದನ್ನೂ ಬಿಟ್ಟುಬಿಡಬೇಕು (ಹೋಗಬಾರದು).

ನಾಗ್ನಿಗೋ ಗುರುಬ್ರಾಹ್ಮಣ ಪ್ರೇಜ್ಯಾದಮ್ಪತ್ಯನ್ತರೇಣಾಭಿಯಾಯಾತ್ । ನ ಶವಮನು ಯಾಯಾತ್ ದೇವಗೋಬ್ರಾಹ್ಮಣ ಚೈತ್ಯಧ್ವಜ ರೋಗಿಪತಿತಪಾಪಕಾರಿಣಾಂ ಚ ಛಾಯಾಂ ನಾಕ್ರಮೇತ ನಾಸ್ತಂಗಚ್ಛನ್ತಂ ಮುದ್ಯನ್ತಂ ವಾದಿತ್ಯಂ ವೀಕ್ಷೇತ ಗಾಂ ಧಯನ್ತೀಂ ಪರಶಸ್ಯಂ ಚಾಚರನ್ತೀಂ ಪರಸ್ಮೈ ನ ಕಸ್ಮೈಚಿದಾಚಕ್ಷೀತ ನ ಚ ಉಲ್ಕಾಪಾತೇನ್ದ್ರಧನೂಂಷಿನಾಗ್ನಿಂ ಮುಖೇನೋಪಧಮೇತ್ । ನಾಪೋ ಭೂಮಿಂ ವಾ ಪಾಣಿಪಾದೇ ನಾಭಿಹನ್ಯಾತ್ ||೯೨||

ಬೆಂಕಿ, ಹಸುಗಳು, ಗುರುಗಳು, ಬ್ರಾಹ್ಮಣರು, ಉಯ್ಯಾಲೆಗಳು, ಗಂಡಹೆಂಡತಿ ಯರು ಇವರ ಮಧ್ಯದಲ್ಲಿ ಹೋಗಬಾರದು. ಹೆಣದಹಿಂದೆ ಹೋಗಬಾರದು. ದೇವರು, ಹಸು, ಬ್ರಾಹ್ಮಣರು, ಶ್ಮಶಾನದಲ್ಲಿರುವ ಮರ, ಬಾವುಟ, ರೋಗಿ, ಪತಿತರು (ಕರ್ಮ ಭ್ರಷ್ಟರು), ಪಾಪಿಷ್ಠರು (ಪಾಪಕಾರ್ಯಗಳನ್ನು ಮಾಡುವವರು) ಇವರ ನೆರಳನ್ನು ತುಳಿಯಬಾರದು. ಸೂರ್ಯನನ್ನು ಮುಳುಗುವಾಗಲೂ ಉದಯಿಸುವಾಗಲೂ ನೋಡ ಬಾರದು. ನೀರು ಕುಡಿಯುತ್ತಿರುವ ಹಸುವನ್ನೂ ಕರುವಿಗೆ ಹಾಲುಕುಡಿಸುವ ಹಸು ವನ್ನೂ ಪರರ ಹೊಲಗದ್ದೆಗಳಲ್ಲಿ ಮೇಯುತ್ತಿರುವ ಹಸುವನ್ನೂ ಮತ್ತಾರಿಗೂ ತಿಳಿಸ ಬಾರದು. ಉಲ್ಕಾಪಾತಗಳನ್ನೂ ಕಾಮನಬಿಲ್ಲನ್ನೂ ಇತರರಿಗೆ ತಿಳಿಸಬಾರದು. (ಕೆಲವರು ಉಲ್ಕಾಪಾತವೆನ್ನುವುದಕ್ಕೆ ಬದಲು ಉತ್ಪಾತವೆನ್ನುತ್ತಾರೆ. ಈ ಉತ್ಪಾತವು ದಿವ್ಯ ಭೌಮಾಂತರಿಕ್ಷ ಭೇದಗಳಿಂದ ೩ ವಿಧಗಳಾಗಿದೆ. ಪ್ರತಿಮಾರೋಹಣ, ಗಂಧರ್ವ ನಗರ ದರ್ಶನಾದಿಗಳು ದಿವ್ಯಗಳು. ಭೂಕಂಪ ಮೊದಲಾದುವು ಭೌಮಗಳು, ನೀರು, ಕತ್ತಲೆ, ಕೋಟೆ ಕಂದಕಗಳನ್ನೂ ಆಕಾಶದಲ್ಲಿ ಕಾಣುವುದು ಅಂತರಿಕ್ಷಗಳು. ಬೆಂಕಿಯನ್ನು ಮುಖವಾಯುವಿನಿಂದ ಊದಿ ಹತ್ತಿಸಬಾರದು. ನೀರನ್ನೂ ಭೂಮಿಯನ್ನೂ ಕೈಕಾಲು ಗಳಿಂದ ಬಡಿಯಬಾರದು.

ನ ವೇಗಾರ್ಧಾರಯೇತ್ । ನ ಬಹಿರ್ವೇಗಾ ಗ್ರಾಮನಗರದೇವತಾಯತನ ಶ್ಮಶಾನ ಚತುಷ್ಪಥ ಸಲಿಲಾಶಯಃ ಪಥಿ ಸನ್ನಿಕೃಷ್ಟಾನುತ್ಸೃಜೇತ್ ನ ಪ್ರಕಾಶಂ ನವಾಯ್ವಗ್ನಿ ಸಲಿಲಸೋ ಮಾರ್ಕಗೋಗುರುಮುಖಮ್ ||೯೩||

ನ ಭೂಮಿಂ ವಿಲಿಖೇತ್ ನಾಸಂವೃತಮುಖಃ ಸದಸಿ ಜೃಮ್ಭೋದ್ಗಾರ ಶ್ವಾಸಕ್ಷವಥೂನು ತ್ಸೃಜೇತ್ ನ ಪರ್ಯಸ್ತಿಕಾಪಷ್ಟಮ್ಭಪಾದಪ್ರಸಾರಣಾನಿ ಗುರುಸನ್ನಿಧೌ ಕುರ್ಯಾತ್ ||೯೪|| ನ ಬಾಲಕರ್ಣನಾಸಾಸ್ರೋತೋದಶನ ವಿವರಾಣ್ಯಭಿಕುಷ್ಣೀಯಾತ್ ನ ವೀಜಯೇತ್ ಕೇಶಮುಖ ನಖವಸ್ತ್ರಗಾತ್ರಾಣಿ ನ ಗಾತ್ರನಖವಕ್ತ್ರವಾದಿತ್ರಂ ಕುರ್ಯಾತ್ ನ ಕಾಷ್ಠಲೋಷ್ಠತೃಣಾದೀನಭಿಹ ನ್ಯಾಚ್ಛಿನ್ದ್ಯಾದ್ವಾ ||೯೫||

ವಾತಮೂತ್ರ ಪುರೀಷಾದಿ ವೇಗಗಳನ್ನು ತಡೆಯಬಾರದು. ಗ್ರಾಮ, ಪಟ್ಟಣ, ದೇವಾಲಯ, ಶ್ಮಶಾನ, ನಾಲ್ಕುಬೀದಿಗಳು ಕೂಡುವ ಸ್ಥಳ, ನೀರಿರುವ ಹೊಳೆ, ಕಾಲುವೆ ಕೆರೆಗಳ ಹತ್ತಿರ, ರಾಜಮಾರ್ಗಗಳಲ್ಲೂ ಎಲ್ಲರಿಗೂ ತಿಳಿಯುವಂತೆಯೂ, ಗಾಳಿ, ಬೆಂಕಿ, ನೀರು, ಚಂದ್ರ, ಸೂರ್ಯ, ಹಸು, ಗುರುಗಳು ಇವರುಗಳಿಗೆದುರಾಗಿಯೂ ಮಲಮೂತ್ರಾದಿಗಳನ್ನು ವಿಸರ್ಜಿಸಬಾರದು. ನೆಲವನ್ನು ಉಗುರಿನಿಂದ ಕೆರೆಯಬಾರದು, ಸಭೆಯಲ್ಲಿರುವಾಗ ಮುಖವನ್ನು ಕೈಯ್ಯಿನಿಂದಾಗಲೀ ವಸ್ತ್ರದಿಂದಾಗಲೀ ಮರೆಮಾಡದೆ ಆಕಳಿಕೆ, ತೇಗು, ಶ್ವಾಸೋಚ್ಛ್ವಾಸ, ಸೀನು ಇವುಗಳನ್ನು ಹೊರಡಿಸಬಾರದು. ಗುರುಗಳ ಮುಂದೆ ಮಂಚದಮೇಲೆ ಅಥವಾ ಹಲಗೆಯಮೇಲೆ ಕೂರುವುದನ್ನಾಗಲೀ, ಗುರುಗಳ ಕಡೆಗೆ ಬೆನ್ನು ತಿರುಗಿಸಿ ಗೋಡೆ, ಕಂಭಗಳನ್ನು ಆಸರೆಮಾಡಿಕೊಂಡು ನಿಲ್ಲುವುದನ್ನಾಗಲೀ, ಅವರ ಮುಂದೆ ಕಾಲುಗಳನ್ನು ನೀಡಿಕೊಂಡು ಕೂರುವುದನ್ನಾಗಲೀ ಮಾಡಬಾರದು. ತಲೆಕೂದಲು, ಕಿವಿ, ಮೂಗುಗಳ ರಂಧ್ರಗಳನ್ನೂ ಮಲಮೂತ್ರಗಳನ್ನೂ ಹಲ್ಲಿನ ಸಂದುಗಳನ್ನೂ ತೊಳೆಸಬಾರದು. ತಲೆಕೂದಲು, ಬಾಯಿ, ಉಗುರು, ವಸ್ತ್ರ, ಶರೀರಗಳನ್ನು ಕೊಡವಬಾರದು. ಮೈಮೇಲೆ ತಾಳಹಾಕಬಾರದು. ಉಗುರುಗಳಿಂದ ವಾದ್ಯದ ತಂತಿಗಳನ್ನು ಮಿಾಟಬಾರದು. ಬಾಯಿನಿಂದ ಕೊಳಲು, ಮೂರ್ಛಿಂಗ್ ಮೊದಲಾದ ವಾದ್ಯಗಳನ್ನು ಬಾರಿಸಬಾರದು. ಕಡ್ಡಿ, ಮಣ್ಣಿನಹೆಂಟೆ, ಹಲ್ಲುಗಳನ್ನೂ ಕೈಯ್ಯಿನಿಂದ ಗುದ್ದಬಾರದು, ಕೀಳಲೂಬಾರದು.

ನ ಪ್ರತಿವಾತಾತಪಂ ಸೇವೇತ ನ ಭುಕ್ತಮಾತ್ರೋಽಗ್ನಿಮುಪಾಸೀತನೋತ್ಕಟುಕಸ್ತಿಷ್ಠೇತ್ ನಾಲ್ಪಕಾಷ್ಠಾಸನಮಧ್ಯಾಸೀತ ನ ಗ್ರೀವಾಂ ವಿಷಮಂ ಧಾರಯೇತ್ ನ ವಿಷಮಕಾಯಃ ಕ್ರಿಯಾಂ ಭಜೇತಭುಞ್ಜೀತ ವಾ ನ ಪ್ರತತಮೀಕ್ಷೇತ ವಿಶೇಷಾಜ್ಜ್ಯೋತಿರ್ಭಾಸ್ಕರಸೂಕ್ಷ್ಮ ಚಲಭ್ರಾನ್ತಾನಿ ನ ಭಾರಂ ಶಿರಸಾ ವಹೇತ್ ನ ಸ್ವಪ್ನಜಾಗರಣಶಯನಾಸನಸ್ಥಾನ ಚಙ್ಕ್ರಮಣಯಾನವಾಹನ ಪ್ರಧಾವನಲಙ್ಘನಪ್ಲವನ ಪ್ರತರಣ ಹಾಸ್ಯಭಾಷ್ಯ ವ್ಯವಾಯ ವ್ಯಾಯಾಮಾದೀನುಚಿತಾನಪ್ಯತಿ ಸೇವೇತ ||೯೬||

ಉಚಿತಾದಪ್ಯಹಿತಾತ್ ವಿರಮೇತ್ ಹಿತಮನುಚಿತಮಪ್ಯಾಸೇವೇತ ಕ್ರಮಶೋ ನ ಚೈಕಾನ್ತತಃ ಪಾದಹೀನಾತ್ ||೯೭||

ಎದುರುಗಾಳಿ ಬಿಸಿಲುಗಳನ್ನು ಸೇವಿಸಬಾರದು. ಭೋಜನಮಾಡಿದ ಕೂಡಲೇ ಬೆಂಕಿಯಿಂದ ಮೈಯನ್ನು ಕಾಯಿಸಬಾರದು. ಕುಕ್ಕರು ಕಾಲಿನಲ್ಲಿ ಕೂಡಬಾರದು ಸಣ್ಣದಾದ ಕಡ್ಡಿಗಳಿಂದಮಾಡಿದ ಪೀಠದಲ್ಲಿ ಕೂಡಬಾರದು. ಕತ್ತನ್ನೂ ಶರೀರವನ್ನೂ ಸೊಟ್ಟಾಗಿ ಮಾಡಿಕೊಂಡು ಕೆಲಸವನ್ನೂ ಊಟವನ್ನೂ ಮಾಡಬಾರದು. ಕಣ್ಣನ್ನು ಹಿಗ್ಗಲಿಸಿಕೊಂಡು ಪ್ರಕಾಶವನ್ನೂ, ಸೂರ್ಯಕಿರಣವನ್ನೂ, ಅತಿ ಸೂಕ್ಷ್ಮವಸ್ತುಗಳನ್ನೂ, ಚಲಿಸುತ್ತಿರುವ ಮತ್ತು ಗಿರಗಿರನೆ ತಿರುಗುತ್ತಿರುವ ವಸ್ತುಗಳನ್ನೂ ನೋಡಬಾರದು. ತಲೆಯಲ್ಲಿ ಭಾರವಸ್ತುಗಳನ್ನು ಹೊರಬಾರದು. ಹಗಲು ನಿದ್ರೆ, ರಾತ್ರಿಕಾಲದಲ್ಲಿ ಎಚ್ಚರ

ವಾಗಿರುವುದು, ಮಲಗಿರುವುದು, ಕೂಡುವುದು, ನಿಂತಿರುವುದು, ತಿರುಗುವುದು, ರಥ, ಪಲ್ಲಕ್ಕಿಗಳಲ್ಲೂ, ಕುದುರೆ, ಆನೆಗಳಮೇಲೆ ಕೂತು ಸವಾರಿಮಾಡುವುದು, ಓಡುವುದು, ಹಾರುವುದು, ನೀರಿನಲ್ಲಿ ಈಜುವುದು, ನಗುವುದು, ಮಾತನಾಡುವುದು (ಭಾಷಣಗಳು), ಮೈಥುನ, ವ್ಯಾಯಾಮ ಮೊದಲಾದುವನ್ನು ಅತಿಯಾಗಿ ಸೇವಿಸಬಾರದು. ಅಭ್ಯಾಸ ವಾಗಿರುವ ಅಹಿತಾಹಾರಾದಿಗಳನ್ನು ಒಂದೇಸಾರಿ ಬಿಡಲೂಬಾರದು. ಹಿತಾಹಾರಾದಿ ಗಳನ್ನು ಒಂದೇ ಸಾರಿ ಸೇವಿಸಲೂ ಬಾರದು. ಅಭ್ಯಾಸವಾಗಿರುವ ಅಹಿತಾಹಾರಾದಿಗಳ ೧/೧೬ ಭಾಗವನ್ನು ಪ್ರತಿದಿನವೂ ಬಿಡುತ್ತಲೂ, ಅಭ್ಯಾಸವಿಲ್ಲದ ಹಿತಾಹಾರಾದಿಗಳಲ್ಲಿ ೧/೧೬ ಭಾಗದಷ್ಟನ್ನು ಸೇವಿಸುತ್ತಲೂ ೧೬ ದಿನಗಳಲ್ಲಿ ಅಹಿತತ್ಯಾಗವೂ ಹಿತಾಭ್ಯಾಸವೂ ಪೂರ್ತಿಯಾಗುತ್ತವೆಂದು ತಿಳಿಯಬೇಕು.

ನಾವಾಕ್‌ಶಿರಾಃ ಶಯೀತ ನ ಭಿನ್ನಪಾತ್ರೇ ನಾಞ್ಜಲಿಪುಟೇ ವಾಪಃ ಪಿಬೇತ್ ಕಾಲೇಹಿತ ಮಿತಸ್ನಿಗ್ಧಮಧುರಪ್ರಾಯಮಾಹಾರಂ ವೈದ್ಯಪ್ರತ್ಯವೇಕ್ಷಿತಮಶ್ನೀಯಾತ್ ಗ್ರಾಮಗಣ ಗಣಿಕಾ ಪಣಿಕಶತ್ರುಶಠಪತಿತ ಭೋಜನಾನಿ ಪರಿಹರೇತ್ ಶೇಷಾಣ್ಯಪಿಚಾನಿಷ್ಟರೂಪರಸಗನ್ಧಸ್ಪರ್ಶಶಬ್ದ ಮಾನಸಾನಿ ಅನ್ಯಾನಿ ಏವಂ ಗುಣಾನ್ಯಪಿ ವಾ ಸಂಭೂಯ ದತ್ತಾನಿ ಮಕ್ಷಿಕಾ (ವಾ) ಲೋಪ ಹತಾನಿ ನಾಪ್ರಕ್ಷಾಳಿತಪಾದೋ ಭುಞ್ಜೀತ ನ ಮೂತ್ರೋಚ್ಚಾರ ಪೀಡಿತೋ ನ ಸನ್ಧ್ಯಯೋ ರ್ನಾಪಾಶ್ರಿತೋ ನಾತೀತಕಾಲಂ ಹೀನಮತಿ ಮಾತ್ರಂ ಚೇತಿ ನ ಭುಞ್ಜೀತೋದ್ಧೃತಸ್ನೇಹಮ್ ||೯೮|| ನೋದಕೇ ಪಶ್ಯೇದಾತ್ಮಾನಂ (ನಾತ್ಮಾನಮುದಕೇಪಶ್ಯೇದಿತಿ ಪಾಠಾನ್ತರಮ್) ನನಗ್ನಃ ಪ್ರವಿಶೇಜ್ಜಲಮ್ । ನ ನಕ್ತಂ ದಧಿ ಭುಞ್ಜೀತ ನ ವಾಪ್ಯಘೃತಶರ್ಕರಮ್ ನಾಮುದ್ಗಸೂಪಂ ನಾಕ್ಷೌದ್ರಂ ನೋಷ್ಣಂ ನಾಮಲಕೈರ್ವಿನಾ ||೯೯|| ಅನ್ಯಥಾ ಕುಷ್ಠವೀಸರ್ಪಾದಿಂ ಜನಯೇತ್।

ತಲೆಯನ್ನು ಕೆಳಕ್ಕೆಮಾಡಿಕೊಂಡು ಮಲಗಬಾರದು. ಒಡಕುಪಾತ್ರೆಯಲ್ಲಾಗಲೀ ಬೊಗಸೆಯಲ್ಲಾಗಲೀ ನೀರನ್ನು ತುಂಬಿ ಕುಡಿಯಬಾರದು. ಗೊತ್ತಾದ ಭೋಜನ ಕಾಲ ದಲ್ಲಿ ಪಥ್ಯವಾದ ಆಹಾರವನ್ನು ಮಿತವಾದ ಪ್ರಮಾಣದಿಂದ (ಸ್ನೇಹ ಮಧುರ ರಸಗಳೇ ಹೆಚ್ಚು ಪ್ರಮಾಣದಿಂದಿರುವುದನ್ನು) ವೈದ್ಯನು ಪರಿಶೀಲಿಸಿ ಒಪ್ಪಿದನಂತರ ಭೋಜನ ಮಾಡಬೇಕು. ಗ್ರಾಮವಾಸಿಗಳು ಚಂದಾ ಎತ್ತಿ ತಯಾರಿಸಿದ, ರಥಕಾರರೂ ಸಂಗೀತ ಗಾರರೂ ವೇಶ್ಯೆಯರ, ವರ್ತಕರ ಸಂಘದ ಶತ್ರುವಿನ ಆಚಾರಭ್ರಷ್ಟನ ಪತಿತನ ಅನ್ನ ವನ್ನು ತ್ಯಜಿಸಿಬಿಡಬೇಕು. ಇತರ ವಿಧದ ಅಸಮ್ಮತವಾದ ಮತ್ತು ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳಲ್ಲಿ ಹೀನವಾದ ಮನಸ್ಸಿಗೆ ಹಿತವಿಲ್ಲದ ಅನ್ನವನ್ನೂ ಮತ್ತು ನೊಣ ಕೂದಲುಗಳಿಂದ ಕೂಡಿದ ಅನ್ನವನ್ನೂ ತ್ಯಜಿಸಿಬಿಡಬೇಕು. ಕಾಲುಗಳನ್ನು ತೊಳೆದು ಕೊಳ್ಳದೆಯೂ, ಮಲಮೂತ್ರಗಳನ್ನು ವಿಸರ್ಜನೆಮಾಡದೆಯೂ, ಸಂಧ್ಯಾಕಾಲಗಳಲ್ಲೂ ಆಸನದಲ್ಲಿ ಕುಳಿತುಕೊಳ್ಳದೆಯೂ, ಭೋಜನದವೇಳೆ ಮೀರಿಹೋದಮೇಲೂ ಹೀನ ಪ್ರಮಾಣದಿಂದ ಅಧಿಕಪ್ರಮಾಣದಿಂದ ಭೋಜನವನ್ನು ಮಾಡಬಾರದು. ಘೃತವನ್ನು ತೆಗೆದು ಬೇರೆಮಾಡಿದ ಅನ್ನವನ್ನೂ ತಿನ್ನಬಾರದು. ನೀರಿನಲ್ಲಿ ತನ್ನ ಪ್ರತಿಬಿಂಬವನ್ನು

ನೋಡಬಾರದು. ನೀರಿನಲ್ಲಿಳಿದು ಬೆತ್ತಲೆ ಸ್ನಾನಮಾಡಬಾರದು. ರಾತ್ರಿಯವೇಳೆ ಮೊಸರನ್ನವನ್ನು ಉಣ್ಣಬಾರದು. ತುಪ್ಪ ಸಕ್ಕರೆಯನ್ನು ಮಿಶ್ರಮಾಡದೆಯೂ, ಹೆಸರು ಬೇಳೆಯತೊವ್ವೆ ಮತ್ತು ಜೇನುತುಪ್ಪ ನೆಲ್ಲಿಕಾಯಿ ಇವುಗಳನ್ನು ಸೇರಿಸದೆ ಮೊಸರನ್ನವನ್ನು ಭೋಜನಮಾಡಬಾರದು. ಈ ನಿಯಮವನ್ನು ಬಿಟ್ಟು ಮೊಸರನ್ನವನ್ನು ಭೋಜನ ಮಾಡುವವರಿಗೆ ಕುಷ್ಠ, ವಿಸರ್ಪ ಮೊದಲಾದ ರೋಗಗಳುಂಟಾಗುತ್ತವೆ.

ದ್ಯೂತಮದ್ಯಾತಿಸೇವಾ ಪ್ರತಿಭೂಸಾಕ್ಷಿತ್ವ ಸಮಾಹ್ವಾನಗೋಷ್ಠೀವಾದಿತ್ರಾಣಿ ನ ಸೇವೇತ ; ಸ್ರಜ್ಯಂ ಛತ್ರೋಪಾನಹೌ ಕನಕಮಶೀತವಾಸಾಂಸಿ ನ ಚಾನ್ಯೈರ್ಧೃತಾನಿ ಧಾರಯೇತ್ ಬ್ರಾಹ್ಮಣಮಗ್ನಿಂ ಗಾಂ ಚ ನೋಚ್ಛಿಷ್ಟಃ ಸ್ಪೃಶೇತ್ ॥೧೦೦॥ ಭವಂತಿಚಾತ್ರ—

ಮುಖಮಾತ್ರಂ ಸಮಾಸೇನ ಸದ್ವೃತ್ತಸ್ಯೇತದೀರಿತಮ್ ।
ಆರೋಗ್ಯಮಾಯುರರ್ಥೋ ವಾ ನಾಸದ್ಭಿಃ ಪ್ರಾಪ್ಯತೇ ನೃಭಿಃ ॥೧೦೧॥

ಜೂಜಾಟ, ಅತಿಮದ್ಯಪಾನ, ಹೊಣೆಯಾಗುವಿಕೆ, ಸಾಕ್ಷಿಹೇಳುವುದು, ಮದ್ದಲೆ, ತಾಳ ಮೊದಲಾದ ಸಲಕರಣೆಗಳಿಂದ ಕೂಡಿದ ವಾದ್ಯಗೋಷ್ಠಿಗಳಲ್ಲಿ ಭಾಗವಹಿಸುವುದು ಇವುಗಳನ್ನು ತ್ಯಜಿಸಬೇಕು. ಮತ್ತೊಬ್ಬರು ಧರಿಸಿದ್ದ ಹೂವಿನಹಾರ, ಛತ್ರಿ, ಪಾದರಕ್ಷೆ ಚಿನ್ನದ ಆಭರಣಗಳು, ಹಳೆಯಬಟ್ಟೆ, ಉಡುಗೆ ಇವುಗಳನ್ನು ಧರಿಸಬಾರದು. ಬ್ರಾಹ್ಮಣರು, ಅಗ್ನಿ, ಹಸುಗಳಿಗೆ ತಿಂದುಮಿಕ್ಕ ಶೇಷಾನ್ನಗಳನ್ನು ಕೊಡಬಾರದು. ಈ ವಿಚಾರದ ಶ್ಲೋಕಾಭಿಪ್ರಾಯವೇನೆಂದರೆ-ಇದುವರೆಗೆ ಉದಾಹರಣೆಗಾಗಿ ಸದಾಚಾರಗಳನ್ನು ಸಂಗ್ರಹವಾಗಿ ತಿಳಿಸಿರುತ್ತೇವೆ. ಮನುಷ್ಯರು ಸದಾಚಾರಿಗಳ ನಿತ್ಯಚಾರಗಳನ್ನು ಗಮನಿಸಿ ಅದರಂತೆ ತಾವು ಆಚರಿಸಿದರೆ ಆರೋಗ್ಯ, ಆಯಸ್ಸು, ಇಷ್ಟಾರ್ಥಗಳನ್ನು ಹೊಂದುತ್ತಾರೆ.

ಯಸ್ಮಿನ್ ಯಸ್ಮಿನ್ನೃತೌ ಯೇ ಯೇ ದೋಷಾಃ ಕುಪ್ಯನ್ತಿ ದೇಹಿನಾಮ್ ।
ತೇಷು ತೇಷು ಪ್ರದಾತವ್ಯಾ ರಸಾಸ್ತೇ ತೇ ವಿಜಾನತಾ ॥೧೦೨॥
ವರ್ಷಾಸು ನ ಪಿಬೇತ್ತೋಯಂ ಪಿಬೇಚ್ಛರದಿ ಮಾತ್ರಯಾ ।
ವರ್ಷಾಸು ಚತುರೋ ಮಾಸಾನ್ ಮಾತ್ರಾವದುದಕಂ ಪಿಬೇತ್ ॥೧೦೩॥
ಉಷ್ಣೇ ಹ್ಯೇಷೇ ವಸನ್ತೇಚ ಕಾಮಂ ಗ್ರೀಷ್ಮೇ ತು ಶೀತಲಮ್ ।
ಹೇಮನ್ತೇ ಚ ವಸನ್ತೇ ಚ ಸೀಧ್ವರಿಷ್ಟೌ ಪಿಬೇನ್ನರಃ ॥೧೦೪॥
ಶೃತಶೀತಂ ಪಿಬೇದ್ಗ್ರೀಷ್ಮೇ ಪ್ರಾವೃಟ್ಕಾಲೇ ರಸಂ ಪಿಬೇತ್ ।
ಯೂಷಂ ವರ್ಷತಿ ತಸ್ಯಾಸ್ತೇ ಪ್ರಪಿಬೇಚ್ಛೀತಲಂ ಜಲಮ್ ॥೧೦೫॥
ಸ್ವಸ್ಥ ಏವ ಮತೋऽನ್ಯಸ್ತು ದೋಷಾಹಾರಮತಾನುಗಃ ।
ಸ್ನೇಹಂ ಸೈನ್ಧವ ಚೂರ್ಣೇನ ಪಿಪ್ಪಲೀಭಿಶ್ಚ ಸಂಯುತಮ್ ॥೧೦೬॥
ಪಿಬೇದಗ್ನಿವಿವೃದ್ಧ್ಯರ್ಥಂ ನ ಚ ವೇಗಾನ್ ವಿಧಾರಯೇತ್ ।
ಅಗ್ನಿದೀಪ್ತಿಕರಂ ನೄಣಾಂ ರೋಗಾಣಾಂ ಶಮನಂ ಪ್ರತಿ ॥೧೦೭॥

ಮನುಷ್ಯರಿಗೆ ಯಾವ ಯಾವ ಋತುವಿನಲ್ಲಿ ಯಾವ ಯಾವ ದೋಷಗಳು ಕೆರಳುತ್ತವೆಯೋ ಅದನ್ನು ತಿಳಿದ ವೈದ್ಯನು ಆಯಾಯ ಋತುಗಳಲ್ಲಿ ಆಯಾಯ ದೋಷ

ನಿವಾರಕ ರಸಪದಾರ್ಥಗಳನ್ನು ಪ್ರಯೋಗಿಸಬೇಕು. ವರ್ಷರ್ತುವಿನಲ್ಲಿ ನೀರನ್ನು ಕುಡಿಯಬಾರದು, ಶರದೃತುವಿನಲ್ಲಿ ಸ್ವಲ್ಪವಾಗಿ ನೀರನ್ನು ಕುಡಿಯಬೇಕು. ಮಳೆಗಾಲದ ನಾಲ್ಕುಮಾಸಗಳಲ್ಲೂ (ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ) ಸ್ವಲ್ಪವಾಗಿಯೇ ನೀರನ್ನು ಕುಡಿಯಬೇಕು. ಉಷ್ಣಕಾಲದಲ್ಲೂ ಹೇಮಂತ ಋತುವಿನಲ್ಲೂ ವಸಂತ ಋತುವಿನಲ್ಲೂ ಯಥೇಚ್ಛವಾಗಿ ಕುಡಿಯಬೇಕು. ಹೇಮಂತ ಮತ್ತು ವಸಂತ ಋತುಗಳಲ್ಲಿ ಸೀಧು ಅರಿಷ್ಟಗಳೆಂಬ ಮದ್ಯಗಳ ತಿಳಿಯನ್ನು ಕುಡಿಯಬೇಕು. ಗ್ರೀಷ್ಮ ಋತುವಿನಲ್ಲಿ ಕಾದಾರಿದ ನೀರನ್ನೂ ಪ್ರಾವೃಟ್ಕಾಲದಲ್ಲಿ (ಆಷಾಢ, ಶ್ರಾವಣ) ಮಾಂಸರಸವನ್ನೂ ವರ್ಷಋತುವಿನಲ್ಲಿ ದ್ವಿದಳಧಾನ್ಯಗಳ ಕಟ್ಟನ್ನೂ ಶರದೃತುವಿನಲ್ಲಿ ತಣ್ಣೀರನ್ನೂ ಸ್ವಸ್ಥನು ಕುಡಿಯಬೇಕು. ರೋಗಿಯು ದೋಷಗಳಿಗೆ ತಕ್ಕಂತೆಯೂ ಅಂದರೆ ವಾತಪ್ರಕೋಪದಲ್ಲಿ ಸ್ನಿಗ್ಧವಾಗಿಯೂ ಬಿಸಿಯಾಗಿಯೂ, ಪಿತ್ತಕೋಪದಲ್ಲಿ ತಣ್ಣಗೂ, ಕಫವೃದ್ಧಿಯಲ್ಲಿ ರೂಕ್ಷವಾಗಿಯೂ ಉಷ್ಣವಾಗಿಯೂ, ಇರುವ ಆಹಾರ ಪಾನಗಳನ್ನೂ, ಆಹಾರಕ್ಕೆ ತಕ್ಕಂತೆ ಅಂದರೆ ಸ್ನೇಹಪಾನಮಾಡಿದಾಗ ಬಿಸಿನೀರನ್ನೂ ಗೋಧಿಯಿಂದ ತಯಾರಾದ ದ್ರವ್ಯವನ್ನು ತಿಂದರೆ ತಣ್ಣೀರನ್ನೂ ಕುಡಿಯಬೇಕು. ಅಗ್ನಿವೃದ್ಧಿಯಾಗಲು ಸೈಂಧವ ಮತ್ತು ಹಿಪ್ಪಲಿಗಳ ಚೂರ್ಣವನ್ನು ತುಪ್ಪದಲ್ಲಿ ಕಲಸಿ ತಿನ್ನಬೇಕು. ವಾತ, ಮೂತ್ರ, ಪುರೀಷ ಮೊದಲಾದ ವೇಗಗಳನ್ನು ತಡೆಯಬಾರದು. ಅಗ್ನಿದೀಪನವಾಗಿ ರೋಗಶಮನವಾಗುವಂತೆ ಪ್ರಯತ್ನಿಸಬೇಕು.

ಪ್ರಾವೃಟ್ಶರದ್ವಸನ್ತೇಷು ಸಮ್ಯಕ್ ಸ್ನೇಹಾದಿಮಾಚರೇತ್ ।
ಕಫೇ ಪ್ರಚ್ಛರ್ದನಂ ಪಿತ್ತೇ ವಿರೇಕೋ ಬಸ್ತಿರಿಷ್ಯತೇ ॥೧೦೮॥
ಶಸ್ಯತೇ ತ್ರಿಷ್ವಪಿ ಸದಾ ವ್ಯಾಯಾಮೋ ದೋಷನಾಶನಃ ।
ಭುಕ್ತಂ ವಿರುದ್ಧಮಪ್ಯನ್ನಂ ವ್ಯಾಯಾಮಾನ್ನ ಪ್ರಕುಪ್ಯತಿ ॥೧೦೯॥

ಪ್ರಾವೃಟ್, ಶರತ್, ವಸಂತ ಋತುಗಳಲ್ಲಿ ಸ್ನೇಹಸ್ವೇದಾದಿ ಕರ್ಮಗಳನ್ನು ಸರಿಯಾಗಿ ಆಚರಿಸಿ ಕಫವೃದ್ಧಿಯಲ್ಲಿ ವಮನವನ್ನೂ, ಪಿತ್ತವೃದ್ಧಿಯಲ್ಲಿ ವಿರೇಚನೌಷಧವನ್ನೂ, ವಾತಕೋಪದಲ್ಲಿ ಬಸ್ತಿಕರ್ಮವನ್ನೂ ಮಾಡಿಸಬೇಕು. ಮೂರು ದೋಷಗಳೂ ವೃದ್ಧಿಯಾಗಿರುವಾಗ (ವ್ಯಾಯಾಮ ಮಾಡುವುದರಿಂದ) ದೋಷಗಳು ನಾಶವಾಗುತ್ತವೆ. ಮತ್ತು ವಿರುದ್ಧಾಹಾರವನ್ನು ಭೋಜನಮಾಡಿದರೂ ದೋಷಪ್ರಕೋಪವುಂಟಾಗುವುದಿಲ್ಲ.

ಉತ್ಸರ್ಗಮೈಥುನಾಹಾರಶೋಧನೇ ಸ್ನಾತ್ವಾ ತನ್ಮನಾಃ ।
ನೆಚ್ಛೇದ್ರೋಗಭಯಾತ್ಪ್ರಾಜ್ಞಃ ಪೀಡಾಂ ವಾ ಕಾಯಮಾನಸೀಮ್ ॥೧೧೦॥
ಅತಿಸ್ತ್ರೀ ಸಂಪ್ರಯೋಗಾಚ್ಚ ರಕ್ಷೇದಾತ್ಮಾನಮಾತ್ಮವಾನ್ ।
ಶೂಲಕಾಸಜ್ವರ ಶ್ವಾಸಕಾರ್ಶ್ಯಪಾಣ್ಡ್ವಾಮಯಕ್ಷಯಾಃ ॥೧೧೧॥
ಅತಿವ್ಯವಾಯಾಜ್ಜಾಯನ್ತೇ ರೋಗಾಶ್ಚಾಕ್ಷೇಪಕಾದಯಃ ।

ಆಯುಷ್ಮನ್ತೋ ಮನ್ದಜರಾ ವಪುರ್ವರ್ಣಬಲಾನ್ವಿತಾಃ ॥೧೧೨॥
ಸ್ಥಿರೋಪಚಿತಮಾಂಸಾಶ್ಚ ಭವನ್ತಿ ಸ್ತ್ರೀಷು ಸಂಯತಾಃ ।
ತ್ರಿಭಿಸ್ತ್ರಿಭಿರಹೋಭಿರ್ವಾ-ಸಮಿಯಾಯಾತ್ ಪ್ರಮದಾಂ ನರಃ ॥೧೧೩॥
ಸರ್ವೇಷ್ವೃತುಷು ಘರ್ಮೇಷು ಪಕ್ಷಾತ್ಪಕ್ಷಾದ್ವ್ರಜೇತ್ ಬುಧಃ
ರಜಸ್ವಲಾಮಕಾಮಾಂ ಚ ಮಲಿನಾಮಪ್ರಿಯಾಂ ತಥಾ ॥೧೧೪॥
ವರ್ಣವೃದ್ಧಾಂ ವಯೋವೃದ್ಧಾಂ ತಥಾ ವ್ಯಾಧಿಪ್ರಪೀಡಿತಾಮ್।
ಹೀನಾಙ್ಗೀಂ ಗರ್ಭಿಣೀಂ ದ್ವೇಷ್ಯಾಂ ಯೋನಿದೋಷ ಸಮನ್ವಿತಾಮ್ ॥೧೧೫॥
ಸಗೋತ್ರಾಂ ಗುರುಪತ್ನೀಂ ಚ ತಥಾ ಪ್ರವ್ರಜಿತಾಮಪಿ ।
ಸನ್ಧ್ಯಾಪರ್ವಸ್ವಗಮ್ಯಾಂ ಚ ನೋಪೇಯಾತ್ ಪ್ರಮದಾಂ ನರಃ ॥೧೧೬॥
ಗೋಸರ್ಗೇ ಚಾರ್ಧರಾತ್ರೇ ಚ ತಥಾ ಮಧ್ಯಂದಿನೇಷು ಚ ।
ಲಜ್ಜಾಸಮಾವಹೇ ದೇಶೇ ವಿವೃತೇಽಶುದ್ಧ ಏವ ಚ ॥೧೧೭॥
ಕ್ಷುಧಿತೋ ವ್ಯಾಧಿತಶ್ಚೈವ ಕ್ಷುಬ್ಧಚಿತ್ತಶ್ಚ ಮಾನವಃ ।
ವಾತವಿಣ್ಮೂತ್ರವೇಗೀ ಚ ಪಿಪಾಸುರತಿದುರ್ಬಲಃ ॥೧೧೮॥
ತಿರ್ಯಗ್ಯೋನಾವಯೋನೌ ಚ ಪ್ರಾಪ್ತಶುಕ್ರವಿಧಾರಣಮ್ ।
ದುಷ್ಟಯೋನೌ ವಿಸರ್ಗನ್ತು ಬಲವಾನಪಿ ವರ್ಜಯೇತ್ ॥೧೧೯॥
ರೇತಸಶ್ಚಾತಿಮಾತ್ರಂ ತು ಮೂರ್ಧಾವರಣಮೇವ ಚ ।
ಸ್ಥಿತಾವುತ್ತಾನಯನೇ ವಿಶೇಷೇಣೈವ ಗರ್ಹಿತಮ್ ॥೧೨೦॥
ಕ್ರೀಡಾಯಾಮಪಿಮೇಧಾವೀ ಹಿತಾರ್ಥೀ ಪರಿವರ್ಜಯೇತ್ ।
ರಜಸ್ವಲಾಂ ಪ್ರಾಪ್ತವತೋ ನರಸ್ಯಾನಿಯತಾತ್ಮನಃ ॥೧೨೧॥
ದೃಷ್ಟ್ಯಾಯುಸ್ತೇಜಸಾಂ ಹಾನಿರಧರ್ಮಶ್ಚ ತತೋ ಭವೇತ್ ।
ಲಿಙ್ಗಿನೀಂಗುರುಪತ್ನೀಂ ಚ ಸಗೋತ್ರಾಮಥ ಪರ್ವಸು ॥ ॥೧೨೨॥
ವೃದ್ಧಾಂ ಚ ಸನ್ಧ್ಯಯೋಶ್ಚಾಪಿ ಗಚ್ಛತೋ ಜೀವಿತಕ್ಷಯಃ ।
ಗರ್ಭಿಣ್ಯಾ ಗರ್ಭಪೀಡಾ ಸ್ಯಾತ್ ವ್ಯಾಧಿತಾಯಾಂ ಬಲಕ್ಷಯಃ ॥೧೨೩॥
ಹೀನಾಙ್ಗೀಂ ಮಲಿನಾಂ ದ್ವೇಷ್ಯಾಂ ಕಾಮಂ ವನ್ಧ್ಯಾಮ ಸಂವೃತೇ ।
ದೇಶೇಽಶುದ್ಧೇ ಚ ಶುಕ್ರಸ್ಯ ಮನಸಶ್ಚ ಕ್ಷಯೋ ಭವೇತ್ ॥೧೨೪॥
ಕ್ಷುಧಿತಃ ಕ್ಷುಬ್ಧಚಿತ್ತಶ್ಚ ಮಧ್ಯಾಹ್ನೇ ತೃಷಿತೋ ಬಲಃ ।
ಸ್ಥಿತಸ್ಯ ಹಾನಿಃ ಶುಕ್ರಸ್ಯ ವಾಯೋಃ ಕೋಪಂ ಚ ವಿನ್ದತಿ ॥ ॥೧೨೫॥
ಅತಿಪ್ರಸಙ್ಗಾದ್ಭವತಿ ಶೋಷಃ ಶುಕ್ರಕ್ಷಯಾವಹಃ ।
ವ್ಯಾಧಿತಸ್ಯ ರುಜಾಪ್ಲೀಹಾ ಮೃತ್ಯುರ್ಮೂರ್ಛಾ ಚ ಜಾಯತೇ ॥೧೨೬॥
ಪ್ರತ್ಯೂಷಸ್ಯರ್ಧರಾತ್ರೇ ಚ ವಾತಪಿತ್ತೇ ಪ್ರಕುಪ್ಯತಃ ।

ತಿರ್ಯಗ್ಯೋನಾವಯೋನೌ ಚ ದುಷ್ಟಯೋನೌ ತಥೈವ ಚ ||೧೭||
ಉಪದಂಶಸ್ತಥಾ ವಾಯೋಃ ಕೋಪಃ ಶುಕ್ರಸ್ಯ ಚ ಕ್ಷಯಃ ।
ಉಚ್ಚಾರಿತೇ ಮೂತ್ರಿತೇ ಚ ರೇತಸಶ್ಚ ವಿಧಾರಣೇ ||೧೮||
ಉತ್ತಾನೇ ಚ ಭವೇಚ್ಛೀಘ್ರಂ ಶುಕ್ರಾಶ್ಮರ್ಯಾಸ್ತು ಸಂಭವಃ ।
ಸರ್ವಂ ಪರಿಹರೇತ್ತಸ್ಮಾದೇತಲ್ಲೋಕದ್ವಯೇಽಹಿತಮ್ ॥ ||೧೯||
ಶುಕ್ರಂ ಚೋಪಸ್ಥಿತಂ ಮೋಹಾನ್ನ ಸನ್ಧಾರ್ಯಂ ಕಥಂಚನ ।

ಮಲಮೂತ್ರಗಳನ್ನು ವಿಸರ್ಜಿಸುವಾಗಲೂ, ಮೈಥುನಮಾಡುವಾಗಲೂ, ಆಹಾರವನ್ನು ತಿನ್ನುತ್ತಿರುವಾಗಲೂ, ವಮನ ವಿರೇಚನೌಧಗಳನ್ನು ವಿಸರ್ಜಿಸುತ್ತಿರುವಾಗಲೂ, (ಸ್ವಸ್ಥಚಿತ್ತನಾಗಿದ್ದು) ಮನಸ್ಸನ್ನು ಬೇರೆಕಡೆಗೆ ತಿರುಗಿಸಿರಬಾರದು. ಇದರಿಂದ ರೋಗಭಯವೂ, ಶರೀರಪೀಡೆಯೂ, ಮನೋವ್ಯಥೆಯೂ ಉಂಟಾಗುವುದಿಲ್ಲ. ಜಿತೇಂದ್ರಿಯನಾಗಿದ್ದುಕೊಂಡು ಅತಿಯಾಗಿ ಸ್ತ್ರೀಸಂಗಮಾಡದಂತೆ ಶರೀರವನ್ನು ಕಾಪಾಡಿಕೊಳ್ಳಬೇಕು. ಅತಿ ಮೈಥುನದಿಂದ ಹೊಟ್ಟೆನೋವು, ಕೆಮ್ಮು, ಜ್ವರ, ಉಬ್ಬಸ, ಕ್ಷೀಣತೆ, ಪಾಂಡುರೋಗ, ಕ್ಷಯರೋಗಗಳೂ ಆಕ್ಷೇಪಕ ಮೊದಲಾದ ವಾತರೋಗಗಳೂ ಉಂಟಾಗುತ್ತವೆ. ಸರಿಯಾದ ರೀತಿಯಿಂದ ಯೋಗ್ಯಕಾಲಗಳಲ್ಲಿ ಸ್ತ್ರೀಸಂಗಮಾಡಿದರೆ ದೀರ್ಘಾಯುಳಾಗಿಯೂ, ಬೇಗ ಮುಪ್ಪುಬಾರದೆಯೂ, ಶರೀರವೃದ್ಧಿ, ವರ್ಣ, ಬಲಯುಕ್ತರಾಗುತ್ತಾರೆ. ಪುರುಷರು ಎಲ್ಲಾ ಋತುಗಳಲ್ಲೂ ಸಾಮಾನ್ಯವಾಗಿ ಮೂರು ದಿನಗಳಿಗೊಂದು ಸಾರಿ ಸ್ತ್ರೀಸಂಗಮಾಡಬೇಕು. ವಿವೇಕವಂತನು ಬೇಸಿಗೆಯಲ್ಲಿ ಪಕ್ಷಕ್ಕೆ ಒಂದು ಸಾರಿ ಮೈಥುನಕ್ರಿಯೆಯನ್ನು ಆಚರಿಸಬೇಕು. ಮುಟ್ಟಾದವಳು, ಇಷ್ಟವಿಲ್ಲದವಳು, ಕೊಳಕಾದವಳು, ತನಗೆ ಹಿತವಿಲ್ಲದವಳು, ಜಾತಿಯಲ್ಲಿಯೂ ವಯಸ್ಸಿನಲ್ಲೂ ತನಗಿಂತಲೂ ಹೆಚ್ಚಾಗಿರುವವಳು, ರೋಗಪೀಡಿತಳು, ಅಂಗಹೀನಳು, ಗರ್ಭಿಣಿಯು, ಶತ್ರುವಾಗಿರುವವಳು, ಯೋನಿದೋಷವುಳ್ಳವಳು, ತನ್ನ ಗೋತ್ರದವಳು, ಗುರುವಿನ ಹೆಂಡತಿ, ಸನ್ಯಾಸಿನಿಯು, ಮಗಳು, ಅಕ್ಕತಂಗಿ ಮೊದಲಾದವರು ಮೈಥುನಕ್ಕೆ ನಿಷಿದ್ಧರು. ಇವರುಗಳನ್ನು ಬಿಡಬೇಕು. ಮೈಥುನಕ್ಕೆ ಅರ್ಹರಾದವರನ್ನೂ ಸಂಧ್ಯಾಕಾಲಗಳಲ್ಲೂ, ಪೂರ್ಣಿಮಾ, ಅಮಾವಾಸ್ಯಾ, ಸಂಕ್ರಮಣ ಮೊದಲಾದ ಪರ್ವಕಾಲಗಳಲ್ಲೂ ತ್ಯಜಿಸಬೇಕು. ಬೆಳಗಿನ ಹೊತ್ತು, ಅರ್ಧರಾತ್ರಿ, ಮಧ್ಯಾಹ್ನಗಳಲ್ಲೂ, ನಾಚಿಕೆಯಾಗುವ ಪ್ರದೇಶದಲ್ಲೂ, ಬೈಲು ಜಾಗದಲ್ಲೂ (ತೆರೆಮರೆಯಿಲ್ಲದೆ), ಶರೀರ ಮನಸ್ಸುಗಳು ಶುದ್ಧಿಯಿಲ್ಲದಿರುವಾಗಲೂ, ಹಸಿದಿರುವಾಗ, ರೋಗದಿಂದ ದಿಣಳುತ್ತಿರುವಾಗ, ಮನಸ್ಸು ವ್ಯಾಕುಲವಾಗಿರುವಾಗ, ವಾತ, ಮೂತ್ರ, ಮಲಗಳ ವೇಗಗಳುಂಟಾಗಿರುವಾಗ, ಬಾಯಾರಿದಾಗ, ಅತಿ ದುರ್ಬಲನಾಗಿರುವಾಗಲೂ, ಪಶು ಮೊದಲಾದುವುಗಳ ಯೋನಿಯಲ್ಲೂ, ಯೋನಿಯಲ್ಲದ ಗುದ ಮೊದಲಾದ ಅಂಗಗಳಲ್ಲೂ ಮೈಥುನ ಕರ್ಮವನ್ನು ಮಾಡಬಾರದು. ಚ್ಯುತವಾಗುತ್ತಿರುವ ಶುಕ್ರವನ್ನು ತಡೆಯಬಾರದು. ಬಲಿಷ್ಠನಾದರೂ ದೋಷದಿಂದ ಕೆಟ್ಟಿರುವ ಯೋನಿಯಲ್ಲಿ ಶುಕ್ರವನ್ನು

ವಿಸರ್ಜಿಸಬಾರದು. ಅತಿಯಾಗಿ ರೇತಸ್ಸನ್ನು ವಿಸರ್ಜಿಸುವುದೂ, ಮೇಢ್ರಮಣಿಗೆ ಮುಸುಕು ಹಾಕಿ ಮೈಥುನಮಾಡುವುದೂ, ಪುರುಷನು ಅಂಗತ್ತಲಾಗಿ ಮಲಗಿ ರತಿ ಕ್ರಿಯೆ ಮಾಡುವುದೂ, ಇವೆಲ್ಲಾ ನಿಂದಿತಗಳು. ಬುದ್ಧಿಶಾಲಿಯು ತನ್ನ ಹಿತರಕ್ಷಣೆಗಾಗಿ ಇವುಗಳನ್ನೆಲ್ಲಾ ತ್ಯಜಿಸಿಬಿಡಬೇಕು. ಚಪಲ ಚಿತ್ತನಾಗಿ ರಜಸ್ವಲೆಯೊಡನೆ ಮೈಥುನಮಾಡಿದರೆ ನೇತ್ರಬಲ, ಆಯುಸ್ಸು, ಕಾಂತಿಗಳು ನಾಶವಾಗುತ್ತವೆಯಲ್ಲದೆ ಅಧರ್ಮವೂ ಉಂಟಾಗುತ್ತದೆ. ವ್ರತಾಚರಣೆಮಾಡುವ ಸನ್ಯಾಸಿನಿ, ಗುರುವಿನ ಹೆಂಡತಿ, ಸಗೋತ್ರ ಸ್ತ್ರೀಯಳು ಇವರನ್ನೂ, ಪರ್ವಕಾಲದಲ್ಲೂ, ಸಂಧ್ಯಾಕಾಲದಲ್ಲೂ, ವೃದ್ಧಳನ್ನೂ, ಮೈಥುನ ಮಾಡಿದರೆ ಪ್ರಾಣನಾಶವಾಗುತ್ತದೆ. (ಆಯುಃಕ್ಷೀಣತೆಯುಂಟಾಗುತ್ತದೆ). ಗರ್ಭಿಣಿಯಲ್ಲಿ ಗರ್ಭನಾಶವೂ ರೋಗಿಷ್ಠಳಲ್ಲಿ ಬಲಹಾನಿಯೂ, ಅಂಗಹೀನಳು, ಕೊಳಕುಬಟ್ಟೆ ಶರೀರವುಳ್ಳವಳು, ದ್ವೇಷಿಯಾದವಳು, ಗೊಡ್ಡಿಯರು ಇವರ ಸಮಾಗಮದಿಂದಲೂ ಆವರಣವಿಲ್ಲದ, ಅಶುಚಿಯಾದ ಸ್ಥಳದಲ್ಲಿ ರತಿಕ್ರಿಯೆ ನಡೆಸಿದರೂ ಶುಕ್ರಕ್ಷಯವೂ ಮನಃಕ್ಷೋಭೆಯೂ ಉಂಟಾಗುತ್ತವೆ. ರೋಗಪೀಡಿತನಿಗೆ ರತಿಕ್ರೀಡೆಯಿಂದ ನೋವೂ ಪ್ಲೀಹವೃದ್ಧಿಯೂ ಮರಣವೂ ಮೂರ್ಛೆಯೂ ಉಂಟಾಗುತ್ತವೆ. ಪ್ರಾತಃಕಾಲ, ಅರ್ಧರಾತ್ರಿಗಳಲ್ಲಿ ಮೈಥುನಮಾಡುವವರಿಗೆ ವಾತ ಪಿತ್ತಗಳ ಪ್ರಕೋಪವೂ ತಿರ್ಯಗ್ಜಂತುಗಳ ಯೋನಿ, ಅಯೋನಿ, ದುಷ್ಟಯೋನಿ ಗಮನದಿಂದ ಉಪದಂಶವ್ಯಾಧಿಯೂ, ವಾತಕೋಪವೂ, ಶುಕ್ರಕ್ಷಯವೂ ಉಂಟಾಗುತ್ತವೆ. ಮಲಮೂತ್ರ ವೇಗಗಳು ಉಂಟಾದಾಗ ಮೈಥುನ ಮಾಡುವುದರಿಂದಲೂ ಚ್ಯುತವಾಗುತ್ತಿರುವ ಶುಕ್ರವನ್ನು ತಡೆಯುವುದರಿಂದಲೂ ಅಂಗತ್ತಲಾಗಿ ಮಲಗಿ ಮೈಥುನವನ್ನಾಚರಿಸುವುದರಿಂದಲೂ ಬಲು ಬೇಗನೆ ಶುಕ್ರಾಶ್ಮರಿಯುಂಟಾಗುತ್ತದೆ. ಆದಕಾರಣ ಈ ಲೋಕದಲ್ಲೂ ಪರಲೋಕದಲ್ಲೂ ಅಹಿತವನ್ನು ಉಂಟುಮಾಡುವ ಮೇಲೆ ವಿವರಿಸಿದ ದುಷ್ಟಅಭ್ಯಾಸಗಳನ್ನು ತ್ಯಜಿಸಬೇಕು. ತಿಳಿುವಳಿಕೆಯಿಲ್ಲದೆ ಸ್ಥಾನಚ್ಯುತವಾದ ಶುಕ್ರವನ್ನು ಯಾವ ರೀತಿಯಿಂದಲೂ ತಡೆಯಬಾರದು. ||೧೩೦||

ವಯೋರೂಪಗುಣೋಪೇತಾಂ ತುಲ್ಯಶೀಲಾಂ ಗುಣಾನ್ವಿತಾಮ್
ಅಭಿಕಾಮೋಽಭಿಕಾಮಾಂ ತು ಹೃಷ್ಟೋ ಹೃಷ್ಟಾಮಲಙ್ಕೃತಾಮ್ ।
ಸೇವೇತ ಪ್ರಮದಾಂ ಯುಕ್ತ್ಯಾ ವಾಜೀಕರಣಬೃಂಹಿತಃ ||೧೩೧||
ಭಕ್ಷ್ಯಾಃ ಕ್ಷೀರಂ ಸಶರ್ಕರಾಃ ಸಸಿತಂ ರಸ ಏವ ಚ ।
ಸ್ನಾನಂ ಸವ್ಯಜನಂ ಸ್ವಪ್ನೋ ವ್ಯವಾಯಾನ್ತೇ ಹಿತಾನಿ ತು ||೧೩೨||

ವಯಸ್ಸು, ರೂಪು, ಸದ್ಗುಣಗಳಿಂದಕೂಡಿ ತನ್ನ ಶೀಲಕ್ಕೆ ಸಮಾನಗುಣವುಳ್ಳ ಸ್ತ್ರೀಯೊಡನೆ ಇಚ್ಛೆಯುಳ್ಳವನಾಗಿ (ಮೈಥುನಾಸಕ್ತಳಾಗಿ ಅಲಂಕೃತಳಾಗಿ ಹರ್ಷಯುಕ್ತಳಾದ ಕಾಮೋದ್ರಿಕ್ತಗಳಾಗಿರುವವಳನ್ನು) ವಾಜೀಕರಣೌಷಧಗಳನ್ನು ಸೇವಿಸಿ ಮದಿಸಿರುವ ಪುರುಷನು ಉದ್ರಿಕ್ತನಾಗಿರುವಾಗ ಸಂಭೋಗಮಾಡಬೇಕು. ರತಿಕ್ರೀಡೆಯು ಮುಗಿದ ಮೇಲೆ ಸಕ್ಕರೆ ಮಿಶ್ರಮಾಡಿದ ಭಕ್ಷ್ಯಗಳನ್ನು ತಿಂದು ಸಕ್ಕರೆ ಮಿಶ್ರಮಾಡಿದ

ಹಾಲನ್ನೂ ಮಾಂಸ ರಸವನ್ನೂ ಕುಡಿಯಬೇಕು. ಸುಖೋದಕಸ್ನಾನಮಾಡಿ ಬೀಸಣಿಗೆಯಿಂದ ತಂಗಾಳಿಯನ್ನು ಬೀಸಿಸಿಕೊಂಡು ನಿದ್ರಿಸಿದರೆ ಹಿತವಾಗುತ್ತದೆ.

ಟಿಪ್ಪಣಿ—ಮೈಥುನಕ್ಕೆ ರಾತ್ರಿಕಾಲವು ಪ್ರಶಸ್ತವೆಂದೂ ಮೈಥುನವಾದ ಮೇಲೆ ಸ್ನಾನಮಾಡಬೇಕೆಂದೂ ಹೇಳಿದೆಯಷ್ಟೇ. ರಾತ್ರಿಯಲ್ಲಿ ಸ್ನಾನ ಭೋಜನಗಳನ್ನು ಮಾಡುವುದರಿಂದ ಅಜೀರ್ಣಾದಿ ದೋಷಗಳುಂಟಾಗುತ್ತವೆಂಬ ಸಂಶಯಬರುತ್ತದೆ. ಅಧಿಕ ಶುಕ್ರವುಳ್ಳವರು ದಿವಾಮೈಥುನಮಾಡಿದರೆ ಆಗ ಸ್ನಾನಮಾಡಬಹುದೆಂದು ನಿರ್ಧರಿಸಿರುವ ವಿಚಾರವಿದು. ಅಥವಾ ಗ್ರೀಷ್ಮರ್ತುವಿನಲ್ಲಿ ಸಾಯಂಕಾಲದಲ್ಲಿ ಸ್ನಾನ ಭೋಜನಗಳನ್ನು ಆಚರಿಸಬಹುದಾದಕಾರಣ ದೋಷವಲ್ಲವೆಂದೂ ಅತಿ ವಿವೃದ್ಧ ಧಾತುಗಳಿಂದ ವ್ಯಾಪ್ತ ಪುರುಷರಿಗೋಸ್ಕರ ಹೇಳಿರುವುದೆಂದೂ ತಿಳಿಯುವುದು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಅನಾಗತಾಬಾಧ ಪ್ರತಿಷೇಧ ಚಿಕಿತ್ಸಾನಾಮ ಚತುರ್ವಿಂಶತಿತಮೋಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಪಂಚವಿಂಶತಿತಮೋಽಧ್ಯಾಯಃ

ಅಥಾತೋ ಮಿಶ್ರಕಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಮಿಶ್ರಕಚಿಕಿತ್ಸೆಯನ್ನು ವಿವರಿಸುತ್ತೇವೆ.

ಪಾಳ್ಯಾಮಯಾಸ್ತು ವಿಸ್ರಾವ್ಯಾ ಇತ್ಯುಕ್ತಂ ಪ್ರಾಜ್ಞಬೋಧರ್ತಃ ।
ಪರಿಪೋಟಸ್ತಥೋತ್ಪಾತ ಉನ್ಮಂಥೋ ದುಃಖವರ್ಧನಃ ||೩||
ಪಞ್ಚಮಃ ಪರಿಲೇಹೀ ಚ ಕರ್ಣಪಾಳ್ಯಾಗದಾ ಸ್ಮೃತಾಃ ।
ಸೌಕುಮಾರ್ಯಾಚ್ಚಿರೋತ್ಸೃಷ್ಟೇ ಸಹಸಾಭಿಪ್ರವರ್ಧಿತೇ ||೪||
ಕರ್ಣಶೋಫೋ ಭವೇತ್ ಪಾಳ್ಯಾಂ ಸರುಜಃ ಪರಿಪೋಟವಾನ್ ।
ಕೃಷ್ಣಾರುಣನಿಭಃ ಸ್ತಬ್ಧಃ ಸ ವಾತಾತ್ ಪರಿಪೋಟಕಃ ||೫||
ಗುರ್ವಾಭರಣಸಂಯೋಗಾತ್ ತಾಡನಾತ್ ಘರ್ಷಣಾದಪಿ ।
ಶೋಫಃ ಪಾಳ್ಯಾಂ ಭವೇಚ್ಛ್ಯಾವೋ ದಾಹಪಾಕರುಗನ್ವಿತಃ ||೬||
ರಕ್ತೋ ವಾ ರಕ್ತಪಿತ್ತಾಭ್ಯಾಮುತ್ಪಾತಃ ಸಗದೋ ಮತಃ ।
ಬಲಾದ್ವರ್ಧಯತಃ ಕರ್ಣಂ ಪಾಳ್ಯಾಂ ವಾಯುಃ ಪ್ರಕುಪ್ಯತಿ ||೭||
ಗೃಹೀತ್ವಾ ಸಕಫಂ ಕುರ್ಯಾಚ್ಛೋಫಂ ತದ್ವರ್ಣವೇದನಮ್ ।
ಉನ್ಮಂಥಕಃ ಸಕಣ್ಡೂಕೋ ವಿಕಾರಃ ಕಫವಾತಜಃ ||೮||
ವರ್ಧಮಾನೇ ಯದಾ ಕರ್ಣೇ ಕಣ್ಡೂದಾಹರುಗನ್ವಿತಃ ।
ಶೋಫೋ ಭವತಿ ಪಾಕಶ್ಚ ತ್ರಿದೋಷೋಽಸೌ ದುಃಖವರ್ಧನಃ ||೯||
ಕಫಾಸೃಕ್ಕ್ರಿಮಯಃ ಕುರ್ಯುಃ ಸರ್ಷಪಾಭಾ ವಿಕಾರಿಣೀಃ ।
ಸ್ರಾವಿಣೀಃ ಪಿಡಿಕಾಃ ಪಾಳ್ಯಾಂ ಕಣ್ಡೂದಾಹರುಗನ್ವಿತಾಃ ||೧೦||
ಕಫಾಸೃಕ್ಕ್ರಿಮಿಸಂಭೂತಃ ಸವಿಸರ್ಪಾಸ್ತಿತಸ್ತತಃ ।
ಲಿಹ್ಯಾತ್ಸಶಷ್ಕುಲೀಂ ಪಾಳೀಂ ಪರಿಲೇಹೀತಿ ಸ ಸ್ಮೃತಃ ||೧೧||
ಪಾಲ್ಯಾಮಯಾಹ್ಯಮೀ ಘೋರಾ ನರಸ್ಯಾಪ್ರತಿಕಾರಿಣಃ ।
ಮಿಥ್ಯಾಹಾರವಿಹಾರಸ್ಯ ಪಾಳಿಂ ಹಿಂಸ್ಯುರುಪೇಕ್ಷಿತಾಃ ||೧೨||

ಸೂತ್ರಸ್ಥಾನದ ೨೫ ನೆಯ ಅಧ್ಯಾಯದಲ್ಲಿ ಪಾಳ್ಯಾಮಯಗಳನ್ನು ಸ್ರಾವಮಾಡಬೇಕೆಂದು ತಿಳಿಸಿರುತ್ತೆ. ಅವುಗಳನ್ನು ಇಲ್ಲಿ ವಿವರಿಸಲಾಗುತ್ತದೆ. ಪರಿಪೋಟ, ಉತ್ಪಾತ ಉನ್ಮಂಥ, ದುಃಖವರ್ಧನ ಮತ್ತು ಪರಿಲೇಹೀ ಎಂದು ೫ ವಿಧ ಕರ್ಣಪಾಳಿಯ ರೋಗ

ಗಳ ಪೈಕಿ (೧) ಬಹಳ ದಿನಗಳಾದಮೇಲೆ ಕರ್ಣಪಾಳಿಯನ್ನು ಚುಚ್ಚಿ ರಂಧ್ರವನ್ನು ಜೇಗನೆ ಹಿಗ್ಗಲಿಸುವುದಕ್ಕಾಗಿ ದಪ್ಪನಾದ ಬೆಂಡಿನ ಕಡ್ಡಿಯನ್ನು ರಂಧ್ರದೊಳಗೆ ನುಗ್ಗಿಸಿದರೆ ಮೃದುವಾದ ಪಾಳಿಯು ಊದಿ ನೋವನ್ನುಂಟುಮಾಡುತ್ತದೆ. ಕೆಲವು ವೇಳೆ ಚರ್ಮವು ಹರಿದು ಹೋಗಿ ವಾತವೃದ್ಧಿಯಿಂದ ಕಪ್ಪಾಗಿಯೂ ಅರುಣ ಬಣ್ಣವುಳ್ಳದಾಗಿಯೂ ಬಿಗಿದು ನಿಲ್ಲುತ್ತದೆ. ಇದಕ್ಕೆ **ಪರಿಪೋಟವೆಂದು** ಹೆಸರು. (೨) ಕರ್ಣಪಾಳಿಯ ರಂಧ್ರದಲ್ಲಿ ಭಾರವಾದ ಆಭರಣವನ್ನು ಸಿಕ್ಕಿಸುವುದರಿಂದಲೂ ಪೆಟ್ಟುಬೀಳುವುದರಿಂದಲೂ ಬಲವಾಗಿ ಉಜ್ಜುವುದರಿಂದಲೂ ಕಪ್ಪು ಬಣ್ಣದ ಶೋಫವು ಪಾಳಿಯಲ್ಲುಂಟಾಗಿ ಉರಿತಪಾಕ ನೋವುಗಳುಳ್ಳದಾಗುತ್ತದೆ. ರಕ್ತಪಿತ್ತವೃದ್ಧಿಯಾಗಿ ಕೆಂಪಾದರೆ **ಉತ್ಪಾತವೆನ್ನುತ್ತಾರೆ**. (೩) ಕರ್ಣಪಾಳಿಯ ರಂಧ್ರವನ್ನು ಬಲತ್ಕಾರದಿಂದ ಹಿಗ್ಗಲಿಸಿದರೆ ವಾಯುವು ಪ್ರಕೋಪಗೊಂಡು ಕಫವನ್ನು ಸೇರಿ ಬಿಳುಪಾದ ನವೆಯಿಂದ ಕೂಡಿದ ಶೋಫವನ್ನುಂಟುಮಾಡುತ್ತದೆ. ಈ ರೋಗಕ್ಕೆ **ಉನ್ಮಂಥಕವೆಂದು** ಹೆಸರು. (೪) ಕರ್ಣಪಾಳಿಯನ್ನು ಹಿಗ್ಗಲಿಸುವಾಗ ನವೆ, ಉರಿತ, ನೋವುಗಳಿಂದ ಕೂಡಿದ ಶೋಫವುಂಟಾಗಿ ಚರ್ಮವು ಪಾಕವಾದರೆ ಇದಕ್ಕೆ **ದುಃಖವರ್ಧನವೆಂದು** ಹೆಸರು. (೫) ಕರ್ಣಪಾಳಿಯಲ್ಲಿ ಕಫ, ರಕ್ತ, ಕ್ರಿಮಿಗಳು ಸೇರಿ ಸಾಸಿವೆಕಾಳಿನಷ್ಟು ದಪ್ಪವಾದ ಬೊಕ್ಕೆಗಳನ್ನುಂಟುಮಾಡುತ್ತವೆ. ಇವು ಒಡೆದು ಸೋರುತ್ತಾ ನವೆ, ಉರಿತ, ನೋವುಗಳಿಂದಲೂ ಕಫ ರಕ್ತಜ ಕ್ರಿಮಿಗಳಿಂದಲೂ ಕೂಡಿ ಮುನ್ನುಗ್ಗಿ ಪಾಳಿಯನ್ನೂ ಕರ್ಣಶಷ್ಕುಲಿಯನ್ನೂ ತಿಂದುಬಿಡುತ್ತವೆ. ಈ ರೋಗಕ್ಕೆ **ಪರಿಲೇಹೀ** ಎಂದು ಹೆಸರು. ಈ ಭಯಂಕರ ರೋಗಗಳಿಗೆ ಚಿಕಿತ್ಸೆಮಾಡದೆ ಉಪೇಕ್ಷಿಸಿ ಮಿಥ್ಯಾಹಾರ ಸೇವನೆಯನ್ನು ಮಾಡಿದರೆ ಕರ್ಣಪಾಳಿಯನ್ನೇ ತಿಂದುಬಿಡುತ್ತವೆ.

ತಸ್ಮಾದಾಶು ಭಿಷಕ್ ತೇಷು ಸ್ನೇಹಾದಿಕ್ರಮಮಾಚರೇತ್ ।
ತಥಾಭ್ಯಙ್ಗಪರೀಷೇಕಪ್ರದೇಹಾಸೃಗ್ವಿಮೋಕ್ಷಣಮ್ ॥೧೩॥
ಸಾಮಾನ್ಯತೋ ವಿಶೇಷಾಚ್ಚ ವಕ್ಷ್ಯಾಮ್ಯಭ್ಯಙ್ಗನಂ ಪ್ರತಿ ।
ಖರಮಞ್ಜರಿಯಷ್ಟ್ಯಾಹ್ವಸೈನ್ಧವಾಮರದಾರುಭಿಃ ॥೧೪॥
ಸುಪಿಷ್ಟೈಃ ಸಾಶ್ವಗನ್ಧೈಶ್ಚ ಮೂಲಕಾವಲ್ಗುಜೈಃ ಫಲೈಃ ।
ಸರ್ಪಿಸ್ತೈಲವಸಾಮಜ್ಜಮಧೂಚ್ಛಿಷ್ಟಾನಿ ಪಾಚಯೇತ್ ॥೧೫॥
ಸಕ್ಷೀರಾಣ್ಯಥ ತೈಃ ಪಾಳಿಂ ಪ್ರದಿಹ್ಯಾತ್ ಪರಿಪೋಟಕೇ ।
ಮಞ್ಜಿಷ್ಠಾತಿಲಯಷ್ಟ್ಯಾಹ್ವಸಾರಿವೋತ್ಪಲಪದ್ಮಕೈಃ ॥೧೬॥
ಸರೋಧ್ರೈಃ ಸಕದಮ್ಬೈಶ್ಚ ಬಲಾಜಮ್ಬ್ವಾಮ್ರಪಲ್ಲವೈಃ ।
ಸಿದ್ಧಂ ಧಾನ್ಯಾಮ್ಲಸಂಯುಕ್ತಂ ತೈಲಮುತ್ಪಾತನಾಶನಮ್ ॥೧೭॥
ತಾಳಪತ್ರ್ಯಶ್ವಗನ್ಧಾರ್ಕವಾಕುಚೀಫಲಸೈನ್ಧವೈಃ ।
ತೈಲಂ ಕುಳೀರಗೋಧಾಭ್ಯಾಂ ವಸಯಾ ಸಹ ಪಾಚಿತಮ್ ॥೧೮॥
ಸರಳಾಲಾಙ್ಗಲೀಭ್ಯಾಂ ಚ ಹಿತಮುನ್ಮನ್ಥನಾಶನಮ್ ।

ತಥಾಶ್ಮನ್ತಕಜಮ್ಬ್ವಾಮ್ರಪತ್ರಕ್ವಾಥೇನ ಸೇಚನಮ್ ||೧೯||
ಪ್ರಪೌಣ್ಡರೀಕಮಧುಕ ಮಞ್ಜಿಷ್ಠಾರಜನೀದ್ವಯೈಃ
ಚೂರ್ಣೈರುದ್ವರ್ತನೈಃ ಪಾಳೀಂ ತೈಲಾಕ್ತಾಮವಚೂರ್ಣಯೇತ್ ||೨೦||
ಲಾಕ್ಷಾವಿಡಙ್ಗಕಲ್ಕೇನ ತೈಲಂ ಪಕ್ತ್ವಾವಚಾರಯೇತ್
ಸ್ವಿನ್ನಾಂ ಗೋಮಯಪಿಣ್ಡೇನ ಪ್ರದಿಹ್ಯಾತ್ ಪರಿಲೇಹಿಕೇ ||೨೧||
ಪಿಷ್ಟೈರ್ವಿಡಙ್ಗೈರಥವಾ ತ್ರಿವೃತ್‌ಶಾಮಾರ್ಕಸಂಯುತೈಃ
ಕರಞ್ಜಿಙ್ಗುದಿಬೀಜೈರ್ವಾ ಕುಟಜಾರಗ್ವಧಾಯುತೈಃ ||೨೨||
ಸರ್ವೈರ್ವಾ ಸಾರ್ಷಪಂ ತೈಲಂ ಸಿದ್ಧಂ ಮರಿಚಸಂಯುತಮ್
ಸನಿಮ್ಬಪತ್ರೈರಭ್ಯಙ್ಗೇ ಮಧೂಚ್ಛಿಷ್ಟಾನ್ವಿತಂ ಹಿತಮ್ ||೨೩||
ಪಾಳೀಷು ವ್ಯಾಧಿಯುಕ್ತಾಸು ತನ್ವೀಷು ಕಠಿನಾಸು ಚ
ಪುಷ್ಟ್ಯರ್ಥಂ ಮಾರ್ದವಾರ್ಥಂ ಚ ಕುರ್ಯಾದಭ್ಯಞ್ಜನಂ ಹಿತಮ್ ||೨೪||
ಲೋಪಾಕಾನೂಪಮಜ್ಜಾನಂ ವಸಾಂ ತೈಲಂ ನವಂ ಘೃತಮ್
ಪಚೇದ್ದಶಗುಣಂ ಕ್ಷೀರಮಾವಾಪ್ಯ ಮಧುರಂ ಗಣಮ್ ||೨೫||
ಅಪಾಮಾರ್ಗಾಶ್ವಗನ್ಧೇ ಚ ತಥಾ ಲಾಕ್ಷಾರಸಂ ಶುಭಮ್
ತತ್ಸಿದ್ಧಂ ಪರಿಪೂತಂ ಚ ಸ್ವನುಗುಪ್ತಂ ನಿಧಾಪಯೇತ್ ||೨೬||
ತೇನಾಭ್ಯಙ್ಗಾತ್ ಸದಾ ಪಾಳೀಂ ಸುಸ್ವಿನ್ನಾಮತಿಮರ್ದಿತಾಮ್
ಏತೇನ ಪಾಳ್ಯೋ ವರ್ಧನ್ತೇ ನಿರುಜೋ ನಿರುಪದ್ರವಾಃ ||೨೭||
ಮೃದ್ವ್ಯಃ ಪುಷ್ಟಾಃ ಸಮಾ ಸ್ನಿಗ್ಧಾ ಜಾಯನ್ತೇ ಭೂಷಣಕ್ಷಮಾಃ

ವೈದ್ಯನು ಪಾಳ್ಯಾಮಯಗಳಲ್ಲಿ ಬೇಗನೆ ಸ್ನೇಹಸ್ವೇದಾದಿ ಕ್ರಮಗಳನ್ನೂ ಅಭ್ಯಂಗ ಪರಿಷೇಚನ, ಲೇಪನ, ರಕ್ತಮೋಕ್ಷಣಗಳನ್ನೂ ಪ್ರಯೋಗಿಸಬೇಕು. ವಿಶೇಷ ರೀತಿ ಯಿಂದ ಅಭ್ಯಂಗ ಕ್ರಮವನ್ನು ಹೇಳುತ್ತೇವೆ. ಉತ್ತರಣೆಯ ಸಮೂಲ, ಅತಿಮಧುರ, ಸೈಂಧವ, ದೇವದಾರು, ಅಶ್ವಗಂಧಿಯಬೇರು, ಮೂಲಂಗಿಬಿತ್ತ, ಬಾವಂತಿಬೀಜ ಇವುಗಳ ಚೂರ್ಣವನ್ನು ತುಪ್ಪ, ಎಳ್ಳೆಣ್ಣೆ, ವಸೆ, ಮಜ್ಜೆ, ಜೇನುಮೇಣ, ಹಾಲು ಇವುಗಳೊಡನೆ ತಯಾರಿಸಿದ ತೈಲದಿಂದ ಕರ್ಣಪಾಲಿಯನ್ನು ಪರಿಪೋಟಿಕ ರೋಗದಲ್ಲಿ ಲೇಪಿಸಬೇಕು. ಮಂಜಿಷ್ಠೆ, ಎಳ್ಳು, ಅತಿಮಧುರ, ಸೊಗದೆಬೇರು, ನೈದಿಲೆಗೆಡ್ಡೆ, ಪದ್ಮಕ, ರೋಧ್ರ, ಈಚಲುಬೇರು, ಕಳ್ಳಂಗಡಲೆ, ನೇರಳೆತೊಗಟೆ, ಮಾವಿನಚಿಗುರುಗಳನ್ನು ಅಮ್ಲಕಾಂಜಿಕ ತೈಲಗಳನ್ನು ಸೇರಿಸಿ ತಯಾರಿಸಿದ ತೈಲದಿಂದ ಲೇಪನಮಾಡಿದರೆ ಉತ್ಪಾತವು ನಿವಾರಣೆ ಯಾಗುತ್ತದೆ. ತಾಳಪತ್ರಗಳು, ಅಶ್ವಗಂಧಿಬೇರು, ಎಕ್ಕದಬೇರು, ಬಾವಂತಿಬೀಜ, ಮಗ್ಗರಿಕಾಯಿ, ಸೈಂಧಲವಣ, ತೈಲ, ನಳ್ಳಿ, ಉಡಗಳ ಕೊಬ್ಬು, ಸರಳದೇವದಾರು, ಕೋಳಿಕುಟುಮುನಗೆಡ್ಡೆಗಳ ಕಲ್ಕವನ್ನು ಸೇರಿಸಿ ಪಾಕಮಾಡಿದ ತೈಲದಿಂದ ಲೇಪನಮಾಡಿ ಸಲು ನಿವಾರಣೆಯಾಗುತ್ತದೆ. ಸರಳದೇವದಾರು, ಆರೇಮರದತೊಗಟೆ, ನೇರಳೆಚಿಗುರು ಮತ್ತು ಮಾವಿನ ಸೊಪ್ಪು ಇವುಗಳ ಕಷಾಯದಿಂದ ಸೇಚನೆಮಾಡಬೇಕು. ಪ್ರಪೌಂಡ

ರೀಕ, ಅತಿಮಧುರ, ಮಂಜಿಷ್ಠೆ, ಅರಿಶಿನ, ಮರದರಿಶಿನ ಇವುಗಳ ಚೂರ್ಣವನ್ನು ಎಳ್ಳಿನ ಎಣ್ಣೆಯಿಂದ ರಂಗಳಿಸಿ ಕರ್ಣಪಾಳಿಯನ್ನು ಉಜ್ಜಿ ಅರಗು, ವಿಡಂಗಗಳ ಚೂರ್ಣವನ್ನು ಸೇರಿಸಿ ತಯಾರಿಸಿದ ತೈಲದಿಂದ ಲೇಪಿಸಬೇಕು. ಪರಿಲೇಹಿಕಾರೋಗದಲ್ಲಿ ಕರ್ಣಪಾಳಿಯನ್ನು ಸಗಣಿಯ ಉಂಡೆಯಿಂದ ಸ್ವೇದನಮಾಡಿಸಿ ಮೇಲೆ ಹೇಳಿದ ತೈಲದಿಂದ ಲೇಪನ ಮಾಡಬೇಕು. ಅಥವಾ ಹೊಂಗೆಬೀಜ, ಇಂಗಳದ ಹಣ್ಣಿನಬೀಜ, ಕೊಡಶಿಗೆಬೀಜ, ಕಕ್ಕೆಬೀಜ, ವಿಡಂಗ, ಕರೀತಿಗಡೆ, ಕೆಂಪುತಿಗಡೆ ಇವುಗಳನ್ನು ಸಾಸಿವೆಯೆಣ್ಣೆಯೊಡನೆ ಪಾಕಮಾಡಿ ಮೆಣಸು, ಬೇವಿನಸೊಪ್ಪು, ಜೇನುಮೇಣಗಳನ್ನೂ ಸೇರಿಸಿ ತಯಾರಿಸಿದ ತೈಲವನ್ನು ಲೇಪಿಸಿದರೆ ಕರ್ಣಫಾಳಿಯ ರೋಗಗಳು ನಿವಾರಣೆಯಾಗುತ್ತವೆ. ತೆಳುವಾದ ಮತ್ತು ಗಟ್ಟಿಯಾದ ಕರ್ಣಪಾಳಿಗಳು ಮೆತ್ತಗಾಗಿ ಪುಷ್ಟಿಯಾಗುತ್ತವೆ. ನರಿ, ಹಂದಿ ಮೊದಲಾದ ಆನೂಪದೇಶದ ಪ್ರಾಣಿಗಳ ಮಜ್ಜೆ, ವಸೆಗಳನ್ನೂ ತಿಲತೈಲವನ್ನೂ ಹೊಸ ತುಪ್ಪವನ್ನೂ ಅವುಗಳ ಹತ್ತರಷ್ಟು ಹಾಲನ್ನೂ ಸೇರಿಸಿ ಕಾಕೋಳಿ ಮೊದಲಾದ ಮಧುರ ಗಣದ್ರವ್ಯಗಳ ಮತ್ತು ಉತ್ತರಣೆ, ಅಶ್ವಗಂಧದ ಬೇರುಗಳ ಕಲ್ಕವನ್ನೂ ಅರಗಿನ ಕಷಾಯವನ್ನೂ ಸೇರಿಸಿ ತಯಾರಿಸಿದ ತೈಲವನ್ನು ವಸ್ತ್ರದಿಂದ ಶೋಧಿಸಿ ಭದ್ರವಾದ ಜಾಡಿಗೆ ತುಂಬಿ ಮುಚ್ಚಳವನ್ನು ಮುಚ್ಚಿ ಕರ್ಣಪಾಳಿಗಳಿಗೆ ಅಭ್ಯಂಗ ಮತ್ತು ಸ್ವೇದಗಳನ್ನು ಮಾಡಿಸಿ ಹೆಚ್ಚಾಗಿ ಮರ್ದನೆಮಾಡುತ್ತಾ ಬಂದರೆ ನೋವು ಮತ್ತು ಯಾವ ಬಾಧೆಯೂ ಇಲ್ಲದೆ ಕರ್ಣಪಾಳಿಗಳು ವೃದ್ಧಿಯಾಗಿ ಮೆತ್ತಗೂ ಪುಷ್ಟಿಹೊಂದಿಯೂ ಸಮವಾಗಿಯೂ ಹೊಳಪಾಗಿಯೂ ಆಭರಣಗಳನ್ನು ಹೊರುವಷ್ಟು ಸಾಮರ್ಥ್ಯವುಳ್ಳವಾಗಿಯೂ ಆಗುತ್ತವೆ.

ನೀಲೀದಳಂ ಭೃಙ್ಗರಜೋಽರ್ಜುನತ್ವಕ್ ಪಿಣ್ಡೀತಕಂ ಕೃಷ್ಣಮಯೋರಜಶ್ಚ । ಬೀಜೋ
ದ್ಭವಂ ಸಾಹಚ ರಂಚ ಪುಷ್ಪಂ ಪಥ್ಯಾಕ್ಷಧಾತ್ರೀಸಹಿತಂ ವಿಚೂರ್ಣ್ಯ ॥೨೮॥ ಏಕೀಕೃತಂ
ಸರ್ವಮಿದಂ ಪ್ರಮಾಯ ಪಙ್ಕ್ತ್ಯೇನ ತುಲ್ಯಂ ನಳಿನೀಭವೇನ । ಸಂಯೋಜ್ಯ ಪಕ್ಷಂ ಕಲಶೇ
ನಿಧಾಯ ಲೋಹೇ ಘಟೇ ಸದ್ಮನಿ ಸಾಹಿಧಾನೇ ॥೨೯॥ ಅನೇನ ತೈಲಂ ವಿಪಚೇದ್ವಿಮಿಶ್ರಂ
ರಸೇನ ಭೃಙ್ಗತ್ರಿಫಲಾಭವೇನ । ಆಸನ್ನಪಾಕೇ ಚ ಪರೀಕ್ಷಣಾರ್ಥಂ ಪತ್ರಂ ಬಲಾಕಾಭವಮಾಕ್ಷಿ
ಪೇಚ್ಚ ॥೩೦॥ ಭವೇದ್ಯದಾ ತದ್ಭ್ರಮರಾಙ್ಗನೀಲಂ ತದಾ ವಿಪಕ್ವಂ ವಿನಿಧಾಯ ಪಾತ್ರೇ ।
ಕೃಷ್ಣಾಯಸೇ ಮಾಸಮವಸ್ಥಿತಂ ತದಭ್ಯಙ್ಗಯೋಗಾತ್ ಪಲಿತಾನಿ ಹನ್ಯಾತ್ ॥೩೧॥

ನೀಲಿಗಿಡದಎಲೆ, ಗರುಗದಸೊಪ್ಪು, ಮತ್ತಿಮರದತೊಗಟೆ, ಕರೀಹೂವಿನ ಮಗ್ಗಾರೆ ತೊಗಟೆ, ಕಪ್ಪುಕಬ್ಬಿಣದಪುಡಿ, ಮಾದಳದಹೂವು, ಮುಳ್ಳುಗೋರಂಟೆಯಹೂವು, ಅಣಿಲೆ, ತಾರೆ, ನೆಲ್ಲೀಕಾಯಿಗಳ ಸಿಪ್ಪೆ ಇವೆಲ್ಲವನ್ನೂ ಕುಟ್ಟಿ ಪುಡಿಮಾಡಿ ಎಲ್ಲಕ್ಕೂ ಸಮಭಾಗ ತಾವರೆಗಿಡದ ಕೆಳಗಿರುವ ಜೇಡಿಮಣ್ಣನ್ನು ಸೇರಿಸಿ ದೊಡ್ಡದಾದ ಕಬ್ಬಿಣದ ಪಾತ್ರೆಗೆ ತುಂಬಿ ಮುಚ್ಚಳ ಮುಚ್ಚಿ ಒಂದುಪಕ್ಷ ಕಳೆದಮೇಲೆ ಹೊರಗೆ ತೆಗೆದು ಗರುಗದ ಸೊಪ್ಪು ತ್ರಿಫಲಾಕಷಾಯ ತೈಲಗಳೊಡನೆ ಪಾಕಮಾಡುತ್ತಿರುವಾಗ ಪರೀಕ್ಷೆಗಾಗಿ ಬಕ

ಪಕ್ಷಿಯ ರೆಕ್ಕೆಗಳನ್ನು ಹಾಕಿ ಅವು ದುಂಬಿಯಗರಿಯಂತೆ ನೀಲವರ್ಣಕ್ಕೆ ತಿರುಗಿದಾಗ ಪಾಕ ಸರಿಯಾಗಿದೆಯೆಂದು ತಿಳಿದು ಪಾತ್ರೆಯನ್ನು ಕೆಳಕ್ಕೆ ಇಳಿಸಿಕೊಂಡು ವಸ್ತ್ರದಿಂದ ತೈಲವನ್ನು ಶೋಧಿಸಿ ಕಬ್ಬಿಣದ ಪಾತ್ರೆಗೆ ತುಂಬಿ ಒಂದು ಮಾಸದವರೆಗೆ ಮುಚ್ಚಿಟ್ಟದ್ದು ಅನಂತರ ಅಭ್ಯಂಗಮಾಡಿಸಿದರೆ ನರೆತು ಬೆಳ್ಳಗಿರುವ ತಲೆಕೂದಲೂ ಕಪ್ಪಾಗುತ್ತದೆ.

ಸೈರೀಯಜಮ್ಬ್ವರ್ಜುನಕಾಶ್ಮರೀಜಂ ಪುಷ್ಪಂ ತಿಲಾಸ್ಮಾರ್ಕವಚೂತಬೀಜೇ । ಪುನರ್ನವಾಕರ್ದಮಕಕಣ್ಟಕಾಯರ್ಾ ಕಾಸೀಸಪಿಣ್ಡೀತಕ ಬೀಜಸಾರಮ್ ॥೩೨॥ ಫಲತ್ರಯಂ ಲೋಹರಜೋಽಞ್ಜನಂ ಚ ಯಷ್ಟ್ಯಾಹ್ವಯಂ ನೀರಜಸಾರಿವೇ ಚ । ಪಿಷ್ಟ್ವಾಥಸರ್ವಂ ಸಹ ಮೋದಯನ್ತ್ಯಾಸಾರಾಮ್ಬುಸಾ ಬೀಜಕಸಮ್ಭವೇನ ॥೩೩॥ ಸಾರಾಮ್ಬುಸಃ ಸಪ್ತಭಿರೇವ ಪಶ್ಚಾತ್ಪ್ರಸ್ಥೈಃ ಸಮಾಲೋಡ್ಯ ದಶಾಹಗುಪ್ತಮ್ । ಲೋಹೇ ಸುಪಾತ್ರೇ ವಿನಿಧಾಯ ತೈಲಮಕ್ಷೋದ್ಭವಂ ತಚ್ಚ ಪಚೇತ್ ಪ್ರಯತ್ನಾತ್ ॥೩೪॥ ಪಕ್ವಂ ಚ ಲೋಹೇಽಭಿನವೇ ನಿಧಾಯ ನಸ್ಯಂ ವಿದಧ್ಯಾತ್ ಪರಿಶುದ್ಧಕಾಯಃ ಅಭ್ಯಙ್ಗಯೋಗೈಶ್ಚ ನಿಯುಜ್ಯಮಾನಂ ಭುಞ್ಜೀತ ಮಾರ್ಷಾ ಕೃಶರಾಮಥೋ ವಾ ॥೩೫॥ ಮಾಸೋಪರಿಷ್ಟಾದ್ಘನಕುಞ್ಚಿತಾಗ್ರಾಃ ಕೇಶಾ ಭವನ್ತಿ ಭ್ರಮರಾಞ್ಜನಾಭಾಃ ಕೇಶಾಸ್ತಥಾನ್ಯೇ ಖಲತೌ ಭವೇಯುರ್ಜರಾ ನ ಚೈನಂ ಸಹಸಾಭ್ಯುಪೈತಿ ॥೩೬॥ ಬಲಂ ಪರಂ ಸಂಭವತೀನ್ದ್ರಿಯಾಣಾಂ ಭವೇಚ್ಚ ವಕ್ತ್ರಂ ವಲಿಭಿರ್ವಿಮುಕ್ತಮ್ ನಾಕಾಮಿನೇಽನರ್ಥಿನಿ ನಾಕೃತಾಯ ನೈವಾರಯೇ ತೈಲಮಿದಂ ಪ್ರದೇಯಮ್ ॥೩೭॥

ಮುಳ್ಳುಗೋರಂಟೆ, ನೇರಳೆ, ಮತ್ತಿ, ಶಿವನಿ ಈ ಮರಗಳ ಹೂವು, ಎಳ್ಳು, ಗರುಗದ ಸೊಪ್ಪು, ಮಾವಿನತಿರುಳು, ಕೊಮ್ಮೆ, ನೈದಿಲೆಗೆಡ್ಡೆಯ ಸುತ್ತಲಿರುವ ಮಣ್ಣು, ಹೆಗ್ಗುಳ್ಳ, ನೆಲಗುಳ್ಳ, ಅನ್ನಭೇದಿ, ಮಗ್ಗಾರೆಕಾಯಿ, ಹೊನ್ನೆ ಮರದ ಸಾರ, ತ್ರಿಫಲೆ, ಕಬ್ಬಿಣದ ಪುಡಿ, ರಸಾಂಜನ, ಅತಿಮಧುರ, ನೈದಿಲೆಗೆಡ್ಡೆ, ಸೊಗದೆಬೇರು, ಇವು ಪ್ರತಿಯೊಂದೂ ಒಂದೊಂದು ಕರ್ಷದಷ್ಟನ್ನು ಅರೆದು ಕಲ್ಕಮಾಡಿ ಕಾಡುಮಲ್ಲಿಗೆ ಮತ್ತು ಸರ್ಜವೃಕ್ಷಗಳ ಕಷಾಯ ೭ ಪ್ರಸ್ಥದಷ್ಟರಲ್ಲಿ ಕದರಿ ೧೦ ದಿನಗಳಾದಮೇಲೆ ಕಬ್ಬಿಣದ ಬಾಂಡ್ಲೆಯಲ್ಲಿ ಸುರಿದು ತಾರೆಕಾಯಿನ ಎಣ್ಣೆಯನ್ನು ೧ ಆಢಕ ಪ್ರಮಾಣದಷ್ಟು ಸೇರಿಸಿ ಪಾಕಮಾಡಿ ಶೋಧಿಸಿ ಕಬ್ಬಿಣದ ಬಿಂದಿಗೆಯಲ್ಲಿ ತುಂಬಿಟ್ಟುನಸ್ಯಕರ್ಮಗಳಿಗೆ ಪ್ರಯೋಗಿಸಬೇಕು. ರೋಗಿಗೆ ದೇಹಶುದ್ಧಿಯನ್ನು ಮಾಡಿಸಿ ಅಭ್ಯಂಗಮಾಡಿಸಿದರೆ ೧ ಮಾಸ ಕಳೆದಮೇಲೆ ತಲೆಗೂದಲು ದಟ್ಟವಾಗಿ ಗುಂಗುರು ಗುಂಗುರಾಗಿ ಬೆಳೆಯುತ್ತವೆ. ಉದ್ದನ್ನೂ ಎಳ್ಳು ಚಿಗುಳಿಯನ್ನೂ ತಿನ್ನಬೇಕು. ತಲೆಕೂದಲು ದುಂಬಿಯ ಶರೀರದಂತೆ ಕಪ್ಪಾಗುತ್ತದೆ ಪಟ್ಟು ತಲೆಯವರಿಗೆ ಈ ತೈಲಾಭ್ಯಂಗದಿಂದ ತಲೆಕೂದಲು ಬೆಳೆಯುತ್ತದೆ. ಜಾಗ್ರತೆಯಾಗಿ ಮುದುಕರಾಗುವುದಿಲ್ಲ ಇಂದ್ರಿಯಗಳಿಗೆ ಬಲವುಂಟಾಗುತ್ತದೆ. ಸುಕ್ಕು ನಿವಾರಿಸಲ್ಪಡುತ್ತದೆ. ಅಪೇಕ್ಷೆಯಿಲ್ಲದವರಿಗೂ ಕೃತಜ್ಞನಲ್ಲದವನಿಗೂ ಶತ್ರುವಿಗೂ ಈ ತೈಲ ಪ್ರಯೋಗವನ್ನು ಉಪದೇಶಮಾಡಬಾರದು.

ಲಾಕ್ಷಾರೋಧ್ರಂ ದ್ವೇಹರಿದ್ರೇ ಶಿಲಾಲೇ ಕುಷ್ಠಂ ನಾಗಂ ಗೈರಿಕಾವರ್ಣಕಾಶ್ಚ ಮಂಜಿಷ್ಠಾ ಪ್ರಿಯಂಗುಃ ಸ್ಯಾತ್ಸುರಾಷ್ಟ್ರೋದ್ಭವಾ ಚ ಪತ್ರಂಗಶ್ಚಾಗ್ರೇವೈ ರೋಚನಾ ಚಾಂಜನಂ ಚ ||೩೮|| ಹೇಮಾಂಗತ್ವಕ್‌ಪಾಂಡುಪತ್ರಂ ವಟಸ್ಯ ಕಾಲೀಯಂ ಸ್ಯಾತ್ಪದ್ಮಕಂ ಪದ್ಮಮಧ್ಯಮ್ ರಕ್ತಂ ಶ್ವೇತಂ ಚನ್ದನಂ ಪಾರದಂ ಚ ಕಾಕೋಳ್ಯಾದಿಃ ಕ್ಷೀರಪಿಷ್ಟಶ್ಚ ವರ್ಗಃ ||೩೯|| ಮೇದೋಮಜ್ಜಾ ಸಿಕ್ಥಕಂ ಗೋಘೃತಂ ಚ ದುಗ್ಧಂ ಕ್ವಾಥಃ ಕ್ಷೀರಿಣಾಂ ಚ ದ್ರುಮಾಣಾಮ್ ಏತತ್ಸರ್ವಂ ಪಕ್ವಮೈಕಧ್ಯತಸ್ತು ವಕ್ತ್ರಾಭ್ಯಂಗೇ ಸರ್ಪಿರುಕ್ತಂ ಪ್ರಧಾನಮ್ ||೪೦|| ಹನ್ಯಾತ್ ವ್ಯಂಗಂ ನೀಲಿಕಾಂ ಚಾತಿವೃದ್ಧಾಂ ವಕ್ತ್ರೇ ಜಾತಾಃ ಸ್ಫೋಟಿಕಾಶ್ಚಾಪಿ ಕಾಶ್ಚಿತ್ ಪದ್ಮಾಕಾರಂ ನಿರ್ವ್ಯಳೀಕಂ ಚ ವಕ್ತ್ರಂ ಕುರ್ಯಾದ್ದ್ವೇಶತ್ ಪೀನಗಣ್ಡಂ ಮನೋಜ್ಞಮ್ ||೪೧|| ರಾಜ್ಞಾಮೇತದ್ಯೋಷಿತಾಂ ಚಾಪಿ ನಿತ್ಯಂ ಕುರ್ಯಾದ್ವೈದ್ಯಸ್ತತ್ಸಮಾನಾಂ ನೃಣಾಂ ಚ ಕುಷ್ಠಘ್ನಂ ವೈ ಸರ್ಪಿರೇತತ್ ಪ್ರಧಾನಂ ಯೇಷಾಂ ಪಾದೇಸನ್ತಿವೈಪಾದಿಕಾಶ್ಚ ||೪೨|| ಹರೀತಕೀಚೂರ್ಣಮರಿಷ್ಟಪತ್ರಂ ಚೂತತ್ವಚಂ ದಾಡಿಮಪುಷ್ಪವೃನ್ತಮ್ ಪತ್ರಂ ಚ ದದ್ಯಾನ್ಮದಯನ್ತಿಕಾಯಾಲೇಪಾಙ್ಗರಾಗೋ ನರದೇವಯೋಗ್ಯಃ ||೪೩||

ಅರಗು, ರೋಧ್ರ, ಅರಿಶಿನ, ಮರದರಿಶಿನ, ಮಣಶಿಲೆ, ಅರಿದಳ, ಚೆಂಗಲ್‌ಕೋಷ್ಠ, ನಾಗಕೇಸರಿ, ಕಾವಿ, ಅರಿದಳ (ಪೀತ), ಮಂಜಿಷ್ಠೆ, ಬಿಳಿಬಜೆ, ಪಟಿಕ, ಪತಂಗಚೆಕ್ಕೆ, ಗೋರೋಜನ, ಸ್ರೋತೋಂಜನ, ಸಂಪಿಗೆಮೊಗ್ಗು, ಆಲದಹಣ್ಣೆಲೆ (ತರಗು), ಕರಿಯ ಅಗಿಲು, ಪದ್ಮಕ, ಪದ್ಮಕೇಸರಿ, ಕೆಂಪುಗಂಧ, ಪಾದರಸ, ಕಾಕೋಳ್ಯಾದಿ ಗಣದ್ರವ್ಯಗಳು ಇವುಗಳನ್ನು ಹಾಲಿನಲ್ಲರೆದು ಕಲ್ಕಮಾಡಿದ್ದು ಇವೆಲ್ಲವನ್ನೂ ೧ ಕರ್ಷದಂತೆ ಸೇರಿಸಿ ೮ ರಷ್ಟು ನೀರಿನಲ್ಲಿ ಕಷಾಯಕಾಯಿಸಿ ೨ ಭಾಗ ನಿಲ್ಲಿಸಿಕೊಂಡು ಬಟ್ಟೆಯಿಂದ ಶೋಧಿಸಿದ ಕಷಾಯದೊಡನೆ ಮೇದಸ್ಸು, ಮಜ್ಜೆ, ಜೇನುಮೇಣ, ಹಸುವಿನತುಪ್ಪ, ಹಾಲು, ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯ ಇವೆಲ್ಲವನ್ನೂ ವಿಧಿವತ್ತಾಗಿ ದೊಡ್ಡ ಪಾತ್ರೆಗೆ ತುಂಬಿ ಮಂದಾಗ್ನಿಯಿಂದ ಪಾಕಮಾಡಿ ನಿಂತಘೃತವನ್ನು ಶೋಧಿಸಿಟ್ಟುಕೊಂಡು ಅಭ್ಯಂಗಕ್ಕೆ ಪ್ರಯೋಗಿಸಿದರೆ ಅತಿ ಪ್ರಬಲವಾಗಿರುವ ಚಿಬ್ಬು ನೀಲಬಣ್ಣದ ಸಂಗಾತಿಗಳೆಂಬ ಕರಿಚುಕ್ಕಿಗಳೂ ಮುಖದಲ್ಲಿ ಎದ್ದಿರುವ ಕೆಲವು ಗುಳ್ಳೆಗಳೂ ಮೊಡವೆಗಳೂ ನಿವಾರಣೆಯಾಗುತ್ತವೆ. ತಾವರೆಯಂತೆ ಮುಖ ಕಾಂತಿಯೂ ಚರ್ಮವು ಸುಕ್ಕು ಹಿಡಿದಿರುವುದೂ ನಿವಾರಣೆಯಾಗುತ್ತದೆ. ಕೆನ್ನೆಗಳು ಉಬ್ಬಿ ಮುಖವು ಮನೋಹರವಾಗಿ ಕಾಣಿಸುತ್ತದೆ. ವೈದ್ಯನು ಈ ತೈಲವನ್ನು ರಾಜರಿಗೂ ಸ್ತ್ರೀಯರಿಗೂ ರಾಜನಿಗೆ ಸಮಾನರಾದ ಧನಿಕರಿಗೂ ಪ್ರಯೋಗಿಸಬೇಕು. ಈ ನೀಲಿನೀ ಘೃತವನ್ನು ಪ್ರಯೋಗಿಸಿದರೆ (ಕಾಲಿನಲ್ಲಿ ಬರುವ ವಿಪಾದಿಕಾ) ಕುಷ್ಠಹರವು. ಅಣಿಲೆಕಾಯಿಚೂರ್ಣ, ಬೇವಿನತರಗೆಲೆ, ಮಾವಿನತೊಗಟೆ, ದಾಳಿಂಬೆ ಹೂವಿನ ತೊಟ್ಟು, ಕಾಡುಮಲ್ಲಿಗೆಸೊಪ್ಪು ಇವುಗಳ ಕಲ್ಕಲೇಪನವು ರಾಜಾರ್ಹವಾದ ಅಂಗರಾಗವು (ಇದರ ಲೇಪದಿಂದ ಚರ್ಮಕ್ಕೆ ಕಾಂತಿಯುಂಟಾಗುತ್ತದೆಂದು ತಿಳಿಯಬೇಕು.)

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಮಿಶ್ರಕಚಿಕಿತ್ಸಾನಾಮ
ಪಂಚವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ
ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಷಡ್ವಿಂಶತಿತಮೋಽಧ್ಯಾಯಃ

ಅಥಾತಃ ಕ್ಷೀಣಬಲೀಯಂ ವಾಜೀಕರಣ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ **ಕ್ಷೀಣಬಲೀಯ ವಾಜೀಕರಣ ಚಿಕಿತ್ಸೆಯನ್ನು** ವಿವರಿಸುತ್ತೇವೆ.

ಕಲ್ಯಸ್ಯೋದಗ್ರವಯಸೋ ವಾಜೀಕರಣ ಸೇವಿನಃ
ಸರ್ವೇಷ್ವೃತುಷ್ವಹರಹರ್ವ್ಯವಾಯೋ ನ ನಿವಾರಿತಃ ||೩||
ಸ್ಥವಿರಾಣಾಂ ರಿರಂಸೂನಾಂ ಸ್ತ್ರೀಣಾಂ ವಾಲ್ಲಭ್ಯಮಿಚ್ಛತಾಮ್
ಯೋಷಿತ್ಪ್ರಸಙ್ಗಾತ್ ಕ್ಷೀಣಾನಾಂ ಕ್ಲೀಬಾನಾಮಲ್ಪರೇತಸಾಮ್ ||೪||
ವಿಲಾಸಿನಾಮರ್ಥವತಾಂ ರೂಪಯೌವನಶಾಲಿನಮ್
ನೃಣಾಂ ಚ ಬಹುಭಾರ್ಯಾಣಾಂ ಯೋಗಾ ವಾಜೀಕರಾ ಹಿತಾಃ ||೫||

ಆರೋಗ್ಯವಂತನಾಗಿ ತರುಣನಾಗಿರುವ ಸದಾವಾಜೀಕರಗಳಾದ ಔಷಧಗಳನ್ನು ಸೇವಿಸುವ ಪುರುಷನಿಗೆ ಎಲ್ಲಾ ಋತುಗಳಲ್ಲೂ ಸ್ತ್ರೀಯೊಡನೆ ಸಂಭೋಗ ಮಾಡಲು ಯಾವ ತೊಂದರೆಯೂ ಸಂಭವಿಸುವುದಿಲ್ಲ. ವೃದ್ಧರಿಗೂ, ರತಿಸುಖವನ್ನು ಅಪೇಕ್ಷಿಸುವವರಿಗೂ ಸ್ತ್ರೀಯರ ಪ್ರೀತಿಯನ್ನು ಗಳಿಸಬೇಕೆಂದು ಆಶಿಸುವವರಿಗೂ ಸ್ತ್ರೀಯರ ಸಂಭೋಗದಿಂದ ಕ್ಷೀಣರಾದವರಿಗೂ, ನಪುಂಸಕರಿಗೂ, ಅಲ್ಪಶುಕ್ರವುಳ್ಳವರಿಗೂ, ಕಾಮಾಭಿಲಾಷಿಗಳಿಗೂ, ಹಣವಂತರಿಗೂ, ಸೌಂದರ್ಯವುಳ್ಳವರಿಗೂ, ಪ್ರಾಯದವರಿಗೂ, ಅನೇಕ ಜನ ಹೆಂಡತಿಯರನ್ನು ಮದುವೆಯಾಗಿರುವವರಿಗೂ ಶುಕ್ರವೃದ್ಧಿಕರಗಳಾದ ಯೋಗಗಳು ಹಿತಕರಗಳು.

ಸೇವಮಾನೋ ಯದೌಚಿತ್ಯಾದ್ವಾಜೀವಾತ್ಯರ್ಥವೇಗವಾನ್
ನಾರೀಸ್ತರ್ಪಯತೇ ತೇನ ವಾಜೀಕರಣಮುಚ್ಯತೇ ||೬||
ಭೋಜನಾನಿ ವಿಚಿತ್ರಾಣಿ ಪಾನಾನಿ ವಿಧಾನಿ ಚ
ವಾಚಃ ಶ್ರೋತ್ರಾನುಗಾಮಿನ್ಯಸ್ತ್ವಚಃ ಸ್ಪರ್ಶಸುಖಾಸ್ತಥಾ ||೭||
ಯಾಮಿನೀ ಸೇನ್ದುತಿಲಕಾ ಕಾಮಿನೀ ನವಯೌವನಾ
ಗೀತಂ ಶ್ರೋತ್ರ ಮನೋಹಾರಿ ತಾಮ್ಬೂಲಂ ಮದಿರಾಃ ಸ್ರಜಃ ||೮||
ಮನಸಶ್ಚಾಪ್ರತೀಘಾತೋ ವಾಜೀಕುರ್ವನ್ತಿ ಮಾನವಮ್

ತಕ್ಕಷ್ಟು ಪ್ರಮಾಣದಿಂದ ಸೇವಿಸಿದ ಯಾವ ದ್ರವ್ಯವು ಆ ಪುರುಷನಿಗೆ ಕುದುರೆಯ ವೇಗದಂತೆ ಸಂಭೋಗ ಮಾಡುವ ಶಕ್ತಿಯನ್ನುಂಟುಮಾಡಿ ಸ್ತ್ರೀಯರ ಮನಸ್ಸನ್ನು ತೃಪ್ತಿ

ಪಡಿಸಿದರೆ ಅದನ್ನು ವಾಜೀಕರಣ ದ್ರವ್ಯವೆಂದು ಹೇಳುತ್ತಾರೆ. ಶುಕ್ರಜನಕ, ಪ್ರವರ್ತಕ ಮತ್ತು ಜನಕಪ್ರವರ್ತಕಗಳೆಂದು ೩ ವಿಧ ದ್ರವ್ಯಗಳುಂಟು. ಘೃತಾದಿಗಳನ್ನು ಸೇವಿಸಿದರೆ ರಸಾದಿ ಸಪ್ತಧಾತುಗಳೂ ಕ್ರಮ ಪರಿಣಾಮವನ್ನು ಹೊಂದಿ ಪುಷ್ಟಿಗೊಳ್ಳುತ್ತವೆ. ಗುಲಗಂಜಿಯ ಬೇರು, ನಸುಗುನ್ನಿಬೀಜ ಮೊದಲಾದುವು ಶುಕ್ರವನ್ನು ವಿರೇಚನ ಮಾಡಿಸಿ ಬೇಗ ಕ್ಷಯವನ್ನು ಉಂಟುಮಾಡುತ್ತವೆ (ಅಂದರೆ ಶುಕ್ರವಿರೇಚನ ದ್ರವ್ಯಗಳು ಶುಕ್ರಪಾತವನ್ನು ಮಾತ್ರ ಮಾಡಿಸತಕ್ಕವು.) ಹಸುವಿನ ತುಪ್ಪ, ಗೋಧಿ ಉದ್ದು ಮೊದಲಾದುವು ದೇಹಬಲವನ್ನುಂಟುಮಾಡಿ ಶುಕ್ರಪಾತವನ್ನೂ ಮಾಡುತ್ತವೆಂದು ತಿಳಿಯಬೇಕು. ವೃಷ್ಯಾದಿ ದ್ರವ್ಯಗಳ ಪ್ರಭಾವದಿಂದ ಸದ್ಯದಲ್ಲೇ ಶುಕ್ರ ಮೊದಲಾದ ಧಾತುಗಳುಂಟಾಗುತ್ತವೆ. ವಿವಿಧ ಭೋಜನಗಳನ್ನೂ ಪಾನಗಳನ್ನೂ ಸೇವಿಸುವುದೂ ಮನಸ್ಸಿಗೆ ಹಿತವಾಗುವಂತೆ ಸಂಭಾಷಣೆಮಾಡುವುದೂ, ಸುಖಕರಗಳಾದ ಆಲಿಂಗನಾದಿ ಸ್ಪರ್ಶವಿಶೇಷಗಳೂ ಚಂದ್ರ ಕಿರಣಗಳಿಂದ ಮನೋಹರವಾದ ರಾತ್ರಿಕಾಲವೂ ನವಯೌವನದಿಂದಿರುವ ಸ್ತ್ರೀಯರ ಮನಸ್ಸಿಗೆ ಇಂಪಾಗಿರುವ ಗಾನವೂ ತಾಂಬೂಲಸೇವನೆಯೂ ಮಧುರವಾದ ಮದ್ಯಪಾನವೂ ಸುವಾಸನೆಯುಳ್ಳ ಹೂವಿನ ಹಾರಗಳ ಧಾರಣೆಯೂ ಮನಸ್ಸಿಗೆ ಯಾವ ವಿಧವಾದ ಕ್ಲೇಶವೂ ಉಂಟಾಗದಿರುವ ಸನ್ನಿವೇಶಗಳೂ ಇವುಗಳಿಂದ ಮನುಷ್ಯರಿಗೆ ವಾಜೀಕರಣವುಂಟಾಗುತ್ತದೆ.

ತೈಸ್ತೈರ್ಭಾವೈರಹೃದ್ಯೈಸ್ತು ರಿರಂಸೋರ್ಮನಸಿ ಕ್ಷತೇ ॥೯॥
ದ್ವೇಷ್ಯಸ್ತ್ರೀಸಂಪ್ರಯೋಗಾಚ್ಚ ಕ್ಲೈಬ್ಯಂ ತನ್ಮಾನಸಂ ಸ್ಮೃತಮ್
ಕಟುಕಾಮ್ಲೋಷ್ಣಲವಣೈರತಿ ಮಾತ್ರೋಪಸೇವಿತೈಃ ॥೧೦॥
ಸೌಮ್ಯಧಾತುಕ್ಷಯೋ ದೃಷ್ಟಃ ಕ್ಲೈಬ್ಯಂತದಪರಂ ಸ್ಮೃತಮ್
ಅತಿವ್ಯವಾಯಶೀಲೋ ಯೋ ನ ಚ ವಾಜೀಕ್ರಿಯಾರತಃ ॥೧೧॥
ಧ್ವಜಭಂಗಮವಾಪ್ನೋತಿ ತಚ್ಛುಕ್ರಕ್ಷಯಹೇತುಕಮ್
ಮಹತಾ ಮೇಢ್ರರೋಗೇಣ ಮರ್ಮಚ್ಛೇದೇನ ವಾ ಪುನಃ ॥೧೨॥
ಕ್ಲೈಬ್ಯಮೇತಚ್ಚತುರ್ಥಂ ಸ್ಯಾನ್ನೃಣಾಂ ಪುಂಸ್ತ್ವೋಪಘಾತಜಮ್ ।
ಜನ್ಮಪ್ರಭೃತಿ ಯಃ ಕ್ಲೀಬಃ ಕ್ಲೈಬ್ಯಂ ತತ್ ಸಹಜಂ ಸ್ಮೃತಮ್ ॥೧೩॥
ಬಲಿನಃ ಕ್ಷುಬ್ಧಮನಸೋ ನಿರೋಧಾತ್ ಬ್ರಹ್ಮಚರ್ಯತಃ ।
ಷಷ್ಠಂ ಕ್ಲೈಬ್ಯಂ ಮತಂ ತತ್ತು ಸ್ಥಿರಶುಕ್ರನಿಮಿತ್ತಜಮ್ ॥೧೪॥
ಅಸಾಧ್ಯ ಸಹಜಂ ಕ್ಲೈಬ್ಯಂ ಮರ್ಮಚ್ಛೇದಾಚ್ಚ ಯದ್ಭವೇತ್ ।
ಸಾಧ್ಯಾನಾಮಿತರೇಷಾಂ ತು ಕಾರ್ಯೋ ಹೇತುವಿಪರ್ಯಯಃ ॥೧೫॥
ವಿಧಿರ್ವಾಜೀಕರೋ ಯಸ್ತು ತಂ ಪ್ರವಕ್ಷ್ಯಾಮ್ಯತಃ ಪರಮ್ ।

ಕ್ಲೈಬ್ಯವು ಮನೋವಿಕಲ್ಪನೆಗಳಿಂದಲೂ ಕೂಡಿ ಆರು ವಿಧವಾಗಿದೆ. (೧) ಭಯ ಶೋಕ, ಕ್ರೋಧ, ಸ್ತ್ರೀದೋಷದರ್ಶನ ಮೊದಲಾದ ಮತ್ತು ಕಠಿಣವಾಗಿಯೂ ನಿಂದ್ಯವಾಗಿಯೂ ಭಯ ನಾಚಿಕೆ ಅವಮಾನಕರಗಳಾದ ಮಾತುಗಳನ್ನು ಕೇಳುವುದರಿಂದಲೂ

ಮನಸ್ಸಿನ ಶಾಂತಿಯು ಕೆಟ್ಟು ಕಾಮುಕನಿಗೆ ಉತ್ಸಾಹ ಹಾನಿಯಾಗುವುದರಿಂದಲೂ ತನಗೆ ಹಿತಕಲ್ಲದ ಸ್ತ್ರೀಯೊಡನೆ ರತಿಕ್ರಿಯೆಯನ್ನು ಮಾಡುವುದರಿಂದಲೂ ಉಂಟಾಗುವುದು ಮಾನಸಿಕ ಕ್ಲೈಬ್ಯವು. (೨) ಖಾರ, ಹುಳಿ, ಉಪ್ಪು, ಬಿಸಿ, ಉಷ್ಣವೀರ್ಯವುಳ್ಳ ದ್ರವ್ಯಗಳನ್ನು ಅತಿಯಾಗಿ ಸೇವಿಸುವುದರಿಂದ ಪಿತ್ತವು ಪ್ರಕೋಪಗೊಂಡು ಶುಕ್ರಧಾತುವು ವಿದಗ್ಧವಾಗುತ್ತದೆ (ಶುಕ್ರಧಾತುವು ನಿರ್ಬಲವುಳ್ಳದಾಗುತ್ತದೆ). ಇದು ಪಿತ್ತಜ ಕ್ಲೈಬ್ಯವು. (೩) ಅತಿಯಾಗಿ ಮೈಥುನ ಕ್ರಿಯೆಯನ್ನು ಆಚರಿಸುತ್ತಲೂ ವಾಜೀಕರಣ ಸೇವನೆಯನ್ನು ಮಾಡದೆಯೂ ಇರುವ ಮನುಷ್ಯನಿಗೆ ಧ್ವಜಭಂಗವುಂಟಾಗುತ್ತದೆ. ಇದಕ್ಕೆ ಶುಕ್ರಕ್ಷಯದಿಂದುಂಟಾದ ಕ್ಲೈಬ್ಯವೆಂದು ಹೆಸರು. (೪) ಅಧಿಕವಾದ ಶಿಶ್ನ ರೋಗದಿಂದ ಶುಕ್ರವಹನಾಡಿಗಳು ಕತ್ತರಿಸಿಹೋಗಿ ಪುರುಷತ್ವವೇ (ಶಿಶ್ನವೇ ಬಿದ್ದುಹೋಗುತ್ತದೆ.) ನಾಶವಾಗಿ ಕ್ಲೈಬ್ಯವುಂಟಾಗುತ್ತದೆ. (೫) ಹುಟ್ಟಿದಾರಭ್ಯ ಯಾವ ಮನುಷ್ಯನಿಗೆ ಶುಕ್ರಧಾತುವಿನ ಕ್ಷೀಣತೆಯಿಂದ ಧ್ವಜಪೇರದೆ ಸ್ತ್ರೀಸಂಗದಲ್ಲೇ ಆಸಕ್ತಿಯುಂಟಾಗುವುದಿಲ್ಲವೋ ಆ ಸ್ಥಿತಿಗೆ ಸಹಜಕ್ಲೈಬ್ಯವೆಂದು ಹೆಸರು. (೬) ಮನಸ್ಸಿನ ವೈರಾಗ್ಯದಿಂದ (ಮನಃಕ್ಷೋಭೆ) ಮೈಥುನಾಸಕ್ತಿಯುಂಟಾಗದೆಯೂ ಬ್ರಹ್ಮಚರ್ಯ ವ್ರತಪಾಲನೆಗೋಸ್ಕರ ಶುಕ್ರನಿರೋಧಮಾಡುವುದರಿಂದಲೂ ಶುಕ್ರವು ಸ್ಥಾನದಿಂದ ಚ್ಯುತವಾಗುವುದಿಲ್ಲ, ಧ್ವಜೋಚ್ಛ್ರಾಯವೂ ಉಂಟಾಗುವುದಿಲ್ಲ, ಇದಕ್ಕೆ ಸ್ಥಿರಶುಕ್ರನಿಮಿತ್ತದಿಂದುಂಟಾದ ಕ್ಲೈಬ್ಯವೆನ್ನುತ್ತಾರೆ. ಇವುಗಳ ಪೈಕಿ ಸಹಜಕ್ಲೈಬ್ಯವೂ ಮತ್ತು ಧ್ವಜಭಂಗದಿಂದುಂಟಾದ ಕ್ಲೈಬ್ಯವೂ ಅಸಾಧ್ಯವಾದುವು. ಉಳಿದ ೪ ವಿಧ ಸಾಧ್ಯಕ್ಲೈಬ್ಯಗಳ ನಿವಾರಣೆಗೆ ಅನುಸರಿಸಬೇಕಾದ ವಾಜೀಕರಣ ವಿಧಾನಗಳನ್ನು ಹೇಳುತ್ತೇವೆ. ॥೧೬॥

ತಿಲಮಾಷವಿದಾರೀಣಾಂ ಶಾಲೀನಾಂ ಚೂರ್ಣಮೇವ ವಾ
ಪೌಣ್ಡ್ರಕೇಕ್ಷುರಸೇನಾದ್ವಂ ಮರ್ದಿತಂ ಸೈನ್ಧವಾನ್ವಿತಮ್ ॥೧೦॥
ವರಾಹಮೇದಸಾಯುಕ್ತಂ ಘೃತೇನೋತ್ಕಾರಿಕಾಂ ಪಚೇತ್
ತಾಂ ಭಕ್ಷಯಿತ್ವಾ ಪುರುಷೋ ಗಚ್ಛೇತ್ತು ಪ್ರಮದಾಶತಮ್ ॥೧೮॥
ಬಸ್ತಾಣ್ಡಸಿದ್ಧೇ ಪಯಸಿ ಭಾವಿತಾನಸಕೃತ್ ತಿಲಾನ್
ಶಿಶುಮಾರವಸಾಪಕ್ವಾಃ ಶಷ್ಕುಲ್ಯಸ್ತೈಸ್ತಿಲೈಃ ಕೃತಾಃ
ಯಃ ಖಾದೇತ್ ಸ ಪುಮಾನ್ ಗಚ್ಛೇತ್ ಸ್ತ್ರೀಣಾಂ ಶತಮಪೂರ್ವವತ್ ॥೧೯॥
ಪಿಪ್ಪಲೀ ಲವಣೋಪೇತಂ ಬಸ್ತಾಣ್ಡೇ ಕ್ಷೀರಸರ್ಪಿಷಾ ।
ಸಾಧಿತಂ ಭಕ್ಷಯೇದ್ಯಸ್ತು ಸ ಗಚ್ಛೇತ್ ಪ್ರಮದಾಶತಮ್ ॥೨೦॥

ಎಳ್ಳು, ಉದ್ದು, ನೆಲಗುಂಬಳಗೆಡ್ಡೆ, ಅಕ್ಕಿ ಇವುಗಳ ಚೂರ್ಣವನ್ನು ಪಟಾಪಟಿ ಕಬ್ಬಿನ ರಸದಲ್ಲಿ ಕಲಸಿ ಸ್ವಲ್ಪ (ತಕ್ಕಷ್ಟು) ಸೈಂಧವಲವಣವನ್ನು ಮಿಶ್ರಮಾಡಿ ಮರ್ದನೆ ಮಾಡಿ ಹಂದಿಕೊಬ್ಬನ್ನು ಸೇರಿಸಿದ ತುಪ್ಪದಲ್ಲಿ ಪೂರಿಯನ್ನು ತಯಾರಿಸಿ ಭಕ್ಷಿಸಿದರೆ ೧೦೦ ಜನಸ್ತ್ರೀಯರೊಡನೆ ಮೈಥುನಮಾಡುವ ಸಾಮರ್ಥ್ಯವುಂಟಾಗುತ್ತದೆ. ಆಡಿನ ವೃಷಣ,

ದೊಡನೆ ಕ್ಷೀರಪಾಕ ವಿಧಾನದಿಂದ ಪಾಕಮಾಡಿದ ಹಾಲನ್ನು ಕುಡಿಯಬೇಕು. ಅಥವಾ ಈ ಎಳ್ಳಿನಿಂದ ಚಕ್ಕುಲಿಮಾಡಿ ಮೇಷಸಳೆಯ ಕೊಬ್ಬಿನಲ್ಲಿ ಬೇಯಿಸಿ ಭಕ್ಷಣೆಮಾಡಿ ಆ ಹಾಲನ್ನು ಕುಡಿಯಬೇಕು. ಈ ಯೋಗಗಳನ್ನು ಸೇವಿಸಿದವರು ೧೦೦ ಹೆಂಗಸರೊಡನೆ ಮೈಥುನಕ್ರಿಯೆ ಮಾಡುವಷ್ಟು ಸಾಮರ್ಥ್ಯವುಳ್ಳವರಾಗುತ್ತಾರೆ. ಮೊದಲನೆಯ ಸ್ತ್ರೀ ಯೊಡನೆ ಸುರತಮಾಡುವಾಗ ಇರುವಷ್ಟೇ ಕುತೂಹಲ ಮತ್ತು ಶಕ್ತಿಯುಳ್ಳವನಾಗಿಯೇ ಇತರರೊಡಯೂ ಸುರತಮಾಡುತ್ತಾನೆ. ಆಡಿನ ಅಂಡಕೋಶಕ್ಕೆ ಹಿಪ್ಪಲಿ ಮತ್ತು ಸೈಂಧವಲವಣಗಳನ್ನು ಮಿಶ್ರಮಾಡಿ ಹಾಲು ತುಪ್ಪಗಳಲ್ಲಿ ಪಕ್ವಮಾಡಿ ಸೇವಿಸಿದರೆ ೧೦೦ ಸ್ತ್ರೀಯರೊಡನೆ ರತಿಸುಖವನ್ನು ಪಡೆಯುವಷ್ಟು ಶಕ್ತನಾಗುತ್ತಾನೆ.

ಪಿಪ್ಪಲೀಮಾಷಶಾಲೀನಾಂ ಯವಗೋಧೂಮಯೋಸ್ತಥಾ
ಚೂರ್ಣಭಾಗೈಃ ಸಮೈಸ್ತೈಸ್ತು ಘೃತೇ ಪೂಪಲಿಕಾಂ ಪಚೇತ್ ॥೨೧॥
ತಾಂ ಭಕ್ಷಯಿತ್ವಾ ಪೀತ್ವಾ ತು ಶರ್ಕರಾಮಧುರಂ ಪಯಃ ।
ನರಶ್ಚಟಕವದ್ಗಚ್ಛೇದ್ದಶವಾರಾನ್ನಿರಂತರಮ್ ॥೨೨॥
ಚೂರ್ಣಂ ವಿದಾರ್ಯಾಃ ಸುಕೃತಂ ಸ್ವರಸೇನೈವ ಭಾವಿತಮ್ ।
ಸರ್ಪಿರ್ಮಧುಯುತಂ ಲೀಢ್ವಾ ದಶ ಸ್ತ್ರೀರಧಿಗಚ್ಛತಿ ॥೨೩॥
ಏವಮಾಮಲಕಂ ಚೂರ್ಣಂ ಸ್ವರಸೇನೈವ ಭಾವಿತಮ್ ।
ಶರ್ಕರಾಮಧುಸರ್ಪಿರ್ಭಿರ್ಯುಕ್ತಂ ಲೀಢ್ವಾ ಪಯಃ ಪಿಬೇತ್ ॥೨೪॥
ಏತೇನಾಶೀತಿವರ್ಷೋऽಪಿ ಯುವೇವ ಪರಿಹೃಷ್ಯತಿ ।

ಹಿಪ್ಪಲಿ, ಉದ್ದು, ಅಕ್ಕಿ, ಯವಧಾನ್ಯ, ಗೋಧಿ ಇವುಗಳ ಚೂರ್ಣವನ್ನು ಸಮ ಭಾಗದಲ್ಲಿ ಮಿಶ್ರಮಾಡಿ ತುಪ್ಪದಿಂದ ಭಕ್ಷ್ಯಮಾಡಿ ತಿಂದು ಸಕ್ಕರೆ ಹಾಕಿದ ಹಾಲನ್ನು ಕುಡಿದರೆ ಗುಬ್ಬಚ್ಚಿಯಂತೆ ೧೦ ಸಾರಿ ಎಡೆಬಿಡದೆ ಮೈಥುನಮಾಡುವ ಶಕ್ತಿಯುಂಟಾಗು ಗುತ್ತದೆ. ನೆಲಗುಂಬಳಗೆಡ್ಡೆಯ ಚೂರ್ಣವನ್ನು ಅದರ ಸ್ವರಸದಿಂದಲೇ ಭಾವನೆಮಾಡಿ ತುಪ್ಪ ಜೇನುತುಪ್ಪಗಳನ್ನು ಮಿಶ್ರಮಾಡಿ ಸೇವಿಸಿದರೆ ೧೦ ಜನ ಸ್ತ್ರೀಯರೊಡನೆ ರತಿ ಸುಖವನ್ನು ಹೊಂದುವಷ್ಟು ಶಕ್ತಿಯುಂಟಾಗುತ್ತದೆ. ಇದೇ ರೀತಿಯಾಗಿ ನೆಲ್ಲಿಕಾಯಿ ಚೂರ್ಣವನ್ನು ನೆಲ್ಲಿಕಾಯಿ ಸ್ವರಸದಿಂದ ಅನೇಕಸಾರಿ ಭಾವನೆಮಾಡಿ ಸಕ್ಕರೆ, ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ಸೇವಿಸಿ ಹಾಲನ್ನು ಕುಡಿದರೆ ೮೦ ವರ್ಷದ ಮುದುಕನೂ ತರುಣನಷ್ಟು ಉತ್ಸಾಹವುಳ್ಳವನಾಗಿ ಧ್ವಜೋಚ್ಛ್ರಾಯವನ್ನು ಹೊಂದಿ ಸ್ತ್ರೀ ಸಮಾ ಗಮ ಮಾಡಬೇಕೆಂದು ಆಶೆಪಡುತ್ತಾನೆ.

ಪಿಪ್ಪಲೀಲವಣೋಪೇತೇ ಬಸ್ತಾಣ್ಡೇ ಘೃತಸಾಧಿತೇ ॥೨೫॥
ಶಿಶುಮಾರಸ್ಯ ವಾ ಖಾದೇತ್ತೇ ತು ವಾಜೀಕರೇ ಭೃಶಮ್ ।
ಕುಳೀರಕೂರ್ಮನಕ್ರಾಣಾಮಣ್ಡಾನ್ಯೇವಂ ತು ಭಕ್ಷಯೇತ್ ॥೨೬॥
ಮಹಿಷರ್ಷಭಬಸ್ತಾನಾಂ ಪಿಬೇಚ್ಛುಕ್ರಾಣಿ ವಾ ನರಃ ।

ಆಡಿನ ಅಂಡಕೋಶಕ್ಕೆ ಹಿಪ್ಪಲಿ ಮತ್ತು ಲವಣಗಳ ಚೂರ್ಣವನ್ನು ಸೇರಿಸಿ ತುಪ್ಪದಿಂದ ಬೇಯಿಸಿ ತಿನ್ನಬೇಕು. ಹೀಗೆಯೇ ಮೀನಿನ ಮೊಟ್ಟೆಯನ್ನೂ ಲವಣ, ಹಿಪ್ಪಲಿ ಚೂರ್ಣಗಳನ್ನೂ ಮಿಶ್ರಮಾಡಿ ತುಪ್ಪದಿಂದ ಬೇಯಿಸಿ ತಿನ್ನಬೇಕು. ಇವೆರಡು ಯೋಗಗಳೂ ಅತಿಯಾಗಿ ವಾಜೀಕರಗಳಾಗುತ್ತವೆ. ಇದೇ ರೀತಿ ನಳ್ಳಿ, ಆಮೆ, ಮೊಸಳೆಗಳ ಮೊಟ್ಟೆಗಳನ್ನೂ ತುಪ್ಪದಲ್ಲಿ ಪಾಕಮಾಡಿ ತಿನ್ನಬೇಕು. ಶುಕ್ರವೃದ್ಧಿಯಾಗಬೇಕೆನ್ನುವವರು ಕೋಣ, ಕೋಳಿ, ಆಡುಗಳ ಶುಕ್ರಗಳನ್ನೂ ಕುಡಿಯಬೇಕು. (ಅಂದರೆ ಶುಕ್ರಸ್ಥಾನಗಳಾದ ಅಂಡಕೋಶಗಳನ್ನು ಹಾಲಿನಿಂದ ಬೇಯಿಸಿ ಸೇವಿಸಬೇಕು.)

ಅಶ್ವತ್ಥಫಲಮೂಲತ್ವಕ್ ಶುಙ್ಗಸಿದ್ಧಂ ಪಯೋ ನರಃ ||೨೭||
ಪೀತ್ವಾ ಸಶರ್ಕರಾಕ್ಷೌದ್ರಂ ಕುಳಿಙ್ಗ ಇವ ಹೃಷ್ಯತಿ ।
ವಿದಾರಿಮೂಲಕಲ್ಕಂ ತು ಘೃತೇನ ಪಯಸಾ ನರಃ ||೨೮||
ಉದುಮ್ಬರಸಮಂ ಪೀತ್ವಾ ವೃದ್ಧೋಽಪಿ ತರುಣಾಯತೇ ।
ಮಾಷಾಣಾಂ ಪಲಮೇಕಂ ತು ಸಂಯುಕ್ತಂ ಕ್ಷೌದ್ರಸರ್ಪಿಷಾ ||೨೯||
ಅವಲಿಹ್ಯ ಪಯಃ ಪೀತ್ವಾ ತೇನ ವಾಜೀಭವೇನ್ನರಃ ।
ಕ್ಷೀರಪಕ್ವಾಂಸ್ತು ಗೋಧೂಮಾನಾತ್ಮಗುಪ್ತಾಫಲೈಃ ಸಹ ||೩೦||
ಶೀತಾನ್ ಘೃತಯುತಾನ್ ಖಾದೇತ್ತತಃ ಪಶ್ಚಾತ್ ಪಯಃ ಪಿಬೇತ್
ನಕ್ರಮೂಷಿಕಮಣ್ಡೂಕಚಟಕಾಣ್ಡಕೃತಂ ಘೃತಮ್ ||೩೧||
ಪಾದಾಭ್ಯಙ್ಗೇನ ಕುರುತೇ ಬಲಂ ಭೂಮಿಂ ತು ನಸ್ಪೃಶೇತ್
ಯಾವತ್ಸ್ಪೃಶತಿನೋಭೂಮಿಂ ತಾವದ್ಗಚ್ಛೇನ್ನಿರನ್ತರಮ್ ||೩೨||

ಅರಳಿಹಣ್ಣು, ಬೇರಿನತೊಗಟೆ, ಮೊಗ್ಗುಗಳನ್ನು ಹಾಲಿನಿಂದ ಕ್ಷೀರಪಾಕಮಾಡಿ ಸಕ್ಕರೆ ಜೇನುತುಪ್ಪ ಮಿಶ್ರಮಾಡಿ ಕುಡಿದರೆ ವೇಗವುಳ್ಳವನಾಗಿ ಅನೇಕಸಾರಿ ಗುಬ್ಬಚ್ಚಿಯಂತೆ ಸ್ತ್ರೀಯರೊಡನೆ ಸಂಭೋಗಪಡುತ್ತಾನೆ. ನೆಲಗುಂಬಳಗೆಡ್ಡೆಯ ಚೂರ್ಣ ಅಥವಾ ಕಲ್ಕ ೧ ಪಲದಷ್ಟನ್ನು ಹಾಲು ತುಪ್ಪ ಮಿಶ್ರಮಾಡಿ ಕುಡಿದರೆ ಮುದುಕರಿಗೂ ಶುಕ್ರವೃದ್ಧಿಯಾಗಿ ಯುವಕರಂತೆ ರಮಿಸಲಪೇಕ್ಷೆಪಡುತ್ತಾರೆ. ೧ ಪಲ ಉದ್ದಿನ ಹಿಟ್ಟನ್ನು ತುಪ್ಪ ಜೇನುತುಪ್ಪ ಮಿಶ್ರಮಾಡಿ ತಿಂದು ಹಾಲನ್ನು ಕುಡಿದರೆ ಕುದುರೆಯಂತೆ ವೇಗದಿಂದ ರಮಿಸುತ್ತಾನೆ. ಗೋಧಿಯನ್ನೂ ನಸುಗುನ್ನಿಯ ಬಿತ್ತವನ್ನೂ ಹಾಲಿನಲ್ಲಿ ಬೇಯಿಸಿ ಆರಿಸಿದಮೇಲೆ ತುಪ್ಪ ಮಿಶ್ರಮಾಡಿ ತಿಂದು ಹಾಲನ್ನು ಕುಡಿದರೆ ವಾಜೀಕರಣವಾಗುತ್ತದೆ. ಮೊಸಳೆ, ಇಲಿ, ಕಪ್ಪೆ, ಗುಬ್ಬಚ್ಚಿಗಳನ್ನು ಸೇರಿಸಿ ತಯಾರಿಸಿದ ತುಪ್ಪದಿಂದ ಪಾದಾಭ್ಯಂಗ ಮಾಡಿದರೆ ಸ್ತ್ರೀಯರೊಡನೆ ರತಿಕ್ರೀಡೆಮಾಡುವ ಶಕ್ತಿಯುಂಟಾಗುತ್ತದೆ. ಎಲ್ಲಿಯವರೆಗೆ ನೆಲವನ್ನು ಕಾಲಿನಿಂದ ಮುಟ್ಟುವುದಿಲ್ಲವೋ ಅಲ್ಲಿಯವರೆಗೆ ಸದಾ ಸಂಭೋಗಮಾಡುತ್ತಲೇ ಇರಬಹುದು.

ಸ್ವಯಂಗುಪ್ತೇಕ್ಷುರಕಯೋಃ ಫಲಚೂರ್ಣಂ ಸಶರ್ಕರಮ್ ।
ಧಾರೋಷ್ಣೇನ ನರಃ ಪೀತ್ವಾ ಪಯಸಾ ನ ಕ್ಷಯಂ ವ್ರಜೇತ್ ॥೩೩॥
ಉಚ್ಚಟಾಚೂರ್ಣಮಪ್ಯೇವಂ ಕ್ಷೀರೇಣೋತ್ತಮಮಿಷ್ಯತೇ ।
ಶತಾವರ್ಯುಚ್ಚಟಾಮೂಲಂ ಪೇಯಮೇವಂ ಬಲಾರ್ಥಿನಾ
ಸ್ವಯಂಗುಪ್ತಾಫಲೈರ್ಯುಕ್ತಂ ಮಾಷಸೂಪಂ ಪಿಬೇನ್ನರಃ ॥೩೪॥
ಗುಪ್ತಾಫಲಂ ಗೋಕ್ಷುರಕಾಚ್ಚ ಬೀಜಂ ತಥೋಚ್ಚಟಾಂ ಗೋಪಯಸಾ ವಿಪಾಚ್ಯ
ಖಜಾಹತಂ ಶರ್ಕರಯಾ ಚ ಯುಕ್ತಂ ಪೀತ್ವಾ ನರೋ ಹೃಷ್ಯತಿ ಸರ್ವರಾತ್ರಮ್ ॥೩೫॥
ಮಾಷಾನ್ ವಿದಾರೀಮಪಿ ಸೋಚ್ಚಟಾಂ ಚ ಕ್ಷೀರೇ ಗವಾಂ ಕ್ಷೌದ್ರಘೃತೋಪಪನ್ನಾಮ್
ಪೀತ್ವಾ ನರಃ ಶರ್ಕರಯಾ ಸುಯುಕ್ತಾಂ ಕುಳಿಙ್ಗವದ್ಧೃಷ್ಯತಿ ಸರ್ವರಾತ್ರಮ್ ॥೩೬॥

ನಸುಗುನ್ನಿ ಬೀಜ ಮತ್ತು ನೆಗ್ಗಿಲು ಸಮೂಲಗಳ ಚೂರ್ಣಕ್ಕೆ ಸಮಸಕ್ಕರೆಯನ್ನು ಸೇರಿಸಿ ಧಾರೋಷ್ಣವಾದ ಹಾಲಿನಲ್ಲಿ ಕದರಿಕುಡಿದರೆ ಕ್ಷಯಹೊಂದುವುದಿಲ್ಲ. ಹೀಗೆಯೇ ಗುಲಗಂಜಿಯ ಬೇರಿನ ಚೂರ್ಣವನ್ನೂ ಹಾಲಿನಲ್ಲಿ ಕದರಿ ಕುಡಿದರೆ ವೀರ್ಯವೃದ್ಧಿ ಮಾಡುವುದರಲ್ಲಿ ಉತ್ತಮವಾದ ಯೋಗವು. ಹೀಗೆಯೇ ಆಷಾಢಿಬೇರು, ಗುಲಗಂಜಿ ಬೇರುಗಳ ಚೂರ್ಣವನ್ನೂ ಹಾಲಿನಲ್ಲಿ ಕದರಿ ಕುಡಿದರೆ ಬಲವೃದ್ಧಿಯಾಗುತ್ತದೆ. ನಸುಗುನ್ನಿಬೀಜ, ಉದ್ದಿನಕಾಳುಗಳನ್ನು ಬೇಯಿಸಿ ಅವುಗಳ ತೊವ್ವೆಯನ್ನು ಮಿಶ್ರಮಾಡಿ ಭೋಜನಮಾಡಬೇಕು. ನಸುಗುನ್ನಿಯಬೀಜ, ನೆಗ್ಗಿಲುಮುಳ್ಳು, ಗುಲಗಂಜಿಬೇರು ಇವುಗಳನ್ನು ಹಾಲಿನಲ್ಲಿ ಕುದಿಸಿ ಸೌಟನಿಂದ ತೊಳಸಿ ಸಕ್ಕರೆಯನ್ನು ಮಿಶ್ರಮಾಡಿ ತಿಂದರೆ ವೀರ್ಯವೃದ್ಧಿಯಾಗಿ ಆ ರಾತ್ರಿಯೆಲ್ಲಾ ಸ್ತ್ರೀಯೊಡನೆ ಸಂತತವಾಗಿ ರತಿಕ್ರೀಡೆ ಮಾಡಲು ಸಮರ್ಥನಾಗುತ್ತಾನೆ. ಉದ್ದು, ನೆಲಗುಂಬಳದಗೆಡ್ಡೆ, ಗುಲಗಂಜಿಯ ಬೇರುಗಳನ್ನು ಚೂರ್ಣಮಾಡಿ ಹಸುವಿನ ಹಾಲಿನಲ್ಲಿ ಕದರಿ ತುಪ್ಪ, ಜೇನುತುಪ್ಪ ಸಕ್ಕರೆಗಳನ್ನು ಮಿಶ್ರಮಾಡಿ ಕುಡಿದರೆ ಶುಕ್ರವೃದ್ಧಿಯಾಗಿ ರಾತ್ರಿಕಾಲವೆಲ್ಲಾ ಗುಬ್ಬಚ್ಚಿಯಂತೆ ಅನೇಕಸಾರಿ ಸ್ತ್ರೀಯೊಡನೆ ಸಂಭೋಗಮಾಡುತ್ತಾನೆ.

ಗೃಷ್ಟೀನಾಂ ವೃದ್ಧವತ್ಸಾನಾಂ ಮಾಷಪೂರ್ಣಭೃತಾಂ ಗವಾಮ್
ಯತ್ಕ್ಷೀರಂ ತತ್ಪ್ರಶಂಸನ್ತಿ ಬಲಕಾಮೇಷು ಜನ್ತುಷು ॥೩೭॥
ಕ್ಷೀರಮಾಂಸಗಣಃ ಸರ್ವಃ ಕಾಕೋಳ್ಯಾದಿಶ್ಚ ಪೂಜಿತಃ
ವಾಜೀಕರಣಹೇತೋರ್ಹಿ ತಸ್ಮಾತ್ತತ್ಪ್ರಯೋಜಯೇತ್ ॥೩೮॥
ಏತೇ ವಾಜೀಕರಾ ಯೋಗಾಃ ಪ್ರೀತ್ಯಪತ್ಯಬಲಪ್ರದಾಃ
ಸೇವ್ಯಾ ವಿಶುದ್ಧೋಪಚಿತದೇಹೈಃ ಕಾಲಾದ್ಯಪೇಕ್ಷಯಾ ॥೩೯॥

ಕಾಡುದ್ದಿನ ಹಸುಯುಸೊಪ್ಪನ್ನು ತಿನ್ನುವ ಮೊದಲಾವರ್ತಿ ಕರುಹಾಕಿ ಬಲಿತ ಕರುವಿರತಕ್ಕ (ಕರುಹಾಕಿ ಒಂದು ವರ್ಷವಾಗಿರುವ) ಹಸುವಿನ ಹಾಲು ಬಲಾಪೇಕ್ಷಿಗಳಿಗೆ ಕುಡಿಯಲು ಉತ್ತಮವಾದದ್ದೆಂದು ಹೊಗಳುತ್ತಾರೆ. ಎಲ್ಲಾ ಕ್ಷೀರಗಳೂ ವಾಜೀಕರಣ

ಯೋಗಗಳಲ್ಲಿ ಮುಖ್ಯವಾದಕಾರಣ ಅವುಗಳನ್ನೇ ಸಂಗ್ರಹಿಸಿ ಪ್ರಯೋಗಿಸಬೇಕು. ವಮನ ವಿರೇಚನಗಳಿಂದ ದೇಹಶುದ್ಧಿಮಾಡಿಸಿಕೊಂಡು ದೇಹಪುಷ್ಟಿಯಾಗಿರುವವರು ದೇಶ ಕಾಲಗಳನ್ನು ಪರಶೀಲಿಸಿ ಮೇಲೆ ಹೇಳಿದ ವಾಜೀಕರಗಳಾದ ಔಷಧ ದ್ರವ್ಯಗಳನ್ನು ಸೇವಿಸಿದರೆ ಸ್ತ್ರೀರತಿಯಲ್ಲಿ ಪ್ರೀತಿಯನ್ನೂ ಪುತ್ರಸಂತಾನವನ್ನೂ ದೇಹಬಲವನ್ನೂ ಹೊಂದುತ್ತಾರೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಕ್ಷೀಣಬಲೀಯವಾಜೀಕರಣ ಚಿಕಿತ್ಸಾನಾಮ ಷಡ್ವಿಂಶತಿತಮೋಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪ ನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಸಪ್ತವಿಂಶತಿತಮೋಽಧ್ಯಾಯಃ

ಅಥಾತಃ ಸರ್ವೋಪಘಾತಶಮನೀಯಂ ರಸಾಯನಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಸರ್ವೋಪಘಾತಶಾಮಕಗಳಾದ ರಸಾಯನ ವಿಧಾನಗಳನ್ನು ವಿವರಿಸುತ್ತೇವೆ.

ಟಿಪ್ಪಣಿ—ರಸಾದಿ ಧಾತುಗಳನ್ನು ವೃದ್ಧಿಮಾಡತಕ್ಕ ದ್ರವ್ಯಗಳಿಗೆ ರಸಾಯನಗಳೆಂದು ಹೆಸರು. ಅಥವಾ ಔಷಧ ದ್ರವ್ಯಗಳಲ್ಲಿರುವ ರಸ, ವೀರ್ಯ, ವಿಪಾಕ, ಪ್ರಭಾವ ಪರಮಾಯುರ್ಬಲ, ವೀರ್ಯಗಳನ್ನೂ, ವಯಸ್ಸು ಸ್ಥೈರ್ಯಗಳನ್ನೂ ಪಡೆಯುವ ವಿಧಾನಕ್ಕೆ ರಸಾಯನವೆಂದೂ ಹೇಳುತ್ತಾರೆ. ಆ ಗುಣಗಳನ್ನು ನಮ್ಮಶರೀರಕ್ಕೆ ಬರಮಾಡಿ ವೃದ್ಧಿಮಾಡುವ ಮತ್ತು ಸ್ಥಿರವಾಗಿ ನಿಲ್ಲುವಂತೆ ಮಾಡುವ ವಿಧಾನವೆಂದೂ ಅರ್ಥವು. ಈ ರೀತಿ ರಸಾಯನ ಲಾಭವನ್ನು ಪಡೆಯಬೇಕಾದರೆ ಎರಡು ವಿಧಾನಗಳಿವೆ- ೧. ಕುಟೀಪ್ರವೇಶ ವಿಧಾನ. ೨. ವಾತಾತಪಿಕ ವಿಧಾನ. ಪುನಃ ೩ ವಿಧಗಳು- ಕಾಮ್ಯ, ನೈಮಿತ್ತಿಕ, ಆಜಸ್ರಿಕಗಳು ಉದಾ:-ಪ್ರಾಣಾದಿಕಾಮರು, ಶ್ರೀಕಾಮರು ಇವು ಕಾಮ್ಯಗಳು. ವ್ಯಾಧಿಹರಣ ನಿಮಿತ್ತಗಳು ನೈಮಿತ್ತಿಕಗಳು. ಹಾಲು ತುಪ್ಪಗಳನ್ನು ನಿತ್ಯವೂ ಸೇವಿಸುವುದು ಆಜಸ್ರಿಕಗಳು. ಸಂಶೋಧನ, ಸಂಶಮನಗಳೆಂದು ಮತ್ತೂ ಎರಡು ವಿಧಾನಗಳಿವೆ—ವಮನ, ವಿರೇಚನ, ಶಿರೋವಿರೇಚನ, ಬಸ್ತಿಕರ್ಮ, ಸಿರಾವ್ಯಧಗಳು ದೋಷಶೋಧನೆಯು, ನಾಗಬಲಾದಿ ಪ್ರಯೋಗಳು ಸಂಶಮನವು.

ಪೂರ್ವೇ ವಯಸಿ ಮಧ್ಯೇ ವಾ ಮನುಷ್ಯಸ್ಯ ರಸಾಯನಮ್
ಪ್ರಯುಞ್ಜೀತ ಭಿಷಕ್ಪ್ರಾಜ್ಞಃ ಸ್ನಿಗ್ಧಶುದ್ಧತನೋಃ ಸದಾ ||೩||
ನಾವಿಶುದ್ಧ ಶರೀರಸ್ಯ ಯುಕ್ತೋ ರಾಸಾಯನೋ ವಿಧಿಃ
ನಾಭಾತಿ ವಾಸಸಿ ಕ್ಲಿಷ್ಟೇರಙ್ಗಯೋಗ ಇವಾಹಿತಃ ||೪||
ಶರೀರಸ್ಯೋಪಘಾತಾಯೇ ದೋಷಜಾ ಮಾನಸಾಸ್ತಥಾ
ಉಪದಿಷ್ಟಾಃ ಪ್ರದೇಶೇಷು ತೇಷಾಂ ವಕ್ಷ್ಯಾಮಿ ವಾರಣಮ್ ||೫||
ಶೀತೋದಕಂ ಪಯಃ ಕ್ಷೌದ್ರಂ ಸರ್ಪಿರಿತ್ಯೇಕಶೋದ್ವಿಶಃ
ತ್ರಿಶಃ ಸಮಸ್ತಮಥವಾ ಪ್ರಾಕ್ ಪೀತಂ ಸ್ಥಾಪಯೇದ್ವಯಃ ||೬||

ವಯಸ್ಸನ್ನು ಬಾಲ್ಯ, ಯೌವನ, ವಾರ್ಧಕ್ಯಗಳೆಂದು ೩ ಭಾಗಗಳನ್ನಾಗಿ ವಿಂಗಡಿಸುತ್ತಾರೆ—ಹುಟ್ಟಿದ ಮೊದಲು ೧೬ ವರ್ಷಗಳು ತುಂಬುವವರೆಗೆ ಬಾಲ್ಯವು. ಅಮೇಲೆ ೭೦ ರವರೆಗೆ ಮಧ್ಯಮವು, ಅನಂತರ ವಾರ್ಧಕ್ಯವು. ಬುದ್ಧಿವಂತನಾದ ವೈದ್ಯನು ಬಾಲ್ಯವಯಸ್ಕರಿಗಾಗಲೀ, ಮಧ್ಯಮವಯಸ್ಕರಿಗಾಗಲೀ ರಸಾಯನ ಪ್ರಯೋ

ಗವನ್ನು ಮಾಡಬೇಕು. ಮೊದಲು ಸ್ನೇಹಸ್ವೇದ ಕರ್ಮಗಳನ್ನು ಮಾಡಿಸಿ ವಮನವಿರೇಚನಾದಿಗಳಿಂದ ದೇಹಶುದ್ಧಿಮಾಡಿಸಿ ಅನಂತರ ರಸಾಯನೌಷಧಗಳನ್ನು ಪ್ರಯೋಗಿಸಬೇಕು. ಕೊಳಕು ಬಟ್ಟೆಗೆ ಬಣ್ಣ ಹಾಕಿಸಿದರೆ ಹೇಗೆ ಪ್ರಕಾಶವಾಗುವುದಿಲ್ಲವೋ ಅದೇ ರೀತಿಯಾಗಿ ದೋಷಶುದ್ಧಿಮಾಡದೆ ರಸಾಯನವನ್ನು ಪ್ರಯೋಗಿಸಿದರೆ ಪ್ರಯೋಜನವಾಗುವುದಿಲ್ಲ. ಮತ್ತು ಶರೀರಕ್ಕೆ ಬಾಧೆಯುಂಟಾಗುತ್ತದೆ. ಆದಕಾರಣ ವಾತ ಪಿತ್ತ ಕಫಗಳೆಂಬ ಶಾರೀರಕ ದೋಷಗಳನ್ನೂ ರಜಸ್ತಮಸ್ಸೆಂಬ ಮಾನಸಿಕ ದೋಷಗಳನ್ನೂ ನಿವಾರಣೆ ಮಾಡುವ ವಿಧಾನಗಳನ್ನು ಹೇಳುತ್ತೇವೆ. ತಣ್ಣೀರು, ಹಾಲು, ಜೇನುತುಪ್ಪ, ತುಪ್ಪ ಇವುಗಳಲ್ಲಿ ಒಂದೊಂದನ್ನೇ ಪ್ರಯೋಗಿಸಿದರೆ ೪ ವಿಧಗಳಾಗುತ್ತವೆ. ನೀರು, ಜೇನುತುಪ್ಪ, ನೀರು ಹಾಲು, ನೀರು ತುಪ್ಪ, ಹಾಲು ಜೇನುತುಪ್ಪ, ಹಾಲು ತುಪ್ಪ, ತುಪ್ಪ ಜೇನುತುಪ್ಪ ಈ ರೀತಿ ೨ ದ್ರವ್ಯಗಳ ಮಿಶ್ರಣದಿಂದ ೬ ವಿಧಗಳು ; ನೀರು, ಹಾಲು, ಜೇನುತುಪ್ಪ ; ಹಾಲು, ನೀರು, ತುಪ್ಪ ; ಜೇನುತುಪ್ಪ, ಹಾಲು, ತುಪ್ಪ ; ನೀರು, ಜೇನುತುಪ್ಪ, ತುಪ್ಪ ಇವು ೪ ವಿಧಗಳು ; ನೀರು, ಹಾಲು, ಜೇನುತುಪ್ಪ, ತುಪ್ಪ ಇವೆಲ್ಲಾ ಸೇರಿ ೧ ವಿಧ. ಈ ರೀತಿ ಒಟ್ಟು ೧೫ ಪ್ರಕಾರಗಳಿವೆ. ಅವುಗಳಲ್ಲಿ ತಣ್ಣೀರನ್ನು ಪಿತ್ತವಾತ, ಪಿತ್ತಕಫ ಪ್ರಕೃತಿಗಳವರಿಗೂ, ಉಳಿದುವನ್ನೂ ವಾತಾದಿ ಪ್ರಕೃತಿಯವರಿಗೂ ತಕ್ಕಂತೆ ಊಹಿಸಿ ಪ್ರಯೋಗಿಸಬೇಕು.

ತತ್ರ ವಿಡಙ್ಗ ತಣ್ಡುಲಚೂರ್ಣಮಾಹೃತ್ಯಯಷ್ಟೀಮಧುಯುಕ್ತಂ ಯಥಾಬಲಂ ಶೀತತೋಯೇನ ಉಪಯುಞ್ಜೀತ ಶೀತತೋಯಂ ಚಾನು ಪಿಬೇದೇವಮಹರಹರ್ಮಾಸಮ್ ತದೇವ ಮಧುಯುಕ್ತಂ ಭಲ್ಲಾತಕ ಕ್ವಾಥೇನ ವಾ ಮಧುದ್ರಾಕ್ಷಾಕ್ವಾಥಯುಕ್ತಂ ವಾ ಗುಡೂಚೀಕ್ವಾಥೇನ ವಾ ಏವಮೇತೇ ಪಞ್ಚ ಪ್ರಯೋಗಾ ಭವನ್ತಿ ; ಜೀರ್ಣೇ ಮುದ್ಗಾಮಲಕಯೂಷೇಣಾಲವಣೇನಾ ಲ್ಪಸ್ನೇಹೇನ ಘೃತವಂತಮೋದನಮಶ್ನೀಯಾತ್ ; ಏತೇ ಖಲ್ವರ್ಶಾಂಸಿ ಕ್ಷಪಯನ್ತಿ ಕ್ರಿಮೀನುಪಘ್ನನ್ತಿ ಗ್ರಹಣಧಾರಣಶಕ್ತಿಂ ಜನಯನ್ತಿ ಮಾಸೇಮಾಸೇ ಪ್ರಯೋಗೇ ವರ್ಷಶತಮಾಯುಷೋಽಭಿವೃದ್ಧಿರ್ಭವತಿ ॥೭॥

ಪ್ರಾತಃಕಾಲದಲ್ಲಿ ವಿಡಂಗ ಮತ್ತು ಅತಿಮಧುರಗಳ ಚೂರ್ಣವನ್ನು ಸಮಭಾಗ ಮಿಶ್ರಮಾಡಿ ರೋಗಿಯ ಶಕ್ತಿಗೆ ತಕ್ಕಷ್ಟು ಪ್ರಮಾಣವನ್ನು ತಣ್ಣೀರಿನಲ್ಲಿ ಕದರಿ ಕುಡಿಸಿ ಸ್ನಾನಪಾನಗಳಿಗೆ ತಣ್ಣೀರನ್ನೇ ಉಪಯೋಗಿಸಬೇಕು. ಈ ರೀತಿ ಒಂದು ಮಾಸದವರೆಗೂ ಪ್ರಯೋಗಿಸಬೇಕು. ಅದನ್ನೆ ಜೇನುತುಪ್ಪ ಮಿಶ್ರಮಾಡಿ ಗೇರುಬೀಜದ ಕಷಾಯ, ದ್ರಾಕ್ಷಾಕಷಾಯ, ನೆಲ್ಲಿಕಾಯಿಕಷಾಯ, ಅಮೃತವಳ್ಳಿಯಕಷಾಯ ಇವುಗಳೊಂದರಲ್ಲಿ ಕದರಿಯಾಗಲೀ ಕುಡಿಸಬೇಕು. ಈ ರೀತಿ ೫ ವಿಧ ಪ್ರಯೋಗಗಳಾಗುತ್ತವೆ. ಇದು ಜೀರ್ಣಿಸಿದಮೇಲೆ ಹೆಸರು ನೆಲ್ಲಿಕಾಯಿಗಳ ಕಟ್ಟನ್ನೂ ಉಪ್ಪನ್ನು ಸೇರಿಸದೆ ಸ್ವಲ್ಪ ತುಪ್ಪವನ್ನು ಮಿಶ್ರಮಾಡಿದ ಶಾಲ್ಯನ್ನವನ್ನೂ ಭೋಜನಮಾಡಿಸಬೇಕು. ಈ ಪ್ರಯೋಗಗಳಿಂದ ಅರ್ಶೋರೋಗ, ಕ್ರಿಮಿರೋಗಗಳು ನಾಶವಾಗುತ್ತವೆ. ಗ್ರಹಣ ಶಕ್ತಿಯೂ, ಧಾರಣ

ಶಕ್ತಿಯೂ (ಗ್ರಹಿಸಿದ್ದನ್ನು ಜ್ಞಾಪಿಸಿಕೊಂಡು ಪುನಃ ಹೇಳುವ ಶಕ್ತಿಯು) ಉಂಟಾಗುತ್ತವೆ. ರೀತಿ ಪ್ರತಿಯೊಂದನ್ನೂ ಮಾಸಪೂರ್ತಿ ಪ್ರಯೋಗಿಸಿದರೆ ೧೦೦-೧೦೦ ವರ್ಷಗಳಷ್ಟು ಆಯುರ್ವೃದ್ಧಿಯಾಗುತ್ತದೆ.

ವಿಡಙ್ಗ ತಣ್ಡುಲಾನಾಂ ದ್ರೋಣಂ ಪಿಷ್ಟಪಚನೇ ಪಿಷ್ಟವದುಪಸ್ವೇದ್ಯ ವಿಗತಕಷಾಯಂ ಸ್ವಿನ್ನಮವತಾರ್ಯ ದೃಷದಿಪಿಷ್ಟಮಾಯಸೇ ದೃಢೇ ಕುಮ್ಭೇ ಮಧೂದಕೋತ್ತರಂ ಪ್ರಾವೃಷಿ ಭಸ್ಮರಾಶಾವನ್ತರ್ಗೃಹೇ ಚತುರೋಮಾಸಾ ನಿದಧ್ಯಾತ್ ವರ್ಷಾಭಿಗಮೇ ಚೋದ್ಧೃತ್ಯೋಪಸ್ಕೃತ ಶರೀರಃ ಸಹಸ್ರಸಂಪಾತಾಭಿಹುತಂ ಕೃತ್ವಾ ಪ್ರಾತರ್ಯಥಾಬಲಮುಪಯುಞ್ಜೀತ ; ಜೀರ್ಣೇ ಮುದ್ಗಾಮಲಕಯೂಷೇಣಾಲವಣೇನಾಲ್ಪಸ್ನೇಹೇನ ಘೃತವನ್ತಮೋದನಮಶ್ನೀಯಾತ್ ಪಾಂಶು ಶಯ್ಯಾಯಾಂ ಶಯೀತ ; ತಸ್ಯಮಾಸಾದೂರ್ಧ್ವಂ ಸರ್ವಾಙ್ಗೇಭ್ಯಃ ಕ್ರಿಮಯೋ ನಿಷ್ಕ್ರಾಮನ್ತಿ ತಾನಣುತೈಲೇನಾಭ್ಯಕ್ತಸ್ಯ ವಂಶವಿದಳೇನಾಪಹರೇತ್ ; ದ್ವಿತೀಯೇ ಪಿಪೀಲಿಕಾಸ್ತೃತೀಯೇ ಯೂಕಾಸ್ತಥೈವಾಪಹರೇತ್ ; ಚತುರ್ಥೇ ದನ್ತನಖರೋಮಾಣ್ಯವಶೀರ್ಯನ್ತೇ ; ಪಞ್ಚಮೇ ಪ್ರಶಸ್ತಗುಣಲಕ್ಷಣಾನಿ ಜಾಯನ್ತೇ ಅಮಾನುಷಂ ಚಾದಿತ್ಯಪ್ರಕಾಶಂ ವಪುರಧಿಗಚ್ಛತಿ ದೂರಾಚ್ಛ್ರವಣಾನಿ ದರ್ಶನಾನಿ ಚಾಸ್ಯಭವನ್ತಿರಜಸ್ತಮಸೀ ಚಾಪೋಹ್ಯಸತ್ತ್ವಮಧಿತಿಷ್ಠತಿ ಶ್ರುತಿನಿಗಾದ್ಯಪೂರ್ವೋತ್ಪಾದೀ ಗಜಬಲೋಽಶ್ವಯ(ಜ)ವಃ ಪುನರ್ಯುವಾಪ್ತೌ ವರ್ಷಶತಾನ್ಯಾಯುರವಾಪ್ನೋತಿ ತಸ್ಯಾಣುತೈಲಮಭ್ಯಙ್ಗಾರ್ಥೇ ಅಜಕರ್ಣಕಷಾಯಮುತ್ಸಾದನಾರ್ಥೇ ಸೋಶೀರಂ ಕೂಪೋದಕಂ ಸ್ನಾನಾರ್ಥೇ ಚಂದನಮುಪಲೇಪನಾರ್ಥೇ ಭಲ್ಲಾತಕವಿಧಾನವದಾಹಾರಃ ಪರಿಹಾರಶ್ಚ ; ಕಾಶ್ಮರ್ಯಾಣಾಂ ನಿಷ್ಕುಲೀಕೃತಾನಾಮೇಷ ಏವ ಕಲ್ಪಃ ಪಾಂಶುಶಯ್ಯಾಭೋಜನವರ್ಜಂ ಅತ್ರ ಹಿ ಪಯಸಾ ಶೃತೇನ ಭೋಕ್ತವ್ಯಂ ಆಶಿಷಶ್ಚ ಪೂರ್ವೇಣ ಸಮಾನಾಃ ಶೋಣಿತಪಿತ್ತನಿಮಿತ್ತೇಷು ವಿಕಾರೇಷ್ವೇತೇಷಾಮುಪಯೋಗಃ ||೮||

ಯಥೋಕ್ತಮಾಗಾರಂ ಪ್ರವಿಶ್ಯ ಬಲಾಮೂಲಾರ್ಧಪಲಂ ಪಲಂ ವಾ ಪಯಸಾಲೋಡ್ಯ ಪಿಬೇತ್, ಜೀರ್ಣೇ ಪಯಃಸರ್ಪಿರೋದನ ಇತ್ಯಾಹಾರಃ ; ಏವಂ ದ್ವಾದಶರಾತ್ರಮುಪಯುಜ್ಯ ದ್ವಾದಶವರ್ಷಾಣಿವಯಸ್ತಿಷ್ಠತಿ ಏವಂ ದಿವಸಶತಮುಪಯುಜ್ಯ ವರ್ಷಶತಂ ವಯಸ್ತಿಷ್ಠತಿ । ಏವಮೇವಾತಿಬಲಾಮುದಕೇನ ನಾಗಬಲಾಚೂರ್ಣಂ ಮಧುನಾ ವಿದಾರೀಚೂರ್ಣಂ ವಾ ಪ್ರಯಸಾ ಕ್ಷೀರೇಣ ಶತಾವರೀಮಪ್ಯೇವಂ ಪೂರ್ವೇಣಾನ್ಯತ್ಸಮಾನಮಾಶಿಷಶ್ಚ ಸಮಾಃ । ಏತಾಸ್ತ್ವೌಷಧಯೋ ಬಲಕಾಮಾನಾಂ ಶೋಣಿತಂ ಛರ್ದಯತಾಂ ವಿರಿಚ್ಯಮಾನಾನಾಂ ಚೋಪದಿಶ್ಯನ್ತೇ ||೯||

ತೂಕದ ೩೨ ಸೇರು ವಿಡಂಗವನ್ನು ನೀರಿನ ಆವಿಯಲ್ಲಿ ಬೇಯಿಸಿ ಕಲ್ಲಿನಿಂದ ಕುಟ್ಟಿ ಚೂರ್ಣಿಸಿ ಕಬ್ಬಿಣದ ಬಿಂದಿಗೆಗೆ ತುಂಬಿ ಅದರಮೇಲೆ ನಿಲ್ಲುವಷ್ಟು ಜೇನುತುಪ್ಪ ಮತ್ತು ನೀರನ್ನು ಸುರಿದು ಬಾಯಿಗೆ ಶ್ರಾವೆಯನ್ನಿಟ್ಟು ನೆಲದಲ್ಲಿ ಆಳವಾಗಿ ತೆಗೆದು ಬೂದಿತುಂಬಿದ ಗುಂಡಿಯಲ್ಲಿ ಅದನ್ನು ಆಷಾಢ ಶ್ರಾವಣ ಮಾಸಗಳಲ್ಲಿ ಹೂತಿಟ್ಟು ನಾಲ್ಕು ತಿಂಗಳುಗಳು ಕಳೆದಮೇಲೆ ಮಳೆಗಾಲ ಕಳೆದಮೇಲೆ ಹೊರಕ್ಕೆ ತೆಗೆದು ಸ್ನೇಹ ಸ್ವೇದ, ವಮನ, ವಿರೇಚನಾದಿಗಳಿಂದ ದೇಹಶುದ್ಧಿಯಾಗಿ ದೇಹಬಲವುಂಟಾದ ಪುರುಷ

ನಿಂದ ಸಹಸ್ರಸಂಪಾತ ಹೋಮವನ್ನು ಮಾಡಿಸಿ ಪ್ರತಿದಿನವೂ ಪ್ರಾತಃಕಾಲದಲ್ಲಿ ದೇಹ ಶಕ್ತಿಗೆ ತಕ್ಕಷ್ಟು ಪ್ರಮಾಣದಲ್ಲಿ ಮೇಲ್ಕಂಡ ವಿಡಂಗ ಚೂರ್ಣವನ್ನು ತಿನ್ನಿಸಿ ಅದು ಜೀರ್ಣಿಸಿದ ಮೇಲೆ ಉಪ್ಪನ್ನು ಹಾಕದೆ ಸ್ವಲ್ಪವೇ ತುಪ್ಪವನ್ನು ಮಿಶ್ರಮಾಡಿದ ಹೆಸರು ಮತ್ತು• ನೆಲ್ಲೀಕಾಯಿ ಕಟ್ಟನೊಡನೆ ಶಾಲ್ಯನ್ನವನ್ನು ಭೋಜನಮಾಡಿಸಿ ಧೂಳು ಮಣ್ಣಿನ ಮೇಲೆ ಹಾಸಿಗೆ ಹಾಸಿ ಮಲಗಿಸಬೇಕು. ಒಂದು ಮಾಸದಮೇಲೆ ಅವನ ಸರ್ವಾಂಗ ಗಳಿಂದಲೂ ಕ್ರಿಮಿಗಳು ಹೊರಕ್ಕೆ ಬರುತ್ತವೆ. ಅವನ ದೇಹಕ್ಕೆ ಅಣುತೈಲವನ್ನು ಬಳಿದು ಮೃದುವಾದ ಬಿದರುಕಳಲೆ ಅಥವಾ ಹಬ್ಬೆಬೇರಿನ ಕುಂಚೇವುಗಳಿಂದ ಕ್ರಿಮಿಗಳನ್ನೆಲ್ಲಾ ತೊಡೆಯಬೇಕು. ೨ ನೆಯ ದಿನ ಬಂದ ಇರುವೆಗಳನ್ನೂ, ೩ ನೆಯ ದಿನ ಬಂದ ಕೂರೆ ಗಳನ್ನೂ ಕುಂಚೇವುಗಳಿಂದಲೇ ಸುಡಿಸಿ ಶುದ್ಧಿಮಾಡಬೇಕು.

ಟಿಪ್ಪಣಿ : ಹೋಮ ಮಾಡಿದನಂತರ ಸುವದಿಂದ ತೊಟ್ಟಿಕ್ಕುವ ಘೃತಬಿಂದುಗಳು ಅಭಿಹುತಂ ಅಂದರೆ ಅಥರ್ವಣ ಮಂತ್ರಗಳಿಂದ ಸಂಸ್ಕೃತವಾದ ನಾಲ್ಕನೆಯದಿನ ಹಲ್ಲು ಗಳೂ, ಉಗುರುಗಳೂ, ಕೂದಲೂ ಕಿತ್ತುಬೀಳುತ್ತವೆ. ಐದನೆಯ ದಿವಸ ಉತ್ಕೃಷ್ಟ ಲಕ್ಷಣಗಳುಂಟಾಗುತ್ತವೆ. ಅಮಾನುಷವಾದ (ಮನುಷ್ಯ ಸಂಬಂಧವಲ್ಲದ್ದು) ಸೂರ್ಯ ತೇಜಸ್ಸಿಗೆ ಸಮಾನವಾದ ಶರೀರವುಂಟಾಗುತ್ತದೆ. ದೂರದ ಶಬ್ದಗಳು ಕೇಳಿಸುತ್ತವೆ, ದೂರದ ವಸ್ತುಗಳೂ ಕಾಣುತ್ತವೆ, ರಜಸ್ತಮೋಗುಣಗಳು ನಿವಾರಣೆಹೊಂದಿ ಸತ್ವ ಗುಣವೇ ಉಂಟಾಗುತ್ತದೆ, ಅಪೂರ್ವ ಶ್ಲೋಕಗಳನ್ನು ರಚಿಸುವ ಸಾಮರ್ಥ್ಯವುಂಟಾಗು ತ್ತದೆ, ಆನೆಯಷ್ಟು ಶಕ್ತಿಯೂ ಕುದುರೆಯಷ್ಟು ವೇಗವೂ ಉಂಟಾಗುತ್ತದೆ, ಪುನಃ ಯೌವನವನ್ನು ಹೊಂದಿದವನಾಗಿ ೮೦೦ ವರ್ಷಗಳ ಆಯುಸ್ಸನ್ನು ಪಡೆಯುತ್ತಾನೆ. ಇವನಿಗೆ ಅಭ್ಯಂಗಕ್ಕೆ ಅಣುತೈಲವನ್ನೂ ಮೈತಿಕ್ಕುವುದಕ್ಕೆ ಸರ್ಜವೃಕ್ಷದ ಕಷಾಯವನ್ನೂ ಸ್ನಾನಕ್ಕೆ ಲಾವಂಚವನ್ನು ನೆನೆಸಿದ ಭಾವಿಯ ನೀರನ್ನೂ ಮೈಗೆ ಲೇಪಿಸುವುದಕ್ಕೆ ಶ್ರೀಗಂಧ ವನ್ನೂ ಗೇರುಕಷಾಯ ಸೇವನೆಯನ್ನೂ ಮಾಡುವಂತೆ ಆಹಾರೋಪಚಾರ ಪರಿಹಾರ ಗಳನ್ನೂ ಉಪದೇಶಿಸಬೇಕು. ಶಿವನಿಕಲ್ಕದ ಸೇವನೆಯಲ್ಲೂ ಇದೇ ರೀತಿ ಆಹಾರ ವಿಹಾರ ಪರಿಹಾರಗಳನ್ನೇ ಅನುಸರಿಸಬೇಕು. ಆದರೆ ಮಣ್ಣಿನಮೇಲೆ ಮಲಗುವುದೂ ಆಹಾರ ವಿಧಾನಗಳೂ ಕೂಡದು. ಇದರಲ್ಲಿ ಹಾಲಿನಿಂದ ಬೇಯಿಸಿದ ಅನ್ನವನ್ನೇ ಭೋಜನಮಾಡಬೇಕು. ಗುಣಗಳು ಮಾತ್ರ ಹಿಂದಿನ ಪ್ರಯೋಗದಲ್ಲಿ ಹೇಳಿರುವಂತೆಯೇ ಆಗುತ್ತವೆ. ರಕ್ತಪಿತ್ತಜನ್ಯ ರೋಗಗಳಲ್ಲಿ ಈ ಶಿವನಿಹಣ್ಣಿನ ವಿಧಾನಗಳನ್ನೇ ಉಪ ಯೋಗಿಸಬೇಕು. ಯಥೋಕ್ತವಾದ ಕುಟಿಯನ್ನು ಪ್ರವೇಶಿಸಿ ಕಳ್ಳಂಗಡ್ಲೆಬೇರಿನ ಚೂರ್ಣ ಅರ್ಧ ಅಥವಾ ೧ ಪಲ ಪ್ರಮಾಣದಷ್ಟನ್ನು ಹಾಲಿನಲ್ಲಿ ಕದರಿ ಕುಡಿಸಿ ಅದು ಜೀರ್ಣಿಸಿದಮೇಲೆ ಹಾಲು ತುಪ್ಪ ಮಿಶ್ರಮಾಡಿದ ಅನ್ನವನ್ನು ಭೋಜನ ಮಾಡಿಸಬೇಕು. ಹೀಗೆ ೧೨ ದಿನಗಳವರೆಗೆ ಪ್ರಯೋಗಿಸಿದರೆ ೧೨ ವರ್ಷಗಳಕಾಲ ಬದುಕುತ್ತಾನೆ. ೧೦೦ ದಿನಗಳು ಉಪಯೋಗಿಸಿದರೆ ೧೦೦ ವರ್ಷಗಳಕಾಲ ಬದುಕುತ್ತಾನೆ. ಇದೇ

ರೀತಿಯಾಗಿ ಬೋಳಂಗಡಲೆ, ತುರುವೆ, ನೆಲಗುಂಬಳಗೆಡ್ಡೆ, ಆಷಾಡಿಬೇರು ಇವುಗಳನ್ನೂ ಪ್ರಯೋಗಿಸಬೇಕು. ಆದರೆ ವಿಶೇಷವಾಗಿ ಬೋಳಂಗಡಲೆಯನ್ನು ನೀರಿನಿಂದಲೂ ತುರುವೇಬೇರಿನ ಚೂರ್ಣವನ್ನು ಜೇನುತುಪ್ಪದೊಡನೆಯೂ, ನೆಲಗುಂಬಳಗಡ್ಡೆಯ ಚೂರ್ಣವನ್ನು ಹಾಲಿನಲ್ಲೂ ಆಷಾಡಿಬೇರಿನ ಕಲ್ಕವನ್ನೂ ಹಾಲಿನಲ್ಲೇ ಕದರಿ ಕುಡಿಸಬೇಕು ಹಿಂದಿನ ಯೋಗದಂತೆಯೇ ಇವೆಲ್ಲವುಗಳ ಗುಣಗಳೂ ಉಂಟಾಗುತ್ತವೆ. ಈ ಔಷಧಯೋಗಗಳನ್ನು ಬಲಾಪೇಕ್ಷಿಗಳಿಗೂ ರಾಜಯಕ್ಷ್ಮರೋಗಿಗಳಿಗೂ ರಕ್ತಪಿತ್ತ ಪೀಡಿತರಿಗೂ (ರಕ್ತವನ್ನು ವಮನ ವಿರೇಚನಗಳಿಂದ ಕಾರತಕ್ಕವರಿಗೂ) ಪ್ರಯೋಗಿಸಬೇಕು.

ವಾರಾಹೀಮೂಲತುಲಾಚೂರ್ಣಂ ಕೃತ್ವಾ ತತೋಮಾತ್ರಾಂಮಧುಯುಕ್ತಾಂ ಪಯಸಾ ಲೋಡ್ಯ ಪಿಬೇತ್ ಜೀರ್ಣೇ ಪಯಃಸರ್ಪಿರೋದನ ಇತ್ಯಾಹಾರಃ ಪ್ರತಿಷೇಧೋಽತ್ರಪೂರ್ವವತ್ ಕ್ರಿಯಾಪ್ರಯೋಗಮುಪಸೇವಮಾನೋ ವರ್ಷಶತಮಾಯುರವಾಪ್ನೋತಿ ಸ್ತ್ರೀಷು ಚಾಕ್ಷಯತಾಮ್ । ಏತೇನೈವ ಚೂರ್ಣೇನ ಪಯೋವಚೂರ್ಣ್ಯಶೃತ ಶೀತಮಭಿಮಥ್ಯಾಜ್ಯಮುತ್ಪಾದ್ಯ ಮಧುಯುತಮುಪಯುಞ್ಜೀತ ಸಾಯಂಪ್ರಾತರೇಕಕಾಲಂ ವಾ ಜೀರ್ಣೇ ಪಯಃಸರ್ಪಿರೋದನ ಇತ್ಯಾಹಾರಃ ಏವಂ ಮಾಸಮುಪಯುಜ್ಯ ವರ್ಷಶತಾಯುರ್ಭವತಿ ||೯||

೧೦೦ ಪಲಗಳಷ್ಟು ಹಂದಿಗೆಡ್ಡೆಯನ್ನು ಚೂರ್ಣಿಸಿ ಪ್ರತಿ ದಿನವೂ ಪ್ರಾತಃಕಾಲದಲ್ಲಿ ೧ ಪಲ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ಹಾಲಿನಲ್ಲಿ ಕದರಿ ಕುಡಿದು ಅದು ಜೀರ್ಣಿಸಿದಮೇಲೆ ಹಾಲು ತುಪ್ಪಗಳೊಡನೆ ಅನ್ನವನ್ನು ಭೋಜನಮಾಡಬೇಕು. ಇದರ ಪ್ರಯೋಗಕಾಲದಲ್ಲಿ ವರ್ಜಮಾಡಬೇಕಾದ ವಿಧಾನಗಳನ್ನು ನಾಗಬಲಾವಿಧಾನದಂತೆಯೇ ಆಚರಿಸಬೇಕು. ಈ ಯೋಗವನ್ನು ಸೇವನೆಮಾಡಿದರೆ ೧೦೦ ವರ್ಷಗಳ ಕಾಲ ಆಯುಸ್ಸನ್ನು ಪಡೆಯುತ್ತಾನೆ. ಸ್ತ್ರೀಯರನ್ನು ರಮಿಸಲು ಅಕ್ಷಯವಾದ ಶುಕ್ರ ಪ್ರಾಪ್ತಿಯುಂಟಾಗುತ್ತದೆ. ಈ ಚೂರ್ಣದೊಡನೆ ಕಾಯಿಸಿದ ಹಾಲನ್ನು ಆರಿದಮೇಲೆ ಕಡೆಗೋಲಿನಿಂದ ಕಡೆದು ತೆಗೆದಬೆಣ್ಣೆಗೆ ಜೇನುತುಪ್ಪ ಮಿಶ್ರಮಾಡಿ ಸಾಯಂಕಾಲ ಪ್ರಾತಃಕಾಲಗಳಲ್ಲಾಗಲೀ ಒಂದೇ ಕಾಲವಾಗಲೀ ಸೇವನೆಮಾಡಿ ಅದು ಜೀರ್ಣಿಸಿದ ಮೇಲೆ ಹಾಲು, ತುಪ್ಪ, ಮಿಶ್ರಮಾಡಿ ಅನ್ನವನ್ನು ಭೋಜನಮಾಡಬೇಕು. ಹೀಗೆ ಒಂದುಮಾಸ ಪ್ರಯೋಗಮಾಡಿದರೆ ೧೦೦ ವರ್ಷಗಳ ಆಯುಸ್ಸು ಉಂಟಾಗುತ್ತದೆ.

ಚಕ್ಷುಃಕಾಮಃ ಪ್ರಾಣಕಾಮೋ ವಾ ಬೀಜಕಸಾರಾಗ್ನಿಮನ್ಥಮೂಲಂ ನಿಃಕ್ವಾಥ್ಯ ಮಾಷಪ್ರಸ್ಥಂ ಸಾಧಯೇತ್ ತಸ್ಮಿನ್ ಸಿಧ್ಯತಿ ಚಿತ್ರಕಮೂಲಾನಾ ಮಕ್ಷಮಾತ್ರಂ ಕಲ್ಕಂ ದದ್ಯಾದಾಮಲಕರಸಚತುರ್ಥಭಾಗಂ ತತಃ ಸ್ವಿನ್ನಮವತಾರ್ಯ ಸಹಸ್ರಸಂಪಾತಾಭಿಹುತಂ ಕೃತ್ವಾ ಶೀತಭೂತಂ ಮಧುಸರ್ಪಿರ್ಭ್ಯಾಂ ಸಂಸೃಜ್ಯೋಪಯುಞ್ಜೀತ ಯಥಾಬಲಂ ಲವಣಂಪರಿಹರಿಹರ್ರ ಭಕ್ಷಯೇತ್ ಜೀರ್ಣೇ ಮುದ್ಗಾಮಲಕಯೂಷೇಣಾಲವಣೇನ ಘೃತವನ್ತ ಮೋದನಮಶ್ನೀಯಾತ್ ಪಯಸಾ ವಾ ಮಾಸತ್ರಯಂ ಏವಮಾಭ್ಯಾಂ ಪ್ರಯೋಗಾಭ್ಯಾಂ ಚಕ್ಷುಃ ಸೌಪರ್ಣ್ಯವದ್ಭವತ್ಯನಲ್ಪಬಲಃ ಸ್ತ್ರೀಷು ಚಾಕ್ಷಯೋ ವರ್ಷಶತಾಯುರ್ಭವತೀತಿ ||೧೧|| ಭವತಿಚಾತ್ರ—

ಪಯಸಾಸಹ ಸಿದ್ಧಾನಿ ನರಃ ಶಣಫಲಾನಿ ಯಃ ।
ಭಕ್ಷಯೇತ್ ಪಯಸಾ ಸಾರ್ಧಂ ವಯಸ್ತಸ್ಯ ನ ಶೀರ್ಯತೇ ॥೧೨॥

ನೇತ್ರಬಲವನ್ನು ಪಡೆದು ಬದುಕಿರಬೇಕೆಂದು ಅಪೇಕ್ಷಿಸುವ ಜನರು ಕೊಡಶಿಗೆ ತೊಗಟೆ ಮತ್ತು ತಗ್ಗಿ ಬೇರಿನತೊಗಟೆಗಳ ಕಷಾಯಕ್ಕೆ ೧ ಪ್ರಸ್ಥ ಉದ್ದಿನಕಾಳನ್ನೂ ೧ ಕರ್ಷದಷ್ಟು ಚಿತ್ರಮೂಲದ ಕಲ್ಕವನ್ನೂ ಒಂದು ಕುಡವದಷ್ಟು ನೆಲ್ಲೀಕಾಯಿ ರಸವನ್ನೂ ಸೇರಿಸಿ ಅದು ಬೆಂದಮೇಲೆ ಕೆಳಕ್ಕೆ ಇಳಿಸಿ ಸಹಸ್ರಾವರ್ತಿ ಘೃತಹೋಮಮಾಡಿ ತಣ್ಣಗಾದ ಈ ಬೆಂದ ಉದ್ದಿನಕಾಳಿಗೆ ತುಪ್ಪವನ್ನೂ ಜೇನುತುಪ್ಪವನ್ನೂ ಸೇರಿಸಿ ತನ್ನ ಬಲಕ್ಕೆ ತಕ್ಕಂತೆ ಉಪ್ಪನ್ನು ಸೇರಿಸದೆ ತಿಂದು ಅದು ಜೀರ್ಣವಾದಮೇಲೆ ಹೆಸರು, ನೆಲ್ಲೀಕಾಯಿಗಳ ಕಟ್ಟಿನೊಡನೆ ಉಪ್ಪನ್ನು ಸೇರಿಸದೆ ತುಪ್ಪಮಿಶ್ರಮಾಡಿದ ಅನ್ನವನ್ನು ಅಥವಾ ಹಾಲು ಅನ್ನವನ್ನಾಗಲೀ ತಿನ್ನಬೇಕು. ಈ ಪ್ರಯೋಗವನ್ನು ೩ ಮಾಸಗಳವರೆಗೆ ಸೇವಿಸಿದರೆ ಗರುಡಪಕ್ಷಿಯಷ್ಟು ಚುರುಕಾದ ನೇತ್ರಬಲವೂ ಅಧಿಕ ದೇಹಬಲವೂ ಸ್ತ್ರೀ ಸಂಗ ಮಾಡಲು ಅಕ್ಷಯವಾದ ಶುಕ್ರವೂ ಉಂಟಾಗಿ ೧೦೦ ವರ್ಷಗಳವರೆಗೆ ಬದುಕುತ್ತಾನೆ. ಈ ವಿಚಾರದಲ್ಲಿ ಆಧಾರವಾಗಿರುವ ಶ್ಲೋಕದ ಅರ್ಥವೇನೆಂದರೆ—ಹಾಲಿನಲ್ಲಿ ಬೆಂದು ತಯಾರಾದ ಶಣಬಿನ ಬೀಜಗಳನ್ನು ಹಾಲಿನೊಡನೆ ಸೇವಿಸುವವನು ದೀರ್ಘಕಾಲ ಬದುಕುತ್ತಾನೆ (ಆಯಸ್ಸು ಕ್ಷೀಣಿಸುವುದಿಲ್ಲ).

ಟಿಪ್ಪಣಿ—ಸಹಸ್ರ ಸಂಪಾತಾಧ್ಯಾಯವು ಋಗ್ವೇದದಲ್ಲಿರುತ್ತದೆ. ಆ ಮಂತ್ರದಿಂದ ೧೦೦೦ ಹೋಮಗಳನ್ನು ಮಾಡಬೇಕೆಂದು ಡಲ್ಲಣರಮತವು. ಸುಶ್ರುತಾರ್ಥ ಸಂದೀಪನಕಾರರು "ಸಮ್ಪಾತೇನ ಹೋಮಮಾಕ್ಷಿಪ್ಯತೇ" ಎಂಬ ನ್ಯಾಯದಿಂದ ೧೦೦೦ ಆಜ್ಯ ಹೋಮಗಳನ್ನು ಮಾಡಿ ಸಮ್ಪಾತಸಹಸ್ರಗಳನ್ನು ತರಬೇಕೆಂದು ಅರ್ಥವಾಗುತ್ತದೆ. ಸಮ್ಪಾತವೆಂದರೆ ಸ್ರುವದಿಂದ ತೊಟ್ಟಿಕ್ಕುವ ಹೋಮಶೇಷದ ಆಜ್ಯಬಿಂದುಗಳೆಂದು ಅರ್ಥವಾಗುತ್ತದೆ. "ಆಜ್ಯಂಜುಹೋತಿ" ಎಂಬ ಕೌಶಿಕಸೂತ್ರದಿಂದ ಸಮ್ಪಾತಾಕ್ಷಿಪ್ತಂ ಜುಹೋತಿ ಚೋದನೆಯಲ್ಲೂ ಆಜ್ಯವೆಂದೇ ತಿಳಿದುಬರುತ್ತದೆ. "ತೇನಾಭಿಹುತಂ" ಎಂದರೆ ತದ್ಯೋಗೇನ ಸಂಸ್ಕೃತಮಿತ್ಯರ್ಥಃ ಹೋಮಮಂತ್ರವು. "ಅಪ್ಸುಯೋ ಯನ್ತ್ಯಮ್ಪಾಭಿಜಾಮಯೋ ಅಧ್ವರೀಯತಾಂ ಪಞ್ಚತೀ ಮಧುನಾ ಪಯಃ" ಇತ್ಯಾದಿ ನಾಲ್ಕು ರುಕ್ಕುಗಳುಳ್ಳ ಅಥರ್ವಣ ಸಂಹಿತೆಯ ೧ನೇ ಖಂಡದ ೧ನೆಯ ಅನುವಾಕದ ೪ನೇ ಸೂಕ್ತದಿಂದ ಹೋಮ ಮಾಡಬೇಕು. "ಅಪ್ಸುಯೋಯನ್ತಿ ವಾಯೋಃ ಪೂತಃ ಇತಿ ಚ ಶಾನ್ತಾಃ" ಇತಿ ಕೌಶಿಕ ಸೂತ್ರದಿಂದ ಸರ್ವರೋಗಭೈಷಜ್ಯಕರ್ಮವಾದ ಆಜ್ಯ ಹೋಮದಲ್ಲಿ ಈ ಸೂತ್ರವು ವಿನಿಯೋಗಿಸಲ್ಪಟ್ಟಿರುತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಸರ್ವೋಪಘಾತಶಮನ ರಸಾಯನ ಚಿಕಿತ್ಸಾನಾಮ ಸಪ್ತವಿಂಶತಿತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಅಷ್ಟಾವಿಂಶತಿತಮೋಽಧ್ಯಾಯಃ

ಅಥಾತೋ ಮೇಧಾಯುಷ್ಕಾಮೀಯಂ ರಸಾಯನಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಮೇಧಾಯುಷ್ಕಾಮೀಯ ರಸಾಯನ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ—"ಮೇಧಾ" ಎಂದರೆ ಯಾವ ತಡೆಯೂ ಇಲ್ಲದ ದೀರ್ಘಾಲೋಚನೆಯಿಂದ ಕೂಡಿದ ಅತ್ಯಂತ ಸೂಕ್ಷ್ಮ ರೂಪದ ಶಾಸ್ತ್ರಾನುಮತವಾದ ಬುದ್ಧಿ ವಿಶೇಷವು.

ಮೇಧಾಯುಷ್ಕಾಮಃ ಶ್ವೇತಾವಲ್ಗುಜಫಲಾನ್ಯಾತಪಪರಿಶುಷ್ಕಾಣ್ಯಾದಾಯಸೂಕ್ಷ್ಮಚೂರ್ಣಾನಿ ಕೃತ್ವಾ ಗುಡೇನಸಹ ಸ್ನೇಹಕುಮ್ಭೇ ಸಪ್ತರಾತ್ರಂ ಧಾನ್ಯರಾಶೌನಿದಧ್ಯಾತ್ ಸಪ್ತರಾತ್ರಾದುದ್ಧೃತ್ಯ ಹೃತದೋಷಸ್ಯ ಯಥಾಬಲಂ ಪಿಣ್ಡಂ ಪ್ರಯಚ್ಛೇದನುದಿತೇ ಸೂರ್ಯೇ ಉಷ್ಣೋದಕಂ ಚಾನು ಪಿಬೇತ್ ಭಲ್ಲಾತಕವಿಧಾನವಚ್ಚಾಗಾರಪ್ರವೇಶಃ ಜೀರ್ಣೌಷಧಶ್ಚಾಪರಾಹ್ಣೇ ಹಿಮಾಭಿರದ್ಭಿಃ ಪರಿಷಿಕ್ತಗಾತ್ರಃ ಶಾಲೀನಾಂ ಷಷ್ಟಿಕಾನಾಂ ಚ ಪಯಸಾ ಶರ್ಕರಾಮಧುರೇಣೌದನಮಶ್ನೀಯಾತ್ ಏವಂ ಷಣ್ಮಾಸಾನುಪಯುಜ್ಯ ವಿಗತಪಾಪ್ಮಾ ಬಲವರ್ಣೋಪೇತಃ ಶ್ರುತಿನಿಗಾದೀ ಸ್ಮೃತಿಮಾನರೋಗೋ ವರ್ಷಶತಾಯುರ್ಭವತಿ । ಕುಷ್ಠಿನಂ ಪಾಣ್ಡುರೋಗಿಣಮುದರಿಣಂ ವಾ ಕೃಷ್ಣಾಯಾಗೋಮೂತ್ರೇಣಾಲೋಡ್ಯಾರ್ಧಪಾಲಿಕಂ ವಿಗತಲೌಹಿತ್ಯೇಸವಿತರಿ ಪಾಯಯೇತ್ ಪರಾಹ್ಣೇ ಚಾಲವಣೇನಾಮಲಕಯೂಷೇಣ ಸರ್ಪಿಷ್ಮನ್ತಮೋದನಮಶ್ನೀಯಾತ್ ಏವಂ ಮಾಸಮುಪಯುಜ್ಯ ಸ್ಮೃತಿಮಾನರೋಗೋ ವರ್ಷಶತಾಯುರ್ಭವತಿ । ಏಷ ಏವೋಪಯೋಗಶ್ಚಿತ್ರಮೂಲಾನಾಂ ರಜನ್ಯಾಶ್ಚ ಚಿತ್ರಮೂಲೇ ವಿಶೇಷೋದ್ವಿಪಲಿಕಂ ಪಿಣ್ಡಂ ಪರಂ ಪ್ರಮಾಣಂ ಶೇಷಂ ಪೂರ್ವವತ್ ||೩||

ಹೃತದೋಷ ಏವ ಪ್ರತಿಸಂಸೃಷ್ಟ ಭಕ್ತೋ ಯಥಾಕ್ರಮಮಾಗಾರಂ ಪ್ರವಿಶ್ಯಮಣ್ಡೂಕಪರ್ಣೀಸ್ವರಸಮಾದಾಯ ಸಹಸ್ರಸಂಪಾತಾಭಿಹುತಂ ಕೃತ್ವಾ ಯಥಾಬಲಂ ಪಯಸಾಲೋಡ್ಯ ಪಿಬೇತ್ ಪಯೋನುಪಾನಂ ವಾ ತಸ್ಯಾಂ ಜೀರ್ಣಾಯಾಂ ಯವಾನ್ನಂ ಪಯಸೋಪಯುಞ್ಜೀತ ತಿಲೈರ್ವಾ ಸಹ ಭಕ್ಷಯೇತ್ ತ್ರೀನ್ ಮಾಸಾನ್ ಪಯೋನುಪಾನಂ ಜೀರ್ಣೇ ಪಯಃ ಸರ್ಪಿರೋದನ ಇತ್ಯಾಹಾರಃ । ಏವಮುಪಯುಞ್ಜಾನೋ ಬ್ರಹ್ಮವರ್ಚಸೀ ಶ್ರುತನಿಗಾದೀ ಭವತಿ ವರ್ಷಶತಮಾಯುರವಾಪ್ನೋತಿ । ತ್ರಿರಾತ್ರೋಪೋಷಿತಶ್ಚ ತ್ರಿರಾತ್ರಮೇನಾಂ ಭಕ್ಷಯೇತ್ ತ್ರಿರಾತ್ರಾದೂರ್ಧ್ವಂಪಯಃ ಸರ್ಪಿರಿತಿ ಚೋಪಯುಞ್ಜೀತ । ಬಿಲ್ವಮಾತ್ರಂ ಪಿಣ್ಡಂ ವಾ ಪಯಸಾಲೋಡ್ಯ ಪಿಬೇತ್ ಏವಂ ದಶರಾತ್ರ ಮುಪಯುಜ್ಯ ಮೇಧಾವೀ ವರ್ಷಶತಾಯುರ್ಭವತಿ ||೪||

ಹೃತದೋಷ ಏವಾಗಾರಂ ಪ್ರವಿಶ್ಯ ಪ್ರತಿಸಂಸೃಷ್ಟಭಕ್ತೋ ಬ್ರಾಹ್ಮೀಸ್ವರಸಮಾದಾಯ ಸಹಸ್ರಸಂಪಾತಾಭಿಹುತಂ ಕೃತ್ವಾ ಯಥಾಬಲಮುಪಯುಞ್ಜೀತ ಜೀರ್ಣೌಷಧಶ್ಚಾಪರಾಹ್ಣೇ

ಯವಾಗೂಮಲವಣಾಂ ಪಿಬೇತ್ ಕ್ಷೀರಸಾತ್ಮ್ಯೋ ವಾ ಪಯಸಾ ಭುಞ್ಜೀತ ಏವಂ ಸಪ್ತರಾತ್ರ ಮುಪಯುಜ್ಯ ಬ್ರಹ್ಮವರ್ಚಸೀ ಮೇಧಾವೀ ಭವತಿ ದ್ವಿತೀಯಂ ಸಪ್ತರಾತ್ರಮುಪಯುಜ್ಯ ಗ್ರನ್ಥ ಮೀಪ್ಸಿತಮುತ್ಪಾದಯತಿ ನಷ್ಟಂ ಚಾಸ್ಯಪ್ರಾದುರ್ಭವತಿ ತೃತೀಯಂ ಸಪ್ತರಾತ್ರಮುಪಯುಜ್ಯ ದ್ವಿರುಚ್ಚಾರಿತಂ ಶತಮಪ್ಯವಧಾರಯತಿ ''ಏವಮೇಕವಿಂಶತಿರಾತ್ರಮುಪಯುಜ್ಯಾಲಕ್ಷ್ಮೀರಪ ಕ್ರಾಮತಿ ಮೂರ್ತಿಮತೀ ಚೈನಂ ವಾಗ್ದೇವ್ಯನುಪ್ರವಿಶತಿ ಸರ್ವಾಶ್ಚೈನಂ ಶ್ರುತಯ ಉಪತಿಷ್ಠನ್ತಿ ಶ್ರುತಧರಃ ಪಞ್ಚವರ್ಷಶತಾಯುರ್ಭವತಿ ||೫||

ಮೇಧಾಯುಷ್ಕಾಮನು ಸೇವಿಸುವ ರಸಾಯನ ವಿಧಾನವು :-ಬಿಸಿಲಿನಲ್ಲಿ ಚೆನ್ನಾಗಿ ಒಣಗಿದ ಬಿಳಿಯಬಾವಂತೀ ಬೀಜಗಳನ್ನು ನುಣ್ಣಗೆ ಚೂರ್ಣಿಸಿ ಬೆಲ್ಲ ಮಿಶ್ರಮಾಡಿ ತುಪ್ಪ ಬಳಿದು ಪಳುಗಿದ ಗುಡಾಣಕ್ಕೆ ತುಂಬಿ ಅದರ ಬಾಯಿಗೆ ಚೇರುಮಾಡಿ ಧಾನ್ಯರಾಶಿಯಲ್ಲಿ ಹೂಳಿಟ್ಟು ಏಳು ದಿನಗಳು ಕಳೆದಮೇಲೆ ಹೊರಕ್ಕೆ ತೆಗೆದು ವಮನ, ವಿರೇಚನಗಳಿಂದ ದೇಹ ಶುದ್ಧಿಮಾಡಿಸಿಕೊಂಡಿರುವ ರೋಗಿಗೆ ಸೂರ್ಯೋದಯಕ್ಕೆ ಮುಂಚಿತವಾಗಿ ಶಕ್ತಿಗೆ ತಕ್ಕಂತೆ ಅರ್ಧಪಲ ಒಂದುಪಲ ಪ್ರಮಾಣದಷ್ಟನ್ನು ತಿನ್ನಿಸಿ ಬಿಸಿನೀರನ್ನು ಕುಡಿಸಬೇಕು. ಗೇರುಬೀಜವನ್ನು ಸೇವಿಸಿದಾಗ ಹೇಳಿರುವಂತೆಯೇ ಕುಟೀಪ್ರವೇಶ ಮಾಡಿಸಬೇಕು. ಔಷಧಿಯು ಜೀರ್ಣವಾದಮೇಲೆ ಮಧ್ಯಾಹ್ನದಲ್ಲಿ ತಣ್ಣೀರಿನಿಂದ ಸ್ನಾನಮಾಡಿಸಿ ಅರವತ್ತು ದಿನಗಳಲ್ಲಿ ಬೆಳೆಯುವ ಭತ್ತದ ಅಕ್ಕಿಯ ಅನ್ನವನ್ನು ಹಾಲು ಸಕ್ಕರೆಗಳನ್ನು ಸೇರಿಸಿ ಭೋಜನ ಮಾಡಿಸಬೇಕು. ಈ ರೀತಿಯಾಗಿ ಆರು ತಿಂಗಳಕಾಲ ಉಪಯೋಗಿಸಿದರೆ ಪಾಪದಿಂದ ಬಿಡಲ್ಪಟ್ಟವನಾಗಿ ಬಲ, ಬಣ್ಣಗಳಿಂದ ಕೂಡಿದವನಾಗಿ ಕೇಳಿದ ವಿಷಯ ಗಳನ್ನು ಜ್ಞಾಪಿಸಿಕೊಳ್ಳುವವನಾಗಿ ರೋಗವಿಲ್ಲದೆ ೧೦೦ ವರ್ಷಗಳಕಾಲ ಬದುಕುತ್ತಾನೆ. ಕುಷ್ಠ, ಪಾಂಡುರೋಗ, ಉದರರೋಗ ಪೀಡಿತರಿಗೆ ಕರಿಯ ಹಸುವಿನ ಮೂತ್ರದಲ್ಲಿ ಅರ್ಧಪಲದಷ್ಟು ಚೂರ್ಣವನ್ನು ಕದರಿ ಸೂರ್ಯೋದಯವಾದ ಮೇಲೆ ಸೂರ್ಯಮಂಡಲ ದಲ್ಲಿ ಕೆಂಪು ಬಣ್ಣವು ನಿವಾರಣೆಯಾದಮೇಲೆ ಕುಡಿಸಬೇಕು. ಮಧ್ಯಾಹ್ನ ಕಳೆದಮೇಲೆ ಉಪ್ಪು ಸೇರದಿರುವ ನೆಲ್ಲೀಕಾಯಿನ ಕಟ್ಟನಲ್ಲಿ ಕಲಿಸಿದ ಶಾಲಿಯ ಅನ್ನವನ್ನು ತುಪ್ಪಮಿಶ್ರ ಮಾಡಿ ಭೋಜನ ಮಾಡಿಸಬೇಕು. ಈ ರೀತಿ ಒಂದು ಮಾಸಕಾಲ ಉಪಯೋಗಿಸಿದರೆ ಜ್ಞಾಪಕಶಕ್ತಿಯುಂಟಾಗಿ ರೋಗರಹಿತನಾಗಿ ೧೦೦ ವರ್ಷಕಾಲ ಬದುಕುತ್ತಾನೆ. ಇದೇ ರೀತಿಯಾಗಿ ಕಪ್ಪುಚಿತ್ರಮೂಲದ ತೊಗಟೆಯನ್ನೂ ಅರಿಶಿನದ ಬೇರನ್ನೂ ಪ್ರಯೋಗಿಸ ಬೇಕು. ಅಧಿಕಪ್ರಮಾಣವು ೨ ಪಲಗಳಷ್ಟೇ ; ಉಳಿದ ಆಹಾರವಿಹಾರಗಳನ್ನೆಲ್ಲಾ ಹಿಂದೆ ಹೇಳಿದಂತೆಯೇ ಆಚರಿಸಬೇಕು.

ದೋಷಹರಣವಾಗಿ ಉಪಚಾರ ಪಥ್ಯಾಚರಣೆಗಳಿಂದ ಮೊದಲಿನಂತೆ ಬಲವುಂಟಾಗಿ ಕುಟೀಪ್ರವೇಶಮಾಡಿಸಿದ ರೋಗಿಗೆ ದೊಡ್ಡ ಒಂದೆಲಗದ ಸ್ವರಸವನ್ನು ಸಂಗ್ರಹಣೆಮಾಡಿ ಸಹಸ್ರಾಜ್ಯಾಹುತಿಗಳನ್ನು ಹೋಮಮಾಡಿಸಿ ಶಕ್ತಿಗೆ ತಕ್ಕಂತೆ ಅರ್ಧಪಲ ಒಂದುಪಲ ಸ್ವರಸವನ್ನು ಹಾಲಿನಲ್ಲಿ ಕದರಿ ಕುಡಿಸಬೇಕು. ಹಾಲನ್ನೇ ಅನುಪಾನಮಾಡಬೇಕು.

ಅದು ಜೀರ್ಣವಾದನಂತರ ಯವೆಯ ಅನ್ನವನ್ನು ಹಾಲಿನೊಡನೆ ಭೋಜನ ಮಾಡಿಸಬೇಕು. ಅಥವಾ ಎಳ್ಳಿನೊಡನೆ ಒಂದೆಲಗದ ಸೊಪ್ಪನ್ನು ತಿನ್ನಿಸಿ ಹಾಲನ್ನು ಕುಡಿಸಬೇಕು. ಅದು ಜೀರ್ಣವಾದಮೇಲೆ ಹಾಲು ತುಪ್ಪಗಳನ್ನು ಮಿಶ್ರಮಾಡಿದ ಶಾಲ್ಯೋದನವನ್ನು ಭೋಜನ ಮಾಡಿಸಬೇಕು. ಈ ರೀತಿ ಉಪಯೋಗಿಸಿದರೆ ಬ್ರಹ್ಮವರ್ಚಸ್ಸನ್ನು ಪಡೆದು ಕೇಳಿದ ವಿಷಯಗಳನ್ನು ಜ್ಞಾಪಿಸಿಕೊಂಡು ಹೇಳುವಷ್ಟು ಸಾಮರ್ಥ್ಯವುಳ್ಳವನಾಗಿ ೧೦೦ ವರ್ಷಗಳಕಾಲ ಜೀವಿಸಿರುತ್ತಾನೆ. ಮೂರು ದಿನಗಳವರಿಗೆ ಉಪವಾಸವಿದ್ದು ಮೂರು ದಿವಸಗಳು ಮಾತ್ರ ಇವನ್ನು ತಿನ್ನಿಸಿ ಹಾಲು ತುಪ್ಪಗಳನ್ನೇ ಉಪಯೋಗಿಸಬೇಕು. ಅಥವಾ ೧ ಪಲ ಪ್ರಮಾಣದಷ್ಟು ಕಲ್ಕವನ್ನಾಗಲೀ ಹಾಲಿನಲ್ಲಿ ಕದರಿ ಕುಡಿಸಬೇಕು. ಈ ರೀತಿಯಾಗಿ ೧೦ ದಿವಸಗಳವರೆಗೆ ಉಪಯೋಗಿಸಿದರೆ ಮೇಧಾವಿಯಾಗಿ (ಸೂಕ್ಷ್ಮಬುದ್ಧಿಯುಳ್ಳವನಾಗಿ) ೧೦೦ ವರ್ಷಗಳವರೆಗೆ ಬದುಕುತ್ತಾನೆ. ದೇಹಶುದ್ಧಿಮಾಡಿಕೊಂಡು ಪಥ್ಯಾಹಾರವಿಹಾರಗಳಿಂದ ಮೊದಲಿನಷ್ಟು ಬಲವುಂಟಾದಮೇಲೆ ಕುಟೀಪ್ರವೇಶಮಾಡಿ ಸಣ್ಣಬ್ರಾಹ್ಮಿಯರಸ (ಒಂದೆಲಗ) ವನ್ನು ಸಂಗ್ರಹಣಮಾಡಿಟ್ಟುಕೊಂಡು ೧೦೦೦ ಆಜ್ಯಾಹುತಿಗಳನ್ನು ಹೋಮಮಾಡಿ ದೇವಬ್ರಾಹ್ಮಣರ ಆಶೀರ್ವಾದವನ್ನು ಪಡೆದು ತನ್ನ ಶಕ್ತಿಗೆ ತಕ್ಕಷ್ಟು ಬ್ರಾಹ್ಮೀ ರಸವನ್ನು ಕುಡಿದು (೧/೨, ೧ ಪಲ) ಇದು ಜೀರ್ಣಿಸಿದಮೇಲೆ ಮಧ್ಯಾಹ್ನದಲ್ಲಿ ಉಪ್ಪನ್ನು ಸೇರಿಸದೆ ಅಲ್ಪವಾಗಿ ಇರುವ ಯವಾಗುವನ್ನು ಪಾನಮಾಡಬೇಕು. ಈ ಕ್ರಮದಿಂದ ಏಳು ದಿವಸಗಳವರಿಗೆ ಉಪಯೋಗಿಸಿದರೆ ಮೇಧಾಶಕ್ತಿಯುಳ್ಳವನಾಗಿ ಬ್ರಹ್ಮವರ್ಚಸ್ಸನ್ನು ಪಡೆಯುತ್ತಾನೆ. ಎರಡನೆಯ ಸಪ್ತರಾತ್ರಗಳು ಉಪಯೋಗಿಸಿದರೆ ತನಗೆ ಬೇಕಾದ ಗ್ರಂಥ ನಿರ್ಮಾಣ ಮಾಡುವ ಶಕ್ತಿಯನ್ನು ಪಡೆಯುತ್ತಾನೆ. ಮರೆತಿದ್ದ ವಿಚಾರಗಳೆಲ್ಲಾ ಜ್ಞಾಪಕಕ್ಕೆ ಬರುತ್ತವೆ. ಮೂರನೆಯ ಸಪ್ತಾಹಗಳಲ್ಲಿ ಉಪಯೋಗಿಸಿದರೆ ಎರಡಾವರ್ತಿ ಹೇಳಿದ ೧೦೦ ಶ್ಲೋಕಗಳನ್ನೂ ಜ್ಞಾಪಕದಲ್ಲಿಟ್ಟುಕೊಳ್ಳುತ್ತಾನೆ. ಈ ರೀತಿಯಾಗಿ ೨೧ ದಿನಗಳವರೆಗೆ ಉಪಯೋಗಿಸಿದರೆ ಅಮಂಗಳಗಳು ನಾಶವಾಗುತ್ತವೆ. ಈ ಮನುಷ್ಯನಲ್ಲಿ ಸಾಕ್ಷಾತ್ ಸರಸ್ವತಿಯೇ ಆರೋಪಿಸಿರುತ್ತಾಳೆ. ಎಲ್ಲಾ ಶ್ರುತಿಗಳೂ ಇವನಿಗೆ ಬುದ್ಧಿಗೋಚರವಾಗುತ್ತವೆ. ಕಿವಿಯಿಂದ ಕೇಳಿದ ವಿಚಾರಗಳನ್ನೆಲ್ಲಾ ಗ್ರಹಿಸಿಟ್ಟುಕೊಳ್ಳುತ್ತಾನೆ. ೫೦೦ ವರ್ಷಗಳಕಾಲ ಜೀವಿಸುತ್ತಾನೆ.

ಬ್ರಾಹ್ಮೀಸ್ವರಸ ಪ್ರಸ್ಥದ್ವಯೇ ಘೃತಪ್ರಸ್ಥಂ ವಿಡಙ್ಗತಂಡುಲಾನಾಂ ಕುಡವಂ ದ್ವೇ ದ್ವೇ ಪಲೇ ವಚಾತ್ರಿವೃತಯೋರ್ದ್ವಾದಶಹರೀತಕ್ಯಾಮಲಕವಿಭೀತಕಾನಿ ಶ್ಲಕ್ಷ್ಣಪಿಷ್ಟಾನ್ಯಾವಾಪ್ಯೈಕಧ್ಯಂ ಸಾಧಯಿತ್ವಾ ಸ್ವನುಗುಪ್ತಂ ನಿದಧ್ಯಾತ್ ತತಃ ಪೂರ್ವವಿಧಾನೇನ ಮಾತ್ರಾಂ ಯಥಾಬಲಮುಪಯುಞ್ಜೀತ ಜೀರ್ಣೇ ಪಯಃಸರ್ಪಿರೋದನ ಇತ್ಯಾಹಾರಃ। ಏತೇನ ಊರ್ಧ್ವಸಮಧಸ್ತಿರ್ಯಕ್ ಕ್ರಿಮಯೋನಿತಿಕ್ರಾಮನ್ತಿ ಅಲಕ್ಷ್ಮೀರಪಕ್ರಾಮತಿ ಪುಷ್ಕರವರ್ಣಃ ಸ್ಥಿರವಯಾಃ ಶ್ರುತನಿಗಾದೀ ತ್ರಿವರ್ಷಶತಾಯುರ್ಭವತ್ಯೇತದೇವ ಕುಷ್ಠವಿಷಮಜ್ವರಾಪಸ್ಮಾರೋನ್ಮಾದ ವಿಷಭೂತಗ್ರಹೇಷ್ವನ್ಯೇಷು ಚ ಮಹಾವ್ಯಾಧಿಷು ಚ ಸಂಶೋಧನಮಾಕದಿನ್ತಿ ||೬||

ಹೃತದೋಷ ಏವಾಗಾರಂ ಪ್ರವಿಶ್ಯ ಹೈಮವತ್ಯಾವಚಾಯಾಃ ಪಿಣ್ಡಮಾಮಲಕಮಾತ್ರ ಮಭಿಹುತಂ ಪಯಸಾಲೋಡ್ಯ ಪಿಬೇತ್ ಜೀರ್ಣೇಪಯಃ ಸರ್ಪಿರೋದನ ಇತ್ಯಾಹಾರಃ ಏವಂ ದ್ವಾದಶರಾತ್ರಮುಪಯುಞ್ಜೀತ ತತೋಽಸ್ಯ ಶ್ರೋತಂ ವಿವ್ರಿಯತೇ ದ್ವಿರಭ್ಯಾಸಾತ್ ಸ್ಮೃತಿ ರ್ಮಾಭವತಿ ತ್ರಿರಭ್ಯಾಸಾಚ್ಛ್ರುತಮಾದತ್ತೇ ಚತುರ್ದ್ವಾದಶರಾತ್ರಮುಪಯುಜ್ಯ ಸರ್ವಂ ತರತಿಕಿಲ್ಬಿಷಂ ತಾರ್ಕ್ಷ್ಯದರ್ಶನಷಮುತ್ಪದ್ಯತೇ ಶತಾಯುಶ್ಚ ಭವತಿ ದ್ವೇ ದ್ವೇ ಪಲೇ ಇತರಸ್ಯಾ ವಚಾಯಾಃ ಕ್ವಾಥ್ಯ ಪಿಬೇತ್ ಪಯಸಾ ಸಮಾನಂ ಭೋಜನಂ ಸಮಾಃ ಪೂರ್ವೇಣಾಶಿಷಶ್ಚ ||೭||

ವಚಾ ಶತಪಾಕಂ ವಾ ಸರ್ಪಿರ್ದ್ರೋಣಮುಪಯುಜ್ಯ ಪಞ್ಚವರ್ಷಶತಾಯುರ್ಭವತಿ ಗಳ ಗಣ್ಡಾಪಚೀಶ್ಲೀಪದಸ್ವರಭೇದಾಂಶ್ಚಾಪಹನ್ತೀತಿ ||೮||

(ಬ್ರಾಹ್ಮೀಘೃತ ವಿಧಾನ)—ಒಂದೆಲಗದ ಸ್ವರಸ ೨ ಪ್ರಸ್ಥ, ತುಪ್ಪ ೧ ಪ್ರಸ್ಥ, ವಾಯುವಿಡಂಗ ೧ ಕುಡವ, ಬಜೆ ೨ ಪಲ, ತಿಗಡೆ ೨ ಪಲ, ತ್ರಿಫಲೆ ೧೨ ಪಲಗಳು ಇವುಗಳನ್ನು ನುಣ್ಣಗೆ ಚೂರ್ಣಿಸಿ ಎಲ್ಲವನ್ನೂ ಕೂಡಿಸಿ ತಯಾರಿಸಿದ ಘೃತವನ್ನು ಶೋಧಿಸಿಟ್ಟುಕೊಂಡು ಹಿಂದೆ ರಸಾಯನಪ್ರಯೋಗ ವಿಧಾನದಲ್ಲಿ ಹೇಳಿದಂತೆ ಶುದ್ಧದೇಹವುಳ್ಳ ರೋಗಿಗೆ ಅವನ ಜೀರ್ಣಶಕ್ತಿಗೆ ತಕ್ಕಷ್ಟು ಪ್ರಮಾಣದಿಂದ ಪ್ರಯೋಗಿಸಿ ಅದು ಜೀರ್ಣಿಸಿದಮೇಲೆ ಮಧ್ಯಾಹ್ನದಲ್ಲಿ ಹಾಲು ತುಪ್ಪ ಮಿಶ್ರಮಾಡಿ ಶಾಲ್ಯನ್ನವನ್ನು ಭೋಜನ ಮಾಡಿಸಬೇಕು. ಇದರಿಂದ ಮೇಲ್ಮುಖವಾಗಿಯೂ ಅಧೋಮುಖವಾಗಿಯೂ ಅಡ್ಡಡ್ಡಲಾಗಿಯೂ ಕ್ರಿಮಿಗಳು ಹೊರಕ್ಕೆ ಬರುತ್ತವೆ. ಅವುಗಳ ನಿವಾರಣೆಯಾಗಿ ತಾವರೆಹೂವಿನಂತೆ ಮುಖವರ್ಣ ವುಂಟಾಗುತ್ತದೆ. ವಯಸ್ಸು ಸ್ಥಿರವಾಗಿ (ಜಾಗ್ರತೆಯಾಗಿ ವಾರ್ಧಕ್ಯವುಂಟಾಗುವುದಿಲ್ಲ) ನಿಂತು ಕೇಳಿದ ವಿಚಾರಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ೨೦೦ ವರ್ಷಗಳವರೆಗೆ ಬದುಕಿರುತ್ತಾನೆ. ಈ ಬ್ರಾಹ್ಮೀಘೃತವನ್ನೇ ಕುಷ್ಠ, ವಿಷಮಜ್ವರ, ಅಪಸ್ಮಾರ, ಉನ್ಮಾದ, ವಿಷ ಭೂತಗ್ರಹ ಮತ್ತು ೪ ವಿಧ ಮಹಾರೋಗಗಳಲ್ಲಿ ಸಂಶೋಧನೆಗಾಗಿ ಪ್ರಯೋಗಿಸಬೇಕೆಂದು ಉಪದೇಶಿಸುತ್ತಾರೆ. (ವಚಾಯೋಗ ವಿಧಾನವು) ದೋಷಶೋಧನೆಮಾಡಿಸಿ ಶುದ್ಧದೇಹವುಳ್ಳವನಾಗಿ ಕುಟಿಯನ್ನು ಪ್ರವೇಶಿಸಿ ೧೦೦೦ ಆಜ್ಯಹೋಮ ಮಾಡಿಸಿದಮೇಲೆ ಬಿಳಿ ಬಜೆಯ ಕಲ್ಕವನ್ನು ನೆಲ್ಲೀಕಾಯಿಯ ಪ್ರಮಾಣದಷ್ಟನ್ನು ಹಾಲಿನಲ್ಲಿ ಕದರಿ ಕುಡಿಸಿ ಇದು ಜೀರ್ಣಿಸಿದಮೇಲೆ ಮಧ್ಯಾಹ್ನದಲ್ಲಿ ಹಾಲು ತುಪ್ಪದೊಡನೆ ಶಾಲ್ಯನ್ನವನ್ನು ಭೋಜನ ಮಾಡಬೇಕು. ಈ ರೀತಿಯಾಗಿ ೧೨ ದಿನಗಳವರೆಗೆ ಪ್ರಯೋಗಿಸಲು ಕರ್ಣರಂಧ್ರಗಳು ಹಿಗ್ಗಲಿಸುತ್ತವೆ. ದಿನಕ್ಕೆ ಎರಡಾವರ್ತಿಯಂತೆ ೧೨ ದಿನಗಳವರೆಗೆ ಪ್ರಯೋಗಿಸಿದರೆ ಜ್ಞಾಪಕ ಶಕ್ತಿಯುಳ್ಳವನಾಗುತ್ತಾನೆ. ಮೂರು ೧೨ ದಿನಗಳವರೆಗೆ ಪ್ರಯೋಗಿಸಿದರೆ ೧೦೦ ವರ್ಷಗಳ ಕಾಲ ಬದುಕುತ್ತಾನೆ. ನಾಲ್ಕು ೧೨ (ಅಂದರೆ ೪೮) ದಿವಸಗಳವರೆಗೆ ಪ್ರಯೋಗಿಸಿದರೆ ಸಕಲಪಾಪಗಳಿಂದಲೂ ಬಿಡಲ್ಪಟ್ಟು ಗರುಡಪಕ್ಷಿಗೆ ಸಮಾನವಾದ ನೇತ್ರಬಲವನ್ನು ಹೊಂದುತ್ತಾನೆ. ಕೆಂಪು ಬಜೆ ೨ ಪಲದಷ್ಟನ್ನು ಹಾಲಿನಲ್ಲಿ ಪಾಕಮಾಡಿ ಕುಡಿದು ಹಿಂದಿನಂತೆ ಹಾಲು ತುಪ್ಪಮಿಶ್ರಮಾಡಿದ ಶಾಲ್ಯನ್ನವನ್ನು ಭೋಜನಮಾಡಿದರೆ ಬಿಳಿಬಜೆಯ ಪ್ರಯೋಗ

ದಂತೆಯೇ ಗುಣಗಳುಂಟಾಗುತ್ತವೆ. ೧೦೦ ಪಲ ಬಿಳಿಯಬಜೆಯನ್ನು ಒಂದು ದ್ರೋಣತುಪ್ಪದಲ್ಲಿ ಪಾಕಮಾಡಿ ಪ್ರಯೋಗಿಸಿದರೆ ೫೦೦ ವರ್ಷಗಳಕಾಲ ಬದುಕುತ್ತಾನೆ. ಗಳಗಂಡ, ಗಂಡಮಾಲೆ (ಅಪಚಿ), ಶ್ಲೀಪದ, ಸ್ವರಭೇದಗಳು ನಾಶವಾಗುತ್ತವೆ.

ಅಥ ಆಯುಃಕಾಮೀಯಂ ವಕ್ಷ್ಯಾಮಃ ।
ಮನ್ತ್ರೌಷಧಸಮಾಯುಕ್ತಂ ಸಂವತ್ಸರಫಲಪ್ರದಮ್ ।
ಬಿಲ್ವಸ್ಯ ಚೂರ್ಣಂ ಪುಷ್ಯೇ ತು ಹುತಂ ವಾರ್ರಾ ಸಹಸ್ರಶಃ ॥೯॥
ಶ್ರೀಸೂಕ್ತೇನ ನರಃ ಕಲ್ಯೇ ಸಸುವರ್ಣಂ ದಿನೇ ದಿನೇ ।
ಸರ್ಪಿಮಧು ಯುತಂ ಲಿಹ್ಯಾದಲಕ್ಷ್ಮೀನಾಶನಂ ಪರಮ್ ॥೧೦॥
ತ್ವಚಂ ಬಿಲ್ವಸ್ಯ ಮೂಲಸ್ಯ ಮೂಲಕ್ವಾಥಂ ದಿನೇ ದಿನೇ ।
ಪ್ರಾಶ್ನೀಯಾತ್ ಪಯಸಾ ಸಾರ್ಧಂ ಸ್ನಾತ್ವಾ ಹುತ್ವಾ ಸಮಾಹಿತಃ
ದಶಸಾಹಸ್ರಮಾಯುಷ್ಯಂ ಸ್ಮೃತಂ ಯುಕ್ತರಥಂ ಭವೇತ್ । ॥೧೧॥
ಹುತ್ವಾ ಬಿಸಾನಾಂ ಕ್ವಾಥಂ ತು ಮಧು ಲಾಜೈಶ್ಚ ಸಂಯುತಮ್ ।
ಅಮೋಘಂ ಶತಸಾಹಸ್ರಂ ಯಕ್ತಂ ಯುಕ್ತರಥಂ ಸ್ಮೃತಮ್ ॥೧೨॥

ಇನ್ನು ಮುಂದೆ ಆಯುಷ್ಕಾಮ ರಸಾಯನಗಳನ್ನು ಹೇಳುತ್ತಾರೆ—ಈ ರಸಾಯನಗಳನ್ನು ಮನ್ತ್ರೋಚ್ಚಾರಣೆ ಮಾಡುತ್ತಾ ಒಂದು ಸಂವತ್ಸರಕಾಲ ಸೇವಿಸಿದರೆ ಫಲವುಂಟಾಗುತ್ತದೆ. ಬಿಲ್ವಪತ್ರೆಯ ಬೇರಿನ ಚೂರ್ಣಕ್ಕೆ ಸುವರ್ಣದ ಪುಡಿಯನ್ನು (ಸುವರ್ಣಭಸ್ಮವೆಂದು ಸುಧಾಭಿಮತವು) ಮಿಶ್ರಮಾಡಿಟ್ಟುಕೊಂಡು ಪುಷ್ಯನಕ್ಷತ್ರದ ದಿವಸ ಪ್ರಾತಃಕಾಲದಲ್ಲಿ ಶ್ರೀ ಸೂಕ್ತದಿಂದ ೧೦೦೦ ಅಜ್ಯಹೋಮಗಳನ್ನು ಮಾಡಿ ತುಪ್ಪ, ಜೇನುತುಪ್ಪಗಳಲ್ಲಿ ಅರ್ಧಪಲ ಚೂರ್ಣವನ್ನು ರಂಗಳಿಸಿ ನೆಕ್ಕಬೇಕು. ಈರೀತಿ ಒಂದು ಸಂವತ್ಸರಕಾಲ ಪ್ರತಿನಿತ್ಯವೂ ಸೇವಿಸುತ್ತಾ ಬಂದರೆ ಅಮಂಗಳವು ನಾಶವಾಗುತ್ತದೆ. (ಸೌಂದರ್ಯವುಂಟಾಗುತ್ತದೆ). ಸ್ನಾನಮಾಡಿ ಹೋಮಮಾಡಿ ಶಾಂತಚಿತ್ತನಾಗಿ ಸಿಪ್ಪೆ ತೆಗೆದ ಬಿಲ್ವಪತ್ರೆಬೇರಿನ ಕಷಾಯವನ್ನು ಹಾಲು ಮಿಶ್ರಮಾಡಿಕೊಂಡು ಪ್ರತಿದಿನ ಪ್ರಾತಃಕಾಲವೂ ಕುಡಿಯುತ್ತಾ ಒಂದು ಸಂವತ್ಸರ ಪೂರ್ತಿ ಸೇವಿಸಿದರೆ ೧೦೦೦೦ ವರ್ಷಗಳ ಆಯುಸ್ಸು ಲಭಿಸುತ್ತದೆ. ಇದಕ್ಕೆ ಯುಕ್ತರಥ ರಸಾಯನವೆಂದು ಹೆಸರು. ರಥಾದಿಗಳಲ್ಲಿ ಸಂಚರಿಸಬಹುದೆಂದು ತಂತ್ರಾಂತರಗಳ ಅಭಿಪ್ರಾಯವು. ಆಜ್ಯಾಹುತಿಗಳನ್ನು ಹೋಮಮಾಡಿ ತಾವರೆದಂಟಿನ ಕಷಾಯಕ್ಕೆ ಜೇನುತುಪ್ಪ ಅರಳುಗಳನ್ನು ಸೇರಿಸಿ ಸೇವಿಸಿದರೆ ೧೦೦೦೦ ವರ್ಷಗಳು ಜೀವಿಸುತ್ತಾನೆ. ಈ ರಸಾಯನವನ್ನು ಸೇವಿಸುವಾಗ ರಥಾದಿಗಳಲ್ಲಿ ಸಂಚರಿಸಬಹುದು. ಇದನ್ನು ಅಮೂಲ್ಯವಾದ ರಸಾಯನವೆನ್ನುತ್ತಾರೆ.

ಸುವರ್ಣಪದ್ಮಬೀಜಾನಿ ಮಧುಲಾಜಾಃ ಪ್ರಿಯಙ್ಗವಃ ।
ಗವ್ಯೇನ ಪಯಸಾ ಪೀತಮಲಕ್ಷ್ಮೀಂ ಪ್ರತಿಷೇಧಯೇತ್ ॥೧೩॥
ನೀಲೋತ್ಪಲದಳಕ್ವಾಥೋ ಗವ್ಯೇನ ಪಯಸಾ ಶೃತಃ ।

ಸಸುವರ್ಣತಿಲೈಃ ಸಾರ್ಧಮಲಕ್ಷ್ಮೀನಾಶನಃ ಸ್ಮೃತಃ ॥೧೪॥
ಗವ್ಯಂ ಪಯಃ ಸುವರ್ಣಂ ಚ ಮಧೂಚ್ಛಿಷ್ಟಂ ಚ ಮಾಕ್ಷಿಕಮ್ ।
ಪೀತಂ ಶತಸಹಸ್ರಾಭಿಹುತಂ ಯುಕ್ತರಥಂ ಸ್ಮೃತಮ್ ॥೧೫॥

ಚಿನ್ನದಪುಡಿ, ತಾವರೆಬೀಜ, ಭತ್ತದಅರಳು, ನೆಲ್ಲು ಇವುಗಳನ್ನು ಚೂರ್ಣಿಸಿ ಹಸುವಿನ ಹಾಲಿನಲ್ಲಿ ಕದರಿ ಜೇನುತುಪ್ಪ ಹಾಕಿ ಕುಡಿದರೆ ಅಮಂಗಳವು ನಿವಾರಣೆಯಾಗುತ್ತದೆ. ಮುಖ ಸೌಂದರ್ಯವುಂಟಾಗುತ್ತದೆ. ನೈದಿಲೆ ಹೂವಿನ ಕಷಾಯಕ್ಕೆ ಹಸುವಿನ ಹಾಲನ್ನು ಸೇರಿಸಿ ಕುದಿಸಿ ಚಿನ್ನದಪುಡಿ ಮತ್ತು ಎಳ್ಳುಕಲ್ಕಗಳೊಡನೆ ಕುಡಿದರೆ ಅಮಂಗಳ ನಿವಾರಣೆಯಾಗುತ್ತದೆಂದು ಹೇಳುತ್ತಾರೆ. (೧೦೦೦೦೦) ಒಂದುಲಕ್ಷ ಆಜ್ಯಾಹುತಿಗಳನ್ನು ಹೋಮಮಾಡಿದಮೇಲೆ ಹಸುವಿನ ಹಾಲಿಗೆ ಭ್ರಾಮರವೆಂಬ ಜಾತಿಯ ಜೇನುತುಪ್ಪ, ಚಿನ್ನದಪುಡಿ, ಜೇನುಮೇಣ (ಕೆಲವರು ಹೇಮಮಾಕ್ಷಿಕದ ಚೂರ್ಣವೆನ್ನುತ್ತಾರೆ.) ಗಳನ್ನು ಸೇರಿಸಿ ಪಾನಮಾಡಿದರೆ ಯುಕ್ತರಥ ರಸಾಯನವೆನ್ನುತ್ತಾರೆ. (ರಥದಮೇಲೆ) ಸಂಚರಿಸಲೂಬಹುದು.

ವಚಾಘೃತಸುವರ್ಣಂ ಚ ಬಿಲ್ವಚೂರ್ಣಮಿತಿ ತ್ರಯಮ್ ।
ಮೇಧ್ಯಮಾಯುಷ್ಯಮಾರೋಗ್ಯಪುಷ್ಟಿಸೌಭಾಗ್ಯವರ್ಧನಮ್ ॥೧೬॥
ವಾಸಾಮೂಲತುಲಾಕ್ವಾಥೇ ತೈಲಮಾವಾಪ್ಯ ಸಾಧಿತಮ್ ।
ಹುತ್ವಾ ಸಹಸ್ರಮಶ್ನೀಯಾನ್ಮೇಧ್ಯಮಾಯುಷ್ಯಮುಚ್ಯತೇ ॥೧೭॥
ಯಾವಕಾಂ ಸ್ತ್ವಾವರ್ಕಾ ಭಕ್ಷ್ಯೇದಭಿಭೂಯ ಯವಾಂ ಸ್ತಥಾ ।
ಪಿಪ್ಪಲೀಮಧುಸಂಯುಕ್ತಾನ್ ಶಿಕ್ಷಾಚರಣವದ್ಭವೇತ್ ॥೧೮॥

ಬಜೆ, ಚಿನ್ನದಪುಡಿ, ಬಿಲ್ವಪತ್ರೆಯಬೇರು ಈ ಮೂರರ ಚೂರ್ಣಗಳನ್ನೂ ತುಪ್ಪದಿಂದ ರಂಗಳಿಸಿ ನೆಕ್ಕಿಸಿದರೆ ಮೇಧಾಶಕ್ತಿಯುಂಟಾಗುತ್ತದೆ. ಆಯುಸ್ಸು, ಆರೋಗ್ಯ, ದೇಹವೃದ್ಧಿ, ಸೌಂದರ್ಯಗಳು ಹೆಚ್ಚುತ್ತವೆ. ೧೦೦ ಪಲ ಆಡುಸೋಗೆಬೇರಿಗೆ ೮ ರಷ್ಟು ನೀರು ಸೇರಿಸಿ ೨ ರಷ್ಟು ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿದ ಕಷಾಯಕ್ಕೆ ೧/೪ ಭಾಗ ತಿಲತೈಲವನ್ನು ಪಾಕಮಾಡಿ ತೈಲಮಾತ್ರ ಉಳಿಯುವಂತೆ ಕಾಯಿಸಿಟ್ಟುಕೊಂಡು ೧೦೦೦ ಆಜ್ಯಾಹುತಿಗಳನ್ನು ಹೋಮಮಾಡಿದನಂತರ ೧/೨ ಪಲದಷ್ಟನ್ನು ಕುಡಿಯಬೇಕು. ಮೇಧಾವೃದ್ಧಿ ಆಯುರ್ವೃದ್ಧಿಗಳು ಉಂಟಾಗುತ್ತವೆ. ಯವೆಯನ್ನು ಕುಟ್ಟಿ ಹೊಟ್ಟುತೆಗೆದು ಹಿಟ್ಟುಮಾಡಿ ಹಿಪ್ಪಲಿ ಮಿಶ್ರಮಾಡಿ ತಯಾರಿಸಿದ ಭಕ್ಷ್ಯಗಳನ್ನು ಜೇನುತುಪ್ಪ ಮಿಶ್ರಮಾಡಿ ಸೇವಿಸಿದರೆ ಗುರೂಪದೇಶ ಶಾಸ್ತ್ರಾಭ್ಯಾಸಗಳೆರಡೂ ಕೂಡಿದಂತೆ ಮೇಧಾ, ಬುದ್ಧಿ ಇವೆರಡೂ ಒಂದೇ ರಸಾಯನ ಯೋಗದಿಂದುಂಟಾಗುತ್ತವೆ.

ಮಧ್ವಾಮಲಕಚೂರ್ಣಾನಿ ಸುವರ್ಣಮಿತಿ ಚ ತ್ರಯಮ್ ।
ಪ್ರಾಶ್ಯಾರಿಷ್ಟಗೃಹೀತೋಽಪಿ ಮುಚ್ಯತೇ ಪ್ರಾಣಸಂಶಯಾತ್ ॥೧೯॥
ಶತಾವರೀ ಘೃತಂ ಸಮ್ಯಗುಪಯುಕ್ತಂ ದಿನೇ ದಿನೇ ।
ಸಕ್ಷೌದ್ರಂ ಸಸುವರ್ಣಂ ಚ ನರೇನ್ದ್ರಂ ಸ್ಥಾಪಯೇದ್ವಶೇ ॥೨೦॥

ಗೋಚನ್ದನಾಮೋಹನಿಕಾ ಮಧುಕಂ ಮಾಕ್ಷಿಕಂ ಮಧು ।
ಸುವರ್ಣಮಿತಿ ಸಂಯೋಗಃ ಪೇಯಃ ಸೌಭಾಗ್ಯಮಿಚ್ಛತಾ ॥೨೧॥
ಪದ್ಮನೀಲೋತ್ಪಲಕ್ವಾಥೇ ಯಷ್ಟೀಮಧುಕ ಸಂಯುತೇ ।
ಸರ್ಪಿರಾಸಾದಿತಂ ಗವ್ಯಂ ಸಸುವರ್ಣಂ ಸದಾ ಪಿಬೇತ್ ॥೨೨॥
ಪಯಶ್ಚಾನುಪಿಬೇತ್ ಸಿದ್ಧಂ ತೇಷಾಮೇವ ಸಮುದ್ಭವೇ ।
ಅಲಕ್ಷ್ಮೀಘ್ನಂ ಸದಾಯುಷ್ಯಂ ರಾಜ್ಯಾಯ ಸುಭಗಾಯ ಚ ॥೨೩॥
ಯತ್ರ ನೋದೀರಿತೋ ಮನ್ತ್ರೋ ಯೋಗೇಷ್ವೇತೇಷು ಸಾಧನೇ ।
ಶಬ್ದಿತಾ ತತ್ರ ಸರ್ವತ್ರ ಗಾಯತ್ರೀ ತ್ರಿಪದಾ ಭವೇತ್ ॥೨೪॥
ಪಾಪ್ಮಾನಂ ನಾಶಯನ್ತ್ಯೇತಾ ದದ್ಯುಶ್ಚೌಷಧಯಃ ಶ್ರಿಯಮ್ ।
ಕುರ್ಯುರ್ನಾಗಬಲಂ ಚಾಪಿ ಮನುಷ್ಯಮಮರೋಪಮಮ್ ॥೨೫॥

ಜೇನುತುಪ್ಪ, ನೆಲ್ಲಿಕಾಯಿ ಚೂರ್ಣ, ಚಿನ್ನದಪುಡಿ ಈ ಮೂರನ್ನೂ ರಂಗಳಿಸಿ ನೆಕ್ಕಿದರೆ ಅರಿಷ್ಟಗ್ರಹಗಳಿಂದ ಹಿಡಿಯಲ್ಪಟ್ಟಿದ್ದರೂ ಪ್ರಾಣಾಪಾಯದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಪ್ರತಿದಿನವೂ ಶತಾವರೀಘೃತವನ್ನು ಜೇನುತುಪ್ಪ, ಚಿನ್ನದ ಪುಡಿಗಳನ್ನು ಮಿಶ್ರಮಾಡಿ ನೆಕ್ಕುತ್ತಾ ಬಂದರೆ ರಾಜನನ್ನೂ ತನ್ನ ವಶದಲ್ಲಿಟ್ಟುಕೊಳ್ಳಬಹುದು. (ಈ ಯೋಗದ ಪ್ರಭಾವದಿಂದ ರಾಜನನ್ನೂ ವಶಪಡಿಸಿಕೊಳ್ಳಬಹುದು), ನೆಳಲು, ಪುತ್ರಜೀವಮಣಿ (ಬಿತ್ತ) ಅತಿಮಧುರ, ಜೇನುಮೇಣ (ಹೇಮಮಾಕ್ಷಿಕ). ಜೇನುತುಪ್ಪ, ಚಿನ್ನದ ಪುಡಿಗಳನ್ನು ಸೇರಿಸಿ ಕುಡಿದರೆ ಸೌಂದರ್ಯವುಂಟಾಗುತ್ತದೆ. ತಾವರೆ, ನೈದಿಲೆ ಗೆಡ್ಡೆಗಳು, ಅತಿಮಧುರ ಇವುಗಳ ಕಷಾಯ ಮಿಶ್ರಮಾಡಿ ತಯಾರಿಸಿದ ಘೃತದೊಡನೆ ಚಿನ್ನದ ಪುಡಿಯನ್ನು ಸೇರಿಸಿ ತಿಂದು ಅವುಗಳ ಕಷಾಯದೊಡನೆ ಕ್ಷೀರಪಾಕ ವಿಧಾನದಿಂದ ಕಾಯಿಸಿದ ಹಾಲನ್ನು ಕುಡಿದರೆ ಅಮಂಗಳನಾಶವೂ, ಆಯುರ್ವೃದ್ಧಿಯೂ, ರಾಜ್ಯಲಾಭವೂ ಸುಖಲಾಭವೂ ಉಂಟಾಗುತ್ತದೆ. ಈ ಔಷಧ ಯೋಗಗಳನ್ನು ತಯಾರಿಸುವುದಕ್ಕೆ ಯಾವ ಮಂತ್ರವೂ ಹೇಳದಿದ್ದರೆ ತ್ರಿಪಾದವುಳ್ಳ ಗಾಯತ್ರಿಯನ್ನೇ ಜಪಿಸತಕ್ಕದ್ದು. ಈ ಔಷಧಿಗಳ ಪ್ರಯೋಗದಿಂದ ಪಾಪನಾಶವೂ ಸಂಪತ್ತಿನ ಲಾಭವೂ ಆನೆಯಷ್ಟು ಬಲವೂ ಉಂಟಾಗಿ ಆ ಮನುಷ್ಯನು ದೇವತೆಗಳಿಗೆ ಸಮಾನನಾಗುತ್ತಾನೆ.

ಸತತಾಧ್ಯಯನಂ ವಾದಃ ಪರತನ್ತ್ರಾವಲೋಕನಮ್ ।
ತದ್ವಿದ್ಯಾಚಾರ್ಯಸೇವಾ ಚ ಬುದ್ಧಿಮೇಧಾಕರೋ ಗಣಃ ॥೨೬॥
ಆಯುಷ್ಯಂ ಭೋಜನಂ ಜೀರ್ಣೇ ವೇಗಾನಾಂ ಚಾವಿಧಾರಣಮ್
ಬ್ರಹ್ಮಚರ್ಯಮಹಿಂಸಾ ಚ ಸಾಹಸಾನಾಂ ಚ ವರ್ಜನಮ್ ॥೨೭॥

ಸದಾಕಾಲದಲ್ಲೂ ಶಾಸ್ತ್ರಾಧ್ಯಯನವನ್ನೇ ಮಾಡುತ್ತಾ ವಿಚಾರಗಳನ್ನು ಜಿಜ್ಞಾಸೆ ಮಾಡಬೇಕು. ಆಯುರ್ವೇದವನ್ನಲ್ಲದೆ ಉಳಿದ ತಂತ್ರಗಳ ವಿಚಾರಗಳನ್ನೂ ತಿಳಿದುಕೊಳ್ಳುವುದು. ಅದನ್ನು ತಿಳಿದ ಗುರುಗಳನ್ನು ಶುಶ್ರೂಷೆಮಾಡಿ ಆ ಶಾಸ್ತ್ರಗಳ ಜ್ಞಾನ

ವನ್ನು ಸಂಪಾದಿಸುವುದು ಇವು ಬುದ್ಧಿ, ಮೇಧಾಶಕ್ತಿಗಳನ್ನು ಹೆಚ್ಚಿಸುವ ವಿಚಾರಗಳ ಗುಂಪು. ಆಹಾರವು ಜೀರ್ಣಿಸಿದಮೇಲೆ ಭೋಜನಮಾಡುವುದು, ಪ್ರಾರಂಭಿಸಿರುವ ವಾತಮೂತ್ರಪುರೀಷಗಳ ವೇಗಗಳನ್ನು ತಡೆಯದಿರುವುದು, ಬ್ರಹ್ಮಚರ್ಯವನ್ನು ಪಾಲನೆ ಮಾಡುವುದು, ಅಹಿಂಸೆ, ಸಾಹಸಕಾರ್ಯಗಳನ್ನು ತ್ಯಜಿಸುವುದು ಇವುಗಳನ್ನು ಆಯುರ್ವೃದ್ಧಿಮಾಡುವ ವಿಚಾರಗಳ ಗುಂಪು ಎಂದು ತಿಳಿಯಬೇಕು.

ಟಿಪ್ಪಣಿ—ಬಲವಿದೆ ಎಂಬ ಗರ್ವದಿಂದ ಹಠಾತ್ತಾಗಿ ವಿಚಾರಶೂನ್ಯತೆಯಿಂದ ಮಾಡುವ ಕಾರ್ಯಗಳಿಗೆ ಸಾಹಸವೆನ್ನುತ್ತಾರೆ. ಉದಾ:-ಮನುಷ್ಯರನ್ನು ಕೊಲ್ಲುವುದು, ಕದಿಯುವುದು, ಪರಸ್ತ್ರೀಗಮನ, ಪರುಷಭಾಷಣ, ಸುಳ್ಳು ಹೇಳುವುದು ಇವು ೫ ವಿಧಗಳಾದ ಸಾಹಸಕರ್ಮಗಳು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಮೇಧಾಯುಷ್ಕಾಮೀಯ ರಸಾಯನ ಚಿಕಿತ್ಸಾನಾಮಾಷ್ಟಾವಿಂಶತಿತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಅಷ್ಟಾವಿಂಶತಿತಮೋಽಧ್ಯಾಯಃ

ಅಥಾತಃ ಸ್ವಭಾವವ್ಯಾಧಿಪ್ರತಿಷೇಧನೀಯಂ ರಸಾಯನಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿ ದಂತೆಯೇ ಸ್ವಾಭಾವಿಕಗಳಾದ ಹಸಿವೆ, ಬಾಯಾರಿಕೆ, ವೃದ್ಧಾಪ್ಯ, ಮರಣ, ನಿದ್ರೆ ಮೊದ ಲಾದ ಸ್ವಾಭಾವಿಕ ವ್ಯಾಧಿಗಳ ನಿವಾರಣೋಪಾಯಗಳನ್ನು ಕುರಿತು ವಿವರಣೆಮಾಡ ಲಾಗುತ್ತದೆ. ಸ್ವಭಾವ ಗುಣಗಳನ್ನು ನಿವಾರಿಸುವುದು ಅಸಾಧ್ಯವೆಂಬುದನ್ನು ಒಪ್ಪತಕ್ಕ ದ್ದಾದರೂ ರಸಪ್ರಭಾವದಿಂದ ಲಬ್ಧವಾದ ಜ್ಞಾನ, ವೈರಾಗ್ಯ, ವಿಜ್ಞಾನಾದಿಗಳಿಂದ ಯುಕ್ತರಾದ ಮಹರ್ಷಿಗಳು ಅನಿಯತಾಯುಸ್ಸುಳ್ಳ ಜನರಿಗೆ ಸ್ವಾಭಾವಿಕ ವ್ಯಾಧಿಗಳನ್ನು ತಡೆಗಟ್ಟಲು ಶಕ್ತರಾಗಿದ್ದರು. ನಿಯತಾಯುಷ್ಯವುಳ್ಳವರಿಗೆ ಕಲಿಯುಗದಲ್ಲಿ ಪಾಪಾ ಚರಣೆಗಳಿಂದ ಆಯುಸ್ಸು ಅಧಿಕಪ್ರಮಾಣದಿಂದ ಕ್ಷೀಣಿಸುವುದರಿಂದ ಅವರು ರಸಾಯನ ಪ್ರಯೋಗಕ್ಕೆ ಅರ್ಹರಲ್ಲ.

ಬ್ರಹ್ಮಾದಯೋಽಸೃಜನ್ ಪೂರ್ವಮಮೃತಂ ಸೋಮಸಂಜ್ಞಿತಮ್ ।
ಜರಾಮೃತ್ಯುವಿನಾಶಾಯ ವಿಧಾನಂ ತಸ್ಯ ವಕ್ಷ್ಯತೇ ||೩||

ಬ್ರಹ್ಮನೇ ಮೊದಲಾದ ದೇವತೆಗಳು ಜರಾ, ಮರಣಗಳನ್ನು ನಿವಾರಿಸುವುದಕ್ಕಾಗಿ "ಸೋಮ" ಎಂಬ ಹೆಸರಿನಿಂದ ವ್ಯವಹರಿಸಲ್ಪಡುವ ಅಮೃತವನ್ನು ಪೂರ್ವ ಕಾಲದಲ್ಲೇ ಸೃಷ್ಟಿಸಿದರು. ಆ ಸೋಮವನ್ನು ಪ್ರಯೋಗಿಸುವ ವಿಚಾರವನ್ನು ಕುರಿತು ಹೇಳುತ್ತೇವೆ.

ಏಕ ಏವ ಖಲು ಭಗವಾನ್ ಸೋಮಃ ಸ್ಥಾನನಾಮಾಕೃತಿವೀರ್ಯ ವಿಶೇಷೈಶ್ಚತುರ್ವಿಂಶತಿಧಾ ಭಿದ್ಯತೇ ||೪|| ತದ್ಯಥಾ:—

ಅಂಶುಮಾನ್ ಮುಂಜವಾಂಶ್ಚೈವ ಚಂದ್ರಮಾ ರಜತಪ್ರಭಃ ।
ದೂರ್ವಾಸೋಮಃ ಕನೀಯಾಂಶ್ಚ ಶ್ವೇತಾಕ್ಷಃ ಕನಕಪ್ರಭಃ ||೫||
ಪ್ರತಾನವಾಂಸ್ತಾಲವೃನ್ತಃ ಕರವೀರೋಂಽಶವಾನಪಿ ।
ಸ್ವಯಂಪ್ರಭೋ ಮಹಾಸೋಮೋ ಯಶ್ಚಾಪಿ ಗರುಡಾಹೃತಃ ||೬||
ಗಾಯತ್ರ್ಯಸ್ತ್ರೈಷ್ಟುಭಃ ಪಾಙ್ಕ್ತೋ ಜಾಗತಃ ಶಾಙ್ಕರಸ್ತಥಾ ।
ಅಗ್ನಿಷ್ಟೋಮೋ ರೈವತಶ್ಚ ಯಥೋಕ್ತ ಇತಿ ಸಂಜ್ಞಿತಃ ||೭||
ಗಾಯತ್ರ್ಯಾ ತ್ರಿಪದಾಯುಕ್ತೋ ಯಶ್ಚೋಡುಪತಿರುಚ್ಯತೇ ।
ಏತೇ ಸೋಮಾಃ ಸಮಾಖ್ಯಾತಾ ವೇದೋಕ್ತೈರ್ನಾಮಭಿಃ ಶುಭೈಃ ||೮||

ಸರ್ವೇಷಾಮೇವ ಚೈತೇಷಾಮೇಕೋ ವಿಧಿರುಪಾಸನೇ ।
ಸರ್ವೇ ತುಲ್ಯಗುಣಾಶ್ಚೈವ ವಿಧಾನಂ ತೇಷು ವಕ್ಷ್ಯತೇ ॥೯॥

ಅಷ್ಟೈಶ್ವರ್ಯಗುಣಯುಕ್ತನಾದ ಸೋಮನು ಒಬ್ಬನೇ ಆದರೂ ಸ್ಥಾನ, ನಾಮ ಆಕಾರ, ವೀರ್ಯಗಳಿಗೆ ತಕ್ಕಂತೆ ೨೪ ಪ್ರಕಾರಗಳಾಗುತ್ತಾನೆ. ಹೇಗೆಂದರೆ—೧. ಅಂಶುಮಾನ್, ೨. ಮುಂಜವಾನ್, ೩. ಚಂದ್ರಮಾಃ, ೪. ರಜತಪ್ರಭಃ, ೫. ದೂರ್ವಾ ಸೋಮಃ, ೬. ಕನೀಯಾನ್, ೭. ಶ್ವೇತಾಕ್ಷಃ, ೮. ಕನಕಪ್ರಭಃ, ೯. ಪ್ರತಾನವಾನ್, ೧೦. ತಾಲವೃಂತಃ, ೧೧. ಕರವೀರಃ ೧೨. ಅಂಶವಾನ್, ೧೩. ಸ್ವಯಂಪ್ರಭಃ, ೧೪. ಮಹಾಸೋಮಃ, ೧೫. ಗರುಡಾಹೃತಾ, ೧೬. ಗಾಯತ್ರ್ಯಃ, ೧೭. ತ್ರೈಷ್ಟುಭಃ, ೧೮. ಪಾಙ್ಕ್ತಃ, ೧೯. ಜಾಗತಃ, ೨೦. ಶಾಙ್ಕರಃ, ೨೧. ಅಗ್ನಿಷ್ಟೋಮಃ, ೨೨. ರೈವತಃ, ೨೩. ತ್ರಿಪದಾಗಾಯತ್ರ್ಯಾಯುಕ್ತಃ, ೨೪. ಉಡುಪತಿಃ. ಈ ರೀತಿಯಾಗಿ ವೇದೋಕ್ತ ವಾದ ಶುಭಕರವಾದ ಹೆಸರುಗಳಿಂದ ೨೪ ವಿಧ ಸೋಮರು ಪ್ರಖ್ಯಾತಿ ಪಡೆದಿರುತ್ತಾರೆ. ಇವರೆಲ್ಲರನ್ನೂ ಉಪಾಸನೆ ಮಾಡತಕ್ಕ ವಿಧಾನವೊಂದೇ ಆಗಿದೆ. ಎಲ್ಲವೂ ಸಮಾನ ಗುಣವುಳ್ಳವೇ ಆಗಿವೆ. ಅವುಗಳನ್ನು ಸೇವನೆಮಾಡುವ ವಿಧಾನವನ್ನು ಹೇಳುತ್ತೇವೆ.

ಅತೋಽನ್ಯತಮಂ ಸೋಮಮುಪಯುಯುಕ್ಷುಃ ಸರ್ವೋಪಕರಣ ಪರಿಚಾರಕೋಪೇತಃ ಪ್ರಶಸ್ತದೇಶೇ ತ್ರಿವೃತಮಾಗಾರಂ ಕಾರಯಿತ್ವಾ ಹೃತದೋಷಾ ಪ್ರತಿಸಂಸೃಷ್ಟಭಕ್ತಃ ಪ್ರಶಸ್ತೇಷು ತಿಥಿಕರಣಮುಹೂರ್ತನಕ್ಷತ್ರೇಷು ಅಂಶುಮನ್ತಮಾದಾಯಾಧ್ವರಕಲ್ಪೇನಾಹೃತಮಭಿಷುತಮಭಿಹುತಂ ಚಾನ್ತರಾಗಾರೇ ಕೃತಮಙ್ಗಳಃ ಸೋಮಕನ್ದಂ ಸುವರ್ಣಸೂಚ್ಯಾ ವಿದಾರ್ಯ ಪಯೋಗೃಹ್ಣೀಯಾತ್ ಸೌವರ್ಣೇ ಪಾತ್ರೇಽಞ್ಜಲಿಮಾತ್ರಂ ತತಃ ಸಕೃದೇವೋಪಯುಞ್ಜೀತ ನಾಸ್ವಾದಯಂಸ್ತತ ಉಪಸ್ಪೃಶ್ಯ ಶೇಷಮಪ್ಸ್ವವಸಾದ್ಯ ಯಮನಿಯಮಾಭ್ಯಾಮಾತ್ಮಾನಂ ಸಂಯೋಜ್ಯ ವಾಗ್ಯತೋಽಭ್ಯನ್ತರತಃ ಸುಹೃದ್ಭಿರುಪಾಸ್ಯಮಾನೋ ವಿಹರೇತ್ ॥೧೦॥

ರಸಾಯನಂ ಪೀತವಾಂಸ್ತು ನಿವಾತೇ ತನ್ಮನಾಃ ಶುಚಿಃ ।
ಆಸೀತ ತಿಷ್ಠೇತ್ ಕ್ರಾಮೇಚ್ಚ ನ ಕಥಞ್ಚನ ಸಂವಿಶೇತ್ ॥೧೧॥

ಸಾಯಂ ವಾ ಭಕ್ಷ್ಮವಾನ್ ಶ್ರುತಶಾನ್ತಿಃ ಕುಶಶಯ್ಯಾಯಾಂ ಕೃಷ್ಣಾಜಿನೋತ್ತರಾಯಾಂ ಸುಹೃದ್ಭಿರುಪಾಸ್ಯಮಾನಃ ಶಯೀತ ತೃಷಿತೋ ವಾ ಶೀತೋದಕಮಾತ್ರಾಂ ಪಿಬೇತ್ ತತಃ ಪ್ರಾತರುತ್ಥಾಯೋಪಶ್ರುತಶಾನ್ತಿಃ ಕೃತಮಙ್ಗಳೋ ಗಾಂ ಸ್ಪೃಷ್ಟ್ವಾ ತಥೈವಾಸೀತ ತಸ್ಯ ಜೀರ್ಣೇ ಸೋಮೇ ಛರ್ದಿರುಪಪದ್ಯತೇ ತತಃ ಶೋಣಿತಾಕ್ತಂ ಕ್ರಿಮಿವ್ಯಾಮಿಶ್ರಂ ಛರ್ದಿತವತಃ (ತೇ) ಸಾಯಂ ಶೃತಶೀತಂ ಕ್ಷೀರಂ ವಿತರೇತ್ ತತಸ್ತೃತೀಯೇಽಹನಿ ಕ್ರಿಮಿವ್ಯಾಮಿಶ್ರಮತಿಸಾರ್ಯತೇ ಸ ತೇನಾಸಿಷ್ಟಪ್ರತಿಗ್ರಹಭುಕ್ತಪ್ರಭೃತಿಭಿರ್ವಿಶೇಷೈರ್ಮುಕ್ತಃ ಶುದ್ಧತನುರ್ಭವತಿ ತತಃ ಸಾಯಂ ಸ್ನಾತಸ್ಯ (ಸ್ನಾತಾಯ) ಪೂರ್ವವದೇವ ಕ್ಷೀರಂ ವಿತರೇತ್ ಕ್ಷೌಮವಸ್ತ್ರಾಸ್ತೃತಾಯಾಂ ಚೈನಂ ಶಯ್ಯಾಯಾಂ ಶಾಯಯೇತ (ತ್) ತತಶ್ಚತುರ್ಥೇಽಹನಿ ತಸ್ಯ ಶ್ವಯಥುರುತ್ಪದ್ಯತೇ ತತಃ ಸರ್ವಾಙ್ಗೇಭ್ಯಃ ಕ್ರಿಮಯೋ ನಿಷ್ಕ್ರಾಮನ್ತಿ ತದಹಶ್ಚ ಶಯ್ಯಾಯಾಂ ಪಾಂಶುಭಿರವಕೀರ್ಯಮಾಣಃ ಶಯೀತ ತತಃ ಸಾಯಂ ಪೂರ್ವವದೇವ ಕ್ಷೀರಂ ವಿತರೇತ್ ಏವಂ ಪಞ್ಚಮಷಷ್ಠಯೋ

ವಸಯೋರ್ವರ್ತೇತ ಕೇವಲಮುಭಯಕಾಲಮಸೌ ಕ್ಷೀರಂ ವಿತರೇತ್ ತತಃ ಸಪ್ತಮೇಽಹನಿ
ರ್ಣಸಸ್ತ್ವಗಸ್ಥಿ (ಸ್ಮೃ) ಭೂತಃ ಕೇವಲಂ ಸೋಮ ಪರಿಗ್ರಹಾದೇವೋಚ್ಛ್ವಸಿತಿ ತದಹಶ್ಚ
ರೇಣ ಸುಖೋಷ್ಣೇನ ಪರಿಷಿಚ್ಯ ತಿಲಮಧುಕ ಚನ್ದನಾನುಲಿಪ್ತದೇಹಂ ಪಯಃ ಪಾಯಯೇತ್ ;
ತೋಽಷ್ಟಮೇಽಹನಿ ಪ್ರಾತರೇವ ಕ್ಷೀರಪರಿಷಿಕ್ತಂ ಚನ್ದನಪ್ರದಿಗ್ಧಗಾತ್ರಂ ಪಯಃ ಪಾಯಯಿತ್ವಾ
ಂಶುಶಯ್ಯಾಂ ಸಮುತ್ಸೃಜ್ಯ ಕ್ಷೌಮಾಸ್ತೃತಾಯಂ ಶಾಯಯೇತ್ ತತೋ ಮಾಂಸಮಾಪ್ಯಾ
ಯತೇತ್ವಕ್ಚಾವದಳತಿ ದನ್ತನಖರೋಮಾಣಿ ಚಾಸ್ಯ ಪತನ್ತಿ ; ತಸ್ಯ ನವಮದಿವಸಾತ್ಪ್ರಭೃತ್ಯಣು
ಲಾಭ್ಯಙ್ಗಃ ಸೋಮವಲ್ಕಕಷಾಯಪರಿಷೇಕಃ ತತೋ ದಶಮೇಽಹನ್ಯೇತದೇವ ವಿತರೇತ್
ತೋಽಸ್ಯ ತ್ವಕ್ ಸ್ಥಿರತಾಮುಪೈತಿ ಏವಮೇಕಾದಶದ್ವಾದಶಯೋರ್ವರ್ತೇತ ತತ್ರ (ತಃ)
ಯೋದಶಾತ್ಪ್ರಭೃತಿ ಸೋಮವಲ್ಕಕಷಾಯಪರಿಷೇಕಃ ಏವಮಾಷೋಡಶಾತ್ವರ್ತೇತ ತತಃ
ಪ್ತದಶಾಷ್ಟಾದಶಯೋರ್ದಿವಸಯೋರ್ದಶನಾ ಜಾಯನ್ತೇ ಶಿಖರಿಣಃ ಸ್ನಿಗ್ಧವಜ್ರವೈಢೂರ್ಯ
ಟಿಕನಿಕಾಶಾಃ ಸಮಾ ಸ್ಥಿರಾಃ ಸಹಿಷ್ಣವಃ ತದಾಪ್ರಭೃತಿ ಚಾನವೈಃ ಶಾಲಿತಣ್ಡುಲೈಃ ಕ್ಷೀರಯವಾ
ಮುಪಸೇವೇತ ಯಾವತ್ ಪಞ್ಚವಿಂಶತಿರಿತಿ ತತೋಽಸ್ಮೈ ದದ್ಯಾತ್ ಶಾಲ್ಯೋದನಂ ಮೃದೂ
ಕಾಲಂ ಪಯಸಾ ತತೋಽಸ್ಯ ನಖಾ ಜಾಯನ್ತೇ ವಿದ್ರುಮೇನ್ದ್ರಗೋಪಕತರುಣಾದಿತ್ಯ
ಕಾಶಾಃ ಸ್ಥಿರಾಃ ಸ್ನಿಗ್ಧಾ ಲಕ್ಷಣಸಂಪನ್ನಾಃ ಕೇಶಾಶ್ಚ ಜಾಯನ್ತೇ ತ್ವಕ್ ಚ ನೀಲೋತ್ಪಲಾತಸೀ
ಷ್ಪವೈಡೂರ್ಯಪ್ರಕಾಶಾಃ ಊರ್ಧ್ವಂ ಚ ಮಾಸಾತ್ ಕೇಶಾನ್ ವಾಪಯೇತ್ ವಾಪಯಿತ್ವಾ
ಶೀರಚನ್ದನಕೃಷ್ಣತಿಲಕಲ್ಕೈಃ ಶಿರಃ ಪ್ರದಿಹ್ಯಾತ್ ಪಯಸಾ ವಾ ಸ್ನಾಪಯೇತ್ ತತೋಽ
ನನ್ತರಂ ಸಪ್ತರಾತ್ರಾತ್ ಕೇಶಾ ಜಾಯನ್ತೇ ಭ್ರಮರಾಞ್ಜನನಿಭಾಃ ಕುಞ್ಚಿತಾಃ ಸ್ನಿಗ್ಧಾಃ
ಸ್ತ್ರಿರಾತ್ರಾತ್ ಪ್ರಥಮಪರಿಸರಾನ್ನಿಷ್ಕ್ರಮ್ಯ ಮುಹೂರ್ತಂ ಸ್ಥಿತ್ವಾ ಪುನರೇವಾನ್ತಃ ಪ್ರವಿ
ತ್ ತತೋಽಸ್ಯ ಬಲಾತೈಲಮಭ್ಯಙ್ಗಾರ್ಥೇಽವಚಾರ್ಯಂ ಯವಪಿಷ್ಟಮುದ್ವರ್ತನಾರ್ಥೇ
ಷ್ಣಂ ಚ ಪಯಃ ಪರಿಷೇಕಾರ್ಥೇ ಅಜಕಷಾಯಮುತ್ಸಾದನಾರ್ಥೇ ಸೋಶೀರಂ ಕೂಪೋ
ಂ ಸ್ನಾನಾರ್ಥೇ ಚನ್ದನಮನುಲೇಪಾರ್ಥೇ ಆಮಲಕರಸವಿಮಿಶ್ರಾಶ್ಚಾಸ್ಯ ಯೂಷಸೂಪವಿ
ಃ ಕ್ಷೀರಮಧುಕಸಿದ್ಧಂ ಚ ಕೃಷ್ಣತಿಲಮುಪಚಾರಣಾರ್ಥೇ ಏವಂ ದಶರಾತ್ರಂ ತತೋಽನ್ಯದ್ದಶ
ತ್ರಂ ದ್ವಿತೀಯೇ ಪರಿಸರೇ ವರ್ತೇತ ತತಸ್ತೃತೀಯೇ ಪರಿಸರೇ ಸ್ಥಿರಕುರ್ವನ್ನಾತ್ಮಾನಮನ್ಯ
ಶರಾತ್ರಮಾಸೀತ ಕಿಞ್ಚಿದಾತಪಪವನಾನ್ ವಾ ಸೇವೇತ ಪುನಶ್ಚಾನ್ತಃ ಪ್ರವಿಶೇತ್ ನ ಚಾತ್ಮಾನ
ದರ್ಶೇಽ (ಪ್ಸ)ಷು ವಾ ನಿರೀಕ್ಷೇತ ರೂಪಶಾಲಿತ್ವಾತ್ ತತೋಽನ್ಯದ್ದಶರಾತ್ರಂ ಕ್ರೋಧಾ
ನ್ ಪರಿಹರೇದೇವಂ ಸರ್ವೇಷಾಮುಪಯೋಗಃ ವಿಶೇಷತಸ್ತು ವಲ್ಲೀಪ್ರತಾನಕ್ಷುಪಾದಯಃ
ಮಾ ಭಕ್ಷಯಿತವ್ಯಾಃ ತೇಷಾಂ ತು ಪ್ರಮಾಣಮರ್ಧಚತುರ್ಥಮುಷ್ಟಯಃ ||೧೨||

ಇವುಗಳಲ್ಲೊಂದು ವಿಧವಾದ ಸೋಮವನ್ನು ಪ್ರಾಶನೆಮಾಡಬೇಕೆಂದು ಇಚ್ಛಿಸುವ
ನುಷ್ಯನು ಘೃತ ತೈಲ ಮೊದಲಾದ ಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಉಪ
ರಿಸಲು ಯೋಗ್ಯರಾದ ಪರಿಚಾರಕರನ್ನು ನೇಮಿಸಿಕೊಂಡು ವೈದ್ಯನ ಅಪ್ಪಣೆಯ ಮೇರೆ
ೋಗ್ಯವಾದ ಸ್ಥಳದಲ್ಲಿ ಮೂರು ಪ್ರಾಕಾರವುಳ್ಳ ಮನೆಯನ್ನು ಕಟ್ಟಿಸಿ ಸ್ನೇಹ ಸ್ವೇದ
ಂದ ಸಂಸ್ಕೃತನಾಗಿ ವಮನ ವಿರೇಚನಾದಿ ರಕ್ತಮೋಕ್ಷಣಾಂತವಾಗಿ ದೇಹಶೋಧನೆ

ಮಾಡಿಸಿಕೊಂಡು ಪೇಯಾವಿಲೇಪಿ ಮೊದಲಾದ ಪಥ್ಯಪಾನ ಕ್ರಮಗಳಿಂದ ಅಗ್ನಿವೃದ್ಧಿ ಯುಂಟಾಗಿ ನಿತ್ಯವೂ ಅಭ್ಯಾಸವಾಗಿರುವ ಆಹಾರ ಸೇವನೆಯಿಂದ ಶರೀರಬಲವುಂಟಾದ ಮೇಲೆ ಶ್ರೇಷ್ಠವಾದ ನಂದಾ ಮೊದಲಾದ ತಿಥಿ ಚರಾದಿಕರಣಗಳು ಶಿವಾದಿಮುಹೂರ್ತ ಪುಷ್ಯ, ಹಸ್ತ, ಅಶ್ವಿನೀ, ಶ್ರವಣ ಮೊದಲಾದ ನಕ್ಷತ್ರಗಳಿಂದ ಕೂಡಿದ ಶುಭ ದಿವಸ (ಜೋಯಿಸರು ನಿಷ್ಕರ್ಷೆಮಾಡಿದಂತೆ) ಅಂಶುಮಂತನಾಮಕ ಸೋಮವನ್ನು ತರಿಸಿ ಯಜ್ಞವಿಧಾನದಲ್ಲಿ ಹೇಳಿದಂತೆ ಋತ್ವಿಕ್ಕರುಗಳಿಂದ ಹಿಂಡಿಸಿ ತೆಗೆದ ಸೋಮರಸವನ್ನು ಅಗ್ನಿಗೆ ಹೋಮಮಾಡಿಸಿ (ಒಳಗಿನ ಮನೆಯಲ್ಲಿಯೇ) ಇದ್ದು ಮಂಗಳ ಸ್ವಸ್ತಿವಾಚನ ಗಳನ್ನು ಹೇಳಿಸಿ ಆಶೀರ್ವಾದವನ್ನು ಪಡೆದಮೇಲೆ ಸೋಮಕಂದವನ್ನು ಚಿನ್ನದ ಸಲಾಕೆ ಯಿಂದ ಚುಚ್ಚಿ ಅದರಿಂದ ಸುರಿಯುವ ರಸವನ್ನೊಂದು ಚಿನ್ನದ ಬಟ್ಟಲಿಗೆ (ಅಥವಾ ಬೆಳ್ಳಿಯ ಬಟ್ಟಲಿಗೆ) ಸುರಿದು ೧ ಕುಡವ ಪ್ರಮಾಣದಷ್ಟು ರಸವನ್ನು ರುಚಿನೋಡದೆ ಒಂದೇಸಾರಿ ಪಾನಮಾಡಿ ಬಾಯಿತೊಳೆದುಕೊಳ್ಳಬೇಕು. ಉಳಿದ ರಸವನ್ನು ಹೊಳೆಯ ನೀರಿನಲ್ಲಿ ಮುಳುಗಿಸಬೇಕು. ಮನಸ್ಸಿನಿಂದ ನಿಷೇಧಿಸುವ ನಿಯಮವೆಂಬ ಮತ್ತು ದೇಹ ಇಂದ್ರಿಯಗಳಿಂದ ನಿಗ್ರಹಿಸುವ ಯಮವೆಂಬ ವಿಧಾನಗಳಿಂದ ಮನಸ್ಸನ್ನು ನಿಗ್ರಹ ಗೊಳಿಸಿ ಮೌನವ್ರತವನ್ನು ತಾಳಿ ಬಹಿರ್ಮುಖದಲ್ಲಿದ್ದು ಸ್ನೇಹಿತರುಗಳಿಂದ ಕೂಡಿದವ ನಾಗಿ ಆಸನದಲ್ಲಿ ಕೂತುಕೊಳ್ಳುವುದು ಮೇಲಕ್ಕೆ ಏಳುವುದು ಅಲ್ಲೇ ಹಿಂದಕ್ಕೂ ಮುಂದಕ್ಕೂ ನಡೆಯುವುದು ಇತ್ಯಾದಿ ಕಾರ್ಯಗಳಲ್ಲಿ ಆಸಕ್ತನಾಗಿರಬೇಕು. ಖಂಡಿತ ವಾಗಿಯೂ ಹಗಲು ಮಲಗಿ ನಿದ್ರೆಮಾಡಬಾರದು. ಸಾಯಂಕಾಲದಲ್ಲಿ ಭೋಜನಮಾಡಿ ಮಂಗಳ ಪಾಠಗಳನ್ನು ಕೇಳುತ್ತಾ ಕಾಲಹರಣ ಮಾಡುತ್ತಿದ್ದು ದರ್ಭಾಸನದಮೇಲೆ ಕೃಷ್ಣಾಜಿನವನ್ನು ಹಾಸಿಕೊಂಡು ಮಲಗಬೇಕು. ಹತ್ತಿರದಲ್ಲೇ ಸ್ನೇಹಿತರೂ ಮಲಗಿರ ಬೇಕು. ಬಾಯಾರಿದರೆ ಸ್ವಲ್ಪ ತಣ್ಣೀರನ್ನು ಕುಡಿಯಬೇಕು. ಬೆಳಗಾದಮೇಲೆ ಹಾಸಿಗೆ ಯಿಂದ ಮೇಲಕ್ಕೆ ಎದ್ದು ಮಂಗಳ ಪಾಠಗಳನ್ನು ಕೇಳುತ್ತಾ ಹಸುವನ್ನು ಸ್ಪರ್ಶಮಾಡಿ ಆಸನದಲ್ಲಿ ಕೂಡಬೇಕು. ಸೋಮವು ಜೀರ್ಣವಾದಮೇಲೆವಮನವಾಗುತ್ತಾ ಕಡೆಗೆ ರಕ್ತ ದಿಂದ ಬಳಿಯಲ್ಪಟ್ಟ ಕ್ರಿಮಿಗಳು ಬಿದ್ದ ಮೇಲೆ ರಾತ್ರಿಯವೇಳೆ ಕಾದಾರಿದ ಹಾಲನ್ನು ಕುಡಿಯಬೇಕು. ಮೂರನೆಯದಿನ ಕ್ರಿಮಿಗಳಿಂದ ಮಿಶ್ರವಾಗಿ ಅತಿಸಾರವೇಗಗಳುಂಟಾ ಗುತ್ತವೆ. ಈ ರೋಗಿಯು ದುರ್ಭೋಜನ ಶ್ರಾದ್ಧಾದಿಭೋಜನ ದುರ್ದಾನಗಳನ್ನು ಸ್ವೀಕ್ತರಿಸಿ ದ್ದರಿಂದುಂಟಾದ ದೋಷಗಳೆಲ್ಲಾ ಹೊರಕ್ಕೆ ವಿಸರ್ಜಿಸಲ್ಪಟ್ಟು ದೇಹಶುದ್ಧಿಯಾಗುತ್ತದೆ. ಆ ಸಾಯಂಕಾಲ ಸುಖೋಷ್ಣವಾದ ನೀರಿನಿಂದ ಸ್ನಾನಮಾಡಿ ಕಾದಾರಿದ ಹಾಲನ್ನೇ ಕುಡಿದು ಉಣ್ಣೆ ಬಟ್ಟೆಯ ಹಾಸಿಗೆಯಲ್ಲಿ ಮಲಗಿರಬೇಕು. ನಾಲ್ಕನೆಯ ದಿವಸ ಅವನ ದೇಹವು ಊದುತ್ತದೆ. ಸರ್ವಾಂಗಗಳಿಂದಲೂ ಕ್ರಿಮಿಗಳು ಹೊರಕ್ಕೆ ಹರಿದುಬರುತ್ತವೆ. ದಿನ ಹಗಲು ಅವನನ್ನು ಹಾಸಿಗೆಯಲ್ಲಿ ಧೂಳನ್ನು ಎರಚಿ ಮಲಗಿಸಬೇಕು. ಆದಿನ ರಾತ್ರಿಅಮೊದಲಿನಂತೆಯೇ ಕಾದಾರಿದ ಹಾಲನ್ನೇ ಕುಡಿಸಬೇಕು. ಹೀಗೆಯೇ ೫ನೆಯ

೬ ನೆಯ ದಿವಸಗಳಲ್ಲಿಯೂ ಉಪಚರಿಸಬೇಕು. ಎರಡು ಹೊತ್ತು ಭೋಜನಕಾಲಗಳಲ್ಲಿ ಕಾದಾರಿದ ಹಾಲನ್ನೇ ಕುಡಿಸಬೇಕು. ಏಳನೆಯ ದಿವಸ ಮಾಂಸರಹಿತನಾಗಿ ಬರಿಯ ಚರ್ಮ ಮೂಳೆಗಳುಳ್ಳ ದೇಹವುಳ್ಳವನಾಗಿದ್ದರೂ ಸೋಮರಸದ ಪ್ರಭಾವದಿಂದ ಉಸಿರಾಡುತ್ತಿರುತ್ತಾನೆ. ಆ ದಿನ ಸುಖೋಷ್ಣವಾದ ಹಾಲಿನಿಂದ ಅವನ ದೇಹದಮೇಲೆ ಸೇಚನೆ ಮಾಡಿಸಿ ಎಳ್ಳು, ಅತಿಮಧುರ, ಶ್ರೀಗಂಧಗಳ ಕಲ್ಕದಿಂದ ಅವನ ದೇಹವನ್ನೆಲ್ಲಾ ಲೇಪನ ಮಾಡಿಸಿ ಹಾಲನ್ನು ಕುಡಿಸಬೇಕು. ಎಂಟನೆಯದಿನ ಪ್ರಾತಃಕಾಲದಲ್ಲಿ ಹಾಲಿನಿಂದ ಮೈಮೇಲೆ ಸೇಚನೆಯನ್ನೂ ಶ್ರೀಗಂಧದ ಕಲ್ಕದಿಂದ ಮೈಗೆ ಲೇಪನವನ್ನೂ ಮಾಡಿಸಿ ಹಾಲನ್ನು ಕುಡಿಸಿ ಧೂಳಿನ ಹಾಸಿಗೆಯನ್ನು ತೆಗೆದು ಉಣ್ಣೆ ಬಟ್ಟೆಯ ಹಾಸಿಗೆಯಲ್ಲಿ ಮಲಗಿಸಬೇಕು. ಅನಂತರ ಮಾಂಸವು ಸ್ವಲ್ಪ ಮೃದುವಾಗುತ್ತದೆ ಚರ್ಮವು ಬಿರಿಯುತ್ತದೆ. ಹಲ್ಲುಗಳೂ, ಉಗುರುಗಳೂ, ತಲೆ ಮುಖ, ಸರ್ವಾಂಗಗಳಿಂದ ಕೂದಲೂ ರೋಮಗಳೂ ಉದುರಿಬೀಳುತ್ತವೆ. ಇವನಿಗೆ ೯ ನೆಯ ದಿವಸದಿಂದ ಅಣುತೈಲವನ್ನು ದೇಹಕ್ಕೆ ಬಳಿದು ಬಿಳಿಕಗ್ಗಲಿಯ ಕಷಾಯದಿಂದ ಸೇಚನೆಮಾಡಿಸಬೇಕು. ಈ ರೀತಿ ೧೨ ದಿವಸಗಳವರೆಗೆ ಉಪಚರಿಸಿದರೆ ಚರ್ಮವು ಸ್ಥಿರವಾಗುತ್ತದೆ. ೧೩ ರ ರಿಂದ ೧೬ ನೆಯ ದಿನಗಳವರೆಗೆ ಅವನ ಮೈಮೇಲೆ ಬಿಳಿಕಗ್ಗಲಿಯ ಕಷಾಯವನ್ನು ಸೇಚನೆಮಾಡಿಸಿದರೆ ೧೭, ೧೮ ನೆಯ ದಿನಗಳ ಹೊತ್ತಿಗೆ ಶಿಖರದಂತೆ ಹಿಂದೆ ಅಗಲವಾಗಿ ತುದಿ ಮೊನಚಾಗಿ ವಜ್ರ, ಪಚ್ಚೆ, ಸ್ಫಟಿಕಗಳಂತೆ ಹೊಳೆಯುವ ನೇರವಾದ ಗಟ್ಟಿಯಾದ ಅಗಿಯುವಷ್ಟು ಸಮರ್ಥಗಳಾದ ಹಲ್ಲುಗಳು ಹುಟ್ಟುತ್ತವೆ. ಅಂದಿನಿಂದ ೨೫ ದಿನಗಳವರೆಗೆ ಹಳೆ ಅಕ್ಕಿಯ ಯವಾಗುವಿಗೆ ಹಾಲನ್ನು ಮಿಶ್ರಮಾಡಿ ಕುಡಿಸಬೇಕು. ಅನಂತರ ದಿನಕ್ಕೆ ಎರಡು ವೇಳೆಯಂತೆ ಹಾಲು ಮಿಶ್ರಮಾಡಿದ ಶಾಲ್ಯನ್ನವನ್ನು ಭೋಜನಮಾಡಿಸಬೇಕು. ಹವಳ, ಇಂದ್ರಗೋಪ, ಉದಯಿಸುವ ಸೂರ್ಯರಂತೆ ಕೆಂಪಾದ ಉಗುರುಗಳೂ ಬಿಗಿಯಾದ ಮಿರುಗುವ ಸುಂದರ ತಲೆಕೂದಲೂ, ನೈದಿಲೆ, ಅಗಸೆ ಹೂವುಗಳ ಬಣ್ಣದ ಚರ್ಮವೂ ಬೆಳೆಯುತ್ತವೆ. ೧ ಮಾಸದಮೇಲೆ ತಲೆಕೂದಲನ್ನು ಬೋಳಿಸಿ ಲಾಮಂಚ, ಶ್ರೀಗಂಧ, ಕರಿಯಎಳ್ಳು ಇವುಗಳ ಕಲ್ಕವನ್ನು ತಲೆಗೆ ಲೇಪಿಸಿ ಹಾಲಿನಿಂದ ಸ್ನಾನಮಾಡಿಸಬೇಕು. ೭ ದಿನಗಳಮೇಲೆ ದುಂಬಿ, ಕಾಡಿಗೆಗಳಂತೆ ಕಪ್ಪಾದ ಗುಂಗುರುಕೂದಲು ಮಿಂಚುತ್ತಾ ಹುಟ್ಟುತ್ತವೆ. ೩ ದಿನಗಳಮೇಲೆ ಇವನನ್ನು ೧ ನೆಯ ಗರ್ಭಪ್ರಾಕಾರದಿಂದ ಹೊರಕ್ಕೆ ಕರೆತಂದು ೧ ಮುಹೂರ್ತಕಾಲದ ಮೇಲೆ ಪುನಃ ಒಳಗಡೆಗೆ ಕಳುಹಿಸಬೇಕು. ಮೂಢಗರ್ಭಚಿಕಿತ್ಸೆಯಲ್ಲಿ ಹೇಳಿರುವ ಬಲಾತೈಲದಿಂದ ಅಭ್ಯಂಗವನ್ನೂ ಯವೆಯ ಹಿಟ್ಟನಿಂದ ಉದ್ವರ್ತನವನ್ನೂ ಸುಖೋಷ್ಣವಾದ ಹಾಲಿನಿಂದ ಸೇಚನವನ್ನೂ ಧೂಪದಮರದ ತೊಗಟೆಯ ಕಲ್ಕದಿಂದ ತೈಲನಿವಾರಣೆಯನ್ನೂ ಲಾಮಂಚವನ್ನು ಅದ್ದಿದ ಬಾವಿಯ ನೀರಿನಿಂದ ಸ್ನಾನವನ್ನೂ ಮೈಗೆ ಶ್ರೀಗಂಧದ ಲೇಪನವನ್ನೂ ಭೋಜನಕ್ಕೆ ಹೆಸರು ನೆಲ್ಲಿಕಾಯಿಗಳ ಕಟ್ಟನ್ನೂ ತಿನ್ನುವುದಕ್ಕೆ ಅತಿಮಧುರ ಹಾಲುಗಳೊಡನೆ ಬೇಯಿ

ಸಿದ ಎಳ್ಳನ್ನೂ ಕೊಟ್ಟು ಈ ರೀತಿ ೧೦ ದಿವಸ ಉಪಚರಿಸಿ ಕ್ರಮವಾಗಿ ೧ ನೆಯ ಅಂಗಳ ದಿಂದ ೨ ನೆಯ ಅಂಗಳಕ್ಕೂ ೩ ನೆಯ ಅಂಗಳಕ್ಕೂ ರೋಗಿಯನ್ನು ಕರೆತಂದು ಸ್ಥಿರವಾಗಿ ಕೂರಿಸಿ ಉಪಚರಿಸಬೇಕು. ಸ್ವಲ್ಪಕಾಲ ಬಿಸಿಲು ಗಾಳಿಗಳಿಗೆ ಹೋಗಿಬರುವಂತೆಮಾಡಿ ಪುನಃ ಒಳಕ್ಕೆ ಕರೆದುಕೊಂಡು ಹೋಗಬೇಕು. ರೂಪು ಸೌಂದರ್ಯವುಂಟಾಗಿರುವುದ ರಿಂದ ಕನ್ನಡಿಯಲ್ಲಾಗಲೀ ನೀರಿನಲ್ಲಾಗಲೀ ಮುಖಬಿಂಬವನ್ನು ನೋಡಿಸಕೂಡದು. ಆಮೇಲೆ ೧೦ ದಿವಸಗಳವರೆಗೆ ಕೋಪಶೋಕಗಳನ್ನು ಮಾಡದಂತೆ ನೋಡಿಕೊಳ್ಳಬೇಕು. ಎಲ್ಲಾ ವಿಧದ ಸೋಮಸೇವನೆಯಲ್ಲೂ ಇದೇ ರೀತಿಯಾಗಿ ಉಪಚರಿಸಬೇಕು. ವಿಶೇಷ ವಾಗಿ ಬಳ್ಳಿ, ಹಂಬು ಸಣ್ಣ ಗಿಡಗಳ ಆಕಾರದ ಸೋಮವನ್ನೇ ಪ್ರಯೋಗಿಸಬೇಕು. ಅವು ಗಳ ಪ್ರಮಾಣವು (೪ ೧/೨ ಪಲಗಳಷ್ಟಿರಬೇಕು (೧೩ ೧/೨ ತೊಲಗಳಷ್ಟಾಗುತ್ತದೆ).

ಅಂಶುಮನ್ತಂ ಸೌವರ್ಣೇಪಾತ್ರೇಽಭಿಷುಣುಯಾತ್ ಚಂದ್ರಮಸಂ ರಾಜತೇ ಚೋಪಯು ಜ್ಯಾಷ್ಟಗುಣಮೈಶ್ವರ್ಯಮವಾಪ್ಯೇಶಾನಂ ದೇವಮನುಪ್ರವಿಶತಿ ಶೇಷಾಂಸ್ತು ತಾಮ್ರಮಯೇ ಮೃಣ್ಮಯೇ ವಾ ರೋಹಿತೇ ವಾ ಚರ್ಮಣಿ ವಿತತೇ ಶೂದ್ರವರ್ಜಂ ತ್ರಿಭಿರ್ವರ್ಣೈಃ ಸೋಮಾ ಉಪಯೋಕ್ತವ್ಯಾಃ । ತತಶ್ಚತುರ್ಥೇ ಮಾಸೇ ಪೌರ್ಣಮಾಸ್ಯಾಂ ಶುಚೌ ದೇಶೇ ಬ್ರಾಹ್ಮಣಾನರ್ಚ ಯಿತ್ವಾ ಕೃತಮಙ್ಗಲೋ ನಿಷ್ಕ್ರಮ್ಯ ಯಥೋಕ್ತಂ ವ್ರಜೇದಿತಿ ॥೧೩॥

ಅಂಶುಮಂತವೆಂಬ ಭೇದದ ಸೋಮವನ್ನು ಹಿಂಡಿ ಚಿನ್ನದ ಪಾತ್ರೆಯಲ್ಲಿಯೂ ಚಂದ್ರಮಸವೆಂಬ ಜಾತಿಯ ಸೋಮವನ್ನು ಬೆಳ್ಳಿಯಪಾತ್ರೆಗೆ ಹಿಂಡಿಕೊಂಡೂ ಉಪ ಯೋಗಿಸಿದರೆ ಅಣಿಮಾದಿ ಅಷ್ಟಸಿದ್ಧಿಗಳನ್ನೂ ಪಡೆದು ಶಿವಸಾಯುಜ್ಯವನ್ನು ಪಡೆಯು ತ್ತಾನೆ. ಇತರ ವಿಧಗಳಾದ ಸೋಮಲತೆಗಳನ್ನು ತಂದು ಅಗಲವಾದ ತಾಮ್ರದ ಮಣ್ಣಿನ ಕೆಂಪು ಜಿಂಕೆಯ ಚರ್ಮದ ಬಟ್ಟಲಿನಲ್ಲಿ ಹಿಂಡಿಕೊಳ್ಳಬೇಕು. ಶೂದ್ರರು ಹೊರತು ಉಳಿದ ಮೂರು ವರ್ಣದವರೂ ಸೋಮಲತೆಯನ್ನು ಪ್ರಯೋಗಮಾಡಬೇಕು. ೪ ನೆಯ ಮಾಸದಲ್ಲಿ ಪೂರ್ಣಿಮೆಯದಿವಸ ಶುಚಿಮಾಡಿದ ಭೂಭಾಗದಲ್ಲಿ ಬ್ರಾಹ್ಮಣರನ್ನು ಪೂಜಿಸಿಮಂಗಳಕಾರ್ಯಗಳನ್ನು ಮಾಡಿಸಿ ಅಲ್ಲಿಂದ ಹೊರಟು ತನಗೆ ಇಷ್ಟಬಂದ ಕಡೆಗೆ ಹೋಗಬಹುದು.

ಓಷಧೀನಾಂ ಪತಿಂ ಸೋಮಮುಪಯುಜ್ಯ ವಿಚಕ್ಷಣಃ ।
ದಶವರ್ಷಸಹಸ್ರಾಣಿ ನವಾಂ ಧಾರಯತೇ ತನುಮ್ ॥೧೪॥
ನಾಗ್ನಿರ್ನತೋಯಂ ನ ವಿಷಂ ನ ಶಸ್ತ್ರಂ ನಾಸ್ತ್ರಮೇವ ಚ ।
ತಸ್ಯಾಲಮಾಯುಃ ಕ್ಷಪಣೇ ಸಮರ್ಥಾಶ್ಚ ಭವನ್ತಿ ಹಿ ॥೧೫॥
ಭದ್ರಾಣಾಂ ಷಷ್ಟಿವರ್ಷಾಣಾಂ ಪ್ರಶ್ರುತಾನಾಮನೇಕಧಾ ।
ಕುಞ್ಜರಾಣಾಂ ಸಹಸ್ರಸ್ಯ ಬಲಂ ಸಮಧಿಗಚ್ಛತಿ ॥೧೬॥
ಕ್ಷೀರೋದಂ ಶಕ್ರಸದನಮುತ್ತರಾಂಶ್ಚ ಕುರೂನಪಿ ।
ಯತ್ರೇಚ್ಛತಿ ಸ ಗನ್ತುಂ ವಾ ತತ್ರಾಪ್ರತಿಹತಾ ಗತಿಃ । ॥೧೭॥

ಕನ್ದರ್ಪಇವರೂಪೇಣ ಕಾನ್ತ್ಯಾ ಚನ್ದ್ರ ಇವಾಪರಃ ।
ಪ್ರಹ್ಲಾದಯತಿ ಭೂತಾನಾಂ ಮನಾಂಸಿ ಸ ಮಹಾದ್ಯುತಿಃ ॥೧೮॥
ಸಾಙ್ಗೋಪಾಙ್ಗಾಂಶ್ಚ ನಿಖಿಲಾನ್ ವೇದಾನ್ ವಿನ್ದತಿ ತತ್ವತಃ ।
ಚರತ್ಯಮೋಘಸಙ್ಕಲ್ಪೋ ದೇವವಚ್ಚಾಖಿಲಂ ಜಗತ್ ॥೧೯॥

ವಿವೇಕಿಯಾದವನು ಔಷಧಿಗಳೆಲ್ಲಕ್ಕೂ ರಾಜನಾದ ಸೋಮನನ್ನು ಮೇಲೆ ಹೇಳಿದ ವಿಧಾನದಿಂದ ಸೇವಿಸಿದರೆ ೧೦೦೦೦ ವರ್ಷಗಳ ಕಾಲದವರೆಗೂ ಸ್ವಲ್ಪವೂ ನಾಶವಿಲ್ಲದ (ಘಾಯ, ರೋಗವಿಲ್ಲದೆ) ಶರೀರವುಳ್ಳವನಾಗಿ ಬದುಕುತ್ತಾನೆ. ಬೆಂಕಿ, ನೀರು, ವಿಷ, ಆಯುಧ, ಅಸ್ತ್ರಗಳಿಂದ ಇವನಿಗೆ ಬಾಧೆಯುಂಟಾಗುವುದಿಲ್ಲ (ಇವುಗಳಿಂದ ಸಾಯುವುದಿಲ್ಲ), ಮದೋದಕವನ್ನು ಸುರಿಸುವ ೬೦ ವರ್ಷ ವಯಸ್ಸಿನ ಮದಗಜಗಳಷ್ಟು ಬಲವುಳ್ಳವನಾಗುತ್ತಾನೆ. ಕ್ಷೀರಸಮುದ್ರ, ಇಂದ್ರಲೋಕ, ಉತ್ತರಕುರು ಮೊದಲಾದ ದೂರ ದೇಶಗಳಿಗೂ ಮತ್ತು ತನಗೆಬೇಕಾದ ಪ್ರದೇಶಗಳಿಗೂ ಯಾವ ತಡೆಯೂ ಇಲ್ಲದೆ ಪ್ರಯಾಣಮಾಡಿ ತಲಪುತ್ತಾನೆ. ಮನ್ಮಥನಂತೆ ಸೌಂದರ್ಯವನ್ನು ಚಂದ್ರನಂತೆ ಕಾಂತಿಯನ್ನೂ ಪಡೆದು ಮಹಾಕಾಂತಿ ಪರಾಕ್ರಮಗಳಿಂದ ಕೂಡಿ ಪ್ರಾಣಿಗಳಿಗೆ ಆನಂದವನ್ನುಂಟುಮಾಡುತ್ತಾನೆ. ಸಾಂಗೋಪಾಂಗಗಳಿಂದ ಕೂಡಿದ ಸಕಲವೇದಗಳನ್ನೂ ಪಡೆಯುತ್ತಾನೆ (ಅದ್ಭುತ ಜ್ಞಾನವುಂಟಾಗುತ್ತದೆ). ಇವನ ಇಷ್ಟಕ್ಕೆ ಯಾವ ತಡೆಯೂ ಬರದೆ ದೇವತೆಗಳಂತೆ ಭೂಮಿಯನ್ನೆಲ್ಲಾ ಸಂಚರಿಸುತ್ತಾನೆ.

ಸರ್ವೇಷಾಮೇವ ಸೋಮಾನಾಂ ಪತ್ರಾಣಿ ದಶಪಞ್ಚ ಚ ।
ತಾನಿ ಶುಕ್ಲೇ ಚ ಕೃಷ್ಣೇ ಚ ಜಾಯನ್ತೇ ನಿಪತನ್ತಿ ಚ ॥೨೦॥
ಏಕೈಕಂ ಜಾಯತೇ ಪತ್ರಂ ಸೋಮಸ್ಯಾಹರಹಸ್ತದಾ ।
ಶುಕ್ಲಸ್ಯಪೌರ್ಣಮಾಸ್ಯಾಂ ತು ಭವೇತ್ ಪಞ್ಚದಶಚ್ಛದಃ ॥೨೧॥
ಶೀರ್ಯತೇ ಪತ್ರಮೇಕೈಕಂ ದಿವಸೇ ದಿವಸೇ ಪುನಃ ।
ಕೃಷ್ಣಪಕ್ಷಕ್ಷಯೇ ಚಾಪಿ ಲತಾ ಭವತಿ ಕೇವಲಾ ॥೨೨॥
ಅಂಶುಮಾನಾಜ್ಯಗನ್ಧಸ್ತು ಕನ್ದವಾನ್ ರಜತಪ್ರಭಃ ।
ಕದಳ್ಯಾಕಾರಕನ್ದಸ್ತು ಮುಞ್ಜವಾಂಲ್ಲಶುನಚ್ಛದಃ ॥೨೩॥
ಚನ್ದ್ರಮಾಃ ಕನಕಾಭಾಸೋ ಜಲೇ ಚರತಿ ಸರ್ವದಾ ।
ಗರುಡಾಹೃತನಾಮಾ ಚ ಶ್ವೇತಾಕ್ಷಶ್ಚಾಪಿ ಪಾಣ್ಡುರೌ ॥೨೪॥
ಸರ್ಪನಿರ್ಮೋಕಸದೃಶೌ ತೌ ವೃಕ್ಷಾಗ್ರಾವಲಮ್ಬಿನೌ ।
ತಥಾನ್ಯೈರ್ಮಣ್ಡಲೈಶ್ಚಿತ್ರಿತಾ ಇವ ಭಾನ್ತಿ ತೇ ॥೨೫॥
ಸರ್ವ ಏವ ತು ವಿಜ್ಞೇಯಾಃ ಸೋಮಾಃ ಪಞ್ಚದಶಚ್ಛದಾಃ ।
ಕ್ಷೀರಕನ್ದಲತಾವನ್ತಃ ಪತ್ರೈರ್ನಾನಾವಿಧೈಃ ಸ್ಮೃತಾಃ ॥೨೬॥

ಎಲ್ಲಾ ವಿಧದ ಸೋಮಲತೆಗಳಿಗೂ ಒಂದೊಂದರಲ್ಲಿ ೧೫ ಎಲೆಗಳಿರುತ್ತವೆ. ಶುಕ್ಲ

ಪಕ್ಷದಲ್ಲಿ ದಿನಕ್ಕೆ ಒಂದೆಲೆಯಂತೆ ಪೌರ್ಣಿಮೆಯದಿನ ೧೫ ಎಲೆಗಳೂ ಇರುತ್ತವೆ. ಹಾಗೆಯೇ ಹೆಚ್ಚುತ್ತಾ ಕೃಷ್ಣಪಕ್ಷದಲ್ಲಿ ದಿನಕ್ಕೆ ಒಂದೊಂದು ಎಲೆಯಂತೆ ಉದುರುತ್ತಾ ಬಂದು ಅಮಾವಾಸ್ಯೆಯ ದಿನಕ್ಕೆ ಒಂದೆಲೆಯೂ ಇರದೆ ಬರಿಯ ಹಂಬು ಉಳಿಯುತ್ತದೆ. ಅಂಶುವರ್ಮಾ ಎಂಬ ವಿಧದ ಸೋಮವಲ್ಲಿಯು ತುಪ್ಪದ ವಾಸನೆಯುಳ್ಳದ್ದು ; ಬೆಳ್ಳಿಯ ಬಣ್ಣವಿರುತ್ತದೆ. ಬಾಳೆಗೆಡ್ಡೆಯ ಆಕಾರದಂತೆ ಇದರ ಗೆಡ್ಡೆಯೂ ಬೆಳ್ಳುಳ್ಳಿಯ ಎಲೆಯಂತೆ ಇದರ ಎಲೆಯೂ ಇರುತ್ತದೆ. ಚಂದ್ರಮಾ ಎಂಬ ವಿಧದ ಸೋಮಲತೆಯು ಚಿನ್ನದ ಬಣ್ಣವುಳ್ಳದ್ದು ಸದಾ ನೀರಿನಲ್ಲೇ ಬೆಳೆಯುತ್ತದೆ. ಗರುಡಾಹೃತ ಮತ್ತು ಶ್ವೇತಾಕ್ಷಗಳು ಬಿಳುಪಾಗಿ ಹಾವಿನಪೊರೆಯಂತೆ ಮರದ ತುದಿಗಳಲ್ಲಿ ನೇತಾಡುತ್ತಾ ಗುಂಡು ಗುಂಡಾಗಿ ಅಲಂಕರಿಸಿದಂತೆ ಕಾಣುತ್ತವೆ. ಎಲ್ಲಾ ವಿಧದ ಸೋಮಲತೆಗಳಿಗೂ ವಿವಿಧಾಕಾರದ ೧೫ ಎಲೆಗಳಿರುತ್ತವೆ, ಹಾಲು ನೆಲಗುಂಬಳದಗೆಡ್ಡೆಯಂತಿರುತ್ತವೆ.

ಹಿಮವತ್ಯರ್ಬುದೇ ಸಹ್ಯೇ ಮಹೇನ್ದ್ರೇ ಮಲಯೇ ತಥಾ ।
ಶ್ರೀಪರ್ವತೇ ದೇವಗಿರೌ ಗಿರೌ ದೇವಸಹೇ ತಥಾ ॥೨೭॥
ಪಾರಿಯಾತ್ರೇ ಚ ವಿನ್ಧ್ಯೇ ಚ ದೇವಸುನ್ದೇ ಹ್ರದೇ ತಥಾ ।
ಉತ್ತರೇಣ ವಿತಸ್ತಾಯಾಃ ಪ್ರವೃದ್ಧಾ ಯೇ ಮಹೀಧರಾಃ ॥೨೮॥
ಪಞ್ಚ ತೇಷಾಮಧೋ ಮಧ್ಯೇ ಸಿನ್ಧುನಾಮಾ ಮಹಾನದಃ ।
ಹರವತ್ಪವತೇ ತತ್ರ ಚಂದ್ರಮಾಃ ಸೋಮಸತ್ತಮಃ ॥೨೯॥
ತಸ್ಯೋದ್ದೇಶೇಷು ಚಾಪ್ಯಸ್ತಿ ಮುಞ್ಜವಾನಂಶುಮಾನಪಿ
ಕಾಶ್ಮೀರೇಷು ಸರೋ ದಿವ್ಯಂ ನಾಮ್ನಾ ಕ್ಷುದ್ರಕಮಾನಸಮ್ ॥೩೦॥
ಗಾಯತ್ರ್ಯಸ್ತ್ರೈಷ್ಟುಭಃ ಪಾಙ್ಕ್ತೋ ಜಾಗತಃ ಶಾಙ್ಕರಸ್ತಥಾ
ಅತ್ರ ಸನ್ತ್ಯಪರೇ ಚಾಪಿ ಸೋಮಾಃ ಸೋಮಸಮಪ್ರಭಾಃ ॥೩೧॥

ಈ ೨೪ ವಿಧಗಳಾದ ಸೋಮಲತಾ ವಿಶೇಷಗಳೂ ಹಿಮಾಲಯ ಪರ್ವತದಲ್ಲಿರುವ ಅಬುಪರ್ವತ, ಸಹ್ಯಪರ್ವತ (ಕೊಡಗಿನಲ್ಲಿದೆ) ಮಹೇಂದ್ರ (ಕಳಿಂಗದೇಶದಲ್ಲಿ) ಮಲಯ (ಋಷ್ಯಮೂಕ ಪರ್ವತ), ಶ್ರೀಪರ್ವತ (ಶ್ರೀಶೈಲ), ದೇವಗಿರಿಬೆಟ್ಟ, ದೇವಸಹ ಪಾರಿಯಾತ್ರ, ವಿಂಧ್ಯಪರ್ವತ, ದೇವಸುಂದಪರ್ವತದಮಡು, ಕಾಶ್ಮೀರದಲ್ಲಿ ಹರಿಯುವ ವಿತಸ್ತಾನದಿಯ ದಡ, ಸಿಂಧೂನದಿಯ ಕೆಳಗಿರುವ ೫ ಬೆಟ್ಟಗಳು ಈ ಕಡೆಗಳಲ್ಲಿವೆ ಚಂದ್ರಮಾ ಎಂಬ ವಿಧದ ಸೋಮಲತೆಯು ಜಲಕುಮ್ಬಿಯಂತೆಯೇ ತೇಲುತ್ತಾ ಇರುತ್ತದೆ. ಇದರ ಸಮೀಪದಲ್ಲೇ ಮುಂಜವಾರ್ನ ಮತ್ತು ಅಂಶುವರ್ಮಾ ಎಂಬ ವಿಧದ ಸೋಮಲತೆಯು ದೊರೆಯುತ್ತದೆ. ಕಾಶ್ಮೀರದೇಶದಲ್ಲಿ "ಕ್ಷುದ್ರಮಾನಸ" ವೆಂಬ ಸರೋವರವಿದೆ ಸೋಮನಂತೆ (ಚಂದ್ರ) ಮನೋಹರಗಳಾದ ಗಾಯತ್ರ್ಯ, ತ್ರೈಷ್ಟುಭ, ಪಾಙ್ಕ್ತ, ಜಾಗತ, ಶಾಕ್ವರ ಮೊದಲಾದ ಸೋಮಭೇದಗಳೆಲ್ಲಾ ಸಿಕ್ಕುತ್ತವೆ.

ಟಿಪ್ಪಣಿ : ಹಿಂದಿನಕಾಲದಲ್ಲಿ ಪ್ರಚಾರದಲ್ಲಿದ್ದ ಹೆಸರುಗಳು ಈಗ ಸಂದಿಗ್ಧಗಳಾಗಿವೆ. ಪಾಪಿಷ್ಠರು, ಕೃತಘ್ನರು, ಔಷಧಿಗಳನ್ನೂ, ಬ್ರಾಹ್ಮಣರನ್ನೂ ದ್ವೇಷಿಸುವವರಿಗೆ ಈ ಸೋಮಲತೆಗಳು ಕಾಣಿಸುವುದೇ ಇಲ್ಲ (ಅದೃಶ್ಯಗಳಾಗುತ್ತವೆ. ಕ್ಷೀಣ ಪುಣ್ಯವುಳವರು ವೈದ್ಯರನ್ನು ದ್ವೇಷಿಸುತ್ತಾರೆ. ಅಂತಹವರಿಗೆ ಕಾಣಿಸುವುದಿಲ್ಲ.)

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಸ್ವಭಾವವ್ಯಾಧಿಪ್ರತಿಷೇಧಕ ರಸಾಯನ ಚಿಕಿತ್ಸಾನಾಮಾಷ್ಟಾವಿಂಶತಿತಮೋಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಏಕೋನತ್ರಿಂಶತ್ತಮೋಽಧ್ಯಾಯಃ

ಅಥಾತೋ ನಿವೃತ್ತಸಂತಾಪೀಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸಂತಾಪನಾಶಕ ರಸಾಯನವನ್ನು ವಿವರಿಸುತ್ತೇವೆ.

ಯಥಾ ನಿವೃತ್ತಸಂತಾಪಾ ಮೋದನ್ತೇ ದಿವಿ ದೇವತಾಃ

ತಥೌಷಧೀರಿಮಾಃ ಪ್ರಾಶ್ಯ ಮೋದನ್ತೇ ಭುವಿ ಮಾನವಾಃ

ವ್ಯಾಧಿನಿವಾರಣೆಯಾಗಿ ಶಾರೀರಕ ಮಾನಸಿಕ ದುಃಖಗಳಿಲ್ಲದೆ ಸ್ವರ್ಗದಲ್ಲಿರುವ ದೇವತೆಗಳು ಸಂತೋಷವುಳ್ಳವರಾಗಿರುವಂತೆಯೇ ಭೂಮಿಯಲ್ಲಿ ವಾಸಮಾಡುವ ಜನರೆಲ್ಲರೂ ಈ ಕೆಳಗೆ ವಿವರಿಸುವ ಔಷಧಗಳನ್ನು ಸೇವಿಸಿದರೆ ರೋಗಪೀಡಿತರಾಗದೆ ಸಂತೋಷಪಡುತ್ತಾರೆ.

ಅಥ ಸಪ್ತ ಪುರುಷಾ ರಸಾಯನಂ ನೋಪಯುಞ್ಜೀರನ್ | ತದ್ಯಥಾ—ಅನಾತ್ಮವಾನಲಸೋದರಿದ್ರಃ ಪ್ರಮಾದೀ ವ್ಯಸನೀ ಪಾಪಕೃತ್ ಭೇಷಜಾಪಮಾನೀ ಚೇತಿ | ಸಪ್ತಭಿರೇವ ಕಾರಣೈರ್ನಸಮ್ಪದ್ಯತೇ ಅಜ್ಞಾನಾದನಾರಮ್ಭಾದಸ್ಥಿರಚಿತ್ತತ್ವಾದ್ದಾರಿದ್ರ್ಯಾದನಾಯತ್ತತ್ವಾದಧರ್ಮಾದೌಷಧಾಲಾಭಾಚ್ಚೇತಿ ||೪||

ರಸಾಯನ ಪ್ರಯೋಗಕ್ಕೆ ಮೂಢಬುದ್ಧಿಯುಳ್ಳವನು, ಅಲಸನು (ಸೋಮಾರಿಯಾದವನು), ದರಿದ್ರನು, ಅಯೋಗ್ಯಕಾರ್ಯಗಳನ್ನು ಮಾಡುವವನು, ದುಃಖಪೀಡಿತನು, ಪಾಪಿಷ್ಠನು, ಔಷಧಕ್ಕೆ ಅಪಮಾನಪಡಿಸುವವನು ಈ ಏಳು ಜನರೂ ಅನರ್ಹರು. ಏಕೆಂದರೆ ಮೂಢನಿಗೆ ಯಾವುದನ್ನು ಮಾಡಬೇಕು ಯಾವುದನ್ನು ಬಿಡಬೇಕು ಎಂಬ ವಿವೇಕವಿಲ್ಲ. ಸೋಮಾರಿಯು ಯೋಗ್ಯಕಾಲದಲ್ಲಿ ಕೆಲಸಮಾಡುವುದಿಲ್ಲ. ದರಿದ್ರನಿಗೆ ಉಪಚರಿಸಲು ತಕ್ಕ ಸಾಮಗ್ರಿಗಳು ದೊರೆಯುವುದಿಲ್ಲ. ಪ್ರಮಾದಿಯು ಹಿತಕ್ಕೆ ಬದಲು ಅಹಿತಪದಾರ್ಥಗಳನ್ನು ಪ್ರಯೋಗಿಸುವ ಸಂಭವವುಂಟು. ದುಃಖಿತನಿಗೆ ಮನಃಶಾಂತಿ ಇರುವುದಿಲ್ಲ ಪಾಪಿಷ್ಠನಿಗೆ ಪಾಪಕಾರ್ಯಗಳಲ್ಲಿ ಮನಸ್ಸುಂಟಾಗುತ್ತದೆ. ಔಷಧವನ್ನು ಅವಮಾನಮಾಡುವವನು ಅದನ್ನು ಸೇವನೆಮಾಡುವುದಿಲ್ಲ. ಈ ೭ ಕಾರಣಗಳಿಂದ ರಸಾಯನಪ್ರಯೋಗವು ವ್ಯರ್ಥವಾಗುತ್ತದೆ.

ಅಥೌಷಧೀರ್ವ್ಯಾಖ್ಯಾಸ್ಯಾಮಃ ; ಶ್ವೇತಕಾಪೋತೀ ಕೃಷ್ಣಕಪೋತೀ, ಗೋನಸೀ ಅಜಗರೀ ವಾರಾಹೀ ಕನ್ಯಾ ಛತ್ರಾ ಅಹಿಚ್ಛತ್ರಾ ಕರೇಣುಃ ಅಜಾ ಚಕ್ರಕಾ ಆದಿತ್ಯ ಪರ್ಣಿನೀ ಬ್ರಹ್ಮಸುವರ್ಚಲಾ ಶ್ರಾವಣೀ ಮಹಾಶ್ರಾವಣೀ ಗೋಲೋಮಾ ಅಜಲೋಮಾ ಮಹಾವೇಗವತೀ ಚೇತ್ಯಷ್ಟಾ

ದಶ ಸೋಮಸಮವೀರ್ಯಾ ಮಹೌಷಧಯೋ ವ್ಯಾಖ್ಯಾತಾಃ । ತಾಸಾಂ ಸೋಮವತ್ ಕ್ರಿಯಾ ಶ್ರೀಸ್ತುತಯಃ ಶಾಸ್ತ್ರೇಽಭಿಹಿತಾಃ । ತಾಸಾಮಾಗಾರೇಽಭಿಹುತಾನಾಂ ಯಾಃ ಕ್ಷೀರವತ್ಯ ಸ್ತಾಸಾಂ ಕ್ಷೀರಕುಡವಂ ಸಕೃದೇವೋಪಯುಞ್ಜೀತ ಯಾಸ್ತ್ವಕ್ಷೀರಾ ಮೂಲವತ್ಯಸ್ತಾಸಾಂ ಪ್ರದೇಶಿನೀಪ್ರಮಾಣಾನಿ ತ್ರೀಣಿಕಾಣ್ಡಾನಿ ಪ್ರಮಾಣಮುಪಯೋಗೇ ಶ್ವೇತಕಾಪೋತೀ ಸಮೂಲ ಪತ್ರಾ ಭಕ್ಷಯಿತವ್ಯಾ ಗೋನಸ್ಯ ಜಗರೀಕೃಷ್ಣಕಾಪೋತೀನಾಂ ಸನಖಮುಷ್ಟಿಂ ಖಣ್ಡಶಃ ಕಲ್ಪ ಯಿತ್ವಾ ಕ್ಷೀರೇಣ ವಿಪಾಚ್ಯ ಅಭಿಘಾರಿತಮಭಿಹುತಂ ಚ ಸಕೃದೇವೋಪಯುಞ್ಜೀತ ; ಚಕ್ರ ಕಾಯಾಃ ಸಕೃದೇವ ಬ್ರಹ್ಮಸುವರ್ಚಲಾ ಸಪ್ತರಾತ್ರಮುಪಯೋಕ್ತವ್ಯಾ ಭಕ್ಷ್ಯಕಲ್ಪೇನ ಶೇಷಾಣಾಂ ಪಞ್ಚಪಲಾನಿ ಕ್ಷೀರಾಢಕಕ್ವಥಿತಾನಿ ಪ್ರಸ್ಥೇಽವಶಿಷ್ಟೇಽವತಾರ್ಯ ಪರಿಸ್ರಾವ್ಯ ಸಕೃ ದೇವೋಪಯುಞ್ಜೀತ । ಸೋಮವದಾಹಾರವಿಹಾರೌ ವ್ಯಾಖ್ಯಾತೌ । ಕೇವಲಂ ನವನೀತಮ ಭ್ಯಂಗಾರ್ಥೇ ಶೇಷಂ ಸೋಮವದಾನಿರ್ಗಮಾದಿತಿ ||೫||

ಈಗ ಆ ಔಷಧಿಗಳನ್ನು ವಿವರಿಸಿ ಹೇಳುತ್ತೇವೆ—ಶ್ವೇತಕಾಪೋತೀ, ಕೃಷ್ಣಕಾಪೋತೀ, ಗೋನಸೀ, ಅಜಗರೀ, ವಾರಾಹೀ (ಹಂದಿಗೆಡ್ಡೆ), ಕನ್ಯಾ (ಲೋಳೆಸರ), ಛತ್ರಾ (ಸಬ್ಬಸಿಗೆ), ಅಹಿಚ್ಛತ್ರಾ (ಕಾಡುಸಬ್ಬಸಿಗೆ), ಕರೇಣು (ಕಕ್ಕೆ), ಅಜಾ (ಅಜಶೃಂಗೀ, ಗರ್ಲಹಂಬು, ಮಧುನಾಶಿನಿ), ಚಕ್ರಕಾ (ಚಕ್ರಮರ್ದ), ಆದಿತ್ಯಪರ್ಣಿನೀ (ಸೂರ್ಯಕಾಂತಿ), ಬ್ರಹ್ಮಸುವರ್ಚಲಾ (ಮಣ್ಡೂಕಪರ್ಣೀ ದೊಡ್ಡವೊಂದೆಲಗ), ಶ್ರಾವಣೀ (ಸಣ್ಣ ಬೋಳದರಗ ಅನಂತನಗೊಂಡೆ), ಮಹಾಶ್ರಾವಣೀ (ದೊಡ್ಡ ಬೋಳದರಗ ದೊಡ್ಡ ಅನಂತನಗೊಂಡೆ ಗಿಡ), ಗೋಲೋಮಾ (ಬಿಳಿಬಜೆ), ಅಜಲೋಮಾ, ಮಹಾವೇಗವತೀ ಎಂಬ ೧೮ ಮಹಾಔಷಧಿಗಳನ್ನು ಸೋಮಲತೆಗೆ ಸಮಾನವಾದ ವೀರ್ಯವುಳ್ಳವುಗಳೆಂದು ವಿವರಿಸಲಾಗಿದೆ. ಅವುಗಳನ್ನು ಸೋಮಲತೆಯಂತೆಯೇ ಪ್ರಯೋಗ ಮಾಡಿದರೆ ಅದೇ ಫಲವುಂಟಾಗುತ್ತದೆಂದೂ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆ. ಆಜ್ಯ ಹೋಮವನ್ನು ಮಾಡಿ ಅವುಗಳ ರಸವನ್ನು ಹಿಂಡಿ ೪ ಪಲಗಳಷ್ಟನ್ನು ಒಂದೇಸಾರಿ ಕುಡಿಯಬೇಕು. ರಸವಿಲ್ಲದ ತರ್ಜನಿಬೆಟ್ಟಿನಷ್ಟು ಗಾತ್ರದ ಅಷ್ಟೇ ಉದ್ದವಿರುವ ಮೂರು ಗಿಡಗಳ ಬೇರುಗಳನ್ನು ಉಪಯೋಗಿಸಬೇಕು. ಶ್ವೇತಕಾಪೋತೀ ಎಂಬುದನ್ನು ಬೇರು ಎಲೆಗಳು ಸಮೇತವಾಗಿ ಭಕ್ಷಿಸಬೇಕು. ಗೋನಸೀ, ಅಜಗರೀ, ಕೃಷ್ಣಕಾಪೋತೀಗಳನ್ನು ಉಗುರುಮುಚ್ಚಿದ ಹಿಡಿಕ್ಕೆಯಲ್ಲಿ ತುಂಬಿಕೊಂಡರೆ ಬರುವಷ್ಟು ಪ್ರಮಾಣದಷ್ಟನ್ನು ಸಣ್ಣ ಚೂರುಗಳಾಗಿ ಕತ್ತರಿಸಿ ಕ್ಷೀರಪಾಕ ವಿಧಾನದಿಂದ ಕಾಯಿಸಿ ಆರಿದಮೇಲೆ ಹಿಂಡಿ ಶೋಧಿಸಿ ಸ್ವಲ್ಪ ತುಪ್ಪಮಿಶ್ರಮಾಡಿ ಆಜ್ಯಹೋಮಮಾಡಿಸಿದ ಮೇಲೆ ಒಂದೇಸಾರಿ ಕುಡಿಯಬೇಕು. ಚಕ್ಕೆಯ ರಸವನ್ನೂ ಒಂದೇಸಾರಿಗೆ ಕುಡಿಯಬೇಕು. ಬ್ರಹ್ಮಸುವರ್ಚಲೆಯನ್ನು ಯವೆ, ಗೋಧಿ, ಅಕ್ಕಿಹಿಟ್ಟುಗಳೊಡನೆ ಸೇರಿಸಿ ಭಕ್ಷ್ಯವಿಧಾನದಿಂದ ೭ ದಿನಗಳು ಉಪಯೋಗಿಸಬೇಕು. ಉಳಿದವುಗಳನ್ನು ೫ ಪಲದಂತೆ ಒಂದು ಆಢಕ (ಅಳತೆಯ ೨ ಸೇರು) ಹಾಲಿನಲ್ಲಿ ಪಾಕಮಾಡಿ ಒಂದು ಪ್ರಸ್ಥದಷ್ಟು ಉಳಿಸಿಕೊಂಡು ತಣ್ಣಗಾದಮೇಲೆ

ಹಿಂಡಿ ಬಟ್ಟೆಯಿಂದ ಶೋಧಿಸಿ ಒಂದೇಸಾರಿ ಕುಡಿದುಬಿಡಬೇಕು. ಸೋಮಲತೆಯ ಪ್ರಯೋಗದಲ್ಲಿ ಹೇಳಿರುವಂತೆಯೇ ಆಹಾರ ವಿಹಾರಗಳನ್ನು ಆಚರಿಸಬೇಕು. ಬೆಣ್ಣೆಯನ್ನೇ ಅಭ್ಯಂಗಕ್ಕೆ ಉಪಯೋಗಿಸಬೇಕು. ಉಳಿದ ವಿಧಾನಗಳೆಲ್ಲವನ್ನೂ ರೋಗಿಯು ಪಥ್ಯಾದಿ ಕ್ರಮಗಳನ್ನು ಮುಗಿಸಿ ಕುಟಿಯಿಂದ ಹೊರಕ್ಕೆ ಬಂದು ಸ್ವೇಚ್ಛಾಚರಣೆಮಾಡುವವರೆಗೆ ಹೇಳಿರುವಂತೆಯೇ ಸೋಮಲತಾ ಸೇವನವಿಧಾನದಲ್ಲಿ ಹೇಳಿದ ನಿಯಮಗಳನ್ನೇ ಆಚರಿಸ ಬೇಕು.

ಭವನ್ತಿ ಚಾತ್ರ—

ಯುವಾನಂ ಸಿಂಹವಿಕ್ರಾನ್ತಂ ಕಾನ್ತಂ ಶ್ರುತನಿಗಾದಿನಮ್
ಕುರ್ಯುರ್ರೇತಾಃ ಕ್ರಮೇಣೈವ ದ್ವಿಸಹಸ್ರಾಯುಷಂ ನರಮ್ ||೬||
ಅಙ್ಗದೀ ಕುಣ್ಡಲೀ ಮೌಳೀ ದಿವ್ಯಸ್ರಕ್ಚನ್ದನಾಮ್ಬರಃ
ಚರತ್ಯಮೋಘಸಙ್ಕಲ್ಪೋ ನಭಸ್ಯಮ್ಬುದದುರ್ಗಮೇ ||೭||
ವ್ರಜನ್ತಿ ಪಕ್ಷಿಣೋ ಯೇನ ಜಲಲಮ್ಬಾಶ್ಚ ತೋಯದಾಃ
ಗತಿಃ ಸೌಷಧಿಸಿದ್ಧಸ್ಯ ಸೋಮಸಿದ್ಧಗತಿಃ ಪರಾ ||೮||

ಫಲಸ್ತುತಿಯನ್ನು ಹೇಳುತ್ತಾರೆ—ಈ ಔಷಧಿಗಳು ಮೇಲೆ ಹೇಳಿದ ವಿಧಾನದಂತೆ ಸೇವಿಸಿದ ಪುರುಷನನ್ನು ತರುಣವಯಸ್ಸಿನವನನ್ನಾಗಿಯೂ ಸಿಂಹದಷ್ಟು ಪರಾಕ್ರಮವುಳ್ಳ ವನನ್ನಾಗಿಯೂ ಸುಂದರನನ್ನಾಗಿಯೂ ಕ್ರಮಶಾಸ್ತ್ರಾಭ್ಯಾಸವನ್ನು ಮಾಡಿದವರಷ್ಟೇ ವಿದ್ವಾಂಸನನ್ನಾಗಿಯೂ ೨೦೦೦ ವರ್ಷಗಳವರೆಗೆ ಬದುಕಿರುವಂತೆಯೂ ಅನುಗ್ರಹಿಸುತ್ತವೆ. ದಿವ್ಯಕವಚ, ಕರ್ಣಕುಂಡಲ, ತಲೆಗೆಸೇಟ ಮೊದಲಾದ ಅಲಂಕಾರಯುತವಾದ ಹೊದ್ದಿಕೆ, ಪುಷ್ಪಹಾರ, ಗಂಧಲೇಪನ, ವಸ್ತ್ರಧಾರಣೆ ಮಾಡಿಕೊಂಡು ಮೇಘಗಳು ಸಂಚರಿಸಲಾಗದಷ್ಟು ಎತ್ತರದಲ್ಲಿ ಅಂತರಿಕ್ಷದಲ್ಲಿ ಸಂಚರಿಸುವ ಅಮೋಘ (ಅದ್ಭುತ) ಶಕ್ತಿಯನ್ನೂ ಉಂಟುಮಾಡುತ್ತವೆ. ಪಕ್ಷಿಗಳೂ ನೀರು ತುಂಬಿದ ಮೇಘಗಳೂ ಅಂತರಿಕ್ಷ ದಲ್ಲಿ ಸಂಚರಿಸುವಂತೆಯೇ ಈ ಔಷಧಪ್ರಯೋಗದಿಂದ ಸಿದ್ಧಿಪಡೆದವರೂ ಶ್ರೇಷ್ಠವಾದ ಸೋಮಲತಾ ಪ್ರಯೋಗದಿಂದ ಸಿದ್ಧಿಯಾಗುವ ಅಂತರಿಕ್ಷ ಗಮನಾದಿಸಿದ್ಧಿಗಳನ್ನು ಹೊಂದುತ್ತಾರೆ.

ಅಥ ವಕ್ಷ್ಯಾಮಿ ವಿಜ್ಞಾನಮೌಷಧೀನಾಂ ಪೃಥಕ್ ಪೃಥಕ್
ಮಣ್ಡಲೈಃ ಕಪಿಲೈಶ್ಚಿತ್ರೈಃ ಸರ್ಪಾಭಾ ಪಞ್ಚಪರ್ಣಿನೀ ||೯||
ಪಞ್ಚಾರತ್ನಿಪ್ರಮಾಣಾ ಚ ವಿಜ್ಞೇಯಾಜಗರೀ ಬುಧೈಃ ।
ನಿಷ್ಪತ್ರಾ ಕನಕಾಭಾಸಾ ಮೂಲೇ ದ್ವ್ಯಙ್ಗುಳಸಮ್ಮಿತಾ ||೧೦||
ಸರ್ಪಾಕಾರಾ ಲೋಹಿತಾನ್ತಾ ಶ್ವೇತಕಾಪೋತಿರುಚ್ಯತೇ
ದ್ವಿಪರ್ಣಿನೀಂ ಮೂಲಭವಾಮರುಣಾಂ ಕೃಷ್ಣಮಣ್ಡಲಾಮ್ ||೧೧||
ದ್ವ್ಯರತ್ನಿಮಾತ್ರಾ ಜಾನೀದ್ಗೋನಸೀಂಗೋನಸಾ ಕೃತಿಮ್

ಸಕ್ಷೀರಾಂ ರೋಮಶಾಂ ಮೃದ್ವೀಂ ರಸೇನೇಕ್ಷುರಸೋಪಮಾಮ್ ||೧೨||
ಏವಂ ರೂಪರಸಾಂಚಾಪಿ ಕೃಷ್ಣಕಾಪೋತಿಮಾದಿಶೇತ್ ।
ಕೃಷ್ಣಸರ್ಪಸ್ವರೂಪೇಣ ವಾರಾಹೀ ಕನ್ದಸಮ್ಭವಾ ||೧೩||
ಏಕಪತ್ರಾ ಮಹಾವೀರ್ಯಾ ಭಿನ್ನಾಞ್ಜನಸಮಪ್ರಭಾ ।
ಛತ್ರಾತಿಚ್ಛತ್ರಕೇ ವಿದ್ಯಾದ್ರಕ್ಷೋಘ್ನೇ ಕನ್ದಸಂಭವೇ ||೧೪||
ಜರಾಮೃತ್ಯುನಿವಾರಿಣ್ಯೌ ಶ್ವೇತಕಾಪೋತಿಸಂಸ್ಥಿತೇ ।
ಕಾನ್ತೈರ್ದ್ವಾದಶಭಿಃ ಪತ್ರೈರ್ಮಯೂರಾಙ್ಗರುಹೋಪಮೈಃ ||೧೫||
ಕನ್ದಜಾ ಚಾಞ್ಜನಕ್ಷೀರೀ ಕನ್ಯಾ ನಾಮ ಮಹೌಷಧೀ ।
ಕರೇಣುಃ ಸುಬಹುಕ್ಷೀರಾ ಕನ್ದೇನ ಗಜರೂಪಿಣೀ ||೧೬||
ಹಸ್ತಿಕರ್ಣಪಲಾಶಸ್ಯ ತುಲ್ಯವರ್ಣಾ ದ್ವಿಪರ್ಣಿನೀ ।
ಅಜಾಸ್ತನಾಭಕನ್ದಾ ತು ಸಕ್ಷೀರಾ ಕ್ಷುಪರೂಪಿಣೀ ||೧೭||
ಅಜಾ ಮಹೌಷಧೀ ಜ್ಞೇಯಾ ಶಙ್ಖಕುನ್ದೇನ್ದುಪಾಣ್ಡುರಾ ।
ಶ್ವೇತಾಂ ವಿಚಿತ್ರಕುಸುಮಾಂ ಕಾಕಾದನ್ಯಾ ಸಮಾಂ ಕ್ಷುಪಾಮ್ ||೧೮||
ಚಕ್ರಕಾಮೋಷಧೀಂ ವಿದ್ಯಾಜ್ಜರಾಮೃತ್ಯುನಿವಾರಿಣೀಮ್ ।
ಮೂಲಿನೀ ಪಞ್ಚಭಿಃ ಪತ್ರೈಃ ಸುರಕ್ತಾಂಶುಕಕೋಮಲೈಃ ||೧೯||
ಆದಿತ್ಯಪರ್ಣಿನೀ ಜ್ಞೇಯಾ ಸದಾದಿತ್ಯಾನುವರ್ತಿನೀ ।
ಕನಕಾಭಾ ಜಲಾನ್ತೇಷು ಸರ್ವತಃ ಪರಿಸರ್ಪತಿ ||೨೦||
ಸಕ್ಷೀರಾ ಪದ್ಮಿನೀಪ್ರಖ್ಯಾ ದೇವೀ ಬ್ರಹ್ಮಸುವರ್ಚಲಾ ।
ಅರತ್ನಿಮಾತ್ರಕ್ಷುಪಕಾ ಪತ್ರೈರ್ದ್ವ್ಯಙ್ಗುಳಸಮ್ಮಿತೈಃ ||೨೧||
ಪುಷ್ಪೈರ್ನೀಲೋತ್ಪಲಾಕಾರೈಃ ಫಲೈಶ್ಚಾಞ್ಜನಸನ್ನಿಭೈಃ ।
ಶ್ರಾವಣೀ ಮಹತೀ ಜ್ಞೇಯಾ ಕನಕಾಭಾ ಪಯಸ್ವಿನೀ ||೨೨||
ಶ್ರಾವಣೀ ಪಾಣ್ಡುರಾಭಾಸಾ ಮಹಾಶ್ರಾವಣಿಲಕ್ಷಣಾ ।
ಗೋಲೋಮೀ ಚಾಜಲೋಮೀ ಚ ರೋಮಶೇ ಕಂದಸಂಭವೇ ||೨೩||
ಹಂಸಪಾದೀವ ವಿಚ್ಛಿನ್ನೈಃ ಪತ್ರೈರ್ಮೂಲಸಮುದ್ಭವೈಃ ।
ಅಥವಾ ಶಙ್ಖಪುಷ್ಪೀ (ಷ್ಪ್ಯ) ಚ ಸಮಾನಾ ಸರ್ವರೂಪತಃ ||೨೪||
ವೇಗೇನ ಮಹತಾವಿಷ್ಟಾ ಸರ್ಪನಿರ್ಮೋಕಸನ್ನಿಭಾ ।
ಏಷಾ ವೇಗವತೀ ನಾಮ ಜಾಯತೇ ಹ್ಯಮ್ಬುದಕ್ಷಯೇ ||೨೫||

ಇನ್ನು ಮುಂದೆ ಬೇರೆ ಬೇರೆ ಔಷಧಿಗಳ ಸ್ವರೂಪವನ್ನು ತಿಳಿಯುವ ವಿಧಾನಗಳನ್ನು ಹೇಳುತ್ತೇವೆ.—ಅಜಗರಿಯು ಹಾವಿನ ಆಕಾರವುಳ್ಳ ಅರತ್ನಿ ಪ್ರಮಾಣದಷ್ಟು (ಹಿಡಿ ಕಡಮೆಯಾದ ಮೊಳಕ್ಕೆ ಅರತ್ನಿಯೆನ್ನುತ್ತಾರೆ.) ಎತ್ತರವಿರುವ (ಉದ್ದ ಬೆಳೆದ) ಎಲೆಗಳುಳ್ಳ ಕಪಿಲವರ್ಣದ (ಕೆಂಪು ಬಿಳುಪು ಮಿಶ್ರವಾದ ಬಣ್ಣಕ್ಕೆ ಕಪಿಲವೆಂದು ಹೆಸರು) ವಿಚಿತ್ರ ಮಂಡಲವುಳ್ಳದ್ದು ಎಂದು ವೈದ್ಯಶ್ರೇಷ್ಠರು ಹೇಳುತ್ತಾರೆ. ಶ್ವೇತಕಾಪೋತಿಯು ಹಾವಿನ

ಆಕಾರವುಳ್ಳುದಾಗಿ ಚಿನ್ನದಂತೆ ಹೊಳೆಯುತ್ತಾ ಬುಡದಲ್ಲಿ ಎರಡು ಅಂಗುಳಿಗಳಷ್ಟು ದಪ್ಪವಾಗಿ ತುದಿಯಲ್ಲಿ ಕೆಂಪು ಬಣ್ಣವುಳ್ಳುದಾಗಿರುತ್ತದೆ. ಗೋನಸಿಯು ಹಸುವಿನ ಮೂಗಿನ ಆಕಾರದಂತೆ ಬುಡದಲ್ಲಿ ಅರುಣ ಬಣ್ಣವಾಗಿಯೂ ಎರಡುಗುದ್ದು ಮೊಳದಷ್ಟು ಉದ್ದವಾಗಿಯೂ ಕಪ್ಪುಮಂಡಲವುಳ್ಳುದಾಗಿ ಎರಡು ಎಲೆಗಳುಳ್ಳುದಾಗಿರುತ್ತದೆ. ಕೃಷ್ಣಕಾಪೋತಿಯು ರಸಯುಕ್ತವಾಗಿ ಮೇಲೆಲ್ಲಾ ರೋಮಗಳಿಂದ ಕೂಡಿ (ಶೂಕಗಳುಳ್ಳುದಾಗಿ) ಮೆತ್ತಗಿರುತ್ತದೆ. ರಸವು ಕಬ್ಬಿನ ಹಾಲಿನಂತೆ ಸಿಹಿಯಾಗಿರುತ್ತದೆ. ಕಪ್ಪುನಾಗರ ಹಾವಿನ ಆಕಾರವುಳ್ಳುದಾಗಿ ವಾರಾಹೀ ಎಂಬ ಮೂಲಿಕೆಯು ಗಡ್ಡೆಯಿಂದ ಹೊರಡುತ್ತದೆ. ಛತ್ರಾ ಮತ್ತು ಅತಿಚ್ಛತ್ರಗಳು ಗಡ್ಡೆಯಿಂದ ಹೊರಟು ಒಂದೇ ಎಲೆಯುಳ್ಳದ್ದಾಗಿ ಕಾಡಿಗೆಯ ಬಣ್ಣದವವಾಗಿ ರಕ್ಷೋಹರಗಳಾಗಿವೆ. (ಅತ್ಯಂತ ಕ್ರಿಮಿಹರಗಳು). ಶ್ವೇತಕಾಪೋತೀ ಎಂಬ ಹೆಸರಿನ ಕಂದವು ನವಿಲಗರಿಯಂತೆ ಮನೋಹರ ಬಣ್ಣವುಳ್ಳ ೧೨ ಎಲೆಗಳುಳ್ಳದ್ದಾಗಿ ವಾರ್ಧಕ್ಯವನ್ನೂ ಅಕಾಲಮರಣವನ್ನೂ ನಿವಾರಿಸುತ್ತದೆ. ಕನ್ಯಾ ಎಂಬ ಮಹೌಷಧವು ಒಂದು ವಿಧ ಗೆಡ್ಡೆಯಿಂದ ಹೊರಡುತ್ತದೆ. ಸುವರ್ಣಬಣ್ಣದ (ಹಳದಿಯ ಬಣ್ಣದ) ಹಾಲುಳ್ಳುದಾಗಿರುತ್ತದೆ. ಕರೇಣುವೆಂಬ ಗಡ್ಡೆಯು ತುಂಬಾ ಹಾಲಿನಿಂದ ಕೂಡಿ ಆನೆಯ ಕಾಲಿನಂತೆ ದಪ್ಪವಾಗಿರುತ್ತದೆ. ಹಸ್ತಿಕರ್ಣದಲ್ಲಿ ಮುತ್ತುಗದೆಲೆಯಂತೆ ಹಸರುಬಣ್ಣದ ಎರಡೆಲೆಗಳಿರುತ್ತವೆ. ಅಜಾ ಎಂಬ ಮೂಲಿಕೆಯು ಆಡಿನ ಮೊಲೆಯಂತೆ ಶಂಖ, ಮೊಲ್ಲೆಹೂವು, ಚಂದ್ರನಂತೆ ಬಿಳುಪಾದ ಗಡ್ಡೆಗಳುಳ್ಳದ್ದು. ಹಾಲಿರುವ ಸಣ್ಣಗಿಡವು, ಆದರೆ ಮಹೌಷಧವು. ಶ್ವೇತಾ ಎಂಬುದು ವಿಚಿತ್ರಬಣ್ಣದ ಹೂವುಗಳಿಂದ ಕೂಡಿ ಗುಲಗಂಜಿಯ ಎಲೆಗಳಂತಿರುತ್ತವೆ. ಚಕ್ರಕವೆಂಬುದು ಒಂದು ವಿಧದ ಹಂಬು ಕೆಂಪುಬಣ್ಣದ ಎಲೆಗಳಿಂದ ಕೂಡಿರುತ್ತದೆ. ಆದಿತ್ಯಪರ್ಣವು ಸದಾಕಾಲದಲ್ಲೂ ಸೂರ್ಯನಕಡೆಗೇ ತಿರುಗಿಕೊಂಡಿರುತ್ತದೆ. ಚಿನ್ನದಂತೆ ಥಳಥಳಗುಟ್ಟುತ್ತಾ ನೀರಿನ ದಡದಲ್ಲೇ ಬೆಳೆದು ಎಲ್ಲಾ ಕಡೆಗೂ ಹಬ್ಬಿರುತ್ತದೆ. ಬ್ರಹ್ಮಸುವರ್ಚಲಾ ಎಂಬ ಕಂದವು ಹಾಲುಳ್ಳುದಾಗಿ ತಾವರೆಹೂವಿನ ಆಕಾರವನ್ನುಳ್ಳುದಾಗಿ ಒಂದು ಗುದ್ದುಮೊಳ ಉದ್ದದ ಸಣ್ಣಗಿಡ ಎರಡಂಗುಳಗಳಷ್ಟು ಅಗಲವಾದ ಎಲೆಗಳಿರುತ್ತವೆ. ನೈದಿಲೆ ಹೂವಿನ ಆಕಾರದ ಕಾಡಿಗೆಯಂತೆ ಕಪ್ಪಾದ ಕಾಯಿಗಳುಳ್ಳದ್ದು. ಮಹಾಶ್ರಾವಣಿಯು ಸುವರ್ಣವರ್ಣದ ಹಾಲುಳ್ಳ ಸಣ್ಣಗಿಡವು. ಇದೇ ರೀತಿಯಾಗಿ (ಮಹಾಶ್ರಾವಣೀಯ ಲಕ್ಷಣವುಳ್ಳ) ಬಿಳಿಯ ಹಾಲಿನಿಂದ ಕೂಡಿದ ಸಣ್ಣಗಿಡವನ್ನು ಶ್ರಾವಣೀ ಎನ್ನುತ್ತಾರೆ. ಗೋಲೋಮಿ ಮತ್ತು ಅಜಲೋಮಿಗಳೆರಡೂ ರೋಮದಿಂದ ಕೂಡಿದ ಕಂದಗಳು. (ಗಡ್ಡೆಗಳಮೇಲೆ ಕೂದಲಿನಂತೆ ಸಣ್ಣ ಸಣ್ಣ ಶೂಕಗಳು ಹೊರಟಿರುತ್ತವೆ). ಹಂಸಪಾದಿಯು ಸೊಪ್ಪಿನಂತೆ ಕವಲುಕವಲಾಗಿ ಒಡೆದು ನೆಲದಮೇಲೆಯೇ ಹಬ್ಬಿ ಸೊಪ್ಪುಹರಡಿಕೊಂಡಿರುತ್ತದೆ. ಅಥವಾ ಬಿಳಿಹೂವಿನ (ವಿಷ್ಣುಕಾಂತಿ) ಗಿರಿಕರ್ಣಿಕೆಗೆ ಸಮವಾಗಿರುವ ಎಲೆಗಳು ಬುಡದಿಂದಲೇ ಹೊರಟಿರುತ್ತವೆ. ವೇಗವತೀ ಎಂಬ ಜಾತಿಯ ಸೋಮಲತೆಯು ಶರದೃತುವಿ

ನಲ್ಲಿ ಹಾವಿನ ಪೊರೆಯಂತೆ ಕಾಣುತ್ತ ಬಲುದೂರಕ್ಕೆ ಹಬ್ಬಿರುತ್ತದೆ.

ಸಪ್ತಾದೌ ಸರ್ವರೂಪಿಣ್ಯೋ ಯಾಹ್ಯೌಷಧ್ಯಃ ಪ್ರಕೀರ್ತಿತಾಃ ।
ತಾಸಾಮುದ್ಧರಣಂ ಕಾರ್ಯಂ ಮನ್ತ್ರೇಣಾನೇನ ಸರ್ವದಾ ॥೧೬॥
ಮಹೇನ್ದ್ರರಾಮಕೃಷ್ಣಾನಾಂ ಬ್ರಾಹ್ಮಣಾನಾಂ ಗವಾಮಪಿ ।
ತಪಸಾ ತೇಜಸಾ ವಾಪಿ ಪ್ರಶಾಮ್ಯಧ್ವಂ ಶಿವಾಯ ವೈ ॥೧೭॥
ಮನ್ತ್ರೇಣಾನೇನ ಮತಿಮಾನ್ ಸರ್ವಾನಪ್ಯಭಿಮನ್ತ್ರಯೇತ್ ।
ಅಶ್ರದ್ದಧಾನೈರಲಸೈಃ ಕೃತಘ್ನೈಃ ಪಾಪಕರ್ಮಭಿಃ ॥೧೮॥
ನೈವಾಸಾದಯಿತುಂ ಶಕ್ಯಾಃ ಸೋಮಃ ಸೋಮಸಮಸ್ತಥಾ ।
ಪೀತಾವಶೇಷಮಮೃತಂ ದೇವೈರ್ಬ್ರಹ್ಮಪುರೋಗಮೈಃ ॥೧೯॥
ನಿಹಿತಂ ಸೋಮವೀರ್ಯಾಸು ಸೋಮೇ ಚಾಪ್ಯೌಷಧೀಪತೌ ।

ಸೋಮರೂಪಿಗಳಾದ ಮೊದಲಿನ ಏಳು ಔಷಧಿಗಳನ್ನು ಸರ್ವಕಾಲದಲ್ಲೂ ಈ ಕೆಳಗೆ ಹೇಳುವ ಮಂತ್ರವನ್ನು ಜಪಿಸುತ್ತಾ ಕೀಳಬೇಕು. ಆ ಮಂತ್ರವು ದೇವೇಂದ್ರ, ರಾಮ, ಕೃಷ್ಣ, ಬ್ರಾಹ್ಮಣರು ಗೋವುಗಳು ಇವರುಗಳ ತಪೋಬಲಗಳಿಂದಲೂ ತೇಜೋಬಲಗಳಿಂದಲೂ ಲೋಕಕಲ್ಯಾಣಕ್ಕಾಗಿ ನಿಮ್ಮ ವೀರ್ಯವನ್ನು ಶಮನಮಾಡಿಕೊಳ್ಳಬೇಕು ಎಂದು ಮಂತ್ರಾರ್ಥವು. ಬುದ್ಧಿವಂತನಾದ ವೈದ್ಯನು ಈ ಮಂತ್ರವನ್ನು ಜಪಿಸುತ್ತಾ ಇವುಗಳ ಮೇಲೆ ನೀರನ್ನು ಅಭಿಮಂತ್ರಿಸುತ್ತಾ ಚುಮುಕಿಸಬೇಕು. ನಂಬಿಕೆಯಿಲ್ಲದವರು, ಅಲಸರು (ಸೋಮಾರಿಗಳು), ಕೃತಘ್ನರು, ಪಾಪಿಷ್ಠರು ಇವರು ಸೋಮಲತೆಯನ್ನಾಗಲಿ ಸೋಮಸಮಾನಗಳಾದ ಔಷಧಿಗಳನ್ನಾಗಲೀ ಹೊಂದಲು ಅನರ್ಹರು. ಬ್ರಹ್ಮನೇ ಮೊದಲಾದ ದೇವತೆಗಳು ತಾವು ಪಾನಮಾಡಿದಮೇಲೆ ಉಳಿದ ಅಮೃತಶೇಷವನ್ನು ಶೀತವೀರ್ಯಗಳಾದ ಔಷಧಿಗಳಲ್ಲೂ ಔಷಧಿಗಳಿಗೆ ರಾಜನಾದ ಸೋಮನಲ್ಲೂ (ಚಂದ್ರ) ಕೊಡಿಟ್ಟರು (ಶೇಖರಿಸಿಟ್ಟರು).

ದೇವಸುನ್ದೇ ಹ್ರದವರೇ ತಥಾ ಸಿನ್ಧೌ ಮಹಾನದೇ ॥೨೦॥
ದೃಶ್ಯತೇ ಚ ಜಲಾನ್ತೇಷು ಮೇಧ್ಯಾ ಬ್ರಹ್ಮಸುವರ್ಚಲಾ ।
ಆದಿತ್ಯಪರ್ಣಿನೀ ಜ್ಞೇಯಾ ತಥೈವ ಹಿ ಹಿಮಕ್ಷಯೇ ॥೨೧॥
ದೃಶ್ಯತೇಽಜಗರೀ ನಿತ್ಯಂ ಗೋನಸೀ ಚಾಮ್ಬುದಾಗಮೇ ।
ಕಾಶ್ಮೀರೇಷು ಸರೋ ದಿವ್ಯಂ ನಾಮ್ನಾ ಕ್ಷುದ್ರಕಮಾನಸಮ್ ॥೨೨॥
ಕರೇಣುಸ್ತತ್ರ ಕನ್ಯಾ ಚ ಛತ್ರಾತಿಚ್ಛತ್ರಕೇ ತಥಾ ।
ಗೋಲೋಮೀ ಚಾಜಲೋಮೀ ಚ ಮಹತೀ ಶ್ರಾವಣೀ ತಥಾ ॥೨೩॥
ವಸನ್ತೇ ಕೃಷ್ಣಸರ್ಪಾಖ್ಯಾ ಗೋನಸೀ ಚ ಪ್ರದೃಶ್ಯತೇ ।
ಕೌಶಿಕೀಂ ಸರಿತಂ ತೀರ್ತ್ವಾ ಸಞ್ಜಯನ್ತ್ಯಾಸ್ತು ಪೂರ್ವತಃ ॥೨೪॥
ಕ್ಷಿತಿಪ್ರದೇಶೋ ವಲ್ಮೀಕೈರಾಚಿತೋ ಯೋಜನತ್ರಯಮ್ ।

ವಿಜ್ಞೇಯಾ ತತ್ರ ಕಾಪೋತೀ ಶ್ವೇತಾ ವಲ್ಮೀಕಮೂರ್ಧಸು ||೩೫||
ಮಲಯೇ ನಳಸೇತೌ ಚ ವೇಗವತ್ಯೌಷಧೀ ಧ್ರುವಾ |
ಕಾರ್ತಿಕ್ಯಾಂ ಪೌರ್ಣಮಾಸ್ಯಾಂ ಚ ಭಕ್ಷಯೇತ್ತಾಮುಪೋಷಿತಃ ||೩೬||
ಸೋಮಮವಚ್ಛಾತ್ರ ವರ್ತೇತ ಫಲಂ ತಾವಚ್ಚ ಕೀರ್ತಿತಮ್ |
ಸರ್ವಾ ವಿಜ್ಞೇಯಾಸ್ತ್ವೌಷಧ್ಯಃ ಸೋಮೇಚಾಪ್ಯರ್ಬುದೇ ಗಿರೌ ||೩೭||
ಸಶೃಜ್ಞೈರ್ದೇವಚರಿತೈರಮ್ಬುದಾನೀಕಭೇದಿಭಿಃ |
ವ್ಯಾಪ್ತಸ್ತಿರ್ಥೈಶ್ಚ ವಿಖ್ಯಾತೈಃ ಸಿದ್ಧರ್ಷಿಸುರಸೇವಿತೈಃ ||೩೮||
ಗುಹಾಭಿರ್ಭೀಮರೂಪಾಭಿಃ ಸಿಂಹೋನ್ನಾದಿತಕುಕ್ಷಿಭಿಃ |
ಗಜಾಲೋಡಿತತೋಯಾಭಿರಾಪಗಾಭಿಃ ಸಮಂತತಃ |
ವಿವಿಧೈರ್ಧಾತುಭಿಶ್ಚಿತ್ರೈಃ ಸರ್ವತ್ರೈವೋಪಶೋಭಿತಃ ||೩೯||
ನದೀಷು ಶೈಲೇಷು ಸರಃ ಸು ಚಾಪಿ ಪುಣ್ಯೇಷ್ವರಣ್ಯೇಷು
ತಥಾಶ್ರಮೇಷು | ಸವತ್ರ ಸರ್ವಾಃ ಪರಿಮಾರ್ಗಿತವ್ಯಾಃ
ಸರ್ವತ್ರ ಭೂಮಿರ್ಹಿ ವಸೂನಿ ಧತ್ತೇ ||೪೦||

ದೇವಸುಂದವೆಂಬ ಶ್ರೇಷ್ಠವಾದ ಮಡುವಿನಲ್ಲೂ, ಸಿಂಧೂಮಹಾನದದಲ್ಲೂ ಜಲದಿಂದ ತುಂಬಿದ ಭೂಭಾಗದ ತುದಿಯಲ್ಲೂ ಪವಿತ್ರವಾದ (ಮೇಧಾಕರವಾದ) ಬ್ರಹ್ಮಸುವರ್ಚಲಾ ಎಂಬ ಔಷಧಿಯೂ ಹಾಗೆಯೇ ವಸಂತಋತುವಿನಲ್ಲಿ ಆದಿತ್ಯಪರ್ಣಿನಿಯೂ ಕಾಣಿಸುತ್ತದೆ. ವರ್ಷಋತುವಿನಲ್ಲಿ ಅಜಗರಿಯೂ ಗೋನಸಿಯೂ ಸದಾ ದೊರೆಯುತ್ತವೆ. ಕಾಶ್ಮೀರದೇಶದಲ್ಲಿ ಕ್ಷುದ್ರಮಾನಸವೆಂಬ ಸರೋವರವಿದೆ. ಅದರ ಸಮೀಪದಲ್ಲಿ ಕರೇಣು, ಕನ್ಯಾ, ಛತ್ರಾ, ಅತಿಚ್ಛತ್ರಾ, ಗೋಲೋಮಾ, ಅಜಲೋಮಾ, ಮಹಾಶ್ರಾವಣೀ ಎಂಬ ಔಷಧಿಗಳೂ ವಸಂತಋತುವಿನಲ್ಲಿ ವಾರಾಹೀ ಮತ್ತು ಗೋನಸೀಗಳೂ ಕಾಣುತ್ತವೆ. ಕೌಶಿಕೀ ನದಿಯನ್ನು ದಾಟಿ ಸಂಜಯಂತಿಗೆ ಪೂರ್ವದಲ್ಲಿ ಎರಡು ಯೋಜನಗಳವರೆಗಿನ ಪ್ರದೇಶದಲ್ಲಿ ಹುತ್ತಗಳು ಬೆಳೆದಿವೆ. ಆ ಹುತ್ತಗಳಮೇಲೆ ಬೆಳೆದಿರುವುವನ್ನೇ ಕಾಪೋತೀ, ಶ್ವೇತಕಾಪೋತಿಗಳೆಂದು ತಿಳಿಯಬೇಕು. ಮಲಯಪರ್ವತದಲ್ಲೂ ನಳಸೇತುವಿರುವ ದರ್ಭಶಯನ ಪ್ರದೇಶದಲ್ಲೂ ವೇಗವತೀಯೆಂಬ ಔಷಧಿಯು ಖಂಡಿತವಾಗಿ ಕಾಣಿಸುತ್ತದೆ. ಅದನ್ನು ಸಂಗ್ರಹಿಸಿ ತಂದು ಉಪಯೋಗಿಸುವ ಮನುಷ್ಯನು ಕಾರ್ತೀಕಶುದ್ಧ ಪೂರ್ಣಿಮೆಯದಿನಸ ಭಕ್ಷಿಸಿದರೆ ಸೋಮಪ್ರಾಶನೆಯಿಂದ ಲಭಿಸುವ ಮಹಾಫಲಗಳೆಲ್ಲಾ ಉಂಟಾಗುತ್ತವೆ. ಅರ್ಬುದಗಿರಿಯಲ್ಲಿ (ಅಬೂಶಿಖರ) ಎಲ್ಲಾ ಔಷಧಿಗಳನ್ನೂ ಹುಡುಕಿ ಕಂಡುಹಿಡಿಯಬೇಕು. ದೇವತೆಗಳು ಸಂಚರಿಸುವ ಮೋಡಗಳನ್ನು ಮುಟ್ಟಿ ಭೇದಿಸುವಷ್ಟು ಎತ್ತರವಾದ ಪರ್ವತಶಿಖರಗಳಲ್ಲಿರುವ ಸಿದ್ಧರೂ, ಋಷಿಗಳೂ, ದೇವತೆಗಳೂ ಸೇವಿಸುವ ಪ್ರಸಿದ್ಧಪುಣ್ಯತೀರ್ಥಗಳ ದಡದಲ್ಲೂ, ಪ್ರದೇಶಗಳಲ್ಲೂ ಸಿಂಹಗಳು ಸೇರಿಕೊಂಡು ಘರ್ಜಿಸುವ ಗುಹೆಗಳಲ್ಲಿಯೂ ಮದಗಜಗಳು ಕಲಕಿ ಬದಿಯಾಗುವಂತೆ (ಬಗ್ಗಡ

ಗೊಳಿಸುವ) ನದಿಗಳ ತೀರಗಳಲ್ಲೂ ಗಂಧಕ, ಮಣಶಿಲೆ, ತಾಲಕ ಮೊದಲಾದ ಗೈರಿಕಾದಿಧಾತುಗಳು ದೊರೆಯುತ್ತವೆ. ಪುಣ್ಯನದಿಗಳು, ಪರ್ವತಗಳು, ಸರೋವರಗಳು, ಅರಣ್ಯಗಳು, ಋಷಿಗಳ ಆಶ್ರಮಗಳು ಈ ಎಲ್ಲಾ ಕಡೆಗಳಲ್ಲೂ ಎಲ್ಲಾ ಪ್ರಕಾರದ ಮಹೌಷಧಿಗಳನ್ನೂ ಹುಡುಕಿ ಪತ್ತೆಮಾಡಬೇಕು. ಎಲ್ಲಾ ಭಾಗದ ಭೂಪ್ರದೇಶಗಳಲ್ಲೂ ಅಷ್ಟವಸುಗಳೂ ಅಡಗಿರುತ್ತವೆಂಬುದನ್ನು ಜ್ಞಾಪಕವಿಡಬೇಕು.

ಇತಿ ಶ್ರೀ ಸುಶ್ರುತಾಸಂಹಿತಾಯಾಂ ಚಿಕಿತ್ಸಿತಸ್ಥಾನೆ ನಿವೃತ್ತಸಂತಾಪೀಯ
ನಾಮ ತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ
ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಏಕತ್ರಿಂಶತ್ತಮೋಽಧ್ಯಾಯಃ

ಅಥಾತಃ ಸ್ನೇಹೋಪಯೌಗಿಕಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ನೇಹನಕರ್ಮಕ್ಕೆ ಉಪಯೋಗವಾಗುವ ಚಿಕಿತ್ಸೆಯ ಕ್ರಮವನ್ನು ವಿವರಿಸುತ್ತೇವೆ.

ಮೊದಲು ಸ್ನೇಹಸ್ವೇದಕರ್ಮಗಳನ್ನೂ ವಮನ ವಿರೇಚನ ಬಸ್ತಿಪ್ರಯೋಗಾದಿಗಳಿಂದ ದೇಹಶುದ್ಧಿಯನ್ನೂ ಮಾಡಿಸಿದ ರೋಗಿಗೆ ರಸಾಯನಗಳನ್ನು ಪ್ರಯೋಗಿಸಬೇಕು. ಸ್ನೇಹ ಕರ್ಮವು ಬಾಹ್ಯ, ಆಭ್ಯಂತರಗಳೆಂದು ಎರಡು ಪ್ರಕಾರವಾಗಿದೆ. ಅಭ್ಯಂಗಾದಿಗಳು ಬಾಹ್ಯವಿಧಾನಗಳು, ಸ್ನೇಹಪಾನಾದಿಗಳು ಆಭ್ಯಂತರಗಳು.

ಸ್ನೇಹಸಾರೋಽಯಂ ಪುರುಷಃ ಪ್ರಾಣಾಶ್ಚ ಸ್ನೇಹಭೂಯಿಷ್ಠಾಃ ಸ್ನೇಹಸಾಧ್ಯಾಶ್ಚ ಭವನ್ತಿ । ಸ್ನೇಹೋಹಿ ಪಾನಾನುವಾಸನಮಸ್ತಿಷ್ಕಶಿರೋಬಸ್ತ್ಯುತ್ತರ ಬಸ್ತಿನಸ್ಯ ಕರ್ಣಪೂರಣ ಗಾತ್ರಾಭ್ಯಙ್ಗ ಭೋಜನೇಷೂಪಯೋಜ್ಯಃ ||೩||

ತತ್ರ ದ್ವಿಯೋನಿಶ್ಚತುರ್ವಿಕಲ್ಪೋಽಭಿಹಿತಃ ಸ್ನೇಹಃ ಸ್ನೇಹಗುಣಾಶ್ಚ । ತತ್ರ ಜಙ್ಗಮೇಭ್ಯೋ ಗವ್ಯಂ ಘೃತಂ ಪ್ರಧಾನಂ ಸ್ಥಾವರೇಭ್ಯಸ್ತಿಲತೈಲಂ ಪ್ರಧಾನಮಿತಿ ||೪||

ಪುರುಷನು ಸ್ನೇಹಬಲವುಳ್ಳವನು ; ಪ್ರಾಣಗಳೂ ಸ್ನೇಹಾಧಿಕಗಳಾಗಿವೆ, ಸ್ನೇಹಕರ್ಮದಿಂದಲೇ ಸಾಧ್ಯಗಳಾಗುತ್ತವೆ. ಸ್ನೇಹವು ಪಾನ, ಅನುವಾಸನಬಸ್ತಿ, ಮಸ್ತಿಷ್ಕ ಶಿರೋಬಸ್ತಿ, ಉತ್ತರಬಸ್ತಿ, ನಸ್ಯಕರ್ಮ, ಕರ್ಣಪೂರಣೆ, ಶರೀರದಮೇಲೆ ಅಭ್ಯಙ್ಗ ಮಾಡುವುದು, ಭೋಜನ ದ್ರವ್ಯಗಳೊಡನೆ ಸೇರಿ ಉಪಯೋಗಿಸಲ್ಪಡುತ್ತದೆ. ಮತ್ತು ಸ್ಥಾವರ ಮತ್ತು ಜಙ್ಗಮಗಳೆಂಬ ಎರಡು ವಿಧಯೋನಿಗಳಿಂದ ಉಂಟಾಗಿ ಘೃತ, ತೈಲ, ವಸೆ, ಮಜ್ಜೆಗಳೆಂದು ನಾಲ್ಕುವಿಧವಾಗಿದೆ. ಜಙ್ಗಮ ಸ್ನೇಹಗಳಲ್ಲಿ ಹಸುವಿನ ತುಪ್ಪವು ಮುಖ್ಯವಾದದ್ದು. ಸ್ಥಾವರ ಸ್ನೇಹಗಳಲ್ಲಿ ಎಳ್ಳಿನ ಎಣ್ಣೆಯೇ ಮುಖ್ಯವಾದದ್ದೆಂದು ಹೇಳಲ್ಪಟ್ಟಿರುತ್ತದೆ.

ಅತ ಊರ್ಧ್ವಂ ಯಥಾಪ್ರಯೋಜನಂ ಯಥಾವಿಧಾನಂ ಚ ಸ್ಥಾವರಸ್ನೇಹಾನುಪದೇಕ್ಷ್ಯಾಮಃ । ತತ್ರ ತಿಲ್ವಕೈರಂಡ ಕೋಶಾಮ್ರದನ್ತೀದ್ರವನ್ತೀ ಸಪ್ತಲಾಶಙ್ಖಿನೀಪಲಾಶ ವಿಷಾಣಿಕಾಗವಾಕ್ಷೀಕಮ್ಪಿಲ್ಲಕಶಮ್ಪಾಕ ನೀಲಿನೀಸ್ನೇಹಾ ವಿರೇಚಯನ್ತಿ ಜೀಮೂತಕಕುಟಜ ಕೃತವೇಧನೇಕ್ಷ್ವಾಕುಧಾಮಾರ್ಗವಮದನ ಸ್ನೇಹಾವಾಮಯನ್ತಿ ವಿಡಙ್ಗ ಖರಮಞ್ಜರೀ ಮಧುಶಿಗ್ರುಸೂರ್ಯವಲ್ಲೀಪೀಲು ಸಿದ್ಧಾರ್ಥಕಜ್ಯೋತಿಷ್ಮತೀಸ್ನೇಹಾಃ ಶಿರೋ ವಿರೇಚಯನ್ತಿ ಕರಞ್ಜ ಪೂತಿಕಕೃತಮಾಲ

ಮಾತುಲುಙ್ಗದೀಕಿರಾತತಿಕ್ತಕಸ್ನೇಹಾದುಷ್ಟವ್ರಣೇಷೂಪಯುಜ್ಯನ್ತೇ ತುವರಕಪಿತ್ಥಕಮ್ಪಿಲ್ಲಕ ಭಲ್ಲಾತಕಪಟೋಲಸ್ನೇಹಾ ಮಹಾವ್ಯಾಧಿಷು ತ್ರಪುಸೈರ್ವಾರುಕತುಮ್ಬಿಕೂಷ್ಮಾಂಡಸ್ನೇಹಾ ಮೂತ್ರಸಙ್ಗೇಷು ಕಪೋತವಙ್ಕಾವಲ್ಗುಜದರೀತಕೀಸ್ನೇಹಾಃ ಶರ್ಕರಾಶ್ಮರೀಷು ಕುಸುಮ್ಭಸರ್ಷ ಪಾತಸೀಪಿಚುಮರ್ದಾತಿ ಮುಕ್ತಾಕಭಾಣ್ಡೀ ಕಟುತುಮ್ಬಿಕಟಭೀಸ್ನೇಹಾಃ ಪ್ರಮೇಹೇಷು ತಾಳ ನಾರಿಕೇಳಪನಸ ಮೋಚಪ್ರಿಯಾಳ ಬಿಲ್ವಮಧೂಕಶ್ಲೇಷ್ಮಾತಕಾಮ್ರಾತಕಫಲಸ್ನೇಹಾಃ ಪಿತ್ತಸಂಸೃ ಷ್ಟೇವಾಯೌ ವಿಭೀತಕಭಲ್ಲಾತಕಪಿಣ್ಡೀತಕಸ್ನೇಹಾಃ ಕೃಷ್ಣೀಕರಣೇ ಶ್ರವಣಕಙ್ಗುಕಟುಙ್ಕ ಸ್ನೇಹಾಃ ಪಾಣ್ಡುಕರಣೇ ಶಿಂಶಪಾಗರುಸಾರಸ್ನೇಹಾ ದದ್ರುಕುಷ್ಠಕಿಟಿಭೇಷು ಸರ್ವಏವಸ್ನೇಹಾ ವಾತಮುಪಘ್ನನ್ತಿ ತೈಲಗುಣಾಶ್ಚಸಮಾಸೇನ ವ್ಯಾಖ್ಯಾತಾಃ ॥೫॥ ಸರಳಪೀತದಾರುಶಿಂಶಪೇತ್ಯಧಿಕ ಪಾಠಃ

ಇನ್ನುಮುಂದೆ ಉಪಯೋಗಕ್ಕೆ ಅನುಸಾರವಾಗಿಯೂ, ತಯಾರಿಸುವ ವಿಧಿಗೆ ತಕ್ಕಂತೆಯೂ ಸ್ಥಾವರಸ್ನೇಹಗಳನ್ನು ವಿವರಿಸುತ್ತೇವೆ.—ಅವುಗಳೊಳಗೆ ರೋಧ್ರ, ಹರಳು ಬೀಜ, ಜೀರಿಗೆಮಾವಿನಬೀಜ, ಜಾಪಾಳ, ಕಿರಿಯಜಾಪಾಳ, ಹಳದಿ ಹಾಲಿನ ಮುಂಡು ಗಳ್ಳಿ, ಈಶ್ವರೀ, ಮುತ್ತುಗದಬೀಜ, ಮೇಷಶೃಙ್ಗಿ (ಎಡಮುರಿಕಾಯಿ), ಹಾವುಮೆಕ್ಕೆಬೀಜ, ಕಪಿಲೆಹಿಟ್ಟು, ಕಕ್ಕೆಬೀಜ, ನೀಲಿ ಇವುಗಳಿಂದ ತಯಾರಿಸಿದ ತೈಲಗಳು ವಿರೇಚನಕಾರಿ ಗಳು. ದೇವದಾಳಿಬೀಜ, ಕೊಡಶಿಗೆಬೀಜ, ಹೀರೆಯಬೀಜ, ಕಹಿಸೋರೆಯಬೀಜ, ತುಪ್ಪಹೀರೆಯಬೀಜ, ಮಗ್ಗಾರೆಬೀಜ ಇವುಗಳ ತೈಲವು ವಮನಕರಗಳು. ವಿಡಂಗ, ಉತ್ತರಣೆಬೀಜ, ಕೆಂಪುನುಗ್ಗೆಯಬೀಜ, ಎಕ್ಕ, ಪೀಲು (ಬಗಿನಿ), ಸಾಸಿವೆ, ಗಂಗುಂಡೆ ಬೀಜ ಇವುಗಳ ತೈಲವು ಶಿರೋವಿರೇಚನಕರಗಳು. ಹೊಂಗೆಬೀಜ, ತನಸದಬೀಜ, ಕಕ್ಕೆ, ಮಾದಳ, ಇಂಗಳ, ನೆಲಬೇವು ಇವುಗಳ ತೈಲಗಳು ದುಷ್ಟವ್ರಣ (ಹರಗಳು)ಗಳಲ್ಲಿ ಉಪ ಯೋಗವಾಗುತ್ತವೆ. ತುವರ, ಬೇಲ, ಕಮ್ಪಿಲ್ಲ, ಗೇರುಬೀಜ, ಕಹಿಪಡವಲದಬೀಜ ಇವುಗಳ ಸ್ನೇಹಗಳು ಮಹಾರೋಗಗಳಲ್ಲಿ ಉಪಯೋಗವಾಗುತ್ತವೆ. ಮಿಣಿಕೆ, ಸೌತೆ, ಸಿಹಿಕುಂಬಳ, ಸೋರೆ, ಬೂದಿಗುಂಬಳ ಇವುಗಳ ಬೀಜದಿಂದ ತೆಗೆದ ಸ್ನೇಹಗಳು ಮೂತ್ರ ಕೃಚ್ಛ್ರದಲ್ಲಿ. (ಮೂತ್ರದತಡೆ) ಉಪಯೋಗವಾಗುತ್ತವೆ. ಕಪೋತವಂಕ (ಬ್ರಹ್ಮಸುವ ರ್ಚಲಾ, ಸಲ್ಲಕಿ ಎಂದು ಕೆಲವರು), ಬಾವಂತಿಬೀಜ, ಅಣಿಲೆಬೀಜ ಇವುಗಳ ತೈಲಗಳು, ಶರ್ಕರೆ ಮತ್ತು ವಾತವನ್ನು ಬಿಟ್ಟು ಉಳಿದ ಅಶ್ಮರಿ ರೋಗಗಳಲ್ಲಿ ಉಪಯೋಗವಾಗುತ್ತವೆ. ಕುಸುಮೆಬೀಜ, ಸಾಸಿವೆ, ಸೀಮೆಅಗಸೆಬೀಜ, ಬೇವಿನಬೀಜ, ಅತಿಮುಕ್ತಕ (ತಿನ್ದುಕ ತೂಪರೆಗಿಡ), ಭಾಣ್ಡೀ (ಬಾಗೆಬೀಜ), ಕಹಿಸೋರೆಬೀಜ, ಗಿರಿಕರ್ಣಿಕೆಯಬೀಜ ಇವುಗಳ ತೈಲಗಳು ಪ್ರಮೇಹರೋಗಗಳಲ್ಲಿ ಉಪಯೋಗವಾಗುತ್ತವೆ. ತಾಳೆಕಾಯಿ ತೆಂಗಿನಕಾಯಿ ಹಲಸು (ಬೀಜ), ಮೋಚ (ಬಾಳೆ), ಚಾರುಪೊಪ್ಪು, ಬಿಲ್ವಪತ್ರೆಬೀಜ, ಹಿಪ್ಪೆಬೀಜ, ಚಳ್ಳೆಬೀಜ, ಅಮಟೆಹಣ್ಣು ಇವುಗಳ ಸ್ನೇಹ (ತೈಲ) ಗಳು ಪಿತ್ತ ಮಿಶ್ರವಾದ ವಾತ ರೋಗದಲ್ಲಿ ಉಪಯೋಗಿಸಲ್ಪಡುತ್ತವೆ. ತಾರೆಕಾಯಿ, ಗೇರುಬೀಜ, ಮಗ್ಗರೆಕಾಯಿ

ಇವುಗಳ ತೈಲಗಳು ವ್ರಣಪ್ರದೇಶವನ್ನು ಕಪ್ಪಾಗಿ ಮಾಡುವುದಕ್ಕೆ ಉಪಯೋಗವಾಗುತ್ತವೆ. ಶ್ರವಣ (ಇಂಗಳವೆಂದು ಡಲ್ಹಣ, ಬೋಳದರಗವೆಂದು ಹಾರಾಣಚಂದ್ರನ ಮತ), ನವಣೆ, ಹೆಮ್ಮರ ಇವುಗಳ ಸ್ನೇಹವು ಚರ್ಮವನ್ನು ಬೆಳ್ಳಗೆ ಮಾಡಲು ಉಪಯೋಗವಾಗುತ್ತದೆ. ಬೀಟೆ, ಅಗಿಲು, ಶಾಲಸಾರ (ಸರ್ಜವೃಕ್ಷ) ಇವುಗಳ ತೈಲವು ಪಿತ್ತದಗಂಧೆ (ಕಜ್ಜಿತುರಿ), ಕುಷ್ಠ,ಕಿಟಭ (ಗಜಕರ್ಣವೆಂಬ ಚರ್ಮರೋಗ) ರೋಗಗಳಲ್ಲಿ ಉಪಯೋಗವಾಗುತ್ತದೆ. ಎಲ್ಲಾ ತೈಲಗಳೂ ವಾತವನ್ನು ನಿವಾರಣೆಮಾಡುತ್ತವೆ. ತೈಲಸಾಮಾನ್ಯವಾದ ತಿಲತೈಲದ ಗುಣಗಳನ್ನು ದ್ರವದ್ರವ್ಯಾಧ್ಯಾಯದಲ್ಲಿ ಹೇಳಿರುತ್ತೇವೆ.

ಅತಊರ್ಧ್ವಂ ಕಷಾಯಸ್ನೇಹಪಾಕ ಕ್ರಮಮುಪದೇಕ್ಷ್ಯಾಮಃ । ತತ್ರ ಕೇಚಿದಾಹುಸ್ತ್ವಕ್ ಪತ್ರಮೂಲಾದೀನಾಂ ಭಾಗಸ್ತಚ್ಚತುರ್ಗುಣಂ ಜಲಮಾವಾಪ್ಯ ಚತುರ್ಭಾಗಾವಶೇಷಂ ನಿಃಕ್ವಾಥ್ಯಾಪಹರೇದಿತ್ಯೇಷ ಕಷಾಯಪಾಕಕಲ್ಪಃ ಸ್ನೇಹಪ್ರಸೃತೇಷುಷಟ್ಸು ಚತುರ್ಗುಣಂ ದ್ರವಮಾವಾಪ್ಯ ಚತುರಶ್ಚಾಕ್ಷಸಮಾ ಭೇಷಜಪಿಣ್ಡಾನಿತ್ಯೇಷ ಸ್ನೇಹಪಾಕಕಲ್ಪಃ । ಏತತ್ತು ನ ಸಮ್ಯಕ್ ಕಸ್ಮಾತ್ ಅಗಮಸಿದ್ಧತ್ವಾತ್ ॥೬॥

ಪಲಕುಡವಾದೀನಾಮತೋ ಮಾನಂ ತು ವ್ಯಾಖ್ಯಾಸ್ಯಾಮಃ । ತತ್ರ ದ್ವಾದಶಧಾನ್ಯಮಾಷಾ ಮಧ್ಯಮಾಃ ಸುವರ್ಣಮಾಷಕಃ । ತೇ ಷೋಡಶ ಸುವರ್ಣಂ ಅಥವಾ ಮಧ್ಯಮನಿಷ್ಪಾವಾ ಏಕೋನವಿಂಶತಿರ್ಧರಣಂ ತಾನ್ಯರ್ಧತೃತೀಯಾನಿ ಕರ್ಷಃ ಶತಶ್ಚೋರ್ಧ್ವಂ ಚತುರ್ಗುಣಮಭಿವರ್ಧಯನ್ತಃ ಪಲಕುನವಪ್ರಸ್ಥಾಢಕದ್ರೋಣಾ ಇತ್ಯಭಿನಿಷ್ಪದ್ಯನ್ತೇ ತುಲಾಪಲಶತಂ ತಾನಿ ವಿಂಶತಿರ್ಭಾರಃ । ಶುಷ್ಕಾಣಾಮಿದಂ ಮಾನಂ ಆರ್ದ್ರದ್ರವಾಣಾಂ ಚ ದ್ವಿಗುಣಮಿತಿ ॥೭॥

ಇನ್ನುಮುಂದೆ ಕಷಾಯ, ಸ್ನೇಹಗಳ ಪಾಕವಿಧಾನವನ್ನು ಉಪದೇಶಮಾಡುತ್ತೇವೆ. ಈ ವಿಚಾರವಾಗಿ ಕೆಲವರು—ತೊಗಟೆ, ಎಲೆ, ಬೇರು ಮೊದಲಾದುವುಗಳೆಲ್ಲಾ ಸೇರಿ ಒಂದು ಭಾಗಕ್ಕೆ ಅದರ ೪ ರಷ್ಟು ನೀರನ್ನು ಸುರಿದು (ಸೇರಿಸಿ) ನಾಲ್ಕರಲ್ಲಿ ಒಂದು ಭಾಗ ನಿಲ್ಲುವಂತೆ ಕಾಯಿಸಿ ಶೋಧಿಸಿಕೊಳ್ಳಬೇಕು. ಇದೇ ಕಷಾಯವನ್ನು ತಯಾರಿಸುವ ವಿಧಾನವು. ಕೈಬೆರಳುಗಳನ್ನು ಒಟ್ಟುಕೂಡಿಸಿ ಸ್ವಲ್ಪ ಅಗಲಿಸಿ ಅದು ಹಿಡಿಯುವಷ್ಟು ಸ್ನೇಹವನ್ನು ಆರಾವರ್ತಿ ಅಳೆದು ಒಂದು ಪಾತ್ರೆಗೆ ಹಾಕಿ ಅದರ ನಾಲ್ಕರಷ್ಟು ಕಷಾಯ, ಹಾಲು ಮೊದಲಾದ ದ್ರವದ್ರವ್ಯವನ್ನೂ ಸೇರಿಸಿ ನಾಲ್ಕು ತಾರೆಕಾಯಿಗಳಷ್ಟು ಪ್ರಮಾಣದ ಔಷಧಕಲ್ಕವನ್ನೂ ಸೇರಿಸಿ ಸ್ನೇಹಮಾತ್ರ ನಿಲ್ಲುವಂತೆ ಹದವರಿತು ಪಾಕಮಾಡಿ ಶೋಧಿಸಿಕೊಂಡು ಸಂಗ್ರಹಿಸಿಟ್ಟುಕೊಳ್ಳಬೇಕು. ಇದು ಸ್ನೇಹಪಾಕ ವಿಧಾನವು—ಎಂದು ಹೇಳುತ್ತಾರೆ. ಇದು ಸರಿಯಲ್ಲ, ಇದು ಶಾಸ್ತ್ರಕ್ಕೆ ವಿರುದ್ಧವಾದುದು. ಇನ್ನುಮುಂದೆ ಪಲಕುಡವಾದಿಗಳ ಪ್ರಮಾಣವನ್ನು ವಿವರಿಸುತ್ತೇವೆ. ಅವುಗಳಲ್ಲಿ ೧೨ ಧಾನ್ಯಮಾಷಗಳಿಗೆ ಒಂದು ಸುವರ್ಣಮಾಷಕವು. ಅಂತಹ ೧೬ ಸುವರ್ಣಮಾಷಕಗಳಿಗೆ ಒಂದು ಸುವರ್ಣವು. ಅಥವಾ ಒಂದು ಕರ್ಷಪ್ರಮಾಣವು. ಇನ್ನೊಂದು ಪ್ರಕಾರದ ಪ್ರಮಾಣವು ಹೇಗೆಂದರೆ ೧೨ ಮಧ್ಯಮನಿಷ್ಪಾವಗಳಿಗೆ ೧ ಸುವರ್ಣಮಾಷಕವು. ೧೯ ಸುವರ್ಣ

ಮಾಷಕಗಳಿಗೆ ಒಂದು ಧರಣವು. ೨೧/೨ ಧರಣಗಳಿಗೆ ಒಂದು ಕರ್ಷ ಪ್ರಮಾಣವು. ಇನ್ನುಮುಂದೆ ಒಂದಕ್ಕೊಂದನ್ನು ೪ ರಷ್ಟು ಹೆಚ್ಚಿಸುತ್ತಾ ಬಂದಂತೆ ಪಲ, ಕುಡವ, ಪ್ರಸ್ಥ, ಆಢಕ, ದ್ರೋಣ ಮೊದಲಾದುವುಗಳು ಉಂಟಾಗುತ್ತವೆ. ತುಲಾ ಎಂದರೆ ೧೦೦ ಪಲಗಳು, ಅವು ೨೦ಕ್ಕೆ ಭಾರವೆಂದು ಸಂಜ್ಞೆಯು, ಇದು ಒಣಗಿದ ದ್ರವ್ಯಗಳನ್ನು ತೂಕ ಮಾಡಿ ನಿರ್ದೇಶಮಾಡತಕ್ಕ ವಿಧಾನವು. ಹಸಿಯದಾದ ಮತ್ತು ದ್ರವರೂಪದ ದ್ರವ್ಯಗಳನ್ನು ಕುಡವದಿಂದ ಮುಂದೆ ಎರಡರಷ್ಟು ಪ್ರಮಾಣದಂತೆ ಪರಿಗಣಿಸಬೇಕು. ಉದಾ— ಒಣಗಿದ ಅಶ್ವಗಂಧಿಬೇರುಗಳ ಪಲಕ್ಕೆ ೧ ಕುಡವವಾದರೆ ಹಸಿಯಬೇರು ೮ ಪಲಗಳಿಗೆ ೧ ಕುಡವವೆಂದು ಪರಿಗಣಿಸಬೇಕೆಂದು ಅಭಿಪ್ರಾಯವು.

ಟಿಪ್ಪಣಿ : ವೃದ್ಧವೈದ್ಯರ ವ್ಯವಹಾರದಲ್ಲಿ ಆಡುಸೋಗೆ, ಕೊಡಸಿಗೆತೊಗಟೆ, ಬೂದುಗುಂಬಳಕಾಯಿಯತಿರುಳು, ಆಷಾಡಿಬೇರು, ಅಮೃತವಳ್ಳಿ, ಬೇವಿನತೊಗಟೆ ಇವುಗಳು ಸಮಭಾಗವಿರಬೇಕೇ ವಿನಃ ಎರಡರಷ್ಟನ್ನು ಸೇರಿಸಬಾರದು. ಮತ್ತೆ ಕೆಲವರು ಪ್ರಸ್ಥಪ್ರಮಾಣದ ವಿಷಯದಲ್ಲಿ ನೀರು, ಹಸಿಯದ್ರವ್ಯ, ದ್ರವದ್ರವ್ಯಗಳು ಪ್ರಸ್ಥಪ್ರಮಾಣವೆಂದರೆ ಕ್ರಮವಾಗಿ ३२–२೦.೧೬ ಪಲಗಳಂತೆ ಸೇರಿಸಬೇಕೆನ್ನುತ್ತಾರೆ. ೧೨ ಧಾನ್ಯ ಮಧ್ಯಮಮಾಷಗಳಿಗೆ ೧ ಸುವರ್ಣಮಾಷಕವೆಂಬ ವ್ಯವಹಾರವು. ಇದು ಸುಶ್ರುತಾಚಾರ್ಯರಿಗೆ ಸಮ್ಮತವಾದ ಮಾನವಿಧಾನವು ಆದರೆ ಕಾಳಿಂಗಮಾನವು ಚರಕಾಚಾರ್ಯರಿಗೆ ಸಮ್ಮತವಾದ ಮಾನವಿಧಾನವು. ಈ ವಿಚಾರವನ್ನು ವೈದ್ಯರು ಮುಖ್ಯವಾಗಿ ಗಮನಿಸಬೇಕು.

ತತ್ರಾನ್ಯತಮಪರಿಮಾಣಸಮ್ಮಿತಾನಾಂ ಯಥಾಯೋಗಂ ತ್ವಕ್‌ಪತ್ರಮೂಲಾದೀನಾಮಾತಪ ಪರಿಶೋಷಿತಾನಾಂ ಭೇದ್ಯಾನಿ ಖಂಡಶಚ್ಛೇದಯಿತ್ವಾ ಭೇದ್ಯಾನಣುಶೋ ಭೇದಯಿತ್ವಾವ ಕುಟ್ಯಾಷ್ಟಗುಣೇನ ಷೋಡಶಗುಣೇನ ವಾಮ್ಭಸಾಭಿಷಿಚ್ಯ ಸ್ಥಾಲ್ಯಾಂ ಚತುರ್ಭಾಗಾವಶಿಷ್ಟಂ ಕ್ವಾಥಯಿತ್ವಾಪಹರೇದಿತ್ಯೇಷ ಕಷಾಯಪಾಕಕಲ್ಪಃ । ಸ್ನೇಹಾಚ್ಚತುರ್ಗುಣೋ ದ್ರವಃ ಸ್ನೇಹ ಚತುರ್ಥಾಂಶೋ ಭೇಷಜಕಲ್ಕಸ್ತದೈಕಧ್ಯಂ ಸಂಸೃಜ್ಯ ವಿಪಚೇದಿತ್ಯೇಷ ಸ್ನೇಹಪಾಕಕಲ್ಪಃ । ಅಥವಾ ತತೋದಕದ್ರೋಣೇ ತ್ವಕ್ಪತ್ರಮೂಲಾದೀನಾಂ ತುಲಾಮಾವಾಪ್ಯ ಚತುರ್ಭಾಗಾವಶಿಷ್ಟಂ ನಿಃಕ್ವಾಥ್ಯಾಪಹರೇದಿತ್ಯೇಷ ಕಷಾಯಪಾಕಕಲ್ಪಃ ; ಸ್ನೇಹಕುಡವೇ ಭೇಷಜಪಲಂ ಪಿಷ್ಟಂ ಕಲ್ಕಂ ಚತುರ್ಗುಣಂ ದ್ರವಮಾಪ್ಯ ವಿಪಚೇದಿತ್ಯೇಷ ಸ್ನೇಹಪಾಕಕಲ್ಪಃ ||೮|| ಭವತಶ್ಚಾತ್ರ—

ಸ್ನೇಹಭೇಷಜತೋಯಾನಾಂ ಪ್ರಮಾಣಂ ಯತ್ರ ನೇರಿತಮ್ ।
ತತ್ರಾಯಂ ವಿಧಿರಾಸ್ಥೇಯೋ ನಿರ್ದಿಷ್ಟೇ ತತ್ ತದೇವ ತು ||೯||
ಅನುಕ್ತೇ ದ್ರವಕಾರ್ಯೇ ತು ಸರ್ವತ್ರ ಸಲಿಲಂ ಮತಮ್ ।
ಕಲ್ಕಕ್ವಾಥಾವನಿರ್ದೇಶೇ ಗಣಾತ್ತಸ್ಮಾತ್ ಪ್ರಯೋಜಯೇತ್ ||೧೦||

ಸುಶ್ರುತರ ಮತದಂತೆಯೇ ಪಾಕವಿಧಾನವನ್ನು ವಿವರಿಸಲಾಗುತ್ತದೆ—ಇವೆರಡು ವಿಧ ಪ್ರಮಾಣಭೇದಗಳಲ್ಲೂ ಕಲ್ಪನೆಗೆ ತಕ್ಕಂತೆ ತೊಗಟೆ, ಎಲೆ, ಬೇರು ಮೊದಲಾದು

ವನ್ನು ಬಿಸಿಲಿನಲ್ಲಿ ಒಣಗಿಸಿ ಸಣ್ಣ ಸಣ್ಣ ಚೂರಾಗಿ ಕತ್ತರಿಸಿ ಒರಳಿಗೆ ಹಾಕಿ ಹಾರೆಯಿಂದಾಗಲೀ ಒನಕೆಯಿಂದಾಗಲೀ ಕುಟ್ಟಿ (ಜಜ್ಜಿ) ೮ ರಷ್ಟು ಅಥವಾ ೧೬ ರಷ್ಟು ನೀರನ್ನು ಸೇರಿಸಿ ದೊಡ್ಡ ಗುಡಾಣಕ್ಕೆ ಅಥವಾ ಕೊಪ್ಪರಿಗೆಗೆ ತುಂಬಿ ೧/೪ ಭಾಗ ನಿಲ್ಲುವಂತೆ ಕಷಾಯವನ್ನು ಕಾಯಿಸಿ ಶೋಧಿಸಿಕೊಳ್ಳಬೇಕು. ಇದು ಕಷಾಯವನ್ನು ತಯಾರಿಸುವ ವಿಧಾನವು. ಸ್ನೇಹದ ೪ ರಷ್ಟು ದ್ರವವೂ ಸ್ನೇಹದ ೧/೪ ಭಾಗ ಕಲ್ಕವೂ ಇರಬೇಕು. ಇವೆಲ್ಲವನ್ನೂ ಒಟ್ಟುಗೂಡಿಸಿದ ಪಾತ್ರೆಯನ್ನು ಒಲೆಯಮೇಲಿಟ್ಟು ಸ್ನೇಹ ಮಾತ್ರವೇ ನಿಲ್ಲುವಂತೆ ಮಂದಾಗ್ನಿಯಿಂದ ಕುದಿಸಿ ಹದವಾಗಿ ತಯಾರಿಸಿದ ಸ್ನೇಹವನ್ನು ಬಟ್ಟೆಯಿಂದ ಶೋಧಿಸಿ ಭದ್ರವಾಗಿಡಬೇಕು. ಇದು ಸ್ನೇಹಪಾಕಮಾಡುವ ವಿಧಾನವು. ಅಥವಾ ಒಂದು ದ್ರೋಣನೀರಿಗೆ ತೊಗಟೆ, ಎಲೆ, ಬೇರುಗಳೆಲ್ಲಾ ಸೇರಿಸಿ ಕುಟ್ಟಿಹಾಕಿದ್ದು ೧೦೦ ಪಲಗಳಷ್ಟುಪುಡಿಯನ್ನು ಸೇರಿಸಿ ೧ ಆಢಕದಷ್ಟು ಕಷಾಯ ನಿಲ್ಲುವಂತೆ ಕುದಿಸಿ ಶೋಧಿಸಿಕೊಳ್ಳಬೇಕು. ಇದು ಕಷಾಯಪಾಕ ವಿಧಾನವು. ೧ ಕುಡವಸ್ನೇಹದೊಡನೆ ೧ ಪಲದ್ರವ್ಯದ ಕಲ್ಕವನ್ನೂ ೧ ಪ್ರಸ್ಥದ್ರವವನ್ನೂ ಸೇರಿಸಿ ಸ್ನೇಹ ಮಾತ್ರ ನಿಲ್ಲುವಂತೆ ಕಾಯಿಸಿ ಶೋಧಿಸಿಕೊಳ್ಳಬೇಕು. ಇದು ಸ್ನೇಹಪಾಕವನ್ನು ಮಾಡುವ ವಿಧಾನವು. ಈ ವಿಚಾರದಲ್ಲಿ ಆಧಾರ ಶ್ಲೋಕಗಳ ಅಭಿಪ್ರಾಯವೇನೆಂದರೆ—ಸ್ನೇಹ, ಭೇಷಜಕಲ್ಕ, ನೀರು ಇವುಗಳ ಪ್ರಮಾಣವನ್ನು ಹೇಳದಿದ್ದಾಗ ಈ ವಿಧಾನವನ್ನು ಅನುಸರಿಸಬೇಕು. ಪ್ರಮಾಣವನ್ನು ನಿರ್ದೇಶಮಾಡಿ ಹೇಳಿರುವಾಗ ಅದರಂತೆಯೇ ಸೇರಿಸಬೇಕು. ಕ್ವಾಥ ಮೊದಲಾದ ದ್ರವಗಳನ್ನು ನಿರ್ದೇಶಮಾಡದಿದ್ದರೆ ನೀರನ್ನೇ ಸೇರಿಸಬೇಕು. ಕಲ್ಕ ಕಷಾಯಗಳನ್ನು ನಿರ್ದೇಶ ಮಾಡದಿರುವಾಗ ಯೋಗದಲ್ಲಿ ಹೇಳಿರುವ ದ್ರವ್ಯಗಳಿಂದಲೇ ಕಲ್ಕವನ್ನೂ ಕಷಾಯವನ್ನೂ ತಯಾರಿಸಿಕೊಳ್ಳಬೇಕು.

ಅತಊರ್ಧ್ವಂ ಸ್ನೇಹಪಾಕ ಕ್ರಮಮುಪದೇಕ್ಷ್ಯಾಮಃ । ಸ ತು ತ್ರಿವಿಧಃ ತದ್ಯಥಾ:- ಮೃದುರ್ಮಧ್ಯಮಃ ಖರ ಇತಿ । ತತ್ರ ಸ್ನೇಹೌಷಧಿ ವಿವೇಕಮಾತ್ರಂ ಯತ್ರ ಭೇಷಜಂ ಸಮ್ಯಗ್ದುರಿತಿ ; ಮಧೂಚ್ಛಿಷ್ಟಮಿವ ವಿಶದಮವಿಲೇಪಿ ಭೇಷಜಂ ಯತ್ರ ಸಮಧ್ಯಮಃ ; ಕೃಷ್ಣಮರ್ವಸನ್ನಯೀಷದ್ವಿಶದಂ ಚಿಕ್ಕಣಂ ಚ ಯತ್ರ ಭೇಷಜಂ ಸ ಖರ ಇತಿ ಅತಊರ್ಧ್ವಂ ದಗ್ಧಸ್ನೇಹೋ ಭವತಿ ತಂ ಪುನಃ ಸಾಧು ಸಾಧಯೇತ್ ತತ್ರ ಪಾನಾಭ್ಯವಹಾರಯೋರ್ಮೃದುಃ ಸಸ್ಯಾಭ್ಯಙ್ಗಯೋರ್ಮಧ್ಯಮಃ ಬಸ್ತಿಕರ್ಣಪೂರಣಯೋಸ್ತು ಖರ ಇತಿ ॥೧೧॥ ಭವತಶ್ಚಾತ್ರ—

ಶಬ್ದಸ್ಯೋಪಶಮೇ ಪ್ರಾಪ್ತೇ ಫೇನಸ್ಯೋಪರಮೇ ತಥಾ ।
ಗನ್ಧವರ್ಣರಸಾದೀನಾಂ ಸಮ್ಪತ್ತೌ ಸಿದ್ಧಿಮಾದಿಶೇತ್ ॥೧೨॥
ಘೃತಸ್ಯೈವಂ ವಿಪಕ್ವಸ್ಯ ಜಾನೀಯಾತ್ ಕುಶಲೋ ಭಿಷಕ್ ।
ಫೇನೋಽತಿಮಾತ್ರಂ ತೈಲಸ್ಯ ಶೇಷಂ ಘೃತವದಾದಿಶೇತ್ ॥೧೩॥

ಇನ್ನು ಮುಂದೆ ಸ್ನೇಹಪಾಕ ಕ್ರಮವನ್ನು ಉಪದೇಶಮಾಡುತ್ತೇನೆ—ಸ್ನೇಹಪಾಕವು ಮೃದು, ಮಧ್ಯಮ, ಖರ ಎಂದು ಮೂರು ವಿಧಗಳು. ಇವುಗಳಲ್ಲಿ ಸ್ನೇಹವೂ

ಔಷಧದ್ರವ್ಯಗಳೂ ಜೇರೆಯಾಗುವಂತೆ ಕಾಯಿಸಿದರೆ ಮೃದುಪಾಕವೆಂದೂ, ಭೇಷಜ ದ್ರವ್ಯವು ಸ್ನೇಹರಹಿತವಾಗಿ ಬೆರಳಿಗೆ ಅಂಟಿಕೊಳ್ಳದೆ ಜೇನುಮೇಣದಂತೆ ಉಂಡೆಯಾದರೆ ಮಧ್ಯಮಪಾಕವೆಂದೂ ಮಡ್ಡಿಯು ಕಪ್ಪಾಗಿ ಸ್ವಲ್ಪತರಿಯಾಗಿಯೂ ಅಂಟುತ್ತಲೂ ಇದ್ದರೆ ಖರಪಾಕವೆಂದೂ ಇದಕ್ಕಿಂತಲೂ ಹೆಚ್ಚಾಗಿ ಕಾಯಿಸಿದರೆ ದಗ್ಧಪಾಕವೆಂತಲೂ ಹೆಸರು. ಆದಕಾರಣ ಸರಿಯಾಗಿ ಪಾಕವಾಗುವಂತೆ ಎಚ್ಚರಿಕೆಯಿಂದಿರಬೇಕು. ಇವುಗಳಲ್ಲಿ ಮೃದು ಪಾಕವುಳ್ಳ ಸ್ನೇಹವನ್ನು ಪಾನ ಆಹಾರಗಳೊಡನೆ ಸೇವಿಸುವುದಕ್ಕೂ, ಮಧ್ಯಮಪಾಕದ ಸ್ನೇಹವನ್ನು ನಸ್ಯ ಮತ್ತು ಅಭ್ಯಂಗಗಳಿಗೂ ಉಪಯೋಗಿಸಬೇಕು. ಖರಪಾಕದಿಂದ ತಯಾರಿಸಿದ ಸ್ನೇಹವನ್ನು ಬಸ್ತಿಕರ್ಮಗಳಿಗೂ ಕರ್ಣಪೂರಣೆಗೂ ಉಪಯೋಗಿಸಬೇಕು. ಸ್ನೇಹಪಾಕ ನಿರ್ಣಯದಲ್ಲಿ ಉದಾಹೃತವಾಗಿರುವ ಶ್ಲೋಕಗಳ ಅಭಿಪ್ರಾಯವೇನೆಂದರೆ— ಸ್ನೇಹಪಾಕಮಾಡುವಾಗ ಕುದಿಯುವುದರಿಂದ ಉಂಟಾಗುವ ಚಟಪಟ ಶಬ್ದವು ನಿಲ್ಲ ಬೇಕು. ಹಾಗೆಯೇ ನೊರೆಯೂ ಅಡಗಿ ಸುವಾಸನೆ, ಸರಿಯಾದ ಬಣ್ಣ ಮತ್ತು ರುಚಿಗಳುಂಟಾದರೆ ಸ್ನೇಹವು ಸರಿಯಾಗಿ ತಯಾರಾಗಿರುತ್ತದೆಂದು ನಿರ್ಧರಿಸಬೇಕು. ಈ ಪರೀಕ್ಷೆಯು ಘೃತಪಾಕಕ್ಕೆಂದು ವೈದ್ಯರು ತಿಳಿಯಬೇಕು. ಆದರೆ ತೈಲಪಾಕದಲ್ಲಿ ನೊರೆಯು ಅತಿಯಾಗಿ ಮೇಲೆ ಕಾಣಿಸಿಕೊಂಡು ಘೃತಪಾಕದಂತೆಯೇ ಗಂಧ, ವರ್ಣ, ರಸಗಳೂ ಸರಿಯಾಗಿರಬೇಕಾಗಿರುವುದು ಆವಶ್ಯಕವೆಂಬುದನ್ನು ಗಮನಿಸಬೇಕು.

ಅತಊರ್ಧ್ವಂ ಸ್ನೇಹಪಾನಕ್ರಮಮುಪದೇಕ್ಷ್ಯಾಮಃ। ಅಥ ಲಘುಕೋಷ್ಠಾಯಾತುರಾಯ ಕೃತಮಙ್ಗಳಸ್ವಸ್ತಿವಾಚನಾಯೋದಯಗಿರಿ ಶಿಖರಸಂಸ್ಥಿತೇ ಪ್ರತಪ್ತಕನಕನಿಕರಪೀತಲೋಹಿತೇ ಸವಿತರಿ ಯಥಾಬಲಂ ತೈಲಸ್ಯಘೃತಸ್ಯ ವಾ ಮಾತ್ರಾಂ ಪಾತುಂ ಪ್ರಯಚ್ಛೇತ್ । ಪೀತ ಮಾತ್ರೇ ಚೋಷ್ಣೋದಕೇನೋಪಸ್ಪೃಶ್ಯ ಸೋಪಾನತ್ಕೋ ಯಥಾಸುಖಂ ವಿಹರೇತ್ ||೧೪||

ಇನ್ನು ಮುಂದೆ ಸ್ನೇಹಪಾನಕ್ರಮವನ್ನು ತಿಳಿಯಪಡಿಸುತ್ತೇವೆ—ಲಘುಕೋಷ್ಠ ವುಳ್ಳ ರೋಗಿಗೆ ಶುಭದಿವಸ ಪ್ರಾತಃಕಾಲದಲ್ಲಿ ಮಂಗಳಕರಗಳಾದ ಸ್ವಸ್ತಿಪುಣ್ಯಾಹ ವಾಚನ ಗಳನ್ನು ಮಾಡಿಸಿ ಬ್ರಾಹ್ಮಣದಿಂದ ಆಶೀರ್ವಾದಮಾಡಿಸಿ ಪೂರ್ವದಿಕ್ಕಿನಲ್ಲಿ ಸೂರ್ಯನು ಉದಯಿಸುತ್ತಾ ಕರಗಿದ ಸುವರ್ಣವು ಹರಿಯುತ್ತಿರುವಾಗ ಕಾಣುವಂತೆ ಹಳದಿ ಮತ್ತು ರಕ್ತಮಿಶ್ರವಾದ ಬಣ್ಣದಿಂದ ಪ್ರಕಾಶಿಸುತ್ತಿರುವಾಗ (ಅರ್ಧಭಾಗ ಸೂರ್ಯಬಿಂಬವು ಮೇಲೆ ಕಾಣಿಸುತ್ತಿರುವಾಗ) ರೋಗಿಗೆ ಶಕ್ತಿಗೆ ತಕ್ಕಷ್ಟು ಪ್ರಮಾಣದಿಂದ ಘೃತವನ್ನಾಗಲೀ ತೈಲವನ್ನಾಗಲೀ ಕುಡಿಸಿ ಕೂಡಲೇ ಬಿಸಿನೀರನ್ನು ಕುಡಿಸಿ ಮುಖವನ್ನು ತೊಳೆಯಿಸಿ ಕಾಲುಗಳಿಗೆ ಪಾದರಕ್ಷೆಗಳನ್ನು ಮೆಟ್ಟಿಸಿ ಅಲ್ಲಲ್ಲೇ ತಿರುಗಾಡಿಸುತ್ತಿರಬೇಕು.

ರೂಕ್ಷಕ್ಷತವಿಷಾರ್ತಾನಾಂ ವಾತಪಿತ್ತವಿಕಾರಿಣಾಮ್ ।
ಹೀನಮೇಧಾಸ್ಮೃತೀನಾಂ ಚ ಸರ್ಪಿಃ ಪಾನಂ ಪ್ರಶಸ್ಯತೇ ||೧೫||
ಕ್ರಿಮಿಕೋಷ್ಠಾನಿಲಾವಿಷ್ಟಾಃ ಪ್ರವೃದ್ಧ ಕಫಮೇದಸಃ ।

ವಿಧೇಯುಸ್ತೈಲಸಾತ್ಮ್ಯಾಶ್ಚ ತೈಲಂ ದಾರ್ಢ್ಯಾರ್ಥಿನಸ್ತು ಯೇ ||೧೬||
ವ್ಯಾಯಾಮಕರ್ಶಿತಾಃ ಶುಷ್ಕರೇತೋರಕ್ತಾ ಮಹಾರುಜಃ |
ಮಹಾಗ್ನಿಮಾರುತಪ್ರಾಣಾ ವಸಾಯೋಗ್ಯಾ ನರಾಃ ಸ್ಮೃತಾಃ ||೧೭||
ಕ್ರೂರಾಶಯಾಃ ಕ್ಲೇಶಸಹಾ ವಾತಾರ್ತಾ ದೀಪ್ತವಹ್ನಯಃ |
ಮಜ್ಜಾನಮಾಪ್ನುಯುಸ್ಸರ್ವೇ ಸರ್ಪಿರ್ವಾ ಸೌಷಧಾನ್ವಿತಮ್ ||೧೮||
ಕೇವಲಂ ಪೈತ್ತಿಕೇ ಸರ್ಪಿರ್ವಾತಿಕೇ ಲವಣಾನ್ವಿತಮ್ |
ದೇಯಂ ಬಹುಕಫೇ ಚಾಪಿ ವ್ಯೋಷಕ್ಷಾರಸಮಾಯುತಮ್ ||೧೯||

ರೂಕ್ಷದೇಹವುಳ್ಳವರೂ ಉರಃಕ್ಷತ ಮತ್ತು ವಿಷದಿಂದ ಪೀಡಿತರಾದವರೂ ವಾತ ಪಿತ್ತ ರೋಗಿಗಳೂ ಬುದ್ಧಿಶಕ್ತಿ ಜ್ಞಾಪಕಶಕ್ತಿಗಳು ಕಡಮೆಯಾಗಿರುವವರೂ ಘೃತವನ್ನು ಪಾನಮಾಡುವುದು ಶ್ರೇಷ್ಠವು. ಕ್ರಿಮಿಕೋಷ್ಠವುಳ್ಳವರೂ ವಾತರೋಗಿಗಳೂ ದೇಹದಾರ್ಢ್ಯ ವನ್ನು ಅಪೇಕ್ಷಿಸತಕ್ಕವರೂ ಕಫವೂ ಮೇದಸ್ಸೂ ವೃದ್ಧಿಯಾಗಿ ಪೀಡಿತರಾದವರೂ ತೈಲವು ಒಗ್ಗಿರುವವರೂ ತೈಲವನ್ನು ಪಾನಮಾಡಬೇಕು. ವ್ಯಾಯಾಮ ಮಾಡಿ ದೇಹಕ್ಷೀಣ ರಾಗಿರುವವರೂ ರಕ್ತ ಮತ್ತು ಶುಕ್ರಧಾತುಗಳು ಒಣಗಿರುವವರೂ ಮಹಾರೋಗ ಪೀಡಿ ತರೂ, ಅತ್ಯಗ್ನಿ, ಅತಿವಾತರೋಗ, ಅತಿಬಲಿಷ್ಠರೂ, ವಸಾಪಾನಕ್ಕೆ ಯೋಗ್ಯರೆಂದು ತಿಳಿಯಬೇಕು. ಕ್ರೂರಕೋಷ್ಠವುಳ್ಳವರೂ ಕ್ಲೇಶಸಹನೆ ಮಾಡತಕ್ಕವರೂ ವಾತಪೀಡಿ ತರೂ ಅಗ್ನಿ ದೀಪ್ತಿಯುಳ್ಳವರೂ ಮಜ್ಜಪಾನವನ್ನಾಗಲೀ ಔಷಧಮಿಶ್ರಮಾಡಿದ ಘೃತವ ನ್ನಾಗಲೀ ಪಾನಮಾಡಬೇಕು. ಪಿತ್ತದೋಷವುಳ್ಳವರು ಬರೀತುಪ್ಪವನ್ನೂ ವಾತಪೀಡಿ ತರೂ ಸೈಂಧವ ಮಿಶ್ರಮಾಡಿದ ತುಪ್ಪವನ್ನೂ ಬಹು ಕಫಪೀಡಿತರು ತ್ರಿಕಟು ಮತ್ತು ಯವಕ್ಷಾರ ಮಿಶ್ರಮಾಡಿದ ಘೃತವನ್ನೂ ಪಾನಮಾಡಬೇಕು.

ದೋಷಾಣಾಮಲ್ಪಭೂಯಸ್ತ್ವಂ ಸಂಸರ್ಗಂ ಸಮವೇಕ್ಷ್ಯ ಚ |
ಯುಞ್ಜ್ಯಾತ್ ತ್ರಿಷಷ್ಟಿಧಾಭಿನ್ನೈಃ ಸಮಾಸವ್ಯಾಸತೋ ರಸೈಃ ||೨೦||
ಸ್ನೇಹಸಾತ್ಮ್ಯಃ ಕ್ಲೇಶಸಹಃ ಕಾಲೇ ನಾತ್ಯುಷ್ಣಶೀತಲೇ |
ಅಚ್ಛಮೇವ ಪಿಬೇತ್ಸ್ನೇಹಮಚ್ಛಪಾನಂ ಹಿ ಪೂಜಿತಮ್ ||೨೧||
ಶೀತಕಾಲೇ ದಿವಾ ಸ್ನೇಹಮುಷ್ಣಕಾಲೇ ಪಿಬೇನ್ನಿಶಿ |
ವಾತಪಿತ್ತಾಧಿಕೇ ರಾತ್ರೌ ವಾತಶ್ಲೇಷ್ಮಾಧಿಕೇ ದಿವಾ ||೨೨||
ವಾತಪಿತ್ತಾಧಿಕಸ್ಯೋಷ್ಣೇ ತೃಣ್ಮೂರ್ಛೋನ್ಮಾದಕಾರಕಃ |
ಶೀತೇ ವಾತಕಫಾರ್ತಸ್ಯ ಗೌರವಾರುಚಿಶೂಲಕೃತ್ ||೨೩||
ಸ್ನೇಹಪೀತಸ್ಯ ಚೇತ್ತೃಷ್ಣಾ ಪಿಬೇದುಷ್ಣೋದಕಂ ನರಃ |
ಏವಂ ಚಾನುಪಶಾಮ್ಯನ್ತ್ಯಾಂ ಸ್ನೇಹಮುಷ್ಣಾಮ್ಬುನಾ ವಮೇತ್ ||೨೪||
ದಿಷ್ಟ್ಯಾಚ್ಛೀತೈಃ ಶಿರಃ ಶೀತಂ ತೋಯಂ ಚಾಪ್ಯವಗಾಹಯೇತ್ |
ಯಾ ಮಾತ್ರಾ ಪರಿಜೀರ್ಯೇತ ಚತುರ್ಭಾಗಗತೇಽಹನಿ ||೨೫||
ಸಾ ಮಾತ್ರಾ ದೀಪಯತ್ಯಗ್ನಿಮಲ್ಪದೋಷೇ ಚ ಪೂಜಿತಾ |

ಯಾ ಮಾತ್ರಾ ಪರಿಜೀರ್ಯೇತ ತಥಾರ್ಧದಿವಸೇ ಗತೇ ||೧೬||
ಸಾ ವೃಷ್ಯಾ ಬೃಂಹಣೀ ಚೈವ ಮಧ್ಯದೋಷೇ ಚ ಪೂಜಿತಾ |
ಯಾ ಮಾತ್ರಾ ಪರಿಜೀರ್ಯೇತ ಚತುರ್ಭಾಗಾವಶೇಷಿತೇ ||೧೭||
ಸ್ನೇಹನೀಯಾ ಚ ಯಾ ಮಾತ್ರಾ ಬಹುದೋಷೇ ಚ ಪೂಜಿತಾ |
ಯಾ ಮಾತ್ರಾ ಪರಿಜೀರ್ಯೇತ್ತು ತಥಾ ಪರಿಣತೇಽಹನಿ ||೧೮||
ಗ್ಲಾನಿಮೂರ್ಛಾಮದಾನ್ ಹಿತ್ವಾ ಸಾ ಮಾತ್ರಾಪೂಜಿತಾ ಭವೇತ್ |
ಅಹೋರಾತ್ರಾದಸನ್ದುಷ್ಟಾ ಯಾ ಮಾತ್ರಾ ಪರಿಜೀರ್ಯತಿ ||೧೮||
ಸಾ ತು ಕುಷ್ಠವಿಷೋನ್ಮಾದಗ್ರಹಾಪಸ್ಮಾರನಾಶಿನೀ |
ಯಥಾಗ್ನಿ ಪ್ರಥಮಾಂ ಮಾತ್ರಾಂ ಪಾಯಯೇತ ವಿಚಕ್ಷಣಃ ||೨೦||
ಪೀತೋ ಹ್ಯತಿಬಹುಸ್ನೇಹೋ ಜನಯೇತ್ ಪ್ರಾಣಸಂಶಯಮ್ |
ಮಿಥ್ಯಾಚಾರಾದ್ಬಹುತ್ವಾದ್ವಾ ಯಸ್ಯ ಸ್ನೇಹೋ ನ ಜೀರ್ಯತಿ ||೨೧||
ವಿಷ್ಟಭ್ಯ ಚಾಪಿ ಜೀರ್ಯೇತ್ತಂ ವಾರಿಣೋಷ್ಣೇನ ವಾಮಯೇತ್ |
ಜೀರ್ಣಾಜೀರ್ಣವಿಶಙ್ಕಾಯಾಂ ಸ್ನೇಹಸ್ಯೋಷ್ಣೋದಕಂ ಪಿಬೇತ್ ||೨೨||
ತೇನೋದ್ಗಾರೋ ಭವೇಚ್ಛುದ್ಧೋ ಭಕ್ತಂ ಪ್ರತಿ ರುಚಿಸ್ತಥಾ |
ಸ್ಯಃ ಪಚ್ಯಮಾನೇ ತೃಡ್ದಾಹಭ್ರಮಸಾದಾರತಿಕ್ಲಮಾಃ ||೨೩||
ಪರಿಪಿಬ್ಯಾದ್ಭಿರುಷ್ಣಾಭಿರ್ಜೀರ್ಣಸ್ನೇಹಂ ತತೋ ನರಮ್ |
ಯವಾಗೂಂ ಪಾಯಯೇಚ್ಚೋಷ್ಣಾಂ ಕಾಮಂ ಕ್ಲಿನ್ನಾಲ್ಪತಣ್ಡುಲಾಮ್ ||೨೪||
ದೇಯೌ ಯೂಷರಸೌ ವಾಪಿ ಸುಗನ್ಧೀ ಸ್ನೇಹವರ್ಜಿತೌ |
ಕೃತೌ ವಾತ್ಯಲ್ಪಸರ್ಪಿಷ್ಕೌ ಯವಾಗೂರ್ವಾ ವಿಧೀಯತೇ ||೨೫||
ಪಿಬೇತ್ ತ್ರ್ಯಹಂ ಚತುರಹಂ ಪಞ್ಚಾಹಂ ಷಡಹಂ ತಥಾ |
ಸಪ್ತರಾತ್ರಾತ್ಪರಂ ಸ್ನೇಹಃ ಸಾತ್ಮ್ಯೀಭವತಿ ಸೇವಿತಃ ||೨೬||
ಸುಕುಮಾರಂ ಕೃಶಂ ವೃದ್ಧಂ ಶಿಶುಂ ಸ್ನೇಹದ್ವಿಷಂ ತಥಾ |
ತೃಷ್ಣಾರ್ತಮುಷ್ಣ ಕಾಲೇ ಚ ಸಹಭಕ್ತೇನ ಪಾಯಯೇತ್ ||೨೭||
ಪಿಪ್ಪಲ್ಯೋ ಲವಣಂ ಸ್ನೇಹಾಶ್ಚತ್ವಾರೋ ದಧಿ ಮಸ್ತುಕಃ |
ಪೀತಮೇಕತ್ರ ಮೇತದ್ಧಿ ಸದ್ಯಃ ಸ್ನೇಹನಮುಚ್ಯತೇ ||೨೮||
ಭೃಷ್ಟಮಾಂಸರಸೇ ಸ್ನಿಗ್ಧಾ ಯವಾಗೂಃ ಸೂಪಕಲ್ಪಿತಾ |
ಸಕ್ಷುದ್ರಾ ಪೀಯಮಾನಾ ತು ಸದ್ಯಃ ಸ್ನೇಹನಮುಚ್ಯತೇ ||೨೯||
ಸರ್ಪಿಷ್ಮತೀ ಪಯಃಸಿದ್ಧಾ ಯವಾಗೂಃ ಸ್ವಲ್ಪತಣ್ಡುಲಾ |
ಸುಖೋಷ್ಣಾ ಸೇವ್ಯಮಾನಾ ತು ಸದ್ಯಃ ಸ್ನೇಹನಮುಚ್ಯತೇ ||೩೦||
ಶರ್ಕರಾಚೂರ್ಣಸಂಸೃಷ್ಟೇ ದೋಹನಸ್ಥೇ ಘೃತೇ ತು ಗಾಮ್ |
ದುಗ್ಧ್ವಾ ಕ್ಷೀರಂ ಪಿಬೇದ್ರೂಕ್ಷಃ ಸದ್ಯಃ ಸ್ನೇಹನಮುಚ್ಯತೇ ||೩೧||
ಯವಕೋಲಕುಳತ್ಥಾನಾಂ ಕ್ವಾಥೋ ಭಾಗತ್ರಯಾನ್ವಿತಃ
ಪಯೋದಧಿಸುರಾಕ್ಷೀರಘೃತಭಾಗೈಃ ಸಮನ್ವಿತಃ ||೩೨||

ಸಿದ್ಧಮೇತೈರ್ಘೃತಂ ಪೀತಂ ಸದ್ಯಃ ಸ್ನೇಹನಮುತ್ತಮಮ್ ।
ರಾಜ್ಞೇ ರಾಜಸಮೇಭ್ಯೋವಾ ದೇಯಮೇತದ್ಘೃತೋತ್ತಮಮ್ ॥೪೩॥
ಬಲಹೀನೇಷು ವೃದ್ಧೇಷು ಮೃದ್ವಗ್ನಿಸ್ತ್ರೀಮಹಾತ್ಮಸು ।
ಅಲ್ಪದೋಷೇಷು ಯೋಜ್ಯಾಃ ಸ್ಯುರ್ಯೋ ಯೋಗಾಃ ಸಮ್ಯಗೀರಿತಾಃ ॥೪೪॥

ದೋಷಗಳ ಹೆಚ್ಚು ಕಡಿಮೆಗಳನ್ನೂ ಸಂಸರ್ಗಗಳನ್ನೂ ವಿಮರ್ಶೆಮಾಡಿ ಅವುಗಳ ೬೩ ವಿಧಗಳಿಗೂ ಷಡ್ರಸದ್ರವ್ಯಗಳಲ್ಲಿ ಪ್ರತ್ಯೇಕ ರಸ ಮತ್ತು ಮಿಶ್ರರಸಗಳುಳ್ಳ ದ್ರವ್ಯಗಳ ೬೩ ವಿಧಾನಗಳನ್ನೂ ತುಲನೆಮಾಡಿ ಸ್ನೇಹವನ್ನು ಪ್ರಯೋಗಿಸಿ ದೋಷಸಾಮ್ಯತೆಯನ್ನು ಉಂಟುಮಾಡಬೇಕು. ಮೇಲೆ ಹೇಳಿದ ೬೩ ರಸಭೇದ ದ್ರವ್ಯಗಳೊಡನೆ ಮಿಶ್ರಮಾಡಿದ ಸ್ನೇಹಪ್ರಯೋಗಕ್ಕೆ "ವಿಚಾರಣೆಗಳೆಂದೂ" ಬರಿಯದಾದ ಸ್ನೇಹಸೇವನೆಗೆ "ಅಚ್ಛಪಾನವೆಂದೂ" ಸಂಜ್ಞೆ. ಸ್ನೇಹವನ್ನು ಅಭ್ಯಾಸದಿಂದ ಒಗ್ಗಿಸಿಕೊಂಡಿರುವವರೂ ಕಷ್ಟಸಹನೆ ಮಾಡುವವರೂ ಅತಿ ಬೇಸಿಗೆಯೂ ಅಲ್ಲದೆ ಅತಿ ಚಳಿಯೂ ಅಲ್ಲದೆ ಸಾಧಾರಣ ಕಾಲದಲ್ಲಿ ಅಚ್ಛಸ್ನೇಹವನ್ನೇ ಕುಡಿಯಬೇಕು. ಈ ಅಚ್ಛಸ್ನೇಹಪಾನವೇ ಶ್ರೇಷ್ಠವಾದದ್ದು. ಶೀತಕಾಲದಲ್ಲಿ ಹಗಲು ಹೊತ್ತಿನಲ್ಲೂ, ಬೇಸಿಗೆಯಲ್ಲಿ ರಾತ್ರಿಯಕಾಲದಲ್ಲೂ ಸ್ನೇಹಪಾನವನ್ನು ಮಾಡಬೇಕು. ವಾತಪಿತ್ತಗಳು ಅಧಿಕವಾಗಿದ್ದರೆ ರಾತ್ರಿಯಲ್ಲೂ ವಾತಕಫಗಳು ವೃದ್ಧಿಯಾಗಿದ್ದರೆ ಹಗಲು ಕಾಲದಲ್ಲೂ ಸ್ನೇಹವನ್ನು ಪಾನಮಾಡಬೇಕು. ವಾತಪಿತ್ತ ವೃದ್ಧಿಯಾಗಿರುವವನಿಗೆ ಉಷ್ಣಕಾಲದಲ್ಲಿ ಸ್ನೇಹಪಾನವನ್ನು ಮಾಡಿಸುವುದರಿಂದ ಬಾಯಾರಿಕೆ, ಮೂರ್ಛೆ, ಉನ್ಮಾದ ಇವುಗಳುಂಟಾಗುತ್ತವೆ. ವಾತ ಕಫ ಪೀಡಿತನಿಗೆ ಶೀತಕಾಲದಲ್ಲಿ ಸ್ನೇಹಪಾನಮಾಡಿಸಿದರೆ ಮೈಭಾರ, ಅರೋಚಕತೆ, ಶೂಲೆ ಇವುಗಳು ಉಂಟಾಗುತ್ತವೆ. ಸ್ನೇಹಪಾನ ಮಾಡಿದವನಿಗೆ ಬಾಯಾರಿದರೆ ಬಿಸಿ ನೀರನ್ನು ಕುಡಿಸಬೇಕು. ಹೀಗೆ ಮಾಡಿದರೂ ನೀರಡಿಕೆಯು ಕಡಮೆಯಾಗದಿದ್ದರೆ ಬಿಸಿನೀರಿಗೆ ಸ್ನೇಹಮಿಶ್ರಮಾಡಿ ಕುಡಿಸಿ ವಮನಮಾಡಿಸಿ ತಣ್ಣಗಿರುವ ಕಲ್ಕದಿಂದ ತಲೆಗೆ ಲೇಪನಮಾಡಿಸಿ ತಣ್ಣೀರಿನಲ್ಲಿ ಕೂರಿಸಬೇಕು. ಹಗಲಿನ ಮೊದಲನೆಯ ಯಾಮದಲ್ಲಿ ಜೀರ್ಣವಾಗುವಷ್ಟು ಪ್ರಮಾಣದ ಸ್ನೇಹಪಾನದಿಂದ ಅಗ್ನಿದೀಪನವುಂಟಾಗುತ್ತದೆ. ಇದು ಅಲ್ಪದೋಷದವರಿಗೆ ಹಿತಕರವಾದದ್ದು. ಅರ್ಧದಿವಸದಲ್ಲಿ ಜೀರ್ಣವಾಗುವಷ್ಟು ಪ್ರಮಾಣದಿಂದ ಸ್ನೇಹಪಾನ ಮಾಡಿದರೆ ಶುಕ್ರವೃದ್ಧಿಯಾಗಿ ದೇಹವು ದಪ್ಪವಾಗುತ್ತದೆ. ಇದು ಮಧ್ಯದೋಷವುಳ್ಳವರಿಗೆ ಹಿತಕರವಾದದ್ದು. ಹಗಲು ಪೂರ್ತಿಯಾಗುವಷ್ಟುಕಾಲ (೪ ಯಾಮುಗಳಲ್ಲಿ) ದಲ್ಲಿ ಜೀರ್ಣವಾಗುವಷ್ಟು ಪ್ರಮಾಣದ ಸ್ನೇಹಪಾನಕ್ಕೆ ಉತ್ತಮ ಮಾತ್ರೆಯೆಂದು ಹೆಸರು. ಇದು ಬಹುದೋಷವುಳ್ಳವರು ಸೇವಿಸಲು ಯೋಗ್ಯವಾದ ಸ್ನೇಹದ ಪ್ರಮಾಣವು. ಮತ್ತು ಹಗಲು ಮುಗಿಯುವಷ್ಟರಲ್ಲಿ ಜೀರ್ಣಿಸುತ್ತದೆ. ಇದರಿಂದ ಇಂದ್ರಿಯಾಯಾಸ (ಗ್ಲಾನಿ), ಮೂರ್ಛೆ, ಮದ (ಮತ್ತತೆ) ಇವು ನಿವಾರಣೆಯಾಗುತ್ತವೆ. ಒಂದು ಹಗಲೂ ಮತ್ತು ಒಂದು ರಾತ್ರಿಯ (೮ ಯಾಮುಗಳಲ್ಲಿ) ಕಾಲದಲ್ಲಿ ಜೀರ್ಣಿಸುವಷ್ಟು

ಪ್ರಮಾಣದ ಸ್ನೇಹವು ಉತ್ತಮ ಮಾತ್ರೆಯು (ಉತ್ಕೃಷ್ಟ). ಇದರಿಂದ ಕುಷ್ಠ, ವಿಷ, ಉನ್ಮಾದ, ದುಷ್ಟಗ್ರಹಪೀಡೆ, ಅಪಸ್ಮಾರ ಇವುಗಳು ನಿವಾರಣೆಯಾಗುತ್ತವೆ. ಬುದ್ಧಿವಂತನಾದ ವೈದ್ಯನು ರೋಗಿಯ ಅಗ್ನಿಶಕ್ತಿಗೆ ತಕ್ಕಂತೆ ಮೊದಲನೆಯ ಹ್ರಸ್ವಮಾತ್ರೆಯ ಸ್ನೇಹವನ್ನು ಪಾನಮಾಡಿಸಬೇಕು. ಅತಿಯಾದ ಪ್ರಮಾಣದ (ಉತ್ಕೃಷ್ಟ) ಸ್ನೇಹ ಪಾನದಿಂದ ಪ್ರಾಣನಾಶವುಂಟಾಗುವ ಭಯವೂ ಉಂಟು. ಮಿಥ್ಯಾಚರಣೆಯಿಂದಲೂ ಸ್ನೇಹವು ಅಧಿಕಪ್ರಮಾಣವಿರುವುದರಿಂದಲೂ ಯಾರಿಗೆ ಸ್ನೇಹವು ಜೀರ್ಣಿಸುವುದಿಲ್ಲವೋ ಮಲರೋಧನವನ್ನುಂಟುಮಾಡಿಯಾಗಲೀ ಜೀರ್ಣಿಸುತ್ತದೋ ಅಂಥವರಿಗೆ ಬಿಸಿನೀರನ್ನು ಕುಡಿಸಿ ವಮನಮಾಡಿಸಬೇಕು. ಪಾನಮಾಡಿದ ಸ್ನೇಹವು ಜೀರ್ಣಿಸಿದೆಯೋ ಇಲ್ಲವೋ ಎಂದು ಸಂದೇಹವುಂಟಾದರೆ ಬಿಸಿನೀರನ್ನು ಕುಡಿಸಬೇಕು. ಅದರಿಂದ ತೇಗು ಶುದ್ಧವಾಗಿ ಬರುತ್ತದೆ (ಸ್ನೇಹದವಾಸನೆ ಇರುವುದಿಲ್ಲ). ಅನ್ನದಲ್ಲಿ ರುಚಿಯುಂಟಾಗುತ್ತದೆ. ಸ್ನೇಹವು ಜೀರ್ಣಿಸುತ್ತಿರುವಾಗ ನೀರಡಿಕೆ ಮೈ ಉರಿತ ತಲೆತಿರುಗುವಿಕೆ ಅಂಗಕ್ಷೀಣತೆ ಬೇಜಾರು (ಯಾವ ಕೆಲಸಮಾಡುವುದಕ್ಕೂ ಉತ್ಸಾಹವಿಲ್ಲದಿರುವಿಕೆ) ಆಯಾಸ ಇವುಗಳುಂಟಾಗುತ್ತವೆ. ಸ್ನೇಹವು ಜೀರ್ಣಿಸಿದ ಮೇಲೆ ಬಿಸಿನೀರಿನಿಂದ ರೋಗಿಗೆ ಸ್ನಾನಮಾಡಿಸಿ ಸ್ವಲ್ಪವೇ ಅಕ್ಕಿಯನ್ನು ಸೇರಿಸಿ ತಯಾರಿಸಿದ ಬಿಸಿಯಾದ ಯವಾಗೂವನ್ನು ಬೇಕಾದಷ್ಟು ಪ್ರಮಾಣದಿಂದ ಕುಡಿಸಬೇಕು. ಅಥವಾ ಸ್ನೇಹವನ್ನು ಸೇರಿಸದೆ ಸುವಾಸನೆಯುಳ್ಳ ಯೂಷ (ಹುರುಳಿ, ಹೆಸರು ಕಟ್ಟು) ಬಿಸಿಯಾದ ಮಾಂಸರಸವನ್ನಾಗಲೀ ಅಥವಾ ಸ್ವಲ್ಪವೇ (ಜಿಡ್ಡನ್ನು) ಸ್ನೇಹ ಮಿಶ್ರಮಾಡಿದ ಯವಾಗೂವನ್ನಾಗಲೀ ಕುಡಿಸಬೇಕು. ಈ ವಿಧಾನದಿಂದ ೩, ೪, ೫, ೬, ದಿನಗಳು ಸ್ನೇಹಪಾನವನ್ನು ಮಾಡಿಸಬೇಕು. ೭ ದಿವಸಗಳಿಗಿಂತಲೂ ಹೆಚ್ಚು ದಿವಸ ಸ್ನೇಹಪಾನಮಾಡಿಸಿದರೆ ಸಾತ್ಮ್ಯವಾಗುತ್ತದೆ (ವಗ್ಗಿಬಿಡುತ್ತದೆ). ಸುಕುಮಾರ ದೇಹವುಳ್ಳವರೂ ಕ್ಷೀಣದೇಹದವರೂ ಮುದುಕರೂ ಮಕ್ಕಳೂ ಸ್ನೇಹದ್ವೇಷಿಗಳೂ ಬಾಯಾರಿಕೆಯುಳ್ಳವರೂ ಇವರಿಗೆ ಬಿಸಲುಕಾಲದಲ್ಲೂ ಅನ್ನದೊಡನೆಯೇ ಸ್ನೇಹವನ್ನು ಮಿಶ್ರಮಾಡಿ ಭೋಜನಮಾಡಿಸಬೇಕು. ಹಿಪ್ಪಲಿ, ಸೈಂಧವಲವಣ, ನಾಲ್ಕುವಿಧ ಸ್ನೇಹಗಳು ಮೊಸರಿನಕಟ್ಟು ಇವೆಲ್ಲವನ್ನೂ ಒಟ್ಟು ಸೇರಿಸಿ ಕುಡಿಸಿದರೆ ಸದ್ಯಸ್ನೇಹನವುಂಟಾಗುತ್ತದೆ. ಹುರಿದ ಮಾಂಸರಸದಿಂದ ಸರಿಯಾಗಿ ತಯಾರಿಸಿದ ಯವಾಗೂವಿಗೆ ಅಲ್ಪಪ್ರಮಾಣದ ಸ್ನೇಹವನ್ನು ಸೇರಿಸಿ ಕುಡಿಸಿದರೆ ಸದ್ಯಸ್ನೇಹನವುಂಟಾಗುತ್ತದೆ. ಹಾಲಿನಲ್ಲಿ ಸ್ವಲ್ಪ ಪ್ರಮಾಣದ ಅಕ್ಕಿಯನ್ನು ಸೇರಿಸಿ ತಯಾರಿಸಿದ ಯವಾಗೂವಿಗೆ ತುಪ್ಪವನ್ನು ಮಿಶ್ರಮಾಡಿ ಸುಖೋಷ್ಣವಾಗಿ ಸೇವಿಸಿದರೆ ಸದ್ಯಸ್ನೇಹವು ಉಂಟಾಗುತ್ತದೆ. ರೂಕ್ಷದೇಹದವರಿಗೆ ಸಕ್ಕರೆ ಹಾಕಿದ ಪಾತ್ರೆಯೊಳಕ್ಕೆ ಹಸುವಿನ ಹಾಲನ್ನು ಕರೆಯಿಸಿ ಕುಡಿಸಿದರೆ ಸದ್ಯಸ್ನೇಹನವಾಗುತ್ತದೆ. ಯವಧಾನ್ಯ, ಎಲಚೀಹಣ್ಣು, ಹುರುಳಿ ಇವುಗಳ ಕಟ್ಟು ಮೂರುಭಾಗಕ್ಕೆ ಒಂದುಭಾಗದಷ್ಟು ಹಾಲು, ಮೊಸರು, ಮದ್ಯ, ಹಾಲಿನಿಂದ ತೆಗೆದ ಬೆಣ್ಣೆಗಳನ್ನು ಮಿಶ್ರಮಾಡಿ) ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ಶ್ರೇಷ್ಠವಾದ

ಸದ್ಯಸ್ನೇಹನೌಷಧಿಯು. ದುರ್ಬಲರು, ವೃದ್ಧರು, ಮಂದಾಗ್ನಿಗಳು, ಸ್ತ್ರೀಯರು (ಬಲಿಷ್ಠರು) ಮಹಾತ್ಮರು, ಅಲ್ಪದೋಷವುಳ್ಳವರು ಇವರುಗಳಿಗೆ ಯೋಗ್ಯಗಳಾದ ಸ್ನೇಹಪಾನ ಯೋಗಗಳನ್ನೆಲ್ಲಾ ವಿವರಿಸಿ ಹೇಳಿರುತ್ತೇವೆ. (ಬುದ್ಧಿಶಾಲಿಯಾದ ವೈದ್ಯನು ಯಾರು ಯಾರಿಗೆ ಯಾವ ಯಾವ.ಯೋಗಗಳು ತಕ್ಕದ್ದೋ ಅದನ್ನು ನಿಷ್ಕರ್ಷಿಸಬೇಕು.)

ವಿವರ್ಜಯೇತ್ ಸ್ನೇಹಪಾನಮಜೀರ್ಣೀ ಚೋದರೀ ಜ್ವರೀ ।
ದುರ್ಬಲೋಽರೋಚಕೀ ಸ್ಥೂಲೋ ಮೂರ್ಛಾರ್ತೋ ಮದಪೀಡಿತಃ ॥೪೫॥
ಛರ್ದ್ಯರ್ದಿತಃ ಪಿಪಾಸಾರ್ತಃ ಶ್ರಾನ್ತಃ ಪಾನಕ್ಲಮಾನ್ವಿತಃ ।
ದತ್ತಬಸ್ತಿರ್ವಿರಿಕ್ತಶ್ಚ ವಾನ್ತೋ ಯಶ್ಚಾಪಿ ಮಾನವಃ ॥೪೬॥
ಅಕಾಲೇ ದುರ್ದಿನೇ ಚೈವ ನ ಚ ಸ್ನೇಹಂ ಪಿಬೇನ್ನರಃ ।
ಅಕಾಲೇ ಚ ಪ್ರಸೂತಾ ಸ್ತ್ರೀ ಸ್ನೇಹಪಾನಂ ವಿವರ್ಜಯೇತ್ ॥೪೭॥
ಸ್ನೇಹಪಾನಾದ್ಭವನ್ತ್ಯೇಷಾಂ ನೃಣಾಂ ನಾನಾವಿಧಾ ಗದಾಃ ।
ಗದಾ ವಾ ಕೃಚ್ಛ್ರತಾಂ ಯಾನ್ತಿ ನ ಸಿಧ್ಯನ್ತ್ಯಥವಾ ಪುನಃ ॥೪೮॥
ಗರ್ಭಾಶಯೇ ಸಶೇಷಾ ಸ್ಯಾರಕ್ತಕ್ಲೇದಮಲಾಸ್ತತಃ ।
ಸ್ನೇಹಂ ಜಹ್ಯಾನ್ನಿಷೇವೇತ ಪಾಚನಂ ರೂಕ್ಷಮೇವ ಚ ॥೪೯॥
ದಶರಾತ್ರಾತ್ ತತಃ ಸ್ನೇಹಂ ಯಥಾವದವಚಾರಯೇತ್ ।
ಪುರೀಷಂ ಗ್ರಥಿತಂ ರೂಕ್ಷಂ ಕೃಚ್ಛ್ರಾದನ್ನಂ ವಿಪಚ್ಯತೇ ॥೫೦॥
ಉರೋವಿದಹ್ಯತೇ ವಾಯುಃ ಕೋಷ್ಠಾದುಪರಿಧಾವತಿ ।
ದುರ್ವರ್ಣೋ ದುರ್ಬಲಶ್ಚೈವ ರೂಕ್ಷೋ ಭವತಿ ಮಾನವಃ ॥೫೧॥

ಈ ಕೆಳಗೆ ಹೇಳುವವರು ಸ್ನೇಹವನ್ನು ಪಾನಮಾಡಕೂಡದು. ಅಜೀರ್ಣರೋಗಿ (ಅಗ್ನಿಮಾಂದ್ಯವು ಹೆಚ್ಚಾಗುತ್ತದೆ) ಉದರರೋಗಿ (ಉದರರೋಗ ಚಿಕಿತ್ಸೆಯಲ್ಲಿ ಹೇಳಿರುವಂತೆ ಪೂರ್ವರೂಪದಲ್ಲಿ ಜಲೋದರವಾಗಿ ಪರಿಣಮಿಸುವುದಕ್ಕೆ ಮುಂಚೆ ಸ್ನೇಹಪಾನ ಮಾಡಬಹುದು. ಜಲೋದರವಾದ ಮೇಲೂ ಛಿದ್ರೋದರದಲ್ಲೂಸ್ನೇಹಪಾನವುನಿಷೇಧವು) ಜ್ವರಿತನಿಗೆ (ತರುಣಜ್ವರಿ ಎಂದು ಪಾಠಾಂತರವಿದೆ) ಸ್ರೋತೋರೋಧವು ಉಂಟಾಗುತ್ತದೆಯಾಗಿ ಸ್ನೇಹಪಾನವು ನಿಷೇಧವು. ದುರ್ಬಲನು (ಅಂಗಗ್ಲಾನಿಯುಂಟಾಗುತ್ತದೆ) ಅರೋಚಕಿ (ಅರೋಚಕವು ಹೆಚ್ಚಾಗುತ್ತದೆ) ಸ್ಥೂಲದೇಹವುಳ್ಳವನು (ಅತಿ ಸ್ಥೌಲ್ಯವೂ ಸ್ರೋತೋರೋಧವೂ ಉಂಟಾಗುತ್ತದೆ) ಮೂರ್ಛಿತನು (ಮೂರ್ಛೆಯು ಹೆಚ್ಚಾಗುತ್ತದೆ) ಮದಪೀಡಿತನು, ವಮನ ಮಾಡುವವನು ನೀರಡಿಕೆಯುಳ್ಳವನು ಬಳಲಿದವನು ಮದ್ಯಪಾನಮಾಡಿ ಆಯಾಸವಾಗಿರುವವನು ಇವರಿಗೆ ಸ್ನೇಹಪಾನದಿಂದ ರೋಗ ವೃದ್ಧಿಯಾಗುತ್ತದೆ. ಬಸ್ತಿದಾನ ಮಾಡಿಕೊಂಡವನು ವಿರೇಚನೌಷಧವನ್ನು ಕುಡಿದಿರುವವನು ವಮನ ಮಾಡಿದವನು (ಇವರಿಗೆ ಅಗ್ನಿಮಾಂದ್ಯವಾಗುತ್ತದೆ) ಸ್ನೇಹಪಾನಕಾಲವನ್ನು (ಪ್ರಾತಃ ಕಾಲ) ಬಿಟ್ಟು ಬೇರೆ ಕಾಲಗಳಲ್ಲೂ ದುರ್ದಿನಗಳೂ ಸ್ನೇಹಪಾನವನ್ನು ಮಾಡಿಸ

ಬಾರದು. ಅಕಾಲದಲ್ಲಿ (೯-೧೦ ತಿಂಗಳಿಗೆ ಮುಂಚೆ) ಹೆತ್ತವಳು ವಿಶೇಷವಾಗಿ ಸ್ನೇಹ ಪಾನವನ್ನು ಮಾಡಬಾರದು. ಗರ್ಭಾಶಯದಲ್ಲಿರುವ ರಕ್ತ, ಕ್ಲೇದ ಮಲಗಳು ಸ್ನೇಹ ಪಾನದಿಂದ ಪ್ರಕೋಪಗೊಂಡು ರೋಗವನ್ನು ವೃದ್ಧಿಮಾಡಿ ಕಷ್ಟಸಾಧ್ಯಗಳಾಗಿ ಪರಿಣಾಮಗೊಳ್ಳುತ್ತವೆ. ಅಥವಾ ಗರ್ಭಾಶಯದಲ್ಲೇ ಶೇಷವಾಗಿ ನಿಂತುಬಿಡುತ್ತವೆಯಾಗಿ ಅವರಿಗೆ ಸ್ನೇಹಪಾನವನ್ನು ಮಾಡಿಸದೆ ರೂಕ್ಷನಾದ ಪಾಚನೌಷಧಗಳನ್ನು ಕುಡಿಸಬೇಕು. ಈ ರೀತಿಯಾಗಿ ೧೦ ದಿನಗಳವರೆಗೆ ಉಪಚರಿಸಿ ಅನಂತರ ಮೊದಲಿನಂತೆ ಸ್ನೇಹವನ್ನು ಪ್ರಯೋಗಿಸಬೇಕು. ಪುರೀಷವುಂಟಾಗಿ ರೂಕ್ಷವಾಗಿದ್ದು ಅನ್ನವು ಬಲುಕಷ್ಟದಿಂದ ಜೀರ್ಣಿಸುವ ಎಡೆಯಲ್ಲಿ ಉರಿತವಾಗಿ ಕರುಳಿನ ಮೇಲೆ ವಾಯುವು ವೇಗದಿಂದ ಸಂಚರಿಸುತ್ತಲೂ ಬಲಹೀನನಾಗಿ ರೂಕ್ಷದೇಹವುಳ್ಳವನಾಗಿರುವ ರೋಗಿಗೆ ಅವಶ್ಯಕವಾಗಿ ಸ್ನೇಹ ಪಾನವನ್ನು ಮಾಡಿಸಬೇಕು. ಈ ಲಕ್ಷಣಗಳು ಪಾಚನೌಷಧಗಳನ್ನು ಪ್ರಯೋಗಿಸಿದ ಕಾರಣ ರೋಗಿಯು ರೂಕ್ಷನಾದನೆಂದು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗಿ ಕಂಡು ಬರುವ ಲಕ್ಷಣಗಳೆಂದು ವೃದ್ಧವೈದ್ಯರ ಅಭಿಪ್ರಾಯವು.

ಗ್ಲಾನಿಃ ಸದನಮಙ್ಗಾನಾಮಧಸ್ತಾತ್ ಸ್ನೇಹದರ್ಶನಮ್ ।
ಸಮ್ಯಕ್ ಸ್ನಿಗ್ಧಸ್ಯ ಲಿಙ್ಗಾನಿ ಸ್ನೇಹದ್ವೇಷಸ್ತಥೈವ ಚ ॥೫೨॥

ಆಯಾಸ, ದೇಹಕ್ಷೀಣತೆ, ಮಲಮೂತ್ರಾಶಯಗಳಿಂದ ಸ್ನೇಹವು ಜಿನುಗುವುದು ಮತ್ತು ಸ್ನೇಹದಲ್ಲಿ ದ್ವೇಷಬುದ್ಧಿಯುಂಟಾಗುವುದು ಇವು ಚೆನ್ನಾಗಿ ಸ್ನೇಹಕರ್ಮವಾಗಿರುವುದಕ್ಕೆ ಲಕ್ಷಣಗಳು.

ಭಕ್ತದ್ವೇಷೋ ಮುಖಸ್ರಾವೋ ಗುದದಾಹಃ ಪ್ರವಾಹಿಕಾ ।
ಪುರೀಷಾತಿಪ್ರವೃತ್ತಿಶ್ಚ ಭೃಶಸ್ನಿಗ್ಧಸ್ಯ ಲಕ್ಷಣಮ್ ॥೫೩॥
ರೂಕ್ಷಸ್ಯ ಸ್ನೇಹನಂ ಸ್ನೇಹೈರತಿಸ್ನಿಗ್ಧಸ್ಯ ರೂಕ್ಷಣಮ್ ।
ಶ್ಯಾಮಾಕಕೋರದೂಷಾನ್ನತಕ್ರಪಿಣ್ಯಾಕಸಕ್ತುಭಿಃ ॥೫೪॥

ಆಹಾರದಲ್ಲಿ ದ್ವೇಷಬುದ್ಧಿಯುಂಟಾಗುವುದು, ಬಾಯಿನಿಂದ ಜೊಲ್ಲು ಸುರಿಯುವುದು, ಗುದದಲ್ಲಿ ಉರಿತವುಂಟಾಗುವುದು, ಆಮಶಂಕೆಯುಂಟಾಗುವುದು, ಅತಿಯಾಗಿ ಮಲವಿಸರ್ಜನೆಯಾಗುವುದು ಇವು ಅತಿಯಾಗಿ ಸ್ನಿಗ್ಧನಾಗಿರುವುದರ ಲಕ್ಷಣಗಳು. ರೂಕ್ಷ ದೇಹವುಳ್ಳವನಿಗೆ ಸ್ನೇಹಕರ್ಮವನ್ನೂ ಸ್ನೇಹಕರ್ಮದಿಂದ ಅತಿಯಾಗಿ ಸ್ನಿಗ್ಧನಾದರೆ ಸಾಮೆ, ಹಾರಕಗಳ ಅನ್ನ, ಮಜ್ಜಿಗೆ, ಹಿಂಡಿ, ಹಿಟ್ಟುಗಳನ್ನು ತಿನ್ನಿಸಿ ರೂಕ್ಷನನ್ನಾಗಿಯೂ ಮಾಡಬೇಕು.

ದೀಪ್ತಾನ್ತರಗ್ನಿಃ ಪರಿಶುದ್ಧಕೋಷ್ಠಃ ಪ್ರತ್ಯಗ್ರಧಾತುರ್ಬಲ ವರ್ಣಯುಕ್ತಃ ।
ದೃಢೇನ್ದ್ರಿಯೋ ಮನ್ದಜರಃ ಶತಾಯುಃ ಸ್ನೇಹೋಪಯೋಗೀ
ಪುರುಷೋ ಭವೇತ್ತು ॥೫೫॥
ಸ್ನೇಹೋ ಹಿತೋ ದುರ್ಬಲವಹ್ನಿದೇಹಸನ್ಧುಕ್ಷಣೇ ವ್ಯಾಧಿನಿಪೀಡಿತಸ್ಯ ।
ಬಲಾನ್ವಿತೌ ಭೋಜನದೋಷಜಾತೈಃ ಪ್ರಮರ್ದಿತಂ ತೌ ಸಹಸಾ ನ ಸಾಧ್ಯೌ ॥೫೬॥

ಸ್ನೇಹಪಾನವನ್ನು ಸರಿಯಾದ ಕ್ರಮದಿಂದ ಸೇವಿಸಿದರೆ ಜೀರ್ಣಶಕ್ತಿಯು ವೃದ್ಧಿಯಾಗಿ ಕೋಷ್ಠಶುದ್ಧಿಯೂ ಹೊಸದಾಗಿ ರಸರಕ್ತಾದಿಧಾತುಗಳ ವೃದ್ಧಿಯೂ ಬಲವರ್ಣಗಳಿಂದ ಕೂಡಿದ ಇಂದ್ರಿಯ ಶಕ್ತಿಯೂ ಉಂಟಾಗುತ್ತದೆ. ಮುದಿತನವು ನಿಧಾನವಾಗಿ ಬರುತ್ತದೆ. ಒಂದುನೂರು ವರ್ಷಗಳಕಾಲ ಬದುಕುತ್ತಾನೆ. ವ್ಯಾಧಿಪೀಡಿತನಿಗೆ ಜಾಠರಾಗ್ನಿಯನ್ನೂ ದೇಹಬಲವನ್ನೂ ಚಟುವಟಿಕೆಯನ್ನೂ ಉಂಟುಮಾಡುತ್ತದೆ. ಸ್ನೇಹಪಾನದಿಂದ ವೃದ್ಧಿಯಾದ ಅಗ್ನಿಯನ್ನೂ ಬಲಗೊಂಡ ದೇಹವನ್ನೂ ಪ್ರಕೋಪಗೊಂಡ ದೋಷಗಳು ನಾಶಗೊಳಿಸಲಾರವೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಸ್ನೇಹೋಪಯೋಗಿಕ
ಚಿಕಿತ್ಸಾನಾಮೈಕತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ
ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ದ್ವಾತ್ರಿಂಶತ್ತಮೋಽಧ್ಯಾಯಃ

ಅಥಾತಃ ಸ್ವೇದಾವಚಾರಣೀಯಂ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ
ಯಥೋವಾಚ ಭಗವಾನ್ ಧನ್ವಂತರಿ (ಸುಶ್ರುತಾಯ) ॥೧॥

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ವೇದನಕರವಾದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಚತುರ್ವಿಧಃ ಸ್ವೇದಃ, ತದ್ಯಥಾ:–ತಾಪಸ್ವೇದಃ ಊಷ್ಮಸ್ವೇದಃ ಉಪನಾಹಸ್ವೇದೋ ದ್ರವಸ್ವೇದ ಇತಿ । ಅತ್ರ ಸರ್ವಸ್ವೇದವಿಕಲ್ಪಾವರೋಧಃ ॥೩॥

ಸ್ವೇದಕರ್ಮವು ನಾಲ್ಕುವಿಧ ; ಹೇಗೆಂದರೆ–ತಾಪಸ್ವೇದ (ಮೈಗೆ ಬಿಸಿತಟ್ಟುವಂತೆ ಮಾಡುವುದು), ಊಷ್ಮಸ್ವೇದ (ಆವಿಯಿಂದ ಮೈಯನ್ನು ಬೆವರಿಸುವುದು), ಉಪನಾಹ ಸ್ವೇದ (ಮೈಗೆ ಬಿಸಿ ಪದಾರ್ಥವನ್ನು ಮುಚ್ಚಿಕಟ್ಟುವುದು), ದ್ರವಸ್ವೇದ (ಬಿಸಿಯಾದ ದ್ರವದ್ರವ್ಯಗಳ ಸೇಚನೆಯಿಂದ ಮೈಬೆವರಿಸುವುದು) ಎಂಬುದಾಗಿ. ಇವುಗಳಲ್ಲಿ ಎಲ್ಲಾ ವಿಧಗಳಾದ ಸ್ವೇದಗಳೂ ಅಡಕಗಳಾಗಿವೆ. ಹೇಗೆಂದರೆ–ತಾಪಸ್ವೇದದಲ್ಲಿ–ಕುಟೀಕೂಪ ಹೋಲಾಕಸ್ವೇದಗಳೂ ಊಷ್ಮಸ್ವೇದದಲ್ಲಿ ಸಂಕರ ಪ್ರಸ್ತರ ಅಶ್ಮಘನ ನಾಡೀ ಕುಂಭೀ ಭೂಸ್ವೇದಗಳೂ, ದ್ರವಸ್ವೇದದಲ್ಲಿ ಪರಿಷೇಕ ಅವಗಾಹಗಳೂ ಅಡಕವಾಗಿರುತ್ತವೆ. ಉಪನಾಹಸ್ವೇದವೂ ಪಿಂಡಸ್ವೇದವೂ ಸೇರಿದೆ.

ತತ್ರತಾಪಸ್ವೇದಃ ಪಾಣಿಕಾಂಸ್ಯಕನ್ದುಕಪಾಲುಕಾವಸ್ತ್ರೈಃ ಪ್ರಯುಜ್ಯತೇ ಶಯಾನಸ್ಯ ಚಾಙ್ಗತಾಪೋ ಬಹುಶಃ ಖಾದಿರಾಙ್ಗಾರೈರಿತಿ ॥೪॥

ತಾಪಸ್ವೇದವು ಅಂಗೈ ಕಂಚಿನಪಾತ್ರೆ ಬಕ್ಕರೆ ಮರಳು ವಸ್ತ್ರ ಇವುಗಳಿಂದ ಶರೀರಕ್ಕೆ ಶಾಖಕೊಡುವ ವಿಧಾನವು. ಕಗ್ಗಲಿಯ ಕೆಂಡಗಳಿಂದ ಕಾಯಿಸಿದ ಅಂಗೈ ಕಂಚಿನ ತಪ್ಪಲೆ ಮೊದಲಾದುವನ್ನು ಮಲಗಿರುವ ರೋಗಿಯ ಶರೀರದ ಅಂಗಗಳಿಗೆ ತಗುಲಿಸುವ ಕ್ರಮವು.

ಊಷ್ಮಸ್ವೇದಸ್ತು ಕಪಾಲಪಾಷಾಣೇಷ್ಟಿಕಾ ಲೋಹಪಿಣ್ಡಾನಗ್ನಿವರ್ಣಾನದ್ಭಿರಾಸಿಞ್ಚ್ಯಾಚ ದಮ್ಲದ್ರವ್ಯೈರ್ವಾ ತೈರಾರ್ದ್ರಾಲಕ್ತಕಪರಿವೇಷ್ಟಿತಙ್ಗಪ್ರದೇಶಂ ಸ್ವೇದಯೇತ್ । ಮಾಂಸರಸ ಪಯೋದಧಿ ಧಾನ್ಯಾಮ್ಲ ವಾತಹರಪತ್ರಭಙ್ಗಕ್ವಾಥಪೂರ್ಣಾಂ ವಾ ಕುಮ್ಭೀಮನುತಪ್ತಾಂ ಪ್ರಾವೃತ್ಯೋಷ್ಮಾಣಂ ಗೃಹ್ಣೀಯಾತ್ । ಪಾರ್ಶ್ವಚ್ಛಿದ್ರೇಣ ವಾ ಕುಮ್ಭೇನಾಧೋಮುಖೇನ ತಸ್ಯ ಮುಖಮಭಿಸನ್ಧಾಯ ತಸ್ಮಿಞ್ ಛಿದ್ರೇ ಹಸ್ತಿಶುಣ್ಡಾಕಾರಾಂ ನಾಡೀಂ ಪ್ರಣಿಧಾಯ ತಂ ಸ್ವೇದಯೇತ್ ॥೫॥ ಸುಖೋಪವಿಷ್ಟಂ ಸ್ವಭ್ಯಕ್ತಂ ಗುರುಪ್ರಾವರಣಾವೃತಮ್ । ಹಸ್ತಿಶುಣ್ಡಿಕಯಾ ನಾಡ್ಯಾ ಸ್ವೇದಯೇದ್ವಾತರೋಗಿಣಮ್ ॥೬॥ ಸುಖಾ ಸರ್ವಾಙ್ಗಗಾಪ್ಯೇಷಾ ನ ಚ ಕ್ಲಿಶ್ನಾತಿ

ಮಾನವಮ್ ॥ ವ್ಯಾಮಾರ್ಧವತ್ರಾ ತ್ರಿರ್ವಕ್ರಾ ಹಸ್ತಿ ಹಸ್ತಸಮಾಕೃತಿಃ ಸ್ವೇದನಾರ್ಥೇ ಹಿತಾ ನಾಡೀಕೈಲಿಙ್ಗೀ ಹಸ್ತಿಶುಣ್ಡಿಕಾ ॥೭॥

ಊಷ್ಮಸ್ವೇದ ವಿಧಾನವನ್ನು ಹೇಳುತ್ತೇವೆ—ಹೆಂಚಿನ ಅಥವಾ ಮಡಕೆಯ ಅಗಲವಾದ ಚೂರು, ಕಲ್ಲು, ಇಟ್ಟಿಗೆ, ಕಬ್ಬಿಣದಗುಂಡು ಇವುಗಳಲ್ಲೊಂದನ್ನು ಬೆಂಕಿಯಲ್ಲಿಟ್ಟು ಕೆಂಪಗೆ ಕಾಯಿಸಿ ಅವುಗಳಮೇಲೆ ನೀರನ್ನಾಗಲೀ ಕಲಗಚ್ಚು ಮೊದಲಾದ ಹುಳಿ ದ್ರವವನ್ನಾಗಲೀ ಸುರಿದು ಬೆವರಿಸಬೇಕಾದ ರೋಗಿಯ ಶರೀರಭಾಗಕ್ಕೆ ಹಸಿಯ ಅರಗಿನ ಕಷಾಯದಲ್ಲಿ ಅದ್ದಿದ ಬಟ್ಟೆಯನ್ನು ಕವಿಚಿ ಅದರ ಹೊಗೆಯು ತಗಲುವಂತೆ ಮಾಡಿ ಬೆವರಿಸಬೇಕು. ಮಾಂಸರಸ, ಹಾಲು, ಮೊಸರು, ಹುಳಿಕಲಗಚ್ಚು, ಹರಳೆಲೆ ಮೊದಲಾದ ವಾತಹರ ಪತ್ರಗಳನ್ನು ಕತ್ತರಿಸಿ ತುಂಬಿ ಕಾಯಿಸಿದ ಕಷಾಯವನ್ನು ತುಂಬಿದ ಕುಂಭ (ಮಡಕೆ, ತಪ್ಪಲೆ ಮೊದಲಾದ ಪಾತ್ರೆ)ವನ್ನು ಬೆಂಕಿಯಮೇಲಿಟ್ಟು ಕಾಯಿಸಿ ಕಂಬಳಿ, ಬಟ್ಟೆ ಮೊದಲಾದುವನ್ನು ಆ ಪಾತ್ರೆಗೆಸುತ್ತಿ ಮೇಲಿನ ಹಬೆಯನ್ನು ನೋವಿರುವ ಭಾಗಕ್ಕೆ ತಗುಲಿಸಬೇಕು. ಅಥವಾ ಆ ಪಾತ್ರೆಯ ಮುಖಕ್ಕೆ ಮತ್ತೊಂದು ಬರಿಯ ಪಾತ್ರೆಯ ಮುಖವನ್ನು ದಬ್ಬುಕವಚಿ ಮೇಲಿನ ಪಾತ್ರೆಯ ಪಕ್ಕದಲ್ಲಿ ರಂಧ್ರ (ತೂತು) ಮಾಡಿ ಆನೆಯ ಸೊಂಡಲಿನ ಆಕಾರದಂತಿರುವ ಕೊಳವೆಯನ್ನು ಸಿಕ್ಕಿಸಿ ಆ ಕೊಳವೆಯ ಮುಖದಿಂದ ಹೊರಡುವ ಹಬೆಯು ರೋಗಿಯ ಶರೀರಕ್ಕೆ ತಗಲುವಂತೆ ಮಾಡಿ ಬೆವರಿಸಬೇಕು. ಇದೇ ಅರ್ಥಬರುವ ಶ್ಲೋಕಗಳ ಅರ್ಥವೇನೆಂದರೆ—ವಾತ ರೋಗಿಯನ್ನು ಸುಖವಾದ ಆಸನದಲ್ಲಿ ಕೂರಿಸಿ ವಾತಹರ ತೈಲಗಳಿಂದ ಮೈಗೆ ಅಭ್ಯಂಗ ಮಾಡಿಸಿ ಭಾರವಾದ ಕಂಬಳಿ, ದುಬಟಿ ಮೊದಲಾದುವುಗಳನ್ನು ಹೊದ್ದಿಸಿ ಆನೆಯ ಸೊಂಡಲಿನಂತಿರುವ ನಳಿಕೆಯಿಂದ ಹಬೆ ತಟ್ಟುವಂತೆಮಾಡಿ ಬೆವರಿಸಬೇಕು. ಇದರಿಂದ ಶರೀರದ ಸಕಲಅಂಗಗಳಿಗೂ ಶಾಖ ತಗಲುವಂತೆ ಮಾಡಬಹುದು, ಸುಖಕರವಾದದ್ದು. ರೋಗಿಗೆ ಆಯಾಸ ತೋರುವುದಿಲ್ಲ. ವೇಗವನ್ನು ತಡೆಯುವುದಕ್ಕಾಗಿ ಅರ್ಧನಾರು ಉದ್ದವಿರುವ ಮೂರು ಕಡೆಗಳಲ್ಲಿ ಬಗ್ಗಿಸಿರುವ ಆನೆಯ ಸೊಂಡಲಿನಂತಿರುವ ನಾಳವು ಅಥವಾ ಹುಲ್ಲು, ದರ್ಭೆ ಮೊದಲಾದುವುಗಳಿಂದ ಆನೆಯ ಸೊಂಡಲಿನಂತೆ ತಯಾರಿಸಿದ ಕೊಳವೆಯು ಸ್ವೇದಮಾಡಿಸಲು ಹಿತಕರವಾದದ್ದು.

> ಪುರುಷಾಯಾಮಮಾತ್ರಾಂ ಚ ಭೂಮಿಮುತ್ಕೀರ್ಯ ಖಾದಿರೈಃ ।
> ಕಾಷ್ಠೈರ್ದಗ್ಧ್ವಾ ತಥಾಭ್ಯುಕ್ಷ್ಯ ಕ್ಷೀರಧಾನ್ಯಾಮ್ಲವಾರಿಭಿಃ ॥೮॥
> ಪತ್ರಭಙ್ಗೈರವಚ್ಛಾದ್ಯ ಶಯಾನಂ ಸ್ವೇದಯೇತ್ತತಃ ।

ಬಾಷ್ಪಸ್ವೇದ ವಿಧಾನವನ್ನು ನಾಡೀಸ್ವೇದದ ಮೂಲಕ ವಿವರಿಸಿ ಭೂಸ್ವೇದವೂ ಬಾಷ್ಪಸ್ವೇದ ವಿಧಾನವೆಂದೇ ಅಭಿಪ್ರಾಯಪಡುತ್ತಾರೆ. ಹೇಗೆಂದರೆ—ರೋಗಿಯ ಶರೀರದಷ್ಟು ಉದ್ದ ಮತ್ತು ಅಗಲವಿರುವಂತೆ ಭೂಮಿಯಲ್ಲಿ ಗುಂಡಿಯನ್ನು ಅಗೆದು ಅದರಲ್ಲಿ ಕಗ್ಗಲಿಸೌದೆಯನ್ನು ತುಂಬಿ ಬೆಂಕಿಹಾಕಿ ಉರಿಸಿ ಹಾಲು, ಕಲಗಚ್ಚು, ನೀರು ಇವುಗಳ

ಲ್ಲೊಂದನ್ನು ಅದರಮೇಲೆ ಸುರಿದು ಹರಳೆಲೆ ಮೊದಲಾದ ವಾತಹರಗಳಾದ ಸೊಪ್ಪು ಗಳಿಂದ ಇದನ್ನು ಮುಚ್ಚಿ ರೋಗಿಯನ್ನು ಅದರ ಮೇಲೆ ಮಲಗಿಸಿ ಬೆವರಿಸಬೇಕು.

ಪೂರ್ವವತ್ ಸ್ವೇದಯೇದ್ದಗ್ಧ್ವಾ ಭಸ್ಮಾಪೋಹ್ಯಾಪಿ ವಾ ಶಿಲಾಮ್ ॥೯॥

ಅಶ್ಮಸ್ವೇದವನ್ನೂ ಬಾಷ್ಪಸ್ವೇದದಲ್ಲೇ ಅಡಕಮಾಡುತ್ತಾರೆ. ಅಗಲವಾಗಿಯೂ ಉದ್ದವಾಗಿಯೂ ಇರುವ ಕಲ್ಲಿನಮೇಲೆ ಹಿಂದೆ ಹೇಳಿದಂತೆ ಕಗ್ಗಲಿಯ ಸೌದೆಗಳನ್ನಿಟ್ಟು ಬೆಂಕಿ ಹತ್ತಿಸಿ ಚೆನ್ನಾಗಿ ಸುಟ್ಟ ಆ ಬೂದಿಯನ್ನು ಹೊರಕ್ಕೆ ತೆಗೆಸಿ ಅದರಮೇಲೆ ಹಾಲು ಕಲಗಚ್ಚು ನೀರು ಇವುಗಳಲ್ಲೊಂದನ್ನು ಚುಮುಕಿಸಿ ವಾತಹರಗಳಾದ ಹರಳೆಲೆ ಮೊದಲಾದುವುಗಳನ್ನು ಮುಚ್ಚಿ ಅದರ ಮೇಲೆ ರೋಗಿಯನ್ನು ಮಲಗಿಸಿ ಬೆವರಿಸಬೇಕು.

ಪೂರ್ವವತ್ ಕುಟೀಂ ವಾ ಚತುರ್ದ್ವಾರಾಂ ಕೃತ್ವಾ ತಸ್ಯಾಮುಪವಿಷ್ಟಸ್ಯಾನ್ತಶ್ಚತುರ್ದ್ವಾರೇಽಙ್ಗಾರಾನುಪಸನ್ಧಾಯ ತಂ ಸ್ವೇದಯೇತ್ ॥೧೦॥

ಬಾಷ್ಪಸ್ವೇದದ ಒಂದು ವಿಧಾನವೇ ಕುಟೀಸ್ವೇದವೆಂದು ತಿಳಿಸುತ್ತಾರೆ. ಅಶ್ಮಸ್ವೇದವೂ ಕುಟೀಸ್ವೇದದಲ್ಲೇ ಅಡಕವಾಗಿದೆಯೆಂದೂ ಅಭಿಪ್ರಾಯವು. ಹೇಗೆಂದರೆ— ನಾಲ್ಕುಕಡೆಗೂ ಬಾಗಿಲಿರುವ ಕುಟಿಯೊಳಗೆ ಕೂಡಿಸಿ ನಾಲ್ಕು ದಿಕ್ಕಿನಲ್ಲೂ ಬೆಂಕಿಯ ಕೆಂಡಗಳನ್ನಿರಿಸಿ ಶಾಖತಟ್ಟುವಂತೆ ಬೆವರಿಸಬೇಕು.

ಧಾನ್ಯಾನಿ ವಾ ಸಮ್ಯಗುಪಸ್ವೇದ್ಯಾಸ್ತೀರ್ಯ ಕಿಲಿಞ್ಜೇಽನ್ಯಸ್ಮಿನ್ ವಾ ತತ್ಪ್ರತಿರೂಪಕೇ ಶಯಾನಂ ಪ್ರಾವೃತ್ಯಸ್ವೇದಯೇದೇವಂ ಪಾಂಶುಗೋಶಕೃತ್ತುಷಬುಸಪಲಾಲೋಷ್ಮಭಿಃ ಸ್ವೇದಯೇತ್ ॥೧೧॥

ಪ್ರಸ್ತರ ಸ್ವೇದವೂ ಬಾಷ್ಪಸ್ವೇದವಿಧಾನವೆಂದೇ ಅಭಿಪ್ರಾಯಪಡುತ್ತಾರೆ. ಉದ್ದು, ಹೆಸರು, ಭತ್ತ ಮೊದಲಾದ ಧಾನ್ಯಗಳನ್ನು ನೀರಿನಲ್ಲಿ ಬೇಯಿಸಿ ನೀರನ್ನು ಬಸಿದು ಚಾಪೆ ಅಥವಾ ನೆಲದಮೇಲೆ ಹರಡಿ ಅದರಮೇಲೆ ಹರಳೆಲೆ ಮೊದಲಾದ ಸೊಪ್ಪನ್ನು ಮುಚ್ಚಿ ರೋಗಿಯನ್ನು ವಸ್ತ್ರದಿಂದ ಸುತ್ತಿ ಅದರಮೇಲೆ ಮಲಗಿಸಿ ಬೆವರಿಸಬೇಕು. ಹೀಗೆಯೇ ಧೂಳು, ಹಸುವಿನಬೆರಣಿ, ಹೊಟ್ಟು, ಧಾನ್ಯವಿಲ್ಲದತೆನೆ, ಜಳ್ಳು ಮೊದಲಾದುವುಗಳನ್ನು ಬೆಂಕಿಯಿಂದ ಕಾಯಿಸಿ ಬಿಸಿಮಾಡಿ ಸ್ವೇದಕರ್ಮವನ್ನು ಮಾಡಿಸಬೇಕು.

ಉಪನಾಹಸ್ವೇದಸ್ತು ವಾತಹರಮೂಲಕಲ್ಕೈರಮ್ಲಪಿಷ್ಟೈರ್ಲವಣ ಪ್ರಗಾಢೈಃ ಸುಸ್ನಿಗ್ಧೈಃ ಸುಖೋಷ್ಣೈಃ ಪ್ರದಿಹ್ಯ ಸ್ವೇದಯೇತ್ । ಏವಂ ಕಾಕೋಲ್ಯಾದಿಭಿರೇಲಾದಿಭಿಃ ಸುರಸಾದಿಭಿಸ್ತಿಲಾತಸೀಸರ್ಷಪಕಲ್ಕೈಃ ಕೃಶರಾಪಾಯಸೋತ್ಕಾರಿಕಾಭಿರ್ವೇಸವಾರೈಃ ಶಾಲ್ವಣೈರ್ವಾ ತನುವಸ್ತ್ರಾವನದ್ಧೈಃ ಸ್ವೇದಯೇತ್ ॥೧೨॥

ಮೂರನೆಯದಾದ ಉಪನಾಹಸ್ವೇದವನ್ನು ವಿವರಿಸುತ್ತಾರೆ—ಸಂಕರಸ್ವೇದವನ್ನೂ ಉಪನಾಹಸ್ವೇದದಲ್ಲೇ ಅಡಕಮಾಡಿರುತ್ತಾರೆ. ಹರಳಸೊಪ್ಪು ಮೊದಲಾದ ವಾತಹರ ದ್ರವ್ಯಗಳನ್ನು ಕಾಂಜಿಕ ಮೊದಲಾದ ಹುಳಿದ್ರವ್ಯಗಳಿಂದ ಅರೆದು ಕಲ್ಕಮಾಡಿ ಹೆಚ್ಚಾಗಿ

ಲವಣವನ್ನು ಸೇರಿಸಿ ತುಪ್ಪವನ್ನು ಹಾಕಿ ಬಿಸಿಮಾಡಿ ಸುಖೋಷ್ಣವಾಗಿ ರೋಗಿಯ ದೇಹಕ್ಕೆ ಬಳಿದು ಬೆವರಿಸಬೇಕು. ಹೀಗೆಯೇ ಪಿತ್ತವಾತಗಳಲ್ಲಿ ಕಾಕೋಳ್ಯಾದಿ ಗಣ ದ್ರವ್ಯಗಳನ್ನೂ ಕೇವಲ ವಾತದಲ್ಲಿ ಏಲಾದಿಗಣೋಕ್ತ ದ್ರವ್ಯಗಳನ್ನೂ ಕಫವಾತ ದೋಷ ಗಳಲ್ಲಿ ಸುರಸಾದಿ ಗಣೋಕ್ತದ್ರವ್ಯಗಳನ್ನೂ ಎಳ್ಳು, ಸೀಮೆಅಗಸೆ, ಸಾಸಿವೆಗಳ ಕಲ್ಕ ದಿಂದಲೂ ಲೇಪಿಸಿ ಎಳ್ಳು, ಅಕ್ಕಿ, ಉದ್ದುಗಳನ್ನೂ ಸೇರಿಸಿ ತಯಾರಿಸಿದ ಯವಾಗೂ ಕೃಶರ, ಹಾಲಿನಲ್ಲಿ ಬೇಯಿಸಿದ ಅಕ್ಕಿಯ ಪಾಯಸ, ಹೋಳಿಗೆ, ಚಟ್ನಿಯಂತೆ ತ್ರಿಕಟು ಕೊತ್ತುಂಬರಿ, ಜೀರಿಗೆ, ಮೋಡಿ, ದಾಳಿಂಬೆ ಇವುಗಳನ್ನು ನುಣ್ಣಗೆ ಅರೆದ ಕಲ್ಕವೇಶವಾರ ಇವುಗಳನ್ನು ರೋಗಿಗೆ ಬಳಿದು ತೆಳುವಾದ ಬಟ್ಟೆಯನ್ನು ಮುಚ್ಚಿ ಕಟ್ಟಿದರೆ ಉಪನಾಹವು. ಈ ರೀತಿಯಿಂದಲೂ ವಾತರೋಗದಲ್ಲಿ ಹೇಳಿರುವ ಶಾಲ್ವಣಸ್ವೇದ ವಿಧಾನದಿಂದಲೂ ಬೆವರಿಸಬೇಕು.

ದ್ರವಸ್ವೇದಸ್ತು ವಾತಹರದ್ರವ್ಯಕ್ವಾಥಪೂರ್ಣೇ ಕೋಷ್ಣಕಟಾಹೇ ದ್ರೋಣ್ಯಾಂವಾ ವಿಗಾಹ್ಯ ಸ್ವೇದಯೇತ್ । ಏವಂ ಪಯೋಮಾಂಸರಸಯೂಷ ತೈಲಧಾನ್ಯಾಮ್ಲಘೃತವಸಾ ಮೂತ್ರೇಷ್ವವ-ಗಾಹೇತ ಸುಖೋಷ್ಣೈಃ ಕಷಾಯೈಃ ಪರಿಷಿಞ್ಚೇದಿತಿ ॥೧೩॥

ತತ್ರ ತಾಪೋಷ್ಮಸ್ವೇದೌ ವಿಶೇಷತಃ ಶ್ಲೇಷ್ಮಘ್ನೌ ಉಪನಾಹಸ್ವೇದೋ ವಾತಘ್ನಃ ಅನ್ಯತ ರಸ್ಮಿನ್ ಪಿತ್ತಸಂಸೃಷ್ಟೇ ದ್ರವಸ್ವೇದ ಇತಿ ಕಫಮೇದೋನ್ವಿತೇ ವಾಯೌ ನಿವಾತಾತಪಗುರುಪ್ರಾವ ರಣನಿಯುದ್ಧಾಧ್ವವ್ಯಾಯಾಮ ಭಾರಹರಣಾಮರ್ಷೈಃ ಸ್ವೇದಮುತ್ಪಾದಯೇದಿತಿ ॥೧೪॥

ಭವತಿ ಚಾತ್ರ—

ಚತುರ್ವಿಧೋ ಯೋಽಭಿಹಿತೋ ದ್ವಿಧಾಸ್ವೇದಃ ಪ್ರಯುಜ್ಯತೇ । ಸರ್ವಸ್ಮಿನ್ನೇವ ದೇಹೇ ತು ದೇಹಸ್ಯಾವಯವೇ ತಥಾ ॥೧೫॥

ನಾಲ್ಕನೆಯದಾದ ದ್ರವಸ್ವೇದವನ್ನು ವಿವರಿಸುತ್ತಾರೆ—ವಾತಹರ ದ್ರವ್ಯಗಳ ಕಷಾಯವನ್ನು ಸುಖೋಷ್ಣವಾಗಿರುವಂತೆ ಹಂಡೆ ಅಥವಾ ದೋಣಿಯ ಆಕಾರದ ಕೊಪ್ಪ ರಿಗೆಗೆ ತುಂಬಿ ರೋಗಿಯ ಎದೆ ವೃಷಣಗಳಿಗೆ ತಣ್ಣಗಿರುವ ಕಲ್ಕಗಳನ್ನು ಬಳಿದು ಕಟ್ಟಿ ಅದ ರೊಳಗೆ ಕೂರಿಸಿರಬೇಕು. ಹೀಗೆಯೇ ಸುಖೋಷ್ಣವಾಗಿರುವ ಹಾಲು, ಮಾಂಸರಸ, ಧಾನ್ಯ ಗಳ ಕಟ್ಟು, ತೈಲ, ಕಲಗಚ್ಚು, ತುಪ್ಪ, ಕೊಬ್ಬು, ಗೋಮೂತ್ರಗಳನ್ನು ತುಂಬಿದ ಕಟಾಹ ಗಳಲ್ಲಿ ರೋಗಿಯನ್ನು ಕೂರಿಸಿ ಸ್ವೇದಮಾಡಿಸಬೇಕು. ಸುಖೋಷ್ಣಗಳಾದ ಕಷಾಯ ಗಳಿಂದ ಅಭಿಷೇಕಮಾಡಿಸಬೇಕು. (ಕೊಟ್ಟಿರುವ ಅಥವಾ ಕೊಳವೆಯನ್ನು ಸಿಕ್ಕಿಸಿರುವ ದಪ್ಪಪಾತ್ರೆಗಳಿಗೆ ಕಷಾಯಗಳನ್ನು ತುಂಬಿ ರೋಗಿಯಮೇಲೆ ನಿಧಾನವಾಗಿ ಸುರಿಸಬೇಕು.) ಈ ೪ ವಿಧಗಳಾದ ಸ್ವೇದವಿಧಾನಗಳಲ್ಲಿ ತಾಗ ಮತ್ತು ಊಷ್ಮಸ್ವೇದಗಳು ಕಫಹರಗಳು. ಉಪನಾಹಸ್ವೇದವು ವಾತಹರವು. ಪಿತ್ತವು ವಾತದೊಡನೆ ಅಥವಾ ಕಫದೊಡನೆ ಸೇರಿ ದ್ದಾಗ ದ್ರವಸ್ವೇದವನ್ನು ಮಾಡಿಸಬೇಕು. ವಾಯುವು ಕಫ ಮತ್ತು ಮೇದಸ್ಸುಗಳೊ ಡನೆ ಸೇರಿದ್ದರೆ ರೋಗಿಯನ್ನು ಗಾಳಿಯಿಲ್ಲದ ಕೊಠಡಿಯಲ್ಲಿ ಅಥವಾ ಬಿಸಿಲಿನಲ್ಲಿ ಕೂಡಿಸಿ

ದಪ್ಪವಾದ ಹೊದ್ದಿಕೆಗಳನ್ನು ಹೊದ್ದಿಸಿ ಕಾಳಗ ಕಾದಿಸಿ ದಾರಿನಡೆಸಿ ವ್ಯಾಯಾಮ ಮಾಡಿಸಿ ಭಾರವನ್ನು ಹೊರಿಸಿ ಹೆದರಿಸಿ ಈ ರೀತಿಯಾಗಿ ನಿರಗ್ನಿಸ್ವೇದ (ಬೆಂಕಿಯ ತಾಪ ವಿಲ್ಲದೆ ಇರುವುದು) ವನ್ನು ಮಾಡಿಸಬೇಕು. ಈ ವಿಚಾರದಲ್ಲಿ ಆಧಾರವಾಗಿ ಉದ್ಧರಿಸಿ ರುವ ಶ್ಲೋಕಗಳ ಅರ್ಥವೇನೆಂದರೆ—ಮೇಲೆ ಹೇಳಿದ ೪ ವಿಧಗಳಾದ ಸ್ವೇದಗಳನ್ನೂ ಸರ್ವಾಂಗಗಳನ್ನಾಗಲೀ ಅಥವಾ ಯಾವುದಾದರೂ ಒಂದು ಅವಯವವನ್ನಾಗಲೀ ಬೆವರಿ ಸುವುದಕ್ಕೆ ಉಪಯೋಗಿಸಬೇಕು. ತನ್ತ್ರಾನ್ತರಗಳಲ್ಲಿ ಕಣ್ಣು, ಹೃದಯ, ವೃಷಣಗಳಿಗೆ ಸ್ವೇದಮಾಡಿಸಕೂಡದೆಂದು ಹೇಳುತ್ತಾರೆ. ಸರ್ವಾಂಗವನ್ನೂ ಸ್ವೇದಮಾಡಿಸಬೇಕೆಂದು ಈ ಶಾಸ್ತ್ರದಲ್ಲಿ ಹೇಳಿರುವುದರಿಂದ ತತ್ಪರಿಹಾರಕ್ಕಾಗಿ ಸ್ವೇದಮಾಡಿಸುವಾಗ ರೋಗಿಯ ಕಣ್ಣು, ಎದೆ, ವೃಷಣಗಳಿಗೆ ಬಿಸಿತಗಲದಂತೆ ಉಪಾಯಾಂತರಗಳನ್ನು ಕಲ್ಪಿಸಿ ಸ್ವೇದ ಕರ್ಮ ಮಾಡಿಸಬೇಕೆಂದು ತಾತ್ಪರ್ಯವು.

ಯೇಷಾಂ ನಸ್ಯಂ ವಿಧಾತವ್ಯಂ ಬಸ್ತಿಶ್ಚೈವ ಹಿ ದೇಹಿನಾಮ್ ।
ಶೋಧನೀಯಾಶ್ಚ ಯೇ ಕೇಚಿತ್ ಪೂರ್ವಂ ಸ್ವೇದ್ಯಾಸ್ತು ತೇ ಮತಾಃ ॥೧೬॥
ಪಶ್ಚಾತ್ ಸ್ವೇದ್ಯಾ ಹೃತೇ ಶಲ್ಯೇ ಮೂಢಗರ್ಭಾನುಪದ್ರವಾ ।
ಸಮ್ಯಕ್ ಪ್ರಜಾತಾ ಕಾಲೇ ಯಾ ಪಶ್ಚಾತ್ ಸ್ವೇದ್ಯಾ ವಿಜಾನತಾ ॥೧೭॥
ಸ್ವೇದ್ಯಾಃ ಪೂರ್ವಂ ಚ ಪಶ್ಚಾಚ್ಚ ಭಗನ್ದರ್ಯರ್ಶಸಸ್ತಥಾ ।
ಅಶ್ಮರ್ಯಾ ಚಾತುರೋ ಜನ್ತುಃ ಶೇಷಾ ಶಾಸ್ತ್ರೇ ಪ್ರಚಕ್ಷ್ಮಹೇ ॥೧೮॥

ರೋಗವಿಶೇಷಗಳಿಗೆ ತಕ್ಕಂತೆ ಸ್ವೇದಕರ್ಮವನ್ನು ತಿಳಿಸುತ್ತಾರೆ—ಯಾರಿಗೆ ನಸ್ಯ ಕರ್ಮ ಬಸ್ತಿಕರ್ಮಗಳನ್ನು ಮಾಡಿಸಬೇಕೋ ಯಾರಿಗೆ ಶೋಧನಕರ್ಮ ಮಾಡಿಸ ಬೇಕೋ ಅಂಥವರಿಗೆ ಮೊದಲೇ ಸ್ವೇದಕರ್ಮವನ್ನು ಮಾಡಿಸಬೇಕು. ಶಲ್ಯಹರಣ ಮಾಡಿಕೊಂಡವರಿಗೂ ಮೂಢಗರ್ಭಹರಣ ಮಾಡಿಕೊಂಡ ಸ್ತ್ರೀಗೂ ಸಕಾಲದಲ್ಲಿ ಪ್ರಸವ ವಾಗಿ ಯಾವ ಉಪದ್ರವಗಳೂ ಇಲ್ಲದ ಸ್ತ್ರೀಗೂ ಪಶ್ಚಾತ್ ಸ್ವೇದಕರ್ಮವನ್ನು ಮಾಡಿಸ ಬೇಕು. ಭಗಂದರ ಅರ್ಶೋರೋಗ ಅಶ್ಮರಿರೋಗ ಪೀಡಿತರಿಗೆ ಶಸ್ತ್ರಚಿಕಿತ್ಸೆಗೆ ಮೊದಲೂ ಕಡೆಯಲ್ಲೂ ಸ್ವೇದಮಾಡಿಸಬೇಕು. ಉಳಿದ ರೋಗಿಗಳಿಗೆ ಸ್ವೇದವಿಧಾನವು ಆಯಾಯ ಚಿಕಿತ್ಸೆಗಳಲ್ಲಿಯೇ ತಿಳಿಸಲಾಗುತ್ತದೆ.

ನಾನಭ್ಯಕ್ತೇ ನಾಪಿ ಚಾಸ್ನಿಗ್ಧದೇಹೇ ಸ್ವೇದೋ ಯೋಜ್ಯಃ ಸ್ವೇದವಿದ್ಭಿಃ ಕಥಞ್ಚಿತ್ ।
ದೃಷ್ಟಂ ಲೋಕೇ ಕಾಷ್ಠಮಸ್ನಿಗ್ಧಮಾಶು ಗಚ್ಛೇದ್ಭಙ್ಗಂ ಸ್ವೇದಯೋಗೈರ್ಗೃಹೀತಮ್
॥೧೯॥

ಅಗ್ನೇರ್ದೀಪ್ತಿಂ ಮಾರ್ದವಂ ತ್ವಕ್ಪ್ರಸಾದಂ ಭಕ್ತಶ್ರದ್ಧಾಂ ಸ್ರೋತಸಾಂ ನಿರ್ಮಲತ್ವಮ್ ।
ಕುರ್ಯಾತ್ ಸ್ವೇದೋ ಹನ್ತಿ ನಿದ್ರಾಂ ಸತನ್ದ್ರಾಂ ಸನ್ಧೀನ್ ಸ್ತಬ್ಧಾನ್ ಶ್ಚೇಷ್ಟಯೇ
ದಾಶು ಯುಕ್ತಃ ॥೨೦॥

ಸ್ನೇಹಕ್ಲಿನ್ನಾ ಧಾತುಸಂಸ್ಥಾಶ್ಚ ದೋಷಾಃ ಸ್ವಸ್ಥಾನಸ್ಥಾ ಯೇ ಚ ಮಾರ್ಗೇಷು ಲೀನಾಃ ।
ಸಮ್ಯಕ್ ಸ್ವೇದೈರ್ಯೋಜಿತೈಸ್ತೇ ದ್ರವತ್ವಂ ಪ್ರಾಪ್ತಾಃ ಕೋಷ್ಠಂ ಯಾನ್ತಿ ದೇಷಾದ
ಶೇಷಾತ್
॥೨೧॥

ಸ್ವೇದ ವಿಧಾನವನ್ನು ತಿಳಿದ ವೈದ್ಯರು ಶರೀರದಮೇಲೆ ಸ್ನೇಹವನ್ನು ಬಳಿಯು ದೆಯೂ ಶರೀರದೊಳಕ್ಕೆ ಸ್ನೇಹಪಾನ ಮಾಡಿಸದೆಯೂ ರೂಕ್ಷರಾದವರಿಗೂ ಎಂದೂ ಸ್ವೇದ ವನ್ನು ಮಾಡಿಸುವುದಿಲ್ಲ. ಒಳಗೆ ಜಿಡ್ಡಿಲ್ಲದ ಚೆಂಡುಸೌದೆಗೆ ಸ್ವೇದಮಾಡಿಸಲು ಬಿಸಿ ದ್ರವವನ್ನು ಸುರಿದರೆ ಕೂಡಲೇ ಅದು ಪುಡಿಯಾಗುವುದು ಎಲ್ಲರಿಗೂ ತಿಳಿದವಿಚಾರವು. ಸರಿಯಾದ ಕ್ರಮದಿಂದ ಪ್ರಯೋಗಿಸಿದ ಸ್ವೇದಕರ್ಮದಿಂದ ಮನುಷ್ಯರಿಗೆ ಅಗ್ನಿದೀಪ್ತಿಯೂ ಅಂಗಮಾರ್ದವವೂ ಅನ್ನರುಚಿಯೂ ಸ್ರೋತಸ್ಸುಗಳು ಮಲರಹಿತಗಳಾಗಿ ಶುದ್ಧವಾಗು ವುದೂ ತೂಕಡಿಕೆಯಿಂದ ಕೂಡಿದ ನಿದ್ರೆಯ ನಾಶವೂ ಆಗುತ್ತದೆ. (ಒಳ್ಳೆ ನಿದ್ರೆ ಯುಂಟಾಗುತ್ತದೆ.) ಬಿಗಿಹಿಡಿದಿರುವ ಸಂಧಿಗಳು ಮೃದುವಾಗಿ ಸುಖವಾಗಿ ಚಲಿಸುತ್ತವೆ. ಸರಿಯಾಗಿ ಸ್ವೇದಕರ್ಮವನ್ನು ಪ್ರಯೋಗಮಾಡಿದರೆ ಸ್ನೇಹಕರ್ಮದಿಂದ ಶರೀರದ ಚರ್ಮ ದಲ್ಲೂ ಧಾತುಗಳಲ್ಲೂ ಅಡಗಿರುವ ದೋಷಗಳೂ ಜಿನುಗು (ಕರಗು) ತ್ತವೆ. ಸ್ವಸ್ಥಾನ ಗಳಲ್ಲಾಗಲೀ ಶಾಖರಕ್ತಾದಿ ಮಾರ್ಗಗಳಲ್ಲಾಗಲೀ ಅಡಗಿರುವ ದೋಷಗಳೂ ನೀರು ನೀರಾಗಿ ಜಿನುಗಿ ಕೋಷ್ಠಕ್ಕೆ ಬಂದು ಒಟ್ಟು ಶರೀರದಿಂದಲೇ ಹೊರಕ್ಕೆ ಹೊರಟು ಬರು ತ್ತವೆ.

ಸ್ವೇದಸ್ರಾವೋ ವ್ಯಾಧಿಹಾನಿರ್ಲಘುತ್ವಂ ಶೀತಾರ್ಥಿತ್ವಂ ಮಾರ್ದವಂ ಚಾತುರಸ್ಯ ।
ಸಮ್ಯಕ್‌ಸ್ವಿನ್ನೇ ಲಕ್ಷಣಂ ಪ್ರಾಹುರೇತತ್ ಮಿಥ್ಯಾಸ್ವಿನ್ನೇ ವ್ಯತ್ಯಯೇನೈತದೇವ ॥೨೨॥
ಸ್ವಿನ್ನೇಽತ್ಯರ್ಥಂ ಸನ್ಧಿಪೀಡಾ ವಿದಾಹಃ ಸ್ಫೋಟೋತ್ಪತ್ತಿಃ ಪಿತ್ತರಕ್ತಪ್ರಕೋಪಃ ।
ಮೂರ್ಛಾಭ್ರಾನ್ತಿರ್ದಾಹತೃಷ್ಣೇ ಕ್ಲಮಶ್ಚ ಕುರ್ಯಾತ್ತೂರ್ಣಂ ತತ್ರ ಶೀತಂ ವಿಧಾನಮ್ ॥೨೩॥

ಪಾಣ್ಡುರ್ಮೇಹೀ ಪಿತ್ತರಕ್ತೀ ಕ್ಷಯಾರ್ತಃ ಕ್ಷಾಮೋಽಜೀರ್ಣೀ ಚೋದರಾರ್ತೋ ವಿಷಾರ್ತಃ ।
ತೃಟ್‌ಛರ್ದ್ಯಾರ್ತೋ ಗರ್ಭಿಣೀ ಪೀತಮದ್ಯೋ ನೈತೇಸ್ವೇದ್ಯಾಯಶ್ಚಮರ್ತ್ಯೋಽತಿ ಸಾರೀ
ಸ್ವೇದಾದೇಷಾಂ ಯಾನ್ತಿದೇಹಾ ವಿನಾಶಂ ಚಾಸಾಧ್ಯತ್ವಂ ಯಾನ್ತಿಚೈಷಾಂ ವಿಕಾರಾಃ ॥೨೪॥
ಸ್ವೇದ್ಯೈಃ ಸಾಧ್ಯೋದುರ್ಬಲೋಽಜೀರ್ಣಭಕ್ತಃ ಸ್ಯಾತಾಂ ಚೇದ್ವಾ ಸ್ವೇದನೀಯೌ ತತಸ್ತೌ ॥೨೫॥

ಬೆವರುವುದು ನಿಂತು ರೋಗನಿವಾರಣೆಯಾಗಿ ತಣ್ಣಗಿರುವ ವಸ್ತುವಿನಲ್ಲಿ ಪ್ರೀತಿ ಯುಂಟಾಗಿ ದೇಹವು ಮೃದುವಾಗುವುದು ಇವು ಸರಿಯಾಗಿ ಸ್ವೇದಕರ್ಮಮಾಡಿಕೊಂಡಿ ರುವ ಪುರುಷನ ಲಕ್ಷಣಗಳು. ಇದಕ್ಕೆ ಬದಲಾಗಿದ್ದರೆ ಮಿಥ್ಯಾಸ್ವೇದಮಾಡಿರುವವನ ಲಕ್ಷಣಗಳೆಂದು ತಿಳಿಯಬೇಕು. ಅತಿ ಸ್ವೇದದಿಂದ ಪಿತ್ತರಕ್ತಗಳು ಪ್ರಕೋಪಗೊಂಡು ಅಸ್ಥಿಸಂಧಿಗಳಲ್ಲಿ ನೋವೂ ಎದೆಯುರಿತ ಮೈಮೇಲೆ ಗುಳ್ಳೆಗಳೇಳುವುದೂ ಪ್ರಜ್ಞೆ ತಪ್ಪಿ

ವುದು, ತಲೆತಿರುಗುವುದು, ಮೈಉರಿತ, ಬಾಯಾರಿಕೆ, ಆಯಾಸ ಇವುಗಳುಂಟಾಗುತ್ತವೆ. ಈ ಸಂದರ್ಭದಲ್ಲಿ ಶೀತಚಿಕಿತ್ಸೆಯನ್ನೂ ಶೀತೋಪಚಾರಗಳನ್ನೂ ಶೀಘ್ರವಾಗಿ ಮಾಡಿಸಬೇಕು. ಪಾಂಡುರೋಗಿ, ಪ್ರಮೇಹಿ, ರಕ್ತಪಿತ್ತರೋಗಿ, ಕ್ಷಯರೋಗಿ, ಕೃಶನು, ಅಜೀರ್ಣರೋಗಿ, ಉದರರೋಗಿ, ವಿಷಭಕ್ಷಿಸಿರುವವನು, ನೀರಡಿಕೆಯುಳ್ಳವನು, ವಮನ ಮಾಡುತ್ತಿರುವವನು, ಗರ್ಭಿಣಿಯು, ಮದ್ಯಪಾನಮಾಡಿರುವವನು, ಅತಿಸಾರ ರೋಗಿ ಇವರುಗಳಿಗೆ ಸ್ವೇದವನ್ನುಮಾಡಿಸಬಾರದು. ಇವರಿಗೆ ಸ್ವೇದಮಾಡಿಸಿದರೆ ಸತ್ತುಹೋಗುತ್ತಾರೆ. ಅಥವಾ ಇವರ ರೋಗಗಳು ಅಸಾಧ್ಯಗಳಾಗುತ್ತವೆ. ದುರ್ಬಲನೂ ಅಜೀರ್ಣ ರೋಗಿಯೂ ಇವರಿಬ್ಬರೂ ಕೆಲವು ಸಾರಿ ಸ್ವೇದಕರ್ಮದಿಂದ ಲಾಭಪಡೆಯುತ್ತಾರೆ.

ಏತೇಷಾಂ ಸ್ವೇದಸಾಧ್ಯಾ ಯೇ ವ್ಯಾಧಯಸ್ತೇಷು ಬುದ್ಧಿಮಾನ್ ।
ಮೃದೂನ್ ಸ್ವೇದಾನ್ ಪ್ರಯುಞ್ಜೀತ ತಥಾ ಹೃನ್ಮುಷ್ಕದೃಷ್ಟಿಷು ॥೨೫॥
ಸರ್ವಾನ್ ಸ್ವೇದಾನ್ನಿವಾತೇ ಚ ಜೀರ್ಣಾನ್ನಸ್ಯಾವಚಾರಯೇತ್ಪಿ ।
ಸ್ನೇಹಾಭ್ಯಕ್ತ ಶರೀರಸ್ಯ ಶೀತೈರಾಚ್ಛಾದ್ಯ ಚಕ್ಷುಷೀ ॥೨೬॥
ಸ್ವಿದ್ಯಮಾನಸ್ಯ ಚ ಮುಹುರ್ಹೃದಯಂ ಶೀತಲೈಃ ಸ್ಪೃಶೇತ್ ।
ಸಮ್ಯಕ್‌ಸ್ವಿನ್ನಂ ವಿಮೃದಿತಂ ಸ್ನಾತಮುಷ್ಣಾಮ್ಬುಭಿಃ ಶನೈಃ ॥೨೭॥
ಸ್ವಭ್ಯಕ್ತಂ ಪ್ರಾವೃತಾಙ್ಗಂ ಚ ನಿವಾತಶರಣಸ್ಥಿತಮ್ ।
ಭೋಜಯೇದನಭಿಷ್ಯನ್ದಿ ಸರ್ವಂ ವಾಚಾರಮಾದಿಶೇತ್ ॥೨೮॥

ಸ್ವೇದಸಾಧ್ಯರೋಗಗಳಿಗೆ ಮೃದುವಾಗಿ ಸ್ವೇದಮಾಡಿಸಬೇಕು. ಹಾಗೆಯೇ ಹೃದಯ, ಅಂಡಕೋಶ, ನೇತ್ರಗಳಿಗೂ ಸ್ವಲ್ಪವೇ ಸ್ವೇದಮಾಡಿಸಬೇಕು. ಎಲ್ಲಾ ರೋಗಿಗಳಿಗೂ ಮೈಗೆಲ್ಲಾ ಬಲಾತೈಲ ಮೊದಲಾದುವುಗಳಿಂದ ಲೇಪನವನ್ನು ಮಾಡಿಸಿ ಎದುರುಗಾಳಿ ಬೀಸದಿರುವ ಸ್ಥಳದಲ್ಲಿ ಕೂರಿಸಿ ಆಹಾರವು ಜೀರ್ಣಿಸಿದಮೇಲೆ ಕಣ್ಣುಗಳನ್ನು ತಣ್ಣಗಿರುವ ಬಟ್ಟೆಯಿಂದ ಮುಚ್ಚಿ ಸ್ವೇದಕರ್ಮವನ್ನು ಮಾಡಿಸಬೇಕು. ಸ್ವೇದಮಾಡುತ್ತಿರುವಾಗ ಪದೇ ಪದೇ ತಣ್ಣಗಿರುವ ಬಟ್ಟೆ ಹತ್ತಿಮುದ್ದೆಗಳನ್ನು ಹೃದಯದ ಮೇಲಿಟ್ಟು ಸ್ವೇದಮಾಡಿಸಬೇಕು. ಸರಿಯಾಗಿ ಸ್ವೇದಮಾಡಿಸಿದಮೇಲೆ ಮೈಯ್ಯನ್ನೆಲ್ಲಾ ಮೆತ್ತಗೆ ಹಿಸುಕಿ ಬಿಸಿನೀರಿನಲ್ಲಿ ಸ್ನಾನಮಾಡಿಸಿ ಬಲಾತೈಲವನ್ನು ಮೆಲ್ಲಗೆ ಮೈಮೇಲೆ ಲೇಪನ ಮಾಡಿಸಿ ಬಟ್ಟೆಗಳನ್ನು ಅವನ ಶರೀರಕ್ಕೆ ಹೊದ್ದಿಸಿ ಎದುರುಗಾಳಿ ಬೀಸದಿರುವ ಕೊಠಡಿಯಲ್ಲಿ ಕೂಡಿಸಿ ಮೈಭಾರವಾಗದಂತೆ ಮಾಡತಕ್ಕ ಆಹಾರವನ್ನು ಭೋಜನಮಾಡಿಸಿ ಯಥೋಕ್ತರೀತಿಯಿಂದ ಉಪಚರಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಸ್ವೇದಾವಚಾರಣೀಯ ಚಿಕಿತ್ಸಾನಾಮ ದ್ವಾತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ತ್ರಯಸ್ತ್ರಿಂಶತ್ತಮೋಽಧ್ಯಾಯಃ

ಅಥಾತೋ ವಮನವಿರೇಚನ ಸಾಧ್ಯೋಪದ್ರವಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ವಮನ ಮತ್ತು ವಿರೇಚನಗಳಿಂದ ಗುಣವಾಗತಕ್ಕ ರೋಗಗಳಿಗೆ ಯೋಗ್ಯವಾದ ಚಿಕಿತ್ಸಾವಿಧಾನಗಳನ್ನು ವಿವರಿಸುತ್ತೇವೆ.

ದೋಷಾಃ ಕ್ಷೀಣಾ ಬೃಂಹಯಿತವ್ಯಾಃ ಕುಪಿತಾಃ ಪ್ರಶಮಯಿತವ್ಯಾಃ ವೃದ್ಧಾ ನಿರ್ಹರ್ತವ್ಯಾಃ ಸಮಾಃ ಪರಿಪಾಲ್ಯಾ ಇತಿ ಸಿದ್ಧಾಂತಃ ||೩||

ಸ್ವಪ್ರಮಾಣಕ್ಕಿಂತಲೂ ಕಡಮೆಯಾದ ದೋಷಗಳನ್ನು ವೃದ್ಧಿಮಾಡಬೇಕು. ಅವು ತಮ್ಮ ಸ್ಥಾನಗಳಲ್ಲೇ ವೃದ್ಧಿಯಾದರೆ ಸಂಶಮನೌಷಧಿಗಳನ್ನು ಪ್ರಯೋಗಿಸಿ ತಗ್ಗಿಸಬೇಕು. ಅತಿಯಾಗಿ ವೃದ್ಧಿಗೊಂಡು ಸ್ವಸ್ಥಾನಗಳನ್ನು ಬಿಟ್ಟು ಮುನ್ನುಗ್ಗಿದರೆ ಶೋಧನೌಷಧಿಗಳನ್ನು ಪ್ರಯೋಗಿಸಿ ಹೊರಕ್ಕೆ ಹೊರಡಿಸಬೇಕು. ವೃದ್ಧಿಯು ಎರಡು ವಿಧ. ಚಯರೂಪ ಅಂದರೆ ಸ್ವಸ್ಥಾನದಲ್ಲಿ ಒಟ್ಟುಗೂಡಿರುವುದು. ಕರಗಿ ಹರಡಿಕೊಂಡು ಇತರ ದೋಷಗಳ ಕಡೆಗೂ ನುಗ್ಗುವುದು. ಇದಕ್ಕೆ ಪ್ರಕೋಪವೆಂದು ಹೆಸರು. ಸ್ವಸ್ಥಾನದಲ್ಲಿ ಸಮಪ್ರಮಾಣದಿಂದಿದ್ದರೆ ಹೆಚ್ಚು ಕಡಮೆಯಾಗದಂತೆ ಕಾಪಾಡಬೇಕು. ಇದೇ ಆಯುರ್ವೇದ ಚಿಕಿತ್ಸೆಯ ಮೂಲಸಿದ್ಧಾಂತವು.

ಪ್ರಾಧಾನ್ಯೇನ ವಮನ ವಿರಚನೇ ವರ್ತೇತೇ ನಿರ್ಹರಣೇ ದೋಷಾಣಾಮ್ । ತಸ್ಮಾತ್ ತಯೋರ್ವಿಧಾನಮುಚ್ಯಮಾನಮುಪಧಾರಯ—ಅಥಾತುರಂ ಸ್ನಿಗ್ಧಂ ಸ್ವಿನ್ನಮಭಿಷ್ಯನ್ದಿಭಿರಾಹಾರೈರನವಬದ್ಧದೋಷಮವಲೋಕ್ಯಶ್ವೋ ವಮನಂ ಪಾಯಯಿತಾಸ್ಮೀತಿ ಸಮ್ಭೋಜಯೇತ್ ತೀಕ್ಷ್ಣಾಗ್ನಿಂ ಬಲವಂತ ಬಹುದೋಷಂ ಮಹಾವ್ಯಾಧಿ ಪರೀತಂ ವಮನಸಾತ್ಮ್ಯಂ ಚ ||೪||

ಭವತಿ ಚಾತ್ರ—ಪೇಶಲ್ಯೈರ್ವಿವಿಧೈರನ್ನೈರ್ದೋಷಾಮುತ್ಕ್ಲೇಶ್ಯ ದೇಹಿನಃ । ಸ್ನಿಗ್ಧಸ್ವಿನ್ನಾಯ ವಮನಂ ದತ್ತಂ ಸಮ್ಯಕ್ ಪ್ರವರ್ತತೇ ||೫||

ಅಥಾಪರೇದ್ಯುಃ ಪೂರ್ವಾಹ್ಣೇ ಸಾಧಾರಣೇ ಕಾಲೇ ವಮನದ್ರವ್ಯ ಕಷಾಯಕಲ್ಕ ಚೂರ್ಣ ಸ್ನೇಹಾನಾಮನ್ಯತಮಸ್ಯ ಮಾತ್ರಾಂ ಪಾಯಯಿತ್ವಾ ವಾಮಯೇದ್ಯಥಾಯೋಗಂ ಕೋಷ್ಠ ವಿಶೇಷಮವೇಕ್ಷ್ಯ ಅಸಾತ್ಮ್ಯ ಬೀಭತ್ಸದುರ್ಗನ್ಧದುರ್ದರ್ಶನಾನಿ ಚ ವಮನಾನಿ ವಿದಧ್ಯಾತ್ ಅತೋ ವಿಪರೀತಾನಿ ವಿರೇಚನಾನಿ ತತ್ರ ಸುಕುಮಾರಂ ಕೃಶಂ ಬಾಲಂ ವೃದ್ಧಂ ಭೀರುಂ ವಾ ವಮನಸಾಧ್ಯೇಷು ವಿಕಾರೇಷು ಕ್ಷೀರದಧಿತಕ್ರಯವಾಗೂನಾಮನ್ಯತಮಮಾಕಣ್ಠಂ ಪಾಯಯೇತ್ ಪೀತೌಷಧಂ ಚ ಪಾಣಿಭಿರಗ್ನಿ ತಪ್ತೈಃ ಪ್ರತಾಪ್ಯಮಾನಂ ಮುಹೂರ್ತಮುಪೇಕ್ಷೇತ ತಸ್ಯ ಚ ಸ್ವೇದಪ್ರಾದುರ್ಭಾವೇಣ ಶಿಥಿಲತಾಮಾಪನ್ನಂ ಸ್ವೇಭ್ಯಃ ಸ್ಥಾನೇಭ್ಯಃ ಪ್ರಚಲಿತಂ ಕುಕ್ಷಿಮನುಸೃತಂ ಜಾನೀಯಾತ್

ತತಃ ಪ್ರವೃತ್ತಹೃಲ್ಲಾಸಂ ಜ್ಞಾತ್ವಾ ಜಾನುಮಾತ್ರಾಸನೋಪವಿಷ್ಟಮಾಪ್ತೈರ್ಲಲಾಟೇ ಪೃಷ್ಠೇ ಪಾರ್ಶ್ವಯೋಃ ಕಣ್ಠೇ ಚ ಪಾಣಿಭಿಃ ಸುಪರಿಗೃಹೀತಮಂಙ್ಗುಳೀಗನ್ಧರ್ವಹಸ್ತೋತ್ಪಲನಾಳಾನಾಮನ್ಯತಮೇನ ಕಣ್ಠಮಭಿಸ್ಪೃಶನ್ತಂ ವಾಮಯೇತ್ತಾವದ್ಯಾವತ್ಸಮ್ಯಗ್ವಾನ್ತಲಿಙ್ಗಾನೀತಿ ||೬||

ಬಸ್ತಿಪ್ರಯೋಗದಿಂದ ಪಕ್ವಾಶಯದಲ್ಲಿರುವ ವಾತಪಿತ್ತಕಫಗಳು ಹೊರಕ್ಕೆ ಬರುತ್ತವೆ. ಧೂಮಪಾನ, ನಸ್ಯಕರ್ಮ, ಕಬಳಧಾರಣಗಳಿಂದ ಕತ್ತಿನ ಮೇಲ್ಭಾಗದ ದೋಷಗಳು ಸ್ವಲ್ಪಸ್ವಲ್ಪವಾಗಿ ಹೊರಕ್ಕೆಬರುತ್ತವೆ. ಅಧಿಕಪ್ರಮಾಣದಲ್ಲಿ ದೋಷಗಳನ್ನು ಹೊರಕ್ಕೆ ಬರಿಸುವುದರಿಂದ ವಮನವಿರೇಚನ ಪ್ರಯೋಗಗಳೇ ಅತಿ ಶ್ರೇಷ್ಠವಾದುವು. ಆದಕಾರಣ ಅವುಗಳ ಪ್ರಯೋಗ ಕ್ರಮಗಳನ್ನು ತಿಳಿಸುತ್ತೇವೆ. ಸಾವಧಾನದಿಂದ ಕೇಳು ಎಂದು ಗುರುಗಳು ಸುಶ್ರುತನಿಗೆ ಹೇಳಿದರು. ರೋಗಿಗೆ ಸ್ನೇಹಸ್ವೇದಗಳನ್ನು ಮಾಡಿಸಿ ಅಭಿಷ್ಯಂದಿಗಳಾದ ಮೊಸರು ಮೊದಲಾದುವನ್ನು ಮಿಶ್ರಮಾಡಿದ ಆಹಾರವನ್ನು ಭೋಜನ ಮಾಡಿಸಿ ದೋಷಗಳು ಸಡಿಲಿಸಿರುತ್ತೆಂದು ತಿಳಿದು ತೀಕ್ಷ್ಣಾಗ್ನಿಯುಳ್ಳ, ಬಲಿಷ್ಠನಾದ, ಅಧಿಕದೋಷವುಳ್ಳ, ಮಹಾವ್ಯಾಧಿಪೀಡಿತನಾದ, ವಮನಮಾಡಲು ಅಭ್ಯಾಸವುಳ್ಳ ರೋಗಿಗೆ ಹಿಂದಿನದಿನ ಬಹಳ ಪುಷ್ಟಿಕರಗಳಾದ ಆಹಾರದಿಂದ ಭೋಜನಮಾಡಿಸು (ಗ್ರಾಮ್ಯಾನೂಪೌದಕ ಮಾಂಸಾದಿಗಳನ್ನು ಮಿಶ್ರಮಾಡಿದ ಆಹಾರವನ್ನು ಭೋಜನ ಮಾಡಿಸಬೇಕು.) ವುದರಿಂದ ಕಫವು ಕೆರಳಿ ದೋಷಗಳು ಹೊರಕ್ಕೆ ಬರಲು ಸುಲಭವಾಗುತ್ತದೆ. ಇದೇ ಅಭಿಪ್ರಾಯವನ್ನು ಸುಲಭವಾಗಿ ತಿಳಿಸಲು ಹೇಳಿರುವ ಶ್ಲೋಕದ ಅರ್ಥವೇನೆಂದರೆ—ರೋಗಿಗೆ ಮೃದುವಾಗಿರುವ ಆಹಾರಗಳನ್ನು ಭೋಜನಮಾಡಿಸಿ ಸ್ನೇಹಸ್ವೇದಗಳನ್ನು ಮಾಡಿ ದೋಷಗಳನ್ನು ಕೆರಳಿಸಿ ವಮನೌಷಧವನ್ನು ಪ್ರಯೋಗಿಸಿದರೆ ದೋಷಗಳು ಸರಿಯಾಗಿ ಹೊರಕ್ಕೆ ಬಂದುಬಿಡುತ್ತವೆ ಎಂದರ್ಥ. ಸಾಧಾರಣ ಕಾಲದಲ್ಲಿ ಅತಿ ಬೇಸಿಗೆಯೂ ಅತಿ ಚಳಿಯೂ ಇಲ್ಲದಿರುವ (ಚೈತ್ರ, ಶ್ರಾವಣ, ಕಾರ್ತಿಕ ಮಾಸಗಳು ಕ್ರಮವಾಗಿ ಕಫ, ವಾತ, ಪಿತ್ತಹರಣಕ್ಕೆ ಯೋಗ್ಯವಾದುವು). ಮಾರನೆಯ ದಿವಸ ಪ್ರಾತಃಕಾಲದಲ್ಲಿ ರೋಗಿಯ ಕೋಷ್ಠಕ್ಕೆ ತಕ್ಕಂತೆ (ಮೃದು, ಮಧ್ಯ, ಕ್ರೂರ) ವಮನ ದ್ರವ್ಯಗಳ ಕಷಾಯ, ಕಲ್ಕ, ಚೂರ್ಣ, ಸ್ನೇಹಗಳಲ್ಲೊಂದನ್ನು ಸರಿಯಾದ ಪ್ರಮಾಣದಿಂದ ಕುಡಿಸಿ ವಮನ ಮಾಡಿಸಬೇಕು. ಕಲ್ಕ, ಮೋದಕ, ಚೂರ್ಣಗಳಾದರೆ ೧ ಕರ್ಷದಷ್ಟನ್ನೂ ಲೇಹವಾದರೆ ೨ ಕರ್ಷ ಅಥವಾ ೧ ಪಲ ಪ್ರಮಾಣದಷ್ಟನ್ನೂ ವಯಸ್ಸು ರೋಗದ ಬಲಾಬಲಗಳಿಗೆ ಅನುಗುಣವಾಗಿ ನಿರ್ಧರಿಸಬೇಕು. ಅಭ್ಯಾಸವಿಲ್ಲದ ವಿಕೃತಾಕಾರಗಳಾಗಿ ದುರ್ಗಂಧವುಳ್ಳವಾಗಿ ನೋಡುವುದಕ್ಕಾಗದ ಆಕಾರವುಳ್ಳವಾಗಿ ವಮನ ದ್ರವ್ಯಗಳಿರುತ್ತವೆ. ಸುಕುಮಾರ ದೇಹವುಳ್ಳ, ಕ್ಷೀಣದೇಹವುಳ್ಳ, ಬಾಲಕ, ವೃದ್ಧ, ಅಂಜುಪುರುಕರುಗಳಿಗೆ ವಮನದಿಂದ ಗುಣವಾಗುವ ರೋಗಗಳಲ್ಲಿ ಮೊದಲು ಹಾಲು, ಮೊಸರು, ಮಜ್ಜಿಗೆ, ಯಾವಾಗೂ ಇವುಗಳಲ್ಲೊಂದನ್ನು ಕಂಠಪೂರ್ತಿಯಾಗಿ ಕುಡಿಸಿ ಔಷಧಿಯನ್ನು ಕುಡಿಸಿದಮೇಲೆ ಕೈಗಳನ್ನು ಬೆಂಕಿಕಡೆಗೆ ತೋರಿಸಿ ಬಿಸಿಮಾಡಿ ಹೊಟ್ಟೆಯಮೇಲೆ ಶಾಖ

ಕೊಟ್ಟು ೧ ಮುಹೂರ್ತಕಾಲ ೪೮ ನಿಮಿಷ ಅಥವಾ ೨ ಘಳಿಗೆ ನಿರೀಕ್ಷಿಸಿ ಮೈಬೆವರಿ ದೋಷಗಳು ಸಡಿಲಿಸಿ ತಮ್ಮ ಸ್ಥಾನಗಳಿಂದ ಹೊಟ್ಟೆಗೆ ಬರುವುದನ್ನು ಗಮನಿಸಬೇಕು. ಅನಂತರ ರೋಗಿಗೆ ಬಾಯಿಯಲ್ಲಿ ನೀರು ಜಿನುಗುವುದನ್ನು ತಿಳಿದು ಮಂಡಿಮಟ್ಟದ ಆಸನ ದಲ್ಲಿ ಕೂರಿಸಿ ಆಪ್ತರಿಂದ ಅವನನ್ನು ಹಣೆ, ಬೆನ್ನು, ಪಕ್ಕೆಗಳು, ಕತ್ತುಗಳಲ್ಲಿ ಕೈಗಳಿಂದ ಹಿಡಿದುಕೊಳ್ಳುವಂತೆ ಮಾಡಿ ಬೆರಳು, ಹರಳಕಡ್ಡಿ, ತಾವರೆದಂಟುಗಳಿಂದ ರೋಗಿಯ ಗಂಟಲನ್ನು ಮುಟ್ಟಿಸಿ ಸರಿಯಾದ ವಮನ ಲಕ್ಷಣಗಳು ಕಾಣುವವರೆಗೂ ವಮನಮಾಡಿಸ ಬೇಕು. (ರೋಗಿಗೆ ಮೈಜುಮ್ಮೆಂದು ರೋಮಾಂಚವಾದರೆ ದೋಷಗಳು ಸ್ವಸ್ಥಾನದಿಂದ ಚಲಿಸುತ್ತವೆಂದೂ ಹೊಟ್ಟೆಉಬ್ಬಿದರೆ ದೋಷಗಳು ಹೊಟ್ಟೆಗೆ ಸೇರಿ ಜಮಾವಣೆಯಾಗಿರು ತ್ತವೆಂದೂ ಬಾಯಿ ನೀರೂರಿದರೆ ವಮನ ಪೂರ್ವರೂಪವೆಂದೂ ತಿಳಿಯಬೇಕು.)

ಭವತಶ್ಚಾತ್ರ

ಕಫಪ್ರಸೇಕಂ ಹೃದಯಾವಿಶುದ್ಧಿಂ ಕಣ್ಡೂಂ ಚ ದುಃಛರ್ದಿತಲಿಙ್ಗಮಾಹುಃ ।
ಪಿತ್ತಾತಿಯೋಗಂ ಚ ವಿಸಂಜ್ಞತಾಂ ಚ ಹೃತ್ಕಣ್ಠಪೀಡಾಮಪಿ ಚಾತಿವಾನ್ತೇ ॥೭॥
ಪಿತ್ತೇ ಕಫಸ್ಯಾನುಸುಖಂ ಪ್ರವೃತ್ತೇ ಶುದ್ಧೇಷು ಹೃತ್ಕಣ್ಠ ಶಿರಃಸ್ಸು ಚಾಪಿ ।
ಲಘೌ ಚ ದೇಹೇ ಕಫಸಂಸ್ರವೇ ಚ ಸ್ಥಿತೇ ಸುವಾನ್ತಂ ಪುರುಷಂ ವ್ಯವಸ್ಯೇತ್ ॥೮॥

ವಮನಕರ್ಮದ ಅಯೋಗ, ಅತಿಯೋಗ ಲಕ್ಷಣಗಳನ್ನು ಹೇಳುತ್ತಾರೆ—ಬಾಯಿ ನಿಂದ ಕಫ ಜೊಲ್ಲು ಸುರಿಯುವುದು, ಹೃದಯವು ಶುದ್ಧಿಯಾಗಿರದೆ ಕಫ ಲೇಪನವಾದಂತೆ ಭಾವನೆಯುಂಟಾಗುವುದು, ನವೆಯಾಗುವುದು, ಇವು ವಮನದ ಅಯೋಗಲಕ್ಷಣಗಳು. ಹೆಚ್ಚು ಪಿತ್ತವು ವಮನದಿಂದ ಬೀಳುವುದು, ಜ್ಞಾನತಪ್ಪುವುದು, ಹೃದಯಶೂಲೆ, ಕಂಠ ಶೂಲೆಗಳಿರುವುದು ಇವು ಅತಿಯಾಗಿ ವಮನವಾದುದಕ್ಕೆ (ವಮನಾತಿಯೋಗದ) ಲಕ್ಷಣ ಗಳೆಂದು ತಿಳಿಯಬೇಕು. ಕಫವು ವಮನವಾದಮೇಲೆ ಪಿತ್ತವು ಸುಖವಾಗಿ ವಮನವಾ ಗುವುದು, ಹೃದಯ, ಕಂಠ, ಶಿರಸ್ಸುಗಳು ಶುದ್ಧಿಯಾಗಿ ದೇಹವು ಹಗುರವಾಗಿ ಕಫ ಸ್ರಾವ ವಾಗುವುದು ನಿಂತರೆ ಸರಿಯಾದ ವಿಧದಿಂದ ವಮನವಾಗಿರುತ್ತೆಂದು ತಿಳಿಯಬೇಕು.

ಟಿಪ್ಪಣಿ—ಕೆಲವು ವೈದ್ಯರು ವಮನ ವಿರೇಚನಗಳ ಸಮ್ಯಗ್ಯೋಗ ಹೀನಯೋಗ ಅತಿಯೋಗಗಳನ್ನು ಅವುಗಳ ಲಕ್ಷಣಗಳಿಂದಲೂ ವೇಗಸಂಖ್ಯೆಗಳಿಂದಲೂ ಹೊರಕ್ಕೆ ಬಂದ ದ್ರವ್ಯಗಳ ಪ್ರಮಾಣಗಳಿಂದಲೂ ನಿರ್ಧರಿಸುತ್ತಾರೆ. ಹೇಗೆಂದರೆ—ವಮನ ವಿರೇಚನಗಳ ಸರಿಯಾದ ಲಕ್ಷಣಗಳಿಂದ ತಿಳಿಯುವುದು ಲೈಂಗಿಕ ಲಕ್ಷಣಗಳು. ೪, ೬, ೮ ಸಾರಿ ವಮನವಾದರೆ ವಮನದ ಹೀನ ಮಧ್ಯಮ ಉತ್ಕೃಷ್ಟವೇಗಗಳೆಂದೂ ೧೦, ೨೦, ೩೦ ಸಾರಿ ವಿರೇಚನಗಳಾದರೆ ವಿರೇಚನದ ಹೀನ ಮಧ್ಯಮ ಉತ್ಕೃಷ್ಟವೇಗಗಳೆಂದೂ ತಿಳಿದುಕೊಳ್ಳು ವುದು ವೈಗಿಕ ಲಕ್ಷಣಗಳು. ಶ್ಲೇಷ್ಮ-ಪಿತ್ತಗಳು ೧ ಪ್ರಸ್ಥ-ಅರ್ಧಾಢಕ, ೧ ಆಢಕ ಗಳಷ್ಟು ಪ್ರಮಾಣದಿಂದ ಸ್ರಾವವಾದರೆ ಹೀನ ಮಧ್ಯಮ ಉತ್ತಮ ಮಾನಗಳೆಂದೂ ತಿಳಿದುಕೊಳ್ಳುವುದು ಮಾನಿಕೀಶುದ್ಧಿ ಎಂದು ಹೇಳುತ್ತಾರೆ. ದೀರ್ಘ, ಹ್ರಸ್ವ, ಸ್ಥೂಲ,

ಕೃಶದೇಹದವರೂ ದಟ್ಟವಾಗಿ ವೃದ್ಧಿಯಾಗಿರುವ ಧಾತುವುಳ್ಳವರೂ ಅನೇಕವಿಧ ಪ್ರಕೃತಿಯವರು ಸತ್ವಸಾರ, ಓಕಸಾರಾದಿಗಳಿಂದ ಅನೇಕ ಲಕ್ಷಣಗಳುಳ್ಳ ಶರೀರವನ್ನು ಧರಿಸಿರುವ ಮನುಷ್ಯರಿಗೆ ದೋಷಧಾತು ಮಲಗಳ ಪ್ರಮಾಣವಿಷ್ಟೆಂದು ನಿರ್ಧರಿಸಲಾಗದ ಕಾರಣ ಮಾನಕೀಶುದ್ಧಿಯಿಂದ ಪ್ರಯೋಜನವುಂಟಾಗುವುದಿಲ್ಲ. ಅನೇಕಸಾರಿ ವಮನ ವಿರೇಚನಗಳಾದರೂ ಕೆಲವುವೇಳೆ ಕೆಲವರಿಗೆ ದೋಷಶುದ್ಧಿಯೇ ಆಗಿರುವುದಿಲ್ಲ. ಪ್ರಕೃತಿ, ವಯಸ್ಸು, ಬಲ, ಶರೀರ ದೋಷಗಳನ್ನು ಲಕ್ಷ್ಯ ಮಾಡದೆ ಕೆಲವರಿಗೆ ಕೆಲವುಸಾರಿ ವಮನ ವಿರೇಚನಗಳ ವಿಸರ್ಜನೆಯಿಂದಲೇ ದೋಷಶುದ್ಧಿಯಾಗುತ್ತದೆ. ಆದ್ದರಿಂದ ವೈಗಿಕೀಶುದ್ಧಿಯೂ ಲಾಭಕರವಲ್ಲ. ಆದ್ದರಿಂದ ಕಫಸ್ರಾವ ನಿಲ್ಲುವುದು ಮೊದಲಾದ ಸಮ್ಯಗ್ಯೋಗ ಲಕ್ಷಣಗಳಿಂದ ವಮನ ವಿರೇಚನಗಳುಂಟಾಗಿರುತ್ತದೆಂಬ ಲೈಂಗಿಕೀ ಶುದ್ಧಿಯನ್ನೇ ಸುಶ್ರುತಾಚಾರ್ಯರು ಅನುಮೋದಿಸುತ್ತಾರೆ.

ಸಮ್ಯಗ್ವಾನ್ತಂ ಚೈನಮಭಿಸಮೀಕ್ಷ್ಯ ಸ್ನೇಹನವಿರೇಚನಶಮನಾನಾಂ ಧೂಮಾನಾಮನ್ಯತಮಂ ಸಾಮರ್ಥ್ಯತಃ ಪಾಯಯಿತ್ವಾಚಾರಕಮಾದಿಶೇತ್ ||೯|| ಭವನ್ತಿ ಚಾತ್ರ—ತತೋಽಪರಾಹ್ಣೇ ಶುಚಿಶುದ್ಧದೇಹಮುಷ್ಣಾಭಿರದ್ಭಿಃ ಪರಿಷಿಕ್ತಗಾತ್ರಮ್ | ಕುಳತ್ಥಮುದ್ಗಾಢಕಿಜಾಙ್ಗಲಾನಾಂ ಯೂಷೈರಸೈವಾಪ್ಯುಪಭೋಜಯೇತ್ತು ||೧೦|| ಕಾಸೋಪಲೇಪಸ್ವರಭೇದ ನಿದ್ರಾತನ್ದ್ರಾಽಸ್ಯ ದೌರ್ಗನ್ಧ್ಯವಿಷೋಪಸರ್ಗಾಃ | ಕಫಪ್ರಸೇಕಗ್ರಹಣೀಪ್ರದೋಷಾ ನ ಸನ್ತಿ ಜನ್ತೋರ್ವಮತಃ ಕದಾಚಿತ್ ||೧೧|| ಭಿನ್ನೇ ತರೌ ಪುಷ್ಪಫಲ ಪ್ರರೋಹಾ ಯಥಾ ವಿನಾಶಂ ಸಹಸಾ ವ್ರಜನ್ತಿ | ತಥಾ ಹೃತೇ ಶ್ಲೇಷ್ಮಣಿ ಶೋಧನೇನ ತಜ್ಜಾ ವಿಕಾರಾಃ ಪ್ರಶಮಂ ಪ್ರಯಾನ್ತಿ ||೧೨||

ಸರಿಯಾಗಿ ವಮನಮಾಡಿರುತ್ತಾನೆಂಬುದನ್ನು ತಿಳಿದಮೇಲೆ ರೋಗಿಯ ಶಕ್ತಿಗೆ ಅನುಗುಣವಾಗುವಷ್ಟು ಪ್ರಮಾಣದಿಂದ ಸ್ನೇಹನ, ವಿರೇಚನ, ಶಮನಕರಗಳಾದ ಧೂಮಗಳಲ್ಲೊಂದನ್ನು ಪಾನಮಾಡಿಸಿ ಸ್ನಾನಭೋಜನಾದಿಗಳಿಂದ ಉಪಚರಿಸಬೇಕು. ಈ ವಿಷಯದಲ್ಲಿ ಉದಾಹರಿಸಿರುವ ಶ್ಲೋಕಗಳ ಅರ್ಥವನ್ನು ವಿವರಿಸಲಾಗುತ್ತದೆ. ವಮನ ವಿರೇಚನಗಳಿಂದ ದೇಹಶುದ್ಧಿಯಾಗಿರುವ ರೋಗಿಗೆ ಮಧ್ಯಾಹ್ನದಲ್ಲಿ ಬಿಸಿನೀರಿನಿಂದ ಸ್ನಾನಮಾಡಿಸಿ ಹುರುಳಿ, ಹೆಸರು, ತೊಗರಿ ಇವುಗಳ ಕಟ್ಟುಗಳಿಂದಾಗಲೀ ಜಾಂಗಲ ಮೃಗಪಕ್ಷಿಗಳ ಮಾಂಸರಸದಿಂದಾಗಲೀ ಅನ್ನವನ್ನು ಭೋಜನಮಾಡಿಸಬೇಕು. ಒಂದುಸಾರಿ ವಮನಮಾಡಿದವರಿಗೆ ಕಾಸ, ಕಫವು ಸ್ರೋತಸ್ಸುಗಳಲ್ಲಿ ಮೆತ್ತಿರುವುದು, ಸ್ವರಬದಲಾಗುವುದು, ನಿದ್ರೆ, ತೂಕಡಿಕೆ, ಬಾಯಿ ದುರ್ವಾಸನೆಯಾಗಿರುವುದು ವಿಷಸಂಪರ್ಕವಾಗಿರುವುದು, ಕಫವು ಬಾಯಿನಿಂದ ಸೋರುವುದು, ಗ್ರಹಣಿಯದೋಷ ಇವುಗಳೆಲ್ಲಾ ನಿವಾರಣೆಯಾಗುತ್ತವೆ. ಬುಡವನ್ನು ಕತ್ತರಿಸಿದ ಗಿಡದ ಹೂವು, ಕಾಯಿ ಮೊಗ್ಗು, ಚಿಗುರು ಇವುಗಳು ಬೇಗ ನಾಶವಾಗುವಂತೆಯೇ ವಮನಕರ್ಮದಿಂದ ಕಫವಿಕಾರಗಳೆಲ್ಲಾ ಬಲುಬೇಗ ನಿವಾರಣೆಯಾಗುತ್ತವೆ ಎಂದು ತಿಳಿಯಬೇಕು.

ನ ವಾಮಯೇತ್ತೈಮಿರಿಕೋರ್ಧ್ವವಾತ ಗುಲ್ಮೋದರ ಪ್ಲೀಹಕ್ರಿಮಿಶ್ರಮಾರ್ತಾನ್ ।
ಸ್ಥೂಲಕ್ಷತಕ್ಷೀಣ ಕೃಶಾತಿವೃದ್ಧಮೂತ್ರಾತುರಾ ಕೇವಲವಾತರೋಗಾ ॥೧೩॥
ಸ್ವರೋಪಘಾತಾಽಧ್ಯಯನ ಪ್ರಸಕ್ತದುಃಚ್ಛರ್ದಿದುಃ ಕೋಷ್ಠತೃಡಾರ್ತಬಾಲಾ ।
ಊರ್ಧ್ವಾಸ್ರಪಿತ್ತಿಕ್ಷುಧಿತಾತಿರೂಕ್ಷ ಗರ್ಭಿಣ್ಯುದಾವರ್ತಿ ನಿರೂಹಿತಾಂ ಶ್ಚ ॥೧೪॥
ಏತೇಽಪ್ಯಜೀರ್ಣವ್ಯಥಿತಾ ವಾಮ್ಯಾ ಯೇ ಚ ವಿಷಾತುರಾಃ ।
ಅತೀವ ಚೋಲ್ಬಣಕಫಾಸ್ತೇ ಚ ಸ್ಯುರ್ಮಧುಕಾಮ್ಬುನಾ ॥೧೫॥
ಅವಮ್ಯವಮನಾದ್ರೋಗಾಃ ಕೃಚ್ಛ್ರತಾಂ ಯಾನ್ತಿ ದೇಹಿನಾಮ್ ।
ಅಸಾಧ್ಯತಾಂ ವಾ ಗಚ್ಛನ್ತಿ ನೈತೇ ವಾಮ್ಯಾಸ್ತತಃ ಸ್ಮೃತಾಃ ॥೧೬॥

ತಿಮಿರವೆಂಬ ನೇತ್ರರೋಗಿ, ಊರ್ಧ್ವಶ್ವಾಸರೋಗಿ, ಗುಲ್ಮ, ಉದರ, ಪ್ಲೀಹವೃದ್ಧಿ, ಕ್ರಿಮಿರೋಗಿ, ಶ್ರಮಪೀಡಿತರು, ಸ್ಥೂಲದೇಹಿಗಳು, ಕ್ಷತಕ್ಷೀಣರು, ಕೃಶರು, ಅತಿವೃದ್ಧರು, ಮೂತ್ರರೋಗಿಗಳು, ಬರೀವಾತರೋಗಪೀಡಿತರು, ಸ್ವರಭಂಗವುಳ್ಳವರು, ಅಧ್ಯಯನ ಮಾಡುವವರು, ವಮನವೇಗವನ್ನು ತಡೆಯುವವರು, ಛರ್ದಿಮಾಡಿಸುವುದು ಕಷ್ಟ ವಾದವರು (ವಮನವಾಗದಿರುವವರು), ಕ್ರೂರಕೋಷ್ಠವುಳ್ಳವರು, ನೀರಡಿಕೆಯುಳ್ಳವರು, ಬಾಲಕರು, ಊರ್ಧ್ವಗರಕ್ತಪಿತ್ತರೋಗಿಗಳು (ಮೂಗು ಬಾಯಿ ಕಿವಿ ಕಣ್ಣುಗಳಿಂದ ರಕ್ತ ಸೋರತಕ್ಕವರು), ಹಸಿದಿರುವವರು, ಅತಿರೂಕ್ಷದೇಹವುಳ್ಳವರು, ಬಸರಿಯರು, ಉದಾ ವರ್ತಪೀಡಿತರು, ನಿರೂಹಬಸ್ತಿದಾನಮಾಡಿಸಿಕೊಂಡವರು ಇವರುಗಳಿಗೆ ವಮನವನ್ನು ಮಾಡಿಸಬಾರದು ಇವರು ಅಜೀರ್ಣ, ವಿಷ, ಅತ್ಯಂತಕಫಗಳಿಂದ ಪೀಡಿತರಾದರೆ ಅತಿ ಮಧುರದ ಕಷಾಯಪಾನದಿಂದ (ಕೆಲವರಿಗೆ ನೀರಿಗೆ ಜೇನುತುಪ್ಪ ಮಿಶ್ರಮಾಡಿ ಪಾನ ಮಾಡಿಸಿ) ವಮನಮಾಡಿಸಬೇಕು. ವಮನಕ್ಕೆ ಅರ್ಹರಲ್ಲದವರಿಗೆ ವಮನಕರ್ಮ ಮಾಡಿಸಿದರೆ ಅವರ ರೋಗಗಳು ಕೃಚ್ಛ್ರಸಾಧ್ಯಗಳಾಗಿಯೂ ಅಥವಾ ಅಸಾಧ್ಯಗಳಾಗಿಯೂ ಪರಿಣಾಮಹೊಂದುತ್ತವೆಯಾದಕಾರಣ ಇವರು ವಮನಕ್ಕೆ ಅನರ್ಹರೆಂದು ತಿಳಿಯಬೇಕು.

ಟಿಪ್ಪಣಿ : ಊರ್ಧ್ವವಾತವೆಂದರೆ ಮೇಲೆ ಬಿಡುವ ಉಸುರೆಂದು ಕೆಲವರ ಮತ. ಕಫದಿಂದಾಗಲೀ ಅಪಾನವಾತದಿಂದಾಗಲೀ ತಡೆಯಲ್ಪಟ್ಟ ವಾಯುವು ಸರ್ವಕಾಲದಲ್ಲೂ ತೇಗನ್ನುಂಟುಮಾಡುತ್ತದೆಯಾಗಿ ಊರ್ಧ್ವವಾತವೆಂದು ಹೆಸರು.

ವಾಮ್ಯಾಸ್ತು—ವಿಷಶೋಷಸ್ತನ್ಯದೋಷ ವಿಷಮಮನ್ದಾಗ್ನ್ಯುನ್ಮಾದಾಪಸ್ಮಾರಶ್ಲೀಪದಾ ರ್ಬುದವಿದಾರಿಕಾಮೇದೋ ಮೇಹಗರಜ್ವರಾರುಚ್ಯಪಚ್ಯಾಮಾತೀಸಾರಹೃದ್ರೋಗಚಿತ್ತವಿಭ್ರಮ ವಿಸರ್ಪವಿದ್ರಧ್ಯಜೀರ್ಣಮುಖಪ್ರಸೇಕ ಹೃಲ್ಲಾಸಶ್ವಾಸಕಾಸ ಪೀನಸಪೂತೀನಾಸಕಣ್ಠೌಷ್ಠವಕ್ತ್ರಪಾಕ ಕರ್ಣಸ್ರಾವಾಧಿಜಿಹ್ವೋಪಜಿಹ್ವಿಕಾಗಳಶುಣ್ಡಿಕಾಧಃ ಶೋಣಿತಪಿತ್ತಿನಃ ಕಫಸ್ಥಾನಜೇಷು ವಿಕಾರೇಷು ಅನ್ಯೇಷು ಕಫವ್ಯಾಧಿಪರೀತೇಷ್ವಿತಿ ॥೧೭॥

ವಮನಕರ್ಮಕ್ಕೆ ಅರ್ಹರಾದವರನ್ನು ವಿವರಿಸುತ್ತಾರೆ—ವಿಷಪೀಡಿತರು, ಕ್ಷಯರೋಗಿ, ಸ್ತನ್ಯದೋಷವುಳ್ಳಸ್ತ್ರೀ, ವಿಷಮಾಗ್ನಿ, ಮಂದಾಗ್ನಿ, ಉನ್ಮಾದರೋಗಿ, ಅಪಸ್ಮಾರರೋಗಿ,

ಶ್ಲೀಪದ, ಅರ್ಬುದ, ವಿದಾರಿಕ, ಮೇದೋರೋಗಿ, ಮೇಹರೋಗಿ, ಗರಪೀಡಿತ (ಕೃವಿುಸಗು ಹೊಟ್ಟೆಯಲ್ಲಿರುವವನು), ಜ್ವರ, ಅರೋಚಕತೆ, ಗಂಡಮಾಲೆ, ಆಮಾತಿಸಾರ, ಹೃದ್ರೋಗ' ಬುದ್ಧಿಭ್ರಂಶ, ವಿಸರ್ಪ, ವಿದ್ರಧಿ, ಅಜೀರ್ಣ, ಮುಖ,ಪ್ರಸೇಕ (ಜೊಲ್ಲು ಸುರಿಯುವವರು)' ಬಾಯಿನೀರು ಸೋರುವವರು, ಶ್ವಾಸ (ಉಬ್ಬಸ) ಕಾಸ, ಪೀನಸ (ನೆಗಡಿ), ಪೂತಿನಾಸ ಈ ರೋಗಪೀಡಿತರು, ಕಂಠ, ತುಟಿ, ಮುಖ, ಹಣೆಯಲ್ಲಿ ಹುಣ್ಣಾಗಿರುವವರು, ಕಿವಿಯಲ್ಲಿ ಕೀವು ಸೋರುವವರು, ಅಧಿಜಿಹ್ವಿಕ, ಉಪಜಿಹ್ವಿಕಾ ರೋಗಪೀಡಿತರೂ, ಗಳಶುಂಡಿಕಾ, ಅಧೋಗರಕ್ತಪಿತ್ತ ಈ ರೋಗಗಳಿಂದ ಪೀಡಿತರೂ, ಕಫಸ್ಥಾನಗಳಲ್ಲಿ (ಆಮಾಶಯ, ಉರಸ್ಸು, ಕಂಠ, ಶಿರಸ್ಸು) ದೋಷಗಳಿಂದ ಪೀಡಿತರಾದವರೂ ಇತರ ಕಫರೋಗಗಳಿಂದ ಪೀಡಿತರಾದವರೂ ವಮನಕರ್ಮಕ್ಕೆ ಯೋಗ್ಯರು.

ವಿರೇಚನಮಪಿ ಸ್ನಿಗ್ಧಸ್ವಿನ್ನಾಯ ವಾನ್ತಾಯ ಚ ದೇಯಂ ಅವಾನ್ತಸ್ಯ ಹಿ ಸಮ್ಯಗ್ವಿರಿಕ್ತಸ್ಯಾಪಿ ಸತೋಽಧಃ ಸ್ರಸ್ತಃ ಶ್ಲೇಷ್ಮಾ ಗ್ರಹಣೀಂ ಛಾದಯತಿ ಗೌರವಮಾಪಾದಯತಿ ಪ್ರವಾಹಿಕಾಂ ವಾ ಜನಯತಿ ||೧೮||

ಅಥಾತುರಂ ಶ್ವೋ ವಿರೇಚನಂ ಪಾಯಯಿತಾಸ್ಮೀತಿ ಪೂರ್ವಾಹ್ಣೇ ಲಘುಭೋಜಯೇತ್ ಫಲಾಮ್ಲಮುಷ್ಣೋದಕಂ ಚೈನಮನುಪಾಯಯೇತ್ । ಅಥಾಽಪರೇಽಹನಿ ವಿಗತಶ್ಲೇಷ್ಮಧಾತುಮಾತುರೋಪಕ್ರಮಣೀಯಾದವೇಕ್ಷ್ಯಾತುರಮಥಾಸ್ಮೈ ಔಷಧಮಾತ್ರಾಂ ಪಾತುಂ ಪ್ರಯಚ್ಛೇತ್ ||೧೯||

ಸ್ನಿಗ್ಧಸ್ವಿನ್ನದೇಹವುಳ್ಳವರು ವಮನೌಷಧವನ್ನು ಸೇವಿಸಿ ಅನಂತರ ವಿರೇಚನೌಷಧವನ್ನು ಸೇವಿಸಬೇಕು. ವಮನಮಾಡಿಸದೆ ಸರಿಯಾಗಿ ವಿರೇಚನಮಾಡಿಸಿದರೂ ಕಫವು ಸ್ವಸ್ಥಾನದಿಂದ ಕೆಳಕ್ಕೆ ಜಾರಿ ಬಂದು ಗ್ರಹಣಿ ಎಂಬ ಆಶಯದಲ್ಲಿ ತುಂಬಿ ಮೈ ಭಾರವನ್ನೂ ಆಮಶಂಕೆಯನ್ನೂ ಉಂಟುಮಾಡುತ್ತದೆ. ಮಾರನೆಯದಿನ ವಿರೇಚನೌಷಧವನ್ನು ಪ್ರಯೋಗಿಸಬೇಕಾದ ರೋಗಿಗೆ ಈ ದಿನ ಪೂರ್ವಾಹ್ಣದಲ್ಲಿ ಲಘುವಾದ ಆಹಾರದಿಂದ ಭೋಜನಮಾಡಿಸಿ ದಾಳಿಂಬೆ ರಸವನ್ನೂ ಬಿಸಿನೀರನ್ನೂ ಕುಡಿಸಬೇಕು. ಆ ಮಾರನೆಯದಿನ ಆತುರೋಪಕ್ರಮಣೀಯಾಧ್ಯಾಯದಲ್ಲಿ ಹೇಳಿರುವಂತೆ ಕಫದೋಷದ ನಿವಾರಣೆಯಾಗಿರುತ್ತದೆಂಬುದನ್ನು ಪರಿಶೀಲಿಸಿ ಪ್ರಾತಃಕಾಲ ರೋಗಿಗೆ ವಿರೇಚನೌಷಧವನ್ನು ನಿರ್ದಿಷ್ಟ ಪ್ರಮಾಣದಿಂದ ಕುಡಿಸಬೇಕು.

ಟಿಪ್ಪಣಿ : ಮೊದಲನೆಯದಿನ ಸ್ನೇಹಪಾನಮಾಡಿ ಭೋಜನಮಾಡಿರುವ ರೋಗಿಗೆ ಮಾರನೆಯದಿನ ವಮನೌಷಧವನ್ನು ಕುಡಿಸಬೇಕು. ಅನಂತರ ೬ ದಿನಗಳು ಪೇಯಾದಿಪಾನಗಳಿಂದಲೂ ಪುನಃ ೬ ದಿನಗಳು ಸ್ನೇಹಮಿಶ್ರಮಾಡಿದ ಆಹಾರವನ್ನು ಸೇವನೆಮಾಡಿಸಿಯೂ, ಅನಂತರ ಮೂರುದಿನಗಳವರೆಗೆ ಸ್ನೇಹಪಾನ ಮಾಡಿಸಿದ ಮೇಲೆ ಬಿಸಿಯಾಗಿಯೂ ಲಘುವಾಗಿಯೂ ಇರುವ ಅನ್ನವನ್ನು ಭೋಜನಮಾಡಿಸಿ (ಇಲ್ಲಿಗೆ ವಮನ ಪ್ರಯೋಗವಾದಮೇಲೆ ೧೫ ದಿನಗಳಾಗುತ್ತವೆ.) ೧೬ ನೆಯ ದಿವಸ ಪ್ರಾತಃ

ಕಾಲದಲ್ಲಿ ಹೀನ, ಮಧ್ಯಮ, ಉತ್ತಮ ವಿರೇಚನ ಮಾತ್ರೆಗಳು ಅರ್ಧಪಲ, ೧ ಪಲ, ೨ ಪಲಗಳಷ್ಟನ್ನು ರೋಗಿಯ ಬಲಾಬಲಗಳಿಗೆ ತಕ್ಕಂತೆ ಪ್ರಯೋಗಿಸಬೇಕು.

ತತ್ರ ಮೃದುಃ ಕ್ರೂರೋ ಮಧ್ಯ ಇತಿ ತ್ರಿವಿಧಃ ಕೋಷ್ಠೋಭವತಿ । ತತ್ರ ಬಹುಪಿತ್ತೋ ಮೃದುಃ ಸದುಗ್ಧೇನಾಪಿ ವಿರಿಚ್ಯತೇ ಬಹುವಾತಶ್ಲೇಷ್ಮಾಕ್ರೂರಃ ಸ ದುರ್ವಿರೇಚ್ಯಃ ಸಮದೋಷೋ ಮಧ್ಯಮಃ ಸಸಾಧಾರಣ ಇತಿ । ತತ್ರ ಮೃದೌ ಮಾತ್ರಾ ಮೃದ್ವೀ ತೀಕ್ಷ್ಣಾಕ್ರೂರೇ ಮಧ್ಯೇ ಮಧ್ಯಾ ಕರ್ತವ್ಯೇತಿ । ಪೀತೌಷಧಶ್ಚ ತನ್ಮನಾಃ ಶಯ್ಯಾಭ್ಯಾಸೇ ವಿರಿಚ್ಯತೇ ॥೨೦॥

ವಿರೇಚನಂ ಪೀತವಾಂಸ್ತು ನ ವೇಗಾನ್ ಧಾರಯೇದ್ಬುಧಃ ।
ನಿವಾತಶಾಯೀ ಶೀತಾಮ್ಬು ನ ಸ್ಪೃಶೇನ್ನ ಪ್ರವಾಹಯೇತ್ ॥೨೧॥
ಯಥಾ ಚ ವಮನೇ ಪ್ರಸೇಕೌಷಧಕಫಪಿತ್ತಾನಿಲಾಃ ಕ್ರಮೇಣ ।
ಗಚ್ಛನ್ತಿ ಏವಂ ವಿರೇಚನೇ ಮೂತ್ರಪುರೀಷಪಿತ್ತೌಷಧ ಕಫಾ ಇತಿ ॥೨೨॥

ಜನರಲ್ಲಿ ಮೃದು, ಮಧ್ಯ, ಕ್ರೂರ ಭೇದಗಳಿಂದ ೩ ವಿಧ ಕೋಷ್ಠವನ್ನು ವಿಂಗಡಿಸ ಬಹುದು.ಅವುಗಳಲ್ಲಿಬಹು ಪಿತ್ತದೋಷದವರು ಮೃದುಕೋಷ್ಠವುಳ್ಳವರು. ಅವರಿಗೆ ಬರಿಯ ಬಿಸಿಹಾಲನ್ನು ಕುಡಿಸಿದರೆ ವಿರೇಚನಗಳಾಗುತ್ತವೆ. ಅಂದರೆ ಕಬ್ಬಿನರಸ, ಹುಳಿಮಜ್ಜಿಗೆ, ಮೊಸರುಕಟ್ಟು, ಬೆಲ್ಲ, ಚಿಗಳಿ, ತುಪ್ಪ, ಹೊಸಮದ್ಯ, ಬಿಸಿನೀರು, ಪೀಲು (ಬಗಿನಿಹಣ್ಣು) ದ್ರಾಕ್ಷಿಗಳನ್ನು ತಿಂದರೂ ವಿರೇಚನವಾಗುತ್ತದೆ. ಅಧಿಕವಾತ ಕಫದೋಷವುಳ್ಳವರು ಕ್ರೂರಕೋಷ್ಠಿಗಳು. ಅವರಿಗೆ ತಿಗಡೆ, ತ್ರಿಫಲೆ, ಕಟುಕರೋಹಿಣೀ ನೀಲಿಯ ಹಣ್ಣು ಗಳನ್ನು ತಿನ್ನಿಸಿದರೂ ಬಲುಕಷ್ಟದಿಂದ ಮಲವಿಸರ್ಜನೆಯಾಗುತ್ತದೆ. ಸಮದೋಷವುಳ್ಳ ವರು ಸಮಕೋಷ್ಠರು. ಮೃದುಕೋಷ್ಠಿಗಳಿಗೆ ತೀಕ್ಷ್ಣತ್ವಾದಿಗಳನ್ನು ಹೋಗಲಾಡಿಸಿ ಮೃದುಗುಣವುಳ್ಳ ವಿರೇಚನ ದ್ರವ್ಯಗಳನ್ನೇ ಉಪಯೋಗಿಸಬೇಕು. ಕ್ರೂರಕೋಷ್ಠದವರಿಗೆ ಹೆಚ್ಚು ತೀಕ್ಷ್ಣಗುಣವುಳ್ಳ ದ್ರವ್ಯಗಳನ್ನೂ, ಸಾಧಾರಣ ಕೋಷ್ಠವುಳ್ಳವರಿಗೆ ಮಧ್ಯಮ ಗುಣಗಳುಳ್ಳ ದ್ರವ್ಯಗಳನ್ನೇ ವಿರೇಚನ ಮಾಡಿಸಲು ಉಪಯೋಗಿಸಬೇಕು. ವಿರೇಚನೌ ಷಧವನ್ನು ಸೇವಿಸಿದ ಮೇಲೆ ಅದೇ ಮನಸ್ಸಿನಿಂದ ಕೂಡಿದವನಾಗಿ ಹಾಸಿಗೆಯ ಹತ್ತಿರ ದಲ್ಲೇ ಮಲವನ್ನು ವಿಸರ್ಜನೆ ಮಾಡಬೇಕು. ವಿವೇಕಶಾಲಿಯು ವಿರೇಚನೌಷಧವನ್ನು ಸೇವಿಸಿ ವೇಗವನ್ನು ತಡೆಯದೆ ಎದುರುಗಾಳಿ ಬೀಸದಿರುವ ಸ್ಥಳದಲ್ಲಿದ್ದು ತಣ್ಣೀರನ್ನು ಮುಟ್ಟದೆ ಮುಲುಕುತ್ತಾ ಮಲವನ್ನು ವಿಸರ್ಜಿಸಬಾರದು. ವಮನೌಷಧವನ್ನು ಸೇವಿಸಿದರೆ ಕ್ರಮವಾಗಿ ಬಾಯಿನೀರು ಸುರಿಯುವುದು, ಔಷಧ, ಕಫ, ಪಿತ್ತ, ವಾತಗಳು ಹೊರಕ್ಕೆ ಬರುವಂತೆಯೇ ವಿರೇಚನೌಷಧವನ್ನು ಸೇವಿಸಿದರೆ ಕ್ರಮವಾಗಿ ಮೂತ್ರ, ಮಲ, ಪಿತ್ತ, ಔಷಧ, ಕಫಗಳು ಹೊರಕ್ಕೆ ಬಂದುಬಿಡುತ್ತವೆ. ಜೊಲ್ಲು ಸೋರುವುದು, ಮತ್ತು ಕಫ ಪ್ರವರ್ತಿಯಾಗುವುದು ಇವು ವಿರೇಕವೇಗದ ಕಡೆಯ ಸ್ಥಿತಿಯು.

ಭವನ್ತಿ ಚಾತ್ರ—

ಹೃತ್ಕುಕ್ಷ್ಯಶುದ್ಧಿಃ ಪರಿದಾಹಕಣ್ಡೂ ವಿಣ್ಮೂತ್ರಸಙ್ಗಾಶ್ಚ ನ ಸದ್ವಿರಿಕ್ತೇ । ಮಾರ್ಹಾ

ಗುದಭ್ರಂಶ ಕಫಾತಿಯೋಗಾಃ ಶೂಲೋದ್ಗಮಶ್ಚಾತಿವಿರಿಕ್ತಲಿಙ್ಗಮ್ ॥೨೩॥ ಗತೇಷು ದೋಷೇಷು ಕಫಾನ್ವಿತೇಷು ನಾಭ್ಯಾಲಘುತ್ವೇ ಮನಸಶ್ಚ ತುಷ್ಟೌ । ಗತೇಽನಿಲೇ ಚಾಪ್ಯನು ಲೋಮಭಾವಂ ಸಮ್ಯಗ್ವಿರಿಕ್ತಂ ಮನುಜಂ ವ್ಯವಸ್ಯೇತ್ ॥೨೪॥ ಮಂದಾಗ್ನಿಮಕ್ಷೀಣಮ ಸದ್ವಿರಿಕ್ತಂ ನ ಪಾಯಯೇತಾಹನಿ ತತ್ರ ಪೇಯಾಮ್ । ಕ್ಷೀಣಂ ತೃಡಾರ್ತಂ ಸುವಿರೇಚಿತಂ ಚ ತನ್ವೀಮಶೀತಾಂ ಲಘು ಪಾಯಯೇತ ॥೨೫॥ ಬುದ್ಧೇಃ ಪ್ರಸಾದಂ ಬಲಮಿನ್ದ್ರಿಯಾಣಾಂ ಧಾತುಸ್ಥಿರತ್ವಂ ಬಲಮಗ್ನಿದೀಪ್ತಿಮ್ । ಚಿರಾಚ್ಚ ಪಾಕಂ ವಯಸಃ ಕರೋತಿ ವಿರೇಚನಂ ಸಮ್ಯಗುಪಾಸ್ಯಮಾನಮ್ ॥೨೬॥ ಯಥೌದಕಾನಾಮುದಕೇಽಪನೀತೇ ಚರಸ್ಥಿರಾಣಾಂ ಭವತಿ ಪ್ರಣಾಶಃ । ಪಿತ್ತೇಹೃತೇ ತ್ವೇವಮುಪದ್ರವಾಣಾಂ ಪಿತ್ತಾತ್ಮಕಾನಾಂ ಭವತಿ ಪ್ರಣಾಶಃ ॥೨೭॥

ಈ ವಿಚಾರವಾಗಿ ಉದಾಹರಿಸಿರುವ ಶ್ಲೋಕಗಳ ಅಭಿಪ್ರಾಯವೇನೆಂದರೆ—ವಿರೇಚನದ ಹೀನಯೋಗದಲ್ಲಿ ಹೃದಯ ಮತ್ತು ಕುಕ್ಷಿಗುಹೆಗಳು ಶುದ್ಧಿಯಾಗಿರುವುದಿಲ್ಲ. ಮೈಉರಿತ, ನವೆ, ಮಲಮೂತ್ರಗಳ ತಡೆಗಳುಂಟಾಗಿರುತ್ತವೆ. ಅತಿಯೋಗದಿಂದ ಜ್ಞಾನ ತಪ್ಪುವಿಕೆ, ಗುದಭ್ರಂಶ, ಅತಿಯಾದ ಕಫವಿರೇಚನ, ಶೂಲೆ ಇವುಗಳು ಉಂಟಾಗುತ್ತವೆ. ಸಮ್ಯಗ್ಯೋಗದಲ್ಲಿ ಕಫಮಿಶ್ರವಾಗಿ ದೋಷಗಳು ನಿವೃತ್ತಿಯಾಗಿ ನಾಭಿದೇಶವು ಹಗುರವಾಗುತ್ತದೆ. ಮನಸ್ಸಿಗೆ ತೃಪ್ತಿಯುಂಟಾಗುತ್ತದೆ. (ಅಪಾನವಾಯುವು ಗುದದ್ವಾರದಿಂದ) ತಡೆಯಿಲ್ಲದೆ ಹೊರಕ್ಕೆ ಬರುತ್ತದೆ. ಅಗ್ನಿಮಾಂದ್ಯ ಬಲವೃದ್ಧಿ ಮಲಬಂಧಗಳಿರುವ ರೋಗಿಗೆ ಆ ದಿವಸ ಪೇಯವನ್ನು ಪಾನಮಾಡಿಸಬಾರದು. ಕ್ಷೀಣನಾಗಿ ಬಾಯಾರಿಕೆಯುಳ್ಳವನಾಗಿ ಸರಿಯಾಗಿ ವಿರೇಚನಮಾಡಿಯೂ ಇದ್ದರೆ ನೀರಾಗಿಯೂ ಬಿಸಿಯಾಗಿಯೂ ಇರುವ ಪೇಯವನ್ನು ಸ್ವಲ್ಪಮಾತ್ರವೇ ಕುಡಿಸಬೇಕು. ಸರಿಯಾದ ಯೋಗದಿಂದ ಪ್ರಯೋಗಿಸಿದ ವಿರೇಚನದಿಂದ ಬುದ್ಧಿಪಾಟವವೂ ಇಂದ್ರಿಯಗಳಿಗೆ ದಾರ್ಢ್ಯವೂ ಧಾತುಗಳ ಸ್ಥಿರತೆಯೂ ದೇಹಬಲವೂ ಅಗ್ನಿದೀಪನವೂ ಬಹಳ ಕಾಲದ ಮೇಲೆ ಮುದಿತನವೂ ಉಂಟಾಗುತ್ತದೆ. ಕೊಳ, ಸರೋವರ ಮೊದಲಾದ ಜಲಾಶಯಗಳಲ್ಲಿ ನೀರು ಬತ್ತಿ ಹೋದರೆ ಅವುಗಳನ್ನಾಶ್ರಯಿರುವ ಸ್ಥಾವರಗಳಾದ ತಾವರೆ ಮೊದಲಾದುವೂ ಜಂಗಮಗಳಾದ ಮೀನು, ನಳ್ಳಿ, ಕಪ್ಪೆ ಮೊದಲಾದ ಪ್ರಾಣಿಗಳೂ ನಾಶವಾಗುವಂತೆಯೇ ವಿರೇಚನ ಪ್ರಯೋಗದಿಂದ ಪಿತ್ತದೋಷಹರಣವಾದರೆ ಪಿತ್ತಜನ್ಯರೋಗಗಳೂ ನಿವಾರಣೆಯಾಗುತ್ತವೆ.

ಟಿಪ್ಪಣಿ—ಶರೀರ ಮನಸ್ಸುಗಳಿಗೆ ಪರಸ್ಪರವಾಗಿ ಅತ್ಯಂತ ನಿಕಟವಾದ ಸಂಬಂಧವಿರುತ್ತದೆಯಾಗಿ ವಿರೇಚನದಿಂದ ಶರೀರ ಶುದ್ಧಿಯಾದರೆ ಮನಸ್ಸೂ ಶುದ್ಧಿಯಾಗುತ್ತದೆ. ಮನಃಶುದ್ಧಿಯಿಂದ ಬುದ್ಧಿಪ್ರಸಾದವೂ ದೇಹಪುಷ್ಟಿಯಾದರೆ ಧಾತುಗಳೂ ಸ್ಥಿರವಾಗಿಯೇ ಆಗುತ್ತವೆ. ಕೆಲವರ ಮತದಲ್ಲಿ ಬುದ್ಧಿಪ್ರಸನ್ನತೆಯು ವಿರೇಚನ ಪ್ರಯೋಗದಿಂದ ತಾತ್ಕಾಲಿಕವಾಗಿ ಉಂಟಾಗುತ್ತದೆಯಾಗಿ ವಿರೇಚನದ ಗುಣವೆಂದೂ ಅಗ್ನಿದೀಪ್ತಿ ಮೊದಲಾದುವು

ಪಥ್ಯಕ್ರಮುಗಳನ್ನು ಆಚರಿಸಿದನಂತರ ಉಂಟಾಗುತ್ತವೆಂದೂ ವಿರೇಚನದಿಂದ ದೇಹಧಾರಕ ಗಳಾದ ಮಲಗಳು ಕ್ಷೀಣಿಸಿದರೂ ಸ್ರೋತಸ್ಸುಗಳು ಶುದ್ಧಿಯಾಗಿ ತಕ್ರಪಾನಮಾಡಿದವರಿಗೆ ಉಂಟಾಗುವಂತೆಯೇ ಬಲವೃದ್ಧಿಯುಂಟಾಗುತ್ತದೆ. ಹೇಗೆಂದರೆ—ಮಜ್ಜಿಗೆಯನ್ನು ನಿಯಮದಂತೆ ಕುಡಿದರೆ ಸ್ರೋತೋಮಾರ್ಗಗಳು ಶುದ್ಧವಾಗುತ್ತವೆ. ಆಹಾರ ರಸವು ಧಾತುಗಳನ್ನು ಸೇರಿ ದೇಹವನ್ನು ಪುಷ್ಟಿಗೊಳಿಸುತ್ತದೆ. ಶರೀರದ ಬಣ್ಣವೂ ಶುಕ್ರ ವೃದ್ಧಿಯೂ ಕಾಮೋದ್ದೀಪನವೂ ಉಂಟಾಗುತ್ತವೆ.

ಮನ್ದಾಗ್ನ್ಯತಿ ಸ್ನೇಹಿತ ಬಾಲವೃದ್ಧಸ್ಥೂಲಾಃ ಕ್ಷತಕ್ಷೀಣ ಭಯೋಪತಪ್ತಾಃ ।
ಶ್ರಾನ್ತಸ್ತೃಡಾರ್ತೋಽಪರಿಜೀರ್ಣಭಕ್ತೋ ಗರ್ಭಿಣ್ಯಧೋಗಚ್ಛತಿಯಸ್ಯ ಚಾಸೃಕ್ ॥೨೮॥
ನವಪ್ರತಿಶ್ಯಾಯಮದಾತ್ಯಯಿ ಚ ನವಜ್ವರೀ ಯಾ ಚ ನವಪ್ರಸೂತಾ ।
ಶಲ್ಯಾರ್ದಿತಾಶ್ಚಾಪ್ಯ ವಿರೇಚನೀಯಾಃ ಸ್ನೇಹಾದಿಭಿರ್ಯೇ ತ್ವನುಪಸ್ಕೃತಾಶ್ಚ ॥೨೯॥
ಅತ್ಯರ್ಥಪಿತ್ತಾಭಿಪರೀತದೇಹಾ ವಿರೇಚಯೇತ್ತಾನಪಿ ಮನ್ದಮನ್ದಮ್ ।
ವಿರೇಚನೈರ್ಯಾನ್ತಿ ನರಾವಿನಾಶಮಜ್ಞಪ್ರಯುಕ್ತೈರ ವಿರೇಚನೀಯಾಃ ॥೩೦॥

ಅಗ್ನಿ ಮಾಂದ್ಯವುಳ್ಳವನು, ಅತಿ ಸ್ನೇಹಪಾನಮಾಡಿದವನು, ಬಾಲಕರು, ಮುದು ಕರು, ದೇಹ ದಪ್ಪವಾಗಿರುವವರು (ಮೇದಸ್ಸುಳ್ಳವರು), ಕ್ಷತಕ್ಷೀಣರು, ಭಯಗ್ರಸ್ತರು, ಬಳಲಿರುವವರು, ನೀರಡಿಕೆಯುಳ್ಳವರು, ಅಜೀರ್ಣಪೀಡಿತರು, ಗರ್ಭಿಣಿಯರು, ಅಧೋಗ ರಕ್ತಪಿತ್ತಪೀಡಿತರು, ಹೊಸದಾಗಿ ನೆಗಡಿಹಿಡಿದವರು, ಮದ್ಯಪಾನದಿಂದ ಮದವೇರಿ ದವರು, ನವಜ್ವರವುಳ್ಳವರು, ಬಾಣಂತಿಯರು, ಶಲ್ಯಪೀಡಿತರು, ಸ್ನೇಹಸ್ವೇದಗಳಿಂದ ಸಂಸ್ಕಾರಮಾಡಿಕೊಳ್ಳದಿರುವವರು ಇವರಿಗೆ ವಿರೇಚನವನ್ನು ಪ್ರಯೋಗಿಸಕೂಡದು. ಪಿತ್ತವೃದ್ಧಿಯಾಗಿರುವವರಿಗೆ ಸ್ವಲ್ಪ ಸ್ವಲ್ಪವಾಗಿಯೇ ವಿರೇಚನಮಾಡಿಸಬೇಕು. ವಿರೇ ಚನಕ್ಕೆ ಅರ್ಹರಲ್ಲದವರಿಗೆ ಪ್ರಯೋಗಿಸಿದ ವಿರೇಚನೌಷಧದಿಂದ ಮರಣವುಂಟಾಗುತ್ತ ದೆಂಬುದನ್ನು ಜ್ಞಾಪಕದಲ್ಲಿಡಬೇಕು.

ವಿರೇಚ್ಯಾಸ್ತು—ಜ್ವರಗರಾರುಚ್ಯರ್ಶೋಽರ್ಬುದೋದರ ಗ್ರನ್ಥಿವಿದ್ರಧಿ ಪಾಣ್ಡುರೋಗಾಪ ಸ್ಮಾರ ಹೃದ್ರೋಗವಾತರಕ್ತ ಭಗನ್ದರಚ್ಛರ್ದಿಯೋನಿರೋಗವಿಸರ್ಪ ಗುಲ್ಮಪಕ್ವಾಶಯರುಗ್ವಿಬನ್ಧ ವಿಸೂಚಿಕಾಲಸಕ ಮೂತ್ರಾಘಾತಕುಷ್ಠವಿಸ್ಫೋಟಕ ಪ್ರಮೇಹಾನಾಹ ಪ್ಲೀಹಶೋಫ ವೃದ್ಧಿ ಶಸ್ತ್ರಕ್ಷತ ಕ್ಷಾರಾಗ್ನಿದಗ್ಧದುಷ್ಟವ್ರಣಾಕ್ಷಿಪಾಕ ಕಾಚತಿಮಿರಾಭಿಷ್ಯನ್ದ ಶಿರಃಕರ್ಣಾಕ್ಷಿನಾಸಾಸ್ಯಗುದಮೇಢ್ರದಾ ಹೋರ್ಧ್ವಗರಕ್ತಪಿತ್ತ, ಕ್ರಿಮಿಕೋಷ್ಠಿನಃ ಪಿತ್ತಸ್ಥಾನಜೇಷುವಿಕಾರೇಷ್ವನ್ಯೇ ಚ ಪೈತ್ತಿಕವ್ಯಾಧಿ ಪರೀತಾ ಇತಿ ॥೩೧॥

ಸರತ್ವಸೌಕ್ಷ್ಮ್ಯತೈಕ್ಷ್ಣ್ಯೌಷ್ಣ್ಯ ವಿಕಾಸಿತ್ವೈರ್ವಿರೇಚನಮ್ ।
ಮಲಂ ತು ಹರೇದ್ದೋಷಂ ಪ್ರಕೃತ್ಯಾಗತಮನ್ಯಥಾ ॥೩೨॥

ವಿರೇಚನ ಪ್ರಯೋಗಕ್ಕೆ ಅರ್ಹರು—ಜ್ವರ, ದೂಷೀವಿಷ, ಅರುಚಿ, ಅರ್ಶಸ್ಸು, ಅರ್ಬುದ, ಉದರ, ಗ್ರಂಥಿ, ವಿದ್ರಧಿ, ಪಾಂಡುರೋಗ, ಅಪಸ್ಮಾರ, ಹೃದ್ರೋಗ, ವಾತ

ರಕ್ತ, ಭಗಂದರ, ಛರ್ದಿ, ಯೋನಿರೋಗ, ವಿಸರ್ಪ, ಗುಲ್ಮ, ಪಕ್ವಾಶಯರುಕ್, ವಿಬಂಧ, ವಿಷೂಚಿಕಾ, ಅಲಸಕ, ಮೂತ್ರಾಘಾತ, ಕುಷ್ಠ, ವಿಸ್ಫೋಟಕ, ಪ್ರಮೇಹ, ಆನಾಹ, ಪ್ಲೀಹ, ಶೋಫ, ವೃದ್ಧಿ, ಶಸ್ತ್ರಕ್ಷತ, ಕ್ಷಾರದಗ್ಧ, ಅಗ್ನಿದಗ್ಧ, ದುಷ್ಟವ್ರಣ, ಅಕ್ಷಿಪಾಕ, ಕಾಚ, ತಿಮಿರ, ಅಭಿಷ್ಯಂದ, ಶಿರೋರೋಗ, ಕರ್ಣರೋಗ, ನೇತ್ರರೋಗ, ನಾಸಾ ರೋಗ, ಮುಖರೋಗ, ಗುದಭ್ರಂಶ, ಮೇಢ್ರದಾಹ, ಊರ್ಧ್ವಗರಕ್ತಪಿತ್ತಕ್ರಿಮಿಕೋಷ್ಠ ಇವರುಗಳೂ ಪಿತ್ತಸ್ಥಾನದಲ್ಲಿ ಹುಟ್ಟಿದ ರೋಗಗ್ರಸ್ತರೂ ಮತ್ತು ಇತರ ಪಿತ್ತರೋಗ ಪೀಡಿತರೂ ವಿರೇಚನಕ್ಕೆ ಅರ್ಹರು.

ಟಿಪ್ಪಣಿ—ಅನುಲೋಮನಗುಣ (ಸರತ್ವ), ಸೂಕ್ಷ್ಮತ್ವ, ತೀಕ್ಷ್ಣಗುಣ (ಬೇಗ ದೋಷಗಳನ್ನು ಸ್ರಾವವಾಗುವಂತೆ ಮಾಡುತ್ತದೆ), ವಿಕಾಸಿತ್ವ (ಧಾತುಗಳನ್ನು ಶಿಥಿಲ ಗೊಳಿಸುವ ಶಕ್ತಿ) ಗುಣಗಳಿಂದ ವಿರೇಚನೌಷಧವು ಬೇರೆಕಡೆಗೆ ನುಗ್ಗಿರುವ ದೋಷ ಗಳನ್ನೂ ತನ್ನ ವೀರ್ಯದಿಂದ ಕೆಳಮುಖಕ್ಕೇ ಎಳೆದು ತರುತ್ತದೆ. ಈ ಗುಣಗಳೇ ವಮನ ದ್ರವ್ಯಗಳಿಗಿದ್ದರೂ ತನ್ನ ವೀರ್ಯದಿಂದ ದೋಷಗಳನ್ನು ಮೇಲ್ಮುಖವಾಗಿ ಎಳೆಯುತ್ತದೆ. ಇಲ್ಲಿ ಪ್ರಕೃತಿಃ, ಸ್ವಭಾವಃ, ಶಕ್ತಿವಿಶೇಷಃ, ಪ್ರಭಾವಃ, ವೀರ್ಯಂ, ಇವೆಲ್ಲಾ ಒಂದೇ ಅರ್ಥವುಳ್ಳಪದಗಳು. ಅಧೋಗಾಮಿ ದ್ರವ್ಯಗಳು ಭೂಮಿ ಮತ್ತು ನೀರುಗಳ ಗುಣಗಳನ್ನುಳ್ಳಕಾರಣ ಕೆಳಮುಖವಾಗಿ ರೋಗಿಗೆ ದೋಷಹರಣ ಮಾಡು ತ್ತವೆ. ಮೇಲ್ಮುಖವಾಗಿ ಹೋಗುವ ದ್ರವ್ಯಗಳು ಅಗ್ನಿ ವಾಯು ಗುಣಗಳುಳ್ಳವು. ಅವು ಹಗುರವಾಗಿರುತ್ತವೆ (ವಾಯುವೂ ಬೆಂಕಿಯೂ ಮೇಲ್ಮುಖಕ್ಕೇ ಹೋಗುತ್ತವೆ). ಘಾಣ್ರಾ ಕಾಕಾರನು ಸರಿಯಾಗಿ ಪ್ರಯೋಗಿಸಿದ ಸರತ್ವಾದಿಗುಣಗಳನ್ನುಳ್ಳ ವಿರೇಚನ ದ್ರವ್ಯಗಳು ಕೆಳಮುಖದಿಂದ ದೋಷಹರಣ ಮಾಡುತ್ತವೆಂದು ಹೇಳುತ್ತಾನೆ. ಈ ಅರ್ಥವು ಸರಿ ಯಾದದ್ದು. ಸರತ್ವಾದಿ ಗುಣಗಳು ಸರಿಯಾಗಿ ಪ್ರಯೋಗಿಸಲ್ಪಟ್ಟರೆ ಬೇಗನೆ ದೋಷ ಹರಣ ಮಾಡುತ್ತವೆ. ಅಕ್ರಮದಿಂದ ಪ್ರಯೋಗಿಸಿದರೆ ಜೀವರಕ್ತ, ಧಾತು, ರಸ, ಇಂದ್ರಿಯ, ಮನಸ್ಸು, ಓಜಸ್ಸು ಮೊದಲಾದುವನ್ನು ಆಕರ್ಷಿಸಿ ರೋಗಿಯನ್ನು ಕೊಂದೇ ಬಿಡುತ್ತವೆ.

ಯಾತ್ಯಧೋ ದೋಷಮಾದಾಯ ಪಚ್ಯಮಾನಂ ವಿರೇಚನಮ್ ।
ಗುಣೋತ್ಕರ್ಷಾತ್ ವ್ರಜತ್ಯೂರ್ಧ್ವಮಪಕ್ವಂ ವಮನಂ ಪುನಃ ॥೩೩॥
ಮೃದುಕೋಷ್ಠಸ್ಯ ದೀಪ್ತಾಗ್ನೇರತಿತೀಕ್ಷ್ಣಂ ವಿರೇಚನಮ್ ।
ನ ಸಮ್ಯಙ್ನಿರ್ಹರೇದ್ದೋಷಾನತಿ ವೇಗಪ್ರಧಾವಿತಾ ॥೩೪॥
ಪೀತಂ ಯದೌಷಧಂ ಪ್ರಾತರ್ಭುಕ್ತಪಾಕಸಮೇ ಕ್ಷಣೇ ।
ಪಕ್ವಂ ಗಚ್ಛತಿ ದೋಷಾಂಶ್ಚ ನಿರ್ಹರೇತ್ ತತ್ ಪ್ರಶಸ್ಯತೇ ॥೩೫॥
ದುರ್ಬಲಸ್ಯ ಚಲಾ ದೋಷಾನಲ್ಪಾನ್ ಪುನಃ ಪುನಃ ।
ಹರೇತ್ಪ್ರಭೂತಾನಲ್ಪಾಂಸ್ತು ಶಮಯೇತ್ ಪ್ರಚ್ಯುತಾನಪಿ ॥೩೬॥

ವಿರೇಚನ ದ್ರವ್ಯಗಳು ಸ್ಥಿರಗಳಾದ ಪೃಥಿವೀ ಮತ್ತು ಅಬ್ಭೂತಗಳ ಗುಣವುಳ್ಳವಾದ್ದರಿಂದ ಕೆಳಕ್ಕೇ ಇಳಿಯುತ್ತವೆ. ಶೀಘ್ರಗತಿಯುಳ್ಳ ವಾಯು ಮತ್ತು ಅಗ್ನಿ ಗುಣಗಳೇ ಹೆಚ್ಚಾಗಿರುವ ವಮನ ದ್ರವ್ಯಗಳು ಲಘುವಾದ್ದರಿಂದ ಅಪಕ್ವವಾಗಿರುವಾಗಲೇ ಮೇಲಕ್ಕೆ ಏಳುತ್ತವೆ. ಮೃದುಕೋಷ್ಠವುಳ್ಳ ಮತ್ತು ದೀಪ್ತಾಗ್ನಿಯುಳ್ಳ ರೋಗಿಗೆ ತೀಕ್ಷ್ಣೌಷಧವನ್ನು ಪ್ರಯೋಗಿಸಿದರೆ ಅತಿವೇಗದಿಂದ ಮುಂದು ಮುಂದಕ್ಕೆ ನುಗ್ಗುತ್ತಿರುವ ದೋಷಗಳನ್ನು ಪಾಕಮಾಡುವುದೇ ಇಲ್ಲ. ಏಕೆಂದರೆ–ಪ್ರಾಯಿಕವಾಗಿ ಕೋಷ್ಠವು ಮೃದುವಾಗಿದ್ದರೆ ದೋಷಗಳು ಬೇಗ ಮುನ್ನುಗ್ಗುತ್ತವೆ. ಅಗ್ನಿದೀಪ್ತಿಯೂ ಇದ್ದರೆ ಮತ್ತಷ್ಟು ವೇಗದಿಂದ ಮುಂದಕ್ಕೆ ನುಗ್ಗುತ್ತವೆ. ತೀಕ್ಷ್ಣೌಷಧಿಯೂ ಸೇರಿದರೆ ಔಷಧವು ದೋಷಗಳನ್ನು ಸೇರುವುದಕ್ಕೆ ಮೊದಲೇ ಔಷಧದ ತೀಕ್ಷ್ಣತೆಯಿಂದ ದೋಷಗಳ ವೇಗವು ಅತ್ಯಧಿಕವಾಗಿ ಮುಂದಕ್ಕೆ ನುಗ್ಗಿಬಿಡುತ್ತವೆಯೇ ವಿನಃ ಔಷಧವು ದೋಷಗಳನ್ನು ಪಾಕಮಾಡಲು ಅವಕಾಶವೇ ಉಂಟಾಗುವುದಿಲ್ಲ. ಅಂದರೆ ಅತಿವೇಗದಿಂದ ಸಂಚರಿಸುತ್ತಿರುವ ದೋಷಗಳನ್ನು ತೀಕ್ಷ್ಣೌಷಧವು ಸರಿಯಾಗಿ ಹೊರಕ್ಕೆ ಹೊರಡಿಸಲಾರದು ಎಂದು ಅರ್ಥ. ಭೋಜನವು ಪಾಕವಾಗುವ ವೇಳೆಯಲ್ಲಿ ಅಂದರೆ ಪ್ರಾತಃಕಾಲದಲ್ಲಿ ವಿರೇಚನೌಷಧವನ್ನು ಕುಡಿದರೆ ಅದು ಪಾಕವಾಗಿ ದೋಷಗಳನ್ನು ಹೊರಕ್ಕೆ ಹೊರಡಿಸುತ್ತದೆಯಾದ್ದರಿಂದ ಶ್ರೇಷ್ಠವಾದದ್ದು. ದುರ್ಬಲನಿಗೆ ಅಧಿಕಪ್ರಮಾಣದಿಂದಿರುವ ದೋಷಗಳನ್ನು ಪ್ರಕೋಪವಾಗಿರುವಾಗ ಪಾಕಮಾಡದೆಯೇ ಶೋಧನೌಷಧಿಗಳಿಂದ ಸ್ವಲ್ಪವಾಗಿದ್ದರೂ ಶಮನೌಷಧಗಳಿಂದ ಸರಿಪಡಿಸಬೇಕು.

ಹರೇದ್ದೋಷಾಂಶ್ಚಲಾನ್ ಪಕ್ವಾನ್ ಬಲಿನೋ ದುರ್ಬಲಸ್ಯ ಚ।
ಚಲಾಹ್ಯುಪೇಕ್ಷಿತಾ ದೋಷಾಃ ಕ್ಲೇಶಯೇಯುಶ್ಚಿರಂ ನರಮ್ ॥೩೭॥
ಮಂದಾಗ್ನಿಂ ಕ್ರೂರಕೋಷ್ಠಂ ಚ ಸಕ್ಷಾರಲವಣೈರ್ಘೃತೈಃ ।
ಸಂಧುಕ್ಷಿತಾಗ್ನಿಂ ಸ್ನಿಗ್ಧಂ ಚ ಸ್ವಿನ್ನಂ ಚೈವ ವಿರೇಚಯೇತ್ ॥೩೮॥
ಸ್ನಿಗ್ಧ ಸ್ವಿನ್ನಸ್ಯ ಭೈಷಜ್ಯೈರ್ದೋಷಸ್ತೂತ್ಕ್ಲೇಶಿತೋ ಬಲಾತ್ ।
ವಿಲೀಯತೇ ನ ಮಾರ್ಗೇಷು ಸ್ನಿಗ್ಧೇ ಭಾಣ್ಡ ಇವೌದಕಮ್ ॥೩೯॥
ನಚಾತಿಸ್ನೇಹಪೀತಸ್ತು ಪಿಬೇತ್ ಸ್ನೇಹವಿರೇಚನಮ್ ।
ದೋಷಾಃ ಪ್ರಚಲಿತಾಃ ಸ್ಥಾನಾತ್ ಭೂಯಃ ಶ್ಲಿಷ್ಯನ್ತಿ ವರ್ತ್ಮಸು ॥೪೦॥

ರೋಗಿಯು ಬಲಿಷ್ಠನಾಗಿರಲೀ ದುರ್ಬಲನಾಗಿರಲೀ ಪಕ್ವವಾಗಿ ಸ್ಥಾನವನ್ನು ಬಿಟ್ಟು ಚಲಿಸುತ್ತಿರುವ ದೋಷಗಳನ್ನು ಹೊರಕ್ಕೆ ಹೊರಡಿಸಲೇಬೇಕು. ಉಪೇಕ್ಷಿಸಿದರೆ ಚಲಿಸುತ್ತಿರುವ ಆ ದೋಷಗಳು ರೋಗಿಯನ್ನು ಬಲುಕಾಲದವರೆಗೂ ಕ್ಲೇಶಪಡಿಸುತ್ತವೆ. ಮಂದಾಗ್ನಿಗೂ ಕ್ರೂರಕೋಷ್ಠವುಳ್ಳವನಿಗೂ ಯವಕ್ಷಾರ, ಸೈಂಧವ ಮಿಶ್ರಮಾಡಿದ ತುಪ್ಪವನ್ನು ಕುಡಿಸಿ ಅಗ್ನಿವೃದ್ಧಿ ಮಾಡಿದಮೇಲೆ ಸ್ನೇಹಸ್ವೇದಗಳನ್ನು ಮಾಡಿಸಿ ವಿರೇಚನ ಮಾಡಿಸಬೇಕು. ಸ್ನೇಹಸ್ವೇದ ಕರ್ಮಗಳನ್ನು ಮಾಡಿಸಿ ರೋಗಿಯ ಬಲಕ್ಕೆ ತಕ್ಕಂತೆ

ಔಷಧಪ್ರಯೋಗಮಾಡಿದರೆ ಉತ್ಕ್ಲೇಶವಾಗಿರುವ ದೋಷಗಳು ತುಪ್ಪಬಳಿದು ಪಳುಗಿದ ಮಡಕೆಗೆ ನೀರು ಅಂಟಿಕೊಳ್ಳದಿರುವಂತೆಯೇ ಮಾರ್ಗದಲ್ಲಿ ಅಡಗಿಕೊಳ್ಳುವುದಿಲ್ಲ. ಅತಿಯಾಗಿ ಸ್ನೇಹಪಾನ ಮಾಡಿದವನು ಸ್ನೇಹವಿರೇಚನವನ್ನು ಸೇವಿಸಬಾರದು. ಸ್ವಸ್ಥಾನವನ್ನು ಬಿಟ್ಟು ಕದಲಿರುವ ದೋಷಗಳು ಪುನಃ ದಾರಿಯಲ್ಲೆಲ್ಲಾದರೂ ನಿಂತುಬಿಡುತ್ತವೆ.

ವಿಷಾಭಿಘಾತಪಿಡಕಾ ಶೋಫಪಾಣ್ಡುವಿಸರ್ಪಿಣಃ ।
ನಾತಿಸ್ನಿಗ್ಧಾ ವಿಶೋಧ್ಯಾಃ ಸ್ಯುಸ್ತಥಾ ಕುಷ್ಠಪ್ರಮೇಹಿಣಃ ॥೪೧॥
ವಿರೂಕ್ಷ್ಯ ಸ್ನೇಹಸಾತ್ಮ್ಯಂ ತು ಭೂಯಃ ಸಂಸ್ನೇಹ್ಯ ಶೋಧಯೇತ್
ತೇನ ದೋಷಾ ಹೃತಾಸ್ತಸ್ಯ ಭವನ್ತಿ ಬಲವರ್ಧನಾಃ ॥೪೨॥
ಪ್ರಾಗಪೀತಂ ನರಂ ಶೋಧ್ಯಂ ಪಾಯಯೇತೌಷಧಂ ಮೃದು ।
ತತೋ ವಿಜ್ಞಾತಕೋಷ್ಠಸ್ಯ ಕಾರ್ಯಂ ಸಂಶೋಧನಂ ಪುನಃ ॥೪೩॥
ಸುಖಂ ದೃಷ್ಟಫಲಂ ಹೃದ್ಯಮಲ್ಪಮಾತ್ರಂ ಮಹಾಗುಣಮ್ ।
ವ್ಯಾಪತ್ಸ್ವಲ್ಪಾತ್ಯಯಂಚಾಪಿ ಪಿಬೇನ್ನೃಪತಿರೌಷಧಮ್ ॥೪೪॥

ವಿಷ, ಅಭಿಘಾತ (ಬಾಹ್ಯಪ್ರಹಾರ), ಪಿಡಕೆ, ಶೋಫ, ಪಾಂಡು, ವಿಸರ್ಪ, ಕುಷ್ಠ, ಪ್ರಮೇಹ ಈ ರೋಗಗಳಿಂದ ಪೀಡಿತರಾದವರಿಗೆ ಸ್ನೇಹಕರ್ಮವನ್ನು ಹೆಚ್ಚಾಗಿ ಮಾಡಿಸಬಾರದು; ಅತಿ ಸ್ವಲ್ಪವಾಗಿ ಮಾಡಿಸಬೇಕು ; ಅಲ್ಪಸ್ನಿಗ್ಧರನ್ನಾಗಿ ಮಾಡಿ ಶೋಧನೌಷಧಗಳನ್ನು ಪ್ರಯೋಗಿಸಬೇಕು. ಸ್ನೇಹವು ಒಗ್ಗಿರುವವನಿಗೆ ರೂಕ್ಷನನ್ನಾಗಿ ಮಾಡಿ ಪುನಃ ಸ್ನೇಹನವಾಗುವಂತೆಮಾಡಿಸಿ ಶೋಧನೌಷಧವನ್ನು ಪ್ರಯೋಗಿಸಬೇಕು. ಹೀಗೆ ಮಾಡಿದರೆ ಅವನಿಗೆ ದೋಷಗಳು ನಿವಾರಣೆಯಾಗಿ ಬಲವು ವೃದ್ಧಿಯಾಗುತ್ತದೆ. ಕೋಷ್ಠಜ್ಞಾನವು ತಿಳಿಯದಿದ್ದರೆ ಮೊದಲು ಮೃದುವಾದ ಶೋಧನೌಷಧವನ್ನು ಪ್ರಯೋಗಿಸಿ ಅವನ ಕೋಷ್ಠದಸ್ಥಿತಿಯನ್ನು (ಮೃದು, ಮಧ್ಯ, ಕ್ರೂರಕೋಷ್ಠಗಳನ್ನು) ನಿರ್ಧರಿಸಿ ಸರಿಯಾದ ಪ್ರಮಾಣದಿಂದ ಶೋಧನೌಷಧವನ್ನು ಪ್ರಯೋಗಿಸಬೇಕು. ಸುಕುಮಾರ ದೇಹವುಳ್ಳವರಿಗೆ ಸುಖಕರವಾದ ಅನುಭವದಿಂದ ತಿಳಿದಿರುವ ಹೃದಯಕ್ಕೆ ಹಿತವಾದ (ತಿನ್ನುವುದಕ್ಕೆ ರುಚಿಯಾದ) ಅಲ್ಪಪ್ರಮಾಣದ ಮಹಾಗುಣವುಳ್ಳ ರಾಜಯೋಗ್ಯವಾದ ಔಷಧವನ್ನು ಪ್ರಯೋಗಿಸಬೇಕು.

ಸ್ನೇಹಸ್ವೇದಾವನಭ್ಯಸ್ಯ ಯಸ್ತು ಸಂಶೋಧನಂ ಪಿಬೇತ್ ।
ದಾರುಶುಷ್ಕಮಿವಾನಾಮೇ ದೇಹಸ್ತಸ್ಯ ವಿಶೀರ್ಯತೇ ॥೪೫॥
ಸ್ನೇಹಸ್ವೇದಪ್ರಚಲಿತಾ ರಸೈಃ ಸ್ನಿಗ್ಧೈರುದೀರಿತಾಃ ।
ದೋಷಾಃ ಕೋಷ್ಠಗತಾ ಜನ್ತೋಃ ಸುಖಾಹರ್ತುಂ ವಿಶೋಧನೈಃ ॥೪೬॥

ಸ್ನೇಹಸ್ವೇದಗಳನ್ನು ಮಾಡಿಸಿಕೊಳ್ಳದೆ ಸಂಶೋಧನೌಷಧವನ್ನು ಪಾನಮಾಡಿದರೆ ಬಗ್ಗಿಸಿದ ಒಣಗಿದ ಕಟ್ಟಿಗೆಯು ಮುರಿಯುವಂತೆಯೇ ಅವನ ದೇಹಕ್ಕೆ ಹಿಂಸೆಯಾಗುತ್ತದೆ.

ಸ್ನೇಹಸ್ವೇದಗಳಿಂದ ದೋಷಗಳು ಸ್ವಸ್ಥಾನಗಳಿಂದ ಹೊರಕ್ಕೆ ಚಲಿಸಿ ಸ್ನಿಗ್ಧಮಾಂಸ ರಸದಿಂದ ಕೆರಳಿ ಕೋಷ್ಠದೊಳಕ್ಕೆ ಬಂದು ಸೇರಿಕೊಳ್ಳುತ್ತವೆಯಾಗಿ ಶೋಧನೌಷಧಗಳನ್ನು ಪ್ರಯೋಗಿಸಿ ಅವನ್ನು ಸುಖವಾಗಿ (ಆಯಾಸವಿಲ್ಲದೆ) ತೆಗೆಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ವಮನ ವಿರೇಚನಸಾಧ್ಯೋಪದ್ರವಚಿಕಿತ್ಸಾನಾಮ ತ್ರಯಸ್ತ್ರಿಂಶತ್ತಮೋಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಚತುಸ್ತ್ರಿಂಶತ್ತಮೋಽಧ್ಯಾಯಃ

ಅಥಾತೋ ವಮನವಿರೇಚನವ್ಯಾಪಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ವಮನವಿರೇಚನವ್ಯಾಪತ್ ಚಿಕಿತ್ಸೆಯನ್ನು ವಿವರಿಸುತ್ತೇವೆ.

ವೈದ್ಯಾತುರನಿಮಿತ್ತಂ ವಮನಂ ವಿರೇಚನಂ ಚ ಪಞ್ಚದಶಧಾ ವ್ಯಾಪದ್ಯತೇ । ತತ್ರ ವಮನಸ್ಯಾಧೋಗತಿರೂರ್ಧ್ವಂ ವಿರೇಚನಸ್ಯೇತಿ ಪೃಥಕ್ ಸಾಮಾನ್ಯಮುಭಯೋಃ—ಸಾವಶೇಷೌಷಧತ್ವಂ ಜೀರ್ಣೌಷಧತ್ವಂ ಹೀನದೋಷಾಪಹೃತತ್ವಂ ವಾತಶೂಲಂ ಅಯೋಗೋ ಅತಿಯೋಗೋ ಜೀವಾದಾನಂ ಆಧ್ಮಾನಂ ಪರಿಕರ್ತಿಕಾ ಪರಿಸ್ರಾವಃ ಪ್ರವಾಹಿಕಾ ಹೃದಯೋಪಸರಣಂ ವಿಬಂಧ ಇತಿ ॥೩॥

ಪ್ರಯೋಗಿಸಿದ ಶೋಧನೌಷಧಗಳು ವೈದ್ಯನ ಮತ್ತು ರೋಗಿಯ ಅವಿವೇಕದಿಂದ ೧೫ ವಿಧ ಬಾಧೆಗಳನ್ನುಂಟುಮಾಡುತ್ತವೆ. ಇವುಗಳಲ್ಲಿ ವಮನೌಷಧವು ಅಧೋಭಾಗದಿಂದಲೂ ವಿರೇಚನೌಷಧವು ಮೇಲ್ಗಡೆಯಿಂದಲೂ ಹೊರಕ್ಕೆ ಬಂದುಬಿಡುತ್ತವೆ. ಇವೆರಡರಲ್ಲೂ ಸಮಾನದೋಷಗಳು ಯಾವುವೆಂದರೆ—ಔಷಧವು ಸ್ವಲ್ಪನಿಂತುಬಿಡೋಣವು, ಬಲು ಹಳೆಯಔಷಧವು (ನಿರ್ವೀರ್ಯವಾದದ್ದು). ಅಲ್ಪಪ್ರಮಾಣದಿಂದ ದೋಷವನ್ನು ಹೊರಡಿಸುವುದು, ವಾತಶೂಲೆಯನ್ನುಂಟುಮಾಡುವುದು, ಅಲ್ಪಪ್ರಮಾಣದಿಂದ ಔಷಧಸೇವನೆ ಮಾಡೋಣವು, ಅತಿಪ್ರಮಾಣದಿಂದ ಔಷಧಸೇವನೆಮಾಡೋಣವು, ಜೀವರಕ್ತಸ್ರಾವವಾಗೋಣ, ಹೊಟ್ಟೆಯುಬ್ಬರಿಸುವುದು, ಮೈಕತ್ತರಿಸಿದಂತೆ ವ್ಯಥೆಯಾಗುವುದು, ದೋಷಗಳಿಗೆ ಅತಿಸ್ರಾವವಾಗುತ್ತಿರುವುದು, ಆಮಶಂಕೆಯುಂಟಾಗುವುದು, ಹೃದಯವು ಅದುರಿದಂತಾಗುವುದು, ಮಲಬಂಧ ಇವುಗಳು. ಇತರ ತಂತ್ರಗಳಲ್ಲಿ ಹೇಳಿರುವ ವಮನವಿರೇಚನ ಪ್ರಯೋಗದ ದೋಷಗಳ ಸಂಖ್ಯೆಯನ್ನು ಪ್ರತಿಷೇಧಿಸುವುದಕ್ಕಾಗಿ ೧೫ ವಿಧ ಪ್ರಯೋಗ ದೋಷಗಳೆಂದು ನಿಷ್ಕರ್ಷಿಸಿರುತ್ತಾರೆ. ಚರಕ ಸಂಹಿತೆಯಲ್ಲಿ "ಆಧ್ಮಾನ, ಪರಿಕರ್ತಿಕಾ, ಸ್ರಾವ, ಹೃದ್ಗ್ರಹ, ಶರೀರಗ್ರಹ, ಜೀವಾದಾನ, ವಿಭ್ರಂಶ, ಸ್ತಂಭ, ಉಪದ್ರವ, ಕ್ಲಮ" ಎಂಬ ೧೦ ದೋಷಗಳು ವಮನವಿರೇಚನಗಳ ಹೀನಯೋಗ ಅತಿಯೋಗಗಳಿಂದ ಉಂಟಾಗುತ್ತವೆಂದು ಹೇಳಿರುತ್ತದೆ.

ತತ್ರ ಬುಭುಕ್ಷಾಪೀಡಿತಸ್ಯಾತಿತೀಕ್ಷ್ಣಾಗ್ನೇರ್ಮೃದುಕೋಷ್ಠಸ್ಯ ಚಾವತಿಷ್ಠಮಾನಂ ದುರ್ಬಲಸ್ಯ ವಾ ಗುಣಸಾಮಾನ್ಯಭಾವಾತ್ ವಮನಮಧೋ ಗಚ್ಛತಿ ತತ್ರೇಪ್ಸಿತಾನವಾಪ್ತಿರ್ದೋಷೋತ್ಕರ್ಷಶ್ಚ ತಮಾಶು ಸ್ನೇಹಯಿತ್ವಾ ಭೂಯಸ್ತೀಕ್ಷ್ಣತರೈರ್ವಾಮಯೇತ್ ॥೪॥

ಅಪರಿಶುದ್ಧಾಮಾಶಯಸ್ಯೋತ್ಕೃಷ್ಟ ಶ್ಲೇಷ್ಮಣಃ ಸಶೇಷಾನ್ನಸ್ಯವಾ್ಯಾಹೃದ್ಯಮತಿಪ್ರಭೂತವಿರೇಚನಂ ಪೀತಮೂರ್ಧ್ವಂ ಗಚ್ಛತಿ ತತ್ರಾಶುದ್ಧಾಮಾಶಯಮುಲ್ಬಣಶ್ಲೇಷ್ಮಾಣಮಾಶು ವಾಮಯಿತ್ವಾ ಭೂಯಸ್ತೀಕ್ಷ್ಣತರೈಃ ವಿರೇಚಯೇತ್ ಆಮಾಶಯೇ ತ್ವಾಮವತ್ ಸಂವಿಧಾನಂ ಆಹೃದ್ಯೇತಿಪ್ರಭೂತೇ ಚ ಹೃದ್ಯಂ ಪ್ರಮಾಣಯುಕ್ತಂ ಚ ; ಅತ ಊರ್ಧ್ವಮುತ್ತಿಷ್ಠತ್ಯೌಷಧೇ ನ ತೃತೀಯಂ ಪಾಯಯೇತ್ । ತತಸ್ತ್ವೇನಂ ಮಧುಘೃತಫಾಣಿತಯುಕ್ತೈರ್ಲೇಹೈರ್ವಿರೇಚಯೇತ್ ॥೫॥

ವಮನೌಷಧಕ್ಕೆ ಅಧೋಗಮನದೋಷವನ್ನು ಹೇಳುತ್ತಾರೆ-ಹಸಿವಿನಿಂದ ಪೀಡಿತನಾಗಿ ಅತಿ ತೀಕ್ಷ್ಣಾಗ್ನಿಯುಳ್ಳ ಮೃದುಕೋಷ್ಠವುಳ್ಳ ರೋಗಿಗೆ ಕುಡಿಸಿದ ವಮನೌಷಧವು ಪಾಕವಾಗಿ ಕೆಳಗಡೆಗೇ ನುಗ್ಗುತ್ತದೆ. ದುರ್ಬಲನಿಗೆ ಆಮಾಶಯದಲ್ಲಿ ನಿಂತ ವಮನೌಷಧವು ಪಾಕವಾಗಿ ಗಣಸಾಮ್ಯತೆಯಿಂದ ಕೆಳಮುಖವಾಗಿಯೇ ನುಗ್ಗುತ್ತದೆ. ಇದರಿಂದ ವಮನವಾಗಿ ದೋಷಹರಣವಾಗದೆ ಕಫದೋಷವೇ ವೃದ್ಧಿಯಾಗುತ್ತದೆ. ಈ ಸ್ಥಿತಿಯಲ್ಲಿ ರೋಗಿಗೆ ಬೇಗ ಸ್ನೇಹಕರ್ಮದಿಂದ ಸ್ನಿಗ್ಧದೇಹವುಳ್ಳವನನ್ನಾಗಿ ಮಾಡಿ ಪುನಃ ತೀಕ್ಷ್ಣೌಷಧಗಳನ್ನು ಕುಡಿಸಿ ವಮನಮಾಡಿಸಬೇಕು. ಇನ್ನು ವಿರೇಚನೌಷಧವು ಮೇಲ್ಮುಖವಾಗಲು ಕಾರಣವನ್ನು ತಿಳಿಸುತ್ತಾರೆ—ಆಮಾಶಯವು ಶುದ್ಧಿಯಾಗಿರದೆ ಅಧಿಕ ಕಫದೋಷಪೀಡಿತನಾದ ರೋಗಿಗೆ ಆಹಾರವು ಜೀರ್ಣವಾಗದೆ ಶೇಷಭಾಗವು ಆಮಾಶಯದಲ್ಲಿರುವಾಗ ಇಷ್ಟವಿಲ್ಲದ ಅತಿ ಪ್ರಮಾಣದಿಂದ ಕುಡಿಸಿದ ವಿರೇಚನೌಷಧವು ಮೇಲ್ಮುಖಕ್ಕೆ ನುಗ್ಗಿ ವಮನಕಾರಿಯಾಗಿ ಪರಿಣಮಿಸುತ್ತದೆ. ವಿರೇಚನವಾಗುವುದಿಲ್ಲ ; ಆಮಾಶಯವು ಶುದ್ಧಿಯಾಗದೆ ಕಫವು ಅಧಿಕವಾಗಿ ಪ್ರಕೋಪವಾಗುವುದರಿಂದ ರೋಗಿಗೆ ಬೇಗನೆ ವಮನಮಾಡಿಸಿ ಪುನಃ ತೀಕ್ಷ್ಣದ್ರವ್ಯಗಳಿಂದ ವಿರೇಚನಮಾಡಿಸಬೇಕು. ಆಮಾಶಯದಲ್ಲಿರುವ ದೋಷಗಳಿಗೆ ಲಂಘನಪಾಚನಗಳನ್ನು ಮಾಡಿಸಬೇಕು. ಅಹಿತಪದಾರ್ಥಗಳನ್ನು ಬಿಟ್ಟು ಮನಸ್ಸಿಗೆ ಹಿತಕರಗಳಾದ ಪದಾರ್ಥಗಳನ್ನೇ ಸೇವಿಸಬೇಕು. ಇದಾದಮೇಲೆಯೂ ಔಷಧವು ಆಮಾಶಯದಲ್ಲೇ ನಿಂತುಬಿಟ್ಟರೆ ಮೂರನೆಯಸಾರಿ ವಿರೇಚನೌಷಧವನ್ನು ಕುಡಿಸದೆ ಜೇನುತುಪ್ಪ, ತುಪ್ಪ, ಕಾಕಂಬಿಗಳನ್ನು ನೆಕ್ಕಿಸಿ ವಿರೇಚನಮಾಡಿಸಬೇಕು.

ದೋಷವಿಗ್ರಥಿತಮಲ್ಪಮೌಷಧಮವಸ್ಥಿತಮೂರ್ಧ್ವಭಾಗಿಕಮಧೋಭಾಗಿಕಂ ವಾ ನ ಸ್ರಂಸಯತಿ ದೋಷಾ ತತ್ರ ತೃಷ್ಣಾ ಪಾರ್ಶ್ವಶೂಲಂ ಛರ್ದಿರ್ಮೂರ್ಛಾ ಪರ್ವಭೇದೋ ಹೃಲ್ಲಾಸಾರತ್ಯುದ್ಗಾರಾವಿಶುದ್ಧಿರ್ಭವತಿ ತಮುಷ್ಣಾಭಿರದ್ಭಿರಾಶು ವಾಮಯೇತ್ ಸಾವಶೇಷೌಷಧಮತಿಪ್ರಧಾವಿತ ದೋಷಮತಿ ಬಲಮಸಮ್ಯಗ್ವಿರಿಕ್ತಮಪ್ಯೇವಂ ಪಾಯಯೇತ್ ॥೬॥

ಕ್ರೂರಕೋಷ್ಠಸ್ಯಾತಿತೀಕ್ಷ್ಣಾಗ್ನೇರಲ್ಪಮೌಷಧಮಲ್ಪಗುಣಂ ವಾ ಭಕ್ತವತ್ ಪಾಕಮುಪೈತಿ ತತ್ರ ಸಮುದೀರ್ಣಾದೋಷಾ ಯಥಾಕಾಲಮನಿರ್ಹ್ರಿಯಮಾಣಾ ವ್ಯಾಧಿಂ ಬಲವಿಭ್ರಮಂಚಾಪಾದಯಂತಿ ತಮನಲ್ಪಮನೌಷಧಂ ಪಾಯಯೇತ್ ॥೭॥

ಅವಶೇಷೌಷಧ ದೋಷಗಳು—ಅಲ್ಪೌಷಧವು ಸ್ಥಿರವಾಗಿರುವ ದೋಷಗಳನ್ನು ಮೇಲ್ಮುಖಕ್ಕಾಗಲೀ ಕೆಳಮುಖಕ್ಕಾಗಲೀ ಜಾರಿಸದೆ ರೋಗಿಗೆ ಬಾಯಾರಿಕೆ, ಪಕ್ಕೆಗಳಲ್ಲಿ ನೋವು, ವಮನ, ಪ್ರಜ್ಞೆತಪ್ಪುವುದು, ಬೆರಳಗಿಣ್ಣುಗಳಲ್ಲಿ ನೋವು, ಎದೆಯೊತ್ತುವುದು. ಬಾಯಿನಿಂದ ಜೊಲ್ಲು ಸುರಿಯುವುದು, ವ್ಯಥೆ, ಶುದ್ಧವಾದ ತೇಗು ಬಾರದಿರುವುದು ಇವುಗಳುಂಟಾದರೆ ರೋಗಿಗೆ ಬಿಸಿನೀರನ್ನು ಕುಡಿಸಿ ವಮನಮಾಡಿಸಬೇಕು. ಊರ್ಧ್ವಮುಖದಿಂದಾಗಲೀ ಅಧೋಮುಖದಿಂದಾಗಲೀ ಔಷಧಶೇಷವು ಅತಿಯಾಗಿ ಸಂಚರಿಸುವಾಗಲೂ ಅತಿ ಬಲವಾದ ದೋಷವನ್ನು ಸರಿಯಾಗಿ ವಿರೇಚನ ಮಾಡಿಸದಿರುವಾಗಲೂ ಬಿಸಿನೀರನ್ನು ಕುಡಿಸಿ ವಮನವನ್ನು ಮಾಡಿಸಬೇಕು. ಕ್ರೂರಕೋಷ್ಠವುಳ್ಳ ಅತಿ ತೀಕ್ಷ್ಣಾಗ್ನಿಗೆ ಪ್ರಯೋಗಿಸಿದ ಅಲ್ಪಪ್ರಮಾಣದ ಅಥವಾ ಅಲ್ಪವೀರ್ಯವುಳ್ಳ ಔಷಧವು ಆಹಾರದಂತೆಯೇ ಪಾಕವಾಗಿ ಕೆರಳಿಸಲ್ಪಟ್ಟ ದೋಷಗಳನ್ನು ಸರಿಯಾದ ಕಾಲದಲ್ಲಿ ಹೊರಕ್ಕೆ ಹೊರಡಿಸದಿದ್ದರೆ ರೋಗವೃದ್ಧಿಯೂ ಬಲಹಾನಿಯೂ ಉಂಟಾದರೆ ಅವನಿಗೆ ಅಧಿಕ ಪ್ರಮಾಣದಿಂದ ತೀಕ್ಷ್ಣೌಷಧವನ್ನು ಕುಡಿಸಬೇಕು.

ಅಸ್ನಿಗ್ಧಸ್ವಿನ್ನೇನಾಲ್ಪಗುಣಂ ವಾ ಭೇಷಜಮುಪಯುಕ್ತಮಲ್ಪಾನ್ ದೋಷಾನ್ ಹನ್ತಿ ತತ್ರ ವಮನೇ ದೋಷಶೇಷಃ ಗೌರವಮುತ್ಕ್ಲೇಶಂ ಹೃದಯಾವಿಶುದ್ಧಿಂ ವ್ಯಾಧಿವೃದ್ಧಿಂ ಕರೋತಿ । ತತ್ರ ಯಥಾಯೋಗಂ ಪಾಯಯಿತ್ವಾ ವಾಮಯೇತ್ ; ದೃಢತರಂ ವಿರೇಚನೇ ಗುದಪರಿಕರ್ತನಮಾಧ್ಮಾನಂ ಶಿರೋಗೌರವಮನಿಃಸರಣಂ ವಾ ವಾಯೋರ್ವ್ಯಾಧಿವೃದ್ಧಿಂ ಕರೋತಿ । ತಮುಪಪಾದ್ಯ ಭೂಯಃ ಸ್ನೇಹಸ್ವೇದಾಭ್ಯಾಂ ವಿರೇಚಯೇತ್ ದೃಢತರಂ ದೃಢಂ ಬಹುಪ್ರಚಲಿತದೋಷಂ ವಾ ತೃತೀಯೇ ದಿವಸೇಽಲ್ಪಗುಣಂ ಚೇತಿ ॥೮॥

ಅಸ್ನಿಗ್ಧಸ್ವಿನ್ನೇನ ರೂಕ್ಷಕೌಷಧಮುಪಯುಕ್ತಮಬ್ರಹ್ಮಚಾರಿಣಾ ವಾ ವಾಯುಂ ಕೋಪಯತಿ ತತ್ರ ವಾಯುಃ ಪ್ರಕುಪಿತಃ ಪಾರ್ಶ್ವಪೃಷ್ಠಶ್ರೋಣಿಮನ್ಯಾಮರ್ಮಶೂಲಂ ಮೂರ್ಛಾಂ ಭ್ರಮಂ ಸಂಜ್ಞಾನಾಶಂ ಚ ಕರೋತಿ, ತಂ ವಾತಶೂಲಮಿತ್ಯಾಚಕ್ಷತೇ । ತಮಭ್ಯಜ್ಯ ಧಾನ್ಯಸ್ವೇದೇನಸ್ವೇದಯಿತ್ವಾ ಯಷ್ಟೀಮಧುಕ ವಿಪಕ್ವೇನ ತೈಲೇನಾನುವಾಸಯೇತ್ ॥೯॥

ಸ್ನೇಹಸ್ವೇದಗಳನ್ನು ಮಾಡಿಸಿಕೊಳ್ಳದೆ ಅಲ್ಪಗುಣವುಳ್ಳ ಔಷಧವನ್ನು ಸೇವಿಸಿದರೆ ಸ್ವಲ್ಪದೋಷ ಮಾತ್ರವೇ ನಿವಾರಣೆಯಾಗುತ್ತದೆ. ವಮನೌಷಧವನ್ನು ಸೇವನೆ ಮಾಡಿ ದೋಷಶೇಷವಿದ್ದರೆ ಮೈಭಾರ, ಬಾಯಿನೀರು ಸುರಿಯುವುದು, ಹೃದಯಾವಿಶುದ್ಧಿ ಮತ್ತು ರೋಗವೃದ್ಧಿ ಇವುಗಳುಂಟಾಗುತ್ತವೆ. ಈ ಸಂದರ್ಭದಲ್ಲಿ ತಕ್ಕಷ್ಟು ಪ್ರಮಾಣದಿಂದ ಔಷಧವನ್ನು ಕುಡಿಸಿ ವಮನಮಾಡಿಸಬೇಕು. ವಿರೇಚನೌಷಧದ ಶೇಷವಿದ್ದರೆ ಗುದದಲ್ಲಿ ಚುಚ್ಚುವುದು, ಹೊಟ್ಟೆ ಉಬ್ಬರಿಸುವುದು, ತಲೆಭಾರ, ಅಪಾನವಾಯುವಿನ ತಡೆತ, ರೋಗವೃದ್ಧಿ ಇವುಗಳು ಉಂಟಾಗುತ್ತವೆ. ಆಗ ರೋಗಿಗೆ ಸ್ನೇಹಸ್ವೇದಗಳಿಂದ ಉಪಚರಿಸಿ ಮೂರನೆಯದಿನ ವಮನಮಾಡಿಸಬೇಕು. ಸ್ನೇಹಸ್ವೇದಕರ್ಮಗಳನ್ನು ಆಚರಿಸದೆ ರೂಕ್ಷಗಳಾದ ಶೋಧನೌಷಧವನ್ನು ಪ್ರಯೋಗಿಸಿದರೆ ಅಥವಾ ಬ್ರಹ್ಮಚರ್ಯವನ್ನು ಪಾಲಿಸ

ದಿದ್ದರೆ (ಸ್ತ್ರೀಸಂಗಮಾಡಿದರೆ) ವಾತಪ್ರಕೋಪವುಂಟಾಗಿ ಪಕ್ಕೆಗಳು, ಬೆನ್ನು, ಸೊಂಟ, ಹೆಕ್ಕತ್ತು, ಮರ್ಮಗಳಲ್ಲಿ ಶೂಲೆಯನ್ನೂ, ಜ್ಞಾನಹಾನಿ, ತಲೆತಿರುಗುವಿಕೆ, ಸಂಜ್ಞೆಯನಾಶ ಇವುಗಳನ್ನೂ ಉಂಟುಮಾಡುತ್ತದೆ. ಈ ರೋಗಕ್ಕೆ "ವಾತಶೂಲೆ"ಯೆನ್ನುತ್ತಾರೆ. ಈ ರೋಗಿಗೆ ತೈಲದಿಂದ ಅಭ್ಯಂಗ, ಬೆಂದ ಧಾನ್ಯಗಳಿಂದ ಸ್ವೇದಕರ್ಮ, ಅತಿಮಧುರದೊಡನೆ ತಯಾರಿಸಿದ ತೈಲದಿಂದ ಅನುವಾಸನಗಳನ್ನು ಮಾಡಿಸಬೇಕು.

ಸ್ನೇಹಸ್ವೇದಾಭ್ಯಾಮವಿಭಾವಿತ ಶರೀರೇಣಾಲ್ಪಮೌಷಧಮಲ್ಪಗುಣಂ ವಾ ಪೀತಮೂರ್ಧ್ವ ಮಧೋ ವಾ ನಾಭ್ಯೇತಿ ದೋಷಾಂಶ್ಚೋತ್ಕ್ಲಿಶ್ಯತೈಃ ಸಹ ಬಲಕ್ಷಯಮಾಪಾದಯತಿ ತತ್ರಾಧ್ಮಾನಂ ಹೃದಯಗ್ರಹಸ್ತೃಷ್ಣಾಮೂರ್ಛಾದಾಹಶ್ಚ ಭವತಿ ; ತಮಯೋಗಮಿತ್ಯಾಚಕ್ಷತೇ ; ತಮಾಶು ವಾಮಯೇನ್ಮದನ ಫಲ ಲವಣಾಮ್ಬುಭಿರ್ವಿರೇಚಯೇತ್ ತೀಕ್ಷ್ಣತರೈಃ ಕಷಾಯೈಶ್ಚ । ದುರ್ವಾ ನ್ತಸ್ಯ ತು ಸಮುತ್ಕ್ಲಿಷ್ಟಾ ದೋಷಾ ವ್ಯಾಪ್ಯ ಶರೀರಂ ಕಣ್ಡೂಶ್ವಯಥು ಕುಷ್ಠ ಪಿಡಕಾಜ್ವರಾಙ್ಗ ಮರ್ದನಿಸ್ತೋದನಾನಿ ಕುರ್ವನ್ತಿ ತತಸ್ತಾನವಶೇಷಾನ್ಮಹೌಷಧೇನಾಪಹರೇತ್ ಅಸ್ನಿಗ್ಧಸ್ವಿನ್ನಸ್ಯ ಮೃದುವಿರಿಕ್ತಸ್ಯಾಧೋನಾಭೇಃ ಸ್ತಬ್ಧಪೂರ್ಣೋದರತಾ ಶೂಲಂ ವಾತಪುರೀಷಾಙ್ಗಃ ಕಣ್ಡೂ ಮಣ್ಡಲ ಪ್ರಾದುರ್ಭಾವೋ ಭವತಿ । ತಮಾಸ್ಥಾಪ್ಯ ಪುನಃ ಸಂಸ್ನೇಹ್ಯ ವಿರೇಚಯೇತ್ ತೀಕ್ಷ್ಣೇನ। ನಾತಿಪ್ರವರ್ತಮಾನೇ ತಿಷ್ಠತಿ ವಾ ದುಷ್ಟಸಂಶೋಧನೇ ತತ್ ಸನ್ತೇಜನಾರ್ಥಮುಷ್ಣೋದಕಂ ಪಾಯಯೇತ್ ಪಾಣಿತಾಪೈಃ ಪಾರ್ಶ್ವೋದರಮುಪಸ್ವೇದಯೇತ್, ತತಃ ಪ್ರವರ್ತನ್ತೇ ದೋಷಾಃ ಅನುಪ್ರವೃತ್ತೇ ಚಾಲ್ಪದೋಷೇ ಜೀರ್ಣೌಷಧಂ ಬಹುದೋಷಮಹಃ ಶೇಷಂ ಬಲಂಚಾವೇಕ್ಷ್ಯ ಭೂಯೋ ಮಾತ್ರಾಂ ವಿದಧ್ಯಾತ್ । ಅಪ್ರವೃತ್ತದೋಷಂ ದಶರಾತ್ರಾದೂರ್ಧ್ವಮುಪಸಂಸ್ಕೃತ ದೇಹಂ ಸ್ನೇಹಸ್ವೇದಾಭ್ಯಾಂ ಭೂಯಃ ಶೋಧಯೇತ್ । ದುರ್ವಿರೇಚ್ಯಮಾಸ್ಥಾಪ್ಯ ವಿರೇಚ ಯೇತ್ ಹ್ರೀಭಯಲೋಭೈರ್ವೇಗಾಘಾತಶೀಲಾಃ ಪ್ರಾಯಶಃ ಸ್ತ್ರೀಯೋ ರಾಜಸಮೀಪಸ್ಥಾ ವಣಿಜಃ ಶ್ರೋತ್ರಿಯಾಶ್ಚ ಭವನ್ತಿ ; ತಸ್ಮಾದೇತೇ ದುರ್ವಿರೇಚ್ಯಾಃ ಬಹುವಾತತ್ವಾತ್ ; ಅತಏವ ತಾನತಿಸ್ನಿಗ್ಧಾನ್ ಸ್ವೇದೋಪಪನ್ನಾನ್ ಶೋಧಯೇತ್ ॥೧೦॥

ಸ್ನೇಹಸ್ವೇದಗಳಿಂದ ಶರೀರ ಸಂಸ್ಕಾರಮಾಡಿಕೊಳ್ಳದೆ ಅಲ್ಪಮಾತ್ರೆಯಲ್ಲಿ ಅಲ್ಪಗುಣ ವುಳ್ಳ ಔಷಧವನ್ನು ಕುಡಿದರೆ ಅದು ಮೇಲಕ್ಕಾಗಲೀ (ವಮನೌಷಧವು) ಕೆಳಗಡೆಗಾಗಲೀ (ವಿರೇಚನೌಷಧವು) ಇಳಿಯದೆ ದೋಷಗಳನ್ನು ಕೆರಳಿಸಿ ಅವುಗಳೊಡನೆ ದೇಹಬಲವನ್ನೂ ನಾಶಮಾಡುತ್ತದೆ. ಇದರಿಂದ ಹೊಟ್ಟೆಯುಬ್ಬರ ಎದೆ ಬಿಗಿತ ನೀರಡಿಕೆ ಪ್ರಜ್ಞೆತಪ್ಪುವುದು ಮೈಉರಿತ ಇವುಗಳುಂಟಾಗುತ್ತವೆ. ಇವು ಹೀನಯೋಗಲಕ್ಷಣಗಳು. ರೋಗಿಗೆ ಮಂಗಾರೆಕಾಯಿ ಸೈಂಧವಲವಣಗಳನ್ನು ಬಿಸಿನೀರಿನಲ್ಲಿ ಕದರಿ ಕುಡಿಸಿ ವಮನವನ್ನೂ ತೀಕ್ಷ್ಣೌಷಧಗಳ ಕಷಾಯದಿಂದ ವಿರೇಚನವನ್ನೂ ಮಾಡಿಸಬೇಕು. ವಮನವಾಗದಿರು ವವರಿಗೆ ಕುಡಿಸಿರುವ ವಮನೌಷಧವು ದೋಷಗಳನ್ನು ಕೆರಳಿಸಿ ಶರೀರಕ್ಕೆಲ್ಲಾ ವ್ಯಾಪಿಸಿ ನವೆ ಊದು ಕುಷ್ಠ ಪಿಡಿಕೆಗಳು ಜ್ವರ ಮೈಕೆತ್ತರಿಸುವುದು ಚುಚ್ಚುವುದು ಇವುಗಳನ್ನುಂಟು ಮಾಡುತ್ತದೆ. ಉತ್ಕೃಷ್ಟ ಔಷಧಗಳ ಪ್ರಯೋಗದಿಂದ ಅವುಗಳನ್ನು ಹೊರಕ್ಕೆ ತೆಗೆಯ ಬೇಕು. ಸ್ನೇಹಸ್ವೇದ ಕರ್ಮಗಳನ್ನು ಸೇವನೆಮಾಡದೆ ಮೃದುವಿರೇಚನವನ್ನು ಪ್ರಯೋಗಿ

ಸಿದರೆ ಹೊಕ್ಕಳ ಕೆಳಗೆ ಹೊಟ್ಟೆಬಿಗಿತ ಉಬ್ಬರ ಶೂಲೆ ವಾತಪುರೀಷಗಳ ತಡೆ ನವೆ ಪಿಡಿಕೆ ಇವುಗಳುಂಟಾಗುತ್ತವೆ. ಈ ರೋಗಿಗೆ ಶೋಧನಬಸ್ತಿಯನ್ನು ಪ್ರಯೋಗಿಸಿ ಸ್ನೇಹಕರ್ಮ ಮಾಡಿಸಿ ತೀಕ್ಷ್ಣ ವಿರೇಚನೌಷಧಗಳನ್ನು ಪ್ರಯೋಗಿಸಬೇಕು. ದೋಷಗಳು ಹೊರಕ್ಕೆ ಬರದೆ ಶೋಧನೆಯಾಗುವುದು ಕಷ್ಟವಾದರೆ ಅವನ್ನು ಕೆರಳಿಸುವುದಕ್ಕಾಗಿ ಬಿಸಿನೀರನ್ನು ಕುಡಿಸಿ ಕೈಗಳನ್ನು ಬೆಂಕಿಯಿಂದ ಕಾಯಿಸಿ ಪಕ್ಕೆಗಳು ಹೊಟ್ಟೆ ಇವುಗಳ ಮೇಲಿಟ್ಟು ಶಾಖ ಕೊಡುವುದರಿಂದ ದೋಷಗಳು ಹೊರಕ್ಕೆ ಬರುತ್ತವೆ. ಹೊರಕ್ಕೆಬಂದ ಅಲ್ಪದೋಷವನ್ನೂ ಕುಡಿದೌಷಧವು ಜೀರ್ಣಿಸಿದ್ದನ್ನೂ ದೋಷವು ಹೆಚ್ಚಾಗಿ ಸೇರಿಕೊಂಡಿರುವುದನ್ನೂ ತಿಳಿದು ಹಗಲುಕಾಲವು ಅಲ್ಪವಾಗಿದೆಯೋ ಹೆಚ್ಚಾಗಿದೆಯೋ ತಿಳಿದು ರೋಗಿಯ ಬಲಕ್ಕೆ ತಕ್ಕಂತೆ ಔಷಧದ ಪ್ರಮಾಣವನ್ನು ನಿರ್ಧರಿಸಿ ಪುನಃ ವಿರೇಚನೌಷಧವನ್ನು ಕುಡಿಸಬೇಕು. ದೋಷಗಳು ಹೊರಕ್ಕೆ ಪ್ರವರ್ತಿಯಾಗದಿದ್ದರೆ ೧೦ ದಿನಗಳ ಅನಂತರ ರೋಗಿಗೆ ಸ್ನೇಹ ಸ್ವೇದಗಳಿಂದ ಸಂಸ್ಕಾರಮಾಡಿಸಿ ಪುನಃ ಶೋಧನೌಷಧಗಳನ್ನು ಪ್ರಯೋಗಿಸಬೇಕು. ವಿರೇಚನವೇ ಆಗದಿರುವವನಿಗೆ ನಿರೂಹಬಸ್ತಿ (ಶೋಧನಬಸ್ತಿ) ಯನ್ನು ಪ್ರಯೋಗಿಸಿ ಪುನಃ ಸ್ನೇಹಸ್ವೇದ ಕರ್ಮಗಳನ್ನು ಮಾಡಿಸಿ ವಿರೇಚನಮಾಡಿಸಬೇಕು. ನಾಚಿಕೆ ಹೆದರಿಕೆ ಲೋಭ (ದ್ರವ್ಯನಾಶವಾಗದಂತೆ ಕಾರ್ಪಣ್ಯಪಡುವುದು)ಗಳಿಂದ ಪ್ರಾಯಶಃ ಸ್ತ್ರೀಯರೂ ರಾಜರ ಹತ್ತಿರದಲ್ಲಿ ಕೆಲಸಮಾಡುವ ಜನರೂ ವರ್ತಕರೂ ಶ್ರೋತ್ರಿಯರೂ ಇವರು ವೇಗಗಳನ್ನು ತಡೆದುಕೊಳ್ಳುವ ಕಾರಣ ವಿರೇಚನಕರ್ಮಕ್ಕೆ ಅರ್ಹರಲ್ಲ. ಅವರಿಗೆ ಅತಿಯಾಗಿ ವಾತಪ್ರಕೋಪವುಂಟಾಗಿರುವಕಾರಣ ಅತಿಸ್ನಿಗ್ಧರನ್ನಾಗಿಮಾಡಿ ಸ್ವೇದಮಾಡಿಸಿ ವಮನ ವಿರೇಚನೌಷಧಗಳಿಂದ ಶೋಧನಮಾಡಿಸಬೇಕು.

ಸ್ನಿಗ್ಧಸ್ವಿನ್ನಸ್ಯಾತಿಮಾತ್ರಮತಿಮೃದುಕೋಷ್ಠಸ್ಯ ವಾ ತೀಕ್ಷ್ಣಾಧಿಕದತ್ತಮೌಷಧಮತಿಯೋಗಂ ಕುರ್ಯಾತ್ । ತತ್ರ ವಮನಾತಿಯೋಗೇ ಪಿತ್ತಾತಿ ಪ್ರವೃತ್ತಿರ್ಬಲವಿಸ್ರಂಸೋ ವಾತಕೋಪಶ್ಚ ಬಲವಾನ್ ಭವತಿ । ತಂ ಘೃತೇನಾಭ್ಯಜ್ಯಾವಗಾಹ್ಯ ಶೀತಾಸ್ವಪ್ಸು ಶರ್ಕರಾಮಧುಮಿಶ್ರೈರ್ಲೇಹ್ಯೈರುಪಚರೇದ್ಯಥಾಸ್ವಂ : ವಿರೇಚನಾಯೋಗೇ ಕಫಸ್ಯಾತಿಪ್ರವೃತ್ತಿರುತ್ತರಕಾಲಂ ಚ ಸರಕ್ತಸ್ಯ ತತ್ರಾಪಿ ಬಲವಿಸ್ರಂಸೋ ವಾತಕೋಪಶ್ಚ ಬಲವಾನ್ ಭವತಿ । ತಮತಿಶೀತಾಮ್ಬುಭಿಃ ಪರಿಷಿಚ್ಯಾವಗಾಹ್ಯ ವಾ ಶೀತೈಸ್ತಣ್ಡುಲಾಮ್ಬುಭಿರ್ಮಧುಮಿಶ್ರೈಶ್ಛರ್ದಯೇತ್ ಪಿಚ್ಛಾಬಸ್ತಿಂ ಚಾಸ್ಮೈದದ್ಯಾತ್ ಕ್ಷೀರಸರ್ಪಿಷಾ ಚೈನಮನುವಾಸಯೇತ್ ಪ್ರಿಯಙ್ಗ್ವಾದಿಂ ಚಾಸ್ಮೈ ತಣ್ಡುಲಾಮ್ಬುನಾ ಪಾತುಂ ಪ್ರಯಚ್ಛೇತ್ ಕ್ಷೀರರಸಯೋಶ್ಚಾನ್ಯತರೇಣ ಭೋಜಯೇತ್ ॥೧೧॥

ಸ್ನೇಹಸ್ವೇದ ಕರ್ಮಗಳಿಂದ ಉಪಚರಿಸಲ್ಪಟ್ಟಿರುವ ಮೃದುಕೋಷ್ಠದವರಿಗೆ ಅತಿಪ್ರಮಾಣದಿಂದ ಶೋಧನೌಷಧಗಳನ್ನು ಪ್ರಯೋಗಿಸಿ ಅತಿ ಯೋಗಗಳುಂಟಾದರೆ ವಮನಾತಿಯೋಗದಲ್ಲಿ ಪಿತ್ತವು ಅತಿಯಾಗಿ ಹೊರಕ್ಕೆ ಬಂದು ಬಲಹಾನಿಯನ್ನೂ ಅತಿ ಪ್ರಕೋಪವನ್ನೂ ಉಂಟುಮಾಡಿದರೆ ತುಪ್ಪದಿಂದ ಅಭ್ಯಂಗಮಾಡಿಸಿದ ಆ ರೋಗಿಯನ್ನು ಕತ್ತಿನಮಟ್ಟದ ತಣ್ಣೀರಿನಲ್ಲಿ ಕೂಡಿಸಿ ಸಕ್ಕರೆ ಮತ್ತು ಜೇನುತುಪ್ಪಗಳೊಡನೆ ಅವನಿಗೆ

ಇಷ್ಟವಾದ ಪದಾರ್ಥಗಳಿಂದ ಉಪಚರಿಸಬೇಕು. ವಿರೇಚನಾತಿಯೋಗದಿಂದ ರಕ್ತಮಿಶ್ರವಾದ ಕಫವು ಅತಿಯಾಗಿ ಹೊರಕ್ಕೆ ಸುರಿದು ಬಲಹಾನಿ ಮತ್ತು ವಾತಪ್ರಕೋಪಗಳುಂಟಾದರೆ ರೋಗಿಗೆ ತಣ್ಣೀರಿನಿಂದ ಸೇಚನೆಮಾಡಿಸಿ ಕತ್ತಿನವರೆಗೆ ಮುಳುಗುವಂತೆ ಕಲಗಚ್ಚಿನಲ್ಲಿ ಕೂರಿಸಿ ಜೇನುತುಪ್ಪವನ್ನು ಸೇರಿಸಿದ ವಮನೌಷಧವನ್ನೂ ಪಿಚ್ಛಾಬಸ್ತಿಯನ್ನೂ ಹಾಲು ತುಪ್ಪಗಳನ್ನು ಮಿಶ್ರಮಾಡಿದ ಅನುವಾಸನಬಸ್ತಿಯನ್ನೂ ಪ್ರಯೋಗಿಸಿ ಪ್ರಿಯಂಗ್ವಾದಿ ಗಣೋಕ್ತದ್ರವ್ಯಗಳ ಚೂರ್ಣವನ್ನು ಕಲಗಚ್ಚಿನಲ್ಲಿ ಕದರಿ ಕುಡಿಸಿ ಹಾಲು ಅಥವಾ ಮಾಂಸರಸ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು.

ತಸ್ಮಿನ್ನೇವ ವಮನಾತಿ ಯೋಗೇ ಪ್ರವೃದ್ಧೇ ಶೋಣಿತಂ ಷ್ಠೀವತಿ ಛರ್ದಯತಿ ವಾ ತತ್ರ ಜಿಹ್ವಾನಿಃಸರಣಮಕ್ಷ್ಣೋರ್ವ್ಯಾವೃತ್ತಿರ್ಹನುಸಂಹನನಂ ತೃಷ್ಣಾ ಹಿಕ್ಕಾಜ್ವರೋ ವೈಸಂಜ್ಞ್ಯಮಿತ್ಯುಪದ್ರವಾ ಭವನ್ತಿ ತಮಜಾಸೃಕ್ ಚಂದನೋಶೀರಾಞ್ಜನಲಾಜಚೂರ್ಣೈಃ ಸಶರ್ಕರೋದಕೈರ್ಮನ್ಥಂ ಪಾಯಯೇತ್ ಫಲರಸೈರ್ವಾ ಸಘೃತ ಕ್ಷೌದ್ರಶರ್ಕರೈಃ ಶುಙ್ಗಾಭಿರ್ವಾ ವಟಾದೀನಾಂ ಪೇಯಾಂ ಸಿದ್ಧಾಂ ಸಕ್ಷೌದ್ರಾಂ ವರ್ಚೋಗ್ರಾಹಿಭಿರ್ವಾ ಪಯಸಾ ಜಾಙ್ಗಲರಸೇನವಾ ಭೋಜಯೇತ್ ಅತಿಸ್ರುತಶೋಣಿತವಿಧಾನೇನೋಪಚರೇತ್ ಜಿಹ್ವಾಮತಿಸರ್ಪಿತಾಂ ಕಟುಕಲವಣಚೂರ್ಣ ಪ್ರಘೃಷ್ಟಾಂ ತಿಲದ್ರಾಕ್ಷಾಪ್ರಲಿಪ್ತಾಂ ವಾ ಪೀಡಯೇತ್ ಪ್ರವಿಷ್ಟಾಯಾಮಮ್ಲಮನ್ಯೇತಸ್ಯ ಪುರಸ್ತಾತ್‌ಖಾದಯೇಯುಃ ವ್ಯಾವೃತ್ತೇ ಚಾಕ್ಷಿಣೀ ಘೃತಾಭ್ಯಕ್ತೇ ಪೀಡಯೇತ್ ಹನುಸಂಹನನೇ ವಾತಶ್ಲೇಷ್ಮಹರಂ ನಸ್ಯಂ ಸ್ವೇದಾಂಶ್ಚ ವಿದಧ್ಯಾತ್ ತೃಷ್ಣಾದಿಷು ಚ ಯಥಾಸ್ವಂ ಪ್ರತಿಕುರ್ವೀತ । ವಿಸಂಜ್ಞೇ ವೇಣುವೀಣಾಗೀತಸ್ವನಂ ಶ್ರಾವಯೇತ್ ||೧೨||

ವಿರೇಚನಾತಿಯೋಗೇ ಚ ಸಚಂದ್ರಕಂ ಸಲಿಲಮಧಃ ಸ್ರವತಿ ತತೋ ಮಾಂಸಧಾವನಪ್ರಕಾಶಮುತ್ತರಕಾಲಂ ಜೀವಶೋಣಿತಂ ಚ ತತೋ ಗುದನಿಃಸರಣಂ ವೇಪಥುರ್ವಮನಾತಿಯೋಗೋಪದ್ರವಾಶ್ಚಾಸ್ಯ ಭವನ್ತಿ ತಮಪಿ ನಿಃಸ್ರುತಶೋಣಿತ ವಿಧಾನೇನೋಚರೇತ್ ನಿಃಸರ್ಪಿತ ಮದಸ್ಯ ಗುದಮಭ್ಯಜ್ಯ ಪರಿಸ್ವೇದ್ಯಾನ್ತಃ ಪೀಡಯೇತ್ ಕ್ಷುದ್ರರೋಗಚಿಕಿತ್ಸಿತಂ ವಾ ವೀಕ್ಷೇತ, ವೇಪಥೌ ವಾತವ್ಯಾಧಿವಿಧಾನಂ ಕುರ್ವೀತ ಜಿಹ್ವಾನಿಃಸರಣಾದಿಷೂಕ್ತಃ ಪ್ರತೀಕಾರಃ ಅತಿವೃತ್ತೇ ವಾ ಜೀವಶೋಣಿತೇ ಕಾಶ್ಮರೀಫಲಬದರೀದೂರ್ವೋಶೀರೈಃ ಶೃತೇನ ಪಯಸಾ ಘೃತಮಣ್ಡಾಞ್ಜನಯುಕ್ತೇನ ಸುಶೀತೇನಾಸ್ಥಾಪಯೇತ್ ನ್ಯಗ್ರೋಧಾದಿಕಷಾಯಕ್ಷೀರೇಕ್ಷುರಸಘೃತಶೋಣಿತಸಂಸೃಷ್ಟೈಶ್ಚೈನಂ ಬಸ್ತಿಭಿರುಪಾಚರೇತ್, ಶೋಣಿತಷ್ಠೀವನೇ ರಕ್ತಪಿತ್ತರಕ್ತಾತೀಸಾರಕ್ರಿಯಾಶ್ಚಾಸ್ಯ ವಿದಧ್ಯಾತ್ ನ್ಯಗ್ರೋಧಾದಿಂ ಚಾಸ್ಯ ವಿದಧ್ಯಾತ್ ಪಾನಭೋಜನೇಷು ||೧೩||

ಜೀವಶೋಣಿತರಕ್ತಪಿತ್ತಯೋಶ್ಚ ಜಿಜ್ಞಾಸಾರ್ಥಂ ತಸ್ಮಿನ್ ಪಿಚುಂ ಪ್ಲೋತಂ ವಾ ಕ್ಷಿಪೇತ್ ಯದ್ಯುಷ್ಣೋದಕಪ್ರಕ್ಷಾಳಿತಮಪಿ ವಸ್ತ್ರಂ ರಞ್ಜಯತಿ ತಜ್ಜೀವಶೋಣಿತ ಮವಗನ್ತವ್ಯಂ ಸಭಕ್ತಂ ಚ ಶುನೇ ದದ್ಯಾತ್ ಸಕ್ತುಸಂಮಿಶ್ರಂ ವಾ ಸ ಯದ್ಯುಪಭುಞ್ಜೀತ ತಜ್ಜೀವಶೋಣಿತಮವಗನ್ತವ್ಯಮ್ ||೧೪||

ವಮನದ ಅತಿಯೋಗದಲ್ಲಿ ರಕ್ತವನ್ನು ಉಗುಳುತ್ತಾ ವಮನಮಾಡುತ್ತಾನೆ. ನಾಲಗೆಯು ಹೊರಕ್ಕೆ ಹೊರಟಿರುತ್ತದೆ, ಕಣ್ಣುಗುಡ್ಡೆಗಳು ಮುಂದಕ್ಕೆ ಚಾಚಿಕೊಂಡಿರು

ತ್ತವೆ, ದವಡೆಗಳು ಬಿಗಿದು ಹಿಡಿದುಕೊಂಡಿರುತ್ತವೆ. ಬಾಯಾರಿಕೆ, ಬಿಕ್ಕಳಿಕೆ, ಜ್ವರ, ಜ್ಞಾನಹೀನತೆ ಇವುಗಳು ಉಪದ್ರವಗಳು. ಅವನಿಗೆ ಆಡಿನರಕ್ತ, ಕೆಂಪುಗಂಧ, ಲಾವಂಚ ಸ್ರೋತೋಂಜನ, ಅರಳು ಇವುಗಳ ಚೂರ್ಣವನ್ನು ನೀರು ಸಕ್ಕರೆಗಳಲ್ಲಿ ಕದರಿದ ಮಂಥಜ ವನ್ನು ಅಥವಾ ದಾಳಿಂಬೆ ಮಾದಳ ಮೊದಲಾದ ಹುಳಿಹಣ್ಣುಗಳ ರಸಕ್ಕೆ ತುಪ್ಪ ಸಕ್ಕರೆ ಗಳನ್ನು ಮಿಶ್ರಮಾಡಿಯಾಗಲೀ ಕುಡಿಸಬೇಕು. ಆಲ ಅತ್ತಿ ಮೊದಲಾದ ಕ್ಷೀರವೃಕ್ಷಗಳ ಮೊಗ್ಗುಗಳ ಕಷಾಯದಿಂದ ಪೇಯವನ್ನೂ ತಯಾರಿಸಿ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು. ಮಲವನ್ನು ತಡೆಯತಕ್ಕ ಔಷಧಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು. ಹಾಲು ಅಥವಾ ಮಾಂಸ ರಸ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು. ಅತಿ ರಕ್ತಸ್ರಾವವಾದವರಿಗೆ ಮಾಡುವಂತೆಯೇ ಕಷಾಯರಸ ಶೀತವೀರ್ಯದ ದ್ರವ್ಯಗಳಿಂದ ಉಪಚರಿಸಬೇಕು. ನಾಲಗೆಯು ಹೊರಕ್ಕೆ ಚಾಚಿಕೊಂಡರೆ ಅದನ್ನು ಖಾರ ಉಪ್ಪುಗಳ ಚೂರ್ಣದಿಂದ ಉಜ್ಜಿ ಎಳ್ಳು ದ್ರಾಕ್ಷಿಗಳ ಕಲ್ಕದಿಂದ ಲೇಪಿಸಿ ಒಳಗಡೆಗೆ ತಳ್ಳಿ ಅವನೆದುರಿಗೆ ಇತರರು ಹುಳಿಯಾದ ದಾಳಿಂಬೆ, ಮಾದಳ ಮೊದಲಾದ ಹುಳಿ ರಸವುಳ್ಳ ಹಣ್ಣುಗಳನ್ನು ತಿನ್ನಬೇಕು. (ಹೀಗೆ ಮಾಡುವುದರಿಂದ ಅವನ ಬಾಯಿ ಯಲ್ಲಿ ರಸ ಜಿನುಗುತ್ತದೆ.) ಕಣ್ಣುಗುಡ್ಡೆಗಳು ಮುಂದಕ್ಕೆ ಚಾಚಿ ಹೊರಕ್ಕೆ ಜಾರಿ ಬಂದಿದ್ದರೆ ಅವುಗಳಿಗೆ ತುಪ್ಪವನ್ನು ಬಳಿದು ತಿಕ್ಕಬೇಕು. ದವಡೆಗಳು ಬಿಗಿಹಿಡಿದು ಕೊಂಡರೆ ವಾತಕಫಹರಗಳಾದ ನಸ್ಯವನ್ನೂ ಸ್ವೇದವನ್ನೂ ಮಾಡಿಸಬೇಕು. ಬಾಯಾ ರಿಕೆ, ಬಿಕ್ಕಳಿಕೆ, ಮೊದಲಾದ ಉಪದ್ರವಗಳಿಗೆ ತಕ್ಕಪ್ರತೀಕಾರಗಳನ್ನು ಮಾಡಬೇಕು. ಜ್ಞಾನತಪ್ಪಿದರೆ ಕೊಳಲು ವೀಣೆ ಸಂಗೀತ ಶ್ರವಣಗಳನ್ನು ಮಾಡಿಸಬೇಕು.

ವಿರೇಚನದ ಅತಿಯೋಗದಲ್ಲಿ ನವಿಲಕತ್ತಿನ ಬಣ್ಣದಂತೆ ವಿವಿಧ ಬಣ್ಣದ ದ್ರವವೂ ಮಾಂಸತೊಳೆದ ನೀರಿನಂತೆ ಕಡೆಗೆ ಜೀವರಕ್ತವೂ ಸ್ರಾವವಾಗಿ ಗುದದಿಂದ ಹೊರಕ್ಕೆ ಕರುಳಿನ ತುದಿಯ ಮಾಂಸವು ಹೊರಟು ಬರುತ್ತದೆ. ಇದಕ್ಕೆ "ಗುದಭ್ರಂಶ" ವೆನ್ನು ತ್ತಾರೆ. ನಡುಕವೂ ವಮನಾತಿಯೋಗದ ಉಪದ್ರವಗಳೂ ಉಂಟಾಗುತ್ತವೆ. ಇವನಿಗೆ ಅತಿರಕ್ತಸ್ರಾವ ಚಿಕಿತ್ಸೆಯಂತೆಯೇ ಉಪಚರಿಸಬೇಕು. ಗುದವು ಹೊರಕ್ಕೆ ಹೊರಟು ಬಂದಿದ್ದರೆ ಗುದಕ್ಕೆ ಶತಧೌತಘೃತದಿಂದ ಲೇಪನ ಮತ್ತು ಸ್ವೇದಮಾಡಿಸಿ ಒಳಕ್ಕೆ ನುಗ್ಗಿಸ ಬೇಕು. ಕ್ಷುದ್ರರೋಗದಲ್ಲಿ ಹೇಳಿರುವಂತೆ ಗುದಭ್ರಂಶ ಚಿಕಿತ್ಸೆಯನ್ನು ಮಾಡಿಸ ಬೇಕು. ಮೈನಡುಕದಲ್ಲಿ ವಾತರೋಗ ಚಿಕಿತ್ಸೆಯನ್ನೂ ನಾಲಗೆಯು ಹೊರಕ್ಕೆ ಚಾಚಿ ದ್ದಾಗ ಮಾಡುವ ಚಿಕಿತ್ಸೆಯನ್ನೂ ಮಾಡಿಸಬೇಕು. ಅತಿಪ್ರಮಾಣದಿಂದ ಜೀವರಕ್ತವು ಸ್ರಾವವಾದರೆ ಶಿವನಿಯಹಣ್ಣು ಬೋರೆಹಣ್ಣು ಮತ್ತು ಹಸಿಯುಗರಿಕೆಗಳೊಡನೆ ಕಾಯಿಸಿದ ಹಾಲನ್ನೂ ಸ್ರೋತೋಂಜನವನ್ನೂತುಪ್ಪದ ತಿಳಿಯೊಡನೆ ಮಿಶ್ರಮಾಡಿ ತಣ್ಣಗೆ ಕಷಾಯ, ಹಾಲು, ಕಬ್ಬಿನರಸ, ತುಪ್ಪ, ರಕ್ತ ಇವುಗಳನ್ನು ಮಿಶ್ರಮಾಡಿ ಬಸ್ತಿಪ್ರಯೋಗವನ್ನು ಮಾಡಿಸಬೇಕು. ರಕ್ತವನ್ನು ಉಗುಳಿದರೆ ರಕ್ತ ಪಿತ್ತ ರಕ್ತಾತಿಸಾರಗಳ ಚಿಕಿತ್ಸೆಯಂತೆ

ಉಪಚರಿಸಬೇಕು. ಪಾನ ಭೋಜನಗಳಿಗೆ ನ್ಯಗ್ರೋಧಾದಿ ಕಷಾಯವನ್ನು ಸೇರಿಸಿರಬೇಕು. ಜೀವರಕ್ತ ರಕ್ತಪಿತ್ತಗಳಿಗಿರುವ ಪರಸ್ಪರ ವ್ಯತ್ಯಾಸವನ್ನು ತಿಳಿಯಬೇಕಾದರೆ ಆ ಸ್ರಾವಗಳಲ್ಲಿ ಹತ್ತಿಯ ಗಡ್ಡೆಯನ್ನಾಗಲೀ ಬಿಳಿಯಬಟ್ಟೆಯ ತುಂಡನ್ನಾಗಲೀ ಅದ್ದಿ ಬಿಸಿ ನೀರಿನಿಂದ ತೊಳೆದರೆ ಬಟ್ಟೆಯಲ್ಲಿನ ಕೆಂಪುಬಣ್ಣವು ಹೋಗದಿದ್ದರೆ ಅದು ಜೀವಶೋಣಿತವೆಂದೂ ಅಂಟಿಕೊಳ್ಳದೆ ಬಟ್ಟೆಯು ಶುಭ್ರವಾಗಿದ್ದರೆ ರಕ್ತಪಿತ್ತರೋಗವೆಂದೂ ತಿಳಿಯಬೇಕು. ಮತ್ತೊಂದು ವಿಧಾನದಿಂದಲೂ ಈ ವ್ಯತ್ಯಾಸವನ್ನು ನಿರ್ಧರಮಾಡಬಹುದು. ಹೇಗೆಂದರೆ—ಆ ಸ್ರಾವದೊಡನೆ ಮಿಶ್ರಮಾಡಿದ ಅನ್ನವನ್ನಾಗಲೀ ಅಕ್ಕಿಯ ಹಿಟ್ಟನ್ನಾಗಲಿ, ನಾಯಿಯು ತಿಂದರೆ ಜೀವರಕ್ತವೆಂದೂ, ತಿನ್ನದಿದ್ದರೆ ರಕ್ತಪಿತ್ತವೆಂದೂ ತಿಳಿಯಬೇಕು.

ಸಶೇಷಾನ್ನೇನ ಬಹುದೋಷೇಣ ರೂಕ್ಷೇಣಾನಿಲಪ್ರಾಯ ಕೋಷ್ಠೇನಾನುಷ್ಣಮ ಸ್ನಿಗ್ಧಂ ವಾ ಪೀತಮೌಷಧಮಾಧ್ಮಾಪಯತಿ ತತ್ರಾನಿಲಮೂತ್ರಪುರೀಷಸಙ್ಗಃ ಸಮುನ್ನದ್ಧೋದರತಾ ಪಾರ್ಶ್ವಭಙ್ಗೋ ಗುದಬಸ್ತಿನಿಸ್ತೋದನಂ ಭಕ್ತಾರುಚಿಶ್ಚ ಭವತಿ ತಂ ಚಾಧ್ಮಾನಮಿತ್ಯಾಚಕ್ಷತೇ ತಮುಪಸ್ವೇದ್ಯಾನುಹವರ್ತಿದೀಪನವಸ್ತಿಕ್ರಿಯಾಭಿರುಪಚರೇತ್ ||೧೫||

ಬಹು ದೋಷಿಯಾದ ರೂಕ್ಷದೇಹವುಳ್ಳ ವಾತಕೋಷ್ಠಿಯು ಆಮಾಶಯದಲ್ಲಿ ಅನ್ನಶೇಷವಿರುವಾಗ ತಣ್ಣಗೂ ರೂಕ್ಷವಾಗಿಯೂ ಇರುವ ಶೋಧನೌಷಧವನ್ನು ಕುಡಿದರೆ ಹೊಟ್ಟೆಯುಬ್ಬರಿಸಿ ವಾತಮೂತ್ರ ಪುರೀಷಗಳ ಪ್ರವರ್ತನೆಗೆ ತಡೆಯುಂಟಾಗಿ ಉದರ ಗುಹೆಯು ತುಂಬಾ ಉಬ್ಬುತ್ತದೆ. ಪಕ್ಕೆಗಳು ಬಗ್ಗುತ್ತವೆ, ಗುದ ಬಸ್ತ್ಯಾಶಯಗಳಲ್ಲಿ ಚುಚ್ಚಿದಂತೆ ನೋವಿರುತ್ತದೆ, ಅನ್ನದಲ್ಲಿ ರುಚಿತೋರುವುದಿಲ್ಲ. ಈ ರೋಗಕ್ಕೆ ಆಧ್ಮಾನವೆಂದು ಹೆಸರು. ಈ ರೋಗಿಯ ಉದರಕ್ಕೆ ಸ್ವೇದಕರ್ಮವನ್ನು ಮಾಡಿಸಿ ಆನಾಹನಿವಾರಣೆಗಾಗಿ ಗುದವರ್ತಿಯನ್ನೂ ದೀಪನವಸ್ತಿಯನ್ನೂ ಪ್ರಯೋಗಿಸಬೇಕು.

ಕ್ಷಾಮೇಣಾತಿಮೃದುಕೋಷ್ಠೇನ ಮನ್ದಾಗ್ನಿನಾ ರೂಕ್ಷೇಣ ವ್ಯಾತಿತೀಕ್ಷ್ಣೋಷ್ಣಾತಿಲವಣಮತಿರೂಕ್ಷಂ ವಾ ಪೀತಮೌಷಧಂ ಪಿತ್ತಾನಿಲೌ ಪ್ರದೂಷ್ಯ ಪರಿಕರ್ತಿಕಾಮಾಪಾದಯತಿ, ತತ್ರ ಗುದನಾಭಿಮೇಢ್ರವಸ್ತಿಶಿರಸ್ಸು ಸದಾಹಂ ಪರಿಕರ್ತನಮನಿಲಸಙ್ಗೋ ವಾಯುವಿಷ್ಟಮ್ಭೋ ಭಕ್ತಾರುಚಿಶ್ಚ ಭವತಿ, ತತ್ರ ಪಿಚ್ಛಾಬಸ್ತಿಯಷ್ಟೀಮಧುಕಕೃಷ್ಣತಿಲಕಲ್ಕಮಧುಘೃತಯುಕ್ತಃ ಶೀತಾಮ್ಬು ಪರಿಷಿಕ್ತಂ ಚೈನಂ ಪಯಸಾ ಭುಕ್ತವನಂ ಘೃತಮಣ್ಡೇನ ಯಷ್ಟೀಮಧುಕಸಿದ್ಧೇನ ತೈಲೇನ ವಾನುವಾಸಯೇತ್ ||೧೬||

ಅತಿಕೃಶನೂ ಮಂದಾಗ್ನಿಯೂ ಮೃದುಕೋಷ್ಠವುಳ್ಳವನೂ ರೂಕ್ಷಶರೀರವುಳ್ಳವನೂ ಅತಿ ಚುರುಕಾದ ಅತಿಲವಣಮಿಶ್ರವಾದ ಅತಿಬಿಸಿಯಾದ ಅತಿರೂಕ್ಷವಾದ ಔಷಧವನ್ನು ಕುಡಿದರೆ ಪಿತ್ತಾನಿಲಗಳು ಪ್ರಕೋಪಗೊಂಡು "ಪರಿಕರ್ತಿಕವೆಂಬ" ರೋಗವನ್ನುಂಟುಮಾಡುತ್ತವೆ. ಈ ರೋಗದಲ್ಲಿ ಗುದ ಹೊಕ್ಕಳು ಶಿಶ್ನ ಬಸ್ತಿಶಿರಸ್ಸುಗಳಲ್ಲಿ ಉರಿತವೂ ಮೈಜಜ್ಜಿದಂತೆ ನೋವೂ ವಾತದಗತಿಗೆ ತಡೆಯೂ ವಾಯುತುಂಬಿ ಹೊಟ್ಟೆಯುಬ್ಬರವೂ ಅನ್ನದಲ್ಲಿ ಅರುಚಿಯೂ ಉಂಟಾದರೆ ರೋಗಿಗೆ ಅತಿಮಧುರ ಮತ್ತು ಕರಿಯ ಎಳ್ಳಿನ ಕಲ್ಕ

ಜೇನುತುಪ್ಪ ತುಪ್ಪಗಳನ್ನು ಮಿಶ್ರಮಾಡಿದ ಪಿಚ್ಛಾಬಸ್ತಿಯನ್ನು ಪ್ರಯೋಗಿಸಬೇಕು. ತಣ್ಣೀರನ್ನು ಮೈಮೇಲೆ ನಿಧಾನವಾಗಿ ಹನಿಸಿದ ಅನಂತರ ಹಾಲು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಿ ತುಪ್ಪದ ಮೇಲಿನ ತಿಳಿಯಿಂದಾಗಲೀ ಅತಿಮಧುರದ ತೈಲದಿಂದಾಗಲೀ ಅನುವಾಸನಬಸ್ತಿಯನ್ನು ಪ್ರಯೋಗಿಸಬೇಕು.

ಕ್ರೂರಕೋಷ್ಠಸ್ಯಾತಿಪ್ರಭೂತದೋಷಸ್ಯ ಮೃದ್ವೌಷಧಮವಚಾರಿತಂ ಸಮುತ್ಕ್ಲಿಶ್ಯ ದೋಷಾನ್ ನ ನಿಃಶೇಷಾನಪಹರತಿ ತತಸ್ತೇ ದೋಷಾಃ ಪರಿಸ್ರಾವಮಾಪಾದಯನ್ತಿ, ತತ್ರ ದೌರ್ಬಲ್ಯೋದರವಿಷ್ಟಮ್ಭಾರುಚಿಗಾತ್ರ ಸದನಾನಿ ಭವನ್ತಿ ಸವೇದನೌ ಚಾಸ್ಯ ಪಿತ್ತಶ್ಲೇಷ್ಮಾಣೌ ಪರಿಸ್ರವತಸ್ತಂ ಪರಿಸ್ರಾವಮಿತ್ಯಾಚಕ್ಷತೇ ತಮಜಕರ್ಣಧವತಿನಿಶಪಲಾಶಬಲಾ ಕಷಾಯೈರ್ಮಧುರ ಸಂಯುಕ್ತೈರಾಸ್ಥಾಪಯೇತ್ ಉಪಶಾನ್ತದೋಷಂ ಸ್ನಿಗ್ಧಂ ಚ ಭೂಯಃ ಸಂಶೋಧಯೇತ್ ||೧೭||

ಕ್ರೂರಕೋಷ್ಠನಿಗೆ ಅಧಿಕವಾದ ದೋಷಪ್ರಕೋಪವಿದ್ದಾಗ ಮೃದುವಾದ ಶೋಧನೌಷಧವನ್ನು ಪ್ರಯೋಗಿಸಿದರೆ ಅದು ದೋಷಗಳನ್ನು ಕೆರಳಿಸಿ ನಿಃಶೇಷವಾಗಿ ಹೊರಗೆಡವದೆ ಗುದದಿಂದ ಸದಾ ದೋಷಗಳು ಸ್ರಾವವಾಗುತ್ತಾ ರೋಗಿಗೆ ಬಲಹಾನಿ ನೋವು ಮಲರೋಧ ಅರುಚಿ ದೇಹಕ್ಷೀಣತೆಗಳನ್ನುಂಟುಮಾಡುತ್ತದೆ. ಇದಕ್ಕೆ "ಪರಿಸ್ರಾವಿ ಗುದ"ವೆಂದು ಹೆಸರು. ಈ ರೋಗಿಗೆ ಧೂಪಮರದತೊಗಟೆ ದಿಂಡಿಗ (ತಿಂಡಿಶ) ಮುತ್ತುಗ (ಕಳ್ಳಂಗಡಲೆ) ಇವುಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಆಸ್ಥಾಪನಬಸ್ತಿಯನ್ನು ಪ್ರಯೋಗಿಸಬೇಕು. ದೋಷನಿವಾರಣೆಯಾದ ಮೇಲೆ ಪುನಃ ಸ್ನೇಹಕರ್ಮವನ್ನು ಮಾಡಿಸಿ ಶೋಧನೌಷಧವನ್ನು ಕುಡಿಸಬೇಕು.

ಅತಿರೂಕ್ಷೇsತಿಸ್ನಿಗ್ಧೇ ವಾ ಭೇಷಜಮವಚಾರಿತಮಪ್ರಾಪ್ತಂ ವಾತವರ್ಚಉದೀರಯೇತ್ ವೇಗಾಘಾತೇನ ವಾ ಪ್ರವಾಹಿಕಾಭವತಿ। ತತ್ರ ಸವಾತಂ ಸದಾಹಂ ಸಶೂಲಂ ಸಶ್ವೇತಂ ಸಪಿಚ್ಛಿಲಂ ಕೃಷ್ಣಂ ರಕ್ತಂ ವಾ ಭೃಶಂ ಪ್ರವಾಹಮಾಣಃ ಕಫಮುಪವಿಶತಿ ತಂ ಪರಿಸ್ರಾವವಿಧಾನೇನೋಪಾಚರೇತ್ ||೧೮||

ಯಸ್ಯೋರ್ಧ್ವಮಧೋವಾ ಭೇಷಜವೇಗಂ ಪ್ರವೃತ್ತಮಜ್ಞತ್ವಾದ್ವಿನಿಹನ್ತಿ ತಸ್ಯೋಪಸರಣಂ ಹೃದಿ ಕುರ್ವನ್ತಿ ದೋಷಾಃ ತತ್ರ ಪ್ರಧಾನಮರ್ಮ ಸನ್ತಾಪಾದ್ವೇದನಾಭಿರತ್ಯರ್ಥಂ ಪೀಡ್ಯಮಾನೋ ದನ್ತಾನ್ ಕಿಟಕಿಟಾಯತೇ ಉದ್ಗತಾಕ್ಷೋ ಜಿಹ್ವಾಂ ಖಾದತಿ ಪ್ರತಾಮ್ಯತ್ಯಚೇತಾಶ್ಚ ಭವತಿ ತಂ ಪರಿವರ್ಜಯನ್ತಿ ಮೂರ್ಖಾಃ ತಮಭ್ಯಜ್ಯ ಧಾನ್ಯಸ್ವೇದೇನ ಸ್ವೇದಯೇತ್ ಯಷ್ಟಿಮಧುಕಸಿದ್ಧೇನ ಚ ತೈಲೇನಾನುವಾಸಯೇತ್ ಶಿರೋವಿರೇಚನಂ ಚಾಸ್ಮೈ ತೀಕ್ಷ್ಣಂ ವಿದಧ್ಯಾತ್ ತತೋ ಯಷ್ಟಿಮಧುಕಮಿಶ್ರೇಣ ತಣ್ಡುಲಾಮ್ಬುನಾ ಛರ್ದಯೇತ್ ಯಥಾದೋಷೋಚ್ಛ್ರಯೇಣ ಚೈನಂ ಬಸ್ತಿಭಿರುಪಾಚರೇತ್ ||೧೯||

ಅತಿರೂಕ್ಷದೇಹವುಳ್ಳವನಿಗಾಗಲೀ ಅತಿಸ್ನಿಗ್ಧದೇಹವುಳ್ಳವನಿಗಾಗಲೀ ಪ್ರಯೋಗಿಸಿದ ಶೋಧನೌಷಧವು ಸರಿಯಾಗಿ ಕೆಲಸಮಾಡದಿದ್ದರೆ ಅಪಾನವಾತವನ್ನೂ ಮಲವನ್ನೂ ಕೆರಳಿಸುತ್ತದೆ. ವೇಗಪ್ರವರ್ತನೆಗೆ ತಡೆಯುಂಟಾದರೆ "ಪ್ರವಾಹಿಕಾರೋಗ"ವುಂಟಾಗು

ತ್ತದೆ. ಈ ರೋಗಿಯು ವಾತಮಿಶ್ರವಾಗಿ ಉರಿತದಿಂದಲೂ ನೋವಿನಿಂದಲೂ ಕೂಡಿ ಬಿಳುಪಾಗಿಯೂ ಗರಣೆಯಾಗಿಯೂ (ಪಿಚ್ಛಿಲ) ಕಪ್ಪಾಗಿ ಅಥವಾ ಕೆಂಪಗಿರುವ ಕಫವನ್ನು ಮುಲುಕುತ್ತಲೇ ವಿಸರ್ಜಿಸಿದರೆ ಅತಿರೂಕ್ಷವಾಗಿ ಕ್ರೂರಕೋಷ್ಠಿಗೆ ಮಾಡುವ ಚಿಕಿತ್ಸೆಯಂತೆಯೂ ಮೃದುಕೋಷ್ಠವುಳ್ಳವನಿಗೆ ಅಧಿಕದೋಷ ಪ್ರಕೋಪವಿದ್ದಾಗ ಮಾಡುವಂತೆ ಸ್ನಿಗ್ಧಕೋಷ್ಠವುಳ್ಳವನಿಗೆ ಚಿಕಿತ್ಸೆಯನ್ನು ಮಾಡಬೇಕು. ತಾನಾಗಿ ಊರ್ಧ್ವಮುಖದಿಂದಾಗಲೀ ಅಧೋಭಾಗದಿಂದಾಗಲೀ ಹೊರಟಿರುವ ವಾತಾದಿಗಳ ವೇಗಗಳನ್ನು ಯಾವನು ತಡೆಯುತ್ತಾನೆಯೋ ಆ ಅವಿವೇಕಿಯ ಹೃದಯದಲ್ಲಿ ಮರ್ಮದಲ್ಲಿ ದೋಷಗಳು ಜಮಾವಣೆಯಾಗಿ ಉರಿತದಿಂದಲೂ ವ್ಯಥೆಯಿಂದಲೂ ಹಲ್ಲನ್ನು ಕಟ್‌ಕಟ್ ಶಬ್ದದಿಂದ ಕಡಿಯುತ್ತಾ ಕಣ್ಣುಗುಡ್ಡೆಗಳನ್ನು ಮೇಲ್ಗಡೆಗೆ ತಿರುಗಿಸುತ್ತಾ ನಾಲಿಗೆಯನ್ನು ಕಚ್ಚಿಕೊಳ್ಳುತ್ತಾ ಬಳಲುತ್ತಾನೆ. ಜ್ಞಾನತಪ್ಪುತ್ತದೆ. ಮೂಢರಾದ ವೈದ್ಯರು ಇಂತಹ ರೋಗಿಗಳನ್ನು ಚಿಕಿತ್ಸೆಮಾಡದೆ ಬಿಟ್ಟುಬಿಡುತ್ತಾರೆ. ಆದರೆ ಬಲಾ ತೈಲವನ್ನು ಮೈಮೇಲೆ ಬಳಿದು ಧಾನ್ಯಸ್ವೇದದಿಂದ ಮೈಬೆವರಿಸಿ ಅತಿಮಧುರದ ತೈಲದಿಂದ ಅನುವಾಸನಬಸ್ತಿಯನ್ನು ಪ್ರಯೋಗಿಸಿ ತೀಕ್ಷ್ಣವಾದ ಶಿರೋವಿರೇಚನೌಷಧಗಳಿಂದ ತಲೆ ಎಡೆಗಳಲ್ಲಿರುವ ಕಫವನ್ನು ಹೊರಡಿಸಬೇಕು. ಕಲಗಚ್ಚಿಗೆ ಅತಿಮಧುರದ ಚೂರ್ಣವನ್ನು ಸೇರಿಸಿ ಕುಡಿಸಿ ವಮನಮಾಡಿಸಬೇಕು. ಪ್ರಕುಪಿತದೋಷಗಳಿಗೆ ಅನುಸಾರವಾಗಿ ದೋಷಹರ ದ್ರವ್ಯಗಳಿಂದ ತಯಾರಿಸಿದ ಬಸ್ತಿಪ್ರಯೋಗದಿಂದ ರೋಗಿಯನ್ನುಪಚರಿಸಬೇಕು.

ಯಸ್ತೂರ್ಧ್ವಮಧೋ ವಾ ಪ್ರವೃತ್ತದೋಷಃ ಶೀತಾಗಾರಮುದಕಮನಿಲಮನ್ಯದ್ವಾ ಸೇವೇತ ತಸ್ಯ ದೋಷಾಃ ಸ್ರೋತಃಸ್ವವಲೀಯಮಾನಾಃ ಘನೀಭಾವಮಾಪನ್ನಾ ವಾತಮೂತ್ರಶಕೃದ್ಗ್ರಹಮಾಪಾದ್ಯ ವಿಬಧ್ಯನ್ತೇ ತಸ್ಮಾಟೋಪೋ ದಾಹೋಜ್ವರೋ ವೇದನಾಶ್ಚ ತೀವ್ರಾ ಭವನ್ತಿ। ತಮಾಶು ವಾಮಯಿತ್ವಾ ಪ್ರಾಪ್ತಕಾಲಂ ಕ್ರಿಯಾಂ ಕುರ್ವೀತ ಅಧೋಭಾಗೇತ್ವಧೋಭಾಗಹರದ್ರವ್ಯಸ್ಯೈನ್ದ್ರವಾಮ್ಲ ಮೂತ್ರಸಂಸೃಷ್ಟಂ ವಿರೇಚನಂ ಪಾಯಯೇತ್ ಆಸ್ಥಾಪನಮನುವಾಸನಂ ಚ ಯಥಾದೋಷಂ ವಿದಧ್ಯಾತ್ | ಯಥಾದೋಷಮಾಹಾರಕ್ರಮಂ ಚ। ಉಭಯತೋಭಾಗೇ ತೂಪದ್ರವವಿಶೇಷಾನ್ ಯಥಾಸ್ವಂ ಪ್ರತಿಕುರ್ವೀತ ॥೨೦॥

ಯಾ ತು ವಿರೇಚನೇ ಗುದಪರಿಕರ್ತಿಕಾ ತದ್ವಮನೇ ಕಣ್ಠಕ್ಷಣನಮ್ ಯದಧಃಪರಿಸ್ರವಣಂ ಸಊರ್ಧ್ವಭಾಗೇ ಶ್ಲೇಷ್ಮಪ್ರಸೇಕೋ ಯಾತ್ವಧಃ ಪ್ರವಾಹಿಕಾ ಸಾತೂರ್ಧ್ವಶುಷ್ಕೋದ್ಗಾರಾ ಇತಿ ॥೨೧॥ ಭವತಿ ಚಾತ್ರ—

ಯಾಸ್ತ್ವೇತಾ ವ್ಯಾಪದಃ ಪ್ರೋಕ್ತಾ ದಶಪಞ್ಚ ಚ ತತ್ತ್ವತಃ।
ಏತಾ ವಿರೇಕಾತಿಯೋಗದುರ್ಯೋಗಾಯೋಗಜಾಃ ಸ್ಮೃತಾ ॥೨೨॥

ವಮನ ವಿರೇಚನೌಷಧಗಳನ್ನು ಸೇವಿಸಿರುವವನು ದೋಷಗಳು ಮೇಲ್ಮುಖವಾಗಿಯೋ ಕೆಳಮುಖವಾಗಿಯೋ ಪ್ರವೃತ್ತವಾಗಿರುವಾಗ ತಣ್ಣಗಿರುವ ಮನೆ, ತಣ್ಣೀರು ಅಥವಾ ಮತ್ಯಾವುದಾದರೂ ತಣ್ಣಗಿರುವ ವಸ್ತುಗಳನ್ನು ಸೇವಿಸಿದರೆ ಆ ದೋಷಗಳು

ಸ್ರೋತೋಮಾರ್ಗಗಳಲ್ಲೇ ಅಡಗಿಕೊಂಡು ಗಟ್ಟಿಯಾಗಿ ವಾತಮೂತ್ರ ಮಲಗಳನ್ನೂ ವಮನವಿರೇಚನಗಳ ವೇಗಗಳನ್ನೂ ತಡೆಗಟ್ಟುತ್ತವ. ಆ ರೋಗಿಯ ಹೊಟ್ಟೆಯಲ್ಲಿ ಗುಡ ಗುಡ ಶಬ್ದವೂ ಉರಿತ ಜ್ವರ ಬಲವಾದ ವೇದನೆಗಳೂ ಉಂಟಾಗುತ್ತವೆ. ಅವನಿಗೆ ವಮನ ಮಾಡಿಸಿ ಕಾಲಕ್ಕೆ ತಕ್ಕಂತೆ ಚಿಕಿತ್ಸೆಮಾಡಿಸಬೇಕು. ಕೆಳಭಾಗದಲ್ಲಾದರೆ ಅಧೋ ಭಾಗದ ದೋಷಹರಣಮಾಡುವ ದ್ರವ್ಯಗಳು ಸೈಂಧವ ಆಮ್ಲವರ್ಗ ಗೋಮೂತ್ರ ಮಿಶ್ರ ಮಾಡಿದ ವಿರೇಚನೌಷಧ ಇವನ್ನು ಕುಡಿಸಬೇಕು. ದೋಷಗಳಿಗೆ ತಕ್ಕಂತೆ ಆಸ್ಥಾಪನ ಅನುವಾಸನ ಬಸ್ತಿಗಳನ್ನೂ ಧಾನ್ಯದಕಟ್ಟು ಹಾಲು ಮಾಂಸರಸ ಮಿಶ್ರಮಾಡಿದ ಅನ್ನ ವನ್ನೂ ಕೊಡಿಸಬೇಕು. ಎರಡು ಭಾಗದಲ್ಲೂ ಉಪದ್ರವಗಳಿಗೆ ತಕ್ಕಂತೆ ಚಿಕಿತ್ಸೆಮಾಡಿಸ ಬೇಕು. ವಿರೇಚನದಲ್ಲಿ ಗುದಪರಿಕರ್ತಿಕಾ ಎಂಬ ಉಪದ್ರವವಿರುವಂತೆಯೇ ವಮನದಲ್ಲಿ ಗಂಟಲು ಕೆರೆತವೂ (ಕಂಠಕ್ಷಣನ) ಕೆಳಗಡೆ ಪರಿಸ್ರಾವದಂತೆ ಮೇಲ್ಗಡೆ ಶ್ಲೇಷ್ಮಪ್ರಸೇಕವೂ ಕೆಳಭಾಗದಲ್ಲಿ ಪ್ರವಾಹಿಕೆ (ಆಮಶಂಕೆ) ಇರುವಂತೆಯೇ ಮೇಲ್ಭಾಗದಲ್ಲಿ ಶುಷ್ಕೋದ್ಗಾರ (ಬರತೇಗು) ಈ ರೀತಿಯಾಗಿ ವಮನ ವಿರೇಚನಗಳ ಉಪದ್ರವಗಳನ್ನು ವಿವರಿಸಿ ಹೇಳ ಲಾಗಿದೆ. ಪಾರಮಾರ್ಥಿಕ ದೃಷ್ಟಿಯಿಂದ ಇಲ್ಲಿ ಹೇಳಿರುವ ೧೫ ಉಪದ್ರವಗಳೂ ವಮನ ವಿರೇಚನೌಷಧಗಳ ಅತಿಯೋಗ ಮಿಥ್ಯಾಯೋಗ ಹೀನಯೋಗಗಳಿಂದ ಉಂಟಾಗುತ್ತ ವೆಂದು ತಿಳಿಯಬೇಕು. ವಿರೇಚನವೆಂದರೆ ಇಲ್ಲಿ ದೋಷಮಲಗಳರೇಚನ ಮತ್ತು ವಮನ ಎಂದು ಅರ್ಥಮಾಡಬೇಕು. ಜೆಜ್ಜಟಾಚಾರ್ಯರು ವಿಪಾಕವೆಂದರೆ ವಿಷಮಃ ಪಾಕಃ ನಷ್ಟಂ ಫಲಂ ಯೇಷಾಂ ತೇ ವಿಪಾಕಾಃ ಎಂದು ಹೇಳುತ್ತಾರೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ವಮನವಿರೇಚನ ವ್ಯಾಪಚ್ಚಿ ಕಿತ್ಸಿತಾನಾಮ ಚತುಸ್ತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪ ನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ಪಞ್ಚತ್ರಿಂಶತ್ತಮೋಽಧ್ಯಾಯಃ

ಅಥಾತೋ ನೇತ್ರಬಸ್ತಿಪ್ರಮಾಣ ಪ್ರವಿಭಾಗ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ನೇತ್ರಬಸ್ತಿಪ್ರಮಾಣವಿಭಾಗಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ—ಬಸ್ತಿ ಎಂದರೆ ಜಿಂಕೆ, ಆಡು ಮೊದಲಾದ ಪ್ರಾಣಿಗಳ ಮೂತ್ರಾಶಯವೆಂದು ಅರ್ಥವು. ಅದು ಹಿಡಿಯುವಷ್ಟು ದ್ರವ್ಯಪ್ರಮಾಣವನ್ನು ಗೊತ್ತುಮಾಡಿ ರೋಗಚಿಕಿತ್ಸೆಮಾಡುವ ಕ್ರಮವೆಂದು ತಿಳಿಯಬೇಕು. ಬಸ್ತಿ ವಿಧಾನದಿಂದಲೂ ದೇಹದ ಮಲವನ್ನು ಹೊರಕ್ಕೆ ತೆಗೆಯಬಹುದು. ನೇತ್ರಂ–ಯಾತರಮೂಲಕ ಸ್ನೇಹಕಲ್ಕಾದಿಗಳು ಅಪಾನವನ್ನು ಸೇರುತ್ತವೆಯೋ ಅದಕ್ಕೆ ನೇತ್ರವೆಂದು ಹೆಸರು. ಅಂದರೆ ನಿರೂಹಾನ್ವಾಸನ ಯಂತ್ರವೆಂದರ್ಥವು. ಮೂತ್ರವು ನಿಲ್ಲುವ ಸ್ಥಳಕ್ಕೆ ವಸ್ತಿ (ಬಸ್ತಿ) ಎಂದು ಹೆಸರು. ಮೃಗಾದಿಗಳ ಮೂತ್ರಾಶಯವು ಧನುಸ್ಸಿನಂತೆ ಸೊಟ್ಟಾಗಿರುವ ಆಶಯ ವಿಶೇಷವು. ಹೊಕ್ಕಳ ಕೆಳಗೆ ಸೋರೆಕಾಯಿನಂತೆ ಕೆಳಮುಖವಾಗಿ ತಾಳವಿರುವ ಅನೇಕ ರಂಧ್ರವುಳ್ಳ ಆಶಯುವು. ಅವುಗಳ ಪ್ರಮಾಣ ಮತ್ತು ವಿಭಾಗಗಳನ್ನು ಇಲ್ಲಿ ತಿಳಿಸುತ್ತೇವೆ.

ತತ್ರ ಸ್ನೇಹಾದೀನಾಂ ಕರ್ಮಣಾಂ ಬಸ್ತಿಕರ್ಮಪ್ರಧಾನತಮಮಾಹುರಾಚಾರ್ಯಾಃ ಕಸ್ಮಾತ್ ಅನೇಕಕರ್ಮಕರತ್ವಾದ್ಬಸ್ತೇಃ ಇಹ ಬಸ್ತಿರ್ನಾನಾವಿಧದ್ರವ್ಯಸಂಯೋಗಾದ್ದೋಷಾಣಾಂ ಸಂಶೋಧನ ಸಂಶಮನ ಸಂಗ್ರಹಣಾನಿ ಕರೋತಿ ; ಕ್ಷೀಣಶುಕ್ರಂ ವಾಜೀಕರೋತಿ, ಕೃಶಂ ಬೃಂಹಯತಿ ಸ್ಥೂಲಂ ಕರ್ಶಯತಿ, ಚಕ್ಷುಃಪ್ರೀಣಯತಿ, ವಲೀಪಲಿತಮಪಹನ್ತಿ, ವಯಃ ಸ್ಥಾಪಯತಿ ||೩||

ಶರೀರೋಪಚಯಂ ವರ್ಣಬಲಮಾರೋಗ್ಯಮಾಯುಷಃ । (ಕುರುತೇ) ಪರಿವೃದ್ಧಿಂ ಕರೋತಿ ಚ । ಬಸ್ತಿಃ ಸಮ್ಯಗುಪಾಸಿತಃ ||೪||

ತಥಾ ಜ್ವರಾತೀಸಾರತಿಮಿರ ಪ್ರತಿಶ್ಯಾಯ ಶಿರೋರೋಗಾಧಿಮನ್ಥಾರ್ದಿತಾಕ್ಷೇಪಕಪಕ್ಷಾಘಾತೈಕಾಙ್ಗಸರ್ವಾಙ್ಗರೋಗಾಧ್ಮಾನೋದರ ಶರ್ಕರಾ (ಯೋನಿ) ಶೂಲವೃದ್ಧ್ಯುಪದಂಶಾನಾಹಮೂತ್ರ ಕೃಚ್ಛ್ರಗುಲ್ಮವಾತ ಶೋಣಿತ ವಾತಮೂತ್ರ ಪುರೀಷೋದಾವರ್ತ ಶುಕ್ರಾರ್ತವಸ್ತನ್ಯನಾಶ ಹೃದ್ಧನುಮನ್ಯಾಗ್ರಹಾರ್ಶೋಽಶ್ಮರೀಮೂಢಗರ್ಭ ಪ್ರಭೃತಿಷು ಚಾತ್ಯರ್ಥಮುಪಯುಜ್ಯತೇ||೫|| ಭವತಿ ಚಾತ್ರ—ಬಸ್ತಿರ್ವಾತೇ ಚ ಪಿತ್ತೇ ಚ ಕಫೇ ರಕ್ತೇ ಚ ಶಸ್ಯತೇ । ಸಂಸರ್ಗೇ ಸನ್ನಿಪಾತೇ ಚ ಬಸ್ತಿರೇವ ಹಿತಃ ಸದಾ ||೬||

ವೈದ್ಯಾಚಾರ್ಯರು ಬಸ್ತಿಕರ್ಮವೇ ಸ್ನೇಹ ಸ್ವೇದ ವಮನ ವಿರೇಚನಾದಿ ಕರ್ಮ

ಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದೆಂದು ಅಭಿಪ್ರಾಯಪಡುತ್ತಾರೆ. ಏಕೆಂದರೆ—ಬಸ್ತಿಯು ಅನೇಕ ಪ್ರಕಾರದಿಂದ ರೋಗನಿವಾರಣೆಮಾಡಲು ಸಹಕರಿಸುತ್ತದೆ. ಬಸ್ತಿ ಕರ್ಮವು ಅನೇಕ ವಿಧಗಳಾದ ದ್ರವ್ಯಗಳನ್ನು ಸೇರಿಸಿ ಪ್ರಯೋಗಿಸಲ್ಪಡುವುದರಿಂದ ದೋಷಗಳ ಶೋಧನೆ ಶಮನ ಮತ್ತು ಸಂಗ್ರಹಣ (ಪ್ರಮಾಣವೃದ್ಧಿ)ಗಳನ್ನು ಮಾಡುತ್ತದೆ. ಕ್ಷೀಣ ಶುಕ್ರರಿಗೆ ಶುಕ್ರವೃದ್ಧಿಯನ್ನುಂಟುಮಾಡಿ ಕುದುರೆಯಷ್ಟು ಬಲ ಮತ್ತು ವೇಗದಿಂದ ಸ್ತ್ರೀಯರೊಡನೆ ರತಿಸುಖವನ್ನುಂಟುಮಾಡುತ್ತದೆ. (ಸಾಮರ್ಥ್ಯವುಂಟಾಗುತ್ತದೆ). ಕೃಶರನ್ನು ಪುಷ್ಟಿಗೊಳಿಸುತ್ತದೆ, (ಮೇದಸ್ಸಿನ ವೃದ್ಧಿಯಿಂದ ದಪ್ಪದೇಹವುಳ್ಳವರನ್ನಾಗಿ ಮಾಡುತ್ತದೆ), ಕಣ್ಣುಗಳಿಗೆ ಬಲವನ್ನುಂಟುಮಾಡುತ್ತದೆ, ತ್ವಚರ್ಮವು ಸುಕ್ಕನ್ನು ನಿವಾರಿಸಿ ಬೆಳ್ಳಗಾದ ತಲೆಕೂದಲನ್ನು ಪುನಃ ಕಪ್ಪಾಗುವಂತೆ ಮಾಡುತ್ತದೆ (ಬೇಗನೆ ಮುದಿತನಬಾರದಂತೆಮಾಡಿ ಜೀವಿತಕಾಲವನ್ನು ಹೆಚ್ಚಿಸುತ್ತದೆ), ಸರಿಯಾಗಿ ಪ್ರಯೋಗಿಸಿದ ಬಸ್ತಿಕರ್ಮದಿಂದ ಶರೀರವು ವೃದ್ಧಿಗೊಂಡು ದೇಹದವರ್ಣ, ಬಲ, ಆರೋಗ್ಯ, ಆಯುಸ್ಸು ಇವು ಹೆಚ್ಚಾಗುತ್ತವೆ, ಜ್ವರ ಅತಿಸಾರ ತಿಮಿರವೆಂಬನೇತ್ರರೋಗ ನೆಗಡಿ ತಲೆನೋವು ಅಧಿಮಂಥವೆಂಬ ನೇತ್ರರೋಗ ಅರ್ದಿತ ಆಕ್ಷೇಪಕ ಪಕ್ಷಾಘಾತ ಏಕಾಂಗವಾತ ಸರ್ವಾಂಗವಾತ ಆಧ್ಮಾನ ಉದರ ಮೂತ್ರಶರ್ಕರ ಶೂಲೆ ಅಂಡವೃದ್ಧಿ ಉಪದಂಶ ಆನಾಹ ಮೂತ್ರಕೃಚ್ಛ್ರ ಗುಲ್ಮ ವಾತರಕ್ತ ವಾತ ಮೂತ್ರಪುರೀಷಗಳು ತಡೆದು ಹೊಟ್ಟೆಯುಬ್ಬರಿಸುವುದು, ಶುಕ್ರ ಆರ್ತವ, ಸ್ತನ್ಯಗಳು ಕ್ಷೀಣವಾಗುವುದು, ಹೃದಯ ದವಡೆ ಹೆಕ್ಕತ್ತುಗಳು ಹಿಡಿದುಕೊಂಡಿರುವುದು, ಅರ್ಶೋರೋಗ ಅಶ್ಮರೀ ಮೂಢಗರ್ಭ ಮೊದಲಾದ ರೋಗಗಳಲ್ಲಿ ಹೆಚ್ಚು ಹೆಚ್ಚಾಗಿ ಬಸ್ತಿಕರ್ಮವನ್ನು ಪ್ರಯೋಗಿಸಿ ರೋಗನಿವಾರಣೆಯನ್ನು ಮಾಡಬೇಕು. ವಾತ ಪಿತ್ತ ಕಫ ರಕ್ತರೋಗಗಳಲ್ಲೂ ಅವುಗಳ ಸಂಸರ್ಗ ಮತ್ತು ಸನ್ನಿಪಾತಗಳಿಂದುಂಟಾಗುವ ರೋಗಗಳಲ್ಲೂ ಸರ್ವಕಾಲಗಳಲ್ಲೂ ಬಸ್ತಿಪ್ರಯೋಗ ಮಾಡಿಸಿದರೆ ಹಿತವುಂಟಾಗುತ್ತದೆ.

ತತ್ರ ಸಾಂವತ್ಸರಿಕಾಷ್ಟದ್ವಿವರ್ಷಾಣಾಂ ಷಡಷ್ಟದಶಾಙ್ಗುಳ ಪ್ರಮಾಣಾನಿ ಕನಿಷ್ಠಿಕಾನಾಮಿಕಾ ಮಧ್ಯಮಾಙ್ಗುಳ ಪರಿಣಾಹಾನ್ಯಗ್ರೇಽಧ್ಯರ್ಧಾಙ್ಗುಳದ್ವ್ಯಙ್ಗುಳಾರ್ಧತೃತೀಯಾಙ್ಗುಳಸನ್ನಿವಿಷ್ಟಕರ್ಣಿಕಾನಿ ಕಙ್ಕಶ್ಯೇನಬರ್ಹಿಪಕ್ಷ ನಾಡೀತುಲ್ಯಪ್ರವೇಶಾನಿ ಮುದ್ಗಮಾಷಕಲಾಯಮಾತ್ರ ಸ್ರೋತಾಂಸಿ ವಿದಧ್ಯಾನ್ನೇತ್ರಾಣಿ ತೇಷು ತ್ವಾಸ್ಥಾಪನದ್ರವ್ಯ ಪ್ರಮಾಣಮಾತುರ ಹಸ್ತಸಮ್ಮಿತೇನ ಪ್ರಸೃತೇನ ಸಮ್ಮಿತೌ ಪ್ರಸೃತೌ ದ್ವಾ ಚತ್ವಾರೋಽಷ್ಟೌ ವಿಧೇಯಾಃ ||೭||

ವರ್ಷೋತ್ತರೇಷು ನೇತ್ರಾಣಾಂ ಬಸ್ತಿಮಾನ್ಯಸ್ಯ ಚೈವ ಹಿ |
ವಯೋಬಲಶರೀರಾಣಿ ಸಮೀಕ್ಷ್ಯ ವರ್ಧಯೇದ್ವಿಧಿಮ್ ||೮||

ಪಞ್ಚವಿಂಶತೇರೂರ್ಧ್ವಂ ದ್ವಾದಶಾಙ್ಗುಳಂ ಮೂಲೇಽಙ್ಗುಷ್ಠೋದರ ಪರೀಣಾಹಂ ಅಗ್ರೇಕನಿಷ್ಠಿಕೋದರಪರೀಣಾಹಂ, ಅಗ್ರೇತ್ರ್ಯಙ್ಗುಳಸನ್ನಿವಿಷ್ಟಕರ್ಣಿಕಂ ಗೃಧ್ರಪಕ್ಷನಾಡೀತುಲ್ಯ ಪ್ರವೇಶಂ ಕೋಲಾಸ್ಥಿಮಾತ್ರಚ್ಛಿದ್ರ ಕ್ಲಿನ್ನ ಕಲಾಯಮಾತಚ್ಛಿದ್ರಮಿತ್ಯೇಕೇ, ಸರ್ವಾಣಿ ಮೂಲೇ ಬಸ್ತಿನಿಬನ್ಧನಾರ್ಥಂ ದ್ವಿಕರ್ಣಿಕಾನಿ ಆಸ್ಥಾಪನದ್ರವ್ಯಪ್ರಮಾಣಂ ತು ವಿಹಿತಾ ದ್ವಾದಶಪ್ರಸೃತಾಃ | ಸಪ್ತತೇರೂರ್ಧ್ವಂ ನೇತ್ರಪ್ರಮಾಣಮೇತದೇವ ದ್ರವ್ಯ ಪ್ರಮಾಣಂ ತು ದ್ವಿರಷ್ಟ ವರ್ಷವತ್ ||೯||

ಈಗ ಗುದದೊಳಕ್ಕೆ ನುಗ್ಗಿಸುವ ನಳಿಕೆಯ ಉದ್ದ ಒಳಗಿನ ಮತ್ತು ತುದಿಬುಡ ಭಾಗಗಳ ರಂಧ್ರದ ಅಗಲವನ್ನೂ ಆ ನಾಳಗಳ ದಪ್ಪವನ್ನೂ ಔಷಧ ದ್ರವ್ಯಗಳ ಪ್ರಮಾಣ ವನ್ನೂ ತಿಳಿಸುತ್ತಾರೆ. ಹೇಗೆಂದರೆ—೧ ವರ್ಷದ ಎಳೆಯ ಮಗುವಿಗೆ ಪ್ರಯೋಗಿಸುವ ನಿರೂಹಯಂತ್ರದ ನಾಳವು ಆರು ಅಂಗುಳಿಗಳಷ್ಟು ಉದ್ದವಾಗಿ ಆ ಮಗುವಿನ ಕಿರುಬೆರಳಿ ನಷ್ಟು ದಪ್ಪವಾಗಿ ತುದಿಯಿಂದ ಹಿಂದೆ ಒಂದೂವರೆ ಅಂಗುಳಿಗಳಷ್ಟು ದೂರದಲ್ಲಿ ಒಂದು ಗುಂಡಗಿರುವ ಚಕ್ರಾಕಾರದ ತಿರುಪನ್ನು ಬಿಗಿದಿರಬೇಕು. ಬುಡದಲ್ಲಿ ಹದ್ದಿನಗರಿಯ ಮಧ್ಯಭಾಗದಷ್ಟು ಅಗಲವಾಗಿ ನಾಳದ ರಂಧ್ರವಿರಬೇಕು. ತುದಿಯ ರಂಧ್ರವು ಹೆಸರು ಕಾಳು ನುಗ್ಗುವಷ್ಟು ಅಗಲವಿರಬೇಕು ಎಂಟುವರ್ಷದ ಹುಡುಗನಿಗೆ ಪ್ರಯೋಗಿಸುವುದಕ್ಕೆ ನಾಳದ ಉದ್ದ ಎಂಟು ಅಂಗುಳಿಗಳಷ್ಟೂ ಅನಾಮಿಕೆಯಷ್ಟು ದಪ್ಪವಾಗಿಯೂ ತುದಿಯ ಹಿಂದೆ ಎರಡು ಅಂಗುಳಿಯಷ್ಟು ದೂರದಲ್ಲಿ ಚಕ್ರಾಕಾರದ ತಿರುಪನ್ನು ಸಿಕ್ಕಿಸಿರಬೇಕು. ಗಿಡುಗಪಕ್ಷಿಯ ಗರಿಯಷ್ಟು ಅಗಲದ ರಂಧ್ರವು ಕೆಳಭಾಗದಲ್ಲಿರಬೇಕು. ಮುಂಭಾಗದಲ್ಲಿ ಉದ್ದಿನಕಾಳು ನುಗ್ಗುವಷ್ಟು ಅಗಲವಾದ ತೂತಿರಬೇಕು. ೧೬ ವರ್ಷದ ಹುಡುಗನಿಗೆ ಉಪಯೋಗಿಸುವ ನಾಡಿಯು ೧೦ ಅಂಗುಳಿಗಳಷ್ಟು ಉದ್ದವಾಗಿ ಮಧ್ಯದ ಬೆರಳಿನಷ್ಟು ದಪ್ಪವಾಗಿ ತುದಿಯಿಂದ ಎರಡೂವರೆ ಅಂಗುಳಿಗಳ ದೂರದಲ್ಲಿ ಗುಂಡಾಗಿರುವ ತಿರುಪನ್ನು ಸಿಕ್ಕಿಸಿಯೂ ಬುಡದ ರಂಧ್ರವು ನವಿಲಗರಿಯನಾಳದಷ್ಟು ಅಗಲವಾಗಿಯೂ ತುದಿಯ ರಂಧ್ರವು ಬಟಾಣಿಯಕಾಳು ನುಗ್ಗುವಷ್ಟು ಅಗಲವಾಗಿಯೂ ಇರಬೇಕು. ಇವರುಗಳಿಗೆ ಆಸ್ಥಾಪನ ಕಷಾಯ ಕಲ್ಕಾದಿದ್ರವ್ಯಗಳು ಕ್ರಮವಾಗಿ ಒಂದು ವರ್ಷದ ಮಗು, ಎಂಟು ವರ್ಷದ ಹುಡುಗ, ಹದಿನಾರು ವರ್ಷದ ಹುಡುಗ ಇವರಿಗೆ ಅವರವರ ಶಾರೆಯಲ್ಲಿ (ಬೆರಳು ಗಳನ್ನು ಬಗ್ಗಿಸಿ ಹಿಡಿದರೆ ಆ ಒಂದು ಅಂಗೈತುಂಬುವಷ್ಟು ದ್ರವ್ಯದ ಪ್ರಮಾಣಕ್ಕೆ ಅಂಜಲಿ ಅಥವಾ ಶಾರೆ ಎಂದು ಹೆಸರು) ೨-೪-೮ ಶಾರೆಗಳಷ್ಟಿರಬೇಕು. ವಯಸ್ಸಿನವರಿಗೆ ಅವ ರವರ ವಯಸ್ಸು ಬಲ ಶರೀರದ ದಪ್ಪಗಳನ್ನು ಅನುಸರಿಸಿ ನಾಳದ ಉದ್ದ ದಪ್ಪ ಬುಡದ ಮತ್ತು ತುದಿಯ ರಂಧ್ರಗಳ ಅಗಲವನ್ನು ಊಹೆಮಾಡಿ ತಯಾರಿಸಬೇಕು. ೨೫ ವರ್ಷ ಗಳ ಮೇಲಿನವರಿಗೆ ನಾಡಿಯ ಉದ್ದ ೧೨ ಅಂಗುಳಿಗಳಷ್ಟೂ ಬುಡವು ಹೆಬ್ಬೆಟ್ಟಿನಷ್ಟು ದಪ್ಪ ವಾಗಿಯೂ ತುದಿಯು ಕಿರುಬೆರಳ ಮಧ್ಯದಷ್ಟು ದಪ್ಪವಾಗಿಯೂ ತುದಿಯಿಂದ ಮೂರು ಅಂಗುಳಿಗಳಷ್ಟು ಹಿಂದೆ ಗುಂಡಾದ ತಿರುಪನ್ನು ಸಿಕ್ಕಿಸಿಯೂ ಇರಬೇಕು. ಬುಡದರಂಧ್ರವು ರಣಹದ್ದಿನ ಗರಿಯಷ್ಟೂ ಮೇಲಿನ ರಂಧ್ರವು ಎಲಚಿಹಣ್ಣಿನ ಬೀಜವು ನುಗ್ಗುವಷ್ಟು ಅಗಲ ವಾಗಿಯೂ(ನೆನೆದ ಬಟಾಣಿಯಕಾಳು ನುಗ್ಗುವಷ್ಟುಅಗಲವಿರಬೇಕೆಂದು ಕೆಲವರೂ)ಎಲ್ಲಾ ನಾಡಿಗಳ ಬುಡದಲ್ಲೂ ಬಸ್ತಿಯಂತ್ರವನ್ನು ಸಿಕ್ಕಿಸಿ ಕಟ್ಟುವುದಕ್ಕಾಗಿ ಎರಡೆರಡು ಗುಂಡು ತಿರುಪುಗಳನ್ನು ಬಿಗಿದಿರಬೇಕು. ಆಸ್ಥಾಪನದ್ರವ್ಯಗಳು ೧೨ ಪ್ರಸೃತಗಳಷ್ಟಿರಬೇಕು. ಎಪ್ಪತ್ತು ವರ್ಷಗಳ ಮೇಲೆಯೂ ನಾಡಿಯು ಇಷ್ಟೇಉದ್ದವಿರಬೇಕು. ಆಸ್ಥಾಪನದ್ರವ್ಯವು ೧೬ ವರ್ಷ ದವರಷ್ಟೇ ಅಂದರೆ ೧೬ ವರ್ಷದವರಿಗೆ ಬೇಕಾಗುವಂತೆ ೮ ಪ್ರಸೃತಗಳಷ್ಟೇ ಇರಬೇಕು.

ಮೃದುರ್ಬಸ್ತಿಃ ಪ್ರಯೋಕ್ತವ್ಯೋ ವಿಶೇಷಾದ್ಬಾಲವೃದ್ಧಯೋಃ ।
ತಯೋಸ್ತೀಕ್ಷ್ಣಃ ಪ್ರಯುಕ್ತಸ್ತು ಬಸ್ತಿರ್ಹಿಂಸ್ಯಾತ್ ಬಲಾಯುಷೀ ॥೧೦॥
ತತ್ರ ನೇತ್ರಾಣಿ ಸುವರ್ಣರಜತತಾಮ್ರಾಯೋರೀತಿದನ್ತಶೃಙ್ಗಮಣಿ ತರುಸಾರಮಯಾನಿ
ಶ್ಲಕ್ಷ್ಣಾನಿ ದೃಢಾನಿ ಗೋಪುಚ್ಛಾಕೃತೀನ್ಯೃಜೂನಿ ಗುಟಿಕಾಮುಖಾನಿ ॥೧೧॥

ಮುಖ್ಯವಾಗಿ ಬಾಲಕರಿಗೂ ಮುದುಕರಿಗೂ ಮೃದುವಾದ ದ್ರವ್ಯಗಳಿಂದ ತಯಾರಿಸಿದ ಬಸ್ತಿಯನ್ನೇ ಪ್ರಯೋಗಿಸಬೇಕು. ತೀಕ್ಷ್ಣಬಸ್ತಿಯ ಪ್ರಯೋಗದಿಂದ ಅವರ ಬಲವೂ ಆಯುಸ್ಸೂ ನಾಶವಾಗುತ್ತವೆ. ಚಿನ್ನ ಬೆಳ್ಳಿ ತಾಮ್ರ ಕಬ್ಬಿಣ ಹಿತ್ತಾಳೆ ಆನೆಯ (ಕೊಂಬು) ಹಲ್ಲು ಹಸು ಎಮ್ಮೆ ಆಡುಗಳ ಕೊಂಬು ಮಣಿ (ವಜ್ರ ಕೆಂಪು) ಮರದ ಕೆಚ್ಚುಗಳಿಂದ ನುಣುಪಾಗಿ ಗಟ್ಟಿಯಾಗಿ ಹಸುವಿನ ಬಾಲದಂತೆ ಹಿಂದುಗಡೆ ದಪ್ಪವಾಗಿ ಬರುಬರುತ್ತಾ ಸಣ್ಣವಾಗಿ ನೇರವಾಗಿ ತುದಿಯಲ್ಲಿ ಗುಳಿಗೆಯನ್ನಿಟ್ಟಂತಿರಬೇಕು.

ಬಸ್ತಯಶ್ಚಾವೃದ್ಧಾನಾಂ ಮೃದವೋ ನಾತಿಬಹುಳಾ ದೃಢಾಃ ।
ಪ್ರಮಾಣವನ್ತೋ ಗೋಮಹಿಷವರಾಹಾಜೋರಭ್ರಾಣಾಮ್ ॥೧೨॥
ನೇತ್ರಾಲಾಭೇ ಹಿತಾ ನಾಡೀ ನಳವಂಶಾಸ್ಥಿಸಂಭವಾ ।
ವಸ್ತ್ಯಲಾಭೇ ಹಿತಂ ಚರ್ಮ ಸೂಕ್ಷ್ಮಂ ವಾ ತಾನ್ತವಂ ಘನಮ್ ॥೧೩॥
ಬಸ್ತಿಂ ನಿರುಪದಿಗ್ಧಂ ತು ಶುದ್ಧಂ ಸುಪರಿಮಾರ್ಜಿತಮ್ ।
ಮೃದ್ವನುದ್ಧತಹೀನಂ ಚ ಮುಹುಃ ಸ್ನೇಹವಿಮರ್ದಿತಮ್ ॥೧೪॥
ನೇತ್ರಮೂಲೇ ಪ್ರತಿಷ್ಠಾಪ್ಯ ನ್ಯುಬ್ಜಂ ತು ವಿವೃತಾನನಮ್ ।
ಬದ್ಧ್ವಾ ಲೋಹೇನ ತಪ್ತೇನ ಚರ್ಮಸ್ರೋತಸಿ ನಿರ್ದಹೇತ್ ॥೧೫॥
ಪರಿವರ್ತ್ಯ ತತೋ ಬಸ್ತಿಂ ಬದ್ಧ್ವಾ ಗುಪ್ತಂ ನಿಧಾಪಯೇತ್ ।
ಆಸ್ಥಾಪನಂ ಚ ತೈಲಂ ಚ ಯಥಾವತ್ ತೇನ ದಾಪಯೇತ್ ॥೧೬॥

ಪ್ರಾಯಬಂದ ವಯಸ್ಸಿನ ದನ, ಎಮ್ಮೆ, ಹಂದಿ, ಆಡು, ಕುರಿ ಇವುಗಳ ಬಸ್ತ್ಯಾಶಯವು ಮೆತ್ತಗೆ ಹೆಚ್ಚುದಪ್ಪವಾಗಿರದೆ ಗಟ್ಟಿಯಾಗಿಯೂ ಉದ್ದವಾಗಿಯೂ ಅಗಲವಾಗಿಯೂ ಇರಬೇಕು. (ಅತಿ ಚಿಕ್ಕಪ್ರಮಾಣದ್ದು ಕೂಡದು), ಬಸ್ತಿಗೆ ಸೇರಿಸಿಕಟ್ಟುವ ನಳಿಕೆಯಲ್ಲದಿದ್ದರೆ ಲಾಳದಕಡ್ಡಿ ಮೂಳೆ ಬಿದಿರುಕೊಳವೆಗಳನ್ನು ಉಪಯೋಗಿಸಬಹುದು. ಬಸ್ತ್ಯಾಶಯವೇ ಸಿಗದಿದ್ದರೆ ತೆಳುವಾದ ಚರ್ಮ ಅಥವಾ ದಪ್ಪಬಟ್ಟೆಯ ಚೌಕವು ಯೋಗ್ಯವಾದದ್ದು. ಮಾಂಸ ಕೊಬ್ಬು ಮೊದಲಾದವುಗಳಿಂದ ಲೇಪಿಸದಿರುವ ಕಷಾಯರಸದಲ್ಲಿ ಅದ್ದಿ ಶುದ್ಧಿಮಾಡಿರುವ ಚೊಕ್ಕಟವಾಗಿ ತೊಳೆದಿರುವ ಮೃದುವಾದ ಅನೇಕಸಾರಿ ಸ್ನೇಹಲೇಪನಮಾಡಿರುವ ಬಸ್ತಿಯ ಒಳಮುಖವನ್ನು ಹೊರಕ್ಕೆ ಮಾಡಿ ಅದರ ಅಗಲವಾದ ಮುಖಭಾಗಕ್ಕೆ ಕೊಳವೆಯ ತುದಿಯನ್ನು ಸೇರಿಸಿ ಬಲವಾಗಿ ದಾರದಿಂದ ಬಿಗಿದು ಕಾದಕಬ್ಬಿಣದ ಗುಳದಿಂದ ನೇತಾಡುವ ತುಂಡು ಚರ್ಮವನ್ನು ಸುಟ್ಟು ಬಸ್ತಿಯನ್ನು

ಸರಿಯಾಗಿ ತಿರುಗಿಸಿ ಕಟ್ಟಿ ರಹಸ್ಯವಾಗಿಟ್ಟಿರಬೇಕು. ನಿರೂಹಬಸ್ತಿ ದ್ರವ್ಯಗಳನ್ನಾಗಲೀ ಸ್ನೇಹಬಸ್ತಿ ದ್ರವ್ಯಗಳನ್ನಾಗಲೀ ಇದರೊಳಕ್ಕೆ ತುಂಬಿ ತಕ್ಕಕಾಲಗಳಲ್ಲಿ ಪ್ರಯೋಗಿಸ ಬೇಕು.

ತತ್ರ ದ್ವಿವಿಧೋ ಬಸ್ತಿಃ ನೈರೂಹಿಕಃ ಸ್ನೈಹಿಕಶ್ಚ । ಆಸ್ಥಾಪನಂ ನಿರೂಹ ಇತ್ಯನರ್ಥಾನ್ತರಮ್ ತಸ್ಯ ವಿಕಲ್ಪೋ ಮಾಧುತೈಲಿಕಃ । ತಸ್ಯ ಪರ್ಯಾಯಶಬ್ದೋ ಯಾಪನೋ ಯುಕ್ತರಥಃ ಸಿದ್ಧಬಸ್ತಿರಿತಿ । ಸ ದೋಷನಿರ್ಹರಣಾಚ್ಛರೀರರೋಗಹರಣಾದ್ವಾ ನಿರೂಹಃ । ವಯಃಸ್ಥಾಪನಾದಾಯುಃಸ್ಥಾಪನಾದ್ವಾ ಆಸ್ಥಾಪನಮ್ । ಮಾಧುತೈಲಿಕವಿಧಾನಂ ಚ ನಿರೂಹ ಕ್ರಮಚಿಕಿತ್ಸಿತೇ ವಕ್ಷ್ಯಾಮಃ । ತತ್ರ ಯಥಾಪ್ರಮಾಣಗುಣವಿಹಿತಃ ಸ್ನೇಹಬಸ್ತಿವಿಕಲ್ಪೋಽನುವಾಸನಃ ಪಾದಾವಕೃಷ್ಟಃಅನುಪಸನ್ನಪಿ ಸದುಷ್ಯತ್ಯನುದಿವಸಂ ವಾ ದೀಯತ ಇತ್ಯನುವಾಸನಃ । ತಸ್ಯಾಪಿ ವಿಕಲ್ಪೋಽರ್ಧಾರ್ಧಮಾತ್ರಾವಕೃಷ್ಟೋಽಪರಿಹಾರ್ಯೋ ಮಾತ್ರಾಬಸ್ತಿರಿತಿ ॥೧೭॥

ನಿರೂಹಃ ಶೋಧನೋ ಲೇಪೀ ಸ್ನೇಹನೋ ಬೃಂಹಣೋ ಮತಃ ।
ನಿರೂಹಶೋಧಿತೇ ಮಾರ್ಗೇ ಸಮ್ಯಕ್ ಸ್ನೇಹೋಽನುಗಚ್ಛತಿ ॥೧೮॥
ಅಪೇತಸರ್ವದೋಷಾಸು ನಾಡೀಷ್ವಿವ ವಹಜ್ಜಲಮ್ ।
ಸರ್ವದೋಷಹರಶ್ಚಾಸೌ ಶರೀರಸ್ಯ ಚ ಜೀವನಃ ॥೧೯॥
ತಸ್ಮಾದ್ವಿಶುದ್ಧದೇಹಸ್ಯ ಸ್ನೇಹಬಸ್ತಿರ್ವಿಧೀಯತೇ ॥೨೦॥

ಬಸ್ತಿವಿಧಾನವು ಎರಡುವಿಧ—ನೈರೂಹಿಕ, ಸ್ನೈಹಿಕಗಳೆಂದು ; ಆಸ್ಥಾಪನ ನಿರೂಹ ಎಂಬುದು ಪರ್ಯಾಯ ಪದಗಳು, ಅದರ ಭೇದವೇ ಮಾಧುತೈಲಿಕಬಸ್ತಿ ಎನ್ನುವುದು. ಇದರ ಪರ್ಯಾಯನಾಮಗಳೇ ಯಾಪನ, ಯುಕ್ತರಥ, ಸಿದ್ಧಬಸ್ತಿಗಳು. ಇದು ದೋಷಗಳನ್ನು ಹೊರಕ್ಕೆ ಹೊರಡಿಸುವುದರಿಂದ ಅಥವಾ ಶರೀರದ ರೋಗಗಳನ್ನು ನಿವಾರಣೆಮಾಡುವುದರಿಂದ ನಿರೂಹಬಸ್ತಿ ಎಂದೂ, ವಯಸ್ಸನ್ನು ಸ್ಥಿರಗೊಳಿಸುವುದರಿಂದ ಅಥವಾ ಜೀವಿತಕಾಲವನ್ನು ಸ್ಥಿರಗೊಳಿಸುವುದರಿಂದ (ಮುದಿತನವು ಬಾರದಂತೆ ತಡೆಯುತ್ತದೆ) ಆಸ್ಥಾಪನಬಸ್ತಿಯೆಂದೂ ವ್ಯವಹರಿಸಲ್ಪಡುತ್ತದೆ. ಮಾಧುತೈಲಿಕ ವಿಧಾನವನ್ನು ನಿರೂಹಕ್ರಮ ಚಿಕಿತ್ಸೆಯಲ್ಲಿ ಹೇಳುತ್ತೇವೆ. ನಿರೂಹವಸ್ತಿದ್ರವ್ಯಗಳ ೩/೪ ಅಂಶವನ್ನು ಕಡಮೆಮಾಡಿ ೧/೪ ಅಂಶದಷ್ಟು ದ್ರವ್ಯವನ್ನು ಮಾತ್ರ ಪ್ರಯೋಗಿಸುವಕಾರಣ ಈ ಪ್ರಮಾಣ ದ್ರವ್ಯವುಳ್ಳ ಸ್ನೇಹಬಸ್ತಿಗೆ ಅನಾಲಾಸನಬಸ್ತಿ ಎಂಬ ಹೆಸರು ಉಂಟಾಗಿದೆ. ಈ ದ್ರವ್ಯವು ಶರೀರದಲ್ಲಿ ನಿಂತುಬಿಟ್ಟರೂ ಕೆಡುಕಾಗುವುದಿಲ್ಲ ಅಥವಾ ಪ್ರತಿದಿವಸವೂ ಪ್ರಯೋಗಿಸಬಹುದು ಎಂಬ ಕಾರಣದಿಂದ ಅನುವಾಸನ ಬಸ್ತಿಯೆಂದು ಅರ್ಥವು. ಅದರ ವಿಭಾಗದಲ್ಲೂ ಅರ್ಧ-ನಾಲ್ಕರಲ್ಲೊಂದಂಶದಷ್ಟು ದ್ರವ್ಯವನ್ನುಪಯೋಗಮಾಡುವುದು. ಇವುಗಳಲ್ಲಿ ಕ್ರಮವಾಗಿ ಅರ್ಧಾವಕೃಷ್ಟ, ಅಪರಿಹಾರ್ಯ, ಮಾತ್ರಾಬಸ್ತಿಯೆಂಬ ಮೂರು ವಿಧಗಳಿವೆ. ಉದಾ ಅನುವಾಸನ ಬಸ್ತಿಯ ಉತ್ತಮ ಪ್ರಮಾಣ ಆರುಪಲ, ಅರ್ಧಾವಕೃಷ್ಟವೆಂದರೆ ಮೂರು ಪಲಗಳಷ್ಟು ಅಪರಿಹಾರ್ಯ ಮಾತ್ರೆಯೆಂದರೆ ಒಂದೂವರೆ ಪಲ

ಗಳಷ್ಟು ಎಂದರ್ಥವು. ದೋಷಶೋಧಕ ದ್ರವ್ಯಗಳಿಂದ ತಯಾರಿಸಿದಕಾರಣ ನಿರೂಹ ವೆಂದು ಹೆಸರು. ಇದರಲ್ಲಿ ಲೇಖನ, ಸ್ನೇಹನ, ಬೃಂಹಣಗಳೆಂದು ಮೂರು ವಿಧಗಳಿವೆ. ಶೋಧನಾದಿಗಳೇ ನಿರೂಹಬಸ್ತಿ ಕರ್ಮಗಳೆಂದು ಜೆಜ್ಜಟಾಚಾರ್ಯರು ಅಭಿಪ್ರಾಯಪಡು ತ್ತಾರೆ. ನಿರೂಹಬಸ್ತಿಯನ್ನುಪಯೋಗಿಸಿ ದೋಷಗಳು ಶೋಧನೆಯಾದಮೇಲೆ ಸ್ನೇಹ ಬಸ್ತಿಯನ್ನು ಪ್ರಯೋಗಿಸಿದರೆ ಸ್ನೇಹವು ಸರಿಯಾಗಿ ಶರೀರದಲ್ಲೆಲ್ಲಾ ಹರಡಿಕೊಳ್ಳುತ್ತದೆ (ಸ್ನೇಹದ ಪ್ರಭಾವವು ಎಲ್ಲಾ ಕಡೆಗೂ ವ್ಯಾಪನೆಯಾಗುತ್ತದೆ.) ದೋಷವನ್ನು ನಿವಾರಣೆ ಮಾಡಿ ಶುದ್ಧಿಮಾಡಿದ ಕೊಳವೆಯಿಂದ ನೀರು ಧಾರಾಳವಾಗಿ ಹರಿದುಹೋಗುವಂತೆಯೇ ಈ ನಿರೂಹಬಸ್ತಿಯ ಪ್ರಯೋಗದಿಂದ ದೋಷಶೋಧನೆಯಾಗಿ ಜೀವನವುಂಟಾಗುವ ಕಾರಣ ದೇಹಶುದ್ಧಿಯಾಗಿರುವವರಿಗೆ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕು.

ತತ್ರೋನ್ಮಾದಭಯ ಶೋಕಪಿಪಾಸಾರೋಚಕಾಜೀರ್ಣಾರ್ಶಃಪಾಣ್ಡುರೋಗಭ್ರಮಮದ ಮೂರ್ಛಾಚ್ಛರ್ದಿ ಕುಷ್ಠಮೇಹೋದರಸ್ಥೌಲ್ಯಶ್ವಾಸಕಾಸಕಣ್ಠಶೋಷ ಶೋಫೋಪಸೃಷ್ಟಕ್ಷತಕ್ಷೀಣ ಚತುಸ್ತ್ರಿಮಾಸ ಗರ್ಭಿಣೀದುರ್ಬಲಾಗ್ನ್ಯಸಹಾಬಾಲವೃದ್ಧಾ ಚ ವಾತರೋಗಾದೃತೇ ಕ್ಷೀಣಾನಾನು ವಾಸ್ಯಾ ನಾಸ್ಥಾಪಯಿತವ್ಯಾಃ ||೨೧||

ಉದರೀ ಚ ಪ್ರಮೇಹೀ ಚ ಕುಷ್ಠೀ ಸ್ಥೂಲಶ್ಚ ಮಾನವಃ |
ಅವಶ್ಯಂ ಸ್ಥಾಪನೀಯಾಶ್ಚ ನಾನುವಾಸ್ಯಾಃ ಕಥಞ್ಚನ ||೨೨||
ಅಸಾಧ್ಯತಾ ವಿಕಾರಾಣಾಂ ಸ್ಯಾದೇಷಾಮನುವಾಸನಾತ್ ।
ಅಸಾಧ್ಯತ್ವೇಽಪಿ ಭೂಯಿಷ್ಠಂ ಗಾತ್ರಾಣಾಂ ಸದನಂ ಭವೇತ್ ||೨೩||

ಉನ್ಮಾದ, ಭಯ, ದುಃಖ, ಬಾಯಾರಿಕೆ, ಅರುಚಿ, ಅಜೀರ್ಣ, ಅರ್ಶೋರೋಗ ಪಾಂಡುರೋಗ, ತಲೆತಿರುಗುವಿಕೆ, ಅಡಿಕೆ ತಿಂದರೆ ಉಂಟಾಗುವಂತೆ ಸೊಕ್ಕುಬರುವುದು ಜ್ಞಾನತಪ್ಪುವುದು, ವಮನ, ಕುಷ್ಠ, ಉರಃಕ್ಷತ, ದೇಹಕ್ಷೀಣತೆ, ಇವುಗಳಿಂದ ಪೀಡಿತರೂ, ೭ ತಿಂಗಳಿನ ಗರ್ಭಿಣಿ, ಮೇಹ, ಉದರ, ಸ್ಥೌಲ್ಯ, ಉಬ್ಬಸ, ಕೆಮ್ಮು, ಗಂಟಲು ಒಣಗು ವುದು, ಶೋಫ, ಅಗ್ನಿಮಾಂದ್ಯ, ಅಶಕ್ತರು, ಬಾಲಕರು, ಮುದುಕರು, ಕೃಶರು ಇವರು ಗಳಿಗೆ ನಿರೂಹವನ್ನೂ ಅನುವಾಸನ ಬಸ್ತಿಯನ್ನೂ ಪ್ರಯೋಗಿಸಬಾರದು (ಇವರು ಸ್ನೇಹ ಬಸ್ತಿ ನಿರೂಹಕರ್ಮಗಳಿಗೆ ಅನರ್ಹರೆಂದು ತಿಳಿಯಬೇಕು.) ಉದರ, ಪ್ರಮೇಹ, ಕುಷ್ಠ, ಸ್ಥೂಲದೇಹ ಇವುಗಳಿಂದ ಪೀಡಿತರಾದವರಿಗೆ ಅವಶ್ಯಕವಾಗಿ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು. ಆದರೆ ಖಂಡಿತವಾಗಿಯೂ ಅನುವಾಸನ (ಸ್ನೇಹಬಸ್ತಿಯನ್ನು) ವನ್ನು ಪ್ರಯೋಗಿಸಕೂಡದು. ಇವರಿಗೆ ಅನುವಾಸನಬಸ್ತಿಯನ್ನು ಪ್ರಯೋಗಿಸಿದರೆ ರೋಗವು ಅಸಾಧ್ಯವಾಗುತ್ತದೆ. ಮತ್ತು ಅಧಿಕಪ್ರಮಾಣದಿಂದ ದೇಹವು ಕ್ಷೀಣಿಸುತ್ತದೆ.

ಪಕ್ವಾಶಯೇ ತಥಾ ಶ್ರೋಣ್ಯಾಂ ನಾಭ್ಯಧಸ್ತಾಚ್ಚ ಸರ್ವತಃ |
ಸಮ್ಯಕ್‌ಪ್ರಣಿಹಿತೋ ಬಸ್ತಿಃ ಸ್ಥಾನೇಷ್ವೇತೇಷು ತಿಷ್ಠತಿ ||೨೪||
ಪಕ್ವಾಶಯಾದ್ಬಸ್ತಿವೀರ್ಯಂ ಖೈರ್ದೇಹಮುಪಸರ್ಪತಿ |

ವೃಕ್ಷಮೂಲೇ ನಿಷಿಕ್ತಾನಾಮಪಾಂ ವೀರ್ಯಮಿವ ದ್ರುಮಮ್ ||೨೫||
ಸ ಚಾಪಿ ಸಹಸಾ ಬಸ್ತಿಃ ಕೇವಲಃ ಸಮಲೋಽಪಿ ವಾ |
ಪ್ರತ್ಯೇತಿ ತ್ವನಿಲೈರ್ವೀರ್ಯಮಪಾನಾದ್ಯೈರ್ವಿನೀಯತೇ ||೨೬||
ವೀರ್ಯೇಣ ಬಸ್ತಿರಾದತ್ತೇ ದೋಷಾನಾಪಾದಮಸ್ತಕಾತ್ |
ಪಕ್ವಾಶಯಸ್ಥೋಽಮ್ಬರಗೋ ಭೂಮೇರರ್ಕೋ ರಸಾನಿವ ||೨೭||
ಸಕಟೀಪೃಷ್ಠಕೋಷ್ಠಸ್ಥಾನ್ ವೀರ್ಯೇಣಾಲೋಡ್ಯ ಸಂಚಯಾನ್ |
ಉತ್ಖಾತಮೂಲಾನ್ ಹರತಿ ದೋಷಾಣಾಂ ಸಾಧುಯೋಜಿತಃ ||೨೮||

ಸರಿಯಾಗಿ ಪ್ರಯೋಗಿಸಿದ ಬಸ್ತಿಯು ಪಕ್ವಾಶಯ, ಸೊಂಟ, ಹೊಕ್ಕಳ ಕೆಳಭಾಗ ಮತ್ತು ಸಕಲದೇಹಭಾಗಗಳಲ್ಲೂ ಪ್ರವೇಶಮಾಡುತ್ತದೆ. ಬಸ್ತಿಯು ಪಕ್ವಾಶಯವನ್ನು ಪ್ರವೇಶಿಸಿದ ಬಸ್ತಿಯು ಮರದಬುಡದಲ್ಲಿ ಸುರಿದ ನೀರನ್ನು ಮರದ ಎಲ್ಲಾ ಭಾಗಗಳೂ ಹೀರುವಂತೆ ಸ್ರೋತೋಮಾರ್ಗಗಳಿಂದ ಎಲ್ಲಾ ಶರೀರ ಭಾಗಗಳಿಗೂ ತನ್ನ ವೀರ್ಯವನ್ನು ತಲುಪಿಸುತ್ತದೆ. ಹೀಗೆ ಪ್ರಯೋಗಿಸಿದ ಬಸ್ತಿಯು ಅಪಾನ, ಉದಾನ, ಸಮಾನಾದಿ ವಾತಗಳ ಮೂಲಕವಾಗಿ ಸಕಲದೇಹಭಾಗಗಳಿಗೂ ತಲಪಿ ಅಲ್ಲಿರುವ ದೋಷಗಳನ್ನೆಲ್ಲಾ ತೆಗೆದುಕೊಂಡು ಬರಿಯ ಬಸ್ತಿಪದಾರ್ಥಗಳಾಗಲೀ ಮಲನಿುಶ್ರವಾಗಿಯಾಗಲಿ ಬೇಗನೆ ಅಥವಾ ನಿಧಾನವಾಗಿ ಹಿಂತಿರುಗಿಬಿಡುತ್ತದೆ. ಸೂರ್ಯನು ಅಂತರಿಕ್ಷದಲ್ಲಿದ್ದು ಕೊಂಡೇ ಭೂಮಿಯ ದ್ರವಗಳನ್ನು ಹೀರಿಬಿಡುವಂತೆಯೇ ಪಕ್ವಾಶಯದಲ್ಲಿ ಪ್ರಯೋಗಿಸಿದ ಬಸ್ತಿಯು ಕಾಲಿನಿಂದ ತಲೆಯವರೆಗಿರುವ ದೋಷಗಳನ್ನೆಲ್ಲಾ ಎಳೆದು ಹೊರಕ್ಕೆ ಹೊರಡಿಸುತ್ತದೆ. ಸರಿಯಾಗಿ ಪ್ರಯೋಗಮಾಡಿದ ಬಸ್ತಿಯು ತನ್ನ ಶಕ್ತಿಯಿಂದ ಸೊಂಟ, ಬೆನ್ನು, ಕೋಷ್ಠಗಳಲ್ಲಿ ಸಂಚಯವಾಗಿರುವ ದೋಷಗಳನ್ನು ಬುಡಸಹಿತವಾಗಿ ಅಪಹರಿಸುತ್ತದೆ.

ದೋಷತ್ರಯಸ್ಯ ಯಸ್ಮಾಚ್ಚ ಪ್ರಕೋಪೇ ವಾಯುರೀಶ್ವರಃ |
ತಸ್ಮಾತ್ ತಸ್ಯಾತಿವೃದ್ಧಸ್ಯ ಶರೀರಮಭಿನಿಘ್ನತಃ ||೨೯||
ವಾಯೋರ್ವಿಹತೇ ವೇಗಂ ನಾನ್ಯಾ ಬಸ್ತೇ ಋತೇ ಕ್ರಿಯಾ |
ಪವನಾವಿದ್ಧತೋಯಸ್ಯ ವೇಲಾ ವೇಗಮಿವೋದಧೇಃ ||೩೦||
ಶರೀರೋಪಚಯಂ ವರ್ಣಂ ಬಲಮಾರೋಗ್ಯಮಾಯುಷಃ |
ಕುರುತೇ ಪರಿವೃದ್ಧಿಂ ಚ ಬಸ್ತಿಃ ಸಮ್ಯಗುಪಾಸಿತಃ ||೩೧||

ಶರೀರದಲ್ಲಿ ತ್ರಿದೋಷಗಳ ಪ್ರಕೋಪಕ್ಕೂ ವಾಯುವೇ ಕಾರಣವಾದದ್ದು. ಅತಿಯಾಗಿ ಪ್ರಕುಪಿತವಾಗಿ ಶರೀರವನ್ನೇ ನಾಶಮಾಡುವ ಈ ವಾಯುವಿನ ವೇಗವನ್ನು ಬಿರುಗಾಳಿಯ ಪ್ರಬಲ ವೇಗದಿಂದ ಅತಿ ಎತ್ತರಕ್ಕೆ ಎದ್ದ ಸಮುದ್ರದ ನೀರಿನ ವೇಗವನ್ನು ದಡವು ಸಹಿಸುವಂತೆಯೇ ಬಸ್ತಿಕರ್ಮ ವಿನಃ ಮತ್ತಾವ ಕರ್ಮವೂ ತಡೆಯಲಾರದು (ಬಸ್ತಿ ಪ್ರಯೋಗವೇ ಪ್ರಬಲ ವಾತವನ್ನು ನಿವಾರಣೆಮಾಡುತ್ತದೆಂದು ತಿಳಿಯಬೇಕು.) ಸರಿಯಾದ ಕ್ರಮದಿಂದ ಬಸ್ತಿಯನ್ನು ಪ್ರಯೋಗಮಾಡಿದರೆ ಶರೀರವೃದ್ಧಿಯೂ, ವರ್ಣವೂ, ಬಲವೂ, ಆರೋಗ್ಯವೂ, ಆಯುರ್ವೃದ್ಧಿಯೂ ಉಂಟಾಗುತ್ತವೆ.

ಅತ ಊರ್ಧ್ವಂ ವ್ಯಾಪದೋ ವಕ್ಷ್ಯಾಮಃ । ತತ್ರ ನೇತ್ರಂ ಚಲಿತಂ ವಿವರ್ತಿಕಂ ಪಾರ್ಶ್ವಾವಪೀಡಿತಂ ಅತ್ಯುತ್ಕ್ಷಿಪ್ತಂ ಅವಸನ್ನಂ ತಿರ್ಯಕ್ಕ್ಷಿಪ್ತಮಿತಿ ಷಟ್‌ಪ್ರಣಿಧಾನದೋಷಾಃ ಅತಿಸ್ಥೂಲಂ ಕರ್ಕಶಂ ಅವನತಂ ಅಣು ಭಿನ್ನಂ ಸನ್ನಿಕೃಷ್ಟವಿಪ್ರಕೃಷ್ಟಕರ್ಣಿಕಂ ಸೂಕ್ಷ್ಮಾತಿಚ್ಛಿದ್ರಂ ಅತಿದೀರ್ಘಂ ಅತಿಹ್ರಸ್ವಮಿತ್ಯೇಕಾದಶ ನೇತ್ರದೋಷಾಃ ಬಹುಳತಾ ಅಲ್ಪತಾ ಸಚ್ಛಿದ್ರತಾ ಪ್ರಸ್ತೀರ್ಣತಾ ದುರ್ಬದ್ಧತೇತಿ ಪಞ್ಚಬಸ್ತಿದೋಷಾ: । ಅತಿಪೀಡಿತತಾ ಶಿಥಿಲಪೀಡಿತತಾ ಭೂಯೋಭೂಯೋಽವಪೀಡನಂ ಕಾಲಾತಿಕ್ರಮ ಇತಿ ಚತ್ವಾರಃ ಪೀಡನದೋಷಾಃ । ಆಮತಾ ಹೀನತಾ ಅತಿಮಾತ್ರತಾ ಅತಿಶೀತತಾ ಅತ್ಯುಷ್ಣತಾ ಅತಿತೀಕ್ಷ್ಣತಾ ಅತಿಮೃದುತಾ ಅತಿಸ್ನಿಗ್ಧತಾ ಅತಿರೂಕ್ಷತಾ ಅತಿಸಾಂದ್ರತಾ ಅತಿದ್ರವತಾ ಇತ್ಯೇಕಾದಶ ದ್ರವ್ಯದೋಷಾಃ । ಅವಾಕ್‌ಶೀರ್ಷೋಚ್ಛ್ರೀರ್ಷನ್ಯುಬ್ಜೋತ್ತಾನಸಙ್ಕುಚಿತದೇಹಸಿತತಾ ದಕ್ಷಿಣಪಾರ್ಶ್ವಶಾಯಿನಃ ಪ್ರದಾನಮಿತಿ ಸಪ್ತಶಯ್ಯಾದೋಷಾಃ । ಏವಮೇತಾಶ್ಚತ್ವಾರಿಂಶದ್ವ್ಯಾಪದೋ ವೈದ್ಯನಿಮಿತ್ತಾಃ । ಆತುರನಿಮಿತ್ತಾಃ ಪಞ್ಚದಶ ಆತುರೋಪದ್ರವಚಿಕಿತ್ಸಿತೇ ವಕ್ಷ್ಯತೇ । ಸ್ನೇಹಸ್ತ್ವಷ್ಟಾಭಿಃ ಕಾರಣೈಃ ಪ್ರತಿಹತೋ ನ ಪ್ರತ್ಯಾಗಚ್ಛತಿ ತ್ರಿಭಿರ್ದೋಷೈಃ ಅಶನಾಭಿಭೂತೋ ಮಲವ್ಯಾಮಿಶ್ರೋಽದೂರಾನುಪ್ರವಿಷ್ಟೋಽಸ್ವಿನ್ನಸ್ಯ ಅನುಷ್ಣೋ ಅಲ್ಪೋಽಭುಕ್ತವತೋ ಅಲ್ಪಾಶನಸ್ಯಚೇತಿ ವೈದ್ಯಾತುರನಿಮಿತ್ತಾ ಭವನ್ತಿ ಅಯೋಗಸ್ತೂಭಯೋರಾಧ್ಮಾನಂ ಪರಿಕರ್ತಿಕಾ ಪರಿಸ್ರಾವಃ ಪ್ರವಾಹಿಕಾ ಹೃದಯೋಪಸರಣಂ ಅಙ್ಗಪ್ರಗ್ರಹೋ ಅತಿಯೋಗೋ ಜೀವಾದಾನಮಿತಿ ನವ ವ್ಯಾಪದೋಽವೈದ್ಯನಿಮಿತ್ತಾ ಭವನ್ತಿ ||೩೨|| ಭವತಿ ಚಾತ್ರ–ಷಟ್‌ಸಪ್ತತಿಃ ಸಮಾಸೇನ ವ್ಯಾಪದಃ ಪರಿಕೀರ್ತಿತಾಃ । ತಾಸಾಂ ವಕ್ಷ್ಯಾಮಿ ವಿಜ್ಞಾನಂ ಸಿದ್ಧಿಂ ಚ ತದನಂತರಮ್ ||೩೩||

ಇನ್ನುಮುಂದೆ ಬಸ್ತಿಕರ್ಮದಲ್ಲಿ ವೈದ್ಯ, ರೋಗಿ ಮೊದಲಾದವರ ಅವಿವೇಕದಿಂದಲೂ ಔಷಧದ್ರವ್ಯ ಬಸ್ತಿಯಂತ್ರ ನಾಳ ಮೊದಲಾದುವುಗಳ ದೋಷಗಳಿಂದಲೂ ಅನೇಕ ಅಪಾಯಗಳುಂಟಾಗುತ್ತವೆ. ಅವುಗಳಪೈಕಿ ನಾಡಿಯು ಅಲ್ಲಾಡುವುದು, ಪಕ್ಕಕ್ಕೆ ತಿರುಗಿಬಿಡುವುದು, ಹಿಂತಿರುಗಿರುವುದು, ಅತಿಯಾಗಿ ಮೇಲಕ್ಕೆ ಎದ್ದಿರುವುದು, ಕೆಳಕ್ಕೆ ಬಗ್ಗಿರುವುದು, ಅಡ್ಡಲಾಗುವುದು ಇವು ಆರು ನಾಡಿಯನ್ನು ಗುದದಲ್ಲಿ ನುಗ್ಗಿಸುವಾಗ ಉಂಟಾಗುವ ದೋಷಗಳು ; ಅತಿದಪ್ಪವಾಗಿರುವುದು, ಸೀಳಿರುವುದು (ಒಡೆದು ಚೂರಾಗಿರುವುದು), ತಿರುಪು ಅತಿಹತ್ತಿರವಿರುವುದು, ಅತಿದೂರದಲ್ಲಿರುವುದು, ರಂಧ್ರವು ಅತಿ ಸಣ್ಣನಾಗಿಯೂ, ಅತಿ ಅಗಲವಾಗಿಯೂ, ಅತಿಉದ್ದವಾಗಿಯೂ, ಅತಿತುಂಡಾಗಿಯೂ ಇರುವುದು (ಮೋಟಾಗಿ) ಇವು ೧೧ ನಾಡಿಯ ದೋಷಗಳು; ಅತಿದಪ್ಪ, ಅತಿತೆಳು, ತೂತುಗಳಿರುವುದು ; ಅತಿ ಅಗಲವಾಗಿರುವುದು, ಸರಿಯಾಗಿ ಬಂಧನಮಾಡದಿರುವುದು, ಬಸ್ತಿನಾಳವನ್ನು ಗುದದಲ್ಲಿಟ್ಟಿರುವುದು ಇವು ೫ ಬಸ್ತಿದೋಷಗಳು ; ಅತಿ ಬಿಗಿಯಾಗಿ ಹಿಂಡುವುದು, ಮೆತ್ತಗೆ ಹಿಂಡುವುದು, ತಿರುಗಿತಿರುಗಿ ಹಿಂಡುವುದು (ಒಂದೇಸಾರಿ ಹಿಂಡದೆ ತಡೆದುತಡೆದು ಬಸ್ತಿಯನ್ನು ಕೈಯಿಂದ ಅದುಮುವುದು), ಕಾಲ ಮೀರಿ ಹಿಂಡುವುದು ಇವು ೪ ಪೀಡನ ದೋಷಗಳು ; ದ್ರವ್ಯವು ಆಮವಾಗಿರುವುದು, ಹೀನ ಪ್ರಮಾಣದಿಂದಿರುವುದು, ಅತಿ ಪ್ರಮಾಣದಿಂದಿರುವುದು, ಅತಿತಣ್ಣಗೂ, ಅತಿ ಬಿಸಿಯಾಗಿಯೂ ಅತಿಚುರು

ಕಾಗಿಯೂ, ಅತಿಮೆತ್ತಗೂ, ಅತಿಜಿಡ್ಡಾಗಿಯೂ, ಅತಿರೂಕ್ಷವಾಗಿಯೂ, ಅತಿ ಮಂದ ವಾಗಿಯೂ, ಅತಿನೀರಾಗಿಯೂ ಇರುವುದು, ಇವು ೧೧ ದ್ರವ್ಯದೋಷಗಳು ; ತಲೆಯನ್ನು ಕೆಳಗಿಡುವುದು, ಎತ್ತರದಲ್ಲಿಟ್ಟುಕೊಳ್ಳುವುದು, ಕೆಳಮುಖಕ್ಕೆ ನೋಡುವುದು, ಮೇಲ್ಮುಖಕ್ಕೆ ನೋಡುವುದು, ದೇಹವನ್ನು ಸಂಕೋಚಮಾಡಿಕೊಳ್ಳುವುದು, ಬಲಗಡೆ ಮಗ್ಗುಲಾಗಿ ಮಲಗಿರುವಾಗ ಬಸ್ತಿಪ್ರಯೋಗಮಾಡುವುದುಇವು ೭ ಶಯ್ಯಾದೋಷಗಳು ; ಈ ರೀತಿ ೪೪ ದೋಷಗಳು ವೈದ್ಯನಿಂದುಂಟಾಗುತ್ತವೆ. ರೋಗಿಯಿಂದುಂಟಾಗುವ ೧೫ ದೋಷಗಳನ್ನು ಆತುರನರೋಗ ಚಿಕಿತ್ಸೆಯಲ್ಲಿ ವಿವರಿಸುತ್ತೇವೆ. ಬಸ್ತಿಯ ಮೂಲಕ ಪ್ರಯೋಗಿಸಿದ ತೈಲವು ೮ ಕಾರಣಗಳಿಂದ ತಡೆಯಲ್ಪಟ್ಟು ಹೊರಕ್ಕೆ ಹೊರಟುಬರುವುದಿಲ್ಲ. ಮೂರು ದೋಷಗಳ ಪ್ರಕೋಪದಿಂದಲೂ, ಆಹಾರದಿಂದ ತಡೆಯಲ್ಪಡುವುದರಿಂದಲೂ, ಮಲ ಮಿಶ್ರವಾಗುವುದರಿಂದಲೂ, ದೂರಕ್ಕೆನುಗ್ಗುವುದರಿಂದಲೂ, ಸ್ವೇದಕರ್ಮ ಮಾಡದಿರುವವನಿಗೆ ಪ್ರಯೋಗಿಸುವುದೂ, ಬಿಸಿಯಾಗಿಲ್ಲದ್ದು (ತಣ್ಣಗಿರುವ), ಅಲ್ಪಪ್ರಮಾಣದಿಂದಿರುವುದೂ, ಊಟಮಾಡಿರುವವನಿಗೆ ಪ್ರಯೋಗಿಸಿದ್ದೂ, ಅಲ್ಪವಾಗಿ ಭೋಜನ ಮಾಡಿದವನಿಗೆ ಪ್ರಯೋಗಮಾಡಿದ ಔಷಧವೂ ಈ ರೀತಿ ೮ ವೈದ್ಯ ಮತ್ತು ರೋಗಿ ಇವರಿಬ್ಬರ ಅವಿವೇಕದಿಂದುಂಟಾಗುವ ದೋಷಗಳು. ನಿರೂಹ ಸ್ನೇಹಬಸ್ತಿಗಳೆರಡರ ಅಯೋಗಗಳಿಂದ ಹೊಟ್ಟೆಯುಬ್ಬರ, ವೈಕತ್ತರಿಸುವುದು, ಗುದದಿಂದ ದ್ರವಸ್ರವಿಸುತ್ತಿರುವುದು, ಆಮಶಂಕೆ, ಹೃದಯವು ಸ್ಥಳದಿಂದ ಜರುಗುವುದು, ಮೈಅಂಗಗಳು ಬಿಗಿಯುವುದು, ಅತಿದ್ರವಸ್ರವಿಸುವುದು, ಜೀವರಕ್ತಸ್ರಾವಗಳೆಂಬ ೯ ದೋಷಗಳು ವೈದ್ಯನ ದೋಷದಿಂದುಂಟಾಗುತ್ತವೆ. ಈ ರೀತಿ ೭೬ ಬಸ್ತಿದೋಷಗಳುಂಟಾಗುತ್ತವೆ. ಅವುಗಳ ಲಕ್ಷಣ ಚಿಕಿತ್ಸೆಗಳನ್ನು ಮುಂದೆ ತಿಳಿಸಲಾಗುತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ನೇತ್ರಬಸ್ತಿಪ್ರಮಾಣ ವಿಭಾಗಚಿಕಿತ್ಸಾನಾಮ ಪಞ್ಚತ್ರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ಷಟ್‌ತ್ರಿಂಶತ್ತಮೋಽಧ್ಯಾಯಃ

ಅಥಾತೋ ನೇತ್ರಬಸ್ತಿವ್ಯಾಪಚ್ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಬಸ್ತಿನಾಳ, ಶಯ್ಯೆ ಮೊದಲಾದುವುಗಳ ದೋಷದಿಂದುಂಟಾಗುವ ರೋಗಗಳಿಗೆ ಮಾಡಬೇಕಾದ ಚಿಕಿತ್ಸೆಗಳನ್ನು ವಿವರಿಸುತ್ತೇವೆ.

ಅಥ ನೇತ್ರೇ ವಿಚಲಿತೇ ತಥಾ ಚೈವ ವಿವರ್ತಿತೇ ।
ಗುದೇ ಕ್ಷತಂ ರುಜಾ ವಾ ಸ್ಯಾತ್ ತತ್ರ ಸದ್ಯಃ ಕ್ಷತಕ್ರಿಯಾಃ ||೩||
ಅತ್ಯುತ್ಕ್ಷಿಪ್ತೇಽವಸನ್ನೇ ಚ ನೇತ್ರೇ ಪಾಯೌ ಭವೇದ್ರುಜಾ ।
ವಿಧಿರತ್ರಾಪಿ ಪಿತ್ತಘ್ನಃ ಕಾರ್ಯಃ ಸ್ನೇಹೈಶ್ಚ ಸೇಚನಮ್ ||೪||
ತಿರ್ಯಕ್ ಪ್ರಣಿಹಿತೇ ನೇತ್ರೇ ತಥಾ ಪಾರ್ಶ್ವಾವಪೀಡಿತೇ ।
ಮುಖಸ್ಯಾವರಣಾದ್ಬಸ್ತಿರ್ನಸಮ್ಯಕ್ ಪ್ರತಿಪದ್ಯತೇ ||೫||
ಋಜುನೇತ್ರಂ ವಿಧೇಯಂ ಸ್ಯಾತ್ತತ್ರ ಸಮ್ಯಗ್ವಿಜಾನತಾ ।

ಬಸ್ತಿನಾಡಿಯು ಅಲುಗಿದರೆ, ಹಿಂದಕ್ಕೆ ತಿರುಗಿಕೊಂಡರೆ, ರೋಗಿಯ ಗುದದಲ್ಲಿ ಗಾಯವಾಗಲೀ ನೋವಾಗಲೀ ಉಂಟಾಗುತ್ತದೆ. ಅದಕ್ಕೆ ಸದ್ಯೋವ್ರಣಚಿಕಿತ್ಸೆಯನ್ನು ಮಾಡಬೇಕು. ಅತಿಯಾಗಿ ಮೇಲಕ್ಕೆದ್ದರೆ ಅಥವಾ ಕೆಳಮುಖಕ್ಕೆ ತಿರುಗಿಕೊಂಡರೆ ಗುದದಲ್ಲಿ ದೋಷವುಂಟಾಗುತ್ತದೆ. ಇಲ್ಲೂ ಕೂಡ ಪಿತ್ತಹರ ಚಿಕಿತ್ಸೆಯನ್ನು ಮಾಡಬೇಕು. ಸುಖೋಷ್ಣವಾದ ತುಪ್ಪವನ್ನು ಗುದದ ಮೇಲೆ ನಿದಾನವಾಗಿ ಸುರಿಯಬೇಕು. ನಾಡಿಯು ಅಡ್ಡಡ್ಡವಾಗಿ ಅಥವಾ ಒಂದು ಪಕ್ಕಕ್ಕೆ ತಿರುಗಿದ್ದಾಗ ಬಸ್ತಿಯನ್ನುಹಿಂಡಿದರೆ ಬಸ್ತಿಮುಖವು ಮುಚ್ಚಿಕೊಂಡು ಪ್ರಯೋಗಿಸಿದ ಔಷಧ ಮತ್ತು ತೈಲಗಳು ಬಸ್ತಿನಾಡಿಯಿಂದ ಗುದದೊಳಕ್ಕೆ ಸರಿಯಾಗಿ ಪ್ರವೇಶಿಸುವುದಿಲ್ಲ. ಇದನ್ನು ತಿಳಿದು ನಾಡಿಯನ್ನು ನೇರಮಾಡಿ ಗುದದೊಳಕ್ಕೆ ನುಗ್ಗಿಸಬೇಕು. (ಪಿತ್ತಘ್ನವೆಂದರೆ ಮಧುರಶೀತಾದಿ ಗುಣಗಳುಳ್ಳ ದ್ರವ್ಯಗಳ ಕಷಾಯವು.)

ಅತಿಸ್ಥೂಲೇ ಕರ್ಕಶೇ ಚ ನೇತ್ರೇ ಚಾವನತೇ ತಥಾ ।
ಗುದೇ ಭವೇತ್ ಕ್ಷತಂ ರುಕ್ ಚ ಸಾಧನಂ ಪೂರ್ವವತ್ ಸ್ಮೃತಮ್ ||೬||
ಆಸನ್ನಕರ್ಣಿಕೇ ನೇತ್ರೇ ಭಿನ್ನೇಽಣೌ ವಾಪ್ಯಪಾರ್ಥಕಃ ।
ಅವಸೇಕೋ ಭವೇದ್ಬಸ್ತೇಸ್ತಸ್ಮಾದ್ದೋಷಾನ್ ವಿವರ್ಜಯೇತ್ ||೭||
ಪ್ರಕೃಷ್ಟಕರ್ಣಿಕೇ ರಕ್ತಂ ಗುದಮರ್ಮಪ್ರಪೀಡನಾತ್ ।

ಕ್ಷರತ್ಯತ್ರಾಪಿ ಪಿತ್ತಘ್ನೋ ವಿಧಿರ್ವಸ್ತಿಶ್ಚ ಪಿಚ್ಛಿಲಃ ||೮||
ಹ್ರಸ್ವೇತ್ವಣುಸ್ರೋತಸಿ ಚ ಕ್ಲೇಶೋ ಬಸ್ತಿಶ್ಚ ಪೂರ್ವವತ್ |
ಪ್ರತ್ಯಾಗಚ್ಛಂಸ್ತತಃ ಕುರ್ಯಾದ್ರೋಗಾನ್ ಬಸ್ತಿವಿಘಾತಜಾನ್ ||೯||
ದೀರ್ಘೇ ಮಹಾಸ್ರೋತಸಿ ಚ ಜ್ಞೇಯಮತ್ಯವಪೀಡವತ್ |
ಪ್ರಸ್ತೀರ್ಣೇ ಬಹಲೇ ಚಾಪಿ ಬಸ್ತೌ ದುರ್ಬದ್ಧದೋಷವತ್ ||೧೦||
ಬಸ್ತಾವಲ್ಪೇಽಲ್ಪತಾ ವಾಪಿ ದ್ರವ್ಯಸ್ಯಾಲ್ಪಗುಣಾ ಮತಾಃ |
ದುರ್ಬದ್ಧೇ ಚಾಣು ಭಿನ್ನೇ ಚ ವಿಜ್ಞೇಯಂ ಭಿನ್ನನೇತ್ರವತ್ ||೧೧||

ಅತಿದಪ್ಪವಾಗಿ ಅತಿಒರಟಾಗಿ ನಾಡಿಯುಳ್ಳ ಬಗ್ಗಿದ ಬಸ್ತಿಯನ್ನು ಪ್ರಯೋಗಿಸಿದರೆ ಗುದವು ಹರಿದು ನೋವುಂಟಾಗುತ್ತದೆ. ಇದಕ್ಕೆ ಹಿಂದೆ ಹೇಳಿದಂತೆ ಸದ್ಯೋವ್ರಣ ಚಿಕಿತ್ಸೆಯನ್ನು ಮಾಡಬೇಕು. ನಾಳಕ್ಕೆ ತಿರುಪು ಹತ್ತಿರದಲ್ಲಿದ್ದರೆ ಒಡೆದಿದ್ದರೆ ಸಣ್ಣ ರಂಧ್ರವಿದ್ದರೆ ಬಸ್ತಿಯಿಂದ ಔಷಧವು ಸುರಿಯುವುದರಿಂದ ದೋಷವುಳ್ಳ ನಾಳಗಳನ್ನು ಬಿಡಬೇಕು. ತಿರುಪು ಉದ್ದವಾಗಿದ್ದರೆ ಗುದಮಾರ್ಗವು ಪೀಡಿಸಲ್ಪಟ್ಟು ರಕ್ತವು ಸೋರುತ್ತದೆ. ಈ ಸಂದರ್ಭದಲ್ಲೂ ಮಧುರಶೀತಕಷಾಯ ಮೊದಲಾದ ದ್ರವ್ಯಗಳಿಂದ ಪಿತ್ತಹರ ಚಿಕಿತ್ಸೆಯನ್ನೂ ಪಿಚ್ಛಿಲದ್ರವ್ಯಗಳನ್ನು ಸೇರಿಸಿ ಬಸ್ತಿಪ್ರಯೋಗವನ್ನೂ ಮಾಡಬೇಕು. ಬಸ್ತಿನಾಳವು ಮೋಟಾಗಿ ಅದಕ್ಕೆ ಸಣ್ಣರಂಧ್ರವಿದ್ದರೆ ಆಗ ಬಸ್ತಿದಾನ ಮಾಡಿದರೆ ಆಯಾಸವನ್ನುಂಟುಮಾಡುತ್ತದೆ. ಬಸ್ತಿದ್ರವ್ಯವು ಹಿಂದಕ್ಕೆ ನುಗ್ಗಿ ಬಸ್ತಿವ್ಯಾಪತ್ತನ್ನುಂಟು ಮಾಡುವ ರೋಗಿಗೆ ಉದ್ದವಾಗಿಯೂ ಅಗಲವಾದ ಮುಖವುಳ್ಳದ್ದಾಗಿಯೂ ಇರುವ ಬಸ್ತಿಯನ್ನು ಪೀಡನೆಮಾಡಿ ಬಸ್ತಿವ್ಯಾಪತ್ತುಗಳುಂಟಾದರೆ ಮೂತ್ರಾಘಾತದ ಚಿಕಿತ್ಸೆಯನ್ನು ಮಾಡಬೇಕು. ಉದ್ದವಾದ ನಾಳ ಮತ್ತು ದೊಡ್ಡರಂಧ್ರವುಳ್ಳ ಯಂತ್ರದಿಂದ ಅತಿಯಾಗಿ ಬಸ್ತಿಪೀಡನ ಮಾಡಿದರೆ ರೋಗಿಯ ಗಂಟಲು ಮುಖ ಮೂಗುಗಳಿಂದ ದ್ರವವು ನುಗ್ಗಿ ಹೊರಕ್ಕೆ ಬರುತ್ತದೆ. ಬಸ್ತಿಯು ಉಚಿತ ಪ್ರಮಾಣಕ್ಕಿಂತಲೂ ಉದ್ದವಾಗಿಯೂ ದಪ್ಪವಾಗಿಯೂ ಇದ್ದು ನಾಡಿಯನ್ನು ಸರಿಯಾಗಿ ಬಿಗಿಯದಿದ್ದರೂ, ಬಸ್ತಿಯು ಚಿಕ್ಕದಾಗಿದ್ದು ಅಲ್ಪಪ್ರಮಾಣದಲ್ಲಿ ದ್ರವ್ಯಗಳನ್ನು ಸೇರಿಸಿದ್ದರೂ ಅಲ್ಪಗುಣದ್ರವ್ಯಗಳಿಂದ ಕೂಡಿದ ಬಸ್ತಿಯಂತೆ ಉಪಯೋಗಕಾರಿಯಾಗುವುದಿಲ್ಲ. ನಾಳವನ್ನು ಬಸ್ತಿಗೆ ಸರಿಯಾಗಿ ಬಂಧನ ಮಾಡದ, ಅಣುದ್ವಾರವುಳ್ಳ, ಒಡೆದು ಚೂರಾದ ನಾಳವುಳ್ಳ ಬಸ್ತಿಯಿಂದಲೂ ದ್ರವವು ಸೋರಿಹೋಗುತ್ತದೆಯಾಗಿ ಇಂತಹ ಬಸ್ತಿದಾನವು ವ್ಯರ್ಥವಾಗುತ್ತದೆಂದು ತಿಳಿಯಬೇಕು.

ಅತಿಪ್ರಪೀಡಿತೋ ಬಸ್ತಿಃ ಪ್ರಯಾತ್ಯಾಮಾಶಯಂ ತತಃ |
ವಾತೇರಿತೋ ನಾಸಿಕಾಭ್ಯಾಂ ಮುಖತೋ ವಾ ಪ್ರಪದ್ಯತೇ ||೧೨||
ತತ್ರ ತೂರ್ಣಂ ಗಳಾಪೀಡಂ ಕುರ್ಯಾಚ್ಛಾಪ್ಯವಧೂನನಮ್ |
ಶಿರಃ ಕಾಯವಿರೇಕೌ ಚ ತೀಕ್ಷ್ಣೌ ಸೇಕಾಂಶ್ಚ ಶೀತಲಾನ್ ||೧೩||
ಶನೈಃ ಪ್ರಪೀಡಿತೋ ಬಸ್ತಿಃ ಪಕ್ವಾಧಾನಂ ನ ಗಚ್ಛತಿ |

ನ ಚ ಸಮ್ಪ್ರಾದಯತ್ಯರ್ಥಾಂ ಸ್ತಸ್ಮಾದ್ಯುಕ್ತಂ ಪ್ರಪೀಡಯೇತ್ ॥೧೪॥
ಭೂಯೋ ಭೂಯೋಽವಪೀಡೇನ ವಾಯುರನ್ತಃ ಪ್ರಪೀಡ್ಯತೇ ।
ತೇನಾಧ್ಮಾನಂ ರುಜಶ್ಶೋಽಗ್ರಾ ಯಥಾಸ್ವಂ ತತ್ರ ಬಸ್ತಯಃ ॥೧೫॥
ಕಾಲಾತಿಕ್ರಮಣಾತ್ ಕ್ಲೇಶೋ ವ್ಯಾಧಿಶ್ಚಾಭಿಪ್ರವರ್ಧತೇ ।
ತತ್ರ ವ್ಯಾಧಿಬಲಘ್ನಂ ತು ಭೂಯೋಬಸ್ತಿಂ ನಿಧಾಪಯೇತ್ । ॥೧೬॥

ಬಸ್ತಿಯನ್ನು ಅತಿಬಲವಾಗಿ ಹಿಂಡಿದರೆ ದ್ರವವು ಆಮಾಶಯಕ್ಕೆ ನುಗ್ಗಿ ವಾತದಿಂದ ತಳ್ಳಲ್ಪಟ್ಟು ಮೂಗು ಬಾಯಿಗಳಿಂದ ಹೊರಕ್ಕೆ ಬಂದುಬಿಡುತ್ತದೆ. ಆಗ ಬೇಗನೆ ರೋಗಿಯ ಕತ್ತನ್ನು ಹಿಸುಕಿ ತಲೆಕೂದಲಿನ ಗಂಟನ್ನು ಹಿಡಿದು ರೋಗಿಯನ್ನು ಆ ಕಡೆಗೂ ಈ ಕಡೆಗೂ ಕೊಡವಿ ಚುರುಕಾದ ಶಿರೋವಿರೇಚನ, ಕಾಯವಿರೇಚನಗಳನ್ನು ಪ್ರಯೋಗಿಸಬೇಕು. ಶೀತಲಗಳಾದ ಹಾಲು, ಕಬ್ಬಿನರಸ, ಅತಿಮಧುರದ ಕಷಾಯ, ಕಲಗಚ್ಚು ಮೊದಲಾದುವುಗಳನ್ನು ಸೇಚನೆಮಾಡಬೇಕು. ಮೆಲ್ಲಮೆಲ್ಲಗೆ ಹಿಂಡಿದ ಬಸ್ತಿಯು ಪಕ್ವಾಶಯಕ್ಕೆ ತಲುಪುವುದೇ ಇಲ್ಲ. ಮತ್ತು ದೋಷನಿವಾರಣೆಯನ್ನೂ ಮಾಡುವುದಿಲ್ಲ. ಆದ್ದರಿಂದ ಸರಿಯಾದ ರೀತಿಯಿಂದ ಬಸ್ತಿಯನ್ನು ಹಿಂಡಬೇಕು. ಸ್ವಲ್ಪಸ್ವಲ್ಪವಾಗಿ ಅನೇಕಸಾರಿ ಹಿಂಡಿದರೆ ವಾಯುವು ಕೋಷ್ಠಪೀಡೆಯನ್ನೂ ಆಧ್ಮಾನವನ್ನೂ ತೀವ್ರ ವೇದನೆಯನ್ನೂ ಉಂಟುಮಾಡುತ್ತದೆ. ಆಗ ರೋಗಕ್ಕೆ ತಕ್ಕಂತೆ ಬಸ್ತಿದಾನವನ್ನು ಮಾಡಬೇಕು. ಗುದದೊಳಗೆ ಬಸ್ತಿನಾಳವನ್ನಿಟ್ಟು ಹೆಚ್ಚುಕಾಲ ಬಸ್ತಿದಾನ ಮಾಡಿದರೆ ಆಯಾಸವೂ ರೋಗವೂ ಹೆಚ್ಚಾಗುತ್ತವೆಯಾಗಿ ರೋಗದ ಬಲವನ್ನು ನಾಶಮಾಡುವ ಬಸ್ತಿಯನ್ನೇ ಪುನಃ ಪ್ರಯೋಗಿಸಬೇಕು.

ಗುದೋಪದೇಹಶೋಫೌ ತು ಸ್ನೇಹೋಽಪಕ್ವಃ ಕರೋತಿ ಹಿ ।
ತತ್ರ ಸಂಶೋಧನೋ ಬಸ್ತಿರ್ಹಿತಂ ಚಾಪಿವಿರೇಚನಮ್ ॥೧೭॥
ಹೀನಮಾತ್ರಾವುಭೌ ಬಸ್ತೀ ನಾತಿಕಾರ್ಯಕರೌ ಮತೌ ।
ಅತಿಮಾತ್ರೌ ತಥಾನಾಹಕ್ಲಮಾತೀಸಾರಾಕಾರಕೌ ॥೧೮॥
ಮೂರ್ಛಾಂ ದಾಹಮತೀಸಾರಂ ಪಿತ್ತಂ ಚಾತ್ಯುಷ್ಣತೀಕ್ಷ್ಣಕೌ ।
ಮೃದುಶೀತಾವುಭೌ ವಾತವಿಬನ್ಧಾಧ್ಮಾನಕಾರಕೌ ॥೧೯॥
ತತ್ರ ಹೀನಾದಿಷು ಹಿತಃ ಪ್ರತ್ಯನೀಕಃ ಕ್ರಿಯಾವಿಧಿಃ ।
ತತ್ರ ಸಾಂದ್ರೇ ತನುಂ ಬಸ್ತಿಂ ತನೌ ಸಾಂದ್ರಂ ಚ ದಾಪಯೇತ್ ॥೨೦॥
ಸ್ನಿಗ್ಧೋ ಽತಿಜಾಡ್ಯಕೃದ್ರೂಕ್ಷಃ ಸ್ತಮ್ಭಾಧ್ಮಾನಕೃದುಚ್ಯತೇ ।
ಬಸ್ತಿಂ ರೂಕ್ಷಮತಿಸ್ನಿಗ್ಧೇ ಸ್ನಿಗ್ಧಂ ರೂಕ್ಷೇ ಚ ದಾಪಯೇತ್ ॥೨೧॥
(ಗುದವಸ್ತ್ಯುಪದೇಹಂ ತು ಕುರ್ಯೋತ್ಸಾನ್ದ್ರೋ ನಿರೂಹಣಃ ।
ಪ್ರವಾಹಿಕಾಂ ವಾ ಜನಯೇತ್ತನುರಲ್ಪಗುಣಾವಹಃ) ॥೨೨॥

ಹಸಿಯ ತೈಲವನ್ನು ಪ್ರಯೋಗಿಸಿದರೆ ಗುದಲೇಪನ ಮತ್ತು ಶೋಫಗಳುಂಟಾಗುತ್ತವೆ. ಇದಕ್ಕೆ ಶೋಧನವಸ್ತಿಯೂ ವಿರೇಚನಪ್ರಯೋಗವೂ ಹಿತಕರಗಳು. ಅಲ್ಪ

ಪ್ರಮಾಣದ ದ್ರವ್ಯಗಳಿಂದ ನಿರೂಹ ಮತ್ತು ಸ್ನೇಹಬಸ್ತಿಗಳನ್ನು ಪ್ರಯೋಗಿಸಿದರೆ ಸರಿಯಾಗಿ ದೋಷಹರಣವಾಗುವುದಿಲ್ಲ. ಅಧಿಕಪ್ರಮಾಣದಿಂದ ಪ್ರಯೋಗಿಸಿದರೆ ಆನಾಹ, ಆಯಾಸ, ಅತಿಸಾರಗಳುಂಟಾಗುತ್ತವೆ. ಅತಿ ಉಷ್ಣ ತೀಕ್ಷ್ಣ ದ್ರವ್ಯಗಳನ್ನು ಸೇರಿಸಿ ಪ್ರಯೋಗಿಸಿದರೆ ಜ್ಞಾನತಪ್ಪುತ್ತದೆ. ವೈಯ್ಯುರಿತ, ಅತಿಸಾರ, ಪಿತ್ತ ವೃದ್ಧಿ ಗಳುಂಟಾಗುತ್ತವೆ. ಮೃದು, ಶೀತವೀರ್ಯದ ದ್ರವ್ಯಗಳನ್ನು ಸೇರಿಸಿ ಪ್ರಯೋಗಿಸಿದ ನಿರೂಹವು ವಾತವೃದ್ಧಿ, ಮಲಬಂಧ, ಹೊಟ್ಟೆಯುಬ್ಬರ ಇವುಗಳನ್ನು ಉಂಟುಮಾಡುತ್ತದೆ. ನಿರೂಹ ದ್ರವ್ಯವು ಬಗ್ಗಡವಾಗಿದ್ದರೆ ಗುದ ಮತ್ತು ಬಸ್ತ್ಯಾಶಯಗಳಿಗೆ ಮೆತ್ತಿಕೊಳ್ಳುತ್ತದೆ. ನೀರಾಗಿದ್ದರೆ ಆಮಶಂಕೆಯನ್ನುಂಟುಮಾಡುತ್ತದೆ, ಹೀನಾಧಿಕ ದ್ರವ್ಯಗಳ ಉಪಯೋಗದಿಂದ ದೋಷಗಳು ಉಷ್ಣತೆಯನ್ನುಂಟುಮಾಡಿದರೆ ಶೀತಕ್ರಿಯೆಯನ್ನೂ ಸ್ನಿಗ್ಧತೆಗೆ ರೂಕ್ಷಣವನ್ನೂ, ಸಾಂದ್ರತೆಗೆ ದ್ರವದ್ರವ್ಯವನ್ನೂ ಈ ರೀತಿ ದೋಷವಿರುದ್ಧ ದ್ರವ್ಯಗಳನ್ನು ಸೇರಿಸಿ ಬಸ್ತಿಯನ್ನು ಪ್ರಯೋಗಿಸಬೇಕು. ಸ್ನಿಗ್ಧದ್ರವ್ಯದಿಂದ ಅತಿ ಜಡತ್ವವೂ ರೂಕ್ಷದ್ರವ್ಯದಿಂದ ಸ್ತಂಭನವೂ ಹೊಟ್ಟೆಯುಬ್ಬರವೂ ಉಂಟಾಗುತ್ತದೆ. ಅತಿರೂಕ್ಷನಿಗೆ ಸ್ನಿಗ್ಧಬಸ್ತಿಯನ್ನೂ ಅತಿಸ್ನಿಗ್ಧನಿಗೆ ರೂಕ್ಷಬಸ್ತಿಯನ್ನೂ ಪ್ರಯೋಗಮಾಡಬೇಕು.

ಅತಿಪೀಡಿತವದ್ದೋಷಾ ವಿಧಿಂಚಾಪ್ಯವಶೀರ್ಷಕೇ ।
ಉಚ್ಛೀರ್ಷಕೇ ಸಮುನ್ನಾಹಂ ಬಸ್ತಿಃ ಕುರ್ಯಾಚ್ಚ ಮೋಹನಮ್ ॥೨೨॥
ತತ್ರೋತ್ತರೋ ಹಿತೋ ಬಸ್ತಿಃ ಸುಸ್ವಿನ್ನಸ್ಯ ಸುಖಾವಹಃ ।
ನ್ಯುಬ್ಜಸ್ಯ ಬಸ್ತಿರ್ನಾಪ್ನೋತಿ ಪಕ್ವಾಧಾನಂ ವಿಮಾರ್ಗಗಃ ॥೨೩॥
ಹೃದ್ಗುದಂ ಬಾಧತೇ ಚಾತ್ರ ವಾಯುಃ ಕೋಪಮಥಾಪಿ ಚ ।
ಉತ್ತಾನಸ್ಯಾವೃತೇ ಮಾರ್ಗೇ ಬಸ್ತಿರ್ನಾನ್ತಃ ಪ್ರಪದ್ಯತೇ ॥೨೪॥
ನೇತ್ರಸಂವೇಜನಭ್ರಾನ್ತೋ ವಾಯುಶ್ಚಾನ್ತಃ ಪ್ರಕುಪ್ಯತಿ ।
ದೇಹೇ ಸಙ್ಕುಚಿತೇ ದತ್ತಃ ಸಕ್ಥ್ನೋರಪ್ಯುಭಯೋಸ್ತಥಾ ॥೨೫॥
ನ ಸಮ್ಯಗನಿಲಾವಿಷ್ಟೋ ಬಸ್ತಿಃ ಪ್ರತ್ಯೇತಿ ದೇಹಿನಃ ।
ಸ್ಥಿತಸ್ಯ ಬಸ್ತಿರ್ದತ್ತಸ್ತು ಕ್ಷಿಪ್ರಮಾಯತ್ಯವಾಙ್ಮುಖಃ ॥೨೬॥
ನ ಚಾಶಯಂ ತರ್ಪಯತಿ ತಸ್ಮಾನ್ನಾರ್ಥಕರೋ ಹಿ ಸಃ ।
ನಾಪ್ನೋತಿ ಬಸ್ತಿರ್ದತ್ತಸ್ತು ಕೃತ್ಸ್ನಂ ಪಕ್ವಾಶಯಂ ಪುನಃ ॥೨೭॥
ದಕ್ಷಿಣಾಶ್ರಿತಪಾರ್ಶ್ವಸ್ಯ ವಾಮಪಾರ್ಶ್ವಾನುಗೋ ಯತಃ ।
ನ್ಯುಬ್ಜಾದೀನಾಂ ಪ್ರದಾನಂ ಚ ಬಸ್ತೇರ್ನೈವ ಪ್ರಶಸ್ಯತೇ ॥೨೮॥
ಪಶ್ಚಾದನಿಲಕೋಪೋऽತ್ರ ಯಥಾಸ್ವಂ ತತ್ರ ಕಾರಯೇತ್ ।
ವ್ಯಾಪದಃ ಸ್ನೇಹಬಸ್ತೇಸ್ತು ವಕ್ಷ್ಯನ್ತೇऽತ್ರ ಚಿಕಿತ್ಸಿತೇ ॥೨೯॥

ತಲೆಯನ್ನು ಕೆಳಗೆಮಾಡಿ ಮಲಗಿರುವ ರೋಗಿಯ ಶಿಶ್ನದೊಳಕ್ಕೆ ಕೊಡುವ ಉತ್ತರ ಬಸ್ತಿಯು ಅತಿಯಾಗಿ ಪೀಡಿಸಿದ ದ್ರವವು ಬಲವಂತದಿಂದ ಆಮಾಶಯಕ್ಕೆ ನುಗ್ಗಿ ದ್ರವವನ್ನು ಮೂತ್ರಾಶಯದೊಳಕ್ಕೆ ನುಗ್ಗಿಸುತ್ತದೆ. ತಲೆಯನ್ನು ಮೇಲ್ಗಡೆಗೆ ಎತ್ತಿ ಮಲಗಿಸಿ ಶಿಶ್ನ

ದೊಳಕ್ಕೆ ಪ್ರಯೋಗಿಸುವ ಉತ್ತರಬಸ್ತಿಯು ಶಿಶ್ನವು ಮೇಲಕ್ಕೆ ಎದ್ದು ನಿಲ್ಲುವಂತೆ ಮಾಡುತ್ತದೆ (ನಿಗರಿಸುತ್ತದೆ). ಶಿಶ್ನಕ್ಕೆ ಸ್ವೇದನಮಾಡಿಸಿ ಉತ್ತರಬಸ್ತಿಯನ್ನು ಪ್ರಯೋಗಿಸಿದರೆ ಸುಖವಾಗುತ್ತದೆ. ಬೋರಲಾಗಿ ಮಲಗಿರುವವನಿಗೆ ಬಸ್ತಿ ಪ್ರಯೋಗವನ್ನುಮಾಡಿದರೆ ಬಸ್ತಿದ್ರವ್ಯಗಳು ವಿರುದ್ಧಮಾರ್ಗದಿಂದ ನುಗ್ಗಿ ಪಕ್ವಾಶಯವನ್ನು ಮುಟ್ಟಲು ತಡೆಯುಂಟಾಗುತ್ತದೆ. ವಾಯುವು ಪ್ರಕೋಪಗೊಂಡು ರೋಗಿಯ ಹೃದಯವನ್ನೂ ಗುದವನ್ನೂ ಚುಚ್ಚಿ ಬಾಧೆಯನ್ನುಂಟುಮಾಡುತ್ತದೆ. ಮುಖವನ್ನು ಮೇಲಕ್ಕೆಮಾಡಿ (ಅಂಗತ್ತಲಾಗಿ) ಮಲಗಿರುವವನಿಗೆ ಮಾರ್ಗವು ದೋಷಗಳಿಂದ ಮುಚ್ಚಲ್ಪಟ್ಟಿರುವ ಕಾರಣ ಬಸ್ತಿದ್ರವ್ಯವು ಕೊನೆಯನ್ನು ಮುಟ್ಟುವುದಿಲ್ಲ. ಕಣ್ಣು ಅದರಿ ಭಯಪೀಡಿತನಾದವನಿಗೆ ವಾತಪ್ರಕೋಪವುಂಟಾಗುತ್ತದೆ. ಎರಡು ತೊಡೆಗಳನ್ನೂ ಮಡಿಸಿ ದೇಹವನ್ನು ಸಂಕೋಚಿಸಿಕೊಂಡಿರುವಾಗ ಬಸ್ತಿಯನ್ನು ಪ್ರಯೋಗಮಾಡಿದರೆ ಬಸ್ತಿದ್ರವ್ಯವು ವಾಯುವಿನಿಂದ ಆವೃತವಾಗಿ ಹಿಂತಿರುಗಿ ಬರುವುದಿಲ್ಲ. ನಿಂತಿರುವವನಿಗೆ ಬಸ್ತಿದಾನಮಾಡಿದರೆ ಬೇಗನೆ ಕೆಳಮುಖದಿಂದಲೇ ಸುರಿದುಬಿಡುತ್ತದೆ. ಪಕ್ವಾಶಯಕ್ಕೆ ಹೋಗುವುದೇ ಇಲ್ಲವಾದಕಾರಣ ನಿಷ್ಪ್ರಯೋಜನವಾದದ್ದು. ಬಲಗಡೆಯಮಗ್ಗಲಲ್ಲಿ ಮಲಗಿರುವವನಿಗೆ ಬಸ್ತಿಯನ್ನು ಪ್ರಯೋಗಿಸಿದರೆ ಆ ದ್ರವ್ಯವೂ ಎಡಗಡೆಯಿಂದ ನುಗ್ಗುತ್ತದೆಯಾಗಿ ಪಕ್ವಾಶಯಕ್ಕೆ ಸೇರುವುದೇ ಇಲ್ಲ. ಬೋರಲಾಗಿ ಮಲಗಿರುವಾಗ ಬಸ್ತಿ ಪ್ರಯೋಗಮಾಡುವುದು ಶ್ರೇಷ್ಠವಾದುದಲ್ಲ. ಕಡೆಯಲ್ಲಿ ವಾತಪ್ರಕೋಪವುಂಟಾಗುತ್ತದೆಯಾಗಿ ತಕ್ಕ ಪ್ರತೀಕಾರವನ್ನು ಮಾಡಬೇಕು. ಸ್ನೇಹಬಸ್ತಿಪ್ರಯೋಗದಿಂದ ಉಂಟಾಗುವ ಉಪದ್ರವಗಳನ್ನು ಆ ಚಿಕಿತ್ಸೆಯಲ್ಲಿ ಹೇಳಲಾಗುತ್ತದೆ.

ಅಯೋಗಾದ್ಯಾಸ್ತು ವಕ್ಷ್ಯಾಮಿ ವ್ಯಾಪದಃ ಸಚಿಕಿತ್ಸಿತಾಃ ।
ಅನುಷ್ಣೋಽಲ್ಪೌಷಧೋ ಹೀನೋ ಬಸ್ತಿರ್ನೈತಿ ಪ್ರಯೋಜಿತಃ ॥೩೦॥
ವಿಷ್ಟಮ್ಭಾಧ್ಮಾನಶೂಲೈಶ್ಚ ತಮಯೋಗಂ ಪ್ರಚಕ್ಷತೇ ।
ತತ್ರ ತೀಕ್ಷ್ಣೋಹಿತೋ ಬಸ್ತಿಸ್ತೀಕ್ಷ್ಣಂ ಚಾಪಿ ವಿರೇಚನಮ್ ॥೩೧॥
ಸಶೇಷಾನ್ನೇ ತಥಾ ಭುಕ್ತೇ ಬಹುದೋಷೇ ಚ ಯೋಜಿತಃ ।
ಅತ್ಯಾಶಿತಸ್ಯಾತಿಬಹುರ್ಬಸ್ತಿರ್ಮನ್ದೋಽಷ್ಣ ಏವ ಚ ॥೩೨॥
ಅನುಷ್ಣಲವಣಸ್ನೇಹೋ ಹ್ಯತಿಮಾತ್ರೋಽಥವಾ ಪುನಃ ।
ತಥಾ ಬಹುಪುರೀಷಶ್ಚ ಕ್ಷಿಪ್ರಮಾಧ್ಮಾಪಯೇನ್ನರಮ್ ॥೩೩॥
ಹೃತ್ಕಟೀಪಾರ್ಶ್ವಪೃಷ್ಠೇಷು ಶೂಲಂ ತತ್ರಾತಿದಾರುಣಮ್ ।
ತತ್ರ ತೀಕ್ಷ್ಣತರೋ ಬಸ್ತಿರ್ಹಿತಂ ಚಾಪ್ಯನುವಾಸನಮ್ ॥೩೪॥
ಅತಿತೀಕ್ಷ್ಣೋಷ್ಣಲವಣೋ ರೂಕ್ಷೋ ಬಸ್ತಿಃ ಪ್ರಯೋಜಿತಃ ।
ಸಪಿತ್ತಂ ಕೋಪಯೇದ್ವಾಯುಂ ಕುರ್ಯಾಚ್ಚ ಪರಿಕರ್ತಿಕಾಮ್ ॥೩೫॥
ನಾಭಿಬಸ್ತಿಗುದಂ ತತ್ರ ಭಿನತ್ತೀವ ವಾತಿ ದೇಹಿನಃ ।

ಪಿಚ್ಛಾಬಸ್ತಿರ್ಹಿತಸ್ತಸ್ಯ ಸ್ನೇಹಶ್ಚ ಮಧುರೈಃ ಶೃತಃ ||೩೬||
ಅತ್ಯಮ್ಲಲವಣಸ್ತೀಕ್ಷ್ಣಃ ಪರಿಸ್ರಾವಾಯ ಕಲ್ಪತೇ ।
ದೌರ್ಬಲ್ಯಮಙ್ಗಸಾದಶ್ಚ ಜಾಯತೇ ತತ್ರ ದೇಹಿನಃ ||೩೭||
ಪರಿಸ್ರವೇತ್ಕೃತಃ ಪಿತ್ತಂ ದಾಹಂ ಸಂಜನಯೇದ್ಗುದೇ ।
ಪಿಚ್ಛಾಬಸ್ತಿರ್ಹಿತಸ್ತತ್ರ ಬಸ್ತಿಃ ಕ್ಷೀರಘೃತಸ್ಯ ಚ ||೩೮||
ಪ್ರವಾಹಿಕಾ ಭವೇತ್ತೀಕ್ಷ್ಣಾನ್ನಿರೂಹಾತ್ ಸಾನುವಾಸನಾತ್ ।
ಸದಾಹಶೂಲಂ ಕೃಚ್ಛ್ರೇಣ ವಾಸೃಕ್ ತತೋಽಪವೇಶ್ಯತೇ ||೩೯||
ಪಿಚ್ಛಾಬಸ್ತಿರ್ಹಿತಸ್ತತ್ರ ಪಯಸಾ ಚೈವ ಭೋಜನಮ್ ।
ಸರ್ಪಿರ್ಮಧುರಕೈಃ ಸಿದ್ಧಂ ತೈಲಂ ಚಾಪ್ಯನುವಾಸನಮ್ ||೪೦||
ಅತಿತೀಕ್ಷ್ಣೋ ನಿರೂಹೋವಾ ಸವಾತೇ ಚಾನುವಾಸನಃ ।
ಹೃದಯಸ್ಯೋಪಸರಣಂ ಕುರುತೇ ಚಾಙ್ಗಪೀಡನಮ್ ||೪೧||
ದೋಷೈಸ್ತತ್ರ ರುಜಸ್ರಾಸ್ತಾ ಮದೋ ಮೂರ್ಛಾಙ್ಗಗೌರವಮ್ ।
ಸರ್ವದೋಷಹರಂ ಬಸ್ತಿಂ ಶೋಧನಂ ತತ್ರ ದಾಪಯೇತ್ ||೪೨||
ರೂಕ್ಷಸ್ಯ ಬಹುವಾತಸ್ಯ ತಥಾ ದುಃಶಯಿತಸ್ಯ ಚ ।
ಬಸ್ತಿರಙ್ಗಗ್ರಹಂ ಕುರ್ಯಾದ್ರೂಕ್ಷೋ ಮೃದ್ವಲ್ಪಭೇಷಜಃ ||೪೩||
ತತ್ರಾಙ್ಗಸಾದಃ ಪ್ರಸ್ತಮ್ಭೋ ಜೃಮ್ಭೋದ್ವೇಷ್ಟನವೇಪಕಾಃ ।
ಪರ್ವಭೇದಶ್ಚ ತತ್ರೇಷ್ಟಾಃ ಸ್ವೇದಾಭ್ಯಙ್ಜನಬಸ್ತಯಃ ||೪೪||
ಅತ್ಯುಷ್ಣತೀಕ್ಷ್ಣೋಽತಿಬಹುರ್ದತ್ತೋಽಸ್ವೇದಿತಸ್ಯ ಚ ।
ಅಲ್ಪದೋಷಸ್ಯ ವಾ ಬಸ್ತಿರತಿಯೋಗಾಯ ಕಲ್ಪತೇ ||೪೫||
ವಿರೇಚನಾತಿಯೋಗೇನ ಸಮಾನಂ ತಚ್ಚಿಕಿತ್ಸಿತಮ್ ।
ಪಿಚ್ಛಾಬಸ್ತಿಪ್ರಯೋಗಶ್ಚ ತತ್ರ ಶೀತಃ ಸುಖಾವಹಃ ||೪೬||
ಅತಿಯೋಗಾತ್ಪರಂ ಯತ್ರ ಜೀವಾದಾನಂ ವಿರಿಕ್ತವತ್ ।
ದೇಯಸ್ತತ್ರ ಹಿತಶ್ಚಾಪಿ ಪಿಚ್ಛಾಬಸ್ತಿಃ ಸಶೋಣಿತಃ ||೪೭||
ನವೈತಾ ವ್ಯಾಪದೋ ಯಾಸ್ತು ನಿರೂಹಂ ಪ್ರತ್ಯುದಾಹೃತಾಃ ।
ಸ್ನೇಹಬಸ್ತಿಷ್ವಪಿ ಹಿ ತಾ ವಿಜ್ಞೇಯಾ ಕುಶಲೈರಿಹ ||೪೮||
ಇತ್ಯುಕ್ತಾ ವ್ಯಾಪದಃ ಸರ್ವಾಃ ಸಲಕ್ಷಣಚಿಕಿತ್ಸಿತಾಃ ।
ಭಿಷಜಾ ಚ ತಥಾ ಕಾರ್ಯಂ ಯಥೈತಾ ನ ಭವನ್ತಿ ಹಿ ||೪೯||

ಇನ್ನು ಮುಂದೆ ಬಸ್ತಿಕರ್ಮದ ಹೀನಮಿಥ್ಯಾತಿಯೋಗಗಳಿಂದುಂಟಾಗುವ ದೋಷಗಳ ಲಕ್ಷಣಗಳನ್ನೂ ಚಿಕಿತ್ಸೆಯನ್ನೂ ಹೇಳುತ್ತೇನೆ—

೧. ಬಿಸಿಯಾಗಿರದೆ ಹೀನಪ್ರಮಾಣದ ಔಷಧಗಳನ್ನು ಸೇರಿಸಿ ಪ್ರಯೋಗಿಸಿದ ನಿರೂಹ ಬಸ್ತಿಯಿಂದ ಔಷಧವು ಕರುಳಿನೊಳಕ್ಕೆ ಸರಿಯಾಗಿ ಪ್ರವೇಶಿಸದೆ ಮಲಬಂಧ, ಹೊಟ್ಟೆಯುಬ್ಬರ, ಶೂಲೆಗಳು ಉಂಟಾಗುತ್ತವೆ. ಇದಕ್ಕೆ "ಅಯೋಗ"ವೆಂದು ಹೇಳುತ್ತಾರೆ. ಈ ಸ್ಥಿತಿಯಲ್ಲಿ ರೋಗಿಗೆ ತೀಕ್ಷ್ಣೌಷಧಿಗಳಿಂದ ತಯಾರಿಸಿದ ಬಸ್ತಿ ಮತ್ತು ವಿರೇಚನಗಳನ್ನು ಪ್ರಯೋಗಿಸಿದರೆ ಹಿತವಾಗುತ್ತದೆ.

೨. ಆಹಾರಶೇಷವಿರುವಾಗ ಭೋಜನಮಾಡಿದಮೇಲೆ ಅಧಿಕದೋಷವಿರುವವನಿಗೆ ಅತಿಪ್ರಮಾಣದಿಂದ ಭೋಜನಮಾಡಿರುವವನಿಗೆ ಅತಿಪ್ರಮಾಣದ ದ್ರವ್ಯಗಳನ್ನು ಸೇರಿಸಿ ಅಲ್ಪಬಿಸಿಯಾಗಿರುವಾಗ ಶೀತವೀರ್ಯ ದ್ರವ್ಯಗಳಿಗೆ ಲವಣವನ್ನೂ ಸ್ನೇಹವನ್ನೂ ಮಿಶ್ರಮಾಡದೆಯೂ ಅನೇಕಸಲ ಪ್ರಯೋಗಿಸಿದ ನಿರೂಹಬಸ್ತಿಯು ಮಲವನ್ನು ತಡೆದು ಬಲುಬೇಗ ಹೊಟ್ಟೆಯುಬ್ಬರ ಹೃದಯ ಸೊಂಟ ಪಕ್ಕೆಗಳು ಬೆನ್ನು ಇವುಗಳಲ್ಲಿ ಅತಿಭಯಂಕರವಾದ ಶೂಲೆಯುಂಟಾಗುತ್ತದೆ. ಇದಕ್ಕೆ "ಮಿಥ್ಯಾಯೋಗ"ವೆಂದು ಹೆಸರು. ಈ ಸ್ಥಿತಿಯಲ್ಲಿರುವ ರೋಗಿಗೆ ಅತ್ಯಂತ ತೀಕ್ಷ್ಣವಾದ ಬಸ್ತಿಯನ್ನೂ ಅನುವಾಸನವನ್ನೂ ಪ್ರಯೋಗಮಾಡಿಸುವುದು ಹಿತಕರವಾದದ್ದು.

೩. ಅತಿತೀಕ್ಷ್ಣ ಮತ್ತು ಉಷ್ಣವೀರ್ಯ ದ್ರವ್ಯಗಳಿಂದಲೂ ಲವಣದಿಂದಲೂ ಕೂಡಿದ ರೂಕ್ಷಬಸ್ತಿಯ ಪ್ರಯೋಗವು ಪಿತ್ತವಾತಗಳನ್ನು ಪ್ರಕೋಪಮಾಡಿ ಪರಿಕರ್ತಿಕೆಯನ್ನು ಉಂಟುಮಾಡುತ್ತದೆ. ರೋಗಿಗೆ ಹೊಕ್ಕಳು ಬಸ್ತೀ ಗುದಗಳು ಅತಿಯಾಗಿ ಕತ್ತರಿಸಿದಂತೆ ನೋಯುತ್ತವೆ. ಇದು "ಅತಿಯೋಗವು" ಈ ರೋಗಿಗೆ ಪಿಚ್ಛಾಬಸ್ತಿಯೂ ಮಧುರದ್ರವ್ಯಗಳಿಂದ ತಯಾರಿಸಿದ ಘೃತಮಿಶ್ರವಾದ ಬಸ್ತಿಪ್ರಯೋಗವೂ ಹಿತಕರವಾದದ್ದು.

೪. ಅತಿಯಾಗಿ ಹುಳಿ ಉಪ್ಪು ಚುರುಕಾದ ದ್ರವ್ಯಗಳನ್ನು ಸೇರಿಸಿದ ಬಸ್ತಿಪ್ರಯೋಗದಿಂದ ಗುದಸ್ರಾವವೂ ಬಲಹೀನತೆಯೂ ದೇಹಕ್ಷೀಣತೆಯೂ ಪಿತ್ತಸ್ರಾವವೂ ಗುದದಲ್ಲಿ ಉರಿಯೂ ಉಂಟಾಗುತ್ತವೆ. ಇದು ಅತಿಯೋಗವು. ಈ ಸ್ಥಿತಿಯಲ್ಲಿ ರೋಗಿಗೆ ಪಿಚ್ಛಾಬಸ್ತಿಯೂ ಹಾಲು ತುಪ್ಪ ಮಿಶ್ರಮಾಡಿದ ಬಸ್ತಿಯೂ ಹಿತಕರವಾದದ್ದು.

೫. ತೀಕ್ಷ್ಣೌಷಧಿಗಳಿಂದ ನಿರೂಹ ಮತ್ತು ಅನುವಾಸನ ಬಸ್ತಿಗಳನ್ನು ಪ್ರಯೋಗಮಾಡಿದರೆ ಉರಿತ ಶೂಲೆಗಳಿಂದ ಕೂಡಿ ಅತಿಕಷ್ಟದಿಂದ ರಕ್ತಪ್ರವೃತ್ತಿಯುಂಟಾಗುತ್ತದೆ. ಇದೂ ಅತಿಯೋಗವು. ಈ ಸ್ಥಿತಿಯಲ್ಲಿ ರೋಗಿಗೆ ಪಿಚ್ಛಾಬಸ್ತಿ ಪ್ರಯೋಗವೂ ಹಾಲು ಅನ್ನಗಳ ಭೋಜನವೂ ಹಿತಕರಗಳು. ಮತ್ತು ಮಧುರೌಷಧ ದ್ರವ್ಯಗಳಿಂದ ತಯಾರಿಸಿದ ಘೃತ ತೈಲಗಳಿಂದ ಅನುವಾಸನ ಮಾಡಿಸಬೇಕು.

೬. ಅತಿ ತೀಕ್ಷ್ಣದ್ರವ್ಯಗಳಿಂದ ನಿರೂಹವನ್ನೂ ವಾತದೋಷದಲ್ಲಿ ಅನುವಾಸನವನ್ನೂ ಪ್ರಯೋಗಿಸಿದರೆ ಹೃದಯಚಲನವೂ ಮೈನೋವೂ ಉಂಟಾಗುತ್ತವೆ. ದೋಷಪ್ರಕೋಪಗಳಿಗೆ ತಕ್ಕಂತೆ ನೋವುಗಳೂ ಜ್ಞಾನತಪ್ಪುವುದೂ ಮೈಭಾರವೂ ಉಂಟಾಗುತ್ತವೆ. ಇದೂ ಅತಿಯೋಗವು. ಈ ಅವಸ್ಥೆಯಲ್ಲಿ ತ್ರಿದೋಷಹರವಾದ ಶೋಧನಬಸ್ತಿಯನ್ನು ಪ್ರಯೋಗಿಸಿದರೆ ಹಿತವಾಗುತ್ತದೆ.

೭. ರೂಕ್ಷದೇಹವುಳ್ಳ ಅತಿವಾತಕೋಪವುಳ್ಳ ರೋಗಿಯ ದೇಹವನ್ನು ವ್ಯತ್ಯಾಸಮಾಡಿ ಮಲಗಿದ್ದಾಗ ರೂಕ್ಷ ಮತ್ತು ಮೃದು ಔಷಧಗಳಿಂದ ತಯಾರಿಸಿದ ಬಸ್ತಿಯನ್ನು ಪ್ರಯೋಗಿಸಿದರೆ ರೋಗಿಗೆ ಅವಯವಗಳೆಲ್ಲಾ ಹಿಡಿದುಕೊಳ್ಳುತ್ತವೆ. ಮೈ ಕೃಶವಾಗು

ತ್ತದೆ. ಚಲನೆಯುಂಟಾಗುವುದಿಲ್ಲ ಆಕಳಿಕೆ, ಕಣ್ಣುಗುಡ್ಡೆಗಳು ಸುತ್ತುವುದು, ಮೈನಡುಕ ಗಳುಂಟಾಗುತ್ತವೆ ಮತ್ತು ಬೆರಳಗಿಣ್ಣುಗಳು ಕಿತ್ತುಹಾಕಿದಂತೆ ನೋಯುತ್ತವೆ. ಇದು ಮಿಥ್ಯಾಯೋಗವು. ಈ ಅವಸ್ಥೆಯಲ್ಲಿರುವ ರೋಗಿಗೆ ಸ್ವೇದ ಅಭ್ಯಂಗ ಬಸ್ತಿಗಳನ್ನು ಪ್ರಯೋಗಿಸಿದರೆ ಹಿತವಾಗುತ್ತದೆ.

೭. ಅತಿಯಾಗಿ ಸ್ವೇದವುಂಟಾಗಿರುವವನಿಗೆ ಅಥವಾ ಅಲ್ಪದೋಷವುಳ್ಳವನಿಗೆ ಅತಿಯಾಗಿ ಉಷ್ಣವೀರ್ಯತೀಕ್ಷ್ಣಗುಣವುಳ್ಳ ಅತಿಪ್ರಮಾಣದ ದ್ರವ್ಯಗಳಿಂದ ತಯಾರಿಸಿ ಪ್ರಯೋಗಿಸಿದ ವಸ್ತಿಯು ಅತಿಯೋಗವಾಗಿ ಪರಿಣಮಿಸುತ್ತದೆ. ಈ ರೋಗಿಗೆ ವಿರೇಚನಾ ತಿಯೋಗದಲ್ಲಿ ಹೇಳಿರುವಂತೆ ಶೀತವೀರ್ಯದ್ರವ್ಯಗಳಿಂದ ತಯಾರಿಸಿದ ಬೃಂಹಣ ಮತ್ತು ಪಿಚ್ಛಾಬಸ್ತಿಗಳ ಪ್ರಯೋಗವು ಹಿತಕರವು.

೯. ಅತಿಯೋಗದಿಂದ ಜೀವಾದಾನವುಂಟಾದರೆ (ಜೀವಶೋಣಿತಸ್ರಾವವು) ವಿರೇಚನಾತಿಯೋಗದಿಂದುಂಟಾದ ಜೀವರಕ್ತಸ್ರಾವದಲ್ಲಿ ಮಾಡುವಂತೆಯೇ ರಕ್ತಮಿಶ್ರ ಮಾಡಿದ ಪಿಚ್ಛಾಬಸ್ತಿಯನ್ನು ಪ್ರಯೋಗಿಸಬೇಕು. ಈ ರೀತಿಯಾಗಿ ನಿರೂಹಬಸ್ತಿ ವ್ಯಾಪತ್ತಿನಲ್ಲಿ ವಿವರಿಸಿರುವ (೯) ವಿಧ ರೋಗಗಳ ಅವಸ್ಥೆಯೂ ಅನುವಾಸನಬಸ್ತಿ ಪ್ರಯೋಗದಲ್ಲೂ ಸಂಭವಿಸುತ್ತವೆಂದು ಕುಶಲರಾದ ವೈದ್ಯರು ಆಯಾಯ ಲಕ್ಷಣಗಳಿಂದ ತಿಳಿದು ತಕ್ಕ ಪ್ರತೀಕಾರಗಳನ್ನು ಮಾಡಬೇಕು. ಈ ರೀತಿಯಾಗಿ ಬಸ್ತಿವ್ಯಾಪತ್ತುಗಳ ನ್ನೆಲ್ಲ ಅವುಗಳ ಲಕ್ಷಣ ಮತ್ತು ಚಿಕಿತ್ಸೆಗಳೊಡನೆ ವಿವರಿಸಿ ಹೇಳಿರುತ್ತೇವೆಯಾಗಿ ವೈದ್ಯನು ಇವುಗಳನ್ನೆಲ್ಲಾ ಪರಿಶೀಲಿಸಿ ಈ ದೋಷಗಳೊಂದೂ ಉಂಟಾಗದಂತೆ ಅತಿಶ್ರದ್ಧೆಯಿಂದ ಬಸ್ತಿದಾನವನ್ನು ಮಾಡಿಸಬೇಕು.

ಪಕ್ಷಾದ್ವಿರೇಕೋ ವಾನ್ತಸ್ಯ ತತಶ್ಚಾಪಿ ನಿರೂಹಣಮ್ ।
ಸದ್ಯೋನಿರೂಢೋಽನುವಾಸ್ಯಃ ಸಪ್ತರಾತ್ರಾದ್ವಿರೇಚಿತಃ ॥೫೦॥

ಪಂಚಕರ್ಮ ಪ್ರಯೋಗಗಳನ್ನು ಯಾವ ಯಾವ ಕಾಲಗಳಲ್ಲಿ ನಡೆಸಬೇಕೆಂದು ಸಂಕ್ಷೇಪವಾಗಿ ಹೇಳುತ್ತಾರೆ. ವಮನಮಾಡಿಸಿದನಂತರ ಒಂದುಪಕ್ಷ ಕಳೆದಮೇಲೆ ವಿರೇ ಚನ ಪ್ರಯೋಗವಾದ ಮೇಲೆ ೭ ದಿನಗಳು ಕಳೆದನಂತರ ೮ನೆಯದಿನ ಅನುವಾಸನಬಸ್ತಿ ಪ್ರಯೋಗವನ್ನೂ ಅಲ್ಲಿಂದ ೧೬ನೆಯ ದಿವಸ ಸ್ನೇಹಾಭ್ಯಂಗ ಮತ್ತು ಸ್ವೇದಗಳನ್ನು ಮಾಡಿ ಸಿದ ಮೇಲೆ ಆಸ್ಥಾಪನಾ ಬಸ್ತಿಯನ್ನೂ ಪ್ರಯೋಗಿಸಬೇಕು. ನಿರೂಹ ಬಸ್ತಿಯನ್ನು ಸೇವಿಸಿದ ದಿನವೇ ಅನುವಾಸನ ಬಸ್ತಿಯನ್ನೂ ಸೇವಿಸಬೇಕು. ಆಸ್ಥಾಪನಾ ಮಾಡಿ ಸುಮ್ಮನಿರಕೂಡದು. ಅನ್ವಾಸನ ಬಸ್ತಿಪ್ರಯೋಗವನ್ನು ಮಾಡಿಸಲೇಬೇಕೆಂದು ತಿಳಿಯ ಬೇಕು.

ಟಿಪ್ಪಣಿ : ಸಮ್ಯಗ್ಯೋಗದಿಂದ ವಮನಮಾಡಿದ ಪುರುಷನಿಗೆ ಒಂದುಪಕ್ಷಕ್ಕೆ ಮುಂಚೆಯಾಗಲೀ ಅನಂತರ ಬಹಳ ದಿನಗಳ ಮೇಲಾಗಲೀ ವಿರೇಚನೌಷಧವನ್ನು ಪ್ರಯೋಗಿಸಬಾರದು. ಪಕ್ಷವಾಗುವುದಕ್ಕೆ ಮುಂಚಿತವಾಗಿಯೇ ವಿರೇಚನ ಪ್ರಯೋಗ

ವನ್ನು ಮಾಡಿದರೆ ರೋಗಿಯ ಬಲವೂ ಅಗ್ನಿಶಕ್ತಿಯೂ ದುರ್ಬಲಗಳಾಗಿರುವುದರಿಂದ ವ್ಯಾಪತ್ತುಂಟಾಗುತ್ತದೆ. ಪಕ್ಷವಾದ ಬಲುದಿನಗಳು ಕಳೆದರೆ ಸ್ನೇಹಸ್ವೇದಗಳ ಪ್ರಯೋಗವು ವ್ಯರ್ಥವಾಗುತ್ತದೆಯಾಗಿ ವಮನವಾದನಂತರ ಪಕ್ಷ ಕಳೆದ ಮರುದಿನವೇ ಸ್ನೇಹಾದಿ ಉಪಚಾರಗಳನ್ನು ಮಾಡಿಸಿಕೊಂಡು ವಿರೇಚನೌಷಧವನ್ನು ಸೇವಿಸಬೇಕು. ಪ್ರಧಾನ ಪ್ರಮಾಣದಿಂದ ದೇಹಶುದ್ಧಿಯಾದವನು ಪೇಯಾದಿ ಸಂಸರ್ಜನದಿಂದ ಅಗ್ನಿವೃದ್ಧಿಮಾಡಿಕೊಂಡು ೬ ದಿನಗಳು ಕಳೆದಮೇಲೆ ಮಧುರಾದಿ ರಸಮಿಶ್ರಮಾಡಿದ ಆಹಾರಗಳನ್ನು ಸೇವನೆಮಾಡಬೇಕು. ಸ್ನೇಹಸ್ವೇದ ಕರ್ಮಗಳಿಂದ ೬ ದಿನಗಳನ್ನೂ ಲಘೂಷ್ಣಾನ್ನಗಳನ್ನು ಭೋಜನಮಾಡುತ್ತಾ ೩ ದಿನಗಳನ್ನೂ ಕಳೆದು ೪ ನೆಯ ದಿವಸ ವಿರೇಚನೌಷಧವನ್ನು ಸೇವಿಸಿ ಅನಂತರ ಮಧುರಾದಿ ರಸಮಿಶ್ರಿತವಾದ ಆಹಾರಸೇವನೆಮಾಡಿ ೭ ದಿವಸ ಕಳೆದ ಮೇಲೆ ೮ ನೆಯದಿನ ದೋಷಾನುಸಾರವಾಗಿ ಅನುವಾಸನ ಬಸ್ತಿಯನ್ನು ಸೇವಿಸಬೇಕು. ಅನಂತರ ೧೬ ನೆಯ ದಿವಸ ಸ್ನೇಹಾಭ್ಯಂಗವನ್ನೂ ಸ್ವೇದವನ್ನೂ ಮಾಡಿಸಿಕೊಂಡು ನಿರೂಹಬಸ್ತಿಯನ್ನು ಸೇವಿಸಬೇಕು. ಗಯದಾಸಾಚಾರ್ಯರು ಚರಕ ಮತದಂತೆ ವಿರೇಚನವಾದನಂತರ ೬ ದಿನಗಳವರೆಗೆ ಅನ್ನಸಂಸರ್ಗಮಾಡಿ ಅವಸ್ಥೆಗನುಸಾರ ಸ್ನೇಹಪಾನ ಮತ್ತು ಅನುವಾಸನಗಳನ್ನು ಮಾಡಿಸಿಕೊಳ್ಳಬೇಕೆಂದು ಅಭಿಪ್ರಾಯಪಡುತ್ತಾರೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ನೇತ್ರಬಸ್ತಿ ವ್ಯಾಪಚ್ಚಿಕಿತ್ಸಾನಾಮ
ಷಟ್‌ತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ
ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ಸಪ್ತತ್ರಿಂಶತ್ತಮೋಽಧ್ಯಾಯಃ

ಅಥಾತೋಽನುವಾಸನೋತ್ತರಬಸ್ತಿ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾರ್ನ್ ಧನ್ವಂತರಿ(ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಅನುವಾಸನ ಮತ್ತು ಉತ್ತರಬಸ್ತಿ ಚಿಕಿತ್ಸೆಗಳನ್ನು ವಿವರಿಸುತ್ತೇವೆ.

ವಿರೇಚನಾತ್ ಸಪ್ತರಾತ್ರೇ ಗತೇ ಜಾತಬಲಾಯ ಚ ।
ಕೃತಾನ್ನಾಯಾನುವಾಸ್ಯಾಯ ಸಮ್ಯಗ್ದೇಯೋಽನುವಾಸನಃ ||೩||

ವಿರೇಚನೌಷಧವನ್ನು ಸೇವನೆಮಾಡಿ ಪಥ್ಯಕ್ರಮದಿಂದ ೭ ದಿನಗಳು ಕಳೆದು ಮೊದಲಿನಂತೆ ಬಲ ಬಂದ ರೋಗಿಗೆ ಮಾರನೆಯದಿವಸ ಆಹಾರವನ್ನು ಭೋಜನಮಾಡಿಸಿ ಅನುವಾಸನ (ಸ್ನೇಹ) ಬಸ್ತಿ ಪ್ರಯೋಗವನ್ನು ಮಾಡಬೇಕು.

ಯಥಾ ವಯೋ ನಿರೂಹಾಣಾಂ ಯಾ ಮಾತ್ರಾಃ ಪರಿಕೀರ್ತಿತಾಃ ।
ಪಾದಾವಕೃಷ್ಟಾಸ್ತಾಃ ಕಾರ್ಯಾ ಸ್ನೇಹಬಸ್ತಿಷು ದೇಹಿನಾಮ್ ||೪||

ನಿರೂಹಬಸ್ತಿಯನ್ನು ಯಾವ ವಯಸ್ಸಿನವರಿಗೆ ಯಾವ ಪ್ರಮಾಣದಿಂದ ಪ್ರಯೋಗಿಸಬೇಕೆಂದು ನಿಷ್ಕರ್ಷೆಮಾಡಿರುತ್ತದೋ ಅದೇ ವಯಸ್ಸಿನವರಿಗೆ ಅದರ ೧/೪ ಭಾಗದಷ್ಟು ಪ್ರಮಾಣದಿಂದ ಅನ್ವಾಸನ ಬಸ್ತಿಯನ್ನು ಪ್ರಯೋಗಿಸಬೇಕು.

ಉತ್ಸೃಷ್ಟಾನಿಲವಿಣ್ಮೂತ್ರೇ ನರೇ ಬಸ್ತಿಂ ವಿಧಾಪಯೇತ್ ।
ಏತೈರ್ಹಿವಿಹತಃ ಸ್ನೇಹೋ ನೈವಾನ್ತಃ ಪ್ರತಿಪದ್ಯತೇ ||೫||
ಸ್ನೇಹಬಸ್ತಿರ್ವಿಧೇಯಸ್ತು ನಾವಿಶುದ್ಧಸ್ಯ ದೇಹಿನಃ ।
ಸ್ನೇಹವೀರ್ಯಂ ತಥಾ ದತ್ತೇ ದೇಹಂ ಚಾನುವಿಸರ್ಪತಿ ||೬||

ಅಪಾನವಾಯುವೂ ಮೂತ್ರವೂ ಮಲವೂ ಪ್ರವೃತ್ತಿಯಾದಮೇಲೆ ಸ್ನೇಹಬಸ್ತಿ ಪ್ರಯೋಗಿಸಬೇಕು. ಇಲ್ಲದಿದ್ದರೆ ಪ್ರಯೋಗಿಸಲ್ಪಟ್ಟ ಸ್ನೇಹವು ಅವುಗಳಿಂದ ತಡೆಯಲ್ಪಟ್ಟು ಶರೀರದೊಳಕ್ಕೆ ಪ್ರವೇಶಿಸುವುದೇ ಇಲ್ಲ, ಶೋಧನೌಷಧಿಗಳಿಂದ ದೇಹವನ್ನು ಶುದ್ಧಿಮಾಡಿಸಿಕೊಂಡಿರುವವರಿಗೆ ಪ್ರಯೋಗಿಸಿದ ಅನ್ವಾಸನ ಬಸ್ತಿಯಿಂದ ಸ್ನೇಹದ ವೀರ್ಯವು ಎಲ್ಲಾ ಭಾಗಗಳಿಗೂ ಹರಡುತ್ತದೆ.

ಅತಊರ್ಧ್ವಂ ಪ್ರವಕ್ಷ್ಯಾಮಿ ತೈಲಾನೀಹ ಯಥಾಕ್ರಮಮ್ ।
ಪಾನಾನ್ವಾಸನನಸ್ಯೇಷು ಯಾನಿ ಹನ್ಯುರ್ಗದಾರ್ನ್ ಬಹೂರ್ನ್ ||೭||
ಶಠೀಪುಷ್ಕರ ಕೃಷ್ಣಾಹ್ವಾಮದನಾಮರದಾರುಭಿಃ ।
ಶತಾಹ್ವಾಕುಷ್ಠಯಷ್ಟ್ಯಾಹ್ವವಚಾ ಬಿಲ್ವಹುತಾಶನೈಃ ||೮||
ಸುಪಿಷ್ಟೈರ್ದ್ವಿಗುಣಂ ಕ್ಷೀರಂ ತೈಲಂ ತೋಯಚತುರ್ಗುಣಮ್ ।

ಪಶ್ಚಾತ್ತು ಬಸ್ತೌ ವಿಧಾತವ್ಯಂ ಮೂಢವಾತಾನುಲೋಮನಮ್ ||೯||
ಅರ್ಶಾಂಸಿ ಗ್ರಹಣೀದೋಷಮಾನಾಹಂ ವಿಷಮಜ್ವರಮ್ |
ಕಟ್ಯೂರುಪೃಷ್ಠಸ್ಥಾನ್ ವಾತರೋಗಾಂಶ್ಚ ನಾಶಯೇತ್ ||೧೦||
ವಚಾಪುಷ್ಕರ ಕುಷ್ಠೈಲಾಮದನಾಮರಸಿನ್ಧುಜೈಃ |
ಕಾಕೋಲೀದ್ವಯಯಷ್ಟ್ಯಾಹ್ವಮೇದಾಯುಗ್ಮನರಾಧಿಪೈಃ ||೧೧||
ಪಾಠಾಜೀವಕಜೀವನ್ತೀ ಭಾರ್ಗೀಚನ್ದನಕಟ್ಫಲೈಃ |
ಸರಳಾಗುರುಬಿಲ್ವಾಮ್ಬುವಾಜಿಗನ್ಧಾಗ್ನಿ ವೃದ್ಧಿಭಿಃ ||೧೨||
ವಿಡಙ್ಗಾರಗ್ವಧ ಶ್ಯಾಮಾತ್ರಿವೃನ್ಮಾಗಧಿಕರ್ಧಿಭಿಃ |
ಪಿಷ್ಟೈಸ್ತೈಲಂ ಪಚೇತ್ ಕ್ಷೀರಪಞ್ಚಮೂಲರಸಾನ್ವಿತಮ್ ||೧೩||
ಗುಲ್ಮಾನಾಹಾಗ್ನಿ ಷಙ್ಗಾರ್ಶೋಗ್ರಹಣೀ ಮೂತ್ರಸಙ್ಗಿನಾಮ್ |
ಅನ್ವಾಸನವಿಧೌ ಯುಕ್ತಂ ಶಸ್ಯತೇಽನಿಲರೋಗಿಣಾಮ್ ||೧೪||

ಪಾನ, ಅನ್ವಾಸನಬಸ್ತಿ, ನಸ್ಯಕರ್ಮಗಳಿಂದ ಅನೇಕ ರೋಗಗಳನ್ನು ನಾಶಮಾಡತಕ್ಕ ತೈಲಗಳನ್ನು ತಯಾರಿಸುವ ವಿಧಾನಗಳನ್ನು ಇನ್ನುಮುಂದೆ ವಿವರಿಸುತ್ತೇವೆ. ಕರ್ಪೂರಶುಂಠಿ, ಪುಷ್ಕರಮೂಲ, ಹಿಪ್ಪಲಿ, ಮಗ್ಗಾರೆಕಾಯಿ, ದೇವದಾರು, ಸಬ್ಬಸಿಗೆಬೀಜ, ಚಂಗಲ್‌ಕೋಷ್ಠ, ಅತಿಮಧುರ, ಬಜೆ, ಬಿಲ್ವಪತ್ರೆಬೇರಿನತೊಗಟೆ, ಚಿತ್ರಮೂಲ ಇವೆಲ್ಲವನ್ನೂ ಸಮಪ್ರಮಾಣದಿಂದ ಚೂರ್ಣಮಾಡಿ ಅದರ ಎರಡರಷ್ಟು ಹಾಲು, ಒಂದರಷ್ಟು ತೈಲ, ೪ರಷ್ಟು ನೀರನ್ನು ಸೇರಿಸಿ ತಯಾರಿಸಿದ ತೈಲದಿಂದ ಬಸ್ತಿಪ್ರಯೋಗಮಾಡಿದರೆ ತಡೆಯಲ್ಪಟ್ಟಿರುವ ಅಪಾನವಾತವು ತನ್ನ ಮಾರ್ಗದಲ್ಲಿ ಸಂಚರಿಸುತ್ತದೆ. ಅರ್ಶಸ್ಸು, ಗ್ರಹಣೀದೋಷ, ಆನಾಹವಿಷಮಜ್ವರ, ಸೊಂಟ, ತೊಡೆ, ಬೆನ್ನು, ಕೋಷ್ಠಗಳಲ್ಲಿರುವ ವಾತರೋಗಗಳು ನಾಶವಾಗುತ್ತವೆ. ಇದಕ್ಕೆ ಶಟ್ಯಾದಿತೈಲವೆಂದು ಹೆಸರು. ಬಜೆ, ಪುಷ್ಕರಮೂಲ, ಚಂಗಲ್‌ಕೋಷ್ಠ, ದೇವದಾರು, ಏಲಕ್ಕಿ, ಮಗ್ಗಾರೆಕಾಯಿ, ಸೈಂಧವ ಲವಣ, ಕಾಕೋಳೀ, ಕ್ಷೀರಕಾಕೋಳೀ,ಅತಿಮಧುರ, ಮೇದೆ, ಮಹಾಮೇದೆ,ಕಕ್ಕೆಕಾಯಿ, ಅಗಳುಶುಂಠಿ, ಜೀವಕ, ಸಿಹಿಹಾಲೆ, ಗಂಟುಭಾಙ್ಗಿ, ಕೆಂಪುಗಂಧ, ಕಿರಿಶಿವನಿ (ಕಾಯಫಲ), ಸರಳದೇವದಾರು, ಅಗಿಲು, ಬಿಲ್ವ ಪತ್ರೆಯಬೇರು, ಮುಡಿವಾಳ, ಅಶ್ವಗಂಧಿಬೇರು, ಮಾಯಫಲ ಚಿತ್ರಮೂಲವೃದ್ಧಿ, ವಾಯುವಿಡಂಗ, ಕಕ್ಕೆತೊಗಟೆ, ಬಿಳಿಯತಿಗಡೆ, ಕೆಂಪು (ಕರಿತಿಗಡೆ),ಹಿಪ್ಪಲಿ, ಋದ್ಧಿ ಇವೆಲ್ಲವನ್ನೂ ಸಮಭಾಗದಿಂದ ಕಲ್ಕಮಾಡಿ ಇದರ ೪ರಷ್ಟು ಹಾಲನ್ನೂ ಅದರ ೪ರಷ್ಟು ಬಿಲ್ವಾದಿಪಂಚಮೂಲದ ಕಷಾಯವನ್ನೂ ಸೇರಿಸಿ ತಯಾರಿಸಿದ ತೈಲವನ್ನು ಅನ್ವಾಸನಬಸ್ತಿ ವಿಧಾನದಿಂದ ಪ್ರಯೋಗಿಸಿದರೆ ಗುಲ್ಮ, ಆನಾಹ, ಅಗ್ನಿಮಾಂದ್ಯ, ಅರ್ಶಸ್ಸು ಗ್ರಹಣಿ, ಮೂತ್ರದತಡೆ, ವಾತರೋಗ ಇವುಗಳು ಗುಣವಾಗುತ್ತವೆ.

ಚಿತ್ರಕಾತಿವಿಷಾಪಾಠಾದನ್ತೀ ಬಿಲ್ವವಚಾಮಿಷೈಃ ।
ಸರಳಾಂಶುಮತೀರಾ ಸ್ನಾನೀಲಿನೀಚತುರಙ್ಗುಳೈಃ ||೧೫||

ಚವ್ಯಾಜಮೋದಕಾಕೋಳೀ ಮೇದಾಯುಗ್ಮಸುರದ್ರುಮೈಃ ।
ಜೀವಕರ್ಷಭವರ್ಷಾಭೂ ಬಸ್ತಗನ್ಧಶತಾಹ್ವಯೈಃ ॥೧೬॥
ರೇಣ್ವಶ್ವಗಂಧಾಮಞ್ಜಿಷ್ಠಾ ಶಠೀಪುಷ್ಕರತಸ್ಕರೈಃ ।
ಸಕ್ಷೀರಂ ವಿಪಚೇತ್ತೈಲಂ ಮಾರುತಾಮಯನಾಶನಮ್ ॥೧೭॥
ಗೃಧ್ರಸೀಖಞ್ಜಕುಬ್ಜಾಢ್ಯ ಮೂತ್ರೋದಾವರ್ತರೋಗಿಣಾಮ್ ।
ಶಸ್ಯತೇಽಲ್ಪಬಲಾಗ್ನೀನಾಂ ಬಸ್ತಾವಾಶು ನಿಯೋಜಿತಮ್ ॥೧೮॥
ಭೂತಿಕೈರಣ್ಡವರ್ಷಾಭೂರಾಸ್ನಾ ವೃಷಕರೋಹಿಷೈಃ ।
ದಶಮೂಲ ಸಹಾಭಾರ್ಗೀಷಡ್ಗ್ರನ್ಥಾಮರುದಾರುಭಿಃ ॥೧೯॥
ಬಲಾನಾಗಬಲಾ ಮೂರ್ವಾವಾಜಿಗನ್ಧಾಮೃತಾದ್ವಯೈಃ ।
ಸಹಾಚರವರೀವಿಶ್ವಾ ಕಾಕನಾಸಾ ವಿದಾರಿಭಿಃ ॥೨೦॥
ಯವಮಾಷಾತಸೀಕೋಲ ಕುಳತ್ಥೈಃ ಕ್ವಥಿತೈಃಶೃತಮ್ ।
ಜೀವನೀಯಪ್ರತೀವಾಪಂ ಕ್ಷೀರಂ ತೈಲಚತುರ್ಗುಣಮ್ ॥೨೧॥
ಜಙಘೋರುತ್ರಿಕಪಾರ್ಶ್ವಾಂಸ ಬಾಹುಮನ್ಯಾಶಿರಃ ಸ್ಥಿತಾ ।
ಹನ್ಯಾದ್ವಾತವಿಕಾರಾಂಸ್ತು ಬಸ್ತಿಯೋಗೈರ್ನಿಷೇವಿತಮ್ ॥೨೨॥
ಜೀವನ್ತ್ಯತಿಬಲಾಮೇದಾ ಕಾಕೋಳೀದ್ವಯಜೀವಕೈಃ ।
ಋಷಭಾತಿವಿಷಾಕೃಷ್ಣಾ ಕಾಕನಾಸಾವಚಾಮರ್ಶೈಃ ॥೨೩॥
ರಾಸ್ನಾಮದನಯಷ್ಟ್ಯಾಹ್ವ ಸರಳಾಭೀರುಚನ್ದನೈಃ ।
ಸ್ವಯಂಗುಪ್ತಾಶಠೀಶೃಙ್ಗೀಕಲಶೀ ಸಾರಿವಾಹ್ವಯೈಃ ॥೨೪॥
ಪಿಷ್ಟೈಸ್ತೈಲಘೃತಂ ಪಕ್ವಂ ಕ್ಷೀರೇಣಾಷ್ಟಗುಣೇನ ತು ।
ತಚ್ಚಾನುವಾಸನೇ ದೇಯಂ ಶುಕ್ರಾಗ್ನಿಬಲವರ್ಧನಮ್ ॥೨೫॥
ಬೃಂಹಣಂ ವಾತಪಿತ್ತಘ್ನಂ ಗುಲ್ಮಾನಾಹಹರಂ ಪರಮ್
ನಸ್ಯೇ ಪಾನೇ ಚ ಸಂಯುಕ್ತಮೂರ್ಧ್ವಜತ್ರುಗದಾಪಹಮ್ ॥೨೬॥

ಚಿತ್ರಕಾದಿ ತೈಲವಿಧಾನವು—ಚಿತ್ರಮೂಲ ಅತಿಬಜೆ ಅಗಳುಶುಂಠಿ ಜಾಪಾಳದ ತೊಗಟೆ ಬಿಲ್ವಪತ್ರೆಯಬೇರು ಬಜೆ ಗುಗ್ಗುಳು ಸರಳದೇವದಾರು ಒಂದೆಲೆಹೊನ್ನೆ ರಾಶ್ಮೆ ನೀಲಿಗಿಡ ಕಕ್ಕೆಕಾಯಿ ಚವ್ಯ ಅಜಮೋದ ಕಾಕೋಳಿ ಮೇದೆ ಮಹಾಮೇದೆ ದೇವದಾರು ಜೀವಕ ಋಷಭಕ ಕೊಮ್ಮೆ ಬೇರು ನಾರಂಬೇಳೆ ಸಬ್ಬಸಿಗೆಬೀಜ ರೇಣುಕಬೀಜ ಅಶ್ವಗಂಧದಬೇರು ಮಂಜಿಷ್ಠೆ ಕರ್ಪೂರಶುಂಠಿ ಪುಷ್ಕರಮೂಲ ಕಚೋರ ಇವುಗಳ ಕಲ್ಕದ ನಾಲ್ಕರಷ್ಟು ತೈಲ ತೈಲದ ೮ ರಷ್ಟು ಹಾಲು ಹಾಲಿನ ೪ ರಷ್ಟು ನೀರು ಇವೆಲ್ಲವನ್ನೂ ಸೇರಿಸಿ ಮಂದಾಗ್ನಿಯಿಂದ ಕಾಯಿಸಿ ತಯಾರಿಸಿದ ತೈಲವನ್ನು ಪಾನ ಮತ್ತು ಬಸ್ತಿ ವಿಧಾನಗಳಿಂದ ಪ್ರಯೋಗಿಸಿದರೆ ವಾತರೋಗವು ನಿವಾರಣೆಯಾಗುತ್ತದೆ. ಗೃಧ್ರಸೀ ಖಂಜ (ಕುಂಟು) ಕುಬ್ಜ (ಗಿಡ್ಡ) ಆಢ್ಯವಾತ (ಊರುಸ್ತಂಭ) ಮೂತ್ರರೋಧ ಉದಾ

ವರ್ತ ಇವುಗಳು ನಾಶವಾಗುತ್ತವೆ. ಅಲ್ಪಶಕ್ತಿ ಮತ್ತು ಅಲ್ಪಾಗ್ನಿಯುಳ್ಳವರಿಗೆ ಬಸ್ತಿ ಕ್ರಮದಿಂದ ಈ ತೈಲವನ್ನು ಪ್ರಯೋಗಿಸಿದರೆ ಹಿತವಾಗುತ್ತದೆ.

ಭೂತಕಾದಿ ತೈಲವಿಧಾನವು–ಪರಿಮಳಗಂಜಣಿಹುಲ್ಲು ಹರಳಬೇರು ಕೊಮ್ಮೆ ಬೇರು ರಾಶ್ಮೆಬೇರು ಆಡುಸೋಗೆಸೊಪ್ಪು ಮಜ್ಜಿಗೆಹುಲ್ಲು ದಶಮೂಲಗಳು ಕಾಡುಹೆಸರು ಭಾರಂಗಿ ಬಜೆ ದೇವದಾರು ಕಳ್ಳಂಗಡಲೆ ತುರುಬೆ ಕೊರಟಗೆ ಹಂಬು ಅಶ್ವಗಂಧಿಯಬೇರು ಅಮೃತವಳ್ಳಿ ಮುಳ್ಳುಗೋರಂಟೆ ಆಷಾಡಿಬೇರು ಶುಂಠಿ ಕಾಗೆತೊಂಡೆ ನೆಲಗುಂಬಳಗೆಡ್ಡೆ ಯವಧಾನ್ಯ ಉದ್ದು ಶೀಮೆಅಗಸೆಯಬೀಜ ಎಲಚಿಹಣ್ಣು ಹುರುಳಿ ಇವುಗಳನ್ನು ಸೇರಿಸಿ ಕಷಾಯಮಾಡಿ ಶೋಧಿಸಿದ ಆ ಕಷಾಯದ ೧/೪ ಭಾಗದಷ್ಟು ಎಳ್ಳೆಣ್ಣೆಯನ್ನೂ ಅದರ ೧/೪ ಭಾಗ ಜೀವನೀಯ ಗಣದ್ರವ್ಯಗಳ ಕಲ್ಕವನ್ನೂ ಪ್ರತೀವಾಪವಮಾಡಿ ತೈಲದ ೪ ರಷ್ಟು ಹಾಲನ್ನು ಸೇರಿಸಿ ತಯಾರಿಸಿದ ತೈಲದಿಂದ ಬಸ್ತಿಪ್ರಯೋಗಮಾಡಿದರೆ ಮೊಣ ಕಾಲು ತೊಡೆ ತ್ರಿಕಪ್ರದೇಶ ಪಕ್ಕೆಗಳು ಹೆಗಲು ತೋಳು ಹೆಕ್ಕತ್ತು ತಲೆ ಇವುಗಳಲ್ಲುಂಟಾ ಗುವ ವಾತರೋಗಗಳು ನಿವಾರಣೆಯಾಗುತ್ತವೆ.

ಜೀವನ್ತ್ಯಾದಿತೈಲವಿಧಾನವು—ಸಿಹಿಹಾಲೆ (ಬೋಳಂಗಡಲೆ) ಮೇದೆ, ಕಾಕೋಳಿ ಕ್ಷೀರಕಾಕೋಳಿ ಜೀವಕ ಋಷಭಕ ಅತಿಬಜೆ ಹಿಪ್ಪಲಿ ಕಾಗೆತೊಂಡೆ ಬಜೆ ದೇವದಾರು ರಾಶ್ಮೆ ಮಗ್ಗಾರೆಕಾಯಿ ಅತಿಮಧುರ ಸರಳದೇವದಾರು ಕೆಂಪುಗಂಧ ನಸುಗುನ್ನಿ ಕರ್ಪೂರ ಶುಂಠಿ ಕರ್ಕಾಟಕಶೃಂಗೀ ಒಂದೆಲೆಹೊನ್ನೆ ಸೊಗದೆಬೇರು (ಬಿಳಿದು, ಕರಿದು) ಇವು ಗಳನ್ನು ಸಮಪ್ರಮಾಣದಿಂದ ಕಲ್ಕಮಾಡಿ ಅದರ ೪ ರಷ್ಟು ತೈಲ ಮತ್ತು ತುಪ್ಪಗಳನ್ನೂ ಸ್ನೇಹದ್ರವ್ಯಗಳ ೮ ರಷ್ಟು ಹಾಲನ್ನೂ ಸೇರಿಸಿ ತಯಾರಿಸಿದ ತೈಲದಿಂದ ಅನುವಾಸನ ಬಸ್ತಿಪ್ರಯೋಗವನ್ನು ಮಾಡಿದರೆ ಶುಕ್ರಧಾತು ಅಗ್ನಿ ಮತ್ತು ಬಲಗಳು ಹೆಚ್ಚಾಗಿ ದೇಹವು ದಪ್ಪವಾಗುತ್ತದೆ. ವಾತಪಿತ್ತಹರವು ಗುಲ್ಮ ಆನಾಹಗಳು ನಿವಾರಣೆಯಾಗಲು ಅತ್ಯುತ್ತಮವಾದದ್ದು. ನಸ್ಯಕರ್ಮದಿಂದಲೂ ಪಾನದಿಂದಲೂ ಉಪಯೋಗಿಸಿದರೆ ಜತ್ರುವಿನಮೇಲ್ಭಾಗದ ರೋಗಗಳು (ಕಣ್ಣು ಮೂಗು ಕಿವಿ ಬಾಯಿ) ನಿವಾರಣೆಯಾಗು ತ್ತವೆ.

ಟಿಪ್ಪಣಿ—ಅಮೃತಾದ್ವಯವೆಂದರೆ ಅಮೃತವಳ್ಳಿ ಮತ್ತು ಅಣಿಲೆಕಾಯಿ ಎಂದ ರ್ಥವು. ಆಮಿಷಂ ಎಂದರೆ ಗುಗ್ಗುಳು ಎಂದರ್ಥವು.

ಮಧೂಕೋಶೀರಕಾಶ್ಮರ್ಯ ಕಟುಕೋತ್ಪಲ ಚನ್ದನೈಃ ।
ಶ್ಯಾಮಾಪದ್ಮಕಜೀಮೂತ ಶತಾಹ್ವಾತಿವಿಷಾಮ್ಬುಭಿಃ ॥೨೭॥
ತೈಲಪಾದಂಪಚೇತ್ಸರ್ಪಿಃ ಪಯಸಾಷ್ಟಗುಣೇನ ಚ ।
ನ್ಯಗ್ರೋಧಾದಿಗಣಕ್ವಾಥಯುಕ್ತಂ ಬಸ್ತಿಷು ಯೋಜಿತಮ್ ॥೨೮॥
ದಾಹಾಸೃಗ್ದರವೀಸರ್ಪ ವಾತಶೋಣಿತವಿದ್ರಧೀನ್ ।
ಪಿತ್ತರಕ್ತಜ್ವರಾದ್ಯಾಂಶ್ಚ ಹನ್ಯಾತ್ ಪಿತ್ತಕೃತಾನ್ಗದಾನ್ ॥೨೯॥

ಮೃಣಾಲೋತ್ಪಲಶಾಲೂಕ ಸಾರಿವಾದ್ವಯ ಕೇಸರೈಃ ।
ಚನ್ದನದ್ವಯಭೂನಿಮ್ಬ ಪದ್ಮಬೀಜಕಸೇರುಕೈಃ ॥೩೦॥
ಪಟೋಲಕಟುಕಾರಕ್ತಾಗುನ್ದ್ರಾಪರ್ಪಟವಾಸಕೈಃ ।
ಪಿಷ್ಟೈಸ್ತೈಲಮಿದಂ ಪಕ್ವಂ ತೃಣಮೂಲರಸೇನ ಚ ॥೩೧॥
ಕ್ಷೀರದ್ವಿಗುಣಸಂಯುಕ್ತಂ ಬಸ್ತಿಕರ್ಮಣಿ ಯೋಜಿತಮ್ ।
ನಸ್ಯೇಽಭ್ಯಞ್ಜನಪಾನೇ ವಾ ಹನ್ಯಾತ್ ಪಿತ್ತಗದಾನ್ ಬಹೂನ್ ॥೩೨॥

ಮಧುಕಾದಿ ತೈಲವಿಧಾನವು—ಅತಿಮಧುರ ಲಾವಂಚ ಶಿವನಿತೊಗಟೆ ಕಟುಕ ರೋಹಿಣಿ ನೈದಿಲೆಗೆಡ್ಡೆ ಕೆಂಪುಗಂಧ ಪ್ರೇಂಖಣ (ನೆಳಲು) ಪದ್ಮಕ ಕೊನ್ನಾರಿಗೆಡ್ಡೆ ಕೊಡಶಿಗೆತೊಗಟೆ ಅತಿಬಜೆ ಮುಡಿವಾಳ ಇವುಗಳ ಕಲ್ಕವನ್ನೂ ಇದರ ೪ ರಷ್ಟು ತೈಲ ವನ್ನೂ ತೈಲದ ೧/೪ ಭಾಗ ತುಪ್ಪವನ್ನೂ ತೈಲದ ೮ ರಷ್ಟು ಹಾಲನ್ನೂ ಸೇರಿಸಿ ತೈಲ ಪಾಕ ವಿಧಾನದಿಂದ ತಯಾರುಮಾಡಿದ ಸ್ನೇಹವನ್ನು ಆಲ ಅರಳಿ ಮೊದಲಾದ ಕ್ಷೀರ ವೃಕ್ಷಗಳ ಕಷಾಯದೊಡನೆ ಸೇರಿಸಿ ಬಸ್ತಿಪ್ರಯೋಗಮಾಡಿದರೆ ಉರಿತ ಪ್ರದರವಿಸರ್ಪ ವಾತರಕ್ತ ವಿದ್ರಧಿ ಪಿತ್ತರಕ್ತ ಜ್ವರ ಮೊದಲಾದ ಪಿತ್ತ ರೋಗಗಳು ನಿವಾರಣೆಯಾಗು ತ್ತವೆ.

ಮೃಣಾಳಾದಿ ತೈಲವಿಧಾನವು—ತಾವರೆದಂಟು ನೈದಿಲೆಗೆಡ್ಡೆ ತಾವರೆಯಗೆಡ್ಡೆ ಬಿಳಿ ಮತ್ತು ಕರಿ ಸೊಗದೆಬೇರು ನಾಗಕೇಸರ ಶ್ರೀಗಂಧ ರಕ್ತಚುದನ ನೆಲಬೇವು ತಾವರೆ ಬೀಜ ಕೊತ್ತಿಗೆಡ್ಡೆ ಕಹಿಸಡವಲ ಕಟುಕರೋಹಿಣಿ ಮಂಜಿಷ್ಠೆ ಶುಂಠಿ ಹುಲ್ಲು (ಕೊನ್ನಾರಿ ಗಡ್ಡೆಯ ಭೇದವೆಂದು ಕೆಲವರಮತ) ಪರ್ಪಾಟಕ ಆಡುಸೋಗೆಸೊಪ್ಪು ಇವುಗಳ ಕಲ್ಕ ವನ್ನೂ ಈ ಕಲ್ಕದ ೪ ರಷ್ಟು ತೈಲವನ್ನೂ ತೈಲದ ೪ ರಷ್ಟು ತೃಣಪಂಚಮೂಲಗಳ ಕಷಾಯುವನ್ನೂ ತೈಲದ ಎರಡರಷ್ಟು ಹಾಲನ್ನೂ ಸೇರಿಸಿ ತಯಾರಿಸಿದ ತೈಲವನ್ನು ಬಸ್ತಿ ನಸ್ಯ ಅಭ್ಯಂಗ ಪಾನಗಳಮೂಲಕ ಪ್ರಯೋಗಿಸಿದರೆ ಅನೇಕ ವಿಧ ಪಿತ್ತವಿಕಾರಗಳು ನಾಶ ವಾಗುತ್ತವೆ.

ತ್ರಿಫಲಾತಿವಿಷಾಮೂರ್ವಾತ್ರಿ ವೃಚ್ಚಿತ್ರಕವಾಸಕೈಃ ।
ನಿಮ್ಬಾರಗ್ವಧಷಡ್ಗ್ರನ್ಥಾಸಪ್ತಪರ್ಣ ನಿಶಾದ್ವಯೈಃ ॥೩೩॥
ಗುಡೂಚೀನ್ದ್ರಸುರಾ ಕೃಷ್ಣಾ ಕುಷ್ಠಸರ್ಷಪನಾಗರೈಃ ।
ತೈಲಮೇಭಿಃ ಸಮೈಃ ಪಕ್ವಂ ಸುರಸಾದಿರಸಾಪ್ಲುತಮ್ ॥೩೪॥
ಪಾನಾಭ್ಯಞ್ಜನಗಣ್ಡೂಷನಸ್ಯಬಸ್ತಿಷು ಯೋಜಿತಮ್ ।
ಸ್ಥೂಲತಾಽಲಸ್ಯಕಣ್ಡ್ವಾದೀನ್ ಜಯೇತ್ಕಫಕೃತಾನ್ ಗದಾನ್ ॥೩೫॥
ಪಾಠಾಜಮೋದಾಶಾಙ್ಗ್ರ್ಟಷ್ಟಾ ಪಿಪ್ಪಲೀದ್ವಯನಾಗರೈಃ ।
ಸರಳಾಗುರುಕಾಲೀಯ ಭಾರ್ಗೀಚವ್ಯಾಮರದ್ರುಮೈಃ ॥೩೬॥
ಮರಿಚೈಲಾಭಯಾಕಟ್ವೀ ಶಠೀಗ್ರನ್ಥಿಕ ಕಟ್ಫಲೈಃ ।
ತೈಲಮೇರಣ್ಡತೈಲಂ ವಾ ಪಕ್ವಮೇಭಿಃ ಸಮಾಯುತಮ್ ॥೩೭॥

ವಲ್ಲೀಕಣ್ಟಕಮೂಲಾಭ್ಯಾಂ ಕ್ವಾಥೇನ ದ್ವಿಗುಣೇನ ಚ ।
ಹನ್ತ್ಯಾದನ್ವಾಸನೈರ್ದತ್ತಂ ಸರ್ವಾನ್ ಕಫಕೃತಾನ್ ಗದಾನ್ ॥೩೮॥
ವಿಡಙ್ಗೇದೀಚ್ಯಸಿನ್ಧೂತ್ಥಶಟೀ ಪುಷ್ಕರಚಿತ್ರಕೈಃ ।
ಕಟ್ಫಲಾತಿವಿಷಾಭಾರ್ಗೀವಚಾ ಕುಷ್ಠಸುರಾಹ್ವಯೈಃ ॥೩೯॥
ಮೇದಾಮದನಯಷ್ಟ್ಯಾಹ್ವಶ್ಯಾಮಾನಿಚುಲನಾಗರೈಃ ।
ಶತಾಹ್ವಾನೀಲಿನೀರಾಸ್ನಾ ಕದಳೀವೃಷರೇಣುಭಿಃ ॥೪೦॥
ಬಿಲ್ವಾಜಮೋದಕೃಷ್ಣಾಹ್ವಾ ದನ್ತೀಚವ್ಯನರಾಧಿಪೈಃ ।
ತೈಲಮೇರಣ್ಡತೈಲಂ ವಾ ಮುಷ್ಕಕಾದಿರಸಾಪ್ಲುತಮ್ ॥೪೧॥
ಪ್ಲೀಹೋದಾವರ್ತವಾತಾಸೃಗ್ಗುಲ್ಮಾನಾಹ ಕಫಾಮಯಾನ್ ।
ಪ್ರಮೇಹಶರ್ಕರಾರ್ಶಾಂಸಿ ಹನ್ತ್ಯಾದಾಶ್ವನುವಾಸನಾತ್ ॥೪೨॥

ತ್ರಿಫಲಾದಿ ತೈಲವು—ತ್ರಿಫಲೆ ಅತಿಬಜೆ ಕೊರಟಿಗೆಹಂಬು ತಿಗಡೆಬೇರು ಚಿತ್ರಮೂಲ ಆಡುಸೋಗೆ ಬೇವಿನತೊಗಟೆ ಕಕ್ಕೆಕಾಯಿ ಬಜೆ (ಮೋಡಿ ಪಿಪ್ಪಲೀಮೂಲವೆಂದು ಸುಧಾವ್ಯಾಖ್ಯಾಕಾರರಮತ) ಮದ್ದಾಲೆ ಅರಿಶಿನ ಮರದರಿಶಿನ ಅಮೃತಬಳ್ಳಿ ಹಾವುಮೆಕ್ಕೆ ಬೇರು ಹಿಪ್ಪಲಿ ಚಂಗಲ್‌ಕೋಷ್ಠ ಸಾಸಿವೆ ಶುಂಠಿ ಇವುಗಳನ್ನೆಲ್ಲಾ ಸಮಪ್ರಮಾಣದಿಂದ ಕಲ್ಕಮಾಡಿ ಇದರ ೪ ರಷ್ಟು ತಿಲತೈಲವನ್ನೂ ತೈಲದ ೪ ರಷ್ಟು ಭಾಗ ಸುರಸಾದಿಗಣ ದ್ರವ್ಯಗಳ ಕಷಾಯವನ್ನೂ ಒಟ್ಟಿಗೆ ಕೂಡಿಸಿ ಮಂದಾಗ್ನಿಯಿಂದ ಕಾಯಿಸಿ ಪಾಕ ಮಾಡಿಟ್ಟುಕೊಂಡು ಪಾನ ಅಭ್ಯಂಗ ಗಂಡೂಷ ನಸ್ಯ ಬಸ್ತಿಕರ್ಮಗಳ ಮೂಲಕ ಪ್ರಯೋಗಿಸಿದರೆ ಸ್ಥೌಲ್ಯ ಜಡತೆ ನವೆ ಮೊದಲಾದ ಕಫ ರೋಗಗಳೆಲ್ಲಾ ನಿವಾರಣೆ ಯಾಗುತ್ತವೆ.

ಪಾಠಾದಿ ತೈಲವಿಧಾನವು—ಅಗಳುಶುಂಠಿ ಅಜಮೋದ ತವಸದತೊಗಟೆ (ಗುಲುಗಂಜಿ ಎಂದು ಸುಧಾಕರರ ಮತ) ಹಿಪ್ಪಲಿ ಗಜಪಿಪ್ಪಲಿ ಶುಂಠಿ ಸರಳದೇವದಾರು ಅಗಿಲು ಕರಿಯಅಗಿಲು ಭಾರ್ಗಿ ಚವ್ಯ (ಗಜಪಿಪ್ಪಲಿಯಬೇರು) ತುಪ್ಪದೇವದಾರು ಮೆಣಸು ಏಲಕ್ಕಿ ಅಣಿಲೆಕಾಯಿ ಕಟುಕರೋಹಿಣಿ (ಪಿಪ್ಪಲಿಮೂಲವೆಂದು ಸುಧಾವ್ಯಾಖ್ಯಾಕಾರರ ಮತ) ಕಿರಿಯಶಿವನಿ ಇವುಗಳನ್ನು ಸಮಭಾಗದಿಂದ ಕಲ್ಕಮಾಡಿ ಇದರ ೪ ರಷ್ಟು ತಿಲ ತೈಲವನ್ನಾಗಲೀ ಹರಳೆಣ್ಣೆಯನ್ನಾಗಲೀ ಸೇರಿಸಿ ವಿದಾರ್ಯಾದಿವಲ್ಲೀ ಪಂಚಮೂಲದ ಕಷಾಯ ಅಥವಾ ಕರಮರ್ದಕ ಮೊದಲಾದ ಕಂಟಕಪಂಚಮೂಲಗಳ ಕಷಾಯುವನ್ನು ಎರಡರಷ್ಟು ಹಾಕಿ ತಯಾರಿಸಿದ ತೈಲದಿಂದ ಅನ್ವಾಸನ ಬಸ್ತಿಪ್ರಯೋಗವನ್ನು ಮಾಡಿಸಿ ದರೆ ಸಕಲವಿಧಗಳಾದ ಕಫ ರೋಗಗಳೂ ನಿವಾರಣೆಯಾಗುತ್ತವೆ.

ವಿಡಙ್ಗಾದಿ ತೈಲವಿಧಾನವು—ವಿಡಂಗ ಮುಡಿವಾಳ ಸೈಂಧವ ಕರ್ಪೂರಶುಂಠಿ ಪುಷ್ಕರಮೂಲ ಚಿತ್ರಮೂಲ ಕಿರಿಶಿವನಿ (ಕಾಯಫಲ) ಅತಿಬಜೆ ಭಾರ್ಗಿ ಬಜೆ ಚಂಗಲ್‌ ಕೋಷ್ಠ ದೇವದಾರು ಮೇಡೆ ಮಗ್ಗಾರೆಕಾಯಿ ಅತಿಮಧುರ ತಿಗಡೆ ನೀರುಹಬ್ಬೆ ಶುಂಠಿ

ಸಬ್ಬಸಿಗೆ ನೀಲಿಗಿಡ ರಾಷ್ಮ್ರಗೆಡ್ಡೆ ಬಾಳೆಗೆಡ್ಡೆ (ಕಲಶೀ ಎಂದು ಪಾಠಾನ್ತರವಿದೆ ಒಂದೆಲೆ ಹೊನ್ನೆಯು) ಆಡುಸೋಗೆಸೊಪ್ಪು ಪರ್ಪಾಷ್ಟಕ ಬಿಲ್ವಪತ್ರೆಬೇರು ಅಜಮೋದ ಹಿಪ್ಪಲಿ ಜಾಪಾಳ ಚವ್ಯಕಕ್ಕೆಕಾಯಿ ಇವುಗಳ ಕಲ್ಕವನ್ನೂ ಅದರ ೪ ರಷ್ಟು ತಿಲತೈಲ ಅಥವಾ ಹರಳೆಣ್ಣೆಯನ್ನೂ ಮುಷ್ಕಕಾದಿ ಗಣದ್ರವ್ಯಗಳ ಕಷಾಯ ತೈಲದ ೪ ರಷ್ಟನ್ನೂ ಸೇರಿಸಿ ತಯಾರಿಸಿದ ತೈಲವನ್ನು ಅನುವಾಸನಬಸ್ತಿಯ ವಿಧಾನದಿಂದ ಪ್ರಯೋಗಿಸಿದರೆ ಪ್ಲೀಹ ವೃದ್ಧಿ ಉದಾವರ್ತವಾತರಕ್ತ ಗುಲ್ಮ ಆನಾಹ ಕಫರೋಗಗಳು ಪ್ರಮೇಹ ಮೂತ್ರ ಶರ್ಕರೆ ಅರ್ಶಸ್ಸು ಈ ರೋಗಗಳು ಬೇಗನೆ ಗುಣವಾಗುತ್ತವೆ.

ಅಸ್ನಿಗ್ಧಮಪಿ ವಾತೇನ ಕೇವಲೇನಾತಿಪೀಡಿತಮ್ ।
ಅಹೋರಾತ್ರಸ್ಯ ಕಾಲೇಷುಸರ್ವೇಷ್ವೇವಾನುವಾಸಯೇತ್ ॥೪೩॥
ರೂಕ್ಷಸ್ಯ ಬಹುವಾತಸ್ಯ ದ್ವೌ ತ್ರೀನಪ್ಯನುವಾಸನಾ ।
ದತ್ವಾ ಸ್ನಿಗ್ಧತನುಂ ಜ್ಞಾತ್ವಾ ತತಃ ಪಶ್ಚಾನ್ನಿರೂಹಯೇತ್ ॥೪೪॥
ಅಸ್ನಿಗ್ಧಮಪಿ ವಾತೇನ ಕೇವಲೇನಾತಿಪೀಡಿತಮ್ ।
ಸ್ನೇಹಪ್ರಗಾಢೈರ್ಮತಿಮಾನ್ ನಿರೋಹೈಃ ಸಮುಪಾಚರೇತ್ ॥೪೫॥
ಅಥ ಸಮ್ಯಙ್ನಿರೂಢಂ ತು ವಾತಾದಿಷ್ವನುವಾಸಯೇತ್ ।
ಬಿಲ್ವಯಷ್ಟ್ಯಾಹ್ವಮದನಫಲತೈಲೈರ್ಯಥಾಕ್ರಮಮ್ ॥೪೬॥
ರಾತ್ರೌ ಬಸ್ತಿಂ ನ ದದ್ಯಾತ್ತು ದೋಷೋತ್ಕ್ಲೇಶೋ ಹಿ ರಾತ್ರಿಜಃ ।
ಸ್ನೇಹೋ ವೀರ್ಯಯುತಃ ಕುರ್ಯಾದಾಧ್ಮಾನಂ ಗೌರವಂ ಜ್ವರಮ್ ॥೪೭॥
ಅಹ್ನಿ ಸ್ಥಾನಸ್ಥಿತೇ ದೋಷೇ ವಹ್ನೌ ಚಾನ್ನರಸಾನ್ವಿತೇ ।
ಸ್ಫುಟಸ್ರೋತೋಮುಖೇ ದೇಹೇ ಸ್ನೇಹೌಜಃ ಪರಿಸರ್ಪತಿ ॥೪೮॥

ಶುದ್ಧವಾತಪೀಡಿತನಿಗೆ ಮಲವಿಸರ್ಜನೆ ಮಾಡದಿದ್ದರೂ ಹಗಲು ರಾತ್ರೆಗಳೆಲ್ಲಾ ಕಾಲಗಳಲ್ಲೂ ಅನುವಾಸನ ಮಾಡಿಸಬೇಕು. ರೂಕ್ಷದೇಹವುಳ್ಳ ಬಹು ವಾತರೋಗಿಗೆ ೨-೩ ಸ್ನೇಹಬಸ್ತಿಗಳನ್ನಾದರೂ ಪ್ರಯೋಗಿಸಿ ದೇಹವು ಸ್ನಿಗ್ಧವಾಗಿದೆಯೆಂದು ತಿಳಿದಮೇಲೆ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು. ಬರಿಯವಾತದಿಂದ ಅತಿಪೀಡಿತನಾದವನು ಸ್ನಿಗ್ಧನಾಗಿಲ್ಲದಿದ್ದರೂ ಬುದ್ಧಿವಂತನಾದ ವೈದ್ಯನು ಅವನಿಗೆ ಹೆಚ್ಚಾಗಿ ಸ್ನೇಹ ಮಿಶ್ರ ಮಾಡಿದ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು. ನಿರೂಹಬಸ್ತಿಯು ಸರಿಯಾಗಿ ಪ್ರಯೋಗವಾಗಿ ತಕ್ಕಫಲಗಳುಂಟಾದಮೇಲೆ ವಾತ ಪಿತ್ತ ಕಫ ದೋಷಗಳಲ್ಲಿ ಕ್ರಮವಾಗಿ ಬಿಲ್ವತೈಲ ಮಧುಯಷ್ಟಿತೈಲ ಮದನತೈಲಗಳಿಂದ ಅನುವಾಸನ ಬಸ್ತಿಯನ್ನು ಪ್ರಯೋಗಿಸ ಬೇಕು. ರಾತ್ರಿಕಾಲದಲ್ಲಿ ಬಸ್ತಿಪ್ರಯೋಗ ಮಾಡಬಾರದು. ರಾತ್ರಿಕಾಲದಲ್ಲಿ ದೋಷ ಗಳು ಉತ್ಕ್ಲೇಶವಾಗುತ್ತವೆ (ದೋಷ ಧಾತು ಮಲಗಳು ಜಿನುಗುತ್ತವೆ). ಸ್ನೇಹದ ವೀರ್ಯದಿಂದ ಆಧ್ಮಾನ ಮೈಭಾರ ಜ್ವರ ಇವುಗಳುಂಟಾಗುತ್ತವೆ. ಹಗಲುವೇಳೆಯಲ್ಲಿ ದೋಷಗಳು ತಮ್ಮ ತಮ್ಮ ಸ್ಥಾನಗಳಲ್ಲಿರುತ್ತವೆ. ಶರೀರದ ಎಲ್ಲಾ ಸ್ರೋತೋಮುಖ

ಗಳೂ ಅಗಲಿಸಿರುತ್ತವೆ. ಅಗ್ನಿವೃದ್ಧಿಯಾಗಿರುತ್ತದೆ. ಈ ಕಾರಣದಿಂದ ಸ್ನೇಹದ ಪ್ರಭಾವವು ದೇಹದಲ್ಲೆಲ್ಲಾ ಹರಡುತ್ತದೆ.

ಟಿಪ್ಪಣಿ—ರಾತ್ರಿಕಾಲದಲ್ಲಿ ಹೃದಯವು ಶುದ್ಧವಾಗಿರುವುದಿಲ್ಲ. ಧಾತುಗಳು ಜಿನುಗುತ್ತಾ ಇರುತ್ತವೆ. ಅನ್ನವು ವಿದಗ್ಧ (ಅರ್ಧಪಾಕ)ವಾಗಿರುತ್ತದೆ. ಸ್ರೋತಸ್ಸುಗಳು ಕಫದಿಂದ ಬೆಳೆಯಲ್ಪಟ್ಟಿರುತ್ತವೆ. ಎಲ್ಲಾ ಕೆಲಸಗಳನ್ನೂ ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಿರುವ ಈ ಸಮಯದಲ್ಲಿ ದೋಷಗಳು ಧಾತುಗಳನ್ನು ಜಿನುಗುವಂತೆ ಮಾಡುತ್ತವೆ. ಇದಕ್ಕೆ ದೋಷೋತ್ಕ್ಲೇಶವೆಂದು ಹೆಸರು.

ಪಿತ್ತೇಽಧಿಕೇ ಕಫೇ ಕ್ಷೀಣೇ ರೂಕ್ಷೇ ವಾತರುಗರ್ದಿತೇ ।
ನರೇ ರಾತ್ರೌ ಚ ದಾತವ್ಯಂ ಕಾಲೇ ಚೋಷ್ಣೇಽನುವಾಸನಮ್ ॥೪೯॥
ಉಷ್ಣೇ ಪಿತ್ತಾಧಿಕೇ ವಾಪಿ ದಿವಾ ದಾಹಾದಯೋ ಗದಾಃ ।
ಸಮ್ಭವನ್ತಿ ಯತಸ್ತಸ್ಮಾತ್ ಪ್ರದೋಷೇ ಯೋಜಯೇದ್ಭಿಷಕ್ ॥೫೦॥
ಶೀತೇ ವಸನ್ತೇ ಚ ದಿವಾ ಗ್ರೀಷ್ಮೇ ಪ್ರಾವೃಡ್ಘನಾತ್ಯಯೇ ।
ಸ್ನೇಹೋ ದಿನಾನ್ತೇ ಪಾನೋಕ್ತಾ ದೋಷಾಃ ಪರಿಜಿಹೀರ್ಷತಾ ॥೫೧॥
ಅಹೋರಾತ್ರೇಷು ಕಾಲೇಷು ಸರ್ವೇಷ್ವೇವಾನಿಲಾಧಿಕಮ್ ।
ತೀವ್ರಾಯಾಂ ರುಜಿ ಜೀರ್ಣಾನ್ನಂ ಭೋಜಯಿತ್ವಾಽನು ವಾಸಯೇತ್ ॥೫೨॥
ನ ಚಾಭುಕ್ತವತಃ ಸ್ನೇಹಃ ಪ್ರಣಿಧೇಯಃ ಕಥಞ್ಚನ ।
ಶುದ್ಧತ್ವಾಚ್ಛೂನ್ಯಕೋಷ್ಠಸ್ಯ ಸ್ನೇಹ ಊರ್ಧ್ವಮಥೋತ್ಪತೇತ್ ॥೫೩॥

ರಾತ್ರೆಯೆಂದರೆ ರಾತ್ರಿಯ ೧ ನೆಯ ಯಾಮವೆಂದರ್ಥವು. ಪ್ರದೋಷವೆಂದರೆ ಸನ್ಧ್ಯಾಹಾರ ಸೂಚಕಕಾಲವು. ಪಿತ್ತವು ಅಧಿಕವಾಗಿಯೂ ಕಫವು ಕ್ಷೀಣವಾಗಿಯೂ ರೋಗಿಯು ರೂಕ್ಷದೇಹವುಳ್ಳವನಾಗಿ ವಾತರೋಗದಿಂದ ಪೀಡಿತನಾಗಿದ್ದರೆ ಬೇಸಿಗೆಯಲ್ಲಿ ರಾತ್ರಿಯವೇಳೆಯಲ್ಲೂ, ಉಷ್ಣಕಾಲದಲ್ಲಿ ಪಿತ್ತವು ಅಧಿಕವೃದ್ಧಿಯಾಗಿ ದಾಹ ಮೊದಲಾದ ರೋಗಗಳುಂಟಾಗುವುದರಿಂದ ಹಗಲು ಹೊತ್ತಿನಲ್ಲಿಯೂ ಅನುವಾಸನ (ಸ್ನೇಹ) ಬಸ್ತಿಯನ್ನು ಪ್ರಯೋಗಿಸಬೇಕು, ವೈದ್ಯನು ಇದನ್ನೆಲ್ಲಾ ಯೋಚಿಸಿ ಪ್ರದೋಷಕಾಲದಲ್ಲಿ ಬಸ್ತಿಯನ್ನು ಪ್ರಯೋಗಿಸಬೇಕು. ಸ್ನೇಹಪಾನೋಕ್ತ ದೋಷಗಳನ್ನು ನಿವಾರಿಸಿಕೊಳ್ಳುವ ಅಪೇಕ್ಷೆಯಿದ್ದರೆ ಶೀತಕಾಲ ಮತ್ತು ವಸನ್ತರ್ತುಗಳಲ್ಲಿ ಹಗಲು ಕಾಲದಲ್ಲೂ ಗ್ರೀಷ್ಮ ಪ್ರಾವೃಟ್ ಶರತ್ ಕಾಲಗಳಲ್ಲಿ ಸಂಧ್ಯಾಕಾಲಗಳಲ್ಲೂ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು. ವಾತಪೀಡಿತನಿಗೆ ತೀವ್ರವಾದ ನೋವಿದ್ದರೆ ಆಹಾರವು ಜೀರ್ಣಿಸಿದ ಮೇಲೆ ಭೋಜನಮಾಡಿಸಿ ಹಗಲಾಗಲೀ ರಾತ್ರಿಯಾಗಲೀ ಎಲ್ಲಾ ಕಾಲಗಳಲ್ಲೂ ಸ್ನೇಹ ಬಸ್ತಿಯನ್ನು ಪ್ರಯೋಗಿಸಬೇಕು. ಭೋಜನಮಾಡದಿರುವವನಿಗೆ ಎಂದಿಗೂ ಸ್ನೇಹಬಸ್ತಿಯನ್ನು ಪ್ರಯೋಗಿಸಬಾರದು. ಏಕೆಂದರೆ ಕೋಷ್ಠವು ಬರಿದಾಗಿರುವಾಗ ಸ್ನೇಹಬಸ್ತಿಯನ್ನು ಪ್ರಯೋಗಿಸಿದರೆ ಆ ಸ್ನೇಹವು ಮೇಲ್ಮುಖವಾಗಿ ವಮನದಿಂದಾಗಲೀ ಕೆಳಗಡೆ ವಿರೇ

ಚನದಿಂದಾಗಲೀ ಹೊರಕ್ಕೆ ಬಂದುಬಿಡುವುದರಿಂದ ಪ್ರಯೋಗಿಸಿದ ಬಸ್ತಿಯು ವ್ಯರ್ಥವಾಗುತ್ತದೆ.

ಸದಾನುವಾಸಯೇಚ್ಚಾಪಿ ಭೋಜಯಿತ್ವಾರ್ದ್ರಪಾಣಿನಮ್ ।
ಜ್ವರಂ ವಿದಗ್ಧಭುಕ್ತಸ್ಯ ಕುರ್ಯಾತ್ ಸ್ನೇಹಃ ಪ್ರಯೋಜಿತಃ ॥೫೪॥
ನ ಚಾತಿಸ್ನಿಗ್ಧಮಶನಂ ಭೋಜಯಿತ್ವಾನುವಾಸಯೇತ್ ।
ಮದಂ ಮೂರ್ಛಾಂ ಚ ಜನಯೇತ್ ದ್ವಿಧಾ ಸ್ನೇಹಃ ಪ್ರಯೋಜಿತಃ ॥೫೫॥
ರೂಕ್ಷಂಭುಕ್ತವತೋಹ್ಯನ್ನಂ ಬಲಂ ವರ್ಣಂ ಚ ಹಾಪಯೇತ್ ।
ಯುಕ್ತಸ್ನೇಹಮತೋ ಜನ್ತುಂ ಭೋಜಯಿತ್ವಾನುವಾಸಯೇತ್ ॥೫೬॥
ಯೂಷಕ್ಷೀರರಸೈಸ್ತಸ್ಮಾದ್ಯಥಾ ವ್ಯಾಧಿಮವೇಕ್ಷ್ಯ ವಾ ।
ಯಥೋಚಿತಾತ್ ಪಾದಹೀನಂ ಭೋಜಯಿತ್ವಾನುವಾಸಯೇತ್ ॥೫೭॥

ರೋಗಿಗೆ ಭೋಜನಮಾಡಿಸಿ ಕೈತೊಳೆದು ಕೈನೀರಾಗಿರುವಾಗಲೇ ಸದಾ ಅನುವಾಸನ ಬಸ್ತಿಪ್ರಯೋಗವನ್ನು ಮಾಡಬೇಕು. ಆಹಾರವು ಅರ್ಧಪಾಕವಾಗಿರುವಾಗ ಸ್ನೇಹಬಸ್ತಿಯನ್ನು ಪ್ರಯೋಗಿಸಿದರೆ ಜ್ವರ ಬರುತ್ತದೆ. ಅತಿಸ್ನಿಗ್ಧವಾದ ಆಹಾರವನ್ನು ಭೋಜನಮಾಡಿಸಿ ಅನುವಾಸನ ಬಸ್ತಿಯನ್ನು ಪ್ರಯೋಗಿಸಿದರೆ ಮತ್ತತೆಯನ್ನೂ ಜ್ಞಾನ ನಾಶವನ್ನೂ ಉಂಟುಮಾಡುತ್ತದೆ. ರೂಕ್ಷವಾದ ಅನ್ನವನ್ನು ಭೋಜನಮಾಡಿದವರಿಗೆ ಅನುವಾಸನ ಬಸ್ತಿಯನ್ನು ಪ್ರಯೋಗಮಾಡಿದರೆ ಬಲವೂ ವರ್ಣವೂ ನಾಶವಾಗುತ್ತವೆ. ಆದಕಾರಣ ಸರಿಯಾದ ಪ್ರಮಾಣದಿಂದ ಸ್ನಿಗ್ಧವಾದವರಿಗೆ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು. ಹೀಗೆ ಉಪಯೋಗಿಸುವಾಗ ರೋಗಿಯ ದೋಷಗಳಿಗೆ ತಕ್ಕಂತೆ (ಅಂದರೆ ಕಫ ಪಿತ್ತ ವಾತ ದೋಷಗಳಿಗೆ) ಕ್ರಮವಾಗಿ ಹೆಸರುಕಟ್ಟು, ಹಾಲು, ಮಾಂಸ, ರಸಗಳನ್ನು ಮಿಶ್ರಮಾಡಿದ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕು. ಬಸ್ತಿಪ್ರಯೋಗಕ್ಕೆ ಮೊದಲು ಕ್ರಮವಾಗಿ ಅವರಿಗೆ ಅಭ್ಯಾಸವಾಗಿರುವ ಆಹಾರದಲ್ಲಿ ಕಾಲುಭಾಗ, ಅರ್ಧಭಾಗ, ಮುಕ್ಕಾಲುಭಾಗದಷ್ಟನ್ನೇ ಭೋಜನಮಾಡಿಸಿರಬೇಕು.

ಅಥಾನುವಾಸ್ಯಂ ಸ್ವಭ್ಯಕ್ತಮುಷ್ಣಾಮ್ಬುಸ್ವೇದಿತಂ ಶನೈಃ ।
ಭೋಜಯಿತ್ವಾ ಯಥಾಶಾಸ್ತ್ರಂ ಕೃತಚಂಕ್ರಮಣಂ ತತಃ ॥೫೮॥
ವಿಸರ್ಜ್ಯ ಚ ಶಕೃನ್ಮೂತ್ರಂ ಯೋಜಯೇತ್ ಸ್ನೇಹಬಸ್ತಿನಾ ।
ಪ್ರಣಿಧಾನವಿಧಾನಂ ತು ನಿರೂಹೇಸಮ್ಪ್ರವಕ್ಷ್ಯತೇ ॥೫೯॥
ತತಃ ಪ್ರಣಿಹಿತಸ್ನೇಹ ಉತ್ತಾನೋ ವಾಕ್ಛತಂ ಭವೇತ್ ।
ಪ್ರಸಾರಿತೈಃ ಸರ್ವಗಾತ್ರೈಸ್ತಥಾ ವೀರ್ಯಂ ವಿಸರ್ಪತಿ ॥೬೦॥
ತಾಡಯೇತ್ ತಲಯೋರೇನಂ ತ್ರೀಂಸ್ತ್ರೀನ್ ವಾರಾನ್ ಶನೈಃಶನೈಃ
ಸ್ಫಿಚೋಶ್ಚೈನಂ ತತಃ ಶಯ್ಯಾಂ ತ್ರೀನ್ ವಾರಾನುತ್ಕ್ಷಿಪೇತ್ ತತಃ ॥೬೧॥
ಏವಂ ಪ್ರಣಿಹಿತೇ ಬಸ್ತೌ ಮನ್ದಾಯಾಸೋಽಥ ಮನ್ದವಾಕ್ ।
ಸ್ವಾಸ್ತೀರ್ಣೇ ಶಯನೇ ಕಾಮಮಾಸೀತಾಚಾರಿಕೇ ರತಃ ॥೬೨॥

ಸ್ನೇಹಬಸ್ತಿ ಪ್ರಯೋಗಕ್ಕೆ ಮೊದಲು ರೋಗಿಗೆ ತೈಲದಿಂದ ಅಭ್ಯಂಗಮಾಡಿಸಿ ಬಿಸಿನೀರಿನ ಸ್ನಾನದಿಂದ ಸ್ವೇದಕರ್ಮಮಾಡಿಸಿ ವಿಧಿವತ್ತಾಗಿ ಭೋಜನಮಾಡಿಸಿ ಅತ್ತಿತ್ತ ತಿರುಗಾಡಿಸಿ ಮಲಮೂತ್ರಗಳನ್ನು ವಿಸರ್ಜನೆಮಾಡಿಸಿ ಸ್ನೇಹಬಸ್ತಿಯನ್ನು ಪ್ರಯೋಗಿಸ ಬೇಕು. ಬಸ್ತಿಪ್ರಯೋಗ ವಿಧಾನವನ್ನು ನಿರೂಹವಸ್ತಿಪ್ರಯೋಗದಲ್ಲಿ ವಿವರಿಸಲಾಗುತ್ತದೆ. ಸ್ನೇಹಬಸ್ತಿಯನ್ನು ಪ್ರಯೋಗಿಸಿದಮೇಲೆ ರೋಗಿಯನ್ನು ೧೦೦ ಮಾತ್ರಾಕಾಲದವರೆಗೂ ಅಂಗತ್ತಾಗಿ ಮಲಗಿಸಿರಬೇಕು. ರೋಗಿಯು ಕೈಕಾಲುಗಳನ್ನು ಚಾಚಿಕೊಂಡು ಮಲ ಗಿದ್ದರೆ ಬಸ್ತಿಶಕ್ತಿಯು ಶರೀರಕ್ಕೆಲ್ಲಾ ಹರಡುತ್ತದೆ. ರೋಗಿಯ ಪಿಕ್ರಿಗಳಮೇಲೆ ವೈದ್ಯನು ಮೆತ್ತಗೆ ಅಂಗೈ ಅಂಗಾಲುಗಳಿಂದ ಎರಡುಸಾರಿ ಗುದ್ದಿ ಕಾಲಿನಕಡೆಯಿಂದ ರೋಗಿ ಸಮೇತ ಹಾಸಿಗೆಯನ್ನು ಎರಡುಸಾರಿ ಮೇಲಕ್ಕೆ ಎತ್ತಬೇಕು. ಈ.ರೀತಿ ಮಾಡಿದಮೇಲೆ ರೋಗಿಯು ಸ್ವಲ್ಪವೂ ಆಯಾಸಪಡದೆಯೂ ಮಾತನಾಡದೆಯೂ ಪಥ್ಯಕ್ರಮದಲ್ಲೇ ನಿರತನಾಗಿ ಸ್ವೇಚ್ಛೆಬಂದಂತೆ ಮಲಗಿರಬೇಕು.

ಸ ತು ಸೈನ್ಧವಚೂರ್ಣೇನ ಶತಾಹ್ವೇನ ಚ ಯೋಜಿತಃ ।
ದೇಯಃ ಸುಖೋಷ್ಣಶ್ಚ ತಥಾ ನಿರೇತಿ ಸಹಸಾ ಸುಖಮ್ ॥೬೩॥
ಯಸ್ಯಾನುವಾಸನೋ ದತ್ತಃ ಸಕೃದನ್ವಕ್ಷಮಾವ್ರಜೇತ್ ।
ಅತ್ಯೌಕ್ಷ್ಣ್ಯಾದತಿತೈಕ್ಷ್ಣ್ಯಾದ್ವಾ ವಾಯುನಾ ವಾ ಪ್ರಪೀಡಿತಃ ॥೬೪॥
ಸವಾತೋಽಧಿಕಮಾತ್ರೋ ವಾ ಗುರುತ್ವಾದ್ವಾ ಸಭೇಷಜಃ ।
ತಸ್ಯಾನ್ಯೋಽಲ್ಪತರೋ ದೇಯೋ ನ ಹಿ ಸ್ನಿಹ್ಯತ್ಯತಿಷ್ಠತಿ ॥೬೫॥
ವಿಷ್ಟಬ್ಧಾನಿಲವಿಣ್ಮೂತ್ರಃ ಸ್ನೇಹಹೀನೋಽನುವಾಸನಃ ।
ದಾಹಕ್ಲಮಪ್ರವಾಹಾರ್ತಿಕರಶ್ಚಾತ್ಯನುವಾಸನಃ ॥೬೬॥
ಸಾನಿಲಃ ಸಪುರೀಷಶ್ಚ ಸ್ನೇಹಃ ಪ್ರತ್ಯೇತಿ ಯಸ್ಯ ತು ।
ಓಷಚೋಷೌ ವಿನಾ ಶೀಘ್ರಂ ಸ ಸಮ್ಯಗನುವಾಸಿತಃ ॥೬೭॥
ಜೀರ್ಣಾನ್ನಮಥ ಸಾಯಾಹ್ನೇ ಸ್ನೇಹೇಪ್ರತ್ಯಾಗತೇ ಪುನಃ ।
ಲಘ್ವನ್ನಂ ಭೋಜಯೇತ್ ಕಾಮಂ ದೀಪ್ತಾಗ್ನಿಸ್ತು ನರೋ ಯದಿ ॥೬೮॥
ಪ್ರಾತರುಷ್ಣೋದಕಂ ದೇಯಂ ಧಾನ್ಯನಾಗರಸಾಧಿತಮ್ ।
ತೇನಾಸ್ಯ ದೀಪ್ಯತೇ ವಹ್ನಿರ್ಭಕ್ತಾಕಾಙ್ಕ್ಷಾ ಚ ಜಾಯತೇ ॥೬೯॥
ಸ್ನೇಹಬಸ್ತಿಕ್ರಮೇಷ್ವೇವಂ ವಿಧಿಮಾಪುರ್ಮನೀಷಿಣಃ ।
ಅನೇನ ವಿಧಿನಾ ಷಡ್ವಾ ಸಪ್ತ ವಾಷ್ಟೌ ನವೈವ ವಾ ॥೭೦॥
ವಿಧೇಯಾ ಬಸ್ತಯಸ್ತೇಷಾಮನ್ತರಾ ತು ನಿರೂಹಣಮ್ ।

ಸ್ನೇಹವು ಮೊದಲೇ ತಯಾರಾಗಿದ್ದರೂ ಬಸ್ತಿಪ್ರಯೋಗಮಾಡುವಾಗ ಸೈಂಧವ ಲವಣ ಮತ್ತು ಸಬ್ಬಸಿಗೆ ಬೀಜಗಳ ಚೂರ್ಣಗಳನ್ನು ೧ ಮಾಷದಷ್ಟು ೧ ಪಲ ಸ್ನೇಹಕ್ಕೆ ಮಿಶ್ರಮಾಡಿ ಸುಖೋಷ್ಣವಾಗಿ ಪ್ರಯೋಗಿಸಿದರೆ ಸುಖವಾಗಿ ಬೇಗನೆ ಹಿಂದಿರುಗಿಬಂದುಬಿಡು

ತ್ತದೆ. ಪ್ರಯೋಗಿಸಿದ ಸ್ನೇಹಬಸ್ತಿಯು ಅತಿ ಉಷ್ಣವಾಗಿಯೂ ಅತಿತೀಕ್ಷ್ಣವಾಗಿಯೂ (ಚುರುಕಾಗಿ)ಅಥವಾ ವಾಯುವಿನಿಂದ ಪೀಡಿಸಲ್ಪಟ್ಟಾಗಲೀ ವಾತ ಮಿಶ್ರವಾಗಿಯೇ ಅಧಿಕ ಪ್ರಮಾಣವಿದ್ದದ್ದರಿಂದಲೋ ಔಷಧಿಯ ಗುರುತ್ವದಿಂದಲೋ ಹೊರಕ್ಕೆ ಹೊರಟುಬಂದರೆ ಅಲ್ಪಪ್ರಮಾಣ ಸ್ನೇಹವುಳ್ಳ ಮತ್ತೊಂದು ಬಸ್ತಿಪ್ರಯೋಗವನ್ನು ಮಾಡಬೇಕು. ಏಕೆಂದರೆ ಸ್ವಲ್ಪಕಾಲ ನಿಲ್ಲದೆ ಬಂದ ಬಸ್ತಿಯು ಗುದವನ್ನು ಸ್ನೇಹಯುಕ್ತವಾದುದನ್ನಾಗಿ ಮಾಡುವುದಿಲ್ಲ (ಸ್ನೇಹಕರ್ಮವಾಗುವುದಿಲ್ಲ.) ಸ್ನೇಹವನ್ನು ಸೇರಿಸದೆ ಅನೇಕಸಾರಿ ಅನುವಾಸನ ಪ್ರಯೋಗಮಾಡಿದರೆ ಅಪಾನವಾತ, ಮೂತ್ರ, ಮಲಗಳು ತಡೆಯಲ್ಪಟ್ಟು ಉರಿತ, ಆಯಾಸ, ಮುಲುಕುವಿಕೆ, ನೋವು ಇವುಗಳನ್ನುಂಟುಮಾಡುತ್ತದೆ. ಜೋಷ, ಓಷ (ಸ್ವಲ್ಪವಾಗಿ ಅಥವಾ ಹೆಚ್ಚಾಗಿ ಉರಿಯುವುದು)ಗಳಿಲ್ಲದೆ ಪ್ರಯೋಗಿಸಿದ ಸ್ನೇಹವು ಅಪಾನವಾಯು, ಮೂತ್ರ, ಮಲಗಳನ್ನು ಬೇಗನೆ ಹೊರಕ್ಕೆ ಹೊರಡಿಸಿಕೊಂಡು ಬಂದರೆ ಸರಿಯಾಗಿ ಅನುವಾಸನ ಕರ್ಮ ನಡೆಯಿತೆಂದು ತಿಳಿಯಬೇಕು. ಪ್ರಯೋಗಿಸಿದ ಅನುವಾಸನವು ಹೊರಕ್ಕೆ ಬಂದ ಮೇಲೆ ಆಹಾರ ಜೀರ್ಣವಾದನಂತರ ಆ ದಿನ ಸಾಯಂಕಾಲದಲ್ಲಿ ಅವನಿಗೆ ಅಗ್ನಿದೀಪನವುಂಟಾಗಿದ್ದರೆ ಬೇಕಾದಷ್ಟು ಪ್ರಮಾಣ ಲಘುವಾದ ಅನ್ನವನ್ನು ಭೋಜನಮಾಡಿಸಿ ಆ ಮಾರನೆಯದಿನ ಬೆಳಗ್ಗೆ ಕೊತ್ತುಂಬರಿ ಶುಂಠಿಗಳನ್ನು ಸೇರಿಸಿ ಕಾಯಿಸಿದ ಬಿಸಿನೀರನ್ನು ಕುಡಿಸಬೇಕು. ಇದರಿಂದ ಅವನಿಗೆ ಅಗ್ನಿ ದೀಪನವೂ ಅನ್ನದಲ್ಲಿ ಇಚ್ಛೆಯೂ ಉಂಟಾಗುತ್ತದೆ. ವಿದ್ವಾಂಸರು ಸ್ನೇಹಬಸ್ತಿಯನ್ನು ಪ್ರಯೋಗಿಸಿದರೆ ಈ ಕ್ರಮದ ಪಥ್ಯಾಚರಣೆಮಾಡಬೇಕೆಂದು ವಿಧಿಸಿರುತ್ತಾರೆ. ಈ ರೀತಿಯಾಗಿ ೬-೭ ೮-೯ ಬಸ್ತಿ ಪ್ರಯೋಗಗಳನ್ನೂ ಮಧ್ಯದಲ್ಲಿ ನಿರೂಹಬಸ್ತಿಯನ್ನೂ ಪ್ರಯೋಗಿಸಬೇಕು.

ದತ್ತಸ್ತು ಪ್ರಥಮೋ ಬಸ್ತಿಃ ಸ್ನೇಹಯೇದ್ಬಸ್ತಿವಙ್ಕ್ಷಣೌ ॥೭೧॥
ಸಮ್ಯಗ್ದತ್ತೋ ದ್ವಿತೀಯಸ್ತು ಮೂರ್ಧಸ್ಥಮನಿಲಂ ಜಯೇತ್ ।
ಜನಯೇದ್ಬಲವರ್ಣೌ ಚ ತೃತೀಯಸ್ತು ಪ್ರಯೋಜಿತಃ ॥೭೨॥
ರಸಂ ಚತುರ್ಥೋ ರಕ್ತಂ ತು ಪಞ್ಚಮಃ ಸ್ನೇಹಯೇತ್ತಥಾ ।
ಷಷ್ಠಸ್ತು ಸ್ನೇಹಯೇನ್ಮಾಂಸಂ ಮೇದಃ ಸಪ್ತಮ ಏವ ಚ ॥೭೩॥
ಅಷ್ಟಮೋ ನವಮಶ್ಚಾಸ್ಥಿ ಮಜ್ಜಾನಂ ಚ ಯಥಾಕ್ರಮಮ್ ।
ಏವಂ ಶುಕ್ರಗತಾನ್ ದೋಷಾನ್ ದ್ವಿಗುಣಃ ಸಾಧು ಸಾಧಯೇತ್ ॥೭೪॥
ಅಷ್ಟಾದಶಾಷ್ಟಾದಶಕಾನ್ ಬಸ್ತೀನಾಂ ಯೋ ನಿಷೇವತೇ ।
ಯಥೋಕ್ತೇನ ವಿಧಾನೇನ ಪರಿಹಾರಕ್ರಮೇಣ ತು ॥೭೫॥
ಸಕುಞ್ಜರಬಲೋಽಶ್ವಸ್ಯ ಜವೇಸ್ತುಲ್ಯೋಽಮರಪ್ರಭಃ ।
ವೀತಪಾಪ್ಮಾ ಶ್ರುತಿಧರಃ ಸಹಸ್ರಾಯುರ್ನರೋ ಭವೇತ್ ॥೭೬॥

ಮೊದಲು ಪ್ರಯೋಗಿಸಿದ ಸ್ನೇಹವಸ್ತಿಯು ಬಸ್ತಿಪ್ರದೇಶವನ್ನೂ ತೊಡೆಸಂದಿಗಳನ್ನೂ (ಅಧಃಕಾಯುಗಳಿಗೆ) ಸ್ನೇಹಮಾಡುತ್ತದೆ. ಎರಡನೆಯ ಬಸ್ತಿಯು ತಲೆಗೇರಿದ

ವಾತವನ್ನು ಜಯಿಸುತ್ತದೆ. ೩ನೆಯ ಬಸ್ತಿಪ್ರಯೋಗದಿಂದ ಬಲವರ್ಣಗಳು ಉಂಟಾಗುತ್ತವೆ. ೪ ನೆಯ ಬಸ್ತಿಪ್ರಯೋಗದಿಂದ ರಸಧಾತುವೂ ೫ ನೆಯ ಬಸ್ತಿಪ್ರಯೋಗದಿಂದ ರಕ್ತಧಾತುವೂ ಸ್ನೇಹಯುಕ್ತವಾಗುತ್ತವೆ. ೬ ನೆಯ ಬಸ್ತಿಪ್ರಯೋಗದಿಂದ ಮಾಂಸವೂ ೭ ನೆಯದರ ಪ್ರಯೋಗದಿಂದ ಮೇದಸ್ಸೂ, ೮ ನೇ, ೯ ನೇ ಸ್ನೇಹಬಸ್ತಿಗಳ ಪ್ರಯೋಗದಿಂದ ಕ್ರಮವಾಗಿ ಮೂಳೆಯೂ ಮಜ್ಜಧಾತುವೂ ಸ್ನೇಹಯುಕ್ತಗಳಾಗುತ್ತವೆ. ಹೀಗೆಯೇ ಎರಡುಸಾರಿ ಸೇವಿಸಿದ ಸ್ನೇಹಬಸ್ತಿಯಿಂದ ಶುಕ್ರಧಾತುವಿನ ದೋಷಗಳು ನಿವಾರಿಸಲ್ಪಡುತ್ತವೆ. ಈ ರೀತಿಯಾಗಿ ಮೇಲೆಹೇಳಿದ ಕ್ರಮದಿಂದಲೂ ಉಪಚಾರ ವಿಧಾನಗಳಿಂದಲೂ ೧೮-೧೮ ಬಸ್ತಿಗಳನ್ನು ಸೇವಿಸುವವರಿಗೆ ಆನೆಯಷ್ಟು ಬಲವೂ ಕುದುರೆಯಷ್ಟು ಶುಕ್ರವೇಗವೂ ಉಂಟಾಗಿ ದೇವತೆಗಳಿಗೆ ಸಮಾನವಾದ ಕಾಂತಿಯುಳ್ಳವರಾಗುತ್ತಾರೆ. ಅವರ ಪಾಪಗಳೆಲ್ಲಾ ನಾಶವಾಗಿ ಸಾವಿರವರ್ಷಗಳಕಾಲ ಆರೋಗ್ಯವುಳ್ಳವರಾಗಿ ಜೀವಿಸುತ್ತಾರೆ.

ಸ್ನೇಹಬಸ್ತಿಂ ನಿರೂಹಂ ವಾ ನೈಕಮೇವಾತಿಶೀಲಯೇತ್ ।
ಸ್ನೇಹಾದಗ್ನಿವಧೋತ್ಕ್ಲೇಶೌ ನಿರೂಹಾತ್ ಪವನಾದ್ಭಯಮ್ ॥೭೭॥
ತಸ್ಮಾನ್ನಿರೂಢೋಽನುವಾಸ್ಯೋ ನಿರೂಹ್ಯಶ್ಚಾನುವಾಸಿತಃ ।
ನೈವಂ ಪಿತ್ತಕಫೋತ್ಕ್ಲೇಶೌ ಸ್ಯಾತಾಂ ನ ಪವನಾದ್ಭಯಮ್ ॥೭೮॥
ರೂಕ್ಷಾಯ ಬಹುವಾತಾಯ ಸ್ನೇಹಬಸ್ತಿಂ ದಿನೇ ದಿನೇ
ದದ್ಯಾದ್ವೈದ್ಯಸ್ತತೋಽನ್ಯೇಷಾಮಗ್ನ್ಯಾಬಾಧಭಯಾತ್ ತ್ರ್ಯಹಾತ್ ॥೭೯॥
ಸ್ನೇಹೋಽಲ್ಪಮಾತ್ರೋ ರೂಕ್ಷಾಣಾಂ ಸರ್ವಕಾಲಮನತ್ಯಯಃ
ತಥಾ ನಿರೂಹಃ ಸ್ನಿಗ್ಧಾನಾಂ ಸ್ವಲ್ಪಮಾತ್ರಃ ಪ್ರಶಸ್ಯತೇ ॥೮೦॥

ಸ್ನೇಹಬಸ್ತಿಯನ್ನೂ ನಿರೂಹಬಸ್ತಿಯನ್ನೂ ಒಂದನ್ನೇ ಅತಿಯಾಗಿ ಸೇವನೆ ಮಾಡಬಾರದು. ಕೇವಲ ಸ್ನೇಹಬಸ್ತಿಯನ್ನೇ ಸೇವಿಸಿದರೆ ಅಗ್ನಿನಾಶವೂ ಬಾಯಿಯಲ್ಲಿ ಕಫಸ್ರಾವವೂ ಬರೀನಿರೂಹಬಸ್ತಿಯನ್ನೇ ಸೇವಿಸಿದರೆ ವಾತಪ್ರಕೋಪವೂ ಉಂಟಾಗುವ ಕಾರಣ ನಿರೂಹಬಸ್ತಿಯನ್ನೂ ಪ್ರಯೋಗಮಾಡಿದಮೇಲೆ ಸ್ನೇಹಬಸ್ತಿಯನ್ನೂ ಅನ್ವಾಸನ(ಸ್ನೇಹಬಸ್ತಿ) ಪ್ರಯೋಗಮಾಡಿದಮೇಲೆ ನಿರೂಹಬಸ್ತಿಯನ್ನೂ ಪ್ರಯೋಗಮಾಡಬೇಕು. ಈ ರೀತಿಯಾಗಿ ಆಚರಣೆ ಮಾಡುವುದರಿಂದ ಪಿತ್ತಕಫಗಳೂ ಕೆರಳುವುದಿಲ್ಲ ಬಾಯಿನಿಂದ ಜೊಲ್ಲೂ (ಕಫಸ್ರಾವ) ಸುರಿಯುವುದಿಲ್ಲ. ವಾತಪ್ರಕೋಪವಾಗುತ್ತದೆಂಬ ಭಯವೂ ಉಂಟಾಗುವುದಿಲ್ಲ. ವೈದ್ಯನು ರೂಕ್ಷದೇಹವುಳ್ಳ ಬಹುವಾತ ಕೋಷ್ಠಗಳಿಗೆ ಪ್ರತಿದಿನವೂ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕು. ಪಿತ್ತಕೋಷ್ಠದವರಿಗೂ ಕಫಾಧಿಕ್ಯವುಳ್ಳವರಿಗೂ ಅಗ್ನಿಮಾಂದ್ಯವುಂಟಾದೀತೆಂಬ ಭಯದಿಂದ ಮೂರು ದಿವಸಗಳಿಗೊಂದಾವರ್ತಿ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕು. ರೂಕ್ಷದೇಹದವರಿಗೆ ಅಲ್ಪಪ್ರಮಾಣದಲ್ಲಿ ಸ್ನೇಹವನ್ನು ಸೇರಿಸಿ ಪ್ರಯೋಗಿಸುವ ಸ್ನೇಹಬಸ್ತಿಯನ್ನು ಸದಾಕಾಲವೂ

ಪ್ರಯೋಗನಮಾಡಿದರೆ ಅಪಾಯ ಸಂಭವಿಸುವುದಿಲ್ಲ. ಹಾಗೆಯೇ ಸ್ನಿಗ್ಧದೇಹದವರಿಗೆ ಸ್ವಲ್ಪಪ್ರಮಾಣದಿಂದ ಕಷಾಯಗಳನ್ನು ಸೇರಿಸಿ ನಿರೂಹಬಸ್ತಿಯನ್ನು ಸದಾಪ್ರಯೋಗಿಸಿದರೆ ಅಪಾಯವುಂಟಾಗುವುದಿಲ್ಲ. ಇಲ್ಲಿ ಅಲ್ಪಮಾತ್ರ ಸ್ನೇಹವೆಂದರೆ ಅರ್ಧ ಭಾಗ ಅಥವಾ ಕಾಲುಭಾಗವೆಂದರ್ಥ. ಅಂದರೆ ೩ ಪಲ ೧ ೧/೨ ಪಲಗಳಷ್ಟೆಂದೂ ನಿರೂಹದಲ್ಲಿ ೧/೪ ಭಾಗದಷ್ಟಾಗಲೀ ೧/೩ ಭಾಗದಷ್ಟಾಗಲೀ ಸೇರಿಸಬೇಕೆಂದೂ ಅರ್ಥವು.

ಅತಊರ್ಧ್ವಂ ಪ್ರವಕ್ಷ್ಯಾಮಿ ವ್ಯಾಪದ ಸ್ನೇಹಬಸ್ತಿಜಾಃ ।
ಬಲವನ್ತೋ ಯದಾ ದೋಷಾಃ ಕೋಷ್ಠೇ ಸ್ಯುರನಿಲಾದಯಃ ॥೪೧॥
ಅಲ್ಪವೀರ್ಯಂ ತದಾ ಸ್ನೇಹಮಭಿಭೂಯ ಪೃಥಗ್ವಿಧಾ ।
ಕುರ್ವನ್ತ್ಯುಪದ್ರವಾ ಸ್ನೇಹಃ ಸ ಚಾಪಿ ನ ನಿವರ್ತತೇ ॥೪೨॥
ತತ್ರ ವಾತಾಭಿಭೂತೇ ತು ಸ್ನೇಹೇತಮುಖಕಷಾಯತಾ ।
ಜೃಮ್ಭಾ ವಾತರುಜಸ್ತಾಸ್ತಾ ವೇಪಥುರ್ವಿಷಮಜ್ವರಃ ॥೪೩॥
ಪಿತ್ತಾಭಿಭೂತೇ ಸ್ನೇಹೇ ತು ಮುಖಸ್ಯ ಕಟುತಾ ಭವೇತ್ ।
ದಾಹಸ್ತೃಷ್ಣಾ ಜ್ವರಃ ಸ್ವೇದೋ ನೇತ್ರಮೂತ್ರಾಙ್ಗಪೀತತಾ ॥೪೪॥
ಶ್ಲೇಷ್ಮಾಭಿಭೂತೇ ಸ್ನೇಹೇ ತು ಪ್ರಸೇಕೋ ಮಧುರಾಸ್ಯತಾ ।
ಗೌರವಂ ಛರ್ದಿರುಚ್ಛ್ವಾಸಃ ಕೃಚ್ಛ್ರಾಃ ಶೀತಜ್ವರೋಽರುಚಿಃ ॥೪೫॥
ತತ್ರ ದೋಷಾಭಿಭೂತೇ ತು ಸ್ನೇಹೇ ಬಸ್ತಿಂ ನಿಧಾಪಯೇತ್ ।
ಯಥಾಸ್ವಂ ದೋಷಶಮನಾನ್ಯುಪಯೋಜ್ಯಾನಿ ಯಾನಿ ಚ ॥೪೬॥
ಅತ್ಯಾಶಿತೇಽನ್ನಾಭಿಭವಾತ್ ಸ್ನೇಹೋ ನೈತಿ ಯದಾ ತದಾ ।
ಗುರುರಾಮಾಶಯಃ ಶೂಲಂ ವಾಯೋಶ್ಚಾಪ್ರತಿಸಂಚರಃ ॥೪೭॥
ಹೃತ್ಪೀಡಾ ಮುಖವೈರಸ್ಯಂ ಶ್ವಾಸೋ ಮೂರ್ಛಾ ಭ್ರಮೋಽರುಚಿಃ ।
ತತ್ರಾಪತರ್ಪಣಸ್ತಾನ್ತೇ ದೀಪನೋ ವಿಧಿರಿಷ್ಯತೇ ॥೪೮॥

ಇನ್ನುಮುಂದೆ ಸ್ನೇಹಬಸ್ತಿ (ಅನ್ವಾಸನ) ಯಿಂದುಂಟಾಗುವ ದೋಷಗಳನ್ನು ಹೇಳುತ್ತೇನೆ—ಕೋಷ್ಠದಲ್ಲಿ ವಾತಾದಿ ದೋಷಗಳು ಪ್ರಕುಪಿತಗಳಾಗಿ ಅತಿಬಲವಾಗಿದ್ದಾಗ ಅಲ್ಪವೀರ್ಯವುಳ್ಳ ಸ್ನೇಹವನ್ನು ಪ್ರಯೋಗಿಸಿದರೆ ಆ ಸ್ನೇಹವು ಆ ದೋಷಗಳಿಂದ ತನ್ನವೀರ್ಯವನ್ನು ಕಳೆದುಕೊಂಡು ಅನೇಕ ಉಪದ್ರವಗಳನ್ನುಂಟುಮಾಡುತ್ತದೆ ಮತ್ತು ಅದು ಹೊರಕ್ಕೂ ಬರುವುದಿಲ್ಲ. ಈ ಸ್ನೇಹವು ವಾತದಿಂದ ತಿರಸ್ಕೃತವಾದರೆ ಮುಖದಲ್ಲಿ ಕಷಾಯರಸವೂ ಆಕಳಿಕೆ ಮೈನಡುಕ ವಿಷಮಜ್ವರ ಮುಂತಾದ ವಾತವಿಕಾರಗಳೂ ಉಂಟಾಗುತ್ತವೆ. ಪಿತ್ತದಿಂದ ಆವೃತವಾದರೆ ಬಾಯಿ ಖಾರವಾಗಿ (ಕಹಿ)ಯೂ ಮೈಯ್ಯುರಿತ ಬಾಯಾರಿಕೆ ಜ್ವರ ಬೆವರುವುದು ಕಣ್ಣು ಮೂತ್ರ ಮೈಗಳು ಹಳದಿಬಣ್ಣಕ್ಕೆ ತಿರುಗುತ್ತವೆ ಕಫವು ಸ್ನೇಹವನ್ನು ಆಕ್ರಮಿಸಿದರೆ ಬಾಯಿ ಸಿಹಿಯಾಗಿಯೂ ಜೊಲ್ಲನ್ನು ಸುರಿಸುತ್ತಲೂ ಇರುವುದಲ್ಲದೆ ಮೈಭಾರ ವಮನ ಊರ್ಧ್ವವಾತ (ನಿಟ್ಟುಸುರು) ಮೂತ್ರಕೃಚ್ಛ್ರ ಶೀತಜ್ವರ ಅರುಚಿ ಇವುಗಳುಂಟಾಗುತ್ತವೆ. ಈ ರೀತಿಯಾಗಿ ಪ್ರಯೋಗಿಸಿದ ಸ್ನೇಹವು ದೋಷ

ಗಳಿಂದ ಆಕ್ರಮಿಸಲ್ಪಟ್ಟು ನಿರ್ವೀರ್ಯವಾಗಿ ಹೊರಕ್ಕೂ ಬರದೆ ನಿಂತುಬಿಟ್ಟರೆ ದೋಷ ಗಳನ್ನು ಶಮನಮಾಡತಕ್ಕ ಬಸ್ತಿಗಳನ್ನು ಪ್ರಯೋಗಮಾಡಬೇಕು. ಅತಿಯಾಗಿ ಭೋಜನ ಮಾಡಿರುವವನಿಗೆ ಪ್ರಯೋಗಿಸಿದ ಸ್ನೇಹವು ಅನ್ನದಿಂದ ತಡೆಯಲ್ಪಟ್ಟು ಹೊರಕ್ಕೆ ಬಸ್ತಿ ಇದ್ದರೆ ಆಮಾಶಯವು ಭಾರವಾಗಿ ಶೂಲೆಯಿಂದ ಕೂಡಿ ವಾಯುಸಂಚರಿಸಲು ಅವಕಾಶವೇ ಇರುವುದಿಲ್ಲ. ಹೃದಯದಲ್ಲಿ ನೋವೂ ಅರುಚಿ ಉಬ್ಬಸ ಜ್ಞಾನತಪ್ಪುವುದು ತಲೆತಿರುಗು ಇವುಗಳುಂಟಾಗುತ್ತವೆ. ಈ ಸಂದರ್ಭದಲ್ಲಿ ರೋಗಿಗೆ ಉಪವಾಸಮಾಡಿಸಿ ಅಗ್ನಿದೀಪನವಾಗುವಂತೆ ಪ್ರಯತ್ನಿಸಬೇಕು.

ಅಶುದ್ಧಸ್ಯ ಮಲೋನ್ಮಿಶ್ರಃ ಸ್ನೇಹೋ ನೈತಿ ಯದಾ ಪುನಃ ।
ತದಾಙ್ಗಸದನಾಧ್ಮಾನೌ ಶ್ವಾಸಃ ಶೂಲಂ ಚ ಜಾಯತೇ ॥೮೯॥
ಪಕ್ವಾಶಯಗುರುತ್ವಂ ಚ ತತ್ರ ದದ್ಯಾನ್ನಿರೂಹಣಮ್
ಅತಿತೀಕ್ಷ್ಣೌಷಧೈರೇವಂ ಸಿದ್ಧಂ ಚಾಪ್ಯನುವಾಸನಮ್ ॥೯೦॥
ಶುದ್ಧಸ್ಯ ದೂರಾನುಸೃತೇ ಸ್ನೇಹೇ ಸ್ನೇಹಸ್ಯ ದರ್ಶನಮ್
ಗಾತ್ರೇಷು ಸರ್ವೇಂದ್ರಿಯಾಣಾಮುಪಲೇಪೋಽವಸಾದನಮ್ ॥೯೧॥
ಸ್ನೇಹಗನ್ಧಿ ಮುಖಂ ತತ್ರ ಕಾಸಶ್ವಾಸಾವರೋಚಕಃ
ಅತಿಪೀಡಿತವತ್ತತ್ರ ವಿಧಿರಾಸ್ಥಾಪನಂ ತಥಾ ॥೯೨॥
ಅಸ್ವಿನ್ನಸ್ಯಾವಿಶುದ್ಧಸ್ಯ ಸ್ನೇಹೋಽಲ್ಪಃ ಸಂಪ್ರಯೋಜಿತಃ
ಶೀತೋ ಮೃದುಶ್ಚ ನಾಭ್ಯೇತಿ ತತೋ ಮನ್ದಂ ಪ್ರವಾಹಯೇತ್ ॥೯೩॥
ವಿಬನ್ಧಗೌರವಾಧ್ಮಾನಶೂಲಾಃ ಪಕ್ವಾಶಯಂ ಪ್ರತಿ
ತತ್ರಾಸ್ಥಾಪನಮೇವಾಶು ಪ್ರಯೋಜ್ಯಂ ಸಾನುವಾಸನಮ್ ॥೯೪॥

ವಿರೇಚನ ನಿರೂಹಬಸ್ತಿಗಳಿಂದ ದೇಹಶುದ್ಧಿಯಿಲ್ಲದವನಿಗೆ ಸ್ನೇಹಬಸ್ತಿಯ ಪ್ರಯೋಗ ದಿಂದ ಮಲಮಿಶ್ರವಾಗಿ ಸ್ನೇಹವು ಹೊರಕ್ಕೆ ಬರದಿದ್ದರೆ ಆಗ ದೇಹಕ್ಷೀಣತೆ ಹೊಟ್ಟೆ ಯುಬ್ಬರ ಉಬ್ಬಸ ಶೂಲೆ ಇವುಗಳುಂಟಾಗುತ್ತವೆ. ಪಕ್ವಾಶಯವು ಭಾರವಾಗುತ್ತದೆ. ಈ ಸಮಯದಲ್ಲಿ ಅತಿತೀಕ್ಷ್ಣೌಷಧಗಳಿಂದ ತಯಾರಿಸಿದ ನಿರೂಹಬಸ್ತಿಯನ್ನೂ ಅನು ವಾಸನ ಬಸ್ತಿಯನ್ನೂ ಪ್ರಯೋಗಿಸಬೇಕು. ಶುದ್ಧವಾದವನಿಗೆ ಪ್ರಯೋಗಿಸಿದ ಸ್ನೇಹ ಬಸ್ತಿಯು ಆಮಾಶಯದವರೆಗೂ ನುಗ್ಗಿದರೆ ಶರೀರದಲ್ಲಿ ಸ್ನೇಹದರ್ಶನವೂ ಇಂದ್ರಿಯಗಳ ಲೆಲ್ಲಾ ಮಲವೃದ್ಧಿಯೂ ದೇಹಕ್ಷೀಣತೆಯೂ ಮುಖದಲ್ಲಿ ಸ್ನೇಹದ ವಾಸನೆಯೂ ಕಾಸ ಶ್ವಾಸ ಅರುಚಿಗಳೂ ಉಂಟಾಗುತ್ತವೆ. ಬಸ್ತಿಯನ್ನು ಅತಿಯಾಗಿ ಹಿಂಡಿದರೆ ಉಂಟಾಗು ವಂತೆಯೇ ಔಷಧವು ಬಾಯಿ ಮೂಗು ಕಿವಿ ಕಣ್ಣುಗಳಿಂದ ಹೊರಕ್ಕೆ ಸುರಿಯಲಾರಂಭಿಸು ತ್ತದೆ. ಈ ಸಮಯದಲ್ಲಿ ಬಾಯಿನಿಂದ ಸ್ನೇಹವು ವಮನವಾಗದಂತೆ ರೋಗಿಯ ಕತ್ತನ್ನು ಮೆಲ್ಲಗೆ ಹಿಸುಕುವುದು, ರೋಗಿಯ ಜುಟ್ಟನ್ನು ಹಿಡಿದು ಬಲವಾಗಿ ಕೊಡವುವುದು ಇತ್ಯಾದಿ ಕ್ರಮಗಳಿಂದ ಸ್ನೇಹವು ಹಿಂದಕ್ಕೆ ಬರುವಂತೆ ಮಾಡಿ ನಿರೂಹಬಸ್ತಿಯನ್ನು ಪ್ರಯೋಗಿಸ ಬೇಕು. ಸ್ವೇದಮಾಡದೆಯೂ ಶೋಧನೌಷಧ ಪ್ರಯೋಗದಿಂದ ದೇಹಶುದ್ಧಿಮಾಡಿ

ಕೊಳ್ಳದೆಯೂ ಇರುವವನಿಗೆ ಅಲ್ಪಪ್ರಮಾಣದಿಂದ ಅನುವಾಸನವನ್ನು ಪ್ರಯೋಗಿಸಿದರೆ ಶೀತವಾಗಿ ಮೃದುವಾದ ಆ ಸ್ನೇಹವು ಸರಿಯಾಗಿ ಪ್ರವೇಶಿಸದೆ ಆಮಶಂಕೆಯ ಮೂಲಕ ಸ್ವಲ್ಪಸ್ವಲ್ಪವಾಗಿ ಹೊರಕ್ಕೆ ಬರುತ್ತದೆ. ಪಕ್ವಾಶಯದಲ್ಲಿ ಮಲಬಂಧ ಭಾರ ಹೊಟ್ಟೆಯುಬ್ಬರ ಶೂಲೆ ಇವುಗಳುಂಟಾಗುತ್ತವೆ. ಆ ರೋಗಿಗೆ ಕೂಡಲೇ ನಿರೂಹ ಮತ್ತು ಅನುವಾಸನ ಬಸ್ತಿಗಳನ್ನು ಪ್ರಯೋಗಿಸಬೇಕು.

ಅಲ್ಪಂ ಭುಕ್ತವತೋಽಲ್ಪೋ ಹಿ ಸ್ನೇಹೋ ಮನ್ದಗುಣಸ್ತಥಾ ।
ದತ್ತೋ ನೈತಿಕ್ಲಮೋತ್ಕ್ಲೇಶೌ ಭೃಶಂ ವಾ ರತಿಮಾವಹೇತ್ ॥೯೫॥
ತತ್ರೈವಾಸ್ಥಾಪನಂ ಕಾರ್ಯಂ ಶೋಧನೀಯೇನ ಬಸ್ತಿನಾ ।
ಅನ್ವಾಸನಂ ಚ ಸ್ನೇಹೇನ ಶೋಧನೀಯೇನ ಶಸ್ಯತೇ ॥೯೬॥
ಅಹೋರಾತ್ರಾದಪಿ ಸ್ನೇಹಃ ಪ್ರತ್ಯಾಗಚ್ಛನ್ನ ದೂಷ್ಯತಿ ।
ಕುರ್ಯಾದ್ಬಸ್ತಿಗುಣಾಂಶ್ಚಾಪಿ ಜೀರ್ಣಸ್ತ್ವಲ್ಪಗುಣೋ ಭವೇತ್ ॥೯೭॥
ಯಸ್ಯ ನೋಪದ್ರವಂ ಕುರ್ಯಾತ್ ಸ್ನೇಹಬಸ್ತಿರನಿಃಸೃತಃ ।
ಸರ್ವೋಽಲ್ಪೋವಾ ವೃತೋ ರೌಕ್ಷ್ಯಾದುಪೇಕ್ಷ್ಯಃ ಸ ವಿಜಾನತಾ ॥೯೮॥
ಅನಾಯಾನ್ತಂ ತ್ವಹೋರಾತ್ರಾತ್ ಸ್ನೇಹಂ ಸಂಶೋಧನೈರ್ಜಯೇತ್ ।
ಸ್ನೇಹಬಸ್ತಾವನಾಯಾತೇ ನಾನ್ಯಃ ಸ್ನೇಹೋ ವಿಧೀಯತೇ ॥೯೯॥
ಇತ್ಯುಕ್ತಾ ವ್ಯಾಪದಃ ಸರ್ವಾಃ ಸಲಕ್ಷಣಚಿಕಿತ್ಸಿತಾಃ ।
ಬಸ್ತೇರುತ್ತರಸಂಜ್ಞಸ್ಯ ವಿಧಿಂ ವಕ್ಷ್ಯಾಮ್ಯತಃ ಪರಮ್ ॥೧೦೦॥

ಅಲ್ಪಪ್ರಮಾಣದಿಂದ ಭೋಜನಮಾಡಿದವನಿಗೆ ಮಂದಗುಣವುಳ್ಳ ಅಲ್ಪಪ್ರಮಾಣದಿಂದ ಪ್ರಯೋಗಿಸಿದ ಸ್ನೇಹವು ಪಕ್ವಾಶಯುವನ್ನು ಸೇರುವುದಿಲ್ಲ. ಅಧಿಕವಾದ ಆಯಾಸವನ್ನೂ ಬಾಯಿನಿಂದ ಜೊಲ್ಲು ಸುರಿಯುವುದನ್ನೂ ಇಷ್ಟಲಾಭವಾಗದವನಿಗೆ ಉಂಟಾಗುವಂತೆ ಮಾನಸಿಕ ದುಃಖವನ್ನೂ ಉಂಟುಮಾಡುತ್ತದೆ. ಈ ಸಂದರ್ಭದಲ್ಲಿ ಶೋಧನಬಸ್ತಿಯನ್ನೂ ಮತ್ತು ಶೋಧನೌಷಧಗಳನ್ನು ಸೇರಿಸಿ ತಯಾರಿಸಿದ ಅನ್ವಾಸನವನ್ನೂ ಪ್ರಯೋಗಿಸಬೇಕು. ಒಂದು ಅಹೋರಾತ್ರಿಗಳಲ್ಲಿ ಸ್ನೇಹವು ಹೊರಕ್ಕೆಬಾರದಿದ್ದರೂ ಕೆಡಕಾಗುವುದಿಲ್ಲ. ಬಸ್ತಿಗುಣಗಳು ಹೆಚ್ಚಾಗುತ್ತವೆ. ಜೀರ್ಣಿಸಿದರೆ ಸ್ವಲ್ಪ ಗುಣವೇ ಉಂಟಾಗುತ್ತದೆ. ಪ್ರಯೋಗಿಸಿದ ಸ್ನೇಹವು ಹೊರಕ್ಕೆ ಬಾರದೆ ಯಾವ ಉಪದ್ರವಗಳನ್ನೂ ಮಾಡದಿದ್ದರೆ ಎಲ್ಲ ಆಗಲೀ ಸ್ವಲ್ಪಮಾತ್ರವಾಗಲೀ ದೇಹದ ರೂಕ್ಷತೆಯಿಂದ ಆವರಿಸಲ್ಪಟ್ಟಿದ್ದರೆ ಉದಾಸೀನತೆಯಿಂದ ಸುಮ್ಮನೆ ಇದ್ದುಬಿಡಬೇಕು. ಒಂದುದಿನ ಕಳೆದರೂ ಹೊರಟು ಬಾರದಿದ್ದಾಗ ಶೋಧನೌಷಧಗಳಿಂದ ಹೊರಡಿಸಬೇಕು. ಒಂದುಸಾರಿ ಪ್ರಯೋಗಿಸಿದ ಸ್ನೇಹವು ಹೊರಟು ಬಾರದಿದ್ದರೆ ಮತ್ತೊಂದು ಸ್ನೇಹಬಸ್ತಿಯನ್ನು ಪ್ರಯೋಗಿಸಬಾರದು. ಈ ರೀತಿಯಾಗಿ ಬಸ್ತಿವ್ಯಾಪತ್ತುಗಳೆಲ್ಲವೂ ಅವುಗಳ ಲಕ್ಷಣ ಚಿಕಿತ್ಸೆಗಳೊಡನೆ ವಿವರಿಸಲ್ಪಟ್ಟಿರುತ್ತವೆ. ಇನ್ನುಮುಂದೆ ಉತ್ತರಬಸ್ತಿಯ ಪ್ರಯೋಗವಿಧಾನವನ್ನು ಹೇಳುತ್ತೇವೆ.

ಚತುರ್ದಶಾಙ್ಗುಳಂ ನೇತ್ರಮಾತುರಾಙ್ಗುಳಸಮ್ಮಿತಮ್ ।
ಮಾಲತೀಪುಷ್ಪವೃನ್ತಾಗ್ರಂ ಛಿದ್ರಂ ಸರ್ಷಪನಿರ್ಗಮಮ್ ॥೧೦೧॥
ಸ್ನೇಹಪ್ರಮಾಣಂ ಪರಮಂ ಪ್ರಕುಞ್ಚಶ್ಚಾತ್ರ ಕೀರ್ತಿತಃ ।
ಪಞ್ಚವಿಂಶಾದಧೋ ಮಾತ್ರಾಂ ವಿದಧ್ಯಾದ್ಬುದ್ಧಿಕಲ್ಪಿತಾಮ್ ॥೧೦೨॥
ನಿವಿಷ್ಟಕರ್ಣಿಕಂ ಮಧ್ಯೇ ನಾರೀಣಾಂ ಚತುರಙ್ಗುಳೇ ।
ಮೂತ್ರಸ್ರೋತಃ ಪರೀಣಾಹಂ ಮುದ್ಗವಾಹಿ ದಶಾಙ್ಗುಳಮ್ ॥೧೦೩॥
ಮೇಢ್ರಾಯಾಮಸಮಂ ಕೇಚಿದಿಚ್ಛನ್ತಿ ಖಲು ತದ್ವಿದಃ ।
ತಾಸಾಮಪತ್ಯಮಾರ್ಗೇ ತು ನಿದಧ್ಯಾಚ್ಚತುರಙ್ಗುಳಮ್ ॥೧೦೪॥
ದ್ವ್ಯಙ್ಗುಳಂ ಮೂತ್ರಮಾರ್ಗೇ ತು ಕನ್ಯಾನಾಂ ತ್ವೇಕಮಙ್ಗುಳಮ್ ।
ವಿಧೇಯಂ ಚಾಙ್ಗುಳಂ ತಾಸಾಂ ವಿಧಿವದ್ವಕ್ಷ್ಯತೇ ಯಥಾ ॥೧೦೫॥
ಸ್ನೇಹಸ್ಯ ಪ್ರಸೃತಂ ಚಾತ್ರ ಸ್ವಾಙ್ಗುಳೀಮೂಲಸಮ್ಮಿತಮ್ ।
ದೇಯಂ ಪ್ರಮಾಣಂ ಪರಮಮುರ್ವಾಗ್ ಬುದ್ಧಿವಿಕಲ್ಪಿತಮ್ ॥೧೦೬॥
ಔರಭ್ರಃ ಶೌಕರೋ ವಾಪಿ ಬಸ್ತಿರಾಜಶ್ಚ ಪೂಜಿತಃ ।
ತದಲಾಭೇ ಪ್ರಯುಞ್ಜೀತ ಗಳಚರ್ಮ ತು ಪಕ್ಷಿಣಾಮ್ ॥೧೦೭॥
ತಸ್ಯಾಲಾಭೇ ದೃತೇಃ ಪಾದೋ ಮೃದುಚರ್ಮ ತತೋಽಪಿವಾ ।

ರೋಗಿಯ ಬೆರಳುಗಳಲ್ಲಿ ಅಳತೆಮಾಡಿದ ೧೪ ಅಂಗುಳಿಗಳಷ್ಟು ಉದ್ದವಿರುವ ನಳಿಕೆಯನ್ನು ಉತ್ತರ ಬಸ್ತಿಪ್ರಯೋಗದಲ್ಲಿ ಉಪಯೋಗಿಸಬೇಕು. ಜಾಜಿಹೂವಿನ ತೊಟ್ಟಿನಂತೆ ಮೊನೆಯುಳ್ಳತುದಿಯಿರಬೇಕು, ರಂಧ್ರವು ಸಾಸಿವೆಯಕಾಳು ನುಗ್ಗುವಷ್ಟೇ ಸಣ್ಣದಾಗಿರಬೇಕು. ಮಧ್ಯದಲ್ಲಿ ಗುಂಡಗಿರುವ ತಿರುಪನ್ನು ಕಟ್ಟಿರಬೇಕು. ಬುಡದಲ್ಲಿ ೨ ಅಂಗುಳ ಬಿಟ್ಟು ಒಂದರಮೇಲೊಂದು ಬರುವಂತೆ ಎರಡುಗುಂಡು (ಕಟ್ಟು) ತಿರುಪುಗಳಿರಬೇಕು. ಅವುಗಳಲ್ಲಿ ಒಂದು ಮೂತ್ರ ಅಥವಾ ಅಪತ್ಯದ್ವಾರಕ್ಕೆ ತಡೆಯಾಗುವುದಕ್ಕೂ ಮತ್ತೊಂದು ಬಸ್ತಿಯಂತ್ರವನ್ನು ಬಿಗಿಯುವುದಕ್ಕೂ ಅನುಕೂಲಿಸುತ್ತದೆ. ಪುರುಷರ ಮೂತ್ರದ್ವಾರದೊಳಗೆ ೬ ಅಂಗುಳಿಗಳಷ್ಟು ದೂರ ನಾಳವು ಪ್ರವೇಶಿಸಬೇಕು. ಅದಕ್ಕಿಂತ ಹೆಚ್ಚುದೂರ ಪ್ರವೇಶಿದರೆ ಬಸ್ತ್ಯಾಶಯಕ್ಕೆ ಹಿಂಸೆಯಾಗುತ್ತದೆ. ಸ್ನೇಹದ ಕಡೆಯಪ್ರಮಾಣವು ೧ ಪಲಕ್ಕಿಂತಲೂ ಹೆಚ್ಚಾಗಿರಕೂಡದು. ೨೫ ವರ್ಷದೊಳಗಿರುವವರಿಗೆ ವರ್ಷಕ್ಕೆ ತಕ್ಕಂತೆ ಪ್ರಮಾಣದಲ್ಲಿ ಹೆಚ್ಚು ಕಡಿಮೆಮಾಡಿಕೊಳ್ಳಬೇಕು. ಹೇಗೆಂದರೆ—೧ ವರ್ಷದ ಬಾಲಕರಿಗೆ ೧/೨೫ ಪಲ ಸ್ನೇಹವಿರಬೇಕು. ೨ನೆಯ,ವರ್ಷದಲಾಗಾಯ್ತು ೨೫ ವರ್ಷದವರೆಗೂ ಪ್ರತಿವರ್ಷವೂ ೧/೨೫ ಪಲದಷ್ಟು ಹೆಚ್ಚಿಸಿಕೊಳ್ಳುತ್ತಾ ೨೫ ನೆಯವರ್ಷದಲ್ಲಿ ೧ ಪಲ ಪೂರ್ತಿಯಾಗುವಂತೆ ವಿಂಗಡಿಸಿಕೊಳ್ಳಬೇಕು. ಹೆಂಗಸಿಗೆ ಉತ್ತರಬಸ್ತಿನಾಳವು ೧೦ ಅಂಗುಳಿಗಳಷ್ಟು ಉದ್ದವಾಗಿ (ಕೆಲವರು ಪುರುಷರ ಶಿಶ್ನದಷ್ಟು ದಪ್ಪವಾಗಿರಬೇಕೆಂದೂ) ಹೆಸರುಕಾಳು ನುಗ್ಗುವಷ್ಟು ರಂಧ್ರವುಳ್ಳದಾಗಿ ತುದಿಯಿಂದ ೪ ಅಂಗುಳಿಗಳಷ್ಟು ದೂರದಲ್ಲಿ ಗುಂಡಾದ ಕಟ್ಟನ್ನು ಬಿಗಿದಿರಬೇಕು. ಇದು ಅಪತ್ಯಮಾರ್ಗದಲ್ಲಿ

ಪ್ರಯೋಗಿಸಲು ಯೋಗ್ಯವಾದದ್ದು. ಮೂತ್ರಮಾರ್ಗದಲ್ಲಿ ಪ್ರವೇಶಿಸುವ ನಾಡಿಯು ಮೂತ್ರಮಾರ್ಗಕ್ಕೆ ನುಗ್ಗುವಷ್ಟೇ ದಪ್ಪವಾಗಿರಬೇಕು. ಎರಡು ಅಂಗುಳಿಗಳಷ್ಟೇ ದೂರಕ್ಕೆ ನುಗ್ಗಿಸಬೇಕು. ಕನ್ಯೆಯರಿಗಾದರೆ ೧ ಅಂಗುಳಿಯಷ್ಟೇ ದೂರ ಪ್ರವೇಶಿಸಬೇಕು. ಉತ್ತರಬಸ್ತಿ ದಾನಕ್ಕೆ .ಸ್ನೇಹದ ಪ್ರಮಾಣವು ಅವರ ಕೈಬೆರಳುಗಳನ್ನು ಮಡಿಸಿಕೊಂಡು ಅಂಗೈಹಿಡಿಯುವಷ್ಟು ಪ್ರಮಾಣವಿರಬೇಕು. ಇದಕ್ಕೆ ಪ್ರಸೃತಿಯೆಂದು ಹೆಸರು. ರೋಗ ಬಲ ದೇಹಬಲಗಳಿಗೆ ತಕ್ಕಂತೆ ಈ ಪ್ರಮಾಣವನ್ನು ಹೆಚ್ಚು ಕಡಮೆ ಮಾಡಿಕೊಳ್ಳಬೇಕು. ಗರ್ಭಾಶಯವನ್ನು ಶೋಧನೆಮಾಡಬೇಕಾದಾಗ (ಗರ್ಭಾಧಾನ ಕಾಲ ಪ್ರಾಪ್ತ ವಾದಾಗ) ನಾಡಿಯು ೪ ಅಂಗುಳಿಗಳಷ್ಟು ಮಾತ್ರವೇ ಪ್ರವೇಶಿಸಬೇಕು. ಸ್ತ್ರೀಯರಿಗೆ ಉತ್ತರಬಸ್ತಿಯನ್ನು ಕೊಡುವಾಗ ಕುರಿ ಕಾಡುಹಂದಿ ಆಡು ಇವುಗಳ ಬಸ್ತಿ ಕೋಶಗಳು ಶ್ರೇಷ್ಠವಾದವು. ಅವು ದೊರೆಯದಿದ್ದರೆ ಪಕ್ಷಿಗಳ ಕತ್ತಿನ ಚರ್ಮವನ್ನು ಉಪಯೋಗ ಮಾಡಬೇಕು. ಅದು ದೊರೆಯದಿದ್ದರೆ ತಿದಿಯ ಕಾಲನ್ನಾಗಲೀ ಮೃದು ಚರ್ಮ ವನ್ನಾಗಲೀ ಉಪಯೋಗಿಸಬೇಕು.

||೧೦೮||
ಅಥಾತುರಮುಪಸ್ನಿಗ್ಧಂ ಸುಸ್ವಿನ್ನಂ ಪ್ರಥಿತಾಶಯಮ್
ಯವಾಗೂಂ ಸಘೃತಕ್ಷೀರಾಂ ಪೀತವನ್ತಂ ಯಥಾಬಲಮ್ |
||೧೦೯||
ನಿಷಣ್ಣಮಾಜಾಗನುಸಮೇ ಪೀಠೇ ಸ್ಥಾನಾಶ್ರಯೇ ಸಮೇ
ಸ್ವಭ್ಯಕ್ತಬಸ್ತಿಮೂರ್ಧಾನಂ ತೈಲೇನೋಷ್ಣೇನ ಮಾನವಮ್ |
||೧೧೦||
ತತಃ ಸಮಂ ಸ್ಥಾಪಯಿತ್ವಾ ನಾಲಮಸ್ಯ ಪ್ರಹರ್ಷಿತಮ್
ಪೂರ್ವಂ ಶಲಾಕಯಾನ್ವಿಷ್ಯ ತತೋ ನೇತ್ರಮನನ್ತರಮ್ |
||೧೧೧||
ಶನೈಃ ಶನೈರ್ಘೃತಾಭ್ಯಕ್ತಂ ವಿದಧ್ಯಾಪಜ್ಙ್ಗುಲಾನಿ ಷಟ್
ತತೋಽವಪೀಡಯೇದ್ಬಸ್ತಿಂ ಶನೈರ್ನೇತ್ರಂ ಚ ನಿರ್ಹರೇತ್ |
||೧೧೨||
ತತಃ ಪ್ರತ್ಯಾಗತಸ್ನೇಹಮಪರಾಹ್ಣೇ ವಿಚಕ್ಷಣಃ
ಭೋಜಯೇತ್ ಪಯಸಾ ಮಾತ್ರಂ ಯೂಷೇಣಾಥ ರಸೇನ ವಾ |
||೧೧೩||
ಅನೇನ ವಿಧಿನಾ ದದ್ಯಾದ್ಬಸ್ತೀಂ ಸ್ತ್ರೀಂಶ್ಚತ:ರೋಽಪಿ ವಾ

ಬಸ್ತಿಪ್ರಣಿಧಾನ ವಿಧಾನವು: ರೋಗಿಗೆ ಸ್ನೇಹಸ್ವೇದಗಳನ್ನು ಮಾಡಿಸಿ ಮಲಮೂತ್ರಗಳು ವಿಸರ್ಜನೆಯಾಗಿ ಆಶಯಗಳು ಶುದ್ಧವಾಗಿರುವಾಗ ಅವನ ಬಲಕ್ಕೆ ತಕ್ಕಂತೆ ಹಾಲು ತುಪ್ಪಮಿಶ್ರಮಾಡಿದ ಯವಾಗೂವನ್ನು ಪಾನಮಾಡಿಸಿ ಸಮವಾದ ಭೂಮಿಯಮೇಲೆ ಮಂಡಿಮಟ್ಟದಷ್ಟು ಎತ್ತರವಿರುವ ಕಾಲುಮಣೆಯನ್ನು ಇರಿಸಿ ರೋಗಿ ಯನ್ನು ಅದರಮೇಲೆ ಕೂಡಿಸಿ ಸುಖೋಷ್ಣವಾದ ತೈಲದಿಂದ ಅವನ ಬಸ್ತಿಯ ಮೇಲ್ಭಾಗ ದಲ್ಲಿ ಚೆನ್ನಾಗಿ ತಿಕ್ಕಿಸಿ ಶಿಶ್ನವು ಹರ್ಷಿತವಾಗಿ ಎದ್ದುನಿಂತಾಗ ನೇರಮಾಡಿ ಮೊದಲು ಸಣ್ಣ ಸಲಾಕೆಯನ್ನು ರಂಧ್ರದೊಳಕ್ಕೆ ನುಗ್ಗಿಸಿ ಶೋಧಿಸಿ (ಅಡ್ಡಿಯಿಲ್ಲದಂತೆಮಾಡಿ) ಅನಂತರ ಬಸ್ತಿನಾಡಿಯನ್ನು ತುಪ್ಪದಿಂದ ಲೇಪಿಸಿ ಮೆಲ್ಲಮೆಲ್ಲಗೆ ಮೂತ್ರದ್ವಾರದೊಳಗೆ ಆರು ಅಂಗುಲ

ಗಳಷ್ಟು ದೂರ ನುಗ್ಗಿಸಿದ ಮೇಲೆ ಬಸ್ತಿಯನ್ನು ಹಿಂಡಿ ಸ್ನೇಹವನ್ನು ಪ್ರಯೋಗಿಸಬೇಕು. ಬಸ್ತಿಯನ್ನು ಅಮುಕಿದರೆ ಸ್ನೇಹವು ನಾಳದಿಂದ ಮೂತ್ರದ್ವಾರದ ಮೂಲಕ ಹರಿದು ಬಸ್ತ್ಯಾಶಯಕ್ಕೆ ಸೇರುತ್ತದೆ). ಅನಂತರ ಮೆಲ್ಲಗೆ ನಾಳವನ್ನು ಹೊರಕ್ಕೆ ಹಿರಿದುಬಿಡ ಬೇಕು. ಸ್ನೇಹವು ಹೊರಕ್ಕೆ ಸುರಿದುಬಿಟ್ಟರೆ ಬುದ್ಧಿವಂತನಾದ ವೈದ್ಯನು ಮಧ್ಯಾಹ್ನದಲ್ಲಿ ರೋಗಿಗೆ ಹಾಲು ಹೆಸರುಕಟ್ಟು ಮಾಂಸರಸ ಇವುಗಳಲ್ಲೊಂದನ್ನು ಸೇರಿಸಿದ ಅನ್ನವನ್ನು ತಕ್ಕಷ್ಟು ಪ್ರಮಾಣದಿಂದ ಭೋಜನ ಮಾಡಿಸಬೇಕು. ಈ ರೀತಿಯಿಂದಲೇ ೩-೪ ಬಸ್ತಿ ಗಳನ್ನು ಪ್ರಯೋಗಿಸಬೇಕು.

ಊರ್ಧ್ವಜಾನ್ವೈ ಸ್ತ್ರಿಯೈ ದದ್ಯಾದುತ್ತಾನಾಯೈ ವಿಚಕ್ಷಣಃ ।
ಸಮ್ಯಕ್ ಪ್ರಪೀಡ್ಯ ಯೋದ್ಯೋನಿಂ ದದ್ಯಾತ್ ಸುಮೃದುಪೀಡಿತಮ್ ॥೧೧೪॥
ತ್ರಿಕರ್ಣಿಕೇನ ನೇತ್ರೇಣ ದದ್ಯಾದ್ಯೋನಿಮುಖಂ ಪ್ರತಿ ।
ಗರ್ಭಾಶಯವಿಶುದ್ಧ್ಯರ್ಥಂ ಸ್ನೇಹೇನ ದ್ವಿಗುಣೇನ ತು ॥೧೧೫॥
ಕ್ವಾಥಪ್ರಮಾಣಂ ಪ್ರಸೃತಂ ಸ್ತ್ರಿಯಾ ದ್ವಿಪ್ರಸೃತಂ ಭವೇತ್ ।
ಕನ್ಯೇತರೇಸ್ಯಾಃ ಕನ್ಯಾಸ್ತದ್ವದ್ಬಸ್ತಿಪ್ರಮಾಣಕಮ್ ॥೧೧೬॥

ಸ್ತ್ರೀಯರಿಗೆ ಉತ್ತರಬಸ್ತಿ ಪ್ರಯೋಗಿಸುವ ವಿಧಾನವು: ಕಾಮ ಚಪಲತೆಯಿಲ್ಲದೆ ಜಿತೆಂದ್ರಿಯನಾದ ವೈದ್ಯನು ಮೇಲಕ್ಕೆ ಮುಖಮಾಡಿ ಅಂಗತ್ತಲಾಗಿ ಮಲಗಿ ಎರಡು ಮಂಡಿಗಳನ್ನೂ ಮೇಲಕ್ಕೆ ಎತ್ತಿಕೊಂಡಿರುವ ಸ್ತ್ರೀಯ ಯೋನಿಯನ್ನು ಕೈಯ್ಯಿನಿಂದ ಸರಿಯಾಗಿ ಹಿಸುಕಿ ಮೂರುಕಟ್ಟಿನ ನಾಡಿಯನ್ನು ಯೋನಿದ್ವಾರದೊಳಕ್ಕೆ ನುಗ್ಗಿಸಿ ಬಸ್ತಿಯಂತ್ರವನ್ನು ಮೆತ್ತಗೆ ಅಮುಕುತ್ತಾ ಸ್ನೇಹಪ್ರಯೋಗವನ್ನು ಮಾಡಬೇಕು. (ಬಸ್ತಿಯಂತ್ರವನ್ನು ಒಂದೇಸಾರಿ ಮೆತ್ತಗೆ ಹಿಂಡಿದರೆ ಸ್ನೇಹವು ನಾಡಿಯ ಮೂಲಕ ಯೋನಿಮಾರ್ಗದಿಂದ ಹರಿದು ಗರ್ಭಾಶಯದೊಳಕ್ಕೆ ನುಗ್ಗುತ್ತದೆ). ಇಲ್ಲಿ ಸ್ನೇಹ ಪ್ರಮಾ ಣವು ಸ್ತ್ರೀಯಳು ಬೆರಳು ಮಡಿಸಿಕೊಂಡು ಅಂಗೈಹಿಡಿಯುವಷ್ಟು ಪ್ರಮಾಣಕ್ಕೆ ಶಾರೆ ಯೆಂದು ಹೆಸರು. ಇಂತಹ ೨ ಶಾರೆಯ ಪ್ರಮಾಣದಷ್ಟು ಸ್ನೇಹವನ್ನು ಗರ್ಭಾಶಯದ ಶುದ್ಧಿಗಾಗಿ ಪ್ರಯೋಗಿಸಬೇಕು. ಕಷಾಯವಾದರೆ ೧ ಶಾರೆಯಷ್ಟಿರಬೇಕು. ಹುಡುಗಿ ಯರಲ್ಲದ ಇತರ ಹೆಂಗಸರಿಗೆ ೨ ಪ್ರಸೃತಗಳಷ್ಟೂ, ೧೨ ವರ್ಷಗಳಿಗೆ ಕಡಮೆ ವಯಸ್ಸಿನ ಹುಡುಗಿಯರಿಗೆ ೧ ಪ್ರಸೃತದಷ್ಟೂ ಇರಬೇಕು.

ಅಪ್ರತ್ಯಾಗಚ್ಛತಿ ಭಿಷಕ್ ಬಸ್ತಾವುತ್ತರಸಂಜ್ಞಿತೇ ।
ಭೂಯೋ ಬಸ್ತಿಂ ನಿದಧ್ಯಾತ್ತು ಸಂಯುಕ್ತಂ ಶೋಧನೈರ್ಗಣೈಃ ॥೧೧೭॥
ಗುದೇ ವರ್ತಿಂ ನಿದಧ್ಯಾದ್ವಾ ಶೋಧನದ್ರವ್ಯಸಂಭೃತಾಮ್ ।
ಪ್ರವೇಶಯೇದ್ವಾ ಮತಿಮಾನ್ ಬಸ್ತಿದ್ವಾರಮಥೈಷಿಣೀಮ್ ॥೧೧೮॥
ಪೀಡಯೇದ್ವಾಪ್ಯಧೋನಾಭೇರ್ಬಲೇನೋತ್ತರಮುಷ್ಟಿನಾ ।
ಆರಗ್ವಧಸ್ಯ ಪತ್ರೇಷು ನಿರ್ಗುಣ್ಡ್ಯಾಃ ಸ್ವರಸೇಷು ಚ ॥೧೧೯॥

ಕುರ್ಯಾದ್ಗೋಮೂತ್ರಪಿಷ್ಟೇಷು ವರ್ತೀರ್ವಾಪಿ ಸಸೈನ್ಧವಾಃ ।
ಮುದ್ಗೈಲಾಸರ್ಷಪಸಮಾಃ ಪ್ರವಿಭಜ್ಯ ವಯಾಂಸಿ ತು ॥೧೨೦॥
ಬಸ್ತೇರಾಗಮನಾರ್ಥಾಯ ತಾ ನಿದಧ್ಯಾಚ್ಛಲಾಕಯಾ ।
ಆಗಾರಧೂಮಬೃಹತೀಪಿಪ್ಪಲೀಫಲ ಸೈಂಧವೈಃ ॥೧೨೧॥
ಕೃತಾ ವಾ ಶುಕ್ತಗೋಮೂತ್ರಸುರಾಪಿಷ್ಟೈಃ ಸನಾಗರೈಃ ।
ಅನುವಾಸನಸಿದ್ಧಂ ಚ ವೀಕ್ಷ್ಯ ಕರ್ಮ ಪ್ರಯೋಜಯೇತ್ ॥೧೨೨॥
ಶರ್ಕರಾಮಧುಮಿಶ್ರೇಣ ಶೀತೇನ ಮಧುಕಾಮ್ಬುನಾ ।
ದಹ್ಯಮಾನೇ ತದಾ ಬಸ್ತೌ ದದ್ಯಾದ್ಬಸ್ತಿಂ ವಿಚಕ್ಷಣಃ ॥೧೨೩॥
ಕ್ಷೀರವೃಕ್ಷಕಷಾಯೇಣ ಪಯಸಾ ಶೀತಲೇನ ಚ ।

ಉತ್ತರಬಸ್ತಿಯಲ್ಲಿ ಪ್ರಯೋಗಿಸಿದ ಸ್ನೇಹವು ಹಿಂದಕ್ಕೆ ಬರದಿದ್ದರೆ ವೈದ್ಯನು ಶೋಧನನೌಷಧ ದ್ರವ್ಯಗಳಿಂದ ತಯಾರಿಸಿದ ಕಷಾಯವನ್ನು ಸೇರಿಸಿ ಪುನಃ ಉತ್ತರ ಬಸ್ತಿಯನ್ನು ಪ್ರಯೋಗಿಸಬೇಕು. ಅಥವಾ ಶೋಧನ ದ್ರವ್ಯಗಳಿಂದ ತಯಾರಿಸಿದ ವರ್ತಿಯನ್ನು ಗುದದೊಳಕ್ಕೆ ಪ್ರವೇಶಿಸಬೇಕು. ಬುದ್ಧಿವಂತನಾದ ವೈದ್ಯನು ಬಸ್ತಿದ್ವಾರ ವನ್ನು ಏಷಣಶಲಾಕಿಯಿಂದ ಶೋಧಿಸಬೇಕು. ಬಲವಾಗಿ ಮುಷ್ಟಿ ಬಿಗಿದು ಹಿಡಿದು ಕೊಂಡು ಹೊಕ್ಕಳ ಕೆಳಗೆ ಉಜ್ಜಬೇಕು. ಕಕ್ಕೇಗಿಡದ ಎಲೆಗಳನ್ನು ಲಕ್ಕಿಸೊಪ್ಪಿನ ರಸ ದಲ್ಲಾಗಲೀ ಹಸುವಿನ ಗಂಜಳದಿಂದಾಗಲೀ ಅರೆದು ಕಲ್ಕಮಾಡಿ ಸೈಂಧವ ಮಿಶ್ರಮಾಡಿ ಬತ್ತಿಯನ್ನು ತಯಾರಿಸಿ ವಯಸ್ಸಿಗೆ ತಕ್ಕಂತೆ ಹೆಸರು ಏಲಕ್ಕಿಕಾಳು ಸಾಸಿವೆಯಷ್ಟು ದಪ್ಪನಾದ ಬತ್ತಿಗಳನ್ನು ಪ್ರಯೋಗಿಸಬೇಕು (ನುಗ್ಗಿಸಬೇಕು). ಬಸ್ತಿಯಿಂದ ಪ್ರಯೋಗಿಸಿದ ಸ್ನೇಹವು ಹೊರಟುಬರುವುದಕ್ಕಾಗಿ ಶಲಾಕೆಯಿಂದ ಈ ಬತ್ತಿಗಳನ್ನು ಒಳಗಡೆಗೆ ನೂಕಬೇಕು. ಇಲ್ಲಣ ಹೆಗ್ಗುಳ್ಳದಬೇರು ಹಿಪ್ಪಲಿ ಮಗ್ಗಾರೆ ಕಾಯಿ ಸೈಂಧವ ಶುಂಠಿ ಇವನ್ನು ಶುಕ್ತ (ಹುಳಿಕಲಗಚ್ಚು) ಗೋಮೂತ್ರ ಮದ್ಯ ಇವುಗಳೊಂದರಿಂದ ಅರೆದು ತಯಾರಿಸಿದ ಬತ್ತಿಯನ್ನಾಗಲೀ ಪ್ರಯೋಗಿಸಬೇಕು. ಅನುವಾಸನ ಬಸ್ತಿಯನ್ನು ಸರಿ ಯಾಗಿ ಪ್ರಯೋಗಿಸಿದಾಗ ಕಾಣುವ ಲಕ್ಷಣಗಳೇ ಉತ್ತರ ಬಸ್ತಿಯ ಸಮ್ಯಗ್ಯೋಗ ದಿಂದಲೂ ಕಂಡುಬರುತ್ತವೆಂದು ತಿಳಿಯಬೇಕು. ಸ್ನೇಹಪ್ರದಾನದಿಂದಾಗಲೀ ತೀಕ್ಷ್ಣೋಷ್ಣ ನಿರೂಹಪ್ರಯೋಗದಿಂದಾಗಲೀ ಪಿತ್ತಪ್ರಕೋಪವಾಗಿ ಬಸ್ತ್ಯಾಶಯದಲ್ಲಿ ಉರಿಯುಂಟಾದರೆ ಬುದ್ಧಿವಂತನಾದ ವೈದ್ಯನು ಆಲ ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯಕ್ಕೆ ಹಾಲನ್ನು ಸೇರಿಸಿ ಬಸ್ತಿಯನ್ನು ಪ್ರಯೋಗಮಾಡಬೇಕು.

ಶುಕ್ರಂ ದುಷ್ಟಂ ಶೋಣಿತಂ ಚಾಙ್ಗನಾನಾಂ ಪುಷ್ಪೋದ್ರೇಕಂ ತಸ್ಯನಾಶಂ ಚ ಕಷ್ಟಮ್ । ಮೂತ್ರಾಘಾತಾನ್ ಮೂತ್ರದೋಷಾನ್ ಪ್ರವೃದ್ಧಾನ್ ಯೋನಿವ್ಯಾಧಿಂ ಸಂಸ್ಥಿತಿಂ ಚಾಪ ರಾಯಾಃ ॥೧೨೪॥

ಶುಕ್ರೋತ್ಸೇಕಂ ಶರ್ಕರಾಮಶ್ಮರೀಂ ಚ ಶೂಲಂ ಬಸ್ತೌ ವಙ್ಕ್ಷಣೇಮೇಹನೇ ಚ । ಘೋರಾನನ್ಯಾನ್ ಬಸ್ತಿಜಾಂಶ್ಚಾಪಿ ರೋಗಾನ್ ಹಿತ್ವಾ ಮೇಹಾನುತ್ತರೋ ಹನ್ತಿ ಬಸ್ತಿಃ ॥೧೨೫॥

ಸಮ್ಯಗ್ದತ್ತಸ್ಯ ಲಿಙ್ಗಾನಿ ವ್ಯಾಪದಃ ಕ್ರಮ ಏವ ಚ ।
ಬಸ್ತೇರುತ್ತರಸಂಜ್ಞಸ್ಯ ಸಮಾನಂ ಸ್ನೇಹಬಸ್ತಿನಾ ॥೧೨೬॥

ದುಷ್ಟಶುಕ್ರವನ್ನೂ ಸ್ತ್ರೀಯರ ದುಷ್ಟಆರ್ತವವನ್ನೂ ಅಕಾಲದಲ್ಲಿ (ಋತುಕಾಲವನ್ನು ಬಿಟ್ಟು ಬೇರೆ ಕಾಲಗಳಲ್ಲಿ) ಅಧಿಕವಾಗಿ ರಜಸ್ಸುಸ್ರಾವವಾಗುತ್ತಿರುವುದನ್ನೂ ಅತಿಕಷ್ಟವಾದ ರಜೋನಾಶವನ್ನೂ ಮೂತ್ರಾಘಾತ ಅತಿಬಲವಾದ ಮೂತ್ರದೋಷ ಯೋನಿರೋಗ ಅಪರವು ಪ್ರವರ್ತಿಸದೆ ತಡೆದಿರುವುದು, ಅತಿಯಾಗಿ ಶುಕ್ರವು ಸ್ರಾವವಾಗುತ್ತಿರುವುದು ಮೂತ್ರಶರ್ಕರೆ ಅಶ್ಮರೀ ಬಸ್ತಿಶೂಲೆ ತೊಡೆಸಂದಿನಲ್ಲಿ ನೋವು ಶಿಶ್ನದಲ್ಲಿ ಶೂಲೆ ಮೇಹರೋಗವನ್ನು ಬಿಟ್ಟು ಇತರ ಅತಿಭಯಂಕರಗಳಾದ ಬಸ್ತಿರೋಗಗಳು. ಇವುಗಳನ್ನೆಲ್ಲಾ ಸರಿಯಾಗಿ ಪ್ರಯೋಗಿಸಿದ ಉತ್ತರಬಸ್ತಿಯಿಂದ ನಿವಾರಣೆಮಾಡಲು ಸಾಧ್ಯವಾಗುತ್ತದೆ. ಸರಿಯಾಗಿ ಪ್ರಯೋಗಿಸಿದ ಸ್ನೇಹಬಸ್ತಿಯ ಪ್ರಯೋಗದಲ್ಲಿ ಕಾಣುವ ಲಕ್ಷಣಗಳು, ದುಷ್ಟಕ್ರಮದಿಂದ ಪ್ರಯೋಗಿಸಿದರೆ ಸಂಭವಿಸುವ ಉಪದ್ರವಗಳು, ಅವುಗಳನ್ನು ನಿವಾರಣೆಮಾಡುವ ಚಿಕಿತ್ಸಾವಿಧಾನಗಳು, ಇವುಗಳನ್ನೆಲ್ಲಾ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇಽನುವಾಸನೋತ್ತರವಸ್ತಿ
ಚಿಕಿತ್ಸಾನಾಮ ಸಪ್ತತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪ
ನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಅಷ್ಟತ್ರಿಂಶತ್ತಮೋಽಧ್ಯಾಯಃ

ಅಥಾತೋ ನಿರೂಹಕ್ರಮ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ನಿರೂಹಬಸ್ತಿಕ್ರಮ ಚಿಕಿತ್ಸೆಗಳನ್ನು ವಿವರಿಸುತ್ತೇವೆ.

ಅಥಾನುವಾಸಿತಮಾಸ್ಥಾಪಯೇತ್ ಸ್ವಭ್ಯಕ್ತಸ್ವಿನ್ನಶರೀರಮುತ್ಸೃಷ್ಟಬಹಿರ್ವೇಗಮಪ್ರವಾತೇ ಶುಚೌ ವೇಶ್ಮನಿ ಮಧ್ಯಾಹ್ನೇ ಪ್ರತತಾಯಾಂ ಶಯ್ಯಾಯಾಮಧಃ ಸುಪರಿಗ್ರಹಾಯಾಂ ಶ್ರೋಣಿಪ್ರದೇಶವ್ಯೂಢಾಯಾಮನುಪಧಾನಾಯಾಂ ವಾಮಪಾರ್ಶ್ವಶಾಯಿನಮಾಕುಞ್ಚಿತದಕ್ಷಿಣಸಕ್ಥಿಮಿತರಪ್ರಸಾರಿತಸಕ್ಥಿಂ ಸುಮನಸಂ ಜೀರ್ಣಾನ್ನಂ ವಾಗ್ಯತಂ ಸುನಿಷಣ್ಣದೇಹಂ ವಿದಿತ್ವಾ ತತೋ ವಾಮಪಾದಸ್ಯೋಪರಿ ನೇತ್ರಂ ಕೃತ್ವೇತರಪಾದಾಙ್ಗುಷ್ಠಾಙ್ಗುಲಿಭ್ಯಾಂ ಕರ್ಣಿಕಾಮುಪರಿನಿಷ್ಪೀಡ್ಯ ಸವ್ಯಪಾಣಿಕನಿಷ್ಠಿಕಾನಾಮಿಕಾಭ್ಯಾಂ ಬಸ್ತೇರ್ಮುಖಾರ್ಧಂ ಸಙ್ಕೋಚ್ಯ ಮಧ್ಯಮಪ್ರದೇಶಿನ್ಯಙ್ಗುಷ್ಠೈರರ್ಧಂ ತು ವಿವೃತಾಸ್ಯಂ ಕೃತ್ವಾ ಬಸ್ತಾವೌಷಧಂ ಪ್ರಕ್ಷಿಪ್ಯ ದಕ್ಷಿಣಹಸ್ತಾಙ್ಗುಷ್ಠಪ್ರದೇಶಿನೀಭ್ಯಾಂ ಚಾನುಸಿಕ್ತಮನಾಯತಮಬುದ್ಬುದಮಸಙ್ಕುಚಿತಮವಾತಮೌಷಧಾಸನ್ನಮುಪಸಂಗೃಹ್ಯ ಪುನರಿತರೇಣ ಗೃಹೀತ್ವಾ ದಕ್ಷಿಣೇನಾವಸಿಞ್ಚೇತ ತತಃ ಸೂತ್ರೇಣ್ಯೈವೌಷಧಾನ್ತೇ ದ್ವಿಸ್ತ್ರಿರ್ವಾ ವೇಷ್ಟಯಿತ್ವಾ ಬಧ್ನೀಯಾತ್ । ಅಥದಕ್ಷಿಣೇನೋತ್ತಾನೇನ ಪಾಣಿನಾ ಬಸ್ತಿಂ ಗೃಹೀತ್ವಾ ವಾಮಹಸ್ತಮಧ್ಯಮಾಙ್ಗುಲಿಪ್ರದೇಶಿನೀಭ್ಯಾಂ ನೇತ್ರಮುಪಸಂಗ್ರಹ್ಯಾಙ್ಗುಷ್ಠೇನ ನೇತ್ರದ್ವಾರಂ ಪಿಧಾಯ ಘೃತಾಭ್ಯಕ್ತಾಗ್ರನೇತ್ರಂ ಘೃತಾಕ್ತಗುದಾಯ ಪ್ರಯಚ್ಛೇದನುಪೃಷ್ಠವಂಶಂ ಸಮಮುನ್ಮುಖಮಾಕರ್ಣಿಕಂ ನೇತ್ರಂ ಪ್ರಣಿಧತ್ಸ್ವೇತಿ ಬ್ರೂಯಾತ್ ||೩||

ಬಸ್ತಿಂ ಸವ್ಯೇ ಕರೇ ಕೃತ್ವಾ ದಕ್ಷಿಣೇನಾವಪೀಡಯೇತ್ ।
ಏಕೇನೈವಾವಪೀಡೇನ ನ ದ್ರುತಂ ನ ವಿಲಮ್ಬಿತಮ್ ||೪||

ತತೋ ನೇತ್ರಮುಪನೀಯ ತ್ರಿಂಶನ್ಮಾತ್ರಾಃ ಪೀಡನಕಾಲಾದುಪೇಕ್ಷ್ಯೋತ್ತಿಷ್ಠೇತ್ಯಾತುರಂ ಬ್ರೂಯಾತ್ । ಆತುರಮುಪವೇಶಯೇದುತ್ಕಟುಕಂ ಬಸ್ತ್ಯಾಗಮನಾರ್ಥಮ್ । ನಿರೂಹಪ್ರತ್ಯಾಗಮನಕಾಲಸ್ತು ಮುಹೂರ್ತೋ ಭವತಿ ||೫|| ಅನೇನ ವಿಧಿನಾ ಬಸ್ತಿಂ ದದ್ಯಾದ್ಬಸ್ತಿವಿಶಾರದಃ । ದ್ವಿತೀಯಂ ವಾ ತೃತೀಯಂ ವಾ ಚತುರ್ಥಂ ವಾ ಯಥಾರ್ಥತಃ ||೬||

ಸ್ನೇಹಬಸ್ತಿಯನ್ನು ಪ್ರಯೋಗಮಾಡಿದರೆ ಸ್ರೋತೋಮಾರ್ಗಗಳು ಸ್ನಿಗ್ಧವಾಗುವುದರಿಂದ ಸುಖವಾಗಿ ದೋಷಹರಣಮಾಡುವುದಕ್ಕಾಗಿ ಆಸ್ಥಾಪನಬಸ್ತಿ ವಿಧಾನವನ್ನು ವಿವರಿಸುತ್ತಾರೆ—ಶರೀರಕ್ಕೆ ಸ್ನೇಹಸ್ವೇದ ಕರ್ಮಗಳನ್ನು ಮಾಡಿಸಿ ಮಲಮೂತ್ರಗಳು ಸರಿಯಾಗಿ ವಿಸರ್ಜನೆಯಾದ ಮೇಲೆ ಎದುರುಗಾಳಿ ಬೀಸದಿರುವ ಶುಚಿಯಾದ ಮನೆಯಲ್ಲಿ ಮಧ್ಯಾಹ್ನಕಾಲದಲ್ಲಿ ತಲೆದಿಂಬಿಲ್ಲದ ಅಗಲವಾಗಿರುವ ಹಾಸಿಗೆಯಲ್ಲಿ ರೋಗಿಯನ್ನು ಎಡ

ಮಗ್ಗುಲಲ್ಲಿ ಮಲಗಿಸಿ ಕತ್ತಿನಿಂದ ಸೊಂಟದವರೆಗೆ ಹೊದ್ದಿಸಿ ಎಡಗಾಲನ್ನು ನೀಡಿ ಬಲ ಗಾಲನ್ನು ಮಡಿಸಿ ಮನಸ್ಸನ್ನು ಸಮಾಧಾನಮಾಡಿಕೊಂಡು ಆಹಾರವು ಜೀರ್ಣಿಸಿರುವಾಗ ವೈದ್ಯನು ಬಸ್ತಿನಾಳವನ್ನು ತನ್ನ ಎಡಗಾಲಿನ ಹೆಬ್ಬೆಟ್ಟು ಮತ್ತು ಇತರ ಬೆರಳುಗಳಲ್ಲಿ ಆ ನಾಳದಕಟ್ಟನ್ನು ಬಿಗಿಯಾಗಿ ಹಿಡಿದುಕೊಂಡು ಬಲಕ್ಕೆ ಕಿರುಬೆರಳು ಅನಾಮಿಕೆಗಳಿಂದ ಬಸ್ತಿಯಂತ್ರದ ಮುಖವನ್ನು ಅರ್ಧಮುಚ್ಚುವಂತೆಯೂ ಹೆಬ್ಬೆಟ್ಟು ಮಧ್ಯದ ಬೆಟ್ಟು ಮತ್ತು ತರ್ಜನಿಗಳಿಂದ ಬಸ್ತಿಮುಖವನ್ನು ಹಿಗ್ಗಲಿಸಿ ಬಸ್ತಿಯೊಳಕ್ಕೆ ನಿರೂಹೌಷಧವನ್ನು ತುಂಬಿ ತನ್ನ ಎಡದಕ್ಕೆ ಹೆಬ್ಬೆಟ್ಟು ಮತ್ತು ತರ್ಜನಿಗಳಿಂದ ಔಷಧವು ಚೆಲ್ಲದಂತೆಯೂ ಬಸ್ತಿಮುಖವು ಹಿಗ್ಗದಂತೆಯೂ ನೊರೆಬರದಂತೆಯೂ ಬಸ್ತಿಮುಖವು ಮಡಿಸಿಕೊಳ್ಳ ದಂತೆಯೂ ಔಷಧದ ಹತ್ತಿರದಲ್ಲಿ ಬಸ್ತಿಮುಖವನ್ನು ಹಿಡಿದು ನಾಡಿಯನ್ನು ಸಿಕ್ಕಿಸಿ ದಾರ ದಿಂದ ಬಿಗಿದುಕಟ್ಟಿ ಬಲಗೈಯ್ಯನ್ನು ಮೇಲ್ಮುಖಕ್ಕೆ ತಿರುಗಿಸಿ ಎಡಕ್ಕೆ ಹೆಬ್ಬೆಟ್ಟು ಮತ್ತು ತರ್ಜನಿಬೆರಳುಗಳಿಂದ ನಾಳವನ್ನು ಹಿಡಿದುಕೊಂಡು ಹೆಬ್ಬೆಟ್ಟನಿಂದ ನಾಳದ ರಂಧ್ರವನು ಮುಚ್ಚಿ ಅದರ ತುದಿಗೆ ತುಪ್ಪವನ್ನು ಬಳಿದು ರೋಗಿಯ ಗುದಕ್ಕೂ ತುಪ್ಪವನ್ನು ಸವರಿ ನಾಳವನ್ನು ಬೆನ್ನುಮೂಳೆಯ ಕಡೆಗೆ ಹೋಗುವಂತೆ ಗುದರಂಧ್ರದೊಳಕ್ಕೆ ನುಗ್ಗಿಸಿ ನೇರ ವಾಗಿ ಬಸ್ತಿಯಂತ್ರವನ್ನು ಹಿಡಿದು ನಾಳದಕರ್ಣಿಕೆಯು (ಕಟ್ಟು) ಗುದಕ್ಕೆ ತಗಲುವಂತೆ ಮಾಡಿ ಹಿಡಿದುಕೊಂಡಿರಬೇಕೆಂದು ರೋಗಿಗೆ ಹೇಳಿ ಅನಂತರ ವೈದ್ಯನು ಬಸ್ತಿಯನ್ನು ತನ್ನ ಎಡಗೈಯ್ಯಲ್ಲಿಟ್ಟುಕೊಂಡು ಬಲಗೈಯ್ಯಿಂದ ಅತಿಬೇಗವಾಗಿಯೂ ಇಲ್ಲದೆ ಅತಿನಿದಾನ ವಾಗಿಯೂ ಇಲ್ಲದೆ ಸಾಧಾರಣ ವೇಗದಿಂದ ಒಂದೇಸಾರಿ ಬಸ್ತಿಯನ್ನು ಹಿಂಡಿ ಔಷಧವೆಲ್ಲಾ ಗುದದೊಳಕ್ಕೆ ನುಗ್ಗಿಹೋಗುವಂತೆಮಾಡಿ ನಾಡಿಯನ್ನು ಗುದದಿಂದ ಹೊರಕ್ಕೆ ತೆಗೆದು ೩೦ ಮಾತ್ರಾಕಾಲದ ಮೇಲೆ ಎದ್ದು ಕುಕ್ಕುರುಗಾಲಿನಲ್ಲಿ ಕೂತುಕೊಳ್ಳಬೇಕೆಂದು ರೋಗಿಗೆ ಹೇಳಬೇಕು. ಇದರಿಂದ ಪ್ರಯೋಗಿಸಿದ ಬಸ್ತಿದ್ರವ್ಯವು ಹೊರಕ್ಕೆ ಬರಲು ಅನುಕೂಲ ವಾಗುತ್ತದೆ. ನಿರೂಹದ್ರವ್ಯವು ಹೊರಕ್ಕೆಬರಬೇಕಾದರೆ ೧ ಮುಹೂರ್ತಕಾಲ ಬೇಕಾ ಗುತ್ತದೆ. ಹಾಗೆ ಅದು ಬರದಿದ್ದರೆ ಕ್ಷಾರಾಮ್ಲಲವಣಗಳಿಂದ ಹೊರಕ್ಕೆ ಬರುವಂತೆ ಮಾಡಬೇಕು. ಸರಿಯಾದ ನಿರೂಹಪ್ರಯೋಗದ ಲಕ್ಷಣಗಳುಂಟಾಗುವರೆಗೂ ಇದೇ ರೀತಿಯಾಗಿ ೨-೩-೪ ನಿರೂಹಬಸ್ತಿಗಳನ್ನು ಪ್ರಯೋಗಮಾಡಬೇಕು.

ಟಿಪ್ಪಣಿ—ಮಾತ್ರಾಕಾಲ: ಬಲಗಡೆ ಮಂಡಿಯಮೇಲೆ ಇರುವ ಗುಟಕೆಯ ಸುತ್ತಲೂ ಬೆರಳನ್ನು ತಿರುಗಿಸುವಷ್ಟುಕಾಲ ಅಥವಾ ಕಣ್ಣುರೆಪ್ಪೆಗಳನ್ನು ಮುಚ್ಚಿತೆಗೆಯು ವಷ್ಟು ಕಾಲಕ್ಕೆ ೧ ಮಾತ್ರಾಕಾಲವೆಂದು ಸಂಜ್ಞೆಯು. ಪರಾಶರರು ಕ್ರೂರಕೋಷ್ಠದವ ರಿಗೆ ಮೃದುಕೋಷ್ಠ ಮಧ್ಯಕೋಷ್ಠದವರಿಗಿಂತ ಹೆಚ್ಚುಕಾಲ ನಿರೀಕ್ಷಿಸಬೇಕೆಂದು ಹೇಳಿರು ತ್ತಾರೆ. ಅಂದರೆ ಕ್ರೂರ ಮಧ್ಯ ಮೃದು ಕೋಷ್ಠವುಳ್ಳವರಿಗೆ ಕ್ರಮವಾಗಿ ೧೦೦-೭೦-೩೦ ಮಾತ್ರಾಕಾಲಗಳು ಬೇಕಾಗುತ್ತದೆ. ಸುಶ್ರುತರು ೩೦ ಮಾತ್ರಾಕಾಲವನ್ನು ನಿರ್ದೇಶಿಸಿ ರುತ್ತಾರೆ. ಇದರಿಂದ ಪರಸ್ಪರ ವಿರುದ್ಧವೆಂದು ಹೇಳುವುದಾದರೆ—೩೦ ಮಾತ್ರೆಗಳಾದ

ನಂತರ ವೈದ್ಯನ ಮತದಂತೆ ರೋಗಿಯು ಮೇಲಕ್ಕೆ ಎದ್ದು ಕುಕ್ಕುರುಗಾಲಿನಲ್ಲಿ ಕೂತು ಕೊಳ್ಳುವಷ್ಟು ಹೊತ್ತಿಗೆ ೧೦೦ ಮಾತ್ರೆಗಳಷ್ಟು ಕಾಲವು ಕಳೆದೇ ಹೋಗುತ್ತದೆಯಾಗಿ ಶಾಸ್ತ್ರವಚನಗಳು ಪರಸ್ಪರ ವಿರುದ್ಧಗಳಾಗುವುಗಲ್ಲವೆಂದು ತಿಳಿಯಬೇಕು.

ಸಮ್ಯಙ್ನಿರೂಢಲಿಙ್ಗೇ ತಂ ಪ್ರಾಪ್ತೇ ಬಸ್ತಿಂ ನಿವಾರಯೇತ್ ।
ಅಪಿ ಹೀನಕ್ರಮಂ ಕುರ್ಯಾನ್ನ ತು ಕುರ್ಯಾದತಿಕ್ರಮಮ್ ॥೭॥
ವಿಶೇಷಾತ್ ಸುಕುಮಾರಾಣಾಂ ಹೀನ ಏವಕ್ರಮೋ ಹಿತಃ ।
ಯಸ್ಯ ಸ್ಯಾದ್ಬಸ್ತಿರತ್ಯಲ್ಪವೇಗೋ ಹೀನಮಲಾನಿಲಃ ॥೮॥
ದುರ್ನಿರೂಢಃ ಸವಿಜ್ಞೇಯೋ ಮೂತ್ರಾರ್ತ್ಯರುಚಿಜಾಡ್ಯವಾನ್ ।
ಯಾನ್ಯೇವ ಪ್ರಾಕ್ಪ್ರಯುಕ್ತಾನಿ ಲಿಙ್ಗಾನ್ಯತಿವಿರೇಚಿತೇ ॥೯॥
ತಾನ್ಯೇವಾತಿನಿರೂಢೇಽಪಿ ವಿಜ್ಞೇಯಾನಿ ವಿಪಶ್ಚಿತಾ ।
ಯಸ್ಯ ಕ್ರಮೇಣ ಗಚ್ಛನ್ತಿ ವಿಟ್‌ಪಿತ್ತಕಫವಾಯವಃ ॥೧೦॥
ಲಾಘವಂ ಚೋಪಜಾಯೇತ ಸುನಿರೂಢಂ ತಮಾದಿಶೇತ್ ।

ಸರಿಯಾದ ನಿರೂಹಬಸ್ತಿ ಪ್ರಯೋಗದ ಲಕ್ಷಣಗಳುಂಟಾದರೆ ಬಸ್ತಿಪ್ರಯೋಗ ವನ್ನು ನಿಲ್ಲಿಸಬೇಕು. ಹೀನಕ್ರಮವನ್ನಾದರೂ ಅನುಸರಿಸಬಹುದು. ಆದರೆ ಅತಿಯಾದ ಅಪಾಯವನ್ನುಂಟುಮಾಡುವ ಕ್ರಮಗಳನ್ನು ಅನುಸರಿಸಬಾರದು. ಸುಕುಮಾರ ದೇಹ ವುಳ್ಳವರಿಗೆ ವಿಶೇಷವಾಗಿ ಹೀನವೇಗದ ಬಸ್ತಿಕ್ರಮವೇ ಹಿತವಾದದ್ದು. ಯಾರಿಗೆ ಅಲ್ಪ ವೇಗವುಂಟಾಗುತ್ತದೋ ಹೀನಪ್ರಮಾಣದಿಂದ ಮಲವೂ ಅಪಾನವಾತವೂ ಹೊರಕ್ಕೆ ಹೊರಡುತ್ತದೋ ಅದು ಹೀನಯೋಗದ ಬಸ್ತಿಪ್ರಯೋಗವು. ಇದರಿಂದ ರೋಗಿಗೆ ಮೂತ್ರಪೀಡೆಯೂ ಅರೋಚಕತೆಯೂ ಜಡತೆಯೂ ಉಂಟಾಗುತ್ತವೆ. ಬುದ್ಧಿವಂತನು ಅತಿವಿರೇಚನ ಮಾಡಿದವನಿಗೆ ಉಂಟಾಗುವ ಲಕ್ಷಣಗಳೇ ಅತಿನಿರೂಢವಾದವನಿಗೂ ಉಂಟಾಗುತ್ತವೆಂದು ತಿಳಿಯಬೇಕು. ಮಲ ಪಿತ್ತ ಕಫ ವಾತಗಳು ಒಂದಾದಮೇಲೆ ಮತ್ತೊಂದು ಕ್ರಮವಾಗಿ ವಿಸರ್ಜನೆಯಾಗಿ ದೇಹವು ಹಗುರವಾದರೆ ಸರಿಯಾಗಿ ನಿರೂಹ ಬಸ್ತಿ ಪ್ರಯೋಗವುಂಟಾಗಿರುತ್ತೆಂದು ತಿಳಿಯಬೇಕು.

ಸುನಿರೂಢಂ ತತೋ ಜನ್ತುಂ ಸ್ನಾತವನ್ತಂ ತು ಭೋಜಯೇತ್ ॥೧೧॥
ಪಿತ್ತಶ್ಲೇಷ್ಮಾನಿಲಾವಿಷ್ಟಂ ಕ್ಷೀರಯೂಷರಸೈಃ ಕ್ರಮಾತ್ ।
ಸರ್ವಂ ವಾ ಜಾಙ್ಗಲರಸೈರ್ಭೋಜಯೇದವಿಕಾರಿಭಿಃ ॥೧೨॥
ತ್ರಿಭಾಗಹೀನಮರ್ಧಂ ವಾ ಹೀನಮಾತ್ರಮಥಾಪಿ ವಾ ।
ಯಥಾಗ್ನಿದೋಷಂ ಮಾತ್ರೇಯಂ ಭೋಜನಸ್ಯ ವಿಧೀಯತೇ ॥೧೩॥
ಅನನ್ತರಂ ತತೋ ಯುಞ್ಜ್ಯಾದ್ಯಥಾಸ್ನಂ ಸ್ನೇಹಬಸ್ತಿವಾ ।

ನಿರೂಹಬಸ್ತಿಯ ಲಕ್ಷಣಗಳು ಸರಿಯಾಗಿ ಉಂಟಾದಮೇಲೆ ಆ ರೋಗಿಗೆ ಸ್ನಾನ ಮಾಡಿಸಿ ಅವನ ದೇಹದಲ್ಲಿರುವ ಪಿತ್ತ ಕಫ ವಾತದೋಷಗಳಿಗೆ ಅನುಸಾರವಾಗಿ ಹಾಲು

ಹೆಸರುಕಟ್ಟು ಮಾಂಸರಸ ಇವುಗಳನ್ನು ಮಿಶ್ರಮಾಡಿದ ಅಥವಾ ರೋಗಕರವಲ್ಲದ ಜಾಂಗಲ ಮಾಂಸರಸ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು. ಅಗ್ನಿ ಶಕ್ತಿಗೆ ತಕ್ಕಂತೆ (ಮೃದು ಮಧ್ಯಸಮಾಗ್ನಿಗಳು) ಮೂರುಭಾಗ ಅರ್ಧಭಾಗ ಕಾಲುಭಾಗ ದಂತೆ ಕಡಮೆ ಭೋಜನಮಾಡಿ ಅವರವರ ದೋಷ ಪ್ರಕೋಪಗಳಿಗೆ ತಕ್ಕಷ್ಟು ಪ್ರಮಾ ಣದ ಸ್ನೇಹವನ್ನು ಸೇರಿಸಿ ಅನುವಾಸನಬಸ್ತಿಯನ್ನು ಪ್ರಯೋಗಮಾಡಬೇಕು.

ಟಿಪ್ಪಣಿ—ಸರಿಯಾಗಿ ನಿರೂಹಬಸ್ತಿಪ್ರಯೋಗವಾಗಿರುವವನಿಗೆ ಶುಂಠಿಯನ್ನು ಸೇರಿಸಿ ಕಾಯಿಸಿದ ಬಿಸಿ ನೀರನ್ನು ಕುಡಿಸಿ ಬಿಸಿನೀರಿನಿಂದ ಸ್ನಾನಮಾಡಿಸಿ ಅನಂತರ ತಕ್ಕಪ್ರಮಾಣದಿಂದ ಭೋಜನಮಾಡಿಸಿ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕೆಂದು ಕೆಲ ವರ ಮತವು. ಅತಿವಿರೇಚನವಾದವನಿಗೆ ಶೀತಳವಾದ ನೀರಿನಿಂದ ಸೇಚನೆಯನ್ನೂ ಪಿಚ್ಛಾಬಸ್ತಿಯನ್ನೂ ಕೊಡಬೇಕು. ಆದರೆ ಸ್ನೇಹಬಸ್ತಿಯನ್ನು ಪ್ರಯೋಗಿಸಕೂಡದು. ಹಾಗೆಯೇ ಅತಿತೀಕ್ಷ್ಣೌಷಧಿಗಳಿಂದ ನಿರೂಹಮಾಡಿಸಿ ಸಕಲ ದೇಹಭಾಗಗಳಿಂದಲೂ ದೋಷನಿರ್ಹರಣೆಯಾದವರಿಗೆ ಅಲ್ಪಸ್ನೇಹ ಪ್ರಯೋಗವು ಯೋಗ್ಯವಲ್ಲ. ಗಯದಾಸಾ ಚಾರ್ಯನು ೬ ಪಲ ಪ್ರಮಾಣದ ಸ್ನೇಹಬಸ್ತಿಪ್ರಯೋಗವನ್ನು ಅನುಮೋದಿಸುವುದಿಲ್ಲ. ೩ ಪಲ ಪ್ರಮಾಣದಷ್ಟು ಸ್ನೇಹವುಳ್ಳ ಬಸ್ತಿಯನ್ನು ಪ್ರಯೋಗಿಸಬೇಕೆಂದೂ ಸ್ನೇಹಬಸ್ತಿ ಯನ್ನು ಸ್ವತಂತ್ರವಾಗಿ ಪ್ರಯೋಗಿಸಬೇಕಾದಾಗ ೬ ಪಲ ಸ್ನೇಹವಿರಬೇಕೆಂದೂ ಅಭಿಪ್ರಾಯಪಡುತ್ತಾನೆ.

ವಿವಿಕ್ತತಾ ಮನಸ್ತುಷ್ಟಿಃ ಸ್ನಿಗ್ಧತಾ ವ್ಯಾಧಿನಿಗ್ರಹಃ ॥೧೪॥
ಆಸ್ಥಾಪನಸ್ನೇಹವಸ್ತ್ಯೋಃ ಸಮ್ಯಗ್ದಾನೇ ತು ಲಕ್ಷಣಮ್ ।
ತದಹಸ್ತಸ್ಯ ಪವನಾದ್ಭಯಂ ಬಲವದಿಷ್ಯತೇ ॥೧೫॥
ರಸೌದನಸ್ತೇನ ಶಸ್ತಸ್ತದಹಶ್ಚಾನುವಾಸನಮ್ ।
ಪಶ್ಚಾದಗ್ನಿಬಲಂ ಮತ್ವಾ ಪವನಸ್ಯ ಚ ಚೇಷ್ಟಿತಮ್ ॥೧೬॥
ಅನ್ನೋಪಸ್ತಮ್ಭಿತೇ ಕೋಷ್ಠೇ ಸ್ನೇಹಬಸ್ತಿರ್ವಿಧೀಯತೇ
ಅನಾಯಾನ್ತಂ ಮುಹೂರ್ತಾತ್ತು ನಿರೂಹಂ ಶೋಧನೈರ್ಹರೇತ್ ॥೧೭॥
ತೀಕ್ಷ್ಣೈರ್ನಿರೂಹೈರ್ಮತಿಮಾನ್ ಕ್ಷಾರಮೂತ್ರಾಮ್ಲಸಂಯುತೈಃ
ವಿಗುಣಾನಿಲವಿಷ್ಟಬ್ಧಂ ಚಿರಂ ತಿಷ್ಠನ್ನಿರೂಹಣಮ್ ॥೧೮॥
ಶೂಲಾರತಿಜ್ವರಾನಾಹಂ ಮರಣಂ ವಾ ಪ್ರವರ್ತಯೇತ್
ನ ತು ಭುಕ್ತವತೇ ದೇಯಮಾಸ್ಥಾಪನಮಿತಿ ಸ್ಥಿತಿಃ ॥೧೯॥
ವಿಷೂಚಿಕಾಂ ವಾ ಜನಯೇಚ್ಛರ್ದಿಂ ವಾಪಿ ಸುದಾರುಣಾಮ್
ಕೋಪಯೇತ್ಸರ್ವದೋಷಾನ್ವಾ ತಸ್ಮಾದ್ದದ್ಯಾದಭೋಜಿತೇ ॥೨೦॥
ಜೀರ್ಣಾನ್ನಸ್ಯಾಶಯೇ ದೋಷಾಃ ಪುಂಸಃ ಪ್ರವ್ಯಕ್ತಿಮಾಗತಾಃ
ನಿಃಶೇಷಾಃ ಸುಖಮಾಯಾನ್ತಿ ಭೋಜನೇನಾಪ್ರಪೀಡಿತಾಃ ॥೨೧॥
ನ ವಾಸ್ಥಾಪನವಿಕ್ಷಿಪ್ತಮನ್ನಮಗ್ನಿಃ ಪ್ರಧಾವತಿ ।

ತಸ್ಮಾದಾಸ್ಥಾಪನಂ ದೇಯಂ ನಿರಾಹಾರಾಯ ಜಾನತಾ ||೨೨||
ಆವಸ್ಥಿಕಂ ಕ್ರಮಂ ಚಾಪಿ ಮತ್ವಾ ಕಾರ್ಯಂ ನಿರೂಹಣಮ್
ಮಲೇಽಪಕೃಷ್ಟೇ ದೋಷಾಣಾಂ ಬಲವತ್ವಂ ನ ವಿದ್ಯತೇ ||೨೩||

ರಸಾದಿ ಧಾತುಗಳ ಸ್ರೋತೋಮಾರ್ಗಗಳು ಕಫಾದಿ ದೋಷಗಳಿಂದ ಆವರಿಸದೆ ಮನಸ್ಸಿಗೆ ತೃಪ್ತಿಯೂ ಶರೀರದಲ್ಲಿ ಸ್ನಿಗ್ಧತ್ವವೂ ವ್ಯಾಧಿನಿವಾರಣೆಯೂ ಉಂಟಾದರೆ ನಿರೂಹಬಸ್ತಿಸ್ನೇಹಬಸ್ತಿಗಳು ಸರಿಯಾಗಿ ಪ್ರಯೋಗಿಸಲ್ಪಟ್ಟಿರುತ್ತವೆಂದು ತಿಳಿಯಬೇಕು. ನಿರೂಹಬಸ್ತಿಯನ್ನು ಪ್ರಯೋಗಿಸಿದ ದಿನ ಅಧಿಕವಾಗಿ ವಾತದಿಂದ ಭಯವುಂಟಾಗುವ ಕಾರಣ ರೋಗಿಗೆ ಮಾಂಸರಸ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಿ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು. ಆಮೇಲೆ ಅಗ್ನಿಶಕ್ತಿಯನ್ನೂ ವಾತಚೇಷ್ಟೆಗಳನ್ನೂ ತಿಳಿದು ಅವುಗಳಿಗೆ ಅನುಗುಣವಾಗಿ ಕೋಷ್ಠದಲ್ಲಿ ಆಹಾರ ನಿಲ್ಲುವಂತೆಮಾಡಿ (ಭೋಜನಮಾಡಿಸಿ) ೬ ಪಲ ಘೃತಸೇರಿದ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕು. ಪ್ರಯೋಗಿಸಿದ ನಿರೂಹ ಬಸ್ತಿಯ ದ್ರವ್ಯವು ೧ ಮುಹೂರ್ತದವರೆಗಾದರೂ ಹೊರಕ್ಕೆ ಬರದಿದ್ದರೆ ಬುದ್ಧಿಶಾಲಿಯಾದ ವನು ತೀಕ್ಷ್ಣಗಳಾದ ಕ್ಷಾರ ಅಮ್ಲ ಕಾಂಜಿಕ ಗೋಮೂತ್ರಗಳನ್ನು ಮಿಶ್ರಮಾಡಿದ ನಿರೂಹ ವನ್ನು ಪ್ರಯೋಗಿಸಬೇಕು. ವಿಗುಣವಾತದಿಂದ ಪ್ರಯೋಗಿಸಿದ ನಿರೂಹದ್ರವ್ಯವು ತಡೆ ಯಲ್ಪಟ್ಟು ದೀರ್ಘಕಾಲದವರೆಗೂ ನಿಂತು ಶೂಲೆ ಮನೋದುಃಖ ಜ್ವರ ಹೊಟ್ಟೆಯುಬ್ಬರ ಮರಣ ಇವೆಲ್ಲವನ್ನೂ ಉಂಟುಮಾಡುತ್ತದೆ. ಊಟಮಾಡಿರುವವರಿಗೆ ನಿರೂಹಬಸ್ತಿ ಯನ್ನು ಪ್ರಯೋಗಿಸಿದರೆ ಅತಿಭಯಂಕರಗಳಾದ ವಿಸೂಚಿಕಾಜೀರ್ಣವೂ ವಮನವೂ ಉಂಟಾಗುತ್ತದೆ. ಅಥವಾ ಎಲ್ಲಾ ದೋಷಗಳೂ ಪ್ರಕೋಪಗೊಳ್ಳುತ್ತವೆ. ಆದ್ದರಿಂದ ಭೋಜನಮಾಡದಿರುವಾಗ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು. ಆಹಾರವು ಜೀರ್ಣಿಸಿರುವವನಿಗೆ ಆಶಯಗಳಲ್ಲಿ ದೋಷಗಳು ಜಮಾಯಿಸಿದ್ದರೆ ಆಹಾರವಿಲ್ಲದ್ದರಿಂದ ಅವು ಭೋಜನದಿಂದ ತಡೆಯಲ್ಪಡದೆ ನಿಃಶ್ಶೇಷವಾಗಿ ಹೊರಕ್ಕೆ ಹೊರಟುಬರುತ್ತವೆ. ಆಸ್ಥಾಪನದಿಂದ (ಕಲಕಿದ) ಕ್ಷೋಭೆಹೊಂದಿದ ಅನ್ನವನ್ನು ಜಾಠರಾಗ್ನಿಯು ಜೀರ್ಣ ಮಾಡುವುದಿಲ್ಲ. ಆದಕಾರಣ ನಿರಾಹಾರಿಯಾದವನಿಗೆ ಆಸ್ಥಾಪನಬಸ್ತಿಯನ್ನು ಪ್ರಯೋಗಿಸ ಬೇಕು. ಶೂಲೆ ಹೊಟ್ಟೆಯುಬ್ಬರ ಮೊದಲಾದ ವ್ಯಾಧ್ಯವಸ್ಥೆಗಳಲ್ಲಿ ನಿರೂಹಪ್ರಯೋಗ ವನ್ನು ಮಾಡಬೇಕು. ಏಕೆಂದರೆ ಮಲವು ಕ್ಷೀಣವಾದರೆ ದೋಷಗಳು ಪ್ರಬಲಗೊಳ್ಳು ವುದಿಲ್ಲ.

ಕ್ಷೀರಾಣ್ಯಮ್ಲಾನಿ ಮೂತ್ರಾಣಿ ಸ್ನೇಹಾ ಕ್ವಾಥಾರಸಾಸ್ತಥಾ
ಲವಣಾನಿ ಫಲಕ್ಷೌದ್ರಂ ಶತಾಹ್ವಾ ಸರ್ಷಪಂ ವಚಾ ||೨೪||
ಏಲಾ ತ್ರಿಕಟುಕಂ ರಾಸ್ನಾ ಸರಳಂ ದೇವದಾರು ಚ ।
ರಜನೀ ಮಧುಕಂ ಹಿಙ್ಗು ಕುಷ್ಠಂ ಸಂಶೋಧನಾನಿ ಚ ||೨೫||
ಕಟುಕಾ ಶರ್ಕರಾ ಮುಸ್ತಮುಶೀರಂ ಚನ್ದನಂ ಶಠೀ ।

ಮಞ್ಜಿಷ್ಠಾ ಮದನಂ ಚಣ್ಡಾ ತ್ರಾಯಮಾಣಾ ರಸಾಞ್ಜನಮ್ ॥೨೬॥
ಬಿಲ್ವಮಧ್ಯಂ ಯಮಾನೀ ಚ ಫಲಿನೀ ಶಕ್ರಜಾ ಯವಾಃ ।
ಕಾಕೋಳೀ ಕ್ಷೀರಕಾಕೋಳೀ ಜೀವಕರ್ಷಭಕಾವುಭೌ ॥೨೭॥
ತಥಾ ಮೇಧಾ ಮಹಾಮೇಧಾ ಋದ್ಧಿವೃದ್ಧಿರ್ಮಧೂಲಿಕಾ ।
ನಿರೂಹೇಷು ಯಥಾಲಾಭಮೇಷವರ್ಗೋ ವಿಧೀಯತೇ ॥೨೮॥

ಎಲ್ಲಾ ಹಾಲುಗಳೂ ಹುಳಿಪದಾರ್ಥಗಳೂ ಮೂತ್ರಗಳೂ ಸ್ನೇಹಗಳೂ ಕ್ವಾಥಗಳೂ ಮಾಂಸರಸಗಳೂ ಲವಣಗಳೂ ಫಲಗಳೂ ಮಗ್ಗಾರೆಕಾಯಿ ಜೇನುತುಪ್ಪ (ಭೇದಗಳು) ಸಬ್ಬಸಿಗೆಬೀಜ ಸಾಸಿವೆ ಬಜೆ ಏಲಕ್ಕಿ ತ್ರಿಕಟುಕ ರಾಸ್ನೆ ಸರಳದೇವದಾರು ತುಪ್ಪ ದೇವ ದಾರು ಅರಿಶಿನ ಅತಿಮಧುರ ಹಿಂಗು ಚಂಗಲ್‌ಕೋಷ್ಠ ಇವು ಶೋಧನಮಾಡಿಸುತ್ತವೆ. ಕಟುಕರೋಹಿಣಿ ಸಕ್ಕರೆ ಕೊನ್ನಾರಿಗೆಡ್ಡೆ ಲಾಮಂಚ ಶ್ರೀಗಂಧ ರಕ್ತಚಂದನ ಕರ್ಪೂರ ಶುಂಠಿ ಮಞ್ಜಿಷ್ಠೆ ಮಗ್ಗಾರೆಕಾಯಿ ಕಚೋರ ಕಹಿದಸರಿ ರಸಾಂಜನ ಬಿಲ್ವಪತ್ರೆಹಣ್ಣಿನ ತಿರುಳು ವಾದಕ್ಕಿ ನೆಲಲು ಕೊಡಸಿಗೆಬೀಜ ಕಾಕೋಳ್ಯಾದಿ ಗಣದ್ರವ್ಯಗಳು ನೀರಿನಲ್ಲಿ ಬೆಳೆಯುವ ಅತಿಮಧುರ ಇವುಗಳಲ್ಲಿ ದೊರೆತಷ್ಟು ದ್ರವ್ಯಗಳನ್ನು ನಿರೂಹ ಬಸ್ತಿಗೆ ಉಪ ಯೋಗಿಸಬೇಕು.

ಸ್ವಸ್ಥೇ ಕ್ವಾಥಸ್ಯ ಚತ್ವಾರೋ ಭಾಗಾಃ ಸ್ನೇಹಸ್ಯ ಪಞ್ಚಮಃ ।
ಕ್ರುದ್ಧೇಽನಿಲೇ ಚತುರ್ಥಸ್ತು ಷಷ್ಠಃ ಪಿತ್ತೇ ಕಫೇಽಷ್ಟಮಃ ॥೨೯॥
ಸರ್ವೇಷು ಚಾಷ್ಟಮೋ ಭಾಗಃ ಕಲ್ಕಾನಾಂ ಲವಣಂ ಪುನಃ ।
ಕ್ಷೌದ್ರಂ ಮೂತ್ರಂ ಫಲಂ ಕ್ಷೀರಮಮ್ಲಂ ಮಾಂಸರಸಂ ತಥಾ ।
ಯುಕ್ತ್ಯಾ ಪ್ರಕಲ್ಪಯೇದ್ಧೀಮಾನ್ ನಿರೂಹೇ ಕಲ್ಪನಾತ್ರಿಯಮ್ ॥೩೦॥
ಕಲ್ಕಸ್ನೇಹಕಷಾಯಾಣಾಮವಿವೇಕಾದ್ಭಿಷಗ್ವರೈಃ ।
ಬಸ್ತಿಸ್ತು ಕಲ್ಪಿತಃ ಸಮ್ಯಕ್ ತಸ್ಯ ದಾನಂ ಯಥಾರ್ಥಕೃತ್ ॥೩೧॥

ಆರೋಗ್ಯವಾಗಿರುವ ಪುರುಷನಿಗೆ ನಿರೂಹಮಾಡಬೇಕಾದರೆ ಕಷಾಯವು ೮ ಪಲ ೪ ಪ್ರಸೃತಗಳು ಸ್ನೇಹವು ೫ ಪಲಗಳು ಕಲ್ಕವು ೩ ಪಲಗಳು ಇರಬೇಕು. ಸ್ನೇಹವು ವಾತಕೋಪದಲ್ಲಿ ೬ ಪಲಗಳು ಪಿತ್ತಪ್ರಕೋಪದಲ್ಲಿ ೪ ಪಲಗಳು ಕಫ ಪ್ರಕೋಪದಲ್ಲಿ ೩ ಪಲಗಳು ಇರುವಂತೆಯೂ, ಕಲ್ಕವು ಯಾವಾಗಲೂ ೩ ಪಲಗಳಷ್ಟೇ ಇರಬೇಕು. ಮತ್ತು ಲವಣ ಜೇನುತುಪ್ಪ ಮೂತ್ರ ಹಣ್ಣುಗಳರಸ ಹಾಲು ಹುಳಿರಸ (ಕಲಗಚ್ಚು ಮೊದಲಾದುವು) ಮಾಂಸರಸ ಇವುಗಳನ್ನು ತಕ್ಕಷ್ಟು ಸೇರಿಸಬೇಕು. ಈ ರೀತಿಯಾಗಿ ಪ್ರತಿಯೊಂದರ ಕಲ್ಕ ಸ್ನೇಹ ಕಷಾಯಗಳ ಪ್ರಮಾಣವನ್ನೂ ಬೇರೆಬೇರೆ ನಿರೂಪಿಸಿರು ತ್ತಾರೆ. ವೈದ್ಯಶ್ರೇಷ್ಠರು ತಮ್ಮ ಬುದ್ಧಿಬಲದಿಂದ ರೋಗಿಯ ದೋಷ ಬಲಗಳಿಗೆ ತಕ್ಕಂತೆ ಅವುಗಳನ್ನು ಮಿಶ್ರಮಾಡಿ ಸರಿಯಾಗಿ ನಿರೂಹಬಸ್ತಿಪ್ರಯೋಗವನ್ನು ಮಾಡಿಸಿದರೆ ದೋಷಹರಣಾದಿ ವಾಜೀಕರಣಾಂತವಾಗಿ ಹೇಳಿರುವ ಫಲಗಳುಂಟಾಗುತ್ತವೆ.

ದತ್ವಾದೌ ಸೈಂಧವಸ್ಯಾಕ್ಷಂ ಮಧುನಃ ಪ್ರಸೃತದ್ವಯಮ್ ||೩೨||
ಪಾತ್ರೇ ತಲೇನ ಮಥ್ನೀಯಾದನುಸ್ನೇಹಂ ಶನೈಃ ಶನೈಃ |
ಸಮ್ಯಕ್ ಸುಮಥಿತೇ ದದ್ಯಾತ್ ಫಲಕಲ್ಕಮತಃ ಪರಮ್ ||೩೩||
ತತೋ ಯಥೋಚಿತಾನ್ ಕಲ್ಕಾನ್ ಭಾಗೈಃ ಸ್ವೈಃ ಶ್ಲಕ್ಷ್ಣಪೇಷಿತಾನ್ |
ಗಮ್ಭೀರೇ ಭಾವನೇಽನ್ಯಸ್ಮಿನ್ಮಥ್ನೀಯಾತ್ತಂ ಖಜೇನ ಚ ||೩೪||
ಯಥಾ ಚ ಸಾಧು ಮನ್ಯೇತ ನ ಸಾನ್ದ್ರೋ ನ ತನುಃ ಸಮಃ |
ಕಷಾಯಪ್ರಸೃತಾನ್ ಪಞ್ಚ ಸುಪೂತಾಂಸ್ತತ್ರ ದಾಪಯೇತ್ |
ರಸಕ್ಷೀರಾಮ್ಲಮೂತ್ರಾಣಾಂ ದೋಷಾವಸ್ಥಾಮವೇಕ್ಷ್ಯ ತು ||೩೫||

ಬಸ್ತಿದ್ರವ್ಯಗಳನ್ನು ಕೂಡಿಸುವ ವಿಧಾನ—ಒಂದು ಅಗಲವಾದ ಆಳವಾದ ತಟ್ಟೆ ಅಥವಾ ಡಬರಿಯಲ್ಲಿ ಒಂದುಕರ್ಷ ಪ್ರಮಾಣದಷ್ಟು ನುಣ್ಣಗಿರುವ ಸೈಂಧವ ಲವಣದ ಚೂರ್ಣವನ್ನು ಹಾಕಿ ಅದರಮೇಲೆ ೪ ಪಲಗಳಷ್ಟು ಜೇನುತುಪ್ಪವನ್ನು ಸುರಿದು ಮಧ್ಯೆ ಮಧ್ಯೆ ಸ್ನೇಹ ಮಗ್ಗಾರಿಕಾಯಿನ ಕಲ್ಕ ಮತ್ತು ನುಣ್ಣಗೆ ಅರೆದ ಇತರ ಕಲ್ಕಗಳನ್ನು ಕ್ರಮವಾಗಿ ಅಂಗೈಯ್ಯಿನಿಂದಲೇ ಉಜ್ಜುತ್ತಾ ಕಡೆಗೋಲು ಸೌಟು ಇವುಗಳಲ್ಲೊಂದರಿಂದ ತೊಳಸುತ್ತಾ ಅತಿಬಗ್ಗಡವಾಗಿರದೆಯೂ ಅತಿ ನೀರಿನಂತಿರದೆಯೂ ಸಮವಾಗಿರುವಂತೆ ಮಾಡಿ ಸರಿಯಾಗಿ ಶೋಧಿಸಿದ ಕಷಾಯ ೫ ಪ್ರಸೃತ ಅಂದರೆ ೧೦೦ ಪಲಗಳಷ್ಟನ್ನು ಸೇರಿಸಿ ದೋಷಗಳಿಗೆ ತಕ್ಕಂತೆ ಮಾಂಸರಸ ಹಾಲು ಹುಳಿಕಲಗಚ್ಚು ಮೂತ್ರ ಇವುಗಳ ಲ್ಲೊಂದನ್ನು ಮಿಶ್ರಮಾಡಿ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು. (ಎಲ್ಲಾ ಸೇರಿ ೧೨ ಪ್ರಸೃತ ಅಥವಾ ೨೪ ಪಲಗಳು ಅಥವಾ ೧ ೧/೨ ಪ್ರಸ್ಥಗಳಾಗುತ್ತವೆ).

ಅತಊರ್ಧ್ವಂ ದ್ವಾದಶಪ್ರಸೃತಾನ್ ವಕ್ಷ್ಯಾಮಃ—
ದತ್ವಾದೌ ಸೈನ್ಧವಸ್ಯಾಕ್ಷಂ ಮಧುನಃ ಪ್ರಸೃತಿದ್ವಯಮ್ |
ವಿನಿರ್ಮಥ್ಯ ತತೋ ದದ್ಯಾತ್ ಸ್ನೇಹಸ್ಯ ಪ್ರಸೃತಿತ್ರಯಮ್ ||೩೬||
ಏಕೀಭೂತೇ ತತಃ ಸ್ನೇಹೇ ಕಲ್ಕಸ್ಯ ಪ್ರಸೃತಿಂ ಕ್ಷಿಪೇತ್ |
ಸಂಮೂರ್ಛಿತೇ ಕಷಾಯಂ ತು ಚತುಃಪ್ರಸೃತಿಸಮ್ಮಿತಮ್ ||೩೭||
ವಿತರೇಚ್ಚ ತದಾವಾಪಮನ್ತೇ ದ್ವಿಪ್ರಸೃತೋನ್ಮಿತಮ್ |
ಏವಂ ಪ್ರಕಲ್ಪಿತೋ ಬಸ್ತಿರ್ದ್ವಾದಶಪ್ರಸೃತೋ ಭವೇತ್ ||೩೮||
ಜ್ಯೇಷ್ಠಾಯಾಃ ಖಲು ಮಾತ್ರಾಯಾಃ ಪ್ರಮಾಣಮಿದಮೀರಿತಮ್ |
ಅಪಹ್ರಾಸೇ ಭಿಷಕ್ ಕುರ್ಯಾತ್ತದ್ವತ್ ಪ್ರಸೃತಿಹಾಪನಮ್ ||೩೯||
ಯಥಾ ವಯೋ ನಿರೂಹಾಣಾಂ ಕಲ್ಪನೇಯಮುದಾಹೃತಾ |
ಸೈನ್ಧವಾದಿದ್ರವಾನ್ತಾನಾಂ ಸಿದ್ಧಿಕಾಮೈರ್ಭಿಷಗ್ವರೈಃ ||೪೦||

ಇನ್ನುಮುಂದೆ ೧೨ ಪ್ರಸೃತ ಪ್ರಮಾಣದ ಬಸ್ತಿಕಲ್ಪನೆಗಳನ್ನು ಹೇಳುತ್ತೇವೆ. ಕ್ರಮರೀತ್ಯಾ ೧ ಕರ್ಷದಷ್ಟು ನುಣುಪಾದ ಸೈಂಧಲವಣದ ಚೂರ್ಣಕ್ಕೆ ೪ ಪಲಗಳಷ್ಟು ಜೇನುತುಪ್ಪವನ್ನು ಪ್ರಸೃತಗಳಷ್ಟು ಸ್ನೇಹವನ್ನೂ ೧ ಪ್ರಸೃತದಷ್ಟು ಕಲ್ಕವನ್ನೂ ೪ ಪ್ರಸೃತಿ

ಗಳಷ್ಟು ಕಷಾಯವನ್ನೂ ಹಾಕುತ್ತಾ ಅಂಗೈನಿಂದ ಉಜ್ಜಿ ಮಿಶ್ರಮಾಡುತ್ತಾ ಕಡೆಗೆ ೨ ಪ್ರಸೃತಿಗಳಷ್ಟು ಕಷಾಯವನ್ನೂ ಕೂಡಿಸಿದರೆ ಒಟ್ಟು ೧೨ ಪ್ರಸೃತಗಳ ಉತ್ತಮ ಮಾತ್ರೆಯ ಬಸ್ತಿಕಲ್ಪನ ವಿಧಾನವೆನಿಸುತ್ತದೆ. ದೋಷವೇಗವು ಕಡಮೆಯಾಗಿರುವಾಗ ವೈದ್ಯನು ಈ ಪ್ರಮಾಣದಲ್ಲಿ ಪ್ರಸೃತ ಪ್ರಮಾಣದಷ್ಟು ದ್ರವ್ಯಗಳನ್ನು ಕಡಮೆಮಾಡಿ ಕೊಳ್ಳಬೇಕು. ನಿರೂಹಬಸ್ತಿ ಪ್ರಯೋಗದಿಂದ ಇಷ್ಟಫಲವುಂಟಾಗಬೇಕಾದರೆ ವೈದ್ಯರು ರೋಗಿಯ ವಯಸ್ಸಿಗೆ ತಕ್ಕಂತೆ ಸೈಂಧವಾದಿ ಕಷಾಯಾಂತವಾಗಿರುವ ದ್ರವ್ಯಪ್ರಮಾಣ ಗಳನ್ನು ಹೆಚ್ಚು ಕಡಿಮೆಮಾಡಿಕೊಳ್ಳಬೇಕು. ೨೪ ಪಲ ದ್ರವ್ಯಗಳಲ್ಲಿ ಪ್ರಮಾಣದಲ್ಲಿ (೧ ಕರ್ಷ) ಸೈಂಧನವು ಸೇರುವುದರಿಂದ ಇದರ ಪ್ರಮಾಣವು ಪರಿಗಣಿಸತಕ್ಕದ್ದಲ್ಲ.

ಅತ ಊರ್ಧ್ವಂ ಪ್ರವಕ್ಷ್ಯನ್ತೇ ಬಸ್ತಯೋಽತ್ರ ವಿಭಾಗಶಃ ।
ಯಥಾದೋಷಂ ಪ್ರಯುಕ್ತಾ ಯೇ ಹನ್ಯುರ್ನಾನಾವಿಧಾನ್ ಗದಾನ್ ॥೪೧॥
ಶಮ್ಪಾಕೋರುಬುವರ್ಷಾಭೂವಾಜಿಗನ್ಧಾ ನಿಶಾಚ್ಛದೈಃ ।
ಪಞ್ಚಮೂಲೀಬಲಾರಾಸ್ನಾ ಗುಡೂಚೀ ಸುರದಾರುಭಿಃ ॥೪೨॥
ಕ್ವಥಿತೈಃ ಪಾಲಿಕೈರೇಭಿರ್ಮದನಾಷ್ಟಕ ಸಂಯುತೈಃ ।
ಕಲ್ಕೈರ್ಮಾಗಧಿಕಾಮ್ಭೋದಹಪುಷಾಮಿಸಿ ಸೈನ್ಧವೈಃ ॥೪೩॥
ವತ್ಸಾಹ್ವಯಪ್ರಿಯಙ್ಗ್ವುಗ್ರಾ ಯಷ್ಟ್ಯಾಹ್ವಯರಸಾಞ್ಜನೈಃ ।
ದದ್ಯಾದಾಸ್ಥಾಪನಂ ಕೋಷ್ಣಂ ಕ್ಷೌದ್ರಾದ್ಯೈರಭಿ ಸಂಸ್ಕೃತಮ್ ॥೪೪॥
ಪೃಷ್ಠೋರುತ್ರಿಕಶೂಲಾಶ್ಮವಿಣ್ಮೂತ್ರಾನಿಲಸಙ್ಗಿನಾಮ್ ।
ಗ್ರಹಣೀಮಾರುತಾರ್ಶೋಘ್ನಂ ರಕ್ತಮಾಂಸಬಲಪ್ರದಮ್ ॥೪೫॥

ಇನ್ನುಮುಂದೆ ದೋಷವಿಭಾಗಕ್ಕೆ ತಕ್ಕಂತೆ ಬಸ್ತಿಪ್ರಯೋಗವಿಧಾನಗಳನ್ನು ವಿವ ರಿಸಲಾಗುತ್ತದೆ—ದೋಷಾನುಸಾರ ಅವುಗಳನ್ನು ಪ್ರಯೋಗಮಾಡಿದರೆ ಅನೇಕ ಪ್ರಕಾರ ಗಳಾದ ರೋಗಗಳು ನಿವಾರಣೆಯಾಗುತ್ತವೆ. ವಾತಹರಬಸ್ತಿ ವಿಧಾನವು—ಕಕ್ಕೆ ಹರಳು ಕೊಮ್ಮೆ ಅಶ್ವಗಂಧಾ ಅರಿಶಿನದಎಲೆ ಲಘುಪಞ್ಚಮೂಲ ಕಳ್ಳಂಗಡಲೆ ರಾಸ್ನೆ ಅಮೃತವಳ್ಳಿ ದೇವದಾರು ಇವು ಬಗೆ ೧ ಕ್ಕೆ ಒಂದೊಂದು ಪಲ, ಮಗ್ಗಾರೆಕಾಯಿ ೮ ಮಾತ್ರ, ಇವುಗಳ ಕಷಾಯಕ್ಕೆ ಹಿಪ್ಪಲಿ ಕೊನ್ನಾರಿಗೆಡ್ಡೆ ಹಬ್ಬೆಬೇರು ಸಬ್ಬಸಿಗೆಬೀಜ ಸೈಂಧನಲವಣ ಕೊಡಸಿಗೆಬೀಜ ನೆಳಲು ಬಜೆ ಅತಿಮಧುರ ರಸಾಂಜನ ಇವುಗಳ ಕಲ್ಕ ವನ್ನೂ ಜೇನುತುಪ್ಪ ಮೊದಲಾದುವನ್ನೂ ಮಿಶ್ರಮಾಡಿ ಸುಖೋಷ್ಣವಾಗಿರುವಾಗ ಬಸ್ತಿ ಪ್ರಯೋಗಮಾಡಿದರೆ ಬೆನ್ನು ತೊಡೆ ತ್ರಿಕಪ್ರದೇಶಗಳಲ್ಲಿರುವ ನೋವೂ ಮೂತಕೃಚ್ಛ್ರ ಮಲ ಮೂತ್ರ ಅಪಾನವಾತಗಳ ತಡೆಯೂ ಗ್ರಹಣೀರೋಗ ವಾತರೋಗ ಅರ್ಶೋರೋಗಗಳೂ ನಾಶವಾಗುತ್ತವೆ. ಮತ್ತು ರಕ್ತ ಮಾಂಸ ಬಲಗಳು ವೃದ್ಧಿಯಾಗುತ್ತವೆ.

ಟಿಪ್ಪಣಿ : ಕಕ್ಕೆ ಮೊದಲು ದೇವದಾರುವಿನವರೆಗೆ ೧೪ ದ್ರವ್ಯಗಳು ಪ್ರತ್ಯೇಕ ೧ ಪಲದಂತೆಯೂ ಮಗ್ಗಾರೆಕಾಯಿ ೨ ಪಲಗಳಷ್ಟನ್ನೂ ಜಜ್ಜಿ ೮ ರಷ್ಟು ನೀರು ಸೇರಿಸಿ ೧/೪

ಭಾಗ ನೀರು ನಿಲ್ಲುವಂತೆ ಕಷಾಯಮಾಡಿ ಶೋಧಿಸಿಕೊಂಡು ೮ ಪಲ ಕಷಾಯಕ್ಕೆ ತಾವ್ರುದ ತಟ್ಟಿಗೆ ೩ ಟಂಕ (ಶಾಣ) ಪ್ರಮಾಣ ಸೈಂಧವಲವಣವನ್ನೂ ೨ ಪಲ ಜೇನು ತುಪ್ಪವನ್ನೂ ಸೇರಿಸಿ ರಂಗಳಿಸಿ ೬ ಪಲ ತೈಲ ೩ ಪಲ ಕಲ್ಕ ಹಾಲು ಕಲಗಚ್ಚು ಮೂತ್ರ ಮಾಂಸರಸ ಇವು ಪ್ರತಿಯೊಂದೂ ಒಂದೊಂದು ಪಲದಂತೆ ಸೇರಿಸಿ ಸುಖೋಷ್ಣವಾಗಿ ೨-೩-೪ ಸಾರಿ ಬಸ್ತಿಯನ್ನು ಪ್ರಯೋಗಮಾಡಿದರೆ ವಾತರೋಗವು ನಿವಾರಣೆಯಾಗುತ್ತದೆ.

ಗುಡೂಚೀ ತ್ರಿಫಲಾರಾಸ್ನಾದಶಮೂಲ ಬಲಾಪಲೈಃ
ಕ್ವಥಿತೈಃ ಶ್ಲಕ್ಷ್ಣ ಪಿಷ್ಟೈಸ್ತು ಪ್ರಿಯಙ್ಗ್ವಞ್ಜನ ಸೈಂಧವೈಃ ||೪೬||
ಶತಪುಷ್ಪಾವಚಾ ಕೃಷ್ಣಾಯವಾನೀಕುಷ್ಠಬಿಲ್ವಜೈಃ |
ಸಗುಡೈರಕ್ಷಮಾತ್ರೈಸ್ತು ಮದನಾರ್ಧಪಲಾನ್ವಿತೈಃ ||೪೭||
ಕ್ಷೌದ್ರತೈಲಘೃತ ಕ್ಷೀರಶುಕ್ತಕಾಞ್ಜಿಕಮಸ್ತುಭಿಃ
ಸಮಾಲೋಡ್ಯ ಚ ಮೂತ್ರೈಸ್ತು ದದ್ಯಾದಾಸ್ಥಾಪನಂ ಪರಮ್ ||೪೮||
ತೇಜೋವರ್ಣಬಲೋತ್ಸಾಹವೀರ್ಯಾಗ್ನಿ ಪ್ರಾಣವರ್ಧನಮ್
ಸರ್ವಮಾರುತರೋಗಘ್ನಂ ವಯಃ ಸ್ಥಾಪನಮುತ್ತಮಮ್ ||೪೯||

ಅಮೃತವಳ್ಳಿ ತ್ರಿಫಲೆ ರಾಸ್ನೆ ದಶಮೂಲ ಕಳ್ಳಂಗಡಲೆ ಮಾಂಸ ಇವು ೧೭ ದ್ರವ್ಯ ಗಳನ್ನೂ ಒಂದೊಂದು ಪಲದಂತೆ ಜಜ್ಜಿ ೧೩೬ ಪಲಗಳಷ್ಟು ನೀರು ಸೇರಿಸಿ ಕಾಯಿಸಿ ೩೪ ಪಲಗಳಷ್ಟು ಕಷಾಯವನ್ನು ಉಳಿಸಿ ಶೋಧಿಸಿ ಇಟ್ಟುಕೊಳ್ಳಬೇಕು. ಅದರಲ್ಲಿ ೮ ಪಲ ಗಳಷ್ಟನ್ನು ಒಂದು ಪಾತ್ರೆಗೆ ಹಾಕಿ ಅದಕ್ಕೆ ಕಲ್ಕಾದಿಗಳನ್ನು ಸೇರಿಸಬೇಕು. ಹೇಗೆಂದರೆ —ನೆಳಲು ಸ್ರೋತೋಂಜನ (ಕೊನ್ನಾರಿ ಗೆಡ್ಡೆಯೆಂದು ಪಾಠಾಂತರವಿದೆ) ಸೈಂಧವ ಸಬ್ಬಸಿಗೆಬೀಜ ಬಜೆ ಹಿಪ್ಪಲಿ ವಾದಕ್ಕಿ ಚಂಗಲ್‌ಕೋಷ್ಠ ಬಿಲ್ವಪತ್ರೆಹಣ್ಣಿನ ತಿರುಳು ಬೆಲ್ಲ ಇವು ಪ್ರತಿಯೊಂದೂ ೧ ಕರ್ಷದಂತೆಯೂ ಮಗ್ಗಾರೆಬೀಜ ಅರ್ಧಪಲ ಸೈಂಧವಲವಣ ೩ ಟಂಕ ಇವುಗಳ ಕಲ್ಕಕ್ಕೆ ೩ ಪಲದಷ್ಟು ಜೇನುತುಪ್ಪವನ್ನು ಸೇರಿಸಿ ಅಂಗೈಯ್ಯಿಂದ ಉಜ್ಜಿ ೩ ಪಲಗಳಷ್ಟು ಕಲ್ಕವನ್ನೂ ೩ ಪಲ ತೈಲವನ್ನೂ ೩ ಪಲ ಹಾಲು ೨ ಪಲ ಶುಕ್ತ (ಕಂದಮೂಲ ಫಲಗಳಿಗೆ ಸ್ನೇಹ ಲವಣ ದ್ರವಗಳನ್ನು ಸೇರಿಸಿ ಹುಳಿಬರುವಂತೆ ಮಾಡಿದರೆ ಶುಕ್ತವೆನಿಸುತ್ತದೆ). ಈ ವಿಧದ ಶುಕ್ತಹುಳಿಕಲಗಚ್ಚು ಮೊಸರಿನಕಟ್ಟು ಗೋಮೂತ್ರ ಇವೆಲ್ಲವೂ ಸೇರಿ ೨ ಪಲಗಳಷ್ಟನ್ನೂ ಮೇಲಿನ ೮ ಪಲ ಕಷಾಯಕ್ಕೆ ಸೇರಿಸಿದರೆ ಒಟ್ಟು ೨೪ ಪಲಗಳಾಗುತ್ತವೆ. ಇವೆಲ್ಲವೂ ಸುಖೋಷ್ಣವಾಗಿರುವಾಗ ಸೌಟನಿಂದ ತೊಳಸಿ ಒಟ್ಟುಗೂಡಿಸಿ ಬಸ್ತಿಪ್ರಯೋಗವನ್ನು ಮಾಡಿ ಇದು ಹೊರಕ್ಕೆ ಬಂದಮೇಲೆ ಇದೇರೀತಿ ೨-೩-೪ ಬಸ್ತಿಗಳನ್ನು ಪ್ರಯೋಗಿಸಿದರೆ ಚರ್ಮಕ್ಕೆ ಹೊಳಪೂ ಭ್ರಾಜಕವೆಂಬ ತ್ವಗ್ಗತ ಪಿತ್ತವೂ ಮಾಂಸವೂ ಮನಸ್ಸಿನ ಉತ್ಸಾಹವೂ (ಚಟುವಟಿಕೆ) ಶುಕ್ರವೂ ಜೀರ್ಣ ಶಕ್ತಿಯೂ ಪ್ರಾಣವೂ (ಅಗ್ನಿಸೋಮಾದಿಗಳೂ) ವೃದ್ಧಿಯಾಗುತ್ತವೆ. ಸಕಲ ವಿಧಗಳಾದ

ವಾತರೋಗಗಳೂ ನಿವಾರಣೆಯಾಗುತ್ತವೆ. ಬೇಗ ಮುದಿತನವುಂಟಾಗುವುದಿಲ್ಲ. ಇದು ಶ್ರೇಷ್ಠವಾದ ನಿರೂಹಬಸ್ತಿಪ್ರಯೋಗವು.

ಕುಶಾದಿಪಞ್ಚಮೂಲಾಬ್ದ ತ್ರಿಫಲೋತ್ಪಲವಾಸಕೈಃ ।
ಶಾರಿವೋಶೀರಮಞ್ಜಿಷ್ಠಾರಾಸ್ನಾರೇಣುಪರೂಷಕೈಃ ॥೫೦॥
ಪಾಲಿಕೈಃ ಕ್ವಥಿತೈಃ ಸಮ್ಯಕ್ ದ್ರವ್ಯೈರೇಭಿಶ್ಚ ಪೇಷಿತೈಃ
ಶೃಙ್ಗಾಟಕಾತ್ಮಗುಪ್ತೇಭ ಕೇಸರಾಗುರುಚನ್ದನೈಃ ॥೫೧॥
ವಿದಾರೀಮಿಸಿಮಞ್ಜಿಷ್ಠಾಶ್ಯಾಮೇನ್ದ್ರಯವ ಸಿನ್ಧುಜೈಃ
ಫಲಪದ್ಮಕಯುಕ್ತೈಃ ಕ್ಷೌದ್ರಕ್ಷೀರಘೃತಾ ಪ್ಲುತೈಃ ॥೫೨॥
ದತ್ತಮಾಸ್ಥಾಪನಂ ಶೀತಮಮ್ಲಹೀನೈಸ್ತಥಾ ದ್ರವೈಃ
ದಾಹಾಸೃಗ್ದರ ಪಿತ್ತಾಸೃಕ್ಪಿತ್ತಗುಲ್ಮ ಜ್ವರಾಞ್ಜಯೇತ್ ॥೫೩॥

ತೃಣಪಞ್ಚಮೂಲ ಕೊನ್ನಾರಿಗೆಡ್ಡೆ ತ್ರಿಫಲೆ ನೈದಿಲೆಗೆಡ್ಡೆ ಆಡುಸೋಗೆ ಸೊಗದೆ ಬೇರು ಲಾಮಂಚ ಮಂಜಿಷ್ಠೆ ರಾಶ್ಮೆ ಪರ್ಪಾಷ್ಟಕ ಕಾಡುಖರ್ಜೂರ ಇವೆಲ್ಲವನ್ನೂ ಒಂದೊಂದು ಪಲದಂತೆ ಸೇರಿಸಿ ಕಷಾಯಮಾಡಿ ಶೋಧಿಸಿಕೊಂಡು ಮುಮ್ಮೂಲೆಗೆಡ್ಡೆ ನಸುಗುನ್ನಿ ನಾಗಕೇಸರಿ ಅಗಿಲು ರಕ್ತಚಂದನ ನೆಲಗುಂಬಳಗೆಡ್ಡೆ ಸಬ್ಬಶಿಗೆಬೀಜ ಮಂಜಿಷ್ಠೆ ತಿಗಡೆಬೇರು (ಪ್ರಿಯಂಗು) ಕೊಡಶಿಗೆಬೀಜ ಮಗ್ಗಾರಿಕಾಯಿ ಪದ್ಮಕ ಅತಿ ಮಧುರ ಇವುಗಳು ಪ್ರತಿಯೊಂದೂ ೧ ಕರ್ಷದಷ್ಟನ್ನೂ ಸೇರಿಸಿ ಕಲ್ಕಮಾಡಿ ಸೈಂಧವ ಲವಣ ೩ ಟಂಕದಷ್ಟನ್ನು ಪುಡಿಮಾಡಿ ಜೇನುತುಪ್ಪ ೫ ಪಲಗಳಷ್ಟನ್ನು ಸೇರಿಸಿ ಅಂಗೈಯ್ಯಿನಿಂದ ಉಜ್ಜಿ ತುಪ್ಪ ೪ ಪಲ ಹಾಲು ೨ ಪಲ (ಪಿತ್ತದೋಷದಲ್ಲಿ ಆಮ್ಲರಸಗಳನ್ನು ಸೇರಿಸಬಾರದು). ಮಾಂಸರಸ ೧ ಪಲ ಕಬ್ಬಿನರಸ ೨ ಪಲ ಎಲ್ಲವೂ ಸೇರಿ ೨೪ ಪಲಗಳಷ್ಟಾಗಬೇಕು. ಹಿಂದಿನಯೋಗದಂತೆಯೇ ಈ ಬಸ್ತಿಪ್ರಯೋಗದಿಂದ ಉರಿತ ಪ್ರದರ ರಕ್ತಪಿತ್ತ ರಕ್ತ ಗುಲ್ಮ ಜ್ವರ ಈ ರೋಗಗಳು ನಿವಾರಣೆಯಾಗುತ್ತವೆ. ದ್ರವವನ್ನು ಕಾಯಿಸಬಾರದು ತಣ್ಣಗಿರಬೇಕು.

ರೋಧ್ರಚನ್ದನಮಞ್ಜಿಷ್ಠಾರಾಸ್ನಾನನ್ತಾ ಬಲರ್ಧಿಭಿಃ
ಸಾರಿವಾವೃಷಕಾಶ್ಮರ್ಯಮೇದಾಮಧುಕ ಪದ್ಮಕೈಃ ॥೫೪॥
ಸ್ಥಿರಾದಿತೃಣಮೂಲೈಶ್ಚ ಕ್ವಾಥೈಃ ಕರ್ಷತ್ರಯೋನ್ಮಿತೈಃ
ಪಿಷ್ಟೈರ್ಜೀವಕಕಾಕೋಲೀ ಯುಗರ್ಧಿಮಧುಕೋತ್ಪಲೈಃ ॥೫೫॥
ಪ್ರಪೌಣ್ಡರೀಕ ಜೀವನ್ತೀಮೇದಾರೇಣುಪರೂಷಕೈಃ
ಅಭೀರುಮಿಸಿಸಿನ್ಧೂತ್ಥವತ್ಸಕೋಶೀರ ಪದ್ಮಕೈಃ ॥೫೬॥
ಕಸೇರುಶರ್ಕರಾಯುಕ್ತೈಃ ಸರ್ಪಿರ್ಮಧುಪಯಃಪ್ಲುತೈಃ
ದ್ರವೈಸ್ತೀಕ್ಷ್ಣಮ್ಲವರ್ಜ್ಯೈಶ್ಚ ದತ್ತೋ ಬಸ್ತಿಃ ಸುಶೀತಲಃ ॥೫೭॥
ಗುಲ್ಮಾಸೃಗ್ದರಹೃತ್ಪಾಣ್ಡುರೋಗಾನ್ ಸವಿಷಮಜ್ವರಾನ್ ।
ಅಸೃಕ್ಪಿತ್ತಾತಿಸಾರಾಂ ಚ ಹನ್ಯಾತ್ ಪಿತ್ತಕೃತಾನ್ ಗದಾನ್ ॥೫೮॥

ಲೋಧ್ರ ರಕ್ತಚಂದನ ಮಂಜಿಷ್ಠೆ ರಾಶ್ನೆ ಸೊಗದೆ ಕಳ್ಳಂಗಡಲೆ ಋದ್ಧಿ ಬಿಳಿಸೊಗದೆ ಹಂಬು ಆಡುಸೋಗೆ ಶಿವನಿ ಮೇದೆ ಅತಿಮಧುರ ಪದ್ಮಕ ಲಘುಪಂಚಮೂಲ ತೃಣಪಂಚ ಮೂಲ ಇವು ಪ್ರತಿಯೊಂದೂ ೨ ಕರ್ಷಗಳಷ್ಟನ್ನೂ ೪ ರಷ್ಟು ನೀರನ್ನೂ ಸೇರಿಸಿ ೧/೪ ಭಾಗ ಕಷಾಯ ನಿಲ್ಲುವಂತೆಮಾಡಿ ೮ ಪಲಗಳಷ್ಟು ಕಷಾಯಕ್ಕೆ ಜೀವಕಕಾಕೋಳಿ ಕ್ಷೀರ ಕಾಕೋಳೀ ಋದ್ಧಿ ಅತಿಮಧುರ ಸ್ನೈದಿಲೆಗೆಡ್ಡೆ ಪ್ರಪೌಣ್ಡರೀಕ ಸಿಹಿಹಾಲೆ ಮೇದೆ ಪರ್ಪಾಷ್ಟಕ ಕಾಡುಖರ್ಜೂರ ಆಷಾಡಿಬೇರು ಸಬ್ಬಸಿಗೆಬೀಜ ಕೊಡಶಿಗೆತೊಗಟೆ ಲಾಮಂಚ, ಪದ್ಮಕ ಕೊತ್ತಿಗೆಡ್ಡೆ ಸಕ್ಕರೆ ಇವುಗಳ ಕಲ್ಕ ೪ ಪಲ ಚುರುಕಾದ ಹುಳಿರಸ ದ್ರವ್ಯಗಳನ್ನು ಬಿಡಬೇಕು. ೪ ಟಂಕ ಸೈಂಧವಚೂರ್ಣ ೪ ಪಲ ಜೇನುತುಪ್ಪ ಇವನ್ನು ಮಿಶ್ರಮಾಡಿ ಉಜ್ಜಿ ೪ ಪಲ ತುಪ್ಪ ೨ ಪಲ ಹಾಲು ಇವೆಲ್ಲವನ್ನೂ ಹಿಂದೆ ಹೇಳಿದ ಕಷಾಯದೊಡನೆ ಮಿಶ್ರಮಾಡಿ ತಣ್ಣಗಿರುವ ೨೪ ಪಲಗಳಷ್ಟನ್ನು ಬಸ್ತಿಪ್ರಯೋಗ ಮಾಡಬೇಕು. ಇದೇ ರೀತಿ ೨-೩-೪ ಸಾರಿ ಪ್ರಯೋಗಮಾಡಿದರೆ ಗುಲ್ಮ ಪ್ರದರ ಹೃದ್ರೋಗ ಪಾಂಡುರೋಗ ವಿಷಮಜ್ವರ ರಕ್ತ ಪಿತ್ತ ಅತಿಸಾರ ಮೊದಲಾದ ಅನೇಕ ಪಿತ್ತರೋಗಗಳು ನಿವಾರಣೆ ಯಾಗುತ್ತವೆ.

ಭದ್ರಾನಿಮ್ಬಕುಳತ್ಥಾರ್ಕ ಕೋಶಾತಕ್ಯಮೃತಾಮರ್ವೈಃ ।
ಸಾರಿವಾಬೃಹತೀಪಾಠಾ ಮೂರ್ವಾರಗ್ವಧವತ್ಸಕೈ ॥೫೯॥
ಕ್ವಾಥಃ ಕಲ್ಕಸ್ತು ಕರ್ತವ್ಯೋ ಬಲಾಮದನಸರ್ಷಪೈಃ
ಸೈನ್ಧವಾಮರಕುಷ್ಠೈಲಾ ಪಿಪ್ಪಲೀಬಿಲ್ವನಾಗರೈಃ ॥೬೦॥
ಕಟುತೈಲಮಧುಕ್ಷಾರಮೂತ್ರ ತೈಲಾಮ್ಬುಸಂಯುತೈಃ
ಕಾರ್ಯಮಾಸ್ಥಾಪನಂ ತೂರ್ಣಂ ಕಾಮಲಾಪಾಣ್ಡುಮೇಹಿನಾಮ್ ॥೬೧॥
ಮೇದಸ್ವಿನಾಮನಗ್ನೀನಾಂ ಕಫರೋಗಾಶನದ್ವಿಷಾಮ್
ಗಳಗಂಡಗರಗ್ಲಾನಿಶ್ಲೀಪದೋದರ ರೋಗಿಣಾಮ್ ॥೬೨॥

ಕೊನ್ನಾರಿಗೆಡ್ಡೆ ಬೇವು ಹುರುಳಿ ಎಕ್ಕದಬೇರು ಹೀರೆಬೇರು ಅಮೃತಬಳ್ಳಿ ದೇವ ದಾರು ಸೊಗದೆಬೇರು ಹೆಗ್ಗುಳ್ಳಿ ಅಗಳುಶುಂಠಿ ಕೊರಟಿಗೆಬೇರು ಕಕ್ಕೆ ಕೊಡಶಿಗೆತೊಗಟೆ ಇವೆಲ್ಲಾ ಸೇರಿ ೧೬ ಪಲಗಳಿಗೆ ೧೨೮ ಪಲಗಳಷ್ಟು ನೀರು ಸೇರಿಸಿ ೩೨ ಪಲ ಕಷಾಯ ವನ್ನು ನಿಲ್ಲಿಸಿ ಶೋಧಿಸಿಟ್ಟುಕೊಂಡು ಇದರಲ್ಲಿ ೮ ಪಲಗಳಷ್ಟನ್ನು ಒಂದು ಪಾತ್ರೆಯಲ್ಲಿಟ್ಟು ಕೊಂಡು ಕಳ್ಳಂಗಡಲೆ ಮಗ್ಗಾರೆಕಾಯಿ ಸಾಸಿವೆ ದೇವದಾರು ಚಂಗಲ್‌ಕೋಷ್ಠ ಏಲಕ್ಕಿ ಹಿಪ್ಪಲಿ ಬಿಲ್ವಪತ್ರೆಹಣ್ಣಿನತಿರುಳು ಶುಂಠಿ ಈ ಹತ್ತು ದ್ರವ್ಯಗಳ ಕಲ್ಕ ಒಟ್ಟು ೩ ಪಲಗಳು ಸೈಂಧವಲವಣದ ಪುಡಿಗೆ ೧ ಕರ್ಷಕ್ಕೆ ೬ ಪಲ ಜೇನುತುಪ್ಪ ಸೇರಿಸಿ ಅಂಗೈಯ್ಯಿನಿಂದ ಉಜ್ಜಿ ಸಾಸಿವೆಎಣ್ಣೆ ೩ ಪಲದಷ್ಟನ್ನು ಸ್ವಲ್ಪ ಸ್ವಲ್ಪವಾಗಿ ಸೇರಿಸಿ ಕಲ್ಕವನ್ನು ಹಾಕಿಕೊಂಡು ಉಜ್ಜಿ ಯವಕ್ಷಾರ ೧ ಪಲ ಗೋಮೂತ್ರ ಕಲಗಚ್ಚು ೧ ೧/೨ ಪಲ ಇವೆಲ್ಲವನ್ನೂ ಮೇಲೆ ಹೇಳಿದ ಕಷಾಯವನ್ನೂ ಒಟ್ಟಿಗೆ ಒಂದು ದೊಡ್ಡಪಾತ್ರೆಗೆ ಹಾಕಿ ಸೌಟಿನಿಂದ ತೊಳಸಿ

ಎಲ್ಲವೂ ಒಟ್ಟುಸೇರುವಂತೆ ಮಾಡಿದ ೨೪ ಪಲಗಳನ್ನೂ ಬಿಸಿಮಾಡಿ ಬಸ್ತಿಯಂತ್ರಕ್ಕೆ ತುಂಬಿ ಪ್ರಯೋಗಿಸಿದರೆ ಕಾಮಾಲೆ ಪಾಂಡುರೋಗ ಮೇಹರೋಗ ಮೇದಸ್ಸು ಹೆಚ್ಚಾಗಿರುವುದು ಅಗ್ನಿಮಾಂದ್ಯ ಕಫವೃದ್ಧಿ ಅನ್ನದ್ವೇಷ ಗಳಗಂಡ ಕೈಮುಸಗು ಆಯಾಸ ಶ್ಲೀಪದ ಉದರ ಇವು ರೋಗಗಳು ನಿವಾರಣೆಯಾಗುತ್ತವೆ.

ದಶಮೂಲೀನಿಶಾಬಿಲ್ವಪಟೋಲ ತ್ರಿಫಲಾಮರೈಃ
ಕ್ವಥಿತೈಃ ಕಲ್ಕಪಿಷ್ಟೈಸ್ತು ಮುಸ್ತಸೈನ್ಧವದಾರುಭಿಃ ||೬೩||
ಪಾಠಾಮಗಧಿಕೇನ್ದ್ರಾಹ್ವೈಸ್ತೈಲಕ್ಷಾರಮಧುಪ್ಲುತೈಃ
ಕುರ್ಯಾದಾಸ್ಥಾಪನಂ ಸಮ್ಯಕ್ ಮೂತ್ರಾಮ್ಲಫಲಯೋಜಿತಮ್ ||೬೪||
ಕಫಪಾಣ್ಡುಮದಾಲಸ್ಯ ಮೂತ್ರ ಮಾರುತಸಂಗಿನಾಮ್
ಆಮಾಟೋಪಾಪಚೀ ಶ್ಲೇಷ್ಮಗುಲ್ಮ ಕ್ರಿಮಿವಿಕಾರಿಣಾಮ್ ||೬೫||

ದಶಮೂಲಗಳು ಅರಿಶಿನ ಬಿಲ್ವಮೂಲ ಕಹಿಪಡವಲ ತ್ರಿಫಲೆ ದೇವದಾರು ಈ ೧೭ ದ್ರವ್ಯಗಳನ್ನು ೧೧ ಪಲದಂತೆ ಸೇರಿಸಿ ಅದರ ೪ರಷ್ಟು ನೀರನ್ನು ಸೇರಿಸಿ ೩೪ ಪಲ ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿಟ್ಟುಕೊಳ್ಳಬೇಕು. ಕೊನ್ನಾರಿಗೆಡ್ಡೆ ದೇವದಾರು ಅಗಳು ಶುಂಠಿ ಹಿಪ್ಪಲಿ ಕೊಡಶಿಗೆತೊಗಟೆ ಇವೆಲ್ಲಾ ಸೇರಿ ೩ ಪಲ ಕಲ್ಕಮಾಡಿ ೧ ಕರ್ಷ ಸೈಂಧವ ಲವಣದ ಚೂರ್ಣಕ್ಕೆ ೪ ಪಲ ಜೇನುತುಪ್ಪವನ್ನು ಸೇರಿಸಿ ಅಂಗೈಯ್ಯಿನಿಂದ ಉಜ್ಜಿ ಆ ಕಲ್ಕವನ್ನೂ ಯವಕ್ಷಾರ ಅರ್ಧ ಪಲ ಮಗ್ಗಾರಿಕಾಯಿಕಲ್ಕ ೧ ೧/೨ ಇವೆಲ್ಲವನ್ನೂ ಹಿಂದೆ ಹೇಳಿದ ೮ ಪಲ ಕಷಾಯವನ್ನೂ ದೊಡ್ಡ ಪಾತ್ರೆಯಲ್ಲಿ ಹಾಕಿ ಸೌಟಿನಿಂದ ತೊಳಸಿ ಬಿಸಿ ನೀರಿನಲ್ಲಿಟ್ಟು ಕಾಯಿಸಿ ಹದವರಿತು ಬಸ್ತಿಯನ್ನು ಪ್ರಯೋಗಿಸಿದರೆ ನೇರವಾಗಿ ಬೆಂಕಿಯ ಮೇಲಿಟ್ಟು ಕಾಯಿಸಕೂಡದು. ಕಫರೋಗ ಪಾಂಡು ಮತ್ತು ಆಯಾಸ ವಾತ ಮೂತ್ರಗಳತಡೆ ಆಮರೋಗ ಹೊಟ್ಟೆಯಲ್ಲಿ ಗುಡಗುಡ ಶಬ್ದವಾಗುವುದು ಗಂಡಮಾಲೆ ಕಫಗುಲ್ಮ ಕ್ರಿಮಿರೋಗ ಇವುಗಳು ನಾಶವಾಗುತ್ತವೆ.

ವೃಷಾಶ್ಮಭೇದವರ್ಷಾಭೂಧಾನ್ಯ ಗಂಧರ್ವಹಸ್ತಕೈಃ
ದಶಮೂಲಬಲಾಮೂರ್ವಾಯವ ಕೋಲನಿಶಾಚ್ಛದೈಃ ||೬೬||
ಕುಳತ್ಥಬಿಲ್ವಭೂನಿಮ್ಬೈಃ ಕ್ವಥಿತೈಃ ಪಲಸಂಮಿತೈಃ
ಕಲ್ಕೈರ್ಮದನಯಷ್ಟ್ಯಾಹ್ವಷಡ್ಗ್ರನ್ಥಾಮರಸರ್ಷಪೈಃ ||೬೭||
ಪಿಪ್ಪಲೀಮೂಲಸಿಂಧೂತ್ಥಯವಾನೀ ಮಿಸಿವತ್ಸಕೈಃ
ಕ್ಷೌದ್ರೇಕ್ಷುಕ್ಷೀರಗೋಮೂತ್ರಾ ಸರ್ಪಿಸ್ತೈಲರಸಪ್ಲುತೈಃ ||೬೮||
ತೂರ್ಣಮಾಸ್ಥಾಪನಂ ಕಾರ್ಯಂ ಸಂಸೃಷ್ಟಬಹುರೋಗಿಣಾಮ್
ಗೃಧ್ರಸೀಶರ್ಕರಾಷ್ಠೀಲಾ ತೂಣೀಗುಲ್ಮಗದಾಪಹಮ್ ||೬೯||

ಅಡುಸೋಗೆ ಹಿಟ್ಟುಳಿಕ ಕೊಮ್ಮೆಬೇರು ಕೊತ್ತುಂಬರಿ ಹರಳುಬೇರು ದಶಮೂಲಗಳು ಕಳ್ಳಂಗಡಲೆಬೇರು ಕೊರಟಗೆಹಂಬು ಯವಧಾನ್ಯಎಲಚಿಹಣ್ಣು ಕರ್ಪೂರ ಶುಂಠಿ ಹುರುಳಿ ಬಿಲ್ವಪತ್ರೆ ನೆಲಬೇವು ಇವು ಪ್ರತಿಯೊಂದನ್ನೂ ಸಮಪ್ರಮಾಣದಿಂದ ಸೇರಿಸಿ ೧೬

ಪಲಗಳಷ್ಟನ್ನು ೧೨೮ ಪಲ ನೀರಿನಲ್ಲಿ ಕಷಾಯಮಾಡಿ ೩೨ ಪಲಗಳಿಗೆ ಉಳಿಸಿ ಶೋಧಿಸಿ ಒಂದು ಪಾತ್ರೆಗೆ ೮ ಪಲ ಕಷಾಯವನ್ನು ಹಾಕಿ ಮಗ್ಗಾರೆಕಾಯಿ ಅತಿಮಧುರ ಬಜೆ ದೇವದಾರು ಸಾಸಿವೆ ಚವ್ಯ ವಾದಕ್ಕಿ ಸಬ್ಬಸಿಗೆಬೀಜ ಕೊಡಶಿಗೆ ತೊಗಟೆ ಇವುಗಳೆಲ್ಲಾ ಸೇರಿದ ೩ ಪಲ ಕಲ್ಕ ಮಗ್ಗಾರೆಯಕಲ್ಕ ಜೇನುತುಪ್ಪ ಸೇರಿ ೩ ಪಲಗಳು ಕಬ್ಬಿನರಸ ಹಾಲು ಗೋಮೂತ್ರ ಇವು ಒಂದೊಂದೂ ೧ ೧/೨ ಪಲ ತುಪ್ಪ ೨ ಪಲ ತೈಲ ೨ ಪಲ ಮಾಂಸರಸ ೧ ೧/೨ ಪಲ ಈ ರೀತಿ ಎಲ್ಲಾ ಸೇರಿ ೧೬ ಪಲಗಳು ಮೇಲೆ ಹೇಳಿದ ಕಷಾಯ ೮ ಪಲ ಒಟ್ಟು ೨೪ ಪಲಗಳಷ್ಟನ್ನೂ ಮಂತಿನಿಂದ ಕಡೆದು ಒಂದೇ ಸಮವಾಗುವಂತೆಮಾಡಿ ಬಸ್ತಿ ಯಂತ್ರಕ್ಕೆ ತುಂಬಿ ದೋಷಾನುಸಾರ ಬಿಸಿಯಾಗಿಯೋ ತಣ್ಣಗೋ ಇರುವಂತೆಮಾಡಿ ಸಂಸರ್ಗ ಸನ್ನಿಪಾತ ರೋಗಗಳಲ್ಲಿ ೨-೩-೪ ಸಾರಿ ಬಸ್ತಿಪ್ರಯೋಗ ಮಾಡಿ ದೋಷಹರಣ ಮಾಡಬೇಕು. ದೋಷಗಳು ಹೆಚ್ಚು ಕಡಮೆ ಇದ್ದರೆ ಅವುಗಳಿಗೆ ತಕ್ಕಂತೆಯೇ ಸ್ನೇಹ ಜೇನುತುಪ್ಪಗಳ ಪ್ರಮಾಣದಲ್ಲಿಯೂ ಹೆಚ್ಚುಕಡಮೆ ಮಾಡಿಕೊಳ್ಳಬೇಕು.

ರಾಸ್ನಾರಗ್ವಧವರ್ಷಾಭೂ ಕಟುಕೋಶೀರವಾರಿದೈಃ ||೨೦||
ತ್ರಾಯಮಾಣಾಮೃತಾರಕ್ತಾಪಞ್ಚ ಮೂಲವಿಭೀತಕೈಃ
ಸಬಲೈಃ ಪಾಲಿಕೈಃ ಕ್ವಾಥಃ ಕಲ್ಕಸ್ತು ಮದನಾನ್ವಿತೈಃ ||೨೧||
ಯಷ್ಟ್ಯಾಹ್ವಮಿಸಿಸಿನ್ಧೂತ್ಥಫಲಿನೀನ್ದ್ರಯವಾಹ್ವಯೈಃ
ರಸಾಞ್ಜನರಸಕ್ಷೌದ್ರದ್ರಾಕ್ಷಾಸೌ ವೀರಸಂಯುತೈಃ ||೨೨||
ಯುಕ್ತೋ ಬಸ್ತಿಃ ಸುಖೋಷ್ಣೋಽಯಂ ಮಾಂಸಶುಕ್ರಬಲಾ ಜಸಾಮ್
ಆಯುಷೋಽಗ್ನೇಶ್ಚ ಸಂಸ್ಕರ್ತಾ ಹನ್ತಿ ಚಾಶು ಗದಾನಿಮಾನ್ ||೨೩||
ಗುಲ್ಮಾಸೃಗ್ದರವೀಸರ್ಪಮೂತ್ರಕೃಚ್ಛ್ರಕ್ಷತಕ್ಷಯಾನ್
ವಿಷಮಜ್ವರಮರ್ಶಾಂಸಿ ಗ್ರಹಣೀಂ ವಾತಕುಣ್ಡಲೀಮ್ ||೨೪||
ಜಾನುಜಙ್ಘಾಶಿರೋಬಸ್ತಿ ಗ್ರಹೋದಾವರ್ತಮಾರುತಾನ್
ವಾತಾಸೃಕ್ ಶರ್ಕರಾಷ್ಠೀಲಾ ಕುಕ್ಷಿಶೂಲೋದರಾರುಚೀಃ ||೨೫||
ರಕ್ತಪಿತ್ತಕಫೋನ್ಮಾದ ಪ್ರಮೇಹಾಧ್ಮಾನಹೃದ್ಗ್ರಹಾನ್

ರಾಶ್ಮೆ ಕಕ್ಕೆಕಾಯಿ ಕೊನ್ನೆಬೇರು ಕಟುಕರೋಹಿಣಿ ಲಾಮಂಚ ಕೊನ್ನಾರಿಗೆಡ್ಡೆ ಕಹಿದಸರಿ ಅಮೃತವಳ್ಳಿ ಮಂಜಿಷ್ಠೆ ಮಹಾಪಂಚಮೂಲ ತಾರೇಕಾಯಿ ಕಳ್ಳಂಗಡಲೆ ಇವು ಪ್ರತಿಯೊಂದನ್ನೂ ೧ ಪಲದಂತೆ ಸೇರಿಸಿ ೮ ರಷ್ಟು ನೀರು ಸೇರಿಸಿ ಕುದಿಸಿ ೧/೪ ಪಾಲು ಕಷಾಯ ನಿಲ್ಲಿಸಿ (೩೨ ಪಲ) ಶೋಧಿಸಿಟ್ಟುಕೊಂಡು ೮ ಪಲ ಕಷಾಯವನ್ನೊಡು ಪಾತ್ರೆಗೆ ಹಾಕಿ ಮಗ್ಗಾರೆಕಾಯಿ ಅತಿಮಧುರ ಸಬ್ಬಸಿಗೆಬೀಜ ನೆಳಲು ಕೊಡಶಿಗೆಬೀಜ ರಸಾಂಜನ ಇವುಗಳ ಕಲ್ಕ ೩ ಪಲ ಸೈಂಧವ ಚೂರ್ಣ ೧ ೧/೨ ಟಂಕ ಜೇನುತುಪ್ಪ ೩ ಪಲ ಕಲ್ಕ ೩ ಪಲ ತೈಲ ೬ ಪಲಗಳನ್ನು ಸೇರಿಸಿ ಉಳಿ, ಎಲ್ಲವನ್ನು ದೊಡ್ಡ ಪಾತ್ರೆಗೆ

ಹಾಕಿ ರಸಾಂಜನದ ಕಲ್ಕ ಮಾಂಸರಸ ಕಲಗಚ್ಚು ದ್ರಾಕ್ಷಾಕಷಾಯ ಇವು ಪ್ರತ್ಯೇಕ ೧ ಪಲದಂತೆಯೂ ಮೇಲಿನ ಕಷಾಯ ೮ ಪಲಗಳನ್ನೂ ಸೇರಿಸಿ ಮಂತಿನಿಂದ ಕಡೆದು ಒಂದಾಗಿಮಾಡಿ ಬಸ್ತಿಯಂತ್ರಕ್ಕೆ ತುಂಬಿ ದೋಷಾನುಗುಣವಾಗಿ ಸುಖೋಷ್ಣವಾಗಿರುವಂತೆ ಪ್ರಯೋಗಿಸಬೇಕು. ಬೇಗ ಹೊರಕ್ಕೆಬಂದರೆ ಇದೇರೀತಿ ತಯಾರಿಸಿ ೨-೩-೪ ಬಸ್ತಿಗಳನ್ನು ಪ್ರಯೋಗಮಾಡಿ ದೋಷಹರಣಮಾಡಿಸಬೇಕು. ಈ ನಿರೂಹಬಸ್ತಿ ಪ್ರಯೋಗವು ಮಾಂಸ ಶುಕ್ರ ಬಲ ಓಜಸ್ಸು ಆಯುಸ್ಸು ಅಗ್ನಿಬಲಗಳನ್ನು ವೃದ್ಧಿಮಾಡಿ ಗುಲ್ಮಪ್ರದರ ವಿಸರ್ಪ ಮೂತ್ರಕೃಚ್ಛ್ರ ಉರಃಕ್ಷತ ರಾಜಯಕ್ಷ್ಮವಿಷಮಜ್ವರ ಅರ್ಶೋರೋಗ ಗ್ರಹಣೀರೋಗ ವಾತಕುಂಡಲೀ ಮಂಡಿ ಮೊಣಕಾಲು ತಲೆಬಸ್ತಗಳು ಹಿಡಿದುಕೊಂಡಿರುವುದು. ಉದಾವರ್ತ ವಾತರೋಗ ವಾತರಕ್ತ ಮೂತ್ರಶರ್ಕರೆ ಅಷ್ಠೀಲವೆಂಬ ಮೂತ್ರನಾಳ ಬಸ್ತ್ಯಾಶಯಗಳು ಕೂಡುವ ಸ್ಥಳದಲ್ಲುಂಟಾಗುವ ಸುಮಾ ಗ್ರಂಥಿಯವೃದ್ಧಿಗೆ (ಅಷ್ಠೀಲವೆಂದು ಹೆಸರು). ಹೊಟ್ಟೆನೋವು ಉದರ ರೋಗ ಅರೋಚಕತೆ ರಕ್ತಪಿತ್ತ ಕಫರೋಗ ಉನ್ಮಾದ ಪ್ರಮೇಹ ಆಧ್ಮಾನ ಹೃದಯ ಗ್ರಹ ಮೊದಲಾದ ರೋಗಗಳನ್ನು ಬಲುಬೇಗ ನಿಗ್ರಹಮಾಡುತ್ತದೆ.

ವಾತಘ್ನೌಷಧನಿಃಕ್ವಾಥಾಃ ಸೈನ್ಧವತ್ರಿವೃತಾಯುತಾಃ ।
ಸಾಮ್ಲಾಃ ಸುಖೋಷ್ಣಾ ಯೋಜ್ಯಾಃ ಸ್ಯುರ್ಬಸ್ತಯಃ ಕುಪಿತೇಽನಿಲೇ ॥೭೬॥
ನ್ಯಗ್ರೋಧಾದಿಗಣಕ್ವಾಥಾಃ ಕಾಕೋಳ್ಯಾದಿಸಮಾಯುತಾಃ ।
ವಿಧೇಯಾ ಬಸ್ತಯಃ ಪಿತ್ತೇ ಸಸರ್ಪಿಷ್ಕಾಃ ಸಶರ್ಕರಾಃ ॥೭೭॥
ಆರಗ್ವಧಾದಿ ನಿಃಕ್ವಾಥಾಃ ಪಿಪ್ಪಲ್ಯಾದಿ ಸಮಾಯುತಾಃ ।
ಸಕ್ಷೌದ್ರಮೂತ್ರಾ ದೇಯಾಃ ಸ್ಯುರ್ಬಸ್ತಯಃ ಕುಪಿತೇ ಕಫೇ ॥೭೮॥
ಶರ್ಕರೇಕ್ಷುರಸಕ್ಷೀರಘೃತಯುಕ್ತಾಃ ಸುಶೀತಲಾಃ ।
ಕ್ಷೀರವೃಕ್ಷಕಷಾಯಾಢ್ಯಾ ಬಸ್ತಯಃ ಶೋಣಿತೇ ಹಿತಾಃ ॥೭೯॥
ಶೋಧನದ್ರವ್ಯನಿಃಕ್ವಾಥಾಸ್ತತ್ಕಲ್ಕಸ್ನೇಹಸೈನ್ಧವೈಃ ।
ಯುಕ್ತಾಃ ಖಜೇನ ಮಥಿತಾ ಬಸ್ತಯಃ ಶೋಧನಾಃ ಸ್ಮೃತಾಃ ॥೮೦॥
ತ್ರಿಫಲಾಕ್ವಾಥಗೋಮೂತ್ರ ಕ್ಷೌದ್ರಕ್ಷಾರಸಮಾಯುತಾಃ ।
ಊಷಕಾದಿಪ್ರತೀವಾಪಾ ಬಸ್ತಯೋ ಲೇಖನಾ ಸ್ಮೃತಾಃ ॥೮೧॥

ವಾತಹರಗಳಾದ ಭದ್ರದಾರ್ವಾದಿ ಗಣದ್ರವ್ಯಗಳ ಕಷಾಯಕ್ಕೆ ಸೈಂಧವಲವಣ ತ್ರಿವೃತ್ ಸ್ನೇಹ (ವಾತವ್ಯಾಧಿಯಲ್ಲಿ ಹೇಳಿದೆ) ಹುಳಿಕಲಗಚ್ಚುಗಳನ್ನು ಸೇರಿಸಿ ಸುಖೋಷ್ಣವಾಗಿ ವಾತಪ್ರಕೋಪದಲ್ಲಿಯೂ, ಕ್ಷೀರವೃಕ್ಷಗಳ ಕಷಾಯಕ್ಕೆ ಕಾಕೋಳ್ಯಾದಿ ಮಧುರಗಣೌಷಧ ಕಲ್ಕನನ್ನೂ ತುಪ್ಪಸಕ್ಕರೆಗಳನ್ನೂ ಮಿಶ್ರಮಾಡಿ ಪಿತ್ತಪ್ರಕೋಪದಲ್ಲೂ, ಆರಗ್ವಧಾದಿ ಗಣದ್ರವ್ಯಗಳ ಕಷಾಯಕ್ಕೆ ಪಿಪ್ಪಲ್ಯಾದಿ ಗಣೌಷಧಗಳಕಲ್ಕ ಜೇನುತುಪ್ಪ ಗೋ

ಮೂತ್ರಗಳನ್ನು ಸೇರಿಸಿ ಕಫಪ್ರಕೋಪದಲ್ಲೂ ಬಸ್ತಿಪ್ರಯೋಗವನ್ನು ಮಾಡಿಸಿದರೆ ಹಿತಕರವು. ಕ್ಷೀರವೃಕ್ಷಗಳ ಕಷಾಯಕ್ಕೆ ಸಕ್ಕರೆ ಕಬ್ಬಿನರಸ ಹಾಲು ತುಪ್ಪಗಳನ್ನು ಸೇರಿಸಿ ತಣ್ಣಗಿರುವಂತೆ ಬಸ್ತಿಪ್ರಯೋಗ ಮಾಡಿಸಿದರೆ ರಕ್ತಕೋಪದಲ್ಲಿ ಹಿತಕರವು. ವಮನ ವಿರೇಚನ ಗಣದ್ರವ್ಯಗಳ ಕಷಾಯಕ್ಕೆ ಆ ದ್ರವ್ಯಗಳ ಕಲ್ಕವನ್ನು ಸೈಂಧವಲಣ ಸೇರಿಸಿ ಮಂತಿನಿಂದ ಕಡೆದು ಬಸ್ತಿಯನ್ನು ಪ್ರಯೋಗಿಸಿದರೆ ವಮನ ವಿರೇಚನಗಳುಂಟಾಗಿ ದೋಷಶೋಧನೆಯಾಗುತ್ತದೆ. ತ್ರಿಫಲಾ ಕಷಾಯ ಗೋಮೂತ್ರ ಜೇನುತಪ್ಪ ಯವಕ್ಷಾರಗಳನ್ನು ಮಿಶ್ರಮಾಡಿ ಊಷಕಾದಿ ಗಣದ್ರವ್ಯಗಳನ್ನು ಪ್ರತೀವಾಪಮಾಡಿ ಬಸ್ತಿ ಪ್ರಯೋಗಮಾಡಿದರೆ ಲೇಖನಕರ್ಮದಲ್ಲಿ ಹಿತಕರವು.

ಟಿಪ್ಪಣಿ—ಮೇಲಿನ ಕಷಾಯಕ್ಕೆ ೧೬ ಪಲಗಳಷ್ಟು ದ್ರವ್ಯಕ್ಕೆ ೮ ರಷ್ಟು ನೀರು ಸೇರಿಸಿ ೩೨ ಪಲಗಳಷ್ಟು ಕಷಾಯ ನಿಲ್ಲುವಂತೆ ಮಾಡಿ ೮ ಪಲ ಕಷಾಯಕ್ಕೆ ಕಲ್ಕ ಸ್ನೇಹ ಜೇನುತುಪ್ಪ ಹಾಲು ಕಲಗಚ್ಚು ಮಾಂಸರಸ ಗೋಮೂತ್ರ ಮೊದಲಾದುವನ್ನು ದೋಷಗಳಿಗೆ ತಕ್ಕಂತೆ ಮಿಶ್ರಮಾಡಿ ಒಟ್ಟು ೨೪ ಪಲಗಳಷ್ಟರ ೨-೩-೪ ನಿರೂಹಬಸ್ತಿಗಳನ್ನು ಪ್ರಯೋಗಮಾಡಬೇಕು.

ಬೃಂಹಣದ್ರವ್ಯನಿಃಕ್ವಾಥಾಃ ಕಲ್ಕೈರ್ಮಧುರಕೈರ್ಯುತಾಃ ।
ಸರ್ಪಿರ್ಮಾಂಸರಸೋಪೇತಾ ಬಸ್ತಯೋ ಬೃಂಹಣಾಃಸ್ಮೃತಾಃ ॥೮೧॥

ನೆಲಗುಂಬಳದಗೆಡ್ಡೆ ಮೊದಲಾದ ಬೃಂಹಣದ್ರವ್ಯಗಳ ಕಷಾಯ ೮ ಪಲ, ಕಾಕೋಳ್ಯಾದಿ ಮಧುರದ್ರವ್ಯಗಳ ಕಲ್ಕ ೨ ಪಲ, ಸ್ನೇಹ ತುಪ್ಪ ೬ ಪಲ, ಜೇನುತುಪ್ಪ ೪ ಪಲ, ಸೈಂಧವಲವಣ ೩ ಟಂಕಗಳು, ಮಾಂಸರಸ ೩ ಪಲ ೭ ಟಂಕಗಳು ಒಟ್ಟು ೨೪ ಪಲಗಳನ್ನು ಸೇರಿಸಿ ಬಸ್ತಿಯನ್ನು ಪ್ರಯೋಗಿಸಿದರೆ ಬೃಂಹಣವಾಗುತ್ತದೆ.

ಚಟಕಾಣ್ಡೋಚ್ಚಟಾಕ್ವಾಥಾಃ ಸಕ್ಷೀರಘೃತಶರ್ಕರಾಃ ।
ಆತ್ಮಗುಪ್ತಾಫಲಾವಾಪಾಃ ಸ್ಮೃತಾ ವಾಜೀಕರಾನೃಣಾಮ್ ॥೮೨॥

ಗುಬ್ಬಚ್ಚಿಮೊಟ್ಟೆ ಮತ್ತು ಗುಲಗಂಜಿಯಬೇರಿನ ಕಷಾಯ ನಸುಗುನ್ನಿಯಬೀಜದ ಕಲ್ಕ ಹಾಲು ತುಪ್ಪ ಸಕ್ಕರೆ ಇವುಗಳನ್ನು ಮಿಶ್ರಮಾಡಿ ಬಸ್ತಿಪ್ರಯೋಗಮಾಡಿದರೆ ಶುಕ್ರವೃದ್ಧಿಯಾಗಿ ಸ್ತ್ರೀಸಂಗಮಾಡುವ ಶಕ್ತಿಯುಂಟಾಗುತ್ತದೆ. ಹೇಗೆಂದರೆ—ಮನೆಸುಬ್ಬಚ್ಚಿಯ ಮೊಟ್ಟೆ ಮತ್ತು ಗುಲಗಂಜಿಯಬೇರು ೧೬ ಪಲಗಳಷ್ಟಕ್ಕೆ ೮ ರಷ್ಟು ನೀರನ್ನು ಸೇರಿಸಿ ೪೨ ಪಲದಷ್ಟು ನಿಲ್ಲುವಂತೆ ಕಷಾಯಮಾಡಿಟ್ಟುಕೊಂಡು ಅದರಲ್ಲಿ ೮ ಪಲಗಳಷ್ಟನ್ನು ಒಂದು ಪಾತ್ರೆಗೆ ಹಾಕಿ ಹಾಲು ೪ ಪಲ ಜೇನುತುಪ್ಪ ೪ ಪಲ ತುಪ್ಪ ೬ ಪಲ ಸಕ್ಕರೆ ೧ ಪಲ ನಸುಗುನ್ನಿಬೀಜದ ಕಲ್ಕ ೧ ಪಲ ಸೈಂಧವ ತಕ್ಕಷ್ಟು ಈ ರೀತಿ ಸೇರಿಸಿ ಬಸ್ತಿಪ್ರಯೋಗಮಾಡಿದರೆ ವಾಜೀಕರವು.

ಬದರ್ಯೈರಾವತೀಶೇಲುಶಾಲ್ಮಲೀ ಧನ್ವನಾಙ್ಕುರಾಃ ।
ಕ್ಷೀರಸಿದ್ಧಾಃ ಕ್ಷೌದ್ರಯುತಾಃ ಸಾಸ್ರಾಃ ಪಿಚ್ಛಿಲಸಂಜ್ಞಿತಾಃ ॥೮೪॥

ವಾರಾಹಮಾಹಿಷೌರಭ್ರಬೈಡಾಲೈಣೇಯಕೌಕ್ಕುಟಮ್
ಸದ್ಯಸ್ಕಮಸೃಗಣ್ಡಂ ವಾ ದೇಯಂ ಪಿಚ್ಛಿಲಬಸ್ತಿಷು ॥೭೫॥

ಎಲಚಿ ತುರುವೆ ಜೆಳ್ಳೆ ದೂದಿ ದಿಂಡಲು ಇವುಗಳ ಚಿಗುರುಗಳನ್ನು ಕಷಾಯಮಾಡಿ ಹಾಲು ಜೇನುತುಪ್ಪ ರಕ್ತ ಇವುಗಳನ್ನು ಮಿಶ್ರಮಾಡಿ ಪ್ರಯೋಗಿಸಿದರೆ ಪಿಚ್ಛಾಬಸ್ತಿ ಯೆಂಬ ಸಂಜ್ಞೆಯು. ಹಂದಿ ಎಮ್ಮೆ ಕುರಿ ಬೆಕ್ಕು ಜಿಂಕೆ ಕೋಳಿ ಇವುಗಳ ಸದ್ಯೋಹತ ರಕ್ತವನ್ನೂ ಮೊಟ್ಟೆಯನ್ನೂ ಪಿಚ್ಛಾಬಸ್ತಿಗೆ ಸೇರಿಸಬೇಕು. ಎಲಚಿ ತುರುವೆ ಮೊದ ಲಾದುವುಗಳ ಚಿಗುರು ೩ ಪಲಗಳಷ್ಟನ್ನು ೨೪ ಪಲ ಹಾಲಿನಲ್ಲಿ ಹಾಕಿ ಹಾಲಿನ ೪ ರಷ್ಟು ನೀರನ್ನು ಸೇರಿಸಿ ೨೪ ಪಲ ಹಾಲುಮಾತ್ರ ನಿಲ್ಲುವಂತೆ ಕಷಾಯಮಾಡಿ ಅದಕ್ಕೆ ೪ ಪಲ ಜೇನುತುಪ್ಪವನ್ನೂ ಆಗತಾನೆ ಕೊಂದ ಹಂದಿ ಎಮ್ಮೆ ಮೊದಲಾದ ಪ್ರಾಣಿಗಳ ರಕ್ತ ೪ ಪಲಗಳಷ್ಟನ್ನೂ ಸೇರಿಸಿದರೆ ೩೨ ಪಲಗಳಾಗುತ್ತವೆ. ಇದು ಪಿಚ್ಛಾಬಸ್ತಿಯಲ್ಲಿ ಸೇರಿ ಸುವ ದ್ರವ್ಯಗಳ ಪ್ರಮಾಣವು. ಬದುಕಿರುವ ಪ್ರಾಣಿಗಳ ರಕ್ತವೇ ಆವಶ್ಯಕವು. ಅದ ರಿಂದ ಪ್ರಾಣಸಂರಕ್ಷಣೆಯಾಗುತ್ತದೆ.

ಪ್ರಿಯಂಙ್ಗ್ವಾದಿಗಣಕ್ವಾಥಾ ಅಮ್ಬಷ್ಠಾದ್ಯೇನ ಸಂಯುತಾಃ ।
ಸಕ್ಷೌದ್ರಾಃ ಸಘೃತಾಶ್ಚೈವ ಗ್ರಾಹಿಣೋ ಬಸ್ತಯಃ ಸ್ಮೃತಾಃ ॥೭೬॥

ಪ್ರಿಯಂಗ್ವಾದಿ ಗಣದ್ರವ್ಯಗಳು ೧೬ ಪಲಗಳಿಗೆ ೮ ರಷ್ಟು ನೀರನ್ನು ಸೇರಿಸಿ ೩೨ ಪಲ ಗಳಷ್ಟು ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿಟ್ಟುಕೊಂಡು ೮ ಪಲಗಳನ್ನು ಒಂದು ಪಾತ್ರೆಗೆ ಹಾಕಿ ಅಂಬಷ್ಠಾದಿ ಗಣದ್ರವ್ಯಗಳ ಕಲ್ಕ ೩ ಪಲಗಳು ಜೇನುತುಪ್ಪ ೪ ಪಲಗಳು ಸಂಗ್ರಹ ದ್ರವ್ಯಗಳಿಂದ ತಯಾರಿಸಿದ ತುಪ್ಪ ೬ ಪಲಗಳು ಸಂಗ್ರಹ ದ್ರವ್ಯವನ್ನು ಹೇಳಿಲ್ಲ ವಾದರೂ ಮಜ್ಜಿಗೆ ೩ ಪಲಗಳಷ್ಟನ್ನು ಸೇರಿಸಿದರೆ ೨೪ ಪಲಗಳಾಗುತ್ತವೆ. ಇದು ಗ್ರಾಹಿ ಬಸ್ತಿಯ ಪ್ರಕಾರವು.

ಏತೇಷ್ವೇವ ಚ ಯೋಗೇಷು ಸ್ನೇಹಾಃ ಸಿದ್ಧಾಃ ಪೃಥಕ್ ಪೃಥಕ್ ।
ಸರ್ವಸ್ರೋತಸ್ಸ್ವಥವಾ ಸಮ್ಯಗ್ವಿಧೇಯಾಃ ಸ್ನೇಹಬಸ್ತಯಃ ॥೭೭॥

ಈ ಯೋಗಗಳಂತೆಯೇ ಬೇರೆಬೇರೆ ಔಷಧಗಳಿಂದ ತಯಾರಿಸಿದ ಘೃತಗಳನ್ನೂ ಬಸ್ತಿಪ್ರಯೋಗದಲ್ಲಿ ಉಪಯೋಗ ಮಾಡಬಹುದು.

ವನ್ಧ್ಯಾನಾಂ ಶತಪಾಕೇನ ಶೋಧಿತಾನಾಂ ಯಥಾಕ್ರಮಮ್ ।
ಬಲಾತೈಲೇನ ದೇಯಾಃ ಸ್ಯುರ್ಬಸ್ತಯಸ್ತ್ರಿವೃತೇನ ಚ ॥೭೮॥

ಸ್ನೇಹಸ್ವೇದ ವಮನ ವಿರೇಚನಗಳಿಂದ ದೇಹಶುದ್ಧಿಮಾಡಿಸಿಕೊಂಡಿರುವ ಬಂಜೆ ಯರಿಗೆ ಶತಪಾಕ ವಿಧಾನದಿಂದ ತಯಾರಿಸಿದ ಬಲಾತೈಲದೊಡನೆ ಮಹಾವಾತರೋಗ ದಲ್ಲಿ ಹೇಳಿರುವ ತುಪ್ಪ ತೈಲ ವಸಾ ಈ ಮೂರು ಸ್ನೇಹಗಳಿಂದ ತಯಾರಿಸಿದ ತ್ರಿವೃತ್ ಎಂಬ ಘೃತವನ್ನು ಸೇರಿಸಿ ಉತ್ತರಬಸ್ತಿಯನ್ನು ಪ್ರಯೋಗಿಸಬೇಕು.

ನರಸ್ಯೋತ್ತಮಸತ್ವಸ್ಯ ತೀಕ್ಷ್ಣಂ ಬಸ್ತಿಂ ನಿಧಾಪಯೇತ್ ।
ಮಧ್ಯಮಂ ಮಧ್ಯಸತ್ವಸ್ಯ ವಿಪರೀತಸ್ಯ ವೈ ಮೃದುಮ್ ॥೮೯॥
ಏವಂ ಕಾಲಂ ಬಲಂ ದೋಷಂ ವಿಕಾರಂ ಚ ವಿಕಾರವಿತ್ ।
ಬಸ್ತಿದ್ರವ್ಯಬಲಂ ಚೈವ ವೀಕ್ಷ್ಯ ಬಸ್ತೀನ್ ಪ್ರಯೋಜಯೇತ್ ॥೯೦॥
ದದ್ಯಾದುತ್ಕ್ಲೇಶನಂ ಪೂರ್ವಂ ಮಧ್ಯೇ ದೋಷಹರಂ ಪುನಃ ।
ಪಶ್ಚಾತ್ ಸಂಶಮನೀಯಂ ಚ ದದ್ಯಾದ್ಬಸ್ತಿಂ ವಿಚಕ್ಷಣಃ ॥೯೧॥

ಅತ್ಯಂತ ಬಲಿಷ್ಠನಿಗೆ ತೀಕ್ಷ್ಣ ಬಸ್ತಿಯನ್ನೂ (ತೀಕ್ಷ್ಣದ್ರವ್ಯಗಳನ್ನು ಸೇರಿಸಿ ತಯಾರಿಸಿದ ಬಸ್ತಿ), ಮಧ್ಯಬಲವುಳ್ಳವನಿಗೆ ಮಧ್ಯವೀರ್ಯವುಳ್ಳ ದ್ರವ್ಯಗಳಿಂದ ತಯಾರಿಸಿದ ಬಸ್ತಿಯನ್ನೂ ಪ್ರಯೋಗಮಾಡಬೇಕು. ಅತಿ ಬೇಸಿಗೆಯಲ್ಲಿ ಮೃದುಬಸ್ತಿಯನ್ನೂ ಸಾಧಾರಣವಾದ ವಸಂತ ಶರದೃತುಗಳಲ್ಲಿ ಸಾಧಾರಣ ಬಸ್ತಿಯನ್ನೂ ಶೀತಕಾಲದಲ್ಲಿ ತೀಕ್ಷ್ಣಬಸ್ತಿಯನ್ನೂ ಕಫವಾತಗಳ ಪ್ರಕೋಪದಲ್ಲಿ ತೀಕ್ಷ್ಣ, ಪಿತ್ತರಕ್ತಾಧಿಕ್ಯತೆಯಲ್ಲಿ ಮೃದು, ಕಫಪಿತ್ತಾಧಿಕ್ಯದಲ್ಲಿ ಮಧ್ಯಮ ಬಸ್ತಿಗಳನ್ನೂ ಪ್ರಯೋಗಿಸಬೇಕು. ರೋಗಗಳನ್ನು ನಿರ್ದೇಶಮಾಡದಿದ್ದರೂ ಮಧ್ಯ ಮೃದು ಕೋಷ್ಠಗಳಿಗೆ ತಕ್ಕಂತೆ ಪ್ರಯೋಗಿಸಬೇಕು. ಮೊದಲು ದೋಷಗಳು ಕೆರಳುವಂತೆಯೂ, ಮಧ್ಯದಲ್ಲಿ ದೋಷಗಳು ಶೋಧನೆಯಾಗುವಂತೆಯೂ, ಕಡೆಯಲ್ಲಿ ದೋಷಶೇಷವು ಶಮನವಾಗುವುದಕ್ಕಾಗಿಯೂ ಬಸ್ತಿಯನ್ನು ಪ್ರಯೋಗಿಸಬೇಕು. ದೋಷೋತ್ಕ್ಲೇಶವಾದರೆ ದೋಷವನ್ನು ಹೊರಡಿಸಬೇಕು. ಅಥವಾ ಶಮನಮಾಡಬೇಕು. ದೋಷಹರ ಬಸ್ತಿಯಲ್ಲಿ ಮೊದಲನೆಯಸಾರಿ ದೋಷ ಶೋಧನೆಯಾಗದಿದ್ದರೆ ೨ ನೇಸಾರಿ, ೩ ನೇಸಾರಿ, ಪುನಃ ಪುನಃ ಬಸ್ತಿಪ್ರಯೋಗವನ್ನು ಮಾಡಬೇಕು. ದೋಷಪ್ರಕೋಪ ಲಕ್ಷಣಗಳಿಂದಲೇ ದೋಷಗಳ ಉತ್ಕ್ಲೇಶ ಲಕ್ಷಣಗಳನ್ನು ತಿಳಿದುಕೊಳ್ಳಬೇಕು.

ಏರಣ್ಡಬೀಜಂ ಮಧುಕಂ ಪಿಪ್ಪಲೀ ಸೈಂಧವಂ ವಚಾ ।
ಹಪುಷಾಫಲಕಲ್ಕಶ್ಚ ಬಸ್ತಿರುತ್ಕ್ಲೇಶನಃ ಸ್ಮೃತಃ ॥೯೨॥
ಶತಾಹ್ವಾಮಧುಕಂ ಬೀಜಂ ಕೌಟಜಂ ಫಲಮೇವ ಚ ।
ಸಕಾಞ್ಜಿಕಃ ಸಗೋಮೂತ್ರೋ ಬಸ್ತಿರ್ದೋಷಹರಃ ಸ್ಮೃತಃ ॥೯೩॥
ಪ್ರಿಯಙ್ಗುರ್ಮಧುಕಂ ಮುಸ್ತಾ ತಥೈವ ಚ ರಸಾಞ್ಜನಮ್ ।
ಸಕ್ಷೀರಃ ಶಸ್ಯತೇ ಬಸ್ತಿರ್ದೋಷಾಣಾಂ ಶಮನಃ ಪರಃ ॥೯೪॥

ಹರಳುಬೀಜ ಅತಿಮಧುರ ಹಿಪ್ಪಲಿ ಸೈಂಧಲವಣ ಬಜೆ ಹಬ್ಬೆಬೇರು ಮಗ್ಗಾರೆ ಕಾಯಿ ಇವುಗಳ ಕಲ್ಕವು ದೋಷಗಳನ್ನು ಕೆರಳಿಸುತ್ತದೆ. ಸಬ್ಬುಶಿಗೆಬೀಜ ಅತಿಮಧುರ ಕೊಡಶಿಗೆಬೀಜ ಮಗ್ಗಾರೆಕಾಯಿಗಳಕಲ್ಕ ಹುಳಿಕಲಗಚ್ಚು ಗೋಮೂತ್ರ ಇವುಗಳನ್ನು ಸೇರಿಸಿ ತಯಾರಿಸಿದ ಬಸ್ತಿಯು ದೋಷಗಳನ್ನು ಶೋಧಿಸುತ್ತದೆ. ನೆಳಲು ಅತಿಮಧುರ ಕೊನ್ನಾರಿಗೆಡ್ಡೆ ರಸಾಂಜನ ಇವುಗಳ ಕಲ್ಕವನ್ನು ಹಾಲಿನಲ್ಲಿ ಕದರಿ ಬಸ್ತಿಪ್ರಯೋಗ ಮಾಡಿದರೆ ದೋಷ ಶಮನವಾಗುತ್ತದೆ (ಉತ್ತಮ ಪ್ರಯೋಗವು).

ನೃಪಾಣಾಂ ತತ್ಸಮಾನಾನಾಂ ತಥಾ ಸುಮಹತಾಮಪಿ ।
ನಾರೀಣಾಂ ಸುಕುಮಾರಾಣಾಂ ಶಿಶುಸ್ಥವಿರಯೋರಪಿ ॥೯೫॥
ದೋಷನಿರ್ಹರಣಾರ್ಥಾಯ ಬಲವರ್ಣೇನ್ದ್ರಿಯಾಯ ಚ ।
ಸಮಾಸೇನೋಪದೇಕ್ಷ್ಯಾಮಿ ವಿಧಾನಂ ಮಾಧುತೈಲಿಕಮ್ ॥೯೬॥
ಯಾನಸ್ತ್ರೀಭೋಜ್ಯಪಾನೇಷು ನಿಯಮಶ್ಚಾತ್ರ ನೋಚ್ಯತೇ ।
ಫಲಂ ಚ ವಿಪುಲಂ ದೃಷ್ಟಂ ವ್ಯಾಪದಾಂ ಚಾಪ್ಯಸಂಭವಃ ॥೯೭॥
ಯೋಜ್ಯಸ್ತ್ವತಃ ಸುಖೇನೈವ ನಿರೂಹಕ್ರಮಮಿಚ್ಛತಾ ।
ಯದೇಚ್ಛತಿ ತದೈವೈಷ ಪ್ರಯೋಕ್ತವ್ಯೋ ವಿಪಶ್ಚಿತಾ ॥೯೮॥
ಮಧುತೈಲೇ ಸಮೇ ಸ್ಯಾತಾಂ ಕ್ವಾಥಶ್ಚೈರಣ್ಡಮೂಲಜಃ ।
ಪಲಾರ್ಧಂ ಶತಪುಷ್ಪಾಯಾಸ್ತತೋಽರ್ಧಂ ಸೈನ್ಧವಸ್ಯ ಚ ॥೯೯॥
ಫಲೇನೈಕೇನ ಸಂಯುಕ್ತಃ ಖಜೇನ ಚ ವಿಲೋಡಿತಃ ।
ದೇಯಃ ಸುಖೋಷ್ಣೋ ಭಿಷಜಾ ಮಾಧುತೈಲಿಕಸಂಜ್ಞಿತಃ ॥೧೦೦॥

ರಾಜರು ರಾಜಸಮಾನರು ಧನಿಕರು ಹೆಂಗಸರು ಸುಕುಮಾರರು ಮಕ್ಕಳು ಮುದುಕರು ಇವರಿಗೆ ದೋಷಹರಣಮಾಡಿ ಬಲ ವರ್ಣಗಳು ಉಂಟಾಗುವುದಕ್ಕಾಗಿ ಮಾಧುತೈಲಿಕವೆಂಬ ಬಸ್ತಿವಿಧಾನವನ್ನು ಹೇಳುತ್ತೇವೆ. ಈ ಬಸ್ತಿಯ ಪ್ರಯೋಗ ಕಾಲದಲ್ಲಿ ರೋಗಿಗೆ ಯಾನ ಸ್ತ್ರೀಸಂಗ ಅನ್ನಪಾನ ವಿಧಾನಗಳಲ್ಲಿ ಯಾವ ನಿರ್ಬಂಧವೂ ಇರುವುದಿಲ್ಲ. ಯಾವ ಅಪಾಯವೂ ಉಂಟಾಗದೆ ಅಧಿಕಪ್ರಯೋಜನವು ಲಭಿಸುವ ಕಾರಣ ಎಲ್ಲರೂ ಸುಖವಾಗಿ ಪ್ರಯೋಗಿಸಿಕೊಳ್ಳಬಹುದು. ಜೇನುತುಪ್ಪ ಎಳ್ಳೆಣ್ಣೆ ಹರಳಬೇರಿನ ಕಷಾಯ ಇವು ಸಮಭಾಗ ಸಬ್ಬಸಿಗೆಬೀಜ ಅರ್ಧಪಲ ಸೈಂಧವ ೧ ಕರ್ಷ ೧ ಮಗ್ಗಾರೆಕಾಯಿ ಇವುಗಳ ಕಲ್ಕ ಇವೆಲ್ಲಾ ದ್ರವ್ಯಗಳನ್ನೂ ಒಟ್ಟುಗೂಡಿಸಿ ಕಡಗೋಲಿನಿಂದ ಕಡೆದು ಸರಿ ಹೊಂದಿಸಿ ಸುಖೋಷ್ಣವಾಗಿ ಪ್ರಯೋಗಿಸಿದರೆ ಮಾಧುತೈಲಿಕ ಬಸ್ತಿಯೆಂದು ಹೆಸರು.

ವಚಾಮಧುಕತೈಲಂ ಚ ಕ್ವಾಥಃಸ್ವರಸಸೈನ್ಧವಃ ।
ಪಿಪ್ಪಲೀಫಲಸಂಯುಕ್ತೋ ಬಸ್ತಿರ್ಯುಕ್ತರಥಃ ಸ್ಮೃತಃ ॥೧೦೧॥
ಸುರುದಾರುವರಾರಾಸ್ನಾಶತಪುಷ್ಪಾವಚಾಮಧು ।
ಹಿಙ್ಗುಸೈನ್ಧವಸಂಯುಕ್ತೋ ಬಸ್ತಿರ್ದೋಷಹರಃ ಸ್ಮೃತರಃ ॥೧೦೨॥
ಪಞ್ಚಮೂಲೀಕಷಾಯಂ ಚ ತೈಲಂ ಮಾಗಧಿಕಾ ಮಧು ।
ಬಸ್ತಿರೇಷ ವಿಧಾತವ್ಯಃ ಸಶತಾಹ್ವಃ ಸಸೈನ್ಧವಃ ॥೧೦೩॥
ಯವಕೋಲಕುಲತ್ಥಾನಾಂ ಕ್ವಾಥೋ ಮಾಗಧಿಕಾ ಮಧು ।
ಸಸೈನ್ಧವಃ ಸಮಧುಕಃ ಸಿದ್ಧಬಸ್ತಿರಿತಿ ಸ್ಮೃತಃ ॥೧೦೪॥

ಬಜೆ ಅತಿಮಧುರ ಇವು ಒಂದೊಂದು ಕರ್ಷ, ನೀರು ೧ ಪ್ರಸ್ಥ, ಇವನ್ನು ೧/೪ ಭಾಗ ನಿಲ್ಲುವಂತೆ ಕಾಯಿಸಿದ ಕಷಾಯಕ್ಕೆ ಹಿಪ್ಪಲಿ ಮಗ್ಗಾರೆಕಾಯಿಗಳಕಲ್ಕ ೨ ಕರ್ಷ, ಸೈಂಧವಚೂರ್ಣ ೧ ೧/೨ ಟಂಕ, ಜೇನುತುಪ್ಪ ತಿಲತೈಲಗಳೆರಡೂ ಸೇರಿ ೪ ಪ್ರಸೃತ

ಗಳು, ಇವೆಲ್ಲಾ ಸೇರಿ ೯ ಪ್ರಸೃತಗಳಾಗುತ್ತವೆ. ಈ ಬಸ್ತಿಗೆ "ಯುಕ್ತರಥ" ಅಥವಾ ಮಾಧುತ್ತೈಲಕ ಬಸ್ತಿಯೆಂದು ಹೆಸರು. ದೇವದಾರು ತ್ರಿಫಲೆ ರಾಸ್ನೆಗಳ ಕಷಾಯ ೪ ಪ್ರಸೃತಗಳು, ತೈಲ ಜೇನುತುಪ್ಪ ೪ ಪ್ರಸೃತಗಳು, ಸಬ್ಬಸಿಗೆಬೀಜ ಬಜೆ ಇವುಗಳ ಕಲ್ಕ ೧ ಪ್ರಸೃತ ಹಿಂಗು ಮತ್ತು ಸೈಂಧವಲವಣಚೂರ್ಣ ೧ ೧/೨ ಟಂಕ ಇವೆಲ್ಲವನ್ನೂ ಮಿಶ್ರ ಮಾಡಿ ೯ ಪ್ರಸೃತಗಳಷ್ಟನ್ನು ಪ್ರಯೋಗಿಸಿದರೆ "ದೋಷಹರಣ ಮಾಧುತ್ತೈಲಿಕ ಬಸ್ತಿ" ಯೆಂದು ಹೆಸರು. ಬಿಲ್ವಾದಿ ಪಂಚಮೂಲದ ಕಷಾಯ ೪ ಪ್ರಸೃತಗಳು, ತೈಲ ಜೇನು ತುಪ್ಪ ೪ ಪ್ರಸೃತಗಳು, ಹಿಪ್ಪಲಿ ಸಬ್ಬಸಿಗೆಬೀಜ ಇವುಗಳ ಕಲ್ಕ ೨ ಪಲ, ಸೈಂಧವಚೂರ್ಣ ೧ ೧/೨ ಟಂಕ, ಇವೆಲ್ಲಾ ಸೇರಿ ೯ ಪ್ರಸೃತಗಳಷ್ಟನ್ನು ಪ್ರಯೋಗಿಸಿದರೆ ಪಂಚಮೂಲಿಕ ಮಾಧುತ್ತೈಲಿಕ ಬಸ್ತಿಯೆಂದು ಹೆಸರು. ಯವಧಾನ್ಯ ಎಲಚಿಹಣ್ಣು ಹುರುಳಿ ಇವುಗಳ ಕಷಾಯ ೪ ಪ್ರಸೃತಗಳು, ತೈಲ ಜೇನುತುಪ್ಪಗಳೆರಡೂ ಸೇರಿ ೪ ಪ್ರಸೃತಗಳು, ಸಬ್ಬಸಿಗೆ ಬೀಜ ಅತಿಮಧುರಗಳಕಲ್ಕ ೨ ಪಲ ಸೈಂಧವಚೂರ್ಣ ೧ ೧/೨ ಟಂಕ, ಇವೆಲ್ಲಾ ಸೇರಿ ೯ ಪ್ರಸೃತಗಳಷ್ಟನ್ನು ಪ್ರಯೋಗಿಸಿದರೆ "ಮಾಧುತ್ತೈಲಿಕ ಸಿದ್ಧ ಬಸ್ತಿ" ಯೋಗವೆಂದು ಹೆಸರು. ಇವುಗಳ ಪ್ರಮಾಣ ಪ್ರತಿಯೊಂದೂ ೯ ಪ್ರಸೃತ ಅಥವಾ ೧೮ ಪಲಗಳಾಗಬೇಕು.

ಮುಸ್ತಾಪಾಠಾಮೃತಾತಿಕ್ತಾ ಬಲಾರಾಸ್ನಾಪುನರ್ನವಾಃ ।
ಮಞ್ಜಿಷ್ಠಾರಗ್ವಧೋಶೀರತ್ರಾಯಮಾಣಾಖ್ಯಗೋಕ್ಷುರೈಃ ॥೧೦೫॥
ಪಾಲಿಕೈಃ ಪಞ್ಚಮೂಲಾಲ್ಪಸಹಿತೈರ್ಮದನಾಷ್ಟಕಮ್ ।
ಜಲಾಢಕೇ ಪಚೇತ್ಕ್ವಾಥಂ ಪಾದಶೇಷಂ ಪುನಃ ಪಚೇತ್ ॥೧೦೬॥
ಕ್ಷೀರಪ್ರಸ್ಥೇನ ಸಂಯುಕ್ತಂ ಕ್ಷೀರಶೇಷಂ ಪರಿಸ್ರುತಮ್ ।
ಪಾದೇನ ಜಾಙ್ಗಲರಸಸ್ತಥಾ ಮಧುಘೃತೇ ಸಮಮ್ ॥೧೦೭॥
ಶತಾಹ್ವಾಫಲಿನೀಯಷ್ಟೀವತ್ಸಕೈಸ್ಸರಸಾಞ್ಜನೈಃ ।
ಕಾರ್ಷಿಕೈಃ ಸೈನ್ಧವಯುತೈಃ ಕಲ್ಕೈರ್ಬಸ್ತಿಃ ಪ್ರಯೋಜಿತಃ ॥೧೦೮॥
ವಾತಾಸೃಙ್ಮೇಹಶೋಫಾರ್ಶೋಗುಲ್ಮಮೂತ್ರವಿಬನ್ಧನುತ್ ।
ವಿಸರ್ಪಜ್ವರವಿಡ್ಭಙ್ಗರಕ್ತಪಿತ್ತವಿನಾಶನಃ ॥೧೦೯॥
ಬಲ್ಯಃ ಸಂಜೀವನೋ ವೃಷ್ಯಶ್ಚಕ್ಷುಷ್ಯಃ ಶೂಲನಾಶನಃ ।
ಸ್ಥಾಪನಾನಾಮಯಂ ರಾಜಾ ಬಸ್ತಿರ್ಮುಸ್ತಾದಿಕೋ ಮತಃ ॥೧೧೦॥

ಕೊನ್ನಾರಿಗೆಡ್ಡೆ ಅಗಳುಶುಂಠಿ ಅಮೃತವಳ್ಳಿ ಕಟುಕರೋಹಿಣಿ ಕಳ್ಳಂಗಡಲೆ ಬೇರು ರಾಸ್ನೆಗೆಡ್ಡೆ ಕೊಮ್ಮೆಬೇರು ಮಂಜಿಷ್ಠೆ ಕಕ್ಕೇಕಾಯಿ ಲಾಮಂಚ ಕಹಿದಸರಿ ನೆಗ್ಗಿಲು ಲಘು ಪಂಚಮೂಲ ಇವು ಒಂದೊಂದೂ ೧ ಪಲದಂತೆಯೂ, ೮ ಮಗ್ಗಾರೆ ಕಾಯಿಗಳು (೨ ಪಲಗಳಾಗುತ್ತವೆ) ಇವೆಲ್ಲವನ್ನೂ ೧ ಆಢಕ (ಅಳತೆ ೨ ಸೇರಿನಷ್ಟು) ನೀರಿನಲ್ಲಿ ಕಷಾಯ ಕಾಯಿಸಿ ೧ ಪ್ರಸ್ಥಕಷಾಯಕ್ಕೆ ನಿಲ್ಲಿಸಿ ಶೋಧಿಸಿ ೨ ಪ್ರಸ್ಥ ಹಾಲನ್ನು ಸೇರಿಸಿ ಹಾಲು ಮಾತ್ರ ನಿಲ್ಲುವಂತೆ ಕಾಯಿಸಿದರೆ ೩೨ ಪಲ ಮಾತ್ರ ನಿಲ್ಲುತ್ತದೆ. ಇದರೊಡನೆ ಜಾಂಗಲ ಮಾಂಸರಸ ಜೇನುತುಪ್ಪ ತುಪ್ಪ ಇವು ಪ್ರತಿಯೊಂದನ್ನೂ ೮ ಪಲಗಳಂತೆಯೂ, ಸಬಸಿಗೆ

ಬೀಜ ನೆಲ್ಲಿಲು ಅತಿಮಧುರ ಕೊಡಶಿಗೆತೊಗಟೆ ರಸಾಂಜನ ಸೈಂಧವಲವಣ ಈ ೬ ದ್ರವ್ಯಗಳನ್ನೂ ಒಂದೊಂದು ಕರ್ಷದಂತೆ ೧ ೧/೨ ಪಲ ಕಲ್ಕವನ್ನು ಸೇರಿಸಿ ೯ ಸಾರಿ ಬಸ್ತಿ ಪ್ರಯೋಗಮಾಡಬೇಕು. ಅಂದರೆ ೧ ಸಾರಿಗೆ ೧೯ ಪಲಗಳಷ್ಟು ದ್ರವ್ಯಗಳಾಗುತ್ತವೆ. ಈ ಬಸ್ತಿಪ್ರಯೋಗದಿಂದ ವಾತ ರಕ್ತ ಮದ ಶೋಫ ಅರ್ಶೋರೋಗ ಗುಲ್ಮ ಮೂತ್ರಮಲಗಳ ತಡೆ ವಿಸರ್ಪ ಜ್ವರ ಮಲಭೇದಿಯಾಗುವುದು ರಕ್ತ ಪಿತ್ತ ಗುದ ಮೂತ್ರ ಯೋನಿದ್ವಾರಗಳಿಂದಲೂ ಬಾಯಿ ಮೂಗು ಕಿವಿ ಕಣ್ಣು ರೋಮಕೂಪಗಳಿಂದಲೂ ರಕ್ತಸ್ರಾವವಾಗುತ್ತಿರುವುದು ಇವು ನಿವಾರಣೆಯಾಗುತ್ತವೆ. ಬಲವನ್ನೂ ಪ್ರಾಣದಾನವನ್ನೂ ಮಾಡುತ್ತದೆ. ಈ ಮುಸ್ತಾದಿ ಗಣದ್ರವ್ಯಗಳ ಕಷಾಯದಿಂದ ತಯಾರಿಸಿದ ಬಸ್ತಿಯು ಅತ್ಯುತ್ತಮವಾದದ್ದು ಎಂದು ಖ್ಯಾತಿಪಡೆದಿರುತ್ತದೆ.

ಟಿಪ್ಪಣಿ—ನಿರೂಹದಲ್ಲಿ ೧ ೧/೪ ಪ್ರಸ್ಥ ಉತ್ತಮ ಪ್ರಮಾಣ, ೧ ಪ್ರಸ್ಥ ಮಧ್ಯಮವು, ೧೨ ಪಲಗಳಷ್ಟು ಹೀನಪ್ರಮಾಣವೆಂದು ಪರಾಶರರ ಮತವು. ಗೂಢಪದಭಂಜನೀ ಎಂಬ ಸುಶ್ರುತ ವ್ಯಾಖ್ಯಾಕಾರನ ಮತವೇನೆಂದರೆ—ಮುಸ್ತಾದಿ ೧೯ ಪದಾರ್ಥಗಳನ್ನೂ ೧ ಆಢಕ ನೀರಿನಲ್ಲಿ ಕಷಾಯಕಾಯಿಸಿ ೧೬ ಪಲಗಳಷ್ಟು ಕಷಾಯವನ್ನು ಉಳಿಸಿ ೨ ಪ್ರಸ್ಥ ಹಾಲನ್ನು ಸೇರಿಸಿ ಪುನಃ ಹಾಲು ಮಾತ್ರ ನಿಲ್ಲುವಂತೆ ಕಷಾಯಮಾಡಿ ಜಾಂಗಲಮಾಂಸ ರಸ ೧/೪ ಭಾಗ ಅಷ್ಟೇ ಪ್ರಮಾಣ ತುಪ್ಪ ಜೇನುತುಪ್ಪಗಳನ್ನು ಸೇರಿಸಿ ಸಬ್ಬಸಿಗೆಬೀಜ ಮೊದಲಾಗಿ ಸೈಂಧವದವರೆಗಿನ ೬ ದ್ರವ್ಯಗಳೂ ಸೇರಿ ೧ ೧/೨ ಪಲ ಕಲ್ಕವನ್ನೂ ಸೇರಿಸಿ ಮಂತಿನಿಂದ ಕಡೆದು ಹದಮಾಡಿ ಮೂರುಸಾರಿ ನಿರೂಹ ಬಸ್ತಿಯನ್ನು ಪ್ರಯೋಗಿಸಬೇಕು. ಒಂದುಸಾರಿ ಪ್ರಯೋಗಕ್ಕೆ ೧೬ ೧/೨ ಪಲಗಳಷ್ಟಾಗುತ್ತದೆ.

ಅವೇಕ್ಷ್ಯ ಭೇಷಜಂ ಬುದ್ಧ್ಯಾ ವಿಕಾರಂ ಚ ವಿಕಾರವಿತ್ ।
ಬೀಜೇನಾನೇನ ಮತಿಮಾನ್ ಕುರ್ಯಾದ್ಬಸ್ತಿಶತಾನ್ಯಪಿ ॥೧೧೧॥
ಅಜೀರ್ಣೇ ನ ಪ್ರಯುಂಜೀತದಿವಾಸ್ವಪ್ನಂ ಚ ವರ್ಜಯೇತ್ ।
ಆಹಾರಾಚಾರಾದಿಕಂ ಶೇಷಮನ್ಯದ್ಯುಕ್ತಂ ಸಮಾಚರೇತ್ ॥೧೧೨॥

ಬುದ್ಧಿವಂತನಾದ ರೋಗಲಕ್ಷಣಗಳನ್ನು ತಿಳಿದಿರುವ ವೈದ್ಯನು ಔಷಧಗಳ ಪ್ರಯೋಗದಲ್ಲಿ ಪರಿಶ್ರಮವನ್ನು ಪಡೆದು ಈ ಮೇಲೆ ಹೇಳಿದ ಬಸ್ತಿಪ್ರಯೋಗಗಳನ್ನೇ ಆಧಾರವಾಗಿಟ್ಟುಕೊಂಡು ರೋಗದ ಅವಸ್ಥೆಗಳಿಗೆ ತಕ್ಕಂತೆ ನೂರಾರು ವಿಧಗಳಾದ ಬಸ್ತಿಯೋಗಗಳನ್ನು ಸ್ವಂತ ಬುದ್ಧಿಬಲದಿಂದ ತಯಾರಿಸಲು ಸಮರ್ಥನಾಗುತ್ತಾನೆ. ಅಜೀರ್ಣವಾಗಿರುವಾಗ ಬಸ್ತಿಪ್ರಯೋಗವನ್ನು ಮಾಡಬಾರದು. ಬಸ್ತಿಪ್ರಯೋಗವಾದ ನಂತರ ಹಗಲು ನಿದ್ರೆ ಮಾಡುವುದನ್ನು ಬಿಡಬೇಕು. ಆಹಾರ ವಿಚಾರ ಉಪಚಾರಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆಯೇ ಆಚರಿಸಬೇಕು.

ಯಸ್ಮಾನ್ಮಧು ಚ ತೈಲಂ ಚ ಪ್ರಾಧಾನ್ಯೇನ ಪ್ರದೀಯತೇ ।
ಮಾಧುತೈಲಿಕ ಇತ್ಯೇವಂ ಭಿಷಗ್ಭಿರ್ಬಸ್ತಿರುಚ್ಯತೇ ॥೧೧೩॥

ರಥೇಷ್ವಪಿ ಚ ಯುಕ್ತೇಷು ಹಸ್ತ್ಯಶ್ವೇಚಾಪಿ ಕಲ್ಪಿತೇ ।
ಯಸ್ಮಾನ್ನಪ್ರತಿಷಿದ್ಧೋಽಯಮತೋ ಯುಕ್ತರಥಃ ಸ್ಮೃತಃ ॥೧೧೪॥
ಬಲೋಪಚಯವರ್ಣಾನಾಂ ಯಸ್ಮಾದ್ವ್ಯಾಧಿಶತಸ್ಯ ಚ ।
ಭವತ್ಯೇತೇನ ಸಿದ್ಧಿಸ್ತು ಸಿದ್ಧಬಸ್ತಿರತೋ ಮತಃ ॥೧೧೫॥
ಸುಖಿನಾಮಲ್ಪದೋಷಾಣಾಂ ನಿತ್ಯಂ ಸ್ನಿಗ್ಧಾಶ್ಚ ಯೇ ನರಾಃ ।
ಮೃದುಕೋಷ್ಠಾಶ್ಚ ಯೇ ತೇಷಾಂ ವಿಧೇಯಾ ಮಾಧುತೈಲಿಕಾಃ ॥೧೧೬॥

ಮುಖ್ಯವಾಗಿ ಜೇನುತುಪ್ಪವನ್ನೂ ತೈಲವನ್ನೂ ಹೆಚ್ಚಾಗಿ ಸೇರಿಸಿ ಬಸ್ತಿಪ್ರಯೋಗ ಮಾಡುವ ಕಾರಣ ಮಾಧುತೈಲಿಕ ಬಸ್ತಿಯೆಂದು ವೈದ್ಯರು ವ್ಯವಹರಿಸುತ್ತಾರೆ. ಈ ಬಸ್ತಿಯನ್ನು ಪ್ರಯೋಗಮಾಡಿಸಿಕೊಂಡವರು ಆನೆಕುದುರೆಗಳನ್ನು ಕಟ್ಟಿದ ರಥಗಳಲ್ಲಿ ಕುಳಿತು ಸಂಚರಿಸಲು ಯಾನ ಅಡ್ಡಿಯೂ ಇಲ್ಲದ ಕಾರಣ ಯುಕ್ತರಥ ಬಸ್ತಿಯೆಂಬ ಹೆಸರೂ ಇರುತ್ತದೆ. ಬಲ ಶರೀರಪುಷ್ಟಿ ಕಾಂತಿಗಳ ಲಾಭವೂ ನೂರಾರು ವ್ಯಾಧಿಗಳ ನಾಶವೂ ಈ ಬಸ್ತಿಪ್ರಯೋಗದಿಂದುಂಟಾಗುವಕಾರಣ ಇದಕ್ಕೆ ಸಿದ್ಧವಸ್ತಿಯೆಂದೂ ಹೆಸರು. ಸುಖಜೀವಿಗಳೂ ಅಲ್ಪದೋಷವುಳ್ಳವರೂ ನಿತ್ಯವೂ ಸ್ನಿಗ್ಧವಾದ ಆಹಾರವನ್ನು ಸೇವನೆಮಾಡಿಕೊಂಡು ಸ್ನಿಗ್ಧದೇಹವುಳ್ಳವರೂ ಮೃದುಕೋಷ್ಠಿಗಳೂ ಈ ಮಾಧುತೈಲಿಕ ಬಸ್ತಿಯಪ್ರಯೋಗದಿಂದ ತುಂಬಾ ಆರೋಗ್ಯಲಾಭವನ್ನು ಪಡೆಯುತ್ತಾರೆ.

ಮೃದುತ್ವಾತ್ ಪಾದಹೀನತ್ವಾದಕೃತ್ಸ್ನ ವಿಧಿಸೇವನಾತ್ ।
ಏಕಬಸ್ತಿಪ್ರದಾನಾಚ್ಚ ಸಿದ್ಧಬಸ್ತಿಷ್ವಯನ್ತ್ರಣಾ ॥೧೧೭॥

ಮೃದು ದ್ರವ್ಯಗಳನ್ನೇ ಸೇರಿಸಿ ಪ್ರಮಾಣದಲ್ಲೇ ೧೪ ಭಾಗ ಕಡಮೆಮಾಡಿ ಉಪಯೋಗಿಸುವುದರಿಂದಲೂ ವಮನ ವಿರೇಚನಾದಿ ಎಲ್ಲಾ ವಿಧಾನಗಳನ್ನೂ ಅನುಸರಿಸಬೇಕಾದ ಆವಶ್ಯಕತೆಯಿಲ್ಲದ್ದರಿಂದಲೂ ಒಂದೇದಿನ ಪ್ರಯೋಗಿಸಿ ಮಹಾಫಲವನ್ನು ಹೊಂದಬಹುದಾದ್ದರಿಂದಲೂ ಒಂದೇದಿನ ಪ್ರಯೋಗಿಸಿ ಮಹಾಫಲವನ್ನು ಹೊಂದಬಹುದಾದ್ದರಿಂದಲೂ ಸಿದ್ಧವಸ್ತಿಪ್ರಯೋಗಕ್ಕೆ ಪಥ್ಯೋಪಚಾರಾದಿ ನಿಯಮಗಳು ಇರುವುದಿಲ್ಲ.

ಇತಿ ಶ್ರೀ ಸುಸ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ನಿರೂಹಕ್ರಮಚಿಕಿತ್ಸಾನಾಮಾಷ್ಟತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹ ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಏಕೋನಚತ್ವಾರಿಂಶತ್ತಮೋಽಧ್ಯಾಯಃ

ಅಥಾತ ಆತುರೋಪದ್ರವ ಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಪಂಚಕರ್ಮಗಳ ಪ್ರಯೋಗ ನಿಮಿತ್ತಗಳಾದ ವ್ಯಾಧಿಗಳ ಚಿಕಿತ್ಸೆಯನ್ನು ವಿವರಿಸುತ್ತೇವೆ. ಅಂದರೆ—ಸ್ನೇಹಸ್ವೇದಕರ್ಮ ಮೊದಲುಗೊಂಡು ನಿರೂಹಬಸ್ತಿಯ ಪ್ರಯೋಗವೇ ಅಂತ್ಯವಾಗಿ ಮಾಡುವ ಚಿಕಿತ್ಸಾವಿಧಾನಗಳಲ್ಲಿ ಪ್ರಾಯಿಕವಾಗಿ ಅಗ್ನಿಮಾಂದ್ಯವೇ ಅಧಿಕವಾಗಿರುತ್ತದೆ. ಅಗ್ನಿವೃದ್ಧಿಗಾಗಿ ಪೇಯಾದಿ ಪಥ್ಯೋಪಯೋಗಗಳನ್ನು ತಿಳಿಸುವುದಕ್ಕಾಗಿಯೂ ಪ್ರಜ್ಞಾಪರಾಧಗಳಿಂದ ಉತ್ಪನ್ನವಾಗುವ ರೋಗಗಳ ಶಮನೋಪಾಯಗಳನ್ನು ತಿಳಿಸುವುದಕ್ಕಾಗಿಯೂ ರೋಗ ಚಿಕಿತ್ಸೆಯೆಂದು ಈ ಅಧ್ಯಾಯಕ್ಕೆ ಹೆಸರು.

ಸ್ನೇಹಪೀತಸ್ಯ ವಾಂತಸ್ಯ ವಿರಿಕ್ತಸ್ಯ ಸ್ರುತಾಸೃಜಃ ।
ನಿರೂಢಸ್ಯ ಚ ಕಾಯಾಗ್ನಿರ್ಮನ್ದೋ ಭವತಿ ದೇಹಿನಃ ||೩||
ಸೋಽನ್ನೈರತ್ಯರ್ಥಗುರುಭಿರುಪಯುಕ್ತೈಃ ಪ್ರಶಾಮ್ಯತಿ ।
ಅಲ್ಪೋ ಮಹದ್ಭಿರ್ಬಹುಭಿಶ್ಛಾದಿತೋಽಗ್ನಿರಿವೇನ್ಧನೈಃ ||೪||
ಸಚಾಲ್ಪೈರ್ಲಘುಭಿಶ್ಚಾನ್ನೈರುಪಯುಕ್ತೈರ್ವಿವರ್ಧತೇ ।
ಕಾಷ್ಠೈರಣುಭಿರಲ್ಪೈಶ್ಚ ಸನ್ಧುಕ್ಷಿತ ಇವಾನಲಃ ||೫||

ಸ್ನೇಹಪಾನ, ವಮನ, ವಿರೇಚನ, ರಕ್ತಮೋಕ್ಷಣ, ನಿರೂಹಬಸ್ತಿ ಈ ಕರ್ಮಗಳನ್ನು ಆಚರಿಸಿದವರಿಗೆ ಜಾಠರಾಗ್ನಿಯು ಮಾಂದ್ಯವಾಗುತ್ತದೆ. ಅವರು ಅತ್ಯಂತ ಗುರುವಾದ ಆಹಾರವನ್ನು ಭೋಜನಮಾಡಿದರೆ ಸ್ವಲ್ಪವಾಗಿರುವ ಬೆಂಕಿಯಮೇಲೆ ಭಾರವಾದ ಸೌದೆ ಕೊರಡುಗಳನ್ನು ಕವಿಚಿದರೆ ಅಗ್ನಿಯು ಆರಿಹೋಗುವಂತೆಯೇ ಜೀರ್ಣಶಕ್ತಿಯೇ ನಾಶವಾಗುತ್ತದೆ. ಲಘುವಾದ ಅನ್ನವನ್ನು ಅಲ್ಪಪ್ರಮಾಣದಿಂದ ಸೇವಿಸುತ್ತಾ ಬಂದರೆ ಸ್ವಲ್ಪ ಬೆಂಕಿಗೆ ಸಣ್ಣ ಸಣ್ಣ ಕಡ್ಡಿಗಳನ್ನು ಸ್ವಲ್ಪಸ್ವಲ್ಪವಾಗಿ ಹಾಕುತ್ತಾ ಬಂದರೆ ಅದು ಬೇಗ ವೃದ್ಧಿಯಾಗಿ ಪ್ರಜ್ವಲಿಸುವಂತೆಯೇ ಜೀರ್ಣಶಕ್ತಿಯೂ ಹೆಚ್ಚುತ್ತದೆ.

ಹೃತದೋಷಪ್ರಮಾಣೇನ ಸದಾಹಾರವಿಧಿಃ ಸ್ಮೃತಃ ।
ತ್ರೀಣಿ ಚಾತ್ರಪ್ರಮಾಣಾನಿ ಪ್ರಸ್ಥೋಽರ್ಧಾಢಕಮಾಢಕಮ್ ||೬|
ತತ್ರಾವರಂ ಪ್ರಸ್ಥಮಾತ್ರಂ ದ್ವೇ ಶೇಷೇ ಮಧ್ಯಮೋತ್ತಮೇ ।

ಯಾವ ಪ್ರಮಾಣದಿಂದ ದೋಷಹರಣವಾಗುತ್ತದೋ ಅದಕ್ಕೆ ಅನುಸಾರವಾಗಿ ಆಹಾರ ಪ್ರಮಾಣವೂ ಹೆಚ್ಚುತ್ತಾ ಬರುತ್ತದೆ. ದೋಷಹರಣದಲ್ಲಿ ಮೂರು ಪ್ರಮಾಣ

ಗಳಿವೆ. ೧ ಪ್ರಸ್ಥ (೧೩ ೧/೨ ಪಲಗಳು) ಅರ್ಧಾಢಕ (೬೪ ಪಲಗಳಷ್ಟು) ೧ ಆಢಕ (೧೨೮ ಪಲಗಳಷ್ಟು) ಎಂದು. ಇವುಗಳಲ್ಲಿ ಪ್ರಸ್ಥಪ್ರಮಾಣವು ಹೀನವಾದದ್ದು. ಉಳಿದ ಅರ್ಧಾಢಕ, ಆಢಕಪ್ರಮಾಣಗಳು ಮಧ್ಯಮ ಮತ್ತು ಉತ್ತಮ ಪ್ರಮಾಣಗಳು.

ಪ್ರಸ್ಥೇ ಪರಿಸ್ರುತೇ ದೇಯಾ ಯವಾಗೂಃ ಸ್ವಲ್ಪತಣ್ಡುಲಾ ॥೭॥
ದ್ವೇ ಚೈವಾರ್ಧಾಢಕೇ ದೇಯೇ ತಿಸ್ರಶ್ಚಾಪ್ಯಾಢಕೇ ಗತೇ
ವಿಲೇಪೀಮುಚಿತಾದ್ಭಕ್ತಾತ್ ಚತುರ್ಥಾಂಶಕೃತಾಂ ತತಃ ॥೮॥
ದದ್ಯಾದುಕ್ತೇನ ವಿಧಿನಾ ಕ್ಲಿನ್ನಸಿಕ್ಥಾಮಪಿಚ್ಛಲಾಮ್
ಅಸ್ನಿಗ್ಧಲವಣಂ ಸ್ವಚ್ಛಮುದ್ಗಯೂಷಯುತಂ ತತಃ ॥೯॥
ಅಂಶದ್ವಯಪ್ರಮಾಣೇನ ದದ್ಯಾತ್ ಸುಸ್ನಿಗ್ಧಮೋದನಮ್
ತತಃ ಸಘೃತಮಣ್ಡೇನ ಹೃದ್ಯೇನೇನ್ದ್ರಿಯಬೋಧಿನಾ ॥೧೦॥
ತ್ರೀನಂಶಾ ವಿತರೇದ್ಭೋಕ್ತುಮಾತುರಾಯೌದನಂ ಮೃದುಮ್
ತತೋ ಯಥೋಚಿತಂ ಭಕ್ತಂ ಭೋಕ್ತುಮಸ್ಮೈ ವಿಚಕ್ಷಣಃ ॥೧೧॥
ಲಾವೈಣಹರಿಣಾದೀನಾಂ ರಸೈರ್ದದ್ಯಾತ್ ಸುಸಂಸ್ಕೃತೈಃ

ಒಂದು ಪ್ರಸ್ಥಪ್ರಮಾಣ ವಿರೇಕದ್ರವವು ಸ್ರಾವವಾದರೆ ಭೋಜನದ ೧/೮ ಭಾಗದಷ್ಟು ಅಕ್ಕಿಯಿಂದ ತಯಾರಾದ ಯವಾಗೂವನ್ನು ಒಂದೇ ಹೊತ್ತು ಕುಡಿಸಬೇಕು. ಅರ್ಧಾಢಕಪ್ರಮಾಣ ವಿರೇಚನವಾದರೆ ೨ ಹೊತ್ತೂ, ಆಢಕಪ್ರಮಾಣದಷ್ಟು ವಿರೇಚನವಾದರೆ ಆದಿನ ೨ ಹೊತ್ತೂ, ಮೂರನೆಯದಿನ ಒಂದು ಹೊತ್ತೂ, ಯವಾಗೂವನ್ನು ಪಾನಮಾಡಿಸಬೇಕು. ಅನಂತರ ೧/೪ ಭಾಗ ಅಕ್ಕಿಯಿಂದ ತಯಾರಿಸಿದ ವಿಲೇಪಿಯನ್ನು (ಅನ್ನವಿಲ್ಲದ ಗಟ್ಟಿಯಾದ ಗಂಜಿ) ಹೀನ ಮಧ್ಯ ಉತ್ತಮ ಪ್ರಮಾಣದಿಂದ ಶುದ್ಧರಾದವರಿಗೆ ಕ್ರಮವಾಗಿ ಆ ದಿನ ರಾತ್ರಿ ಭೋಜನಕಾಲ ಎರಡನೆಯ ಭೋಜನಕಾಲಗಳೆರಡು ಎರಡನೆಯ ದಿನದಲ್ಲಿ ಮೊದಲನೆಯ ಭೋಜನಕಾಲಪೇಯಾ ಎರಡನೆಯ ಭೋಜನಕಾಲ ಮತ್ತು ಮೂರನೆಯದಿನ ಎರಡು ಭೋಜನ ಕಾಲಗಳಲ್ಲೂ ಸಹ ವಿಲೇಪೀ ಪಾನವನ್ನೇ ಮಾಡಿಸಿ ಅನಂತರ ತುಪ್ಪವನ್ನೂ ಲವಣವನ್ನೂ ಮಿಶ್ರಮಾಡದಿರುವ ಹೆಸರುಕಟ್ಟನ್ನು ಸೇರಿಸಿ (ಎರಡುಪಾಲು ಅನ್ನ) ಅರ್ಧಭೋಜನವನ್ನೂ ಅನಂತರ ಹಿತವಾಗಿ ತುಪ್ಪ ಮತ್ತು ಸುಸಂಸ್ಕೃತವಾದ ಯೂಷಮಿಶ್ರಮಾಡಿದ ಅನ್ನದ ೩/೪ ಗ್ರಾಸವನ್ನೂ ಅನಂತರ ಲಾವನ ಹಕ್ಕಿ ಕರಿಹುಲ್ಲೆ ಜಿಂಕೆ ಮೊದಲಾದುವುಗಳ ಮಾಂಸರಸವನ್ನು ಸೇರಿಸಿ ಸರಿಯಾಗಿ ಸಂಸ್ಕರಿಸಿದ ಪೂರ್ಣಾಹಾರ ಭೋಜನವನ್ನೂ ೧-೨-೩ ವೇಳೆಗಳಂತೆ ಹೀನ ಮಧ್ಯಮ ಉತ್ತಮ ಪ್ರಮಾಣದಿಂದ ಶುದ್ಧರಾದವರಿಗೆ ವಿಭಾಗ ಮಾಡಿ ಪ್ರಯೋಗಿಸಿದನಂತರ ನಿತ್ಯವೂ ಅಭ್ಯಾಸವಾಗಿರುವ ಭೋಜನವನ್ನು ಮಾಡಿಸಬೇಕು.

ಟಿಪ್ಪಣಿ : ವಿರೇಚನದ್ರವ್ಯವೂ ೧ ಪ್ರಸ್ಥದಷ್ಟು ವಿಸರ್ಜನೆಯಾದವನು ಹೀನಶುದ್ಧಿ ಶುದ್ಧನು. ಅವನಿಗೆ ಮೊದಲನೆಯದಿನ ಬೆಳಗಿನ ಅನ್ನಕಾಲದಲ್ಲಿ ಪೇಯು

ವನ್ನೂ ರಾತ್ರಿಯ ಅನ್ನಕಾಲದಲ್ಲಿ ವಿಲೇಪಿಯನ್ನೂ, ಎರಡನೆಯದಿನ ಹಗಲಿನ ಅನ್ನಕಾಲದಲ್ಲಿ ಬರಿ ಹೆಸರುಕಟ್ಟಿನೊಡನೆ ಅರ್ಧಭೋಜನವನ್ನೂ, ಸಾಯಂಕಾಲದ ಅನ್ನಕಾಲದಲ್ಲಿ ತುಪ್ಪ ಲವಣಗಳಿಂದ ತಯಾರಿಸಿದ ಹೆಸರುಕಟ್ಟು ಮಿಶ್ರಮಾಡಿ ೩/೪ ಗ್ರಾಸ ಭೋಜನವನ್ನೂ, ಮೂರನೆಯದಿನ ಹಗಲು ಮಾಂಸರಸ ಮಿಶ್ರಮಾಡಿದ ಪೂರ್ಣಭೋಜನವನ್ನೂ ಸಾಯಂಕಾಲದಿಂದ ಪ್ರಕೃತಿ ಭೋಜನವನ್ನೂ ಮಾಡಿಸಬೇಕು. ಅರ್ಧಾಢಕದಷ್ಟು ವಿರೇಚನದ್ರವ್ಯವನ್ನು ವಿಸರ್ಜನೆ ಮಾಡಿದವನು ಮಧ್ಯಮ ಶುದ್ಧಿಶುದ್ಧನು. ಅವನಿಗೆ ಆ ದಿನ ೨ ಭೋಜನ ವೇಳೆಗಳಲ್ಲೂ ತಿಳಿಯಾದ ಪೇಯಾಪಾನವನ್ನೂ, ೨ ನೆಯದಿನ ೨ ಹೊತ್ತು ಊಟದಕಾಲದಲ್ಲೂ ವಿಲೇಪಿ (ಗಟ್ಟಿಯಾದ ಗಂಜಿ) ಯನ್ನೂ, ೩ ನೆಯದಿನ ಎರಡು ಭೋಜನ ಕಾಲಗಳಲ್ಲೂ ತುಪ್ಪ ಲವಣಗಳನ್ನು ಸೇರಿಸದಿರುವ ಹೆಸರುಕಟ್ಟನ್ನು ಸೇರಿಸಿದ ಅರ್ಧಪ್ರಮಾಣದ ಅನ್ನವನ್ನೂ, ೪ ನೆಯದಿನ ೨ ಅನ್ನಕಾಲಗಳಲ್ಲೂ ತುಪ್ಪ ಲವಣ ಮೊದಲಾದುವುಗಳೊಡನೆ ತಯಾರಿಸಿದ ಹೆಸರುಕಟ್ಟಿನೊಡನೆ ೩/೪ ಪ್ರಮಾಣದ ಅನ್ನವನ್ನೂ, ೫ ನೆಯದಿನ ೨ ಭೋಜನ ಕಾಲಗಳಲ್ಲೂ ಲಾವ ಏಣ ಮೊದಲಾದ ಪ್ರಾಣಿಗಳ ಮಾಂಸರಸ ಮಿಶ್ರಮಾಡಿದ ಪೂರ್ಣಭೋಜನವನ್ನೂ, ೬ನೆಯ ದಿನದಿಂದ ಸಾತ್ಮ್ಯವಾದ ಆಹಾರವನ್ನೂ ಭೋಜನ ಮಾಡಿಸಬೇಕು. ೧ ಆಢಕ ಪ್ರಮಾಣ ವಿರೇಕದ್ರವ್ಯವನ್ನು ವಿಸರ್ಜಿಸಿದವನನ್ನು ಉತ್ತಮ ಪ್ರಮಾಣದಿಂದ ಶುದ್ಧಿಯಾದವನೆಂದು ಪರಿಗಣಿಸಿ ಅವನಿಗೆ ಆ ದಿನ ೨ ಭೋಜನ ಕಾಲಗಳಲ್ಲೂ, ೨ ನೆಯ ದಿವಸ ಹಗಲಿನ ಭೋಜನಕಾಲದಲ್ಲೂ, ಪೇಯಾಪಾನವನ್ನೂ ಆ ದಿನ ರಾತ್ರಿ ಭೋಜನ ಕಾಲ ಮತ್ತು ೩ ನೆಯದಿನ ೨ ಭೋಜನ ಕಾಲಗಳಲ್ಲೂ ವಿಲೇಪಿಯನ್ನೂ ಪಾನಮಾಡಿಸಬೇಕು. ೪ ನೆಯದಿನ ೨ ವೇಳೆ ಮತ್ತು ೫ ನೆಯದಿನ ಹಗಲು ತುಪ್ಪ ಲವಣಗಳನ್ನು ಸೇರಿಸದಿರುವ ಬರಿಯ ಹೆಸರುಕಟ್ಟು ಮಿಶ್ರಮಾಡಿದ ಅರ್ಧಭಾಗ ಅನ್ನವನ್ನು ಭೋಜನಮಾಡಿಸಿ ಆ ರಾತ್ರಿಯ ಮತ್ತು ೬ ನೆಯ ದಿನ ಎರಡು ವೇಳೆಯ ಭೋಜನ ಕಾಲಗಳಲ್ಲೂ ತುಪ್ಪ ಲವಣಗಳಿಂದ ಯಾಚಿಸಿ ಮನಸ್ಸಿಗೆ ಹಿತಕರವಾಗಿರುವ ಹೆಸರುಕಟ್ಟು ಮಿಶ್ರಮಾಡಿದ ೩/೪ ಗ್ರಾಸ ಅನ್ನವನ್ನು ಭೋಜನ ಮಾಡಿಸಬೇಕು. ೭ ನೆಯ ದಿನ ೨ ವೇಳೆಯೂ ೮ ನೆಯ ದಿನ ಹಗಲಿನ ಭೋಜನ ಕಾಲದಲ್ಲೂ ಲಾವ ಏಣ ಮೊದಲಾದ ಪ್ರಾಣಿಗಳ ಮಾಂಸರಸ ಮಿಶ್ರಮಾಡಿದ ಪೂರ್ಣಗ್ರಾಸದ ಅನ್ನವನ್ನು ಭೋಜನ ಮಾಡಿ ಆ ದಿನ ರಾತ್ರಿ ಭೋಜನ ಕಾಲದಿಂದ ಸಾತ್ಮ್ಯಭೋಜನವನ್ನು ಮಾಡಿಸಬೇಕು. “ಗಯಿಾ” ಎಂಬ ವೈದ್ಯನು ಹೀನ ಶುದ್ಧನಿಗೆ ಮೊದಲಿನ ಅನ್ನಕಾಲ ೧/೮ ಭಾಗ ಅಕ್ಕಿಯಿಂದ (ನಿತ್ಯಭೋಜನಕ್ಕೆ ಬೇಕಾಗುವುದರ ೧/೮ ಭಾಗವು) ತಯಾರಿಸಿದ ಪೇಯಾವನ್ನೂ, ಎರಡನೆಯ ಅನ್ನಕಾಲದಲ್ಲಿ ೧/೪ ಅಕ್ಕಿಯಿಂದ ತಯಾರಿಸಿದ ವಿಲೇಪಿಯನ್ನೂ, ಎರಡನೆಯದಿನ ಹಗಲು ಉಚಿತ ಭೋಜನದ ಅರ್ಧಭಾಗ ಅನ್ನಕ್ಕೆ ಕೋಳಿ ಲಾವನಹಕ್ಕಿ ಮೊದಲಾದ ಪ್ರಾಣಿಗಳ ಮಾಂಸರಸ ಅಥವಾ ಹೆಸರುಕಟ್ಟನ್ನು ಮಿಶ್ರಮಾಡಿ ಭೋಜನ ಮಾಡಿಸಬೇಕು. ಆ ರಾತ್ರಿ

ಭೋಜನದ ವೇಳೆ ದೋಹಗಳಿಗೆ ತಕ್ಕಂತೆ ಸರಿಯಾಗಿ ತಯಾರಿಸಿದ ಹೆಸರು ಕಟ್ಟನ್ನಾಗಲೀ, ಹಿಪ್ಪಲಿ ಶುಂಠಿ ಮೊದಲಾದುವುಗಳಿಂದ ತಯಾರಿಸಿದ ಮಾಂಸರಸವನ್ನಾಗಲೀ ಮಿಶ್ರ ಮಾಡಿ ೩/೪ ಭಾಗ ಅನ್ನವನ್ನು ಭೋಜನ ಮಾಡಿಸಬೇಕು. ೩ ನೆಯ ದಿನ ಸರಿಯಾಗಿ ತಯಾರಿಸಿದ ಯೂಷ ಅಥವಾ ಮಾಂಸರಸ ಮಿಶ್ರಮಾಡಿದ ಪೂರ್ಣ ಭೋಜನವನ್ನು ಹಗಲೂ ಸಾಯಂಕಾಲಗಳಲ್ಲಿ ಭೋಜನ ಮಾಡಿಸಿ ಅನಂತರ ಪ್ರಕೃತಿ ಭೋಜನವನ್ನು ಮಾಡಿಸಬೇಕೆಂದೂ ಇದೇ ರೀತಿಯಾಗಿ ಮಧ್ಯಶುದ್ಧಿ ಶುದ್ಧರಾದವರೂ ಕ್ರಮವಾಗಿ ಪೇಯಾ ವಿಲೇಪೀ ಅಕೃತಯೂಷ ಅಥವಾ ಮಾಂಸರಸ ಮಿಶ್ರಮಾಡಿದ ಅರ್ಧಗ್ರಾಸದ ಭೋಜನ, ಸರಿಯಾಗಿ ತಯಾರಿಸಿದ ಯೂಷ ಮಾಂಸರಸ ಮಿಶ್ರಮಾಡಿದ ೩/೪ ಗ್ರಾಸದ ಅನ್ನವನ್ನೂ ಅನಂತರ ಸುಸಂಸ್ಕೃತ ಯೂಷ ಮಾಂಸರಸ ಮಿಶ್ರಮಾಡಿದ ಪೂರ್ಣಗ್ರಾಸದ ಅನ್ನವನ್ನೂ, ಅನಂತರ ಪ್ರಕೃತಿ ಭೋಜನವನ್ನೂ ಕ್ರಮವಾಗಿ ೨ ಹೊತ್ತು ೩ ಹೊತ್ತುಗಳಂತೆ ಅಭ್ಯಾಸಮಾಡಿ ೫ ನೆಯ ಮತ್ತು ೭ ನೆಯ ದಿನಗಳಲ್ಲಿ ಪ್ರಕೃತಿ ಭೋಜನ ಮಾಡಬೇಕೆಂದು ಅಭಿಪ್ರಾಯಪಡುತ್ತಾನೆ.

ಹೀನಮಧ್ಯೋತ್ತಮೇಷ್ವೇಷು ವಿರೇಕೇಷು ವಿಧಿಃ ಸ್ಮೃತಃ ॥೧೨॥
ಏಕದ್ವಿತ್ರಿಗುಣಃ ಸಮ್ಯಗಾಹಾರಸ್ಯ ಕ್ರಮಸ್ತ್ವಯಮ್ ।
ಕಫಪಿತ್ತಾಧಿಕಾನ್ ಮದ್ಯನಿತ್ಯಾನ್ ಹೀನವಿಶೋಧಿತಾನ್ ॥೧೩॥
ಪೇಯಾಽಭಿಷ್ಯಂದಯೇತ್ತೇಷಾಂ ತರ್ಪಣಾದಿಕ್ರಮೋ ಹಿತಃ ।
ವೇದನಾಲಾಭನಿಯಮಶೋಕವೈಚಿತ್ರ್ಯಹೇತುಭಿಃ ॥೧೪॥
ನರಾನುಪೋಷಿತಾಂ ಶ್ಚಾಪಿವಿರಿಕ್ತವದುಪಾಚರೇತ್ ।

೧ ಪ್ರಸ್ಥದಷ್ಟು ವಿರೇಚನವಾದರೆ ಹೀನಯೋಗವೆಂದೂ, ಅವನಿಗೆ ಒಂದೊಂದು ಅನ್ನ ಕಾಲದಲ್ಲಿ ಪೇಯಾ ವಿಲೇಪೀ ಅಕೃತಯೂಷ ರಸ ಮಿಶ್ರಿತ ಅನ್ನವನ್ನೂ ಸುಸಂಸ್ಕೃತ ಯೂಷರಸ ಮಿಶ್ರಿತ ಅನ್ನವನ್ನೂ ಪ್ರಯೋಗಿಸಬೇಕು. ಅರ್ಧಾಢಕದಷ್ಟು ವಿರೇಚನ ದ್ರವ್ಯಸ್ರಾವವಾದರೆ ಮಧ್ಯಮ ಪ್ರಮಾಣದ ವಿರೇಕಯೋಗವೆಂದೂ, ಅವನಿಗೆ ಪೇಯಾದಿಗಳನ್ನು ಕ್ರಮವಾಗಿ ಎರಡೆರಡು ಅನ್ನಕಾಲಗಳಲ್ಲಿ ಪ್ರಯೋಗಿಸಬೇಕು. ೧ ಆಢಕದಷ್ಟು ವಿರೇಚನವಾದರೆ ವಿರೇಚನದ ಉತ್ತಮ ಯೋಗವೆಂದೂ ಅಂಥವನಿಗೆ ಪೇಯಾದಿಗಳನ್ನು ೩-೩ ಅನ್ನ ಕಾಲಗಳಲ್ಲಿ ಪ್ರಯೋಗಿಸಬೇಕು. ಈ ರೀತಿಯಾಗಿ ಹೀನ ಮಧ್ಯಮ ಉತ್ತಮ ಪ್ರಮಾಣದಿಂದ ವಿರೇಚನಮಾಡಿದವರಿಗೆ ಪೇಯಾ ವಿಲೇಪ್ಯಾದಿಗಳನ್ನು ೧-೨-೪ ರಷ್ಟು ಕಾಲದಂತೆ ಕ್ರಮವಾಗಿ ಉಪಯೋಗಿಸುವ ನಿಯಮವನ್ನು ಹೇಳಿರುತ್ತಾರೆ. ಕಫ ಪಿತ್ತಾಧಿಕ್ಯವುಳ್ಳವರೂ ಮದ್ಯಪಾಯಿಗಳೂ ಹೀನಯೋಗದಿಂದ ಶೋಧನೆಯಾದವರೂ ಪೇಯಾಪಾನ ಮಾಡಿದರೆ ಅಭಿಷ್ಯಂದವಾಗುತ್ತದೆಯಾಗಿ ಅಂತಹವರಿಗೆ ತರ್ಪಣಾದಿ ಕ್ರಮಗಳು ಹಿತಕರಗಳು. ಅಂದರೆ ಲಾಜ ಮೊದಲಾದುವುಗಳಿಂದ ತಯಾರಿಸಿದ ತರ್ಪಣ ವನ್ನು ಪ್ರಯೋಗಿಸಿದಮೇಲೆ ಯೂಷಾದಿಗಳಿಂದ ಮಿಶ್ರಮಾಡಿದ ಅನ್ನವನ್ನು ಭೋಜನ

ಮಾಡಿಸಬೇಕು. ಜ್ವರಾದಿ ರೋಗಗಳುಂಟಾದವರಿಗೂ ವ್ರತ ಉಪವಾಸಾದಿ ನಿಯಮ ಗಳನ್ನು ಅಚರಿಸುವವರಿಗೂ ವ್ಯಸನ ಬುದ್ಧಿವ್ಯತ್ಯಾಸ ಮೊದಲಾದುವುಗಳಿಂದ ಪೀಡಿತರಾದ ವರಿಗೂ ಉಪವಾಸಮಾಡಿಸಿ ಅನಂತರ ವಿರೇಚನೌಷಧ ಸೇವನೆ ಮಾಡಿದವರಂತೆಯೇ ಪೇಯಾದಿ ಕ್ರಮವನ್ನು ಅಭ್ಯಾಸಮಾಡಿಸಬೇಕು.

ಅಥಕಾರ್ಧಾಥಕಪ್ರಸ್ಥಸಂಖ್ಯಾಹ್ಯೇಷಾ ವಿರೇಚನೇ ||೧೫||
ಶ್ಲೇಷ್ಮಾನ್ತತ್ವಾದ್ವಿರೇಕಸ್ಯ ನ ತಾಮಿಚ್ಛತಿ ತದ್ವಿದಃ ।
ಏಕೋ ವಿರೇಕಃ ಶ್ಲೇಷ್ಮಾನ್ತೋ ನ ದ್ವಿತೀಯೋಽಸ್ತಿ ಕಶ್ಚನ ||೧೬||

ವಿರೇಚನದಲ್ಲಿ ೧ ಆಢಕ ಅರ್ಧಾಥಕ ಪ್ರಸ್ಥಪರಿಮಾಣ ವಿರೇಚನದ್ರವ್ಯದ ಪ್ರಮಾಣವನ್ನು ಹೇಳಿರುವುದು ಶ್ಲೇಷ್ಮವು ವಿರೇಚನವಾಗಲು ಶುರುವಾದರೆ ಅಲ್ಲಿಗೆ ವಿರೇಕಕರ್ಮವು ಪೂರ್ತಿಯಾಗುತ್ತದೆಂಬ ಅಭಿಪ್ರಾಯದಿಂದ ಕೆಲವರು ಅದನ್ನು ಒಪ್ಪುವುದಿಲ್ಲ. ಕಫವು ಕಾಣುವವರೆಗೆ ವಿರೇಕವಾಗುವುದೇ ೧ ವಿರೇಚನ ಯೋಗವೆಂದೂ ಬೇರೆ ಯಾವ ಲಕ್ಷಣವೂ ವಿರೇಚನದ ಸಮ್ಯಗ್ಯೋಗವನ್ನು ನಿರ್ಧರಿಸಲಾರದೆಂದೂ ಹೇಳುತ್ತಾರೆ.

ಟಿಪ್ಪಣಿ—ಅಗ್ನಿಗೆ ಆಧಾರಭೂತವಾದ ಗ್ರಹಣಿ ಸ್ಥಾನವು ಪಿತ್ತಾಧಿಕ್ಯದಿಂದ ಕ್ಲೇದಿತವಾಗಿ ದೂಷಿತವಾಗಿ ಅಗ್ನಿಮಾಂದ್ಯವನ್ನುಂಟುಮಾಡುತ್ತದೆಯಾಗಿ ೧ ಆಢಕ ಪ್ರಮಾಣದಷ್ಟು ವಿರೇಕದ್ರವವು ಸ್ರಾವವಾಗಬೇಕೆಂದು ಸಂಜ್ಞೆ. ವಮನ ಆಸ್ಥಾಪನ ಗಳಲ್ಲಿ ಅಗ್ನ್ಯಧಿಷ್ಠಾನಕ್ಕೆ ಕ್ಲೇದವುಂಟಾಗುವ ಸಂಭವವಿಲ್ಲವಾಗಿ ಅಗ್ನಿಮಾಂದ್ಯವುಂಟಾಗುವುದಿಲ್ಲವಾದಕಾರಣ ಅವುಗಳಲ್ಲಿ ಪ್ರಮಾಣ ನಿಯಮವಿಲ್ಲವಾಗಿ ವಮನಮಾಡಿದವರು ಆ ದಿನವೇ ಹುರುಳಿ ಮತ್ತು ಹೆಸರುಕಟ್ಟು ಮಿಶ್ರಮಾಡಿದ ಅನ್ನದ ಭೋಜನವನ್ನೂ ಆಸ್ಥಾಪನಮಾಡಿಕೊಂಡವರು ಮಾಂಸರಸ ಮಿಶ್ರಮಾಡಿದ ಅನ್ನವನ್ನು ತಿಂದು ಅನುವಾಸನ ಬಸ್ತಿಯನ್ನೂ ಪ್ರಯೋಗಿಸಿಕೊಳ್ಳಬಹುದು. ಇದರ ಅಭಿಪ್ರಾಯವೇನೆಂದರೆ— ನಿಃಶೇಷವಾಗಿ ಪಿತ್ತಹರಣ ಮಾಡುವುದಕ್ಕಾಗಿಯೇ ವಿರೇಚನವನ್ನು ಪ್ರಯೋಗಿಸಬೇಕು. ಪಿತ್ತಪ್ರವರ್ತನೆಯಾದಮೇಲೆ ಅದರ ಸ್ಥಾನದಲ್ಲಿ ಅನುರೂಪ ಕಫವು ಜಮಾಯಿಸುತ್ತದೆ. ನಿಃಶೇಷವಾಗಿ ಪಿತ್ತಹರಣವಾಗಿರುತ್ತೆಂಬುದಕ್ಕೆ ಇದೇ ಗುರುತು. ವಿರೇಕದ ಸಮ್ಯಗ್ಯೋಗ ಲಕ್ಷಣವನ್ನು ತಿಳಿದ ವೈದ್ಯರು ಪ್ರಸ್ಥಾದಿ ವಿರೇಕದ್ರವಗಳ ಪ್ರಮಾಣವನ್ನು ಒಪ್ಪುವುದಿಲ್ಲ. ಇನ್ನು ಶೋಧನಲಕ್ಷಣಗಳಿಂದ ಹೀನ ಮತ್ತು ಮಧ್ಯಮೋತ್ತಮ ವೇಗಗಳನ್ನು ನಿರ್ಧರಿಸುವ ಮಾರ್ಗವೇ ಮುಖ್ಯವು. ಹೇಗೆಂದರೆ—ವಮನದಲ್ಲಿ ವಾಕರಿಕೆ, ಬಾಯಿ ನೀರು ಸುರಿಯುವುದು, ಔಷಧ ಕಫ ಪಿತ್ತ ವಾತಗಳು ಕ್ರಮವಾಗಿ ಹೊರಕ್ಕೆ ಬರುತ್ತವೆ. ಹೀಗೆಯೇ ವಿರೇಚನದಲ್ಲೂ ಮಲ ಪಿತ್ತ ಔಷಧ ಕಫಗಳೂ ಕ್ರಮವಾಗಿ ವಿಸರ್ಜಿಸಲ್ಪಡುತ್ತವೆ. ಆದ್ದರಿಂದ ವೇಗ ಗಣನೆಯಿಂದಲೂ ಪ್ರಮಾಣ (ಅಳತೆ) ಗಣನೆಯಿಂದಲೂ ಹೀನ ಮಧ್ಯಮೋತ್ಕೃಷ್ಟ ಭೇದಗಳನ್ನು ನಿರ್ಧರಿಸುವುದು ಕೆಲವು ಸಂದರ್ಭಗಳಲ್ಲಿ ಬಾಲ ವೃದ್ಧರಿಗೆ ಪ್ರಯೋಗಿಸಿದಾಗ್ಯೆ ಗೌಣವಾಗಿ ಪ್ರಯೋಜನವಾಗಬಹುದು. ಪಿತ್ತವೇ ಅಂತ್ಯ

ವಾದ ವಮನವನ್ನೂ, ಕಫವೇ ಅಂತ್ಯವಾದ ವಿರೇಚನವನ್ನೂ ಉತ್ತಮ ಮಾತ್ರೆಯನ್ನಾಗಿ ಪರಿಗಣಿಸಬೇಕೆಂದು ತಾತ್ಪರ್ಯ.

ಬಲಂ ಯತ್ರಿವಿಧಂ ಪ್ರೋಕ್ತಮತಸ್ತತ್ರ ಕ್ರಮಸ್ತ್ರಿಧಾ ||೧೬||
ತತ್ರಾನುಕ್ರಮಮೇಕಂ ತು ಬಲಸ್ಥಃ ಸಕೃದಾಚರೇತ್ ।
ದ್ವಿರಾಚರೇನ್ಮಧ್ಯಬಲಸ್ತ್ರೀನ್ ವಾರಾನ್ ದುರ್ಬಲಸ್ತಥಾ ||೧೭||
ಕೇಚಿದೇವಂ ಕ್ರಮಂ ಪ್ರಾಹುರ್ಮನ್ದಮಧ್ಯೋತ್ತಮಾಗ್ನಿಷು ।

ಬಲವು ಹೀನ ಮಧ್ಯಮ ಉತ್ತಮಗಳೆಂದು ಮೂರು ವಿಧವಾಗಿದೆಯಾಗಿ ಅನ್ನ ಪ್ರಯೋಗವನ್ನೂ ಅದಕ್ಕೆ ತಕ್ಕಂತೆಯೇ ಲಘು ಮಧ್ಯಮ ಉತ್ಕೃಷ್ಟ ಪ್ರಮಾಣದಿಂದ ಭೋಜನ ಮಾಡಬೇಕಾಗುತ್ತದೆ. ಬಲಶಾಲಿಯು ಒಂದೇಸಾರಿ ಉತ್ಕೃಷ್ಟಪ್ರಮಾಣ ದಿಂದಲೂ ಮಧ್ಯ ಬಲವುಳ್ಳವನು ಎರಡು ಸಾರಿಯೂ ಹೀನಬಲವುಳ್ಳವನು ಮೂರಾ ವರ್ತಿಯೂ ಪ್ರಮಾಣ ಕಡಮೆಮಾಡಿ ಉಪಯೋಗಿಸಬೇಕು. ಕೆಲವರು ಈ ಕ್ರಮವು ಮಂದ ಮಧ್ಯಮ ಉತ್ತಮ ಅಗ್ನಿಬಲವುಳ್ಳವರಿಗೋಸ್ಕರ ಹೇಳಿರುತ್ತೆಂದು ಅಭಿಪ್ರಾಯ ಪಡುತ್ತಾರೆ.

ಸಂಸರ್ಗೇಣ ವಿವೃದ್ಧೇಽಗ್ನೌ ದೋಷಕೋಪಭಯಾದ್ಭಜೇತ್ ||೧೮||
ಪ್ರಾಕ್ ಸ್ವಾದುತಿಕ್ತೌ ಸ್ನಿಗ್ಧಾವಮ್ಲಲವಣೌ ಕಟುಕಂ ತತಃ ।
ಸ್ವಾದ್ವಮ್ಲಲವಣಾನ್ ಭೂಯಃ ಸ್ವಾದುತಿಕ್ತಾವತಃ ಪರಮ್ ||೧೯||
ಸ್ನಿಗ್ಧರೂಕ್ಷಾನ್ ರಸಾಂಶ್ಚೈವ ವ್ಯತ್ಯಾಸಾತ್ ಸ್ವಸ್ಥವತ್ತತಃ ।
ಕೇವಲಂ ಸ್ನೇಹಪೀತೋ ವಾ ವಾನ್ತೋ ಯಶ್ಚಾಪಿ ಕೇವಲಮ್ ।
ಸ ಸಪ್ತರಾತ್ರಂ ಮನುಜೋ ಭುಞ್ಜೀತ ಲಘುಭೋಜನಮ್ ||೨೦||

ಅಗ್ನಿವೃದ್ಧಿಯಾದರೆ ದೋಷಗಳು ಪ್ರಕೋಪವಾದೀತೆಂಬ ಭಯದಿಂದ ಮಿಶ್ರರಸ ದ್ರವ್ಯಗಳನ್ನು ಸೇವಿಸಬೇಕು. ಹೇಗೆಂದರೆ–ಆರೋಗ್ಯವಂತನು ಮೊದಲು ಸಿಹಿ ಕಹಿ ರಸ ಗಳನ್ನೂ ಸ್ನಿಗ್ಧವಾದ ಅಮ್ಲ ಲವಣಗಳನ್ನೂ ಕಡೆಗೆ ಕಟುರಸವನ್ನೂ ಹಾಗೆಯೇ ಸಿಹಿ ಅಮ್ಲ ಲವಣಗಳನ್ನು ಹೆಚ್ಚಾಗಿಯೂ ಸಿಹಿ ಕಹಿ ರಸಗಳನ್ನೂ ಸ್ನಿಗ್ಧ ರೂಕ್ಷ ದ್ರವ್ಯಗಳನ್ನೂ ಬದಲಾಯಿಸುತ್ತಾ ಉಪಯೋಗಿಸಬೇಕು. ಸ್ನೇಹಪಾನ ಮಾಡಿದವನೂ (ಜರೀತುಪ್ಪ ವನ್ನೇ ಕುಡಿದವನು) ಬರೀವಮನೌಷಧವನ್ನು ಪಾನಮಾಡಿ ವಮನ ಮಾಡಿರುವವನೂ ೭ ದಿನಗಳವರೆಗೂ ಲಘುವಾದ ಅನ್ನವನ್ನೇ ಊಟಮಾಡಬೇಕು.

ಕೃತಃ ಸಿರಾವ್ಯಧೋ ಯಸ್ಯ ಕೃತಂ ಯಸ್ಯ ಚ ಶೋಧನಮ್ ।
ಸ ನಾ ಪರಿಹರೇನ್ಮಾಸಂ ಯಾವದ್ವಾ ಬಲವಾನ್ಭವೇತ್ ||೨೧||
ತ್ರ್ಯಹಂ ತ್ರ್ಯಹಂ ಪರಿಹರೇದೇಕೈಕಂ ಬಸ್ತಿಮಾತುರಃ ।
ತೃತೀಯೇ ತು ಪರೀಹಾರೇ ಯಥಾಯೋಗಂ ಸಮಾಚರೇತ್ ||೨೨||

ಸಿರಾವ್ಯಧ ಮಾಡಿಸಿಕೊಂಡವನೂ ವಿರೇಚನೌಷಧ ಪ್ರಯೋಗದಿಂದ ಉತ್ಕೃಷ್ಟ ಮಾತ್ರೆಯಲ್ಲಿ ಶುದ್ಧನಾದವನೂ ೭ ದಿನಗಳವರೆಗೆ ಪೇಯಾದಿ ಕ್ರಮದಿಂದ ಅಗ್ನಿವೃದ್ಧಿ

ಹೊಂದಿ ಅನಂತರ ಸ್ವಾದ್ವಮ್ಲಲವಣಾದಿ ರಸಗಳನ್ನು ವ್ಯತ್ಯಾಸಕ್ರಮದಿಂದ ಅಭ್ಯಾಸ ಮಾಡಿ ಒಂದು ತಿಂಗಳವರೆಗೆ ಅಥವಾ ಅವನಿಗೆ ಮೊದಲಿನಂತೆ ಬಲಬರುವವರೆಗೆ ಪಥ್ಯಾಹಾರವನ್ನೇ ಸೇವಿಸಬೇಕು. ಕ್ರಮವಾಗಿ ಧಾತುಗಳು ವೃದ್ಧಿಯಾಗುತ್ತಾ ಬಂದು ಒಂದು ತಿಂಗಳಿಗೆ ಶುಕ್ರವೃದ್ಧಿಯಾಗುತ್ತದೆ. ಬಸ್ತಿಪ್ರಯೋಗದಲ್ಲಿ ಈ ನಿಯಮವಿಲ್ಲ. ಮೂರು ದಿನಬಿಟ್ಟು ಒಂದೊಂದು ಬಸ್ತಿಯನ್ನು ಸೇವಿಸಬೇಕು. ಈ ರೀತಿ ಮೂರನೆಯ ಸಾರಿ ಅನುವಾಸನ ಬಸ್ತಿಯನ್ನು ಪ್ರಯೋಗಿಸಿದನಂತರ ಅಗ್ನಿ ಬಲಕ್ಕೆ ತಕ್ಕಂತೆ ಪ್ರಕೃತಿ ಭೋಜನವನ್ನು ಮಾಡಬೇಕು.

ತೈಲಪೂರ್ಣಾಮಮೃದ್ಭಾಣ್ಡಸಧರ್ಮಾಣೋ ವ್ರಣಾತುರಾಃ ।
ಸ್ನಿಗ್ಧಶುದ್ಧಾಕ್ಷಿರೋಗಾರ್ತಾ ಜ್ವರಾತೀಸಾರಿಣಶ್ಚ ಯೇ ॥೨೩॥

ಹಸಿಯಮಣ್ಣಿನ ಮಡಕೆಯಲ್ಲಿ ತೈಲವನ್ನು ತುಂಬಿ ಕೈಯಲ್ಲಿ ಹಿಡಿದು ಅಲ್ಲಾಡಿಸಿದರೆ ಮಡಕೆಯು ಬಿರಿದು ಚೂರಾಗಿ ತೈಲವೆಲ್ಲಾ ಸುರಿದುಹೋಗುವಂತೆಯೇ ವ್ರಣರೋಗಿಗಳೂ ಸ್ನಿಗ್ಧರಾಗಿ ಶೋಧನೌಷಧಗಳಿಂದ ಶುದ್ಧರಾದವರೂ, ನೇತ್ರರೋಗಿಗಳೂ, ಜ್ವರಪೀಡಿತರೂ, ಸರಿಯಾಗಿ ಉಪಚರಿಸಲ್ಪಡದಿದ್ದರೆ ಬೇರೆ ಅವಸ್ಥೆಯನ್ನು ಹೊಂದಿ ರೋಗಾಂತರಗಳಿಂದ ಪೀಡಿತರಾಗುತ್ತಾರೆಯಾಗಿ ಇವರನ್ನು ಶೋಧಿತರಂತೆಯೇ ಉಪಚರಿಸಬೇಕು.

ಕ್ರುಧ್ಯತಃ ಕುಪಿತಂ ಪಿತ್ತಂ ಕುರ್ಯಾತ್ ತಾಂಸ್ತಾನುಪದ್ರವಾನ್ ।
ಆಯಾಸ್ಯತಃ ಶೋಚತೋ ವಾ ಚಿತ್ತಂ ವಿಭ್ರಮಮೃಚ್ಛತಿ ॥೨೪॥
ಮೈಥುನೋಪಗಮಾದ್ಘೋರಾನ್ ವ್ಯಾಧೀನಾಪ್ನೋತಿ ದುರ್ಮತಿಃ ।
ಆಕ್ಷೇಪಕಂ ಪಕ್ಷಘಾತಮಙ್ಗಪ್ರಗ್ರಹಮೇವ ಚ ॥೨೫॥
ಗುಹ್ಯಪ್ರದೇಶೇ ಶ್ವಯಥುಂ ಕಾಸಶ್ವಾಸೌ ಚ ದಾರುಣೌ ।
ಶುಕ್ರವಚ್ಚಾಪಿ ರುಧಿರಂ ಸರಜಸ್ಕಂ ಪ್ರವರ್ತತೇ ॥೨೬॥
ಲಭತೇ ಚ ದಿವಾಸ್ವಪ್ನಾತ್ ತಾಂಸ್ತಾನ್ವ್ಯಾಧೀನ್ ಕಫಾತ್ಮಕಾನ್ ।
ಪ್ಲೀಹೋದರಂ ಪ್ರತಿಶ್ಯಾಯಂ ಪಾಣ್ಡುತಾಂ ಶ್ವಯಥುಂ ಜ್ವರಮ್ ॥೨೭॥
ಮೋಹಂ ಸದನಮಙ್ಗಾನಾಮವಿಪಾಕಂ ತಥಾರುಚಿಮ್ ।
ತಮಸಾ ಚಾಭಿಭೂತಸ್ತು ಸ್ವಪ್ನಮೇವಾಭಿನನ್ದತಿ ॥೨೮॥
ಉಚ್ಚೈಃ ಸಂಭಾಷಣಾದ್ವಾಯುಃ ಶಿರಸ್ಯಾಪಾದಯೇದ್ರುಜಮ್ ।
ಆನ್ಧ್ಯಂ ಜಾಡ್ಯಮಜಿಘ್ರತ್ವಂ ಬಾಧಿರ್ಯಂ ಮೂಕತಾಂ ತಥಾ ॥೨೯॥
ಹನುಮೋಕ್ಷಮಧೀಮನ್ಥಮರ್ದಿತಂ ಚ ಸುದಾರುಣಮ್ ।
ನೇತ್ರಸ್ತಮ್ಭಂ ನಿಮೇಷಂ ವಾ ತೃಷ್ಣಾಂ ಕಾಸಂ ಪ್ರಜಾಗರಮ್ ॥೩೦॥
ಲಭತೇ ದನ್ತಚಾಲಂ ಚ ತಾಂಸ್ತಾನನ್ಯಾನುಪದ್ರವಾನ್ ।
ಯಾನಯಾನಾತ್ತು ಲಭತೇ ಛರ್ದಿಮೂರ್ಛಾಭ್ರಮಕ್ಲಮಾನ್ ॥೩೧॥
ತಥೈವಾಙ್ಗಗ್ರಹಂ ಘೋರಮಿನ್ದ್ರಿಯಾಣಾಂ ಚ ವಿಭ್ರಮಮ್ ।
ಚಿರಾಸನಾತ್ ತಥಾ ಸ್ಥಾನಾಚ್ಛ್ರೋಣ್ಯಾಂ ಭವತಿ ವೇದನಾ ॥೩೨॥

ಅತಿಚಙ್ಕ್ರಮಣಾದ್ವಾಯುರ್ಜಙ್ಘಯೋಃ ಕುರುತೇರುಜಃ ।
ಸಕ್ಥಿಪ್ರಶೋಷಂ ಶೋಫಂ ವಾ ಪಾದಹರ್ಷಮಥಾಪಿ ವಾ ॥೩೩॥
ಶೀತಸಂಭೋಗತೋಯಾನಾಂ ಸೇವಾ ಮಾರುತವೃದ್ಧಯೇ ।
ತತೋಽಙ್ಗಮರ್ದವಿಷ್ಟಮ್ಭಶೂಲಾಧ್ಮಾನ ಪ್ರವೇಪಕಾಃ ॥೩೪॥
ವಾತಾತಪಾಭ್ಯಾಂ ವೈವರ್ಣ್ಯಂ ಜ್ವರಂ ಚಾಪಿ ಸಮಾಪ್ನುಯಾತ್ ।
ವಿರುದ್ಧಾಧ್ಯಶನಾನ್ಮೃತ್ಯುಂ ವ್ಯಾಧಿಂ ವಾ ಘೋರಮೃಚ್ಛತಿ ॥೩೫॥
ಅಸಾತ್ಮ್ಯಭೋಜನಂ ಹನ್ಯಾದ್ಬಲವರ್ಣಮಸಂಶಯಮ್ ॥೩೬॥
ಅನಾತ್ಮವನ್ತಃ ಪಶುವದ್ಭುಞ್ಜತೇಯೇಽಪ್ರಮಾಣತಃ ।
ರೋಗಾನೀಕಸ್ಯತೇ ಮೂಲಮಜೀರ್ಣಂ ಪ್ರಾಪ್ನುವನ್ತಿಹಿ ॥೩೭॥
ವ್ಯಾಪದಾಂ ಕಾರಣಂ ವೀಕ್ಷ್ಯ ವ್ಯಾಪತ್ಸ್ವೇತಾಸು ಬುದ್ಧಿಮಾನ್ ।
ಪ್ರಯತೇತಾತುರಾರೋಗ್ಯೇ ಪ್ರತ್ಯನೀಕೇನ ಹೇತುನಾ ॥೩೮॥

ಕೋಪಮಾಡಿದರೆ ಪಿತ್ತವೃದ್ಧಿಯಾಗಿ ದಾಹ ನೀರಡಿಕೆ ಮೊದಲಾದ ಪಿತ್ತವಿಕಾರಗಳುಂಟಾಗುತ್ತವೆ. ಆಯಾಸಪಡುವವನಿಗೂ ವ್ಯಥೆಪಡುವವನಿಗೂ ವಿವಿಧಗಳಾದ ತಲೆತಿರುಗು ಮತ್ತತೆ ಜ್ಞಾನತಪ್ಪುವುದು ಅಪಸಾರ ಉನ್ಮಾದ ಮೊದಲಾದ ಮನೋವಿಕಾರಗಳುಂಟಾಗುತ್ತವೆ. ಮೈಥುನವನ್ನು ಅತಿಯಾಗಿ ಸೇವಿಸಿದರೆ ಆಕ್ಷೇಪಕ ಪಕ್ಷವಧೆ ಅಂಗಗ್ರಹ ಗುಹ್ಯಾಂಗಗಳಲ್ಲಿ ಶೋಥ ಅತಿಭಯಂಕರಗಳಾದ ಕಾಸ ಶ್ವಾಸ ಮೊದಲಾದುವು ಉಂಟಾಗುತ್ತವೆ. ಪುರುಷರಿಗೆ ಶುಕ್ರಸ್ರಾವವಾಗುವಂತೆಯೇ ಸ್ತ್ರೀಯರಿಗೂ ರಜಸ್ಸು ಮಿಶ್ರವಾದ ಧಾತುರಕ್ತವೂ ಸ್ರಾವವಾಗುತ್ತದೆ. ಹಗಲು ನಿದ್ರೆ ಮಾಡುವುದರಿಂದ ಕಫರೋಗಗಳೂ ಪ್ಲೀಹೋದರ ನೆಗಡಿ ಪಾಂಡುತ್ವ (ಮೈಬಿಳಿಚಿಕೊಳ್ಳುತ್ತದೆ) ಶೋಥ ಜ್ವರ ಮತ್ತತೆ ಮೂರ್ಛೆ ದೇಹಕಾರ್ಶ್ಯ ಅಜೀರ್ಣ ಅರುಚಿ ಕಣ್ಣು ಕತ್ತಲಾಗುವುದು ಮಲಗಿರಬೇಕೆಂಬ ಇಚ್ಛೆ ಇವುಗಳುಂಟಾಗುತ್ತವೆ. ಘಟ್ಟಿಯಾಗಿ ಮಾತನಾಡುವುದರಿಂದ ವಾತವು ಪ್ರಕೋಪವಾಗಿ ತಲೆನೋವು ಆನ್ಧ್ಯವೆಂಬ ನೇತ್ರರೋಗ ಜಡತ್ವ ಗಂಧನಾಶ ಕಿವುಡುತನ ಮೂಕತ್ವ ದವಡೆಗಳು ಜಾರುವುದು ಅಧಿಮನ್ಥವೆಂಬ ನೇತ್ರರೋಗ ಅತಿಭಯಂಕರವಾದ ಅರ್ದಿತವಾತ ನೇತ್ರಗಳು ಬಿಗಿದು ನಿಲ್ಲುವುದು ಸದಾ ಕಣ್ಣುಮುಚ್ಚಿಕೊಂಡಿರುವಿಕೆ (ನಿಮೇಷ) ನೀರಡಿಕೆ ಕೆಮ್ಮು ಸದಾ ಎಚ್ಚರವಾಗಿರುವುದು ಹಲ್ಲು ಅಲ್ಲಾಡುವುದು ಇತ್ಯಾದಿ ವಾತರೋಗಗಳುಂಟಾಗುತ್ತವೆ. ಕುದುರೆ ರಥ ಇವುಗಳಲ್ಲಿ ಅತಿಯಾಗಿ ಸಂಚರಿಸಿದರೆ ವಮನ ಜ್ಞಾನನಾಶ ತಲೆತಿರುಗುವಿಕೆ ಆಯಾಸ ಅಂಗಗ್ರಹ ಇಂದ್ರಿಯ ಭ್ರಮಣ ಇವುಗಳುಂಟಾಗುತ್ತವೆ. ಬಲುಕಾಲದವರೆಗೆ ಒಂದೇ ಆಸನದಲ್ಲಿ ಕೂಡುವುದರಿಂದಲೂ ಬಲು ಹೊತ್ತು ನಿಂತುಕೊಂಡೇ ಇರುವುದರಿಂದಲೂ ಸೊಂಟನೋವುಂಟಾಗುತ್ತದೆ. ಅತಿಯಾಗಿ ನಡೆಯುವುದರಿಂದ ವಾಯುವು ಮೊಣಕಾಲಿನಲ್ಲಿ ನೋವನ್ನುಂಟುಮಾಡುತ್ತದೆ. ತೊಡೆ ಸಣ್ಣಗಾಗುತ್ತದೆ ಶೋಫವೂ ಪಾದ ಹರ್ಷವೂ ಕಾಲು ಅದುರುವುದೂ ಉಂಟಾಗುತ್ತದೆ. ಶೀತಳವಾದ ಗಂಧಲೇಪನಾದಿಗಳಿಂದಲೂ ತಣ್ಣೀರಿನಲ್ಲಿ ಅತಿಯಾಗಿ ಸ್ನಾನಪಾನಮಾಡುವ

ದರಿಂದಲೂ ವಾತವೃದ್ಧಿಯಾಗಿ ಮೈಕತ್ತರಿಸಿದಂತೆ ನೋವು ಮಲಬಂಧ ಹೊಟ್ಟೆನೋವು ಹೊಟ್ಟೆಯುಬ್ಬರ ಮೈನಡುಕಗಳುಂಟಾಗುತ್ತವೆ. ಅತಿಯಾಗಿ ಗಾಳಿಬಿಸಿಲುಗಳನ್ನು ಸೇವಿಸಿದರೆ ಮೈಬಣ್ಣವು ವ್ಯತ್ಯಾಸವಾಗಿ ಜ್ವರ ಬರುತ್ತದೆ. ವಿರುದ್ಧವಾದ ಹಾಲು ಮಾಂಸಗಳನ್ನು ನಿಶ್ರಮಾಡಿದ ಆಹಾರವನ್ನೂ ಅಧ್ಯಶನ (ಅಜೀರ್ಣಭೋಜನ) ವನ್ನೂ ಸೇವಿಸಿದರೆ ಮರಣವೂ ಅಥವಾ ಘೋರವಾದ ಅಜೀರ್ಣ ರೋಗವೂ ಉಂಟಾಗುತ್ತದೆ. ಅಭ್ಯಾಸವಿಲ್ಲದ (ತನಗೆ ಒಗ್ಗದಿರುವ) ಆಹಾರವನ್ನು ತಿಂದರೆ ಖಂಡಿತವಾಗಿ ಬಲವೂ ನಾಶವಾಗುತ್ತವೆ. ಅಜಿತೇಂದ್ರಿಯರು (ಚಪಲಚಿತ್ತವುಳ್ಳವರು) ದನದಂತೆ ಅತಿಯಾಗಿ ಭೋಜನ ಮಾಡಿ ರೋಗ ಸಮೂಹವನ್ನುಂಟುಮಾಡುವ ಅಜೀರ್ಣವನ್ನು ಹೊಂದುತ್ತಾರೆ. ಬುದ್ಧಿಶಾಲಿಯಾದ ವೈದ್ಯನು ರೋಗೋಪದ್ರವಗಳುಂಟಾಗಲು ಕಾರಣಗಳನ್ನು ನಿರ್ಧರಿಸಿ ಅವುಗಳಿಗೆ ವಿರುದ್ಧವಾದ ಚಿಕಿತ್ಸೆಗಳಿಂದ ರೋಗಿಗೆ ಆರೋಗ್ಯವನ್ನುಂಟುಮಾಡುವುದಕ್ಕೆ ಪ್ರಯತ್ನಿಸಬೇಕು.

ವಿರಿಕ್ತವಾನ್ತೈರ್ಹರಿಣೈಣಲಾವಕಾಃ ಶಶಶ್ಚ ಸೇವ್ಯಃ ಸಮಯೂರತಿತ್ತಿರಿಃ ।
ಸಷಷ್ಟಿಕಾಶ್ಚೈವ ಪುರಾಣಶಾಲಯಸ್ತಥೈವ ಮುದ್ಗಾ ಲಘು ಯಚ್ಚ ಕೀರ್ತಿತಮ್ ॥೩೯॥

ವಿರೇಚಿತರೂ ವಮನಮಾಡಿದವರೂ ಜಿಂಕೆ ನೀಲಬಣ್ಣದ ಜಿಂಕೆ ಲಾವನಹಕ್ಕಿ ಮೊಲ ನವಿಲು ತಿತ್ತಿರಿಪಕ್ಷಿ ಇವುಗಳ ಮಾಂಸರಸವನ್ನೂ ಷಷ್ಟಿಕಶಾಲಿ ಮತ್ತು ಹಳೆಯ ಶಾಲಿಗಳ ಅನ್ನವನ್ನೂ ಹೆಸರು ಕಟ್ಟನ್ನೂ ಮತ್ತು ಲಘುವಾದ ಹಿತಕರವಾದ ಆಹಾರವನ್ನೂ ಸೇವಿಸಬೇಕು. ಜೆಜ್ಜಟಾಚಾರ್ಯರು ವಿರೇಚಿತನಿಗೆ ವಿರೇಕದ್ರವ್ಯಕ್ಕೆ ತಕ್ಕಂತೆಯವಾಗೂ ವಿಲೇಪೀ ಮೊದಲಾದ ಭೋಜನಕ್ರಮವನ್ನು ೧-೨-೩ ಕಾಲಗಳಲ್ಲೂ ಕ್ರಮವಾಗಿ ಉಪಯೋಗಿಸಬೇಕೆಂದೂ ವಾಂತರಿಗೆ ಈ ನಿಯಮವು ಬೇಕಿಲ್ಲವೆಂದೂ ವಿರೇಚನದಿಂದ ಕ್ಷೀಣವಾದ ಅಗ್ನಿಬಲವನ್ನು ವೃದ್ಧಿಗೊಳಿಸಲು ಈ ವಿಧಾನವನ್ನು ಆಚರಿಸಬೇಕೆಂದೂ ವಮಿತನಿಗೆ ಅಗ್ನಿಮಾಂದ್ಯವೇ ಸಂಭವಿಸುವುದಿಲ್ಲವೆಂದೂ ಅಭಿಪ್ರಾಯಪಡುತ್ತಾರೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಆತುರೋಪದ್ರವ ಚಿಕಿತ್ಸಾ ನಾಮೈಕೋನಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕಭಾಷಾವಿವೃತಿಃ

ಚತ್ವಾರಿಂಶತ್ತಮೋಽಧ್ಯಾಯಃ

ಅಥಾತೋ ಧೂಮನಸ್ಯಕಬಳಗ್ರಹಚಿಕಿತ್ಸಿತಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಧೂಮಪಾನ ನಸ್ಯ ಪ್ರಯೋಗ ಗಂಡೂಷ ಕಬಳಗ್ರಹಗಳ ಚಿಕಿತ್ಸೆಯನ್ನು ವಿವರಿಸಿ ಹೇಳುತ್ತೇವೆ.

ಧೂಮಃ ಪಞ್ಚವಿಧೋ ಭವತಿ ; ತದ್ಯಥಾ—ಪ್ರಾಯೋಗಿಕಃ ಸ್ನೇಹನೋ ವೈರೇಚನಃ ಕಾಸಘ್ನೋ ವಾಮನೀಯಶ್ಚೇತಿ ||೩||

ಧೂಮಪಾನವು ೫ ಪ್ರಕಾರಗಳಾಗಿವೆ. ಹೇಗೆಂದರೆ—ಪ್ರಾಯೋಗಿಕ ಸ್ನೇಹನ ವಿರೇಚನ ಕಾಸಹರ ವಮನಕರಗಳೆಂದು.

ಟಿಪ್ಪಣಿ—ಪ್ರಾಯೋಗಿಕವೆಂದರೆ ಸ್ವಸ್ಥನಿಗೆ ಸದಾಕಾಲದಲ್ಲೂ ಉಪಯೋಗಿಸಲು ಯೋಗ್ಯವಾದದ್ದೆಂದರ್ಥವು. ಅದು ಕಫವನ್ನು ಜಿನುಗಿಸಿ ಹೊರಡಿಸುತ್ತದೆ. ಸ್ನೇಹನ ವಿರೇಚನ ಕಾರ್ಯಗಳಲ್ಲಿ ಸಮಾನವಾದ್ದರಿಂದ ವಾತಶಮನಕರವು. ಎದೆ ಕತ್ತುಗಳಲ್ಲಿರುವ ದೋಷಗಳನ್ನು ನಿವಾರಣೆಮಾಡುವುದರಿಂದ ಕಾಸಹರವು. ತಲೆಯಲ್ಲಿ ಅಭಿಷ್ಯನ್ದವನ್ನುಂಟುಮಾಡುವ ಕಫವನ್ನು ಕರಗಿಸಿ ಹೊರಕ್ಕೆ ಸುರಿಸುವುದರಿಂದ ಶಿರೋವಿರೇಚನವು ರೂಕ್ಷತೆ ತೀಕ್ಷ್ಣತೆ ಉಷ್ಣಸ್ವಭಾವ ವಿಶದತ್ವಗಳಿಂದ ಕಫವನ್ನು ವಿರೇಚನಮಾಡಿಸುತ್ತದೆ. ರೂಕ್ಷದೇಹದವರು ಪ್ರಯೋಗಿಸಿದರೆ ಸ್ನಿಗ್ಧತೆಯುಂಟಾಗುತ್ತದೆ. ಗಂಟಲು ಮತ್ತು ಎದೆಗಳಲ್ಲಿ ಮೆತ್ತಿಕೊಂಡಿರುವ ಕಫವನ್ನು ಕರಗಿಸಿ ವಮನಮಾಡಿಸುತ್ತದೆ.

ತತ್ರೈಲಾದಿನಾ ಕುಷ್ಠತಗರವರ್ಜ್ಯೇಣ ಶ್ಲಕ್ಷ್ಣಪಿಷ್ಟೇನ ದ್ವಾದಶಾಙ್ಗುಳಂ ಶರಕಾಣ್ಡಂಕ್ಷೌಮೇಣಾಷ್ಟಾಙ್ಗುಳಂ ವೇಷ್ಟಯಿತ್ವಾ ಲೇಪಯೇದೇಷಾವರ್ತಿಃ ಪ್ರಾಯೋಗಿಕೇ ; ಸ್ನೇಹಫಲಸಾರಮಧೂಚ್ಛಿಷ್ಟಸರ್ಜರಸಗುಗ್ಗುಳು ಪ್ರಭೃತಿಭಿಃ ಸ್ನೇಹಮಿಶ್ರೈಃ ಸ್ನೇಹನೇ ; ಶಿರೋವಿರೇಚನದ್ರವ್ಯೈರ್ವಿರೇಚನೇ ಬೃಹತೀಕಣ್ಟಕಾರಿಕಾತ್ರಿಕಟುಕಾಸಮರ್ದಹಿಙ್ಗ್ವಿಂಗುದೀತ್ವಙ್ಮನಃಶಿಲಾಛಿನ್ನರುಹಾಕರ್ಕಟಶೃಙ್ಗೀಪ್ರಭೃತಿಭಿಃ ಕಾಸಹರೈಶ್ಚ ಕಾಸಘ್ನೇ ; ಸ್ನಾಯುಚರ್ಮಖುರಶೃಙ್ಗಕರ್ಕಟಕಾಸ್ಥಿಶುಷ್ಕಮತ್ಸ್ಯವಲ್ಲೂರಕ್ರಿಮಿ ಪ್ರಭೃತಿಭಿರ್ವಾಮನೀಯೈಶ್ಚ ವಾಮನೀಯೇ ||೪||

ಚಂಗಲ್‌ಕೋಷ್ಠ ತಗರ ಇವುಗಳನ್ನು ಬಿಟ್ಟು ಉಳಿದ ಏಲಾದಿಗಣ ದ್ರವ್ಯಗಳನ್ನು ನೀರಿನಿಂದ ನುಣ್ಣಗೆ ಅರೆದು ಹನ್ನೆರಡು ಅಂಗುಳಿಗಳಷ್ಟು ಉದ್ದವಾಗಿಯೂ ಕಿರುಬೆರಳಿನಷ್ಟು ದಪ್ಪವಾಗಿಯೂ ಇರುವ ಲಾಳದಕಡ್ಡಿಗೆ ೮ ಅಂಗುಳಿಗಳವರೆಗೆ ಹತ್ತಿಯನ್ನು ಸುತ್ತಿ ಆ ಕಲ್ಕದಿಂದ ಲೇಪಿಸಿದ ಈ ಧೂಮವರ್ತಿಯು ಆರೋಗ್ಯವಂತರು ನಿತ್ಯದಲ್ಲೂ ಉಪ

ಯೋಗಿಸುವುದಕ್ಕೆ ಯೋಗ್ಯವಾದದ್ದು. ಲಾಳದಕಡ್ಡಿಗೆ ಹತ್ತಿಯನ್ನು ಸುತ್ತಿರುವುದರಿಂದ ಲೇಪಿಸಿದ ಕಲ್ಕವು ಒಣಗಿದಮೇಲೆ ಆ ಕಡ್ಡಿಯನ್ನು ಹಿರಿದುಕೊಳ್ಳುವುದು ಸುಲಭವಾಗುತ್ತದೆ. ಎಳ್ಳು ಸೀಮೆಅಗಸೆ ನುಗ್ಗೆ ತಾರೆ ಮೊದಲಾದ ಫಲಗಳ ಸಾರ ಜೇನುಮೇಣ ರಾಳು ಗುಗ್ಗುಳು ಮೊದಲಾದುವುಗಳ ಕಲ್ಕಕ್ಕೆ ಸ್ನೇಹವನ್ನು ಮಿಶ್ರಮಾಡಿ ತಯಾರಿಸಿದ ವರ್ತಿಯ ಧೂಮಪಾನವು ಸ್ನೇಹನಕರವು. ಹಿಪ್ಪಲಿ ವಿಡಂಗ ನುಗ್ಗೆ ಸಾಸಿವೆ ಉತ್ತರಣೆ ನಕಚಿಕನಿ ಕಾಮಕಸ್ತೂರಿ ಮೊದಲಾದ ಶಿರೋವಿರೇಚನ ದ್ರವ್ಯಗಳ ಕಲ್ಕದಿಂದ ತಯಾರಿಸಿದ ವರ್ತಿಯು ಶಿರೋವಿರೋಚನಕ್ಕೆ ಯೋಗ್ಯವು. ಹೆಗ್ಗುಳ್ಳ ನೆಲಗುಳ್ಳ ತ್ರಿಕಟು ಕಾಸಮರ್ದ (ಉಪ್ಪಿಗಚಿ) ಹಿಂಗು ಇಂಗಳ ದಾಲ್ಚಿನ್ನಿ ಮಣಶಿಲೆ ಅಮೃತವಳ್ಳಿ ಕರ್ಕಾಟಕಶೃಂಗೀ ಮೊದಲಾದ ದ್ರವ್ಯಗಳಿಂದ ತಯಾರಿಸಿದ ವರ್ತಿಯು ಕಾಸಹರವಾಗುತ್ತದೆ. ನರ, ಗೊರಸು ಚಕ್ಕಳ ಕೊಂಬು ಸಳ್ಳಿಯ ಅಸ್ಥಿಪಂಜರ ಒಣಗಿದಮೀನು ಮಾಂಸ ಕ್ರಿಮಿ ಇವುಗಳನ್ನು ಮದನಮಧುಕಲಮ್ಬಾ ಮೊದಲಾದ ವಮನ ಗಣದ್ರವ್ಯಗಳ ಕಲ್ಕದಿಂದ ಬತ್ತಿಮಾಡಿ ಧೂಮಪಾನಮಾಡಿದರೆ ವಮನಯೋಗ್ಯವಾಗುತ್ತದೆ.

ತತ್ರ ಬಸ್ತಿನೇತ್ರದ್ರವ್ಯೈಃ ಧೂಮನೇತ್ರದ್ರವ್ಯಾಣಿ ವ್ಯಾಖ್ಯಾತಾನಿ ಭವನ್ತಿ । ಧೂಮನೇತ್ರಂ ತು ಕನಿಷ್ಠಿಕಾಪರಿಣಾಹಮಗ್ರೇ ಕಲಾಯಮಾತ್ರಸ್ರೋತೋ ಮೂಲೇಽಙ್ಗುಷ್ಠಪರಿಣಾಹಂ ಧೂಮವರ್ತಿ ಪ್ರವೇಶಸ್ರೋತೋಽಙ್ಗುಲಾನ್ಯಷ್ಟಚತ್ವಾರಿಂಶತ್ ಪ್ರಾಯೋಗಿಕೇ ದ್ವಾತ್ರಿಂಶತ್ ಸ್ನೇಹನೇ ಚತುರ್ವಿಂಶತಿರ್ವೈರೇಚನೇ ಷೋಡಶಾಙ್ಗುಲಂ ಕಾಸಘ್ನೇ ವಾಮನೀಯೇ ಚ ಏತೇಽಪಿ ಕೋಲಾಸ್ಥಿಮಾತ್ರಚ್ಛಿದ್ರೇ ಭವತಃ । ವ್ರಣನೇತ್ರಮಷ್ಟಾಙ್ಗುಲಂ ವ್ರಣಧೂಪನಾರ್ಥಂ ಕಲಾಯಪರಿಮಣ್ಡಲಂ ಕುಲತ್ಥವಾಹಿಸ್ರೋತ ಇತಿ ||೫||

ಚಿನ್ನ ಬೆಳ್ಳಿ ತವರ ಸೀಸ ತಾಮ್ರ ಕಂಚು ಮೊದಲಾದ ಲೋಹಗಳಿಂದ ಬಸ್ತಿನಾಳದಂತೆಯೇ ಧೂಮನಾಳವನ್ನೂ ತುದಿಯಲ್ಲಿ ಕಿರುಬೆರಳಿನಷ್ಟು ದಪ್ಪವಾಗಿ ಬಟಾಣಿಯ ಕಾಳನ್ನು ಹಿಡಿಸುವಷ್ಟು ಅಗಲವಿರುವ ರಂಧ್ರವುಳ್ಳದ್ದಾಗಿಯೂ ಬುಡದಲ್ಲಿ ಹೆಬ್ಬೆಟ್ಟಿನಷ್ಟು ದಪ್ಪವಾಗಿ ಧೂಮವರ್ತಿಯು ನುಗ್ಗುವಷ್ಟು ಅಗಲದ ರಂಧ್ರವುಳ್ಳದ್ದಾಗಿಯೂ ೪೮ ಅಂಗುಲಿಗಳಷ್ಟು ಉದ್ದವಾಗಿಯೂ ಆರೋಗ್ಯನಂತರ ನಿತ್ಯೋಪಯೋಗಕ್ಕಾಗಿ ೩೨ ಅಂಗುಲಿಗಳಷ್ಟು ಉದ್ದವಿರುವುದನ್ನು ಸ್ನೇಹನಧೂಮಕ್ಕೂ ೨೪ ಅಂಗುಲಿಗಳಷ್ಟು ಉದ್ದವಿರುವುದನ್ನು ವಿರೇಚನಧೂಮಕ್ಕೂ ೧೬ ಅಂಗುಲಿಗಳಷ್ಟು ಉದ್ದವಿರುವುದನ್ನು ಕಾಸಹರ ಮತ್ತು ವಮನಕರಧೂಮಕ್ಕೂ ಉಪಯೋಗಿಸಬೇಕು. ಈ ಕಾಸಹರ ಮತ್ತು ವಮನಕರ ಧೂಮಗಳಿಗೆ ಉಪಯೋಗಿಸತಕ್ಕ ನಾಳಗಳಿಗೆ ಮುಖರಂಧ್ರವು ಎಲಚಿಹಣ್ಣಿನ ಬಿತ್ತವು ನುಗ್ಗುವಷ್ಟು ಅಗಲವಿರಬೇಕು. ವ್ರಣನೇತ್ರವು ೮ ಅಂಗುಲಿಗಳಷ್ಟು ಉದ್ದವಾಗಿರಬೇಕು. ವ್ರಣಕ್ಕೆ ಧೂಪವು ತಟ್ಟುವಂತೆ ಮಾಡುವುದಕ್ಕಾಗಿ ಮುಖಭಾಗವು ಗುಳಿಗೆಯಂತೆಯೂ ಹುರುಳಿಕಾಳು ನುಗ್ಗುವಷ್ಟು ಅಗಲದ ರಂಧ್ರವುಳ್ಳದ್ದಾಗಿಯೂ ಇರಬೇಕು.

ಅಥ ಸುಖೋಪವಿಷ್ಟಃ ಸುಮನಾ ಋಜ್ವಧೋದೃಷ್ಟಿರತನ್ದ್ರಿತಃ ಸ್ನೇಹಾಕ್ತಾಂ ಪ್ರದೀಪ್ತಾಗ್ರಾಂ ವರ್ತಿಂ ನೇತ್ರಸ್ರೋತಸಿ ಪ್ರಣಿಧಾಯ ಧೂಮಂ ಪಿಬೇತ್ ||೬|| ಮುಖೇನ ತಂಪಿಬೇತ್ ಪೂರ್ವಂ ನಾಸಿಕಾಭ್ಯಾಂ ತತಃ ಪಿಬೇತ್ | ಮುಖಪೀತಂ ಮುಖೇನೈವ ವಮೇತ್ ಪೀತಂ ಚ ನಾಸಯಾ ||೭|| ಮುಖೇನ ಧೂಮಮಾದಾಯ ನಾಸಿಕಾಭ್ಯಾಂ ನ ನಿರ್ಹರೇತ್ | ತೇನ ಹಿ ಪ್ರತಿಲೋಮೇನ ದೃಷ್ಟಿಸ್ತತ್ರ ವಿಹನ್ಯತೇ ||೮|| ವಿಶೇಷತಸ್ತು ಪ್ರಾಯೋಗಿಕಂ ಘ್ರಾಣೇ ನಾದದೀತ, ಸ್ನೇಹನಂ ಮುಖನಾಸಾಭ್ಯಾಂ ನಾಸಿಕಯಾ ವೈರೇಚನಂ, ಮುಖೇನೈವೇತರಾ ||೯||

ಧೂಮಪಾನ ವಿಧಾನವು : ಧೂಮಪಾನ ಮಾಡುವವನು ಸುಖವಾದಾಸನ ದಲ್ಲಿ ಕುಳಿತುಕೊಂಡು ಶಾಂತಚಿತ್ತನಾಗಿ ದೇಹವನ್ನು ನೆಟ್ಟಗೆ ಮಾಡಿಕೊಂಡು ಕೆಳಗಡೆಗೆ ನೋಡುತ್ತಾ ಜಾಗರೂಕತೆಯಿಂದಿದ್ದು ಧೂಮವರ್ತಿಗೆ ಸ್ನೇಹವನ್ನು ಬಳಿದು ತುದಿಗೆ ಬೆಂಕಿ ಹತ್ತಿಸಿ ಸಿಕ್ಕಿಸಿ ಧೂಮಪಾನವನ್ನು ಮಾಡಬೇಕು. ಮೊದಲು ಮುಖ ದಿಂದಲೂ ಮೂಗಿನ ಹೊಳ್ಳೆಯಿಂದಲೂ ಧೂಮಪಾನ ಮಾಡಬೇಕು. ಮುಖದಿಂದಲೂ ಮೂಗಿನಿಂದಲೂ ಪಾನಮಾಡಿದ ಧೂಮವನ್ನು ಮುಖದಿಂದಲೇ ಹೊರಕ್ಕೆ ಬಿಡಬೇಕು. ಮುಖದಿಂದ ಪಾನಮಾಡಿದ ಧೂಮವನ್ನು ಮೂಗಿನಿಂದ ಹೊರಕ್ಕೆ ಬಿಡಕೂಡದು. ಹೀಗೆ ಪ್ರತಿಲೋಮದಿಂದ ಧೂಮವನ್ನು ಹೊರಕ್ಕೆ ಬಿಟ್ಟರೆ ಕಣ್ಣುಗಳು ಕುರುಡಾಗುತ್ತವೆ. ಪ್ರಾಯೋಗಿಕ ಧೂಪವನ್ನು ವಿಶೇಷವಾಗಿ ಮೂಗಿ ನಿಂದಲೇ ಕುಡಿಯಬೇಕು. ಸ್ನೇಹನಧೂಪವನ್ನು ಮುಖದಿಂದಲೂ ಮೂಗಿನಿಂದಲೂ ವಿರೇಚನ ಧೂಮವನ್ನು ಮೂಗಿನಿಂದಲೂ ಕುಡಿಯಬೇಕು. ಕಾಸಘ್ನ ಮತ್ತು ವಮನ ಧೂಮಗಳನ್ನು ಮುಖದಿಂದಲೇ ಕುಡಿಯಬೇಕು.

ತತ್ರ ಪ್ರಾಯೋಗಿಕೇ ವರ್ತಿಂ ವ್ಯಪಗತಶರಕಾಣ್ಡಾಂ ನಿವಾತಾತಪಶುಷ್ಕಾಮಙ್ಗಾರೇಷ್ವವ ದೀಪ್ಯ ನೇತ್ರಮೂಲಸ್ರೋತಸಿ ಪ್ರಯುಜ್ಯ ಧೂಮಮಾಹರೇತಿ ಬ್ರೂಯಾತ್ | ಏವಂ ಸ್ನೇಹನಂ ವೈರೇಚನಿಕಂ ಚ ಕುರ್ಯಾದಿತಿ | ಇತರಯೋರ್ವ್ಯಪೇತಧೂಮಾಙ್ಗಾರೇ ಸ್ಥಿರೇ ಸಮಾಹಿತೇ ಶರಾವೇ ಪ್ರಕ್ಷಿಪ್ಯ ವರ್ತಿಂ ಮೂಲಚ್ಛಿದ್ರೇಣಾನ್ಯೇನ ಶರಾವೇಣ ಪಿಧಾಯ ತಸ್ಮಿನ್ ಛಿದ್ರೇ ನೇತ್ರ ಮೂಲಂ ಸಂಯೋಜ್ಯ ಧೂಮಮಾಸೇವೇತ ಪ್ರಶಾನ್ತೇ ಧೂಮೇ ವರ್ತಿಮವಶಿಷ್ಟಾಂ ಪ್ರಕ್ಷಿಪ್ಯ ಪುನರಪಿ ಧೂಮಂ ಪಾಯಯೇದಾದೋಷವಿಶುದ್ಧೇರೇಷ ಧೂಮಪಾನೋಪಾಯವಿಧಿಃ ||೧೦||

ಆರೋಗ್ಯವಂತನು ಸೇವಿಸುವುದಕ್ಕಾಗಿ ತಯಾರಿಸಿದ ಧೂಮವರ್ತಿಯಿಂದ ಲಾಳದ ಕಡ್ಡಿಯನ್ನು ಹಿರಿದು ಗಾಳಿ ಬಿಸಿಲುಗಳಲ್ಲಿ ಒಣಗಿದ ಬತ್ತಿಯ ತುದಿಯನ್ನು ಕೆಂಡದಲ್ಲಿ ಹತ್ತಿಸಿ ನಳಿಕೆಯ ಬುಡದ ರಂಧ್ರದಲ್ಲಿ ಮತ್ತೊಂದು ಭಾಗವನ್ನು ಭದ್ರವಾಗಿ ಸಿಕ್ಕಿಸಿ ಧೂಮವನ್ನು ಎಳೆದು ಸೇದಬೇಕೆಂದು ರೋಗಿಗೆ ಹೇಳಬೇಕು. ಹೀಗೆಯೇ ಸ್ನೇಹನ ವಿರೇಚನ ಧೂಮವನ್ನೂ ಉಪಯೋಗಿಸಬೇಕು. ಉಳಿದ ಕಾಸಹರ ಮತ್ತು ವಮನಕರ ಗಳಾದ ಧೂಮವರ್ತಿಗಳನ್ನು ಹೊಗೆಯಿಲ್ಲದ ಕೆಂಡಗಳನ್ನು ತುಂಬಿದ ಗಟ್ಟಿಯಾದ ಸಮ ನಾದ ಶ್ರಾವೆಯಲ್ಲಿಟ್ಟು ಬುಡದಲ್ಲಿ ರಂಧ್ರವಿರುವ ಬೇರೊಂದು ಶ್ರಾವೆಯನ್ನು ಆ ಮೊದಲಿನ

ಶ್ರಾವೆಯಮೇಲೆ ಮುಚ್ಚಿ ಆ ರಂಧ್ರಕ್ಕೆ ನಾಡಿಯನ್ನು ಸಿಕ್ಕಿಸಿ ಧೂಮಪಾನಮಾಡಬೇಕು. ಧೂಮವು ನಿಂತಮೇಲೆ (ಆರಿಹೋದರೆ) ಉಳಿದಿರುವ ಬತ್ತಿಯನ್ನು ಅದರೊಳಗಿರಿಸಿ ಪುನಃ ಧೂಮಪಾನಮಾಡಬೇಕು. ಹೀಗೆ ದೋಷನಿವಾರಣೆಯಾಗುವವರೆಗೂ ಧೂಮಪಾನ ಮಾಡತಕ್ಕ ಉಪಾಯವನ್ನು ತಿಳಿಸಲಾಯಿತು.

ತತ್ರ ಶೋಕಶ್ರಮಭಯಾಮರ್ಷೌಷ್ಣ್ಯ ವಿಷರಕ್ತಪಿತ್ತ ಮದಮೂರ್ಛಾದಾಹಪಿಪಾಸಾ ಪಾಣ್ಡುರೋಗ ತಾಲುಶೋಷಚ್ಛರ್ದಿಶಿರೋಽಭಿಘಾತೋದ್ಗಾರಾ ಪತರ್ಪಿತತಿಮಿರಪ್ರಮೇಹೋದ ರಾಧ್ಮಾನೋರ್ಧ್ವವಾತಾರ್ತಾ ಬಾಲವೃದ್ಧದುರ್ಬಲವಿರಿಕ್ತಾಸ್ಥಾಪಿತ ಜಾಗರಿತಗರ್ಭಿಣೀರೂಕ್ಷ ಕ್ಷೀಣಕ್ಷತೋರಸ್ಕಮಧುಘೃತದಧಿದುಗ್ಧ ಮತ್ಸ್ಯಮದ್ಯಯಾವಾಗೂಪೀತಾಲ್ಪಕಫಾಶ್ಚ ನ ಧೂಮ ಮಾಸೇವೇರ್ನ ||೧೧|| ಅಕಾಲಪೀತಃ ಕುರುತೇ ಭ್ರಮಮೂರ್ಛಾಶಿರೋರುಜಃ | ಘ್ರಾಣ ಶ್ರೋತ್ರಾಕ್ಷಿಜಿಹ್ವಾನಾಮುಪಘಾತಂ ಚ ದಾರುಣಮ್ ||೧೨||

ವ್ಯಸನ ಆಯಾಸ ಭೀತಿ ಕೋಪ ಉಷ್ಣ ವಿಷ ರಕ್ತ ಪಿತ್ತ ಮದ್ಯಮದ ಜ್ಞಾನ ತಪ್ಪುವುದು ಮೈ ಉರಿತ ನೀರಡಿಕೆ ಪಾಂಡುರೋಗ ಅಂಗಳು ಒಣಗುವುದು ವಮನ ತಲೆಗೆ ಪೆಟ್ಟುಬಿದ್ದಿರುವುದು ತೇಗುಬರುವುದು ಉಪವಾಸ ತಿಮಿರವೆಂಬ ನೇತ್ರರೋಗ ಪ್ರಮೇಹ ಉದರ ಆಧ್ಮಾನ ಊರ್ಧ್ವವಾತ ಇವುಗಳಿಂದ ಪೀಡಿತರಾದವರೂ ಬಾಲರೂ ಮುದುಕರೂ ದುರ್ಬಲರೂ ವಿರೇಚನಮಾಡಿದವರೂ ಆಸ್ಥಾಪನ ಬಸ್ತಿಯನ್ನು ಸೇವಿಸಿರು ವವರೂ ರಾತ್ರಿ ನಿದ್ದೆಕೆಟ್ಟಿರುವವರೂ ಗರ್ಭಿಣಿಯರೂ ರೂಕ್ಷದೇಹವುಳ್ಳವರೂ ಕೃಶರೂ ಉರಃಕ್ಷತಪೀಡಿತರೂ ಜೇನುತುಪ್ಪ ತುಪ್ಪ ಮೊಸರು ಹಾಲು ಮೀನು ಮದ್ಯ ಯವಾಗೂ ಇವುಗಳನ್ನು ಪಾನಮಾಡಿದವರೂ ಅಲ್ಪಕಫಪೀಡಿತರೂ ಧೂಮವನ್ನು ಸೇವನೆಮಾಡ ಬಾರದು. ಅಕಾಲದಲ್ಲಿ ಧೂಮಪಾನಮಾಡಿದರೆ ತಲೆತಿರುಗು ಜ್ಞಾನತಪ್ಪುವುದು ತಲೆ ನೋವು ಮೂಗು ಕಣ್ಣು ಕಿವಿ ನಾಲಿಗೆಗಳಿಗೆ ಬಾಧೆ ಇವುಗಳುಂಟಾಗುತ್ತವೆ.

ಆದ್ಯಾಸ್ತು ತ್ರಯೋ ಧೂಮಾ ದ್ವಾದಶಸು ಕಾಲೇಷೂಪಾದೇಯಾಃ । ತದ್ಯಥಾಕ್ಷುತದಂತ ಪ್ರಕ್ಷಾಳನನಸ್ಯ ಸ್ನಾನಭೋಜನದಿವಾಸ್ವಪ್ನಮೈಥುನಚ್ಛರ್ದಿ ಮೂತ್ರೋಚ್ಚಾರರುಹಿತಶಸ್ತ್ರ ಕರ್ಮಾನ್ತೇಷ್ವಿತಿ । ತತ್ರ ಮೂತ್ರೋಚ್ಚಾರಕ್ಷವಥುರುಹಿತಮೈಥುನಾನ್ತೇಷು ಸ್ನೈಹಿಕಃ ಸ್ನಾನ ಛರ್ದನದಿವಾಸ್ವಪ್ನಾನ್ತೇಷು ವೈರೇಚನಃ, ದಂತಪ್ರಕ್ಷಾಳನ ನಸ್ಯಸ್ನಾನಭೋಜನಶಸ್ತ್ರಕರ್ಮಾ ನ್ತೇಷು ಪ್ರಾಯೋಗಿಕ ಇತಿ ||೧೩||

ತತ್ರ ಸ್ನೇಹನೋ ವಾತಂ ಶಮಯತಿ, ಸ್ನೇಹಾದುಪಲೇಪಾಚ್ಚ ವೈರೇಚನಃ ಶ್ಲೇಷ್ಮಾಣ ಮುತ್ಕ್ಲೇಶ್ಯಾಪಕರ್ಷತಿ, ರೌಕ್ಷ್ಯಾತ್ತೈಕ್ಷ್ಣ್ಯಾದೌಷ್ಣ್ಯಾದ್ವೈಶದ್ಯಾಚ್ಚ || ಪ್ರಾಯೋಗಿಕಃ ಶ್ಲೇಷ್ಮಾಣಮುತ್ಕ್ಲೇಶಯತ್ಯುತ್ಕ್ಲಿಷ್ಟಂ ಚಾಪಕರ್ಷತಿ, ಸಾಧಾರಣತ್ವಾತ್ ಪೂರ್ವಾಭ್ಯಾಮಿತಿ ||೧೪|| ಭವತಿ ಚಾತ್ರ—

ನರೋ ಧೂಮೋಪಯೋಗಾಚ್ಚ ಪ್ರಸನ್ನೇಂದ್ರಿಯವಾಙ್ಮನಾಃ | ದೃಢಕೇಶ ದ್ವಿಜಶ್ಮಶ್ರು ಸ್ಸುಗನ್ಧಿ ವಿಶದಾನನಃ ||೧೫|| (ತಥಾ) ಕಾಸಶ್ವಾಸಾರೋಚಕಾಸ್ಯೋಪಲೇಪ ಸ್ವರಭೇದ ಮುಖಾ

ಸ್ರಾವ (ಕ್ಷವಥು) ವಮಥುತನ್ದ್ರಾನಿದ್ರಾಹನುಮನ್ಯಾಸ್ತಮ್ಭಪೀನಸಶಿರೋ ರೋಗಕರ್ಣಾಕ್ಷಿ ಶೂಲವಾತಕಫ ನಿಮಿತ್ತಾಶ್ಚಾಸ್ಯ ಮುಖರೋಗಾ ನ ಭವನ್ತಿ ||೧೬||

ಮೊದಲನೆಯ ೩ ವಿಧ ಧೂಮಗಳನ್ನು (ಪ್ರಾಯೋಗಿಕ ಸ್ನೇಹನ ವಿರೇಚನ) ೧೨ ಕಾಲಗಳಲ್ಲಿ ಪ್ರಯೋಗಿಸಬೇಕು. ಅವು ಯಾವುವೆಂದರೆ—ಸೀನುವುದು ಹಲ್ಲುಗಳನ್ನುಜ್ಜಿ ತೊಳೆಯುವುದು ನಸ್ಯಕರ್ಮ ಸ್ನಾನ ಭೋಜನ ಹಗಲುನಿದ್ರೆ ಸ್ತ್ರೀಸಂಗ ವಮನ ಮೂತ್ರ ವಿಸರ್ಜನೆ ಮಲವಿಸರ್ಜನೆ ಕೋಪಿಸಿಕೊಂಡಿರುವಾಗ ಶಸ್ತ್ರಕ್ರಿಯೆ ಇವುಗಳ ಕಡೆಯಲ್ಲಿ (ಈ ಕೆಲಸಗಳು ಮುಗಿದಮೇಲೆ ಧೂಮಪಾನ ಮಾಡಬೇಕೆಂದು ಅರ್ಥವು). ಅವುಗಳ ಪೈಕಿ ಮೂತ್ರ ಮತ್ತು ಮಲಗಳನ್ನು ವಿಸರ್ಜಿಸಿದಮೇಲೂ ಸೀನುಬಂದಮೇಲೂ ಕೋಪನಿಂತ ಮೇಲೂ ಮೈಥುನಕ್ರಿಯೆಯು ಮುಗಿದಮೇಲೂ ಸ್ನೈಹಿಕಧೂಮವನ್ನೂ ಸ್ನಾನ ವಮನ ಹಗಲುನಿದ್ರೆ ಇವು ಮುಗಿದಮೇಲೆ ವಿರೇಚನ ಧೂಮವನ್ನೂ ಹಲ್ಲುಗಳನ್ನುಜ್ಜಿ ತೊಳೆಯುವುದು ನಸ್ಯಕರ್ಮ ಸ್ನಾನ ಭೋಜನ ಶಸ್ತ್ರಕರ್ಮ ಇವುಗಳು ಮುಗಿದಮೇಲೆ ಪ್ರಾಯೋಗಿಕ ಧೂಮವನ್ನೂ ಪ್ರಯೋಗಮಾಡಬೇಕು. ಇವುಗಳ ಪೈಕಿ ಸ್ನೈಹಿಕ ಧೂಮಪಾನದಿಂದ ವಾತಶಮನವಾಗುತ್ತದೆ. ವಿರೇಚನ ಧೂಮಪಾನದಿಂದಲೂ ಕಫವು ಕರಗಿ ಹೊರಕ್ಕೆ ಹೊರಟುಬರುತ್ತದೆ. ರೂಕ್ಷವಾಗಿಯೂ ಚುರುಕಾಗಿಯೂ ಬಿಸಿಯಾಗಿಯೂ ವಿಶದವಾಗಿಯೂ ದ್ರವವಾಗಿಯೂ ಇರುವಕಾರಣ ಪ್ರಾಯೋಗಿಕವು ಕಫವನ್ನು ಜಿನುಗಿಸಿ ಹೊರಕ್ಕೆ ಹರಿದು ಹೋಗುವಂತೆ ಮಾಡುತ್ತದೆ. ಇದಕ್ಕೆ ಸಂಬಂಧಪಟ್ಟ ಶ್ಲೋಕದ ಅರ್ಥವೇನೆಂದರೆ—ಧೂಮಪಾನಮಾಡುವ ಜನರು ಸ್ವಚ್ಛವಾದ ಇಂದ್ರಿಯಗಳು ವಾಕ್ಕು ಮನಸ್ಸು ಉಳ್ಳವರಾಗುತ್ತಾರೆ. ಬಲವಾದ ತಲೆಕೂದಲುಗಳು ಹಲ್ಲುಗಳು ಗಡ್ಡ ಮೀಸೆಗಳು ಸುವಾಸನೆಯುಳ್ಳ ವಿಶಾಲಮುಖ ಇವನ್ನುಳ್ಳವರಾಗುತ್ತಾರೆ. ಧೂಮಪಾನ ಮಾಡುವ ಜನರಿಗೆ ಕೆಮ್ಮು ಉಬ್ಬಸ ಅರೋಚಕತೆ ಮುಖಲೇಪ ಸ್ವರಭೇದ ಬಾಯಿನಿಂದ ಜೊಲ್ಲು ಸುರಿಯುವುದು ವಮನ ತೂಕಡಿಕೆ ನಿದ್ರೆ ದವಡೆಗಳೂ ಮತ್ತು ಹೆಕ್ಕತ್ತುಗಳೂ ಬಿಗಿಹಿಡಿದುಕೊಳ್ಳುವುದು ನೆಗಡಿ ತಲೆನೋವು ಕಿವಿಶೂಲೆ ಕಣ್ಣುನೋವು ವಾತಕಫನಿಮಿತ್ತಗಳಾದ ಮುಖರೋಗಗಳು ಇವು ಉಂಟಾಗುವುದಿಲ್ಲ.

ತಸ್ಯ ಯೋಗಾತಿಯೋಗೌ ವಿಜ್ಞಾತವ್ಯೌ । ತತ್ರ ಯೋಗೋ ರೋಗಪ್ರಶಮನಃ ಅತಿ ಯೋಗೋ ರೋಗಾಪ್ರಶಮನಃ ತಾಲುಗಲಶೋಷಪರಿದಾಹ ಪಿಪಾಸಾಮೂರ್ಛಾ ಭ್ರಮದಕರ್ಣಾಕ್ಷಿ ದೃಷ್ಟಿನಾಸಾರೋಗ ದೌರ್ಬಲ್ಯಾನ್ಯತಿಯೋಗೋ ಜನಯತಿ ||೧೭||

ಧೂಮಪಾನದ ಸಮ್ಯಗ್ಯೋಗ ಅತಿಯೋಗಗಳನ್ನು ತಿಳಿಯುವ ಕ್ರಮವು—ರೋಗಗಳು ನಿವಾರಣೆಯಾದರೆ ಸರಿಯಾದ ಯೋಗವೆಂದೂ ಅತಿಯಾಗಿ ಧೂಮಪಾನಮಾಡಿದರೆ ರೋಗಶಮನವಾಗದೆ ಅಂಗಳು ಗಂಟಲುಗಳು ಕ್ಷೀಣಿಸುತ್ತವೆ. ಅತಿಯಾದ ಉರಿಯೂ ನೀರಡಿಕೆಯೂ ಜ್ಞಾನತಪ್ಪುವುದೂ ತಲೆತಿರುಗು ಮತ್ತತೆ ಕಿವಿ ಕಣ್ಣು ದೃಷ್ಟಿ ಮೂಗುಗಳಲ್ಲಿ ನೋವೂ ದೌರ್ಬಲ್ಯ ಇವುಗಳು ಉಂಟಾಗುತ್ತವೆ.

ಪ್ರಾಯೋಗಿಕಂ ತ್ರೀಂಸ್ತ್ರೀನುಚ್ಛ್ವಾಸಾನಾದದೀತ ಮುಖನಾಸಿಕಾಭ್ಯಾಂ ಚ ಪರ್ಯಾಯಾಂ ಸ್ತ್ರೀಂಶ್ಚತುರೋಪೇತಿ ಸ್ನೈಹಿಕಂ ಯಾವದಶ್ರುಪ್ರವೃತ್ತಿಃ ವೈರೇಚನಿಕ ಮಾದೋಷದರ್ಶನಾತ್ ತಿಲತಣ್ಡುಲಯವಾಗೂಪೀತೇನ ಪಾತವ್ಯೋ ವಾಮನೀಯಃ ಶ್ವಾಸಾನ್ತರೇಷು ಕಾಸಘ್ನ ಇತಿ॥೧೮॥

ವ್ರಣಧೂಮಂ ಶರಾವಸಂಪುಟೋಪನೀತೇನ ನೇತ್ರೇಣ ವ್ರಣಮಾನಯೇತ್ ಧೂಪನಾ ದ್ವೇದನೋಪಶಮೋ ವ್ರಣವೈಶದ್ಯಮಾಸ್ರಾವೋಪಶಮಶ್ಚ ಭವತಿ ॥೧೯॥

ವಿಧಿರೇಷ ಸಮಾಸೇನ ಧೂಮಸ್ಯಾಭಿಹಿತೋ ಮಯಾ ।
ನಸ್ಯಸ್ಯಾತಃ ಪ್ರವಕ್ಷ್ಯಾಮಿ ವಿಧಿಂ ನಿರವಶೇಷತಃ ॥೨೦॥

ಪ್ರಾಯೋಗಿಕ ಧೂಮಪಾನದಲ್ಲಿ ಮುಖ ಮತ್ತು ಮೂಗಿನ ಹೊಳ್ಳೆಗಳಿಂದ ೩ ಆವರ್ತಿ ಧೂಮವನ್ನು ಸೇದುತ್ತಲೂ, ೩ ಆವರ್ತಿ ಹೊರಕ್ಕೆ ಬಿಡುತ್ತಲೂ ಇರಬೇಕು. ಇದಕ್ಕೆ ೧ ಪರ್ಯಾಯವೆಂದು ಹೆಸರು. ಹೀಗೆ ೩-೪ ಪರ್ಯಾಯಗಳನ್ನು ಸೇವನೆ ಮಾಡಬೇಕು. ಸ್ನೈಹಿಕ ಧೂಮವನ್ನು ಕಣ್ಣೀರು ತೊಟ್ಟುವವರಿಗೂ ಸೇವಿಸಬೇಕು. ವಿರೇಚನ ಧೂಮವನ್ನು ದೋಷಗಳು ಹೊರಕ್ಕೆ ಕಾಣುವವರೆಗೂ ಸೇವಿಸಬೇಕು. ಎಳ್ಳು ಅಕ್ಕಿ ಯವಧಾನ್ಯಗಳಿಂದ ತಯಾರಿಸಿದ ಯವಾಗೂವನ್ನು ಪಾನಮಾಡಿಸಿದ ಮೇಲೆ ವಿರೇಚನ ಧೂಮಪಾನವನ್ನು ಮಾಡಿಸಬೇಕು. ಆಹಾರ ಗ್ರಾಸಗಳ ಮಧ್ಯೆ ಕಾಸಘ್ನಧೂಮವನ್ನು ಪಾನಮಾಡಿಸಬೇಕು. ವ್ರಣಧೂಪನಕ್ರಮವು—ಎರಡು ಶ್ರಾವೆಗಳನ್ನು ಒಂದರ ಮೇಲೊಂದನ್ನು ಕವಿಚಿ ಅವುಗಳ ಮಧ್ಯರಂಧ್ರಕ್ಕೆ ನಾಳವನ್ನು ಸಿಕ್ಕಿಸಿ ಶರಾವೆಯ ಒಳಗೆ ಬೆಂಕಿಯನ್ನು ಹಾಕಿ ಧೂಮವರ್ತಿಯನ್ನಿಟ್ಟು ಹೊರಡುವ ಹೊಗೆಯು ವ್ರಣಕ್ಕೆ ತಗಲುವಂತೆ ಮಾಡಬೇಕು. ಹೀಗೆ ಧೂಪನ ಮಾಡುವುದರಿಂದ ವ್ರಣವೇದನೆಯು ನಿಂತುಬಿಡುತ್ತದೆ. ವ್ರಣಮುಖವು ಹಿಗ್ಗಿ ಸ್ರಾವವು ನಿಲ್ಲುತ್ತದೆ. ಈ ರೀತಿಯಾಗಿ ಧೂಮಪಾನ ವಿಧಾನವು ವಿವರಿಸಲ್ಪಟ್ಟಿತು. ಇನ್ನು ಸಮಗ್ರವಾಗಿ ನಸ್ಯ ವಿಧಾನವನ್ನು ಹೇಳುತ್ತೇವೆ.

ಔಷಧಮೌಷಧಸಿದ್ಧೋ ವಾ ಸ್ನೇಹೋ ನಾಸಿಕಾಭ್ಯಾಂ ದೀಯತ ಇತಿ ನಸ್ಯಮ್ । ತದ್ವಿವಿಧಮ್ ಶಿರೋವಿರೇಚನಂ ಸ್ನೇಹನಂ ಚ । ತತ್ ದ್ವಿವಿಧಮಪಿ ಪಞ್ಚಧಾಃ–ತದ್ಯಥಾ ನಸ್ಯಂ ಶಿರೋವಿರೇಚನಂ ಪ್ರತಿಮರ್ಶೋ ಅವಪೀಡಃ ಪ್ರಧಮನಂ ಚ । ತೇಷು ನಸ್ಯಂ ಪ್ರಧಾನಂ ಶಿರೋವಿರೇಚನಂ ಚ ನಸ್ಯವಿಕಲ್ಪಃ ಪ್ರತಿಮರ್ಶಃ ಶಿರೋವಿರೇಚನವಿಕಲ್ಪೋಽವಪೀಡಃ ಪ್ರಧಮನಂ ಚ । ತತೋ ನಸ್ಯ ಶಬ್ದಃ ಪಞ್ಚಧಾ ನಿಪಾತಿತಃ

ಹಿಪ್ಪಲಿ ವಿಡಂಗ ಉತ್ತರಣೆಯಬೀಜ ಇವುಗಳ ಚೂರ್ಣವನ್ನಾಗಲೀ ಈ ಔಷಧಗಳನ್ನು ಸೇರಿಸಿ ತಯಾರಿಸಿದ ತೈಲವನ್ನಾಗಲೀ ಮೂಗಿನಹೊಳ್ಳೆಗಳಮೂಲಕ ಪ್ರಯೋಗಿಸುವುದಕ್ಕೆ ನಸ್ಯವೆಂದು ಸಂಜ್ಞೆ. ನಸ್ಯವು ಶಿರೋವಿರೇಚನ ಮತ್ತು ಸ್ನೇಹನಗಳೆಂದು ಎರಡು ವಿಧವು. ಈ ಎರಡು ವಿಧಗಳೂ ೫ ಪ್ರಕಾರವಾಗಿ ಉಪಯೋಗಿಸಲ್ಪಡುತ್ತವೆ, ನಸ್ಯ ಶಿರೋವಿರೇಚನ ಪ್ರತಿಮರ್ಶ ಅವಪೀಡ ಪ್ರಧಮನಗಳೆಂದು. ಇವುಗಳಲ್ಲಿ ನಸ್ಯವೇ ಮುಖ್ಯವಾದದ್ದು. ಶಿರೋವಿರೇಚನವೂ ಕೂಡ ಮುಖ್ಯವಾದ ನಸ್ಯ ಭೇದವೇ. ಪ್ರತಿ

ಮರ್ಶ, ಶಿರೋವಿರೇಚನ ಅವಪೀಡ ಪ್ರಧಮನಗಳೂ ಆದಕಾರಣ ನಸ್ಯ ಶಬ್ದವು ೫ ವಿಧಗಳಲ್ಲಿಯೂ ಅಡಗಿರುತ್ತದೆ.

ಟಿಪ್ಪಣಿ—ನಾಸಾಗ್ರಾಹ್ಯೌಷಧನಂಗಿಸ್ಯಂ ನಾವನಂ ಅಂದರೆ ಮೂಗಿನ ಹೊಳ್ಳೆಗಳಿಂದ ಪ್ರಯೋಗಿಸಲ್ಪಡುವ ಔಷಧಗಳು. ಇವುಗಳ ಯೋಗಕ್ಕೆ ನಸ್ಯಕರ್ಮವೆಂದು ಹೆಸರು. ವಿರೇಚನಕರ ದ್ರವ್ಯಗಳ ಪ್ರಯೋಗಕ್ಕೆ ಶಿರೋವಿರೇಚನವೆಂದೂ ಶೃತಶೀತ ಕ್ವಾಥಗಳನ್ನು ಪಿಚುಗಳಲ್ಲಿ ಅದ್ದಿ ಮೂಗಿಗೆ ಹಿಂಡಿದರೆ ಅವಪೀಡವೆಂದೂ ಹೆಸರು. ಚೂರ್ಣ ದ್ರವ್ಯಗಳನ್ನು ನಾಡಿಯಲ್ಲಿ ತುಂಬಿ ಮೂಗಿನ ಹೊಳ್ಳೆಗಳಿಗೆ ಮುಖವಾಯುವಿನಿಂದ ಊದುವುದು ಪ್ರಧಮನವು. ಪ್ರತಿಮರ್ಶವೂ ಶಿರೋವಿರೇಚನದ ಭೇದವು.

ತತ್ರ ಯಃ ಸ್ನೇಹನಾರ್ಥಂ ಶೂನ್ಯಶಿರಸಾಂ ಗ್ರೀವಾಸ್ಕನ್ಧೋರಸಾಂ ಚ ಬಲಜನನಾರ್ಥಂ ದೃಷ್ಟಿಪ್ರಸಾದಜನನಾಯ ವಾ ಸ್ನೇಹೋ ವಿಧೀಯತೇ ತಸ್ಮಿನ್ ವೈಶೇಷಿಕೋ ನಸ್ಯಶಬ್ದಃ। ತತ್ತು ನಸ್ಯಂ ದೇಯಂ ವಾತಾಭಿಭೂತೇ ಶಿರಸಿ ದನ್ತಕೇಶಶ್ಮಶ್ರುಪ್ರಪಾತ ದಾರುಣಕರ್ಣಶೂಲ ಕರ್ಣಕ್ಷ್ವೇಡತಿಮಿರಸ್ವರೋಪಘಾತ ನಾಸಾರೋಗಾಸ್ಯಶೋಷಾಪಬಾಹುಕಾಕಾಲಜವಲೀಪಲಿತ ಪ್ರಾದುರ್ಭಾವದಾರುಣ ಪ್ರಬಾಧೇಷು ವಾತಪೈತ್ತಿಕೇಷು ಮುಖರೋಗೇಷ್ವನ್ಯೇಷು ಚ ವಾತಪಿತ್ತಹರ ದ್ರವ್ಯಸಿದ್ಧೇನ ಸ್ನೇಹೇನೇತಿ ॥೨೨॥

ಶಿರೋವಿರೇಚನಂ ಶ್ಲೇಷ್ಮಣಾಭಿವ್ಯಾಪ್ತತಾಲುಕಣ್ಠಶಿರಸಾಮರೋಚಕ ಶಿರೋಗೌರವಶೂಲ ಪೀನಸಾರ್ಧಾವಭೇದಕ ಕ್ರಿಮಿಪ್ರತಿಶ್ಯಾಯಾಪಸ್ಮಾರಗನ್ಧಾ ಜ್ಞಾನೇಷ್ವನ್ಯೇಷು ಚೋರ್ಧ್ವಜತ್ರುಗರೇಷು ಕಫಜೇಷುವಿಕಾರೇಷು ಶಿರೋವಿರೇಚನದ್ರವ್ಯೈಸ್ತತ್ ಸಿದ್ಧೇನ ವಾ ಸ್ನೇಹೇನೇತಿ ॥೨೩॥ ತತ್ರೈತದ್ದ್ವಿವಿಧಮಪ್ಯಭುಕ್ತವತೋಽನ್ನಕಾಲೇ ಪೂರ್ವಾಹ್ಣೇ ಶ್ಲೇಷ್ಮರೋಗಿಣಾಂ ಮಧ್ಯಾಹ್ನೇ ಪಿತ್ತರೋಗಿಣಾಂ ಅಪರಾಹ್ಣೇ ವಾತರೋಗಿಣಾಮ್ ॥೨೪॥

ಈ ಪೈಕಿ ಸ್ನೇಹನವಾಗಲೆಂದು ಬರಿಯತಲೆಗೂ ಕತ್ತು ಹೆಗಲು ಎದೆ ಇವುಗಳಿಗೆ ಬಲವುಂಟಾಗುವುದಕ್ಕೂ ನೇತ್ರದ ಶಕ್ತಿಯು ಹೆಚ್ಚಿ ನೇತ್ರವಿಕಾರಗಳು ನಿವಾರಣೆಯಾಗುವುದಕ್ಕೂ ಪ್ರಯೋಗಿಸುವ ಸ್ನೇಹಕ್ಕೆ ನಸ್ಯವೆಂಬ ವಿಶೇಷ ಪದವ್ಯವಹಾರವಿರುತ್ತದೆ. ಈ ವಿಧದ ನಸ್ಯವನ್ನು ವಾತಪೀಡಿತಶಿರಸ್ಸುಳ್ಳವರಿಗೂ (ತಲೆಶೂಲೆ) ಹಲ್ಲು ತಲೆ ಕೂದಲು ಗಡ್ಡ ಮೀಸೆಗಳು ಉದುರಿದವರಿಗೂ ಅತಿನೋವನ್ನುಂಟುಮಾಡುವ ಕಿವಿನೋವು ಕಿವಿಯಲ್ಲಿ ಶಬ್ದ ತಿಮಿರವೆಂಬ ನೇತ್ರರೋಗ ಸ್ವರಭಂಗ ನಾಸಾರೋಗ ಮುಖಶೋಷ ಅಪಬಾಹುಕ ಅಕಾಲದಲ್ಲಿ ಚರ್ಮ ಸುಕ್ಕುಬೀಳುವುದು ತಲೆಕೂದಲು ಬೆಳ್ಳಗಾಗುವುದು ಮೊದಲಾದ ಭಯಂಕರ ರೋಗಪೀಡಿತರಿಗೂ ವಾತಪಿತ್ತರೋಗಿಗಳಿಗೂ ಇತರ ವಿಧಗಳಾದ ಮುಖರೋಗ ಪೀಡಿತರಿಗೂ ವಾತಪಿತ್ತಹರ ದ್ರವ್ಯಸಿದ್ಧತೈಲದಿಂದ ನಸ್ಯಕರ್ಮವನ್ನು ಮಾಡಿಸಬೇಕು. ಕಫಕೋಪದಿಂದ ಅಂಗಳು ಗಂಟಲು ತಲೆಗಳಲ್ಲಿ ಕಫ ಸೇರಿ ನರಳುವವರಿಗೂ ಅರುಚಿ ತಲೆಭಾರ ನೋವು ನೆಗಡಿ ಅರ್ಧಾವಭೇದಕವೆಂಬ ಶಿರೋವಾತ ಕ್ರಿಮಿಗಳು ತಲೆಯಲ್ಲಿ ಸೇರಿ ಉಂಟುಮಾಡುವ ಪೀನಸರೋಗಿಗಳಿಗೂ ಅಪಸ್ಮಾರಿಗಳಿಗೂ ಗಂಧಜ್ಞಾನವಿಲ್ಲ

ದವರಿಗೂ ಇನ್ನೂ ಅನೇಕ ವಿಧಗಳಾದ ಕಫಜನಿತ ಊರ್ಧ್ವಜತ್ರುರೋಗಗಳಲ್ಲೂ ಹಿಪ್ಪಲಿ ವಿಡಂಗ ನುಗ್ಗೆಬೀಜ ಸಾಸಿವೆ ಉತ್ತರಣೆಬೀಜ ನಕಚಿಕನಿ ಕಾಮಕಸ್ತೂರಿಬೀಜ ಪೀಲು (ಬಗಿನಿ) ಮೊದಲಾದ ಶಿರೋವಿರೇಚನಚೂರ್ಣದಿಂದಾಗಲೀ. ಇವುಗಳಿಂದ ತಯಾರಿಸಿದ ತೈಲದಿಂದಾಗಲೀ, ನಸ್ಯಮಾಡಿ ಶಿರೋವಿರೇಚನವನ್ನು ಮಾಡಿಸಬೇಕು. ಈ ಎರಡು ವಿಧಗಳಾದ ನಸ್ಯಗಳನ್ನೂ ಭೋಜನಕ್ಕೆ ಮುಂಚೆ ಅನ್ನಕಾಲಗಳಲ್ಲಿ ಪ್ರಾತಃಕಾಲದಲ್ಲಿ ಕಫರೋಗಿಗಳಿಗೂ ಮಧ್ಯಾಹ್ನದಲ್ಲಿ ಪಿತ್ತರೋಗಿಗಳಿಗೂ ಅಪರಾಹ್ಣದಲ್ಲಿ ವಾತರೋಗಿಗಳಿಗೂ ಪ್ರಯೋಗಿಸಬೇಕು.

ಅಥ ಪುರುಷಾಯ ಶಿರೋವಿರೇಚನೀಯಾಯ ದನ್ತಕಾಷ್ಠಧೂಮಪಾನಾಭ್ಯಾಂ ವಿಶುದ್ಧವಕ್ತ್ರಸ್ರೋತಸೇ ಪಾಣಿತಾಪಪರಿಸ್ವಿನ್ನ ಮೃದಿತ ಗಳ ಕಪೋಲಲಲಾಟಪ್ರದೇಶಾಯವಾತತಪರಜೋಹೀನ ವೈಶ್ಮನ್ಯುತ್ತಾನಶಾಯಿನೇ ಪ್ರಸಾರಿತಕರಚರಣಾಯ ಕಿಞ್ಚಿತ್ಪ್ರವಿಲಮ್ಬಿತಶಿರಸೇ ವಸ್ತ್ರಾಚ್ಛಾದಿತ ನೇತ್ರಾಯ ವಾಮಹಸ್ತಪ್ರದೇಶಿನ್ಯಗ್ರೋನ್ನಾಮಿತನಾಸಾಗ್ರಾಯ ವಿಶುದ್ಧಸ್ರೋತಸಿ ದಕ್ಷಿಣ ಹಸ್ತೇನ ಸ್ನೇಹಮುಷ್ಣಾನುತಪ್ತಂ ರಜತಸುವರ್ಣತಾಮ್ರಮೃತ್ಪಾತ್ರ ಶುಕ್ತೀನಾಮನ್ಯತಮಸ್ಥಂ ಶುಕ್ತ್ಯಾ ಪಿಚುನಾ ವಾ ಸುಖೋಷ್ಣಂ ಸ್ನೇಹಮದ್ರುತಮಾಸಿಞ್ಚೇದವಚ್ಛಿನ್ನಧಾರಂ ಯಥಾ ನೇತ್ರೇ ನ ಪ್ರಾಪ್ನೋತಿ ||೨೫||

ಸ್ನೇಹೇऽವಸಿಚ್ಯಮಾನೇ ತು ಶಿರೋ ನೈವ ಪ್ರಕಮ್ಪಯೇತ್ |
ನ ಕುಪ್ಯೇನ್ನ ಪ್ರಭಾಷೇಚ್ಚ ನ ಕ್ಷುಯಾನ್ನ ಹಸೇತ್ತಥಾ ||೨೬||
ಏತೈರ್ಹಿ ವಿಹತಃ ಸ್ನೇಹೋ ನ ಸಮ್ಯಕ್ ಪ್ರತಿಪದ್ಯತೇ |
ತತಃ ಕಾಸಪ್ರತಿಶ್ಯಾಯಶಿರೋऽಕ್ಷಿಗದಸಂಭವಃ ||೨೭||

ನಸ್ಯಪ್ರಯೋಗ ವಿಧಾನ : ಶಿರೋವಿರೇಚನವನ್ನು ಮಾಡಿಸಿಕೊಳ್ಳುವವನು ಮೂತ್ರಪುರೀಷಗಳನ್ನು ವಿಸರ್ಜಿಸಿ ಭೋಜನ ಮಾಡಿದನಂತರ ಮೋಡವಿಲ್ಲದ ದಿನ ದಂತ ಕಾಷ್ಠ ಧೂಮಪಾನಗಳಿಂದ ಶುದ್ಧವಾದ ಮುಖರಂಧ್ರವುಳ್ಳವನಾಗಿ ಅಂಗೈಯನ್ನು ಬೆಂಕಿಯಕಡೆ ತೋರಿಸಿ ಬಿಸಿಮಾಡಿ ಕತ್ತು ಕೆನ್ನೆ ಹಣೆಗಳಿಗೆ ಬಿಸಿತಟ್ಟಿಸಿ ಮೃದುವಾಗಿ ಹಿಸುಕಿ ಎದುರುಗಾಳಿ ಬಿಸಿಲು ಧೂಳು ಬೀಳದಿರುವ ಕೋಣೆಯಲ್ಲಿ ಅಂಗತ್ತಲಾಗಿ ಮಲಗಿ ಕೈಕಾಲುಗಳನ್ನು ಅತ್ತಿತ್ತ ನೀಡಿಕೊಂಡು ತಲೆಯನ್ನು ಸ್ವಲ್ಪ ಕೆಳಕ್ಕೆ ಜೋಲುವಂತೆ ಮಾಡಿ ಕಣ್ಣುಗಳಿಗೆ ಬಟ್ಟೆಮುಚ್ಚಿ ಮಲಗಿರುವಾಗ ವೈದ್ಯನು ತನ್ನ ಎಡಗೈತರ್ಜನಿಯಿಂದ ರೋಗಿಯ ಮೂಗಿನ ತುದಿಯನ್ನು ಸ್ವಲ್ಪ ಮೇಲಕ್ಕೆ ಎತ್ತಿ ಮೂಗಿನಹೊಳ್ಳೆಗಳನ್ನು ಶುದ್ಧಿಮಾಡಿ ಬಲಗೈಯ್ಯಲ್ಲಿ ಬೆಳ್ಳಿ ಚಿನ್ನ ತಾಮ್ರ ಮಣಿ ಕಪ್ಪೆಚಿಪ್ಪು ಮಣ್ಣಿನ ಪಾತ್ರೆ ಇವುಗಳಲ್ಲೊಂದರಲ್ಲಿ ಸ್ನೇಹವನ್ನು ತುಂಬಿ ಬಿಸಿನೀರಿನಲ್ಲಿ ಪಾತ್ರೆಯನ್ನು ಅದ್ದಿ ಬಿಸಿಮಾಡಿದ ತೈಲವನ್ನು ಕಪ್ಪೆಚಿಪ್ಪಿನಿಂದಾಗಲೀ ಹತ್ತಿಯ ಉಂಡೆಯನ್ನು ಅದ್ದಿಯಾಗಲೀ ಸುಖೋಷ್ಣವಾಗಿರುವಂತೆ ಮಾಡಿ ನಿದಾನವಾಗಿ ಕಣ್ಣಿಗೆ ಬೀಳದಂತೆ ತಡೆದು ತಡೆದು ಧಾರಾಕಾರವಾಗಿ ಹಿಂಡಬೇಕು. ಸ್ನೇಹವನ್ನು ಮೂಗಿಗೆ ಹಿಂಡುತ್ತಿರುವಾಗ ತಲೆಯನ್ನು ಅಲ್ಲಾಡಿಸಬಾರದು.

ಕೋಪಮಾಡಬಾರದು, ಮಾತಾಡಬಾರದು, ಶೀನಬಾರದು, ನಗಬಾರದು. ಹೀಗೆ ಮಾಡಿದರೆ ತೈಲವು ಸರಿಯಾಗಿ ಪ್ರವೇಶಿಸುವುದಿಲ್ಲ. ಕೆಮ್ಮು ನೆಗಡಿ ತಲೆನೋವು ಕಣ್ಣು ನೋವುಗಳುಂಟಾಗುತ್ತವೆ.

ತಸ್ಯಪ್ರಮಾಣಮಷ್ಟೌ ಬಿನ್ದವಃ ಪ್ರದೇಶಿನೀಪರ್ವದ್ವಯ ನಿಃಸೃತಾಃ ಪ್ರಥಮಾಮಾತ್ರಾ ದ್ವಿತೀಯಾಶುಕ್ತಿಃ ತೃತೀಯಾ ಪಾಣಿಶುಕ್ತಿಃ ಇತ್ಯೇತಾಸ್ತಿಸ್ರೋಮಾತ್ರಾ ಯಥಾಬಲಂ ಪ್ರಯೋಜ್ಯಾಃ ||೨೮|| ಸ್ನೇಹನಸ್ಯಂ ನ ಚೋಪಗಿಲೇತ್ ಕಥಞ್ಚಿದಪಿ ||೨೯|| ಶೃಙ್ಗಾಟಕಮಭಿಪ್ಲಾವ್ಯ ನಿರೇತಿವದನಾದ್ಯಥಾ | ಕಫೋತ್ಕ್ಲೇಶಭಯಾಚ್ಚೈವನಿಷ್ಠೀವೇದವಿಧಾರಯನ್ ||೩೦||

ತರ್ಜನಿಯ ಎರಡು ಗಿಣ್ಣುಗಳನ್ನು ಸ್ನೇಹದಲ್ಲಿ ಮುಳುಗಿಸಿ ಮೇಲಕ್ಕೆತ್ತಿದರೆ ತೊಟ್ಟಿಕ್ಕುವ ಎಂಟೆಂಟು ಬಿಂದುಗಳು ಒಂದೊಂದು ಮೂಗಿಗೆ ತುಂಬಿದರೆ ಹೀನಮಾತ್ರೆ. ಮಧ್ಯಮ ಮಾತ್ರೆಗೆ ೩೨ ಬಿಂದುಗಳು, ಉತ್ತಮ ಮಾತ್ರೆಯು ೬೪ ತೊಟ್ಟುಗಳಿಂದು ತಿಳಿಯಬೇಕು. ಈ ರೀತಿ ೩ ಪ್ರಮಾಣಗಳ ನಸ್ಯವನ್ನೂ ರೋಗಿಯ ಬಲಾನುಸಾರವಾಗಿ ಪ್ರಯೋಗಿಸಬೇಕು. ಸ್ನೇಹನಸ್ಯವನ್ನು ಕುಡಿಯಬಾರದು. ಮೂಗಿನಿಂದ ಪ್ರಯೋಗಿಸಿದ ನಸ್ಯವು ಶೃಂಗಾಟಕಮರ್ಮಸ್ಥಾನವನ್ನು ನೆನೆಸಿ ಮುಖದಿಂದ ಹೊರಕ್ಕೆ ಬರುತ್ತದೆ. ಕಫವನ್ನು ಜಿನುಗಿಸುತ್ತದೆಯಾಗಿ ಇದನ್ನು ತಡೆಯಬಾರದು ಬಂದಬಂದಂತೆ ಕಫವನ್ನು ಎಡದ ಮಗ್ಗಲಿಗೂ ಬಲದಮಗ್ಗಲಿಗೂ ಕ್ಯಾಕರಿಸಿ ಉಗುಳುತ್ತಿರಬೇಕು.

ದತ್ತೇ ತು ಪುನರಪಿ ಸಂಸ್ವೇದ್ಯಗಳಕಪೋಲಾದೀನ್ ಧೂಮಾಸೇವೇತ ಭೋಜಯೇಚ್ಚೈನಮಭಿಷ್ಯನ್ದಿ ತತೋಽಸ್ಯಾಚಾರಿಕಮಾದಿಶೇತ್ ರಜೋಧೂಮಸ್ನೇಹಾತಪಮದ್ಯದ್ರವಪಾನಶಿರಃಸ್ನಾನಾತಿಯಾನಕ್ರೋಧಾದೀನಿ ಚ ಪರಿಹರೇತ್ ||೩೧|| ತಸ್ಯಯೋಗಾತಿಯೋಗಾನಾಮಿದಂ ವಿಜ್ಞಾನಂ ಭವತಿ ||೩೨||

ಲಾಘವಂ ಶಿರಸೋ ಯೋಗೇ ಸುಖಸ್ವಪ್ನಬೋಧನಮ್ |
ವಿಕಾರೋಪಶಮಃ ಶುದ್ಧಿರಿನ್ದ್ರಿಯಾಣಾಂ ಮನಃ ಸುಖಮ್ ||೩೩||
ಕಫಪ್ರಸೇಕಃ ಶಿರಸೋ ಗುರುತೇನ್ದ್ರಿಯವಿಭ್ರಮಃ |
ಲಕ್ಷಣಂ ಮೂರ್ಧ್ನ್ಯತಿಸ್ನಿಗ್ಧೇ ರೂಕ್ಷಂ ತತ್ರಾವಚಾರಯೇತ್ ||೩೪||
ಅಯೋಗೇ ಚೈವ ವೈಗುಣ್ಯಮಿನ್ದ್ರಿಯಾಣಾಂ ಚ ರೂಕ್ಷತಾ |
ರೋಗಾಶಾನ್ತಿಶ್ಚ ತತ್ರೇಷ್ಟಂ ಭೂಯೋ ನಸ್ಯಂ ಪ್ರಯೋಜಯೇತ್ ||೩೫||
ಚತ್ವಾರೋ ಬಿನ್ದವಃ ಷಡ್ವಾ ತಥಾಷ್ಟೌ ವಾ ಯಥಾಬಲಮ್ |
ಶಿರೋವಿರೇಕಸ್ನೇಹಸ್ಯ ಪ್ರಮಾಣಮಭಿನಿರ್ದಿಶೇತ್ ||೩೬||

ನಸ್ಯಪ್ರಯೋಗಮಾಡಿದಮೇಲೆ ಕತ್ತು ಕೆನ್ನೆ ಹಣೆ ಮೊದಲಾದುವನ್ನು ಪುನಃ ಸ್ವೇದಮಾಡಿಸಿ ಧೂಮಪಾನಮಾಡಿಸಬೇಕು. ಮೊಸರು ಮೊದಲಾದ ಅಭಿಷ್ಯಂದಕರಗಳಾದ ಆಹಾರವನ್ನು ಭೋಜನಮಾಡಿಸಿ ಯಥಾಕ್ರಮವಾಗಿ ಪಥ್ಯಕ್ರಮಗಳನ್ನು ಅನುಸರಿಸಬೇಕು. ಧೂಳು ಹೊಗೆ ಸ್ನೇಹ ಬಿಸಿಲು ಮದ್ಯ ದ್ರವ ಇವುಗಳ ಪಾನವನ್ನೂ ತಲೆಗೆ ಸ್ನಾನವನ್ನೂ ಅತಿಯಾದ ಯಾನಸಂಚಾರ ಕ್ರೋಧ ದುಃಖ ಮೊದಲಾದುವನ್ನೂ ತ್ಯಜಿಸಿ

ಬಿಡಬೇಕು. ನಸ್ಯಕರ್ಮದ ಹೀನ ಮಧ್ಯಮ ಅತಿಯೋಗ ಲಕ್ಷಣಗಳನ್ನು ಹೇಳುತ್ತಾರೆ ಸರಿಯಾದ ನಸ್ಯಪ್ರಯೋಗದಿಂದ ಮೈಹಗುರ ಸುಖವಾದನಿದ್ರೆ ಎಚ್ಚರಗಳು ರೋಗನಾಶ ಇವುಗಳೂ ಇಂದ್ರಿಯಶುದ್ಧಿ ಮನಃ ಸೌಖ್ಯಗಳೂ ಉಂಟಾಗುತ್ತವೆ. ಅತಿಯೋಗದಿಂದ ಕಫವು ಬಾಯಿನಿಂದ ಸೋರುತ್ತದೆ. ತಲೆಭಾರ ಇಂದ್ರಿಯಗಳ ಬದಲಾವಣೆ ಈ ಲಕ್ಷಣಗಳಿರುತ್ತವೆ. ಹೀನಯೋಗದಲ್ಲಿಯೂ ಇಂದ್ರಿಯಗಳು ಬದಲಾಗಿ ದೇಹವು ಒರಟಾಗುತ್ತದೆ ರೋಗಶಮನವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಪುನಃ ಸ್ನೇಹನಸ್ಯವನ್ನು ಪ್ರಯೋಗಿಸಬೇಕು. ಶಿರೋವಿರೇಚನಕ್ಕೆ ೪-೬-೮ ಬಿಂದುಗಳ ಪ್ರಯೋಗವು ಕ್ರಮವಾಗಿ ಹೀನಬಲ ಮಧ್ಯಬಲ ಉತ್ತಮ ಬಲವುಳ್ಳವರಿಗೆ ಹಿತಕರವೆಂದು ತಿಳಿಯಬೇಕು.

ನಸ್ಯೇ ತ್ರೀಣ್ಯುಪದಿಷ್ಟಾನಿ ಲಕ್ಷಣಾನಿ ಪ್ರಯೋಗತಃ ।
ಶುದ್ಧಹೀನಾತಿಸಂಜ್ಞಾನಿ ವಿಶೇಷಾಚ್ಛಾಸ್ತ್ರಚಿನ್ತಕೈಃ ॥೩೭॥
ಲಾಘವಂ ಶಿರಸಃ ಶುದ್ಧಿಃ ಸ್ರೋತಸಾಂ ವ್ಯಾಧಿನಿರ್ಜಯಃ ।
ಚಿತ್ತೇನ್ದ್ರಿಯಪ್ರಸಾದಶ್ಚ ಶಿರಸಃ ಶುದ್ಧಿಲಕ್ಷಣಮ್ ॥೩೮॥
ಕಣ್ಡೂಪದೇಹೌ ಗುರುತಾ ಸ್ರೋತಸಾಂ ಕಫಸಂಸ್ರವಃ ।
ಮೂರ್ಧ್ನಿ ಹೀನವಿಶುದ್ಧೇ ತು ಲಕ್ಷಣಂ ಪರಿಕೀರ್ತಿತಮ್ ॥೩೯॥
ಮಸ್ತುಲುಙ್ಗಾಗಮೋ ವಾತವೃದ್ಧಿರಿನ್ದ್ರಿಯವಿಭ್ರಮಃ ।
ಶೂನ್ಯತಾ ಶಿರಸಶ್ಚಾಪಿ ಮೂರ್ಧ್ನಿ ಗಾಢವಿರೇಚಿತೇ ॥೪೦॥
ಹೀನಾತಿಶುದ್ಧೇ ಶಿರಸಿ ಕಫವಾತಘ್ನಮಾಚರೇತ್ ।
ಸಮ್ಯಗ್ವಿಶುದ್ಧೇ ಶಿರಸಿ ಸರ್ಪಿರ್ನಸ್ಯಂ ನಿಷೇಚಯೇತ್ ॥೪೧॥
ಏಕಾನ್ತರಂ ದ್ವ್ಯನ್ತರಂ ವಾ ಸಪ್ತಾಹಂ ವಾ ಪುನಃ ಪುನಃ ।
ಏಕವಿಂಶತಿರಾತ್ರಂ ವಾ ಯಾವದ್ವಾ ಸಾಧು ಮನ್ಯತೇ ॥೪೨॥
ಮಾರುತೇನಾಭಿಭೂತಸ್ಯ ವಾತ್ಯನ್ತಂ ಯಸ್ಯ ದೇಹಿನಃ ।
ದ್ವಿಕಾಲಂ ಚಾಪಿ ದಾತವ್ಯಂ ನಸ್ಯಂ ತಸ್ಯ ವಿಜಾನತಾ ॥೪೩॥

ಶಾಸ್ತ್ರವಿಚಾರಗಳನ್ನು ಪರಿಶೀಲಿಸಿರುವ ವೈದ್ಯರು ನಸ್ಯಪ್ರಯೋಗದ ಹೀನ ಮಧ್ಯ ಅತಿಯೋಗಗಳೆಂಬ ೩ ವಿಧ ಲಕ್ಷಣಗಳನ್ನು ಹೇಳುತ್ತಾರೆ—ಶುದ್ಧನಸ್ಯಪ್ರಯೋಗದಿಂದ ದೇಹವು ಹಗುರವಾಗಿಯೂ ತಲೆಯೊಳಗೆ ಇರುವ ಕಿವಿ ಕಣ್ಣು ಮೂಗು ಬಾಯಿ ಎಂಬ ಸ್ರೋತಸ್ಸುಗಳು ಶುದ್ಧವಾಗಿ ವ್ಯಾಧಿನಾಶವೂ ಮನಸ್ಸೂ ಮತ್ತು ಇಂದ್ರಿಯಗಳೂ ಸ್ಥಿಮಿತವಾಗಿರುತ್ತವೆ. ಹೀನಶುದ್ಧಿಯಲ್ಲಿ ನವೆ ಕಫ ಲೇಪನ ತಲೆಭಾರ ಕಣ್ಣು ಮೂಗು ಮೊದಲಾದ ಸ್ರೋತೋಮಾರ್ಗಗಳಿಂದ ಕಫಸ್ರಾವವಾಗುತ್ತದೆ. ಶಿರೋವಿರೇಚನದ ಅತಿಯೋಗದಿಂದ ತಲೆಯೊಳಗೆ ತುಪ್ಪದಂತಿರುವ ವಸ್ತುವು (ಮಸ್ತುಲುಂಗ) ಸ್ರೋತೋಮಾರ್ಗಗಳಿಂದ ಸ್ರವವಾಗುತ್ತದೆ. ವಾತಪ್ರಕೋಪವೂ ಇಂದ್ರಿಯದೌರ್ಬಲ್ಯವೂ ತಲೆ ಭೆಂಡಾಗಿಯೂ ಆಗುತ್ತವೆ. ಹೀನಶುದ್ಧಿ ಅತಿಶುದ್ಧಿ ಲಕ್ಷಣಗಳು ಕಂಡಾಗ ತಲೆಯಲ್ಲಿ

ಕಫವಾತಹರಗಳಾಗುವಂತೆ ಔಷಧ ಪ್ರಯೋಗವನ್ನು ಮಾಡಬೇಕು. ಸರಿಯಾಗಿ ಶುದ್ಧಿಯಾದರೆ ತುಪ್ಪದಿಂದ ನಸ್ಯಮಾಡಿಸಬೇಕು. ೧ ದಿನ, ೨ ದಿನ, ೭ದಿನ, ೨೧ ದಿನ ಅಥವಾ ಗುಣವಾಗುವವರೆಗೆ ಮಧ್ಯೆ ಮಧ್ಯೆ ಬಿಟ್ಟು ಬಿಟ್ಟು ನಸ್ಯಕರ್ಮವನ್ನು ಮಾಡಿಸಬೇಕು. ಅತಿಯಾಗಿ ವಾತಪೀಡಿತನಾಗಿದ್ದರೆ ತಿಳಿದು ವೈದ್ಯನು ದಿನಕ್ಕೆ ೨ ಸಾರಿಯಾದರೂ ನಸ್ಯವನ್ನು ಪ್ರಯೋಗಿಸಬೇಕು.

ಅವಪೀಡಸ್ತು ಶಿರೋವಿರೇಚನದಭಿಷ್ಯಂದಸರ್ಪದಷ್ಟವಿಸಂಜ್ಞೇಭ್ಯೋ ದದ್ಯಾಚ್ಛಿರೋವಿರೇಚನ ದ್ರವ್ಯಾಣಾಮನ್ಯತಮಮವಪೀಡ್ಯಾವಪೀಡ್ಯ ಶರ್ಕರೇಕ್ಷುರಸಕ್ಷೀರಘೃತಮಾಂಸರಸಾನಾಮನ್ಯತಮಂ ಕ್ಷೀಣಾನಾಂ ಶೋಣಿತಪಿತ್ತೇ ಚ ವಿದಧ್ಯಾತ್ ||೪೪||

ಕೃಶದುರ್ಬಲಭೀರೂಣಾಂ ಸುಕುಮಾರಸ್ಯ ಯೋಷಿತಾಮ್ ।
ಶೃತಾಃ ಸ್ನೇಹಾಃ ಶಿರಃಶುದ್ಧ್ಯೈ ಕಲ್ಕಸ್ತೇಭ್ಯೋ ಯಥಾ ಹಿತಃ ||೪೫||

ಹಿಪ್ಪಲಿ ವಿಡಂಗ ಮೊದಲಾದ ಶಿರೋವಿರೇಚನ ದ್ರವ್ಯಗಳಲ್ಲೊಂದರ ಕಲ್ಕವನ್ನು ಅಥವಾ ಕಷಾಯವನ್ನು ಬಟ್ಟೆತುಂಡಿನಲ್ಲಿ ಅಥವಾ ಹತ್ತಿಯಲ್ಲಿ ಅದ್ದಿ ಶಿರೋವಿರೇಚನದಂತೆಯೇ ಮೇದಸ್ಸು ಕಫಗಳಿಂದ ಆವೃತವಾದ ತಲೆಯುಳ್ಳವರಿಗೂ ಹಾವು ಕಡಿತದಿಂದ ಜ್ಞಾನತಪ್ಪಿದವರಿಗೂ ಮೂಗಿಗೆ ಹಿಂಡಬೇಕು. ಕ್ಷೀಣರಿಗೂ ರಕ್ತಪಿತ್ತರೋಗಿಗಳಿಗೂ ಸಕ್ಕರೆ ಕಬ್ಬಿನರಸ ಹಾಲು ತುಪ್ಪ ಮಾಂಸರಸ ಇವುಗಳಲ್ಲೊಂದನ್ನು ನಸ್ಯಮಾಡಿಸಬೇಕು. ಕೃಶರು ದುರ್ಬಲರು ಹೆದರಿದವರು ಸುಕುಮಾರರು ಹೆಂಗಸರು ಇವರುಗಳಿಗೆ ಶಿರಸ್ಸು ಶುದ್ಧಿಯಾಗುವುದಕ್ಕಾಗಿ ಕಷಾಯ ಸ್ನೇಹ ಕಲ್ಕಗಳನ್ನು ಅವರವರಿಗೆ ಹಿತಕರಗಳಾದುವನ್ನು ತಯಾರಿಸಿ ೪-೬-೮ ತೊಟ್ಟುಗಳಂತೆ ಹೀನ ಮಧ್ಯ ಉತ್ತಮ ಬಲವುಳ್ಳವರಿಗೆ ನಸ್ಯಮಾಡಿಸಬೇಕು.

ಟಿಪ್ಪಣಿ—ಸರ್ವದೋಷಗಳಲ್ಲೂ ಯಾವ ನಿರ್ಬಂಧವೂ ಇಲ್ಲದೆ ಪ್ರಯೋಗಿಸಲು ಅನುಕೂಲವಾಗುವುದರಿಂದ ಅವಪೀಡನಸ್ಯವು ಹಿತಕರವಾದದ್ದು. ವಿಷಪೀಡಿತರಾಗಿ ಜ್ಞಾನತಪ್ಪಿದವರಿಗೆ ಎಚ್ಚರವುಂಟಾಗುವುದಕ್ಕೆಂದೂ ರಕ್ತಪಿತ್ತವೊದಲಾದ ರೋಗಗಳಿಂದ ಪೀಡಿತರಾದವರಿಗೆ ಸ್ತಮ್ಭನಮಾಡುವುದಕ್ಕೆಂದೂ ಎರಡು ವಿಧ ಅವಪೀಡಕ ಪ್ರಯೋಗಗಳಿವೆ. ವಿಷ ಸಂನ್ಯಾಸ ಮೂರ್ಛೆ ಮದ್ಯಪಾನ ಅಪತಂತ್ರಕವಾತರೋಗ ಮತ್ತತೆ ಅಪಸ್ಮಾರ ಕಾಮುಕರು ಚಿತ್ತನಾಶ ಕ್ರೋಧ ಭಯ ಇವುಗಳಿಂದ ಪೀಡಿತರಾದವರಿಗೆ ಜ್ಞಾನವುಂಟಾಗಲು ಹಿಪ್ಪಲಿ ವಿಡಂಗ ಸಾಸಿವೆ ಉತ್ತರಣೆಬೀಜ ಮೊದಲಾದುವುಗಳಲ್ಲೊಂದನ್ನು ಕಲ್ಕಮಾಡಿ ಬಟ್ಟೆಯ ತುದಿಯಲ್ಲಿಟ್ಟಾಗಲೀ ಕಷಾಯದಲ್ಲಿ ನೆನೆಸಿದ ಹತ್ತಿಯ ಮುದ್ದೆಯನ್ನಾಗಲೀ ರೋಗಿಯ ಮೂಗಿಗೆ ಹಿಂಡಬೇಕು. ರಕ್ತಪಿತ್ತದಲ್ಲಿ ಜೇನುತುಪ್ಪವನ್ನು ಮಿಶ್ರಮಾಡಿ ಸ್ತಂಭನೌಷಧ ಕಲ್ಕವನ್ನು ನಸ್ಯಮಾಡಿಸಬೇಕು.

ಚೇತೋವಿಕಾರ ಕ್ರಿಮಿ ವಿಷಭಿಪನ್ನಾನಾಂ ಚೂರ್ಣಂ ಪ್ರಧಮೇತ್ ||೪೪||

ಮನೋರೋಗ ಕ್ರಿಮಿ ವಿಷಗಳಿಂದ ಪೀಡಿತರಾಗಿದ್ದರೆ ಸಣ್ಣಕೊಳವೆಯ ಒಂದು ತುದಿಯಲ್ಲಿ ನುಣುಪಾದ ಒಂದುಚಿಟಿಕೆಯಷ್ಟು ಶಿರೋವಿರೇಚನ ಚೂರ್ಣವನ್ನು ತುಂಬಿ ರೋಗಿಯ ಮೂಗಿನಹೊಳ್ಳೆಗೆ ಹಿಡಿದು ಮತ್ತೊಂದು ರಂಧ್ರದಿಂದ ಮುಖವಾಯುವನ್ನು ಊದಿದರೆ ಆ ಚೂರ್ಣವು ಮೂಗಿನೊಳಕ್ಕೆ ಹೋಗಿ ದೋಷಹರಣಮಾಡುತ್ತದೆ. ಇದಕ್ಕೆ ಪ್ರಧಮನವೆಂದು ಸಂಜ್ಞೆ. ನಾಳವು ೬ ಅಂಗುಳಷ್ಟು ಉದ್ದವಿರಬೇಕು.

ನಸ್ಯೇನ ಪರಿಹರ್ತವ್ಯೋ ಭುಕ್ತವಾನಪತರ್ಪಿತೋಽತ್ಯರ್ಥತರುಣಪ್ರತಿಶ್ಯಾಯೀ ಗರ್ಭಿಣೀ ಪೀತಸ್ನೇಹೋದಕಮದ್ಯದ್ರವೋಽಜೀರ್ಣೀ ದತ್ತಬಸ್ತಿಃ ಕ್ರುದ್ಧೋ ಗರಾರ್ತಸ್ತೃಷಿತಃ ಶೋಕಾಭಿಭೂತಃ ಶ್ರಾನ್ತೋ ಬಾಲೋ ವೃದ್ಧೋ ವೇಗಾವರೋಧಿತಃ ಶಿರಃ ಸ್ನಾತುಕಾಮಶ್ಚೇತಿ । ಅನಾರ್ತವೇ ಚಾಭ್ರೇ ನಸ್ಯಧೂಮೌ ಪರಿಹರೇತ್ ॥೪೭॥ ತತ್ರ ಹೀನಾತಿಮಾತ್ರಾತಿಶೀತೋಷ್ಣೋ ಸಹಸಾಪ್ರದಾನಾತಿಪ್ರವಿಲಮ್ಬಿತಶಿರಸ ಉಚ್ಛಿಙ್ಘತೋ ವಿಚಲತೋಽಭ್ಯವಹರತೋ ವಾ ಪ್ರತಿಷಿದ್ಧಪ್ರದಾನಾಚ್ಚ ವ್ಯಾಪದೋ ಭವನ್ತಿ ತೃಷ್ಣೋದ್ಗಾರಾದಯೋ ದೋಷನಿಮಿತ್ತಾಃ ಕ್ಷಯಜಾಶ್ಚ ॥೪೮॥ ಭವತಶ್ಚಾತ್ರ—

ನಸ್ಯೇ ಶಿರೋವಿರೇಕೇ ಚ ವ್ಯಾಪದೋ ದ್ವಿವಿಧಾಃ ಸ್ಮೃತಾಃ ।
ದೋಷೋತ್ಕ್ಲೇಶಾತ್ ಕ್ಷಯಾಚ್ಚೈವ ವಿಜ್ಞೇಯಾಸ್ತಾ ಯಥಾಕ್ರಮಮ್ ॥೫೦॥
ದೋಷೋತ್ಕ್ಲೇಶನಿಮಿತ್ತಾಸ್ತು ಜಯೇಚ್ಛಮನಶೋಧನೈಃ ।
ಅಥ ಕ್ಷಯನಿಮಿತ್ತಾಸು ಯಥಾಸ್ವಂ ಬೃಂಹಣಂ ಹಿತಮ್ ॥೫೧॥

ನಸ್ಯಕರ್ಮಕ್ಕೆ ಅಯೋಗ್ಯರು:—ಊಟಮಾಡಿರುವವನು ಹಸಿದಿರುವವನು ಆಗ ತಾನೇ ನೆಗಡಿಹಿಡಿದವನು ಗರ್ಭಿಣಿ ಸ್ನೇಹ ನೀರು ಮದ್ಯ ದ್ರವಗಳನ್ನು ಕುಡಿದಿರುವವನು ಅಜೀರ್ಣರೋಗಿಯು ಬಸ್ತಿಪ್ರಯೋಗ ಮಾಡಿಕೊಂಡಿರುವವನು ಕುಪಿತನು ಕೃವುದ್ದನ್ನು ಸೇವಿಸಿರುವವನು ಬಾಯಾರಿದವನು ದುಃಖಿತನು ಶ್ರಮಪಟ್ಟಿರುವವನು ಬಾಲಕನು ವೃದ್ಧನು ವಾತಮೂತ್ರಾದಿ ವೇಗಗಳನ್ನು ತಡೆದಿರುವವನು ತಲೆಗೆ ಸ್ನಾನಮಾಡಬೇಕೆಂದಿರ್ಪ ವವನು ಇವರು ನಸ್ಯಕರ್ಮಕ್ಕೆ ಅನರ್ಹರು. ಅಕಾಲದಲ್ಲಿ ಮೋಡಕವಿದಿರುವಾಗಲೂ ಮೋಡಕವಿದಿರುವ ಮಳೆಕಾಲದಲ್ಲೂ ನಸ್ಯಕರ್ಮವನ್ನು ಮಾಡಿಸಬಾರದು. ಅಲ್ಪ ಮಾತ್ರೆಯಿಂದಾಗಲೀ ಅತಿಮಾತ್ರೆಯಿಂದಾಗಲೀ ಅತಿಶೀತ ಅತಿಬೇಸಿಗೆಯ ಕಾಲಗಳಲ್ಲೂ ಅತಿಜಾಗ್ರತೆಯಾಗಿಯೂ ಅತಿಯಾಗಿ ತಲೆಯನ್ನು ಬಗ್ಗಿಸಿಯೂ ಶೀನುತ್ತಿರುವಾಗಲೂ ಅತಿಯಾಗಿ ತಲೆಯನ್ನು ಅಲ್ಲಾಡಿಸುತ್ತಿರುವಾಗಲೂ ಊಟಮಾಡುತ್ತಿರುವಾಗಲೂ ಸ್ನಾನ ರ್ಹನಿಗೂ ನಸ್ಯಪ್ರಯೋಗಮಾಡಿದರೆ ನೀರಡಿಕೆ ತೇಗು ಮೊದಲಾದ ದೋಷಕೋಪದಿಂದ ಉಂಟಾಗುವ ರೋಗಗಳೂ ಕ್ಷಯನಿಮಿತ್ತರೋಗಗಳೂ ಉಂಟಾಗುತ್ತವೆ. ಈ ವಿಚಾರ ದಲ್ಲಿ ಉದಾಹೃತಗಳಾದ ಶ್ಲೋಕಗಳ ಅಭಿಪ್ರಾಯವೇನೆಂದರೆ—ನಸ್ಯ ಮತ್ತು ಶಿರೋವಿರೇಚನಗಳ ಹೀನಾತಿಮಾತ್ರ ಪ್ರಯೋಗಗಳಿಂದ ದೋಷೋತ್ಕ್ಲೇಶವೂ ಮತ್ತು ಕ್ಷಯನಿಮಿತ್ತ ರೋಗಗಳೂ ಉಂಟಾಗುತ್ತವೆ. ದೋಷೋತ್ಕ್ಲೇಶದಿಂದುಂಟಾಗುವ ರೋಗಗಳನ್ನು

ಶಮನ ಮತ್ತು ಶೋಧನೌಷಧಿಗಳಿಂದ ನಿವಾರಣೆಮಾಡಬೇಕು. ಕ್ಷಯನಿಮಿತ್ತರೋಗಗಳಿಗೆ ದೋಷಾನುಸಾರವಾಗಿ ಬೃಂಹಣ ಚಿಕಿತ್ಸೆಯನ್ನು ಮಾಡುವುದು ಹಿತಕರವಾದದ್ದು.

ಪ್ರತಿಮರ್ಶಶ್ಚತುರ್ದಶಸು ಕಾಲೇಷೂಪಾದೇಯಃ। ತದ್ಯಥಾ–ತಲ್ಪೋತ್ಥಿತೇನ ಪ್ರಕ್ಷಾಳಿತದನ್ತೇನ ಗೃಹಾನ್ನಿರ್ಗಚ್ಛತಾ ವ್ಯಾಯಾಮವ್ಯವಾಯಾಧ್ವಪರಿಶ್ರಾನ್ತೇನ ಮೂತ್ರೋಚ್ಚಾರಕಬಳಾಞ್ಜನಾನ್ತೇ ಭುಕ್ತವತಾ ಛರ್ದಿತವತಾ ದಿವಾಸ್ವಪ್ನೋತ್ಥಿತೇನ ಸಾಯಂ ಚೇತಿ ||೫೧||

ತತ್ರ ತಲ್ಪೋತ್ಥಿತೇನಾಸೇವಿತಃ ಪ್ರತಿಮರ್ಶೋ ರಾತ್ರಾವುಪಚಿತನಾಸಾಸ್ರೋತೋಗತಮಲಮುಪಹನ್ತಿ ಮನಃಪ್ರಸಾದಂ ಚ ಕರೋತಿ ಪ್ರಕ್ಷಾಳಿತದನ್ತೇನಾಸೇವಿತೋ ದನ್ತಾನಾಂ ದೃಢತಾಂ ವದನಸೌಗನ್ಧ್ಯಂ ಚಾಪಾದಯತಿ ಗೃಹಾನ್ನಿರ್ಗಚ್ಛತಾ ಸೇವಿತೋ ನಾಸಾಸ್ರೋತಸಃ ಕ್ಲಿನ್ನತಯಾ ರಜೋ ಧೂಮೋ ವಾ ನಾಬಾಧತೇ ವ್ಯಾಯಾಮಮೈಥುನಾಶ್ವಪರಿಶ್ರಾನ್ತೇನಾಸೇವಿತಃ ಶ್ರಮಮುಪಹನ್ತಿ ಮೂತ್ರೋಚ್ಚಾರಾನ್ತೇ ವಾ ಸೇವಿತೋ ದೃಷ್ಟೇರ್ಗುರುತ್ವಮಪನಯತಿ ಕವಲಾಞ್ಜನಾನ್ತೇ ಸೇವಿತೋ ದೃಷ್ಟಿಂ ಪ್ರಸಾದಯತಿ ಭುಕ್ತವತಾ ಸೇವಿತಃ ಸ್ರೋತಸಾಂ ವಿಶುದ್ಧಿಂ ಲಘುತಾಂ ಚಾಪಾದಯತಿ ವಾನ್ತೇನಾಸೇವಿತೋ ಸ್ರೋತೋವಿಲಗ್ನಂ ಶ್ಲೇಷ್ಮಾಣಮಪೋಹ್ಯ ಭಕ್ತಾಕಾಙ್ಕ್ಷಾಮಾಪಾದಯತಿ ದಿವಾಸ್ವಪ್ನೋತ್ಥಿತೇನಾಸೇವಿತೋನಿದ್ರಾಶೇಷಂ ಗುರುತ್ವಂ ಮಲಂ ಚಾಪೋಹ್ಯ ಚಿತ್ತೈಕಾಗ್ರ್ಯಂ ಜನಯತಿ ಸಾಯಂ ಚಾಸೇವಿತಃ ಸುಖನಿದ್ರಾ ಪ್ರಬೋಧಂ ಚೇತಿ ||೫೨||

ಈಷದುಚ್ಛಿಙ್ಘತಃ ಸ್ನೇಹೋ ಯಾವದ್ವಕ್ತ್ರಂ ಪ್ರಪದ್ಯತೇ।
ನಸ್ಯೇ ನಿಷಿಕ್ತಂ ತಂ ವಿದ್ಯಾತ್ ಪ್ರತಿಮರ್ಶಂ ಪ್ರಮಾಣತಃ ||೫೩||
ಉಚ್ಛಿಙ್ಘೇನ್ನ ಪಿಬೇನ್ನಸ್ಯಂ ನಿಷ್ಠೀವೇನ್ಮುಖಮಾಗತಮ್।

ಪ್ರತಿಮರ್ಶನಸ್ಯವನ್ನು ೧೪ ಕಾಲಗಳಲ್ಲಿ ಉಪಯೋಗಿಸಬೇಕು. ಅವು ಯಾವುವೆಂದರೆ—ಹಾಸಿಗೆಯಿಂದ ಮೇಲಕ್ಕೆ ಎದ್ದಮೇಲೆ, ಹಲ್ಲುಗಳನ್ನು ದಂತಕಾಷ್ಟಗಳಿಂದ ಶುದ್ಧಿಮಾಡಿದಮೇಲೆ, ಮನೆಯಿಂದ ಹೊರಕ್ಕೆ ಹೋಗಬೇಕೆಂದಿರುವಾಗ, ವ್ಯಾಯಾಮ ಸ್ತ್ರೀಸಂಗ ದಾರಿನಡೆಯುವುದು ಇವುಗಳಿಂದ ಬಳಲಿರುವಾಗ, ಮೂತ್ರ ಮಲಗಳನ್ನು ವಿಸರ್ಜಿಸಿದಮೇಲೆ, ಕವಳಗ್ರಹಣ ಅಂಜನಗಳ ಕಡೆಯಲ್ಲಿ, ಭೋಜನವಾದಮೇಲೆ, ವಮನ ಮಾಡಿದಮೇಲೆ, ಹಗಲು ನಿದ್ರೆಮಾಡಿ ಎದ್ದಮೇಲೆ, ಸಾಯಂಕಾಲದಲ್ಲಿ ಪ್ರತಿಮರ್ಶವನ್ನು ಪ್ರಯೋಗಿಸಬೇಕು. ಅವುಗಳಲ್ಲಿ ಬೆಳಗ್ಗೆ ಹಾಸಿಗೆಯಿಂದ ಎದ್ದಮೇಲೆ ಪ್ರತಿಮರ್ಶನಸ್ಯವನ್ನು ಸೇವಿಸಿದರೆ ರಾತ್ರಿಯಕಾಲದಲ್ಲಿ ವೃದ್ಧಿಯಾದ ಮೂಗಿನ ಹೊಳ್ಳೆಯಲ್ಲಿರುವ ಮಲವನ್ನು ನಾಶಮಾಡಿ ಮನಸ್ಸಿಗೆ ಶಾಂತಿಯನ್ನುಂಟುಮಾಡುತ್ತದೆ. ಹಲ್ಲುಗಳನ್ನುಜ್ಜಿ ತೊಳೆದಮೇಲೆ ಸೇವಿಸಿದ ನಸ್ಯದಿಂದ ಹಲ್ಲುಗಳು ಭದ್ರವಾಗುತ್ತವೆ, ಮುಖದಲ್ಲಿ ಸುಗಂಧವುಂಟಾಗುತ್ತದೆ. ಮನೆಯನ್ನು ಬಿಟ್ಟು ಹೊರಕ್ಕೆ ಸಂಚಾರಮಾಡಲು ಹೊರಡುವಾಗ ನಸ್ಯಸೇವನೆಮಾಡಿದರೆ ಮೂಗಿನ ಹೊಳ್ಳೆಗಳು ತೀವ್ರವಾಗಿರುವುದರಿಂದ ಧೂಳಾಗಲೀ ಹೊಗೆಯಾಗಲೀ ನಿಂತು ಬಾಧೆಪಡಿಸುವುದಿಲ್ಲ. ವ್ಯಾಯಾಮ ಸ್ತ್ರೀಸಂಗ ದಾರಿನಡೆಯುವುದು ಇವುಗಳಿಂದ ಆಯಾಸವಾಗಿರುವಾಗ ನಸ್ಯಸೇವನೆ ಮಾಡಿದರೆ ಶ್ರಮಪರಿಹಾರ

ವಾಗುತ್ತದೆ. ಮೂತ್ರ ಮತ್ತು ಮಲಗಳನ್ನು ವಿಸರ್ಜನೆ ಮಾಡಿದಮೇಲೆ ನಸ್ಯಸೇವನೆ ಮಾಡಿದರೆ ಕಣ್ಣಿನಭಾರವು ನಿವಾರಣೆಯಾಗುತ್ತದೆ. ಕವಳಗ್ರಹಣ ಅಂಜನಗಳನ್ನು ಸೇವಿಸಿದನಂತರ ನಸ್ಯಸೇವನೆಮಾಡಿದರೆ ಶುದ್ಧವಾದ ದರ್ಶನ ಶಕ್ತಿಯುಂಟಾಗುತ್ತದೆ. ಭೋಜನವಾದಮೇಲೆ ನಸ್ಯಸೇವನೆಮಾಡಿದರೆ ಸ್ರೋತೋ ಮಾರ್ಗಗಳು ಶುದ್ಧವಾಗಿ ದೇಹವು ಹಗುರವಾಗುತ್ತದೆ. ವಮನವಾದಮೇಲೆ ನಸ್ಯ ಸೇವನೆಮಾಡಿದರೆ ಕಂಠನಾಳ ದಲ್ಲಿ ಅಂಟಿರುವ ಕಫವನ್ನು ಕರಗಿಸಿ ಶೋಧಿಸಿ ಅನ್ನದಲ್ಲಿ ಇಚ್ಛೆಯನ್ನು ಉಂಟುಮಾಡು ತ್ತದೆ. ಹಗಲು ನಿದ್ದೆಮಾಡಿ ಎದ್ದನಂತರ ನಸ್ಯಸೇವನೆ ಮಾಡಿದರೆ ನಿದ್ರೆಯ ಶೇಷವನ್ನೂ ಮೈಭಾರವನ್ನೂ ಮಲವನ್ನೂ ಕೊಳೆಯನ್ನೂ ಹೋಗಲಾಡಿಸಿ ಸ್ಥಿರಬುದ್ಧಿಯನ್ನುಂಟು ಮಾಡುತ್ತದೆ. ರಾತ್ರಿಕಾಲದಲ್ಲಿ ನಸ್ಯವನ್ನು ಸೇವಿಸಿದರೆ ಸುಖನಿದ್ರೆಯುಂಟಾಗಿ ಸುಖ ವಾಗಿ ಎಚ್ಚರಿಕೆಯುಂಟಾಗುತ್ತದೆ. ಮೂಗಿನಿಂದ ಸ್ವಲ್ಪಮೇಲಕ್ಕೆ ಎಳೆದು ಸೇದಿದ ನಸ್ಯದಿಂದ ಸ್ನೇಹವು ಬಾಯಿಗೆ ಬಂದುಬಿಟ್ಟರೆ ಪ್ರತಿಮರ್ಶವು ಸರಿಯಾಗಿ ಪ್ರಯೋಗಿ ಸಲ್ಪಟ್ಟಿರುತ್ತೆಂದು ತಿಳಿಯಬೇಕು. ನಸ್ಯವನ್ನು ಮೇಲೆ ಎಳೆದುಕೊಂಡು ಬಾಯಿಗೆ ಬಂದ ಸ್ನೇಹವನ್ನು ಕುಡಿಯದೆ ಥೂಕರಿಸಿ ಹೊರಕ್ಕೆ ಉಗುಳಬೇಕು. ನಸ್ಯಪ್ರಮಾಣ ೨ ಬಿಂದುಗಳು.

ನಸ್ಯೇನ ರೋಗಾಃ ಶಾಮ್ಯನ್ತಿ ನರಾಣಾಮೂರ್ಧ್ವಜತ್ರುಜಾಃ ।
ಇಂದ್ರಿಯಾಣಾಂ ಚ ವೈಮಲ್ಯಂ ಕುರ್ಯಾದಾಸ್ಯಂ ಸುಗನ್ಧಿ ಚ ॥೫೪॥
ಹನುದನ್ತಶಿರೋಗ್ರೀವಾತ್ರಿಕಬಾಹೂರಸಾಂ ಬಲಮ್ ।
ವಲೀಪಲಿತಖಾಲಿತ್ಯವ್ಯಙ್ಗಾನಾಂ ಚಾಪ್ಯಸಮ್ಭವಃ ॥೫೫॥
ತೈಲಂ ಕಫೇ ಸವಾತೇ ಸ್ಯಾತ್ ಕೇವಲೇ ಪವನೇ ವಸಾಮ್ ।
ದದ್ಯಾತ್ಸರ್ಪಿಃ ಸದಾ ಪಿತ್ತೇ ಮಜ್ಜಾನಂ ಚ ಸಮಾರುತೇ ॥೫೬॥
ಚತುರ್ವಿಧಸ್ಯ ಸ್ನೇಹಸ್ಯ ವಿಧಿರೇವಂ ಪ್ರಕೀರ್ತಿತಃ ।
ಶ್ಲೇಷ್ಮಸ್ಥಾನಾವಿರೋಧಿತ್ವಾತ್ ತೇಷು ತೈಲಂ ವಿಧೀಯತೇ ॥೫೭॥

ನಸ್ಯಸೇವನೆಯಿಂದ ಮನುಷ್ಯರಿಗೆ ಊರ್ಧ್ವಜತ್ರುಗತ ರೋಗಗಳು ಕಾಸಶ್ವಾಸಾದಿ ಗಳು ನಿವಾರಣೆಯಾಗುತ್ತವೆ. ಇಂದ್ರಿಯಗಳೆಲ್ಲ ಶುದ್ಧಿಯಾಗುತ್ತವೆ. ಮುಖದಿಂದ ಸುವಾಸನೆಯು ಹೊರಟುಬರುತ್ತದೆ. ದವಡೆ ಹಲ್ಲುಗಳು ತಲೆ ಕತ್ತು ತ್ರಿಕ(ಹೆಕ್ಕತ್ತಿನ ಕೆಳಗೆ ಎರಡುಹೆಗಲುಗಳ ಮಧ್ಯಭಾಗವು) ತೋಳುಗಳು ಎದೆ ಇವುಗಳಿಗೆ ಬಲವುಂಟಾಗುತ್ತದೆ ಚರ್ಮವು ಸುಕ್ಕುಸುಕ್ಕಾಗುವುದು. ತಲೆಕೂದಲು ಬೆಳ್ಳಗಾಗುವುದು ಪಟ್ಟೆತಲೆಯಾಗುವುದು ಭಂಗುಬರುವುದು (ಚಿಬ್ಬು ಉಂಟಾಗುವುದು) ಇವುಗಳೊಂದೂ ಸಂಭವಿಸುವುದಿಲ್ಲ. ಕಫದೋಶದಲ್ಲೂ ವಾತಮಿಶ್ರವಾದ ಕಫದೋಷದಲ್ಲೂ ತೈಲವನ್ನೂ ಶುದ್ಧವಾದ ದೋಷ ದಲ್ಲಿ ವಸೆಯನ್ನೂ ಪಿತ್ತದೋಷದಲ್ಲಿ ಸದಾ ತುಪ್ಪವನ್ನೂ ವಾತಮಿಶ್ರವಾದ ಪಿತ್ತದೋಷ ದಲ್ಲಿ ಮಜ್ಜೆಯನ್ನೂ ಈ ರೀತಿಯಾಗಿ ೪ ವಿಧ ಸ್ನೇಹಗಳನ್ನೂ ನಸ್ಯಕರ್ಮದಲ್ಲಿ

ಪ್ರಯೋಗಿಸಬೇಕು. ತೈಲವು ಕಫಸ್ಥಾನಕ್ಕೆ ವಿರೋಧವಲ್ಲದ್ದರಿಂದ ನಸ್ಯಕರ್ಮದಲ್ಲಿ ಪ್ರಯೋಗಿಸಬೇಕು.

ಅತಃ ಪರಂ ಪ್ರವಕ್ಷ್ಯಾಮಿ ಕಬಳಗ್ರಹಣೇ ವಿಧಿಮ್ ।
ಚತುರ್ಧಾಕಬಳಃ ಸ್ನೇಹೀಪ್ರಸಾದೀ ಶೋಧಿರೋಪಣೌ ॥೫೮॥
ಸ್ನಿಗ್ಧೋಷ್ಣೈಃ ಸ್ನೇಹಿಕೋ ವಾತೇ ಸ್ವಾದುಶೀತೈಃ ಪ್ರಸಾದನಃ ।
ಪಿತ್ತೇ ಕಟ್ವಮ್ಲಲವಣೈ ರೂಕ್ಷೋಷ್ಣೈಃ ಶೋಧನಃ ಕಫೇ ॥೫೯॥
ಕಷಾಯತಿಕ್ತಮಧುರೈಃ ಕಟೂಷ್ಣೈಃ ರೋಪಣೋ ವ್ರಣೇ ।
ಚತುರ್ವಿಧಸ್ಯ ಚೈವಾಸ್ಯ ವಿಶೇಷೋಽಯಂ ಪ್ರಕೀರ್ತಿತಃ ॥೬೦॥

ಇನ್ನುಮುಂದೆ ಕಬಳಗ್ರಹ ವಿಧಾನವನ್ನು ಹೇಳುತ್ತೇನೆ.—ಸ್ನೇಹನ ಪ್ರಸಾದನ ಶೋಧನ ರೋಪಣಗಳೆಂದು ಕಬಳಗ್ರಹವು ೪ ವಿಧಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ. ವಾತದೋಷದಲ್ಲಿ ಸ್ನಿಗ್ಧ ಮತ್ತು ಉಷ್ಣದ್ರವ್ಯಗಳಿಂದ ಸ್ನೇಹನವಾಗುವಂತೆಯೂ ಪಿತ್ತ ದೋಷದಲ್ಲಿ ಸ್ವಾದುರಸ ಶೀತವೀರ್ಯ ದ್ರವ್ಯಗಳಿಂದ ಪ್ರಸಾದನವಾಗುವಂತೆಯೂ ದೋಷ ಶಮನ ರಕ್ತದೋಷದಲ್ಲಿ ಕಷಾಯ ಕಹಿಸಿಹಿ ಕಟುರಸಗಳಿಂದ ಬಿಸಿಬಿಸಿ ಪ್ರಯೋಗ ದಿಂದಲೂ ವ್ರಣರೋಪಣವನ್ನೂ ಕಟು ಅಮ್ಲ ಲವಣ ರಸದ್ರವ್ಯಗಳಿಂದಲೂ ರೂಕ್ಷ ಉಷ್ಣವಾಗಿರುವುದರಿಂದ ಶೋಧನವನ್ನೂ ಮಾಡಿಸಬೇಕು. ಹೀಗೆ ೪ ವಿಧ ಪ್ರಯೋಗ ಗಳ ವ್ಯತ್ಯಾಸಗಳನ್ನೂ ತಿಳಿಸಿರುತ್ತೇವೆ.

ತತ್ರ ತ್ರಿಕಟುಕವಚಾಸರ್ಷಪಹರೀತಕೀಕಲ್ಕಮಾಲೋಡ್ಯ ತೈಲಶುಕ್ತಸುರಾಮೂತ್ರಕ್ಷಾರ ಮಧೂನಾಮನ್ಯತಮೇನ ಸಲವಣಮಭಿಪ್ರತಪ್ತಮುಪಸ್ವಿನ್ನಮೃದಿತಗಳ ಕಪೋಲಲಲಾಟ ಪ್ರದೇಶೋ ಧಾರಯೇತ್ ॥೬೧॥ ಸುಖಂ ಸಂಚಾರ್ಯತೇ ಯಾ ತು ಮಾತ್ರಾ ಸಾ ಕಬಳೇ ಸ್ಮೃತಾ । ಅಸಂಚಾರ್ಯಾ ತು ಯಾ ಮಾತ್ರಾ ಗಣ್ಡೂಷಃ ಸ ಪ್ರಕೀರ್ತಿತಃ ॥೬೨॥

ಮುಖವು ಕಫಸ್ಥಾನವಾದಕಾರಣ ಕಫಹರಗಳಾದ ಸಂಶೋಧನ ದ್ರವ್ಯಗಳನ್ನು ಮುಖದಲ್ಲಿಟ್ಟುಕೊಂಡು ಕಫಹರಣಮಾಡುವ ಸಂಶೋಧನ ವಿಧಾನವೇ ಕಬಳಗ್ರಹವೆಂದು ವ್ಯವಹಾರವುಂಟಾಗಿರುತ್ತದೆ. ಅದಕ್ಕೆ ತ್ರಿಕಟು ಬಜೆ ಸಾಸಿವೆ ಅಣಿಲೆಕಾಯಿ ಸಿಪ್ಪೆ ಇವುಗಳ ಕಲ್ಕವನ್ನು ತೈಲ ಹುಳಿಕಲಗಚ್ಚು ಮದ್ಯ ಗೋಮೂತ್ರ ಕ್ಷಾರಮಿಶ್ರ ಮಾಡಿದ ನೀರು ಜೇನುತುಪ್ಪ ಇವುಗಳೊಂದರಲ್ಲಿ ಕದಡಿ ಸೈಂಧವಮಿಶ್ರಮಾಡಿ ಕಾಯಿಸಿ ರೋಗಿಯ ಕತ್ತು ಕೆನ್ನೆ ಹಣೆಗಳಿಗೆ ಸ್ವೇದಮಾಡಿಸಿ ಹಿಸುಕಿದನಂತರ ಬಾಯಿಗೆ ತುಂಬಿಕೊಳ್ಳಬೇಕು. ಗಳಗಳವೆಂದು ಸದ್ದಾಗುವಂತೆ ಅಲ್ಲಾಡಿಸಲು ಅನುಕೂಲವಾಗುವಷ್ಟು ಪ್ರಮಾಣದ ದ್ರವ ವಿದ್ದರೆ ಅದಕ್ಕೆ ಕಬಳಗ್ರಹವೆಂದೂ ಅಲ್ಲಾಡಿಸುವುದಕ್ಕಾಗದಂತೆ ಬಾಯಿ ತುಂಬುವಷ್ಟು ಪ್ರಮಾಣದ ದ್ರವಕ್ಕೆ ಗಂಡೂಷವೆಂದೂ ವ್ಯವಹರಿಸುತ್ತಾರೆ.

ತಾವಚ್ಚ ಧಾರಯಿತವ್ಯೋsನನ್ಯಮನಸೋsನ್ನತದೇಹೇನ ಯಾವದ್ದೋಷಪರಿಪೂರ್ಣಕಪೋಲತ್ವಂ ನಾಸ್ರೋತೋsನಯನ ಪಂಪ್ಲಾವಶ್ಚ ಭವತಿ ತದಾ ವಿಮೋಕ್ತವ್ಯಃ ಪುನಶ್ಚಾನ್ಯೋ ಗ್ರಹೀತವ್ಯ ಇತಿ ||೬೩|| ಏವಂ ಸ್ನೇಹಪಯಃಕ್ಷೌದ್ರರಸಮೂತ್ರಾಮ್ಲಸಂಭೃತಾಃ | ಕಷಾಯೋಷ್ಣೋದಕಾಭ್ಯಾಂ ಚ ಕಬಳಾ ದೋಷತೋsಹಿತಾಃ ||೬೪||

ಜೇರೆಕಡೆ ಯೋಚಿಸದೆ ಎದೆಯನ್ನು ಮುಂದಕ್ಕೆ ಚಾಚಿ ಕತ್ತನ್ನು ಮೇಲಕ್ಕೆ ಎತ್ತಿ ಕಫದೋಷವು ಕೆನ್ನೆ ಕೆನ್ನೆಗಳು ತುಂಬಿ ಮೂಗಿನ ರಂಧ್ರ ಕಣ್ಣುಗಳಿಂದ ಸ್ರಾವ ವುಂಟಾಗುವವರೆಗೆ ಕಷಾಯಾದಿ ದ್ರವಗಳನ್ನು ಬಾಯಿಗೆ ತುಂಬಿಕೊಂಡಿದ್ದು ಉಗುಳಿ ಪುನಃ ತುಂಬಿಕೊಳ್ಳಬೇಕು. ಈ ರೀತಿಯಾಗಿ ದೋಷಾನುಸಾರವಾಗಿ ಸ್ನೇಹ ಹಾಲು ಜೇನು ತುಪ್ಪ ಮಾಂಸರಸ ಗೋಮೂತ್ರ ಹುಳಿಕಲಗಚ್ಚು ಕಷಾಯ ಬಿಸಿನೀರು ಇವುಗಳಲ್ಲೊಂದನ್ನು ಕಬಳಗ್ರಹಣಮಾಡಲು ಹಿತವಾಗುತ್ತದೆ.

ವ್ಯಾಧೇರಪಚಯಸ್ತುಷ್ಟಿರ್ವೈಶದ್ಯಂ ವಕ್ತ್ರಲಾಘವಮ್ |
ಇಂದ್ರಿಯಾಣಾಂ ಪ್ರಸಾದಶ್ಚ ಕಬಳೇ ಶುದ್ಧಿಲಕ್ಷಣಮ್ ||೬೫||
ಹೀನೇ ಜಾಡ್ಯಕಫೋತ್ಕ್ಲೇಶಾವರಸಜ್ಞಾನಮೇವ ಚ
ಅತಿಯೋಗಾನ್ಮುಖೇ ಪಾಕಃ ಶೋಷತೃಷ್ಣಾರುಚಿಕ್ಲಮಾಃ ||೬೬||
ಶೋಧನೀಯೇ ವಿಶೇಷೇಣ ಭವನ್ತ್ಯೇವಂ ನ ಸಂಶಯಃ |
ತಿಲಾ ನೀಲೋತ್ಪಲಾ ಸರ್ಪಿಃ ಶರ್ಕರಾ ಕ್ಷೀರಮೇವ ಚ ||೬೭||
ಸಕ್ಷೌದ್ರೋ ದಗ್ಧವಕ್ತ್ರಸ್ಯ ಗಣ್ಡೂಷೋ ದಾಹನಾಶನಃ
ಕಬಳಸ್ಯ ವಿಧಿರ್ಹ್ಯೇಷ ಸಮಾಸೇನ ಪ್ರಕೀರ್ತಿತಃ ||೬೮||

ರೋಗನಿವಾರಣೆಯಾಗಿ ಮನಸ್ಸಿಗೆ ತೃಪ್ತಿಯಾಗಿ ಮೆತ್ತಿರುವ ಕಫವು ಹೋಗಿ ಬಾಯಿ ಸ್ವಚ್ಛವಾಗಿ ಹಗುರವಾದಂತೆ ತೋರುವುದು. ಇಂದ್ರಿಯಪಾಟವವುಂಟಾಗುವುದು ಇವು ಕಬಳಗ್ರಹಣದ ಸಮ್ಯಗ್ಯೋಗ ಲಕ್ಷಣಗಳು. ಹೀನಯೋಗದಲ್ಲಿ ಜಡತೆಯೂ ಕಫವು ಬಾಯಿನಿಂದ ಜಿನುಗುತ್ತಿರುವುದು ರಸಜ್ಞಾನವಿಲ್ಲದಂತಾಗುವುದು ಈ ಲಕ್ಷಣಗಳಿರುತ್ತವೆ. ಅತಿಯೋಗದಿಂದ ಮುಖಪಾಕ ಕೃಶತ್ವ ನೀರಡಿಕೆ ಅರೋಚಕತೆ ಆಯಾಸ ಇವುಗಳುಂಟಾಗುತ್ತವೆ. ಹೀನಯೋಗ ಅತಿಯೋಗಗಳಲ್ಲಿ ಕ್ರಮವಾಗಿ ಕಫ ಪಿತ್ತ ದೋಷಗಳನ್ನು ಶೋಧಿಸಬೇಕು. ಎಳ್ಳು ಮತ್ತು ನೈದಿಲೆಗೆಡ್ಡೆಗಳ ಕಲ್ಕಕ್ಕೆ ತುಪ್ಪ ಸಕ್ಕರೆ ಹಾಲು ಜೇನುತುಪ್ಪ ಇವುಗಳನ್ನು ಸೇರಿಸಿ ಗಂಡೂಷ ಮಾಡಿದರೆ ಮುಖ ದಾಹ ಮುಖ ಪಾಕವು ನಿವಾರಣೆಯಾಗುತ್ತದೆ. (ಈ ಗಂಡೂಷವು ಮುಖದಾಹಹರವು) ಈ ರೀತಿ ಕಬಳಗ್ರಹ ವಿಧಾನವನ್ನು ಸಂಕ್ಷೇಪವಾಗಿ ಹೇಳಲಾಯಿತು.

ವಿಭಜ್ಯ ಭೇಷಜಂ ಬುಧ್ಯಾ ಕುರ್ವೀತ ಪ್ರತಿಸಾರಣಮ್ |
ಕಲ್ಕೋ ರಸಕ್ರಿಯಾ ಕ್ಷೌದ್ರಂ ಚೂರ್ಣಂ ಚೇತಿ ಚತುರ್ವಿಧಮ್ ||೬೯||
ಅಙ್ಗುಳ್ಯಗ್ರಪ್ರಣೀತಂ ತು ಯಥಾಸ್ವಂ ಮುಖರೋಗಿಣಾಮ್ |

ದೋಷಗಳಿಗೆ ತಕ್ಕಂತೆ ಔಷಧ ದ್ರವ್ಯಗಳನ್ನು ಬುದ್ಧಿಬಲದಿಂದ ವಿಂಗಡಿಸಿ ಕಲ್ಕ ರಸ ಕ್ರಿಯಾ (ಫಾಣಿತ-ಅವಲೇಹ) ಕ್ಷೌದ್ರ (ಗುಳಿಗೆ) ಚೂರ್ಣಗಳೆಂಬ ೪ ವಿಧ ಔಷಧ ಯೋಗಗಳನ್ನು ತಯಾರಿಸಿ ಮುಖರೋಗಿಗಳಿಗೆ ತರ್ಜನಿಬೆರಳಿನಿಂದ ಲೇಪನಮಾಡಬೇಕು. ಇದಕ್ಕೆ ಪ್ರತಿಸಾರಣವೆಂದು ಹೆಸರು.

ಟಿಪ್ಪಣಿ—ಬೆರಳತುದಿಗೆ ಹಾಕಿ ಲೇಪಿಸಬೇಕೆಂದು ಹೇಳಿರುವಕಾರಣ ಇದರ ಪ್ರಮಾಣವು ಎಲಚಿಹಣ್ಣಿನ ಬಿತ್ತದಷ್ಟು ಗಾತ್ರವಿರಬೇಕು. ವ್ಯಾಧಿಗಳ ಬಲಕ್ಕೆತಕ್ಕಂತೆ ಹೀನ ಮಧ್ಯಮೋತ್ತಮಗಳ ಪ್ರಕಾರ ೩-೫-೭ ಸಾರಿ ಪ್ರತಿಸಾರಣಮಾಡಬೇಕು. ಅತಿಯಾಗಿ ಉಜ್ಜಬಾರದು. ಅತಿಯಾಗಿ ಉಜ್ಜಿದರೆ ಊಷ ಚೋಷ ದಾಹ ಕ್ಲೇದ ಶೋಥ ತೃಷ್ಣೆ ಆಹಾರದ್ವೇಷ ಮಾತುನಿಲ್ಲುವುದು ಇತ್ಯಾದಿ ಉಪದ್ರವಗಳುಂಟಾಗುತ್ತವೆ. ಹೀನವಾಗಿ ಉಜ್ಜಿದರೆ ಪೈಚ್ಛಿಲ್ಯ ಗುರುತ್ವ ಅನ್ನದ್ವೇಷ ಅಜ್ಞಾನ ಇವುಗಳುಂಟಾಗುತ್ತವೆ. ಸಮ್ಯಗ್ಯೋಗದಿಂದ ಮುಖವಿಕಾಸ ಬಾಯಿನೀರು ನಿಲ್ಲುವುದು ಹಗುರತೆ ಶೀನು ಅನ್ನ ರುಚಿ ಇವುಗಳುಂಟಾಗುತ್ತವೆ.

ತಸ್ಮಿನ್ಯೋಗಮಯೋಗಂ ಚ ಕಬಳೋಕ್ತಂ ವಿಭಾವಯೇತ್ ॥೬೦॥
ತಾನೇವ ಶಮಯೇದ್ವ್ಯಾಧೀನ್ ಕಬಳೋ ಯಾನಪೋಹತಿ ।
ದೋಷಘ್ನಮನಭಿಷ್ಯನ್ದಿ ಭೋಜಯೇಚ್ಚ ತಥಾ ನರಮ್ ॥೬೧॥

ಕಬಳಗ್ರಹದಲ್ಲಿ ಹೇಳಿರುವ ಹೀನಾತಿಯೋಗಲಕ್ಷಣಗಳೇ ಪ್ರತಿಸಾರಣದ ಹೀನಾತಿಯೋಗಗಳಲ್ಲೂ ಉಂಟಾಗುತ್ತವೆಯೆಂದೂ ಸಮ್ಯಗ್ಯೋಗ ಕಬಳಗ್ರಹದಿಂದ ಯಾವ ರೋಗಗಳು ನಿವಾರಿಸಲ್ಪಡುತ್ತವೋ ಆ ವ್ಯಾಧಿಗಳನ್ನೇ ಸಮ್ಯಗ್ಯೋಗದಿಂದ ಪ್ರಯೋಗಿಸಿದ ಪ್ರತಿಸಾರಣೆಯೂ ನಿವಾರಿಸುತ್ತದೆಂದೂ ತಿಳಿಯಬೇಕು. ಅನಂತರ ಆ ರೋಗಿಗೆ ದೋಷಹರಗಳಾದ ಅಭಿಷ್ಯಂದವನ್ನುಂಟುಮಾಡದಿರುವ ಆಹಾರವನ್ನು ಭೋಜನ ಮಾಡಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಿತಸ್ಥಾನೇ ಧೂಮನಸ್ಯಕಬಳಗ್ರಹ
ಚಿಕಿತ್ಸಾನಾಮಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ
ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕ ಭಾಷಾವಿವೃತಿಃ

ಇತಿ ಶ್ರೀ ಸುಶ್ರುತಸಂಹಿತಾಯಾಂ ಚಿಕಿತ್ಸಾಸ್ಥಾನಂ ಸಂಪೂರ್ಣಮ್

॥ಶ್ರೀಧನ್ವನ್ತರಯೇ ನಮಃ॥

ಸುಶ್ರುತಸಂಹಿತಾ—ಕಲ್ಪಸ್ಥಾನಮ್

ಪ್ರಥಮೋಧ್ಯಾಯಃ

ಅಥಾತೋಽನ್ನಪಾನರಕ್ಷಾಕಲ್ಪಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವಂತರಿಃ(ಸುಶ್ರುತಾಯ) ॥೨॥

ಅರ್ಥ—ದ್ವಿವ್ರಣೀಯ ಚಿಕಿತ್ಸಾಧ್ಯಾಯದಲ್ಲಿ ವಿಷದಿಂದ ವ್ಯಾಪ್ತನಾದವನ ಲಕ್ಷಣ ಗಳನ್ನೂ ವಿಷವನ್ನು ನಿರ್ಧರಿಸುವ ಕ್ರಮಗಳನ್ನೂ ಮತ್ತು ವಿಷನಿವಾರಣೋಪಾಯ ಗಳನ್ನೂ ಕಲ್ಪಸ್ಥಾನದಲ್ಲಿ ಹೇಳುತ್ತೇವೆಂದು ಪ್ರತಿಜ್ಞೆಮಾಡಿದ ಪ್ರಕಾರವೇ ಚಿಕಿತ್ಸಾಸ್ಥಾನ ವನ್ನು ಹೇಳಿ ಮುಗಿಸಿದನಂತರ ಶ್ರೀಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿ ದಂತೆಯೇ ಕಲ್ಪಸ್ಥಾನವನ್ನು ಪ್ರಾರಂಭಿಸಿ ಸ್ವಸ್ಥನಿಗೂ ರೋಗಿಗೂ (ವ್ಯಾಧಿಜರ್ಜರಿತ ದೇಹವುಳ್ಳವ) ಅನ್ನಪಾನಗಳ ಸೇವನೆಯಿಂದಲೇ ಪ್ರಾಣಧಾರಣವಾಗಬೇಕಾದ್ದರಿಂದ ಮೊದಲು ಅನ್ನಪಾನಗಳಿಗೆ ವಿಷಮಿಶ್ರಣವಾಗದಂತೆ ಹೇಗೆ ರಕ್ಷಣೆ ಮಾಡಿಕೊಳ್ಳಬೇಕೆಂಬು ದನ್ನು ತಿಳಿಸುವುದಕ್ಕಾಗಿ ಮೊದಲು ಅನ್ನಪಾನ ರಕ್ಷಾಕಲ್ಪವನ್ನು ಹೇಳುತ್ತೇವೆ.

ಧನ್ವನ್ತರಿಃ ಕಾಶಿಪತಿಸ್ತಪೋ ಧರ್ಮಭೃತಾಂ ವರಃ।
ಸುಶ್ರುತ ಪ್ರಭೃತೀನ್ ಶಿಷ್ಯಾಂಛ್ಛಶಾಸಾಹತಶಾಸನಃ ॥೩॥
ರಿಪವೋ ವಿಕ್ರಮಾಕ್ರಾನ್ತಾ ಯೇಚಸ್ವೇ ಕೃತ್ಯತಾಂಗತಾಃ।
ಸಿಸೃಕ್ಷವಃ ಕ್ರೋಧವಿಷಂ ವಿವರಂ ಪ್ರಾಪ್ಯತಾದೃಶಮ್ ॥೪॥
ವಿಷೈರ್ನಿಹನ್ಯುರ್ನಿಪುಣಂ ನೃಪತಿಂ ದುಷ್ಟಚೇತಸಃ।
ಸ್ತ್ರಿಯೋವಾ ವಿವಿಧಾನ್ಯೋಗಾನ್ ಕದಾಚಿತ್ ಸುಭಗೇಚ್ಛಯಾ ॥೫॥
ವಿಷಕನ್ಯೋಪಯೋಗಾದ್ವಾ ಕ್ಷಣಾಜ್ಜಹ್ಯಾದಸೂನ್ನರಃ।
ತಸ್ಮಾದ್ವೈದ್ಯೇನ ಸತತಂ ವಿಷಾದ್ರಕ್ಷ್ಯೋ ನರಾಧಿಪಃ ॥೬॥

ಅರ್ಥ—ಕಾಶಿರಾಜನಾಗಿ ತಪಸ್ಸು ಧರ್ಮಾನುಷ್ಠಾನ ಮಾಡುವವರಲ್ಲಿ ಶ್ರೇಷ್ಠ ನಾದ ಶ್ರೀಧನ್ವನ್ತರಿಯು (ಇವನ ಆಜ್ಞೆಯನ್ನು ಮೀರಲು ಯಾರೂ ಅಸಮರ್ಥರು (ಅಂದರೆ ಮಹಾಪರಾಕ್ರಮಶಾಲಿಯೆಂದರ್ಥವು) ಸುಶ್ರುತನೇ ಮೊದಲಾದ ಶಿಷ್ಯರನ್ನು ದ್ದೇಶಿಸಿ ಅಪ್ಪಣೆಮಾಡಿದ್ದೇನೆಂದರೆ—ಪರಾಕ್ರಮಿಯಾದ ರಾಜನಿಂದ ಜಯಿಸಲ್ಪಟ್ಟ ಆಶ್ರಿತ ರಾಜರು ಅವನನ್ನುದ್ದೇಷಿಸಿ ಸಮಯವನ್ನು ಕಾಯುತ್ತಾ ಆತನ ಮೇಲೆ ಕ್ರೋಧವಿಷವನ್ನು ಪ್ರಯೋಗಿಸಲು ಸ್ತ್ರೀಯರ ಮೂಲಕ ವಿಷಮಿಶ್ರಮಾಡಿದ ಅನ್ನಪಾನಗಳನ್ನಾಗಲಿ ಔಷಧ

ಗಳನ್ನಾಗಲೀ ಪ್ರಯೋಗಿಸಿ ಕೊಂದುಬಿಡುತ್ತಾರೆ; ಮೋಸದಿಂದ ವಿಷಕನ್ಯೆಯನು ಭೋಗಿಸುವಂತೆ ಮಾಡಿ ಬೇಗನೆ ಕೊಲ್ಲುತ್ತಾರೆ; ಆದಕಾರಣ ವೈದ್ಯನು ಸದಾ ಕಾಲದಲ್ಲೂ ರಾಜನ ಸಮೀಪದಲ್ಲೇ ಇದ್ದು ಅವನಿಗೆ ವಿಷಸಂಪರ್ಕವುಂಟಾಗದಂತೆ ಬಲು (ಎಚ್ಚರಿಕೆ) ಜಾಗರೂಕತೆಯಿಂದ ಕಾಪಾಡಬೇಕು. ಹಿಂದಿನ ಕಾಲದಲ್ಲಿ ಸ್ವಲ್ಪ ಸ್ವಲ್ಪ ತೀಕ್ಷ್ಣ ವಿಷಸೇವನೆಮಾಡುತ್ತಾ ಬಲು ಕಾಲದನಂತರ ವಿಷವು ಹೆಚ್ಚಾಗಿರುವ ಹೆಂಗಸನ್ನು ಶತ್ರುರಾಜರಿಗೆ ಭೋಗಿಸುವಂತೆಮಾಡಿ ಅವರನ್ನು ಕೊಲ್ಲುವ ವಾಡಿಕೆಯಿತ್ತು.

ಯಸ್ಮಾಚ್ಚ ಚೇತೋಽನಿತ್ಯತ್ವಮಶ್ವವತ್ ಪ್ರಥಿತಂ ನೃಣಾಮ್ ।
ನವಿಶ್ವಸ್ಯಾತ್ತತೋ ರಾಜಾ ಕದಾಚಿದಪಿ ಕಸ್ಯಚಿತ್ ॥೭॥

ಅರ್ಥ—ಕುದುರೆಯು ಯಾವ ರೀತಿಯಲ್ಲಿ ಬಲವಾಗಿ ಓಡಿಹೋಗುತ್ತದೆಯೋ ಹಾಗೆಯೇ ಮನುಷ್ಯರ ಮನಸ್ಸೂ ಬಲು ಚಂಚಲವಾದದ್ದು. ಆದಕಾರಣ ದೊರೆಯು ತನಗೆ ಹಿತಚಿಂತಕನಾನ ವೈದ್ಯನನ್ನು ಬಿಟ್ಟು ಬೇರೆ ಯಾರೊಡನೆಯೂ ನಂಬಿಕೆಯನ್ನಿಡಬಾರದು.

ಕುಲೀನಂ ಧಾರ್ಮಿಕಂ ಸ್ನಿಗ್ಧಂ ಸುಭೃತಂ ಸತತೋತ್ಥಿತಮ್ ।
ಅಲುಬ್ಧಮಶಠಂ ಭಕ್ತಂ ಕೃತಜ್ಞಂ ಪ್ರಿಯದರ್ಶನಮ್ ॥೮॥
ಕ್ರೋಧಪಾರುಷ್ಯಮಾತ್ಸರ್ಯಮಾಯಾಲಸ್ಯ ವಿವರ್ಜಿತಮ್ ।
ಜಿತೇನ್ದ್ರಿಯಂ ಕ್ಷಮಾವನ್ತಂ ಶುಚಿಂ ಶೀಲದಯಾನ್ವಿತಮ್ ॥೯॥
ಮೇಧಾವಿನಮಸಂಶ್ರಾನ್ತಮನುರಕ್ತಂ ಹಿತೈಷಿಣಮ್ ।
ಪಟುಂ ಪ್ರಗಲ್ಭಂ ನಿಪುಣಂ ದಕ್ಷಮಾಲಸ್ಯವರ್ಜಿತಮ್ ॥೧೦॥
ಪೂರ್ವೋಕ್ತೈಶ್ಚ ಗುಣೈರ್ಯುಕ್ತಂ ನಿತ್ಯಂ ಸನ್ನಿಹಿತಾಗದಮ್ ।
ಮಹಾನಸೇ ಪ್ರಯುಞ್ಜೀತ ವೈದ್ಯಂ ತದ್ವಿದ್ಯಪೂಜಿತಮ್ ॥೧೧॥

ಅರ್ಥ—ವೈದ್ಯನ ಗುಣಗಳನ್ನು ವಿವರಿಸುತ್ತಾರೆ–ಸತ್ಕುಲದಲ್ಲಿ ಹುಟ್ಟಿದ ಧರ್ಮಿಷ್ಠನಾದ, ದೀನರಲ್ಲಿ ಪ್ರೀತಿಯುಳ್ಳ, ಪುಷ್ಟವಾದ ಶರೀರವುಳ್ಳ, ಸದಾ ಎಚ್ಚರಿಕೆಯುಳ್ಳ ಲೋಭಿಯಲ್ಲದ, ದುಷ್ಟನಲ್ಲದ, ಅನುರಕ್ತನಾದ, ಉಪಕಾರ ಸ್ಮರಣೆಮಾಡುವ, ಸುಂದರನಾದ, ಕೋಪ, ಕಠಿನವಾದ ಮಾತು, ದ್ವೇಷ, ಮೋಸ, ಆಲಸ್ಯಗಳಿಂದ ರಹಿತನಾದ, ಜಿತೇನ್ದ್ರಿಯನಾದ, ಸಹನಶೀಲನಾದ, ಕಾಯಾವಾಚಾ ಮನಸ್ಸುಗಳಲ್ಲೂ ಶುದ್ಧನಾದ, ಸದ್ಗುಣದಿಂದಲೂ ದಯೆಯಿಂದಲೂ ಕೂಡಿದ, ಬುದ್ಧಿವಂತನಾದ, ಚಟುವಟಿಕೆಯುಳ್ಳ ಅನುರಾಗವುಳ್ಳ, ಸದಾ ಪರರ ಹಿತವನ್ನೇ ಬಯಸುವ, ಕೆಲಸಮಾಡುವುದರಲ್ಲಿ ಸಮರ್ಥನಾದ, ವಾಕ್ಚಾತುರ್ಯವುಳ್ಳ, ಜಾಣನಾದ, ಹೆದರಿಕೆಯಿಲ್ಲದೆ ಮುನ್ನುಗ್ಗುವ ಸ್ವಭಾವವುಳ್ಳ, ಸೋಮಾರಿಯಲ್ಲದ, ಗುರುಗಳಲ್ಲಿ ಅಭ್ಯಾಸಮಾಡಿದ ಶಾಸ್ತ್ರಾರ್ಥಜ್ಞಾನ ಮತ್ತು ಕರ್ಮಕುಶಲತೆಗಳನ್ನು ಪಡೆದಿರುವ (ಇತ್ಯಾದಿ ಗುಣಗಳಿಂದ ಕೂಡಿದವನಾಗಿ) ಸರ್ವಕಾಲದಲ್ಲೂ ವಿಷಹರಗಳಾದ ಔಷಧಿಗಳನ್ನು ಸಂಗ್ರಹಿಸಿಟ್ಟುಕೊಂಡಿರುವ, ಪಾಕಶಾಸ್ತ್ರ

ದಲ್ಲಿ ನಿಪುಣನಾದ, ವೈದ್ಯನನ್ನು ರಸಶಾಲೆಗೆ (ಅಡಿಗೆ ಮನೆಗೆ) ಯಜಮಾನನನ್ನಾಗಿ ಮಾಡಬೇಕು. ಇದರಿಂದ ವೈದ್ಯನಿಗೆ ಪಾಕವಿದ್ಯೆಯಲ್ಲಿ ತುಂಬಾ ಪರಿಶ್ರಮವಿರಬೇಕೆಂಬ ಅಂಶವು ನಿರ್ಧರಿಸಲ್ಪಟ್ಟಿತು (ಪಾಕಶ್ರೇಷ್ಠೋ ವೈದ್ಯಶ್ರೇಷ್ಠಃ ಇತಿ).

ಪ್ರಶಸ್ತದಿಗ್ದೇಶ ಕೃತಂ ಶುಚಿಭಾಣ್ಡಂ ಮಹಚ್ಛುಚಿ ।
ಸಜಾಲಕಂಗವಾಕ್ಷಾಢ್ಯಮಾತ್ಮವರ್ಗ ನಿಷೇವಿತಮ್ ॥೧೨॥
ವಿಕಕ್ಷಸೃಷ್ಟಸಂಸೃಷ್ಟಂ ಸವಿತಾನಂ ಕೃತಾರ್ಚನಮ್ ।
ಪರೀಕ್ಷಿತಸ್ತ್ರೀಪುರುಷಂ ಭವೇಚ್ಚಾಪಿ ಮಹಾನಸಮ್ ॥೧೩॥
ತತ್ರಾಧ್ಯಕ್ಷಂ ನಿಯುಞ್ಜೀತ ಪ್ರಾಯೋ ವೈದ್ಯಗುಣಾನ್ವಿತಮ್ ।

ಅರ್ಥ—ಶುದ್ಧವಾದ ದಕ್ಷಿಣ ಭೂಭಾಗದಲ್ಲಿ (ಅಡಿಗೆಮನೆ) ಪಾಕಶಾಲೆಯನ್ನು ಕಟ್ಟಿಸಿ ದೊಡ್ಡ ದೊಡ್ಡ ಶುಭ್ರವಾದ ಪಾತ್ರೆಗಳನ್ನು ಸಿದ್ಧಗೊಳಿಸಿರಬೇಕು. ಹೊಗೆ ಹೋಗುವಂತೆ ಜಾಲರಿಗಳನ್ನು ಬಿಗಿದಿರುವ ಕಿಟಕಿಗಳಿರಬೇಕು. ತನ್ನ ಕಡೆಯ ಜನರೇ ಕೆಲಸ ಮಾಡತಕ್ಕವರಾಗಿರಬೇಕು, ತಿಪ್ಪೆ, ಕಸ, ಹುಲ್ಲುಗಳು ಹತ್ತಿರದಲ್ಲಿ ರಾಶಿಯಾಗಿರದಂತೆ ಜಾಗರೂಕತೆಯಿಂದಿರಬೇಕು, ಮೇಲುಕಟ್ಟು ಕಟ್ಟಿರಬೇಕು, ಅಗ್ನಿಯನ್ನು ಪೂಜೆಮಾಡಬೇಕು, ಸ್ತ್ರೀಪುರುಷರ ಶೀಲಸ್ವಭಾವಗಳನ್ನು ಚೆನ್ನಾಗಿ ಪರೀಕ್ಷಿಸಿದನಂತರವೇ ಅವರನ್ನು ಕೆಲಸಕ್ಕೆ ನಿಯಮಿಸಿಕೊಳ್ಳಬೇಕು.

ಶುಚಯೋ ದಕ್ಷಿಣಾದಕ್ಷಾ ವಿನೀತಾಃ ಪ್ರಿಯದರ್ಶನಾಃ ॥೧೪॥
ಸಂವಿಭಕ್ತಾಃ ಸುಮನಸೋ ನೀಚಕೇಶ ನಖಾಃ ಸ್ಥಿರಾಃ ।
ಸ್ನಾತಾ ದೃಢಂ ಸಂಯಮಿನಃ ಕೃತೋಷ್ಣೀಷಾಃ ಸುಸಂಯತಾಃ ॥೧೫॥
ತಸ್ಯಚಾಜ್ಞಾವಿಧೇಯಾಃ ಸ್ಯುರ್ವಿವಿಧಾಃ ಪರಿಕರ್ಮಿಣಃ ।

ಅರ್ಥ—ಅಡಿಗೆಯವರೂ, ಪರಿಚಾರಕರೂ ಪಾಕಶಾಲೆಯ ಅಧ್ಯಕ್ಷನ ಅಧೀನದಲ್ಲಿದ್ದು ಕೆಲಸಮಾಡತಕ್ಕವರಾಗಿ ಶುಚಿರ್ಭೂತರಾಗಿ, ಸತ್ಕುಲದಲ್ಲಿ ಹುಟ್ಟಿದವರಾಗಿ (ಧೈರ್ಯದಿಂದ ಮುಂದೆ ನುಗ್ಗುವ ಸ್ವಭಾವವುಳ್ಳವರು) ವಿನಯವುಳ್ಳವರಾಗಿ ಶಕ್ತಿಯುಳ್ಳವರಾಗಿ, ಸುಂದರರಾಗಿ, ಗೊತ್ತಾದ ಕೆಲಸಗಳನ್ನು ಮಾಡುತ್ತಾ ಸಂತುಷ್ಟಚಿತ್ತರಾಗಿ ತಲೆಕೂದಲನ್ನೂ ಉಗುರನ್ನೂ ಕತ್ತರಿಸಿ ತುಂಡಾಗಿಟ್ಟುಕೊಂಡು ಸ್ಥಿರಮನಸ್ಕರಾಗಿ, ಸ್ನಾನಮಾಡಿ, ಜಿತೇನ್ದ್ರಿಯರಾಗಿ, ತಲೆಗೆ ಬಟ್ಟೆಯನ್ನು ಬಿಗಿದುಕೊಂಡು, (ಜಿಹ್ವಾಚಾಪಲ್ಯ) ಚಪಲ ಬುದ್ಧಿಯಿಲ್ಲದವರಾಗಿ ಅಧ್ಯಕ್ಷನ ಅಪ್ಪಣೆಯನ್ನು ಪಾಲಿಸತಕ್ಕವರಾಗಿರಬೇಕು.

ಆಹಾರಸ್ಥಿತಯಶ್ಚಾಪಿ ಭವನ್ತಿಪ್ರಾಣಿನೋ ಯತಃ ॥೧೬॥
ತಸ್ಮಾನ್ಮಹಾನಸೇ ವೈದ್ಯಃ ಪ್ರಮಾದರಹಿತೋ ಭವೇತ್ ।
ಮಹಾನಸಿಕವೋಢಾರಃ ಸೌಪೌದನಿಕಪೌಪಿಕಾಃ ॥೧೭॥
ಭವೇಯುರ್ವೈದ್ಯವಶಗಾ ಯೇಚಾಪ್ಯನ್ಯೇಽತ್ರಕೇಚನ ।

ಅರ್ಥ—ಪ್ರಾಣಿಗಳಿಗೆ ಆಹಾರದಿಂದಲೇ ಜೀವಿಕೆಯು ; ಆದಕಾರಣ ವೈದ್ಯನು ಪಾಕಶಾಲೆಯಲ್ಲಿ ಉದಾಸೀನನಾಗಿರಬಾರದು. ಸೂಪ (ತೊವ್ವೆ), ಅನ್ನ, ರೊಟ್ಟಿ, ದೋಸೆ

ಮೊದಲಾದುವುಗಳನ್ನು ತಯಾರಿಸುವ ಪಾಕಶಾಲೆಯಲ್ಲಿ ಕೆಲಸಮಾಡತಕ್ಕ ಜನರು (ಪಾಚಕ ಪರಿಚಾರಕರಾಗಿ ಅಡಿಗೆಮನೆಯಲ್ಲಿ ಕೆಲಸಗಾರರಾಗಿರುವವರೆಲ್ಲರೂ) ವೈದ್ಯನ ಅಧೀನರಾಗಿ ಅವನ ಇಷ್ಟದಂತೆಯೇ ಪಾಕಾದಿಕಾರ್ಯಗಳನ್ನು ಮಾಡಬೇಕು.

ಇಙ್ಗಿತಜ್ಞೋಮನುಷ್ಯಾಣಾಂ ವಾಕ್ಚೇಷ್ಟಾಮುಖವೈಕೃತೈಃ ॥೧೮॥
ವಿದ್ಯಾದ್ವಿಷಸ್ಯ ದಾತಾರಮೇಭಿರ್ಲಿಙ್ಗೈಶ್ಚ ಬುದ್ಧಿಮಾನ್ ।
ನ ದದಾತ್ಯುತ್ತರಂ ಪೃಷ್ಟೋ ವಿವಕ್ಷನ್ ಮೋಹಮೇತಿ ಚ ॥೧೯॥
ಅಪಾರ್ಥಂ ಬಹುಸಂಕೀರ್ಣಂ ಭಾಷತೇ ಚಾಪಿ ಮೂಢವತ್ ।
ಸ್ಫೋಟಯತ್ಯಙ್ಗುಲೀರ್ಭೂಮಿಮಕಸ್ಮಾದ್ವಿಲಿಖೇದ್ಧಸೇತ್ ॥೨೦॥
ವೇಪಥುರ್ಜಾಯತೇ ತಸ್ಯ ತ್ರಸ್ತಶ್ಚಾನ್ಯೋಽನ್ಯಮೀಕ್ಷತೇ ।
ಕ್ಷಾಮೋ ವಿವರ್ಣವಕ್ತ್ರಶ್ಚ ನಖೈಃ ಕಿಞ್ಚಿಚ್ಛಿನತ್ತ್ಯಪಿ ॥೨೧॥
ಆಲಭೇತಾಸಕೃದ್ದೀನಃ ಕರೇಣ ಚ ಶಿರೋರುಹಾನ್ ।
ನಿರ್ಯಿಯಾಸುರಪದ್ವಾರೈರ್ವೀಕ್ಷತೇ ಚ ಪುನಃ ಪುನಃ ॥೨೨॥
ವರ್ತತೇ ವಿಪರೀತಂ ತು ವಿಷದಾತಾ ವಿಚೇತನಃ ।
ಕೇಚಿದ್ಭಯಾತ್ ಪಾರ್ಥಿವಸ್ಯ ತ್ವರಿತಾ ವಾ ತದಾಜ್ಞಯಾ ॥೨೩॥
ಅಸತಾಮಪಿ ಸನ್ತೋಽಪಿ ಚೇಷ್ಟಾಂ ಕುರ್ವನ್ತಿ ಮಾನವಾಃ ।
ತಸ್ಮಾತ್ಪರೀಕ್ಷಣಂ ಕಾರ್ಯಂ ಭೃತ್ಯಾನಾಮಾದೃತೈರ್ನೃಪೈಃ ॥೨೪॥

ಅರ್ಥ—ಮನುಷ್ಯರ ಅಭಿಪ್ರಾಯವನ್ನು ಅವರ ಮುಖಸೂಚನೆಯಿಂದಲೇ ತಿಳಿಯ ಬಲ್ಲ ವೈದ್ಯನು ಅವರ ಮಾತು, ಅವರ ವ್ಯಾಪಾರ, ಮುಖ ವ್ಯತ್ಯಾಸಗಳಿಂದಲೇ ವಿಷ ಪ್ರಯೋಗಮಾಡುವ ಜನರನ್ನು ಈ ಕೆಳಗೆ ಹೇಳುವ ಲಕ್ಷಣಗಳಿಂದ ತಿಳಿದುಕೊಳ್ಳಬೇಕು, ಹೇಗೆಂದರೆ—ಕೇಳಿದರೆ ಜವಾಬನ್ನು ಕೊಡುವುದೇ ಇಲ್ಲ, ಹೇಳಬೇಕೆಂದು ಇಷ್ಟಬಂದರೂ ಮರೆತುಬಿಟ್ಟು ವಿಪರೀತವಾಗಿಯೋ, ಅಸ್ಪಷ್ಟವಾಗಿಯೋ, ಹುಚ್ಚನಂತೆಯೋ ಜವಾಬನ್ನು ಹೇಳುತ್ತಾನೆ, ಭಯದಿಂದುಂಟಾದ ಮೈನಡುಕ, ಕೈನಡುಕವನ್ನು ಮರೆಮಾಚುವುದಕ್ಕಾಗಿ ಬೆರಳುಗಳಿಂದ ಚುಟಿಕಿಹಾರಿಸುತ್ತಾನೆ, ಕಾರಣವಿಲ್ಲದೆ ನೆಲವನ್ನು ಕೆರೆಯುತ್ತಾನೆ, ಮೈಯನ್ನು ನಡುಗಿಸುತ್ತಾನೆ, ಹೆದರಿಕೆಯಿಂದ ಒಬ್ಬೊಬ್ಬರ ಮುಖವನ್ನು ನೋಡುತ್ತಾನೆ, ದೇಹ ಕೃಶವಾಗಿ ಮುಖದಲ್ಲಿ ಕಳೆಯಿಲ್ಲದೆ ಉಗುರಿನಿಂದ ಏನನ್ನಾದರೂ ಜಿಗುಟುತ್ತಿರುತ್ತಾನೆ, ದೈನ್ಯದಿಂದ ಮಧ್ಯೆಮಧ್ಯೆ ಕೈಯ್ಯಿನಿಂದ ತಲೆಯನ್ನು ಕೆರೆದುಕೊಳ್ಳುತ್ತಾನೆ, ಬಾಗಿಲನ್ನು ಬಿಟ್ಟು ಬೇರೆಕಡೆಯಿಂದ ಹೊರಕ್ಕೆ ಹೋಗಬೇಕೆಂದು ಪದೇ ಪದೇ ನೋಡುತ್ತಾನೆ. ಈರೀತಿಯಾಗಿ ವಿಷಪ್ರಯೋಗ ಮಾಡುವವನು ಬುದ್ಧಿಶೂನ್ಯನಾಗಿ ವ್ಯತ್ಯಾಸವಾದ ನಡತೆಯುಳ್ಳವನಾಗಿರುತ್ತಾನೆ, ಕೆಲವರು ಸತ್ಪುರುಷರೂ ದೊರೆಯ ಹೆದರಿಕೆಯಿಂದ ಅವನ ಅಪ್ಪಣೆಗೆ ತ್ವರೆಮಾಡುತ್ತಾ ತಪ್ಪು ಕೆಲಸಗಳನ್ನು ಮಾಡುತ್ತಾರೆ. (ವಿಷಪ್ರಯೋಗಿ ಸುವವನಂತೆಯೇ ಘಾಬರಿಯಿಂದ ಒಂದಕ್ಕೆ ಬದಲಾಗಿ ಮತ್ತೊಂದು ಕೆಲಸಮಾಡಿಬಿಡು

ತ್ತಾರೆ). ಈ ಕಾರಣದಿಂದ ರಾಜರು ಭೃತ್ಯರ ವಿಚಾರದಲ್ಲಿ ಪ್ರೀತಿಯುಳ್ಳವರಾಗಿದ್ದು ಗುಣಾವಗುಣಗಳನ್ನು ಪರೀಕ್ಷಿಸಬೇಕು.

ಅನ್ನೇಪಾನೇ ದನ್ತಕಾಷ್ಠೇ ತಥಾಭ್ಯಙ್ಗೇಽವಲೇಖನೇ ।
ಉತ್ಸಾದನೇ ಕಷಾಯೇ ಚ ಪರಿಷೇಕೇಽನುಲೇಪನೇ ॥೨೫॥
ಸ್ರಕ್ಷು ವಸ್ತ್ರೇಷು ಶಯ್ಯಾಸು ಕವಚಾಭರಣೇಷು ಚ ।
ಪಾದುಕಾಪಾದಪೀಠೇಷು ಪೃಷ್ಠೇಷು ಗಜವಾಜಿನಾಮ್ ॥೨೬॥
ವಿಷಜುಷ್ಟೇಷು ಚಾನ್ಯೇಷು ನಸ್ಯಧೂಮಾಞ್ಜನಾದಿಷು ।
ಲಕ್ಷಣಾನಿ ಪ್ರವಕ್ಷ್ಯಾಮಿ ಚಿಕಿತ್ಸಾಮಪ್ಯನನ್ತರಮ್ ॥೨೭॥

ಅರ್ಥ—ಅನ್ನಪಾನಗಳು, ಹಲ್ಲುಗಳನ್ನುಜ್ಜುವ ಕುಂಚಿಕೆಗಳು, ನಾಲಿಗೆಯನ್ನು ಕೆರೆಯುವ ಚಿನ್ನ ಬೆಳ್ಳಿ ಮೊದಲಾದುವುಗಳಿಂದ ಮಾಡಿದ ಹಲ್ಲೆಗಳು, ಮುಖಶೋಧನೆ ಮಾಡುವ ರೋಧ್ರಾದಿ ಕಷಾಯಾದಿಗಳು, ಅಭ್ಯಂಗಕ್ಕಾಗಿ ಉಪಯೋಗಿಸುವ ತೈಲಗಳು, ತಲೆಯನ್ನು ಬಾಚಿಕೊಳ್ಳುವ ಬಾಚಣಿಗೆ, ಶೀರಣಿಗೆಗಳು, ಮೈಉಜ್ಜುವ ಚೂರ್ಣಗಳು, ಕಷಾಯಗಳು, ಸ್ನಾನದ ನೀರು, ಗಂಧಾದಿ ಅನುಲೇಪನಗಳು, ಹೂವಿನಹಾರಗಳು, ವಸ್ತ್ರಗಳು, ಹಾಸಿಗೆಗಳು, ಅಂಗಿ, ಬನೀನು ಮೊದಲಾದ ಉಡುವುಗಳು, ಆಭರಣಗಳು, ಪಾದರಕ್ಷೆಗಳು (ಎಕ್ಕಡ, ಚಡಾವು, ಪಾಪಾಸು, ಬೂಟ್ ಮೊದಲಾದುವು), ಕಾಲು ಮಣೆಗಳು, (ಕುರ್ಚಿ, ಸ್ಟೂಲು, ಸೋಫಾ, ಬೆಂಚು, ಮಂಚ ಮುಂತಾದುವು), ಸವಾರಿ ಮಾಡುವ ಆನೆ ಕುದುರೆಗಳ ಬೆನ್ನಿನ ಮೇಲ್ಭಾಗ, ಇತರಗಳಾದ ನಸ್ಯ, ಧೂಮ, ಅಞ್ಜನ ಮೊದಲಾದುವುಗಳಿಗೆ ವಿಷಸೇರಿದ್ದರೆ ಯಾವ ಲಕ್ಷಣಗಳಿರುತ್ತವೆಂದೂ ಅನಂತರ ಅವುಗಳಲ್ಲಿರುವ ವಿಷದೋಷವನ್ನು ಹೇಗೆ ನಿವಾರಣೆಮಾಡಬೇಕು ಎಂಬ ಚಿಕಿತ್ಸೆಯನ್ನೂ ಹೇಳುತ್ತೇನೆ.

ನೃಪಭಕ್ತಾದ್ಬಲಿಂ ನ್ಯಸ್ತಂ ಸವಿಷಂ ಭಕ್ಷಯನ್ತಿ ಯೇ ।
ತತ್ರೈವ ತೇ ವಿನಶ್ಯನ್ತಿ ಮಕ್ಷಿಕಾವಾಯಸಾದಯಃ ॥೨೮॥
ಹುತಭುಕ್ ತೇನ ಚಾನ್ನೇನ ಭೃಶಂ ಚಟಚಟಾಯತೇ ।
ಮಯೂರ ಕಣ್ಠಪ್ರತಿಮೋ ಜಾಯತೇ ಜಾಪಿ ದುಃಸಹಃ ॥೨೯॥
ಭಿನ್ನಾರ್ಚಿಸ್ತೀಕ್ಷ್ಣಧೂಮಶ್ಚ ನ ಚಿರಾಚ್ಚೋಪಶಾಮ್ಯತಿ ।
ಚಕೋರಸ್ಯಾಕ್ಷಿವೈರಾಗ್ಯಂ ಜಾಯತೇಕ್ಷಿಪ್ರಮೇವತು ॥೩೦॥
ದುಷ್ಟಾನ್ನಂ ವಿಷಸಂಸೃಷ್ಟಂ ಮ್ರಿಯನ್ತೇ ಜೀವಜೀವಕಾಃ ।
ಕೋಕಿಲಃ ಸ್ವರವೈಕೃತ್ಯಂ ಕ್ರೌಞ್ಚಸ್ತು ಮದಮೃಚ್ಛತಿ ॥೩೧॥
ಹೃಷ್ಯೇನ್ಮಯೂರ ಉದ್ವಿಗ್ನಃ ಕ್ರೋಶತಃ ಶುಕಸಾರಿಕೇ ।
ಹಂಸಃ ಕ್ಷ್ವೇಡತಿ ಚಾತ್ಯರ್ಥಂ ಭೃಙ್ಗರಾಜಸ್ತು ಕೂಜತಿ ॥೩೨॥
ಪೃಷತೋ ವಿಸೃಜತ್ಯಶ್ರುಂ ವಿಷ್ಠಾಂ ಮುಞ್ಚತಿ ಮರ್ಕಟಃ ।

ಸನ್ನಿಕೃಷ್ಟಾಂಸ್ತತಃ ಕುರ್ಯಾದ್ರಾಜ್ಞಸ್ತಾನ್ ಮೃಗಪಕ್ಷಿಣಃ ||೩೩||
ವೇಶ್ಮನ್ಯೋಽಥ ವಿಭೂಷಾರ್ಥಂ ರಕ್ಷಾರ್ಥಂ ಚಾತ್ಮನಃ ಸದಾ |

ಅರ್ಥ—ದೊರೆಗೋಸ್ಕರ ತಯಾರಿಸಿದ ಅನ್ನದಿಂದ ಬಲಿಹರಣಕ್ಕಾಗಿ ಹೊರಗೆ ಹಾಕಿದ ವಿಷಮಿಶ್ರವಾದ ಅನ್ನವನ್ನು ತಿಂದ ನೊಣಗಳೂ ಕಾಗೆ ಮೊದಲಾದ ಪ್ರಾಣಿಗಳೂ ಅಲ್ಲೇ ಸತ್ತು ಬೀಳುತ್ತವೆ, ವಿಷಮಿಶ್ರಮಾಡಿದ ಅನ್ನವನ್ನು ಅಗ್ನಿಗೆ ಹೋಮಮಾಡಿದರೆ ತುಂಬಾ ಚಟಚಟ ಶಬ್ದವುಂಟಾಗುತ್ತದೆ, ನವಿಲ ಕತ್ತಿನ ಬಣ್ಣದಂತೆ ನಾನಾಬಣ್ಣದ ಹೊಗೆಯು ಮೇಲಕ್ಕೆದ್ದು ಉರಿಯು ಒಡೆದುಹೋಗಿ ಮೇಲೆ ಹಾರುತ್ತದೆ, ಸಹಿಸಲಶಕ್ಯವಾದ ತೀಕ್ಷ್ಣವಾದ ವಾಸನೆಯುಂಟಾಗಿ ಉರಿಯು ಕೂಡಲೇ ಆರಿಹೋಗುತ್ತದೆ, ವಿಷಮಿಶ್ರಿತವಾದ ಅನ್ನವನ್ನು ನೋಡಿ ಚಕ್ರವಾಕ ಪಕ್ಷಿಯ ಕಣ್ಣು ಬೇಗನೆ ಕೆಂಪೇರುತ್ತದೆ, ಅದನ್ನು ತಿಂದ ಜೀವಂಜೀವಕವೆಂಬ ಚಕ್ರವಾಕ ವಿಶೇಷ ಪಕ್ಷಿಯು ಸಾಯುತ್ತದೆ, ಕೋಗಿಲೆಯು ತಿಂದರೆ ಸ್ವರವಿಕಾರವಾಗುತ್ತದೆ, ಕ್ರೌಞ್ಚಪಕ್ಷಿಗೆ ಮತ್ತತೆ ಬರುತ್ತದೆ, ನವಿಲು ಈ ವಿಷಮಿಶ್ರಿತ ಅನ್ನವನ್ನು ನೋಡಿ ಕುಣಿದಾಡುತ್ತದೆ, ಗಿಣಿಯೂ ಮೈನಾಹಕ್ಕಿಯೂ ಈ ಅನ್ನವನ್ನು ನೋಡಿ ಗಟ್ಟಿಯಾಗಿ ಕೂಗಿಕೊಳ್ಳುತ್ತವೆ, ಹಂಸಪಕ್ಷಿಯು ನೋಡಿ ಅತಿಯಾಗಿ ಶಬ್ದಮಾಡುತ್ತದೆ, ಭೃಙ್ಗರಾಜ ಪಕ್ಷಿಯು ಕೂಗಿಕೊಳ್ಳುತ್ತದೆ, ಹುಲ್ಲೆಯು ಇದನ್ನು ನೋಡಿ ಕಣ್ಣೀರು ಸುರಿಸುತ್ತದೆ, ಕೋತಿಯು ಇದನ್ನು ನೋಡಿ ಮಲವಿಸರ್ಜನೆಯನ್ನು ಮಾಡುತ್ತದೆ. ಆದಕಾರಣ ಈ ಮೃಗಪಕ್ಷಿಗಳನ್ನು ಮನೆಗೆ ಅಲಂಕಾರಕ್ಕಾಗಿಯೂ ಪ್ರಾಣರಕ್ಷಣೆ ಮಾಡಿಕೊಳ್ಳುವುದಕ್ಕಾಗಿಯೂ ದೊರೆಯು ಅರಮನೆಯ ಹತ್ತಿರದಲ್ಲೇ ಸಾಕಿಕೊಂಡಿರಬೇಕು.

ಉಪಕ್ಷಿಪ್ತಸ್ಯ ಚಾನ್ನಸ್ಯ ಬಾಷ್ಪೇಣೋರ್ಧ್ವಂ ಪ್ರಸರ್ಪತಾ ||೩೪||
ಹೃತ್ಪೀಡಾ ಭ್ರಾನ್ತನೇತ್ರತ್ವಂ ಶಿರೋದುಃಖಂ ಚ ಜಾಯತೇ |
ತತ್ರ ನಸ್ಯಾಞ್ಜನೇ ಕುಷ್ಠಂ ಲಾಮಜ್ಜಂನಳದಂ ಮಧು ||೩೫||
ಕುರ್ಯಾಚ್ಛಿರೀಷರಜನೀಚನ್ದನೈಶ್ಚ ಪ್ರಲೇಪನಮ್ ।
ಹೃದಿ ಚನ್ದನಲೇಪಸ್ತು ತಥಾ ಸುಖಮವಾಪ್ನುಯಾತ್ ||೩೬||
ಪ್ರಾಣಿಪ್ರಾಪ್ತಂ ಪಾಣಿದಾಹಂ ನಖಶಾತಂ ಕರೋತಿ ಚ ।
ಅತ್ರ ಪ್ರಲೇಪಃ ಶ್ಯಾಮೇನ್ದ್ರಗೋಪಾಸೋಮೋತ್ಪಲಾನಿ ಚ ||೩೭||

ಅರ್ಥ—ಅನ್ನದ ತಪ್ಪಲೆಯಿಂದ ತೋಡಿಕೊಂಡು ಎಲೆ ತಟ್ಟೆ ಮೊದಲಾದುವುಗಳ ಮೇಲೆ ವಿಷಮಿಶ್ರಿತ ಅನ್ನವನ್ನು ಬಡಿಸಿದರೆ ಅದರಿಂದ ಮೇಲಕ್ಕೆ ಹೊರಡುವ ಹಬೆಯನ್ನು ಸೇವನೆಮಾಡಿದರೆ ಎದೆ ನೋವು, ಕಣ್ಣುಗುಡ್ಡೆ ತಿರುಗುವುದು, ತಲೆನೋವು ಇವುಗಳುಂಟಾಗುತ್ತವೆ. ಈ ಸಮಯದಲ್ಲಿ ಚಂಗಲ್‌ಕೋಷ್ಟ, ಜಟಾಮಾಂಸಿ, ಲಾಮಜ್ಜಗಳ ಚೂರ್ಣವನ್ನು ಜೇನುತುಪ್ಪದಿಂದ ರಂಗಳಿಸಿ ನಸ್ಯ, ಅಞ್ಜನವನ್ನು ಹಾಕಬೇಕು. ಬಾಗೆಬೀಜ, ಅರಿಶಿನ, ಶ್ರೀಗಂಧ, ರಕ್ತಚಂದನ ಇವುಗಳ ಕಲ್ಕವನ್ನೂ, ಬರಿಯ ಶ್ರೀಗಂಧವನ್ನಾದರೂ

ಎಡೆಗೆ ಬಳಿಯಬೇಕು, ಇದರಿಂದ ಸುಖವುಂಟಾಗುತ್ತದೆ, ಅದೇ ಅನ್ನವನ್ನು ಭೋಜನ ಮಾಡಬೇಕೆಂದು ಕೈಗೆತೆಗೆದುಕೊಂಡರೆ ಅಂಗೈಯಲ್ಲಿ ಉರಿಯೂ ಉಗುರುಗಳು ಉದುರುವುದೂ ಉಂಟಾಗುತ್ತವೆ. ಅದರ ನಿವಾರಣೆಗಾಗಿ ಶ್ಯಾಮಾ ಎಂಬ ಲತೆಯನ್ನೂ (ಕೆಲವರು ನೆಳಲುಪಿಯಂಗು ಎನ್ನುತ್ತಾರೆ), ಇಂದ್ರಗೋಪನೆಂಬ ಮಳೆಗಾಲದಲ್ಲಿ ನೆಲದಿಂದ ಮೇಲಕ್ಕೇಳುವ ಹುಳು, (ಕೆಲವರು ಇಂಡ್ರಾ, ಹಾವುಮೆಕ್ಕೆ, ಗೋಪಾ, ಸೊಗದೆಬೇರು ಎನ್ನುತ್ತಾರೆ) ಅಮೃತವಳ್ಳಿ, ನೈದಿಲೆಗೆಡ್ಡೆ ಇವುಗಳ ಕಲ್ಕವನ್ನು ಲೇಪಿಸಬೇಕು.

ಸ ಚೇತ್ ಪ್ರಮಾದಾನ್ಮೋಹಾದ್ವಾ ತದನ್ನಮುಪಸೇವತೇ ।
ಅಷ್ಠೀಲಾವತ್ತತೋ ಜಿಹ್ವಾ ಭವತ್ಯರಸವೇದಿನೀ ॥೩೮॥
ತುದ್ಯತೇ ದಃಹ್ಯತೇ ಚಾಪಿ ಶ್ಲೇಷ್ಮಾ ಚಾಸ್ಯಾತ್ ಪ್ರಸಿಚ್ಯತೇ ।
ತತ್ರಬಾಷ್ಪೇರಿತಂ ಕರ್ಮಯಚ್ಚಸ್ಯಾದ್ದಂತ್ಕಾಷ್ಠಿಕಮ್ ॥೩೯॥
ಮೂರ್ಛಾಂ ಛರ್ದಿಮತೀಸಾರಮಾಧ್ಮಾನಂ ದಾಹವೇಪಥೂ ।
ಇನ್ದ್ರಿಯಾಣಾಂ ಚ ವೈಕೃತ್ಯಂ ಕುರ್ಯಾದಾಮಾಶಯಂ ಗತಮ್ ॥೪೦॥
ತತ್ರಾಶು ಮದನಾಲಾಬುಬಿಮ್ಬೀಕೋಶಾತಕೀಫಲೈಃ ।
ಛರ್ದನಂ ದಧ್ಯುದಶ್ವಿದ್ಭ್ಯಾಮಥವಾ ತಣ್ಡುಲಾಮ್ಬುನಾ ॥೪೧॥

ಅರ್ಥ—ಅಕಸ್ಮಾತ್ತಾಗಲೀ ಅಜ್ಞಾನದಿಂದಾಗಲೀ ಆ ಅನ್ನವನ್ನು ತಿಂದರೆ ನಾಲಿಗೆಯು ಗಟ್ಟಿಯಾದ ಗಡ್ಡೆಯಂತಾಗಿ ರುಚಿ ತಿಳಿಯದೆ ಚುಚ್ಚಿ ನೋಯುತ್ತದೆ, ಜೊಲ್ಲು ಸುರಿಯುತ್ತದೆ, ಈ ಸ್ಥಿತಿಯಲ್ಲಿಯೂ ವಿಷಮಿಶ್ರಿತ ಅನ್ನದ ಹಬೆಯನ್ನು ಸೇವಿಸಿದಾಗಲೂ ದನ್ತಕಾಷ್ಠವನ್ನು ಉಪಯೋಗಿಸಿದಾಗಲೂ ಮಾಡುವಂತೆ ಬಾಗೆಬೀಜ, ಅರಿಶಿನ ಮೊದಲಾದುವುಗಳಿಂದ ಅಞ್ಜನನಸ್ಯಗಳನ್ನೂ, ರೋಧ್ರಾದಿ ಕಷಾಯ, ತೈಲಗಳಿಂದ ಗಂಡೂಷ ಕವಳ ಗ್ರಹಗಳನ್ನೂ ಮಾಡಿಸಬೇಕು.

ಅರ್ಥ—ಆಮಾಶಯಕ್ಕೆ ವಿಷಮಿಶ್ರಿತವಾದ ಅನ್ನವು ಸೇರಿದರೆ ಜ್ಞಾನ ತಪ್ಪುತ್ತದೆ, ವಮನ, ಅತಿಸಾರ, ಹೊಟ್ಟೆಯುಬ್ಬರ, ಮೈಉರಿತ, ನಡುಕ, ಇಂದ್ರಿಯ ವಿಕಾರಗಳುಂಟಾಗುತ್ತವೆ, ಈ ಸಂದರ್ಭದಲ್ಲಿ ಕೂಡಲೇ ಮಗ್ಗಾರಿಕಾಯಿ, ತೊಂಡೆ, ಹೀರೆಕಾಯಿಗಳಿಂದ ವಮನವನ್ನೂ ಅಥವಾ ಅರ್ಧ ನೀರು ಮಿಶ್ರಮಾಡಿದ ಮೊಸರು, ಅಕ್ಕಿ ಬಸಿದನೀರು, (ಕಲಗಚ್ಚು) ಇವುಗಳಲ್ಲೊಂದನ್ನು ಕುಡಿಸಿಯಾಗಲೀ ವಮನ ಮಾಡಿಸಬೇಕು.

ದಾಹಂ ಮೂರ್ಛಾಮತೀಸಾರಂ ತೃಷಾಮಿನ್ದ್ರಿಯವೈಕೃತಮ್ ।
ಆಟೋಪಪಾಣ್ಡುತಾಂ ಕಾರ್ಶ್ಯಂಕುರ್ಯಾತ್ ಪಕ್ವಾಶಯಂ ಗತಮ್ ॥೪೨॥
ವಿರೇಚನಂ ಸಸರ್ಪಿಷ್ಕಂ ತತ್ರೋಕ್ತಂ ನೀಲಿನೀಫಲಮ್ ।
ದಧ್ನಾದೂಷೀವಿಷಾರಿಶ್ಚಪೇಯೋ ವಾ ಮಧುಸಂಯುತಃ ॥೪೩॥

ಅರ್ಥ—ಪಕ್ವಾಶಯಕ್ಕೆ ವಿಷಮಿಶ್ರಿತ ಅನ್ನವು ಸೇರಿದರೆ ಉರಿತ, ಮೂರ್ಛೆ, ಅತಿಸಾರ, ಇಂದ್ರಿಯ ವಿಕಾರಗಳೂ ಹೊಟ್ಟೆಯಲ್ಲಿ ವಾಯುವು ಗುಡಗುಡ ಶಬ್ದದಿಂದ

ಓಡಾಡುವುದು, ನ್ಮೈಬಿಳಿಚಿಕೊಳ್ಳುವುದು, ಕೃಶತ್ವ ಇವುಗಳುಂಟಾಗುತ್ತವೆ, ಇದರ ನಿವಾರಣೆಗಾಗಿ ನೀಲಿ ಹಣ್ಣು, ತುಪ್ಪ, ಮೊಸರನ್ನು ಕುಡಿಸಬೇಕು, ದೂಷೀವಿಷಾರಿ ಯೆಂಬ ಅಗದವನ್ನು ಜೇನುತುಪ್ಪ ಮಿಶ್ರಮಾಡಿ ಮೊಸರಿನಲ್ಲಿ ಕದರಿಕುಡಿಸಬೇಕು. (೧ ಕರ್ಷದೂಷೀ, ವಿಷಾರಿಯೆಂಬ ಅಗದ ಜೇನುತುಪ್ಪ ೮ ಮಾಷದಷ್ಟು ಅಂದರೆ ಅರ್ಧಕರ್ಷ ಕುಡಿಯುವಷ್ಟು ಪ್ರಮಾಣದ ಮೊಸರು ಅಂದರೆ ಸಾಮಾನ್ಯವಾಗಿ ಒಂದು ಪಲದಂತೆ ಶೇಖರಿಸಿರಬೇಕು).

ದ್ರವದ್ರವ್ಯೇಷು ಸರ್ವೇಷು ಕ್ಷೀರಮದ್ಯೋದಕಾದಿಷು ।
ಭವನ್ತಿ ವಿವಿಧಾ ರಾಜ್ಯಃ ಫೇನಬುದ್ಬುದಜನ್ಮ ಚ ॥೪೪॥
ಛಾಯಾಶ್ಚಾತ್ರ ನ ದೃಶ್ಯನ್ತೇ ದೃಶ್ಯನ್ತೇ ಯದಿವಾ ಪುನಃ ।
ಭವನ್ತಿ ಯಮಳಾಚ್ಛಿದ್ರಾಸ್ತನ್ವ್ಯೋವಾ ವಿಕೃತಾಸ್ತಥಾ ॥೪೫॥

ಅರ್ಥ—ಹಾಲು ಮದ್ಯ ನೀರು ಮೊದಲಾದ ಎಲ್ಲಾ ದ್ರವದ್ರವ್ಯಗಳಲ್ಲಿಯೂ ವಿಷ ಮಿಶ್ರವಾಗಿದ್ದರೆ ಅವುಗಳಮೇಲೆ ನಾನಾವಿಧದ ರೇಖೆಗಳು ಕಾಣುತ್ತವೆ, ನೊರೆ, ಗುಳ್ಳೆ ಗಳುಂಟಾಗುತ್ತವೆ, ಮುಖ ಬಿಂಬವು ಕಾಣುವುದಿಲ್ಲ ಅಥವಾ ಕಂಡರೂ ಎರಡೆರಡು ರಂಧ್ರಗಳಾಗಿ ತೆಳುವಾಗಿ ವಿಕಾರವಾಗಿ ಕಾಣುತ್ತವೆ, ಸೌಮ್ಯವಾದ ರೂಪವು ವಿಕಾರ ವಾಗಿರುವಂತೆಯೂ ವಿಕೃತಾಕಾರವು ಸೌಮ್ಯವಾಗಿಯೂ ಕಾಣಿಸುತ್ತದೆ.

ಶಾಕಸೂಪಾನ್ನಮಾಂಸಾನಿ ಕ್ಲಿನ್ನಾನಿ ವಿರಸಾನಿ ಚ ।
ಸದ್ಯಃ ಪರ್ಯುಷಿತಾನೀವ ವಿದಗ್ಧಾನಿ ಭವನ್ತಿ ಚ ॥೪೬॥
ಗನ್ಧವರ್ಣರಸೈರ್ಹೀನಾಃ ಸರ್ವೇಭಕ್ಷ್ಯಾಃ ಫಲಾನಿ ವಾ ।
ಪಕ್ವಾನ್ಯಾಶು ವಿಶೀರ್ಯನ್ತೇ ಪಾಕಮಾಮಾನಿ ಯಾನ್ತಿ ಚ ॥೪೭॥

ಅರ್ಥ—ವಿಷಮಿಶ್ರವಾದ ಶಾಕ, ಸೂಪ (ತೊವ್ವೆ), ಅನ್ನ, ಮಾಂಸಗಳು ಜಿನುಗಿ ನೀರು ತೊಟ್ಟಿಕ್ಕುತ್ತದೆ, ರಸವ್ಯತ್ಯಾಸವಾಗುತ್ತದೆ (ವಾಸನೆ, ಬಣ್ಣ, ರಸ, ಸ್ಪರ್ಶಗಳಿಲ್ಲದೆ) ಎಲ್ಲಾ ವಿಧ ಭಕ್ಷ್ಯಗಳೂ ತಮ್ಮ ವಾಸನೆ, ಬಣ್ಣ, ರಸ, ಸ್ಪರ್ಶಗಳನ್ನು ಕಳೆದುಕೊಳ್ಳು ತ್ತವೆ, ಪಕ್ವಫಲಗಳು ಬೇಗ ಕೊಳೆತುಹೋಗುತ್ತವೆ, ಅಪಕ್ವವಾಗಿದ್ದರೆ ಹಣ್ಣಾಗುತ್ತವೆ.

ಟಿಪ್ಪಣಿ—ಶಾಕಗಳು, ಮೂಲ, ಪತ್ರ, ಕರೀರಾಗ್ರ, ಫಲ, ಕಾಣ್ಡ, ಅಧಿರೂಡಕ ತ್ವಕ್, ಪುಷ್ಪ, ಕವಕಗಳೆಂದು ೧೦ ವಿಧಗಳು.

ವಿಶೀರ್ಯತೇ ಕೂರ್ಚಕಸ್ತು ದನ್ತಕಾಷ್ಠಗತೇ ವಿಷೇ ।
ಜಿಹ್ವಾದನ್ತೌಷ್ಠಮಾಂಸಾನಾಂ ಶ್ವಯಥುಶ್ಚೋಪಜಾಯತೇ ॥೪೮॥
ಅಥಾಸ್ಯ ಧಾತಕೀಪುಷ್ಪಪಥ್ಯಾಜಮ್ಬೂಫಲಾಸ್ಥಿಭಿಃ ।
ಸಕ್ಷೌದ್ರೈಃ ಪ್ರಚ್ಛಿತೇ ಶೋಫೇ ಕರ್ತವ್ಯಂ ಪ್ರತಿಸಾರಣಮ್ ॥೪೯॥
ಅಥವಾಙ್ಕೋಲಮೂಲಾನಿ ತ್ವಚಃ ಸಪ್ತಚ್ಛದಸ್ಯವಾ ।
ಶಿರೀಷಮಾಷಕಾ ವಾಪಿ ಸಕ್ಷೌದ್ರಾಃ ಪ್ರತಿಸಾರಣಮ್ ॥೫೦॥

ಅರ್ಥ— ವಿಷಸಂಸರ್ಗವುಳ್ಳ ದನ್ತಕಾಷ್ಠವನ್ನು ಉಪಯೋಗಿಸಿ ದನ್ತಶುದ್ಧಿಮಾಡಿದರೆ ಕೂರ್ಚಿಕದ ತುದಿಯು ಉದುರಿಬಿಡುತ್ತದೆ. ನಾಲಗೆ, ವಸಡು, ತುಟಿಗಳು ಊದುತ್ತವೆ. ಇದಕ್ಕೆ ಚಿಕಿತ್ಸೆ–ಧಾತಕೀಕುಸುಮ, ಅಣಿಲೆಕಾಯಿ, ನೇರಳೆಬೀಜ ಇವುಗಳ ಪುಡಿಗೆ ಜೇನು ತುಪ್ಪವನ್ನು ಮಿಶ್ರಮಾಡಿ ಶೋಫವನ್ನು ಚೂರಿಯಿಂದ ಕುಯಿದು ಉಜ್ಜಬೇಕು. ಅಂಕೋಲೆಬೇರಿನ ತೊಗಟೆ, ಏಳೆಲಗ (ಮದ್ದಾಲೆ) ಅಥವಾ ಬಾಗೇಬೀಜದ ಚೂರ್ಣಕ್ಕೆ ಜೇನುತುಪ್ಪವನ್ನು ಸೇರಿಸಿ ಉಜ್ಜಬೇಕು.

ಜಿಹ್ವಾ ನಿರ್ಲೇಖಕವಳೌ ದನ್ತಕಾಷ್ಠವದಾದಿಶೇತ್ ।

ಅರ್ಥ—ನಾಲಿಗೆಯನ್ನು ತಿಕ್ಕುವ ಲೋಹದ ತಗಡು ಮತ್ತು ಕವಳಗ್ರಹಣದ ಕಷಾಯಗಳಿಗೆ ವಿಷಮಿಶ್ರವಾದರೆ ವಿಷಮಿಶ್ರಿತ ದನ್ತಕಾಷ್ಠವನ್ನು ಉಪಯೋಗಿಸುವುದರಿಂದುಂಟಾಗುವ ಉಪದ್ರವಗಳೇ ಉಂಟಾಗುತ್ತವೆಯಾಗಿ ಅವುಗಳಿಗೆ ಹೇಳಿದ ಚಿಕಿತ್ಸೆಯನ್ನೇ ಮಾಡಬೇಕು.

ಪಿಚ್ಛಿಲೋಬಹುಳೋಽಭ್ಯಙ್ಗೋ ವಿವರ್ಣೋವಾವಿಷಾನ್ವಿತಃ ॥೫೧॥
ಸ್ಫೋಟಜನ್ಮ ರುಜಾಸ್ರಾವತ್ವಕ್ಪಾಕಃ ಸ್ವೇದನಂ ಜ್ವರಃ ।
ದರಣಂ ಚಾಪಿ ಮಾಂಸಾನಾಮಭ್ಯಙ್ಗೇ ವಿಷಸಂಯುತೇ ॥೫೨॥
ತತ್ರ ಶೀತಾಮ್ಬುಸಿಕ್ತಸ್ಯ ಕರ್ತವ್ಯಮನುಲೇಪನಮ್ ।
ಚನ್ದನಂ ತಗರಂ ಕುಷ್ಠಮುಶೀರಂ ವೇಣುಪತ್ರಿಕಾ ॥೫೩॥
ಸೋಮವಲ್ಲ್ಯಮೃತಾ ಶ್ವೇತಾ ಪದ್ಮಂ ಕಾಲೀಯಕಂ ತ್ವಚಮ್ ।
ಕಪಿತ್ಥರಸಮೂತ್ರಾಭ್ಯಾಂ ಪಾನಮೇತಚ್ಚ ಯುಜ್ಯತೇ ॥೫೪॥
ಉತ್ಸಾದನೇ ಪರೀಷೇಕೇ ಕಷಾಯೇ ಚಾನುಲೇಪನೇ ।
ಶಯ್ಯಾವಸ್ತ್ರತನುತ್ರೇಷು ಜ್ಞೇಯಮಭ್ಯಙ್ಗಲಕ್ಷಣೈಃ ॥೫೫॥

ಅರ್ಥ—ವಿಷಮಿಶ್ರವಾದ ತೈಲದಿಂದ ಅಭ್ಯಂಗಮಾಡಿದರೆ ತೈಲವು ಪಿಚ್ಛಿಲವಾಗಿ ಮಂದವಾಗಿ ಬಣ್ಣದಲ್ಲಿ ಬದಲಾಗುತ್ತದೆ, ಮೈಮೇಲೆ ಗುಳ್ಳೆಗಳೇಳುತ್ತವೆ, ನೋವು, ದ್ರವಸ್ರಾವ ತ್ವಕ್ಪಾಕ (ಹುಣ್ಣಾಗುತ್ತವೆ), ಬೆವರು, ಜ್ವರ, ಮಾಂಸವು ಕಿತ್ತುಬರುವುದು ಈ ಲಕ್ಷಣಗಳಿರುತ್ತವೆ, ಇಂತಹ ಸಂದರ್ಭದಲ್ಲಿ ತಣ್ಣೀರಿನಿಂದ ಸ್ನಾನಮಾಡಿಸಿ ಶ್ರೀಗಂಧ, ತಗರ, ಚಂಗಲ್‌ಕೋಷ್ಠ, ಲಾಮಜ್ಜ, ಬಿದಿರುಸೊಪ್ಪು, ಅಮೃತವಳ್ಳಿ, ಖರ್ಸಾರಿತುತ್ಥ, ಮರದರಿಶಿನ, ಬಿಳಿಯ ಗಿರಿಕರ್ಣಿಕೆ, ಗಂಟುಭಾರಂಗಿ, ದಾಲ್ಚಿನ್ನಿ, ಇವುಗಳ ಕಲ್ಕವನ್ನು ಬೇಲದಕಷಾಯ, ಗೋಮೂತ್ರಗಳಲ್ಲಿ ಕದರಿ ಕುಡಿಸಿ ಆ ಕಲ್ಕದ ಲೇಪನವನ್ನು ಮಾಡಬೇಕು. ಮೈಯನ್ನು ಉಜ್ಜುವ ಚೂರ್ಣ, ಸ್ನಾನದ ನೀರು, ಕಷಾಯ, ಲೇಪನ, ವಸ್ತ್ರ, ಹಾಸಿಗೆ ಬಟ್ಟೆ ಹೊದ್ದಿಕೆ, ಅಂಗಿ, ಕವಚ ಮೊದಲಾದುವುಗಳಿಗೆ ವಿಷಸಂಪರ್ಕವಾದರೆ ವಿಷಮಿಶ್ರಿತ ಅಭ್ಯಙ್ಗದ ದುರ್ಲಕ್ಷಣಗಳೇ ಉಂಟಾಗುತ್ತವೆ, ಅವುಗಳಿಗೆ ಹೇಳಿದ ಚಿಕಿತ್ಸೆಯನ್ನೇ ಮಾಡಬೇಕು.

ಕೇಶಶಾತಃ ಶಿರೋದುಃಖಂ ಖೇಭ್ಯಶ್ಚ ರುಧಿರಾಗಮಃ ।
ಗ್ರಂಥಿಜನ್ಮೋತ್ತಮಾಙ್ಗೇಷು ವಿಷಜುಷ್ಟೇಽವಲೇಖನೇ ॥೫೬॥
ಪ್ರಲೇಪೋ ಬಹು ಶಸ್ತತ್ರ ಭಾವಿತಾಃ ಕೃಷ್ಣಮೃತ್ತಿಕಾಃ ।
ಖುಷ್ಯಪಿತ್ತಘೃತ ಶ್ಯಾಮಾಪಾಲಿನ್ದೀತಣ್ಡುಲೀಯಕೈಃ ॥೫೭॥
ಗೋಮಯ ಸ್ವರಸೋವಾಪಿ ಹಿತೋವಾ ಮಾಲತೀರಸಃ ।
ರಸೋ ಮೂಷಿಕಪರ್ಣ್ಯಾ ವಾ ಧೂಮೋವಾಗಾರ ಸಂಭವಃ ॥೫೮॥
ಶಿರೋಽಭ್ಯಙ್ಗಃ ಶಿರಃಸ್ತ್ರಾಣಂ ಸ್ನಾನಮುಷ್ಣೀಷಮೇವ ಚ ।
ಸ್ರಜಶ್ಚ ವಿಷಸಂಸೃಷ್ಟಾಃ ಸಾಧಯೇದವಲೇಖನಾತ್ ॥೫೯॥

ಅರ್ಥ—ವಿಷ ಸಂಬದ್ಧವಾದ ಬಾಚಣಿಗೆ ಶೀರಣಿಗೆಗಳಿಂದ ತಲೆ ಬಾಚಿಕೊಂಡರೆ ತಲೆ ಕೂದಲು ಉದುರುತ್ತದೆ, ತಲೆನೋವು ರೋಮಕೂಪಗಳಿಂದ ರಕ್ತಸ್ರಾವ ಉಂಟಾಗುತ್ತದೆ, ತಲೆಯಲ್ಲಿ ಗಂಟುಗಳೇಳುತ್ತವೆ, ಇದಕ್ಕೆ ಕೃಷ್ಣಮೃಗ (ಕರಿಜಿಂಕೆ, ರುರು) ದ ಪಿತ್ತ, ತುಪ್ಪ, ನೆಳಲು, ತಿಗಡೆಬೇರು, ಕಿರಕಸಾಲೆಗಳ ಕಷಾಯದಿಂದ ಅನೇಕ ಸಾರಿ ಭಾವನೆ ಮಾಡಿದ ಕರಿಯ ಜೇಡಿಮಣ್ಣನ್ನು ಬಳಿಯಬೇಕು, ಅಥವಾ ಗೋಮಯ ರಸದಿಂದ ಭಾವನೆಮಾಡಿದ ಜಾಜೀಸೊಪ್ಪಿನ ರಸವನ್ನಾಗಲೀ, ಇಲಿಕಿವಿಗಿಡದ ರಸವನ್ನಾಗಲೀ, ಇಲ್ಲಣ (ಗೃಹಧೂಮ) ವನ್ನಾಗಲೀ ಲೇಪಿಸಬೇಕು, ವಿಷಮಿಶ್ರವಾದ ಶಿರೋಽಭ್ಯಙ್ಗತೈಲ, ತಲೆಗೆ ಹಾಕಿಕೊಳ್ಳುವ ಪೇಟ, ರುಮಾಲು, ಟೋಪಿ ಮೊದಲಾದ ತಲೆಗೆ ಮುಚ್ಚುವ ವಸ್ತ್ರಗಳು, ಸ್ನಾನ ದ್ರವ್ಯಗಳು, ತಲೆಗೆ ಇಟ್ಟುಕೊಳ್ಳುವ ಕಿರೀಟ, ಹೂವಿನ ಮಾಲೆಗಳಿಂದುಂಟಾಗುವ ಉಪದ್ರವಗಳಿಗೂ, ವಿಷಮಿಶ್ರಿತ ಬಾಚಣಿಗೆ ಮೊದಲಾದುವುಗಳಿಂದುಂಟಾಗುವ ರೋಗಗಳಿಗೆ ಹೇಳಿದ ಚಿಕಿತ್ಸೆಗಳನ್ನೇ ಮಾಡಬೇಕು.

ಮುಖಾಲೇಪೇ ಮುಖಂ ಶ್ಯಾವಂ ಯುಕ್ತಮಭ್ಯಙ್ಗಲಕ್ಷಣೈಃ ।
ಪದ್ಮಿನೀಕಣ್ಟಕಪ್ರಖ್ಯೈಃ ಕಣ್ಟಕೈಶ್ಚೋಪಚೀಯತೇ ॥೬೦॥
ತತ್ರ ಕ್ಷೌದ್ರಘೃತಂ ಪಾನಂ ಪ್ರಲೇಪಶ್ಚನ್ದನಂ ಘೃತಮ್ ।
ಪಯಸಾ ಮಧುಕಂಫಞ್ಜೀ ಬನ್ಧುಜೀವಃ ಪುನರ್ನವಾ ॥೬೧॥

ಅರ್ಥ—ವಿಷಮಿಶ್ರಿತ ಮುಖಾಲೇಪನದಿಂದ ವಿಷಮಿಶ್ರಿತ ಅಭ್ಯಂಗದಲ್ಲುಂಟಾಗುವಂತೆಯೇ ಮುಖವು ಹೊಗೆ ಬಣ್ಣವಾಗುತ್ತದೆ. ತಾವರೆಗಿಡದ ಮುಳ್ಳುಗಳಂತೆ ಮಾಂಸಾದಿಕಾರಗಳೇಳುತ್ತವೆ, ಇಂತಹ ಸಂದರ್ಭದಲ್ಲಿ ತುಪ್ಪ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು, ಶ್ರೀಗಂಧ, ತುಪ್ಪ, ಅತಿಮಧುರ,ಗಂಟುಭಾರ್ಗಿ, ನೀರಬಾಳೆ ಗೆಡ್ಡೆ, ಕೊಮ್ಮೆ ಬೇರು ಇವುಗಳನ್ನು ಹಾಲಿನಲ್ಲರೆದು ಲೇಪಿಸಬೇಕು.

ಅಸ್ವಾಸ್ಥ್ಯಃ ಕುಞ್ಜರಾದೀನಾಂ ಲಾಲಾಸ್ರಾವೋಽಕ್ಷಿರಕ್ತತಾ ।
ಸ್ಫಿಕ್ಪಾಯುಮೇಢ್ರಮುಷ್ಕೇಷು ಯಾತುಶ್ಚಸ್ಫೋಟ ಸಂಭವಃ ॥೬೨॥
ತತ್ರಾಭ್ಯಙ್ಗವದೇವೇಷ್ಟಾ ಯಾತೃವಾಹನಯೋಃ ಕ್ರಿಯಾ ।
ಶೋಣಿತಾಗಮನಂ ಖೇಭ್ಯಃ ಶಿರೋರುಕ್ಕಫಸಂಸ್ರವಃ ॥೬೩॥

ನಸ್ಯಧೂಮಗತೇ ಲಿಙ್ಗಮಿನ್ದ್ರಿಯಾಣಾಂ ಚ ವೈಕೃತಮ್ ।
ತತ್ರ ದುಗ್ಧೈರ್ಗವಾದೀನಾಂ ಸರ್ಪಿಃ ಸಾತಿವಿಷೈಃ ಶೃತಮ್ ॥೬೪॥
ಪಾನೇ ನಸ್ಯೇ ಚ ಸಶ್ವೇತಂ ಹಿತಂ ಸಮದಯನ್ತಿಕಮ್ ।

ಅರ್ಥ—ವಿಷ ಭಕ್ಷಣೆಮಾಡಿದ ಆನೆ, ಕುದುರೆಗಳಿಗೆ ಆರೋಗ್ಯ ತಪ್ಪುತ್ತದೆ, ಬಾಯಿಂದ ಜೊಲ್ಲು ಸುರಿಯುತ್ತ, ಕಣ್ಣು ಕೆಂಪಾಗುತ್ತದೆ, ಅವುಗಳ ಮೇಲೆ ಕೂತ-ಸವಾರಿ ಮಾಡುವವನಿಗೆ ಪಿರ್ರೆ, ಗುದದ್ವಾರ, ಶಿಶ್ನ, ಅಂಡಕೋಶಗಳಲ್ಲಿ ಗುಳ್ಳೆಗಳೇಳುತ್ತವೆ, ವಾಹನಗಳಾದ ಆನೆ, ಕುದುರೆಗಳಿಗೂ ಸವಾರಿಮಾಡಿದ ಮನುಷ್ಯನಿಗೂ ವಿಷದೂಷಿತ ಅಭ್ಯಂಗದಲ್ಲಿ ಉಂಟಾದ ಉಪದ್ರವಗಳಿಗೆ ಮಾಡುವಂತೆಯೇ ಚಿಕಿತ್ಸೆಮಾಡಬೇಕು ; ವಿಷಮಿಶ್ರವಾದ ನಸ್ಯಧೂಮಗಳನ್ನು ಸೇವಿಸಿದರೆ ರೋಮಕೂಪಗಳಿಂದ ರಕ್ತಸ್ರಾವವೂ, ತಲೆನೋವು, ಮುಖ ನಾಸಿಕಗಳಿಂದ ಕಫಸ್ರಾವವೂ ಆಗುತ್ತದೆ ; ಅವರಿಗೆ ಅತಿಬಜೆಯ ಘೃತವನ್ನು ಹಸುವಿನ ಹಾಲಿನಲ್ಲಿ ಕುಡಿಸಬೇಕು ಮತ್ತು ನಸ್ಯಮಾಡಿಸಬೇಕು. ಬಿಳಿಬಜೆ ಮತ್ತು ಮಲ್ಲಿಗೆಯ ಹೂವುಗಳಿಂದ ತಯಾರಿಸಿದ ತುಪ್ಪದಿಂದ ನಸ್ಯಮಾಡಿಸಿದರೆ ಹಿತಕರವಾಗುತ್ತದೆ.

ಗನ್ಧಹಾನಿರ್ವಿವರ್ಣತ್ವಂ ಪುಷ್ಪಾಣಾಂ ಮ್ಲಾನತಾ ಭವೇತ್ ॥೬೫॥
ಜಿಘ್ರತಶ್ಚ ಶಿರೋದುಃಖಂ ವಾರಿಪೂರ್ಣೇಚ ಲೋಚನೇ ।
ತತ್ರಬಾಷ್ಪೇರಿತಂ ಕರ್ಮಮುಖಾಲೇಪೇಚ ಯತ್ಸ್ಮೃತಮ್ ॥೬೬॥

ಅರ್ಥ—ಹೂವಿನ ಮಾಲಿಕೆಗೆ ವಿಷಮಿಶ್ರವಾದರೆ ವಾಸನೆ ಹೋಗುತ್ತದೆ, ಬಣ್ಣ ವ್ಯತ್ಯಾಸವಾಗುತ್ತದೆ, ಬಾಡಿ ಹೋಗುತ್ತದೆ, ಅದನ್ನು ಮೂಸಿದರೆ ತಲೆನೋವೂ, ಕಣ್ಣಿನಲ್ಲಿ ನೀರು ಸುರಿಯುವುದೂ ಉಂಟಾಗುತ್ತದೆ ಈ ಸ್ಥಿತಿಯಲ್ಲಿ ಬಾಷ್ಪಸುರಿಯುವುದಕ್ಕೂ ಮುಖಲೇಪನದಿಂದುಂಟಾಗುವ ರೋಗಗಳಿಗೂ ಮಾಡುವಂತೆಯೇ ಚಿಕಿತ್ಸಿಸಬೇಕು.

ಕರ್ಣತೈಲಗತೇ ಶ್ರೋತ್ರವೈಗುಣ್ಯಂ ಶೋಫವೇದನೇ
ಕರ್ಣಸ್ರಾವಶ್ಚ ತತ್ರಾಶು ಕರ್ತವ್ಯಂ ಪ್ರತಿಪೂರಣಮ್ ॥೬೭॥
ಸ್ವರಸೋ ಬಹುಪುತ್ರಾಯಾಃ ಸಘೃತಃ ಕ್ಷೌದ್ರಸಂಯುತಃ
ಸೋಮವಲ್ಕರಸಶ್ಚಾಪಿ ಸಶೀತೋ ಹಿತ ಇಷ್ಯತೇ ॥೬೮॥

ಅರ್ಥ—ವಿಷಮಿಶ್ರಿತ ತೈಲದಿಂದ ಕರ್ಣಪೂರಣಮಾಡಿದರೆ ಕರ್ಣಸ್ರೋತಸ್ಸು ವ್ಯತ್ಯಾಸವಾಗುತ್ತದೆ. ಊದಿ, ನೋಯುತ್ತದೆ, ಕಿವಿಯಿಂದ ಕೀವು ಸೋರುತ್ತದೆ, ಈ ಸಂದರ್ಭದಲ್ಲಿ ಕಿವಿಗೆ ಆಷಾಡಿಬೇರಿನ ಸ್ವರಸಕ್ಕೆ ತುಪ್ಪ ಜೇನುತುಪ್ಪಗಳನ್ನು ಮಿಶ್ರಮಾಡಿಯಾಗಲಿ ಬಿಳಿಕಗ್ಗಲಿ ತೊಗಟೆಯ ಸ್ವರಸವನ್ನು ತಣ್ಣಗಿರುವಂತೆ ಮಾಡಿಯಾಗಲಿ ಕಿವಿಗೆ ತುಂಬಿದರೆ ಹಿತವಾಗುತ್ತದೆ.

ಅಶ್ರೂಪದೇಹೋ ದಾಹಶ್ಚ ವೇದನಾದೃಷ್ಟಿವಿಭ್ರಮಃ ।
ಅಞ್ಜನೇ ವಿಷಸಂಸೃಷ್ಟೇ ಭವೇದಾನ್ಧ್ಯಮಥಾಪಿ ಚ ॥೬೯॥
ತತ್ರ ಸದ್ಯೋಘೃತಂ ಪೇಯಂ ತರ್ಪಣಂ ಚ ಸಮಾಗಧಮ್ ।

ಅರ್ಥ—ವಿಷಮಿಶ್ರವಾದ ಅಞ್ಜನವನ್ನು ಕಣ್ಣಿಗೆ ಹಾಕಿದರೆ ಕಣ್ಣೀರು ಸೋರುತ್ತದೆ, ಕಣ್ಣಿನಲ್ಲಿ ಜಿಬರು ಮೆತ್ತಿಕೊಳ್ಳುತ್ತದೆ, ಕಣ್ಣುರಿತ ನೋವು, ದೃಷ್ಟಿ ವ್ಯತ್ಯಾಸ, ಕುರುಡುತನ ಇವುಗಳುಂಟಾಗುತ್ತವೆ, ಆ ಸಂದರ್ಭದಲ್ಲಿ ಆಗತಾನೆ ಕಾಯಿಸಿದ ತುಪ್ಪವನ್ನು ಕುಡಿಸಬೇಕು, ಅನೇಕಸಾರಿ ಹಾಲಿನಲ್ಲಿ ಕಾಸಿದ ಹಿಪ್ಪಲಿ ಪುಡಿಯನ್ನು ಸೇರಿಸಿ ತಯಾರಿಸಿದ ಘೃತಮಿಶ್ರಮಾಡಿದ ತರ್ಪಣವನ್ನು ಸೇವಿಸಬೇಕು.

ಅಞ್ಜನಂ ಮೇಷಶೃಙ್ಗಸ್ಯ ನಿರ್ಯಾಸೋ ವರುಣಸ್ಯ ಚ ||೭೦||
ದುಷ್ಕಕಸ್ಯಾಜಕರ್ಣಸ್ಯ ಫೇನೋ ಗೋಪಿತ್ತಸಂಯುತಃ ।
ಕಪಿತ್ಥಮೇಷಶೃಙ್ಗ್ಯೋಶ್ಚ ಪುಷ್ಪಂ ಭಲ್ಲಾತಕಸ್ಯವಾ ||೭೧||
ಏಕೈಕಂ ಕಾರಯೇತ್ಪುಷ್ಪಂ ಬನ್ಧೂಕಾಙ್ಕೋಟಯೋರಪಿ ।

ಅರ್ಥ—ಮೇಷಶೃಙ್ಗೀ (ಗೆರ್ಶೆಹಂಬು ಗುಡ್‌ಮಾರ್) ಸೊಪ್ಪಿನರಸ, ಮಟ್ಟಿಮಾವಿನ ತೊಗಟೆಯ ಕಷಾಯ, ಕರಿಮುಳ್ಳು ಮುತ್ತುಗದ, ಸಾಲವೃಕ್ಷದ, ಗೋರೋಚನ ಮಿಶ್ರಮಾಡಿದ ಸಮುದ್ರದ ನೊರೆ, ಬೇಲದ ಹೂವು, ಗೆರ್ಶೆಹಂಬಿನ ಹೂವು, ಅಥವಾ ಗೇರು ಹೂವು, ನೀರು ಬಾಳೆಯ ಹೂವು, ಅಂಕೋಲೆ ಹೂವು ಇವುಗಳಲ್ಲಿ ಯಾವುದಾದರೂ ಒಂದನ್ನು ಅಂಜನಮಾಡಬೇಕು.

ಶೋಫಃ ಸ್ರಾವಸ್ತಥಾ ಸ್ವಾಪಃಪಾದಯೋಃ ಸ್ಫೋಟಜನ್ಮ ಚ ||೭೨||
ಭವನ್ತಿ ವಿಷಜುಷ್ಟಾಭ್ಯಾಂ ಪಾದುಕಾಭ್ಯಾಮ ಸಂಶಯಮ್
ಉಪಾನತ್ ಪಾದಪೀಠಾನಿ ಪಾದುಕಾವತ್ಪ್ರಸಾದಯೇತ್ ||೭೩||
ಭೂಷಣಾನಿ ಹತಾರ್ಚೀಂಷಿ ನ ವಿಭಾನ್ತಿ ಯಥಾಪುರಾ
ಸ್ವಾನಿ ಸ್ಥಾನಾನಿ ಹನ್ಯುಶ್ಚ ದಾಹಪಾಕಾವದಾರಣೈಃ ||೭೪||
ಪಾದುಕಾಭೂಷಣೇಷೂಕ್ತಮಭ್ಯಙ್ಗ ವಿಧಿಮಾಚರೇತ್

ಅರ್ಥ—ವಿಷಸಂಪರ್ಕವುಳ್ಳ ಹಾವುಗೆ (ಪಾದರಕ್ಷೆ)ಯನ್ನು ಮೆಟ್ಟಿದರೆ ಕಾಲುಗಳು ಊದಿ ಒಡೆದು ರಕ್ತಸ್ರಾವವಾಗುತ್ತದೆ, ಸ್ಪರ್ಶಜ್ಞಾನ ನಾಶವಾಗುತ್ತದೆ, ಬೊಬ್ಬೆಗಳು ಖಂಡಿತವಾಗಿ ಉಂಟಾಗುತ್ತವೆ, ವಿಷದೂಷಿತ ಎಕ್ಕಡ, ಪಾದಪೀಠಗಳನ್ನು ಹಾವಿಗೆಯಂತೆಯೇ ಶುದ್ಧಿಮಾಡಬೇಕು. ಒಡವೆಗಳಿಗೆ ವಿಷತಗಲಿದರೆ ಅವುಗಳಲ್ಲಿ ಮೊದಲಿನಂತೆ ಹೊಳಪಿರುವುದಿಲ್ಲ, ಅವು ತಗುಲಿದ ಶರೀರ ಭಾಗಗಳಲ್ಲಿ ಉರಿತ, ವ್ರಣಪಾಕ, ಚರ್ಮ ಬಿರಿಯುವುದು ಈ ಲಕ್ಷಣಗಳಿರುತ್ತವೆ. ಈ ರೀತಿಯಾಗಿ ವಿಷಸಂಧಿತಗಳಾದ ಪಾದುಕಾ ಭೂಷಣಗಳಿಂದುಂಟಾದ ರೋಗಿಗಳಿಗೆ ವಿಷಮಿಶ್ರಿತ ಅಭ್ಯಙ್ಗದಲ್ಲಿ ಹೇಳಿದಂತೆ ಚಿಕಿತ್ಸೆ ಮಾಡಬೇಕು.

ವಿಷೋಪಸರ್ಗೋ ಬಾಷ್ಪಾದಿರ್ಭೂಷಣಾನ್ತೋ ಯ ಈರಿತಃ ||೭೫||
ಸಮೀಕ್ಷ್ಯೋಪದ್ರವಾಂಸ್ತಸ್ಯ ವಿದಧೀತಚಿಕಿತ್ಸಿತಮ್
ಮಹಾಸುಗನ್ಧಿಮಗದಂ ಯಂಪ್ರವಕ್ಷ್ಯಾಮಿ ತಂ ಭಿಷಕ್ ||೭೬||
ಪಾನಾಲೇಪನ ನಸ್ಯೇಷು ವಿದಧೀತಾಞ್ಜನೇಷು ಚ

ವಿರೇಚನಾನಿ ತೀಕ್ಷ್ಣಾನಿ ಕುರ್ಯಾತ್ ಪ್ರಚ್ಛರ್ದನಾನಿ ಚ ||೭೭||
ಸಿರಾಶ್ಚ ವ್ಯಧಯೇತ್ ಕ್ಷಿಪ್ರಂ ಪ್ರಾಪ್ತಂ ವಿಸ್ರಾವಣಂ ಯದಿ
ಮೂಷಿಕಾಜರುಹಾ ವಾಪಿ ಹಸ್ತೇ ಬದ್ಧಾತು ಭೂಪತೇಃ ||೭೮||
ಕರೋತಿ ನಿರ್ವಿಷಂ ಸರ್ವಮನ್ನಂ ವಿಷಸಮಾಯುತಮ್

ಅರ್ಥ—ವಿಷಮಿಶ್ರಿತ ಅನ್ನದಿಂದ ಹೊರಡುವ ರಂಬೆಯು ಸೇವನೆ ಮೊದಲುಮಾಡಿ ವಿಷಸಂಪರ್ಕವಾದ ಆಭರಣವೇ ಕಡೆಯಾಗಿ ಹೇಳಿದ ಈ ವಿಷೋಪಸರ್ಗದಿಂದ ಉಂಟಾಗುವ ಉಪದ್ರವ್ಯಗಳನ್ನು ಪರಿಶೀಲಿಸಿ ತಕ್ಕಂತೆ ಹೇಳಿರುವ ಚಿಕಿತ್ಸೆಗಳನ್ನು ಮಾಡಿಸಬೇಕು, ಕಲ್ಪಸ್ಥಾನದ ೭ನೆಯ ಅಧ್ಯಾಯದಲ್ಲಿ ಹೇಳುವ ಮಹಾಸುಗನ್ಧಿಯೆಂಬ ಅಗದವನ್ನು ಪಾನ, ಲೇಪನ, ನಸ್ಯ, ಅಞ್ಜನ ವಿಧಾನಗಳನ್ನೂ ತೀಕ್ಷ್ಣಗಳಾದ ವಮನ ವಿರೇಚನೌಷಧಗಳನ್ನೂ ಪ್ರಯೋಗಿಸಬೇಕು. ರಕ್ತಸ್ರಾವವುಂಟಾದರೆ ಕೂಡಲೇ ಸಿರಾವ್ಯಧಮಾಡಿಸಿ ದುಷ್ಟರಕ್ತಹರಣವನ್ನು ಮಾಡಿಸಬೇಕು, ಮೂಷಿಕಾ, ಅಜರುಹಾ ಎಂಬ ಸಿದ್ಧೌಷಧಗಳನ್ನು (ಮೂಲಿಕಾ ವಿಶೇಷಗಳು) ರಾಜನ ಕೈಗೆ ಕಟ್ಟಿದರೆ ಸಾವಿರಾರು ವಿಧಗಳಾದ ವಿಷಮಿಶ್ರಿತಗಳಾದ ಅನ್ನಗಳನ್ನೂ ನಿರ್ವಿಷಗಳನ್ನಾಗಿ ಮಾಡುತ್ತವೆ.

ಟಿಪ್ಪಣಿ—ಶುಕ್ರಾಚಾರ್ಯರಿಂದ ಅಜರುಹಾ, ಮೂಷಿಕಾ ಎಂಬ ಸಿದ್ಧೌಷಧಲಕ್ಷಣಗಳು ಹೇಳಿರುವುದನ್ನು ವೈದ್ಯರು ಗಮನದಲ್ಲಿಡಬೇಕು. ಅಜರುಹಾ ಎಂಬುದು ಕನ್ದ, ವಿಶೇಷವು ಬಿಳುಪಾಗಿಯೂ ಗಂಟು ಗಂಟಾಗಿಯೂ ಜಿಗುಟಿದರೆ ಅಞ್ಜನ ವರ್ಣವಾಗಿಯೂ ಇರುತ್ತದೆ, ಇದರ ಗಂಧವನ್ನು ವಿಷಪೀಡಿತರಿಗೆ ಲೇಪಿಸಿ, ಕುಡಿಸಿದರೆ ವಿಷವು ಜೀರ್ಣವಾಗಿ ಬಿಡುತ್ತದೆ. ವಿಷಪ್ರಾಣಿಗಳಿಂದ ಕಚ್ಚಲ್ಪಟ್ಟವರು, ವಿಷಪಾನ ಮಾಡಿದವರು ಮತ್ತು ವಿಷಪೀಡಿತರಾದ ಅನೇಕರಿಗೆ ವಿಷವನ್ನು ಜೀರ್ಣಿಸಿಬಿಡುತ್ತನೆಯಾಗಿ "ಅಜರುಹಾ ಎಂದು ಹೆಸರುಂಟಾಯಿತು". ಮೂಷಿಕಾ ಎಂಬುದು ಅನೇಕ ಲೋಮದಂತಿರುವ ಸಣ್ಣ ಸಣ್ಣ ಬೇರುಗಳು ಅಂಟಿಕೊಂಡಿರುವ ಕಂದವು, ಅದಕ್ಕೂ ಅಜರುಹಾದಂತೆಯೇ ಗುಣಗಳಿರುತ್ತವೆ.

ಹೃದಯಾವರಣಂ ನಿತ್ಯಂ ಕುರ್ಯಾಚ್ಚ ಮಿತ್ರಮಧ್ಯಗಃ ||೭೯||
ಪಿಬೇತ್ ಘೃತಮಜೇಯಾಖ್ಯಮಮೃತಾಖ್ಯಂ ಚ ಬುದ್ಧಿಮಾನ್ |
ಸರ್ಪಿರ್ದಧಿಪಯಃ ಕ್ಷೌದ್ರೈಃ ಪಿಬೇದ್ವಾ ಶೀತಲಂ ಜಲಮ್ ||೮೦||
ಮಯೂರಾನ್ನಕುಲಾನ್ ಗೋಧಾಃ ಪೃಷತಾನ್ ಹರಿಣಾನಪಿ
ಸತತಂ ಭಕ್ಷಯೇಚ್ಚಾಪಿ ರಸಾಂಸ್ತೇಷಾಂ ಪಿಬೇದಪಿ ||೮೧||

ಅರ್ಥ—ಸ್ನೇಹಿತರ ಮಧ್ಯದಲ್ಲಿ ವಾಸಿಸುತ್ತಾ ಅತಿಮಧುರ, ಚಂಗಲ್‌ಕೋಷ್ಠ ಮೊದಲಾದುವುಗಳಿಂದ ತಯಾರಿಸಿದ ಅಜೇಯಘೃತ, ಉತ್ತರಣೆಯ ಬೀಜ, ಹಿಪ್ಪಲೀ ಮೊದಲಾದುವುಗಳಿಂದ ತಯಾರಿಸಿದ ಅಮೃತಾದಿ ಘೃತ, ತುಪ್ಪ, ಮೊಸರು, ಹಾಲು, ಜೇನು, ತುಪ್ಪ, ತಣ್ಣೀರು ಇವುಗಳಲ್ಲಿ ಅನ್ಯೋನ್ಯ ಒಟ್ಟುಕೂಡಿಸಿ ಕುಡಿದು ಹೃದಯ

ರಕ್ಷಣೆಯನ್ನು ಮಾಡಿಕೊಳ್ಳಬೇಕು. ನವಿಲು, ಮುಂಗುಸಿ, ಉಡ, ಕೃಷ್ಣಮೃಗ (ರುರು) ಕೆಂಪುಹುಲ್ಲೆ ಇವುಗಳ ಮಾಂಸವನ್ನು ಸರ್ವದಾ ಭೋಜನಮಾಡಬೇಕು ಅಥವಾ ಅವುಗಳ ಮಾಂಸ ರಸವನ್ನು ಸದಾಕಾಲದಲ್ಲೂ ಕುಡಿಯುತ್ತಿರಬೇಕು.

ಟಿಪ್ಪಣಿ—ಮೂಷಿಕಾ, ಅಜರುಹಾ, ಅಮೃತಾಘೃತ, ಅಜೇಯ ಘೃತ, ಪುರಾಣ ಘೃತ, ದೂಷೀವಿಷಾರಿ, ಮಹಾಸುಗನ್ಧಿ, ಸಿಮ್ಬಾಯೂಷ, ತೀಕ್ಷ್ಣ ವಿಷಘ್ನಧಾರಣೆ ಗಳಿಂದ ಹೃದಯ ಸಂರಕ್ಷಣೆ ಮಾಡಿಕೊಳ್ಳಬೇಕು, ಇವುಗಳಲ್ಲಿ ಮೂಷಿಕಾ, ಅಜರುಹಾ ಗಳು ಸಿದ್ಧಮೂಲಿಕೆಗಳು, ಅಮೃತಾ, ಅಜೇಯ, ಪುರಾಣ ಘೃತಗಳು ಹೃದಯಾವರಣ ವನ್ನು ಮಾಡುತ್ತವೆ, ದೂಷೀವಿಷಾರಿ, ಮಹಾಸುಗಂಧಿಗಳು ಸಿದ್ಧಾಗದ ಯೋಗಗಳು, ದ್ವಿದಳ ಧಾನ್ಯಗಳ ಯೂಷವು ಗೋಧಾನಕುಲಾದಿಗಳ ಮಾಂಸರಸ ಇವುಗಳು ವಿಷಹರ ಗಣಗಳು.

ಗೋಧಾನಕುಲಮಾಂಸೇಷು ಹರಿಣಸ್ಯ ಚ ಬುದ್ಧಿಮಾನ್ ।
ದದ್ಯಾತ್ ಸುಪಿಷ್ಟಾಂ ಪಾಲಿನ್ದೀಂ ಮಧುಕಂ ಶರ್ಕರಾಂ ತಥಾ ॥೮೨॥
ಶರ್ಕರಾತಿವಿಷೇ ದೇಯೇ ಮಾಯೂರೇ ಸ ಮಹೌಷಧೇ ।
ಪಾರ್ಷತೇ ಚಾಪಿದೇಯಾಃ ಸ್ಯುಃ ಪಿಪ್ಪಲ್ಯಃ ಸ ಮಹೌಷಧಾಃ ॥೮೩॥
ಸಕ್ಷೌದ್ರಃ ಸಘೃತಶ್ಚೈವ ಶಿಮ್ಬೀಯೂಷೋ ಹಿತಃ ಸದಾ ।
ವಿಷಘ್ನಾನಿ ಚ ಸೇವೇತ ಭಕ್ಷ್ಯಭೋಜ್ಯಾನಿ ಬುದ್ಧಿಮಾನ್ ॥೮೪॥

ಅರ್ಥ—ಬುದ್ಧಿವಂತನಾದ ವೈದ್ಯನು ಉಡ, ಮುಂಗಸಿ, ಜಿಂಕೆಗಳ ಮಾಂಸ ದೊಡನೆ ತಿಗಡೆ ಅತಿಮಧುರಗಳ ಸೂಕ್ಷ್ಮಚೂರ್ಣವನ್ನೂ ಸಕ್ಕರೆಯನ್ನೂ ಮಿಶ್ರಮಾಡಿ ಕುಡಿಸಬೇಕು, ನವಿಲಿನ ಮಾಂಸದೊಡನೆ ಸಕ್ಕರೆ, ಅತಿಬಜೆ, ಶುಂಠಿ ಇವುಗಳ ಚೂರ್ಣ ವನ್ನು ಕೃಷ್ಣಮೃಗ (ರುರು)ದ ಮಾಂಸದೊಡನೆ ಪಿಪ್ಪಲಿ ಶುಂಠಿಗಳ ಚೂರ್ಣವನ್ನು ಸೇರಿ ಸಿಯೂ, ಹೆಸರು, ಹುರುಳಿ ಮೊದಲಾದ ದ್ವಿದಳ ಧಾನ್ಯಗಳ ಕಟ್ಟಿಗೆ ತುಪ್ಪ ಜೇನುತುಪ್ಪ ಗಳನ್ನು ಮಿಶ್ರಮಾಡಿಯೂ ಸೇವಿಸಬೇಕು, ಸರ್ವದಾ ವಿಷಹರಗಳಾದ ದ್ರವ್ಯಗಳನ್ನು ಮಿಶ್ರ ಮಾಡಿದ ಭಕ್ಷ್ಯಗಳನ್ನೇ ಸೇವಿಸುತ್ತಿರಬೇಕು.

ಪಿಪ್ಪಲೀ ಮಧುಕಕ್ಷೌದ್ರ ಶರ್ಕರೇಷು ರಸಾಮ್ಬುಭಿಃ ।
ಛರ್ದಯೇದ್ದುಪ್ತಹೃದಯೋ ಭಕ್ಷಿತಂ ಯದಿವೈ ವಿಷಮ್ ॥೮೫॥

ಅರ್ಥ—ವಿಷಭಕ್ಷಣೆಯನ್ನು ಮಾಡಿದವನು ಹೃದಯಾವರಣವನ್ನು ಮಾಡಿಸಿ ಕೊಂಡು ಹಿಪ್ಪಲಿ, ಅತಿಮಧುರಗಳ ಕಲ್ಕವನ್ನು ಜೇನುತುಪ್ಪ, ಸಕ್ಕರೆ, ಕಬ್ಬಿನರಸ, ನೀರು ಇವುಗಳನ್ನು ಒಟ್ಟಿಗೆ ಸೇರಿಸಿ ಕುಡಿದು ವಮನಮಾಡಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಕಲ್ಪಸ್ಥಾನೇಽನ್ನಪಾನರಕ್ಷಾಕಲ್ಪನಾಮಕ
ಪ್ರಥಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀ
ನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ದ್ವಿತೀಯೋಽಧ್ಯಾಯಃ

ಅಥ ಸ್ಥಾವರ ವಿಷವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಅರ್ಥ — ಈ ಅಧ್ಯಾಯದಲ್ಲಿ ಶ್ರೀಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ಥಾವರ ವಿಷವಿಜ್ಞಾನವನ್ನು ವಿವರಿಸುತ್ತೇವೆ.

ಸ್ಥಾವರಂ ಜಙ್ಗಮಂ ಚೈವ ದ್ವಿವಿಧಂ ವಿಷಮುಚ್ಯತೇ ।
ದಶಾಧಿಷ್ಠಾನಮಾದ್ಯಂತು ದ್ವಿತೀಯಂ ಷೋಡಶಾಹ್ವಯಮ್ ||೩||
ಮೂಲಂಪತ್ರಂಫಲಂ ಪುಷ್ಪಂ ತ್ವಕ್‌ಕ್ಷೀರಂಸಾರ ಏವ ಚ ।
ನಿರ್ಯಾಸೋಧಾತವಶ್ಚೈವ ಕನ್ದಶ್ಚ ದಶಮಃ ಸ್ಮೃತಃ ||೪||

ಅರ್ಥ — ಸ್ಥಾವರ, ಜಙ್ಗಮ ಭೇದಗಳಿಂದ ವಿಷವನ್ನು ಎರಡು ವಿಧಗಳನ್ನಾಗಿ ವಿಂಗಡಿಸಿರುತ್ತಾರೆ. ಮೊದಲನೆಯದಾದ ಸ್ಥಾವರ ವಿಷವು ೧೦ ಆಶ್ರಯ ಸ್ಥಾನಗಳನ್ನುಳ್ಳದ್ದು, ಎರಡನೆಯದಾದ ಜಙ್ಗಮವಿಷವು ೧೬ ಆಶ್ರಯ ಸ್ಥಾನಗಳನ್ನುಳ್ಳದ್ದು ಎಂದು ತಿಳಿಯಬೇಕು. ಬೇರು, ಎಲೆ, ಹಣ್ಣು, ಹೂವು, ತೊಗಟೆ, ಹಾಲು, ಮಧ್ಯಭಾಗದ ಗಟ್ಟಿಮರ (ಸಾರ ಅಥವಾ ಕೆಚ್ಚೆದೆಯ ಭಾಗ) ಅದರ ನಿರ್ಯಾಸ (ಗೋಂದು) ಗೈರಿಕಾದಿ ಧಾತುಗಳು, ಕಂದ (ಗೆಡ್ಡೆ) ಎಂಬ ಈ ೧೦ ವಿಭಾಗಗಳುಳ್ಳದ್ದು.

ಗ.—ತತ್ರ ಕ್ಲೀತಕಾಶ್ವಮಾರಗುಞ್ಜಾ ಸುಗನ್ಧ ಗರ್ಗರಕ ಕರಘಾಟವಿದ್ಯುಚ್ಛಿಖಾ ವಿಜಯಾನೀತ್ಯಷ್ಟೌ ಮೂಲವಿಷಾಣಿ, ವಿಷಪತ್ರಿಕಾಲಮ್ಬಾವರದಾರುಕರಮ್ಭ ಮಹಾಕರಮ್ಭಾಣಿಪಞ್ಚ ಪತ್ರವಿಷಾಣಿ, ಕುಮುದ್ವತೀ ವೇಣುಕಾಕರಮ್ಭ ಮಹಾಕರಮ್ಭ ಕರ್ಕೋಟಕರೇಣುಕಖದ್ಯೋತಕ ಚರ್ಮರೀಭಗನ್ಧ ಸರ್ಪಘಾತೀನನ್ದ ಸಾರಪಾಕಾನೀತಿದ್ವಾದಶಜಲ ವಿಷಾಣಿ, ವೇತ್ರಕಾದಮ್ಬವಲ್ಲೀಜ ಕರಮ್ಭಮಹಾಕರಮ್ಭಾಣಿಪಞ್ಚಪುಷ್ಪ ವಿಷಾಣಿ, ಅನ್ತ್ರ ಪಾಚಕಕರ್ತರೀಯಸೌರೀಯಕ ಕರಘಾಟಕರಮ್ಭನನ್ದನವರಾಟಕಾನಿ ಸಪ್ತತ್ವಕ್‌ಸಾರನಿರ್ಯಾಸವಿಷಾಣಿ, ಕುಮುದಘ್ನೀ ಸ್ನುಹೀಜಾಲಕ್ಷೀರೀಣಿ ತ್ರೀಣಿಕ್ಷೀರವಿಷಾಣಿ, ಫೇಣಾಶ್ಮ (ಭಸ್ಮ) ಹರಿತಾಲಂಚ ದ್ವೇ ಧಾತುವಿಷೇ, ಕಾಲಕೂಟವತ್ಸನಾಭಸರ್ಷಪಪಾಲಕಕರ್ದಮಕ ವೈರಾಟಕಮುಸ್ತಕಶೃಙ್ಗೀವಿಷಪ್ರಪುಣ್ಡರೀಕ ಮೂಲಕ ಹಾಲಾಹಲ ಮಹಾವಿಷಕರ್ಕಟಕಾನೀತಿ ತ್ರಯೋದಶಕನ್ದ ವಿಷಾಣಿ.

ಇತ್ಯೇವಂ ಪಞ್ಚಪಞ್ಚಾಶತ್ ಸ್ಥಾವರ ವಿಷಾಣಿಭವನ್ತಿ ||೫||
ಚತ್ವಾರಿ ವತ್ಸನಾಭಾನಿ ಮುಸ್ತಕೇ ದ್ವೇ ಪ್ರಕೀರ್ತಿತೇ ।
ಷಟ್ ಚೈವ ಸರ್ಷಪಾಣ್ಯಾಹುಃ ಶೇಷಾಣ್ಯೇಕೈಕಮೇವ ತು ||೬||

ಅರ್ಥ—ಇವುಗಳಲ್ಲಿ ೧ ಕ್ಲೀತಕ (ಅತಿಮಧುರ) ೨ ಅಶ್ವಮಾರ (ಕಣಿಗಲೆ) ೩ ಗುಂಜಾ (ಗುಲಗಂಜಿ) ೪ ಸುಗನ್ಧ, ೫ ಗರ್ಗರಕ, ೬ ಕರಘಾಟ (ಮಗ್ಗಾರೆ), ೭ ವಿದ್ಯುಚ್ಛಿಖಾ, ೮ ವಿಜಯಾನೀ ಎಂಬವು ಮೂಲ ವಿಷಗಳು, ವಿಷಪತ್ರಿಕಾ, ಲಮ್ಬಾ, ವರದಾರು, ಕರಮ್ಭ, ಮಹಾಕರಮ್ಭ ಈ ೫ ಪತ್ರ ವಿಷಗಳು, ಕುಮುದ್ವತಿ, ವೇಣುಕ, ಕರಮ್ಭ ಮಹಾಕರಮ್ಭ, ಕರ್ಕೋಟಕ, ರೇಣುಕ, ಖದ್ಯೋತಕ, ಚರ್ಮರೀ, ಇಭಗನ್ಧಾ, ಸರ್ಪಘಾತಿ, ನನ್ದನ, ಸಾರಪಾಕಗಳೆಂಬ ೧೨ ಫಲವಿಷಗಳು; ವೇತ್ರ (ಬೆತ್ತದಗಿಡ), ಕಾದಮ್ಬ, ವಲ್ಲೀಜ, ಕರಮ್ಭ, ಮಹಾಕರಮ್ಭಗಳೆಂಬ ೫ ಪುಷ್ಪವಿಷಗಳು; ಅನ್ತ್ರಪಾಚಕ ಕರ್ತರೀಯಿ, ಸೌರೀಯಕ, ಕರಘಾಟಕ, ಕರಮ್ಭ, ನನ್ದನ, ವರಾಟಕಗಳೆಂಬ ೭ ತ್ವಕ್‌ಸಾರ, ನಿರ್ಯಾಸ ವಿಷಗಳು ; ಕುಮುದಘ್ನೀ, ಸ್ನುಹೀ (ಮುಂಡುಗಳ್ಳಿ), ಜಾಲಕ್ಷೀರಿಗಳೆಂಬ ೩ ಕ್ಷೀರ ವಿಷಗಳು ; ಫೇನಾಶ್ಮಭಸ್ಮ, ಅರಿದಳಗಳೆಂಬ ೨ ಧಾತು ವಿಷಗಳು ; ಕಾಲಕೂಟ, ವತ್ಸನಾಭ, ಸರ್ಷಪ, ಪಾಲಕ, ಕರ್ದಮಕ, ವೈರಾಟಕ, ಮುಸ್ತಕ, ಶೃಙ್ಗೀವಿಷ, ಪ್ರಪುಣ್ಡರೀಕ, ಮೂಲಕ, ಹಾಲಾಹಲ, ಮಹಾವಿಷ, ಕರ್ಕಟಕಗಳೆಂಬ ೧೩ ಕನ್ದವಿಷಗಳು, ಈ ರೀತಿಯಾಗಿ ೫೫ ಸ್ಥಾವರ ವಿಷಗಳಿವೆ. (ಮೂಲ, ಪತ್ರಾದಿ ವಿಷವಸ್ತುಗಳನ್ನು ಕಂಡುಹಿಡಿಯಲು ಅತಿ ಶ್ರಮಪಟ್ಟವರಿಗೂ ಅಸಾಧ್ಯವಾದ ಕಾರಣ ಹಿಮಾಲಯ ಪ್ರದೇಶಗಳಲ್ಲಿ ವಾಸಮಾಡುವ ಕಿರಾತರು, ಬೇಡರು ಮೊದಲಾದವರಿಂದ ತಿಳಿದುಕೊಳ್ಳಬೇಕು). ಈ ಪೈಕಿ ವತ್ಸನಾಭವು ೪ ವಿಧವು, ಮುಸ್ತಕವು ೨ ವಿಧವು, ಸರ್ಷಪವು ೬ ಭೇದಗಳು, ಉಳಿದುವೆಲ್ಲಾ ಒಂದೊಂದೇ ವಿಧವು.

ಉದ್ವೇಷ್ಟನಂ ಮೂಲವಿಷೈಃ ಪ್ರಲಾಪೋಮೋಹ ಏವ ಚ ।
ಜೃಮ್ಭಾಙ್ಗೋದ್ವೇಷ್ಟನಶ್ವಾಸಾಃ ಜ್ಞೇಯಾಃ ಪತ್ರವಿಷೇಣ ತು ॥೭॥
ಮುಷ್ಕಶೋಫಃ ಫಲವಿಷೈರ್ದಾಹೋಽನ್ನದ್ವೇಷ ಏವ ಚ ।
ಭವೇತ್ ಪುಷ್ಪವಿಷೈ ಚ್ಛರ್ದಿರಾಧ್ಮಾನಂ ಮೋಹ ಏವ ಚ ॥೮॥
ತ್ವಕ್ಸಾರನಿರ್ಯಾಸವಿಷೈರುಪಯುಕ್ತೈರ್ಭವನ್ತಿಹಿ ।
ಆಸ್ಯದೌರ್ಗನ್ಧ್ಯಪಾರುಷ್ಯ ಶಿರೋರುಕ್ ಕಫಸಂಸ್ರವಾಃ ॥೯॥
ಫೇನಾಗಮಃ ಕ್ಷೀರವಿಷೈರ್ವಿಡ್ಭೇದೋ ಗುರು-ಜಿಹ್ವತಾ
ಹೃತ್ಪೀಡನಂ ಧಾತುವಿಷೈ ಮೂರ್ಛಾದಾಹಶ್ಚ ತಾಲುನಿ ॥೧೦॥
ಪ್ರಾಯೇಣ ಕಾಲಘಾತೀನಿ ವಿಷಾಣ್ಯೇತಾನಿ ನಿರ್ದಿಶೇತ್ ।
ಕನ್ದಜಾನಿ ತು ತೀಕ್ಷ್ಣಾನಿ ತೇಷಾಂ ವಕ್ಷ್ಯಾಮಿ ವಿಸ್ತರಮ್ ॥೧೧॥
ಸ್ಪರ್ಶಾಜ್ಞಾನಂ ಕಾಲಕೂಟೇ ವೇಪಥುಃ ಸ್ತಮ್ಭ ಏವ ಚ
ಗ್ರೀವಾಸ್ತಮ್ಭೋ ವತ್ಸನಾಭೇ ಪೀತವಿಣ್ಮೂತ್ರನೇತ್ರತಾ ॥೧೨॥
ಸರ್ಷಪೇ ವಾತವೈಗುಣ್ಯಮಾನಾಹೋಗ್ರನ್ಥಿ ಜನ್ಮ ಚ
ಗ್ರೀವಾದೌರ್ಬಲ್ಯವಾಕ್ಸಙ್ಗೌ ಪಾಲಕೇಽನುಮತಾವಿಹ ॥೧೩॥
ಪ್ರಸೇಕಃ ಕರ್ದಮಾಖ್ಯೇನ ವಿಡ್ಭೇದೋ ನೇತ್ರಪೀತತಾ

ವೈರಾಟಕೇನಾಙ್ಗದುಃಖಂ ಶಿರೋರೋಗಶ್ಚ ಜಾಯತೇ ||೧೪||
ಗಾತ್ರಸ್ತಮ್ಭೋವೇಪಥುಶ್ಚ ಜಾಯತೇ ಮುಸ್ತಕೇನ ತು
ಶೃಙ್ಗೀವಿಷೇಣಾಙ್ಗಸಾದ ದಾಹೋದರ ವಿವೃದ್ಧಯಃ ||೧೫||
ಪುಣ್ಡರೀಕೇಣ ರಕ್ತತ್ವಮಕ್ಷ್ಣೋರ್ವೃದ್ಧಿಸ್ತಥೋದರೇ
ವೈವರ್ಣ್ಯಂ ಮೂಲಕೈಶ್ಛರ್ದಿಹಿಕ್ಕಾಶೋಫ ಪ್ರಮೂಢತಾಃ ||೧೬||
ಚಿರೇಣೋಚ್ಛ್ವಸಿತಿ ಶ್ಯಾವೋ ನರೋ ಹಾಲಾಹಲೇನ ವೈ
ಮಹಾವಿಷೇಣ ಹೃದಯೇ ಗ್ರನ್ಥಿಶೂಲೋದ್ಗಮೌ ಭೃಶಮ್ ||೧೭||
ಕರ್ಕಟೇನೋತ್ಪತತ್ಯೂರ್ಧ್ವಂ ಹಸನ್ದನ್ತಾನ್ದಶತ್ಯಪಿ
ಕನ್ದಜಾನ್ಯುಗ್ರವೀರ್ಯಾಣಿ ಪ್ರತ್ಯುಕ್ತಾನಿ ತ್ರಯೋದಶ ||೧೮||
ಸರ್ವಾಣಿ ಕುಶಲೈರ್ಜ್ಞೇಯಾನ್ಯೇತಾನಿ ದಶಭಿರ್ಗುಣೈಃ

ಅರ್ಥ—ಮೂಲ ವಿಷಸೇವನೆಯಿಂದ ಮೈನಡುಕ, ತಲೆತಿರುಗುವಿಕೆ, ಅಸಂಬದ್ಧವಾಗಿ ಮಾತನಾಡುವುದು, ಅಜ್ಞಾನ ಇವುಗಳೂ, ಪತ್ರ ವಿಷಸೇವನೆಯಿಂದ ಆಕಳಿಕೆ, ತಲೆತಿರುಗುವಿಕೆ, ಮೇಲೆ ಮೇಲೆ ಉಸಿರಾಡುವುದು (ಏದುಬ್ಬಸ) ಇವುಗಳೂ, ಫಲವಿಷಸೇವನೆಯಿಂದ ಅಂಡಕೋಶ, ಅನ್ನದ್ವೇಷ, ಮೈಉರಿ ಇವುಗಳೂ, ಪುಷ್ಪ ವಿಷಸೇವನೆಯಿಂದ ವಮನ, ಹೊಟ್ಟೆಉಬ್ಬರ, ಜ್ಞಾನತಪ್ಪುವುದೂ, ತ್ವಕ್ಸಾರ ನಿರ್ಯಾಸ ವಿಷಗಳ ಸೇವನೆಯಿಂದ ಮುಖ ದುರ್ವಾಸನೆ, ಒರಟಾಗುವುದು, ತಲೆನೋವು, ಬಾಯಿನಿಂದ ಕಫವು ಜಿನುಗುವುದು ಆಗುತ್ತವೆ. ಕ್ಷೀರವಿಷದ ಸಂಬನ್ಧವಾದರೆ ಬಾಯಿನಿಂದ ನೊರೆ ನೊರೆಯಾಗಿ ಜೊಲ್ಲು ಸುರಿಸುತ್ತದೆ, ಮಲವು ಒಡೆದು ವಿಸರ್ಜನೆಯಾಗುತ್ತದೆ, ನಾಲಿಗೆ ದಪ್ಪನಾಗುತ್ತದೆ, ಧಾತು ವಿಷಸಂಬನ್ಧವುಂಟಾದರೆ ಎದೆನೋವು ಅಂಗಳಿನಲ್ಲಿ ಉರಿತ, ಜ್ಞಾನ ತಪ್ಪುವಿಕೆ ಇವು ಉಂಟಾಗುತ್ತವೆ. ಈ ವಿಷಗಳೆಲ್ಲಾ ಕಾಲಾನ್ತರದಲ್ಲಿ ಕೊಂದುಬಿಡುತ್ತವೆಂದು ತಿಳಿಯಬೇಕು. ಕನ್ದವಿಷಗಳು ತೀಕ್ಷ್ಣವಾದುವು, ಅವುಗಳ ಲಕ್ಷಣಗಳನ್ನು ವಿಸ್ತಾರವಾಗಿ ಹೇಳುತ್ತೇನೆ. ಕಾಲಕೂಟ ವಿಷಸಂಪರ್ಕವಾದರೆ ಸ್ಪರ್ಶ ಜ್ಞಾನವಿರುವುದಿಲ್ಲ, ಮೈನಡುಕ, ಅವಯವಗಳು ಬಿಗಿದು ಹಿಡಿದುಕೊಂಡಂತಾಗುತ್ತದೆ, ವತ್ಸನಾಭದ ಸಂಪರ್ಕವಾದರೆ ಕತ್ತುಬಿಗಿದು ಹಿಡಿದುಕೊಳ್ಳುತ್ತದೆ (ಅತ್ತಿತ್ತ ಅಲ್ಲಾಡಿಸುವುದಕ್ಕಾಗುವುದಿಲ್ಲ). ಮಲ, ಮೂತ್ರ, ನೇತ್ರಗಳು ಹಳದಿಯ ಬಣ್ಣಕ್ಕೆ ತಿರುಗುತ್ತವೆ, ಸರ್ಷಪ ವಿಷ ಸಂಬಂಧದಿಂದ ವಾತವಿಕಾರ, ಹೊಟ್ಟೆಯುಬ್ಬರ, ಮೈಗಂಟುಗಳಾಗುತ್ತವೆ, ಪಾಲಕ ವಿಷ ಸಂಪರ್ಕವಾದರೆ ಕತ್ತು ದುರ್ಬಲವಾಗುತ್ತದೆ, ಮಾತು ತಡೆಯುತ್ತದೆ (ಸ್ಪಷ್ಟವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ, ಕರ್ದಮ ವಿಷಸಂಪರ್ಕದಿಂದ ಬಾಯಿಂದ ಜೊಲ್ಲು ನೀರು ಸುರಿಯುತ್ತದೆ, ಮಲವು ಒಡೆದು ಒಡಕೊಡಕಾಗಿ ಸುರಿಯುತ್ತದೆ, ಕಣ್ಣು ಹಳದಿ ಬಣ್ಣಕ್ಕೆ ತಿರುಗುತ್ತದೆ, ವೈರಾಟಕ ವಿಷದ ಸಂಬನ್ಧವುಂಟಾದರೆ ಮೈನೋವು ತಲೆಬಿಗಿದು ಹಿಡಿದಂತಾಗುತ್ತದೆ, ಮುಸ್ತಕ ವಿಷದ ಸಂಪರ್ಕದಿಂದ ಮೈಬಿಗಿದು ಹಿಡಿದಂತಾಗುತ್ತದೆ.

ಮೈನಡುಕವುಂಟಾಗುತ್ತದೆ. ಶೃಙ್ಗೀವಿಷವು ತಗುಲಿದರೆ ಮೈಕೃಶವಾಗುತ್ತದೆ, ಮೈ ಉರಿಯುತ್ತದೆ, ಹೊಟ್ಟೆದಪ್ಪನಾಗುತ್ತದೆ, ಪುಣ್ಡರೀಕ ವಿಷವು ದೇಹಕ್ಕೆ ಸೇರಿದರೆ ಕಣ್ಣು ಕೆಂಪಾಗುತ್ತದೆ, ಮೂಲಕವಿಷವು ಶರೀರಕ್ಕೆ ಸೇರಿದರೆ ಶರೀರದ ಬಣ್ಣವು ಬದಲಾಗುತ್ತದೆ, ವಮನ, ಬಿಕ್ಕಳಿಕೆ, ಶೋಭೆಗಳುಂಟಾಗುತ್ತವೆ, ಪ್ರಜ್ಞೆಇರುವುದಿಲ್ಲ, ಹಾಲಾಹಲ ವಿಷವು ಶರೀರದೊಳಗೆ ಸೇರಿದರೆ ಬಲುಕಾಲದ ಮೇಲೆ ಉಸಿರಾಡುತ್ತಾನೆ, ಮೈ ಶ್ಯಾವಬಣ್ಣಕ್ಕೆ ತಿರುಗುತ್ತದೆ, ಮಹಾವಿಷವು ದೇಹದೊಳಗೆ ಸೇರಿದರೆ ಹೃದಯದಲ್ಲಿ ಅಧಿಕವಾಗಿ ಶೂಲೆಯೂ ಗಂಟುಗಳೂ ಉಂಟಾಗುತ್ತವೆ, ಕರ್ಕಟಕ ವಿಷವು ದೇಹದಲ್ಲಿ ಸೇರಿದರೆ ಆ ರೋಗಿಯು ನಗುತ್ತಾ ಮೇಲಕ್ಕೆ ನೆಗೆದು ಕೆಳಕ್ಕೆ ಬೀಳುತ್ತಾನೆ, ಹಲ್ಲುಗಳನ್ನು ಕಡಿಯುತ್ತಾನೆ, ಈ ೧೩ ವಿಧಗಳಾದ ಕಂದವಿಷಗಳೂ ಘೋರವಿಷಗಳೆಂದು ಹೇಳಲ್ಪಟ್ಟವೆ, ಇವುಗಳನ್ನೆಲ್ಲಾ ಕುಶಲ ರಾದ ವೈದ್ಯರು ಪರೀಕ್ಷಿಸಿ ಅವುಗಳಲ್ಲಿರುವ ೧೦ ವಿಧಗಳಾದ ಗುಣಗಳನ್ನೂ ಕಂಡು ನಿರ್ಧ ರಿಸಬೇಕು.

ರೂಕ್ಷಮುಷ್ಣಂ ತಥಾ ತೀಕ್ಷ್ಣಂ ಸೂಕ್ಷ್ಮಮಾಶು ವ್ಯವಾಯಿ ಚ ॥೧೯॥
ವಿಕಾಶಿವಿಶದಂ ಚೈವ ಲಘ್ವಪಾಕಿ ಚ ತತ್ಸ್ಮೃತಮ್ ।
ತದ್ರೌಕ್ಷ್ಯಾತ್ಕೋಪಯೇದ್ವಾಯುಮೌಷ್ಣ್ಯಾತ್ಪಿತ್ತಂ ಸಶೋಣಿತಮ್ ॥೨೦॥
ಮತಿಂ ಚ ಮೋಹಯೇತ್ ತೈಕ್ಷ್ಣ್ಯಾತ್ ಮರ್ಮಬನ್ಧಾನ್ ಭಿನತ್ತಿ ಚ ।
ಶರೀರಾವಯವಾನ್ ಸೌಕ್ಷ್ಮ್ಯಾತ್ ಪ್ರವಿಶೇದ್ವಿಕರೋತಿ ಚ ॥೨೧॥
ಆಶುತ್ವಾದಾಶು ತದ್ಧನ್ತಿ ವ್ಯವಯಾತ್ ಪ್ರಕೃತಿಂಭಜೇತ್ ।
ಕ್ಷಪಯೇಚ್ಚ ವಿಕಾಸಿತ್ವಾತ್ ದೋಷಾನ್ ಧಾತೂನ್ ಮಲಾನಪಿ ॥೨೨॥
ವೈಶದ್ಯಾದತಿರಿಚ್ಯೇತ ದುಶ್ಚಿಕಿತ್ಸ್ಯಂ ಚ ಲಾಘವಾತ್ ।
ದುರ್ಹರಂ ಚಾವಿಪಾಕಿತ್ವಾತ್ ತಸ್ಮಾತ್ ಕ್ಲೇಶಯತೇ ಚಿರಮ್ ॥೨೩॥

ಅರ್ಥ—ರೂಕ್ಷ, ಉಷ್ಣ, ತೀಕ್ಷ್ಣ, ಸೂಕ್ಷ್ಮ, ಆಶುಕಾರಿ, ವ್ಯವಾಯಿ, ವಿಕಾಸಿ, ವಿಶದ, ಲಘು, ಅಪಾಕಿಗಳೆಂದು ೧೦ ವಿಷ ಗುಣಗಳುಂಟು. ಅವುಗಳಲ್ಲಿ ರೂಕ್ಷತೆಯಿಂದ ವಾಯು ಕೋಪವೂ, ಉಷ್ಣತೆಯಿಂದ ಪಿತ್ತ, ರಕ್ತಗಳ ಪ್ರಕೋಪವು, ತೀಕ್ಷ್ಣತೆಯಿಂದ ಬುದ್ಧಿನಾಶವೂ (ಬುದ್ಧಿವ್ಯತ್ಯಾಸವೂ) ಮತ್ತು ಮರ್ಮಬನ್ಧವು, ಮೈಕತ್ತರಿಸುವಿಕೆಯೂ ಸೂಕ್ಷ್ಮಗುಣದಿಂದ ಶರೀರಾವಯವಗಳನ್ನು ನುಗ್ಗಿ ವಿಕಾರಗೊಳಿಸುವಿಕೆಯೂ, ಆಶು ಗುಣ ದಿಂದ ಬೇಗ ಕೊಲ್ಲುವುದೂ, ವ್ಯವಾಯಿ ಗುಣದಿಂದ ತನ್ನಸ್ವರೂಪಕ್ಕೆ ತಿರುಗಿಬಿಡುವುದೂ, ವಿಕಾಸಿಗುಣದಿಂದ (ಹಿಂಸನ ಸ್ವಭಾವದಿಂದ), ದೋಷ, ಧಾತು ಮಲಗಳನ್ನು ನಾಶ ಮಾಡುತ್ತದೆ, ವಿಶದತೆಯಿಂದ ಒಂದು ಸ್ಥಳದಲ್ಲೂ ಭದ್ರವಾಗಿನಿಲ್ಲದಿರುವುದೂ ಲಘುಗುಣ ದಿಂದ ಚಿಕಿತ್ಸೆಗೆ ಅಸಾಧ್ಯವೂ ಈ ಲಕ್ಷಣಗಳುಂಟು. ಪಾಕವಾಗುವುದೇ ಇಲ್ಲವಾದ ಕಾರಣ (ಜಠರಾಗ್ನಿಯು ವಿಷವನ್ನು ಜೀರ್ಣಿಸಲಾರದು) ಅದನ್ನು ಹೊರಕ್ಕೆ ಹೊರಡಿಸು ವುದೇ ಬಲುಕಷ್ಟದ ಕೆಲಸ. ಆದಕಾರಣ ಬಲುಕಾಲದವರೆಗೂ ಹಿಂಸಿಸುತ್ತದೆ. ಈ

ರೀತಿಯಾಗಿ ಲಾಘವ ಅಪಾಕಿಗುಣಗಳಿಂದ ಹೊರಕ್ಕೆ ಹೊರಡಿಸುವುದು ಕಷ್ಟವಾದ ಮೇಲೆ ೧೦ ಗುಣಗಳೂ ಒಟ್ಟಾದರೆ ಕೂಡಲೇ ಕೊಂದೇ ಬಿಡುತ್ತದೆಂಬುದು ಖಂಡಿತವು.

ಸ್ಥಾವರಂ ಜಙ್ಗಮಂ ಯಚ್ಚ ಕೃತ್ರಿಮಂ ಚಾಪಿ ಯದ್ವಿಷಮ್ ।
ಸದ್ಯೋ ವ್ಯಾಪಾದಯೇತ್ ತತ್ತು ಜ್ಞೇಯಂ ದಶಗುಣಾನ್ವಿತಮ್ ॥೨೪॥
ಯತ್‌ಸ್ಥಾವರಂ ಜಙ್ಗಮಕೃತ್ರಿಮಂ ವಾ ದೇಹಾದಶೇಷಂ ಯದನಿರ್ಗತಂ ತತ್ ।

ಅರ್ಥ—ಸ್ಥಾವರ, ಜಙ್ಗಮ, ಕೃತ್ರಿಮ ವಿಷಗಳಲ್ಲಿ ಹಿಂದೆ ಹೇಳಿದ ರೌಕ್ಷ್ಯತೈಕ್ಷ್ಣ್ಯಾದಿ ಮತ್ತುಗುಣಗಳಿಂದ ಕೂಡಿದ ಯಾವುದೊಂದನ್ನೇ ಆಗಲೀ ಶರೀರದಿಂದ ಹೊರಕ್ಕೆ ಸಂಪೂರ್ಣವಾಗಿ ಹೊರಡಿಸದಿದ್ದರೆ ಕೂಡಲೇ ಕೊಂದುಬಿಡುತ್ತೆಂದು ತಿಳಿಯಬೇಕು.

ಜೀರ್ಣಂ ವಿಷಘ್ನೌಷಧಿಭಿರ್ಹತಂ ವಾ ದಾವಾಗ್ನಿವಾತಾತಪ ಶೋಷಿತಂ ವಾ ॥೨೫॥
ಸ್ವಭಾವತೋ ವಾ ಗುಣವಿಪ್ರಹೀನಂ ವಿಷಂ ಹಿ ದೂಷೀವಿಷತಾ ಮುಪೈತಿ ।
ವೀರ್ಯಾಲ್ಪಭಾವಾನ್ನ ವಿಪಾತಯೇತ್ತತ್ಕಫಾವೃತಂ ವರ್ಷ ಗಣಾನುಬನ್ಧಿ ॥೨೬॥

ಅರ್ಥ—ಮೇಲೆ ಹೇಳಿದ ಸ್ಥಾವರ ವಿಷಗಳು ಹಳೆಯವಾದರೂ, ವಿಷಹರಗಳಾದ ಔಷಧಿಗಳಿಂದ ಸಂಸ್ಕಾರಹೊಂದಿ ತಮ್ಮ ವಿಷಗುಣಗಳು ನಾಶವಾದರೂ, ಕಾಡ್ಗಿಚ್ಚು ವಾತ, ಬಿಸಿಲುಗಳಲ್ಲಿ ಶೋಷಿಸಲ್ಪಟ್ಟರೂ, ಸ್ವಭಾವದಿಂದಲೇ ವಿಷಗುಣಗಳು ಹೀನ ಪ್ರಮಾಣದಿಂದಿದ್ದರೂ ದೂಷೀವಿಷನೆಂಬ ಸಂಜ್ಞೆಯುಂಟಾಗುತ್ತದೆ. ಅವುಗಳಿಗೆ ಶಕ್ತಿ ಕಡಿಮೆಯಾಗಿರುವುದರಿಂದ ಅವುಗಳನ್ನು ಹೊರಕ್ಕೆ ಹೊರಡಿಸುವುದಕ್ಕಾಗುವುದಿಲ್ಲ. ದೇಹ ದಲ್ಲಿ ಕಫದಿಂದ ಆವೃತವಾಗಿರುವ ಕಾರಣ ಅವುಗಳ ತೀಕ್ಷ್ಣೋಷ್ಣಾದಿ ಗುಣಗಳು ಕೊರತೆ ಯಲ್ಲಿ ಕಡಮೆಯಾಗಿ ಬಿಟ್ಟು ರೋಗಿಯನ್ನು ಕೊಲ್ಲಲು ಶಕ್ತಿಹೀನಗಳಾಗಿ ಬಹಳ ವರ್ಷಗಳ ವರೆಗೆ ಶರೀರದಲ್ಲೇ ಅಡಗಿದ್ದು ಆಗಾಗ ಪೀಡಿಸುತ್ತವೆಯಾಗಿ ಇವುಗಳು ದೂಷೀವಿಷ ಗಳೆಂಬ ಹೆಸರನ್ನು ಹೊಂದಿರುತ್ತವೆ. ಇವು ಸವಿಷಗಳೆಂದೂ ವಿಷವಿಲ್ಲದವುಗಳಿಗೆ ಗರ ವೆಂದೂ (ಕೈಮುಸಗು) ಈ ದೂಷೀವಿಷ ಮತ್ತು ಗರಗಳೆರಡೂ ಕೃತ್ರಿಮವಿಷಭೇದಗಳೆಂದು ತಿಳಿಯಬೇಕು.

ತೇನಾರ್ದಿತೋ ಭಿನ್ನಪುರೀಷವರ್ಣೋ ವಿಗನ್ಧವೈರಸ್ಯಮುಖಃ ಪಿಪಾಸೀ ।
ಮೂರ್ಛನ್ವಮನ್ ಗದ್ಗದವಾಗ್ವಿಷಣ್ಣೋ ಭವೇಚ್ಚ ದೂಷ್ಯೋ ದರಲಿಙ್ಗಜುಷ್ಟಃ ॥೨೭॥
ಆಮಾಶಯಸ್ಥೇ ಕಫವಾತರೋಗೀ ಪಕ್ವಾಶಯಸ್ಥೇಽನಿಲಪಿತ್ತರೋಗೀ ।
ಭವೇನ ರೋ ಧ್ವಸ್ತಶಿರೋರುಹಾಙ್ಗೋ ವಿಲೂನಪಕ್ಷಸ್ತು ಯಥಾವಿಹಙ್ಗಃ ॥೨೮॥
ಸ್ಥಿತಂ ರಸಾದಿಷ್ವಥವಾ ಯಥೋಕ್ತಾನ್ ಕರೋತಿ ಧಾತು ಪ್ರಭವಾನ್ ವಿಕಾರಾನ್ ।
ಕೋಪಂ ಚ ಶೀತಾನಿಲದುರ್ದಿನೇಷು ಯಾತ್ಯಾಶು ಪೂರ್ವಂ ಶ್ರುಣು ತತ್ರರೂಪಮ್ ॥೨೯॥
ನಿದ್ರಾಗುರುತ್ವಂ ಚ ವಿಜೃಮ್ಭಣಂ ಚ ವಿಶ್ಲೇಷಹರ್ಷಾವಥವಾಙ್ಗಮರ್ದಃ ।

ಅರ್ಥ : ದೂಷೀವಿಷ ಪೀಡಿತನು ಭಿನ್ನಪುರೀಷದ ಬಣ್ಣದಂತಿರುವ ಚರ್ಮವುಳ್ಳವನಾಗಿರುತ್ತಾನೆ, ಬಾಯಿವಾಸನೆ ವ್ಯತ್ಯಾಸವಾಗಿ ಪದಾರ್ಥಗಳು ರುಚಿಸದೆ ನೀರಡಿಕೆಯುಳ್ಳವನಾಗಿ ಜ್ಞಾನತಪ್ಪಿ ವಮನ ಮಾಡುತ್ತಾನೆ. ಗದ್ಗದನಾಗಿ ಮಾತನಾಡುತ್ತಾ (ಅಸ್ಪಷ್ಟವಾಗಿ ಮೆಲ್ಲಗೆ ಮಾತನಾಡುತ್ತಾನೆ) ವ್ಯಥೆಪಡುತ್ತಾನೆ. ದೂಷೀವಿಷವು ಆಮಾಶಯದಲ್ಲಿದ್ದರೆ ಕಫವಾತರೋಗಿಯಾಗಿಯೂ (ಕೆಮ್ಮು, ಉಬ್ಬಸ ಮೊದಲಾದುವುಗಳಿಂದಲೂ) ಪಕ್ವಾಶಯದಲ್ಲಿದ್ದರೆ ವಾತಪಿತ್ತರೋಗಿಯಾಗಿಯೂ (ಅತಿಸಾರ ಗ್ರಹಣೀ ಮೊದಲಾದುವುಗಳಿಂದ ಪೀಡಿತನಾಗಿಯೂ), ತಲೆಕೂದಲೂ, ಶರೀರದ ಅಂಗಗಳೂ ಕಿತ್ತು ಬೀಳುತ್ತವೆಯಾಗಿ ರೆಕ್ಕೆಗಳು ಉದುರಿದ ಪಕ್ಷಿಯಂತೆ ವಿಕಾರವಾಗಿ ಕಾಣುತ್ತಾನೆ. ರಸಾದಿ ಸಪ್ತಧಾತುಗಳಲ್ಲಿ ಈ ದೂಷೀವಿಷವು ಸೇರಿಕೊಂಡಿದ್ದರೆ ಧಾತುಗಳ ಕ್ಷೀಣತೆಯುಂಟಾಗಿ ರೋಗಗಳನ್ನುಂಟುಮಾಡುತ್ತದೆ. ಶೀತಕಾಲದಲ್ಲೂ, ತಂಗಾಳಿ ಮತ್ತು ಮೋಡಗಳಿಂದ ಸೂರ್ಯನು ಮುಚ್ಚಿ ಹೋಗಿರುವ ದುರ್ದಿನಗಳಲ್ಲಿಯೂ ಈ ವಿಷವು ಪ್ರಕೋಪಗೊಳ್ಳುತ್ತದೆ. ಆಗ ರೋಗಿಯು ದೇಹದಲ್ಲಿ ನಿದ್ರೆ, ಮೈಭಾರ, ಆಕಳಿಕೆ, ಅಂಗಗಳು ಸಡಿಲಿಸುವುದು, ಮೈರೋಮಾಂಚನವಾಗುವುದು, ಮೈಕತ್ತರಿಸುವಂತೆ ನೋಯುವುದು, ಇವೇ ದೂಷೀವಿಷವು ಪ್ರಕೋಪಿಸಿದರೆ ಉಂಟಾಗುವ ಲಕ್ಷಣಗಳೆಂದು ತಿಳಿಯಬೇಕು.

ತತಃ ಕರೋತ್ಯನ್ನಮದಾವಿಪಾಕಾವರೋಚಕಂ ಮಣ್ಡಲಕೋಠಮೋಹಾ೯ ||೩೦||
ಧಾತುಕ್ಷಯಂ ಪಾದಕರಾಸ್ಯಶೋಫಂ ದಕೋದರಂ ಛರ್ದಿಮಥಾತಿಸಾರಮ್ |
ವೈವರ್ಣ್ಯ ಮೂರ್ಛಾವಿಷಮಜ್ವರಾ೯ ವಾ ಕುರ್ಯಾತ್ ಪ್ರವೃದ್ಧಾಂ ಪ್ರಬಲಾಂ ತೃಷಾಂ ವಾ ||೩೧||
ಉನ್ಮಾದಮನ್ಯಜ್ಜನಯೇತ್ ತಥಾನ್ಯದಾನಾಹಮನ್ಯತ್ ಕ್ಷಪಯೇಚ್ಚ ಶುಕ್ರಮ್ |
ಗಾದ್ಗದ್ಯಮನ್ಯಜ್ಜನಯೇಚ್ಚ ಕುಷ್ಠಂ ತಾಂಸ್ತಾ೯ ವಿಕಾರಾಂಶ್ಚ ಬಹುಪ್ರಕಾರಾ೯ ||೩೨||
ದೂಷಿತಂ ದೇಶಕಾಲಾನ್ನದಿವಾಸ್ವಪ್ನೈರಭೀಕ್ಷ್ಣಶಃ |
ಯಸ್ಮಾದ್ದೂಷಯತೇ ಧಾತೂ೯ ತಸ್ಮಾದ್ದೂಷೀವಿಷಂ ಸ್ಮೃತಮ್ ||೩೩||

ಅರ್ಥ—ಪೂರ್ವರೂಪಗಳುಂಟಾದ ಮೇಲೆ ಕ್ರಮವಾಗಿ ವ್ಯಾಧಿಲಕ್ಷಣಗಳೇ ವ್ಯಕ್ತವಾಗಿ ಕಾಣಿಸುತ್ತವೆ. ಹೇಗೆಂದರೆ:—ಅನ್ನಭೋಜನದಿಂದ ಮತ್ತತೆಯುಂಟಾಗುತ್ತದೆ. ಆಹಾರವು ಜೀರ್ಣಿಸುವುದಿಲ್ಲ. ಅರುಚಿಯೂ, ಮೈಮೇಲೆ, ಹುಳುಕಡ್ಡಿ, ಪಿತ್ತದಗಂಧೆಗಳೇಳುವಿಕೆ, ಜ್ಞಾನಹಾನಿ, ಧಾತುಕ್ಷೀಣತೆ, ಕಾಲು ಕೈ ಮುಖಗಳಲ್ಲಿ ಶೋಫ, ಉದಕೋದರ, ವಮನ, ಅತಿಸಾರ, ಬಣ್ಣದ ವ್ಯತ್ಯಾಸ, ಜ್ಞಾನಹಾನಿ, ವಿಷಮಜ್ವರ ಮತ್ತು ಪ್ರಬಲವಾದ ನೀರಡಿಕೆ ಇವು ಉಂಟಾಗುತ್ತವೆ, ಕೆಲವು ಉನ್ಮಾದ ಹೊಟ್ಟೆಯುಬ್ಬರವನ್ನೂ, ಶುಕ್ರಕ್ಷಯವನ್ನೂ, ಗದ್ಗದಸ್ವರ, ಕುಷ್ಠ ಮುಂತಾದ ರೋಗಗಳನ್ನು ಉಂಟುಮಾಡುತ್ತವೆ. ದೇಶ, ಕಾಲ, ಅನ್ನ, ಹಗಲು ನಿದ್ರೆ ಇವುಗಳಿಂದ ಆಗಾಗ ಕೆರಳಿಸಲ್ಪಟ್ಟು, ದೇಹದಲ್ಲಿ ಅಡಗಿರುವ

ಅಲ್ಪವೀರ್ಯದ ವಿಷಗಳು ಶರೀರದ ಧಾತುಗಳನ್ನು ದೂಷಿಸುವ ಕಾರಣ (ಕೆಡಿಸುವ) ದೂಷೀವಿಷವೆಂದು ಹೆಸರು ಬಂದಿತು.

ಟಿಪ್ಪಣಿ—ದೇಶ, ಅಧಿಕವಾಗಿ ಗಾಳಿ, ಶೀತ, ಮಳೆಗಳಿರುವ ಭೂಭಾಗವು. ಕಾಲ, ಶೀತಗಾಳಿ ದುರ್ದಿನ ಮೊದಲಾದುವು. ಅನ್ನ, ಮದ್ಯ, ಎಳ್ಳು, ಹುರುಳಿ ಮೊದಲಾದುವು ಅನ್ನದೊಡನೆ ಸೇರಿ ವಿಷವನ್ನು ಕೆರಳಿಸಿ ಆಮಾಶಯ ಪಕ್ವಾಶಯ ರೋಗಗಳನ್ನೂ ರಸಾದಿ ಧಾತುಗತ ರೋಗಗಳನ್ನೂ ಉಂಟುಮಾಡುತ್ತವೆ.

ಸ್ಥಾವರಸ್ಯೋಪಯುಕ್ತಸ್ಯ ವೇಗೇ ತು ಪ್ರಥಮೇನೃಣಾಮ್ ।
ಶ್ಯಾವಾ ಜಿಹ್ವಾ ಭವೇತ್ ಸ್ತಬ್ಧಾ ಮೂರ್ಛಾಶ್ವಾಸಶ್ಚ ಜಾಯತೇ ॥೩೪॥
ದ್ವಿತೀಯೇ ವೇಪಥುಃ ಸಾದೋದಾಹಃ ಕಣ್ಠರುಜಸ್ತಥಾ ।
ವಿಷಮಾಮಾಶಯಪ್ರಾಪ್ತಂ ಕುರುತೇ ಹೃದಿವೇದನಾಮ್ ॥೩೫॥
ತಾಲುಶೋಷಂ ತೃತೀಯೇ ತು ಶೂಲಂ ಚಾಮಾಶಯೇಭೃಶಮ್ ।
ದುರ್ವರ್ಣೇ ಹರಿತೇ ಶೂನೇ ಜಾಯತೇ ಚಾಸ್ಯಲೋಚನೇ ॥೩೬॥
ಪಕ್ವಾಶಯಗತೇ ತೋದೋ ಹಿಕ್ಕಾಕಾಸೋಽನ್ತ್ರಕೂಜನಮ್ ।
ಚತುರ್ಥೇ ಜಾಯತೇ ವೇಗೇ ಶಿರಸಶ್ಚಾತಿ ಗೌರವಮ್ ॥೩೭॥
ಕಫಪ್ರಸೇಕೋ ವೈವರ್ಣ್ಯಂ ಪರ್ವಭೇದಶ್ಚ ಪಞ್ಚಮೇ ।
ಸರ್ವದೋಷ ಪ್ರಕೋಪಶ್ಚ ಪಕ್ವಾಧಾನೇ ಚ ವೇದನಾ ॥೩೮॥
ಷಷ್ಠೇ ಪ್ರಜ್ಞಾಪ್ರಣಾಶಶ್ಚ ಭೃಶಂ ಚಾಪ್ಯತಿಸಾರ್ಯತೇ ।
ಸ್ಕನ್ಧಪೃಷ್ಠಕಟೀಭಙ್ಗಃ ಸನ್ನಿರೋಧಶ್ಚ ಸಪ್ತಮೇ ॥೩೯॥
ಪಕ್ವಾಮಾಶಯಯೋಸ್ತೋದೋ ॥ಇತಿ ಪಾಠಾನ್ತರಮ್॥

ಅರ್ಥ—ಸ್ಥಾವರ ವಿಷವನ್ನು ಕುಡಿದವರಿಗೆ ಮೊದಲನೆಯ ವೇಗದಲ್ಲಿ ನಾಲಿಗೆಯು ಹೊಗೆಯ ಬಣ್ಣದಂತಾಗಿ ಬಿಗಿದುಕೊಂಡಿರುತ್ತದೆ (ಹಿಂದಕ್ಕೂ ಮುಂದಕ್ಕೂ ಆಡಿಸುವುದಕ್ಕೆ ಆಗುವುದಿಲ್ಲ). ಜ್ಞಾನ ತಪ್ಪುತ್ತದೆ, ಮೇಲುಸುರು ಆಡುತ್ತದೆ. ಎರಡನೆಯ ವೇಗದಲ್ಲಿ ಮೈನಡುಕ, ಕೃಶತ್ವ, ಉರಿತ ನವೆ, ನೋವುಗಳುಂಟಾಗುತ್ತವೆ. ಆಮಾಶಯಕ್ಕೆ ವಿಷಸೇರಿದರೆ ಎದೆಯಲ್ಲಿ ನೋವುಂಟಾಗುತ್ತದೆ. ಮೂರನೆಯ ವೇಗದಲ್ಲಿ ಅಂಗಳು ಒಣಗುತ್ತದೆ, ಆಮಾಶಯದಲ್ಲಿ ತುಂಬಾ ನೋವಿರುತ್ತದೆ. ಕಣ್ಣುಗಳ ಬಣ್ಣ ಕೆಟ್ಟು ಹಸುರು ಬಣ್ಣವುಳ್ಳವಾಗಿ ಊದಿರುತ್ತವೆ. ವಿಷವು ಪಕ್ವಾಶಯಕ್ಕೆ ಬಂದರೆ ಚುಚ್ಚುವಿಕೆ, ಬಿಕ್ಕಳಿಕೆ ಕಾಸ, ಕರುಳಿನಲ್ಲಿ ಶಬ್ದಕೇಳುವುದು ಇವುಗಳುಂಟಾಗುತ್ತವೆ. ನಾಲ್ಕನೆಯ ವೇಗದಲ್ಲಿ ತಲೆಯು ಅತಿಯಾಗಿ ಭಾರವಾಗುತ್ತದೆ, ಐದನೆಯ ವಿಷವೇಗದಲ್ಲಿ ಬಾಯಿನಿಂದ ಜೊಲ್ಲು ಸುರಿಯುತ್ತದೆ. ವರ್ಣಬದಲಾಗುತ್ತದೆ. ಬೆರಳಗಿಣ್ಣುಗಳು ಚುಚ್ಚುತ್ತವೆ. ತ್ರಿದೋಷಗಳೂ ಪ್ರಕೋಪಗೊಳ್ಳುತ್ತವೆ. ಪಕ್ವಾಶಯದಲ್ಲಿ ನೋವು ಉಂಟಾಗುತ್ತದೆ ೬ನೆಯ ವಿಷವೇಗದಲ್ಲಿ ಬುದ್ಧಿನಾಶವಾಗುತ್ತದೆ. ತುಂಬಾ ಅತಿಸಾರವಾಗುತ್ತದೆ. ೭ನೆಯ

ವಿಷವೇಗದಲ್ಲಿ ಹೆಗಲು ಬೆನ್ನು, ಸೊಂಟಗಳು ಬಿದ್ದುಹೋಗುತ್ತವೆ (ಅಂದರೆ ಜಾರಿರುತ್ತವೆ, ಮೇಲಕ್ಕೆ ಎತ್ತುವುದಕ್ಕಾಗುವುದಿಲ್ಲ), ಉಸಿರಾಡುವುದು ನಿಲ್ಲುತ್ತದೆ.

ಪ್ರಥಮೇ ವಿಷವೇಗೇ ತು ವಾಂತಂ ಶೀತಾಮ್ಬುಸೇಚಿತಮ್ ।
ಆಗದಂ ಮಧುಸರ್ಪಿರ್ಭ್ಯಾಂ ಪಾಯಯೇತ ಸಮಾಯುತಮ್ ॥೪೦॥
ದ್ವಿತೀಯೇ ಪೂರ್ವವದ್ವಾನ್ತಂ ಪಾಯಯೇತ್ತು ವಿರೇಚನಮ್ ।
ತೃತೀಯೇಽಗದಪಾನಂ ತು ಹಿತಂ ನಸ್ಯಂ ತಥಾಞ್ಜನಮ್ ॥೪೧॥
ಚತುರ್ಥೇ ಸ್ನೇಹಸಂಮಿಶ್ರಂ ಪಾಯಯೇತಾಗದಂ ಭಿಷಕ್ ।
ಪಞ್ಚಮೇಕ್ಷೌದ್ರಮಧುಕಕ್ವಾಥಯುಕ್ತಂ ಪ್ರದಾಪಯೇತ್ ॥೪೨॥
ಷಷ್ಠೇಽತೀಸಾರವತ್ ಸಿದ್ಧಿರವಪೀಡಸ್ತು ಸಪ್ತಮೇ ।
ಮೂರ್ಧ್ನಿ ಕಾಕಪದಂ ಕೃತ್ವಾ ಸಾಸೃಗ್ವಾ ಪಿಶಿತಂ ಕ್ಷಿಪೇತ್ ॥೪೩॥

ಅರ್ಥ—ವಿಷದ ಮೊದಲನೆಯ ವೇಗದಲ್ಲಿ ವಮನಮಾಡಿಸಿ ತಣ್ಣೀರನ್ನು ಮುಖದ ಮೇಲೆ ಎರಚಿ ದೂಷೀವಿಷಾರಿಯೆಂಬ ಅಗದವನ್ನು (ಪಿಪ್ಪಲಿ, ಗಂಜಣ, ಜಟಾಮಾಂಸೀ ಮೊದಲಾದುವು) ತುಪ್ಪ ಜೇನುತುಪ್ಪಗಳಿಂದ ರಂಗಳಿಸಿ ಕುಡಿಸಬೇಕು. ೨ನೇ ವೇಗದಲ್ಲಿ ವಮನ ಮತ್ತು ವಿರೇಚನಗಳನ್ನೂ, ಅಗದ ಪಾನವನ್ನೂ ಮಾಡಿಸಬೇಕು. ೩ನೆಯ ವೇಗದಲ್ಲಿ ಆಗದಪಾನ, ನಸ್ಯ, ಅಞ್ಜನಗಳನ್ನೂ, ೪ನೆಯ ವೇಗದಲ್ಲಿ ತುಪ್ಪದಲ್ಲಿ ಅಗದ ಪಾನವನ್ನೂ, ೫ನೆಯ ವೇಗದಲ್ಲಿ ಅತಿವ ಧುರ ಕಷಾಯಕ್ಕೆ ಜೇನುತುಪ್ಪ ಬೆರೆಸಿ ಅಗದ ಪಾನವನ್ನೂ ಮಾಡಿಸಬೇಕು. ೬ನೆಯ ವೇಗದಲ್ಲಿ ಅತಿಸಾರ ಪೀಡಿತನಿಗೆ ಮಾಡುವಂತೆ ದೀಪನಪಾಚನಾದಿ ಚಿಕಿತ್ಸೆಗಳನ್ನು ಮಾಡಬೇಕು. ಏಳನೆಯ ವಿಷವೇಗದಲ್ಲಿ ಅವಪೀಡ ನಸ್ಯವನ್ನು ಮಾಡಿಸಬೇಕು. ನೆತ್ತಿಯಲ್ಲಿ ಕಾಗೆ ಕಾಲಿನಂತೆ ಚೂರಿಯಿಂದ ಸೀಳಿ ಘಾಯ ಮಾಡಿ ರಕ್ತಮಿಶ್ರಿತವಾದ ಆಗತಾನೇ ಕತ್ತರಿಸಿದ ಆಡು, ಜಿಂಕೆ ಮೊದಲಾದುವುಗಳ ಮಾಂಸವನ್ನು ರಕ್ತಸಮೇತ ಆ ಕಾಕಪದದ ಮೇಲಿರಿಸಿ ಕಟ್ಟಬೇಕು.

ವೇಗಾನ್ತರೇತ್ವನ್ಯತಮೇಕೃತೇ ಕರ್ಮಣಿಶೀತಳಾಮ್ ।
ಯವಾಗೂಂ ಸಘೃತಕ್ಷೌದ್ರಾಮಿಮಾಂದದ್ಯಾದ್ವಿಷಾಪಹಮ್ ॥೪೪॥
ಕೋಶಾತಕ್ಯೋಽಗ್ನಿಕಃ ಪಾಠಾಸೂರ್ಯವಲ್ಯಮೃತಾಭಯಾಃ ।
ಶಿರೀಷಃ ಕಿಣಿಹೀಶ್ವೇಲುರ್ಗಿರ್ಯಾಹ್ವಾ ರಜನೀದ್ವಯಮ್ ॥೪೫॥
ಪುನರ್ನವೇಹರೇಣುಶ್ಚ ತ್ರಿಕಟುಃ ಸಾರಿವೇ ಬಲಾ ।
ಏಷಾಂ ಯವಾಗೂರ್ನಿಃಕ್ವಾಥೇ ಕೃತಾಹನ್ತಿ ವಿಷದ್ವಯಮ್ ॥೪೬॥
ಮಧುಕಂ ತಗರಂ ಕುಷ್ಠಂ ಭದ್ರದಾರುಹರೇಣವಃ ।
ಪುನ್ನಾಗೈಲೈಲವಾಲೂನಿ ನಾಗಪುಷ್ಪೋತ್ಪಲಂ ಸಿತಾ ॥೪೭॥
ವಿಡಙ್ಗಂ ಚನ್ದನಂ ಪತ್ರಂ ಪ್ರಿಯಙ್ಗುಧ್ಯಾಮಕಂ ತಥಾ ।
ಹರಿದ್ರೇದ್ವೇ ಬೃಹತ್ಯೌ ಚ ಸಾರೇವೇ ಚ ಸ್ಥಿರಾ ಸಹಾ ॥೪೮॥

ಕಲ್ಕೈರೇಷಾಂ ಘೃತಂ ಸಿದ್ಧಮಜೇಯಮಿತಿವಿಶ್ರುತಮ್ |
ವಿಷಾಣಿ ಹನ್ತಿ ಸರ್ವಾಣಿ ಶೀಘ್ರಮೇವಾಜಿತಂ ಕ್ವಚಿತ್ ||೪೯||

ಅರ್ಥ—ವೇಗಗಳ ಮಧ್ಯದಲ್ಲಿ ಶೀತಕ್ರಿಯೆಯನ್ನು ಮಾಡಿಸಿ (ಸ್ನಾನಲೇಪಾದಿಗಳು ಶೀತಲಗಳಾಗಿರಬೇಕು.) ವಿಷಹರದ್ರವ್ಯ ಕಷಾಯ ಸಿದ್ಧ ಯವಾಗುವಿಗೆ ತುಪ್ಪ ಜೇನು ತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು. ಹೀರೆ, ವಾದಕ್ಕಿ, ಅಗಳು ಶುಂಠಿ, ಪಡವಲ ದೆಲೆಗೆ ಸಮಾನವಾದ ಎಲೆಯುಳ್ಳ ಸೂರ್ಯವಳ್ಳಿಯೆಂಬ ಮೂಲಿಕೆ (ಎಕ್ಕದೆಲೆಯೆಂದು ಸುಧಾಕಾರರಮತ, ಸೂರ್ಯಕಾನ್ತಿಯೆಂದು ಕೆಲವರು) ಅಮೃತವಳ್ಳಿ, ಅಣಿಲೆಕಾಯಿ, ಬಾಗೆಬಿತ್ತ, ಉತ್ತರಣೆಯ ಬೀಜ, ಚಳ್ಳೆಹಣ್ಣು, ಗಿರಿಕರ್ಣಿಕೆ (ಬಿಳಿದು) ಅರಶಿನ, ಮರ ದರಶಿನ, ಬಿಳಿಕೊಮ್ಮೆ, ಕೆಂಪುಕೊಮ್ಮೆ, ರೇಣುಕೆಬೀಜ, ತ್ರಿಕಟು, ಸೊಗದೆಬೇರು (ಬಿಳಿದು, ಕರಿದು), ಕಳ್ಳಂಗಡಲೆ ಇವುಗಳನ್ನು ಷಡಂಗಪಾನೀಯದಂತೆ ಕಷಾಯಮಾಡಿ ಅದರಿಂದ ತಯಾರಿಸಿದ ಯವಾಗೂವನ್ನು ಪಾನಮಾಡಿಸಿದರೆ ಸ್ಥಾವರ ಜಙ್ಗಮಗಳೆಂಬೆ ರಡು ವಿಧ ವಿಷಗಳೂ ಗುಣವಾಗುತ್ತವೆ. ಅತಿಮಧುರ, ತಗರ, ಚಂಗಲ್‌ಕೋಷ್ಠ, ದೇವದಾರು, ರೇಣುಕೆಬೀಜ, ಸುರಹೊನ್ನೆಹೂವು, ಏಲಾವಾಲುಕವೆಂಬ ದ್ರವ್ಯ, ಏಲಕ್ಕಿ, ನಾಗಕೇಸರಿ, ನೈದಿಲೆಗೆಡ್ಡೆ, ಸಕ್ಕರೆ, ವಿಡಂಗ, ಶ್ರೀಗಂಧ, ತಮಾಲಪತ್ರೆ, ನೆಳಲು, ಪರಿ ಮಳಗಂಜಣಿಹುಲ್ಲು, ಅರಿಶಿನ, ಮರದರಿಶಿನ, ಹೆಗ್ಗುಳ್ಳ. ನೆಲಗುಳ್ಳ, ಬಿಳಿ ಮತ್ತು ಕರಿ ಸೊಗದೆಬೇರು, ಒಂದೆಲೆಹೊನ್ನೆ, ಕಾಡುಹೆಸರು ಇವೆಲ್ಲವನ್ನೂ ಸಮವಾಗಿ ಸೇರಿಸಿ ಕಲ್ಕ ಮಾಡಿ ಕಲ್ಕದ ೪ ಭಾಗ ತುಪ್ಪವನ್ನೂ ತುಪ್ಪದ ೪ ರಷ್ಟು ನೀರನ್ನೂ ಸೇರಿಸಿ ತಯಾರಿಸಿದ ಘೃತಕ್ಕೆ ಅಜೇಯಘೃತವೆಂಬ ಹೆಸರು ಪ್ರಸಿದ್ಧವಾಗಿದೆ. ಈ ಘೃತವನ್ನು ಪಾನಾಞ್ಜನ ನಸ್ಯಗಳಿಂದ ಪ್ರಯೋಗಿಸಿದರೆ ಸಕಲವಿಧ ವಿಷಗಳೂ ನಿವಾರಣೆಯಾಗುತ್ತವೆ. ಇದರ ಪ್ರಯೋಗದಿಂದ ನಿವಾರಣೆಯಾಗದ ಸ್ಥಾವರ ಜಙ್ಗಮಾದಿ ವಿಷಗಳೊಂದೂ ಇಲ್ಲ. ಸಿದ್ಧ ಪ್ರಯೋಗವು.

ದೂಷೀವಿಷಾರ್ತಂ ಸುಸ್ವಿನ್ನಮೂರ್ಧ್ವಂಚಾಧಶ್ಚ ಶೋಧಿತಮ್ |
ಪಾಯಯೇತಾಗದಂ ನಿತ್ಯಮಿಮಂ ದೂಷೀವಿಷಾಪಹಮ್ ||೫೦||
ಪಿಪ್ಪಲ್ಯೋ ಧ್ಯಾಮಕಂ ಮಾಂಸೀ ಸಾವರಃಪರಿಪೇಲವಮ್ |
ಸುವರ್ಚಿಕಾ ಸಸೂಕ್ಷ್ಮೈಲಾ ತೋಯಂ ಕನಕಗೈರಿಕಮ್ ||೫೧||
ಕ್ಷೌದ್ರಯುಕ್ತೋಽಗದೋಹ್ಯೇಷ ದೂಷೀವಿಷಮಪೋಹತಿ |
ನಾಮ್ನಾ ದೂಷೀವಿಷಾರಿಸ್ತು ನ ಚಾನ್ಯತ್ರಾಪಿ ವಾರ್ಯತೇ ||೫೨||

ಅರ್ಥ—ದೂಷೀ ವಿಷಪೀಡಿತನಿಗೆ ಚೆನ್ನಾಗಿ ಸ್ವೇದನವನ್ನೂ ವಮನ ವಿರೇಚನ ಗಳಿಂದ ಶೋಧನವನ್ನೂ ಮಾಡಿಸಿದನಂತರ ಈ ಕೆಳಗೆ ಹೇಳುವ ದೂಷೀವಿಷಾರಿ ಎಂಬ ಅಗದವನ್ನು ಸದಾ ಕುಡಿಸಬೇಕು. ಹಿಪ್ಪಲಿ, ಪರಿಮಳಗಂಜಣಿ ಹುಲ್ಲಿನಬೇರು, ಜಟಾ ಮಾಂಸೀ, ಲೋಧ್ರ, ನಾಗರಮುಸ್ತೆ (ಚೇಣಿಜೊಂಡಿನಬುಡ) ಸೌವರ್ಚಲವಣ, ಸಣ

ಏಲಕ್ಕಿ, ಕನಕಬಣ್ಣದ ಕಾವಿಮಣ್ಣು ಇವನ್ನು ನೀರಿನಿಂದ ನುಣ್ಣಗೆ ಅರೆದು ಗುಳಿಗೆ ಮಾಡಿಕೊಂಡು ಜೇನುತುಪ್ಪದಲ್ಲಿ ರಂಗಳಿಸಿ ಅಂಜನಹಾಕಿದರೆ ದೂಷೀವಿಷವು ನಿವಾರಣೆ ಯಾಗುತ್ತದೆ. ತೀಕ್ಷ್ಣವಿಷಗಳಾದ ಸ್ಥಾವರಜಂಗಮ ವಿಷಗಳಲ್ಲೂ ತಡೆಯಿಲ್ಲದೆ ಉಪ ಯೋಗಿಸಬಹುದು. ಜ್ವರಾದಿರೋಗಗಳಲ್ಲೂ ಪ್ರಯೋಗಿಸಲು ಯಾವ ಬಾಧಕವೂ ಇಲ್ಲವೆಂದು ಕೆಲವರ ಮತವು.

ಜ್ವರೇ ದಾಹೇ ಚ ಹಿಕ್ಕಾಯಾಮಾನಾಹೇ ಶುಕ್ರಸಂಕ್ಷಯೇ ।
ಶೋಫೇಽತಿಸಾರೇ ಮೂರ್ಛಾಯಾಂ ಹೃದ್ರೋಗೇ ಜಠರೇಽಪಿ ಚ ॥೫೩॥
ಉನ್ಮಾದೇ ವೇಪಥೌ ಚೈವ ಯೇಚಾನ್ಯೇಸ್ಯುರುಪದ್ರವಾಃ ।
ಯಥಾಸ್ವಂ ತೇಷು ಕುರ್ವೀತ ವಿಷಘ್ನೈರೌಷಧೈಃ ಕ್ರಿಯಾಮ್ ॥೫೪॥

ಅರ್ಥ—ದೂಷೀವಿಷದಿಂದ ಉಂಟಾಗುವ ಜ್ವರ, ದಾಹ, ಬಿಕ್ಕಳಿಕೆ, ಹೊಟ್ಟೆ ಯುಬ್ಬರ, ಶುಕ್ರಕ್ಷಯ, ಶೋಫ, ಅತಿಸಾರ, ಮೂರ್ಛೆ, ಹೃದ್ರೋಗ, ಉದರರೋಗ, ಉನ್ಮಾದ, ವೇಪಥು ಮತ್ತು ಇನ್ಯಾವ ಉಪದ್ರವಗಳುಂಟಾದರೂ ಅವುಗಳಿಗೆ ದೂಷೀ, ವಿಷಾರಿ, ಅಗದಮಿಶ್ರಮಾಡಿ ಆಯಾಯ ರೋಗಚಿಕಿತ್ಸೆಯನ್ನು ಮಾಡಬೇಕು.

ಸಾಧ್ಯಮಾತ್ಮವತಃ ಸದ್ಯೋ ಯಾಪ್ಯಂ ಸಂವತ್ಸರೋತ್ಥಿತಮ್
ದೂಷೀವಿಷಮಸಾಧ್ಯಂ ತು ಕ್ಷೀಣಸ್ಯಾಹಿತಸೇವಿನಃ ॥೫೫॥

ಅರ್ಥ—ದೂಷೀವಿಷ ಪೀಡಿತನು ಜಿತೇನ್ದ್ರಿಯನಾಗಿದ್ದು ಕೂಡಲೇ ಚಿಕಿತ್ಸೆ ಮಾಡಿಸಿಕೊಂಡರೆ ಸಾಧ್ಯವಾಗುತ್ತದೆ. ಪ್ರಾರಮ್ಭವಾಗಿ ವರ್ಷಕಳೆದರೆ ಯಾಪ್ಯವು. ಕೃಶನಿಗೆ ಮತ್ತು ಅಹಿತಸೇವಿಗೆ ಉಂಟಾಗಿರುವ ದೂಷೀವಿಷವು ಅಸಾಧ್ಯವಾದದ್ದು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಕಲ್ಪಸ್ಥಾನೇ ಸ್ಥಾವರವಿಷ ವಿಜ್ಞಾನೀಯ ಕಲ್ಪನಾ ಮಕ ದ್ವಿತೀಯಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ.

ತೃತೀಯೋಽಧ್ಯಾಯಃ

ಅಥಾತೋ ಜಙ್ಗಮವಿಷವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಜಙ್ಗಮ ವಿಷಜ್ಞಾನವನ್ನು ವಿವರಿಸುತ್ತೇವೆ.

ಜಙ್ಗಮಸ್ಯ ವಿಷಸ್ಯೋಕ್ತಾನ್ಯಧಿಷ್ಠಾನಾನಿ ಷೋಡಶ
ಸಮಾಸೇನ ಮಯಾ ಯಾನಿ ವಿಸ್ತರಸ್ತೇಷು ವಕ್ಷ್ಯತೇ ||೩||
ಗ-ತತ್ರ, ದೃಷ್ಟಿನಿಃಶ್ವಾಸದಂಷ್ಟ್ರಾನಖ ಮೂತ್ರಪುರೀಷ ಶುಕ್ರಲಾಲಾ
ರ್ತವಮುಖಸಂದಂಶವಿಶರ್ಧಿತ ಗುದಾಸ್ಥಿ ಪಿತ್ತಶೂಕಶವಾನೀತಿ ||೪||

ಅರ್ಥ—ಜಙ್ಗಮ ವಿಷಾಧಿಷ್ಠಾನಗಳು ೧೬ ಎಂಬುದಾಗಿ ಸಂಕ್ಷೇಪವಾಗಿ ತಿಳಿಸಿರುವುದನ್ನು ಈಗ ವಿಸ್ತಾರವಾಗಿ ವಿವರಿಸಲಾಗುತ್ತದೆ. ಅವುಗಳು ಯಾವುವೆಂದರೆ—ಕಣ್ಣಿನಿಂದ ನೋಡುವುದು, ಉಸಿರುಬಿಡುವುದು, ಹಲ್ಲಿನಿಂದ ಕಚ್ಚುವುದು, ಉಗುರುಗಳಿಂದ ಪರಚುವುದು, ಮೂತ್ರ, ಮಲ, ಶುಕ್ರ, ಜೊಲ್ಲು, ಆರ್ತವರಕ್ತ ಇವು ಶರೀರಕ್ಕೆ ತಗಲುವುದು, ಬಾಯಿನಿಂದ ಕಚ್ಚುವುದು, ಅಪಾನವಾಯುವನ್ನು ಶಬ್ದದಿಂದ ಹೊರಡಿಸುವುದು (ಹೂಸುವುದು), ಗುದ, ಮೂಳೆ, ಪಿತ್ತ, ಊಬು (ಸಣ್ಣ ಮೊನಚಾದ ಭಾಗಗಳು), ಸತ್ತದೇಹ ಇವು ಶರೀರಕ್ಕೆ ತಗುಲುವುದು.

ಗ-ತತ್ರ, ದೃಷ್ಟಿನಿಃಶ್ವಾಸವಿಷಾ ದಿವ್ಯಾಃಸರ್ಪಾಃ, ಭೌಮಾಸ್ತುದಂಷ್ಟ್ರಾವಿಷಾಃ, ಮಾರ್ಜಾರಶ್ವವಾನರ ಮಕರಮಣ್ಡೂಕ ಪಾಕಮತ್ಸ್ಯಗೋಧಾಶಮ್ಬೂಕ ಪ್ರಚಲಾಕ ಗೃಹಗೋಧಿಕಾ ಚತುಷ್ಪಾದ ಕೀಟಾಸ್ತಥಾನ್ಯೇ ದಂಷ್ಟ್ರಾನಖವಿಷಾಃ, ಚಿಪಿಟಿ ಪಿಚ್ಚಟಕ ಕಷಾಯವಾಸಿಕ ಸರ್ಷಪವಾಸಿಕ ತೋಟಕವರ್ಚಃ ಕೀಟಕೌಣ್ಡಿನ್ಯಕಾಃ ಶಕೃನ್ಮೂತ್ರವಿಷಾಃ, ಮೂಷಿಕಾಃಶುಕ್ರವಿಷಾಃ,ಲೂತಾಶ್ಚ ಲಾಲಾ ಮೂತ್ರಪುರೀಷ ಮುಖಸಂದಂಶ ನಖಶುಕ್ರಾರ್ತವವಿಷಾಃ, ವೃಶ್ಚಿಕವಿಶ್ವಮ್ಭರವರಟೀರಾಜೀವ ಮತ್ಸ್ಯೋಚ್ಚಿಟಿಙ್ಗಾಃ ಸಮುದ್ರವೃಶ್ಚಿಕಾಶ್ಚಾರವಿಷಾಃ, ಚಿತ್ರಶಿರಃಸರಾವಕುರ್ದಿತಶತದಾರುಕಾರಿಮೇದಕ ಶಾರಿಕಾಮುಖಾ ಮುಖಸಂದಂಶವಿಶರ್ಧಿತಮೂತ್ರಪುರೀಷವಿಷಾಃ, ಮಕ್ಷಿಕಾಕಣಭ ಜಲಾಯುಕಾ ಮುಖಸಂದಂಶವಿಷಾಃ, ವಿಷಹತಾಸ್ಥಿ ಸರ್ಪಕಣ್ಟಕವರಟೀಮತ್ಸ್ಯಾಸ್ಥಿ ಚೇತ್ಯಸ್ಥಿವಿಷಾಣಿ, ಶಕುಲೀಮತ್ಸ್ಯರಕ್ತರಾಜೀವರಕೀ (ಟೀ) ಮತ್ಸ್ಯಾಶ್ಚಪಿತ್ತವಿಷಾಃ, ಸೂಕ್ಷ್ಮತುಣ್ಡೋಚ್ಚಿಟಿಙ್ಗವರಟೀಶತಪದೀ ಶೂಕವಲ್ಲಭಿಕಾಶೃಙ್ಗೀಭ್ರಮರಾಃ ಶೂಕ ತುಣ್ಡವಿಷಾಃ, ಕೀಟಸರ್ಪದೇಹಾಗತಾಸವಃ ಶವವಿಷಾಃ, ಶೇಷಾಸ್ತ್ವನುಕ್ತಾ ಮುಖ ಸಂದಂಶವಿಷೇಷ್ವೇವ ಗಣಯಿತವ್ಯಾಃ ||೫||

(೧) ಸರ್ಷಪಕ ಇತಿ, (೨) ಚಾಲ ಇತಿ, (೩) ಕುರ್ದಿ ಇತಿ ಪಾಠಾನ್ತರಾಣಿ.

ಅರ್ಥ—ಅವುಗಳ ಪೈಕಿ-(೧) ದಿವ್ಯಸರ್ಪಗಳು ದೃಷ್ಟಿನಿಃಶ್ವಾಸ ವಿಷವುಳ್ಳವು ; ತಕ್ಷಕ ವಾಸುಕಿ ಮೊದಲಾದ ದೇವಲೋಕದ ಸರ್ಪಗಳು ಇವು ಒಂದುಸಾರಿ ಕಣ್ಣು ತೆರೆದರೆ ಸಕಲ ಪ್ರಾಣಿಗಳೂ ಮುಂದಿರುವ ಮರಗಿಡಮೊದಲಾದುವೆಲ್ಲಾ ಸುಟ್ಟು ಭಸ್ಮವಾಗುತ್ತವೆ —(೨) ದಂಷ್ಟ್ರಾವಿಷಗಳಿಗೆ, ಭೂಮಿಯಲ್ಲಿ ಸಂಚರಿಸುವ ನಾಗರಹಾವು, ಮಂಡಲದ ಹಾವು, ಕೇರೇಹಾವು ಮೊದಲಾದುವು. (೩) ದಂಷ್ಟ್ರಾನಖವಿಷದ ಪ್ರಾಣಿಗಳು, ಬೆಕ್ಕು, ನಾಯಿ, ಕೋತಿ, ಮೊಸಳೆ, ಕಪ್ಪೆ, ಪಾಕಮತ್ಸ್ಯ, ಉಡ, ಶಮ್ಬೂಕ (ಜಲಶುಕ್ತಿ ವಿಶೇಷವು), ಹಲ್ಲಿ, ಜಾಡರಹುಳು, ೪ ಕಾಲಿರುವ ಹುಳುಗಳು, ಬೆಕ್ಕನ್ನು ಹೇಳಿರುವುದ ಮಾಂಸಾಹಾರಿಗಳಾದ ಹುಲಿ, ಚಿರತೆ, ಸಿಂಹಾದಿಗಳೂ ಸೇರಿವೆ. (೪) ಮಲಮೂತ್ರ ವಿಷಗಳು—ಚಿಪಿಟಕ, ಪಿಚ್ಚಿಟಕ, ಕಷಾಯವಾಸಿಕ, ಸರ್ಷಪಿಕ, ತೋಟಕ ವರ್ಚಃಕೀಟ, ಕೌಣ್ಡಿನ್ಯಕ (ಇವು ಬಹು ಪುರಾತನ ಕಾಲಿಕಪದಗಳು ಇವನ್ನು ಯಾವ ಪ್ರಾಣಿಗಳಿಗೆ ವ್ಯವಹರಿಸುತ್ತಿದ್ದರೆಂಬುದು ತಿಳಿಯಬರುವುದಿಲ್ಲ. (೫) ಶುಕ್ರವಿಷ ಇಲಿಗಳು. (೬) ಜೊಲ್ಲು, ಮೂತ್ರ, ಪುರೀಷ, ಮುಖದಂಶ, ಉಗುರು, ಶುಕ್ರ, ಆರ್ತವ ವಿಷಗಳು-ಜಾಡರಹುಳುಗಳು. (೭) ಚಾಲವಿಷ (ಮುಳ್ಳು, ಶೂಕಗಳಿಂದ ವಿಷಸಂಪರ್ಕವಾಗುತ್ತದೆ), ಚೇಳು, ವಿಶ್ವಂಭರ, ಕಣಜದಹುಳು, ರಾಜೀವವೆಂಬ ಮೀನು, ಉಚ್ಚಿಟಿಂಗ, ಕಣಜ, ಸಮುದ್ರ ಚೇಳು (ಮೊಂಡರಕಪ್ಪೆ) ಇವು ಮುಳ್ಳುಗಳಿಂದ ಚುಚ್ಚುತ್ತವೆ (ಕುಟುಕುತ್ತವೆ. (೮) ಮುಖದಂಶ, ಅಪಾನವಾಯುವನ್ನು ಶಬ್ದಮಾಡುತ್ತಾ ವಿಸರ್ಜಿಸುವುದರಿಂದ, ಮೂತ್ರ ಪುರೀಷಗಳ ಸಂಪರ್ಕದಿಂದುಂಟಾಗುವ ವಿಷ ಚಿತ್ರಶಿರಃ, ಸರಾವಕುರ್ದಿತ, ಶತದಾರುಕಾ, ಅರಿಮೇದಕ, ಶಾರಿಕಾಮುಖ ಎಂಬ ಕೀಟಗಳು (ಹುಳುಗಳು). (೯) ಮುಖಸಂದಂಶ ವಿಷಗಳು_ನೊಣ, ಕಣಜದ ಹುಳು, ಜಿಗುಳಿಗಳು. (೧೦) ಅಸ್ಥಿವಿಷಗಳು—ವಿಷಪ್ರಾಣಿಗಳಿಂದ ಕಚ್ಚಲ್ಪಟ್ಟು ಸತ್ತವರ ಮೂಳೆ, ಹಾವಿನಮೂಳೆ, ಕಣಜದ ಹುಳುವಿನಮುಳ್ಳು, ಮೀನಿನ ಮೂಳೆಗಳು. (೧೧) ಪಿತ್ತವಿಷಗಳು—ಶಕುಲೀಮತ್ಸ್ಯ, ರಕ್ತರಾಜೀಮತ್ಸ್ಯ, ವರಕೀಮತ್ಸ್ಯಗಳು. (೧೨) ಊಬು, ಕೊಕ್ಕುಗಳಿಂದ ಉಂಟಾದ ವಿಷಗಳು—ಸಣ್ಣ ಕೊಕ್ಕು ಕೊಂಡಿಗಳುಳ್ಳ ಕಣಚ, ಕೆಂಜಿಗ, ಸಾವಿರಕಾಲು (ಝುರಿ), ಶೂಕವಲ್ಲಭಿಕಾ, ಕೊಂಡಿಯುಳ್ಳ ದುಂಬಿ, ಜೇನುಹುಳು ಮೊದಲಾದುವು. (೧೩) ಶವವಿಷಗಳು—ಹಾವು, ಚೇಳುಗಳು ಸತ್ತಮೇಲೆ ಅವುಗಳ ದೇಹ ಸ್ಪರ್ಶದಿಂದ, ಉಂಟಾಗುವ ವಿಷಗಳು. ಇಲ್ಲಿ ಹೇಳದೆ ಬಿಟ್ಟಿರುವ ಇತರ ವಿಧಗಳಾದ ವಿಷಸಂಪರ್ಕವು ಮುಖಸಂದಂಶದಿಂದುಂಟಾಗುತ್ತವೆಂದು ತಿಳಿಯಬೇಕು.

ಭವನ್ತಿಚಾತ್ರ—ರಾಜ್ಞೋऽರಿದೇಶೇ ರಿಪವಸ್ತೃಣಾಮ್ಬು
ಮಾರ್ಗಾನ್ನಧೂಮಶ್ವಸನಾ‌ನ್ ವಿಷೇಣ । ಸಂದೂಷಯನ್ತ್ಯೇಭಿರತಿ
ಪ್ರದುಷ್ಟಾನ್ ವಿಜ್ಞಾಯ ಲಿಙ್ಗೈರಭಿಶೋಧಯೇತ್ತಾನ್ ॥೬॥

ಅರ್ಥ—ಶತ್ರುರಾಜರ ದೇಶಕ್ಕೆ ಪ್ರವೇಶಮಾಡಿದ ಚಕ್ರವರ್ತಿಗೆ ಮತ್ತು ಸೈನಿಕರು,

ದನ, ಕುದುರೆ, ಕಾಲಾಳು ಮೊದಲಾದ ಅವನ ಪರಿಜನರಿಗೆ ಕೇಡನ್ನುಂಟುಮಾಡುವುದಕ್ಕಾಗಿ ದಾರಿಯುದ್ದಕ್ಕೂ ದೊರೆಯುವ ಹುಲ್ಲು, ಜಲಾಶಯಗಳು, ದಾರಿ, ಅನ್ನ, ಧೂಮ, ಗಾಳಿ ಇವುಗಳನ್ನು ವಿಷದಿಂದ ಕೆಡಿಸುತ್ತಾರೆ. ವಿಷಮಿಶ್ರವಾದ ನೀರು ಮತ್ತು ಹುಲ್ಲುಗಳ ಲಕ್ಷಣಗಳನ್ನು ತಿಳಿದು ಅವುಗಳನ್ನು ಶುದ್ಧಿಮಾಡಿಸಬೇಕು.

ದುಷ್ಟಂ ಜಲಂ ಪಿಚ್ಛಿಲಮುಗ್ರಗನ್ಧಿ ಫೇನಾನ್ವಿತಂ ರಾಜಿಭಿರಾವೃತಂ ಚ ।
ಮಣ್ಡೂಕಮತ್ಸ್ಯಂ ಮ್ರಿಯತೇ ವಿಹಙ್ಗಾ ಮತ್ತಾಶ್ಚ ಸಾನೂಪಚರಾ ಭ್ರಮನ್ತಿ ॥೭॥
ಮಜ್ಜಂತಿ ಯೇ ಚಾತ್ರ ನರಾಶ್ವನಾಗಾಸ್ತೇ ಛರ್ದಿಮೋಹ ಜ್ವರದಾಹಶೋಫಾ ।
ಋಚ್ಛನ್ತಿ ತೇಷಾಮಪಹೃತ್ಯ ದೋಷಾ ದುಷ್ಟಂ ಜಲಂ ಶೋಧಯಿತುಂ ಯತೇತ ॥೮॥
ಧವಾಶ್ವಕರ್ಣಾಸನಪಾರಿಭದ್ರಾ ಸಪಾಟಲಾ ಸಿದ್ಧಕ ಮೋಕ್ಷಕೌಚ ।
ದಗ್ಧ್ವಾ ಸ ರಾಜದ್ರುಮಸೋಮವಲ್ಕಾಂಸ್ತದ್ಭಸ್ಮಶೀಶಂ ವಿತರೇತ್ ಸರಸ್ಸು ॥೯॥
ಭಸ್ಮಾಞ್ಜಲಿಂ ಚಾಪಿ ಘಟೇ ನಿಧಾಯ ವಿಶೋಧಯೇದೀಪ್ಸಿತ ಮೇವಮಮ್ಭಃ ।

ಅರ್ಥ—ವಿಷದೂಷಿತವಾದ ನೀರು ಗರಣೆಗರಣೆಯಾಗಿ ಉಗ್ರವಾದ ವಾಸನೆಯುಳ್ಳದಾಗಿ ನೊರೆಯಿಂದಲೂ ಗೆರೆಯುಳ್ಳದಾಗಿಯೂ ಇರುತ್ತದೆ. ಕಪ್ಪೆ, ಮೀನುಗಳೆಲ್ಲಾ ಸತ್ತುಹೋಗುತ್ತವೆ ; ದಡದಲ್ಲಿ ಪಕ್ಷಿಗಳು ಮತ್ತತೆಯಿಂದ ಹಾರಾಡುತ್ತವೆ, ಆ ನೀರಿನಲ್ಲಿ ಮನುಷ್ಯರಾಗಲೀ ಆನೆ, ಕುದುರೆಗಳಾಗಲೀ ಮುಳುಗಿ ಸ್ನಾನಮಾಡಿದರೆ ಅವರಿಗೆ ವಮನ, ಮತ್ತತೆ (ಅಜ್ಞಾನ), ಜ್ವರ, ತಾಪ, ಶೋಫಗಳುಂಟಾಗುತ್ತವೆ ; ಈ ದೋಷಗಳನ್ನು ಹೋಗಲಾಡಿಸಿ ಕೆಟ್ಟಿರುವ ನೀರನ್ನು ಶುದ್ಧಿಮಾಡಲು ಪ್ರಯತ್ನಿಸಬೇಕು. ದಿಂಡಲು ಧೂಪದಮರ, ಕರಿಹೊನ್ನೆ, ಬೇವು (ಪಾರಿವಾಣವೆಂದು ಕೆಲವರ ಮತ), ಪಾದರಿ, ಸಿದ್ಧಕ, ಮುಳ್ಳುಮುತ್ತುಗ, ಕಕ್ಕೆ, ಬಿಳಿಕಗ್ಗಲಿ ಈ ಮರಗಳನ್ನು ಸುಟ್ಟು ಅವುಗಳ ಬೂದಿಯನ್ನು ಆ ಸರೋವರಗಳಲ್ಲಿ ಸುರಿಯಬೇಕು. ಒಂದು ಬಿಂದಿಗೆ ನೀರಿಗೆ ಒಂದು ಅಂಜಲಿ (ಬೊಗಸೆ)ಯಷ್ಟು ಭಸ್ಮವನ್ನು ಸುರಿದು ಕದರಿ ಶೋಧಿಸಿಕೊಂಡರೆ ನೀರು ಶುದ್ಧವಾಗಿ ಕುಡಿಯುವುದಕ್ಕೆ ಯೋಗ್ಯವಾಗುತ್ತದೆ.

ಕ್ಷಿತಿಪ್ರದೇಶಂ ವಿಷದೂಷಿತಂ ತು ಶಿಲಾಶಲಂ ತೀರ್ಥಮಥೇರಿಣಂ ವಾ ॥೧೦॥
ಸ್ಪೃಶನ್ತಿಗಾತ್ರೇಣ ತು ಯೇನಯೇನ ಗೋವಾಜಿನಾಗೋಷ್ಟ್ರಖರಾನರಾ ವಾ ।
ತಚ್ಛೂನತಾಂ ಯಾತ್ಯಥ ದಹ್ಯತೇಚ ವಿಶೀರ್ಯತೇ ರೋಮ ನಖಂ ತಥೈವ ॥೧೧॥
ತತಾಪ್ಯನನ್ತಾಂ ಸಹ ಸರ್ವಗನ್ಧೈಃ ಪಿಷ್ಟ್ವಾಸುರಾಭಿರ್ವಿ ನಿಯೋಜ್ಯಮಾರ್ಗಮ್ ।
ಸಿಞ್ಚೇತ್ ಪಯೋಭಿಸ್ತು ಮೃದನ್ವಿತೈಸ್ತಂ ವಿಡಙ್ಗಪಾಠಾ ಕಟಭೀಜಲೈರ್ವಾ ॥೧೨॥

ಅರ್ಥ—ನೆಲವನ್ನೂ, ಕಲ್ಲಿನ ಆಸನಗಳನ್ನೂ, ನದೀತೀರದ ಮೆಟ್ಟಲುಗಳನ್ನೂ, ಊಷರ ಪ್ರದೇಶಗಳನ್ನೂ ವಿಷದಿಂದ ಕೆಡಿಸಿದ್ದರೆ ಅಲ್ಲಿ ವಿಶ್ರಮಿಸಿಕೊಳ್ಳಲು ಕೂತ ಮನುಷ್ಯರು, ದನ, ಕುದುರೆ, ಆನೆ, ಒಂಟೆ, ಕತ್ತೆ ಇವುಗಳಿಗೆ ಮೈಸೋಕಿದ ಸ್ಥಳವು ಊದುತ್ತದೆ, ಉರಿಯುತ್ತದೆ, ಸೀಳುತ್ತದೆ, ರೋಮಗಳೂ, ಉಗುರುಗಳೂ ಕಿತ್ತು ಉದುರಿ ಬೀಳುತ್ತವೆ.

ಈ ಸಂದರ್ಭದಲ್ಲಿ ಜೇಡಿಮಣ್ಣು ಮತ್ತು ಸರ್ವಗಂಧಗಳನ್ನು ಮದ್ಯದಿಂದ ಅರೆದು ಮಾರ್ಗ ದಲ್ಲೆಲ್ಲಾ ಚುಮುಕಿಸಬೇಕು, ಅಥವಾ ಜೇಡಿಮಣ್ಣು, ವಿಡಂಗ, ಅಗಳುಶುಂಠಿ, ಗಿರಿಕರ್ಣಿಕೆ ಇವುಗಳ ಕಷಾಯಕ್ಕೆ ನೀರು ಸೇರಿಸಿ ಚುಮುಕಿಸಿದರೆ ವಿಷಹರಣವಾಗುತ್ತದೆ.

ತೃಣೇಷು ಭಕ್ಷ್ಯೇಷು ಚ ದೂಷಿತೇಷು ಸೀದನ್ತಿ ಮೂರ್ಛನ್ತಿ ವಮನ್ತಿ ಚಾನ್ಯೇ ।
ವಿಡ್ಭೇದಮೃಚ್ಛನ್ತ್ಯಥವಾ ಮ್ರಿಯನ್ತೇ ತೇಷಾಂ ಚಿಕಿತ್ಸಾಂ ಪ್ರಣಯೇದ್ಯಥೋಕ್ತಾಮ್ ॥೧೩॥

ವಿಷಾಪಹೈರ್ವಾಪ್ಯಗದೈರ್ವಿಲಿಪ್ಯ ವಾದ್ಯಾನಿ ಚಿತ್ರಾಣ್ಯಪಿ ವಾದಯೇತ ।
ತಾರಃ ಸುತಾರಃ ಸಸುರೇನ್ದ್ರಗೋಪಃ ಸರ್ವೈಶ್ಚ ತುಲ್ಯಃ ಕುರುವಿನ್ದಭಾಗಃ ॥೧೪॥
ಪಿತ್ತೇನಯುಕ್ತಃ ಕಪಿಲಾನ್ವಯೇನ ವಾದ್ಯಪ್ರಲೇಪೋ ವಿಹಿತಃಪ್ರಶಸ್ತಃ ।
ವಾದ್ಯಸ್ಯ ಶಬ್ದೇನ ಹಿ ಯಾನ್ತಿ ನಾಶಂ ವಿಷಾಣಿ ಘೋರಾಣ್ಯಪಿ ಯಾನಿ ಸನ್ತಿ ॥೧೫॥

ಅರ್ಥ—ಹುಲ್ಲು, ಆಹಾರ ಧಾನ್ಯಗಳು ವಿಷದೂಷಿತಗಳಾಗಿದ್ದು ಅವನ್ನು ಸೇವಿಸಿದ ದನಗಳಾಗಲೀ ಮನುಷ್ಯರಾಗಲೀ ಬಳಲುತ್ತಾರೆ, ಜ್ಞಾನತಪ್ಪಿದವರಾಗುತ್ತಾರೆ ಮತ್ತೆ ಕೆಲವರು ವಮನಮಾಡುತ್ತಾರೆ, ಮಲವನ್ನು ಭೇದಿ ಮಾಡುತ್ತಾರೆ ಅಥವಾ ಸಾಯು ತ್ತಾರೆ. ಇಂತಹವರಿಗೆ ಆಯಾಯ ರೋಗಕ್ಕೆ ತಕ್ಕ ಪ್ರತೀಕಾರವನ್ನು ಮಾಡಿ ಗುಣಪಡಿಸ ಬೇಕು, ಅಥವಾ ದುನ್ದುಭಿಸ್ವನೀಯೋಕ್ತ ಅಗದಗಳಿಂದ ತಮಟೆ; ನಗಾರಿ ಮೊದಲಾದ ವಾದ್ಯಗಳಿಗೆ ಲೇಪಿಸಿ ವಿಚಿತ್ರರೀತಿಯಿಂದ ಬಾರಿಸಬೇಕು; ಬೆಳ್ಳಿ, ಪಾದರಸ, ಚಿನ್ನ, ಸೊಗಡೆಬೇರು ಇವುಗಳಿಗೆ ಸಮಭಾಗ ಕೊನ್ನಾರಿ ಗೆಡ್ಡೆಯನ್ನು ಸೇರಿಸಿ ಕಲ್ಕಮಾಡಿ ಕಪಿಲ ಬಣ್ಣದ ಹಸುವಿನ ಪಿತ್ತದಿಂದ ಮಿಶ್ರಮಾಡಿ ವಾದ್ಯಗಳಿಗೆ ಲೇಪಿಸಿ ಬಾರಿಸಿದರೆ ಈ ವಾದ್ಯದ ಶಬ್ದದಿಂದ ಘೋರ ವಿಷಗಳೂ ನಾಶವಾಗುತ್ತವೆ.

ಧೂಮೇಽನಿಲೇ ವಾ ವಿಷಸಂಪ್ರಯುಕ್ತೇ ಖಗಾಃಶ್ರಮಾರ್ತಾಃ ಪ್ರಪತನ್ತಿಭೂಮೌ ।
ಕಾಸಪ್ರತಿಶ್ಯಾಯ ಶಿರೋರುಜಶ್ಚ ಭವನ್ತಿ ತೀವ್ರಾ ನಯನಾಮಯಾಶ್ಚ ॥೧೬॥
ಲಾಕ್ಷಾ ಹರಿದ್ರಾತಿವಿಷಾಭಯಾಬ್ದ ಹರೇಣುಕೈಲಾದಳವಲ್ಕ ಕುಷ್ಠಮ್ ।
ಪ್ರಿಯಙ್ಗುಕಾಂ ಚಾಪ್ಯನಲೇನಿಧಾಯ ಧೂಮಾನಿಲಾಚಾಪಿ ವಿಶೋಧಯೇತ ॥೧೭॥

ಅರ್ಥ—ವಿಷಮಿಶ್ರವಾದ ಹೊಗೆಯನ್ನಾಗಲೀ ಗಾಳಿಯನ್ನಾಗಲೀ ಸೇವಿಸಿದ ಪಕ್ಷಿ ಗಳು ಶ್ರಮಪೀಡಿತಗಳಾಗಿ ನೆಲದಮೇಲೆ ಬಿದ್ದು ಬಿಡುತ್ತವೆ. ಕಾಸ, ನಗಡಿ, ತಲೆನೋವು, ತೀವ್ರವಾದ ನೇತ್ರರೋಗಗಳೂ ಸಂಭವಿಸುತ್ತವೆ. ಈ ಸಮಯದಲ್ಲಿ ಅರಗು, ಅರಶಿನ, ಅತಿಬಜೆ, ಅಣಿಲೆಸಿಪ್ಪೆ, ಕೊನ್ನಾರಿಗೆಡ್ಡೆ, ರೇಣುಕೆಬಿತ್ತ, ಏಲಕ್ಕಿ, ದಳವಲ್ಕ ? ಚಂಗಲ್ ಕೋಷ್ಠ, ನೆಳಲು ಇವುಗಳ ಚೂರ್ಣವನ್ನು ಬೆಂಕಿಯಮೇಲೆ ಉದುರಿಸುತ್ತಾ ಧೂಮ ವನ್ನೂ ಗಾಳಿಯನ್ನೂ ಶೋಧನೆ ಮಾಡಬೇಕು.

ಪ್ರಜಾಮಿಮಾಮಾತ್ಮಯೋನೇರ್ಬ್ರಹ್ಮಣಃ ಸೃಜತಿಃಕಿಲ ।
ಅಕರೋದಸುರೋ ವಿಘ್ನಂ ಕೈಟಭೋನಾಮ ದರ್ಪಿತಃ ॥೧೮॥

ತತಃ ಕ್ರುದ್ಧಸ್ಯ ವೈವಕ್ತ್ರಾದ್ಬ್ರಹ್ಮಣಸ್ತೇಜಸೋ ನಿಧೇಃ ।
ಕ್ರೋಧೋ ವಿಗ್ರಹವಾನ್ ಭೂತ್ವಾ ನಿಪಪಾತಾತಿದಾರುಣಃ ॥೧೯॥
ಸ ತಂ ದದಾಹ ಗರ್ಜನ್ತಮನ್ತಕಾಭಂ ಮಹಾಬಲಮ್ ।
ತತೋಽಸುರಂ ಘಾತಯಿತ್ವಾ ತತ್ತೇಜೋಽವರ್ಧತಾದ್ಭುತಮ್ ॥೨೦॥
ತತೋ ವಿಷಾದೋ ದೇವನಾಮಭವತ್ತಂ ನಿರೀಕ್ಷ್ಯವೈ ।
ತತಃ ಸೃಷ್ಟ್ವಾ ಪ್ರಜಾಃ ಶೇಷಂ ತದಾ ತಂ ಕ್ರೋಧನೇಶ್ವರಃ ॥೨೧॥
ವಿನ್ಯಸ್ತವಾನ್ ಸ ಭೂತೇಷು ಸ್ಥಾವರೇಷು ಚ ॥೨೨॥

ಅರ್ಥ—ಸ್ವಯಂಭೂವಾದ ಬ್ರಹ್ಮನು ಸೃಷ್ಟಿಮಾಡುವಾಗ ಬಲದರ್ಪಿತನಾದ ಕೈಟಭನೆಂಬ ರಾಕ್ಷಸನು ವಿಘ್ನ ಮಾಡಿದನು. ಆಗ ತೇಜೋನಿಧಿಯಾದ ಬ್ರಹ್ಮನಿಗೆ ಕೋಪವುಂಟಾಗಿ ದೇಹಧಾರಿಯಾದ ವಿಷಪುರುಷನು ಬ್ರಹ್ಮನ ಮುಖದಿಂದಲೇ ಉದ್ಭವಿಸಿದನು. ಅತಿ ಭಯಂಕರ ರೂಪಿಯಾದ ಈ ವಿಷರೂಪಿಯಾದ ಪುರುಷನು ಯಮಸ್ವರೂಪನಾದ ಮಹಾಬಲಿಷ್ಠನಾಗಿ ಘರ್ಜಿಸುತ್ತಿದ್ದ ಆ ರಾಕ್ಷಸನನ್ನು ಕೊಂದುಹಾಕಿದನು. ಆ ಮೇಲೆ ಆ ಕ್ರೋಧರೂಪವಾದ ವಿಷರೂಪದ ಆ ಬ್ರಹ್ಮನ ತೇಜಸ್ಸು ಅತ್ಯಧಿಕವಾಗಿ ವೃದ್ಧಿಯಾಗಲು ಅದನ್ನು ನೋಡಿ ದೇವತೆಗಳಿಗೆಲ್ಲಾ ಮಹತ್ತರವಾದ ವಿಷಾದ (ಭಯ) ವುಂಟಾಯಿತು. ವಿಷಾದವನ್ನುಂಟುಮಾಡಿದ್ದರಿಂದ ವಿಷವೆಂಬ ಹೆಸರುಂಟಾಯಿತು. ಆಗ ಆ ಕ್ರೋಧಕ್ಕೆ ಒಡೆಯನಾದ ಬ್ರಹ್ಮನು ಉಳಿದ ಪ್ರಜೆಗಳನ್ನು ಸೃಷ್ಟಿಮಾಡಿ ಆ ವಿಷಪುರುಷನನ್ನು ಸ್ಥಾವರ ಜಙ್ಗಮ ವಸ್ತುಗಳಲ್ಲಿ ಸೇರಿಸಿಬಿಟ್ಟನು (ಐಕ್ಯಗೊಳಿಸಿದನು). ವಾಕ್ಕಾಯ ಮನಸ್ಸುಗಳ ಕ್ಷೀಣತೆಗೆ ವಿಷಾದವೆಂದು ಹೇಳುತ್ತಾರೆ.

ಯಥಾಽವ್ಯಕ್ತರಸಂ ತೋಯಮನ್ತರಿಕ್ಷಾನ್ಮಹೀಂಗತಮ್ ।
ತೇಷು ತೇಷು ಪ್ರದೇಶೇಷು ರಸಂ ತಂ ತಂ ನಿಯಚ್ಛತಿ ॥೨೩॥
ಏವಮೇವ ವಿಷಂ ಯದ್ಯದ್ದ್ರವ್ಯಂ ವ್ಯಾಪ್ಯಾವತಿಷ್ಠತೇ ।
ಸ್ವಭಾವಾದೇವ ತಂ ತಸ್ಯ ರಸಂ ಸಮನುವರ್ತತೇ ॥೨೪॥

ಅರ್ಥ—ಅವ್ಯಕ್ತ ರಸವುಳ್ಳ ನೀರು ಅನ್ತರಿಕ್ಷದಿಂದ ಭೂಮಿಯಮೇಲೆ ಬಿದ್ದು ಆಯಾಯ ಭೂಪ್ರದೇಶದ ರಸವನ್ನೇ ಉಳ್ಳದಾಗುತ್ತದೆ. ಅದೇ ರೀತಿಯಲ್ಲಿ ವಿಷವು ಯಾವ ಯಾವ ದ್ರವ್ಯವನ್ನು ವ್ಯಾಪಿಸುತ್ತದೋ ಆ ದ್ರವ್ಯಗಳಲ್ಲಿರುವ ಸ್ವಾಭಾವಿಕ ರಸಗಳನ್ನೇ ಅನುಕರಿಸುತ್ತದೆ.

ವಿಷೇ ಯಸ್ಮಾದ್ಗುಣಾಃ ಸರ್ವೇ ತೀಕ್ಷ್ಣಾಃ ಪ್ರಾಯೇಣ ಸನ್ತಿ ಹಿ ।
ವಿಷಂ ಸರ್ವಮತೋ ಜ್ಞೇಯಂ ಸರ್ವದೋಷಪ್ರಕೋಪಣಮ್ ॥೨೫॥
ತೇ ತು ವೃತ್ತಿಂ ಪ್ರಕುಪಿತಾ ಜಹತಿ ಸ್ವಾಂ ವಿಷಾರ್ದಿತಾಃ ।
ನೋಪಯಾತಿ ವಿಷಂ ಪಾಕಮತಃ ಪ್ರಾಣಾನ್ ರುಣದ್ಧಿ ಚ ॥೨೬॥
ಶ್ಲೇಷ್ಮಣಾಽಽವೃತಮಾರ್ಗತ್ವಾದುಚ್ಛ್ವಾಸೋಽಸ್ಯ ನಿರುಧ್ಯತೇ ।
ವಿಸಂಜ್ಞಃ ಸತಿ ಜೀವೇಽಪಿ ತಸ್ಮಾತ್ ತಿಷ್ಠತಿ ಮಾನವಃ ॥೨೭॥

ಅರ್ಥ—ತೇಜೋರೂಪವಾದ ಕ್ರೋಧಾತ್ಮಕವಾದ ವಿಷದಲ್ಲಿ ಪ್ರಾಯಿಕವಾಗಿ ತೀಕ್ಷ್ಣಗುಣವೇ ಅಧಿಕವಾಗಿರುವುದರಿಂದ ಎಲ್ಲಾ ವಿಷಗಳೂ ತ್ರಿದೋಷಗಳ ಪ್ರಕೋಪವನ್ನುಂಟುಮಾಡುತ್ತವೆ. ಆದ್ದರಿಂದ ವಿಷಪೀಡಿತರಲ್ಲಿ ಸ್ಪಂದನಾದಿ ವಾತದ ಸ್ವಾಭಾವಿಕ ಗುಣಗಳೂ, ರಾಗ, ಪಾಕ ಮೊದಲಾದ ಪಿತ್ತದ ಸ್ವಾಭಾವಿಕ ಗುಣಗಳೂ ಸಂಧಿಶ್ಲೇಷಾದಿ ಕಫದ ಸ್ವಾಭಾವಿಕ ಗುಣಗಳೂ ನಾಶವಾಗಿಬಿಡುತ್ತವೆ. ಪಿತ್ತಕ್ಕೆ ಪಾಕಮಾಡುವ ಶಕ್ತಿಯು ನಾಶವಾಗಿರುತ್ತದೆಯಾಗಿ ವಿಷವು ಜೀರ್ಣಿಸುವುದೇ ಇಲ್ಲ. ಅಪಕ್ವವಿಷವು ಪ್ರಾಣವನ್ನು ತಡೆಯುತ್ತದೆ ; ಕಫದಿಂದ ಉಚ್ಛ್ವಾಸವು ತಡೆಯಲ್ಪಡುತ್ತದೆಯಾಗಿ ಪ್ರಾಣವಿದ್ದರೂ (ಜೀವವಂತನಾಗಿದ್ದರೂ) ಸರಿಯಾದ ಜ್ಞಾನವೇ ಇರುವುದಿಲ್ಲ.

ಶುಕ್ರವತ್ ಸರ್ವಸರ್ಪಾಣಾಂ ವಿಷಂ ಸರ್ವಶರೀರಗಮ್ ।
ಕ್ರುದ್ಧಾನಾಮೇತಿ ಚಾಙ್ಗೇಭ್ಯಃ ಶುಕ್ರಂ ನಿರ್ಮನ್ಥನಾದಿವ ॥೨೮॥
ತೇಷಾಂ ಬಡಿಶವದ್ದಂಷ್ಟ್ರಾಸ್ತಾಸು ಸಜ್ಜತಿ ಚಾಗತಮ್ ।
ಅನುದ್ಧೃತ್ಯ ವಿಷಂ ತಸ್ಮಾನ್ನ ಮುಞ್ಚನ್ತಿ ಚ ಭೋಗಿನಃ ॥೨೯॥

ಅರ್ಥ—ಶುಕ್ರವು ಸರ್ವದೇಹ ವ್ಯಾಪಿಯಾಗಿರುವಂತೆಯೇ ವಿಷವೂ ಸರ್ಪಗಳಿಗೆ ಸರ್ವಾಙ್ಗವನ್ನೂ ವ್ಯಾಪಿಸಿರುತ್ತದೆ. ಅಙ್ಗನೆಯರನ್ನು ಆಲಿಙ್ಗನೆಮಾಡುವುದು ಮೊದಲಾದ ರತಿವ್ಯಾಪಾರದಿಂದ ಉದ್ರಿಕ್ತವಾದ ಶುಕ್ರವು ಸಕಲ ಶರೀರದಿಂದಲೂ ಬಂದು ಸ್ರಾವವಾಗುವಂತೆಯೇ ಸರ್ಪಗಳಿಗೆ ಕ್ರೋಧವುಂಟಾದರೆ ಅವುಗಳ ಸರ್ವದೇಹದಲ್ಲಿರುವ ವಿಷವೂ ಅವುಗಳ ಕೋರೆಹಲ್ಲುಗಳಲ್ಲಿ ಬಂದು ನಿಲ್ಲುತ್ತದೆ. ಮೀನನ್ನು ಹಿಡಿಯುವುದಕ್ಕೆ ಉಪಯೋಗಿಸುವ ಬಡಿಶದಂತೆ (ಕೊಕ್ಕೆಯಂತೆ) ಸರ್ಪಗಳ ಹಲ್ಲುಗಳು ವಕ್ರವಾಗಿರುತ್ತವೆ (ಕೋರೆ ಹಲ್ಲುಗಳೆನ್ನುತ್ತಾರೆ). ಅವುಗಳಿಗೆ ಕೋಪಬಾರದಿದ್ದರೆ ಕೋರೆ ಹಲ್ಲುಗಳಲ್ಲಿರುವ ವಿಷವು ಚಲಿಸುವುದೇ ಇಲ್ಲ.

ಯಸ್ಮಾದತ್ಯರ್ಥಮುಷ್ಣಂ ಚ ತೀಕ್ಷ್ಣಂ ಚ ಪಠಿತಂ ವಿಷಮ್ ।
ಅತಃ ಸರ್ವವಿಷೇಷೂಕ್ತಃ ಪರಿಷೇಕಸ್ತು ಶೀತಲಃ ॥೩೦॥
ಮನ್ದಂ ಕೀಟೇಷು ನಾತ್ಯುಷ್ಣಂ ಬಹುವಾತಕಫಂ ವಿಷಮ್ ।
ಅತಃ ಕೀಟವಿಷೇ ಚಾಪಿ ಸ್ವೇದೋ ನ ಪ್ರತಿಷಿಧ್ಯತೇ ॥೩೧॥
ಕೀಟೈರ್ದಷ್ಟಾನುಗ್ರವಿಷೈಃ ಸರ್ಪವತ್ಸಮುಪಾಚರೇತ್ ।

ಅರ್ಥ—ವಿಷವು ಅತ್ಯಂತ ತೀಕ್ಷ್ಣ ಮತ್ತು ಉಷ್ಣವೆಂದು ಹೇಳಿರುವಕಾರಣ ಎಲ್ಲಾ ವಿಷಪೀಡೆಯಲ್ಲೂ ಶೀತಲವಾದ ಪರಿಷೇಚನವೇ ಹೇಳಲ್ಪಟ್ಟಿರುತ್ತದೆ. ಕೀಟಗಳಲ್ಲಿ ವಿಷವು ಸ್ವಲ್ಪ ಪ್ರಮಾಣದಲ್ಲಿರುತ್ತದೆ ಮತ್ತು ಅದು ಬಹು ವಾತಕಫವುಳ್ಳದಾಗಿರುತ್ತದೆ. ಉಗ್ರವಿಷವುಳ್ಳ ಕೀಟಗಳು ಕಡಿದವರಿಗೆ ಸ್ವೇದಮಾಡಿಸಬಾರದು ; ಸರ್ಪಗಳ ಕಡಿತದಿಂದುಂಟಾದ ವಿಷಚಿಕಿತ್ಸೆಯಂತೆಯೇ ಶೀತ ಚಿಕಿತ್ಸೆಯನ್ನು ಮಾಡಬೇಕು.

ಟಿಪ್ಪಣಿ : ಅಲ್ಪಪ್ರಮಾಣದ ವಿಷವುಳ್ಳ ವಾತಕಫ ಪ್ರಧಾನವಾದ ಕೀಟಗಳಿಂದ

ದಷ್ಟನಾದ ಮನುಷ್ಯನಿಗೆ ಸ್ವೇದಮಾಡಿಸಲು ಅಡ್ಡಿಯಿರುವುದಿಲ್ಲ (ಸ್ವೇದಮಾಡಿಸಬೇಕು). ಈ ವಿಧದ ಕೀಟಗಳು ಅತಿ ಸ್ವಲ್ಪವು.

ಸ್ವಭಾವಾದೇವ ತಿಷ್ಠೇತ್ತು ಪ್ರಹಾರಾದಂಶಯೋರ್ವಿಷಮ್ ||೩೨||
ವ್ಯಾಪ್ಯಸಾವಯವಂ ದೇಹಂ ದಿಗ್ಧವಿದ್ಧಾಹಿದಷ್ಟಯೋ |
ಲೌಲ್ಯಾದ್ವಿಷಾನ್ವಿತಂ ಮಾಂಸಂ ಯಃಖಾದೇನ್ಮೃತಮಾತ್ರಯೋಃ ||೩೩||
ಯಥಾ ವಿಷಂ ಸರೋಗೇಣ ಕ್ಲಿಶ್ಯತೇ ಮ್ರಿಯತೇಽಪಿವಾ |
ಅತಶ್ಚಾಪ್ಯನಯೋರ್ಮಾಂಸಮಭಕ್ಷ್ಯಂ ಮೃತಮಾತ್ರಯೋಃ ||೩೪||
ಮುಹೂರ್ತಾತ್ತದುಪಾದೇಯಂ ಪ್ರಹಾರಾದಂಶ ವರ್ಜಿತಮ್ |

ಅರ್ಥ—ವಿಷಲೇಪಮಾಡಿದ ಆಯುಧದಿಂದ ಚುಚ್ಚಿದ ಮತ್ತು ಸರ್ಪಕಡಿದ ಪ್ರಾಣಿಗಳಿಗೆ ಆ ಆಯುಧ ಚುಚ್ಚಿದ ಮತ್ತು ಹಾವು ಕಚ್ಚಿದ ಶರೀರಭಾಗದಲ್ಲೇ ವಿಷವು ನಿಲ್ಲುವುದು ಸಹಜವಾದದ್ದು. ಹಾಗೆ ವಿಷಬಳಿದ ಆಯುಧದಿಂದ ಚುಚ್ಚಿ ಕೊಂದ ಮತ್ತು ಹಾವು ಕಚ್ಚಿ ಸತ್ತ ಪ್ರಾಣಿಗಳ ಮಾಂಸವನ್ನು ಅವು ಸತ್ತ ಕೂಡಲೇ ಚಪಲ ಚಿತ್ತದಿಂದ ಯಾರು ತಿನ್ನುತ್ತಾರೆಯೋ ಅವರು ಆ ವಿಷದಿಂದ ಪೀಡಿತರಾಗುತ್ತಾರೆ ಅಥವಾ ಸತ್ತು ಹೋಗುತ್ತಾರೆ. ಆದಕಾರಣ ಅವುಗಳು ಸತ್ತಕೂಡಲೇ ಅವುಗಳ ಮಾಂಸವನ್ನು ತಿನ್ನಬಾರದು. ಒಂದು ಮುಹೂರ್ತಕಾಲ ಕಳೆದಮೇಲೆ ವಿಷಶಸ್ತ್ರ ಚುಚ್ಚಿದ ಮತ್ತು ಹಾವು ಕಚ್ಚಿದ ಸ್ಥಳದ ಮಾಂಸವನ್ನು ಬಿಟ್ಟು ಉಳಿದ ಭಾಗದ ಮಾಂಸವನ್ನು ತಿನ್ನಬಹುದು.

ಸವಾತಂ ಗೃಹಧೂಮಾಭಂ ಪುರೀಷಂ ಯೋಽತಿಸಾರ್ಯತೇ ||೩೫||
ಆಧ್ಮಾತೋಽತ್ಯರ್ಥಮುಷ್ಣಾಸ್ರೋ ವಿವರ್ಣಃ ಸಾದಪೀಡಿತಃ |
ಉದ್ವಮತ್ಯಥ ಫೇನಂ ಚ ವಿಷಪೀತಂ ತಮಾದಿಶೇತ್ ||೩೬||
ಸ ಚಾಸ್ಯ ಹೃದಯಂ ವಹ್ನಿರ್ವಿಷಜುಷ್ಟಂದಹತ್ಯಪಿ |
ತದ್ಧಿಸ್ಥಾನಂ ಚೇತನಾಯಾಃ ಸ್ವಭಾವಾದ್ವ್ಯಾಪ್ಯ ತಿಷ್ಠತಿ ||೩೭||

ಅರ್ಥ—ವಿಷಪಾನಮಾಡಿದವನ, ಪ್ರಾಣಬಿಡುತ್ತಿರುವವನ, ಸತ್ತವನ ಲಕ್ಷಣಗಳನ್ನು ತಿಳಿಸುತ್ತಾರೆ—ವಾತ ಮಿಶ್ರವಾಗಿ ಇಲ್ಲಣದಂತೆ ಮಲವನ್ನು ಯಾರು ಅತಿಸಾರ ಮಾಡುತ್ತಾರೋ ಅತಿಯಾಗಿ ಯಾರಿಗೆ ಹೊಟ್ಟೆಯು ಉಬ್ಬರಿಸಿರುತ್ತದೋ ಬಿಸಿಬಿಸಿಯಾದ ಕಣ್ಣೀರನ್ನು ಯಾರು ಸುರಿಸುತ್ತಾರೋ ದೇಹದ ಬಣ್ಣವು ವ್ಯತ್ಯಾಸವಾದರೂ ಮತ್ತು ನೊರೆನೊರೆಯಾಗಿ ವಮನಮಾಡಿದರೂ ವಿಷಪಾನಮಾಡಿರುತ್ತಾನೆಂದು ತಿಳಿಯಬೇಕು. ವಿಷಪೀಡಿತನ ಹೃದಯವನ್ನು ಬೆಂಕಿಯು ಸುಡುವುದಿಲ್ಲ. ಹೃದಯವು ಚೇತನಾಸ್ಥಾನವು ; ವಿಷವು ಹೃದಯವನ್ನೇ ಆವರಿಸಿ ನಿಲ್ಲುತ್ತದೆ.

ಅಶ್ವತ್ಥದೇವಾಯತನಶ್ಮಶಾನ ವಲ್ಮೀಕ ಸಂಧ್ಯಾಸು ಚತುಷ್ಪಥೇಷು ।
ಯಾಮ್ಯೇ ಸಪಿತ್ರ್ಯೇ ಪರಿವರ್ಜನೀಯಾ ಋಕ್ಷೇ ನರಾಮರ್ಮಸು ಯೇ ಚ ದಷ್ಟಾಃ ||೩೮||

ಅರ್ಥ—ಅರಳೀಮರ, ದೇವಸ್ಥಾನ, ಸ್ಮಶಾನ, ಹುತ್ತಗಳ ಹತ್ತಿರದಲ್ಲೂ ಸಂಧ್ಯಾಕಾಲದಲ್ಲೂ, ನಾಲ್ಕುದಾರಿ ಕೂಡುವ ಜಾಗದಲ್ಲೂ ಭರಣಿ, ಮಖಾನಕ್ಷತ್ರಗಳಲ್ಲೂ ಮರ್ಮಸ್ಥಾನಗಳಲ್ಲಿಯೂ ಸರ್ಪ ಕಚ್ಚಿದವರನ್ನು ತ್ಯಜಿಸಬೇಕು. (ಅಸಾಧ್ಯವು.)

ದರ್ವೀಕರಾಣಾಂ ವಿಷಮಾಶು ಘಾತಿ ಸರ್ವಾಣಿ ಚೋಷ್ಣೇ ದ್ವಿಗುಣೀ ಭವನ್ತಿ
ಅಜೀರ್ಣಪಿತ್ತಾತಪಪೀಡಿತೇಷು ಬಾಲಪ್ರಮೇಹೇಷ್ವಥ ಗರ್ಭಿಣೀಷು ||೩೯||
ವೃದ್ಧಾತುರಕ್ಷೀಣಬುಭುಕ್ಷಿತೇಷು ರೂಕ್ಷೇಷು ಭೀರುಷ್ವಥ ದುರ್ದಿನೇಷು |

ಅರ್ಥ—ಹೆಡೆಯುಳ್ಳ (ನಾಗರಹಾವು) ಹಾವುಗಳ ವಿಷವು ಸದ್ಯಃ ಪ್ರಾಣಹರವು. ಎಲ್ಲಾ ಹಾವುಗಳಿಗೂ ಬೇಸಿಗೆಯಲ್ಲಿ ವಿಷವೇಗವು ಎರಡರಷ್ಟು ಹೆಚ್ಚುತ್ತದೆ. ಅಜೀರ್ಣರೋಗಿ, ಪಿತ್ತ, ಬಿಸಿಲುಗಳಲ್ಲಿ ಪೀಡಿತರಾದವರು, ಬಾಲಕರು, ಪ್ರಮೇಹರೋಗ ಪೀಡಿತರು, ಗರ್ಭಿಣಿಯರು, ವೃದ್ಧರು, ರೋಗದಿಂದ ಕೃಶರಾದವರು, ಹಸಿದಿರುವವರು, ರೂಕ್ಷದೇಹವುಳ್ಳವರು, ಅಂಜುಬುರುಕರು ಇವರಿಗೂ ಮೋಡಮುಚ್ಚಿದ ದುರ್ದಿನದಲ್ಲಿ ಕಚ್ಚಿದರೂ ವಿಷವೇಗವು ಎರಡರಷ್ಟಾಗುತ್ತದೆ.

ಶಸ್ತ್ರಕ್ಷತೇ ಯಸ್ಯ ನ ರಕ್ತಮೇತಿ ರಾಜ್ಯೋ ಲತಾಭಿಶ್ಚ ನ ಸಮ್ಭವನ್ತಿ ||೪೦||
ಶೀತಾಭಿರದ್ಭಿಶ್ಚ ನ ರೋಮಹರ್ಷೋ ವಿಷಾಭಿಭೂತಂ ಪರಿವರ್ಜಯೇತ್ತಮ್ |
ಜಿಹ್ವಾ ಸಿತಾ ಯಸ್ಯ ಚ ಕೇಶಶಾತೋ ನಾಸಾವಭಙ್ಗಶ್ಚ ಸಕಣ್ಠಭಙ್ಗಃ ||೪೧||
ಕೃಷ್ಣಃ ಸರಕ್ತಃ ಸ್ವಯಥುಶ್ಚ ದಂಶೇ ಹನ್ವೋಃ ಸ್ಥಿರತ್ವಂ ಚ ಸ ವರ್ಜನೀಯಃ |
ವರ್ತಿರ್ಘನಾ ಯಸ್ಯ ನಿರೇತಿ ವಕ್ತ್ರಾದ್ರಕ್ತಂ ಸ್ರವೇದೂರ್ಧ್ವಮಧಶ್ಚ ಯಸ್ಯ ||೩೨||
ದಂಷ್ಟ್ರಾನಿಪಾತಾಃ ಸಕಲಾಶ್ಚ ಯಸ್ಯ ತಂ ಚಾಪಿ ವೈದ್ಯಃ ಪರಿವರ್ಜಯೇತ್ತು |
ಉನ್ಮತ್ತಮತ್ಯರ್ಥಮುಪದ್ರುತಂ ವಾ ಹೀನಸ್ವರಂ ವಾಪ್ಯಥವಾ ವಿವರ್ಣಮ್ ||೪೩||
ಸಾರಿಷ್ಟಮತ್ಯರ್ಥಮವೇಗಿನಂ ಚ ಜಹ್ಯಾಚ್ಚ ತಂ ಕರ್ಮ ನ ತತ್ರ ಕುರ್ಯಾತ್ ||೪೪||

ಅರ್ಥ—ವಿಷಪೀಡಿತನ ದೇಹವನ್ನು ಶಸ್ತ್ರದಿಂದ ಕತ್ತರಿಸಿದರೂ ರಕ್ತ ಬರದಿದ್ದರೆ ಬೆತ್ತದಿಂದ ಮೈಮೇಲೆ ಹೊಡೆದರೂ ಬಾಸುಂಡೆ ಬರದಿದ್ದರೆ, ತಣ್ಣೀರನ್ನು ಮೈಮೇಲೆ ಎರಚಿದರೂ ರೋಮಗಳೇಳದಿದ್ದರೆ ಅವನನ್ನು ತ್ಯಜಿಸಬೇಕು. ಯಾರಿಗೆ ನಾಲಿಗೆ ಬೆಳ್ಳಗಾಗಿರುತ್ತದೋ ತಲೆಯ ಕೂದಲು ಕಿತ್ತು ಬರುತ್ತದೋ, ಮೂಗಿನ ರಂಧ್ರಗಳು ಸೊಟ್ಟಾಗುತ್ತವೋ (ಅನುನಾಸಿಕವರ್ಣವನ್ನೇ ಉಚ್ಚರಿಸಿದರೆ) ಕಣ್ಠಭಙ್ಗವಾದರೆ (ಸ್ವರಸಾದ) ವಿಷವ್ರಣದಲ್ಲಿ ಕಪ್ಪು, ಕೆಂಪು ವರ್ಣದ ಶೋಫವುಂಟಾದರೆ, ದವಡೆಗಳು ಬಿಗಿದು ಹಿಡಿದುಕೊಂಡರೆ ಅವನನ್ನು ತ್ಯಜಿಸಬೇಕು ; ಬಾಯಿನಿಂದ ಕಫವು ಬತ್ತಿಯಂತೆ ದಪ್ಪವಾಗಿ ಬರುವವನನ್ನು, ಬಾಯಿನಿಂದಲೂ, ಗುದ ಮೇಢ್ರ ಮಾರ್ಗಗಳಿಂದಲೂ ರಕ್ತಸ್ರಾವವಾಗುತ್ತಿರುವವನನ್ನೂ, ಎಲ್ಲಾ ಹಲ್ಲುಗಳೂ ಉದುರಿ ಬಿದ್ದವನನ್ನೂ ಸಹ ವೈದ್ಯನು ಚಿಕಿತ್ಸೆ ಮಾಡದೆ

ತ್ಯಜಿಸಿಬಿಡಬೇಕು. ಹುಚ್ಚನಂತೆ ಅತಿ ವಾಕ್ಕುಳ್ಳವನನ್ನೂ, ಅತಿ ವೇದನೆಯುಳ್ಳವನನ್ನೂ, ಹೀನಸ್ವರವುಳ್ಳವನನ್ನೂ, ಬಣ್ಣಬದಲಾದವನನ್ನೂ ಮರಣ ಲಕ್ಷಣವುಳ್ಳವನನ್ನೂ, ವೇಗಗಳೆಲ್ಲಾ ನಿಂತಿರುವವನನ್ನೂ (ಶ್ವಾಸ ಅಪಾನ ಮೊದಲಾದ ವೇಗಗಳೆಲ್ಲಾ ನಿಂತುಬಿಟ್ಟಿರುವವನನ್ನೂ) ತ್ಯಜಿಸಿಬಿಡಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಕಲ್ಪಸ್ಥಾನೇ ಜಙ್ಗಮವಿಷ ವಿಜ್ಞಾನೀಯ ಕಲ್ಪ ನಾಮಕ ತೃತೀಯಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕಭಾಷಾವಿವೃತಿಃ

ಚತುರ್ಥೋಽಧ್ಯಾಯಃ

ಅಥಾತಃ ಸರ್ಪದಷ್ಟ ವಿಷವಿಜ್ಞಾನೀಯಂ ಕಲ್ಪಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀ ಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಸರ್ಪದಷ್ಟ ವಿಷಜ್ಞಾನವನ್ನು ವಿವರಿಸುತ್ತೇವೆ.

ಧನ್ವನ್ತರಿಂ ಮಹಾಪ್ರಾಜ್ಞಂ ಸರ್ವಶಾಸ್ತ್ರವಿಶಾರದಮ್ |
ಪಾದಯೋರುಪಸಂಗೃಹ್ಯ ಸುಶ್ರುತಃ ಪರಿಪೃಚ್ಛತಿ ||೩||
ಸರ್ಪಸಂಖ್ಯಾಂ ವಿಭಾಗಂ ಚ ದಷ್ಟಲಕ್ಷಣಮೇವ ಚ |
ಜ್ಞಾನಂ ಚ ವಿಷವೇಗಾನಾಂ ಭಗವನ್ ವಕ್ತುಮರ್ಹತಿ ||೪||

ಅರ್ಥ—ಸುಶ್ರುತನು ಮಹಾಪ್ರಾಜ್ಞನೂ ಸಕಲಶಾಸ್ತ್ರವಿಶಾರದನೂ ಆದ ಧನ್ವನ್ತರಿಯ ಎರಡು ಪಾದಗಳನ್ನೂ ಹಿಡಿದುಕೊಂಡು ನಮಸ್ಕಾರಮಾಡಿ ಎಲೈ ಅಷ್ಟೈಶ್ವರ್ಯ ಗುಣಸಂಪನ್ನರಾದ ಗುರುವರ್ಯರೇ ಸರ್ಪಗಳ ಸಂಖ್ಯೆಗಳನ್ನೂ, ಭೇದಗಳನ್ನೂ ಅವು ಕಚ್ಚಿದರೆ ಕಾಣುವ ಲಕ್ಷಣಗಳನ್ನೂ ವಿಷವೇಗಗಳ ತಿಳುವಳಿಕೆಯನ್ನೂ ಹೇಳಬೇಕು ಎಂದು ಪ್ರಾರ್ಥಿಸಿದನು.

ತಸ್ಯ ತದ್ವಚನಂ ಶ್ರುತ್ವಾ ಪ್ರಾಬ್ರವೀದ್ಭಿಷಜಾಂ ವರಃ |
ಅಸಂಖ್ಯಾ ವಾಸುಕಿಶ್ರೇಷ್ಠಾ ವಿಖ್ಯಾತಾಸ್ತಕ್ಷಕಾದಯಃ ||೫||
ಮಹೀಧರಾಶ್ಚ ನಾಗೇನ್ದ್ರಾ ಹುತಾಗ್ನಿ ಸಮತೇಜಸಃ |
ಯೇ ಚಾಪ್ಯಜಸ್ರಂ ಗರ್ಜನ್ತಿ ವರ್ಷನ್ತಿ ಚ ತಪನ್ತಿ ಚ ||೬||
ಸಸಾಗರಾ ಗಿರಿದ್ವೀಪಾ ಯೈರಿಯಂ ಧಾರ್ಯತೇ ಮಹೀ |
ಕ್ರುದ್ಧಾ ನಿಃಶ್ವಾಸದೃಷ್ಟಿಭ್ಯಾಂ ಯೇ ಹನ್ಯುರಖಿಲಂ ಜಗತ್ ||೭||
ನಮಸ್ತೇಭ್ಯೋಽಸ್ತಿ ನೋ ತೇಷಾಂ ಕಾರ್ಯಂ ಕಿಞ್ಚಿಚ್ಚಿಕಿತ್ಸಯಾ |
ಯೇ ತು ದಂಷ್ಟ್ರಾವಿಷಾಭೌಮಾ ಯೇ ದಶನ್ತಿ ಚ ಮಾನುಷಾನ್ ||೮||
ತೇಷಾಂ ಸಂಖ್ಯಾಂ ಪ್ರವಕ್ಷ್ಯಾಮಿ ಯಥಾವದನುಪೂರ್ವಶಃ |

ಅರ್ಥ—ಅವನು ಹೇಳಿದ ಮಾತನ್ನು ಕೇಳಿ ವೈದ್ಯಶ್ರೇಷ್ಠನಾದ ಶ್ರೀ ಧನ್ವನ್ತರಿಯು ಈ ರೀತಿ ಹೇಳಿದನು—ವಾಸುಕಿ ಮೊದಲಾದ ಶ್ರೇಷ್ಠಸರ್ಪಗಳು ಅಸಂಖ್ಯಾತವಾಗಿರುತ್ತವೆ. ಬಹಳ ಪ್ರಸಿದ್ಧಿ ಪಡೆದು ಇರುವ ತಕ್ಷಕ ಮೊದಲಾದುವೂ ಭೂಮಿಯನ್ನೇ ಧಾರಣೆಮಾಡಿರುವ ಆದಿಶೇಷನೇ ಮೊದಲಾದ ಶ್ರೇಷ್ಠಸರ್ಪಗಳೂ ಪ್ರಜ್ವಲಿಸುತ್ತಿರುವ ಅಗ್ನಿಗೆ ಸಮಾನವಾದ ಕಾನ್ತಿಯುಳ್ಳವುಗಳಾಗಿವೆ. ಅವುಗಳೆಲ್ಲಾ ಹಗಲು ರಾತ್ರಿಗಳಲ್ಲೂ ಘರ್ಜನೆ ಮಾಡುತ್ತಲೂ ಮಳೆ ಸುರಿಸುತ್ತಲೂ ಸಂತಾಪಗೊಳಿಸುತ್ತಲೂ ಸಮುದ್ರ,

ಪರ್ವತ, ದ್ವೀಪಗಳು ಮೊದಲಾದ ಸಕಲ ಭೂಮಣ್ಡಲವನ್ನೂ ಧರಿಸಿರುತ್ತವೆ. ಅವುಗಳಿಗೆ ಕೋಪವುಂಟಾದರೆ ತಮ್ಮ ನಿಃಶ್ವಾಸ (ನಿಟ್ಟುಸುರು) ದಿಂದಲೂ ತೀವ್ರವಾದ ದೃಷ್ಟಿ (ಉಗ್ರ ದೃಷ್ಟಿ)ಯಿಂದಲೂ ಸಕಲ ಜಗತ್ತನ್ನೇ ಸಂಹರಿಸಿಬಿಡುತ್ತವೆ. ಅವುಗಳಿಗೆಲ್ಲಾ ನಮಸ್ಕಾರ ಮಾಡುತ್ತೇವೆ. ತಕ್ಷಕಾದಿ ಸರ್ಪಶ್ರೇಷ್ಠರಿಂದ ಕಚ್ಚಲ್ಪಟ್ಟ ವಿಷಚಿಕಿತ್ಸೆಗೆ ಯಾವ ಪ್ರಯೋಜನವೂ ದೊರೆಯುವುದಿಲ್ಲ. ದವಡೆ ಹಲ್ಲುಗಳಲ್ಲಿ ವಿಷ ತುಂಬಿಕೊಂಡು ಭೂಮಿಯಲ್ಲಿ ವಾಸಮಾಡುತ್ತಾ ಮನುಷ್ಯರನ್ನು ಕಚ್ಚುವ ಹಾವುಗಳ ಸಂಖ್ಯೆಯನ್ನು ಮಾತ್ರ ಹೇಳುತ್ತೇನೆ.

ಅಶೀತಿಸ್ತ್ವೇವ ಸರ್ಪಾಣಾಂ ಭಿದ್ಯತೇ ಪಞ್ಚಧಾತು ಸಾ ||೯||
ದರ್ವೀಕರಾ ಮಣ್ಡಲಿನೋರಾಜಿಮನ್ತಸ್ತಥೈವ ಚ |
ನಿರ್ವಿಷಾ ವೈಕರಞ್ಜಾಶ್ಚ ತ್ರಿವಿಧಾಸ್ತೇ ಪುನಃ ಸ್ಮೃತಾಃ ||೧೦||
ದರ್ವೀಕರಾ ಮಣ್ಡಲಿನೋ ರಾಜಿಮನ್ತಶ್ಚ ಪನ್ನಗಾಃ |
ತೇಷು ದರ್ವೀಕರಾ ಜ್ಞೇಯಾವಿಂಶತಿಃ ಷಟ್ಚ ಪನ್ನಗಾಃ
ದ್ವಾವಿಂಶತಿರ್ಮಣ್ಡಲಿನೋ ರಾಜಿಮನ್ತಸ್ತಥಾ ದಶ |
ನಿರ್ವಿಷಾ ದ್ವಾದಶ ಜ್ಞೇಯಾ ವೈಕರಞ್ಜಾಸ್ತ್ರಯಸ್ತಥಾ ||೧೨||
ವೈಕರಞ್ಜೋದ್ಭವಾಃ ಸಪ್ತ ಚಿತ್ರಾ ಮಣ್ಡಲಿರಾಜಿಲಾಃ |

ಅರ್ಥ—ಸರ್ಪಗಳು ೮೦ ಸಂಖ್ಯೆಯುಳ್ಳವು. ಅವುಗಳಲ್ಲಿ ೫ ಭೇದಗಳುಂಟು. ದರ್ವೀಕರಗಳು, ಮಂಡಲಿಗಳು, ರಾಜಿಮಂತಗಳು (ರಾಜಿಲಗಳು) ನಿರ್ವಿಷಗಳು ಮತ್ತು ವೈಕರಞ್ಜಗಳು ಎಂದು ತಿಳಿಯಬೇಕು. ಇವುಗಳು ಪುನಃ ದರ್ವೀಕರ, ಮಣ್ಡಲಿ ರಾಜಿಮನ್ತಗಳೆಂದು ೩ ವಿಧಗಳು. ಅವುಗಳಲ್ಲಿ ದರ್ವೀಕರಗಳು ೨೬, ಮಂಡಲಿಗಳು ೨೨, ರಾಜಿಮನ್ತಗಳು ೧೦, ನಿರ್ವಿಷಗಳು ೧೨, ವೈಕರಞ್ಜಗಳು ೩, ವೈಕರಞ್ಜ ಮಣ್ಡಲಿಗಳ ಸಂಬನ್ಧದಿಂದ ೪, ವೈಕರಞ್ಜ ರಾಜಿಲಗಳ ಸಂಪರ್ಕದಿಂದ ೩, ಈ ರೀತಿ ೭ ಚಿತ್ರಜಾತಿಗಳುಂಟು.

ಪಾದಾಭಿಮೃಷ್ಟಾ ದುಷ್ಟಾ ವಾ ಕ್ರುದ್ಧಾ ಗ್ರಾಸಾರ್ಥಿನೋಽಪಿವಾ
ತೇ ದಶನ್ತಿ ಮಹಾಕ್ರೋಧಾಸ್ತದ್ಧಿ ತ್ರಿವಿಧಮುಚ್ಯತೇ | ||೧೩||

ಅರ್ಥ—ಕಾಲಿನಿಂದ ತುಳಿದ, ಸ್ವಭಾವದುಷ್ಟವಾದ ಕೋಪವುಳ್ಳ, ಆಹಾರಾರ್ಥವಾಗಿ ಸಂಚರಿಸುವ ಹಾವುಗಳು ಮಹಾಕೋಪವುಳ್ಳುವಾಗಿ ಭಯಂಕರಗಳಾದ ಆಕಾರವುಳ್ಳವಾಗಿ ಕಚ್ಚುತ್ತವೆ. ಅವು ೩ ವಿಧಗಳಾಗಿವೆ.

ಸರ್ಪಿತಂ ರದಿತಂ ಚಾಪಿ ತೃತೀಯಮಥ ನಿರ್ವಿಷಮ್ |
ಸರ್ಪಾಙ್ಗಾಭಿಹತಂ ಕೇಚಿದಿಚ್ಛನ್ತಿ ಖಲು ತದ್ವಿದಃ ||೧೪||
ಪದಾನಿ ಯತ್ರ ದನ್ತಾನಾಮೇಕಂ ದ್ವೇವಾ ಬಹೂನಿ ಚ |
ನಿಮಗ್ನಾನ್ಯಲ್ಪರಕ್ತಾನಿ ಯಾನ್ಯುದ್ವೃತ್ಯ ಕರೋತಿ ಹಿ ||೧೫||

ಚಞ್ಚುಮಾಲಕಯುಕ್ತಾನಿ ವೈಕೃತ್ಯಕರಣಾನಿ ಚ ।
ಸಞ್ಕ್ಷಿಪ್ತಾನಿ ಸಶೋಫಾನಿ ವಿದ್ಯಾತ್ತತ್ ಸರ್ಪಿತಂ ಭಿಷಕ್ ॥೧೬॥
ರಾಜ್ಯಃ ಸಲೋಹಿತಾ ಯತ್ರ ನೀಲಾಃ ಪೀತಾಃ ಸಿತಾಸ್ತಥಾ ।
ವಿಜ್ಞೇಯಂ ರದಿತಂ ತ್ವಕ್ಷು ಜ್ಞೇಯಮಲ್ಪವಿಷಂ ಚ ತತ್ ॥೧೭॥
ಅಶೋಫಮಲ್ಪದುಷ್ಟಾಸೃಕ್ ಪ್ರಕೃತಿಸ್ಥಸ್ಯ ದೇಹಿನಃ ।
ಪದಂ ಪದಾನಿ ವಾ ವಿದ್ಯಾದವಿಷಂ ತಚ್ಚಿಕಿತ್ಸಕಃ ॥೧೮॥
ಸರ್ಪಸ್ಪೃಷ್ಟಸ್ಯ ಭೀರೋರ್ಹಿ ಭಯೇನ ಕುಪಿತೋಽನಿಲಃ ।
ಕಸ್ಯಚಿತ್ ಕುರುತೇಶೋಫಂ ಸರ್ಪಾಙ್ಗಾಭಿಹತಂ ತು ತತ್ ॥೧೯॥
ವ್ಯಾಧಿತೋದ್ವಿಗ್ನದಷ್ಟಾನಿ ಜ್ಞೇಯಾನ್ಯಲ್ಪವಿಷಾಣಿ ತು ।
ತಥಾ ತ್ರಿವೃದ್ಧಬಾಲಾಭಿರ್ದಷ್ಟಮಲ್ಪವಿಷಂ ಸ್ಮೃತಮ್ ॥೨೦॥
ಸುಪರ್ಣದೇವ ಬ್ರಹ್ಮರ್ಷಿಯಕ್ಷಸಿದ್ಧ ನಿಷೇವಿತೇ ।
ವಿಷಘ್ನೌಷಧಿ ಯುಕ್ತೇ ಚ ದೇಶೇ ನ ಕ್ರಮತೇ ವಿಷಮ್ ॥೨೧॥

ಅರ್ಥ—ಸರ್ಪಿತ, ರದಿತ, ನಿರ್ವಿಷ ಭೇದಗಳಿಂದ ಹಾವು ಕಚ್ಚುವುದು ಮೂರು ವಿಧಗಳು, ಮತ್ತೆ ಕೆಲವು ವೈದ್ಯರು ಸರ್ಪದೇಹದಿಂದ ಏಟು ಬಿದ್ದದ್ದೂ ಒಂದು ವಿಧವನ್ನು ತ್ತಾರೆ. ಹಾವಿನ ಹಲ್ಲುಗಳ ಪೈಕಿ ಒಂದು, ಎರಡು ಅಥವಾ ಅನೇಕ ಹಲ್ಲುಗಳು ಆಳ ವಾಗಿ ಚುಚ್ಚಿ ಸ್ವಲ್ಪ ರಕ್ತವೇ ಹೊರಕ್ಕೆ ಬಂದಂತೆ ಚಿಹ್ನೆಗಳಿದ್ದರೆ (ಕೆಲವರು ಹಲ್ಲುಗಳನ್ನು ಹೊರಳಿಸಿದಮೇಲೆ ರಕ್ತಬರುತ್ತದೆ ಎನ್ನುತ್ತಾರೆ). ಕಚ್ಚಿದ ಪ್ರದೇಶದ ಪಕ್ಕದಲ್ಲಿ ಆಲದ ಬಿಳಲಿನಂತೆ ಮಾಂಸಾಙ್ಕುರಗಳುಂಟಾಗಿ ವಿಕಾರವಾಗಿ ಕಾಣುತ್ತಲೂ ಸೂಕ್ಷ್ಮಗಳಾದ ಅಙ್ಕುರಗಳಿಂದ ಕೂಡಿ ಊದಿದ್ದರೆ ಸರ್ಪಿತದಂಶವೆಂದು ತಿಳಿಯಬೇಕು. ಆಳವಾಗಿ ಕಚ್ಚಿ ವಿಷವನ್ನು ಕಾರಿರುತ್ತದೆಂದು ತಿಳಿಯುವುದು). ರಕ್ತ ನೀಲ ಹಳದಿ ಬಿಳುಪು ಬಣ್ಣದ ಗೆರೆಗಳು ಅತಿ ಮೇಲ್ಭಾಗದಲ್ಲಿ ಕಚ್ಚಿದ ಗುರ್ತು ಕಂಡರೆ ಅದಕ್ಕೆ ರದಿತದಂಶವೆಂದೂ ಅಲ್ಪ ವಿಷವುಳ್ಳದೆಂದೂ ತಿಳಿಯಬೇಕು. ಊದು ಕಾಣಿಸದೆ ಸ್ವಲ್ಪವೇ ಕೆಟ್ಟರಕ್ತ ಸ್ರಾವವಾಗಿ ರೋಗಿಯು ಆರೋಗ್ಯವಾಗಿದ್ದು ಒಂದು ಅಥವಾ ಅನೇಕ ಹಲ್ಲುಗಳಿಂದ ಕಚ್ಚಿದಂತೆ ಗುರ್ತು ಕಂಡು ಬಂದರೆ ಅದು ನಿರ್ವಿಷದಂಶವೆಂದು ತಿಳಿಯಬೇಕು. ಅಂಜುಪುರಕನಿಗೆ ಶರೀರದಮೇಲೆ ಹಾವು ಹರಿದುಹೋದರೆ ಭಯದಿಂದ ವಾತಪ್ರಕೋಪವುಂಟಾಗಿ ಕೆಲವರಿಗೆ ಶೋಫವುಂಟಾಗುತ್ತದೆ, ಇದಕ್ಕೆ ಸರ್ಪಾಙ್ಗಾಭಿಹತವೆಂದು ಹೆಸರು (ಸರ್ಪಸ್ಪರ್ಶವೆಂದು ಹೇಳುತ್ತಾರೆ). ವ್ಯಾಧಿಪೀಡಿತವಾದ ಘಾಬರಿ ಪಟ್ಟಿರುವ ಹಾವುಗಳು ಅತಿ ಮುದಿಯಾದ ಮತ್ತು ಅತಿ ಎಳೆಯದಾದ ಹಾವುಗಳು ಕಚ್ಚಿದರೂ ಅಲ್ಪಮಾತ್ರೆಯಲ್ಲಿ ವಿಷವಿರುತ್ತೆಂದು ನಿರ್ಧರಿಸಬೇಕು. ಗರುಡಪಕ್ಷಿಗಳು ದೇವರ್ಷಿ, ಬ್ರಹ್ಮರ್ಷಿ, ಯಕ್ಷರು, ಸಿದ್ಧರು ವಾಸ ವಾಗಿರುವ ಪ್ರದೇಶಗಳಲ್ಲೂ ವಿಷಹರ ದ್ರವ್ಯಗಳು ಬೆಳೆದಿರುವ ಪ್ರದೇಶಗಳಲ್ಲೂ ಹಾವು ಕಚ್ಚಿದರೆ ವಿಷದ ವೇಗವು ಕಚ್ಚಿದ ಸ್ಥಳದಿಂದ ಮೇಲಕ್ಕೆ ಏರುವುದಿಲ್ಲವೆಂದು ತಿಳಿಯಬೇಕು.

ರಥಾಙ್ಗಲಾಙ್ಗಲಚ್ಛತ್ರಸ್ವಸ್ತಿಕಾಙ್ಕುಶಧಾರಿಣಃ ।
ಜ್ಞೇಯಾ ದರ್ವೀಕರಾಃ ಸರ್ಪಾಃ ಫಣಿನಃ ಶೀಘ್ರಗಾಮಿನಃ ॥೨೨॥
ಮಣ್ಡಲೈರ್ವಿವಿಧೈಶ್ಚಿತ್ರಾಃ ಪೃಥವೋ ಮನ್ದಗಾಮಿನಃ ।
ಜ್ಞೇಯಾ ಮಣ್ಡಲಿನಃ ಸರ್ಪಾಜ್ವಲನಾರ್ಕಸಮಪ್ರಭಾಃ ॥೨೩॥
ಸ್ನಿಗ್ಧಾ ವಿವಿಧವರ್ಣಾಭಿಸ್ತಿರ್ಯಗೂರ್ಧ್ವಂ ಚ ರಾಜಿಭಿಃ ।
ಚಿತ್ರಿತಾ ಇವ ಯೇ ಭಾನ್ತಿ ರಾಜಿಮನ್ತಸ್ತು ತೇ ಸ್ಮೃತಾಃ ॥೨೪॥

ಅರ್ಥ—ಸರ್ಪದ ದೇಹದಮೇಲೆ ಚಕ್ರ, ನೇಗಿಲು, ಛತ್ರಿ, ಹೆಡೆಯಲ್ಲಿರುವ ನೀಲ ರೇಖೆ (ಸ್ವಸ್ತಿಕ) ಅಙ್ಕುಶ ಅಂದರೆ ಈಟಿಯಂತೆ, ಗುರುತುಗಳಿರುತ್ತವೆ. ಹೆಡೆಗಳಿರುತ್ತವೆ. ಬಹಳ ವೇಗವಾಗಿ ಚಲಿಸುತ್ತವೆ. ಈ ರೀತಿಯ ಹಾವುಗಳಿಗೆ ದರ್ವೀಕರಗಳೆಂದು ಹೆಸರು. ಅಂದರೆ ಹೆಡೆಯು ಸೌಟಿನಂತೆಯೂ ಹಸ್ತದಂತೆ ವಿಶಾಲವಾಗಿ ಆಯುಧದಂತೆ ಪ್ರಯೋಗಿಸುವುದಕ್ಕೂ ಉಪಯೋಗವಾಗಿಯೂ ಇರುತ್ತೆಂದು ತಿಳಿಯಬೇಕು ; ಮೈಮೇಲೆಲ್ಲಾ ಅನೇಕತರದ ಮಂಡಲಗಳುಳ್ಳ ದಪ್ಪವಾಗಿಯೂ ಮೆಲ್ಲಗೆ ಹರಿಯುತ್ತಲೂ ಅತಿ ಪ್ರಕಾಶದಿಂದ ಸುಡುತ್ತಿರುವ ಸೂರ್ಯನಂತೆ ಕಾಂತಿಯುಳ್ಳ ಸರ್ಪಗಳಿಗೆ ಮಂಡಲಿಗಳೆನ್ನುತ್ತಾರೆ. ಮೈ ಹೊಳೆಯುತ್ತಲೂ ನಾನಾಬಣ್ಣದ ಉದ್ದವಾಗಿಯೂ ಅಡ್ಡಲಾಗಿಯೂ ಇರುವ ಗೆರೆಗಳಿಂದ ಅಲಂಕಾರ ಮಾಡಿದಂತಿರುವ ಸರ್ಪಗಳಿಗೆ ರಾಜಿಮಂತಗಳೆಂದು ಕರೆಯುತ್ತಾರೆ.

ಮುಕ್ತಾರೂಪ್ಯಪ್ರಭಾ ಯೇ ಚ ಕಪಿಲಾ ಯೇ ಚ ಪನ್ನಗಾಃ ।
ಸುಗನ್ಧಯಃ ಸುವರ್ಣಾಭಾಸ್ತೇ ಜಾತ್ಯಾಬ್ರಾಹ್ಮಣಾಃ ಸ್ಮೃತಾಃ ॥೨೫॥
ಕ್ಷತ್ರಿಯಾಃ ಸ್ನಿಗ್ಧವರ್ಣಾಸ್ತು ಪನ್ನಗಾ ಭೃಶಕೋಪನಾಃ ।
ಸೂರ್ಯಚನ್ದ್ರಾತಪತ್ರಾಭಲಕ್ಷ್ಮ ತೇಷಾಂ ತಥಾಮ್ಬುಜಮ್ ॥೨೬॥
ಕೃಷ್ಣಾ ವಜ್ರನಿಭಾ ಯೇ ಚ ಲೋಹಿತಾ ವರ್ಣತಸ್ತಥಾ ।
ಧೂಮ್ರಾಃ ಪಾರಾವತಾಭಾಶ್ಚ ವೈಶ್ಯಾಸ್ತೇ ಪನ್ನಗಾಃ ಸ್ಮೃತಾಃ ॥೨೭॥
ಮಹಿಷದ್ವೀಪಿ ವರ್ಣಾಭಾಸ್ತಥೈವ ಪರುಷತ್ವಚಃ ।
ಭಿನ್ನವರ್ಣಾಶ್ಚ ಯೇ ಕೇಚಿಚ್ಛೂದ್ರಾಸ್ತೇ ಪರಿಕೀರ್ತಿತಾಃ ॥೨೮॥

ಅರ್ಥ—ಮುತ್ತು ಬೆಳ್ಳಿಯಂತೆ ಕಾನ್ತಿಯುಳ್ಳಕಪಿಲವರ್ಣದ ಪನ್ನಗಗಳು (ಎದೆಯಿಂದ ಹರಿಯುವವು ಎಂದರ್ಥ). ಸುವಾಸನೆಯುಳ್ಳವಾಗಿ ಸುವರ್ಣದಂತೆ ಶರೀರ ಬಣ್ಣವಿರುವ ಸರ್ಪಗಳು ಬ್ರಾಹ್ಮಣ ಜಾತಿಗೆ ಸೇರಿದುವು. ಮೈಹೊಳೆಯುತ್ತಾ ಅತಿ ಕೋಪವುಳ್ಳ, ಸೂರ್ಯ, ಚಂದ್ರ, ಛತ್ರಿ, ಶಂಖ ಇವುಗಳ ಚಿಹ್ನೆಯುಳ್ಳ ಸರ್ಪಗಳು ಕ್ಷತ್ರಿಯ ಜಾತಿಗೆ ಸೇರಿದವು. ಕಪ್ಪುಬಣ್ಣವಿರುವ ವಜ್ರದಂತೆ ಥಳಥಳಿಸುವ ಬಣ್ಣದಲ್ಲಿ ಕೆಂಪಗೂ ಇರುವ ಹೊಗೆಯಬಣ್ಣ, ಪಾರಿವಾಳದ ಕತ್ತಿನ ಬಣ್ಣದಂತಿರುವ ಸರ್ಪಗಳು ವೈಶ್ಯಜಾತಿಗೆ ಸೇರಿದುವು. ಎಮ್ಮೆ, ಹುಲಿಗಳ ವರ್ಣದಂತೆ ಮೈಬಣ್ಣವಿರುವ ಒರಟಾದ ಮೈಚರ್ಮವುಳ್ಳ ಬೇರೆಬೇರೆ ಬಣ್ಣದ ಸರ್ಪಗಳು ಶೂದ್ರ ಜಾತಿಗೆ ಸೇರಿದವೆಂದು ಪರಿಗಣಿಸಬೇಕು.

ಕೋಪಯತ್ಯನಿಲಂ ಜನ್ತೋಃ (ಸರ್ಪಾಃ) ಫಣಿನಃ ಸರ್ವ ಏವ ತು ।
ಪಿತ್ತಂ ಮಣ್ಡಲಿನಶ್ಚಾಪಿ ಕಫಞ್ಚಾನೇಕರಾಜಯಃ ॥೨೯॥
ಅಪತ್ಯಮಸವರ್ಣಾಭ್ಯಾಂ ದ್ವಿದೋಷಕರಲಕ್ಷಣಮ್ ।
ಜ್ಞೇಯೌ ದೋಷೌ ಚ ದಮ್ಪತ್ಯೋರ್ವಿಶೇಷಶ್ಚಾತ್ರ ಕಥ್ಯತೇ ॥೩೦॥
ರಜನ್ಯಾಃ ಪಶ್ಚಿಮೇ ಯಾಮೇ ಸರ್ಪಾಶ್ಚಿತ್ರಾಶ್ಚರನ್ತಿಹಿ ।
ಶೇಷೇಷೂಕ್ತಾ ಮಣ್ಡಲಿನೋ ದಿವಾ ದರ್ವೀಕರಾಃ ಸ್ಮೃತಾಃ ॥೩೧॥
ದರ್ವೀಕರಾಸ್ತು ತರುಣಾ ವೃದ್ಧಾ ಮಣ್ಡಲಿನಸ್ತಥಾ ।
ರಾಜಿಮನ್ತೋ ವಯೋಮಧ್ಯೇ ಜಾಯನ್ತೇ ಮೃತ್ಯುಹೇತವಃ ॥೩೨॥
ನಕುಲಾಕುಲಿತಾ ಬಾಲಾ ವಾರಿಪಿಪ್ರಹತಾಃ ಕೃಶಾಃ ।
ವೃದ್ಧಾಮುಕ್ತತ್ವಚೋ ಭೀತಾಃ ಸರ್ಪಾಸ್ತ್ವಲ್ಪವಿಷಾಃ ಸ್ಮೃತಾಃ ॥೩೩॥

ಅರ್ಥ—ಸಕಲ ವಿಧಗಳಾದ ಹೆಡೆಯುಳ್ಳ ಹಾವುಗಳೂ ಕಚ್ಚಿದರೆ ವಾತಪ್ರಕೋಪವೂ, ಮಂಡಲದ ಹಾವುಗಳು ಕಚ್ಚಿದರೆ ಪಿತ್ತಪ್ರಕೋಪವೂ, ಅನೇಕ ರಾಜಿಗಳುಳ್ಳ ಹಾವುಗಳು ಕಚ್ಚಿದರೆ ಕಫಪ್ರಕೋಪವೂ ಉಂಟಾಗುತ್ತದೆ ; ಮಿಶ್ರಜಾತಿಯ ಹಾವುಗಳಿಂದ ಹುಟ್ಟಿದ ಹಾವು ಕಚ್ಚಿದರೆ ದ್ವಿದೋಷಗಳು ಪ್ರಕೋಪಗೊಳ್ಳುತ್ತವೆ ; ದಂಪತಿಗಳ ದೇಹ ಲಕ್ಷಣಗಳಿಂದ ದೋಷಗಳನ್ನು ತಿಳಿಯಬೇಕು, ವಿಶೇಷ ಲಕ್ಷಣಗಳನ್ನು ಹೇಳುತ್ತೇವೆ. ರಾತ್ರಿಯ ಕಡೆಯ ಯಾಮದಲ್ಲಿ ಚಿತ್ರಬಣ್ಣದ ಸರ್ಪಗಳೂ ಉಳಿದ ಮೂರು ಯಾಮಗಳಲ್ಲೂ ಮಂಡಲಿ ಸರ್ಪಗಳೂ ಸಂಚಾರಮಾಡಿ ಸಂಭೋಗಿಸುತ್ತವೆ. ಹಗಲು ಹೊತ್ತಿನಲ್ಲಿ ದರ್ವೀಕರ ಸರ್ಪಗಳು ಸಂಭೋಗಮಾಡುತ್ತವೆ, ದರ್ವೀಕರಗಳು ತರುಣಾವಸ್ಥೆಯಲ್ಲೂ ಮಂಡಲಿಗಳು ವಾರ್ಧಕ್ಯದಲ್ಲೂ (ಮುದಿಯಾದವುಗಳು) ರಾಜಿಮಂತ ಸರ್ಪಗಳು ಮಧ್ಯವಯಸ್ಸಿನಲ್ಲೂ ಕಚ್ಚಿದರೆ ಮರಣ ಸಂಭವಿಸುತ್ತದೆ. ಮುಂಗುಸಿಯೊಡನೆ ಜಗಳವಾಡಿ ಬಳಲಿರುವ ಳಿಯಉಪಯಸ್ಸಿನ, ನೀರಿನಲ್ಲಿ ಈಜಿ ಅಥವಾ ನೀರಿನ ವೇಗದಿಂದ ತೊಂದರೆ ಪಟ್ಟಿರುವ, ಕ್ಷೀಣವಾಗಿರುವ, ಮುದಿಯಾದ, ಪೊರೆ ಬಿಟ್ಟಿರುವ, ಹೆದರಿರುವ ಸರ್ಪಗಳು ಅಲ್ಪವಿಷವುಳ್ಳವೆಂದು ತಿಳಿಯಬೇಕು.

ಗ—ತತ್ರ ದರ್ವೀಕರಾಃ–ಕೃಷ್ಣಸರ್ಪೋ, ಮಹಾಕೃಷ್ಣಃ, ಕೃಷ್ಣೋದರಃ, ಶ್ವೇತಕಪೋತೋ, ಮಹಾಕಪೋತೋ, ಬಲಾಹಕೋ. ಮಹಾಸರ್ಪಃ, ಶಙ್ಖಪಾಲೋ ಲೋಹಿತಾಕ್ಷೋ, ಗವೇಧುಕಃ, ಪರಿಸರ್ಪಃ, ಖಣ್ಡಫಣಃ ಕಕುದಃ, ಪದ್ಮೋ, ಮಹಾಪದ್ಮೋ, ದರ್ಭಪುಷ್ಪೋ, ದಧಿಮುಖಃ ಪುಣ್ಡರೀಕೋ, ಭ್ರುಕುಟೀಮುಖೋ, ವಿಷ್ಕಿರಃ, ಪುಷ್ಪಾಭಿಕೀರ್ಣೋ, ಗಿರಿಸರ್ಪಃ, ಋಜುಸರ್ಪಃ, ಶ್ವೇತೋದರೋ, ಮಹಾಶಿರಾಃ, ಅಲಗರ್ದೋ, ಆಶೀವಿಷ ಇತಿ ॥೩೪॥

ಮಣ್ಡಲಿನಸ್ತು—ಆದರ್ಶಮಣ್ಡಲಃ, ಶ್ವೇತಮಣ್ಡಲೋ, ರಕ್ತಮಂಡಲಃ, ಚಿತ್ರಮಣ್ಡಲಃ ಪೃಷತೋ, ರೋಧ್ರಪುಷ್ಪೋ, ಮಲಿನ್ದಕೋ, ಗೋನಸೋ ವೃದ್ಧಗೋನಸೋ, ಪನಸೋ, ಮಹಾಪನಸೋ, ವೇಣುಪತ್ರಕಃ, ಶಿಶುಕೋ, ಮದನಃ, ಪಾಳಿನ್ದಿರಃ, ಪಿಙ್ಗಳತನ್ತುಕಃ ಪುಷ

ಪಾಣ್ಡುಃ, ಷಡಙ್ಗೀ, ಅಗ್ನಿಕೋ, ಬಭ್ರುಕಷಾಯುಃ, ಕಲುಷಃ, ಪಾರಾವತೋ, ಹಸ್ತಾಭರಣಃ ಚಿತ್ರಕಃ, ಏಣೀಪದ ಇತಿ ||೩೫||

ರಾಜಿಮನ್ತಾಸ್ತು–ಪುಣ್ಡರೀಕೋ, ರಾಜಿಚಿತ್ರೋ, ಅಙ್ಗುಳರಾಜಿಃ, ಬಿನ್ದುರಾಜಿಃ ಕರ್ದಮಕಃ, ತೃಣಶೋಷಕಃ, ಸರ್ಷಪಕಃ, ಶ್ವೇತಹನುಃ, ದರ್ಭಪುಷ್ಪಃ, ಚಕ್ರಕೋ, ಗೋಧೂಮಕಃ, ಕಿಕ್ಕಿಸಾದ ಇತಿ ||೩೬||

ನಿರ್ವಿಷಾಸ್ತು—ಗಲಗೋಲೀ, ಶೂಕಪತ್ರೋ, ಅಜಗರೋ, ದಿವ್ಯಕೋ, ವರ್ಷಾಹಿಕಃ, ಪುಷ್ಪಶಕಲೀ, ಜ್ಯೋತೀರಥಃ, ಕ್ಷೀರಿಕಾ, ಪುಷ್ಪಕೋ, ಅಹಿಪತಾಕೋ, ಅನ್ಧಾಹಿಕೋ, ಗೌರಾಹಿಕೋ, ವೃಕ್ಷೇಶಯ ಇತಿ ||೩೭||

ಅರ್ಥ—ದರ್ವೀಕರಗಳು ಅಂದರೆ ಹೆಡೆಯುಳ್ಳ ಹಾವುಗಳಲ್ಲಿರುವ ಭೇದಗಳು—ಕೃಷ್ಣಸರ್ಪಃ, ಮಹಾಕೃಷ್ಣ (ಅಚ್ಚಕಪ್ಪು) ಕೃಷ್ಣೋದರ, (ಹೊಟ್ಟೆಕಪ್ಪು) ಶ್ವೇತಕಪೋತೋ (ಬಿಳಿಯ ಪಾರಿವಾಳದ ಹಕ್ಕಿಯಂತೆ ಬಿಳಿಯ ಬಣ್ಣದ ಹಾವು) ಮಹಾಕಪೋತ, ಮಹಾಸರ್ಪ, ಶಙ್ಖಪಾಲ, ಲೋಹಿತಾಕ್ಷ (ಕಣ್ಣುಗುಡ್ಡೆ ಕೆಂಪಾಗಿರುವ ಹಾವು) ಗವೇಧುಕ, ಪರಿಸರ್ಪ, ಖಣ್ಡಫಣ (ಹೆಡೆ ಹರಿದಿರುವುದು), ಕಕುದಃ, ಪದ್ಮ, ಮಹಾಪದ್ಮ, ದರ್ಭಪುಷ್ಪಃ, ದಧಿಮುಖಃ, ಪುಣ್ಡರೀಕ, ಭ್ರೃಕುಟೀಮುಖ, ವಿಷ್ಕಿರ, ಪುಷ್ಪಾಭಿಕೀರ್ಣ ಗಿರಿಸರ್ಪ, ಋಜುಸರ್ಪ, ಶ್ವೇತೋದರ (ಹೊಟ್ಟೆಬೆಳ್ಳಗಿರುವುದು), ಮಹಾಶಿರ (ತಲೆ ದಪ್ಪವಾಗಿರುವುದು), ಅಲಗರ್ದ, ಆಶೀವಿಷಗಳೆಂದು ೨೭ ವಿಧಗಳಿವೆ.

ಮಂಡಲಿಗಳಲ್ಲಿ—ಆದರ್ಶಮಂಡಲ, ಬಿಳಿಮಂಡಲ, ರಕ್ತಮಂಡಲ, ಚಿತ್ರಮಂಡಲ, ಪೃಷತ, ರೋಧ್ರಪುಷ್ಪ, ಮಳಿನ್ದಕ, ಗೋನಸ, ವೃದ್ಧಗೋನಸ, ಪನಸ, ಮಹಾಪನಸ, ವೇಣುಪತ್ರಕ, ಶಿಶುಕಃ, ಮದನ, ಪಾಳಿನ್ದಿರಃ, ಪಿಙ್ಗಳತನ್ತುಕ, ಪುಷ್ಪಪಾಣ್ಡು, ಷಡಙ್ಗ, ಅಗ್ನಿಕ, ಬಭ್ರು, ಕಷಾಯ, ಕಲುಷ, ಪಾರಾವತ, ಹಸ್ತಾಭರಣ, ಚಿತ್ರಕ, ಏಣೀಪದಗಳೆಂಬ ೨೬ ಭೇದಗಳಿವೆ.

ರಾಜಿಮನ್ತಗಳಲ್ಲಿ—ಪುಣ್ಡರೀಕ, ರಾಜಿಚಿತ್ರ, ಅಙ್ಗುಲರಾಜಿ, ಬಿನ್ದುರಾಜಿ, ಕರ್ದಮಕ, ತೃಣಶೋಷಕ, ಸರ್ಷಪಕ, ಶ್ವೇತಹನುಃ, ಚಕ್ರಕ, ಗೋಧೂಮಕ, ಕಿಕ್ಕಿಸಾದಗಳೆಂಬ ೧೨ ಭೇದಗಳಿವೆ.

ನಿರ್ವಿಷಗಳಲ್ಲಿ—ಗಳಗೋಲೀ, ಶೂಕಪತ್ರ, ಅಜಗರ (ಹೆಬ್ಬಾವು), ದಿವ್ಯಕ ವರ್ಷಾಹಿಕ, ಪುಷ್ಪ ಶಕಲೀ, ಜ್ಯೋತಿರಥಃ ಕ್ಷೀರಿಕಾ ಪುಷ್ಪಕಂ ಅಹಿಪತಾಕೀ, ಅನ್ಧಾಹಿಕಃ, ಗೌರಾಹಿಕ, ವೃಕ್ಷೇಶಯಗಳೆಂಬ ೧೨ ಭೇದಗಳಿವೆ.

ಗ—ವೈಕರಞ್ಜಾಸ್ತುತ್ರಯಾಣಾಂ ದರ್ವೀಕರಾದೀನಾಂ ವ್ಯತಿಕರಾಜ್ಜಾತಾಃ, ತದ್ಯಥಾ, ಮಾಕುಲಿಃ, ಪೋಟಗಳಃ, ಸ್ನಿಗ್ಧರಾಜಿರಿತಿ। ತತ್ರ ಕೃಷ್ಣಸರ್ಪೇಣ ಗೋನಸ್ಯಾಂ ವೈಪರೀತ್ಯೇನ ವಾ ಜಾತೋ ಮಾಕುಲಿಃ, ರಾಜಿಲೇನ ಗೋನಸ್ಯಾಂ ವೈಪರೀತ್ಯೇನ ವಾ ಜಾತಃ ಪೋಟಗಳಃ, ಕೃಷ್ಣಸರ್ಪೇಣ ರಾಜಿಮತ್ಯಾಂ ವೈಪರೀತ್ಯೇನ ವಾ ಜಾತಃ ಸ್ನಿಗ್ಧರಾಜಿರಿತಿ। ತೇಷಾಮಾದ್ಯಸ್ಯ ಪಿತೃವದ್ವಿಷೋತ್ಕರ್ಷೋ ದಯೋರ್ಮಾತೃವದಿತ್ಯೇಕೇ ||೩೮||

ತ್ರಯಾಣಾಂ ವೈಕರಞ್ಜಾನಾಂ ಪುನರ್ದಿವ್ಯೇಳಕರೋಧ್ರಪುಷ್ಪಕ ರಾಜೀಚಿತ್ರಕಪೋಟಗಳ ಪುಷ್ಪಾಭಿಕೀರ್ಣ ದರ್ಭಪುಷ್ಪವೇಲ್ಲಿತಕಾಃ ಸಪ್ತ, ತೇಷಾಮಾದ್ಯಾಸ್ತ್ರಯೋರಾಜಿಲವತ್, ಶೇಷಾ ಮಣ್ಡಲಿವತ್, ಏವಮೇತೇಷಾಂ ಸರ್ಪಾಣಾಮಶೀತಿರ್ವ್ಯಾಖ್ಯಾತಾ ||೩೯||

ತತ್ರ ಮಹಾನೇತ್ರಜಿಹ್ವಾಸ್ಯಶಿರಸಃ ಪುಮಾಂಸಃ, ಸೂಕ್ಷ್ಮನೇತ್ರಜಿಹ್ವಾಸ್ಯ ಶಿರಸಃ ಸ್ತ್ರೀಯಃ, ಉಭಯಲಕ್ಷಣಾ ಮನ್ದವಿಷಾ ಅಕ್ರೋಧಾ ನಪುಂಸಕಾ ಇತಿ ||೪೦||

ಅರ್ಥ—ವೈಕರಞ್ಜಗಳು ದರ್ವೀಕರ ಮೊದಲಾದ ಮೂರು ವಿಧಗಳ ಪರಸ್ಪರ ವ್ಯತ್ಯಾಸ ಸಂಪರ್ಕದಿಂದ ಹುಟ್ಟಿದವು. ಹೇಗೆಂದರೆ—ಮಾಕುಲಿ, ಪೋಟಗಳ, ಸ್ನಿಗ್ಧ ರಾಜಿಗಳೆಂಬ ಮೂರು ವಿಧಗಳು ಸಂಪರ್ಕಜನ್ಯಗಳು. ಅವುಗಳಲ್ಲಿ ಕೃಷ್ಣಸರ್ಪವು ಗೋನಸಿಯಲ್ಲಿಯೂ ಇದಕ್ಕೆ ಬದಲಾಗಿ ಗೋನಸವು ಕೃಷ್ಣಸರ್ಪ ಸ್ತ್ರೀಯಲ್ಲಿಯೂ ಉತ್ಪನ್ನಮಾಡಿದ ಹಾವುಗಳಿಗೆ ಮಾಕುಲಿಯೆಂದೂ, ರಾಜಿಲನು ಗೋನಸೆಯಲ್ಲೂ ಇದಕೆ ವ್ಯತ್ಯಾಸವಾಗಿ ಗೋನಸನು ರಾಜಿಲೆಯಲ್ಲಿ ಉತ್ಪನ್ನಮಾಡಿದ ಹಾವುಗಳಿಗೆ ಪೋಟಗಳ ವೆಂದೂ, ಕೃಷ್ಣಸರ್ಪವು ರಾಜಿಮತಿಯಲ್ಲೂ ತದ್ವ್ಯತಿರೇಕವಾಗಿ ರಾಜಿಮಂತನು ಹೆಣ್ಣು ಕೃಷ್ಣಸರ್ಪದಲ್ಲೂ ಉತ್ಪನ್ನಮಾಡಿದ ಹಾವುಗಳಿಗೆ ಸ್ನಿಗ್ಧರಾಜಿಯೆಂದೂ ಸಂಕೇತವು. ಇವುಗಳ ಪೈಕಿ ಮೊದಲನೆಯದಾದ ಮಾಕುಲಿಗೆ ಪಿತೃವಿನಂತೆ ವಿಷಾಧಿಕ್ಯವುಂಟಾಗುತ್ತದೆ, ಉಳಿದ ಪೋಟಗಳ ಸ್ನಿಗ್ಧರಾಜಿಗಳಿಗೆ ಮಾತೃವಿನಂತೆ ವಿಷವೃದ್ಧಿಯುಂಟಾಗುತ್ತೆಂದು ಕೆಲ ವರ ಮತವುಂಟು. ಈ ಮೂರು ವಿಧ ವೈಕರಞ್ಜಗಳಲ್ಲಿ ದಿವ್ಯೇಳಕ, ರೋಧ್ರ ಪುಷ್ಪಕ, ರಾಜೀ, ಚಿತ್ರಕ, ಪೋಟಗಳ, ಪುಷ್ಪಾಭಿಕೀರ್ಣ, ದರ್ಭಪುಷ್ಪ, ವೇಲ್ಲಿತಕಗಳೆಂಬ ೭ ಭೇದ ಗಳುಂಟಾಗುತ್ತವೆ. ಇವುಗಳಲ್ಲಿ ಮೊದಲನೆಯ ಮೂರು ವಿಧಗಳು ರಾಜಿಲದಂತೆಯೂ, ಉಳಿದವು ಮಂಡಲಿಯಂತೆಯೂ ವೃದ್ಧಿಗೊಳ್ಳುತ್ತವೆ. ಈ ರೀತಿಯಾಗಿ ಈ ಸರ್ಪಗಳಲ್ಲಿ ರುವ ೮೦ ವಿಧಗಳನ್ನೂ ವಿವರಿಸಿದ್ದಾಯಿತು. ಇನ್ನು ಇವುಗಳಲ್ಲಿ ಯಾವವು ವಿಶಾಲ ವಾದ ಕಣ್ಣು, ನಾಲಿಗೆ, ಬಾಯಿ, ತಲೆಗಳನ್ನುಳ್ಳವೋ ಅವು ಗಂಡೆಂದೂ, ಸಣ್ಣ ಕಣ್ಣು, ನಾಲಿಗೆ, ಬಾಯಿ, ತಲೆಗಳನ್ನುಳ್ಳವು ಹೆಣ್ಣೆಂದೂ ಈ ಎರಡು ಲಕ್ಷಣಗಳೂ ಇದ್ದು ಅಲ್ಪ ವಿಷವುಳ್ಳವಾಗಿ ಕೋಪವಿಲ್ಲದವು ನಪುಂಸಕಗಳೆಂದೂ ನಿರ್ಧರಿಸಬೇಕು. ಮೇಲೆ ಹೇಳಿದ ಹೆಸರುಗಳೆಲ್ಲಾ ಪುರಾತನ ಕಾಲದಲ್ಲಿ ರೂಢಿಯಲ್ಲಿದ್ದಿರಬಹುದಾದರೂ ಈಗಿನಕಾಲದಲ್ಲಿ ಅವುಗಳನ್ನೆಲ್ಲಾ ಗೊತ್ತುಮಾಡುವುದು ಅತ್ಯಂತ ಪ್ರಯಾಸವಾದದ್ದು, ಅವುಗಳನ್ನು ತಿಳಿದಿ ರುವವರೂ ದುರ್ಲಭರೆಂಬುದನ್ನು ಗಮನಿಸಬೇಕು, ಸದ್ಯಕ್ಕೆ ಮೂಲಗ್ರಂಥದಲ್ಲಿ ಹೇಳಿದ ಹೆಸರನ್ನೇ ಪ್ರಯೋಗಿಸಲಾಗಿದೆ.

ಗ–ತತ್ರ ಸರ್ವೇಷಾಂ ಸರ್ಪಾಣಾಂ ಸಾಮಾನ್ಯತ ಏವ ದಷ್ಟಲಕ್ಷಣಂ ವಕ್ಷ್ಯಾಮಃ। ಕಿಂಕಾರ ಣಮ್ ವಿಷಂ ಹಿ ನಿಶಿತಸ್ತ್ರಿಂಶಾತನಿಹುತವಹದೇಶ್ಯಮಾಶುಕಾರಿ ಮುಹೂರ್ತಮಪ್ಯುಪೇಕ್ಷಿತ ಮಾತುರಮತಿಪಾತಯತಿ, ನ ಚಾವಕಾಶೋಽಸ್ತಿವಾಕ್ ಸಮೂಹಮುಪಸರ್ತುಮ್, ಪ್ರತ್ಯೇಕಮಪಿ ದಷ್ಟಲಕ್ಷಣೇಽಭಿಹಿತೇ ಸರ್ವತ್ರತ್ರೈವಿಧ್ಯಂ ಭವತಿ, ತಸ್ಮಾತ್ ತ್ರೈವಿಧ್ಯಮೇವ ವಕ್ಷ್ಯಾಮಃ।

ಏತದ್ವ್ಯಾತುರಹಿತಮಸಂ ಮೋಹಕರಂ ಚ, ಅಪಿ ಚಾತ್ರೈವ ಸರ್ವಸರ್ಪವ್ಯಂಜನಾವರೋಧಃ ||೪೧||

ಅರ್ಥ—ಇಲ್ಲಿ ಎಲ್ಲಾ ಸರ್ಪಗಳಿಗೂ ಸಾಮಾನ್ಯವಾದ ದಷ್ಟಲಕ್ಷಣ (ಕಡಿದಚಿಹ್ನೆ) ಗಳನ್ನೇ ಹೇಳುತ್ತೇವೆ. ಏನು ಕಾರಣವೆಂದರೆ—ವಿಷವು ಹರಿತವಾದ ಖಡ್ಗ, ಸಿಡಿಲು, ಬೆಂಕಿಗಳಿಗೆ ಸಮಾನವಾಗಿ ಶೀಘ್ರದಲ್ಲೇ ಕೊಲ್ಲುತ್ತದೆ, ಒಂದು ಮುಹೂರ್ತ ಕಾಲದವರೆಗೆ ಉಪೇಕ್ಷಿಸಿದರೂ ರೋಗಿಯನ್ನು ಕೊಂದೇಬಿಡುತ್ತದೆ, ಮಾತಿನ ರಾಶಿಯನ್ನು ಹಿಂತೆಗೆಯಲು ಅಂದರೆ ಮುಗಿಸುವುದಕ್ಕೆ ಕಾಲವೇ ಇಲ್ಲ, ಪ್ರತ್ಯೇಕ ದಷ್ಟ ಲಕ್ಷಣಗಳನ್ನು ಹೇಳುವುದಾದರೆ ಎಲ್ಲಾ ಭೇದಗಳಲ್ಲೂ ಮೂರು ವಿಧಗಳುಂಟಾಗುತ್ತವೆಯಾಗಿ ಆ ಮೂರು ವಿಧಾನಗಳನ್ನೇ ಹೇಳುತ್ತೇವೆ, ಇದರಲ್ಲೇ ಎಲ್ಲಾ ಸರ್ಪಗಳ ದಂಶ ಲಕ್ಷಣಗಳೂ ಅಡಕವಾಗಿಯೇ ಇದ್ದಂತಾಯಿತು.

ಗ—ತತ್ರ ದರ್ವೀಕರ ವಿಷೇಣ ತ್ವಙ್ನಯನ ನಖದಶನ ವದನಮೂತ್ರ ಪುರೀಷದಂತ ಕೃಷ್ಣತ್ವಂ ರೌಕ್ಷ್ಯಂ ಶಿರಸೋಗೌರವಂ ಸನ್ಧಿವೇದನಾ ಕಟೀಪೃಷ್ಠಗ್ರೀವಾದೌರ್ಬಲ್ಯಂ ಜೃಮ್ಭಣಂ ವೇಪಥುಃ ಸ್ವರಾವಸಾದೋಘುರ್ಘುರಕೋ ಜಡತಾ ಶುಷ್ಕೋದ್ಗಾರಃ ಕಾಸಶ್ವಾಸೌ ಹಿಕ್ಕಾ ವಾಯೋ ರೂರ್ಧ್ವಗಮನಂ ಶೂಲೋದ್ವೇಷ್ಟನಂ ತೃಷ್ಣಾಲಾಲಾಸ್ರಾವಃ ಫೇನಾಗಮನಂ ಸ್ರೋತೋಽವರೋಧಸ್ತಾಸ್ತಾಶ್ಚ ವಾತವೇದನಾಭವನ್ತಿ. ಮಣ್ಡಲಿವಿಷೇಣ ತ್ವಗಾದೀನಾಂ ಪೀತತ್ವಂ ಶೀತಾಭಿಲಾಷಃ ಪರಿಧೂಪನಂ ದಾಹಸ್ತೃಷ್ಣಾ ಮದೋಮೂರ್ಛಾಜ್ವರಃ ಶೋಣಿತಾಗಮನಮೂರ್ಧ್ವ ಮಧಶ್ಚ ಮಾಂಸಾನಾಮವಶಾತನಂ ಶ್ವಯಥುರ್ದಂಶಕೋಥಃ ಪೀತರೂಪದರ್ಶನ ಮಾಶುಕೋಪಸ್ತಾಸ್ತಾಶ್ಚ ಪಿತ್ತವೇದನಾಭವನ್ತಿ, ರಾಜಿಮದ್ವಿಷೇಣ ಶುಕ್ಲತ್ವಂ ತ್ವಗಾದೀನಾಂ ಶೀತಜ್ವರೋ ರೋಮಹರ್ಷಃ ಸ್ತಬ್ಧತ್ವಂ ಗಾತ್ರಾಣಾಮಾದಂಶಶೋಫಃ ಸಾಂದ್ರಕಫಪ್ರಸೇಕಶ್ಛರ್ದಿರಭೀಕ್ಷ್ಣಮಕ್ಷ್ಣೋಃ ಕಣ್ಡೂಃ ಕಣ್ಠೇಶ್ವಯಥುರ್ಘುರ್ಘುರಕ ಉಚ್ಛ್ವಾಸನಿರೋಧಸ್ತಮಃ ಪ್ರವೇಶಸ್ತಾಸ್ತಾಶ್ಚ ಕಫವೇದನಾಭವನ್ತಿ ||೪೨||

ಅರ್ಥ—ಅವುಗಳೊಳಗೆ ದರ್ವೀಕರ ವಿಷದಿಂದ ಚರ್ಮ, ಕಣ್ಣು, ಉಗುರು ಹಲ್ಲುಗಳು, ಬಾಯಿ, ಮೂತ್ರ, ಮಲ, ಕಚ್ಚಿದಸ್ಥಳ ಇವು ಕಪ್ಪಾಗಿರುತ್ತವೆ, ಚರ್ಮವು ಒರಟಾಗುತ್ತದೆ, ತಲೆಭಾರ, ಅಸ್ಥಿಸನ್ಧಿಗಳಲ್ಲಿ ನೋವೂ, ಸೊಂಟ (ನಡು), ಬೆನ್ನು, ಕತ್ತುಗಳಲ್ಲಿ ದೌರ್ಬಲ್ಯವೂ (ಬಲಹೀನತೆ), ಆಕಳಿಕೆ, ಮೈನಡುಕ, ಸ್ವರಭಂಗ, ಘುರ್ಘುರಧ್ವನಿ, ಚಲನೆಯಿಲ್ಲದಿರುವಿಕೆ, ಬರತೇಗು, ಕೆಮ್ಮು, ಉಬ್ಬಸ, ಬಿಕ್ಕಳಿಕೆ, ಮೇಲ್ಮೇಲೆ ಉಸಿರು ಹೊರಡುವುದು, ಶೂಲೆ, ಮೈಸೆಳೆತ, ನೀರಡಿಕೆ, ಬಾಯಿನಿಂದ ಜೊಲ್ಲು ಸುರಿಯುವುದು, ನೊರೆನೊರೆಯಾಗಿ ಬಾಯಿನಿಂದ ಉಗುಳುಬರುವುದು, ಸ್ರೋತಸ್ಸುಗಳಲ್ಲಿ ತಡೆಯುಂಟಾಗುವುದು ಮತ್ತು ತೋದಭೇದ ಮೊದಲಾದ ವಾತವೇದನೆಗಳುಂಟಾಗುತ್ತವೆ ; ಮಂಡಲಿ ವಿಷದಿಂದ ಚರ್ಮಕಣ್ಣುಗಳು ಉಗುರು ಮೊದಲಾದುವು ಹಳದಿ ಬಣ್ಣವಾಗುತ್ತವೆ, ಶೀತ ಪದಾರ್ಥಗಳಲ್ಲಿ ಪ್ರೀತಿಯೂ ಮೈಯೆಲ್ಲೆಲ್ಲಾ ಉರಿಯೂ ಉಂಟಾಗುತ್ತದೆ. ಉರಿತ,

ನೀರಡಿಕೆ, ಅಡಿಕೆತಿಂದ ಮದದಂತೆ ಮತ್ತಾಗಿ ಜ್ಞಾನತಪ್ಪುತ್ತದೆ, ಜ್ವರ ಬರುವುದು, ಬಾಯಿನಿಂದಲೂ ಗುದದಿಂದಲೂ ರಕ್ತಸೋರುವುದು, ಕಡಿದಸ್ಥಳದಲ್ಲಿ ಮಾಂಸವು ಕಿತ್ತು ಬರುವುದು, ಕಚ್ಚಿದಭಾಗವು ಊದಿ ಮಾಂಸವು ಕೊಳೆಯುವುದು, ಹಳದಿಯ ರೂಪವು ಕಾಣಿಸುವುದು, ಬೇಗ ಕೋಪವುಂಟಾಗುತ್ತದೆ, ಉರಿ ಮೊದಲಾದ ಪಿತ್ತವೇದನೆಗಳು ಉಂಟಾಗುತ್ತವೆ ; ರಾಜಿಲವಿಷದಿಂದ ಚರ್ಮ, ಉಗುರು, ಕಣ್ಣು ಮೊದಲಾದುವು ಬಿಳುಪೇರಿರುತ್ತವೆ, ಶೀತಜ್ವರವೂ, ರೋಮಾಂಚವೂ, ಬಿಗಿತವೂ ಉಂಟಾಗುವುದು. ಕಚ್ಚಿದ ಸ್ಥಳವು ಊದಿರುತ್ತದೆ, ಗಡ್ಡೆಕಟ್ಟಿದ ಕಫವು ಬಾಯಿನಿಂದ ಸುರಿಯುತ್ತದೆ, ತುಂಬಾ ವಮನವಾಗುತ್ತದೆ, ಕಣ್ಣುಗಳು ಕಡಿಯುತ್ತವೆ, ಗಂಟಲು ಊದಿ ಘುರ್ಘುರ ಶಬ್ದವುಂಟಾಗುತ್ತದೆ, ಉಸಿರು ಕಟ್ಟುತ್ತದೆ ಕಣ್ಣುಕತ್ತಲಾಗುತ್ತದೆ, ಕಣ್ಣು ಗೌರವ ಮೊದಲಾದ ಕಫವೇದನೆಗಳುಂಟಾಗುತ್ತವೆ.

ಗ—ಪುರುಷಾಭಿರ್ದಷ್ಟ ಊರ್ಧ್ವಂಪ್ರೇಕ್ಷತೇ ಅಧಸ್ತಾತ್ ಸಿರಾಶ್ಚೋತ್ತಿಷ್ಠಂತಿ ಸ್ತ್ರೀಯಾತ್ತಿಷ್ಠಂತಿ ಲಲಾಟೇ ನಪುಂಸಕಾಭಿರ್ದಷ್ಟಸ್ತಿರ್ಯಕ್ ಪ್ರೇಕ್ಷೀ ಭವತಿ, ಗರ್ಭಿಣ್ಯಾಪಾಣ್ಡುಮುಖೋ ಧ್ಮಾತಶ್ಚ ಸೂತಿಕಯಾಕ್ಷಿ ಕುಕ್ಷಿಶೂಲಾರ್ತೋ ಸರುಧಿರಂ ಮೇಹತ್ಯುಪಜಿಹ್ವಿಕಾಚಾಸ್ಯ ಭವತಿ, ಗ್ರಾಸಾರ್ಥಿನಾನ್ನಂ ಕಾಙ್ಕ್ಷತಿ, ವೃದ್ಧೇನ ಚಿರಾತ್ಮನ್ದಾ ವೇಗಾಶ್ಚ ಬಾಲೇನಾಶು ಮೃದವಶ್ಚ ನಿರ್ವಿಷೇಣಾ ವಿಷಲಿಙ್ಗಮ್ ಅನ್ಧಾಹಿಕೇನಾನ್ಧತ್ವಮಿತ್ಯೇಕೇ ಗ್ರಸನಾದಜಗರಃ ಶರೀರಪ್ರಾಣಹರೋ ನ ವಿಷಾತ್ ತತ್ರ ಸದ್ಯಃ ಪ್ರಾಣಹರಾಹಿದಷ್ಟಃ ಪತತಿಶಸ್ತ್ರಾಶನಿಹತ ಇವ ಭೂಮೌ ಸ್ರಸ್ತಾಙ್ಗಃ ಸ್ವಪಿತಿ ||೮೩||

ಅರ್ಥ—ಗಂಡು ಸರ್ಪಗಳಿಂದ ಕಚ್ಚಲ್ಪಟ್ಟವನು ಮೇಲಕ್ಕೆ ನೋಡುತ್ತಾನೆ (ಮೇಲ್ನೋಟವಿರುತ್ತದೆ) ಹೆಣ್ಣು ಸರ್ಪ ಕಚ್ಚಿದರೆ ಕೆಳಗಡೆಗೇ ನೋಡುತ್ತಾನೆ ಮತ್ತು ಅವನ ಹಣೆಯಲ್ಲಿ ಸಿರೆಗಳು ಉಬ್ಬುತ್ತವೆ, ನಪುಂಸಕ ಸರ್ಪಗಳಿಂದ ಕಚ್ಚಲ್ಪಟ್ಟರೆ ಅಡ್ಡಡ್ಡವಾಗಿ ನೋಡುತ್ತಾನೆ, ಗರ್ಭಿಣಿಯಾದ ಸರ್ಪವು ಕಚ್ಚಿದರೆ ಮುಖವು ಬಿಳಿಚಿಕೊಳ್ಳುತ್ತದೆ ಮತ್ತು ಉಬ್ಬುತ್ತದೆ, ಸೂತಿಕಾ (ಪ್ರಸವವಾದನಂತರ) ಸರ್ಪವು ಕಚ್ಚಿದರೆ ಹೊಟ್ಟೆಶೂಲೆಯಿಂದ ಪೀಡಿತನಾಗಿ ಮೂತ್ರದ್ವಾರದಿಂದ ರಕ್ತವನ್ನು ಸುರಿಸುತ್ತಾನೆ, ಉಪಜಿಹ್ವಿಕೆಯುಂಟಾಗುತ್ತದೆ, ಆಹಾರಕ್ಕಾಗಿ ಸಂಚರಿಸುವ ಸರ್ಪವು ಕಚ್ಚಿದರೆ ಅನ್ನವನ್ನು ಅಪೇಕ್ಷಿಸುತ್ತಾನೆ, ಮುದಿಸರ್ಪವು ಕಚ್ಚಿದರೆ ನಿಧಾನವಾಗಿ ಸ್ವಲ್ಪವೇ ವೇದನೆಯುಂಟಾಗುತ್ತದೆ, ಬಾಲ್ಯಾವಸ್ಥೆಯಲ್ಲಿರುವ ಸರ್ಪವು ಕಚ್ಚಿದರೆ ಬೇಗನೆ ಮಂದ ವೇದನೆಯುಂಟಾಗುತ್ತದೆ, ನಿರ್ವಿಷಸರ್ಪವು ಕಚ್ಚಿದರೆ ವಿಷದ ಚಿಹ್ನೆಗಳಿರುವುದಿಲ್ಲ, ಕುರುಡು ಸರ್ಪ ಕಚ್ಚಿದರೆ ಕುರುಡನಾಗುತ್ತಾನೆಂದು ಕೆಲವು ವೈದ್ಯರು ಹೇಳುತ್ತಾರೆ, ಅಜಗರವು ಹಿಡಿದು ಶರೀರವನ್ನು ಜೀವದಿಂದಿರುವಾಗಲೇ ತಿಂದುಬಿಡುತ್ತದೆಯೇ ವಿನಃ ವಿಷದಿಂದಲ್ಲ (ಅಜಗರವಿಷವು ಮಾರಕವಲ್ಲವು). ಅವುಗಳಲ್ಲೆಲ್ಲಾ ಸದ್ಯಃ ಪ್ರಾಣಹರ ಸರ್ಪದಿಂದ ಕಚ್ಚಲ್ಪಟ್ಟರೆ ಶಸ್ತ್ರ ಮತ್ತು

ಶಿಡಿಲುಬಿದ್ದವನಂತೆ ನೆಲದಮೇಲೆ ಬಿದ್ದು ಕೈಕಾಲು ದೇಹಗಳನ್ನು ನೀಡಿಕೊಂಡು ಮಲಗುತ್ತಾನೆ.

ಗ—ತತ್ರ ಸರ್ವೇಷಾಂ ಸರ್ಪಾಣಾಂ ವಿಷಸ್ಯ ಸಪ್ತವೇಗಾ ಭವನ್ತಿ । ತತ್ರ ದರ್ವೀಕರಾಣಾಂ ಪ್ರಥಮೇ ವೇಗೇ ವಿಷಂ ಶೋಣಿತಂ ದೂಷಯತಿ ತತ್ಪ್ರದುಷ್ಟಂ ಕೃಷ್ಣತಾಮುಪೈತಿ ತೇನ ಕಾರ್ಷ್ಣ್ಯಂಪಿಪೀಲಿಕಾ ಪರಿಸರ್ಪಣಮಿವ ಚಾಙ್ಗೇಭವತಿ ದ್ವಿತೀಯೇ ಮಾಂಸಂ ದೂಷಯತಿ ತೇನಾತ್ಯರ್ಥಂ ಕೃಷ್ಣತಾ ಶೋಫೋ ಗ್ರನ್ಥಯಶ್ಚಾಙ್ಗೇ ಭವನ್ತಿ ; ತೃತೀಯೇ ಮೇದೋ ದೂಷಯತಿ ತೇನ ದಂಶಕ್ಲೇದಃ ಶಿರೋಗೌರವಂ ಸ್ವೇದದೃಷ್ಟ್ಯವರೋಧಶ್ಚಕ್ಷುರ್ಗ್ರಹಣಂ ಚ ; ಚತುರ್ಥೇ ಕೋಷ್ಠಮನುಪ್ರವಿಶ್ಯಕಫಪ್ರಧಾನಾನ್ ದೋಷಾನ್ ದೂಷಯತಿ ತೇನ ತನ್ದ್ರಾಪ್ರಸೇಕಸನ್ಧಿವಿಶ್ಲೇಷಾ ಭವನ್ತಿ ಪಞ್ಚಮೇಽಸ್ಥೀನ್ಯನುಪ್ರವಿಶತಿ ಪ್ರಾಣಮಗ್ನಿಂ ಚ ದೂಷಯತಿ ತೇನ ಪರ್ವಭೇದೋಹಿಕ್ಕಾದಾಹಶ್ಚ ಭವತಿ ಷಷ್ಠೇ ಮಜ್ಜಾನಮನುಪ್ರವಿಶತಿ ಗ್ರಹಣೀಂ ಚಾತ್ಯರ್ಥಂ ದೂಷಯತಿ ತೇನ ಗಾತ್ರಾಣಾಂ ಗೌರವಮತೀಸಾರೋ ಹೃತ್ಪೀಡಾ ಮೂರ್ಛಾ ಚ ಭವತಿ ; ಸಪ್ತಮೇ ಶುಕ್ರಮನುಪ್ರವಿಶತಿ ವ್ಯಾನಂ ಚಾತ್ಯರ್ಥಂ ಕೋಪಯತಿ ಕಫಂ ಚ ಸೂಕ್ಷ್ಮಸ್ರೋತೇಭ್ಯಃ ಪ್ರಚ್ಯಾವಯತಿ ತೇನ ಶ್ಲೇಷ್ಮವರ್ತಿ ಪ್ರಾದುರ್ಭಾವಃ ಕಟೀಪೃಷ್ಠಭಙ್ಗಃ ಸರ್ವಚೇಷ್ಟಾವಿಘಾತೋ ಲಾಲಾಸ್ವೇದಯೋರತಿ ಪ್ರವೃತ್ತಿರುಚ್ಛ್ವಾಸ ನಿರೋಧಶ್ಚ ಭವತಿ । ತತ್ರಮಣ್ಡಲಿನಾಂ ಪ್ರಥಮೇ ವೇಗೇ ವಿಷಂ ಶೋಣಿತಂ ದೂಷಯತಿ, ತತ್ಪ್ರದುಷ್ಟಂ ಪೀತತಾಮುಪೈತಿ ತತ್ರಪರಿದಾಹಃ ಪೀತಾವಭಾಸತಾ ಚಾಙ್ಗಾನಾಂ ಭವತಿ ದ್ವಿತೀಯೇ ಮಾಂಸಂ ದೂಷಯತಿ ತೇನಾತ್ಯರ್ಥಂ ಪೀತತಾಪರಿದಾಹೌ ದಂಶೇಶ್ವಯಥುಶ್ಚ ಭವತಿ ತೃತೀಯೇ ಮೇದೋದೂಷಯತಿ ತೇನ ಪೂರ್ವವಚ್ಚಕ್ಷುರ್ಗ್ರಹಣಮ್ ತೃಷ್ಣಾದಂಶೇಕ್ಲೇದಃ ಸ್ವೇದಶ್ಚ ಚತುರ್ಥೇ ಕೋಷ್ಠಮನುಪ್ರವಿಶ್ಯ ಜ್ವರಮಾಪಾದಯತಿ ; ಪಞ್ಚಮೇ ಪರಿದಾಹಂ ಸರ್ವಗಾತ್ರೇಷು ಕರೋತಿ ; ಷಷ್ಠಸಪ್ತಮಯೋಃ ಪೂರ್ವವತ್ । ರಾಜಿಮತಾಂ ಪ್ರಥಮೇ ವೇಗೇ ವಿಷಂ ಶೋಣಿತಂ ದೂಷಯತಿ ತತ್ಪ್ರದುಷ್ಟಂ ಪಾಣ್ಡುತಾಮುಪೈತಿ ತೇನ ರೋಮಹರ್ಷಃ ಶುಕ್ಲಾವಭಾಸಶ್ಚ ಪುರುಷೋ ಭವತಿ ದ್ವಿತೀಯೇ ಮಾಂಸಂ ದೂಷಯತಿ ತೇನ ಪಾಣ್ಡುತಾತ್ಯರ್ಥಂ ಜಾಡ್ಯಂ ಶಿರಃಶೋಫಶ್ಚ ಭವತಿ ತೃತೀಯೇ ಮೇದೋದೂಷಯತಿ ತೇನ ಚಕ್ಷುರ್ಗ್ರಹಣಂ ದನ್ತಕ್ಲೇದಃ ಸ್ವೇದೋಘ್ರಾಣಾಕ್ಷಿ ಸ್ರಾವಶ್ಚ ಭವತಿ ; ಚತುರ್ಥೇ ಕೋಷ್ಠಮನುಪ್ರವಿಶ್ಯ ಮನ್ಯಾಸ್ತಮ್ಭಂ ಶಿರೋಗೌರವಂ ಚಾಪಾದಯತಿ ; ಪಞ್ಚಮೇವಾಕ್ಸಙ್ಗಂ ಶೀತಜ್ವರಂ ಚ ಕರೋತಿ ; ಷಷ್ಠಸಪ್ತಮಯೋಃ ಪೂರ್ವವದಿತಿ ॥೪೪॥

ಧಾತ್ವನ್ತರೇಷು ಯಾಃ ಸಪ್ತಕಲಾಃ ಸಂಪರಿಕೀರ್ತಿತಾಃ ।
ತಾಸ್ವೇಕೈಕಾಮತಿಕ್ರಮ್ಯ ವೇಗಂ ಪ್ರಕುರುತೇ ವಿಷಮ್ ॥೪೫॥
ಯೇನಾನ್ತರೇಣತು ಕಲಾಂ ಕಾಲಕಲ್ಪಂ ಭಿನತ್ತಿ ಹಿ ।
ಸಮೀರಣೇನೋಹ್ಯಮಾನಂ ತತ್ತುವೇಗಾನ್ತರಂ ಸ್ಮೃತಮ್ ॥೪೬॥

ಅರ್ಥ—ಎಲ್ಲಾ ಸರ್ಪಗಳಿಗೂ ೭ ವೇಗಗಳಿರುತ್ತವೆ, ಆ ವೇಗಗಳ ಪೈಕಿ ದರ್ವೀಕರ ಸರ್ಪ ಕಚ್ಚಿದವನಿಗೆ ಮೊದಲನೆಯ ವೇಗದಲ್ಲಿ ವಿಷವು ರಕ್ತವನ್ನು ಕೆಡಿಸುತ್ತದೆ,

ರಕ್ತವು ಕಪ್ಪುಬಣ್ಣಕ್ಕೆ ತಿರುಗುತ್ತದೆ, ಅದರಿಂದ ಶರೀರವು ಕಪ್ಪಾಗಿಯೂ ಮೈಮೇಲೆ ಇರುವೆಗಳು ಹರಿದಾಡಿದಂತೆ ವೇದನೆಯೂ ಉಂಟಾಗುತ್ತವೆ, ಎರಡನೆಯ ವೇಗದಲ್ಲಿ ಮಾಂಸವು ಕೆಡುತ್ತದೆ, ಅದರಿಂದ ಶರೀರದ ಬಣ್ಣವು ಕಪ್ಪಾಗುತ್ತದೆ, ಶರೀರದಲ್ಲಿ ಶೋಫೆಯೂ ಗ್ರಂಥಿಗಳೂ ಉಂಟಾಗುತ್ತವೆ, ಮೂರನೆಯ ವೇಗದಲ್ಲಿ ವಿಷವು ಮೇದಸ್ಸನ್ನು ಕೆಡಿಸುವುದರಿಂದ ಕಡಿದ ಸ್ಥಳದ ಘಾಯದಲ್ಲಿ ದ್ರವವು ಜಿನುಗುತ್ತದೆ, ತಲೆಭಾರ ಮೈಬೆವರುವುದು, ಕಣ್ಣುಬಿಗಿತ ಕಣ್ಣು ಕಾಣಿಸುವುದಿಲ್ಲ, ನಾಲ್ಕನೆಯ ವೇಗದಲ್ಲಿ ವಿಷವು ಕೋಷ್ಠವನ್ನು ಸೇರಿ ದೋಷಗಳನ್ನು ಕೆಡಿಸುತ್ತದೆ (ಆ ದೋಷಗಳಪೈಕಿ ಕಫವೇ ಹೆಚ್ಚಾಗಿ ಕೆರಳುತ್ತದೆ) ಅದರಿಂದ ತೂಕಡಿಕೆ ಬಾಯಿನಿಂದಜೊಲ್ಲು ಸುರಿಯುತ್ತದೆ, ಅಸ್ಥಿಸಂಧಿಗಳು ಸಡಿಲವಾಗುತ್ತವೆ, ಐದನೆಯ ವೇಗದಲ್ಲಿ ವಿಷವು ಮೂಳೆಗಳೊಳಗೆ ಪ್ರವೇಶಿಸುತ್ತದೆ, ಪ್ರಾಣವನ್ನೂ ಅಗ್ನಿಯನ್ನೂ ಕೆಡಿಸುತ್ತದೆ, ಬೆರಳುಗಳ ಗಿಣ್ಣುಗಳು ನೋಯುತ್ತವೆ, ಬಿಕ್ಕಳಿಕೆ ಉರಿತಗಳುಂಟಾಗುತ್ತವೆ, ಆರನೆಯ ವೇಗದಲ್ಲಿ ವಿಷವು ಮಜ್ಜಧಾತುವನ್ನು ಸೇರಿ ಗ್ರಹಣಿಯನ್ನು ಅತಿಯಾಗಿ ಕೆಡಿಸುತ್ತದೆ, ಅದರಿಂದ ಮೈಭಾರ, ಅತಿಸಾರ, ಹೃದಯದಲ್ಲಿ ನೋವು ಜ್ಞಾನ ತಪ್ಪುವುದೂ ಉಂಟಾಗುತ್ತದೆ, ಏಳನೆಯ ವೇಗದಲ್ಲಿ ವಿಷವು ಶುಕ್ರಧಾತುವನ್ನು ಪ್ರವೇಶಿಸುತ್ತದೆ, ವ್ಯಾನವಾಯುವನ್ನು ಅತಿಯಾಗಿ ಪ್ರಕೋಪಗೊಳಿಸುತ್ತದೆ, ಕಫವನ್ನು ಸೂಕ್ಷ್ಮಸ್ರೋತಸ್ಸುಗಳಿಂದ ಹೊರಕ್ಕೆ ಹೊರಡಿಸುತ್ತದೆ, ಅದರಿಂದ ಕಫವು ವರ್ತಿಯಂತೆ ಹೊರಟುಬರುತ್ತದೆ, ಸೊಂಟವೂ ಬೆನ್ನೂ ಕುಗ್ಗಿಹೋಗುತ್ತವೆ, ಎಲ್ಲಾ ವಿಧದ ಚೇಷ್ಟೆಗಳೂ ನಿಂತುಬಿಡುತ್ತವೆ, ಜೊಲ್ಲೂ ಬೆವರೂ ಅತಿಯಾಗಿ ಸುರಿಯುತ್ತವೆ, ಉಸಿರಾಡುವುದು ನಿಂತುಬಿಡುತ್ತದೆ (ಅಂದರೆ ರೋಗಿಯು ಸಾಯುತ್ತಾನೆ). ಮಂಡಲಿಸರ್ಪಗಳು ಕಚ್ಚಿದ ಮನುಷ್ಯನಿಗೆ ಮೊದಲನೆಯ ವಿಷವೇಗದಲ್ಲಿ ವಿಷವು ರಕ್ತವನ್ನು ಕೆಡಿಸುತ್ತದೆ, ಅದು ತಣ್ಣಗಾಗುತ್ತದೆ, ಮೈ ಉರಿತವೂ ಹಳದಿಯ ಬಣ್ಣಕ್ಕೆ ತಿರುಗುವುದೂ ಉಂಟಾಗುತ್ತವೆ, ಎರಡನೆಯ ವೇಗದಲ್ಲಿ ವಿಷವು ಮಾಂಸವನ್ನು ಕೆಡಿಸುತ್ತದೆ, ಶರೀರವು ಅತ್ಯಂತ ಹಳದಿಯಾಗುತ್ತದೆ, ಕಚ್ಚಿದ ವ್ರಣವು ಉರಿಯುತ್ತಲೂ ಸಂತಾಪವುಳ್ಳದಾಗಿಯೂ ಊದಿಕೊಂಡೂ ಇರುತ್ತದೆ, ಮೂರನೆಯ ವೇಗದಲ್ಲಿ ವಿಷವು ಮೇದಸ್ಸನ್ನು ಕೆಡಿಸುವುದರಿಂದ ಕಣ್ಣಿಗೆ ತೊಂದರೆಯುಂಟಾಗುತ್ತದೆ, ಬಾಯಾರಿಕೆಯೂ ಕಚ್ಚಿದ ವ್ರಣಭಾಗದಲ್ಲಿ ದ್ರವಜಿನುಗುತ್ತದೆ ಮತ್ತು ಬೆವರುತ್ತದೆ, ನಾಲ್ಕನೆಯ ವೇಗದಲ್ಲಿ ವಿಷವು ಕೋಷ್ಠವನ್ನು ಸೇರಿ ಜ್ವರವನ್ನು ಉಂಟುಮಾಡುತ್ತದೆ, ಐದನೆಯ ವೇಗದಲ್ಲಿ ಶರೀರದಲ್ಲೆಲ್ಲಾ ಉರಿಯುಂಟಾಗುತ್ತದೆ, ಆರನೆಯ ಮತ್ತು ಏಳನೆಯ ವೇಗಗಳಲ್ಲಿ ಹಿಂದೆ ಹೇಳಿದಂತೆಯೇ ತೊಂದರೆಯನ್ನು ಉಂಟುಮಾಡುತ್ತದೆ. ರಾಜಿಲಸರ್ಪಗಳು ಕಚ್ಚಿದರೆ ಮೊದಲನೆಯ ವೇಗದಲ್ಲಿ ವಿಷವು ರಕ್ತವನ್ನು ಕೆಡಿಸಿ ಶರೀರವನ್ನು ಬಿಳುಪಾಗುವಂತೆ ಮಾಡುತ್ತದೆ, ರೋಮಗಳು ಎದ್ದು ನಿಲ್ಲುತ್ತವೆ (ಮೈ ಜುಮ್ಮೆಂದು ರೋಮಾಂಚವಾಗುತ್ತದೆ). ರಕ್ತಹೀನತೆಯಿಂದ ರೋಗಿಯ ದೇಹವು ಬಿಳುಪೇರುತ್ತದೆ, ಎರಡನೆಯ ವೇಗ

ದಲ್ಲಿ ವಿಷವು ಮಾಂಸವನ್ನು ಕೆಡಿಸುತ್ತದೆ, ಅತಿಯಾಗಿ ಪಾಂಡುತ್ವವೂ ಜಡತ್ವವೂ (ನಿಶ್ಚೇಷ್ಟತೆಯೂ), ತಲೆಯಲ್ಲಿ ಶೋಥವೂ ಉಂಟಾಗುತ್ತವೆ, ಮೂರನೆಯ ವೇಗದಲ್ಲಿ ವಿಷವು ಮೇದಸ್ಸನ್ನು ಕೆಡಿಸಿ ಕಣ್ಣು ಕಾಣಿಸದಂತೆ ಮಾಡುತ್ತದೆ, ಹಲ್ಲುಗಳಲ್ಲಿ ಕೊಳೆ ಮೆತ್ತಿ ಜಿನುಗುತ್ತದೆ, ವೈಬೆವರುವುದು ಮೂಗಿನಿಂದ ಸಿಂಬಳವೂ ಕಣ್ಣಿನಿಂದ ನೀರೂ ಸೋರುತ್ತವೆ. ನಾಲ್ಕನೆಯ ವೇಗದಲ್ಲಿ ವಿಷವು ಕೋಷ್ಠವನ್ನು ಸೇರಿ ಮನ್ಯಾಸ್ತಮ್ಭವನ್ನೂ (ಕತ್ತುಬಿಗಿದು ಹಿಡಿದಂತಾಗಿ ಅತ್ತಿತ್ತಕಡೆ ತಿರುಗಿಸುವುದಕ್ಕೆ ಆಗುವುದಿಲ್ಲ). ತಲೆಭಾರವನ್ನೂ ಉಂಟುಮಾಡುತ್ತದೆ. ಐದನೆಯ ವೇಗದಲ್ಲಿ ವಾಕ್ಸಙ್ಗ (ಗಂಟಲಲ್ಲಿರುವ ಸ್ವರವಾಹಿನಾಡಿಯನ್ನು ಕೆಡಿಸುವುದರಿಂದ ಮಾತು ಹೊರಡುವುದಿಲ್ಲ) ಮತ್ತು ಶೀತಜ್ವರಗಳನ್ನುಂಟುಮಾಡುತ್ತದೆ, ಆರನೆಯ ಮತ್ತು ಏಳನೆಯ ವೇಗಗಳಲ್ಲಿ ದರ್ವೀಕರಸರ್ಪದ ೬–೭ ನೆಯ ವಿಷವೇಗದಂತೆಯೇ ಕೇಡುಂಟಾಗುತ್ತದೆ. ಸುಶ್ರುತ ಶಾರೀರಸ್ಥಾನದ ೪ ನೆಯ ಅಧ್ಯಾಯದಲ್ಲಿ ಹೇಳಿರುವ ೭ ಕಲೆಗಳೂ ಧಾತುಗಳ ಮಧ್ಯವರ್ತಿಗಳಾಗಿವೆಯಷ್ಟೆ ; ವಿಷವು ಈ ಕಲೆಗಳಲ್ಲಿ ಒಂದರಿಂದ ಮತ್ತೊಂದನ್ನು ಪ್ರವೇಶಿಸಿ ವೇಗವನ್ನು ಪ್ರದರ್ಶಿಸುತ್ತದೆ. ಹೇಗೆಂದರೆ—ರಸರಕ್ತಗಳ ಮಧ್ಯದ ಕಲೆಯನ್ನು ಮೀರಿ ರಕ್ತದಲ್ಲೇ ಮೊದಲನೆಯ ವಿಷವೇಗವುಂಟಾಗುತ್ತದೆ, ರಕ್ತಮಾಂಸಗಳ ಮಧ್ಯದ ಕಲೆಯನ್ನು ದಾಟಿ ಎರಡನೆಯ ವಿಷವೇಗವೂ ಮಾಂಸ ಮೇದಸ್ಸುಗಳ ಮಧ್ಯದ ಕಲೆಯನ್ನುಲ್ಲಂಘಿಸಿ ಮೂರನೆಯ ವಿಷವೇಗವೂ ಮೇದಸ್ಸೂ ಕಫಗಳ ಮಧ್ಯದ ಕಲೆಯಲ್ಲನ್ನುಂಘಿಸಿ ನಾಲ್ಕನೆಯ ವಿಷ ವೇಗವೂ ಕಫ ಮತ್ತು ಪುರೀಷಗಳ ಮಧ್ಯದ ಕಲೆಯನ್ನತಿಕ್ರಮಿಸಿ ಐದನೆಯ ವಿಷ ವೇಗವೂ ಪುರೀಷ ಮತ್ತು ಪಿತ್ತಗಳ ಮಧ್ಯದ ಕಲೆಯನ್ನತಿಕ್ರಮಿಸಿ ಆರನೆಯ ವಿಷ ವೇಗವೂ ಪಿತ್ತ ಶುಕ್ರಗಳ ಮಧ್ಯದ ಕಲೆಯನ್ನತಿಕ್ರಮಿಸಿ ಏಳನೆಯ ವಿಷವೇಗವೂ ಉಂಟಾಗುತ್ತವೆ. ಯಾವುದು ಪುರೀಷಧರವೋ ಅದೇ ಅಸ್ಥಿಧರೆಯಾದ್ದರಿಂದ ಅಸ್ಥಿಯನ್ನು ಪ್ರವೇಶಿಸುತ್ತೆಂದು ಹೇಳಿರುವುದು ವಿರುದ್ಧವಲ್ಲ, ಹೀಗೆಯೇ ಯಾವುದು ಪಿತ್ತಧರೆಯೋ ಅದೇ ಮಜ್ಜಾಧರ ಕಲೆಯಾದ್ದರಿಂದ ಆರನೆಯ ವಿಷವೇಗದಲ್ಲಿ ವಿಷವು ಮಜ್ಜೆಯನ್ನು ಪ್ರವೇಶಿಸುತ್ತೆಂದರೆ ವಿರೋಧವಲ್ಲವು, ಮೃತ್ಯುಸಮಾನವಾದ ವಿಷವು ವಾಯುವಿನಿಂದ ಪ್ರೇರಿತವಾಗಿ ಒಂದು ಕಲೆಯಿಂದ ಮತ್ತೊಂದು ಕಲೆಯನ್ನು ನುಗ್ಗಿಹೋಗುವಷ್ಟು ಕಾಲಕ್ಕೆ "ವೇಗಾನ್ತರ" ಕಾಲವೆನ್ನುತ್ತಾರೆ.

ಶೂನಾಙ್ಗಃ ಪ್ರಥಮೇವೇಗೇ ಪಶುರ್ಧ್ಯಾಯತಿ ದುಃಖಿತಃ ।
ಲಾಲಾಸ್ರಾವೋದ್ವಿತೀಯೇ ತು ಕೃಷ್ಣಾಙ್ಗಃ ಪೀಡ್ಯತೇ ಹೃದಿ ॥೪೭॥
ತೃತೀಯೇ ಚ ಶಿರೋದುಃಖಂ ಕಣ್ಠಗ್ರೀವಂ ಚ ಭಜ್ಯತೇ ।
ಚತುರ್ಥೇ ವೇಪತೇಮೂಢಃ ಖಾದನ್ ದನ್ತಾನ್ ಜಹಾತ್ಯಸೂನ್ ॥೪೮॥
ಕೇಚಿದ್ವೇಗತ್ರಯಂ ಪ್ರಾಹುರನ್ಯೇಷ್ವೈತೇಷು ತದ್ವಿದಃ ।
ಧ್ಯಾಯತಿ ಪ್ರಥಮೇ ವೇಗೇ ಪಕ್ಷೀ ಮುಹ್ಯತ್ಯತಃ ಪರಮ್ ॥೪೯॥

ದ್ವಿತೀಯೇ ವಿಹ್ವಲಃ ಪ್ರೋಕ್ತಸ್ತೃತೀಯೇ ಮೃತ್ಯುಮೃಚ್ಛತಿ ।
ಕೇಚಿದೇಕಂ ವಿಹಙ್ಗೇಷು ವಿಷವೇಗಮುಶನ್ತಿಹಿ ॥೫೦॥
ಮಾರ್ಜಾರನಕುಲಾದೀನಾಂ ವಿಷಂ ನಾತಿಪ್ರವರ್ತತೇ ।

ಅರ್ಥ—ಮನುಷ್ಯನಿಗೆ ಏಳು ವಿಷವೇಗಗಳುಂಟು. ಆದರೆ ಪಶುಗಳಿಗೆ ನಾಲ್ಕು ವಿಷವೇಗಗಳೂ ಪಕ್ಷಿಗಳಿಗೆ ಮೂರು ವಿಷವೇಗಗಳೂ ಎಂದು ವಿಷವೇಗ ಜ್ಞಾನವುಳ್ಳ ವೈದ್ಯರು ಹೇಳುತ್ತಾರೆ. ಪಶುಗಳಿಗೆ ಮೊದಲನೆಯ ವಿಷವೇಗದಲ್ಲಿ ಮೈಊದುತ್ತದೆ, ವೇದನೆಯಿಂದ ದುಃಖಪಡುತ್ತಾ ನಡುಗುತ್ತಿರುತ್ತದೆ, ಎರಡನೆಯ ವೇಗದಲ್ಲಿ ಬಾಯಿನಿಂದ ಜೊಲ್ಲು ಸುರಿಯುತ್ತದೆ, ನಾಲಿಗೆ, ಬಾಯಿ, ಕಣ್ಣು ಗುಡ್ಡೆಗಳು ಕಪ್ಪಾಗುತ್ತವೆ, ಹೃದಯ ದಲ್ಲಿ ವ್ಯಥೆಯುಂಟಾಗುತ್ತದೆ, ಮೂರನೆಯ ವೇಗದಲ್ಲಿ ತಲೆ ಭಾರವಾಗಿ ಕತ್ತನ್ನು ಬಗ್ಗಿಸಿ ಕೊಂಡಿರುತ್ತದೆ, ಗಂಟಲೂ ಕತ್ತೂ ಮುರಿಯುತ್ತವೆ (ಧ್ವನಿ ಹೊರಡುವುದಿಲ್ಲ ಕತ್ತು ಸೊಟ್ಟಾಗುತ್ತದೆ). ನಾಲ್ಕನೆಯ ವೇಗದಲ್ಲೇ ನಡುಗುತ್ತಿರುತ್ತದೆ, ಹಲ್ಲುಗಳನ್ನು ಕಡಿ ಯುತ್ತಾ ಪ್ರಾಣವನ್ನು ಬಿಡುತ್ತದೆ, ಕೆಲವರು ಪಶುಗಳಿಗೂ ಮೂರೇ ವಿಷವೇಗಗಳೆಂದು ಅಭಿಪ್ರಾಯಪಡುತ್ತಾರೆ. ಪಕ್ಷಿಯು ವಿಷದ ಮೊದಲನೆಯ ವೇಗದಲ್ಲಿ ವಿಷವೇಗದಿಂದ ದುಃಖಪಡುತ್ತದೆ, ಅಜ್ಞಾನವುಂಟಾಗುತ್ತದೆ. ಎರಡನೆಯ ವೇಗದಲ್ಲಿ ಗಾಬರಿಯಿಂದ ಅದುರಾಡುತ್ತದೆ. ಮೂರನೆಯ ವೇಗದಲ್ಲಿ ಸಾಯುತ್ತದೆ, ಪಕ್ಷಿಗಳಿಗೆ ಒಂದೇ ವಿಷವೇಗ ವಿರುತ್ತೆಂದು ಕೆಲವು ವಿಷವೈದ್ಯರ ಮತವು, ಬೆಕ್ಕು ಮುಂಗುಸಿಗಳಿಗೆ ವಿಷವು ಹೆಚ್ಚಾಗಿ ವ್ಯಾಪಿಸುವುದೇ ಇಲ್ಲವೆಂದೂ ಅದರಿಂದ ಅವು ಹೆಚ್ಚುಬಾಧೆ ಪಡುವಂತೆಯೂ ಇಲ್ಲವೆಂದೂ ಅಭಿಪ್ರಾಯಪಡುತ್ತಾರೆ.

ಟಿಪ್ಪಣಿ—ವಿಷವೇಗದ ಜ್ಞಾನದಿಂದುಂಟಾಗುವ ಲಾಭವನ್ನು ಚಕ್ರಪಾಣಿದತ್ತನು ಈ ರೀತಿಯಲ್ಲಿ ತಿಳಿಸುತ್ತಾನೆ—ವಿಷವೇಗದಿಂದ ಸತ್ತವರ ಮಾಂಸವನ್ನೂ ವಿಷಸಂಪರ್ಕ ವಿಲ್ಲದ್ದನ್ನು ಮಾತ್ರಾಭೋಜನಕ್ಕೆ ಉಪಯೋಗಿಸುವಾಗ ವಿಷಪಾನ ಮಾಡಿದವರ ಹೃದಯ ವನ್ನೂ ವಿಷಪ್ರಾಣಿಗಳಿಂದ ಕಚ್ಚಲ್ಪಟ್ಟಿದ್ದರೆ ಕಚ್ಚಿ ವ್ರಣವಾಗಿರುವ ಭಾಗವನ್ನೂ ಬಿಟ್ಟು ಉಳಿದ ಭಾಗಗಳ ಮಾಂಸವನ್ನು ಸೇವಿಸಬಹುದು. ಅಂದರೆ ವಿಷಪ್ರಯೋಗವಾಗಿ ಎಷ್ಟು ಕಾಲವಾಗಿರುತ್ತೆಂದು ವಿಷವೇಗ ಲಕ್ಷಣಗಳಿಂದ ಗೊತ್ತುಮಾಡಲು ಅನುಕೂಲವಾಗುತ್ತದೆ, ವೇಗಜ್ಞಾನ ತಿಳಿಯದಿದ್ದರೆ ವಿಷವು ಶರೀರವನ್ನೆಲ್ಲಾ ವ್ಯಾಪಿಸಿರುವ ಲಕ್ಷಣಗಳೂ ಗೊತ್ತಾಗದೆ ಅದನ್ನು ಉಪಯೋಗಿಸಿದರೆ ಮರಣವುಂಟಾಗುತ್ತದೆಂದು ಜ್ಞಾನವುಂಟಾಗುವುದಿಲ್ಲವಾಗಿ ವೇಗಜ್ಞಾನವನ್ನು ಆವಶ್ಯಕವಾಗಿ ತಿಳಿದುಕೊಂಡಿರಬೇಕು.

ಇತಿ ಶ್ರೀಸುಶ್ರುತ ಸಂಹಿತಾಯಾಂ ಕಲ್ಪಸ್ಥಾನೇ ಸರ್ಪದಷ್ಟವಿಷ ವಿಜ್ಞಾನೀಯ
ಕಲ್ಪನಾಮಕ ಚತುರ್ಥಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ
ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ

ಪಞ್ಚಮೋಽಧ್ಯಾಯಃ

ಅಥಾತಃ ಸರ್ಪದಷ್ಟವಿಷ ಚಿಕಿತ್ಸಿತಂ ಕಲ್ಪಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸರ್ಪದಷ್ಟವಿಷ ಚಿಕಿತ್ಸಾಕಲ್ಪವನ್ನು ವಿವರಿಸುತ್ತೇವೆ.

ಸರ್ವೈರೇವಾದಿತಃ ಸರ್ಪೈಃ ಶಾಖಾದಷ್ಟಸ್ಯ ದೇಹಿನಃ ।
ದಂಶಸ್ಯೋಪರಿ ಬಧ್ನೀಯಾದರಿಷ್ಟಾಶ್ಚತುರಙ್ಗುಳೇ ||೩||
ಪ್ಲೋತ ಚರ್ಮಾನ್ತವಲ್ಕಾನಾಂ ಮೃದುನಾನ್ಯತಮೇನವೈ ।
ನ ಗಚ್ಛತಿ ವಿಷಂ ದೇಹಮರಿಷ್ಟಾಭಿರ್ನಿವಾರಿತಮ್ ||೪||

ಅರ್ಥ—ಹೆಡೆಯುಳ್ಳ ಎಲ್ಲಾ ವಿಧಸರ್ಪಗಳೂ ಶಾಖೆಗಳಲ್ಲಿ ಕಡಿದರೆ (ಅಂದರೆ ಕೈಕಾಲುಗಳನ್ನು ನಡುವಿನಿಂದ ಅಂಗಾಲಿನವರೆಗಿನ ಪ್ರದೇಶ ಮತ್ತು ಹೆಗಲಿನಿಂದ ಅಂಗೈವರೆಗಿನ ಶರೀರ ಭಾಗವನ್ನು ಕಡಿದರೆ) ಮೊದಲು ಕಡಿದ ಸ್ಥಳಕ್ಕೆ ೪ ಅಂಗುಳಿಗಳಷ್ಟು ಪ್ರದೇಶದ ಮೇಲೆ ಬಟ್ಟೆಯ ಚೂರು, ಚರ್ಮದ ತುಂಡು ಅಥವಾ ಮರಗಳ ತೊಗಟೆ ಇವುಗಳ ಪೈಕಿ ಯಾವುದಾದರೊಂದು ಮೃದುವಾದುದನ್ನಿಟ್ಟು ಬಿಗಿಯಬೇಕು, ಈ ಬಂಧನದಿಂದ ತಡೆಯಲ್ಪಟ್ಟ ವಿಷವು ದೇಹದಲ್ಲೆಲ್ಲಾ ಹರಡುವುದಿಲ್ಲ.

ಟಿಪ್ಪಣಿ—ಆದಿತಃ ಸರ್ಪವು ಕಚ್ಚಿದಕೂಡಲೇ, ಅಂದರೆ ಸಾವಕಾಶಮಾಡಬಾರದು ಎಂದು ಅರ್ಥ. ಹಾವು ಕಚ್ಚಿದರೆ ಸಾಮಾನ್ಯಚಿಕಿತ್ಸೆ, ವಿಶೇಷಚಿಕಿತ್ಸೆಗಳೆಂದು ೨ ವಿಧ ಚಿಕಿತ್ಸೆಗಳಿವೆ. ಮೊದಲು ಸಾಮಾನ್ಯ ಚಿಕಿತ್ಸೆಯನ್ನು ವಿವರಿಸುತ್ತಾರೆ, ಅರಿಷ್ಟವೆಂದರೆ ಬಂಧ ವಿಶೇಷವು, ಇದು ಎರಡು ವಿಧ–೧ನೆಯದು ಸಿದ್ಧಮಂತ್ರಗಳನ್ನುಚ್ಚಾರಮಾಡಿ ವಿಷವೇಗವನ್ನು ತಡೆಯುವುದು ಅಥವಾ ನಿವಾರಿಸುವುದು, ೨ ನೆಯದು ದಾರ ಮತ್ತು ಪಟ್ಟೆಗಳಿಂದ ವಿಷವ್ರಣದಮೇಲೆ ಬಂಧನಮಾಡಿ ವಿಷವು ಶರೀರದ ಇತರ ಭಾಗಗಳಿಗೆ ಹರಡದಿರುವಂತೆ ತಡೆಗಟ್ಟುವುದು.

ದಹೇದ್ದಂಶಮಥೋತ್ಕೃತ್ಯ ಯತ್ರಬನ್ಧೋ ನ ಜಾಯತೇ ।
ಆಚೂಷಣಚ್ಛೇದದಾಹಾಃ ಸರ್ವತ್ರೈವ ತು ಪೂಜಿತಾಃ ||೫||
ಪ್ರತಿಪೂರ್ಯ ಮುಖಂ ವಸ್ತ್ರೈರ್ಹಿತಮಾಚೂಷಣಂ ಭವೇತ್ ।
ಸ ದಷ್ಟವ್ಯೋಽಥವಾ ಸರ್ಪೋ ಲೋಷ್ಟೋ ವಾಪಿ ಹಿ ತತ್ಕ್ಷಣಮ್ ||೬||

ಅರ್ಥ—ಶಾಖೆಗಳನ್ನು ಬಿಟ್ಟು ಬಾಕಿಯಾದ ಶರೀರ ಭಾಗದಲ್ಲಿ ಸರ್ಪದಷ್ಟವಾದರೆ

(ಅಂದರೆ ವಸ್ತ್ರಪ್ಲೋತಾದಿಗಳಿಂದ ಬನ್ಧನಮಾಡಲು ಸಾಧ್ಯವಿಲ್ಲದ ಶರೀರ ಭಾಗಗಳಲ್ಲಿ) ಮುಖದಿಂದ ಮತ್ತೊಬ್ಬರು ವಿಷವನ್ನು ಹೀರಿ ಉಗುಳುವುದರಿಂದಲಾಗಲೀ, ಕಚ್ಚಿದ ಶರೀರ ಭಾಗದಲ್ಲಿನ ಮಾಂಸವನ್ನು ಕತ್ತರಿಸಿ ಹೊರಕ್ಕೆ ಬಿಸಾಡಿ ವ್ರಣವನ್ನು ಕಾದ ಶಲಾಕೆಯಿಂದ ಸುಟ್ಟು ವಿಷಹರಣಮಾಡುವುದು ಶ್ರೇಷ್ಠವಾದ ಉಪಾಯವು, ಬಾಯಿಗೆ ಒಂದು ಚೂರು ಬಟ್ಟೆಯನ್ನು ತುಂಬಿಕೊಂಡು ವಿಷವನ್ನು ಹೀರಿ ಹೊರಕ್ಕೆ ಉಗುಳಬೇಕು, ವಸ್ತ್ರವೆಂದು ಹೇಳಿರುವುದು ಉದಾಹರಣೆಗಾಗಿಯೆಂದು ತಿಳಿದು ಮಣ್ಣು, ಧೂಳು, ರಾಗಿಯಹಿಟ್ಟು ಮೊದ ಲಾದ ಒಣಗಿದ ದ್ರವ್ಯಗಳಲ್ಲೊಂದನ್ನು ಬಾಯಿಗೆ ತುಂಬಿಕೊಂಡು ವಿಷವನ್ನು ಹೀರಿದರೆ ಈ ದ್ರವ್ಯಗಳೊಡನೆ ವಿಷವು ಸೇರಿಕೊಂಡು ರೋಗಿಗೆ ತೊಂದರೆಯಾಗುವುದಿಲ್ಲ, ಅವನ್ನು ಉಗುಳುವುದರಿಂದ ವಿಷವನ್ನು ಹೀರಿದವರಿಗೂ ಅಪಾಯವಿಲ್ಲ, ಹಾವು ಕಚ್ಚಿದಕೂಡಲೇ ಆತನು ಕಚ್ಚಿದ ಹಾವನ್ನೇ ಕಚ್ಚಬೇಕು, ಅಥವಾ ಮಣ್ಣಿನ ಹೆಂಟೆಯನ್ನಾಗಲೀ ಕಚ್ಚಿ ಉಗುಳಬೇಕು.

ಅಥ ಮಣ್ಡಲಿನಾ ದಷ್ಟಂ ನ ಕಥಂಚನ ದಾಹಯೇತ್ ।
ಸ ಪಿತ್ತಬಾಹುಳ್ಯ ವಿಷಾತ್ ದಂಶೋದಾಹಾದ್ವಿಸರ್ಪತಿ ॥೭॥
ಅರಿಷ್ಟಮಪಿ ಮನ್ತ್ರೈಶ್ಚ ಬಧ್ನೀಯಾನ್ಮನ್ತ್ರ ಕೋವಿದಃ ।
ಸಾ ತು ರಜ್ಜ್ವಾದಿರ್ಭಿರ್ಬದ್ಧಾ ವಿಷಪ್ರತಿಕರೀ ಮತಾ ॥೮॥

ಅರ್ಥ—ಅನಂತರ (ಅಂದರೆ ದರ್ವೀಕರದಂಶದ ಪ್ರತೀಕಾರವನ್ನು ಹೇಳಿದ ಮೇಲೆ) ಮಂಡಲಿ ಸರ್ಪಗಳಿಂದ ಕಡಿಯಲ್ಪಟ್ಟವನ ದಂಶಪ್ರದೇಶವನ್ನು ಖಂಡಿತವಾಗಿಯೂ ಬೆಂಕಿ ಯಿಂದಾಗಲೀ ಕಾದ ಶಲಾಕೆಯಿಂದಾಗಲೀ ಸುಡಬಾರದು, ಏಕೆಂದರೆ ಕಚ್ಚಿದ ಸ್ಥಳದಲ್ಲಿ ಪಿತ್ತಾಧಿಕ್ಯತೆಯುಳ್ಳ ವಿಷವಿರುವುದರಿಂದ ಅದನ್ನು ಸುಟ್ಟರೆ ವಿಷವು ದಂಶಸ್ಥಳದಿಂದ ಬೇರೆ ಕಡೆಗೆ ಹರಡಲು ಅನುಕೂಲವಾಗುತ್ತದೆ, ಮತ್ತು ವಿಷಹರಣಮಾಡುವುದು ಕಷ್ಟವಾಗುತ್ತದೆ, ವಿಷಹರಣ ಮನ್ತ್ರಗಳನ್ನು ತಿಳಿದಿರುವ ವಿಷವೈದ್ಯನು ಮನ್ತ್ರಪುರಶ್ಚರಣೆಮಾಡಿ ಪಟ್ಟಿ ಯನ್ನು ಕಟ್ಟಿದರೆ ಅಂದರೆ ದಾರ, ಹುರಿಗಳಿಂದ ವಿಷದಷ್ಟವಾದ ಶರೀರಭಾಗದಲ್ಲಿ ವಸ್ತ್ರಾದಿ ಗಳ ಪಟ್ಟಿಯನ್ನು ಮುಚ್ಚಿ ಬಿಗಿದುಕಟ್ಟಿದರೆ ವಿಷಕ್ಕೆ ಪ್ರತೀಕಾರಮಾಡಿದಂತೆಯೇ ಆಗುತ್ತದೆ.

ದೇವಬ್ರಹ್ಮರ್ಷಿಭಿಃ ಪ್ರೋಕ್ತಾ ಮನ್ತ್ರಾಃ ಸತ್ಯತಪೋಮಯಾಃ ।
ಭವನ್ತಿ ನಾನ್ಯಥಾ ಕ್ಷಿಪ್ರಂ ವಿಷಂ ಹನ್ಯುಃ ಸುದುಸ್ತರಮ್ ॥೯॥
ವಿಷಂ ತೇಜೋಮಯೈರ್ಮನ್ತ್ರೈಃ ಸತ್ಯಬ್ರಹ್ಮ ತಪೋಮಯೈಃ ।
ಯಥಾ ನಿವಾರ್ಯತೇ ಕ್ಷಿಪ್ರಂ ಪ್ರಯುಕ್ತೈರ್ನ ತಥೌಷಧೈಃ ॥೧೦॥

ಅರ್ಥ—ಮಂತ್ರಗಳು ಶಾಶ್ವತಗಳು ಅವುಗಳನ್ನು ಯಾರೂ ಕಲ್ಪನೆ ಮಾಡುವುದಿಲ್ಲ. ದೇವರ್ಷಿಗಳು ಪಠನಮಾಡುವುದರಿಂದ ಸತ್ಯಮಯಗಳಾಗಿಯೂ ಬ್ರಹ್ಮರ್ಷಿಗಳು ಜಪಿಸು ವುದರಿಂದ ತಪೋಮಯಗಳಾಗಿಯೂ ಆಗುತ್ತವೆ. ಇವುಗಳನ್ನು ಪುರಶ್ಚರಣೆ ಮಾಡಿದರೆ

ಅಸಾಧ್ಯ ವಿಷಗಳ ವೇಗಗಳೂ ನಾಶಗೊಳ್ಳುತ್ತವೆ, ದೇವರ್ಷಿಗಳಿಂದ ಪುರಶ್ಚರಣೆ ಮಾಡದಿದ್ದರೆ ಅಂತಹ ಪ್ರಭಾವಗಳುಂಟಾಗುವುದೇ ಇಲ್ಲ. ಸತ್ಯ, ಬ್ರಹ್ಮ, ತಪಸ್ತೇಜೋಮಯಗಳಾದ ಮಂತ್ರಗಳ ಪ್ರಭಾವದಿಂದ ವಿಷವು ಬಲುಬೇಗ ನಾಶವಾಗುವಂತೆ ಔಷಧಿ ಪ್ರಯೋಗದಿಂದ ಅಷ್ಟುಬೇಗ ನಾಶವಾಗುವುದಿಲ್ಲ. ಈ ಗ್ರಂಥದಲ್ಲಿ ಪರತನ್ತ್ರೋಕ್ತಗಳಾದ ಕುರುಕುಲ್ಲಾ ಭೇರುಣ್ಡಾದಿ ಮನ್ತ್ರಗಳನ್ನು ಹೇಳುವುದಿಲ್ಲ.

ಮನ್ತ್ರಾಣಾಂ ಗ್ರಹಣಂ ಕಾರ್ಯಂ ಸ್ತ್ರೀಮಾಂಸ ಮಧುವರ್ಜಿನಾ ।
ಮಿತಾಹಾರೇಣ ಶುಚಿನಾ ಕುಶಾಸ್ತರಣಶಾಯಿನಾ ॥೧೧॥
ಗನ್ಧಮಾಲ್ಯೋಪಹಾರೈಶ್ಚ ಬಲಿಭಿಶ್ಚಾಪಿ ದೇವತಾಃ ।
ಪೂಜಯೇನ್ಮನ್ತ್ರಸಿದ್ಧ್ಯರ್ಥಂ ಜಪಹೋಮೈಶ್ಚ ಯತ್ನತಃ ॥೧೨॥
ಮನ್ತ್ರಾಸ್ತ್ವವಿಧಿನಾ ಪ್ರೋಕ್ತಾ ಹೀನಾವಾ ಸ್ವರವರ್ಣತಃ ।
ಯಸ್ಮಾನ್ನಸಿದ್ಧಿಮಾಯಾನ್ತಿ ತಸ್ಮಾದ್ಯೋಜ್ಯೋಽಗದ ಕ್ರಮಃ ॥೧೩॥

ಅರ್ಥ—ಸ್ತ್ರೀಮಾಂಸ, ಮದ್ಯಸೇವನೆಯನ್ನು ತ್ಯಜಿಸಿ ಮಿತಾಹಾರ ಮಾಡುತ್ತಾ ಶುಚಿರ್ಭೂತನಾಗಿ ದರ್ಭೆಯಿಂದ ಮಾಡಿದ ಆಸನದಲ್ಲಿ ಕೂರುತ್ತಾ ಮಲಗುತ್ತಾ ಇರತಕ್ಕವನೇ ಈ ವಿಷಹರ ಮನ್ತ್ರಗಳನ್ನು ಸ್ವೀಕಾರ ಮಾಡಬೇಕು, ಮನ್ತ್ರಸಿದ್ಧಿಯುಂಟಾಗಬೇಕಾದರೆ ಆಯಾಯ ಮನ್ತ್ರಾಭಿಮಾನಿ ದೇವತೆಗಳನ್ನು ಗಂಧಪುಷ್ಪ, ಮಾಲಿಕೆಗಳು, ಉಪಹಾರಗಳು, ಬಲಿ ಇವುಗಳನ್ನು ಸಮರ್ಪಿಸಿ ಪ್ರೀತಿಯುಳ್ಳವರನ್ನಾಗಿ ಮಾಡಿಕೊಂಡು ಅವರಿಗೆ ಇಷ್ಟವಾದ ಮಂತ್ರಗಳನ್ನು ಜಪಿಸಬೇಕು, ಹೋಮಮಾಡಬೇಕು, (ಇವುಗಳನ್ನು ಅತಿ ಭಕ್ತಿಶ್ರದ್ಧೆಗಳಿಂದ ಆಚರಿಸಬೇಕು). ವಿಧಿಗೆ ಅನುಸಾರವಾಗಿ ಜಪಮಾಡದಿದ್ದರೂ ಸ್ವರವರ್ಣಗಳು ಹೀನವಾದರೂ ಮನ್ತ್ರಸಿದ್ಧಿಯುಂಟಾಗುವುದಿಲ್ಲದಿವಾದ ಕಾರಣ ಅಗದಗಳನ್ನು (ಸಿದ್ಧೌಷಧಗಳನ್ನು) ತಯಾರಿಸಿ ಪ್ರಯೋಗಿಸಬೇಕು.

ಸಮನ್ತತಃ ಸಿರಾಂ ದಂಶಾದ್ವಿಧ್ಯೇತ್ತು ಕುಶಲೋ ಭಿಷಕ್ ।
ಶಾಖಾಗ್ರೇ ವಾ ಲಲಾಟೇವಾ ವೇಧ್ಯಾಸ್ತಾ ವಿಸೃತೇ ವಿಷೇ ॥೧೪॥
ರಕ್ತೇ ನಿರ್ಹ್ರಿಯಮಾಣೇ ತು ಕೃತ್ಸ್ನಂ ನಿರ್ಹ್ರಿಯತೇ ವಿಷಮ್ ।
ತಸ್ಮಾದ್ವಿಸ್ರಾವಯೇದ್ರಕ್ತಂ ಸಾಹ್ಯಸ್ಯ ಪರಮಾಕ್ರಿಯಾ ॥೧೫॥
ಸಮನ್ತಾದಗದೈರ್ದಂಶಂ ಪ್ರಚ್ಛಯಿತ್ವಾ ಪ್ರಲೇಪಯೇತ್ ।
ಚನ್ದನೋಶೀರಯುಕ್ತೇನ ವಾರಿಣಾ ಪರಿಷೇಚಯೇತ್ ॥೧೬॥

ಅರ್ಥ—ಬುದ್ಧಿವಂತನಾದ ವಿಷವೈದ್ಯನು ವಿಷಸರ್ಪ ಕಚ್ಚಿದ ಸ್ಥಳದಸುತ್ತಲೂ ಇರುವ ಸಿರೆಗಳನ್ನು ವ್ಯಧನ (ಚುಚ್ಚಬೇಕು) ಮಾಡಬೇಕು. ವಿಷಪ್ರಾಣಿಗಳು ಕಚ್ಚಿ ವಿಷ ಪ್ರಯೋಗವಾದ ಮೇಲೆ ಕೈಕಾಲುಗಳ ತುದಿಯಲ್ಲಿರುವ ಹಣೆಯಲ್ಲಿರುವ ಸಿರೆಗಳನ್ನು ವೇಧ ಮಾಡಿ ರಕ್ತಹರಣ ಮಾಡಿದರೆ ವಿಷವೆಲ್ಲವೂ ಪೂರ್ತಿಯಾಗಿ ಹರಣವಾದಂತೆಯೇ ಸರಿ. ಆದಕಾರಣ ರಕ್ತಸ್ರಾವಣವನು ಮಾಡಬೇಕು, ರಕ್ತಸ್ರಾವಣ ವಿಧಾನವೇ ವಿಷಹರಣದಲ್ಲಿ

ಮಾಡಬೇಕಾದ ಮುಖ್ಯಕಾರ್ಯವೆಂದು ತಿಳಿಯಬೇಕು, ಕಚ್ಚಿದ ಸ್ಥಳದ ಸುತ್ತಲೂ ಶಸ್ತ್ರದಿಂದ ಕೆರೆದು ಯೋಗ್ಯವಾದ ಅಗದಗಳಿಂದ ದಂಶವನ್ನು ಮುಚ್ಚಿ ಕಟ್ಟಬೇಕು. ರಕ್ತಚಂದನ ಮತ್ತು ಲಾಮಜ್ಜಗಳ ಶೀತಕಷಾಯದಿಂದ ವ್ರಣ ಸೇಚನೆಮಾಡಬೇಕು, (ವ್ರಣದಮೇಲೆ ಧಾರೆಯಾಗಿ ಸುರಿಯಬೇಕು.)

ಪಾಯಯೇತಾಗದಾಂಸ್ತಾಂಸ್ತಾನ್ ಕ್ಷೀರಕ್ಷೌದ್ರಘೃತಾದಿಭಿಃ |
ತದಲಾಭೇಹಿತಾವಾಸ್ಯಾತ್ ಕೃಷ್ಣಾವಲ್ಮೀಕಮೃತ್ತಿಕಾ ||೧೭||
ಕೋವಿದಾರಶಿರೀಷಾರ್ಕ ಕಟಭೀರ್ವಾಪಿ ಭಕ್ಷಯೇತ್ |
ನ ಪಿಬೇತ್ ತೈಲಕೌಲತ್ಥಮದ್ಯ ಸೌವೀರಕಾಣಿ ಚ ||೧೮||
ದ್ರವಮನ್ಯತ್ತು ಯತ್ಕಿಞ್ಚಿತ್ ಪೀತ್ವಾಪೀತ್ವಾ ತದುದ್ವಮೇತ್ |
ಪ್ರಾಯೋ ಹಿ ವಮನೇನೈವ ಸುಖಂ ನಿರ್ಹ್ರಿಯತೇ ವಿಷಮ್ ||೧೯||

ಅರ್ಥ—ರಕ್ತಸ್ರಾವ ಮಾಡುವುದಕ್ಕಿಂತ ಮೊದಲೇ ರೋಗಿಯು ಹೃದಯಾವರಣ ಮಾಡುವುದಕ್ಕಾಗಿ ಆಯಾಯ ಉಕ್ತ ಮಹಾಗದಗಳನ್ನು ೧ ಕರ್ಷ ಪ್ರಮಾಣದಷ್ಟನ್ನು ಹಾಲು, ತುಪ್ಪ, ಜೇನುತುಪ್ಪ, ಮೊಸರು, ಮಜ್ಜಿಗೆಗಳೊಂದರಲ್ಲಿ ತಕ್ಕಷ್ಟನ್ನು ಹಾಕಿಕೊಂಡು) ಕದರಿ ಕುಡಿಸಬೇಕು, ಅವುಗಳು ದೊರೆಯದಿದ್ದರೆ ಕರಿಯ ಹುತ್ತದ ಮಣ್ಣನ್ನಾಗಲೀ ಕದರಿ ಕುಡಿಸಿದರೆ ಹಿತಕರವಾಗುತ್ತದೆ. ಕಂಚುವಾಳ, ಬಾಗೆ, ಎಕ್ಕೆ ಅಥವಾ ಗಿರಿಕರ್ಣಿಕೆಗಳನ್ನಾಗಲೀ ತಿನ್ನಬೇಕು, ತಿಲತ್ತೈಲ, ಹುರುಳಿಕಟ್ಟು, ಮದ್ಯ, ಹುಳಿ ಕಲಗಚ್ಚು ಇವನ್ನು ಕುಡಿಯಬಾರದು, ಮತ್ತಾವ್ಯಾವ ದ್ರವಪದಾರ್ಥಗಳನ್ನಾಗಲೀ ಕೊಂಚಕೊಂಚ ಪ್ರಮಾಣದಿಂದ ಕುಡಿದು ವಮನಮಾಡಬೇಕು, ಪ್ರಾಯಿಕವಾಗಿ ವಿಷವು ವಮನಕ್ರಿಯೆಯಿಂದಲೇ ಸುಖವಾಗಿ ಹೊರಕ್ಕೆ ಬಂದುಬಿಡುತ್ತದೆ.

ಫಣಿನಾಂ ವಿಷವೇಗೇ ತು ಪ್ರಥಮೇ ಶೋಣಿತಂ ಹರೇತ್ |
ದ್ವಿತೀಯೇ ಮಧುಸರ್ಪಿರ್ಭ್ಯಾಂ ಪಾಯಯೇತಾಗದಂಭಿಷಕ್ ||೨೦||
ನಸ್ಯಕರ್ಮಾಞ್ಜನೇ ಯುಞ್ಜ್ಯಾತ್ ತೃತೀಯೇ ವಿಷನಾಶನೇ |
ವಾನ್ತಂ ಚತುರ್ಥೇ ಪೂರ್ವೋಕ್ತಾಂ ಯವಾಗೂಮಥ ದಾಪಯೇತ್ ||೨೧||
ಶೀತೋಪಚಾರಂ ಕೃತ್ವಾದೌ ಭಿಷಕ್ ಪಞ್ಚಮಷಷ್ಠಯೋಃ |
ದಾಪಯೇಚ್ಛೋಧನಂ ತೀಕ್ಷ್ಣಂ ಯವಾಗೂಂ ಚಾಪಿ ಕೀರ್ತಿತಾಮ್ ||೨೨||
ಸಪ್ತಮೇತ್ವವಪೀಡೇನ ಶಿರಿರಸ್ತೀಕ್ಷ್ಣೇನ ಶೋಧಯೇತ್ |
ತೀಕ್ಷ್ಣಮೇವಾಞ್ಜನಂ ದದ್ಯಾತ್ ತೀಕ್ಷ್ಣಶಸ್ತ್ರೇಣ ಮೂರ್ಧ್ನಿ ಚ ||೨೩||
ಕೃತ್ವಾ ಕಾಕಪದಂ ಚರ್ಮಸಾಸೃಗ್ವಾ ಪಿಶಿತಂ ಕ್ಷಿಪೇತ್ |

ಅರ್ಥ—ದರ್ವೀಕರದಷ್ಟ ವಿಷವೇಗಗಳಲ್ಲಿ ವಿಶೇಷ ಚಿಕಿತ್ಸೆಯನ್ನು ಹೇಳುತ್ತಾರೆ. ಮೊದಲನೆಯ ವಿಷವೇಗದಲ್ಲಿ ರಕ್ತಹರಣಮಾಡಬೇಕು. ಸಿರಾವ್ಯಧ, ಚೂರಿಯಿಂದ ಕತ್ತರಿಸಿ ಅಥವಾ ಶೃಙ್ಗದಿಂದ ರಕ್ತಹರಣಮಾಡಬೇಕು, ಎರಡನೆಯ ವೇಗದಲ್ಲಿ ದರ್ವೀಕರ ವಿಷಹರವಾದ ಅಗದವನ್ನು ತುಪ್ಪ, ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು, ಮೂರನೆಯ ವಿಷ

ವೇಗದಲ್ಲಿ ವಿಷಹರಗಳಾದ ನಸ್ಯ ಮತ್ತು ಅಞ್ಜನಗಳನ್ನು ಪ್ರಯೋಗಮಾಡಬೇಕು, ನಾಲ್ಕನೆಯ ವೇಗದಲ್ಲಿ ರೋಗಿಗೆ ವಮನಮಾಡಿಸಿ ಸ್ಥಾವರ ವಿಷಪ್ರಕರಣದಲ್ಲಿ ಹೇಳಿರುವ ಯವಾಗುವನ್ನು ಕುಡಿಸಬೇಕು, ೫–೬ ನೆಯ ವೇಗಗಳಲ್ಲಿ ಮೊದಲು ಶೀತೋಪಚಾರಗಳನ್ನು ಮಾಡಿಸಿ ತೀಕ್ಷ್ಣೌಷಧಗಳಿಂದ ಶೋಧನೆಮಾಡಿಸಿ ಯವಾಗುವನ್ನು ಕುಡಿಸಬೇಕು, ಏಳನೆಯ ವಿಷವೇಗದಲ್ಲಿ ಚುರುಕಾದ ಅವಪೀಡನಸ್ಯದಿಂದ ತಲೆಯನ್ನು ಶೋಧಿಸಿ ತೀಕ್ಷ್ಣಾಞ್ಜನವನ್ನು ಪ್ರಯೋಗಿಸಿ ತಲೆಯ ಮೇಲ್ಭಾಗದಲ್ಲಿ ಹರಿತವಾದ ಶಸ್ತ್ರದಿಂದ ಕಾಗೆಯ ಕಾಲಿನ ಆಕಾರದಂತೆ ಕತ್ತರಿಸಿ ಚರ್ಮಸಮೇತವಾದ ರಕ್ತಸೋರುತ್ತಿರುವ ಮಾಂಸವನು ಅದರಮೇಲೆ ಮುಚ್ಚಿಡಬೇಕು.

ಪೂರ್ವೇ ಮಂಡಲಿನಾಂ ವೇಗೇ ದರ್ವೀಕರವದಾಚರೇತ್ ||೨೪||
ಅಗದಂ ಮಧುಸರ್ಪಿರ್ಭ್ಯಾಂ ದ್ವಿತೀಯೇ ಪಾಯಯೇತ ಚ |
ವಾಮಯಿತ್ವಾ ಯವಾಗೂಂ ಚ ಪೂರ್ವೋಕ್ತಾಮಥ ದಾಪಯೇತ್ ||೨೫||
ತೃತೀಯೇ ಶೋಧಿತಂ ತೀಕ್ಷ್ಣೈರ್ಯವಾಗೂಂ ಪಾಯಯೇದ್ಧಿತಾಮ್ |
ಚತುರ್ಥೇಪಞ್ಚಮೇ ವಾಪಿ ದರ್ವೀಕರವದಾಚರೇತ್ ||೨೬||
ಕಾಕೋಲ್ಯಾದಿರ್ಹಿತಃ ಷಷ್ಠೇ ಪೇಯಶ್ಚ ಮಧುರೋಗಣಃ |
ಹಿತೋಽವಪೀಡೇ ತ್ವಗದಃ ಸಪ್ತಮೇ ವಿಷನಾಶನಃ ||೨೭||

ಅರ್ಥ—ಮಂಡಲಿಸರ್ಪ ಕಚ್ಚಿದ ವಿಷದ ಮೊದಲನೆಯ ವೇಗದಲ್ಲಿ ದರ್ವೀಕರದಷ್ಟ ವಿಷದ ಮೊದಲನೆಯ ವೇಗದಲ್ಲಿ ಮಾಡುವಂತೆಯೇ ರಕ್ತಹರಣ ಮಾಡಬೇಕು. ೨ನೆಯ ವೇಗದಲ್ಲಿ ತುಪ್ಪ, ಜೇನುತುಪ್ಪಗಳಿಂದ ಮಿಶ್ರಮಾಡಿದ ಅಗದವನ್ನು ಪಾನಮಾಡಿಸಬೇಕು, ವಮನ ಮಾಡಿಸಿದಮೇಲೆ ಹಿಂದೆ ಹೇಳಿದ ಕೋಶತಕ್ಯಾದಿ ದ್ರವ್ಯಗಳಿಂದ ಸಿದ್ಧವಾದ ಯವಾಗೂ ಪಾನವನ್ನು ಮಾಡಿಸಬೇಕು. ೩ನೆಯ ವೇಗದಲ್ಲಿ ತೀಕ್ಷ್ಣೌಷಧಿಗಳಿಂದ ಶೋಧನೆಮಾಡಿಸಿ ಹಿತಕರವಾದ ಯವಾಗೂವನ್ನು ಕುಡಿಸಬೇಕು. ೪–೫ ನೆಯ ವಿಷ ವೇಗಗಳಲ್ಲಿ ದರ್ವೀಕರ ವಿಷವೇಗದಲ್ಲಿ ಮಾಡುವಂತೆ ಚಿಕಿತ್ಸೆ ಮಾಡಬೇಕು. ೬ ನೆಯ ವೇಗದಲ್ಲಿ ಕಾಕೋಲ್ಯಾದಿ ಮಧುರಗಣೌಷಧಿಗಳಿಂದ ತಯಾರಿಸಿದ ಪೇಯಾವನ್ನು ಕುಡಿಸಬೇಕು. ೭ ನೆಯ ವೇಗದಲ್ಲಿ ವಿಷಹರಗಳಾದ ಅವಪೀಡನಸ್ಯ ಮತ್ತು ಅಗದಗಳನ್ನು ಪ್ರಯೋಗಿಸುವುದು ಹಿತಕರವು.

ಪೂರ್ವೇ ರಾಜಿಮತಾಂ ವೇಗೇಽಲಾಬುಭಿಃ ಶೋಣಿತಂ ಹರೇತ್ |
ಅಗದಂ ಮಧುಸರ್ಪಿರ್ಭ್ಯಾಂ ಸಂಯುಕ್ತಂ ಪಾಯಯೇತ ಚ ||೨೮||
ವಾನ್ತಂ ದ್ವಿತೀಯೇತ್ವಗದಂ ಪಾಯಯೇದ್ವಿಷನಾಶನಮ್ |
ತೃತೀಯಾದಿಷು ತ್ರಿಷ್ವೇವಂ ವಿಧಿರ್ದಾರ್ವೀಕರೋ ಹಿತಃ ||೨೯||
ಷಷ್ಠೇಽಞ್ಜನಂ ತೀಕ್ಷ್ಣತಮಮಪೀಡಞ್ಚ ಸಪ್ತಮೇ |

ಅರ್ಥ—ರಾಜಿಮಂತಸರ್ಪ ಕಚ್ಚಿದ ಮೊದಲನೆಯ ವಿಷವೇಗದಲ್ಲಿ ಸೋರೇಬುರುಡೆ

ಯಿಂದ ರಕ್ತಹರಣ ಮಾಡಬೇಕು, ತುಪ್ಪ ಜೇನುತುಪ್ಪ ಮಿಶ್ರಮಾಡಿ ಅಗದ ಪಾನವನ್ನು ಮಾಡಿಸಬೇಕು. ಎರಡನೆಯ ವೇಗದಲ್ಲಿ ವಮನ ಮಾಡಿಸಿದಮೇಲೆ ವಿಷಹರವಾದ ಅಗದ ಪಾನಮಾಡಿಸಬೇಕು. ಮೂರನೆಯ ಮತ್ತು ನಾಲ್ಕೈದನೆಯ ವಿಷ ವೇಗಗಳಲ್ಲಿ ದರ್ವೀಕರದಷ್ಟ ವಿಷದ ೩-೪-೫ ನೇ ವೇಗಗಳಲ್ಲಿ ಮಾಡುವಂತೆ ಚಿಕಿತ್ಸೆ ಮಾಡಬೇಕು. ೬ ನೇ ವೇಗದಲ್ಲಿ ತೀಕ್ಷ್ಣಾಂಜನವನ್ನೂ ೭ ನೇ ವೇಗದಲ್ಲಿ ತೀಕ್ಷ್ಣತಮವಾದ ಅವಪೀಡ ವನ್ನೂ ಮಾಡಿಸಬೇಕು.

ಗರ್ಭಿಣೀ ಬಾಲವೃದ್ಧಾನಾಂ ಸಿರಾವ್ಯಧನವರ್ಜಿತಮ್ ||೩೦||
ವಿಷಾರ್ತಾನಾಂ ಯಥೋದ್ದಿಷ್ಟಂ ವಿಧಾನಂ ಶಸ್ಯತೇ ಮೃದು |
ರಕ್ತಾವಸೇಕಾಞ್ಜನಾನಿ ನರತುಲ್ಯಾನ್ಯಜಾವಿಕೇ ||೩೧||
ತ್ರಿಗುಣಂ ಮಹಿಷೇಸೋಷ್ಟ್ರೇ ಗವಾಶ್ವೇ ದ್ವಿಗುಣಂ ತು ತತ್ |
ಚತುರ್ಗುಣಂ ತು ನಾಗಾನಾಂ ಕೇವಲಂ ಸರ್ವಪಕ್ಷಿಣಾಮ್ ||೩೨||
ಪರಿಷೇಕಾ ಪ್ರದೇಹಾಂಶ್ಚ ಸುಶೀತಾನವಚಾರಯೇತ್ |
ಮಾಷಕಂ ತ್ವಞ್ಜನಸ್ಯೇಷ್ಟಂ ದ್ವಿಗುಣಂ ನಸ್ಯತೋಹಿತಮ್ ||೩೩||
ಪಾನೇ ಚತುರ್ಗುಣಂ ಪಥ್ಯಂ ವಮನೇsಷ್ಟಗುಣಂ ಪುನಃ |
ದೇಶಪ್ರಕೃತಿಸಾತ್ಮ್ಯರ್ತು ವಿಷವೇಗ ಬಲಾಬಲಮ್ ||೩೪||
ಪ್ರಧಾರ್ಯ ನಿಪುಣಂ ಬುದ್ಧ್ಯಾ ತತಃ ಕರ್ಮಸಮಾಚರೇತ್ |
ವೇಗಾನುಪೂರ್ವ್ಯಾ ಕರ್ಮೋಕ್ತಮಿದಂ ವಿಷವಿನಾಶನಮ್ ||೩೫||

ಅರ್ಥ—ವಿಷಪೀಡಿತರಾದ ಗರ್ಭಿಣಿ, ಬಾಲಕರು, ವೃದ್ಧರಿಗೆ ಸಿರಾವ್ಯಧವನ್ನು ಬಿಟ್ಟು ಉಳಿದ ವಿಧಾನಗಳೆಲ್ಲವನ್ನೂ ಮೃದು ದ್ರವ್ಯಗಳಿಂದ ಮಾಡಿಸಬೇಕು, ರಕ್ತಸ್ರಾವ ಮತ್ತು ಅಞ್ಜನಕರ್ಮಗಳನ್ನು ಮನುಷ್ಯರಿಗೆ ಮಾಡುವಷ್ಟು ಪ್ರಮಾಣದಿಂದಲೇ ಆಡು ಕುರಿಗಳಿಗೆ ಮಾಡಿಸಬೇಕು. ಎಮ್ಮೆ ಒಂಟೆಗಳಿಗೆ ಮೂರರಷ್ಟೂ ಹಸು ಕುದುರೆಗಳಿಗೆ ೨ ರಷ್ಟೂ ಆನೆಗಳಿಗೆ ೪ ರಷ್ಟೂ ಮಾಡಿಸಬೇಕು. ಎಲ್ಲಾ ಪಕ್ಷಿಗಳಿಗೂ ಮನುಷ್ಯರ ವಿಷ ಹರ ದ್ರವ್ಯಗಳಿಂದಲೇ ಶೀತಲವಾದ ಪರಿಷೇಕ ಪ್ರದೇಹಗಳನ್ನು ಮಾಡಿಸಬೇಕು, ಆದರೆ ರಕ್ತಾವಸೇಕ ಅಞ್ಜನಗಳನ್ನು ಮಾಡಿಸಕೂಡದು. ಅಞ್ಜನ ದ್ರವ್ಯವು ೧ ಮಾಷ ಪ್ರಮಾಣ ದಷ್ಟೂ ನಸ್ಯಕ್ಕೆ ಅದರ ೨ ರಷ್ಟೂ ಇರುವುದು ಹಿತವಾದದ್ದು, ಪಾನಕ್ಕೆ ೪ ರಷ್ಟು ವಮನಕ್ಕೆ ೮ ರಷ್ಟು ಇರುವುದು ಹಿತಕರವು, ಜಾಂಗಲಾದಿ ಭೂಮಿ ಪ್ರದೇಶ ರೋಗಿಯ ಮರ್ಮ ಪ್ರದೇಶಾದಿಗಳು ಮನುಷ್ಯರ ಸತ್ವಾದಿ ಪ್ರಕೃತಿ ಒಗ್ಗಿರುವ ಆಹಾರ ವಿಹಾರಗಳು ಋತು ಕಾಲ ವಿಷವೇಗದ ಬಲ ಮತ್ತು ದೌರ್ಬಲ್ಯ ಇವುಗಳನ್ನೆಲ್ಲಾ ಮನಸ್ಸಿನಿಂದ ಆಲೋಚಿಸಿ ತಿಳಿದು ಯೋಗ್ಯವಾದ ಕಾರ್ಯಗಳನ್ನು (ಚಿಕಿತ್ಸೆ) ಮಾಡಿಸಬೇಕು. ವಿಷ ವೇಗವನ್ನು ಅನುಸರಿಸಿಕೊಂಡು ವಿಷಹರಣ ಮಾಡುವ ವಿಧಾನಗಳನ್ನು ಹೇಳಲಾಯಿತು.

ಟಿಪ್ಪಣಿ—ವೃದ್ಧವಾಗ್ಭಟರ ಮತ್ತು ಸುಶ್ರುತರ ಮತದಂತೆ ವಿಷಹರಣಮಾಡುವ

ಅಞ್ಜನಾದಿ ದ್ರವ್ಯಗಳ ಮಹತೀ ಮಾತ್ರೆಯನ್ನೇ ಪ್ರಯೋಗಿಸಬೇಕೆಂದು ಡಲ್ಹಣರ ಮತವು. ಕಲ್ಕ ಮೋದಕಚೂರ್ಣಗಳು ೧ ಪಲವೇ ಮಹತೀ ಮಾತ್ರೆಯು, ಲೇಹವು ೨ ಕರ್ಷದಷ್ಟೂ ಕಲ್ಕವು ೧ ಕರ್ಷ ಮೋದಕ ಮತ್ತು ಚೂರ್ಣಗಳು ೧ ಪಲದಷ್ಟಿರಬೇಕೆಂದು ಅರ್ಥವಾಗುತ್ತದೆ, ಕ್ವಾಥವು ೪ ಪಲಗಳಷ್ಟಿರಬೇಕು, ವಮನ ವಿಷಯದಲ್ಲಿ ಕ್ವಾಥವು ೯ ಪ್ರಸ್ಥಗಳಷ್ಟಿರಬೇಕೆಂದೂ, ಉತ್ತಮ ಮಾತ್ರೆಗೆ ೬ ಪ್ರಸ್ಥಗಳು ಮಧ್ಯ ಮಾತ್ರೆ, ೩ ಪ್ರಸ್ಥಗಳು ಕನಿಷ್ಟ ಮಾತ್ರೆ ಎಂದು ಹೇಳುತ್ತಾರೆ, ವಮನಮಾಡಲು ಕಲ್ಕ ೩ ಪಲವಿದ್ದರೆ ಉತ್ತಮ ಮಾತ್ರೆ ೨ ಪಲಗಳು ಮಧ್ಯಮ ಮಾತ್ರೆ ೧ ಪಲವು ಕನಿಷ್ಟ ಅಥವಾ ಹೀನ ಮಾತ್ರೆಯೆನಿಸುತ್ತದೆ. ಈ ಕಾಲಕ್ಕೆ ಈ ಪ್ರಮಾಣಗಳು ಅಪಾಯಕರಗಳಾಗುತ್ತವೆ ಯಾಗಿ ಆ ಕಾಲದ ಹೀನ ಪ್ರಮಾಣವೇ ಈ ಕಾಲದವರಿಗೆ ಉತ್ತಮ ಪ್ರಮಾಣವೆಂದು ಪರಿಗಣಿಸಿ ರೋಗಿಯ ಬಲಾಬಲಗಳಿಗೆ ತಕ್ಕಂತೆ ಹೆಚ್ಚು ಕಡಮೆ ಮಾಡಬೇಕು.

ಕರ್ಮಾವಸ್ಥಾ ವಿಶೇಷೇಣ ವಿಷಯೋರುಭಯೋಃ ಶೃಣು ।
ವಿವರ್ಣೇ ಕಠಿಣೇ ಶೂನೇ ಸರುಜೇಙ್ಗೇ ವಿಷಾನ್ವಿತೇ ॥
ತೂರ್ಣಂ ವಿಸ್ರಾವಣಂ ಕಾರ್ಯಮುಕ್ತೇನ ವಿಧಿನಾ ತತಃ ॥೩೬॥
ಕ್ಷುಧಾರ್ತಮನಿಲಪ್ರಾಯಂ ತದ್ವಿಷಾರ್ತಂ ಸಮಾಹಿತಃ ।
ಪಾಯಯೇತ ರಸಂ ಸರ್ಪಿಃ ಶುಕ್ತಂ ಕ್ಷೌದ್ರಂ ತಥಾ ದಧಿ ॥೩೭॥
ತೃಡ್ದಾಹಘರ್ಮಸಂಮೋಹೇ ಪೈತ್ತಂ ಪಿತ್ತೇ ವಿಷಾತುರೇ ।
ಶೀತೈಃ ಸಂವಾಹನಸ್ನಾನಪ್ರದೇಹೈಃ ಸಮುಪಾಚರೇತ್ ॥೩೮॥
ಶೀತೇ ಶೀತಪ್ರಸೇಕಾರ್ತಂ ಶ್ಲೈಷ್ಮಿಕಂ ಕಫಕೃದ್ವಿಷಮ್ ।
ವಾಮಯೇದ್ವಮನೈಸ್ತೀಕ್ಷ್ಣೈಸ್ತಥಾ ಮೂರ್ಛಾಮದಾನ್ವಿತಮ್ ॥೩೯॥
ಕೋಷ್ಠದಾಹರುಜಾಧ್ಮಾನ ಮೂತ್ರಸಙ್ಗರುಗನ್ವಿತಮ್ ।
ವಿರೇಚಯೇಚ್ಛ ಕೃದ್ವಾಯುಸಙ್ಗಪಿತ್ತಾತುರಂ ನರಮ್ ॥೪೦॥

ಅರ್ಥ—ಸ್ಥಾವರ ಜಙ್ಗಮಗಳೆಂಬೆರಡುವಿಧ ವಿಷಪೀಡಿತರಿಗೂ ವಿಷವೇಗದ ಅವಸ್ಥೆಗೆ ತಕ್ಕಂತೆ ಚಿಕಿತ್ಸೆಯನ್ನು ಹೇಳುತ್ತೇವೆ, ವಿಷಸೇರಿರುವ ಅವಯವವು ವರ್ಣದಲ್ಲಿ ವ್ಯತ್ಯಾಸಹೊಂದಿರುತ್ತದೆ, ಗಟ್ಟಿಯಾಗಿಯೂ ಊದು ಮತ್ತು ನೋವಿನಿಂದ ಕೂಡಿಯೂ ಇರುತ್ತದೆ, ಇದಕ್ಕೆ ಬೇಗನೆ ಶಿರಾವ್ಯಧ–ಪ್ರಚ್ಛನಕ್ರಿಯೆ–ಶೃಙ್ಗಾಲಾಬು ಮೊದಲಾದ ವಿಧಾನಗಳಿಂದ ರಕ್ತಸ್ರಾವ ಇವುಗಳನ್ನು ಮಾಡಿಸಬೇಕು. ವಿವೇಕಿಯಾದ ವೈದ್ಯನು ಶಾಂತಚಿತ್ತನಾಗಿದ್ದು ವಿಷಪೀಡಿತನು ಹಸಿದಿದ್ದು ವಾತದೋಷಾಧಿಕನಾಗಿದ್ದರೆ ಆತನಿಗೆ ಮಾಂಸರಸ, ತುಪ್ಪ, ಶುಕ್ತವೆಂಬ ಸಂಧಾನ ವಿಶೇಷ, ಜೇನುತುಪ್ಪ, ಮೊಸರು ಇವುಗಳ ಲ್ಲೊಂದನ್ನು ಕುಡಿಸಬೇಕು. ನೀರಡಿಕೆ, ಮೈಉರಿತಗಳಿಂದ ಪೀಡಿತನಾಗಿರುವಾಗಲೂ ಬಿಸಿಲುಕಾಲದಲ್ಲೂ ಮೂರ್ಛಿತನಾಗಿರುವಾಗಲೂ ಮಂಡಲಸರ್ಪದಿಂದ ಕಚ್ಚಲ್ಪಟ್ಟು ಪಿತ್ತದೋಷಾಧಿಕನಾಗಿದ್ದರೆ ಶೀತಲ ಮತ್ತು ಸುಖಕರವಾದ ಅಂಗಸಂಸ್ಪರ್ಶದಿಂದಲೂ, ಸ್ನಾನ, ಲೇಪನಗಳಿಂದಲೂ ಉಪಚರಿಸಬೇಕು. ಚಳಿಗಾಲದಲ್ಲಿ ತಣ್ಣಗೆ ಬಾಯಿನೀರನ್ನು

ಸೋರಿಸುತ್ತಾ ಕಫಪೀಡಿತನಾಗಿರುವ ರಾಜಿಲಸರ್ಪದಷ್ಟನಾದ ರೋಗಿಯು ಮೂರ್ಛೆಯಿಂದಲೂ ಮತ್ತಿನಿಂದಲೂ ಪೀಡಿತನಾಗಿದ್ದರೆ ತೀಕ್ಷ್ಣವಮನೌಷಧಗಳನ್ನು ಕುಡಿಸಿ ವಾಂತಿಯನ್ನು ಮಾಡಿಸಬೇಕು, ಕೋಷ್ಠದಲ್ಲಿ ಉರಿತ, ನೋವು, ಉಬ್ಬರ ಮೂತ್ರದ ತಡೆ ಮತ್ತು ನೋವುಗಳಿಂದ ಪೀಡಿತನಾಗಿ ಮಲಮೂತ್ರ, ಅಪಾನ ವಾಯುಗಳ ತಡೆಯುಳ್ಳ ಪಿತ್ತ ರೋಗಿಗೆ ವಿರೇಚನಬಸ್ತಿಯನ್ನು ಪ್ರಯೋಗಿಸಬೇಕು. (ಪಚ್ಯಮಾನ ಪಕ್ವಾಶಯಗಳಿಗೆ ವ್ಯಾಪಿಸಿಕೊಂಡಿರುವ ಪಿತ್ತವಾತಗಳಿಗೆ ವಿರೇಚನಮಾಡಿಸಬೇಕು. ಅಂದರೆ ವಿರೇಚನಬಸ್ತಿಯನ್ನು ಪ್ರಯೋಗಿಸಬೇಕು.)

ಶೂನಾಕ್ಷಿಕೂಟಂ ನಿದ್ರಾರ್ತಂ ವಿವರ್ಣಾವಿಲಲೋಚನಮ್ ।
ವಿವರ್ಣಂ ಚಾಪಿ ಪಶ್ಯನ್ತಮಞ್ಜನೈಃ ಸಮುಪಾಚರೇತ್ ॥೪೧॥
ಶಿರೋರುಗ್ಗೌರವಾಲಸ್ಯಹನು ಸ್ತಮ್ಭಗಳಗ್ರಹೇ ।
ಶಿರೋವಿರೇಚಯೇತ್ ಕ್ಷಿಪ್ರಂ ಮನ್ಯಾಸ್ತಮ್ಭೇ ಚ ದಾರುಣೇ ॥೪೨॥

ಅರ್ಥ—ಕಣ್ಣು ಸಂಧಿಗಳು ಊದಿ ನಿದ್ರೆಯಿಂದ ಪೀಡಿತನಾಗಿ ವಿವಿಧವರ್ಣವುಳ್ಳ ಜಿಬರು ಮತ್ತು ಕಣ್ಣೀರುಗಳಿಂದ ಮಾಸಿದ ಕಣ್ಣುಗಳುಳ್ಳ, ಎಲ್ಲಾ ಪದಾರ್ಥಗಳನ್ನೂ ವಿವಿಧ ಬಣ್ಣಗಳಿಂದ ಕೂಡಿರುವಂತೆ ಕಾಣುವ ಮನುಷ್ಯನಿಗೆ (ಯಾರಿಗೆ ಎಲ್ಲಾ ಪದಾರ್ಥಗಳೂ ಅನೇಕ ಬಣ್ಣದಿಂದ ಕೂಡಿರುವಂತೆ ಕಾಣುತ್ತದೋ) ಅಂಜನ ಪ್ರಯೋಗವನ್ನು ಮಾಡಬೇಕು. ತಲೆನೋವು, ತಲೆಭಾರ, ಆಲಸತೆ (ಸೋಮಾರಿತನ), ದವಡೆ, ಗಂಟಲುಗಳು ಹಿಡಿದುಬಿಟ್ಟು ಬಾಯಿಯನ್ನು ಅಗಲಿಸುವುದಕ್ಕೂ ಮಾತನಾಡುವುದಕ್ಕೂ ತೊಂದರೆಯಾದವರಿಗೂ, ಅತಿ ತೀವ್ರವಾದ ಮನ್ಯಾಸ್ತಮ್ಭಗಳಿದ್ದರೆ ಬೇಗ ಶಿರೋವಿರೇಚನೌಷಧವನ್ನು ಪ್ರಯೋಗಿಸಬೇಕು.

ನಷ್ಟಸಂಜ್ಞಂ ವಿವೃತಾಕ್ಷಂ ಭಗ್ನಗ್ರೀವಂ ವಿರೇಚನೈಃ ।
ಚೂರ್ಣೈಃ ಪ್ರಧಮನೈಸ್ತೀಕ್ಷ್ಣೈರ್ವಿಷಾರ್ತಂ ಸಮುಪಾಚರೇತ್ ॥೪೩॥
ತಾಡಯೇಚ್ಚ ಸಿರಾಃ ಕ್ಷಿಪ್ರಂ ತಸ್ಯ ಶಾಖಾಲಲಾಟಜಾಃ ।
ತಾಸ್ವಪ್ರಸಿಚ್ಯಮಾನಾಸು ಮೂರ್ಧ್ನಿ ಶಸ್ತ್ರೇಣ ಶಸ್ತ್ರವಿತ್ ॥೪೪॥
ಕುರ್ಯಾತ್ಕಾಕಪದಾಕಾರಂ ವ್ರಣಮೇವಂ ಸ್ರವನ್ತಿತಾಃ ।
ಸರಕ್ತಂ ಚರ್ಮ ಮಾಂಸಂ ವಾ ನಿಕ್ಷಿಪೇಚ್ಚಾಸ್ಯ ಮೂರ್ಧನಿ ॥೪೫॥
ಚರ್ಮವೃಕ್ಷಕಷಾಯಂ ವಾ ಕಲ್ಕಂ ವಾ ಕುಶಲೋ ಭಿಷಕ್ ।
ವಾದಯೇಚ್ಚಾಗದೈರ್ಲಿಪ್ತ್ವಾ ದುನ್ದುಭೀಂಸ್ತಸ್ಯ ಪಾರ್ಶ್ವಯೋಃ ॥೪೬॥
ಲಬ್ಧಸಂಜ್ಞಂ ಪುನಶ್ಚೈನಮೂರ್ಧ್ವಂ ಚಾಧಶ್ಚ ಶೋಧಯೇತ್ ।
ನಿಃಶೇಷಂ ನಿರ್ಹರೇಚ್ಚೈವಂ ವಿಷಂ ಪರಮದುರ್ಜಯಮ್ ॥೪೭॥
ಅಲ್ಪಮಪ್ಯವಶಿಷ್ಟಂ ಹಿ ಭೂಯೋವೇಗಾಯ ಕಲ್ಪತೇ ।
ಕುರ್ಯಾದ್ವಾ ಸಾದವೈವರ್ಣ್ಯಜ್ವರಕಾಸಶಿರೋರುಜಃ ॥೪೮॥
ಶೋಫಶೋಷಪ್ರತಿಶ್ಯಾಯ ತಿಮಿರಾರುಚಿಪೀನಸಾನ್ ।

||೪೯||
ತೇಷು ಚಾಪಿ ಯಥಾದೋಷಂ ಪ್ರತಿಕರ್ಮ ಪ್ರಯೋಜಯೇತ್
ವಿಷಾರ್ತೋಪದ್ರವಾಂಶ್ಚಾಪಿ ಯಥಾಸ್ವಂ ಸಮುಪಾಚರೇತ್ ।
ಅಥಾರಿಷ್ಟಾಂ ವಿಮುಚ್ಯಾಶು ಪ್ರಚ್ಛಯಿತ್ವಾಙ್ಕಿತಂ ತಥಾ ||೫೦||
ದಿಹ್ಯಾತ್ತತ್ರ ವಿಷಂ ಸ್ಕನ್ನಂ ಭೂಯೋ ವೇಗಾಯ ಕಲ್ಪತೇ ।

ಅರ್ಥ—ಜ್ಞಾನಹೀನವಾಗಿ ಕಣ್ಣುಗಳನ್ನು ಅಗಲಿಸಿ ಪಾರ್ಶ್ವಕ್ಕೆ ಕತ್ತುತಿರುಗಿರುವ ವಿಷಪೀಡಿತರೋಗಿಗೆ ವಿರೇಚನೌಷಧದಿಂದಲೂ ತೀಕ್ಷ್ಣಗಳಾದ ಶಿರೋವಿರೇಚನ 'ಚೂರ್ಣ ವನ್ನು ಮೂಗಿನಹೊಳ್ಳೆಗೆ ಮುಖವಾಯುವಿನಿಂದ ಊದುವುದರಿಂದಲೂ ಚಿಕಿತ್ಸೆಮಾಡ ಬೇಕು ; ಅವನ ಕೈಕಾಲುಗಳ ಮತ್ತು ಹಣೆಯಮೇಲೆ ಎದ್ದಿರುವ ಸಿರೆಗಳನ್ನು ಕೂಡಲೇ ಬಡಿಯಬೇಕು, ಅವುಗಳಿಂದ ರಕ್ತಸ್ರಾವವಾಗದಿದ್ದರೆ ಶಸ್ತ್ರವೈದ್ಯನು ರೋಗಿಯ ತಲೆಯ ಮೇಲೆ ಶಸ್ತ್ರದಿಂದ ಚುಚ್ಚಿ ಕಾಗೆಯ ಕಾಲಿನಂತೆ ವ್ರಣವನ್ನುಮಾಡಿ ರಕ್ತವನ್ನು ಸ್ರಾವ ಮಾಡಿಸಿ ರಕ್ತಸುರಿಯುತ್ತಿರುವ ಚರ್ಮವಿರುವ ಮಾಂಸಖಂಡವನ್ನು ಆ ವ್ರಣದ ಮೇಲೆ ಮುಚ್ಚಿಡಬೇಕು, ಅಥವಾ ಭುಜಪತ್ರೆಗಿಡದ ಕಷಾಯವನ್ನಾಗಲೀ ಕಲ್ಕವನ್ನಾಗಲೀ ಲೇಪಿಸಬೇಕು, ಅಗದವನ್ನು ಬಳಿದ ತಮಟೆ ಅಥವಾ ನಗಾರಿಗಳನ್ನು ಅವನ ಪಕ್ಕದಲ್ಲಿ ಬಾರಿಸುವಂತೆಮಾಡಿ ಅವನಿಗೆ ಎಚ್ಚರಿಕೆಯಾದ ಮೇಲೆ ವಮನ ವಿರೇಚನಗಳ ಪ್ರಯೋಗ ದಿಂದ ಶೋಧನೆಮಾಡಿಸಿ ಅತಿದುರ್ಜಯವಾದ ವಿಷವನ್ನು ನಿಃಶೇಷವಾಗಿ ತೆಗೆದುಬಿಡ ಬೇಕು. ಸ್ವಲ್ಪ ಪ್ರಮಾಣದಿಂದ ವಿಷ ನಿಂತರೂ ಪುನಃ ವೇಗವನ್ನುಂಟುಮಾಡುತ್ತದೆ, ದೇಹಾಯಾಸ, ವರ್ಣವಿಕಾರ, ಜ್ವರ, ಕಾಸ, ತಲೆನೋವು, ಶೋಫ, ಕ್ಷಯ, ನೆಗಡಿ, ತಿಮಿರ (ಕುರುಡುತನ) ವೆಂಬ ನೇತ್ರರೋಗ ಅರೋಚಕತೆ, ಪೀನಸವೆಂಬ ನಾಸಾರೋಗ ಇವುಗಳನ್ನುಂಟುಮಾಡುತ್ತದೆ. ಇವುಗಳಿಗೆ ದೋಷಪ್ರಕೋಪಗಳಿಗೆ ತಕ್ಕಂತೆಯೂ ಮತ್ತು ವಿಷಪೀಡಿತನಿಗೆ ಉಂಟಾಗುವ ರೋಗಗಳಿಗೂ ಚಿಕಿತ್ಸೆಮಾಡಿ ಅನಂತರ ಸರ್ಪ ಕಚ್ಚಿದ ಸ್ಥಾನದಲ್ಲಿ ಬಿಗಿದಿರುವ ಬಂಧನವನ್ನು ಬಿಚ್ಚಿ ಕಚ್ಚಿದ ವ್ರಣವನ್ನು ಚೂರಿಯಿಂದ ಕತ್ತರಿಸಿ ವಿಷಹರಗಳಾದ ಅಗದಗಳಿಂದ ಲೇಪಿಸಬೇಕು. ಹಾಗೆ ಮಾಡದಿದ್ದರೆ ಆ ಸ್ಥಳ ದಲ್ಲಿ ಹೆಪ್ಪು ಕಟ್ಟಿರುವ ವಿಷವು ಕರಗಿ ಪುನಃ ವಿಷವೇಗಗಳನ್ನುಂಟುಮಾಡುತ್ತದೆ.

ಏವಮೌಷಧಿಭಿರ್ಮನ್ತ್ರೈಃ ಕ್ರಿಯಾಯೋಗೈಶ್ಚ ಯತ್ನತಃ ||೫೧||
ವಿಷೇ ಹೃತಗುಣೇ ದೇಹಾದ್ಯದಾ ದೋಷಃ ಪ್ರಕುಪ್ಯತಿ ।
ತದಾ ಪವನಮುದ್ವೃತ್ತಂ ಸ್ನೇಹಾದ್ಯೈಃ ಸಮುಪಾಚರೇತ್ ||೫೨||
ತೈಲಮತ್ಸ್ಯಕುಳತ್ಥಾಮ್ಲವರ್ಜ್ಯೈರ್ವಿಷಹರಾಯುತೈಃ ।
ಪಿತ್ತಜ್ವರಹರೈಃ ಪಿತ್ತಂ ಕಷಾಯಸ್ನೇಹಬಸ್ತಿಭಿಃ ||೫೩||
ಕಫಮಾರಗ್ವಧಾದ್ಯೇನ ಸಕ್ಷೌದ್ರೇಣ ಗಣೇನ ತು ।
ಶ್ಲೇಷ್ಮಘ್ನೈರಗದೈಶ್ಚೈವ ತಿಕ್ತರೂಕ್ಷೈಶ್ಚ ಭೋಜನೈಃ ||೫೪||

ಅರ್ಥ—ಮಹಾ ಅಗದ ಪ್ರಯೋಗ, ಸಿದ್ಧಮನ್ತ್ರೋಚ್ಚಾರಣೆ, ತಕ್ಕ ಚಿಕಿತ್ಸಾ ಕ್ರಮಗಳಿಂದಲೂ ಬಲುಪ್ರಯತ್ನದಿಂದಲೂ ವಿಷದ ವೇಗಗಳು ದೇಹದಿಂದ ನಿವಾರಣೆ

ಯಾದ ಮೇಲೆ ವಾತಾದಿದೋಷಗಳು ಪ್ರಕೋಪಗೊಂಡರೆ ತೈಲ, ಮತ್ಸ್ಯ, ಹುರುಳಿ, ಹುಳಿಕಲಗಚ್ಚುಗಳನ್ನು ತ್ಯಜಿಸಿ ವಿಷಹರಗಳಾದ ತೈಲಾದಿಗಳಿಂದ ವಾತದೋಷವನ್ನೂ ಪಿತ್ತಜ್ವರಹರಗಳಾದ ಕಷಾಯಪಾನ ಸ್ನೇಹಬಸ್ತಿಗಳ ಪ್ರಯೋಗದಿಂದ ಪಿತ್ತದೋಷವನ್ನೂ ಆರಗ್ವಧಾದಿ ಗಣದ್ರವ್ಯಗಳ ಕಷಾಯದಿಂದಲೂ ಕಹಿಯಾಗಿಯೂ ರೂಕ್ಷವಾಗಿಯೂ ಇರುವ ಭೋಜನಗಳಿಂದಲೂ ಕಫದೋಷವನ್ನೂ ನಿವಾರಿಸಬೇಕು.

ವೃಕ್ಷಪ್ರಪಾತ ವಿಷಮಪತಿತಂ ಮೃತವಮ್ಭಸಿ ।
ಉದ್ಬದ್ಧಂ ಚ ಮೃತಂ ಸದ್ಯಶ್ಚಿಕಿತ್ಸೇನ್ನಷ್ಟಸಂಜ್ಞವತ್ ॥೫೫॥

ಅರ್ಥ—ಮರದ ಮೇಲಿನಿಂದ ನದೀ ದಡದಿಂದ (ಜಲಪಾತದಲ್ಲಿ ಎತ್ತರದಿಂದ ಕೆಳಕ್ಕೆ) ಎತ್ತರವಾದ ದಿಣ್ಣೆಯಿಂದ ಕಡಿದಾದ ಹಳ್ಳಕ್ಕೆ ಬಿದ್ದವನಿಗೂ ನೀರಿನಲ್ಲಿ ಮುಳುಗಿ ಸಾಯುವ ಸ್ಥಿತಿಯಲ್ಲಿರುವವನಿಗೂ ಜ್ಞಾನಶೂನ್ಯನಿಗೆ ಮಾಡುವಂತೆ (೪೩ನೆಯ ಶ್ಲೋಕ ನೋಡಿ) ಚಿಕಿತ್ಸೆಮಾಡಬೇಕು.

ಗಾಢಂ ಬದ್ಧೇಽರಿಷ್ಟಯಾ ಪ್ರಚ್ಛಿತೇ ವಾ ತೀಕ್ಷ್ಣೈರ್ಲೇಪೈಸ್ತದ್ವಿಧೈರ್ವಾ ವಿಶೇಷೈಃ ।
ಶೂನೇ·ಗಾತ್ರೇ ಕ್ಲಿನ್ನಮತ್ಯರ್ಥಪೂತಿಜ್ಞೇಯಂ ಮಾಂಸಂ ತದ್ವಿಷಾತ್ ಪೂತಿ ಕಷ್ಟಮ್ ॥೫೬॥
ಸದ್ಯೋವಿದ್ಧಂ ನಿಃ ಸ್ರವೇತ್ ಕೃಷ್ಣರಕ್ತಂ ಪಾಕಂ ಯಾಯಾದ್ದಹ್ಯತೇ ಚಾಪ್ಯಭೀಕ್ಷ್ಣಮ್ ।
ಕೃಷ್ಣೀಭೂತಂ ಕ್ಲಿನ್ನಮತ್ಯರ್ಥಪೂತಿ ಶೀರ್ಣಂ ಮಾಂಸಂ ಯಾತ್ಯಜಸ್ರಂ ಕ್ಷತಾಚ್ಚ ॥೫೭॥
ತೃಷ್ಣಾಮೂರ್ಛಾಭ್ರಾನ್ತಿದಾಹೌಜ್ವರಶ್ಚ ಯಸ್ಯಸ್ಯುಸ್ತಂ ದಿಗ್ಧವಿದ್ಧಂ ವ್ಯವಸ್ಯೇತ್ ।
ಪೂರ್ವೋದ್ದಿಷ್ಟಂ ಲಕ್ಷಣಂ ಸರ್ವಮೇತಜ್ಜುಷ್ಟಂ ಯಸ್ಯಾಲಂ ವಿಷೇಣ ವ್ರಣಾಃ ಸ್ಯುಃ ॥೫೮॥
ಲೂತಾದಷ್ಟಾ ದಿಗ್ಧವಿದ್ಧಾ ವಿಷೈರ್ವಾ ಜುಷ್ಟಾ ಯೇ ಸ್ಯುಸ್ತೇವ್ರಣಾಃ ಪೂತಿಮಾಂಸಾಃ ।

ಅರ್ಥ—ವಿಷಕಚ್ಚಿದ ವ್ರಣವನ್ನು ಶಸ್ತ್ರದಿಂದ ಕತ್ತರಿಸಿ ತೀಕ್ಷ್ಣೌಷಧಗಳಿಂದ ಲೇಪಿಸಿ ಪಟ್ಟಿಯನ್ನು ಕಟ್ಟಿ ಹುರಿಯಿಂದ ಬಿಗಿದು ಕಟ್ಟಬೇಕು ; ಶರೀರವು ಊದಿ ಮಾಂಸವು ಅತಿಯಾಗಿ ಕೊಳೆತುಹೋದರೆ ಅದು ಕೃಛ್ರಸಾಧ್ಯವಾದದ್ದು, ವಿಷಬಳಿದ ಶಲಾಕೆಗಳು ಚುಚ್ಚಿದ್ದರಿಂದ ಉಂಟಾದ ವ್ರಣವು ಕಪ್ಪುರಕ್ತವನ್ನು ಸ್ರಾವಮಾಡಿ ಪಾಕವಾಗುತ್ತದೆ, ಅತಿಯಾಗಿ ಉರಿಯುತ್ತದೆ, ಮಾಂಸವು ಕಪ್ಪಾಗಿ ಜಿನುಗುತ್ತಾ ಅತಿಯಾಗಿ ಕೊಳೆತು ಘಾಯದಿಂದ ಕಿತ್ತುಬರುತ್ತದೆ. ರೋಗಿಗೆ ಬಾಯಾರಿಕೆ ಜ್ಞಾನತಪ್ಪುವುದು, ತಬ್ಬಿಬ್ಬು (ಒಂದಕ್ಕೆ ಬದಲು ಮತ್ತೊಂದು ವಸ್ತುವನ್ನು ತಿಳಿಯುತ್ತಾನೆ) ಮೈಉರಿತ, ಜ್ವರ ಇವುಗಳಿದ್ದರೆ ವಿಷಲೇಪಿಸಿದ ಆಯುಧದಿಂದ ಚುಚ್ಚಲ್ಪಟ್ಟಿರುತ್ತಾನೆಂದು ನಿರ್ಧರಿಸಬೇಕು. ಹಿಂದೆ ಹೇಳಿದ ವಿಷಲಕ್ಷಣಗಳಿದ್ದರೆ ಶತ್ರುಗಳು ಪ್ರಯೋಗಿಸಿದ ವಿವಿಧ ವಿಷ ಪ್ರಯೋಗಗಳಿಂದ ಉಂಟಾಗಿರುತ್ತೆಂದು ತಿಳಿಯಬೇಕು. (ವಿಷಪ್ರಾಣಿಗಳಿಂದಲೂ ಲೂತಾ ಮೊದಲಾದ ವಿಷದ ಹುಳುಗಳಿಂದಲೂ ಕಚ್ಚಲ್ಪಟ್ಟವರು ವಿಷದಿಂದ ಲೇಪಿಸಲ್ಪಟ್ಟ ಶಸ್ತ್ರ

ಗಳಿಂದ ಚುಚ್ಚಲ್ಪಟ್ಟವರ ಮತ್ತು ವಿಷಸರ್ಪಾದಿಗಳಿಂದ ಕಡಿಯಲ್ಪಟ್ಟವರ ವ್ರಣದಲ್ಲಿ ಮಾಂಸವು ಕೊಳೆತುಬಿಡುತ್ತದೆ.

ತೇಷಾಂ ಯುಕ್ತ್ಯಾ ಪೂತಮಾಂಸಾನ್ಯಪೋಹ್ಯ ವಾರ್ಯೋಘೋಭಿಃ ಶೋಣಿತಂ ಚಾಪಹೃತ್ಯ ||೫೯||

ಹೃತ್ವಾದೋಷಾನ್ ಕ್ಷಿಪ್ರಮೂರ್ಧ್ವಂ ತ್ವಧಶ್ಚ ಸಮ್ಯಕ್ ಸಿಞ್ಚೇತ್ ಕ್ಷೀರಿಣಾಂ ತ್ವಕ್ಕಷಾಯೈಃ ।
ಅನ್ತರ್ವಸ್ತ್ರಂ ದಾಪಯೇಚ್ಚ ಪ್ರದೇಹಾನ್ ಶೀತೈರ್ದ್ರವ್ಯೈ ರಾಜ್ಯಯುಕ್ತೈರ್ವಿಷಘ್ನೈಃ ||೬೦||

ಭಿನ್ನೇಽಸ್ಥ್ನಿ ವೈದುಷ್ಟಜಾತೇನ ಕಾರ್ಯಃ ಪೂರ್ವೋಮಾರ್ಗಃ ಪೈತ್ತಿಕೇ ಯೋ ವಿಷೇ ಚ ||೬೧||

ಅರ್ಥ—ಅವುಗಳಿಗೆ ಉಪಾಯದಿಂದ ಕೊಳೆತ ಮಾಂಸವನ್ನು ಕತ್ತರಿಸಿ ತೆಗೆದು ಹಾಕಿ ಹರಿಯುವ ನೀರಿನ ಪ್ರವಾಹದಿಂದ ರಕ್ತವನ್ನು ಹೋಗಲಾಡಿಸಿ ವಮನವಿರೇಚನಗಳಿಂದ ದೋಷಹರಣಮಾಡಿ ಆಲ ಅರಳಿ ಮೊದಲಾದ ಕ್ಷೀರಿವೃಕ್ಷಗಳ ತ್ವಕ್ಕಷಾಯವನ್ನು ವ್ರಣದಮೇಲೆ ನಿದಾನವಾಗಿ ಸುರಿಸಬೇಕು. ವ್ರಣದಮೇಲೆ ಬಟ್ಟೆಯತುಂಡನ್ನಿಟ್ಟು ಶೀತವೀರ್ಯಗಳಾಗಿಯೂ ವಿಷಹರಗಳಾಗಿಯೂ ಇರುವ ಔಷಧಿಕಲ್ಕಕ್ಕೆ ತುಪ್ಪವನ್ನು ಸೇರಿಸಿ ಅದರಮೇಲೆ ಬಳಿಯಬೇಕು. ದುಷ್ಟಜಂತುಗಳ ಮೂಳೆಯ ಚೂರು ಚುಚ್ಚಿಕೊಂಡು ಉಂಟಾದ ವ್ರಣವನ್ನೂ ಮೇಲಿನ ವಿಧಾನದಿಂದಲೇ ಅಂದರೆ ಕೊಳೆತ ಮಾಂಸವನ್ನು ಕತ್ತರಿಸಿ ತೆಗೆದು ನದಿಯ ನೀರಿನ ಪ್ರವಾಹದಲ್ಲಿ ವ್ರಣವನ್ನು ತೊಳೆದು ಕ್ಷೀರಿವೃಕ್ಷ ಕಷಾಯದಿಂದ ವ್ರಣಸೇಚನೆ, ವಿಷಹರ ದ್ರವ್ಯಕಲ್ಕಕ್ಕೆ ತುಪ್ಪಮಿಶ್ರಮಾಡಿ ಲೇಪಿಸುವುದು ಇತ್ಯಾದಿ ಚಿಕಿತ್ಸೆಯನ್ನು ಮಾಡಬೇಕು. ಹೀಗೆ ಪೈತ್ತಿಕ ವಿಷವ್ರಣದಲ್ಲೂ ವಿಷಪ್ರಾಣಿಗಳ ಶಕೃತ್ತು ಮೂತ್ರ ಶುಕ್ರಾರ್ತವಾದಿ ಸ್ಪರ್ಶ ಸಂಯೋಗದಿಂದುಟಾದ ವ್ರಣಗಳನ್ನೂ ಉಪಚರಿಸಬೇಕು.

ತ್ರಿವೃದ್ವಿಶಲ್ಯೇ ಮಧುಕಂ ಹರಿದ್ರೇ ರಕ್ತಾನರೇನ್ದ್ರೋ ಲವಣಶ್ಚ ವರ್ಗಃ ||೬೧||
ಕಟುತ್ರಿಕಂ ಚೈವ ವಿಚೂರ್ಣಿತಾನಿ ಶೃಙ್ಗೇ ನಿದಧ್ಯಾನ್ಮಧುಸಂಯುತಾನಿ ||
ಏಷೋಽಗದೋ ಹನ್ತಿ ವಿಷಂ ಪ್ರಯುಕ್ತಃ ಪಾನಾಞ್ಜನಾಭ್ಯಞ್ಜನನಸ್ಯಯೋಗೈಃ ||೬೩||
ಅವಾರ್ಯವೀರ್ಯೋವಿಷವೇಗಹನ್ತಾ ಮಹಾಗದೋ ನಾಮ ಮಹಾಪ್ರಭಾವಃ ।

ಅರ್ಥ—(**ಮಹಾಗದಃ**)–ತಿಗಡೆಬೇರು, ಬಿಳಿಪಾದರಿಯತೊಗಟೆ (ಕೋಳಿಕುಟುಮನಗೆಡ್ಡೆಯೆಂದೂ ದಂತಿ ಎಂದೂ ಕೆಲವರು ಹೇಳುತ್ತಾರೆ), ಅತಿಮಧುರ, ಅರಿಶಿನ, ಮರದರಿಶಿನ, ಮಂಜಿಷ್ಠೆ, ಕಕ್ಕೆಚಿಗುರು, ಪಞ್ಚಲವಣಗಳು, ತ್ರಿಕಟು ಇವೆಲ್ಲವನ್ನೂ ಸಮಭಾಗದಿಂದ ಸೇರಿಸಿ ಚೂರ್ಣಮಾಡಿ ಜೇನುತುಪ್ಪದಿಂದ ಕಲಸಿ ಹಸುವಿನ ಕೊಂಬಿನಲ್ಲಿ ತುಂಬಿಟ್ಟುಕೊಳ್ಳಬೇಕು. ಪಾನ, ಅಞ್ಜನ, ಅಭ್ಯಂಗ, ನಸ್ಯಗಳ ಮೂಲಕವಾಗಿ ಈ

ಅಗದ ಪ್ರಯೋಗವನ್ನು ಮಾಡಿದರೆ ವಿಷಹರಣವಾಗುತ್ತದೆ. ಅಪ್ರತಿಹತವಾದ ಶಕ್ತಿಯುಳ್ಳದ್ದು, ವಿಷವೇಗ ನಿವಾರಣೆಯಾಗುತ್ತದೆ, ಇದೇ ಪ್ರಭಾವವುಳ್ಳ ಮಹಾಗದವು.

ಪ್ರಪೌಣ್ಡರೀಕಂ ಸುರದಾರುಮುಸ್ತಾ ಕಾಲಾನುಸಾರ್ಯಾ ಕಟುರೋಹಿಣೀ ಚ ||೬೫||
ಸ್ಥೌಣೇಯಕಂ ಧ್ಯಾಮಕ ಗುಗ್ಗುಳೂನಿ ಪುನ್ನಾಗ ತಾಳೀಸಸುವರ್ಚಿಕಾಶ್ಚ |
ಕುಟನ್ನಟೈಲಾ ಸಿತಸಿನ್ದುವಾರಾಃ ಶೈಲೇಯಕುಷ್ಠೌ ತರಗಂ ಪ್ರಿಯಙ್ಗುಃ ||೬೬||
ರೋಧ್ರಂ ಜಲಂ ಕಾಞ್ಚನಗೈರಿಕಂ ಚ ಸಮಾಗಧಂ ಚನ್ದನಸೈನ್ಧವಂ ಚ |
ಸೂಕ್ಷ್ಮಾಣಿ ಚೂರ್ಣಾನಿ
ಸಮಾನಿ ಕೃತ್ವಾ ಶೃಙ್ಗೇ ನಿದಧ್ಯಾನ್ಮಧು ಸಂಯುತಾನಿ ||೬೭||
ಏಷೋಽಗದಸ್ತಾರ್ಕ್ಷ್ಯ ಇತಿ ಪ್ರದಿಷ್ಟೋ ವಿಷಂ ನಿಹನ್ಯಾದಪಿ ತಕ್ಷಕಸ್ಯ |

ಅರ್ಥ—ಪ್ರಪೌಣ್ಡರೀಕ, ದೇವದಾರು, ಕೊನ್ನಾರಿಗೆಡ್ಡೆ, ಅಗಿಲು, ಕಟುಕರೋಹಿಣಿ, ಮಾಚಿಪತ್ರೆ, ಪರಿಮಳಗಂಜಣಿಹುಲ್ಲು, ಮಹಿಷಾಕ್ಷಿಗುಗ್ಗುಳು, ಸುರಹೊನ್ನೆ, ಹೂವು, ತಾಳೀಪತ್ರೆ, ಸೌವರ್ಚಲವಣ, ಹೆಮ್ಮರದತೊಗಟೆ, ಏಲಕ್ಕಿ, ಬಿಳಿಯಲಕ್ಕಿ ತೊಗಟೆ, ಕಲ್ಲುಹೂವು, ಚಂಗಲ್‌ಕೋಷ್ಠ, ಗ್ರಂಥಿಕತಗರ, ನೆಳಲು, ರೋಧ್ರ, ಮುಡಿವಾಳ, ಕೆಂಪುಗಂಧ, ಸೈಂಧವಲವಣ ಇವೆಲ್ಲವನ್ನೂ ಸಮಭಾಗದಲ್ಲಿ ಸೇರಿಸಿ ಸೂಕ್ಷ್ಮವಾಗಿ ಚೂರ್ಣಿಸಿ ಜೇನುತುಪ್ಪದಿಂದ ಕಲಿಸಿ ರಂಗಳಿಸಿ ಹಸುವಿನಕೊಂಬಿನಲ್ಲಿ ಶೇಖರಿಸಿಟ್ಟುಕೊಳ್ಳಬೇಕು, ಇದಕ್ಕೆ ತಾರ್ಕ್ಷ್ಯಾಗದವೆಂದು ಹೆಸರು, ಈ ಅಗದವು ತಕ್ಷಕನೆಂಬ ಸರ್ಪದ ವಿಷವನ್ನೂ ನಾಶಗೊಳಿಸುತ್ತದೆ.

ಮಾಂಸೀಹರೇಣುತ್ರಿಫಲಾಮುರಙ್ಗೀರಕ್ತಾಲತಾ ಯಷ್ಟಿಕಪದ್ಮಕಾನಿ ||೬೮||
ವಿಡಙ್ಗತಾಳೀಸ ಸುಗನ್ಧಿಕೈಲಾತ್ವಕ್ಕುಷ್ಠಪತ್ರಾಣಿ ಸಚನ್ದನಾನಿ |
ಭಾರ್ಗೀಪಟೋಲಂ ಕಿಣಿಹೀ ಸಪಾಠಾಮೃಗಾದನೀ ಕರ್ಕಟಿಕಾ ಪುರಂ ಚ ||೬೯||
ಪಾಳಿನ್ದ್ಯಶೋಕೌ ಕ್ರಮುಕಂ ಸುರಸ್ಯಾಃ ಪ್ರಸೂನಮಾರುಷ್ಕರಜಂ ಚ ಪುಷ್ಪಮ್ |
ಸೂಕ್ಷ್ಮಾಣಿ ಚೂರ್ಣಾನಿ ಸಮಾನಿ ಶೃಙ್ಗೇ ನ್ಯಸೇತ್ಸಪಿತ್ತಾನಿ ಸಮಾಕ್ಷಿಕಾಣಿ ||೭೦||
ವರಾಹಗೋಧಾಶಿಖಿಶಲ್ಲಕೀನಾಂ ಮಾರ್ಜಾರಜಂ ಪಾರ್ಷತನಾಕುಲೇ ಚ |
ಯಸ್ಯಾಗದೋಽಯಂ
ಸುಕೃತೋ ಗೃಹೇಸ್ಯಾನ್ನಾಮ್ನಾರ್ಷಭೋನಾಮ ನರರ್ಷಭಸ್ಯ ||೭೧||
ನ ತತ್ರ ಸರ್ಪಾಃ ಕುತ ಏವ ಕೀಟಾಃ ತ್ಯಜನ್ತಿ ವೀರ್ಯಾಣಿ ವಿಷಾಣಿ ಚೈವ |
ಏತೇನ ಭೇರ್ಯಃ ಪಟಹಾಶ್ಚ ದಿಗ್ಧಾ ನಾನದ್ಯಮಾನಾ ವಿಷಮಾಶು ಹನ್ಯುಃ ||೭೨||
ದಿಗ್ಧಾ ಪತಾಕಾಶ್ಚ ನಿರೀಕ್ಷ್ಯ ಸದ್ಯೋ ವಿಷಾಭಿಭೂತಾ ಹ್ಯವಿಷಾ ಭವನ್ತಿ |

ಅರ್ಥ—ಜಟಾಮಾಂಸಿ, ರೇಣುಕೆಬೀಜ, ತ್ರಿಫಲೆ, ನುಗ್ಗೆಬೀಜ (ತೊಗಟೆ), ಮಂಜಿಷ್ಠೆ, ಅತಿಮಧುರ, ಪದ್ಮಕ, ವಿಡಂಗ, ತಾಳೀಸಪತ್ರೆ, ಸರ್ಪಗಂಧಾ (ಈಶ್ವರೀ ಭೇದ), ಏಲಕ್ಕಿ, ದಾಲ್ಚಿನ್ನಿ, ಚಂಗಲ್‌ಕೋಷ್ಠ, ಲವಂಗಪತ್ರೆ, ಕೆಂಪುಗಂಧ, ಭಾರ್ಗಿ, ಕಹಿಪಡವಲಬೇರು, ಉತ್ತರಣೆಬೀಜ, ಆಗಳುಶುಂಠಿ, ಬಿಳಿಹೂವಿನ ದಾಸಮೆಕ್ಕೆ, ಕಾಡು

ಹಾಗಲಬೇರು, ಮಹಿಷಾಕ್ಷಿಗುಗ್ಗುಳ, ತಿಗಡೆ, ಅಶೋಕತೊಗಟೆ, ಅಡಿಕೆಗೋಟು, ತುಳಸಿಯತೆನೆ, ಗೇರುಹೂವು, ಗೋರೋಚನ ಇವೆಲ್ಲವನ್ನೂ ಸಮಭಾಗದಿಂದ ಸೇರಿಸಿ ಸೂಕ್ಷ್ಮಚೂರ್ಣಮಾಡಿಸಿ ಜೇನುತುಪ್ಪದಲ್ಲಿ ಕಲೆಸಿ (ರಂಗಳಿಸಿ) ಹಂದಿ, ಉಡ, ನವಿಲು ಮುಳ್ಳುಹಂದಿ, ಬೆಕ್ಕು, ನೀಲವಾದ ಅಂಡವುಳ್ಳಜಿಂಕೆ, ಮುಂಗುಸಿ ಇವುಗಳ ಪಿತ್ತವನ್ನೂ ಮಿಶ್ರಮಾಡಿಟ್ಟರೆ "ನರರ್ಷಭಾಗದ"ವೆನ್ನುತ್ತಾರೆ. ಇದನ್ನು ಸರಿಯಾಗಿ ತಯಾರಿಸಿ ಯಾವ ಪುರುಷಶ್ರೇಷ್ಠನು ತನ್ನ ಮನೆಯಲ್ಲಿಟ್ಟುಕೊಳ್ಳುತ್ತಾನೋ ಅಲ್ಲಿ ಸರ್ಪಗಳೂ ಕೀಟಗಳೂ ಕೂಡ ವೀರ್ಯವನ್ನಾಗಲೀ ವಿಷವನ್ನಾಗಲೀ ಕಾರುವುದಿಲ್ಲ. ಈ ಅಗದದಿಂದ ನಗಾರಿಯನ್ನಾಗಲೀ ತಮಟೆಯನ್ನಾಗಲೀ ಬಳಿದು ಬಾರಿಸಿದರೆ ಕೂಡಲೇ ವಿಷಗಳ ಪ್ರಭಾವವೇ ನಾಶವಾಗುತ್ತದೆ. ಈ ಅಗದವನ್ನು ಬಳಿದಿರುವ ಬಾವುಟವು ಹಾರಿ ಗಾಳಿಯನ್ನು ಬೀಸಿದರೆ ವಿಷಮಿಶ್ರವಾದ ವಸ್ತುಗಳೆಲ್ಲಾ ನಿರ್ವಿಷಗಳಾಗುತ್ತವೆ. ದೊರೆಯ ಮನೆಯಲ್ಲಿ ಆವಶ್ಯಕವಾಗಿ ಈ ಅಗದವನ್ನು ಶೇಖರಿಸಿಟ್ಟುಕೊಂಡಿರಬೇಕು.

ಲಾಕ್ಷಾಹರೇಣುನಲದಂಪ್ರಿಯಙ್ಗುಃ ಶಿಗ್ರುದ್ವಯಂ ಯಷ್ಟಿಕಪೃಥ್ವಿಕಾಶ್ಚ ॥೭೩॥
ಚೂರ್ಣೀಕೃತೋಽಯಂ ರಜನೀವಿಮಿಶ್ರೋ ವರ್ಗೋ ನಿಧೇಯೋ ಮಧುಸರ್ಪಿಷಾಕ್ತಃ ।
ಶೃಙ್ಗೇಗವಾಂ ಪೂರ್ವದಾಪಿಧಾನಸ್ತತಃ ಪ್ರಯೋಜ್ಯೋಽಞ್ಜನನಸ್ಯಪಾನೈಃ ॥೭೪॥
ಸಂಜೀವನೋನಾಮ ಗತಾಸುಕಲ್ಪಮೇಷೋಽಗದೋ ಜೀವಯತೀಹ ಮರ್ತ್ಯಮ್ ।
ಶ್ಲೇಷ್ಮಾತಕೀ ಕಟ್ಫಲಮಾತುಲುಙ್ಗ್ಯೌ ಶ್ವೇತಾ ಗಿರಿಹ್ವಾ ಕಿಣಿಹೀ ಸಿತಾ ಚ ॥೭೫॥
ಸತಣ್ಡುಲೀಯೋಽಗದ ಏಷ ಮುಖ್ಯೋ ವಿಶೇಷಾ ದರ್ವೀಕರರಾಜಿಲಾನಾಮ್ ।

ಅರ್ಥ—ಅರಗು, ರೇಣುಕೆಬಿತ್ತ, ಲಾಮಂಚ, ನೆಳಲು, ಬಿಳಿನುಗ್ಗೆ, ಕೆಂಪುನುಗ್ಗೆ ಅತಿಮಧುರ, ಏಲಕ್ಕಿ, ಅರಿಶಿನ ಇವುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಿಸಿ ಹಸುವಿನ ಕೊಂಬಿನಲ್ಲಿಟ್ಟುಕೊಂಡು ಅಞ್ಜನ, ನಸ್ಯ, ಪಾನಗಳ ಮೂಲಕ ಸೇವನೆ ಮಾಡಬೇಕು. ಇದಕ್ಕೆ **ಸಂಜೀವನಾಗದವೆಂದು** ಹೆಸರು. ಸಾಯುವ ಸ್ಥಿತಿಯಲ್ಲಿರುವ ಮನುಷ್ಯನನ್ನೂ ಇದರ ಪ್ರಯೋಗವು ಬದುಕಿಸುತ್ತದೆ. ಚಳ್ಳೆತೊಗಟೆ, ಕಿರಿಯಶಿವನಿ (ಕಾಯಫಲ), ಮಾದಳದತೊಗಟೆ, ಬಿಳಿಯ ಗಿರಿಕರ್ಣಿಕೆಯಬೇರು, (ಕರಿ) ನೀಲಿಯ ಹೂವಿನ ಗಿರಿಕರ್ಣಿಕೆಯಬೇರು, ಸಕ್ಕರೆ, ಕಿರಕಸಾಲೆಯಬೇರು ಇವುಗಳನ್ನು ಸಮಭಾಗದಿಂದ ಸೇರಿಸಿ ಚೂರ್ಣಮಾಡಿ ಜೇನುತುಪ್ಪವನ್ನು ಮಿಶ್ರಮಾಡಿ ದನದಕೊಂಬಿನಲ್ಲಿಟ್ಟುಕೊಂಡು ದರ್ವೀಕರಸರ್ಪ ರಾಜಿಲಸರ್ಪ ವಿಷಗಳಲ್ಲಿ ಪಾನ, ಅಞ್ಜನಗಳ ಮೂಲಕ ಪ್ರಯೋಗಿಸಲು ಶ್ರೇಷ್ಠವಾದ ಅಗದವು.

ದ್ರಾಕ್ಷಾಸುಗನ್ಧಾನಗವೃತ್ತಿಕಾ ಚ ಶ್ವೇತಾಸಮಙ್ಗಾ ಸಮಭಾಗಯುಕ್ತಾ ॥೭೫॥
ದೇಯೋದ್ವಿಭಾಗಃ ಸುರಸಾಚ್ಛದಸ್ಯ ಕಪಿತ್ಥಬಿಲ್ವಾದಪಿ ದಾಡಿಮಾಚ್ಚ ।
ತಥಾರ್ಧಭಾಗಃ ಸಿತಸಿನ್ದುವಾರಾದಙ್ಕೋಟಮೂಲಾದಪಿ ಗೈರಿಕಾಚ್ಚ ॥೭೭॥
ಏಷೋಽಗದಃ ಕ್ಷೌದ್ರಯುತೋ ನಿಹನ್ತಿ ವಿಶೇಷತೋ ಮಣ್ಡಲಿನಾಂ ವಿಷಾಣಿ ।

ಅರ್ಥ—ದ್ರಾಕ್ಷಿ, ಈಶ್ವರಿಬೇರು, ನಾಯಿಬೇಲದತೊಗಟೆ, ಬಿಳಿಯ ಗಿರಿಕರ್ಣಿಕೆಯ ಬೇರು, ಮಂಜಿಷ್ಠೆ ಇವೆಲ್ಲವನ್ನೂ ಸಮಭಾಗದಂತೆಯೂ ಎರಡರಷ್ಟು ಭಾಗ ತುಳಸಿಯ ಸೊಪ್ಪನ್ನೂ, ಬೇಲಿ, ಬಿಲ್ಪಪತ್ರೆ, ದಾಳಿಂಬೆಸೊಪ್ಪು, ಬಿಳಿಯಲಕ್ಕಿಸೊಪ್ಪು, ಅಂಕೋಲೆಯ ಬೇರಿನ ತೊಗಟೆ, ಕಾವಿಮಣ್ಣು ಇವೆಲ್ಲಾ ಅರ್ಧಾರ್ಧಭಾಗದಂತೆಯೂ ಸೇರಿಸಿ ಪುಡಿಮಾಡಿ ವಸ್ತ್ರಗಾಳಿತಮಾಡಿ ಜೇನುತುಪ್ಪದಲ್ಲಿ ಕಲಸಿ ಹಸುವಿನಕೊಂಬಿನಲ್ಲಿ ಶೇಖರಿಸಿಡಬೇಕು, ಮುಖ್ಯವಾಗಿ ಮಂಡಲಸರ್ಪದ ವಿಷದಲ್ಲಿ ಪ್ರಯೋಗಿಸಬೇಕು.

ವಂಶತ್ವಗಾದ್ರಾ್ರಮಲಕಂ ಕಪಿತ್ಥಂ ಕಟುತ್ರಿಕಂ ಹೈಮವತೀಸಕುಷ್ಠಾ ॥೭೮॥
ಕರಞ್ಜಬೀಜಂ ತಗರಂ ಶಿರೀಷಪುಷ್ಪಂ ಚ ಗೋಪಿತ್ತಯುತಂ ನಿಹನ್ತಿ ।
ವಿಷಾಣಿ ಲೂತೋನ್ದುರುಪನ್ನಗಾನಾಂ ಕೈಟಂ ಚ ಲೇಪಾಞ್ಜನನಸ್ಯಪಾನೈಃ ॥೭೯॥
ಪುರೀಷ ಮೂತ್ರಾನಿಲಗರ್ಭಸಂಗರ್ಾ ನಿಹನ್ತಿವರ್ತ್ಯಞ್ಜನನಾಭಿ ಲೇಪೈಃ ।
ಕಾಚಾರ್ಮಕೋಥಾರ್ಪಟಲಾಂಶ್ಚ ಘೋರರ್ಾ ಪುಷ್ಪಂ ಚ ಹನ್ತ್ಯಞ್ಜನನಸ್ಯಯೋಗೈಃ ॥೮೦॥

ಸಮೂಲಪುಷ್ಪಾಙ್ಕುರವಲ್ಕಬೀಜಾತ್ ಕ್ವಾಥಃ ಶಿರೀಷಾತ್‌ತ್ರಿಕಟು ಪ್ರಗಾಢಃ ।
ಸಲಾವಣಃ ಕ್ಷೌದ್ರಯುತೋಽಥ ಪೀತೋ ವಿಶೇಷತಃ ಕೀಟವಿಷಂ ನಿಹನ್ತಿ ॥೮೧॥

ಅರ್ಥ—ಬಿದಿರತೊಗಟೆ, ಹಸಿಯ ನೆಲ್ಲಿಕಾಯಿ, ಬೇಲದಕಾಯಿ, ತ್ರಿಕಟು, ಬಿಳಿ ಬಜೆ, ಚಂಗಲ್‌ಕೋಷ್ಠ, ಹೊಂಗೆಯಬೀಜ, ತಗರ, ಬಾಗೆಯಹೂವು, ಗೋರೋಚನ ಇವುಗಳನ್ನು ಸಮಭಾಗದಿಂದ ಚೂರ್ಣಿಸಿ ಶೋಧಿಸಿದ ಪುಡಿಯನ್ನು ಜೇನುತುಪ್ಪದಲ್ಲಿ ರಂಗಳಿಸಿ ಹಸುವಿನ ಕೊಂಬಿನಲ್ಲಿಟ್ಟುಕೊಂಡು ಲೇಪ, ಅಂಜನ, ನಸ್ಯ, ಪಾನಗಳ ಮೂಲಕ ಪ್ರಯೋಗಿಸಿದರೆ ಲೂತ (ಜಾಡರಹುಳು) ಮೂಗಿಲಿ, ನಾಗರಹಾವುಗಳ ವಿಷವು ನಿವಾರಣೆ ಯಾಗುತ್ತದೆ. ಕೈಟಾಗದವೆಂದು ಹೆಸರು. ಇದನ್ನು ಗುದವರ್ತಿ, ನೇತ್ರಾಞ್ಜನ ಹೊಕ್ಕಳಿಗೆ ಲೇಪಿಸಿದರೆ ಮಲ, ಮೂತ್ರ, ಅಪಾನವಾತ, ಗರ್ಭಪ್ರಸವ ಇವುಗಳ ತಡೆಯೂ, ಕಾಚ, ಅರ್ಮ, ಕ್ಲಿನ್ನವರ್ತ್ಮ ಅತಿ ಭಯಂಕರಗಳಾದ ನೇತ್ರಪಟಲ ರೋಗಗಳು ಕಣ್ಣಿನ ಹೂವನ್ನೂ (ಹೂವು ಕಣ್ಣನ್ನೂ) ಇವುಗಳ ಅಞ್ಜನ ನಸ್ಯಪ್ರಯೋಗದಿಂದಲೂ ನಿವಾರಣೆ ಯಾಗುತ್ತವೆ, ಬಾಗೇಬೇರು, ಹೂವು, ಚಿಗುರು, ತೊಗಟೆ, ಬೀಜ ಇವೆಲ್ಲವನ್ನೂ ಸೇರಿಸಿ ಕಷಾಯಮಾಡಿ ತ್ರಿಕಟುಚೂರ್ಣವನ್ನು ಹೆಚ್ಚಾಗಿ ಸೇರಿಸಿ ಸ್ವಲ್ಪ ಸೈಂಧವ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ವಿಶೇಷವಾಗಿ ಕೀಟವಿಷಹರವು. ಇದಕ್ಕೆ ಪಞ್ಚಶೈರೀಷಾಗದ ವೆಂದು ಹೆಸರು.

ಕುಷ್ಠಂ ತ್ರಿಕಟುಕಂ ದಾರ್ವೀ ಮಧೂಕಂ ಲವಣದ್ವಯಮ್ ।
ಮಾಲತೀನಾಗಪುಷ್ಪಂ ಚ ಸರ್ವಾಣಿ ಮಧುರಾಣಿ ಚ ॥೮೨॥
ಕಪಿತ್ಥರಸಪಿಷ್ಟೋಽಯಂ ಶರ್ಕರಾಕ್ಷೌದ್ರಸಂಯುತಃ ।
ವಿಷಂ ಹನ್ತ್ಯಗದಃ ಸರ್ವಂ ಮೂಷಿಕಾಣಾಂ ವಿಶೇಷತಃ ॥೮೩॥

ಅರ್ಥ—ಚಂಗಲ್‌ಕೋಷ್ಠ, ತ್ರಿಕಟು, ಮರದರಿಶಿನ, ಹಿಪ್ಪೆಹೂ, ಸೈಂಧವ, ಸೌವರ್ಚಲವಣ, ಜಾಜಿಹೂವು, ನಾಗಕೇಸರ, ಕಾಕೋಳ್ಯಾದಿ ಮಧುರ ಗಣದ್ರವ್ಯ ಇವುಗಳನ್ನೆಲ್ಲಾ ಬೇಲದಕಾಯಿನ ರಸದಿಂದ ಅರೆದು ಸಕ್ಕರೆ ಜೇನುತುಪ್ಪ ಮಿಶ್ರಮಾಡಿ ನಸ್ಯಾಞ್ಜನ ಲೇಪನಗಳಿಂದ ಪ್ರಯೋಗಿಸಿದರೆ ವಿಶೇಷವಾಗಿ ಮೂಷಿಕ (ಇಲಿಗಳ) ಗಳ ವಿಷಹರಣವಾಗುತ್ತದೆ. ಸರ್ವಕಾರ್ಮಿಕಾಗದವೆಂದು ಹೆಸರು.

ಸೋಮರಾಜೀಫಲಂಪುಷ್ಪಂ ಕಟಭೀಸಿನ್ದುವಾರಕಃ ।
ಚೋರಕೋವರುಣಃ ಕುಷ್ಠಂ ಸರ್ಪಗನ್ಧಾ ಸಸಪ್ತಲಾ ॥೮೪॥
ಪುನರ್ನವಾಶಿರೀಷಶ್ಚ ಪುಷ್ಪಮಾರಗ್ವಧಾರ್ಕಜಮ್ ।
ಶ್ಯಾಮಾಮ್ಬಷ್ಠಾ ವಿಡಙ್ಗಾನಿ ತಥಾಮ್ರಾಶ್ಮನ್ತಕಾನಿ ಚ ॥೮೫॥
ಭೂಮಿಾಕುರುವಕಶ್ಚೈವ ಗಣ ಏಕಸರಃ ಸ್ಮೃತಃ ।
ಏಕಶೋದ್ವಿಸ್ತ್ರಿಶೋವಾಪಿ ಪ್ರಯೋಕ್ತವ್ಯೋ ವಿಷಾಪಹಃ ॥೮೬॥

ಅರ್ಥ—ಬಾವಂತಿಬೀಜ, ಬಿಳಿಗಿರಿಕರ್ಣೆಯ ಹೂವು, ಬಿಳಿಯಲಕ್ಕೆಹೂವು, ಕಚೋರ, ಮಟ್ಟಿಮಾವು (ತೊಗಟೆ), ಚಂಗಲ್‌ಕೋಷ್ಠ, ಈಶ್ವರೀಬೇರು, ಅರಿಶಿನ ಹಾಲುಳ್ಳ ಮುಂಡುಗಳ್ಳಿ (ಈಶ್ವರೀಭೇದವು) ಕೊಮ್ಮೆಬೇರು, ಬಾಗೆಹೂವು, ಕಕ್ಕೆಹೂವು, ಬೆಳಿಯ ಎಕ್ಕದಹೂವು, ನೆಳಲು, ಅಗಳುಶುಂಠಿ, ವಿಡಂಗ, ಮಾವಿನಚಿಗರು ಆರೆಹೂವು, ಕರಿಮಣ್ಣು, ಗೋರಂಟಿಹೂವು ಈ ಗಣದ್ರವ್ಯಗಳಿಗೆ ಏಕಸರ ದ್ರವ್ಯಗುಣವೆಂದು ಹೆಸರು. ಇವುಗಳ ಪೈಕಿ ಒಂದೊಂದನ್ನಾಗಲಿ, ಎರಡೆರಡು, ಮೂರು ಮೂರು ದ್ರವ್ಯ ಗಳನ್ನಾಗಲೀ ಪಾನಾಞ್ಜನನಸ್ಯಲೇಪನಗಳಿಂದ ಪ್ರಯೋಗಿಸಿದರೆ ವಿಷಹರಣವಾಗುತ್ತದೆ.

ಇತಿ ಶ್ರೀಸುಶ್ರುತ ಸಂಹಿತಾಯಾಂ ಕಲ್ಪಸ್ಥಾನೇ ಸರ್ಪದಷ್ಟವಿಷ ಚಿಕಿತ್ಸಾ
ಕಲ್ಪನಾಮಕ ಪಞ್ಚಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ
ನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ.

ಷಷ್ಠೋಽಧ್ಯಾಯಃ

ಅಥಾತೋ ದುಂದುಭಿಸ್ವನೀಯಂ ಕಲ್ಪಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ದುಂದುಭಿಸ್ವನೀಯ ಕಲ್ಪವನ್ನು ವಿವರಿಸುತ್ತೇವೆ.

ಗ—ಧವಾಶ್ವಕರ್ಣಶಿರೀಷತಿನಿಶಪಲಾಶಪಿಚುಮರ್ದಪಾಟಲಿಪಾರಿಭದ್ರಕಾಮ್ರೋದುಂಬರಕರಹಾಟಕಾರ್ಜುನಕಕುಭಸರ್ಜಕಪೀತನಶ್ಲೇಷ್ಮಾತಕಾಂಕೋಟಾಮಲಕ ಪ್ರಗ್ರಹಕಟಜಶಮೀಕಪಿತ್ಥಾಶ್ಮನ್ತಕಾರ್ಕ ಚಿರಬಿಲ್ವಮಹಾವೃಕ್ಷಾರುಷ್ಕರಾರಳು ಮಧುಕಮಧುಶಿಗ್ರುಶಾಕ ಗೋಜೀಮೂರ್ವಾಭೂರ್ಜತಿಲ್ವಕೇಕ್ಷುರಕ ಗೋಪಘೋಂಟಾರಿಮೇದಾನಾಂ ಭಸ್ಮಾನ್ಯಾಹೃತ್ಯ ಗವಾಂ ಮೂತ್ರೇಣ ಕ್ಷಾರಕಲ್ಪೇನ ಪರಿಸ್ರಾವ್ಯ ವಿಪಚೇತ್ ; ದದ್ಯಾಚ್ಚಾತ್ರ ಪಿಪ್ಪಲೀಮೂಲತಣ್ಡುಲೀಯಕರವರಾಜ್ಞ ಚೋಚಕ ಮಂಜಿಷ್ಠಾ ಕರಞ್ಜಿಕಾಹಸ್ತಿಪಿಪ್ಪಲೀಮರಿಪವಿಡಙ್ಗಗೃಹ ಧೂಮಾನನಾಸ್ಫೋಟಮಸರಳಾ ಬಾಹ್ಲೀಕಗುಹಾಕ್ರೋಶಾವ್ರಶ್ವೇತಸರ್ಷಪ ವರುಣಲವಣಪ್ಲಕ್ಷನಿಚುಲಕವಞ್ಜುಲವಕ್ರಾಲವರ್ಧಮಾನಪುತ್ರಶ್ರೇಣೀಸಪ್ತಪರ್ಣಟುಣ್ಟುಕೈಲ ವಾಲುಕನಾದನ್ಯತಿವಿಷಾಭಯಾ ಭದ್ರದಾರು ಕುಷ್ಠಹರಿದ್ರಾವಚಾಚೂರ್ಣಾನಿ ಲೋಹಾನಾಂಚ ಸಮಭಾಗಾನಿ ತತಃ ಕ್ಷಾರವದಾಗತ ಪಾಕಮವತಾರ್ಯ ಲೋಹಕುಮ್ಭೇನಿದಧ್ಯಾತ್ ॥೩॥

ಅನೇನ ದುಂದುಭಿಂ ಲಿಮ್ಪೇತ್ ಪತಾಕಾಂ ತೋರಣಾನಿ ಚ ।
ಶ್ರವಣಾದ್ದರ್ಶನಾತ್ ಸ್ಪರ್ಶಾತ್ ವಿಷಾತ್ ಸಂಪ್ರತಿಮುಚ್ಯತೇ ||೪||
ಏಷ ಕ್ಷಾರಾಗದೋ ನಾಮ ಶರ್ಕರಾಸ್ವಶ್ಮರೀಷು ಚ ।
ಅರ್ಶಃಸು ವಾತಗುಲ್ಮೇಷು ಕಾಸಶೂಲೋದರೇಷು ಚ ||೫||
ಅಜೀರ್ಣೇ ಗ್ರಹಣೀ-ದೋಷೇ ಭಕ್ತದ್ವೇಷೇ ಚ ದಾರುಣೇ ।
ಶೋಫೇ ಸರ್ವಸರೇ ಚಾಪಿ ದೇಯಃ ಶ್ವಾಸೇ ಚ ದಾರುಣೇ ||೬||
ಏಷ ಸರ್ವವಿಷಾರ್ತಾನಾಂ ಸರ್ವಥೈವೋಪಯುಜ್ಯತೇ ।
ತಥಾ ತಕ್ಷಕಮುಖ್ಯಾನಾಮಪಿ ಸರ್ಪಾಣ್ಯಕಶೋಽಗದಃ ||೭||

ಅರ್ಥ—ದಿಂಡಲು, ಧೂಪದಮರ, ಬಾಗೆಮರ, ರಥವೃಕ್ಷ, ಮುತ್ತುಗ, ಬೇವಿನಮರ, ಪಾದರಿಗಿಡ, ಕೆಂಪುಹೂವಿನ ಹಾಲುವಾಣ, ಮಾವಿನಮರ, ಅತ್ತಿಮರ, ಮುಂಡುಗಳ್ಳಿ, ಅತಿಮಧುರ, ಕರಘಾಟ (ಭದ್ರವೆಂಬ ಮುಳ್ಳು ಹಣ್ಣಿನಮರ), ಬಿಳಿಮತ್ತಿ, ಕರಿಮತ್ತಿ, ಸಾರ್ಜವೃಕ್ಷ, ಬಂಗರಳಿ (ಹೊವರಶಿ), ಚಳ್ಳೆಗಿಡ, ಅಂಕೋಲೆಗಿಡ, ನೆಲ್ಲಿಗಿಡ, ಕಕ್ಕೆಗಿಡ, ಕೊಡಶಿಗೆ, ಬನ್ನಿಮರ, ಬೇಲದಮರ, ಆರೇಮರ (ಕಂಚುವಾಳದ ಭೇದ), ಎಕ್ಕದಗಿಡ, ಹೊಂಗೆ, ಹೆಮ್ಮರ, ಗೇರು, ಕೆಂಪುನುಗ್ಗೆ, ತೇಗ, ಎತ್ತುನಾಲಿಗೆ, ಕೊರಟಿಗೆ

ಹಂಬು, ಭುಜಪತ್ರೆಮರ, ಲೋಧ್ರವೃಕ್ಷ , ಕೊಳವಳಿಕೆಗಿಡ, ಗೋಪಘೋಂಟ (ಮಿಣಿಕೆ), ಗೊಬ್ಬಳಿ (ಕರಿಜಾಲಿ) ಇವುಗಳ ಭಸ್ಮವನ್ನು ಗೋಮೂತ್ರದಲ್ಲಿ ಕದರಿ ಶೋಧಿಸಿ ಕ್ಷಾರವಿಧಾನ ದಿಂದ ಕಾಯಿಸಿ ಚವ್ಯ, ಕಿರುಕುಸಾಲೆ, ದಾಲ್ಚಿನ್ನಿ, ದಪ್ಪದಾಲ್ಚಿನ್ನಿ, ಮಂಜಿಷ್ಠೆ, ಹೊಂಗೆ ಚಿತ್ರ, ಗಜಹಿಪ್ಪಲಿ, ಮೆಣಸು, ವಿಡಂಗ, ಇಲ್ಲಣ, ಬೋಳದರಗ, ಬಿಳಿಕಗ್ಗಲಿ, ದೇವ ದಾರು, ಕೇಸರಿ, ಮೂರೆಲೆಹೊನ್ನೆ, ಜೀರಿಗೆನೂವು, ಬಿಳಿಸಾಸಿವೆ, ಮುಟ್ಟನೂವು, ಸೈಂಧವ ಲವಣ, ಗೋಣಿಮರದ ತೊಗಟೆ, ನೀರಂಜಿತೊಗಟೆ, ಹಬ್ಬೆಬೇರು, ತಗರ, ಅರಿದಳ,ಹರಳು, ಸಣ್ಣ ಜಾಪಾಳ, ಹೆಮ್ಮರ, ಏಲಾವಾಲುಕ, ದೊಡ್ಡ ಜಾಪಾಲ, ಅತಿಬಜೆ, ಅಣಿಲೆಕಾಯಿ, ದೇವದಾರು, ಚಂಗಲ್‌ಕೋಷ್ಠ ಅರಿಶಿನ, ಬಜೆ, ಇವುಗಳ ಚೂರ್ಣವನ್ನೂ ಕಬ್ಬಿಣದ ಪುಡಿ ಯನ್ನೂ ಸಮಭಾಗದಿಂದ ಮಿಶ್ರಮಾಡಿ, ಕ್ಷಾರಪಾಕಮಾಡಿ ಇಳಿಸಿಕೊಂಡು ಕಬ್ಬಿಣದ ಪಾತ್ರೆಗೆ ತುಂಬಿಡಬೇಕು. ಈ ಕ್ಷಾರವನ್ನು ನಗಾರಿ, ಬಾವುಟ ತೋರಣಗಳಿಗೆ ಬಳಿದು ಇವುಗಳ ಶಬ್ದವನ್ನು ಕೇಳಿ, ನೋಡಿ, ಕೈಯಿಂದ ಮುಟ್ಟಿದರೆ ವಿಷನಿವಾರಣೆಯಾಗುತ್ತದೆ, ಇದು ಕ್ಷಾರಾಗದವು, ಇದರ ಪ್ರಯೋಗದಿಂದ ಶರ್ಕರೆ, ಮೂತ್ರಾಶ್ಮರಿ, ಅರ್ಶೋರೋಗ, ವಾತಗುಲ್ಮ, ಕಾಸ, ಶೂಲ, ಉದರ, ಅಜೀರ್ಣ, ಗ್ರಹಣೀರೋಗ, ದಾರುಣ ಅರೋಚ ಕತೆ, ಶೋಫ, ಮುಖಪಾಕ, ಉಬ್ಬಸಗಳು ನಿವಾರಣೆಯಾಗುತ್ತವೆ, ಸರ್ವವಿಷಪೀಡಿತ ರಿಗೂ ಹಿತಕರವು, ತಕ್ಷಕ ಮೊದಲಾದ ಸರ್ಪಗಳ ವಿಷ ದರ್ಪವನ್ನೂ ನಿವಾರಿಸುವ ಅಗದವು.

ವಿಡಙ್ಗ ತ್ರಿಫಲಾದನ್ತೀ ಭದ್ರದಾರು ಹರೇಣವಃ ।
ತಾಳೀಸಪತ್ರಮಞ್ಜಿಷ್ಠಾ ಕೇಶರೋತ್ಪಲಪದ್ಮಕಮ್ ॥೮॥
ದಾಡಿಮಂ ಮಾಲತೀಪುಷ್ಪಂ ರಜನ್ಯೌ ಸಾರಿವೇಸ್ಥಿರೇ ।
ಪ್ರಿಯಙ್ಗುಸ್ತಗರಂ ಕುಷ್ಠಂ ಬೃಹತ್ಯೌ ಚೈಲವಾಲುಕಮ್ ॥೯॥
ಸಚನ್ದನಗವಾಕ್ಷೀಭಿರೇತೈಃ ಸಿದ್ಧಂ ವಿಷಾಪಹಮ್ ।
ಸರ್ಪಿಃ ಕಲ್ಯಾಣಕಂ ಹ್ಯೇತದ್ಗ್ರಹಾಪಸ್ಮಾರನಾಶನಮ್ ॥೧೦॥
ಪಾಣ್ಡ್ವಾಮಯಗರಶ್ವಾಸಮನ್ದಾಗ್ನಿ ಜ್ವರಕಾಸನುತ್ ।
ಶೋಷಿಣಾಮಲ್ಪಶುಕ್ರಾಣಾಂ ವನ್ಧ್ಯಾನಾಂ ಚ ಪ್ರಶಸ್ಯತೇ ॥೧೧॥

ಅರ್ಥ—ವಿಡಙ್ಗ, ತ್ರಿಫಲಾ, ಜಾಪಾಳದ ತೊಗಟೆ, ದೇವದಾರು, ರೇಣುಕೆಬೀಜ, ತಾಳೀಸಪತ್ರೆ, ಮಂಜಿಷ್ಠೆ, ನಾಗಸರಿನ್ನೈದಿಲೆಗೆಡ್ಡೆ, ಪದ್ಮಕ, ದಾಳಿಂಬೆಸಿಪ್ಪೆ, ಜಾಜಿಹೂವು, ಅರಿಶಿನ, ಮರದರಿಸಿನ, ಸೊಗದೆಬೇರು, ಮೂರೆಲೆಹೊನ್ನೆ, ನೆಳಲು, ತಗರ, ಚಂಗಲ್ ಕೋಷ್ಠ, ಹೆಗ್ಗುಳ್ಳ, ನೆಲಗುಳ್ಳ, ಏಲಾವಾಲುಕ, ರಕ್ತಚಂದನ, ಹಾವುಮೆಕ್ಕೆ, ಇವುಗಳ ಕಲ್ಕದೊಡನೆ ತಯಾರಿಸಿದ ಘೃತವು ವಿಷಹರವು ; ಇದಕ್ಕೆ ಕಲ್ಯಾಣಕ ಘೃತವೆಂದು ಹೆಸರು. ಇದನ್ನು ಸೇವಿಸಿದರೆ ದುಷ್ಟಗ್ರಹಪೀಡೆಯೂ, ಅಪಸ್ಮಾರ, ಪಾಣ್ಡುರೋಗ, ಗರ

(ಕ್ರೈಮಿಸಗು), ಉಬ್ಬಸ, ಅಗ್ನಿಮಾಂದ್ಯ, ಜ್ವರ, ಕಾಸ ಇವುಗಳು ನಿವಾರಣೆಯಾಗುತ್ತವೆ. ಮತ್ತು ಕ್ಷಯರೋಗಿಗಳಿಗೂ, ಅಲ್ಪಶುಕ್ರವುಳ್ಳವರಿಗೂ, ವನ್ಧ್ಯಾಸ್ತ್ರೀಯರಿಗೂ ಶ್ರೇಷ್ಠವಾದದ್ದು.

ಅಪಾಮಾರ್ಗಸ್ಯ ಬೀಜಾನಿ ಶಿರೀಷಸ್ಯ ಚ ಮಾಷಕಾ |
ಶ್ವೇತೇ ದ್ವೇ ಕಾಕಮಾಚೀಂ ಚ ಗವಾಂ ಮೂತ್ರೇಣ ಪೇಷಯೇತ್ ||೧೨||
ಸರ್ಪಿರೇತೈಸ್ತು ಸಂಸಿದ್ಧಂ ವಿಷಸಂಶಮನಂ ಪರಮ್ |
ಅಮೃತಂ ನಾಮ ವಿಖ್ಯಾತಮಪಿ ಸಂಜೀವಯೇನ್ಮೃತಮ್ ||೧೩||

ಅರ್ಥ—ಉತ್ತರಣೆಯಬೀಜ, ಬಾಗೆಬೀಜ, ಬಿಳಿಗಿರಿಕರ್ಣಿಕೆ, ನೀಲಿಯಗಿರಿಕರ್ಣಿಕೆ, ಗಣಿಕೆಸೊಪ್ಪು ಇವೆಲ್ಲವುಗಳ ಸಮಭಾಗಗಳನ್ನು ಸೇರಿಸಿ ಹಸುವಿನಗಂಜಳದಲ್ಲಿ ಅರೆದು ಇದರೊಡನೆ ಘೃತವನ್ನು ತಯಾರಿಸಬೇಕು. ಈ ಘೃತವನ್ನು ಸೇವಿಸಿದರೆ ವಿಷವು ಶಮನವಾಗುತ್ತದೆ ; ಇದಕ್ಕೆ ಅಮೃತಪ್ರಾಶಘೃತವೆಂದು ಹೆಸರು. ಮರಣಾವಸ್ಥೆಯಲ್ಲಿರುವವರೂ ಇದನ್ನು ಪಾನಮಾಡುವುದರಿಂದ ಬದುಕಿಬಿಡುತ್ತಾರೆ.

ಚನ್ದನಾಗುರುಣೀ ಕುಷ್ಠಂ ತಗರಂ ತಿಲಪರ್ಣಿಕಮ್ |
ಪ್ರಪೌಣ್ಡರೀಕಂ ನಳದಂ ಸರಳಂ ದೇವದಾರು ಚ ||೧೪||
ಭದ್ರಶ್ರಿಯಂ ಯವಫಲಾಂ ಭಾರ್ಗೀಂ ನೀಲೀಂ ಸುಗನ್ಧಿಕಾಮ್ |
ಕಾಲೇಯಕಂ ಪದ್ಮಕಂ ಚ ಮಧುಕಂ ನಾಗರಂ ಜಟಾಮ್ ||೧೫||
ಪುನ್ನಾಗೈಲೈಲವಾಲೂನಿ ಗೈರಿಕಂ ಧ್ಯಾಮಕಂ ಬಲಾಮ್ |
ತೋಯಂ ಸರ್ಜರಸಂ ಮಾಂಸೀಂ ಶತಪುಷ್ಪಾಂ ಹರೇಣುಕಾಮ್ ||೧೬||
ತಾಳೀಸಪತ್ರಂ ಕ್ಷುದ್ರೈಲಾಂ ಪ್ರಿಯಙ್ಗುಂ ಸಕುಟನ್ನಟಮ್ |
ಶಿಲಾಪುಷ್ಪಂ ಸಶೈಲೇಯಂ ಪತ್ರಂ ಕಾಲಾನುಸಾರಿವಾಮ್ ||೧೭||
ಕಟುತ್ರಿಕಂ ಶೀತಶಿವಂ ಕಾಶ್ಮರ್ಯಂ ಕಟುರೋಹಿಣೀಮ್ |
ಸೋಮರಾಜೀಮತಿವಿಷಾಂ ಪೃಥ್ವೀಕಾಮಿನ್ದ್ರವಾರುಣೀಮ್ ||೧೮||
ಉಶೀರಂ ವರುಣಂ ಮುಸ್ತಂ ಕುಸ್ತುಂಬರು ನಖಂ ತಥಾ |
ಶ್ವೇತೇ ಹರಿದ್ರೇ ಸ್ಥೌಣೇಯಂ ಲಾಕ್ಷಾಂ ಚ ಲವಣಾನಿ ಚ ||೧೯||
ಕುಮುದೋತ್ಪಲಪದ್ಮಾನಿ ಪುಷ್ಪಂ ಚಾಪಿ ತಥಾರ್ಕಜಮ್ |
ಚಮ್ಪಕಾಶೋಕಸುಮನಸ್ತಿಲಕ ಪ್ರಸವಾನಿ ಚ ||೨೦||
ಪಾಟಲೀಶಾಲ್ಮಲೀಶೇಲು ಶಿರೀಷಾಣಾಂ ತಥೈವ ಚ |
ಕುಙ್ಕುಮಂ ತೃಣಮೂಲ್ಯಾಚ್ಚ ಸುರಭೀಸಿನ್ಧುವಾರಜಮ್ ||೨೧||
ಧವಾಶ್ವಕರ್ಣಪಾರ್ಥಾನಾಂ ಪುಷ್ಪಾಣಿ ತಿನಿಶಸ್ಯ ಚ |
ಗುಗ್ಗುಳುಂ ಕುಙ್ಕುಮಂ ಬಿಂಬೀಂ ಸರ್ಪಾಕ್ಷೀಂ ಗನ್ಧನಾಕುಲೀಮ್ ||೨೨||
ಏತತ್ ಸಂಭೃತ್ಯ ಸಂಭಾರಂ ಸೂಕ್ಷ್ಮಚೂರ್ಣಾನಿ ಕಾರಯೇತ್ |

ಗೋಪಿತ್ತಮಧುಸರ್ಪಿರ್ಭಿರ್ಯುಕ್ತಂ ಶೃಙ್ಗೇ ನಿಧಾಪಯೇತ್ ॥೧೩॥
ಭಗ್ನಸ್ಕಂಧಂ ವಿವೃತ್ತಾಕ್ಷಂ ಮೃತ್ಯೋರ್ದಂಷ್ಟ್ರಾನ್ತರಂ ಗತಮ್ ।
ಅನೇನಾಗದಮುಖ್ಯೇನ ಮನುಷ್ಯಂ ಪುನರಾಹರೇತ್ ॥೧೪॥
ಏಷೋಽಗ್ನಿಕಲ್ಪಂ ದುರ್ವಾರಂ ಕ್ರುದ್ಧಸ್ಯಾಮಿತತೇಜಸಃ ।
ವಿಷಂ ನಾಗಪತೇರ್ಹನ್ಯಾತ್ ಪ್ರಸಭಂ ವಾಸುಕೇರಪಿ ॥೧೫॥
ಮಹಾಸುಗನ್ಧಿನಾಮಾಯಂ ಪಞ್ಚಾಶೀತ್ಯಙ್ಗ ಸಂಯುತಃ ।
ರಾಜಾಗದಾನಾಂ ಸರ್ವೇಷಾಂ ರಾಜ್ಞೋಹಸ್ತೇ ಭವೇತ್ ಸದಾ ॥೧೬॥
ತೇನಾನ.ಲಿಪ್ತಸ್ತು ನೃಪೋ ಭವೇತ್ ಸರ್ವಜನಪ್ರಿಯಃ ।

ಸ್ನಾತಾ ಇತಿ ಪಾಠಾನ್ತರಮ್

ಭ್ರಾಜಿಷ್ಣುತಾಂ ಚ ಲಭತೇ ಶುಕ್ರಮಧ್ಯಗತೋಽಪಿ ಸ್ಸ ॥೧೭॥

ಅರ್ಥ—(ಮಹಾಸುಗನ್ಧಿನಾಮಾಗದಃ) ಕೆಂಪುಗಂಧ, ಅಗಿಲು, ಚಂಗಲ್‌ಕೋಷ್ಠ, ಗ್ರಂಥಿಕತಗರ, ತಿಲಪರ್ಣಿ (ನಾರಂಬೇಳಿ, ಸರಳರಸವೆಂದು ಗಯಿಮತ, ತೇರಣವೆಂದು ಈ ದೇಶದಲ್ಲಿ ರೂಢಿಯಿದೆ. ಇದರ ಸೊಪ್ಪನ್ನು ಅರೆದು ಉಗುರಿಗೆ ಮೆತ್ತಿದರೆ ಕೆಂಪಾಗುತ್ತದೆ. ಮೆಹಿನ್ದಿ ಎಂದು ಹಿಂದಿಯ ಹೆಸರು), ಪ್ರಪೌಣ್ಡರೀಕ, ಲಾಮಂಚ, ಸರಳದೇವದಾರು, ತುಪ್ಪದೇವದಾರು, ಶ್ರೀಗಂಧ, ಕೊಡಶಿಗೆಬೀಜ, ಭಾರ್ಗಿ, ನೀಲಿಸೊಪ್ಪು, ಈಶ್ವರೀಬೇರು, ಪೀತಚಂದನ (ಅಗಿಲು ಎಂದು ಕೆಲವರ ಮತ), ಪದ್ಮಕ, ಅತಿಮಧುರ, ಶುಂಠಿ, ಜಟಾಮಾಂಸೀ, ಸುರಹೊನ್ನೆ, ದೊಡ್ಡ ಏಲಕ್ಕಿ, ಏಲಾವಾಲುಕ, ಕಾವಿಮಣ್ಣು, ಪರಿಮಳಗಂಜಣಿ ಹುಲ್ಲು, ಕಳ್ಳಂಗಡಲೆ, ಮುಡಿವಾಳ, ರಾಳು, ಗಂಧಮಾಂಸೀ, ಸಬ್ಬಶಿಗೆಬೀಜ, ರೇಣುಕೇ ಬೀಜ, ತಾಳೀಸಪತ್ರೆ, ಸಣ್ಣ ಏಲಕ್ಕಿ, ನೆಳಲು, ಹೆಮ್ಮರದತೊಗಟೆ, ಮಣಶಿಲೆ, ಪುಷ್ಪಕಾಸೀಸ, ಕಲ್ಲುಹೂವು, ಲವಙ್ಗಪತ್ರೆ, ಅಗಿಲು, ತ್ರಿಕಟು, ಪಚ್ಚಕರ್ಪೂರ, ಶಿವನಿಹಣ್ಣು, ಕಟುಕರೋಹಿಣಿ, ಬಾವನ್ತಿಬೀಜ, ಅತಿಬಜೆ, ಕರಿಯಜೀರಿಗೆ, ಹಾವುಮೆಕ್ಕೆಕಾಯಿ, ಲಾಮಞ್ಚ, ಮುಟ್ಟಮಾವು, ಕೊನ್ನಾರಿಗೆಡ್ಡೆ, ಕೊತ್ತುಂಬರಿ, ಬಳಿಯ ಗಿರಿಕರ್ಣಿಕೆ, ಬಿಳಿ ಬಜೆ, ಅರಿಶಿನ, ಮರದರಿಶಿನ, ಮಾಚಿಪತ್ರೆ, ಅರಗು, ೫ ಲವಣಗಳು, ನೈದಿಲೆ, ಬಿಳಿ ನೈದಿಲೆ, ತಾವರೆ ಇವುಗಳ ಗೆಡ್ಡೆಗಳು, ಎಕ್ಕ, ಸಂಪಿಗೆ, ಅಶೋಕ, ಜಾಜಿ, ಲೋಧ್ರ, ಪಾದರಿ, ಬೂರಗ, ಚಳ್ಳಿ, ಬಾಗೆ ಇವುಗಳ ಹೂವುಗಳು, ಕುಂಕುಮಕೇಸರಿ, ತಾಳೆಹೂವು, ತುಳಸೀತೆನೆ, ಲಕ್ಕಿಹೂವು,ದಿಂಡಲು, ಧೂಪದಮರ, ಮುತ್ತಿ, ನೇವಿ, ವೃಕ್ಷ ಇವುಗಳ ಹೂವುಗಳು, ಮಹಿಷಾಕ್ಷಗುಗ್ಗುಳು, ಕೇಸರಿ, ತೊಂಡೆಹಣ್ಣು, ಈಶ್ವರೀಬೇರು, ಆಡುಮುಟ್ಟದ ಬೇರು (ಗನ್ಧನಾಕುಲಿ ಎನ್ನುತ್ತಾರೆ) ಇವುಗಳನ್ನೆಲ್ಲಾ ಸಮಭಾಗದಿಂದ ಸೇರಿಸಿ ಸೂಕ್ಷ್ಮ ಚೂರ್ಣಮಾಡಿ ಶೋಧಿಸಿ ಗೋರೋಚನ, ಜೇನುತುಪ್ಪ, ತುಪ್ಪಗಳನ್ನು ಸೇರಿಸಿ ರಂಗಳಿಸಿ ಹಸುವಿನ ಕೊಂಬಿಗೆ ತುಂಬಿಟ್ಟುಕೊಳ್ಳಬೇಕು. ಹೆಗಲು ಮುರಿದು ಪಕ್ಕದಲ್ಲಿ ಜೋತಾಡುವವನು, ಕಣ್ಣುಗಳನ್ನು ಅಗಲಿಸಿರುವವರು ಮೃತ್ಯುವಿನ ದವಡೆಗೆ ಸಿಕ್ಕಿಕೊಂಡಿರುವವರು

(ಮರಣ ಹೊಂದುತ್ತಲಿರುವವರು) ಅಗದ ಪ್ರಯೋಗದಿಂದ ಬದುಕಿಬಿಡುತ್ತಾರೆ ; ಅಗ್ನಿ ಸಮಾನವಾದ ತಡೆಯಲಾಗದ ಶಕ್ತಿಯುಳ್ಳ ಅತ್ಯಂತ ಪರಾಕ್ರಮವುಳ್ಳ ಕೋಪಗೊಂಡ ಸರ್ಪರಾಜನಾದ ವಾಸುಕಿಯ ವಿಷವೇಗವನ್ನೂ ಬಲಾತ್ಕಾರದಿಂದ ನಾಶಪಡಿಸುತ್ತದೆ ; ೮೫ ಅಂಗಗಳಿಂದ (ದ್ರವ್ಯಗಳಿಂದ) ಕೂಡಿದ (ತಯಾರಿಸಲ್ಪಟ್ಟಿರುವ) ಈ ಅಗದಕ್ಕೆ ಮಹಾಸುಗನ್ಧಿ ಅಗದವೆಂದು ಪ್ರಸಿದ್ಧಿಯುಂಟಾಗಿರುತ್ತದೆ. ವಿಷಹರ ಅಗದಗಳಲ್ಲೆಲ್ಲಾ ರಾಜನಾದದ್ದು (ಅತ್ಯಂತ ಶ್ರೇಷ್ಠವು) ರಾಜರು ಸರ್ವಕಾಲದಲ್ಲೂ ಈ ಅಗದವನ್ನು ಕೈಗೆ ಕಟ್ಟಿಕೊಂಡಿರಬೇಕು, ಸ್ನಾನದಿಂದ ಶುದ್ಧಿಮಾಡಿಕೊಂಡಮೇಲೆ ರಾಜರು ಈ ಅಗದವನ್ನು ಮೈಗೆ ಅನುಲೇಪನಮಾಡಿಕೊಂಡರೆ ಜನರೆಲ್ಲರಿಗೂ ಪ್ರಿಯವಾಗುತ್ತಾರೆ (ಯಾರೂ ದ್ವೇಷ ಮಾಡುವುದಿಲ್ಲ), ಇಂದ್ರನ ಮಧ್ಯದಲ್ಲಿದ್ದರೂ ಇದರ ಪ್ರಭಾವದಿಂದ ಅಧಿಕ ಕಾಂತಿಯುಳ್ಳ ವರಾಗುತ್ತಾರೆ.

ಉಷ್ಣವರ್ಜ್ಯೋ ವಿಧಿಃ ಕಾರ್ಯೋ ವಿಷಾರ್ತಾನಾಂ ವಿಜಾನತಾ ।
ಮುಕ್ತ್ವಾ ಕೀಟವಿಷಂ ತದ್ಧಿ ಶೀತೇನಾಭಿಪ್ರವರ್ಧತೇ ॥೨೮॥

ಅರ್ಥ—ಬುದ್ಧಿಶಾಲಿಯಾದ ವೈದ್ಯನು ಕೀಟವಿಷಪೀಡಿತರನ್ನು ಬಿಟ್ಟು ಉಳಿದ ಎಲ್ಲಾ ವಿಧದ ವಿಷದಿಂದ ಪೀಡಿತರಾದ ರೋಗಿಗಳಿಗೆ ಬಿಸಿಯನ್ನು ಬಿಟ್ಟಿರುವ ಅಂದರೆ ಶೀತಲವಾದ ಪಾನ, ಲೇಪನ, ನಸ್ಯಾಞ್ಜನಾದಿ ಸಕಲವಿಧಗಳಾದ ಉಪಚಾರಗಳನ್ನೂ ಮಾಡಿಸಬೇಕು ; ಕೀಟವಿಷವು ಶೀತೋಪಚಾರಗಳಿಂದ ವೃದ್ಧಿಯಾಗುತ್ತದೆಯಾಗಿ ಅವುಗಳಿಗೆ ಉಷ್ಣೋಪಚಾರಗಳನ್ನೇ ಮಾಡಿಸಬೇಕೆಂದು ತಿಳಿಯತಕ್ಕದ್ದು.

ಅನ್ನಪಾನವಿಧಾವುಕ್ತಮುಪಧಾರ್ಯ ಶುಭಾಶುಭಮ್ ।
ಶುಭಂ ದೇಯಂ ವಿಷಾರ್ತೇಭ್ಯೋ ವಿರುದ್ಧೇಭ್ಯಶ್ಚ ವಾರಯೇತ್ ॥೨೯॥
ಫಾಣಿತಂ ಶಿಗ್ರುಸೌವೀರಮಜೀರ್ಣಾಧ್ಯಶನಂ ತಥಾ ।
ವರ್ಜಯೇಚ್ಚ ಸಮಾಸೇನ ನವಧಾನ್ಯಾದಿಕಂ ಗಣಮ್ ॥೩೦॥
ದಿವಾಸ್ವಪ್ನಂ ವ್ಯವಾಯಂ ಚ ವ್ಯಾಯಾಮಂ ಕ್ರೋಧಮಾತಪಮ್ ।
ಸುರಾತಿಲಕುಳತ್ಥಾಂಶ್ಚ ವರ್ಜಯೇದ್ಧಿ ವಿಷಾತುರಃ ॥೩೧॥

ಅರ್ಥ—ಅನ್ನಪಾನ ವಿಧಾನಗಳಲ್ಲಿ ಹೇಳಿರುವಂತೆ ಹಿತಾಹಿತಗಳನ್ನು ಗಮನಿಸಿ ನಿರ್ಧರಿಸಿ ತಿಳಿದುಕೊಂಡು ವಿಷಪೀಡಿತರಿಗೆ ಪಥ್ಯವಾದ ಆಹಾರ ವಿಹಾರಗಳಿಂದ ಉಪಚಾರ ಮಾಡುತ್ತಲೂ ಅಹಿತಗಳನ್ನು ತ್ಯಜಿಸುತ್ತಲೂ ಎಚ್ಚರಿಕೆಯಿಂದಿರಬೇಕು. ಅರ್ಧ ಪಾಕಕ್ಕೆ ಬಂದ ಬೆಲ್ಲ, ನುಗ್ಗೆಕಾಯಿ, ಕಲಗಚ್ಚು ಅಜೀರ್ಣಭೋಜನಗಳನ್ನೂ ನವ ಧಾನ್ಯಾದಿ ಗಣದ್ರವ್ಯಗಳನ್ನೂ ತ್ಯಜಿಸಬೇಕು. ವಿಷಪಾನ ಮಾಡಿರುವವನು ಹಗಲು ನಿದ್ರೆ, ಸ್ತ್ರೀಸಂಗ, ವ್ಯಾಯಾಮ, ಕ್ರೋಧ, ಬಿಸಿಲು, ಮದ್ಯ, ಎಳ್ಳು, ಹುರುಳಿ ಇವುಗಳನ್ನು ತ್ಯಜಿಸಿಬಿಡಬೇಕು.

ಪ್ರಸನ್ನದೋಷಂ ಪ್ರಕೃತಿಸ್ಥಧಾತುಮನ್ನಾಭಿಕಾಙ್ಕ್ಷಂ ಸಮಸೂತ್ರಜಿಹ್ವಮ್ ।
ಪ್ರಸನ್ನವರ್ಣೇನ್ದ್ರಿಯಚಿತ್ತಚೇಷ್ಟಂ ವೈದ್ಯೋಽವಗಚ್ಛೇದವಿಷಂ ಮನುಷ್ಯಮ್ ॥೩೨॥

ಅರ್ಥ—ವಾತಾದಿದೋಷಗಳು ಸ್ವಸ್ಥಾನಗಳಲ್ಲಿದ್ದು ತಮ್ಮ ತಮ್ಮ ಮಾರ್ಗಗಳಲ್ಲಿ ಸಂಚರಿಸುತ್ತಿರಬೇಕು. ಧಾತುಗಳು ಸಮಪ್ರಮಾಣದಿಂದಿರಬೇಕು, ರೋಗಿಗೆ ಆಹಾರದಲ್ಲಿ ಇಚ್ಛೆಯುಂಟಾಗಬೇಕು, ನಾಲಿಗೆಯು ಪದಾರ್ಥಗಳ ರುಚಿಯನ್ನು ಸರಿಯಾಗಿ ತಿಳಿಸುತ್ತಿರಬೇಕು, ಇಂದ್ರಿಯಗಳು ಸ್ವಕಾರ್ಯ ನಿರ್ವಾಹಮಾಡಲು ಸಮರ್ಥಗಳಾಗಿರಬೇಕು, ಶರೀರದ ಬಣ್ಣಗಳು ಬದಲಾಯಿಸಕೂಡದು. ನಿರ್ಮಲಚಿತ್ತನಾಗಿದ್ದು ನಿತ್ಯಕಾರ್ಯಗಳನ್ನು ನಿರ್ವಹಿಸತಕ್ಕ ಮನುಷ್ಯನನ್ನು ನಿರ್ವಿಷದೋಷವುಳ್ಳವನೆಂದು ಆರೋಗ್ಯವಂತನೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಕಲ್ಪಸ್ಥಾನೇ ದುನ್ದುಭಿಸ್ವನೀಯ ಕಲ್ಪನಾಮಕ ಷಷ್ಠಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ

ಸಪ್ತಮೋಽಧ್ಯಾಯಃ

ಅಥಾತೋ ಮೂಷಿಕಕಲ್ಪಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀಧನ್ವನ್ತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಮೂಷಿಕ ವಿಷಚಿಕಿತ್ಸಾಕಲ್ಪವನ್ನು ವಿವರಿಸುತ್ತೇವೆ.

ಪೂರ್ವಂ ಶುಕ್ರವಿಷಾ ಉಕ್ತಾ ಮೂಷಿಕಾ ಯೇ ಸಮಾಸತಃ ।
ನಾಮಲಕ್ಷಣಭೈಷಜ್ಯೈರಷ್ಟಾದಶ ನಿಬೋಧ ಮೇ ||೩||
ಲಾಲನಃ ಪುತ್ರಕಃ ಕೃಷ್ಣೋ ಹಂಸಿರಶ್ಚಿಕ್ಕಿರಸ್ತಥಾ ।
ಛುಚ್ಛುನ್ದರೋಽಲಸಶ್ಚೈವ ಕಷಾಯದಶನೋಽಪಿ ಚ ||೪||
ಕುಳಿಙ್ಗಶ್ಚಾಜಿತಶ್ಚೈವ ಚಪಲಃ ಕಪಿಲಸ್ತಥಾ ।
ಕೋಕಿಲೋಽರುಣಸಂಜ್ಞಶ್ಚ ಮಹಾಕೃಷ್ಣಸ್ತಥೋನ್ದುರಃ ||೫||
ಶ್ವೇತೇನ ಮಹತಾ ಸಾರ್ಧಂ ಕಪಿಲೇನಾಖುನಾ ತಥಾ ।
ಮೂಷಿಕಶ್ಚ ಕಪೋತಾಖ್ಯಸ್ತಥೈವಾಷ್ಟಾದಶ ಸ್ಮೃತಾಃ ||೬||
ಶುಕ್ರಂ ಪತತಿಯತ್ರೈಷಾಂ ಶುಕ್ರಸ್ಪೃಷ್ಟೈಃ ಸ್ಪೃಶನ್ತಿ ವಾ ।
ನಖದನ್ತಾದಿಭಿಸ್ತಸ್ಮಿನ್ ಗಾತ್ರೇ ರಕ್ತಂ ಪ್ರದುಷ್ಯತಿ ||೭||

ಅರ್ಥ—ಜಙ್ಗಮವಿಷ ವಿಜ್ಞಾನೀಯಾಧ್ಯಾಯದಲ್ಲಿ ಮೂಷಿಕಗಳು ಶುಕ್ರವಿಷಗಳೆಂದು ಹೇಳಿದೆ. ಅವುಗಳ ೧೮ ಭೇದಗಳನ್ನೂ ಅವುಗಳ ಹೆಸರು ಲಕ್ಷಣ ಚಿಕಿತ್ಸೆಗಳೊಡನೆ ವಿವರಿಸಲಾಗುತ್ತದೆ ; ಹೇಗೆಂದರೆ—ಲಾಲನ, ಪುತ್ರಕ, ಕೃಷ್ಣ, ಹಂಸಿರ, ಚಿಕ್ಕಿರ, ಛುಛುನ್ದರ, ಅಲಸ, ಕಷಾಯದಶನ, ಕುಳಿಙ್ಗ, ಅಜಿತ, ಚಪಲ, ಕೋಕಿಲ, ಅರುಣಸಂಜ್ಞಃ, ಮಹಾಕೃಷ್ಣಃ (ಉನ್ದುರು, ಮಹಾಶ್ವೇತ) (ಕಪಿಲಾಖುಃ, ಕಪೋತ ಮೂಷಿಕಃ) ಎಂಬ ಇಲಿಗಳ ಶುಕ್ರವು ಮನುಷ್ಯರ ದೇಹದ ಯಾವ ಭಾಗದಲ್ಲಿ ಬೀಳುತ್ತದೆಯೋ ಅಥವಾ ಅವುಗಳ ಶುಕ್ರಸಂಪರ್ಕವುಳ್ಳ ಉಗುರು ಹಲ್ಲುಗಳೇ ಆದಿಯಾಗಿ ಅವುಗಳ ಶರೀರಭಾಗವು ಮನುಷ್ಯರ ಶರೀರದ ಯಾವ ಭಾಗಕ್ಕೆ ತಗಲುತ್ತದೆಯೋ ಆ ಭಾಗದಲ್ಲಿ ರಕ್ತವು ಕೆಟ್ಟುಹೋಗುತ್ತದೆ.

ಟಿಪ್ಪಣಿ : ಇಲಿಗಳ ಶುಕ್ರಮಿಶ್ರವಾದ ಅವುಗಳ ಮಲಮೂತ್ರಗಳು ತಗಲಿದರೂ ಆ ಭಾಗದಲ್ಲಿರುವ ರಕ್ತವು ಕೆಡುತ್ತದೆ. ಆಲಮ್ಬಾಯನರ ಮತದಲ್ಲಿ ಇಲಿಗಳು ಶುಕ್ರ, ಮಲಮೂತ್ರ, ಉಗುರು, ಹಲ್ಲುಗಳಿಂದ (೫ ರೀತಿಯಿಂದ) ವಿಷವನ್ನು ಪ್ರಯೋಗಿಸುತ್ತವೆ. ತನ್ತ್ರಾನ್ತರಗಳಲ್ಲಿ ಇನ್ನೂ ವಿಶೇಷವುಂಟು–ಗರ್ಭಿಣಿಯಾದ ಇಲಿಯು ಕಚ್ಚಿದರೆ ಹುಳಿ ರಸ

ದಲ್ಲಿ ಬಯಕೆಯುಂಟಾಗುತ್ತದೆ. ರಜಸ್ವಲೆಯಾದ ಮೂಷಿಕೆಯು ಕಚ್ಚಿದರೆ ಮೇಹನ ದ್ವಾರದಿಂದ ರಕ್ತಸ್ರಾವವೂ ಹೊಟ್ಟೆಯುಬ್ಬರವೂ ರತಿಕಾಮನೆಯೂ ಉಂಟಾಗುತ್ತದೆಂದು ತಿಳಿಯಬರುತ್ತದೆ.

ಜಾಯನ್ತೇ ಗ್ರನ್ಥಯಃ ಶೋಫಾಃ ಕರ್ಣಿಕಾಮಂಡಲಾನಿ ಚ ।
ಪಿಡಕೋಪಚಯಶ್ಚೋಗ್ರೋ ವಿಸರ್ಪಾಃ ಕಿಟಿಭಾನಿ ಚ ||೮||
ಪರ್ವಭೇದೋರುಜಸ್ತೀವ್ರಾ ಮೂರ್ಛಾಙ್ಗಸದನಂ ಜ್ವರಃ ।
ದೌರ್ಬಲ್ಯಮರುಚಿಃ ಶ್ವಾಸೋ ವಮಥುರ್ಲೋಮಹರ್ಷಣಮ್ ||೯||
ದಷ್ಟರೂಪಂ ಸಮಾಸೋಕ್ತಮೇತದ್ವ್ಯಾಸಮತಃ ಶೃಣು ।

ಅರ್ಥ—ಕಚ್ಚಿದ ಸ್ಥಳದಲ್ಲಿ ಗಂಟುಗಳೂ, ಊದೂ, ಕರ್ಣಿಕೆಗಳೂ (ಉಂಗುರ ದಂತೆ ಗುಂಡಾದ ತಾವರೆಯ ಹೂವಿನ ಮಧ್ಯದ ಕರ್ಣಿಕೆಯಂತೆ ವ್ರಣದ ಸುತ್ತಲೂ ಮುದ್ರೆಹಾಕಿದಂತೆ ಗುಂಡಗಿರುವ) ಕಟ್ಟಿರುತ್ತದೆ, ಸಣ್ಣಸಣ್ಣ ಬೊಕ್ಕೆಗಳೇಳುತ್ತವೆ ; ವಿಸರ್ಪವೂ, ಚರ್ಮ ದಪ್ಪವಾಗಿ ಕಿಟಿಭದಂತಾಗುತ್ತದೆ (ಗಜಚರ್ಮದಂತೆ), ಬೆರಳುಗಳ ಗಿಣ್ಣುಗಳು ನೋಯುತ್ತವೆ, ತೀವ್ರವೇದನೆಯೂ, ಜ್ಞಾನತಪ್ಪುವಿಕೆಯೂ, ದೇಹ ಕ್ಷೀಣತೆ, ಜ್ವರ, ದೌರ್ಬಲ್ಯ, ಅರೋಚಕತೆ, ಮೇಲೆ ಮೇಲೆ ಉಬ್ಬಸ, ವಮನ, ರೋಮಾಂಚಗಳುಂಟಾಗುವುದು, ಇವು ಸಂಕ್ಷೇಪವಾಗಿ ಇಲಿ ಕಚ್ಚಿದ ಲಕ್ಷಣಗಳು. ಇನ್ನು ಮುಂದೆ ವಿಸ್ತಾರವಾಗಿ ಅವುಗಳ ಲಕ್ಷಣಗಳನ್ನು ತಿಳಿಸಲಾಗುತ್ತದೆ.

ಲಾಲಾಸ್ರಾವೋ ಲಾಲನೇನ ಹಿಕ್ಕಾಛರ್ದಿಶ್ಚ ಜಾಯತೇ ||೧೦||
ತಣ್ಡುಲೀಯಕಕಲ್ಕಂ ತು ಲಿಹ್ಯಾತ್ತತ್ರ ಸಮಾಕ್ಷಿಕಮ್ ।
ಪುತ್ರಕೇಣಾಙ್ಗಸಾದಶ್ಚ ಪಾಣ್ಡುವರ್ಣಶ್ಚ ಜಾಯತೇ ||೧೧||
ಚೀಯತೇ ಗ್ರನ್ಥಿಭಿಶ್ಚಾಙ್ಗಮಾಖುಶಾವಕಸನ್ನಿಭೈಃ ।
ಶಿರೀಷೇಙ್ಗುದಕಲ್ಕಂ ತು ಲಿಹ್ಯಾತ್ತತ್ರ ಸಮಾಕ್ಷಿಕಮ್ ||೧೨||
ಕೃಷ್ಣೇನ ದಂಶೇ ಶೋಫೋಽಸೃಕ್ಛರ್ದಿಃ ಪ್ರಾಯಶ್ಚ ದುರ್ದಿನೇ ।
ಶಿರೀಷಫಲಕುಷ್ಠಂ ತು ಪಿಬೇತ್ ಕಿಂಶುಕಭಸ್ಮನಾ ||೧೩||
ಹಂಸಿರೇಣಾನ್ನ ವಿದ್ವೇಷೋ ಜೃಮ್ಭಾ ರೋಮಾಞ್ಚಹರ್ಷಣಮ್ ।
ಪಿಬೇದಾರಗ್ವಧಾದಿಂ ತು ಸುವಾನ್ತಸ್ತತ್ರ ಮಾನವಃ ||೧೪||

ಅರ್ಥ—**ಲಾಲನನೆಂಬ** ಭೇದದ ಇಲಿಯು ಕಚ್ಚಿದರೆ ರೋಗಿಯ ಬಾಯಿನಿಂದ ಜೊಲ್ಲು ಸುರಿಯುತ್ತದೆ, ಬಿಕ್ಕಳಿಕೆ, ವಮನಗಳುಂಟಾಗುತ್ತವೆ, ಇದಕ್ಕೆ ಕಿರುಕುಸಾಲೆಯ ಕಲ್ಕ ಮತ್ತು ಜೇನುತುಪ್ಪಗಳನ್ನು ರಂಗಳಿಸಿ ನೆಕ್ಕಿಸಬೇಕು ; **ಪುತ್ರಕನೆಂಬ** ಇಲಿಯು ಕಚ್ಚಿದರೆ ಮೈಉರಿಯೂ, ಮೈಬೆಳ್ಳಗೂ ಆಗುತ್ತದೆ ; ಇಲಿಯ ಮರಿಯ ಆಕಾರವುಳ್ಳ ಗಂಟುಗಳು ಮೈಮೇಲೆಲ್ಲಾ ತುಂಬಿಕೊಳ್ಳುತ್ತವೆ. ಈ ರೋಗಿಗೆ ಬಾಗೆತೊಗಟೆ ಇಂಗಳದ ಹಣ್ಣುಗಳ ಕಲ್ಕಗಳಿಗೆ ಜೇನುತುಪ್ಪ ಮಿಶ್ರಮಾಡಿ ನೆಕ್ಕಿಸಬೇಕು. **ಕೃಷ್ಣ**ವೆಂಬ ಜಾತಿಯ

ಇಲಿಯು ಕಚ್ಚಿದರೆ ಕಚ್ಚಿದ ಸ್ಥಳವು ಊದುತ್ತದೆ ; ಪ್ರಾಯಿಕವಾಗಿ ಮೋಡ ಮುಚ್ಚಿ ಕೊಂಡಿರುವ ದಿನಗಳಲ್ಲಿ ರಕ್ತವಮನವಾಗುತ್ತದೆ ; ಬಾಗೆಬೀಜ, ಚಂಗಲ್‌ಕೋಷ್ಠಗಳ ಕಲ್ಕವನ್ನು ಮುತ್ತುಗದ ಕ್ಷಾರೋದಕದಲ್ಲಿ ಕದರಿ ಕುಡಿಸಬೇಕು. ಹಂಸಿರವೆಂಬ ಜಾತಿಯ ಇಲಿಯು ಕಚ್ಚಿದರೆ ಅನ್ನದ್ವೇಷವೂ, ಆಕಳಿಕೆಯೂ, ರೋಮಹರ್ಷವೂ ಉಂಟಾಗುತ್ತದೆ ; ಆ ರೋಗಿಗೆ ಚೆನ್ನಾಗಿ ವಮನಮಾಡಿಸಿ ಆರಗ್ವಧಾದಿಗಳ ಕಷಾಯ ವನ್ನು ಕುಡಿಸಬೇಕು.

ಚಿಕ್ಕರೇಣ ಶಿರೋದುಃಖಂ ಶೋಫೋ ಹಿಕ್ಕಾ ವಮಿಸ್ತಥಾ ।
ಜಾಲಿನೀಮದನಾಙ್ಕೋಟ ಕಷಾಯೈರ್ವಾಮಯೇತ್ತು ತಮ್ ॥೧೫॥
ಯವನಾಳರ್ಷಭೀಕ್ಷಾರಂ ಬೃಹತ್ಯೋಶ್ಚಾತ್ರ ದಾಪಯೇತ್ ।
ಛುಚ್ಛುನ್ದರೇಣ ತೃಟ್ ಛರ್ದಿಜ್ವರೋ ದೌರ್ಬಲ್ಯಮೇವ ಚ ॥೧೬॥
ಗ್ರೀವಾಸ್ತಮ್ಭಃ ಪೃಷ್ಠಶೋಫೋ ಗನ್ಧಾಜ್ಞಾನಂ ವಿಸೂಚಿಕಾ ।
ಚವ್ಯಂ ಹರೀತಕೀ ಶುಂಠೀ ವಿಡಙ್ಗಂ ಪಿಪ್ಪಲೀ ಮಧು ॥೧೭॥
ಅಙ್ಕೋಟಬೀಜಂ ಚ ತಥಾ ಪಿಬೇದತ್ರ ವಿಷಾಪಹಮ್ ।
ಗ್ರೀವಾಸ್ತಮ್ಭೋಽಲಸೇನೋರ್ಧ್ವವಾಯುರ್ದಂಶೇ ರುಜಾ ಜ್ವರಃ ॥೧೮॥
ಮಹಾಗದಂ ಸಸರ್ಪಿಷ್ಕಂ ಲಿಹ್ಯಾತ್ತತ್ರ ಸಮಾಕ್ಷಿಕಮ್ ।
ನಿದ್ರಾ ಕಷಾಯದನ್ತೇನ ಹೃಚ್ಛೋಷಃ ಕಾರ್ಶ್ಯಮೇವ ಚ ॥೧೯॥
ಕ್ಷೌದ್ರೋಪೇತಾಃ ಶಿರೀಷಸ್ಯ ಲಿಹ್ಯಾತ್ ಸಾರಫಲತ್ವಚಃ ।
ಕುಳಿಙ್ಗೇನ ರುಜಃ ಶೋಫೋ ರಾಜ್ಯಶ್ಚ ದಂಶಮಣ್ಡಲೇ ॥೨೦॥
ಸಹೇ ಸಸಿನ್ದುವಾರೇ ಚ ಲಿಹ್ಯಾತ್ತತ್ರ ಸಮಾಕ್ಷಿಕೇ ।

ಅರ್ಥ—ಚಿಕ್ಕಿರಮೂಷಿಕವು ಕಚ್ಚಿದರೆ ತಲೆನೋವು, ಶೋಫ, ಬಿಕ್ಕಳಿಕೆ, ವಮನಗಳುಂಟಾಗುತ್ತವೆ ; ಹೀರೆ, ಮಗ್ಗಾರೆಕಾಯಿ ಮತ್ತು ಅಂಕೋಲೆಯ ಬೇರು ಇವುಗಳ ಕಷಾಯದಿಂದ ವಮನಮಾಡಿಸಿ ಯವೆಕಡ್ಡಿ, ನಸುಗುನ್ನಿ, ಹೆಗ್ಗಳ, ನೆಲಗುಳ್ಳ ಇವುಗಳ ಕ್ಷಾರವನ್ನು ಜೇನುತುಪ್ಪದಿಂದ ಕಲೆಸಿ ನೆಕ್ಕಿಸಬೇಕು ; ಛುಛುನ್ದರೀ (ಮೂಗಿಲಿ) ಯು ಕಡಿದರೆ ಬಾಯಾರಿಕೆ, ವಮನ, ಜ್ವರ, ದೌರ್ಬಲ್ಯಗಳೂ, ಕತ್ತನ್ನು ತಿರುಗಿಸಲಾಗದೆ ಬಿಗಿದುಕೊಂಡಿರುವುದೂ, ಬೆನ್ನು ಊದುವುದೂ, ಗಂಧಜ್ಞಾನ ನಾಶವೂ, ವಿಸೂಚಿಕಾ ರೋಗವೂ ಉಂಟಾಗುತ್ತವೆ, ರೋಗಿಗೆ ವಿಷಹರಗಳಾದ ಚವ್ಯ, ಅಣಿಲೆಶಿಪ್ಪೆ, ಶುಂಠಿ, ವಿಡಂಗ, ಹಿಪ್ಪಲಿ, ಅಙ್ಕೋಲೆಬೀಜ ಇವುಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರ ಮಾಡಿ ಕುಡಿಸಬೇಕು. ಆಲಸವೆಂಬ ಇಲಿಯು ಕಚ್ಚಿದರೆ ಕತ್ತು ಬಿಗಿತವೂ ಮೇಲೆ ಮೇಲೆ ಉಸಿರಾಡುವುದೂ, ಕಚ್ಚಿದ ಜಾಗದಲ್ಲಿ ನೋವೂ, ಜ್ವರವೂ ಉಂಟಾಗುತ್ತವೆ ; ಆ ಆಗರೋಗಿಗೆ ಮಹಾಗದದಕಲ್ಕಕ್ಕೆ ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ನೆಕ್ಕಿಸ ಬೇಕು ; ಕಷಾಯದಂತವೆಂಬ ಜಾತಿಯ ಇಲಿಯು ಕಚ್ಚಿದರೆ (ಇಲಿಯ ಹಲ್ಲುಗಳು

ಕಷಾಯದಂತೆ ಕಪ್ಪು ಕೆಂಪು ಮಿಶ್ರವಾದ ಬಣ್ಣವುಳ್ಳದ್ದಾಗಿರುತ್ತದೆ), ರೋಗಿಗೆ ನಿದ್ರೆ ಬರುತ್ತದೆ. ಹೃದಯವು ಕ್ಷೀಣಿಸುತ್ತದೆ, ದೇಹ ಕ್ಷೀಣತೆಯುಂಟಾಗುತ್ತದೆ, ಬಾಗೆಮರದ ಮಧ್ಯದ ಕೆಚ್ಚುಮರ, ಕಾಯಿ, ತೊಗಟೆ ಇವುಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರ ಮಾಡಿ ಕುಡಿಸಬೇಕು ; **ಕುಳಿಂಗ**ವೆಂಬ ಭೇದದ ಇಲಿಯು ಕಚ್ಚಿದರೆ ನೋವು, ಶೋಫ ಕಚ್ಚಿದ ಸ್ಥಳದಲ್ಲಿ ಗೀರುಗೀರಾಗುವುದು ಈ ಲಕ್ಷಣಗಳುಂಟಾಗುತ್ತವೆ ; ಕಾಡುಉದ್ದು, ಕಾಡುಹೆಸರು ಲಕ್ಕಿಸೊಪ್ಪು ಇವುಗಳ ಸ್ವರಸ, ಕಲ್ಕಗಳಿಗೆ ಜೇನುತುಪ್ಪ ಮಿಶ್ರಮಾಡಿ ನೆಕ್ಕಿಸಬೇಕು.

ಅಜಿತೇನಾಙ್ಗಕೃಷ್ಣತ್ವಂ ಛರ್ದಿರ್ಮೂರ್ಛಾ ಚ ಹೃದ್ಗ್ರಹಃ ॥೨೧॥
ತತ್ರ ಸ್ನುಹೀಕ್ಷೀರಪಿಷ್ಟಾಂ ಪಾಳಿನ್ದೀಂ ಮಧುನಾ ಲಿಹೇತ್ ।
ಚಪಲೇನ ಭವೇಚ್ಛರ್ದಿರ್ಮೂರ್ಛಾ ಚ ಸಹ ತೃಷ್ಣಯಾ ॥೨೨॥
ಕ್ಷೌದ್ರೇಣ ತ್ರಿಫಲಾಂ ಲಿಹ್ಯಾದ್ಭದ್ರಕಾಷ್ಠಜಟಾನ್ವಿತಾಮ್ ।
ಕಪಿಲೇನ ವ್ರಣೇ ಕೋಥೋ ಜ್ವರೋ ಗ್ರನ್ಥ್ಯುದ್ಗಮಃ ಸತೃಟ್ ॥೨೩॥
ಲಿಹ್ಯಾನ್ಮಧುಯುತಾಂ ಶ್ವೇತಾಂ ಶ್ವೇತಾಂ ಚಾಪಿ ಪುನರ್ನವಾಮ್ ।
ಗ್ರನ್ಥಯಃ ಕೋಕಿಲೇನೋಗ್ರಾ ಜ್ವರೋ ದಾಹಶ್ಚ ದಾರುಣಃ ॥೨೪॥
ವರ್ಷಾಭೂನೀಲಿನೀಕ್ವಾಥ ಕಲ್ಕಸಿದ್ಧಂ ಘೃತಂ ಪಿಬೇತ್ ।

ಅರ್ಥ—**ಅಜಿತ**ವೆಂಬ ಜಾತಿ ಇಲಿಯು ಕಡಿದರೆ ವ್ರಣವು ಕಪ್ಪಾಗಿ ವಮನ, ಜ್ಞಾನನಾಶ, ಹೃದಯಗ್ರಹ ಇವುಗಳುಂಟಾಗುತ್ತವೆ ; ಆ ರೋಗಿಗೆ ತಿಗಡೆಯನ್ನು ಮುಂಡುಗಳ್ಳಿಯ ಹಾಲಿನಲ್ಲಿ ಅರೆದು ಜೇನುತುಪ್ಪವನ್ನು ಮಿಶ್ರಮಾಡಿ ನೆಕ್ಕಿಸಬೇಕು. ಚಪಲನೆಂಬ ಇಲಿಯು ಕಚ್ಚಿದರೆ ವಮನ, ಜ್ಞಾನನಾಶ, ನೀರಡಿಕೆಗಳುಂಟಾಗುತ್ತವೆ, ಆಗ ತ್ರಿಫಲೆ, ಮತ್ತು ದೇವದಾರುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ, ನೆಕ್ಕಿಸ ಬೇಕು. **ಕಪಿಲ**ವೆಂಬ ಜಾತಿಯ ಇಲಿಯು ಕಚ್ಚಿದರೆ ವ್ರಣವು ಕೊಳೆತು ಜ್ವರವೂ ಗ್ರಂಥಿಗಳೂ, ಬಾಯಾರಿಕೆಯೂ ಉಂಟಾಗುತ್ತವೆ, ಆಗ ಜೇನುತುಪ್ಪ ಮಿಶ್ರಮಾಡಿದ ಬಿಳಿಗಿರಿಕರ್ಣಿಕೆಯ ಕಲ್ಕವನ್ನಾಗಲೀ ಬಿಳಿಕೊಮ್ಮೆಯ ಕಲ್ಕವನ್ನಾಗಲೀ ನಕ್ಕಿಸಬೇಕು. **ಕೋಕಿಲ**ವೆಂಬ ಜಾತಿಯ ಇಲಿಯು ಕಚ್ಚಿದರೆ ಗಂಟುಗಳೇಳುತ್ತವೆ, ಉಗ್ರವಾದ ಜ್ವರವೂ ಅಸಾಧ್ಯವಾದ ಉರಿಯೂ ಉಂಟಾಗುತ್ತವೆ, ಆ ರೋಗಿಗೆ ಕೊಮ್ಮೆ ಮತ್ತು ನೀಲಿಗಿಡಗಳ ಕಷಾಯ ಮತ್ತು ಕಲ್ಕಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸ ಬೇಕು.

ಅರುಣೇನಾನಿಲಃ ಕ್ರುದ್ಧೋ ವಾತಜಾ೯ ಕುರುತೇ ಗದಾ೯ ॥೨೫॥
ಮಹಾಕೃಷ್ಣೇನ ಪಿತ್ತಂ ಚ ಶ್ವೇತೇನ ಕಫ ಏವ ಚ ।
ಮಹತಾ ಕಪಿಲೇನಾಸೃಕ್ ಕಪೋತೇನ ಚತುಷ್ಟಯಮ್ ॥೨೬॥
ಭವನ್ತಿ ಚೈಷಾಂ ದಂಶೇಷು ಗ್ರನ್ಥಿಮಣ್ಡಲಕರ್ಣಿಕಾಃ ।

ಪಿಡಕೋಪಚಯುಶ್ಚೋಗ್ರಃ ಶೋಫಶ್ಚ ಭೃಶದಾರುಣಃ ||೨೭||
ದಧಿಕ್ಷೀರಘೃತಪ್ರಸ್ಥಾಸ್ತ್ರಯಃ ಪ್ರತ್ಯೇಕಶೋ ಮತಾಃ |
ಕರಞ್ಜಾರಗ್ವಧವ್ಯೋಷ ಬೃಹತ್ಯಂಶುಮತೀಸ್ಥಿರಾಃ ||೨೮||
ನಿಃಕ್ವಾಥ್ಯ ಚೈಷಾಂ ಕ್ವಾಥಸ್ಯ ಚತುರ್ಥಾಂಶಃ ಪುನರ್ಭವೇತ್ |
ತ್ರಿವೃದ್ಗೋಜ್ಯಮೃತಾವಕ್ರಸರ್ಪಗಂಧಾಃ ಸವೃತ್ತಿಕಾಃ ||೨೯||
ಕಪಿತ್ಥದಾಡಿಮತ್ವಕ್ಚ ಶ್ಲಕ್ಷ್ಣಪಿಷ್ಟಾಃ ಪ್ರದಾಪಯೇತ್ |
ತತ್ಸರ್ವಮೇಕತಃಕೃತ್ವಾ ಶನೈರ್ಮೃದ್ವಗ್ನಿನಾ ಪಚೇತ್ ||೩೦||
ಪಞ್ಚಾನಾಮರುಣಾದೀನಾಂ ವಿಷಮೇತದ್ವ್ಯಪೋಹತಿ |
ಕಾಕಾದನೀಕಾಕಮಾಚೀಸ್ವರಸೇಷ್ವಥವಾ ಕೃತಮ್ ||೩೧||
ಸಿರಾಶ್ಚ ಸ್ರಾವಯೇತ್ಪ್ರಾಪ್ತಾಃ ಕುರ್ಯಾತ್ಸಂಶೋಧನಾನಿ ಚ |

ಅರ್ಥ—ಅರುಣವೆಂಬ ಜಾತಿಯ ಇಲಿಯು ಕಚ್ಚಿದರೆ ವಾತಪ್ರಕೋಪವುಂಟಾಗಿ ವಾತರೋಗಗಳನ್ನುಂಟುಮಾಡುತ್ತದೆ. ಮಹಾಕೃಷ್ಣದಿಂದ ಪಿತ್ತಪ್ರಕೋಪವೂ ಶ್ವೇತದಿಂದ ಕಫವೂ ಪ್ರಕೋಪವಾಗುತ್ತವೆ. ಮಹಾಕಪಿಲದಿಂದ ರಕ್ತಪ್ರಕೋಪವೂ, ಕಪೋತದಿಂದ ವಾತ, ಪಿತ್ತ, ಕಫ, ರಕ್ತ ಇವು ನಾಲ್ಕೂ ಪ್ರಕೋಪ ಹೊಂದುತ್ತವೆ. ಇವು ಕಚ್ಚಿದ ಶರೀರಭಾಗದಲ್ಲಿ ಗಂಟು, ವರ್ತುಳಾಕಾರದವ್ರಣ ಮತ್ತು ಪದ್ಮಕರ್ಣಿಕೆಯಂತೆ ದುರ್ಮಾಂಸ ವೃದ್ಧಿಯೂ ಉಂಟಾಗುತ್ತವೆ. ಗುಳ್ಳೆಗಳು ಇಂಗಬೇಕಾದರೆ ಹಾಲು ಮೊಸರು ತುಪ್ಪ ಪ್ರತಿಯೊಂದೂ ಒಂದೊಂದು ಪ್ರಸ್ಥಪ್ರಮಾಣವೂ ಹೊಂಗೆ, ಕಕ್ಕೆ, ತ್ರಿಕಟು, ಹೆಗ್ಗುಳ್ಳ, ಒಂದೆಲೆಹೊನ್ನೆ, ನೂರೆಲೆಹೊನ್ನೆ ಇವೆಲ್ಲವುಗಳ ಕಷಾಯ ೧ ಪ್ರಸ್ಥ ಇವೆಲ್ಲವನ್ನೂ ಕಾಯಿಸಿ ಕಾಲು ಅಂಶದಷ್ಟು ಶೇಷವನ್ನು ಉಳಿಸಿ ಅದಕ್ಕೆ ತಿಗಡೆ ಎತ್ತು ನಾಲಿಗೆಸೊಪ್ಪು, ಅಮೃತವಳ್ಳಿ, ತಗರ, ಈಶ್ವರೀಬೇರು, ಹುತ್ತದಮಣ್ಣು ಬೇಲದ ಮತ್ತು ದಾಳಿಂಬೆಯ ತೊಗಟೆ ಇವು ೧ ಕುಡವದಷ್ಟನ್ನು ನುಣ್ಣಗೆ ಕಲ್ಕಮಾಡಿ ಸೇರಿಸಿ ಮಂದಾಗ್ನಿಯಿಂದ ಪಾಕಮಾಡಿ ಪ್ರಯೋಗಿಸಿದರೆ ಅರುಣ ಮೊದಲಾದ ೫ ವಿಧ ಇಲಿಗಳ ವಿಷವು ನಾಶವಾಗುತ್ತದೆ. ಅಥವಾ ಗುಲಗಂಜಿ, ಗಣಿಕೆಗಳ ಸ್ವರಸದಿಂದ ತಯಾರಿಸಿದ ರಸಕ್ರಿಯೆಯನ್ನೂ ಪ್ರಯೋಗಿಸಬೇಕು. ಉಬ್ಬಿರುವ ಸಿರೆಗಳನ್ನೂ ಸ್ರಾವ ಮಾಡಿಸಬೇಕು. ಶೋಧನೌಷಧಗಳನ್ನೂ ಪ್ರಯೋಗಿಸಬೇಕು.

ಟಿಪ್ಪಣಿ : ಮೊಸರು ಮೊದಲಾದುವು ೩ ಪ್ರಸ್ಥ ಹೊಂಗೇಬೀಜ ಮೊದಲಾದುವುಗಳ ಕಲ್ಕ ೨ ಪಲಗಳಂತೆ ೧ ಆಢಕದಷ್ಟು ನೀರಿನಲ್ಲಿ ಕಷಾಯವನ್ನು ಕಾಯಿಸಿ ೧ ಪ್ರಸ್ಥದಷ್ಟನ್ನು ಉಳಿಸಿಕೊಳ್ಳಬೇಕು, ಒಟ್ಟು ೪ ಪ್ರಸ್ಥದ್ರವದ್ರವ್ಯಗಳಿಗೆ ತಿಗಡೆಬೇರು ಮೊದಲಾದುವುಗಳ ಕಲ್ಕ ೧ ಕುಡವದಷ್ಟನ್ನು ಸೇರಿಸಿ ತಯಾರಿಸಿದ ಘೃತವು ವಿರೇಚನಕಾರಿಯು. ಅಗನ್ನತ್ತಿಕಾ, ಶಲ್ಲಕೀ (ನಾಯಿಬೇಲ), ಸಿರಾಃ, ಮರ್ಮವನ್ನಾಶ್ರೈಸ್ಟದಿರುವ ಸಿರೆಗಳಿಂದ

ರಕ್ತಸ್ರಾವ ಮಾಡಿಸುತ್ತಾರೆ. ಸಂಶೋಧನಾದಿ, ವಮನ ವಿರೇಚನ ಮೊದಲಾಗಿ ನಸ್ಯದ ಪರ್ಯಂತವಿರುವ ಶೋಧನಕರ್ಮಗಳು.

ಸರ್ವೇಷಾಂ ಚ ವಿಧಿಃ ಕಾರ್ಯೋ ಮೂಷಿಕಾಣಾಂ ವಿಶೇಷ್ವಯಮ್ ||೩೨||
ದಗ್ಧ್ವಾವಿಸ್ರಾವಯೇದ್ದಂಶಂ ಪ್ರಚ್ಛಿತಂ ಚ ಪ್ರಲೇಪಯೇತ್ ।
ಶಿರೀಷರಜನೀಕುಷ್ಠಕುಙ್ಕುಮೈರ ಮೃತಾಯುತೈಃ ||೩೩||
ಛರ್ದನಂ ಜಾಲಿನೀ ಕ್ವಾಥೈಃ ಶುಕಾಖ್ಯಾಙಕೋಲಯೋರಪಿ ।

ಅರ್ಥ—ಎಲ್ಲಾ ಜಾತಿಯ ಮೂಷಿಕದಷ್ಟ ವಿಷಗಳಲ್ಲಿಯೂ ಈ ಸಿರಾವ್ಯಧದ ವಿಧಾನವನ್ನು ಆಚರಿಸಬೇಕು. ಕಚ್ಚಿದ ಸ್ಥಳವನ್ನು ಕಾದಸಲಾಕೆಯಿಂದ ಸುಟ್ಟು ರಕ್ತ ಸ್ರಾವ ಮಾಡಿಸಬೇಕು, ವಿಷಮಿಶ್ರವಾದ ಮಾಂಸವನ್ನು ಶಸ್ತ್ರದಿಂದ ಕತ್ತರಿಸಿ ಬಾಗೆಬೀಜ, ಅರಿಶಿನ, ಚಂಗಲ್‌ಕೋಷ್ಠ, ಕುಂಕುಮಕೇಸರಿ, ಅಮೃತವಳ್ಳಿ ಇವುಗಳ ಕಲ್ಕದಿಂದ ಲೇಪಿಸಬೇಕು ; ಕಹಿಹೀರೆಯ ಕಷಾಯ ಅಥವಾ ಬಾಗೆ ಮತ್ತು ಅಂಕೋಲೆಗಳ ಕಷಾಯ ವನ್ನು ಕುಡಿಸಿ ವಮನಮಾಡಿಸಬೇಕು.

ಶುಕಾಖ್ಯಾ ಕೋಶವತ್ಯೋ ಶ್ಚ ಮೂಲಂ ಮದನ ಏವ ಚ ||೩೪||
ದೇವದಾಳೀಫಲಂ ಚೈವ ದಧ್ನಾ ಪೀತ್ವಾ ವಿಷಂ ವಮೇತ್ ।
ಸರ್ವಮೂಷಿಕದಷ್ಟಾನಾಮೇಷಯೋಗಃ ಸುಖಾವಹಃ ||೩೫||
ಫಲಂ ವಚಾ ದೇವದಾಳೀ ಕುಷ್ಠಂ ಗೋಮೂತ್ರಪೇಷಿತಮ್ ।
ಪೂರ್ವಕಲ್ಪೇನ ಯೋಜ್ಯಾಃ ಸ್ಯುಃ ಸರ್ವೇನ್ದುರುವಿಷಚ್ಛಿದಃ ||೩೬||

ಅರ್ಥ—ಬಾಗೆ ಮತ್ತು ಕಹಿಹೀರೆಗಳ ಬೇರು ಮಗ್ಗಾರೆಕಾಯಿ ದೇವದಾಳಿಹಣ್ಣು ಇವೆಲ್ಲವನ್ನೂ ಕಲ್ಕಮಾಡಿ ಮೊಸರಿನಲ್ಲಿ ಕದರಿ ಕುಡಿಸಿ ವಿಷವನ್ನು ವಮನಮಾಡಿಸಬೇಕು. ಈ ಯೋಗವು ಎಲ್ಲಾ ತರದ ಇಲಿಗಳು ಕಚ್ಚಿದ ವಿಷವನ್ನೂ ಸುಖವಾಗಿ ನಿವಾರಿಸುತ್ತದೆ. ಮಗ್ಗಾರೆಕಾಯಿ ಬಜೆ ದೇವದಾಳಿಹಣ್ಣು ಚಂಗಲ್‌ಕೋಷ್ಠ ಇವುಗಳನ್ನು ಗೋಮೂತ್ರ ದಿಂದ ಅರೆದು ಮೊಸರಿನಲ್ಲಿ ಕದರಿ ಕುಡಿಸಿದರೆ ಎಲ್ಲಾ ವಿಧದ ಇಲಿಗಳು ಕಚ್ಚಿದ ವಿಷವು ಹೋಗುತ್ತದೆ.

ವಿರೇಚನೇ ತ್ರಿವೃದ್ದನ್ತೀತ್ರಿಫಲಾಕಲ್ಕ ಇಷ್ಯತೇ ।
ಶಿರೋವಿರೇಚನೇ ಸಾರಃ ಶಿರೀಷಸ್ಯ ಫಲಾನಿ ಚ ||೩೭||
ಪಿತೋಕಟುತ್ರಿಕಾಧ್ಯಶ್ಚ ಗೋಮಯಸ್ವರಸೋಽಞ್ಜನೇ ।
ಕಪಿತ್ಥಗೋಮಯರಸಃ ಸಕ್ಷಾದ್ರೋ ಲೇಹ ಇಷ್ಯತೇ ||೩೮||
ರಸಾಞ್ಜನಹರಿದ್ರೇನ್ದ್ರಯವಕಟ್ವೀಷು ವಾ ಕೃತಮ್ ।
ಪ್ರಾತಃ ಸಾತಿವಿಷಂ ಕಲ್ಕಂ ಲಿಹ್ಯಾನ್ಮಾಕ್ಷಿಕ ಸಂಯುತಮ್ ||೩೯||
ತಣ್ಡುಲೀಯಕಮೂಲೇಷು ಸರ್ಪಿಃ ಸಿದ್ಧಂ ಪಿಬೇನ್ನರಃ ।
ಆಸ್ಫೋತಮೂಲಸಿದ್ಧಂ ವಾ ಪಞ್ಚಕಾಪಿತ್ಥಮೇವ ವಾ ||೪೦||

ಅರ್ಥ—ತಿಗಡೆ, ಜಾಪಾಳದ ತೊಗಟೆ, ತ್ರಿಫಲೆಗಳ ಕಲ್ಕವನ್ನು ವಿರೇಚನಕ್ಕೂ ಬಾಗೆಯಮರದಸಾರ ಮತ್ತು ಕಾಯಿಗಳನ್ನು ಶಿರೋವಿರೇಚನಕ್ಕೂ ಉಪಯೋಗಿಸಿದರೆ ಹಿತಕರವು. ಗೋಮಯಸ್ವರಸಕ್ಕೆ ತ್ರಿಕಟುಚೂರ್ಣವನ್ನು ಹೆಚ್ಚಾಗಿ ಸೇರಿಸಿ ಕಣ್ಣಿಗೆ ಅಂಜನಮಾಡಿಸಿದರೆ ಹಿತಕರವಾಗುತ್ತದೆ. ಬೇಲದ ಹಣ್ಣಿನರಸ ಗೋಮಯರಸ ಜೇನು ತುಪ್ಪಗಳನ್ನು ಮಿಶ್ರಮಾಡಿ ನೆಕ್ಕಿಸುವುದೂ ಅಥವಾ ರಸಾಂಜನ, ಅರಿಶಿನ, ಕೊಡಶಿಗೆ ಬೀಜ, ಕಟುಕರೋಹಿಣಿ ಇವುಗಳ ಕಲ್ಕವನ್ನಾಗಲೀ ನೆಕ್ಕಿಸಿದರೆ ಹಿತವಾಗುತ್ತದೆ. ಅತಿ ಬಜೆಯ ಕಲ್ಕವನ್ನು ಜೇನುತುಪ್ಪ ಮಿಶ್ರಮಾಡಿ ಪ್ರತಿದಿನವೂ ನೆಕ್ಕಿಸಬೇಕು. ಕಿರುಕ ಸಾಲೆಯ ಬೇರಿನೊಡನೆ ತಯಾರಿಸಿದ ಘೃತವನ್ನಾಗಲೀ ಸೊಗದೆಬೇರಿನೊಡನೆ ತಯಾರಿಸಿದ ತುಪ್ಪವನ್ನಾಗಲೀ ಬೇಲದಹಣ್ಣು, ಬೇರು, ಹೂವು, ತೊಗಟೆ, ಎಲೆಗಳ (ಪಞ್ಚಕಾಪಿತ್ಥವೆಂಬ) ಕಷಾಯದೊಡನೆ ತಯಾರಿಸಿದ ಘೃತವನ್ನಾಗಲೀ ಕುಡಿಸಿದರೆ ಸಕಲ ವಿಧ ಮೂಷಿಕಗಳ ವಿಷವೂ ಪರಿಹಾರವಾಗುತ್ತದೆ.

ಮೂಷಿಕಾಣಾಂ ವಿಷಂ ಪ್ರಾಯಃ ಕುಪ್ಯತ್ಯಭ್ರೇಷ್ವನಿರ್ಹೃತಮ್ ।
ತತ್ರಾಪ್ಯೇಷವಿಧಿಃ ಕಾರ್ಯೋ ಯಶ್ಚ ದೂಷೀವಿಷಾಪಹಃ ॥೪೧॥
ಸ್ಥಿರಾಣಾಂ ರುಜತಾಂ ವಾಪಿ ವ್ರಣಾನಾಂ ಕರ್ಣಿಕಾಂ ಭಿಷಕ್ ।
ಪಾಟಯಿತ್ವಾ ಯಥಾದೋಷಂ ವ್ರಣವಚ್ಚಾಪಿ ಶೋಧಯೇತ್ ॥೪೨॥

ಅರ್ಥ—ಇಲಿ ಕಚ್ಚಿದ ವಿಷವು ಪ್ರಾಯಿಕವಾಗಿ ಮಳೆಗಾಲದಲ್ಲಿ ಕೆರಳುತ್ತದೆ. ಆಗಲೂ ಈ ರೀತಿಯಾಗಿಯೇ ಚಿಕಿತ್ಸೆಮಾಡಬೇಕು ಅಥವಾ ದೂಷೀವಿಷಕ್ಕೆ ಮಾಡುವ ಚಿಕಿತ್ಸೆಯನ್ನಾದರೂ ಮಾಡಬೇಕು. ಸ್ಥಿರವಾಗಿದ್ದು ನೋಯುತ್ತಿರುವ ಮೂಷಿಕದಷ್ಟ ವ್ರಣಗಳಲ್ಲಿರುವ ಕರ್ಣಿಕಾಕಾರದ ಮಾಂಸಾಂಕುರಗಳನ್ನು ಶಸ್ತ್ರದಿಂದ ಕತ್ತರಿಸಿ ತೆಗೆದು ಹಾಕಿ ದೋಷಗಳಿಗೆ ಅನುಸಾರವಾಗಿ ವ್ರಣಶೋಧನೆಯನ್ನು ಮಾಡಬೇಕು.

ಶೃಗಾಲಶ್ವತರಕ್ಷ್ವೃಕ್ಷವ್ಯಾಘ್ರಾದೀನಾಂ ಯದಾನಿಲಃ ।
ಶ್ಲೇಷ್ಮಪ್ರದುಷ್ಟೋ ಮುಷ್ಣಾತಿ ಸಂಜ್ಞಾಂ ಸಂಜ್ಞಾವಹಾ ಶ್ರಿತಃ ॥೪೩॥
ತದಾಪ್ರಸ್ರಸ್ತ ಲಾಙ್ಗೂಲಹನುಸ್ಕನ್ಧೋಽತಿಲಾಲವಾನ್ ।
ಅತ್ಯರ್ಥ ಬಧಿರೋಽನ್ಧಶ್ಚ ಸೋಽನ್ಯೋಽನ್ಯಮಭಿಧಾವತಿ ॥೪೪॥
ತೇನೋನ್ಮತ್ತೇನ ದಷ್ಟಸ್ಯ ದಂಷ್ಟ್ರಿಣಾ ಸವಿಷೇಣ ತು ।
ಸುಪ್ತತಾ ಜಾಯತೇ ದಂಶೇ ಕೃಷ್ಣಂ ಚಾತಿ ಸ್ರವತ್ಯಸೃಕ್ ॥೪೫॥
ದಿಗ್ಧವಿದ್ಧಸ್ಯ ಲಿಙ್ಗೇನ ಪ್ರಾಯಃಶಶ್ಚೋಪಲಕ್ಷಿತಃ ।
ಯೇನ ಚಾಪಿ ಭವೇದ್ದಷ್ಟಸ್ತಸ್ಯ ಚೇಷ್ಟಾಂ ರುತಂ ನರಃ ॥೪೬॥
ಬಹುಶಃ ಪ್ರತಿಕುರ್ವಾಣಃ ಕ್ರಿಯಾಹೀನೋ ವಿನಶ್ಯತಿ ।

ಅರ್ಥ—ಇಲಿಯು ಳ ಕಾಲುಳ್ಳ ಹಿಂಸಾಕರ ಪ್ರಾಣಿಯಾದ್ದರಿಂದ ಇದಕ್ಕೆ ಸಮಾನ ಗಳಾದ ದುಷ್ಟವಿಷವುಳ್ಳ ನರಿ, ನಾಯಿ, ಶಿವಂಗಿ, ಕರಡಿ, ಹುಲಿ ಮೊದಲಾದ ಪ್ರಾಣಿ

ಗಳಿಗೆ ಕಫದೂಷಿತವಾತವು ಅವುಗಳ ಸಂಜ್ಞಾವಹಸ್ರೋತಗಳನ್ನಾಶ್ರೈಸಿ ಅವುಗಳು ಜಾರಿ ಬಿದ್ದು ಬಾಯಿನಿಂದ ಜೊಲ್ಲನ್ನು ಹೆಚ್ಚಾಗಿ ಸುರಿಸುತ್ತಾ ಅತಿಯಾಗಿ ಕಿವುಡಾಗಿಯೂ ಕುರುಡಾಗಿಯೂ ಆಗಿ ಒಂದನ್ನೊಂದು ಕಚ್ಚುವುದಕ್ಕಾಗಿ ಅಟ್ಟಿಸಿಕೊಂಡು ಓಡುತ್ತವೆ. ಈರೀತಿ ವಿಷದ ಹಲ್ಲುಗಳುಳ್ಳ ಹುಚ್ಚುಪ್ರಾಣಿಗಳಿಂದ ಕಚ್ಚಲ್ಪಟ್ಟ ಮನುಷ್ಯನಿಗೆ ಕಡಿದ ಶರೀರಭಾಗದಲ್ಲಿ ಸ್ಪರ್ಶಹಾನಿಯೂ ಕಪ್ಪುಬಣ್ಣವೂ ಉಂಟಾಗಿ ಅತಿಯಾಗಿ ರಕ್ತಸ್ರಾವ ವುಂಟಾಗುತ್ತದೆ ; ವಿಷಬಳಿದ ಶಸ್ತ್ರದಿಂದ ಚುಚ್ಚಲ್ಪಟ್ಟ ವ್ರಣಲಕ್ಷಣಗಳಿಂದ ಕೂಡಿದವ ನಂತಿರುತ್ತಾನೆ. ಕಚ್ಚಿದ ಪ್ರಾಣಿಯಂತೆಯೇ ಚಲನವಲನಗಳನ್ನೂ (ಶಬ್ದ) ಧ್ವನಿ ಯನ್ನೂ ಅನುಕರಣೆ ಮಾಡುತ್ತಲೂ ನಿಶ್ಚೇಷ್ಟನಾಗಿಯೂ ಇರುವ ಪುರುಷನು ಸತ್ತು ಹೋಗುತ್ತಾನೆಂದು ತಿಳಿಯಬೇಕು.

ದಂಷ್ಟ್ರಿಣಾ ಯೇನ ದಷ್ಟಶ್ಚ ತದ್ರೂಪಂ ಯಸ್ತು ಪಶ್ಯತಿ ||೪೭||
ಅಪ್ಸು ವಾ ಯದಿ ವಾದರ್ಶೇರಿಷ್ಟಂ ತಸ್ಯ ವಿನಿರ್ದಿಶೇತ್ |
ತ್ರಸ್ಯತ್ಯಕಸ್ಮಾದ್ಯೋಽಭೀಕ್ಷ್ಣಂ ದೃಷ್ಟ್ವಾ ಸ್ಪೃಷ್ಟ್ವಾಪಿ ವಾ ಜಲಮ್ ||೪೮||
ಜಲತ್ರಾಸಂ ತು ವಿದ್ಯಾತ್ತಂ ರಿಷ್ಟಂ ತದಪಿ ಕೀರ್ತಿತಮ್ |
ಅದಷ್ಟೋ ವಾ ಜಲತ್ರಾಸೀ ನ ಕಥಞ್ಚನ ಸಿಧ್ಯತಿ ||೪೯||
ಪ್ರಸುಪ್ತೋಽಥೋತ್ಥಿತೋ ವಾಪಿ ಸ್ವಸ್ಥಸ್ತ್ರಸ್ತೋ ನ ಸಿಧ್ಯತಿ |

ಅರ್ಥ—ವಿಷಪ್ರಾಣಿಗಳಿಂದ ಕಚ್ಚಲ್ಪಟ್ಟ ಮನುಷ್ಯನು ನೀರಿನಲ್ಲಾಗಲೀ ಕನ್ನಡಿಯ ಲ್ಲಾಗಲೀ ಕಚ್ಚಿದ ಪ್ರಾಣಿಯ ಆಕಾರವನ್ನೇ ಕಂಡರೆ **ರಿಷ್ಟಲಕ್ಷಣವೆಂದು** ತಿಳಿಯಬೇಕು. ವಿಷಪ್ರಾಣಿಗಳಿಂದ ಕಚ್ಚಲ್ಪಟ್ಟ ಮನುಷ್ಯನು ಅಕಸ್ಮಾತ್ತಾಗಿ ನೀರನ್ನು ನೋಡಿಯಾಗಲೀ ನೀರಿನಲ್ಲಿ ಸ್ನಾನಮಾಡಿಯಾಗಲೀ ನೀರನ್ನು ಮುಟ್ಟಿದರಾಗಲೀ ಹೆದರಿದರೆ ಅವನಿಗೆ **ಜಲ ತ್ರಾಸರೋಗವೆಂದು** ತಿಳಿಯಬೇಕು. ಇದು ಮರಣಸೂಚಕ ಲಕ್ಷಣವು ; ವಿಷಪ್ರಾಣಿ ಗಳು ಕಚ್ಚದಿದ್ದರೂ ಯಾರಿಗೆ ಜಲತ್ರಾಸರೋಗವಿದೆಯೋ ಅವರಿಗೆ ಚಿಕಿತ್ಸೆ ಮಾಡಿದರೂ ಗುಣವಾಗುವುದಿಲ್ಲ ; ಮಲಗಿದ್ದು ಎಚ್ಚರವಾದಮೇಲೆ ಎದ್ದ ಆರೋಗ್ಯವಂತನೂ ಜಲ ತ್ರಾಸ ರೋಗವಿದೆಯೋ ಅವರಿಗೆ ಚಿಕಿತ್ಸೆಮಾಡಿದರೂ ಗುಣವಾಗುವುದಿಲ್ಲ ; ಮಲಗಿದ್ದು ಎಚ್ಚರವಾದಮೇಲೆ ಎದ್ದ ಆರೋಗ್ಯವಂತನೂ ಜಲತ್ರಾಸ ಹೊಂದಿದರೆ ಅವನೂ ಸಾಯು ತ್ತಾನೆ.

ಟಿಪ್ಪಣಿ ವಿಷಪ್ರಾಣಿಗಳು ಕಚ್ಚದಿದ್ದರೂ ಜಲತ್ರಾಸವುಂಟಾದರೆ ಮರಣ ಲಕ್ಷ ಣವು ಎಂದು ವಿಷವೈದ್ಯರು ಹೇಳುತ್ತಾರೆ ; ಶರೀರದಲ್ಲಿ ಕಫಸಂಚಯದಿಂದ ನೀರಿಲ್ಲದಿದ್ದರೂ ಜಲತ್ರಾಸವುಂಟಾಗುತ್ತದೆ. ಹೇಗೆಂದರೆ–ಬರಿಯ ಶ್ಲೇಷ್ಮವು ಬುದ್ಧಿಸ್ಥಾನವನ್ನಾಕ್ರಮಿಸಿ ದರೆ ಬುದ್ಧಿ ನಿರೋಧವುಂಟಾಗಿ ಎಚ್ಚರವಾಗಿರುವಾಗಲೂ ಮಲಗಿದ್ದು ಎದ್ದಮೇಲಾದರೂ ನೀರಿನಲ್ಲಿ ಸ್ನಾನಮಾಡುತ್ತಿರುವಂತೆ ತಿಳಿದು ನೀರನ್ನು ಕಂಡು ಹೆದರಿದವನಂತೆ ಬೆಚ್ಚು ಬೀಳುತ್ತಾನೆ, ಅವನಿಗೆ ಕಫಹರಗಳಾದ ಶೋಧನಶಮನ ಚಿಕಿತ್ಸೆಗಳನ್ನು ಮಾಡಬೇಕು,

ಮತ್ತು ಅವನು ಸ್ವಭಾವಿಕ ಮನುಷ್ಯನಂತೆ ಆಗುವವರೆಗೆ ಆಹಾರ ವಿಧಾನಗಳಲ್ಲೂ ಶ್ಲೇಷ್ಮಹರಗಳಾದುವನ್ನೇ ಭೋಜನಮಾಡಿಸಬೇಕು. ಈ ಜಲತ್ರಾಸವು ಕಫಪ್ರಕೋಪ ದಿಂದುಂಟಾಗುವಕಾರಣ ಮರಣಸೂಚಕ (ರಿಷ್ಟ) ಲಕ್ಷಣಗಳಲ್ಲವಾಗಿ ಚಿಕಿತ್ಸೆಮಾಡ ಬೇಕೆಂದು ಹೇಳುತ್ತಾರೆ. ವಿಷಪ್ರಾಣಿಗಳು ಕಚ್ಚಿದವನು ಜಲತ್ರಾಸವುಳ್ಳವನಾದರೆ ಅದು **ರಿಷ್ಟ ಲಕ್ಷಣವೆಂದು** ತಿಳಿಯಬೇಕು.

ವಿಸ್ರಾವ್ಯ ದಂಶಂ ತೈರ್ದಷ್ಟೇ ಸರ್ಪಿಷಾ ಪರಿದಾಹಿತಮ್ ||೫೦||
ಪ್ರದಿಹ್ಯಾದಗದೈಃ ಸರ್ಪಿಃ ಪುರಾಣಂ ಪಾಯಯೇತ ಚ |
ಅರ್ಕಕ್ಷೀರಯುತಂ ಹ್ಯಸ್ಯ ದದ್ಯಾಚ್ಚಾಪಿ ವಿಶೋಧನಮ್ ||೫೧||
ಶ್ವೇತಾಂ ಪುನರ್ನವಾಂ ಚಾಸ್ಯ ದದ್ಯಾದ್ಧತ್ತೂರಕಾಯುತಾಮ್ |
ಪಲಲಂ ತಿಲತೈಲಂ ಚ ರೂಪಿಕಾಯಾಃ ಪಯೋ ಗುಡಃ ||೫೨||
ನಿಹನ್ತಿ ವಿಷಮಾಲರ್ಕಂ ಮೇಘವೃನ್ದಮಿವಾನಿಲಃ |

ಅರ್ಥ—ವಿಷಪ್ರಾಣಿಗಳು ಕಚ್ಚಿದ ಮನುಷ್ಯನಿಗೆ ಕಚ್ಚಿದ ಸ್ಥಾನವನ್ನು ಕೈಯ್ಯಿ ನಿಂದ ಹಿಂಡಿ ವಿಷವನ್ನು ಹೊರಕ್ಕೆ ಹೊರಡಿಸಿ ಕಾದತುಪ್ಪದಿಂದ ಸುಡಬೇಕು ಮತ್ತು ಮಹಾಗದಾದಿಗಳಿಂದ ಲೇಪನೆಮಾಡಿ ಪುರಾಣಘೃತವನ್ನು ಕುಡಿಸಬೇಕು, ಮತ್ತು ಎಕ್ಕದ ಹಾಲನ್ನು ಮಿಶ್ರಮಾಡಿ ಶೋಧನೌಷಧಗಳನ್ನು ಕುಡಿಸಿ ಉಮತ್ತಿಸೊಪ್ಪನ್ನೂ ಬಿಳಿಯ ಕೊಮ್ಮೆಯಬೇರನ್ನೂ ಮಿಶ್ರಮಾಡಿ ತಿನ್ನಿಸಬೇಕು ; ಎಳ್ಳು ಕಲ್ಕಕ್ಕೆ ಸ್ನೇಹಮಿಶ್ರಮಾಡಿ ಎಳ್ಳೆಣ್ಣೆ, ಎಕ್ಕದಹಾಲು, ಬೆಲ್ಲ-ಇವುಗಳನ್ನು ಸೇವಿಸಿದರೆ ಗಾಳಿಯು ಮೋಡಗಳ ಸಮೂಹ ವನ್ನು ಚದರಿಸುವಂತೆಯೇ ಹುಚ್ಚುನಾಯಿ ಕಚ್ಚಿದ ವಿಷವು ನಾಶವಾಗುತ್ತದೆ.

ಮೂಲಸ್ಯ ಶರಪುಂಖಾಯಾಃ ಕರ್ಷಂ ಧುತ್ತೂರಕಾರ್ಧಿಕಮ್ ||೫೩||
ತಣ್ಡುಲೋದಕಮಾದಾಯ ಪೇಷಯೇತ್ತಣ್ಡುಲೈಃ ಸಹ |
ಉನ್ಮತ್ತಕಸ್ಯ ಪತ್ರೈಸ್ತು ಸಂವೇಷ್ಟ್ಯಾಪೂಪಕಂ ಪಚೇತ್ ||೫೪||
ಖಾದೇದೌಷಧಕಾಲೇ ತಮಾಲರ್ಕವಿಷದೂಷಿತಃ |
ಕರೋತ್ಯನ್ಯಾನ್ ವಿಕಾರಾಂಸ್ತು ತಸ್ಮಿನ್ ಜೀರ್ಯತಿ ಚೌಷಧೇ ||೫೫||
ವಿಕಾರಾಃ ಶಿಶಿರೇ ಯಾಪ್ಯಾ ಗೃಹೇ ವಾರಿವಿವರ್ಜಿತೇ |
ತತಃ ಶಾನ್ತವಿಕಾರಸ್ತು ಸ್ನಾತ್ವಾ ಚೈವಾಪರೇಽಹನಿ ||೫೬||
ಶಾಲಿಷಷ್ಟಿಕಯೋರ್ಭಕ್ತಂ ಕ್ಷೀರೇಣೋಷ್ಣೇನ ಭೋಜಯೇತ್ |
ದಿನತ್ರಯೇ ಪಞ್ಚಮೇ ವಾ ವಿಧಿರೇಷೋಽರ್ಧಮಾತ್ರಯಾ ||೫೭||
ಕರ್ತವ್ಯೋ ಭಿಷಜಾವಶ್ಯಮಲರ್ಕವಿಷನಾಶನಃ |
ಕುಪ್ಯೇತ್ ಸ್ವಯಂ ವಿಷಂ ಯಸ್ಯ ನ ಸ ಜೀವತಿ ಮಾನವಃ ||೫೮||
ತಸ್ಮಾತ್ ಪ್ರಕೋಪಯೇದಾಶು ಸ್ವಯಂ ಯಾವನ್ನ ಕುಪ್ಯತಿ |

ಅರ್ಥ—ಹುಚ್ಚುನಾಯಿ, ನರಿ ಮೊದಲಾದುವು ಕಡಿದರೆ ಮಾಡಬೇಕಾದ ಚಿಕಿತ್ಸೆ -ಕೊಗ್ಗೆಬೇರು ೧ ಕರ್ಷ, ಉಮ್ಮತ್ತಿಬೇರು ಅರ್ಧ ಕರ್ಷ ಇವುಗಳೊಡನೆ ಅಕ್ಕಿಯನ್ನೂ ಸೇರಿಸಿ ಕಲಗಚ್ಚಿನಿಂದ ಅರೆದು ಕಲ್ಕಮಾಡಿ ೭ ಉಮ್ಮತ್ತಿ ಎಲೆಗಳಲ್ಲಿಟ್ಟು ಸುತ್ತಿ ಬೇಯಿಸಿ ರೊಟ್ಟಿಯನ್ನು ಮಾಡಬೇಕು ; ಹುಚ್ಚುಹಿಡಿದ ನಾಯಿ ಮೊದಲಾದ ಪ್ರಾಣಿಗಳಿಂದ ಕಚ್ಚಲ್ಪಟ್ಟ ಮನುಷ್ಯನಿಗೆ ಔಷಧಪ್ರಯೋಗಮಾಡುವ ಕಾಲದಲ್ಲಿ ಆ ರೊಟ್ಟಿಯನ್ನು ತಿನ್ನಿಸಬೇಕು, ಈ ಔಷಧಿಯು ಜೀರ್ಣಿಸುತ್ತಿರುವಾಗ ನಾಯಿ ಮೊದಲಾದುವುಗಳಂತೆಯೇ ಬೊಗುಳುವುದು ಓಡುವುದು ಕಚ್ಚುವುದು ಮೊದಲಾದ ಚೇಷ್ಟೆಗಳನ್ನೂ ರೋಗಿಯು ಮಾಡುತ್ತಾನೆ ; ಶೀತಕಾಲದಲ್ಲಿ ನೀರು ಇಲ್ಲದ ಮನೆಯಲ್ಲಿ ರೋಗಿಯನ್ನು ಮಲಗಿಸಿದರೆ ಶಮನವಾಗುತ್ತದೆ ; ಈ ವಿಕಾರಗಳೆಲ್ಲಾ ನಿಂತಮೇಲೆ ಆ ಮೂರನೆಯ ದಿವಸ -ಸ್ನಾನ ಮಾಡಿಸಿ ೬೦ ದಿನಗಳ ಅಕ್ಕಿಯ ಅನ್ನಕ್ಕೆ ಬಿಸಿಹಾಲನ್ನು ಸೇರಿಸಿ ಭೋಜನ ಮಾಡಿಸ ಬೇಕು ; ಹೀಗೆಯೇ ೩ ನೆಯ ಮತ್ತು ೫ ನೆಯ ದಿವಸಗಳಲ್ಲಿ ಅರ್ಧಪ್ರಮಾಣದಿಂದ ಔಷಧವನ್ನು ಪ್ರಯೋಗಿಸಿ ಉಪಚರಿಸಬೇಕು. ವೈದ್ಯರು ಅವಶ್ಯಕವಾಗಿ ನಾಯಿ ಮೊದ ಲಾದ ಹುಚ್ಚು ಹಿಡಿದ ಪ್ರಾಣಿಗಳು ಕಚ್ಚಿದ ರೋಗಿಗೆ ಈ ವಿಧಾನದಿಂದ ಚಿಕಿತ್ಸೆಮಾಡ ಬೇಕು. ಯಾರಿಗೆ ವಿಷವು ತಾನಾಗಿಯೇ ಪ್ರಕೋಪಿಸುತ್ತದೋ ಅವನು ಬದುಕುವುದಿಲ್ಲ, ಆದಕಾರಣ ಕಚ್ಚಿದ ವಿಷವು ತಾನಾಗಿ ಕೆರಳುವುದಕ್ಕೆ ಮುಂಚೆಯೇ ವಿಷವನ್ನು ಮೇಲೆ ಹೇಳಿದ ಔಷಧಪ್ರಯೋಗದಿಂದ ಕೆರಳಿಸಬೇಕು.

ಬೀಜರತ್ನೌಷಧೀಗರ್ಭೈಃ ಕುಮ್ಭೈಃ ಶೀತಾಮ್ಬುಪೂರಿತೈಃ ॥೫೯॥
ಸ್ನಾಪಯೇತ್ತಂ ನದೀತೀರೇ ಸಮನ್ತ್ರೈರ್ವಾ ಚತುಷ್ಪಥೇ ।
ಬಲಿಂ ನಿವೇದ್ಯ ತತ್ರಾಪಿ ಪಿಣ್ಯಾಕಃ ಪಲಲಂ ದಧಿ ॥೬೦॥
ಮಾಲ್ಯಾನಿ ಚ ವಿಚಿತ್ರಾಣಿ ಮಾಂಸಂ ಪಕ್ವಾಮಕಂ ತಥಾ ।
ಅಲರ್ಕಾಧಿಪತೇ ಯಕ್ಷ ಸಾರಮೇಯಗಣಾಧಿಪ ॥೬೧॥
ಅಲರ್ಕಜುಷ್ಟಮೇತನ್ಮೇ ನಿರ್ವಿಷಂ ಕುರು ಮಾಚಿರಾತ್ ।
ದದ್ಯಾತ್ಸಂಶೋಧನಂ ತೀಕ್ಷ್ಣಮೇವಂ ಸ್ನಾತಸ್ಯ ದೇಹಿನಃ ॥೬೨॥
ಅಶುದ್ಧಸ್ಯ ಸುರೂಢೇಽಪಿ ವ್ರಣೇ ಕುಪ್ಯತಿ ತದ್ವಿಷಮ್ ।

ಅರ್ಥ—ಹುಚ್ಚುನಾಯಿ ಕಚ್ಚಿದಾಗ ಹೆದರಿಕೆಯುಂಟಾಗುತ್ತದೆಯಷ್ಟೆ ! ಈ ಭೂತಾಭಿಷಙ್ಗದ ನಿವಾರಣೆಗಾಗಿ ವೈದಿಕಮನ್ತ್ರದಿಂದ ಸ್ನಾನವಿಧಾನವನ್ನು ಹೇಳುತ್ತಾರೆ. ಹೇಗೆಂದರೆ-ತಣ್ಣೀರು ತುಂಬಿದ ಕುಂಭದೊಳಗೆ ಧಾನ್ಯಬೀಜಗಳು, ರತ್ನಗಳು, ಸೋಮ ವಲ್ಲೀ ಮೊದಲಾದ ಔಷಧಗಳನ್ನು ತುಂಬಿ ಮಂತ್ರಗಳಿಂದ ಅಭಿಮಂತ್ರಿಸಿ ರೋಗಿಯನ್ನು ನದೀ ತೀರದಲ್ಲಾಗಲೀ ನಾಲ್ಕುದಾರಿ ಕೂಡುವ ಸ್ಥಳದಲ್ಲಾಗಲೀ ಕೂರಿಸಿ ಆ ಕುಂಭದ ನೀರಿನಿಂದ ಸ್ನಾನಮಾಡಿಸಬೇಕು. ಅದೇ ಸ್ಥಳದಲ್ಲಿ ಎಳ್ಳಿನ ಹಿಂಡಿ ತುಪ್ಪ ಮಿಶ್ರಮಾಡಿದ ಚಿಗಳಿ, ಮೊಸರು, ಬೆಂದಮಾಂಸ, ಹಸಿಯಮಾಂಸ, ಮೊದಲಾದುವುಗಳಿಂದ ಬಲಿಯನ್ನು

ಗುಡ್ಡೆಮಾಡಿ ಹಾಕಿ ಅನೇಕ ಬಣ್ಣದ ಹೂವುಗಳ ಮಾಲಿಕೆಗಳಿಂದ ಅಲಂಕರಿಸಿ "ಅಲಕಾ ಪುರಕ್ಕೆ ಅಧಿಪತಿಯಾದ ಯಕ್ಷರಾಜನೇ ನಾಯಿಗಳ ಕುಲಕ್ಕೆ ಒಡೆಯನೆ ! ಹುಚ್ಚುನಾಯಿ ಕಡಿದ ವಿಷದಿಂದ ಪೀಡಿತನಾಗಿರುವ ಈ ರೋಗಿಗೆ ವಿಷ ನಿವಾರಣೆಮಾಡಿ ಬೇಗನೇ ನಿರ್ವಿಷವುಳ್ಳವನನ್ನಾಗಿ ಮಾಡು" ಎಂದು ಪ್ರಾರ್ಥಿಸಿಕೊಳ್ಳಬೇಕು. ಸ್ನಾನವಾದ ನಂತರ ತೀಕ್ಷ್ಣಗಳಾದ ಶೋಧನೌಷಧಗಳನ್ನು ಪ್ರಯೋಗಿಸಬೇಕು. ಶೋಧನೌಷಧ ಗಳಿಂದ ದೇಹಶುದ್ಧಿಯಾಗದಿರುವವನಿಗೆ ವ್ರಣವು ಮಾದುಹೋಗಿದ್ದರೂ ವಿಷವು ಕೆರಳು ತ್ತದೆ.

ಶ್ವಾದಯೋಽಭಿಹಿತಾ ವ್ಯಾಳಾ ಯೇಽತ್ರ ದಂಷ್ಟ್ರಾವಿಷಾ ಮಯಾ ॥೬೩॥
ಅತಃ ಕರೋತಿ ದಷ್ಟಸ್ತು ತೇಷಾಂ ಚೇಷ್ಟಾಂ ಋತಂ ನರಃ ।
ಬಹುಶಃ ಪ್ರತಿಕುರ್ವಾಣೋ ನ ಚಿರಾತ್ ಮ್ರಿಯತೇ ಚ ಸಃ ॥೬೪॥

ಅರ್ಥ—ನಾನು ಇದುವರೆಗೆ ದಂಷ್ಟ್ರಾವಿಷವುಳ್ಳ ನಾಯಿ, ನರಿ ಮೊದಲಾದ ಪ್ರಾಣಿ ಗಳನ್ನು ವಿವರಿಸಿರುತ್ತೇನೆಯಷ್ಟೆ, ಅವುಗಳು ಕಚ್ಚಿದ ಮನುಷ್ಯನು ಅವುಗಳಂತೆಯೇ ಚೇಷ್ಟೆ ಯನ್ನೂ, ನಡೆಯುವುದು, ಮುಖವಿಕಾರಾದಿಗಳನ್ನೂ ಶಬ್ದ ಧ್ವನಿಗಳನ್ನೂ ಮಾಡು ತ್ತಾನೆ. ಅವುಗಳಿಗೆ ಪ್ರತೀಕಾರ ವಿಧಾನಗಳನ್ನು ಅನೇಕಸಾರಿ ಪ್ರಯೋಗಿಸಿದರೆ ಆ ಮನುಷ್ಯನು ಬಲು ದಿವಸಗಳವರೆಗೂ ಸಾಯುವುದಿಲ್ಲ (ರೋಗನಿವಾರಣೆಯಾಗುತ್ತ ದೆಂದರ್ಥ).

ನಖದಂತಕ್ಷತಂ ವ್ಯಾಳೈರ್ಯತ್ಕೃತಂ ತದ್ವಿಮರ್ದಯೇತ್ ।
ಸಿಞ್ಚೇತ್ ತೈಲೇವ ಕೋಷ್ಣೇನ ತೇ ಹಿ ವಾತಪ್ರಕೋಪಕಾಃ ॥೬೫॥

ಅರ್ಥ—ವಿಷಪ್ರಾಣಿಗಳು ಉಗುರಿನಿಂದ ಪರಚಿಯೂ ಹಲ್ಲುಗಳಿಂದ ಕಚ್ಚಿಯೂ ಮಾಡಿದ ಘಾಯಗಳನ್ನು ಚೆನ್ನಾಗಿ ಹಿಸುಕಿ ವಿಷವನ್ನು ಹೊರಕ್ಕೆ ಹೊರಡಿಸಿ ಸುಖೋಷ್ಣ ವಾದ ತಿಲತೈಲವನ್ನು ಆ ವ್ರಣಗಳಮೇಲೆ ನಿಧಾನವಾಗಿ ಸುರಿಸಬೇಕು. ಏಕೆಂದರೆ ಉಗುರು ಹಲ್ಲುಗಳಿಂದಾದ ಘಾಯವು ವಾತಪ್ರಕೋಪವನ್ನುಂಟುಮಾಡುತ್ತದೆ.

ಇತಿ ಶ್ರೀಸುಶ್ರುತ ಸಂಹಿತಾಯಾಂ ಕಲ್ಪಸ್ಥಾನೇ ಮೂಷಿಕ ಕಲ್ಪನಾಮಕ
ಸಪ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀ
ನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ.

ಅಷ್ಟಮೋಽಧ್ಯಾಯಃ

ಅಥಾತಃ ಕೀಟಕಲ್ಪಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಅರ್ಥ—ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಕೀಟವಿಷ ಕಲ್ಪವನ್ನು ವಿವರಿಸುತ್ತೇವೆ.

ಸರ್ಪಾಣಾಂ ಶುಕ್ರವಿಣ್ಮೂತ್ರಶವಪೂತ್ಯಣ್ಡ ಸಂಭವಾಃ ।
ವಾಯ್ವಗ್ನ್ಯಮ್ಬುಪ್ರಕೃತಯಃ ಕೀಟಾಸ್ತು ವಿವಿಧಾಃ ಸ್ಮೃತಾಃ ||೩||
ಸರ್ವದೋಷಪ್ರಕೃತಿಭಿರ್ಯುಕ್ತಾಸ್ತೇ ಪರಿಣಾಮತಃ ।
ಕೀಟತ್ವೇಽಪಿ ಸುಘೋರಾಃ ಸ್ಯುಃ ಸರ್ವಏವ ಚತುರ್ವಿಧಾಃ ||೪||

ಅರ್ಥ—ಸರ್ಪಗಳ ಶುಕ್ರ, ಮಲ, ಮೂತ್ರ, ಸತ್ತು ಕೊಳೆತ ದೇಹ, ಮೊಟ್ಟೆ, ಇವುಗಳಿಂದ ವಾತ, ಅಗ್ನಿ (ಪಿತ್ತ), ನೀರು ಕಫ ಪ್ರಕೃತಿಯುಳ್ಳ ಅನೇಕವಿಧ ಕೀಟಗಳು ಉತ್ಪನ್ನವಾಗುತ್ತವೆ. ತ್ರಿದೋಷ ಪ್ರಕೃತಿಗಳ ಪರಿಣಾಮದಿಂದ ಹುಟ್ಟುವ (ವೈಕರಂಜಾದಿಗಳ ಶುಕ್ರಮಲಮೂತ್ರಾದಿಗಳಿಂದ ಹುಟ್ಟುವ) ಕೀಟಗಳು ಅತಿ ಭಯಂಕರವಾದ ವಿಷವುಳ್ಳವಾಗುತ್ತವೆ. ಸಕಲ ಕೀಟಗಳನ್ನೂ ೪ ವಿಧಗಳನ್ನಾಗಿ ವಿಂಗಡಿಸಬಹುದು.

ಟಿಪ್ಪಣಿ: ದರ್ವೀಕರಾದಿ ಸರ್ಪಗಳ ಶುಕ್ರ, ಮಲಾದಿಗಳಿಂದ ವಾತಪ್ರಕೃತಿ ಕೀಟಗಳೂ, ಮಂಡಲಿಸರ್ಪಗಳ ಶುಕ್ರಮಲಮೂತ್ರಾದಿಗಳಿಂದ ಪಿತ್ತಪ್ರಕೃತಿಯ ಕೀಟಗಳೂ, ರಾಜಿಲಸರ್ಪಗಳ ಶುಕ್ರ ಮಲಮೂತ್ರಾದಿಗಳಿಂದ ಕಫಪ್ರಕೃತಿಯ ಕೀಟಗಳೂ, ಮೇಲೆ ಹೇಳಿದ ಮೂರು ವಿಧಗಳಾದ ಸರ್ಪಗಳ ವ್ಯತಿಕ್ರಮ ಸಂಪರ್ಕದಿಂದುಂಟಾಗುವ ೭ ವಿಧಗಳಾದ ವೈಕರಂಜಾದಿಗಳ ಶುಕ್ರಮಲಮೂತ್ರಾದಿಗಳಿಂದ ತ್ರಿದೋಷ ಪ್ರಕೃತಿಯುಳ್ಳ ಅತಿ ಭಯಂಕರ ವಿಷಮಯಗಳಾದ ಕೀಟಗಳೂ ಹುಟ್ಟುತ್ತವೆ ಎಂದು ತಿಳಿಯಬೇಕು.

ಕುಮ್ಭೀನಸಸ್ತುಣ್ಡಿಕೇರೀ ಶೃಙ್ಗೀ ಶತಕುಲೀರಕಃ ।
ಉಚ್ಚಿಟಿಙ್ಗೋಽಗ್ನಿನಾಮಾ ಚ ಚಿಚ್ಚಿಟಿಙ್ಗೋ ಮಯೂರಿಕಾ ||೫||
ಆವರ್ತಕಸ್ತಥೋರಭ್ರಃ ಸಾರಿಕಾಮುಖವೈದಳಾ ।
ಶರಾವಕುರ್ದೋಽಭೀರಾಜೀ ಪರುಷಶ್ಚಿತ್ರಶೀರ್ಷಕಃ ||೬||
ಶತಬಾಹುಶ್ಚ ಯಶ್ಚಾಪಿ ರಕ್ತರಾಜಿಃ ಪ್ರಕೀರ್ತಿತಃ ।
ಅಷ್ಟಾದಶೇತಿ ವಾಯವ್ಯಾಃ ಕೀಟಾಃ ಪವನಕೋಪನಾಃ ||೭||
ತೈರ್ಭವನ್ತೀಹ ದಷ್ಟಾನಾಂ ರೋಗಾ ವಾತನಿಮಿತ್ತಜಾಃ ।

ಅರ್ಥ—ಕುಮ್ಬೀನಸ, ತುಣ್ಡಿಕೇರಿ, ಶೃಙ್ಗೀ, ಶತಕುಳೀರಕ, ಉಚ್ಚಿಟಿಂಗ, ಅಗ್ನಿನಾಮಾ, ಚಿಚ್ಚಿಟಿಂಗ, ಮಯೂರಿಕಾ, ಆವರ್ತಕ, ಉರಭ್ರ, ಸಾರಿಕಾಮುಖ, ವೈದಳ, ಶರಾವಕುರ್ದ, ಅಭೀರಾಜೀ, ಪುರುಷಃ, ಚಿತ್ರಶೀರ್ಷಕ, ಶತಬಾಹು, ರಕ್ತರಾಜೀ ಎಂಬ ೧೮ ವಿಧ ವಾಯುವ್ಯ ಕೀಟಗಳು ಕಚ್ಚಿದರೆ ವಾತದೋಷವು ಪ್ರಕೋಪವಾಗಿ ವಾತ ರೋಗಗಳುಂಟಾಗುತ್ತವೆಂದು ತಿಳಿಯಬೇಕು.

ಕೌಣ್ಡಿನ್ಯಕಃ ಕಣಭಕೋ ವರಟೀ ಪತ್ರವೃಶ್ಚಿಕಃ ॥೮॥
ವಿನಾಸಿಕಾ ಬ್ರಾಹ್ಮಣಿಕಾ ಬಿನ್ದುಲೋ ಭ್ರಮರಸ್ತಥಾ ।
ಬಾಹ್ಯಕೀ ಪಿಚ್ಚಿಟಃ ಕುಮ್ಭೀ ವರ್ಚಃಕೀಟೋಽರಿಮೇದಕಃ ॥೯॥
ಪದ್ಮಕೀಟೋ ದುನ್ದುಭಿಕೋ ಮಕರಃ ಶತಪಾದಕಃ ।
ಪಞ್ಚಾಲಕಃ ಪಾಕಮತ್ಸ್ಯಃ ಕೃಷ್ಣತುಣ್ಡೋಽಥ ಗರ್ದಭೀ ॥೧೦॥
ಕ್ಲೀತಃ ಕ್ರಿಮಿಸರಾರೀ ಚ ಯಶ್ಚಾಪ್ಯುತ್ಕ್ಲೇಶಕಃ ಸ್ಮೃತಃ ।
ಏತೇ ಹ್ಯಗ್ನಿಪ್ರಕೃತಯಶ್ಚತುರ್ವಿಂಶತಿರೇವ ಚ ॥೧೧॥
ತೈರ್ಭವನ್ತೀಹ ದಷ್ಟಾನಾಂ ರೋಗಾಃ ಪಿತ್ತನಿಮಿತ್ತಜಾಃ ।

ಅರ್ಥ—ಕೌಣ್ಡಿನ್ಯಕ, ಕಣಭಕ, ವರಟೀ, ಪತ್ರವೃಶ್ಚಿಕ, ವಿನಾಸಿಕಾ, ಬ್ರಾಹ್ಮಣಿಕಾ, ಬಿನ್ದುಲಃ, ಭ್ರಮರ, ಬಾಹ್ಯಕೀ, ಪಿಚ್ಚಿಟಃ ಕುಮ್ಭೀ, ವರ್ಚಕಕೀಟ, ಅರಿಮೇದಕಃ, ಪದ್ಮಕೀಟಃ, ದುನ್ದುಭಿಕಃ ಮಕರಃ, ಶತಪಾದಕಃ, ಪಞ್ಚಾಲಕಃ, ಪಾಕಮತ್ಸ್ಯಃ, ಕೃಷ್ಣತುಣ್ಡಃ, ಗರ್ದಭೀ, ಕ್ಲೀತಃ, ಕ್ರಿಮಿಶರಾರೀ, ಉತ್ಕ್ಲೇಶಕಃ, ಈ ೨೪ ಅಗ್ನಿ ಪ್ರಕೃತಿಕೀಟಗಳು–ಇವು ಕಡಿದವರಿಗೆ ಪಿತ್ತಪ್ರಕೋಪದ ರೋಗಗಳುಂಟಾಗುತ್ತವೆ.

ವಿಶ್ವಮ್ಭರಃ ಪಞ್ಚಶುಕ್ಲಃ ಪಞ್ಚಕೃಷ್ಣೋಽಥ ಕೋಕಿಲಃ ॥೧೨॥
ಸೈರೇಯಕಃ ಪ್ರಚಲಕೋ ಬಲಭಃ ಕಿಟಿಮಸ್ತಥಾ ।
ಸೂಚೀಮುಖಃ ಕೃಷ್ಣಗೋಧಾ ಯಶ್ಚ ಕಾಷಾಯವಾಸಿಕಃ ॥೧೩॥
ಕೀಟಗರ್ದಭಕಶ್ಚೈವ ತಥಾ ತ್ರೋಟಕ ಏವ ಚ ।
ತ್ರಯೋದಶೈತೇ ಸೌಮ್ಯಾಃ ಸ್ಯುಃ ಕೀಟಾಃ ಶ್ಲೇಷ್ಮಪ್ರಕೋಪಣಾಃ ॥೧೪॥
ತೈರ್ಭವನ್ತೀಹ ದಷ್ಟಾನಾಂ ರೋಗಾಃ ಕಫನಿಮಿತ್ತಜಾಃ ।

ಅರ್ಥ—ವಿಶ್ವಮ್ಭರಃ, ಪಞ್ಚಶುಕ್ಲಃ, ಪಞ್ಚಕೃಷ್ಣಃ, ಕೋಕಿಲಃ, ಸೈರೇಯಕಃ ಪ್ರಚಲಕಃ, ಬಲಭಃ, ಕಿಟಿಮಃ, ಸೂಚೀಮುಖಃ, ಕೃಷ್ಣಗೋಧಾ, ಕಷಾಯವಾಸಿಕಃ, ಕೀಟಗರ್ದಭಕಃ, ತ್ರೋಟಕಃ ಈ ೧೩ ಸೌಮ್ಯಕೀಟಗಳು. ಕಫಪ್ರಕೋಪಕರಗಳು. ಇವು ಕಚ್ಚಿದವರಿಗೆ ಕಫಜನಿತ ರೋಗಗಳುಂಟಾಗುತ್ತವೆ.

ತುಙ್ಗಿನಾಸೋ ವಿಚಿಲಕಸ್ತಾಲಕೋ ವಾಹಕಸ್ತಥಾ ॥೧೫॥
ಕೋಷ್ಠಾಗಾರೀ ಕ್ರಿಮಿಕರೋ ಯಶ್ಚ ಮಣ್ಡಲಪುಚ್ಛಕಃ ।
ತುಣ್ಡನಾಭಃ ಸರ್ಷಪಿಕೋಽವಲ್ಗುಲಿಃ ಶಮ್ಬುಕಸ್ತಥಾ ॥೧೬॥
ಅಗ್ನಿಕೀಟಶ್ಚ ವಿಜ್ಞೇಯಾ ದ್ವಾದಶ ಪ್ರಾಣನಾಶನಃ ।

ತೈರ್ಭವನ್ತೀಹ ದಷ್ಟಾನಾಂ ವೇಗಜ್ಞಾನಾನಿ ಸರ್ಪವತ್ ॥೧೭॥
ತಾಸ್ತಾಶ್ಚ ವೇದನಾಸ್ತೀವ್ರಾ ರೋಗಾ ವೈ ಸಾನ್ನಿಪಾತಿಕಾಃ ।
ಕ್ಷಾರಾಗ್ನಿದಗ್ಧವದ್ದಂಶೋ ರಕ್ತಪೀತಸಿತಾರುಣಾಃ ॥೧೮॥

ಅರ್ಥ—ತುಙ್ಗನಾಸಃ, ವಿಚಿಲಕಃ, ತಾಲಕಃ, ವಾಹಕಃ, ಕೋಷ್ಠಾಗಾರೀ, ಕ್ರಿಮಿಕರಃ, ಮಣ್ಡಲಪುಚ್ಛಕಃ, ತುಣ್ಡನಾಭಃ, ಸರ್ಷಪಿಕಃ, ಅವಲ್ಗುಲಿಃ, ಶಮ್ಬುಕಃ, ಅಗ್ನಿಕೀಟಃ–ಈ ೧೨ ಪ್ರಾಣನಾಶಕಗಳು, ಇವುಗಳು ಕಚ್ಚಿದ ಮನುಷ್ಯರಿಗೆ ಹಾವು ಕಚ್ಚಿದ ವರಿಗೆ ಕಾಣುವ ವೇಗಗಳುಂಟಾಗುತ್ತವೆ. ಸನ್ನಿಪಾತ ರೋಗದ ಲಕ್ಷಣಗಳೇ ಇರುತ್ತವೆ. ಕ್ಷಾರ ಅಗ್ನಿಗಳಿಂದ ಸುಟ್ಟರೆ ಆಗುವಂತೆಯೇ ಇವುಗಳು ಕಚ್ಚಿದ ವ್ರಣಗಳಲ್ಲಿ ರಕ್ತ, ಹಳದಿ, ಕಪ್ಪು, ಸ್ವಲ್ಪ ಕೆಂಪು ಬಣ್ಣಗಳುಂಟಾಗುತ್ತವೆ.

ಜ್ವರಾಙ್ಗಮರ್ದರೋಮಾಞ್ಚವೇದನಾಭಿಃ ಸಮನ್ವಿತಃ ।
ಛರ್ದ್ಯತೀಸಾರತೃಷ್ಣಾಶ್ಚ ದಾಹೋ ಮೂರ್ಛಾ ವಿಜೃಮ್ಭಿಕಾ ॥೧೯॥
ವೇಪಥುಃ ಶ್ವಾಸಹಿಕ್ಕಾಶ್ಚ ದಾಹಃ ಶೀತಂ ಚ ದಾರುಣಮ್ ।
ಪಿಡಕೋಪಚಯಃ ಶೋಫೋ ಗ್ರನ್ಥಯೋ ಮಣ್ಡಲಾನಿ ಚ ॥೨೦॥
ದದ್ರ್ವಃ ಕರ್ಣಿಕಾಶ್ಚೈವ ವಿಸರ್ಪಾಃ ಕಿಟಿಭಾನಿ ಚ ।
ತೈರ್ಭವನ್ತೀಹ ದಷ್ಟಾನಾಂ ಯಥಾಸ್ವಂ ಚಾಪ್ಯುಪದ್ರವಾಃ ॥೨೧॥
ಯೇಽನ್ಯೇ ತೇಷಾಂ ವಿಶೇಷಾಸ್ತು ತೂರ್ಣಂ ತೇಷಾಂ ಸಮಾದಿಶೇತ್ ।
ದೂಷೀವಿಷಪ್ರಕೋಪಾಚ್ಚ ತಥೈವ ವಿಷಲೇಪನಾತ್ ॥೨೨॥
ಲಿಙ್ಗಂ ತೀಕ್ಷ್ಣವಿಷೇಷ್ವೇತಚ್ಛೃಣು ಮನ್ದವಿಷೇಷ್ವತಃ ।
ಪ್ರಸೇಕಾರೋಚಕಚ್ಛರ್ದಿಶಿರೋಗೌರವಶೀತಕಾಃ ॥೨೩॥
ಪಿಡಕಾಕೋಠಕಣ್ಡೂನಾಂ ಜನ್ಮ ದೋಷವಿಭಾಗತಃ ।

ಅರ್ಥ—ಜ್ವರ, ಮೈಕತ್ತರಿಸಿದಂತೆ ನೋವು, ರೋಮಾಞ್ಚ ಮೊದಲಾದ ವೇದನೆ ಗಳಿಂದಲೂ ವಮನ, ಅತಿಸಾರ, ಬಾಯಾರಿಕೆ, ಉರಿತ, ಮೂರ್ಛೆ, ಆಕಳಿಕೆ, ಮೈನಡುಕ, ಉಬ್ಬಸ, ಬಿಕ್ಕಳಿಕೆ, ಉರಿತ, ಅತಿ ಭಯಂಕರವಾದ ಶೀತ, ಪಿಡಿಕೆಗಳುಂಟಾಗುವುದು, ಶೋಫ, ಗಂಟುಗಳೂ, ಮಂಡಲಗಳೂ ಉಂಟಾಗುವುದು, ದದ್ರು (ಗುಳ್ಳೆಗಳು, ಮುದ್ರೆ ಹಾಕಿದಂತೆ ಮಾಂಸಾಂಕುರಗಳೇಳುವುದು, ವಿಸರ್ಪ, ಗಜಕರ್ಣ ಇವುಗಳು ಕೀಟದಷ್ಟ ರಿಗೆ ಉಂಟಾಗುವ ಉಪದ್ರವಗಳು. ಇನ್ನೂ ಇತರ ವಿಧಗಳಾದ ವ್ಯತ್ಯಾಸಗಳನ್ನು, ದೂಷೀ ವಿಷಪ್ರಕೋಪದ, ವಿಷವನ್ನು ಬಳಿದಶಸ್ತ್ರದಿಂದ ಚುಚ್ಚಿದ ವ್ರಣದ, ತೀಕ್ಷ್ಣ ವಿಷಲಕ್ಷಣಗಳಿಂದಲೂ ತಿಳಿದುಕೊಳ್ಳಬೇಕು. ಇನ್ನು ಮಂದವಿಷ ಲಕ್ಷಣಗಳನ್ನು ಹೇಳುತ್ತೇವೆ :—ಬಾಯಿಯಲ್ಲಿ ನೀರೂರುವುದು, ಅರುಚಿ, ವಮನ, ತಲೆಭಾರ, ಮೈತಣ್ಣ ಗಿರುವುದು, ಮೈಮೇಲೆ ಬೊಕ್ಕೆಗಳೇಳುವುದು, ಪಿತ್ತದ ಗಂಧೆಗಳೇಳುವುದು, ನವೆಯಾಗು ವುದು, ಇವುಗಳನ್ನು ದೋಷಗಳ ಪ್ರಕೋಪಕ್ಕೆ ತಕ್ಕಂತೆ ತಿಳಿಯಬೇಕು.

ಯೋಗೈರ್ನಾನಾವಿಧೈರೇಷಾಂ ಚೂರ್ಣಾನಿ ಗರಮಾದಿಶೇತ್ ||೨೪||
ದೂಷೀವಿಷಪ್ರಕಾರಾಣಾಂ ತಥೈವಾಪ್ಯನುಲೇಪನಾತ್ |
ಏಕಜಾತೀನತಸ್ತೂರ್ಧ್ವಂ ಕೀಟಾನ್ ವಕ್ಷ್ಯಾಮಿ ಭೇದತಃ ||೨೫||
ಸಾಮಾನ್ಯತೋ ದಷ್ಟಲಿಙ್ಗೈಃ ಸಾಧ್ಯಾಸಾಧ್ಯಾಕ್ರಮೇಣ ಚ |
ತ್ರಿಕಣ್ಟಃ ಕರಿಣೀ ಚಾಪಿ ಹಸ್ತಿಕಕ್ಷೋಽಪರಾಜಿತಃ ||೨೬||
ಚತ್ವಾರ ಏತೇ ಕಣಭಾ ವ್ಯಾಖ್ಯಾತಾಸ್ತೀವ್ರವೇದನಾಃ |
ತೈರ್ದಷ್ಟಸ್ಯ ಶ್ವಯಥುರಙ್ಗಮರ್ದೋ ಗುರುತಾ ಗಾತ್ರಾಣಾಂ ದಂಶಃ ಕೃಷ್ಣಶ್ಚ ಭವತಿ ||೨೭||

ಅರ್ಥ— ಈ ವಿಷಕೀಟಗಳ ಶರೀರವನ್ನು ಚೂರ್ಣಿಸಿ ಔಷಧಾಹಾರಗಳಿಂದ ನಾವು ಸೇವಿಸುವ ಚೂರ್ಣಾದಿಗಳೊಡನೆಯೂ ಗಂಧಾದಿ ಅನುಲೇಪನಗಳೊಡನೆಯೂ ಪ್ರಯೋಗಿಸಿದರೆ ದೂಷೀವಿಷಗಳಂತೆಯೇ ಪೀಡಿಸುತ್ತವೆ. ಇನ್ನು ಮುಂದೆ ಸಾಮಾನ್ಯಗಳಾದ ಕಚ್ಚಿದ ಗುರ್ತುಗಳಿಂದಲೂ ಸಾಧ್ಯಾಸಾಧ್ಯ ಕ್ರಮಗಳಿಂದಲೂ ಪರಿಶೀಲಿಸಿ ಏಕಜಾತಿಯ ಕೀಟಗಳನ್ನೇ ಹೇಳುತ್ತೇವೆ. ತ್ರಿಕಣ್ಟಕ, ಕಿರಿಣಿ, ಹಸ್ತಿಕಕ್ಷ, ಅಪರಾಜಿತಗಳೆಂಬ ೪ ವಿಧ ಕಣಭಗಳು ತೀವ್ರವಿಷವೇದನೆಗಳುಳ್ಳವೆಂದು ಹೇಳಿರುತ್ತೇವೆ. ಇವುಗಳು ಕಚ್ಚಿದ ಮನುಷ್ಯನಿಗೆ ಮೈಸೆಳೆತವೂ ಮೈಕತ್ತರಿಸಿದಂತೆ ನೋವೂ ಮೈ ಭಾರವೂ ಕಚ್ಚಿದ ಸ್ಥಳವು ಕಪ್ಪಗೂ ಆಗುತ್ತದೆ.

ಗ—ಪ್ರತಿಸೂರ್ಯಕಃ ಪಿಙ್ಗಾಭಾಸೋ ಬಹುವರ್ಣೋ ನಿರುಪಮೋ ಗೌಧೇರಕ ಇತಿ ಪಞ್ಚ ಗೋಧೇರಕಾಃ ; ತೈರ್ದಷ್ಟಸ್ಯ ಶೋಫೋ ದಾಹರುಜೌ ಚ ಭವತಃ ; ಗೋಧೇರಕೇಽನೈತದೇವ ಗ್ರನ್ಥಿಪ್ರಾದುರ್ಭಾವೋ ಜ್ವರಶ್ಚ ||೨೮||

ಗಲಗೋಲೀ :—ಶ್ವೇತಾ ಕೃಷ್ಣಾ ರಕ್ತರಾಜೀ ರಕ್ತಮಣ್ಡಲಾ ಸರ್ವಶ್ವೇತಾ ಸರ್ಷಪಿಕೇತ್ಯೇವಂ ಷಟ್ ; ತಾಭಿರ್ದಷ್ಟೇ ಸರ್ಷಪಿಕಾವರ್ಜಂ ದಾಹಶೋಫಕ್ಲೇದಾ ಭವನ್ತಿ ; ಸರ್ಷಪಿಕಯಾ ಹೃದಯಪೀಡಾತಿಸಾರಶ್ಚ ; ತಾಸು ಮಧ್ಯೇ ಸರ್ಷಪಿಕಾ ಪ್ರಾಣಹಾರೀ ||೨೯||

ಶತಪದ್ಯಸ್ತು :—ಪರುಷಾ, ಕೃಷ್ಣಾ, ಚಿತ್ರಾ, ಕಪಿಲಿಕಾ, ರಕ್ತಾ, ಶ್ವೇತಾ, ಅಗ್ನಿಪ್ರಭಾ, ಇತ್ಯಷ್ಟೌ ತಾಭಿರ್ದಷ್ಟೇ ಶೋಫೋ ವೇದನಾ ದಾಹಶ್ಚ ಹೃದಯೇ ; ಶ್ವೇತಾಗ್ನಿಪ್ರಭಾಭ್ಯಾಮೇತದೇವ ದಾಹೋ ಮೂರ್ಛಾ ಚಾತಿಮಾತ್ರಂ ಶ್ವೇತಪಿಡಕೋತ್ಪತ್ತಿಶ್ಚ ||೩೦||

ಅರ್ಥ—ಕೃಷ್ಣಸರ್ಪದಿಂದ ಉಡದಲ್ಲಿ ಉತ್ಪನ್ನವಾದ ೪ ಕಾಲಿನ ಪ್ರಾಣಿಗೆ ಗೌಧೇರಕವೆಂದು (ಹಾವರಾಣಿ) ಹೆಸರು. ಪ್ರತಿಸೂರ್ಯಕ ಪಿಙ್ಗಾಭಾಸ (ಹಳದಿಯ ಬಣ್ಣವುಳ್ಳದ್ದು) ಬಹುವರ್ಣ ನಿರುಪಮ ಗೌಧೇರಕಗಳೆಂಬ ೫ ಗೌಧೇರಕಗಳುಂಟು ಇವುಗಳಿಂದ ಕಚ್ಚಲ್ಪಟ್ಟ ಮನುಷ್ಯನಿಗೆ ಮೈಶೋಫದಾಹ ನೋವುಗಳುಂಟಾಗುತ್ತವೆ, ಗೋಧೇರಕನ ದಂತದಲ್ಲಿ ಈ ಲಕ್ಷಣಗಳೂ ಇರುತ್ತವೆ. ಅವುಗಳ ಜೊತೆಗೆ ಕಚ್ಚಿದ ಭಾಗದಲ್ಲಿ ಪಿಡಕೆಗಳೂ ಜ್ವರವೂ ಉಂಟಾಗುತ್ತದೆ.

ಗಳಗೋಲಿ (ಹಲ್ಲಿ) ಯಲ್ಲಿ ಶ್ವೇತಾ ಕೃಷ್ಣಾ ರಕ್ತರಾಜೀ ರಕ್ತಮಂಡಲಾ ಶ್ವೇತಾ ಸರ್ಷಪಿಕಾ ಎಂಬದಾಗಿ ಆರು ಭೇದಗಳುಂಟು. ಸರ್ಷಪಿಕವನ್ನು ಬಿಟ್ಟು ಉಳಿದವು ಕಚ್ಚಿದರೆ ಕಚ್ಚಿದ ಸ್ಥಳದಲ್ಲಿ ಉರಿತ ಶೋಫ ರಸಿಕೆ ಜಿನುಗುವುದು ಇವುಗಳಿರುತ್ತವೆ. ಸರ್ಷಪಿಕೆಯು ಕಚ್ಚಿದರೆ ಹೃದಯವೇದನೆಯೂ ಅತಿಸಾರವೂ ಮೇಲಿನ ಉಪದ್ರವಗಳೂ ಇರುತ್ತವೆ. ಇವುಗಳ ಮಧ್ಯೆ ಸರ್ಷಪಿಕಾದಂಶದಿಂದ ಪ್ರಾಣಹಾನಿಯೂ ಉಂಟಾಗುತ್ತದೆ.

ಶತಪದಿಗಳು (ಸಾವಿರಕಾಲು ಅಥವಾ ಝುರಿ) ಪರುಷ ಕಪ್ಪು ಚಿತ್ರಬಣ್ಣ ಕಪಿಲ ಬಣ್ಣ (ಕೆಂಪು ಮತ್ತು ಕಪ್ಪು ಮಿಶ್ರವಾದದ್ದು) ಹಳದಿ ರಕ್ತ, ಬಿಳುಪು ಅಗ್ನಿಪ್ರಭೆ ಎಂಬ ೮ ಜಾತಿಗಳುಂಟು. ಅವು ಕಚ್ಚಿದರೆ ಶೋಫವೂ ನೋವೂ ಹೃದಯದಲ್ಲಿ ಉರಿಯೂ ಬಿಳಿಯ ಬೆಂಕಿಯ ಉರಿಯಂತೆ ಮೈಉರಿತವೂ ಜ್ಞಾನ ತಪ್ಪುವುದೂ ಅತಿ ಪ್ರಮಾಣದಿಂದ ಮೈಮೇಲೆ ಬೊಕ್ಕೆಗಳೂ ಹುಟ್ಟುತ್ತವೆ.

ಗ—ಮಣ್ಡೂಕಾಃ—ಕೃಷ್ಣಃ ಸಾರಃ ಕುಹಕೋ ಹರಿತೋ ರಕ್ತೋ ಯವ ವರ್ಣಾಭೋ ಭೃಕುಟೀಕೋಟಿಕಶ್ಚೇತ್ಯಷ್ಟೌ ತೈರ್ದಷ್ಟಸ್ಯದಂಶೇ ಕಣ್ಡೂರ್ಭವತಿ ಪೀತ ಫೇನಾಗಮಶ್ಚ ವಕ್ತ್ರಾತ್; ಭೃಕುಟೀಕೋಟಿಕಾಭ್ಯಾಮೇತದೇವ ದಾಹಚ್ಛರ್ದಿಮೂರ್ಛಾಭಿಶ್ಚಾತಿಮಾತ್ರಮ್ ||೩೧||

ಅರ್ಥ—ಮಣ್ಡೂಕಾಃ ಕೃಷ್ಣಃ ಸಾರಃ ಕುಹಕ ಹರಿತಃ (ಹಸುರುಬಣ್ಣ) ಕೆಂಪು ಯವ ಧಾನ್ಯದ ಬಣ್ಣದಂತೆಯೂ ಹುಬ್ಬುಗಂಟಿಕ್ಕಿದಂತೆಯೂ ಕೋಟಿಕ ಎಂದು ೮ ವಿಧಗಳಿವೆ. ಅವು ಕಚ್ಚಿದರೆ ಕಡಿದ ಸ್ಥಳದಲ್ಲಿ ನವೆಯೂ ಹಳದಿಯ ಬಣ್ಣದ ನೊರೆಯು ಮುಖದಿಂದ ಸೋರುತ್ತದೆ. ಭ್ರುಕುಟಿ ಮತ್ತು ಕೋಟಿಕಗಳು ಕಚ್ಚಿದರೆ ಈ ಲಕ್ಷಣಗಳು ಅತಿಯಾಗಿ, ಉರಿತ, ವಮನ, ಮೂರ್ಛೆಗಳೂ ಇರುತ್ತವೆ.

ಗ—ವಿಶ್ವಮ್ಭರಾಭಿರ್ದಷ್ಟೇ ದಂಶಃ ಸರ್ಷಪಾಕಾರಾಭಿಃ ಪಿಡಕಾಭಿಃ ಸರುಜಾಭಿಶ್ಚೀಯತೇ ಶೀತಜ್ವರಾರ್ತಶ್ಚ ಪುರುಷೋ ಭವತಿ ||೩೨||

ಅಹಿಣ್ಡುಕಾಭಿರ್ದಷ್ಟೇ ತೋದದಾಹಕಣ್ಡೂಶ್ವಯಥವೋ ಭವನ್ತಿ ಮೋಹಶ್ಚ ಕಣ್ಡೂಮಕಾಭಿರ್ದಷ್ಟೇ ಪೀತಾಙ್ಗಶ್ಛರ್ದ್ಯತೀಸಾರ ಜ್ವರಾದಿಭಿರಹನ್ಯತೇ ಶೂಕವೃನ್ತಾದಿಭಿರ್ದಷ್ಟೇ ಕಣ್ಡೂಕೋಠಾಃ ಪ್ರವರ್ಧನ್ತೇ ಶೂಕಂ ಚಾತ್ರ ಲಕ್ಷ್ಯತೇ ||೩೪||

ಅರ್ಥ—ಕಣಜವು ಕಚ್ಚಿದ ಶರೀರಭಾಗದಲ್ಲಿ ಸಾಸಿವೆಯಂತೆ ಬೊಕ್ಕೆಗಳುಂಟಾಗಿ ನೋವಿರುತ್ತದೆ ; ರೋಗಿಯು ಶೀತಜ್ವರದಿಂದ ನರಳುತ್ತಾನೆ. ಅಹಿಣ್ಡುಕಗಳೆಂಬ ಕೀಟಗಳು ಕಚ್ಚಿದ ಸ್ಥಳದಲ್ಲಿ ಚುಚ್ಚುವಿಕೆ, ಉರಿತ, ನವೆ, ಊದು, ಅಜ್ಞಾನವುಂಟಾಗುತ್ತದೆ. ಕಣ್ಡೂಮಕಗಳೆಂಬ ಕ್ರಿಮಿಗಳು ಕಚ್ಚಿದರೆ ಮೈಹಳದಿಯಾಗಿ ವಮನ, ಅತಿಸಾರ ಜ್ವರಾದಿಗಳಿಂದ ಪೀಡಿತನಾಗುತ್ತಾನೆ. ಶೂಕವೃನ್ತಾದಿ ಕೀಟಗಳು ಕಚ್ಚಿದರೆ ನವೆ, ಗಂಧೆಗಳು ವೃದ್ಧಿಯಾಗುತ್ತವೆ, ಮುಳ್ಳುಗಳು ಕಾಣುತ್ತವೆ.

ಗ—ಪಿಪೀಲಿಕಾಃ—ಸ್ಥೂಲಶೀರ್ಷಾ, ಸಂವಾಹಿಕಾ, ಬ್ರಾಹ್ಮಣಿಕಾ, ಅಙ್ಗುಳಿಕಾ, ಕಪಿಲಿಕಾ, ಚಿತ್ರವರ್ಣೇತಿ ಷಟ್ ತಾಭಿರ್ದಷ್ಟೇ ದಂಶೇ ಶ್ವಯಥುರಗ್ನಿಸ್ಪರ್ಶವದ್ದಾಹ ಶೋಫೌ ಭವತಃ ||೩೫||

ಮಕ್ಷಿಕಾಃ—ಕಾನ್ತಾರಿಕಾ, ಕೃಷ್ಣಾ, ಪಿಙ್ಗಳಾ, ಮಧೂಲಿಕಾ, ಕಾಷಾಯಿಾ, ಸ್ಥಾಲಿಕೇ ತ್ಯೇವಂ ಷಟ್ ; ತಾಭಿರ್ದಷ್ಟಸ್ಯ ಕಣ್ಡುಶೋಫದಾಹರುಜೋ ಭವನ್ತಿ, ಸ್ಥಾಲಿಕಾ ಕಾಷಾಯಿಾ ಭ್ಯಾಮೇತದೇವ ; ಶ್ಯಾವಪಿಡಕೋತ್ಪತ್ತಿರುಪದ್ರವಾಶ್ಚ ಜ್ವರಾದಯೋಭವನ್ತಿ ಕಾಷಾಯಿಾ ಸ್ಥಾಲಿಕಾ ಚ ಪ್ರಾಣಹರೇ ||೩೬||

ಮಶಕಾಃ—ಸಾಮುದ್ರಃ, ಪರಿಮಣ್ಡಲೋ, ಹಸ್ತಿಮಶಕಃ, ಕೃಷ್ಣಃ, ಪಾರ್ವತೀಯ ಇತಿ ಪಞ್ಚ ; ತೈರ್ದಷ್ಟಸ್ಯ ತೀವ್ರಾ ಕಣ್ಡೂರ್ದಂಶಶೋಫಶ್ಚ ಪಾರ್ವತೀಯಸ್ತು ಕೀಟೈಃ ಪ್ರಾಣ ಹರೈಸ್ತುಲ್ಯಲಕ್ಷಣಃ ! ನಖಾವಕೃಷ್ಟೇsತ್ಯರ್ಥಂ ಪಿಡಕಾಃ ಸದಾಹಪಾಕಾ ಭವನ್ತಿ ; ಜಲೌಕಸಾಂ ದಷ್ಟಲಕ್ಷಣಮುಕ್ತಂ ಚಿಕಿತ್ಸಿತಞ್ಚ ||೩೭||

ಭವನ್ತಿಚಾತ್ರ—ಗೌಧೇರಕಃ ಸ್ಥಾಲಿಕಾ ಚ ಯೇ ಚ ಶ್ವೇತಾಗ್ನಿಸಂಪ್ರಭೇ । ಭ್ರುಕುಟೀ ಕೀಲಕಶ್ಚೈವ ನ ಸಿಧ್ಯನ್ತೇsಕಜಾತಿಷು ||೩೮||

ಅರ್ಥ—ಇರುವೆಗಳಲ್ಲಿ ದಪ್ಪತಲೆಯುಳ್ಳವು (ಕಟ್ಟಿರುವೆಗಳು) ಸಂವಾಹಿಕಾ (ಆಹಾರ ಪದಾರ್ಥಗಳನ್ನು ಹೊತ್ತು ತೆಗೆದುಕೊಂಡು ಹೋಗತಕ್ಕ ಮಧ್ಯದೇಹವುಳ್ಳವು) ಬ್ರಾಹ್ಮಣಿಕಾ, ಅಂಗಾಳಿಕಾ, ಕಪಿಲಿಕಾ (ಕೆಂಚಿರುವೆಗಳು), ಚಿತ್ರವರ್ಣದವುಗಳೆಂದು ೬ ಭೇದಗಳುಂಟು, ಅವು ಕಚ್ಚಿದರೆ ಕಡಿದಭಾಗವು ಊದಿ ಬೆಂಕಿ ಸೋಕಿದರೆ ಉಂಟಾಗು ವಂತೆ ಉರಿಯೂ ಶೋಥವೂ ಉಂಟಾಗುತ್ತವೆ ; ನೊಣಗಳು—ಕಾಡುನೊಣ, ಕಪ್ಪು ನೊಣ, ಹಳದಿಬಣ್ಣದ ನೊಣ, ಮಧೂಳಿಕಾ (ಜೇನುತುಪ್ಪದ ವರ್ಣದ ನೊಣಗಳು), ಕಾಷಾಯಿ (ಹೊಗೆಯಬಣ್ಣದ ನೊಣಗಳು), ಸ್ಥಾಲಿಕೇ (ಸ್ಥಾಲಿಯಂತೆ ಹೊಟ್ಟೆದಪ್ಪ ಬಾಯಿ ಸಣ್ಣವಾಗಿರುತ್ತವೆ) ಎಂದು ೬ ವಿಧಗಳಾಗಿವೆ. ಅವುಗಳು ಕಚ್ಚಿದ ದೇಹಭಾಗ ಗಳಲ್ಲಿ ನವೆ, ಊದು, ಉರಿತ, ನೋವುಗಳುಂಟಾಗುತ್ತವೆ. ಸ್ಥಾಲಿಕಾ ಕಪಾಲಿಕೆಗಳು ಕಚ್ಚಿದರೆ ಈ ಲಕ್ಷಣಗಳ ಜೊತೆಗೆ ಹೊಗೆಯಬಣ್ಣದ ಗುಳ್ಳೆಗಳಾಗುತ್ತವೆ. ಜ್ವರಾದಿ ಉಪ ದ್ರವಗಳೂ ಉಂಟಾಗುತ್ತವೆ. ಕಾಷಾಯಿ, ಸ್ಥಾಲಿಕಾ ಎಂಬುವು ಕಚ್ಚಿದರೆ ಪ್ರಾಣ ನಾಶವಾಗುತ್ತದೆ. ಸೊಳ್ಳೆಗಳು—ಸಮುದ್ರಸೊಳ್ಳೆ, ಗುಂಡುಸೊಳ್ಳೆ, ಆನೆಸೊಳ್ಳೆ, ಕರಿಯ ಸೊಳ್ಳೆ, ಪರ್ವತದ ಸೊಳ್ಳೆಯೆಂದು ೫ ವಿಧಗಳು. ಅವು ಕಡಿದರೆ ಅತಿ ನವೆಯೂ ಕಡಿದ ಭಾಗದಲ್ಲಿ ಊದೂ ಉಂಟಾಗುತ್ತವೆ. ಬೆಟ್ಟದ ಸೊಳ್ಳೆಗಳು ಕಡಿದರೆ ಪ್ರಾಣಹರವು. ಕೀಟಗಳಿಂದ ಕಡಿದರೆ ಉಂಟಾಗುವ ಲಕ್ಷಣಗಳು ಇರುತ್ತವೆ. ಕಚ್ಚಿದ ಭಾಗವನ್ನು ಉಗುರಿನಿಂದ ಕೆರೆದರೆ ಅತಿಯಾಗಿ ಬೊಕ್ಕೆಗಳಾಗುತ್ತವೆ. ಉರಿತ, ಪಾಕಗಳುಂಟಾಗು ತ್ತವೆ. ಜಿಗಳೆಗಳು ಕಚ್ಚಿದರೆ ಉಂಟಾಗುವ ಲಕ್ಷಣ ಚಿಕಿತ್ಸೆಗಳನ್ನೂ ಹೇಳಿರುತ್ತೇವೆ. ಈ ವಿಚಾರದಲ್ಲಿ ಆಧಾರ ಶ್ಲೋಕಗಳು ಹೇಳುವುದೇನೆಂದರೆ—ಗೋಧೇರಕ, ಸ್ಥಾಲಿಕಾ, ಗೋಧಿಗಳಲ್ಲಿ ಶ್ವೇತ ಅಗ್ನಿಸಂಭವ, ಭ್ರುಕುಟೀ, ಕೋಟಕ ಇನ್ನಾದ್ಯಯುಧವೆಂಬ ಜಿಗಳೆ ಇವು ಕಚ್ಚಿದರೆ ರೋಗಿಯು ಸಾಯುತ್ತಾನೆಂದು ತಿಳಿಯಬೇಕು.

ಶವಮೂತ್ರಪುರೀಷೈಸ್ತು ಸವಿಷೈರವಮರ್ಷಣಾತ್ ।
ಸ್ಯುಃ ಕಣ್ಡೂದಾಹಕೋಠಾರುಃ ಪಿಡಕಾ ತೋದವೇದನಾಃ ॥೩೯॥
ಪ್ರಕ್ಲೇದವಾಂಸ್ತಥಾ ಸ್ರಾವೋ ಭೃಶಂ ಸಂಪಾಚಯೇತ್ತ್ವಚಮ್ ।
ದಿಗ್ಧವಿದ್ಧಕ್ರಿಯಾಸ್ತತ್ರ ಯಥಾವದವಚಾರಯೇತ್ ॥೪೦॥

ಅರ್ಥ—ಸತ್ತವಿಷಪ್ರಾಣಿಗಳ ದೇಹ, ಮೂತ್ರ, ಪುರೀಷಗಳು ಸೋಕಿದ ಶರೀರ ಭಾಗದಲ್ಲಿ ನವೆ, ಉರಿತ, ದದ್ದುಗಳು, ನೋವು, ಚುಚ್ಚುವುದು, ಬೊಕ್ಕೆಗಳು ಉಂಟಾಗುತ್ತವೆ ; ವಿಷಮಿಶ್ರವಾದ ಚೂರ್ಣಗಳು ಶರೀರಕ್ಕೆ ತಗುಲಿದರೆ ಅಲ್ಲಿ ಚರ್ಮವು ಕಿತ್ತು ಹುಣ್ಣಾಗಿ ಜಿನುಗುತ್ತದೆ ; ಸ್ರಾವ ಪಾಕಗಳಾಗುತ್ತವೆ ; ವಿಷಲೇಪನ ಮಾಡಿದ ಶಸ್ತ್ರಗಳಿಂದ ಚುಚ್ಚಿದರೆ ಉಂಟಾಗುವ ವ್ರಣಗಳಿಗೆ ಮಾಡುವಂತೆಯೇ ಚಿಕಿತ್ಸೆ ಮಾಡಬೇಕು.

ನಾವಸನ್ನಂ ನ ಚೋತ್ಪನ್ನಮತಿಸಂರಮ್ಭವೇದನಮ್ ।
ದಂಶಾದೌ ವಿಪರೀತಾರ್ತಿ ಕೀಟದಷ್ಟಂ ಸುಬಾಧಕಮ್ ॥೪೧॥
ಕೀಟೈರ್ದಷ್ಟಾನುಗ್ರವಿಷೈಃ ಸರ್ಪವತ್ಸಮುಪಾಚರೇತ್ ।
ತ್ರಿವಿಧಾನಾಂ ತು ಪೂರ್ವೇಷಾಂ ತ್ರೈವಿಧ್ಯೇನ ಕ್ರಿಯಾ ಹಿತಾ ॥೪೨॥

ಅರ್ಥ—ಕಚ್ಚಿದ ದೇಹಭಾಗವು ಅತಿಯಾಗಿ ಶೀಳದಿದ್ದರೆ ಎತ್ತರವಾಗಿಲ್ಲದಿದ್ದರೆ ಅತಿಪೀಡೆಯೂ ದಿಗಲೂ ಉಂಟಾಗುವುದು. ಕಡಿತದಲ್ಲಿ ವ್ಯತ್ಯಾಸವಾಗಿ ನೋವು ಕಾಣುವುದು ಅಂದರೆ ಉಗ್ರವಿಷಕೀಟ ಕಚ್ಚಿದರೆ ಸ್ವಲ್ಪ ನೋವಿರುವುದು. ಸ್ವಲ್ಪ ವಿಷದ ಕೀಟವು ಕಚ್ಚಿದರೆ ಅತ್ಯಂತ ವ್ಯಥೆಯಾಗುವುದು. ಇದು ಕಷ್ಟಸಾಧ್ಯವೆಂದರಿಯಬೇಕು ; ಉಗ್ರವಿಷವುಳ್ಳ ಕೀಟಗಳು ಕಚ್ಚಿದರೆ ಸರ್ಪಕಚ್ಚಿದರೆ ಮಾಡುವಂತೆಯೇ ಚಿಕಿತ್ಸೆಯನ್ನು ಮಾಡಬೇಕು. ಹಿಂದೆ ಹೇಳಿದಂತೆ ಕ್ರಮವಾಗಿ ದರ್ವೀಕರ, ಮಂಡಲಿ, ರಾಜಿಲಗಳ ಶುಕ್ರಮೂತ್ರಾದಿಗಳು ಕೊಳೆತು ಹುಟ್ಟುವ ವಿಷಕೀಟದಷ್ಟನಿಗೆ ವಾತ, ಪಿತ್ತ, ಕಫಹರ ಚಿಕಿತ್ಸೆಗಳನ್ನು ಮಾಡಿದರೆ ಹಿತವಾಗುತ್ತದೆ.

ಸ್ವೇದಮಾಲೇಪನಂ ಸೇಕಂ ಚೋಷ್ಣಮತ್ರಾವಚಾರಯೇತ್ ।
ಅನ್ಯತ್ರ ಮೂರ್ಛಿತಾದ್ದಂಶಾತ್ ಪಾಕಕೋಥಪ್ರಪೀಡಿತಾತ್ ॥೪೩॥
ವಿಷಘ್ನಂ ಚ ವಿಧಿಂ ಸರ್ವಂ ಕುರ್ಯಾತ್ ಸಂಶೋಧನಾನಿ ಚ ।
ಶಿರೀಷಃ ಕಟುಕಾ ಕುಷ್ಠಂ ವಚಾ ರಜನಿ ಸೈನ್ಧವೇ ॥೪೪॥
ಕ್ಷೀರಮಜ್ಜವಸಾಸರ್ಪಿಃ ಶುಣ್ಠೀ ಪಿಪ್ಪಲಿ ದಾರು ಚ ।
ಉತ್ಕಾರಿಕಾ ಸ್ಥಿರಾದೌ ವಾ ಸುಕೃತಾ ಸ್ವೇದನೇ ಹಿತಾ ॥೪೫॥

ಅರ್ಥ—ವಿಷಕೀಟಗಳಿಂದ ಕಚ್ಚಲ್ಪಟ್ಟ ರೋಗಿಗಳಿಗೆ (ಮೂರ್ಛಿತನನ್ನು ಬಿಟ್ಟು) ಸ್ವೇದನ ಬಿಸಿಯಾದ ಲೇಪನ ಸೇಚನಗಳನ್ನು ಮಾಡಿಸಬೇಕು. ಪಾಕವಾಗಿ ಕೊಳೆತು ಹೋದ ಘಾಯಗಳಿಗೆ ವಿಷಹರಗಳಾದ ಚಿಕಿತ್ಸೆಗಳನ್ನೂ ಶೋಧನೌಷಧಿಗಳ ಪ್ರಯೋಗವನ್ನೂ ಮಾಡಿಸಬೇಕು. ಬಾಗೆತೊಗಟೆ, ಕಟುಕರೋಹಿಣಿ, ಚಂಗಲ್ ಕೋಷ್ಠ, ಬಜೆ, ಅರಿಶಿನ, ಸೈಂಧವಲವಣ, ಹಾಲು, ಮಜ್ಜೆ, ವಸೆ, ತುಪ್ಪ, ಶುಂಠಿ, ಹಿಪ್ಪಲಿ, ದೇವದಾರು

ಇವುಗಳನ್ನು ಸೇರಿಸಿ ಉತ್ಕಾರಿಕೆಗಳನ್ನು (ಹೋಳಿಗೆಗಳನ್ನು) ಮಾಡಿಸಿ ಸ್ವೇದಮಾಡಿಸುವುದು ಹಿತಕರವಾದದ್ದು.

ನ ಸ್ವೇದಯೇತ ಚೀದಂಶಂ ಧೂಮಂ ವಕ್ಷ್ಯಾಮಿ ವೃಶ್ಚಿಕೇ ।
ಅಗದಾನೇಕಜಾತೀಷು ಪ್ರವಕ್ಷ್ಯಾಮಿ ಪೃಥಕ್ ಪೃಥಕ್ ||೪೬||

ಅರ್ಥ—ಚೇಳು ಕಚ್ಚಿದರೆ ಕುಟುಕಿದ ಸ್ಥಳಕ್ಕೆ ಸ್ವೇದಮಾಡಬಾರದು. ತಕ್ಕ ಧೂಮಪ್ರಯೋಗವನ್ನು ಹೇಳುತ್ತೇವೆ. ೫೪ ವಿಧಗಳಾದ ವಿಷಜಂತುಗಳು ಕಚ್ಚಿದರೆ ಅವುಗಳಿಗೆ ಮಾಡಬೇಕಾದ ಅಗದಪ್ರಯೋಗಗಳನ್ನು ಹೇಳುತ್ತೇವೆ.

ಕುಷ್ಠಂ ವಕ್ರಂ ವಚಾ ಪಾಠಾ ಬಿಲ್ವಮೂಲಂ ಸುವರ್ಚಿಕಾ ।
ಗೃಹಧೂಮಂ ಹರಿದ್ರೇ ದ್ವೇ ತ್ರಿಕಣ್ಟಕವಿಷೇ ಹಿತಾಃ ||೪೭||

ಅರ್ಥ—ಚಂಗಲ್‌ಕೋಷ್ಠ, ಗ್ರಂಥಿಕತಗರ, ಬಜೆ, ಅಗಳುಶುಂಠಿ, ಬಿಲ್ವಪತ್ರೆಯ ಬೇರು, ಸುವರ್ಚಲವಣ, ಇಲ್ಲಣ, ಅರಿಶಿನ, ಮರದರಿಶಿನ ಇವು ತ್ರಿಕಣ್ಟಕ ಮೊದಲಾದ ಕಣಭ ವಿಷಗಳನ್ನು ನಿವಾರಿಸುವ ಅಗದವು.

ರಜನ್ಯಾಗಾರಧೂಮಶ್ಚ ವಕ್ರಂ ಕುಷ್ಠಂ ಪಲಾಶಜಮ್ ।
ಗಳಗೋಲಿಕದಷ್ಟಾನಾಮಗದೋ ವಿಷನಾಶನಃ ||೪೮||
ಕುಙ್ಕುಮಂ ತಗರಂ ಶಿಗ್ರು ಪದ್ಮಕಂ ರಜನೀದ್ವಯಮ್ ।
ಅಗದಂ ಜಲಪಿಷ್ಟೋಽಯಂ ಶತಪಾದ್ವಿಷನಾಶನಃ ||೪೯||
ಮೇಷಶೃಙ್ಗೀ ವಚಾ ಪಾಠಾ ನಿಚುಲೋ ರೋಹಿಣೀ ಜಲಮ್ ।
ಸರ್ವಮಣ್ಡೂಕದಷ್ಟಾನಾಮಗದೋಽಯಂ ವಿಷಾಪಹಃ ||೫೦||
ವಚಾಶ್ವಗನ್ಧಾತಿಬಲಾ ಬಲಾ ಸಾತಿಗುಹಾ ಗುಹಾಃ ।
ವಿಶ್ವಮ್ಭರಾಭಿರ್ದಷ್ಟಾನಾಮಗದೋಽಯಂ ವಿಷಾಪಹಃ ||೫೧||
ಶಿರೀಷಂ ತಗರಂ ಕುಷ್ಠಂ ಶಾಲಿಪರ್ಣೀ ಸಹಾ ನಿಶೇ ।
ಅಹಿಣ್ಡುಕಾಭಿರ್ದಷ್ಟಾನಾಮಗದೋ ವಿಷನಾಶನಃ ||೫೨||

ಅರ್ಥ—ಅರಿಶಿನ, ಇಲ್ಲಣ, ತಗರ, ಚಂಗಲ್‌ಕೋಷ್ಠ, ಮುತ್ತುಗದಬೀಜ ಇವುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಸಿ ಹಸುವಿನ ಕೊಂಬಿನಲ್ಲಿ ತುಂಬಿಟ್ಟುಕೊಂಡು ನಸ್ಯ, ಅಂಜನ, ಲೇಪಗಳನ್ನು ಮಾಡಿದರೆ ವಿಷಹರಣವಾಗುತ್ತದೆ. (ಹಲ್ಲಿ ಕಚ್ಚಿದ ವಿಷಹರವು) ಕುಂಕುಮಕೇಸರ, ಗ್ರಂಥಿಕತಗರ, ನುಗ್ಗೆಬೀಜ, ಪದ್ಮಕ, ಅರಿಶಿನ, ಮರದರಿಶಿನ ಇವುಗಳ ಚೂರ್ಣವನ್ನು ನೀರಿನಲ್ಲರೆದು ಕಲ್ಕಮಾಡಿ ನಸ್ಯಾಂಜನ ಲೇಪಗಳನ್ನು ಮಾಡಿದರೆ ಶತಪದಿಯ (ಸಾವಿರಕಾಲು–ಝುರಿ) ವಿಷಹರಣವಾಗುತ್ತದೆ. ಮೇಷಶೃಂಗಿ (ಗೆರ್ಶಿಹಂಬು), ಬಜೆ, ಅಗಳುಶುಂಠಿ, ಹಬ್ಬೆಬೇರು, ಕಟುಕರೋಹಿಣಿ, ಮುಡಿವಾಳ ಇವುಗಳ ಕಲ್ಕದಿಂದ ನಸ್ಯ, ಅಂಜನ ಪಾನಗಳಿಂದ ಸಕಲವಿಧಗಳಾದ ಕಪ್ಪೆಗಳು ಕಚ್ಚಿದ ವಿಷಹರಣವಾಗುತ್ತದೆ. ಬಜೆ, ಅಶ್ವಗಂಧಿಬೇರು, ತುತ್ತಿಬೇರು, ಬೋಳಂಗಡಲೆಯಬೇರು, ಮೂರೆಲೆಹೊನ್ನೆ, ಒಂದೆಲೆಹೊನ್ನೆ ಇವುಗಳ ಕಲ್ಕದಿಂದ ನಸ್ಯ, ಅಂಜನ ಲೇಪ ಪಾನಗಳನ್ನು ಮಾಡಿಸಿದರೆ

ವಿಶ್ವಂಭರಕೀಟದಷ್ಟ ವಿಷಹರಣವಾಗುತ್ತದೆ. ಬಾಗೇಬೀಜ, ತಗರ, ಚಂಗಲ್‌ಕೋಷ್ಠ, ಮೂರೆಲೆಹೊನ್ನೆ, ಕಾಡುಹೆಸರು, ಅರಿಶಿನ, ಮರದರಿಶಿನ ಇವುಗಳ ಕಲ್ಕದಿಂದ ನಸ್ಯ, ಅಂಜನ, ಲೇಪ, ಪಾನಗಳನ್ನು ಮಾಡಿಸಿದರೆ ಅಹಿಣ್ಡುಕದಷ್ಟವಿಷಹರವಾಗುತ್ತದೆ.

ಕಣ್ಡೂಮಕಾಭಿರ್ದಷ್ಟಾನಾಂ ರಾತ್ರೌ ಶೀತಾಃ ಕ್ರಿಯಾ ಹಿತಾಃ ।
ದಿವಾ ತೇ ನೈವ ಸಿಧ್ಯನ್ತಿ ಸೂರ್ಯರಶ್ಮಿಬಲಾರ್ದಿತಾಃ ॥೫೩॥
ವಕ್ರಂ ಕುಷ್ಠಮಪಾಮಾರ್ಗಃ ಶೂಕವೃನ್ತವಿಷೇಽಗದಃ ।
ಭೃಙ್ಗಸ್ವರಸಪಿಷ್ಟಾ ವಾ ಕೃಷ್ಣವಲ್ಮೀಕಮೃತ್ತಿಕಾ ॥೫೪॥
ಪಿಪೀಲಿಕಾಭಿರ್ದಷ್ಟಾನಾಂ ಮಕ್ಷಿಕಾಮಶಕೈಸ್ತಥಾ ।
ಗೋಮೂತ್ರೇಣ ಯುತೋ ಲೇಪಃ ಕೃಷ್ಣವಲ್ಮೀಕಮೃತ್ತಿಕಾ ॥೫೫॥
ನಖಾವಘೃಷ್ಟಸಂಜಾತೇ ಶೋಫೇ ಭೃಙ್ಗರಸೋ ಹಿತಃ ।
ಪ್ರತಿಸೂರ್ಯಕದಷ್ಟಾನಾಂ ಸರ್ಪದಷ್ಟವದಾಚರೇತ್ ॥೫೬॥

ಅರ್ಥ—ಸೂರ್ಯಕಿರಣದ ಪ್ರಭಾವದಿಂದ ಕಣ್ಡೂಮಕಾ ಮೊದಲಾದ ಕೀಟಗಳಿಗೆ ವಿಷವೇಗವು ಹೆಚ್ಚುತ್ತದೆಯಾಗಿ ಹಗಲು ಹೊತ್ತಿನಲ್ಲಿ ಅವುಗಳಿಗೆ ಚಿಕಿತ್ಸೆಮಾಡಿದರೆ ಸಿದ್ಧಿಯಾಗುವುದಿಲ್ಲವಾಗಿ ರಾತ್ರಿಯಕಾಲದಲ್ಲಿ ಶೀತಚಿಕಿತ್ಸೆಯನ್ನು ಮಾಡಿದರೆ ಹಿತಕರವಾಗುತ್ತದೆ. ತಗರ, ಚಂಗಲ್‌ಕೋಷ ಉತ್ತರಣೆಬೀಜ ಇವುಗಳ ಕಲ್ಕದಿಂದ ಲೇಪಮಾಡಿದರೆ ಶೂಕವೃನ್ತವಿಷಹರಣವಾಗುತ್ತದೆ. ಅಥವಾ ಹುತ್ತದ ಮಣ್ಣಿಗೆ ಗರುಗದಸ್ವರಸವನ್ನು ಹಿಂಡಿ ಕಲ್ಕಮಾಡಿ ಲೇಪಿಸಿದರೂ ಶೂಕವೃನ್ತವಿಷಹರವು. ಇರುವೆ, ನೊಣ, ಸೊಳ್ಳೆಗಳು ಕಚ್ಚಿದರೆ ಹುತ್ತದ ಮಣ್ಣನ್ನು ಗೋಮೂತ್ರದಲ್ಲಿ ಕಲಿಸಿ ಲೇಪಿಸುವುದರಿಂದಲೂ ಉಗುರಿನಿಂದ ಕೆರೆದು ಶೋಫವುಂಟಾದರೆ ಗರುಗದ ಸೊಪ್ಪಿನ ರಸದಿಂದ ಲೇಪಿಸುವುದರಿಂದಲೂ ಹಿತವಾಗುತ್ತದೆ. ಪ್ರತಿಸೂರ್ಯಕ ಕೀಟದ ದಂಶ ವಿಷಕ್ಕೆ ಹಾವು ಕಚ್ಚಿದ ವಿಷದ ಪ್ರತೀಕಾರದಂತೆ ಚಿಕಿತ್ಸೆಮಾಡಬೇಕು.

ತ್ರಿವಿಧಾ ವೃಶ್ಚಿಕಾಃ ಪ್ರೋಕ್ತಾ ಮನ್ದಮಧ್ಯಮಹಾವಿಷಾಃ ।
ಗೋಶಕೃತ್ಕೋಥಜಾ ಮನ್ದಾ ಮಧ್ಯಾಃ ಕಾಷ್ಠೇಷ್ಟಿಕೋದ್ಭವಾಃ
ಸರ್ಪಕೋಥೋದ್ಭವಾಸ್ತೀಕ್ಷ್ಣಾ ಯೇ ಚಾನ್ಯೇ ವಿಷಸಂಭವಾಃ ॥೫೭॥
ಮನ್ದಾ ದ್ವಾದಶ ಮಧ್ಯಾಸ್ತು ತ್ರಯಃ ಪಞ್ಚದಶೋತ್ತಮಾಃ ।
ದಶವಿಂಶತಿರಿತ್ಯೇತೇ ಸಂಖ್ಯಯಾ ಪರಿಕೀರ್ತಿತಾಃ ॥೫೮॥

ಅರ್ಥ—ಚೇಳುಗಳನ್ನು ಮಂದವಿಷ, ಮಧ್ಯವಿಷ, ಮಹಾವಿಷವುಳ್ಳವೆಂದು ೩ ವಿಧಗಳಾಗಿ ವಿಂಗಡಿಸುತ್ತಾರೆ. ಹಸುವಿನಸಗಣಿ ಕೊಳೆತು ಅದರಲ್ಲಿ ಹುಟ್ಟುವ ಚೇಳುಗಳು ಅಲ್ಪವಿಷವುಳ್ಳವು. ಮರಗಳಲ್ಲೂ ಇಟ್ಟಿಗೆ ಗೂಡುಗಳಲ್ಲೂ ಹುಟ್ಟುವವು ಮಧ್ಯವಿಷವುಳ್ಳವು. ಕೊಳೆತ ಹಾವಿನದೇಹದಲ್ಲಿ ಹುಟ್ಟುವ ಚೇಳುಗಳೂ ಮತ್ತು ವಿಷದಿಂದ ಹುಟ್ಟುವ ಇತರ ಚೇಳುಗಳೂ ತೀಕ್ಷ್ಣವಿಷವುಳ್ಳವುಗಳೆಂದು ತಿಳಿಯಬೇಕು. ಮಂದವಿಷ

ವುಳ್ಳ ಚೇಳುಗಳು ೧೨, ಮಧ್ಯವಿಷವುಳ್ಳವು ೩ ತೀಕ್ಷ್ಣವಿಷವುಳ್ಳವು ೧೫ ವಿಷಗಳು, ಈ ರೀತಿಯಾಗಿ ಒಟ್ಟು ೩೦ ಭೇದಗಳಿವೆಯೆಂದು ನಿರ್ಧರಿಸಲ್ಪಟ್ಟಿವೆ.

ಕೃಷ್ಣಃ ಶ್ಯಾವಃ ಕರ್ಬುರಃ ಪಾಣ್ಡುವರ್ಣೋ ಗೋಮೂತ್ರಾಭಃ ಕರ್ಕಶೋ ಮೇಚಕಶ್ಚ।
ಪೀತೋ ಧೂಮ್ರೋ ರೋಮಶಃ ಶಾಡ್ವಲಾಭೋ ರಕ್ತಶ್ಚೈತೇ ಮನ್ದವೀರ್ಯಾ ಮತಾಸ್ತು ॥೫೯॥
ಏಭಿರ್ದಷ್ಟೇ ವೇದನಾ ವೇಪಥುಶ್ಚ ಗಾತ್ರಸ್ತಮ್ಭಃ ಕೃಷ್ಣರಕ್ತಾಗಮಶ್ಚ
ಶಾಖಾದಷ್ಟೇ ವೇದನಾ ಚೋರ್ಧ್ವಮೇತಿ ದಾಹಸ್ವೇದೌ ದಂಶಶೋಫೋ ಜ್ವರಶ್ಚ ॥೬೦॥
ಯೇಷಾಂ ಚೈತೇ ವೃಶ್ಚಿಕಾಃ ಪುಚ್ಛದೇಶೇ ಸ್ಯುರ್ಭೂಯಿಷ್ಠೇಭಿಃ ಪರ್ವಭಿಶ್ಚೇತರೇಭ್ಯಃ।

ಅರ್ಥ—ಕಪ್ಪು, ಹೊಗೆ, ವಿಚಿತ್ರ, ಕೆಂಪುಮಿಶ್ರವಾದ ಬಿಳುಪು, ಗೋಮೂತ್ರ ಇವುಗಳ ಬಣ್ಣದಂತಿರುವ, ಒರಟಾದ ನವಿಲಿನ ಕತ್ತಿನಬಣ್ಣವುಳ್ಳ, ಹಳದಿ, ಧೂಮ್ರ ವರ್ಣವುಳ್ಳ ರೋಮಗಳಿಂದ ಕೂಡಿ ಹಸುರುಗರಿಕೆಯಂತೆ ಕೆಂಪುಬಣ್ಣವುಳ್ಳವೆಂದು ೧೨ ವಿಧಗಳಾದ ಮಂದವಿಷ ಚೇಳುಗಳುಂಟು. ಇವುಗಳ ಹೊಟ್ಟೆಬೆಳ್ಳಗಿರುತ್ತದೆ. ಇವುಗಳು ಕಚ್ಚಿದರೆ ನೋವು, ಮೈನಡುಕ, ಮೈಬಿಗಿತ, ಕಪ್ಪುಬಣ್ಣದ ರಕ್ತವು ಹೊರಕ್ಕೆ ಬರುವುದು ಈ ಲಕ್ಷಣಗಳಿರುತ್ತವೆ. ಕೈಕಾಲುಗಳಲ್ಲಿ ಕಚ್ಚಿದರೆ ನೋವು ಮೇಲಕ್ಕೆ ಏರುತ್ತಾ ಹೋಗುತ್ತದೆ. ಈ ವಿಧದ ಚೇಳುಗಳು ಕಚ್ಚಿದರೆ ಮೈಉರಿತ, ಬೆವರು, ಕಚ್ಚಿದಕಡೆ ಊದುವುದು, ಜ್ವರ ಬರುವುದು ಈ ಲಕ್ಷಣಗಳಿರುತ್ತವೆ. ಇತರ ವಿಧದ ಚೇಳುಗಳಿಗಿಂತಲೂ ಬಾಲದಲ್ಲಿ ಹೆಚ್ಚು ಗಿಣ್ಣುಗಳಿರುತ್ತವೆ (ಅಂದರೆ ಕೊಂಡಿಯ ಹಿಂದುಗಡೆಯಲ್ಲಿ ಅನೇಕ ಗುಂಡು ಮಣಿಗಳನ್ನು ಪೋಣಿಸಿರುವಂತೆ ಗಿಣ್ಣುಗಳಿರುತ್ತವೆ.

ರಕ್ತಃ ಪೀತಃ ಕಪಿಲಶ್ಚೋದರೇಣ ಸರ್ವೇ ಧೂಮ್ರಾ ಪರ್ವಭಿಶ್ಚ ತ್ರಿಭಿಃ ಸ್ಯುಃ ॥೬೧॥
ಏತೇ ಮೂತ್ರೋಚ್ಚಾರಪೂತ್ಯಣ್ಡಜಾತಾ ಮಧ್ಯಾ ಜ್ಞೇಯಾಸ್ತ್ರಿಪ್ರಕಾರೋರಗಾಣಾಮ್।
ಯಸ್ಯೈತೇಷಾಮನ್ವಯಾದ್ಯಃ ಪ್ರಸೂತೋ ದೋಷೋತ್ಪತ್ತಿಂ ತತ್ಸ್ವರೂಪಾಂ ಸ ಕುರ್ಯಾತ್ ॥೬೨॥
ಜಿಹ್ವಾಶೋಫೋ ಭೋಜನಸ್ಯಾವರೋಧೋ ಮೂರ್ಛಾ ಚೋಗ್ರಾ ಮಧ್ಯವೀರ್ಯಾಭಿದಷ್ಟೇ।

ಅರ್ಥ—ರಕ್ತದಬಣ್ಣ, ಹಳದಿ, ಕೆಂಪು, ಹಳದಿಮಿಶ್ರವಾದದ್ದು, ಕಪಿಲಬಣ್ಣವುಳ್ಳ ಹೊಟ್ಟೆಯು ಧೂಮ್ರವರ್ಣ (ಹೊಗೆಯಬಣ್ಣ)ವುಳ್ಳಬಾಲದಲ್ಲಿ ಮೂರೇ ಗಿಣ್ಣುಳ್ಳದಾಗಿಯೂ ಸರ್ಪಾದಿಗಳ ಮೂತ್ರಮಲಾದಿಗಳಿಂದಲೂ ಕೊಳೆತ ಮೊಟ್ಟೆಗಳಿಂದಲೂ ಹುಟ್ಟುತ್ತವೆಯಾಗಿಯೂ ದರ್ವೀಕರಾದಿ ಮೂರುವಿಧ ಸರ್ಪಗಳಿಂದ (ಅವುಗಳ ಮಲಮೂತ್ರಾದಿಗಳು ಕೊಳೆತು ಹುಟ್ಟುತ್ತವೆ) ಹುಟ್ಟಿದವಾಗಿಯೂ ಮಧ್ಯವಿಷವುಳ್ಳವಾಗಿಯೂ ಇರುತ್ತವೆ. ಅವುಗಳ ಉತ್ಪತ್ತಿಗೆ ಕಾರಣಗಳಾದ ಸರ್ಪಗಳ ಪ್ರಕೃತಿಗಳಂತೆಯೇ ದೋಷಗಳನ್ನೂ ಲಕ್ಷಣಗಳನ್ನೂ ಉಂಟುಮಾಡುತ್ತವೆ. ಈ ಮಧ್ಯವಿಷವೇಗವುಳ್ಳ ಚೇಳುಗಳು

ಕಡಿದರೆ ರೋಗಿಗೆ ನಾಲಗೆ ಊದುತ್ತದೆ. ಊಟ ಮಾಡುವುದಕ್ಕೆ ತಡೆಯುಂಟಾಗುತ್ತದೆ. ಅತಿಯಾಗಿ ಪ್ರಜ್ಞೆತಪ್ಪುತ್ತದೆ.

ಶ್ವೇತಶ್ಚಿತ್ರಃ ಶ್ಯಾಮಲೋ ಲೋಹಿತಾಭೋ ರಕ್ತಃ ಶ್ವೇತೋ ರಕ್ತನೀಲೋದರೌ ಚ ॥೬೩॥

ಪೀತೋಽರಕ್ತೋ ನೀಲಪೀತೋಽಪರಸ್ತು ರಕ್ತೋ ನೀಲೋ ನೀಲಶುಕ್ಲಸ್ತಥಾ ಚ ।
ರಕ್ತೋ ಬಭ್ರುಃ ಪೂರ್ವವಚ್ಚೈಕಪರ್ವಾ ಯಶ್ಚಾಪರ್ವಾ ಪರ್ವಣೀ ದ್ವೇ ಚ ಯಸ್ಯ ॥೬೪॥

ನಾನಾರೂಪಾ ವರ್ಣತಶ್ಚಾಪಿ ಘೋರಾ ಜ್ಞೇಯಾಶ್ಚೈತೇ ವೃಶ್ಚಿಕಾಃ ಪ್ರಾಣಚೌರಾಃ ।
ಜನ್ಮೈತೇಷಾಂ ಸರ್ಪಕೋಥಾತ್ ಪ್ರದಿಷ್ಟಂ ದೇಹೇಭ್ಯೋ ವಾ ಘಾತಿತಾನಾಂ ವಿಷೇಣ ॥೬೫॥

ಏಭಿರ್ದಷ್ಟೇ ಸರ್ಪವೇಗಪ್ರವೃತ್ತಿಃ ಸ್ಫೋಟೋತ್ಪತ್ತಿರ್ಭ್ರಾನ್ತಿ ದಾಹೌ ಜ್ವರಶ್ಚ ।
ಖೇಭ್ಯಃ ಕೃಷ್ಣಂ ಶೋಣಿತಂ ಯಾತಿ ತೀವ್ರಂ ತಸ್ಮಾತ್ ಪ್ರಾಣೈಸ್ತ್ಯಜ್ಯತೇ ಶೀಘ್ರಮೇವ ॥೬೬॥

ಉಗ್ರಮಧ್ಯವಿಷೈರ್ದಷ್ಟಂ ಚಿಕಿತ್ಸೇತ್ ಸರ್ಪದಷ್ಟವತ್ ।
ಆದಂಶಂ ಸ್ವೇದಿತಂ ಚೂರ್ಣೈಃ ಪ್ರಚ್ಛಿತಂ ಪ್ರತಿಸಾರಯೇತ್ ॥೬೭॥

ಅರ್ಥ—ಬಿಳುಪು, ಚಿತ್ರಬಣ್ಣ, ಶ್ಯಾಮಲ, ಲೋಹಿತ, ರಕ್ತ ಮತ್ತು ಬಿಳುಪು ಮಿಶ್ರ ವರ್ಣವುಳ್ಳವು, ಹೊಟ್ಟೆಯು ನೀಲ ಮತ್ತು ರಕ್ತಬಣ್ಣ ಮಿಶ್ರಿತವಾಗಿರುವ ಚೇಳುಗಳೂ ಹಳದಿ ಮತ್ತು ಕಪ್ಪು (ಅರಕ್ತ), ನೀಲಿ ಹಳದಿ ಮಿಶ್ರವಾದ ರಕ್ತ ಮತ್ತು ನೀಲ ಮಿಶ್ರ ವಾದದ್ದು, ನೀಲಿ ಮತ್ತು ಬಿಳುಪು ವರ್ಣಗಳು ಮಿಶ್ರವಾದದ್ದು, ರಕ್ತ ಮತ್ತು ಬಿಳುಪು ಮಿಶ್ರವಾದದ್ದು, ಹಿಂದೆ ಹೇಳಿದಂತೆ ಒಂದೇ ಗಿಣ್ಣುಳ್ಳದ್ದು, ಗಿಣ್ಣುಗಳಿಲ್ಲದವು, ಎರಡು ಗಿಣ್ಣುಗಳುಳ್ಳದ್ದು, ನಾನಾಆಕಾರವುಳ್ಳವು, ಉಗ್ರವಾದ ಬಣ್ಣವುಳ್ಳವು ಈ ವಿಧಗಳಾದ ಚೇಳುಗಳು ಕಚ್ಚಿದರೆ ಪ್ರಾಣವನ್ನು ನಾಶಮಾಡುತ್ತವೆ. (ಪ್ರಾಣವನ್ನು ಕದಿಯುತ್ತವೆ ಅಂದರೆ ಕೊಲ್ಲುತ್ತವೆ). ಯಾವ ವಿಧ ಸರ್ಪವು ಕೊಳೆಯುತ್ತದೋ ಅದರಿಂದುತ್ಪನ್ನ ವಾದ ಚೇಳೂ ಆ ವಿಧದ ಸರ್ಪದ ವಿಷದಂತೆಯೇ ಪ್ರಾಣಹರಣಮಾಡುತ್ತದೆ. ವಾತ, ಪಿತ್ತ, ಕಫ ದೋಷಗಳನ್ನು ದರ್ವೀಕರ, ಮಂಡಲಿ, ರಾಜಿಲಗಳು ಕ್ರಮವಾಗಿ ಪ್ರಕೋಪ ಗೊಳಿಸುತ್ತವೆ. ಹಾಗೆಯೇ ಅವುಗಳ ಮಲ ಮೂತ್ರ ಶವಗಳು ಕೊಳೆತು ಅವುಗಳಿಂದ ಹುಟ್ಟುವ ಚೇಳುಗಳೂ ಆಯಾಯ ದೋಷಗಳನ್ನೇ ಪ್ರಕೋಪಗೊಳಿಸುತ್ತವೆ. ಈ ಚೇಳು ಗಳು ಕಚ್ಚಿದರೆ ಆಯಾಯ ಜಾತಿಯ ಸರ್ಪಗಳ ವಿಷವೇಗಗಳೇ ಉಂಟಾಗುತ್ತವೆ, ಗುಳ್ಳೆ ಗಳೇಳುತ್ತವೆ. ತಲೆತಿರುಗು, ಉರಿತ, ಜ್ವರ, ಇಂದ್ರಿಯಗಳಿಂದ ಕರಿಯಬಣ್ಣದ ರಕ್ತವು ಅತಿಯಾಗಿ ಸ್ರಾವವಾಗಿ ರೋಗಿಯು ಬೇಗ ಸಾಯುತ್ತಾನೆ. ಉಗ್ರ, ಮಧ್ಯ ವಿಷವುಳ್ಳ ಚೇಳುಗಳು ಕಚ್ಚಿದರೆ ಆಯಾಯ ಚೇಳು ಹುಟ್ಟಿದ ಸರ್ಪಶರೀರದ ಪ್ರಕೃತಿಗೆ ತಕ್ಕ ಚಿಕಿತ್ಸಾ

ಕ್ರಮಗಳನ್ನು ಮಾಡಿಸಬೇಕು. ಕಚ್ಚಿದ ವ್ರಣವನ್ನು ತಕ್ಕ ಚೂರ್ಣಗಳಿಂದ ಸ್ವೇದ ಮಾಡಿಸಿ (ಬೆವರಿಸಿ) ಚೂರಿಯಿಂದ ವ್ರಣವನ್ನು ಕತ್ತರಿಸಿ ವಿಷಹರ ದ್ರವ್ಯಗಳಿಂದ ಪ್ರತಿಸಾರಣಮಾಡಬೇಕು. ಅಂದರೆ ವಿಷಮಿಶ್ರಿತ ರಕ್ತವನ್ನು ಶರೀರದಿಂದ ಹೊರಕ್ಕೆ ಹೊರಡಿಸಬೇಕು.

ರಜನೀಸೈಂಧವವ್ಯೋಷ ಶಿರೀಷಫಲಪುಷ್ಪಜೈಃ ।
ಮಾತುಲುಙ್ಗಾಮ್ಲಗೋಮೂತ್ರಪಿಷ್ಟಂ ಚ ಸುರಸಾಗ್ರಜಮ್ ॥೭೮॥
ಲೇಪೇ ಸ್ವೇದೇ ಸುಖೋಷ್ಣಂ ಚ ಗೋಮಯಂ ಹಿತಮಿಷ್ಯತೇ ।
ಪಾನೇ ಕ್ಷೌದ್ರಯುತಂ ಸರ್ಪಿಃ ಕ್ಷೀರಂ ವಾ ಬಹುಶರ್ಕರಮ್ ॥೭೯॥

ಅರ್ಥ—ಅರಿಶಿನ, ಸೈಂಧವ, ತ್ರಿಕಟು, ಬಾಗೆಬೀಜ, ಬಾಗೆಹೂವು, ತುಳಸಿಯ ತೆನೆ ಇವುಗಳನ್ನು ಸಮಭಾಗದಿಂದ ಸೇರಿಸಿ ಮಾದಳದ ಹಣ್ಣಿನ ಹುಳಿರಸ ಮತ್ತು ಗೋಮೂತ್ರಗಳಿಂದ ಅರೆದು ಆ ಕಲ್ಕವನ್ನು ಕಚ್ಚಿದ ವ್ರಣಕ್ಕೆ ಲೇಪಿಸಬೇಕು. ಹಸುವಿನ ಸಗಣಿಯನ್ನು ಕೆಂಡದಮೇಲಿಟ್ಟು ಬಿಸಿಮಾಡಿ ಸುಖೋಷ್ಣವಾಗಿರುವಂತೆ ಚೇಳುಕಚ್ಚಿದ ವ್ರಣಕ್ಕೆ ಶಾಖಕೊಡಬೇಕು. ತುಪ್ಪ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು. ಅಥವಾ ತುಂಬಾ ಸಕ್ಕರೆಯನ್ನು ಹಾಕಿದ ಹಾಲನ್ನು ಕುಡಿಸಬೇಕು.

ದಂಶಂ ಮಂದವಿಷಾಣಾಂ ತು ಚಕ್ರತೈಲೇನ ಸೇಚಯೇತ್ ।
ವಿದಾರೀ ಗಣಸಿದ್ಧೇನ ಸುಖೋಷ್ಣೇನಾಥವಾ ಪುನಃ ॥೮೦॥
ಕುರ್ಯಾಚ್ಚೋತ್ಕಾರಿಕಾಸ್ವೇದಂ ವಿಷಘ್ನೈರುಪನಾಹಯೇತ್
ಗುಡೋದಕಂ ವಾ ಸುಹಿಮಂ ಚಾತುರ್ಜಾತಕ ಸಂಯುತಮ್ ॥೮೧॥
ಪಾನಮಸ್ಮೈ ಪ್ರದಾತವ್ಯಂ ಕ್ಷೀರಂ ವಾ ಸಗುಡಂ ಹಿಮಮ್
ಶಿಖಿಕುಕ್ಕುಟಬರ್ಹಾಣಿ ಸೈನ್ಧವಂ ತೈಲಸರ್ಪಿಷೀ ॥೮೨॥
ಧೂಪೋ ಹನ್ತಿ ಪ್ರಯುಕ್ತಸ್ತು ಕೀಟವೃಶ್ಚಿಕಜಂ ವಿಷಮ್
ಕುಸುಮ್ಭಪುಷ್ಪಂ ರಜನೀ ನಿಶಾ ವಾ ಕೋದ್ರವಂ ತೃಣಮ್ ॥೮೩॥
ಏಭಿರ್ಘೃತಾಕ್ತೈರ್ಧೂಪಸ್ತು ಪಾಯುದೇಶೇ ಪ್ರಯೋಜಿತಃ
ನಾಶಯೇದಾಶು ಕೀಟೋತ್ಥಂ ವೃಶ್ಚಿಕಸ್ಯ ಚ ಯದ್ವಿಷಮ್ ॥೮೪॥

ಅರ್ಥ—ಮಂದ ವಿಷವುಳ್ಳ ಪ್ರಾಣಿಗಳು ಕಚ್ಚಿದರೆ ಚಕ್ರತೈಲದಿಂದ ಕಚ್ಚಿದ ವ್ರಣದ ಮೇಲೆ ಸೇಚನೆಮಾಡಬೇಕು. ಅಥವಾ ವಿದಾರಿಗಣ ದ್ರವ್ಯಗಳ ಕಷಾಯದಿಂದ ಸುಖೋಷ್ಣವಾಗಿ ವ್ರಣ ಸೇಚನೆಮಾಡಿಸಬೇಕು, ಉತ್ಕಾರಿಕೆಯ (ಬಿಸಿ ಕಡಬಿನಿಂದ) ಸ್ವೇದವನ್ನು ಮಾಡಿಸಬೇಕು. (ವಿಷಹರ ದ್ರವ್ಯಗಳಿಂದ ಕಡುಬನ್ನು ತಯಾರಿಸಿ ಸ್ವೇದ ಮಾಡಿಸಬಾರದು. ದಾಲ್ಚಿನ್ನಿ, ಲವಂಗಪತ್ರೆ, ಸಣ್ಣ ಏಲಕ್ಕಿ, ನಾಗಕೇಸರಗಳನ್ನು ಚೂರ್ಣ ಮಾಡಿ ಸೇರಿಸಿರುವ ತಣ್ಣಗಿರುವ ಬೆಲ್ಲದ ನೀರನ್ನಾಗಲೀ ಅಥವಾ ತಣ್ಣಗಿರುವ ಹಾಲಿಗೆ ಬೆಲ್ಲದ ಪುಡಿಯನ್ನು ಕದರಿಯಾಗಲೀ ಕುಡಿಸಬೇಕು. ನವಿಲು, ಕೋಳಿಗಳ ಗರಿಗಳು, ಸೈಂಧವಲವಣ, ತಿಲತೈಲ, ತುಪ್ಪ ಇವುಗಳನ್ನೆಲ್ಲಾ ಒಟ್ಟುಗೂಡಿಸಿ ಚೇಳಿನ ವಿಷವು

ಗಲಿರುವ ಶರೀರ ಭಾಗಗಳಿಗೆ ತಗಲುವಂತೆ ಧೂಪನಮಾಡಿದರೆ ಕೀಟ ಚೇಳುಗಳು ಕಚ್ಚಿದ ವಿಷವು ನಿವಾರಣೆಯಾಗುತ್ತದೆ. ಕುಸುಮೆಹೂವು, ಅರಿಶಿನ, ಮರದ ರಿಶಿನ ಹಾರಕ, ಧೂಳು ಇವುಗಳನ್ನು ಚೂರ್ಣಿಸಿ ತುಂಬಾ ತುಪ್ಪವನ್ನು ಸೇರಿಸಿದ ಧೂಪ ನವು ಚೇಳು ಕಚ್ಚಿದ ಸ್ಥಳಕ್ಕೆ ತಗುಲಿಸಿದರೆ ಚೇಳು ಮೊದಲಾದ ಹುಳುಗಳ ವಿಷವು ನಿವಾ ರಣೆಯಾಗುತ್ತದೆ.

ಲೂತಾವಿಷಂ ಘೋರತಮಂ ದುರ್ವಿಜ್ಞೇಯತಮಂ ಚ ತತ್ ।
ದುಶ್ಚಿಕಿತ್ಸ್ಯತಮಂ ಚಾಪಿ ಭಿಷಗ್ಭಿರ್ಮನ್ದಬುದ್ಧಿಭಿಃ ॥೭೫॥
ಸವಿಷಂ ನಿರ್ವಿಷಂ ಚೈತದಿತ್ಯೇವಂ ಪರಿಶಙ್ಕ್ಯತೇ ।
ವಿಷಘ್ನಮೇವ ಕರ್ತವ್ಯಮವಿರೋಧಿ ಯದೌಷಧಮ್ ॥೭೬॥
ಅಗದಾನಾಂ ಹಿ ಸಂಯೋಗೋ ವಿಷಜುಷ್ಟಸ್ಯ ಯುಜ್ಯತೇ ।
ನಿರ್ವಿಷೇ ಮಾನವೇ ಯುಕ್ತೋಽಗದಃ ಸಮ್ಪದ್ಯತೇಽಸುಖಮ್ ॥೭೭॥
ತಸ್ಮಾತ್ ಸರ್ವಪ್ರಯತ್ನೇನ ಜ್ಞಾತವ್ಯೋ ವಿಷನಿಶ್ಚಯಃ ।
ಅಜ್ಞಾತ್ವಾ ವಿಷಸದ್ಭಾವಂ ಭಿಷಗ್ವ್ಯಾಪಾದಯೇನ್ನರಮ್ ॥೭೮॥

ಅರ್ಥ—ಲೂತಾವಿಷವು ಅತ್ಯಂತ ಭಯಜನಕವಾದದ್ದು. ಅದನ್ನು ತಿಳಿಯು ವುದು ಬಲುಕಷ್ಟವಾದದ್ದು. ಅಜ್ಞವೈದ್ಯರಿಂದ ಚಿಕಿತ್ಸೆಮಾಡುವುದಕ್ಕೆ ಆಗುವುದಿಲ್ಲ. ಸವಿಷ ನಿರ್ವಿಷಗಳನ್ನು ನಿರ್ಧರಿಸಲು ಅನುಮಾನವುಂಟಾದರೆ ರಸಾದಿ ಧಾತುಗಳಿಗೆ ವಿರುದ್ಧವಲ್ಲದ ಅನ್ನಪಾನಗಳನ್ನೇ ಉಪಯೋಗಿಸಬೇಕು. ಅಗದಪ್ರಯೋಗವನ್ನು ಮಾಡ ಬಾರದು. ವಿಷಪೀಡಿತನಿಗೆ ಅಗದವನ್ನು ಪ್ರಯೋಗಿದರೆ ಹಿತವಾಗುತ್ತದೆ. ವಿಷರಹಿತ ನಾದವನಿಗೆ ಸಕಲಪ್ರಯತ್ನದಿಂದಲೂ ವಿಷಸಂಪರ್ಕವಾಗಿದೆಯೇ ಇಲ್ಲವೇ ಎಂಬ ವಿಚಾರ ವನ್ನು ತಿಳಿದುಕೊಂಡಿರಬೇಕಾದದ್ದು ಅತ್ಯವಶ್ಯಕವಾದ ವಿಚಾರವು. ಶರೀರದಲ್ಲಿ ವಿಷವು ಸೇರಿಕೊಂಡಿರುತ್ತೆಂಬ ವಿಚಾರವನ್ನು ತಿಳಿದುಕೊಳ್ಳದೆ ಇರುವ ವೈದ್ಯನು ತನ್ನ ಅವಿವೇಕ ದಿಂದ ರೋಗಿಯನ್ನು ಕೊಂದುಬಿಡುತ್ತಾನೆ.

ಪ್ರೋದ್ಭಿದ್ಯಮಾನಸ್ತು ಯಥಾಙ್ಕುರೇಣ ನವ್ಯಕ್ತಜಾತಿಃ ಪ್ರವಿಭಾತಿ ವೃಕ್ಷಃ ।
ತದ್ವದ್ದುರಾಲಕ್ಷ್ಯತಮಂ ಹಿ ತಾಸಾಂ ವಿಷಂ ಶರೀರೇ ಪ್ರವಿಕೀರ್ಣಮಾತ್ರಮ್ ॥೭೯॥

ಅರ್ಥ—ಚಿಗುರು ಬಿಡದಿರುವ ಮರವನ್ನು ಇಂತಹ ಜಾತಿಗೆ ಸೇರಿದ್ದೆಂದು ನಿರ್ಧರಿಸು ವುದಕ್ಕೆ ಹೇಗೆ ಆಗುವುದಿಲ್ಲವೋ ಹಾಗೆಯೇ ಶರೀರದೊಳಗೆ ವಿಷವು ಪ್ರವೇಶಮಾಡಿದ ಕೂಡಲೇ ಇಂತಹ ಜಾತಿಯ ವಿಷವೆಂದು ನಿರ್ಧರಿಸುವುದು ಕಷ್ಟವಾಗುತ್ತದೆ.

ಈಷಚ್ಚ ಕಣ್ಡೂಪ್ರಚಲಂ ಸಕೋಠಮವ್ಯಕ್ತವರ್ಣಂ ಪ್ರಥಮೇಽಹನಿ ಸ್ಯಾತ್ ।
ಅನ್ತೇಷು ಶೂನಂ ಪರಿನಿಮ್ನ ಮಧ್ಯಂ ಪ್ರವ್ಯಕ್ತ ರೂಪಂ ಚ ದಿನೇ ದ್ವಿತೀಯೇ ॥೮೦॥
ತ್ರ್ಯಹೇಣ ತದ್ದರ್ಶಯತೀಹ ದಂಶಮ್ ವಿಷಂ ಚತುರ್ಥೇಽಹನಿ ಕೋಪಮೇತಿ ।
ಅತೋಽಧಿಕೇಽಹ್ನಿ ಪ್ರಕರೋತಿ ಜನ್ತೋರ್ವಿಷ ಪ್ರಕೋಪ ಪ್ರಭವಾನ್ ವಿಕಾರಾನ್ ॥೮೧॥

ಷಷ್ಠೇ ದಿನೇ ವಿಪ್ರಸೃತಂ ತು ಸರ್ವಾನ್ ಮರ್ಮಪ್ರದೇಶಾನ್ ಭೃಶಮಾವೃಣೋತಿ ।
ತತ್ಸಪ್ತಮೇಽತ್ಯರ್ಥಪರೀತಗಾತ್ರಂ ವ್ಯಾಪಾದಯೇನ್ಮರ್ತ್ಯಮತಿಪ್ರವೃದ್ಧಮ್ ॥೮೨॥

ಅರ್ಥ—ವಿಷಕೀಟಗಳು ಕಚ್ಚಿದ ಮೊದಲನೆಯದಿವಸ ಕಚ್ಚಿದ ಪ್ರದೇಶದಲ್ಲಿ ಸ್ವಲ್ಪ ನವೆ, ಸ್ವಲ್ಪಚಲನೆ, ಗಂಥೆಗಳು, ವರ್ಣವ್ಯತ್ಯಾಸವಿಲ್ಲದೆ ಇರುತ್ತವೆ. ೨ ನೆಯದಿನ ಗಂಥೆಗಳು ತುದಿಯಲ್ಲಿ ಉಬ್ಬಿ ಮಧ್ಯದಲ್ಲಿ ಹಳ್ಳವಾಗಿ ಸ್ಪಷ್ಟವಾಗಿ ಕಂಡುಬರುತ್ತವೆ. ೩ ನೆಯದಿನ ಕಡಿದಭಾಗವು ವಿಷಲಕ್ಷಣದಿಂದ ಕೂಡಿರುತ್ತದೆ. ೪ ನೆಯದಿನ ವಿಷವು ಪ್ರಕೋಪಗೊಂಡು ೫ ನೆಯದಿನ ಹಗಲು ಹೊತ್ತಿನಲ್ಲಿ ವಿಷಪ್ರಕೋಪದಿಂದುಂಟಾಗುವ ಉಪದ್ರವಗಳು ಕಾಣುತ್ತವೆ. ೬ ನೆಯದಿನ ವಿಷವು ಹರಡಿ ಎಲ್ಲಾ ಮರ್ಮಪ್ರದೇಶಗಳನ್ನೂ ವ್ಯಾಪಿಸುತ್ತದೆ. ೭ ನೆಯದಿನ ವಿಷವು ಅತಿಪ್ರವೃದ್ಧವಾಗಿ ದೇಹವನ್ನೆಲ್ಲಾ ಸಂಪೂರ್ಣವಾಗಿ ವ್ಯಾಪಿಸಿ ರೋಗಿಯನ್ನು ಕೊಲ್ಲುತ್ತದೆ.

ಯಾಸ್ತೀಕ್ಷ್ಣಚಣ್ಡೋಗ್ರವಿಷಾ ಹಿ ಲೂತಾಸ್ತಾಃ ಸಪ್ತರಾತ್ರೇಣ ನರಂ ನಿಹನ್ಯುಃ ।
ಅತೋಽಧಿಕೇನಾಪಿ ನಿಹನ್ಯುರನ್ಯಾ ಯಾಸಾಂ ವಿಷಂ ಮಧ್ಯಮವೀರ್ಯಮುಕ್ತಮ್ ॥೮೩॥
ಯಾಸಾಂ ಕನೀಯೋ ವಿಷವೀರ್ಯಮುಕ್ತಂ ತಾಃ ಪಕ್ಷಮಾತ್ರೇಣ ವಿನಾಶಯನ್ತಿ ।
ತಸ್ಮಾತ್ ಪ್ರಯತ್ನಂ ಭಿಷಗತ್ರಕುರ್ಯಾದಾದಂಶಪಾತಾದ್ವಿಷಘಾತಿಯೋಗ್ಯೈಃ ॥೮೪॥

ಅರ್ಥ—ತೀಕ್ಷ್ಣವಿಷ (ದಾಹ ಪಾಕ ಸ್ರಾವಕರಗಳು) ಚಂಡಿ (ಅತಿಕೋಪಾಟೋಪಕರಗಳು) ಇವುಗಳಿಂದ ಸಹಿಸಲು ಅಸಾಧ್ಯವೇಗವುಳ್ಳ ಲೂತಗಳು ಕಚ್ಚಿದರೆ ಕಚ್ಚಲ್ಪಟ್ಟ ಮನುಷ್ಯನು ೭ ದಿನಗಳಲ್ಲಿ ಸಾಯುತ್ತಾನೆ. ಮಧ್ಯಮವೀರ್ಯವುಳ್ಳ ವಿಷಕೀಟಗಳು ಕಚ್ಚಿದರೆ ಅದಕ್ಕಿಂತಲೂ ಹೆಚ್ಚುದಿನಗಳಲ್ಲಿ ಸಾಯುತ್ತಾನೆ. ಅಲ್ಪವಿಷವುಳ್ಳ ಕೀಟಗಳು ಕಚ್ಚಿದರೆ ಅವು ಒಂದು ಪಕ್ಷದಲ್ಲಿ ಕೊಲ್ಲುತ್ತವೆ. ಆದಕಾರಣ ವೈದ್ಯನು ಲೂತಾ ವಿಷದಿಂದ ಪೀಡಿತನಾದ ರೋಗಿಯನ್ನು ವಿಷಹರಗಳಾದ ಔಷಧಪ್ರಯೋಗಗಳಿಂದ ಕಚ್ಚಿದ ವಿಷದಕಟ್ಟುಗಳು ಕೆಳಕ್ಕೆ ಬೀಳುವವರೆಗೂ ಚಿಕಿತ್ಸೆಮಾಡಿ ಉಪಚರಿಸಬೇಕು.

ವಿಷಂ ತು ಲಾಲಾನಖಮೂತ್ರದಂಷ್ಟ್ರಾರಜಃ ಪುರೀಷೈ ರಥಚೇನ್ದ್ರಿಯೇಣ
ಸಪ್ತಪ್ರಕಾರಂ ವಿಸೃಜನ್ತಿ ಲೂತಾಸ್ತದುಗ್ರಮಧ್ಯಾವರವೀರ್ಯಯುಕ್ತಮ್ ॥೮೫॥
ಸಕಣ್ಡುಕೋಠಂ ಸ್ಥಿರಮಲ್ಪಮೂಲಂ ಲಾಲಾಕೃತಂ ಮನ್ದರುಜಂ ವದನ್ತಿ
ಶೋಫಶ್ಚ ಕಣ್ಡೂಶ್ಚ ಪುಲಾನಿಕಾ ಚ ಧೂಮಾಯನಂ ಚೈವ ನಖಾಗ್ರದಂಶೇ ॥೮೬॥
ದಂಶಂ ತು ಮೂತ್ರೇಣ ಸಕೃಷ್ಣಮಧ್ಯಂ ಸರಕ್ತಪರ್ಯನ್ತಮವೇಹಿ ದೀರ್ಣಮ್
ದಂಷ್ಟ್ರಾಭಿರುಗ್ರಂ ಕಠಿನಂ ವಿವರ್ಣಂ ಜಾನೀಹಿ ದಂಶಂ ಸ್ಥಿರಮಂಡಲಂ ಚ ॥೮೭॥
ರಜಃ ಪುರೀಷೇನ್ದ್ರಿಯಜಂ ಹಿ ವಿದ್ಧಿ ಸ್ಫೋಟಂ ವಿಪಕ್ವಂ ಮಲಪೀಲು ಪಾಣ್ಡುವತ್
ಏತಾವದೇತತ್ಸಮುದಾಹೃತಂ ತು ವಕ್ಷ್ಯಾಮಿ ಲೂತಾ ಪ್ರಭವಂ ಪುರಾಣಮ್
ಸಾಮಾನ್ಯತೋ ದಷ್ಟಮಸಾಧ್ಯಸಾಧ್ಯಂ ಚಿಕಿತ್ಸಿತಂ ಚಾಪಿ ಯಥಾವಿಶೇಷಮ್ ॥೮೮॥

ಅರ್ಥ—ಹಿಂದೆ ಹೇಳಿದಂತೆ ದರ್ವೀಕರ ಮಂಡಲ ರಾಜಿಲ ಸರ್ಪಗಳ ಮೂತ್ರ ಮಲಶುಕ್ರ ಶವಾದಿಗಳು ಕೊಳೆತು ಕ್ರಮವಾಗಿ ಅವುಗಳಿಂದ ಹುಟ್ಟಿದ ವಾತ ಪಿತ್ತ ಕಫ

ದೋಷಗಳೇ ಅಧಿಕವಾಗಿರುವುದರಿಂದ ಪ್ರಧಾನ ಮಧ್ಯ ಹೀನವೀರ್ಯಗಳುಳ್ಳ ಕೀಟಗಳು ಜೊಲ್ಲು ಉಗುರು ಮೂತ್ರ ಹಲ್ಲು ಆರ್ತವ ಮಲ ಶುಕ್ರಗಳನ್ನು ಮನುಷ್ಯರ ದೇಹದ ಮೇಲೆ ವಿಸರ್ಜಿಸಿ ೭ ವಿಧಗಳ ಮೂಲಕ ವಿಷವನ್ನುಂಟುಮಾಡುತ್ತವೆ. ಇವುಗಳ ಪೈಕಿ ಅವುಗಳ ಜೊಲ್ಲು ಶರೀರಕ್ಕೆ ತಗುಲಿದರೆ ನವೆಯೂ ಗಂಧೆಯೂ ಸ್ಥಿರವಾಗಿ ಸ್ವಲ್ಪವೇ ಬಿಡವುಳ್ಳ ಸ್ವಲ್ಪ ನೋವುಳ್ಳ ವ್ರಣವುಂಟಾಗುತ್ತೆಂದು ಹೇಳುತ್ತಾರೆ. ಉಗುರಿನಿಂದ ಚುಚ್ಚಿದರೆ ಊದು ನವೆ ರೋಮಾಂಚ ಮೈಯಿಂದ ಬಿಸಿಯಾಗಿ ಹೊಗೆ ಹೊರಡುವಂತೆಯೂ ಆಗುತ್ತವೆ. ಮೂತ್ರವು ತಗಲಿದರೆ ಮೈಯಲ್ಲಿ ಗಂಧೆಯುಂಟಾಗಿ ಮಧ್ಯೆ ಕಪ್ಪಾಗಿಯೂ ಅಂಚಿನಲ್ಲಿ ಕೆಂಪಾಗಿಯೂ ಬಿರಿದುಹೋಗಿಯೂ ಇರುತ್ತವೆ. ಹಲ್ಲಿನಿಂದ ಕಚ್ಚಿದರೆ ಗಟ್ಟಿಯಾದ ಗುಂಡಾದ ಚಲನೆಯಿಲ್ಲದ ವರ್ಣವ್ಯತ್ಯಾಸವುಳ್ಳ ಬೊಬ್ಬೆಗಳೇಳುತ್ತವೆ. ವಿಷಕೀಟಗಳ ಮಲ ಶುಕ್ರಗಳು ಶರೀರಕ್ಕೆ ತಗುಲಿದರೆ ಪಕ್ವವಾದ ಗುಳ್ಳೆಗಳೇಳುತ್ತವೆ. ಶುಭ್ರವಾದ ಬಗಿನಿಯ (ಪೀಲು) ಹಣ್ಣಿನಂತೆ ಬಿಳುಪಾಗಿರುತ್ತವೆ. ಈ ರೀತಿಯಯಗಿ ಇದುವರೆಗೆ ಜೊಲ್ಲು ಮೂತ್ರಾದಿಗಳು ತಗಲಿದರೆ ಉಂಟಾಗುವ ಮತ್ತು ೧ ನೆಯದಿನದ ಲಾಗಾಯ್ತು ೧ ಪಕ್ಷದವರೆಗಿನ ಕಾಲದಲ್ಲಿ ಉಂಟಾಗುವ ಮರಣ ಲಕ್ಷಣಗಳನ್ನೂ ವಿವರಿಸಿದ್ದಾಯಿತು. ಇನ್ನುಮುಂದೆ ಲೂತಾದಷ್ಟ ವಿಷಗಳಿಗೆ ಸಾಮಾನ್ಯ ಲಕ್ಷಣಗಳನ್ನೂ ಸಾಧ್ಯಾಸಾಧ್ಯಗಳ ವಿಚಾರಗಳನ್ನೂ ಚಿಕಿತ್ಸೆಯ ವಿಧಾನಗಳನ್ನೂ ಹೇಳುತ್ತೇವೆ.

ವಿಶ್ವಾಮಿತ್ರೋ ನೃಪವರಃ ಕದಾಚಿದೃಷಿಸತ್ತಮಮ್
ವಸಿಷ್ಠಂ ಕೋಪಯಾಮಾಸ ಗತ್ವಾಶ್ರಮಪದಂ ಕಿಲ ||೯೦||
ಕುಪಿತಸ್ಯ ಮುನೇಸ್ತಸ್ಯ ಲಲಾಟಾತ್ ಸ್ವೇದಬಿನ್ದವಃ
ಅಪತರ್ ದರ್ಶದಾದೇವ ರವೇಸ್ತತ್ಸಮತೇಜಸಃ ||೯೧||
ತೃಣೇ ಮಹರ್ಷಿಣಾ ಲೂತೇ ಧೇನ್ವರ್ಥಂ ಸಂಭೃತೇಽಪಿ ಚ
ತತೋ ಜಾತಾಸ್ತ್ವಿಮಾಘೋರಾ ನಾನಾರೂಪಾ ಮಹಾವಿಷಾಃ ||೯೨||
ಅಪಕಾರಾಯ ವರ್ತನ್ತೇ ನೃಪಸಾಧನವಾಹನೇ
ಯಸ್ಮಾಲ್ಲೂನಂ ತೃಣಂ ಪ್ರಾಪ್ತಾ ಮುನೇಃ ಪ್ರಸ್ವೇದಬಿನ್ದವಃ ||೯೩||
ತಸ್ಮಾಲ್ಲೂತೇತಿ ಭಾಷ್ಯನ್ತೇ ಸಂಖ್ಯಯಾ ತಾಶ್ಚ ಷೋಡಶ

ಅರ್ಥ—(ಲೂತಾ ಉತ್ಪತ್ತಿ ಕ್ರಮವನ್ನು ವಿವರಿಸುತ್ತಾರೆ). ರಾಜಶ್ರೇಷ್ಠನಾದ ವಿಶ್ವಾಮಿತ್ರನು ಒಂದು ಕಾಲದಲ್ಲಿ ವಸಿಷ್ಠಋಷಿಗಳ ಆಶ್ರಮಕ್ಕೆ ಹೋಗಿ ಅವರಿಗೆ ಕೋಪ ಬರುವಂತೆ ಮಾಡಲು ಸೂರ್ಯದಂತೆ ಪ್ರಜ್ವಲಿಸಿದ ಅವರ ಹಣೆಯಿಂದ ಬೆವರು ಹನಿಗಳು ಹೊರಟು ಹಸುಗಳಿಗೆ ಆಹಾರಕ್ಕಾಗಿ ಕತ್ತರಿಸಿ ಶೇಖರಿಸಿಟ್ಟಿದ್ದ ಹುಲ್ಲಿನಮೇಲೆ ಬಿದ್ದವು ; ಅವುಗಳಿಂದ ಅನೇಕ ಪ್ರಕಾರಗಳಾದ ಅತಿಭಯಂಕರ ವಿಷವುಳ್ಳ ಹುಳುಗಳು ಉತ್ಪನ್ನವಾಗಿ ನಾನಾರೂಪಗಳನ್ನು ಧರಿಸಿಕೊಂಡು ಆ ರಾಜನ ವಾಹನಗಳಾದ ಆನೆ ಕುದುರೆ ಮೊದಲಾದ ಪ್ರಾಣಿಗಳ ಆಹಾರಗಳಾದ ಹುಲ್ಲು ಮೊದಲಾದುವುಗಳನ್ನು ಸೇರಿ ಅಪಕಾರಮಾಡುವುದಕ್ಕಾಗಿ ನಿಂತುವು. ಋಷಿಗಳ ಬೆವರು ಹನಿಗಳು ಕತ್ತರಿಸಿದ ಹುಲ್ಲುಗಳಿಗೆ

ಬಿದ್ದು ಅವುಗಳನ್ನು ಆವರಿಸಿದಕಾರಣ ಆ ಕ್ರಿಮಿಗಳಿಗೆ ಲೂತ ಎಂದು ವ್ಯವಹರಿಸುತ್ತಾರೆ. ಅವು ೧೬ ವಿಧಗಳಾಗಿವೆ.

ಕೃಚ್ಛ್ರಸಾಧ್ಯಾಸ್ತಥಾಽಸಾಧ್ಯಾ ಲೂತಾಸ್ತು ದ್ವಿವಿಧಾಃ ಸ್ಮೃತಾಃ
ತಾಸಾಮಷ್ಟೌ ಕೃಚ್ಛ್ರಸಾಧ್ಯಾ ವರ್ಜ್ಯಾಸ್ತಾವತ್ಯ ಏವ ತು ||೯೪||
ತ್ರಿಮಣ್ಡಲಾ ತಥಾ ಶ್ವೇತಾ ಕಪಿಲಾ ಪೀತಿಕಾ ತಥಾ
ಆಲಮೂತ್ರವಿಷಾರಕ್ತಾ ಕಸನಾ ಚಾಷ್ಟಮೀ ಸ್ಮೃತಾ ||೯೫||
ತಾಭಿರ್ದಷ್ಟೇ ಶಿರೋದುಃಖಂ ಕಣ್ಡೂರ್ದಂಶೇ ಚ ವೇದನಾ
ಭವನ್ತಿ ಚ ವಿಶೇಷೇಣ ಗದಾಃ ಶ್ಲೈಷ್ಮಿಕವಾತಿಕಾಃ ||೯೬||
ಸೌವರ್ಣಿಕಾ ಲಾಜವರ್ಣಾ ಜಾಲಿನ್ಯೇಣೀಪದೀ ತಥಾ
ಕೃಷ್ಣಾಗ್ನಿವರ್ಣಾ ಕಾಕಾಣ್ಡಾ ಮಾಲಾಗುಣಾಷ್ಟಮೀ ಸ್ಮೃತಾ ||೯೭||
ತಾಭಿರ್ದಷ್ಟೇ ದಂಶಕೋಥಃ ಪ್ರವೃತ್ತಿಃ ಕ್ಷತಜಸ್ಯ ಚ
ಜ್ವರೋ ದಾಹೋಽತಿಸಾರಶ್ಚ ಗದಾಃ ಸ್ಯುಶ್ಚ ತ್ರಿದೋಷಜಾಃ ||೯೮||
ಪಿಡಕಾ ವಿವಿಧಾಕಾರಾ ಮಣ್ಡಲಾನಿ ಮಹಾನ್ತಿ ಚ
ಶೋಫಾ ಮಹಾನ್ತೋ ಮೃದವೋ ರಕ್ತಾಃ ಶ್ಯಾವಾಶ್ಚಲಾಸ್ತಥಾ ||೯೯||
ಸಾಮಾನ್ಯಂ ಸರ್ವಲೂತಾನಾಮೇತದಾದಂಶಲಕ್ಷಣಮ್
ವಿಶೇಷಲಕ್ಷಣಂ ಶಾಸಾಂ ವಕ್ಷ್ಯಾಮಿ ಸಚಿಕಿತ್ಸಿತಂ ||೧೦೦||

ಅರ್ಥ—ಕಷ್ಟಸಾಧ್ಯ ಅಸಾಧ್ಯಗಳೆಂದು ವಿಷವು ೨ ವಿಧ ; ಅವುಗಳ ಪೈಕಿ ೮ ಕೃಚ್ಛ್ರಸಾಧ್ಯಗಳು, ೮ ಅಸಾಧ್ಯಗಳು. ತ್ರಿಮಣ್ಡಲಾ, ಶ್ವೇತಾ, ಕಪಿಲಾ, ಪೀತಿಕಾ, ಆಲವಿಷಾ, ಮೂತ್ರವಿಷಾ, ರಕ್ತಾ, ಕಸನಾ ಎಂಬ ೮ ವಿಧ ಲೂತಗಳು ಕಚ್ಚಿದರೆ ಕೃಚ್ಛ್ರಸಾಧ್ಯಗಳಾಗುತ್ತವೆ. ಅವು ಕಚ್ಚಿದರೆ ತಲೆನೋವು ಕಚ್ಚಿದ ಘಾಯದಲ್ಲಿ ನವೆ ನೋವುಗಳು. ವಿಶೇಷವಾಗಿ ಕಫವಾತ ರೋಗಗಳೇ ಹೆಚ್ಚಾಗಿ ಉಂಟಾಗುತ್ತವೆ. ಸೌವರ್ಣಿಕಾ, ಲಾಜವರ್ಣಾ, ಜಾಲಿನೀ, ಏಣಪದೀ, ಕೃಷ್ಣವರ್ಣಾ, ಅಗ್ನಿವರ್ಣಾ, ಕಾಕಾಣ್ಡಾ, ಮಾಲಾಗುಣಾ ಎಂಬ ೮ ವಿಧ ಕೀಟಗಳು ಕಚ್ಚಿದರೆ ಕಡಿದ ವ್ರಣವು ಕೊಳೆಯುತ್ತದೆ. ರಕ್ತಸ್ರಾವ, ಜ್ವರ, ಉರಿತ, ಅತಿಸಾರ, ತ್ರಿದೋಷಜನ್ಯ ರೋಗಗಳುಂಟಾಗುತ್ತವೆ. ಇವು ಅಸಾಧ್ಯಗಳಾದ ಲೂತಾ ದಂಶಗಳೆಂದು ತಿಳಿಯಬೇಕು. ಅಧಿಕವಾದ ಮೃದುವಾದ ಶೋಫವು ಕೆಂಪಗೂ ಹೊಗೆ ಬಣ್ಣವುಳ್ಳವಾಗಿಯೂ ಚಲಿಸತಕ್ಕವಾಗಿಯೂ ಇರುತ್ತವೆ. ಈ ಲಕ್ಷಣಗಳು ಸಕಲವಿಧ ಲೂತಾಗಳು ಕಚ್ಚಿದರೂ ಉಂಟಾಗುವ ಸಾಮಾನ್ಯ ಲಕ್ಷಣಗಳೆಂದು ತಿಳಿಯಬೇಕು. ಅವುಗಳ ಕಡಿತದಿಂದುಟಾಗುವ ವಿಶೇಷ ಲಕ್ಷಣಗಳನ್ನೂ ಚಿಕಿತ್ಸೆಯನ್ನೂ ಹೇಳುತ್ತೇವೆ.

ತ್ರಿಮಣ್ಡಲಾಯಾ ದಂಶೇಽಸೃಕ್ ಕೃಷ್ಣಂ ಸ್ರವತಿ ದೀರ್ಯತೇ
ಬಾಧಿರ್ಯಂ ಕಲುಷಾ ದೃಷ್ಟಿಸ್ತಥಾ ದಾಹಶ್ಚ ನೇತ್ರಯೋಃ ||೧೦೧||
ತತ್ರಾರ್ಕಮೂಲಂ ರಜನೀ ನಾಕುಲೀ ಪೃಶ್ನಿಪರ್ಣಿಕಾ

ಪಾನಕರ್ಮಣಿ ಶಸ್ಯನ್ತೇ ನಸ್ಯಾಲೇಪಾಞ್ಜನೇಷು ಚ ||೧೦೨||

ಅರ್ಥ—ತ್ರಿಮಂಡಲವೆಂಬ ಕೀಟವು ಕಚ್ಚಿದರೆ ಕಪ್ಪುರಕ್ತಸ್ರಾವವೂ ವ್ರಣವು ಒಡೆದು ಕಿವುಡುತನವೂ ದೃಷ್ಟಿಮಂಡಲದಲ್ಲಿ ಕೊಳೆಯು ಸೇರಿ ಕಣ್ಣುರಿಯೂ ಉಂಟಾಗುತ್ತದೆ. ಈ ರೋಗಿಗೆ ಎಕ್ಕದಬೇರು, ಅರಿಶಿನ, ಈಶ್ವರಿಯಹಂಬು, ಒಂದೆಲೆಹೊನ್ನೆ ಇವುಗಳ ಕಲ್ಕವನ್ನು ಪಾನ ನಸ್ಯ ಲೇಪನ ಅಂಜನಗಳ ಮೂಲಕ ಪ್ರಯೋಗಿಸಿದರೆ ಹಿತವಾಗುತ್ತದೆ.

ಶ್ವೇತಾಯಾಃ ಪಿಡಕಾ ದಂಶೇ ಶ್ವೇತಾ ಕಣ್ಡೂಮತೀ ಭವೇತ್
ದಾಹಮೂರ್ಛಾಜ್ವರವತೀ ವಿಸರ್ಪಕ್ಲೇದರುಕ್ಕರೀ ||೧೦೩||
ತತ್ರ ಚನ್ದನರಾಸ್ನೈಲಾ ಹರೇಣುವಳಸಞ್ಜುಲಾಃ
ಕುಷ್ಠಂ ಲಾಮಜ್ಜಕಂ ವಕ್ರಂ ನಳದಂ ಚಾಗದೋ ಹಿತಃ ||೧೦೪||

ಅರ್ಥ—ಶ್ವೇತಾ ಎಂಬ ಕೀಟವು ಕಚ್ಚಿದ ವ್ರಣದಲ್ಲಿ ಬಿಳಿಯ ಬೊಕ್ಕೆಗಳೆದ್ದು ನವೆ, ಉರಿತ, ಜ್ಞಾನನಾಶ, ಜ್ವರ, ವಿಸರ್ಪ, ಸ್ರಾವ, ನೋವು ಇವುಗಳಿಂದ ಕೂಡಿರುತ್ತದೆ. ಇದಕ್ಕೆ ರಕ್ತಚಂದನ, ರಾಸ್ನೆಗೆಡ್ಡೆ, ಏಲಕ್ಕಿ, ರೇಣುಕೆಬೀಜ, ಜೇವನಾಳ, ನೀರಂಜಿಮರದ ತೊಗಟೆ, ಚಂಗಲ್‌ಕೋಷ್ಠ, ಲಾಮಂಚ, ತಗರ, ಜಟಾಮಾಂಸಿ, ಇವೆಲ್ಲವನ್ನೂ ಸಮಭಾಗದಿಂದ ಚೂರ್ಣಿಸಿ ಜೇನುತುಪ್ಪದಲ್ಲಿ ಕಲೆಸಿ ದನದ ಕೊಂಬಿನಲ್ಲಿ ತುಂಬಿಟ್ಟುಕೊಂಡು ಪಾನ, ಲೇಪನ, ನಸ್ಯಗಳಿಂದ ಪ್ರಯೋಗಿಸಲು ಹಿತಕರವಾದದ್ದು.

ಆದಂಶೇ ಪಿಡಿಕಾ ತಾಮ್ರಾ ಕಪಿಲಾಯಾಃ ಸ್ಥಿರಾ ಭವೇತ್
ಶಿರಸೋ ಗೌರವಂ ದಾಹಸ್ತಿಮಿರಂ ಭ್ರಮ ಏವ ಚ ||೧೦೫||
ತತ್ರ ಪದ್ಮಕಕುಷ್ಠೈಲಾಕರಞ್ಜಕಕುಭತ್ವಚಃ |
ಸ್ಥಿರಾರ್ಕಪರ್ಣ್ಯಪಾಮಾರ್ಗದೂರ್ವಾಬ್ರಾಹ್ಮ್ಯೋ ವಿಷಾಪಹಾಃ ||೧೦೬||

ಅರ್ಥ—ಕಪಿಲಾ ಎಂಬ ಕೀಟವು ಕಚ್ಚಿದರೆ ಕಚ್ಚಿದ ಸ್ಥಳದಲ್ಲಿ ಕೆಂಪಾದ ಗಟ್ಟಿಯಾದ ಚಲನವಿಲ್ಲದ ಬೊಕ್ಕೆಯುಂಟಾಗುತ್ತದೆ. ರೋಗಿಗೆ ತಲೆಭಾರ ಮೈಉರಿತ ತಿಮಿರವೆಂಬ ನೇತ್ರರೋಗ, ತಲೆತಿರುಗು, ಉಂಟಾಗುತ್ತವೆ. ಅದಕ್ಕೆ ಪದ್ಮಕ, ಚಂಗಲ್‌ಕೋಷ್ಠ, ಸಣ್ಣಏಲಕ್ಕಿ, ಹೊಂಗೆಬೀಜ, ಮತ್ತಿಯತೊಗಟೆ, ಮೂರೆಲೆಹೊನ್ನೆ, ಎಕ್ಕದಬೇರಿನ ತೊಗಟೆ, ಉತ್ತರಣೆಬೀಜ, ಗರಿಕೆ, ಒಂದೆಲಗ, ಇವುಗಳ ಕಲ್ಕವನ್ನು ಪಾನ, ಲೇಪನ, ನಸ್ಯ, ಅಂಜನಗಳ ಮೂಲಕ ಉಪಯೋಗಿಸಿದರೆ ವಿಷಹರಣವಾಗುತ್ತದೆ.

ಆದಂಶೇ ಪೀತಿಕಾಯಾಸ್ತು ಪಿಡಿಕಾ ಜಾಯತೇ ಸ್ಥಿರಾ |
ತಥಾ ಛರ್ದಿಃ ಜ್ವರಃ ಶೂಲಂ ಮೂರ್ಧ್ನಿ ರಕ್ತೇ ತಥಾಕ್ಷಿಣೀ ||೧೦೭||
ತತ್ರೇಷ್ಟಾಃ ಕುಟಜೋಶೀರತುಙ್ಗಪದ್ಮಕವಞ್ಜುಳಾಃ |
ಶಿರೀಷಕಿಣಿಹೀಶೇಲು ಕದಮ್ಬಕಕುಭತ್ವಚಃ ||೧೦೮||

ಅರ್ಥ—ಪೀತಿಕಾ ಎಂಬ ಕೀಟವು ಕಡಿದರೆ ಕಚ್ಚಿದ ಸ್ಥಾನದಲ್ಲಿ ಚಲನೆಯಿಲ್ಲದ ಬೊಕ್ಕೆಯುಂಟಾಗುತ್ತದೆ. ರೋಗಿಗೆ ವಮನ, ಜ್ವರ, ತಲೆಶೂಲೆ, ಕಣ್ಣಿನಿಂದ ರಕ್ತ ಸ್ರಾವವೂ ಉಂಟಾಗುತ್ತವೆ. ಇಂತಹ ಕಾಲದಲ್ಲಿ ಕೊಡಸಿಗೆ ತೊಗಟೆ, ಲಾಮಂಚ, ಸುರಹೊನ್ನೆ, ಪದ್ಮಕ, ನೀರಂಜಿಮರದತೊಗಟೆ, (ಬೈಸೆಮರ) ಬಾಗೆತೊಗಟೆ, (ಬೀಜ) ಉತ್ತರಣೆಬೀಜ, ಚಳ್ಳೆತೊಗಟೆ, ಈಚಲು, ಮತ್ತಿ, ಇವುಗಳ ತೊಗಟೆಗಳ ಕಲ್ಕದಿಂದ ಅಂಜನ, ನಸ್ಯ, ಲೇಪನಾದಿಗಳನ್ನು ಪ್ರಯೋಗಿಸಿದರೆ ಹಿತವಾಗುತ್ತದೆ.

ರಕ್ತಮಣ್ಡಲನಿಭೇ ದಂಶೇ ಪಿಡಕಾಃ ಸರ್ಷಪಾ ಇವ ।
ಜಾಯನ್ತೇ ತಾಲುಶೋಷಶ್ಚ ದಾಹಶ್ಚಾಲವಿಷಾನ್ವಿತೇ ॥೧೦೯॥
ತತ್ರ ಪ್ರಿಯಙ್ಗು ಹ್ರೀವೇರ ಕುಷ್ಠಲಾಮಜ್ಜವಞ್ಜುಳಾಃ ।
ಅಗದಃ ಶತಪುಷ್ಪಾ ಚ ಸಪಿಪ್ಪಲವಟಾಙ್ಕುರಾಃ ॥೧೧೦॥

ಅರ್ಥ—ಅಲವಿಷದಿಂದ (ಕೊಂಡಿಯುಮುಳ್ಳಿನಿಂದ) ಕುಟುಕಿದರೆ ದಂಶ ವ್ರಣದಲ್ಲಿ ರಕ್ತದ ಗಡ್ಡೆಯಂತೆ ಸಾಸಿವೆಕಾಳಿನಷ್ಟು ಸಣ್ಣ ಬೊಕ್ಕೆಗಳೇಳುತ್ತವೆ. ಅಂಗಳು ಒಣಗುತ್ತದೆ ; ಮೈಉರಿತವಾಗುತ್ತದೆ ; ಇದಕ್ಕೆ ನೆಳಲು, ಮುಡಿವಾಳ, ಚಂಗಲ್‌ಕೋಷ್ಠ, ಲಾಮಂಚ, ನೀರಂಜಿತೊಗಟೆ, ಸಬ್ಬಶಿಗೆಬೀಜ, ಅರಳಿ ಮತ್ತು ಆಲದ ಚಿಗುರು ಮತ್ತು ಬಿಳಲು, ಇವುಗಳ ಕಲ್ಕವನ್ನು ನಸ್ಯ, ಪಾನ, ಭೋಜನಗಳ ಮೂಲಕ ಪ್ರಯೋಗಿಸಿದರೆ ಹಿತಕರವು.

ಪೂತಿಮೂತ್ರವಿಷಾದಂಶೋ ವಿಸರ್ಪೀ ಕೃಷ್ಣಶೋಣಿತಃ ।
ಕಾಸಶ್ವಾಸವಮಿಮೂರ್ಛಾಜ್ವರದಾಹಸಮನ್ವಿತಃ ॥೧೧೧॥
ಮನಃಶಿಲಾಲಮಧುಕ ಕುಷ್ಠ ಚನ್ದನಪದ್ಮಕೈಃ ।
ಮಧುಮಿಶ್ರೈಃ ಸಲಾಮಜ್ಜೈರಗದಸ್ತತ್ರ ಕೀರ್ತಿತಃ ॥೧೧೨॥

ಅರ್ಥ—ಕೊಳೆತ ಮೂತ್ರ, ವಿಷ, ಹಲ್ಲಿನಿಂದ ಕಚ್ಚಿದ ವಿಷ, ಇವುಗಳನ್ನು ಮೈ ಮೇಲೆ ಲೇಪಿಸಿದರೆ ಪಿಡಿಕೆಗಳೆದ್ದು ಹರಿದಾಡುತ್ತಾ ಕಪ್ಪು ರಕ್ತವು ಸ್ರಾವವಾಗುತ್ತದೆ. ರೋಗಿಗೆ ಕೆಮ್ಮು, ಉಬ್ಬಸ, ವಮನ, ಮೂರ್ಛೆ, ಜ್ವರ, ದಾಹ ಇವುಗಳು ಇರುತ್ತವೆ. ಈ ಸಂದರ್ಭದಲ್ಲಿ ಮಣಿಶಿಲೆ, ಹರಿತಾಳ, ಅತಿಮಧುರ, ಚಂಗಲ್‌ಕೋಷ್ಠ, ಕೆಂಪುಗಂಧ, ಪದ್ಮಕ, ಲಾಮಂಚ, ಇವುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ತಯಾರಿಸಿದ ಅಗದವು ಪಾನ, ಲೇಪ ನಸ್ಯಾದಿಗಳಿಗೆ ಹಿತಕರವು.

ಆಪಾಣ್ಡುಪಿಡಕೋ ದಂಶೋ ದಾಹಕ್ಲೇದಸಮನ್ವಿತಃ ।
ರಕ್ತಾಯಾ ರಕ್ತಪರ್ಯನ್ತೋ ವಿಜ್ಞೇಯೋ ರಕ್ತಸಂಯುತಃ ॥೧೧೩॥
ಕಾರ್ಯಸ್ತತ್ರಾಗದಸ್ತೋಯಚನ್ದನೋಶೀರ ಪದ್ಮಕೈಃ
ತಥೈವಾರ್ಜುನಶೇಲುಭ್ಯಾಂ ತ್ವಗ್ಭಿರಾಮ್ರಾತಕಸ್ಯ ಚ ॥೧೧೪॥
ಪಿಚ್ಛಿಲಂ ಕಸನಾ ದಂಶಾದ್ರುಧಿರಂ ಶೀತಲಂ ಸ್ರವೇತ್
ಕಾಸಶ್ವಾಸೌ ಚ ತತ್ರೋಕ್ತಂ ರಕ್ತಲೂತಾಚಿಕಿತ್ಸಿತಮ್ ॥೧೧೫॥

ಅರ್ಥ—ರಕ್ತಾ ಎಂಬ ಕೀಟವು ಕಚ್ಚಿದರೆ ಕಚ್ಚಿದ ಭಾಗದಲ್ಲಿ ಬಿಳಿಯಪಿಡಿಕೆಗಳುಂಟಾಗಿ ಉರಿತ, ದ್ರವಜಿನುಗುವುದು, ತುದಿ ಕೆಂಪಗೂ, ರಕ್ತದಿಂದ ಕೂಡಿಯೂ ಇರುತ್ತದೆ ; ಇದಕ್ಕೆ ಚಿಕಿತ್ಸೆ-ಮುಡಿವಾಳ, ರಕ್ತಚಂದನ, ಲಾಮಂಚ, ಪದ್ಮಕ, ಮತ್ತಿತೊಗಟೆ, ಚಳ್ಳೆತೊಗಟೆ, ಅನುಟೆಯತೊಗಟೆ, ಇವುಗಳ ಕಲ್ಕದಿಂದ ತಯಾರಿಸಿದ ಅಗದ ಪ್ರಯೋಗವನ್ನು ಮಾಡಿಸಬೇಕು ; ಕಸನಾ ಎಂಬ ಕೀಟವು ಕಚ್ಚಿದರೆ ಗರಣೆಗರಣೆಯಾಗಿ ತಣ್ಣಗಿರುವ ರಕ್ತವು ಸ್ರಾವವಾಗುತ್ತದೆ ; ಕೆಮ್ಮು, ಉಬ್ಬಸ, ಇರುತ್ತವೆ. ಈ ದಂಶದಲ್ಲಿ ರಕ್ತ ಲೂತಾ ಚಿಕಿತ್ಸೆಯನ್ನು ಮಾಡಬೇಕು.

ಪುರೀಷಗನ್ಧಿರಲ್ಪಾಸೃಕ್ ಕೃಷ್ಣಾಯಾ ದಂಶ ಏವ ತು ।
ಜ್ವರಮೂರ್ಛಾವಮಿದಾಹ ಕಾಸಶ್ವಾಸ ಸಮನ್ವಿತಃ ॥೧೧೬॥
ತತ್ರೈಲಾವಕ್ರಸರ್ಪಾಕ್ಷೀ ಗನ್ಧನಾಕುಲಿಚನ್ದನೈಃ ।
ಮಹಾಸುಗನ್ಧಿ ಸಹಿತೈಃ ಪ್ರತ್ಯಾಖ್ಯಾಯಾಗದಃ ಸ್ಮೃತಃ ॥೧೧೭॥
ದಂಶೇ ದಾಹೋಽಗ್ನಿವರ್ಣಾಯಾಃ ಸ್ರಾವೋಽತ್ಯರ್ಥಂ ಜ್ವರಸ್ತಥಾ ।
ಚೋಪಕಣ್ಡೂರೋಮಹರ್ಷಾ ವಿದಾಹಃ ಸ್ಫೋಟಜನ್ಮ ಚ ॥೧೧೮॥
ತೃಷ್ಣಾಪ್ರಶಮನಂ ಚಾತ್ರ ಪ್ರತ್ಯಾಖ್ಯಾಯ ಪ್ರಯೋಜಯೇತ್ ।
ಸಾರಿವೋಶೀರಯಷ್ಟ್ಯಾಹ್ವ ಚನ್ದನೋತ್ಪಲಪದ್ಮಕಮ್ ॥೧೧೯॥
ಸರ್ವಾಸಾಮೇವ ಯುಞ್ಜೀತ ವಿಷೇ ಶ್ಲೇಷ್ಮಾತಕತ್ವಚಮ್ ।
ಭಿಷಕ್ ಸರ್ವಪ್ರಕಾರೇಷು ತಥಾ ಚ ಕ್ಷೀರಪಿಪ್ಪಲಮ್ ॥೧೨೦॥

ಅರ್ಥ—ಸೌವರ್ಣಿಕಾ ಮೊದಲಾದ ೮ ಕೀಟದಷ್ಟಗಳು ಅಸಾಧ್ಯವಾದರೂ ಕೃಷ್ಣಾ, ಅಗ್ನಿವಕ್ತ್ರಗಳು ಕಚ್ಚಿದರೆ ಕೆಲವುವೇಳೆ ಕೃಚ್ಛ್ರಸಾಧ್ಯಗಳಾಗುತ್ತವೆಂದು ಕಂಡುಬಂದಿರುವಕಾರಣ ಚಿಕಿತ್ಸಾಫಲವು ನಿಶ್ಚಯವಿಲ್ಲದಿದ್ದರೂ ಒಂದುವೇಳೆ ದೈವಯೋಗದಿಂದ ಗುಣವಾಗಬಹುದೆಂಬ ವಿಚಾರವನ್ನು ರೋಗಿಗೆ ಮನವರಿಕೆಮಾಡಿ ಚಿಕಿತ್ಸೆಮಾಡಬೇಕು. ಕೃಷ್ಣಾ ಎಂಬ ಕೀಟವು ಕಡಿದರೆ ಕಚ್ಚಿದ ವ್ರಣದಿಂದ ಮಲದ ವಾಸನೆಯುಳ್ಳ ಸ್ವಲ್ಪ ರಕ್ತವು ಸುರಿಯುತ್ತದೆ. ರೋಗಿಗೆ ಜ್ವರ, ಮೂರ್ಛೆ, ವಮನ, ಉರಿತ, ಕಾಸಶ್ವಾಸಗಳಿರುತ್ತವೆ. ಈ ಸ್ಥಿತಿಯಲ್ಲಿ ಸಣ್ಣ ಏಲಕ್ಕಿ, ತಗರ, ಕೆಂಪುಹೂವಿನ ಈಶ್ವರಿಯಬೇರು, ಗಂಧನಾಕುಲಿ (ಆಡನುಟ್ಟದಬೇರು), ರಕ್ತಚಂದನ ಇವುಗಳ ಕಲ್ಕಕ್ಕೆ ದುಂದುಭಿಸ್ವನೀಯದಲ್ಲಿ ಹೇಳಿದ ಮಹಾಸುಗನ್ಧಿ ಅಗದವನ್ನು ಸೇರಿಸಿ ನಸ್ಯ, ಅಂಜನ, ಲೇಪ, ಪಾನಗಳ ಮೂಲಕ ಪ್ರಯೋಗಮಾಡಬೇಕು. ಅಗ್ನಿವರ್ಣಕೀಟದ ದಂಶದಲ್ಲಿ ವ್ರಣವು ಉರಿಯುತ್ತದೆ ; ಅತಿಯಾಗಿ ರಕ್ತಸ್ರಾವವಾಗುತ್ತದೆ, ರೋಗಿಗೆ ಜ್ವರ, ಸ್ವಲ್ಪಉರಿತ, ನವೆ, ರೋಮಗಳೆದ್ದು ನಿಲ್ಲುವುದು, ಎದೆಯುರಿ, ಬೊಬ್ಬೆಗಳು ಏಳುವುದು ಈ ಲಕ್ಷಣಗಳಿರುತ್ತವೆ. ದೈವಯೋಗದಿಂದ ಸಿದ್ಧಿಸಬಹುದೆಂದು ರೋಗಿಗೆ ಧೈರ್ಯವನ್ನುಂಟುಮಾಡಿ ಕೃಷ್ಣಾದಂಶದಂತೆಯೇ ಚಿಕಿತ್ಸೆಮಾಡಬೇಕು. ಸೊಗದೆಬೇರು ಲಾಮಂಚ ಅತಿಮಧುರ, ರಕ್ತಚಂದನ, ನೈದಿಲೆ

ಗೆಡ್ಡೆ, ಪದ್ಮಕ ಇವುಗಳ ಕಲ್ಕವನ್ನು ಸೇವಿಸಬೇಕು. ಎಲ್ಲಾ ಕೀಟಗಳದಂಶದಲ್ಲೂ ವಿಷ ನಿವಾರಣೆಯಾಗಲು ಚಳ್ಳಿಗಿಡದ ತೊಗಟೆಯನ್ನೂ ಕ್ಷೀರವನ್ನೇ ಹುಯ್ದು ಬೆಳೆಸಿದ ಅರಳಿ ಮರದ ತೊಗಟೆಯನ್ನೂ ನಸ್ಯ, ಲೇಪ, ಅಂಜನ, ಪಾನಗಳ ಮೂಲಕ ಪ್ರಯೋಗಿಸ ಬೇಕು.

ಕೃಚ್ಛ್ರಸಾಧ್ಯವಿಷಾಹ್ಯಷ್ಟೌ ಪ್ರೋಕ್ತಾ ದ್ವೇ ಚ ಯದೃಚ್ಛಯಾ ।
ಅವಾರ್ಯವಿಷವೀರ್ಯಾಣಾಂ ಲಕ್ಷಣಾನಿ ನಿಬೋಧ ಮೇ ॥೧೨೧॥
ಧ್ಮಾತಃ ಸೌವರ್ಣಿಕಾದಂಶಃ ಸಫೇನೋ ಮತ್ಸ್ಯಗಂಧಿಕಃ ।
ಶ್ವಾಸಕಾಸೌ ಜ್ವರಸ್ತೃಷ್ಣಾ ಮೂರ್ಛಾ ಚಾತ್ರ ಸುದಾರುಣಾ ॥೧೨೨॥
ಆದಂಶೇ ಲಾಜವರ್ಣಾಯಾ ಧ್ಮಾಮಂ ಪೂತಿ ಸ್ರವೇದಸೃಕ್ ।
ದಾಹೋ ಮೂರ್ಛಾತಿಸಾರಶ್ಚ ಶಿರೋದುಃಖಂ ಚ ಜಾಯತೇ ॥೧೨೩॥
ಘೋರೋ ದಂಶಸ್ತು ಜಾಲಿನ್ಯಾ ರಾಜಿಮಾನವದೀರ್ಯತೇ ।
ಸ್ತಮ್ಭಃ ಶ್ವಾಸಸ್ತಮೋವೃದ್ಧಿಸ್ತಾಲುಶೋಷಶ್ಚ ಜಾಯತೇ ॥೧೨೪॥
ಏಣೀಪದ್ಯಾಸ್ತಥಾ ದಂಶೋ ಭವೇತ್ಕೃಷ್ಣತಿಲಾಕೃತಿಃ ।
ತೃಷ್ಣಾಮೂರ್ಛಾಜ್ವರಚ್ಛರ್ದಿಕಾಸಶ್ವಾಸ ಸಮನ್ವಿತಃ ॥೧೨೫॥
ದಂಶಃ ಕಾಕಾಣ್ಡಕಾದಷ್ಟೇ ಪಾಣ್ಡುರಕ್ತೋsತಿವೇದನಃ ।
ತೃಣ್ಮೂರ್ಛಾಶ್ವಾಸಹೃದ್ರೋಗಹಿಕ್ಕಾಕಾಸಾಃ ಸ್ಯುರುಚ್ಛ್ರಿತಾಃ ॥೧೨೬॥
ರಕ್ತೋ ಮಾಲಾಗುಣಾದಂಶೋ ಧೂಮಗಂಧೋsತಿವೇದನಃ ।
ವಿದೀರ್ಯತೇ ಚ ಬಹುಧಾ ದಾಹಮೂರ್ಛಾಜ್ವರಾನ್ವಿತಃ ॥೧೨೭॥
ಅಸಾಧ್ಯಾಸ್ವಪ್ಯಭಿಹಿತಂ ಪ್ರತ್ಯಾಖ್ಯಾಯಾಶು ಯೋಜಯೇತ್ ।
ದೋಷೋಚ್ಛ್ರಯವಿಶೇಷೇಣ ದಾಹಚ್ಛೇದವಿವರ್ಜಿತಮ್ ॥ ॥೧೨೮॥

ಅರ್ಥ—ಕೃಚ್ಛ್ರಸಾಧ್ಯವುಳ್ಳ ೮ ವಿಧ ಕೀಟಗಳನ್ನೂ ಅಸಾಧ್ಯವಿಷಕೀಟಗಳಲ್ಲಿ ದೈವೇಚ್ಛೆಯಿಂದ ಗುಣವಾಗುವ ೨ ವಿಧ ಕೀಟಗಳ ದಂಶಲಕ್ಷಣಗಳನ್ನೂ ಚಿಕಿತ್ಸೆಗಳನ್ನೂ ಹೇಳಿ ಮುಗಿಸಿರುತ್ತೇನೆ. ಇನ್ನು ಉಳಿದ ೬ ವಿಧಗಳಾದ ಅಸಾಧ್ಯವಿಷಕೀಟದಂಶಗಳನ್ನು ಹೇಳುತ್ತೇನೆ ಕೇಳಿ–ಸೌವರ್ಣಿಕಾಕೀಟವು ಕಚ್ಚಿದ ವ್ರಣವು ಉಬ್ಬಿ ಮೀನಿನ ವಾಸನೆ ಯುಳ್ಳರಕ್ತವನ್ನು ನೊರೆನೊರೆಯಾಗಿ ಸುರಿಸುತ್ತದೆ. ರೋಗಿಗೆ ಅತಿ ಭಯಂಕರವಾದ ಉಬ್ಬಸ, ಕೆಮ್ಮು, ಜ್ವರ,ಬಾಯಾರಿಕೆ, ಮತ್ತು ಮೂರ್ಛೆಗಳುಂಟಾಗುತ್ತವೆ. ಲಾಜವರ್ಣ ಕೀಟದದಂಶದಿಂದ ವ್ರಣವು ಕೊಳೆಯುಳ್ಳುದಾಗಿ ದುರ್ವಾಸನೆಯುಳ್ಳ ರಕ್ತವು ಸುರಿಯು ತ್ತದೆ. ರೋಗಿಗೆ ಮೈಉರಿತ, ಮೂರ್ಛೆ, ಅತಿಸಾರ, ತಲೆನೋವುಗಳುಂಟಾಗುತ್ತವೆ. ಜಾಲಿನಿಯು ಕಚ್ಚಿದರೆ ಭಯಂಕರವಾದ ವ್ರಣವುಂಟಾಗಿ ಗೆರೆ ಗೆರೆಗಳಿದ್ದು ಸೀಳಿಹೋಗು ತ್ತದೆ. ರೋಗಿಗೆ ಮೈಬಿಗಿತ, ಉಬ್ಬಸ, ಕಣ್ಣುಗತ್ತಲೆಯು ಹೆಚ್ಚಿ ಅಂಗಳು ಒಣಗಿಬಿಡು ತ್ತದೆ. ಏಣೀಪದ್ಯವು ಕಚ್ಚಿದರೂ ಅದೇ ರೀತಿಯ ವಿಕಾರಗಳು ಉಂಟಾಗುತ್ತವಲ್ಲದೆ ವ್ರಣದಮೇಲೆ ಕರಿಯ ಎಳ್ಳಿನಂತೆ ಮಚ್ಚೆಗಳುಂಟಾಗುತ್ತವೆ. ರೋಗಿಯು ನೀರಡಿಕೆ,

ಮೂರ್ಛೆ, ಜ್ವರ, ವಮನ, ಕಾಸ, ಶ್ವಾಸಗಳಿಂದ ಪೀಡಿತನಾಗಿರುತ್ತಾನೆ. ಕಾಕಾಣ್ಡಕ ಕೀಟವು ಕಡಿದರೆ ವ್ರಣವು ಬಿಳುಪಾಗಿಯೂ ಅತಿ ನೋವುಳ್ಳದಾಗಿಯೂ ಇರುತ್ತದೆ. ರೋಗಿಗೆ ಅತ್ಯಧಿಕವಾದ ನೀರಡಿಕೆ, ಮೂರ್ಛೆ, ಉಬ್ಬಸ, ಹೃದಯಶೂಲೆ, ಬಿಕ್ಕಳಿಕೆ, ಕಾಸ ಇವುಗಳಿರುತ್ತವೆ. ಮಾಲಾಗುಣವೆಂಬ ಕೀಟವು ಕಚ್ಚಿದರೆ ವ್ರಣವು ಕೆಂಪಾಗಿ ಹೊಗೆಯ ವಾಸನೆಯುಳ್ಳದಾಗಿ ಅತಿಯಾಗಿ ವ್ಯಥೆಯನ್ನುಂಟುಮಾಡುತ್ತದೆ ಮತ್ತು ಅನೇಕ ಪ್ರಕಾರವಾಗಿ ಬಿರಿಯುತ್ತದೆ. ರೋಗಿಗೆ ಮೈಉರಿತ, ಮೂರ್ಛೆ, ಜ್ವರಗಳಿರುತ್ತವೆ. ಕೆಲವು ವಿಷವೈದ್ಯರು ಉರಿಯೂ, ಬಿರುಕೂ ಇಲ್ಲದ ಅಸಾಧ್ಯಗಳಾದ ಕೀಟದಂಶಗಳಿಗೆ ದೋಷಗಳ ಉಲ್ಬಣಕ್ಕೆ ತಕ್ಕಂತೆ ಪ್ರಯೋಗಿಸುವ ಔಷಧಗಳನ್ನೂ (ರೋಗಿಗೆ ಸಮಾಧಾನಮಾಡಿ ದೈವಯೋಗದಿಂದ ಗುಣವಾಗಬಹುದೆಂದೂ ಚಿಕಿತ್ಸೆಮಾಡದಿದ್ದರೆ ಸಾಯುವುದು ನಿಶ್ಚಯ, ಆದ್ದರಿಂದ ಚಿಕಿತ್ಸೆಯನ್ನು ಮಾಡಿಸಬೇಕಾದುದೇ ಯೋಗ್ಯ ವಿಧಾನವೆಂದೂ ವಿವೇಕವನ್ನು ಹೇಳಿ) ಹೇಳುತ್ತಾರೆ. ಅಂದರೆ ದೋಷದ ಉಲ್ಬಣಕ್ಕೆ ತಕ್ಕಂತೆ ಔಷಧಪ್ರಯೋಗವನ್ನು ಮಾಡಬೇಕೆಂದು ಅರ್ಥವು.

ಸಾಧ್ಯಾಭಿರಾಭಿರ್ಲೂತಾಭಿರ್ದಷ್ಟಮಾತ್ರಸ್ಯ ದೇಹಿನಃ ॥೧೨೮॥
ವೃದ್ಧಿಪತ್ರೇಣ ಮತಿಮಾನ್ ಸಮ್ಯಗಾದಂಶಮುದ್ಧರೇತ್ ।
ಜಾಮ್ಬವೋಷ್ಠೇನಾಗ್ನಿ ತಪ್ತೇನ ದಹೇದಾಕರವಾರಣಾತ್ ॥೧೨೯॥

ಅರ್ಥ—ಸಾಧ್ಯಗಳಾದ ಲೂತಾಗಳಿಂದ ದಷ್ಟವಾದ ಕೂಡಲೇ ಬುದ್ಧಿವಂತನಾದ ವೈದ್ಯನು ರೋಗಿಯ ಕಚ್ಚಿದ ಪ್ರದೇಶವನ್ನು ಚೂರಿಯಿಂದ ಪೂರ್ತಿಯಾಗಿ ಕತ್ತರಿಸಿ ಬೆಂಕಿಯಲ್ಲಿ ಕಾಯಿಸಿದ ಜಾಮ್ಬವೋಷ್ಠದಿಂದ ವಿಷವು ವ್ಯಾಪಿಸದಂತೆ ವ್ರಣದ ಸುತ್ತಲೂ ಸುಡಬೇಕು.

ಅಮರ್ಮಣಿ ವಿಧಾನಜ್ಞೋ ವರ್ಜಿತಸ್ಯ ಜ್ವರಾದಿಭಿಃ ।
ದಂಶಸ್ಯೋತ್ಕರ್ತನಂ ಕುರ್ಯಾತ್ ಅಲ್ಪಶ್ವಯಥುಕಸ್ಯ ಚ ॥೧೩೦॥
ಮಧುಸೈನ್ಧವಸಂಯುಕ್ತೈರಗದೈರ್ಲೇಪಯೇತ್ತತಃ ।
ಪ್ರಿಯಙ್ಗುರಜನೀಕುಷ್ಠಸಮಙ್ಗಾ ಮಧುಕೈಸ್ತಥಾ ॥೧೩೧॥
ಸಾರಿವಾ ಮಧುಕಂ ದ್ರಾಕ್ಷಾಂ ಪಯಸ್ಯಾಂ ಕ್ಷೀರಮೋರಟಮ್ ।
ವಿದಾರೀಗೋಕ್ಷುರ ಕ್ಷೌದ್ರಮಧುಕಂ ಪಾಯಯೇತ ವಾ ॥೧೩೨॥
ಕ್ಷೀರಿಣಾಂ ತ್ವಕ್ಕಷಾಯೇಣ ಸುಶೀತೇನ ಚ ಸೇಚಯೇತ್ ।
ಉಪದ್ರವಾನ್ ಯಥಾದೋಷಂ ವಿಷಘ್ನೈಶ್ಚ ಪ್ರಸಾಧಯೇತ್ ॥೧೩೩॥

ಅರ್ಥ—(ಯಾವ ವಿಧ ದಂಶವನ್ನು ಕತ್ತರಿಸಬೇಕೆನ್ನುವುದನ್ನು ಹೇಳುತ್ತಾರೆ) ತಿಳುವಳಿಕೆಯುಳ್ಳ ಶಸ್ತ್ರವೈದ್ಯನು (ಮರ್ಮಸ್ಥಾನದಲ್ಲಿಲ್ಲದ ಕೀಟದಷ್ಟವಾಗಿ ಊದಿರುವ ಶರೀರ ಭಾಗವನ್ನು ರೋಗಿಗೆ ಜ್ವರಾದಿ ಬಾಧೆಗಳಿಲ್ಲದಿರುವಾಗ) ಶಸ್ತ್ರದಿಂದ ಕತ್ತರಿಸಿ ಜೇನುತುಪ್ಪ, ಸೈಂಧವ ಮಿಶ್ರಮಾಡಿದ ಸಿದ್ಧಾಗದಗಳಿಂದಾಗಲೀ ಅಥವಾ ನೆಳಲು, ಅರಿಶಿನ, ಚಂಗಲ್

ಕೋಷ್ಠ, ಮಂಜಿಷ್ಠೆ, ಅತಿಮಧುರಗಳ ಕಲ್ಕದಿಂದಾಗಲೀ ಲೇಪಿಸಬೇಕು. ಸೊಗದೇಬೇರು, ಅತಿಮಧುರ, ದ್ರಾಕ್ಷಿ, ನೆಲಗುಂಬಳದಗೆಡ್ಡೆ, ಹಾಲು ಕೊರಟಿಗೆಬೇರು, ನೆಗ್ಗಿಲು, ಜೇನು ತುಪ್ಪ, ಕಾಕೋಳಿ, ಅತಿಮಧುರಗಳ ಕಷಾಯವನ್ನು ರೋಗಿಗೆ ಕುಡಿಸಬೇಕು. ಅಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯದಿಂದ ವ್ರಣವನ್ನು ತೊಳೆಯಬೇಕು. ಉಪ ದ್ರವಗಳನ್ನು ದೋಷೋಲ್ಬಣಕ್ಕೆ ತಕ್ಕಂತೆ ವಿಷಹರಗಳಾದ ಔಷಧಗಳಿಂದ ಚಿಕಿತ್ಸೆಮಾಡಿ ನಿವಾರಣೆಮಾಡಬೇಕು.

ನಸ್ಯಾಞ್ಜನಾಭ್ಯಞ್ಜನಪಾನಧೂಮಂ ತಥಾವಪೀಡಂ ಕವಳಗ್ರಹಂ ಚ
ಸಂಶೋಧನಂ ಚೋಭಯತಃ ಪ್ರಯುಞ್ಜ್ಯಾದ್ರಕ್ತಂ ಹರೇಚ್ಚಾಪಿ ಜಲಾಯುಕಾಭಿಃ ॥೧೩೪॥

ಕೀಟದಷ್ಟವ್ರಣಾನ್ ಸರ್ವಾನಹಿದಷ್ಟವ್ರಣಾನಿ ಚ
ಆದಾಹಪಾಕಾತ್ ತಾನ್ಸರ್ವಾನ್ ಚಿಕಿತ್ಸೇತ್ ದುಷ್ಟವದ್ಭಿಷಕ್ ॥೧೩೫॥

ಅರ್ಥ—ಲೂತಾದಷ್ಟವಿಷಕ್ಕೆ ೧೦ ವಿಧ ಪ್ರತೀಕಾರಗಳನ್ನು ಹೇಳುತ್ತಾರೆ—ನಸ್ಯ, ಅಂಜನ, ಅಭ್ಯಂಗ, ಪಾನ, ಧೂಮ, ಅವಪೀಡ, ಕವಳಗ್ರಹ, ವಮನ, ವಿರೇಚನ, ಮತ್ತು ಜಿಗುಳೆಗಳನ್ನು ಕಚ್ಚಿಸಿ ದಂಶದಿಂದ ದುಷ್ಟ ವಿಷರಕ್ತಹರಣ ಮಾಡಿಸುವುದು ಎಂಬು ದಾಗಿ ಸಕಲವಿಧಗಳಾದ ಕೀಟದಷ್ಟ ವ್ರಣಗಳನ್ನೂ ಸರ್ಪದಷ್ಟವ್ರಣಗಳನ್ನೂ ಕಾದಸಲಾಕೆ ಯಿಂದ ಸುಟ್ಟು ಪಾಕಮಾಡುವವರೆಗೆ (ಅಂದರೆ ದಾಹಕರ್ಮವನ್ನು ಬಿಟ್ಟು) ದುಷ್ಟ ವ್ರಣಕ್ಕೆ ಮಾಡುವಂತೆಯೇ (ಅಂದರೆ ವಿಷಹರದ್ರವ್ಯಗಳಿಂದಲೇ ಶೋಧನ ವಮನ ವಿರೇ ಚನಗಳನ್ನು ಮಾಡಿಸಬೇಕು). ಚಿಕಿತ್ಸೆಯ ವಿಧಾನಗಳನ್ನು ಪ್ರಯೋಗಿಸಬೇಕು.

ವಿನಿವೃತ್ತೇ ತತಃ ಶೋಫೇ ಕರ್ಣಿಕಾಪಾತನಂ ಹಿತಮ್ ।
ನಿಮ್ಬಪತ್ರಂ ತ್ರಿವೃದ್ದನ್ತೀ ಕುಸುಮ್ಭಂ ರಜನೀ ಮಧು ॥೧೩೬॥
ಗುಗ್ಗುಳುಃ ಸೈನ್ಧವಂ ಕಿಣ್ವಂ ವರ್ಚಃ ಪಾರಾವತಸ್ಯ ಚ ।
ವಿಷವೃದ್ಧಿಕರಂ ಚಾನ್ನಂ ಹಿತ್ವಾ ಸಂಭೋಜನಂ ಹಿತಮ್ ॥೧೩೭॥
ವಿಷೇಭ್ಯಃ ಖಲು ಸರ್ವೇಭ್ಯಃ ಕರ್ಣಿಕಾಮರುಜಾಂ ಸ್ಥಿರಾಮ್ ।
ಪ್ರಚ್ಛಯಿತ್ವಾ ಮಧೂನ್ಮಿಶ್ರೈಃ ಶೋಧನೀಯೈರುಪಾಚರೇತ್ ॥೧೩೮॥
ಸಪ್ತಷಷ್ಠಸ್ಯ ಕೀಟಾನಾಂ ಶತಸ್ಯೈತದ್ವಿಭಾಗಶಃ ।
ದಷ್ಟಲಕ್ಷಣಮಾಖ್ಯಾತಂ ಚಿಕಿತ್ಸಾಚಾಪ್ಯನನ್ತರಮ್ ॥೧೩೯॥

ಅರ್ಥ—ಅಗ್ನಿದಾಹದಿಂದ ಶೋಫನಿವಾರಣೆಯಾದ ಮೇಲೆ ವ್ರಣದ ಸುತ್ತಲೂ ಬೆಳೆದಿರುವ ಕರ್ಣಿಕಾಕಾರದ ದುರ್ಮಾಂಸವನ್ನು ತೆಗೆಯಬೇಕು. (ತಾವರೆಯ ಹೂವಿನ ಮಧ್ಯದಲ್ಲಿ ತಾವರೆಬೀಜಗಳು ಅಡಗಿಕೊಂಡಿರುವ ಕರ್ಣಿಕೆಯಂತಿರುವ ದುರ್ಮಾಂಸ) ಬೇವಿನಸೊಪ್ಪು, ತಿಗಡೆಬೇರು, ಜಾಪಾಳದತೊಗಟೆ, ಕುಸುಮೆಬೀಜ, ಅರಿಶಿನ, ಜೇನು ತುಪ್ಪ, ಗುಗ್ಗುಳು, ಸೈಂಧಲವಣ, ಮದ್ಯದಗಶಿ, ಪಾರಿವಾಳದಹಿಕ್ಕೆ ಇವುಗಳ ಕಲ್ಕವನ್ನು

ಲೇಪಿಸಿದರೆ ಕರ್ಣಿಕೆಯು ಬಿದ್ದುಹೋಗುತ್ತದೆ. ವಿಷವರ್ಧಕಗಳಾದ ಅನ್ನವನ್ನು ಬಿಟ್ಟು ಸುಖವಾದ ಆಹಾರವನ್ನು ಭೋಜನ ಮಾಡಿಸಬೇಕು. ನೋವಿಲ್ಲದೆ ಬಲವಾಗಿ ಅಂಟಿಕೊಂಡಿರುವ ಕರ್ಣಿಕಾರೂಪದ ಮಾಂಸವನ್ನು ಶಸ್ತ್ರದಿಂದ ಕತ್ತರಿಸಿ ವ್ರಣಶೋಧನ ದ್ರವ್ಯಗಳ ಕಲ್ಕಕ್ಕೆ ಜೇನುತುಪ್ಪವನ್ನು ಸೇರಿಸಿ ಲೇಪಿಸಬೇಕು. ೧೬೭ ವಿಧವಿಷಕೀಟಗಳಿಗೆ ತಕ್ಕ ವಿಭಾಗಗಳನ್ನು ಮಾಡಿ ಅವುಗಳ ಕಡಿತದಿಂದುಂಟಾಗುವ ಲಕ್ಷಣಗಳನ್ನೂ ಅನಂತರ ಅವುಗಳಿಗೆ ಮಾಡಬೇಕಾದ ಚಿಕಿತ್ಸೆಗಳನ್ನೂ ಹೇಳಿದ್ದಾಯಿತು.

ಸವಿಂಶಮಧ್ಯಾಯಶತಮೇತದುಕ್ತಂ ವಿಭಾಗಶಃ
ಇಹೋದ್ದಿಷ್ಟಾ ನ ನಿರ್ದಿಷ್ಟಾನರ್ಥಾನ್ವಕ್ಷ್ಯಾಮ್ಯಥೋತ್ತರೇ ॥೧೪೦॥
ಸನಾತನತ್ವಾದ್ವೇದಾನಾಮಕ್ಷರತ್ವಾತ್ತಥೈವ ಚ ।
ತಥಾದೃಷ್ಟಫಲತ್ವಾಚ್ಚ ಹಿತತ್ವಾದಪಿ ದೇಹಿನಾಮ್ ॥೧೪೧॥
ವಾಕ್ಸಮೂಹಾರ್ಥವಿಸ್ತಾರಾತ್ ಪೂಜಿತತ್ವಾಚ್ಚ ದೇಹಿಭಿಃ ।
ಚಿಕಿತ್ಸಿತಾತ್ಪುಣ್ಯತಮಂ ನ ಕಿಞ್ಚಿದಪಿ ಸುಶ್ರುಮಃ ॥೧೪೨॥
ಋಷೇರಿನ್ದ್ರಪ್ರಭಾವಸ್ಯಾಮೃತಯೋನೇಃ ಭಿಷಗ್ಗುರೋಃ ।
ಧಾರಯಿತ್ವಾ ತು ವಿಮಲಂ ಮತಂ ಪರಮಸಂಮತಮ್ ।
ಉಕ್ತಾಹಾರಸಮಾಚಾರ ಇಹ ಪ್ರೇತ್ಯ ಚ ಮೋದತೇ ॥೧೪೩॥

ಅರ್ಥ—ಸೂತ್ರ, ನಿದಾನ, ಶಾರೀರ, ಚಿಕಿತ್ಸಾ, ಕಲ್ಪಸ್ಥಾನಗಳೆಂಬ ೫ ವಿಭಾಗಗಳಿಂದ ಕೂಡಿದ ಈ ಗ್ರಂಥದ ೧೨೦ ಅಧ್ಯಾಯಗಳನ್ನು ವಿವರಿಸಿದ್ದಾಯಿತು. ಈ ೧೨೦ ಅಧ್ಯಾಯಗಳಲ್ಲಿ ಸಂಗ್ರಹ ರೂಪದಿಂದ ಹೇಳಿದ ಶಾಲಾಕ್ಯ, ಕೌಮಾರಭೃತ್ಯ, ಕಾಯಚಿಕಿತ್ಸಾದಿ ವಿಚಾರಗಳನ್ನು ಉತ್ತರ ತನ್ತ್ರದಲ್ಲಿ ವಿಶದವಾಗಿ ಹೇಳುತ್ತೇನೆ. ಶಲ್ಯ ಶಾಲಾಕ್ಯಾದ್ಯಾಯುರ್ವೇದಾಂಗಗಳು ಸ್ವತಸ್ಸಿದ್ಧಗಳು (ಯಾರೂ ಇದನ್ನು ರಚಿಸಲಿಲ್ಲ) ಇವುಗಳು ಸರ್ವಕಾಲಕ್ಕೂ ಸಿದ್ಧಸಮ್ಮತಗಳಾದ ಕಾರಣ ಇವುಗಳಿಗೆ ನಾಶವಿಲ್ಲ. ವಿಷಯಗಳನ್ನು ವಿಸ್ತಾರವಾಗಿ ವಿವರಿಸಿ ಪ್ರಾಣಿಗಳಿಗೆ ರೋಗನಿವಾರಣೆಯಾಗಿ ಆರೋಗ್ಯರಕ್ಷಣೆಯೇ ಮುಖ್ಯವಾದ ಕಾರಣ ಚಿಕಿತ್ಸೆಮಾಡಿ ಪ್ರಾಣದಾನ ಮಾಡುವುದಕ್ಕಿಂತಲೂ ಬೇರೊಂದು ಪುಣ್ಯಕಾರ್ಯವಿಲ್ಲದ್ದರಿಂದಲೂ ಅಮೃತೋತ್ಪಾದನೆಗೆ ಕಾರಣನಾಗಿ ಇಂದ್ರಸಮಾನ ತೇಜಸ್ಸುಳ್ಳ ವೈದ್ಯಗುರುವಾದ ಶ್ರೀಧನ್ವನ್ತರಿಯು ಉಪದೇಶಗಳನ್ನು ಎಲ್ಲರೂ ಹೃದ್ಗತ ಮಾಡಿಕೊಂಡು ಅದರಂತೆ ಆಹಾರ ಆಚಾರಗಳನ್ನು ನಿರ್ವಹಿಸುತ್ತಾ ಈ ಲೋಕದಲ್ಲೂ ಸ್ವರ್ಗದಲ್ಲೂ ಆನಂದವನ್ನು ಪಡೆಯಬೇಕು.

ಟಿಪ್ಪಣಿ—ಸನಾತನತ್ವಾತ್ : ನಿತ್ಯವಾದದ್ದು, ಕೃತಕವಲ್ಲದ್ದು, ದೋಷವಿಲ್ಲದ್ದು ಎಂದು ಅರ್ಥವು ; ಅದರಲ್ಲಿ ಹೇಳಿದ ಚಿಕಿತ್ಸೆಯೂ ಪುಣ್ಯಪ್ರದವು. ಅಕ್ಷರತ್ವಾತ್—ನಾಶವಿಲ್ಲದ್ದರಿಂದಲೂ, ದೃಷ್ಟಫಲತ್ವಾತ್—ಪ್ರತ್ಯಕ್ಷ ಫಲಪ್ರಾಪ್ತಿಯಾಗುವುದರಿಂದಲೂ, ವಾಕ್ಸಮೂಹಾರ್ಥವಿಸ್ತರಾತ್—ವಾಕ್ಸಮೂಹದಿಂದ ಸ್ಪಷ್ಟಾರ್ಥವುಳ್ಳದ್ದು ಅದರಿಂದಲೂ ಪೂಜಿ

ತತ್ವಾತ್-ವ್ಯಾಧಿನಿವಾರಣೆಯಾಗಿ ಸ್ವಾಸ್ಥ್ಯರಕ್ಷಣೆ ಮಾಡಲಪೇಕ್ಷಿಸುವವರು ಸ್ವಪದ ಪದಾರ್ಥರೂಪವಾದ ಆಯುರ್ವೇದೋಪದೇಶಗಳನ್ನು ಪೂಜಿಸುತ್ತಾರೆ (ಗೌರವಿಸುತ್ತಾರೆ), ಅಮಲಂ-ದೋಷರಹಿತವಾದದ್ದು, ಪರಮಸಂಮತಂ-ಹೃದಯದಲ್ಲಿ ಧಾರಣೆಮಾಡಲು ಯೋಗ್ಯವಾದದ್ದು, ಉಕ್ತಾಹಾರಸಮಾಚಾರಃ-ಅದರಲ್ಲಿ ಹೇಳಿದಂತೆ ವ್ಯಾಧಿ ಪರಿಹಾರವಾಗಿ ಸ್ವಾಸ್ಥ್ಯರಕ್ಷಣ ಮಾಡುವ ಆಹಾರ ಆಚಾರಗಳನ್ನು ಸೇವಿಸುವವನು, ಗಯದಾಸಾಚಾರ್ಯನ ಮತದಲ್ಲಿ—ಸನಾತನತ್ವಾತ್-ಆಯುಃಸನ್ತಾನದಂತೆ ಪ್ರಜಾಸಂತಾನವು ನಿತ್ಯವಾಗಿರಲು ಉಪಕಾರಮಾಡುವುದರಿಂದಲೂ, ಅಕಾರಾದಿ ಸ್ವರಗಳು ಮತ್ತು ಕಕಾರಾದಿ ವ್ಯಞ್ಜನ ಪದಗಳಿಂದ ಕೂಡಿರುವುದರಿಂದಲೂ ಆಯುರ್ವೇದವು ಸತ್ಯವೆಂಬುದು ಸಿದ್ಧವು.

ಇತಿ ಶ್ರೀ ಧನ್ವನ್ತರಿಣೋಪದಿಷ್ಟಾಯಾಂ ಸುಶ್ರುತಸಂಹಿತಾಯಾಂ ಕಲ್ಪಸ್ಥಾನೇ ಕೀಟಕಲ್ಪನಾಮಕಾಷ್ಟಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕಭಾಷಾವಿವೃತಿಃ

ಸ್ವಸ್ತಿ ಶ್ರೀ ಭಗವತಾಧನ್ವನ್ತರಿಣೋಪದಿಷ್ಟಾಯಾಂತಚ್ಛಿಷ್ಯೇಣ ಚ ಮಹರ್ಷಿ ಶ್ರೀ ಸುಶ್ರುತೇನ ವಿರಚಿತಾಯಾಂ ಸುಶ್ರುತಸಂಹಿತಾಯಾಂ ಶ್ರೀಮತ್ತ್ರಿಮಕೂಟಪುರೀ ವಾಸ್ತವ್ಯ ದೀಕ್ಷಿತ ನಂಜುಂಡಭಟ್ಟಪುತ್ರ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕಭಾಷಾವಿವೃತಿ ಸಹಿತಂ ಕಲ್ಪಸ್ಥಾನಂ ಸಮಾಪ್ತಮ್.

|| ಶ್ರೀ ಧನ್ವನ್ತರಯೇ ನಮಃ ||

ಸುಶ್ರುತಸಂಹಿತಾ—ಉತ್ತರತನ್ತ್ರಮ್

ಪ್ರಥಮೋಽಧ್ಯಾಯಃ

ಅಥ ಔಪದ್ರವಿಕಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ ಸುಶ್ರುತಾಯ ||೨||

ಈ ಅಧ್ಯಾಯದಲ್ಲಿ ಶ್ರೀಧನ್ವನ್ತರಿಯು ತನ್ನ ಶಿಷ್ಯನಾದ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಔಪದ್ರವಿಕಾಧ್ಯಾಯವನ್ನು ವಿವರಿಸುತ್ತೇವೆ.

ಟಿಪ್ಪಣಿ : ಕಲ್ಪಸ್ಥಾನದಲ್ಲಿ ವಿಷಜನ್ಯವಾದ ಆಗನ್ತುವ್ರಣವು ವಿಷದಂತೆ ಉಪದ್ರವಗಳನ್ನುಂಟುಮಾಡುವುದರಿಂದಲೂ ನಿಜವ್ರಣಗಳಲ್ಲಿಯೂ ಶತ್ರುಗಳಿಂದ ಪ್ರಯೋಗಿಸಲ್ಪಟ್ಟ ವಿಷಗಳಿಗೆ ವಿಷಚಿಕಿತ್ಸೆಯಂತೆಯೇ ಚಿಕಿತ್ಸೆಮಾಡಬೇಕೆಂದು ಹೇಳಿರುತ್ತೆಯಾಗಿ ಇವೆರಡಕ್ಕೂ ಉಪದ್ರವಗಳು ಸಾಮಾನ್ಯವಾಗಿರುವುದರಿಂದ ಚಿಕಿತ್ಸೆಯನ್ನು ಸಮಾನವಾಗಿಯೇ ಮಾಡಬೇಕಾದ್ದರಿಂದ ಸರ್ವೋಪದ್ರವಗಳಿಗೂ ಚಿಕಿತ್ಸೆ ಮಾಡುವುದಕ್ಕಾಗಿಯೇ ಉತ್ತರತನ್ತ್ರವು ಪ್ರಾರಂಭಿಸಲ್ಪಟ್ಟಿರುತ್ತದೆ. ಅಥವಾ ಹಿಂದೆ ಹೇಳಿದ ೧೨೦ ಅಧ್ಯಾಯಗಳಲ್ಲಿಯೂ ವಿವರಿಸದೆ ಉಳಿದಿರುವ ಉಪದ್ರವಗಳ ಚಿಕಿತ್ಸೆಯನ್ನು ವಿವರಿಸುವುದಕ್ಕಾಗಿಯೇ ಈ ಉತ್ತರತನ್ತ್ರವನ್ನು ಪ್ರಾರಂಭಿಸುತ್ತಾರೆ. ತಂತ್ರದಲ್ಲಿ ಹೇಳಿರುವ ಉಪದ್ರವಗಳನ್ನು ಉದ್ದೇಶಿಸಿ ವಿವರಣೆ ಮಾಡುವುದರಿಂದ ಈ ಅಧ್ಯಾಯಕ್ಕೆ ಔಪದ್ರವಿಕಾಧ್ಯಾಯವೆಂದು ಹೆಸರು. ಉಪದ್ರವಗಳೆಂದರೆ ರೋಗಗಳೆಂದರ್ಥವು.

ಅಧ್ಯಾಯಾನಾಂ ಶತೇ ವಿಂಶೇ ಯದುಕ್ತಮಸಕೃನ್ಮಯಾ ।
ವಕ್ಷ್ಯಾಮಿ ಬಹುಧಾ ಸಮ್ಯಗುತ್ತರೇಽರ್ಥಾನಿಮಾನಿತಿ ||೩||
ಇದಾನೀಂ ತತ್ಪ್ರವಕ್ಷ್ಯಾಮಿ ತನ್ತ್ರಮುತ್ತರಮುತ್ತಮಮ್ ।

ಇಲ್ಲಿ ಹೇಳಿದ ವಿಚಾರವನ್ನೇ ಉತ್ತರತಂತ್ರದಲ್ಲಿ ವಿಸ್ತಾರವಾಗಿ ವಿವರಿಸುತ್ತೇನೆಂದು ಪೂರ್ವತಂತ್ರದ ೧೨೦ ಅಧ್ಯಾಯಗಳಲ್ಲೂ ಅನೇಕ ಸಂದರ್ಭಗಳಲ್ಲಿ ನಾನು ಹೇಳಿದ್ದ ಪ್ರಕಾರವಾಗಿಯೇ ಈಗ ಆ ಉತ್ತರತಂತ್ರವನ್ನು ಹೇಳುತ್ತೇನೆ.

ನಿಖಿಲೇನೋಪದಿಶ್ಯನ್ತೇ ಯತ್ರ ರೋಗಾಃ ಪೃಥಗ್ವಿಧಾಃ ||೪||
ಶಾಲಾಕ್ಯತನ್ತ್ರಾಭಿಹಿತಾ ವಿದೇಹಾಧಿಪಕೀರ್ತಿತಾಃ ।
ಯೇ ಚ ವಿಸ್ತರತೋ ದೃಷ್ಟಾಃ ಕುಮಾರಾಬಾಧಹೇತವಃ ||೫||

ಷಟ್ಸು ಕಾಯಚಿಕಿತ್ಸಾಸು ಯೇ ಚೋಕ್ತಾ ಪರಮರ್ಷಿಭಿಃ ।
ಉಪಸರ್ಗಾದಯೋ ರೋಗಾ ಯೇ ಚಾಗನ್ತವಃ ಸ್ಮೃತಾಃ ॥೬॥
ತ್ರಿಷಷ್ಟೀರಸಸಂಸರ್ಗಾಃ ಸ್ವಸ್ಥವೃತ್ತಂ ತಥೈವ ಚ ।
ಯುಕ್ತಾರ್ಥಾ ಯುಕ್ತಯಶ್ಚೈವ ದೋಷಭೇದಾಸ್ತಥೈವ ಚ ॥೭॥
[ವಿದೇಹಾಧಿಪತಿಃ ಶ್ರೀಮಾನ್ ಜನಕೋ ನಾಮ ವಿಶ್ರುತಃ ।
ಆಲಮ್ಭಯಜ್ಞಪ್ರವಣಃ ಸೋಽಯಜದ್ಬ್ರಾಹ್ಮಣೈರ್ವೃತಃ
ತಸ್ಯ ಯಾಗಪ್ರವೃತ್ತಸ್ಯ ಕುಪಿತೋ ಭಗವಾನ್ ರವಿಃ ।
ದೃಷ್ಟಿಂ ಪ್ರಣಾಶಯಾಮಾಸ ಸೋಽನುತೇಪೇ ಮಹತ್ತಪಃ ॥
ದೀಪ್ತಾಂಶುಸ್ತಪಸಾ ತೇನ ತೋಷಿತಃ ಪ್ರದದೌ ಪುನಃ ।
ಚಕ್ಷುರ್ವೇದಂ ಪ್ರಸನ್ನಾತ್ಮಾ ಸರ್ವಭೂತಾನುಕಮ್ಪಯಾ ॥]
ಯತ್ರೋಕ್ತಾ ವಿವಿಧಾ ಅರ್ಥಾ ರೋಗಸಾಧನಹೇತವಃ ॥
ಮಹತಸ್ತಸ್ಯ ತನ್ತ್ರಸ್ಯ ದುರ್ಗಾಧಸ್ಯಾಮ್ಬುಧೇರಿವ ॥೮॥
ಆದಾವೇವೋತ್ತಮಾಙ್ಗಸ್ಥಾನ್ ರೋಗಾನಭಿದಧಾಮ್ಯಹಂ ।
ಸಙ್ಖ್ಯಯಾ ಲಕ್ಷಣೈಶ್ಚಾಪಿ ಸಾಧ್ಯಾಸಾಧ್ಯಕ್ರಮೇಣ ಚ ॥೯॥

ಈ ಉತ್ತರತಂತ್ರದಲ್ಲಿ ವಿದೇಹರಾಜನಾದ ನಿಮಿಚಕ್ರವರ್ತಿಯಿಂದ ರಚಿತವಾದ ಶಾಲಾಕ್ಯತನ್ತ್ರದಲ್ಲಿ ಹೇಳಿರುವ ಅನೇಕವಿಧಗಳಾದ ಊರ್ಧ್ವಜತ್ರುರೋಗಗಳನ್ನೂ (೭೬ ವಿಧ ನೇತ್ರರೋಗ). ಪಾರ್ವತಕ, ಜೀವಕ, ಬನ್ಧಕ, ಯಾಚಕ ಮೊದಲಾದವರಿಂದ ವಿಸ್ತಾರವಾಗಿ ವಿವರಿಸಲ್ಪಟ್ಟಿರುವ ಬಾಲಕರನ್ನು ಪೀಡಿಸುವ ಸ್ಕನ್ದಗ್ರಹಾದಿಗಳನ್ನೂ, ಮಹರ್ಷಿಗಳಾದ ಅಗ್ನಿವೇಶ, ಭೇಡ, ಜತೂಕರ್ಣ, ಪರಾಶರಹಾರೀತ, ಕ್ಷಾರಪಾಣಿ ಗಳಿಂದ ಹೇಳಲ್ಪಟ್ಟ ಕಾಯಚಿಕಿತ್ಸೆಗಳನ್ನೂ ಅಂದರೆ ಜ್ವರ, ರಕ್ತಪಿತ್ತ ಮೊದಲಾದ ಉಪ ಸರ್ಗರೋಗಗಳನ್ನೂ, ಉನ್ಮಾದ, ಅಪಸ್ಮಾರಾದಿ ಆಗನ್ತುರೋಗಗಳನ್ನೂ, ೬೩ ವಿಧಗಳಾದ ರಸಸಂಸರ್ಗಗಳನ್ನೂ, ಸ್ವಸ್ಥರು ಆಚರಿಸಬೇಕಾದ ನಿತ್ಯಾಚರಣೆಗಳನ್ನೂ ಪ್ರಮಾಣಸಹಿತ ವಾಗಿ ತಂತ್ರಯುಕ್ತಿಗಳನ್ನೂ, ೬೩ ವಿಧಗಳಾದ ದೋಷಭೇದಗಳನ್ನೂ, ರೋಗನಿವಾರಣೆ ಮಾಡುವ ಚಿಕಿತ್ಸಾವಿಧಾನಗಳನ್ನೂ ವಿಸ್ತಾರವಾಗಿ ತಿಳಿಸುತ್ತೇನೆ.

ಟಿಪ್ಪಣಿ : ವಿದೇಹರಾಜನಾಗಿ ಸುಪ್ರಸಿದ್ಧನಾದ ಜನಕರಾಜನು ವಿದ್ವಾಂಸರಾದ ಬ್ರಾಹ್ಮಣರ ಸಹಾಯದಿಂದ ಅಶ್ವಾಲಮ್ಭ ಗವಾಲಮ್ಭಾದಿ ಪ್ರಾಣಿಯಜ್ಞಗಳನ್ನು ಮಾಡಲು ಪ್ರವರ್ತಿಸಿದಕಾರಣ ಶ್ರೀಭಗವಾನ್ ಸೂರ್ಯನು ಕೋಪಗೊಂಡು ಜನಕನ ಕಣ್ಣುಗಳನ್ನು ನಾಶಮಾಡಿದನು. (ಜನಕನು ಕುರುಡನಾದನು) ಇದರಿಂದ ತುಂಬಾ ವ್ಯಸನಗೊಂಡ ಜನಕರಾಜನು ಬಹುಭಕ್ತಿಯಿಂದ ಸೂರ್ಯದೇವನನ್ನು ಕುರಿತು ಉಗ್ರ ತಪಸ್ಸನ್ನು ಮಾಡಲಾಗಿ ದಯಾಸಮುದ್ರನಾದ ಸೂರ್ಯನು ಇವನ ತಪಸ್ಸಿಗೆ ಮೆಚ್ಚಿ ಸಂತುಷ್ಟನಾಗಿ ಸಕಲ ಪ್ರಾಣಿಗಳಲ್ಲೂ ದಯೆಯನ್ನು ತೋರಿಸುವುದಕ್ಕಾಗಿ ಚಕ್ಷುರ್ವೇದ

ವನ್ನು (ನೇತ್ರ ಚಿಕಿತ್ಸಾಶಾಸ್ತ್ರವನ್ನು) ಜನಕರಾಜನಿಗೆ ಉಪದೇಶಮಾಡಿದನು. (ಪುನಃ ಅವನಿಗೆ ಕಣ್ಣು ಕಾಣಿಸುವಂತೆ ಅನುಗ್ರಹಮಾಡಿದನು.) ಈ ಆನುಪೂರ್ವಿಯನ್ನು ಮೇಲಿನ ಅಂಶಗಳಿಗೆ ಸೇರಿಸಿಕೊಳ್ಳಬೇಕೆಂದು ಕೆಲವು ವೈದ್ಯರ ಮತವು. ಸಮುದ್ರದಂತೆ ಅಗಾಧವಾದ ಈ ಉತ್ತರತನ್ತ್ರದ ಪ್ರಾರಂಭದಲ್ಲಿಯೇ ತಲೆಯಲ್ಲಿ ಉಂಟಾಗುವ ರೋಗ ಗಳನ್ನೂ, ಅವುಗಳ ಸಂಖ್ಯೆಲಕ್ಷಣಗಳು–ಸಾಧ್ಯಾಸಾಧ್ಯವಿಚಾರಸಮೇತವಾಗಿ ಚಿಕಿತ್ಸೆ ಯನ್ನೂ ಹೇಳುತ್ತೇನೆ. ೭೬ ನೇತ್ರರೋಗಗಳೆಂದು ಜನಕಪ್ರಣೀತ ನೇತ್ರರೋಗಚಿಕಿತ್ಸೆ ಯಲ್ಲೂ ಮತ್ತು ಕರಾಳ, ಭದ್ರಶೌನಕಾದಿತಂತ್ರಗಳಲ್ಲೂ ಹೇಳಿದೆಯೆಂದು ಸುಶ್ರುತರ ಅಭಿಪ್ರಾಯವು.

ಟಿಪ್ಪಣಿ: ಉತ್ತಮಾಙ್ಗಸ್ಥ–ಸಕಲ ಇಂದ್ರಿಯಗಳಿಗೂ ತಲೆಯೇ ಆಶ್ರಯ ಸ್ಥಾನವಾಗಿದೆ ; ಮತ್ತು ಪ್ರಾಣಕ್ಕೂ ಆಶ್ರಯವಾಗಿದೆ. ಆದ್ದರಿಂದ ಮೊದಲು ಶಿರಸ್ಸಿನಲ್ಲಿ ಉಂಟಾಗುವ ರೋಗಗಳನ್ನು ವಿವರಿಸಬೇಕಾದದ್ದೇ ಯುಕ್ತವು. ಸಾಧ್ಯಾ ಸಾಧ್ಯಕ್ರಮೇಣ ಚ–ಎಂದು ಚಕಾರದಿಂದ ಚಿಕಿತ್ಸೆಯನ್ನೂ ಹೇಳುತ್ತೇನೆಂದು ಅರ್ಥವು ; ಲಕ್ಷಣವೆಂದರೆ ಹೇತು ಪೂರ್ವರೂಪ ರೂಪ–ಉಪಶಯ ಸಂಪ್ರಾಪ್ತಿಗಳೆಂದೂ ಅರ್ಥಮಾಡಬೇಕು.]

ವಿದ್ಯಾದ್ದ್ವ್ಯಙ್ಗುಲಬಾಹುಲ್ಯಂ ಸ್ವಾಙ್ಗುಷ್ಠೋದರಸಮ್ಮಿತಮ್
ದ್ವ್ಯಙ್ಗುಲಂ ಸರ್ವತಃ ಸಾರ್ಧಂ ಭಿಷಙ್ನಯನಬುದ್ಬುದಮ್ ||೧೦||
ಸುವೃತ್ತಂ ಗೋಸ್ತನಾಕಾರಂ ಸರ್ವಭೂತಗುಣೋದ್ಭವಮ್
ಪಲಂ ಭುವೋಽಗ್ನಿತೋ ರಕ್ತಂ ವಾತಾತ್ ಕೃಷ್ಣಂ ಸಿತಂ ಜಲಾತ್ ||೧೧||
ಆಕಾಶಾದಶ್ರುಮಾರ್ಗಾಶ್ಚ ಜಾಯನ್ತೇ ನೇತ್ರಬುದ್ಬುದೇ

ಶಿರಸ್ಸಿನಲ್ಲಿ ಎಲ್ಲಾ ಇಂದ್ರಿಯಗಳಿದ್ದರೂ ನೇತ್ರೇಂದ್ರಿಯವೇ ಮುಖ್ಯವಾದಕಾರಣ ಮೊದಲು ನೇತ್ರೇಂದ್ರಿಯದಲ್ಲಿ ಹುಟ್ಟುವ ರೋಗಗಳ ಸಂಖ್ಯೆ ಮೊದಲಾದುವನ್ನು ವಿವರಿಸ ಬೇಕಾದ್ದು ಆವಶ್ಯಕವು. ಕಣ್ಣಿನ ಪಟಲಗಳನ್ನು ಚುಚ್ಚಿ ಚಿಕಿತ್ಸೆಮಾಡಬೇಕಾದ್ದರಿಂದ ನೇತ್ರಶಲಾಕೆಯನ್ನು ಎಷ್ಟು ಆಳಕ್ಕೆ ಚುಚ್ಚಬೇಕೆಂದು ನಿರ್ಧರಿಸಬೇಕಾಗುವಕಾರಣ ನೇತ್ರ ಗೋಳದ ಉದ್ದ ಅಗಲ ಎತ್ತರ ಆಕಾರಾದಿಗಳನ್ನು ನಿರ್ಧರಿಸಬೇಕಾಗುತ್ತದೆ. ನೇತ್ರ ಗೋಳವು ಅವರವರ ಕೈಹೆಬ್ಬೆಟ್ಟಿನ ಮಧ್ಯದ ಅಗಲದ ಎರಡರಷ್ಟು ಎತ್ತರವಾಗಿಯೂ ಉದ್ದದಲ್ಲೂ ಅಗಲದಲ್ಲೂ 2½ ಅಂಗುಷ್ಠ ಮಧ್ಯದಷ್ಟಿರುತ್ತದೆಂದೂ ಗುಂಡಾಗಿ ಹಸುವಿನ ಮೊಲೆಯಂತೆ ಆಕಾರವುಳ್ಳದಾಗಿರುತ್ತದೆಂದೂ ವೈದ್ಯರು ತಿಳಿಯಬೇಕು ; ಮತ್ತು ಪೃಥಿ ವ್ಯಾದಿ ಸಕಲಭೂತಗಳ ಗುಣಗಳಿಂದ ಉತ್ಪನ್ನಗಳಾದ ಸಿರಾ, ಸ್ನಾಯು, ಅಸ್ಥಿಗಳಿಂದಲೂ ಅಶ್ರುಮಾರ್ಗಗಳಿಂದಲೂ ವ್ಯಾಪ್ತವಾಗಿರುತ್ತೆಂದು ತಿಳಿಯಬೇಕು. ರಕ್ತ, ಸಿತ ಕೃಷ್ಣಗಳು ಅಗ್ನಿ, ಅಪ್ ಮತ್ತು ಭೂಮಿಯ ಗುಣಗಳೆಂದು ಅರ್ಥವು. ಭೂಮಿಯಿಂದ ಮಾಂಸವೂ, ಅಗ್ನಿಯಿಂದ ರಕ್ತವೂ, ವಾತದಿಂದ ಕಪ್ಪುಬಣ್ಣವೂ, ನೀರಿನಿಂದ ಬಿಳಿಯಬಣ್ಣವೂ,

ಆಕಾಶದಿಂದ ಅಶ್ರುಮಾರ್ಗವೂ ಉಂಟಾಗುತ್ತವೆ. (ನೇತ್ರಗೋಳದಲ್ಲಿರುವ ವಸ್ತುಗಳ ಉತ್ಪತ್ತಿಕ್ರಮವಿದು)

ದೃಷ್ಟಿಂ ಚಾತ್ರ ತಥಾ ವಕ್ಷ್ಯೇ ಯಥಾ ಬ್ರೂಯಾದ್ವಿಶಾರದಃ ॥೧೨॥
ನೇತ್ರಾಯಾಮತ್ರಿಭಾಗಂ ತು ಕೃಷ್ಣಮಂಡಲಮುಚ್ಯತೇ ।
ಕೃಷ್ಣಾತ್ ಸಪ್ತಮಮಿಚ್ಛನ್ತಿ ದೃಷ್ಟಿಂ ವಿಶಾರದಾಃ ॥೧೩॥
ಮಣ್ಡಲಾನಿ ಚ ಸನ್ಧೀಂಶ್ಚ ಪಟಲಾನಿ ಚ ಲೋಚನೇ ।
ಯಥಾಕ್ರಮಂ ವಿಜಾನೀಯಾತ್ ಪಞ್ಚ ಷಟ್ಚ ಷಡೇವ ಚ ॥೧೪॥

ವಿದೇಹರಾಜನಾದ ನೇತ್ರಚಿಕಿತ್ಸಾಪ್ರವೀಣನಾದ ಜನಕನು (ನಿಮಿಯು) ಹೇಳುವಂತೆಯೇ ಪೂರ್ವಾಚಾರ್ಯರ ಅಭಿಪ್ರಾಯವನ್ನು ಅನುಸರಿಸಿ ದೃಷ್ಟಿಮಂಡಲದ ಪ್ರಮಾಣವನ್ನು ಹೇಳುತ್ತೇನೆ; ಹೇಗೆಂದರೆ ನೇತ್ರಬುದ್ಬುದ (ನೇತ್ರಗೋಳ)ದ ಅಗಲದ $\frac{1}{3}$ನೆಯ ಭಾಗದಷ್ಟು ಕರಿಗುಡ್ಡೆಯ ಅಗಲವೂ (ಕೃಷ್ಣಮಂಡಲವೂ) ಕರೀಗುಡ್ಡೆಯ $\frac{1}{7}$ನೆಯ ಭಾಗದಷ್ಟು ದೃಷ್ಟಿಮಂಡಲದ ಅಗಲವೂ ಎಂದು ನೇತ್ರವೈದ್ಯರು ಅಭಿಪ್ರಾಯಪಡುತ್ತಾರೆ. ಪ್ರತಿ ಕಣ್ಣಿನಲ್ಲಿಯೂ ೫ ಮಂಡಲಗಳೂ, ೬ ಸಂಧಿಗಳೂ, ೬ ಪಟಲಗಳೂ ಇರುತ್ತವೆಂದು ತಿಳಿಯಬೇಕು.

ಪಕ್ಷ್ಮವರ್ತ್ಮಶ್ವೇತಕೃಷ್ಣದೃಷ್ಟೀನಾಂ ಮಣ್ಡಲಾನಿ ತು ।
ಅನುಪೂರ್ವಂ ತು ತೇ ಮಧ್ಯಾಶ್ಚತ್ವಾರೋऽನ್ತ್ಯ ಯಥೋತ್ತರಂ ॥೧೫॥

(ಪಕ್ಷ್ಮ) ಕಣ್ಣುರೆಪ್ಪೆಯಕೂದಲು-ಕಣ್ಣುರೆಪ್ಪೆ-ಬಿಳಿಗುಡ್ಡೆ-ಕರಿಗುಡ್ಡೆ-ದೃಷ್ಟಿ ಎಂದು ೫ ಮಂಡಲಗಳು ಇವೆ. ರೆಪ್ಪೆ ಕೂದಲಿನ ಮಂಡಲದಿಂದ ಹಿಂದಕ್ಕೆ ೪ ಮಂಡಲಗಳಾಗುತ್ತವೆ; ದೃಷ್ಟಿಮಂಡಲದಿಂದ ಮುಂದಕ್ಕೆ ೪ ಮಂಡಲಗಳಾಗುತ್ತವೆ; ಕಡೆಯಿಂದ ಎಣಿಕೆಮಾಡಿದರೆ ದೃಷ್ಟಿಮಂಡಲವು ಅಂತ್ಯಮಂಡಲವಾಗುವುದಿಲ್ಲ; ಮೊದಲಿನಿಂದ ಎಣಿಸಿದರೆ ರೆಪ್ಪೆ (ಪಕ್ಷ್ಮ) ಮಂಡಲವು ಮಧ್ಯಮಂಡಲವಾಗುವುದಿಲ್ಲ. ಅಂದರೆ ಮಧ್ಯಮಂಡಲಗಳು ೪ ಎಂದು ತಿಳಿಯಬೇಕು.

ಪಕ್ಷ್ಮವರ್ತ್ಮಗತಃ ಸನ್ಧಿರ್ವರ್ತ್ಮಶುಕ್ಲಗತೋऽಪರಃ ।
ಶುಕ್ಲಕೃಷ್ಣಗತಸ್ತ್ವನ್ಯಃ ಕೃಷ್ಣದೃಷ್ಟಿಗತೋऽಪರಃ ॥೧೬॥
ತತಃ ಕನೀನಕಗತಃ ಷಷ್ಠಶ್ಚಾಪಾಙ್ಗಗಃ ಸ್ಮೃತಃ ।

ರೆಪ್ಪೆಕೂದಲೂ ರೆಪ್ಪೆಯೂ ಕೂಡುವಸಂಧಿ ರೆಪ್ಪೆಯೂ ಬಿಳಿಯಗುಡ್ಡೆಯೂ ಸೇರುವ ಸಂಧಿ ಬಿಳಿಗುಡ್ಡೆಯೂ ಕರಿಯ ಗುಡ್ಡೆಯೂ ಸೇರುವಸಂಧಿ ಕರಿಯಗುಡ್ಡೆಯೂ ದೃಷ್ಟಿಮಂಡಲವೂ ಸೇರುವಸಂಧಿ ಮೂಗಿನಹತ್ತಿರದಲ್ಲಿರುವ ಎರಡು ರೆಪ್ಪೆಗಳು ಸೇರುವಸ್ಥಳ ಮತ್ತು ಹುಬ್ಬಿನ ತುದಿಯ ಕೆಳಗೆ ಕಣ್ಣಿನ ಎರಡು ರೆಪ್ಪೆಗಳು ಸೇರುವಸ್ಥಳ, ಈ ರೀತಿಯಾಗಿ ೬ ನೇತ್ರಸಂಧಿಗಳಿವೆ.

ದ್ವೇ ವರ್ತ್ಮಪಟಲೇ ವಿದ್ಯಾಚ್ಚತ್ವಾರ್ಯನ್ಯಾನಿ ಚಾಕ್ಷಿಣಿ ||೧೭||
ಜಾಯಂತೇ ತಿಮಿರಂ ಯೇಷು ವ್ಯಾಧಿಃ ಪರಮದಾರುಣಃ ।
ತೇಜೋಜಲಾಶ್ರಿತಂ ಬಾಹ್ಯಂ ತೇಷ್ವನ್ಯತ್ ಪಿಶಿತಾಶ್ರಿತಮ್ ||೧೮||
ಮೇದಸ್ತೃತೀಯಂ ಪಟಲಮಾಶ್ರಿತಂ ತ್ವಸ್ಥಿಚಾಪರಮ್ ।
ಪಞ್ಚಮಾಂಶಸಮಂ ದೃಷ್ಟೇಸ್ತೇಷಾಂ ಬಾಹುಳ್ಯಮಿಷ್ಯತೇ ||೧೯||
ಸಿರಾಣಾಂ ಕಣ್ಡರಾಣಾಂ ಚ ಮೇದಸಃ ಕಾಲಕಸ್ಯ ಚ ।
ಗುಣಾಃ ಕಾಲಾನ್ತರಃ ಶ್ಲೇಷ್ಮಾ ಬನ್ಧನೇಽಕ್ಷ್ಣೋಃ ಸಿರಾಯುತಃ ||೨೦||

ಕಣ್ಣಿನಲ್ಲಿ ೨ ರೆಪ್ಪೆಗಳೂ ಮತ್ತು ಅತಿ ಭಯಂಕರವಾದ ತಿಮಿರರೋಗವುಂಟಾಗುವ ೪ ಪಟಲಗಳೂ ಕೂಡಿ ಒಟ್ಟು ೬ ಪಟಲಗಳುಂಟು (ಮುಸುಕು). ಆ ೪ ಪಟಲಗಳೊಳಗೆ ತೇಜಸ್ಸು ಮತ್ತು ಜಲಗಳ ಮಿಶ್ರಣದಿಂದ ಹೊರಗಿನ ಪಟಲವೂ ಮಾಂಸ ಪಟಲವೇ ಎರಡನೆಯದು ಮೇದಸ್ಸಿನ ಪಟಲವೇ ೩ ನೆಯದು ಮೂಳೆಯ ಪಟಲವೇ ೪ ನೆಯದು ; ಎಲ್ಲಾ ಪಟಲಗಳೂ ಒಟ್ಟಾಗಿ ಸೇರಿದರೆ ದೃಷ್ಟಿಮಂಡಲದ $\frac{1}{5}$ ಭಾಗದಷ್ಟು ದಪ್ಪವಾಗುತ್ತದೆ ; ಸಿರೆಗಳ ಕಣ್ಡರಗಳ ಮೇದಸ್ಸಿನ ಕಾಲಕಾಸ್ಥಿಯ ಸಾರ ಭಾಗಗಳನ್ನು ಕಾಲಕಾಸ್ಥಿಯಲ್ಲಿ ಸಂಚಿತವಾದ ಕಫವು ಸಿರೆ ಧಮನಿ ಸ್ನಾಯುಗಳ ಮೂಲಕ ಅಕ್ಷಿಗೋಳವನ್ನು ಶುಕ್ಲಕೃಷ್ಣಭಾಗದಲ್ಲಿ ಬಿಗಿದುಕೊಂಡಿರುತ್ತದೆ.

ಟಿಪ್ಪಣಿ : ತೇಜಸ್ಸೆಂದರೆ–ಆಲೋಚಕಪಿತ್ತವನ್ನು ಸಿರೆಗಳಲ್ಲಿರುವ ರಕ್ತವು ಆಶ್ರಯಿಸಿಕೊಂಡಿರುತ್ತೆಂದೂ ಜಲವೆಂದರೆ ತ್ವಗ್ಗತರಸಧಾತುವೆಂದೂ ಇವೆರಡರಿಂದ ಅಕ್ಷಿಗೋಳದ ಹೊರಗಡೆಯ ಮೊದಲನೆಯ ಪಟಲವುಂಟಾಗಿರುತ್ತೆಂದೂ ತಿಳಿಯಬೇಕು ; ಅದರ ಕೆಳಗಿನ ಪಟಲವೇ ಮಾಂಸಮಯವು, ಸಿರೆಗಳ ಕಂಡರಗಳ ಮತ್ತು ಮೇದಸ್ಸಿನ ಸಾರಭಾಗಗಳು ಕರೀಗುಡ್ಡೆಯನ್ನೂ ಸಿರಾಗತಶ್ಲೇಷ್ಮವು ಬಿಳಿಯಗುಡ್ಡೆಯನ್ನೂ ಬಿಗಿದು ಹಿಡಿದಿರುತ್ತವೆ.

ಸಿರಾನುಸಾರಿಭಿರ್ದೋಷೈರ್ವಿಗುಣೈರೂರ್ಧ್ವಮಾಗತೈಃ ।
ಜಾಯನ್ತೇ ನೇತ್ರಭಾಗೇಷು ರೋಗಾಃ ಪರಮದಾರುಣಾಃ ||೨೧||
ತತ್ರಾವಿಲಂ ಸಸಂರಂಭಮಶ್ರುಪೂರ್ಣೋಪದೇಹವತ್ ।
ಗುರೂಷಾ (ತೋದ) ಚೋಷರಾಗಾದ್ಯೈರ್ಜುಷ್ಟಂ ಚಾವ್ಯಕ್ತಲಕ್ಷಣೈಃ ||೨೨||
ಸ ಶೂಲಂ ವರ್ತ್ಮಕೋಷೇಷು ಶೂಕಪೂರ್ಣಾಭಮೇವ ಚ ।
ವಿಹನ್ಯಮಾನಂ ರೂಪೇ ವಾ ಕ್ರಿಯಾಸ್ವಕ್ಷಿ ಯಥಾ ಪುರಾ ||೨೩||
ದೃಷ್ಟ್ವೈವ ಧೀಮಾನ್ ಬುಧ್ಯೇತ ದೋಷೇಣಾಧಿಷ್ಠಿತಂ ತು ತತ್ ।
ತತ್ರ ಸಂರಮ್ಭಮಾಸಾದ್ಯ ಯಥಾದೋಷಂ ಭಿಷಗ್ಜಿತಮ್ ||೨೪||
ವಿದಧ್ಯಾನ್ನೇತ್ರಜಾ ರೋಗಾ ಬಲವನ್ತಃ ಸ್ಯುರನ್ಯಥಾ ।
ಸಂಕ್ಷೇಪತಃ ಕ್ರಿಯಾಯೋಗೋ ನಿದಾನಪರಿವರ್ಜನಮ್
ವಾತಾದೀನಾಂ ಪ್ರತೀಘಾತಃ ಪ್ರೋಕ್ತೋ ವಿಸ್ತರತಃ ಪುನಃ || ||೨೫||

ನೇತ್ರರೋಗಗಳಿಗೆ ಸಂಪ್ರಾಪ್ತಿಯು—ಪ್ರಕುಪಿತಗಳಾದ ದೋಷಗಳು ನೇತ್ರಗತ ಶಿರೆಗಳನ್ನಾಶ್ರಯಿಸಿ ಮೇಲ್ಮುಖವಾಗಿ ನುಗ್ಗಿ ನೇತ್ರಭಾಗಗಳಲ್ಲಿ ಅತಿಭಯಂಕರ ರೋಗಗಳನ್ನುಂಟುಮಾಡುತ್ತವೆ. ಪೂರ್ವರೂಪದ ಲಕ್ಷಣ ಕಣ್ಣಿನಲ್ಲಿ ನೀರುತುಂಬಿ ಊದಿ ಜಿಬರುಮೆತ್ತಿ ಭಾರವಾಗಿ ಉರಿತ, ಚುಚ್ಚುವಿಕೆ-ಕೆಂಪುಬಣ್ಣಗಳಿಂದ ಕೂಡಿದ್ದರೆ ಅವ್ಯಕ್ತಲಕ್ಷಣ ಅಥವಾ ಪೂರ್ವರೂಪವೆಂದು ತಿಳಿಯಬೇಕು. ಇದರಜೊತೆಗೆ ಕಣ್ಣು ಚುಚ್ಚುವಂತೆಯೂ ರೆಪ್ಪೆಗಳಲ್ಲಿ ಸುಂಕು (ಸೂಕ್ಷ್ಮವಾದ ಮುಳ್ಳು) ತುಂಬಿದಂತೆಯೂ ನೋವುಂಟಾಗುತ್ತದೆ. ರೂಪ (ವ್ಯಕ್ತಲಕ್ಷಣ) ದಲ್ಲಿ ರೂಪದರ್ಶನ ಮಾಡುವುದಕ್ಕೂ ರೆಪ್ಪೆಗಳನ್ನು ಮುಚ್ಚಿತೆರೆಯುವುದಕ್ಕೂ ಆಗದಂತೆ ನೋವು ಹೆಚ್ಚುತ್ತದೆ. ಆಗ ಬುದ್ಧಿವಂತ ವೈದ್ಯನು ದೋಷಪ್ರಕೋಪ ಲಕ್ಷಣಗಳನ್ನು ಗೊತ್ತುಮಾಡಬೇಕು. ಕಣ್ಣಿನಲ್ಲಿ ದೋಷ ಪ್ರಕೋಪದಿಂದ ಪೂರ್ವರೂಪಲಕ್ಷಣಗಳು ತಿಳಿದಕೂಡಲೇ ಚಿಕಿತ್ಸೆಮಾಡುವುದಕ್ಕೆ ಪ್ರಾರಂಭಿಸಬೇಕು ; ಉದಾಸೀನ ಮಾಡಿದರೆ ರೋಗವು ಬಲವಾಗುತ್ತದೆಯಾಗಿ ಸಂಶೋಧನ ಸಂಶಮನ ರೂಪಚಿಕಿತ್ಸೆಗಳನ್ನು ಮಾಡಿಸಿ ರೋಗಕಾರಣಗಳಾದ ಆಹಾರವಿಹಾರಗಳನ್ನು ತ್ಯಜಿಸುವುದು ಸಾಮಾನ್ಯ ಚಿಕಿತ್ಸೆಯು. ಪ್ರಕುಪಿತಗಳಾದ ವಾತಾದಿದೋಷಗಳ ಪ್ರತೀಕಾರವೇ ವಿಶೇಷ ಚಿಕಿತ್ಸೆಯು.

(ಏವಂವಿದಾಹ್ಯಪ್ರತಿಕಾರಿಣೋಽನ್ನಂ ವಿದಗ್ಧಮತ್ಯುದ್ಗಿರತೋನರಸ್ಯ ।
ವಿದಾಹ್ಯಸಾತ್ಮ್ಯತಿ ವಿರುದ್ಧಶೀತಕ್ಷಾರಾಮ್ಲ ತೀಕ್ಷ್ಣೋಷ್ಣ ಗುರುದ್ರವಾಪ್ತೈಃ
ಅವಾಕ್ಶಿರೋತ್ಯುಚ್ಛ್ರಿತಶಾಯಿತಸ್ಯ ಜ್ವರೋಪತಾಪಾದ್ಯತುಪರ್ಯಯಾಚ್ಚ)
ಉಷ್ಣಾಭಿತಪ್ತಸ್ಯ ಜಲಪ್ರವೇಶಾತ್ ದೂರೇಕ್ಷಣಾತ್ ಸ್ವಪ್ನ ವಿಪರ್ಯಯಾಚ್ಚ ।
ಪ್ರಸಕ್ತಸಂರೋದನ ಶೋಕಕೋಪ ಕ್ಲೇಶಾಭಿಘಾತಾದತಿ ಮೈಥುನಾಚ್ಚ ||೨೬||
ಶುಕ್ತಾರನಾಳಾಮ್ಲಕುಳತ್ಥಮಾಷನಿಷೇವಣಾದ್ವೇಗವಿನಿಗ್ರಹಾಚ್ಚ ।
ಸ್ವೇದಾದ್ರಜೋಧೂಮನಿಷೇವಣಾಚ್ಚ ಛರ್ದೇರ್ವಿಘಾತಾದ್ವಮನಾತಿಯೋಗಾತ್ ।
ಬಾಷ್ಪಗ್ರಹಾತ್ ಸೂಕ್ಷ್ಮನಿರೀಕ್ಷಣಾಚ್ಚ ನೇತ್ರೇ ವಿಕಾರಾನ್ ಜನಯನ್ತಿ ದೋಷಾಃ ||೨೭||

ಅರ್ಧಪಕ್ವವಾದ, ದೇಹಕ್ಕೆ ಒಗ್ಗದಿರುವ ವಿರುದ್ಧವಾದ ತಣ್ಣಗಿರುವ, ಕ್ಷಾರ ಹುಳಿ-ತೀಕ್ಷ್ಣ-ಉಷ್ಣ-ಗುರು-ದ್ರವಾಹಾರಗಳನ್ನು ಸೇವಿಸಿ (ಅರ್ಧಜೀರ್ಣವಾದ ಅನ್ನವನ್ನೇ ಅತಿಯಾಗಿ ವಮನಮಾಡುವ) ತಲೆಯನ್ನು ತಗ್ಗಿನಲ್ಲಾಗಲೀ ಅತಿ ಎತ್ತರದಲ್ಲಾಗಲೀ ಇಟ್ಟು ಮಲಗುವ, ಜ್ವರತಾಪದಿಂದಲೂ ಋತುಧರ್ಮದ ಬದಲಾವಣೆಯಿಂದಲೂ ದೋಷ ಪ್ರಕೋಪಗೊಂಡವನಿಗೆ (ಇದು ಪ್ರಕ್ಷಿಪ್ತಪಾಠವು) ಬಿಸಿಲು ಬೆಂಕಿಯಲ್ಲಿ ಕೆಲಸಮಾಡಿ ಶ್ರಮದಿಂದಿರುವಾಗ ತಣ್ಣೀರಿನಲ್ಲಿ ಮುಳುಗುವುದು-ದೂರದವಸ್ತುವನ್ನು ದೃಷ್ಟಿಸಿನೋಡುವುದು-ಹಗಲಲ್ಲಿ ನಿದ್ರೆಮಾಡುವುದು-ರಾತ್ರಿಎಚ್ಚರಗೊಂಡಿರುವುದು-ದುಃಖ ಕೋಪ ಅತ್ಯಾಯಾಸಗಳನ್ನುಪಡುವುದು-ಮೈಮೇಲೆಪೆಟ್ಟುಬೀಳುವುದು-ಅತಿಯಾಗಿ ಸ್ತ್ರೀಸಂಗ ಮಾಡುವುದು-ಶುಕ್ತ-ಹುರುಳಿ-ಉದ್ದು ಇವುಗಳನ್ನು ಅತಿಯಾಗಿ ಸೇವನೆ ಮಾಡುವುದು ವಮನ,

ಕಣ್ಣೀರು ಮಲಮೂತ್ರಾದಿ ವೇಗಗಳನ್ನು ತಡೆಯುವುದು ಅತಿಸ್ವೇದವಾಗುವುದು ಧೂಳು ಹೊಗೆಗಳನ್ನು ಸೇವಿಸುವುದು, ಅತಿಯಾಗಿ ವಮನ ಮಾಡುವುದು, ಸಣ್ಣವಸ್ತುವನ್ನು ದೃಷ್ಟಿಸಿ ನೋಡುವುದು ಇವುಗಳಿಂದ ದೋಷಗಳು ಪ್ರಕೋಪಗೊಂಡು ನೇತ್ರದಲ್ಲಿ ಅತಿ ಭಯಂಕರವಾದ ರೋಗಗಳನ್ನು ಉಂಟುಮಾಡುತ್ತವೆ.

ವಾತಾದ್ದಶ ತಥಾ ಪಿತ್ತಾತ್ ಕಫಾಚ್ಚೈವ ತ್ರಯೋದಶ ।
ರಕ್ತಾತ್ ಷೋಡಶ ವಿಜ್ಞೇಯಾಃ ಸರ್ವಜಾಃ ಪಞ್ಚವಿಂಶತಿಃ ॥೨೮॥
ತಥಾ ಬಾಹ್ಯೌ ಪುನರ್ದ್ವೌ ಚ ರೋಗಾಃ ಷಟ್ಸಪ್ತತಿಃ ಸ್ಮೃತಾಃ ।

ವಾತದಿಂದ ೧೦, ಪಿತ್ತದಿಂದ ೧೦, ಕಫದಿಂದ ೧೩, ರಕ್ತದಿಂದ ೧೬, ತ್ರಿದೋಷ ಗಳಿಂದ ೨೫, ಬಾಹ್ಯರೋಗದಿಂದ ೨ ಈ ರೀತಿಯಾಗಿ ನೇತ್ರರೋಗಗಳು ಒಟ್ಟು ಸೇರಿ ೭೬ ವಿಧಗಳೆಂದು ತಿಳಿಯಬೇಕು.

ಹತಾಧಿಮನ್ಥೋ ನಿಮಿಷೋ ದೃಷ್ಟಿರ್ಗಮ್ಭೀರಿಕಾ ಚ ಯಾ ॥೨೯॥
ಯಚ್ಚ ವಾತಹತಂ ವರ್ತ್ಮ ನ ತೇ ಸಿಧ್ಯನ್ತಿ ವಾತಜಾಃ ।
ಯಾಪ್ಯೋಽಥ ತನ್ಮಯಃ ಕಾಚಃ ಸಾಧ್ಯಾಃ ಸ್ಯುಃ ಸಾನ್ಯಮಾರುತಾಃ ॥೩೦॥
ಶುಷ್ಕಾಕ್ಷಿಪಾಕಾಧೀಮನ್ಥಸ್ಯನ್ದಮಾರುತಪರ್ಯಯಾಃ ।
ಅಸಾಧ್ಯೋ ಹ್ರಸ್ವಜಾಡ್ಯೋ ಯೋ ಜಲಸ್ರಾವಶ್ಚ ಪೈತ್ತಿಕಃ ॥೩೧॥
ಪರಿಮ್ಲಾಯೀ ಚ ನೀಲಶ್ಚ ಯಾಪ್ಯಃ ಕಾಚೋಽಥ ತನ್ಮಯಃ
ಅಭಿಷ್ಯನ್ದೋಽಧಿಮನ್ಥೋಽಮ್ಲಾಧ್ಯುಷಿತಂ ಶುಕ್ತಿಕಾ ಚ ಯಾ ॥೩೨॥
ದೃಷ್ಟಿಃ ಪಿತ್ತವಿದಗ್ಧಾ ಚ ಧೂಮದರ್ಶೀ ಚ ಸಿಧ್ಯತಿ

ಅವುಗಳಲ್ಲಿ ವಾತಾದಿಭೇದಗಳಲ್ಲಿ ಸಾಧ್ಯತ್ವ, ಅಸಾಧ್ಯತ್ವ ಯಾಪ್ಯತ್ವಗಳನ್ನು ತಿಳಿಸುತ್ತಾರೆ. ವಾತಜನೇತ್ರರೋಗಗಳು ೧೦. ಅವುಗಳ ಪೈಕಿ ಹತಾಧಿಮನ್ಥ, ನಿಮಿಷ, ಗಮ್ಭೀರಕಾದೃಷ್ಟಿ-ವಾತಹತವರ್ತ್ಮಗಳೆಂಬ ೪ ವಿಧಗಳು ಅಸಾಧ್ಯಗಳು, ವಾತ ಕಾಚವು ಯಾಪ್ಯವು, ಅನ್ಯಮಾರುತವೂ-ಶುಷ್ಕಾಕ್ಷಿಪಾಕ-ಅಧಿಮನ್ಥಃ-ಸ್ಕಂದ-ಮಾರುತ ಪರ್ಯಯ ಗಳೆಂಬ ೫ ವಿಧ ರೋಗಗಳು ಸಾಧ್ಯವಾಗುತ್ತವೆ. ೧೦ ವಿಧ ನೇತ್ರರೋಗಗಳ ಪೈಕಿ ಹ್ರಸ್ವ ಜಾಡ್ಯ-ಪೈತ್ತಿಕ ಜಲಸ್ರಾವಗಳೆರಡೂ ಅಸಾಧ್ಯವಾದವು ; ಪೈತ್ತಿಕಪರಿಮ್ಲಾಯೀ ಮತ್ತು ನೀಲಗಳೆಂಬ ೨ ವಿಧ ಕಾಚರೋಗಗಳೂ ಯಾಪ್ಯವು. ಪಿತ್ತಾಭಿಷ್ಯನ್ದ-ಪಿತ್ತಾಧಿಮನ್ಥ-ಅಮ್ಲಾಧ್ಯುಷಿತ-ಶುಕ್ತಿಕಾ-ಪಿತ್ತವಿದಗ್ಧ-ದೃಷ್ಟಿ ಮತ್ತು ಧೂಮದರ್ಶಿಗಳೆಂಬ ೬ ನೇತ್ರ ರೋಗಗಳೂ ಸಾಧ್ಯವಾಗುತ್ತವೆ.

ಅಸಾಧ್ಯಃ ಕಫಜಃ ಸ್ರಾವೋ ಯಾಪ್ಯಃ ಕಾಚಶ್ಚ ತನ್ಮಯಃ ॥೩೩॥
ಅಭಿಷ್ಯನ್ದೋಽಧಿಮನ್ಥಶ್ಚ ಬಲಾಸಗ್ರಥಿತಂ ಚ ಯತ್ ।
ದೃಷ್ಟಿಃ ಶ್ಲೇಷ್ಮವಿದಗ್ಧಾ ಚ ಪೋತಕ್ಕೀಲಗಣಶ್ಚ ಯಃ ॥೩೪॥
ಕ್ರಿಮಿಗ್ರನ್ಥಿಃ ಪರಿಕ್ಲಿನ್ನವರ್ತ್ಮಶುಕ್ಲಾರ್ಮಪಿಷ್ಟಕಾಃ ।
ಶ್ಲೇಷ್ಮೋಪನಾಹಃ ಸಾಧ್ಯಸ್ತು ಕಥಿತಾಃ ಶ್ಲೇಷ್ಮಜೇಷು ತು ॥೩೫॥

೧೩ ವಿಧ ಕಫಜನೇತ್ರರೋಗಗಳ ಪೈಕಿ ಕಫಸ್ರಾವವು ಅಸಾಧ್ಯವು, ಕಫಕಾಚವು ಯಾಪ್ಯವು ; ಕಫಾಭಿಷ್ಯನ್ದ-ಕಫಾಧಿಮನ್ಥ-ಬಲಾಸಗ್ರಥಿತ-ಶ್ಲೇಷ್ಮವಿದಗ್ಧ, ದೃಷ್ಟಿ-ಪೋದಕಿ-ಲಗಣ-ಕ್ರಿಮಿಗ್ರಂಥಿ-ಪರಿಕ್ಲಿನ್ನವರ್ತ್ಮ-ಶುಕ್ಲಾರ್ಮ-ಪಿಷ್ಟಿಕಾ-ಶ್ಲೇಷ್ಮೋಪನಾಹಗಳೆಂಬ ೧೧ ವಿಧಗಳು ಸಾಧ್ಯಗಳೆಂದು ತಿಳಿಯಬೇಕು.

ರಕ್ತಸ್ರಾವೋಽಜಕಾಜಾತಂ ಶೋಣಿತಾರ್ಶೋಽವಲಂಬಿತಂ ।
ಶುಕ್ರಂ ನ ಸಾಧ್ಯಂ ಕಾಚಶ್ಚ ಯಾಪ್ಯಸ್ತಜ್ಜಃ ಪ್ರಕೀರ್ತಿತಃ ॥೩೬॥
ಮನ್ಥಸ್ಯನ್ದೌ ಕ್ಲಿಷ್ಟವರ್ತ್ಮ ಹರ್ಷೋತ್ಪಾತೌ ತಥೈವ ಚ ।
ಸಿರಾಜಾದಞ್ಜನಾಖ್ಯಾ ಚ ಸಿರಾಜಾಲಂ ಚ ಯತ್ ಸ್ಮೃತಮ್ ॥೩೭॥
ಪರ್ವಣ್ಯಥಾವ್ರಣಂ ಶುಕ್ರಂ ಶೋಣಿತಾರ್ಮಾರ್ಜುನಶ್ಚ ಯಃ ।
ಏತೇ ಸಾಧ್ಯಾ ವಿಕಾರೇಷು ರಕ್ತಜೇಷು ಭವನ್ತಿ ಹಿ ॥೩೮॥

೧೬ ವಿಧಗಳಾದ ರಕ್ತಜನೇತ್ರರೋಗಗಳ ಪೈಕಿ ರಕ್ತಸ್ರಾವ-ಅಜಕಾಜಾತ-ರಕ್ತಾರ್ಶಃ-ಕ್ಷತಶುಕ್ರಗಳೆಂಬ ೪ ವಿಧಗಳು ಅಸಾಧ್ಯವಾದವು ; ರಕ್ತಜ ಕಾಚವು ಯಾಪ್ಯವು; ರಕ್ತಾಧಿಮಂಥ-ರಕ್ತಾಭಿಷ್ಯಂದ-ಕ್ಲಿಷ್ಟವರ್ತ್ಮ-ಸಿರಾಹರ್ಷ-ಸಿರೋತ್ಪಾತ ಅಂಜನನಾಮಿಕಾ—ಸಿರಾಜಾಲ-ಪರ್ವಣಿ-ಅವ್ರಣಶುಕ್ರ—ರಕ್ತಾರ್ಮ—ಅರ್ಜುನಗಳೆಂಬ ೧೧ ವಿಧಗಳು ಸಾಧ್ಯಗಳೆಂದು ತಿಳಿಯಬೇಕು.

ಪೂಯಾಸ್ರಾವೋ ನಾಕುಲಾನ್ಧ್ಯಮಕ್ಷಿಪಾಕಾತ್ಯಯೋಽಲಜೀ ।
ಅಸಾಧ್ಯಾಃ ಸರ್ವಜಾ ಯಾಪ್ಯಃ ಕಾಚಃ ಕೋಪಶ್ಚ ಪಕ್ಷ್ಮಣಃ ॥೩೯॥
ವರ್ತ್ಮಾವಬನ್ಧೋ ಯೋ ವ್ಯಾಧಿಃ ಸಿರಾಸು ಪಿಡಕಾ ಚ ಯಾ ।
ಪ್ರಸ್ತಾರ್ಯರ್ಮಾಧಿಮಾಂಸಾರ್ಮ ಸ್ನಾಯ್ವರ್ಮೋತ್ಸಙ್ಗಿನೀ ಚ ಯಾ ॥೪೦॥
ಪೂಯಾಲಸಶ್ಚಾರ್ಬುದಂ ಚ ಶ್ಯಾವಕರ್ದಮವರ್ತ್ಮನೀ ।
ತಥಾರ್ಶೋವರ್ತ್ಮ ಶುಷ್ಕಾರ್ಶಃ ಶರ್ಕರಾವರ್ತ್ಮ ಯಚ್ಚ ವೈ ॥೪೧॥
ಸಶೋಫಶ್ಚಾಪ್ಯಶೋಫಶ್ಚ ಪಾಕೋ ಬಹಳವರ್ತ್ಮ ಚ ।
ಅಕ್ಲಿನ್ನವರ್ತ್ಮ ಕುಮ್ಭೀಕಾ ಬಿಸವರ್ತ್ಮ ಚ ಸಿಧ್ಯತಿ ॥೪೨॥
ಸನಿಮಿತ್ತೋಽನಿಮಿತ್ತಶ್ಚ ದ್ವಾವಸಾಧ್ಯೌ ತು ಬಾಹ್ಯಜೌ ।
ಷಟ್‌ಸಪ್ತತಿ ವಿಕಾರಾಣಾಮೇಷಾ ಸಂಗ್ರಹಕೀರ್ತನಾ ॥೪೩॥

೨೧ ವಿಧ ತ್ರಿದೋಷೋತ್ಥ ನೇತ್ರರೋಗಗಳ ಪೈಕಿ ಪೂಯಸ್ರಾವ-ನಕುಲಾನ್ಧ್ಯ ಅಕ್ಷಿಪಾಕಾತ್ಯಯ-ಅಲಜಿ ಎಂಬ ೪ ವಿಧಗಳು-ಅಸಾಧ್ಯವಾದುವು ; ತ್ರಿದೋಷೋತ್ಥ ಕಾಚರೋಗ ಮತ್ತು ಪಕ್ಷ್ಮಕೋಪಗಳು ಯಾಪ್ಯಗಳು; ವರ್ತ್ಮಾವಬಂಧ-ಸಿರಾ ಪಿಡಕ-ಪ್ರಸ್ತಾರ್ಯರ್ಮ-ಅಧಿಮಾಂಸಾರ್ಮ-ಸ್ನಾಯ್ವರ್ಮ-ಉತ್ಸಙ್ಗಿನೀ-ಪೂಯಾಲಸ-ಅರ್ಬುದ-ಶ್ಯಾವವರ್ತ್ಮ-ಕರ್ದಮವರ್ತ್ಮ-ಅರ್ಶೋವರ್ತ್ಮ—ಶುಷ್ಕಾರ್ಶಸ್ಸು—ಶರ್ಕರಾವರ್ತ್ಮ(ವರ್ತ್ಮ ಶರ್ಕರಾ)-ಸಶೋಫಾಕ್ಷಿಪಾಕ-ಬಹಳವರ್ತ್ಮ-ಅಕ್ಲಿನ್ನವರ್ತ್ಮ-ಕುಮ್ಭೀಕಾವರ್ತ್ಮ-ಬಿಸವರ್ತ್ಮ

ಗಳೆಂಬ ೧೯ ವಿಧಗಳು ಸಾಧ್ಯವಾಗುತ್ತವೆ; (ಬಹಿರ್ಭಾಗದಲ್ಲುಂಟಾಗುವ) ಬಾಹ್ಯಕಾರಣ ಗಳಿಂದುಂಟಾಗುವ ಅನಿಮಿತ್ತಲಿಂಗನಾಶವೂ ಅಭಿಘಾತದಿಂದುಂಟಾಗುವ ಸನಿಮಿತ್ತಲಿಂಗ ನಾಶವೂ ಅಸಾಧ್ಯಗಳು ; ಈ ರೀತಿಯಾಗಿ ದೋಷಪ್ರಕೋಪಗಳಿಗೆ ಅನುಸಾರ ವಾಗಿ ೭೬ ವಿಧಗಳಾದ ನೇತ್ರರೋಗಗಳನ್ನು ಸಂಕ್ಷೇಪವಾಗಿ ಹೇಳಲಾಗಿದೆ.

ನವ ಸನ್ಧ್ಯಾಶ್ರಯಾಸ್ತೇಷು ವರ್ತ್ಮಜಾಸ್ತ್ವೇಕ ವಿಂಶತಿಃ ।
ಶುಕ್ಲಭಾಗೇ ದಶೈಕಶ್ಚ ಚತ್ವಾರಃ ಕೃಷ್ಣಭಾಗಜಾಃ ॥೪೪॥
ಸರ್ವಾಶ್ರಯಾ ಸಪ್ತದಶ ದೃಷ್ಟಿಜಾ ದ್ವಾದಶೈವ ತು ।
ಬಾಹ್ಯಜೌ ದ್ವೌ ಸಮಾಖ್ಯಾತೌ ರೋಗೌ ಪರಮದಾರುಣೌ ॥
ಭೂಯ ಏತಾನ್ ಪ್ರವಕ್ಷ್ಯಾಮಿ ಸಂಖ್ಯಾರೂಪಚಿಕಿತ್ಸಿತೈಃ ॥೪೫॥

ಈಗ ಆಶ್ರಯಭೇದಗಳಿಂದ ೭೬ ವಿಧ ನೇತ್ರರೋಗಗಳನ್ನೂ ವಿವರಿಸುತ್ತಾರೆ— ಸಂಧಿಗಳಲ್ಲಿ ೯ ವಿಧಗಳು ;_ರೆಪ್ಪೆಗಳಲ್ಲಿ ೨೧ ವಿಧಗಳು ; ಬಿಳಿಗುಡ್ಡೆಯಲ್ಲಿ ೧೧ ವಿಧಗಳು ; ಕರಿಯುಗುಡ್ಡೆಯಲ್ಲಿ ೪ ವಿಧಗಳು ; ಸರ್ವಾಶ್ರಯಗಳು ೧೭ ವಿಧಗಳು ; ದೃಷ್ಟಿ ಭಾಗದಲ್ಲಿ ೧೨ ವಿಧಗಳು ; ಬಹಿರ್ನಿಮಿತ್ತಗಳಾದ ಅತಿಭಯಂಕರಗಳಾದ ೨ ವಿಧ ಲಿಂಗನಾಶಗಳೂ ಸರ್ವಾಶ್ರಯಗಳಾದರೂ ದೃಷ್ಟ್ಯಾಶ್ರಯಗಳೆಂದೇ ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಔಪದ್ರವಿಕನಾಮಕಪ್ರಥಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕಭಾಷಾವಿವೃತಿಃ.

ದ್ವಿತೀಯೋಽಧ್ಯಾಯಃ

ಅಥಾತಃ ಸನ್ಧಿಗತರೋಗವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ನೇತ್ರಸಂಧಿಗತ ರೋಗಗಳನ್ನು ವಿವರಿಸಿ ಹೇಳುತ್ತೇವೆ ; ಹಿಂದಿನ ಅಧ್ಯಾಯದಲ್ಲಿ ನೇತ್ರಸಂಧಿಗಳಲ್ಲಿ ಹುಟ್ಟುವ ರೋಗಗಳು ೯, ರೆಪ್ಪೆಗಳಲ್ಲಿ ಹುಟ್ಟತಕ್ಕವು ೨೧, ಈ ರೀತಿಯಾಗಿ ಆಶ್ರಯಭೇದಗಳಿಗೆ ತಕ್ಕಂತೆ ರೋಗಸಂಖ್ಯೆಗಳನ್ನು ನಿರ್ಧರಿಸಿರುತ್ತಾರೆ ; ಅವುಗಳಲ್ಲಿ ಸಂಧಿಗತರೋಗಗಳನ್ನು ಮೊದಲು ಹೇಳಿರುವುದರಿಂದ ಔಪದ್ರವಿಕಾಧ್ಯಾಯವು ಮುಗಿದ ಮೇಲೆ ನೇತ್ರಸಂಧಿಗಳಲ್ಲುಂಟಾಗುವ ರೋಗಗಳನ್ನು ವಿವರಿಸುತ್ತೇವೆ.

ಪೂಯಾಲಸಃ ಸೋಪನಾಹಃ ಸ್ರಾವಾಃ ಪರ್ವಣಿಕಾಲಜೀ ।

ಕ್ರಿಮಿಗ್ರನ್ಥಿಶ್ಚ ವಿಜ್ಞೇಯಾ ರೋಗಾಃ ಸನ್ಧಿಗತಾ ನವ ||೩||

ಪೂಯಾಲಸಾ–ಉಪನಾಹ–೪ ವಿಧ ಸ್ರಾವಗಳು—ಪರ್ವಣಿಕಾ–ಅಲಜೀ—ಕ್ರಿಮಿಗ್ರಂಥಿ ಎಂಬ ೯ ವಿಧ ರೋಗಗಳು ನೇತ್ರಸಂಧಿಗಳಲ್ಲುಂಟಾಗುತ್ತವೆಂದು ತಿಳಿಯಬೇಕು.

ಪಕ್ವಃ ಶೋಫಃ ಸನ್ಧಿಜಃ ಸಂಸ್ರವೇದ್ಯಃ ಸಾನ್ದ್ರಂ ಪೂಯಂ ಪೂತಿ ಪೂಯಾಲಸಃ ಸಃ ।

ಗ್ರನ್ಥಿರ್ನಾಲ್ಪೋ ದೃಷ್ಟಿಸನ್ಧಾವಪಾಕಃ ಕಣ್ಡೂಪ್ರಾಯೋ ನೀರುಜಸ್ತೂಪನಾಹಃ ||೪||

ನಾಸಾಸಂಧಿ (ಕನೀನಸಂಧಿ) ಯಲ್ಲಿ ಶೋಫವು ಪಾಕವಾಗಿ ಗಟ್ಟಿಯಾಗಿ ದುರ್ವಾಸನೆಯುಳ್ಳ ಕೀವನ್ನು ಸುರಿಸಿದರೆ **ಪೂಯಾಲಸ**ವೆಂದು ಹೆಸರು, ಇದು ತ್ರಿದೋಷಗಳ ಪ್ರಕೋಪದಿಂದುಂಟಾಗುತ್ತವೆ. ಚಿಕಿತ್ಸೆಮಾಡಿ ಗುಣಪಡಿಸಬಹುದು ; ದೃಷ್ಟಿಸಂಧಿಯಲ್ಲಿ ಕಫದಿಂದ ದೊಡ್ಡಗ್ರಂಥಿಯುಂಟಾಗಿ ಸ್ವಲ್ಪ ಪಕ್ವವಾಗಿ ಅಧಿಕವಾದ ನವೆಯಿಂದ ಕೂಡಿದ್ದರೆ **ಉಪನಾಹ**ವೆನ್ನುತ್ತಾರೆ ; ಇದರಲ್ಲಿ ನೋವಿರುವುದಿಲ್ಲ ; ಇದು ಸುಲಭಸಾಧ್ಯವು.

ಗತ್ವಾ ಸನ್ಧೀನಶ್ರುಮಾರ್ಗೇಣ ದೋಷಾಃ ಕುರ್ಯುಃ ಸ್ರಾವಾನ್ ರುಗ್ವಿಹೀನಾನ್ ಕನೀನಾತ್ ।

ತಾನ್ ವೈ ಸ್ರಾವಾನ್ ನೇತ್ರನಾಡೀಮಥೈಕೇ ತಸ್ಯಾ ಲಿಙ್ಗಂ ಕೀರ್ತಯಿಷ್ಯೇ ಚತುರ್ಧಾ ||೫||

ಪಾಕಃ ಸನ್ಧೌ ಸಂಸ್ರವೇದ್ಯಸ್ತು ಪೂಯಂ ಪೂಯಾಸ್ರಾವೋ ನೈಕರೂಪಃ ಪ್ರದಿಷ್ಟಃ ।

ಶ್ವೇತಂ ಸಾನ್ದ್ರಂ ಪಿಚ್ಛಿಲಂ ಸಂಸ್ರವೇದ್ಯಃ ಶ್ಲೇಷ್ಮಾಸ್ರಾವೋ ನೀರುಜಃ ಸ ಪ್ರದಿಷ್ಟಃ ||೬||

ರಕ್ತಾಸ್ರಾವಃ ಶೋಣಿತೋತ್ಥಃ ಸರಕ್ತಂ ಕೋಷ್ಣಂ ನಾಲ್ಪಂ ಸಂಸ್ರವೇನ್ನಾತಿಸಾನ್ದ್ರಮ್।
ಪೀತಾಭಾಸಂ ನೀಲಮುಷ್ಣಂ ಜಲಾಭಂ ಪಿತ್ತಾಸ್ರಾವಃ ಸಂಸ್ರವೇತ್ ಸನ್ನಿಮಧ್ಯಾತ್ ॥೭॥

ಪ್ರಕುಪಿತದೋಷಗಳು ಕಣ್ಣೀರಿನ ಮೂಲಕ ಸಿರೆಗಳಿಗೆ ಸೇರಿ ಕನೀನಸಂಧಿಯ ಮೂಲಕ ನೋವಿಲ್ಲದಂತೆ ಹೊರಕ್ಕೆ ಹರಿದುಬರುತ್ತವೆ ; ಈ ಸ್ರಾವಗಳಿಗೆ ಕೆಲವು ವೈದ್ಯರು "ನೇತ್ರನಾಡೀ" ಎಂದು ಕರೆಯುತ್ತಾರೆ ; ಈ ಸ್ರಾವಗಳು ೪ ಪ್ರಕಾರಗಳಾಗಿವೆ ; ಅವುಗಳ ಲಕ್ಷಣಗಳನ್ನು ಹೇಳುತ್ತೇನೆ. ದೋಷಗಳು ಪಾಕವಾಗಿ ಕನೀನ ಸಂಧಿಯಿಂದ ಕೀವನ್ನು ಸುರಿಸಿದರೆ **ಪೂಯಾಸ್ರಾವ**ವೆಂದು ಹೆಸರು ; ಇದು ಸನ್ನಿಪಾತಜವಾದ ಕಾರಣ ಅನೇಕವಿಧ ಬಣ್ಣವುಳ್ಳದಾಗಿರುತ್ತದೆ. ಬಿಳುಪಾಗಿ ಗಟ್ಟಿಯಾಗಿ ಗರಣೆಗರಣೆಯಾಗಿ ನೋವಿಲ್ಲದೆ ಸ್ರವಿಸಿದರೆ **ಶ್ಲೇಷ್ಮಸ್ರಾವ**ವೆಂದು ಹೆಸರು ; ರಕ್ತಪ್ರಕೋಪದಿಂದ ಸ್ವಲ್ಪ ಬಿಸಿಯಾದ ರಕ್ತವನ್ನು ಅತಿಮಂದವಾಗಿರದೆ ಅತಿಯಾಗಿ ಸ್ರವಿಸಿದರೆ **ರಕ್ತಸ್ರಾವ**ವೆಂದು ಹೆಸರು ; ಅರಿಶಿನ ಬಣ್ಣದ ನೀರಿನಂತೆ ತೆಳುವಾದ ನೀಲಿಬಣ್ಣದ ಬಿಸಿಯಾದ ದ್ರವವು ಕನೀನಸಂಧಿಯಿಂದ ಸ್ರಾವವಾದರೆ **ಪಿತ್ತಾಸ್ರಾವ**ವೆಂದು ಹೆಸರು. ಈ ೪ ವಿಧಸ್ರಾವಗಳೂ ಅಸಾಧ್ಯಗಳೆಂದು ತಿಳಿಯಬೇಕು.

ತಾಮ್ರಾ ತನ್ವೀ ದಾಹಶೂಲೋಪಪನ್ನಾ ರಕ್ತಾಜ್ಞೇಯಾ ಪರ್ವಣೀ ವೃತ್ತಶೋಫಾ ।
ಜಾತಾ ಸನ್ಧೌ ಕೃಷ್ಣಶುಕ್ಲೇಽಲಜೀ ಸ್ಯಾತ್ ತಸ್ಮಿನ್ನೇವಾಖ್ಯಾಪಿತಾ ಪೂರ್ವಲಿಙ್ಗೈಃ ॥೮॥

ನೇತ್ರದ ಕೃಷ್ಣ ಮತ್ತು ಶುಕ್ಲ ಸಂಧಿಗಳಲ್ಲಿ ತಾಮ್ರಬಣ್ಣದ ತೆಳುವಾದ ಗುಂಡಾದ ಶೋಫವುಂಟಾಗಿ ಉರಿಯಿಂದಲೂ ನೋವಿನಿಂದಲೂ ಇದ್ದರೆ **ಪರ್ವಣಿ** ಎಂದೂ ; ದಪ್ಪ ಶೋಫವುಂಟಾಗಿ ಪರ್ವಣಿಯ ಲಕ್ಷಣಗಳೇ ಇದ್ದರೆ ಅಲಜೀ ಎಂದೂ ಹೆಸರು. ಇವು ಸನ್ನಿಪಾತದಿಂದ ಹುಟ್ಟುವ ಕಾರಣ ಅಸಾಧ್ಯಗಳೆಂದು ತಿಳಿಯಬೇಕು.

ಕ್ರಿಮಿಗ್ರನ್ಥಿರ್ವರ್ತ್ಮನಃ ಪಕ್ಷ್ಮಣಶ್ಚ ಕಣ್ಡೂಂ ಕುರ್ಯುಃ ಕ್ರಿಮಯಃ ಸನ್ಧಿಜಾತಾಃ ।
ನಾನಾರೂಪಾ ವರ್ತ್ಮಶುಕ್ಲಸ್ಯ ಸನ್ಧೌ ಚರನ್ತೋಽನ್ತಃ ನಯನಂ ದೂಷಯನ್ತಿ ॥೯॥

ಕಣ್ಣುರೆಪ್ಪೆಗೂ ಶುಕ್ಲಸಂಧಿಗೂ ಮಧ್ಯದಲ್ಲಿ ಕಫದೂಷಿತ ಕ್ರಿಮಿಗಳು ಗ್ರಂಥಿಯನ್ನುಂಟುಮಾಡಿ ನೇತ್ರಗೋಳದೊಳಗೆ ಸಂಚರಿಸಿ ಅಲ್ಲಿನ ಮಾಂಸರಕ್ತಾದಿಗಳನ್ನು ತಿಂದು ರೆಪ್ಪೆಗೂ ರೆಪ್ಪೆ ಕೂದಲಿಗೂ ಮಧ್ಯದ ಸಂಧಿಭಾಗಕ್ಕೆ ಬಂದು ನವೆಯನ್ನುಂಟುಮಾಡಿ ಕಣ್ಣುಗಳನ್ನು ಕೆಡಿಸುತ್ತವೆ ; ಇದನ್ನು ಕ್ರಿಮಿ ಗ್ರಂಥಿಯೆನ್ನುತ್ತಾರೆ. ಇದನ್ನು ಚಿಕಿತ್ಸೆ ಮಾಡಿ ಗುಣಪಡಿಸಬಹುದು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ಸಂಧಿಗತ ರೋಗ ವಿಜ್ಞಾನೀಯನಾಮಕ ದ್ವಿತೀಯಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಕೃತ ಕರ್ಣಾಟಕ ಭಾಷಾವಿವೃತಿಃ.

ತೃತೀಯೋಽಧ್ಯಾಯಃ

ಅಥಾತೋ ವರ್ತ್ಮಗತರೋಗವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಕಣ್ಣಿನ ರೆಪ್ಪೆಯಲ್ಲುಂಟಾಗುವ ರೋಗಗಳನ್ನು ವಿವರಿಸುತ್ತೇವೆ.

ಪೃಥಗ್ದೋಷಾಃ ಸಮಸ್ತಾಶ್ಚ ಯದಾ ವರ್ತ್ಮವ್ಯಪಾಶ್ರಯಾಃ |
ಸಿರಾ ವ್ಯಾಪ್ಯಾವತಿಷ್ಠನ್ತೇ ವರ್ತ್ಮಸ್ವಧಿಕಮೂರ್ಛಿತಾಃ ||೩||
ವಿವರ್ಧ್ಯ ಮಾಂಸಂ ರಕ್ತಂ ಚ ತದಾ ವರ್ತ್ಮವ್ಯಪಾಶ್ರಯಾನ್ |
ವಿಕಾರಾನ್ ಜನಯನ್ತ್ಯಾಶು ನಾಮತಸ್ತಾನ್ ನಿಬೋಧತ ||೪||

ವಾತಾದಿದೋಷಗಳು ಒಂದೊಂದಾಗಲೀ ಎಲ್ಲವೂ ಒಟ್ಟು ಸೇರಿಕೊಂಡಾಗಲೀ ರೆಪ್ಪೆಯಲ್ಲಿರುವ ಸಿರೆಗಳೊಳಕ್ಕೆ ನುಗ್ಗಿ ಅಧಿಕ ಪ್ರಮಾಣದಿಂದ ಮಾಂಸವನ್ನೂ ರಕ್ತವನ್ನೂ ವೃದ್ಧಿಮಾಡಿ ಉಂಟುಮಾಡುವ ರೋಗಗಳ ಹೆಸರನ್ನು ಹೇಳುತ್ತೇನೆ–ಕೇಳು !

ಉತ್ಸಙ್ಗಿನ್ಯಥ ಕುಮ್ಭೀಕಾ ಪೋಥಕ್ಯೋ ವರ್ತ್ಮಶರ್ಕರಾ |
ತಥಾರ್ಶೋವರ್ತ್ಮ ಶುಷ್ಕಾರ್ಶಸ್ತಥೈವಾಞ್ಜನನಾಮಿಕಾ ||೫||
ಬಹಳಂ ವರ್ತ್ಮ ಯಚ್ಚಾಪಿ ವ್ಯಾಧಿರ್ವರ್ತ್ಮಾವಬನ್ಧಕಃ |
ಕ್ಲಿಷ್ಟಕರ್ದಮವರ್ತ್ಮಾಖ್ಯೌ ಶ್ಯಾವವರ್ತ್ಮ ತಥೈವ ಚ ||೬||
ಪ್ರಕ್ಲಿನ್ನಮಪರಿಕ್ಲಿನ್ನಂ ವರ್ತ್ಮ ವಾತಹತಂ ತು ಯತ್ |
ಅರ್ಬುದಂ ನಿಮಿಷಶ್ಚಾಪಿ ಶೋಣಿತಾರ್ಶಶ್ಚ ಯತ್ ಸ್ಮೃತಮ್ ||೭||
ಲಗಣೋ ಬಿಸನಾಮಾ ಚ ಪಕ್ಷ್ಮಕೋಪಸ್ತಥೈವ ಚ |
ಏಕವಿಂಶತಿರಿತ್ಯೇತೇ ವಿಕಾರಾ ವರ್ತ್ಮಸಂಶ್ರಯಾಃ ||೮||

ಉತ್ಸಂಗಿನೀ ಕುಂಭಿಕಾ ಪೋಥಕ್ಯಃ ವರ್ತ್ಮಶರ್ಕರಾ ಅರ್ಶೋವರ್ತ್ಮ ಶುಷ್ಕಾರ್ಶಃ ಅಂಜನನಾಮಿಕಾ ಬಹಳವರ್ತ್ಮ ವರ್ತ್ಮಾವಬಂಧಕ ಕ್ಲಿಷ್ಟವರ್ತ್ಮ ಕರ್ದಮವರ್ತ್ಮ ಪ್ರಕ್ಲಿನ್ನ ವರ್ತ್ಮ ಅಪರಿಕ್ಲಿನ್ನವರ್ತ್ಮ ವಾತಹತವರ್ತ್ಮ ಅರ್ಬುದ ನಿಮಿಷ ರಕ್ತಾರ್ಶಃ ಲಗಣ ಬಿಸ ವರ್ತ್ಮ ಪಕ್ಷ್ಮಕೋಪಗಳೆಂದು ೨೧ ವಿಧ ವರ್ತ್ಮರೋಗಗಳಿವೆ.

ನಾಮಭಿಸ್ತೇ ಸಮುದ್ದಿಷ್ಟಾ ಲಕ್ಷಣೈಸ್ತಾನ್ ಪ್ರಚಕ್ಷ್ಮಹೇ |
ಅಭ್ಯನ್ತರಮುಖೀ ಬಾಹ್ಯೋತ್ಸಙ್ಗೋಽಧೋವರ್ತ್ಮನಶ್ಚಯಾ ||೯||
ವಿಜ್ಞೇಯೋತ್ಸಙ್ಗಿನೀ ನಾಮ ತದ್ರೂಪಪಿಡಕಾಚಿತಾ |

ಅವುಗಳ ಹೆಸರನ್ನು ಹೇಳಿದ್ದಾಯಿತು. ಇನ್ನು ಮುಂದೆ ಅವುಗಳ ಲಕ್ಷಣಗಳನ್ನು

ಹೇಳುತ್ತೇವೆ; ಕೆಳಗಿನ ರೆಪ್ಪೆಯ ಹೊರಗಡೆ ಪಿಡಕೆಯೆದ್ದು ಒಳಮುಖವಾಗಿ ಉಬ್ಬಿ ರೆಪ್ಪೆಯ ತುದಿಯಲ್ಲಿರುವಂತೆ ಕಂಡರೆ ಉತ್ಸಂಗಪಿಡಕೆಯೆಂದು ಹೆಸರು. ಇದು ತ್ರಿದೋಷ ಗಳಿಂದ ಹುಟ್ಟಿದ್ದರೂ ಚಿಕಿತ್ಸೆಯಿಂದ ಸಾಧ್ಯವಾಗುತ್ತದೆ. ಅದರ ಸುತ್ತಲೂ ಅದೇ ವಿಧದ ಪಿಡಕೆಗಳುಂಟಾಗುತ್ತವೆ.

ಕುಮ್ಭೀಕಬೀಜಪ್ರತಿಮಾಃ ಪಿಡಕಾಃ ಪಕ್ಷ್ಮವರ್ತ್ಮನೋಃ ॥೧೦॥
ಆಧ್ಮಾಪಯನ್ತಿ ಭಿನ್ನಾ ಯಾಃ ಕುಮ್ಭೀಕಪಿಡಕಾಸ್ತು ತಾಃ ।

ರೆಪ್ಪೆಗಳಿಗೂ ರೆಪ್ಪೆಕೂದಲಿಗೂ ಮಧ್ಯಭಾಗದಲ್ಲಿ ಜಾಪಾಳದ ಬೀಜದಷ್ಟು ಸಣ್ಣ ಬೊಕ್ಕೆಗಳು (ದಾಳಿಂಬೆಯ ಬೀಜದಷ್ಟು ದಪ್ಪದ ಬೊಕ್ಕೆಗಳೆಂದು ಡಲ್ಹಣರು) ಎದ್ದು ಪಾಕವಾಗಿ ರೆಪ್ಪೆಗಳನ್ನು ಉಬ್ಬಿಸುತ್ತವೆ. ಇದಕ್ಕೆ ಕುಂಭೀಕವರ್ತ್ಮವೆಂದು ಹೆಸರು.

ಸ್ರಾವಿಣ್ಯಃ ಕಣ್ಡುರಾ ಗುರ್ವ್ಯೋ ರಕ್ತಸರ್ಷಪಸನ್ನಿಭಾಃ ॥೧೧॥
ಪಿಡಕಾಶ್ಚ ರುಜಾವನ್ತ್ಯಃ ಪೋಥಕ್ಯ ಇತಿ ಸಂಜ್ಞಿತಾಃ ।

ರೆಪ್ಪೆಗಳ ತುದಿಯಲ್ಲಿ ಕೆಂಪು ಸಾಸಿವೆಯ ಕಾಳಿನಷ್ಟು ದಪ್ಪದ ಬೊಕ್ಕೆಗಳೆದ್ದು ಸದಾಸ್ರಾವ ನವೆ ಭಾರವುಳ್ಳವಾಗಿ ನೋಯುತ್ತಿದ್ದರೆ ಪೋಥಕೀ ಎಂದು ಹೆಸರು. ಕುಮ್ಭೀಕ ಮತ್ತು ಪೋಥಕಗಳೆಂಬ ಎರಡು ಬೊಕ್ಕೆಗಳೂ ಕಫದಿಂದ ಹುಟ್ಟಿದ ಕಾರಣ ಚಿಕಿತ್ಸೆಮಾಡಿ ಗುಣಪಡಿಸಬಹುದೆಂದು ತಿಳಿಯಬೇಕು.

ಪಿಡಕಾಭಿಃ ಸುಸೂಕ್ಷ್ಮಾಭಿರ್ಘನಾಭಿರಭಿಸಂವೃತಾ ॥೧೨॥
ಪಿಡಕಾ ಯಾ ಖರಾ ಸ್ಥೂಲಾ ಸಾ ಜ್ಞೇಯಾ ವರ್ತ್ಮಶರ್ಕರಾ ।

ರೆಪ್ಪೆಯ ತುದಿಯಲ್ಲಿ ಅತಿಸಣ್ಣವಾದ ಗಟ್ಟಿಯಾದ ಬೊಕ್ಕೆಗಳೆದ್ದು ಒರಟಾಗಿ ದಪ್ಪ ವಾದರೆ ವರ್ತ್ಮಶರ್ಕರೆಯೆಂದು ಹೆಸರು ; ತ್ರಿದೋಷಜಗಳಾದರೂ ಇವು ಸಾಧ್ಯವು.

ಏರ್ವಾರುಬೀಜಪ್ರತಿಮಾಃ ಪಿಡಕಾ ಮನ್ದವೇದನಾಃ ।
ಸೂಕ್ಷ್ಮಾಃ ಖರಾಶ್ಚ ವರ್ತ್ಮಸ್ಥಾಸ್ತದರ್ಶೋವರ್ತ್ಮ ಕೀರ್ತ್ಯತೇ ॥೧೩॥

ರೆಪ್ಪೆಯ ತುದಿಯಲ್ಲಿ ಸೌತೇಬೀಜದ ಆಕಾರವುಳ್ಳ ಪಿಡಕೆಗಳೆದ್ದು ಸ್ವಲ್ಪವೇ ನೋವುಳ್ಳವಾಗಿ ಸ್ವಲ್ಪಭಾಗವೇ ರೆಪ್ಪೆಗೆ ತಗುಲಿಕೊಂಡಿದ್ದು ಒರಟಾಗಿದ್ದರೆ ಅರ್ಶೋ ವರ್ತ್ಮವೆನ್ನುತ್ತಾರೆ. ತ್ರಿದೋಷಜವಾದರೂ ಇವನ್ನು ಚಿಕಿತ್ಸೆಮಾಡಿ ಗುಣಪಡಿಸಲು ಸಾಧ್ಯವಾಗುತ್ತದೆ.

ದೀರ್ಘೋಽಙ್ಕುರಃ ಖರಃ ಸ್ತಬ್ಧೋ ದಾರುಣೋ ವರ್ತ್ಮಸಂಭವಃ ।
ವ್ಯಾಧಿರೇಷ ಸಮಾಖ್ಯಾತಃ ಶುಷ್ಕಾರ್ಶ ಇತಿ ಸಂಜ್ಞಿತಃ ॥೧೪॥

ರೆಪ್ಪೆಯ ಮಧ್ಯಭಾಗದಲ್ಲಿ ಉದ್ದವಾದ ಮಾಂಸಾಂಕುರಗಳು ಹೊರಟು ಒರಟಾಗಿ ಬಿಗಿಯಾಗಿ ಹೆಚ್ಚು ನೋವುಳ್ಳವಾದರೆ ಶುಷ್ಕಾರ್ಶಸ್ಸೆಂದು ಹೆಸರು. ಇದು ತ್ರಿದೋಷಜವು ಮತ್ತು ಸಾಧ್ಯವು.

ದಾಹತೋದವತೀ ತಾಮ್ರಾ ಪಿಡಕಾ ವರ್ತ್ಮಸಂಭವಾ !
ಮೃದ್ವೀ ಮಂದರುಜಾ ಸೂಕ್ಷ್ಮಾ ಜ್ಞೇಯಾ ಸಾಂಜನನಾಮಿಕಾ ||೧೫||

ರೆಪ್ಪೆಗಳ ಮುಂದೆ ಹೊರಟಿರುವ ತಾಮ್ರವರ್ಣದ ಪಿಟಕೆಗಳು ಉರಿಯುತ್ತಲೂ ಚುಚ್ಚುತ್ತಲೂ ಮೆತ್ತಗೂ ಸ್ವಲ್ಪವೇ ನೋಯುತ್ತಲೂ ಅತಿ ಸಣ್ಣಗೂ ಇದ್ದರೆ ಅಂಜನ ನಾಮಿಕವೆನ್ನುತ್ತಾರೆ. ಇದು ರಕ್ತ ಜನಿತ ಪಿಡಿಕೆಯು, ಸಾಧ್ಯವಾಗುತ್ತದೆ.

ವರ್ತ್ಮೋಪಚೀಯತೇ ಯಸ್ಯ ಪಿಡಕಾಭಿಃ ಸಮನ್ತತಃ ।
ಸುವರ್ಣಾಭಿಃ ಸಮಾಭಿಶ್ಚ ವಿದ್ಯಾದ್ಬಹಳವರ್ತ್ಮ ತತ್ ||೧೬||

ಯಾವ ಮನುಷ್ಯನಿಗೆ ರೆಪ್ಪೆಯ ತುದಿಯ ಸುತ್ತಲೂ ರೆಪ್ಪೆಯ ಬಣ್ಣದ ಸಮ ಮಟ್ಟದ ಪಿಡಿಕೆಗಳು ವೃದ್ಧಿಯಾದರೆ ಅದಕ್ಕೆ ಬಹಳವರ್ತ್ಮವೆನ್ನುತ್ತಾರೆ. ಇದು ಸನ್ನಿಪಾತ ಜನಿತವು ಮತ್ತು ಚಿಕಿತ್ಸೆಯಿಂದ ಸಾಧ್ಯವಾಗುತ್ತದೆ.

ಕಂಡೂಮತಾಲ್ಪತೋದೇನ ವರ್ತ್ಮಶೋಫೇನ ಯೋ ನರಃ
ನ ಸಮಂ ಛಾದಯೇದಕ್ಷಿ ಭವೇದ್ಬನ್ಧಃ ಸ ವರ್ತ್ಮನಃ ||೧೭||

ಯಾವ ಮನುಷ್ಯನಿಗೆ ನವೆಯೂ ಸ್ವಲ್ಪ ನೋವೂ ಇದ್ದು ರೆಪ್ಪೆಯೂ ಊದಿ ಕಣ್ಣನ್ನು ಸರಿಯಾಗಿ ಮುಚ್ಚಿಕೊಳ್ಳುವುದಕ್ಕಾಗದಿದ್ದರೆ ಅದಕ್ಕೆ ವರ್ತ್ಮಬಂಧವೆನ್ನುತ್ತಾರೆ ; ಇದೂ ಸನ್ನಿಪಾತಜವು. ಸಾಧ್ಯವಾಗುತ್ತದೆ.

ಮೃದ್ವಲ್ಪವೇದನಂ ತಾಮ್ರಂ ಯದ್ವರ್ತ್ಮ ಸಮಮೇವ ಚ ।
ಅಕಸ್ಮಾಚ್ಚ ಭವೇದ್ರಕ್ತಂ ಕ್ಲಿಷ್ಟವರ್ತ್ಮ ತದಾದಿಶೇತ್ ||೧೮||

ರೆಪ್ಪೆಗಳೆರಡೂ ಮೆತ್ತಗೂ ಸ್ವಲ್ಪ ನೋವುಳ್ಳವಾಗಿಯೂ ತಾಮ್ರವರ್ಣವುಳ್ಳದಾಗಿ ಸಮಪ್ರಮಾಣದಲ್ಲಿದ್ದು ಅಕಸ್ಮಾತ್ತಾಗಿ ರಕ್ತವರ್ಣಕ್ಕೇರಿದರೆ ಕ್ಲಿಷ್ಟವರ್ತ್ಮವೆನ್ನುತ್ತಾರೆ ; ಇದು ರಕ್ತದೋಷದಿಂದುಂಟಾಗುತ್ತದೆ ; ಸಾಧ್ಯವು.

ಕ್ಲಿಷ್ಟಂ ಪುನಃ ಪಿತ್ತಯುಕ್ತಂ ವಿದಹೇಚ್ಛೋಣಿತಂ ಯದಾ ।
ತದಾ ಕ್ಲಿನ್ನತ್ವಮಾಪನ್ನಮುಚ್ಯತೇ ವರ್ತ್ಮ ಕರ್ದಮಮ್ ||೧೯||

ಕ್ಲಿಷ್ಟವರ್ತ್ಮವನ್ನುಂಟುಮಾಡುವ ಶ್ಲೇಷ್ಮದುಷ್ಟರಕ್ತವು ಪಿತ್ತದೊಡನೆ ಮಿಶ್ರವಾಗಿ ವಿದಾಹವುಂಟಾಗಿ ಕ್ಲಿನ್ನವಾದರೆ (ನೆನೆದು ನೀರಾದರೆ) ವರ್ತ್ಮಕರ್ದಮವೆನ್ನುತ್ತಾರೆ. ಇದು ಕಫ ಪಿತ್ತ ರಕ್ತಗಳಿಂದ ಮಿಶ್ರವಾಗಿ ಸನ್ನಿಪಾತದೋಷದಿಂದುಂಟಾದರೂ ಚಿಕಿತ್ಸೆಯಿಂದ ಸಾಧ್ಯವಾಗುತ್ತದೆಂದು ತಿಳಿಯಬೇಕು.

ಯದ್ವರ್ತ್ಮ ಬಾಹ್ಯತೋಽನ್ತಶ್ಚ ಶ್ಯಾವಂ ಶೂನಂ ಸವೇದನಮ್ ।
ದಾಹಕಣ್ಡ್ವಾಪರೀಕ್ಲೇದಿ ಶ್ಯಾವವರ್ತ್ಮೇತಿ ತನ್ಮತಮ್ ||೨೦||

ಸನ್ನಿಪಾತದೋಷದಿಂದ ರೆಪ್ಪೆಯ ಹೊರಗೂ ತುದಿಯಲ್ಲೂ ಕಪ್ಪಾಗಿ ಊದಿ ನೋಯುತ್ತಿದ್ದು ಉರಿತ ನವೆ ದ್ರವಗಳಿಂದ ಕೂಡಿದ್ದರೆ ಶ್ಯಾವವರ್ತ್ಮವೆನ್ನುತ್ತಾರೆ ; ಇದ ಸಾಧ್ಯವಾಗುತ್ತದೆ.

ಅರುಜಂ ಬಾಹ್ಯತಃ ಶೂನಮನ್ತಃ ಕ್ಲಿನ್ನಂ ಸ್ರವತ್ಯಪಿ ।
ಕಣ್ಡೂನಿಸ್ತೋದಭೂಯಿಷ್ಠಂ ಕ್ಲಿನ್ನವರ್ತ್ಮ ತದುಚ್ಯತೇ ॥೨೧॥

ಕಫ ಕೋಪದಿಂದ ಕಣ್ಣಿನ ರೆಪ್ಪೆಯು ನೋವಿಲ್ಲದೆ ಹೊರಗಡೆಯಲ್ಲಿ ಊದಿ ಒಳಗೆ ದ್ರವ ಜಿನುಗಿ ಒದ್ದೆಯಾಗಿ ನವೆಯೂ ನೋವೂ ಹೆಚ್ಚಾಗಿದ್ದರೆ ಕ್ಲಿನ್ನವರ್ತ್ಮವೆನ್ನುತ್ತಾರೆ. ಕಫಜನಿತವಾದ್ದರಿಂದ ಇದನ್ನು ಸಾಧ್ಯವೆಂದರಿಯಬೇಕು.

ಯಸ್ಯ ಧೌತಾನಿ ಧೌತಾನಿ ಸಂಬಧ್ಯನ್ತೇ ಪುನಃ ಪುನಃ ।
ವರ್ತ್ಮಾನ್ಯಪರಿಪಕ್ವಾನಿ ವಿದ್ಯಾದಕ್ಲಿನ್ನವರ್ತ್ಮ ತತ್ ॥೨೨॥

ಪದೇಪದೇ ರೆಪ್ಪೆಗಳನ್ನು ತೊಳೆಯುತ್ತಿದ್ದರೂ ಪಾಕವಾಗದೆ ದ್ರವರಹಿತವಾಗಿ ಅಂಟಿಕೊಂಡರೆ ಅದಕ್ಕೆ ಅಕ್ಲಿನ್ನವರ್ತ್ಮವೆನ್ನುತ್ತಾರೆ. ಇದು ಸನ್ನಿಪಾತ ಜನಿತವಾದರೂ ಸಾಧ್ಯವೆಂದು ತಿಳಿಯಬೇಕು. ಇದಕ್ಕೆ ಪಿಲ್ಲಾಖ್ಯವರ್ತ್ಮವೆಂದೂ ಹೇಳುತ್ತಾರೆ. ವಿದೇಹನ ಮತದಂತೆ ನೀರಿನಿಂದ ತೊಳೆದು ಶುದ್ಧಿಮಾಡಿದರೂ ರೆಪ್ಪೆಗಳು ಪರಸ್ಪರ ಕಚ್ಚಿಕೊಂಡರೆ ಅಪರಿಕ್ಲಿನ್ನವರ್ತ್ಮ ಅಥವಾ ಪಿಲ್ಲವೆಂದು ತಿಳಿಯಬೇಕು.

ವಿಮುಕ್ತಸನ್ಧಿ ನಿಶ್ಚೇಷ್ಟಂ ವರ್ತ್ಮಯನ್ನ ನಿಮೀಲ್ಯತೇ ।
ಏತದ್ವಾತಹತಂ ವಿದ್ಯಾತ್ ಸರುಜಂ ಯದಿ ವಾರುಜಮ್ ॥೨೩॥

ರೆಪ್ಪೆಗಳ ಸಂಧಿಯು ಜಾರಿಬಿದ್ದು ಚಲನೆಯಿಲ್ಲದೆ ಕಣ್ಣುಗಳನ್ನು ಮುಚ್ಚಿಕೊಳ್ಳುವುದಕ್ಕೂ ತೆರೆಯುವುದಕ್ಕೂ ಆಗದಿದ್ದರೆ ವಾತಹತಪಕ್ಷ್ಮವೆನ್ನುತ್ತಾರೆ. ಇದರಲ್ಲಿ ನೋವಿದ್ದರೂ ಇಲ್ಲದಿದ್ದರೂ ಇದು ಅಸಾಧ್ಯವು.

ವರ್ತ್ಮಾನ್ತರಸ್ಥಂ ವಿಷಮಂ ಗ್ರನ್ಥಿಭೂತಮವೇದನಮ್ ।
ವಿಜ್ಞೇಯಮರ್ಬುದಂ ಪುಂಸಾಂ ಸರಕ್ತಮವಲಮ್ಬಿತಮ್ ॥೨೪॥

ರೆಪ್ಪೆಗಳ ಮಧ್ಯೆ ಗ್ರಂಥಿಯುಂಟಾಗಿ ನೋವಿಲ್ಲದೆ ನೇತಾಡುತ್ತಿದ್ದರೆ ಅರ್ಬುದವೆಂದು ಹೆಸರು. ಪಿತ್ತಜನಿತವಾದ್ದರಿಂದ ಕೆಂಪಗಿರುತ್ತದೆ. ಸನ್ನಿಪಾತಜವಾದರೂ ಸಾಧ್ಯವೆಂದು ತಿಳಿಯಬೇಕು.

ನಿಮೇಷಣೀಃ ಸಿರಾ ವಾಯುಃ ಪ್ರವಿಷ್ಟೋ ವರ್ತ್ಮಸಂಶ್ರಯಾಃ ।
ಚಾಲಯೇದತಿ ವರ್ತ್ಮಾನಿ ನಿಮೇಷಃ ಸ ಗದೋ ಮತಃ ॥೨೫॥

ರೆಪ್ಪೆಗಳನ್ನಾಶ್ರೈಸಿರುವ ನಿಮೇಷೋನ್ಮೇಷಕಾರಕ ಸಿರೆಗಳಿಗೆ ವಾಯುವು ಪ್ರವೇಶಿಸಿ ರೆಪ್ಪೆಗಳು ಹೆಚ್ಚಾಗಿ ಮುಚ್ಚಿಕೊಂಡರೆ ನಿಮೇಷ ರೋಗವೆಂದು ತಿಳಿಯಬೇಕು ; ಇದು ಸಾಧ್ಯವಾಗುವುದಿಲ್ಲ.

ಛಿನ್ನಾಶ್ಛಿನ್ನಾ ವಿವರ್ಧನ್ತೇ ವರ್ತ್ಮಸ್ಥಾ ಮೃದವೋಽಙ್ಕುರಾಃ ।
ದಾಹಕಂಡೂರುಜೋಪೇತಾಸ್ತೇಽರ್ಶಃ ಶೋಣಿತಸಂಭವಾಃ ॥೨೬॥

ರೆಪ್ಪೆಗಳಲ್ಲಿ ಹುಟ್ಟಿ ಮೃದುವಾಗಿ ಉರಿತ, ನವೆ ನೋವುಗಳಿಂದ ಕೂಡಿರುವ ಮಾಂಸಾಂಕುರಗಳನ್ನು ಶಸ್ತ್ರದಿಂದ ಕತ್ತರಿಸಿದರೂ ಕತ್ತರಿಸದಿದ್ದರೂ ಹೆಚ್ಚುತ್ತಾ ಬೆಳೆಯು

ತ್ರವೆ. ರಕ್ತದಿಂದ ಉತ್ಪನ್ನವಾದ ಈ ಅಂಕುರಗಳಿಗೆ ಅರ್ಶಸ್ಸೆಂದು ಹೆಸರು. ಇವು ಅಸಾಧ್ಯಗಳು.

ಅಪಾಕಃ ಕಠಿನಃ ಸ್ಥೂಲೋ ಗ್ರನ್ಥಿರ್ವರ್ತ್ಮಭವೋಽರುಜಃ ।
ಸಕಣ್ಡೂಃ ಪಿಚ್ಛಿಲಃ ಕೋಲಪ್ರಮಾಣೋ ಲಗಣಸ್ತು ಸಃ ॥೨೭॥

ರೆಪ್ಪೆಯಲ್ಲಿ ಪಾಕವಾಗದ ಗಟ್ಟಿಯಾದ ಕಫಗ್ರಂಥಿಯುಂಟಾಗಿ ನೋವಿಲ್ಲದೆ ನವೆಯಿಂದ ಕೂಡಿ ಗರಣೆಯಂತೆ ಅಂಟಾಗಿ ಎಲಚೀಹಣ್ಣಿನಷ್ಟು ದಪ್ಪವಿದ್ದರೆ **ಲಗಣವೆಂದು** ಹೆಸರು ; ಇದು ಸಾಧ್ಯವಾಗುತ್ತದೆ.

ಶೂನಂ ಯದ್ವರ್ತ್ಮ ಬಹುಭಿಃ ಸೂಕ್ಷ್ಮೈಶ್ಛಿದ್ರೈಃ ಸಮನ್ವಿತಮ್ ।
ಬಿಸಮನ್ತರ್ಜಲ ಇವ ಬಿಸವರ್ತ್ಮೇತಿ ತನ್ಮತಮ್ ॥೨೮॥

ರೆಪ್ಪೆಯು ಅನೇಕ ಸಣ್ಣಸಣ್ಣ ರಂಧ್ರಗಳುಳ್ಳದಾಗಿ ಊದಿ ನೀರಿನಿಂದ ತುಂಬಿದ ತಾವರೆಯ ದಂಟಿನಂತಿದ್ದರೆ **ಬಿಸವರ್ತ್ಮವೆನ್ನುತ್ತಾರೆ** ; ಇದು ತ್ರಿದೋಷಜವಾದರೂ ಚಿಕಿತ್ಸೆಯಿಂದ ಸಾಧ್ಯವಾಗುತ್ತದೆ.

ಪಕ್ಷ್ಮಾಶಯಗತಾ ದೋಷಾಸ್ತೀಕ್ಷ್ಣಾಗ್ರಾಣಿ ಖರಾಣಿ ಚ ।
ನಿರ್ವರ್ತಯನ್ತಿ ಪಕ್ಷ್ಮಾಣಿ ತೈರ್ಘೃಷ್ಟಂ ಚಾಕ್ಷಿ ದೂಯತೇ ॥೨೯॥
ಉತ್ಕೃಟಿತೈಃ ಪುನಃ ಶಾನ್ತಿಃ ಪಕ್ಷ್ಮಭಿಶ್ಚೋಪಜಾಯತೇ ।
ವಾತಾತಪಾನಲದ್ವೇಷ್ಟಾ ಪಕ್ಷ್ಮಕೋಪಃ ಸ ಉಚ್ಯತೇ ॥೩೦॥

ತ್ರಿದೋಷಗಳ ಪ್ರಕೋಪದಿಂದ ರೆಪ್ಪೆಯ ಕೂದಲು ಮೊನಚಾದ ತುದಿಯುಳ್ಳದ್ದಾಗಿ ಒರಟಾಗಿ ಹೊರಕ್ಕೆ ನುಗ್ಗಿ ಅವುಗಳ ತುದಿಯು ಕಣ್ಣಿಗೆ ಚುಚ್ಚಿದರೆ ನೋಯುತ್ತದೆ; ಆ ಕೂದಲುಗಳನ್ನು ಚಿಮುಟದಿಂದ ಕಿತ್ತರೆ ನೋವು ನಿಲ್ಲುತ್ತದೆ ; ಗಾಳಿ ಬಿಸಿಲು ಬೆಂಕಿಯ ಉರಿ ಇವನ್ನು ನೋಡಲಾಗುವುದಿಲ್ಲ ; ಇದಕ್ಕೆ **ಪಕ್ಷ್ಮಕೋಪವೆಂದು** ಹೆಸರು ; ತ್ರಿದೋಷಜನಿತವಾದ ಈ ರೋಗವು ಯಾಪ್ಯವು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ವರ್ತ್ಮಗತ ರೋಗವಿಜ್ಞಾನೀಯನಾಮಕ ತೃತೀಯಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾ ವಿವೃತಿಃ.

ಚತುರ್ಥೋಽಧ್ಯಾಯಃ

ಅಥಾತಃ ಶುಕ್ಲಗತರೋಗ ವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿ ದಂತೆಯೇ ಶುಕ್ಲಗತ ರೋಗಗಳ ವಿವರಣೆಯನ್ನು ಮಾಡುತ್ತೇವೆ.

ಟಿಪ್ಪಣಿ : ವರ್ತ್ಮವಮಂಡಲದ ನಂತರ ಶುಕ್ಲಮಂಡಲವು ಪ್ರಾಪ್ತಿಯಾಗುತ್ತದೆ ಯಾಗಿ ವರ್ತ್ಮರೋಗ ಜ್ಞಾನವಾದ ಮೇಲೆ ಶುಕ್ಲಗತರೋಗಗಳ ಜ್ಞಾನವಾಗತಕ್ಕದ್ದು ಉಚಿತವಾದದ್ದು.

ಪ್ರಸ್ತಾರಿಶುಕ್ಲಕ್ಷತಜಾಧಿಮಾಂಸಸ್ನಾಯ್ವರ್ಮಸಂಜ್ಞಾಃ ಖಲು ಪಞ್ಚ ರೋಗಾಃ ।
ಸ್ಯುಃ ಶುಕ್ತಿ ಕಾಚಾರ್ಜುನಪಿಷ್ಟಕೌ ಚ ಜಾಲಂ ಸಿರಾಣಾಂ ಪಿಡಕಾ ಚ ಯಾಃ ಸ್ಯುಃ ||೩||
ರೋಗಾ ಬಲಾಸಗ್ರಥಿತೇನ ಸಾರ್ಧಮೇಕಾದಶಾಕ್ಷ್ಣೋಃ ಖಲು ಶುಕ್ಲಭಾಗೇ ।

ಪ್ರಸ್ತಾರ್ಯರ್ಮ, ಶುಕ್ಲಾರ್ಮ, ಕ್ಷತಜಾರ್ಮ, ಅಧಿಮಾಂಸಾರ್ಮ, ಸ್ನಾಯ್ವರ್ಮ, ಶುಕ್ತಿಕಾ, ಅರ್ಜುನ, ಪಿಷ್ಟಕ, ಸಿರಾಜಾಲ, ಸಿರಾಪಿಡಕ, ಬಲಾಸ ಗ್ರಥಿತಗಳೆಂಬ ೧೧ ರೋಗಗಳು ನೇತ್ರದ ಶುಕ್ಲಭಾಗದಲ್ಲಿ ಹುಟ್ಟುತ್ತವೆ.

ಪ್ರಸ್ತಾರಿಪ್ರಥಿಕಮಿಹಾರ್ಮಶುಕ್ಲಭಾಗೇ ವಿಸ್ತೀರ್ಣಂ ತನುರುಧಿರಪ್ರಭಂ ಸನೀಲಮ್ ||೪||
ಶುಕ್ಲಾಖ್ಯಂ ಮೃದು ಕಥಯನ್ತಿ ಶುಕ್ಲಭಾಗೇ ಸಶ್ವೇತಂ ಸಮಮಿಹ ವರ್ಧತೇ ಚಿರೇಣ ।
ಯನ್ಮಾಂಸಂ ಪ್ರಚಯಮುಪೈತಿ ಶುಕ್ಲಭಾಗೇ ಪದ್ಮಾಭಂ ತದುಪದಿಶನ್ತಿ ಲೋಹಿತಾರ್ಮ ||೫||

ನೇತ್ರ ಶುಕ್ಲಭಾಗದಲ್ಲಿ ಅಗಲವಾದ ತೆಳ್ಳಗೆ ಸ್ವಲ್ಪನೀಲ ಮಿಶ್ರವಾದ ರಕ್ತಬಣ್ಣದ ತ್ರಿದೋಷಜ ಮಾಂಸವೃದ್ಧಿಗೆ ಪ್ರಸ್ತಾರ್ಯರ್ಮವೆಂದೂ ಕಫದಿಂದ ಸ್ವಲ್ಪ ಬಿಳುಪಾಗಿ ಮೃದುವಾಗಿ ನಿಧಾನವಾಗಿ ವೃದ್ಧಿಹೊಂದಿದರೆ ಶುಕ್ಲಾರ್ಮವೆಂದೂ ಮತ್ತು ಮಾಂಸ ದಿಂದ ತಾವರೆಯಹೂವಿನ ರೇಕಿನಂತೆ ವೃದ್ಧಿಹೊಂದಿದರೆ ಲೋಹಿತಾರ್ಮವೆಂದೂ ಹೇಳುತ್ತಾರೆ ; ಈ ಮೂರು ವಿಧ ಅರ್ಮಗಳೂ ಸಾಧ್ಯವಾಗುತ್ತವೆ.

ವಿಸ್ತೀರ್ಣಂ ಮೃದು ಬಹಳಂ ಯಕೃತ್ಪ್ರಕಾಶಂ ಶ್ಯಾವಂ ವಾತದಧಿಕ ಮಾಂಸಜಾರ್ಮ ವಿದ್ಯಾತ್ ।
ಶುಕ್ಲೇ ಯತ್ಪಿಶಿತಮುಪೈತಿ ವೃದ್ಧಿಮೇತತ್ ಸ್ನಾಯ್ವರ್ಮೇತ್ಯಭಿ ಪಠಿತಂ ಖರಂ ಪ್ರಪಾಣ್ಡು ||೬||

ಶುಕ್ಲಭಾಗದಲ್ಲಿ ಅಗಲವಾಗಿ ಮೆತ್ತಗೆ ದಪ್ಪವಾಗಿ ಯಕೃತ್ತಿಗೆ ಸಮಾನವಾದ ಶ್ಯಾವ

ಬಣ್ಣದ ಮಾಂಸವೃದ್ಧಿಗೆ ಅಭಿಮಾಂಸಾರ್ಮವೆಂದು ಹೆಸರು ; ಇದು ಸನ್ನಿಪಾತದಿಂದ ಹುಟ್ಟಿದ್ದಾದರೂ ಚಿಕಿತ್ಸೆಮಾಡಿದರೆ ಸಾಧ್ಯವಾಗುತ್ತದೆ ; ಶುಕ್ಲಭಾಗದಲ್ಲಿ ಒರಟಾದ ಅಧಿಕ ಬಿಳುಪಾದ ಮಾಂಸವೃದ್ಧಿಗೆ ಸ್ನಾಯ್ವರ್ಮವೆನ್ನುತ್ತಾರೆ. ತ್ರಿದೋಷ ಜನ್ಯವಾದ ಇದನ್ನು ಚಿಕಿತ್ಸೆಮಾಡಿ ಗುಣಪಡಿಸಬಹುದು. (ಸಾಧ್ಯವಾಗುತ್ತದೆ.)

ಶ್ಯಾವಾಃ ಸ್ಯುಃ ಪಿಶಿತನಿಭಾಸ್ತು ಬಿನ್ದವೋ ಯೇ ಶುಕ್ತ್ಯಾಭಾ ಸಿತನಯನೇ ಸ ಶುಕ್ತಿ ಸಂಜ್ಞಃ

ಏಕೋ ಯಃ ಶಶರುಧಿರೋಪಮಸ್ತು ಬಿನ್ದುಃ ಶುಕ್ಲಸ್ಥೋ ಭವತಿ ತಮರ್ಜುನಂ ವದನ್ತಿ ॥೭॥

ನೇತ್ರಶುಕ್ಲಭಾಗದಲ್ಲಿ ಹೊಗೆಯ ಬಣ್ಣದ ಕಪ್ಪೇಚಿಪ್ಪಿನ ಆಕಾರದ ಮಾಂಸ ಬಿಂದುಗಳುಂಟಾದರೆ ಶುಕ್ತಿಕಾ ವಿಕಾರವೆನ್ನುತ್ತಾರೆ ; ಪಿತ್ತದಿಂದ ಉಂಟಾದ ಈ ರೋಗಗಳು ಸಾಧ್ಯಗಳು. ಶುಕ್ಲಮಂಡಲದಲ್ಲಿ ಮೊಲದ ರಕ್ತದಂತೆ ಬಿಂದುವಿನ ಆಕಾರದ ರಕ್ತಪಿಡಿಕೆಗೆ ಅರ್ಜುನವೆನ್ನುತ್ತಾರೆ.

ಉತ್ಸನ್ನಃ ಸಲಿಲನಿಭೋಽಥ ಪಿಷ್ಟಶುಕ್ಲೋ ಬಿನ್ದುರ್ಯಃ ಸಭ್ಬವತಿ ಪಿಷ್ಟಕಃ ಸುವೃತ್ತಃ

ಜಾಲಾಭಃ ಕಠಿನಸಿರೋ ಮಹಾರ್ನ್ ಸರಕ್ತಃ ಸನ್ತಾನಃ ಸ್ಮೃತ ಇಹ ಜಾಲಸಂಜ್ಞಿತಸ್ತು ॥೮॥

ಬಿಳಿಯಗುಡ್ಡೆಯ ಮೇಲೆ ಉಬ್ಬಿ ನೀರಿನ ಹನಿಯಂತೆ ಅಕ್ಕಿಹಿಟ್ಟನಂತೆ ಅಲ್ಲಲ್ಲಿ ಗುಂಡಾಗಿ ಎದ್ದಿರುವ ಮಾಂಸಾಂಕುರಗಳಿಗೆ ಪಿಷ್ಟಕವೆಂದು ಹೆಸರು ; ಮತ್ತು ಬಲೆಯೊಡ್ಡಿದಂತೆ ಗಟ್ಟಿಯಾದ ಉದ್ದವಾದ ಸಿರೆಗಳಿಂದ ಕೆಂಪು ಮಿಶ್ರವಾದ ಮಾಂಸಾಂಕುರಗಳಿಗೆ ಸಿರಾಜಾಲವೆಂದು ಹೆಸರು.

ಶುಕ್ಲಸ್ಥಾಃ ಸಿತಪಿಡಕಾಃ ಸಿರಾವೃತಾ ಯಾಸ್ತಾ ವಿದ್ಯಾದಸಿತ ಸಮೀಪಜಾಃ ಸಿರಾಜಾಃ ।

ಕಾಂಸ್ಯಾಭೋ ಭವತಿ ಸಿರಾವೃತಃ ಸಿತೇ ಯೋ ಬಿನ್ದುರ್ವಾ ಸತು ನಿರುಜೋ ಬಲಾಸಕಾಖ್ಯಃ ॥೯॥

ನೇತ್ರದ ಶುಕ್ಲಭಾಗದಲ್ಲಿ ಸಿರೆಗಳಿಂದ ಸುತ್ತಲ್ಪಟ್ಟ ಬಿಳಿಬೊಕ್ಕೆಗಳು ಕರಿಯ ಗುಡ್ಡೆಯ ಸಮೀಪದಲ್ಲಿ ಉಂಟಾದರೆ ಸಿರಾಜಪಿಡಕಗಳೆಂದು ಹೆಸರು ; ಇವು ಸನ್ನಿಪಾತ ದೋಷದಿಂದ ಹುಟ್ಟುತ್ತವೆಯಾದರೂ ಚಿಕಿತ್ಸೆಯಿಂದ ಸಾಧ್ಯವಾಗುತ್ತವೆ ; ನೇತ್ರದ ಬಿಳಿಯಗುಡ್ಡೆಯ ಭಾಗದಲ್ಲಿ ಕಂಚಿನ ಬಣ್ಣದ ನೀಲಿಮಿಶ್ರವಾದ ಬಿಳಿಯ ಬಣ್ಣದ ಸಿರೆಗಳಿಂದ ಸುತ್ತಲ್ಪಟ್ಟ ನೋವಿಲ್ಲದ ಮಾಂಸವೃದ್ಧಿಗೆ ಬಲಾಸಕವೆಂದು ಹೆಸರು ; ಕಫಜನಿತವಾದ ಈ ರೋಗವು ಸಾಧ್ಯವಾಗುತ್ತದೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಶುಕ್ಲಗತ ರೋಗ ವಿಜ್ಞಾನೀಯನಾಮಕ ಚತುರ್ಥಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಽ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕ ಭಾಷಾವಿವೃತಿಃ.

ಪಞ್ಚಮೋಽಧ್ಯಾಯಃ

ಅಥಾತಃ ಕೃಷ್ಣಗತರೋಗ ವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ನೇತ್ರಗೋಳದ ಕೃಷ್ಣಮಂಡಲದಲ್ಲಿ ಹುಟ್ಟುವ ರೋಗಗಳನ್ನು ವಿವರಣೆ ಮಾಡುತ್ತೇವೆ.

ಯತ್ಸವ್ರಣಂ ಶುಕ್ರಮಥಾವ್ರಣಂ ವಾ ಪಾಕಾತ್ಯಯಶ್ಚಾಪ್ಯಜಕಾ ತಥೈವ

ಚತ್ವಾರ ಏತೇಽಭಿಹಿತಾ ವಿಕಾರಾಃ ಕೃಷ್ಣಾಶ್ರಯಾಃ ಸಂಗ್ರಹತಃ ಪುರಸ್ತಾತ್ ||೩||

ಸ್ರವಣಶುಕ್ರ ಅವ್ರಣಶುಕ್ರ ಪಾಕಾತ್ಯಯ ಅಜಕಾ ಎಂಬ ೪ ವಿಧರೋಗಗಳೂ ನೇತ್ರದ ಕರಿಯ ಗುಡ್ಡೆಯಲ್ಲುಂಟಾಗುತ್ತವೆಂದು ಸಂಕ್ಷೇಪವಾಗಿ ಹೇಳಿರುತ್ತದೆ.

ನಿಮಗ್ನರೂಪಂ ತು ಭವೇತ್ತು ಕೃಷ್ಣೇ ಸೂಚ್ಯೇವ ವಿದ್ಧಂ ಪ್ರತಿಭಾತಿ ಯದ್ವೈ

ಸ್ರಾವಂ ಸ್ರವೇದುಷ್ಣಮತೀವ ರುಕ್ಚ ತತ್ಸವ್ರಣಂ ಶುಕ್ರಮುದಾಹರನ್ತಿ ||೪||

ಕಣ್ಣಿನ ಕರಿಗುಡ್ಡೆಯ ಒಳಗಡೆಗೆ ನುಗ್ಗಿದಂತೆಯೂ ಸೂಜಿಯಿಂದ ಚುಚ್ಚಿದಂತೆಯೂ ಗುಂಡಗಿರುವ ರಂಧ್ರದಿಂದ ಬಿಸಿಯಾದ ದ್ರವವು ಸರ್ವದಾ ಜಿನುಗುತ್ತಾ ನೋವಿನಿಂದ ಕೂಡಿದ್ದರೆ ಸವ್ರಣ ಶುಕ್ರವೆಂದು ಹೆಸರು ; ಕಣ್ಣು ಸುಕುಮಾರಾವಯವವಾದ ಕಾರಣ ಅತಿಯಾಗಿ ನೋಯುವುದು ಯುಕ್ತವಾದದ್ದು ; ರಕ್ತದಿಂದುಂಟಾದ ಈ ರೋಗವು ಅಸಾಧ್ಯವಾದದ್ದು.

ದೃಷ್ಟೇಃ ಸಮೀಪೇ ನ ಭವೇತ್ತು ಯಚ್ಚ ನ ಚಾವಗಾಢಂ ನ ಚ ಸಂಸ್ರವೇದ್ಧಿ

ಅವೇದನಾವನ್ನ ಚ ಯುಗ್ಮಶುಕ್ರಂ ತತ್ಸಿದ್ಧಿಮಾಪ್ನೋತಿ ಕದಾಚಿದೇವ ||೫||

ಈ ಸವ್ರಣ ಶುಕ್ರವು ದೃಷ್ಟಿಮಂಡಲದ ಹತ್ತಿರವಿರದೆ ಅತಿ ಆಳಕ್ಕೆ ಇಳಿಯದೆಯೂ ಸ್ರಾವವಿಲ್ಲದೆಯೂ ನೋವಿಲ್ಲದೆಯೂ ಎರಡು ಶುಕ್ರ ಬಿಂದುಗಳಿಲ್ಲದೆಯೂ ಇದ್ದರೆ ಒಂದೊಂದು ವೇಳೆ ಗುಣವಾಗುವ ಸಂಭವವೂ ಉಂಟು.

ವಿಚ್ಛಿನ್ನಮಧ್ಯಂ ಪಿಶಿತಾವೃತಂ ವಾ ಚಲಂ ಸಿರಾಸಕ್ತಮದೃಷ್ಟಿಕೃಚ್ಚ

ದ್ವಿತ್ವಗ್ಗತಂ ಲೋಹಿತಮನ್ತತಶ್ಚ ಚಿರೋತ್ಥಿತಂ ಚಾಪಿ ವಿವರ್ಜನೀಯಮ್ ||೬||

ಉಷ್ಣಾಶ್ರುಪಾತಃ ಪಿಡಕಾ ಚ ಕೃಷ್ಣೇ ಯಸ್ಮಿನ್ ಭವೇನ್ಮುದ್ಗನಿಭಂ ಚ ಶುಕ್ರಮ್

ತದಪ್ಯಸಾಧ್ಯಂ ಪ್ರವದನ್ತಿ ಕೇಚಿದನ್ಯಚ್ಚ ಯತ್ತಿತ್ತಿರಿಪಕ್ಷತುಲ್ಯಮ್ ||೭||

ಸವ್ರಣ ಶುಕ್ರದ ಅಸಾಧ್ಯ ಲಕ್ಷಣವು. ಮಾಂಸವಿಲ್ಲದ ಕಾರಣ ಮಧ್ಯಭಾಗವು ರಂಧ್ರವಾದಂತೆ ಕಾಣುವುದೂ ಮಧ್ಯದಲ್ಲಿ ರಂಧ್ರವಿಲ್ಲದಿದ್ದರೂ ಮಾಂಸವು ಉಬ್ಬಿರು

ವುದೂ, ಸಿರೆಗಳಿಗೆ ತಗಲಿರುವ ಕಾರಣ ಚಲಿಸುತ್ತಿರುವುದೂ, ಕಣ್ಣು ಕಾಣಿಸದೇ ಇರುವುದೂ, ಆಳವಾಗಿ ಎರಡು ಪಟಲಗಳನ್ನೂ ವ್ಯಾಪಿಸಿರುವುದೂ, ಸುತ್ತಲೂ ರಕ್ತವರ್ಣ ವಾಗಿರುವುದೂ ಬಲು ಕಾಲದಲ್ಲಿ ಹುಟ್ಟಿದ್ದಾಗಿಯೂ ಇರುವ ಸವ್ರಣ ಶುಕ್ರವನ್ನು ತ್ಯಜಿಸಿ ಬಿಡಬೇಕು ; ದ್ವಿತ್ವಗ್ಗತವಾದ ಶುಕ್ರಲಕ್ಷಣವನ್ನು ಹೇಳುತ್ತಾರೆ. ಕೃಷ್ಣಮಂಡಲದಲ್ಲಿ ಹೆಸರುಕಾಳಿನ ಆಕಾರವುಳ್ಳ ಬಿಳಿಯ ಬೊಕ್ಕೆಯುಂಟಾಗಿ ಬಿಸಿಯಾಗಿ ಕಣ್ಣೀರನ್ನು ಸುರಿಸಿ ದರೆ ದ್ವಿತ್ವಗ್ಗತ ಶುಕ್ರಲಕ್ಷಣವೆಂದೂ ಅಸಾಧ್ಯವೆಂದೂ ತಿಳಿಯಬೇಕು ; ತಿತ್ತಿರಿಪಕ್ಷಿ (ವೇದ ಪಕ್ಷಿ)ಯ ಗರಿಯಂತೆ ಅತಿಬಿಳುಪಾದ ಶುಕ್ರವೂ ಅಸಾಧ್ಯವೆಂದು ಕೆಲವರ ಮತವು.

ಸಿತಂ ಯದಾ ಭಾತ್ಯಸಿತಪ್ರದೇಶೇ ಸ್ಯನ್ದಾತ್ಮಕಂ ನಾತಿರುಗಶ್ರುಯುಕ್ತಮ್
ವಿಹಾಯಸೀವಾಭ್ರದಳಾನುಕಾರಿ ತದವ್ರಣಂ ಸಾಧ್ಯತಮಂ ವದನ್ತಿ ॥೮॥

ಕಣ್ಣಿನ ಕರಿಯಗುಡ್ಡೆಯಲ್ಲಿ ಬಿಳಿಯ ಬೊಕ್ಕೆಯುಂಟಾಗಿ ಅಶ್ರುಸ್ರಾವದಿಂದ ಕೂಡಿ ಅತಿನೋವಿಲ್ಲದೆ ಆಕಾಶದಲ್ಲಿರುವ ಮೋಡದಂತೆ ತೆಳುವಾಗಿದ್ದರೆ ಅವ್ರಣಶುಕ್ರವೆಂದೂ ರಕ್ತ ಜನಿತವಾದರೂ ಚಿಕಿತ್ಸೆಮಾಡಿದರೆ ಇದು ಗುಣವಾಗುತ್ತದೆಂದೂ ತಿಳಿಯಬೇಕು.

ಗಮ್ಭೀರಜಾತಂ ಬಹಲಂ ಚ ಶುಕ್ರಂ ಚಿರೋತ್ಥಿತಂ ಚಾಪಿ ವದನ್ತಿ ಕೃಚ್ಛ್ರಮ್ ।

ಆಳವಾಗಿ ದಪ್ಪ ಚರ್ಮವುಳ್ಳ ಬಲುಕಾಲಕ್ಕೆ ಮುಂಚೆ ಹುಟ್ಟಿರುವ ಶುಕ್ರವನ್ನು ಕಷ್ಟಸಾಧ್ಯವೆಂದು ಹೇಳುತ್ತಾರೆ.

ಸಂಛಾದ್ಯತೇ ಶ್ವೇತನಿಭೇನ ಸರ್ವದೋಷೇಣ ಯಸ್ಯಾಽಸಿತಮಣ್ಡಲಂ ತು ।
ತಮಕ್ಷಿಪಾಕಾತ್ಯಯಮಕ್ಷಿಕೋಪಸಮುತ್ಥಿತಂ ತೀವ್ರರುಜಂ ವದನ್ತಿ ॥೯॥

ತ್ರಿದೋಷಗಳ ಪ್ರಕೋಪದಿಂದ ಕರಿಗುಡ್ಡೆಯಮೇಲೆ ಬಿಳಿಯ ಪದರವು ಮುಚ್ಚಿ ತೀವ್ರವೇದನೆಯುಂಟಾದರೆ ಅಭಿಷ್ಯನ್ದದಿಂದುಂಟಾದ ಅಕ್ಷಿಪಾಕಾತ್ಯಯವೆಂದೂ ಅಸಾಧ್ಯ ವೆಂದೂ ತಿಳಿಯಬೇಕು.

ಅಜಾಪುರೀಷಪ್ರತಿಮೋ ರುಜಾವಾನ್ ಸಲೋಹಿತೋ ಲೋಹಿತ ಪಿಚ್ಛಿಲಾಸ್ರಃ ।
ವಿದಾರ್ಯ ಕೃಷ್ಣಂ ಪ್ರಚಯೋಽಭ್ಯುಪೈತಿ ತಂ ಚಾಜಕಾಜಾತಮಿತಿ ವ್ಯವಸ್ಯೇತ್ ॥೧೦॥

ನೇತ್ರಗೋಳದ ಕೃಷ್ಣಮಂಡಲವನ್ನು ಭೇದಿಸಿ ಆಡಿನ ಒಣಹಿಕ್ಕೆಯಂತೆ ಸ್ವಲ್ಪ ರಕ್ತ ವರ್ಣದ ಮೇದೋಗ್ರಂಥಿಯು ಹೊರಕ್ಕೆ ಹೊರಟುಬಂದು ರಕ್ತಮಿಶ್ರವಾಗಿ ಅಂಟುವ (ಜಿಬಿಗುಟ್ಟುವ) ಕಣ್ಣೀರನ್ನು ಸೋರಿಸುತ್ತಿದ್ದರೆ ಅಜಕಾಜಾತವೆನ್ನುತ್ತಾರೆ ; ಕಫಜನಿತ ವಾದ ಈ ರೋಗವು ಅಸಾಧ್ಯವಾದುದೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಕೃಷ್ಣಗತ
ರೋಗವಿಜ್ಞಾನನಾಮಕ ಪಂಚಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ
ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ಷಷ್ಠೋಽಧ್ಯಾಯಃ

ಅಥಾತಃ ಸರ್ವಗತರೋಗವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿ ದಂತೆಯೇ ಸರ್ವಾಕ್ಷಿಗತರೋಗವಿಜ್ಞಾನವನ್ನು ಹೇಳುತ್ತೇವೆ.

ಸ್ಯನ್ದಾಸ್ತು ಚತ್ವಾರ ಇಹೋಪದಿಷ್ಟಾಸ್ತಾವನ್ತ ಏವೇಹ ತಥಾಧಿಮನ್ಥಾಃ
ಶೋಫಾನ್ವಿತೋಽಶೋಫಯುತಶ್ಚ ಪಾಕಾವಿತ್ಯೇವಮೇತೇ ದಶಸಂಪ್ರದಿಷ್ಟಾಃ ॥೩॥
ಹತಾಧಿಮನ್ಥೋಽನಿಲಪರ್ಯಯಶ್ಚ ಶುಷ್ಕಾಕ್ಷಿಪಾಕೋಽನ್ಯತ ಏವ ವಾತಃ ।
ದೃಷ್ಟಿಸ್ತಥಾಮ್ಲಾಧ್ಯುಷಿತಾ ಸಿರಾಣಾಮುತ್ಪಾತಹರ್ಷಾವಪಿ ಸರ್ವಭಾಗಾಃ ॥೪॥
ಪ್ರಾಯೇಣ ಸರ್ವೇ ನಯನಾಮಯಾಸ್ತೇ ಭವನ್ತ್ಯಭಿಷ್ಯನ್ದ ನಿಮಿತ್ತಮೂಲಾಃ ।
ತಸ್ಮಾದಭಿಷ್ಯನ್ದಮುದೀರ್ಯಮಾಣಮುಪಾಚರೇದಾಶು ಹಿತಾಯ ಧೀಮಾನ್ ॥೫॥

೪ ಅಭಿಷ್ಯನ್ದಗಳು, ೪ ಅಧಿಮಂಥಗಳು, ಸಶೋಫಪಾಕ ಅಶೋಫಪಾಕಗಳೆಂಬ ೧೦ ವಿಧವಾದ ಸರ್ವಾಕ್ಷಿಗತರೋಗಗಳು, ಹತಾಧಿಮಂಥ, ಅನಿಲಪರ್ಯಾಯ, ಶುಷ್ಕಾಕ್ಷಿ ಪಾಕ, ಅನ್ಯತೋವಾತ, ಅಮ್ಲಾಧ್ಯುಷಿತದೃಷ್ಟಿ, ಸಿರೋತ್ಪಾತ, ಸಿರಾಹರ್ಷಗಳೆಂಬ ೭ ವಿಧ ಸರ್ವಾಕ್ಷಿರೋಗಗಳು ಈ ರೀತಿಯಾಗಿ ೧೭ ವಿಧ ಸರ್ವಾಕ್ಷಿರೋಗಗಳನ್ನು ಹೇಳುತ್ತಾರೆ. ಈ ೧೭ ವಿಧ ಗಳಾದ ನೇತ್ರರೋಗಗಳು ನೇತ್ರಾಭಿಷ್ಯಂದದಿಂದಲೇ ಉಂಟಾಗುತ್ತವೆಯಾದ ಕಾರಣ ಬುದ್ಧಿವಂತನಾದ ವೈದ್ಯನು ಅಭಿಷ್ಯಂದ ರೋಗವು ಪ್ರಾರಂಭಿಸಿದಾಗಲೇ ಚಿಕಿತ್ಸೆ ಮಾಡಿ ಬೇಗ ನಿವಾರಣೆಮಾಡಿದರೆ ಲಾಭವುಂಟಾಗುತ್ತದೆ.

ನಿಸ್ತೋದನಸ್ತಮ್ಭನರೋಮಹರ್ಷಸಂಘರ್ಷಪಾರುಷ್ಯಶಿರೋಽಭಿತಾಪಾಃ।
ವಿಶುಷ್ಕಭಾವಾಃ ಶಿಶಿರಾಶ್ರುತಾ ಚ ವಾತಾಭಿಪನ್ನೇ ನಯನೇ ಭವನ್ತಿ ॥೬॥
ದಾಹಪ್ರಪಾಕೌ ಶಿಶಿರಾಭಿನನ್ದಾ ಧೂಮಾಯನಂ ಬಾಷ್ಪಸಮುಚ್ಛ್ರಯಶ್ಚ ।
ಉಷ್ಣಾಶ್ರುತಾ ಪೀತಕನೇತ್ರತಾ ಚ ಪಿತ್ತಾಭಿಪನ್ನೇ ನಯನೇ ಭವನ್ತಿ ॥೭॥
ಉಷ್ಣಾಭಿನನ್ದಾ ಗುರುತಾಕ್ಷಿಶೋಫಃ (ಫಃ) ಕಣ್ಡೂಪ್ರದೇಹೌ ಸಿತತಾತಿಶೈತ್ಯಮ್ ।
ಸ್ರಾವೋ ಮೃದುಃ ಪಿಚ್ಛಿಲ ಏವ ಚಾಪಿ ಕಫಾಭಿಪನ್ನೇ ನಯನೇ ಭವನ್ತಿ ॥೮॥
ತಾಮ್ರಾಶ್ರುತಾ ಲೋಹಿತನೇತ್ರತಾ ಚ ರಾಜ್ಯಃ ಸಮನ್ತಾದತಿ ಲೋಹಿತಾಶ್ಚ ।
ಪಿತ್ತಸ್ಯ ಲಿಙ್ಗಾನಿ ಚ ಯಾನಿ ತಾನಿ ರಕ್ತಾಭಿಪನ್ನೇ ನಯನೇ ಭವನ್ತಿ ॥೯॥
ವೃದ್ಧೈರೇತೈರಭಿಷ್ಯನ್ದೈರ್ನರಾಣಾಮಕ್ರಿಯಾವತಾಮ್ ।
ತಾವನ್ತಸ್ತ್ವಧಿಮನ್ಥಾಃ ಸ್ಯುರ್ನಯನೇ ತೀವ್ರವೇದನಾಃ ॥೧೦॥

ವಾತದುಷ್ಟವಾದ ನೇತ್ರಾಭಿಷ್ಯಂದದಲ್ಲಿ ಕಣ್ಣುಗಳು ಚುಚ್ಚುತ್ತವೆ ; ಬಿಗಿದು ಹಿಡಿದುಕೊಂಡಿರುತ್ತವೆ ; ಮೈರೋಮಗಳೆದ್ದು ನಿಲ್ಲುತ್ತವೆ ; ಕಣ್ಣಿನಲ್ಲಿ ಕರಕರವೆಂದು ಉಜ್ಜಿದಂತೆ ನೋವು ತರುತ್ತದೆ ; ಒರಟಾಗುತ್ತದೆ ; ತಲೆಯಲ್ಲಿ ಉರಿಯುವಂತೆ ವ್ಯಥೆಯುಂಟಾಗುತ್ತದೆ ; ಒಣಗುತ್ತದೆ ; ಕಣ್ಣಿಗೆ ನೀರು ಸೋರುತ್ತದೆ ; ಪಿತ್ತಾಭಿಷ್ಯಂದದಲ್ಲಿ ಕಣ್ಣುರಿತ, ಹುಣ್ಣಾಗುವುದು. ತಣ್ಣಗಿರುವಸೇಚನೆ ಲೇಪನದ್ರವ್ಯಗಳಲ್ಲಿ ಪ್ರೀತಿಯುಂಟಾಗುವುದು ; ಕಣ್ಣಿನಿಂದ ಹೊಗೆ ಹೊರಟು ಬರುವಂತೆ ಕಾಣುವುದು. ಹೆಚ್ಚಾಗಿ ಬಿಸಿಯಾದ ಕಣ್ಣೀರು ಸೋರುವುದೂ ಕಣ್ಣು ಹಳದಿಯಾಗುವುದೂ ಈ ಲಕ್ಷಣಗಳಿರುತ್ತವೆ ; ಕಫಾಭಿಷ್ಯಂದದಲ್ಲಿ ಬಿಸಿಯಾದ ಸೇಕಲೇಪಗಳಲ್ಲಿ ಪ್ರೀತಿಯೂ, ಕಣ್ಣುಭಾರ, ಊದು ನವೆಯುಂಟಾಗುತ್ತವೆ. ರೆಪ್ಪೆಗಳಲ್ಲಿ ಜಿಬರು ಮೆತ್ತಿ ಕಣ್ಣುಗುಡ್ಡೆಗಳು ಮುಚ್ಚಿರುತ್ತವೆ ; ಪದೇ ಪದೇ ಜಿಬರುಮಿಶ್ರವಾಗಿ ಕಣ್ಣೀರು ಸೋರುತ್ತದೆ ; ರಕ್ತಾಭಿಷ್ಯಂದದಲ್ಲಿ ತಾಮ್ರವರ್ಣದ ಕಣ್ಣೀರು ಸೋರುತ್ತದೆ. ಕಣ್ಣು ರಕ್ತದಂತೆ ಕೆಂಪಾಗಿ ಇರುತ್ತದೆ, ಕಣ್ಣುಗುಡ್ಡೆಗಳ ಮೇಲೆ ಕೆಂಪಾದ ಮಾಂಸದ ರೇಖೆಗಳು ಮುಚ್ಚಿಕೊಂಡು ಪಿತ್ತಾಭಿಷ್ಯಂದ ಲಕ್ಷಣಗಳೇ ಕಾಣಿಸುತ್ತವೆ ; ಈ ಲಕ್ಷಣಗಳು ಅಧಿಕವಾಗಿದ್ದಾಗಲೂ ಉದಾಸೀನತೆಯಿಂದ ಚಿಕಿತ್ಸೆಮಾಡದಿದ್ದರೆ ಅತಿ ತೀವ್ರವೇದನೆಯನ್ನುಂಟುಮಾಡುವ ಆಯಾಯ ರೋಗಭೇದದ ಅಧಿಮಂಥಗಳು ಕಣ್ಣಿನಲ್ಲಿ ಉಂಟಾಗುತ್ತವೆ.

ಉತ್ಪಾಟ್ಯತ ಇವಾತ್ಯರ್ಥಂ ನೇತ್ರಂ ನಿರ್ಮಥ್ಯತೇ ತಥಾ ।
ಶಿರಸೋಽರ್ಧಂ ತು ತಂ ವಿದ್ಯಾದಧಿಮನ್ಥಂ ಸ್ವ ಲಕ್ಷಣೈಃ ॥೧೧॥

ಕಣ್ಣುಗುಡ್ಡೆಯು ಕಿತ್ತುಹಾಕಿದಂತೆಯೂ, ತಲೆಯ ಅರ್ಧಭಾಗದಲ್ಲಿ ಕಡಗೋಲಿನಿಂದ ಕಡೆದಂತೆಯೂ ವ್ಯಥೆಯುಂಟಾದರೆ ಅಧಿಮಂಥನೆಂದು ತಿಳಿಯಬೇಕು. ಈ ಲಕ್ಷಣಗಳು ಎಲ್ಲಾ ವಿಧದ ಅಧಿಮಂಥಗಳಲ್ಲೂ ಕಾಣುತ್ತವೆಯಾದರೂ ಹಿಂದೆ ಹೇಳಿದ ಅಭಿಷ್ಯಂದದೋಷ ಲಕ್ಷಣಗಳಿಂದ ಆಯಾಯ ವಿಧದ ಅಭಿಷ್ಯಂದಗಳನ್ನು ಗೊತ್ತುಮಾಡಬೇಕು.

ನೇತ್ರಮುತ್ಪಾಟ್ಯತ ಇವ ಮಥ್ಯತೇಽರಣಿವಚ್ಚ ಯತ್ ।
ಸಂಘರ್ಷತೋದನಿರ್ಭೇದಮಾಂಸಸಂರಬ್ಧಮಾವಿಲಮ್ ॥೧೨॥
ಕುಞ್ಚನಾ ಸ್ಫೋಟನಾಧ್ಮಾನವೇಪಥುವ್ಯಥನೈರ್ಯುತಮ್ ।
ಶಿರಸೋಽರ್ಧಂ ಚ ಯೇನ ಸ್ಯಾದಧಿಮನ್ಥಃ ಸಮಾರುತಾತ್ ॥೧೩॥

ವಾತಪ್ರಕೋಪದಿಂದುಂಟಾದ ಅಧಿಮಂಥರೋಗದಲ್ಲಿ ಕಣ್ಣುಗುಡ್ಡೆಗಳು ಕಿತ್ತಂತೆಯೂ, ಯಜ್ಞದಲ್ಲಿ ಅಗ್ನಿಯನ್ನುಂಟುಮಾಡಲು ಅರಣಿಯನ್ನು (ಕಡೆಯುವ ಮರಗಳು) ಕಡೆಯುವಂತೆಯೂ, ಉಜ್ಜುವುದು, ಇರಿಯುವುದು, ಶೀಳುವುದು ಇತ್ಯಾದಿ ವಿಧದ ನೋವುಗಳುಂಟಾಗುವುದೂ, ಮಾಂಸವೃದ್ಧಿಯಾಗುವುದೂ, ಕೊಳೆಯಿಂದ ಮೆತ್ತಿರುವುದೂ

ತಲೆಯ ಅರ್ಧಭಾಗವು ಸೆಳೆದುಕೊಂಡಂತೆಯೂ, ಒಡೆದುಹೋದಂತೆಯೂ ವಾಯುವಿನಿಂದ ತುಂಬಿ ಉಬ್ಬಿದಂತೆಯೂ ನಡುಗುತ್ತಲೂ ನೋಯುತ್ತಲೂ ಇರುತ್ತದೆ.

ರಕ್ತರಾಜಿಚಿತಂ ಸ್ರಾವಿವಹ್ನಿನೈವಾವದಹ್ಯತೇ ।
ಯಕೃತ್ಪಿಣ್ಡೋಪಮಂ ದಾಹಿ ಕ್ಷಾರೇಣಾಕ್ತಮಿವ ಕ್ಷತಮ್ ॥೧೪॥
ಪ್ರಪಕ್ವೋಚ್ಛೂನವರ್ತ್ಮಾನ್ತಂ ಸಸ್ವೇದಂ ಪೀತದರ್ಶನಮ್ ।
ಮೂರ್ಛಾ ಶಿರೋದಾಹಯುತಂ ಪಿತ್ತೇನಾಕ್ಷ್ಯಧಿಮನ್ಥಿತಮ್ ॥೧೫॥

ಪಿತ್ತಾಧಿಮಂಥದಲ್ಲಿ ಕಣ್ಣುಗಳು ಕೆಂಪು ರೇಖೆಗಳಿಂದ ತುಂಬಿರುತ್ತವೆ. ನೀರು ಸುರಿಯುತ್ತಲೂ ಬೆಂಕಿಯಿಂದ ಸುಟ್ಟಂತೆಯೂ ಯಕೃತ್ತಿನ ಬಣ್ಣದಂತೆ ಕಪ್ಪುಕೆಂಪು ಮಿಶ್ರಿತವಾದ ಬಣ್ಣವುಳ್ಳದಾಗಿ ಉರಿಯಿಂದಲೂ ಘಾಯದ ಮೇಲೆ ಕ್ಷಾರವನ್ನು ತುಂಬಿದಂತೆ ವ್ಯಥೆಯಿಂದಲೂ ಕೂಡಿ ಪೂರ್ಣಪಕ್ವವಾಗಿ ಉಬ್ಬಿಯೂ, ಬೆವರುತ್ತಲೂ ಇರುವ ರೆಪ್ಪೆಗಳ ತುದಿಯುಳ್ಳದಾಗಿಯೂ, ಎಲ್ಲಾ ವಸ್ತುಗಳೂ ಹಳದಿಯಾಗಿ ಕಾಣಿಸುತ್ತಾ ಮೂರ್ಛೆ, ತಲೆಯುರಿತದಿಂದಲೂ ಕೂಡಿಯೂ ಇರುತ್ತದೆ.

ಶೋಫವನ್ನಾತಿಸಂರಬ್ಧಂ ಸ್ರಾವಕಣ್ಡೂಸಮನ್ವಿತಮ್ ।
ಶೈತ್ಯಗೌರವಪೈಚ್ಛಿಲ್ಯದೂಷಿಕಾಹರ್ಷಣಾನ್ವಿತಮ್ ॥೧೬॥
ರೂಪಂ ಪಶ್ಯತಿ ದುಃಖೇನ ಪಾಂಶು ಪೂರ್ಣಮಿವಾವಿಲಮ್ ।
ನಾಸಾಧ್ಮಾನಶಿರೋದುಃಖಯುತಂ ಶ್ಲೇಷ್ಮಾಧಿಮನ್ಥಿತಮ್ ॥೧೭॥

ಕಫಾಧಿಮಂಥದಲ್ಲಿ ಕಣ್ಣುಗಳು ಊದಿ ಮರಳುತುಂಬಿ ಚುಚ್ಚುವಂತೆ ನೋವುಂಟಾಗಿ ನೀರುಸುರಿಯುತ್ತಲೂ ನವೆಯುಳ್ಳದಾಗಿಯೂ ತಣ್ಣಗೂ ಭಾರವಾಗಿಯೂ, ಜಿಬರಿದಿಂದ ಪಿಚುಗುಟ್ಟುತ್ತ ಮೈ ಜುಂ ಎಂದು ರೋಮಾಂಚನವಾಗುತ್ತಾ ಬಲುಕಷ್ಟದಿಂದದಿಂದ ಪದಾರ್ಥಗಳನ್ನು ನೋಡಬೇಕಾಗುತ್ತದೆ. ಮೂಗಿನ ಹೊಳ್ಳೆಗಳು ಉಬ್ಬಿರುತ್ತವೆ, ತಲೆನೋವಿರುತ್ತದೆ.

ಬನ್ಧುಜೀವ ಪ್ರತೀಕಾಶಂ ತಾಮ್ಯತಿ ಸ್ಪರ್ಶನಾಕ್ಷಮಮ್ ।
ರಕ್ತಾಸ್ರಾವಂ ಸ ನಿಸ್ತೋದಂ ಪಶ್ಯತ್ಯಗ್ನಿನಿಭಾ ದಿಶಃ ॥೧೮॥
ರಕ್ತಮಗ್ನಾರಿಷ್ಟವಚ್ಚ ಕೃಷ್ಣಭಾಗಶ್ಚ ಲಕ್ಷ್ಯತೇ ।
ಯದ್ದೀಪ್ತಂ ರಕ್ತಪರ್ಯನ್ತಂ ತದ್ರಕ್ತೇನಾಭಿಮನ್ಥಿತಮ್ ॥೧೯॥

ರಕ್ತಾಧಿಮಂಥದಲ್ಲಿ ಕಣ್ಣುಗಳು ನೀರುಬಾಳೆಹೂವಿನಂತೆ ಕೆಂಪಾಗಿಯೂ, ಬಳಲುತ್ತಲೂ ಕೈಯ್ಯಿನಿಂದ ಮುಟ್ಟುಗೊಡಿಸದೆಯೂ, ರಕ್ತವರ್ಣದ ನೀರನ್ನು ಸೋರಿಸುತ್ತಲೂ ಚುಚ್ಚುತ್ತಲೂ ದಿಕ್ಕುಗಳು ಬೆಂಕಿಯಕೆಂಡದಂತೆ ಕಾಣುತ್ತಲೂ, ಕರಿಯಗುಡ್ಡೆಯು ರಕ್ತದಲ್ಲಿ ಅದ್ದಿದ ಅಂಟುವಾಳದಕಾಯಿನಂತೆ ಕಾಣಿಸುತ್ತಲೂ, ಕಣ್ಣಿನ ರೆಪ್ಪೆಗಳ ತುದಿಯು ಕೆಂಪಾಗಿಯೂ ಇರುತ್ತವೆ.

ಹನ್ಯಾದ್ದೃಷ್ಟಿಂ ಸಪ್ತರಾತ್ರಾತ್ಕಫೋತ್ಥೋಽಧೀಮನ್ಥೋಽಸೃಕ್ ಸಮ್ಭವಃ ಪಂಚ ರಾತ್ರಾತ್ ।

ಷಡ್ರಾತ್ರಾದ್ವಾ ಮಾರುತೋತ್ಥೋ ನಿಹನ್ಯಾತ್ ಮಿಥ್ಯಾಚಾರಾತ್ ಪೈತ್ತಿಕಃ ಸದ್ಯ ಏವ ॥೨೦॥

ಅಧಿಮಂಥವು ಕಫದಿಂದುತ್ಪನ್ನವಾದರೆ ೭ ದಿನಗಳೊಳಗೂ, ರಕ್ತಜನ್ಯ ■ ದಿನಗಳಲ್ಲೂ, ವಾತದೋಷೋಚ್ಛ್ರಾಯದಿಂದ ೬ ದಿವಸಗಳಲ್ಲೂ ಪಿತ್ತಜನ್ಯವಾಗಿದ್ದು ರೋಗಿಯು ಮಿಥ್ಯಾಚಾರವನ್ನು ಮಾಡಿದರೆ ಸದ್ಯದಲ್ಲೇ ಕಣ್ಣು ಕುರುಡಾಗುತ್ತದೆ. ಇವನ್ನು ವ್ಯಾಧಿಲಕ್ಷಣಗಳಿಂದಲೇ ತಿಳಿದುಕೊಳ್ಳಬೇಕು.

ಕಣ್ಡೂಪದೇಹಾಶ್ರುಯುತಃ ಪಕ್ವೋದುಮ್ಬರಸನ್ನಿಭಃ ।
ದಾಹಸಂಹರ್ಷತಾಮ್ರತ್ವ ಶೋಫನಿಸ್ತೋದ ಗೌರವೈಃ ॥೨೧॥
ಜುಷ್ಟೋ ಮುಹುಃ ಸ್ರವೇದ್ವಾಸ್ರಮುಷ್ಣಶೀತಾಮ್ಬು ಪಿಚ್ಛಿಲಮ್ ।
ಸಂರಮ್ಭಿ ಪಚ್ಯತೇ ಯಶ್ಚ ನೇತ್ರಪಾಕಃ ಸಶೋಫಜಃ ॥೨೨॥
ಶೋಫಹೀನಾನಿ ಲಿಂಗಾನಿ ನೇತ್ರಪಾಕೇತ್ವಶೋಫಜೇ ।

ಸಶೋಫನೇತ್ರಪಾಕದಲ್ಲಿ ಕಣ್ಣುಗಳಲ್ಲಿ ನವೆ, ಜಿಬಿರು ಮೆತ್ತಿರುವುದು, ಕಣ್ಣೀರು ಸೋರುವುದು, ಅತ್ತಿಯಹಣ್ಣಿನ ಗಾತ್ರವುಳ್ಳದಾಗಿ, ಉರಿತ, ಶೋಫ, ತಾಮ್ರದಬಣ್ಣ, ಚುಚ್ಚುವಿಕೆ, ಭಾರ-ಇವುಗಳಿಂದ ಕೂಡಿ ಪದೇಪದೇ ಬಿಸಿಯಾಗಿಯೂ ತಣ್ಣಗೂ ಇರುವ ನೀರನ್ನು ಗರಣೆಗರಣೆಯಾಗಿ ಸುರಿಸುತ್ತದೆ ; ಮರಳು ಸೇರಿ ಉಜ್ಜಿದಂತೆ ನೋವೂ ಪಾಕವೂ ಇರುತ್ತದೆ ; ಇದಕ್ಕೆ ಬದಲಾಗಿ ಶೋಫವಿಲ್ಲದೆ ಬಾಕಿ ಲಕ್ಷಣಗಳಿದ್ದರೆ ಅಶೋಫ ನೇತ್ರಪಾಕವೆಂದು ತಿಳಿಯಬೇಕು ; ಈ ಎರಡುವಿಧ ನೇತ್ರಪಾಕಗಳೂ ತ್ರಿದೋಷಗಳ ಪ್ರಕೋಪದಿಂದ ಉಂಟಾದರೂ ಚಿಕಿತ್ಸೆಮಾಡಿದರೆ ಸಾಧ್ಯವಾಗುತ್ತವೆ.

ಉಪೇಕ್ಷಣಾದಕ್ಷಿ ಯದಾಧಿಮನ್ಥೋ ವಾತಾತ್ಮಕಃ ಶೋಷಯತಿ ಪ್ರಸಹ್ಯ ।
ರುಜಾಭಿರುಗ್ರಾಭಿರಸಾಧ್ಯ ಏವ ಹತಾಧಿಮನ್ಥೋ ಗದಿತೋ ಗದೋ ಹಿ ॥೨೩॥
ಅನ್ತಃ ಸಿರಾಣಾಂ ಶ್ವಸನಃ ಸ್ಥಿತೋ ದೃಷ್ಟಿಂ ಪ್ರತಿಕ್ಷಿಪನ್ ।
ಹತಾದಿಮನ್ಥಂ ಜನಯೇತ್ ತಮಸಾಧ್ಯಂ ವಿದುರ್ಬುಧಾಃ ॥೨೪॥

ವಾತಾಧಿಮಂಥವನ್ನು ಚಿಕಿತ್ಸೆಮಾಡದೆ ಉಪೇಕ್ಷೆಮಾಡಿದರೆ ಪ್ರಕುಪಿತವಾತವು ನೇತ್ರಾಶ್ರಿತಸಿರೆಗಳಲ್ಲೆಲ್ಲಾ ನುಗ್ಗಿ ಬಲಾತ್ಕಾರದಿಂದ ನೇತ್ರಗೋಳವನ್ನೇ ಬತ್ತಿಸುತ್ತದೆ ಅತಿಯಾಗಿ ನೋಯುತ್ತದೆ ; ಇದಕ್ಕೆ ಹತಾಧಿಮಂಥವೆಂದು ಹೆಸರು ; ಇದು ಅಸಾಧ್ಯವಾದದ್ದು ; ಕಣ್ಣಿನಲ್ಲಿರುವ ಸಿರೆಗಳಲ್ಲಿ ವಾತವು ಪ್ರಕೋಪವಾಗಿ ಅಕ್ಷಿಗೋಳವನ್ನೇ ಹೊರಕ್ಕೆ ಕಿತ್ತೊಗೆದುಬಿಡುತ್ತದೆ, ಇದಕ್ಕೂ ಹತಾಧಿಮಂಥವೆಂದು ಹೆಸರು ; ಇದೂ ಅಸಾಧ್ಯವಾದದ್ದು.

ಟಿಪ್ಪಣಿ—ಈ ಹತಾಧಿಮಂಥವು ನಯನಶೋಷಲಕ್ಷಣ ದೃಷ್ಟಿನಿರ್ಗಮಲಕ್ಷಣ ಭೇದದಿಂದ ಎರಡು ವಿಧಗಳಾದರೂ ದೃಷ್ಟಿನಾಶಲಕ್ಷಣಸಾಮಾನ್ಯದಿಂದ ಒಂದೇ ವಿಧ

ವೆಂದು ಪರಿಗಣಿಸಬೇಕು ; ವಿದೇಹನಮತದಲ್ಲಿ—ಕಣ್ಣಿನೊಳಗಿರುವ ಸಿರೆಗಳಲ್ಲಿ ಪ್ರಕುಪಿತವಾದ ವಾತವು ಸೇರಿ ಕಡೆಗೋಲಿನಿಂದ ಕಡೆದಂತೆ ನೋವನ್ನುಂಟುಮಾಡಿ ದೃಷ್ಟಿಗೋಳವನ್ನೇ ಕಿತ್ತುಹೊರಡಿಸುತ್ತದೆ ; ಶೂಲ ತೋದ ಅಧಿಮಂಥಗಳಿರುತ್ತವೆ ; ಅಥವಾ ಬಿಸಿಲಿನ ತಾಪದಿಂದ ತಾವರೆಯ ಹೂವು ಒಣಗಿ ಹೋಗುವಂತೆಯೇ ವಾತಪ್ರಕೋಪದಿಂದ ಅಕ್ಷಿಗೋಳವು ಬತ್ತಿಹೋಗುತ್ತದೆ. ಇವೆರಡು ವಿಧಗಳಿಗೂ ಹತಾಧಿಮಂಥವೆಂದೇ ಹೆಸರು.

ಪಕ್ಷ್ಮದ್ವಯಾಕ್ಷಿಭ್ರುವಮ್ಪ್ರಾತಸ್ತು ಯತ್ರಾನಿಲಃ ಸಂಚರತಿ ಪ್ರದುಷ್ಟಃ
ಪರ್ಯಾಯಶಶ್ಚಾಪಿ ರುಜಃ ಕರೋತಿ ತಂ ವಾತಪರ್ಯಾಯ ಮುದಾಹರನ್ತಿ ||೨೫||

ಪ್ರಕುಪಿತವಾತವು ರೆಪ್ಪೆಗಳಕೂದಲಮಂಡಲ ಕಣ್ಣುಗುಡ್ಡೆ ಹುಬ್ಬು ಇವುಗಳನ್ನು ಆಶ್ರಯಿಸಿ ಕೆಲವುವೇಳೆ ರೆಪ್ಪೆಕೂದಲಲ್ಲೂ-ಕಣ್ಣುಗುಡ್ಡೆಯಲ್ಲೂ-ಹುಬ್ಬುಗಳಲ್ಲೂ ಪರ್ಯಾಯ ರೀತಿಯಲ್ಲಿ (ಒಂದೊಂದನ್ನಾಗಿ) ನೋವನ್ನುಂಟುಮಾಡಿದರೆ ವಾತಪರ್ಯಾಯವೆಂದು ಹೆಸರು ; ಇದನ್ನು ಚಿಕಿತ್ಸೆಮಾಡಿ ಗುಣಮಾಡಬಹುದು.

ಯತ್ ಕೂಣಿತಂ ದಾರುಣರೂಕ್ಷವರ್ತ್ಮ ವಿಲೋಕನೇ ಚಾವಿಲ ದರ್ಶನಂ ಯತ್
ಸುದಾರುಣಂ ಯತ್ಪ್ರತಿಬೋಧನೇ ಚ ಶುಷ್ಕಾಕ್ಷಿಪಾಕೋಪಹತಂ ತದಕ್ಷಿ ||೨೬||

ಕಣ್ಣುಮುಚ್ಚಿಕೊಂಡಾಗ ರೆಪ್ಪೆಗಳು ಕಠಿನವಾಗಿಯೂ ರೂಕ್ಷವಾಗಿಯೂ ಪದಾರ್ಥಗಳನ್ನು ಅತಿಯಾಗಿ ನೋಡಿದರೆ ಅತಿಯಾಗಿ ನೋವುಂಟಾಗುವುದೂ, ಕಣ್ಣು ತೆರೆದಾಗ ಅತಿ ಕಠಿನವಾಗುವುದೂ (ಕಣ್ಣುಗಳನ್ನು ತೆರೆಯುವುದು ಕಷ್ಟವಾಗುತ್ತದೆ) ಈ ಲಕ್ಷಣಗಳಿರುವ ಕಣ್ಣಿನರೋಗಕ್ಕೆ **ಶುಷ್ಕಾಕ್ಷಿಪಾಕ**ವೆಂಬ ಹೆಸರು. ಇದು ಸ್ವಲ್ಪ ರಕ್ತಮಿಶ್ರಿತವಾತದಿಂದುಂಟಾದಕಾರಣ ಸಾಧ್ಯವಾಗುತ್ತದೆ.

ಯಸ್ಯಾವಟೂಕರ್ಣಶಿರೋಹನುಸ್ಥೋ ಮನ್ಯಾಗತೋ ವಾಪ್ಯ ನಿಲೋಽನ್ಯತೋ ವಾ
ಕುರ್ಯಾದ್ರುಜೋಽತಿಭ್ರುವಿ ಲೋಚನೇ ವಾ ತಮನ್ಯತೋ ವಾ ತಮುದಾಹರನ್ತಿ ||೨೭||

ಹೆಕ್ಕತ್ತು–ಕಿವಿ–ತಲೆ–ದವಡೆ–ಕತ್ತಿನಪಕ್ಕದ ಸಿರೆ ಇವುಗಳಲ್ಲಿ ಪ್ರಕುಪಿತವಾದ ವಾತವು ಹುಬ್ಬು–ಕಣ್ಣು–ಬೆನ್ನು ಮೊದಲಾದ ಶರೀರಭಾಗಗಳಲ್ಲಿ ನೋವನ್ನುಂಟುಮಾಡಿದರೆ ಅನ್ಯತೋವಾತವೆಂದು ಹೆಸರು ; ಈ ರೋಗವು ಸಾಧ್ಯವಾಗುತ್ತದೆ.

ಅಮ್ಲೇನ ಭುಕ್ತೇನ ವಿದಾಹಿನಾ ವಾ ಸಞ್ಛಾದ್ಯತೇ ಸರ್ವತ ಏವ ನೇತ್ರಮ್
ಶೋಫಾನ್ವಿತಾ ಲೋಹಿತಕಂ ಸನೀಲೈರೇತಾದೃಗಮ್ಲಾಧ್ಯುಷಿತಂ ವದನ್ತಿ ||೨೮||

ಹುಳಿಪದಾರ್ಥ–ಖಾರ_ಲವಣ ಮೊದಲಾದ ವಿದಾಹಕರಪದಾರ್ಥಗಳನ್ನು ಭೋಜನ ಮಾಡಿದರೆ ಕಣ್ಣುಗುಡ್ಡೆಗಳು ಊದಿ ಕೆಂಪು, ಸ್ವಲ್ಪ ನೀಲಬಣ್ಣ ಮಿಶ್ರವಾದ ಮಾಂಸರೇಖೆಗಳಿಂದ ಮುಚ್ಚಲ್ಪಟ್ಟದ್ದರೆ ಅಮ್ಲಾಧ್ಯುಷಿತ ದೃಷ್ಟಿ ಎನ್ನುತ್ತಾರೆ—ಇದು ಪಿತ್ತದೋಷಜನಿತವಾದದ್ದು, ಚಿಕಿತ್ಸೆಮಾಡಿದರೆ ಸಾಧ್ಯವಾಗುತ್ತದೆ.

ಅವೇದನಾ ವಾಪಿ ಸವೇದನಾ ವಾ ಯಸ್ಯಾಕ್ಷಿರಾಜ್ಯೋ ಹಿ ಭವನ್ತಿ ತಾಮ್ರಾಃ
ಮುಹುರ್ವಿರಜ್ಯನ್ತಿ ಚ ತಾಃ ಸಮನ್ತಾತ್ ವ್ಯಾಧಿಃ ಸಿರೋತ್ಪಾತ ಇತಿ ಪ್ರದಿಷ್ಟಃ ||೨೯||
ಮೋಹಾತ್ ಸಿರೋತ್ಪಾತ ಉಪೇಕ್ಷಿತಸ್ತು ಜಾಯೇತ ರೋಗಸ್ತು ಸಿರಾಪ್ರಹರ್ಷಃ
ತಾಮ್ರಾಭಮಸ್ರಂ ಸ್ರವತಿ ಪ್ರಗಾಢಂ ತಥಾ ನಶಕ್ನೋತ್ಯಭಿವೀಕ್ಷಿತುಂ ಚ ||೩೦||

ಯಾರಿಗೆ ಕಣ್ಣುಗುಡ್ಡೆಯಮೇಲೆ ಗೆರೆಗಳುಂಟಾಗಿ ನೋವಿರಲಿ ಅಥವಾ ನೋವಿಲ್ಲದಿರಲಿ ತಾಮ್ರವರ್ಣವುಳ್ಳವಾಗಿ ಕಣ್ಣಿನಸುತ್ತಲೂ ಕೆಂಪಾಗಿಬಿಟ್ಟರೆ ಸಿರೋತ್ಪಾತವೆಂದು ಹೆಸರು. ಇದು ರಕ್ತದೋಷದಿಂದುಂಟಾಗುತ್ತದೆ. ಚಿಕಿತ್ಸೆಮಾಡಿದರೆ ಸಾಧ್ಯವಾಗುತ್ತದೆ. ಅವಿವೇಕದಿಂದ ಈ ಸಿರೋತ್ಪಾತರೋಗಕ್ಕೆ ಚಿಕಿತ್ಸೆಮಾಡದೆ ಉಪೇಕ್ಷೆ ಮಾಡಿದರೆ ಸಿರಾಪ್ರಹರ್ಷರೋಗವಾಗಿ ಪರಿಣಮಿಸಿ ಅತಿಯಾಗಿ ತಾಮ್ರ ಬಣ್ಣದ ಕಣ್ಣೀರು ಸೋರುತ್ತದೆ. ಕಣ್ಣುಗಳನ್ನು ತೆರೆದು ಪದಾರ್ಥಗಳನ್ನು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ; ರಕ್ತದಿಂದುಂಟಾಗುವ ಈ ರೋಗವು ಸಾಧ್ಯವು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ
ಸರ್ವಗತನೇತ್ರರೋಗವಿಜ್ಞಾನನಾಮಕ ಷಷ್ಠಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ
ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ನಾಟಕಭಾಷಾವಿವೃತಿಃ

ಸಪ್ತಮೋಽಧ್ಯಾಯಃ

ಅಥಾತೋ ದೃಷ್ಟಿಗತರೋಗವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ ಸುಶ್ರುತಾಯ ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಸರ್ವಾಕ್ಷಿಗತರೋಗವಿವರಣೆಯಾದನಂತರ ಉಳಿದಿರುವ ದೃಷ್ಟಿಭಾಗದಲ್ಲುಂಟಾಗುವ ರೋಗಗಳನ್ನು ವಿವರಿಸುತ್ತೇವೆ.

ಮಸೂರದಲಮಾತ್ರಾಂ ತು ಪಞ್ಚಭೂತಪ್ರಸಾದಜಾಮ್
ಖದ್ಯೋತವಿಸ್ಫುಲಿಙ್ಗಾಭಾಂ ಸಿದ್ಧಾಂ ತೇಜೋಭಿರವ್ಯಯೈಃ ||೩||
ಆವೃತಾಂ ಪಟಲೇನಾಕ್ಷ್ಣೋರ್ಬಾಹ್ಯೇನ ವಿವರಾಕೃತಿಮ್
ಶೀತಸಾತ್ಮ್ಯಾಂ ನೃಣಾಂ ದೃಷ್ಟಿಮಾಹುರ್ನಯನಚಿನ್ತಕಾಃ ||೪||
ರೋಗಾಂಸ್ತದಾಶ್ರಯಾನ್ ಘೋರಾನ್ ಷಟ್ಚ ಷಟ್ಚ ಪ್ರಚಕ್ಷ್ಮಹೇ
ಪಟಲಾನುಪ್ರವಿಷ್ಟಸ್ಯ ತಿಮಿರಸ್ಯ ಚ ಲಕ್ಷಣಮ್ ||೫||

ನೇತ್ರರೋಗನಿವಾರಣೆಯ ಜ್ಞಾನದಲ್ಲಿ ಕುಶಲರಾದ ನಿಮಿ ಮೊದಲಾದ ವೈದ್ಯಶ್ರೇಷ್ಠರು ದೃಷ್ಟಿಮಂಡಲವು ಸಾರಂಗಿಬೇಳೆಯಷ್ಟು ಅಗಲವುಳ್ಳುದಾಗಿ ಪಂಚಭೂತಗಳ ಸಾರಭೂತವಾಗಿ ಮುಖ್ಯವಾಗಿ ತೇಜೋಭೂತವೇ ಅಧಿಕಪ್ರಮಾಣದಿಂದ ಕೂಡಿ ಮಿಣುಕುಹುಳುವಿನಂತೆಯೂ ಅಗ್ನಿಕಣದಂತೆಯೂ ನಾಶವಿಲ್ಲದ ತೇಜಸ್ಸಿನಿಂದ ಕೂಡಿದ್ದಾಗಿಯೂ ಇರುತ್ತೆಂದೂ ಅಭಿಪ್ರಾಯಪಡುತ್ತಾರೆ ; ತೇಜಸ್ಸು ಜಲಗಳಿಂದ ತಯಾರಿಸಿರುವ ನೇತ್ರದ ಹೊರಪಟಲವು ಈ ದೃಷ್ಟಿಮಂಡಲವನ್ನು ಮುಚ್ಚಿಕೊಂಡಿರುತ್ತದೆ. ಮಿಣುಕುಹುಳು ಮತ್ತು ಸೂಕ್ಷ್ಮಾಗ್ನಿಕಣಗಳಂತೆಯೇ ದೃಷ್ಟಿಮಂಡಲವೂ ಸುಡುವುದಿಲ್ಲ. ಸೂರ್ಯಕಿರಣಗಳಿಂದ ರೂಪಗ್ರಹಣ ಮಾಡದೆಯೂ ಹೆಚ್ಚು ಕಡಿಮೆಯಾಗದೆಯೂ ತೇಜೋಜಲಮಯವಾದ ಬಾಹ್ಯಪಟಲದಿಂದ ಮುಚ್ಚಲ್ಪಟ್ಟಿರುವ ಕಾರಣ ಹೊಳೆಯದಿದ್ದರೂ ಅತ್ಯಂತ ತೆಳುವಾದ ರೋಮಕೂಪಗಳುಳ್ಳ ನಾಲ್ಕುಪಟಲಗಳಿಂದ ಮುಚ್ಚಲ್ಪಟ್ಟಿದ್ದರೂ ಅದರ ರೂಪಗ್ರಹಣಶಕ್ತಿಯು ಕಡಮೆಯಾಗುವುದಿಲ್ಲ. ದೃಷ್ಟಿಮಂಡಲವು ರಂಧ್ರವುಳ್ಳುದಾಗಿ ಕಾಣುತ್ತದೆ. ಅಲ್ಲಿ ರಂಧ್ರವೇ ಇಲ್ಲ ; ಮೃದುವಾಗಿ ರಂಧ್ರವಿರುವಂತೆ ಕಾಣುತ್ತದೆ. ಮನುಷ್ಯರ ದೃಷ್ಟಿ ಮಂಡಲವು ಶೀತಸಾತ್ಮ್ಯವುಳ್ಳುದೆಂದು ಹೇಳುತ್ತಾರೆ. ದೃಷ್ಟಿಮಂಡಲದಲ್ಲುಂಟಾಗುವ ೧೨ ವಿಧಗಳಾದ ಭಯಂಕರ ರೋಗಗಳನ್ನೂ ಪಟಲವನ್ನಾಶ್ರಯಿಸಿದ ತಿಮಿರರೋಗದ ಲಕ್ಷಣವನ್ನೂ ಹೇಳುತ್ತೇವೆ.

ಟಿಪ್ಪಣಿ : ದೃಷ್ಟಿಯನ್ನು ಬಾಹ್ಯಪಟಲವು ಮುಚ್ಚಿಕೊಂಡರೆ ಯಾವುದೂ ಕಾಣಿಸ

ದಂತಾಗಬೇಕಷ್ಟೆ ! ಆದರೆ ತೇಜಸ್ಸು ಜಲಗಳಿಂದುಂಟಾದ ಬಹಿಃಪಟಲವು ಅತ್ಯಂತ ತೆಳು ವಾದ ಕಾರಣ ರೋಮಕೂಪವಿವರಗಳು (ರಂಧ್ರ) ಈ ಪಟಲಗಳಲ್ಲಿ ಅಸಂಖ್ಯಾತಗಳಾಗಿ ರುವುದರಿಂದ ತೇಜಸ್ಸಿನ ಕಣಗಳು ಈ ರೋಮಕೂಪಗಳ ಮೂಲಕ ಮುನ್ನುಗ್ಗುವುದಕ್ಕೆ ಯಾವ ಅಡ್ಡಿಯೂ ಉಂಟಾಗುವುದಿಲ್ಲ ; ಶೀತಸಾತ್ಮ್ಯ-ಶೀತದಿಂದ ತೇಜಸ್ಸಿಗೆ ಹಾನಿ ಯೆಂಬುದು ಪ್ರಸಿದ್ಧವಾದರೂ (ಜಲವೂ ತೇಜಸ್ಸೂ ಬೇರೆ ಇದ್ದಾಗ ಮಾತ್ರ ಒಂದ ಕ್ಕೊಂದು ವಿರೋಧವು) ಎರಡೂ ಒಟ್ಟಿಗೇ ಉತ್ಪನ್ನವಾಗಿ ಒಂದೇ ಕಾರ್ಯವನ್ನು ಮಾಡು ವಾಗ ವಿರೋಧವುಂಟಾಗುವುದಿಲ್ಲವೆಂದರ್ಥವು.

ಸಿರಾಭಿರಭಿಸಂಪ್ರಾಪ್ಯ ವಿಗುಣೋಽಭ್ಯನ್ತರೇಭೃಶಮ್
ಪ್ರಥಮೇ ಪಟಲೇ ದೋಷೋ ಯಸ್ಯ ದೃಷ್ಟೌ ವ್ಯವಸ್ಥಿತಃ ||೬||
ಅವ್ಯಕ್ತಾನಿ ಸ ರೂಪಾಣಿ ಸರ್ವಾಣ್ಯೇವ ಪ್ರಪಶ್ಯತಿ

ಪ್ರಕುಪಿತದೋಷಗಳು ರೂಪವಾಹಿಸಿರೆಗಳನ್ನಾಶ್ರಯಿಸಿ ಎಲ್ಲಕ್ಕೂ ಒಳಗಿರುವ ಕಾಲಕಾಸ್ಥಿತಿಯನ್ನಾಶ್ರಯಿಸಿರುವ ಮೊದಲನೆಯ ಪಟಲವನ್ನು ಸೇರಿದರೆ ಎಲ್ಲಾ ವಸ್ತು ಗಳನ್ನೂ ಅಸ್ಪಷ್ಟವಾಗಿ (ಅವ್ಯಕ್ತವಾಗಿ-ಮೊಬ್ಬುಮೊಬ್ಬಾಗಿ) ಕಾಣುತ್ತಾನೆ ; ಅವನು ನೋಡುವ ಪದಾರ್ಥದ ಮೇಲೆ ತೆಳುವಾದ ಪೊರೆಯು ಮುಸುಗು ಹಾಕಿರುವಂತೆ ತಿಳಿಯು ತ್ತಾನೆ. ದೋಷಗಳಿಗೆ ಅನುಸಾರವಾಗಿ ಕೆಲವುವೇಳೆ ವಸ್ತುಗಳು (ದೋಷ ಇಲ್ಲದಿರು ವಾಗ) ಸ್ಪಷ್ಟವಾಗಿಯೂ ದೋಷಗಳು ಜಮಾಯಿಸಿರುವಾಗ ಮೊಬ್ಬಾಗಿಯೂ ಕಾಣಿಸು ತ್ತವೆ. ಹೀಗೆ ತಿಮಿರವನ್ನುಂಟುಮಾಡುವ ದೋಷಗಳು ಮುಂದುಮುಂದಿನ ಪಟಲಗಳಲ್ಲಿ ಜಮಾವಣೆಯಾದಂತೆಲ್ಲಾ ಪದಾರ್ಥಗಳು ಕಾಣಿಸುವುದೇ ಇಲ್ಲ.

ದೃಷ್ಟಿರ್ಭೃಶಂ ವಿಹ್ವಲತಿ ದ್ವಿತೀಯಂ ಪಟಲಂ ಗತೇ ||೭||
ಮಕ್ಷಿಕಾ ಮಶಕಾನ್ ಕೇಶಾನ್ ಜಾಲಕಾನಿ ಚ ಪಶ್ಯತಿ ।
ಮಣ್ಡಲಾನಿ ಪತಾಕಾಂಶ್ಚ ಮರೀಚೀನ್ ಕುಣ್ಡಲಾನಿ ಚ ||೮||
ಪರಿಪ್ಲವಾಂಶ್ಚ ವಿವಿಧಾನ್ ವರ್ಷಮಭ್ರಂ ತಮಾಂಸಿ ಚ ।
ದೂರಸ್ಥಾನ್ಯಪಿ ರೂಪಾಣಿ ಮನ್ಯತೇ ಸ ಸಮೀಪತಃ ||೯||
ಸಮೀಪಸ್ಥಾನಿ ದೂರೇ ಚ ದೃಷ್ಟೇರ್ಗೋಚರವಿಭ್ರಮಾತ್ ।
ಯತ್ನವಾನಪಿ ಚಾತ್ಯರ್ಥಂ ಸೂಚೀಪಾಶಂ ನ ಪಶ್ಯತಿ ||೧೦||

ಎರಡನೆಯ ಪಟಲದಲ್ಲಿ (ಮೇದಸ್ಸಿನ) ದೋಷಗಳು ಜಮಾವಣೆಯಾದರೆ ಮೊದಲ ನೆಯ ಪಟಲದಲ್ಲಿ ದೋಷವಿದ್ದಾಗ ಕಾಣಿಸುವುದಕ್ಕಿಂತಲೂ ಹೆಚ್ಚು ಅಸ್ಪಷ್ಟವಾಗಿ ಪದಾರ್ಥಗಳು ಕಾಣಿಸುತ್ತವೆ. ತಿಮಿರಾರಂಭಕದೋಷಗಳ ಪ್ರಭಾವದಿಂದ ನೊಣ,- ಸೊಳ್ಳೆ-ಕೂದಲು-ಬಲೆ (ಜಾಡರಹುಳುವಿನ ಬಲೆಯಂತೆ) ಸೂರ್ಯ ಚಂದ್ರರ ಮಂಡಲ ಇವುಗಳು-ಬಾವುಟ-ಬಿಸಿಲುಕುದುರೆ-ನಕ್ಷತ್ರಗಳು ಮಿಣುಗುವಂತೆಯೂ ಕಿವಿಯ ಕುಂಡ ಲುಗಳು, ಮಳೆಯು ಸುರಿಯುವಂತೆಯೂ, ಮೋಡ ಕವಿದಂತೆಯೂ ಕತ್ತಲು ಕವಿ

ದಂತೆಯೂ ಕಾಣಿಸುತ್ತವೆ. ಇಲ್ಲದಿರುವ ವಸ್ತುಗಳನ್ನೇ ಮೇಲ್ಕಂಡ ಆಕಾರಗಳಿಂದ ಕಾಣುತ್ತಾನೆ ; ದೂರದಲ್ಲಿರುವುದನ್ನು ಹತ್ತಿರದಲ್ಲಿರುವಂತೆಯೂ ಹತ್ತಿರವಿರುವುದನ್ನು ದೂರದಲ್ಲಿರುವಂತೆಯೂ ಕಾಣುತ್ತಾನೆ. ಅತಿ ಪ್ರಯತ್ನಪಟ್ಟರೂ ಸೂಜಿಯರಂಧ್ರವು ಕಾಣಿಸುವುದೇ ಇಲ್ಲ.

ಊರ್ಧ್ವಂ ಪಶ್ಯತಿ ನಾಧಸ್ತಾತ್ ತೃತೀಯಂ ಪಟಲಂ ಗತೇ ।
ಮಹಾನ್ತ್ಯಪಿ ಚ ರೂಪಾಣಿ ಛಾದಿತಾನೀವ ವಾಸಸಾ ॥೧೧॥
ಕರ್ಣನಾಸಾಕ್ಷಿಯುಕ್ತಾನಿ ವಿಪರೀತಾನಿ ವೀಕ್ಷತೇ ।
ಯಥಾದೋಷಂ ಚ ರಜ್ಯೇತ ದೃಷ್ಟಿರ್ದೋಷೇ ಬಲೀಯಸಿ ॥೧೨॥
ಅಧಃಸ್ಥಿತೇ ಸಮೀಪಸ್ಥಂ ದೂರಸ್ಥಂ ಚೋಪರಿಸ್ಥಿತೇ ।
ಪಾರ್ಶ್ವಸ್ಥಿತೇ ತಥಾ ದೋಷೇ ಪಾರ್ಶ್ವಸ್ಥಾನಿ ನ ಪಶ್ಯತಿ ॥೧೩॥
ಸಮನ್ತತಃ ಸ್ಥಿತೇ ದೋಷೇ ಸಂಕುಲಾನೀವ ಪಶ್ಯತಿ ।
ದೃಷ್ಟಿಮಧ್ಯಗತೇ ದೋಷೇ ಸ ಏಕಂ ಮನ್ಯತೇ ದ್ವಿಧಾ ॥೧೪॥
ದ್ವಿಧಾ ಸ್ಥಿತೇ ತ್ರಿಧಾಪಶ್ಯೇದ್ಬಹುಧಾ ಚಾನವಸ್ಥಿತೇ ।
ತಿಮಿರಾಖ್ಯಃ ಸ ವೈ ದೋಷಶ್ಚತುರ್ಥಪಟಲಂ ಗತಃ ॥೧೫॥
ರುಣದ್ಧಿ ಸರ್ವತೋ ದೃಷ್ಟಿಂ ಲಿಂಗನಾಶಃ ಸ ಉಚ್ಯತೇ ।
ತಸ್ಮಿನ್ನಪಿ ತಮೋಭೂತೇ ನಾತಿರೂಢೇ ಮಹಾಗದೇ ॥೧೬॥
ಚಂದ್ರಾದಿತ್ಯೌ ಸನಕ್ಷತ್ರಾವನ್ತರಿಕ್ಷೇ ಚ ವಿದ್ಯುತಃ ।
ನಿರ್ಮಲಾನಿ ಚ ತೇಜಾಂಸಿ ಭ್ರಾಜಿಷ್ಣೂನೀವ ಪಶ್ಯತಿ ॥೧೭॥
ಸ ಏವ ಲಿಂಗನಾಶಸ್ತು ನೀಲಿಕಾ ಕಾಚ ಸಂಜ್ಞಿತಃ ।

ಮೂರನೆಯದಾದ ಮಾಂಸ ಪಟಲವನ್ನು ದೋಷವು ಆಶ್ರಯಿಸಿದ್ದರೆ ಮೇಲೆ ಇರುವ ವಸ್ತುಗಳು ಕಾಣುತ್ತವೆ, ಕೆಳಗಿರುವ ವಸ್ತುಗಳು ಕಾಣಿಸುವುದಿಲ್ಲ. ದೊಡ್ಡ ಆಕಾರದ ವಸ್ತುಗಳು ಬಟ್ಟೆಯಿಂದ ಸುತ್ತಿರುವಂತೆಯೂ ಕಿವಿ, ಮೂಗು, ಕಣ್ಣುಗಳಿರುವ ಪ್ರಾಣಿಗಳು ಯಾವ ಅಂಗಗಳೂ ಇಲ್ಲದವುಗಳಂತೆಯೂ ಕಾಣಿಸುತ್ತವೆ ; ಜಮಾವಣೆಯಾಗಿರುವ ದೋಷಗಳಿಗೆ ತಕ್ಕಂತೆ ವಾತದೋಷದಲ್ಲಿ ಕಪ್ಪುಬಿಳುಪುವರ್ಣಗಳೂ ಪಿತ್ತದಲ್ಲಿ ಹಳದಿ ಕೆಂಪುವರ್ಣಗಳೂ, ಕಫದೋಷವಿದ್ದರೆ ಬಿಳುಪುಬಣ್ಣವೂ, ರಕ್ತಾಧಿಕ್ಯವಾದರೆ ರಕ್ತದ ಬಣ್ಣವೂ, ತ್ರಿದೋಷಗಳಿದ್ದರೆ ಚಿತ್ರವರ್ಣ ಕಾಣುತ್ತವೆ ; ದೋಷಗಳು ದೃಷ್ಟಿಯ ಕೆಳಗಡೆಯಲ್ಲಿದ್ದರೆ ಹತ್ತಿರದಲ್ಲಿರುವವನ್ನೂ ದೃಷ್ಟಿಯ ಮೇಲ್ಭಾಗದಲ್ಲಿದ್ದರೆ ದೂರದಲ್ಲಿರುವವನ್ನೂ ಪಕ್ಕದಲ್ಲಿದ್ದರೆ ಪಕ್ಕದಲ್ಲಿರುವವನ್ನೂ ಕಾಣುವುದಿಲ್ಲ. ದೃಷ್ಟಿಯ ಸುತ್ತಲೂ ದೋಷ ಹರಡಿಕೊಂಡಿದ್ದರೆ ವಸ್ತುವಿನ ರೂಪವು ಮಿಶ್ರವಾದಂತೆಯೂ ದೃಷ್ಟಿಯ ಮಧ್ಯದಲ್ಲಿದ್ದರೆ ಒಬ್ಬನನ್ನು ಇಬ್ಬರನ್ನಾಗಿಯೂ, ಎರಡು ಪಾಲಾಗಿ ದೋಷವಿದ್ದರೆ ಮೂರು ಪದಾರ್ಥಗಳಿರುವಂತೆಯೂ, ದೋಷಗಳು ದೃಷ್ಟಿಭಾಗದಲ್ಲಿ ಹರಡಿದ್ದರೆ ಅನೇಕ ವಸ್ತುಗಳಿದ್ದಂತೆಯೂ ಕಾಣಿಸುತ್ತದೆ ; ಈ ರೋಗಕ್ಕೆ ತಿಮಿರವೆಂದು ಹೆಸರು. ಈ ದೋಷವೇ ನಾಲ್ಕನೆಯ

ದಾದ ತೇಜೋ ಜಲಾಶ್ರಿತವಾದ ಬಾಹ್ಯಪಟಲಕ್ಕೆ ಬಂದುಸೇರಿದರೆ ದೃಷ್ಟಿಮಂಡಲವನ್ನು ಎಲ್ಲಾ ಕಡೆಗಳಿಂದಲೂ ಮುಚ್ಚಿಬಿಡುತ್ತದೆ ; ಯಾವ ವಸ್ತುವೂ ಕಾಣಿಸುವುದೇ ಇಲ್ಲ ; ಇದಕ್ಕೆ ಲಿಂಗನಾಶವೆಂದು ಹೆಸರು. ಅಂಧಕಾರಮಯವಾದ ಈ ರೋಗದಲ್ಲೂ ದೋಷವು ಅಧಿಕವಾಗಿಲ್ಲದಿದ್ದರೆ ಚಂದ್ರ ಸೂರ್ಯ ನಕ್ಷತ್ರಗಳನ್ನೂ ಅಂತರಿಕ್ಷದಲ್ಲಿ ಕಾಣುವ ಮಿಂಚು ನಿರ್ಮಲವಾದ ತೇಜಸ್ಸುಗಳನ್ನೂ ಅಗ್ನಿಯಜ್ವಾಲೆಯನ್ನೂ ನೋಡುತ್ತಾನೆ. ಪ್ರಧಾನೇಂದ್ರಿಯವಾದ ಚಕ್ಷುವಿನ ಕಾರ್ಯವನ್ನೇ ತಡೆಯುವುದರಿಂದ ಮಹಾಗದವೆಂದು ಪ್ರಸಿದ್ಧಿಯಾಗಿದೆ. ಈ ತಿಮಿರರೋಗಕ್ಕೆ ಕಾಚ, ನೀಲಿಕಾ, ಎಂದೂ ಹೆಸರುಂಟು.

ಟಿಪ್ಪಣಿ :—ನಿಮಿಃ–ಮೂರನೆಯ ಪಟಲದ ದೋಷದಿಂದ ನೀಲಿಬಣ್ಣವುಂಟಾದರೆ ತಿಮಿರಕ್ಕೆ ಕಾಚವೆಂದೂ, ನಾಲ್ಕನೆಯ ಪಟಲದಲ್ಲಾದರೆ ಲಿಂಗನಾಶವೆಂದೂ ಇವೆರಡೂ ಕಫದೋಷಾಧಿಕ್ಯತೆಯಿಂದುಂಟಾಗುತ್ತದೆಂದೂ, ಯಾಪ್ಯ ಮತ್ತು ಅಸಾಧ್ಯಗಳೆಂದೂ ತಿಳಿಯಬೇಕು. (೩ನೆಯ ಪಟಲದಲ್ಲಿ ಕಾಚವು ಯಾಪ್ಯವು ; ೪ನೇ ಪಟಲದಲ್ಲಿ ಲಿಂಗನಾಶವು ಅಸಾಧ್ಯವು) ಲಿಂಗ್ಯತೇ–ಜ್ಞಾಯತೇಽನೇನೇತಿ ಲಿಂಗಂ–ಇಂದ್ರಿಯ ಅಂದರೆ ದರ್ಶನಶಕ್ತಿಯು ; "ತನ್ನಾಶೋಽಸ್ಮಿನ್ನಿತಿ ಲಿಂಗನಾಶಃ" ; ರೂಪಗ್ರಹಣವಾಗುವುದಿಲ್ಲವಾಗಿ ಅಂಧಕಾರದಂತೆ ತೋರುತ್ತದೆ ; ಗದಾಧರನ ಮತದಲ್ಲಿ–"ನೀಲಿಕಾವಿಶೇಷಿತಾ ಕಾಚಸಂಜ್ಞಾ." ನೀಲಿಕಾ ಕಾಚಸಂಜ್ಞಾ ಎಂದೂ, ೩ ನೆಯ ಪಟಲದಲ್ಲಿ ದೋಷಗಳಿದ್ದರೆ ಕಾಚಸಂಜ್ಞೆಯೂ ೪ನೆಯ ಪಟಲದಲ್ಲಿ ನೀಲಿಕಾ ಕಾಚವೆಂಬ ಸಂಜ್ಞೆಯೂ ಉಂಟಾಗುತ್ತದೆ. ಕಾಚವೇ ಬೇರೆ, ತಿಮಿರವೇ ಬೇರೆ ರೋಗವು ; ತಿಮಿರದ ಬೇರೆ ಅವಸ್ಥೆಯೇ ಕಾಚವಾದ ಕಾರಣ ಅವೆರಡೂ ಒಂದೇರೋಗವೆಂದು ಹೇಳಿದರೆ ಅದು ಹಾಗಾಗುವುದಿಲ್ಲ. ಏಕೆಂದರೆ ಅಭಿಷ್ಯಂದ ಮತ್ತು ಸಿರೋತ್ಪಾತಗಳೂ, ಅಧಿಮಂಥ ಸಿರಾಹರ್ಷಗಳೂ ಅವಸ್ಥಾಂತರಗಳಾದರೂ ಬೇರೆಬೇರೆ ರೋಗಗಳೆಂದೇ ಪರಿಗಣಿಸಲ್ಪಡುತ್ತವೆ. ಹಾಗೆಯೇ ತಿಮಿರಕಾಚಗಳನ್ನೂ ಬೇರೆಬೇರೆರೋಗಗಳೆಂದೇ ತಿಳಿಯಬೇಕು.

||೧೮||
ವಾತೇನ ಚಾಪಿ ರೂಪಾಣಿ ಭ್ರಮನ್ತೀವ ಸಪಶ್ಯತಿ
ಆವಿಲಾನ್ಯರುಣಾಭಾನಿ ವ್ಯಾವಿದ್ಧಾನೀವ ಮಾನವಃ ।

||೧೯||
ಪಿತ್ತೇನಾದಿತ್ಯಖದ್ಯೋತಶಕ್ರಚಾಪತಟಿದ್ಗುಣಾ
ಶಿಖಿಬರ್ಹವಿಚಿತ್ರಾಣಿ ನೀಲಕೃಷ್ಣಾನಿ ಪಶ್ಯತಿ ।

||೨೦||
ಕಫೇನ ಪಶ್ಯೇದ್ರೂಪಾಣಿ ಸ್ನಿಗ್ಧಾನಿ ಚ ಸಿತಾನಿ ಚ
ಗೌರಚಾಮರಗೌರಾಣಿ ಶ್ವೇತಾಭ್ರಪ್ರತಿಮಾನಿ ಚ ।

||೨೧||
ಪಶ್ಯೇದಸೂಕ್ಷ್ಮಾಣ್ಯತ್ಯರ್ಥಂ ವ್ಯಭ್ರೇ ಚೈವಾಭ್ರಸಂಪ್ಲವಮ್
ಸಲಿಲಪ್ಲಾವಿತಾನೀವ ಪರಿಜಾಡ್ಯಾನಿ ಮಾನವಃ ।

||೨೨||
ತಥಾ ರಕ್ತೇನ ರಕ್ತಾನಿ ತಮಾಂಸಿ ವಿವಿಧಾನಿ ಚ
ಹರಿತಶ್ಯಾವಕೃಷ್ಣಾನಿ ಧೂಮಧೂಮ್ರಾಣಿ ಚೇಕ್ಷತೇ ।

||೨೩||

ಸನ್ನಿಪಾತೇನ ಚಿತ್ರಾಣಿ ವಿಪ್ಲುತಾನೀವ ಪಶ್ಯತಿ
ಬಹುಧಾ ವಾ ದ್ವಿಧಾ ವಾಪಿ ಸರ್ವಾಣ್ಯೇವ ಸಮನ್ತತಃ ।
ಹೀನಾಧಿಕಾಙ್ಗಾನ್ಯಥವಾ ಜ್ಯೋತೀಂಷ್ಯಪಿ ಚ ಮಾನವಃ ||೨೪||

ವಾತಾದಿದೋಷಾರಂಭಕತಿಮಿರಲಕ್ಷಣಗಳು–ವಾತಿಕತಿಮಿರ ರೋಗದಲ್ಲಿ ಮನುಷ್ಯರಿಗೆ ಪದಾರ್ಥಗಳು ತಿರುಗುತ್ತಿರುವಂತೆಯೂ, ಕೊಳಕಾಗಿಯೂ, ಅರುಣ ಬಣ್ಣವುಳ್ಳವಾಗಿಯೂ ಡೊಂಕುಡೊಂಕಾಗಿಯೂ ಕಾಣುತ್ತವೆ. ಪೈತ್ತಿಕತಿಮಿರ ರೋಗದಲ್ಲಿ ಸೂರ್ಯ–ಮಿಣುಕುಹುಳು–ಕಾಮನಬಿಲ್ಲು–ಮಿಂಚು–ನವಿಲಿನಗರಿಯಂತೆ ವಿಚಿತ್ರಬಣ್ಣವುಳ್ಳ ನೀಲಿಬಣ್ಣ–ಕಪ್ಪುಬಣ್ಣಗಳಿಂದ ವ್ಯಾಪ್ತವಾದಂತೆ ಎಲ್ಲಾ ಪದಾರ್ಥಗಳೂ ಕಾಣಿಸುತ್ತವೆ. ಕಫಜತಿಮಿರದಲ್ಲಿ ಎಲ್ಲಾ ವಸ್ತುಗಳೂ ಸ್ನಿಗ್ಧವಾಗಿಯೂ ಬೆಳ್ಳಗೂ ಬಿಳಿಯ ಚಾಮರದಂತೆ ಬಿಳುಪಾಗಿಯೂ, ಬಿಳಿಯಮೋಡದಂತೆಯೂ, ಸೂಕ್ಷ್ಮವಾದುವನ್ನು ಅತಿದಪ್ಪವಾದಂತೆಯೂ, ಮೋಡವಿಲ್ಲದಾದ ಮೋಡ ಕವಿದಂತೆಯೂ, ಎಲ್ಲವೂ ನೀರಿನಿಂದ ನೆನೆಸಲ್ಪಟ್ಟಂತೆಯೂ ಸ್ತಿಮಿತವಾಗಿರುವಂತೆ ಕಾಣುತ್ತವೆ. ರಕ್ತಜ ತಿಮಿರರೋಗಿಯು ಪದಾರ್ಥಗಳನ್ನೆಲ್ಲಾ ರಕ್ತಬಣ್ಣವಾಗಿರುವಂತೆಯೂ, ಎಲ್ಲವೂ ಕತ್ತಲಾಗಿರುವಂತೆಯೂ ಕಾಣುತ್ತಾನೆ. ಹಸುರಾಗಿಯೂ, (ಶ್ಯಾವಬಣ್ಣ) ಹೊಗೆಯಿಂದ ಸುತ್ತಲ್ಪಟ್ಟಂತೆಯೂ ಕಾಣಿಸುತ್ತವೆ. ತ್ರಿದೋಷಜನ್ಯ ತಿಮಿರರೋಗದವನು ನಾನಾಬಣ್ಣವುಳ್ಳವಾಗಿಯೂ, ಎಲ್ಲಾ ಕಡೆಗೂ ಹರಡಿದಂತೆಯೂ ಒಂದುವಸ್ತುವೇ ಎರಡೆರಡಾಗಿಯೂ ಅನೇಕವಸ್ತುಗಳಂತೆಯೂ, ನೋಡತಕ್ಕವಸ್ತುಗಳೆಲ್ಲಾ, ಹೀನವಾದುವು ದೊಡ್ಡವಾಗಿಯೂ, ದೊಡ್ಡವು ಮಿಣುಗುಟ್ಟುವಂತೆಯೂ ಕಾಣಿಸುತ್ತವೆ.

ಪಿತ್ತಂ ಕುರ್ಯಾತ್ ಪರಿಮ್ಲಾಯಿ ಮೂರ್ಛಿತಂ ರಕ್ತತೇಜಸಾ ।
ಪೀತಾದಿಶಸ್ತಥೋದ್ಯನ್ತಮಾದಿತ್ಯಮಿವ ಪಶ್ಯತಿ ||೨೫||
ವಿಕೀರ್ಯಮಾಣಾನ್ ಖದ್ಯೋತೈರ್ವೃಕ್ಷಾಂಸ್ತೇಜೋಭಿರೇವ ಚ ।
ವಕ್ಷ್ಯಾಮಿ ಷಡ್ವಿಧೈರಾಗೈರ್ಲಿಂಗನಾಶಮತಃ ಪರಮ್ ||೨೬||

ರಕ್ತದ ಸಾರಭಾಗದೊಡನೆ ಪಿತ್ತದೋಷವು ಮಿಶ್ರವಾಗಿ ನೇತ್ರಗೋಳದಲ್ಲಿ ಪರಿಮ್ಲಾಯಿಯೆಂಬ ತಿಮಿರರೋಗವನ್ನುಂಟುಮಾಡುತ್ತದೆ. ದಿಕ್ಕುಗಳು ಹಳದಿ ಬಣ್ಣವುಳ್ಳವಾಗಿಯೂ, ಸೂರ್ಯನು ಉದಯಿಸುತ್ತಿರುವಂತೆಯೂ, ಮರಗಳು ಕಾಂತಿಯುಳ್ಳ ಬೆಂಕಿಯಕಿಡಿಗಳಿಂದ ಮುಚ್ಚಲ್ಪಟ್ಟಿರುವಂತೆಯೂ ಕಾಣಿಸುತ್ತವೆ. ಇನ್ನುಮುಂದೆ ರಾಗಪ್ರಾಪ್ತವಾದ ಲಿಂಗನಾಶದ ೬ ವಿಧಗಳನ್ನೂ ವಿವರಿಸಿ ಹೇಳುತ್ತೇವೆ.

ಟಿಪ್ಪಣಿ : ಈ ಪರಿಮ್ಲಾಯಿ ರೋಗವು ಒಂದೇವಿಧವಾದರೂ ರಾಗಪ್ರಾಪ್ತಿಯಾಗುವುದಕ್ಕಿಂತ ಮುಂಚೆ ತಿಮಿರವೆಂದೂ, ರಾಗಪ್ರಾಪ್ತಿಯಾದಮೇಲೆ ಕಾಚ ಎಂದೂ ಈ ಕಾಚವೇ ದೃಷ್ಟಿನಾಶವನ್ನುಂಟುಮಾಡಿದರೆ ಲಿಂಗನಾಶವೆಂಬ ಹೆಸರನ್ನೂ ಹೊಂದುತ್ತದೆಯೆಂದೂ ತಿಳಿಯಬೇಕು. ಎಲ್ಲಾವಿಧದ ತಿಮಿರರೋಗಗಳೂ ಮೊದಲನೆಯ ಪಟಲ

ದಲ್ಲಿ ಸಾಧ್ಯವಾಗುತ್ತವೆ ; ಎರಡನೆಯ ಪಟಲಕ್ಕೆ ಬಂದಾಗ ಕಷ್ಟಸಾಧ್ಯಗಳಾಗುತ್ತವೆ ; ಮೂರನೆಯ ಪಟಲಕ್ಕೆ ಬಂದಾಗ ರಾಗಪ್ರಾಪ್ತಿಯಾದರೆ ಕಾಚನೆಂಬ ಹೆಸರನ್ನು ಹೊಂದಿ ಯಾಪ್ಯಗಳಾಗುತ್ತವೆ ; ನಾಲ್ಕನೆಯ ಪಟಲಕ್ಕೆ ಬಂದಾಗ ಲಿಂಗನಾಶವೆಂಬ ಹೆಸರು ಉಂಟಾಗುತ್ತದೆ. ಆಗ ಚಿಕಿತ್ಸೆಮಾಡಿದರೂ ಸಾಧ್ಯವಾಗುವುದಿಲ್ಲವೆಂದು ತಿಳಿಯಬೇಕು.

ರಾಗೋಽರುಣೋ ಮಾರುತಜಃ ಪ್ರದಿಷ್ಟಃ ಪಿತ್ತಾತ್ ಪರಿಮ್ಲಾಯ್ಯಥವಾಪಿ ನೀಲಃ ।
ಕಫಾತ್ ಸಿತಃ ಶೋಣಿತಜಸ್ತು ರಕ್ತಃ ಸಮಸ್ತದೋಷೋಽಥ ವಿಚಿತ್ರರೂದಃ ॥೨೭॥
ರಕ್ತಜಂ ಮಣ್ಡಲಂ ದೃಷ್ಟೌ ಸ್ಥೂಲಕಾಚಾರುಣಪ್ರಭಮ್ ।
ಪರಿಮ್ಲಾಯಿನಿ ರೋಗೇ ಸ್ಯಾನ್ಮ್ಲಾಯ್ಯಾನಿಲಂ ಚ ಮಣ್ಡಲಮ್ ॥೨೮॥
ದೋಷಕ್ಷಯಾತ್ಕದಾಚಿತ್ ಸ್ಯಾತ್ಸಯಂ ತತ್ರ ಚ ದರ್ಶನಮ್ ।

ವಾತಪ್ರಕೋಪದಿಂದ ಸ್ವಲ್ಪ ಕೆಂಪುಮಿಶ್ರವಾದ ಬಿಳೀಬಣ್ಣವು ಉಂಟಾಗುತ್ತದೆ. ಪಿತ್ತಪ್ರಕೋಪದಿಂದ ಹಳದಿ ಅಥವಾ ನೀಲಿಬಣ್ಣವೂ ಕಫಕೋಪದಿಂದ ಬಿಳಿಯಬಣ್ಣವೂ ರಕ್ತಕೋಪದಿಂದ ರಕ್ತವರ್ಣವೂ ತ್ರಿದೋಷಗಳಪ್ರಕೋಪದಿಂದ ವಿಚಿತ್ರವರ್ಣವೂ ಉಂಟಾಗುತ್ತವೆ. ಈ ರೀತಿಯಾಗಿ ೫ ವಿಧ ಕಾಚರೋಗಗಳಲ್ಲೂ ಅರುಣಾದಿ ೫ ವರ್ಣಗಳುಂಟಾಗುತ್ತವೆ. ಕಾಚವೇ ರಾಗಪ್ರಾಪ್ತವಾದರೆ ೬ ನೆಯ ಪರಿಮ್ಲಾಯಿರೋಗವು ; ರಕ್ತತೇಜಸ್ಸಿನಿಂದ ಪರಿಮ್ಲಾಯಿ ರೋಗವುಂಟಾಗುತ್ತದೆಂದು ಹಿಂದೆ ಹೇಳಿದಂತೆ ಕಣ್ಣಿನಲ್ಲಿ ದಪ್ಪಗಾಜಿನ ಮಂಡಲದಂತೆ ಕೆಂಪುಬಣ್ಣದ ಮಂಡಲವು ಕೆಂಪುಮಿಶ್ರವಾದ ಬಿಳುಪುಬಣ್ಣದಿಂದ ಕೂಡಿದಂತೆ ಕಾಣುತ್ತದೆ. ಬೆಂಕಿಯ ಜ್ವಾಲೆಯಂತೆ ಸ್ವಲ್ಪ ನೀಲಿಬಣ್ಣ ಮಿಶ್ರವಾಗಿರುವಂತೆಯೂ ಕಾಣುತ್ತದೆ ; ಅಂದರೆ ಸ್ವಲ್ಪ ನೀಲಿಮಿಶ್ರವಾದ ಅರಿಶಿನಬಣ್ಣವುಳ್ಳದ್ದಾಗಿರುತ್ತದೆಂದು ತಿಳಿಯಬೇಕು. ೩ ನೆಯ ಪಟಲದಲ್ಲಿ ರಸ (ಆಹಾರ) ಧಾತು ಮಿಶ್ರವಾದ ಪಿತ್ತದೋಷದಿಂದ ಹಳದಿಬಣ್ಣವೂ, ರಕ್ತಮಿಶ್ರವಾದ ಪಿತ್ತದಿಂದ ನೀಲಿಬಣ್ಣವೂ ಉಂಟಾಗುತ್ತವೆ. ದೋಷವ್ಯಾಧಿಗಳ ಪ್ರಭಾವದಿಂದ ರಾಗಪ್ರಾಪ್ತಿಯಾದಾಗ ಮಂಡಲಾಕಾರವಾಗುತ್ತದೆ, ಆದರೆ ರೇಖೆಯಂತಿರುವುದಿಲ್ಲ. ಪಿತ್ತದಿಂದ ಮಿಶ್ರವಾದ ಆಹಾರರಸದ ಕ್ಷಯದಿಂದ ದೋಷಕ್ಷಯವಾದರೆ ಒಂದೊಂದುವೇಳೆ ದೃಷ್ಟಿಭಾಗವು ಶುದ್ಧಿಹೊಂದಿ ಪದಾರ್ಥ ದರ್ಶನವುಂಟಾಗಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ ; ಇದು ಯಾಪ್ಯರೋಗವು.

ಅರುಣಂ ಮಣ್ಡಲಂ ವಾತಾಚ್ಚಪಲಂ ಪುರುಷಂ ತಥಾ ।
ಪಿತ್ತಾನ್ಮಣ್ಡಲಮಾನೀಲಂ ಕಾಂಸ್ಯಾಭಂ ಪೀತಮೇವ ವಾ ॥೨೯॥
ಶ್ಲೇಷ್ಮಣಾ ಬಹಳಂ ಸ್ನಿಗ್ಧಂ ಶಙ್ಖಕುನ್ದೇನ್ದು ಪಾಣ್ಡುರಮ್ ।
ಚಲತ್ಪದ್ಮ ಪಲಾಶಸ್ಥಃ ಶುಕ್ಲೋ ಬಿನ್ದುರಿವಾಮ್ಭಸಃ ॥೩೦॥
ಮೃದ್ಯಮಾನೇ ಚ ನಯನೇ ಮಣ್ಡಲಂ ತದ್ವಿಸರ್ಪತಿ ।
ಪ್ರವಾಳಪದ್ಮ ಪತ್ರಾಭಂ ಮಣ್ಡಲಂ ಶೋಣಿತಾತ್ಮಕಮ್ ॥೩೧॥

ದೃಷ್ಟಿರಾಗೋ ಭವೇಚ್ಚಿತ್ರೋ ಲಿಂಗನಾಶೇ ತ್ರಿದೋಷಜೇ ।
ಯಥಾಸ್ವಂ ದೋಷಲಿಙ್ಗಾನಿ ಸರ್ವೇಷ್ವೇವ ಭವನ್ತಿ ಹಿ ||೩೨||

ಆರು ವಿಧ ಲಿಂಗನಾಶಲಕ್ಷಣಗಳನ್ನು ಹೇಳುತ್ತಾರೆ–ವಾತಪ್ರಕೋಪದಿಂದ ದೃಷ್ಟಿ ಮಂಡಲವು ರಕ್ತಮಿಶ್ರವಾದ ಬಿಳಿಯಬಣ್ಣ (ಅರುಣವರ್ಣ) ವುಳ್ಳುದಾಗಿ ಚಂಚಲವಾಗಿ ಸ್ಪರ್ಶಕ್ಕೆ ಕಠಿಣವಾಗಿಯೂ, ಪಿತ್ತಾಧಿಕ್ಯತೆಯಿಂದ ಸ್ವಲ್ಪ ನೀಲವಾಗಿ ಬಿಳುಪುಮಿಶ್ರವಾದ ಹಳದಿವರ್ಣವುಳ್ಳುದಾಗಿಯೂ ಇರುತ್ತದೆ ; ದಪ್ಪವಾಗಿಯೂ ಹೊಳಪಾಗಿಯೂ ಶಂಖ ಮೊಲ್ಲೆಹುವ್ವು, ಚಂದ್ರ ಮತ್ತು ತಾವರೆಯೆಲೆಯ ಮೇಲಿನ ನೀರಿನ ಹನಿಯಂತೆಯೂ, ಬಿಳುಪಾಗಿರುತ್ತೆ. ಕಣ್ಣನ್ನು ಹಿಸುಕಿದರೆ ಸುತ್ತಲೂ ಹರಡುತ್ತದೆ ; ರಕ್ತಾಧಿಕ್ಯತೆಯಿಂದ ದೃಷ್ಟಿಮಂಡಲವು ಹವಳ ಮತ್ತು ಕೆಂಪುತಾವರೆ ಹೂವಿನ ದಳದಂತೆ ರಕ್ತವರ್ಣವುಳ್ಳು ದಾಗುತ್ತದೆ ; ತ್ರಿದೋಷಗಳೂ ವೃದ್ಧಿಯಾದರೆ ದೃಷ್ಟಿಮಂಡಲದಲ್ಲಿ ನಾನಾ ಬಣ್ಣಗಳು ಕಾಣುತ್ತವೆ ; ದೋಷವೃದ್ಧಿಗೆ ತಕ್ಕಂತೆ ಆಯಾಯ ಲಕ್ಷಣಗಳೂ ಉಂಟಾಗುತ್ತವೆ ; ಇವುಗಳ ಪೈಕಿ ಕಫಜಲಿಂಗನಾಶವನ್ನು ಬಿಟ್ಟು ಉಳಿದುವೆಲ್ಲಾ ಅಸಾಧ್ಯಗಳೆಂದು ತಿಳಿಯ ಬೇಕು ; ಪರಿಮ್ಲಾಯಿಯ ಅವಸ್ಥೆಯನ್ನು ಹೊಂದಿ ಕದಾಚಿತ್ ದೃಷ್ಟಿದೋಷವು ಪರಿಹಾರ ವಾಗಿ ರೂಪದರ್ಶನವಾಗುವ ಲಿಂಗನಾಶವೂ ಸೇರಿ ೬ ವಿಧ ಲಿಂಗನಾಶಗಳೆಂದು ತಿಳಿಯ ಬೇಕು.

ಷಟ್ ಲಿಂಗನಾಶಾಃ ಷಡಿಮೇ ಚ ರೋಗಾದೃಷ್ಟ್ಯಾಶ್ರಯಾಃ ಷಟ್ ಚ ಷಡೇವ ಚ ಸ್ಯುಃ ।
ತಥಾ ನರಃ ಪಿತ್ತವಿದಗ್ಧದೃಷ್ಟಿಃ ಕಫೇನ ಚಾನ್ಯಸ್ತ್ವಥ ಧೂಮದರ್ಶೀ ||೩೩||
ಯೋ ಹ್ರಸ್ವಜಾಡ್ಯೋ ನಕುಲಾನ್ಧತಾ ಚ ಗಮ್ಭೀರಸಂಜ್ಞಾ ಚ ತಥೈವ ದೃಷ್ಟಿಃ ।

ಅರುಣ ಪೀತಾದಿವರ್ಣಗಳಾದ ೬ ವಿಧಗಳಾದ ಲಿಂಗನಾಶರೋಗಗಳನ್ನೂ ಹೇಳಿ ದ್ದಾಯಿತು ; ಇವು ದೃಷ್ಟಿಮಂಡಲವನ್ನಾಶ್ರಯಿಸಿ ಹುಟ್ಟುತ್ತವೆ ; ಇವುಗಳ ಜೊತೆಗೆ ಪಿತ್ತ ವಿದಗ್ಧದೃಷ್ಟಿ ಕಫವಿದಗ್ಧದೃಷ್ಟಿ ಧೂಮದರ್ಶೀ ಹ್ರಸ್ವಜಾಡ್ಯನಕುಲಾಂಧತಾ, ಗಂಭೀರಿಕಾ, ಎಂಬ ಮುಂದೆ ಹೇಳುವ ೬ ವಿಧ ದೃಷ್ಟಿರೋಗಗಳೂ ಸೇರಿ ೧೨ ವಿಧ ದೃಷ್ಟಿರೋಗಗಳೆಂದು ತಿಳಿಯಬೇಕು. ಪಿತ್ತವಿದಗ್ಧದೃಷ್ಟಿಯೆಂದರೆ ದಿವಾಂಧತೆಯೂ ಕಫವಿದಗ್ಧದೃಷ್ಟಿಯೆಂದರೆ ರಾತ್ರ್ಯಂಧತೆಯೂ ಎಂದು ತಿಳಿದುಬರುತ್ತದೆ.

ಪಿತ್ತೇನ ದುಷ್ಟೇನ ಗತೇನ ದೃಷ್ಟಿಂ ಪೀತಾಭವೇದ್ಯಸ್ಯ ನರಸ್ಯ ದೃಷ್ಟಿಃ ||೩೪||
ಪೀತಾನಿ ರೂಪಾಣಿ ಚ ಮನ್ಯತೇ ಯಃ ಸ ಮಾನವಃ ಪಿತ್ತವಿದಗ್ಧ ದೃಷ್ಟಿಃ ।
ಪ್ರಾಪ್ತೇ ತೃತೀಯಂ ಪಟಲಂ ತು ದೋಷೇ ದಿವಾ ನ ಪಶ್ಯೇನ್ನಿಶಿ ವೀಕ್ಷತೇ ಚ ||೩೫||
ರಾತ್ರೌ ಸ ಶೀತಾನುಗೃಹೀತದೃಷ್ಟಿಃ ಪಿತ್ತಾಲ್ಪಭಾವಾದಪಿ ತಾನಿ ಪಶ್ಯೇತ್ ।

ಪ್ರಕುಪಿತ ಪಿತ್ತವು ದೃಷ್ಟಿಮಂಡಲವನ್ನಾಶ್ರಯಿಸಿ ಯಾರಿಗೆ ದೃಷ್ಟಿಭಾಗವು ಹಳದಿ ಬಣ್ಣವಾಗಿ ಎಲ್ಲಾ ಆಕಾರವೂ ಹಳದಿಯ ಬಣ್ಣಕ್ಕೆ ಕಾಣುತ್ತದೋ ಅವನು ಪಿತ್ತವಿದಗ್ಧ ದೃಷ್ಟಿಯುಳ್ಳರೋಗಿ ಎಂದು ಕರೆಯಲ್ಪಡುತ್ತಾನೆ ; ಈ ದೋಷಗಳು ೩ ನೆಯ ಪಟಲ

ವನ್ನು ಸೇರಿದರೆ ಅವನಿಗೆ ಹಗಲು ಹೊತ್ತಿನಲ್ಲಿ ಕಣ್ಣು ಕಾಣಿಸುವುದಿಲ್ಲ ; ರಾತ್ರಿಯ ವೇಳೆಯಲ್ಲಿ ಕಾಲಸ್ವಭಾವದಿಂದ ದೃಷ್ಟಿಗೆ ಶೀತಸಂಬಂಧವುಂಟಾಗುವುದರಿಂದಲೂ ಪಿತ್ತವು ಪ್ರಮಾಣದಲ್ಲಿ ಕಡಮೆ ಬೀಳುವುದರಿಂದಲೂ ಕಣ್ಣು ಕಾಣಿಸುತ್ತದೆ ; ಸಾಧ್ಯವು.

ತಥಾ ನರಃ ಶ್ಲೇಷ್ಮವಿದಗ್ಧದೃಷ್ಟಿಸ್ತಾನ್ಯೇವ ಶುಕ್ಲಾನಿ ಹಿ ಮನ್ಯತೇ ತು ॥೩೬॥
ತ್ರಿಷು ಸ್ಥಿತೋಽಲ್ಪಃ ಪಟಲೇಷು ದೋಷೋ ನಕ್ತಾನ್ಧ್ಯಮಾಪಾದಯತಿ ಪ್ರಸಹ್ಯ ।
ದಿವಾ ಸ ಸೂರ್ಯಾನುಗೃಹೀತ ದೃಷ್ಟಿಃ ವೀಕ್ಷೇತ ರೂಪಾಣಿ ಕಫಾಲ್ಪ ಭಾವಾತ್ ॥೩೭॥

ಪ್ರಕುಪಿತ ಕಫವು ದೃಷ್ಟಿಮಂಡಲವನ್ನಾಶ್ರಯಿಸಿ ಯಾರಿಗೆ ದೃಷ್ಟಿಭಾಗವು ಬೆಳ್ಳಗಾಗಿ ಎಲ್ಲಾ ಪದಾರ್ಥಗಳೂ ಬೆಳ್ಳಗೆ ಇರುವಂತೆ ಕಾಣಿಸುತ್ತವೆಯೋ ಆತನನ್ನು ಶ್ಲೇಷ್ಮವಿದಗ್ಧದೃಷ್ಟಿಯುಳ್ಳವನೆಂದು ತಿಳಿಯಬೇಕು ; ಮೂರು ಪಟಲಗಳಲ್ಲೂ ಅಲ್ಪಪ್ರಮಾಣದಿಂದ (ದೋಷಗಳು) ಸೇರಿದರೆ ನಕ್ತಾಂಧ್ಯವನ್ನುಂಟುಮಾಡುತ್ತದೆ ; ಅಂದರೆ ಆತನಿಗೆ ರಾತ್ರಿಯ ಹೊತ್ತಿನಲ್ಲಿ ಕಣ್ಣು ಕಾಣಿಸುವುದಿಲ್ಲವೆಂದರ್ಥ. ಹಗಲು ಹೊತ್ತಿನಲ್ಲಿ ಕಫವು ಸ್ವಲ್ಪಪ್ರಮಾಣದಿಂದಿರುತ್ತದೆ ; ಸೂರ್ಯ ತೇಜಸ್ಸಿನಿಂದ ಅನುಗ್ರಹಿಸಲ್ಪಟ್ಟ ದೃಷ್ಟಿಶಕ್ತಿಯುಳ್ಳವನಾಗುತ್ತಾನೆ. ದೃಷ್ಟಿಗೋಳವನ್ನಾಚ್ಛಾದಿಸಿರುವ ಕಫವು ಸೂರ್ಯತೇಜಸ್ಸಿನಿಂದ ಚದುರಿಸಲ್ಪಟ್ಟು ಕಫವು ದೃಷ್ಟಿಮಂಡಲವನ್ನು ಬಿಡುವುದರಿಂದ ಆತನಿಗೆ ಎಲ್ಲರಂತೆ ಎಲ್ಲಾ ವಸ್ತುಗಳೂ ಸ್ಪಷ್ಟವಾಗಿ ಕಾಣಿಸುತ್ತವೆ ; ಇದೂ ಚಿಕಿತ್ಸೆಮಾಡಿದರೆ ಸಾಧ್ಯವಾಗುತ್ತದೆ.

ಶೋಕಜ್ವರಾಯಾಸಶಿರೋಭಿತಾಪೈರಭ್ಯಾಹತಾ ಯಸ್ಯ ನರಸ್ಯ ದೃಷ್ಟಿಃ ।
ಸ ಧೂಮಕಾನ್ ಪಶ್ಯತಿ ಸರ್ವಭಾವಾಂಸ್ತಂ ಧೂಮದರ್ಶೀತಿ ವದನ್ತಿ ರೋಗಮ್ ॥೩೮॥
ಸ ಹ್ರಸ್ವಜಾಡ್ಯೋ ದಿವಸೇಷು ಕೃಚ್ಛ್ರಾದ್ಯಃ ಹ್ರಸ್ವಾನಿ ರೂಪಾಣಿ ಚ ಯೇನ ಪಶ್ಯೇತ್ ।

ವ್ಯಸನ–ಜ್ವರ–ಆಯಾಸ–ತಲೆನೋವು ಇವುಗಳಿಂದ ಪೀಡಿತರಾದವರಿಗೆ ದೃಷ್ಟಿಭಾಗವು ದೂಷಿಸಲ್ಪಟ್ಟು ಪ್ರತಿಯೊಂದು ವಸ್ತುವೂ ಧೂಮದಿಂದ ಸುತ್ತುವರಿಯಲ್ಪಟ್ಟಿರುವಂತೆ ಕಾಣಿಸಿದರೆ ಅವರಿಗೆ ದೂಮದರ್ಶೀ ಎಂದು ಹೆಸರು. ಪಿತ್ತಜನಿತ ಈ ರೋಗವು ಚಿಕಿತ್ಸೆ ಮಾಡಿದರೆ ಸಾಧ್ಯವಾಗುತ್ತದೆ. ಯಾವನಿಗೆ ಹಗಲುಹೊತ್ತಿನಲ್ಲಿ ಬಲುಕಷ್ಟದಿಂದ ನೋಡಿದರೆ ಪದಾರ್ಥಗಳು ಬಲುಚಿಕ್ಕವಾಗಿ ಕಾಣಿಸುತ್ತವೆಯೋ ಅವನಿಗೆ ಹ್ರಸ್ವಜಾಡ್ಯವೆನ್ನುತ್ತಾರೆ. ಅವನಿಗೆ ರಾತ್ರಿಯಲ್ಲಿ ಪದಾರ್ಥಗಳು ಕಾಣಿಸುವುದೇ ಇಲ್ಲ. ೪ ನೆಯ ಪಟಲವನ್ನಾಶ್ರಯಿಸಿರುವ ಪಿತ್ತದೋಷದಿಂದ ಈ ರೋಗ ಉಂಟಾಗುವುದು. ಅಸಾಧ್ಯವು.

ಟಿಪ್ಪಣಿ :—ರಾತ್ರಿಕಾಲದಲ್ಲಿ ನಕ್ತಾಂಧ್ಯ–ನಕುಲಾಂಧ್ಯ–ಹ್ರಸ್ವಜಾಡ್ಯ–ಶ್ಲೇಷ್ಮವಿದಗ್ಧದೃಷ್ಟಿ ಈ ೪ ಜನರಿಗೆ ಕಣ್ಣು ಕಾಣಿಸುವುದಿಲ್ಲ.

ವಿದ್ಯೋತತೇ ಯೇನ ನರಸ್ಯ ದೃಷ್ಟಿರ್ದೋಷಾಭಿಪನ್ನಾ ನಕುಲಸ್ಯ ।
ಯದ್ವತ್ ॥೩೯॥
ಚಿತ್ರಾಣಿ ರೂಪಾಣಿ ದಿವಾ ಸ ಪಶ್ಯೇತ್ ಸ ವೈ ವಿಕಾರೋ ನಕುಲಾನ್ಧ್ಯಸಂಜ್ಞಃ ।

ದೃಷ್ಟಿರ್ವಿರೂಪಾ ಶ್ವಸನೋಪಸೃಷ್ಟಾ ಸಙ್ಕುಚ್ಯ ತೇಽಭ್ಯನ್ತರತಶ್ಚ ಯಾತಿ ।
ಋಜಾವಗಾಢಾ ಚ ತಮಕ್ಷಿ ರೋಗಂ ಗಮ್ಭೀರಕೇತಿ ಪ್ರವದನ್ತಿ ತಜ್ಜ್ಞಾಃ ॥೪೦॥

ತ್ರಿದೋಷಪ್ರಕೋಪದಿಂದ ಯಾವನಿಗೆ ದೃಷ್ಟಿಮಂಡಲವು ಮುಚ್ಚಲ್ಪಟ್ಟು ಮುಂಗುಸಿಯ ಕಣ್ಣಿನಂತೆ ಕೆಂಪಗೆ ಕಾಣಿಸುತ್ತದೆಯೋ ಆತನಿಗೆ ಹಗಲುಹೊತ್ತಿನಲ್ಲಿ ಮಾತ್ರ ಎಲ್ಲಾ ವಸ್ತುಗಳೂ ಕಾಣಿಸುತ್ತವೆಯಾದರೂ ರಾತ್ರಿಯಹೊತ್ತಿನಲ್ಲಿ ಕಾಣಿಸುವುದಿಲ್ಲವೋ ಅವನನ್ನು ನಕುಲಾಂಧ್ಯದೃಷ್ಟಿಯವನೆಂದು ಹೇಳುತ್ತಾರೆ. ವಾತ ಪ್ರಕೋಪದಿಂದ ದೃಷ್ಟಿಯು ವಿಕಾರವಾದ ಆಕೃತಿಯನ್ನು ಹೊಂದಿ ಸಣ್ಣದಾಗಿ ಅಡಗಿಕೊಂಡು ಒಳಗಡೆಗೇ ಸೇರಿಹೋಗಿ ತೀವ್ರವಾಗಿ ನೋಯುತ್ತಿದ್ದರೆ ಗಂಭೀರಿಕಾ ಎಂದು ಹೆಸರು.

ಬಾಹ್ಯೌ ಪುನರ್ದ್ವಾವಿಹ ಸಂಪ್ರದಿಷ್ಟೌ ನಿಮಿತ್ತತಶ್ಚಾಪ್ಯ ನಿಮಿತ್ತತಶ್ಚ ।
ನಿಮಿತ್ತತಸ್ತತ್ರ ಶಿರೋಽಭಿತಾಪಾಜ್ಜ್ಞೇಯಸ್ತ್ವಭಿಷ್ಯನ್ದನಿದರ್ಶನೈಶ್ಚ. ॥೪೧॥
ಸುರರ್ಷಿಗನ್ಧರ್ವಮಹೋರಗಾಣಾಂ ಸನ್ದರ್ಶನೇನಾಪಿ ಚ ಭಾಸ್ವರಾಣಾಮ್ ।
ಹನ್ಯೇತ್ ದೃಷ್ಟಿರ್ಮನುಜಸ್ಯ ಯಸ್ಯ ಸ ಲಿಙ್ಗನಾಶಸ್ತ್ವನಿಮಿತ್ತ ಸಂಜ್ಞಃ ॥೪೨॥
ತತ್ರಾಕ್ಷಿ ವಿಸ್ಪಷ್ಟಮಿವಾವಭಾತಿ ವೈಡೂರ್ಯ ವರ್ಣಾ ವಿಮಲಾ ಚ ದೃಷ್ಟಿಃ ।
ವಿದೀರ್ಯತೇ ಸೀದತಿ ಹೀಯತೇ ವಾ ನೃಣಾಮಭೀಘಾತಹತಾ ತು ದೃಷ್ಟಿಃ ॥೪೩॥

ಈ ಸಂದರ್ಭದಲ್ಲೇ ನಿಮಿತ್ತಾನಿಮಿತ್ತಕಾರಣಗಳಿಂದ ಎರಡುವಿಧ ಲಿಂಗನಾಶಗಳನ್ನು ಬಾಹ್ಯಕಾರಣಗಳಿಂದ ಉಂಟಾಗುತ್ತವೆಂದು ಹೇಳುತ್ತಾರೆ. ಅವುಗಳ ಪೈಕಿ ವಿಷಪುಷ್ಪದ ವಾಸನೆಯನ್ನು ಹೊತ್ತುತಂದ ವಾತಸಂಪರ್ಕದಿಂದ ಉಂಟಾಗುವ ಶಿರೋಭಿತಾಪದಿಂದಲೂ ಅಭಿಷ್ಯಂದಲಕ್ಷಣಗಳುಂಟಾಗಿ ಲಿಂಗನಾಶವಾದರೆ ಸನಿಮಿತ್ತ ಬಾಹ್ಯಹೇತುಜಲಿಂಗನಾಶವೆಂದು ಹೇಳುತ್ತಾರೆ. ದೇವತೆಗಳು–ಋಷಿಗಳು–ಗಂಧರ್ವರು–ತಕ್ಷಕ ವಾಸುಕಿ ಮೊದಲಾದ ಮಹಾಸರ್ಪಗಳನ್ನೂ, ಅತಿಪ್ರಕಾಶವಾದ ತೇಜೋರಾಶಿಯನ್ನು ನೋಡುವುದರಿಂದ ಯಾರಿಗೆ ಕಣ್ಣಿನ ದರ್ಶನಶಕ್ತಿಯು ನಾಶವಾಗುತ್ತದೋ ಅದಕ್ಕೆ ಅನಿಮಿತ್ತಬಾಹ್ಯಕಾರಣಲಿಂಗನಾಶವೆಂದು ಹೆಸರು. ಆ ಮನುಷ್ಯನ ಕಣ್ಣುಗಳು ಯಾವುದೊಂದೂ ದೋಷವಿರದೇ ಸ್ವಚ್ಛವಾಗಿ ಸ್ವಾಭಾವಿಕ ವರ್ಣವುಳ್ಳುದಾಗಿ ಅಂದರೆ ವೈಡೂರ್ಯ (ಪಚ್ಚೆಯ) ವರ್ಣವುಳ್ಳುದಾಗಿ ತಿಮಿರ, ಕಾಚಾದಿ ದೋಷಗಳಿಲ್ಲದ್ದಾಗಿ ಶಕ್ತಿನಾಶವಾಗಿರುತ್ತದೆ. ದೇವಾದಿಗಳು ಮನುಷ್ಯಶರೀರವನ್ನು ಕೆಡಿಸುವುದಿಲ್ಲ. ಬಿಸಿಲುನೆರಳುಗಳು ಕನ್ನಡಿಯನ್ನೂ ಸೂರ್ಯಕಾಂತಮಣಿಯನ್ನೂ ಸೇರುವಂತೆಯೇ ಮನುಷ್ಯದೇಹವನ್ನೂ ಪ್ರವೇಶಿಸುತ್ತಾರೆ. ಇವು ಅಸಾಧ್ಯಗಳು. ಮತ್ತೊಂದು ವಿಧದ ಬಾಹ್ಯಾಭಿಘಾತದಿಂದುಂಟಾದ ಲಿಂಗನಾಶದಲ್ಲಿ ಮನುಷ್ಯರ ದೃಷ್ಟಿಮಂಡಲವು ಬಿರಿದು–ಹಾಳಾಗುತ್ತದೆ. ಕ್ಷೀಣಿಸುತ್ತದೆ.

ಇತ್ಯೇತೇ ನಯನಗತಾ ಮಹಾವಿಕಾರಾಃ ಸಂಖ್ಯಾತಾಃ ಪೃಥಗಿಹ ಷಟ್ಚ ಸಪ್ತತಿಶ್ಚ ।
ಏತೇಷಾಂ ಪೃಥಗಿಹ ವಿಸ್ತರೇಣ ಸರ್ವಂ ವಕ್ಷ್ಯೇಽಹಂ ತದನುಚಿಕಿತ್ಸಿತಂ ಚ ತಾವತ್ ॥೪೪॥

ಈ ಶಾಲಾಕ್ಯತನ್ತ್ರದಲ್ಲಿ ೭೬ ವಿಧಗಳಾದ ಮಹಾನೇತ್ರರೋಗಗಳನ್ನೂ ಅವುಗಳ ಕಾರಣ–ಲಕ್ಷಣ ಭೇದಗಳಿಂದ ವಿಸ್ತಾರವಾಗಿ ಪರಿಗಣನೆಮಾಡಿ ವಿವರಿಸಿದ್ದಾಯಿತು. ಇನ್ನುಮುಂದೆ ಅವುಗಳನ್ನೇ ಚಿಕಿತ್ಸೆಯೊಡನೆ ವಿಸ್ತಾರವಾಗಿ ವಿವರಿಸುತ್ತೇನೆ. (ಇದರಿಂದ ಖರನಾದಾದಿ ಇತರ ಶಾಲಾಕ್ಯತಂತ್ರಕಾರರು ಹೇಳುವ ನೇತ್ರರೋಗಗಳ ಸಂಖ್ಯೆಯು ತಿರಸ್ಕರಿಸಿದಂತೆಯೇ ಆಯಿತೆಂದು ತಿಳಿಯಬೇಕು.)

ಇತಿ ಶ್ರೀಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ದೃಷ್ಟಿಗತ ರೋಗ ವಿಜ್ಞಾನನಾಮಕ ಸಪ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ.

ಅಷ್ಟಮೋಽಧ್ಯಾಯಃ

ಅಥಾತಶ್ಚಿಕಿತ್ಸಿತಪ್ರವಿಭಾಗ ವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಚಿಕಿತ್ಸಾಪ್ರವಿಭಾಗವನ್ನು ಪೃಥಕ್ ಪೃಥಕ್ ವಿಂಗಡಿಸಿ ವಿವರಿಸುತ್ತೇವೆ.

ಷಟ್ಸಪ್ತತಿರ್ಯೇಽಭಿಹಿತಾ ವ್ಯಾಧಯೋ ನಾಮಲಕ್ಷಣೈಃ ।
ಚಿಕಿತ್ಸಿತಮಿದಂ ತೇಷಾಂ ಸಮಾಸವ್ಯಾಸತಃ ಶೃಣು ||೩||

ನೇತ್ರರೋಗಗಳು ೭೬ ವಿಧಗಳೆಂದೂ ಅವುಗಳ ಹೆಸರು ಲಕ್ಷಣಗಳಿಂದ ಇದುವರೆಗೆ ಹೇಳಿದ ಆ ವ್ಯಾಧಿಗಳಿಗೆ ಮಾಡಬೇಕಾದ ಚಿಕಿತ್ಸಾವಿಧಾನಗಳನ್ನು ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ಹೇಳುತ್ತೇನೆ, ಕೇಳು.

ಛೇದ್ಯಾಸ್ತೇಷು ದಶೈಕಶ್ಚ ನವ ಲೇಖ್ಯಾಃ ಪ್ರಕೀರ್ತಿತಾಃ ।
ಭೇದ್ಯಾಃ ಪಞ್ಚ ವಿಕಾರಾಃ ಸ್ಯುರ್ವ್ಯಧ್ಯಾಃ ಪಞ್ಚದಶೈವ ತು ||೪||
ದ್ವಾದಶಾಶಸ್ತ್ರಕೃತ್ಯಾಶ್ಚ ಯಾಪ್ಯಾಃ ಸಪ್ತ ಭವನ್ತಿ ಹಿ ।
ರೋಗಾ ವರ್ಜಯಿತವ್ಯಾಸ್ಯುರ್ದಶಪಞ್ಚ ಜಾನತಾ ।
ಅಸಾಧ್ಯೌ ವಾ ಭವೇತಾಂ ತು ಯಾಪ್ಯಾವಾಗನ್ತುಸಂಜ್ಞಿತಾ ||೫||

೮ ವಿಧ ಶಸ್ತ್ರಕರ್ಮಗಳ ಪೈಕಿ ನಾಲ್ಕು ವಿಧಶಸ್ತ್ರಕರ್ಮಗಳಿಂದ ಚಿಕಿತ್ಸೆ ಮಾಡಲು ಯೋಗ್ಯಗಳಾದ ನೇತ್ರರೋಗಗಳನ್ನು ವಿವರಿಸುತ್ತಾರೆ. ಹೇಗೆಂದರೆ :—೧೧ ನೇತ್ರವ್ಯಾಧಿಗಳನ್ನು ಛೇದನಕರ್ಮದಿಂದಲೂ ; ೯ನ್ನು ಲೇಖನದಿಂದಲೂ ; ೫ನ್ನು ಭೇದನದಿಂದಲೂ ; ೧೫ನ್ನು ವ್ಯಧನದಿಂದಲೂ ಸಾಧಿಸಬೇಕು. ೧೨ ವಿಧ ನೇತ್ರರೋಗಗಳು ಶಸ್ತ್ರಕರ್ಮಕ್ಕೆ ಅರ್ಹಗಳಲ್ಲ ; ೭ ಯಾಪ್ಯಗಳು, ೧೫ ವರ್ಜ್ಯಗಳು, (ಅಸಾಧ್ಯ) ೨ ವಿಧ ಬಾಹ್ಯಭಿಘಾತಗಳೂ ಅಸಾಧ್ಯ ಎಂದು ತಿಳಿಯಬೇಕು.

ಅರ್ಶೋಽನ್ವಿತಂ ಭವತಿ ವರ್ತ್ಮ ತು ಯತ್ತಥಾರ್ಶಃ ಶುಷ್ಕಂ ತಥಾರ್ಬುದಮಥೋ ಪಿಡಕಾಃ ಸಿರಾಜಾಃ ।

ಜಾಲಂ ಸಿರಾಜಮಪಿ ಪಞ್ಚವಿಧಂ ತಥಾರ್ಮ ಛೇದ್ಯಾ ಭವನ್ತಿ ಸಹ ಪರ್ವಣಿಕಾಮಯೇನ ||೬||

ಅರ್ಶೋವರ್ತ್ಮ—ಶುಷ್ಕಾರ್ಶಸ್ಸು – ಅರ್ಬುದ – ಸಿರಾಪಿಡಕ – ಸಿರಾಜಾಲಪ್ರಸ್ತಾರ್ಯರ್ಮಶುಷ್ಕಾರ್ಮ–ಅಧಿಮಾಂಸಾರ್ಮ–ಸ್ನಾಯ್ವರ್ಮಗಳೆಂಬ 5 ವಿಧ ಅರ್ಮಗಳೂ ; ಪರ್ವಣಿ ಎಂಬ ನೇತ್ರರೋಗ ಇವುಗಳನ್ನೂ ಛೇದನಕರ್ಮದಿಂದ ಚಿಕಿತ್ಸೆಮಾಡಬೇಕು.

ಉತ್ಸಙ್ಗನೀ ಬಹಳಕರ್ದಮವರ್ತ್ಮ ನೀ ಚ ಶ್ಯಾವಂ ಯಚ್ಚ ಪಠಿತಂ ತ್ವಿಹಬದ್ಧವರ್ತ್ಮ ।
ಕ್ಲಿಷ್ಟಂ ಚ ಪೋಥಕಿಯುತಂ ಖಲು ವರ್ತ್ಮ ಯಚ್ಚ ಕುಮ್ಭೀಕಿನೀಚ ಸಹ ಶರ್ಕರಯಾ ಚ
ಲೇಖ್ಯಾಃ ||೭||

ಉತ್ಸಂಗಿನೀ-ಬಹಳವರ್ತ್ಮ-ಕರ್ದಮವರ್ತ್ಮ-ಶ್ಯಾವವರ್ತ್ಮ-ಬದ್ಧವರ್ತ್ಮ-ಕ್ಲಿಷ್ಟವರ್ತ್ಮ ಪೋಥಕೀ-ಕುಂಭೀಗನೀ-ಶರ್ಕರಾವರ್ತ್ಮ-ಈ ೯ ರೋಗಗಳನ್ನೂ ಲೇಖನಕರ್ಮದಿಂದ ಚಿಕಿತ್ಸೆಮಾಡಬೇಕು.

ಶ್ಲೇಷ್ಮೋಪನಾಹಲಗಣೌ ಚ ಬಿಸಂ ಚ ಭೇದ್ಯಾ ಗ್ರನ್ಥಿಶ್ಚಯಃ ಕ್ರಿಮಿಕೃತೋಽಞ್ಜನ
ನಾಮಿಕಾ ಚ ।

ಶ್ಲೇಷ್ಮೋಪನಾಹ—ಲಗಣ—ಬಿಸವರ್ತ್ಮ-ಕ್ರಿಮಿಗ್ರಂಥಿ ಅಂಜನನಾಮಿಕಗಳೆಂಬ ನೇತ್ರರೋಗಗಳನ್ನೂ ಶಸ್ತ್ರದಿಂದ ಭೇದನಮಾಡಿ ಚಿಕಿತ್ಸೆಮಾಡಬೇಕು.

ಆದೌ ಸಿರಾ ನಿಗದಿತಾಶ್ಚ ಯಯೋಃ ಪ್ರಯೋಗೇ ಪಾಕೌ ಯೌನಯನಯೋಃ
ಪವನೋಽನ್ಯತಶ್ಚ ||೮||
ಪೂಯಾಲಸಾನಿಲವಿಪರ್ಯಯಮನ್ಥಸಂಜ್ಞಾಃ ಸ್ಯನ್ದಾಸ್ತು ಯಾನ್ತ್ಯುಪಶಮಂ ಹಿ ಸಿರಾ
ವ್ಯಧೇನ ।

ಸಿರೋತ್ಪಾತ-ಸಿರಾಹರ್ಷ-ಸಶೋಫನೇತ್ರಪಾಕ-ಅಶೋಫನೇತ್ರಪಾಕ-ಅನ್ಯತೋವಾತ-ಪೂಯಾಲಸ-ವಾತಪರ್ಯಾಯ-(ಪರ್ಯಾಯವಾತ), ೪ ವಿಧ ಅಭಿಷ್ಯಂದಗಳು-೪ ವಿಧ ಅಧಿಮಂಥಗಳು ಇವುಗಳನ್ನು ಸಿರಾವ್ಯಧೆಯಿಂದ ಚಿಕಿತ್ಸೆ ಮಾಡಬೇಕು. (ದುಷ್ಟ ರಕ್ತವನ್ನು ಸ್ರಾವಮಾಡಬೇಕು)

ಶುಷ್ಕಾಕ್ಷಿಪಾಕ ಕಫಪಿತ್ತವಿದಗ್ಧದೃಷ್ಟಿಷ್ವಮ್ಲಾಖ್ಯಶುಕ್ರಸಹಿತಾರ್ಜುನಪಿಷ್ಟಕೇಷು ||೯||
ಅಕ್ಲಿನ್ನವರ್ತ್ಮಹುತಭುಗ್ಧ್ವಜದರ್ಶಿಶುಕ್ತಿಪ್ರಕ್ಲಿನ್ನವರ್ತ್ಮಸು ತಥೈವ ಬಲಾಸಸಂಜ್ಞೇ
ಆಗನ್ತುನಾಮಯಯುಗೇನ ಚ ದೂಷಿತಾಯಾಂ ದೃಷ್ಟೌನ ಶಸ್ತ್ರಪತನಂ ಪ್ರವದನ್ತಿ
ತಜ್ಜ್ಞಾಃ ||೧೦||

ಶುಷ್ಕಾಕ್ಷಿಪಾಕ, ಕಫಪಿತ್ತವಿದಗ್ಧದೃಷ್ಟಿ-ಪಿತ್ತವಿದಗ್ಧದೃಷ್ಟಿ-ಅಮ್ಲಾಧ್ಯುಷಿತ-ಅವ್ರಣಶುಕ್ರ-ಅರ್ಜುನ-ಪಿಷ್ಟಿಕಾ-ಅಕ್ಲಿನ್ನವರ್ತ್ಮ-ಧೂಮದರ್ಶೀ- ಶುಕ್ತಿ-ಪ್ರಕ್ಲಿನ್ನವರ್ತ್ಮ-ಬಲಾಸಕ-ಈ ೧೨ ರೋಗಗಳಲ್ಲೂ ಶಸ್ತ್ರಪ್ರಯೋಗವನ್ನು ಮಾಡಕೂಡದು ಎಂದು ಶಾಲಾಕ್ಯತಂತ್ರದ ಪ್ರವೀಣರು ಹೇಳುತ್ತಾರೆ ; ಮತ್ತು ಸನಿಮಿತ್ತಾ ಅನಿಮಿತ್ತಾ ಲಿಂಗನಾಶಗಳೆಂಬ ೨ ವಿಧ ಆಗಂತುರೋಗಗಳಲ್ಲೂ ಶಸ್ತ್ರಪ್ರಯೋಗ ಮಾಡಕೂಡದು.

ಸಂಪತ್ಕೃತಃ ಷಡಪಿ ಯೇಽಭಿಹಿತಾಸ್ತು ಕಾಚಾಸ್ತೇ ಪಕ್ಷ್ಮಕೋಪ ಸಹಿತಾಸ್ತು ಭವನ್ತಿ
ಯಾಪ್ಯಾಃ ।
ಚತ್ವಾರ ಏವ ಪವನಪ್ರಭವಾಸ್ತ್ವಸಾಧ್ಯಾ ದ್ವೌ ಪಿತ್ತಜಾ ಕಫನಿಮಿತ್ತಜ ಏಕ ಏವ ।
ಅಪ್ಯಾರ್ಥಕಾ ರುಧಿರಜಾಶ್ಚ ಗದಾಸ್ತ್ರಿದೋಷಾಸ್ತ್ವಾವನ್ತ ಏವ ಗದಿತಾವಪಿ ಬಾಹ್ಯಜೌ
ದ್ವೌ ||೧೧||

ವಾತ-ಪಿತ್ತ-ಕಫ-ರಕ್ತ-ಸನ್ನಿಪಾತಜ-ಪರಿಮ್ಲಾಯಿ ಎಂಬ ಆರುವಿಧ ಕಾಚ ರೋಗಗಳೂ, ಪಕ್ಷ್ಮಕೋಪವೂ ಕೂಡ (ಪದಾರ್ಥಗಳನ್ನು ಸರಿಯಾಗಿ ನೋಡುತ್ತಿದ್ದ ಮನುಷ್ಯನಿಗೆ ಸಂಭವಿಸಿದರೆ) ಯಾಪ್ಯಗಳೆಂದು ತಿಳಿಯಬೇಕು. ಹತಾಧಿಮಂಥ-ನಿಮೇಷ -ಗಂಭೀರದೃಷ್ಟಿ-ವಾತಹತವರ್ತ್ಮಗಳೆಂಬ ೪ ವಿಧ ವಾತಜನ್ಯನೇತ್ರರೋಗಗಳೂ-ಹ್ರಸ್ವ ಜಾಡ್ಯ-ಜಲಸ್ರಾವಿ ಎಂಬ ೨ ವಿಧ ಪಿತ್ತಜನ್ಯಗಳೂ, ಕಫಸ್ರಾವವೆಂಬ ಕಫಜನ್ಯರೋಗವೂ —ರಕ್ತಸ್ರಾವ-ಅಜಕಾಜಾತ-ರಕ್ತಾರ್ಶಸ್ಸು-ಸವ್ರಣಶುಕ್ರಗಳೆಂಬ ೪ ವಿಧ ರಕ್ತಜನ್ಯ ಗಳೂ, ಪೂಯಾಸ್ರಾವ-ನಕುಲಾಂಧ್ಯ-ಅಕ್ಷಿಪಾಕಾತ್ಯಯ-ಅಲಜಿ ಎಂಬ ೪ ವಿಧ ತ್ರಿದೋಷಜನ್ಯಗಳೂ, ಸನಿಮಿತ್ತಲಿಂಗನಾಶ-ಅನಿಮಿತ್ತಲಿಂಗ ನಾಶಗಳೆಂಬ ಬಹಿರಾಗಂತು ಜನ್ಯಗಳಾದ ೨ ವಿಧ ರೋಗಗಳೂ ಈ ರೀತಿಯಾಗಿ ೧೭ ವಿಧ ನೇತ್ರರೋಗಗಳು ಅಸಾಧ್ಯ ಗಳೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಾ ಶಾಲಾಕ್ಯತನ್ತ್ರೇ
ಚಿಕಿತ್ಸಿತಪ್ರವಿಭಾಗ ವಿಜ್ಞಾನೀಯನಾಮಕ ಅಷ್ಟಮಾಧ್ಯಾಯಸ್ಯ
ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ
ಕರ್ಣಾಟಕ ಭಾಷಾ ವಿವೃತಿಃ

ನವಮೋಽಧ್ಯಾಯಃ

ಅಥಾತೋ ವಾತಾಭಿಷ್ಯನ್ದಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ವಾತಾಭಿಷ್ಯಂದಚಿಕಿತ್ಸೆಯನ್ನು ವಿವರಿಸಿ ಹೇಳುತ್ತೇವೆ.

ಟಿಪ್ಪಣಿ :—ಹಿಂದಿನ ಅಧ್ಯಾಯದಲ್ಲಿ ೭೬ ವಿಧ ನೇತ್ರರೋಗಗಳನ್ನೂ ಭೇದ್ಯ ಲೇಖ್ಯಾದಿ ೪ ವಿಧ ಶಸ್ತ್ರ ಕರ್ಮಗಳಿಂದ ಸಾಧ್ಯ, ಅಸಾಧ್ಯಾದಿ ಭೇದಗಳಾಗಿ ವಿಂಗಡಿಸಲಾಯಿತು. ನೇತ್ರರೋಗಗಳಿಗೆ ಅಭಿಷ್ಯಂದವೇ ಕಾರಣವಾದ್ದರಿಂದಲೂ ಅವುಗಳಲ್ಲೂ ಪಿತ್ತಾದಿಗಳಿಗೂ ವಾತನೇ ಆವರಣವಾಗುವ ಕಾರಣ ಮೊದಲು ವಾತಾಭಿಷ್ಯಂದ ಚಿಕಿತ್ಸೆಯನ್ನು ವಿವರಿಸುವುದು ಯೋಗ್ಯವಾದದ್ದು. 'ಆದಿ' ಎಂಬುದು ಲೋಪವಾಗಿದೆ ಆದ್ದರಿಂದ ವಾತಾಭಿಷ್ಯಂದಾದಿ ಚಿಕಿತ್ಸೆಯೆಂದು ಹೇಳಬೇಕು ; ಹೀಗೆಯೇ ಪಿತ್ತಾಭಿಷ್ಯಂದಾದಿ ಇತ್ಯಾದಿಯಾಗಿ ಹೇಳಬೇಕು.

ಪುರಾಣಸರ್ಪಿಷಾಸ್ನಿಗ್ಧೌ ಸ್ಯನ್ದಾಧೀಮನ್ಥ ಪೀಡಿತೌ ।
ಸ್ವೇದಯಿತ್ವಾ ಯಥಾನ್ಯಾಯಂ ಸಿರಾಮೋಕ್ಷೇಣ ಯೋಜಯೇತ್ ||೩||
ಸಂಪಾದಯೇದ್ಬಸ್ತಿಭಿಶ್ಚ ಸಮ್ಯಕ್ ಸ್ನೇಹವಿರೇಚಿತೌ ।
ತರ್ಪಣೈಃ ಪುಟಪಾಕೈಶ್ಚ ಧೂಮೈರಾಶ್ಚ್ಯೋತನೈಸ್ತಥಾ ||೪||
ನಸ್ಯಸ್ನೇಹಪರೀಷೇಕೈಃ ಶಿರೋಬಸ್ತಿಭಿರೇವ ಚ ।

ನೇತ್ರಾಭಿಷ್ಯಂದ ಮತ್ತು ಅಧಿಮಂಥಗಳಿಂದ ಪೀಡಿತರಾದ ನೇತ್ರರೋಗಿಗಳನ್ನು ಸ್ನೇಹಪಾನ, ಸ್ನೇಹಲೇಪನಗಳಿಂದ ಸ್ನಿಗ್ಧರನ್ನಾಗಿಮಾಡಿ (ಸ್ನೇಹವು ೧ ವರ್ಷಕ್ಕಿಂತ ಹಿಂದಿನದಾಗಿರಬೇಕು, ಕೆಲವರು ೧೦ ವರ್ಷಗಳು ಕಳೆದಿರಬೇಕೆಂದು ಹೇಳುತ್ತಾರೆ) ಯಥಾಯೋಗ್ಯವಾಗಿ ಸ್ವೇದಮಾಡಿಸಿ ಸಿರಾಮೋಕ್ಷವನ್ನೂ ಸರಿಯಾಗಿ ಸ್ನೇಹವಿರೇಚನದಿಂದ ಶುದ್ಧಿಮಾಡಿದ ಮೇಲೆ ಸರಿಯಾದ ಬಸ್ತಿಕರ್ಮಗಳಿಂದ ಉಪಚರಿಸಿ ಅನಂತರ ತರ್ಪಣ-ಪುಟಪಾಕ-ಧೂಮ-ಆಶ್ಚ್ಯೋತನ-ನಸ್ಯ-ಸ್ನೇಹಪರಿಷೇಚನ-ಶಿರೋಬಸ್ತಿ ವಿಧಾನಗಳಿಂದ ಉಪಚಾರ ಮಾಡಬೇಕು.

ಟಿಪ್ಪಣಿ : ರಕ್ತದೋಷದಿಂದ ನೇತ್ರರೋಗಗಳುಂಟಾಗುತ್ತವೆ. ರಕ್ತಶುದ್ಧಿ ಮಾಡಲು ಸಿರಾವ್ಯಧದಿಂದ ದುಷ್ಟರಕ್ತವನ್ನು ಹೊರಡಿಸಬೇಕು ; ಅದಕ್ಕೆ ಮುಂಚೆಯೇ ದೃಷ್ಟಿಗೆ ಹತ್ತಿರದಲ್ಲೇ ತಲೆಯನ್ನು ಸ್ನೇಹದಿಂದ ಸ್ವಲ್ಪ ಲೇಪಮಾಡಿ ಸ್ವೇದ ಮಾಡಿಸಬೇಕು. ಆದರೆ ದೃಷ್ಟಿಗೆ ಸ್ವೇದಮಾಡಿಸಬಾರದು ; ದೋಷವ್ಯಾಧಿಗಳಿಗೆ ನಿರಾಮಾ

ವಸ್ಥೆಯಲ್ಲೇ ಘೃತಪಾನವನ್ನು ಮಾಡಿಸಬೇಕು. ತಂತ್ರಾನ್ತರದಲ್ಲಿ ಸ್ವೇದ, ಲೇಪ,-ತಿಕ್ತಾನ್ನಸೇವನ,-ಧೂಮಪಾನಗಳನ್ನು ೪ ದಿವಸಗಳವರೆಗೆ ಆಚರಿಸುವುದು, ಲಂಘನ ಇವು ಆರೂ ನೇತ್ರರೋಗಿಗಳಿಗೆ ಆಮಪಾಚಕಗಳು ; ಅಂಜನ-ಘೃತಪಾನ-ಕಷಾಯ ಗುರು ಭೋಜನ-ಆಮರೋಗದಲ್ಲಿ ಸ್ನಾನ ಇವುಗಳನ್ನು ನೇತ್ರರೋಗದವರು ತ್ಯಜಿಸಬೇಕು. ವಿದೇಹನ ಮತದಲ್ಲಿ ನೇತ್ರರೋಗದಲ್ಲಿ ಮೊದಲು ೩ ದಿನಗಳವರೆಗೆ ಲಘುವಾದ ಆಹಾರ ಅಥವಾ ೩ ದಿನ ಉಪವಾಸವಿರಬೇಕು. ರಾತ್ರಿಯಕಾಲದಲ್ಲಿ ಭೋಜನ ಮಾಡಬೇಕು. ೪ ನೆಯ ದಿನ ನಸ್ಯಸೇಕಾದಿಗಳನ್ನು ಮಾಡಿಸಬೇಕು ; ಸಿರಾಮೋಕ್ಷ ಮಾಡಬೇಕಾದರೆ ಉಪನಾಸಿಕಾ-(ಮೂಗಿನಹತ್ತಿರದ), ಲಲಾಟ್ಯಾಂ-ಹಣೆಯಲ್ಲಿ ಉಬ್ಬಿರುವ ಸಿರೆಯನ್ನು ವೇಧಿಸಬೇಕು. ಸುಖೋಷ್ಣಸೇಕವೂ, ಶೀತಲ ಆಶ್ಚ್ಯೋತನವೂ ಹಿತಕರಗಳೆಂದು ತಿಳಿಯಬೇಕು.

ವಾತಘ್ನಾನೂಪಜಲಜ ಮಾಂಸಾಮ್ಲಕ್ವಾಥಸೇಚನೈಃ ॥೫॥
ಸ್ನೇಹೈಶ್ಚತುರ್ಭಿರುಷ್ಣೈಶ್ಚ ತತ್ಪ್ರೀತಾಮ್ಬರಧಾರಣೈಃ ।
ಪಯೋಭಿರ್ವೇಸವಾರೈಶ್ಚ ಶಾಲ್ವಣೈಃ ಪಾಯಸೈಸ್ತಥಾ ॥೬॥
ಭಿಷಕ್ಸಂಪಾದಯೇದೇತಾನುಪನಾಹೈಶ್ಚ ಪೂಜಿತೈಃ ।
ಗ್ರಾಮ್ಯಾನೂಪೌದಕರಸೈಃ ಸ್ನಿಗ್ಧೈಃ ಫಲರಸಾನ್ವಿತೈಃ ॥೭॥
ಸುಸಂಸ್ಕೃತೈಃ ಪಯೋಭಿಸ್ಚ ತಯೋರಾಹಾರ ಇಷ್ಯತೇ ।
ತಥಾ ಚೋಪರಿಭಕ್ತಸ್ಯ ಸರ್ಪಿಃ ಪಾನಂ ಪ್ರಶಸ್ಯತೇ ॥೮॥
ತ್ರಿಫಲಾಕ್ವಾಥಸಂಸಿದ್ಧಂ ಕೇವಲಂ ಜೀರ್ಣಮೇವ ವಾ ।
ಸಿದ್ಧಂ ವಾತಹರೈಃ ಕ್ಷೀರಂ ಪ್ರಥಮೇನ ಗಣೇನ ವಾ ॥೯॥
ಸ್ನೇಹಾಸ್ತೈಲಾದ್ವಿನಾಸಿದ್ಧಾಃ ವಾತಘ್ನೈಸ್ತರ್ಪಣೈರ್ಹಿತಾಃ ।
ಸ್ನೈಹಿಕಃ ಪುಟಪಾಕಶ್ಚ ಧೂಮೋನಸ್ಯಂ ಚ ತದ್ವಿಧಮ್ ॥೧೦॥
ನಸ್ಯಾದಿಷು ಸ್ಥಿರಾಕ್ಷೀರಮಧುರೈಸ್ತೈಲಮಿಷ್ಯತೇ ।
ಏರಣ್ಡಪಲ್ಲವೇ ಮೂಲೇ ತ್ವಚಿ ಪಾಜಂ ಪಯಃ ಶೃತಮ್ ॥೧೧॥
ಕಣ್ಟಕಾರ್ಯಾಶ್ಚ ಮೂಲೇಷು ಸುಖೋಷ್ಣಂ ಸೇಚನೇ ಹಿತಮ್ ।
ಸೈನ್ಧವೋದೀಚ್ಯಯಷ್ಟ್ಯಾಹ್ವಪಿಪ್ಪಲೀಭಿಃ ಶೃತಂ ಪಯಃ ॥೧೨॥
ಹಿತಮಧ್ವೋದಕಂ ಸೇಕೇ ತಥಾಶ್ಚ್ಯೋತನಮೇವ ಚ ।

ವಾತಹರಗಳಾದ ಕಾಕೋಳ್ಯಾದಿ ಕ್ವಾಥ, ವರಾಹಾದಿ ಅನೂಪಮಾಂಸ, ಮತ್ಸ್ಯ ಮೊದಲಾದ ಜಲಚರ ಮಾಂಸರಸಗಳು-ಹುಳಿಕಲಗಚ್ಚು ಇವುಗಳಿಂದಲೂ ಅಕ್ಷಿಸೇಚನೆಗಳಿಂದಲೂ-ಸುಖೋಷ್ಣಗಳಾದ ೪ ವಿಧ ಸ್ನೇಹಗಳಲ್ಲಿ ಅದ್ದಿದ ವಸ್ತ್ರಗಳನ್ನು ಕಣ್ಣುಗಳ ಮೇಲೆ ಮುಚ್ಚುವುದರಿಂದಲೂ, ಹಾಲು-ವೇಸವಾರ-ಶಾಲ್ವಣಸ್ವೇದ, ಪಾಯಸಗಳಿಂದಲೂ ವೈದ್ಯನು ಉಪನಾಹಸ್ವೇದವನ್ನು ಮಾಡಿಸಬೇಕು. ಆಡು ಮೊದಲಾದ

ಗ್ರಾಮ್ಯಪ್ರಾಣಿಗಳ, ಮೀನು ಮೊದಲಾದ ಔದಕಪ್ರಾಣಿಗಳ ಮಾಂಸರಸದೊಡನೆ ಸ್ನಿಗ್ಧ ಮಾಡಿದ ಫಲರಸಗಳನ್ನು ಸೇರಿಸಿಯಾಗಲೀ, ಸರಿಯಾಗಿ ತಯಾರಿಸಿ ಹಾಲು ಮಿಶ್ರ ಮಾಡಿದ ಅನ್ನವನ್ನು ಭೋಜನಮಾಡಿಸಿದ ಮೇಲೆ ಘೃತವನ್ನು ಪಾನಮಾಡಿಸುವುದು ಉತ್ತಮವು. ತ್ರಿಫಲಾಕಷಾಯದಿಂದ ತಯಾರಿಸಿದ ಘೃತವನ್ನಾಗಲೀ, ಬರೀ ಹಳೆಯ ತುಪ್ಪವನ್ನಾಗಲೀ ಅಥವಾ ವಿದಾರಿಗಂಧಾದಿ ಲಘುಪಂಚಮೂಲದೊಡನೆ ಕಾಯಿಸಿದ ಹಾಲಾಗಲೀ, ತೈಲವನ್ನು ಬಿಟ್ಟು ಉಳಿದ ಸ್ನೇಹಗಳನ್ನು ವಾತಹರದ್ರವ್ಯಗಳೊಡನೆ ತಯಾರಿಸಿದ ತರ್ಪಣವಾಗಲೀ, ಪಾನವಾಗಲೀ, ಹಿತವಾದದ್ದು ; ಸ್ನೇಹನ, ಪುಟಪಾಕ, ಧೂಮ, ನಸ್ಯಗಳು ಹಿತಕರಗಳು. ಮೂರೆಲೆಹೊನ್ನೆ ಹಾಲು, ಕಾಕೋಲ್ಯಾದಿ ಮಧುರ ದ್ರವ್ಯಗಳೊಡನೆ ತಯಾರಿಸಿದ ತೈಲದಿಂದ ನಸ್ಯಮಾಡಿಸಬೇಕು ; ಹರಳೆಲೆ ಹರಳುಬೇರಿನ ಮೇಲಿನ ತೊಗಟೆಗಳೊಡನೆ ಆಡಿನಹಾಲನ್ನು ಪಾಕ ಮಾಡಿಯಾಗಲೀ, ನೆಲಗುಳ್ಳದ ಬೇರಿನೊಡನೆ ಕಾಯಿಸಿದ ಹಾಲಿನಿಂದಾಗಲೀ ಸಖೋಷ್ಣವಾಗಿ ನೇತ್ರಸೇಚನೆ ಮಾಡಿದರೆ ಹಿತಕರವು ; ಸೈಂಧವಲವಣ, ಮುಡಿವಾಳ, ಅತಿಮಧುರ, ಹಿಪ್ಪಲಿ ಇವುಗಳೊಡನೆ ಹಾಲನ್ನೂ ಅದರ ಅರ್ಧದಷ್ಟು ನೀರನ್ನೂ ಸೇರಿಸಿ ಕಾಯಿಸಿ ಶೋಧಿಸಿಕೊಂಡು ಸೇಚನೆ, ಆಶ್ಚ್ಯೋತನೆಗಳನ್ನು ಮಾಡಿಸಿದರೆ ಹಿತವಾಗುತ್ತದೆ.

ಹ್ರೀವೇರವಕ್ರಮಂಜಿಷ್ಠೋದುಂಬರತ್ವಕ್ಷು ಸಾಧಿತಮ್ ॥೧೩॥
ಸಾಮ್ಭುಚ್ಛಾಗಂ ಪಯೋಽಪಿ ಶೂಲಾಶ್ಚ್ಯೋತನಮುತ್ತಮಮ್ ।

ಲಾಮಂಚ, ತಗರ, ಮಂಜಿಷ್ಠೆ, ಅತ್ತಿತೊಗಟೆಗಳೊಡನೆ ಅರ್ಧದಷ್ಟು ನೀರು ಸೇರಿಸಿದ ಆಡಿನಹಾಲನ್ನು ಕಾಯಿಸಿ ಕಣ್ಣಿಗೆ ತುಂಬಿ (ಆಶ್ಚ್ಯೋತನಮಾಡಿಸಿ) ದರೆ ಶೂಲಹರವಾಗುತ್ತದೆ.

ಮಧುಕಂ ರಜನೀಂ ಪಥ್ಯಾಂ ದೇವದಾರುಂ ಚ ಪೇಷಯೇತ್ ॥೧೪॥
ಆಜೇನ ಪಯಸಾ ಶ್ರೇಷ್ಠಮಭಿಷ್ಯನ್ದೇ ತದಞ್ಜನಮ್ ।
ಗೈರಿಕಂ ಸೈನ್ಧವಂ ಕೃಷ್ಣಾಂ ನಾಗರಂ ಚ ಯಥೋತ್ತರಮ್ ॥೧೫॥
ದ್ವಿಗುಣಂ ಪಿಷ್ಟಮದ್ಭಿಸ್ತು ಗುಟಿಕಾಞ್ಜನಮಿಷ್ಯತೇ ।
ಸ್ನೇಹಾಞ್ಜನಂ ಹಿತಂ ಚಾತ್ರ ವಕ್ಷ್ಯತೇ ತದ್ಯಥಾವಿಧಿ ॥೧೬॥
ರೋಗೋ ಯಶ್ಚಾನ್ಯತೋ ವಾತೋ ಯಶ್ಚ ಮಾರುತಪರ್ಯಯಃ ।
ಅನೇನೈವ ವಿಧಾನೇನ ಭಿಷಕ್ತಾವಪಿ ಸಾಧಯೇತ್ ॥೧೭॥

ಅತಿಮಧುರ, ಅರಿಶಿನ, ಅಣಿಲೆಸಿಪ್ಪೆ, ದೇವದಾರು ಇವುಗಳನ್ನು ಆಡಿನಹಾಲಿನಲ್ಲಿ ಅರೆದು ಕಲ್ಕಮಾಡಿ ಕಣ್ಣಿಗೆ ಅಂಜನಹಾಕಿದರೆ ಅಭಿಷ್ಯಂದದಲ್ಲಿ ಶ್ರೇಷ್ಠವಾದದ್ದು ; ಕಾವಿ, ಸೈಂಧವ, ಹಿಪ್ಪಲಿ, ಶುಂಠಿ, ಇವನ್ನು ಕ್ರಮವಾಗಿ ಎರಡರಷ್ಟು ಹೆಚ್ಚಿಸುತ್ತಾ ಆಡಿನ ಹಾಲಿನಲ್ಲಾಗಲೀ ನುಣ್ಣಗೆ ಅರೆದು ಗುಳಿಗೆ ಮಾಡಿಟ್ಟುಕೊಂಡು ಕಣ್ಣಿಗೆ ಅಂಜನ ಹಾಕಿದರೆ ಅಭಿಷ್ಯಂದಹರವು, ಇದಕ್ಕೆ ಗುಲಕಾಂಜನವೆಂದು ಹೆಸರು ; ಸ್ನೇಹಾಂಜನವೂ ಹಿತಕರವು ;

ಅದನ್ನು ಕ್ರಮವಾಗಿ ಹೇಳುತ್ತೇವೆ. ಇದೇ ರೀತಿಯಾಗಿ ವೈದ್ಯನು ಅನ್ಯತೋವಾತ ಮಾರುತಪರ್ಯಾಯಗಳನ್ನು ಚಿಕಿತ್ಸೆ ಮಾಡಿ ಗುಣಪಡಿಸಬೇಕು.

ಪೂರ್ವಭಕ್ತಂ ಹಿತಂ ಸರ್ಪಿಃ ಕ್ಷೀರಂ ವಾಪ್ಯಥ ಭೋಜನೇ ।
ವೃಕ್ಷಾದನ್ಯಾಂ ಕಪಿತ್ಥೇ ಚ ಪಞ್ಚಮೂಲೇ ಮಹತ್ಯಪಿ ॥೧೮॥
ಸಕ್ಷೀರಂ ಕರ್ಕಟರಸೇ ಸಿದ್ಧಂ ಚಾತ್ರ ಘೃತಂ ಪಿಬೇತ್ ।
ಸಿದ್ಧಂ ವಾಪಿತಮತ್ರಾಹುಃ ಪತ್ತೂರಾರ್ತಗಳಾಗ್ನಿಕೈಃ ॥೧೯॥
ಸಕ್ಷೀರಂ ಮೇಷಶೃಙ್ಗ್ಯಾ ವಾ ಸರ್ಪಿರ್ವೀರತರೇಣವಾ ।

ಬಂದಣಿಗೆ, ಬೇಲದತೊಗಟೆ, ಬಿಲ್ವಾದಿಪಂಚಮೂಲ ಇವುಗಳ ಕಷಾಯದೊಡನೆ (ಏಡಿ) ನಳ್ಳಿಯಮಾಂಸರಸ, ಹಾಲು–ತುಪ್ಪಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಪ್ರಾಗ್ಭಕ್ತಪಾನ ಮಾಡಿದರೆ ಅಥವಾ ಇವುಗಳ ಸಂಗಡ ಕ್ಷೀರಪಾಕ ವಿಧಾನದಿಂದ ತಯಾರಿಸಿದ ಹಾಲನ್ನು ಅನ್ನಕ್ಕೆ ಸೇರಿಸಿ ಭೋಜನ ಮಾಡಿದರೆ ಅನ್ಯತೋ ವಾತ, ವಾತ ಪರ್ಯಾಯ ರೋಗಗಳು ನಿವಾರಣೆಯಾಗುತ್ತವೆ. ಇದೇರೀತಿ ಹೊನ್ನಗಳು, ಕರಿಮುಳ್ಳು ಗೋರಂಟೆ, ಜೀರಿಗೆಗಳೊಡನೆ ತಯಾರಿಸಿದ ಘೃತವನ್ನಾಗಲೀ ಗೆರ್ಸೆಹಂಬು, ಲಾಳ ಅಥವಾ ವಡಿವಾರದ ಕಷಾಯ ಹಾಲುತುಪ್ಪಗಳನ್ನು ಸೇರಿಸಿ ತಯಾರಿಸಿದ ತುಪ್ಪವನ್ನಾಗಲೀ ಭೋಜನಕ್ಕೆ ಮೊದಲು ಕುಡಿಸಬೇಕು.

ಸೈನ್ಧವಂ ದಾರು ಶುಂಠೀ ಚ ಮಾತುಲುಙ್ಗರಸೋ ಘೃತಮ್ ॥೨೦॥
ಸ್ತನ್ಯೋದಕಾಭ್ಯಾಂ ಕರ್ತವ್ಯಂ ಶುಷ್ಕಪಾಕೇ ತದಞ್ಜನಮ್ ।
ಪೂಜಿತಂ ಸರ್ಪಿಷಶ್ಚಾತ್ರ ಪಾನಮಕ್ಷ್ಣೋಶ್ಚ ತರ್ಪಣಮ್ ॥೨೧॥
ಘೃತೇನ ಜೀವನೀಯೇನ ನಸ್ಯಂ ತೈಲೇನ ಚಾಣುನಾ ।
ಪರಿಷೇಕೇ ಹಿತಂ ಚಾತ್ರ ಪಯಃ ಶೀತಂ ಸಸೈನ್ಧವಮ್ ॥೨೨॥
ರಜನೀದಾರುಸಿದ್ಧಂ ವಾ ಸೈನ್ಧವೇನ ಸಮಾಯುತಮ್ ।
ಸರ್ಪಿರ್ಯುತಂ ಸ್ತನ್ಯಘೃಷ್ಟಮಞ್ಜನಂ ಚ ಮಹೌಷಧಮ್ ॥೨೩॥
ವಸಾ ವಾನೂಪಜಲಜಾ ಸೈಂಧವೇನ ಸಮಾಯುತಾ ।
ನಾಗರೋನ್ಮಿಶ್ರಿತಾ ಕಿಞ್ಚಿಚ್ಛುಷ್ಕಪಾಕೇ ತದಞ್ಜನಮ್ ॥೨೪॥

ಸೈಂಧವ, ದೇವದಾರು, ಶುಂಠಿ ಇವುಗಳ ಕಲ್ಕವನ್ನು ಮಾದಳರಸ, ತುಪ್ಪ, ಸ್ತನ್ಯ, ನೀರು ಇವುಗಳೊಡನೆ ತಯಾರಿಸಿದ ರಸಕ್ರಿಯೆಯನ್ನು ಶುಷ್ಕಾಕ್ಷಿಪಾಕದಲ್ಲಿ ಅಂಜನ ಹಾಕಬೇಕು. ಘೃತಪಾನವೂ ಘೃತದಿಂದ ಅಕ್ಷಿತರ್ಪಣವೂ ಶ್ರೇಷ್ಠವಾದದ್ದು. ಜೀವನೀಯ ಗಣದ್ರವ್ಯಗಳಿಂದ ತಯಾರಿಸಿದ ಘೃತದಿಂದಾಗಲೀ ಶಾಲಾಕ್ಯ ತಂತ್ರೋಕ್ತವಾದ ಅಣುತೈಲದಿಂದಾಗಲೀ ನಸ್ಯಮಾಡಿಸಬೇಕು ; ಸ್ವಲ್ಪ ಸೈಂಧವ ಮಿಶ್ರಮಾಡಿದ ತಣ್ಣಗಿರುವ ಹಾಲಿನಿಂದ ಕಣ್ಣಿಗೆ ಪರಿಸೇಚನೆ ಮಾಡಬೇಕು ; ಅರಿಶಿನ ದೇವದಾರುಗಳೊಡನೆ ತಯಾರಿಸಿದ ಘೃತಕ್ಕೆ ಸ್ವಲ್ಪ ಸೈಂಧವವನ್ನೂ, ಸ್ವಲ್ಪ ಶುಂಠಿಯನ್ನೂ ಸೇರಿಸಿ ಸ್ತನ್ಯದಿಂದ ಅರೆದು ಕಣ್ಣಿಗೆ ಅಂಜನ ಹಾಕಬೇಕು ; ಹಂದಿಮೊದಲಾದ ಅನೂಪಪ್ರಾಣಿಗಳ ಅಥವಾ ಮೀನಿನ

ಕೊಬ್ಬಿಗೆ ಸ್ವಲ್ಪ ಶುಂಠಿಯ ಪುಡಿಯನ್ನೂ ಸ್ವಲ್ಪಸೈಂಧವವನ್ನೂ ಸೇರಿಸಿ ಶುಷ್ಕಾಕ್ಷಿಪಾಕದಲ್ಲಿ ಅಂಜನಹಾಕಬೇಕು.

ಪವನಪ್ರಭವಾ ರೋಗಾ ಯೇ ಕೇಚಿತ್ ದೃಷ್ಟಿನಾಶನಾಃ ।
ಬೀಜೇನಾನೇನ ಮೇಧಾವೀ ತೇಷು ಕರ್ಮ ಪ್ರಯೋಜಯೇತ್ ॥೨೫॥

ಈ ರೀತಿ ವಾತಾಭಿಷ್ಯಂದನಿವಾರಕ ಚಿಕಿತ್ಸಾವಿಧಾನವನ್ನೇ ಆಧಾರಮಾಡಿಕೊಂಡು ಬುದ್ಧಿವಂತ ವೈದ್ಯನು ವಾತಾದಿಪ್ರಕೋಪಜನ್ಯಗಳಾದ ದೃಷ್ಟಿನಾಶಕಗಳಾದ ತಿಮಿರ ಕಾಚಾದಿ ಮಹಾನೇತ್ರರೋಗಗಳಿಗೂ ಊಹಾಪೋಹವಿಚಾರಮಾಡಿ ಚಿಕಿತ್ಸೆ ಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾರ್ಗತಶಾಲಾಕ್ಯತನ್ತ್ರೇ ವಾತಾಭಿಷ್ಯನ್ದಪ್ರತಿಷೇಧನಾಮಕನವಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕಭಾಷಾವಿವೃತಿಃ

ದಶಮೋಽಧ್ಯಾಯಃ

ಅಥಾತಃ ಪಿತ್ತಾಭಿಷ್ಯನ್ದಪ್ರತಿಷೇಧಂ ವ್ಯಾಖ್ಯಾಸ್ಯಾಮಃ ॥೧॥

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಪಿತ್ತಾಭಿಷ್ಯಂದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಪಿತ್ತಸ್ಯಂದೇ ಪೈತ್ತಿಕೇ ಚಾಧಿಮನ್ಥೇ ರಕ್ತಾಸ್ರಾವಃ ಸ್ರಂಸನಂ ಚಾಪಿ ಕಾರ್ಯಮ್ ।
ಅಕ್ಷ್ಣೋಃ ಸೇಕಾಲೇಪನಸ್ಯಾಞ್ಜನಾನಿ ಪೈತ್ತೇ ಯತ್ಸ್ಯಾದ್ವೈಸರ್ಪೇ ವಿಧಾನಮ್ ॥೩॥
ಗುನ್ದ್ರಾಂ ಶಾಲಿಂ ಶೈವಲಂ ಶೈಲಭೇದಂ ದಾರ್ವೀಮೇಲಾಮುತ್ಪಲಂ ರೋಧ್ರಮಭ್ರಮ್ ।
ಪದ್ಮಾತ್ಪತ್ರಂ ಶರ್ಕರಾದರ್ಭಮಿಕ್ಷುಂ ತಾಲಂ ರೋಧ್ರಂ ವೇತಸಂ ಪದ್ಮಕಂ ಚ ॥೪॥
ದ್ರಾಕ್ಷಾಂ ಕ್ಷೌದ್ರಂ ಚಂದನಂ ಯಷ್ಟಿಕಾಹ್ವಂ ಯೋಷಿತ್ಕ್ಷೀರಂ ರಾತ್ರ್ಯನನ್ತೇ ಚ ಪಿಷ್ಟ್ವಾ ।
ಸರ್ಪಿಃ ಸಿದ್ಧಂ ತರ್ಪಣೇ ಸೇಕನಸ್ಯೇ ಶಸ್ತಂ ಕ್ಷೀರಂ ಸಿದ್ಧಮೇತೇಷು ಚಾಜಮ್ ॥೫॥
ಯೋಜ್ಯೋ ವರ್ಗೋ ವ್ಯಸ್ತಮಪ್ಯೋಽನ್ಯಥಾ ವಾ ಸಮ್ಯಙ್ನಸ್ಯೇಽಪ್ಯಾರ್ಧಸಂಜ್ಞೇಽಪಿ
ನಿತ್ಯಮ್ ।
ಕ್ರಿಯಾಃ ಸರ್ವಾಃ ಪಿತ್ತಹರ್ಯಃ ಪ್ರಶಸ್ತಾ ಸ್ತ್ರ್ಯಹಾಚ್ಚೋರ್ಧ್ವಂ ಕ್ಷೀರಸರ್ಪಿಶ್ಚ
ನಸ್ಯಮ್ ॥೬॥

ಪಿತ್ತಾಭಿಷ್ಯಂದ ಮತ್ತು ಪಿತ್ತಾಧಿಮಂಥಗಳಲ್ಲಿ ರಕ್ತಸ್ರಾವವನ್ನೂ ವಿರೇಚನವನ್ನೂ ಮಾಡಿಸಬೇಕು ; ಕಣ್ಣುಗಳಿಗೆ ಪಿತ್ತವಿಸರ್ಪದಲ್ಲಿ ಮಾಡತಕ್ಕ ಪಿತ್ತಹರಗಳಾದ ಉಶೀರ–ಲಾಮಂಚ–ರಕ್ತಚಂದನಾದಿ ದ್ರವ್ಯಗಳಿಂದ ಸೇಕ–ಲೇಪ ನಸ್ಯ ಅಂಜನಗಳನ್ನು ಪ್ರಯೋಗಿಸಬೇಕು; ಶುಂಠಿಹುಲ್ಲು, ಬತ್ತದ ಬೇರು, ಹಸಿರು ಗರಿಕೆ, ಪಾಷಾಣಭೇದ (ಹಿಟ್ಟುಳುಕಿನ ಗಿಡ), ಮರದರಿಶಿನ, ಸಣ್ಣಏಲಕ್ಕಿ, ನೈದಿಲೆಗೆಡ್ಡೆ, ರೋಧ್ರದಚಕ್ಕೆ, ಕೊನ್ನಾರೆಗೆಡ್ಡೆ, ತಾವರೆಎಲೆ, ಸಕ್ಕರೆ, ದರ್ಭೆಯಬೇರು, ಕಬ್ಬಿನ ಬೇರು ; ಪನೆತೊಗಟೆ, ಲೋಧ್ರ, ನೀರಂಜಿಮರದ ತೊಗಟೆ, ಪದ್ಮಕ, ದ್ರಾಕ್ಷಿ, ಜೇನುತುಪ್ಪ, ರಕ್ತಚಂದನ, ಅತಿಮಧುರ, ಹೆಂಗಸಿನಸ್ತನ್ಯ, ಅರಿಶಿನ, ಸೊಗದೆಬೇರು, ಇವುಗಳ ಕಲ್ಕಕ್ಕೆ ಅದರ ೪ ರಷ್ಟು ತುಪ್ಪವನ್ನೂ ತುಪ್ಪದ ೮ ರಷ್ಟು ಆಡಿನ ಹಾಲನ್ನೂ ದ್ರವ್ಯಪಾಕಕ್ಕಾಗಿ ಹಾಲಿನ ೪ ರಷ್ಟು ನೀರನ್ನೂ ಸೇರಿಸಿ ಮೃದ್ವಗ್ನಿಯಿಂದ ಘೃತಪಾಕವನ್ನು ಮಾಡಿಟ್ಟುಕೊಂಡು ಸರಿಯಾಗಿ ನಸ್ಯಕರ್ಮವನ್ನು ಮಾಡಿಸಿದರೆ ಅಂದರೆ ಪ್ರತಿಮರ್ಶ–ಅವಪೀಡನಸ್ಯ–ಶಿರೋವಿರೇಚನಗಳೆಂಬ–೪ ಪ್ರಕಾರಗಳಿಂದ ಪ್ರಯೋಗಿಸಿದರೆ ಪಿತ್ತಾಭಿಷ್ಯಂದಾದಿ ರೋಗಗಳುನಿ ವಾರಣೆಯಾಗುತ್ತವೆ ; ಮೇಲ್ಕಂಡ ದ್ರವ್ಯಗಳೆಲ್ಲವಾಗಲೀ, ಅರ್ಧವಾಗಲೀ ಆಗಬಹುದು ; ಪಿತ್ತಹರ ಚಿಕಿತ್ಸಾ

ಕ್ರಮಗಳೇ ಶ್ರೇಷ್ಠವಾದುವು ; ಮೂರು ದಿನಗಳ ಮೇಲೆ ಹಾಲುತುಪ್ಪಗಳನ್ನು ರಂಗಳಿಸಿ ನಸ್ಯಕರ್ಮವನ್ನು ಮಾಡಿಸಬೇಕು.

ಪಾಲಾಶಂ ಸ್ಯಾಚ್ಛ್ಯೋಣಿತಂ ಚಾಞ್ಜನಾರ್ಥೇ ಶಲ್ಲಕ್ಯಾ ವಾ ಶರ್ಕರಾಕ್ಷೌದ್ರಯುಕ್ತಮ್ ।
ರಸಕ್ರಿಯಾಂ ಶರ್ಕರಾಕ್ಷೌದ್ರಯುಕ್ತಾಂ ಪಾಳಿನ್ದ್ಯಾಂ ವಾ ಮಧುಕೇ ವಾಪಿ ಕುರ್ಯಾತ್ ॥೭॥

ಮುಸ್ತಾ ಫೇನಃ ಸಾಗರಸ್ಯೋತ್ಪಲಂ ಚ ಕ್ರಿಮಿಘ್ನೈಲಾಧಾತ್ರಿ ಬೀಜಾದ್ರಸಶ್ಚ ।
ತಾಲೀಶೈಲಾ ಗೈರಿಕೋಶೀರಶಙ್ಖೈ ರೇವಂಯುಞ್ಜ್ಯಾದಞ್ಜನಂ ಸ್ತನ್ಯಪಿಷ್ಟೈಃ ॥೮॥
ಚೂರ್ಣಂ ಕುರ್ಯಾದಞ್ಜನಾರ್ಥೇ ರಸೋವಾ ಸ್ತನೋಪೇತೋ ಧಾತಕೀಸ್ಯನ್ದನಾಭ್ಯಾಮ್ ।
ಯೋಷಿತ್ಸ್ತನ್ಯಂ ಶಾತಕುಮ್ಭಂ ವಿಘೃಷ್ಟಂ ಕ್ಷೌದ್ರೋಪೇತಂ ಕೈಂಶುಕಂ ಚಾಪಿ ಪುಷ್ಪಮ್ ॥೯॥

ಮುತ್ತುಗದ ಅಥವಾ ನಾಯಿಬೇಲದ ತೊಗಟೆಯ ರಸಕ್ಕೆ ಸಕ್ಕರೆ ಜೇನುತುಪ್ಪಗಳನ್ನು ಸೇರಿಸಿ ರಂಗಳಿಸಿ ಅಥವಾ ಹಿಪ್ಪೆತೊಗಟೆಯ ರಸಕ್ಕೆ ತಿಗಡೆಪುಡಿ ಸಕ್ಕರೆ ಜೇನುತುಪ್ಪ ಇವನ್ನು ಮಿಶ್ರಮಾಡಿ ರಸಕ್ರಿಯೆಯನ್ನಾಗಲೀ, ಕೊನ್ನಾರಿಗೆಡ್ಡೆ, ಸಮುದ್ರದ ನೊರೆ, ನೈದಿಲೆಗೆಡ್ಡೆಗಳ ಕಲ್ಕ ; ವಿಡಂಗ, ಏಲಕ್ಕಿ, ನೆಲ್ಲಿಯಬೀಜದೊಳಗಿರುವ ತಿರುಳು ಇವುಗಳ ಕಲ್ಕ, ತಾಳೀಸಪತ್ರೆ, ಏಲಕ್ಕಿ, ಕಾವಿ, ಲಾವಂಚ ಶಂಖ, ಇವುಗಳನ್ನು ಸ್ತನ್ಯದಲ್ಲಿ ಅರೆದು ಕಲ್ಕಮಾಡಿಯಾಗಲೀ ಅಂಜನ ಹಾಕಬೇಕು. ಧಾತಕೀಕುಸುಮ ಮತ್ತು ತಿನಿಶಪುಷ್ಪಗಳನ್ನು ಮೊಲೆಹಾಲಿನಲ್ಲಿ ಅರೆದು ಕಲ್ಕಮಾಡಿಯಾಗಲೀ ಸ್ತನ್ಯದಿಂದ ಚಿನ್ನವನ್ನೂ ಮುತ್ತುಗದ ಹೂವನ್ನೂ ಮಿಶ್ರಮಾಡಿ ತಾಮ್ರದ ಭರಣಿಯಲ್ಲಿಟ್ಟುಕೊಂಡು ಕಣ್ಣಿಗೆಚ್ಚಲು ಪಿತ್ತಾಭಿಷ್ಯಂದಾದಿಗಳೂ ಮತ್ತು ಇತರ ಪೈತ್ತಿಕ ನೇತ್ರರೋಗಗಳೂ ನಿವಾರಣೆಯಾಗುತ್ತವೆ.

ರೋಧ್ರಂ ದ್ರಾಕ್ಷಾಂ ಶರ್ಕರಾಮುತ್ಪಲಂ ಚ ನಾರ್ಯಾಃ ಕ್ಷೀರೇಯಷ್ಟಿಕಾಹ್ವಂ ಪಚೇಚ್ಚ ।
ಪಿಷ್ಟ್ವಾ ವ ಕ್ಷೀರೇ ವರ್ಣಕಸ್ಯತ್ವಚಂ ವಾ ತೋಯೇಽನ್ಮಿಶ್ರೇ ಚನ್ದನೋದುಮ್ಬರೇ ಚ ॥೧೦॥

ಕಾರ್ಯಃ ಫೇನಃ ಸಾಗರಸ್ಯಾಞ್ಜನಾರ್ಥೇನಾರೀಸ್ತನ್ಯೇ ಮಾಕ್ಷಿಕೇ ಚಾಪಿ ಘೃಷ್ಟಃ ।
ಯೋಷಿತಸ್ತನ್ಯೇ ಸ್ಥಾಪಿತಂ ಯಷ್ಟಿಕಾಹ್ವಂ ರೋಧ್ರಂ ದ್ರಾಕ್ಷಾಂ ಶರ್ಕರಾಮುತ್ಪಲಂ ಚ ॥೧೧॥

ಕ್ಷೌಮಾಬದ್ಧಂ ಪಥ್ಯಮಾಶ್ಚ್ಯೋತನೇ ವಾ ಸರ್ಪಿರ್ಘೃಷ್ಟಂ ಯಷ್ಟಿಕಾಹ್ವಂ ಸರೋಧ್ರಮ್ ।
ತೋಯೇಽನ್ಮಿಶ್ರಾಃ ಕಾಶ್ಮರೀಧಾತ್ರಿಪಥ್ಯಾಸ್ತದ್ವಚ್ಚಾಹುಃ ಕಟ್ಫಲಂ ಚಾಮ್ಬುನೈವ ॥೧೨॥
ಏಷೋಽಮ್ಲಾಖ್ಯೇಽನುಕ್ರಮಶ್ಚಾಪಿ ಶುಕ್ತೌ ಕಾರ್ಯಃ ಸರ್ವಃ ಸ್ಯಾತ್ಸಿರಾಮೋಕ್ಷವರ್ಜ್ಯಃ ॥೧೩॥

ರೋಧ್ರ, ದ್ರಾಕ್ಷಿ, ಸಕ್ಕರೆ, ನೈದಿಲೆಹೂವು, ಅತಿಮಧುರ, ಬಜೆ, ಇವುಗಳನ್ನು ಸ್ತನ್ಯದಲ್ಲಿ ಅರೆದು ಕಲ್ಕಮಾಡಿಯಾಗಲೀ, ಮಟ್ಟಮಾವಿನ ತೊಗಟೆ, ಮುಡಿವಾಳ, ಪತಂಗದ ಚೆಕ್ಕೆ, ಅತ್ತಿಯತೊಗಟೆ ಇವುಗಳನ್ನು ಹಾಲಿನಲ್ಲರೆದ ಕಲ್ಕವನ್ನಾಗಲೀ ಸಮುದ್ರದ ನೊರೆಯನ್ನು ಸ್ತನ್ಯದಲ್ಲಿ ಅರೆದು ಜೇನುತುಪ್ಪ ಮಿಶ್ರಮಾಡಿಯಾಗಲೀ ಅಂಜನ ಹಾಕಬೇಕು. ಅತಿಮಧುರ, ಲೋಧ್ರ, ದ್ರಾಕ್ಷಿ, ಸಕ್ಕರೆ, ನೈದಿಲೆಗೆಡ್ಡೆ ಇವುಗಳ ಚೂರ್ಣವನ್ನು ಸ್ತನ್ಯದಲ್ಲಿ ಕದರಿ ಒಂದು ಚೌಕದ ತುದಿಗೆ ಕಟ್ಟಿ ಕಾದತುಪ್ಪದಲ್ಲಿ ಅದ್ದಿ ಹದವರಿತು ಸುಖೋಷ್ಣವಾಗಿ ಕಣ್ಣುಗಳಿಗೆ ಹಿಂಡಬೇಕು ; ಇದೇ ರೀತಿಯಾಗಿ ಮುಡಿವಾಳ, ಶಿವನಿಹಣ್ಣು, ನೆಲ್ಲೀಕಾಯಿ, ಅಣಿಲೆಕಾಯಿ, ಕಿರಿಯುಶಿವನಿ ಮತ್ತು ಮುಡಿವಾಳಗಳ ಚೂರ್ಣವನ್ನು ಬಟ್ಟೆಯ ತುದಿಯಲ್ಲಿಟ್ಟು ತುಪ್ಪದಲ್ಲಾಗಲೀ ಹಾಲಿನಲ್ಲಾಗಲೀ ಅದ್ದಿ ಸುಖೋಷ್ಣವಾಗಿ ಕಣ್ಣುಗಳಿಗೆ ಹಿಂಡಬೇಕು. ಅಮ್ಲಾಧ್ಯುಷಿತ ಮತ್ತು ಶುಕ್ತಿಕಾರೋಗಗಳಲ್ಲಿ ಸಿರಾಮೋಕ್ಷವನ್ನು ಬಿಟ್ಟು ಉಳಿದ ಅಶ್ಚ್ಯೋತನ ಅಂಜನ ಲೇಪಾದಿ ಕರ್ಮಗಳನ್ನು ಮಾಡಬೇಕು.

ಸರ್ಪಿಃ ಪೇಯಂ ತ್ರೈಫಲಂ ತೈಲ್ವಕಂ ವಾ ಪೇಯಂ ವಾ ಸ್ಯಾತ್ಕೇವಲಂ ಯತ್ಪುರಾಣಮ್ ।
ದೋಷೇಽಧಸ್ತಾಚ್ಛುಕ್ತಿಕಾಯಾಮಪಾಸ್ತೇ ಶೀತೈರ್ದ್ರವ್ಯೈರಞ್ಜನಂ ಕಾರ್ಯಮಾಶು ॥೧೪॥

ಅಮ್ಲಾಧ್ಯುಷಿತಚಿಕಿತ್ಸೆ :—ತ್ರಿಫಲಾಘೃತ ಮತ್ತು ರೋಧ್ರಘೃತಗಳನ್ನು ಪಾನಮಾಡಿಸಿ ವಿರೇಚನದಿಂದ ದೋಷಹರಣಮಾಡಿ ಹಳೆಯ ತುಪ್ಪವನ್ನು ಪಾನಮಾಡಿಸಿ ದೋಷಸಂಶಮನವಾದ ಮೇಲೆ ಶೀತಲದ್ರವ್ಯಗಳಿಂದ ಅಂಜನಮಾಡಿಸಬೇಕು.

ವೈಡೂರ್ಯಂ ಯತ್ ಸ್ಫಾಟಿಕಂ ವೈದ್ರುಮಂ ಚ ಮೌಕ್ತಂ ಶಾಙ್ಖಂ ರಾಜತಂ ಶಾತಕುಮ್ಭಮ್ ।
ಚೂರ್ಣಂ ಸೂಕ್ಷ್ಮಂ ಶರ್ಕರಾಕ್ಷೌದ್ರಯುಕ್ತಂ ಶುಕ್ತಿಂ ಹನ್ಯಾದಞ್ಜನಂ ಚೈತದಾಶು ॥೧೫॥

ಶೀತಲದ್ರವ್ಯಗಳು, ವೈಡೂರ್ಯ, ಸ್ಫಟಿಕಮಣಿ, ಹವಳ, ಮುತ್ತು, ಶಂಖ, ಬೆಳ್ಳಿ, ಚಿನ್ನ ಇವುಗಳ ಸೂಕ್ಷ್ಮಚೂರ್ಣವನ್ನು ಸಕ್ಕರೆ ಜೇನುತುಪ್ಪಗಳೊಡನೆ ರಂಗಳಿಸಿ ಕಣ್ಣಿಗೆ ಹಚ್ಚಿದರೆ ಶುಕ್ತಿರೋಗವು ನಿವಾರಣೆಯಾಗುತ್ತದೆ.

ಯುಞ್ಜ್ಯಾತ್ ಸರ್ಪಿರ್ಧೂಮದರ್ಶೀ ನರಸ್ತು ಶೇಷಂ ಕುರ್ಯಾತ್ ರಕ್ತಪಿತ್ತೇ ವಿಧಾನಮ್ ।
ಯಚ್ಚೈವಾನ್ಯತ್ಪಿತ್ತಹೃಚ್ಚಾಪಿ ಸರ್ವಂ ಯದ್ವೀಸರ್ಪೇ ಪೈತ್ತಿಕೇ ವೈ ವಿಧಾನಮ್ ॥೧೬॥

ಧೂಮದರ್ಶಿ ರೋಗಕ್ಕೆ ಚಿಕಿತ್ಸೆಯು—ಧೂಮದರ್ಶಿ ರೋಗಿಗೆ ಘೃತಪಾನಮಾಡಿಸಿ ರಕ್ತಾಭಿಷ್ಯಂದ, ಪಿತ್ತಾಭಿಷ್ಯಂದಗಳಿಗೆ ಮಾಡುವ ಚಿಕಿತ್ಸಾ ವಿಧಾನಗಳನ್ನೂ, ಇತರಗಳಾದ

ಪಿತ್ತರೋಗಹರ ಚಿಕಿತ್ಸೆಯನ್ನೂ ಅಂದರೆ ಪಿತ್ತವಿದಗ್ಧದೃಷ್ಟಿಗೆ ಮಾಡುವ ಚಿಕಿತ್ಸಾ ವಿಧಾನಗಳನ್ನೂ, ಪಿತ್ತವಿಸರ್ಪಗಳಲ್ಲಿ ಮಾಡುವಂತೆ ಪಿತ್ತಹರಗಳಾದ ಲೇಪಸೇಕಾದಿಗಳನ್ನೂ ಮಾಡಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಪಿತ್ತಾಭಿಷ್ಯಂದಪ್ರತಿಷೇಧನಾಮಕ ದಶಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕಭಾಷಾವಿವೃತಿಃ.

ಏಕಾದಶೋಽಧ್ಯಾಯಃ

ಅಥಾತಃ ಶ್ಲೇಷ್ಮಾಭಿಷ್ಯನ್ದ ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಶ್ಲೇಷ್ಮಾಭಿಷ್ಯಂಧ ಪ್ರತಿಷೇಧವನ್ನು ಹೇಳುತ್ತೇವೆ.

ಸ್ಯನ್ದಾಧಿಮನ್ಥೌ ಕಫಜೌ ಪ್ರವೃದ್ಧೌ ಜಯೇತ್ಸಿರಾಣಾಮಥ ಮೋಕ್ಷಣೇನ ।
ಸ್ವೇದಾವಪೀಡಾಞ್ಜನಧೂಮಸೇಕಪ್ರಲೇಪಯೋಗೈಃ ಕವಲಗ್ರಹೈಶ್ಚ ||೩||
ರೂಕ್ಷೈಸ್ತಥಾಶ್ಚ್ಯೋತನ ಸಂವಿಧಾನೈಸ್ತಥೈವ ರೂಕ್ಷೈಃ ಪುಟಪಾಕಯೋಗೈಃ ।
ತ್ರ್ಯಹಾತ್ತ್ರ್ಯಹಾಚ್ಚಾಪ್ಯತರ್ಪಣಾನ್ತೇಪ್ರಾತಸ್ತಯೋಸ್ತಿಕ್ತಘೃತಂ ಪ್ರಶಸ್ತಮ್ ||೪||
ತದನ್ನಪಾನಂ ಚ ಸಮಾಚರೇದ್ಧಿ ಯಚ್ಛ್ಲೇಷ್ಮಣೋ ನೈವ ಕರೋತಿ ವೃದ್ಧಿಮ್ ।

ಪ್ರಕುಪಿತ ಕಫಾಭಿಷ್ಯಂಧ ಮತ್ತು ಕಫಾಧಿಮಂಥಗಳನ್ನು ಸಿರಾವ್ಯಧಗಳಿಂದ ಸ್ವೇದ, ಅವಪೀಡ, ಅಂಜನ, ಧೂಮಪಾನ, ಕಷಾಯಸೇಚನ, ಪ್ರಲೇಪ, ಕವಳಗ್ರಹ, ರೂಕ್ಷವಾದ, ಪುಟಪಾಕರಸದ ಆಶ್ಚ್ಯೋತನಗಳಿಂ ದ ನಿವಾರಣೆ ಮಾಡಬೇಕು ; ಮೂರು ದಿನಗಳಿಗೆತಂದು ದಿನ ಉಪವಾಸಮಾಡಿಸಿ ಅದರ ಮಾರನೆಯದಿನ ಪ್ರಾತಃಕಾಲದಲ್ಲಿ ಕುಷ್ಠರೋಗದಲ್ಲಿ ಹೇಳಿರುವ ತಿಕ್ತಘೃತವನ್ನು ಕುಡಿಸಬೇಕು ; ಕಫವೃದ್ಧಿ ಮಾಡದಿರುವ ಅನ್ನಪಾನಗಳನ್ನು ಸೇವನೆ ಮಾಡಿಸಬೇಕು.

ಕುಟನ್ನಟಾಸ್ಫೋತಫಣಿಜ್ಜಬಿಲ್ವಪತ್ತೂರಪೀಲ್ವರ್ಕಕಪಿತ್ಥಭಙ್ಗೈಃ ||೫||
ಸ್ವೇದಂ ವಿದಧ್ಯಾದಥವಾನುಲೇಪಂ ಬರ್ಹಿಷ್ಠಶುಣ್ಠೀಸುರಕಾಷ್ಠಕುಷ್ಠೈಃ ।

ತಗರ, ಸೊಗದೆಬೇರು, ಮರುಗ, ಬಿಲ್ವಪತ್ರೆಬೇರು, ಹೊಮ್ಮಗಳು, ಪೀಲು (ಬಗಿನಿ), ಎಕ್ಕದಬೇರು, ಬೇಲ, ಇವುಗಳ ಸೊಪ್ಪುಗಳನ್ನು ಚೂರು ಚೂರು ಮಾಡಿ ನೀರಿನಲ್ಲಿ ಬೇಯಿಸಿ ತಲೆಯ ಮೇಲಿಟ್ಟು, ಬೆವರಿಸಬೇಕು ಅಥವಾ ಮುಡಿವಾಳ, ಶುಂಠಿ, ದೇವದಾರು, ಚಂಗಲ್‌ಕೋಷ್ಠಗಳ ಕಲ್ಕದಿಂದ ನೇತ್ರಗಳಿಗೆ ಲೇಪನಮಾಡಿಸಬೇಕು.

ಸಿನ್ಧೂತ್ಥಹಿಙ್ಗುತ್ರಿಫಲಾಮಧೂಕಪ್ರಪೌಣ್ಡರೀಕಾಞ್ಜನತುತ್ಥತಾಮ್ರೈಃ ||೬||
ಪಿಷ್ಟೈರ್ಜಲೇನಾಞ್ಜನವರ್ತಯಃ ಸ್ಯುಃ ಪಥ್ಯಾಹರಿದ್ರಾಮಧುಕಾಞ್ಜನೈರ್ವಾ ।
ತ್ರೀಣ್ಯೂಷಣಾನಿ ತ್ರಿಫಲಾ ಹರಿದ್ರಾವಿಡಙ್ಗಸಾರಶ್ಚ ಸಮಾನಿ ಚ ಸ್ಯುಃ ||೭||
ಬರ್ಹಿಷ್ಠಕುಷ್ಠಾಮರಕಾಷ್ಠಶಙ್ಖಪಾಠಾನಲವ್ಯೋಷಮನಃಶಿಲಾಶ್ಚ ।
ಪಿಷ್ಟ್ವಾಮ್ಬುನಾ ವಾ ಕುಸುಮಾನಿ ಜಾತಿಕರಞ್ಜಶೋಭಾಞ್ಜನಜಾನಿ ಯುಞ್ಜ್ಯಾತ್ ||೮||

ಫಲಂ ಪ್ರಕೀರ್ಯಾದಥವಾಪಿ ಶಿಗ್ರೋಃ ಪುಷ್ಪಂ ಚ ತುಲ್ಯಂ ಬೃಹತೀದ್ವಯಸ್ಯ ।
ರಸಾಞ್ಜನಂ ಚನ್ದನಸೈನ್ಧವಂ ಚ ಮನಃಶಿಲಾಲೇ ಲಶುನಂ ಚ ತುಲ್ಯಮ್ ॥೯॥
ಪಿಷ್ಟ್ವಾಞ್ಜನಾರ್ಥಂ ಕಫಜೇಷು ಧೀಮಾನ್ ವರ್ತೀರ್ವಿದಧ್ಯಾನ್ನಯನಾಮಯೇಷು ।

ವರ್ತ್ಯಂಜನದ್ರವ್ಯಗಳು—ಸೈಂಧವ, ಹಿಂಗು, ತ್ರಿಫಲೆ, ಹಿಪ್ಪೆಹೂವು, ಪ್ರಪೌಂಡರೀಕ, ಸೌವೀರಾಂಜನ, ಮೈಲುತುತ್ಥ, ತಾಮ್ರದಪುಡಿ ಇವು ಒಂದು ಯೋಗ. ಅಣಿಲೆ ಸಿಪ್ಪೆ, ಅರಿಶಿನ, ಅತಿಮಧುರ, ಸೌವಿರಾಂಜನ ಇವು ಒಂದು ಯೋಗ. ತ್ರಿಕಟು, ತ್ರಿಫಲೆ, ಅರಿಶಿನ, ವಿಡಂಗ ಇವು ಒಂದು ಯೋಗ. ಮುಡಿವಾಳ, ಚಂಗಲ್‌ಕೋಷ್ಠ, ದೇವದಾರು, ಶಂಖ, ಅಗಳುಶುಂಠಿ, ಚಿತ್ರಮೂಲ, ತ್ರಿಕಟು, ಮಣಃಶಿಲೆ, ಇವು ಒಂದು ಯೋಗ. ಜಾಜಿ, ಹೊಂಗೆ, ನುಗ್ಗೆ, ಹೂವು ಇವು ಒಂದು ಯೋಗ. ತವಸ, ನುಗ್ಗೆ, ಹೆಗ್ಗುಳ್ಳ, ನೆಲಗುಳ್ಳ, ಇವುಗಳ ಹೂವು, ಕಾಯಿ, ಇವುಗಳು ಒಂದು ಯೋಗ. ರಸಾಂಜನ, ಕೆಂಪು ಗಂಧ, ಸೈಂಧವ, ಮಣಶಿಲೆ, ಅರಿದಳ, ಬೆಳುಳ್ಳಿ ಇವು ಒಂದು ಯೋಗ. ಈ ರೀತಿ ಅರ್ಧಾರ್ಧ ಶ್ಲೋಕಗಳಲ್ಲಿ ಹೇಳಿದ ದ್ರವ್ಯಗಳನ್ನು ಸಮಭಾಗದಿಂದ ಕೂಡಿಸಿ ನೀರಿನಲ್ಲರೆದು ಕಲ್ಕ ಮಾಡಿದರೆ ೭ ಯೋಗಗಳಾಗುತ್ತವೆ. ಇವುಗಳನ್ನು ನೇತ್ರರೋಗಗಳಲ್ಲಿ ಅಂಜನಕ್ಕಾಗಿ ಉಪಯೋಗಿಸಬೇಕು.

ರೋಗೇ ಬಲಾಸಗ್ರಥಿತೇಽಞ್ಜನಜ್ಞೈಃ ಕರ್ತವ್ಯಮೇತತ್ಸುವಿಶುದ್ಧ ಕಾಯೇ ॥೧೦॥
ನೀಲಾನ್ ಯವಾನ್ ಗವ್ಯಪಯೋಽನುಪೀತಾನ್ ಶಲಾಕಿನಃ ಶುಷ್ಕತನೂನ್ ವಿದಹ್ಯ ।
ತಥಾರ್ಜಕಾಸ್ಫೋತಕಪಿತ್ಥಬಿಲ್ವನಿರ್ಗುಣ್ಡಿ ಜಾತೀಕುಸುಮಾನಿ ಚೈವ ॥೧೧॥
ತತ್ಕ್ಷಾರವತ್ಸೈನ್ಧವತುತ್ಥರೋಚನಂ ಪಕ್ವಂ ವಿದಧ್ಯಾದಥ ಲೋಹನಾಡ್ಯಾಮ್ ।
ಏತದ್ಬಲಾಸಗ್ರಥಿತೇಽಞ್ಜನಂಸ್ಯಾದೇಷೋಽನುಕಲ್ಪಸ್ತು ಫಣಿಜ್ಝಕಾದೌ ॥೧೨॥

ಬಲಾಸಗ್ರಥಿತರೋಗದಲ್ಲಿ ರೋಗಿಗೆ ವಮನವಿರೇಚನ ಪ್ರಯೋಗಗಳಿಂದ ದೇಹಶುದ್ಧಿ ಮಾಡಿಸಿ ಈ ಕೆಳಗಿನ ದ್ರವ್ಯಗಳ ಕಲ್ಕದಿಂದ ಅಂಜನಮಾಡಿಸಬೇಕು. ಊಬುಸಹಿತವಾದ ಯವೆಯನ್ನು ಕರಿಬಣ್ಣದ ಹಸುವಿನ ಹಾಲಿನಲ್ಲಿ ರಾತ್ರಿಯವೇಳೆ ಭಾವನೆಮಾಡಿ ಹಗಲುಹೊತ್ತು ಒಣಗಿಸಬೇಕು ; ಹೀಗೆ ೭ ದಿನಗಳು, ೧೪ ದಿನಗಳು, ೨೧ ದಿನಗಳು ಭಾವನೆ ಮಾಡುತ್ತಲೂ, ಒಣಗಿಸುತ್ತಲೂ ಬಂದು ಅನಂತರ ಕಬ್ಬಿಣದ ಬಾಂಡ್ಲಿಯಲ್ಲಿಟ್ಟು ಬೆಂಕಿಯಮೇಲೆ ಬಾಂಡ್ಲಿಯನ್ನು ಇರಿಸಿ ಶಲಾಕೆಯಿಂದ ಹುರಿಯುತ್ತಾ ಕಪ್ಪಾಗಿ ಸೀದುಹೋಗುವವರೆಗೂ ಹುರಿದು ಒಂದು ಪ್ರಸ್ಥಬೂದಿಗೆ ಒಂದು ಪ್ರಸ್ಥ ಬಿಸಿನೀರನ್ನು ಹಾಕಿ ಕದರಿ ಪುನಃ ಪುನಃ ಶೋಧಿಸಿಕೊಳ್ಳಬೇಕು ; ಕ್ಷಾರೋದಕವು ತೀಕ್ಷ್ಣವಾಗಿ ಬಗ್ಗಡವಾಗಿ ಕೆಂಪಾಗುವವರೆಗೂ ಶೋಧಿಸಿ ಬೂದಿಯನ್ನು ಬೇರೆಮಾಡಿ ಈ ಕ್ಷಾರೋದಕಕ್ಕೆ ಸೈಂಧವ, ಮೈಲುತುತ್ಥ, ಗೋರೋಚನಗಳನ್ನು ಹುರಿದು ಕ್ಷಾರೋದಕದ 1/32 ದ ಭಾಗದಷ್ಟನ್ನು ಸೇರಿಸಿ ಕುದಿಸಬೇಕು. ಈ ರೀತಿ ತಯಾರಿಸಿದ ಕ್ಷಾರವನ್ನು ಕಬ್ಬಿಣದ ಕೊಳವಿಯಲ್ಲಿ ತುಂಬಿಟ್ಟುಕೊಂಡು ಬಲಾಸಗ್ರಥಿತವೆಂಬ ನೇತ್ರರೋಗದಲ್ಲಿ ಅಂಜನ

ಹಾಕಬೇಕು. ಇದೇ ರೀತಿಯಲ್ಲಿ ಕಾಮುಕಸ್ತೂರಿ, ಸೊಗಡೆಹಂಬು, ಬೇಲ, ಬಿಲ್ವಪತ್ರೆ, ಲಕ್ಕಿ, ಜಾಜಿ ಹೂವುಗಳ ಭಸ್ಮಗಳನ್ನು ಕದರಿ ಶೋಧಿಸಿದ ಕ್ಷಾರೋದಕಕ್ಕೆ ಸೈಂಧವಾದಿಗಳ ಚೂರ್ಣವನ್ನು ಸೇರಿಸಿ ಪುನಃ ಪಾಕಮಾಡಿಟ್ಟುಕೊಳ್ಳಬೇಕು ; ಕೆಲವರು ಸೈಂಧವಾದಿ ದ್ರವ್ಯಗಳನ್ನೂ ಭಸ್ಮ ಮಾಡಬೇಕೇ ವಿನಃ ಆವಾಪ ಮಾಡಬೇಕಾಗಿಲ್ಲವೆನ್ನುತ್ತಾರೆ ; ಅವರ ಮತದಂತೆ ಪ್ರತೀವಾಪವೇ ಬೇಕಾಗಿಲ್ಲ.

ಮಹೌಷಧಂ ಮಾಗಧಿಕಾಂ ಚ ಮುಸ್ತಾಂ ಸಸೈನ್ಧವಂ ಯನ್ಮರಿಚಂ ಚ ಶುಕ್ಲಮ್ ।
ತನ್ಮಾತುಲುಙ್ಗಸ್ವರಸೇನ ಪಿಷ್ಟಂ ನೇತ್ರಾಞ್ಜನಂ ಪಿಷ್ಟಕಮಾಶು ಹನ್ಯಾತ್ ॥೧೩॥
ಫಲಂ ಬೃಹತ್ಯಾ ಮಗಧೋದ್ಭವಾನಾಮಾದಾಯ ಕಲ್ಕಂ ಫಲಪಾಕಕಾಲೇ ।
ಸ್ರೋತೋಜಯುಕ್ತಂ ಚ ತನುದ್ಧತಂ ಸ್ಯಾತ್ತತ್ಸಪ್ತ ಪಿಷ್ಟೇ ವಿಧಿರೇಷಚಾಪಿ ॥೧೪॥
ವಾರ್ತಾಕುಶಿಗ್ರ್ವಿನ್ದ್ರಸುರಾಪಟೋಲಕಿರಾತತಿಕ್ತಾಮಲಕೀ ಫಲೇಷು ।

ಶುಂಠಿ, ಹಿಪ್ಪಲಿ, ಕೊನ್ನಾರಿಗೆಡ್ಡೆ, ಸೈಂಧವ (ಬಿಳಿನುಗ್ಗೆಬೀಜ), ಬಿಳಿಮೆಣಸು ಇವುಗಳನ್ನು ಸಮಭಾಗದಿಂದ ಸೇರಿಸಿ ಮಾದಳದಹಣ್ಣಿನ ರಸದಲ್ಲಿ ಅರೆದು ಕಣ್ಣಿಗೆ ಹಚ್ಚಿದರೆ ಪಿಷ್ಟಕವು ನಾಶವಾಗುತ್ತದೆ ; ಪಕ್ವವಾದ ಹೆಗ್ಗುಳ್ಳದ ಬೀಜವನ್ನು ತೆಗೆದುಹಾಕಿ ಅದರೊಳಗೆ ಸಮಭಾಗ ಹಿಪ್ಪಲಿ ಮತ್ತು ಸೌವೀರಾಂಜನಗಳ ಕಲ್ಕವನ್ನು ತುಂಬಿಟ್ಟು ೭ ದಿನಗಳಮೇಲೆ ಅಂಜನಮಾಡಿದರೆ ಪಿಷ್ಟಕರೋಗವು ನಿವಾರಣೆಯಾಗುತ್ತದೆ. ಇದೇ ರೀತಿ ಬದನೆ, ನುಗ್ಗೆ, ಹಾವುಮೆಕ್ಕೆ, ಕಹಿಪಡವಲ, ನೆಲಬೇವು, ಪಕ್ವವಾದ ನೆಲ್ಲಿಕಾಯಿಗಳು, ಶುಂಠಿ ಮೊದಲಾದುವುಗಳ ಕಲ್ಕವನ್ನು ಸೇರಿಸಿ ಮಾದಳರಸದಲ್ಲರೆದು ಅಂಜನ ಮಾಡಬೇಕು.

ಕಾಸೀಸಸಾಮುದ್ರರಸಾಞ್ಜನಾನಿ ಜಾತ್ಯಾಸ್ತಥಾಕೋರಕಮೇವ ಚಾಪಿ ॥೧೫॥
ಪ್ರಕ್ಲಿನ್ನವರ್ತ್ಮನ್ಯುಪವಿಶ್ಯತೇ ತು ಯೋಗಾಞ್ಜನಂ ತನ್ಮಧುನಾಪಘೃಷ್ಟಮ್ ।
ನಾದೇಯಮಗ್ರ್ಯ ರಿಚಂ ಮ ಚ ಶುಕ್ಲಂ ನೇಪಾಲಜಾತಾ ಚ ಸಮಪ್ರಮಾಣಾ ॥೧೬॥
ಸಮಾತುಲುಙ್ಗದ್ರವ ಏಷ ಯೋಗಃ ಕಣ್ಡೂಂ ನಿಹನ್ಯಾತ್ಸಕೃದಞ್ಜನೇನ ।

ಅನ್ನಭೇದಿ, ಸಮುದ್ರಲವಣ, ರಸಾಂಜನ, ಜಾಜಿಮೊಗ್ಗು ಇವುಗಳ ಕಲ್ಕವನ್ನು ಜೇನುತುಪ್ಪ ಮಿಶ್ರಮಾಡಿ ಕಣ್ಣಿಗೆ ಹಚ್ಚಿದರೆ ಪ್ರಕ್ಲಿನ್ನವರ್ತ್ಮಹರವಾಗುತ್ತದೆ ; ಇದಕ್ಕೆ ಯೋಗಾಂಜನವೆನ್ನುತ್ತಾರೆ. ಸೈಂಧವ, ನುಗ್ಗೆಯಬೀಜ, ಮಣಶಿಲೆ ಇವುಗಳನ್ನು ಸಮ ಪ್ರಮಾಣದಿಂದ ಸೇರಿಸಿ ಮಾದಲದಹಣ್ಣಿನ ರಸದಿಂದ ಅರೆದು ಒಂದೇ ಸಾರಿ ಕಣ್ಣಿಗೆ ಹಚ್ಚಿದರೆ ನೇತ್ರಕಂಡೂ ಹರವಾಗುತ್ತದೆ.

ಸಶೃಙ್ಗವೇರಂ ಸುರದಾರು ಮುಸ್ತಂ ಸಿನ್ಧುಪ್ರಸೂತಂ ಮುಕುಳಾನಿ ಜಾತ್ಯಾಃ ॥೧೭॥
ಸುರಾಸುಃಪಿಷ್ಟಂ ಶ್ರಿದಮಞ್ಜನಂ ಪಿ ಕಣ್ಡ್ವಂ ಚ ಶೋಫೇಚ ಓತಂ ವದನ್ತಿ ॥
ಸ್ನಾನ್ಧಿಮನ್ಥ ಕ್ರಮಮಾಚರೇಚ್ಚ ಸರ್ವೇಷು ಚೈತೇಷು ಸದಾಪ್ರಮತ್ತಃ ।
ವಿಶೇಷತೋ ನಾವನಮೇವ ಕಾರ್ಯಂ ಸಂಸರ್ಜನಂ ಚಾಪಿ ಯಥೋಪದಿಷ್ಟಮ್॥ ೧೮ ॥

ಹಸಿಶುಂಠಿ, ದೇವದಾರು, ಕೊನ್ನಾರಿಗೆಡ್ಡೆ, ಸೈಂಧವ, ಜಾಜಿಯಮೊಗ್ಗು ಇವುಗಳನ್ನು ಸಮಭಾಗದಲ್ಲಿ ಸೇರಿಸಿ ಮದ್ಯದಿಂದ ಅರೆದು ನೇತ್ರಕಂಡೂ ಶೋಫಗಳಲ್ಲಿ ಕಣ್ಣಿಗೆ ಹಚ್ಚಿದರೆ ಹಿತಕರವು; ಬಲಾಸಗ್ರಥಿತ, ಪಿಷ್ಟಕ, ಪ್ರಕ್ಲಿನ್ನವರ್ತ್ಮ ರೋಗಗಳಲ್ಲಿಯೂ ಮತ್ತು ಇತರ ಕಫಜ ಅಕ್ಷಿ ರೋಗಗಳಲ್ಲೂ ಜಾಗರೂಕತೆಯಿಂದಿದ್ದು ಕೊಂಡು ಅಭಿಷ್ಯಂಧ, ಅಧಿಮಂಥ, ಚಿಕಿತ್ಸಾಕ್ರಮಗಳನ್ನೇ ಮಾಡಿಸಬೇಕು. ವಿಶೇಷವಾಗಿ ನಾವನವನ್ನೂ ಪಥ್ಯಕ್ರಮವನ್ನೂ ಅನುಸರಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ
ಶ್ಲೇಷ್ಮಾಭಿಷ್ಯನ್ದ ಪ್ರತಿಷೇಧನಾಮಕ್ಯೈಕಾದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ
ನಾಮಕ ಶ್ರೀ ಲಕ್ಷ್ಮೀನೃಹಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ

ದ್ವಾದಶೋಽಧ್ಯಾಯಃ

ಅಥಾತೋರಕ್ತಾಭಿಷ್ಯನ್ದ ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶುತುಯಿ) ||೨||

ಮನ್ಥಂ ಸ್ಯನ್ದಂ ಸಿರೋತ್ಪಾತಂ ಸಿರಾಹರ್ಷಂ ಚ ರಕ್ತಜಮ್ ।

ಏಕೇನೈವ ವಿಧಾನೇನ ಚಿಕಿತ್ಸೇಚ್ಚತುರೋಗದಾನ್ ||೩||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ರಕ್ತಾಭಿಷ್ಯಂದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ರಕ್ತಜನೇತ್ರಾಧಿಮಂಥ, ಅಭಿಷ್ಯಂದ, ಸಿರೋತ್ಪಾತ, ಸಿರಾಹರ್ಷಗಳೆಂಬ ಈ ೪ ರೋಗಗಳನ್ನೂ ಒಂದೇ ರೀತಿಯ ಚಿಕಿತ್ಸಾ ವಿಧಾನದಿಂದ ಉಪಚರಿಸಬೇಕು ; ಅಧಿಮಂಥವು ಅಭಿಷ್ಯಂದಕ್ಕಿಂತಲೂ ಗುರುತರವಾದುದೆಂದು ತಿಳಿಸುವುದಕ್ಕಾಗಿಯೇ ಮೊದಲು ಅಧಿಮಂಥವನ್ನು ಹೇಳಿರುತ್ತಾರೆ.

ವ್ಯಾಧ್ಯಾರ್ತಾಂಶ್ಚತುರೋಪ್ಯೇತಾನ್ಸ್ನಿಗ್ಧಾನ್ಕೌಮ್ಭೇನ ಸರ್ಪಿಷಾ।

ರಸೈರುದಾರೈರಥವಾ ಸಿರಾಮೋಕ್ಷೇಣ ಯೋಜಯೇತ್ ||೪||

ವಿರಕ್ತಾನಾಂ ಪ್ರಕಾಮಂ ಚ ಶಿರಾಂ ಸ್ಯೇಷಾಂ ವಿಶೋಧಯೇತ್ ।

ವೈರೇಚನಿಕಸಿದ್ಧೇನ ಸಿತಾಯುಕ್ತೇನ ಸರ್ಪಿಷಾ ||೫||

(ಮಜ್ಜಾವಾತದ್ವಿಮಿಶ್ರೇಣ ಮೇದಸಾ ತಚ್ಛೃತೇನ ವಾ ।)

ತತಃ ಪ್ರದೇಹಾಃ ಪರಿಷೇಚನಾನಿ ನಸ್ಯಾನಿ ಧೂಮಾಶ್ಚ ಯಥಾಸ್ವ ಮೇವ ।

ಅಶ್ಚ್ಯೋತನಾಭ್ಯಞ್ಜನ ತರ್ಪಣಾನಿ ಸ್ನಿಗ್ಧಾಶ್ಚ ಕಾರ್ಯಾಃ ಪುಟ ಪಾಕಯೋಗಾಃ || ೬ ||

ಈ ರಕ್ತಾಧಿಮಂಥಾದಿ ನಾಲ್ಕು ರೋಗಿಗಳಿಗೆ ಕುಂಭಸರ್ಪಿಯನ್ನು (೧೦೦ ವರ್ಷಗಳ ಹಿಂದಿನ ತುಪ್ಪ) ಪಾನಮಾಡಿಸಿ ಸ್ನಿಗ್ಧರಾದಮೇಲೆ ತುಂಬಾತುಪ್ಪ ಮಿಶ್ರ ಮಾಡಿದ ಮಾಂಸರಸವನ್ನು ಕುಡಿಸಿ, ಮಜ್ಜೆ, ಮೇದಸ್ಸು, ತುಪ್ಪ, ಸಕ್ಕರೆಗಳನ್ನು ಮಿಶ್ರ ಮಾಡಿ ಶಿರೋವಿರೇಚನವನ್ನೂ, ನೇತ್ರಗಳ ಮೇಲೆ ಹುಬ್ಬುಗಳ ಹತ್ತಿರದ ಅಥವಾ ಹಣೆಯಲ್ಲಿರುವ ಸಿರೆಯಿಂದ ರಕ್ತ ಮೋಕ್ಷಣವನ್ನು ಮಾಡಿಸಿ ಶುದ್ಧನಾದ ರೋಗಿಗೆ ರೋಗಗಳಿಗೆ ತಕ್ಕಂತೆ ಆಲೇಪನ, ಸೇಚನ, ನಸ್ಯ, ಧೂಮಪಾನ, ಆಶ್ಚ್ಯೋತನ ಅಭ್ಯಂಜನ, ತರ್ಪಣ, ಪುಟಪಾಕ ಮೊದಲಾದ ಸ್ನಿಗ್ಧವಿಧಾನಗಳನ್ನು ಪ್ರಯೋಗಮಾಡಿ ಉಪಚರಿಸಬೇಕು.

ನೀಲೋತ್ಪಲೋಶೀರ ಕಟಙ್ಕಟೇರೀ ಕಾಲೀಯಯಷ್ಟೀಮಧು ಮುಸ್ತರೋಧ್ರೈಃ ।

ಸಪದ್ಮಕೈರ್ಧೌತಘೃತಪ್ರದಿಗ್ಧೈರಕ್ಷ್ಣೋಃ ಪ್ರಲೇಪಂ ಪರಿತಃ ಪ್ರಕುರ್ಯಾತ್ ||೭||

ನೈದಿಲೆಗೆಡ್ಡೆ, ಲಾಮಂಚ, ಮರದರಿಶಿನ, ಅಗಿಲು, ಅತಿಮಧುರ, ಕೊನ್ನಾರಿಗೆಡ್ಡೆ ರೋಧ್ರ, ಪದ್ಮಕ ಇವುಗಳ ಕಲ್ಕಕ್ಕೆ ತುಪ್ಪವನ್ನು ಮಿಶ್ರಮಾಡಿ ಕಣ್ಣಿನಸುತ್ತಲೂ ಬಳಿಯ ಬೇಕು.

ರುಜಾಯಾಂ ಚಾಪ್ಯತಿಭೃಶಂ ಸ್ವೇದಾಶ್ಚ ಮೃದವೋ ಹಿತಾಃ ।
ಅಕ್ಷ್ಣೋಃ ಸಮನ್ತತಃ ಕಾರ್ಯಂ ಪಾತನಂ ಚ ಜಲೌಕಸಾಮ್ ||೮||
ಘೃತಸ್ಯ ಮಹತೀ ಮಾತ್ರಾ ಪೀತಾ ಚಾರ್ತಿಂ ನಿಯಚ್ಛತಿ ।
ಪಿತ್ತಾಭಿಷ್ಯನ್ದಶಮನೋ ವಿಧಿಶ್ಚಾಪ್ಯುಪಪಾದಿತಃ ||೯||

ಸಿರಾಮೋಕ್ಷಣದಿಂದ ಅಥವಾ ವಾತಾವೃತರಕ್ತದಿಂದ ನೋವು ಹೆಚ್ಚಾದರೆ ಮೊದ ಲನೆಯದಕ್ಕೆ ಕಣ್ಣಿನ ಸುತ್ತಲೂ ಮೃದುಸ್ವೇದವನ್ನೂ ಎರಡನೆಯದರಲ್ಲಿ ಜಿಗಳೆಯನ್ನು ಕಚ್ಚಿಸಿ ದುಷ್ಟರಕ್ತಹರಣವನ್ನೂ ಮಾಡಿಸಬೇಕು ; ವಾತಿಕವೇದನೆಯಲ್ಲಿ ತುಪ್ಪದಮಹತೀ ಮಾತ್ರೆಯನ್ನು ಕುಡಿಸಬೇಕು ; ಸ್ವಲ್ಪರಕ್ತದಿಂದ ವೇದನೆಯುಂಟಾದರೆ ಪಿತ್ತಾಭಿಷ್ಯಂದ ವಿಧಾನವನ್ನು ಮಾಡಿಸಿದರೆ ನಿವಾರಣೆಯಾಗುತ್ತದೆ.

ಕಶೇರುಮಧುಕಾಭ್ಯಾಂ ವಾ ಚೂರ್ಣಮಮ್ಬರಸಂವೃತಮ್ ।
ನಸ್ತಮಪ್ಸ್ವಾನ್ತರಿಕ್ಷಾಸು ಹಿತಮಾಶ್ಚ್ಯೋತನಂ ಭವೇತ್ ||೧೦||

ಕೊತ್ತಿಗೆಡ್ಡೆ ಮತ್ತು ಅತಿಮಧುರಗಳ ಚೂರ್ಣವನ್ನು ಬಟ್ಟೆಯಚೂರಿನಲ್ಲಿಟ್ಟು ಮುಚ್ಚಿ ಮಳೆಯ ನೀರಿನಲ್ಲಿ ನೆನೆಸಿ ಕಣ್ಣಿಗೆ ಹಿಂಡಬೇಕು.

ಪಾಟಲ್ಯರ್ಜುನಶ್ರೀಪರ್ಣೀಧಾತಕೀ ಧಾತ್ರಿಬಿಲ್ವತಃ ।
ಪುಷ್ಪಾಣ್ಯಥ ಬೃಹತ್ಯೋಶ್ಚ ಬಿಮ್ಬೀಲೋಟಾಚ್ಚ ತುಲ್ಯಶಃ ||೧೧||
ಸಮಞ್ಜಿಷ್ಠಾನಿ ಮಧುನಾ ಪಿಷ್ಟಾನೀಕ್ಷುರಸೇನ ವಾ ।
ರಕ್ತಾಭಿಷ್ಯನ್ದಶಾನ್ತ್ಯರ್ಥಮೇತದಞ್ಜನಮಿಷ್ಯತೇ ||೧೨||
ಚನ್ದನಂ ಕುಮುದಂ ಪತ್ರಂ ಶಿಲಾಜತುಸಕುಙ್ಕುಮಮ್ ।
ಅಯಸ್ತಾಮ್ರರಜಸ್ತುತ್ಥಂ ನಿಮ್ಬನಿರ್ಯಾಸಮಞ್ಜನಮ್ ||೧೩||
ತ್ರಪುಕಾಂಸ್ಯಮಲಂ ಚಾಪಿಪಿಷ್ಟ್ವಾಪುಷ್ಪರಸೇನ ತು ।
ವಿಪುಲಾಯಾಃ ಕೃತಾವರ್ತ್ಯಃ ಪೂಜಿತಾಶ್ಚಾಞ್ಜನೇ ಸದಾ ||೧೪||

ಪಾದರಿ, ಮತ್ತಿ, ಶಿವನಿ, ಧಾತಕಿ, ನೆಲ್ಲಿ, ಬಿಲ್ವಪತ್ರೆ, ಹೆಗ್ಗುಳ್ಳ, ಭಿಲ್ಲೋಟ (ವೆಂಬ ಹಿಮಾಲಯ ಪ್ರಸಿದ್ಧವಾದ ಮರ) ಇವುಗಳ ಹೂವನ್ನು ಸಮವಾಗಿಯೂ ಒಂದು ಪಾಲಿನಷ್ಟು ಮಂಜಿಷ್ಠೆಯನ್ನೂ ಸೇರಿಸಿ ಕಬ್ಬಿನರಸದಿಂದ ಅರೆದು ಕಲ್ಕಮಾಡಿ ಜೇನು ತುಪ್ಪ ಮಿಶ್ರಮಾಡಿ ಅಂಜನಮಾಡಿದರೆ ರಕ್ತಾಭಿಷ್ಯಂದವು ನಿವಾರಣೆಯಾಗುತ್ತದೆ ; ರಕ್ತ ಗಂಧ, ನೈದಿಲೆಗೆಡ್ಡೆ, ಲವಂಗಪತ್ರೆ, ಶಿಲಾಜತು, ಕುಂಕುಮಕೇಸರಿ, ಕಬ್ಬಿಣದ ಮತ್ತು ತಾಮ್ರದ ಅರಪುಡಿ, ಮೈಲ್‌ತುತ್ಥ, ಬೇವಿನಗೋಂದು, ರಸಾಂಜನ, ತವರ, ಕಂಚು ಇವು ಗಳನ್ನು ಚೂರ್ಣಗಳ ಸಮಭಾಗದಿಂದ ಸೇರಿಸಿ ಜೇನುತುಪ್ಪದಿಂದ ಅರೆದು ಲೇಖಸಾದಿ ಗಳಿಗೆ ಅನುಕೂಲವಾಗುವಷ್ಟು ದಪ್ಪದ ವರ್ತಿಗಳನ್ನು ಮಾಡಿ ಅಂಜನಮಾಡಿದರೆ ಹಿತ ಕರವು. ಇದನ್ನು ಸದಾಕಾಲಗಳಲ್ಲೂ ಪ್ರಯೋಗಿಸಬಹುದು.

ಸ್ಯಾದಞ್ಜನಂ ಘೃತಂ ಕ್ಷೌದ್ರಂ ಸಿರೋತ್ಪಾತಸ್ಯ ಭೇಷಜಮ್ ।
ತದ್ವತ್ಸೈನ್ಧವಕಾಸೀಸಂ ಸ್ತನ್ಯಘೃಷ್ಟಂ ಚ ಪೂಜಿತಮ್ ॥೧೫॥
ಮಧುನಾ ಶಙ್ಖ ನೈಪಾಲೀ ತುತ್ಥದಾರ್ವ್ಯಂ ಸಸೈನ್ಧವಾಃ ।
ರಸಃ ಶಿರೀಷಪುಷ್ಪಾಚ್ಚ ಸುರಾಮರಿಚಮಾಕ್ಷಿಕೈಃ ॥೧೬॥
ಯುಕ್ತಂ ತು ಮಧುನಾ ವಾಪಿ ಗೈರಿಕಂ ಹಿತಮಞ್ಜನಮ್ ।
ಸಿರಾಹರ್ಷೇಽಞ್ಜನಂ ಕುರ್ಯಾತ್ ಫಾಣಿತಂ ಮಧುಸಂಯುತಮ್ ॥೧೭॥
ಮಧುನಾ ತಾರ್ಕ್ಷ್ಯಜಂ ವಾಪಿ ಕಾಸೀಸಂ ವಾ ಸಸೈನ್ಧವಮ್ ।
ವೇತ್ರಾಮ್ಲಸ್ತನ್ಯಸಂಯುಕ್ತಂ ಫಾಣಿತಂ ತು ಸಸೈನ್ಧವಮ್ ॥೧೮॥

ಸಿರೋತ್ಪಾತಕ್ಕೆ—ತುಪ್ಪ-ಜೇನುತುಪ್ಪಗಳಲ್ಲಿ ರಸಾಂಜನವನ್ನೂ, ಸೈಂಧವ, ಅನ್ನಭೇದಿಗಳನ್ನು ಸ್ತನ್ಯದಲ್ಲಿಯೂ ಶಂಖ-ಮಣಶಿಲೆ-ಮೈಲುತುತ್ಥ-ಮರದರಿಶಿನ-ಸೈಂಧವಗಳನ್ನು ಜೇನುತುಪ್ಪದಲ್ಲೂ, ಬಾಗೇಹೂವಿನರಸ ಮದ್ಯ-ಮೆಣಸು ಅಥವಾ ಕಾವಿಯನ್ನು ಜೇನುತುಪ್ಪದಲ್ಲಿ ರಂಗಳಿಸಿಯೂ ಕಣ್ಣಿಗೆಚ್ಚಬೇಕು ; ಸಿರಾಹರ್ಷದಲ್ಲಿ ಕಾಕಂಬಿಗೆ ಜೇನುತುಪ್ಪವನ್ನು ಸೇರಿಸಿ ರಂಗಳಿಸಿಯೂ ಜೇನುತುಪ್ಪದಿಂದ ರಸಾಂಜನವನ್ನು ಅಥವಾ ಸೈಂಧವ ಅನ್ನಭೇದಿಗಳನ್ನು ಅರೆದು ಕಣ್ಣಿಗೆಚ್ಚಬೇಕು ; ಅಮ್ಲವೇತಸ (ಓಟೆ ಹುಳಿ) ಕಾಕಂಬಿ, ಸೈಂಧವಗಳನ್ನು ಸ್ತನ್ಯದಿಂದ ಅರೆದು ಕಲ್ಕಮಾಡಿ ಕಣ್ಣಿಗೆ ಹಚ್ಚಬೇಕು.

ಪೈತ್ತಂ ವಿಧಿಮಶೇಷೇಣ ಕುರ್ಯಾದರ್ಜುನಶಾನ್ತಯೇ ।
ಇಕ್ಷುಕ್ಷೌದ್ರಸಿತಾಸ್ತನ್ಯದಾರ್ವೀಮಧುಕಸೈನ್ಧವೈಃ ॥೧೯॥
ಸೇಕಾಞ್ಜನಂ ಚಾತ್ರ ಹಿತಮಮ್ಲೈಶ್ಚಾಶ್ಚ್ಯೋತನಂ ತಥಾ ।
ಸಿತಾಮಧುಕಕಟ್ವಙ್ಗಮಸ್ತುಕ್ಷೌದ್ರಾಮ್ಲಸೈನ್ಧವೈಃ ॥೨೦॥
ಬೀಜಪೂರಕಕೋಲಾಮ್ಲದಾಡಿಮಾಮ್ಲೈಶ್ಚ ಯುಕ್ತಿತಃ ।
ಏಕಶೋ ವಾ ದ್ವಿಶೋ ವಾಪಿ ಯೋಜಿತಂ ವಾ ತ್ರಿಭಿಸ್ತ್ರಿಭಿಃ ॥೨೧॥
ಸ್ಫಟಿಕಂ ವಿದ್ರುಮಂ ಶಙ್ಖೋ ಮಧುಕಂ ಮಧು ಚೈವ ಹಿ ।
ಶಙ್ಖಕ್ಷೌದ್ರಸಿತಾಯುಕ್ತಃ ಸಾಮುದ್ರಃ ಫೇನ ಏವ ಚ ॥೨೨॥
ತ್ವಾವಿಮೌ ವಿಹಿತೌ ಯೋಗಾವಞ್ಜನೇಽರ್ಜುನನಾಶನೌ ।
ಸೈನ್ಧವಕ್ಷೌದ್ರಕತಕಾಃ ಸಕ್ಷೌದ್ರಂ ವಾ ರಸಾಞ್ಜನಮ್ ॥೨೩॥
ಕಾಸೀಸಂ ಮಧುನಾ ವಾಪಿ ಯೋಜ್ಯಮತ್ರಾಞ್ಜನೇ ಸದಾ ।

ರಕ್ತಾರ್ಜುನಚಿಕಿತ್ಸೆ—ಅರ್ಜುನರೋಗವು ನಿವೃತ್ತಿಯಾಗಲು ವಿಶೇಷವಾಗಿ ಪಿತ್ತಾಭಿಷ್ಯಂದಚಿಕಿತ್ಸಾವಿಧಾನವನ್ನು ಅನುಸರಿಸಬೇಕು ; ಕಬ್ಬಿನರಸ, ಜೇನುತುಪ್ಪ, ಸಕ್ಕರೆ, ಸ್ತನ್ಯ, ಮರದರಿಶಿನ, ಜೇಷ್ಠಮಧು, ಸೈಂಧವ ಇವುಗಳ ಕಲ್ಕದಿಂದ ಸೇಕಾಂಜನಗಳನ್ನು (ಆಸೇಚನ, ಅಂಜನ) ಮಾಡಿಸಿದರೆ ಹಿತಕರವು ; ಕಾಂಜಿಕ, ಮಾದಳ, ದಾಡಿಮ ಮೊದಲಾದ ಹುಳಿರಸಗಳನ್ನು ಕಣ್ಣಿನಮೇಲೆ ನಿಧಾನವಾಗಿ ಸೇಚನೆಮಾಡಬೇಕು ; ಸಕ್ಕರೆ, ಅತಿಮಧುರದಚೂರ್ಣ, ಹೆಮ್ಮರದತೊಗಟೆಯಚೂರ್ಣ, ಮೊಸರಿನ

ಕಟ್ಟು, ಜೇನುತುಪ್ಪ, ಹುಳಿರಸ, ಸೈಂಧವ ಇವುಗಳಲ್ಲಿ ಒಂದೊಂದು ಎರಡೆರಡು ಮೂರು ಮೂರರಂತೆ ಸೇರಿಸಿ ಆಶ್ಚ್ಯೋತನವನ್ನು ಮಾಡಬೇಕು. ಅವುಗಳೊಡನೆ ಮಾದಳ ಹಣ್ಣಿನ ರಸ, ಎಲಚಿಹಣ್ಣಿನ ಹುಳಿರಸ, ದಾಳಿಂಬೆಹಣ್ಣಿನರಸ, ಇವುಗಳನ್ನೂ ಸೇರಿಸಿ, ಒಂದೊಂದು, ಎರಡೆರಡು, ಮೂರುಮೂರರಂತೆ ಸೇರಿಸಿ ಆಶ್ಚ್ಯೋತನಮಾಡಬೇಕು ; ಸ್ಫಟಿಕ, ಹವಳ, ಶಂಖ, ಅತಿಮಧುರ ಇವುಗಳ ಚೂರ್ಣಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿಯಾಗಲೀ, ಶಂಖಚೂರ್ಣ, ಜೇನುತುಪ್ಪ, ಸಕ್ಕರೆಗಳೊಡನೆ ಸಮುದ್ರದನೊರೆಯನ್ನಾಗಲೀ ಮಿಶ್ರ ಮಾಡಿ ಅಂಜನಹಾಕಿದರೆ ಅರ್ಜುನರೋಗಹರವಾಗುತ್ತದೆ ; ಅರ್ಜುನನಾಶಕಗಳಾದ ಎರಡು ಯೋಗಗಳನ್ನು ಹೇಳುತ್ತಾರೆ : ಅವುಗಳಲ್ಲಿ ೧ ನೇಯದು ಸೈಂಧವ, ಚಿಲ್ಲದಬೀಜ ಗಳಪುಡಿಗೆ ಜೇನುತುಪ್ಪ ಮಿಶ್ರಮಾಡಿಯಾಗಲೀ, ೨ನೆಯದು ರಸಾಂಜನವನ್ನು ಜೇನು ತುಪ್ಪದಿಂದ ಅರೆದು ರಂಗಳಿಸಿಯಾಗಲೀ ಅಂಜನ ಹಾಕಬೇಕು ; ಸರ್ವದಾ ಅಶ್ಮಭೇದಿ ಯನ್ನು ಜೇನುತುಪ್ಪದಲ್ಲಿ ಅರೆದು ಕಣ್ಣಿಗೆಚ್ಚಬೇಕು.

ಲೋಹಚೂರ್ಣಾನಿ ಸರ್ವಾಣಿ ಧಾತವೋ ಲವಣಾನಿ ಚ ||೨೪||
ರತ್ನಾನಿ ದನ್ತಾಃ ಶೃಙ್ಗಾಣಿ ಗಣಶ್ಚಾಪ್ಯವಸಾದನಃ ।
ಕುಕ್ಕುಟಾಣ್ಡಕಪಾಲಾನಿ ಲಶುನಂ ಕಟುಕತ್ರಯಮ್ ||೨೫||
ಕರಞ್ಜಬೀಜಮೇಲಾ ಚ ಲೇಖ್ಯಾಞ್ಜನಮಿದಂ ಸ್ಮೃತಮ್ ।
ಪುಟಪಾಕಾವಸಾನೇನ ರಕ್ತವಿಸ್ರಾವಣಾದಿನಾ ||೨೬||
ಸಂಪಾದಿತಸ್ಯ ವಿಧಿನಾ ಕೃತ್ಸ್ನೇನ ಸ್ಯನ್ದಘಾತಿನಾ ।
ಅನೇನಾಪಹರೇಚ್ಛುಕ್ರಮವ್ರಣಂ ಕುಶಲೋ ಭಿಷಕ್ ||೨೭||

ಚಿನ್ನ, ಬೆಳ್ಳಿ, ತವರ, ಸೀಸ, ತಾಮ್ರ, ಕಬ್ಬಿಣ ಮೊದಲಾದಲೋಹಗಳು, ಮಣ ಶಿಲೆ, ಕಾವಿ ಮೊದಲಾದ ಧಾತುಗಳು, ಸೈಂಧವಾದಿಲವಣಗಳು, ಪಚ್ಚೆ, ವೈಡೂರ್ಯ ಮೊದಲಾದರತ್ನಗಳು, ಹಸು, ಕುದುರೆ, ಆನೆ ಮೊದಲಾದ ಪ್ರಾಣಿಗಳ ಹಲ್ಲುಗಳು. ಹಸು, ಆಡುಗಳಕೊಂಬು, ಮಿಶ್ರಕೋಕ್ತಕಾಸೀಸ ಮೊದಲಾದುವುಗಳು, ಕೋಳಿ ಮೊಟ್ಟೆಯ ಮೇಲಿನಸಿಪ್ಪೆ, ಬೆಳ್ಳುಳ್ಳಿ, ತ್ರಿಕಟು, ಹೊಂಗೆಬೀಜ, ಏಲಕ್ಕಿ, ಇವು ಲೇಖ್ಯಾಂಜನಗಳು ; ಅಭಿಷ್ಯಂದಹರಗಳಾದ ರಕ್ತಸ್ರಾವ, ವಿರೇಚನ ಮೊದಲಾಗಿ ಶಿರೋ ವಿರೇಚನದವರೆಗಿನ ವಿಧಾನಗಳನ್ನೂ ಅನುಸರಿಸಿ ಲೇಖ್ಯಾಂಜನಗಳನ್ನುಪಯೋಗಿಸಬೇಕು. ಮೇಲೆ ಹೇಳಿದ ರಕ್ತಮೋಕ್ಷಣ, ಮೊದಲಾದ ಚಿಕಿತ್ಸಾವಿಧಾನಗಳಿಂದ ಶುದ್ಧಿಮಾಡಿದ ನಂತರ ಅವ್ರಣಶುಕ್ರರೋಗಿಗೆ ಲೇಖನಾಂಜನದಿಂದ ಶುಕ್ರನಿವಾರಣೆ ಮಾಡಬೇಕು.

ಉತ್ತಾನಮುವಗಾಢಂ ವಾ ಕರ್ಕಶಂ ವಾಽಪಿ ಸವ್ರಣಮ್ ।
ಶಿರೀಷಬೀಜಮರಿಚಪಿಪ್ಪಲೀಸೈಂಧವೈರಪಿ ||೨೮||
ಶುಕ್ರಸ್ಯ ಘರ್ಷಣಂ ಕಾರ್ಯಮಥವಾ ಸೈನ್ಧವೇನ ತು ।
ಕುರ್ಯಾತ್ತಾಮ್ರರಜಃ ಶಙ್ಖಶಿಲಾಮರಿಚ ಸೈನ್ಧವೈಃ ||೨೯||

ಅನ್ಯಾತ್ಯೈತ್ ದ್ವಿಗುಣಿತ್ತೈರೇಭಿರಞ್ಜನಂ ಶುಕ್ರನಾಶನಮ್ ।
ಕುರ್ಯಾದಞ್ಜನಯೋಗೌ ವಾ ಸಮ್ಯಕ್ ಶ್ಲೋಕಾರ್ಧಿಕಾವಿಮೌ ॥೩೦॥
ಶಙ್ಖಕೋಲಾಸ್ಥಿಕತಕ ದ್ರಾಕ್ಷಾಮಧುಕವಾಕ್ಷಿಕೈಃ ।
ಕ್ಷೌದ್ರದನ್ತಾರ್ಣವಮಲಶಿರೀಷಕುಸುಮೈರಪಿ ॥೩೧॥
ಕ್ಷಾರಾಞ್ಜನಂ ವಾ ವಿತರೇತ್ ಬಲಾಸಗ್ರದಿತಾಪಹಮ್ ।
ಮುದ್ಗಾನ್ ವಾ ನಿಸ್ತುಷಾನ್ ಭೃಷ್ಟ್ವಾ ಶಙ್ಖಕ್ಷೌದ್ರಸಿತಾಯುತಾನ್ ॥೩೨॥
ಮಧೂಕಸಾರಂ ಮಧುನಾ ಯೋಜಯೇಚ್ಚಾಞ್ಜನೇ ಸದಾ ।
ವಿಭೀತಕಾಸ್ಥಿಮಜ್ಜಾ ವಾ ಸಕ್ಷೌದ್ರಃ ಶುಕ್ರನಾಶನಃ ॥೩೩॥
ಶಙ್ಖಶುಕ್ತಿಮಧುದ್ರಾಕ್ಷಾ ಮಧೂಕಕತಕಾನಿ ಚ ।
ದ್ವಿತ್ವಗ್ಗತೇ ಸಶೂಲೇ ವಾ ವಾತಘ್ನಂ ತರ್ಪಣಂ ಹಿತಮ್ ॥೩೪॥
ವಂಶಜಾರುಷ್ಕರೌತಾಲಂ ನಾರಿಕೇಳಂ ಚ ದಾಹಯೇತ್ ।
ವಿಸ್ರಾವ್ಯಕ್ಷಾರವಚ್ಚೂರ್ಣಂ ಭಾವಯೇತ್ಕರಭಾಸ್ಥಿಜಮ್ ॥೩೫॥
ಬಹುಶೋಽಞ್ಜನಮೇತತ್ಸ್ಯಾಚ್ಛುಕ್ರವೈವರ್ಣ್ಯನಾಶನಮ್ ।

ಸವ್ರಣಶುಕ್ರಚಿಕಿತ್ಸಾವಿಧಾನವು—ಮೊದಲನೆಯ ಪಟಲದಲ್ಲಾಗಲೀ ೨ನೆಯ ಅಥವಾ ೩ನೆಯ ಪಟಲಗಳನ್ನು ವ್ಯಾಪಿಸಿ ಒರಟಾಗಿರುವ ಸವ್ರಣಶುಕ್ರವನ್ನು ಬಾಗೇಬೀಜ, ಮೆಣಸು, ಹಿಪ್ಪಲಿ ಸೈಂಧವಗಳ ಚೂರ್ಣದಿಂದ ಅಥವಾ ಬರಿಯ ಸೈಂಧವಲವಣದ ಚೂರ್ಣದಿಂದಾಗಲೀ ತಿಕ್ಕಬೇಕು; ತಾಮ್ರದ ಅರಪುಡಿ ೧೬ ಭಾಗ ಶಂಖದ ಚೂರ್ಣ ೮ ಭಾಗ, ಮಣಶಿಲೆ ೪ ಭಾಗ, ಮೆಣಸು ೨ ಭಾಗ, ಸೈಂಧವ ೧ ಭಾಗ, ಈ ರೀತಿ ಕಡೆಯಿಂದ ಮೊದಲಿನವರೆಗಿರುವ ಚೂರ್ಣಗಳನ್ನು ೧ ಕ್ಕೆ ೨ ರಂತೆ ಹೆಚ್ಚಿಸಿ ಎಲ್ಲವನ್ನೂ ಸೇರಿಸಿ ಅಂಜನಮಾಡಿದರೆ ಶುಕ್ರಹರಣವಾಗುತ್ತದೆ. ಅಥವಾ ಅರ್ಧ ಶ್ಲೋಕದಿಂದ ಹೇಳಿದ ೨ ಯೋಗಗಳಿಂದಾಗಲೀ ಅಂಜನಕರ್ಮವನ್ನು ಮಾಡಿಸಬೇಕು. ಅವುಗಳಲ್ಲಿ ಮೊದಲನೆಯ ಯೋಗಕ್ಕೆ—ಶಂಖ, ಎಲಚೀಬೀಜ, ಚಿಲ್ಲದಬೀಜ, ದ್ರಾಕ್ಷಿ, ಅತಿಮಧುರ ಇವುಗಳ ಚೂರ್ಣವನ್ನು ಜೇನುತುಪ್ಪ ಮಿಶ್ರಣ ಮಾಡಿ ಅಂಜನಮಾಡಬೇಕು; ೨ ನೆಯ ಯೋಗಕ್ಕೆ—ಹಸುವಿನಕೊಂಬು, ಸಮುದ್ರದ ನೊರೆ, ಬಾಗೇಹೂವುಗಳ ಕಲ್ಕವನ್ನು ಜೇನುತುಪ್ಪ ಮಿಶ್ರಮಾಡಿ ಅಂಜನಹಾಕಬೇಕು. ಬಲಾಸಗ್ರಥಿತ ಹರವಾದ ನೀಲಯವವನ್ನು ಹಸುವಿನ ಹಾಲಿನಲ್ಲಿ ಭಾವನೆ ಮಾಡಿ ಒಣಗಿಸಿ ಸುಟ್ಟಸುಸಿ ಮೊದಲಾದುವುಗಳಿಂದ ತಯಾರಿಸಿದ ಕ್ಷಾರಾಂಜನವನ್ನು, ಹಾಕಬೇಕು; ಹೊಟ್ಟು ತೆಗೆದ ಹೆಸರನ್ನು ಹುರಿದು ಪುಡಿಮಾಡಿ ಶಂಖಚೂರ್ಣ, ಜೇನುತುಪ್ಪ, ಸಕ್ಕರೆಗಳೊಡನೆ ರಂಗಳಿಸಿಯಾಗಲೀ, ಹಿಪ್ಪೆತೊಗಟೆಯಿಂದ ತಯಾರಿಸಿದ ರಸಕ್ರಿಯೆಯಿಂದಾಗಲೀ ತಾರೆಕಾಯಿಯ ಬೀಜದೊಳಗಿನ ಪೊಪ್ಪಿನ ಕಲ್ಕಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿಯಾಗಲೀ ಕಣ್ಣಿಗೆಚ್ಚಲು ಸವ್ರಣ ಶುಕ್ರ ನಾಶವಾಗುತ್ತದೆ; ಶಂಖ, ಮುತ್ತಿನಚಿಪ್ಪು, ಜೇನುತುಪ್ಪ, ದ್ರಾಕ್ಷಿ, ಅತಿಮಧುರ

ಚಿಲ್ಲದಬೀಜ ಇವುಗಳನ್ನೆಲ್ಲಾ ಅರೆದು ಕಲ್ಕಮಾಡಿ ಕಣ್ಣಿಗೆಚ್ಚಿದರೆ ಸುವ್ರಣ ಶುಕ್ರನಾಶವಾಗುತ್ತದೆ ; ಶುಕ್ರವು ೨ ನೆಯ ಪಟಲವನ್ನಾಶ್ರಯಿಸಿ ನೋಯುತ್ತಿದ್ದರೆ ವಾತಹರತರ್ಪಣೌಷಧದಿಂದ ನೇತ್ರಕ್ಕೆ ಉಪಚಾರಮಾಡಿದರೆ ಹಿತವಾಗುತ್ತದೆ ; ಬಿದರು ಕಳಲೆ, ಗೇರುಬೀಜ, ಪನೆಕಾಯಿ ತೆಂಗಿನಕಾಯಿಗಳನ್ನು ಒಟ್ಟುಸೇರಿಸಿ ಎಳ್ಳುಕಡ್ಡಿಗಳಿಂದಮುಚ್ಚಿ ಸುಟ್ಟಬೂದಿಯನ್ನು ನೀರಿನಲ್ಲಿ ಕದರಿ ಶೋಧಿಸಿಬಂದನೀರನ್ನು ಬಿಸಿಲಲ್ಲಿ ಶೋಷಿಸಿ ತಳಗೆ ನಿಂತ ಕ್ಷಾರವನ್ನು ಶೇಖರಿಸಿಟ್ಟುಕೊಂಡು ಆನೆಯ ಮೂಳೆಯ ಚೂರ್ಣವನ್ನೂ ಪ್ರತಿದಿನವೂ ಉಪಯೋಗಕ್ಕೆ ಬೇಕಾದಷ್ಟುಪ್ರಮಾಣದಿಂದ ಮಿಶ್ರಮಾಡಿ ಅದಕ್ಕೆ ೬ ರಷ್ಟು ಅಥವಾ ೮ ರಷ್ಟು ನೀರುಸೇರಿಸಿ ಕುದಿಸಿ $\frac{1}{4}$ ಭಾಗಕ್ಕೆ ಉಳಿಸಿಶೋಧಿಸಿದ ನೀರನ್ನು ಆನೆಯಮೂಳೆಚೂರ್ಣಕ್ಕೆ ಸುರಿದು ಭಾವನೆಮಾಡಿ ಬಿಸಿಲಲ್ಲಿ ಒಣಗಿಸಬೇಕು. ಹೀಗೆ ೭ ದಿನಗಳು ಭಾವನೆಮಾಡಿದ ಆನೆಮೂಳೆಯ ನಯವಾದ ಚೂರ್ಣವನ್ನು ಜೇನುತುಪ್ಪ ಮಿಶ್ರಮಾಡಿ ಶಲಾಕೆಯಿಂದಾಗಲೀ ಕೈಬೆರಳಿನಿಂದಾಗಲೀ ಅಂಜನ ಮಾಡಿದರೆ ಶುಕ್ರದ ಬಣ್ಣವು ಕಪ್ಪಾಗುತ್ತದೆ ; ಆದರೆ ಶುಕ್ರವು ನಿವಾರಣೆಯಾಗುವುದಿಲ್ಲ.

ಅಜಕಾಂ ಪಾರ್ಶ್ವತೋವಿದ್ಧ್ವಾಂ ಸೂಚ್ಯಾವಿಸ್ರಾವ್ಯ ಚೋದಕಮ್ ||೩೬||
ವ್ರಣಂ ಗೋಮಾಂಸಚೂರ್ಣೇನ ಪೂರಯೇತ್ ಸರ್ಪಿಷಾ ಸಹ |
ಬಹುಶೋಽವಲಿಖೇಚ್ಚಾಪಿ ವರ್ತ್ಮಾಸ್ಯೋಪಗತಂ ಯದಿ ||೩೭||
ಸಶೋಫಶ್ಚಾಪ್ಯಶೋಫಶ್ಚ ದ್ವೌ ಪಾಕೌ ಯೌ ಪ್ರಕೀರ್ತಿತೌ |
ಸ್ನೇಹಸ್ವೇದೋಪಪನ್ನಸ್ಯ ತತ್ರ ವಿದ್ಧ್ವಾ ಸಿರಾಂ ಭಿಷಕ್ ||೩೮||
ಸೇಕಾಶ್ಚ್ಯೋತನನಸ್ಯಾನಿ ಪುಟಪಾಕಾಂಶ್ಚ ಕಾರಯೇತ್ |
ಸರ್ವತಶ್ಚಾಪಿ ಶುದ್ಧಸ್ಯ ಕರ್ತವ್ಯಮಿದಮಂಜನಮ್ ||೩೯||
ತಾಮ್ರಪಾತ್ರಸ್ಥಿತಂ ಮಾಂಸಂ ಸರ್ಪಿಃ ಸೈಂಧವಸಂಯುತಮ್ |
ಮೈರೇಯಂ ವಾಪಿ ದಧ್ಯೇವಂ ದಧ್ಯುತ್ತರಕಮೇವ ಚ ||೪೦||
ಘೃತಂ ಕಾಂಸ್ಯಮಲೋಪೇತಂ ಸ್ತನ್ಯಂ ವಾಪಿ ಸಸೈಂಧವಮ್ |
ಮಧೂಕಸಾರಂ ಮಧುನಾ ತುಲ್ಯಾಂಶಂ ಗೈರಿಕೇಣ ವಾ ||೪೧||

ಅಜಕಾ ಎಂಬ ಗ್ರಂಥಿಯನ್ನು ಪಕ್ಕದಲ್ಲಿ ಸೂಜಿಯಿಂದ ಚುಚ್ಚಿ ನೀರನ್ನು ಸುರಿಸಿ ದನದಮಾಂಸಚೂರ್ಣಕ್ಕೆ ತುಪ್ಪಮಿಶ್ರಮಾಡಿ ವ್ರಣದೊಳಕ್ಕೆ ತುಂಬಬೇಕು ; ಅದರ ಮುಖವು ಎತ್ತರವಾಗಿದ್ದರೆ ಚೂರಿಯಿಂದ ಕೆರೆಯಬೇಕು. ಸಶೋಫ ನೇತ್ರಪಾಕ, ಅಶೋಫನೇತ್ರಪಾಕಗಳಲ್ಲಿ ಸ್ನೇಹಸ್ವೇದಗಳನ್ನು ಮಾಡಿಸಿದ ಮೇಲೆ ಸಿರಾವ್ಯಧವನ್ನು ಮಾಡಿಸಿ ಸೇಕ, ಆಶ್ಚ್ಯೋತನ, ನಸ್ಯ, ಪುಟಪಾಕಗಳನ್ನು ಮಾಡಿಸಿ ಸರ್ವದೇಹವೂ ಶುದ್ಧಿಯಾದನಂತರ ಈ ಅಂಜನಗಳನ್ನು ಪ್ರಯೋಗಿಸಬೇಕು. ೧ನೆಯ ವಿಧಾನ :—೧ ತಿಂಗಳವರೆಗೆ ತಾಮ್ರದ ಪಾತ್ರೆಯಲ್ಲಿ ಮಾಂಸವನ್ನು ತುಪ್ಪಸೈಂಧವಲವಣ ಮಿಶ್ರಮಾಡಿಟ್ಟಬೇಕು ; ಸುರಾ ಆಸವಗಳನ್ನು ಒಟ್ಟುಗೂಡಿಸಿ ಸಂಧಾನವಾಗುವಂತೆಮಾಡಿ ತಯಾರಿಸಿದ ಮೈರೇಯವನ್ನೂ ಮೊಸರು ಅಥವಾ ಮೊಸರುಕಟ್ಟನ್ನೂ ಸೇರಿಸಿಟ್ಟು ತಿಂಗಳಾದ

ಮೇಲೆ ಈ ದ್ರವಗಳಿಂದ ಅಂಜನಮಾಡಿಸಬೇಕು ; ೨ನೆಯ ವಿಧಾನ :—ಕಂಚಿನಪಾತ್ರೆಯಲ್ಲಿ ತುಪ್ಪ ಸೈಂಧವ ಸ್ತನ್ಯಗಳನ್ನು ಮಿಶ್ರಮಾಡಿ ಅಂಜನ ಹಾಕುವುದು. ೩ನೆಯ ವಿಧಾನ :—ಅತಿಮಧುರದ ಕಷಾಯಕ್ಕೆ ಸಮಭಾಗ ಕಾವಿಯನ್ನು ಸೇರಿಸಿ ಜೇನುತುಪ್ಪ ಮಿಶ್ರಮಾಡಿ ಅಂಜನ ಹಾಕಬೇಕು ; ಇವುಗಳ ಪೈಕಿ ರಕ್ತಸ್ರಾವಮಾಡಿಸಿದ ನಂತರ ರೂಕ್ಷತೆಯಿಂದ ವಾತೋಲ್ಬಣವಾದ ಪಾಕದಲ್ಲಿ ಸ್ನೇಹಾಂಜನವನ್ನೂ, ಪಿತ್ತೋಲ್ಬಣವಾಗಿ ಅತಿರೂಕ್ಷನಾಗದಿದ್ದರೆ ವೈರೇಯ ದಧಿಸೈಂಧವಗಳನ್ನು ತಾಮ್ರದಪಾತ್ರೆಯಲ್ಲಿಟ್ಟು ಅಂಜನ ಹಾಕಬೇಕು ; ಇವು ಅಶೋಫವ್ರಣನೇತ್ರಪಾಕಗಳ ಚಿಕಿತ್ಸೆಗಳು ; ಇನ್ನು ಸಶೋಫವ್ರಣ ನೇತ್ರಪಾಕದಲ್ಲಿ ಕಂಚಿನಮಲದೊಡನೆ ಮಿಶ್ರಮಾಡಿದ ಘೃತ, ಸ್ತನ್ಯ, ಸೈಂಧವಗಳ ಅಂಜನವುಹಿತವು ; ಅಥವಾ ಅತಿಮಧುರದಸಾರಕ್ಕೆ ಸಮಭಾಗ ಕಾವಿಯನ್ನು ಸೇರಿಸಿ ಜೇನುತುಪ್ಪದೊಡನೆ ಅಂಜನಹಾಕಬೇಕು ; ಹೀಗೆ ಸ್ತನ್ಯಮಿಶ್ರ ಮಾಡಿದ ಘೃತಾದಿ ೨ ವಿಧಗಳಾದ ಅಂಜನಗಳು ರಕ್ತಶೇಷವುಳ್ಳ ಶೋಫವ್ರಣಹರಗಳೆಂದು ತಿಳಿಯಬೇಕು.

> ಸರ್ಪಿಃ ಸೈಂಧವತಾಮ್ರಾಣಿ ಯೋಷಿತ್‌ಸ್ತನ್ಯಯುತಾನಿ ಚ ।
> ದಾಡಿಮಾರೇವತಾಶ್ಮನ್ತಕೋಲಾಮ್ಲೈಶ್ಚ ಸಸೈನ್ಧವಾವ್ ॥
> ರಸಕ್ರಿಯಾಂ ವಾ ವಿತರೇತ್ ಸಮ್ಯಕ್ಪಾಕಜಿಘಾಂಸಯಾ ॥೪೨॥

ತುಪ್ಪ, ಸೈಂಧವ, ಸ್ತನ್ಯಗಳನ್ನು ತಾಮ್ರದಪಾತ್ರೆಯಲ್ಲಿ ಅರೆದಾಗಲೀ, ದಾಡಿಮ ಕಕ್ಕೆ, ಆರೆಮರ, ಯಲಚಿ, ಸೈಂಧವ ಇವುಗಳ ರಸಕ್ರಿಯೆಯನ್ನಾಗಲೀ ಪ್ರಯೋಗಮಾಡಿ ಪಾಕವಾಗದಂತೆ ಮಾಡಬೇಕು.

> ಮಾಸಂ ಸೈಂಧವಸಂಯುಕ್ತಂ ಸ್ಥಿತಂ ಸರ್ಪಿಷಿ ನಾಗರಮ್ ।
> ಆಶ್ಚ್ಯೋತನಾಞ್ಜನಂ ಯೋಜ್ಯಮಬಲಾಕ್ಷೀರಸಂಯುತಮ್ ॥೪೩॥

ಸೈಂಧವ, ಶುಂಠಿ, ತುಪ್ಪಗಳನ್ನು ಸೇರಿಸಿ ಒಂದು ತಿಂಗಳ ನಂತರ ಸ್ತನ್ಯಮಿಶ್ರ ಮಾಡಿ ಆಶ್ಚ್ಯೋತನ ಅಂಜನಗಳನ್ನು ಪ್ರಯೋಗಿಸಬೇಕು.

> ಜಾತ್ಯಾಃ ಪುಷ್ಪಂ ಸೈನ್ಧವಂ ಶೃಙ್ಗವೇರಂ ಕೃಷ್ಣಾಬೀಜಂ ಕೀಟಶತ್ರೋಶ್ಚ ಸಾರಮ್ ।
> ವಿಷ್ಟಪಿಷ್ಟಂ ನೇತ್ರಪಾಕೇಽಞ್ಜನಾರ್ಥಂಕ್ಷೌದ್ರೋಪೇತಂ ನಿರ್ವಿಶಙ್ಕಂ ಪ್ರಯೋಜ್ಯಮ್ ॥೪೪॥

ಜಾಜಿಹೂವು, ಸೈಂಧವ, ಹಸಿಶುಂಠಿ, ಹಿಪ್ಪಲಿಯಕಾಳು, ವಿಡಂಗ ಇವೆಲ್ಲವನ್ನೂ ಸಮಭಾಗವಾಗಿ ಸೇರಿಸಿ ನುಣ್ಣಗೆ ಪುಡಿಮಾಡಿ ಜೇನುತುಪ್ಪದಿಂದ ರಂಗಳಿಸಿ ನೇತ್ರಪಾಕದಲ್ಲಿ ಧೈರ್ಯವಾಗಿ ಅಂಜನಮಾಡಬೇಕು.

> ಪೂಯಾಲಸೇ ಶೋಣಿತಮೋಕ್ಷಣಂ ಚ ಹಿತಂ ತಥೈವಾಪ್ಯುಪನಾಹನಂ ಚ ।
> ಕೃತ್ಸ್ನೋ ವಿಧಿಶ್ಚೇಕ್ಷಣಪಾಕಘಾತಿ ಯಥಾಭಿಧಾನಂ ಭಿಷಜಾ ಪ್ರಯೋಜ್ಯಃ ॥೪೫॥

ತ್ರಿದೋಷಜ ನೇತ್ರಪಾಕದಲ್ಲಿ ರಕ್ತಮೋಕ್ಷಣ ಉಪನಾಹ ಮತ್ತು ನೇತ್ರಪಾಕಹರಗಳಾದ ಚಿಕಿತ್ಸಾವಿಧಾನಗಳನ್ನು ಆಚರಿಸಬೇಕು ; ಅಂದರೆ ಸ್ನೇಹಸ್ವೇದಗಳನ್ನು ಮಾಡಿಸಿದ

ಮೇಲೆ ಸಿರಾವ್ಯಧೆಯನ್ನು ಮಾಡಬೇಕು ; ದೋಷಹರದ್ರವ್ಯಗಳಿಂದ ವ್ರಣಶೋಧನವನ್ನೂ ನೇತ್ರಬಲಕರದ್ರವ್ಯಗಳಲೇಪನಮಾಡಿ ಬಂಧನವನ್ನೂ ಮಾಡಬೇಕು ; ಅಂತಃ ಶುದ್ಧಿಕರ ಗಳಾದವಮನ ವಿರೇಚನಗಳ ಪ್ರಯೋಗಗಳನ್ನೂ ಬಾಹ್ಯಶುದ್ಧಿಕರಗಳಾದ ಸ್ನಾನ, ಅಭ್ಯಂಗಪರಿಷೇಕಾದಿಗಳನ್ನೂ ಮಾಡಿಸಬೇಕೆಂದು ಅರ್ಥವು.

ಕಾಸೀಸಸಿನ್ಧುಪ್ರಭವಾರ್ದ್ರಕೈಸ್ತು ಭವೇದಞ್ಜನಮೇವ ಚಾತ್ರ ।
ಕ್ಷೌದ್ರಾನ್ವಿತೈರೇಭಿರಥೋಪಯುಞ್ಜ್ಯಾದಸ್ಯತ್ತು ತಾಮ್ರಾಯಸ ಚೂರ್ಣಯುಕ್ತೈಃ ॥೪೬॥

ಸ್ನೇಹಾದಿನಾ ಸಮ್ಯಗಪಾಸ್ಯ ದೋಷಾಂಸ್ತೃಪ್ತಂ ವಿಧಾಯಾಥ ಯಥಾಸ್ವಮೇವ ।
ಪ್ರಕ್ಲಿನ್ನವರ್ತ್ಮಾನಮುಪಕ್ರಮೇತ ಸೇಕಾಞ್ಜನಾಶ್ಚ್ಯೋತನನಸ್ಯ ಧೂಮೈಃ ॥೪೭॥
ಮುಸ್ತಾಹರಿದ್ರಾಮಧುಕಪ್ರಿಯಙ್ಗು ಸಿದ್ಧಾರ್ಥರೋಧ್ರೋತ್ಪಲ ಸಾರಿವಾಭಿಃ ।
ಕ್ಷುಣ್ಣಾಭಿರಾಶ್ಚ್ಯೋತನಮೇವ ಕಾರ್ಯಮತ್ರಾಞ್ಜನಂ ಚಾಞ್ಜನ ಮಾಕ್ಷಿಕಂ ಸ್ಯಾತ್ ॥೪೮॥

ಅನ್ನಭೇದಿ, ಸೈಂಧವಲವಣ, ಹಸಿಯಶುಂಠಿಗಳಕಲ್ಕದಿಂದ ಅಂಜನಮಾಡಿದರೆ ಹಿತವಾಗುತ್ತದೆ ; ಇವುಗಳ ಜೊತೆಗೆ ತಾಮ್ರದ ಮತ್ತು ಕಬ್ಬಿಣದ ಅರಪುಡಿಗಳನ್ನು ಸೇರಿಸಿ ಜೇನುತುಪ್ಪ ಮಿಶ್ರಮಾಡಿ ಅಂಜನಮಾಡಿಸಬೇಕು. ಇದು ಮತ್ತೊಂದು ವಿಧಾನವು. ಪ್ರಕ್ಲಿನ್ನ ವರ್ತ್ಮ ರೋಗಿಗೆ ಸ್ನೇಹಾದಿಕಾರ್ಯಗಳಿಂದ ದೋಷಹರಣಮಾಡಿಸಿ ಅಂದರೆ ಸ್ನೇಹನ ಸಿರಾಮೋಕ್ಷಣ ವಿರೇಚನ ಶಿರೋವಿರೇಚನ ಆಸ್ಥಾಪನ, ಬಸ್ತಿಪ್ರಯೋಗಗಳಿಂದ ದೋಷಗಳನ್ನು ಹೊರಕ್ಕೆ ಹೊರಡಿಸಿ ಸೇಕ ಅಂಜನ ಆಶ್ಚ್ಯೋತನ, ನಸ್ಯ ಧೂಮ ಪ್ರಯೋಗಗಳಿಂದ ಉಪಚರಿಸಬೇಕು ; ಕೊನ್ನಾರಿಗೆಡ್ಡೆ, ಅರಿಶಿನ, ಅತಿಮಧುರ, ನೆಳಲು, ಸಾಸಿವೆ, ಲೋಧ್ರ, ನೈದಿಲೆಗಡ್ಡೆ, ಸೊಗದೆಬೇರು ಇವುಗಳನ್ನು ನುಣ್ಣಗೆ ಪುಡಿಮಾಡಿಟ್ಟುಕೊಂಡು ಆಶ್ಚ್ಯೋತನವನ್ನೂ ಸೌವೀರಾಂಜನ ಜೇನುತುಪ್ಪಗಳನ್ನು ಸೇರಿಸಿ ಅಂಜನವನ್ನೂ ಮಾಡಿಸಬೇಕು.

ಪತ್ರಂ ಫಲಂ ಚಾಮಲಕಸ್ಯ ಪಕ್ತ್ವಾ ಕ್ರಿಯಾಂ ವಿದಧ್ಯಾದಥವಾಞ್ಜನಾರ್ಥೇ ।
ವಂಶಸ್ಯ ಮೂಲೇನರಸಕ್ರಿಯಾಂ ವಾ ವರ್ತೀಕೃತಾಂ ತಾಮ್ರ ಕಪಾಲಪಕ್ವಾಮ್ ॥೪೯॥
ರಸಕ್ರಿಯಾಂ ವಾ ತ್ರಿಫಲಾವಿಪಕ್ವಾಂ ಪಲಾಸಪುಷ್ಪೈಃ ಖರಮಂಜರೇರ್ವಾ ॥

ರಸಕ್ರಿಯಾಂಜನವು:—ನೆಲ್ಲೀಸೊಪ್ಪು ನೆಲ್ಲೀಕಾಯಿಗಳನ್ನು ಬೇಯಿಸಿ ಶೋಧಿಸಿದ ನೀರನ್ನು ಕಾಯಿಸಿ ರಸಕ್ರಿಯೆಯನ್ನು ಮಾಡಬೇಕು; ಬಿದಿರು ಕಳಲೆಯ ಕಷಾಯನನ್ನು ಶೋಧಿಸಿ ಪುನಃ ಆ ಕಷಾಯವನ್ನು ತಾಮ್ರದ ಪಾತ್ರೆಯಲ್ಲಿ ತುಂಬಿ ರಸಕ್ರಿಯೆಯನ್ನು ಮಾಡಬೇಕು ; ಹೀಗೆಯೇ ತ್ರಿಫಲಾ, ಮುತ್ತುಗದಹೂವು, ಉತ್ತರಣೆ ಸಮೂಲಗಳ ಕಷಾಯಯದಿಂದ ರಸಕ್ರಿಯೆಯನ್ನು ಮಾಡಿ ಅಂಜನ ಹಾಕಬೇಕು.

ಪಿಷ್ಟ್ವಾ ಭಗಲ್ಯಾಃ ಪಯಸಾ ಮಲಂ ವಾ ಕಾಂಸ್ಯಸ್ಯ ದಗ್ಧ್ವಾ ಸಹತಾನ್ತವೇನ ॥೫೦॥
ಪ್ರತ್ಯಞ್ಜನೇ ತನ್ಮರಿಚೈರುಪೇತಂ ಚೂರ್ಣೇನ ತಾಮ್ರಸ್ಯ ಸಹೋಪಯೋಜ್ಯಮ್ ॥

ಸಮುದ್ರಫೇನಂ ಲವಣೋತ್ತಮಂ ಚ ಶಙ್ಖೋಽಥ ಮುದ್ಗೋ ಮರಿಚಂ ಚ ಶುಕ್ಲಮ್ ||೪೧||

ಚೂರ್ಣಾಞ್ಜನಂ ಯೋಜ್ಯಮಥಾಪಿ ಕಣ್ಡ್ವಾವಕ್ಲಿನ್ನವರ್ತ್ಮಾನ್ಯುಪಹನ್ತಿ ಶೀಘ್ರಮ್ ||

ಪ್ರಕ್ಲಿನ್ನವರ್ತ್ಮನ್ಯಪಿ ಚೈತಏವ ಯೋಗಾಃ ಪ್ರಯೋಜ್ಯಾಶ್ಚ ಸಮೀಕ್ಷ್ಯ ದೋಷಾನ್ ||೪೨||

ಸಕಜ್ಜಲಂ ತಾಮ್ರಘಟೇ ಚ ಘೃಷ್ಟಂ ಸರ್ಪಿರ್ಯುತಂ ತುತ್ಥಕಮಞ್ಜನಂ ಚ ||೪೩||

ತೀಕ್ಷ್ಣಾಂಜನಪ್ರಯೋಗದಿಂದ ದುರ್ಬಲವಾದ ಕಣ್ಣಿಗೆ ಸಮಾಧಾನ ಮಾಡಲು ಪ್ರತ್ಯಂಜನವನ್ನೂ ಹೇಳುತ್ತಾರೆ. ಕಂಚಿನಮಲವನ್ನು ವಸ್ತ್ರದೊಡನೆ ಸುಟ್ಟು ನುಗ್ಗೆ ಬೀಜ ಮತ್ತು ತಾಮ್ರದ ಪುಡಿಗಳನ್ನು ಸೇರಿಸಿ ಆಡಿನಹಾಲಿನಲ್ಲಿ ನುಣ್ಣಗೆ ಅರೆದು ಅಂಜನ ಹಾಕಬೇಕು ; ಸಮುದ್ರದ ನೊರೆ, ಸೈಂಧವ, ಶಂಖ ಹೆಸರುಬೇಳೆ ನುಗ್ಗೆ ಬೀಜ ಇವುಗಳ ಚೂರ್ಣವನ್ನು ಅಂಜನ ಹಾಕಿದರೆ ಬೇಗನೆ ನವೆಯನ್ನೂ ಅಕ್ಲಿನ್ನ ವರ್ತ್ಮವನ್ನೂ ನಾಶಮಾಡುತ್ತದೆ ; ಇದಕ್ಕೆ ಚೂರ್ಣಾಂಜನವೆಂದು ಹೆಸರು ; ಪ್ರಕ್ಲಿನ್ನವರ್ತ್ಮರೋಗದಲ್ಲೂ ದೋಷಗಳಿಗೆ ತಕ್ಕಂತೆ ಈ ಯೋಗಗಳನ್ನೇ ಉಪಯೋಗಿಸಬೇಕು; ಕಫಾಧಿಕ್ಯವಿರುವಕಾರಣ ಕಫಹರಯೋಗಗಳನ್ನೇ ಉಪಯೋಗಿಸಬೇಕು; ಕಾಡಿಗೆ ಮೈಲ್ ತುತ್ಥಗಳನ್ನು ಸಮಭಾಗದಿಂದ ಸೇರಿಸಿ ತುಪ್ಪ ಮಿಶ್ರಣಮಾಡಿ ತಾಮ್ರದ ತಟ್ಟೆಯಲ್ಲಿಟ್ಟು ನುಣ್ಣಗೆ ಉಜ್ಜಿ ಕಣ್ಣಿಗೆಚ್ಚಿದರೆ ಪ್ರಕ್ಲಿನ್ನ ವರ್ತ್ಮರೋಗವು ನಿವಾರಣೆಯಾಗುತ್ತದೆ. ಇದಕ್ಕೆ ತುತ್ಥಾಂಜನವೆಂದು ಹೆಸರು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ
ರಕ್ತಾಭಿಷ್ಯನ್ದಪ್ರತಿಷೇಧನಾಮಕ ದ್ವಾದಶಾಧ್ಯಾಯಸ್ಯ ಶ್ರೀ
ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ
ಕೃತ ಕರ್ಣಾಟಕ ಭಾಷಾ ವಿವೃತಿಃ.

ತ್ರಯೋದಶೋಽಧ್ಯಾಯಃ

ಅಥಾತೋ ಲೇಖ್ಯರೋಗಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಲೇಖ್ಯ ರೋಗಚಿಕಿತ್ಸೆಯನ್ನು ವಿವರಿಸುತ್ತೇನೆ.

ಟಿಪ್ಪಣಿ—ಅಭಿಷ್ಯಂದಾದಿರೋಗಗಳಲ್ಲಿ ಔಷಧಸಾಧ್ಯಚಿಕಿತ್ಸೆಗಳನ್ನು ವಿವರಿಸಿದ ನಂತರ ಶಸ್ತ್ರಸಾಧ್ಯರೋಗಗಳ ಚಿಕಿತ್ಸೆಯನ್ನು ವಿವರಿಸುತ್ತಾರೆ; ಇವುಗಳು ಅಲ್ಪಾವಸ್ಥೆಯಲ್ಲಿರುವಾಗ ಲೇಖನಕರ್ಮದಿಂದಲೇ ಸಾಧ್ಯವಾಗುತ್ತವೆಯಾದ್ದರಿಂದ ಮೊದಲು ಲೇಖ್ಯಯೋಗ್ಯರೋಗಗಳನ್ನು ಹೇಳುತ್ತಾರೆ.

ನವ ಯೇಽಭಿಹಿತಾ ಲೇಖ್ಯಾಃ ಸಾಮಾನ್ಯಸ್ತೇಷ್ವಯಂ ವಿಧಿಃ ।
ಸ್ನಿಗ್ಧವಾನ್ತವಿರಿಕ್ತಸ್ಯ ನಿವಾತಾತಪಸದ್ಮನಿ ||೩||
ಆಪ್ತೈರ್ಧೃತ ಗೃಹೀತಸ್ಯ ವೇಶ್ಮನ್ಯುತ್ತಾನಶಾಯಿನಃ ।
ಸುಖೋದಕಪ್ರತಪ್ತೇನ ವಾಸಸಾ ಸುಸಮಾಹಿತಃ ||೪||
ಸ್ವೇದಯೇದ್ವರ್ತ್ಮ ನಿರ್ಭುಜ್ಯ ವಾಮಾಙ್ಗುಷ್ಠಾಙ್ಗುಲಿಸ್ಥಿತಮ್ ।
ಅಙ್ಗುಳ್ಯಙ್ಗುಷ್ಠಕಾಭ್ಯಾಂ ತು ನಿರ್ಭುಗ್ನಂ ವರ್ತ್ಮ ಯತ್ನತಃ ||
ಪ್ಲೋತಾನ್ತರೀಕೃತಂ (ನ್ತರಾಭ್ಯಾನಯಥಾ) ನೈವಚಲತಿ ಸ್ರಂಸತೇಽಪಿ ವಾ ||೫||
ತತಃ ಪ್ರಮೃಜ್ಯ ಪ್ಲೋತೇನ ವರ್ತ್ಮ ಶಸ್ತ್ರಪದಾಙ್ಕಿತಮ್ ।
ಲಿಖೇಚ್ಛಸ್ತ್ರೇಣ ಪತ್ರೈರ್ವಾ ತತೋ ರಕ್ತೇ ಸ್ಥಿತೇ ಪುನಃ ||೬||
ಸ್ವಿನ್ನಂ ಮನೋಹ್ವಾಕಾಸೀಸವ್ಯೋಷಾರ್ದ್ರಾಞ್ಜನಸೈನ್ಧವೈಃ ।
ಶ್ಲಕ್ಷ್ಣಪಿಷ್ಟೈಃ ಸಮಾಕ್ಷೀಕೈಃ ಪ್ರತಿಸಾರ್ಯೋಷ್ಣವಾರಿಣಾ ||೭||
ಪ್ರಕ್ಷಾಳ್ಯ ಹವಿಷಾ ಸಿಕ್ತಂ ವ್ರಣವತ್ಸಮುಪಾಚರೇತ್ ।
ಸ್ವೇದಾವಪೀಡಪ್ರಭೃತೀಂ ಸ್ತ್ವ್ಯಹಾದೂರ್ಧ್ವಂ ಪ್ರಯೋಜಯೇತ್ ||೮||
ವ್ಯಾಸತಸ್ತೇ ಸಮಾದಿಷ್ಟಂ ವಿಧಾನಂ ಲೇಖ್ಯಕರ್ಮಣಿ ।
ಅಸೃಗಾಸ್ರಾವರಹಿತಂ ಕಣ್ಡೂಶೋಫವಿವರ್ಜಿತಮ್ ||೯||
ಸಮಂ ನಖನಿಭಂ ವರ್ತ್ಮಲಿಖಿತಂ ಸಮ್ಯಗಿಷ್ಯತೇ ।

ಒಂಬತ್ತು ವಿಧ ಲೇಖ್ಯ ರೋಗಗಳಿಗೂ ಈ ಕೆಳಗೆ ಹೇಳುವ ವಿಧಾನಗಳನ್ನೇ ಅನುಸರಿಸಬೇಕು ; ಹೇಗೆಂದರೆ ರೋಗಿಗೆ ಸ್ನೇಹ ಸ್ವೇದ ವಮನ ವಿರೇಚನ ಬಸ್ತಿ ಕರ್ಮಗಳಿಂದ ಶೋಧನಮಾಡಿಸಿ ಎದುರುಗಾಳಿ, ಬಿಸಿಲು ಬೀಳದಿರುವ ಕೊಠಡಿಯಲ್ಲಿ ಅಂಗತ್ತಲಾಗಿ ಮಲಗಿಸಿ ಆಪ್ತರು ಬಲವಾಗಿ ಹಿಡಿದುಕೊಂಡಿರುವಂತೆ ಮಾಡಿ ವೈದ್ಯನು ಸುಖೋಷ್ಣವಾದ

ನೀರಿನಲ್ಲಿ ಶುಭ್ರವಾದ ಶುದ್ಧವಾದ ವಸ್ತ್ರದಚೂರನ್ನು ಅದ್ದಿ ಎಡಗೈ ಹೆಬ್ಬೆಟ್ಟು ತರ್ಜನಿ ಬೆರಳುಗಳಿಂದ ರೋಗಿಯ ರೆಪ್ಪೆಯನ್ನು ಅಮುಕಿ ಕಣ್ಣುಗುಡ್ಡೆಯು ಆಕಡೆ ಈಕಡೆ ಚಲಿಸದಂತೆಯೂ ಜಾರಿಹೋಗದಂತೆಯೂ ಬಿಗಿದು ಹಿಡಿದುಕೊಂಡು ಹತ್ತಿಯ ಉಂಡೆಯಿಂದ ಕಣ್ಣಿನಕೊಳೆಯನ್ನು ತೊಳೆದು ಶಸ್ತ್ರದಿಂದ ಕತ್ತರಿಸತಕ್ಕದ್ದಾದರೆ ಕತ್ತರಿಸಿಯೂ ಕೆರೆಯಬೇಕಾಗಿದ್ದರೆ ಕೆರೆದು ಲೇಖನಮಾಡಿ ಅಥವಾ ಒರಟಾದ ಪಾರಿಜಾತದ ಎಲೆಗಳಿಂದ ಉಜ್ಜಿ ರಕ್ತವನ್ನು ಹೊರಕ್ಕೆ ಸುರಿಸಬೇಕು ; ರಕ್ತಸ್ರಾವವು ನಿಂತಮೇಲೆ ಪುನಃ ಸ್ವೇದಮಾಡಿ ಮಣಶಿಲೆ, ಅನ್ನಭೇದಿ, ತ್ರಿಕಟು, ರಸಾಂಜನ, ಸೈಂಧವಗಳನ್ನು ನುಣ್ಣಗೆ ಚೂರ್ಣಮಾಡಿ ಜೇನುತುಪ್ಪ ಮಿಶ್ರಮಾಡಿ ಕಣ್ಣಿಗೆ ಬಳಿದು ಬಿಸಿನೀರಿನಿಂದ ತೊಳೆದು ತುಪ್ಪದಿಂದ ಲೇಪಿಸಿದನಂತರ ಸದ್ಯೋವ್ರಣದಂತೆ ೭ ದಿನಗಳವರೆಗೆ ಉಪಚಾರಗಳನ್ನು ಮಾಡಿ ಅನಂತರ ೩ ದಿನಗಳಮೇಲೆ ಪುನಃ ಸ್ವೇದ ಅವಪೀಡಿತ ಮೊದಲಾದ ವ್ರಣೋಪಚಾರಗಳನ್ನು ಮಾಡಬೇಕು ; ಈ ರೀತಿಯಾಗಿ ಲೇಖ್ಯವಿಧಾನವು ವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತದೆ : ರಕ್ತಸ್ರಾವವು ನಿಂತು ನವೆ ಶೋಫಗಳಿಲ್ಲದೆ ರೆಪ್ಪೆಗಳು ಉಬ್ಬುತಗ್ಗಿಲ್ಲದೆ ಸಮಮಟ್ಟವಾಗಿ ಉಗುರಿನ ಹಿಂಭಾಗದಂತೆ (ರಕ್ತಮಿಶ್ರವಾದ ಬಿಳುಪು ಬಣ್ಣವುಳ್ಳದಾದರೆ) ಆದರೆ ಸರಿಯಾಗಿ ಲೇಖ್ಯ ಕರ್ಮವಾಗಿರುತ್ತೆಂದು ತಿಳಿಯಬೇಕು.

ರಕ್ತಮಕ್ಷಿ ಸ್ರವೇತ್ ಸ್ಕನ್ನಂ ಕ್ಷತಾಚ್ಚ ಸ್ತ್ರಕೃತಾದ್ಧ್ರುವಮ್ ||೧೦||
ರಾಗಶೋಫಪರಿಸ್ರಾವಾಸ್ತಿಮಿರಂ ವ್ಯಾಧ್ಯನಿರ್ಜಯಃ |
ವರ್ತ್ಮ ಶ್ಯಾವಂ ಗುರು ಸ್ತಬ್ಧಂ ಕಣ್ಡೂಹರ್ಷೋಪದೇಹವತ್ ||೧೧||
ನೇತ್ರಪಾಕಮುದೀರ್ಣಂ ವಾ ಕುರ್ವೀತಾಪ್ರತಿಕಾರಿಣಃ |
ಏತದ್ದುರ್ಲಿಖಿತಂ ಜ್ಞೇಯಂ ಸ್ನೇಹಯಿತ್ವಾ ಪುನರ್ಲಿಖೇತ್ ||೧೨||

ಶಸ್ತ್ರದಿಂದ ಲೇಖನಮಾಡುವಾಗ ಘಾಯಹೆಚ್ಚಾಗಿ ರಕ್ತಸ್ರಾವವಾಗಿ ರಕ್ತವು ಗಡ್ಡೆಕಟ್ಟಿಕೊಂಡು ರೆಪ್ಪೆಯು ಕೆಂಪಾಗಿಯೂ, ಊದಿಕೊಂಡೂ, ರಕ್ತಸ್ರಾವವಾಗುತ್ತಲೂ, ತಿಮಿರದರ್ಶನವಾಗಿ ವ್ಯಾಧಿನಿವಾರಣೆಯಾಗದೆ ರೆಪ್ಪೆಯು ಹೊಗೆಬಣ್ಣದಿಂದಿದ್ದು ಭಾಗವಾಗಿ–ಚಲಿಸದೆ–ನವೆಯುಳ್ಳದಾಗಿ–ಅದುರುತ್ತಲೂ, ಜಿಬರಿನಿಂದ ಮೆತ್ತಿದ್ದರೂ ಅಥವಾ ನೇತ್ರಪಾಕಚಿಕಿತ್ಸೆಮಾಡದಿದ್ದರೂ ಇವು ದುರ್ಲಿಖಿತವ್ರಣ ಲಕ್ಷಣಗಳೆಂದು ತಿಳಿದು ರೋಗಿಗೆ ಸ್ನೇಹಸ್ವೇದಗಳನ್ನು ಮಾಡಿಸಿ ಪುನಃ ಸರಿಯಾಗಿ ಲೇಖನಮಾಡಬೇಕು.

ವ್ಯಾವರ್ತತೇ ಯದಾ ವರ್ತ್ಮ ಪಕ್ಷ್ಮ ಚಾಪಿ ವಿಮುಹ್ಯತಿ ।
ಸ್ಯಾತ್ ಸರುಕ್ ಸ್ರಾವಭೂಯಿಷ್ಠಂ ತದತಿಸ್ರಾವಿತಂ ವಿದುಃ ||೧೩||
ಸ್ನೇಹಸ್ವೇದಾದಿರಿಷ್ಟಃ ಸ್ಯಾತ್ ಕ್ರಮಸ್ತತ್ರಾನಿಲಾಪಹಃ |

ರೆಪ್ಪೆಯು ಹಿಂದಕ್ಕೆ ಮಡಿಸಿಕೊಂಡು-ರೆಪ್ಪೆಕೂದಲು ಉದುರುತ್ತಲೂ ನೋವಿನಿಂದ ಕೂಡಿಯೂ ಅತಿರಕ್ತಸ್ರಾವವಾದರೆ ಅತಿಪ್ರಮಾಣದಿಂದ ಲೇಖನ ಮಾಡಲ್ಪಟ್ಟಿರುತ್ತೆಂದು ತಿಳಿಯಬೇಕು. ಈ ಸ್ಥಿತಿಯಲ್ಲಿ ವಾತಹರಗಳಾದ ಸ್ನೇಹ ಸ್ವೇದಾದಿಗಳು ಹಿತಕರಗಳು.

ವರ್ತ್ಮಾವಬನ್ಧಂ ಕ್ಲಿಷ್ಟಂ ಚ ಬಹಳಂ ಯಚ್ಚ ಕೀರ್ತಿತಮ್ ||೧೪||
ಪೋಥಕೀಂ ಚಾಪ್ಯವಲಿಖೇತ್ ಪ್ರಚ್ಛಯಿತ್ವಾಗ್ರತಃ ಶನೈಃ |
ಸಮಂ ಲಿಖೇತ್ತು ಮೇಧಾವೀ ಶ್ಯಾವಕರ್ದಮವರ್ತ್ಮನೀ ||೧೫||

ರೆಪ್ಪೆಗಳು ಬಿಗಿದುಹಿಡಿದಿದ್ದರೆ—ಕ್ಲಿಷ್ಟವರ್ತ್ಮ-ಬಹಳವರ್ತ್ಮ-ಪೋಥಕಿಗಳನ್ನು ತುದಿಯಲ್ಲಿ ಶಸ್ತ್ರದಿಂದ ಸ್ವಲ್ಪಕತ್ತರಿಸಿ ಲೇಖನಮಾಡಬೇಕು ; ಗಿಡದ ಒರಟು ಎಲೆಗಳಿಂದ ಉಜ್ಜಿ ರಕ್ತಸ್ರಾವವಾಗುವಂತೆ ಮಾಡಬಾರದು ; ಬುದ್ಧಿವಂತನಾದ ವೈದ್ಯನು ಶ್ಯಾವವರ್ತ್ಮ-ಕರ್ದಮವರ್ತ್ಮಗಳನ್ನು ಹಳ್ಳದಿಣ್ಣೆಗಳಾಗದಂತೆ ಒಂದೇ ಮಟ್ಟಕ್ಕಿರುವಂತೆ ಶಸ್ತ್ರದಿಂದ ಲೇಖನಮಾಡಬೇಕು.

ಕುಮ್ಭೀಕಿನೀಂ ಶರ್ಕರಾಂ ಚ ತಥೈವೋತ್ಸಙ್ಗಿನೀಮಪಿ
ಕರ್ತಯಿತ್ವಾ ತು ಶಸ್ತ್ರೇಣ ಲಿಖೇತ್ಪಶ್ಚಾದತಂದ್ರಿತಃ ||೧೬||

ವೈದ್ಯನು ಜಾಗರೂಕತೆಯಿಂದ ಕುಂಭಿಕಿನೀ-ಶರ್ಕರಾ-ಉತ್ಸಂಗಪಿಟಕೆ-ಕುಂಭಿಕಾವರ್ತ್ಮ-ವರ್ತ್ಮಶರ್ಕರಾ ಇವುಗಳನ್ನು ಶಸ್ತ್ರದಿಂದ ಕತ್ತರಿಸಿ ಲೇಖನ ಮಾಡಬೇಕು.

ಭವೇಯುರ್ವರ್ತ್ಮಸು ಚಯಾಃ ಪಿಡಕಾ ಕಠಿನಾ ಭೃಶಮ್ |
ಹ್ರಸ್ವಾಸ್ತಾಮ್ರಾಶ್ಚತಾಃ ಪಕ್ವಾ ಭಿನ್ದ್ಯಾದ್ಭಿನ್ನಾ ಲಿಖೇದಪಿ ||೧೭||
ತರುಣೀಶ್ಚಾಲ್ಪಸಂರಮ್ಭಾ ಪಿಡಕಾ ಬಾಹ್ಯವರ್ತ್ಮಜಾಃ |
ವಿದಿತ್ವೈತಾಃ ಪ್ರಶಮಯೇತ್ ಸ್ವೇದಾಲೇಪನಶೋಧನೈಃ ||೧೮||

ರೆಪ್ಪೆಗಳಲ್ಲಿ ಗಟ್ಟಿಯಾದ ಪಿಟಿಕೆಗಳುಂಟಾಗಿ ಮೋಟಾಗಿ ತಾಮ್ರವರ್ಣವಾಗಿ ಪಕ್ವವಾದರೆ ಅವನ್ನು ಶಸ್ತ್ರದಿಂದ ಭೇದಿಸಿ ಲೇಖನಮಾಡಬೇಕು ; ರೆಪ್ಪೆಯ ಹೊರಗಡೆ ಅಲ್ಪಪಿಡಿಕೆಗಳಿದ್ದು ಸ್ವಲ್ಪವೇ ನೊಂದರೆ ಸ್ವೇದ-ಲೇಪ-ಶೋಧನೆಗಳಿಂದ ಶಮನಗೊಳಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾಗ್ಗತಶಾಲಾಕ್ಯತನ್ತ್ರೇ
ಲೇಖ್ಯರೋಗ ಪ್ರತಿಷೇಧನಾಮಕತ್ರಯೋದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ
ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕಭಾಷಾವಿವೃತಿಃ

ಚತುರ್ದಶೋಽಧ್ಯಾಯಃ

ಅಥಾತೋ ಭೇದ್ಯರೋಗಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಭೇದ್ಯರೋಗಗಳ ಚಿಕಿತ್ಸೆಯನ್ನು ಹೇಳುತ್ತೇವೆ.

ಸ್ವೇದಯಿತ್ವಾ ಬಿಸಗ್ರನ್ಥಿಂ ಛಿದ್ರಾಣ್ಯಸ್ಯ ನಿರಾಶ್ರಯಮ್ ।
ಪಕ್ವಂ ಭಿತ್ವಾ ತು ಶಸ್ತ್ರೇಣ ಸೈನ್ಧವೇನಾವಚೂರ್ಣಯೇತ್ ||೩||
ಕಾಸೀಸ ಮಾಗಧೀಪುಷ್ಪನೈಪಾಳೈಲಾಯುತೇನ ತು ।
ತತಃ ಕ್ಷೌದ್ರಘೃತಂ ದತ್ವಾ ಸಮ್ಯಗ್ಬನ್ಧಮುಪಾಚರೇತ್ ||೪||

ಪಕ್ವಬಿಸಗ್ರಂಥಿಯನ್ನು ಸ್ವೇದಮಾಡಿಸಿ ಅದರ ಛಿದ್ರವನ್ನು ಆಶ್ರಯವಿಲ್ಲದಂತೆ ಕತ್ತರಿಸಿ ಪಕ್ವವಾದರೆ ಶಸ್ತ್ರದಿಂದ ಭೇದಿಸಿ ಸೈಂಧವಚೂರ್ಣವನ್ನು ಅದರ ಮೇಲೆ ಉದುರಿಸಬೇಕು. ಅನ್ನಭೇದಿ ಹಿಪ್ಪಲಿ ಪುಷ್ಪಾಂಜನ ಮಣಶಿಲೆ ಏಲಕ್ಕಿ ಇವುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ತುಪ್ಪಮಿಶ್ರಮಾಡಿ ಲೇಪಿಸಿ ಸರಿಯಾಗಿ ಬಂಧನಮಾಡಬೇಕು.

ರೋಚನಾ ಕ್ಷಾರ ತುತ್ಥಾನಿ ಪಿಪ್ಪಲ್ಯಃ ಕ್ಷೌದ್ರಮೇವ ಚ ।
ಪ್ರತಿಸಾರಣಮೇಕೈಕಂ ಭಿನ್ನೇ ಲಗಣ ಇಷ್ಯತೇ ||೫||
ಮಂಹತ್ಯಪಿ ಚ ಯುಞ್ಜೀತ ಕ್ಷಾರಾಗ್ನೀ ವಿಧಿಕೋವಿದಃ ।
ಸ್ವಿನ್ನಾಂ ಭಿನ್ನಾಂ ವಿನಿಷ್ಪೀಡ್ಯ ಭಿಷಗಞ್ಜನನಾಮಿಕಾಮ್ ||೬||
ಶಿಲೈಲಾನತಸಿನ್ಧೂತ್ಥೈಃ ಸಕ್ಷೌದ್ರೈಃ ಪ್ರತಿಸಾರಯೇತ್ ।
ರಸಾಞ್ಜನಮಧುಭ್ಯಾಂ ವಾ ಭಿತ್ವಾ ವಾ ಶಸ್ತ್ರಕರ್ಮವಿತ್ ||೭||
ಪ್ರತಿಸಾರ್ಯಾಞ್ಜನೈರ್ಯುಞ್ಜ್ಯಾದುಷ್ಣೈರ್ದೀಪಶಿಖೋದ್ಭವೈಃ ।
ಸಮ್ಯಕ್ಸ್ವಿನ್ನೇ ಕ್ರಿಮಿಗ್ರನ್ಥೌ ಭಿನ್ನೇ ಸ್ಯಾತ್ ಪ್ರತಿಸಾರಣಮ್ ||೮||
ತ್ರಿಫಲಾತುತ್ಥಕಾಸೀಸಸೈನ್ಧವೈಸ್ತು ರಸಕ್ರಿಯಾಮ್ ।
ಭಿತ್ವೋಪನಾಹಂ ಕಫಜಂ ಪಿಪ್ಪಲೀಮಧುಸೈನ್ಧವೈಃ ||೯||
ಲೇಖಯೇನ್ಮಣ್ಡಲಾಗ್ರೇಣ ಸಮನ್ತಾತ್ ಪ್ರಚ್ಛಯೇದಪಿ ।

ಶಸ್ತ್ರಕರ್ಮವಿಧಾನಗಳಲ್ಲಿ ಬುದ್ಧಿವಂತನಾದ ವೈದ್ಯನು ಲಗಣವನ್ನು (ಸ್ವಲ್ಪವಾಗಿದ್ದರೆ) ಸೂಜಿಯಿಂದ ಚುಚ್ಚಿ ನೀರನ್ನು ಸುರಿಸಿದ ಮೇಲೆ ಗೋರೋಚನ, ಯವಕ್ಷಾರ, ಮೈಲ್‌ತುತ್ಥ, ಹಿಪ್ಪಲಿ, ಜೇನುತುಪ್ಪ ಇವುಗಳಲ್ಲೊಂದೊಂದರ ಪುಡಿಯನ್ನು ಅದರೊಳಕ್ಕೆ ತುಂಬಬೇಕು ; ಲಗಣವು ದಪ್ಪವಾದರೆ ಕ್ಷಾರದಿಂದಲಾಗಲೀ, ಅಗ್ನಿತಪ್ತಶಲಾಕೆಯಿಂದಾ

ಗಲೀ ಅದನ್ನು ಸುಟ್ಟುಬಿಡಬೇಕು ; ಅಂಜನನಾಮಿಕೆಯನ್ನು ಸ್ವೇದಮಾಡಿ ಒಡೆದು ಹೋದರೆ ಸ್ನೇಹಸ್ವೇದಮಾಡಿ, ಹಿಸುಗಿ ಮಣಶಿಲೆ, ಏಲಕ್ಕಿ, ತಗರ, ಸೈಂಧವಗಳ ಚೂರ್ಣ ವನ್ನು ಜೇನುತುಪ್ಪದಿಂದ ರಂಗಳಿಸಿ ಅದಕ್ಕೆ ಲೇಪಮಾಡಬೇಕು ; ಸ್ವಯಂಭಿನ್ನವಾಗ ದಿದ್ದರೆ ಶಸ್ತ್ರದಿಂದ ಛೇದಿಸಿ ರಸಾಂಜನ ಮತ್ತು ಜೇನುತುಪ್ಪಗಳನ್ನು ರಂಗಳಿಸಿ ಅದ ರೊಳಕ್ಕೆ ತುಂಬಿ ಕಾಡಿಗೆಯಿಂದ ಲೇಪಿಸಬೇಕು. ಕ್ರಿಮಿಗ್ರಂಥಿಯನ್ನು ಸ್ವೇದಮಾಡಿಸಿ ಶಸ್ತ್ರದಿಂದ ಕತ್ತರಿಸಿ ರಸಾಂಜನ ಜೇನುತುಪ್ಪಗಳಿಂದ ಪ್ರತಿಸಾರಣಮಾಡಿ (ತುಂಬಿ) ಅನಂತರ ತ್ರಿಫಲಾ ಕಷಾಯಕ್ಕೆ ಮೈಲ್‌ತುತ್ಥ, ಅನ್ನಭೇದಿ, ಸೈಂಧವಗಳನ್ನು ಹಾಕಿ ಕುದಿಸಿದ ರಸಕ್ರಿಯೆಯನ್ನು ಅದರಮೇಲೆ ಲೇಪಿಸಬೇಕು ; ಕಫಜಉಪನಾಹವನ್ನು ಶಸ್ತ್ರ ದಿಂದ ಕತ್ತರಿಸಿ ಹಿಪ್ಪಲಿಪುಡಿ, ಜೇನುತುಪ್ಪ, ಸೈಂಧವಲವಣಗಳಲ್ಲೊಂದರಿಂದ ಪ್ರತಿಸಾರಣ ಮಾಡಬೇಕು ; ದೊಡ್ಡದಾಗಿ ನೋವಿಲ್ಲದಿದ್ದರೆ ಲೇಖನಮಾಡಬೇಕು ; ರಕ್ತಾನುಬಂಧ ವಿದ್ದರೆ ಶಸ್ತ್ರದಿಂದ ಛೇದಿಸಬೇಕು.

ಸಂಸ್ನೇಹ್ಯಪತ್ರಭಙ್ಗೈಶ್ಚ ಸ್ವೇದಯಿತ್ವಾ ಯಥಾಸುಖಮ್ ॥೧೦॥
ಅಪಾಕಾದ್ವಿಧಿನೋಕ್ತೇನ ಪಞ್ಚ ಭೇದ್ಯಾನುಪಾಚರೇತ್ ।
ಸರ್ವೇಷ್ವೇತೇಷು ವಿಹಿತಂ ವಿಧಾನಂ ಸ್ನೇಹಪೂರ್ವಕಮ್ ॥೧೧॥
ಸಂಪಕ್ವೇ ಪ್ರಯತೋ ಭೂತ್ವಾ ಕುರ್ವೀತ ವ್ರಣರೋಪಣಮ್ ।

ಬಿಸಗ್ರಂಥಿ, ಲಗಣ, ಅಂಜನನಾಮಿಕ, ಕ್ರಿಮಿಗ್ರಂಥಿ, ಶ್ಲೇಷ್ಮೋಪನಾಹ ಈ ರೋಗಗಳಿಗೆ ಸ್ನೇಹನಮಾಡಿ ಬೇವಿನಎಲೆ ಮೊದಲಾದುವುಗಳಿಂದ ಸ್ವೇದನಮಾಡಿಸಿ ಅಪತ ರ್ಪಣ (ಉಪವಾಸ) ಮೊದಲಾದ ಸಾಮಾನ್ಯಶೋಥಪ್ರತೀಕಾರವನ್ನು ಮಾಡಿಸಿ ಅವು ಪಾಕವಾಗುವವರೆಗೂ ಚಿಕಿತ್ಸೆಮಾಡಬೇಕು ; ಇವುಗಳೆಲ್ಲಕ್ಕೂ ಸ್ನೇಹಸ್ವೇದ, ರಕ್ತ ಮೋಕ್ಷಣ, ವಿರೇಕಾದಿ ವಿಧಾನಗಳನ್ನು ಆಚರಿಸಬೇಕು ; ನಯನಬುದ್ಬುದ ರೋಗದಲ್ಲಿ ವಿನಃ ಬಾಕಿರೋಗಗಳಲ್ಲಿ ವಮನವನ್ನೂ ಮಾಡಿಸಬೇಕು ; ತಾನಾಗಿಯೇ ಅವು ಪಾಕ ವಾದರೆ ಜಾಗರೂಕತೆಯಿಂದ ವ್ರಣರೋಪಣವಾಗುವಂತೆ ಚಿಕಿತ್ಸೆ ಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಭೇದ್ಯ ರೋಗ ಪ್ರತಿಷೇಧನಾಮಕ ಚತುರ್ದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕಭಾಷಾನಿವೃತಿಃ.

ಪಞ್ಚದಶೋಽಧ್ಯಾಯಃ

ಅಥಾತಃ ಛೇದ್ಯರೋಗಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾರ್ನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಛೇದ್ಯರೋಗಗಳ ಚಿಕಿತ್ಸೆಯನ್ನು ವಿವರಿಸುತ್ತೇನೆ.

ಸ್ನಿಗ್ಧಂ ಭುಕ್ತವತೋಹ್ಯನ್ನಮುಪವಿಷ್ಟಸ್ಯ ಯತ್ನತಃ |
ಸಂರೋಷಯೇತ್ತು ನಯನಂ ಭಿಷಕ್ಚೂರ್ಣೈಸ್ತು ಲಾವಣೈಃ ||೩||

೧೧ ವಿಧ ಛೇದ್ಯ ರೋಗಗಳಲ್ಲಿ ಮೊದಲಿನ ೫ ರೋಗಗಳಿಗೂ ಒಂದೇ ವಿಧವಾದ ಚಿಕಿತ್ಸಾ ವಿಧಾನಗಳಿರುತ್ತದೆಂಬುದನ್ನು ನಿರ್ದೇಶಿಸುತ್ತಾರೆ ; ಹೇಗೆಂದರೆ-ಅರ್ಮರೋಗ ಪೀಡಿತನಿಗೆ ಮೊದಲು ಸ್ನೇಹಸ್ವೇದವಿಧಾನಗಳಿಂದ ವಮನವಿರೇಚನಗಳನ್ನು ಮಾಡಿಸಿ ದೇಹಶುದ್ಧಿಮಾಡಿಸಿದನೇಲೆ ಸ್ನಿಗ್ಧವಾದ ಆಹಾರವನ್ನು ಭೋಜನಮಾಡಿಸಿ ಸುಖಾಸನದಲ್ಲಿ ಕೂತಿರುವ ರೋಗಿಗೆ ಸೈಂಧವಚೂರ್ಣವನ್ನು ಕಣ್ಣಿನ ಅರ್ಮಕ್ಕೆ ತಿಕ್ಕಿದರೆ ಅದು ಉಬ್ಬಿದರೆ ಸಡಿಲಿಸುತ್ತದೆ.

ತತಃ ಸಂರೋಷಿತಂ ತೂರ್ಣಂ ಸುಸ್ವಿನ್ನಂ ಪರಿಘಟ್ಟಿತಮ್ |
ಅರ್ಮ ಯತ್ರ ವಲೀಜಾತಂ ತತ್ರೈತಲ್ಲಗಯೇದ್ಭಿಷಕ್ ||೪||
ಅಪಾಙ್ಗಂ ಪ್ರೇಕ್ಷಮಾಣಸ್ಯ ಬಡಿಶೇನ ಸಮಾಹಿತಃ |
ಮುಚುಂಡ್ಯಾದಾಯ ಮೇಧಾವೀ ಸೂಚೀಸೂತ್ರೇಣ ವಾ ಪುನಃ ||೫||
ನ ಚೋತ್ಥಾಪಯತಾ ಕ್ಷಿಪ್ರಂ ಕಾರ್ಯಮತ್ಯುನ್ನತಂ ತು ತತ್ |
ಶಸ್ತ್ರಪಾತಭಯಾಚ್ಚಾಸ್ಯ ವರ್ತ್ಮನೀ ಗ್ರಾಹಯೇದ್ದೃಢಮ್ ||೬||
ತತಃ ಪ್ರಶಿಥಿಲೀಭೂತಂ ತ್ರಿಭಿರೇವ ವಿಲಮ್ಬಿತಮ್ |
ಉಲ್ಲಿಖ್ಯ ಮಂಡಲಾಗ್ರೇಣ ತೀಕ್ಷ್ಣೇನ ಪರಿಶೋಧಯೇತ್ ||೭||
ವಿಮುಕ್ತಂ ಸರ್ವತಶ್ಚಾಪಿ ಕೃಷ್ಣಾಚ್ಛುಕ್ಲಾಚ್ಚ ಮಂಡಲಾತ್ |
ನೀತ್ವಾ ಕನೀನಿಕೋಪಾನ್ತಂ ಛಿನ್ದ್ಯಾನ್ನಾತಿಕನೀನಕಮ್ ||೮||
ಚತುರ್ಭಾಗಸ್ಥಿತೇ ಮಾಂಸೇನಾಕ್ಷಿ ವ್ಯಾಪತ್ತಿಮರ್ಹತಿ |
ಕನೀನಕವಧಾದಸ್ರಂ ನಾಡೀಚಾಪ್ಯುಪಜಾಯತೇ ||೯||
ಹೀನಚ್ಛೇದಾತ್ ಪುನರ್ವೃದ್ಧಿಂ ಶೀಘ್ರಮೇವಾಧಿಗಚ್ಛತಿ |

ಹೀಗೆ ಸಡಿಲಿಸಿದ ಅರ್ಮವನ್ನು ಸ್ವೇದನಮಾಡಿಸಿ ಚಲಿಸುವಂತೆ ಮಾಡಿ ಸುಕ್ಕು ಕಟ್ಟಿದ ಜಾಗದಲ್ಲಿ ಮೀನಿನ ಗಾಳದಂತಿರುವ ಬಡಿಶಯಂತ್ರವನ್ನು ಚುಚ್ಚಿ ರೋಗಿಯು ಕಡೆಗಣ್ಣಿನಕಡೆಗೆ ದೃಷ್ಟಿಸುವಾಗ **ಮುಚುಂಡಿಯಿಂದ** (ಚಿಮಟ) ಚುಚ್ಚಿ ಹಿಡಿಯ

ಬೇಕು. ಅಥವಾ ದಾರಪೋಣಿಸಿದ ಸೂಜಿಯಿಂದ ಚುಚ್ಚಿ ಹಿಡಿದು ನಿಧಾನವಾಗಿ ಮೇಲಕ್ಕೆ ಎತ್ತಬೇಕು ; ಜೇಗನೆ ಮೇಲಕ್ಕೆ ಎತ್ತಿದರೆ ಅರ್ಮವು ಹರಿದುಹೋಗುತ್ತದೆ ; ಶಸ್ತ್ರವು ಚುಚ್ಚುವ ಭಯನಿವಾರಣೆಗಾಗಿ ರೆಪ್ಪೆಗಳನ್ನು ಬಲವಾಗಿ ಹಿಡಿದಿರಬೇಕು ; ತುಂಬಾ ಸಡಿಲವಾದರೆ ೩ ಚಿಮುಟದಿಂದ ಅರ್ಮವನ್ನು ಹಿಡಿದುಕೊಂಡು ಹರಿತವಾದ **ಮಂಡಲಾ ಗ್ರಶಸ್ತ್ರದಿಂದ** (ಹಜಾಮರ ಕತ್ತಿ) ಮೂರು ಕಡೆಯೂ ಅಂಟಿರುವ ಅರ್ಮವನ್ನು ಬಿಡಿಸ ಬೇಕು ; ಹೀಗೆ ಶುಕ್ಲಮಂಡಲ ಕೃಷ್ಣಮಂಡಲಗಳಿಗೆ ಅಂಟಿರುವ ಅರ್ಮವನ್ನು ಬಿಡಿಸಿ ಕನೀನಿಕಾಸಂಧಿಯ ಕಡೆಗೆ ನೂಕಿ $\frac{1}{4}$ ಭಾಗದಷ್ಟು ಮಾಂಸವನ್ನು ಬಿಟ್ಟು ಅರ್ಮವನ್ನು ಕತ್ತರಿಸಿದರೆ ಕಣ್ಣಿಗೆ ಯಾವ ವಿಪತ್ತೂ ಉಂಟಾಗುವುದಿಲ್ಲ : ಕನೀನಿಕದ ಹತ್ತಿರದಲ್ಲಿ ಅರ್ಮಚ್ಛೇದ ಮಾಡಿದರೆ ಕನೀನಿಕಸಂಧಿಗೆ ಅಪಾಯವುಂಟಾಗಿ ರಕ್ತಸ್ರಾವವೂ ನಾಡೀ ವ್ರಣವೂ ಉಂಟಾಗುತ್ತವೆ ; ಕಡಮೆಯಾಗಿ ಕತ್ತರಿಸಿದರೆ ಜಾಗ್ರತೆಯಾಗಿಯೇ ಅರ್ಮ ವೆಂಬ ಮಾಂಸಖಂಡವು ಪುನಃ ಬೆಳೆದುಕೊಳ್ಳುತ್ತದೆ.

ಅರ್ಮಯಚ್ಚಾಲವದ್ವ್ಯಾಪಿ ತದಪ್ಯುನ್ಮಾರ್ಜ್ಯ ಲಮ್ಬಿತಮ್ ॥೧೦॥
ಭಿನ್ದ್ಯಾದ್ವಕ್ರೇಣ ಶಸ್ತ್ರೇಣ ವರ್ತ್ಮ ಶುಕ್ಲಾನ್ತಮಾಶ್ರಿತಮ್ ।

ಬಲೆಯಂತೆ ಶುಕ್ಲಮಂಡಲವನ್ನು ಮುಚ್ಚಿ ಹರಡಿರುವ ಅರ್ಮವನ್ನೂ ಸೈಂಧವ ಚೂರ್ಣದಿಂದ ಮೇಲ್ಮುಖವಾಗಿ ಉಜ್ಜಿ ಸಡಿಲಿಸಿ ಬಡಿತದಿಂದ ಚುಚ್ಚಿ ಎಳೆದು ಮಂಡಲಾಗ್ರ ಶಸ್ತ್ರದಿಂದ ಭೇದಿಸಬೇಕು ; ವರ್ತ್ಮಾನ್ತವೆಂದರೆ ಮಂಡಲದವರೆಗೆ ಎಂದರ್ಥ. ಶುಕ್ಲವು ಅವಯವವಾಚಿ, ಜಾಲಕಂ ಅಂದರೆ ಸ್ನಾಯ್ವರ್ಮ, ಅದನ್ನೂ ಬಡಿತದಿಂದ ಹಿಡಿದೆಳೆದು ಮಂಡಲಾಗ್ರದಿಂದ ಕತ್ತರಿಸಬೇಕೆಂದೇ ಅರ್ಥಮಾಡಬೇಕು.

ಪ್ರತಿಸಾರಣಮಕ್ಷ್ಣೋಽಸ್ತು ತತಃ ಕಾರ್ಯಮನಂತರಮ್ ॥೧೧॥
ಯಾವನಾಳಸ್ಯ ಚೂರ್ಣೇನ ತ್ರಿಕಟೋರ್ಲವಣಸ್ಯ ಚ ।
ಸ್ವೇದಯಿತ್ವಾ ತತಃ ಪಶ್ಚಾತ್ ಬಧ್ನೀಯಾತ್ ಕುಶಲೋಭಿಷಕ್ ॥೧೨॥
ದೇಶರ್ತುಬಲಕಾಲಜ್ಞಃ ಸ್ನೇಹಂ ದತ್ವಾ ಯಥಾಹಿತಮ್ ।
ವ್ರಣವತ್ ಸಂವಿಧಾನಂ ತು ತಸ್ಯ ಕುರ್ಯಾದತಃ ಪರಮ್ ॥೧೩॥
ತ್ರ್ಯಹಾನ್ಮುಕ್ತ್ವಾ ಕರಸ್ವೇದಂ ದತ್ವಾ ಶೋಧನಮಾಚರೇತ್ ।

ಅರ್ಮಚ್ಛೇದವಾದಮೇಲೆ ಯವಕ್ಷಾರ, ತ್ರಿಕಟು, ಸೈಂಧವಗಳ ಚೂರ್ಣದಿಂದ ಛೇದಶೇಷವಾದ ಅರ್ಮವನ್ನು ಪ್ರತಿಸಾರಣ ಮಾಡಬೇಕು, ಅಂದರೆ ಉಜ್ಜಬೇಕು. ಅನಂತರ ಸ್ವೇದಮಾಡಿಸಿ ಸ್ನೇಹವನ್ನು ಬಳಿದು ದೇಶ, ಋತುಬಲ, ಕಾಲಕ್ಕೆ ತಕ್ಕಂತೆ ಬಂಧನಕಟ್ಟಿ ವ್ರಣಚಿಕಿತ್ಸೆಯಂತೆ ಉಪಚರಿಸಬೇಕು. ೩ ದಿನಗಳಮೇಲೆ ಬಂಧನವನ್ನು ಬಿಚ್ಚಿ ಬೆಂಕಿಗೆ ಕೈಯೊಡ್ಡಿಯಾಗಲೀ, ಎರಡು ಕೈಗಳನ್ನೂ ಉಜ್ಜಿ ಬಿಸಿಯಾದಮೇಲೆ ಅರ್ಮದಮೇಲಿಟ್ಟು ಬೆಚ್ಚಗೆ ಮಾಡಿ ಅದರ ಮೇಲೆ ತ್ರಿಫಲ, ಲೋಧ್ರ, ಚಂದನಾದಿ

ಕಷಾಯದ್ರವ್ಯಗಳ ಕಲ್ಕ ಇಟ್ಟು ಕಟ್ಟಿ ವ್ರಣದಂತೆ ಶೋಧನಕ್ಷಾಳನರೋಪಣಾದಿ ವಿಧಾನಗಳಿಂದ ಉಪಚರಿಸಬೇಕು.

ಕರಞ್ಜಬೀಜಾಮಲಕಮಧೂಕೈಃ ಸಾಧಿತಂ ಪಯಃ ||೧೪||
ಹಿತಮಾಶ್ಚ್ಯೋತನಂ ಶೂಲೇ ದ್ವಿರಹ್ನಿಃ ಕ್ಷೌದ್ರಸಂಯುತಮ್ ।
ಮಧುಕೋತ್ಪಲಕಿಞ್ಜಲ್ಕ ದೂರ್ವಾಕಲ್ಕೈಶ್ಚ ಮೂರ್ಧನಿ ||೧೫||
ಪ್ರಲೇಪಃ ಸಘೃತಃ ಶೀತಃ ಕ್ಷೀರಪಿಷ್ಟಃ ಪ್ರಶಸ್ಯತೇ ।
ಲೇಖ್ಯಾಞ್ಜನೈರಪಹರೇದರ್ಮಶೇಷಂ ಭವೇದ್ಯದಿ ||೧೬||

ಹೊಂಗೇಬೀಜ, ನೆಲ್ಲೀಚೆಟ್ಟು, ಹಿಪ್ಪೆಹೂವುಗಳಿಂದ ತಯಾರಿಸಿದ ಹಾಲಿಗೆ ಜೇನು ತುಪ್ಪವನ್ನು ಮಿಶ್ರಮಾಡಿ ದಿನಕ್ಕೆ ೨ ವೇಳೆ ಕಣ್ಣಿನಮೇಲೆ ಆಶ್ಚ್ಯೋತನ ಮಾಡಬೇಕು ; ಅತಿಮಧುರ, ನೈದಿಲೆಯಕುಸುಮ, ಗರಿಕೆಗಳನ್ನು ಹಾಲಿನಿಂದ ಅರೆದು ತುಪ್ಪಮಿಶ್ರಮಾಡಿ ತಣ್ಣಗೆ ತಲೆಗೆ ಲೇಪಿಸಬೇಕು ; ಅರ್ಮಶೇಷವಿದ್ದರೆ ಇತರ ಲೇಖಾಂಜನಗಳನ್ನು ಹಾಕಬೇಕು.

ಅರ್ಮಾಲ್ಪಂ ದಧಿನಿಭಂ ನೀಲಂ ರಕ್ತಮಥಾಪಿ ವಾ ।
ಧೂಸರಂ ತದು ಯಚ್ಚಾಪಿ ಶುಕ್ರವತ್ತದುಪಾಚರೇತ್ ||೧೭||
ಚರ್ಮಾಭಂ ಬಹಳಂ ಯತ್ತು ಸ್ನಾಯುಮಾಂಸಘನಾವೃತಮ್ ।
ಛೇದ್ಯಮೇವ ತದರ್ಮಸ್ಯಾತ್ಕೃಷ್ಣಮಂಡಲಗಂ ಚ ಯತ್ ||೧೮||
ವಿಶುದ್ಧವರ್ಣಮಕ್ಲಿಷ್ಟಂ ಕ್ರಿಯಾಸ್ವಕ್ಷಿಗತಕ್ಲಮಮ್ ।
ಛಿನ್ನೇರ್ಮಣಿ ಭವೇತ್ ಸಮ್ಯಗ್ಯಥಾಸ್ವಮನುಪದ್ರವಮ್ ||೧೯||
ಸಿರಾಜಾಲೇ ಸಿರಾಯಾಸ್ತು ಕಠಿಣಾಸ್ತಾಶ್ಚ ಬುದ್ಧಿಮಾನ್ ।
ಉಲ್ಲಿಖೇನ್ಮಣ್ಡಲಾಗ್ರೇಣ ಬಡಿಶೇನಾವಲಮ್ಬಿತಾಃ ||೨೦||

ಅರ್ಮವು ಸ್ವಲ್ಪವಾಗಿದ್ದು ಮೊಸರಿನಂತೆಯೂ, ನೀಲವಾಗಿಯೂ, ರಕ್ತಬಣ್ಣವಾಗಿಯೂ, ಧೂಸರವರ್ಣವಾಗಿ ತೆಳುವಾಗಿಯೂ ಇದ್ದರೆ ಶುಕ್ರದಂತೆ ಚಿಕಿತ್ಸೆ ಮಾಡಬೇಕು ; ಚರ್ಮದಬಣ್ಣದಂತೆ ಸ್ನಾಯುಮಾಂಸಗಳಿಂದ ದಪ್ಪವಾಗಿ ಹರಡಿಕೊಂಡೂ ಕೃಷ್ಣಮಂಡಲಗತವಾಗಿದ್ದರೂ ಅದನ್ನು ಶಸ್ತ್ರದಿಂದ ಛೇದಿಸಬೇಕು ; ಅರ್ಮಚ್ಛೇದವಾದ ಮೇಲೆ ಕಣ್ಣು ಸ್ವಾಭಾವಿಕವರ್ಣದಿಂದ ಕೂಡಿದ್ದು, ಕೆಲಸ ಮಾಡಲು ಯಾವ ತೊಂದರೆಯೂ, ಯಾವ ಉಪದ್ರವಗಳೂ ಇರಕೂಡದು ; ಸಿರಾಜಾಲದ ಕಠಿಣವಾಗಿರುವ ಸಿರೆಗಳನ್ನು ಬುದ್ಧಿವಂತನಾದ ವೈದ್ಯನು ಬಡಿಶದಿಂದ ಚುಚ್ಚಿ ಹಿಡಿದುಕೊಂಡು ಮಂಡಲಾಗ್ರಶಸ್ತ್ರದಿಂದ ಕತ್ತರಿಸಬೇಕು.

ಸಿರಾಸು ಪಿಡಕಾ ಜಾತಾ ಯಾ ನ ಸಿಧ್ಯನ್ತಿ ಭೇಷಜೈಃ ।
ಅರ್ಮವನ್ಮಣ್ಡಲಾಗ್ರೇಣ ತಾಸಾಂ ಛೇದನಮಿಷ್ಯತೇ ||೨೧||
ರೋಗಯೋಶ್ಛೇತಯೋಃ ಕಾರ್ಯಮುರ್ಮೋಕ್ತಂ ಪ್ರತಿಸಾರಣಂ ।
ವಿಧಿಶ್ಚಾಪಿ ಯಥಾದೋಷಂ ಲೇಖನದ್ರವ್ಯಸಂಭೃತಃ ||೨೨||

ಸಿರೆಗಳಲ್ಲಿ ಉಂಟಾದ ಪಿಡಿಕೆಗಳು ಔಷಧಪ್ರಯೋಗದಿಂದ ಸಾಧ್ಯವಾಗದಿದ್ದರೆ ಅರ್ಮದಂತೆಯೇ ಅವುಗಳನ್ನೂ ಮಂಡಲಾಗ್ರಶಸ್ತ್ರದಿಂದ ಕತ್ತರಿಸಬೇಕು. ಸಿರಾಜಾಲ ಸಿರಾಪಿಡಕಗಳೆಂಬ ಈ ಎರಡು ರೋಗಗಳಲ್ಲೂ ದೋಷಾನುಸಾರವಾಗಿ ಲೇಖನ ದ್ರವ್ಯಗಳಿಂದ ಅರ್ಮೋಕ್ತಪ್ರತಿಸಾರಣವನ್ನು ಮಾಡಬೇಕು.

ಸನ್ನಾಂ ಸಂಭೇದ್ಯ ಶಸ್ತ್ರೇಣ ಪರ್ವಣೀಕಾಂ ವಿಚಕ್ಷಣಃ ।
ಉತ್ತರೇ ಚ ತ್ರಿಭಾಗೇ ಚ ಬಡಿಶೇನಾವಲಮ್ಬಿತಾಮ್ ॥೨೩॥
ಛಿನ್ದ್ಯಾತ್ ತತೋಽರ್ಧಮಗ್ರೇ ಸ್ಯಾದಶ್ರುನಾಡೀಹ್ಯತೋಽನ್ಯಥಾ ।
ಪ್ರತಿಸಾರಣಮಪ್ಯತ್ರಾಪಿ ಸೈನ್ಧವಕ್ಷೌದ್ರಮಿಷ್ಯತೇ ॥೨೪॥
ಲೇಖನೀಯಾನಿ ಚೂರ್ಣಾನಿ ವ್ಯಾಧಿಶೇಷಸ್ಯ ಭೇಷಜಮ್ ।

ಬುದ್ಧಿವಂತನಾದ ಶಸ್ತ್ರವೈದ್ಯನು ಕೃಷ್ಣಶುಕ್ಲಮಂಡಲಗಳ ಸಂಧಿಯಲ್ಲಿ ಕಣ್ಣಿಗೆ ನೋವಾಗದಂತೆ ಸ್ವೇದಮಾಡಿಸಿ ಅಲ್ಲಿ ಹುಟ್ಟಿರುವ ಪರ್ವಣಿಕವೆಂಬ ಪಿಡಕೆಯನ್ನು ಮೇಲ್ಗಡೆಯ ½ ಭಾಗದಲ್ಲಿ ಬಡಿಶಯಂತ್ರದಿಂದ ಚುಚ್ಚಿ ಹಿಡಿದು ಶಸ್ತ್ರದಿಂದ ಛೇದಿಸ ಬೇಕು ; ಕೆಳಭಾಗದಲ್ಲಿ ಛೇದಿಸಿದರೆ ಅಶ್ರುನಾಡಿಗೆ ತೊಂದರೆಯುಂಟಾಗುತ್ತದೆ ; ಅನಂತರ ಸೈಂಧವಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ನೋಟಕಾಗಿರುವ ಪರ್ವಣಿಗೆ ಲೇಪಿಸ ಬೇಕು ; ಶೇಷಪಿಟಕೆಯ ನಿವಾರಣೆಗಾಗಿ ಲೇಖನಚೂರ್ಣವನ್ನು ಪ್ರಯೋಗಿಸಬೇಕು. (ಶುಕ್ಲಕೃಷ್ಣಗೋಳವನ್ನಾಶ್ರಯಿಸಿ ಅಶ್ರುವಹನಮಾಡುವ ನಳಿಕೆಗೆ ಅಶ್ರುನಾಡಿ ಯೆನ್ನುತ್ತಾರೆ.)

ಶಙ್ಖಂ ಸಮುದ್ರಫೇನಂ ಚ ಮಣ್ಡೂಕೀಂ ಚ ಸಮುದ್ರಜಾಮ್ ॥೨೫॥
ಸ್ಫಟಿಕಂ ಕುರುವಿನ್ದಂ ಚ ಪ್ರವಾಳಾಶ್ಮನ್ತಕಂ ತಥಾ ।
ವೈಡೂರ್ಯಂ ಪುಲಕಂ ಮುಕ್ತಾಮಯಸ್ತಾಮ್ರರಜಾಂಸಿ ಚ ॥೨೬॥
ಸಮಭಾಗಾನಿ ಸಂಪಿಷ್ಯ ಸಾರ್ಧಂ ಸ್ರೋತೋಞ್ಜನೇನ ತು ।
ಚೂರ್ಣಾಞ್ಜನಂ ಕಾರಯಿತ್ವಾ ಭಾಜನೇ ಮೇಷಶೃಙ್ಗಜೇ ॥೨೭॥
ಸಂಸ್ಥಾಪ್ಯೋಭಯತಃ ಕಾಲಮಞ್ಜಯೇತ್ ಸತತಂ ಬುಧಃ ।
ಅರ್ಮಾಣಿ ಪಿಡಕಾಂ ಹನ್ಯಾತ್ ಸಿರಾಜಾಲಾನಿ ತೇನ ವೈ ॥೨೮॥

ಶಂಖ, ಸಮುದ್ರನೊರೆ, ಮುತ್ತಿನಚಿಪ್ಪು, ಸ್ಫಟಿಕಶಿಲೆ, ಪದ್ಮರಾಗವೆಂಬಮಣಿ, ಹವಳ, ಅಶ್ಮಂತಕಮಣಿ, ಕೆಂಪು (ರತ್ನವಿಶೇಷ), ಮುತ್ತು, ಕಬ್ಬಿಣದಪುಡಿ, ತಾಮ್ರದ ಪುಡಿ ಇವನ್ನು ಸಮಭಾಗದಿಂದಲೂ, ಒಂದುಭಾಗ ಸ್ರೋತೋಂಜನವನ್ನೂ ಸೇರಿಸಿ ನುಣ್ಣಗೆ ಪುಡಿಮಾಡಿ ಕುರಿಯಕೊಂಬಿನಲ್ಲಿ ತುಂಬಿಟ್ಟುಕೊಳ್ಳಬೇಕು ; ದಿನಕ್ಕೆ ೨ ವೇಳೆ (ಪ್ರಾತಃ-ಸಾಯಂಕಾಲ) ಸದಾ ಅಂಜನಮಾಡುತ್ತಾ ಬಂದರೆ ಅರ್ಮಪಿಡಕೆಗಳೂ, ಸಿರಾ ಜಾಲಗಳೂ ನಿವಾರಣೆಯಾಗುತ್ತವೆ ; ಕೆಲವರು ಮೇಷಶೃಂಗವೆಂದರೆ ಇಂಗುದಿಯಭೇದ ವೆನ್ನುತ್ತಾರೆ.

ಅರ್ಶಸ್ತಥಾ ಯಚ್ಚ ನಾಮ್ನಾ ಶುಷ್ಕಾರ್ಶೋಽರ್ಬುದಮೇವ ಚ ।
ಅಭ್ಯಂತರಂ ವರ್ತ್ಮಶಯಾ ವಿಧಾನಂ ತೇಷು ವಕ್ಷ್ಯತೇ ॥೨೯॥

ವರ್ತ್ಮೋಪಸ್ವೇದ್ಯ ನಿರ್ಭುಜ್ಯ ಸೂಚ್ಯೋತ್ಕ್ಷಿಪ್ಯ ಪ್ರಯತ್ನತಃ ।
ಮಣ್ಡಲಾಗ್ರೇಣ ತೀಕ್ಷ್ಣೇನ ಮೂಲೇ ಛಿನ್ದ್ಯಾದ್ಭಿಷಗ್ವರಃ ॥೩೦॥
ತತಃ ಸೈನ್ಧವಕಾಸೀಸಕೃಷ್ಣಾಭಿಃ ಪ್ರತಿಸಾರಯೇತ್ ।
ಸ್ಥಿತೇ ಚ ರುಧಿರೇ ವರ್ತ್ಮ ದಹೇತ್ಸಮ್ಯಕ್ ಶಲಾಕಯಾ ॥೩೧॥
ಕ್ಷಾರೇಣಾವಲಿಖೇಚ್ಚಾಪಿ ವ್ಯಾಧಿಶೇಷೋ ಭವೇದ್ಯದಿ ।
ತೀಕ್ಷ್ಣೈರುಭಯತೋ ಭಾಗೈಸ್ತತೋ ದೋಷಮಧಿಕ್ಷಿಪೇತ್ ॥೩೨॥
ವಿತರೇಚ್ಚ ಯಥಾದೋಷಮಭಿಷ್ಯನ್ದಕ್ರಿಯಾವಿಧಿಮ್ ।
ಶಸ್ತ್ರಕರ್ಮಣ್ಯುಪರತೇ ಮಾಸಂ ಚ ಸ್ಯಾತ್ ಸುಯನ್ತ್ರಿತಃ ॥೩೩॥

ರೆಪ್ಪೆಯ ಒಳಗೆ ಶುಷ್ಕಾರ್ಶಸ್ಸು ಮತ್ತು ಅರ್ಬುದಗಳುಂಟಾದರೆ ಅವುಗಳ ಚಿಕಿತ್ಸಾ ವಿಧಾನವನ್ನು ಹೇಳಲಾಗುತ್ತದೆ :–ರೆಪ್ಪೆಗಳಿಗೆ ಸ್ವೇದಮಾಡಿಸಿ ಹಿಂದಕ್ಕೆ ಮಡಿಸಿ ಸೂಜಿಯ ತುದಿಯಿಂದ ಆ ದುರ್ಮಾಂಸಾಂಕುರಗಳನ್ನು ಮೇಲಕ್ಕೆ ಎತ್ತಿಹಿಡಿದುಕೊಂಡು ಹರಿತವಾದ ಅಲಗುಳ್ಳ ಮಂಡಲಾಗ್ರಶಸ್ತ್ರದಿಂದ ಬುಡಭಾಗವನ್ನು ಕತ್ತರಿಸಿ ಸೈಂಧವ ಅನ್ನಭೇದಿ ಹಿಪ್ಪಲಿಗಳ ಚೂರ್ಣದಿಂದ ಉಜ್ಜಿ ರಕ್ತಸ್ರಾವವು ನಿಂತಮೇಲೆ ಬೆಂಕಿಯಲ್ಲಿ ಕಾದ ಶಲಾಕೆ ಯಿಂದ ಸುಡಬೇಕು ; ವ್ಯಾಧಿಶೇಷವನ್ನು ಕ್ಷಾರದಿಂದ ಉಜ್ಜಬೇಕು ; (ಅಗ್ನಿಕ್ಷಾರಗಳಿಂದ ಸುಡುವಾಗ ಬಟ್ಟೆಯಿಂದ ಕಣ್ಣನ್ನು ಮುಚ್ಚಿರಬೇಕು) ವಮನವಿರೇಚನದ್ರವ್ಯಗಳ ಕಷಾಯ ದಿಂದ ತೊಳೆದು ದೋಷಗಳನ್ನು ಹೊರಡಿಸಬೇಕು. ದೋಷಪ್ರಕೋಪಕ್ಕೆ ತಕ್ಕಂತೆ ಅಭಿ ಷ್ಯಂದ ಚಿಕಿತ್ಸೆಯನ್ನು ಮಾಡಬೇಕು ; ಶಸ್ತ್ರಕರ್ಮವನ್ನು ಮಾಡಿ ಮುಗಿಸಿದಮೇಲೆ ೧ ಮಾಸದವರೆಗೆ ಬೆಳಕಿಗೆ ಕಣ್ಣನ್ನು ಬಿಡದಂತೆ ಕಣ್ಣಿಗೆ ಬಟ್ಟೆ ಕಟ್ಟಿರಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ಛೇದ್ಯ ರೋಗಪ್ರತಿಷೇಧನಾಮಕ ಪಞ್ಚದಶಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ.

ಷೋಡಶೋಽಧ್ಯಾಯಃ

ಅಥಾತಃ ಪಕ್ಷ್ಮಕೋಪಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಪಕ್ಷ್ಮಕೋಪರೋಗ ಚಿಕಿತ್ಸೆಯನ್ನು ಹೇಳುತ್ತೇವೆ ; ಪಕ್ಷ್ಮಕೋಪವನ್ನು ಛೇದ್ಯಕರ್ಮದಿಂದ ನಿವಾರಣೆಮಾಡಬೇಕು ; ರೆಪ್ಪೆಯತುದಿಯಲ್ಲಿ ಸಾಲಾಗಿ ಬೆಳೆದಿರುವ ಕೂದಲಿಗೆ ಪಕ್ಷ್ಮಮಂಡಲವೆನ್ನುತ್ತಾರೆ ; ಮತ್ತೆ ಕೆಲವರು ಈ ಪಕ್ಷ್ಮಗಳಿಗೆ ಆಶ್ರಯವಾದ ವರ್ತ್ಮಮಂಡಲವೆನ್ನುತ್ತಾರೆ.

ಯಾಪ್ಯಸ್ತು ಯೋ ವರ್ತ್ಮಭವೋ ವಿಕಾರಃ ಪಕ್ಷ್ಮಪ್ರಕೋಪೋಽಭಿಹಿತಃ ಪುರಸ್ತಾತ್ ।
ತತ್ರೋಪವಿಷ್ಟಸ್ಯ ಚರ್ಮ ವರ್ತ್ಮೋಪರಿಷ್ಟಾದನುತಿರ್ಯಗೇವ ||೩||
ಭ್ರುವೋರಧಸ್ತಾತ್ ಪರಿಮುಚ್ಯ ಭಾಗೌ ಪಕ್ಷ್ಮಾಶ್ರಿತಂ ಚೈಕಮತೋಽವಕೃನ್ತೇತ್ ।
ಕನೀನಕಾಪಾಙ್ಗಸಮಂ ಸಮನ್ತಾದ್ಯವಾಕೃತಿಸ್ನಿಗ್ಧತನೋರ್ನರಸ್ಯ ||೪||
ಉತ್ಕೃತ್ಯ ಶಸ್ತ್ರೇಣ ಯವಪ್ರಮಾಣಂ ವಾಲೇನ ಸೀವ್ಯೇದ್ಭಿಷಗಪ್ರಮತ್ತಃ ।
ದತ್ವಾ ಚ ಸರ್ಪಿರ್ಮಧುನಾವಶೇಷಂ ಕುರ್ಯಾದ್ವಿಧಾನಂ ವಿಹಿತಂ ವ್ರಣೇ ಯತ್ ||೫||
ಲಲಾಟದೇಶೇ ಚ ನಿಬದ್ಧಪಟ್ಟಂ ಪ್ರಾಕ್ಸೂತ್ರಮತ್ರಾಪ್ಯಪರಂ ಚ ಬದ್ಧ್ವಾ ||
ಸ್ಥೈರ್ಯಂಗತೇ ಚಾಪ್ಯಥ ಶಸ್ತ್ರಮಾರ್ಗೇ ಬಾಲಾನ್ ವಿಮುಞ್ಚೇತ್ ।
ಕುಶಲೋಽಭಿವೀಕ್ಷ್ಯ ||೬||

ವರ್ತ್ಮರೋಗವಿಜ್ಞಾನೀಯಾಧ್ಯಾಯದಲ್ಲಿ ಪಕ್ಷ್ಮರೋಗವು ಯಾಪ್ಯವೆಂದು ತಿಳಿಸಿರುತ್ತದೆ ; ಸ್ನೇಹಕರ್ಮಮಾಡಿಸಿದ ಈ ರೋಗಿಯನ್ನು ಆಸನದಲ್ಲಿ ಕುಳ್ಳಿರಿಸಿ ರೆಪ್ಪೆಯ ಮೇಲಿನ ಚರ್ಮವನ್ನು ಹುಬ್ಬಿನಿಂದಕೆಳಗೆ $\frac{1}{2}$ ಭಾಗವನ್ನು ಬಿಟ್ಟು ರೆಪ್ಪೆಯ ತುದಿಯ ಕೂದಲು ಸಹಿತವಾದ $\frac{1}{2}$ ಭಾಗದಲ್ಲಿ ಕನೀನಕ (ಮೂಗಿನಹತ್ತಿರದಲ್ಲಿ) ಗಳನ್ನು ಬಿಟ್ಟು ಉಳಿದ ಉಪಪಕ್ಷ್ಮಮಾಲೆಯನ್ನು ಯವೆಯಷ್ಟು ಸ್ಥಳವನ್ನುಬಿಟ್ಟು ಅಡ್ಡಲಾಗಿ ಕತ್ತರಿಸಬೇಕು. ಹೀಗೆ ಯವೆಧಾನ್ಯದಷ್ಟು ಬಿಟ್ಟುಬಿಟ್ಟು ಶಸ್ತ್ರದಿಂದ ಅಡ್ಡಲಾಗಿ ಕತ್ತರಿಸಿ, ಕುದುರೆ ಬಾಲದ ಕೂದಲಿನಿಂದ ಹೊಲಿಯಬೇಕು ; ಜೇನುತುಪ್ಪ, ತುಪ್ಪಗಳನ್ನು ರಂಗಳಿಸಿ ಅದರಮೇಲೆ ಲೇಪಿಸಿ, ಸದ್ಯೋವ್ರಣದ ಚಿಕಿತ್ಸಾವಿಧಾನದಂತೆ ಉಪಚರಿಸಬೇಕು ; ರೋಗಿಯಹಣೆಗೆ ಬಲವಾದ ದಪ್ಪಬಟ್ಟೆಯಪಟ್ಟೆಯನ್ನು ಬಿಗಿದು ಕಟ್ಟಿ ಮತ್ತೊಂದು ಕುದುರೆಯಜವಿಯನ್ನು ಆ ರಂಧ್ರದೊಳಗೆ ಪೋಣಿಸಿ ಇವೆರಡು ಕುದುರೆಯಜವಿಗಳನ್ನೂ ಮೇಲೆತ್ತಿ ಪಟ್ಟಿಗೆ ಬಿಗಿಯಬೇಕು ; ಕೆಲವುದಿನಗಳಮೇಲೆ ವ್ರಣವು ಮಾದು

ರೆಪ್ಪೆಯತುದಿಯು ಗಟ್ಟಿಯಾದನಂತರ ಉಪಾಯವಾಗಿ ಆ ಕುದುರೆಯಜವಿಯನ್ನು ಹೊರಕ್ಕೆ ಎಳೆದುಕೊಳ್ಳಬೇಕು ; ಅದನ್ನು ರೆಪ್ಪೆಯಸಮುಕ್ಕೆ ಕತ್ತರಿಸಿಬಿಡಬೇಕೆಂದು ಕೆಲವರು ಹೇಳುತ್ತಾರೆ.

ಏವಂ ನ ಚೇಚ್ಛಾಮ್ಯತಿ ತಸ್ಯ ವರ್ತ್ಮನಿರ್ಭುಜ್ಯ ದೋಷೋಪಹತಾಂ ವಲಿಂ ಚ ।
ತತೋಽಗ್ನಿನಾ ವಾ ಪ್ರತಿಸಾರಯೇತ್ತಾಂ ಕ್ಷಾರೇಣ ವಾ ಸಮ್ಯಗವೇಕ್ಷ್ಯ ಧೀರಃ ॥೭॥
ಭಿತ್ವಾ ಸಮಂ ವಾಪ್ಯುಪಪಕ್ಷ್ಮಮಾಲಾಂ ಸಮ್ಯಕ್ ಗೃಹೀತ್ವಾ ಬಡಿಶೈಸ್ತ್ರಿಭಿಸ್ತು ।
ಪಥ್ಯಾಫಲೇನ ಪ್ರತಿಸಾರಯೇತ್ತು ಘೃಷ್ಟೇನ ವಾ ತೌವರಕೇಣ ಸಮ್ಯಕ್ ॥೮॥
ಚತ್ವಾರ ಏತೇ ವಿಧಯೋ ವಿಹನ್ತುಂ ಪಕ್ಷ್ಮೋಪರೋಧಂ ಪೃಥಗೇವ ಶಸ್ತಾಃ ।
ವಿರೇಚನಾಶ್ಚ್ಯೋತನನಸ್ಯಧೂಮಲೇಪಾಞ್ಜನಸ್ನೇಹರಸಕ್ರಿಯಾಶ್ಚ ॥೯॥

ಇದರಿಂದಲೂ ಪಕ್ಷ್ಮಕೋಪವು ಶಮನವಾಗದಿದ್ದರೆ ಅವನ ರೆಪ್ಪೆಯನ್ನು ಮೇಲ್ಮುಖಕ್ಕೆ ತಿರುಗಿಸಿ ದೋಷದಿಂದ ಮಡಿಸಿ ಸುಕ್ಕುಹಿಡಿದಭಾಗವನ್ನು ಕಾದಶಲಾಕೆಯಿಂದ ಸುಡಬೇಕು ; ಅಥವಾ ಕ್ಷಾರದಿಂದ ತಿಕ್ಕಬೇಕು ; ಇವುಗಳಿಂದಲೂ ಶಮನವಾಗದಿದ್ದರೆ ಉಪಪಕ್ಷ್ಮಮಾಲೆಯನ್ನೇ ಬಡಿಶಗಳಿಂದ ಚುಚ್ಚಿಹಿಡಿದು ಶಸ್ತ್ರದಿಂದ ಕತ್ತರಿಸಿ ಅದರ ಮೇಲೆ ಅಣಿಲೆಕಾಯಿಯ ಕಲ್ಕವನ್ನು ಬಳಿಯಬೇಕು ; ಅಥವಾ ಗೇರುಬೀಜದಿಂದ ಉಜ್ಜಬೇಕು ; ಶಸ್ತ್ರಭೇದನ ಅಗ್ನಿದಾಹ ಕ್ಷಾರಪ್ರತಿಸಾರಣ ಭೇಷಜಪ್ರಯೋಗಗಳೆಂಬ ಈ ೪ ವಿಧಾನಗಳಿಂದ ಪಕ್ಷ್ಮರೋಧವನ್ನು ಅಡಗಿಸಬಹುದು. ಆದರೆ ಪೂರ್ಣವಾಗಿ ಶಮನ ಮಾಡಲಾಗುವುದಿಲ್ಲ ; ಯಾಪ್ಯರೋಗವು ; ಅಭಿಷ್ಯಂದ ಚಿಕಿತ್ಸೆಯಲ್ಲಿ ಹೇಳಿರುವ ವಿರೇಚನ ಆಶ್ಚ್ಯೋತನ ನಸ್ಯ ಧೂಮ ಲೇಪನ ಅಂಜನ ಸ್ನೇಹ ರಸಕ್ರಿಯೆಗಳ ಪ್ರಯೋಗಗಳೂ ಉಪಪಕ್ಷ್ಮವನ್ನು ಕೀಳುವುದೂ ಇವೂ ಪಕ್ಷ್ಮೋಪರೋಧಹರಗಳು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ
ಪಕ್ಷ್ಮಕೋಪಪ್ರತಿಷೇಧನಾಮಕಷೋಡಶಾಧ್ಯಾಯಸ್ಯ ಶ್ರೀ
ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ
ಕೃತಕರ್ಣಾಟಕಭಾಷಾವಿವೃತಿಃ.

ಸಪ್ತದಶೋಽಧ್ಯಾಯಃ

ಅಥಾತೋ ದೃಷ್ಟಿಗತರೋಗಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ದೃಷ್ಟಿಮಂಡಲದಲ್ಲುಂಟಾಗುವ ರೋಗಗಳ ಚಿಕಿತ್ಸೆಯನ್ನು ವಿವರಿಸಿ ಹೇಳುತ್ತೇವೆ.

ತ್ರಯಃಸಾಧ್ಯಾಸ್ತ್ರಯೋಽಸಾಧ್ಯಾ ಯಾಪ್ಯಾಃ ಷಟ್ಚ ಭವನ್ತಿ ಹಿ ।
ತತ್ರೈಕಸ್ಯ ಪ್ರತೀಕಾರಃ ಕೀರ್ತಿತೋ ಧೂಮದರ್ಶಿನಃ ||೩||

ಧೂಮದರ್ಶಿ, ಪಿತ್ತವಿದಗ್ಧದೃಷ್ಟಿ, ಶ್ಲೇಷ್ಮವಿದಗ್ಧದೃಷ್ಟಿ ಈ ಮೂರು ರೋಗಗಳು ಸಾಧ್ಯಗಳು ; ಹ್ರಸ್ವಜಾಡ್ಯ, ನಕುಲಾಂಧ್ಯ, ಗಂಭೀರಿಕಗಳೆಂಬ ಮೂರು ರೋಗಗಳು ಅಸಾಧ್ಯಗಳು ; ಅರುಣಾದಿ ವಿಚಿತ್ರಬಣ್ಣವುಳ್ಳ ಶ್ಲೈಷ್ಮಿಕ ಲಿಂಗನಾಶವನ್ನು ಬಿಟ್ಟು ಉಳಿದ ೫ ವಿಧ ಕಾಚರೋಗಗಳೂ ಯಾಪ್ಯಗಳು ; ಪಿತ್ತಾಭಿಷ್ಯಂದ ಚಿಕಿತ್ಸೆಯನ್ನು ಹೇಳಿದಾಗಲೇ ಸಾಧ್ಯವಾದ ಧೂಮದರ್ಶೀ ಎಂಬ ರೋಗದ ಪ್ರತೀಕಾರವನ್ನೂ ಹೇಳಿರುತ್ತೇವೆ.

ದೃಷ್ಟ್ಯಾಂ ಪಿತ್ತವಿದಗ್ಧಾಯಾಂ ವಿದಗ್ಧಾಯಾಂ ಕಫೇನ ಚ ।
ಪಿತ್ತಶ್ಲೇಷ್ಮಹರಂ ಕುರ್ಯಾದ್ವಿಧಿಂ ಶಸ್ತ್ರಕ್ಷತಾದೃತೇ ||೪||
ನಸ್ಯಸೇಕಾಞ್ಜನಾಲೇಪಪುಟಪಾಕೈಃ ಸತರ್ಪಣೈಃ ।
ಆದ್ಯೇ ತು ತ್ರೈಫಲಂ ಪೇಯಂ ಸರ್ಪಿಸ್ತ್ರೈವೃತಮುತ್ತರೇ ||೫||
ತೈಲ್ವಕಂ ಚೋಭಯೋಃ ಪಥ್ಯಂ ಕೇವಲಂ ಜೀರ್ಣಮೇವ ವಾ ।

ಪಿತ್ತವಿದಗ್ಧದೃಷ್ಟಿಯಲ್ಲಿ ಪಿತ್ತಾಭಿಷ್ಯಂದಹರಗಳಾದ ನಸ್ಯಸೇಕಾಂಜನವೂ, ಆಲೇಪ, ಪುಟಪಾಕ, ತರ್ಪಣಗಳೂ, ತ್ರಿಫಲಾ ಮತ್ತು ತ್ರಿವೃದ್ಘೃತ ; ಶ್ಲೇಷ್ಮವಿದಗ್ಧ ದೃಷ್ಟಿಯಲ್ಲಿ ಶ್ಲೇಷ್ಮಾಭಿಷ್ಯಂದಹರಗಳಾದ ನಸ್ಯಸೇಕಾಂಜನ ಆಲೇಪಾದಿಗಳೂ, ತಿಲ್ವಕ (ರೋಧ್ರ) ಘೃತ, ಇವೆರಡು ರೋಗಗಳಲ್ಲೂ ತಿಲ್ವಕಘೃತವಾಗಲೀ ಅಥವಾ ಪುರಾಣಘೃತವಾಗಲೀ ಹಿತಕರವು.

ಗೈರಿಕಂ ಸೈನ್ಧವಂ ಕೃಷ್ಣಾಂ ಗೋದನ್ತಸ್ಯ ಮಸೀಂ ತಥಾ ||೬||
ಗೋಮಾಂಸಂ ಮರಿಚಂ ಬೀಜಂ ಶಿರೀಷಸ್ಯ ಮನಃಶಿಲಾ ।
ವೃನ್ತಂ ಕಪಿತ್ಥಾನ್ಮಧುನಾ ಸ್ವಯಙ್ಗುಪ್ತಾಫಲಾನಿ ಚ ||೭||
ಚತ್ವಾರ ಏತೇ ಯೋಗಾಃ ಸ್ಯುರುಭಯೋರಞ್ಜನೇ ಹಿತಾಃ ।

ಕಾವಿ, ಸೈಂಧವ, ಹಿಪ್ಪಲಿ, ಹಸುವಿನಕೊಂಬನ್ನು ಸುಟ್ಟಮಸಿ ಇವುಗಳು ಒಂದು ಯೋಗವು ; ಹಸುವಿನಮಾಂಸ, ಮೆಣಸು, ಬಾಗೇಬೀಜ, ಮಣಶಿಲೆ ಇವು ಒಂದು

ಯೋಗವು. ಬೇಲದಹೂವಿನತೊಟ್ಟು, ಜೇನುತುಪ್ಪ, ಇವು ಒಂದು ಯೋಗವು; ನಸುಗುನ್ನಿಯಬೀಜ, ಜೇನುತುಪ್ಪ ಇವು ಒಂದು ಯೋಗ, ಈ ರೀತಿ ೪ ಯೋಗಗಳಿಗೂ ವಿದಗ್ಧದೃಷ್ಟಿ, ಶ್ಲೇಷ್ಮವಿದಗ್ಧದೃಷ್ಟಿ ರೋಗಗಳಿಗೆ ಜೇನುತುಪ್ಪ ಮಿಶ್ರಮಾಡಿ ಅಂಜನಮಾಡ ಬೇಕು; ಪಿತ್ತವಿದಗ್ಧದೃಷ್ಟಿಯಲ್ಲಿ ರಾತ್ರಿಯಕಾಲದಲ್ಲೂ ಶ್ಲೇಷ್ಮವಿದಗ್ಧದೃಷ್ಟಿಯಲ್ಲಿ ಹಗಲು ಕಾಲದಲ್ಲೂ ಅಂಜನಮಾಡಬೇಕು ಎಂದು ಕೆಲವು ವೈದ್ಯರು ಕಾಲವಿಭಾಗವನ್ನು ಮಾಡು ತ್ತಾರೆ.

ಕುಬ್ಜಕಾಶೋಕಶಾಲಾಮ್ರಪ್ರಿಯಙ್ಗುನಳಿನೋತ್ಪಲೈಃ ||೮||
ಪುಷ್ಪೈರ್ಹರೇಣುಃ ಕೃಷ್ಣಾಹ್ವಾಪಥ್ಯಾಮಲಕ ಸಂಯುತೈಃ |
ಸರ್ಪಿರ್ಮಧುಯುತೈಶ್ಚೂರ್ಣೈರ್ವೇಣುನಾಡ್ಯಾಮವಸ್ಥಿತೈಃ ||೯||
ಅಞ್ಜಯೇತ್ದ್ವಾವಪಿ ಭಿಷಕ್ ಪಿತ್ತಶ್ಲೇಷ್ಮವಿಭಾವಿತೌ |

ಪುಷ್ಪಾಂಜನ ವಿಧಾನವು: ಗುಲಾಬಿ, ಅಶೋಕ, ಸರ್ಜವೃಕ್ಷ, ಮಾವು ನೆಳಲು, ಕೆಂದಾವರೆ, ನೈದಿಲೆ ಇವುಗಳ ಹೂಗಳೂ, ರೇಣುಕೆಬೀಜ, ಹಿಪ್ಪಲಿ, ಅಣಿಲೆಸಿಪ್ಪೆ, ನೆಲ್ಲೀಚೆಟ್ಟು, ಇವೆಲ್ಲವನ್ನೂ ಚೂರ್ಣಿಸಿ ತುಪ್ಪ, ಜೇನುತುಪ್ಪಗಳಿಂದ ರಂಗಳಿಸಿ ಬಿದರು ಕೊಳವೆಯಲ್ಲಿ ತುಂಬಿಟ್ಟುಕೊಂಡು ಪಿತ್ತವಿದಗ್ಧದೃಷ್ಟಿ ಮತ್ತು ಶ್ಲೇಷ್ಮವಿದಗ್ಧದೃಷ್ಟಿರೋಗ ಗಳಲ್ಲಿ ಅಂಜನಹಾಕಬೇಕು.

ಆಮ್ರಜಮ್ಬೂದ್ಭವಂ ಪುಷ್ಪಂ ತದ್ರಸೇನಹರೇಣುಕಾಮ್ ||೧೦||
ಪಿಷ್ಟ್ವಾ ಕ್ಷೌದ್ರಾಜ್ಯಸಂಯುಕ್ತಾಂ ಪ್ರಯೋಜ್ಯಮಥವಾಞ್ಜನಮ್ |
ನಳಿನೋತ್ಪಲಕಿಞ್ಜಲ್ಕಗೈರಿಕೈರ್ಗೋಃಶಕದ್ರಸೈಃ ||೧೧||
ಗುಡಿಕಾಞ್ಜನಮೇತದ್ವಾ ದಿನರಾತ್ರ್ಯನ್ಧಯೋರ್ಹಿತಮ್ |
ರಸಾಞ್ಜನರಸಕ್ಷೌದ್ರತಾಳೀಸಸ್ವರ್ಣಗೈರಿಕಮ್ ||೧೨||
ಗೋಶಕೃದ್ರಸಸಂಯುಕ್ತಂ ಪಿತ್ತೋಪಹತದೃಷ್ಟಯೇ |

ಮಾವು ಮತ್ತು ನೇರಳೆಹೂವುಗಳರಸದಿಂದ ರೇಣುಕಾಬೀಜ ಚೂರ್ಣ ¼ ಭಾಗ ದಷ್ಟನ್ನು ಅರೆದು ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ದಿವಾ, ರಾತ್ರ್ಯಂಧ ರೋಗಿ ಗಳಿಗೆ ಅಂಜನಹಾಕಬೇಕು. ಕೆಂದಾವರೆ–ನೈದಿಲೆಗಳ ಕೇಸರಗಳು ಕಾವಿ ಇವನ್ನು ಹಸು ವಿನ ಸೆಗಣಿಯರಸದಲ್ಲಿ ಅರೆದು ಗುಳಿಗೆಮಾಡಿಟ್ಟುಕೊಂಡು ಜೇನುತುಪ್ಪದಿಂದ ತೇದು ದಿವಾಂಧ ರಾತ್ರ್ಯಂಧ ರೋಗಿಗಳಿಗೆ ಅಂಜನಹಾಕಿದರೆ ಹಿತವಾಗುತ್ತದೆ; ಇದಕ್ಕೆ ಗುಟಿ ಕಾಂಜನವೆಂದು ಹೆಸರು; ಕೆಲವರು ಶಕೃದ್ರಸಕ್ಕೆ ಬದಲಾಗಿ ಯಕೃದ್ರಸವೆಂದು ಅರ್ಥ ಮಾಡುತ್ತಾರೆ; ಅವರಮತದಲ್ಲಿ ಯಕೃತ್ತೆಂದರೆ ಕಾಲಖಂಡವೆಂದೂ ಅದರರಸವೆಂದೂ ಅರ್ಥವಾಗುತ್ತದೆ.

ರಸಾಞ್ಜನರಸಕೌದ್ರತಾಳೀಸಸ್ವರ್ಣಗೈರಿಕಮ್ ||೧೨||
ಗೋಶಕೃದ್ರಸಸಂಯುಕ್ತಂ ಪಿತ್ತೋಪಹತದೃಷ್ಟಯೇ |

ಶೀತಂ ಸೌವೀರಕಂ ವಾಪಿ ಪಿಷ್ಟ್ವಾ ಥ ರಸಭಾವಿತಮ್ ||೧೩||
ಕೂರ್ಮಪಿತ್ತೇನ ಮತಿಮಾನ್ ಭಾವಯೇದ್ರೌಹಿತೇನ ವಾ |
ಚೂರ್ಣಾಞ್ಜನಮಿದಂ ನಿತ್ಯಂ ಪ್ರಯೋಜ್ಯಂ ಪಿತ್ತಶಾನ್ತಯೇ ||೧೪||
ಕಾಶ್ಮರೀ ಪುಷ್ಪಮಧುಕ ದಾರ್ವೀರೋಧ್ರರಸಾಞ್ಜನೈಃ |
ಸಕ್ಷೌದ್ರಮಞ್ಜನಂ ತದ್ವದ್ಧಿತಮತ್ರಾಮಯೇ ಸದಾ ||೧೫||

ರಸಾಂಜನ-ಜಾಜೀಸೊಪ್ಪಿನರಸ (ಕೆಲವರು ನೆಲ್ಲೀಸೊಪ್ಪಿನರಸವೆನ್ನುತ್ತಾರೆ) ಜೇನುತುಪ್ಪ-ತಾಳಿಸಪತ್ರೆ-ಸುವರ್ಣಗೈರಿಕ-ಇವುಗಳನ್ನು ಹಸುವಿನ ಸಗಣಿಯರಸದಲ್ಲರೆದು ಪಿತ್ತವಿದಗ್ಧದೃಷ್ಟಿಯವರಿಗೆ (ದಿವಾಂಧರಿಗೆ) ಕಣ್ಣಿಗೆಚ್ಚಬೇಕು ; ಶೀತವೀರ್ಯವುಳ್ಳ ಸೌವೀರಾಂಜನವನ್ನು ಪುಡಿಮಾಡಿ ಜಾಜಿಯಸೊಪ್ಪಿನರಸದಲ್ಲಿ ಭಾವನೆ ಮಾಡಿ ಆಮೆಯ ಪಿತ್ತದಿಂದಲೂ ಅದರ ರಕ್ತದಿಂದಲೂ ಭಾವನೆಮಾಡಿಟ್ಟುಕೊಂಡು ನಿತ್ಯವೂ ಪ್ರಯೋಗಿಸಿದರೆ ಪಿತ್ತಶಮನವಾಗುತ್ತದೆ ; ಇದಕ್ಕೆ ಚೂರ್ಣಾಂಜನವೆಂದು ಹೆಸರು ; ಶಿವನಿಹೂವು ಅತಿಮಧುರ ಮರದರಿಶಿನ ರೋಧ್ರರಸಾಂಜನಗಳನ್ನು ಚೂರ್ಣಿಸಿ ಜೇನುತುಪ್ಪದಲ್ಲಿ ರಂಗಳಿಸಿ ಅಂಜನ ಹಾಕಿದರೆ ಪಿತ್ತವಿದಗ್ಧದೃಷ್ಟಿಹರವು.

ಸ್ರೋತೋಜಂ ಸೈಂಧವಂ ಕೃಷ್ಣಾಂ ರೇಣುಕಾಂ ಚಾಪಿ ಪೇಷಯೇತ್ |
ಅಜಾಮೂತ್ರೇಣ ವಾ ವರ್ತ್ಯಃ ಕ್ಷಣದಾನ್ಧ್ಯಾಞ್ಜನೇ ಹಿತಾಃ ||೧೬||
ಕಾಲಾನುಸಾರಿವಾಂ ಕೃಷ್ಣಾಂ ನಾಗರಂ ಮಧುಕಂ ತಥಾ |
ತಾಳೀಸಪತ್ರಂ ಕ್ಷಣದೇ ಗಾಙ್ಗೇಯಂ ಚ ಶಕೃದ್ರಸೇ ||೧೭||
ಕೃತಾಸ್ತಾ ವರ್ತಯಃ ಪಿಷ್ಟ್ವಾಚ್ಛಾಯಾಶುಷ್ಕಾಃ ಸುಖಾವಹಾಃ |
ಮನಃಶಿಲಾಭಯಾವ್ಯೋಷ ಬಲಾಕಾಲಾನುಸಾರಿವಾಃ ||೧೮||
ಸಫೇನಾ ವರ್ತಯಃ ಪಿಷ್ಟ್ವಾಚ್ಛಾಗಕ್ಷೀರಸಮನ್ವಿತಾಃ |
ಗೋಮೂತ್ರಪಿತ್ತಮದಿರಾಶಕೃದ್ಧಾತ್ರೀರಸೇ ಪಚೇತ್ ||೧೯||
ಕ್ಷುದ್ರಾಞ್ಜನಂ ರಸೇಚಾನ್ಯದ್ಯಕೃತಸ್ತ್ರೈಫಲೇsಪಿವಾ |

ಸ್ರೋತೋಂಜನ ಸೈಂಧವ ಹಿಪ್ಪಲಿ ರೇಣುಕೇಬೀಜ ಇವುಗಳನ್ನು ಆಡಿನ ಮೂತ್ರದಲ್ಲಿ ಅರೆದು ಬತ್ತಿಮಾಡಿಟ್ಟುಕೊಂಡು ಅಂಜನ ಹಾಕಿದರೆ ನಕ್ತಾಂಧ್ಯಹರವಾಗುತ್ತದೆ ; ಕರಿಜಿಗಿಲು ಹಿಪ್ಪಲಿ ಶುಂಠಿ ಅತಿಮಧುರ ತಾಳೀಸಪತ್ರೆ ಕೊನ್ನಾರಿಗೆಡ್ಡೆ ಇವುಗಳನ್ನು ಹಸುವಿನ ಸಗಣಿಯ ರಸದಿಂದ ಅರೆದು ಅಂಜನ ಹಾಕಿದರೆ ನಕ್ತಾಂಧ್ಯಹರವು ; ಈ ಬತ್ತಿಗಳನ್ನು ನೆರಳಿನಲ್ಲಿ ಒಣಗಿಸಿಟ್ಟುಕೊಳ್ಳಬೇಕು ; ಇದರಿಂದ ಸುಖವಾಗುತ್ತದೆ ; ಮಣಶಿಲೆ ಅಣಿಲೆಸಿಪ್ಪೆ ತ್ರಿಕಟು, ಕಳ್ಳಂಗಡಲೆಬೇರು, ಅಗಿಲು, ಸಮುದ್ರದನೊರೆ ಇವುಗಳನ್ನು ಆಡಿನಹಾಲಿನಲ್ಲಿ ಅರೆದು ಬತ್ತಿಗಳನ್ನು ಮಾಡಿ ನೆರಳಿನಲ್ಲಿ ಒಣಗಿಸಬೇಕು ; ಇದೂ ರಾತ್ರ್ಯಂಧಹರಾಂಜನವು ; ಹಸುವಿನ ಮೂತ್ರ, ಗೋರೋಚನ, ಮದ್ಯದತಿಳಿ, ಗೋಮಯರಸ, ನೆಲ್ಲೀಕಾಯಿರಸ ಇವುಗಳನ್ನು ಕಾಯಿಸಿದ ರಸಕ್ರಿಯೆಗೆ ಕ್ಷುದ್ರಾಂಜನವೆಂದು

ಹೆಸರು ; ಯಕೃದ್ರಸದೊಡನೆ ರಸಕ್ರಿಯೆಯನ್ನು ಕಾಯಿಸಿ ತಯಾರಿಸಿದರೆ ೨ನೆಯ ಯೋಗವು, ತ್ರಿಫಲೆಯ ಕಷಾಯದಿಂದ ಕಾಯಿಸಿ ತಯಾರಿಸಿದರೆ ೩ನೆಯ ಅಂಜನ ಯೋಗವು.

ಗೋಮೂತ್ರಾಜ್ಯಾರ್ಣವಮಲಪಿಪ್ಪಲೀಕ್ಷೌದ್ರಕಟ್ಫಲಮ್ ॥೨೦॥
ಸೈನ್ಧವೋಪಹಿತಂ ಯುಞ್ಜ್ಯಾನ್ನಿಹಿತಂ ವೇಣುಭಾಜನೇ ।
ಮೇದೋಯಕೃದ್ಘೃತಂ ಚಾಜಂ ಪಿಪ್ಪಲ್ಯಃ ಸೈನ್ಧವಂ ಮಧು ॥೨೧॥
ರಸಮಾಮಲಕಂ ಚಾಪಿ ಪಕ್ವಂ ಸಮ್ಯಙ್ನಿಧಾಪಯೇತ್ ।
ಕೋಶೇ ಖದಿರನಿರ್ಮಾಣೇ ತದ್ವತ್ ಕ್ಷುದ್ರಾಞ್ಜನಂ ಹಿತಮ್ ॥೨೨॥
ಹರೇಣುಮಗಧಾಜಾಸ್ಥಿಮಜ್ಜೈಲಾಯಕೃದನ್ವಿತಮ್ ।
ಯಕೃದ್ರಸೇನಾಞ್ಜನಂ ವಾ ಶ್ಲೇಷ್ಮೋಪಹತದೃಷ್ಟಯೇ ॥೨೩॥

ಹಸುವಿನಮೂತ್ರ, ತುಪ್ಪ, ಸಮುದ್ರದನೊರೆ, ಹಿಪ್ಪಲಿ, ಜೇನುತುಪ್ಪ, ಕಿರಿಶಿವನಿ (ಕಾಯಫಲ) ಸೈಂಧವ ಇವುಗಳ ಕಲ್ಕವನ್ನು ಬಿದಿರುಕೊಳವೆಯಲ್ಲಿ ತುಂಬಿ ಕಣ್ಣಿಗೆಚ್ಚಿದರೆ ರಾತ್ರ್ಯಂಧವು ನಿವಾರಣೆಯಾಗುತ್ತದೆ ; ಆಡಿನಕೊಬ್ಬು ಯಕೃತ್ತು ತುಪ್ಪ ಹಿಪ್ಪಲಿ ಸೈಂಧವ ಜೇನುತುಪ್ಪ ನೆಲ್ಲೀಕಾಯಿ ರಸ ಇವೆಲ್ಲವನ್ನೂ ಪಕ್ವಮಾಡಿ ರಸಕ್ರಿಯೆಯನ್ನು ಮಾಡಿಟ್ಟುಕೊಂಡು ಕಗ್ಗಲಿಮರದ ಡಬ್ಬಿಯಲ್ಲಿ ತುಂಬಿಟ್ಟು ಕ್ಷುದ್ರಾಂಜನದಂತೆ ಕಣ್ಣಿಗೆ ಹಚ್ಚಿದರೆ ರಾತ್ರ್ಯಂಧಕ್ಕೆ ಹಿತವು ; ರೇಣುಕೆಬೀಜ, ಹಿಪ್ಪಲಿ, ಆಡಿನಮೂಳೆ, ಮಜ್ಜೆ, ಏಲಕ್ಕಿ, ಯಕೃತ್ ಇವನ್ನು ಯಕೃದ್ರಸದಿಂದ ಅರೆದು ಅಂಜನಹಾಕಿದರೆ ಕಫಾಂಧ್ಯ ಹರವಾಗುತ್ತದೆ.

ವಿಪಾಚ್ಯ ಗೋಧಾಯಕೃದರ್ಧಪಾಟಿತಂ ಸುಪೂರಿತಂ ಮಾಗಧಿಕಾಭಿರಗ್ನಿನಾ ।
ನಿಷೇವಿತಂ ತದ್ಯಕೃದಞ್ಜನೇನ ನಿಹನ್ತಿನಕ್ತಾಂಧ್ಯಮಸಂಶಯಂ ಖಲು ॥೨೪॥

ಉಡದ ಯಕೃತ್ತನ್ನು ಅರ್ಧಸೀಳಿ ಹಿಪ್ಪಲಿಯನ್ನು ತುಂಬಿ ಶುದ್ಧವಾದ ಮಣ್ಣನ್ನು ಬಳಿದು ಬೆಂಕಿಯಲ್ಲಿ ಬೇಯಿಸಿ ತೆಗೆದು ಮಣ್ಣನ್ನು ಬೇರ್ಪಡಿಸಿ ತಿನ್ನಬೇಕು ; ಆ ಹಿಪ್ಪಲಿಯನ್ನು ನೀರಿನಲ್ಲರೆದು ಕಣ್ಣಿಗೆ ಹಚ್ಚಿಕೊಂಡರೆ ಖಂಡಿತವಾಗಿಯೂ ರಾತ್ರ್ಯಂಧವು ನಿವಾರಣೆಯಾಗುತ್ತದೆ.

ತಥಾಯಕೃಚ್ಛಾಗಭವಂ ಹುತಾಶನೇ ವಿಪಾಚ್ಯ ಸಮ್ಯಙ್ಮಗಧಾ ಸಮನ್ವಿತಮ್ ।
ಪ್ರಯೋಜಿತಂ ಪೂರ್ವವದಾಶ್ವಸಂಶಯಂ ಜಯೇತ್ ಕ್ಷಪಾನ್ಧ್ಯಂ ಸಕೃದಞ್ಜನಾನ್ನೃಣಾಮ್ ॥೨೫॥
ಪ್ಲೀಹಾಯಕೃಚ್ಚಾಪ್ಯುಪಭಕ್ಷಿತೇ ಉಭೇ ಪ್ರಕಲ್ಪ್ಯ ಶೂಲ್ಯೇ ಘೃತತೈಲಸಂಯುತೇ ।
ತೇಸಾರ್ಷಪಸ್ನೇಹಸಮಾಯುತೇಽಞ್ಜನಂ ಸಕ್ತಾನ್ಧ್ಯಮಾಶ್ವೇವ ಹತಃ ಪ್ರಯೋಜಿತೇ ॥೨೬॥

ಆಡಿನ ಯಕೃತ್ತನ್ನು ಅರ್ಧಸೀಳಿ ಹಿಪ್ಪಲಿಯನ್ನು ತುಂಬಿ ಮಣ್ಣು ಬಳಿದು ಕೆಂಡ

ದಲ್ಲಿ ಬೇಯಿಸಿ ತೆಗೆದು ಮಣ್ಣನ್ನು ಜೇರೆಮಾಡಿ ತಿಂದು ಆ ಹಿಪ್ಪಲಿ ಕಲ್ಕವನ್ನು ಒಂದು ಸಾರಿ ಅಂಜನಹಾಕಿದರೆ ನಿಶ್ಚಯವಾಗಿಯೂ ರಾತ್ರ್ಯಂಧವು ನಾಶವಾಗುತ್ತದೆ ; ಉಡ ಮತ್ತು ಆಡುಗಳ ಪ್ಲೀಹ ಮತ್ತು ಯಕೃತ್ತುಗಳನ್ನು ಶಲಾಕಿಯಿಂದ ಚುಚ್ಚಿ ಬೆಂಕಿಯ ಕೆಂಡದಲ್ಲಿ ಹದವರಿತು ಸುಟ್ಟು ಬೆಂದಮೇಲೆ ತುಪ್ಪ ತೈಲಗಳನ್ನು ಸೇರಿಸಿ ತಿನ್ನಬೇಕು ; ಸಾಸಿವೆ ಎಣ್ಣೆಯನ್ನು ಮಿಶ್ರಮಾಡಿ ಕಣ್ಣಿಗೆ ಅಂಜನ ಹಾಕಿದರೆ ಬೇಗನೆ ರಾತ್ರ್ಯಂಧಹರ ವಾಗುತ್ತದೆ.

ನದೀಜಶಿಖಿವ್ಯಾಕಟುಕಾನ್ಯಥಾಞ್ಜನಂ ಮನಃಶಿಲಾದ್ವೇಚನಿಶೇ ಯಕೃದ್ರಸೇ ।
ಸಚನ್ದನೇಯಂ ಗುಟಿಕಾಥವಾಞ್ಜನೇ ಪ್ರಶಸ್ಯತೇ ವೈದಿವಸೇಷ್ವ ಪಶ್ಯತಾಮ್ ॥೭॥
ಭವನ್ತಿ ಯಾಪ್ಯಾಃ ಖಲು ಯೇ ಷಡಾಮಯಾ ಹರೇದಸೃಕ್ತೇಷು ಸಿರಾವಿಮೋಕ್ಷಣೈಃ ।
ವಿರೇಚಯೇಚ್ಚಾಪಿ ಪುರಾಣಸರ್ಪಿಷಾ ವಿರೇಚನಾಜಶ್ಗ್ಲೋಪಹಿತೇನ ಸರ್ವದಾ ॥೨೮॥

ಸೈಂಧವ, ಹಸುರು ಹೆಸರು, ಕಟುಕರೋಹಿಣೀ, ಸೌವೀರಾಂಜನ, ಮಣಶಿಲೆ, ಅರ ಶಿನ, ಮರದರಿಶಿನ, ರಕ್ತಚಂದನ ಇವೆಲ್ಲವನ್ನೂ ಆಡಿನ ಯಕೃದ್ರಸದಿಂದ ಅರೆದು, ಗುಳಿಗೆ ಕಟ್ಟಿ ಹಗಲು ಕಣ್ಣು ಕಾಣಿಸದವರಿಗೆಚ್ಚಿದರೆ ಗುಣಕರವು ; ಯಾಪ್ಯರೋಗಗಳೆಂದು ಪರಿ ಗಣಿಸಲ್ಪಟ್ಟ ರೋಗಗಳಲ್ಲಿ ಸಿರಾಮೋಕ್ಷಣದಿಂದ ರಕ್ತಹರಣಮಾಡಿಸಿ ನಂತರ ವಿರೇಚನ ದ್ರವ್ಯಗಳೊಡನೆ ತಯಾರಿಸಿದ ಪುರಾಣಘೃತಗಳ ಪಾನದಿಂದ ವಿರೇಚನಮಾಡಿಸಬೇಕು ; ಪ್ರಥಮದ್ವಿತೀಯಪಟಲಗಳಲ್ಲಿ ದೋಷಪ್ರಕೋಪದಿಂದ ತಿಮಿರಾವಸ್ಥೆಯುಂಟಾದಾಗ ಸಿರಾ ಮೋಕ್ಷಣಮಾಡಬೇಕು ; ರಾಗಪ್ರಾಪ್ತವಾದರೆ ಕೂಡದು.

ಪಯೋವಿಮಿಶ್ರಂ ಪವನೋದ್ಭವೇ ಹಿತಂ ವದನ್ತಿ ಪಞ್ಚಾಙ್ಗುಳ ತೈಲಮೇವ ತು ।
ಭವೇದ್ಘೃತಂ ತ್ರೈಫಲಮೇವ ಶೋಧನಂ ವಿಶೇಷತಃ ಶೋಣಿತ ಪಿತ್ತರೋಗಯೋಃ ॥೨೯॥

ತ್ರಿವೃದ್ವಿರೇಕಃ ಕಫಜೇ ಪ್ರಶಸ್ಯತೇ ತ್ರಿದೋಷಜೇ ತೈಲಮುಶನ್ತಿ ತತ್ಕೃತಮ್ ।

ಸರ್ವತಿಮಿರರೋಗಗಳಲ್ಲೂ ವಿಶೇಷಶೋಧನೌಷಧಗಳನ್ನು ಹೇಳುತ್ತಾರೆ. ವಾತಿಕ ತಿಮಿರದಲ್ಲಿ ಹರಳೆಣ್ಣೆಗೆ ಹಾಲು ಮಿಶ್ರಮಾಡಿ ಕುಡಿಸಿದರೆ ಹಿತಕರವು ; ರಕ್ತಪಿತ್ತರೋಗ ದಲ್ಲಿ ತ್ರಿಫಲಾಘೃತವೂ, ಕಫಜದಲ್ಲಿ ತ್ರಿವೃತ್‌ಘೃತವೂ, ತ್ರಿದೋಷಜದಲ್ಲಿ ವಾತಪಿತ್ತ ಕಫಹರ ದ್ರವ್ಯಗಳಿಂದ ತಯಾರಿಸಿದ ತೈಲ ಸೇವನೆಯೂ ಹಿತವು.

ಪುರಾಣಸರ್ಪಿಸ್ತಿಮಿರೇಷು ಸರ್ವಶೋ ಹಿತಂ ಭವೇದಾಯಸ ಭಾಜನಸ್ಥಿತಮ್ ॥೩೦॥
ಹಿತಂ ಚ ವಿದ್ಯಾತ್ ತ್ರಿಫಲಾಘೃತಂ ಸದಾ ಕೃತಂ ಚ ಯನ್ಮೇಷವಿಷಾಣನಾಮಭಿಃ ।
ಸದಾವಲಿಹ್ಯಾತ್ ತ್ರಿಫಲಾಂ ಸುಚೂರ್ಣಿತಾಂ ಘೃತಪ್ರಗಾಢಾಂ ತಿಮಿರೇಽಥ ಪಿತ್ತಜೇ
ಸಮೀರಜೇ ತೈಲಯುತಾಂ ಕಫಾತ್ಮಕೇ ಮಧುಪ್ರಗಾಢಾಂ ವಿದಧೀತಯುಕ್ತಿತಃ ।
ಗವಾಂ ಶಕೃತ್ಕ್ವಾಥವಿಪಕ್ವಮುತ್ತಮಂ ಹಿತಂ ತು ತೈಲಂ ತಿಮಿರೇಷು ನಾವನಮ್ ॥೩೧॥

ವಾತಪಿತ್ತಕಫಜತಿಮಿರಗಳಲ್ಲೆಲ್ಲಾ ಪುರಾಣಘೃತವನ್ನೇ ಪಾನಾಭ್ಯಂಗ ನಸ್ಯಾದಿ ಗಳಿಗೆ ಪ್ರಯೋಗಿಸಬೇಕು ; ತ್ರಿಫಲಾಕ್ವಾಥಕಲ್ಕಗಳಿಂದ ತಯಾರಿಸಿದ ಕಬ್ಬಿಣದ ಪಾತ್ರೆಯಲ್ಲಿ ತುಂಬಿರುವ ತ್ರಿಫಲಾಘೃತವನ್ನಾಗಲೀ, ಮೇಷಶೃಂಗಿಫಲ (ಗೆರ್ಶೆ ಹಂಬಿನ ಗಿಡಗಳಿಂದ ತಯಾರಿಸಿದ ಘೃತವನ್ನಾಗಲೀ ಸದಾ ಉಪಯೋಗಿಸಬೇಕು ; ನುಣ್ಣಗೆ ಪುಡಿಮಾಡಿದ ತ್ರಿಫಲಾಚೂರ್ಣಕ್ಕೆ ಅತಿಯಾಗಿ ತುಪ್ಪ ಮಿಶ್ರಮಾಡಿ ಪಿತ್ತ ತಿಮಿರದಲ್ಲೂ, ತೈಲ ಮಿಶ್ರಮಾಡಿ ವಾತಜತಿಮಿರದಲ್ಲೂ, ಜೇನುತುಪ್ಪವನ್ನು ಮಿಶ್ರಮಾಡಿ ಕಫಜತಿಮಿರ ದಲ್ಲಿಯೂ ಪ್ರಯೋಗಿಸಬೇಕು. ಹಸುವಿನ ಸಗಣಿಯ ಕಷಾಯದೊಡನೆ ತಯಾರಿಸಿದ ತೈಲವನ್ನು ಎಲ್ಲಾ ವಿಧ ತಿಮಿರಗಳಲ್ಲೂ ನಸ್ಯಮಾಡಿಸಿದರೆ ಹಿತವು.

ಹಿತಂ ಘೃತಂ ಕೇವಲಮೇವ ಪೈತ್ತಿಕೇ ಹ್ಯಜಾವಿಕಂ ಯನ್ಮಧುರೈರ್ವಿಪಾಚಿತಮ್ ।
ತೈಲಂ ಸ್ಥಿರಾದೌ ಮಧರೇ ಚ ಯದ್ಗಣೇ ತಥಾಣು ತೈಲಂ ಪವನಾಸೃಗುತ್ಥಯೋಃ ॥೩೩॥

ಸಹಾಶ್ವಗನ್ಧಾತಿಬಲಾವರೀಶೃತಂ ಹಿತಂ ಚ ನಸ್ಯೇ ತ್ರಿವೃತಂ ಯದೀರಿತಮ್ ।
ಜಲೋದ್ಭವಾನೂಪಜಮಾಂಸ ಸಂಸ್ಕೃತಂ ಘೃತಂ ವಿಧೇಯಂ ಪಯಸೋಯದುತ್ಥಿತಮ್ ॥೩೪॥

ಸಸ್ಸೈನ್ಧವಃ ಕ್ರವ್ಯಭುಗೇಣಮಾಂಸಯೋರ್ಹಿತಃ ಸಸರ್ಪಿಃ ಸಮಧುಃ ಪುಟಾಹ್ವಯಃ।
ವಸಾಥ ಗೃಧ್ರೋರಗತಾಮ್ರಚೂಡಜಾ ಸದಾ ಪ್ರಶಸ್ತಾಮಧುಕಾನ್ವಿತಾಞ್ಜನೇ ॥೩೫॥
ಪ್ರತ್ಯಞ್ಜನಂ ಸ್ರೋತಸಿಯತ್ಸಮುತ್ಥಿತಂಕ್ರಮಾದ್ರಸಕ್ಷೀರಘೃತೇಷು ಭಾವಿತಮ್ ।
ಸ್ಥಿತಂ ದಶಾಹತ್ರಯಮೇತದಞ್ಜನಂ ಕೃಷ್ಣೋರಗಾಸ್ಯೇ ಕುಶ ಸಂಪ್ರವೇಷ್ಟಿತೇ ॥೩೬॥
ತನ್ಮಾಲತೀಕೋರಕಸೈನ್ಧವಾಯುತಂ ಸದಾಞ್ಜನಂ ಸ್ಯಾತ್ತಿಮಿರೇಷು ರಾಗಿಣಿ ।
ಸುಭಾವಿತಂ ವಾ ಪಯಸಾ ದಿನತ್ರಯಂ ಕಾಚಾಪಹಂ ಶಾಸ್ತ್ರವಿದಃ ಪ್ರಚಕ್ಷತೇ ॥೩೭॥

ಕೇವಲ ಪಿತ್ತತಿಮಿರದಲ್ಲಿ ಕಾಕೋಳ್ಯಾದಿ ಮಧುರೌಷಧಿಗಳಿಂದ ತಯಾರಿಸಿದ ಕುರಿ ಅಥವ ಆಡಿನ ತುಪ್ಪವನ್ನು ಕುಡಿಸಬೇಕು ; ಕೆಲವರು ಯಾವ ಔಷಧಿಯನ್ನೂ ಸೇರಿಸದೆ ಬರಿಯದಾದ ಕುರಿಯ ಅಥವ ಆಡಿನ ತುಪ್ಪವೆಂದು ಹೇಳುತ್ತಾರೆ. ವಾತರಕ್ತಜ ತಿಮಿರದಲ್ಲಿ ಹ್ರಸ್ವಪಂಚಮೂಲಗಳಿಂದ ತಯಾರಿಸಿದ ತೈಲವಾಗಲೀ ಕಾಕೋಳ್ಯಾದಿ ಮಧುರಗಣದ್ರವ್ಯಗಳಿಂದ ತಯಾರಿಸಿದ ತೈಲವಾಗಲೀ, ಅಣುತೈಲವಾಗಲೀ ಹಿತಕರ ವಾದದ್ದು. ವಾತಜತಿಮಿರದಲ್ಲಿ ಕಾಡುಹೆಸರು, ಆಷಾಢಿ, ಅಶ್ವಗಂಧಾ, ತುರುಬೆ ಇವು ಗಳೊಡನೆ ತಯಾರಿಸಿದ ತೈಲದಿಂದ ನಸ್ಯಮಾಡಿಸಿದರೆ ಹಿತವಾಗುತ್ತದೆ. ತುಪ್ಪ, ವಸೆ, ಮಜ್ಜೆಗಳೆಂಬ ತ್ರಿಸ್ನೇಹದೊಡನೆ ತ್ರಿವೃತ್‌ಚೂರ್ಣಸಾರದಿಂದ ತಯಾರಿಸಿದ ತೈಲವೂ ನಸ್ಯಕರ್ಮಕ್ಕೆ ಹಿತಕರವು. ಕೆಲವು ವೈದ್ಯರು ಮುದ್ಗಪರ್ಣೀ ಮತ್ತು ಅಶ್ವಗಂಧಾದಿ ಗಳೊಡನೆ ಸರ್ಪಿರ್ಮಜ್ಜಾವಸೆಗಳೊಡನೆ ತಯಾರಿಸಿದ ತೈಲದಿಂದ ನಸ್ಯಮಾಡಿಸಿದರೆ ಹಿತ ವೆನ್ನುತ್ತಾರೆ. ಮತ್ಸ್ಯಾದಿ ಜಲಚರಗಳ ಮತ್ತು ಹಂದಿ ಮೊದಲಾದ ಅನೂಪ ಪ್ರಾಣಿ ಗಳ ಮಾಂಸದೊಡನೆ ಕ್ಷೀರಪಾಕ ವಿಧಾನದಿಂದ ಕಾಯಿಸಿದ ಹಾಲನ್ನು ಕಡೆದು ಬರುವ

ಬೆಣ್ಣೆಗೆ ಮುದ್ಗಪರ್ಣೀ, ಅಶ್ವಗಂಧಾದಿ ದ್ರವ್ಯಗಳನ್ನು ಮಿಶ್ರಮಾಡಿ ತಯಾರಿಸಿದ ತೈಲವು ವಾತಿಕತಿಮಿರದಲ್ಲಿ ನಸ್ಯಕರ್ಮಕ್ಕೆ ಹಿತಕರವು. ಮಾಂಸಾಹಾರಿಗಳಾದ ಹದ್ದು ಮೊದಲಾದುವುಗಳ ಮತ್ತು ಕರಿಯ ಹುಲ್ಲೆಯ ಮಾಂಸಕ್ಕೆ ಸೈಂಧವ ಮಿಶ್ರಮಾಡಿ ಪುಟಪಾಕ ವಿಧಾನದಿಂದ ಬೇಯಿಸಿ ತುಪ್ಪ, ಜೇನುತುಪ್ಪ ಮಿಶ್ರಮಾಡಿ ಅಂಜನ ಹಾಕಬೇಕು. ಹದ್ದು, ಕೃಷ್ಣಸರ್ಪ, ಕೋಳಿ ಇವುಗಳಲ್ಲೊಂದರ ಕೊಬ್ಬಿನಲ್ಲಿ ಅತಿಮಧುರವನ್ನು ಅರೆದು ಅಂಜನಮಾಡಿದರೆ ಹಿತಕರವು. ಅವೆಲ್ಲವುಗಳ ಕೊಬ್ಬಿನಲ್ಲಿ ಅತಿಮಧುರವನ್ನು ತೇದು ಕಣ್ಣಿಗೆ ಅಂಜನವನ್ನು ಹಾಕಿ ಪುನಃ ಅಂಜನಹಾಕಿದರೆ ಪ್ರತ್ಯಂಜನವೆಂದು ಹೆಸರು. ವಾತಜ ತಿಮಿರದಲ್ಲಿ ಸ್ನೇಹಾಂಜನ ಪ್ರಯೋಗದಿಂದ ಜಡವಾದ ಕಣ್ಣಿಗೆ ಉಪಕಾರ ಮಾಡಲು ತೀಕ್ಷ್ಣಾಂಜನಕ್ಕೆ ಮೃದ್ವಂಜನವೂ ಮೃದ್ವಂಜನಕ್ಕೆ ತೀಕ್ಷ್ಣಾಂಜನವೂ ಕ್ರಮವಾಗಿ ದೃಷ್ಟಿಬಲವನ್ನುಂಟುಮಾಡುವ ಪಶುಪಕ್ಷಿಗಳ ಮಾಂಸರಸ ತುಪ್ಪಗಳಲ್ಲಿ ಭಾವನೆ ಮಾಡಿದ ಸ್ರೋತೋಂಜನ ಅಥವಾ ಸೌವೀರಾಂಜನವನ್ನು (ಒಂದೊಂದರಲ್ಲಿ ಏಳೇಳು ದಿನಗಳವರೆಗೆ ಭಾವನೆ ಮಾಡಿರಬೇಕು) ಚೂರ್ಣಮಾಡಿ ಕಣ್ಣಿಗೆಚ್ಚಬೇಕು. ರಾಗಪ್ರಾಪ್ತ ತಿಮಿರಚಿಕಿತ್ಸೆ:—ಸ್ರೋತೋಂಜನ ಅಥವಾ ಸೌವೀರಾಂಜನವನ್ನು ಕೃಷ್ಣಸರ್ಪದ ಬಾಯಿಯಲ್ಲಿಟ್ಟು ದರ್ಭೆಯಿಂದ ಬಾಯಿಕಟ್ಟಿ ಒಂದು ತಿಂಗಳು ಕಳೆದನಂತರ ತೆಗೆದುಕೊಂಡು ಜಾಜಿಮೊಗ್ಗು ಸೈಂಧವಗಳೊಡನೆ ಅರೆದು ಕಣ್ಣಿಗೆಚ್ಚಿದರೆ ರಾಗಯುಕ್ತ ತಿಮಿರವು ನಾಶವಾಗುತ್ತದೆ ; ಅಥವಾ 2 ದಿನಗಳವರೆಗೆ ಹಾಲಿನಲ್ಲಿ ಭಾವನೆಮಾಡಿ ಅಂಜನಹಾಕಬಹುದು ಎಂದು ವೈದ್ಯಶಾಸ್ತ್ರಜ್ಞರು ಹೇಳುತ್ತಾರೆ.

ಹವಿರ್ಹಿತಂ ಕ್ಷೀರಭಂ ತು ಪೈತ್ತಿಕೇ ವದನ್ತಿ ನಸ್ಯೇ ಮಧುರೌಷಧೈಃ ಕೃತಮ್ ।
ತತ್ತರ್ಪಣೇ ಚೈವ ಹಿತಂ ಪಯೋಜಿತಂ ಸಜಾಙ್ಗಲಸ್ನೇಷು ಚ ಯಃ ಪುಟಾಹ್ವಯಃ ॥೩೮॥

ರಸಾಞ್ಜನಕ್ಷೌದ್ರಸಿತಾ ಮನಃಶಿಲಾಃಕ್ಷೌದ್ರಾಞ್ಜನಂ ಯನ್ಮಧುಕೇನ ಸಂಯುತಮ್ ।
ಸಮಾಞ್ಜನಂ ವಾ ಕನಕಾಕರೋದ್ಭವಂ ಸುಚೂರ್ಣಿತಂ ಶ್ಲೇಷ್ಮಮುಶನ್ತಿ ತದ್ವಿದಃ ॥೩೯॥

ಭಿಲ್ಲೋಟಗನ್ಧೋದಕ ಸೇಕಸೇಚಿತಂ ಪ್ರತ್ಯಞ್ಜನಂ ಚಾತ್ರ ಹಿತಂ ತು ತುತ್ಥಕಮ್
ಸಮೇಷಶೃಙ್ಗ್ಯಞ್ಜನಭಾಗಸಂಮಿತಂ ಜಲೋದ್ಭವಂ ಕಾಚಮಲಂ ವ್ಯಪೋಹತಿ ॥೪೦॥
ಪಲಾಶರೋಹೀತಮಧೂಕಜಾ ರಸಾಃ ಕ್ಷೌದ್ರೇಣ ಯುಕ್ತಾ ಮದಿರಾಗ್ರಮಿಶ್ರಿತಾಃ
ಉಶೀರಲೋಧ್ರು ತ್ರಿಫಲಾ ಪ್ರಿಯಙ್ಗುಭಿಃ ಪಚೇತ ನಸ್ಯಂ ಕಫರೋಗಶಾನ್ತಯೇ ॥೪೧॥

ಹಾಲನ್ನು ಕಡೆದು ಬೆಣ್ಣೆಯನ್ನು ಕಾಕೋಳ್ಯಾದಿ ಮಧುರೌಷಧಗಳೊಡನೆ ಸೇರಿಸಿ ಘೃತವನ್ನು ತಯಾರಿಸಿ ಮಾಡಿಸಿದರೆ ಪಿತ್ತತಿಮಿರಹರವಾಗುತ್ತದೆ ; ಹೀಗೆ ಮಧುರೌಷಧ ಸಿದ್ಧಘೃತವನ್ನು ಜಾಂಗಲಮಾಂಸಪುಟಪಾಕದ ರಸದೊಡನೆ ಮಿಶ್ರಮಾಡಿ ನೇತ್ರತರ್ಪಣವಾಗಿ ಪ್ರಯೋಗಿಸಿದರೆ ಪಿತ್ತತಿಮಿರಹರವು ; ರಸಾಂಜನ, ಜೇನುತುಪ್ಪ, ಸಕ್ಕರೆ, ಮಣ

ಶಿಲೆ, ಅತಿಮಧುರ ಇವುಗಳಿಂದ ತಯಾರಿಸಿದ ರಸಕ್ರಿಯೆಯನ್ನು ಅಂಜನಮಾಡಿದರೆ ಪಿತ್ತ ತಿಮಿರಹರವು ; ಇದಕ್ಕೆ ಕ್ಷುದ್ರಾಂಜನವೆಂದು ಹೆಸರು. ವೈದ್ಯರು ಸೌವೀರಾಂಜನವನ್ನೂ ವೈಲುತುತ್ಥವನ್ನೂ ಸಮಪ್ರಮಾಣದಿಂದ ಸೇರಿಸಿ ಪುಡಿಮಾಡಿ ಕಣ್ಣಿಗೆಚ್ಚಿದರೆ ಪಿತ್ತತಿಮಿರ ಹರವಾಗುತ್ತದೆಂದು ಹೇಳುತ್ತಾರೆ. ಇದಕ್ಕೆ ಪ್ರತ್ಯಂಜನವೆನ್ನುತ್ತಾರೆ. ಹಿಮಾಲಯ ಪ್ರಾಂತದಲ್ಲಿ ಮತ್ತಿಗಿಡದಂತಿರುವ ವೃಕ್ಷ ವಿಶೇಷಕ್ಕೆ ಭಿಲ್ಲೋಟವೆಂದು ಹೆಸರು. ವೈಲ್ ತುತ್ಥಕ್ಕೆ ಭಿಲ್ಲೋಟಫಲದ ಕಷಾಯವನ್ನೂ ; ಏಲಾದಿಗಣೋಕ್ತ ಗಂಧೋದಕವನ್ನೂ ಸೇಚನೆಮಾಡಿದರೆ ಪ್ರತ್ಯಂಜನವಾಗುತ್ತದೆ ; ಇದರ ಪ್ರಯೋಗದಿಂದ ಪಿತ್ತತಿಮಿರಹರ ವಾಗುತ್ತದೆ. ಪುತ್ರಜೀವ ವೃಕ್ಷದಂತಿರುವ ಮೇಷಶೃಂಗವೆಂಬ ಮರದ ಕಷಾಯ ೧ ಭಾಗ, ಸೌವೀರಾಂಜನ ೧ ಭಾಗ ಇವೆರಡಕ್ಕೂ ಸಮಭಾಗ ಸ್ರೋತೋಂಜನ (ಕೆಲವರು ಶಂಖ ವೆನ್ನುತ್ತಾರೆ) ವನ್ನೂ ಸೇರಿಸಿ ಕಣ್ಣಿಗೆಚ್ಚಿದರೆ ಪಿತ್ತಕಾಚಹರವು. ಮುತ್ತುಗ, ರೋಹಿತಕ (ದಾಳಿಂಬೆ ಹೂವಿನಂತಿರುವ ಹೂವಿನಗಿಡ) ಹಿಪ್ಪೆ, ಇವುಗಳ ತೊಗಟೆಯ ಕಷಾಯ, ಮದ್ಯದತಿಳಿ ಇವುಗಳನ್ನು ಸೇರಿಸಿ ತಯಾರಿಸಿದ ರಸಕ್ರಿಯೆಗೆ ಜೇನುತುಪ್ಪ ಮಿಶ್ರಮಾಡಿ ಕಣ್ಣಿಗೆಚ್ಚಿದರೆ ಪಿತ್ತಕಾಚಹರವು. ಲಾಮಂಚ, ಲೋಧ್ರ, ತ್ರಿಫಲೆ, ನೆಳಲು ಇವುಗಳ ಕಲ್ಕ ದೊಡನೆ ಪಾಕಮಾಡಿದರೆ ತಿಲತೈಲದಿಂದ ನಸ್ಯಮಾಡಿಸಿದರೆ ಕಫಕಾಚಹರವು.

ವಿಡಙ್ಗಪಾಠಾಕಿಣಿಹಿಙ್ಗುದೀತ್ವಚಃ ಪ್ರಯೋಜಯೇದ್ಧೂಮಮುಶೀರ ಸಂಯುತಮ್
ವನಸ್ಪತಿಕ್ವಾಥ ವಿಪಾಚಿತಂ ಘೃತಂ ಹಿತಂ ಹರಿದ್ರಾನಳದೇವ ತರ್ಪಣಮ್ ||೪೨||
ಸಮಾಗಧೋ ಮಾಕ್ಷಿಕಸೈನ್ಧವಾ ಢ್ಯಃ ಸಜಾಙ್ಗಲಃ ಸ್ಯಾತ್ ಪುಟಪಾಕ ಏವ ಚ

ವಿಡಂಗ, ಅಗಳುಶುಂಠಿ, ಉತ್ತರಣೆ, ಇಂಗಳದತೊಗಟೆ, ಲಾಮಂಚ ಇವುಗಳ ಧೂಮಪಾನದಿಂದ ಕಫಕಾಚವು ನಿವಾರಣೆಯಾಗುತ್ತದೆ ; ಅತ್ತಿ, ಆಲ, ಮೊದಲಾದ ಕ್ಷೀರವೃಕ್ಷಗಳ ತೊಗಟೆಯ ಕಷಾಯ ೪ ಭಾಗ, ತುಪ್ಪ ೧ ಭಾಗ, ಅರಿಶಿನ, ಲಾಮಂಚ ಕಲ್ಕ ೧/೪ ಭಾಗವನ್ನು ಸೇರಿಸಿ ತಯಾರಿಸಿದ ಘೃತವನ್ನು ಕಣ್ಣುಗಳಿಗೆ ತುಂಬಿದರೆ ಕಫ ಹರವಾಗುತ್ತದೆ ; ಜಾಂಗಲಮೃಗಪಕ್ಷಿಗಳ ಮಾಂಸಕ್ಕೆ ಹೆಚ್ಚಾಗಿ ಹಿಪ್ಪಲಿಯನ್ನು ಸೇರಿಸಿ ಪುಟಪಾಕವಿಧಾನದಿಂದ ಪಾಕಮಾಡಿ ಅದರರಸಕ್ಕೆ ಸೈಂಧವಚೂರ್ಣ ಜೇನುತುಪ್ಪಗಳನ್ನು ಮಿಶ್ರಮಾಡಿ ಕಣ್ಣಿಗೆಚ್ಚಿದರೆ ಕಫತಿಮಿರಹರವಾಗುತ್ತದೆ.

ಮನಃಶಿಲಾತ್ರ್ಯೂಷಣಶಙ್ಖಮಾಕ್ಷಿಕೈಃ ಸಸಿನ್ಧುಕಾಸೀಸರಸಾಞ್ಜನೈಃ ಕ್ರಿಯಾಃ ||೪೩||
ಹಿತೇ ಚ ಕಾಸೀಸರಸಾಞ್ಜನೇ ತಥಾ ವದನ್ತಿ ಪಥ್ಯೇ ಗುಡನಾಗರೈರ್ಯುತೇ

ಮಣಶಿಲೆ, ತ್ರಿಕಟು, ಶಂಖ, ಜೇನುತುಪ್ಪ, ಸೈನ್ಧವ, ಅನ್ನಭೇದಿ, ರಸಾಂಜನ ಇವು ಗಳನ್ನು ಚೂರ್ಣಿಸಿ ೪ ರಷ್ಟು ನೀರನ್ನು ಸೇರಿಸಿ ಮಾಡಿದ ರಸಕ್ರಿಯೆಗಳನ್ನು ಕಣ್ಣಿಗೆಚ್ಚಿದರೆ ಕಫತಿಮಿರಹರವಾಗುತ್ತದೆ ; ಅನ್ನಭೇದಿ, ರಸಾಂಜನ, ಬೆಲ್ಲ, ಶುಂಠಿಗಳನ್ನೂ ಮೇಲೆ ಹೇಳಿ ದಂತೆ ರಸಕ್ರಿಯೆ ಮಾಡಿ ಅಂಜನಮಾಡಿದರೆ ಹಿತವಾಗುತ್ತದೆ.

ಯದಞ್ಜನಂ ವಾ ಬಹುಶೋ ನಿಷೇಚಿತಂ ಸಮೂತ್ರವರ್ಗೇ ತ್ರಿಫಲೋದಕೇ ಶೃತೇ ||೪೪||

ನಿಶಾಚರಾಸ್ಥಿ ಸ್ಥಿತಮೇತದಞ್ಜನಂ ಕ್ಷಿಪೇಚ್ಚ ಮಾಂಸಂ ಸಲಿಲೈಸ್ಥಿರೇ ಪುನಃ |
ಮೇಷಸ್ಯಪುಷ್ಪೈರ್ಮಧುಕೇನ ಸಂಯುತಂ ತದಞ್ಜನಂ ಸರ್ವಕೃತೇ ಪ್ರಯೋಜಯೇತ್ ||೪೫||

ಸ್ರೋತೋಂಜನವನ್ನು ಅನೇಕಸಾರಿ ಬೆಂಕಿಯಲ್ಲಿ ಕಾಯಿಸಿ ೮ ಮೂತ್ರಗಳಲ್ಲೂ ಅದ್ದಿ ತ್ರಿಫಲಾ ಕಷಾಯದಲ್ಲಿ ಕುದಿಸಿ (ಗೃಧ್ರಾದಿಗಳ) ಹದ್ದು ಗೂಬೆ ಮೊದಲಾದ ಪ್ರಾಣಿಗಳ ಮಜ್ಜರಹಿತವಾದ ಮೂಳೆಗೆ ತುಂಬಿ ಮೂಳೆಯಮುಖವನ್ನು ಮುಚ್ಚಿ ಗೂಟಕ್ಕೆ ಕಟ್ಟಿ ಹರಿಯುವ ಹೊಳೆಯನೀರಿನಲ್ಲಿ ನಿಲ್ಲಿಸಿ ೧ ಮಾಸಕಳೆದಮೇಲೆ ತೆಗೆದು ಒಣಗಿಸಿ ಮೇಷ ಶೃಂಗೀ (ಗೆರ್ಶೆಹಂಬು) ಹೂವು, ಅತಿಮಧುರಗಳ ಚೂರ್ಣದೊಡನೆ ಸಮಭಾಗದಿಂದ ಮಿಶ್ರಮಾಡಿ ಜೇನುತುಪ್ಪದಲ್ಲಿ ರಂಗಳಿಸಿ ಕಣ್ಣಿಗೆಚ್ಚಿದರೆ ತ್ರಿದೋಷಕೃತತಿಮಿರಹರವು. ರುಬ್ಬಿಸೂಸ (ಅತಿಮಧುರದ ಸಾರ) ಮತ್ತು ಕೆಂಪು ನುಗ್ಗೆ ಹೂವೆಂದು ಪಾಠಭೇದವು.

ಕ್ರಿಯಾಶ್ಚ ಸರ್ವಾಃ ಕ್ಷತಜೋದ್ಭವೋಹಿತಃ ಕ್ರಮಃ ಪರಿಮ್ಲಾಯಿನಿ ಚಾಪಿಪಿತ್ತಹೃತ್ |
ಕ್ರಮೋ ಹಿತಃ ಸ್ಯನ್ದಹರಃ ಪ್ರಯೋಜಿತಃ ಸಮೀಕ್ಷ್ಯ ದೋಷೇಷು ಯಥಾಸ್ವಮೇವ ಚ ||೪೬||

ದೋಷೋದಯೇ ನೈವ ಚ ವಿಪ್ಲುತಿಂ ಗತೇ ದ್ರವ್ಯಾಣಿ ನಸ್ಯಾದಿಷು ಯೋಜಯೇದ್ಬುಧಃ

ತ್ರಿದೋಷಜತಿಮಿರದಲ್ಲಿ ಅಪತರ್ಪಣ ಪುಟಪಾಕಾದಿ ವಾತಪಿತ್ತಕಫಜತಿಮಿರಹರಗಳಾದ ಎಲ್ಲಾ ಚಿಕಿತ್ಸಾ ವಿಧಾನಗಳನ್ನೂ ಮಾಡಬೇಕು ; ಇನ್ನು ಕೆಲವರು ತ್ರಿದೋಷಜ ತಿಮಿರಗಳಲ್ಲಿ ಹೇಳಿದ ಎಲ್ಲಾ ವಿಧಾನಗಳನ್ನೂ ಮಾಡಬೇಕೆನ್ನುತ್ತಾರೆ. ಪರಿಮ್ಲಾಯಿ ತಿಮಿರದಲ್ಲಿ ಪಿತ್ತತಿಮಿರಹರಗಳಾದ ನಸ್ಯತರ್ಪಣಾದಿ ಕ್ರಮುಗಳನ್ನು ಮಾಡಬೇಕು. ಇವು ರಾಗವಿಲ್ಲದ ತಿಮಿರದ ಚಿಕಿತ್ಸೆಯು. ಇನ್ನು ರಾಗಪ್ರಾಪ್ತವಾದ (2ನೇ ಪಟಲವನ್ನು ಸೇರಿದ) ತಿಮಿರದಲ್ಲಿ ಪಿತ್ತಕಾಚಹರ ಚಿಕಿತ್ಸೆಗಳನ್ನು ಮಾಡಬೇಕು. ವಾತಾದಿ ತಿಮಿರಗಳಲ್ಲಿ ರಾಗಪ್ರಾಪ್ತಿಯಿಲ್ಲದಿದ್ದರೆ ವಾತಾದ್ಯಭಿಷ್ಯಂದ ಚಿಕಿತ್ಸೆಯನ್ನೂ, ರಾಗಪ್ರಾಪ್ತಿಯಾಗಿದ್ದರೆ ಅಂದರೆ ದೋಷಗಳು ಸಮಸ್ತ ನೇತ್ರಭಾಗವನ್ನೂ ವ್ಯಾಪಿಸಿದರೆ ಆಗ ಆಯಾಯ ದೋಷೋಕ್ತ ಅಭಿಷ್ಯಂದ ಚಿಕಿತ್ಸೆಯನ್ನು ಮಾಡಬಾರದು. ಆದರೆ ಲಂಘನ ವಿರೇಚನ ನಿರೂಹಾನುವಾಸನ ಶಿರೋವಿರೇಚನ ಗಳಿಂದ 2 ದಿನಗಳವರೆಗೆ ಉಪಚರಿಸಿ ಆಯಾಯ ದೋಷೋತ್ಥ ಅಭಿಷ್ಯಂದದಲ್ಲಿ ಹೇಳಿರುವ ನಸ್ಯ ತರ್ಪಣಾದಿಗಳಿಂದ ಉಪಚರಿಸಬೇಕು.

ಪುನಶ್ಚ ಕಲ್ಪೇಽಞ್ಜನವಿಸ್ತರಃ ಶುಭಃ ಪ್ರವಕ್ಷ್ಯತೇಽನ್ಯಸ್ತಮಿಹೇಹ ಯೋಜಯೇತ್ ||೪೭||

ಘೃತಂ ಪುರಾಣಂ ತ್ರಿಫಲಾಂ ಶತಾವರೀಂ ಪಟೋಲಮುದ್ಗಾಮಲಕಂ ಯವಾನಪಿ
ನಿಷೇವಮಾಣಸ್ಯ ನರಸ್ಯ ಯತ್ನತೋ ಭಯಂ ಸುಘೋರಾತ್ತಿಮಿರಾನ್ನ ವಿದ್ಯತೇ ||೪೮||

ಶತಾವರೀಪಾಯಸ ಏವ ಕೇವಲ ಸ್ತಥಾಕೃತೋ ವಾಮಲಕೇಷು ಪಾಯಸಃ ।
ಪ್ರಭೂತಸರ್ಪಿಸ್ತ್ರಿಫಲೋದಕೋತ್ತರೋ ಯವೌದನೋ ವಾ ತಿಮಿರಂ ವ್ಯಪೋಹತಿ ॥೪೯॥

ಕ್ರಿಯಾಕಲ್ಪದಲ್ಲಿ ಹೇಳುವ ಶ್ರೇಷ್ಠಗಳಾದ ಅಂಜನ ವಿಧಾನಗಳನ್ನೂ ತಿಮಿರ ಚಿಕಿತ್ಸೆಯಲ್ಲಿ ಪ್ರಯೋಗಿಸಬೇಕು. ಪುರಾಣಘೃತ, ತ್ರಿಫಲೆ, ಆಷಾಡಿಬೇರು, ಕಹಿಪಡ ವಲ, ಹೆಸರುಕಾಳು, ನೆಲ್ಲೀಕಾಯಿ, ಯವಧಾನ್ಯಗಳನ್ನು ಪ್ರಯತ್ನಪೂರ್ವಕವಾಗಿ ಸೇವಿಸು ವವರಿಗೆ ಈ ಭಯಂಕರವಾದ ತಿಮಿರರೋಗವುಂಟಾಗುವುದಿಲ್ಲ.

ಜೀವನ್ತಿಶಾಕಂ ಸುನಿಷಣ್ಣಕಂ ಚ ಸತಣ್ಡುಲೀಯಂ ವರವಾಸ್ತುಕಂ ಚ ।
ಚಿಲ್ಲೀ ತಥಾ ಮೂಲಕಪೋತಿಕಾ ಚ ದೃಷ್ಟೇರ್ಹಿತಂ ಶಾಕುನಜಾಙ್ಗಲಂ ಚ ॥೫೦॥
ಪಟೋಲ ಕರ್ಕೋಟಕಕಾರವೇಲ್ಲವಾರ್ತಾಕುತರ್ಕಾರಿಕರೀರಜಾನಿ
ಶಾಕಾನಿ ಶಿಗ್ರ್ವಾರ್ತಗಲಾನಿ ಚೈವಹಿತಾನಿ ದೃಷ್ಟೇರ್ಘೃತ ಸಾಧಿತಾನಿ ॥೫೧॥

ಚಕ್ಷುಷ್ಯಶಾಕಗಳು—ಸಿಹಿಹಾಲೆ, ಅಣ್ಣೆಸೊಪ್ಪು, ಕಿರಕುಸಾಲೆ, ಚಕ್ಕೋತ, ಹರುವೆ, ಎಳೆಯ ಮೂಲಂಗಿ, ಲಾವನಹಕ್ಕಿ, ಏಣಾದಿಮೃಗಪಕ್ಷಿಗಳ ಮಾಂಸ, ಪಡವಲ, ಹಾಗಲ, ಕಾಡುಹಾಗಲ, ಬದನೆ, ತಗ್ಗಿ, ಬಿದಿರಕಳಲೆ, ನುಗ್ಗೆ, ಕರಿಹೂವಿನಮುಳ್ಳು ಗೋರಂಟಿ, ಈ ಸೊಪ್ಪುಗಳನ್ನು ತುಪ್ಪದಲ್ಲಿ ಹುರಿದು ಸೇವಿಸಿದರೆ ಕಣ್ಣಿಗೆ (ಬಲ) ಹಿತ ಕರವು.

ವಿವರ್ಜಯೇತ್ ಸಿರಾಮೋಕ್ಷಂ ತಿಮಿರೇ ರಾಗಮಾಗತೇ ।
ಯನ್ತ್ರೇಣೋತ್ಪೀಡಿತೋ ದೋಷೋ ನಿಹನ್ಯಾದಾಶು ದರ್ಶನಮ್ ॥೫೨॥
ಅರಾಗಿ ತಿಮಿರಂ ಸಾಧ್ಯಮಾದ್ಯಂ ಪಟಲಮಾಶ್ರಿತಮ್ ।
ಕೃಚ್ಛ್ರಂ ದ್ವಿತೀಯೇ ರಾಗಿ ಸ್ಯಾತ್ತೃತೀಯೇ ಯಾಪ್ಯಮುಚ್ಯತೇ ॥೫೩॥
ರಾಗಪ್ರಾಪ್ತೇಷ್ವಪಿ ಹಿತಾಸ್ತಿಮಿರೇಷು ಕ್ರಿಯಾ ತಥಾ ।
ಯಾಪನಾರ್ಥಂ ಯಥೋದ್ದಿಷ್ಟಾಃ ಸೇವ್ಯಾಶ್ಚಾಪಿ ಜಲೌಕಸಃ ॥೫೪॥

ತಿಮಿರರೋಗದಲ್ಲಿ ರಾಗಪ್ರಾಪ್ತವಾದರೆ ಸಿರಾಮೋಕ್ಷವನ್ನು ಮಾಡಿಸಬಾರದು. ಯಂತ್ರಣದಿಂದ ದೋಷವು ಪೀಡಿತವಾಗಿ ಬೇಗನೆ ದರ್ಶನಶಕ್ತಿಯನ್ನೇ ನಾಶಮಾಡುತ್ತದೆ. (ಕುರುಡುತನವನ್ನುಂಟುಮಾಡುತ್ತದೆ). ಮೊದಲನೆಯ ಪಟಲವನ್ನಾಶ್ರಯಿಸಿ ರಾಗವನ್ನು ಹೊಂದದಿರುವ ತಿಮಿರರೋಗವನ್ನು ಚಿಕಿತ್ಸೆಮಾಡಿ ಗುಣಪಡಿಸಬಹುದು. ಎರಡನೆಯ ಪಟಲವನ್ನು ಆಕ್ರಮಿಸಿ ರಾಗಪ್ರಾಪ್ತಿಯಿಲ್ಲದಿದ್ದರೆ ಕಷ್ಟಪಟ್ಟು ಗುಣಪಡಿಸಬಹುದು. ಆದರೆ ಮೂರನೆಯ ಪಟಲಕ್ಕೇರಿ ರಾಗವನ್ನು ಹೊಂದಿರುವ ತಿಮಿರವು ಯಾಪ್ಯವು. ಎರಡು ನೆಯ ಪಟಲವನ್ನಾಕ್ರಮಿಸಿ ರಾಗವನ್ನು (ಕೆಂಪು ಬಣ್ಣವನ್ನು) ಹೊಂದಿದ ತಿಮಿರದಲ್ಲಿ ಯಾಪನಾರ್ಥವಾಗಿ ರಕ್ತಮೋಕ್ಷಣವು ನಿಷಿದ್ಧವಾದ ಕಾರಣ ಜಿಗುಳೆಯನ್ನು ಕಚ್ಚಿಸಿ ರಕ್ತ ಹರಣಮಾಡಬೇಕು.

ಶ್ಲೇಷ್ಮಿಕೇ ಲಿಙ್ಗನಾಶೇ ತು ಕರ್ಮ ವಕ್ಷ್ಯಾಮಿ ಸಿದ್ಧಯೇ ।
ನ ಚೇದರ್ಧೇನ್ದು ಘರ್ಮಾಮ್ಬುಬಿನ್ದು ಮುಕ್ತಾಕೃತಿಃ ಸ್ಥಿರಃ ॥೫೫॥
ವಿಷಮೋ ವಾ ತನುರ್ಮಧ್ಯೇ ರಾಜಿಮಾನ್ ವಾ ಬಹುಪ್ರಭಃ ।
ದೃಷ್ಟಿಸ್ಥೋ ಲಕ್ಷ್ಯತೇ ದೋಷಃ ಸರುಜೋ ವಾ ಸಲೋಹಿತಃ ॥೫೬॥

ಶ್ಲೈಷ್ಮಿಕಲಿಂಗನಾಶವು ಕೃಚ್ಛ್ರಸಾಧ್ಯವಾದ ಕಾರಣ ಅದರ ನಿವಾರಣೆಗಾಗಿ ಶಸ್ತ್ರ ಕರ್ಮವಿಧಾನವನ್ನು ಹೇಳುತ್ತೇನೆ : ದೃಷ್ಟಿಸ್ಥದೋಷವು ದ್ವಂದ್ವಾಕೃತಿ, ಅರ್ಧಚಂದ್ರಾಕೃತಿ, ಬೆವರಿನ ಹನಿಯಂತೆ ಬಿಂದುವಿನ ಅಥವಾ ಮುತ್ತಿನ ಆಕಾರವುಳ್ಳದಾಗಿ ಸ್ಥಿರವಾಗಿ (ಚಲಿಸದೆ) ಇರಕೂಡದು. ಉಬ್ಬುತಗ್ಗಾಗಿ, ಮಧ್ಯೆತೆಳುವಾಗಿ ಗೆರೆಗೆರೆಯಾಗಿ, ಅತಿ ಕಾಂತಿಯುಳ್ಳದಾಗಿ ನೋವಿನಿಂದ ಕೂಡಿದ್ದಾಗಿ, ಕೆಂಪುಬಣ್ಣವುಳ್ಳದಾಗಿ ಇರಕೂಡದು.

ಸ್ನಿಗ್ಧಸ್ವಿನ್ನಸ್ಯ ತಸ್ಯಾಥ ಕಾಲೇನಾತ್ಯುಷ್ಣಶೀತಲೇ ।
ಯನ್ತ್ರಿತಸ್ಯೋಪವಿಷ್ಟಸ್ಯ ಸ್ವಾಂ ನಾಸಾಂ ಪಶ್ಯತಃ ಸಮಮ್ ॥೫೭॥
ಮತಿಮಾನ್ ಶುಕ್ಲಭಾಗೌ ದ್ವೌ ಕೃಷ್ಣಾನ್ಮುಕ್ತ್ವಾ ಹ್ಯಪಾಙ್ಗತಃ ।
ಉನ್ಮೀಲ್ಯ ನಯನಂ ಸಮ್ಯಕ್ ಸಿರಾಜಾಲವಿವರ್ಜಿತಃ ॥೫೮॥
ನಾಧೋ ನೋರ್ಧ್ವಂ ಚ ಪಾರ್ಶ್ವಾಭ್ಯಾಂ ಛಿದ್ರೇ ದೈವಕೃತೇ ತತಃ ।
ಶಲಾಕಯಾ ಪ್ರಯತ್ನೇನ ವಿಶ್ವಸ್ತಂ ಯವವಕ್ರಯಾ ॥೫೯॥
ಮಧ್ಯಪ್ರದೇಶಿನ್ಯಙ್ಗುಷ್ಠಸ್ಥಿರಹಸ್ತಗೃಹೀತಯಾ ।
ದಕ್ಷಿಣೇನ ಭಿಷಕ್ ಸವ್ಯಂ ವಿಧ್ಯೇತ್ ಸವ್ಯೇನ ಚೇತರತ್ ॥೬೦॥
ವಾರಿಬಿನ್ದ್ವಾಗಮಃ ಸಮ್ಯಗ್ಭವೇಚ್ಛಬ್ದಸ್ತಥಾವ್ಯಧೇ ।

ಅತಿ ಬೇಸಿಗೆಯೂ, ಅತಿ ಚಳಿಯೂ ಆಗಿರದೆ ಅಂದರೆ ಸಾಧಾರಣವಾದ ಮಾರ್ಗಶೀರ್ಷ ಅಥವಾ ಚೈತ್ರಮಾಸಗಳಲ್ಲಿ ಸ್ನೇಹಪಾನಮಾಡಿಸಿ ಸ್ವೇದಕರ್ಮಮಾಡಿಸಿದ ರೋಗಿಯನ್ನು ಮುಂಡಿಮುಟ್ಟ ಪೀಠದಲ್ಲಿ ಕೂರಿಸಿ ನೇತ್ರವನ್ನು ಮುಚ್ಚಿ, ತನ್ನ ಮೂಗನ್ನೇ ನೋಡುತ್ತಾ ಕುಳಿತಿರುವಾಗ ಬುದ್ಧಿವಂತನಾದ ವೈದ್ಯನು ರೋಗಿಯ ಕಣ್ಣುರೆಪ್ಪೆಗಳನ್ನು ತೆರೆದು ಎರಡು ಬಿಳಿಗುಡ್ಡೆಗಳನ್ನೂ, ಕರಿಗುಡ್ಡೆಗಳ ಕಡೆಗೆ ಬಿಟ್ಟು ಕಡೆಗಣ್ಣಿನ ಕಡೆಯಿಂದ ಸಿರಾಜಾಲವಿಲ್ಲದ ಭಾಗದಲ್ಲಿ ಶಲಾಕೆಯಿಂದ ಚುಚ್ಚಿ ತನ್ನ ಹೆಬ್ಬೆಟ್ಟು ತರ್ಜನಿ ಮಧ್ಯಮಾಂಗುಳಿಗಳಿಂದ ಶಲಾಕೆಯನ್ನು ಬಿಗಿಯಾಗಿ ಹಿಡಿದು ತನ್ನ ಬಲಗೈಯ್ಯಿನಿಂದ ರೋಗಿಯ ಎಡಗಣ್ಣನ್ನೂ ತನ್ನ ಎಡಗೈಯ್ಯಿನಿಂದ ರೋಗಿಯ ಬಲಗಣ್ಣನ್ನೂ ಛೇಧಿಸಬೇಕು. ರೋಗಿಗೆ ದಿಗಿಲಾಗದಂತೆ ಸಮಾಧಾನವಚನಗಳನ್ನು ಆಡುತ್ತಿರಬೇಕು. ರೋಗಿಯ ಕಡೆಗಣ್ಣಿನ ಕಡೆಯಿಂದ ಶಲಾಕೆಯನ್ನು ಕಣ್ಣಿನೊಳಗೆ ನುಗ್ಗಿಸಬೇಕು. ಮೇಲ್ಗಡೆಯಿಂದ ಅಥವಾ ಕೆಳಗಡೆಯಿಂದಲೂ ಕೂಡದು. ಪಕ್ಕೆಗಳಿಂದಲೇ ದೈವಕೃತಛಿದ್ರಾಕಾರದ ಪ್ರದೇಶದಲ್ಲಿ ಶಲಾಕೆಯನ್ನು ನೂಕಬೇಕು. ಸರಿಯಾಗಿ ಶಲಾಕೆಯಿಂದ ಛೇದಿಸಿದರೆ ಸ್ವಲ್ಪಶಬ್ದದೊಡನೆ ನೀರಿನ ಬಿಂದುವೂ ಹೊರಕ್ಕೆ ಬರುತ್ತದೆ.

ಸಂಸಿಚ್ಯ ವಿದ್ಧಮಾತ್ರಂ ತು ಯೋಷಿತ್ ಸ್ತನ್ಯೇನ ಕೋವಿದಃ ॥೬೧॥
ಸ್ಥಿರೇ ದೋಷೇ ಚಲೇ ವಾಪಿ ಸ್ವೇದಯೇದಕ್ಷಿ ಬಾಹ್ಯತಃ ।
ಸಮ್ಯಕ್ ಶಲಾಕಾಂ ಸಂಸ್ಥಾಪ್ಯ ಭಙ್ಗೈರನಿಲನಾಶನೈಃ ॥೬೨॥
ಶಲಾಕಾಗ್ರೇಣ ತು ತತೋ ನಿರ್ಲಿಖೇತ್ ದೃಷ್ಟಿಮಂಡಲಮ್ ।
ವಿಧ್ಯತೋಽನ್ಯಪಾರ್ಶ್ವೇಽಕ್ಷ್ಣಸ್ತಂ ರುಧ್ವಾನಾಸಿಕಾಪುಟಮ್ ॥೬೩॥
ಉಚ್ಛಿಙ್ಘನೇನ ಹರ್ತವ್ಯೋ ದೃಷ್ಟಿಮಂಡಲಜಃ ಕಫಃ ।

ಕೂಡಲೆ ಸ್ತನ್ಯವನ್ನು ಕಣ್ಣಿಗೆ ಹಿಂಡಬೇಕು ; ದೋಷವು ಸ್ಥಿರವಾಗಿರಲಿ ಚಲಿಸುತ್ತಿರಲಿ, ಕಣ್ಣಿನ ಹೊರಭಾಗವನ್ನು ವಾತಹರಗಳಾದ ಹರಳೆಲೆ ಮೊದಲಾದುವುಗಳಿಂದ ಸ್ವೇದಮಾಡಿಸಬೇಕು ; ಶಲಾಕೆಯ ತುದಿಯಿಂದ ದೃಷ್ಟಿಮಂಡಲವನ್ನು ಕೆರೆದು ಕಣ್ಣಿನ ಬೇರೆಭಾಗದ ಮೂಗಿನ ಹೊಳ್ಳೆಯನ್ನು ಮುಚ್ಚಿ (ಶ್ವಾಸನಾಡಿ ವಾಯುವನ್ನು ಸೇದಿಕೊಂಡು) ದೃಷ್ಟಿಮಂಡಲದಲ್ಲಿರುವ ಕಫವನ್ನು ಹೊರಡಿಸಬೇಕು. (ಮೇಲಕ್ಕೆ ಉಸಿರನ್ನು ಎಳೆದರೆ ಕಫವು ಸ್ವಸ್ಥಾನದಿಂದ ಚಲಿಸುತ್ತದೆ. ಆಗ ಶಲಾಕೆಯಿಂದ ಕೆರೆದು ಹೊರಡಿಸಬೇಕು.)

ನಿರಭ್ರ ಇವ ಘರ್ಮಾಂಶುರ್ಯದಾ ದೃಷ್ಟಿಃ ಪ್ರಕಾಶತೇ ॥೬೪॥
ತದಾಸೌ ಲಿಖಿತಾ ಸಮ್ಯಕ್ ಜ್ಞೇಯಾ ಯಾಚಾಪಿ ನಿರ್ವ್ಯಥಾ ।
ಏವಂ ತ್ವಶಕ್ಯೋ ನಿರ್ಹರ್ತುಂ ದೋಷೇ ಪ್ರತ್ಯಾಗತೇಽಪಿ ವಾ ॥೬೫॥
ಸ್ನೇಹಾದ್ಯೈರುಪಪನ್ನಸ್ಯ ವ್ಯಧೋ ಭೂಯೋ ವಿಧೀಯತೇ ।
ತತೋ ದೃಷ್ಟೇಷು ರೂಪೇಷು ಶಲಾಕಾಮಾಹರೇಚ್ಛನೈಃ ॥೬೬॥
ಘೃತೇನಾಭ್ಯಜ್ಯ ನಯನಂ ವಸ್ತ್ರಪಟ್ಟೇನ ವೇಷ್ಟಯೇತ್ ।
ತತೋ ಗೃಹೇ ನಿರಾಬಾಧೇ ಶಯೀತೋತ್ತಾನ ಏವ ಚ ॥೬೭॥
ಉದ್ಗಾರಕಾಸಕ್ಷವಥುಷ್ಠೀವನೋಜ್ಜೃಮ್ಭಣಾನಿ ಚ ।
ತತ್ಕಾಲಂ ನಾಚರೇದೂರ್ಧ್ವಂ ವಿಧಿಶ್ಚ ಸ್ನೇಹಪೀತವತ್ ॥೬೮॥
ತ್ರ್ಯಹಾತ್ ತ್ರ್ಯಹಾಚ್ಚ ಧಾವೇತ ಕಷಾಯೈರನಿಲಾಪಹೈಃ ।
ವಾಯೋರ್ಭಯಾತ್ ತ್ರ್ಯಹಾದೂರ್ಧ್ವಂ ಸ್ವೇದಯೇದಕ್ಷಿ ಪೂರ್ವವತ್ ॥೬೯॥
ದಶಾಹಮೇವಂ ಸಂಯಮ್ಯ ಹಿತಂ ದೃಷ್ಟಿ ಪ್ರಸಾದನಮ್ ।
ಪಶ್ಚಾತ್ಕರ್ಮ ಚ ಸೇವೇತ ಲಘ್ವನ್ನಂ ಚಾಪಿ ಮಾತ್ರಯಾ ॥೭೦॥

ಸರಿಯಾಗಿ ದೃಷ್ಟಿಮಂಡಲದಿಂದ ಕಫಹರಣವಾದ ಬಗ್ಗೆ ಲಕ್ಷಣವು :– ಮೋಡವಿಲ್ಲದಿರುವಾಗ ಸೂರ್ಯನು ಪ್ರಕಾಶಿಸುವಂತೆ ದೃಷ್ಟಿಮಂಡಲದಲ್ಲೂ ಕಫಾದಿ ದೋಷಗಳಿಲ್ಲದೆ ಸ್ವಚ್ಛತೆಯುಂಟಾಗಿ ಸ್ವಲ್ಪವೂ ನೋವಿರದಿದ್ದರೆ ಸರಿಯಾಗಿ ಛೇದನವಾಗಿರುತ್ತೆಂದು ತಿಳಿಯಬೇಕು ; ಈ ರೀತಿಯಾಗಿ ದೋಷಹರಣಮಾಡಲು ಸಾಧ್ಯವಾಗದಿದ್ದರೆ ಅಥವಾ ದೋಷವು ದೃಷ್ಟಿಮಂಡಲದಲ್ಲಿ ಕೂಡಿಕೊಂಡರೆ ರೋಗಿಗೆ ಸ್ನೇಹಸ್ವೇದಾದಿಗಳಿಂದು ಪಚರಿಸಿ ಪುನಃ ಪುನಃ ಶಲಾಕೆಯನ್ನುಪಯೋಗಿಸಿ ದೃಷ್ಟಿಮಂಡಲವನ್ನು ಚುಚ್ಚಿ ದೋಷ

ಹರಣಮಾಡಬೇಕು ; ರೂಪಗಳು (ವಸ್ತು ಸ್ವರೂಪ) ಸ್ಪಷ್ಟವಾಗಿ ಕಾಣಿಸಿದರೆ ಆಗ ಮೆಲ್ಲಗೆ ಶಲಾಕೆಯನ್ನು ಹಿರಿದು ತುಪ್ಪವನ್ನು ಕಣ್ಣಿಗೆ ಬಳಿದು ದಪ್ಪ ವಸ್ತ್ರದ ಪಟ್ಟಿಯನ್ನು ಬಿಗಿದುಕಟ್ಟಬೇಕು ; ಧೂಳು ಹೊಗೆ ಗಾಳಿ ಬಿಸಿಲುಗಳಿಂದ ತೊಂದರೆಯಿಲ್ಲದ ಕೋಣೆಯಲ್ಲಿ ರೋಗಿಯನ್ನು ಅಂಗತ್ತಲಾಗಿ ಮಲಗಿಸಬೇಕು ; ಶಲಾಕೆಯು ಕಣ್ಣಿನೊಳಗೆ ಇರುವಾಗ ತೇಗುವುದು, ಕೆಮ್ಮುವುದು, ಸೀನುವುದು ಕ್ಯಾಕರಿಸುವುದು, ಆಕಳಿಸುವುದು ಇತ್ಯಾದಿ ಕಾರ್ಯಗಳನ್ನು ಮಾಡಬಾರದು ; ಅನಂತರ ಸ್ನೇಹಪಾನಮಾಡಿದವರಿಗೆ ಹೇಳಿದ ನಿಯಮಗಳನ್ನು ಆಚರಿಸಬೇಕು, ಮೂರುದಿನಗಳಿಗೊಂದು ಸಾರಿ ವಾತಹರಗಳಾದ ಹರಳಬೇರು ಮೊದಲಾದುವುಗಳ ಕಷಾಯದಿಂದ ಕಣ್ಣನ್ನು ತೊಳೆಯಬೇಕು. ವಾಯು ಭಯ ನಿವಾರಣೆಗಾಗಿ ಮೂರು ದಿನಗಳಮೇಲೆ ಮೊದಲಿನಂತೆ ಕಣ್ಣಿನ ಹೊರಗೆ ಮೃದು ಸ್ವೇದವನ್ನು ಮಾಡಿಸಬೇಕು. ಈ ರೀತಿಯಾಗಿ ಹತ್ತುದಿನಗಳವರೆಗೆ ಉತ್ತಾನಶಯನಾದಿ ನಿಯಮಗಳನ್ನು ಆಚರಣೆಮಾಡಿ ಅನಂತರ ದೃಷ್ಟಿಪ್ರಸಾದಕರಗಳಾದ ನಸ್ಯ ತರ್ಪಣ, ಶಿರೋಬಸ್ತಿ ಮೊದಲಾದುವುಗಳನ್ನೂ ತಕ್ಕಪ್ರಮಾಣದಿಂದ ಲಘ್ವನ್ನಭೋಜನವನ್ನೂ ಆಚರಣೆಮಾಡಬೇಕು.

ಸಿರಾವ್ಯಧವಿಧೌ ಪೂರ್ವಂ ದರಾ ಯೇ ಚ ವಿವರ್ಜಿತಾಃ ।
ನ ತೇಷಾಂ ನೀಲಿಕಾಂ ವಿಧ್ಯೇದನ್ಯತ್ರಾಭಿಹಿತಾದ್ಭಿಷಕ್ ॥೭೧॥
ಪೂರ್ಯತೇ ಶೋಣಿತೇನಾಕ್ಷಿ ಸಿರಾವೇಧಾದ್ವಿಸರ್ಪತಾ ।
ತತ್ರ ಸ್ತ್ರೀಸ್ತನ್ಯಯಷ್ಟ್ಯಾಹ್ವಪಕ್ವಂ ಸೇಕೇ ಹಿತಂ ಘೃತಮ್ ॥೭೨॥

ಬಾಲರೂ, ವೃದ್ಧರೂ ಮೊದಲಾದ ಸಿರಾವ್ಯಧಕ್ಕೆ ಅರ್ಹರಲ್ಲದವರಿಗೆ ನೀಲಿಕಾ ರೋಗವುಂಟಾದರೆ ಅವರಿಗೆ ದೃಷ್ಟಿಮಂಡಲವನ್ನು ಬಿಟ್ಟು ಬೇರೆ ಕಡೆಯಲ್ಲಿ ಶಲಾಕೆಯಿಂದ ಚುಚ್ಚಬಾರದು, ಏಕೆಂದರೆ ಸಿರಾವೇಧದಿಂದ ರಕ್ತವು ಸ್ರಾವವಾಗಿ ಕಣ್ಣಿಗೆ ತುಂಬಿಬಿಡುತ್ತದೆ ; ಆ ಸ್ಥಿತಿಯಲ್ಲಿ ಸ್ತನ್ಯ ಅತಿಮಧುರಗಳಿಂದ ತಯಾರಿಸಿದ ಘೃತದಿಂದ ಅಕ್ಷಿಸೇಚನೆ ಮಾಡಬೇಕು. (ಸುಖೋಷ್ಣವಾಗಿರುವ ತುಪ್ಪವನ್ನು ಕಣ್ಣಿನ ಮೇಲೆ ನಿಧಾನವಾಗಿ ಧಾರಾಕಾರವಾಗಿ ಸುರಿಯಬೇಕು).

ಅಪಾಙ್ಗಾಸನ್ನವಿದ್ಧೇ ತು ಶೋಫಶೂಲಾಶ್ರುರಕ್ತತಾಃ ।
ತತ್ರೋಪನಾಹಂ ಭ್ರೂಮಧ್ಯೇ ಕುರ್ಯಾಚ್ಚೋಷ್ಣಾಜ್ಯಸೇಚನಮ್ ॥೭೩॥
ವ್ಯಧೇನಾಸನ್ನಕೃಷ್ಣೇನ ಭಾಗಃ ಕೃಷ್ಣಶ್ಚ ಪೀಡ್ಯತೇ ।
ತತ್ರಾಧಃ ಶೋಧನಂ ಸೇಕಃ ಸರ್ಪಿಷಾ ರಕ್ತಮೋಕ್ಷಣಮ್ ॥೭೪॥
ಅಥಾಪ್ಯುಪರಿ ವಿದ್ಧೇ ತು ಕಷ್ಟಾ ರುಕ್ ಸಂಪ್ರವರ್ತತೇ ।
ತತ್ರ ಕೋಷ್ಣೇನ ಹವಿಷಾ ಪರಿಷೇಕಃ ಪ್ರಶಸ್ಯತೇ ॥೭೫॥
ಶೂಲಾಶ್ರುರಾಗಸ್ತ್ವತ್ಯರ್ಥಮಧೋವಿದ್ಧೇ ಭವನ್ತಿ ಹಿ ।
ವಿದಧೀತ ಭಿಷಗ್ಧೀಮಾನ್ ತತ್ರ ಪೂರ್ವ ಚಿಕಿತ್ಸಿತಮ್ ॥೭೬॥

ರಾಗಾಶ್ರುವೇದನಾಸ್ತಮ್ಭಹರ್ಷಾಶ್ಚಾತಿ ವಿಘಟ್ಟಿತೇ ।
ಸ್ನೇಹಸ್ವೇದೌ ಹಿತಸ್ತತ್ರ ಹಿತಂ ವಾಪ್ಯನುವಾಸನಮ್ ॥೭೭॥
ದೋಷಸ್ತ್ವಧೋಽಪಕೃಷ್ಟೋಽಪಿ ತರುಣಃ ಪುನರೂರ್ಧ್ವಗಃ ।
ಕುರ್ಯಾಚ್ಛುಕ್ಲಾರುಣಂ ನೇತ್ರಂ ತೀವ್ರರುಙ್ನಷ್ಟದರ್ಶನಮ್ ॥೭೮॥

ಕಡೆಗಣ್ಣಿನ ಹತ್ತಿರದಲ್ಲಿ ಶಲಾಕೆಯಿಂದ ಚುಚ್ಚಿದರೆ ಊದು, ನೋವು ಕಣ್ಣೀರು, ರಕ್ತಸ್ರಾವ ಇವು ಉಂಟಾಗುತ್ತವೆ. ಸುಖವಾಗುವಂತೆ ಕಣ್ಣಿಗೆ ಉಪನಾಹಸ್ವೇದವನ್ನೂ ಹುಬ್ಬುಗಳ ಮಧ್ಯೆ ಬಿಸಿಯಾದ ತುಪ್ಪದಿಂದ ಸೇಚನೆಯನ್ನೂ ಮಾಡಬೇಕು. ಕರೀಗುಡ್ಡೆಯ ಹತ್ತಿರ ಚುಚ್ಚಿದರೆ ಕರಿಯಗುಡ್ಡೆಗೆ ನೋವುಂಟಾಗುತ್ತದೆ. ಆಗ ವಿರೇಚನೌಷಧದಿಂದ ಶೋಧನೆ ಮಾಡಿಸಿ ತುಪ್ಪದಿಂದ ಸೇಚನೆಯನ್ನೂ, ರಕ್ತಮೋಕ್ಷಣವನ್ನೂ ಮಾಡಿಸಬೇಕು. ಮೇಲ್ಭಾಗದಲ್ಲಿ ವ್ಯಧವಾಗಿ ಅತಿ ಕಷ್ಟವಾದ ನೋವುಂಟಾದರೆ ಆಗ ಸುಖೋಷ್ಣವಾದ ತುಪ್ಪದಿಂದ ಸೇಚನೆಮಾಡಬೇಕು. ಕರಿಗುಡ್ಡೆಯ ಕೆಳಗೆ ಶಲಾಕೆಯಿಂದ ಚುಚ್ಚಿದರೆ ಅಧಿಕಶೂಲೆಯೂ, ಕಣ್ಣೀರು ಸೋರುವುದೂ ಕೆಂಪುಬಣ್ಣವೂ ಉಂಟಾಗುತ್ತದೆ. ಆಗ ಬುದ್ಧಿಶಾಲಿಯಾದ ವೈದ್ಯನು ಹಿಂದಿನ ಚಿಕಿತ್ಸೆಯನ್ನೇ ಮಾಡಬೇಕು. ಅಧಃಶೋಧನಾದಿಗಳನ್ನಾಗಲೀ ಸ್ತನ್ಯಯಷ್ಟ್ಯಾಹ್ವಾದಿಸೇಚನೆಗಳನ್ನಾಗಲೀ ಮಾಡಬೇಕು. ಅತಿಯಾಗಿ ಚುಚ್ಚಿದರೆ ಕಣ್ಣು ಅತಿಯಾಗಿ ಕೆಂಪೇರುವುದು, ಕಣ್ಣೀರು ಸೋರುವುದು, ನೋವೂ, ಕಣ್ಣುಬಿಗಿದು ಚಲಿಸದೇ ನಿಲ್ಲುವುದು, ಕಣ್ಣು ಜುಮುಗುಟ್ಟುವುದೂ ಉಂಟಾಗುತ್ತವೆ. ಸ್ನೇಹಸ್ವೇದಗಳನ್ನು ಮಾಡಿಸಿ ಅನುವಾಸನಬಸ್ತಿಯನ್ನು ಪ್ರಯೋಗಿಸಿದರೆ ಹಿತವಾಗುತ್ತದೆ ; ದೃಷ್ಟಿನಾಶವಾಗುವುದಕ್ಕೆ ಮುಂಚೆ ದೋಷವನ್ನು ಕೆಳಗಡೆಗೆ ತಂದಾಗ್ಯೂ ಪುನಃ ಕಣ್ಣಿನ ಮೇಲ್ಭಾಗದಲ್ಲಿ ಕೆಂಪು ಬಿಳುಪು ಬಣ್ಣವನ್ನೂ ತೀವ್ರವೇದನೆಯನ್ನೂ ದೃಷ್ಟಿನಾಶವನ್ನೂ ಉಂಟುಮಾಡುತ್ತದೆ.

ಮಧುರೈಸ್ತತ್ರ ಸಿದ್ಧೇನ ಘೃತೇನಾಕ್ಷ್ಣಃ ಪ್ರಸೇಚನಮ್ ।
ಶಿರೋಬಸ್ತಿಂ ಚ ತೇನೈವ ದದ್ಯಾನ್ಮಾಂಸೈಶ್ಚ ಭೋಜನಮ್ ॥೭೯॥
ದೋಷಸ್ತು ಸಂಜಾತಬಲೋ ಘನಃ ಸಮ್ಪೂರ್ಣಮಣ್ಡಲಃ ।
ಪ್ರಾಪ್ಯ ನಶ್ಯೇಚ್ಛಲಾಕಾಯಾಂ ತನ್ವಭ್ರಮಿವ ಮಾರುತಮ್ ॥೮೦॥
ಮೂರ್ಧಾಭಿಘಾತ ವ್ಯಾಯಾಮವ್ಯವಾಯವಮಿಮೂರ್ಛನೈಃ ।
ದೋಷಃ ಪ್ರತ್ಯೇತಿ ಕೋಪಾಚ್ಚ ವಿದ್ಧೋಽತಿ ತರುಣಶ್ಚ ಯಃ ॥೮೧॥

ಈ ಸ್ಥಿತಿಯಲ್ಲಿ ಕಾಕೋಳ್ಯಾದಿಮಧುರೌಷಧಗಣದೊಡನೆ ಸಿದ್ಧವಾದ ಘೃತದಿಂದ ಅಕ್ಷಿಸೇಚನೆಯನ್ನೂ, ಶಿರೋಬಸ್ತಿಯನ್ನೂ, ಮಾಂಸಭೋಜನವನ್ನೂ ಮಾಡಬೇಕು.

ಶಸ್ತ್ರಕರ್ಮಕ್ಕೆ ಯೋಗ್ಯವಾದ ಲಿಂಗನಾಶ ಲಕ್ಷಣವು :—ದೋಷವು ಬಲಾಧಿಕ್ಯದಿಂದ ಗಟ್ಟಿಯಾಗಿ ಪೂರ್ಣಮಂಡಲಾಕಾರವಾಗಿ ಪರಿಣಮಿಸಿ ಶಲಾಕೆಯಿಂದ ಕೆರೆಯಲ್ಪಟ್ಟು ಗಾಳಿಯಿಂದ ಸ್ವಲ್ಪ ಮೋಡಗಳು ಚದುರುವಂತೆ ಶೀಘ್ರದಲ್ಲೇ ನಾಶ

ವಾಗುತ್ತದೆ. ತಲೆಗೆ ಪೆಟ್ಟು ಬೀಳುವುದು, ವ್ಯಾಯಾಮ, ಸ್ತ್ರೀಸಂಗ, ವಮನ, ಮೂರ್ಛೆಗಳಿಂದ ಲಿಂಗನಾಶಾವಸ್ಥೆಗೆ ಬರುವ ಮೊದಲು ಶಲಾಕೆಯಿಂದ ದೋಷ ನಿರ್ಲೇಖನ ಮಾಡಿದ್ದರೂ ಪುನಃ ಪ್ರಕೋಪಗೊಳ್ಳುತ್ತದೆ.

ಶಲಾಕಾ ಕರ್ಕಶಾ ಶೂಲಂ ಖರಾ ದೋಷ ಪರಿಪ್ಲುತಿಮ್ ।
ವ್ರಣಂ ವಿಶಾಲಂ ಸ್ಥೂಲಾಗ್ರಂ ತೀಕ್ಷ್ಣಾ ಹಿಂಸ್ಯಾದನೇಕಧಾ ॥೮೨॥
ಜಲಾಸ್ರಾವಂ ತು ವಿಷಮಾ ಕ್ರಿಯಸಙ್ಗಮಥಾಸ್ಥಿರಾ ।
ಕರೋತಿ ವರ್ಜಿತಾ ದೋಷೈಸ್ತಸ್ಮಾದೇಭಿರ್ಹಿತಾ ಭವೇತ್ ॥೮೩॥

ಶಲಾಕೆಯ ದೋಷಗಳು :-ಶಲಾಕೆಯು ಕರ್ಕಶವಾಗಿದ್ದರೆ (ತುದಿ ಮೊಂಡಾಗಿದ್ದರೆ) ಶೂಲವನ್ನೂ ; ತರಿ ತರಿಯಾಗಿದ್ದರೆ ದೋಷವನ್ನು ಜಿನುಗುವಂತೆಯೂ, ತುದಿ ದಪ್ಪವಾಗಿದ್ದರೆ ವ್ರಣವನ್ನು ಆಗಲವಾಗುವಂತೆಯೂ, ಮೊನಚಾಗಿದ್ದರೆ ನಾನಾ ವಿಧದ ವ್ಯಥೆಯನ್ನೂ ; ಸೊಟ್ಟಾಗಿದ್ದರೆ ಜಲಸ್ರಾವವನ್ನೂ, ಅಲ್ಲಾಡುತ್ತಿದ್ದರೆ ಕೆಲಸಕ್ಕೆ ಅಡ್ಡಿಯನ್ನೂ ಉಂಟುಮಾಡುತ್ತದೆ ; ಆದಕಾರಣ ಈ ರೀತಿಯ ದೋಷಗಳಿಲ್ಲದ ಶಲಾಕೆಯಿಂದ ನಿಷೇಧ ಮಾಡಬೇಕು.

ಅಷ್ಟಾಙ್ಗುಲಾಯತಾ ಮಧ್ಯೇ ಸೂತ್ರೇಣಪರಿವೇಷ್ಟಿತಾ ।
ಅಙ್ಗುಷ್ಠಪರ್ವಸಮಿತಾ ವಕ್ತ್ರಯೋರ್ಮುಕುಳಾಕೃತಿಃ ॥೮೪॥
ತಾಮ್ರಾಯಸೀ ಶಾತಕುಮ್ಭೀ ಶಲಾಕಾ ಸ್ಯಾದನಿನ್ದಿತಾ ।

ಯೋಗ್ಯ ಶಲಾಕೆಗಳ ಲಕ್ಷಣ :—೧೮ ಅಂಗುಳಿಗಳಷ್ಟು ಉದ್ದವಿರುವ, ಮಧ್ಯದಲ್ಲಿ ಧಾರವನ್ನು ಬಿಗಿದಿರುವ, ಹೆಬ್ಬೆಟ್ಟಿನ ಮಧ್ಯದ ಗಿಣ್ಣಿನಷ್ಟು ದಪ್ಪವಿರುವ ; ತುದಿಗಳೆರಡೂ ಹೂವಿನ ಮೊಗ್ಗಿನಂತಿರುವ ; ತಾಮ್ರ ಕಬ್ಬಿಣ ಚಿನ್ನಗಳಿಂದ ಮಾಡಿದ್ದರೆ ದೋಷರಹಿತಶಲಾಕೆಯೆಂದು ತಿಳಿಯಬೇಕು.

ರಾಗಃ ಶೋಫೋಽರ್ಬುದಂ ಚೋಷೋ ಬುದ್ಬುದಂ ಶೂಕರಾಕ್ಷಿತಾ ॥೮೫॥
ಅಧಿಮನ್ಥಾದಯಶ್ಚಾನ್ಯೇ ರೋಗಾಃ ಸ್ಯುರ್ವ್ಯಧ ದೋಷಜಾಃ ।
ಅಹಿತಾಚಾರತೋ ವಾಪಿ ಯಥಾಸ್ವಂ ತಾನುಪಾಚರೇತ್ ॥೮೬॥

ದುಷ್ಟವ್ಯಥೆಯಿಂದಲೂ ದುರಾಹಾರಾಚಾರಗಳಿಂದಲೂ ಉಂಟಾಗುವ ಬಾಧಕಗಳು :—ಕಣ್ಣು ಕೆಂಪಾಗುವುದು, ಊದುವುದು. ದುರ್ಮಾಂಸ ಬೆಳೆಯುವುದು, ಉರಿಯುವುದು ಗುಳ್ಳೆಗಳೇಳುವುದು. ಹಂದಿಕಣ್ಣು (ಕೆಳಗಡೆ ನೋಟ) ಅಧಿಮಂಥ ಮೊದಲಾದ ಇತರ ನೇತ್ರಗಳು ದೃಷ್ಟಿಯನ್ನು ಲಿಂಗನಾಶವನ್ನು ಸರಿಯಾಗಿ ಶಲಾಕೆಯಿಂದ ವೇಧ ಮಾಡದಿದ್ದರೆ ಅಥವಾ ಆಹಾರಾಚಾರಗಳಲ್ಲಿ ಕ್ರಮ ತಪ್ಪಿದರೆ ಉಂಟಾಗುತ್ತವೆಂದು ತಿಳಿಯಬೇಕು. ಅವುಗಳಿಗೆ ದೋಷಾನುಸಾರವಾಗಿ ಚಿಕಿತ್ಸೆ ಮಾಡಬೇಕು.

ರುಜಾಯಾಮಕ್ಷಿರಾಗೇ ವಾ ಯೋಗಾ್ ಭೂಯೋ ನಿಬೋಧ ಮೇ
ಗೈರಿಕಂ ಸಾರಿವಾ ದೂರ್ವಾ ಯವಪಿಷ್ಟಂ ಘೃತಂ ಪಯಃ ||೮೭||
ಸುಖಾಲೇಪಃ ಪ್ರಯೋಜ್ಯೋऽಯಂ ವೇದನಾ ರಾಗಶಾನ್ತಯೇ
ಮೃದುಭ್ರಷ್ಟೈಸ್ತಿಲೈರ್ವಾಪಿ ಸಿದ್ಧಾರ್ಥಕ ಸಮಾಯುತೈಃ ||೮೮||
ಮಾತುಲುಙ್ಗರಸೋಪೇತೈಃ ಸುಖಾಲೇಪಃ ಪ್ರಶಸ್ಯತೇ । ("ತದರ್ಥಕೃತ್")
ಪಯಸ್ಯಾಸಾರಿವಾಪತ್ರಮಞ್ಜಿಷ್ಠಾಮಧುಕೈರಪಿ ||೮೯||
ಅಜಾಕ್ಷೀರಾನ್ವಿತೈರ್ಲೇಪಃ ಸುಖೋಷ್ಣಃ ಪಥ್ಯ ಉಚ್ಯತೇ ।
ದಾರುಪದ್ಮಕಶುಂಠೀಭಿರೇವಮೇವ ಕೃತೋऽಪಿ ವಾ ||೯೦||
ದ್ರಾಕ್ಷಾ ಮಧುಕಕುಷ್ಠೈರ್ವಾ ತದ್ವತ್ ಸೈಂಧವ ಸಂಯುತೈಃ ।
ರೋಧ್ರಸೈನ್ಧವಮೃದ್ವೀಕಾಮಧುಕೈರ್ವಾಪ್ಯಜಾಪಯಃ ||೯೧||
ಶೃತಂ ಸೇಕೇ ಪ್ರಯೋಕ್ತವ್ಯಂ ರುಜಾರಾಗನಿವಾರಣಮ್ ।
ಮಧುಕೋತ್ಪಲಕುಷ್ಠೈರ್ವಾ ("ದ್ರಾಕ್ಷಾಕ್ಷಾಸಿತಾಯುತೈಃ") ತದ್ವತ್ಸೈನ್ಧವ ಸಂಯುತೈಃ ||೯೨||
ಸಸೈನ್ಧವೈಃ ಶೃತಂ ಕ್ಷೀರಂ ರುಜಾರಾಗನಿಬರ್ಹಣಮ್ ।
ಶತಾವರೀಪೃಥಕ್ಪರ್ಣೀಮುಸ್ತಾಮಲಕ ಪದ್ಮಕೈಃ
ಸಾಜಕ್ಷೀರೈಃ ಶೃತಂ ಸರ್ಪಿರ್ದಾಹಶೂಲ ನಿಬರ್ಹಣಮ್ ||೯೩||
ವಾತಘ್ನಸಿದ್ಧೇ ಪಯಸಿ ಸಿದ್ಧಂ ಸರ್ಪಿಶ್ಚತುರ್ಗುಣೇ ।
ಕಾಕೋಲ್ಯಾದಿ ಪ್ರತೀವಾಪಂ ತದ್ಯುಞ್ಜ್ಯಾನ್ ಸರ್ವಕರ್ಮಸು ||೯೪||
ಶಾಮ್ಯತ್ಯೇವಂ ನ ಚೇಚ್ಛೂಲಂ ಸ್ನಿಗ್ಧಸ್ವಿನ್ನಸ್ಯ ಮೋಕ್ಷಯೇತ್
ತತಃ ಸಿರಾಂ ದಹೇದ್ವಾಪಿ ಮತಿಮಾನ್ ಕೀರ್ತಿತಂ ಯಥಾ ||೯೫||

ಕಣ್ಣು ನೋವಿಗೂ ಕಣ್ಣು ಕೆಂಪಿಗೂ ಪುನಃ ಔಷಧ ಯೋಗಗಳನ್ನು ಹೇಳುತ್ತೇನೆ ಕೇಳು. ಕಾವಿ ಸೊಗದೆಬೇರು ಗರಿಕೆ ಯವೆಯಹಿಟ್ಟು ತುಪ್ಪ ಹಾಲು ಇವೆಲ್ಲವನ್ನೂ ಬಿಸಿ ಮಾಡಿ ಸುಖೋಷ್ಣವಾಗಿ ಕಣ್ಣಿಗೆ ಲೇಪಿಸಿದರೆ ನೋವೂ ಕೆಂಪೂ ಶಮನವಾಗುತ್ತವೆ ; ಸಾಸಿವೆಯನ್ನು ಮಿಶ್ರಮಾಡಿದ ಎಳ್ಳನ್ನು ಸೀದು ಹೋಗದಂತೆ ಮೆಲ್ಲಗೆ ಹುರಿದು ಮಾದಳ ರಸವನ್ನು ಸೇರಿಸಿ ಅರೆದು ಸುಖೋಷ್ಣಮಾಡಿ ಲೇಪಿಸುವುದು ಪ್ರಶಸ್ತವಾದದ್ದು ; ಅರ್ಕಪುಷ್ಪಿ (ಹಾಲುನೆಲಗುಂಬಳಗೆಡ್ಡೆ ಎಂದು ಕೆಲವರಮತ) ಸೊಗದೇಬೇರು ಲವಂಗ ಪತ್ರೆ ಮಂಜಿಷ್ಠೆ ಅತಿಮಧುರಗಳನ್ನು ಆಡಿನ ಹಾಲಿನಲ್ಲಿ ಅರೆದು ಸುಖೋಷ್ಣಮಾಡಿ ಲೇಪಿಸಿದರೂ ಹಿತಕರವು ; ದೇವದಾರು, ಪದ್ಮಕ, ಶುಂಠಿ, ಇವುಗಳನ್ನು ಆಡಿನ ಹಾಲಿನಲ್ಲಿ ಅರೆದು ಸುಖೋಷ್ಣ ಮಾಡಿ ಲೇಪಿಸಿದರೂ ಹಿತಕರವು ; ದ್ರಾಕ್ಷಿ, ಅತಿಮಧುರ ಚಂಗಲ್ ಕೋಷ್ಠಗಳನ್ನು ಆಡಿನ ಹಾಲಿನಲ್ಲರೆದು ಸೈಂಧವ ಮಿಶ್ರಮಾಡಿ ಸುಖೋಷ್ಣವಾಗಿ ಲೇಪಿಸಿದರೂ,

ರೋಧ್ರ ಸೈಂಧವ ದ್ರಾಕ್ಷಿ ಅತಿಮಧುರಗಳನ್ನು ಆಡಿನ ಹಾಲಿನಲ್ಲಿ ಸುಖೋಷ್ಣವಾಗಿ ಸೇಚನೆ ಮಾಡಿದರೂ ನೋವೂ, ಕೆಂಪು ಬಣ್ಣವೂ ನಿವಾರಣೆಯಾಗುತ್ತವೆ ; ಆಷಾಢಿ ಬೇರು ಒಂದೆಲೆಹೊನ್ನೆ ಕೊನ್ನಾರಿ ನೆಲ್ಲೀಕಾಯಿ ಪದ್ಮಕಗಳೊಡನೆ ಹಾಲನ್ನು ಕುದಿಸಿ ಸೈಂಧವ ಮಿಶ್ರಮಾಡಿ ನೇತ್ರಸೇಚನೆ ಮಾಡಿದರೆ ನೋವೂ ಕೆಂಪುಬಣ್ಣವೂ ನಿವಾಳಣೆ ಯಾಗುತ್ತವೆ ; ಆಡಿನ ಹಾಲಿನಲ್ಲಿ ಕುದಿಸಿದ ತುಪ್ಪವನ್ನು ಸುಖೋಷ್ಣವಾಗಿ ಕಣ್ಣಿಗೆ ಸೇಚನೆ ಮಾಡಿದರೆ ಉರಿತ ಶೂಲೆಗಳು ನಿವಾರಣೆಯಾಗುತ್ತವೆ ; ಭದ್ರದಾರ್ವಾದಿಗಣ ದ್ರವ್ಯಗಳೊಡನೆ ೧೬ ರಷ್ಟು ಹಾಲನ್ನೂ ೪ ರಷ್ಟು ತುಪ್ಪವನ್ನೂ ೧ ಪಾಲು ಕಾಕೋ ಳಾದಿದ್ರವ್ಯ ಕಲ್ಕವನ್ನು ಸೇರಿಸಿ ತಯಾರಿಸಿದ ತುಪ್ಪವನ್ನು ನಸ್ಯ ಲೇಪಾದಿ ಸಕಲ ವಿಧಾನಗಳಿಂದಲೂ ಉಪಯೋಗಿಸಬಹುದು ; ಈ ರೀತಿ ಉಪಚಾರ ಮಾಡಿದರೂ ಕಣ್ಣಿನ ಶೂಲೆಯು ಶಮನವಾಗದಿದ್ದರೆ ಬುದ್ಧಿವಂತನಾದ ವೈದ್ಯನು ರೋಗಿಗೆ ಸ್ನೇಹಸ್ವೇದ ಗಳಿಂದುಪಚರಿಸಿ ಸಿರಾಮೋಕ್ಷಮಾಡಿ ದುಷ್ಟರಕ್ತಹರಣವನ್ನು ಮಾಡಬೇಕು ; ಮತ್ತು ಹುಬ್ಬುಗಳಲ್ಲೂ ಹಣೆಯಲ್ಲೂ ಶಂಖದೇಶಗಳಲ್ಲೂ ಉಬ್ಬಿದ ಸಿರೆಯನ್ನು ಸುಡಬೇಕು.

ದೃಷ್ಟೇರತಃ ಪ್ರಸಾದಾರ್ಥಮಞ್ಜನೇ ಶೃಣು ಮೇ ಶುಭೇ
ಮೇಷಶೃಙ್ಗಸ್ಯ ಪುಷ್ಪಾಣಿ ಶಿರೀಷಧವಯೋರಪಿ ||೯೬||
ಸುಮನಾಯಾಶ್ಚ ಪುಷ್ಪಾಣಿ ಮುಕ್ತಾವೈಡೂರ್ಯಮೇವ ಚ
ಅಜಾಕ್ಷೀರೇಣ ಸಂಪಿಷ್ಯ ತಾಮ್ರೇ ಸಪ್ತಾಹಮಾವಪೇತ್ ||೯೭||
ಪ್ರವಿಧಾಯ ಚ ತದ್ವರ್ತೀರ್ಯೋಜಯೇಚ್ಚಾಞ್ಜನೇ ಭಿಷಕ್
ಸ್ರೋತೋಜಂ ವಿದ್ರುಮಂ ಫೇನಂ ಸಾಗರಸ್ಯ ಮನಃ ಶಿಲಾಮ್ ||೯೮||
ಮರಿಚಾನಿ ಚ ತದ್ವರ್ತೀಃ ಕಾರಯೇಚ್ಚಾಪಿ ಪೂರ್ವವತ್
ದೃಷ್ಟಿಸ್ಥೈರ್ಯಾರ್ಥಮೇತತ್ತು ವಿದಧ್ಯಾನಞ್ಜನೇ ಹಿತಮ್ ||೯೯||
ಭೂಯೋ ವಕ್ಷ್ಯಾಮಿ ಮುಖ್ಯಾನಿ ವಿಸ್ತರೇಞ್ಜನಾನಿ ಚ
ಕಲ್ಪೇ ನಾನಾಪ್ರಕಾರಾಣಿ ತಾನ್ಯಪೀಹಪ್ರಯೋಜಯೇತ್ ||೧೦೦||

ಕಣ್ಣಿನದೋಷ ನಿವಾರಣೆಯಾಗಿ ಕಣ್ಣುಶುದ್ಧಿಯಾಗಲು ಎರಡುವಿಧಗಳ ಅಂಜನ ಗಳನ್ನು ಹೇಳುತ್ತೇನೆ ಕೇಳು :-೧ ನೇಯದು :—ಮೇಷಶೃಂಗೀಯಹೂವು (ಪುತ್ರ ಜೀವಿ ಗಿಡದಂತಹ ಮರವೆಂದು ಕೆಲವರೂ, ಗೆರ್ಶೆಹಂಬು ಎಂದು ಕೆಲವರೂ ಹೇಳುತ್ತಾರೆ.) ಬಾಗೆಯಹೂವು, ದಿಂಡಲುಮರದಹೂವು, ಜಾಜಿಯಹೂವು, ಮುತ್ತು, ವೈಡೂರ್ಯ (ಕೆಂಪು) ಇವುಗಳನ್ನು ಆಡಿನ ಹಾಲಿನಲ್ಲಿ ನುಣ್ಣಗೆ ಅರೆದು ತಾಮ್ರದ ಪಾತ್ರೆಯಲ್ಲಿ ೭ ದಿನಗಳವರೆಗೂ ಮುಚ್ಚಿಟ್ಟು ಅನಂತರ ಅವುಗಳಿಂದ ವರ್ತಿಗಳನ್ನೂ ಮಾಡಿಟ್ಟು ಪ್ರಯೋ ಗಿಸಬೇಕು. ೨ ನೇಯದು :-ಸ್ರೋತೋಂಜನವು (ಇದಕ್ಕೆ ಸೌವೀರಾಂಜನವೆಂದೂ ಹೆಸರು ; ಯಮುನಾನದಿಯಲ್ಲಿ ಹುರುಳಿಕಾಳಿನಂತೆ ಆಕಾರವುಳ್ಳ ಒಂದು ವಿಧ ಪಾಷಾಣ, ಕಲ್ಲಿನ ಭೇದಕ್ಕೆ ಸೌವೀರಾಂಜನವೆಂದು ಹೆಸರು.) ಹವಳ, ಸಮುದ್ರದ ನೊರೆ, ಮಣ

ಶಿಲೆ, ಮೆಣಸು ಇವುಗಳನ್ನು ಹಿಂದಿನಂತೆಯೇ ಆಡಿನ ಹಾಲಿನಲ್ಲಿ ಅರೆದು ೭ ದಿನಗಳವರೆಗೆ ತಾಮ್ರದ ಪಾತ್ರೆಯಲ್ಲಿ ಮುಚ್ಚಿಟ್ಟು ಅನಂತರ ಬತ್ತಿಗಳನ್ನಾಗಿಟ್ಟುಕೊಂಡು ಅಂಜನ ಪ್ರಯೋಗಮಾಡಬೇಕು. ಇನ್ನೂ ಮುಖ್ಯಗಳಾದ ಅನೇಕ ಪ್ರಕಾರಗಳಾದ ಅಂಜನಗಳನ್ನು ಕ್ರಿಯಾಕಲ್ಪಾಧ್ಯಾಯದಲ್ಲಿ ವಿಸ್ತಾರವಾಗಿ ಹೇಳುತ್ತೇವೆ ; ಅವುಗಳನ್ನೂ ಪ್ರಯೋಗ ಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ದೃಷ್ಟಿಗತ ರೋಗ ಪ್ರತಿಷೇಧ ನಾಮಕ ಸಪ್ತದಶಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ

ಅಷ್ಟಾದಶೋಽಧ್ಯಾಯಃ

ಅಥಾತಃ ಕ್ರಿಯಾಕಲ್ಪಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಪುಟಪಾಕಾದಿಗಳ ಕ್ರಿಯಾಕಲ್ಪನವನ್ನು ವಿವರಿಸುತ್ತೇವೆ.

ಸರ್ವಶಾಸ್ತ್ರಾರ್ಥತತ್ವಜ್ಞಸ್ತಪೋದೃಷ್ಟಿರುದಾರಧೀಃ
ವೈಶ್ವಾಮಿತ್ರಂ ಶಶಿಸಾಥ ಶಿಷ್ಯಂ ಕಾಶೀಪತಿರ್ಮುನಿಃ ||೩||
ತರ್ಪಣಂ ಪುಟಪಾಕಶ್ಚ ಸೇಕ ಆಶ್ಚ್ಯೋತನಾಞ್ಜನೇ
ತತ್ರ ತತ್ರೋಪದಿಷ್ಟಾನಿ ತೇಷಾಂ ವ್ಯಾಸಂ ನಿಬೋಧ ಮೇ ||೪||

ಸರ್ವಶಾಸ್ತ್ರಾರ್ಥ ತತ್ವಗಳನ್ನೂ ತಿಳಿದ ತಪೋಜ್ಞಾನ ಮತ್ತು ಮಹಾಪ್ರಜ್ಞೆಯುಳ್ಳ ಕಾಶಿರಾಜನೂ ರಾಜರ್ಷಿಯೂ ಆದ ಶ್ರೀ ಧನ್ವಂತರಿಯು ವಿಶ್ವಾಮಿತ್ರರ ಮಗನಾಗಿ ತನ್ನ ಪ್ರಿಯಶಿಷ್ಯನಾದ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಹೇಳುತ್ತೇವೆ. ಹಿಂದೆ ಸಂಕ್ಷೇಪವಾಗಿ ಹೇಳಿರುವ ತರ್ಪಣ, ಪುಟಪಾಕ, ಸೇಕ, ಆಶ್ಚ್ಯೋತನ, ಅಂಜನ ವಿಧಾನಗಳನ್ನು ಈ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳುತ್ತೇವೆ.

ಸಂಶುದ್ಧದೇಹಶಿರಸೋ ಜೀರ್ಣಾನ್ನಸ್ಯ ಶುಭೇ ದಿನೇ ।
ಪೂರ್ವಾಹ್ಣೇ ಚಾಪರಾಹ್ಣೇ ವಾ ಕಾರ್ಯಮಕ್ಷ್ಣೋಸ್ತು ತರ್ಪಣಮ್ ||೫||
ವಾತಾತಪರಜೋಹೀನೇ ವೇಶ್ಮನ್ಯುತ್ತಾನಶಾಯಿನಃ ।
ಆಧಾರೌ ಮಾಷಚೂರ್ಣೇನ ಕ್ಲಿನ್ನೇನ ಪರಿಮಣ್ಡಲೌ ||೬||
ಸಮೌ ದೃಢಾವಸಂಬಾಧೌ ಕರ್ತವ್ಯೌ ನೇತ್ರಕೋಶಯೋಃ ।
ಪೂರಯೇತ್ ಘೃತಮಂಡಸ್ಯ ವಿಲೀನಸ್ಯ ಸುಖೋದಕೈಃ ||೭||
ಆಪಕ್ಷ್ಮಾಗ್ರಾತ್ತತಃ ಸ್ಥಾಪ್ಯಂ ಪಞ್ಚತದ್ವಾಕ್ಶತಾನಿ ತು ।
ಸ್ವಸ್ಥೇ ಕಫೇಷಟ್ ಪಿತ್ತೇಽಷ್ಟೌ ದಶವಾತೇ ತದುತ್ತಮುಮ್ ||೮||
ರೋಗಸ್ಥಾನವಿಶೇಷೇಣ ಕೇಚಿತ್ಕಾಲಂ ಪ್ರಚಕ್ಷತೇ ।
ಯಥಾಕ್ರಮೋಪದಿಷ್ಟೇಷು ತ್ರೀಣ್ಯೇಕಂ ಪಞ್ಚ ಸಪ್ತ ಚ ||೯||
ದಶ ದೃಷ್ಟ್ಯಾಮಥಾಷ್ಟೌ ಚ ವಾಕ್ಶತಾನಿ ವಿಭಾವಯೇತ್ ।
ತತಶ್ಚಾಪಾಙ್ಗತಃ ಸ್ನೇಹಂ ಸ್ರಾವಯಿತ್ವಾಕ್ಷಿ ಶೋಧಯೇತ್ ||೧೦||
ಸ್ವಿನ್ನೇನ ಯವಪಿಷ್ಟೇನ ಸ್ನೇಹವೀರ್ಯೇರಿತಂ ತತಃ ।
ಯಥಾಸ್ವಂ ಧೂಮಪಾನೇನ ಕಫಮಸ್ಯ ವಿಶೋಧಯೇತ್ ||೧೧||
ಏಕಾಹಂ ವಾ ತ್ರ್ಯಹಂ ವಾಪಿ ಪಞ್ಚಾಹಂ ಚೇಷ್ಯತೇ ಪರಮ್ ।

ಸಿರಾಮೋಕ್ಷಣ, ವಿರೇಚನ, ನಿರೂಹ, ಶಿರೋವಿರೇಚನಗಳಿಂದ ಶರೀರ ಮತ್ತು ಶಿರಸ್ಸುಗಳನ್ನು ಶುದ್ಧಿಮಾಡಿಕೊಂಡಿರುವ ನೇತ್ರರೋಗಪೀಡಿತನಿಗೆ ತಿಂದ ಆಹಾರವು ಜೀರ್ಣಿಸಿರುವಾಗ ಒಂದು ಶುಭದಿವಸ ಪ್ರಾತಃಕಾಲದಲ್ಲಾಗಲೀ ಮಧ್ಯಾಹ್ನದ ವೇಳೆಯಾಗಲೀ ಕಣ್ಣುಗಳಿಗೆ ತರ್ಪಣ ವಿಧಾನವನ್ನು ಮಾಡಬೇಕು ; ಗಾಳಿ, ಬಿಸಲು, ಧೂಳುಗಳಿಲ್ಲದ ಶುದ್ಧವಾದ ಕೊಠಡಿಯಲ್ಲಿ ರೋಗಿಯನ್ನು ಅಂಗತ್ತಲಾಗಿ ಮಲಗಿಸಿ ಉದ್ದಿನಹಿಟ್ಟನ್ನು ನೀರಿನಿಂದ ಕಲೆಸಿ ಎರಡು ಕಣ್ಣುಗುಡ್ಡೆಗಳ ಸುತ್ತಲೂ ಗುಂಡಾಗಿ ಪಾತೆಯಾಗುವಂತೆ ಸಮವಾಗಿ ಮೆತ್ತಿ ತುಪ್ಪದ ಮೇಲಿನ ತಿಳಿಯನ್ನು ಬಿಸಿನೀರಲ್ಲಿಟ್ಟು ಕರಗಿಸಿ ಕಣ್ಣಿನ ರೆಪ್ಪೆ ಕೂದಲು ಮುಳುಗುವಷ್ಟು ತುಂಬಿ ಸ್ವಸ್ಥನಿಗೆ ೫೦೦ ಮಾತುಗಳನ್ನು ಉಚ್ಚರಿಸುವವರೆಗೂ ಕಫದೋಷಕೋಪದಲ್ಲಿ ೬೦೦, ಪಿತ್ತದೋಷಪ್ರಕೋಪದಲ್ಲಿ ೮೦೦, ವಾತಪ್ರಕೋಪದಲ್ಲಿ ೧೦೦೦ ಮಾತುಗಳನ್ನು ಉಚ್ಚರಿಸುವಷ್ಟು ಕಾಲಬಿಟ್ಟು ತೆಗೆಯಬೇಕು ; ಕೆಲವರು ರೋಗಸ್ಥಾನಕ್ಕೆ ತಕ್ಕಂತೆ ಕಾಲಪ್ರಮಾಣವನ್ನು ನಿರ್ಧರಿಸುತ್ತಾರೆ ; ಹೇಗೆಂದರೆ ನೇತ್ರಸಂಧಿಯಲ್ಲಿ ದೋಷವಿದ್ದರೆ ೩೦೦ ಮಾತುಗಳನ್ನಾಡುವಷ್ಟು ಕಾಲವೂ, ರೆಪ್ಪೆಗಳಲ್ಲಿ ದೋಷವಿದ್ದರೆ ೧೦೦, ಶುಕ್ಲಮಂಡಲದಲ್ಲಿ ದೋಷವಿದ್ದರೆ ೫೦೦, ಕೃಷ್ಣಮಂಡಲದಲ್ಲಿದ್ದರೆ ೬೦೦, ಎಲ್ಲಾ ಭಾಗಗಳಲ್ಲಿದ್ದರೆ ೧೦೦೦, ದೃಷ್ಟಿಮಂಡಲದಲ್ಲಿ ದೋಷವಿದ್ದರೆ ೧೦೦೦ ಅಥವಾ ೮೦೦ ಮಾತುಗಳನ್ನು ಉಚ್ಚರಿಸುವಷ್ಟು ಕಾಲವಿರಬೇಕು ; ಅನಂತರ ಹುಬ್ಬಿನತುದಿಯ ಕೆಳಭಾಗದಲ್ಲಿ ಶಲಾಕೆಯಿಂದ ಉದ್ದಿನಕಟ್ಟೆಯನ್ನು ಕೊರೆದು ತುಪ್ಪವನ್ನು ಹೊರಕ್ಕೆ ಬಸಿದುಕೊಂಡು ಬೆಂದಯವೆಯ ಹಿಟ್ಟಿನ ಮುದ್ದೆಯಿಂದ ಅಥವಾ ಉದ್ದಿನ ಹಿಟ್ಟಿನಿಂದ ಮೆತ್ತಿರುವ ಕಣ್ಣಿನ ತುಪ್ಪವನ್ನು ಅದ್ದಿ ಶೋಧಿಸಿ ಕಫಹರವಾದ ಶಿರೋವಿರೇಚನಕರ ಧೂಮಪಾನವನ್ನುಮಾಡಿಸಿ ಕಫಹರಣ ಮಾಡಬೇಕು ; ಇದು ಗಯಿಾ ಮತವು ; ಅಲ್ಪದೋಷದವರಿಗೆ ಒಂದುದಿನವೂ, ಮಧ್ಯದೋಷದವರಿಗೆ ೩ ದಿವಸಗಳೂ, ಅಧಿಕದೋಷದವರಿಗೆ ೫ ದಿನಗಳೂ ಪ್ರಯೋಗಿಸಬೇಕೆಂದೂ ಜೆಜ್ಜಟನ ಮತವು ; ಇದರಮೇಲೆ ತರ್ಪಣವನ್ನು ಪ್ರಯೋಗಿಸಕೂಡದು ; ವಿದೇಹನ ಮತದಲ್ಲಿ ಸ್ವಸ್ಥನು ೨ ದಿನಗಳನ್ನು ಬಿಟ್ಟು, ವಾತರೋಗಿಗೆ ಪ್ರತಿದಿನವೂ, ರಕ್ತಪಿತ್ತರೋಗಿಗೆ ೧ ದಿನ ಬಿಟ್ಟು, ಸನ್ನಿಪಾತದೋಷಿಗೆ ೨ ದಿನ ಬಿಟ್ಟು, ಕಫರೋಗಿಗೆ ೩ ದಿನ ಬಿಟ್ಟು ಪುನಃ ತರ್ಪಣಪ್ರಯೋಗವನ್ನು ನಿರಂತರವೂ ಮಾಡಬೇಕೆಂದು ಹೇಳುತ್ತಾನೆ.

ತರ್ಪಣೇತೃಪ್ತಿಲಿಙ್ಗಾನಿ ನೇತ್ರಸ್ಯೇಮಾನಿ ಲಕ್ಷಯೇತ್ ॥೧೨॥
ಸುಖಸ್ವಪ್ನಾವಬೋಧತ್ವಂ ವೈಶದ್ಯಂ ವರ್ಣಪಾಟವಮ್ ।
ನಿರ್ವೃತಿರ್ವ್ಯಾಧಿ ವಿಧ್ವಂಸಃ ಕ್ರಿಯಾಲಾಘವಮೇವ ಚ ॥೧೩॥

ಸರಿಯಾಗಿ ನೇತ್ರತರ್ಪಣಕರ್ಮವು ಆಚರಿಸಲ್ಪಟ್ಟರೆ ರೋಗಿಗೆ ಸುಖವಾಗಿ ನಿದ್ರೆ ಬರುತ್ತದೆ ಮತ್ತು ಸುಖವಾಗಿ ಎಚ್ಚರವಾಗುತ್ತದೆ. ಕಣ್ಣುಗಳು ಜಿಬರು ಕಟ್ಟದೆ ಸ್ವಚ್ಛ

ವಾಗಿದ್ದು ಎಲ್ಲಾ ಬಣ್ಣಗಳೂ ಸರಿಯಾಗಿ ಕಾಣಿಸುತ್ತವೆ ; (ಕೆಲವರು ಕಣ್ಣಿನ ಶುಕ್ಲ ಕೃಷ್ಣಮಂಡಲಗಳಲ್ಲಿ ಬಣ್ಣವ್ಯತ್ಯಾಸವಾಗದಿರುವುದೆಂದು ಹೇಳುತ್ತಾರೆ.) ತತ್ಕಾಲದಲ್ಲಿ ಸುಖಾನುಭವ ತೋರಿ ವ್ಯಾಧಿನಿವಾರಣೆಯಾಗಿ, ನಿಮೇಷೋನ್ಮೇಷಾದಿ ಕಾರ್ಯಗಳು ಶೀಘ್ರವಾಗಿ ನಡೆಯುವುದು ; (ಕೆಲವರು ಕ್ರಿಯೆಯೆಂದರೆ ಕಣ್ಣುಗಳನ್ನು ಮುಚ್ಚಿ ಬಿಡುವುದು, ಲಾಘವವೆಂದರೆ ನೇತ್ರಲಘುತಾ ಎಂದು ಅರ್ಥ ಮಾಡುತ್ತಾರೆ.)

ಗುರ್ವಾವಿಲಮತಿಸ್ನಿಗ್ಧಮಶ್ರುಕಣ್ಡೂಪದೇಹವತ್ ।
ಜ್ಞೇಯಾಂ ದೋಷಸಮುತ್ಕ್ಲಿಷ್ಟಂ ನೇತ್ರಮತ್ಯರ್ಥತರ್ಪಿತಮ್ ॥೧೪॥
ರೂಕ್ಷಮಾವಿಲಮಸ್ರಾಢ್ಯಮಸಹಂ ರೂಪದರ್ಶನೇ ।
ವ್ಯಾಧಿವೃದ್ಧಿಶ್ಚ ತಜ್ಞೇಯಂ ಹೀನತರ್ಪಿತಮಕ್ಷಿ ಚ ॥೧೫॥
ಅನಯೋರ್ದೋಷಬಾಹುಳ್ಯಾತ್ ಪ್ರಯತ್ನೇತ ಚಿಕಿತ್ಸಿತೇ ।
ಧೂಮನಸ್ಯಾಞ್ಜನೈಃ ಸೇಕೈರೂಕ್ಷೈಃ ಸ್ನಿಗ್ಧೈಶ್ಚ ಯೋಗವಿತ್ ॥೧೬॥

ಕಣ್ಣುಗಳು ಭಾರವಾಗಿ ಜಿಬರು ಮೆತ್ತಿಕೊಂಡು, ಅತಿಜಿಡ್ಡಾಗಿ, ಕಣ್ಣೀರು, ನವೆ, ದೋಷಗಳಿಂದ ಮಿಶ್ರವಾಗಿರುವುದು ಇವು ಅತಿ ತೃಪ್ತಲಕ್ಷಣಗಳು ; ರೂಕ್ಷವಾಗಿ ಕೊಳೆ ಮೆತ್ತಿಕೊಂಡು ಕಣ್ಣೀರುತುಂಬಿ, ಪದಾರ್ಥಗಳನ್ನು ನೋಡುವುದಕ್ಕಾಗದೆ ವ್ಯಾಧಿವೃದ್ಧಿಯಾದರೆ ಹೀನತರ್ಪಿತ ಲಕ್ಷಣಗಳು ; ಇವೆರಡು ವಿಧಗಳಲ್ಲೂ ದೋಷಾಧಿಕ್ಯತೆಯಿರುವ ಕಾರಣ ಯೋಗಜ್ಞನಾದ ವೈದ್ಯನು ಕ್ರಮವಾಗಿ ರೂಕ್ಷವಾಗಿಯೂ ಸ್ನಿಗ್ಧವಾಗಿಯೂ ಇರುವ ಧೂಮಪಾನ, ನಸ್ಯ, ಅಂಜನ, ಸೇಕಗಳಿಂದ ಚಿಕಿತ್ಸಿಸಬೇಕು. (ಅತಿತರ್ಪಿತನಿಗೆ ರೂಕ್ಷ ಧೂಮಾದಿಗಳಿಂದಲೂ, ಹೀನತೃಪ್ತನಿಗೆ ಸ್ನಿಗ್ಧಧೂಮ ಪಾನಾದಿಗಳಿಂದಲೂ ಚಿಕಿತ್ಸೆ ಮಾಡಬೇಕು.

ತಾಮ್ಯತ್ಯತಿವಿಶುಷ್ಕಂ ಚ ಯದ್ರೂಕ್ಷಂ ಚಾತಿದಾರುಣಮ್ ।
ಶೀರ್ಣಪಕ್ಷ್ಮಾವಿಲಂ ಜಿಹ್ಮಂ ರೋಗಕ್ಲಿಷ್ಟಂ ಚ ಯದ್ಭೃಶಮ್ ॥೧೭॥
ತದಕ್ಷಿ ತರ್ಪಣಾದೇವ ಲಭೇತೋರ್ಜಾಮಸಂಶಯಮ್ ।
ದುರ್ದಿನಾತ್ಯುಷ್ಣಶೀತೇಷು ಚಿನ್ತಾಯಾಂ ಸಂಭ್ರಮೇಷು ಚ ॥೧೮॥
ಅಶಾನ್ತೋಪದ್ರವೇ ಚಾಕ್ಷ್ಣಿ ತರ್ಪಣಂ ನಪ್ರಶಸ್ಯತೇ ।

ಕಣ್ಣುಗಳು ಬಳಲಿ ದುರ್ಬಲವಾಗಿ, ತುಂಬಾ ಒಣಗಿ, ರೂಕ್ಷವಾಗಿ, ಕಠಿನವಾಗಿ ರೆಪ್ಪೆಕೂದಲು ಸೀಳಿ, ಕೊಳೆಯಿಂದ ಕೂಡಿ, ಸೊಟ್ಟಾಗಿ, ಅತಿಯಾಗಿ ರೋಗಪೀಡಿತವಾಗಿದ್ದರೆ, ತರ್ಪಣಕ್ರಿಯೆಯಿಂದ ಆ ಕಣ್ಣುಗಳಿಗೆ ಖಂಡಿತವಾಗಿಯೂ ಬಲ ಬರುತ್ತದೆ. ದುರ್ದಿನಗಳಲ್ಲಿ, ಅತಿಬೇಸಿಗೆಯಲ್ಲಿ, ಅತಿ ಶೀತಕಾಲಗಳಲ್ಲಿ, ಚಿಂತೆ ಮತ್ತು ಅತಿ ಸಂತೋಷವಿರುವಾಗ, ಉಪದ್ರವವು ನಿವಾರಣೆಯಾಗದಿರುವಾಗ ತರ್ಪಣಕ್ರಿಯೆಯು ಯೋಗ್ಯವಾದುದಲ್ಲ.

ಪುಟಪಾಕಸ್ತಥೈತೇಷು ನಸ್ಯಂ ಯೇಷು ಚ ಗರ್ಹಿತಮ್ ||೧೯||
ತರ್ಪಣಾರ್ಹಾ ನ ಯೇ ಪ್ರೋಕ್ತಾಃ ಸ್ನೇಹಪಾನಾಕ್ಷಮಾಶ್ಚ ಯೇ |
ತತಃ ಪ್ರಶಾನ್ತದೋಷೇಷು ಪುಟಪಾಕಕ್ಷಮೇಷು ಚ ||೨೦||
ಪುಟಪಾಕಃ ಪ್ರಯೋಕ್ತವ್ಯೋ ನೇತ್ರೇಷು ಭಿಷಜಾ ಭವೇತ್ |
ಸ್ನೇಹನೋ ಲೇಖನೀಯಶ್ಚ ರೋಪಣೀಯಶ್ಚ ಸ ತ್ರಿಧಾ ||೨೧||

ತರ್ಪಣಾರ್ಹರಿಗೆ ಪುಟಪಾಕವೂ ಯೋಗ್ಯವಾದದ್ದು. ನಸ್ಯಕರ್ಮ ಮತ್ತು ಸ್ನೇಹ ಪಾನಗಳಿಗೆ ಅರ್ಹರಲ್ಲದವರು ತರ್ಪಣ ಮತ್ತು ಪುಟಪಾಕಗಳಿಗೂ ಅರ್ಹರಲ್ಲ. ತರ್ಪಣ ಸ್ನೇಹಪಾನಗಳಿಗೆ ಅರ್ಹರಾದವರು ಮತ್ತು ಹಿಂದಿನ ಕರ್ಮಗಳಿಂದ ದೋಷಶಮನಮಾಡಿ ಕೊಂಡು ಪುಟಪಾಕವನ್ನು ಸೇವಿಸಬೇಕು. ವೈದ್ಯರು ನಾಡಿಗಳ ಮೂಲಕ ಪುಟಪಾಕ ವನ್ನು ಪ್ರಯೋಗಿಸಬೇಕು. ಪುಟಪಾಕವು ಸ್ನೇಹನ ಲೇಖನ ರೋಪಣಗಳೆಂದು ಮೂರು ವಿಧವು (ತರ್ಪಣಕ್ಕೆ ಅನರ್ಹರು—ಚಿಂತೆ ಭ್ರಮೆ ಭಯಪೀಡಿತರು ಸ್ನೇಹಪಾನಕ್ಕೆ ಅನ ರ್ಹರು—ದುರ್ಬಲಾರೋಚಕಾ ಜ್ವರ ಪೀಡಿತರು).

ಹಿತಃ ಸ್ನಿಗ್ಧೋಽತಿರೂಕ್ಷಸ್ಯ ಸ್ನಿಗ್ಧಸ್ಯಾಪಿ ಚ ಲೇಖನಃ |
ದೃಷ್ಟೇರ್ಬಲಾರ್ಥಮಿತರಃ ಪಿತ್ತಾಸೃಗ್ವ್ರಣವಾತನುತ್ ||೨೨||
ಸ್ನೇಹ ಮಾಂಸವಸಾಮಜ್ಜಮೇದಃ ಸ್ವಾದ್ವೌಷಧೈಃ ಕೃತಃ |
ಸ್ನೇಹನಃ ಪುಟಪಾಕಸ್ತು ಧಾರ್ಯೋ ದ್ವೇ ವಾಕ್ಶತೇ ತು ಸಃ ||೨೩||

ಅತಿರೂಕ್ಷನಿಗೆ ಸ್ನಿಗ್ಧವಾದ ಪುಟಪಾಕವೂ ಸ್ನಿಗ್ಧರಿಗೆ ಲೇಖನ ಪುಟಪಾಕವೂ ದೃಷ್ಟಿಗೆ ಬಲಬರುವುದಕ್ಕಾಗಿ ರೋಪಣ ಪುಟಪಾಕವೂ ಹಿತಕರವಾದವು. ಪಿತ್ತ ರಕ್ತ ವ್ರಣ ವಾತಗಳು ನಿವಾರಣೆಯಾಗುತ್ತವೆ. ಆನೂಪದೇಶದ ಪ್ರಾಣಿಗಳ ಮಾಂಸವು ಸ್ನೇಹ ಪ್ರಧಾನವಾಗಿರುತ್ತದೆಯಾಗಿ ಅವುಗಳ ಮಾಂಸ ವಸೆ ಮಜ್ಜೆ ಮೇದಸ್ಸುಗಳನ್ನು ಕಾಕೋ ಳ್ಯಾದಿ ಮಧುರೌಷಧದ್ರವ್ಯಗಳ ಕಷಾಯದಿಂದ ತಯಾರಿಸಿದ ಸ್ನೇಹನ ಪುಟಪಾಕವನ್ನು ೨೦೦ ವಾಕ್ಕುಗಳನ್ನು (ಮಾತು) ಉಚ್ಚರಿಸುವಷ್ಟು ಕಾಲದವರೆಗೆ ಧಾರಣೆ ಮಾಡಬೇಕು.

ಜಾಙ್ಗಲಾನಾಂ ಯಕೃನ್ಮಾಂಸೈರ್ಲೇಖನದ್ರವ್ಯಸಂಭೃತೈಃ |
ಕೃಷ್ಣಲೋಹರಜಸ್ತಾಮ್ರಶಙ್ಖವಿದ್ರುಮಸಿನ್ಧುಜೈಃ ||೨೪||
ಸಮುದ್ರಫೇನಕಾಸೀಸಸ್ರೋತೋಜದಧಿಮಸ್ತುಭಿಃ |
ಲೇಖನೋ ವಾಕ್ಶತಂ ತಸ್ಯಪರಂ ಧಾರಣಮುಚ್ಯತೇ ||೨೫||

ಜಾಂಗಲ (ಬೈಲುಸೀಮೆಯ) ಪ್ರಾಣಿಗಳ ಯಕೃತ್, ಮಾಂಸಗಳೊಡನೆ ಲೇಖನ ದ್ರವ್ಯಗಳನ್ನು ಮಿಶ್ರಮಾಡಿ ಕಬ್ಬಿಣದಪುಡಿ, ತಾಮ್ರದಪುಡಿ, ಶೃಂಗ, ಹವಳ, ಸೈಂಧವ, ಸಮುದ್ರದನೊರೆ, ಅನ್ನಭೇದಿ, ಸ್ರೋತೋಂಜನ (ಸೌವೀರಾಂಜನ), ಮೊಸರಿನ ಕಟ್ಟು –ಇವೆಲ್ಲವನ್ನೂ ಸೇರಿಸಿ ತಯಾರಿಸಿದ ಲೇಖನ ಪುಟಪಾಕವನ್ನು 100 ಪದಗಳನ್ನು ಉಚ್ಚ ರಿಸುವಷ್ಟು ಕಾಲ ಧಾರಣೆ ಮಾಡಬೇಕು ; ಇದೇ ಲೇಖನ ಪುಟಪಾಕಧಾರಣೆಗೆ ಪರಮಾ ವಧಿಯಾದ ಕಾಲವು.

ಸ್ತನ್ಯಜಾಙ್ಗಲಮಧ್ವಾಜ್ಯತಿಕ್ತದ್ರವ್ಯವಿಪಾಚಿತಃ।
ಲೇಖನಾತ್ ತ್ರಿಗುಣಂ ಧಾರ್ಯಃ ಪುಟಪಾಕಸ್ತು ರೋಪಣಃ ॥೨೬॥

ಸ್ತ್ರೀಸ್ತನ್ಯ, ಜಾಂಗಲಪ್ರಾಣಿಗಳ ಮಾಂಸ, ಜೇನುತುಪ್ಪ, ತುಪ್ಪ ಇವುಗಳನ್ನು ಕಟುರಸದ ದ್ರವ್ಯಗಳನ್ನೂ ಸೇರಿಸಿ ತಯಾರಿಸಿದರೆ ರೋಪಣ ಪುಟಪಾಕವಾಗುತ್ತದೆ. ಇದನ್ನು ಲೇಖನ ಪುಟಪಾಕದ 2 ರಷ್ಟು ಅಂದರೆ 300 ಪದಗಳನ್ನು ಉಚ್ಚರಿಸುವಷ್ಟು ಕಾಲದವರೆಗೆ ಧಾರಣಮಾಡಬೇಕು.

ವಿತರೇತ್ ತರ್ಪಣೋಕ್ತಂ ತು ಧೂಮಂ ಹಿತ್ವಾ ತು ರೋಪಣಮ್।
ಸ್ನೇಹಸ್ವೇದೌ ದ್ವಯೋಃ ಕಾರ್ಯೌ ಕಾರ್ಯೌ ನೈವಚ ರೋಪಣೇ ॥೨೭॥
ಏಕಾಹಂ ವಾ ದ್ವ್ಯಹಂ ವಾಪಿ ತ್ರ್ಯಹಂ ವಾಪ್ಯವಚಾರಣಮ್।
ಯನ್ತ್ರಣಾ ತು ಕ್ರಿಯಾಕಾಲಾದ್ದ್ವಿಗುಣಂ ಕಾಲಮಿಷ್ಯತೇ ॥೨೮॥

ಸ್ನೇಹನ, ಲೇಖನ ಪುಟಪಾಕಗಳನ್ನು ಪ್ರಯೋಗಿಸುವುದಕ್ಕಿಂತ ಮುಂಚೆ ರೋಗಿಯು ಸ್ನೇಹಸ್ವೇದಗಳಿಂದ ಸಂಸ್ಕೃತನಾಗಿ ತರ್ಪಣವಿಧಾನದಲ್ಲಿ ಹೇಳಿದ ಧೂಮ ಪಾನವನ್ನು ಮಾಡಬೇಕು; ಇದು ರೋಪಣ ಪುಟಪಾಕದಲ್ಲಿ ಕೂಡದು ; ಕಫಜ ನೇತ್ರರೋಗದಲ್ಲಿ 1 ದಿನವೂ, ಪೈತ್ತಿಕದಲ್ಲಿ 2 ದಿನಗಳೂ, ವಾತಜದಲ್ಲಿ 3 ದಿನಗಳೂ ಪುಟಪಾಕಪ್ರಯೋಗವನ್ನು ಮಾಡಬೇಕು; ಸ್ನೇಹಪಾನದಲಾಗಾಯಿತು ಪುಟಪಾಕ ವನ್ನು ಪ್ರಯೋಗಿಸಲು ಬೇಕಾಗುವ ಕಾಲದ ಎರಡರಷ್ಟು ಕಾಲದವರೆಗೆ ಪಥ್ಯ ಕ್ರಮವನ್ನು ಆಚರಿಸಬೇಕು.

ತೇಜಾಂಸ್ಯನಿಲಮಾಕಾಶಮಾದರ್ಶಂ ಭಾಸ್ವರಾಣಿ ಚ।
ನೇಕ್ಷೇತ ತರ್ಪಿತೇ ನೇತ್ರೇ ಪುಟಪಾಕಕೃತೇ ತಥಾ ॥೨೯॥
ಮಿಥ್ಯೋಪಚಾರಾದನಯೋ ರ್ಯೋ ವ್ಯಾಧಿರುಪಜಾಯತೇ।
ಅಞ್ಜನಾಶ್ಚ್ಯೋತನಸ್ವೇದೈರ್ಯಥಾಸ್ವಂ ತಮುಪಾಚರೇತ್ ॥೩೦॥

ನೇತ್ರತರ್ಪಣ ಮತ್ತು ಪುಟಪಾಕಗಳನ್ನು ಪ್ರಯೋಗಿಸಿದ ನಂತರ ಆ ರೋಗಿಗಳು ಪ್ರಕಾಶವುಳ್ಳ ತೇಜಸ್ಸು, ಗಾಳಿ, ಅಂತರಿಕ್ಷ, ಕನ್ನಡಿ, ಸೂರ್ಯನಬೆಳಕು, ಬೆಂಕಿಯಜ್ವಾಲೆ, ಮೊದಲಾದ ಪ್ರಕಾಶಗಳನ್ನು ನೋಡಬಾರದು ; ಈ ತರ್ಪಣಪುಟ ಪಾಕಗಳಿಂದುಪಚರಿಸಲ್ಪಟ್ಟವರು ಅಪಥ್ಯಮಾಡಿದರೆ ಉಂಟಾಗುವ ಉಪದ್ರವಗಳನ್ನು ಅಂಜನ, ಆಶ್ಚ್ಯೋತನ, ಸ್ವೇದಗಳಿಂದ ಉಪಚರಿಸಿ ನಿವಾರಣೆ ಮಾಡಬೇಕು.

ಪ್ರಸನ್ನವರ್ಣಂ ವಿಶದಂ ವಾತಾತಪಸಹಂ ಲಘು।
ಸುಖಸ್ವಪ್ನಾವ ಬೋಧ್ಯಕ್ಷಿ ಪುಟಪಾಕಗುಣಾನ್ವಿತಮ್ ॥೩೧॥
ಅತಿಯೋಗಾದ್ರುಜಃ ಶೋಫಃ ಪಿಡಕಾಸ್ತಿಮಿರೋದ್ಗಮಃ।
ಪಾಕೋಽಶ್ರು ಹರ್ಷಣಂ ಚಾಪಿ ಹೀನೇ ದೋಷೋದ್ಗಮಸ್ತಥಾ ॥೩೨॥

ವರ್ಣವು ಸ್ಪಷ್ಟವಾಗಿ ಕಾಣಬರುವುದು, ಸ್ವಚ್ಛವಾಗಿರುವುದು, ಗಾಳಿಬಿಸಿಲು ಗಳನ್ನು ಸಹಿಸುವ ಶಕ್ತಿಯುಂಟಾಗುವುದು, ಕಣ್ಣು ಹಗುರವಾಗಿರುವುದು ಸುಖವಾಗಿ

ನಿದ್ರೆಬರುವುದು, ಸುಖವಾಗಿ ಎಚ್ಚರವಾಗುವುದು ಇವು ಪುಟಪಾಕದ ಸಮ್ಯಗ್ಯೋಗ ಲಕ್ಷಣವೆಂದು ತಿಳಿಯಬೇಕು. ಅತಿಯೋಗದಿಂದ ಕಣ್ಣುನೋವೂ, ಕಫವೂ ಬೊಕ್ಕೆಗಳೂ ತಿಮಿರವ್ಯಾಧಿಯೂ ಉಂಟಾಗುತ್ತವೆ. ಹೀನಯೋಗದಿಂದ ನೇತ್ರಪಾಕವೂ, ಕಣ್ಣೀರು ಸೋರುವುದೂ, ಜುಮುಗುಟ್ಟುವುದೂ ದೋಷಪ್ರಕೋಪವೂ ಉಂಟಾಗುತ್ತವೆ.

ಅತ ಊರ್ಧ್ವಂ ಪ್ರವಕ್ಷ್ಯಾಮಿ ಪುಟಪಾಕ ಪ್ರಸಾಧನಮ್।
ದ್ವೌ ಬಿಲ್ವಮಾತ್ರೌ ಶ್ಲಕ್ಷ್ಣಸ್ಯ ಪಿಣ್ಡೌ ಮಾಂಸಸ್ಯ ಪೇಷಿತೌ ॥೩೩॥
ದ್ರವ್ಯಾಣಾಂ ಬಿಲ್ವ ಮಾತ್ರಂ ತು ದ್ರವಾಣಾಂ ಕುಡವೋ ಮತಃ ।
ತದೈಕಧ್ಯಂ ಸಮಾಲೋಡ್ಯ ಪತ್ರೈಃ ಸುಪರಿವೇಷ್ಟಿತಮ್ ॥೩೪॥
ಕಾಶ್ಮರೀಕುಮುದೈರಣ್ಡ ಪದ್ಮಿನೀ ಕದಳೀಭವೈಃ।
ಮೃದಾವಲಿಪ್ತಮಙ್ಗಾರೈಃ ಖದಿರೈರನುಕೂಲಯೇತ್ ॥೩೫॥
ಕತಕಾಶ್ಮನ್ತಕೈರಣ್ಡ ಪಾಟಲಾ ವೃಷಬಾದರೈಃ।
ಸಕ್ಷೀರದ್ರುಮಕಾಷ್ಠೈರ್ವಾ ಗೋಮಯೈರ್ವಾಪಿ ಯುಕ್ತಿತಃ ॥೩೬॥
ಸ್ವಿನ್ನಮುದ್ಧೃತ್ಯ ನಿಷ್ಪೀಡ್ಯ ರಸಮಾದಾಯ ತಂ ನೃಣಾಮ್ ।
ತರ್ಪಣೋಕ್ತೇನ ವಿಧಿನಾ ಯಥಾವದವಚಾರಯೇತ್ ॥೩೭॥
ಕನೀನಕೇ ನಿಷೇಚ್ಯಃ ಸಾನ್ನಿತ್ಯಮುತ್ತಾನ ಶಾಯಿನಃ।
ರಕ್ತೇ ಪಿತ್ತೇ ಚ ತೌ ಶೀತೌ ಕೋಷ್ಣೌ ವಾತಕಫಾವಹೌ ॥೩೮॥
ಅತ್ಯುಷ್ಣತೀಕ್ಷ್ಣೌ ಸತತಂ ದಾಹಪಾಕಕರೌ ಸ್ಮೃತೌ।

ಇನ್ನು ಮುಂದೆ ಪುಟಪಾಕಗಳನ್ನು ತಯಾರಿಸುವ ವಿಧಾನವನ್ನು ಹೇಳುತ್ತೇವೆ. ಬಿಲ್ವಪತ್ರೆಕಾಯಿಯ ಪ್ರಮಾಣದಷ್ಟು ೨ ಮಾಂಸದ ಮುದ್ದೆಗಳನ್ನು ಬೇರೆಬೇರೆಯಾಗಿ ನುಣ್ಣಗೆ ಅರೆಯಬೇಕು ; ಸ್ನೇಹನ, ಲೇಖನ, ರೋಪಣ, ಪುಟಪಾಕಗಳಿಗೆ ಅನುಸಾರವಾಗಿ ಮಧುರೌಷಧ ದ್ರವ್ಯಗಳು, ಲೇಖನೌಷಧ ದ್ರವ್ಯಗಳು, ತಿಕ್ತದ್ರವ್ಯಗಳು, ೧ ಪಲದಂತೆಯೂ, ದ್ರವ್ಯಗಳು ೧ ಕುಡವಪ್ರಮಾಣದಷ್ಟನ್ನೂ ಸೇರಿಸಬೇಕು. ಆ ಪೈಕಿ ಸ್ನೇಹನ ಪುಟಪಾಕಕ್ಕೆ ಅರೆದು ಕದರುವುದಕ್ಕೆ ಮಾಂಸರಸ ಮಧುರೌಷಧ ಕಷಾಯ, ಹಾಲು, ಇವುಗಳನ್ನೂ ಲೇಖನಪುಟಪಾಕಕ್ಕೆ ಜೇನುತುಪ್ಪ, ಮೊಸರಿನಕಟ್ಟು ತ್ರಿಫಲಾ ಕಷಾಯಗಳನ್ನೂ ರೋಪಣಪುಟಪಾಕಕ್ಕೆ ತಿಕ್ತ ಕಷಾಯಗಳನ್ನೂ ಅರೆದು ಸಿವನಿ ನೈದಿಲೆಯ ಎಲೆ, ಹರಳೆಲೆ, ತಾವರೆಎಲೆ, ಬಾಳೆಲೆ, ಇವುಗಳಲ್ಲೊಂದರಲ್ಲಿ ಆ ಕಲ್ಕವನ್ನಿಟ್ಟು ಮುಚ್ಚಿ ಉಂಡೆಮಾಡಿ ಮಣ್ಣುಬಳಿದು ಕಗ್ಗಲಿಯ ಕೆಂಡದಲ್ಲಿಟ್ಟು ಸುಡಬೇಕು ; ಚಿಲ್ಲದ ಬೀಜ, ಆರೆಮರ, ಹರಳು, ಪಾದರಿ, ಆಡುಸೋಗೆ, ಎಲಚಿ, ಆಲ, ಅತ್ತಿ, ಮೊದಲಾದ ಕ್ಷೀರವೃಕ್ಷಗಳ ಸೌದೆ ಹಸುವಿನ ಶಗಣಿಯಿಂದ ತಯಾರಿಸಿದ ಬೆರಣಿ ಇವುಗಳಿಂದ ಸ್ವೇದನಾಗುವಂತೆ ಉರಿಹಾಕಿ ಬೇಯಿಸಿ ಹೊರಕ್ಕೆ ತೆಗೆದು ಹಿಂಡಿದರಸವನ್ನು ಒಂದು ಗಾಜಿನ

ಬಟ್ಟಲಿನಲ್ಲಿ ಶೇಖರಿಸಿ ಇದನ್ನು ತರ್ಪಣವಿಧಾನದಲ್ಲಿ ಹೇಳಿರುವಂತೆ ನಿತ್ಯವೂ ಅಂಗತ್ತ ಲಾಗಿ ಮಲಗಿರುವ ರೋಗಿಯು ಕಣ್ಣಿನ ರೆಪ್ಪೆಗಳನ್ನು ಅಗಲಿಸಿ ಕನೀನಿಕ ಸಂಧಿಯಲ್ಲಿ ಹಿಂಡಬೇಕು ; ರಕ್ತದೋಷ ಪಿತ್ತದೋಷಗಳಲ್ಲಿ ತಣ್ಣಗೂ, ವಾತ ಕಫದೋಷಗಳಲ್ಲಿ ಸುಖೋಷ್ಣವಾಗಿಯೂ ಇರಬೇಕು ; ಅತ್ಯುಷ್ಣವಾಗಿಯಾಗಲೀ ಅತಿ ತೀಕ್ಷ್ಣವಾಗಿ ಯಾಗಲೀ ಪುಟಪಾಕ ದ್ರವವಿದ್ದರೆ ಸದಾ ಉರಿಯನ್ನೂ ಪಾಕವನ್ನೂ ಉಂಟುಮಾಡುತ್ತ ವೆಂದು ತಿಳಿಯಬೇಕು. (ಅಂದರೆ ಅತಿತೀಕ್ಷ್ಣವಾಗಿಯೂ ಅತ್ಯುಷ್ಣವಾಗಿಯೂ ಇರ ಬಾರದು)

ಅಪ್ಲುತೌ ಶೀತಲೌ ಚಾಕ್ಷುಸ್ತಮ್ಭರುಗ್ಘರ್ಷಕಾರಕೌ ||೩೯||
ಅತಿಮಾತ್ರೌ ಕಷಾಯತ್ವಸಙ್ಕೋಚಸ್ಫುರಣಾವಹೌ
ಹೀನ ಪ್ರಮಾಣೌ ದೋಷಾಣಾಮುತ್ಕ್ಲೇಶ ಜನನೌ ಭೃಶಮ್ ||೪೦||

ತರ್ಪಣ ಪುಟಪಾಕಗಳನ್ನು ನಿಧಾನವಾಗಿಯೂ ತಣ್ಣಗೂ ಹಾಕಿದರೆ ಕಣ್ಣೀರು ಸೋರುವುದು ರೆಪ್ಪೆಗಳು ಬಿಗಿತ, ನೋವು, ಮರಳುತುಂಬಿದಂತೆ ಉಜ್ಜುವಿಕೆಯೂ ಉಂಟಾ ಗುತ್ತವೆ ; ಅತಿಪ್ರಮಾಣದಿಂದ ಹಾಕಿದರೆ ಕಣ್ಣುಗಳು ಕಷಾಯ ಬಣ್ಣಕ್ಕೆ ತಿರುಗಿ ಸಂಕೋಚಿಸುತ್ತವೆ. ಅದುರುತ್ತವೆ ; ಸ್ವಲ್ಪ ಪ್ರಮಾಣದಿಂದ ಸುರಿದರೆ ಅಧಿಕಪ್ರಮಾಣ ದಿಂದ ದೋಷಗಳು ಕೆರಳುತ್ತವೆ.

ಯುಕ್ತೌ ಕೃತೌ ದಾಹಶೋಫರುಗ್ಘರ್ಷಸ್ರಾವನಾಶನೌ
ಕಣ್ಡೂಪದೇಹದೂಷೀಕಾರಕ್ತರಾಜಿವಿನಾಶಿನೌ ||೪೧||
ತಸ್ಮಾತ್ ಪರಿಹರ್ರ ದೋಷಾ ವಿದಧ್ಯಾತೌ ಸುಖಾವಹೌ

ಸಮಪ್ರಮಾಣದಿಂದ ತರ್ಪಣ ಪುಟಪಾಕಗಳನ್ನು ಪ್ರಯೋಗಿಸಿದರೆ ಕಣ್ಣುರಿ, ಶೋಫ, ನೋವು, ಮರಳು ಉಜ್ಜುವಂತೆ ನೋಯುವುದು ನೇತ್ರಸ್ರಾವ ಇವುಗಳು ನಿವಾರಣೆಯಾಗುತ್ತವೆ ; ನವೆ, ಜಿಬರುಮೆತ್ತಿರುವುದು, ರೆಪ್ಪೆಗಳು ಅಂಟಿಕೊಳ್ಳುವುದು, ಮಾಂಸದ ದಾರಗಳು ಕಣ್ಣುಗುಡ್ಡೆಗಳಮೇಲೆ ಎದ್ದಿರುವುದು, ಇವೆಲ್ಲಾ ಪರಿಹಾರವಾಗು ತ್ತವೆ. ಆದ್ದರಿಂದ ದೋಷನಿವಾರಣೆಯಾಗುವಂತೆ ಅವನ್ನು ಸರಿಯಾಗಿ ಪ್ರಯೋಗಿಸ ಬೇಕು.

ವ್ಯಾಪದಶ್ಚ ಯಥಾದೋಷಂ ನಸ್ಯಧೂಮಾಞ್ಜನೈರ್ಜಯೇತ್ ||೪೨||
ಆದ್ಯನ್ತಯೋಶ್ಚಾಪ್ಯನಯೋಃ ಸ್ವೇದ ಉಷ್ಣಾಮ್ಬುಚೈಲಿಕಃ
ತಥಾಹಿತೋಽವಸಾನೇ ಚ ಧೂಮಃ ಶ್ಲೇಷ್ಮಸಮುಚ್ಛ್ರಿತೌ ||೪೩||
ಯಥಾದೋಷೋಪಯುಕ್ತಂ ತು ನಾತಿಪ್ರಬಲಮೋಜಸಾ
ರೋಗಮಾಶ್ವೋಚ್ಚೇತನಂ ಹನ್ತಿ ಸೇಕಸ್ತು ಬಲವತ್ತರಮ್ ||೪೪||

ಈ ಪ್ರಯೋಗದಿಂದುಂಟಾಗುವ ಉಪದ್ರವಗಳನ್ನು ದೋಷಪ್ರಕೋಪಕ್ಕೆ ತಕ್ಕಂತೆ ತಯಾರಿಸಿದ ನಶ್ಯ, ಧೂಮಪಾನ, ಅಂಜನಪ್ರಯೋಗಗಳಿಂದ ನಿವಾರಣೆ ಮಾಡಬೇಕು ;

ಇವುಗಳ ಪ್ರಯೋಗಕ್ಕೆ ಮೊದಲಲ್ಲೂ ಕೊನೆಯಲ್ಲೂ ಬಿಸಿನೀರಿನಲ್ಲಿ ಅದ್ದಿದ ಬಟ್ಟೆತುಂಡಿನಿಂದ ಮೃದುವಾಗಿ ನೇತ್ರಗಳಿಗೆ ಸ್ವೇದಮಾಡಬೇಕು ಮತ್ತು ಕಡೆಯಲ್ಲಿ ಕಫವೃದ್ಧಿಯಾದರೆ ಧೂಮಪಾನ ಮಾಡಿಸಬೇಕು ; ದೋಷಗಳಿಗೆ ತಕ್ಕಂತೆ ತಯಾರಿಸಿದ ಆಶ್ಚ್ಯೋತನೌಷಧವು ಸಾಮಾನ್ಯ ರೋಗಗಳನ್ನೂ ಪ್ರಬಲಶಕ್ತಿಗಳುಳ್ಳ ರೋಗಗಳನ್ನೂ ನಿವಾರಿಸುತ್ತವೆ.(ವಾತಾದಿದೋಷಹರ ದ್ರವ್ಯಗಳಿಂದ ಆಶ್ಚ್ಯೋತನ ಆಸೇಚನ ಔಷಧಗಳನ್ನು ತಯಾರಿಸಿಕೊಳ್ಳಬೇಕು.)

ತೌ ತ್ರಿಧೈವೋಪಯುಜ್ಯೇತೇ ರೋಗೇಷು ಪುಟಪಾಕವತ್
ಲೇಖನೇ ಸಪ್ತ ಚಾಷ್ಟೌ ವಾ ಬಿನ್ದವಃ ಸ್ನೈಹಿಕೇ ದಶ ||೪೫||
ಆಶ್ಚ್ಯೋತನೇ ಪ್ರಯೋಕ್ತವ್ಯಾ ದ್ವಾದಶೈವ ತು ರೋಪಣೇ
ಸೇಕಸ್ಯ ದ್ವಿಗುಣಃ ಕಾಲಃ ಪುಟಪಾಕಾತ್ ಪರೋ ಮತಃ ||೪೬||
ಅಥವಾ ಕಾರ್ಯನಿರ್ವೃತ್ತೇರುಪಯೋಗೋ ಯಥಾಕ್ರಮಮ್
ಪೂರ್ವಾಪರಾಹ್ಣೇ ಮಧ್ಯಾಹ್ನೇ ರುಜಾಕಾಲೇಷು ಚೋಭಯೋಃ ||೪೭||
ಯೋಗಾಯೋಗಾ ಸ್ನೇಹಸೇಕೇ ತರ್ಪಣೋಕ್ತಾ ಪ್ರಚಕ್ಷತೇ

ಪುಟಪಾಕವಿಧಾನದಂತೆಯೇ ಆಶ್ಚ್ಯೋತನ, ಸೇಕಗಳೂ ಸ್ನೇಹನ, ಲೇಖನ, ರೋಪಣಗಳೆಂದೂ ೩ ವಿಧಗಳಾಗಿವೆ. ಪುಟಪಾಕದಲ್ಲಿ ಹೇಳಿದ ದ್ರವ್ಯಗಳನ್ನೇ ಅರೆದು ಕದರಲು ಉಪಯೋಗಿಸಬೇಕು. ಇವುಗಳ ಪ್ರಯೋಗದಿಂದ ಸಮ್ಯಗ್ಯೋಗ, ಹೀನಯೋಗ, ಅತಿಯೋಗ, ಲಕ್ಷಣಗಳನ್ನೂ ಪುಟಪಾಕಪ್ರಯೋಗದಲ್ಲಿ ಹೇಳಿರುವಂತೆಯೇ ಗಮನಿಸಬೇಕು ; ಪುಟಪಾಕಧಾರಣಕಾಲದಷ್ಟೇ ಆಶ್ಚ್ಯೋತನೌಷಧ ಧಾರಣಕಾಲದ ಪ್ರಮಾಣವೆಂದು ತಿಳಿಯಬೇಕು. ಆಶ್ಚ್ಯೋತನಕರ್ಮಕಾಲದಲ್ಲಿ ಲೇಖನದಲ್ಲಿ ೭ ಅಥವಾ ೮ ತೊಟ್ಟುಗಳನ್ನೂ, ಸ್ನೇಹನದಲ್ಲಿ ೧೦ ಬಿಂದುಗಳನ್ನೂ ರೋಪಣಕಾರ್ಯದಲ್ಲಿ ೧೨ ಬಿಂದುಗಳನ್ನೂ ಪ್ರಯೋಗಿಸಬೇಕು. ಸೇಕಮಾಡಲು ಪುಟಪಾಕವಿಧಾನದಲ್ಲಿ ಬೇಕಾಗುವ ಕಾಲದ ಎರಡರಷ್ಟು ಕಾಲದವರೆಗೂ ಅಂದರೆ ಲೇಖನದಲ್ಲಿ ೨೦೦ ಪದೋಚ್ಚಾರಕಾಲವೂ, ಸ್ನೇಹನದಲ್ಲಿ ೪೦೦ ಪದೋಚ್ಚಾರಕಾಲವೂ, ರೋಪಣದಲ್ಲಿ ೬೦೦ ಪದೋಚ್ಚಾರಕಾಲವೂ ಬೇಕು, ಅಥವಾ ವ್ಯಾಧಿಶಮನವಾಗಿ ನೇತ್ರದ ಸ್ವಾಭಾವಿಕ ವರ್ಣೋತ್ಪತ್ತಿಯಾಗಿ ವೇದನೆಯು ನಿಲ್ಲಬೇಕು. ಅಲ್ಲಿಯವರೆಗೆ ಬೇಕಾಗುವಷ್ಟು ಕಾಲವೆಂದು ಕೆಲವು ವೈದ್ಯರ ಮತವು ; ಆಶ್ಚ್ಯೋತನ ಸೇಕಗಳನ್ನು ಕಫದೋಷದಲ್ಲಿ ಲೇಖನ ಮಾಡಲು ಪ್ರಾತಃಕಾಲವೂ, ವಾತದೋಷದಲ್ಲಿ ಸ್ನೇಹನ ಮಾಡಲು ಅಪರಾಹ್ಣವೂ, ರಕ್ತಪಿತ್ತದೋಷದಲ್ಲಿ ರೋಪಣ ಮಾಡಲು ಮಧ್ಯಾಹ್ನಕಾಲವೂ ಉತ್ತಮವು. ನೋವುಂಟಾದಾಗ ಕ್ರಿಯಾಪ್ರಯೋಗ ಮಾಡಬೇಕೆಂದು ಕೆಲವರ ಮತವು. ತಿಳಿಯಾದ ತುಪ್ಪವನ್ನು ಸೇಚನೆ ಮಾಡುವಾಗ ಹೀನಯೋಗ, ಅತಿಯೋಗ, ಸುಯೋಗಗಳನ್ನು ತರ್ಪಣವಿಧಾನದಂತೆ ತಿಳಿಯಬೇಕು. ಆದರೆ ಹಾಲು, ಕಬ್ಬಿನರಸ, ಮಾಂಸರಸಗಳಿಂದ ಪರಿಷೇಕ ಮಾಡಿದ

ಪುಟಪಾಕ ವಿಧಾನದಲ್ಲುಂಟಾಗುವಂತೆ ಸಮ್ಯಗ್ಯೋಗ, ಹೀನಾತಿಯೋಗ ಲಕ್ಷಣಗಳುಂಟಾಗುತ್ತವೆ ಎಂದು ತಿಳಿಯಬೇಕು.

ರೋಗಾನ್ ಶಿರಸಿಸಂಭೂತಾನ್ ಹತ್ವಾತಿಪ್ರಬಲಾನ್ ಗುಣಾನ್ ||೪೮||
ಕರೋತಿ ಶಿರಸೋ ಬಸ್ತಿರುಕ್ತಾ ಯೇ ಮೂರ್ಧತೈಲಿಕಾಃ |

ಶಿರೋಬಸ್ತಿಯಪ್ರಯೋಗವು ಶಿರೋಭಿತಾಪ ಮೊದಲಾದ ಅತಿ ಪ್ರಬಲ ಶಿರೋರೋಗಗಳನ್ನು ನಿವಾರಣೆಮಾಡಿ ಮೂರ್ಧತೈಲಪ್ರಯೋಗದಂತೆ ಅತ್ಯುತ್ಕೃಷ್ಟ ಗುಣಗಳುಂಟಾಗುತ್ತವೆ.

ಶುದ್ಧದೇಹಸ್ಯ ಸಾಯಾಹ್ನೇ ಯಥಾವ್ಯಾಧ್ಯಶಿತಸ್ಯತು ||೪೯||
ಋಜ್ವಾಸೀನಸ್ಯ ಬಧ್ನೀಯಾದ್ವಸ್ತಿಕೋಶಂ ತತೋ ದೃಢಮ್ |
ಯಥಾವ್ಯಾಧಿಶೃತಸ್ನೇಹಪೂರ್ಣಂ ಸಂಯಮ್ಯ ಧಾರಯೇತ್ ||೫೦||
ತರ್ಪಣೋಕ್ತಂ ದಶಗುಣಂ ಯಥಾದೋಷಂ ವಿಧಾನವಿತ್ |

ವಮನವಿರೇಚನಾದಿಗಳಿಂದ ಅಧಃಶರೀರಶುದ್ಧಿಯನ್ನೂ, ನಸ್ಯ ಧೂಮಪಾನ ಶಿರೋವಿರೇಚನಗಳಿಂದ ಶಿರಃಶುದ್ಧಿಯನ್ನೂ ಮಾಡಿಕೊಂಡಿರುವ ರೋಗಿಯು ದೋಷ ಪ್ರಕೋಪಕ್ಕೆ ತಕ್ಕಂತೆ ಅದಕ್ಕೆ ವಿಪರೀತವಾದ ರಸದ್ರವ್ಯಗಳನ್ನು ಭೋಜನಮಾಡಿ, ಸಾಯಂಕಾಲದಲ್ಲಿ ನೆಟ್ಟಗಿರುವ ಆಸನದಲ್ಲಿ ಕುಳಿತುಕೊಂಡು ಎರಡು ಕಿವಿಗಳ ಮೇಲ್ಭಾಗದಲ್ಲಿ ತಲೆಯ ಸುತ್ತಲೂ ಗುಂಡಾದ ಚರ್ಮದಪಟ್ಟಿಯನ್ನು ೪ ಅಂಗುಲಗಳಷ್ಟು ಎತ್ತರ ನಿಲ್ಲುವಂತೆ ಬಿಗಿಸಿ ಸಂಧಿಗಳಿಗೆ ಉದ್ದಿನಹಿಟ್ಟನ್ನು ನೀರು ಹಾಕಿ ಕಲಿಸಿ ಮೆತ್ತಬೇಕು ; ದೋಷಪ್ರಕೋಪ ನಿವಾರಕಗಳಾದ ದ್ರವ್ಯಗಳಿಂದ ತಯಾರಿಸಿದ ಸ್ನೇಹವನ್ನು ಸುಖೋಷ್ಣವಾಗುವಂತೆ ಬಿಸಿನೀರಿನ ಪಾತ್ರೆಯಲ್ಲಿಟ್ಟು ಕರಗಿಸಿ ರೋಗಿಯ ನೆತ್ತಿಯಮೇಲೆ ೧ ಅಂಗುಳಿಯಷ್ಟು ಎತ್ತರ ನಿಲ್ಲುವಂತೆ ತುಂಬಿ ದೋಷಾನುಸಾರವಾಗಿ ತರ್ಪಣಧಾರಣೆಗೆ ಬೇಕಾದ ಕಾಲದ ೧೦ ರಷ್ಟು ಕಾಲದವರೆಗೆ ನಿರೀಕ್ಷಿಸಬೇಕು ; ಅಂದರೆ ಶ್ಲೇಷ್ಮರೋಗದಲ್ಲಿ ೬೦೦೦ ಮಾತ್ರಾಕಾಲ, ಪಿತ್ತದೋಷದಲ್ಲಿ ೮೦೦೦ ಮಾತ್ರಾಕಾಲ, ವಾತರೋಗದಲ್ಲಿ ೧೦೦೦೦ ಮಾತ್ರಾಕಾಲದಷ್ಟು ನಿರೀಕ್ಷಿಸಬೇಕು.

ವ್ಯಕ್ತರೂಪೇಷು ದೋಷೇಷು ಶುದ್ಧಕಾಯಸ್ಯ ಕೇವಲೇ ||೫೧||
ನೇತ್ರ ಏವ ಸ್ಥಿತೇ ದೋಷೇ ಪ್ರಾಪ್ತಮಞ್ಜನಮಾಚರೇತ್ |
ಲೇಖನಂ ರೋಪಣಂ ಚಾಪಿ ಪ್ರಸಾದನಮಥಾಪಿ ವಾ ||೫೨||

ಅಂಜನಪ್ರಯೋಗಕ್ಕೆ ಕಾಲವನ್ನು ನಿರ್ದೇಶಿಸುತ್ತಾರೆ. ಸಿರಾವ್ಯಧ, ವಮನ, ವಿರೇಚನ, ಶಿರೋವಿರೇಚನಗಳಿಂದ ದೇಹಶುದ್ಧಿಯಾದ ನಂತರ ಅಕ್ಷಿಗೋಳವನ್ನಾಶ್ರೈಸಿ ಒಂದೇವಿಧವಾದ ದೋಷಸಂಚಯವಾಗಿದ್ದರೆ ಕಣ್ಣಿಗೆ ಅಂಜನವನ್ನು ಪ್ರಯೋಗಿಸಬೇಕು. ಲೇಖನ, ರೋಪಣ, ಪ್ರಸಾದನಗಳೆಂದು ಅಂಜನದಲ್ಲಿ ಮೂರುವಿಧಾನಗಳುಂಟು.

ತತ್ರ ಪಞ್ಚರಸಾ ವ್ಯಸ್ತಾನಾದ್ಯೈಕರಸವರ್ಜಿತಾ ।
ಪಞ್ಚಧಾ ಲೇಖನಂ ಯುಞ್ಜ್ಯಾದ್ಯಥಾದೋಷಮತನ್ದ್ರಿತಃ ॥೫೩॥
ನೇತ್ರವರ್ತ್ಮ ಸಿರಾಕೋಶೇ ಸ್ರೋತಃ ಶೃಙ್ಗಾಟಕಾಶ್ರಿತಮ್ ।
ಮುಖನಾಸಾಕ್ಷಿಭಿರ್ದೋಷಮೋಜಸಾ ಸ್ರಾವಯೇತ್ತು ತತ್ ॥೫೪॥
ಕಷಾಯತಿಕ್ತಕಂ ಚಾಪಿ ಸಸ್ನೇಹಂ ರೋಪಣಂ ಮತಮ್ ।
ತತ್ಸ್ನೇಹಶೈತ್ಯಾದ್ವರ್ಣ್ಯಂ ಸ್ಯಾತ್ ದೃಷ್ಟೇಶ್ಚ ಬಲವರ್ಧನಮ್ ॥೫೫॥
ಮಧುರಂ ಸ್ನೇಹಸಂಪನ್ನಮಞ್ಜನಂ ತು ಪ್ರಸಾದನಮ್ ।
ದೃಷ್ಟಿದೋಷಪ್ರಸಾದಾರ್ಥಂ ಸ್ನೇಹನಾರ್ಥಂ ಚ ತದ್ಧಿತಮ್ ॥೫೬॥
ಯಥಾದೋಷಂ ಪ್ರಯೋಜ್ಯಾನಿ ತಾನಿ ದೋಷವಿಶಾರದೈಃ ।
ಅಞ್ಜನಾನಿ ಯಥೋಕ್ತಾನಿ ಪ್ರಾಹ್ಣಸಾಯಾಹ್ನರಾತ್ರಿಷು ॥೫೭॥

ಮಧುರರಸವನ್ನು ಬಿಟ್ಟು ಉಳಿದ ೫ ರಸಗಳಿಂದ ದೋಷಾನುಸಾರವಾಗಿ, ೫ ವಿಧ ಲೇಖನಾಂಜನಗಳನ್ನು ತಯಾರಿಸಬೇಕು. ಹೇಗೆಂದರೆ ವಾತದೋಷದಲ್ಲಿ ಹುಳಿ ಉಪ್ಪು ರಸದ್ರವ್ಯಗಳಿಂದಲೂ, ಪಿತ್ತದೋಷದಲ್ಲಿ ಕಹಿ ಒಗರು ರಸ ದ್ರವ್ಯಗಳಿಂದಲೂ ಕಫದೋಷದಲ್ಲಿ ಕಟುತಿಕ್ತಕಷಾಯರಸದ್ರವ್ಯಗಳಿಂದಲೂ ರಕ್ತದೋಷದಲ್ಲಿ ಪಿತ್ತದೋಷದಂತೆಯೂ, ಸನ್ನಿಪಾತದೋಷದಲ್ಲಿ ೨ ಅಥವಾ ೩ ರಸಗಳನ್ನು ಮಿಶ್ರಮಾಡಿಯೂ ಲೇಖನಾಂಜನಗಳನ್ನು ತಯಾರಿಸಿ ಪ್ರಯೋಗಿಸಿದರೆ ನೇತ್ರಮಾರ್ಗದ ಸಿರೆಯಲ್ಲಿಯೂ ನೇತ್ರಕೋಶದಲ್ಲಿಯೂ, ಸ್ರೋತಸ್ಸಗಳಲ್ಲೂ, ಶೃಂಗಾಟಕಮರ್ಮದಲ್ಲಿಯೂ ಆಶ್ರಯಿಸಿರುವ ದೋಷಗಳು ಓಜಸ್ಸಿನ ಪ್ರಭಾವದಿಂದ ಬಾಯಿ, ಮೂಗು, ಕಣ್ಣುಗಳಮೂಲಕ ಹೊರಕ್ಕೆ ಹೊರಟುಬರುತ್ತವೆ. ಸ್ನೇಹಮಿಶ್ರವಾಗಿ ಪ್ರಯೋಗಿಸಿದ ಕಷಾಯತಿಕ್ತದ್ರವ್ಯಗಳು ರೋಪಣಗಳಾಗುತ್ತವೆ. ಸ್ನೇಹದಿಂದಲೂ ಶೈತ್ಯದಿಂದಲೂ ವರ್ಣ್ಯವು ಮತ್ತು ದೃಷ್ಟಿಯ ಬಲವರ್ಧನವುಂಟಾಗುತ್ತದೆ. ಮಧುರದ್ರವ್ಯದೊಡನೆ ಸ್ನೇಹಮಿಶ್ರವಾದರೆ ದೃಷ್ಟಿಯಲ್ಲಿನ ದೋಷಗಳನ್ನು ಶಮನ ಮಾಡಿ ಸ್ನಿಗ್ಧತೆಯನ್ನುಂಟುಮಾಡುತ್ತದೆ. ನೇತ್ರವೈದ್ಯರು ದೋಷಾನುಸಾರ ಅಂಜನ ಪ್ರಯೋಗಮಾಡಿ ರೋಗನಿವಾರಣೆ ಮಾಡಬೇಕು. ಪೂರ್ವಾಹ್ಣದಲ್ಲಿ ಕಫರೋಗಿಗಳಿಗೆ ಲೇಖನಾಂಜನವನ್ನೂ, ಸಾಯಂಕಾಲದಲ್ಲಿ ವಾತ ರೋಗಿಗಳಿಗೆ ಸ್ನೇಹನಾರ್ಥವಾಗಿಯೂ, ರಾತ್ರಿಯಲ್ಲಿ ಪಿತ್ತಹರವಾದ ಶಮನಾಂಜನ (ಪ್ರಸಾದನ)ವನ್ನೂ ಪ್ರಯೋಗಿಸಬೇಕು.

ಗುಟಿಕಾರಸಚೂರ್ಣಾನಿ ತ್ರಿವಿಧಾನ್ಯಞ್ಜನಾನಿ ತು ।
ಯಥಾಪೂರ್ವಂ ಬಲಂ ತೇಷಾಂ ಶ್ರೇಷ್ಠಮಾಹುರ್ಮನೀಷಿಣಃ ॥೫೮॥
ಹರೇಣುಮಾತ್ರಾ ವರ್ತಿಃ ಸ್ಯಾಲ್ಲೇಖನಸ್ಯ ಪ್ರಮಾಣತಃ ।
ಪ್ರಸಾಧನಸ್ಯ ಚಾಧ್ಯರ್ಧಾ ದ್ವಿಗುಣಾ ರೋಪಣ್ಯ ಚ ॥೫೯॥
ರಸಾಞ್ಜನಸ್ಯ ಮಾತ್ರಾ ತು ಯಥಾವರ್ತಿಮಿತಾ ಮತಾ ।
ದ್ವಿತ್ರಿಚತುಃ ಶಲಾಕಾಶ್ಚ ಚೂರ್ಣಸ್ಯಾಪ್ಯನುಪೂರ್ವಶಃ ॥೬೦॥

ತೇಷಾಂ ತುಲ್ಯಗುಣಾನ್ಯೇವ ವಿದಧ್ಯಾದ್ಭಾಜನಾನ್ಯಪಿ ।
ಸೌವರ್ಣಂ ರಾಜತಂ ಶಾಙ್ಗ್ರತಾಮ್ರಂ ವೈಢೂರ್ಯಕಾಂಸ್ಯಜಮ್ ॥೬೧॥
ಆಯಸಾನಿ ಚ ಯೋಜ್ಯಾನಿ ಶಲಾಕಾಶ್ಚ ಯಥಾಕ್ರಮಮ್

ಅಂಜನಗಳಲ್ಲಿ ಗುಳಿಗೆ, ರಸಕ್ರಿಯೆ, ಚೂರ್ಣಗಳೆಂದು ಮೂರುವಿಧಗಳಿವೆ. ಅವುಗಳಲ್ಲಿ ಹಿಂದುಹಿಂದಿನವು ಹೆಚ್ಚುಹೆಚ್ಚು ಬಲವುಳ್ಳವು. ಅಂದರೆ ಪ್ರಬಲರೋಗಗಳಲ್ಲಿ ಗುಳಿಗೆಗಳನ್ನೂ, ಮಧ್ಯಬಲವುಳ್ಳ ರೋಗಗಳಲ್ಲಿ ರಸಕ್ರಿಯೆಗಳನ್ನೂ, ಅಲ್ಪ ಬಲವುಳ್ಳ ರೋಗಗಳಲ್ಲಿ ಚೂರ್ಣಾಂಜನವನ್ನೂ ಪ್ರಯೋಗಿಸಬೇಕು. ಲೇಖನಾಂಜನವು ಗುಂಡು ಬಟಾಣಿಯಷ್ಟು ಗಾತ್ರವೂ, ಪ್ರಸಾದನದಲ್ಲಿ $1\frac{1}{2}$ ಬಟಾಣಿಯಷ್ಟು ಪ್ರಮಾಣವೂ, ರೋಪಣದಲ್ಲಿ ಎರಡು ಬಟಾಣಿಯ ಕಾಳುಗಳಷ್ಟೂ ಇರಬೇಕು ಮತ್ತು ರಸಕ್ರಿಯಾ ರೂಪದ ಅಂಜನದ ಪ್ರಮಾಣವು ಲೇಖನವರ್ತಿ, ಪ್ರಸಾದನ, ರೋಪಣವರ್ತಿಗಳಷ್ಟೇ ಪ್ರಮಾಣವಿರಬೇಕೆಂದು ಹೇಳುತ್ತಾರೆ. ಚೂರ್ಣಾಂಜನಗಳ ಪ್ರಮಾಣವು ಲೇಖನ, ಪ್ರಸಾದನ, ರೋಪಣಗಳಲ್ಲಿ ಕ್ರಮವಾಗಿ ೨-೩-೪ ಶಲಾಕೆಗಳಷ್ಟಿರಬೇಕು. ಆಯಾಯ ಪ್ರಕಾರದ ಅಂಜನಗಳಿಗೆ ತಕ್ಕಂತೆಯೇ ಅವುಗಳನ್ನು ಶೇಖರಿಸಡುವ ಪಾತ್ರೆಗಳೂ, ಶಲಾಕೆ ಕೂಡ ಆಯಾಯ ರಸವಿಶಿಷ್ಟಗಳಾದ ಪಾತ್ರೆಗಳೇ ಆಗಿರಬೇಕು. ಹೇಗೆಂದರೆ ಮಧುರವನ್ನು ಸುವರ್ಣಪಾತ್ರೆಯಲ್ಲೂ, ಲವಣ ರಸವಾದರೆ ಆಡಿನ ಕೊಂಬಿನ ಪಾತ್ರೆಯಲ್ಲೂ, ಕಷಾಯರಸವಾದರೆ ತಾಮ್ರ ಅಥವಾ, ಕಬ್ಬಿಣದ ಪಾತ್ರೆಯಲ್ಲೂ, ಕಟುರಸದ್ರವ್ಯವನ್ನು ವೈಢೂರ್ಯದ ಪಾತ್ರೆಯಲ್ಲೂ, ಕಹಿರಸವನ್ನು ಕಂಚಿನ ಬಟ್ಟಲಿನಲ್ಲೂ, ಶೀತಲವಾದರೆ ಹತ್ತಿಯಬಟ್ಟೆಯಲ್ಲೂ ಇಡಬೇಕು. ಶಲಾಕೆಗಳೂ ಅದೇ ವಿಧವಾದ ಲೋಹದಿಂದ ಮಾಡಿದ್ದಾಗಿರಬೇಕು.

ವಕ್ತ್ರಯೋರ್ಮುಕುಳಾಕಾರಾ ಕಲಾಯಪರಿಮಣ್ಡಲಾ ॥೬೨॥
ಅಷ್ಟಾಙ್ಗುಲಾ ತನುರ್ಮಧ್ಯೇ ಸುಕೃತಾ ಸಾಧುನಿಗ್ರಹಾ ।
ಔಡುಮ್ಬುರ್ಯಶ್ಚ ಜಾತಾಪಿ ಶಾರೀರೀ ವಾ ಹಿತಾ ಭವೇತ್ ॥೬೩॥

ಶಲಾಕೆಗಳು ತುದಿಯಲ್ಲಿ ಮೊಲ್ಲೆ ಜಾಜಿ ಮೊದಲಾದ ಹೂವುಗಳ ಮೊಗ್ಗುಗಳಂತೆ ಮೊನಚಾಗಿಯೂ, ಬಟಾಣಿಕಾಳಿನಂತೆ ಗುಂಡಗೂ (ತುದಿಯು ಮೊನಚಾಗಿರಬಾರದು) ೮ ಅಂಗುಳಿಯಷ್ಟು ಉದ್ದವೂ ಮಧ್ಯಭಾಗದಲ್ಲಿ ತೆಳ್ಳಗೂ ಕರ್ಕಶಾದಿ ದೋಷವಿಲ್ಲದ್ದಾಗಿಯೂ ಸುಖವಾಗಿ ಹಿಡಿದುಕೊಳ್ಳುವಂತೆಯೂ ಇರಬೇಕು. ತಾಮ್ರದಿಂದಾಗಲೀ, ವೈಢೂರ್ಯಾದಿ ರತ್ನಗಳಿಂದಲೂ, ಕೊಂಬಿನಿಂದಲೂ, ಅಪಿಶಬ್ದದಿಂದ ಸುವರ್ಣಾದಿ ಲೋಹಗಳಿಂದಲೂ ಮಾಡಿರಬೇಕು.

ವಾಮೇನಾಕ್ಷಿ ವಿನಿರ್ಭುಜ್ಯ ಹಸ್ತೇನ ಸುಸಮಾಹಿತಃ ।
ಶಲಾಕಯಾ ದಕ್ಷಿಣೇನ ಕ್ಷಿಪೇತ್ ಕಾನೀನಮಞ್ಜನಮ್ ॥೬೪॥
ಆಪಾಙ್ಗ್ಯಂ ವಾ ಯಥಾಯೋಗ್ಯಂ ಕುರ್ಯಾಚ್ಛಾ ಬಿಗತಾಗತಮ್ ।

ವರ್ತ್ಮಾವಲೇಪಿ ವಾ ಯತ್ತದಞ್ಜ್ಗಳ್ಯೈವ ಪ್ರಯೋಜಯೇತ್ ||೬೫||
ಅಕ್ಷಿ ನಾತ್ಯನ್ತಯೋರಞ್ಜ್ಯಾದ್ಬಾಧಮಾನೋಽಪಿ ವಾ ಭಿಷಕ್|
ನ ವಾ ನಿರ್ವಾನ್ತದೋಷೇಕ್ಷ್ಣಿ ಧಾವನಂ ಸಂಪ್ರಯೋಜಯೇತ್ ||೬೬||

ವೈದ್ಯನು ತನ್ನ ಎಡದ ಕೈಯಿಂದ ರೋಗಿಯ ಕಣ್ಣಿನ ರೆಪ್ಪೆಗಳನ್ನು ಅಗಲಿಸಿ ಬಲಗೈಯಲ್ಲಿ ಶಲಾಕೆಯನ್ನು ಹಿಡಿದುಕೊಂಡು ಹೀನಾತಿಪ್ರಮಾಣಮಾಡದೆ ಸರಿಯಾದ ಪ್ರಮಾಣದಿಂದ ಅಂಜನವನ್ನು ಶಲಾಕೆಯನ್ನು ಕನೀನಿಕಾ ಅಥಾವ ಅಪಾಂಗ ಸಂಧಿಗಳಲ್ಲಿ ಸ್ವಲ್ಪಹಾಕಿ ಶಲಾಕೆಯನ್ನು ಕನೀನಿಕದಿಂದ ಅಪಾಂಗಕ್ಕೂ ಅಪಾಂಗದಿಂದ ಕನೀನಿಕ ಸಂಧಿಗೂ ತಿರುಗಿಸಿ ಅಂಜನ ಹಾಕಬೇಕು. ಹೀಗೆ ಕಣ್ಣಿನ ಒಳಗಡೆಯಲ್ಲಿ ಶಲಾಕೆಯಿಂದ ಅಂಜನಹಾಕಿ ರೆಪ್ಪೆಗಳ ಹೊರಗಡೆಯಲ್ಲಿ ಬೆರಳಿನಿಂದಲೇ ಹಾಕಬೇಕು. ತುದಿಗಳಿಗೆ ಅಂದರೆ ಅಪಾಂಗ ಕನೀನಿಕಾ ಸಂಧಿಗಳಲ್ಲಿ ಹೆಚ್ಚಾಗಿ ಅಂಜನ ಹಾಕಿದರೆ ಕೆಡಕಾಗುತ್ತದೆ. ಕಣ್ಣೀರು, ಜಿಬಿರುಗಳು ಸಂಪೂರ್ಣವಾಗಿ ಸೋರಿನಿಲ್ಲುವವರೆಗೂ ಕಣ್ಣುಗಳನ್ನು ನೀರಿನಿಂದಾಗಲೀ ಕಷಾಯದಿಂದಾಗಲೀ ತೊಳೆಯಬಾರದು, ಅದರಿಂದ ದೋಷಗಳು ಹಿಂತಿರುಗಿ ಸೇರಿಕೊಳ್ಳುತ್ತವೆ.

ದೋಷಃ ಪ್ರತಿನಿವೃತ್ತಸ್ಸ ಹನ್ಯಾದ್ದೃಷ್ಟೇರ್ಬಲಂ ತಥಾ|
ಗತದೋಷಮಪೇತಾಶ್ರು ಪಶ್ಯೇದ್ಯತ್ ಸಮ್ಯಗಮ್ಬುನಾ ||೬೭||
ಪ್ರಕ್ಷಾಳ್ಯಾಕ್ಷಿ ಯಥಾದೋಷಂ ಕಾರ್ಯಂ ಪ್ರತ್ಯಞ್ಜನಂ ತತಃ|
ಶ್ರಮೋದಾವರ್ತರುದಿತಮದ್ಯ ಕ್ರೋಧಭಯಜ್ವರೈಃ ||೬೮||
ವೇಗಾಘಾತಶಿರೋದೋಷೈಶ್ಚಾರ್ತಾನಾಂ ನೇಷ್ಯತೇಞ್ಜನಮ್|
ರಾಗರುಕ್ತಿಮಿರಾಸ್ರಾವ ಶೂಲಸಂರಮ್ಭಸಂಭವಾತ್ ||೬೯||

ಈ ರೀತಿ ಹಿಂತಿರುಗಿ ಬಂದ ದೋಷಗಳು ದೃಷ್ಟಿಶಕ್ತಿಯನ್ನು ನಾಶಗೊಳಿಸುತ್ತವೆ. ದೋಷನಿವಾರಣೆಯಾಗಿ ಕಣ್ಣೀರು ಸೋರುವುದು ನಿಂತು ಕಣ್ಣಿನಿಂದ ಚೆನ್ನಾಗಿ ನೋಡುವುದಕ್ಕಾದರೆ ಆಗ ನೀರಿನಿಂದ ಚೆನ್ನಾಗಿ ತೊಳೆಯಬೇಕು. ಅನಂತರ ದೋಷಾನುಗುಣವಾಗಿ ಪ್ರತ್ಯಂಜನವನ್ನು ಪ್ರಯೋಗಿಸಬೇಕು. ಅಂದರೆ ತೀಕ್ಷ್ಣಾಂಜನವನ್ನೂ ಪ್ರಯೋಗಿಸಿದ್ದರೆ ಶೀತವಾಗುವಂತೆಯೂ, ಕಣ್ಣುಗಳು ಜಡವಾಗಿದ್ದರೆ ತೀಕ್ಷ್ಣಾಂಜನವನ್ನೂ ಹಾಕಬೇಕು. ಇದಕ್ಕೆ ಪ್ರತ್ಯಂಜನವೆಂದು ಹೆಸರು. ಶ್ರಮ, ಉದಾವರ್ತರೋಗ, ರೋದನ, ಮದ್ಯಪಾನ, ಕ್ರೋಧ, ಜ್ವರ, ವೇಗನಿರೋಧ ಮತ್ತು ತಲೆಯದೋಷಗಳಿಂದ ಪೀಡಿತರಾದವರಿಗೆ ಅಂಜನವನ್ನು ಹಾಕಬಾರದು. ಹಾಕಿದರೆ ಕಣ್ಣುಗಳು ಕೆಂಪಾಗುತ್ತವೆ ; ನೋವು, ತಿಮಿರರೋಗ, ನೇತ್ರಸ್ರಾವ, ಶೂಲೆ, ಕಣ್ಣಿನಲ್ಲಿ ಉಜ್ಜಿದಂತೆ ವೇದನೆಗಳೂ ಉಂಟಾಗುತ್ತವೆ.

ನಿದ್ರಾಕ್ಷಯೇ ಕ್ರಿಯಾಶಕ್ತಿಂ ಪ್ರವಾತೇ ದೃಗ್ಬಲಕ್ಷಯಮ್ |
ರಜೋಧೂಮಹತೇ ರಾಗಸ್ರಾವಾಧೀಮನ್ಥಸಂಭವಮ್ ||೭೦||

ಸಂರಮ್ಭಶೂಲೌ ನಸ್ಯಾನ್ತೇ ಶಿರೋರುಜಿ ಶಿರೋರುಜಮ್ ।
ಶಿರಃಸ್ನಾತೇಽತಿಶೀತೇ ಚ ರವಾವನುದಿತೇಽಪಿ ಚ ॥೭೧॥
ದೋಷಸ್ಥೈರ್ಯಾದಪಾರ್ಥಂ ಸ್ಯಾದ್ದೋಷೋತ್ಕ್ಲೇಶಂ ಕರೋತಿ ಚ ।
ಅಜೀರ್ಣೇಽಪ್ಯೇವಮೇವ ಸ್ಯಾತ್ ಸ್ರೋತೋ ಮಾರ್ಗಾವರೋಧನಾತ್ ॥೭೨॥
ದೋಷವೇಗೋದಯೇ ದತ್ತಂ ಕುರ್ಯಾತ್ ತಾಂಸ್ತ್ವನುಪದ್ರವಾನ್ ।
ತಸ್ಮಾತ್ ಪರಿಹರನ್ ದೋಷಾನಞ್ಜನಂ ಸಾಧು ಯೋಜಯೇತ್ ॥೭೩॥
ಲೇಖನಸ್ಯ ವಿಶೇಷೇಣ ಕಾಲ ಏಷ ಪ್ರಕೀರ್ತಿತಃ ।

ನಿದ್ರೆ ಮುಗಿದಮೇಲೆ ಅಂಜನವನ್ನು ಹಾಕಿಕೊಂಡರೆ ರೆಪ್ಪೆಗಳನ್ನು ಮುಚ್ಚುವುದಕ್ಕೂ ಆಗುವುದಿಲ್ಲ. ಬಿರುಗಾಳಿಯಲ್ಲಿ ತಿರುಗಿದರೆ ನೋಡುವ ಶಕ್ತಿ ನಾಶವಾಗುತ್ತದೆ. ಧೂಳು, ಹೊಗೆಯಲ್ಲಿದ್ದರೆ ಕಣ್ಣು ಕೆಂಪಾಗಿ ಕಣ್ಣೀರು ಸೋರುತ್ತದೆ. ಅಧಿಮಂಥಗಳುಂಟಾಗುತ್ತವೆ. ನಸ್ಯಕರ್ಮವನ್ನು ಮಾಡಿದಮೇಲೆ ಅಂಜನ ಹಾಕಿಕೊಂಡರೆ ಕಣ್ಣಿನಲ್ಲಿ ಮರಳು ಸಿಕ್ಕಿದಂತೆ ನೋವುಂಟಾಗುತ್ತದೆ. ತಲೆನೋವಿದ್ದಾಗ ಅಂಜನ ಹಾಕಿಕೊಂಡರೆ ತಲೆನೋವು ಹೆಚ್ಚಾಗುತ್ತದೆ. ತಲೆಗೆ ಸ್ನಾನ ಮಾಡಿದಮೇಲೆ, ಶೀತಕಾಲದಲ್ಲಿ, ಸೂರ್ಯೋದಯವಾಗುವುದಕ್ಕೆ ಮುಂಚೆ ಅಂಜನ ಹಾಕಿಕೊಂಡರೆ ದೋಷಗಳು ಸ್ಥಿರವಾಗಿ ನಿಂತಿರುವುದರಿಂದ ಅಂಜನಪ್ರಯೋಗವು ವ್ಯರ್ಥವಾಗುತ್ತದೆ ಮತ್ತು ದೋಷಗಳು ಕೆರಳುತ್ತವೆ. ಅಜೀರ್ಣರೋಗದಲ್ಲಿ ಸ್ರೋತೋಮಾರ್ಗದಲ್ಲಿ ತಡೆಯುಂಟಾಗಿರುವ ಕಾರಣ ಅಂಜನ ಪ್ರಯೋಗ ಮಾಡಿದರೆ ರಾಗ, ಶೋಫ ಮೊದಲಾದ ಉಪದ್ರವಗಳುಂಟಾಗುತ್ತವೆ. ಆದ ಕಾರಣ ಇವುಗಳನ್ನೆಲ್ಲಾ ತ್ಯಜಿಸಿ, ದೇಶ, ಕಾಲ, ಅವಸ್ಥೆಗಳನ್ನು ಪರಿಶೀಲಿಸಿ ಅಂಜನವನ್ನು ಪ್ರಯೋಗಿಸಬೇಕು. ಈ ಪ್ರತಿಷೇಧಗಳೆಲ್ಲಾ ಲೇಖನಾಂಜನಗಳ ವಿಚಾರದಲ್ಲೆಂದು ತಿಳಿಯಬೇಕು.

ವ್ಯಾಪದಶ್ಚ ಜಯೇದೇತಾಃ ಸೇಕಾಶ್ಚ್ಯೋತನಲೇಪನೈಃ ॥೭೪॥
ಯಥಾಸ್ವಂ ಧೂಮಕಬಳೈರ್ನಸ್ಯೈಶ್ಚಾಪಿ ಸಮುತ್ಥಿತಾಃ ।
ವಿಶದಂ ಲಘು ನಾಸ್ರಾವಿ ಕ್ರಿಯಾಪಟು ಸುನಿರ್ಮಲಮ್ ॥೭೫॥
ಸಂಶಾನ್ತೋಪದ್ರವಂ ನೇತ್ರಂ ವಿರಿಕ್ತಂ ಸಮ್ಯಗಾದಿಶೇತ್ ।
ಜಿಹ್ಮಂ ದಾರುಣದುರ್ವರ್ಣಂ ಸ್ರಸ್ತಂ ರೂಕ್ಷಮತೀವ ಚ ॥೭೬॥
ನೇತ್ರಂ ವಿರೇಕಾತಿಯೋಗೇ ಸ್ಯನ್ದತೇ ಚಾತಿಮಾತ್ರಶಃ ।
ತತ್ರ ಸಂತರ್ಪಣಂ ಕಾರ್ಯಂ ವಿಧಾನಂ ಚಾನಿಲಾಪಹಮ್ ॥೭೭॥
ಅಕ್ಷಿ ಮನ್ದವಿರಿಕ್ತಂ ಸ್ಯಾದುದಗ್ರತರದೋಷವತ್ ।
ಧೂಮನಸ್ಯಾಞ್ಜನೈರ್ಲೇಪೈರ್ಹಿತಂ ದೋಷಾವಸೇಚನಮ್ ॥೭೮॥

ಅಕಾಲದಲ್ಲಿ ಅಂಜನಪ್ರಯೋಗ ಮಾಡುವುದರಿಂದುಂಟಾಗುವ ರಾಗ, ರುಕ್ ಮೊದಲಾದ ಉಪದ್ರವಗಳನ್ನು ಸೇಕ, ಆಶ್ಚ್ಯೋತನ, ಲೇಪಗಳಿಂದಲೂ ಯೋಗ್ಯವಾದ

ಧೂಮಪಾನ, ಕಬಳಗ್ರಹ, ನಸ್ಯಪ್ರಯೋಗಗಳಿಂದಲೂ ನಿವಾರಣೆ ಮಾಡಬೇಕು. ಲೇಖನಾಂಜನದ ಸಮ್ಯಗ್ಯೋಗ ಹೀನಾತಿಯೋಗಗಳ ಲಕ್ಷಣಗಳನ್ನು ಹೇಳುತ್ತಾರೆ. ಕಣ್ಣುಗಳು ಕೊಳೆಯಿಲ್ಲದೆಯೂ ಹಗುರವಾಗಿಯೂ ಸ್ರಾವವಿಲ್ಲದೆಯೂ ಸುಖವಾಗಿ ರೆಪ್ಪೆಗಳನ್ನು ಮುಚ್ಚುತ್ತಲೂ ತೆರೆಯುತ್ತಲೂ ಇದ್ದು ಜಿಬರು, ಕೆಂಪುಬಣ್ಣ, ಉರಿತ ಮೊದಲಾದುವಿಲ್ಲದೆ, ಸ್ವಚ್ಛವಾಗಿ, ಉಪದ್ರವಗಳೆಲ್ಲಾ ನಿವಾರಣೆಯಾದರೆ ಸರಿಯಾಗಿ ಲೇಖನವಾಗಿರುತ್ತೆಂದು ತಿಳಿಯಬೇಕು. ಕಣ್ಣುಗಳು ಸೊಟ್ಟಾಗಿ ಭುಗ್‌ಭುಗ್ ಎಂದು ಉರಿಯುತ್ತಲೂ, ಬಣ್ಣಕೆಟ್ಟು ಜಾರಿದಂತಾಗಿ ಅತ್ಯಂತ ರೂಕ್ಷವಾಗಿ, ಅತಿಯಾಗಿ ಕಣ್ಣೀರು ಸುರಿದ ಕಾರಣ ಅತಿಯಾಗಿ ಲೇಖನಾಂಜನ ಪ್ರಯೋಗವಾಗಿರುತ್ತೆಂದು ತಿಳಿಯಬೇಕು. ಇಂತಹ ಸಂದರ್ಭದಲ್ಲಿ ಸಂತರ್ಪಣವನ್ನೂ, ವಾತಹರ ಚಿಕಿತ್ಸೆಯನ್ನೂ ಮಾಡಬೇಕು. ಕಣ್ಣಿನಿಂದ ಸ್ವಲ್ಪವೇ ನೇತ್ರಸ್ರಾವವಾಗಿ ಅಧಿಕದೋಷವುಳ್ಳದಾದರೆ ಹೀನಯೋಗದಿಂದ ಲೇಖನಾಂಜನಪ್ರಯೋಗವಾಗಿಡೆಯೆಂದು ತಿಳಿದು ರೋಗಿಗೆ ಧೂಮಪಾನ, ನಸ್ಯ, ಅಂಜನ, ಲೇಪನಗಳಿಂದ ದೋಷಹರಣ ಮಾಡಬೇಕು.

ಸ್ನೇಹವರ್ಣಬಲೋಪೇತಂ ಪ್ರಸನ್ನಂ ದೋಷವರ್ಜಿತಮ್ ।
ಜ್ಞೇಯಂ ಪ್ರಸಾದನೇ ಸಮ್ಯಗುಪಯುಕ್ತೇಽಕ್ಷಿ ನಿರ್ವೃತಮ್ ॥೭೯॥
ಕಿಞ್ಚಿದ್ಧೀನವಿಕಾರಂ ಸ್ಯಾತ್ತರ್ಪಣಾದ್ವಿಕೃತಾದಪಿ ।
ತತ್ರ ದೋಷಹರಂ ರೂಕ್ಷಂ ಭೇಷಜಂ ಶಸ್ಯತೇ ಮೃದು ॥೮೦॥

ಕಣ್ಣುಗಳು ಸ್ನೇಹ (ಥಾಳಥಳ್ಯ) ವರ್ಣ, ಬಲಗಳುಳ್ಳದಾಗಿ ಸ್ವಚ್ಛವಾಗಿ ದೋಷರಹಿತವಾಗಿ ಉಪದ್ರವಗಳಿಲ್ಲದಿದ್ದರೆ ಸರಿಯಾದ ಪ್ರಮಾಣದಿಂದ ಪ್ರಸಾದನಾಂಜನವು ಪ್ರಯೋಗಿಸಲ್ಪಟ್ಟಿರುತ್ತೆಂದು ತಿಳಿಯಬೇಕು. ಅಧಿಕಪ್ರಮಾಣದಿಂದ ಪ್ರಯೋಗಿಸಿದರೆ ಕಣ್ಣುಗಳು ಸ್ವಲ್ಪ ವಿಕಾರವಾದರೆ, ಮೃದುವಾದ ಮತ್ತು ರೂಕ್ಷವಾದ ದ್ರವ್ಯಗಳ ಪ್ರಯೋಗವು ಹಿತಕರವಾದದ್ದು.

ಸಾಧಾರಣಮಪಿ ಜ್ಞೇಯಮೇವಂ ರೋಪಣಲಕ್ಷಣಮ್ ।
ಪ್ರಸಾದನವದಾಚಷ್ಟೇ ತಸ್ಮಿನ್ ಯುಕ್ತೇಽತಿ ಭೇಷಜಮ್ ॥೮೧॥

ರೋಪಣಾಂಜನದ ಸಮ್ಯಗ್ಯೋಗ, ಅತಿಯೋಗ ಲಕ್ಷಣಗಳೂ ಪ್ರಸಾದಾಂಜನದ ಸಮ್ಯಗ್ಯೋಗಾತಿಯೋಗ ಲಕ್ಷಣಗಳಂತೆಯೇ ಎಂದು ತಿಳಿಯಬೇಕು. ರೋಪಣಾಂಜನದ ಅತಿಯೋಗದಿಂದುಂಟಾಗುವ ವಿಕಾರಗಳಿಗೆ ಪ್ರಸಾದನಾಂಜನಾತಿಯೋಗದಿಂದುಂಟಾಗುವ ವಿಕಾರಗಳಿಗೆ ಮಾಡುವಂತೆಯೇ ದೋಷಹರಗಳಾದ, ಮೃದು, ರೂಕ್ಷಹರಗಳಾದ ದ್ರವ್ಯಗಳನ್ನು ಪ್ರಯೋಗಿಸಬೇಕು.

ಸ್ನೇಹನಂ ರೋಪಣಂ ಚಾಪಿ ಹೀನಯುಕ್ತಮಪಾರ್ಥಕಮ್ ।
ಕರ್ತವ್ಯಂ ಮಾತ್ರಯಾ ತಸ್ಮಾದಞ್ಜನಂ ಸಿದ್ಧಿಮಿಚ್ಛತಾ ॥೮೨॥

ಪುಟಪಾಕಕ್ರಿಯಾದ್ಯಾಸು ಕ್ರಿಯಾಸ್ವೇಷ್ವೈವ ಕಲ್ಪನಾ ।
ಸಹಸ್ರಶಶ್ಚಾಞ್ಜನೇಷು ಬೀಜೇನೋಕ್ತೇನ ಪೂಜಿತಾ ॥೮೩॥
ದೃಷ್ಟೇರ್ಬಲವಿವೃದ್ಧ್ಯರ್ಥಂ ಯಾಪ್ಯರೋಗಕ್ಷಯಾಯ ಚ ।
ರಾಜಾರ್ಹಾನ್ಯಞ್ಜನಾಗ್ರ್ಯಾಣಿ ನಿಬೋಧೈತಾನ್ಯತಃಪರಮ್ ॥೮೪॥

ಸ್ನೇಹನಾಂಜನ ಮತ್ತು ರೋಪಣಾಂಜನಗಳನ್ನು ಹೀನಪ್ರಮಾಣದಿಂದ ಪ್ರಯೋಗಿಸಿದರೆ ವ್ಯರ್ಥವಾಗುತ್ತದೆ. ಆದಕಾರಣ ಕ್ರಿಯಾಸಿದ್ಧಿಯಾಗಬೇಕಾದರೆ ಸರಿಯಾದ ಪ್ರಮಾಣದಿಂದ ಅಂಜನಪ್ರಯೋಗ ಮಾಡಬೇಕು. ಮೇಲೆ ಹೇಳಿದಂತೆ ಮಧುರ ರಸವನ್ನು ಬಿಟ್ಟು ಉಳಿದ ೫ ರಸಗಳಿಂದ ಲೇಖನ, ಪ್ರಸಾದನ, ರೋಪಣಾಂಜನಗಳನ್ನು ತಯಾರಿಸುವುದನ್ನೇ ಆಧಾರ ಮಾಡಿಕೊಂಡು ಪುಟಪಾಕ, ಸೇಕ, ಆಶ್ಚ್ಯೋತನ, ಅಂಜನ ವಿಧಾನಗಳಲ್ಲಿ ಸಹಸ್ರಾರು ಯೋಗಗಳನ್ನು ಕಲ್ಪನೆ ಮಾಡಿಕೊಳ್ಳಬಹುದು. ಇನ್ನು ಮುಂದೆ ನೇತ್ರದೃಷ್ಟಿಶಕ್ತಿಯು ಹೆಚ್ಚಿ ಯಾಪ್ಯರೋಗಗಳು ನಾಶವಾಗುವುದಕ್ಕೂ ರಾಜರುಗಳಿಗೆ ಪ್ರಯೋಗಿಸುವುದಕ್ಕೂ ಯೋಗ್ಯಗಳಾದ, ಶ್ರೇಷ್ಠಗಳಾದ ಅಂಜನ ವಿಧಾನಗಳನ್ನು ಹೇಳುತ್ತೇವೆ. ಅವುಗಳನ್ನು ಮನವಿಟ್ಟು ಕೇಳು. (ಇದುವರೆಗೆ ರೋಗಹರಣಾಂಜನ ಪ್ರಯೋಗಗಳನ್ನು ವಿವರಿಸಿ ಈಗ ಸ್ವಸ್ಥಾತುರರಿಗೆ ಹಿತಕರಗಳಾದ ಅಂಜನ ಯೋಗಗಳನ್ನು ಹೇಳುತ್ತಾರೆ. ದೃಷ್ಟಿಯು ಮಸೂರಾರ್ಧದಳಮಾತ್ರವಿದೆ. ಅದರ ಬಲವು ಹೆಚ್ಚಾಗುವುದು. ಆರೋಗ್ಯವಂತನ ಹಿತಕ್ಕಾಗಿ ೬ ವಿಧ ಕಾಚಗಳು ಯಾಪ್ಯಗಳು. ಇವುಗಳು ಕ್ಷಯವಾಗುವುದು ರೋಗಿಗೆ ಹಿತಕರವು.)

ಅಷ್ಟೌ ಭಾಗಾನಂಜನಸ್ಯ ನೀಲೋತ್ಪಲಸಮದ್ಯುತೇಃ ।
ಔದುಮ್ಬರಂ ಶಾತಕುಮ್ಭಂ ರಾಜತಂ ಚ ಸಮಾಸತಃ ॥೮೫॥
ಏಕಾದಶ್ಯೈತಾರ್ನ್ ಭಾಗಾಂಸ್ತು ಯೋಜಯೇತ್ಕುಶಲೋ ಭಿಷಕ್ ।
ಮೂಷಾಕ್ಷಿಪ್ತಂ ತದಾಧ್ಮಾತಮಾವೃತಂ ಜಾತವೇದಸಿ ॥೮೬॥
ಖದಿರಾಶ್ಮನ್ತಕಾಙ್ಗಾರೈರ್ಗೋಶಕೃದ್ಭಿರಥಾಪಿ ವಾ ।
ಗವಾಂ ಶಕೃದ್ರಸೇ ಮೂತ್ರೇ ದಧ್ನಿ ಸರ್ಪಿಷಿ ಮಾಕ್ಷಿಕೇ ॥೮೭॥
ತೈಲಮದ್ಯವಸಾಮಜ್ಜಸರ್ವಗನ್ಧೋದಕೇಷು ಚ ।
ದ್ರಾಕ್ಷಾರಸೇಕ್ಷುತ್ರಿಫಲಾರಸೇಷು ಸುಹಿಮೇಷು ಚ ॥೮೮॥
ಸಾರಿವಾದಿಕಷಾಯೇ ಚ ಕಷಾಯೇಚೋತ್ಪಲಾದಿಕೇ ।
ನಿಷೇಚಯೇತ್ ಪೃಥಕ್ ಚೈನಂ ಧ್ಮಾತಂ ಧ್ಮಾತಂ ಪುನಃ ಪುನಃ ॥
ತತೋಽನ್ತರಿಕ್ಷೇ ಸಪ್ತಾಹಂ ಪ್ಲೋತಬದ್ಧಂ ಸ್ಥಿತಂ ಜಲೇ ।
ವಿಶೋಷ್ಯ ಚೂರ್ಣಯೇನ್ಮುಕ್ತಾಂ ಸ್ಫಾಟಿಕಂ ವಿದ್ರುಮಂ ತಥಾ ॥೯೦॥
ಕಾಲಾನುಸಾರ್ಯಂ ಚ ತಥಾ ಶುಚಿರಾವಾಪ್ಯ ಯೋಗತಃ ।
ಏತಚ್ಚೂರ್ಣಾಂಜನಂ ಶ್ರೇಷ್ಠಂ ನಿಹಿತಂ ಭಾಜನೇ ಶುಭೇ ॥೯೧॥
ದನ್ತಸ್ಫಟಿಕವೈಡೂರ್ಯಶಙ್ಖಶೈಲಾಸನೋದ್ಭವೇ ।

> ಶಾತಕುಮ್ಭೇಽಥ ಶಾಙ್ಗ್ರೇ ವಾ ರಾಜತೇ ವಾ ಸುಸಂಸ್ಕೃತೇ ||೯೨||
> ಸಹಸ್ರಪಾಕವತ್ ಪೂಜಾಂ ಕೃತ್ವಾ ರಾಜ್ಞಃ ಪ್ರಯೋಜಯೇತ್ |
> ತೇನಾಙ್ಕ್ತಾಕ್ಷೋ ನೃಪತಿರ್ಭವೇತ್ ಸರ್ವಜನಪ್ರಿಯಃ ||
> ಅಧೃಷ್ಯಃ ಸರ್ವಭೂತಾನಾಂ ದೃಷ್ಟಿರೋಗವಿವರ್ಜಿತಃ ||೯೩||

ನೈದಿಲೆಹೂವಿನ ಬಣ್ಣದಂತಿರುವ ಸೌವೀರಾಂಜನ ೮ ಭಾಗಗಳು, ತಾಮ್ರದ ಪುಡಿ, ಚಿನ್ನದಪುಡಿ, ಬೆಳ್ಳಿಯಪುಡಿ ಇವು ಒಂದೊಂದು ಭಾಗ ಒಟ್ಟು ೧೧ ಭಾಗಗಳನ್ನು ಬುದ್ಧಿವಂತನಾದ ವೈದ್ಯನು ಮೂಷೆಗೆ ತುಂಬಿ ಕಗ್ಗಲಿ ಮತ್ತು ಆರೆಮರಗಳ ಇದ್ದಲೊಳಗೆ ಅಥವಾ ಹಸುವಿನ ಬೆರಣಿಯಲ್ಲಾಗಲೀ ಮುಚ್ಚಿ ಬೆಂಕಿಹಾಕಿ ತಿದಿಯಿಂದ ಊದಿ ಎಲ್ಲವೂ ಕರಗಿ ಒಟ್ಟಿಗೆ ಸೇರಿದ್ದನ್ನು ಕ್ರಮವಾಗಿ (ಒಂದೊಂದರಲ್ಲಿ ೭ ಸಾರಿಯಂತೆ ತಣ್ಣಗಿರುವ ಹಸುವಿನ ಸಗಣಿಯರಸ, ಗಂಜಳ, ಮೊಸರು, ತುಪ್ಪ, ಜೇನುತುಪ್ಪ, ಎಳ್ಳೆಣ್ಣೆ, ಮದ್ಯ, ವಸೆ, ಮಜ್ಜೆ, ಸರ್ವಗಂಧೋದಕ, ದ್ರಾಕ್ಷಿಯ ಕಷಾಯ, ತ್ರಿಫಲಾಕಷಾಯ, ಕಬ್ಬಿನರಸ, ಸಾರಿವಾದಿಗಣದ್ರವ್ಯಗಳ ಕಷಾಯ, ನೀಲೋತ್ಪಲಾದಿಗಣದ್ರವ್ಯಗಳ ಕಷಾಯಗಳಲ್ಲಿ (ಒಂದೊಂದರಲ್ಲಿ ಏಳೇಳು ಸಾರಿ) ಅದ್ದಿ, ಅನಂತರ ಅಂತರಿಕ್ಷೋದಕ (ಮಳೆಯನೀರು) ದಲ್ಲಿ ೭ ದಿನಗಳವರೆಗೆ ಒಂದು ಬಟ್ಟೆಯಲ್ಲಿ ಸುತ್ತಿಟ್ಟಮೇಲೆ ಅದನ್ನು ಚೆನ್ನಾಗಿ ಒಣಗಿಸಿ ಚೂರ್ಣಮಾಡಿ ಇದರೊಡನೆ ಮುತ್ತು, ಸ್ಫಟಿಕಮಣಿ, ಹವಳ, ಅಗಿಲು ಇವೆಲ್ಲ (ಕೆಲವರು ಕಾಲಾನುಸಾರ್ಯವೆಂದೂ, ತಗರಮೂಲವೆಂದೂ, ಸೊಗಡೆಹಂಬೆಂದೂ ಹೇಳುತ್ತಾರೆ) ವನ್ನು ಮಿಶ್ರಮಾಡಿ ಚೂರ್ಣಿಸಿ ಶುಚಿರ್ಭೂತನಾದ ವೈದ್ಯನು ಆನೆಯಹಲ್ಲು, ಸ್ಫಟಿಕ, ವೈಡೂರ್ಯ, ಮಣಿ, ಶಂಖ, ಕಲ್ಲು, ಕೆಂಪುಹೊನ್ನೆಮರ ಇವುಗಳಿಂದ ತಯಾರಿಸಿದ ಡಬ್ಬಿಯಲ್ಲಾಗಲೀ, ಸರಿಯಾಗಿ ಸಂಸ್ಕರಿಸಲ್ಪಟ್ಟ ಚಿನ್ನ, ಕೊಂಬು, ಬೆಳ್ಳಿಯ ಕೊಳವೆಗಳಲ್ಲಾಗಲೀ ತುಂಬಿ ಶಂಖಭೇರಿ, ತಮಟೆ, ಕೊಂಬಿನ ವಾದ್ಯಗಳಿಂದ ಸಹಸ್ರಪಾಕದಂತೆ ಪೂಜೆಮಾಡಿ ರಾಜರಿಗೆ ಅಂಜನಪ್ರಯೋಗವನ್ನು ಮಾಡಬೇಕು. ಈ ಅಂಜನಕ್ಕೆ ಚೂರ್ಣಾಂಜನವೆಂದು ಹೆಸರು. ಈ ಅಂಜನವನ್ನು ಕಣ್ಣುಗಳಿಗೆಚ್ಚಿಕೊಂಡ ದೊರೆಯು ಸಕಲ ಜನರಿಗೂ ಪ್ರೀತಿಪಾತ್ರನಾಗುತ್ತಾನೆ. ದೇವಾಸುರಯಕ್ಷಗಂಧರ್ವ ರಕ್ಷಃ ಪಿತೃ ಪಿಶಾಚ ನಾಗಾದಿ ಗ್ರಹಗಳು ಇವನನ್ನು ಬಾಧಿಸುವುದಿಲ್ಲ ಮತ್ತು ೬ ವಿಧಗಳಾದ ಕಾಚರೋಗಗಳೂ ಪರಿಹಾರವಾಗುತ್ತವೆ. ಯಾವ ವಿಧವಾದ ದೃಷ್ಟಿ ರೋಗವೂ ಇವನನ್ನು ಪೀಡಿಸುವುದಿಲ್ಲ.

> ಕುಷ್ಠಂ ಚನ್ದನಮೇಲಾಶ್ಚ ಪತ್ರಂ ಮಧುಕಮಞ್ಜನಮ್
> ಮೇಷಶೃಙ್ಗಸ್ಯ ಪುಷ್ಪಾಣಿ ವಕ್ರಂ ರತ್ನಾನಿ ಸಪ್ತ ಚ ||೯೪||
> ಉತ್ಪಲಸ್ಯ ಬೃಹತ್ಯೋಶ್ಚ ಪದ್ಮಸ್ಯಾಪಿ ಚ ಕೇಸರಮ್
> ನಾಗಪುಷ್ಪಮುಶೀರಾಣಿ ಪಿಪ್ಪಲೀ ತುತ್ಥಮುತ್ತಮಮ್ ||೯೫||
> ಕುಕ್ಕುಟಾಣ್ಡಕಪಾಲಾನಿ ದಾರ್ವೀಂ ಪಥ್ಯಾಂ ಸರೋಚನಾಮ್
> ಮರಿಚಾನ್ಯಕ್ಷಮಜ್ಜಾನಂ ತುಲ್ಯಾಂ ಚ ಗೃಹಗೋಧಿಕಾಮ್ ||೯೬||

ಕೃತ್ವಾ ಸೂಕ್ಷ್ಮಂ ತತಶ್ಚೂರ್ಣಂ ನ್ಯಸೇದಭ್ಯರ್ಚ್ಯ ಪೂರ್ವವತ್
ಏತದ್ಭದ್ರೋದಯಂ ನಾಮ ಸದೈವಾರ್ಹತಿ ಭೂಮಿಪಃ ||೯೭||

ಚೆಂಗಲ್‌ಕೋಷ್ಠ, ರಕ್ತಚಂದನ, ಸಣ್ಣಏಲಕ್ಕಿ, ಲವಂಗಪತ್ರೆ, ಅತಿಮಧುರ. ಸ್ರೋತೋಂಜನ, ಗೆರ್ಶಿಹಂಬಿನಹೂವು, ತಗರ, ಪದ್ಮರಾಗ, ಪಚ್ಚೆ, ನೀಲ, ಕೆಂಪು, ಮುತ್ತು, ಹವಳ, ಚಿನ್ನ ಈ ಏಳು ರತ್ನಗಳು ; ಸೈದಿಲೆ, ಹೆಗ್ಗುಳ್ಳ, ತಾವರೆಯ ಕುಸುಮ, ನಾಗಕೇಸರಿ, ಲಾಮಂಚ, ಹಿಪ್ಪಲಿ, ವೈಲ್‌ತುತ್ಥ, ಕೋಳಿಮೊಟ್ಟೆಯ ಮೇಲ್ಗಡೆಯ ಓಡು, ಮರದರಿಶಿನ, ಅಣಿಲೆಸಿಪ್ಪೆ, ಗೋರೋಚನ, ಮೆಣಸು, ತಾರೆ ಕಾಯಿಯ ಪೊಪ್ಪು, ಇವೆಲ್ಲವೂ ಸಮಭಾಗವಾಗಿರಬೇಕು. ಹಲ್ಲಿಯನ್ನೂ ಸೇರಿಸಿ ಎಲ್ಲವನ್ನೂ ಸೂಕ್ಷ್ಮ ಚೂರ್ಣಮಾಡಿ ಹಿಂದಿನ ಚೂರ್ಣಾಂಜನಕ್ಕೆ ಹೇಳಿದಂತೆ ಒಂದು ಕೊಳವಿಯಲ್ಲಿ ತುಂಬಿಟ್ಟು ಶಂಖ ಭೇರಿ ಮೊದಲಾದ ವಾದ್ಯಗಳ ಮಧ್ಯೆ ಪೂಜೆಮಾಡಿ ಇಟ್ಟುಕೊಳ್ಳಬೇಕು. ಇದಕ್ಕೆ ಭದ್ರೋದಯಾಂಜನವೆಂದು ಹೆಸರು. ದೊರೆಯು ಇದನ್ನು ಸರ್ವ ಕಾಲದಲ್ಲೂ ಅಂಜನಮಾಡಿಕೊಳ್ಳಲು ಅರ್ಹವಾದದ್ದು.

ವಕ್ರಂ ಸಮರಿಚಂ ಚೈವಮಾಂಸೀಂ ಶೈಲೇಯಮೇವಚ ।
ತುಲ್ಯಾಂಶಾನಿ ಸಮಾನ್ಯೈಸ್ತೈಃ ಸಮಗ್ರೈಶ್ಚ ಮನಃಶಿಲಾ ||೯೮||
ಪತ್ರಸ್ಯ ಭಾಗಾಶ್ಚತ್ವಾರೋ ದ್ವಿಗುಣಂ ಸರ್ವತೋಽಞ್ಜನಮ್ ।
ತಾವಚ್ಚ ಯಷ್ಟೀಮಧುಕಂ ಪೂರ್ವವಚ್ಚೈತದಞ್ಜನಮ್ ||೯೯||

ತಗರ, ಮೆಣಸು, ಜಟಾಮಾಂಸಿ, ಕಲ್ಲುಹೂವು ಇವು ಸಮಭಾಗ, ೪ ಭಾಗ ಮಣಶಿಲೆ, ಲವಂಗಪತ್ರೆ ೩೨ ಭಾಗಗಳು, ಸೌವೀರಾಂಜನವು ೮೦ ಭಾಗಗಳು, ೧೨೦ ಭಾಗಗಳಷ್ಟು ಅತಿಮಧುರ ಎಲ್ಲಾ ಸೇರಿ ೨೪೦ ಭಾಗಗಳಾಗುತ್ತವೆ. ಇವುಗಳ ಚೂರ್ಣವನ್ನು ಶಂಖದುಂದುಭಿ ಧ್ವನಿಗಳಾಗುತ್ತಿರುವಾಗ ಶೃಂಗಾದಿ ಕೊಳವೆಗಳಲ್ಲಿಟ್ಟು ಪೂಜಿಸಿ ಅಂಜನ ಮಾಡಿದರೆ ಅವುಗಳಂತೆಯೇ ಉತ್ತಮಗುಣಗಳುಂಟಾಗುತ್ತವೆ.

ಮನಃಶಿಲಾಂ ದೇವಕಾಷ್ಠಂ ರಜನ್ಯೌ ತ್ರಿಫಲೋಷಣಮ್ ।
ಲಾಕ್ಷಾಲಶುನಮಞ್ಜಿಷ್ಠಾಸೈನ್ಧವೈಲಾಃ ಸಮಾಕ್ಷಿಕಾಃ ||೧೦೦||
ರೋಧ್ರಂ ಸಾವರಕಂ ಚೂರ್ಣಮಾಯಸಂ ತಾಮ್ರಮೇವ ಚ ।
ಕಾಲಾನುಸಾರಿವಾಂ ಚೈವ ಕುಕ್ಕುಟಾಣ್ಡದಳಾನಿ ಚ ||೧೦೧||
ತುಲ್ಯಾನಿ ಪಯಸಾ ಪಿಷ್ಟ್ವಾ ಗುಟಿಕಾಂ ಕಾರಯೇದ್ಬುಧಃ ।
ಕಣ್ಡೂತಿಮಿರಶುಕ್ಲಾರ್ಮರಕ್ತರಾಜ್ಯುಪಶಾನ್ತಯೇ ||೧೦೨||

ಮಣಶಿಲೆ, ದೇವದಾರು, ಅರಿಶಿನ, ಮರದರಿಶಿನ, ತ್ರಿಫಲೆ, ಮೆಣಸು, ಅರಗು, ಬೆಳ್ಳುಳ್ಳಿ, ಮಂಜಿಷ್ಠೆ, ಸೈಂಧವ, ಸಣ್ಣಏಲಕ್ಕಿ, ಜೇನುತುಪ್ಪ, ರೋಧ್ರ, ಕಬ್ಬಿಣದ ಪುಡಿ, ತಾಮ್ರದಪುಡಿ, ಅಗಿಲು, ಕೋಳಿಯಮೊಟ್ಟೆಯಮೇಲಿನ ಓಡು ಇವೆಲ್ಲವನ್ನೂ ಸಮಭಾಗವಾಗಿ ಸೇರಿಸಿ ಹಾಲಿನಲ್ಲರೆದು ಗುಳಿಗೆಮಾಡಿಟ್ಟುಕೊಂಡು ಕಣ್ಣಿಗೆಚ್ಚಿದರೆ ಕಣ್ಣಿನನವೆ, ತಿಮಿರ, ಶುಕ್ಲ, ಅರ್ಮ, ರಕ್ತರಾಜಿ ಇವುಗಳು ನಾಶವಾಗುತ್ತವೆ.

ಕಾಂಸ್ಯಾಪಮಾರ್ಜನಮಸೀ ಮಧುಕಂ ಸೈನ್ಧವಂ ತಥಾ ।
ಏರಣ್ಡಮೂಲಂ ಚ ಸಮಂ ಬೃಹತ್ಯಂಶದ್ವಯಾನ್ವಿತಮ್ ॥೧೦೩॥
ಆಜೇನ ಪಯಸಾ ಪಿಷ್ಟ್ವಾ ತಾಮ್ರಪಾತ್ರಂ ಪ್ರಲೇಪಯೇತ್ ।
ಸಪ್ತಕೃತ್ವಸ್ತು ತಾವರ್ತ್ಯಶ್ಛಾಯಾಶುಷ್ಕಾ ರುಜಾಪಹಾಃ ॥೧೦೪॥

ಕಂಚಿನ ಪಾತ್ರೆಗೆ ಅಂಟಿರುವ ೧ ಭಾಗ ಮಸಿ, ಅತಿಮಧುರ, ಸೈಂಧವ, ಹರಳು ಬೇರು, ಇವು ಸಮಭಾಗ, ಹೆಗ್ಗುಳ್ಳದಬೇರು ೨ ಭಾಗ ಇವೆಲ್ಲವನ್ನೂ ಆಡಿನಹಾಲಿನಲ್ಲಿ ಅರೆದು ತಾಮ್ರದ ಪಾತ್ರೆಗೆ ಬಳಿದು ನೆರಳಿನಲ್ಲಿಟ್ಟು ಒಣಗಿಸಬೇಕು. ಈ ರೀತಿ ಏಳು ಸಾರಿ ಆಡಿನ ಹಾಲಿನಲ್ಲರೆದು ತಾಮ್ರದ ಪಾತ್ರೆಗೆ ಬಳಿದು ನೆರಳಿನಲ್ಲಿ ಒಣಗಿಸಿದ ಈ ವರ್ತಿಗಳನ್ನು ಶೇಖರಿಸಿಟ್ಟು ಅಂಜನ ಹಾಕಿದರೆ ಕಣ್ಣಿನ ನೋವು ನಾಶವಾಗುತ್ತದೆ.

ಪಥ್ಯಾತುತ್ಥಕಯಷ್ಟ್ಯಾಹ್ವೈಸ್ತುಲ್ಯೈರ್ಮರಿಚಷೋಡಶಾ ।
ಪಥ್ಯಾ ಸರ್ವವಿಕಾರೇಷು ವರ್ತಿಃ ಶೀತಾಮ್ಬುಪೇಷಿತಾ ॥೧೦೫॥

ಅಣಿಲೆಕಾಯಿಸಿಪ್ಪೆ, ಮೈಲ್‌ತುತ್ಥ, ಅತಿಮಧುರ, ಇವು ಒಂದೊಂದು ಭಾಗ, ಮೆಣಸು ೧೬ ಭಾಗ ಇವುಗಳನ್ನೆಲ್ಲಾ ಕೂಡಿಸಿ ತಣ್ಣೀರಿನಲ್ಲಿ ಅರೆದು ವರ್ತಿಮಾಡಿಟ್ಟು ಕೊಂಡು ಕಣ್ಣಿಗೆಚ್ಚಿದರೆ ಎಲ್ಲಾ ವಿಧದ ನೇತ್ರರೋಗಗಳಲ್ಲೂ ಹಿತವಾಗುತ್ತದೆ.

ರಸಕ್ರಿಯಾವಿಧಾನೇನ ಯಥೋಕ್ತವಿಧಿಕೋವಿದಃ ।
ಪಿಣ್ಡಾಞ್ಜನಾನಿ ಕುರ್ವೀತ ಯಥಾಯೋಗಮತನ್ದ್ರಿತಃ ॥೧೦೬॥

ಶುಷ್ಕವರ್ತಿಯನ್ನು ಅಂಜನವಾಗಿ ಉಪಯೋಗಿಸಿದರೆ ಕಣ್ಣಿನಲ್ಲಿ ಘಾಯವಾಗುತ್ತೆಂಬ ಭಯದಿಂದ ವಿಧಾನವನ್ನು ತಿಳಿದ ವೈದ್ಯನು ರಸಕ್ರಿಯಾ ವಿಧಾನದಿಂದ ಪಿಂಡಾಂಜನವನ್ನು ತಯಾರಿಸಿ ಜಾಗರೂಕನಾಗಿ ಕಲ್ಲುಪತ್ತಿನಲ್ಲಿ ಅರೆದು ಶಲಾಕಿಯಿಂದ ಅತಿಗಟ್ಟಿಯಾಗಿಯೂ ಇರದೆ ಅತಿ ನೀರಾಗಿಯೂ ಇರದೆ ಹದವರಿತು ಕಣ್ಣಿಗೆಚ್ಚಬೇಕು. ಯಾವಾಗಲೂ ಒಣಗಿದ ವರ್ತಿಯನ್ನು ಕಣ್ಣಿಗೆಚ್ಚಲೇಬಾರದು. ನೀರಿನಲ್ಲಿ ಅರೆದು ಹಚ್ಚಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ಕ್ರಿಯಾಕಲ್ಪ
ನಾಮಕಾಷ್ಟಾದಶಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹ
ಶರ್ಮಕೃತ ಕರ್ಣಾಟಕ ಭಾಷಾವಿವೃತಿಃ.

ಏಕೋನವಿಂಶತಿತಮೋಽಧ್ಯಾಯಃ

ಅಥಾತೋ ನಯನಾಭಿಘಾತಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ನಯನಾಭಿಘಾತ ಚಿಕಿತ್ಸೆಯನ್ನು ಹೇಳುತ್ತೇವೆ ; ಅಂದರೆ ಇದುವರೆಗೆ ಶರೀರ ದೋಷಗಳ ಪ್ರಕೋಪಗಳಿಂದುಂಟಾದ ನೇತ್ರರೋಗಗಳ ಚಿಕಿತ್ಸೆಯನ್ನು ಹೇಳಿದ್ದಾಯಿತು. ಈಗ ಬಾಹ್ಯ ಅಭಿಘಾತಗಳಿಂದುಂಟಾಗುವ ನೇತ್ರವೇದನೆಗಳಿಗೆ ಚಿಕಿತ್ಸೆಯನ್ನು ಹೇಳಲಾಗುತ್ತದೆ. ಈ ಬಾಹ್ಯಾಭಿಘಾತಗಳು ಪ್ರತ್ಯಕ್ಷವಾಗಿ ದಂಡಾದಿಗಳ ಪೆಟ್ಟು ಬೀಳುವುದರಿಂದಲೂ ಭಯ ಶೋಕಾದಿಗಳಿಂದಲೂ ಉಂಟಾಗುತ್ತವೆಯಾಗಿ ಅವನ್ನು ಇಲ್ಲಿ ವಿವರಿಸುತ್ತೇವೆ.

ಅಭ್ಯಾಹತೇ ತು ನಯನೇ ಬಹುಧಾ ನರಾಣಾಂ ಸಂರಮ್ಭರಾಗ ತುಮುಲಾಸು ರುಜಾಸು ಧೀವಾನ್ ।

ನಸ್ಯಪ್ರಲೇಪಪರಿಷೇಚನ ತರ್ಪಣಾದ್ಯಮುಕ್ತಂ ಪುನಃ ಕ್ಷತಜ ಪಿತ್ತಜ ಶೂಲಪಥ್ಯಮ್ ||೩||

ದೃಷ್ಟಿಪ್ರಸಾದಜನನಂ ವಿಧಿಮಾಶು ಕುರ್ಯಾತ್ ಸ್ನಿಗ್ಧೈರ್ಹಿಮೈಶ್ಚ ಮಧುರೈಶ್ಚ ತಥಾ ಪ್ರಯೋಗೈಃ ।

ಮನುಷ್ಯರ ಕಣ್ಣುಗಳಿಗೆ ದೊಣ್ಣೆ ಶಸ್ತ್ರ ಕಲ್ಲು ಮೊದಲಾದುವುಗಳಿಂದ ಬಹಳ ಪೆಟ್ಟು ಬಿದ್ದು ರಾಗ, ದಾಹ, ಶೋಫ, ಪಾಕ ಘರ್ಷ, ಮೊದಲಾದ ಮಿಶ್ರವೇದನೆಗಳಿಂದ ಪೀಡಿತರಾದರೆ ಬುದ್ಧಿವಂತನಾದ ಶಸ್ತ್ರವೈದ್ಯನು ಕೂಡಲೇ (೭ ದಿನಗಳೊಳಗೆ) ನಸ್ಯ, ಪ್ರಲೇಪ, ಪರಿಷೇಚನೆ, ತರ್ಪಣಾದಿಗಳನ್ನೂ, ರಕ್ತಾಭಿಷ್ಯಂದಾ ಶೂಲೆಯಲ್ಲಿ ಹೇಳಿದ ಚಿಕಿತ್ಸೆಗಳನ್ನೂ ಸ್ನಿಗ್ಧ, ಮಧುರ ದ್ರವ್ಯಗಳಿಂದ ದೃಷ್ಟಿ ಪ್ರಸಾದಕರಗಳಾದ ಚಿಕಿತ್ಸಾ ವಿಧಾನಗಳನ್ನೂ ಅನುಸರಿಸಬೇಕು ; ಅಂದರೆ ನಯನಗೋಳಕ್ಕೆ ಸುಖವಾಗುವಂತೆ ಎಚ್ಚರಿಕೆಯಿಂದ ಚಿಕಿತ್ಸೆ ಮಾಡಬೇಕು.

ಸ್ವೇದಾಗ್ನಿಧೂಮಭಯಶೋಕರುಜಾಭಿಘಾತೈರಭ್ಯಾಹತಾಮಪಿ ತಥೈವ ಭಿಷಕ್ ಚಿಕಿತ್ಸೇತ್ ||೪||

ಸದ್ಯೋಽಹತೇ ನಯನ ಏಷವಿಧಿಸ್ತದೂರ್ಧ್ವಂ ಸ್ಯನ್ದೇರಿತೋ ಭವತಿ ದೋಷಮವೇಕ್ಷ್ಯ ಕಾರ್ಯಃ ।

ಅಭ್ಯಾಹತಂ ನಯನಮೀಕ್ಷದಥಾಸ್ಯ ಬಾಷ್ಪಂ ಸಂಸ್ವೇದಿತಂ ಭವತಿ ತನ್ನಿರುಜಂ ಕ್ಷಣೇನ ||೫||

ಸ್ವೇದ, ಅಗ್ನಿ ಹೊಗೆ, ಭಯ, ವ್ಯಸನ, ಬಹಿರ್ಭಾಗದಲ್ಲಿ ಪೆಟ್ಟು ಬೀಳುವುದು ಇವುಗಳಿಂದ ಬಾಧೆಯುಂಟಾದರೂ ಮೇಲೆ ಹೇಳಿದಂತೆ ನಸ್ಯ, ಲೇಪಾದಿಗಳಿಂದ ಉಪಚರಿಸಬೇಕು. ಸದ್ಯೋಹತವೆಂದರೆ ವೈದ್ಯಶಾಸ್ತ್ರದಲ್ಲಿ ಪೆಟ್ಟುಬಿದ್ದ ೭ ದಿವಸಗಳೊಳಗೆಂದು ಅರ್ಥವು. ಈ ರೀತಿಯಾಗಿ ಚಿಕಿತ್ಸೆಮಾಡಿ ; ಅನಂತರ ದೋಷ ಪ್ರಕೋಪಗಳಿಗೆ ಅನುಸಾರವಾಗಿ ಅಭಿಷ್ಯಂದದಲ್ಲಿ ಹೇಳಿರುವಂತೆ ಚಿಕಿತ್ಸಾವಿಧಾನಗಳನ್ನು ಮಾಡಬೇಕು ; ಪೆಟ್ಟುಬಿದ್ದ ಕೂಡಲೇ ಕಣ್ಣಿನಮೇಲೆ ಬಿಸಿಬಿಸಿಯಾಗಿ ಮುಖ ಊದಿದರೆ ತಕ್ಷಣದಲ್ಲೇ ನೋವು ನಿಂತುಬಿಡುತ್ತದೆ.

ಸಾಧ್ಯಂ ಕ್ಷತಂ ಪಟಲಮೇಕಮುಭೇ ತು ಕೃಚ್ಛ್ರೇ ತ್ರೀಣಿ ಕ್ಷತಾನಿ ಪಟಲಾನಿ ವಿವರ್ಜಯೇತ್ತು ।
ಸ್ಯಾತ್ ಪಿಚ್ಚಿತಂ ಚ ನಯನಂ ಹೃತಿ ಚಾವಸನ್ನಂ ಸ್ರಸ್ತಂ ಚ್ಯುತಂ ಚ ಹತದೃಕ್ ಚ ಭವೇತ್ತು ಯಾಪ್ಯಮ್ ॥೬॥
ವಿಶೀರ್ಣದೃಷ್ಟಿತನುರಾಗಮಸತ್ಪ್ರದರ್ಶಿ ಸಾಧ್ಯಂ ಯಥಾಸ್ಥಿತ ಮನಾವಿಲದರ್ಶನಂ ಚ ।
ಪ್ರಾಣೋಪರೋಧವಮನಕ್ಷವಕಣ್ಠರೋಧೈರುನ್ನಮ್ಯಮಾಶುನಯನಂ ಯದತಿಪ್ರವಿಷ್ಟಮ್ ॥೭॥
ನೇತ್ರೇ ವಿಲಮ್ಬಿನಿ ವಿಧಿರ್ವಿಹಿತಃ ಪುರಸ್ತಾದುತ್ಪಿಜ್ಗನಂ ಶಿರಸಿ ವಾರ್ಯವಸೇಚನಂ ಚ ।

ಅಭಿಘಾತದಿಂದ ಮೊದಲನೆಯ ಪಟಲಕ್ಕೆ ಪೆಟ್ಟುಬಿದ್ದರೆ ಸಾಧ್ಯವಾಗುತ್ತದೆ. ಎರಡನೆಯ ಪಟಲಕ್ಕೂ ವ್ಯಾಪಿಸಿದರೆ ಕೃಚ್ಛ್ರಸಾಧ್ಯವು. ಮೂರು ಪಟಲಗಳು ಘಾಯ ಹೊಂದಿದರೆ ತ್ಯಜಿಸಿಬಿಡಬೇಕು. (ಅಸಾಧ್ಯವು) ; ಪೆಟ್ಟುಬಿದ್ದು ಮುರಿದ ಮೂಳೆಯೊಡನೆ ಪೆಟ್ಟುಬಿದ್ದ ಶರೀರ ಭಾಗವು ದಪ್ಪವಾಗಿ ಊದಿ ಮಜ್ಜೆಯೂ ರಕ್ತವೂ ಮಿಶ್ರವಾಗಿದ್ದರೆ ಆ ವ್ರಣಕ್ಕೆ ಪಿಚ್ಚಿತವೆಂದು ಹೆಸರು ; ಹೀಗೆ ಬಾಹ್ಯಾಭಿಘಾತದಿಂದ ನೇತ್ರಗೋಳವು ಪಿಚ್ಚಿತವಾದರೆ (ಅತಿಯಾಗಿ ಒಳಗಡೆಗೆ ಇಳಿದು ಹೋದರೆ) ಜಾರಿ ಹೊರಕ್ಕೆ ಕಳಚಿಬಿದ್ದರೆ, ದೃಷ್ಟಿಶಕ್ತಿಯು ನಾಶವಾದರೆ ಯಾಪ್ಯವು. ದೃಷ್ಟಿಮಂಡಲವು ಹರಿದು ಹೋಗಿ ಸ್ವಲ್ಪ ಕೆಂಪಾಗಿ ಪದಾರ್ಥಗಳ ರೂಪು ಸರಿಯಾಗಿ ಕಾಣದಿದ್ದರೂ ಯಾಪ್ಯವು ; ಮೊದಲಿನಂತೆಯೇ ಸ್ವಸ್ಥಾನದಲ್ಲಿದ್ದು ದೃಷ್ಟಿಯಲ್ಲಿ ಕೊಳೆ ಸೇರಿಕೊಳ್ಳದೆ ಸ್ಪಷ್ಟವಾಗಿ ಪದಾರ್ಥಗಳ ಸ್ವರೂಪವು ಕಂಡರೆ ಸುಖಸಾಧ್ಯವೆಂದರಿಯಬೇಕು ; ಕಣ್ಣಿನಗುಡ್ಡೆಯು ಅತಿಯಾಗಿ ಆಳಕ್ಕೆ ಇಳಿದುಹೋಗಿದ್ದರೆ ಪ್ರಾಣಾಯಾಮದ ಮೂಲಕ ಪ್ರಾಣವಾಯುವನ್ನು ತಡೆಯುವುದರಿಂದಲೂ ವಮನಮಾಡುವುದು ಶೀನುವುದು, ಕತ್ತನ್ನು ಅಮುಕುವುದು ಇತ್ಯಾದಿ ಉಪಾಯಗಳಿಂದಲೂ ಮೇಲಕ್ಕೆ ಎಬ್ಬಿಸಬೇಕು ; ಹೊರಕ್ಕೆ ಜಾರಿಬಂದು ಜೋತಾಡುತ್ತಿರುವ ಕಣ್ಣುಗುಡ್ಡೆಯನ್ನು ಸರಿಯಾಗಿ ಅದರ ಸ್ಥಾನದಲ್ಲಿ ಸೇರಿಸಿ ಹಿಂದೆ ಹೇಳಿರುವಂತೆ ಚಿಕಿತ್ಸೆ ಮಾಡಬೇಕು. ಮೂಗಿನಿಂದ ವಾಯುವನ್ನು ಮೇಲಕ್ಕೆ ಎಳೆದುಕೊಳ್ಳುವುದು, ತಲೆಯಮೇಲೆ ತಣ್ಣೀರನ್ನು ಸುರಿಸುವುದು ಇವುಗಳಿಂದ ಬಿಗಿದು ಹಿಡಿದುಕೊಳ್ಳುವಂತೆ ಮಾಡಬೇಕು.

ಷಟ್‌ಸಪ್ತತಿರ್ನಯನಜಾ ಯ ಇಮೇ ಪ್ರದಿಷ್ಟಾ ರೋಗಾ ಭವನ್ತ್ಯ ಮಹತಾಂ ಮಹತಾಂ ಚ ತೇಭ್ಯಃ ||೮||

ಸ್ತನ್ಯಪ್ರಕೋಪ ಕಫಮಾರುತಪಿತ್ತ ರಕ್ತೈರ್ಬಾಲಾಕ್ಷಿವರ್ತ್ಮಭವ ಏವಕುಕೂಣಕೋsನ್ಯಃ |

ಇದುವರೆಗೆ ವಿವರಿಸಿದ ೭೬ ವಿಧ ನೇತ್ರರೋಗಗಳು ದೊಡ್ಡವರಿಗೂ ಬಾಲಕರಿಗೂ ಸಂಭವಿಸುತ್ತವೆ. ಬಾಲಕರ ನೇತ್ರಗಳ ರೆಪ್ಪೆಗಳಲ್ಲಿ ದುಷ್ಟಸ್ತನ್ಯಪಾನದಿಂದ ಪ್ರಕೋಪ ಹೊಂದಿ ಕಫ, ವಾತ, ಪಿತ್ತ, ರಕ್ತಗಳಿಂದುಂಟಾಗುವ ಕುಕೂಣಕವೆಂಬ ನೇತ್ರ ರೋಗವು ಮೇಲ್ಕಂಡ ೭೬ ವಿಧ ನೇತ್ರರೋಗಗಳಿಗೆ ಭಿನ್ನವಾದದ್ದು. ಆದ್ದರಿಂದ ಸಂಖ್ಯೆಯಲ್ಲಿ ಅಧಿಕವಾಗುತ್ತದೆಂಬ ಸಂದೇಹವುಂಟಾಗುತ್ತದೆ. ಇದು ದೊಡ್ಡವರಿಗೆ ಕಣ್ಣಿನರೆಪ್ಪೆಗಳಲ್ಲುಂಟಾಗುವುದಿಲ್ಲ. ಇದನ್ನು ಪಕ್ಷ್ಮಾಭಿಷ್ಯಂಧದಲ್ಲೇ ಅಡಕವಾಡಿರುತ್ತಾರಾಗಿ ನೇತ್ರ ರೋಗಗಳು ಸಂಖ್ಯೆಯಲ್ಲಿ ಅಧಿಕವಾಗುವುದಿಲ್ಲವೆಂದು ತಿಳಿಯತಕ್ಕದ್ದು.

ಮೃದ್ನಾತಿ ನೇತ್ರಮತಿಕಣ್ಡು ಮಥಾಕ್ಷಿಕೂಟನಾಸಾಲಲಾಟಮಪಿ ತೇನ ಶಿಶುಃ ಸ ನಿತ್ಯಮ್ ||೯||

ಸೂರ್ಯಪ್ರಭಾಂ ನ ಸಹತೇ ಸ್ರವತಿಪ್ರವೃದ್ಧಂ ತಸ್ಯಾ ಹರೇದ್ರುಧಿರಮಾಶು ವಿನಿರ್ಲಿಖೇಚ್ಚ |

ಕ್ಷೌದ್ರಾಪ್ರಯುಕ್ತೈಶ್ಚ ಕಟುಭಿಃ ಪ್ರತಿಸಾರಯೇತ್ತು ಮಾತುಃ ಶಿಶೋರಭಿಹಿತಂ ಚ ವಿಧಿಂ ವಿದಧ್ಯಾತ್ ||೧೦||

ಕುಕೂಣಕಲಕ್ಷಣ : ಕಣ್ಣಿನಲ್ಲಿ ಅತಿಯಾಗಿ ನವೆಯಾಗುವುದರಿಂದ ಮಗುವು ಕಣ್ಣಿನಸಂಧಿಗಳನ್ನೂ (ಅಪಾಂಗಕನೀನಿಕೆಗಳು) ಮೂಗು, ಹಣೆಗಳನ್ನೂ, ಕೈಯ್ಯಿನಿಂದ ಸದಾ ಹಿಸುಗುತ್ತದೆ. ಸೂರ್ಯನ ಬೆಳಕನ್ನು ನೋಡಲಾರದು. ಅತಿಯಾಗಿ ಕಣ್ಣೀರು ಸುರಿಯುತ್ತದೆ. ಆ ಮಗುವಿಗೆ ಸಿರಾವ್ಯಧವಾಡಿಸಿ ದುಷ್ಟರಕ್ತವನ್ನು ಸ್ರಾವಮಾಡಿಸ ಬೇಕು. ಕಣ್ಣಿನಲ್ಲಿ ಬೆಳೆದಿರುವ ದುರ್ಮಾಂಸವನ್ನು ನೈಲ್‌ತುತ್ಥ, ಸುರುಸುರಿಕೆ, ಪಾರಿಜಾತ ಮೊದಲಾದ ತರಿತರಿಯಾದ (ಒರಟಾದ) ಎಲೆಗಳಿಂದ ಉಜ್ಜಿ ರಕ್ತವು ಸುರಿಯುವಂತೆ ಮಾಡಬೇಕು. ತ್ರಿಕಟು ಮೊದಲಾದ ಕಟುದ್ರವ್ಯಗಳ ಚೂರ್ಣವನ್ನು ಜೇನು ತುಪ್ಪದಿಂದ ರಂಗಳಿಸಿ ಕಣ್ಣಿಗೆಚ್ಚಿ ದ್ರವಸ್ರಾವವನ್ನು ಮಾಡಬೇಕು. ಅನಂತರ ಮಗುವಿಗೂ, ತಾಯಿಗೂ ಅಥವಾ ದಾದಿಗೂ ಹೇಳಿರುವಂತೆ ಸ್ತನ್ಯಶುದ್ಧಿ ಚಿಕಿತ್ಸೆಗಳನ್ನು ಮಾಡಿಸ ಬೇಕು.

ತಂ ವಾಮಯೇತ್ತು ಮಧುಸೈನ್ಧವ ಸಂಪ್ರಯುಕ್ತೈಃ ಪೀತಂ ಪಯಃಖಲು ಪಲೈಃ ಖರ ಮಞ್ಜರೀಣಾಮ್ ||೧೧||

ಸ್ಯಾತ್ಪಿಪ್ಪಲೀಲವಣಮಾಕ್ಷಿಕಸಂಯುತೈರ್ವಾ ನೈನಂ ವಮನ್ತಮಪಿ ವಾಮಯಿತುಂ ಯತೇತ |

ದತ್ವಾ ವಚಾಮಶನದುಗ್ಧಭುಜೇ ಪ್ರಯೋಜ್ಯಮೂರ್ಧ್ವಂ ತತಃ ಫಲಯುತಂ ವಮನಂ ವಿದಿಜ್ಞೈಃ ||೧೨||

ಜಮ್ಬ್ವಾಮ್ರಧಾತ್ರ್ಯರ್ಣದಳೈಃ ಪರಿಧಾವನಾರ್ಥಂ ಕಾರ್ಯಂ ಕಷಾಯಮವಸೇಚನ
ಮೇವ ಚಾಪಿ ।

ಹಾಲು ಕುಡಿಯುವ ಮಗುವಿಗೆ ಜೇನುತುಪ್ಪ, ಸೈಂಧವಚೂರ್ಣ, ಸ್ತನ್ಯ, ಉತ್ತರಣೆಯಬೀಜ ಚೂರ್ಣಗಳನ್ನು ರಂಗಳಿಸಿಯಾಗಲೀ ; ಹಿಪ್ಪಲಿ, ಸೈಂಧವ, ಜೇನುತುಪ್ಪ, ಉತ್ತರಣೆಯಬೀಜಗಳ ಚೂರ್ಣವನ್ನು ಸ್ತನ್ಯದಲ್ಲಿ ಸೇರಿಸಿ ರಂಗಳಿಸಿಯಾಗಲೀ ಕುಡಿಸಿದರೆ ವಮನವಾಗುತ್ತದೆ. ತಾನಾಗಿ ವಮನಮಾಡುವ ಮಕ್ಕಳಿಗೆ ವಮನೌಷಧಿಯನ್ನು ಕುಡಿಸಬಾರದು. ಅನ್ನವನ್ನು ತಿಂದು ಸ್ತನ್ಯಪಾನವನ್ನೂ ಮಾಡುವ ಹುಡುಗರಿಗೆ ಹಿಂದೆ ಹೇಳಿದ ಸೈಂಧವ, ಜೇನುತುಪ್ಪ, ಹಿಪ್ಪಲಿ, ಉತ್ತರಣೆ ಬೀಜಗಳೊಡನೆ ಬಜೆಯನ್ನೂ ಸೇರಿಸಿ ಪುಡಿಮಾಡಿ ಹಾಲಿನಲ್ಲಿ ಕದರಿ ಕುಡಿಸಬೇಕು. ಸ್ತನ್ಯಪಾನವನ್ನು ಮಾಡದೆ ಬರಿಯ ಅನ್ನವನ್ನು ತಿನ್ನುವ ಹುಡುಗರಿಗೆ ಹಿಂದೆ ಹೇಳಿದ ವಮನೌಷಧಗಳೊಡನೆ ಮಗ್ಗಾರೆಕಾಯಿ ಚೂರ್ಣವನ್ನೂ ಸೇರಿಸಿ ಹಾಲಿನೊಡನೆಯಾಗಲೀ, ಹಾಲನ್ನು ಸೇರಿಸದೆ ಯಾಗಲೀ ಕುಡಿಸಿ ವಮನಮಾಡಿಸಬೇಕು. ಕುಕೂಣಕರೋಗದಲ್ಲಿ ರೆಪ್ಪೆಗಳನ್ನು ತೊಳೆಯುವುದಕ್ಕೂ ಕಣ್ಣುಗಳ ಮೇಲೆ ಸೇಚನೆಮಾಡುವುದಕ್ಕೂ ನೇರಳೆ, ಮಾವು, ನೆಲ್ಲೀಗಿಡಗಳ ಮತ್ತು ಆರೆಮರದ ಎಲೆಗಳ ಕಷಾಯವನ್ನು ಉಪಯೋಗಿಸಬೇಕು.

ಆಶ್ಚ್ಯೋತನೇ ಚ ಹಿತಮತ್ರಘೃತಂ ಗುಡೂಚೀಸಿದ್ಧಂ ತಥಾಹುರಪಿ ಚ ತ್ರಿಫಲಾ ವಿಪ
ಕ್ವಮ್ ॥೧೩॥

ನೇಪಾಲಜಾಮರಿಚಶಙ್ಖರಸಾಞ್ಜನಾನಿ ಸಿನ್ಧುಪ್ರಸೂತಗುಡ ಮಾಕ್ಷಿಕಸಂಯುತಾನಿ ।
ಸ್ಯಾದಞ್ಜನಂ ಮಧುರಸಾಮಧುಕಾಮ್ರಕೈರ್ವಾ ಕೃಷ್ಣಾಯಸಂ ಘೃತಪಯೋಮಧು
ವಾ ಪಿ ಘೃಷ್ಟಮ್ ॥೧೪॥

ಕುಕೂಣಕದಲ್ಲಿ ಆಶ್ಚ್ಯೋತನಮಾಡಲು ಕಲ್ಕವಿಲ್ಲದ ೨ ವಿಧ ಘೃತಗಳನ್ನು ಹೇಳಿರುತ್ತಾರೆ. ಅಮೃತವಳ್ಳಿರಸ ೪ ಭಾಗ ಘೃತವನ್ನು ಸೇರಿಸಿ ತಯಾರಿಸಿದ ಗುಡೂಚೀಘೃತವನ್ನಾಗಲೀ, ತ್ರಿಫಲಾಘೃತವನ್ನಾಗಲೀ (೪ ಭಾಗ ತ್ರಿಫಲಾ ಕಷಾಯದೊಡನೆ ೧ ಭಾಗ ತುಪ್ಪವನ್ನು ಸೇರಿಸಿ ತಯಾರಿಸಬೇಕು.) ಆಶ್ಚ್ಯೋತನ ಮಾಡಬೇಕು. ಅಂಜನಗಳನ್ನು ಹೇಳುತ್ತಾರೆ. ೧ ನೆಯದು ಮಣಶಿಲೆ, ಮೆಣಸು, ಶಂಖ, ರಸಾಂಜನ, ಸೈಂಧವ, ಬೆಲ್ಲ, ಜೇನುತುಪ್ಪಗಳನ್ನು ರಂಗಳಿಸಿ ಅಂಜನ ಹಾಕಬೇಕು. ೨ ನೆಯದು :- ಕೊರಟಿಗೆ ಬೇರು, ಅತಿಮಧುರ, ಮಾವಿನಬೀಜದ ತಿರುಳು, ಇವುಗಳ ಕಲ್ಕದಿಂದ ಅಂಜನಹಾಕಬೇಕು. ಇದಕ್ಕೆ ಚೂರ್ಣಾಂಜನವೆಂದು ಹೇಳುತ್ತಾರೆ. ಕಬ್ಬಿಣದಪುಡಿ, ತುಪ್ಪ, ಹಾಲು, ಜೇನುತುಪ್ಪಗಳನ್ನು ಸೇರಿಸಿ ಉಜ್ಜಿ ಅಂಜನಮಾಡಬೇಕು.

ವ್ಯೋಷಂ ಪಲಾಣ್ಡು ಮಧುಕಂ ಲವಣೋತ್ತಮಂ ಚ ಲಾಕ್ಷಾಂ ಚ ಗೈರಿಯುತಾಂ ಗುಟಿ
ಕಾಞ್ಜನಂ ವಾ

ನಿಮ್ಬಚ್ಛದಂ ಮಧುಕ ದಾರ್ವಿ ಸತಾಮ್ರ ಲೋಧ್ರ ಮಿಚ್ಛನ್ತಿ ಚಾತ್ರ ಭಿಷಜೋಽಞ್ಜನ
ಮಂಶತುಲ್ಯಮ್ ॥೧೫॥

ಗುಟಿಕಾಂಜನ : ತ್ರಿಕಟು, ಈರುಳ್ಳಿ, ಅತಿಮಧುರ, ಸೈಂಧವ, ಅರಗು, ಕಾವಿ, ಬೇವಿನಸೊಪ್ಪು, ಅತಿಮಧುರ, ಮರದರಿಶಿನ, ತಾಮ್ರದಪುಡಿ, ಲೋಧ್ರ, ಇವುಗಳನ್ನು ಸಮಸಮಭಾಗಗಳಿಂದ ಸೇರಿಸಿ ಚೂರ್ಣಮಾಡಿಟ್ಟುಕೊಂಡು ಪ್ರಯೋಗಿಸಬೇಕು. ಈ ರೀತಿಯಾಗಿ ೨ ವಿಧ ಚೂರ್ಣಾಂಜನಗಳನ್ನು ಹೇಳಿರುತ್ತಾರೆ.

ಸ್ರೋತೋಜಶಙ್ಖದಧಿಸೈಂಧವಮರ್ಧಪಕ್ಷಂ ಶುಕ್ರಂ ಶಿಶೋರ್ನುದತಿ ಭಾವಿತಮಞ್ಜನೇನ।
ಸ್ಯನ್ದೇ ಕಫಾದಭಿಹಿತಂ ಕ್ರಮಮಾಚರೇಚ್ಚ ಬಾಲಸ್ಯ ರೋಗ ಕುಶಲೋಕ್ಷಿಗದಂ
ಜಿಘಾಂಸುಃ ||೧೬||

ಸ್ರೋತೋಂಜನ, ರಸಾಂಜನ, ಶಂಖ, ಮೊಸರು, ಸೈಂಧವಲವಣ ಇವುಗಳನ್ನು ಅರ್ಧಪಕ್ಷದವರೆಗೆ ಭಾವನೆಮಾಡಿಕೊಂಡು ಈ ರಸಾಂಜನದಿಂದ ಮಕ್ಕಳ ಕಣ್ಣಿಗೆ ಅಂಜನ ಹಾಕಿದರೆ ಶುಕ್ರವು ನಿವಾರಣೆಯಾಗುತ್ತದೆ. ನೇತ್ರವೈದ್ಯನು ಕಫಾಭಿಷ್ಯಂದ ವಿಧಾನದಂತೆಯೇ ಬಾಲಕರ ನೇತ್ರರೋಗಗಳಿಗೆ ಚಿಕಿತ್ಸೆಮಾಡಬೇಕು.

ಟಿಪ್ಪಣಿ : ಸ್ರೋತೋಂಜನವೆಂದರೆ ಸೌವೀರಾಂಜನವೆಂದು ಕೆಲವರ ಮತವು ಹಸುವಿನ ಮೊಸರಿನಲ್ಲಿ ಸೈಂಧವವನ್ನು ಕರಗಿಸಿ ರಸಾಂಜನಕ್ಕೆ ಬಳಿಯಬೇಕು. ಹೀಗೆ $2\frac{1}{2}$ ದಿನಗಳವರೆಗೆ ಭಾವನೆಮಾಡಿ ಅರೆದು ಬತ್ತಿಗಳನ್ನುಮಾಡಿ ಮಕ್ಕಳ ಕಣ್ಣಿಗೆಚ್ಚಲು ಶುಕ್ರಹರವು.

ಸಮುದ್ರ ಇವಗಮ್ಭೀರಂ ನೈವ ಶಕ್ಯಂ ಚಿಕಿತ್ಸಿತಮ್ ।
ವಕ್ತುಂ ನಿರವಶೇಷೇಣ ಶ್ಲೋಕಾನಾಮಯುತೈರಪಿ ||೧೭||
ಸಹಸ್ರೈರಪಿ ಚ ಪ್ರೋಕ್ತಮರ್ಥಮಲ್ಪಮತಿರ್ನರಃ ।
ತರ್ಕಗ್ರನ್ಥಾರ್ಥರಹಿತೋ ನೈವಗೃಹ್ಣಾತ್ಯಪಣ್ಡಿತಃ ||೧೮||
ತದಿದಂ ಬಹುಗೂಢಾರ್ಥಂ ಚಿಕಿತ್ಸಾಬೀಜಮೀರಿತಮ್ ।
ಕುಶಲೇನಾಭಿಪನ್ನಂ ತದ್ಬಹುಧಾಭಿಪ್ರರೋಹತಿ ||೧೯||
ತಸ್ಮಾನ್ಮತಿಮತಾ ನಿತ್ಯಂ ನಾನಾಶಾಸ್ತ್ರಾರ್ಥದರ್ಶಿನಾ ।
ಸರ್ವಮೂಹ್ಯಮಗಾಧಾರ್ಥಂ ಶಾಸ್ತ್ರಮಾಗಮಬುದ್ಧಿನಾ ||೨೦||

ಈ ಚಿಕಿತ್ಸಾಶಾಸ್ತ್ರವು ಸಮುದ್ರದಂತೆ ಅತಿ ಗಹನವಾದದ್ದು. ಒಂದು ಕೋಟಿ ಶ್ಲೋಕಗಳಿಂದಲೂ ಸಂಪೂರ್ಣವಾಗಿ ಹೇಳಿ ತಿಳಿಸುವುದಕ್ಕಾಗುವುದಿಲ್ಲ. (೧೦೦೦೦೦೦೦ ಅಂದರೆ ೧೦೦೦ ಅಯುತ ಶ್ಲೋಕಗಳಿಂದಲೂ ಹೇಳಿ ತಿಳಿಸಲಾಗದಿರುವ ಚಿಕಿತ್ಸಾಶಾಸ್ತ್ರವನ್ನು ಕೇವಲ ೧ ಸಾವಿರ ಶ್ಲೋಕದಿಂದ ಇತ್ಯಾದಿಯಾಗಿ ತಿಳಿದುಕೊಳ್ಳಬೇಕು.) ಕೇವಲ ಸಾವಿರ ಶ್ಲೋಕಗಳಿಂದ ಹೇಳಿರುವ ಈ ಶಾಸ್ತ್ರದ ಅರ್ಥವನ್ನು ಅಲ್ಪಬುದ್ಧಿಯುಳ್ಳ ಮನುಷ್ಯನು ತರ್ಕಗ್ರಂಥಾರ್ಥಗಳ ಜ್ಞಾನವಿಲ್ಲದೆ ಊಹೆ ಮಾಡಿ ತಿಳಿದುಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಅತ್ಯಂತ ಗಹನವಾದ ಅಭಿಪ್ರಾಯವುಳ್ಳ ಚಿಕಿತ್ಸಾಬೀಜವು (ಉಪದೇಶದಿಂದ ಹೇಳಿ ಬೀಜಮಾತ್ರದಂತಿರುವ ಈ ಶಾಸ್ತ್ರವು) ಒಂದು ಸಣ್ಣ ಬೀಜವನ್ನು

ಭೂಮಿಯಲ್ಲಿ ಹುಟ್ಟುಹಾಕಿದರೆ ಬೇರು ಕೊಂಬೆ ಚಿಗುರು ಕಾಯಿಗಳಿಂದ ಅನೇಕ ವಿಧವಾಗಿ ಪ್ರಸರಿಸುವಂತೆಯೇ ಜಾಣನಾದ ವೈದ್ಯನು ಈ ಶಾಸ್ತ್ರವನ್ನು ಅಭ್ಯಾಸಮಾಡಿದರೆ ತುಂಬಾ ಫಲಕಾರಿಯಾಗಿ ವೃದ್ಧಿಯಾಗುತ್ತದೆ. ಆದಕಾರಣ ಬುದ್ಧಿಶಾಲಿಯಾದ ನಾನಾ ಶಾಸ್ತ್ರಾರ್ಥಜ್ಞಾನವುಳ್ಳ ವೈದ್ಯರು ಶಾಸ್ತ್ರಬುದ್ಧಿಯಿಂದಲೇ ಅಪರಿಮಿತಾರ್ಥವುಳ್ಳ ಈ ಶಾಸ್ತ್ರವನ್ನು ಊಹಿಸಿ ತಿಳಿದುಕೊಳ್ಳಬೇಕು ಮತ್ತು ನಾನಾ ಶಾಲಾಕ್ಯಾದಿತಂತ್ರಗಳನ್ನು ಪರಿಶೀಲಿಸಿ ನಿರ್ಧರಿಸಬೇಕೆಂದು ಸಿದ್ಧಾಂತಮಾಡಿರುತ್ತಾರೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ನಯನಾಭಿಘಾತಪ್ರತಿಷೇಧನಾಮೈಕೋನವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ.

ವಿಂಶತಿತಮೋಽಧ್ಯಾಯಃ

ಅಥಾತಃ ಕರ್ಣಗತರೋಗವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಕರ್ಣಗತರೋಗಗಳನ್ನು ವಿವರಿಸುತ್ತೇವೆ.

ಕರ್ಣಶೂಲಂ ಪ್ರಣಾದಶ್ಚ ಬಾಧಿರ್ಯಂ ಕ್ಷ್ವೇಡ ಏವ ಚ |
ಕರ್ಣಸ್ರಾವಃ ಕರ್ಣಕಣ್ಡೂಃ ಕರ್ಣವರ್ಚಸ್ತಥೈವ ಚ ||೩||
ಕ್ರಿಮಿಕರ್ಣಪ್ರತೀನಾಹೌ ವಿದ್ರಧಿರ್ದ್ವಿವಿಧಸ್ತಥಾ |
ಕರ್ಣಪಾಕಃ ಪೂತಿಕರ್ಣಸ್ತಥೈವಾರ್ಶಶ್ಚತುರ್ವಿಧಮ್ ||೪||
ತಥಾರ್ಬುದಂ ಸಪ್ತವಿಧಂ ಶೋಫಶ್ಚಾಪಿ ಚತುರ್ವಿಧಃ |
ಏತೇ ಕರ್ಣಗತಾ ರೋಗಾ ಅಷ್ಟಾವಿಂಶತಿರೀರಿತಾಃ ||೫||

ಕರ್ಣಶೂಲ, ಕರ್ಣಪ್ರಸಾದ, ಬಾಧಿರ್ಯ, ಕರ್ಣಕ್ಷ್ವೇಡ, ಕರ್ಣಸ್ರಾವ, ಕರ್ಣಕಂಡು, ಕರ್ಣವರ್ಚಃ, ಕರ್ಣಗೂಥಕಃ, ಕ್ರಿಮಿಕರ್ಣ, ಪ್ರತೀನಾಹ, ೭ ವಿಧಗಳಾದ ವಿದ್ರಧಿಗಳು, ಕರ್ಣಪಾಕಂ, ಪೂತಿಕರ್ಣ, ೪ ವಿಧಗಳಾದ ಅರ್ಶಸ್ಸುಗಳು, ೭ ವಿಧಗಳಾದ ಅರ್ಬುದಗಳು, ೪ ವಿಧಗಳಾದ ಕರ್ಣ ಶೋಫಗಳು ಈ ರೀತಿಯಾಗಿ ಕರ್ಣ ರೋಗಗಳು ೨೮ ವಿಧಗಳಿವೆ.

ಸಮೀರಣಃ ಶ್ರೋತ್ರಗತೋಽನ್ಯಥಾಚರಃ ಸಮನ್ತತಃ ಶೂಲಮತೀವ ಕರ್ಣಯೋಃ
ಕರೋತಿ ದೋಷೈಶ್ಚ ಯಥಾಸಮಾವೃತಃ ಸ ಕರ್ಣಶೂಲಃ ಕಥಿತೋ ದುರಾಚರಃ ||೬||

ಕರ್ಣದೊಳಗೆ ಪ್ರವೇಶಿಸಿದ ವಾಯುವು ವಿಮಾರ್ಗಗಳಲ್ಲಿ ಸಂಚರಿಸುತ್ತಾ ಕಫ, ಪಿತ್ತ, ರಕ್ತ, ದೋಷಗಳಿಂದ ಆವರಿಸಲ್ಪಡುವ ಕಾರಣ ಕಿವಿಗಳ ಒಳಗಡೆ ಸುತ್ತಲೂ ನೋವನ್ನುಂಟುಮಾಡುವುದರಿಂದ ಕರ್ಣಶೂಲೆಯೆಂದು ಹೆಸರು. ಇದನ್ನು ಉಪಚರಿಸುವುದು ತುಂಬಾ ಕಷ್ಟವಾಗುತ್ತದೆ.

ಯದಾ ತು ನಾಡೀಷು ವಿಮಾರ್ಗಮಾಗತಃ ಸ ಏವ ಶಬ್ದಾಭಿವಹಾಸು ತಿಷ್ಠತಿ |
ಶೃಣೋತಿ ಶಬ್ದಾನ್ ವಿವಿಧಾಂಸ್ತದಾ ನರಃ ಪ್ರಣಾದಮೇನಂ ಕಥಯನ್ತಿ ಚಾಮಯಮ್ ||೭||

ಸ ಏವ ಶಬ್ದಾತಿವಹಾ ಯದಾ ಸಿರಾಃ ಕಫಾನುಯಾತೋವ್ಯನುಸೃತ್ಯ ತಿಷ್ಠತಿ |
ತದಾ ನರಸ್ಯಾಪ್ರತಿಕಾರಸೇವಿನೋ ಭವೇತ್ತು ಬಾಧಿರ್ಯಮಸಂಶಯಂ ಖಲು ||೮||
ಶ್ರಮಾತ್ ಕ್ಷಯಾದ್ರೂಕ್ಷಕಷಾಯಭೋಜನಾತ್ ಸಮೀರಣಃ ಶಬ್ದಪಥೇವ್ಯವಸ್ಥಿತಃ |

ವಿರಿಕ್ತಶೀರ್ಷಸ್ಯ ಚ ಶೀತಸೇವಿನಃ ಕರೋತಿ ಹಿ ಕ್ಷ್ವೇಡಮತೀವ ಕರ್ಣಯೋಃ ॥೯॥
ಶಿರೋಽಭಿಘಾತಾದಥವಾ ನಿಮಜ್ಜತೋ ಜಲೇ ಪ್ರಪಾಕಾದಥವಾಪಿ ವಿದ್ರಧೇಃ ।
ಸ್ರವೇತ್ತು ಪೂಯಂ ಶ್ರವಣೋಽನಿಲಾವೃತಃ ಸಕರ್ಣಸಂಸ್ರಾವ ಇತಿ ಪ್ರಕೀರ್ತಿತಃ ॥೧೦॥

ವಿಮಾರ್ಗದಿಂದ ಅಡ್ಡಲಾಗಿಯೂ ಕೆಳಗಡೆಯಿಂದಲೂ ಸಂಚರಿಸುತ್ತಾ ಬಂದ ವಾಯುವು ಶಬ್ದವಾಹಿ ನಾಡಿಗಳಲ್ಲಿ ನಿಂತು ಆ ಮನುಷ್ಯನಿಗೆ ವಿವಿಧ ಶಬ್ದಗಳು ಕೇಳಿಸಿದರೆ ಈ ರೋಗಕ್ಕೆ ಕರ್ಣನಾದವೆಂದು ಹೆಸರು. ಇದೇ ವಾತವು ಕಫದೊಡನೆ ಸೇರಿ ವಿವಿಧ ಮಾರ್ಗಗಳನ್ನು ಆಕ್ರಮಿಸಿ ನಿಂತರೆ ಆಗ ಚಿಕಿತ್ಸೆ ಮಾಡದಿದ್ದರೆ ಸಂಶಯವಿಲ್ಲದೆ ಬಾಧಿರ್ಯವುಂಟಾಗುತ್ತದೆ. ಶ್ರಮದಿಂದಲೂ ಧಾತುಕ್ಷಯದಿಂದಲೂ ರೂಕ್ಷ ಕಷಾಯ ದ್ರವ್ಯಗಳ ಭೋಜನದಿಂದಲೂ ವಾತವು ಪ್ರಕೋಪಿಸಿ ಶಬ್ದವಾಹಿ ಸಿರೆಗಳಲ್ಲಿ ಸೇರಿಯೂ ಶಿರೋವಿರೇಚನದಿಂದ ತಲೆಬರಿದಾಗಿರುವಾಗ ಶೀತಲಜಲದಿಂದ ಸ್ನಾನಪಾನ ಮಾಡಿದಾಗಲೂ ವಾತಪ್ರಕೋಪವಾಗಿ ಬಿದಿರಿನ ಕೊಳಲಿನ ಧ್ವನಿಯಂತೆ ಕಿವಿಯಲ್ಲಿ ಶಬ್ದ ಕೇಳಿಸುತ್ತದೆ. ಇದಕ್ಕೆ ಕರ್ಣಕ್ಷ್ವೇಡವೆಂದು ಹೆಸರು. ಕರ್ಣನಾದದಲ್ಲಿ ಬರಿ ವಾತವೊಂದೇ ನಾನಾ ವಿಧ ಶಬ್ದವನ್ನುಂಟುಮಾಡುತ್ತದೆ. ಕರ್ಣಕ್ಷ್ವೇಡದಲ್ಲಿ ಕಫ, ಪಿತ್ತ, ರಕ್ತದೊಡನೆ ಮಿಶ್ರವಾಗಿರುವ ವಾತವು ಆಯಾಯ ದೋಷಗಳಿಗೆ ತಕ್ಕಂತೆ ಶಬ್ದಗಳ ವ್ಯತ್ಯಾಸ ಕೇಳಿಬರುತ್ತದೆ. ತಲೆಗೆ ಪೆಟ್ಟುಬಿದ್ದಿರುವಾಗಲೂ, ವಿದ್ರಧಿಯೂ ಪಾಕವಾಗಿರುವಾಗಲೂ, ನೀರಿನಲ್ಲಿ ಮುಳುಗುವುದರಿಂದ ಕಿವಿಯಿಂದ ಕೀವು ಸೋರಿದರೆ ಕರ್ಣಸ್ರಾವವೆಂದು ಹೆಸರು.

ಕಫೇನ ಕಣ್ಡೂಃ ಪ್ರಚಿತೇನ ಕರ್ಣಯೋರ್ಭೃಶಂ ಭವೇತ್ಸ್ರೋತಸಿ ಕರ್ಣಸಂಜ್ಞಿತೇ ।
ವಿಶೋಷಿತೇ ಶ್ಲೇಷ್ಮಣಿ ಪಿತ್ತತೇಜಸಾ ನೃಣಾಂ ಭವೇತ್ ಸ್ರೋತಸಿ ಕರ್ಣಗೂಥಕಃ ॥೧೧॥
ಸ ಕರ್ಣವಿಟ್ಕೋ ದ್ರವತಾಂ ಯದಾಗತೋ ವಿಲಾಯಿತೋ ಘ್ರಾಣಮುಖಂ ಪ್ರಪದ್ಯತೇ ।
ತದಾ ಸ ಕರ್ಣಪ್ರತಿನಾಹಸಂಜ್ಞಿತೋ ಭವೇದ್ವಿಕಾರಃ ಶಿರಸೋಽಭಿತಾಪನಃ ॥೧೨॥
ಯದಾ ತು ಮೂರ್ಛನ್ತ್ಯಥವಾಪಿ ಜನ್ತವಃ ಸೃಜನ್ತ್ಯಪತ್ಯಾನ್ಯಥವಾಪಿ ಮಕ್ಷಿಕಾಃ ।
ತದಞ್ಜನತ್ವಾಚ್ಛ್ರವಣೋ ನಿರುಚ್ಯತೇ ಭಿಷಗ್ಭಿರಾದ್ಯೈಃ ಕ್ರಿಮಿ ಕರ್ಣಕಸ್ತು ಸಃ ॥೧೩॥

ಕರ್ಣಸ್ರೋತಸ್ಸಿನಲ್ಲಿ ಸಂಚಿತವಾದ ಕಫವು ನವೆಯನ್ನುಂಟುಮಾಡಿದರೆ ಕರ್ಣಕಂಡೂ ಎಂದೂ, ಆ ಕಫವು ಪಿತ್ತತೇಜಸ್ಸಿನಿಂದ ಶೋಷಿಸಿದರೆ ಕರ್ಣಗೂಥಕವೆಂದೂ, ಕರ್ಣದಮಲವು ಸ್ನೇಹಸ್ವೇದಗಳಿಂದ ಪುನಃ ಕರಗಿ ಮೂಗು ಬಾಯಿಗಳಿಗೆ ಬಂದು ಹೊರಕ್ಕೆ ಸುರಿದರೆ ಕರ್ಣಪ್ರತೀನಾಹವೆಂದೂ ಹೆಸರು ; ಇದರಲ್ಲಿ ರೋಗಿಗೆ ತಲೆಯಲ್ಲೆಲ್ಲಾ ವಿಕಾರಗಳುಂಟಾಗುತ್ತವೆ ; ಶ್ರವಣೇಂದ್ರಿಯದ ಒಳಭಾಗದಲ್ಲಿ ರಕ್ತವೂ ಮಾಂಸವೂ ಕೊಳೆತು ಕಿವಿಯಿಂದ (ಸಣ್ಣ ಸಣ್ಣ ಕ್ರಿಮಿಗಳುತ್ಪತ್ತಿಯಾಗಿ ನೀಲಬಣ್ಣದ ನೊಣಗಳು ಮುತ್ತಿದರೆ) ಈ ರೋಗಕ್ಕೆ ಕ್ರಿಮಿಕರ್ಣಕವೆಂದೂ ಪೂರ್ವಿಕರಾದ ನಿಮಿ ಮೊದಲಾದ ವೈದ್ಯಶ್ರೇಷ್ಠರು ಹೇಳುತ್ತಾರೆ.

ಕ್ಷತಾಭಿಘಾತಪ್ರಭವಸ್ತು ವಿದ್ರಧಿರ್ಭವೇತ್ತಥಾ ದೋಷ ಕೃತೋಪರಃ ಪುನಃ ।
ಸರಕ್ತಪೀತಾರುಣಮಸ್ರಮಾಸ್ರವೇತ್ಪ್ರತೋದಿಧೂಮಾಯನ ದಾಹಜೋಷವಾನ್ ॥೧೪॥
ಭವೇತ್ ಪ್ರಪಾಕಃ ಖಲುಪಿತ್ತಕೋಪತೋ ವಿಕೋಥವಿಕ್ಲೇದ ಕರಶ್ಚ ಕರ್ಣಯೋಃ ।
ಸ್ಥಿತೇ ಕಫೇಸ್ರೋತಸಿ ಪಿತ್ತತೇಜಸಾ ವಿಲಾಯ್ಯ ಮಾನೇ ಭೃಶಸಂಪ್ರತಾಪನಾತ್ ॥೧೫॥
ಅವೇದನೋ ವಾಪ್ಯಥವಾ ಸವೇದನೋ ಘನಂ ಸ್ರವೇತ್ ಪೂತಿ ಸಪೂತಿ ಕರ್ಣಕಃ ।
ಪ್ರದಿಷ್ಟಲಿಙ್ಗಾನ್ಯರ್ಶಾಂಸಿ ತತ್ವತಸ್ತಥೈವ ಶೋಫಾರ್ಬುದಲಿಙ್ಗ ಮೀರಿತಮ್ ॥೧೬॥
ಮಯಾ ಪುರಸ್ತಾತ್ ಪ್ರಸಮೀಕ್ಷ್ಯಯೋಜಯೇದಿಹೈವ ತಾನಿ ಪ್ರಯತೋಭಿಷಗ್ವರಃ ।

ಘಾಯದಿಂದಲೂ, ಪೆಟ್ಟಿನಿಂದಲೂ ವಿದ್ರಧಿಯುಂಟಾಗುತ್ತದೆ. ಅಭಿಘಾತವೇ ಅವೆರಡಕ್ಕೂ ಕಾರಣವಾದ್ದರಿಂದ ಒಂದನೆಯ ವಿಧವು; ದೋಷಪ್ರಕೋಪದಿಂದುಂಟಾಗುವ ವಿದ್ರಧಿಯು ೨ ನೆಯ ವಿಧವು ; ಇದರಲ್ಲಿ ರಕ್ತಮಿಶ್ರವಾಗಿ ಹಳದಿ ಕೆಂಪುಬಣ್ಣದ ಸ್ರಾವವಿರುತ್ತದೆ. ಇರಿತ ಭುಗ್ ಭುಗ್ ಎಂದು ಧೂಮ ಹೊರಟಂತಾಗುವುದು, ಉರಿಯೂ ಜೋಷವೂ (ಸ್ವಲ್ಪ ಉರಿಯೂ) ಪಿತ್ತಪ್ರಕೋಪದಿಂದ ಹೆಚ್ಚಾಗಿ ಪಾಕವಾಗುತ್ತದೆ. ವಿಶೇಷವಾಗಿ ಕೊಳೆತ ದ್ರವವು ಕಿವಿಯಿಂದ ಸೋರುತ್ತದೆ. ಕರ್ಣಸ್ರೋತಸ್ಸಿನಲ್ಲಿ ಚಯವಾಗಿರುವ ಕಫವು ಪಿತ್ತತೇಜಸ್ಸಿನಿಂದ ತುಂಬಾ ಕರಗಿ ನೋವಿಲ್ಲದೆಯಾಗಲೀ ನೋವಿನಿಂದ ಕೂಡಿಯಾಗಲೀ ಮಂದವಾಗಿ ಸೋರಿ ದುರ್ವಾಸನೆಯುಂಟಾದರೆ ಪೂತಿಕರ್ಣಕವೆನ್ನುತ್ತಾರೆ ; ಹಿಂದೆಯೇ ಅರ್ಶಸ್ಸು, ಶೋಫ, ಅರ್ಬುದಗಳ ಲಕ್ಷಣಗಳು ವಿವರಿಸಲ್ಪಟ್ಟಿವೆ. ಬುದ್ಧಿವಂತರಾದ ವೈದ್ಯರು ಅವುಗಳ ಲಕ್ಷಣಗಳನ್ನೂ ಈ ಕರ್ಣರೋಗಗಳ ಸಂಬಂಧದಲ್ಲಿ ಗಮನಿಸಿ ನಿರ್ಧರಿಸತಕ್ಕದ್ದು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ಕರ್ಣಗತ ರೋಗ ವಿಜ್ಞಾನನಾಮಕ ವಿಂಶತಿತಮೋಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕಭಾಷಾವಿವೃತಿಃ

ಏಕವಿಂಶತಿತಮೋಽಧ್ಯಾಯಃ

ಅಥಾತಃ ಕರ್ಣಗತರೋಗಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಕರ್ಣರೋಗಚಿಕಿತ್ಸೆಯನ್ನು ವಿವರಿಸುತ್ತೇವೆ.

ಸಾಮಾನ್ಯಂ ಕರ್ಣರೋಗೇಷು ಘೃತಪಾನಂ ರಸಾಯನಮ್ ।
ಅವ್ಯಾಯಾಮೋಽಶಿರಃಸ್ನಾನಂ ಬ್ರಹ್ಮಚರ್ಯಮಕತ್ಥನಮ್ ||೩||

ಕರ್ಣರೋಗಗಳಲ್ಲಿ ಭೋಜನವಾದ ಮೇಲೆ ಘೃತಪಾನವನ್ನು ಮಾಡಿದರೆ ರಸಾಯನ ಪ್ರಯೋಗ ಮಾಡಿದಂತೆಯೇ ಲಾಭವುಂಟಾಗುತ್ತದೆ; ಕರ್ಣರೋಗಿಯು ವ್ಯಾಯಾಮ, ಶಿರಃಸ್ನಾನ, ಸ್ತ್ರೀಸಂಗ, ಭಾಷಣಗಳನ್ನು ತ್ಯಜಿಸಿಬಿಡಬೇಕು.

ಕರ್ಣಶೂಲೇ ಪ್ರಣಾದೇ ಚ ಬಾಧಿರ್ಯಕ್ಷ್ವೇಡಯೋರಪಿ।
ಚತುರ್ಣಾಮಪಿ ರೋಗಾಣಾಂ ಸಾಮಾನ್ಯಂ ಭೇಷಜಂ ವಿದುಃ ||೪||

ಸ್ನಿಗ್ಧಂ ವಾತಹರೈಃ ಸ್ವೇದೈರ್ನರಂ ಸ್ನೇಹವಿರೇಚಿತಮ್।
ನಾಡೀಸ್ವೇದೈರುಪಚರೇತ್ ಪಿಣ್ಡ ಸ್ವೇದೈಸ್ತಥೈವ ಚ ||೫||

ಕರ್ಣಶೂಲ, ಕರ್ಣನಾದ, ಬಾಧಿರ್ಯ ಮತ್ತು ಕರ್ಣಕ್ಷ್ವೇಡಗಳೆಂಬ, ೪ ವಿಧ ಕರ್ಣರೋಗಗಳಿಗೂ ಒಂದೇ ಕಾರಣವಾದ್ದರಿಂದ ಚಿಕಿತ್ಸೆಯೂ ಒಂದೇರೀತಿಯಾದದ್ದೆಂದು ತಿಳಿಯಬೇಕು. ಹೇಗೆಂದರೆ ಸ್ನೇಹಪಾನದಿಂದಲೂ ಅಭ್ಯಂಗದಿಂದಲೂ ಬಾಹ್ಯಾಭ್ಯಂತರಗಳಲ್ಲಿ ಸ್ನಿಗ್ಧನಾದ ರೋಗಿಗೆ ವಾತಹರಗಳಾದ ಕಷಾಯಗಳಿಂದ ಸ್ವೇದ ಮಾಡಿಸಿ ಹರಳೆಣ್ಣೆ ಮೊದಲಾದ ಸ್ನೇಹಗಳಿಂದ ವಿರೇಚನ ಮಾಡಿಸಿ ಸ್ವೇದಾಧ್ಯಾಯದಲ್ಲಿ ಹೇಳಿರುವಂತೆ ಅರ್ಧಯಾಮ ಮಾತ್ರ ನಾಡಿಸ್ವೇದದಿಂದಲೂ ಕೃಶರಾಪಾಯ ಸಾದಿಗಳಿಂದ ಪಿಂಡಸ್ವೇದದಿಂದಲೂ ಉಪಚರಿಸಬೇಕು.

ಬಿಲ್ವೈರಣ್ಡಾರ್ಕವರ್ಷಾಭೂದಧಿತ್ಥೋನ್ಮತ್ತಶಿಗ್ರುಭಿಃ।
ಬಸ್ತಗನ್ಧಾಶ್ವಗನ್ಧಾಭ್ಯಾಂ ಶರ್ಕಾರೀಯವವೇಣುಭಿಃ ||೬||
ಆರನಾಳೈಃ ಶೃತೈರೇಭಿರ್ನಾಡೀಸ್ವೇದಃ ಪ್ರಯೋಜಿತಃ।
ಕಫವಾತಸಮುತ್ಥಾನಂ ಕರ್ಣಶೂಲಂ ನಿರಸ್ಯತಿ ||೭||

ಬಿಲ್ವಪತ್ರೆ, ಹರಳು, ಕೊಮ್ಮೆಬೇರು, ಬೇಲದತೊಗಟೆ, ಉಮ್ಮತ್ತಿಸೊಪ್ಪು ನುಗ್ಗೇಸೊಪ್ಪು, ನಾರಂಬೇಳೆಸೊಪ್ಪು, ಅಶ್ವಗಂಧಿಬೇರು, ತಗ್ಗಿಸೊಪ್ಪು, (ಬಿದರಕ್ಕಿ) ಇವನ್ನು ಅಕ್ಕಿತೊಳೆದ ನೀರಿನಲ್ಲಿ ಕುದಿಸಿ ಆ ಕಷಾಯದಿಂದ ನಾಡೀಸ್ವೇದವನ್ನು

ಮಾಡಿಸಿದರೆ ಕರ್ಣಶೂಲವು ನಿವಾರಣೆಯಾಗುತ್ತದೆ. ಕೇವಲ ವಾತದಲ್ಲಿ ಸ್ನೇಹ ಪೂರ್ವಕವಾಗಿಯೂ, ಕಫ ವಾತಶೂಲೆಯಲ್ಲಿ ರೂಕ್ಷಸ್ವೇದವನ್ನೂ ಮಾಡಿಸಿದರೆ ಕರ್ಣ ಶೂಲವು ನಿವಾರಣೆಯಾಗುತ್ತದೆ.

ಮೀನಕುಕ್ಕುಟಲಾವಾನಾಂ ಮಾಂಸಜ್ಯೈಃ ಪಯಸಾಪಿ ವಾ।
ಪಿಣ್ಡೈಃ ಸ್ವೇದಂ ಚ ಕುರ್ವೀತ ಕರ್ಣಶೂಲನಿವಾರಣಮ್ ॥೮॥

ಪಿಂಡಸ್ವೇದನ ವಿಧಾನವು ಮೀನು, ಕೋಳಿ, ಲಾವನಹಕ್ಕಿ, ಇವುಗಳ ಮಾಂಸ ಪಿಂಡವನ್ನು ಕಾದ ಹಾಲಿನಲ್ಲಿ ಅದ್ದಿ ಸ್ವೇದ ಮಾಡಿಸಬೇಕು.

ಅಶ್ವತ್ಥ ಪತ್ರಖಲ್ಲಂ ವಾ ವಿಧಾಯ ಬಹುಪತ್ರಕಮ್।
ತೈಲಾಕ್ತಮಙ್ಗಾರಸಂಪೂರ್ಣಂ ನಿದಧ್ಯಾಚ್ಛ್ರವಣೋಪರಿ ॥೯॥
ಯತ್ತೈಲಂ ಚ್ಯವತೇ ತಸ್ಮಾತ್ ಖಲ್ಲಾದಙ್ಗಾರಸಾಧಿತಾತ್।
ತತ್ಪ್ರಾಪ್ತಂ ಶ್ರವಣಸ್ರೋತಃ ಸದ್ಯೋಗೃಹ್ಣಾತಿ ವೇದನಾಮ್ ॥೧೦॥

ಅರಳಿ ಎಲೆಯಂತೆ ಮೇಲೆ ಅಗಲವಾಗಿ ಬರಬರುತ್ತಾ ಸಣ್ಣಗಿರುವಂತೆ ಒಂದು ಯಂತ್ರವನ್ನು ತಯಾರಿಸಿ ತೈಲ ಬಳಿದ ಅರಳಿಯೆಲೆಗಳನ್ನು ತುಂಬಿ ಅದರ ಮೇಲೆ ಬೆಂಕಿಯಕೆಂಡವನ್ನು ಇರಿಸಿ ಯಂತ್ರದ ಕೆಳಗಡೆಯ ರಂಧ್ರವು ರೋಗಿಯ ಕಿವಿಯ ತೂತಿಗೆ ತಗಲುವಂತೆ ಮಾಡಿ ಬೆಂಕಿಯ ಶಾಖದಿಂದ ಕರಗಿದ ತೈಲವನ್ನು ಕಿವಿಗೆ ತೊಟ್ಟಿಕ್ಕಿಸಿದರೆ ಕೂಡಲೇ ಕಿವಿಯನೋವು ನಿಂತುಬಿಡುತ್ತದೆ.

ಕ್ಷಾಮಗುಗ್ಗುಳ್ವಗುರುಭಿಃ ಸಂಘೃತೈರ್ಧೂಪಯೇಚ್ಚ ತಮ್ ।
ಭಕ್ತೋಪರಿ ಹಿತಂ ಸರ್ಪಿರ್ಬಸ್ತಿಕರ್ಮಚ ಪೂಜಿತಮ್ ॥೧೧॥

ಹತ್ತಿಯಬಟ್ಟೆಯತುಂಡು, ಗುಗ್ಗುಳು, ಅಗಿಲು, ತುಪ್ಪ, ಇವುಗಳ ಧೂಪವನ್ನು ಕಿವಿಗೆ ನುಗ್ಗುವಂತೆ ಮಾಡಿ ಭೋಜನವಾದ ಮೇಲೆ ಘೃತಪಾನವು ಮತ್ತು ಶಿರೋ ಬಸ್ತಿ ವಿಧಾನ ಇವು ಹಿತಕರಗಳು.

ನಿರನ್ನೋ ನಿಶಿ ತತ ರ್ಪಿಃ ಪೀತ್ವೋಪರಿ ಪಯಃ ಪಿಬೇತ್।
ಮೂರ್ಧಬಸ್ತಿಷು ನಸ್ಯೇ ಚ ಮಸ್ತಿಷ್ಕೇ ಪರಿಷೇಚನೇ ॥೧೨॥
ಶತಪಾಕಂ ಬಲಾತೈಲಂ ಪ್ರಶಸ್ತಂ ಚಾಪಿ ಭೋಜನೇ।
ಕಣ್ಟಕಾರೀಮಜಾಕ್ಷೀರೇ ಪಕ್ವಾ ಕ್ಷೀರೇಣ ತೇನ ಚ ॥೧೩॥
ವಿಪಚೇತ್ ಕುಕ್ಕುಟವಸಾಂ ಕರ್ಣಯೋಸ್ತತ್ರಪೂರಣಮ್।
ತಣ್ಡುಲೀಯಕಮೂಲಾನಿ ಫಲಮಜಾಶೃಙ್ಗೀಟಜಂ ತಥಾ ॥೧೪॥
ಅಹಿಂಸ್ರಾಕೇಮ್ಬುಕಾಮೂಲಂ ಸರಳಂ ದೇವದಾರು ಚ।
ಲಶುನಂ ಶೃಙ್ಗವೇರಂ ಚ ತಥಾ ವಂಶಾವಲೇಖವಮ್ ॥೧೫॥
ಕಲ್ಕೈರೇಷಾಂ ತಥಾಮ್ಲೈಶ್ಚ ಪಚೇತ್ ಸ್ನೇಹಚತುರ್ವಿಧಮ್।
ವೇದನಾಯಾಃ ಪ್ರಶಾನ್ತ್ಯರ್ಥಂ ಹಿತಂ ತತ್ಕರ್ಣಪೂರಣಮ್ ॥೧೬॥

ರೋಗಿಯು ಉಪವಾಸದಿಂದಿದ್ದು ರಾತ್ರಿಯಲ್ಲಿ ಘೃತಪಾನಮಾಡಿ ಬಿಸಿ ಹಾಲನ್ನು ಕುಡಿಯಬೇಕು. ವಾತವ್ಯಾಧಿಯಲ್ಲಿ ಹೇಳಿದ ಶತಪಾಕ ಬಲಾತೈಲವು ಶಿರೋಬಸ್ತಿ ನಸ್ಯ ತಲೆಯಮೇಲೆ ಸುರಿಯುವುದು ಆಹಾರ ಇವುಗಳಲ್ಲಿ ಹಿತಕರವು. ನೆಲಗುಳ್ಳ ಸಮೂಲವನ್ನು ಆಡಿನ ಹಾಲಿನಲ್ಲಿ ಬೇಯಿಸಿ ಆ ಹಾಲಿನೊಡನೆ ಕೋಳಿಯ ಕೊಬ್ಬನ್ನು ಕಾಯಿಸಿ ಕರ್ಣಬಾಧೆಯಲ್ಲಿ ಕಿವಿಗೆ ತುಂಬಿದರೂ ಅಥವಾ ಕಿರುಕಸಾಲೆಯ ಬೇರು ಅಂಕೋಲೆಯ ಹಣ್ಣು, ಜಟಾಮಾಂಸಿ, ಹಳದಿಮೂಲಂಗಿ, ಸರಳದೇವದಾರು, ಬೆಳ್ಳುಳ್ಳಿ, ಹಸಿಶುಂಠಿ, ಕಲ್ಲಿನಿಂದ ಜಜ್ಜಿರುವ ಬಿದರುಕಳಲೆ ಇವುಗಳ ಕಲ್ಕ ೧ ಪಾಲು ತುಪ್ಪ, ಮಜ್ಜೆ, ವಸೆ, ತೈಲ ಇವುಗಳೆಲ್ಲಾ ಸೇರಿ ೪ ಪಾಲು, ಹುಳಿಕಲಗಚ್ಚು ೧೬ ಪಾಲು ಇವೆಲ್ಲವನ್ನೂ ಸೇರಿಸಿ ಸ್ನೇಹವುಳಿಯುವಂತೆ ಕಾಯಿಸಿ ಶೋಧಿಸಿಟ್ಟುಕೊಂಡು ಕಿವಿಗೆ ತುಂಬಿದರೂ ನೋವು ಹೋಗುತ್ತದೆ.

ಲಶುನಾರ್ದ್ರಕಶಿಗ್ರೂಣಾಂ ಮುರಙ್ಗ್ಯಾ ಮೂಲಕಸ್ಯ ಚ ।
ಕದಳ್ಯಾಃ ಸರಸಃ ಶ್ರೇಷ್ಠಃ ಕದುಷ್ಣಃ ಕರ್ಣಪೂರಣೇ ||೧೭||
ಶೃಙ್ಗವೇರರಸಕ್ಷೌದ್ರಂ ಸೈನ್ಧವಂ ತೈಲಮೇವ ಚ ।
ಕದುಷ್ಣಂ ಕರ್ಣಯೋರ್ದೇಯಮೇತದ್ವಾ ವೇದನಾಪಹಮ್ ||೧೮||
ವಂಶಾವಲೇಖಸಂಯುಕ್ತೇ ಮೂತ್ರೇ ಚಾಜಾವಿಕೇ ಭಿಷಕ್ ।
ಸರ್ಪಿಃ ಪಚೇತ್ತೇನ ಕರ್ಣಂ ಪೂರಯೇತ್ ಕರ್ಣಶೂಲಿನಃ ||೧೯||

ಬೆಳ್ಳುಳ್ಳಿ, ಹಸಿಯಶುಂಠಿ, ಕೆಂಪುನುಗ್ಗೆ, ಮೂಲಂಗಿ, ಬಾಳೆಗೆಡ್ಡೆ, ಇವುಗಳಲ್ಲೊಂದರ ರಸವನ್ನು ಸುಖೋಷ್ಣವಾಗಿ ಕಿವಿಗೆ ತುಂಬಿದರೆ ನೋವು ಹರವು. ಹಸಿಯ ಶುಂಠಿಯರಸ, ಜೇನುತುಪ್ಪ, ಸೈಂಧವ ತೈಲ ಇವೆಲ್ಲವನ್ನೂ ಸೇರಿಸಿ ಸುಖೋಷ್ಣಮಾಡಿ ಕಿವಿಗೆ ತುಂಬಿದರೆ ನೋವು ಶಮನವಾಗುತ್ತದೆ. ಆಡು ಕುರಿಗಳ ಮೂತ್ರಕ್ಕೆ ಬಿದಿರು ಕಳಲೆಯನ್ನು ಜಜ್ಜಿಸೇರಿಸಿ ತುಪ್ಪವನ್ನು ಪಾಕಮಾಡಿ ಕಿವಿಗೆ ತುಂಬಿದರೆ ಕಿವಿಶೂಲೆಹರವು.

ಮಹತಃ ಪಞ್ಚಮೂಲಸ್ಯ ಕಾಣ್ಡಮಷ್ಟಾದಶಾಙ್ಗುಳಮ್ ।
ಕ್ಷೌಮೇಣಾವೇಷ್ಟ್ಯ ಸಂಸಿಚ್ಯ ತೈಲೇನಾದೀಪಯೇತ್ತತಃ ||೨೦||
ಯತ್ತೈಲಂ ಚ್ಯವತೇ ತೇಭ್ಯೋ ಘೃತೇಭ್ಯೋ ಭಾಜನೋಪರಿ ।
ಜ್ಞೇಯಂ ತದ್ದೀಪಿಕಾ ತೈಲಂ ಸದ್ಯೋಗೃಹ್ಣಾತಿ ವೇದನಾಮ್ ||೨೧||
ಕುರ್ಯಾದೇವಂ ಭದ್ರಕಾಷ್ಠೇ ಕುಷ್ಠೇ ಕಾಷ್ಠೇ ಚ ಸಾರಳೇ ।
ಮತಿರ್ಮಾ ದೀಪಿಕಾತೈಲಂ ಕರ್ಣಶೂಲನಿಬರ್ಹಣಮ್ ||೨೨||

ಮಹಾಪಂಚಮೂಲದಲ್ಲೊಂದರ ೧೮ ಅಂಗುಳಿಯಷ್ಟು ಉದ್ದವಿರುವ ಕಡ್ಡಿಯ 3/4 ಭಾಗದಷ್ಟಕ್ಕೆ ಅಗಸೆ ಹತ್ತಿಯನ್ನು ಸುತ್ತಿ ತುಪ್ಪದಲ್ಲಿ ಅದ್ದಿ ತುದಿಗೆ ಬೆಂಕಿ ಹತ್ತಿಸಿ, ಪಾತ್ರೆಯಮೇಲೆ ತಲೆಕೆಳಗೆ ಮಾಡಿ ಹಿಡಿದುಕೊಳ್ಳಲು ಕಾದತುಪ್ಪವು ಪಾತ್ರೆಯಮೇಲೆ

ಮೇಲೆ ತೊಟ್ಟಿಕ್ಕಿ ಬೀಳುತ್ತದೆ ; ಇದಕ್ಕೆ ದೀಪಿಕಾತೈಲವೆಂದು ಹೆಸರು. ಈ ತೈಲವನ್ನು ಕಿವಿಗೆ ತುಂಬಿದರೆ ಕಿವಿಶೂಲೆ ತಕ್ಷಣವೇ ನಾಶವಾಗುತ್ತದೆ; ಇದೇ ರೀತಿಯಾಗಿ ದೇವ ದಾರು, ಚಂಗಲ್‌ಕೋಷ್ಠ, ಸರಳ ದೇವದಾರುಗಳಿಂದ ಬುದ್ಧಿವಂತನಾದ ವೈದ್ಯನು ಕರ್ಣ ಶೂಲಹರಗಳಾದ ದೀಪಿಕಾ ತೈಲಗಳನ್ನು ಮಾಡಬೇಕು.

ಅರ್ಕಾಙ್ಕುರಾನಲ್ಪಪಿಷ್ಟಾಂಸ್ತೈಲಾಕ್ತಾನ್ ಲವಣಾನ್ವಿತಾನ್ ।
ಸನ್ನಿದಧ್ಯಾತ್ಸ್ನುಹೀಕಾಣ್ಡೇ ಕೋರಿತೇ ತಚ್ಚ ದಾವೃತೇ ॥೨೩॥
ಪುಟಪಾಕಕ್ರಮಸ್ವಿನ್ನಾನ್ ಪೀಡಯೇದಾರಸಾಗಮಾತ್ ।
ಸುಖೋಷ್ಣಂ ತದ್ರಸಂ ಕರ್ಣೇ ದಾಪಯೇಚ್ಛೂಲಶಾನ್ತಯೇ ॥೨೪॥
ಕಪಿತ್ಥಮಾತುಲುಙ್ಗಾಮ್ಲ ಶೃಙ್ಗವೇರರಸೈಃ ಶುಭೈಃ ।
ಸುಖೋಷ್ಣೈಃ ಪೂರಯೇತ್ಕರ್ಣಂ ತಚ್ಛೂಲವಿನಿವೃತ್ತಯೇ ॥೨೫॥
ಕರ್ಣ ಕೋಷ್ಣೇನ ಚುಕ್ರೇಣ ಪೂರಯೇತ್ ಕರ್ಣಶೂಲಿನಃ ।
ಸಮುದ್ರಫೇನ ಚೂರ್ಣೇನ ಯುಕ್ತ್ಯಾ ವಾಪ್ಯವಚೂರ್ಣಯೇತ್ ॥೨೬॥

ಎಕ್ಕದ ಚಿಗರೆಲೆಗಳನ್ನು ಸ್ವಲ್ಪಜಜ್ಜಿ ತಿಲ ತೈಲಸೈಂಧವಗಳನ್ನು ಸೇರಿಸಿ, ಮುಂಡು ಗಳ್ಳಿಯ ಬುಡದಲ್ಲಿ ತೂತುಕೊರೆದು ಅದರಲ್ಲಿ ತುಂಬಿ ಅದರೆಲೆಯನ್ನ ಮುಚ್ಚಿ ಪುಟಪಾಕ ಕ್ರಮದಂತೆ ಬೇಯಿಸಿ ತೆಗೆದು ರಸಬರುವಂತೆ ಹಿಂಡಿ ಸುಖೋಷ್ಣವಾದ ಆ ರಸವನ್ನು ಕಿವಿಗೆ ತುಂಬಿದರೆ ಕರ್ಣಶೂಲವು ನಿಂತುಬಿಡುತ್ತದೆ. ಕರ್ಣಶೂಲದಿಂದ ಪೀಡಿತರಾದವರು ಸುಖೋಷ್ಣವಾದ ಕಲಗಚ್ಚನ್ನು ಕಿವಿಗೆ ತುಂಬಿ ಸಮುದ್ರದನೊರೆಯನ್ನು ಪುಡಿಮಾಡಿ ಉಪಾಯವಾಗಿ ಕಿವಿಗೆ ಉದುರಿಸಬೇಕು.

ಅಷ್ಟಾನಾಮಿಹಮೂತ್ರಾಣಾಂ ಮೂತ್ರೇಣಾನ್ಯತಮೇನ ವಾ ।
ಕೋಷ್ಣೇನ ಪೂರಯೇತ್ಕರ್ಣಂ ಕರ್ಣಶೂಲೋಪಶಾನ್ತಯೇ ॥೨೭॥
ಮೂತ್ರೇಷ್ವಮ್ಲೇಷು ವಾತಘ್ನೇ ಗಣೇ ಚ ಕ್ವಥಿತೇ ಭಿಷಕ್ ।
ಪಚೇಚ್ಚತುರ್ವಿಧಂ ಸ್ನೇಹಂ ಪೂರಣಂ ತಚ್ಚ ಕರ್ಣಯೋಃ ॥೨೮॥
ಏತಾ ಏವ ಕ್ರಿಯಾಃ ಕುರ್ಯಾತ್ ಪಿತ್ತಘ್ನೈಃ ಪಿತ್ತಸಂಯುತೇ ।

ಎಂಟು ವಿಧ ಮೂತ್ರಗಳ ಪೈಕಿ ಯಾವುದೊಂದು ಮೂತ್ರವನ್ನಾದರೂ ಸುಖೋಷ್ಣ ವಾಗಿರುವಂತೆ ಕಾಯಿಸಿ ಕಿವಿಗಳಿಗೆ ತುಂಬಿದರೆ ಕಿವಿಶೂಲೆಯು ನಿವಾರಣೆಯಾಗುತ್ತದೆ. ವೈದ್ಯನು ಮೂತ್ರಗಣ, ಆಮ್ಲಗಣ, ವಾತಹರಗಣದ್ರವ್ಯಗಳೊಡನೆ ನಾಲ್ಕು ವಿಧ ಸ್ನೇಹ ಗಳನ್ನು ಸೇರಿಸಿ ತಯಾರಿಸಿದ ತೈಲವನ್ನು ಕಿವಿಗೆ ತುಂಬಿದರೆ ಕರ್ಣಶೂಲವು ನಿವಾರಣೆ ಯಾಗುತ್ತದೆ. ಪಿತ್ತಕೃತ ಕರ್ಣಶೂಲೆಯಲ್ಲಿ ಪಿತ್ತಹರದ್ರವ್ಯಗಳಿಂದ ತಯಾರಿಸಿದ ಘೃತ, ಕಷಾಯಾದಿಗಳಿಂದ ಇದೇ ಇದೇ ರೀತಿ ಕರ್ಣಪೂರಣಮಾಡಬೇಕು.

ಕಾಕೋಲ್ಯಾದೌ ದಶಕ್ಷೀರಂ ತಿಕ್ತಂ ಚಾತ್ರ ಹಿತಂ ಹವಿಃ ॥೨೯॥
ಕ್ಷೀರ ವೃಕ್ಷಪ್ರವಾಳೇಷು ಮಧುಕೇ ಚಂದನೇ ತಥಾ ।
ಕಲ್ಕಕ್ವಾಥೇ ಪರಂ ಪಕ್ವಂ ಶರ್ಕರಾಮಧುಕೈಃ ಸಹೈಃ ॥೩೦॥

ಕಾಕೋಳ್ಯಾದಿ ಗಣದ್ರವ್ಯಗಳ ಕಲ್ಕ ೧ ಪಾಲು, ೧೦ ಪಾಲು ಹಾಲು, ೧ ಪಾಲು ತುಪ್ಪವನ್ನು ಸೇರಿಸಿ ತಯಾರಿಸಿದ ಘೃತವೂ, (ಕೆಲವರು ಕುಷ್ಠಚಿಕಿತ್ಸೆಯಲ್ಲಿ ಹೇಳಿದ ತಿಕ್ತಘೃತವೆನ್ನುತ್ತಾರೆ.) ಅತ್ತಿ, ಆಲ, ಅರಳಿ, ಬಸರಿ, ಹೂವರಸಿ ಗಿಡಗಳ ತೊಗಟೆಯ ಕಷಾಯಕ್ಕೆ ಕಾಕೋಳ್ಯಾದಿಗಣದ್ರವ್ಯಗಳ ಕಲ್ಕವನ್ನು ಸೇರಿಸಿ ತಯಾರಿಸಿದ ಘೃತವೂ, ಅತಿಮಧುರದ ಕಷಾಯಕಲ್ಕಗಳಿಂದ ತಯಾರಿಸಿದ ಘೃತವೂ, ರಕ್ತಚಂದನದ ಕಷಾಯ ಕಲ್ಕಗಳಿಂದ ತಯಾರಿಸಿದ ಘೃತವೂ, ಸಕ್ಕರೆ, ಅತಿಮಧುರಗಳನ್ನು ಸೇರಿಸಿ ತಯಾರಿಸಿದ ಘೃತವೂ, ವಿರೇಚನದ್ರವ್ಯಗಳ ಕಷಾಯಕಲ್ಕಗಳಿಂದ ತಯಾರಿಸಿದ ಘೃತವೂ ಪಿತ್ತಜ ಕರ್ಣಶೂಲಹರಗಳು.

ಇಙ್ಗುದೀ ಸರ್ಷಪಸ್ನೇಹೌ ಸಕಫೇ ಪೂರಣೇ ಹಿತೌ ।
ತಿಕ್ತೌಷಧಾನಾಂ ಯೂಷಾಶ್ಚ ಸ್ವೇದಾಶ್ಚ ಕಫನಾಶನಾಃ. ॥೩೧॥
ಸುರಸಾದೌ ಕೃತಂ ತೈಲಂ ಪಞ್ಚಮೂಲೇ ಮಹತ್ಯಪಿ ।
ಮಾತುಲುಙ್ಗಂ ರಸಃ ಶುಕ್ತಂ ಲಶುನಾರ್ದ್ರಕಯೋರಸಃ ॥೩೨॥
ಏಕೈಕಃ ಪೂರಣೇ ಪಥ್ಯಸ್ತೈಲಂ ತೇಷ್ವಥವಾ ಕೃತಮ್ ।
ತೀಕ್ಷ್ಣಾ ಮೂರ್ಧ್ನಿ ವಿರೇಕಾಶ್ಚ ಕವಲಾಶ್ಚಾತ್ರ ಪೂಜಿತಾಃ ॥೩೩॥
ಕರ್ಣಶೂಲವಿಧಿಃ ಕೃತ್ಸ್ನಃ ಪಿತ್ತಘ್ನಃ ಶೋಣಿತಾವೃತೇ ।

ಕಫಜಕರ್ಣಶೂಲೆಯಲ್ಲಿ ಇಂಗಳದ ತೈಲವನ್ನೂ, ಸಾಸಿವೆಯ ಎಣ್ಣೆಯನ್ನೂ ತಿಕ್ತೌಷಧಗಳಿಂದ ತಯಾರಿಸಿದ ಯೂಷಗಳನ್ನೂ ಕಿವಿಗೆ ತುಂಬಿದರೆ ಹಿತವಾಗುತ್ತದೆ ಮತ್ತು ಕಫಹರಗಳಾದ ರೂಕ್ಷಗಳಾದ ತಾಪಸ್ವೇದ, ಊಷ್ಮಸ್ವೇದಗಳೂ ಹಿತಕರಗಳು. ಸುರಸಾದಿಗಣದ್ರವ್ಯಗಳಿಂದ ತಯಾರಿಸಿದ ತೈಲವೂ, ಬಿಲ್ವಾದಿಮಹಾಪಂಚಮೂಲಗಳ ಕ್ವಾಥ ಕಲ್ಕಗಳಿಂದ ತಯಾರಿಸಿದ ತೈಲವೂ, ಮಾದಳದ ಹಣ್ಣಿನ ರಸವೂ, ಶುಕ್ತವೂ, ಬೆಳ್ಳುಳ್ಳಿ ಮತ್ತು ಹಸಿಶುಂಠಿಗಳ ರಸವೂ, ಇವುಗಳಲ್ಲೊಂದೊಂದನ್ನು ಕಿವಿಗೆ ತುಂಬಿದರೆ ಹಿತವಾಗುತ್ತದೆ ; ಅಥವಾ ಅವುಗಳೊಡನೆ ತಯಾರಿಸಿದ ತೈಲವನ್ನು ಕಿವಿಗೆ ತುಂಬಿದರೂ ಹಿತಕರವು. ತೀಕ್ಷ್ಣಗಳಾದ ಶಿರೋವಿರೇಚನಗಳೂ, ಕಬಳಗ್ರಹಗಳೂ, ಕಫವಾತಜ ಶಿರೋರೋಗಗಳಲ್ಲಿ ಹಿತಕರಗಳು. ರಕ್ತದಿಂದುಂಟಾದ ಕರ್ಣಶೂಲೆಯಲ್ಲಿ ಪಿತ್ತಹರಗಳಾದ ಕರ್ಣಶೂಲ ವಿಧಾನಗಳೇ ಹಿತಕರವು.

ಕರ್ಣಪ್ರಣಾದ ಬಾಧಿರ್ಯ ಕ್ಷ್ವೇಡಾನಾಂ ತು ಪ್ರಕೀರ್ತಿತಮ್ ॥೩೪॥
ಸಾಮಾನ್ಯತೋ ವಿಶೇಷೇಣ ಬಾಧಿರ್ಯೇ ಪೂರಣಂ ಶೃಣು ।
ಗವಾಂ ಮೂತ್ರೇಣ ಬಿಲ್ವಾನಿ ಪಿಷ್ಟ್ವಾ ತೈಲಂ ವಿಪಾಚಯೇತ್ ॥೩೫॥
ಸಜಲಂ ಚಸದುಗ್ಧಂ ಚ ಬಾಧಿರ್ಯೇ ಕರ್ಣಪೂರಣಮ್ ।
ಸಿತಾಮಧುಕಬಿಮ್ಬಾಭಿಃ ಸಿದ್ಧಂ ವಾಜೇ ಪಯಸ್ಯಥ ॥೩೬॥
ಸಿದ್ಧಂ ವಾ ಬಿಲ್ವನಿಃಕ್ವಾಥೇ ಶೀತೀಭೂತಂ ಶದುದ್ಧೃತಮ್ ।

ಪುನಃ ಪಚೇದ್ದ್ವಿಕ್ಷೀರಂ ಸಿತಾಮಧುಕಚನ್ದನೈಃ ||೩೭||
ಬಿಲ್ವಾಮ್ಬುಗಾಢಂ ತತ್ತೈಲಂ ಬಾಧಿರ್ಯೇ ಕರ್ಣಪೂರಣಮ್ |
ವಕ್ಷ್ಯತೇ ಯಃ ಪ್ರತಿಶ್ಯಾಯೇ ವಿಧಿಃ ಸೋಽಪ್ಯತ್ರ ಪೂಜಿತಃ ||೩೮||

ಕರ್ಣಶೂಲ, ಕರ್ಣನಾದ, ಬಾಧಿರ್ಯ, ಕರ್ಣಕ್ಷ್ವೇಡಗಳ ಸಾಮಾನ್ಯಚಿಕಿತ್ಸೆಯನ್ನು ಹೇಳಿ ಮುಗಿಸಿ ಇನ್ನು ಮುಂದೆ ಬಾಧಿರ್ಯಕ್ಕೆ ವಿಶೇಷವಾದ ಕರ್ಣಪೂರಣವನ್ನು ಹೇಳುತ್ತೇವೆ, ಕೇಳು. ಗೋಮೂತ್ರದಿಂದ ಬಿಲ್ವಪತ್ರೆಯ ಹಣ್ಣಿನ ತಿರುಳನ್ನು ಅರೆದು ಹಾಲುನೀರುಗಳನ್ನು ಮಿಶ್ರಮಾಡಿ ಅದರ ೪ ರಷ್ಟು ತೈಲವನ್ನು ಸೇರಿಸಿ ತಯಾರಿಸಿದ ತೈಲವನ್ನು ಕಿವಿಗೆ ತುಂಬಿದರೆ ಬಾಧಿರ್ಯಹರವಾಗುತ್ತದೆ. ಆಡಿನ ಹಾಲು ೪ ಭಾಗ, ತಿಲತೈಲ ೧ ಭಾಗ ಸಕ್ಕರೆ, ಅತಿಮಧುರ, ತೊಂಡೆಯಬೇರು ಇವೆಲ್ಲವುಗಳ ಕಲ್ಕ $\frac{1}{4}$ ಭಾಗ ದಂತೆ ಸೇರಿಸಿ ತಯಾರಿಸಿದ ತೈಲವನ್ನು ಕಿವಿಗೆ ತುಂಬಿದರೆ ಬಾಧಿರ್ಯಹರವಾಗುತ್ತದೆ; ಅಥವಾ ಈ ತೈಲವನ್ನು ಬಿಸಿಯಾದ ಬಿಲ್ವಪತ್ರೆಯ ಬೇರಿನ ಕಷಾಯಕ್ಕೆ ಸುರಿದು ಕಡೆದು ತಣ್ಣಗಾದಮೇಲೆ ಪುನಃ ಅಧಿಕವಾಗಿರುವ ಬಿಲ್ವದ ಕಷಾಯಕ್ಕೆ ತೈಲವನ್ನು ಮಾತು ಸೇರಿಸಿ ತೈಲದ ೧೦ ರಷ್ಟು ಭಾಗ ಹಾಲನ್ನೂ ಸಕ್ಕರೆ, ಅತಿಮಧುರ, ರಕ್ತಚಂದನಗಳ ಕಲ್ಕ ತೈಲದ $\frac{1}{4}$ ಭಾಗದಷ್ಟನ್ನೂ ಸೇರಿಸಿ ತಯಾರಿಸಿದ ತೈಲವನ್ನು ಕಿವಿಗೆ ತುಂಬಿದರೆ ಬಾಧಿರ್ಯವು ನಿವಾರಣೆಯಾಗುತ್ತದೆ. ಪ್ರತಿಶ್ಯಾಯದಲ್ಲಿ ಹೇಳುವಂತೆ ಘೃತಪಾನ ಮಾಡುವುದೂ ಉತ್ತಮವಾದ ಉಪಾಯವು.

ವಾತವ್ಯಾಧಿಷು ಯಚ್ಚೋಕ್ತೋ ವಿಧಿಃ ಸ ಚ ಹಿತೋ ಭವೇತ್ |
ಕರ್ಣಸ್ರಾವೇ ಪೂತಿಕರ್ಣೇ ತಥೈವ ಕ್ರಿಮಿಕರ್ಣಕೇ ||೩೯||
ಸಮಾನಂ ಕರ್ಮ ಕುರ್ವೀತ ಯೋಗಾ್ ವೈಶೇಷಿಕಾನಪಿ |

ವಾತರೋಗದಲ್ಲಿ ಹೇಳಿದಂತೆ ನಿವಾತಗೃಹದಲ್ಲಿ ವಾಸಮಾಡುತ್ತಾ ಬ್ರಹ್ಮಚರ್ಯಾದಿ ವಿಧಿಗಳನ್ನು ಆಚರಿಸಬೇಕೆಂದು ಹೇಳಿರುವ ವಿಧಾನಗಳನ್ನೇ ಕರ್ಣಶೂಲೆಯಿಂದ ಪೀಡಿತರಾದವರೂ ಅನುಸರಿಸಬೇಕು. ಕರ್ಣಸ್ರಾವ, ಪೂತಿಕರ್ಣ, ಕ್ರಿಮಿ ಕರ್ಣರೋಗಿಗಳಿಗೂ ಇದೇ ಚಿಕಿತ್ಸಾಕ್ರಮಗಳನ್ನು ಪ್ರಯೋಗಿಸಿ ವಿಶೇಷ ವಿಧಾನಗಳನ್ನೂ ಮಾಡಬೇಕು.

ಶಿರೋವಿರೇಚನಂ ಚೈವ ಧೂಪನಂ ಪೂರಣಂ ತಥಾ ||೪೦||
ಪ್ರಮಾರ್ಜನಂ ಧಾವನಂ ಚ ವೀಕ್ಷ್ಯ ವೀಕ್ಷ್ಯಾವಚಾರಯೇತ್ |
ರಾಜವೃಕ್ಷಾದಿತೋಯೇನ ಸುರಸಾದಿಗಣೇನ ವಾ ||೪೧||
ಕರ್ಣಪ್ರಕ್ಷಾಳನಂ ಕಾರ್ಯಂ ಚೂರ್ಣೈರೇಷಾಂ ಚ ಪೂರಣಮ್ |

ಕರ್ಣಸ್ರಾವಾದಿ ರೋಗಗಳಲ್ಲಿ ದೋಷಗಳ ಪ್ರಕೋಪಗಳಿಗೆ ತಕ್ಕಂತೆ ಶಿರೋವಿರೇಚನ, ಧೂಪನ, ಕರ್ಣಪೂರಣ, ಪಿಚು ಇವನ್ನು ಕಿವಿಗೆ ಹಾಕಿ ಕೊಳೆಯನ್ನು ಒರೆಸುವುದು, ಕಷಾಯದಿಂದ ತೊಳೆಯುವುದು ಇತ್ಯಾದಿ ಉಪಚಾರಗಳನ್ನು ಮಾಡಬೇಕು. ಅರಗ್ವಧಾದಿಗಣದ್ರವ್ಯಗಳ ಮತ್ತು ಸುರಸಾದಿಗಣದ್ರವ್ಯಗಳ ಕಷಾಯದಿಂದ ಕಿವಿಯನ್ನು ತೊಳೆದು ಒರೆಸಿ ಅವುಗಳ ಚೂರ್ಣವನ್ನು ಕಿವಿಗೆ ತುಂಬಬೇಕು.

ಚೂರ್ಣಂ ಪಞ್ಚ ಕಷಾಯೋತ್ಥಂ ಕಪಿತ್ಥರಸಯೋಜಿತಮ್ ||೪೨||
ಕರ್ಣಸ್ರಾವೇ ಪ್ರಶಂಸನ್ತಿ ಪೂರಣಂ ಮಧುನಾ ಸಹ ।
ಸರ್ಜತ್ವಕ್ಚೂರ್ಣಸಂಯುಕ್ತಃ ಕಾರ್ಪಾಸೀಫಲಜೋ ರಸಃ ||೪೩||
ಯೋಜಿತೋ ಮಧುನಾ ವಾಪಿ ಕರ್ಣಸ್ರಾವೇ ಪ್ರಶಸ್ಯತೇ ।
ಲಾಕ್ಷಾಶ್ರೀಸರ್ಜರಸೈರ್ವಾಪಿ ಚೂರ್ಣಿತೈಃ ಕರ್ಣಪೂರಣಮ್ ||೪೪||
ಸಶೈವಲಮಹಾವೃಕ್ಷ ಜಮ್ಬ್ವಾಮ್ರಪ್ರಸವಾಯುತಮ್ ।
ಕುಳೀರಕ್ಷೌದ್ರ ಮಂಡೂಕೀಸಿದ್ಧಂ ತೈಲಂ ಚ ಪೂಜಿತಮ್ ||೪೫||

ತೂಪರೆ, ಅಣಿಲೆ, ರೋಧ್ರ, ಮಂಜಿಷ್ಠೆ, ನೆಲ್ಲಿ ಈ ೫ ದ್ರವ್ಯಗಳ ಚೂರ್ಣವನ್ನು ಬೇಲದ ಕಷಾಯದಲ್ಲಿ ಕದರಿ ಅಥವಾ ಕಾಡುಹತ್ತಿಯಕಾಯನ್ನು ಜಜ್ಜಿ ಹಿಂಡಿಬಂದ ರಸಕ್ಕೆ ಸರ್ಜವೃಕ್ಷದ ತೊಗಟೆಯಪುಡಿ, ಅರಗು, ರಾಳುಗಳಚೂರ್ಣ, ಪಾಚಿ (ಕೆಲವರು ಜಲಕುಂಭೀ ಎನ್ನುತ್ತಾರೆ), ಮುಂಡುಗಳ್ಳಿ, ನೇರಳೆ ಮತ್ತು ಮಾವಿನಸೊಪ್ಪುಗಳ ಕಷಾಯ ೪ ಭಾಗಕ್ಕೆ ಕರ್ಕಾಟಕಶೃಂಗಿ ಸಣ್ಣಒಂದೆಲಗಗಳ ಕಲ್ಕ $\frac{1}{4}$ ಭಾಗ ತೈಲ ೧ ಭಾಗದಂತೆ ಸೇರಿಸಿ ತಯಾರಿಸಿದ ತೈಲವೂ ಇವುಗಳಲ್ಲೊಂದನ್ನು ಜೇನುತುಪ್ಪದೊಡನೆ ಕರ್ಣಪೂರಣೆ ಮಾಡಿದರೆ ಕರ್ಣಸ್ರಾವವು ಪರಿಹಾರವಾಗುತ್ತದೆ.

ತಿನ್ದುಕಾನ್ಯಭಯಾರೋಧ್ರಂ ಸಮಙ್ಗಾಮಲಕಂ ಮಧು ।
ಪೂರಣಂಚಾತ್ರ ಪಥ್ಯಂ ಸ್ಯಾತ್ಕಪಿತ್ಥರಸಯೋಜಿತಮ್ ||೪೬||
ರಸಮಾಮ್ರಕಪಿತ್ಥಾನಾಂ ಮಧೂಕಧವ ಶಾಲಜಮ್ ।
ಪೂರಣಾರ್ಥಂ ಪ್ರಶಂಸನ್ತಿ ತೈಲಂ ವಾ ತೈರ್ವಿಪಾಚಿತಮ್ ||೪೭||
ಪ್ರಿಯಙ್ಗುಮಧುಕಾಮ್ಬಷ್ಠಾಧಾತಕೀಶೀಲಪರ್ಣಿಭಿಃ ।
ಮಞ್ಜಿಷ್ಠಾರೋಧ್ರಲಾಕ್ಷಾಭಿಃ ಕಪಿತ್ಥಸ್ಯ ರಸೇನ ವಾ ||೪೮||
ಪಚೇತ್ತೈಲಂ ತದಾಸ್ರಾವಮಪಗೃಹ್ಣಾತಿ ಪೂರಣಾತ್ ।

ತೂಪರಚಕ್ಕೆ, ಅಣಿಲೆಸಿಪ್ಪೆ, ರೋಧ್ರ, ಮಂಜಿಷ್ಠೆ, ನೆಲ್ಲಿಚಿಟ್ಟು ಇವುಗಳ ಪುಡಿಯನ್ನು ಬೇಲದ ಕಷಾಯದಲ್ಲಿ ಕದರಿ ಜೇನುತುಪ್ಪಮಿಶ್ರಮಾಡಿ ಕಿವಿಗೆ ತುಂಬಿದರೆ ಕರ್ಣಸ್ರಾವನಿವಾರಣೆಯಾಗುತ್ತವೆ. ಇದಕ್ಕೆ ಪಂಚಕಷಾಯವೆಂದು ಹೆಸರು, ಮಾವಿನಸೊಪ್ಪಿನ ರಸವನ್ನಾಗಲಿ, ಬೇಲದಸೊಪ್ಪಿನರಸವನ್ನಾಗಲೀ ಅಥವಾ ಇವೆರಡರ ರಸವನ್ನಾಗಲೀ ಅಥವಾ ಇವೆರಡರ ರಸದೊಡನೆ ತಯಾರಿಸಿದ ತೈಲವನ್ನಾಗಲೀ ಕಿವಿಗೆ ತುಂಬಿದರೆ ಕೀವು ಸುರಿಯುವುದು ನಿಲ್ಲುತ್ತದೆ. ನೆಣಲು, ಅತಿಮಧುರ, ಅಗಳುಶುಂಠಿ, ಧಾತಕೀಕುಸುಮ, ಮಣಶಿಲೆ, ಮೂರೆಲೆಹೊನ್ನೆ, ಮಂಜಿಷ್ಠೆ, ರೋಧ್ರ, ಅರಗು ಇವುಗಳ ಕಲ್ಕ. ೧ ಕುಡುವ ತಿಲತೈಲ ೧ ಪ್ರಸ್ಥ, ಬೇಲದಸೊಪ್ಪಿನರಸ, ೧ ಆಢಕಪ್ರಮಾಣದಷ್ಟು ಈ ರೀತಿ ಸೇರಿಸಿ ತಯಾರಿಸಿದ ತೈಲದಿಂದ ಕರ್ಣ ಪೂರಣಮಾಡಿದರೆ ಕೀವು ಸುರಿಯುವುದು ನಿಲ್ಲುತ್ತದೆ.

ಘೃಷ್ಟಂ ರಸಾಞ್ಜನಂ ನಾರ್ಯಾಃ ಕ್ಷೀರೇಣ ಕ್ಷೌದ್ರಸಂಯುತಮ್ ||೪೯||
ಪ್ರಶಸ್ಯತೇ ಚಿರೋತ್ಥೇಽಪಿ ಸಾಸ್ರಾವೇ ಪೂತಿಕರ್ಣಕೇ ।

ನಿರ್ಗುಣ್ಡ್ಯಾಸ್ಸ್ವರಸೇ ತೈಲಂ ಸಿನ್ಧುಧೂಮರಜೋಗುಡಃ ॥೫೦॥
ಪೂರಣಃ ಪೂತಿಕರ್ಣಸ್ಯ ಶಮನೋ ಮಧುಸಂಯುತಃ ।
ಕ್ರಿಮಿಕರ್ಣಕನಾಶಾರ್ಥಂ ಕ್ರಿಮಿಘ್ನಂ ಯೋಜಯೇದ್ವಿಧಿಮ್ ॥೫೧॥
ವಾರ್ತಾಕುಧೂಮಶ್ಚ ಹಿತಃ ಸಾರ್ಷಪಸ್ನೇಹ ಏವ ಚ ।

ಸ್ತನ್ಯದಲ್ಲಿ ರಸಾಂಜನವನ್ನು ತೇದು ಜೇನುತುಪ್ಪ ಮಿಶ್ರಮಾಡಿ ಕಿವಿಗೆ ತುಂಬಿದರೆ ಬಲುಹಳೆಯದಾದ ಪೂತಿಕರ್ಣವನ್ನೂ ನಿವಾರಣೆಮಾಡುತ್ತದೆ. ಲಕ್ಕಿಯಸೊಪ್ಪಿನರಸ ತಿಲತೈಲ, ಸೈಂಧವಲವಣ, ಇಲ್ಲಣದಪುಡಿ, ಜೇನುತುಪ್ಪಗಳನ್ನು ಮಿಶ್ರಮಾಡಿ ಕಿವಿಗೆ ತುಂಬಿದರೆ ಪೂತಿಕರ್ಣರೋಗವು ಶಮನವಾಗುತ್ತದೆ. ಕ್ರಿಮಿಕರ್ಣರೋಗದಲ್ಲಿ ಕ್ರಿಮಿ ಹರಗಳಾದ ಚಿಕಿತ್ಸೆಯ ವಿಧಾನಗಳನ್ನು ಪ್ರಯೋಗಿಸಬೇಕು. ಹಣ್ಣುಬದನೆಕಾಯನ್ನು ಒಣಗಿಸಿ ಅದರ ಧೂಮಪಾನ ಮಾಡುವುದರಿಂದಲೂ ಆ ಧೂಮವನ್ನು ಕಿವಿಯೊಳಕ್ಕೆ ನುಗ್ಗಿಸುವುದರಿಂದಲೂ, ಕಿವಿಗೆ ಸಾಸಿವೆಯ ಎಣ್ಣೆಯನ್ನು ತುಂಬುವುದರಿಂದಲೂ ಕ್ರಿಮಿ ಕರ್ಣರೋಗವು ನಿವಾರಣೆಯಾಗುತ್ತದೆ.

ಕ್ರಿಮಿಘ್ನಂ ಹರಿತಾಳೇನ ಗವಾಂ ಮೂತ್ರಯುತೇನ ಚ ॥೫೨॥
ಗುಗ್ಗುಲುಃ ಕರ್ಣದೌರ್ಗನ್ಧ್ಯೇ ಧೂಪನಂ ಶ್ರೇಷ್ಠಮುಚ್ಯತೇ ।
ಛರ್ದನಂ ಧೂಮಪಾನಂ ಚ ಕಬಳಸ್ಯ ಚ ಧಾರಣಮ್ ॥೫೩॥
ಕರ್ಣಕ್ಷ್ವೇಡೇ ಹಿತಂ ತೈಲಂ ಸಾರ್ಷಪಂ ಚೈವ ಪೂರಣಮ್ ।
ವಿದ್ರಧೌ ಚಾಪಿ ಕುರ್ವೀತ ವಿದ್ರಧ್ಯುಕ್ತಂ ಚಿಕಿತ್ಸಿತಮ್ ॥೫೪॥

ವಿಡಂಗ ಮತ್ತು ಅರಿದಳಗಳ ಚೂರ್ಣವನ್ನು ಹಸುವಿನ ಮೂತ್ರದಲ್ಲಿ ಕದರಿ ಕಿವಿಗೆ ತುಂಬಬೇಕು. ಗುಗ್ಗುಳದ ಹೊಗೆಯನ್ನು ಕಿವಿಗೆ ನುಗ್ಗಿಸಿ ವಮನ, ಧೂಮಪಾನ, ಕಬಳಗ್ರಹಣಗಳನ್ನು ಮಾಡಿಸಿದರೆ ಕರ್ಣದೌರ್ಗಂಧ್ಯವು ನಿವಾರಣೆಯಾಗುತ್ತದೆಯಾಗಿ ಇದು ಶ್ರೇಷ್ಠವಾದ ಔಷಧ. ಕರ್ಣಕ್ಷ್ವೇಡದಲ್ಲಿ ಕಿವಿಗೆ ಸಾಸಿವೆಯ ಎಣ್ಣೆಯನ್ನು ತುಂಬುವುದು ಹಿತಕರವು. ಕರ್ಣವಿದ್ರಧಿಯಲ್ಲಿ ವಿದ್ರಧಿಚಿಕಿತ್ಸೆಯಲ್ಲಿ ಹೇಳಿರುವ ಚಿಕಿತ್ಸಾವಿಧಾನ ಗಳನ್ನೇ ಮಾಡಬೇಕು.

ಪ್ರಕ್ಲೇದ್ಯ ಧೀಮಾಂಸ್ತೈಲೇನ ಸ್ವೇದೇನ ಪ್ರವಿಲಾಪ್ಯ ಚ ।
ಶೋಧಯೇತ್ಕರ್ಣವಿಟ್ಕಂ ತು ಭಿಷಕ್ ಸಮ್ಯಕ್ ಶಲಾಕಯಾ ॥೫೫॥
ನಾಡೀಸ್ವೇದೋಽಥ ವಮನಂ ಧೂಮೋ ಮೂರ್ಧವಿರೇಚನಮ್ ।
ವಿಧಿಶ್ಚ ಕಫಹೃತ್ಸರ್ವಃ ಕರ್ಣಕಣ್ಡೂಮಪೋಹತಿ ॥೫೬॥

ಕರ್ಣಮಲವನ್ನು ತೈಲದಿಂದ ಜಿನುಗಿಸಿ ಸ್ವೇದದಿಂದ ಕರಗಿಸಿ ಶಲಾಕೆಯಿಂದ ಹಿರಿದು ಹೊರಕ್ಕೆ ತೆಗೆಯಬೇಕು. ಕರ್ಣಕಂಡುವಿನಲ್ಲಿ ನಾಡೀಸ್ವೇದ (ಬಿಸಿನೀರಿನಿಂದ ಪಿಚಕಾರಿ ಮಾಡಿಸಬೇಕು), ವಮನ, ಧೂಮಪಾನ, ಶಿರೋವಿರೇಚನ ಮೊದಲಾದ ಕಫ ಹರಗಳಾದ ಚಿಕಿತ್ಸೆಗಳನ್ನೇ ಮಾಡಿಸಬೇಕು.

ಅಥ ಕರ್ಣಪ್ರತೀನಾಹೇ ಸ್ನೇಹಸ್ವೇದೌ ಪ್ರಯೋಜಯೇತ್ ।
ತತೋ ವಿರಿಕ್ತಶಿರಸಃ ಕ್ರಿಯಾಂ ಪ್ರಾಪ್ತಾಂ ಸಮಾಚರೇತ್ ॥೫೭॥

ಕರ್ಣಪ್ರತೀನಾಹದಲ್ಲಿ ಕಿವಿಗೆ ಸ್ನೇಹ ಸ್ವೇದ ಶಿರೋವಿರೇಚನ ನಸ್ಯಾದಿ ಯೋಗ್ಯ ಕರ್ಮಗಳನ್ನು ಮಾಡಿಸಬೇಕು.

ಕರ್ಣಪಾಕಸ್ಯ ಭೈಷಜ್ಯಂ ಕುರ್ಯಾತ್ ಪಿತ್ತವಿಸರ್ಪವತ್ ।
ಕರ್ಣಚ್ಛಿದ್ರೇ ವರ್ತಮಾನಂ ಕೀಟಂ ಕ್ಲೇದ ಮಲಾದಿ ವಾ ॥೫೮॥
ಶೃಙ್ಗೇಣಾಪಹರೇದ್ಧೀಮಾನಥವಾಪಿ ಶಲಾಕಯಾ ।
ಶೇಷಾಣಾಂ ತು ವಿಕಾರಾಣಾಂ ಪ್ರಾಕ್ ಚಿಕಿತ್ಸಿತಮೀರಿತಮ್ ॥೫೯॥

ಕರ್ಣಪಾಕದಲ್ಲಿ ಪಿತ್ತವಿಸರ್ಪದಲ್ಲಿ ಹೇಳಿರುವಂತೆ ಶೀತಲವಾದ ಲೇಪನ, ಪರಿಷೇಕಾದಿಗಳನ್ನೂ, ಕಿವಿಯ ರಂಧ್ರದಲ್ಲಿ ಹುಳು, ರಸಿಕೆ, ಕೊಳೆಗಳಿದ್ದರೆ ಶೃಂಗ ಯಂತ್ರದಿಂದಾಗಲೀ, ಶಲಾಕಾಯಂತ್ರದಿಂದಲಾಗಲೀ ಅವನ್ನು ಹೊರಕ್ಕೆ ತೆಗೆಯಬೇಕು. ಇನ್ನು ಉಳಿದಿರುವ ೪ ವಿಧ ಕರ್ಣಾರ್ಶಸ್ಸುಗಳಿಗೂ ೭ ವಿಧಗಳಾದ ಕರ್ಣಾರ್ಬುದಗಳಿಗೂ, ೫ ವಿಧ ಕರ್ಣಶೋಫಗಳಿಗೂ ಹಿಂದೆ ಆಯಾಯ ರೋಗಗಳ ಚಿಕಿತ್ಸೆಯಲ್ಲಿ ಹೇಳಿರುವಂತೆಯೇ ಉಪಚರಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಕರ್ಣಗತ ರೋಗಪ್ರತಿಷೇಧನಾಮೈಕವಿಂಶತಿತಮೋಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ದ್ವಾವಿಂಶತಿತಮೋಽಧ್ಯಾಯಃ

ಅಥಾತೋ ನಾಸಾಗತರೋಗವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ನಾಸಾಗತರೋಗಗಳನ್ನು ವಿವರಿಸುತ್ತೇವೆ.

ಅಪೀನಸಃ ಪೂತಿನಸ್ಯಂ ನಾಸಾಪಾಕಸ್ತಥೈವ ಚ |
ತಥಾ ಶೋಣಿತಪಿತ್ತಂ ಚ ಪೂಯಶೋಣಿತಮೇವ ಚ ||೩||
ಕ್ಷವಥುರ್ಭ್ರಂಶಥುರ್ದೀಪ್ತೋ ನಾಸಾನಾಹಃ ಪರಿಸ್ರವಃ |
ನಾಸಾಶೋಷೇಣ ಸಹಿತಾ ದಶೈಕಶ್ಚೇರಿತಾಗದಾಃ ||೪||
ಚತ್ವಾರ್ಯರ್ಶಾಂಸಿ ಚತ್ವಾರಃ ಶೋಫಾಃ ಸಪ್ತಾರ್ಬುದಾನಿ ಚ |
ಪ್ರತಿಶ್ಯಾಯಶ್ಚ ಯೇ ಪಞ್ಚ ವಕ್ಷ್ಯನ್ತೇ ಸಚಿಕಿತ್ಸಿತಾಃ ||೫||
ಏಕತ್ರಿಂಶನ್ಮಿತಾಸ್ತೇ ತು ನಾಸಾರೋಗಾಃ ಪ್ರಕೀರ್ತಿತಾಃ |

ಅಪೀನಸ, ಪೂತಿನಸ್ಯ, ನಾಸಾಪಾಕ, ರೋಣಿತಪಿತ್ತ, ಪೂಯಶೋಣಿತ, ಕ್ಷವಥು, ದೀಪ್ತ, ನಾಸಾನಾಹ, ಪರಿಸ್ರವ, ನಾಸಾಶೋಷಗಳೆಂಬ ೧೧ ರೋಗಗಳೂ ೪ ವಿಧ ನಾಸಾರ್ಶಸ್ಸುಗಳೂ, ೭ ನಾಸಾರ್ಬುದಗಳೂ, ೫ ಪ್ರತಿಶ್ಯಾಯಗಳೂ ಈ ರೀತಿ ೩೧ ನಾಸಾರೋಗಗಳ ಲಕ್ಷಣಗಳೂ ಚಿಕಿತ್ಸೆಯೂ ಹೇಳಲ್ಪಡುತ್ತದೆ.

ಆನಹ್ಯತೇ ಯಸ್ಯ ವಿಧೂಪ್ಯತೇ ಚ ಪ್ರಕ್ಲಿದ್ಯತೇ ಕ್ಲಿದ್ಯತಿ ಚಾಪಿ ನಾಸಾ ||೬||
ನವೇತ್ತಿ ಯೋ ಗನ್ಧರಸಾಂಶ್ಚ ಜನ್ತುರ್ಜುಷ್ಟಂ ವ್ಯವಸ್ಯೇತ್ತಮಪೀನಸೇನ |
ತಂ ಚಾನಿಲಶ್ಲೇಷ್ಮಭವಂ ವಿಕಾರಂ ಬ್ರೂಯಾತ್ ಪ್ರತಿಶ್ಯಾಯಸಮಾನಲಿಙ್ಗಮ್ ||೭||
ದೋಷೈರ್ವಿದಗ್ಧೈರ್ಗಳ ತಾಲುಮೂಲೇ ಸಂವಾಸಿತೋ ಯಸ್ಯ ಸಮೀರಣಸ್ತು |
ನಿರೇತಿ ಪೂತಿರ್ಮುಖನಾಸಿಕಾಭ್ಯಾಂ ತಂ ಪೂತಿನಸ್ಯಂ ಪ್ರವದನ್ತಿ ರೋಗಮ್ ||೮||

ಅಪೀನಸ ಲಕ್ಷಣ :—ಪ್ರಕುಪಿತವಾದ ಪಿತ್ತವು ಮೂಗಿನಲ್ಲಿ ಅಡಗಿ ಕಫವನ್ನು ಒಣಗಿಸಿ ಬಿಸಿಯಾದ ಹೊಗೆಯನ್ನು ಮೂಗಿನಿಂದ ಹೊರಡಿಸಿ ನಾಸಾಪಾಕವನ್ನೂ, ಶೋಫವನ್ನೂ ಕಫಸ್ರಾವವನ್ನೂ ಮಾಡಿಸುತ್ತಾ ರೋಗಿಗೆ ಪದಾರ್ಥಗಳ ಗಂಧವೂ, ರುಚಿಯೂ ಗೊತ್ತಾಗದಂತೆ ಮಾಡಿದರೆ ಈ ರೋಗಕ್ಕೆ "ಅಪೀನಸ"ವೆಂದು ಹೆಸರು ವಾತ ಕಫಗಳಿಂದುಂಟಾದ ಪ್ರತಿಶ್ಯಾಯ ಲಕ್ಷಣಗಳು ಈ ರೋಗದಲ್ಲಿ ಕಂಡುಬರುತ್ತವೆ.

ಪೂತಿನಾಸದ ಲಕ್ಷಣ :—ಕತ್ತು ಮತ್ತು ಕಾಲುಗಳ ಬುಡದಲ್ಲಿ ಪ್ರಕುಪಿತವಾದ

ವಾಯುವು ಪಿತ್ತ ಕಫ, ರಕ್ತಗಳೊಡನೆ ಬೆರೆದು ದುರ್ವಾಸನೆಯುಳ್ಳದಾಗಿ ಮೂಗಿನಿಂದಲೂ ಬಾಯಿಂದಲೂ ಹೊರಕ್ಕೆ ಬಂದರೆ "ಪೂತಿನಾಸ"ವೆಂದು ಹೆಸರು.

ಘ್ರಾಣಾಶ್ರಿತಂ ಪಿತ್ತಮರೂಂಷಿ ಕುರ್ಯಾದ್ಯಸ್ಮಿನ್ವಿಕಾರೇ ಬಲವಾಂಶ್ಚ ಪಾಕಃ ।
ತಂನಾಸಿಕಾಪಾಕಮಿತಿ ವ್ಯವಸ್ಯೇದ್ವಿಕ್ಲೇದಕೋಥಾವಪಿ ಯತ್ರದೃಷ್ಟೌ ॥೯॥

ಪಿತ್ತವು ಮೂಗಿನಲ್ಲಿ ಚಯವಾಗಿ ಹುಣ್ಣನ್ನೂ ಪಾಕವನ್ನೂ ಉಂಟುಮಾಡಿ ದುರ್ವಾಸನೆಯುಳ್ಳ ದ್ರವವನ್ನು ಜಿನುಗಿಸಿದರೆ ನಾಸಿಕಾಪಾಕವೆನ್ನುತ್ತಾರೆ.

ಚತುರ್ವಿಧಂ ದ್ವಿಪ್ರಭವಂ ದ್ವಿಮಾರ್ಗಂ ವಕ್ಷ್ಯಾಮಿ ಭೂಯಃ ಖಲು ರಕ್ತಪಿತ್ತಮ್ ।
ದೋಷೈರ್ವಿದಗ್ಧೈರಥವಾಪಿ ಜನ್ತೋರ್ಲಲಾಟದೇಶೇಭಿಹತಸ್ಯ ತೈಸ್ತು ॥೧೦॥
ನಾಸಾಸ್ರವೇತ್ ಪೂಯಮಸೃಗ್ವಿಮಿಶ್ರಂ ತು ಪೂಯರಕ್ತಂ ಪ್ರವದನ್ತಿ ರೋಗಮ್ ।

ವಾತ ಪಿತ್ತ ಕಫ ಸನ್ನಿಪಾತಗಳೆಂಬ ೪ ವಿಧಗಳಾದ ಯಕೃದುತ್ಪನ್ನ ಪ್ಲೀಹೋತ್ಪನ್ನಗಳೆಂಬ ೨ ವಿಧ ಉತ್ಪತ್ತಿ ಕಾರಣಗಳುಳ್ಳ, ಊರ್ಧ್ವಗ, ಅಧೋಗಗಳೆಂಬ ೨ ಮಾರ್ಗಗಳಿಂದ ಪ್ರವರ್ತಿಸುವ ರಕ್ತ ಪಿತ್ತ ರೋಗವನ್ನು ಹೇಳುತ್ತೇವೆ ; ಪರಸ್ಪರವಾಗಿ ಮಿಶ್ರವಾದ ರಕ್ತದೋಷಗಳಿಂದಾಗಲೀ ಹಣೆಯಮೇಲೆ ಪೆಟ್ಟು ಬೀಳುವುದರಿಂದಾಗಲೀ ಮೂಗಿನಿಂದ ರಕ್ತ ಮಿಶ್ರವಾಗಿ ಕೀವು ಸೋರಿ (ಪಿತ್ತ ರಕ್ತಾಧಿಕ್ಯದಿಂದ ವಿರುದ್ಧಪಾಕವಾಗುತ್ತದೆಯಾಗಿ) ದರೆ ಅದನ್ನು "ಪೂಯರಕ್ತ" ರೋಗವೆಂದು ಹೇಳುತ್ತಾರೆ.

ಘ್ರಾಣಾಶ್ರಿತೇ ಮರ್ಮಣಿ ಸಂಪ್ರದುಷ್ಟೋ ಯಸ್ಯಾನಿಲೋ ನಾಸಿಕಯಾ ನಿರೇತಿ ॥೧೧॥
ಕಫಾನುಯಾತೋ ಬಹುಶಃ ಸಶಬ್ದಸ್ತಂ ರೋಗಮಾಹುಃ ಕ್ಷವಥುಂ ವಿಧಿಜ್ಞಾಃ ।
ತೀಕ್ಷ್ಣೋಪಯೋಗಾದತಿಜಿಘ್ರತೋವಾಭಾವಾರ್ನ್ ಕಟೂನರ್ಕ ನಿರೀಕ್ಷಣಾದ್ವಾ ॥೧೨॥
ಸೂತ್ರಾದಿಭಿರ್ವಾ ತರುಣಾಸ್ಥಿಮರ್ಮಣ್ಯುದ್ಘಾಟಿತೇ ಯಃ ಕ್ಷವಥುರ್ನಿರೇತಿ ।

ಘ್ರಾಣಾಶ್ರಿತವಾದ ಶೃಂಗಾಟಕ ಮರ್ಮದಲ್ಲಿ ಪ್ರದುಷ್ಟ ವಾಯುವು ಕಫ ಮಿಶ್ರವಾಗಿ ಶಬ್ದಮಾಡುತ್ತಾ ಮೂಗಿನ ರಂಧ್ರದಿಂದ ಹೊರಕ್ಕೆಬಂದರೆ ಆ ರೋಗಕ್ಕೆ "ಕ್ಷವಥು" ವೆನ್ನುತ್ತಾರೆ ; ತೀಕ್ಷ್ಣ ಪದಾರ್ಥಗಳನ್ನು ಸೇವಿಸುವುದರಿಂದಲೂ, ಖಾರವಾದ ಪದಾರ್ಥಗಳನ್ನು ಅತಿಯಾಗಿ ಮೂಸುವುದರಿಂದಲೂ, ಸೂರ್ಯನನ್ನು ನೋಡುವುದರಿಂದಲೂ, ದಾರ ಮೊದಲಾದ ಸೂಕ್ಷ್ಮ ವಸ್ತುಗಳಿಂದ ಮೂಗಿನ ಕಂಬದಲ್ಲಿರುವ ತರುಣಾಸ್ಥಿಮರ್ಮವು (ಶೃಙ್ಗಾಟಕಮರ್ಮವು) ಅದುರಿದರೆ (ಚಲಿಸಿದರೆ) ಶೀನು ಬರುತ್ತದೆ.

ಪ್ರಭ್ರಶ್ಯತೇ ನಾಸಿಕಯೈವ ಯಶ್ಚ ಸಾನ್ದ್ರೋವಿದಗ್ಧೋಲವಣಃ ಕಫಸ್ತು ॥೧೩॥
ಪ್ರಾಕ್ ಸಂಚಿತೋ ಮೂರ್ಧ್ನಿ ಚ ಪಿತ್ತತಪ್ತಸ್ತಂ ಭ್ರಂಶಥುಂ ವ್ಯಾಧಿಮುದಾಹರನ್ತಿ ।

ತಲೆಯಲ್ಲಿ ಸಂಚಿತವಾಗಿರುವ ಕಫವು ಪಿತ್ತದಿಂದ ಕಾದು ವಿದಗ್ಧಪಾಕವಾಗಿ ಉಪ್ಪುಪ್ಪಾಗಿಯೂ ಗರಣೆ ಗರಣೆಯಾಗಿಯೂ ಮೂಗಿನಿಂದ ಜಾರಿಬಿದ್ದರೆ ಆ ರೋಗಕ್ಕೆ "ಭ್ರಂಶಥು" ವೆನ್ನುತ್ತಾರೆ.

ಘ್ರಾಣೇ ಭೃಶಂ ದಾಹಸಮನ್ವಿತೇ ತು ವಿನಿಃಸರೇದ್ಧೂಮ ಇವೇಹ ವಾಯುಃ ||೧೪||
ನಾಸಾಪ್ರದೀಪ್ತೇವ ಚ ಯಸ್ಯ ಜನ್ತೋರ್ವ್ಯಾಧಿಂತು ತಂ ದೀಪ್ತ ಮುದಾಹರನ್ತಿ |

ಮೂಗಿನ ಒಳಗೆ ತುಂಬಾ ಉರಿಯುಂಟಾಗಿ ಬಿಸಿಯಾದ ಘಾಳಿಯು ಹೊರಕ್ಕೆ ಬರುತ್ತಾ ಮೂಗು ದೀಪ ಹಚ್ಚಿದಂತೆ ಉರಿದರೆ ಆ ವ್ಯಾಧಿಗೆ "ದೀಪ್ತ"ವೆನ್ನುತ್ತಾರೆ.

ಕಫಾವೃತೋ ವಾಯುರುದಾನಸಂಜ್ಞೋ ಯದ್ವಾವಮಾರ್ಗೇ ವಿಗುಣಃಸ್ಥಿತಃ ಸ್ಯಾತ್ ||೧೫||
ಘ್ರಾಣಂ ವೃಣೋತೀವ ತದಾಸರೋಗೋನಾಸಾಪ್ರತೀನಾಹ ಇತಿ ಪ್ರದಿಷ್ಟಃ |
ಅಜಸ್ರಮುಚ್ಛಂ ಸಲಿಲಪ್ರಕಾಶಂ ಯಸ್ಯಾವಿವರ್ಣಂ ಸ್ರವತೀಹನಾಸಾ ||೧೬||
ರಾತ್ರೌ ವಿಶೇಷೇಣ ಹಿ ತಂ ವಿಕಾರಂ ನಾಸಾಪರಿಸ್ರಾವಮಿತಿ ವ್ಯವಸ್ಯೇತ್ |

ಉದಾನವಾಯುವು ಕಫದಿಂದ ಆವರಿಸಲ್ಪಟ್ಟು ತನ್ನ ಮಾರ್ಗದಲ್ಲೇ ವಿಗುಣವಾಗಿ ನಿಂತು ಮೂಗಿನಲ್ಲೆಲ್ಲಾ ಹರಡಿದರೆ ಆ ರೋಗಕ್ಕೆ "ನಾಸಾ ಪ್ರತೀನಾಹ"ವೆಂದು ಹೆಸರು. ಸದಾಕಾಲದಲ್ಲೂ ಮೂಗಿನಿಂದ ಶುದ್ಧವಾದ ನೀರಿನಂತೆ ಸ್ರಾವವಾಗುತ್ತಿದ್ದು ರಾತ್ರಿಯ ಕಾಲದಲ್ಲಿ ಇನ್ನೂ ಹೆಚ್ಚಾಗಿ ಸುರಿದರೆ "ನಾಸಾಪರಿಸ್ರಾವ"ವೆಂದು ಹೆಸರು. (ಶೃಙ್ಗಾಟಕ ವೆಂಬ ಮರ್ಮದಲ್ಲಿರುವ ಕಫದಿಂದ ಈ ವಿಧವಾದ ಸ್ರಾವವುಂಟಾಗುತ್ತದೆ.)

ಘ್ರಾಣಾಶ್ರಿತೇ ಶ್ಲೇಷ್ಮಣಿ ಮಾರುತೇನ ಪಿತ್ತೇನ ಗಾಢಂ ಪರಶೋಷಿತೇ ಚ ||೧೭||
ಸಮುಚ್ಛ್ವಸಿತ್ಯೂರ್ಧ್ವಮಧಶ್ಚ ಕೃಚ್ಛ್ರಾದ್ಯಸ್ತಸ್ಯನಾಸಾಪರಿಶೋಷ ಉಕ್ತಃ |
ದೋಷೈಸ್ತ್ರಿಭಿಸ್ತೈಃ ಪೃಥಗೇಕಶಶ್ಚ ಬ್ರೂಯಾತ್ ತಥಾರ್ಶಾಂಸಿ ತಥೈವ ಶೋಫಾ ||೧೮||
ಶಾಲಾಕ್ಯಸಿದ್ಧಾನ್ತಮವೇಕ್ಷ್ಯ ವಾಪಿ ಸರ್ವಾತ್ಮಕಂ ಸಪ್ತಮಮರ್ಬುದಂತು |
ರೋಗಃ ಪ್ರತಿಶ್ಯಾಯ ಇಹ ಪ್ರದಿಷ್ಟಃ ಸವಕ್ಷ್ಯತೇಪಞ್ಚವಿಧಃ ಪುರಸ್ತಾತ್ ||೧೯||
ನಾಸಾ ಸ್ರೋತೋಗತಾರೋಗಾಸ್ತ್ರಿಂಶದೇಕಶ್ಚ ಕೀರ್ತಿತಾಃ |

ನಾಸಿಕದಲ್ಲಿ ಸೇರಿರುವ ಕಫವನ್ನು ವಾತಪಿತ್ತಗಳು ಶೋಷಿಸಿ ಬಲುಕಷ್ಟದಿಂದ ಉಚ್ಛ್ವಾಸನಿಃ ಶ್ವಾಸಮಾಡುವುದಾದರೆ (ಉಸಿರಾಡುವುದೇ ಬಲುಕಷ್ಟವಾದರೆ) "ನಾಸಾ ಶೋಷ"ವೆಂದು ಹೆಸರು ; ವಾತ, ಪಿತ್ತ, ಕಫ, ತ್ರಿದೋಷಭೇದಗಳಿಂದ ೪ ಅರ್ಶಸ್ಸುಗಳೂ ೪ ವಿಧ ಶೋಫಗಳೂ, ವಾತ, ಪಿತ್ತ, ಕಫ, ವಾತಪಿತ್ತ, ವಾತ ಕಫ, ಪಿತ್ತಕಫ, ಭೇದ ಗಳಿಂದ ೬ ವಿಧಗಳಾದ ಅರ್ಬುದಗಳೆಂದೂ, ನಿದಾನ ಸ್ಥಾನದಲ್ಲಿ ನಿರ್ಧರವಾಗಿರುತ್ತದೆ. ಆದರೆ ಶಾಲಾಕ್ಯತಂತ್ರ ಸಿದ್ಧಾಂತವನ್ನು ಪರಿಶೀಲಿಸಿದರೆ ತ್ರಿದೋಷಜವೆಂಬ ೭ನೆಯ ವಿಧದ ಅರ್ಬುದವೂ ಉಂಟೆಂದು ತಿಳಿಯಬೇಕು ಇಲ್ಲಿ ಪ್ರತಿಶ್ಯಾಯ ರೋಗವನ್ನು ಹೇಳಲಾಗಿದೆ ; ಮುಂದೆ ೫ ಪ್ರಕಾರದ ಪ್ರತಿಶ್ಯಾಯಗಳು ಹೇಳಲ್ಪಡುತ್ತವೆ ; ಈ ರೀತಿಯಾಗಿ ನಾಸಾ ಸ್ರೋತಸ್ಸಿನಲ್ಲಿ ೩೧ ರೋಗಗಳುಂಟಾಗುತ್ತವೆಂದು ತಿಳಿಸಲ್ಪಟ್ಟಿರುತ್ತದೆ.

ಸ್ರೋತಃಪಥೇ ಯದ್ವಿಪುಲಂ ಕೋಶವಚ್ಚಾರ್ಬುದಂ ಹಿ ತತ್ ||೨೦||
ಶೋಫಾಶ್ಚ ಶೋಫವಿಜ್ಞಾನಾ ನಾಸಾಸ್ರೋತೋವ್ಯವಸ್ಥಿತಾಃ ।
ನಿದಾನೇಽರ್ಶಾಂಸಿ ನಿರ್ದಿಷ್ಟಾನ್ಯೇವಂ ತಾನಿವಿಭಾವಯೇತ್ ||೨೧||

ಶೋಥಕ್ಕೂ ಅರ್ಬುದಕ್ಕೂ ಇರುವ ವ್ಯತ್ಯಾಸವನ್ನು ತಿಳಿಸುತ್ತಾರೆ : ನಾಸಾ ಸ್ರೋತಸ್ಸಿನ ಮಾರ್ಗದಲ್ಲಿ ವಿಶಾಲವಾದ ಗೆಡ್ಡೆಯಿದ್ದರೆ "ಅರ್ಬುದ"ವೆಂದೂ ಆ ರೀತಿ ಶೋಫದಲ್ಲಿ ಒಳಭಾಗವನ್ನು ತುಂಬುವ ವಸ್ತುವ್ಯಾವುದು ಇಲ್ಲವೆಂದೂ, ಅದರಿಂದ ಅರ್ಬುದವನ್ನು ಶಸ್ತ್ರದಿಂದ ಕತ್ತರಿಸಿ ತೆಗೆಯುವುದು ಸಾಧ್ಯವೆಂದೂ, ಶೋಫವನ್ನು ಕತ್ತರಿಸಿದರೆ ದೋಷಮಾತ್ರ ಗೊತ್ತಾಗುತ್ತದೆಂದೂ ತಿಳಿಯಬೇಕು ಘನಪದಾರ್ಥಗಳ್ಯಾವವೂ ಶೋಥದಲ್ಲಿ ದೊರೆಯುವುದಿಲ್ಲ ; ನಿದಾನಸ್ಥಾನದಲ್ಲಿ ಅರ್ಶೋರೋಗಗಳನ್ನು ನಿರ್ದೇಶಿಸಿರುವಂತೆಯೇ ಶೋಫವನ್ನೂ ನಿರ್ದೇಶಿಸಿರುವುದರಿಂದ ಅವುಗಳನ್ನೂ ಲಕ್ಷ್ಯಕೊಟ್ಟು ತಿಳಿದುಕೊಳ್ಳಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಶಾಲಾಕ್ಯತನ್ತ್ರೇ ನಾಸಾಗತ ರೋಗವಿಜ್ಞಾನನಾಮ ದ್ವಾವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ತ್ರಯೋವಿಂಶತಿತಮೋಽಧ್ಯಾಯಃ

ಅಥಾತೋ ನಾಸಾಗತರೋಗಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ ಸುಶ್ರುತಾಯ ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ನಾಸಾಗತ ರೋಗಗಳ ಚಿಕಿತ್ಸೆಯನ್ನು ವಿವರಿಸಿ ಹೇಳುತ್ತೇವೆ.

ಪೂರ್ವೋದ್ದಿಷ್ಟೇ ಪೂತಿನಸ್ಯೇ ಜನ್ತೋಃ ಸ್ನೇಹಸ್ವೇದೌ ಛರ್ದನಂ ಸ್ರಂಸನಂ ಚ |
ಯುಕ್ತಂ ಭಕ್ತಂ ತೀಕ್ಷ್ಣಮಲ್ಪಂ ಲಘುಃಸ್ಯಾದುಷ್ಣಂ ತೋಯಂ
ಧೂಮಃಪಾನಂ ಚ ಕಾಲೇ ||೩||

ಹಿಂದೆ ಹೇಳಿದ ಅಪೀನಸ, ಪೂತಿನಸ್ಯ ರೋಗಗಳಲ್ಲಿ ರೋಗಿಗೆ ಸ್ನೇಹ, ಸ್ವೇದ, ವಮನ, ವಿರೇಚನಗಳಿಂದ ದೇಹಶುದ್ಧಿಮಾಡಿಸಿ ಚುರುಕಾದ ಲಘುವಾದ ಆಹಾರವನ್ನು (ಅನ್ನವನ್ನು) ಅಲ್ಪಪ್ರಮಾಣದಿಂದ ಭೋಜನ ಮಾಡಿಸಿ ಬಿಸಿ ನೀರನ್ನು ಕುಡಿಸಿ ಧೂಮಪಾನ ಮಾಡಿಸಬೇಕು.

ಹಿಙ್ಗು ವ್ಯೋಷಂ ವತ್ಸಕಾಖ್ಯಂ ಶಿವಾಟೀ ಲಾಕ್ಷಾ ಬೀಜಂ ಸೌರಭಂ ಕಟ್ಫಲಂ ಚ |
ಉಗ್ರಾ ಕುಷ್ಠಂ ತೀಕ್ಷ್ಣಗನ್ಧಾ ವಿಡಙ್ಗಂ ಶ್ರೇಷ್ಠಂ ನಿತ್ಯಂ ಚಾವಪೀಡೇ ಕರಞ್ಜಮ್ ||೪||
ಪಿತ್ತೈರ್ದ್ರವ್ಯೈಃ ಸಾರ್ಷಪಂ ಮೂತ್ರಯುಕ್ತಂ ತೈಲಂ ಧೀಮಾನ್ನಸ್ಯಹೇತೋಃ ಪಚೇಚ್ಚ |

ಹಿಂಗು, ತ್ರಿಕಟು, ಕೊಡಶಿಗೆತೊಗಟೆ, ಬಿಳಿಕೊಮ್ಮೆ, ಅರಗು, ಕೆಂಪುಹೊನ್ನೆ, ಗೌಳದಬೀಜ, (ನಕ್ತಮಾಳವೆಂದು ಕೆಲವರ ಮತ) ಕಿರಿಶಿವನಿ (ಮಾಪಾಳದ ಬೀಜ) ಬಜೆ, ಚಂಗಲ್‌ಕೋಷ್ಠ, ನುಗ್ಗೆಯಬೀಜ, ವಿಡಂಗ, ಹೊಂಗೆಬೀಜ ಇವುಗಳ ಕಲ್ಕ ೧ ಭಾಗ, ಸಾಸಿವೆಎಣ್ಣೆ ೪ ಭಾಗ, ಗೋಮೂತ್ರ ೧೬ ಭಾಗಗಳನ್ನು ಸೇರಿಸಿ ತಯಾರಿಸಿದ ತೈಲವು ನಸ್ಯಮಾಡಲು ಯೋಗ್ಯವಾದದ್ದು.

ನಾಸಾಪಾಕೇ ಪಿತ್ತಹೃತ್ ಸಂವಿಧಾನಂ ಕಾರ್ಯಂ ಸರ್ವಂ ಬಾಹ್ಯಮಾಭ್ಯನ್ತರಂ ವಾ ||೫||
ಹೃತ್ವಾ ರಕ್ತಂ ಕ್ಷೀರವೃಕ್ಷತ್ವಚಶ್ಚ ಸಾಜ್ಯಾಃ ಸೇಕಾಃ ಯೋಜನೀಯಾಶ್ಚ ಲೇಪಾಃ |
ವಕ್ಷ್ಯಾಮ್ಯೂರ್ಧ್ವಂ ರಕ್ತಪಿತ್ತೋಪಶಾನ್ತಿಂ ನಾಡಿವತ್ ಸ್ಯಾತ್‌ಪೂಯರಕ್ತೇ ಚಿಕಿತ್ಸಾ ||೬||
ಪಾನ್ತೇ ಸಮ್ಯಕ್ಚಾವಪೀಡಂ ವದನ್ತಿ ತೀಕ್ಷ್ಣಂ ಧೂಮಂ ಶೋಧನಂ ಚಾತ್ರ ನಸ್ಯಮ್ |

ನಾಸಾಪಾಕರೋಗದಲ್ಲಿ ಎಲ್ಲಾವಿಧಗಳಾದ ಬಾಹ್ಯ ಮತ್ತು ಆಭ್ಯಂತರ ಚಿಕಿತ್ಸೆಗಳಲ್ಲೂ ಪಿತ್ತಹರಗಳಾದುವುಗಳನ್ನೇ ಪ್ರಯೋಗ ಮಾಡಬೇಕು ; ಮತ್ತು ರಕ್ತಹರಣ ಮಾಡಿಸಿ ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ತೊಗಟೆಗಳ ಕಷಾಯಕ್ಕೆ ತುಪ್ಪ ಮಿಶ್ರಮಾಡಿ ಸೇಚನೆಮಾಡಿಸಬೇಕು. ರಕ್ತಪಿತ್ತಶಮನ ವಿಧಾನಗಳನ್ನು ಮುಂದೆ ಹೇಳು

ತ್ತೀವೆ. ಪೂಯರಕ್ತ ರೋಗದಲ್ಲಿ ನಾಡೀರೋಗ ಚಿಕಿತ್ಸೆಯಂತೆಯೇ ಉಪಚರಿಸಬೇಕು. ಈ ವಿಧಾನವು ವಿಸರ್ಪ, ನಾಡೀ ಸ್ತನರೋಗ ಚಿಕಿತ್ಸೆಯಲ್ಲೇ ವಿವರಿಸಲ್ಪಟ್ಟಿರುತ್ತದೆ. ಈ ಪೂಯರಕ್ತರೋಗಿಗೆ ಸರಿಯಾಗಿ ವಮನ ಮಾಡಿಸಿ ಅವಪೀಡನಸ್ಯ, ತೀಕ್ಷ್ಣ ಧೂಮಪಾನ ಮತ್ತು ಶೋಧನನಸ್ಯಗಳನ್ನು ಪ್ರಯೋಗಿಸಬೇಕು.

ಕ್ಷೇಪ್ಯಂ ನಸ್ಯಂ ಮೂರ್ಧವೈರೇಚನೀಯೈರ್ನಾಡ್ಯಾ ಚೂರ್ಣಂ ಕ್ಷವಥೌ ಭ್ರಂಶಥೌ ಚ ॥೭॥
ಕುರ್ಯಾತ್ ಸ್ವೇದಾನ್ ಮೂರ್ಧ್ನಿ ವಾತಾಮಯಘ್ನಾನ್ ಸ್ನಿಗ್ಧಾನ್ ಧೂಮಾನ್ ಯದ್ಯದನ್ಯದ್ಧಿತಂ ಚ ।
ದೀಪ್ತೇ ರೋಗೇ ಪೈತ್ತಿಕಂ ಸಂವಿಧಾನಂ ಕುರ್ಯಾತ್ ಸರ್ವಂ ಸ್ವಾದು ಯಚ್ಛೀತಲಂ ಚ ॥೮॥

ಕ್ಷವಥು ಮತ್ತು ಭ್ರಂಶಥು ರೋಗಗಳಲ್ಲಿ ಪ್ರಧಮನನಸ್ಯವನ್ನು ಅಂದರೆ ಶಿರೋವಿರೇಚನದ್ರವ್ಯಗಳ ಚೂರ್ಣವನ್ನು ಕೊಳವೆಯ ತುದಿಯಲ್ಲಿಟ್ಟು ಆ ಕೊಳವೆಯ ತುದಿಯು ರೋಗಿಯ ಮೂಗಿನಹೊಳ್ಳೆಗೆ ಸೋಕುವಂತೆಮಾಡಿ ಕೊಳವೆಯ ಮತ್ತೊಂದು ರಂಧ್ರದಲ್ಲಿ ಮುಖವಾಯುವಿನಿಂದ ಊದಿ ಚೂರ್ಣವು ರೋಗಿಯ ಮೂಗಿಗೆ ನುಗ್ಗುವಂತೆ ಮಾಡಬೇಕು. ಈ ರೀತಿಯಾಗಿ ಕಫವು ಕ್ಷೀಣವಾದ ಮೇಲೆ ವಾತರೋಗಹರಗಳಾದ ಶಿರೋಬಸ್ತಿಯನ್ನೂ, ಸ್ನಿಗ್ಧವಾದ ಧೂಮಪಾನವನ್ನೂ ಮತ್ತು ಇತರ ಹಿತಕರಗಳಾದ ಉಪಚಾರಗಳನ್ನೂ ಮಾಡಬೇಕು. ದೀಪ್ತಿರೋಗದಲ್ಲಿ ಸ್ವಾದುಶೀತಲಗಳಾದ ಎಲ್ಲಾ ವಿಧ ಪಿತ್ತಹರ ಚಿಕಿತ್ಸೆಗಳನ್ನೇ ಮಾಡಬೇಕು.

ನಾಸಾನಾಹೇ ಸ್ನೇಹಪಾನಂ ಪ್ರಧಾನಂ ಸ್ನಿಗ್ಧಾ ಧೂಮಾ ಮೂರ್ಧಬಸ್ತಿಶ್ಚ ನಿತ್ಯಮ್ ।
ಬಲಾತೈಲಂ ಸರ್ವಥೈವೋಪಯೋಜ್ಯಂ ವಾತವ್ಯಾಧಾವನ್ಯದುಕ್ತಂ ಚ ಯದ್ಯತ್ ॥೯॥
ನಾಸಾಸ್ರಾವೇ ಘ್ರಾಣತಶ್ಚೂರ್ಣಮುಕ್ತಂ ನಾಡ್ಯಾ ದೇಯಂಯೋಽವಪೀಡಶ್ಚ ತೀಕ್ಷ್ಣಃ ।
ತೀಕ್ಷ್ಣಂ ಧೂಮಂ ದೇವದಾರ್ವಗ್ನಿಕಾಭ್ಯಾಂ ಮಾಂಸಂ ವಾಜಂ ಯುಕ್ತಮತ್ರಾದಿಶನ್ತಿ ॥೧೦॥

ನಾಸಾನಾಹ ರೋಗದಲ್ಲಿ ರೋಗಿಗೆ ಸ್ನೇಹವನ್ನು ಪಾನಮಾಡಿಸಬೇಕು. ಸರ್ವದಾ ಸ್ನಿಗ್ಧಧೂಮಪಾನ ಮತ್ತು ಶಿರೋಬಸ್ತಿಗಳನ್ನು ಮಾಡಿಸಬೇಕು. ಬಲಾತೈಲವನ್ನು ವಾತರೋಗದಲ್ಲಿ ಹೇಳಿರುವ ಇತರ ವಿಧಾನಗಳನ್ನೂ ಪ್ರಯೋಗಿಸಬೇಕು. ನಾಸಾಸ್ರಾವ ರೋಗದಲ್ಲಿ ನಳಿಕೆಯ ಮೂಲಕ ತೀಕ್ಷ್ಣಗಳಾದ ಅವಪೀಡನಸ್ಯ ಚೂರ್ಣಗಳನ್ನು ಮೂಗಿನ ಹೊಳ್ಳೆಗಳಿಗಿಟ್ಟು ಸೇದಿಸಬೇಕು. ದೇವದಾರು, ಚಿತ್ರಮೂಲಗಳನ್ನು ಸೇರಿಸಿ ತೀಕ್ಷ್ಣ ಧೂಮಪಾನ ಮಾಡಿಸಬೇಕು. ಆಹಾರದೊಡನೆ ಆಡಿನ ಮಾಂಸವನ್ನು ಸೇವಿಸಬೇಕೆಂದು ಹೇಳುತ್ತಾರೆ.

ನಾಸಾಶೋಷೇ ಕ್ಷೀರಸರ್ಪಿಃ ಪ್ರಧಾನಂ ಸಿದ್ಧಂ ತೈಲಂ ಚಾಣು ಕಲ್ಪೇನ ನಸ್ಯೇ ।
ಸರ್ಪಿಃ ಪಾನಂ ಭೋಜನಂ ಜಾಙ್ಗಲೈಶ್ಚ ಸ್ನೇಹಃ ಸ್ವೇದಃ ಸ್ನೈಹಿಕಶ್ಚಾಪಿ ಧೂಮಃ ॥೧೧॥

ಶೇಷಾರ್ ರೋಗಾರ್ ಘ್ರಾಣಜಾರ್ ಸನ್ನಿಯಚ್ಛೇದುಕ್ತಂ ತೇಷಾಂ ಯದ್ಯಥಾ ಸಂವಿಧಾನಮ್ ||೧೨||

ನಾಸಾಶೋಷದಲ್ಲಿ ಹಾಲನ್ನು ಕಡೆದು ತೆಗೆದ ಬೆಣ್ಣೆಯೇ ಪ್ರಧಾನವಾಗಿ ಅಣುತೈಲ ವಿಧಾನದಿಂದ ತಯಾರಿಸಿದ ತೈಲದಿಂದ ನಸ್ಯವನ್ನೂ, ಸ್ನೇಹಪಾನವನ್ನೂ, ಜಾಂಗಲ ಮಾಂಸಮಿಶ್ರವಾದ ಭೋಜನವನ್ನೂ ಸ್ನೇಹಸ್ವೇದ ಕರ್ಮಗಳನ್ನೂ, ಸ್ನೇಹಕರ ಧೂಮ ಪಾನವನ್ನೂ ಮಾಡಿಸಬೇಕು. ನಾಶಾರ್ಶಸ್ಸು, ನಾಸಾಶೋಫ, ನಾಸಾರ್ಬುದಾದಿ ಇತರ ನಾಸಾರೋಗಗಳನ್ನು ಆಯಾಯ ರೋಗಗಳಲ್ಲಿ ಹೇಳಿರುವ ಚಿಕಿತ್ಸಾವಿಧಾನಗ ಳಂತೆಯೇ ಉಪಚರಿಸಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರ ತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ನಾಸಾಗತ ರೋಗಪ್ರತಿಷೇಧನಾಮಕ ತ್ರಯೋವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾ ವಿವೃತಿಃ

ಚತುರ್ವಿಂಶತಿತಮೋಽಧ್ಯಾಯಃ

ಅಥಾತಃ ಪ್ರತಿಶ್ಯಾಯಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಪ್ರತಿಶ್ಯಾಯರೋಗದ ಚಿಕಿತ್ಸೆಯನ್ನು ವಿವರಿಸಿಹೇಳುತ್ತೇವೆ ; ಕಫಾದಿ ದೋಷಗಳು ವಾತಮಾರ್ಗವನ್ನು ಅನುಸರಿಸಿ ಗಮನಮಾಡುವುದರಿಂದ (ಸಂಚರಿಸುತ್ತವೆ) ಪ್ರತಿಶ್ಯಾಯವುಂಟಾಗುತ್ತವೆ.

ನಾರೀಪ್ರಸಙ್ಗಃ ಶಿರಸೋಽಭಿತಾಪೋ ಧೂಮೋ ರಜಃ ಶೀತಮತಿಪ್ರತಾಪಃ ।
ಸಂಧಾರಣಂ ಮೂತ್ರಪುರೀಷಯೋಶ್ಚ ಸದ್ಯಃ ಪ್ರತಿಶ್ಯಾಯ ನಿದಾನಮುಕ್ತಮ್ ||೩||

ಅತಿಯಾದ ಸ್ತ್ರೀಸಂಗ ಮಾಡುವುದು, ಹೊಗೆಯೂ ಧೂಳೂ ಮೂಗಿನ ಮೂಲಕ ನುಗ್ಗಿ ತಲೆಯಲ್ಲಿ ತಾಪವನ್ನುಂಟುಮಾಡುವುದು, ಶೀತವಾದ ಘಾಳಿಯಲ್ಲಿ ಸಂಚರಿಸುವುದು, ಅತಿಶೀತಲವಾದನೀರನ್ನು ಪಾನಮಾಡುವುದು, ಅತಿಯಾಗಿ ಬಿಸಿಲಿನಲ್ಲಿ ಸಂಚರಿಸಿ ತಲೆಯನ್ನು ಕಾಯಿಸುವುದು, ಮೂತ್ರಪುರೀಷಗಳ ವೇಗವನ್ನು ತಡೆಯುವುದು ಇವೇ ಪ್ರತಿಶ್ಯಾಯ ಕಾರಣಗಳು.

ಚಯಂಗತಾ ಮೂರ್ಧನಿ ಮಾರುತಾದಯಃ ಪೃಥಕ್ ಸಮಸ್ತಾಶ್ಚ ತಥೈವ ಶೋಣಿತಮ್ ।
ಪ್ರಕೋಪ್ಯಮಾನಾ ವಿವಿಧೈಃ ಪ್ರಕೋಪಣೈರ್ನೃಣಾಂ ಪ್ರತಿಶ್ಯಾಯಕರಾ ಭವನ್ತಿ ಹಿ ||೪||

ತಲೆಯೊಳಗೆ ಚಯವಾದ ವಾತ, ಪಿತ್ತ, ಕಫಗಳೂ ರಕ್ತವೂ ಪ್ರತ್ಯೇಕವಾಗಿಯೂ ಮಿಶ್ರವಾಗಿಯೂ ವಿವಿಧ ಪ್ರಕೋಪಕಾರಣಗಳಿಂದ ಪ್ರವೃದ್ಧಗಳಾಗಿ ಸ್ವಪ್ರಮಾಣಗಳಿಗಿಂತಲೂ ಹೆಚ್ಚಾಗಿ ಪ್ರತಿಶ್ಯಾಯವನ್ನುಂಟುಮಾಡುತ್ತವೆ.

ಟಿಪ್ಪಣಿ :—ಚಯವೆಂದರೆ ದೋಷಗಳು ತಮ್ಮತಮ್ಮಸ್ಥಾನಗಳಲ್ಲೇ ವೃದ್ಧಿಯಾಗುತ್ತವೆಂದು ಅರ್ಥವು. ವಾತಪಿತ್ತಕಫರಕ್ತಗಳಿಗೆಲ್ಲಕ್ಕೂ ತಲೆಯಲ್ಲಿ ಸ್ಥಾನವಿಲ್ಲದ್ದರಿಂದ ಅವು ತಲೆಯಲ್ಲಿ ಸಂಚಯವಾಗುವುದು ಹೇಗೆ ? ಎಂಬ ಸಂಶಯವುಂಟಾದರೆ ಮುಖಸಂಚಾರಿಯಾದ ಪ್ರಾಣವಾಯುವಿಗೆ ಶಿರಸ್ಸುಸ್ಥಾನವು. ತ್ವಗಾಶ್ರಿತಪಿತ್ತಕ್ಕೂ ತಲೆಯೇ ಸ್ಥಾನವಾಯಿತು. ತಲೆಯು ಕಫದಸ್ಥಾನವೆಂಬುದು ಸುಪ್ರಸಿದ್ಧವಾದ ಸಂಗತಿಯು ; ಸಿರೆಗಳು ಸರ್ವಶರೀರಗತಂಗಳಾದ್ದರಿಂದ ರಕ್ತಕ್ಕೂ ಶಿರಸ್ಸುಸ್ಥಾನವಾಯಿತು ; ಆದ್ದರಿಂದ ತಲೆಯಲ್ಲಿ ಅವೆಲ್ಲವೂ ವೃದ್ಧಿಯಾಗುವುದೆಂಬುದು ಸರಿಯಾದ ವಿಚಾರವು.

ಶಿರೋಗುರುತ್ವಂ ಕ್ಷವಥೋಃ ಪ್ರವರ್ತನಂ ತಥಾಙ್ಗಮರ್ದಃ ಪರಿಹೃಷ್ಟರೋಮತಾ ।
ಉಪದ್ರವಾಶ್ಚಾಪ್ಯಪರೇ ಪೃಥಗ್ವಿಧಾ ನೃಣಾಂ ಪ್ರತಿಶ್ಯಾಯಪುರಃಸರಾಃ ಸ್ಮೃತಾಃ ||೫||

ಪೂರ್ವರೂಪದಲ್ಲಿ ತಲೆಭಾರ, ಶೀನುಬರುವುದು, ಮೈಕತ್ತರಿಸುವಂತೆನೋವು, ಮೈರೋಮಾಂಚವಾಗುವುದು, ಅರೋಚಕತೆ ಮೊದಲಾದ ಇತರ ಉಪದ್ರವಗಳುಂಟಾಗುತ್ತವೆ.

ಆನದ್ಧಾ ಪಿಹಿತಾ ನಾಸಾ ತನುಸ್ರಾವಪ್ರವರ್ತಿನೀ ।
ಗಳತಾಲ್ವೋಷ್ಠಶೋಷಶ್ಚ ನಿಸ್ತೋದಃ ಶಙ್ಖಯೋಸ್ತಥಾ ॥೬॥
ಸ್ವರೋಪಘಾತಶ್ಚ ಭವೇತ್ ಪ್ರತಿಶ್ಯಾಯೇಽನಿಲಾತ್ಮಕೇ ।

ವಾತಜಪ್ರತಿಶ್ಯಾಯದಲ್ಲಿ ಮೂಗುದಪ್ಪವಾಗಿ ಧೂಳಿನಿಂದ ತುಂಬಿರುತ್ತದೆ ನೀರಾಗಿ ದ್ರವಸೋರುತ್ತದೆ ; ಗಂಟಲು ತಾಲುದೇಶ (ಅಂಗಳು) ತುಟಿಗಳು ದ್ರವರಹಿತಗಳಾಗುತ್ತವೆ. ಕೆನ್ನೆಯಮೇಲ್ಭಾಗವು ನೋಯುತ್ತದೆ ; ಧ್ವನಿಕೆಡುತ್ತದೆ (ಕೆಲವುವೇಳೆ ಮಾತನಾಡುವುದಕ್ಕೆ ಆಗುವುದಿಲ್ಲ (ಮಾತೇ ಹೊರಡುವುದಿಲ್ಲ).

ಉಷ್ಣಃ ಸಪೀತಕಃ ಸ್ರಾವೋ ಘ್ರಾಣಾತ್ ಸ್ರವತಿ ಪೈತ್ತಿಕೇ ॥೭॥
ಕೃಶೋಽತಿಪಾಣ್ಡುಃ ಸನ್ತಪ್ತೋ ಭವೇತ್ ತೃಷ್ಣಾಭಿಪೀಡಿತಃ ।
ಸಧೂಮಂ ಸಹಸಾ ವಹ್ನಿಂ ವಮತೀವ ಸ ಮಾನವಃ ॥೮॥

ಪಿತ್ತಜಪ್ರತಿಶ್ಯಾಯದಲ್ಲಿ ಬಿಸಿಯಾದ ಹಳದಿವರ್ಣದ ದ್ರವವು ಮೂಗಿನಿಂದ ಸೋರುತ್ತದೆ. ರೋಗಿಯು ಕೃಶನಾಗಿ ಅತಿಪಾಂಡುವುಳ್ಳವನಾಗಿ ಮುಖವೂ, ಮೂಗೂ ಬಿಸಿಯಾಗಿ ಬಾಯಾರಿಕೆಯಿಂದ ಪೀಡಿತನಾಗಿರುತ್ತಾನೆ. ಅಕಸ್ಮಾತ್ತಾಗಿ ಹೊಗೆಯಿಂದ ಕೂಡಿದ ಬೆಂಕಿಯುನ್ನು ವಮನಮಾಡುವಂತೆ ಮನಸ್ಸಿಗೆ ತೋರುತ್ತದೆ.

ಕಫಃ ಕಫಕೃತೇ ಘ್ರಾಣಾಚ್ಛುಕ್ಲಃ ಶೀತಃ ಸ್ರವೇನ್ಮುಹುಃ ।
ಶುಕ್ಲಾವಭಾಸಃ ಶೂನಾಕ್ಷೋ ಭವೇದ್ಗುರುಶಿರೋಮುಖಃ ॥೯॥
ಶಿರೋಗಳೌಷ್ಠತಾಲೂನಾಂ ಕಣ್ಡೂಯನಮತೀವ ಚ ।

ಕಫಜಪ್ರತಿಶ್ಯಾಯದಲ್ಲಿ (ನೆಗಡಿಯಲ್ಲಿ) ಮೂಗಿನಿಂದ ಬಿಳುಪಾದ ತಣ್ಣಗಿರುವ ಕಫವು ಪದೇಪದೇ ಸ್ರಾವವಾಗುತ್ತದೆ. ಮುಖ ಬಿಳುಪೇರಿ ಕಣ್ಣುಗಳೂದಿ ತಲೆ, ಮುಖಗಳು ಭಾರವಾಗುತ್ತವೆ. ತಲೆ, ಗಂಟಲು, ತುಟಿಗಳು, ಅಂಗಳುಗಳಲ್ಲಿ ಅತಿಯಾಗಿ ನವೆಯುಂಟಾಗುತ್ತದೆ.

ಭೂತ್ವಾ ಭೂತ್ವಾ ಪ್ರತಿಶ್ಯಾಯೋ ಯೋಽಕಸ್ಮಾದ್ವಿನಿವರ್ತತೇ ॥೧೦॥
ಸಂಪಕ್ವೋ ವಾಪ್ಯಪಕ್ವೋ ವಾ ಸ ಸರ್ವಪ್ರಭವಃ ಸ್ಮೃತಃ ।
ಲಿಙ್ಗಾನಿ ಚೈವ ಸರ್ವೇಷಾಂ ಪೀನಸಾನಾಂ ಚ ಸರ್ವಜೇ ॥೧೧॥

ತ್ರಿದೋಷಜಪ್ರತಿಶ್ಯಾಯದಲ್ಲಿ ನೆಗಡಿಯಾಗಿ ಅಕಸ್ಮಾತ್ತಾಗಿ ನಿಂತುಬಿಡುತ್ತದೆ. ಪಾಕಾವಸ್ಥೆಯಲ್ಲಾಗಲೀ, ಆಮಾವಸ್ಥೆಯಲ್ಲಾಗಲೀ ಮೂರು ವಿಧಗಳಾದ ನೆಗಡಿಗಳ ಲಕ್ಷಣಗಳು ಇರುತ್ತವೆ. ಇದನ್ನು ಅಸಾಧ್ಯವಾದದ್ದೆಂದು ತಿಳಿಯಬೇಕು.

ರಕ್ತಜೇ ತು ಪ್ರತಿಶ್ಯಾಯೇ ರಕ್ತಾಸ್ರಾವಃ ಪ್ರವರ್ತತೇ ।
ತಾಮ್ರಾಕ್ಷಶ್ಚ ಭವೇಜ್ಜನ್ತುರುರೋಘಾತಪ್ರಪೀಡಿತಃ ॥೧೨॥

ದುರ್ಗನ್ಧೋಚ್ಛ್ವಸವದನಸ್ತಥಾ ಗನ್ಧಾನ್ ನ ವೇತ್ತಿ ಚ ।
ಮೂರ್ಛನ್ತಿ ಚಾತ್ರ ಕ್ರಿಮಯಃ ಶ್ವೇತಾಃ ಕೃಷ್ಣಾಸ್ತಥಾಣವಃ ||೧೩||
ಕ್ರಿಮಿಮೂರ್ಧವಿಕಾರೇಣ ಸಮಾನಂ ಚಾಸ್ಯ ಲಕ್ಷಣಮ್ ।

ರಕ್ತಜಪ್ರತಿಶ್ಯಾಯದಲ್ಲಿ ಮೂಗಿನಿಂದ ರಕ್ತವರ್ಣದ ದ್ರವವು ಸೋರುತ್ತದೆ. ರೋಗಿಯ ಕಣ್ಣು ತಾಮ್ರದ ಬಣ್ಣವಾಗಿರುತ್ತದೆ. ಎದೆಯೊಡೆದು ವ್ಯಥೆಪಡುತ್ತಾನೆ. ಉಸಿರುಬಿಟ್ಟರೆ ಬಾಯಿಯಿಂದ ದುರ್ಗಂಧ ಹೊರಡುತ್ತದೆ. ಅವನಿಗೆ ಪದಾರ್ಥಗಳ ವಾಸನೆ ಗೊತ್ತಾಗುವುದಿಲ್ಲ. ಅವನ ಮೂಗಿನಿಂದ ಬಿಳುಪಾದ, ಕಪ್ಪಾದ ಸೂಕ್ಷ್ಮ ಕ್ರಿಮಿಗಳು ಬೀಳುತ್ತವೆ. ಕ್ರಿಮಿಜನಿತ ಶಿರೋರೋಗದ ಲಕ್ಷಣಗಳೆಲ್ಲಾ ರಕ್ತಜ ಪ್ರತಿಶ್ಯಾಯದಲ್ಲೂ ಕಂಡುಬರುತ್ತವೆ.

ಪ್ರಕ್ಲಿದ್ಯತಿ ಪುನರ್ನಾಸಾ ಪುನಶ್ಚ ಪರಿಶುಷ್ಯತಿ ||೧೪||
ಮುಹುರಾನಹ್ಯತೇ ಚಾಪಿ ಮುಹುರ್ವಿವ್ರಿಯತೇ ತಥಾ।
ನಿಃಶ್ವಾಸೋಚ್ಛ್ವಸದೌರ್ಗನ್ಧ್ಯಂ ತಥಾ ಗನ್ಧಾನ್ ನ ವೇತ್ತಿ ಚ ||೧೫||
ಏವಂ ದುಷ್ಟಪ್ರತಿಶ್ಯಾಯಂ ಜಾನೀಯಾತ್ ಕೃಚ್ಛ್ರಸಾಧನಮ್।

ಏಕದೋಷಜ ಪ್ರತಿಶ್ಯಾಯಕ್ಕೆ ಚಿಕಿತ್ಸೆಮಾಡದೆ ಉಪೇಕ್ಷಿಸಿದರೆ. ದುಷ್ಟ ಪ್ರತಿಶ್ಯಾಯವಾಗಿ ಪರಿಣಮಿಸುತ್ತದೆ. ಅದರ ಲಕ್ಷಣಗಳಾವುವೆಂದರೆ ಮೂಗಿನಿಂದ ದ್ರವಜಿನುಗುತ್ತಲೂ, ಪುನಃ ಮೂಗು ಒಣಗುತ್ತಲೂ, ಮೂಗುಕಟ್ಟಿ ಉಸಿರಾಡದಂತಾಗುತ್ತಲೂ, ಪುನಃ ಮೂಗಿನ ಹೊಳ್ಳೆಗಳು ಅಗಲವಾಗುತ್ತಲೂ, ಉಚ್ಛ್ವಾಸನಿಃಶ್ವಾಸಗಳಿಂದ ದುರ್ವಾಸನೆ ಹೊರಡುತ್ತಲೂ ವಾಸನೆಯೇ ಗೊತ್ತಾಗದೆಯೂ ಇರುತ್ತದೆ. ಇದನ್ನು ಕೃಚ್ಛ್ರಸಾಧ್ಯವೆಂದು ತಿಳಿಯಬೇಕು.

ಸರ್ವಏವಪ್ರತಿಶ್ಯಾಯಾ ನರಸ್ಯಾಪ್ರತಿಕಾರಣಃ ||೧೬||
ಕಾಲೇನ ರೋಗಜನನಾ ಜಾಯನ್ತೇ ದುಷ್ಟಪೀನಸಾಃ।
ಬಾಧಿರ್ಯಮಾನ್ಧ್ಯಮಘ್ರಾಣಂ ಘೋರಾಂಶ್ಚ ನಯನಾಮಯಾನ್ ||೧೭||
ಕಾಸಾಗ್ನಿಸಾದಶೋಫಾಂಶ್ಚ ವೃದ್ಧಾಃ ಕುರ್ವನ್ತಿ ಪೀನಸಾಃ।

ಎಲ್ಲಾ ವಿಧಗಳಾದ ಪ್ರತಿಶ್ಯಾಯಗಳಿಗೂ ಚಿಕಿತ್ಸೆಮಾಡದಿದ್ದರೆ ಕಾಲಕಳೆದ ಮೇಲೆ ದುಷ್ಟಪೀನಸಗಳನ್ನುಂಟುಮಾಡುತ್ತವೆ. ಈ ಪೀನಸಗಳು ಪ್ರಬಲವೃದ್ಧಿ ಹೊಂದಿದರೆ ಕಿವುಡುತನ, ಕುರುಡುತನ, ಮೂಗಿಗೆ ವಾಸನೆಗೊತ್ತಾಗದಿರುವಿಕೆ (ಘ್ರಾಣನಾಸ) ಕಾಸ, ಅಗ್ನಿನಾಶ, ಶೋಫ ಇವುಗಳನ್ನೂ ಅತಿ ಭಯಂಕರಗಳಾದ ನೇತ್ರರೋಗಗಳನ್ನೂ ಉಂಟುಮಾಡುತ್ತವೆ.

ನವಂ ಪ್ರತಿಶ್ಯಾಯಮಪಾಸ್ಯ ಸರ್ವಮುಪಾಚರೇತ್ಸರ್ಪಿಷ ಏವ ಪಾನೈಃ।
ಸ್ವೇದೈರ್ವಿಚಿತ್ರೈರ್ವಮನೈಶ್ಚ ಯುಕ್ತೈಃ ಕಾಲೋಪಪನ್ನೈರವಪೀಡನೈಶ್ಚ ||೧೮||

ಆಮಾವಸ್ಥೆಯನ್ನು ಬಿಟ್ಟು ಉಳಿದ ಪ್ರತಿಶ್ಯಾಯದ ಎಲ್ಲಾ ಅವಸ್ಥೆಗಳಲ್ಲೂ ಘೃತ

ವನ್ನು ಪಾನಮಾಡಿಸಬೇಕು ; (ಎಲ್ಲಾ ವಿಧದ ಪ್ರತಿಶ್ಯಾಯಗಳೂ ವಾತಾತ್ಮಕ ಗಳಾಗಿಯೇ ಇರುತ್ತವೆಯಾಗಿ ಘೃತಪಾನವು ಹಿತಕರವಾದದ್ದು). ವಿವಿಧಸ್ವೇದಗ ಳಿಂದಲೂ ಕಾಲಕ್ಕೆ ತಕ್ಕಂತೆ ವಾತಾದಿಹರಗಳಾದ ಅವಪೀಡನ ನಸ್ಯಗಳ ಪ್ರಯೋಗ ದಿಂದಲೂ ಚಿಕಿತ್ಸೆಮಾಡಬೇಕು.

ಟಿಪ್ಪಣಿ : ಅರುಚಿ ವಿರಸತೋರುವುದು, ಮೂಗಿನಿಂದ ದ್ರವಸೋರುವುದು, ನೋವು, ಸದಾ ವ್ಯಥೆಪಡುವುದು, ತಲೆಭಾರ, ಶೀನುಬರುವುದು, ಜ್ವರ, ಇವು ಆಮಪೀನ ಸದ ಲಕ್ಷಣಗಳು ; ಮೇಲಿನಲಕ್ಷಣಗಳೆಲ್ಲಾ ಕಡಮೆಯಾಗಿ ತಲೆ ಮೂಗು, ಮುಖಗಳು ಹಗುರವಾಗುವುದು, ಗಟ್ಟಿಯಾದ ಹಳದಿ ಬಣ್ಣದ ಕಫವು ಮೂಗಿನಿಂದ ಹೊರಕ್ಕೆ ಬೀಳು ವುದು ಇವು ಪಕ್ವಪ್ರತಿಶ್ಯಾಯದ ಲಕ್ಷಣಗಳು.

ಅಪಚ್ಯಮಾನಸ್ಯ ಹಿ ಪಾಚನಾರ್ಥಂ ಸ್ನೇಹೋ ಹಿತೋಽಮ್ಲೈರಹಿಮಂ ಚ ಭೋಜ್ಯಮ್ ।
ನಿಷೇವ್ಯಮಾಣಂ ಪಯಸಾರ್ದ್ರಕಂ ವಾ ಸಂಪಾಚಯೇದಿಕ್ಷುವಿಕಾರಯೋಗ್ಯೈಃ ॥೧೯॥
ಪಕ್ವಂ ಘನಂ ಚಾಪ್ಯವಲಮ್ಬಮಾನಂ ಶಿರೋವಿರೇಕೈರಪಕರ್ಷಯೇತ್ತಮ್ ।
ವಿರೇಚನಾಸ್ಥಾಪನಧೂಮಪಾನೈರವೇಕ್ಷ್ಯ ದೋಷಾ ಕವಳಗ್ರಹೈಶ್ಚ ॥೨೦॥

ತರುಣ ಪ್ರತಿಶ್ಯಾಯವು (ಆಮ) ಪಾಕವಾಗಲು ಅಮ್ಲರಸಮಿಶ್ರಮಾಡಿದ ಘೃತ ಪಾನವನ್ನು ಮಾಡಬೇಕು, ಬಿಸಿಯಾಗಿ ಭೋಜನಮಾಡಬೇಕು ; ಹಾಲಿನೊಡನೆ ಹಶಿ ಶುಂಠಿಯರಸವನ್ನು (ಶುಂಠಿಪುಡಿಯೆಂದು ಕೆಲವರ ಮತ) ಅಥವಾ ಬೆಲ್ಲವನ್ನು ಸೇರಿಸಿ ಕುಡಿ ಯಬೇಕು ; ಪಕ್ವಪ್ರತಿಶ್ಯಾಯದಲ್ಲಿ ಗಡ್ಡೆಕಟ್ಟಿದ ಕಫವು ಮೂಗಿನಲ್ಲಿ ನೇತಾಡುತ್ತಿದ್ದರೆ ಶಿರೋವಿರೇಚನದಿಂದಲೂ, ದೋಷಗಳಿಗೆ ತಕ್ಕಂತೆ ವಿರೇಚನ, ಆಸ್ಥಾಪನಬಸ್ತಿ, ಧೂಮ ಪಾನ, ಕಬಳಗ್ರಹಗಳಿಂದಲೂ ನಿವಾರಣೆ ಮಾಡಬೇಕು.

ನಿವಾತಶಯ್ಯಾಸನಚೇಷ್ಟನಾನಿ ಮೂರ್ಧ್ನೋ ಗುರೂಷ್ಣಂ ಚ ತಥೈವ ವಾಸಃ ।
ತೀಕ್ಷ್ಣಾ ವಿರೇಕಾಃ ಶಿರಸಶ್ಚ ಧೂಮಾಃ ರೂಕ್ಷಂಪಲಾನ್ನಂ ವಿಜಯಾ ಚ ಸೇವ್ಯಾ ॥೨೧॥

ಪ್ರತಿಶ್ಯಾಯದಲ್ಲಿ ಪಥ್ಯಗಳು :—ಗಾಳಿಯು ವೇಗವಾಗಿ ನುಗ್ಗದಿರುವ ಮನೆಯಲ್ಲಿ ಮಲಗುವುದು, ಕೂರುವುದು, ಕೆಲಸಮಾಡುವುದು ; ತಲೆಗೆ ಬಿಸಿಯಾದ ಭಾರವಾದ ಬಟ್ಟೆಯಿಂದ ಬಿಗಿದ ಪೇಟ ರುಮಾಲು ಮೊದಲಾದ ಶಿರೋವೇಷ್ಟನವೂ, ತೀಕ್ಷ್ಣ ದ್ರವ್ಯ ಗಳಿಂದ ಶಿರೋವಿರೇಚನ, ಧೂಮಪಾನ, ರೂಕ್ಷವಾದ ಅನ್ನ, ಮತ್ತು ಮಾಂಸಗಳ ಭೋಜನ ಅಣಿಲೆಪುಡಿ ಇವುಗಳನ್ನು ಸೇವಿಸುವುದೂ ಹಿತಕರಗಳು.

ಶೀತಾಮ್ಬುಯೋಷಿಚ್ಛಿಶಿರಾವಗಾಹಚಿನ್ತಾತಿರೂಕ್ಷಾಶನವೇಗ ರೋಧಾ ।
ಶೋಕಂ ಚ ಮದ್ಯಾನಿ ನವಾನಿ ಚೈವ ವಿವರ್ಜಯೇತ್ ಪೀನಸರೋಗಜುಷ್ಟಃ ॥೨೨॥

ಪೀನಸದಲ್ಲಿ ಅಪಥ್ಯಗಳು :—ತಣ್ಣೀರಿನಿಂದ ಸ್ನಾನಪಾನಗಳನ್ನು ಮಾಡುವುದು ಸ್ತ್ರೀಸಂಗ, ಯೋಚನೆಮಾಡುವುದು, ಅತಿರೂಕ್ಷವಾದ ಅನ್ನವನ್ನು ತಿನ್ನುವುದು, ಮೂತ್ರ

ಪುರೀಷಾದಿಗಳ ವೇಗಗಳನ್ನು ತಡೆಯುವುದು, ವ್ಯಸನಪಡುವುದು ; ಹೊಸದಾಗಿ ತಯಾರಾದ ಮದ್ಯಪಾನ ಇವುಗಳನ್ನು ತ್ಯಜಿಸಬೇಕು.

ಛರ್ದ್ಯಙ್ಗಸಾದಜ್ವರಗೌರವಾರ್ತಮರೋಚಕಾರತ್ಯತಿಸಾರ ಯುಕ್ತಮ್ ।
ವಿಲಙ್ಘನೈಃ ಪಾಚನದೀಪನೀಯೈರುಪಾಚರೇತ್ ಪೀನಸಿನಂ ಯಥಾವತ್ ॥೨೩॥
ಬಹುದ್ರವೈರ್ವಾತಕಫೋಪಸೃಷ್ಟಂ ಪ್ರಚ್ಛರ್ದಯೇತ್ ಪೀನಸಿನಂ ವಯಸ್ಥಮ್ ।
ಉಪದ್ರವಾಂಶ್ಚಾಪಿ ಯಥೋಪದೇಶಂ ಸ್ವೈರ್ಭೇಷಜೈರ್ಭೋಜನ ಸಂವಿಧಾನೈಃ ।
ಜಯೇದ್ವಿದಿತ್ವಾ ಮೃದುತಾಂ ಗತೇಷು ಪ್ರಾಗ್ಲಕ್ಷಣೇಷೂಕ್ತಮಥಾದಿಶೇಚ್ಚ ॥೨೪॥

ವಮನ, ದೇಹಕಾರ್ಶ್ಯ, ಜ್ವರ, ಮೈಭಾರ, ಅರೋಚಕತೆ, ದುಃಖ, ಅತಿಸಾರ ಇವುಗಳಿಂದ ಪೀಡಿತನಾದ ಪೀನಸ ರೋಗಿಯನ್ನು ಲಂಘನ, ಆಮಪಾಚನ, ಅಗ್ನಿದೀಪನ ಕರಗಳಾದ ಔಷಧಪ್ರಯೋಗಗಳಿಂದ ಉಪಚರಿಸಬೇಕು ; ವಾತಕಫಪೀಡಿತನಾದ ತರುಣ ರೋಗಿಗೆ ಬಹುದ್ರವದ್ರವ್ಯಗಳಿಂದ ವಮನಮಾಡಿಸಿ ಉಪದ್ರವಗಳಿಗೆ ತಕ್ಕ ಔಷಧಪ್ರಯೋಗ ಗಳನ್ನೂ ಭೋಜನಕ್ರಮಗಳನ್ನೂ ಆಚರಿಸಬೇಕು ; ಆಮಲಕ್ಷಣವುಳ್ಳ ಪ್ರತಿಶ್ಯಾಯಗಳು ಮೇಲಿನ ಕ್ರಮಗಳಿಂದ ಪಕ್ವಾವಸ್ಥೆಗೆ ಬಂದು ಮೃದುವಾದರೆ ಹಿಂದೆಹೇಳಿದ ಚಿಕಿತ್ಸಾ ವಿಧಾನಗಳನ್ನು (ವಾತಪ್ರತಿಶ್ಯಾಯದಲ್ಲಿ ಘೃತಪಾನ ಮುಂತಾದವು) ಆಚರಿಸಬೇಕು.

ವಾತಿಕೇ ತು ಪ್ರತಿಶ್ಯಾಯೇ ಪಿಬೇತ್ ಸರ್ಪಿರ್ಯಥಾಕ್ರಮಮ್ ।
ಪಞ್ಚಭಿರ್ಲವಣೈಃ ಸಿದ್ಧಂ ಪ್ರಥಮೇನ ಗಣೇನ ಚ ॥೨೫॥
ನಸ್ಯಾದಿಷು ವಿಧಿಂ ಕೃತ್ಸ್ನಮವೇಕ್ಷೇತಾರ್ದಿತೇರಿತಮ್ ।

ವಾತಿಕಪ್ರತಿಶ್ಯಾಯದಲ್ಲಿ ಕ್ರಮವರಿತು ಘೃತವನ್ನು ಪಾನಮಾಡಿಸಬೇಕು ; ಪಂಚ ಲವಣಸಿದ್ಧವಾದ ಘೃತವನ್ನೂ ಹ್ರಸ್ವಪಂಚಮೂಲದಿಂದ ತಯಾರಿಸಿದ ಘೃತವನ್ನೂ ಅರ್ದಿತಚಿಕಿತ್ಸೆಯಲ್ಲಿ ಹೇಳಿದ ಸಮಸ್ತವಿಧಾನಗಳನ್ನು (ನಸ್ಯಾದಿ) ಅನುಸರಿಸಬೇಕು.

ಪಿತ್ತರಕ್ತೋತ್ಥಯೋಃ ಪೇಯಂ ಸರ್ಪಿರ್ಮಧುರಕೈಃ ಶೃತಮ್ ॥೨೬॥
ಪರಿಷೇಕಾನ್ ಪ್ರದೇಹಾಂಶ್ಚ ಕುರ್ಯಾದಪಿ ಚ ಶೀತಲಾನ್ ।
ಶ್ರೀಸರ್ಜರಸಪತ್ತಙ್ಗಪ್ರಿಯಙ್ಗುಮಧುಶರ್ಕರಾಃ ॥೨೭॥
ದ್ರಾಕ್ಷಾಮಧೂಲಿಕಾಗೋಜೀಶ್ರೀಫರ್ಣೀಮಧುಕೈಸ್ತಥಾ ।
ಯುಜ್ಯನ್ತೇ ಕವಳಾಶ್ಚಾತ್ರ ವಿರೇಕೋ ಮಧುರೈರಪಿ ॥೨೮॥
ಧನತ್ವಕ್ತ್ರಿಫಲಾಶ್ಯಾಮಾತಿಲ್ವಕೈರ್ಮಧುಕೇನ ಚ ।
ಶ್ರೀಪರ್ಣೀರಜನೀಮಿಶ್ರೈಃ ಕ್ಷೀರೇ ದಶಗುಣೇ ಪಚೇತ್ ॥೨೯॥
ತೈಲಂ ಕಾಲೋಪಪನ್ನಂ ತನ್ನಸ್ಯಂ ಸ್ಯಾದನಯೋರ್ಹಿತಮ್ ।

ಪಿತ್ತರಕ್ತೋತ್ಥಪೀನಸದಲ್ಲಿ ಕಾಕೋಳ್ಯಾದಿಗಣಸಿದ್ಧ ಘೃತವನ್ನು ಕುಡಿಸಬೇಕು ; ಶೀತಲಗಳಾದ ಪರಿಷೇಕಗಳನ್ನೂ, ಲೇಪನಗಳನ್ನೂ ಮಾಡಿಸಬೇಕು ; ಸಾಂಬ್ರಾಣಿ, ರಾಳು, ಪತಂಗದಚೆಕ್ಕೆ, ನೆಳಲು, ಜೇನುತುಪ್ಪ, ಸಕ್ಕರೆ, ದ್ರಾಕ್ಷಿ, ಅಮೃತವಳ್ಳಿ, ಎತ್ತು ನಾಲಿಗೆಸೊಪ್ಪು, ಶಿವನಿ, ಅತಿಮಧುರ, ಇವುಗಳ ಕಷಾಯದಿಂದ ಕಬಳವನ್ನೂ, ಮಧುರ

ದ್ರವ್ಯಗಳಿಂದ ವಿರೇಚನವನ್ನೂ ಮಾಡಿಸಬೇಕು ; ದಿಂಡಲತೊಗಟೆ, ತ್ರಿಫಲ, ತಿಗಡೆಬೇರು ರೋಧ್ರ, ಅತಿಮಧುರ, ಶಿವನಿ, ಅರಿಶಿನ, ಇವುಗಳನ್ನು ೧೦ ರಷ್ಟು ಹಾಲಿನೊಡನೆ, ತೈಲ ೪ ರಷ್ಟನ್ನು ಸೇರಿಸಿ ತಯಾರಿಸಿದ ತೈಲದಿಂದ ನಿರಾಮಸ್ಥಿತಿಯಲ್ಲಿ ನಸ್ಯ ಮಾಡಿಸಬೇಕು.

ಕಫಜೇ ಸರ್ಪಿಷಾ ಸ್ನಿಗ್ಧಂ ತಿಲಮಾಷ ವಿಪಕ್ವಯಾ ||೩೦||
ಯವಾಗ್ವಾ ವಾಮಯೇ ದ್ವಾನ್ತಃ ಕಫಘ್ನಂ ಕ್ರಮಮಾಚರೇತ್ |
ಉಭೇ ಬಲೇ ಬೃಹತ್ಯೌ ಚ ವಿಡಙ್ಗಂ ಸತ್ರಿಕಣ್ಟಕಮ್ ||೩೧||
ಶ್ವೇತಾಮೂಲಂ ಸದಾಭದ್ರಂ ವರ್ಷಾಭೂಂ ಚಾತ್ರ ಸಂಹರೇತ್ |
ತೈಲಮೇಭಿರ್ವಿಪಕ್ವಂ ತು ನಸ್ಯಮಸ್ಯೋಪಕಲ್ಪಯೇತ್ ||೩೨||
ಸರಳಾಕಿಣಿಹೀದಾರುನಿಕುಮ್ಭೇಙ್ಗುದಿಭಿಃ ಕೃತಾಃ |
ವರ್ತಯಶ್ಚೋಪಯೋಜ್ಯಾಃ ಸ್ಯುರ್ಧೂಮಪಾನೇ ಯಥಾವಿಧಿ ||೩೩||

ಕಫಜಪೀನಸದಲ್ಲಿ ರೋಗಿಯು ಘೃತಪಾನದಿಂದ ಸ್ನಿಗ್ಧನಾದ ಮೇಲೆ ಎಳ್ಳು ಉದ್ದುಗಳೊಡನೆ ತಯಾರಿಸಿದ ಯವಾಗುವಿನೊಡನೆ ವಮನೌಷಧಗಳನ್ನು ಸೇರಿಸಿ ವಮನ ಮಾಡಿಸಿ ಅನಂತರ ಕಫಹರಗಳಾದ ಆಹಾರ ಉಪಚಾರ ಪಥ್ಯಾಭ್ಯಾಸಗಳನ್ನು ಮಾಡಿಸಬೇಕು ; ಕಳ್ಳಂಗಡಲೆ ಬೋಳಂಗಡಲೆ ಹೆಗ್ಗುಳ್ಳ, ನೆಲಗುಳ್ಳ, ವಿಡಂಗ, ನೆಗ್ಗಿಲು, ಬಿಳಿಯ ಗಿರಿಕರ್ಣಿಕೆಯಬೇರು, ಶಿವನಿಹಣ್ಣು (ತೊಗಟೆ) ಬಿಳಿಕೊಮ್ಮೆಬೇರು, ಇವುಗಳೊಡನೆ ತಯಾರಿಸಿದ ತೈಲದಿಂದ ನಸ್ಯ ಮಾಡಿಸಬೇಕು ; ಸರಳ ದೇವದಾರು, ಗಿರಿಕರ್ಣಿಕೆ, ಮರದರಿಶಿನ, ಜಾಪಾಳದತೊಗಟೆ, ಇಂಗಳದ ಹಣ್ಣು ಇವುಗಳನ್ನು ಸೇರಿಸಿ ತಯಾರಿಸಿದ ವರ್ತಿಗಳಿಂದ ಧೂಮಪಾನ ಮಾಡಿಸಬೇಕು.

ಸರ್ಪಿಂಷಿ ಕಟುತಿಕ್ತಾನಿ ತೀಕ್ಷ್ಣಧೂಮಾಃ ಕಟೂನಿ ಚ |
ಭೇಷಜಾನ್ಯುಪಯುಕ್ತಾನಿ ಹನ್ಯುಃ ಸರ್ವಪ್ರಕೋಪಜಮ್ ||೩೪||
ರಸಾಞ್ಜನೇ ಸಾತಿವಿಷೇ ಮುಸ್ತಾಯಾಂ ಭದ್ರದಾರುಣಿ |
ತೈಲಂ ವಿಪಕ್ವಂ ನಸ್ಯಾರ್ಥೇ ವಿದಧ್ಯಾಚ್ಚಾತ್ರ ಬುದ್ಧಿಮಾನ್ ||೩೫||

ತ್ರಿದೋಷಜಪ್ರತಿಶ್ಯಾಯದಲ್ಲಿ ಕಟುತಿಕ್ತದ್ರವ್ಯಗಳಿಂದ ತಯಾರಾದ ಘೃತಗಳು, ತೀಕ್ಷ್ಣಧೂಮಗಳು ಕಟುದ್ರವ್ಯೌಷಧಿಗಳು ಉಪಯೋಗಕರಗಳು ; ರಸಾಂಜನ, ಅತಿಬಜೆ, ಕೊನ್ನಾರಿಗೆಡ್ಡೆ, ದೇವದಾರು, ಮೊದಲಾದುವುಗಳಿಂದ ತೈಲವನ್ನು ತಯಾರಿಸಿ ನಸ್ಯ ಮಾಡಿಸಬೇಕು.

ಮುಸ್ತಾ ತೇಜೋವತೀ ಪಾಠಾ ಕಟ್ಫಲಂ ಕಟುಕಾ ವಚಾ |
ಸರ್ಷಪಾಃ ಪಿಪ್ಪಲೀಮೂಲಂ ಪಿಪ್ಪಲ್ಯಃ ಸ್ಸೈನ್ಧವಾಗ್ನಿಕೌ ||೩೬||
ತುತ್ಥಂ ಕಸಞ್ಜಬೀಜಂ ಚ ಲವಣಂ ಭದ್ರದಾರು ಚ |
ಏತೈಃ ಕೃತಂ ಕಷಾಯಂ ತು ಕವಳೇ ಸಂಪ್ರಯೋಜಯೇತ್ ||೩೭||
ಹಿತಂ ಮೂರ್ಧವಿರೇಕೇಣ ತೈಲಮೇಭಿರ್ವಿಪಾಚಿತಮ್ |

ಕೊನ್ನಾರಿಗೆಡ್ಡೆ, ಗುಂಗುಂಡೆಬೀಜ ಅಗಳುಶುಂಠಿ ಕಿರಿಶಿವನಿ (ಮಾಸಾಳದಕಾಯಿ) ಕಟುಕರೋಹಿಣಿ, ಬಜೆ, ಸಾಸಿವೆ, ಮೋಡಿ, ಹಿಪ್ಪಲಿ, ಸೈಂಧವ, ಚಿತ್ರಮೂಲ ಮೈಲ್ ತುತ್ಥ, ಹೊಂಗೆಬೀಜ ಸೈಂಧವ, ದೇವದಾರು, ಇವುಗಳ ಕಷಾಯದಿಂದ ಕಬಳಗ್ರಹ ಮಾಡಿಸಬೇಕು ; ಇವುಗಳನ್ನು ಸೇರಿಸಿ ತಯಾರಿಸಿದ ತೈಲದಿಂದ ಶಿರೋವಿರೇಚನ ಮಾಡಿಸಿದರೆ ಹಿತವಾಗುತ್ತದೆ.

||೩೮||
ಕ್ಷೀರವರ್ಧಜಲೇ ಕ್ವಾಥ್ಯಂ ಜಾಙ್ಗಲೈರ್ಮೃಗಪಕ್ಷಿಭಿಃ
ಪುಷ್ಪೈರ್ವಿಮಿಶ್ರಂ ಜಲಜೈರ್ವಾತಘ್ನೈರೌಷಧೈರಪಿ |
||೩೯||
ಹಿಮೇ ಕ್ಷೀರಾವಶಿಷ್ಟೇಽಸ್ಮಿನ್ ಘೃತಮುತ್ಪಾದ್ಯ ಯತ್ನತಃ
ಸರ್ವಗನ್ಧಸಿತಾನನ್ತಾಮಧುಕಂ ಚನ್ದನಂ ತಥಾ |
ಆವಾಪ್ಯ ವಿಪಚೇದ್ಭೂಯೋ ದಶಕ್ಷೀರಂ ತು ತದ್ಘೃತಮ್ ||೪೦||
ನಸ್ಯಪ್ರಯುಕ್ತಮುದ್ರಿಕ್ತಾನ್ ಪ್ರತಿಶ್ಯಾಯಾನಪೋಹತಿ |
ಯಥಾಸ್ವಂ ದೋಷಶಮನೈಸ್ತೈಲಂ ಕುರ್ಯಾಚ್ಚ ಯತ್ನತಃ ||೪೧||

ಕರಿಜಿಂಕೆ, ಲಾವನಹಕ್ಕಿ, ಮೊದಲಾದ ಜಾಂಗಲ ಮೃಗಪಕ್ಷಿಗಳ ಮಾಂಸ, ನೈದಿಲೆ ಮೊದಲಾದ ಹೂವುಗಳು, ವಿದಾರಿಗಂಧಾದಿ ವಾತಹರ ಔಷಧದ್ರವ್ಯಗಳೊಡನೆ ಕ್ಷೀರಪಾಕ ಮಾಡಿದ ಹಾಲನ್ನು ಕಡೆದು ಬೆಣ್ಣೆಯನ್ನು ತೆಗೆದು ಏಲಾದಿಗಣೋಕ್ತ ದ್ರವ್ಯಗಳನ್ನೂ ಗಂಧನನ್ನೂ, ಸಕ್ಕರೆ, ಸೊಗದೆಬೇರು, ಅತಿಮಧುರ, ರಕ್ತಚಂದನ ಇವುಗಳ ಪುಡಿಯನ್ನೂ ಹಾಕಿ ೧೦ ಭಾಗ ಹಾಲನ್ನು ಮಿಶ್ರಮಾಡಿ ತಯಾರಿಸಿದ ಘೃತದಿಂದ ನಸ್ಯ ಮಾಡಿಸಿದರೆ ಪ್ರಕೋಪಗೊಂಡ ಪ್ರತಿಶ್ಯಾಯವು ನಾಶಗೊಳ್ಳುತ್ತದೆ. ಪ್ರಕೋಪಗೊಂಡ ದೋಷಗಳಿಗೆ ತಕ್ಕಂತೆ ಆಯಾಯ ದೋಷಹರಗಳಾದ ದ್ರವ್ಯಗಳೊಡನೆ ತಯಾರಿಸಿದ ತೈಲದಿಂದ ನಸ ಮಾಡಿಸಿದರೆ ಪ್ರತಿಶ್ಯಾಯ ನಿವಾರಣೆಯಾಗುತ್ತದೆ.

ಸಮೂತ್ರಪಿತ್ತಾಸ್ತೂದ್ದಿಷ್ಟಾಃ ಕ್ರಿಯಾಃ ಕ್ರಿಮಿಷು ಯೋಜಯೇತ್ |
ಯಾಪನಾರ್ಥಂ ಕ್ರಿಮಿಘ್ನಾನಿ ಭೇಷಜಾನಿ ಚ ಬುದ್ಧಿಮಾನ್ ||೪೨||

ರಕ್ತಪಿತ್ತಪ್ರತಿಶ್ಯಾಯದಲ್ಲಿ ಕ್ರಿಮಿಗಳುಂಟಾಗುತ್ತವೆಂದು ಹೇಳಿರುತ್ತದೆಯಾಗಿ ಆ ಕ್ರಿಮಿಗಳನ್ನು ನಿವಾರಿಸಲು (ಈ ಪ್ರತಿಶ್ಯಾಯವು ಯಾಪನವಾದ್ದರಿಂದ) ವಿಡಂಗವೊದಲಾದ ಕ್ರಿಮಿಹರದ್ರವ್ಯಗಳನ್ನು ಗೋಮೂತ್ರ ಮತ್ತು ಗೋರೋಚನಗಳೊಡನೆ ಅರೆದು ಪ್ರಯೋಗಿಸಬೇಕು ; ಎಲ್ಲಾ ವಿಧಗಳಾದ ಪ್ರತಿಶ್ಯಾಯಗಳಲ್ಲೂ ಕ್ರಿಮಿಗಳುತ್ಪತ್ತಿಯಾಗುತ್ತವೆಂದು ಹೇಳುವವರು ವಾತಾದಿಜನಿತ ಪ್ರತಿಶ್ಯಾಯಗಳಿಗೆ ಹೇಳಿರುವ ದ್ರವ್ಯಗಳನು ಗೋಮೂತ್ರ ಮತ್ತು ಗೋರೋಚನಗಳೊಡನೆ ಅರೆದು ಆಯಾಯ ದೋಷೋಕ್ತ ವಿಧಾನಗಳಂತೆ ಚಿಕಿತ್ಸೆಮಾಡಬೇಕೆಂದು ಅಭಿಪ್ರಾಯಪಡುತ್ತಾರೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಪ್ರತಿಶ್ಯಾಯ ಪ್ರತಿಷೇಧನಾಮಕಚತುರ್ವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ಪಞ್ಚವಿಂಶತಿತಮೋಽಧ್ಯಾಯಃ

ಅಥಾತಃ ಶಿರೋರೋಗವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಶಿರೋರೋಗಗಳನ್ನು ವಿವರಿಸುತ್ತೇವೆ.

ಶಿರೋ ರುಜತಿ ಮರ್ತ್ಯಾನಾಂ ವಾತಪಿತ್ತಕಫೈಸ್ತ್ರಿಭಿಃ ।
ಸನ್ನಿಪಾತೇನ ರಕ್ತೇನ ಕ್ಷಯೇಣ ಕ್ರಿಮಿಭಿಸ್ತಥಾ ||೩||
ಸೂರ್ಯಾವರ್ತಾನನ್ತವಾತಾರ್ಧಾವಭೇದಕಶಙ್ಖಕೈಃ ।
ಏಕಾದಶಪ್ರಕಾರಸ್ಯ ಲಕ್ಷಣಂ ಸಂಪ್ರವಕ್ಷ್ಯತೇ ||೪||

ಮನುಷ್ಯರಿಗೆ ವಾತ, ಪಿತ್ತ, ಕಫಗಳೆಂಬ ಮೂರು ದೋಷಗಳಿಂದಲೂ, ಸನ್ನಿಪಾತ, ರಕ್ತ, ಕ್ಷಯ, ಕ್ರಿಮಿಗಳಿಂದಲೂ, ಸೂರ್ಯಾವರ್ತ, ಅನಂತವಾತ, ಅರ್ಧಾವಭೇದಕ, ಶಂಖಕಗಳೆಂಬ ೧೧ ವಿಧ ತಲೆನೋವುಗಳುಂಟಾಗುತ್ತವೆ. ಅವುಗಳ ಲಕ್ಷಣಗಳನ್ನು ಹೇಳುತ್ತೇವೆ.

ಟಿಪ್ಪಣಿ : ವಿದೇಹನಮತ :—ವಾತವು ಪಿತ್ತದೊಡನೆ ತಲೆಯಲ್ಲಿ ಚಯವಾಗಿ ಹಗಲುಹೊತ್ತು ಸೂರ್ಯನ ತಾಪದಿಂದ ಪ್ರಕೋಪಗೊಂಡು ಅತಿ ತೀವ್ರವೇಗವುಳ್ಳ ಪೈತ್ತಿಕ ಶಿರೋರೋಗವನ್ನುಂಟುಮಾಡುತ್ತದೆ ; ಹಗಲು ಕಳೆದರೆ ನೋವು ಸಂಜೆಯ ಸೂರ್ಯನು ಕಳೆಗುಂದುವ ಕಾರಣ ವಾತವೃದ್ಧಿಯಾಗಿ ಪಿತ್ತವು ಶಾಂತಿಹೊಂದಿ ತಲೆನೋವು ನಿಂತೇ ಬಿಡುತ್ತದೆ ; ಇದು ಪಿತ್ತಾನಿಲಗಳಿಂದುಂಟಾಗುವ ಸೂರ್ಯಾವರ್ತದ ವಿಪರ್ಯಯವು.

ಯಸ್ಯಾನಿಮಿತ್ತಂ ಶಿರಸೋರುಜಶ್ಚ ಭವನ್ತಿ ತೀವ್ರಾ ನಿಶಿಚಾತಿ ಮಾತ್ರಮ್ ।
ಬನ್ಧೋಪತಾಪೈಶ್ಚ ಭವೇದ್ವಿಶೇಷಃ ಶಿರೋಽಭಿತಾಪಃ ಸಸಮೀರಣೇನ ||೫||

ಕಾರಣವಿಲ್ಲದೆ ಇದ್ದಕ್ಕಿದ್ದಂತೆ ಅತಿತೀವ್ರವೇದನೆಯುಳ್ಳ ತಲೆನೋವು ಉಂಟಾಗುತ್ತಾ ರಾತ್ರಿಯವೇಳೆ ಅತಿಯಾಗಿ ಹೆಚ್ಚುತ್ತದೋ (ರಾತ್ರಿಯವೇಳೆ ಶೀತಕಾಲವಾದ ಕಾರಣ ಅತಿಯಾಗಿ ವಾತಕೋಪವಾಗುತ್ತದೆ) ವಸ್ತ್ರಾದಿಗಳಿಂದ ತಲೆಯನ್ನು ಬಿಗಿಯುವುದರಿಂದಲೂ ಬಿಸಿಯಾಗಿ ಉಪನಾಹಮಾಡುವುದರಿಂದಲೂ ಶಮನವಾದರೆ ವಾತಜ ಶಿರೋಭಿತಾಪವೆಂದು ತಿಳಿಯಬೇಕು.

ಯಸೋಷ್ಣಮಙ್ಗಾರಚಿತಂ ಯಥೈವ ದಹ್ಯೇತ ಧೂಪ್ಯೇತ ಶಿರೋಽಕ್ಷಿನಾಸಮ್
ಶೀತೇನ ರಾತ್ರೌ ಚ ಭವೇದ್ವಿಶೇಷಃ ಶಿರೋಽಭಿತಾಪಃ ಸ ತು ಪಿತ್ತ ಕೋಪಾತ್ ||೬||
ಶಿರೋಗಳಂ ಯಸ್ಯಂ ಕಫೋಪದಿಗ್ಧಂ ಗುರುಪ್ರತಿಷ್ಟಬ್ಧಮಥೋ ಹಿಮಂ ಚ ।

ಶೂನಾಕ್ಷಿಕೂಟಂ ವದನಂ ಚ ಯಸ್ಯ ಶಿರೋಽಭಿತಾಪಃ ಸ ಕಫ ಪ್ರಕೋಪಾತ್ ||೭||
ಶಿರೋಭಿತಾಪೇ ತ್ರಿತಯಪ್ರವೃತ್ತೇ ಸರ್ವಾಣಿ ಲಿಙ್ಗಾನಿ ಸಮುದ್ಭವನ್ತಿ ।
ರಕ್ತಾತ್ಮಕಃ ಪಿತ್ತಸಮಾನಲಿಙ್ಗಃ ಸ್ಪರ್ಶಾಸಹತ್ವಂ ಶಿರಸೋ ಭವೇಚ್ಚ ||೮||

ತಲೆಯು ಬಿಸಿಯಾಗಿ ಕೆಂಡತುಂಬಿದಂತೆ ಸುಡುತ್ತಲೂ ಕಣ್ಣುಗಳೂ ಮೂಗೂ ಹೊಗೆಹೊರಟಂತೆ ಭುಗ್ ಎಂದು ತೋರುತ್ತಲೂ, ಶೀತೋಪಚಾರದಿಂದಲೂ ರಾತ್ರಿಯ ವೇಳೆಯಲ್ಲೂ ನೋವು ನಿಂತರೆ ಅದನ್ನು ಪಿತ್ತಪ್ರಕೋಪದಿಂದುಂಟಾದ ತಲೆನೋವೆಂದು ತಿಳಿಯಬೇಕು; ಯಾರಿಗೆ ತಲೆಯೂ ಗಂಟಲೂ ಕಫದಿಂದ ಲೇಪಮಾಡಿದಂತೆಯೂ ಭಾರವಾಗಿರುವಂತೆಯೂ ಚಲಿಸಲಾಗದಂತೆಯೂ ತಣ್ಣಗೂ ತೋರುತ್ತಾ ಕಣ್ಣುಗುಡ್ಡೆಗಳೂ ಮುಖವೂ ಊದಿರುತ್ತವೋ ಅದನ್ನು ಕಫಪ್ರಕೋಪದಿಂದುಂಟಾದ ತಲೆನೋವೆಂದು ತಿಳಿಯಬೇಕು; ತ್ರಿದೋಷಜನಿತ ಶಿರೋರೋಗದಲ್ಲಿ ಎಲ್ಲಾ ಲಕ್ಷಣಗಳೂ ಇರುತ್ತವೆ ; ರಕ್ತಜ ಶಿರೋರೋಗದಲ್ಲಿ ಪಿತ್ತಜ ಶಿರೋರೋಗದ ಲಕ್ಷಣಗಳೆಲ್ಲಾ ಕಂಡುಬರುತ್ತವೆ ; ತಲೆಯನ್ನು ಮುಟ್ಟುಗೊಳಿಸಲಾಗದಷ್ಟು ವೇದನೆ ಇರುತ್ತದೆ.

ವಸಾಬಲಾಸಕ್ಷತಸಂಭವಾನಾಂ ಶಿರೋಗತಾನಾಮಿಹ ಸಂಕ್ಷಯೇಣ।
ಕ್ಷಯಪ್ರವೃತ್ತಃ ಶಿರಸೋಭಿತಾಪಃ ಕಷ್ಟೋ ಭವೇದುಗ್ರರುಜೋಽತಿಮಾತ್ರಮ್ ||೯||
ಸಂಸ್ವೇದನಚ್ಛರ್ದನಧೂಮನಸ್ಯೈರಸೃಗ್ವಿಮೋಕ್ಷೈಶ್ಚ ವಿವೃದ್ಧಿಮೇತಿ ।
ನಿಸ್ತುದ್ಯತೇ ಯಸ್ಯ ಶಿರೋಽತಿಮಾತ್ರಂ ಸಂಭಕ್ಷ್ಯಮಾಣಂ ಸ್ಫುರತೀವ ಚಾನ್ತಃ ||೧೦||
ಘ್ರಾಣಾಚ್ಚ ಗಚ್ಛೇತ್ಸಲಿಲಂ ಸರಕ್ತಂ ಶಿರೋಭಿತಾಪಃ ಕ್ರಿಮಿಭಿಃ ಸ ಘೋರಃ।

ತಲೆಯೊಳಗಡೆಯಲ್ಲಿರುವ ವಸೆ, ಕಫ, ರಕ್ತಗಳು ಕ್ಷಯವಾಗುವುದರಿಂದ ಉಂಟಾಗುವ ಕ್ಷಯಜ ಶಿರೋರೋಗವು ಅತಿಯಾಗಿ ವೇದನೆಯುಳ್ಳುದಾದ ಕಾರಣ ಕಷ್ಟಸಾಧ್ಯವಾಗುತ್ತದೆ; ವಸಾ ಎಂಬುದು ದೇಹದ ಸ್ನೇಹ,ತಲೆಬುರುಡೆಯಲ್ಲಿರುವ ಮೇದಸ್ಸು,ಮಜ್ಜಾ, ಶುಕ್ರಧಾತುಗಳಿಗೂ ಉಪಲಕ್ಷಣವಾದ ಕಾರಣ ಅವೆಲ್ಲವೂ ಕ್ಷಯವಾಗುತ್ತವೆಂದು ತಿಳಿಯಬೇಕು; ಸ್ವೇದ, ವಮನ, ಧೂಮಪಾನ, ನಸ್ಯಕರ್ಮ, ರಕ್ತಮೋಕ್ಷಣಗಳಿಂದ ತಲೆನೋವು ಅಧಿಕವಾಗುತ್ತದೆ ; ಇವು ಕ್ಷಯಜ ಶಿರೋರೋಗದಲಕ್ಷಣವು ; ಕ್ರಿಮಿಜನಿತ ಶಿರೋರೋಗಲಕ್ಷಣವನ್ನು ಹೇಳುತ್ತಾರೆ:—ಯಾರಿಗೆ ತಲೆಯೊಳಗೆ ಶಲಾಕೆಯಿಂದ ಚುಚ್ಚಿದಂತೆ ವ್ಯಥೆಯುಂಟಾಗುತ್ತದೆಯೋ ತಲೆಯ ಒಳಭಾಗವನ್ನೂ ಕ್ರಿಮಿಗಳು ತಿನ್ನುವಂತೆ ತೋರುತ್ತದೆಯೋ ಮೂಗಿನಿಂದ ರಕ್ತಮಿಶ್ರಿತವಾದ ದ್ರವವು ಸೋರುತ್ತದೆಯೋ ಅದನ್ನು "ಕ್ರಿಮಿಜನಿತ ಶಿರೋರೋಗವೆಂದು" ತಿಳಿಯಬೇಕು ; ಇದು ಅತಿ ಭಯಂಕರವಾದದ್ದು. ಅಸಾಧ್ಯವು.

ಸೂರ್ಯೋದಯಂ ಯಾ ಪ್ರತಿ ಮನ್ದಮಕ್ಷಿಭ್ರುವಂ ರುಕ್ ಸಮುಪೈತಿ ಗಾಢಮ್ ||೧೧||
ವಿವರ್ಧತೇ ಚಾಂಶುಮತಾ ಸಹೈವ ಸೂರ್ಯಾಪವೃತ್ತೌ ವಿನಿವರ್ತತೇ ಚ ।

ಶೀತೇನ ಶಾನ್ತಿಂ ಲಭತೇ ಕದಾಚಿದುಷ್ಣೇನ ಜನ್ತುಃ ಸುಖಮಾಪ್ನುಯಾಚ್ಚ ||೧೨||
ತಂ ಭಾಸ್ಕರಾವರ್ತಮುದಾಹರನ್ತಿ ಸರ್ವಾತ್ಮಕಂ ಕಷ್ಟತಮಂ ವಿಕಾರಮ್ |

ಸೂರ್ಯೋದಯವಾದರೆ ಕಣ್ಣು ಹುಬ್ಬುಗಳಲ್ಲಿ ಸ್ವಲ್ಪ ಸ್ವಲ್ಪ ನೋವು ಪ್ರಾರಂಭವಾಗಿ ಸೂರ್ಯನು ಮೇಲಕ್ಕೆ ಏರಿದಂತೆಯೇ ನೋವು ಹೆಚ್ಚುತ್ತಾ ಸೂರ್ಯನು ಪಶ್ಚಿಮದಲ್ಲಿ ಕೆಳಕ್ಕೆ ಇಳಿಯುತ್ತಾ ಬಂದಂತೆ ನೋವೂ ಕಮ್ಮಿಯಾಗುತ್ತಾ ಬರುತ್ತದೆ, ಕೆಲವು ಸಾರಿ ಶೀತೋಪಚಾರದಿಂದಲೂ, ಕೆಲವು ಸಾರಿ ಉಷ್ಣೋಪಚಾರದಿಂದಲೂ ರೋಗಿಗೆ ಸುಖವುಂಟಾಗುವುದೂ ಉಂಟು; ಈ ರೋಗವನ್ನು ತ್ರಿದೋಷದಿಂದುಂಟಾಗುವ ಸೂರ್ಯಾವರ್ತವೆಂಬ ಅತಿ ಕಷ್ಟರೋಗವೆನ್ನುತ್ತಾರೆ.

ದೋಷಾಸ್ತು ದುಷ್ಟಾಸ್ತ್ರಯ ಏವ ಮನ್ಯಾಂ ಸಂಪೀಡ್ಯ ಘಾಟಾಂ ಸುರುಜಾಂ ಸುತೀವ್ರಾಮ್ ||೧೩||
ಕುರ್ವನ್ತಿ ಸಾಕ್ಷಿಭ್ರುವಶಙ್ಖದೇಶೇ ಸ್ಥಿತಂ ಕರೋತ್ಯಾಶು ವಿಶೇಷತಸ್ತು |
ಗಣ್ಡಸ್ಯ ಪಾರ್ಶ್ವೇಷು ಕರೋತಿ ಕಮ್ಪಂ ಹನುಗ್ರಹಂ ಲೋಚನ ಜಾಂಶ್ಚ ರೋಗಾನ್ ||೧೪||
ಅನನ್ತವಾತಂ ತಮುದಾಹರನ್ತಿ ದೋಷತ್ರಯೋತ್ಥಂ ಶಿರಸೋ ವಿಕಾರಮ್ |

ತ್ರಿದೋಷಗಳೂ ಪ್ರಕೋಪಗೊಂಡು ಕತ್ತಿನಲ್ಲಿರುವ ಮನ್ಯಾ ಎಂಬ ಎರಡು ಸಿರೆಗಳನ್ನು ಪೀಡಿಸಿ ಕತ್ತಿನ ಹಿಂಭಾಗದಲ್ಲಿ (ಹೆಕ್ಕತ್ತಿನಲ್ಲಿ) ಅತಿಘೋರವಾದ ನೋವನ್ನುಂಟು ಮಾಡಿ ಕಣ್ಣು, ಹುಬ್ಬು, ಶಂಖಪ್ರದೇಶ (ಹಣೆಕೆನ್ನೆ) ಗಳಲ್ಲಿ ವೇದನೆಯು ಪ್ರಾರಂಭಿಸಿ ಕೆನ್ನೆಗಳ ಪಕ್ಕದಲ್ಲಿ ನಡುಕವನ್ನೂ, ಹನುಗ್ರಹವನ್ನೂ (ದವಡೆಗಳು ಬಿಗಿದು ಹಿಡಿದುಕೊಂಡು ಬಾಯನ್ನು ಅಗಲಿಸುವುದಕ್ಕಾಗುವುದಿಲ್ಲ.) ನೇತ್ರರೋಗಗಳನ್ನೂ ಉಂಟುಮಾಡುತ್ತವೆ. ಈ ರೋಗಕ್ಕೆ "ಅನಂತವಾತ" ವೆಂದು ಹೆಸರು.

ಯಸ್ಯೋತ್ತಮಾಙ್ಗಾರ್ಧಮತೀವ ಜನ್ತೋಃ ಸಂಭೇದ ತೋದ ಭ್ರಮಶೂಲಜುಷ್ಟಮ್ ||೧೫||
ಪಕ್ಷಾದ್ದಶಾಹದಥವಾಪ್ಯಕಸ್ಮಾತ್ ತಸ್ಯಾರ್ಧಭೇದಂ ತ್ರಿತಯಾದ್ವ್ಯವಸ್ಯೇತ್ |

ಯಾವನಿಗೆ ತಲೆಯ ಅರ್ಧಭಾಗವು ಭಿನ್ನವಾದಂತೆಯೂ ಶಲಾಕೆಯಿಂದ ಚುಚ್ಚಿದಂತೆಯೂ, ತಿರುಗಿದಂತೆಯೂ, ನೋವಿನಿಂದ ಪೀಡಿತವಾಗಿಯೂ ಇರುತ್ತದೆಯೋ ಈ ವ್ಯಥೆಯು ಪಕ್ಷಕ್ಕೆ ಒಂದು ಸಾರಿಯಂತೆಯಾಗಲೀ, ಹತ್ತುದಿನಗಳಿಗೊಂದಾವರ್ತಿಯಾಗಲೀ ಅಥವಾ ಇದ್ದಕ್ಕಿದ್ದಂತೆಯೇ ಉಂಟಾದರೆ ತ್ರಿದೋಷಗಳಿಂದುಂಟಾದ "ಅರ್ಧಾವಭೇದಕ" (ಅರೆತಲೆನೋವು) ವೆನ್ನುತ್ತಾರೆ.

ಶಙ್ಖಾಶ್ರಿತೋ ವಾಯುರುದೀರ್ಣವೇಗಃ ಕೃತಾನುಯಾತ್ರಃ ಕಫಪಿತ್ತರಕ್ತೈಃ ||೧೬||
ರುಜಃ ಸುತೀವ್ರಾಃ ಪ್ರತನೋತಿ ಮೂರ್ಧ್ನಿ ವಿಶೇಷತಶ್ಚಾಪಿ ಹಿ ಶಙ್ಖಯೋಸ್ತು |
ಸುಕಷ್ಟಮೇನಂ ಖಲು ಶಙ್ಖಕಾಖ್ಯಂ ಮಹರ್ಷಯೋ ವೇದವಿದಃ ಪುರಾಣಾಃ |
ವ್ಯಾಧಿಂ ವದನ್ತ್ಯುದ್ಗತಮೃತ್ಯುಕಲ್ಪಂ ಭಿಷಕ್ ಸಹಸ್ರೈರಪಿ ದುರ್ನಿವಾರಮ್ ||೧೭||

ಅತಿ ವೇಗವುಳ್ಳ ವಾಯುವು ಕಫಪಿತ್ತರಕ್ತಗಳೊಡನೆ ಶಂಖಪ್ರದೇಶವನ್ನು ಸೇರಿ ಅತಿ ಪ್ರಬಲವಾದ ವೇದನೆಯನ್ನು ತಲೆಯಲ್ಲೂ ವಿಶೇಷವಾಗಿ ಶಂಖ ಪ್ರದೇಶದಲ್ಲೂ ಉಂಟು ಮಾಡುತ್ತದೆ ; ಪ್ರಾಚೀನ ಕಾಲದ ಆಯುರ್ವೇದಜ್ಞರಾದ ಮಹರ್ಷಿಗಳು ಮೃತ್ಯು ಸಮಾನವಾದ ಈ ರೋಗಕ್ಕೆ "ಶಂಖ"ವೆಂದು ಹೇಳುತ್ತಾರೆ. ಸಾವಿರಾರು ವೈದ್ಯರು ಚಿಕಿತ್ಸೆಮಾಡಿದರೂ ಸಾಧ್ಯವಾಗುವುದಿಲ್ಲವೆಂದೂ, 2 ದಿನಗಳೊಳಗೆ ಕೊಂದುಬಿಡುತ್ತದೆಂದೂ, ಒಂದು ವೇಳೆ 2 ದಿನಗಳ ಮೇಲೆ ರೋಗಿಯು ಬದುಕಿದರೆ ಬುದ್ಧಿವಂತ ವೈದ್ಯನು ಚಿಕಿತ್ಸೆಮಾಡಿದರೆ ಪ್ರಾಯಶಃ ಬದುಕಬಹುದೆಂದೂ ಕೆಲವು ವೈದ್ಯರ ಅಭಿಪ್ರಾಯವು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಶಿರೋಗತ ರೋಗವಿಜ್ಞಾನೀಯನಾಮಕ ಪಞ್ಚವಿಂಶತಿತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾ ವಿವೃತಿಃ

ಷಡ್ವಿಂಶತಿತಮೋಽಧ್ಯಾಯಃ

ಅಥಾತಃ ಶಿರೋರೋಗ ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಶಿರೋರೋಗ ಚಿಕಿತ್ಸೆಯನ್ನು ವಿವರಿಸುತ್ತೇವೆ.

ವಾತವ್ಯಾಧಿವಿಧಿಃ ಕಾರ್ಯಃ ಶಿರೋರೋಗೇಽನಿಲಾತ್ಮಕೇ ।

ಪಯೋಽನುಪಾನಂ ಸೇವೇತ ಘೃತಂ ತೈಲಮಥಾಪಿ ವಾ ||೩||

ವಾತಿಕಶಿರೋರೋಗದಲ್ಲಿ ಸ್ನೇಹಸ್ವೇದಾಭ್ಯಂಗ ಪರಿಷೇಕೋಪನಾಹಾದಿ ನಸ್ಯಪೂರ್ತಿಯಾದ ಬಾಹ್ಯ ಮತ್ತು ಸ್ನೇಹಪಾನಾನುವಾಸನನಿರೂಹಾದಿ ಅಭ್ಯಂತರಗಳಾದ ವಾತವ್ಯಾಧಿಹರ ಕ್ರಮಗಳನ್ನು ಅನುಸರಿಸಬೇಕು ; ಪಿತ್ತಾನುಬಂಧದಲ್ಲಿ ಘೃತವನ್ನೂ, ಕಫಾನುಬಂಧದಲ್ಲಿ ತೈಲವನ್ನೂ ಪಾನಮಾಡಿಸಿ ಹಾಲನ್ನು ಅನುಪಾನಮಾಡಿಸಬೇಕು.

ಮುದ್ಗಾನ್ ಕುಲತ್ಥಾನ್ಮಾಷಾಂಶ್ಚ ಖಾದೇಚ್ಚ ನಿಶಿ ಕೇವಲಾನ್ ||೪||

ಕಟೂಷ್ಣಾಂಶ್ಚ ಸಸರ್ಪಿಷ್ಕಾನುಷ್ಣಂ ಚಾನುಪಯಃ ಪಿಬೇತ್ ।

ಪಿಬೇದ್ವಾ ಪಯಸಾ ತೈಲಂ ತತ್ಕಲ್ಕಂ ವಾಪಿ ಮಾನವಃ ||೫||

ವಾತಘ್ನಸಿದ್ಧೈಃ ಕ್ಷೀರೈಶ್ಚ ಸುಖೋಷ್ಣೈಃ ಸೇಕಮಾದಿಶೇತ್ ।

ತತ್ಸಿದ್ಧೈಃ ಪಾಯಸೈರ್ವಾಪಿ ಸುಖೋಷ್ಣೈರ್ಲೇಪಯೇಚ್ಛಿರಃ ||೬||

ರಾತ್ರಿಯವೇಳೆ ಹೆಸರು, ಹುರುಳಿ, ಉದ್ದು ಇವುಗಳನ್ನು ಮಾತ್ರವೇ ಆಗಲಿ, ಕಟು ಉಷ್ಣದ್ರವ್ಯಗಳಿಂದ ತಯಾರಿಸಿ ತುಪ್ಪಮಿಶ್ರಮಾಡಿಯಾಗಲೀ, ತಿಂದು ಬಿಸಿಹಾಲನ್ನು ಕುಡಿಯಬೇಕು ; ಅಥವಾ ಹಾಲಿಗೆ ತಿಲತೈಲಮಿಶ್ರಮಾಡಿಯಾಗಲೀ, ಹೆಸರು ಮೊದಲಾದುವುಗಳ ಕಲ್ಕವನ್ನು ಮಿಶ್ರಮಾಡಿಯಾಗಲೀ, ಕುಡಿಯಬೇಕು ; ವಾತಹರಗಳಾದ ಭದ್ರದಾರ್ವಾದಿಗಣದ್ರವ್ಯಗಳಿಂದ ತಯಾರಿಸಿದ ಹಾಲಿನಿಂದ ಸುಖೋಷ್ಣವಾಗಿ ತಲೆಯಮೇಲೆ ಸೇಕವನ್ನೂ, ವಾತಹರದ್ರವ್ಯಗಳನ್ನೂ ಹಾಲನ್ನೂ ಸೇರಿಸಿ ತಯಾರಿಸಿದ ಸುಖೋಷ್ಣವಾದ ಪಾಯಸದಿಂದಲಾಗಲೀ ಶಿರೋಲೇಪವನ್ನು ಮಾಡಿಸಬೇಕು.

ಸ್ವಿನ್ನೈರ್ವಾ ಮತ್ಸ್ಯಪಿಶಿತೈಃ ಕೃಸರೈರ್ವಾ ಸಸೈನ್ಧವೈಃ ।

ಚನ್ದನೋತ್ಪಲಕುಷ್ಠೈರ್ವಾ ಸುಶ್ಲಕ್ಷ್ಣೈರ್ಮಗಧಾಯುತೈಃ ||೭||

ಸ್ನಿಗ್ಧಸ್ಯ ತೈಲಂ ನಸ್ಯಂ ಸ್ಯಾತ್ ಕುಳೀರರಸಸಾಧಿತಮ್ ।

ವರುಣಾದೌ ಗಣೇ ಕ್ಷುಣ್ಣೇ ಕ್ಷೀರಮರ್ಧೋದಕಂ ಪಚೇತ್ ||೮||

ಕ್ಷೀರಶೇಷಂ ತು ತನ್ಮಥ್ಯಂ ಶೀತಂ ಸಾರಮುಪಾಹರೇತ್ ।

ತತೋ ಮಧುರಕೈಃ ಸಿದ್ಧಂ ನಸ್ಯೇ ತತ್ ಪೂಜಿತಂ ಹವಿಃ ||೯||
ತಸ್ಮಿನ್ ವಿಪಕ್ವೇ ಕ್ಷೀರೇ ಚ ಪೇಯಂ ಸರ್ಪಿಃ ಸಶರ್ಕರಮ್ |
ಧೂಮಂ ಚಾಸ್ಯ ಯಥಾಕಾಲಂ ಸ್ನೈಹಿಕಂ ಯೋಜಯೇದ್ಭಿಷಕ್ ||೧೦||

ಮೀನಿನಮಾಂಸವನ್ನು ಬೇಯಿಸಿ ತಲೆಗೆ ಉಪನಾಹ ಮಾಡಿಸಬೇಕು ಅಥವಾ ತಿಲಕಲ್ಕಕ್ಕೆ ಸೈಂಧವವನ್ನು ಸೇರಿಸಿ ಬಿಸಿಮಾಡಿ ಶಿರಸ್ಸಿಗೆ ಉಪನಾಹ ಸ್ವೇದಮಾಡಿಸಬೇಕು ; ಅಥವಾ ರಕ್ತಚಂದನ, ನೈದಿಲೆಗೆಡ್ಡೆ, ಚಂಗಲ್‌ಕೋಷ್ಠ, ಹಿಪ್ಪಲಿ ಇವನ್ನು ನುಣ್ಣಗೆ ಅರೆದು ಕಲ್ಕಮಾಡಿ ಸುಖೋಷ್ಣವಾಗಿ ತಲೆಗೆ ಉಪನಾಹ ಮಾಡಿಸಬೇಕು. ಈ ರೀತಿ ಸ್ನೇಹಮಾಡಿಸಿದಮೇಲೆ ನಳ್ಳಿ (ಏಡಿ) ಯ ಮಾಂಸರಸದೊಡನೆ ತಯಾರಿಸಿದ ತೈಲದಿಂದ ನಸ್ಯ ಮಾಡಿಸಬೇಕು ; ವರುಣಾದಿಗಣದ್ರವ್ಯಗಳ ಕಲ್ಕದೊಡನೆ ೪ ರಷ್ಟು ಹಾಲನ್ನೂ ೨ ರಷ್ಟು ನೀರನ್ನೂ ಸೇರಿಸಿ ಹಾಲುಮಾತ್ರ ನಿಲ್ಲುವಂತೆ ಕಾಯಿಸಿ ಆ ಹಾಲು ತಣ್ಣಗಾದಮೇಲೆ ಕಡೆದು ಬೆಣ್ಣೆಯನ್ನು ತೆಗೆದು ಕಾಕೋಲ್ಯಾದಿಗಣೋಕ್ತ ದ್ರವ್ಯಗಳೊಡನೆ ತಯಾರಿಸಿದ ಹಾಲಿಗೆ ತುಪ್ಪ ಮತ್ತು ಸಕ್ಕರೆಯನ್ನು ಮಿಶ್ರಮಾಡಿ ಕುಡಿಸಬೇಕು ; ವ್ಯಾಧಿಯ ಅವಸ್ಥೆಗೆ ಅನುಗುಣವಾಗಿ ಜೇನುಮೇಣ ಮೊದಲಾದ ದ್ರವ್ಯಗಳಿಂದ ತಯಾರಿಸಿ ಸ್ನೇಹಮಿಶ್ರಮಾಡಿದ ಧೂಮಪಾನವನ್ನು ಮಾಡಿಸಬೇಕು.

ಪಾನಾಭ್ಯಞ್ಜನನಸ್ಯೇಷು ಬಸ್ತಿಕರ್ಮಣಿ ಸೇಚನೇ |
ವಿದಧ್ಯಾತ್ ತ್ರೈವೃತಂ ಧೀಮಾನ್ ಬಲಾತೈಲಮಥಾಪಿ ವಾ ||೧೧||
ಭೋಜಯೇಚ್ಚ ರಸೈಃ ಸ್ನಿಗ್ಧೈಃ ಪಯೋಭಿರ್ವಾ ಸುಸಂಸ್ಕೃತೈಃ |
ಪಿತ್ತರಕ್ತಸಮುತ್ಥಾನೌ ಶಿರೋರೋಗೌ ನಿವಾರಯೇತ್ ||೧೨||
ಶಿರೋಲೇಪೈಃ ಸಸರ್ಪಿಷ್ಕೈಃ ಪರಿಷೇಕೈಶ್ಚ ಶೀತಲೈಃ |
ಕ್ಷೀರೇಕ್ಷುರಸಧಾನ್ಯಾಮ್ಲ ಮಸ್ತುಕ್ಷೌದ್ರ ಸಿತಾಜಲೈಃ ||೧೩||

ಪಾನ ಅಭ್ಯಾಂಗ ನಸ್ಯ ಬಸ್ತಿಕರ್ಮಗಳಲ್ಲಿ ಸೇಚನೆಮಾಡುವುದಕ್ಕೆ ತ್ರಿವೃತ್ ತೈಲವನ್ನಾಗಲಿ, ಬಲಾತೈಲವನ್ನಾಗಲಿ ಪ್ರಯೋಗಿಸಬೇಕು. ಸ್ನಿಗ್ಧಮಾಂಸದ ಸಮ್ಮಿಶ್ರಿತವಾದ ಅನ್ನವನ್ನಾಗಲೀ ಭೋಜನ ಮಾಡಿಸಬೇಕು ; ಪಿತ್ತರಕ್ತಗಳಿಂದ ಉಂಟಾದ ರೋಗಗಳನ್ನು ಘೃತಮಿಶ್ರಿತವಾದ ಶಿರೋಲೇಪಗಳಿಂದಲೂ, ಶೀತಲವಾದ ಕಷಾಯದಿಂದ ಅಥವಾ ಹಾಲು, ಕಬ್ಬಿನರಸ, ಕಲಗಚ್ಚು, ಮೊಸರಿನಮೇಲಿನ ತಿಳಿನೀರು ಜೇನುತುಪ್ಪ, ಸಕ್ಕರೆ ನೀರು ಇವುಗಳಿಂದಾಗಲೀ ಪರಿಷೇಚನೆ ಮಾಡಿಸಬೇಕು.

ನಳವಞ್ಜುಳಕಲ್ಹಾರ ಚನ್ದನೋತ್ಪಲಪದ್ಮಕೈಃ |
ಶಙ್ಖಶೈವಲಯಷ್ಟ್ಯಾಹ್ವಮುಸ್ತಾಮ್ಭೋರುಹ ಸಂಯುತೈಃ ||೧೪||
ಶಿರಃ ಪ್ರಲೇಪಃ ಸಘೃತೈರ್ವೈಸರ್ಪೈಶ್ಚ ತಥಾವಿಧೈಃ |
ಮಧುರೈಶ್ಚ ಸುಖಾಲೇಪೈರ್ನಸ್ಯಕರ್ಮಭಿರೇವ ಚ ||೧೫||
ಆಸ್ಥಾಪನೈರ್ವಿರೇಕೈಶ್ಚ ಪಥ್ಯೈಶ್ಚ ಸ್ನೇಹಬಸ್ತಿಭಿಃ |

ಕ್ಷೀರಸರ್ಪಿರ್ಹಿತಂ ನಸ್ಯಂ ವಸಾವಾ ಜಾಙ್ಗಲಾ ಶುಭಾ ||೧೬||
ಉತ್ಪಲಾದಿ ವಿಪಕ್ವೇನ ಕ್ಷೀರೇಣಾಸ್ಥಾಪನಂ ಹಿತಮ್ |
ಭೋಜನಂ ಜಾಙ್ಗಲರಸೈಃ ಸರ್ಪಿಷಾ ಚಾನುವಾಸನಮ್ ||೧೭||
ಮಧುರೈಃ ಕ್ಷೀರಸರ್ಪಿಸ್ತು ಸ್ನೇಹನೇ ಚ ಸಶರ್ಕರಮ್ |
ಪಿತ್ತರಕ್ತಘ್ನಮುದ್ದಿಷ್ಟಂ ಯಚ್ಚಾನ್ಯದಪಿ ತದ್ಧಿತಮ್ ||೧೮||

ಲಾಳದಬೇರು, ನೀರಂಜಿತೊಗಟೆ, ಕೆಂಪುತಾವರೆಹೂವು, ರಕ್ತಚಂದನ, ನೈದಿಲೆ ಗೆಡ್ಡೆ, ಪದ್ಮಕ, ಶಂಖ, ಪಾಚಿಗರಿಕೆ, ಅತಿಮಧುರ, ಕೊನ್ನಾರಿಗೆಡ್ಡೆ, ತಾವರೆಗೆಡ್ಡೆ, ಇವು ಗಳಕಲ್ಕಕ್ಕೆ ತುಪ್ಪಮಿಶ್ರಮಾಡಿ ತಲೆಗೆ ಲೇಪಿಸಬೇಕು ; ವಿಸರ್ಪರೋಗದಲ್ಲಿ ಹೇಳಿರುವ ಔಷಧಗಳಿಂದಲೂ ಕಾಕೋಳ್ಯಾದಿಮಧುರಗಣೌಷಧಗಳ ಕಲ್ಕದಿಂದಲೂ ಶಿರೋಲೇಪನ ಮಾಡಬೇಕು ; ರಕ್ತಜ ಮತ್ತು ಪಿತ್ತಜ ಶಿರೋರೋಗಗಳಲ್ಲಿ ವಮನವಿಧಾನವನ್ನು ಬಿಟ್ಟು ಆಸ್ಥಾಪನವಸ್ತಿ, ವಿರೇಚನಕರ್ಮ, ಹಿತಗಳಾದಸ್ನೇಹಬಸ್ತಿಗಳೂ, ಹಾಲಿನಿಂದ ತೆಗೆದ ಬೆಣ್ಣೆಯನ್ನು ಕಾಯಿಸಿ ತಯಾರಿಸಿದ ತುಪ್ಪದಿಂದ ಅಥವಾ ಜಾಂಗಲ ಪ್ರಾಣಿಗಳ ವಸೆ ಯಿಂದ ನಸ್ಯಕರ್ಮವನ್ನು ಮಾಡಿಸುವುದು ಹಿತಕರವಾದದ್ದು ; ಉತ್ಪಲಾದಿಗಣದ್ರವ್ಯ ಗಳೊಡನೆ ತಯಾರಿಸಿದ ಹಾಲಿನಿಂದ ಆಸ್ಥಾಪನಬಸ್ತಿ ಕರ್ಮವೂ, ಜಾಂಗಲಪ್ರಾಣಿಗಳ ಮಾಂಸವನ್ನು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸುವುದೂ, ಘೃತದಿಂದ ಅನ್ವಾ ಸನಬಸ್ತಿಯೂ, ಮಧುರಗಣದ್ರವ್ಯ ದ್ರವ್ಯಸಿದ್ಧವಾದ ಹಾಲು ತುಪ್ಪ ಸಕ್ಕರೆ ಮತ್ತು ಪಿತ್ತ ರಕ್ತಹರಗಳಾದ ಶೀತಲವಾದ ಮಧುರಸ್ನಿಗ್ಧೌಷಧಗಳ ಪ್ರಯೋಗವೂ ಹಿತಕರಗಳು.

ಕಫೋತ್ಥಿತಂ ಶಿರೋರೋಗಂ ಜಯೇತ್ಕಫನಿವಾರಣೈಃ |
ಶಿರೋವಿರೇಕೈರ್ವಮನೈಸ್ತೀಕ್ಷ್ಣೈರ್ಗಣ್ಡೂಷಧಾರಣೈಃ ||೧೯||
ಅಚ್ಛಂ ಚ ಪಾಯಯೇತ್ಸರ್ಪಿಃ ಸ್ವೇದಯೇಚ್ಚಾಪ್ಯಭೀಕ್ಷ್ಣಶಃ |
ಶಿರೋ ಮಧುಕಸಾರೇಣ ಸ್ನಿಗ್ಧಂ ಚಾಪಿ ವಿರೇಚಯೇತ್ ||೨೦||
ಇಙ್ಗುದಸ್ಯ ತ್ವಚಾ ವಾಪಿ ಮೇಷಶೃಙ್ಗ್ಯಥವಾ ಭಿಷಕ್ |

ಕಫಜಶಿರೋರೋಗಚಿಕಿತ್ಸೆ :—ಕಫಜಶಿರೋರೋಗದಲ್ಲಿ ಕಫಹರಗಳಾದ ಶಿರೋವಿರೇಚನ, ವಮನ, ತೀಕ್ಷ್ಣೌಷಧಿಗಳಿಂದ ತಯಾರಿಸಿದ ಗಂಡೂಷ ಧಾರಣೆ ಮತ್ತು ಅಚ್ಛಘೃತಪಾನಗಳನ್ನು ಮಾಡಿಸಿ ಅಧಿಕವಾಗಿ ಸ್ವೇದಮಾಡಿಸಬೇಕು ; ಅತಿ ಮಧುರದ ಸಾರದಿಂದ ತಲೆಗೆ ಲೇಪನ ಮಾಡಿಸಿ ಸ್ನಿಗ್ಧನಾದ ಮೇಲೆ ಶಿರೋವಿರೇಚನ ವನ್ನೂ ಮಾಡಿಸಿ ಉಳಿದ ಕಫನಿವಾರಣೆಗಾಗಿ ಇಂಗಳದ ತ್ವಕ್ಕಿನಿಂದಾಗಲೀ ಮೇಷಶೃಂಗೀ ಯಿಂದಾಗಲೀ ಧೂಮಪಾನ ಮಾಡಿಸಬೇಕು.

ಆಭ್ಯಾಮೇವ ಕೃತಾ ವರ್ತಿರ್ಧೂಮಪಾನೇ ಪ್ರಯೋಜಯೇತ್ ||೨೧||
ಘ್ರೇಯಂ ಕಟ್ಫಲಚೂರ್ಣಂ ವಾ ಕಬಳಾಶ್ಚ ಕಫಾಪಹಾಃ |

ಸರಳಾಕುಷ್ಠಶಾರ್ಙ್ಗೇಷ್ಟಾದೇವಕಾಷ್ಠೈಃ ಸರೋಹಿಷೈಃ ||೨೨||
ಕ್ಷಾರಪಿಷ್ಟೈಃ ಸಲವಣೈಃ ಸುಖೋಷ್ಣೈರ್ಲೇಪಯೇಚ್ಛಿರಃ ।

ಇಂಗಳದ ತೊಗಟೆ ಮತ್ತು ಗೆರ್ಕೆಹಂಬುಗಳಿಂದ ತಯಾರಿಸಿದ ವರ್ತಿಯಿಂದ ಧೂಮಪಾನ ಮಾಡಿಸಬೇಕು ; ಮಾಪಾಳದ ಚೂರ್ಣವನ್ನು ಮೂಸಿ ಕಫಹರಗಳಾದ ಕಷಾಯಗಳಿಂದ ಕಬಳಧಾರಣೆಯನ್ನು ಮಾಡಿಸಬೇಕು ; ಸರಳ ದೇವದಾರು, ಚಂಗಲ್ ಕೋಷ್ಠ, ತವಸದತೊಗಟೆ, ದೇವದಾರು, ಪರಿಮಳಗಂಜಣಿ ಹುಲ್ಲು ಇವುಗಳೊಡನೆ ಯವಕ್ಷಾರವನ್ನು ಸೇರಿಸಿ ಕಲ್ಕಮಾಡಿ ಸುಖೋಷ್ಣಮಾಡಿ ತಲೆಗೆ ಲೇಪನ ಮಾಡಿದರೆ ಕಫಜಶಿರೋರೋಗಹರವಾಗುತ್ತದೆ.

ಯವಷಷ್ಟಿಕಯೋಶ್ಚಾನ್ನಂ ವ್ಯೋಷಕ್ಷಾರಸಮಾಯುತಮ್ ||೨೩||
ಪಟೋಲಮುದ್ಗಕೌಳತ್ಥೈರ್ಮಾತ್ರಾವದ್ಭೋಜಯೇದ್ರಸೈಃ ।
ಶಿರೋರೋಗೇ ತ್ರಿದೋಷೋತ್ಥೇ ತ್ರಿದೋಷಘ್ನೋ ವಿಧಿರ್ಹಿತಃ ||೨೪||
ಸರ್ಪಿಃಪಾನಂ ವಿಶೇಷೇಣ ಪುರಾಣಂ ವಾ ದಿಶನ್ತಿ ಹಿ ।
ಕ್ಷಯಜೇ ಕ್ಷಯಮಾಸಾದ್ಯ ಕರ್ತವ್ಯೋ ಬೃಂಹಣೋ ವಿಧಿಃ ||೨೫||
ಪಾನೇ ನಸ್ಯೇ ಚ ಸರ್ಪಿಃ ಸ್ಯಾದ್ವಾತಘ್ನೈರ್ಮಧುರೈಃ ಶೃತಮ್ ।
ಕ್ಷಯಕಾಸಾಪಹಂ ಚಾತ್ರ ಸರ್ಪಿಃ ಪಥ್ಯತಮಂ ವಿದುಃ ||೨೬||
ಕ್ರಿಮಿಭಿರ್ಭಕ್ಷ್ಯಮಾಣಸ್ಯ ವಕ್ಷ್ಯನ್ತೇ ಶಿರಸಃ ಕ್ರಿಯಾಃ ।
ನಸ್ಯಂ ಹಿ ಶೋಣಿತಂ ದದ್ಯಾತ್ ತೇನ ಮೂರ್ಛನ್ತಿ ಜನ್ತವಃ ||೨೭||
ಮತ್ತಾಃ ಶೋಣಿತಗನ್ಧೇನ ಸಮಾಯಾನ್ತಿ ಯತಸ್ತತಃ ।
ತೇಷಾಂ ನಿರ್ಹರಣಂ ಕಾರ್ಯಂ ತತೋ ಮೂರ್ಧವಿರೇಚನೈಃ ||೨೮||
ಹ್ರಸ್ವಶಿಗ್ರುಕಬೀಜೈರ್ವಾ ಕಾಂಸ್ಯನೀಲೀಸಮಾಯುತೈಃ ।
ಕ್ರಿಮಿಘ್ನೈರವಪೀಡೈಶ್ಚ ಮೂತ್ರಪಿಷ್ಟೈರುಪಾಚರೇತ್ ||೨೯||
ಪೂತಿಮತ್ಸ್ಯಯುತಾನ್ ಧೂಮಾನ್ ಕ್ರಿಮಿಘ್ನಾಂಶ್ಚ ಪ್ರಯೋಜಯೇತ್ ।
ಭೋಜನಾನಿ ಕ್ರಿಮಿಘ್ನಾನಿ ಪಾನಾನಿ ವಿವಿಧಾನಿ ಚ ||೩೦||

ಯವಧಾನ್ಯ ಮತ್ತು ಷಷ್ಟಿಕಶಾಲಿಗಳ ಅನ್ನಕ್ಕೆ ತ್ರಿಕಟು, ಯವಕ್ಷಾರಗಳನ್ನು ಮಿಶ್ರಮಾಡಿ ಕಹಿಪಡವಲ, ಹೆಸರು, ಹುರುಳಿ ಇವುಗಳ ಕಟ್ಟನ್ನು ಮಿಶ್ರಮಾಡಿ ತಕ್ಕ ಪ್ರಮಾಣದಿಂದ ಭೋಜನ ಮಾಡಿಸಬೇಕು; ತ್ರಿದೋಷಜಶಿರೋರೋಗದಲ್ಲಿ ತ್ರಿದೋಷಹರ ಚಿಕಿತ್ಸೆಯನ್ನು ಮಾಡಬೇಕು ; ವಿಶೇಷವಾಗಿ ಪುರಾಣಘೃತಪಾನವನ್ನು ಉಪದೇಶ ಮಾಡಿರುತ್ತಾರೆ ; ಕ್ಷಯಜಶಿರೋರೋಗದಲ್ಲಿ ರಕ್ತಾದಿಗಳ ಕ್ಷಯವನ್ನು ನಿರ್ಧರಿಸಿ ತಕ್ಕ ಪ್ರತೀಕಾರವನ್ನು ಮಾಡಬೇಕು ; ಕ್ಷಯರೋಗದಲ್ಲಿ ಹೇಳಿರುವ ಬೃಂಹಣ ವಿಧಾನಗಳನ್ನು ಅಂದರೆ ಆಹಾರೌಷಧಗಳನ್ನು ಸೇವಿಸಬೇಕೆಂದು ಕೆಲವರ ಮತವು ; ವಾತಹರಗಳಾದ ಮತ್ತು ಮಧುರ ದ್ರವ್ಯಗಳಿಂದ ತಯಾರಿಸಿದ ಘೃತಗಳನ್ನು ಪಾನ ನಸ್ಯಗಳಲ್ಲಿ ಪ್ರಯೋಗಿಸಬೇಕು ; ಕ್ಷಯಕಾಸಹರವಾದ ಘೃತವನ್ನೂ ಈ ಕ್ಷಯಜಶಿರೋರೋಗದಲ್ಲಿ ಪ್ರಯೋ

ಗಿಸಬೇಕು ; ಕ್ರಿಮಿಗಳು ಶಿರಸ್ಸಿನ ಒಳಭಾಗವನ್ನು ತಿನ್ನುತ್ತಿದ್ದರೆ ಅದಕ್ಕೆ ಚಿಕಿತ್ಸೆಯನ್ನು ಹೇಳುತ್ತೇವೆ ; ರಕ್ತವನ್ನೇ ನಸ್ಯಮಾಡಿಸಿದರೆ ರಕ್ತದ ವಾಸನೆಯಿಂದ ಮದಿಸಿದ ಕ್ರಿಮಿಗಳು ಮೂಗಿನ ದ್ವಾರದಿಂದ ಹೊರಕ್ಕೆ ; ಬರಲು ಪ್ರಾರಂಭಿಸುತ್ತವೆ ; ಅವುಗಳನ್ನು ಕೂರ್ಚ ಗಳಿಂದ ಹೊರಕ್ಕೆ ತೆಗೆದುಬಿಡಬೇಕು ; ಕೂರ್ಚಗಳಿಗೆ ಸಿಕ್ಕದಿರುವ ಕ್ರಿಮಿಗಳಿಗೆ ಹ್ರಸ್ವಶಿಗ್ರು ಬೀಜ ವಿಡಂಗ ಕಂಚಿನಕಿಲುಬು ನೀಲಿಸೊಪ್ಪುಗಳಿಂದ ಶಿರೋರೇಚನವನ್ನೂ ಗೋಮೂತ್ರದಿಂದ ಅರೆಯಲ್ಪಟ್ಟ ಕ್ರಿಮಿಹರದ್ರವ್ಯಗಳ ಕಲ್ಕದಿಂದ (ವಿಡಂಗ, ಮರಿಚ, ಉತ್ತರಣೆಬೀಜ, ನುಗ್ಗೆ ಬೀಜ) ಅವಪೀಡ ನಸ್ಯವನ್ನೂ ಕ್ರಿಮಿಹರವಾದ ಪೂತಿಮತ್ಸ್ಯದ ಹೊಗೆಯನ್ನೂ ಕ್ರಿಮಿಹರಗಳಾದ ಅನ್ನಾಹಾರಗಳನ್ನೂ ಸೇವನೆ ಮಾಡಿಸಬೇಕು.

ಸೂರ್ಯಾವರ್ತೇವಿಧಾತವ್ಯಂ ನಸ್ಯಕರ್ಮಾದಿಭೇಷಜಮ್ ।
ಭೋಜನಂ ಜಾಙ್ಗಲಪ್ರಾಯಂ ಕ್ಷೀರಾನ್ನವಿಕೃತೈರ್ಘೃತಮ್ ॥೩೧॥

ಸೂರ್ಯಾವರ್ತದಲ್ಲಿ ನಸ್ಯ ಲೇಪ ಪರಿಷೇಕ ಕವಳಗ್ರಹ ಶಿರೋಬಸ್ತ್ಯಾದಿ ಔಷಧಗಳನ್ನೂ ಜಾಂಗಲಮಾಂಸಾಧಿಕವಾಗಿರುವ ತುಪ್ಪಮಿಶ್ರವಾದ ಕ್ಷೀರ ವಿಕಾರಗಳನ್ನೂ ಫೇಡ ಬರ್ಫಿ ಮೊದಲಾದುವುಗಳ ಮತ್ತು ಅನ್ನಗಳ ಭೋಜನವನ್ನೂ ಪ್ರಯೋಗಿಸಬೇಕು.

ತಥಾರ್ಧಭೇದಕೇ ವ್ಯಾಧೌ ಪ್ರಾಪ್ತಮನ್ಯಚ್ಚ ಯದ್ಭವೇತ್ ।
ಶಿರೀಷಮೂಲಕವಲೈರವಪೀಡೋऽನಯೋರ್ಹಿತಃ ॥೩೨॥
ವಂಶಮೂಲಕಕರ್ಪೂರೈರನಪೀಡಂ ಪ್ರಯೋಜಯೇತ್ ।
ಅವಪೀಡೋ ಹಿತಶ್ಚಾತ್ರ ವಚಾಮಾಗಧಿಕಾಯುತಃ ॥೩೩॥
ಮಧುಕೇನಾವಪೀಡೋ ವಾ ಮಧುನಾ ಸಹ ಸಂಯುತಃ ।
ಮನಃಶಿಲಾವಪೀಡೋ ವಾ ಮಧುನಾ ಚಂದನೇನ ವಾ ॥೩೪॥

ಅರ್ಧಾವಭೇದ ಚಿಕಿತ್ಸೆ :—ಸೂರ್ಯಾವರ್ತರೋಗ ಚಿಕಿತ್ಸೆಯಂತೆಯೇ ಅರ್ಧಾವಭೇದರೋಗದಲ್ಲೂ ನಸ್ಯಕರ್ಮಜಾಂಗಲ ಪ್ರಾಣಿಗಳ ಮಾಂಸ ಭೋಜನ ಕ್ಷೀರಾನ್ನ ಘೃತಗಳ ಪ್ರಯೋಗಗಳು ಹಿತಕರಗಳು ; ಸ್ನೇಹ ಸ್ವೇದಸಿರಾವ್ಯಧ ಅವಪೀಡನಸ್ಯ ಮತ್ತು ಕರ್ಣಶೂಲದಲ್ಲಿ ಹೇಳಿದ ದೀಪಿಕಾತೈಲ ಇವುಗಳನ್ನೂ ಪ್ರಯೋಗಿಸಬೇಕು ; ಈ ಎರಡು ವ್ಯಾಧಿಗಳಲ್ಲೂ ಬಾಗೇಬೀಜ, ಮೂಲಂಗಿ, ಮಗ್ಗಾರೆಕಾಯಿಗಳ ಚೂರ್ಣ, ಬಿದು ರಿನ ತೊಗಟೆ, ಮೂಲಂಗಿ, ಕರ್ಪೂರಗಳ ಚೂರ್ಣ ; ಅತಿಮಧುರದ ಚೂರ್ಣವನ್ನು ಜೇನುತುಪ್ಪದೊಡನೆಯೂ, ಮಣಶಿಲೆಯ ಚೂರ್ಣವನ್ನು ಜೇನುತುಪ್ಪದೊಡನೆಯೂ ಅಥವಾ ರಕ್ತಚಂದನದೊಡನೆಯೂ ಅವಪೀಡ ನಸ್ಯವನ್ನು ಪ್ರಯೋಗಿಸಬೇಕು.

ತೇಷಾಮನ್ತೇ ಹಿತಂ ನಸ್ಯಂ ಸರ್ಪಿರ್ಮಧುರಸಾನ್ವಿತಮ್ ।
ಸಾರಿವೋತ್ಪಲಕುಷ್ಠಾನಿ ಮಧುಕಂ ಚಾಮ್ಲವೇತಸಮ್ ॥೩೫॥
ಸರ್ಪಿಸ್ತೈಲಯುತೋ ಲೇಪೋ ದ್ವಯೋರಪಿ ಸುಖಾವಹಃ ।
ಏಷ ಏವ ಪ್ರಯೋಕ್ತವ್ಯಃ ಶಿರೋರೋಗೇ ಕಫಾತ್ಮಕೇ ॥೩೬॥

ಅವುಗಳ ಪ್ರಯೋಗಗಳ ಕಡೆಯಲ್ಲಿ ಮಧುರ ಗಣೌಷಧಗಳಿಂದ ತಯಾರಿಸಿದ ಘೃತ ದಿಂದ ನಸ್ಯಕರ್ಮವನ್ನು ಮಾಡಿಸಬೇಕು ; ಸೊಗದೇಬೇರು, ನೈದಿಲೆಗೆಡ್ಡೆ, ಚಂಗಲ್ ಕೋಷ್ಠ, ಅತಿಮಧುರ, ಓಟೇಹುಳಿ, ಇವುಗಳ ಕಲ್ಕಕ್ಕೆ ತುಪ್ಪ ಮತ್ತು ತಿಲ ತೈಲಗಳನ್ನು ಮಿಶ್ರಮಾಡಿ ಲೇಪಹಾಕಿದರೆ ಸೂರ್ಯಾವರ್ತಾರ್ಧಾವಭೇದಕಗಳೆರಡೂ ಸುಖವಾಗಿ ನಿವಾರಿಸಲ್ಪಡುತ್ತವೆ ; ಇವನ್ನೇ ಕಫಜ ಶಿರೋರೋಗದಲ್ಲೂ ಪ್ರಯೋಗಮಾಡಬೇಕು.

ಅನನ್ತವಾತೇ ಕರ್ತವ್ಯಃ ಸೂರ್ಯಾವರ್ತೇರಿತೋ ವಿಧಿಃ ।
ಸಿರಾವ್ಯಧಶ್ಚ ಕರ್ತವ್ಯೋಽನನ್ತವಾತಪ್ರಶಾನ್ತಯೇ ॥೩೭॥
ಆಹಾರಶ್ಚ ವಿಧಾತವ್ಯೋ ವಾತಪಿತ್ತವಿನಾಶನಃ ।
ಮಧುಮಸ್ತಕಸಂಯಾವಘೃತಪೂರೈಶ್ಚ ಭೋಜನೈಃ ॥೩೮॥
ಕ್ಷೀರಸರ್ಪಿಃ ಪ್ರಶಂಸನ್ತಿ ನಸ್ಯೇ ಪಾನೇ ಚ ಶಙ್ಖಕೇ ।
ಜಾಙ್ಗಲಾನಾಂ ರಸೈಃ ಸ್ನಿಗ್ಧೈರಾಹಾರಾಶ್ಚಾತ್ರ ಶಸ್ಯತೇ ॥೩೯॥
ಶತಾವರೀಂ ತಿಲಾನ್ ಕೃಷ್ಣಾನ್ ಮಧುಕಂ ನೀಲಮುತ್ಪಲಮ್ ।
ದೂರ್ವಾಂ ಪುನರ್ನವಾಂ ಚೈವ ಲೇಪೇ ಸಾಧ್ವವಚಾರಯೇತ್ ॥೪೦॥
ಮಹಾಸುಗನ್ಧಾಮಥವಾ ಪಾಳಿನ್ದೀ ಚಾಮ್ಲ ಪೇಷಿತಾಮ್ ।
ಶೀತಾಂಶ್ಚಾತ್ರ ಪರಿಷೇಕಾನ್ ಪ್ರದೇಹಾನಥ ಯೋಜಯೇತ್ ॥೪೧॥
ಅವಪೀಡಶ್ಚ ದೇಯೋಽತ್ರ ಸೂರ್ಯಾವರ್ತನಿವಾರಣಃ ।

ಅನಂತವಾತದಲೂ ಸೂರ್ಯಾವರ್ತಚಿಕಿತ್ಸಾ ವಿಧಾನವನ್ನೇ ಆಚರಿಸಬೇಕು ; ಸಿರಾವ್ಯಧೆಮಾಡಿ ರಕ್ತಸ್ರಾವ ಮಾಡಿಸಿದರೆ ಅನಂತವಾತಹರವಾಗುತ್ತದೆ ; ವಾತಪಿತ್ತಹರ ಗಳಾದ ಸ್ನಿಗ್ಧಶೀತಗಳಾದ ಗುರ್ವಾಹಾರಗಳನ್ನು ಸೇವಿಸಬೇಕು ; ಮಧುಮಸ್ತಕ ಮತ್ತು ಸಂಯಾವಗಳೆಂಬ ಘೀವರ್ ಮೊದಲಾದ ಉತ್ತರದೇಶೀಯರ ಭಕ್ಷ್ಯಗಳನ್ನು ಸೇವಿಸಬೇಕು. ಅಂದರೆ ನಮ್ಮ ದೇಶದಲ್ಲಿ ಹೂರಣ ಕಡುಬು, ಸರ್ಜಿಪ್ಪ, ರೋಗದಲ್ಲಿ ನಸ್ಯ ಪಾನಗಳಿಗೆ ಹಾಲು ತುಪ್ಪಗಳನ್ನು ಉಪಯೋಗಿಸಬೇಕೆಂದು ಪ್ರಶಂಸಿಸುತ್ತಾರೆ ; ಜಾಂಗಲ ಮೃಗಪಕ್ಷಿ ಗಳ ಮಾಂಸರಸಗಳನ್ನು ಮಿಶ್ರಮಾಡಿ ಸ್ನಿಗ್ಧವಾದ ಅನ್ನಗಳನ್ನು ಭೋಜನ ಮಾಡಿಸಬೇಕು; ಆಷಾಡಿಬೇರು, ಕರಿಯಎಳ್ಳು, ಅತಿಮಧುರ, ನೈದಿಲೇಗೆಡ್ಡೆ, ಗರಿಕೆ, ಕೊಮ್ಮೆಬೇರು, ಇವುಗಳ ಕಲ್ಕವನ್ನು ಚೆನ್ನಾಗಿ ಲೇಪಿಸಬೇಕು ; ಸೊಗದೇಬೇರು ತಿಗಡೆಬೇರುಗಳನ್ನು ಹುಳಿ ಕಲಗಚ್ಚಿನಲ್ಲಿ ಅರೆದು ಆ ಕಲ್ಕವನ್ನಾಗಲೀ ಲೇಪಿಸಬೇಕು. ಶೀತಲವಾದ ಲೇಪನಗಳನ್ನೂ ಪರಿಷೇಕವನ್ನೂ ಸೂರ್ಯಾವರ್ತಹರವಾದ ಅವಪೀಡ ನಸ್ಯವನ್ನೂ ಪ್ರಯೋಗಿಸಬೇಕು ;

ಕ್ರಿಮಿಕ್ಷಯಕೃತೌ ಜಿತ್ವಾ ಶಿರೋರೋಗೇಷು ಬುದ್ಧಿಮಾನ್ ॥೪೨॥
ಮಧುತೈಲಸಮಾಯುಕ್ತೈಃ ಸಿರಾಂಸ್ಯತಿ ವಿರೇಚಯೇತ್ ।
ಪಶ್ಚಾತ್ ಸರ್ಪತೈಲೇನ ತತೋ ನಸ್ಯಂ ಪ್ರಯೋಜಯೇತ್ ॥೪೩॥
ನ ಚೇಚ್ಛಾನ್ತಿಂ ವ್ರಜತ್ಯೇವಂ ಸ್ನಿಗ್ಧಸ್ವಿನ್ನಾಂಸ್ತತೋಭಿಷಕ್ ।
ಪಶ್ಚಾದುಪಾಚರೇತ್ಸಮ್ಯಕ್ ಸಿರಾಣಾಮಥಮೋಕ್ಷಣೈಃ ॥೪೪॥

ಕ್ರಿಮಿಜಶಿರೋರೋಗವನ್ನೂ ಕ್ಷಯ ಶಿರೋರೋಗವನ್ನೂ ಬಿಟ್ಟು ಉಳಿದ ಶಿರೋರೋಗಗಳಲ್ಲಿ ಶಿರೋವಿರೇಚನೆದ್ರವ್ಯಗಳಿಗೆ ಜೇನುತುಪ್ಪ ತಿಲತೈಲಗಳನ್ನು ಮಿಶ್ರ ಮಾಡಿ ನಸ್ಯಮಾಡಿಸಬೇಕು ; ಶೂಲೆ ಮತ್ತು ವಾತಗಳನ್ನು ನಿವಾರಿಸುವುದಕ್ಕಾಗಿ ಸಾಸಿವೆಯ ಎಣ್ಣೆಯಿಂದ ನಸ್ಯಮಾಡಿಸಬೇಕು ; ಹೀಗೆ ಮಾಡಿದರೂ ಶಾಂತವಾಗದಿದ್ದರೆ ಸ್ನಿಗ್ಧ ಸ್ವಿನ್ನನನ್ನಾಗಿ ಮಾಡಿದ ರೋಗಿಗೆ ಸಿರಾವ್ಯಧಮಾಡಿ ರಕ್ತವನ್ನು ಸ್ರಾವಮಾಡಿಸಬೇಕು ;

ಷಟ್ಸಪ್ತತಿರ್ನೇತ್ರರೋಗಾ ದಶಾಷ್ಟಾದಶ ಕರ್ಣಜಾಃ ।
ಏಕತ್ರಿಂಶತ್ ಘ್ರಾಣಗತಾಃ ಶಿರಸ್ಯೇಕಾದಶೇ ಹ ತು ॥೪೫॥
ಇತಿ ವಿಸ್ತರತೋ ದೃಷ್ಟಾಃ ಸಲಕ್ಷಣಚಿಕಿತ್ಸಿತಾಃ ।
ಸಂಹಿತಾಯಾಮಭಿಹಿತಾಃ ಸಪ್ತಷಷ್ಟಿರ್ಮುಖಾಮಯಾಃ ॥೪೬॥
ಏತಾವನ್ತೋ ಯಥಾಸ್ಥೂಲಮುತ್ತಮಾಙ್ಗಗತಾ ಗದಾಃ ।
ಅಸ್ಮಿಞ್ಛಾಸ್ತ್ರೇ ನಿಗದಿತಾಃ ಸಂಖ್ಯಾರೂಪಚಿಕಿತ್ಸಿತೈಃ ॥೪೭॥

೭೬ ನೇತ್ರರೋಗಗಳು ; ೨೮ ಕರ್ಣರೋಗಗಳು ; ೩೧ ನಾಸಾರೋಗಗಳು ೧೧ ಶಿರೋರೋಗಗಳು ಇವುಗಳನ್ನೂ ೬೭ ಮುಖರೋಗಗಳನ್ನೂ ಉತ್ತಮಾಂಗ (ಶಿರಸ್ಸು) ದಲ್ಲಿ ಉಂಟಾಗುವ ೬೭ ರೋಗಗಳನ್ನೂ ಈ ಶಾಲಾಕ್ಯತಂತ್ರದಲ್ಲಿ ರೋಗಸಂಖ್ಯೆ, ರೋಗ ಲಕ್ಷಣ, ರೋಗಚಿಕಿತ್ಸೆಗಳೊಡನೆ ವಿವರಿಸಲಾಯಿತು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಶಾಲಾಕ್ಯತನ್ತ್ರೇ ಶಿರೋರೋಗ ಪ್ರತಿಷೇಧನಾಮಕ ಷಡ್ವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕಭಾಷಾವಿವೃತಿಃ.

ಸಪ್ತವಿಂಶತಿತಮೋಽಧ್ಯಾಯಃ

ಕೌಮಾರಭೃತ್ಯಮ್

ಅಥಾತೋ ನವಗ್ರಹಾಕೃತಿವಿಜ್ಞಾನೀಯಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ನವಗೃಹಾಕೃತಿ ವಿಜ್ಞಾನವನ್ನು ವಿವರಿಸುತ್ತೇವೆ.

ಬಾಲಗ್ರಹಾಣಾಂ ವಿಜ್ಞಾನಂ ಸಾಧನಂ ಚಾಪ್ಯನನ್ತರಮ್ ।
ಉತ್ಪತ್ತಿಂ ಕಾರಣಂ ಚೈವ ಸುಶ್ರುತೈಕಮನಾಃ ಶೃಣು ||೩||

ಬಾಲಕರನ್ನು ಪೀಡಿಸುವ ವಿಜ್ಞಾನಂ ಗ್ರಹಗಳ ಸ್ವರೂಪಜ್ಞಾನ, ನಿವಾರಣೋಪಾಯ ಮತ್ತು ಉತ್ಪತ್ತಿ ಕಾರಣಗಳನ್ನು ಹೇಳುತ್ತೇವೆ, ಎಲೈ ಸುಶ್ರುತನೇ ! ಒಂದೇ ಚಿತ್ತದಿಂದ ಕೇಳು. ಬಾಲಕರನ್ನು ಪೀಡಿಸುವ ಗ್ರಹಗಳು ೯, ದೊಡ್ಡವರಿಗೆ ಆವರಿಸುವ ಗ್ರಹಗಳು ೮ ಎಂದು ಭೂತವಿದ್ಯದಲ್ಲಿ ತಿಳಿಸಲಾಗುತ್ತದೆ. (೬೦ ನೆಯ ಅಧ್ಯಾಯವನ್ನು ನೋಡಿ).

ಸ್ಕನ್ಧಗ್ರಹಸ್ತು ಪ್ರಥಮಃ ಸ್ಕನ್ದಾಪಸ್ಮಾರ ಏವ ಚ।
ಶಕುನೀ ರೇವತೀ ಚೈವ ಪೂತನಾ ಚಾನ್ಧ ಪೂತನಾ ||೪||
ಪೂತನಾ ಶೀತನಾಮಾ ಚ ತಥೈವ ಮುಖಮಂಡಿಕಾ।
ನವಮೋ ನೈಗಮೇಷಶ್ಚ ಯಃ ಪಿತೃಗ್ರಹಸಂಜ್ಞಿತಃ ||೫||

ಮೊದಲನೆಯದು ಸ್ಕಂದಗ್ರಹವು, ಅನಂತರ ಕ್ರಮವಾಗಿ ಸ್ಕಂದಾಪಸ್ಮಾರ, ಶಕುನಿ, ರೇವತಿ, ಪೂತನಾ, ಅಂಧಪೂತನಾ, ಶೀತಪೂತನಾ, ಮುಖಮಂಡಿತಿಕಾ, ೯ ನೆಯದೇ ನೈಗಮೇಷ ಅಥವಾ ಪಿತೃಗ್ರಹವೆಂಬ ಸಂಜ್ಞೆಯುಳ್ಳದ್ದು.

ಧಾತ್ರೀಮಾತ್ರೋಃ ಪ್ರಾಕ್‌ಪ್ರದಿಷ್ಟಾಪಚಾರಾತ್ ಶೌಚಭ್ರಷ್ಟಾನ್ಮಂಗಳಾಚಾರಹೀನಾನ್ ।
ತ್ರಸ್ತಾನ್ ಹೃಷ್ಟಾಂಸ್ತರ್ಜಿತಾನ್ ಕ್ರನ್ದಿತಾನ್ (ತಾಡಿತಾನ್) ವಾ ಪೂಜಾಹೇತೋರ್ಹಿಂಸ್ಯುರೇತೇ ಕುಮಾರಾನ್ ||೬||
ಐಶ್ವರ್ಯಸ್ಥಾಸ್ತೇ ನ ಶಕ್ಯಾ ವಿಶನ್ತೋದೇಹಂ ದ್ರಷ್ಟುಂ ಮಾನುಷೈರ್ವಿಶ್ವರೂಪಾಃ ।
ಆಪ್ತಂ ವಾಕ್ಯಂ ತತ್ಸಮೀಕ್ಷ್ಯಾಭಿಧಾಸ್ಯೇ ಲಿಙ್ಗಾನ್ಯೇಷಾಂ ಯಾನಿ ದೇಹೇ ಭವನ್ತಿ ||೭||

ಈ ಗ್ರಹಗಳು ಪೂಜೆ, ಬಲಿಗಳನ್ನು ಅಪೇಕ್ಷಿಸಿ ಮಕ್ಕಳ ಪೂರ್ವಕರ್ಮಾನುಸಾರವಾಗಿಯೂ, ಅಯೋಗ್ಯ ಆಹಾರಾಚಾರಗಳನ್ನು ಮಾಡುವ ಧಾತ್ರಿಯ ಮತ್ತು ತಾಯಿ

ಯರ ದೆಸೆಯಿಂದಲೂ, ಅಶುಚಿಯಾಗಿ ದುರಾಚಾರವುಳ್ಳ, ಹೆದರಿದ, ಇತರರಿಂದ ಹೆದರಿಸಲ್ಪಡುವ, ಅಳುತ್ತಿರುವ ಮಕ್ಕಳನ್ನು ಪೀಡಿಸುತ್ತವೆ. ಅಣಿಮಾದಿ ಅಷ್ಟವಿಧೈಶ್ವರ್ಯವುಳ್ಳ ಈ ಗ್ರಹಗಳು ಅತಿ ಸೂಕ್ಷ್ಮಾಕೃತಿಯುಳ್ಳ ಕಾರಣ ಮಕ್ಕಳ ದೇಹವನ್ನು ಪ್ರವೇಶಿಸುವುದು ಮನುಷ್ಯರಿಗೆ ಗೊತ್ತಾಗುವುದಿಲ್ಲ. ಆಪ್ತರ ಮಾತುಗಳಿಗೆ ಅನುಸಾರವಾಗಿ ಅವು ದೇಹಕ್ಕೆ ಪ್ರವೇಶಿಸಿದರೆ ಉಂಟಾಗುವ ಲಕ್ಷಣಗಳನ್ನು ಹೇಳುತ್ತೇವೆ.

ಟಿಪ್ಪಣಿ : ಕುಮಾರಭರಣ ಮತ್ತು ಧಾತ್ರೀಕ್ಷೀರದೋಷಶೋಧನ ಮಾಡುವುದಕ್ಕೂ, ದುಷ್ಟಸ್ತನ್ಯಪಾನದಿಂದಲೂ, ಗ್ರಹಬಾಧೆಯಿಂದಲೂ ಉಂಟಾಗುವ ಮಕ್ಕಳ ರೋಗನಿವಾರಣೆಗೋಸ್ಕರವೂ ಕೌಮಾರಭೃತ್ಯವು ಹೇಳಲ್ಪಡತ್ತದೆ. ಕುಮಾರ ಶಬ್ದದಿಂದ ಹೆಣ್ಣುಮಕ್ಕಳಿಗೂ ಈ ವಿಚಾರವು ಸಂಬಂಧಪಟ್ಟದ್ದೆಂದು ತಿಳಿಯಬೇಕು. ಸ್ತ್ರೀಯರು ಋತುಕಾಲದಲ್ಲೂ, ಗರ್ಭಾವಸ್ಥೆಯಲ್ಲೂ, ಬಾಣಂತಿಯರಾಗಿರುವಾಗಲೂ ಅಭ್ಯಾಸವಿಲ್ಲದ ಆಹಾರಾಚಾರಗಳನ್ನು ಅನುಸರಿಸಿದರೆ ಅವು ಮಕ್ಕಳ ಶರೀರದಲ್ಲಿ ಪರಿಣಮಿಸಿ ಅನೇಕ ವಿಧಗಳಾದ ಜ್ವರಾತೀಸಾರಾದಿ ರೋಗಗಳನ್ನೂ ನವಗ್ರಹಗಳಿಂದ ಪೀಡಿತಗಳಾಗಿ ಮಾನಸಿಕ ದುಃಖನನ್ನೂ ಅನುಭವಿಸಬೇಕಾಗುತ್ತದೆ. ಪ್ರಸವ ವಿಜ್ಞಾನವನ್ನು ಶಾರೀರಸ್ಥಾನದಲ್ಲಿ ವಿವರಿಸುತ್ತೇವೆ.

ಶೂನಾಕ್ಷಃ ಕ್ಷತಜಸಗನ್ಧಿಕಃ ಸ್ತನದ್ವಿಟ್ ವಕ್ತ್ರಾಸ್ಯೋ ಹತಚಲಿತೈಕಪಕ್ಷ್ಮನೇತ್ರಃ ।
ಉದ್ವಿಗ್ನಃ ಸುಲುಲಿತಚಕ್ಷುರಲ್ಪರೋದೀ ಸ್ಕನ್ದಾರ್ತೋ ಭವತಿ ಚ ಗಾಢಮುಷ್ಟಿವರ್ಚಾಃ ॥೮॥

ಷಣ್ಮುಖನಿಗೆ ಆಟಪಾಟ ವಿನೋದವನ್ನುಂಟುಮಾಡಲು ಪರಮೇಶ್ವರನು ಸ್ಕಂದನೆಂಬ ಗ್ರಹವನ್ನು ಸೃಷ್ಟಿಸಿದನು. ಷಣ್ಮುಖನು ಯೌವನಸ್ಥನಾದಮೇಲೆ ಅವನು ಆತನ ಅಪ್ಪಣೆಯನ್ನು ಪಡೆದು ಭೂಲೋಕಕ್ಕೆ ಬಂದನು. ಆದಕಾರಣ ಈ ಸ್ಕಂದಗ್ರಹವನ್ನು ಷಣ್ಮುಖನಿಗಿಂತ ಬೇರೆಯಾದವನೆಂದು ತಿಳಿಯಬೇಕು. ಈ ಸ್ಕಂದ ಗ್ರಹವು ಬಾಲಕರನ್ನು ಆಕ್ರಮಿಸಿದಾಗ ಆ ಮಕ್ಕಳ ಕಣ್ಣುಗಳು ಊದುತ್ತವೆ, ರಕ್ತದಂತೆ ವೈವಾಸನೆಯುಂಟಾಗುತ್ತದೆ, ಸ್ತನಪಾನಮಾಡುವುದಿಲ್ಲ. (ಸ್ತನವನ್ನು ಉಣಲಿಕ್ಕೆ ಕೊಟ್ಟರೆ ತ್ಯಜಿಸಿಬಿಡುತ್ತವೆ). ಮುಖವು ಸೊಟ್ಟಾಗಿರುತ್ತದೆ, ಒಂದು ಭಾಗದ ಕಣ್ಣಿನ ಗುಡ್ಡೆಯೂ ರೆಪ್ಪೆಯೂ ಸ್ಪರ್ಶಹೀನವುಳ್ಳದಾಗಿ ಸ್ಥಳದಿಂದ ಜಾರಿದಂತಿರುವುದು, ದಿಗಿಲುಪಡುತ್ತ ಕಣ್ಣುಗಳನ್ನು ಮುಚ್ಚಿಕೊಂಡೇ ಸ್ವಲ್ಪವೇ ಅಳುತ್ತಾ ಕೈಮುಷ್ಟಿಗಳನ್ನು ಬಿಗಿದುಹಿಡಿದು ಗಟ್ಟಿಯಾಗಿ ಮಲವಿಸರ್ಜನೆ ಮಾಡುತ್ತದೆ.

ನಿಃಸಂಜ್ಞೋ ಭವತಿ ಪುನರ್ಭವೇತ್ ಸಸಂಜ್ಞಃ ಸಂರಬ್ಧಃ ಕರಚರಣೈಶ್ಚ ನೃತ್ಯತೀವ ।
ವಿಣ್ಮೂತ್ರೇ ಸೃಜತಿ ವಿನದ್ಯ ಜೃಮ್ಭಮಾಣಃ ಫೇನಂ ಪ್ರಸೃಜತಿ ತತ್ಸಖಾಭಿಪನ್ನಃ ॥೯॥

ಸ್ರಸ್ತಾಂಗಃ ಭಯಚಕಿತೋ ವಿಹಙ್ಗಗನ್ಧಿಃ ಸಂಸ್ರಾವಿವ್ರಣಪರಿಪೀಡಿತಃ ಸಮನ್ತಾತ್ ।

ಸ್ಫೋಟೈಶ್ಚ ಪ್ರತತ ತನುಃ ಸದಾಹಪಾಕೈರ್ವಿಜ್ಞೇಯೋ ಭವತಿ ಶಿಶುಃ ಕ್ಷತಃ ಶಕುನ್ಯಾ ||೧೦||

ರಕ್ತಾಸ್ಯೋ ಹರಿತಮಲೋಽತಿಪಾಣ್ಡುದೇಹಃ ಶ್ಯಾವೋ ವಾ ಜ್ವರಮುಖಪಾಕವೇದನಾರ್ತಃ ।
ರೇವತ್ಯಾವ್ಯಥಿತತನುಶ್ಚ ಕರ್ಣನಾಸಂ ಮೃದ್ನಾತಿ ಧ್ರುವಮಭಿಪೀಡಿತಃ ಕುಮಾರಃ ||೧೧||

ಸ್ಕಂದಾಪಸ್ಮಾರ ಪೀಡಿತವಾದ ಮಗುವು ಎಚ್ಚರಿಕೆ ತಪ್ಪಿ ತಕ್ಷಣವೇ ಎಚ್ಚರಗೊಳ್ಳುತ್ತದೆ, ಮೈಯೆಲ್ಲಾ ನಡುಗುತ್ತಾ ಕೈಕಾಲುಗಳನ್ನು ಕುಣಿಸುತ್ತದೆ; ಗಟ್ಟಿಯಾಗಿ ಕೂಗಿ ಶಬ್ದಮಾಡಿ ಮಲವಿಸರ್ಜನೆ ಮಾಡುತ್ತದೆ (ಕೆಲವರ ಮತದಲ್ಲಿ ಮೈಮುರಿದು ಮೈ ಬಗ್ಗಿಸಿ ಮಲವನ್ನು ವಿಸರ್ಜಿಸುತ್ತೆಂದು ಅರ್ಥ) ಆಕಳಿಸುತ್ತಾ ನೊರೆಯನ್ನುಗುಳುತ್ತದೆ; ಶಕುನಿ ಗ್ರಹ ಪೀಡಿತನಾದ ಬಾಲಕನಿಗೆ ಅಂಗಗಳು ಜಾರಿದಂತೆಯೂ ಭಯದಿಂದ ಗಾಭರಿ ಪಡುತ್ತಲೂ ಮಾಂಸತಿನ್ನುವ ಕೊಕ್ಕರೆ ಬಾತುಗಳ ಮಾಂಸದ ವಾಸನೆಯುಳ್ಳದ್ದಾಗಿ ಮೈ ಮೇಲೆಲ್ಲಾ ಕೀವು ರಕ್ತ ಹರಿಯುವ ವ್ರಣದಿಂದ ಪೀಡಿತವಾಗಿ ಗುಳ್ಳೆಗಳೆದ್ದು ಉರಿಯಿಂದಲೂ ಪಾಕವಾಗುತ್ತಲೂ ಇರುತ್ತವೆ. ರೇವತಿ ಎಂಬ ಗ್ರಹವು ಹಿಡಿದ ಮಗುವಿಗೆ ಮುಖವು ಕೆಂಪಾಗಿರುತ್ತದೆ, ಹಸುರು ಹಸುರಾಗಿ ಮಲವನ್ನು ಸ್ರವಿಸುತ್ತದೆ ಮೈಯು ಅತಿಯಾಗಿ ಬಿಳಿಚಿಕೊಂಡಿರುತ್ತದೆ ಅಥವಾ ಹೊಗೆಯ ಬಣ್ಣದಂತೆ ಇರುತ್ತದೆ, ಜ್ವರ, ಮುಖಪಾಕಗಳಿಂದ ಪೀಡಿತವಾಗಿ ವ್ಯಥೆಪಡುತ್ತಾ ಕಿವಿಯನ್ನೂ ಮೂಗನ್ನೂ ಬಲವಾಗಿ ಉಜ್ಜುತ್ತಲಿರುತ್ತದೆ.

ಸ್ರಸ್ತಾಙ್ಗಃ ಸ್ವಪತಿ ಸುಖಂ ದಿವಾ ನ ರಾತ್ರೌ ವಿಡ್ಭಿನ್ನಂ ಸೃಜತಿ ಚ ಕಾಕತುಲ್ಯಗನ್ಧಿಃ ।
ಛರ್ದ್ಯಾರ್ತೋ ಹೃಷಿತತನೂರುಹಃ ಕುಮಾರಸ್ತೃಷ್ಣಾಳುರ್ಭವತಿ ಚ ಪೂತನಾಗೃಹೀತಃ ||೧೨||

ಯೋ ದ್ವೇಷ್ಟಿ ಸ್ತನಮತಿಸಾರಕಾಸಹಿಕ್ಕಾಚ್ಛರ್ದೀಭಿರ್ಜ್ವರ ಸಹಿತಾಭಿರರ್ದ್ಯಮಾನಃ ।
ದುರ್ವರ್ಣಃ ಸತತಮಧಃ ಶಯೋಽಮ್ಲಗನ್ಧಿಸ್ತಂ ಬ್ರೂಯುರ್ಭಿಷಜೋಽನ್ಧಪೂತನಾರ್ತಮ್ ||೧೩||

ಅವಯವಗಳು ಜಾರಿರುತ್ತಾ ಹಗಲಾಗಲೀ ರಾತ್ರಿಯಾಗಲೀ ನಿದ್ದೆ ಮಾಡದೆ ಒಡಕು ಒಡಕಲಾಗಿ ಮಲವನ್ನು ಸುರಿಸುತ್ತಲೂ ಕಾಗೆಯ ವಾಸನೆಯುಳ್ಳದ್ದಾಗಿಯೂ ವಮನ ಮಾಡುತ್ತಾ ಮೈರೋಮಗಳೆಲ್ಲಾ ಎದ್ದುನಿಂತು ಬಾಯಾರಿಕೆಯುಳ್ಳ ಬಾಲಕನು ಪೂತನಾಗ್ರಹ ಪೀಡಿತನೆಂದೂ, ಮೊಲೆಯನ್ನುಣ್ಣದೆ ಸ್ತನವನ್ನು ದ್ವೇಷಿಸುತ್ತಲೂ ಅತಿಸಾರ, ಕಾಸ, ಬಿಕ್ಕಳಿಕೆ, ವಮನ ಜ್ವರಗಳಿಂದ ಪೀಡಿತನಾಗಿ ಮೈಬಣ್ಣ ಕೆಟ್ಟು ಸದಾ ಮುಖವನ್ನು ಕೆಳಗೆ ಮಾಡಿಕೊಂಡು ಮಲಗುತ್ತಾ ಮೈ ಹುಳಿ ಹುಳಿಯಾದ ವಾಸನೆಯುಳ್ಳದ್ದಾಗಿರುವ ಬಾಲಕನನ್ನು ಅಂಧಪೂತನವೆಂಬ ಗ್ರಹ ಪೀಡಿತನೆಂದೂ ತಿಳಿಯಬೇಕು.

ಉದ್ವಿಗ್ನೋ ಭೃಶಮತಿವೇಪತೇ ಪ್ರರುದ್ಯಾತ್ ಸಂಲೀನಃ ಸ್ವಪಿತಿ ಚಯಸ್ಯ ಚಾನ್ತ್ರ
ಕೂಜಃ ||
ವಿಸ್ರಾಙಶಙ್ಗೀ ಭೃಶಮತಿಸಾರ್ಯತೇ ಚ ಯಸ್ತಂ ಜಾನೀಯಾದ್ಭಿಷಗಿಹ ಶೀತ ಪೂತ
ನಾರ್ತಮ್ ||೧೮||
ಮ್ಲಾನಾಙ್ಗಃ ಸುರುಚಿರಪಾಣಿ ಪಾದವಕ್ತ್ರೋ ಬಹ್ವಾಶೀ ಕಲುಷಸಿರಾ ವೃತೋದರೋ
ಯಃ|
ಸೋದ್ವೇಗೋಭವತಿ ಚ ಮೂತ್ರ ತುಲ್ಯಗನ್ಧಿಃ ಸ ಜ್ಞೇಯಃ ಶಿಶುರಥ ವಕ್ತ್ರಮಣ್ಡಿ
ಕಾರ್ತಃ ||೧೫||
ಯಃ ಫೇನಂ ವಮತಿ ವಿನಮ್ಯತೇ ಚ ಮಧ್ಯೇ ಸೋದ್ವೇಗಂ ವಿಲಪತಿ ಚೋರ್ಧ್ವಮಾಕ್ಷ
ಮಾಣಃ |
ಜೀರ್ಯೇತ ಪ್ರತತಮಥೋ ಬಲಾಸಗನ್ಧಿರ್ನಿಃಸಂಜ್ಞೋ ಭವತಿ ಹಿ ನೈಗಮೇಷಜುಷ್ಟಃ
||೧೬||

ಭಯದಿಂದ ಅತ್ತಿತ್ತ ನೋಡುತ್ತಲೂ ಅತಿಯಾಗಿ ನಡುಗುತ್ತಲೂ ಅತಿಯಾಗಿ ಅಳುತ್ತಲೂ ಕೃಶನಾಗಿ ಮಲಗಿರುತ್ತಾ ಕರುಳಿನಲ್ಲಿ ಶಬ್ದವಾಗುತ್ತಾ ಅಮನಾಂಸದ ವಾಸನೆಯುಳ್ಳ ಅತಿಸಾರವಾಗುತ್ತಿರುವ ಮಗುವು ಶೀತಪೂತನಾಗ್ರಹದಿಂದ ಪೀಡಿತನಾಗಿದ್ದಾನೆಂದೂ, ದೇಹವು ಕೃಶವಾಗಿ ಕೈಕಾಲು ಮುಖಗಳು ಹೊಳಪಾಗಿ ಅತಿಯಾಗಿ ಆಹಾರ ತಿನ್ನುವಹೊಟ್ಟೆಯ ಮೇಲೆ ಕೊಳಕಾದ ಸಿರೆಗಳು ಉಬ್ಬಿ ಭಯದಿಂದ ಅತ್ತಿತ್ತಕಡೆನೋಡುತ್ತಿದ್ದು ಮೈಮೂತ್ರದ ವಾಸನೆಯುಳ್ಳುದಾದರೆ ಮುಖಮಂಡಿಕೆಯಿಂದ ಪೀಡಿತನಾಗಿರುತ್ತಾನೆಂದೂ; ಯಾವನು ನೊರೆ ನೊರೆಯಾಗಿ ವಮನ ಮಾಡುತ್ತಾ ಹೊಟ್ಟೆಯನ್ನು ಬಗ್ಗಿಸುತ್ತಲೂ ದಿಗಲಿನಿಂದ ಅತ್ತಿತ್ತ ಕಡೆ ನೋಡುತ್ತಲೂ ಮೇಲಕ್ಕೆ ನೋಡಿ ಅಳುತ್ತಾ ಅತಿಯಾಗಿ ಕೃಶನಾಶನಾಗುತ್ತಾನೋ ಕಫದ ವಾಸನೆಯುಳ್ಳವನಾಗಿ ಜ್ಞಾನ ತಪ್ಪಿದರೆ ಆ ಮಗುವು ನೈಗಮೇಷಗ್ರಹ ಪೀಡಿತನೆಂದೂ ತಿಳಿಯಬೇಕು. (ಇದಕ್ಕೆ ಪಿತೃಗ್ರಹವೆಂದು ಹೇಳುತ್ತಾರೆ.)

ಪ್ರಸ್ತಬ್ಧೋಯಃ ಸ್ತನದ್ವೇಷೀ ಮುಹ್ಯತೇ ಚಾವಿಶನ್ಮುಹುಃ |
ತಂ ಬಾಲಂ ನಚಿರಾದ್ಧನ್ತಿ ಗ್ರಹಃ ಸಂಪೂರ್ಣ ಲಕ್ಷಣಃ ||೧೭||
ವಿಪರೀತಮತಃ ಸಾಧ್ಯಂ ಚಿಕಿತ್ಸೇದಚಿರಾರ್ದಿತಮ್ |

ಅವಯವಗಳನ್ನು ಬಲವಾಗಿ ಹಿಡಿದುಕೊಂಡು ಸ್ತನದ್ವೇಷಮಾಡುವ ಪದೇ ಪದೇ ಗ್ರಹಾವೇಶ ಬಂದು ಜ್ಞಾನ ತಪ್ಪುವ ಸಂಪೂರ್ಣ ಲಕ್ಷಣವುಳ್ಳ ಮಗುವನ್ನು ಆ ಗ್ರಹವು ಕೂಡಲೇ ಕೊಂದುಬಿಡುತ್ತದೆ ; ಇದಕ್ಕೆ ವಿಪರೀತ ಲಕ್ಷಣಗಳುಳ್ಳ ಸ್ವಲ್ಪ ದಿನಗಳಿಂದಲೇ ಪೀಡಿಸುತ್ತಿರುವ ಗ್ರಹವನ್ನು ಚಿಕಿತ್ಸೆಮಾಡಿ ನಿವಾರಿಸುವುದು ಸಾಧ್ಯವಾಗುತ್ತದೆ.

ಗೃಹೇ ಪುರಾಣೇಹವಿಷಾಭ್ಯಜ್ಯ ಬಾಲಂ ಶುಚೌ ಶುಚಿಃ ||೧೮||
ಸರ್ಷಪಾನ್ ಪ್ರಕಿರೇತ್ತೇಷಾಂ ತೈಲೈರ್ದೀಪಂ ಚ ಕಾರಯೇತ್ |

ಸದಾ ಸನ್ನಿಹಿತಂ ಚಾಪಿ ಜುಹುಯಾದ್ಧವ್ಯವಾಹನಮ್ ||೧೯||
ಸರ್ವಗನ್ಧೌಷಧೀಬೀಜೈರ್ಗನ್ಧ ಮಾಲ್ಯೈರಲಙ್ಕೃತಮ್ |
ಅಗ್ನಯೇ ಕೃತ್ತಿಕಾಭ್ಯಶ್ಚ ಸ್ವಾಹಾ ಸ್ವಾಹೇತಿ ಸಂಸ್ಮರ್ರ ||೨೦||
ನಮಃ ಸ್ಕನ್ದಾಯ ದೇವಾಯ ಗ್ರಹಾಧಿಪತಯೇ ನಮಃ |
ಶಿರಸಾ ತ್ವಾಭಿವನ್ದೇಽಹಂ ಪ್ರತಿಗೃಹ್ಣೀಷ್ವ ಮೇ ಬಲಿಮ್ ||೨೧||
ನೀರುಜೋ ನಿರ್ವಿಕಾರಶ್ಚ ಶಿಶುರ್ಮೇ ಜಾಯತಾಂ ಧೃವಮ್ ||೨೨||

ಶುಚಿಯಾದ ಮನೆಯಲ್ಲಿ ಶುಚಿರ್ಭೂತನಾದ ವೈದ್ಯನು ಪುರಾಣ ಘೃತದಿಂದ ಗ್ರಹ ಪೀಡಿತ ಬಾಲಕನಿಗೆ ಅಭ್ಯಂಗ ಮಾಡಿಸಿ ಮನೆಯ ಸುತ್ತಲೂ ಬಿಳಿಯ ಸಾಸಿವೆಯನ್ನು ದುರಿಸಿ ತೈಲದಿಂದ ದೀಪವನ್ನು ಹತ್ತಿಸಿ ಅಗ್ನಿಯ ಹತ್ತಿರವಿಟ್ಟು ಸರ್ವಗಂಧೌಷಧ ಬೀಜ ಗಳಿಂದಲೂ ಗಂಧ ಪುಷ್ಪಗಳಿಂದಲೂ ಅಗ್ನಿಗೆ ಅಲಂಕರಿಸಿ ಅಗ್ನಯೇಸ್ವಾಹಾ ಕೃತ್ತಿಕಾಭ್ಯಶ್ಚ ಸ್ವಾಹಾ ಎಂದು ಹೇಳುತ್ತಾ ಆಜ್ಯಾಹುತಿಯನ್ನು ಹೋಮ ಮಾಡಬೇಕು. ಸ್ಕಂದದೇವ ನಿಗೆ ನಮಸ್ಕಾರವು ಗ್ರಹಾಧಿಪತಿಯಾದ ನಿನಗೆ ಶಿರಸ್ಸಿನಿಂದ ನಮಸ್ಕಾರ ಮಾಡುತ್ತೇನೆ; ನಾನು ಹಾಕಿರುವ ಬಲಿಯನ್ನು ಸ್ವೀಕರಿಸಿ ನನ್ನ ಮಗುವಿಗೆ ಖಂಡಿತವಾಗಿಯೂ ನೋವಿಲ್ಲ ದಂತೆಯೂ ರೋಗವಿಲ್ಲದಂತೆಯೂ ಮಾಡು ಎಂದು ಪ್ರಾರ್ಥಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರಸ್ಥಾನಾನ್ತರ್ಗತ ಕೌಮಾರ ಭೃತ್ಯತಂತ್ರೇ ನವಗ್ರಹಾಕೃತಿ ವಿಜ್ಞಾನೀಯ ನಾಮಕಸಪ್ತವಿಂಶತಿತಮಾಧ್ಯಾಯಸ್ಯ ಶ್ರೀ ಭಟ್ಟಾ ಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ಅಷ್ಟಾವಿಂಶತಿತಮೋಽಧ್ಯಾಯಃ

ಅಥಾತಃ ಸ್ಕನ್ದಗ್ರಹಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರಿಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ಕಂದಗ್ರಹದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಸ್ಕನ್ದಗ್ರಹೋಪಸೃಷ್ಟಾನಾಂ ಕುಮಾರಾಣಾಂ ಚ ಶಸ್ಯತೇ ।
ವಾತಘ್ನದ್ರುಮಪತ್ರಾಣಾಂ ನಿಃಕ್ವಾಥಃ ಪರಿಷೇಚನೇ ||೩||
ತೇಷಾಂ ಮೂಲೇಷು ಸಿದ್ಧಂ ಚ ತೈಲಮಭ್ಯಞ್ಜನೇ ಹಿತಮ್ ।
ಸರ್ವಗನ್ಧಸುರಾಮಣ್ಡ ಕೈಟರ್ಯಾವಾಪಮಿಷ್ಯತೇ ||೪||

ಸ್ಕಂದಗ್ರಹ ಪೀಡಿತರಾದ ಮಕ್ಕಳಿಗೆ ಸ್ಕಂದಗ್ರಹದ ಪ್ರಭಾವದಿಂದ ವಾತಪ್ರಕೋಪ ವುಂಟಾಗುವ ಕಾರಣ ವಾತಹರಗಳಾದ ಗಿಡಗಳ ಎಲೆಗಳನ್ನು ನೀರಿನಲ್ಲಿ ಕಾಯಿಸಿ ಆ ಕಷಾಯವನ್ನು ಮೈ ಮೇಲೆ ಸುರಿಯಬೇಕು ; ಅವುಗಳ ಬೇರುಗಳಿಂದ ತಯಾರಿಸಿದ ತೈಲ ದಿಂದ ಅಭ್ಯಂಗ ಮಾಡಿಸಿ ಏಲಾದಿ ಸರ್ವಗನ್ಧ ಕಷಾಯ ; ಮಧ್ಯದ ತಿಳಿ, ಹೆಬ್ಬೇವು ಇವು ಗಳ ಕಷಾಯದಿಂದ ಪರಿಷೇಕಮಾಡಿಸಬೇಕು.

ದೇವದಾರುಣಿ ರಾಸ್ನಾಯಾಂ ಮಧುರೇಷು ದ್ರುಮೇಷು ಚ ।
ಸಿದ್ಧಂ ಸರ್ಪಿಶ್ಚ ಸಕ್ಷೀರಂ ಪಾನಮಸ್ಮೈ ಪ್ರಯೋಜಯೇತ್ ||೫||
ಸರ್ಷಪಾಃ ಸರ್ಪನಿರ್ಮೋಕೋ ವಚಾಕಾಕಾದನೀ ಘೃತಮ್ ।
ಉಷ್ಟ್ರಾಜಾವಿಗವಾಂ ಚೈವ ರೋಮಾಣ್ಯುದ್ಧೂಪನಂ ಶಿಶೋಃ ||೬||

ದೇವದಾರು, ರಾಸ್ನೆ, ರಾಜಾದನ ಮೊದಲಾದ ಮಧುರ ವೃಕ್ಷಗಳ ತೊಗಟೆಗಳೊಡನೆ ತುಪ್ಪವನ್ನೂ ಹಾಲನ್ನೂ ಸೇರಿಸಿ ತಯಾರಿಸಿದ ತುಪ್ಪವನ್ನು ಕುಡಿಸಬೇಕು. ಬಿಳಿಸಾಸಿವೆ, ಹಾವಿನಪೊರೆ, ಬಜೆ, ಕಾಗೆತೊಂಡೆ, ತುಪ್ಪ,ಒಂಟೆ, ಕುರಿ, ಆಡು, ಹಸು ಇವುಗಳ ರೋಮ ಗಳನ್ನು ಬೆಂಕಿಯಲ್ಲಿ ಸುಟ್ಟು ಆ ಹೊಗೆಯನ್ನು ಮೈಗೆ ತಗುಲಿಸಬೇಕು.

ಸೋಮವಲ್ಲೀಮಿನ್ದ್ರವಲ್ಲೀಂ ಶಮೀಂ ಬಿಲ್ವಸ್ಯ ಕಣ್ಟಕಾನ್ ।
ಮೃಗಾದನ್ಯಾಶ್ಚ ಮೂಲಾನಿ ಗ್ರಥಿತಾನ್ಯೇವ ಧಾರಯೇತ್ ||೭||

ಅಮೃತವಳ್ಳಿ, ಕೊಡಶಿಗೆ, (ಹೊನಗನ್ನೆ), ಬನ್ನಿ, ಬಿಲ್ವಪತ್ರೆಯಮುಳ್ಳು, ಬಿಳಿ ಹೂವಿನ ದಾಸವಾಳ್ಕೆಯ ಬೇರು ಇವುಗಳನ್ನು ಹಾರದಂತೆ ಕಟ್ಟಿ ಮಗುವಿನ ಕೊರಳಿಗೆ ಹಾಕಬೇಕು.

ರಕ್ತಾನಿ ಮಾಲ್ಯಾನಿ ತಥಾ ಪತಾಕಾ ರಕ್ತಾಶ್ಚ ಗನ್ಧಾ ವಿವಿಧಾಶ್ಚ ಭಕ್ಷ್ಯಾಃ ।
ಘಣ್ಟಾ ಚ ದೇವಾಯ ಬಲಿರ್ನಿವೇದ್ಯಃ ಸಕುಕ್ಕುಟಃ ಸ್ಕನ್ದಗ್ರಹೇ ಹಿತಾಯ ॥೮॥
ಸ್ನಾನಂ ತ್ರಿರಾತ್ರಂ ನಿಶಿ ಚತ್ವರೇಷು ಕುರ್ಯಾತ್ತ್ಪುನಃ ಶಾಲಿಯವೈರ್ನವೈಸ್ತು ।
ಅದ್ಭಿಶ್ಚ ಗಾಯತ್ರ್ಯಭಿಮಂತ್ರಿತಾಭಿಃ ಪ್ರಜ್ವಾಲನಂ ಚಾಹುತಿಭಿಶ್ಚ ವಹ್ನೇಃ ॥೯॥

ಕೆಂಪು ಹೂವಿನ ಹಾರಗಳು ಕೆಂಪು ಬಟ್ಟೆಯ ಬಾವುಟಗಳು ರಕ್ತಗಂಧ ಅನೇಕ ವಿಧಗಳಾದ ಕಡಬು, ಮೋದಕ, ಮೊದಲಾದ ಭಕ್ಷ್ಯಗಳು ಘಂಟೆ, ಕೋಳಿ ಇವುಗಳ ಬಲಿಯನ್ನು ಸ್ಕಂದಗ್ರಹಕ್ಕೆ ರಾತ್ರಿಯ ವೇಳೆಗಳಲ್ಲಿ ನಾಲ್ಕು ದಾರಿಗಳು ಸೇರತಕ್ಕ ಸ್ಥಳಗಳಲ್ಲಿ ಹಾಕಬೇಕು ; ಅಕ್ಕಿ ಮತ್ತು ಯವಗಳಿಂದ ನೆಲದಮೇಲೆ ಮಂಡಲಗಳನ್ನು ಬರೆದು ಅವುಗಳ ಮೇಲೆ ಹೊಸ ಹೊಸ ಬಲಿಗಳನ್ನು ಹಾಕಿ ನೀರಿನಿಂದ ಪ್ರೋಕ್ಷಿಸಬೇಕು ; ಈ ರೀತಿಯಾಗಿ ೩ ದಿನಗಳು ಬಲಿ, ಸ್ನಾನ, ಹೋಮಗಳನ್ನು ಮಾಡಬೇಕು. (ಗಾಯತ್ರೀ ಜಪದಿಂದ ನೀರನ್ನು ಪ್ರೋಕ್ಷಣೆಮಾಡಿ ೩-೭-೧೦ ಹೋಮಗಳನ್ನೂ ಮಾಡಿಸಬೇಕು ಎಂದು ಅರ್ಥ.)

ರಕ್ಷಾಮತಃ ಪ್ರವಕ್ಷ್ಯಾಮಿ ಬಾಲಾನಾಂ ಪಾಪನಾಶಿನೀಂ ।
ಅಹನ್ಯಹನಿ ಕರ್ತವ್ಯಾ ಯಾ ಭಿಷಗ್ಭಿರತನ್ದ್ರಿತೈಃ ॥೧೦॥
ತಪಸಾಂ ತೇಜಸಾಂ ಚೈವ ಯಶಸಾಂ ವಪುಷಾಂ ತಥಾ ।
ನಿಧನಂ ಯೋಽವ್ಯಯೋ ದೇವಃ ಸ ತೇಸ್ಕನ್ದಃ ಪ್ರಸೀದತು ॥೧೧॥
ಗ್ರಹಸೇನಾಪತಿರ್ದೇವೋ ದೇವಸೇನಾಪತಿರ್ವಿಭುಃ ।
ದೇವಸೇನಾರಿಪುಹರಃ ಪಾತುತ್ವಾಂ ಭಗವಾನ್ ಗುಹಃ ॥೧೨॥
ದೇವದೇವಸ್ಯ ಮಹತಃ ಪಾವಕಸ್ಯ ಚ ಯಃ ಸುತಃ ।
ಗಙ್ಗೋಮಾಕೃತ್ತಿಕಾನಾಂ ಚ ಸ ತೇ ಶರ್ಮ ಪ್ರಯಚ್ಛತು ॥೧೩॥
ರಕ್ತಮಾಲ್ಯಾಮ್ಬರಃ ಶ್ರೀಮಾನ್ ರಕ್ತಚನ್ದನಭೂಷಿತಃ ।
ರಕ್ತದಿವ್ಯವಪುರ್ದೇವಃ ಪಾತು ತ್ವಾಂ ಕ್ರೌಞ್ಚಸೂದನಃ ॥೧೪॥

ಇನ್ನು ಮುಂದೆ ಬಾಲಕರ ಪಾಪನಾಶಕಗಳಾದ ಮಂತ್ರ ರಕ್ಷೆಗಳನ್ನು ಹೇಳುತ್ತೇವೆ. (ಮಂತ್ರಗಳು ಅಚಿಂತ್ಯವೀರ್ಯಗಳಾದ ಕಾರಣ ಪಾಪಹರಗಳು) ವೈದ್ಯರ ಜಾಗರೂಕರಾಗಿ ಪ್ರತಿನಿತ್ಯವೂ ಮಂತ್ರರಕ್ಷೆಯನ್ನು ಮಾಡಬೇಕು; ತಪಸ್ಸು, ತೇಜಸ್ಸು, ಯಶಸ್ಸು, ಶರೀರಗಳಿಗೆ ಆಧಾರಸ್ಥಾನ ಭೂತನಾದ ಸ್ಕನ್ದನು ನಿತ್ಯಸ್ವರೂಪನು, ಇವನು ಪ್ರಸನ್ನನಾಗಲಿ ; ಸ್ಕಂದಗ್ರಹಾದಿಗಳಿಗೆ ಅಧಿಪತಿಯಾಗಿಯೂ ದೇವಸೇನಾಪತಿಯೂ ಸರ್ವವ್ಯಾಪಿಯೂ ದೇವಸೇನಾರಿಪುಗಳನ್ನು ಧ್ವಂಸಮಾಡುವ ಅಣಿಮಾದ್ಯಷ್ಟೈಶ್ವರ್ಯ ಸಂಪನ್ನನಾದ ಗುಹನು ನಿನ್ನನ್ನು ಕಾಪಾಡಲಿ ; ದೇವ ದೇವನಾದ ಪರಮೇಶ್ವರನ ಮಗನಾಗಿಯೂ ಅಗ್ನಿ ಗಂಗಾದೇವೀ ಪಾರ್ವತೀ ಸಪ್ತರ್ಷಿ ಭಾರ್ಯೆಯರಾದ ಷಟ್ ಕೃತ್ತಿಕಾದೇವೀ ಇವರ ತನಯನಾದ ಷಣ್ಮುಖಸ್ವಾಮಿಯು ನಿನಗೆ ಸುಖವನ್ನುಂಟು

ಮಾಡಲಿ ; ರಕ್ತಪುಷ್ಪಗಳ ಮಾಲಿಕೆಯನ್ನೂ ರಕ್ತವಸ್ತ್ರಗಳನ್ನೂ ಧರಿಸಿ ರಕ್ತಗಂಧದಿಂದ ಅಲಂಕೃತನಾದ ದಿವ್ಯವಾದ ರಕ್ತವರ್ಣದ ದೇಹವುಳ್ಳ, ಕೌಂಚನನ್ನು ನಾಶಮಾಡಿದ ಶ್ರೀಮಾನೆಗುಹನು ನಿನ್ನನ್ನು ಕಾಪಾಡಲಿ ಎಂದು ಅರ್ಥಬರುವ ಮಂತ್ರಗಳಿಂದ ಅಭಿ ಮಂತ್ರಿಸಿದ ರಕ್ಷಾಸೂತ್ರವನ್ನು ಬಾಲಕನ ಕೈಗೆ ಕಟ್ಟಬೇಕು.

ಇತಿ ಶ್ರೀಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕೌಮಾರಭೃತ್ಯತನ್ತ್ರೇ ಸ್ಕಂದಗ್ರಹಪ್ರತಿಷೇಧನಾಮಕಾಷ್ಟಾವಿಂಶತಿತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕ ಭಾಷಾವಿವೃತಿಃ

ಏಕೋನತ್ರಿಂಶತ್ತಮೋಽಧ್ಯಾಯಃ

ಅಥಾತಃ ಸ್ಕನ್ಧಾಪಸ್ಮಾರಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ಕಂದಾಪಸ್ಮಾರ ಗ್ರಹಚಿಕಿತ್ಸೆಯನ್ನು ಹೇಳುತ್ತೇವೆ.

ಬಿಲ್ವಃ ಶಿರೀಷೋ ಗೋಲೋಮೀ ಸುರಸಾದಿಶ್ಚ ಯೋ ಗಣಃ ।
ಪರಿಷೇಕೇ ಪ್ರಯೋಕ್ತವ್ಯಃ ಸ್ಕನ್ದಾಪಸ್ಮಾರಶಾನ್ತಯೇ ||೩||
ಸರ್ವಗನ್ಧವಿಪಕ್ವಂ ತು ತೈಲಮಭ್ಯಞ್ಜನೇ ಹಿತಮ್ ।
ಕ್ಷೀರವೃಕ್ಷಕಷಾಯೇ ಚ ಕಾಕೋಲ್ಯಾದೌ ಗಣೇ ತಥಾ ||೪||
ವಿಪಕ್ತವ್ಯಂ ಘೃತಂ ವಾಪಿ ಪಾನೀಯಂ ಪಯಸಾನ್ವಿತಮ್ ।
ಉತ್ಸಾದನಂ ವಚಾಹಿಙ್ಗುಯುಕ್ತಂ ಸ್ಕನ್ದಗ್ರಹೇ ಹಿತಮ್ ||೫||
ಗೃಧ್ರೂಲೂಕಪುರೀಷಾಣಿ ಕೇಶಾ ಹಸ್ತಿನಖಾ ಘೃತಮ್ ।
ವೃಷಭಸ್ಯ ಚ ರೋಮಾಣಿ ಯೋಜ್ಯಾನ್ಯುದ್ಧೂಪನೇಽಪಿ ಚ ||೬||

ಸ್ಕಂದಾಪಸ್ಮಾರ ಚಿಕಿತ್ಸೆ :—ಏಲಾದಿಗಣ ದ್ರವ್ಯಗಳಿಂದ ತಯಾರಿಸಿದ ತೈಲದಿಂದ ಬಾಲಕನಿಗೆ ಅಭ್ಯಂಗ ಮಾಡಿಸಿ ಬಿಲ್ವಪತ್ರೆಯ ಬೇರು, ಬಾಗೆಯತೊಗಟೆ, ಗರಿಕೆ, (ಬಜೆ ಎಂದು ಕೆಲವರು) ಸುರಸಾದಿಗಣ ದ್ರವ್ಯ ಇವುಗಳ ಕಷಾಯದಿಂದ ಪರಿಷೇಚನೆ ಮಾಡಿಸಿದರೆ ಸ್ಕಂದಾಪಸ್ಮಾರವು ಶಾಂತವಾಗುತ್ತದೆ; ಸರ್ವಗಂಧ ದ್ರವ್ಯಗಳೊಡನೆ ತಯಾರಿಸಿದ ತೈಲದಿಂದ ಅಭ್ಯಂಗ ಮಾಡಿಸುವುದು ಹಿತಕರವು. ಕ್ಷೀರವೃಕ್ಷಗಳ ಕಷಾಯದಿಂದಾಗಲೀ, ಕಾಕೋಲ್ಯಾದಿಗಣ ದ್ರವ್ಯಗಳೊಡನೆಯಾಗಲೀ ತಯಾರಿಸಿದ ತುಪ್ಪವನ್ನು ಹಾಲಿನಲ್ಲಿ ಕದರಿ ಕುಡಿಸಬೇಕು ; ಬಜೆ ಮತ್ತು ಹಿಂಗುಗಳ ಚೂರ್ಣದಿಂದ ಉಜ್ಜಿದರೆ ಸ್ಕಂದಾಪಸ್ಮಾರಗಳಲ್ಲಿ ಹಿತಕರವು ; ಹದ್ದು ಗೂಬೆಗಳ ಹಿಕ್ಕೆಗಳು ತಲೆಗೂದಲು ಆನೆಯಉಗುರು ತುಪ್ಪ ಗೂಳಿಯಬಾಲದ ಕೂದಲು ಇವುಗಳನ್ನು ಸುಟ್ಟು ಬರುವ ಹೊಗೆಯಿಂದ ಮೈಯನ್ನು ಕಾಯಿಸಬೇಕು (ಧೂಪನ ಮಾಡಿಸಬೇಕು);

ಅನನ್ತಾಂ ಕುಕ್ಕುಟೀಂ ಬಿಮ್ಬೀಂ ಮರ್ಕಟೀಂ ಚಾಪಿ ಧಾರಯೇತ್ ।
ಪಕ್ವಾಪಕ್ವಾನಿ ಮಾಂಸಾನಿ ಪ್ರಸನ್ನಂ ರುಧಿರಂ ಪಯಃ ||೭||
ಭೂತೋದನೋ ನಿವೇದ್ಯಶ್ಚ ಸ್ಕನ್ದಾಪಸ್ಮಾರಿಣೋಽವಟೇ ।
ಚತುಷ್ಪಥೇ ಚ ಕರ್ತವ್ಯಂ ಸ್ನಾನಮಸ್ಯ ಯತಾತ್ಮನಾ ||೮||
ಸ್ಕಂದಾಪಸ್ಮಾರಸಂಜ್ಞೋ ಯಃ ಸ್ಕನ್ದಸ್ಯ ದಯಿತಃ ಸಖಾ ।
ವಿಶಾಖಸಂಜ್ಞಶ್ಚ ಶಿಶೋಃ ಶಿವೋಽಸ್ತು ವಿಕೃತಾನನಃ ||೯||

ಸೊಗದೆಬೇರು, ಅಣ್ಣೆಸೊಪ್ಪು, ತೊಂಡೆಬೇರು, ನಸುಗುನ್ನಿಯಹಂಬು, ಇವನ್ನು ಬಾಲಕನ ಕತ್ತಿಗೆ ಕಟ್ಟಬೇಕು ; ಬೇಂದಮಾಂಸ, ಹಸಿಯಮಾಂಸ, ತಿಳಿಮದ್ಯ, ಆಡಿನ ರಕ್ತ, ಹಾಲು, ಭೂತಬಲಿಗೆ ಹೇಳಿದ ಅನ್ನ ಇವನ್ನು ಆ ಮಗುವಿನ ಮುಖಕ್ಕೆ ನಿವಾಳಿಸಿ ೪ ದಾರಿ ಸೇರುವ ಕಡೆ ಬಲಿಹಾಕಬೇಕು; ಹಳ್ಳದಲ್ಲಿ ಮಗುವನ್ನು ಕೂರಿಸಿ ಸ್ನಾನ ಮಾಡಿಸಬೇಕು ; ಷಣ್ಮುಖನಿಗೆ ಪರಮ ಮಿತ್ರನಾದ ಸ್ಕಂದಾಪಸ್ಮಾರ ಅಥವಾ ವಿಶಾಖ ನೆಂಬ ಹೆಸರಿನ ವಿಕೃತಮುಖವುಳ್ಳ ಗ್ರಹವು ಬಾಲಕನಿಗೆ ಮಂಗಳವನ್ನುಂಟುಮಾಡಲಿ ಎಂದು ಪ್ರಾರ್ಥಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರ ಭೃತ್ಯತನ್ತ್ರೇ ಸ್ಕಂದಾಪಸ್ಮಾರ ಪ್ರತಿಷೇಧ ನಾಮಕ್ಯೆಕೋನತ್ರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹ ಶರ್ಮ ಕೃತಕರ್ಣಾಟಕ ಭಾಷಾ ವಿವೃತಿಃ

ತ್ರಿಂಶತ್ತಮೋಽಧ್ಯಾಯಃ

ಅಥಾತಃ ಶಕುನೀಪ್ರತಿಷೇಧಂ ವ್ಯಾಖ್ಯಾಸ್ಯಾಮಃ ॥೧॥

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಶಕುನಿಗ್ರಹಪ್ರತಿಷೇಧವನ್ನು ವಿವರಿಸುತ್ತೇವೆ.

ಶಕುನ್ಯಭಿಪರೀತಸ್ಯ ಕಾರ್ಯೋ ವೈದ್ಯೇನ ಜಾನತಾ ।
ವೇತಸಾಮ್ರಕಪಿತ್ಥಾನಾಂ ನಿಷ್ಕ್ವಾಥಃ ಪರಿಷೇಚನೇ ॥೩॥
ಕಷಾಯಮಧುರೈಸ್ತೈಲಂ ಕಾರ್ಯಮಭ್ಯಞ್ಜನೇ ಶಿಶೋಃ ।
ಮಧುಕೋಶೀರಹ್ರೀವೇರ ಸಾರಿವೋತ್ಪಲಪದ್ಮಕೈಃ ॥೪॥
ರೋಧ್ರಪ್ರಿಯಙ್ಗುಮಞ್ಜಿಷ್ಠಾಗೈರಿಕೈಃ ಪ್ರದಿಹೇಚ್ಛಿಶುಮ್ ।
ವ್ರಣೇಪೂಕ್ತಾನಿ ಚೂರ್ಣಾನಿ ಪಥ್ಯಾನಿ ವಿವಿಧಾನಿ ಚ ॥೫॥
ಸ್ಕಂದಗ್ರಹೇ ಧೂಪನಾನಿ ತಾನೀಹಾಪಿ ಪ್ರಯೋಜಯೇತ್ ।

ಬುದ್ಧಿವಂತನಾದ ವೈದ್ಯನು ಶಕುನಿಗ್ರಹಪೀಡಿತನಾದ ಬಾಲಕನಿಗೆ ನೀರಂಜಿ, ಮಾವು, ಬೇಲ ಇವುಗಳ ತೊಗಟೆಯ ಕಷಾಯದಿಂದ ಸೇಚನೆಯನ್ನೂ ಅತಿಮಧುರ, ಮುಡಿವಾಳ, ಲಾಮಂಚ, ಸೊಗದೆಬೇರು, ನೈದಿಲೆಗೆಡ್ಡೆ, ಪದ್ಮಕ, ಇವುಗಳಿಂದ ತಯಾರಿಸಿದ ತೈಲದಿಂದ ಅಭ್ಯಂಗವನ್ನೂ ಲೋಧ್ರ, ನೆಳಲು, ಮಂಜಿಷ್ಠೆ, ಕಾವಿ ಇವುಗಳ ಕಲ್ಕದಿಂದ ಲೇಪನವನ್ನೂ ವ್ರಣಚಿಕಿತ್ಸೆಯಲ್ಲಿ ಹೇಳಿರುವ ಚೂರ್ಣಗಳೂ, ವಿವಿಧ ಪಥ್ಯ ಕ್ರಮಗಳೂ, ಸ್ಕಂದಗ್ರಹ ಚಿಕಿತ್ಸೆಯಲ್ಲಿ ಹೇಳಿದ ಧೂಪಗಳೂ ಇವುಗಳನ್ನೂ ಈ ಶಕುನಿ ಗ್ರಹ ಪೀಡೆಯಲ್ಲಿ ಪ್ರಯೋಗಿಸಬೇಕು.

ಶತಾವರೀಮೃಗೈರ್ವಾರುನಾಗದನ್ತೀ ನಿದಿಗ್ಧಿಕಾಃ ॥೬॥
ಲಕ್ಷ್ಮಣಾಂ ಸಹದೇವಾಂ ಚ ಬೃಹತೀಂ ಚಾಪಿ ಧಾರಯೇತ್ ।
ತಿಲತಣ್ಡುಲಕಂ ಮಾಲ್ಯಂ ಹರಿತಾಳಂ ಮನಃಶಿಲಾ ॥೭॥
ಬಲಿರೇಷ ಕರಞ್ಜೇಷು ನಿವೇದ್ಯೋ ನಿಯತಾತ್ಮನಾ ।
ನಿಕುಞ್ಜೇ ಚ ಪ್ರಯೋಕ್ತವ್ಯಂ ಸ್ನಾನಮಸ್ಯ ಯಥಾವಿಧಿ ॥೮॥
ಸ್ಕನ್ದಗ್ರಹೋಪಶಮನಂ ಘೃತಂ ತಚ್ಚೇಹ ಪೂಜಿತಮ್ ।

ಆಷಾಡಿ, ಬಿಳಿಹೂವಿನ ದಾಸಮೆಕ್ಕೆ, ನಾಗದಾಳಿಸೊಪ್ಪು (ಜಾಪಾಳಭೇದವೆಂದು ಡಲ್ಹಣರು), ನೆಲಗುಳ್ಳ, ಬಿಳಿಗುಳ್ಳ, (ಲಕ್ಷ್ಮಣಾ), ಸಹದೇವೀ, ಹೆಗ್ಗುಳ್ಳ ಇವನ್ನು ಕೈಯ್ಯಲ್ಲಾಗಲೀ ಕತ್ತಿನಲ್ಲಾಗಲೀ ಧರಿಸಬೇಕು. ತಿಲತಂಡುಲಕವೆಂಬ ಹೆಸರಿನ ಬಲಿ

ಯನ್ನೂ (ಎಳ್ಳನ್ನೂ ಅಕ್ಕಿಯನ್ನೂ ಸೇರಿಸಿ ಬೇಯಿಸಿದ್ದು) ಹೂವಿನಮಾಲೆ, ಮಣಶಿಲೆ ಅರಿದಳ ಇವನ್ನೂ ಒಂದು ಬಾಳೆಲೆಯಲ್ಲಿ ತೋಡಿಟ್ಟು ಮಗುವಿಗೆ ನಿವಾಳಿಸಿ ಹೊಂಗೆಮರಗಳು ವಿಶೇಷವಾಗಿ ಬೆಳೆದಿರುವ ಗುತ್ತಿಯಲ್ಲಿಡಬೇಕು (ಪೊದೆಯಲ್ಲಿ). ಸ್ಕಂದಚಿಕಿತ್ಸೆಯಲ್ಲಿ ಹೇಳಿದಂತೆ ಯವೆ, ಛತ್ತ್ರದ ಪೈರಿರುವ ಗದ್ದೆ ಅಥವಾ ಹೊಲದಲ್ಲಿ ಗಾಯತ್ರಿಯಿಂದ ಅಭಿಮಂತ್ರಿಸಿರುವ ನೀರಿನಿಂದ ಮಗುವಿಗೆ ಸ್ನಾನ ಮಾಡಿಸಬೇಕು. ಸ್ಕಂದಗ್ರಹ ಪೀಡಿತನಾದ ಬಾಲಕನಿಗೆ ಹೇಳಿರುವಂತೆ ದೇವದಾರುಘೃತ, ರಾಸ್ನಾದಿ ಘೃತಗಳ ಪಾನವನ್ನೂ ಅಮೃತಬಳ್ಳಿ ಮೊದಲಾದ ಮೂಲಿಕೆಗಳ ಧಾರಣವನ್ನೂ ಮಾಡಿಸಬೇಕು.

ಕುರ್ಯಾಚ್ಚ ವಿವಿಧಾಂ ಪೂಜಾಂ ಶಕುನ್ಯಾಃ ಕುಸುಮೈಃ ಶುಭೈಃ ||೯||
ಅನ್ತರಿಕ್ಷಚರಾ ದೇವೀ ಸರ್ವಾಲಙ್ಕಾರ ಭೂಷಿತಾ ॥
ಅಧೋಮುಖೀ ತೀಕ್ಷ್ಣ ತುಂಡಾ ಶಕುನೀ ತೇ ಪ್ರಸೀದತು ||೧೦||
ದುರ್ದರ್ಶನಾ ಮಹಾಕಾಯಾ ಪಿಙ್ಗಾಕ್ಷೀ ಭೈರವಸ್ವರಾ |
ಲಮ್ಬೋದರೀ ಶಙ್ಖಕರ್ಣೀ ಶಕುನೀ ತೇ ಪ್ರಸೀದತು ||೧೧||

ಶಕುನಿಗ್ರಹಕ್ಕೆ ಜಾಜಿ, ನೈದಿಲೆ ಮೊದಲಾದ ವಿವಿಧ ಪುಷ್ಪಗಳಿಂದ ಪೂಜೆಗಳನ್ನು ಮಾಡಿ ಅಂತರಿಕ್ಷದಲ್ಲಿ ಸಂಚರಿಸುವ, ಸಕಲ ಅಲಂಕಾರಗಳಿಂದ ಕೂಡಿ ಅಧೋಮುಖಳಾದ ಮೊನೆಯಾದ ಕೊಕ್ಕುಳ್ಳ, ಭಯಂಕರಾಕಾರದ, ದಪ್ಪದೇಹದ, ಹೊಂಬಣ್ಣದ ಕಣ್ಣುಗಳುಳ್ಳ, ಜೋಲುತ್ತಿರುವ ಉದರ, ಶಂಖದಂತೆ ಕರ್ಣವುಳ್ಳವಳೇ ಪ್ರಸನ್ನಳಾಗಿ ಮಗುವನ್ನು ಕಾಪಾಡು ಎಂದು ಪ್ರಾರ್ಥಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರಭೃತ್ಯತನ್ತ್ರೇ ಶಕುನೀಗ್ರಹ ಪ್ರತಿಷೇಧನಾಮಕ ತ್ರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ಏಕತ್ರಿಂಶತ್ತಮೋಽಧ್ಯಾಯಃ

ಅಥಾತೋ ರೇವತೀ ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿ ದಂತೆಯೇ ರೇವತೀಗ್ರಹದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಅಶ್ವಗನ್ಧಾ ಚ ಶೃಙ್ಗೀ ಚ ಸಾರಿವಾ ಸಪುನರ್ನವಾ ।
ಸಹೇ ವಿದಾರೀ ಚ ತಥಾ ಕಷಾಯಾಃ ಸೇಚನೇ ಹಿತಾಃ ||೩||
ತೈಲಮಭ್ಯಙ್ಜನೇ ಕಾರ್ಯಂ ಕುಷ್ಠೇ ಸರ್ಜರಸೇಽಪಿ ವಾ ।
ಪಲಙ್ಕಷಾಯಾಂ ನಳದೇ ತಥಾ ಗಿರಿಕದಮ್ಬಕೇ ||೪||
ಧವಾಶ್ವಕರ್ಣಕಕುಭಧಾತಕೀತಿನ್ದುಕೇಷು ಚ ।
ಕಾಕೋಳ್ಯಾದಿ ಗಣೇ ಚೈವ ಪಾನೀಯಂ ಸರ್ಪಿರಿಷ್ಯತೇ ||೫||

ಅಶ್ವಗಂಧಿಯಬೇರು, ಕರ್ಕಾಟಕಶೃಂಗಿ, ಸೊಗದೇಬೇರು, ಕೊಮ್ಮೆಬೇರು, ಕಾಡು ಹೆಸರು, ಕಾಡುಉದ್ದು, ನೆಲಗುಂಬಳಗೆಡ್ಡೆ, ಇವುಗಳ ಕಷಾಯದಿಂದ ಬಾಲಕನಿಗೆ ಸೇಚನೆಯನ್ನೂ; ಚಂಗಲ್‌ಕೋಷ್ಟ, ರಾಳು, ಅರಗು, (ದೇವನಾಳ), ಜಟಾಮಾಂಸಿ, ಬೋಳದರಗ ಇವುಗಳೊಡನೆ ತಯಾರಿಸಿದ ತೈಲದಿಂದ ಅಭ್ಯಂಗವನ್ನೂ ಮಾಡಿಸಿದರೆ ಹಿತಕರವು. ದಿಂಡಲು, ಧೂಪದಮರ (ಗರ್ಧಭಾಂಡವೆನ್ನುತ್ತಾರೆ) ಮತ್ತಿ ಇವುಗಳ ತೊಗಟೆಯನ್ನೂ ಧಾತಕೀ ಕುಸುಮ, ತೂಪರಚಕ್ಕೆ, ಕಾಕೋಳ್ಯಾದಿ ಗಣದ್ರವ್ಯ ಇವು ಗಳಿಂದ ತಯಾರಿಸಿದ ಘೃತವು ಪಾನಕ್ಕೆ ಯೋಗ್ಯವಾದದ್ದು (ಬಿಸಿನೀರಿನಲ್ಲಿ ಹಾಕಿಕರಗಿಸಿ ಕುಡಿಯಬೇಕು).

ಕುಳತ್ಥಾಃ ಶಙ್ಖಚೂರ್ಣಂ ಚ ಪ್ರದೇಹಾಃ ಸಾರ್ವಗನ್ಧಿಕಾಃ ।
ಗೃಧ್ರೋಲೂಕಪುರೀಷಾಣಿ ತಥಾ ಯವಫಲೋ ಘೃತಮ್ ||೬||
ಸನ್ಧ್ಯಯೋರುಭಯಂ ಕಾರ್ಯಮೇತದುದ್ಧೂಪನಂ ಶಿಶೋಃ ।
ವರುಣಾರಿಷ್ಟಕಮಯಂ ರುಚಕಂ ಸೈನ್ಧವಂ ತಥಾ ||೭||
ಸತತಂ ಧಾರಯೇಚ್ಚಾಪಿ ಕೃತಂ ವಾ ಪೌತ್ರಜೀವಿಕಮ್ ।
ಶುಕ್ಲಾಃ ಸುಮನಸೋ ಲಾಜಾಃ ಪಯಃ ಶಾಲ್ಯೋದನಂ ತಥಾ ||೮||
ಬಲಿರ್ನಿವೇದ್ಯೋ ಗೋತೀರ್ಥೇ ರೇವತ್ಯೈ ಪ್ರಯತಾತ್ಮನಾ ।

ಹುರುಳಿ, ಶಂಖದಪುಡಿ (ಸುದಗ್ಧವಾದದ್ದು) ಏಲಾದಿ ಸರ್ವಗಂಧದೊಡನೆ ಮೈಗೆ ಲೇಪಮಾಡಬೇಕು; ಹದ್ದು ಗೂಬೆಗಳ ಮಲ, ಯವಧಾನ್ಯ ಇವುಗಳ ಕಲ್ಕಕ್ಕೆ ತುಪ್ಪ

ವನ್ನು ಸೇರಿಸಿ ಪ್ರಾತಃಸಂಧ್ಯಾ ಸಾಯಂಸಂಧ್ಯಾ ಕಾಲಗಳೆರಡರಲ್ಲೂ ಮಗುವಿಗೆ ಧೂಪನ ಮಾಡಬೇಕು ; ಮಟ್ಟಮಾವು, ಬೇವು, ಲಕ್ಕಿ, ಇವುಗಳ ಕಡ್ಡಿಯ ಚೂರುಗಳ ಹಾರವನ್ನು ಸದಾ ಮಗುವಿನ ಕತ್ತಿಗೆ ತೂಗುಹಾಕಬೇಕು ; ಅಥವಾ ಪುತ್ರ ಜೀವಿ ಗಿಡದ ಕಡ್ಡಿಗಳಿಂದಲೂ ತಯಾರಿಸಿ ಕತ್ತಿಗೆ ಹಾಕಿಕೊಳ್ಳಬೇಕು. ಶುಚಿರ್ಭೂತನಾದ ವೈದ್ಯನು ಬಲಿಯ ಅನ್ನವನ್ನು ಬಾಳೆಲೆಯಮೇಲೆ ಸುರಿದು ಜಾಜಿಮೊಲ್ಲೆ ಮೊದಲಾದ ಬಿಳಿಯ ಹೂವುಗಳನ್ನೂ ಅರಳು, ಹಾಲು, ಅನ್ನ, ಇವೆಲ್ಲವನ್ನೂ ದನದ ಕೊಟ್ಟಿಗೆಯ ಹತ್ತಿರ ನಿವೇದನಮಾಡಿ ಬಲಿಹರಣ ಮಾಡಬೇಕು ; ಇದು ರೇವತೀ ಗ್ರಹದ ಚಿಕಿತ್ಸೆಯು.

ಸಙ್ಗಮೇ ಚ ಭಿಷಕ್ ಸ್ನಾನಂ ಕುರ್ಯಾದ್ಧಾತ್ರೀಕುಮಾರಯೋಃ ॥೯॥
ನಾನಾವಸ್ತ್ರಧರಾದೇವೀ ಚಿತ್ರಮಾಲ್ಯಾನುಲೇಪನಾ ।
ಚಲತ್ಕುಣ್ಡಲಿನೀ ಶ್ಯಾಮಾ ರೇವತೀ ತೇ ಪ್ರಸೀದತು ॥೧೦॥
ಉಪಾಸತೇ ಯಾಂ ಸತತಂ ದೇವ್ಯೋ ವಿವಿಧಭೂಷಣಾಃ ।
ಲಮ್ಬಾ ಕರಾಳಾ ವಿನತಾ ತಥೈವ ಬಹುಪುತ್ರಿಕಾ ॥
ರೇವತೀ ಶುಷ್ಕನಾಮಾ ಯಾ ಸಾ ತೇ ದೇವೀ ಪ್ರಸೀದತು ॥೧೧॥

ವೈದ್ಯನು ದಾದಿಗೂ ಮಗುವಿಗೂ ಎರಡು ನದಿಗಳು ಕೂಡುವ ಸ್ಥಳದಲ್ಲಿ ಸ್ನಾನ ಮಾಡಿಸಬೇಕು ; ವಿವಿಧ ವಸ್ತ್ರಗಳನ್ನೂ ವಿಚಿತ್ರ ಬಣ್ಣದ ಹೂವುಗಳನ್ನೂ ಗಂಧಗಳನೂ ಧರಿಸುವವಳೇ ಕಿವಿಯಲ್ಲಿ ಕುಂಡಲಗಳನ್ನು ನೇತಾಡಿಸುತ್ತಾ ಶಾಮಬಣ್ಣವುಳ್ಳ ರೇವತಿಯೇ ನೀನು ಬಾಲಕನಲ್ಲಿ ದಯೆಯಿಡು ; ಪ್ರಸನ್ನಳಾಗು ; ಲಂಬಾ, ಕರಾಳಾ, ವಿನತಾ, ಬಹುಪುತ್ರಿಕಾ ಎಂಬ ವಿವಿಧ ದೇವತೆಗಳೂ ಶುಷ್ಕರೇವತಿಯೂ ನಿನ್ನನ್ನೇ ಉಪಾಸನೆ ಮಾಡುತ್ತಾರೆಯಷ್ಟೆ. ಅಂತಹ ನೀನು ಪ್ರಸನ್ನಳಾಗು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರ ತನ್ತ್ರಾನ್ತರ್ಗತ ಕೌಮಾರ ಭೃತ್ಯತನ್ತ್ರೇ ರೇವತೀಪ್ರತಿಷೇಧನಾಮಕ್ಕೈಕತ್ರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ದ್ವಾತ್ರಿಂಶಂತ್ತಮೋಽಧ್ಯಾಯಃ

ಅಥಾತಃ ಪೂತನಾ ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯ ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಪೂತನಾಗ್ರಹದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಕಪೋತವಙ್ಕಾರಣುಕೋ ವರುಣಃ ಪಾರಿಭದ್ರಕಃ ।
ಆಸ್ಫೋತಾ ಚೈವ ಯೋಜ್ಯಾಃ ಸ್ಯುರ್ಬಾಲಾನಾಂ ಪರಿಷೇಚನೇ ॥೩॥
ವಚಾ ವಯಸ್ಥಾ ಗೋಲೋಮೀ ಹರಿತಾಳಂ ಮನಃಶಿಲಾ ।
ಕುಷ್ಠಂ ಸರ್ಜರಸಶ್ಚೈವ ತೈಲಾರ್ಥೇ ವರ್ಗ ಇಷ್ಯತೇ ॥೪॥

ಒಂದೆಲಗ, ಹೆಮ್ಮರದ ತೊಗಟೆ, ಮಟ್ಟಿನಾವು, ಬೇವು, ಸೊಗದೇಬೇರು, ಇವುಗಳ ಕಷಾಯದಿಂದ ಬಾಲಕನಿಗೆ ಸ್ನಾನಮಾಡಿಸಿ ಬಜೆ, ಏಲಕ್ಕಿ, ಬಿಳಿಗರಿಕೆ, ಅರಿದಳ, ಮಣಿಶಿಲೆ, ಚಂಗಲ್‌ಕೋಷ್ಟ, ರಾಳು, ಇವುಗಳೊಡನೆ ತೈಲವನ್ನು ತಯಾರಿಸಿ ಪ್ರಯೋಗಿಸಬೇಕು.

ಹಿತಂ ಘೃತಂ ತುಗಾಕ್ಷೀರ್ಯಾಂ ಸಿದ್ಧಂ ಮಧುರಕೇಷು ಚ ।
ಕುಷ್ಠತಾಳೀಸ ಖದಿರಂ ಚನ್ದನಸ್ಯನ್ದನೇ ತಥಾ ॥೫॥
ದೇವದಾರುವಚಾಹಿಙ್ಗುಕುಷ್ಠಂ ಗಿರಿಕದಮ್ಬಕಃ ।
ಏಲಾಹರೇಣವಶ್ಚಾಪಿ ಯೋಜ್ಯಾ ಉದ್ಧೂಪನೇ ಸದಾ ॥೬॥
ಗನ್ಧನಾಕುಲಿಕುಮ್ಭೀಕಾಮಜ್ಜಾನೋಬದರಸ್ಯ ಚ ।
ಕರ್ಕಟಾಸ್ಥಿಘೃತಂ ಚೈವ ಧೂಪನಂ ಸರ್ಷಪೈಃ ಸಹ ॥೭॥

ತವಕ್ಷೀರ, ಕಾಕೋಳ್ಯಾದಿಗಣದ್ರವ್ಯಗಳ ಕಲ್ಕ, ಚಂಗಲ್‌ಕೋಷ್ಠ, ತಾಳೀಸಪತ್ರೆ, ಕಗ್ಗಲಿತೊಗಟೆ, ಶ್ರೀಗಂಧ, ತಿಲ್ವಕವೃಕ್ಷದ ತೊಗಟೆ, ಇವುಗಳೊಡನೆ ತಯಾರಿಸಿದ ಘೃತವು ಪಾನನಸ್ಯಾದಿಗಳಿಗೆ ಹಿತವು. ತವಕ್ಷೀರದಕಷಾಯ ೪ ಭಾಗ, ತುಪ್ಪ ೧ ಭಾಗ, ದ್ರವ್ಯಕಲ್ಕ ೧/೪ ಭಾಗ ಮಿಶ್ರಮಾಡಿ ಘೃತವನ್ನು ತಯಾರಿಸಬೇಕು ; ದೇವದಾರು, ಬಜೆ, ಹಿಂಗು, ಚಂಗಲ್‌ಕೋಷ್ಠ, ದೊಡ್ಡ ಈಚಲುತೊಗಟೆ, ಏಲಕ್ಕಿ, ರೇಣುಕೆಯ ಬೀಜ, ಇವುಗಳ ಚೂರ್ಣವನ್ನು ಬೆಂಕಿಯಕೆಂಡದ ಮೇಲೆ, ಉದುರಿಸಿ ಬಂದ ಹೊಗೆಯನ್ನು ಬಾಲಕರಿಗೆ ತಗಲಿಸುವುದು. ಆಡುಮುಟ್ಟದಸಮೂಲ, ಜಲಕುಂಭಿ ಎಂಬ ತೃಣವಿಶೇಷ, ಎಲಚಿಪೊಪ್ಪು (ಬೀಜ), ನಳ್ಳಿಯಮೂಳೆ, ಸಾಸಿವೆ ಇವುಗಳನ್ನು ಪುಡಿಮಾಡಿ ಬೆಂಕಿಯ

ಕೆಂಡದ ಮೇಲೆ ಉದುರಿಸಿ ಶರೀರಕ್ಕೆ ಹೊಗೆತಗುಲಿಸಿದರೆ, ಪೂತನಾಗ್ರಹವು ಪರಿಹಾರ ವಾಗುತ್ತದೆ.

ಕಾಕಾದನೀಂ ಚಿತ್ರಫಲಾಂ ಬಿಮ್ಬೀಂ ಗುಞ್ಜಾಂ ಚ ಧಾರಯೇತ್ ।
ಮತ್ಸ್ಯಾದನಂ ಚ ಕುರ್ವೀತ ಕೃಶರಾ ಪಲಲಂ ತಥಾ ॥
ಶರಾವಸಂಪುಟೇ ಕೃತ್ವಾ ಬಲಿಂ ಶೂನ್ಯಗೃಹೇ ಹರೇತ್ ॥೮॥

ಕಾಗೆತೊಂಡೆ, ಹಾವುಮೆಕ್ಕೆ, ತೊಂಡೆ, ಗುಲುಗಂಜಿ, ಇವುಗಳ ಬೇರುಗಳನ್ನು ಮಗುವಿನ ಕತ್ತಿಗೆ ತೋಳಿಗೆ, ಕಟ್ಟಬೇಕು ; ಅನ್ನದೊಡನೆ ಮೀನಿನಮಾಂಸ, ಕೃಶರ, ಎಳ್ಳು ಹಿಂಡಿ ಇವನ್ನು ಮಣ್ಣಿನಶ್ರಾವೆಯಲ್ಲಿಟ್ಟು ಮತ್ತೊಂದು ಶ್ರಾವೆಯನ್ನು ಮುಚ್ಚಿ ಬರಿ ಮನೆಯಲ್ಲಿಟ್ಟು ಬಲಿಸಮರ್ಪಣೆ ಮಾಡಬೇಕು.

ಉಚ್ಛಿಷ್ಟೇನಾಭಿಷೇಕೇಣ ಶಿರಸಿ ಸ್ನಾನಮಿಷ್ಯತೇ ।
ಪೂಜ್ಯಾ ಚ ಪೂತನಾ ದೇವೀ ಬಲಿಭಿಃ ಸೋಪಹಾರಕೈಃ ॥೯॥
ಮಲಿನಾಮ್ಬರ ಸಂವೀತಾ ಮಲಿನಾ ಸೂಕ್ಷಮೂರ್ಧಜಾ ।
ಶೂನ್ಯಾಗಾರಾಶ್ರಿತಾ ದೇವೀ ದಾರಕಂ ಪಾತು ಪೂತನಾ ॥೧೦॥
ದುರ್ದರ್ಶನಾ ಸುದುರ್ಗನ್ಧಾ ಕರಾಳಾ ಮೇಘಕಾಳಿಕಾ ।
ಭಿನ್ನಾಗಾರಾಶ್ರಯಾ ದೇವೀ ದಾರಕಂ ಪಾತು ಪೂತನಾ ॥೧೧॥

ರಕ್ಷಾಮಂತ್ರವು :—ಕೊಳೆಯುಬಟ್ಟೆಯನ್ನು ಧರಿಸಿ ಕೊಳಕುದೇಹ, ಒರಟಾದ ತಲೆ ಕೂದಲುಳ್ಳ ಶೂನ್ಯವಾದ ಮನೆಯಲ್ಲಿರುವ ಪೂತನಾ ಎಂಬ ಗ್ರಹವು ಬಾಲಕನನ್ನು ಕಾಪಾಡಲಿ. ವಿಕೃತಾಕಾರದಿಂದಲೂ ದುರ್ವಾಸನೆಯಿಂದಲೂ ವಿಕೃತವಾದ ಉಬ್ಬಿದ ಹಲ್ಲುಳ್ಳ ಮೋಡದಂತೆ ಕಪ್ಪು ಶರೀರವುಳ್ಳ ಪೂತನಾ ಎಂಬ ಗ್ರಹವು ಬಾಲಕನನ್ನು ಕಾಪಾಡಲಿ ಎಂದು ಪ್ರಾರ್ಥಿಸಬೇಕು. (ಮಕ್ಕಳಬಟ್ಟೆ ಹಾಸಿಗೆ ಹೊದಿಕೆಗಳು ಸದಾ ಶುಚಿಯಾಗಿರಬೇಕು ; ಅವರ ಮುಖವನ್ನೂ ದೇಹವನ್ನೂ ಕೊಳಕಾಗದಂತೆ ತೊಳೆದು ಒರೆಸಿ ಮಡಿವಸ್ತ್ರಗಳನ್ನುಡಿಸಬೇಕು ; ಶುಚಿಯಾದ ಆವರಣವುಳ್ಳ ಮನೆಯಲ್ಲಿ ಸುವಾಸನೆಯ ಗಂಧದ್ರವ್ಯಗಳಿಂದ ಧೂಪಹಾಕಬೇಕು ; ಜನಗಳಿದ್ದು ಉಪಚರಿಸಬೇಕೆಂದರ್ಥವು).

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರ ಭೃತ್ಯತನ್ತ್ರೇ ಪೂತನಾಪ್ರತಿಷೇಧೋನಾಮಕ ದ್ವಾತ್ರಿಂಶತ್ತಮೋಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪ ನಾಮಕ ಶ್ರೀಲಕ್ಷ್ಮಿನೃಸಿಂಹಶರ್ಮ ಕೃತಕರ್ಣಾಟಕ ಭಾಷಾ ವಿವೃತಿಃ

ತ್ರಯಸ್ತ್ರಿಂಶತ್ತಮೋऽಧ್ಯಾಯಃ

ಅಥಾತೋऽನ್ಧಪೂತನಾಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಅಂಧಪೂತನಾ ಚಿಕಿತ್ಸೆಯನ್ನು ವಿವರಿಸುತ್ತೇವೆ.

ತಿಕ್ತಕದ್ರುಮಪತ್ರಾಣಾಂ ಕಾರ್ಯಃ ಕ್ವಾಥೋऽವಸೇಚನೇ ।
ಸುರಾ ಸೌವೀರಕಂ ಕುಷ್ಠಂ ಹರಿತಾಳಂ ಮನಃ ಶಿಲಾ ||೩||
ತಥಾ ಸರ್ಜರಸಶ್ಚೈವ ತೈಲಾರ್ಥಮುಪದಿಶ್ಯತೇ ।
ಪಿಪ್ಪಲ್ಯಃ ಪಿಪ್ಪಲೀಮೂಲಂ ವರ್ಗೋ ಮಧುರಕೋ ಮಧು ||೪||
ಶಾಲಿಪರ್ಣೀ ಬೃಹತ್ಯೌ ಚ ಘೃತಾರ್ಥಮುಪದಿಶ್ಯತೇ ।
ಸರ್ವಗನ್ಧೈಃ ಪ್ರದೇಹಶ್ಚ ಗಾತ್ರೇಷ್ವಕ್ಷ್ಣೋಶ್ಚ ಶೀತಲೈಃ ||೫||

ಅಂಧಪೂತನಾ ಚಿಕಿತ್ಸೆ :—ಬೇವು, ಅಮೃತವಳ್ಳಿ, ಮೊದಲಾದ ಕಹಿ ಸೊಪ್ಪುಗಳ ಕಷಾಯದಿಂದ ಬಾಲಕರಿಗೆ ಸ್ನಾನಸೇಕಗಳನ್ನು ಮಾಡಿಸಬೇಕು ; ಮದ್ಯ, ಕಲಗಚ್ಚು, ಚಂಗಲ್‌ಕೋಷ್ಠ, ಅರಿದಳ, ಮಣಶಿಲೆ, ರಾಳು, ಇವುಗಳನ್ನು ಸೇರಿಸಿ ತೈಲದಿಂದ ತಯಾರಿಸಿದ ಅಭ್ಯಂಗ ಮಾಡಿಸಬೇಕು ; ಹಿಪ್ಪಲಿ, ಮೋಡಿ, ಕಾಕೋಳ್ಯಾದಿಮಧುರಗಣ ದ್ರವ್ಯ, ಜೇನುತುಪ್ಪ, ಮೂರೆಲೆಹೊನ್ನೆ, ಹೆಗ್ಗುಳ್ಳ, ನೆಲಗುಳ್ಳ ಇವುಗಳಿಂದ ಘೃತವನ್ನು ತಯಾರಿಸಿ ಪಾನ ನಸ್ಯಾದಿಗಳಿಗೆ ಉಪಯೋಗಿಸಬೇಕು ; ಏಲಾದಿ ಗಣದ್ರವ್ಯಗಳಿಂದ ಸರ್ವಗಂಧವನ್ನು ತಯಾರಿಸಿ ಬಾಲಕನ ದೇಹಕ್ಕೆ ಲೇಪವನ್ನೂ ಶೀತಲದ್ರವ್ಯಗಳಿಂದ ಕಣ್ಣುಗಳಿಗೆ ಲೇಪವನ್ನೂ ಮಾಡಬೇಕು (ತಾವರೆ ನೈದಿಲೆ ಮೊದಲಾದ ಶೀತಲ) ದ್ರವ್ಯಗಳು.

ಪುರೀಷಂ ಕೌಕ್ಕುಟಂ ಕೇಶಾಂಶ್ಚರ್ಮ ಸರ್ಪತ್ವಚಂ ತಥಾ ।
ಜೀರ್ಣಾಂ ಚ ಭಿಕ್ಷುಸಂಘಾಟೀಂ ಧೂಪನಾಯೋಪಕಲ್ಪಯೇತ್ ||೬||

ಕೋಳಿಯಹಿಕ್ಕೆ, ತಲೆಕೂದಲು, ಕೃಷ್ಣಾಜಿನ, ಹಾವಿನಪೊರೆ, ಸನ್ಯಾಸಿಯ (ಬೌದ್ಧಭಿಕ್ಷು) ಕಾವೀಶಾಟಿಯ ಚೂರು ಇವುಗಳನ್ನು ಕೆಂಡದಮೇಲೆ ಹಾಕಿ ಬಂದ ಹೊಗೆಯನ್ನು ಮಗುವಿನ ದೇಹಕ್ಕೆ ತಗುಲಿಸಬೇಕು ;

ಕುಕ್ಕುಟೀಂ ಮರ್ಕಟೀಂ ಶಿಮ್ಬೀಮನನ್ತಾಂ ಚಾಪಿ ಧಾರಯೇತ್ ।
ಮಾಂಸಮಾಮಂ ತಥಾ ಪಕ್ವಂ ಶೋಣಿತಂ ಚ ಚತುಷ್ಪಥೇ ||೭||

ನಿವೇದ್ಯಮನ್ನಶ್ಚ ಗೃಹೇ ಶಿಶೋರಕ್ಷಾನಿಮಿತ್ತತಃ ।
ಶಿಶೋಶ್ಚ ಸ್ನಪನಂ ಕುರ್ಯಾತ್ ಸರ್ವಗನ್ಧಾದಿಕೈಃ ಶುಭೈಃ ||೮||
ಕರಾಳಾ ಪಿಙ್ಗಳಾ ಮುಣ್ಡಾ ಕಷಾಯಾಮ್ಬರವಾಸಿನೀ ।
ದೇವೀ ಬಾಲಮಿಮಂ ಪ್ರೀತಾ ಸಂರಕ್ಷತ್ವನ್ಧಪೂತನಾ ||೯||

ಅಣ್ಣೆಸೊಪ್ಪಿನತೆನೆ, (ಕೋಳಿಯ ಶರೀರದಂತೆ ವಿಚಿತ್ರಬಣ್ಣದ ಹೂವಿನಬಳ್ಳಿ ಎಂದೂ, ಸ್ಫಟಿಕದಂತಿರುವ ಕಂದವೆಂದೂ ಕೆಲವರ ಮತ) ನಸುಗುನ್ನಿಯಬೇರು, ಶೂಕ ಶಿಂಬಿ (ಅವರೆ ಗಿಡದ ಬೇರು ಎಂದು ಕೆಲವರು) ಸೊಗದೆಬೇರು ಇವುಗಳನ್ನು ಕತ್ತಿಗೆ ತೋಳಿಗೆ ಕಟ್ಟಬೇಕು. ಅಂತರ್ಗೃಹದಲ್ಲಿ ಮಗುವನ್ನು ಕೂರಿಸಿ ಅದರ ಮುಂದೆ ಆಮ ಮಾಂಸ ಪಕ್ವಮಾಂಸಗಳೊಡನೆ ರಕ್ತಮಿಶ್ರಿತ ಅನ್ನವನ್ನು ಬಡಿಸಿ ಈ ಅನ್ನವನ್ನು ಮಗು ವಿನ ಮುಖಕ್ಕೆ ನಿವಾಳಿಸಿ ನಾಲ್ಕುದಾರಿ ಕೂಡುವ ಕಡೆ ಬಲಿಹರಣ ಮಾಡಬೇಕು ; ಇದ ರಿಂದ ಮಗುವಿಗೆ ರಕ್ಷೆಯಾದಂತೆ ತಿಳಿಯಬೇಕು ; ಶುಭಕರವಾದ ಏಲಾದಿಗಣೋಕ್ತ ಸರ್ವ ಗಂಧೋದಕದಿಂದ ಮಗುವಿಗೆ ಸ್ನಾನಮಾಡಿಸಬೇಕು. ಕರಾಳದಂತವುಳ್ಳ ಹೊಂಬಣ್ಣದ ಶರೀರವುಳ್ಳ ಬೋಳತಲೆಯುಳ್ಳ ಕಾವಿ ಬಟ್ಟೆಯನ್ನುಟ್ಟಿರುವ ಅಂಧಪೂತನಾದೇವಿಯೇ ಈ ಬಲಿದಾನದಿಂದ ಸಂತುಷ್ಟಳಾಗಿ ಈ ಬಾಲಕನನ್ನು ರಕ್ಷಿಸು ಎಂದು ಪ್ರಾರ್ಥಿಸಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರ ಭೃತ್ಯತನ್ತ್ರೇನ್ಧ ಪೂತನಾ ಪ್ರತಿಷೇಧೋನಾಮ ತ್ರಯಸ್ತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪ ನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ಚತುಸ್ತ್ರಿಂಶತ್ತಮೋಽಧ್ಯಾಯಃ

ಅಥಾತಃ ಶೀತಪೂತನಾಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಶೀತಪೂತನಾ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಕಪಿತ್ಥಂ ಸುವಹಾಂ ಬಿಮ್ಬೀಂ ತಥಾ ಬಿಲ್ವಂ ಪ್ರಚೀಬಲಮ್ ।
ನನ್ದೀಂ ಭಲ್ಲಾತಕೀಂ ಚಾಪಿ ಪರಿಷೇಕೇ ಪ್ರಯೋಜಯೇತ್ ||೩||
ಬಸ್ತಮೂತ್ರಂ ಗವಾಂ ಮೂತ್ರಂ ಮುಸ್ತಂ ಚ ಸುರದಾರು ಚ ।
ಕುಷ್ಠಂ ಚ ಸರ್ವಗನ್ಧಂ ಚ ತೈಲಾರ್ಥಮವಚಾರಯೇತ್ ||೪||
ರೋಹಿಣೀ ಸರ್ಜಖದಿರಪಲಾಶಕಕುಭತ್ವಚಃ ।
ನಿಷ್ಕ್ವಾಥ್ಯ ತಸ್ಮಿನ್ನಿಷ್ಕ್ವಾಥೇ ಸಕ್ಷೀರಂ ವಿಪಚೇದ್ಘೃತಮ್ ||೫||
ಗೃಧ್ರೋಲೂಕಪುರೀಷಾಣಿ - ಬಸ್ತಗನ್ಧಾಮಹೇಸ್ತ್ವಚಃ ।
ನಿಮ್ಬಪತ್ರಾಣಿ ಮಧುಕಂ ಧೂಪನಾರ್ಥೇ ಪ್ರಯೋಜಯೇತ್ ||೬||
ಧಾರಯೇದಪಿ ಲಮ್ಬಾಂ ಚ ಗುಞ್ಜಾಂ ಕಾಕಾದನೀಂ ತಥಾ ।

ಬೇಲ, ಗಂಧನಾಕುಲಿ, (ಆಡಮುಟ್ಟದ ಬೇರು) ತೊಂಡೆಹಂಬು, ಬಿಲ್ವಪತ್ರೆಯ ಬೇರು, ಹೊನಗನ್ನೆಸೊಪ್ಪು, (ಪ್ರಾಚಿಬಲವೆಂದರೆ ಅಶ್ವಗಂಧಿಯಹಣ್ಣೆಂದು ಕೆಲವರು) ನಂದಿಮರ, ಗೇರುಬಿತ್ತ ಇವುಗಳ ಕಷಾಯದಿಂದ ಮಗುವಿಗೆ ಪರಿಷೇಚನ ಮಾಡಬೇಕು ; ಆಡಿನಮೂತ್ರ, ಹಸುವಿನಗಂಜಳ, ಕೊನ್ನಾರಿಗೆಡ್ಡೆ, ದೇವದಾರು, ಚಂಗಲ್ ಕೋಷ್ಠ, ಏಲಾದಿ ಗಣೋಕ್ತ ಸರ್ವಗಂಧಗಳನ್ನು ಸೇರಿಸಿ ತಯಾರಿಸಿದ ತೈಲವನ್ನು ಅಭ್ಯಂಗ ನಸ್ಯಗಳಿಗೆ ಪ್ರಯೋಗಿಸಬೇಕು ; ಕಟುರೋಹಿಣೀ, ಸರ್ಜವೃಕ್ಷದ ತೊಗಟೆ ಕಗ್ಗಲಿ, ಮುತ್ತುಗ, ಮತ್ತಿ ಇವುಗಳ ತೊಗಟೆಗಳ ಕಷಾಯದೊಡನೆ ಹಾಲು ನಾಲ್ಕು ಭಾಗದಷ್ಟು ತುಪ್ಪ $\frac{1}{4}$ ಭಾಗದಷ್ಟು ಸೇರಿಸಿ ತಯಾರಿಸಿದ ಘೃತವನ್ನು ಪಾನಕ್ಕೂ ನಸ್ಯಕರ್ಮಕ್ಕೂ ಉಪಯೋಗಿಸಬೇಕು ; ಹದ್ದು ಮತ್ತು ಗೂಬೆಗಳ ಹಿಕ್ಕೆ, ನಾರಂಬೇಳೆ, ಉಪ್ಪು, ಹಾವಿನಪೊರೆ, ಬೇವಿನಸೊಪ್ಪು, ಅತಿಮಧುರ, ಇವುಗಳನ್ನು ಕೆಂಡದ ಮೇಲೆ ಹಾಕಿ ಬರುವ ಹೊಗೆಯನ್ನು ಮಗುವಿನ ದೇಹಕ್ಕೆ ತಗಲಿಸಬೇಕು ; ಕಹಿಸೋರೆಯ ಬೇರು, ಗುಲಗಂಜಿಯ ಬೇರು, ಕಾಗೆತೊಂಡೆಯಬೇರು, ಇವುಗಳನ್ನು ಮಗುವಿನ ಕತ್ತಿಗೂ ತೋಳಿಗೂ ಕಟ್ಟಬೇಕು; ಹೆಸರು ಸೇರಿಸಿದ ಅಕ್ಕಿಯಿಂದ ಅನ್ನ ಮಾಡಿ (ಪೊಂಗಲು ಹುಗ್ಗಿಯನ್ನು) ನದೀದಡದಲ್ಲಿ ಶೀತಪೂತನಾಗ್ರಹಶಾಂತ್ಯರ್ಥವಾಗಿ ಬಲಿಯನ್ನು ಹಾಕಬೇಕು.

ನದ್ಯಾಂ ಮುದ್ಗಕೃತೈಶ್ಚಾನ್ನೈಸ್ತರ್ಪಯೇಚ್ಛೀತಪೂತನಾಮ್ ||೭||
ದೇವ್ಯೈ ದೇಯಶ್ಚೋಪಹಾರೋ ವಾರುಣೀ ರುಧಿರಂ ತಥಾ ।
ಜಲಾಶಯಾನ್ತೇ ಬಾಲಸ್ಯ ಸ್ನಪನಂ ಚೋಪದಿಶ್ಯತೇ ||೮||
ಮುದ್ಗೌದನಾಶನಾ ದೇವೀ ಸುರಾಶೋಣಿತಪಾಯಿನೀ ।
ಜಲಾಶಯಾಲಯಾ ದೇವೀ ಪಾತು ತ್ವಾಂ ಶೀತ ಪೂತನಾ ||೯||

ಶೀತಪೂತನಾಗ್ರಹಕ್ಕೆ ನದೀ ದಡದಲ್ಲಿ ಹೆಸರನ್ನು ಸೇರಿಸಿ ತಯಾರಿಸಿದ ಅನ್ನ ಬಲಿದಾನಮಾಡಿ ತೃಪ್ತಿಪಡಿಸಬೇಕು; ವಾರುಣಿಯೆಂಬ ಮದ್ಯವನ್ನೂ ರಕ್ತವನ್ನೂ ಕಾಣಿಕೆಯಾಗಿ ಸಮರ್ಪಿಸಬೇಕು; ನೀರಿನ ದಡದಲ್ಲಿ ಮಗುವಿಗೆ ಸ್ನಾನಮಾಡಿಸಬೇಕು; ಮುದ್ಗಾನ್ನವನ್ನು ಭೋಜನಮಾಡಿ ಮದ್ಯವನ್ನೂ ರಕ್ತವನ್ನೂ ಕುಡಿದುಕೊಂಡು ಕೆರೆ, ಭಾವಿ, ಕೊಳ, ಮೊದಲಾದ ಜಲಾಶಯಗಳಲ್ಲಿ ವಾಸಮಾಡುವ ಶೀತಪೂತನಾದೇವಿಯೇ ಮಗುವನ್ನು ಕಾಪಾಡು ಎಂದು ಪ್ರಾರ್ಥಿಸಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾರ್ಗತ ಕೌಮಾರ ಭೃತ್ಯತನ್ತ್ರೇ ಶೀತ ಪೂತನಾ ಪ್ರತಿಷೇಧನಾಮಕ ಚತುಸ್ತ್ರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ಪಞ್ಚತ್ರಿಂಶತ್ತಮೋಽಧ್ಯಾಯಃ

ಅಥಾತೋ ಮುಖಮಂಡಿಕಾಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಮುಖಮಂಡಿಕಾಗ್ರಹಚಿಕಿತ್ಸೆಯನ್ನು ವಿವರಿಸುತ್ತೇವೆ.

ಕಪಿತ್ಥಬಿಲ್ವತರ್ಕಾರೀವಾಂಶೀಗನ್ಧರ್ವಹಸ್ತಕಾಃ |
ಕುಬೇರಾಕ್ಷೀ ಚ ಯೋಜ್ಯಾಃ ಸ್ಯುರ್ಬಾಲಾನಾಂ ಪರಿಷೇಚನೇ ||೩||
ಸ್ವರಸೈರ್ಭೃಙ್ಗವೃಕ್ಷಾಣಾಂ ತಥಾ ಚ ಹರಿಗನ್ಧಯೋಃ |
ತೈಲಂ ವಸಾಂ ಚ ಸಂಯೋಜ್ಯ ಪಚೇದಭ್ಯಞ್ಜನೇ ಶಿಶೋಃ ||೪||
ಮಧೂರಿಕಾಯಾಂ ಪಯಸಿ ತುಗಾಕ್ಷೀರ್ಯಾಂ ಗಣೇ ತಥಾ |
ಮಧುರೇ ಪಞ್ಚಮೂಲೇ ಚ ಕನೀಯಸಿ ಘೃತಂ ಪಚೇತ್ ||೫||

ಬೇಲ, ಬಿಲ್ವಪತ್ರೆ, ತಗ್ಗಿ, ಬಿದುರುಪ್ಪು, ಹರಳುಬೇರು, ಬಿಳಿಯಪಾದರಿ ಇವುಗಳ ತೊಗಟೆ ಮತ್ತು ಬೇರುಗಳ ಕಷಾಯದಿಂದ ಮುಖಮಂಡಿಕಾಗ್ರಹ ಪೀಡಿತ ಬಾಲಕರಿಗೆ ಸ್ನಾನಮಾಡಿಸಬೇಕು; ವಾತಹರಗಳಾದ ಬಿಲ್ವಾದಿವೃಕ್ಷಗಳ ಸೊಪ್ಪು ಸ್ವರಸ ನಾರಂಬೇಳೆ, ಅಶ್ವಗಂಧಗಳ ಸ್ವರಸ ಇವು ೪ ಭಾಗ, ತಿಲತೈಲ ಮತ್ತು ಕೊಬ್ಬು ಇವೆರಡು ಸೇರಿ (ಯಮಕಸ್ನೇಹ ೧ ಭಾಗವನ್ನು ಸೇರಿಸಿ ತೈಲವನ್ನು ತಯಾರಿಸಿ ಮಗುವಿಗೆ ಅಭ್ಯಂಗಮಾಡಿಸಬೇಕು; ಕೊರಟಿಗೆಹಂಬು ಮತ್ತು ತವಕ್ಷೀರಗಳ ಕಲ್ಕ ೧ ಭಾಗಕ್ಕೆ ತುಪ್ಪ ೪ ಭಾಗವನ್ನು ಸೇರಿಸಿ ಕಾಕೋಳ್ಯಾದಿಮಧುರಗಣದ್ರವ್ಯ ಮತ್ತು ಲಘುಪಂಚಮೂಲಗಳ ಕಷಾಯವನ್ನು ತುಪ್ಪದ ೪ ರಷ್ಟು ಭಾಗವನ್ನು ಸೇರಿಸಿ ಘೃತವನ್ನು ತಯಾರಿಸಿ ಪಾನ ನಸ್ಯಾದಿಗಳಿಗೆ ಕೊಡಬೇಕು.

ವಚಾ ಸರ್ಜರಸಃ ಕುಷ್ಠಂ ಸರ್ಪಿಶ್ಚೋಧೂಪನೇ ಹಿತಮ್ |
ಧಾರಯೇದಪಿ ಜಿಹ್ವಾಶ್ಚ ಚಾಷ ಚೀರಲ್ಲಿಸರ್ಪಜಾಃ ||೬||
ವರ್ಣಕಂ ಚೂರ್ಣಕಂ ಮಾಲ್ಯಮಞ್ಜನಂ ಪಾರದಂ ತಥಾ |
ಮನಃಶಿಲಾಂ ಚೋಪಹರೇದ್ಗೋಷ್ಠಮಧ್ಯೇ ಬಲಿಂ ತಥಾ ||೭||
ಪಾಯಸಂ ಸಪುರೋಡಾಶಂ ಬಲ್ಯರ್ಥಮುಪಹಾರಯೇತ್ |
ಮನ್ತ್ರಪೂತಾಭಿರದ್ಭಿಶ್ಚ ತತ್ರೈವ ಸ್ನಪನಂ ಹಿತಮ್ ||೮||
ಅಲಙ್ಕೃತಾ ರೂಪವತೀ ಸುಭಗಾ ಕಾಮ ರೂಪಿಣೀ |
ಗೋಷ್ಠಮಧ್ಯಾಲಯರತಾ ಪಾತು ತ್ವಾಂ ಮುಖಮಣ್ಡಿಕಾ ||೯||

ಬಜೆ, ರಾಳು, ಚೆಂಗಲ್‌ಕೋಷ್ಠ, ತುಪ್ಪ ಇವುಗಳನ್ನು ಬೆಂಕಿಯಮೇಲೆಹಾಕಿ ಬರುವ ಹೊಗೆಯನ್ನು ಮಗುವಿನ ದೇಹಕ್ಕೆ ತಾಕುವಂತೆ ಮಾಡಬೇಕು ; ಹಸು, ಬನಹಕ್ಕಿ, ಚಿಲ್ಲಿಎಂಬಹಕ್ಕಿ, ಹಾವು ಇವುಗಳ ನಾಲಿಗೆಗಳನ್ನು ಕಿತ್ತು ಮಗುವಿನಕತ್ತಿಗೆ ತೋಳಿಗೆ ಕಟ್ಟಬೇಕು, ಕಪಿಲೆಹಿಟ್ಟು (ವರ್ಣಕಂ), ಹೂವು, ರಸಾಂಜನ (ಸೌವೀರಾಂಜನವೆಂದೂ) ಪಾದರಸ, ಮಣಶಿಲೆ, ಇವುಗಳಿಗೆ ಅಕ್ಕಿ, ಎಳ್ಳು ಇವನ್ನು ಮಿಶ್ರಮಾಡಿ ದನದ ಕೊಟ್ಟಿಗೆಯಲ್ಲಿ ಮಂಡಲಾಕಾರವಾಗಿ ಹಸೆಬರೆದು ಅಲಂಕರಿಸಿ ಹೆಸರುಬೇಳೆ ಮಿಶ್ರಮಾಡಿದ ಅನ್ನವನ್ನೂ, ಪಾಯಸವನ್ನೂ, ಹಿಟ್ಟಿನರೊಟ್ಟಿಯನ್ನೂ, ಧ್ವಜಚಕ್ರಾಕಾರವಾಗಿ ರೊಟ್ಟಿತಟ್ಟಿ ಬೆಂಕಿಯಲ್ಲಿ ಸುಟ್ಟು ಮೇಲೆ ಹೇಳಿದ ಹುಗ್ಗಿಯಸಂಗಡ ಬಲಿಯನ್ನು ಹಾಕಿ ಮಂತ್ರದಿಂದ ಅಭಿಮಂತ್ರಿಸಿ ಮಗುವಿಗೆ ಸ್ನಾನಮಾಡಿಸಿದ ನಂತರ “ ದನದ ಕೊಟ್ಟಿಗೆಯಲ್ಲಿದ್ದು ವಾಸ ಮಾಡಲು ಬಯಸುವ ಅಲಂಕೃತಳಾದ ಸುಂದರಾಕಾರವುಳ್ಳ ಶೋಭನಕರಳಾದ ಕಾಮರೂಪವುಳ್ಳ ಮುಖಮಂಡಿಕೆಯೇ ನೀನು ಮಗುವನ್ನು ಕಾಪಾಡು ” ಎಂದು ಹರಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರಭೃತ್ಯತನ್ತ್ರೇ ಶೀತಪೂತನಾಪ್ರತಿಷೇಧನಾಮಕ ಪಞ್ಚತ್ರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕಭಾಷಾವಿವೃತಿಃ

ಷಟ್‌ತ್ರಿಂಶತ್ತಮೋಧ್ಯಾಯಃ

ಅಥಾತೋ ನೈಗಮೇಷಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಕಡೆಯದಾದ ನೈಗಮೇಷಗ್ರಹದ ಪ್ರತಿಷೇಧವನ್ನು ವಿವರಿಸುತ್ತೇವೆ.

ಬಿಲ್ವಾಗ್ನಿ ಮನ್ಥಪೂತೀಕಾಃ ಕಾರ್ಯಾಃ ಸ್ಯುಃ ಪರಿಷೇಚನೇ ।
ಸುರಾಸೌವೀರಧಾನ್ಯಾಮ್ಲೈಃ ಪರಿಷೇಕಶ್ಚ ಶಸ್ಯತೇ ||೩||
ಪ್ರಿಯಙ್ಗು ಸರಳಾನನ್ತಾಶತಪುಷ್ಪಾಕುಟನ್ನಟೈಃ ।
ಪಚೇತ್ತೈಲಂ ಸಗೋಮೂತ್ರೈಃ ದಧಿಮಸ್ತ್ವಮ್ಲ ಕಾಞ್ಜಿಕೈಃ ||೪||
ಪಞ್ಚಮೂಲದ್ವಯಕ್ವಾಥೇ ಕ್ಷೀರೇ ಮಧುರಕೇಷು ಚ ।
ಪಚೇದ್ಘೃತಂ ಚ ಮೇಧಾವೀ ಖರ್ಜೂರೀಮಸ್ತಕೇಽಪಿ ಚ ||೫||

ಬಿಲ್ವಪತ್ರೆ, ತಗ್ಗಿ, ತವಸ ಇವುಗಳ ಬೇರುಗಳ ಕಷಾಯ, ಮದ್ಯದತಿಳಿ, ತುಷೋದಕ, ಹುಳಿಕಲಗಚ್ಚು ಇವುಗಳಿಂದ ನೈಗಮೇಷ (ಪಿತೃ) ಗ್ರಹಪೀಡಿತ ಮಗುವಿನ ಪರಿಷೇಚನೆ ಮಾಡಿಸಲು ಹಿತವಾಗುತ್ತದೆ. ನೆಳಲು, ಸರಳದೇವದಾರು, ಸೊಗದೇಬೇರು, ಸಬ್ಬಶಿಗೆಬೀಜ (ಪರಿಪೇಲ್ಲ ಹೆಮ್ಮರದ ತೊಗಟೆ ಎಂದು ಕೆಲವರು), ನಾಗರಮುಸ್ತೆ ಇವುಗಳ ಕಲ್ಕ ೧ ಭಾಗಕ್ಕೆ ೪ ಭಾಗ ತಿಲತೈಲವನ್ನೂ ಗೋಮೂತ್ರ, ಮೊಸರು, ಮೊಸರು ಕಟ್ಟು, ಹುಳಿಕಲಗಚ್ಚು ಇವು ಪ್ರತಿಯೊಂದೂ ತೈಲಕ್ಕೆ ಸಮಭಾಗದಂತೆಯೂ ಸೇರಿಸಿ ತೈಲಪಾಕ ವಿಧಾನದಿಂದ ತಯಾರಿಸಿ ಅಭ್ಯಂಗ ಮತ್ತು ನಸ್ಯಗಳನ್ನು ಮಾಡಿಸಬೇಕು. ದಶಮೂಲಗಳ ಕಷಾಯ ೩ ಭಾಗ, ಹಾಲು ೧ ಭಾಗ ಮತ್ತು ತುಪ್ಪ ೧ ಭಾಗ ಸೇರಿಸಿ ಕಾಕೋಳ್ಯಾದಿ ಮಧುರದ್ರವ್ಯಗಳ ಕಲ್ಕ ೧ ಭಾಗ ಖರ್ಜೂರದ ತಿರುಳು ಕಾಲುಭಾಗವನ್ನೂ ಸೇರಿಸಿ ಪಾಕಮಾಡಿದ ಘೃತವನ್ನು ಕುಡಿಸಬೇಕು.

ವಚಾಂ ವಯಸ್ಥಾಂ ಗೋಲೋಮೀಂ ಜಟಿಲಾಂ ವಾಪಿ ಧಾರಯೇತ್ ।
ಉತ್ಸಾದನಂ ಹಿತಂ ಚಾತ್ರ ಸ್ಕನ್ದಾಪಸ್ಮಾರನಾಶನಮ್ ||೬||

ಬಜೆ, ಅಮೃತವಳ್ಳಿ, ಗೆರಿಕೆ, ಜಟಾಮಾಂಸೀ ಇವನ್ನು ಮಗುವಿನ ಕತ್ತಿಗೂ ತೋಳಿಗೂ ಕಟ್ಟಬೇಕು ಮತ್ತು ಇವುಗಳ ಚೂರ್ಣವನ್ನು ಮೈಗೆ ಹಚ್ಚಬೇಕು.

ಸಿದ್ಧಾರ್ಥಕ ವಚಾಹಿಙ್ಗುಕುಷ್ಠಂ ಚೈವಾಕ್ಷತೈಃ ಸಹ ।
ಭಲ್ಲಾತಕಾಜಮೋದಾಶ್ಚ ಹಿತಮುದ್ಧೂಪನಂ ಶಿಶೋಃ ||೭||

ಮರ್ಕಟೋಲೂಕಗೃಧ್ರಾಣಾಂ ಪುರೀಷಾಣಿ ನವಗ್ರಹೇ ।
ಧೂಪಃ ಸಂಪ್ತೇ ಜನೇ ಕಾರ್ಯೋ ಬಾಲಸ್ಯಹಿತಮಿಚ್ಛತಾ ||೮||

ಬಿಳಿಯಸಾಸಿವೆ, ಬಜೆ, ಹಿಂಗು, ಚಂಗಲ್‌ಕೋಷ್ಠ, ಯವಧಾನ್ಯ, ಗೇರುಬೀಜ ಓಮು ಇವೆಲ್ಲವನ್ನೂ ಬೆಂಕಿಯ ಕೆಂಡದ ಮೇಲೆ ಉದುರಿಸಿ ಬರುವ ಹೊಗೆಯನ್ನು ಮಗುವಿನ ಶರೀರಕ್ಕೆ ತಗಲುವಂತೆ ಮಾಡಿದರೆ ಹಿತವಾಗುತ್ತದೆ. ನವಗ್ರಹಪೀಡಿತವಾದ ಮಂಗುವಿಗೆ ಒಳ್ಳೆಯದಾಗಲೆಂದು ಬಯಸತಕ್ಕವರು ಕಪಿ, ಗೂಬೆ, ಹದ್ದು ಇವುಗಳ ಮಲವನ್ನು ತಂದು ಊರಿನ ಜನರೆಲ್ಲಾ ಮಲಗಿ ನಿದ್ರಿಸುತ್ತಿರುವಾಗ ಮಧ್ಯ ರಾತ್ರಿಯಲ್ಲಿ ನಿಶ್ಯಬ್ದವಾಗಿರುವಾಗ ಧೂಪಹಾಕಿ (ಧೂಪದ್ರವ್ಯಗಳೊಡನೆ ಮಿಶ್ರಮಾಡಿ ಬೆಂಕಿಯ ಕೆಂಡದ ಮೇಲೆ ಉದುರಿಸಿ) ಬರುವ ಹೊಗೆಯು ಮಗುವಿನ ದೇಹಕ್ಕೆ ತಗಲುವಂತೆ ಮಾಡಿದರೆ ಹಿತವಾಗುತ್ತದೆ.

ತಿಲತಣ್ಡುಲಕಂ ಮಾಲ್ಯಂ ಭಕ್ಷ್ಯಾಂಶ್ಚ ವಿವಿಧಾನಪಿ ।
ಕುಮಾರಪಿತೃಮೇಷಾಯ ವೃಕ್ಷಮೂಲೇ ನಿವೇದಯೇತ್ ||೯||
ಅಧಸ್ತಾದ್ವಟವೃಕ್ಷಸ್ಯ ಸ್ನಪನಂ ಚೋಪದಿಶ್ಯತೇ ।
ಬಲಿಂ ನ್ಯಗ್ರೋಧವೃಕ್ಷೇಷು ತಿಥೌ ಷಷ್ಠ್ಯಾಂ ನಿವೇದಯೇತ್ ||೧೦||
ಅಜಾನನಶ್ಚಲಾಕ್ಷಿಭ್ರೂಃ ಕಾಮರೂಪೀ ಮಹಾಯಶಾಃ ।
ಬಾಲಂ ಪಾಲಯಿತಾ ದೇವೋ ನೈಗಮೇಷೋಽಭಿರಕ್ಷತು ||೧೧||

ಆಲ, ಅರಳಿ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಬುಡದಲ್ಲಿ ಮಕ್ಕಳನ್ನು ರಕ್ಷಿಸುವ ಕಾರಣ ಮಕ್ಕಳ ತಂದೆಯಾದ ನೈಗಮೇಷಗ್ರಹದ ತೃಪ್ತಿಗಾಗಿ ಸ್ವಸ್ತಿಕಗಳು ಮೋದಕ ಮೊದಲಾದ ಭಕ್ಷ್ಯಗಳೂ, ತಿಲಾಕ್ಷತೆ, ಹೂವಿನ ಹಾರಗಳು, ಇವೆಲ್ಲವನ್ನೂ ಬಡಿಸಿ ಬಲಿ ಹಾಕಬೇಕು. ಆಲದಮರದ ಕೆಳಗಡೆಯಲ್ಲಿ ಷಷ್ಠಿಯದಿನ ಗಾಯತ್ರೀ ಮಂತ್ರದಿಂದ ಅಭಿಮಂತ್ರಿಸಿದ ನೀರಿನಿಂದ ಮಗುವಿಗೆ ಸ್ನಾನಮಾಡಿಸಿ ಆ ಮರದ ಬುಡದಲ್ಲಿಯೇ ಬಲಿಯನ್ನು ಹಾಕಿಸಬೇಕು. ಅಜದಂತೆ ಮುಖವುಳ್ಳ, ಸದಾ ಕಣ್ಣುಗಳನ್ನೂ ಹುಬ್ಬುಗಳನ್ನೂ ಹಾರಿಸುತ್ತಾ ಕಾಮರೂಪಿಯಾದ ಮಹಾಯಶಸ್ಸುಳ್ಳ ನೈಗಮೇಗ್ರಹದೇವನೇ ಮಕ್ಕಳನ್ನು ರಕ್ಷಿಸುವವನೇ ಈ ಮಗುವನ್ನು ಈ ಮಹಾಸಂಕಟದಿಂದ ಬಿಡುಗಡೆಮಾಡಿ ಕಾಪಾಡು ಎಂದು ಪ್ರಾರ್ಥಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರಭೃತ್ಯತನ್ತ್ರೇ ನೈಗಮೇಷಪ್ರತಿಷೇಧನಾಮಕ ಷಟ್‌ತ್ರಿಂಶತ್ತಮೋಽಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಸಪ್ತತ್ರಿಂಶತ್ತಮೋಽಧ್ಯಾಯಃ

ಅಥಾತೋ ಗ್ರಹೋತ್ಪತ್ತಿಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ಕಂದಾದಿ ನವಗ್ರಹಗಳು ಭೂಲೋಕದಲ್ಲುಂಟಾಗುವುದಕ್ಕೆ ಕಾರಣವನ್ನು ವಿವರಿಸುತ್ತೇವೆ. ಈ ಗ್ರಹಗಳು ಷಣ್ಮುಖನಿಗೆ ಆಟಕ್ಕಾಗಿ ನಿಯಮಿಸಲ್ಪಟ್ಟವಾದ ಕಾರಣ ಹೊಸದಾಗಿ ನಿರ್ಮಿತಗಳಲ್ಲವೆಂದು ತಿಳಿಯಬೇಕು.

ನವಸ್ಕನ್ದಾದಯಃ ಪ್ರೋಕ್ತಾ ಬಾಲಾನಂ ಯ ಇಮೇ ಗ್ರಹಾಃ ।
ಶ್ರೀಮನ್ತೋ ದಿವ್ಯ ವಪುಷೋ ನಾರೀಪುರುಷವಿಗ್ರಹಾಃ ||೩||

ಸ್ಕಂದಾದಿ ಈ ೯ ಗ್ರಹಗಳೂ ಬಾಲಕರನ್ನು ಪೀಡಿಸುತ್ತವೆಂದು ಹೇಳಿದೆಯಷ್ಟೆ, ಇವು ಕಾಂತಿಯುಕ್ತಗಳಾದ ದೇವತಾಯೋಗ್ಯ ಶರೀರಗಳನ್ನು ಧರಿಸಿರುವ ಸ್ತ್ರೀಪುರುಷರ ಆಕಾರವುಳ್ಳವೆಂದು ತಿಳಿಯಬೇಕು ; ಅವುಗಳಲ್ಲಿ ಸ್ಕಂದ ಸ್ಕಂದಾಪಸ್ಮಾರ ನೈಗಮೇಷ ಗಳೆಂಬ ೩ ಪುರುಷ ಶರೀರವುಳ್ಳವು. ಉಳಿದ ಶಕುನೀ, ರೇವತೀ, ಪೂತನಾ, ಅಂಧಪೂತನಾ, ಶೀತಪೂತನಾ, ಮುಖಮಂಡಿಕಾ ಎಂಬ ೬ ಗ್ರಹಗಳೂ ಸ್ತ್ರೀಶರೀರವುಳ್ಳವು.

ಏತೇ ಗುಹಸ್ಯ ರಕ್ಷಾರ್ಥಂ ಕೃತ್ತಿಕೋಮಾಗ್ನಿಶೂಲಿಭಿಃ ।
ಸೃಷ್ಟಾಃ ಶರವನಸ್ಥಸ್ಯ ರಕ್ಷಿತಸ್ಯಾತ್ಮತೇಜಸಾ ||೪||

ತನ್ನ ಸ್ವಂತಪ್ರಭಾವದಿಂದಲೇ ತನ್ನನ್ನು ಕಾಪಾಡಿಕೊಳ್ಳಬಲ್ಲ ಕೃತ್ತಿಕಾನಕ್ಷತ್ರಗಳು ೬ ಪಾರ್ವತಿ, ಅಗ್ನಿ, ಪರಮೇಶ್ವರರ ಅಪ್ಪಣೆಯಂತೆ ಷಣ್ಮುಖನ ರಕ್ಷಣೆಗಾಗಿ ನವಗ್ರಹಗಳು ಕಳುಹಿಸಲ್ಪಟ್ಟರು. ಇಂದ್ರನು ಪರಾಕ್ರಮಶಾಲಿಯಾದರೂ ದೇವತೆಗಳಿಗೆ ಪ್ರಭುವಾದ ಕಾರಣ ಇತರ ದೇವತೆಗಳು ಅವನ ಅಂಗರಕ್ಷಣೆಗಾಗಿ ನಿಯೋಜಿತರಾಗಿರುವಂತೆಯೇ ಗುಹ ಷಣ್ಮುಖನಿಗೂ ಈ ಗ್ರಹಗಳು ರಕ್ಷಕರಾಗಿ ನಿಯೋಗಿಸಲ್ಪಟ್ಟರು.

ಸ್ತ್ರೀವಿಗ್ರಹಾ ಗ್ರಹಾ ಯೇ ತು ನಾನಾರೂಪಾ ಮಯೇರಿತಾಃ ।
ಗಂಗೋಮಾಕೃತ್ತಿಕಾನಾಂ ತೇ ಭಾಗಾ ರಾಜಸ ತಾಮಸಾಃ ||೫||
ನೈಗಮೇಯಸ್ತು ಪಾರ್ವತ್ಯಾ ಸೃಷ್ಟೋ ಮೇಷಾನನೋ ಗ್ರಹಃ ।
ಕುಮಾರಧಾರೀ ದೇವಸ್ಯ ಗುಹಸ್ಯಾತ್ಮಸಮಃ ಸಖಾ ||೬||
ಸ್ಕನ್ದಾಪಸ್ಮಾರಸಂಜ್ಞೋ ಯಃ ಸೋಽಗ್ನಿನಾಗ್ನಿಸಮದ್ಯುತಿಃ ।
ಸ ಚ ಸ್ಕನ್ದಸಖಾ ನಾಮ ವಿಶಾಖ ಇತಿ ಚೋಚ್ಯತೇ ||೭||

ಧನ್ವಂತರಿಯಾದ ನಾನು ನಾನಾ ರೂಪವುಳ್ಳ ಸ್ತ್ರೀ ಶರೀರ ಧಾರಣೆ ಮಾಡಿರುವ ಗ್ರಹಗಳನ್ನು ಹಿಂದೆ ಹೇಳಿರುತ್ತೇನಷ್ಟೆ, ಅವುಗಳನ್ನು ಗಂಗೆ ಪಾರ್ವತಿ ಕೃತ್ತಿಕೆಗಳ ರಾಜಸ ತಾಮಸಾಂಶಗಳಿಂದು ತಿಳಿಯಬೇಕು. ಮೇಷದ (ಟಗರಿನ) ಮುಖದಂತಿರುವ ನೈಗನು ಗ್ರಹವನ್ನು ಪಾರ್ವತಿಯು ಸೃಜಿಸಿದಳು (ಮಕ್ಕಳಿಗೆ ಕೌತುಕವನ್ನುಂಟು ಮಾಡುವುದಕ್ಕಾಗಿ ಮುಖದ ಆಕಾರವನ್ನು ಬದಲಾಯಿಸಲಾಗಿದೆ) ಗುಹನನ್ನು ಎಚ್ಚರಿಕೆಯಿಂದ ಪಾಲಿಸತಕ್ಕವನು ; ಆದಕಾರಣ ಗುಹನಿಗೆ ಅವನು ಏಕದೇಹಾಭಿಮಾನವುಳ್ಳವನಾದನು (ತನ ದೇಹಕ್ಕೂ ಅವನ ದೇಹಕ್ಕೂ ಯಾವ ಭೇದವೂ ಇಲ್ಲವೆಂಬ ಜ್ಞಾನವುಂಟಾಗಿತ್ತು. (ಅಂದರೆ ಪರಮಮಿತ್ರನಾದನು) ಅಗ್ನಿಯಂತೆ ಪ್ರಜ್ವಲಿಸುವ ಮುಖವುಳ್ಳ ಅಗ್ನಿಗೆ ಸಮಾನ ಕಾಂತಿಯುಳ್ಳ ಸ್ಕಂದಾಪಸ್ಮಾರವೆಂಬ ಗ್ರಹಕ್ಕೆ ಸ್ಕಂದಸಖನಾದ ವಿಶಾಖನೆಂದೂ ಹೇಳುತ್ತಾರೆ.

ಸ್ಕನ್ದಃ ಸೃಷ್ಟೋ ಭಗವತಾ ದೇವೇನ ತ್ರಿಪುರಾರಿಣಾ ।
ಬಿಭರ್ತಿ ಚಾಪರಾಂ ಸಂಜ್ಞಾಂ ಕುಮಾರ ಇತಿ ಸ ಗ್ರಹಃ ॥೮॥

ಮಹಾಮಹಿಮನಾದ ಅಣಿಮಾದ್ಯಷ್ಟೈಶ್ವರ್ಯ ಸಂಪನ್ನನಾದ ತ್ರಿಪುರನೆಂಬ ರಾಕ್ಷಸನನ್ನು ಕೊಂದ ಪರಮೇಶ್ವರನೇ ಈ ಸ್ಕಂದನನ್ನು ನಿರ್ಮಿಸಿದ ಕಾರಣ ಈ ಗ್ರಹಕ್ಕೆ "ಕುಮಾರ" ಎಂಬ ಬೇರೆ ಹೆಸರೂ ಇದೆ.

ಬಾಲಲೀಲಾಧರೋ ಯೋऽಯಂ ದೇವೋ ರುದ್ರಾಗ್ನಿಸಮ್ಭವಃ ।
ಮಿಥ್ಯಾಚಾರೇಷು ಭಗವಾನ್ ಸ್ವಯಂ ನೈಷ ಪ್ರವರ್ತತೇ ॥೯॥
ಕುಮಾರಃ ಸ್ಕನ್ದಸಾಮಾನ್ಯಾದತ್ರ ಕೇಚಿದಪಣ್ಡಿತಾಃ ।
ಗೃಹ್ಣಾತೀತ್ಯಲ್ಪವಿಜ್ಞಾನಾ ಬ್ರುವತೇ ದೇಹಚಿನ್ತಕಾಃ ॥೧೦॥

ಪರಮೇಶ್ವರನ ಮತ್ತು ಅಗ್ನಿಯ ತೇಜಸ್ಸಿನಿಂದ ಉತ್ಪನ್ನನಾದ ಬಾಲಲೀಲಾಧರನಾದ ಅಂದರೆ ಬಾಲ್ಯಾವಸ್ಥೆಯಲ್ಲಿ ಬಾಲಕರ ಹಾಗೆಯೇ ಹಸ್ತಪಾದಗಳನ್ನು ಕುಣಿಸುವುದು ಇತ್ಯಾದಿ ಅಂಗಚೇಷ್ಟೆಗಳನ್ನು ಮಾಡುತ್ತಿದ್ದ ಶ್ರೀ ಷಣ್ಮುಖ ಸ್ವಾಮಿಯು ಮಿಥ್ಯಾಚಾರಿಗಳಾದ ಬಾಲಕರನ್ನು ಆಕ್ರಮಿಸಿ ಪೀಡಿಸುವುದಿಲ್ಲ. ಆದರೆ ಅವನ ಅನುಚರರಾದ ಈ ಗ್ರಹಗಳು ಪೀಡಿಸುತ್ತವೆ. ಕುಮಾರಸ್ವಾಮಿಗೂ ಸ್ಕಂದಗ್ರಹಕ್ಕೂ "ಸ್ಕಂದ" ಪದ ಸಾಮಾನ್ಯವಾಗಿರುವುದರಿಂದ ಕೆಲವು ಅವಿವೇಕಿ ಜನರು ಷಣ್ಮುಖನೂ ಮಕ್ಕಳನ್ನು ಆಕ್ರಮಿಸಿ ಪೀಡಿಸುತ್ತಾನೆಂದೇ ಹೇಳುತ್ತಾರೆ. ಅದು ಸರಿಯಲ್ಲ.

ತತೋ ಭಗವತಿ ಸ್ಕನ್ದೇ ಸುರಸೇನಾಪತೌ ಕೃತೇ ।
ಉಪತಸ್ಥುರ್ಗ್ರಹಾಃ ಸರ್ವೇ ದೀಪ್ತಶಕ್ತಿಧರಂ ಗುಹಮ್ ॥೧೧॥
ಊಚುಃ ಪ್ರಾಞ್ಜಲಯಶ್ಚೈನಂ ವೃತ್ತಿಂ ನಃ ಸಂವಿಧತ್ಸ್ವ ವೈ ।
ತೇಷಾಮರ್ಥೇ ತತಃ ಸ್ಕನ್ದಃ ಶಿವಂ ದೇವಮಚೋದಯತ್ ॥೧೨॥
ತತೋ ಗ್ರಹಾಂಸ್ತಾನುವಾಚ ಭಗವಾನ್ ಭಗನೇತ್ರಹೃತ್ ।
ತಿರ್ಯಗ್ಯೋನಿಂ ಮಾನುಷಂ ಚ ದೈವಂ ಚ ತ್ರಿತಯಂ ಜಗತ್ ॥೧೩॥

ಪರಸ್ಪರೋಪಕಾರೇಣ ವರ್ತತೇ ಧಾರ್ಯತೇऽಪಿ ಚ ।
ದೇವಾ ಮನುಷ್ಯಾನ್ ಪ್ರೀಣನ್ತಿ ತೈರ್ಯಗ್ಯೋನೀಂಸ್ತಥೈವಚ ॥೧೪॥
ವರ್ತಮಾನೈರ್ಯಥಾ ಕಾಲಂ ಶೀತವರ್ಷೋಷ್ಣಮಾರುತೈಃ ।
ಇಜ್ಯಾಞ್ಜಲಿನಮಸ್ಕಾರಜಪಹೋಮವ್ರತಾದಿಭಿಃ ॥೧೫॥
ನರಾಃ ಸಮ್ಯಕ್ ಪ್ರಯುಕ್ತೈಶ್ಚ ಪ್ರೀಣನ್ತಿ ತ್ರಿದಿವೇಶ್ವರಾನ್ ।
ಭಾಗಧೇಯಂ ವಿಭಕ್ತಂ ಚ ಶೇಷಂ ಕಿಞ್ಚಿನ್ನವಿದ್ಯತೇ ॥೧೬॥
ತದ್ಯುಷ್ಮಾಕಂ ಶುಭಾ ವೃತ್ತಿರ್ಬಾಲೇಷ್ವೇವ ಭವಿಷ್ಯತಿ ।
ಕುಲೇಷು ಯೇಷು ನೇಜ್ಯನ್ತೇ ದೇವಾಃ ಪಿತರ ಏವ ಚ ॥೧೭॥
ಬ್ರಾಹ್ಮಣಾಃ ಸಾಧವಶ್ಚೈವ ಗುರವೋऽತಿಥಯಸ್ತಥಾ ।
ನಿವೃತ್ತಾಚಾರಶೌಚೇಷು ಪರಪಾಕೋಪಭೋಜಿಷು ॥೧೮॥
ಉಚ್ಛನ್ನಬಲಿಭಿಕ್ಷೇಷು ಭಿನ್ನಕಾಂಸ್ಯೋಪಭೋಜಿಷು ।
ಗೃಹೇಷು ತೇಷು ಯೇ ಬಾಲಾಸ್ತಾನ್ ಗೃಹ್ಣೀಧ್ವಮಶಙ್ಕಿತಾಃ ॥೧೯॥
ತತ್ರ ವೋ ವಿಪುಲಾ ವೃತ್ತಿಃ ಪೂಜಾ ಚೈವ ಭವಿಷ್ಯತಿ
ಏವಂ ಗ್ರಹಾಸ್ಸಮುತ್ಪನ್ನಾ ಬಾಲಾನ್ ಗೃಹ್ಣನ್ತಿ ಚಾಪ್ಯತಃ ॥೨೦॥
ಗ್ರಹೋಪಸೃಷ್ಟಾ ಬಾಲಾಸ್ತು ದುಶ್ಚಿಕಿತ್ಸ್ಯತಮಾ ಮತಾಃ

ಅಷ್ಟೈಶ್ವರ್ಯಯುಕ್ತನಾದ ಗುಹನನ್ನು ದೇವಸೇನಾಧಿಪತಿಯನ್ನಾಗಿ ಮಾಡಿದ ಮೇಲೆ ಗ್ರಹಗಳೆಲ್ಲಾ ಒಟ್ಟಿಗೆಕೂಡಿ ಪ್ರಕಾಶವಂತನಾದ (ಅತಿತೇಜಸ್ವಿಯಾದ) ಗುಹನ ಬಳಿಯಲ್ಲಿ ಅಂಜಲಿಬದ್ಧರಾಗಿ ನಿಂತು ತಮ್ಮೆಲ್ಲರಿಗೂ ಜೀವಿಕೆಯನ್ನು ಕಲ್ಪಿಸಬೇಕು ಎಂದು ಪ್ರಾರ್ಥಿಸಲು ಗುಹನು ಪರಮೇಶ್ವರನನ್ನು ನಮಿಸಿ ಅವರೆಲ್ಲರಿಗೂ ತಕ್ಕ ಜೀವಿಕೆಯನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಲು ಆಗ ಪರಮಶಿವನು ಆ ಗ್ರಹಗಳನ್ನುದ್ದೇಶಿಸಿ ಈ ರೀತಿಯಾಗಿ ಹೇಳಿದನು—ಪಶುಪಕ್ಷ್ಯಾದಿ ತಿರ್ಯಗ್ಜಂತುಗಳು ಮನುಷ್ಯರಿಗೆ ವಾಹನ ರೂಪದಿಂದಲೂ ಮನುಷ್ಯರು ಅವುಗಳಿಗೆ ಉದ್ದು, ಹುರುಳಿ, ಹುಲ್ಲು ಮೊದಲಾದ ಆಹಾರ ಪದಾರ್ಥಗಳನ್ನು ಕೊಟ್ಟು ಪೋಷಿಸುವುದರಿಂದಲೂ ಪರಸ್ಪರ ಉಪಕಾರ ಮಾಡುತ್ತಾ ಜೀವಿಸುತ್ತಾರೆ. ದೇವತೆಗಳು ಕಾಲಕಾಲಕ್ಕೆ ಸರಿಯಾಗಿ ಶೀತ, ಉಷ್ಣ, ಮಳೆಗಳನ್ನು ಒದಗಿಸಿ ಮನುಷ್ಯರಿಗೂ ತಿರ್ಯಗ್ಜಂತುಗಳಿಗೂ ಉಪಕಾರ ಮಾಡುತ್ತಾರೆ. ಮನುಷ್ಯರು ಯಜ್ಞ, ಕೈ ಮುಗಿಯುವುದು, ನಮಸ್ಕರಿಸುವುದು, ಓಂಕಾರಪೂರ್ವಕವಾಗಿ ಗಾಯತ್ರೀ ಜಪಗಳನ್ನು ಪುನಶ್ಚರಣೆಮಾಡುವುದು, ಲಕ್ಷಸಂಖ್ಯೆಗಳಿಂದ ಅಗ್ನಿಗೆ ಆಹುತಿಗಳಿಂದ ಹೋಮ ಮಾಡುವುದು, ವ್ರತಗಳನ್ನು ಆಚರಿಸುವುದು ವೇದಗಳನ್ನು ಅಧ್ಯಯನ ಮಾಡುವುದು ಇತ್ಯಾದಿ ರೀತಿಯಿಂದ ದೇವತೆಗಳಿಗೆ ತೃಪ್ತಿಯನ್ನುಂಟುಮಾಡುತ್ತಾರೆ. ಇದೇ ರೀತಿಯಾಗಿ ತಿರ್ಯಗ್ಜಂತುಗಳೂ, ಮನುಷ್ಯರೂ, ದೇವತೆಗಳೂ ಪರಸ್ಪರೋಪಕಾರ ಮಾಡಿಕೊಂಡು ಜೀವಿಸುತ್ತಾರಷ್ಟೆ. ಬಾಲಕನಾದ ಗುಹನನ್ನು ರಕ್ಷಿಸುವುದಕ್ಕಾಗಿ ನಿಯೋಗಿಸಲ್ಪಟ್ಟ ಗ್ರಹರೂಪಿಗಳಾದ ನಿಮಗೆ ಪ್ರಪಂಚದಲ್ಲಿ ಯಾವುದೂ ಜೀವಿಕೆಗಾಗಿ ಉಳಿದಿರುವುದಿಲ್ಲ

ವಾಗಿ ನಿಮಗೆ ಬಾಲಕರಿಂದಲೇ ಗ್ರಹಗಳಿಗೆ ಜೀವಿಕೆಯನ್ನುಂಟುಮಾಡಿದರೆ ಪರಮೇಶ್ವರನಿಗೂ ದೋಷ ಸಂಭವಿಸುತ್ತೆಂದು ಶಂಕೆಯುಂಟಾದರೆ ಅದನ್ನು ಪರಿಹರಿಸುವುದಕ್ಕಾಗಿಯೇ ಈ ಕೆಳಗೆ ಹೇಳುವ ಜನರ ಮನೆಯಲ್ಲಿ ಹುಟ್ಟಿರುವ ಬಾಲಕರಿಂದ ನಿಮಗೆ ಜೀವಿಕೆಯುಂಟಾಗಲೆಂದು ವಿವರಿಸಿರುತ್ತಾರೆ. ಯಾರ ಮನೆಯಲ್ಲಿ ದೇವತೆಗಳೂ, ಪಿತೃಗಳೂ, ಬ್ರಾಹ್ಮಣರೂ, ಸಾಧುಗಳೂ, ಗುರುಗಳೂ, ಅತಿಥಿಗಳೂ ಪೂಜಿಸಲ್ಪಡುವುದಿಲ್ಲವೋ, ಅಶುಚಿಯಾದ ಆಹಾರವನ್ನು ಭೋಜನಮಾಡುವ ಆಚಾರಹೀನರಾದ ಪರರ ಆಹಾರವನ್ನು ತಿಂದು ಜೀವಿಸುವ, ಬಲಿಹರಣವನ್ನೂ ಭಿಕ್ಷದಾನವನ್ನೂ ಮಾಡದಿರುವವರ, ಒಡೆದು ಹೋದ ಕಂಚಿನ ಪಾತ್ರೆಯಲ್ಲಿ ಅನ್ನವನ್ನು ಹಾಕಿಕೊಂಡು ಭೋಜನಮಾಡುವವರ ಮನೆಯಲ್ಲಿರುವ ಮಕ್ಕಳನ್ನು ನಿಶ್ಶಂಕೆಯಿಂದ ಆಕ್ರಮಿಸಿ ಪೀಡಿಸಿರುವುದರಿಂದ ನಿಮಗೆ ಅಧಿಕವಾಗಿ ಜೀವಿಕೆಯೂ ಪೂಜೆಯೂ ಉಂಟಾಗುತ್ತದೆ. ಈ ರೀತಿಯಾಗಿ ಗ್ರಹಗಳುಂಟಾಗಲು ಕಾರಣವನ್ನೂ ಮಕ್ಕಳನ್ನು ಪೀಡಿಸುವುದರಿಂದ ಪೂಜೆಯೂ ಬಲಿದಾನಗಳಿಂದ ಜೀವನವೂ ಉಂಟಾಗುತ್ತೆಂದು ವಿವರಿಸಲಾಯಿತು. ಗ್ರಹಪೀಡಿತರಾದ ಬಾಲಕರಿಗೆ ಚಿಕಿತ್ಸೆಮಾಡಿ ಗುಣಪಡಿಸುವುದು ಅತ್ಯಂತ ಕಷ್ಟತಮವಾದದ್ದು. ಇದರಿಂದ ತಿಳಿಯಬರುವುದೇನೆಂದರೆ— ಅಶುಚಿಯಾದ ಆಹಾರ, ಅಶುದ್ಧವಾದ ವಾತಾವರಣ, ಮಲಿನವಸ್ತ್ರಾದಿಧಾರಣ, ಕೊಳಕು ಪ್ರದೇಶದಲ್ಲಿ ಕೂಡುವುದು, ಮಲಗುವುದು ಇತ್ಯಾದಿ ಕಾರಣಗಳಿಂದ ಮಕ್ಕಳ ದೇಹದಲ್ಲಿ ವಾತಾದಿದೋಷಗಳು ಪ್ರಕೋಪಗೊಂಡು ಬಾಧೆಯುಂಟಾಗುತ್ತದೆಂದು ತಿಳಿಯಬೇಕು.

ವೈಕಲ್ಯಂ ಮರಣಂ ಚಾಶು ಧ್ರುವಂ ಸ್ಕನ್ದಗ್ರಹೇ ಮತಮ್ ॥೨೧॥
ಸ್ಕನ್ದಗ್ರಹೋಽತ್ಯುಗ್ರತಮಃ ಸರ್ವೇಷ್ವೇವ ಯತಃ ಸ್ಮೃತಃ ।
ಅನ್ಯೋ ವಾ ಸರ್ವರೂಪಸ್ತು ನ ಸಾಧ್ಯೋ ಗ್ರಹ ಉಚ್ಯತೇ ॥೨೨॥

ಸ್ಕಂದಗ್ರಹದಿಂದ ಪೀಡಿತರಾದ ಮಕ್ಕಳಿಗೆ ಅಂಗವಿಕಾರ ಅಥವಾ ಮರಣವುಂಟಾಗುವುದು ಖಂಡಿತವಾದುದು ಒಂಬತ್ತು ಗ್ರಹಗಳಲ್ಲಿ ಸ್ಕಂದಗ್ರಹವೇ ಅತ್ಯಂತ ಭಯಂಕರವಾದುದೆಂದು ಪ್ರಸಿದ್ಧಿಯಾಗಿದೆ; ಸ್ಕಂದಾಪಸ್ಮಾರಾದಿ ಇತರ ಗ್ರಹಗಳೂ ಸಕಲ ಲಕ್ಷಣಗಳಿಂದ ಕೂಡಿದ್ದರೆ ಅಸಾಧ್ಯಗಳಾಗುತ್ತವೆ.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರ ಭೃತ್ಯತನ್ತ್ರೇ ಗ್ರಹೋತ್ಪತ್ತಿನಾಮಕ ಸಪ್ತತ್ರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ಅಷ್ಟತ್ರಿಂಶತ್ತಮೋಽಧ್ಯಾಯಃ

ಅಥಾತೋ ಯೋನಿವ್ಯಾಪತ್ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಯೋನಿವ್ಯಾಪತ್ತಿನ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ:—ಗ್ರಹೋತ್ಪತ್ತಿ ಅಧ್ಯಾಯದಲ್ಲಿ ತಿರ್ಯಗ್ಯೋನಿ ಮಾನುಷ ಮೊದಲಾದವರ ಯೋನಿಪದವು ಪ್ರಯೋಗಿಸಲ್ಪಟ್ಟಿರುತ್ತದೆ. ಮಕ್ಕಳ ಜನನದಿಂದ ಯೋನಿಗೆ ವಿಪತ್ತುಂಟಾಗುವ ಕಾರಣ ಅದನ್ನು ನಿವಾರಣೆಮಾಡುವುದಕ್ಕಾಗಿ ಉಪಾಯಗಳನ್ನು ತಿಳಿಸುತ್ತೇವೆ.

ಪ್ರವೃದ್ಧಲಿಙ್ಗಂ ಪುರುಷಂ ಯಾತ್ಯರ್ಥಮುಪಸೇವತೇ।
ರೂಕ್ಷದುರ್ಬಲಬಾಲಾಯಾಸ್ತಸ್ಯಾ ವಾಯುಃ ಪ್ರಕುಪ್ಯತಿ ||೩||
ಸ ದುಷ್ಟೋ ಯೋನಿಮಾಸಾದ್ಯ ಯೋನಿರೋಗಾಯ ಕಲ್ಪತೇ ।

ದಪ್ಪವಾಗಿ ಉದ್ದವಾಗಿರುವ ಶಿಶ್ನವುಳ್ಳ ತುಂಬಾ ಪುಷ್ಟನಾಗಿರುವ ಪುರುಷನೊಡನೆ ರೂಕ್ಷಳಾಗಿ ಬಲಹೀನಳಾದ ಬಾಲಕಿಯು (ಅಂದರೆ ೧೬ ವರ್ಷಪೂರ್ತಿಯಾಗದಿರುವವಳು) ಅತಿಯಾಗಿ ಮೈಥುನ ಕ್ರಿಯೆಯನ್ನು ಆಚರಿಸಿದರೆ ಅವಳ ದೇಹದಲ್ಲಿ ವಾಯುವು ಪ್ರಕುಪಿತವಾಗಿ ಯೋನಿಯನ್ನು ಆಕ್ರಮಿಸಿ ಯೋನಿರೋಗಗಳನ್ನುಂಟುಮಾಡುತ್ತದೆ.

ತ್ರಯಾಣಾಮಪಿ ದೋಷಾಣಾಂ ಯಥಾಸ್ವಂ ಲಕ್ಷಣೇನ ತು ||೪||
ವಿಂಶತಿರ್ವ್ಯಾಪದೋ ಯೋನೇರ್ನಿರ್ದಿಷ್ಟಾ ರೋಗಸಂಗ್ರಹೇ ||
ಮಿಥ್ಯಾಚಾರೇಣ ಯಾಃ ಸ್ತ್ರೀಣಾಂ ಪ್ರದುಷ್ಟೇನಾರ್ತವೇನ ಚ ||೫||
ಜಾಯನ್ತೇ ಬೀಜದೋಷಾಚ್ಚ ದೈವಾಚ್ಚ ಶೃಣು ತಾಃ ಪೃಥಕ್ ।

ಮೂರು ದೋಷಗಳ ಲಕ್ಷಣಗಳಿಂದಲೂ ಕೂಡಿದ ೨೦ ವಿಧಗಳಾದ ಯೋನಿರೋಗಗಳನ್ನು ರೋಗಸಂಗ್ರಹಾಧ್ಯಾಯದಲ್ಲಿ ಹೇಳಿರುತ್ತೇವೆ. ಈ ಯೋನಿರೋಗಗಳು ಸ್ತ್ರೀಯರ ಮಿಥ್ಯಾಚಾರಗಳಿಂದಲೂ ದುಷ್ಟಾರ್ತವದಿಂದಲೂ ಸ್ತ್ರೀಬೀಜ ದೋಷದಿಂದಲೂ ದೈವ ದುರ್ಯೋಗದಿಂದಲೂ ಉಂಟಾಗುತ್ತವೆ ಅವುಗಳ ದೋಷ ಲಕ್ಷಣಗಳಿಂದಲೇ ಆಯಾಯ ವ್ಯಾಧಿಗಳೆಂದು ತಿಳಿಯಬೇಕು.

ಉದಾವರ್ತಾ ತಥಾ ವನ್ಧ್ಯಾ ವಿಪ್ಲುತಾ ಚ ಪರಿಪ್ಲುತಾ ||೬||
ವಾತಲಾ ಚೇತಿ ವಾತೋತ್ಥಾಃ ಪಿತ್ತೋತ್ಥಾ ರುಧಿರಕ್ಷರಾ ।
ವಾಮಿನೀ ಸ್ರಂಸಿನೀ ಚಾಪಿ ಪುತ್ರಘ್ನೀ ಪಿತ್ತಲಾ ಚ ಯಾ ||೭||

ಅತ್ಯಾನನ್ದಾ ಚ ಯಾ ಯೋನಿಃ ಕರ್ಣಿನೀ ಚರಣಾದ್ವಯಮ್॥
ಶ್ಲೈಷ್ಮಿಕಾ ಸಕಫಾ ಜ್ಞೇಯಾಃ ಷಣ್ಢೀ ಚ ಫೇಲಿನೀ ತಥಾ ॥೮॥
ಮಹತೀ ಸೂಚಿವಕ್ತ್ರಾ ಚ ಸರ್ವಜೇತಿ ತ್ರಿದೋಷಜಾ ।

ಉದಾವರ್ತಾ, ವಂಧ್ಯಾ, ವಿಪ್ಲುತಾ, ಪರಿಪ್ಲುತಾ, ವಾತಲಾ, ಎಂಬ ೫ ವಾತಜಗಳೂ, ಪಿತ್ತೋತ್ಥಾ, ರುಧಿರಕ್ಷರ, ವಾಮಿನೀ ಸ್ರಂಸಿನೀ, ಪುತ್ರಘ್ನಿ, ಎಂಬ ೫ ಪಿತ್ತಜನಿತಗಳೂ, ಅತ್ಯಾನಂದಾ, ಕರ್ಣಿನೀ, ಅತಿಚರಣಾ, ಅಚರಣಾ, ಶ್ಲೈಷ್ಮಿಕಾ, ಎಂಬ ೫ ಕಫಜನಿತಗಳೂ, ಷಂಡೀ, ಫಲಿನೀ, ಮಹತೀ, ಸೂಚಿವಕ್ತ್ರಾ, ಸರ್ವಜಾ ಎಂಬ ೫ ತ್ರಿದೋಷಜನಿತಗಳೂ ಈ ರೀತಿಯಾಗಿ ೨೦ ವಿಧ ಯೋನಿರೋಗಗಳುಂಟಾಗುತ್ತವೆ ಯೆಂದು ತಿಳಿಯಬೇಕು.

ಸಫೇನಿಲಮುದವರ್ತಾ ರಜಃ ಕೃಚ್ಛ್ರೇಣ ಮುಞ್ಚತಿ ॥೯॥
ವನ್ಧ್ಯಾಂ ನಷ್ಟಾರ್ತವಾಂ ವಿದ್ಯಾದ್ವಿಪ್ಲುತಾಂ ನಿತ್ಯವೇದನಾಮ್ ।
ಪರಿಪ್ಲುತಾಯಾಂ ಭವತಿ ಗ್ರಾಮ್ಯಧರ್ಮೇ ರುಜಾ ಭೃಶಮ್ ॥೧೦॥
ವಾತಲಾ ಕರ್ಕಶಾ ಸ್ತಬ್ಧಾ ಶೂಲನಿಸ್ತೋದಪೀಡಿತಾ ।
ಚತಸೃಷ್ವಪಿ ಚಾದ್ಯಾಸು ಭವನ್ತ್ಯನಿಲವೇದನಾಃ ॥೧೧॥

ಉದಾವರ್ತ ರೋಗವುಳ್ಳ ಸ್ತ್ರೀಗೆ ನೊರೆಗೂಡಿದ ಆರ್ತವ ರಕ್ತವು ಬಲುಕಷ್ಟದಿಂದ ಸ್ರಾವವಾಗುತ್ತದೆ; ಆರ್ತವಕ್ಷೀಣಳಾದ ಸ್ತ್ರೀಯನ್ನು ವಂಧ್ಯೆ ಎಂದು ತಿಳಿಯಬೇಕು; ಸದಾ ನೋಯುತ್ತಿರುವ ಯೋನಿಯುಳ್ಳವಳನ್ನು "ವಿಪ್ಲುತಯೋನಿ" ಯುಳ್ಳವಳೆನ್ನುತ್ತಾರೆ. ಪರಿಪ್ಲುತಾಯೋನಿಯ ಸ್ತ್ರೀಯಳಿಗೆ ಮೈಥುನಕ್ರಿಯೆಯನ್ನು ಆಚರಿಸುವಾಗ ಅತಿಯಾಗಿ ನೋವುಂಟಾಗುತ್ತದೆ. ಯೋನಿಯು ಒರಟಾಗಿ, ಬಿಗಿದುನಿಂತು (ಚಲನೆಯಿಲ್ಲದೆ) ಶೂಲೆಯಿಂದಲೂ, ಒಡೆತದಿಂದಲು ಪೀಡಿತವಾಗಿದ್ದರೆ ವಾತಲಾಯೋನಿಯೆಂದೂ ಹೇಳುತ್ತಾರೆ; ಉದಾವರ್ತ, ವಂಧ್ಯಾ, ವಿಪ್ಲುತಾ, ಪರಿಪ್ಲುತಾ ಈ ೪ ವಿಧಗಳಾದ ಯೋನಿರೋಗಗಳಲ್ಲೂ ವಾತವೇದನೆಗಳಿರುತ್ತವೆ.

ಸದಾಹಂ ಪ್ರಕಿರತ್ಯಸ್ರಂ ಯಸ್ಯಾಃ ಸಾ ಲೋಹಿತಕ್ಷರಾ ।
ಸವಾತಮುದ್ಗಿರೇದ್ಬೀಜಂ ವಾಮಿನೀ ರಜಸಾಯುತಮ್ ॥೧೨॥
ಪ್ರಸ್ರಂಸಿನೀ ಸ್ಯಂದತೇ ತು ಕ್ಷೋಭಿತಾ ದುಃಪ್ರಸೂಶ್ಚ ಯಾ ।
ಸ್ಥಿತಂ ಸ್ಥಿತಂ ಹಂತಿ ಗರ್ಭಂ ಪುತ್ರಘ್ನೀ ರಕ್ತಸಂಸ್ರವಾತ್ ॥೧೩॥
ಅತ್ಯರ್ಥಂ ಪಿತ್ತಲಾ ಯೋನಿರ್ದಾಹಪಾಕಜ್ವರಾನ್ವಿತಾ ।
ಚತಸೃಷ್ವಪಿ ಚಾದ್ಯಾಸು ಪಿತ್ತಲಿಙ್ಗೋಚ್ಛ್ರಯೋ ಭವೇತ್ ॥೧೪॥

ಉರಿಯಿಂದ ಕೂಡಿದ ರಜಸ್ಸು ಸ್ರಾವವಾದರೆ ಅವಳಿಗೆ ಲೋಹಿತಕ್ಷರಾ ಎಂದು ಹೆಸರು. ಆರ್ತವದೊಡನೆ ವಾತಸಹಿತವಾಗಿ ಪುಂಬೀಜವನ್ನೂ (ಶುಕ್ರವನ್ನು) ಯೋನಿಯಿಂದ ಹೊರಕ್ಕೆ ಕಾರಿದರೆ ಒಟ್ಟಿಗೆ [ಸುರಿಸಿದರೆ] "ವಾಮಿನೀ" ಎನ್ನುತ್ತಾರೆ.

ಅಪತ್ಯಮಾರ್ಗವು ದೂಷಿತವಾಗಿ ಸ್ವಸ್ಥಾನದಿಂದ ಚ್ಯುತವಾಗಿ ಆರ್ತವವು ಸದಾ ಹೊರಕ್ಕೆ ಹರಿಯುತ್ತಿದ್ದರೆ "ಪ್ರಸ್ರಂಸಿನೀಯೋನಿ" ಯೆಂದು, ಗರ್ಭಧಾರಣೆಯಾಗಿರುವ ಸ್ತ್ರೀಯಳ ಯೋನಿಯಿಂದ ರಕ್ತವು ಸ್ರಾವವಾಗಿ ಧಾರಣೆಯಾಗಿದ್ದ ಗರ್ಭವೂ ನಾಶವಾಗಿ ಹೊರಕ್ಕೆ ಬಂದರೆ "ಪುತ್ರಘ್ನೀ" ಎಂದೂ, ಯೋನಿಯಲ್ಲಿ ಅತಿಯಾದ ಉರಿತವೂ, ಮಾಂಸಪಾಕವೂ, ಜ್ವರವೂ ಉಂಟಾದರೆ "ಪಿತ್ತದೂಷಿತ ಯೋನಿ" ಯೆಂದೂ ಹೇಳುತ್ತಾರೆ. ಲೋಹಿತಕ್ಷರಾ, ವಾಮಿನೀ, ಪ್ರಸ್ರಂಸಿನೀ, ಪುತ್ರಘ್ನೀ ಎಂಬ ೪ ವಿಧ ರೋಗಗಳಲ್ಲೂ ಪಿತ್ತ ಲಕ್ಷಣಗಳೇ ಹೆಚ್ಚಾಗಿರುತ್ತವೆ.

ಅತ್ಯಾನನ್ದಾ ನ ಸನ್ತೋಷಂ ಗ್ರಾಮ್ಯಧರ್ಮೇಣ ಗಚ್ಛತಿ ।
ಕರ್ಣಿನ್ಯಾಂ ಕರ್ಣಿಕಾ ಯೋನೌ ಶ್ಲೇಷ್ಮಾಸೃಗ್ಭ್ಯಾಂ ಪ್ರಜಾಯತೇ ||೧೫||
ಮೈಥುನೇಽಚರಣಾ ಪೂರ್ವಂ ಪುರುಷಾದತಿರಿಚ್ಯತೇ ।
ಬಹುಶಶ್ಚಾತಿಚರಣಾದನ್ಯಾ ಬೀಜಂ ನ ವಿನ್ದತಿ ||೧೬||
ಶ್ಲೇಷ್ಮಲಾ ಪಿಚ್ಛಿಲಾ ಯೋನಿಃ ಕಣ್ಡೂಯುಕ್ತಾತಿಶೀತಲಾ ।
ಚತಸೃಷ್ವಪಿ ಚಾದ್ಯಾಸು ಶ್ಲೇಷ್ಮಲಿಙ್ಗೋಚ್ಛ್ರಿತಿರ್ಭವೇತ್ ||೧೭||

ಅತಿಮೈಥುನಾಚರಣೆಯಿಂದಲೂ ಸಂತೋಷವನ್ನು ಹೊಂದದಿರುವವಳು ಅತ್ಯಾನಂದಾ ಎಂದು ಹೇಳಲ್ಪಡುತ್ತಾಳೆ. ಕರ್ಣಿನಿಯಯೋನಿಯಲ್ಲಿ ಶ್ಲೇಷ್ಮ ರಕ್ತಗಳಿಂದ ಕಮಲ ಮಧ್ಯದ ಕರ್ಣಿಕೆಯಂತಿರುವ ದುರ್ಮಾಂಸ ಖಂಡವು ಉತ್ಪತ್ತಿಯಾಗುತ್ತದೆ. ಮೈಥುನ ಕಾಲದಲ್ಲಿ ಪುರುಷನ ಶುಕ್ರವು ಚ್ಯುತಿಯಾಗುವುದಕ್ಕೆ ಮೊದಲೇ ಸ್ತ್ರೀಯಳ ಆರ್ತವವು ಚ್ಯುತವಾದರೆ ಅಚರಣಾ ಎಂದು ಹೇಳುತ್ತಾರೆ. ಅತಿಯಾದ ಮೈಥುನಕ್ರಿಯೆಯಿಂದ ಶುಕ್ರ ಬೀಜವು ನಿಲ್ಲದೆ ಗರ್ಭಧಾರಣೆಯಾಗುವುದೇ ಇಲ್ಲ. ಅವಳಿಗೆ ಅತಿಚರಣಾಯೋನಿ ಎಂದು ಹೇಳುತ್ತಾರೆ. ಯೋನಿಯು ಜಿಬಿಜಿಬಿಗುಟ್ಟುತ್ತಾ ನವೆಯುಳ್ಳದಾಗಿ ಅತಿ ತಣ್ಣಗಿದ್ದರೆ "ಶ್ಲೇಷ್ಮಲಾಯೋನಿ"ಯೆಂದು ಹೆಸರು. ಮೊದಲಿನ ಅತ್ಯಾನಂದಾದಿ ೪ ವಿಧಯೋನಿಗಳ ಗಳಲ್ಲೂ ಅತಿಯಾಗಿ ಕಫಲಕ್ಷಣಗಳಿರುತ್ತವೆ.

ಅನಾರ್ತವಸ್ತನಾ ಷಣ್ಢೀ ಖರಸ್ಪರ್ಶಾ ಚ ಮೈಥುನೇ ।
ಅತಿಕಾಯಗೃಹೀತಾ ಯಾಸ್ತರುಣ್ಯಾಃ ಫಲಿನೀ ಭವೇತ್ ||೧೮||
ವಿವೃತಾತಿ ಮಹಾಯೋನಿಃ ಸೂಚೀವಕ್ತ್ರಾತಿಸಂವೃತಾ ।
ಸರ್ವಲಿಙ್ಗ ಸಮುತ್ಥಾನಾ ಸರ್ವದೋಷಪ್ರಕೋಪಜಾ ||೧೯||
ಚತಸೃಷ್ವಪಿ ಚಾದ್ಯಾಸು ಸರ್ವಲಿಙ್ಗೋಚ್ಛ್ರಿತಿರ್ಭವೇತ್ ।
ಪಞ್ಚಾಸಾಧ್ಯಾ ಭವನ್ತೀಮಾ ಯೋನಿಯಃ ಸರ್ವದೋಷಜಾಃ ||೨೦||

ಸ್ತನವೃದ್ಧಿ ಕಾಣುತ್ತಿದ್ದರೂ ಆರ್ತವಸ್ರಾವವಿಲ್ಲದೆ ಇರುವ ಸ್ತ್ರೀಯನ್ನು ವಂಧ್ಯಾ (ಬಂಜೆ) ಎಂದೂ, ಆರ್ತವಸ್ರಾವವು ಆಗದೆ ಸ್ತನಗಳೂ ವೃದ್ಧಿಯಾಗದಿರುವ ಸ್ತ್ರೀಯನ್ನು ಷಂಡೀ ಎಂದೂ ಹೇಳುತ್ತಾರೆ ; ಇಬ್ಬರಿಗೂ ಯೋನಿಯು ಒರಟಾಗಿರುತ್ತದೆ. ಬಂಜೆಗೆ

ಪುರುಷನೊಡನೆ ಸಂಗ ಮಾಡಬೇಕೆಂದು ಇಚ್ಛೆಯುಂಟು. ಷಂಡಳಿಗೆ ಪುರುಷನೊಡನೆ ಮೈಥುನ ಕ್ರಿಯೆಯನ್ನು ಮಾಡಬೇಕೆಂಬ ಇಚ್ಛೆಯೇ ಇರುವುದಿಲ್ಲ. ದಪ್ಪದೇಹವನ್ನೂ ಶಿಶ್ನವನ್ನೂ ಹೊಂದಿರುವ ಪುರುಷನು ತರುಣಿಯನ್ನು ಬಲಾತ್ಕರಿಸಿ ರಮಿಸಿದರೆ ಅವಳಿಗೆ "ಫಲೀನೀ" ಎಂದು ಹೆಸರು (ಅವಳ ಯೋನಿಗೆ ದಪ್ಪಶಿಶ್ನವು ಬಲವಂತದಿಂದ ನುಗ್ಗಬೇಕಾಗುತ್ತದೆ). ಕೆಲವರು ಅತಿ ದಪ್ಪದೇಹ ಮತ್ತು ಅಗಲವಾದ ಯೋನಿಯುಳ್ಳ ಸ್ತ್ರೀಯು ಮೈಥುನದಿಂದ ಗರ್ಭಧಾರಣೆಯನ್ನು ಮಾಡಲಾರಳಾದ ಕಾರಣ ಅವಳಿಗೆ ಅಫಲಿನೀ ಎಂದು ಹೆಸರು ಎಂದು ಅರ್ಥಮಾಡುತ್ತಾರೆ ; ಅತಿ ಅಗಲವಾದ ಯೋನಿಯುಳ್ಳ ಸ್ತ್ರೀಯನ್ನು ಮಹಾಯೋನಿಯೆಂದೂ, ಯೋನಿಯ ಮುಖವು ಅತ್ಯಂತ ಸಣ್ಣ ಪ್ರಮಾಣದಿಂದ ಸೂಜಿಯ ಮೊನೆಯಷ್ಟು ಸಣ್ಣವಾದರೆ ಸೂಚೀಮುಖೀ ಎಂದೂ, ರೂಕ್ಷತೆ ತೋದಾದಿವಾತಲಿಂಗಗಳೂ ; ಉರಿ, ದಾಹ ಮೊದಲಾದ ಪಿತ್ತಲಿಂಗಗಳೂ ; ಸ್ನೇಹ ಕಂಡೂತಿ ಮೊದಲಾದ ಕಫಲಿಂಗಗಳೂ ಏಕಕಾಲದಲ್ಲಿ ಕಂಡುಬಂದರೆ "ಸರ್ವಜಾಯೋನಿಯೆಂದೂ" ಹೇಳುತ್ತಾರೆ ; ಮೇಲೆ ಹೇಳಿದ ಷಣ್ಢೀ, ಫಲೀನಿ, ಮಹಾಯೋನೀ, ಸೂಚೀವಕ್ತ್ರಾ, ಎಂಬ ೪ ವಿಧ ರೋಗಗಳಲ್ಲಿ ತ್ರಿದೋಷಗಳು ಪ್ರಕುಪಿತಗಳಾಗಿರುತ್ತವೆ. ಸರ್ವದೋಷಪ್ರಕೋಪದಿಂದುಂಟಾದ ಈ ೫ ವಿಧ ಯೋನಿದೋಷಗಳೂ ಅಸಾಧ್ಯವಾದುವು ಅಂದರೆ ಚಿಕಿತ್ಸೆಮಾಡಿದರೂ ಪ್ರಯೋಜನವುಂಟಾಗುವುದಿಲ್ಲವೆಂದು ತಿಳಿಯಬೇಕು.

ಪ್ರತಿದೋಷಂ ತು ಸಾಧ್ಯಾಸು ಸ್ನೇಹಾದಿಕ್ರಮ ಇಷ್ಯತೇ ।
ದದ್ಯಾದುತ್ತರವಸ್ತೀಂಶ್ಚ ವಿಶೇಷೇಣ ಯಥೋದಿತಾನ್ ॥೨೧॥

ಸಾಧ್ಯವಾದ ಯೋನಿವ್ಯಾಪದ್ರೋಗಗಳಲ್ಲಿ ಪ್ರಕುಪಿತ ದೋಷಗಳಿಗೆ ತಕ್ಕಂತೆ ಸ್ನೇಹ, ಸ್ವೇದ, ವಮನ, ವಿರೇಚನ, ಆಸ್ಥಾಪನ (ಸ್ನೇಹಬಸ್ತಿ) ಗಳನ್ನು ಪ್ರಯೋಗಿಸಬೇಕು. ಮುಖ್ಯವಾಗಿ ವಾತಾದಿ ದೋಷಗಳಿಗೆ ಅನುಸಾರವಾಗಿ ತಯಾರಿಸಿದ ಉತ್ತರಬಸ್ತಿಗಳನ್ನೂ ಪ್ರಯೋಗಿಸಬೇಕು.

ಕರ್ಕಶಾಂ ಶೀತಲಾಂ ಸ್ತಬ್ಧಾಮಲ್ಪಸ್ಪರ್ಶಾಂ ಚ ಮೈಥುನೇ ।
ಕುಮ್ಭಾಸ್ವೇದೈರುಪಚರೇತ್ ಸಾನೂಪೌದಕಸಂಯುತೈ ॥೨೨॥
ಮಧುರೌಷಧಸಂಯುಕ್ತಾನ್ ವೇಶವಾರಾಂಶ್ಚ ಯೋನಿಷು ।
ನಿಕ್ಷಿಪೇದ್ಧಾರಯೇಚ್ಚಾಪಿ ಪಿಚುತೈಲಮತನ್ದ್ರಿತಃ ॥೨೩॥
ಧಾವನಾನಿ ಚ ಪಥ್ಯಾಸಿ ಕುರ್ವೀತಾಪೂರಣಾನಿ ಚ ।

ಒರಟಾದ, ಶೀತಲವಾದ, ಚಲನವಿಲ್ಲದೆ ಬಿಗಿದು ಹಿಡಿದಿರುವ ಅತಿಮೈಥುನದಿಂದ ಕುಪಿತವಾದ ವಾತದಿಂದ ಸ್ಪರ್ಶಜ್ಞಾನ ನಾಶವಾಗಿರುವ ಯೋನಿವ್ಯಾಪತ್ತಿನಲ್ಲಿ ಹಂದಿ ಮೊದಲಾದ ಆನೂಪಪ್ರಾಣಿಗಳ ಬಾತು ಮೊದಲಾದ ಉದಕದಲ್ಲಿ ಸಂಚರಿಸುವ ಪ್ರಾಣಿಗಳ ಮಾಂಸವನ್ನೂ, ದಶಮೂಲಾದಿ ವಾತಹರದ್ರವ್ಯಗಳನ್ನು ಸೇರಿಸಿ ತಯಾರಿಸಿದ ಕಷಾಯವನ್ನು ದೊಡ್ಡ ಮಡಕೆಗೆ ತುಂಬಿ ಅದರಲ್ಲಿ ಕಾದಕಲ್ಲು, ಮಣ್ಣಿನಹೆಂಟೆ, ಕಬ್ಬಿಣದ

ಗುಂಡುಗಳನ್ನು ಕೆಂಪಗೆ ಕಾಯಿಸಿ ಮಡಿಕೆಯ ಕಷಾಯದೊಳಕ್ಕೆ ಮುಳುಗಿಸಿ ಮೇಲೆ ಬರುವ ಹೊಗೆಯನ್ನು ಕೊಳವೆಯ ಮೂಲಕ ರೋಗಿಯ ಯೋನಿಗೆ ತಾಕುವಂತೆ ಮಾಡಬೇಕು (ಇದಕ್ಕೆ ಕುಂಭೀಸ್ವೇದವೆಂದು ಹೆಸರು) ಕಾಕೋಳಿ ಮೊದಲಾದ ಮಧುರೌಷಧ ದ್ರವ್ಯಗಳನ್ನು ಸೇರಿಸಿ ಅನ್ನವರ್ಗದಲ್ಲಿ ಹೇಳಿದಂತೆ ವೇಸವಾರಗಳನ್ನು ತಯಾರಿಸಿ ಯೋನಿಯೊಳಕ್ಕೆ ತುಂಬಿ ಮೇಲೆಬಟ್ಟೆಯ ತುಂಡನ್ನು ಮುಚ್ಚಬೇಕು. ನಿದಾನ ಮಾಡದೆ ವಾತಹರತೈಲದಲ್ಲಿ ಅದ್ದಿದ ಹತ್ತಿಯ ಉಂಡೆಯನ್ನು ಯೋನಿಯೊಳಕ್ಕೆ ನುಗ್ಗಿಸಿ ಬಟ್ಟೆ ಮುಚ್ಚಿ ಕಟ್ಟಬೇಕು ; ವಾತಹರಗಳಾದ ದಶಮೂಲ ಕಷಾಯ ರಾಸ್ನಾದಿ ಕಷಾಯ ಗಳಿಂದ ಯೋನಿಕ್ಷಾಳನವನ್ನು ಪೂರಣವನ್ನು ಮಾಡಬೇಕು.

ಓಷಚೋಷಾನ್ವಿತಾಸೂಕ್ತಂ ಕುರ್ಯಾಚ್ಛೀತಂ ವಿಧಿಂ ಭಿಷಕ್ ॥೨೪॥

ಉರಿತದಾಹ ಮೊದಲಾಗಿ ಪಿತ್ತಲಿಂಗ ಪೀಡಿತಯೋನಿ ವ್ಯಾಪಿತಗಳಲ್ಲಿ ಶೀತಲ ಗಳಾದ ಮತ್ತು ಪಿತ್ತಹರಗಳಾದ ಚಿಕಿತ್ಸೆಗಳನ್ನು ಮಾಡಬೇಕು.

ದುರ್ಗನ್ಧಾಂ ಪಿಚ್ಛಿಲಾಂ ಚಾಪಿ ಚೂರ್ಣೈಃ ಪಞ್ಚಕಷಾಯಜೈಃ ।
ಪೂರಯೇದ್ರಾಜವೃಕ್ಷಾದಿಕಷಾಯೈಶ್ಚಾಪಿ ಧಾವನಮ್ ॥೨೫॥
ಯೋನ್ಯಾಂ ತು ಪೂಯಸ್ರಾವಿಣ್ಯಾಂ ಶೋಧನದ್ರವ್ಯಸಂಭೃತೈಃ ।
ಸಗೋಮೂತ್ರೈಃ ಸಲವಣೈಃ ಪಿಣ್ಡೈರಾಪೂರಣಂ ಹಿತಮ್ ॥೨೬॥
ಬೃಹತೀಫಲಕಲ್ಕಸ್ಯ ದ್ವಿಹರಿದ್ರಾಯುತಸ್ಯ ಚ ।
ಕಣ್ಡೂಮತೀಮಪಸ್ಪರ್ಶಾಂ ಪೂರಯೇದ್ಧೂಪಯೇತ್ತಥಾ ॥೨೭॥
ವರ್ತಿಂ ಪ್ರದದ್ಯಾತ್ ಕರ್ಣಿನ್ಯಾಂ ಶೋಧನದ್ರವ್ಯಸಂಭೃತಾಮ್ ।
ಪ್ರಸ್ರಂಸಿನೀಂ ಘೃತಾಭ್ಯಕ್ತಾಂ ಕ್ಷೀರಸ್ವಿನ್ನಾಂ ಪ್ರವರ್ತಯೇತ್ ॥೨೮॥
ಪಿಧಾಯ ವೇಸವಾರೇಣ ತತೋ ಬನ್ಧಂ ಸಮಾಚರೇತ್ ।
ಪ್ರತಿದೋಷಂ ವಿದಧ್ಯಾಚ್ಚ ಸುರಾರಿಷ್ಟಾಸವಾನ್ ಭಿಷಕ್ ॥೨೯॥
ಪ್ರಾತಃಪ್ರಾತರ್ನಿಷೇವೇತ ರಸೋನಾದುದ್ಧೃತಮ್ ರಸಮ್ ।
ಕ್ಷೀರಮಾಂಸರಸಪ್ರಾಯಮಾಹಾರಂ ವಿದಧೀತ ಚ ॥೩೦॥

ದುರ್ವಾಸನೆಯಾಗಿ ಜಿಬಿಗುಟ್ಟುವ ಯೋನಿಗೆ ಆಲ ಅತ್ತಿ ಮೊದಲಾದ ಪಂಚವೃಕ್ಷ ಗಳ ತೊಗಟೆಯ ಚೂರ್ಣವನ್ನು ಪೊಟ್ಟಣಕಟ್ಟಿ ಯೋನಿಯೊಳಕ್ಕೆ ತುಂಬಬೇಕು ; ಆಕ್ಕೆ ಮೊದಲಾದುವುಗಳ ಕಷಾಯದಿಂದ ಯೋನಿಕ್ಷಾಳನ ಮಾಡಬೇಕು ; ಕೀವು ಸುರಿಯುತ್ತಿ ರುವ ಯೋನಿಯಲ್ಲಿ ಮಿಶ್ರಕೋಕ್ತ ಶೋಧನ ದ್ರವ್ಯಗಳಿಂದ ಗೋಮೂತ್ರ ಸೈಂಧವಲವಣ ಮಿಶ್ರಮಾಡಿದ ಚೂರ್ಣದ ಮುದ್ದೆಯನ್ನು ತುಂಬಿದರೆ ಹಿತವಾಗುತ್ತದೆ ; ನವೆಯುಳ್ಳ ಯೋನಿಗೂ ಸ್ಪರ್ಶಮಾಡಗೊಡಿಸದ (ವೇದನೆಯಿಂದ ಕೂಡಿದ) ಯೋನಿಗೂ, ಹೆಗ್ಗುಳ್ಳದ ಹಣ್ಣು ಅರಿಶಿನ ಮರದರಿಶಿನಗಳ ಕಲ್ಕವನ್ನು ತುಂಬಿ ಅವುಗಳ ಧೂಪದಿಂದ ಹೊಗೆಯು ತಗಲುವಂತೆ ಮಾಡಬೇಕು ; ಕರ್ಣಿಕೆಯುಳ್ಳ ಯೋನಿಗೆ ಶೋಧನ ದ್ರವ್ಯಗಳಿಂದ ತಯಾ

ರಾದ ವರ್ತಿಯನ್ನು ನುಗ್ಗಿಸಿಡಬೇಕು ; ಯೋನಿಯು ಹೊರಗಡೆಗೆ ಹೊರಟುಕೊಂಡು ನೇತಾಡುತ್ತಿದ್ದರೆ ತುಪ್ಪವನ್ನು ಬಳಿದು ಬಿಸಿಹಾಲಿನಿಂದ ಸ್ವೇದಮಾಡಿಸಿ ಒಳಗಡೆ ನೂಕಿ ವೇಸವಾರದಿಂದ ತುಂಬಿ ಪಟ್ಟಿಯನ್ನು ಕಟ್ಟಬೇಕು ; ವಾತಾದಿ ದೋಷಗಳಿಗೆ ತಕ್ಕಂತೆ ಮದ್ಯವನ್ನೂ ಅರಿಷ್ಟಗಳನ್ನೂ ಆಸವಗಳನ್ನೂ ಪ್ರಯೋಗಿಸಬೇಕು ; ಪ್ರತಿನಿತ್ಯ ಬೆಳ್ಳುಳ್ಳಿಯನ್ನು ಜಜ್ಜಿ ಹಿಂಡಿದ ರಸವನ್ನು ಕುಡಿಸಬೇಕು. ಹಾಲು ಮಾಂಸರಸಗಳನ್ನೇ ಹೆಚು ಪ್ರಮಾಣದಿಂದ ಸೇರಿಸಿರುವ ಅನ್ನವನ್ನು ಭೋಜನ ಮಾಡಿಸಬೇಕು.

ಶುಕ್ರಾರ್ತವಾದಯೋದೋಷಾಃ ಸ್ತನರೋಗಾಶ್ಚ ಕೀರ್ತಿತಾಃ ।
ಕ್ಲೈಬ್ಯೋತ್ಥಾನಾನಿ ಮೂಢಸ್ಯ ಗರ್ಭಸ್ಯ ವಿಧಿರೇವ ಚ ॥೩೦॥
ಗರ್ಭಿಣೀಪ್ರತಿರೋಗೇಷು ಚಿಕಿತ್ಸಾಚಾಪ್ಯುದಾಹೃತಾ ।
ತಾಂ ಸರ್ವಥಾ ಪ್ರಯುಞ್ಜೀತ ಯೋನಿವ್ಯಾಪತ್ಸು ಬುದ್ಧಿಮಾನ್ ॥
ಅಪಪ್ರಜಾತಾ ರೋಗಾಂಶ್ಚ ಚಿಕಿತ್ಸೇದುತ್ತರಾದ್ಬುಧಃ ॥೩೧॥

ಶುಕ್ರ, ಆರ್ತವ, ಸ್ತನ್ಯ ಇವುಗಳ ದೋಷ ಸ್ತನರೋಗ, ಕ್ಲೈಬ್ಯಕಾರಣ ಚಿಕಿತ್ಸೆ ಅಂದರೆ ಕ್ಷೀಣಬಲೀಯ ವಾಜೀಕರಣ ಚಿಕಿತ್ಸೆ ಮೂಢಗರ್ಭ-ನಿದಾನ ಲಕ್ಷಣ ಚಿಕಿತ್ಸೆಗಳು ಗರ್ಭಿಣಿಗೆ ಪ್ರತಿಮಾಸದಲ್ಲೂ ಉಂಟಾಗುವ ರೋಗಗಳು ಅವುಗಳ ಚಿಕಿತ್ಸೆಗಳನ್ನೂ ಅಕಾಲ ಪ್ರಸವ ಚಿಕಿತ್ಸೆಯನ್ನೂ ಅಪತಾನಕಾದಿ ವಾತ ರೋಗಗಳ ಚಿಕಿತ್ಸೆಗಳನ್ನೂ ಈ ಕೌಮಾರ ಭೃತ್ಯದಲ್ಲೂ ಉತ್ತರತಂತ್ರದ ಜ್ವರಾದಿರೋಗ ಚಿಕಿತ್ಸೆಗಳಲ್ಲೂ ಹೇಳಿರುತ್ತೆ. ಅವುಗಳನ್ನೂ ಯೋನಿವ್ಯಾಪತ್ತು ರೋಗಗಳಲ್ಲಿ ಪ್ರಯೋಗಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕೌಮಾರ ಭೃತ್ಯತನ್ತ್ರೇ
ಯೋನಿವ್ಯಾಪತ್ಪ್ರತಿಷೇಧ ನಾಮಕಾಷ್ಟಾತ್ರಿಂಶತ್ತಮಾಧ್ಯಾಯಸ್ಯ
ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕ
ಭಾಷಾವಿವೃತಿಃ
ಸಮಾಪ್ತಮಿದಂ ಕೌಮಾರ ಭೃತ್ಯತನ್ತ್ರಮ್

ಏಕೋನಚತ್ವಾರಿಂಶತ್ತಮೋಽಧ್ಯಾಯಃ

ಅಥಾತೋ ಜ್ವರಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಜ್ವರ ಚಿಕಿತ್ಸೆಯನ್ನು ವಿವರಿಸಿ ಹೇಳುತ್ತೇವೆ.

ಟಿಪ್ಪಣಿ :—ಕೌಮಾರ ಭೃತ್ಯತಂತ್ರದ ಕಡೆಯಲ್ಲಿ ಅಕಾಲಪ್ರಸವದಿಂದುಂಟಾಗುವ ರೋಗಗಳಿಗೆ ಉತ್ತರ ತಂತ್ರದಲ್ಲಿ ಹೇಳಿರುವ ಜ್ವರಾದಿ ರೋಗಗಳ ಚಿಕಿತ್ಸೆಯಂತೆ ಉಪಚಾರ ಮಾಡಬೇಕು ; ಎಂದು ಹೇಳಿರುತ್ತಾರಾಗಿ ಈಗ ಕಾಯ ರೋಗಗಳ ಚಿಕಿತ್ಸೆಯನ್ನು ಹೇಳುತ್ತೇವೆ ; ಕಾಯ ಎಂದರೆ ದೋಷ, ಧಾತು, ಮಲಗಳ ಸಮುದಾಯವೆಂದರ್ಥವು ; ಇದರಿಂದ ಶರೀರದಲ್ಲಿ ಉಂಟಾಗುವ ಜ್ವರಾದಿ ರೋಗಗಳ ಚಿಕಿತ್ಸೆಯನ್ನು ಹೇಳಲಾಗುತ್ತೆ. ಕೆಲವರು ಕಾಯವೆಂದರೆ ಕಾಯಾಗ್ನಿಯೆಂದು ಹೇಳುತ್ತಾರೆ. ಏಕೆಂದರೆ ಅಗ್ನಿಯನ್ನು ವ್ಯಾಪಿಸಿ ಜ್ವರಾದಿಗಳುಂಟಾಗುತ್ತವೆ ; ರುದ್ರ ಕೋಪದಿಂದುಟಾದ್ದರಿಂದ ಹೆಚ್ಚು ಪ್ರಧಾನವಾದ ಜ್ವರ ರೋಗವನ್ನು ಮೊದಲು ವಿವರಿಸಿ ಅದರ ಚಿಕಿತ್ಸೆಯನ್ನು ಹೇಳುತ್ತಾರೆ.

ಯೇನಾಮೃತಮಪಾಂ ಮಧ್ಯಾದುದ್ಧೃತಂ ಪೂರ್ವಜನ್ಮನಿ ।
ತತೋಽಮರತ್ವಂ ಸಂಪ್ರಾಪ್ತಾಸ್ತ್ರಿದಶಾಸ್ತ್ರಿದಿವೇಶ್ವರಾತ್ ||೩||
ಶಿಷ್ಯಾಸ್ತಂ ದೇವಮಾಸೀನಂ ಪಪ್ರಚ್ಛುಃ ಸುಶ್ರುತಾದಯಃ ।
ವ್ರಣಸ್ಯೋಪದ್ರವಾಃ ಪ್ರೋಕ್ತಾಃ ವ್ರಣಿನಾಮಪ್ಯತಃ ಪರಮ್ ||೪||
ಸಮಾಸಾದ್ವ್ಯಾಸತಶ್ಚೈವ ಬ್ರೂಹಿ ನೋ ಭಿಷಜಾಂ ವರ ।

ಹಿಂದಿನ ಜನ್ಮದಲ್ಲಿ ಅಮೃತಕಲಶವನ್ನು ಕೈಯಲ್ಲಿ ಹಿಡಿದುಕೊಂಡು ಕ್ಷೀರ ಸಮುದ್ರದಿಂದ ಹೊರಕ್ಕೆ ಬಂದು ದೇವತೆಗಳಿಗೆ ಅಮೃತದಾನ ಮಾಡಿ ಅವರೆಲ್ಲರನ್ನೂ ನಾಶರಹಿತರನ್ನಾಗಿ ಮಾಡಿದ ಧನ್ವಂತರಿಯು ಈ ಜನ್ಮದಲ್ಲಿ ಕಾಶಿರಾಜನಾಗಿ ಜನಿಸಿ ಸುಶ್ರುತಾದಿ ಶಿಷ್ಯರಿಗೆ ಆಯುರ್ವೇದವನ್ನು ಬೋಧಿಸುತ್ತಿದ್ದಾನಷ್ಟೆ ; ಸುಶ್ರುತ ಮೊದಲಾದ ಶಿಷ್ಯರು ಆ ಧನ್ವಂತರಿಯನ್ನು (ಕಾಶಿರಾಜನನ್ನು) ಕುರಿತು ವೈದ್ಯ ಶ್ರೇಷ್ಠನೇ ವ್ರಣರೋಗಿಗಳಿಗೆ ವ್ರಣೋಪದ್ರವಗಳುಂಟಾಗುತ್ತವೆಯೆಂದು ಹೇಳಿದೆಯಲ್ಲವೆ ! ಈಗ ಅವುಗಳ ವಿಚಾರಗಳನ್ನು ವಿಸ್ತರಿಸಿ ಹೇಳಬೇಕೆಂದು ಪ್ರಾರ್ಥಿಸಿದರು.

ಉಪದ್ರವೇಣ ಜುಷ್ಟಸ್ಯ ವ್ರಣಃ ಕೃಚ್ಛ್ರೇಣ ಸಿಧ್ಯತಿ ||೫||
ಉಪದ್ರವಾಸ್ತು ವ್ರಣಿನಃ ಕೃಚ್ಛ್ರಸಾಧ್ಯಾಃ ಪ್ರಕೀರ್ತಿತಾಃ ।

ಪ್ರಕ್ಷೀಣಬಲಮಾಂಸಸ್ಯ ದೋಷಧಾತುಪರಿಕ್ಷಯಾತ್ ||೬||
ತಸ್ಮಾದುಪದ್ರವಾರ್ನ ಕೃತ್ಸ್ನಾನ್ ಬ್ರೂಹಿ ನಃ ಸಚಿಕಿತ್ಸಿತಾನ್ ।
ಸರ್ವಕಾಯಚಿಕಿತ್ಸಾಸು ಯೇದೃಷ್ಟಾಃ ಪರಮರ್ಷಿಭಿಃ ||೭||

ದೋಷಗಳೂ, ಧಾತುಗಳು, ಕ್ಷೀಣಿಸಿ ಬಲಮಾಂಸ ಕ್ಷಯಪೀಡಿತನಾದ ವ್ರಣ ರೋಗಿಗೆ ಉಂಟಾಗುವ ಜ್ವರಾದಿ ಶಾರೀರಕ ರೋಗಗಳು ಕೃಚ್ಛ್ರಸಾಧ್ಯಗಳೆಂದು ಹೇಳಲ್ಪಟ್ಟಿರುತ್ತವೆಯಾಗಿ ಪರಮರ್ಷಿಗಳು ಕಾಯಚಿಕಿತ್ಸೆಯಲ್ಲಿ ಹೇಳುವ ಸಕಲ ರೋಗಗಳನ್ನು ಚಿಕಿತ್ಸೆಸಹಿತವಾಗಿ ನಮಗೆ ವಿವರಿಸಬೇಕು.

ತೇಷಾಂ ತದ್ವಚನಂ ಶ್ರುತ್ವಾ ಪ್ರಾಬ್ರವೀದ್ಭಿಷಜಾಂ ವರಃ ।
ಜ್ವರಮಾದೌ ಪ್ರವಕ್ಷ್ಯಾಮಿ ಸ ರೋಗಾನೀಕರಾಟ್ ಸ್ಮೃತಃ ||೮||
ರುದ್ರಕೋಪಾಗ್ನಿಸಂಭೂತಃ ಸರ್ವಭೂತಪ್ರತಾಪನಃ ।
ತೈಸ್ತೈರ್ನಾಮಭಿರಿತ್ಯೇಷಾಂ ಸತ್ವಾನಾಂ ಪರಿಕೀರ್ತ್ಯತೇ ||೯||
ಜನ್ಮಾದೌ ನಿಧನೇಚೈವ ಪ್ರಾಯೋ ವಿಶತಿ ದೇಹಿನಃ ।
ಅತಃ ಸರ್ವವಿಕಾರಾಣಾಮಯಂ ರಾಜಾ ಪ್ರಕೀರ್ತಿತಃ ||೧೪||

ಈ ರೀತಿಯಾಗಿ ಪ್ರಾರ್ಥಿಸಿ ಸುಶ್ರುತಾದಿ ಶಿಷ್ಯರ ಮಾತನ್ನು ಕೇಳಿ ವೈದ್ಯ ಶ್ರೇಷ್ಠನಾದ ಧನ್ವಂತರಿಯು ಈ ರೀತಿಯಾಗಿ ಹೇಳಿದನು ; ಮೊದಲು ಜ್ವರವನ್ನು ವಿವರಿಸುತ್ತೇನೆ. ಏಕೆಂದರೆ ರೋಗಸಮೂಹಕ್ಕೆ ಜ್ವರವು ರಾಜನಂತೆ ಪ್ರಧಾನವಾದದ್ದು. ಪ್ರಾಯಶಃ ಎಲ್ಲಾ ರೋಗಗಳಲ್ಲೂ ಜ್ವರವಿದ್ದೇ ಇರುತ್ತದೆ ; ಜ್ವರವಿಲ್ಲದ ರೋಗಗಳೇ ಅಪರೂಪ. ರುದ್ರನ ಕೋಪಾಗ್ನಿಯಿಂದ ಉತ್ಪತ್ತಿಯಾಗಿ ಸಕಲ ಪ್ರಾಣಿಗಳಿಗೂ ಸಂತಾಪವನ್ನುಂಟು ಮಾಡುತ್ತದೆ ; ಆನೆ ಕುದುರೆ ಮೊದಲಾದ ಪ್ರಾಣಿಗಳಿಗೆ ಸಂಭವಿಸುವ ಜ್ವರಕ್ಕೆ ಪಾಕಲ, ಅಭಿತಾಪ, ಖೋರಕಾ ಮೊದಲಾದ ಬೇರೆ ಬೇರೆ ಹೆಸರನ್ನು ಹೇಳುತ್ತಾರೆ ; ಪ್ರಾಣಿಗಳು ಹುಟ್ಟುವಾಗಲೂ ಸಾಯುವಾಗಲೂ ವಿಶೇಷವಾಗಿ ಜ್ವರವುಂಟಾಗುತ್ತದೆಯಾಗಿ ಜ್ವರವನ್ನು ರೋಗಗಳಿಗೆಲ್ಲಾ ರಾಜನೆನ್ನುತ್ತಾರೆ.

ಟಿಪ್ಪಣಿ :—ಆಡುಗಳಿಗೆ ಬರುವ ಜ್ವರಕ್ಕೆ ಪ್ರಲಾಪವೆಂದೂ, ಕರಭ (ಆನೆಯ ಮರಿಗೆ) ಅಲಸಃ, ಮೃಗಗಳಿಗೆ ಮೃಗರೋಗ, ಎಮ್ಮೆಗಳಿಗಾದರೆ ಹಾರಿದ್ರಃ, ಪಕ್ಷಿಗಳಿಗೆ ಅಭಿಘಾತ, ಹಕ್ಕಿಗಳಿಗೆ ಪಕ್ಷಪಾತ, ಪಾರಿವಾಳಗಳಿಗೆ ಅಕ್ಷಕ, ಮೀನುಗಳಿಗೆ ಜ್ವರ ಬಂದರೆ ಇಂದ್ರಮದವೆನ್ನುತ್ತಾರೆ. ನೀರಿಗೆ ನೀಲಿಕೆ, ಭೂಮಿಗೆ ಊಷರ, ಮರಗಳಿಗೆ ಕೋಟರಃ, ಎಂದು ವ್ಯವಹರಿಸುತ್ತಾರೆ.

ಋತೇ ದೇವಮನುಷ್ಯೇಭ್ಯೋ ನಾನ್ಯೋ ವಿಷಹತೇ ತು ತಮ್ ।
ಕರ್ಮಣಾ ಲಭತೇ ಯಸ್ಮಾದ್ದೇವತ್ವಂ ಮಾನುಷಾದಪಿ ||೧೧||
ಪುನಶ್ಚೈವ ಚ್ಯುತಃ ಸ್ವರ್ಗಾನ್ಮಾನುಷ್ಯಮನುವರ್ತತೇ ।
ತಸ್ಮಾತ್ ತೇ ದೇವಭಾವೇನ ಸಹನ್ತೇ ಮಾನುಷಾಜ್ವರಮ್ ||೧೨||
ಶೇಷಾಃ ಸರ್ವೇ ವಿಪದ್ಯನ್ತೇ ತೈರ್ಯಗ್ಯೋನಾ ಜ್ವರಾರ್ದಿತಾಃ ।

ದೇವತೆಗಳೂ ಮತ್ತು ಮನುಷ್ಯರೂ ಮಾತ್ರವೇ ಜ್ವರದ ತಾಪವನ್ನು ಸಹಿಸುತ್ತಾರೆ. ಆದರೆ ಮತ್ಯಾರೂ ಸಹಿಸಲಾರರು ; ದೇವತ್ವವು ಪುಣ್ಯಕರ್ಮಗಳಿಂದುಂಟಾಗುತ್ತದೆ ; ಆ ಕರ್ಮಗಳು ಕ್ಷೀಣವಾದರೆ ದೇವತೆಗಳೂ ಪುನಃ ಸ್ವರ್ಗದಿಂದ ಭೂಮಿಗೆ ಬಂದು ಮನುಷ್ಯರಾಗಿ ಹುಟ್ಟುತ್ತಾರೆಯಾಗಿ ದೇವಭಾವದಿಂದಲೇ ಜ್ವರದ ಸಂತಾಪವನ್ನು ತಡೆದುಕೊಳ್ಳುತ್ತಾರೆ ; ಉಳಿದ ಸಕಲತಿರ್ಯಗ್ಜಂತುಗಳೂ ಜ್ವರಪೀಡಿತವಾದರೆ ಸಾಯುತ್ತವೆ.

ಸ್ವೇದಾವರೋಧಃ ಸನ್ತಾಪಃ ಸರ್ವಾಙ್ಗಗ್ರಹಣಂ ತಥಾ ॥೧೩॥
ವಿಕಾರಾ ಯುಗಪದ್ಯಸ್ಮಿನ್ ಜ್ವರಃ ಸಪರಿಕೀರ್ತಿತಃ ।
ದೋಷೈಃ ಪೃಥಕ್ ಸಮಸ್ತೈಶ್ಚ ದ್ವನ್ದ್ವೈರಾಗನ್ತುರೇವ ಚ ॥೧೪॥
ಅನೇಕಕಾರಣೋತ್ಪನ್ನಃ ಸ್ಮೃತಸ್ತ್ವಷ್ಟವಿಧೋ ಜ್ವರಃ ।

ಬೆವರು ನಿಂತುಬಿಡುವುದು, ಶಾರೀರ ಮಾನಸಿಕ ತಾಪವೇರುವುದು, ಶರೀರದ ಸಂಧಿಗಳೆಲ್ಲಾ ಹಿಡಿದುಕೊಳ್ಳುವುದು ಈ ವಿಕಾರಗಳೆಲ್ಲಾ ಒಂದೇಕಾಲದಲ್ಲುಂಟಾದರೆ ಜ್ವರವುಂಟಾಯಿತೆಂದು ಹೇಳುತ್ತಾರೆ. ಅನೇಕ ಕಾರಣಗಳಿಂದ ಜ್ವರವು ಉತ್ಪನ್ನವಾದರೂ ವಾತಾದಿ ದೋಷಗಳ ಪ್ರತ್ಯೇಕ ಕಾರಣದಿಂದ ೩ ವಿಧಗಳೂ, ಮೂರೂ ಒಟ್ಟಾಗಿ ಎರಡೆರಡು ದೋಷಗಳು ಸೇರಿ ೩ ವಿಧ, ಆಗಂತುವಿನಿಂದ ೧ ವಿಧ, ಈ ರೀತಿಯಾಗಿ ಜ್ವರವು ೮ ವಿಧಗಳಾಗಿ ವಿಂಗಡಿಸಲ್ಪಟ್ಟಿರುತ್ತದೆ.

ದೋಷಾಃ ಪ್ರಕುಪಿತಾಃ ಸ್ವೇಷು ಕಾಲೇಷು ಸ್ವೈಃ ಪ್ರಕೋಪಣೈಃ ॥೧೫॥
ವ್ಯಾಪ್ಯ ದೇಹಮಶೇಷೇಣ ಜ್ವರಮಾಪಾದಯನ್ತಿ ಹಿ ।
ದುಷ್ಟಾಃ ಸ್ವಹೇತುಭಿರ್ದೋಷಾಃ ಪ್ರಾಪ್ಯಾಮಾಶಯ ಮೂಷ್ಮಣಾ ॥೧೬॥
ಸಹಿತಾಶ್ಚ ಸಮಾಗತ್ಯ ರಸಸ್ವೇದಪ್ರವಾಹಿಣಾಮ್ ।
ಸ್ರೋತಸಾಂ ಮಾರ್ಗಮಾವೃತ್ಯಮನ್ದೀಕೃತ್ಯ ಹುತಾಶನಮ್ ॥೧೭॥
ನಿರಸ್ಯ ಬಹಿರೂಷ್ಮಾಣಂ ಪಕ್ತಿಸ್ಥಾನಾಚ್ಚ ಕೇವಲಮ್ ।
ಶರೀರಂ ಸಮಭಿವ್ಯಾಪ್ಯ ಸ್ವಕಾಲೇಷು ಜ್ವರಾಗಮಮ್ ॥೧೮॥
ಜನಯನ್ತ್ಯಥ ವೃದ್ಧಿಂ ಚ ಸ್ವವರ್ಣಂ ಚ ತ್ವಗಾದಿಷು ।

ಪ್ರಾವೃಟ್ಕಾಲ (ಮಳೆಗಾಲ), ಶರತ್ಕಾಲ, ವಸಂತ ಕಾಲಗಳಲ್ಲೂ, ಅಹೋರಾತ್ರಿಗಳ ಅಂತ್ಯ, ಮಧ್ಯ, ಆದಿಗಳಲ್ಲೂ ಕ್ರಮವಾಗಿ ವಾತ, ಪಿತ್ತ, ಕಫಗಳು ಪ್ರಕೋಪಗೊಂಡು ಪ್ರಾಕೃತ ಜ್ವರವನ್ನುಂಟುಮಾಡುತ್ತವೆ ; ಬಲಿಷ್ಠರೊಡನೆ ಜಗಳವಾಡುವುದು, ಕಾಮ ಕ್ರೋಧಗಳಿಂದ ಪೀಡಿತರಾಗುವುದು ಇತ್ಯಾದಿ (ಆಗಂತು ಕಾರಣಗಳಿಂದ) ಪ್ರಕುಪಿತಗಳಾದ ದೋಷಗಳು ವೈಕೃತಜ್ವರಗಳನ್ನು ಉಂಟುಮಾಡುತ್ತವೆ. (ಜ್ವರಸಂಪ್ರಾಪ್ತಿಯು) ಮೇಲೆ ಹೇಳಿದ ಪ್ರಾಕೃತ ವೈಕೃತ ಕಾರಣಗಳಿಂದ ಪ್ರಕುಪಿತಗಳಾದರೆ ದೋಷಗಳು ಆಮಾಶಯವನ್ನು ಸೇರಿ ಧಾತೂಷ್ಮ ಮತ್ತು ಶರೀರದ ಊಷ್ಮಗಳಿಂದ ಕೂಡಿ ರಸವಾಹಿ ಮತ್ತು ಸ್ವೇದವಾಹಿ ಸ್ರೋತಸ್ಸುಗಳಲ್ಲಿ ತಡೆಯಲ್ಪಟ್ಟು ಅಗ್ನಿಯ ಬಲವನ್ನು ತಗ್ಗಿಸಿ ಜಾಠರಾಗ್ನಿ

ಯನ್ನು ಸ್ವಸ್ಥಾನದಿಂದ ಹೊರಗೆಡವಿ ಶಾಖವು ಶರೀರವನ್ನೆಲ್ಲಾ ವ್ಯಾಪಿಸುವಂತೆ ಮಾಡಿ ಜ್ವರವನ್ನುಂಟುಮಾಡುತ್ತವೆ ; ಪ್ರಕುಪಿತವಾದ ದೋಷಕ್ಕೆ ಅನುಸಾರವಾಗಿ ಚರ್ಮ, ಉಗುರು, ಕಣ್ಣುಗಳು, ಮಲಮೂತ್ರ ಇವುಗಳ ಬಣ್ಣವೂ ಬದಲಾಗುತ್ತದೆ.

ಟಿಪ್ಪಣಿ : ಬ್ರಹ್ಮದೇವನು ಸನ್ನಿಪಾತಕೋಪಲಕ್ಷಣಗಳನ್ನು ವಿವರಿಸುತ್ತಾನೆ. ವಿಷಮಾಧ್ಯಶನ ಅನಶನಗಳು ; ಎಳೆಯನಿಂಬೆಯಕಾಯಿ, ಹುಳಿಯಾದ ಹಣ್ಣುಗಳು, ಪರ್ವತದಮೇಲೆ ಇರುವ ಹಳ್ಳದಲ್ಲಿ ನಿಂತಿರುವ ನೀರನ್ನು ಕುಡಿಯುವುದು, ಎಳ್ಳಿನಹಿಂಡಿ, ಬಲಿತ ಮೂಲಂಗಿ, ಸಾಸಿವೆಯಸೊಪ್ಪು, ಯವೆಯಿಂದ ತಯಾರಿಸಿದ ಮದ್ಯ, ಕೃಶಜಂತುಗಳ ಒಣಗಿದ ಮಾಂಸ ಮತ್ತು ಸೊಪ್ಪುಗಳು, ಯವೆಯಅನ್ನ ಇವನ್ನೇ ಭೋಜನ ಮಾಡುವುದು, ಪರ್ವತದ ಮೇಲೆ ವಾಸಮಾಡುವುದು, ಕೆಟ್ಟುಹೋದ ನೀರು, ಮದ್ಯ, ಮೊಸರು, ಗೆಡ್ಡೆಗಳು, ಮಣ್ಣು, ವಿಷಗರ, (ಕೃಮುಸಗು) ಮೊದಲಾದುವನ್ನು ಸೇವಿಸುವುದು, ಋತುಗಳಲ್ಲಿ ಬದಲಾವಣೆಯಾಗುವುದು ; ದುರ್ದಿನ ಪೂರ್ವದಿಕ್ಕಿನ ವಾತವನ್ನು ಸೇವಿಸುವುದು, ಗ್ರಹಗಳಿಂದುಂಟಾದ ಹವದ ಬದಲಾವಣೆ, ಅಯೋಗ್ಯಗಳಾದ ಔಷಧಿಗಳನ್ನು ಮೂಗಿನಿಂದ ಅಘ್ರಾಣಿಸುವುದು, ಪಾಪಕರ್ಮಗಳನ್ನು ಅಭ್ಯಾಸ ಮಾಡುವುದು, ಅಕ್ರಮದಿಂದ ಸ್ನೇಹ ಸ್ವೇದ ಕರ್ಮಗಳನ್ನು ಸೇವಿಸುವುದು, ಪೂರ್ವಸಂಚಿತ ಕರ್ಮಫಲಾನುಭವವು, ಸ್ತ್ರೀಯರ ವಿಷಮಪ್ರಸವ ಮಿಥ್ಯಾಪ್ರಯೋಗವು, ಮಿಥ್ಯಾಯೋಗದಿಂದ ಪ್ರಸವಿಸಿದ ಸ್ತ್ರೀಗೆ ಸ್ನೇಹ, ಸ್ವೇದ, ರಸಾಯನಾದಿಗಳ ಪ್ರಯೋಗ ಇವುಗಳಿಂದ ವ್ಯಾಪತ್ತುಗಳು ಉಂಟಾಗುತ್ತವೆ.

ಮಿಥ್ಯಾತಿಯುಕ್ತೈರಪಿ ಚ ಸ್ನೇಹಾದ್ಯೈಃ ಕರ್ಮಭಿರ್ನೃಣಾಮ್ ||೧೯||
ವಿವಿಧಾದಭಿಘಾತಾಚ್ಚ ರೋಗೋತ್ಥಾನಾತ್ ಪ್ರಪಾಕತಃ |
ಶ್ರಮಾತ್ ಕ್ಷಯಾದಜೀರ್ಣಾಚ್ಚ ವಿಷಾತ್ ಸಾತ್ಮ್ಯರ್ತು ಪರ್ಯಯಾತ್ ||೨೦||
ಓಷಧೀಪುಷ್ಪಗಂಧಾಚ್ಚ ಶೋಕಾನ್ನಕ್ಷತ್ರಪೀಡನಾತ್ |
ಅಭಿಚಾರಾಭಿಶಾಪಾಭ್ಯಾಂ ಮನೋಭೂತಾಭಿಶಙ್ಕಯಾ ||೨೧||
ಸ್ತ್ರೀಣಾಮಪಪ್ರಜಾತಾನಾಂ ಪ್ರಜಾತಾನಾಂ ತಥಾಹಿತೈಃ |
ಸ್ತನ್ಯಾವತರಣೇ ಚೈವ ಜ್ವರೋ ದೋಷೈಃ ಪ್ರವರ್ತತೇ ||೨೨||

ಅನ್ಯಕಾರಣಗಳಿಂದಲೂ ಜ್ವರವುಂಟಾಗುತ್ತದೆ–ಸ್ನೇಹ, ಸ್ವೇದ, ವಮನ, ವಿರೇಚನಾದಿಕರ್ಮಗಳನ್ನು ಉಕ್ತವಿಧಿಯನ್ನು ಬಿಟ್ಟು ಬೇರೆ ಕ್ರಮದಿಂದ ಉಪಯೋಗಿಸುವುದೂ, ಅತಿಯಾಗಿ ಉಪಯೋಗಿಸುವುದೂ ಶಸ್ತ್ರ, ದೊಣ್ಣೆ, ಮಣ್ಣಿನಹೆಂಟೆ ಮೊದಲಾದ ವಿವಿಧ ವಸ್ತುಗಳಿಂದ ಪೆಟ್ಟುಬೀಳುವುದೂ ; ವಿದ್ರಧಿ ಮೊದಲಾದ ರೋಗಗಳುಂಟಾಗುವುದೂ ಮತ್ತು ಅವುಗಳು ಪಾಕವಾಗುವ ಕಾಲಗಳಲ್ಲೂ ; ದೇಹಾಯಾಸ, ರಾಜಯಕ್ಷ್ಮ ರೋಗ ಆಮಾಜೀರ್ಣ, ವಿಷಸಂಪರ್ಕ, ಅಭ್ಯಾಸವಾದ ಆಹಾರ ಬದಲಾವಣೆ, ಋತುಧರ್ಮಗಳು ಬದಲಾಗುವುದು ; ವಿಷೌಷಧಿಗಳ ವಾಸನೆಯನ್ನು ಮೂಸುವುದು, ವ್ಯಸನ, ಜನ್ಮನಕ್ಷತ್ರದಲ್ಲಿ ಕ್ರೂರ ಗ್ರಹಗಳು ಸೇರಿ ಬಾಧಿಸುವುದು ಆಥರ್ವಣೋಕ್ತಮಂತ್ರೋಚ್ಚಾರಣೆ

ಯಿಂದ ಪೀಡೆಯಾಗುವುದು, ದ್ವಿಜಗುರುಸಿದ್ಧರು ಕುಪಿತರಾಗಿ ಶಪಿಸುವುದು, ಕಾಮಾದಿ ಗಳಿಂದ ಮನೋಭಿಷಂಗವೂ, ದೇವಾದಿಗ್ರಹಾಭಿಷಂಗವೂ ಉಂಟಾಗುವುದು ; ಅಕಾಲದಲ್ಲಿ ಪ್ರಸವವಾಗಿರುವ, ಸರಿಯಾಗಿ ಪ್ರಸವ ಮಾಡದಿರುವ, ಸರಿಯಾಗಿ ಪ್ರಸವವಾದರೂ ಅಹಿತಾಚಾರಗಳನ್ನು ಸೇವಿಸುವ ಸ್ತ್ರೀಯಸ್ತನಗಳಲ್ಲಿ ಮೊದಲಾವರ್ತಿ ಹಾಲು ತುಂಬಿ ಕೊಳ್ಳುವಾಗಲೂ ದೋಷಪ್ರಕೋಪವುಂಟಾಗಿ ಜ್ವರವು ಬರುತ್ತದೆ.

ತೈರ್ವೇಗವದ್ಭಿರ್ಬಹುಧಾ ಸಮುದ್ಭ್ರಾನ್ತೈರ್ವಿಮಾರ್ಗಗೈಃ ।
ವಿಕ್ಷಿಪ್ಯಮಾಣೋಽನ್ತರಗ್ನಿರ್ಭವತ್ಯಾಶು ಬಹಿಶ್ಚರಃ ॥೨೩॥
ಋಣದ್ಧಿ ಚಾಪ್ಯಪಾಂ ಧಾತುಂ ಯಸ್ಮಾತ್ ತಸ್ಮಾಜ್ಜ್ವರಾತುರಃ ।
ಭವತ್ಯತ್ಯುಷ್ಣಗಾತ್ರಶ್ಚ ನ ಚ ಸ್ವಿದ್ಯತಿ ಸರ್ವಶಃ ॥೨೪॥

ಸುತ್ತಲೂ ಹರಡುವ ಸ್ವಭಾವವುಳ್ಳ ಆ ಪ್ರಕುಪಿತ ದೋಷಗಳು ಅತ್ತಿತ್ತ ಹರಡಿ ಅಡ್ಡಡ್ಡಲಾಗಿ ಮುನ್ನುಗ್ಗುತ್ತಾ ಅಂತರಗ್ನಿಯನ್ನು ಹೊರಕ್ಕೆ ಹೊರಡಿಸಿ ರೋಮಕೂಪ ಗಳ ಮೂಲಕ ಚರ್ಮದಕಡೆಗೆ ಹೋಗುವಂತೆ ಮಾಡುತ್ತದೆ ; ಈ ರೀತಿಯಾಗಿ ಹೊರ ಮುಖವಾಗಿ ರೋಮಕೂಪಗಳಿಂದ ಹೊರಟ ಶಾಖವು ಅಬ್ಧಾತುವಿನಿಂದ ಕಡೆಯಲ್ಪ ಡುವಕಾರಣ ಜ್ವರಪೀಡಿತನಿಗೆ ಶರೀರವೆಲ್ಲಾ ಅತ್ಯಂತ ಮೈ ಬೆವರುವುದಿಲ್ಲ ; ಒಂದು ಕಡೆಮಾತ್ರ ಬೆವರುತ್ತದೆ.)

ಶ್ರಮೋಽರತಿರ್ವಿವರ್ಣತ್ವಂ ವೈರಸ್ಯಂ ನಯನಪ್ಲವಃ ।
ಇಚ್ಛಾದ್ವೇಷೌ ಮುಹುಶ್ಚಾಪಿ ಶೀತವಾತಾತಪಾದಿಷು ॥೨೫॥
ಜೃಮ್ಭಾಙ್ಗಮರ್ದೋ ಗುರುತಾ ರೋಮಹರ್ಷೋಽರುಚಿಸ್ತಮಃ ।
ಅಪ್ರಹರ್ಷಶ್ಚ ಶೀತಂ ಚ ಭವತ್ಯುತ್ಪತ್ಸ್ಯತಿ ಜ್ವರೇ ॥೨೬॥
ಸಾಮಾನ್ಯತೋ ವಿಶೇಷಾತ್ತು ಜೃಮ್ಭಾತ್ಯರ್ಥಂ ಸಮೀರಣಾತ್ ।
ಪಿತ್ತಾನ್ನಯನಯೋರ್ದಾಹಃ ಕಫಾನ್ನಾನ್ನಾಭಿನನ್ದನಮ್ ॥೨೭॥
ಸರ್ವಲಿಙ್ಗಸಮವಾಯಃ ಸರ್ವದೋಷಪ್ರಕೋಪಜೇ ।
ದ್ವಯೋರ್ದ್ವಯೋಸ್ತು ರೂಪೇಣ ಸಂಸೃಷ್ಟಂ ದ್ವನ್ದ್ವಜಂ ವಿದುಃ ॥೨೮॥

ಜ್ವರದ ಪೂರ್ವರೂಪದಲ್ಲಿ ಆಯಾಸ, ಶಯನ ಆಸನಗಳಲ್ಲಿಯೂ ಹಿಂಸೆಯಾಗು ವುದು, ಮೈಬಣ್ಣವೂ ಬಾಯಿರುಚಿಯೂ ಬದಲಾಗುವುದು, ಕಣ್ಣೀರು ಸೋರುವುದು, ಶೀತವಾತ, ಬಿಸಿಲು, ಆಸನ, ಹಾಸಿಗೆಗಳಲ್ಲಿ ಪದೇಪದೇ ಪ್ರೀತಿಯೂ ದ್ವೇಷವೂ ಆಗು ವುದೂ ಆಕಳಿಕೆ, ಮೈಕತ್ತರಿಸುವಂತೆ ನೋವು, ಮೈಭಾರ, ಮೈರೋಮಗಳೆದ್ದು ನಿಲ್ಲುವುದು, ಅರೋಚಕತೆ, ಕಣ್ಣು ಕತ್ತಲು ಹಿಡಿಯುವುದು, ಮನಸ್ಸಿಗೆ ವ್ಯಸನ, ಮೈ ತಣ್ಣಗಾಗುವುದು ಈ ಲಕ್ಷಣಗಳಿರುತ್ತವೆ. ಇವು ಸಾಮಾನ್ಯ ಲಕ್ಷಣಗಳು. ಮುಖ್ಯ ವಾಗಿ ವಾತಜ್ವರದಲ್ಲಿ ಅತಿಯಾಗಿ ಆಕಳಿಕೆಯೂ, ಪಿತ್ತಜ್ವರದಲ್ಲಿ ಕಣ್ಣುರಿಯೂ, ಕಫ ಜ್ವರದಲ್ಲಿ ಆಹಾರದಲ್ಲಿ ಅನಿಚ್ಛೆಯೂ, ತ್ರಿದೋಷಜ್ವರದಲ್ಲಿ ಮೂರುದೋಷಗಳ ಲಕ್ಷಣ ಗಳೂ, ದ್ವಂದ್ವಜ್ವರಗಳಲ್ಲಿ ಎರಡೆರಡು ದೋಷಗಳ ಮಿಶ್ರಲಕ್ಷಣಗಳೂ ಕಾಣುತ್ತವೆ.

ವೇಪಥುರ್ವಿಷಮೋ ವೇಗಃ ಕಣ್ಠೌಷ್ಠಮುಖಶೋಷಣಮ್ ।
ನಿದ್ರಾನಾಶಃ ಕ್ಷವಃ ಸ್ತಮ್ಭೋ ಗಾತ್ರಾಣಾಂ ರೌಕ್ಷ್ಯಮೇವಚ ॥೨೯॥
ಶಿರೋಹೃದ್ಗಾತ್ರರುಗ್ವಕ್ತ್ರವೈರಸ್ಯಂ ಬದ್ಧವಿಟ್ಕತಾ ।
ಜೃಮ್ಭಾಧ್ಮಾನಂ ತಥಾ ಶೂಲಂ ಭವತ್ಯನಿಲಜೇ ಜ್ವರೇ ॥೩೦॥

ವಾತಜ್ವರದಲ್ಲಿ ಮೈ ನಡುಕವೂ ಕೆಲವು ಹೊತ್ತು ಹೆಚ್ಚುವೇಗವೂ ಕೆಲವು ಹೊತ್ತು ಕೊಂಚವೇಗವೂ, ಕತ್ತು, ತುಟಿಗಳು, ಬಾಯಿ ಒಣಗುವುದು, ಅತಿ ನಿದ್ರೆಯ ನಾಶವೂ, ಸೀನುಬರುವುದೂ, ಮೈ ಬಿಗಿತವೂ, ಮೈ ರೂಕ್ಷತೆಯೂ, (ಥಾಳಥಳ್ಯವಿಲ್ಲದೇ ಇರುತ್ತದೆ), ತಲೆ, ಹೃದಯ, ಮೈಗಳಲ್ಲಿ ನೋವೂ ಅರುಚಿಯೂ, ಮಲಬದ್ಧತೆಯೂ, ಆಕಳಿಕೆ, ಹೊಟ್ಟೆಯುಬ್ಬರ ಮತ್ತು ಹೊಟ್ಟೆಶೂಲೆ ಈ ಲಕ್ಷಣಗಳು ಇರುತ್ತವೆ.

ವೇಗಸ್ತೀಕ್ಷ್ಣೋಽತಿಸಾರಶ್ಚ ನಿದ್ರಾಲ್ಪತ್ವಂ ತಥಾ ವಮಿಃ ।
ಕಣ್ಠೌಷ್ಠಮುಖನಾಸಾನಾಂ ಪಾಕಃ ಸ್ವೇದಶ್ಚ ಜಾಯತೇ ॥೩೧॥
ಪ್ರಲಾಪಃ ಕಟುತಾ ವಕ್ತ್ರೇ ಮೂರ್ಛಾ ದಾಹೋ ಮದಸ್ತೃಷಾ ।
ಪೀತವಿಣ್ಮೂತ್ರ ನೇತ್ರತ್ವಂ ಪೈತ್ತಿಕೇ ಭ್ರಮ ಏವ ಚ ॥೩೨॥

ಪಿತ್ತಜ್ವರದಲ್ಲಿ ವೇಗವು ಚುರುಕಾಗಿರುತ್ತದೆ. ಅತಿಸಾರ, ಸ್ವಲ್ಪನಿದ್ರೆ, ವಮನ, ಕತ್ತು, ತುಟಿಗಳು, ಬಾಯಿ, ಮೂಗುಗಳಲ್ಲಿ ಹುಣ್ಣಾಗುವುದೂ, ಮೈ ಬೆವರುವುದೂ, ಅಸಂಬದ್ಧವಾಗಿ ಮಾತನಾಡುವುದೂ, ಮುಖದಲ್ಲಿ ಖಾರವಾದ ರುಚಿ, ಜ್ಞಾನತಪ್ಪುವುದೂ, ಮೈ ಉರಿತ, ನೀರಡಿಕೆಗಳು, (ಹಳದಿ ಬಣ್ಣದ ಮೂತ್ರವು ಪ್ರವೃತ್ತಿಯಾಗುತ್ತದೆ) ಮಲ-ಮೂತ್ರ, ಕಣ್ಣುಗಳು ಅರಶಿನ ಬಣ್ಣಕ್ಕೆ ತಿರುಗುವುದೂ ಮತ್ತು ತಲೆ ತಿರುಗುವಿಕೆ ಈ ಲಕ್ಷಣಗಳಿರುತ್ತವೆ.

ಗೌರವಂ ಶೀತಮುತ್ಕ್ಲೇಶೋ ರೋಮಹರ್ಷೋಽತಿನಿದ್ರತಾ ।
ಸ್ರೋತೋರೋಧೋ ರುಗಲ್ಪತ್ವಂ ಪ್ರಸೇಕೋ ಮಧುರಾಸ್ಯತಾ ॥೩೩॥
ನಾತ್ಯುಷ್ಣಗಾತ್ರತಾ ಛರ್ದಿರಙ್ಗಸಾದೋಽವಿಪಾಕತಾ ।
ಪ್ರತಿಶ್ಯಾಯೋಽರುಚಿಃ ಕಾಸಃ ಕಫಜೇಽಕ್ಷ್ಣೋಶ್ಚ ಶುಕ್ಲತಾ ॥೩೪॥

ಕಫಜ್ವರದಲ್ಲಿ ತಲೆ ಭಾರವಾಗಿ ಮೈ ತಣ್ಣಗಿರುತ್ತೆ, ಬಾಯಿಯಿಂದ ಜೊಲ್ಲುಸುರಿಯುತ್ತದೆ. ಮೈ ರೋಮಗಳೆದ್ದು ನಿಲ್ಲುತ್ತವೆ, ಅತಿನಿದ್ರೆ ಬರುತ್ತದೆ. ಸ್ರೋತಸ್ಸುಗಳಲ್ಲಿ ತಡೆಯುಂಟಾಗುತ್ತದೆ ; ಸ್ವಲ್ಪನೋವಿರುತ್ತದೆ. ಬಾಯಿ ನೀರು ಸೋರುತ್ತದೆ ; ಬಾಯಿ ಸಿಹಿಯಾಗಿರುತ್ತದೆ ; ಮೈ ಅತಿಬಿಸಿಯಾಗಿಯೂ ಇರುವುದಿಲ್ಲ, ಅತಿಯಾಗಿ ತಣ್ಣಗೂ ಇರುವುದಿಲ್ಲ ; ವಮನವಾಗುತ್ತದೆ, ದೇಹವು ಕೃಶವಾಗುತ್ತದೆ, ಆಹಾರ ಪಾಕವಾಗುವುದಿಲ್ಲ. ನೆಗಡಿ, ಕೆಮ್ಮು, ಅರೋಚಕತೆ, ಕಣ್ಣುಗಳು ಬೆಳ್ಳಗೂ ಇರುತ್ತವೆ.

ನಿದ್ರಾನಾಶೋ ಭ್ರಮಃ ಶ್ವಾಸಸ್ತನ್ದ್ರಾಸುಪ್ತಾಙ್ಗತಾರುಚಿಃ ।
ತೃಷ್ಣಾ ಮೋಹೋ ಮದಃ ಸ್ತಮ್ಭೋ ದಾಹಃ ಶೀತಂ ಹೃದಿವ್ಯಥಾ ॥೩೫॥

ಪಕ್ತಿಶ್ಚಿರೇಣ ದೋಷಾಣಾಮುನ್ಮಾದಃ ಶ್ಯಾವದನ್ತತಾ ।
ರಸನಾ ಪರುಷಾ ಕೃಷ್ಣಾ ಸನ್ನಿಮೂರ್ಧಾಸ್ಥಿಜಾರುಜಃ ॥೩೬॥
ನಿರ್ಭುಗ್ನಕಲುಷೇ ನೇತ್ರೇ ಕರ್ಣೌ ಶಬ್ದರುಗನ್ವಿತಾ ।
ಪ್ರಲಾಪಃ ಸ್ರೋತಸಾಂ ಪಾಕಃ ಕೂಜನಂ ಚೇತನಾ ಚ್ಯುತಿಃ ॥೩೭॥
ಸ್ವೇದಮೂತ್ರ ಪುರೀಷಾಣಾಮಲ್ಪಶಃ ಸುಚಿರಾತ್ಸ್ರುತಿಃ ।
ಸರ್ವಜೇ ಸರ್ವಲಿಙ್ಗಾನಿ ವಿಶೇಷಂ ಚಾತ್ರ ಮೇ ಶೃಣು ॥೩೮॥

ಸನ್ನಿಪಾತಜ್ವರದಲಕ್ಷಣವು : ನಿದ್ರೆಯು ನಾಶವಾಗುತ್ತದೆ, ತಲೆತಿರುಗುತ್ತದೆ ಊರ್ಧ್ವಶ್ವಾಸ (ಮೇಲ್ಮೇಲೆ ಉಸಿರುಬಿಡುತ್ತಾನೆ), ತೂಕಡಿಕೆ, ಸ್ಪರ್ಶಹಾನಿಯಾಗಿರುತ್ತದೆ. ಜಿಗುಟಿದರೂ ನೈನೋವು ಗೊತ್ತಾಗುವುದಿಲ್ಲ ; ಅರುಚಿಯಿರುತ್ತದೆ, ನೀರಡಿಕೆ, ಮೂರ್ಛೆ, ಅಡಿಕೆ ತಿಂದರೆ ಸೊಕ್ಕುವಂತೆ ಅಂಗಸಂಧಿಗಳು ಸಡಿಲವಾಗುತ್ತವೆ. ಅಂಗಗಳು ಬಿಗಿದುಹಿಡಿದಂತಾಗುತ್ತವೆ, ಮೈಉರಿತವೂ, ಮೈತಣ್ಣಗೂ ಇರುತ್ತದೆ ; ಹೃದಯದಲ್ಲಿ ನೋವಿರುತ್ತದೆ ; ದೋಷಗಳು ಬಲುಕಾಲಕಳೆದಮೇಲೆ ಪಾಕವಾಗುತ್ತವೆ ; ನಾಲಿಗೆಯು ಒರಟಾಗಿ ಕಪ್ಪಾಗಿರುತ್ತದೆ, ಅಸ್ಥಿಸಂಧಿ, ತಲೆ ಮೂಳೆಗಳು ನೋಯುತ್ತವೆ, ಕಣ್ಣುಗಳು ಸೊಟ್ಟವಾಗುತ್ತವೆ, ಕಣ್ಣಿನಲ್ಲಿ ನೀರುತುಂಬಿಕೊಂಡು ಕೊಳೆಯಾಗಿರುತ್ತದೆ. ಕಿವಿಗಳೊಳಗೆ ಶಬ್ದವೂ ನೋವೂ ಇರುತ್ತದೆ. ಅಸಂಬದ್ಧವಾಗಿ ಮಾತನಾಡುತ್ತಾನೆ, ಬಾಯಿ, ಮೂಗಿನಹೊಳ್ಳೆಗಳು ಹುಣ್ಣಾಗುತ್ತವೆ, ಗಂಟಲಿನಲ್ಲಿ ಅಸ್ಪಷ್ಟವಾದ ಶಬ್ದಗಳು ಹೊರಡುತ್ತವೆ, ಚಿತ್ತನಾಶವಾಗುತ್ತದೆ, ಮೂತ್ರ ಮಲಗಳು ಸ್ವಲ್ಪವಾಗಿಯೇ ವಿಸರ್ಜಿಸಲ್ಪಡುತ್ತವೆ ; ಬಹಳಕಾಲದ ಮೇಲೆ ಜ್ಞಾನವುಂಟಾಗುತ್ತದೆ. ಈ ರೀತಿಯಾಗಿ ತ್ರಿದೋಷಗಳ ಲಕ್ಷಣಗಳೂ ಕಂಡುಬರುತ್ತವೆ. ಈ ಸನ್ನಿಪಾತಜ್ವರದ ವಿಶೇಷ ಲಕ್ಷಣಗಳನ್ನು ಹೇಳುತ್ತೇನೆ ಕೇಳು.

ನಾತ್ಯುಷ್ಣಶೀತೋऽಲ್ಪಸಂಜ್ಞೋ ಭ್ರಾನ್ತಪ್ರೇಕ್ಷೀ ಹತಸ್ವರಃ ।
ಖರಜಿಹ್ವಃ ಶುಷ್ಕಕಣ್ಠಃ ಸ್ವೇದವಿಣ್ಮೂತ್ರವರ್ಜಿತಃ ॥೩೯॥
ಸಾಸ್ರನಿರ್ಭುಗ್ನಹೃದಯೋ ಭಕ್ತದ್ವೇಷೀ ಹತಪ್ರಭಃ ।
ಶ್ವಸನ್ ನಿಪತಿತಃ ಶೇತೇ ಪ್ರಲಾಪೋಪದ್ರವಾಯುತಃ ॥೪೦॥
ತಮಭಿನ್ಯಾಸಮಿತ್ಯಾಹುರ್ಹತೌಜಸಮಥಾಪರೇ ।
ಸನ್ನಿಪಾತಜ್ವರಂ ಕೃಚ್ಛ್ರಮಸಾಧ್ಯಮಪರೇ ವಿದುಃ ॥೪೧॥
ನಿದ್ರೋಪೇತಮಭಿನ್ಯಾಸಂ ಕ್ಷೀಣಮೇನಂ ಹತೌಜಸಮ್ ।
ಸಂನ್ಯಸ್ತಗಾತ್ರಂ ಸನ್ನ್ಯಾಸಂ ವಿದ್ಯಾತ್ ಸರ್ವಾತ್ಮಕೇ ಜ್ವರೇ ॥೪೨॥

ಅಭಿನ್ಯಾಸ ಲಕ್ಷಣವು–ಅತಿಉಷ್ಣವೂ ಅಲ್ಲದೆ ಶೀತವೂ ಅಲ್ಲದೆ ಸಮಶೀತೋಷ್ಣ ಸ್ಪರ್ಶದ ದೇಹವುಳ್ಳವನಾಗಿ ಸ್ವಲ್ಪವೇ ಜ್ಞಾನವುಳ್ಳವನಾಗಿ ಎಲ್ಲಾ ಪದಾರ್ಥಗಳನ್ನು ಭ್ರಾಂತನಾಗಿ ನೋಡುತ್ತಾ (ಪದಾರ್ಥವಿಂಥದೆಂಬ ಜ್ಞಾನವಿರುವುದಿಲ್ಲ) ಸ್ವರಹಾನಿಯಾಗಿ

ನಾಲಿಗೆಯು ತರಿತರಿಯಾಗಿ ಕಂಠವು ಒಣಗಿ ಬೇವರು ಮತ್ತು ಮಲಮೂತ್ರಗಳು ವಿಸರ್ಜನೆಯಾಗದೆ ಕಣ್ಣೀರನ್ನು ಸೋರಿಸುತ್ತ ಹೃದಯವು ಗಟ್ಟಿಯಾಗಿ ಅನ್ನವನ್ನು ದ್ವೇಷಿಸುವವನಾಗಿ ಕಾಂತಿಹೀನನಾಗಿ ಮೇಲ್ಮೇಲೆ ಉಸಿರಾಡಿಸುತ್ತಾ ಕೆಳಗೆ ಬಿದ್ದು ಅಂಗಹೀನನಂತೆ ಹಾಸಿಗೆಯಲ್ಲಿ ಮಲಗಿರುತ್ತಾ ಅಸಂಬದ್ಧ ಮಾತುಗಳನ್ನಾಡುತ್ತಾ ಇರುತ್ತಾನೆ; ಈ ರೋಗವನ್ನು ಅಭಿನ್ಯಾಸವೆಂಬ ಸನ್ನಿಪಾತ ವಿಶೇಷವೆಂದೂ; ಕೆಲವರು ಹತೌಜಸ್ಸೆಂದೂ ಹೇಳುತ್ತಾರೆ. ಸನ್ನಿಪಾತಜ್ವರವು ಕಷ್ಟಸಾಧ್ಯವೆಂದು ಮತ್ತೆ ಕೆಲವರೂ ಹೇಳುತ್ತಾರೆ. ಸನ್ನಿಪಾತದಲ್ಲಿ ನಿದ್ರೆಬರುತ್ತಿದ್ದರೆ ಅಭಿನ್ಯಾಸವೆಂದೂ ದೇಹಕ್ಷೀಣವಾಗಿದ್ದರೆ ಹತೌಜಸವೆಂದೂ, ದೇಹವು ಬಿದ್ದಲ್ಲಿಯೇ ಚೇಷ್ಟೆಯಿಲ್ಲದೆ ಬಿದ್ದಿದ್ದರೆ ಸನ್ಯಾಸವೆಂದೂ ತಿಳಿಯಬೇಕು.

ಟಿಪ್ಪಣಿ:—ಮೇಲೆ ಹೇಳಿದ ಎಲ್ಲಾ ಲಕ್ಷಣಗಳೂ ಇದ್ದರೆ ಅಸಾಧ್ಯವೆಂದೂ ಸ್ವಲ್ಪ ಕಡಿಮೆ ಲಕ್ಷಣಗಳಿದ್ದರೆ ಕಷ್ಟಸಾಧ್ಯವೆಂದೂ ತಿಳಿಯಬೇಕು. ನಿದ್ರೋಪೇತಮಭಿನ್ಯಾಸ ಎನ್ನುವುದರ ಮುಂದೆ ಪ್ರಲಿಪ್ತಸ್ನಿವಗಾತ್ರಾಣೀ ಇತ್ಯಾದಿ ಪ್ರಲೇಪಕ ಲಕ್ಷಣಗಳನ್ನು ಹೇಳುತ್ತಾರೆ. ನಿತ್ಯಂಮನ್ದಜ್ವರೋ ಇತ್ಯಾದಿಗಳಿಂದ ಕ್ಷಾರಪಾಣಿ ಪ್ರೋಕ್ತವಾತಬಲಾಸ ಜ್ವರವನ್ನು ಹೇಳುತ್ತಾರೆ. ಮಂದಜ್ವರ ಇತ್ಯಾದಿ ಪಾಠದನಂತರ ತೃಣಪುಷ್ಪಲಕ್ಷಣವನ್ನು "ಪುಷ್ಪೇಭ್ಯೋಗನ್ಧರಜಸೀ ತೇಜಸ್ವಿಭ್ಯೋಯದಾನಿಲಃ ಉಪಾದಾಯ ಮನುಷ್ಯಸ್ಯ ಪ್ರಾಣಾಪಾನೌನಿಯಚ್ಛತಿ॥ ಸೌಕ್ಷ್ಮ್ಯಾದನುಸೃತೋಧಾತೂರ್ ಮರ್ಮಾಣ್ಯಪಿ ಚತೇಜಸಾಕರ್ಮಚಿತ್ತಂ ಜ್ಞಾನಂ ತದಾ ಶಾಮ್ಯತಿ ಮಾರುತಃ॥ ಕರ್ಮಾದಿಷು ನಿರುದ್ಧೇಷು ಸ್ವಪಿತೀತಿ ಸುಹೃಜ್ಜನಃ ಮನ್ಯತೇ ಹೃತಚಿತ್ತತ್ವಾದೋಜಸ್ಯುಪರತೇ ಸತಿ ತಸ್ಯಾದಿತಃ ಶಿರೋರೋಗಃ ಸಸಂಜ್ಞಸ್ಯೈವಜಾಯತೇ ವಿಗನ್ಧಂ ಚ ಸುಗಂಧಂ ಚ ದೃಷ್ಟ್ವಾ ಕಸ್ಮಾತ್ ಸಮೂರ್ಛತಿ ತೃಣಪುಷ್ಪಕಮಿತ್ಯೇವಂ ಜ್ವರಂ ವಿದ್ಯಾದ್ವಿಚಕ್ಷಣಃ ಅಂದರೆ ಕೆಲವು ತೇಜಸ್ಸುಳ್ಳ ಪುಷ್ಪಗಳ ಮೇಲೆ ಬೀಸುವ ಘಾಳಿಯು ಆ ಪುಷ್ಪಗಳ ಪರಾಗಗಳನ್ನು ಹೊತ್ತು ತಂದು ಅದನ್ನು ಸೇವಿಸುವ ಜನರ ಪ್ರಾಣಾಪಾನ ವಾಯುಗಳನ್ನು ತಡೆದು ಅತಿ ಸೂಕ್ಷ್ಮವಾದ ಕಾರಣ ಅವರ ಧಾತುಗಳನ್ನು ಆಶ್ರಯಿಸಿ ತನ್ನ ತೇಜಸ್ಸಿನಿಂದ ಅವರ ಮರ್ಮಸ್ಥಾನಗಳನ್ನು ಸೇರಿ ಅವರ ಕರ್ಮ, ಮನಸ್ಸು, ಬಲ, ಜ್ಞಾನಗಳನ್ನು ನಾಶಗೊಳಿಸುತ್ತದೆ ; ಅವರಿಗೆ ಕರ್ಮಾದಿಗಳೂ ಹೃದಯ ಚಲನೆಯೂ ಶ್ವಾಸವೂ ನಿಂತು ಚಲನೆಯಿಲ್ಲದೆ ಬಿದ್ದಿರುತ್ತಾರೆ ; ಅವರ ಬಂಧುಗಳೆಲ್ಲಾ ಅವನು ನಿದ್ರಿಸುತ್ತಿರುವನೆಂದೇ ತಿಳಿಯುತ್ತಾರೆ, ಆತನಿಗೆ ಮೊದಲಿನಿಂದಲೂ ತಲೆನೋವು ಇದ್ದೇ ಇರುತ್ತದೆ. ವಾಸನೆ ಇರಲಿ ಇಲ್ಲದಿರಲಿ ಮೂರ್ಛೆ ಹೋಗುತ್ತಾನೆ, ಇದಕ್ಕೆ ತೃಣಪುಷ್ಪವಿಷ ಜನಿತ ಜ್ವರವೆನ್ನುತ್ತಾರೆ.

ಟಿಪ್ಪಣಿ : ರೋಗಿಯು ದೀರ್ಘಕಾಲ ಜೀವಿಸುವ ಸುಯೋಗವಿದ್ದರೆ ಮಲಪಾಕವಾಗುತ್ತದೆ, ಇಲ್ಲದೆ ಹೋದರೆ ಧಾತುಪಾಕವಾಗುತ್ತೆಂದು ತಿಳಿಯಬೇಕು. "ಪುನರ್ಘೋ

ರತರೋಭೂತ್ವಾ" ಎಂದು ಪುನಃ ಶಬ್ದದಿಂದ ಭಾಲುಕಿಯು ಹೇಳುವಂತೆ ಸನ್ನಿಪಾತಾವಧಿಯು ತ್ರಿದೋಷಗಳ ಮರ್ಯಾದೆ (ಅವಧಿ) ಯಾದ ೭-೯-೧೦ ದಿನಗಳ ದ್ವಿಗುಣಕಾಲ ಅಂದರೆ ೧೪-೧೮-೨೨ ದಿನಗಳೆಂದು ತಿಳಿಯಬೇಕು. ಮೊದಲನೆಯ ಅವಧಿಯಲ್ಲಿ ದೋಷಗಳು ಘೋರವಾಗಿರುತ್ತವೆ, ೨ ನೆಯ ಅವಧಿಯಲ್ಲಿ ಘೋರತರಗಳಾಗುತ್ತವೆ. ಧಾತುಪಾಕಲಕ್ಷಣ—ದೇಹದಲ್ಲಿ ಜ್ವರವೂ ವ್ಯಥೆಯೂ ಕಡಮೆಯಾಗಿ ಮಾತನಾಡಲು ಕಷ್ಟಪಡುತ್ತಾ (ತೊದಲುಮಾತನಾಡುತ್ತಾ) ನೆಯೋ ಆತನನ್ನು ಧಾತುಪಾಕಿಯೆಂದು ತಿಳಿಯಬೇಕು. ಶಕುನಗಳಿಂದಲೂ ರಿಷ್ಟಲಕ್ಷಣಗಳಿಂದಲೂ ಧಾತುಪಾಕವೆಂಬುದನ್ನು ನಿರ್ಧರಿಸಬೇಕೆಂದು ವೃದ್ಧರು ಹೇಳುತ್ತಾರೆ.

ದ್ವಿದೋಷೋಚ್ಛ್ರಾಯಲಿಙ್ಗಾಸ್ತು ದ್ವನ್ದ್ವಜಾಸ್ತ್ರಿವಿಧಾಃ ಸ್ಮೃತಾಃ ।

ಎರಡೆರಡು ದೋಷಗಳ ವೃದ್ಧಿಲಕ್ಷಣಗಳಿದ್ದರೆ ದ್ವಂದ್ವಜಗಳೆಂದು ಹೇಳುತ್ತಾರೆ. ವಾತಪಿತ್ತ, ವಾತಶ್ಲೇಷ್ಮ, ಪಿತ್ತಶ್ಲೇಷ್ಮಗಳೆಂದು ೩ ವಿಧ ದ್ವಂದ್ವಜ್ವರಗಳಿವೆ.

ತೃಷ್ಣಾ ಮೂರ್ಛಾ ಭ್ರಮೋ ದಾಹಃ ಸ್ವಪ್ನನಾಶಃ ಶಿರೋರುಜಾ ॥೪೭॥
ಕಣ್ಠಾಸ್ಯಶೋಷೋ ವಮಥೂರೋಮಹರ್ಷೋಽರುಚಿಸ್ತಥಾ ।
ಪರ್ವಭೇದಶ್ಚ ಜೃಮ್ಭಾ ಚ ವಾತಪಿತ್ತಜ್ವರಾಕೃತಿಃ ॥೪೮॥
ಸ್ತೈಮಿತ್ಯಂ ಪರ್ವಣಾಂ ಭೇದೋ ನಿದ್ರಾ ಗೌರವಮೇವ ಚ ।
ಶಿರೋಗ್ರಹಃ ಪ್ರತಿಶ್ಯಾಯಃ ಕಾಸಃ ಸ್ವೇದಾಪ್ರವರ್ತನಮ್ ॥೪೯॥
ಸನ್ತಾಪೋ ಮಧ್ಯವೇಗಶ್ಚ ವಾತಶ್ಲೇಷ್ಮಜ್ವರಾಕೃತಿಃ ।
ಲಿಪ್ತತಿಕ್ತಾಸ್ಯತಾ ತಂದ್ರಾ ಮೋಹಃ ಕಾಸೋಽರುಚಿಸ್ತೃಷಾ ॥೫೦॥
ಮುಹುರ್ದಾಹೋ ಮುಹುಃ ಶೀತಂ ಶ್ಲೇಷ್ಮಪಿತ್ತಜ್ವರಾಕೃತಿಃ ।
(ಜೃಮ್ಭಾಧ್ಮಾನಮದೋತ್ಕಮ್ಪಪರ್ವಭೇದಪರಿಕ್ಷಯಾಃ ।
ತೃಟ್ಪ್ರಲಾಪಾಭಿತಾಪಾಃ ಸ್ಯುರ್ಜ್ವರೇ ಮಾರುತಪೈತ್ತಿಕೇ ॥೧॥
ಶೂಲಕಾಸಕಫೋತ್ಕ್ಲೇಶಶೀತವೇಪಥುಪೀನಸಾಃ ।
ಗೌರವಾರುಚಿವಿಷ್ಟಮ್ಭಾ ವಾತಶ್ಲೇಷ್ಮ ಸಮುದ್ಭವೇ ॥೨॥
ಶೀತದಾಹಾರುಚಿಸ್ತಮ್ಭಸ್ವೇದಮೋಹಮದಭ್ರಮಾಃ ।
ಕಾಸಾಙ್ಗಸಾದಹೃಲ್ಲಾಸಾ ಭವನ್ತಿ ಕಫಪೈತ್ತಿಕೇ ॥೩॥)

ನೀರಡಿಕೆ, ಜ್ಞಾನನಾಶ, ತಲೆತಿರುಗುವಿಕೆ, ಮೈಉರಿತ, ನಿದ್ರೆನಾಶ, ತಲೆನೋವು ಕತ್ತುಮುಖಗಳು ಒಣಗುವುದು, ವಮನ, ಮೈರೋಮಾಂಚನವಾಗುವುದು, ಅರೋಚಕತೆ, ಕೈಬೆರಳುಗಳ ಗಿಣ್ಣುಗಳಲ್ಲಿ ನೋವು, ಇವು ವಾತಪಿತ್ತಜ್ವರದ ಲಕ್ಷಣಗಳು. ಜ್ವರಪೀಡಿತನು ಚಲಿಸದೆ ಒಂದೇಕಡೆ ಕುಳಿತಿರುವುದು, ಕೈಬೆರಳ ಗಿಣ್ಣುಗಳಲ್ಲಿ ನೋವು, ನಿದ್ರೆ ಬರುತ್ತಲೇ ಇರುವುದು, ಮೈ ಭಾರವಾಗಿರುವುದು, ತಲೆ ಬಿಗಿದುಹಿಡಿದಂತಾಗುವುದು, ನೆಗಡಿ, ಕೆಮ್ಮಲು, ಬೆವರುಬಾರದೆ ತಡೆದಿರುವುದು, ಶರೀರ ಮನಸ್ಸುಗಳಲ್ಲಿ ಉರಿಯುವಂತೆ

ವ್ಯಥೆ ತೋರುವುದು, ದೋಷಗಳು ಮಧ್ಯಮ ಸ್ಥಿತಿಯಲ್ಲಿರುವುದು, ಇವು ವಾತಶ್ಲೇಷ್ಮ ಜ್ವರದ ಲಕ್ಷಣಗಳು. ನಾಲಿಗೆಯ ಮೇಲೆ ಕಫ ಮೆತ್ತಿರುವುದು ಮತ್ತು ನಾಲಿಗೆ ಕಹಿಯಾಗಿರುವುದು, ತೂಕಡಿಕೆ, ಮತ್ತತೆಯುಂಟಾಗುವುದು, ಕಾಸ, ಅರೋಚಕತೆ, ಬಾಯಾರಿಕೆ, ಆಗಾಗ್ಯೆ ಮೈ ಉರಿಯುವಂತೆಯೂ ಹಾಗೆಯೇ ತಣ್ಣಗಾದಂತೆಯೂ ತೋರುವುದು. ಇವು ಪಿತ್ತಕಫಜ್ವರದ ಲಕ್ಷಣಗಳು. (ಜೆಜ್ಜಟಾಚಾರ್ಯರು ದ್ವಂದ್ವ ಜ್ವರಲಕ್ಷಣಗಳನ್ನು ಹೀಗೆ ಹೇಳುತ್ತಾರೆ—ಆಕಳಿಕೆ, ಹೊಟ್ಟೆಯುಬ್ಬರ ಮತ್ತು ಮೈನಡುಕ, ಬೆರಳುಗಳ ಗಿಣ್ಣುಗಳಲ್ಲಿ ನೋವು, ದೇಹಕ್ಷೀಣತೆ, ಬಾಯಾರಿಕೆ, ಅಸಂಬದ್ಧ ಮಾತು ಮೈಉರಿಯುವುದು, ಇವು ವಾತಪಿತ್ತಜ್ವರದ ಲಕ್ಷಣಗಳು. ಹೊಟ್ಟೆಯನೋವು, ಕೆಮ್ಮು, ಕಫವು ಬಾಯಿನಿಂದ ಸೋರುವುದು, ಮೈ ತಣ್ಣಗಿರುವುದು, ಮೈನಡುಕ, ನೆಗಡಿ, ಮೈಭಾರ, ಅರೋಚಕತೆ, ಮಲಬಂಧ, ಇವು ವಾತಶ್ಲೇಷ್ಮಜ್ವರದ ಲಕ್ಷಣಗಳು. ಮೈ ತಣ್ಣಗಿರುವುದು, ಉರಿಯುವಂತೆ ಅನುಭವ ತೋರುವುದು, ಅರೋಚಕತೆ, ಮೈಬಿಗಿದು ಹಿಡಿದುಕೊಂಡಂತಿರುವುದು, ಬೆವರುವುದು, ಮತ್ತತೆ, ತಲೆ ತಿರುಗುವಿಕೆ, ಕೆಮ್ಮು, ಮೈ ಕೃಶವಾಗುವುದು, ಬಾಯಿನಿಂದ ಜೊಲ್ಲು ಸುರಿಯುವುದು ಈ ಲಕ್ಷಣಗಳು ಕಫಪಿತ್ತಜ್ವರದ ಲಕ್ಷಣಗಳೆಂದು ಹೇಳುತ್ತಾರೆ) ಇವುಗಳೆರಡು ವಿಧಗಳಲ್ಲೊಂದನ್ನು ಮಾತ್ರವೇ ಗಮನಿಸಬೇಕು.

ಕ್ಷಾಮಾಣಾಂ ಜ್ವರಮುಕ್ತಾನಾಂ ಮಿಥ್ಯಾಹಾರವಿಹಾರಿಣಾಮ್ ।
ದೋಷಃ ಸ್ವಲ್ಪೋಽಪಿ ಸಂವೃದ್ಧೋ ದೇಹಿನಾಮನಿಲೇರಿತಃ ॥೫೧॥
ಸತತಾನ್ಯೇದ್ಯುಷ್ಕತ್ರ್ಯಾಖ್ಯ ಚಾತುರ್ಥಾನ್ ಸಪ್ರಲೇಪಕಾನ್ ।
ಕಫಸ್ಥಾನವಿಭಾಗೇನ ಯಥಾಸಂಖ್ಯಂ ಕರೋತಿ ಹಿ ॥೫೨॥

ಕೃಶರಿಗೆ ಜ್ವರಬಿಟ್ಟು ಮಿಥ್ಯಾಹಾರ ವಿಹಾರಗಳ ಸೇವನೆಯಿಂದ ದೋಷವು ಸ್ವಲ್ಪ ವಿದ್ದರೂ ಬಾಹ್ಯ ಹೇತುವಿನಿಂದ ವೃದ್ಧಿಯಾದ ವಾತದಿಂದ ಪ್ರೇರಿತಗಳಾಗಿ ಆಮಾಶಯ, ಹೃದಯ, ಕಂಠ, ಶಿರಸ್ಸು ಸಂಧಿಗಳೆಂಬ ಕಫಸ್ಥಾನಗಳಿಗೆ ಅನುಸಾರವಾಗಿ ಸತತ, ಅನ್ಯೇದ್ಯುಷ್ಕ, ತ್ರ್ಯಾಹ್ಯಿಕ, ಚಾತುರ್ಥಿಕ, ಪ್ರಲೇಪಗಳೆಂಬ ಜ್ವರಗಳನ್ನುಂಟುಮಾಡುತ್ತವೆ. ಆಮಾಶಯದೋಷದಿಂದ ಸತತಜ್ವರವುಂಟಾಗಿ ದಿನಕ್ಕೆ ೨ ವೇಳೆ ಬರುತ್ತದೆ. ಹೀಗೆ ಹೃದಯಾದಿ ಸ್ಥಾನದ ದೋಷಗಳಿಂದ ಅನ್ಯೇದ್ಯುಷ್ಕಾದಿಗಳು ಸಂಭವಿಸುತ್ತವೆ ; ೫ ಕಫಸ್ಥಾನಗಳಲ್ಲಿರುವ ದೋಷಗಳೆಲ್ಲಾ ಒಟ್ಟುಸೇರಿ ಸತತ ಜ್ವರವನ್ನುಂಟುಮಾಡುತ್ತವೆಂದು ತಿಳಿಯಬೇಕು.

ಅಹೋರಾತ್ರಾದಹೋರಾತ್ರಾತ್ ಸ್ಥಾನಾತ್ ಸ್ಥಾನಂ ಪ್ರಪದ್ಯತೇ ।
ತತಶ್ಚಾಮಾಶಯಂ ಪ್ರಾಪ್ಯ ಘೋರಂ ಕುರ್ಯಾಜ್ಜ್ವರಂ ನೃಣಾಮ್ ॥೫೩॥
ತಥಾ ಪ್ರಲೇಪಕೋ ಜ್ಞೇಯಃ ಶೋಷಿಣಾಂ ಪ್ರಾಣನಾಶನಃ ।
ದುಶ್ಚಿಕಿತ್ಸ್ಯತಮೋ ಮನ್ದಃ ಸುಕಷ್ಟೋ ಧಾತುಶೋಷಕೃತ್ ॥೫೪॥

ಒಂದು ಹಗಲು ಒಂದು ರಾತ್ರಿ ಕೂಡಿದ ಕಾಲಕ್ಕೆ ಒಂದು ದಿನವೆಂಬ ಸಂಜ್ಞೆ. ದೋಷಗಳು ಒಂದೊಂದು ದಿನಸ ಒಂದೊಂದು ಸ್ಥಾನಕ್ಕೆ ಬಂದು ಆಮಾಶಯವನ್ನು ಸೇರಿ ಉತ್ಕಟವಾದ ಜ್ವರವನ್ನುಂಟುಮಾಡುತ್ತವೆ. ಹೇಗೆಂದರೆ ಉರಃಪ್ರದೇಶದಲ್ಲಿರುವ ದೋಷವು ಒಂದುದಿನ ಕಳೆದನಂತರ ಆಮಾಶಯಕ್ಕೆ ಬಂದು ಮಾರನೆಯ ದಿವಸ ಜ್ವರವನ್ನುಂಟುಮಾಡುತ್ತದೆ; ಕಂಠದಲ್ಲಿರುವ ದೋಷವು ಒಂದು ದಿವಸ ಹೃದಯಕ್ಕೂ ಒಂದು ದಿವಸ ಆಮಾಶಯಕ್ಕೂ ಬಂದು ಮೂರನೆಯ ದಿನ ಜ್ವರವನ್ನು ಉಂಟುಮಾಡುತ್ತದೆ; ಹೀಗೆ ಶಿರಸ್ಸಿನಲ್ಲಿರುವ ದೋಷವು ಕ್ರಮವಾಗಿ ಕಂಠ ಹೃದಯ ಆಮಾಶಯಗಳನ್ನು ಮೂರುದಿನಗಳಲ್ಲಿ ಸೇರಿ ನಾಲ್ಕನೆಯದಿನ ಜ್ವರವನ್ನು ಮಾಡುತ್ತದೆ. ಅಸ್ಥಿಸಂಧಿಗಳಲ್ಲಿರುವ ದೋಷವು ನಿತ್ಯವು ಜ್ವರವನ್ನುಂಟುಮಾಡುತ್ತದೆ. ಇದು ರಾಜಯಕ್ಷ್ಮರೋಗಿಗಳಿಗೆ ಮಾತ್ರ ಬರತಕ್ಕ ಜ್ವರವು ಮತ್ತು ಸನ್ನಿಪಾತಾತ್ಮಕವಾದದ್ದು. ಮಂದ ವೇಗವುಳ್ಳದ್ದು; ಧಾತುಗಳನ್ನೇ ಕ್ಷೀಣಗೊಳಿಸಿ ಮರಣವನ್ನೇ ಉಂಟುಮಾಡುತ್ತದೆಯಾಗಿ ಅತಿ ಕಷ್ಟವೆಂದು ತಿಳಿಯಬೇಕು.

ಕಫಸ್ಥಾನೇಷು ವಾ ದೋಷತಿಷ್ಠನ್ ದ್ವಿತ್ರಿಚತುರ್ಷು ವಾ ।
ವಿಪರ್ಯಯಾಖ್ಯಾನ್ ಕುರುತೇ ವಿಷಮಾನ್ ಕುರುತೇ ವಿಷಮಾನ್ ಕೃಚ್ಛ್ರಸಾಧನಾನ್ ॥೫೫॥

ಉರಸ್ಸು ಆಮಾಶಯಗಳೆರಡು ಸ್ಥಾನಗಳಲ್ಲಿ ದೋಷಗಳಿದ್ದರೆ ಪೂರ್ವಾಹ್ಣ ದಿನಗಳಲ್ಲೊಂದು ಕಾಲದಲ್ಲಿ ಜ್ವರವು ಬಿಟ್ಟಿರುತ್ತೆ. ಬಾಕಿದಿನವೆಲ್ಲಾ ಜ್ವರವಿರುತ್ತದೆ. ಕತ್ತು ಉರಸ್ಸು, ಆಮಾಶಯ ಈ ಮೂರು ಸ್ಥಳಗಳಲ್ಲಿ ದೋಷಗಳಿದ್ದರೆ ಎರಡು ದಿನ ಜ್ವರ ಬಂದು ಮೂರನೆಯ ದಿನ ಬಿಡುತ್ತದೆ. ತಲೆ, ಕತ್ತು, ಉರಸ್ಸು, ಆಮಾಶಯಗಳೆಂಬ ೪ ಸ್ಥಾನಗಳಲ್ಲೂ ದೋಷಗಳಿದ್ದರೆ ಮೂರು ದಿನಗಳವರೆಗೆ ಜ್ವರ ಬಂದು ೪ ನೆಯ ದಿನ ಬಿಡುತ್ತದೆ. ಹೀಗೆ ಕ್ರಮವಾಗಿ ಅನ್ಯೇದ್ಯುಷ್ಕವಿಪರ್ಯಯ, ತೃತೀಯಕವಿಪರ್ಯಯ, ಚಾತುರ್ಥಿಕ ವಿಪರ್ಯಯಗಳುಂಟಾಗುತ್ತವೆಂದು ತಿಳಿಯಬೇಕು. ಆಮಾಶಯವೊಂದರಲ್ಲೇ ದೋಷವಿದ್ದು ಜ್ವರವನ್ನು ಬರಿಸುವ ಸತತಕವಿಪರ್ಯಯವಿಲ್ಲ. ದೋಷವೆಂದರೆ ಒಂದು, ಎರಡು, ಮೂರು ದೋಷಗಳೆಂದು ಅರ್ಥವು.

ಪರೋ ಹೇತುಃ ಸ್ವಭಾವೋ ವಾ ವಿಷಮೋ ಕೈಶ್ಚಿದೀರಿತಃ ।
ಆಗನ್ತುಶ್ಚಾನುಬನ್ಧೋ ಹಿ ಪ್ರಾಯಶೋ ವಿಷಮಜ್ವರೇ ॥೫೬॥

ವಿಷಮಜ್ವರವು ನಿಯತಕಾಲದಲ್ಲೇ ಬರುವುದಕ್ಕೆ ಸ್ವಭಾವವೇ ಮುಖ್ಯ ಕಾರಣವೆಂದು ಕೆಲವರ ಮತವು. ಪ್ರಾಯಶಃ ವಿಷಮಜ್ವರಕ್ಕೆ ಆಗಂತುಕಾರಣವೇ ಮುಖ್ಯವಾದದ್ದು.

ವಾತಾಧಿಕತ್ವಾತ್ ಪ್ರವದನ್ತಿ ತಜ್ಞಾಸ್ತೃತೀಯಕಂ ವಾಪಿ ಚತುರ್ಥಕಂ ಚ ।
ಔಪತ್ಯಕೇ ಮದ್ಯಸಮುದ್ಭವೇ ಚ ಹೇತುಂ ಜ್ವರೇ ಪಿತ್ತಕೃತಂ ವದನ್ತಿ ॥೫೭॥

ಪ್ರಲೇಪಕಂ ವಾತಬಲಾಸಕಂ ಚ ಕಫಾಧಿಕತ್ವೇನ ವದನ್ತಿ ತಜ್ಞಾಃ ।
ಮೂರ್ಛಾನುಬನ್ಧಾ ವಿಷಮಜ್ವರಾ ಯೇ ಪ್ರಾಯೇಣ ತೇ ದ್ವನ್ದ್ವ ಸಮುತ್ಥಿತಾಸ್ತು ||೫೮||

ಇತರ ಗ್ರಂಥಕಾರರು ಕಫಪಿತ್ತದಿಂದ ತ್ರಿಕಗ್ರಹವೂ, ವಾತಕಫದಿಂದ ಪೃಷ್ಠಗ್ರಹವೂ, ವಾತಪಿತ್ತದಿಂದ ಶಿರೋಗ್ರಹವೂ ಉಂಟಾಗುತ್ತದೆಂದೂ, ತೃತೀಯಕ ಚತುರ್ಥಕ ಜ್ವರಗಳು ದ್ವಿದೋಷಗಳಿಂದೂ ಅಭಿಪ್ರಾಯಪಡುತ್ತಾರಾದರೂ ಈ ಗ್ರಂಥಕಾರರಾದ ಸುಶ್ರುತರ ಮತದಲ್ಲಿ ವಾತಾಧಿಕ್ಯತೆಯೂ ಉಂಟೆಂದು ತಿಳಿಯಬೇಕು. ಪರ್ವತದ ಸಮೀಪದೇಶದಲ್ಲಿ ತೀಕ್ಷ್ಣೋಷ್ಣ ಗುಣವುಳ್ಳ ಔಷಧಿಗಳಿಂದ ಪಿತ್ತಪ್ರಕೋಪವುಂಟಾಗುತ್ತದೆ. ಹಾಗೆಯೇ ಮದ್ಯಪಾನದಿಂದ ಬರುವ ಜ್ವರವೂ ಪಿತ್ತಕರವು. ಪ್ರಲೇಪಕಜ್ವರದಲ್ಲಿ ವಾತವು ಪ್ರೇರಕವಾದರೂ ಸಂಧಿಗಳು ಕಫಸ್ಥಾನವಾದ್ದರಿಂದ ಕಫವೇ ಅಧಿಕವಾಗಿರುತ್ತೆಂದು ತಿಳಿಯಬೇಕು. ಹಾಗೆಯೇ ವಾತಬಲಾಸಕ ಜ್ವರದಲ್ಲೂ ಕಫವೇ ಹೆಚ್ಚಾಗಿರುತ್ತದೆ. ವಿಷಮಜ್ವರಗಳಲ್ಲಿ ಸದಾಕಾಲದಲ್ಲೂ ಮೂರ್ಛೆಯು ಅನುಸರಿಸಿದ್ದರೆ ಅವು ಪ್ರಾಯಿಕವಾಗಿ ದ್ವಂದ್ವಜದೋಷಗಳಿಂದಲೇ ಉಂಟಾಗುತ್ತವೆ.

ತ್ವಕ್ಸ್ಥೌ ಶ್ಲೇಷ್ಮಾನಿಲೌ ಶೀತಮಾದೌ ಜನಯತೋ ಜ್ವರೇ ।
ತಯೋಃ ಪ್ರಶಾನ್ತಯೋಃ ಪಿತ್ತಮನ್ತೇ ದಾಹಂ ಕರೋತಿ ಚ ||೫೯||
ಕರೋತ್ಯಾದೌ ತಥಾ ಪಿತ್ತಂ ತ್ವಕ್ಸ್ಥಂ ದಾಹಮತೀವ ಚ ।
ಪ್ರಶಾನ್ತೇ ಕುರುತಸ್ತಸ್ಮಿಂಶ್ಶೀತಮನ್ತೇ ಚ ತಾವಪಿ ||೬೦||
ದ್ವಾವೇತೌ ದಾಹಶೀತಾದೀ ಜ್ವರೌ ಸಂಸರ್ಗಜೌ ಸ್ಮೃತೌ ।
ದಾಹಪೂರ್ವಸ್ತಯೋಃ ಕಷ್ಟಃ ಕೃಚ್ಛ್ರಸಾಧ್ಯತಮಶ್ಚ ಸಃ ||೬೧||

ಈ ಸತತಕಾದಿ ಜ್ವರಗಳಲ್ಲಿ ಎರಡು ವಿಧಗಳುಂಟು. ತ್ವಗ್ಗತಗಳಾದ ವಾತ ಕಫಗಳಿಂದ ಜ್ವರದ ಪ್ರಾರಂಭದಲ್ಲಿ ಶೀತವುಂಟಾಗುತ್ತದೆ. ಶಮನವಾಗಿ ಪಿತ್ತದಿಂದ ಕಡೆಯಲ್ಲಿ ಅತಿಯಾಗಿ ದಾಹವುಂಟಾದರೆ ಶೀತಾದಿಜ್ವರವೆಂದೂ ಹಾಗೆಯೇ ತ್ವಗ್ಗತವಾದ ಪಿತ್ತವು ಜ್ವರದ ಪ್ರಾರಂಭದಲ್ಲಿ ಅತಿಯಾಗಿ ಮೈಉರಿಯನ್ನುಂಟುಮಾಡಿ ಅದು ಶಾಂತವಾಗಿ ನಿಂತ ಮೇಲೆ ವಾತಕಫಗಳು ಮೈಶೀತವಾಗುವಂತೆ ಮಾಡಿದರೆ ಇದಕ್ಕೆ "ದಾಹಪೂರ್ವಜ್ವರ" ವೆಂದೂ ಹೆಸರು. ಇವು ಸಂಸರ್ಗದೋಷಗಳಿಂದುಂಟಾಗುತ್ತವೆ. ಇವುಗಳ ಪೈಕಿ ದಾಹಪೂರ್ವಕಜ್ವರವು ಕಷ್ಟತರವಾದ ಕಾರಣ ಅತ್ಯಂತ ಕಷ್ಟಪಟ್ಟು ಗುಣಪಡಿಸಬೇಕಾಗುತ್ತದೆ.

ಪ್ರಸಕ್ತಶ್ಚಾಭಿಘಾತೋತ್ಥಶ್ಚೇತನಾಪ್ರಭವಸ್ತು ಯಃ ।
ರಾತ್ರ್ಯಹ್ನೋಃ ಷಟ್ಸು ಕಾಲೇಷು ಕೀರ್ತಿತೇಷು ಯಥಾ ಪುರಾ ||೬೨||
ಪ್ರಸಹ್ಯ ವಿಷಮೋಽಭ್ಯೇತಿ ಮಾನವಂ ಬಹುಧಾ ಜ್ವರಃ ।

ದೊಣ್ಣೆ, ಕಲ್ಲು, ಮಣ್ಣಿನಹೆಂಟೆ ಮೊದಲಾದುವುಗಳಿಂದ ಶರೀರಕ್ಕೆ ಪೆಟ್ಟು ಬೀಳು ವುದರಿಂದಲೂ, ಕಾಮಾದಿ ಮನೋವಿಕಾರಗಳಿಂದಲೂ ಉಂಟಾಗುವ ಜ್ವರಗಳು ದೀರ್ಘ ಕಾಲದವರೆಗೂ ಅನುಸರಿಸಿಕೊಂಡೇ ಬರುವ ಕಾರಣ ಅತ್ಯಂತ ಕಷ್ಟಸಾಧ್ಯಗಳು. ಹಿಂದೆ ಹೇಳಿದ ಸತತಾದಿ ಜ್ವರಗಳು ಪ್ರದೋಷ, ಅರ್ಧರಾತ್ರಿ, ಪ್ರತ್ಯೂಷ (ಬೆಳಗಿನಝಾವ) ಎಂಬ ಮೂರು ಕಾಲಗಳನ್ನೂ, ಹಗಲಿನ ಪೂರ್ವಾಹ್ಣ, ಮಧ್ಯಾಹ್ನ, ಅಪರಾಹ್ಣಗಳೆಂಬ ೩ ಕಾಲಗಳಲ್ಲೂ, ಪೂರ್ವಾಹ್ಣ ಪ್ರದೋಷಗಳಲ್ಲಿ ಕಫದೋಷದಿಂದಲೂ, ಮಧ್ಯಾಹ್ನ ಅರ್ಧ ರಾತ್ರಿಗಳಲ್ಲಿ ಪಿತ್ತದೋಷದಿಂದಲೂ, ಸಾಯಾಹ್ನ ಪ್ರತ್ಯೂಷ (ಬೆಳಗಿನ ಝಾವ) ಗಳಲ್ಲಿ ವಾತದೋಷದಿಂದಲೂ ಸತತ ಜ್ವರವು ದಿನಕ್ಕೆ ೨ ವೇಳೆಯಂತೆಯೂ, ಅನ್ಯೇದ್ಯುಷ್ಕವು ದಿನಕ್ಕೆ ಒಂದು ವೇಳೆಯಂತೆಯೂ ತ್ರ್ಯಾಹಿಕಜ್ವರವು ಒಂದುದಿನ ಬಿಟ್ಟು ಮೂರನೆಯ ದಿನವೂ ಚಾತುರ್ಥಿಕವು ಎರಡು ದಿನಗಳನ್ನು ಬಿಟ್ಟು ನಾಲ್ಕನೆಯ ದಿನವೂ ಬಲಾತ್ಕರಿಸಿ ಬಂದುಬಿಡುತ್ತದೆ. ಒಂದು ಸಾರಿ ತಣ್ಣಗೂ, ಒಂದು ಸಾರಿ ಬಿಸಿಯಾಗಿಯೂ, ಒಂದು ಕೈಕಾಲುಗಳಲ್ಲೂ ಮತ್ತು ಹೆಗಲು ಮೊದಲಾದ ಅವಯವಗಳಲ್ಲೂ ನಿಯತವಿಲ್ಲದೆಯೂ (ಬಂದಜ್ವರವು ಸ್ವಲ್ಪಹೊತ್ತಿಗೆ ಬಿಟ್ಟುಬಿಡುತ್ತಲೂ), ಬಹಳ ದಿನಗಳವರೆಗೂ ಪೀಡಿಸು ತ್ತದೆ. ಈ ರೀತಿಯಾಗಿ ವಿಷಮಜ್ವರಗಳಲ್ಲಿ ಅನೇಕ ಭೇದಗಳಿದ್ದು ಮನುಷ್ಯರನ್ನು ಬಹಳ ವಾಗಿ ಪೀಡಿಸುತ್ತವೆ.

ಸ ಚಾಪಿ ವಿಷಮೋದೇಹಂ ನ ಕದಾಚಿದ್ವಿಮುಞ್ಚತಿ ||೬೩||
ಗ್ಲಾನಿ ಗೌರವ ಕಾರ್ಶ್ಯೇಭ್ಯಃ ಸಯಸ್ಮಾನ್ನ ಪ್ರಮುಚ್ಯತೇ |
ವೇಗೇ ತು ಸಮತಕ್ರಾನ್ತೇ ಗತೋಽಯಮಿತಿ ಲಕ್ಷ್ಯತೇ ||೬೪||
ಧಾತ್ವನ್ತರಸ್ಥೋ ಲೀನತ್ವಾನ್ನ ಸೌಕ್ಷ್ಮ್ಯಾದುಪಲಭ್ಯತೇ |
ಅಲ್ಪದೋಷೇನ್ಧನಃ ಕ್ಷೀಣಃ ಕ್ಷೀಣೇನ್ಧನ ಇವಾನಲಃ ||೬೫||

ವಿಷಮಜ್ವರವು ಇಂದ್ರಿಯಾಲಸ್ಯ, ಮೈಭಾರ ಮತ್ತು ಕ್ಷೀಣತೆಗಳಿಂದ ಕೂಡಿ ದೇಹ ವನ್ನು ಬಿಡುವುದೇ ಇಲ್ಲ. ವೇಗವು ಕಡಮೆಯಾದರೆ ಜ್ವರವು ಬಿಟ್ಟುಬಿಟ್ಟಂತೆ ಕಾಣು ತ್ತದೆ. ಧಾತುಗಳೊಳಗೆ ಅಡಗಿಕೊಂಡು ಅತಿ ಸೂಕ್ಷ್ಮರೂಪದಿಂದ ಇರುವುದರಿಂದ ದೋಷವು ಸ್ವಲ್ಪವೇ ಇದ್ದುಕೊಂಡು ಸ್ವಲ್ಪಮಾತ್ರವೇ ಕಾಷ್ಠ (ಸೌದೆಯು)ವು ಉಳಿದರೆ ಬೆಂಕಿಯು ಹೇಗೆ ಸಣ್ಣಗಾಗುತ್ತದೋ ಹಾಗೆಯೇ ಕ್ಷೀಣವಾಗಿರುತ್ತದೆ.

ದೋಷೋಽಲ್ಪೋಽಹಿತಸಮ್ಭೂತೋ ಜ್ವರೋತ್ಸೃಷ್ಟಸ್ಯ ವಾ ಪುನಃ |
ಧಾತುಮನ್ಯತಮಂ ಪ್ರಾಪ್ಯ ಕರೋತಿ ವಿಷಮಜ್ವರಮ್ ||೬೬||
ಸತತಂ ರಸರಕ್ತಸ್ಥಃ ಸೋಽನ್ಯೇದ್ಯುಃ ಪಿಶಿತಾಶ್ರಿತಃ |
ಮೇದೋಗತಸ್ತೃತೀಯೇಽಹ್ನಿ ತ್ವಸ್ಥಿಮಜ್ಜಗತಃ ಪುನಃ ||೬೭||
ಕುರ್ಯಾಚ್ಚಾತುರ್ಥಕಂ ಘೋರಮನ್ತಕಂ ರೋಗಸಙ್ಕರಮ್ |

ಅಪಥ್ಯಾಚರಣೆಯಿಂದ ಪ್ರಕುಪಿತವಾಗಿರುವ ಅಲ್ಪದೋಷವೂ ಜ್ವರಬಿಟ್ಟ ಮೇಲೆ ಕ್ಷೀಣದೇಹವುಳ್ಳ ಮನುಷ್ಯನಿಗೆ ಹಿಂದೆ ಹೇಳಿದಂತೆ ಕಫಸ್ಥಾನಗಳಿಗೆ ತಕ್ಕಂತೆ ಸತತಕಾದಿ ಜ್ವರಗಳನ್ನುಂಟುಮಾಡುತ್ತದೆ. ಹಿಂದೆ ಆಮಾಶಯ ಉರಸ್ಸು ಮೊದಲಾದ ಕಫಸ್ಥಾನಗಳಿಗೆ ತಕ್ಕಂತೆ ಸತತಾದಿ ಜ್ವರಗಳುಂಟುಮಾಡುತ್ತವೆಂದು ತಿಳಿಸಲಾಯಿತು. ಈಗ ದೋಷಗಳು ಧಾತುಗಳನ್ನಾಶ್ರಯಿಸಿ ಜ್ವರವನ್ನು ಹುಟ್ಟಿಸುತ್ತವೆಂದು ಹೇಳಲಾಗುತ್ತದೆಯಾಗಿ ಪುನರುಕ್ತಿಯೆಂದು ತಿಳಿಯಬಾರದು. ದೋಷವು ರಸರಕ್ತಧಾತುವನ್ನಾಶ್ರಯಿಸಿ ಸತತ ಜ್ವರವನ್ನೂ, ಮಾಂಸವನ್ನಾಶ್ರಯಿಸಿ ಅನ್ಯೇದ್ಯುಷ್ಕಜ್ವರವನ್ನೂ, ಮೇದಸ್ಸನ್ನಾಶ್ರಯಿಸಿ ತೃತೀಯಕಜ್ವರವನ್ನೂ, ಮೂಳೆಯನ್ನೂ, ಮಜ್ಜೆಯನ್ನೂ ಆಶ್ರಯಿಸಿ ಚಾತುರ್ಥಿಕ ಜ್ವರವನ್ನೂ ಉಂಟುಮಾಡುತ್ತವೆ. ಈ ಚಾತುರ್ಥಿಕ ಜ್ವರವು ಮರಣವನ್ನುಂಟುಮಾಡುವುದದರಿಂದಲೂ ಬಹುಕಾಲ ಕ್ಲೇಶಪಡಿಸುವುದರಿಂದಲೂ ಇದನ್ನು ಯಮನಂತೆ ಅತಿ ಭಯಂಕರವಾದ ರೋಗವೆಂದು ತಿಳಿಯಬೇಕು.

ಟಿಪ್ಪಣಿ : ಕೆಲವರು ಸತತಕವೆನ್ನುವಾಗಲೇ ಸಂತತವೆಂದು ಮೊದಲು ಹೇಳುತ್ತಾರೆ. ಅವರ ಮತದಲ್ಲಿ ರಸದಲ್ಲಿರುವ ದೋಷವು ಸಂತತಜ್ವರವನ್ನೂ ರಕ್ತದಲ್ಲಿರುವುದು ಸತತಕಜ್ವರವನ್ನೂ ಉಂಟುಮಾಡುತ್ತವೆಂದು ತಾತ್ಪರ್ಯವು. ಕೆಲವರು ಸಂತತವು ಸತತದಪರ್ಯಾಯವೆಂದು ಹೇಳುತ್ತಾರೆ. ಆದರೆ ಸಂತತಜ್ವರಕ್ಕೆ ವಿಷಮಜ್ವರವೆಂಬ ಹೆಸರುಂಟಾಗುವುದಿಲ್ಲ. ಶಿರಸ್ಸು, ಕಂಠ, ಉರಸ್ಸು, ಆಮಾಶಯ, ಅಸ್ಥಿಸಂಧಿಗಳೆಂಬ ೫ ಕಫಸ್ಥಾನಗಳಲ್ಲೂ ಒಂದೇ ಕಾಲದಲ್ಲಿ ಕಫದೋಷವುಂಟಾಗಿ ಸಂತತಜ್ವರವುಂಟಾಗುತ್ತೆಂದು ಹಿಂದೆಯೇ ತಿಳಿಸಿರುತ್ತದೆ.

||೧೮||
ಕೇಚಿದ್ಭೂತಾಭಿಷಜತ್ವಾಗ್ನೇತ್ಥಂ ಬ್ರುವತೇ ವಿಷಮಜ್ವರಮ್
ಸಪ್ತಾಹಂ ವಾ ದಶಾಹಂ ವಾ ದ್ವಾದಶಾಹಮಥಾಪಿ ವಾ ।
||೧೯||
ಸನ್ತತ್ಯಾ ಯೋಽವಿಸರ್ಗೀ ಸ್ಯಾತ್ಸಂತತಃ ಸನಿಗದ್ಯತೇ
ಅಹೋರಾತ್ರೇ ಸತತಕೋ ದ್ವೌ ಕಾಲಾವನುವರ್ತತೇ ।
||೨೦||
ಅನ್ಯೇದ್ಯುಷ್ಕಸ್ತ್ವಹೋರಾತ್ರಾದೇಕಕಾಲಂ ಪ್ರವರ್ತತೇ

ಗ್ರಹಾವೇಶದಿಂದಲೂ ವಿಷಮಜ್ವರವುಂಟಾಗುತ್ತದೆಂದು ಕೆಲವರು ಹೇಳುತ್ತಾರೆ. ಸನ್ನಿಪಾತದೋಷದಿಂದುಂಟಾದ ಸಂತತಾದಿಜ್ವರಗಳಿಗೆ ವಾತಪಿತ್ತಕಫದೋಷಗಳ ಅಧಿಕ್ಯತೆಯಿಂದ ಕ್ರಮವಾಗಿ ಏಳು, ಹತ್ತು, ಹನ್ನೆರಡು ದಿನಗಳ ಅವಧಿಯನ್ನು ಕಲ್ಪಿಸಿ ಮಲಪಾಕದಿಂದ ದೋಷಮೋಕ್ಷವೂ ಧಾತುಪಾಕದಿಂದ ಮರಣವೂ ಉಂಟಾಗುತ್ತದೆಂದು ತಿಳಿಸಲಾಗಿತ್ತು. ಈಗ ಒಂದೇ ದೋಷದ ಆಧಿಕ್ಯತೆಯಿಂದ ಸುಖಸಾಧ್ಯವಾದ ಸಂತತಜ್ವರವು ವಾತಿಕವು, ೭ ದಿನಗಳಲ್ಲೂ, ಪೈತ್ತಿಕವು ೧೦ ದಿವಸಗಳಲ್ಲೂ, ಶ್ಲೈಷ್ಮಿಕವು ೧೨ ದಿನಗಳಲ್ಲೂ ಬಿಡುತ್ತದೆಂದು ತಿಳಿಯಬೇಕು. ಪೂರ್ವಾಹ್ಣ ಪ್ರದೋಷ ಇತ್ಯಾದಿ ಕಾಲಗಳಲ್ಲಿ ಸಂತತಕವು ದಿನಕ್ಕೆ ಎರಡು ಸಾರಿಯೂ, ಅನ್ಯೇದ್ಯುಷ್ಕಜ್ವರವು ಒಂದುಕಾಲದಲ್ಲೂ

ತೃತೀಯಕವು ಮೂರುದಿನಗಳಲ್ಲೊಂದುಸಾರಿಯೂ ಚಾತುರ್ಥಿಕವು ನಾಲ್ಕುದಿನಗಳಲ್ಲೊಂದುಸಾರಿಯೂ ಬರುತ್ತದೆ. ದೋಷಗಳು ಹೆಚ್ಚಾಗಿದ್ದರೆ ಹೆಚ್ಚುಕಾಲವೂ, ಅಲ್ಪ ಪ್ರಮಾಣದಿಂದಿದ್ದರೆ ಸ್ವಲ್ಪಹೊತ್ತು ಮಾತ್ರವೇ ಜ್ವರ ಕಾಯುತ್ತದೆ.

ತೃತೀಯಕಸ್ತೃತೀಯೇಽಹ್ನಿ ಚತುರ್ಥೇಽಹ್ನಿ ಚತುರ್ಥಕಃ ।
ವಾತೇನೋದೀರ್ಯಮಾಣಾಶ್ಚ ಕ್ಷೀಯಮಾಣಾಶ್ಚ ಸರ್ವತಃ ।
ಏಕದ್ವಿದೋಷಾ ಮರ್ತ್ಯಾನಾಂ ತಸ್ಮಿನ್ನೇವೋದಿತೇಹನಿ ॥೭೧॥
ವೇಲಾಂ ತಾಮೇವ ಕುರ್ವನ್ತಿ ಜ್ವರವೇಗೇ ಮುಹುರ್ಮುಹುಃ ।
ವಾತೇನೋದ್ಧೂಯಮಾನಸ್ತು ಯಥಾ ಪೂರ್ಯೇತ ಸಾಗರಃ ॥೭೨॥
ವಾತೇನೋದೀರಿತಾಸ್ತದ್ವದ್ದೋಷಾಃ ಕುರ್ವನ್ತಿ ವೈ ಜ್ವರಾನ್ ।
ಯಥಾ ವೇಗಾಗಮೇ ವೇಲಾಂ ಛಾದಯಿತ್ವಾ ಮಹೋದಧೇಃ ॥೭೩॥
ವೇಗಹಾನೌ ತದೇವಾಮ್ಬುಸ್ತತ್ರೈವಾನ್ತರ್ನಿಲೀಯತೇ ।
ದೋಷವೇಗೋದಯೇ ತದ್ವದುದೀರ್ಯೇತ ಜ್ವರೋಽಸ್ಯವಾ ॥೭೪॥
ವೇಗಹಾನೌ ಪ್ರಶಾಮ್ಯೇತ ಯಥಾಽನ್ತಃ ಸಾಗರೇ ತಥಾ ।

ಈ ವಿಷಮಜ್ವರಗಳು ವಾತದಿಂದಲೇ ಕೆರಳಿಸಲ್ಪಟ್ಟು ದೇಹದಾದ್ಯಂತವೂ ಹರಡುತ್ತಾ ತಮ್ಮ ತಮ್ಮ ನಿಯಮಿತದಿವಸಗಳಲ್ಲಿ ನಿಯತಕಾಲದಲ್ಲಿ ಜ್ವರವನ್ನುಂಟುಮಾಡುತ್ತವೆ. ಸಮುದ್ರದನೀರು ವಾತವು ಬಲವಾಗಿ ಬೀಸಿದರೆ ಅಲೆಗಳ ರೂಪದಿಂದ ಅತಿ ಎತ್ತರಕ್ಕೆ ಏಳುತ್ತದೆ. ಹಾಗೆಯೇ ಶರೀರದೊಳಗೆ ವಾತದಿಂದ ಕೆರಳಿಸಲ್ಪಟ್ಟ ದೋಷಗಳು ಜ್ವರವನ್ನುಂಟುಮಾಡುತ್ತವೆ. ವಾತವೇಗವುಂಟಾದಾಗ ಸಮುದ್ರದ ನೀರು ದಡವನ್ನು ಮುಚ್ಚಿ ಮೇಲಕ್ಕೆ ಇರುತ್ತದೆ. ವಾತವೇಗವು ಕಡಿಮೆಯಾದರೆ ಆ ನೀರು ಕೆಳಕ್ಕೇ ಇಳಿದು ಅಲ್ಲೇ ಅಡಗುತ್ತದೆ. ಹಾಗೆಯೇ ದೇಹದೊಳಗೆ ದೋಷವೇಗವು ಹೆಚ್ಚಾದರೆ ಜ್ವರವು ಕೆರಳಿ ದೇಹದಲ್ಲೆಲ್ಲಾ ಹರಡುತ್ತದೆ. ವೇಗ ನಿಂತ ಮೇಲೆ ದೋಷಗಳು ಹಿಂತಿರುಗಿ ತಮ್ಮ ತಮ್ಮ ಸ್ಥಾನಗಳಲ್ಲೇ ಅಡಗಿಕೊಳ್ಳುತ್ತವೆ.

ವಿವಿಧೇನಾಭಿಘಾತೇನ ಜ್ವರೋ ಯಃ ಸಂಪ್ರವರ್ತತೇ ॥೭೫॥
ಯಥಾ ದೋಷಪ್ರಕೋಪಂ ತು ತಥಾ ಮನ್ಯೇತ ತಂ ಜ್ವರಮ್ ।

ದೊಣ್ಣೆ, ಮಣ್ಣುಹೆಂಟೆ ಮೊದಲಾದುವುಗಳ ಪೆಟ್ಟು ತಗಲಿ ದೇಹಕ್ಕುಂಟಾಗುವ ವ್ಯಥೆಯಿಂದ ಜ್ವರವುಂಟಾದರೆ ಪ್ರಕೋಪಗೊಂಡ ದೋಷಕ್ಕೆ ಅನುಸಾರವಾಗಿ ಜ್ವರದ ಭೇದವನ್ನು ನಿರ್ಧರಿಸಬೇಕು.

ಶ್ಯಾವಾಸ್ಯತಾ ವಿಷಕೃತೇ ದಾಹಾತೀಸಾರಹೃದ್ಗ್ರಹಾಃ ॥೭೬॥
ಅಭಕ್ತರುಕ್ ಪಿಪಾಸಾ ಚ ತೋದೋ ಮೂರ್ಛಾ ಬಲಕ್ಷಯಃ ।
ಓಷಧೀಗನ್ಧಜೇ ಮೂರ್ಛಾ ಶಿರೋರುಕ್ ವಮಥುಃ ಕ್ಷವಃ ॥೭೭॥
ಕಾಮಜೇ ಚಿತ್ತವಿಭ್ರಂಶಸ್ತನ್ದ್ರಾಲಸ್ಯಮಭಕ್ತರುಕ್ ।

ಹೃದಯೇ ವೇದನಾ ಚಾಸ್ಯ ಗಾತ್ರಂ ಚ ಪರಿಶುಷ್ಯತಿ ||೭೮||
ಭಯಾತ್ ಪ್ರಲಾಪಃ ಶೋಕಾಚ್ಚ ಭವೇತ್ ಕೋಪಾಚ್ಚ ವೇಪಥುಃ |
ಅಭಿಚಾರಾಭಿಶಾಪಾಭ್ಯಾಂ ಮೋಹಸ್ತೃಷ್ಣಾಭಿಜಾಯತೇ ||೭೯||
ಭೂತಾಭಿಷಜ್ಗಾದುದ್ವೇಗ ಹಾಸ್ಯ ಕಮ್ಪನ ರೋದನಮ್ |

ವಿಷವು ತ್ರಿದೋಷವನ್ನು ಪ್ರಕೋಪಗೊಳಿಸುವುದರಿಂದ ಬಾಯಿಯು ಹೊಗೆಯ ಬಣ್ಣಕ್ಕೆ ತಿರುಗುತ್ತದೆ, ಮೈ ಉರಿಯುತ್ತದೆ, ಅತೀಸಾರ, ಹೃದ್ರೋಗ (ಎದೆ ಬಡಿದು ಕೊಂಡಂತಾಗುತ್ತದೆ), ಅರೋಚಕತೆ, ನೀರಡಿಕೆ, ಮೈಚುಚ್ಚುವುದು, ಜ್ಞಾನನಾಶ, ಬಲಹಾನಿ ಇವುಗಳುಂಟಾಗುತ್ತವೆ. ವಿಷೌಷಧಿಗಳ ಗಂಧವನ್ನು ಮೂಸುವುದರಿಂದ ಜ್ಞಾನತಪ್ಪುವುದು, ತಲೆನೋವು, ವಮನ, ಸೀನುಬರುವುದು ಇವುಗಳುಂಟಾಗುತ್ತವೆ. ಕಾಮಜ್ವರದಲ್ಲಿ ಬುದ್ಧಿವಿಕಲ್ಪ, ತೂಕಡಿಕೆ, ಅಲಸತೆ, ಅರೋಚಕತೆ, ಹೃದಯದಲ್ಲಿ ನೋವು ಇವುಗಳುಂಟಾಗಿ ದೇಹವು ಕ್ಷೀಣಿಸುತ್ತದೆ, ಭಯದಿಂದ ಜ್ವರಬಂದರೆ ಅಸಂಬದ್ಧ ವಾಗಿ ಮಾತನಾಡುತ್ತಾನೆ ; ವ್ಯಸನದಿಂದಲೂ, ಕೋಪದಿಂದಲೂ ಜ್ವರ ಉಂಟಾದರೆ ಮೈ ನಡುಗುತ್ತದೆ. ಅಥರ್ವಣ ಮಂತ್ರಪ್ರಯೋಗದಿಂದಲೂ ಋಷಿ ಗುರುಜನಗಳು ಮೊದ ಲಾದವರ ಶಾಪದಿಂದಲೂ ಜ್ವರಬಂದರೆ ಮೋಹ (ಮತ್ತತೆ)ವೂ ನೀರಡಿಕೆಯೂ ಉಂಟಾ ಗುತ್ತವೆ. ದೇವಾದಿಗ್ರಹಗಳು ಆವರಿಸಿ, ಜ್ವರವುಂಟಾದರೆ ಮನಸ್ಸು ಉದ್ವೇಗಗೊಳ್ಳು ತ್ತದೆ (ಬುದ್ಧಿಪಲ್ಲಟವಾಗುತ್ತದೆ), ನಗುವುದು, ನಡುಗುವುದು, ಅಳುವುದು ಈ ಲಕ್ಷಣಗಳು ಕಾಣುತ್ತವೆ.

ಶ್ರಮಕ್ಷಯಾಭಿಘಾತೇಭ್ಯೋ ದೇಹಿನಾಂ ಕುಪಿತೋಽನಿಲಃ ||೮೦||
ಪೂರಯಿತ್ವಾಖಿಲಂ ದೇಹಂ ಜ್ವರಮಾಪಾದಯೇದ್ಭೃಶಮ್ |

ಆಯಾಸ, ಕ್ಷಯ, ಅಭಿಘಾತ (ಬಾಹ್ಯಶರೀರಕ್ಕೆ ಪೆಟ್ಟುಬೀಳುವುದು) ಇವುಗಳಿಂದ ಜನರಿಗೆ ವಾತವು ಪ್ರಕೋಪಿಸಿ ದೇಹದಲ್ಲೆಲ್ಲಾ ಹರಡಿ ಅತಿಹೆಚ್ಚಾಗಿ ಜ್ವರವನ್ನು ಉಂಟು ಮಾಡುತ್ತದೆ.

ರೋಗಾಣಾಂ ತು ಸಮುತ್ಥಾನಾದ್ವಿದಾಹಾಗನ್ತುತಸ್ತಥಾ ||೮೧||
ಜ್ವರೋಽಪರಃ ಸಂಭವತಿ ತೈಸ್ತೈರನ್ಯೈಶ್ಚ ಹೇತುಭಿಃ |
ದೋಷಾಣಾಂ ಸ ತುಲಿಜ್ಗಾನಿ ಕದಾಚಿನ್ನಾತಿವರ್ತತೇ ||೮೨||

ಅನ್ಯಪ್ರಕಾರದ ಜ್ವರಲಕ್ಷಣ : ವಿದ್ರಧಿಯು ಪಾಕವಾಗುವುದು, ಅಪಕ್ವವಾಗಿ ರುವುದನ್ನು ಶಸ್ತ್ರದಿಂದ ಭೇದಿಸುವುದು. ಮೊದಲಾದ ಇನ್ನೂ ಅನೇಕ ಕಾರಣಗಳಿಂದ ಜ್ವರವುಂಟಾದರೆ ವಾತಾದಿ ಜ್ವರಲಿಂಗಗಳೇ ಕಂಡುಬರುತ್ತವೆ.

ಗುರುತಾ ಹೃದಯೋತ್ಕ್ಲೇಶಃ ಸದನಂ ಛರ್ದ್ಯರೋಚಕೌ |
ರಸಸ್ಥೇ ತು ಜ್ವರೇಲಿಜ್ಗಂ ದೈನ್ಯಂ ಚಾಸ್ಯೋಪಜಾಯತೇ ||೮೩||
ರಕ್ತನಿಷ್ಠೀವನಂ ದಾಹಃ ಸ್ವೇದಚ್ಛರ್ದನವಿಭ್ರಮೌ |

ಪ್ರಲಾಪಃ ಪಿಟಿಕಾ ತೃಷ್ಣಾ ರಕ್ತಪ್ರಾಪ್ತೇ ಜ್ವರೇ ನೃಣಾಮ್ ||೮೪||
ಪಿಣ್ಡಿಕೋದ್ವೇಷ್ಟನಂ ತೃಷ್ಣಾ ಸೃಷ್ಟಮೂತ್ರಪುರೀಷತಾ ।
ಊಷ್ಮಾನ್ತರ್ದಾಹವಿಕ್ಷೇಪೌ ಗ್ಲಾನಿಃ ಸ್ಯಾನ್ಮಾಂಸಗೇ ಜ್ವರೇ ||೮೫||
ಭೃಶಂ ಸ್ವೇದಸ್ತೃಷಾ ಮೂರ್ಛಾ ಪ್ರಲಾಪಚ್ಛರ್ದಿರೇವ ಚ ।
ದೌರ್ಗನ್ಧ್ಯರೋಚಕೌ ಗ್ಲಾನಿರ್ಮೇದಸ್ಥೇ ಚಾಸಹಿಷ್ಣುತಾ ||೮೬||
ಭೇದೋಽಸ್ಥ್ನಾಂ ಕುಞ್ಚನಂ ಶ್ವಾಸೋ ವಿರೇಕಚ್ಛರ್ದಿರೇವ ಚ ।
ವಿಕ್ಷೇಪಣಂ ಚ ಗಾತ್ರಾಣಾಮೇತದಸ್ಥಿಗತೇ ಜ್ವರೇ ||೮೭||
ಅನ್ತರ್ದಾಹೋ ಮಹಾಶ್ವಾಸೋ ಮರ್ಮಚ್ಛೇದಶ್ಚ ಮಜ್ಜಗೇ ।
ಮರಣಂ ಪ್ರಾಪ್ನುಯಾತ್ ತತ್ರ ಶುಕ್ರಸ್ಥಾನಗತೇ ಜ್ವರೇ ||೮೮||
ಶೇಫಸಃ ಸ್ತಬ್ಧತಾ ಮೋಕ್ಷಃ ಶುಕ್ರಸ್ಯ ತು ವಿಶೇಷತಃ ।
ದಗ್ಧ್ವೇನ್ಧನಂ ಯಥಾ ವಹ್ನಿರ್ಧಾತೂರ್ ಹತ್ವಾ ಯಥಾ ವಿಷಮ್ ||೮೯||
ಕೃತಕೃತ್ಯೋ ವ್ರಜೇಚ್ಛಾನ್ತಿಂ ದೇಹಂ ಹತ್ವಾ ತಥಾ ಜ್ವರಃ ।

ರಸಧಾತುವನ್ನಾಶ್ರಯಿಸಿ ಜ್ವರಬಂದರೆ ಹೃದಯವು ಭಾರವಾಗುತ್ತದೆ, ಬಾಯಿನಿಂದ ದ್ರವವು ಸುರಿಯುತ್ತದೆ, ದೇಹಕ್ಷೀಣತೆಯೂ, ವಮನವೂ ಆಗುತ್ತವೆ. ಅರುಚಿ, ದೀನತೆಯೂ ಕಾಣುತ್ತದೆ. ರಕ್ತಗತವಾದರೆ ಬಾಯಿನಿಂದ ರಕ್ತವು ವಮನವಾಗುತ್ತದೆ. ಮೈ ಉರಿತ, ಮೈ ಬೆವರುವುದು, ವಮನ, ತಲೆತಿರುಗುವಿಕೆ, ಅಸಂಬದ್ಧವಾಗಿ ಮಾತನಾಡುವುದು, ಮೈಮೇಲೆ ಬೊಬ್ಬೆಗಳೇಳುವುದು, ನೀರಡಿಕೆ, ಮಲಮೂತ್ರಗಳ ವಿಸರ್ಜನೆ, ಹೊಗೆಹೊರಟಂತೆ ಮನಸ್ಸಿಗೆ ತೋರೋಣವು, ಇವು ರಕ್ತಧಾತುವನ್ನಾಶ್ರಯಿಸಿರುವ ಜ್ವರದ ಚಿಹ್ನೆಗಳು. ಜ್ವರವು ಮಾಂಸಗತವಾದರೆ ಮೊಣಕಾಲಿನ ಹಿಂಭಾಗದಲ್ಲಿರುವ ಮಾಂಸ ಗ್ರಂಥಿಗಳು ನೋಯುತ್ತವೆ. ಮೇದಸ್ಸನ್ನಾಶ್ರೈಸಿರುವ ಜ್ವರದಲ್ಲಿ ನೀರಡಿಕೆ, ಮಲ ಮೂತ್ರಗಳ ತಡೆತ, ಶರೀರದಿಂದ ಹೊಗೆಯು ಹೊರಕ್ಕೆಹೊರಟಂತೆ ಮನಸ್ಸಿಗೆ ತೋಚುವುದು, ಮೈ ಬಳಲಿರುವುದು, ಅಧಿಕವಾಗಿ ಮೈಬೆವರುವುದು, ಬಾಯಾರಿಕೆ, ಜ್ಞಾನನಾಶ, ಅಸಂಬದ್ಧವಾಗಿ ಮಾತನಾಡುವುದು, ವಮನ, ಮೈ ದುರ್ವಾಸನೆ, ಅರುಚಿ, ಆಯಾಸ, ಲಕ್ಷಣಗಳು ಕಂಡುಬರುತ್ತವೆ. ಮೂಳೆಯಲ್ಲಿ ಜ್ವರವಿದ್ದರೆ ಮೂಳೆಗಳು ಚುಚ್ಚಿ ಒಡೆದಂತೆ ಕಾಣಿಸುತ್ತವೆ, ಸಂಧಿಗಳು ಮಡಿಸಿಕೊಳ್ಳುತ್ತವೆ, ಉಬ್ಬಸ, ವಿರೇಚನ, ವಮನ, ಅಂಗಗಳು ನೋವು, ಅದುರುವುದು, ಈ ಲಕ್ಷಣಗಳಿರುತ್ತವೆ. ಮಜ್ಜಧಾತುವನ್ನಾಶ್ರೈಸಿ ಜ್ವರವುಂಟಾದರೆ ಅಂತರ್ದಾಹ, ದೀರ್ಘಶ್ವಾಸ, ಮರ್ಮಸ್ಥಾನಗಳು ಕಿತ್ತಂತೆ ನೋವು ಉಂಟಾಗುತ್ತವೆ. ಶುಕ್ರಸ್ಥಾನದಲ್ಲಿ ಜ್ವರವುಂಟಾದರೆ ಮರಣವುಂಟಾಗುತ್ತದೆ. ಶಿಶ್ನವು ಬಿಗಿದು ನಿಲ್ಲುತ್ತದೆ, ವಿಶೇಷ ಪ್ರಮಾಣದಿಂದ ಶುಕ್ರಸ್ರಾವವಾಗುತ್ತದೆ. ಸೌದೆಯನ್ನು ಸುಟ್ಟ ಅನಂತರ ಬೆಂಕಿಯು ಶಾಂತವಾಗುವಂತೆಯೂ, ವಿಷವು ಧಾತುಗಳನ್ನು ನಾಶಗೊಳಿಸುವಂತೆಯೂ, ಜ್ವರವು ದೇಹವನು ನಾಶಮಾಡಿ ಶಮನವಾಗುತ್ತದೆ.

ವಾತಪಿತ್ತಕಫೋತ್ಥಾನಾಂ ಜ್ವರಾಣಾಂ ಲಕ್ಷಣಂ ಯಥಾ ॥೯೦॥
ತಥಾ ತೇಷಾಂ ಭಿಷಗ್ಬ್ರೂಯಾದ್ರಸಾದಿಷ್ವಪಿ ಬುದ್ಧಿಮಾನ್ ।
ಸಮಸ್ತೈಃ ಸನ್ನಿಪಾತೇನ ಧಾತುಸ್ಥಮಪಿ ನಿರ್ದಿಶೇತ್ ॥೯೧॥
ದ್ವಂದ್ವಜಂ ದ್ವಂದ್ವಜೈರೇವ ದೋಷೈಶ್ಚಾಪಿ ವದೇತ್ ಕೃತಮ್ ।

ವಾತ, ಪಿತ್ತ, ಕಫ, ದ್ವಂದ್ವ, ಸನ್ನಿಪಾತಜ್ವರಗಳ ಲಕ್ಷಣಗಳೇ ರಸಾದಿ ಧಾತುಗಳನ್ನು ವ್ಯಾಪಿಸಿದ ದೋಷಗಳು ಜ್ವರವನ್ನುಂಟುಮಾಡಿದಾಗಲೂ ಉಂಟಾಗುತ್ತವೆಂದು ತಿಳಿಯಬೇಕು.

ಗಮ್ಭೀರಸ್ತು ಜ್ವರೋ ಜ್ಞೇಯೋ ಹ್ಯನ್ತರ್ದಾಹೇನ ತೃಷ್ಣಯಾ ॥೯೨॥
ಆನದ್ಧತ್ವೇನ ಚಾತ್ಯರ್ಥಂ ಶ್ವಾಸಕಾಸೋದ್ಗಮೇನ ಚ ।

ಶರೀರದ ಒಳಗೆ ಉರಿಯೂ, ಬಾಯಾರಿಕೆಯೂ ಉಂಟಾಗುವುದು. ದೋಷಗಳೂ, ಮಲಗಳೂ ತಡೆದುನಿಲ್ಲುವುದು, ಶ್ವಾಸಕಾಸಗಳುಂಟಾಗುವುದು ಮತ್ತು ರೋಗಿಯು ಅಸಂಬದ್ಧವಾಗಿ ಮಾತನಾಡೋಣ, ತಲೆ ತಿರುಗು, ಅಸ್ಥಿಸಂಧಿಗಳಲ್ಲೂ ಮೂಳೆಗಳಲ್ಲೂ ನೋವುಕಾಣುವುದು, ಇತ್ಯಾದಿ ಲಕ್ಷಣಗಳಿಂದ ಗಮ್ಭೀರಜ್ವರವೆಂದೂ ಇದಕ್ಕೆ ವ್ಯತ್ಯಾಸವಾಗಿ ದೇಹದ ಹೊರಗೆ (ಚರ್ಮ) ಹೆಚ್ಚು ಬಿಸಿಯಾಗೋಣ ಮತ್ತು ನೀರಡಿಕೆಯುಂಟಾಗುವಿಕೆ, ಶ್ವಾಸಾದಿಗಳು ಕಡಮೆಯಾಗೋಣ ಇವು ಉತ್ತಾನ ಜ್ವರದ ಲಕ್ಷಣಗಳೆಂದು ತಿಳಿಯಬೇಕು. ಗಮ್ಭೀರ ಮತ್ತು ಉತ್ತಾನ ಜ್ವರಗಳೆಂದರೆ ಅಂತರ್ವೇಗ, ಬಹಿರ್ವೇಗ, ಗಳೆಂದು ಅರ್ಥವು. ಇವುಗಳಲ್ಲಿ ಗಮ್ಭೀರಜ್ವರವು ಕಷ್ಟಸಾಧ್ಯವು. ಉತ್ತಾನಜ್ವರವು ಸುಖಸಾಧ್ಯವು.

ಹತಪ್ರಭೇನ್ದ್ರಿಯಂ ಕ್ಷಾಮಂ ದುರಾತ್ಮನಮುಪದ್ರುತಮ್ ॥೯೩॥
ಗಮ್ಭೀರತೀಕ್ಷ್ಣವೇಗಾರ್ತಂ ಜ್ವರಿತಂ ಪರಿವರ್ಜಯೇತ್ ।
ಹೀನಮಧ್ಯಾಧಿಕೈರ್ದೋಷೈಸ್ತ್ರಿ ಸಪ್ತದ್ವಾದಶಾಹಿಕಃ ॥೯೪॥
ಜ್ವರವೇಗೋ ಭವೇತ್ ತೀವ್ರೋ ಯಥಾಪೂರ್ವಂ ಸುಖಕ್ರಿಯಃ ।

ಗಂಭೀರಜ್ವರದ ಅಸಾಧ್ಯಲಕ್ಷಣ—ಶರೀರದ ಕಾಂತಿ ನಾಶವಾಗೋಣ, ಕಿವಿ, ಕಣ್ಣು ಮೊದಲಾದ ಇಂದ್ರಿಯಗಳು ಪಾಟವವಿಲ್ಲದೆ ಅವುಗಳ ವ್ಯಾಪಾರಗಳು ಕಮ್ಮಿಯಾಗೋಣ, ದೇಹವು ಕ್ಷೀಣವಾಗೋಣ, ದುಃಖಪಡುತ್ತಲೇ ಇರುವುದು (ಮನೋವ್ಯಥೆ) ಜ್ವರದ ಉಪದ್ರವಗಳಿಂದ ಬಾಧಿಸಲ್ಪಡುವುದು, ಅಂತರ್ದಾಹ, ನೀರಡಿಕೆ, ಮೊದಲಾದ ಗಂಭೀರಜ್ವರದ ತೀಕ್ಷ್ಣವೇಗಗಳಿಂದ ಪೀಡಿಸಲ್ಪಡುವುದು ಈ ಲಕ್ಷಣಗಳುಳ್ಳ ಜ್ವರಿತನನ್ನು ತ್ಯಜಿಸಬೇಕು. ಜ್ವರವೇಗವು ಹೀನದೋಷ, ಮಧ್ಯದೋಷ, ಅಧಿಕದೋಷಗಳಿಂದ ೩, ೭, ೧೨ ದಿನಗಳವರೆಗೂ ಚುರುಕಾಗಿಯೇ ಇರುತ್ತವೆ. ಅವುಗಳಲ್ಲಿ ೧೨ ದಿನಗಳು ಪೀಡಿಸುವ ಜ್ವರಕ್ಕಿಂತಲೂ ೭ ದಿನಗಳು ಪೀಡಿಸುವ ಜ್ವರವನ್ನು ಸುಲಭವಾಗಿ ಚಿಕಿತ್ಸೆಮಾಡಬಹುದು. ಅದಕ್ಕಿಂತಲೂ ೩ ದಿನಗಳು ಪೀಡಿಸುವ ಜ್ವರವನ್ನು ಅತಿ

ಸುಲಭವಾಗಿ ಚಿಕಿತ್ಸೆಮಾಡಬಹುದು. ದೋಷಗಳ ತರ ತಮಗಳಿಗೆ ಅನುಸಾರವಾಗಿಯೂ ಮೇಲೆ ಹೇಳಿದ ಅವಧಿಗಳಲ್ಲೂ ನ್ಯೂನಾಧಿಕ್ಯಗಳನ್ನು ಗೊತ್ತುಮಾಡಬೇಕು.

ಟಿಪ್ಪಣಿ—ಹತಪ್ರಭೇನ್ದ್ರಿಯಂ-ಪ್ರಭಾ ಎಂದರೆ ಇಂದ್ರಿಯಶಕ್ತಿಯುಳ್ಳವನೆಂದರ್ಥ. ಕೆಲವರು ದುರಾತ್ಮಭಿರುಪದ್ರುತಂ ಎಂದು ಹೇಳಿ ಪ್ರೇತ, ಪಿಶಾಚ, ರಾಕ್ಷಸರಿಂದ ಪೀಡಿತನಾದವನೆಂದು ಅರ್ಥಮಾಡುತ್ತಾರೆ. ಅಂದರೆ ಗ್ರಹಪೀಡೆಯನ್ನು ಸೂಚಿಸಿದಂತಾಯಿತು.

ಕಾಲೋಹ್ಯೇಷ ಯಮಶ್ಚೈವ ನಿಯತಿರ್ಮೃತ್ಯುರೇವ ಚ ||೯೫||
ತಸ್ಮಿನ್ ವ್ಯಪಗತೇ ದೇಹಾಜ್ಜನ್ಮೇಹ ಪುನರುಚ್ಯತೇ |
ಇತಿ ಜ್ವರಾಃ ಸಮಾಖ್ಯಾತಾಃ ಕರ್ಮೇದಾನೀಂ ಪ್ರವಕ್ಷ್ಯತೇ ||೯೬||

ಕಾಲವು ಯಮ, ನಿಯತಿ, ಮೃತ್ಯು, ಎಂದು ಪರಿಗಣಿಸಲ್ಪಡುತ್ತದೆ ; ಈ ಕಾಲವು ಕಳೆದನಂತರ ರೋಗಿಯು ಜೀವಿಸಿದ್ದರೆ ಪುನಃ ಹುಟ್ಟಿದಂತೆಯೇ ತಿಳಿಯಬೇಕು ; ಈ ರೀತಿಯಾಗಿ ಜ್ವರಕಾರಣಗಳನ್ನು ಹೇಳಿದ್ದಾಯಿತು. ಇನ್ನು ಜ್ವರಚಿಕಿತ್ಸೆಯನ್ನು ಹೇಳುತ್ತೇವೆ.

ಜ್ವರಸ್ಯ ಪೂರ್ವರೂಪೇಷು ವರ್ತಮಾನೇಷು ಬುದ್ಧಿಮಾನ್ |
ಪಾಯಯೇತ್ ಘೃತಂ ಸ್ವಚ್ಛಂ ತತಃ ಸಲಭತೇ ಸುಖಮ್ ||೯೭||
ವಿಧಿರ್ಮಾರುತಜೇಷ್ವೇಷ ಪೈತ್ತಿಕೇಷು ವಿರೇಚನಮ್ |
ಮೃದು ಪ್ರಚ್ಛರ್ದನಂ ತದ್ವತ್ಕಫಜೇಷು ವಿಧೀಯತೇ ||೯೮||

ಬುದ್ಧಿವಂತನಾದ ವೈದ್ಯನು ವಾತಜ್ವರದ ಪೂರ್ವರೂಪಗಳ ಪ್ರಾರಂಭದಲ್ಲಿ ಅಚ್ಛಘೃತವನ್ನು ಪಾನಮಾಡಿಸಿದರೆ ಜ್ವರೋತ್ಪತ್ತಿಯೇ ಆಗುವುದಿಲ್ಲ ; ಸುಖವುಂಟಾಗುತ್ತದೆ ; ಪಿತ್ತಜ್ವರದ ಪೂರ್ವರೂಪದಲ್ಲಿ ಮೃದುವಾಗಿ ವಿರೇಚನವನ್ನೂ ಕಫಜ್ವರದ ಪೂರ್ವರೂಪದಲ್ಲಿ ವಮನವನ್ನೂ ಮಾಡಿಸಬೇಕು.

ಸರ್ವದ್ವಿದೋಷಜೇಷೂಕ್ತಂ ಯಥಾದೋಷಂ ವಿಕಲ್ಪಯೇತ್ |
ಅಸ್ನೇಹನೀಯೋಽಶೋಧ್ಯಶ್ಚ ಸಂಯೋಜ್ಯೋ ಲಙ್ಘನಾದಿನಾ ||೯೯||

ತ್ರಿದೋಷಜ ಮತ್ತು ದ್ವಂದ್ವದೋಷಜ ಜ್ವರಗಳಲ್ಲಿ ದೋಷಗಳಿಗೆ ತಕ್ಕಂತೆ ಘೃತಪಾನ, ವಿರೇಚನ, ವಮನ, ಮೊದಲಾದುವನ್ನು ಮಿಶ್ರಮಾಡಿ ಚಿಕಿತ್ಸೆ ಮಾಡಬೇಕು ; ಅಜೀರ್ಣ ರೋಗಿಗೂ, ತರುಣಜ್ವರದವರಿಗೂ ಮತ್ತು ಸ್ನೇಹಪಾನಕ್ಕೆ ಅಯೋಗ್ಯರಾದವರಿಗೂ ಸ್ನೇಹಪಾನವನ್ನು ಮಾಡಿಸಬಾರದು, ಶೋಧನೌಷಧಗಳನ್ನು ಕೊಡಿಸಬಾರದು ; ಅವರಿಗೆ ಲಂಘನ (ಉಪವಾಸ) ಷಡಂಗ ಕಷಾಯ ಮತ್ತು ಬಿಸಿನೀರಿನ ಪಾನಗಳನ್ನು ಕೊಡಬೇಕು.

ರೂಪಪ್ರಾಗ್ರೂಪಯೋರ್ವಿದ್ಯಾನ್ನಾನಾತ್ವಂ ವಹ್ನಿಧೂಮವತ್ |

ಬೆಂಕಿಯೂ, ಧೂಮವೂ, ಹೇಗೆ ಬೇರೆಬೇರೆಯಾಗಿ ಕಾಣಿಸುತ್ತವೆಯೋ ಅದ

ರಂತೆಯೇ ಪೂರ್ವರೂಪ ರೂಪಗಳು ಕಾಣಿಸುವಾಗ ಬೇರೆ ಬೇರೆ ಚಿಕಿತ್ಸಾವಿಧಾನಗಳನ್ನು ಮಾಡಬೇಕು.

ಪ್ರವ್ಯಕ್ತರೂಪೇಷು ಹಿತಮೇಕಾನ್ತೇನಾಪತರ್ಪಣಮ್ ||೧೦೦||
ಆಮಾಶಯಸ್ಥೇ ದೋಷೇ ತು ಸೋತ್ಕ್ಲೇಶೇ ವಮನಂ ಪರಮ್ ।

ಜ್ವರದ ಲಕ್ಷಣಗಳು ಸ್ಪಷ್ಟವಾಗಿ ಕಾಣುವಾಗ ಲಂಘನವನ್ನೇ ಮಾಡಿಸಬೇಕು. ಆಮಾಶಯದಲ್ಲಿ ದೋಷವಿದ್ದು ಬಾಯಿನೀರು ಸೋರುತ್ತಿದ್ದರೆ ವಮನ ಮಾಡಿಸುವುದೇ ಉತ್ತಮವಾದ ಚಿಕಿತ್ಸಾ ವಿಧಾನವು.

ಆನದ್ಧಸ್ತಿಮಿತೈರ್ದೋಷೈರ್ಯಾವನ್ತಂ ಕಾಲಮಾತುರಃ ||೧೦೧||
ಕುರ್ಯಾದನಶನಂ ತಾವತ್ತತಃ ಸಂಸರ್ಗಮಾಚರೇತ್ ।

ದೋಷಗಳು ಆಮರಸದಿಂದ ಮಿಶ್ರವಾಗಿ ಆಮಾಶಯದಲ್ಲಿರುವವರೆಗೆ ರೋಗಿಗೆ ಉಪವಾಸವನ್ನು ಮಾಡಿಸಬೇಕು. ಆಮಾಶಯದಿಂದ ಮುಂದೆನುಗ್ಗಿ ಹೋಗಿ ರೋಗಿಗೆ ಅನ್ನತಿನ್ನಬೇಕೆಂದು ಇಚ್ಛೆಯುಂಟಾದರೆ ಆಗ ಪೇಯಾ ವಿಲೇಪೀ ಮೊದಲಾದ ದ್ರವರೂಪವಾದ ಲಘ್ವನ್ನವನ್ನು ಪ್ರಯೋಗಿಸಬೇಕು ; ಕೆಲವರು "ವಿರಿಕ್ತವತ್" ಎಂದು ಹೇಳುತ್ತಾರೆ ; ಪ್ರಮಾಣ ಲಘುವೆಂದು ತಿಳಿಯಬೇಕು.

ನ ಲಙ್ಘಯೇನ್ಮಾರುತಜೇ ಕ್ಷಯಜೇ ಮಾನಸೇ ತಥಾ ||೧೦೨||
ಅಲಙ್ಘ್ಯಾಶ್ಚಾಪಿ ಯೇ ಪೂರ್ವಂ ದ್ವಿವ್ರಣೀಯೇ ಪ್ರಕೀರ್ತಿತಾಃ ।
ಅನವಸ್ಥಿತ ದೋಷಾಗ್ನೇರ್ಲಙ್ಘನಂ ದೋಷಪಾಚನಮ್ ||೧೦೩||
ಜ್ವರಘ್ನಂ ದೀಪನಂ ಕಾಙ್ಕ್ಷಾರುಚಿಲಾಘವಕಾರಕಮ್ ।
ಸೃಷ್ಟಮಾರುತವಿಣ್ಮೂತ್ರಂ ಕ್ಷುತ್ಪಿಪಾಸಾಸಹಂ ಲಘುಮ್ ||೧೦೪||
ಪ್ರಸನ್ನಾತ್ಮೇನ್ದ್ರಿಯಂ ಕ್ಷಾಮಂ ನರಂ ವಿದ್ಯಾತ್ ಸುಲಙ್ಘಿತಮ್ ।

ಧಾತುಕ್ಷಯದಿಂದುಂಟಾದ ವಾತಜ್ವರದಲ್ಲಿಯೂ ಮಾನಸಿಕಜ್ವರದಲ್ಲಿಯೂ ದ್ವಿವ್ರಣೀಯಾಧ್ಯಾಯದಲ್ಲಿ ಹೇಳಿದ ಲಂಘನಕ್ಕೆ ಅನರ್ಹರಾದವರಿಗೂ ಲಂಘನವನ್ನು ಮಾಡಿಸಬಾರದು. ಜ್ವರದಲ್ಲಿ ದೋಷಗಳು ಸ್ಥಾನಾಂತರಗಳಿಗೆ ನುಗ್ಗಿ ಚಲಗಳಾಗಿರುತ್ತವೆ. ಜಾಠರಾಗ್ನಿಯೂ ಹೊರಕ್ಕೆ ಹೊರಡಿಸಲ್ಪಡುವುದರಿಂದ ಈ ಸಂದರ್ಭದಲ್ಲಿ ಲಂಘನ ಮಾಡಿಸಿದರೆ ದೋಷಗಳು ಪಾಕವಾಗಿ ಜ್ವರಹರವಾಗಿ ಅಗ್ನಿದೀಪನೆಯಾಗುವುದು ; ಆಹಾರವನ್ನು ತಿನ್ನಬೇಕೆಂಬ ಇಚ್ಛೆಯೂ, ಶರೀರವು ಹಗುರವಾಗಿದೆಯೆಂಬ ಭಾವನೆಯೂ ಉಂಟಾಗುತ್ತವೆ ; ವಾತ, ಮೂತ್ರ, ಮಲಗಳು ಹೊರಟು ಬರುತ್ತಿರುವ, ಹಸಿವು ಬಾಯಾರಿಕೆಗಳನ್ನು ತಡೆಯಲು ಶಕ್ತನಾದ, ಶರೀರ ಲಘುವಾಗಿರುತ್ತೆಂಬ ಭಾವನೆಯುಳ್ಳ, ಅಂತಃಕರಣವೃತ್ತಿಯೂ, ಇಂದ್ರಿಯಗಳೂ ವಿಶದವಾಗಿರುವ, ದೇಹಕೃಶನಾದವನನ್ನು ಸರಿಯಾಗಿ ಲಂಘಿತನಾಗಿರುತ್ತಾನೆಂದು ತಿಳಿಯಬೇಕು.

ಬಲಕ್ಷಯಸ್ತೃಷಾ ಶೋಷಸ್ತನ್ದ್ರಾ ನಿದ್ರಾಭ್ರಮಕ್ಲಮಾಃ ॥೧೦೫॥
ಉಪದ್ರವಾಶ್ಚ ಶ್ವಾಸಾದ್ಯಾಃ ಸಮ್ಭವನ್ತ್ಯತಿ ಲಙ್ಘನಾತ್ ।

ಅತಿಯಾಗಿ ಲಂಘನ ಮಾಡಿಸಿದರೆ ಬಲಹಾನಿಯೂ, ಬಾಯಾರಿಕೆಯೂ, ದೇಹ ಕ್ಷೀಣತೆಯೂ, ತೂಕಡಿಕೆಯೂ, ನಿದ್ರೆಯೂ, ತಲೆತಿರುಗುವಿಕೆಯೂ, ಇಂದ್ರಿಯಾಯಾಸವೂ, ಶ್ವಾಸ, ಕಾಸ, ಸ್ವರಕ್ಷಯ, ವಮನ, ಬಿಕ್ಕಳಿಕೆ ಮೊದಲಾದುವೂ ಉಂಟಾಗುತ್ತವೆ ; ಬೇರೆ ತಂತ್ರಗಳಲ್ಲಿ ಪರ್ವಭೇದ, ಜ್ವರ, ಸ್ತಂಭ ಮೊದಲಾದ ಉಪದ್ರವಗಳನ್ನು ಹೇಳಿರುತ್ತಾರೆ ; ಇವು "ಪ್ರಸನ್ನಾತ್ಮೇನ್ದ್ರಿಯಮನಾಃ" ಎಂಬ ಲಕ್ಷಣಗಳಿಗೆ ವಿರುದ್ಧ ಲಕ್ಷಣಗಳೆಂದು ತಿಳಿಯಬೇಕು.

ದೀಪನಂ ಕಫವಿಚ್ಛೇದಿ ಪಿತ್ತವಾತಾನುಲೋಮನಮ್ ॥೧೦೬॥
ಕಫವಾತಜ್ವರಾರ್ತೇಭ್ಯೋ ಹಿತಮುಷ್ಣಾಮ್ಬು ತೃಟ್‌ಛಿದಮ್ ।
ತದ್ಧಿ ಮಾರ್ದವಕೃದ್ದೋಷಸ್ರೋತಸಾಂ ಶೀತಮನ್ಯಥಾ ॥೧೦೭॥
ಸೇವ್ಯಮಾನೇನ ತೋಯೇನ ಜ್ವರಃ ಶೀತೇನ ವರ್ಧತೇ ।
ಪಿತ್ತಮದ್ಯವಿಷೋತ್ಥೇಷು ಶೀತಲಂ ತಿಕ್ತಕೈಃ ಶೃತಮ್ ॥೧೦೮॥
ಗಾಙ್ಗೇಯನಾಗರೋಶೀರಪರ್ಪಟೋದೀಚ್ಯ ಚಂದನೈಃ ।

ಬಿಸಿನೀರು ಅಗ್ನಿದೀಪನಕಾರಿಯು, ಹೆಪ್ಪುಕಟ್ಟಿರುವ ಕಫವನ್ನು ಕತ್ತರಿಸುತ್ತದೆ ; ಪಿತ್ತವಾತಗಳನ್ನು ಸ್ವಮಾರ್ಗದಲ್ಲಿ ಸಂಚರಿಸುವಂತೆ ಮಾಡುತ್ತದೆ ; ಕಫಜ್ವರ, ವಾತಜ್ವರ, ಕಫ–ವಾತಜ್ವರಗಳನ್ನೂ, ಬಾಯಾರಿಕೆಯನ್ನೂ ನಿವಾರಿಸುತ್ತದೆ ; ದೋಷಗಳು ಸಂಚರಿಸುವ ಮಾರ್ಗಗಳನ್ನು ಮೆತ್ತಗೆ ಮಾಡುತ್ತದೆ ; ತಣ್ಣೀರು ಇವುಗಳಿಗೆ ಬದಲಾದ ಗುಣಗಳುಳ್ಳದ್ದು. ತಣ್ಣೀರನ್ನು ಕುಡಿದರೆ ಜ್ವರ ವೃದ್ಧಿಯಾಗುತ್ತದೆ ; ಪಿತ್ತಜ್ವರ, ಮದ್ಯಪಾನದಿಂದುಂಟಾದ ಜ್ವರ, ವಿಷದಿಂದುಂಟಾದ ಜ್ವರಗಳಲ್ಲಿ ಕಹಿರಸದ ಮೂಲಿಕೆಗಳನ್ನು ಮಿಶ್ರಮಾಡಿ, ಕಾಯಿಸಿದ ಕಷಾಯವನ್ನಾಗಲೀ ಅಥವಾ ಬರಿಯ ನೀರನ್ನು ಕಾಯಿಸಿ ಆರಿಸಿಯಾಗಲೀ ಕುಡಿಸಬೇಕು ; ಕೊನ್ನಾರಿ ಗೆಡ್ಡೆ, ಶುಂಠಿ, ಲಾಮಂಚ, ಪರ್ಪಾಟಕ, ಮುಡಿವಾಳ, ರಕ್ತಚಂದನ ಇವು ಪ್ರತಿಯೊಂದೂ ೧ ಕರ್ಷಪ್ರಮಾಣದಂತೆ ಒಂದು ಪ್ರಸ್ಥ ನೀರಿಗೆ ಸೇರಿಸಿ ಅರ್ಧಪ್ರಸ್ಥ ಉಳಿಯುವಂತೆ ಕಷಾಯವನ್ನು ಕಾಯಿಸಿ ಕುಡಿಸಬೇಕು ; ಇದಕ್ಕೆ "ಷಡಂಗ ಪಾನೀಯವೆಂದು" ಹೆಸರು. ವೃದ್ಧವೈದ್ಯರು ಮುಸ್ತಾದಿಗಳನ್ನು ಒಂದೊಂದು ಪಲದಂತೆ ೧ ಆಢಕ ನೀರಿಗೆ ಸೇರಿಸಿ ಅರ್ಧಾಢಕ ನಿಲ್ಲುವಂತೆ ಕಾಯಿಸಿ, ಇದನ್ನೇ ಜ್ವರ ಬಂದವರಿಗೆ ಕುಡಿಯುವುದಕ್ಕೂ ಪೇಯಾದಿಗಳ ತಯಾರಿಕೆಗೂ ಉಪಯೋಗಿಸಬೇಕೆನ್ನುತ್ತಾರೆ ; ಶುಂಠಿಯು ಕಹಿಯಲ್ಲದಿದ್ದರೂ ಪಾಚನೀಯವಾದ ಕಾರಣ ಅದನ್ನೂ ಈ ಯೋಗದಲ್ಲಿ ಸೇರಿಸಿರುತ್ತಾರೆ.

ದೀಪನೀ ಪಾಚನೀ ಲಘ್ವೀ ಜ್ವರಾರ್ತಾನಾಂ ಜ್ವರಾಪಹಾ ॥೧೦೯॥
ಅನ್ನಕಾಲೇ ಹಿತಾಪೇಯಾ ಯಥಾಸ್ವಂ ಪಾಚನೈಃ ಕೃತಾ ।

ಬಹುದೋಷಸ್ಯ ಮಂದಾಗ್ನೇಃ ಸಪ್ತರಾತ್ರಾತ್ಪರಂ ಜ್ವರೇ ||೧೧೦||
ಲಙ್ಘನಾನ್ತೇ ಯವಾಗೂಭಿರ್ಯದಾ ದೋಷೋ ನ ಪಚ್ಯತೇ |
ತದಾ ತಂ ಮುಖವೈರಸ್ಯತೃಷ್ಣಾರೋಚಕನಾಶನೈಃ ||೧೧೧||
ಕಷಾಯೈಃ ಪಾಚನೈರ್ಹೃದ್ಯೈರ್ಜ್ವರಘ್ನೈಃ ಸಮುಪಾಚರೇತ್ |

ಅನ್ನವನ್ನು ಭೋಜನಮಾಡುವ ಹೊತ್ತಿನಲ್ಲಿ ದೋಷಾನುಸಾರದ್ರವ್ಯಗಳಿಂದ ತಯಾರಿಸಿದ ಪೇಯೂವನ್ನು ಕುಡಿಸಿದರೆ ಅಗ್ನಿದೀಪನವನ್ನೂ,ಆಮಪಾಚನವನ್ನೂ ಮಾಡುತ್ತದೆ. ಲಘುವಾದದ್ದು. ಜ್ವರಪೀಡಿತರಿಗೆ ಜ್ವರಹರವು. ಬಹುದೋಷವಿರುವ ಮತ್ತು ಅಗ್ನಿಮಾಂದ್ಯವಿರುವ ಜ್ವರಿತನಿಗೆ ೭ ದಿವಸಗಳನಂತರ ಅಂದರೆ ೬ ದಿನಗಳವರೆಗೆ ಲಂಘನಮಾಡಿಸಿ ೭ನೆಯ ದಿವಸ ಯವಾಗೂಪಾನಮಾಡಿಸಿದರೂ ದೋಷವು ಪಾಕವಾಗದಿದ್ದರೆ ಆಗ ಮುಖವಿರಸತೆಯನ್ನೂ, ಬಾಯಾರಿಕೆಯನ್ನೂ, ಅರುಚಿಯನ್ನೂ ನಿವಾರಣೆ ಮಾಡುವ ಕಷಾಯಗಳಿಂದಲೂ ಆಮಪಾಚನಗಳಾದ ಹೃದಯಕ್ಕೆ ಬಲಕೊಡುವ ಜ್ವರಹರಗಳಾದ ಕಷಾಯಗಳಿಂದಲೂ ಚಿಕಿತ್ಸೆಮಾಡಬೇಕು.

ಪಞ್ಚಮೂಲೀಕಷಾಯಂ ತು ಪಾಚನಂ ಪವನಜ್ವರೇ ||೧೧೨||
ಸಕ್ಷೌದ್ರಂ ಪೈತ್ತಿಕೇ ಮುಸ್ತಕಟುಕೇನ್ದ್ರಯವೈಃ ಕೃತಮ್ |
ಪಿಪ್ಪಲ್ಯಾದಿಕಷಾಯಂ ತು ಕಫಜೇ ಪರಿಪಾಚನಮ್ ||೧೧೩||
ದ್ವನ್ದ್ವಜೇಷು ತು ಸಂಸೃಷ್ಟಂ ದದ್ಯಾದಥ ವಿವರ್ಜಯೇತ್ |
ಪೀತಾಮ್ಬುರ್ಲಙ್ಘಿತೋ ಭುಕ್ತೋಽಜೀರ್ಣೀ ಕ್ಷೀಣಃ ಪಿಪಾಸಿತಃ ||೧೧೪||

ವಾತಜ್ವರದಲ್ಲಿ ಮಹಾಪಂಚಮೂಲಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು. ಪಿತ್ತಜ್ವರದಲ್ಲಿ ಕೊನ್ನಾರಿಗೆಡ್ಡೆ, ಕಟುಕರೋಹಿಣಿ, ಕೊಡಶಿಗೆಯ ಬೀಜ ಇವುಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿಯೂ ಕಫಜ್ವರದಲ್ಲಿ ಪಿಪ್ಪಲ್ಯಾದಿ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿಯೂ ಕುಡಿಸಬೇಕು. ಇವು ಆಮಪಾಚನಗಳು. ಎರಡೆರಡು ದೋಷಗಳಿಂದುಂಟಾದ ಜ್ವರದಲ್ಲಿ ಅವೆರಡು ದೋಷಗಳನ್ನೂ ನಿವಾರಣೆಮಾಡುವ ಕಷಾಯಗಳನ್ನು ಮಿಶ್ರಮಾಡಿಯೂ, ತ್ರಿದೋಷಜ ಜ್ವರಚಿಕಿತ್ಸೆಯನ್ನು ಹೇಳದಿದ್ದರೂ ಮೇಲೆ ಹೇಳಿದ ೩ ಕಷಾಯಗಳನ್ನೇ ಮಿಶ್ರಮಾಡಿಯೂ ಕುಡಿಸಬೇಕು. ಆಗತಾನೆ ನೀರು ಕುಡಿದವನು, ಉಪವಾಸ ಮಾಡಿರುವವನು, ಭೋಜನಮಾಡಿದವನು, ಆಹಾರ ಜೀರ್ಣಿಸದಿರುವವನು. ಕೃಶನು, ಬಾಯಾರಿರುವನು, ಇವರಿಗೆ ಪಾಚನ ಕಷಾಯವನ್ನು ಕುಡಿಸಬಾರದು.

ಮೃದೌ ಜ್ವರೇ ಲಘೌ ದೇಹೇ ಪ್ರಚಲೇಷು ಮಲೇಷು ಚ |
ಪಕ್ವಂ ದೋಷಂ ವಿಜಾನೀಯಾತ್ ಜ್ವರೇ ದೇಯಂ ತದೌಷಧಮ್ ||೧೧೫||

ಜ್ವರವು ಕಮ್ಮಿಯಾಗಿ ದೇಹವು ಹಗುರವಾಗಿ ಮಲಗಳು ಸ್ಥಳಬಿಟ್ಟು ಚಲಿಸಿದರೆ ದೋಷಪಾಕವಾಯಿತೆಂದು ತಿಳಿದು ಆಗ ಶೋಧನ, ಶಮನೌಷಧಿಗಳನ್ನು ಕೊಡಬೇಕು

ದೋಷಪ್ರಕೃತಿವೈಕೃತ್ಯಾದೇಕೇಷಾಂ ಪಕ್ವಲಕ್ಷಣಮ್ ।

ಜ್ವರವನ್ನುಂಟುಮಾಡುವ ದೋಷಗಳ ಉಲ್ಬಣಾವಸ್ಥೆಯು ನಿವಾರಣೆಯಾದರೆ ದೋಷಪಾಕವಾಗಿದೆಯೆಂದು ತಿಳಿಯಬೇಕು ಎಂಬುದು ಕೆಲವು ವೈದ್ಯರ ಮತವು.

ಹೃದಯೋದ್ವೇಷ್ಟನಂ ತನ್ದ್ರಾ ಲಾಲಾಸ್ರುತಿರರೋಚಕಃ ॥೧೧೬॥
ದೋಷಾಪ್ರವೃತಿರಾಲಸ್ಯಂ ವಿಬನ್ಧೋ ಬಹುಮೂತ್ರತಾ ।
ಗುರೂದರತ್ವಮಸ್ವೇದೋ ನ ಪಕ್ತಿಃ ಶಕೃತೋಽರತಿಃ ॥೧೧೭॥
ಸ್ವಾಪಃ ಸ್ತಮ್ಭೋ ಗುರುತ್ವಂ ಚ ಗಾತ್ರಾಣಾಂ ವಹ್ನಿಮಾರ್ದವಮ್ ।
ಮುಖಸ್ಯಾಶುದ್ಧಿರಗ್ಲಾನಿಃ ಪ್ರಸಙ್ಗೀ ಬಲವಾನ್ ಜ್ವರಃ ॥೧೧೮॥
ಅಙ್ಗೈರೇಭಿರ್ವಿಜಾನೀಯಾಜ್ಜ್ವರಮಾಮಂ ವಿಚಕ್ಷಣಃ ।

ಆಮಜ್ವರದ ಲಕ್ಷಣ: ಹೃದಯದ ಸುತ್ತಲೂ ಕಫ ಮೆತ್ತಿದಂತಿರುವುದು, ತೂಕಡಿಕೆ, ಬಾಯಿನಿಂದ ಜೊಲ್ಲುಸುರಿಯುವುದು, ಅರುಚಿ (ರುಚಿ ಗೊತ್ತಾಗದಿರುವುದು), ವಾತಾದಿದೋಷಗಳು ಚಲಿಸದಿರುವುದು, ಆಲಸತೆ, ಮಲಬಂಧ, ಹೆಚ್ಚಾಗಿ ಮೂತ್ರವು ಸೋರುವುದು, ಹೊಟ್ಟೆಯು ಭಾರವಾಗಿರುವುದು, ಬೆವರು ಬಾರದಿರುವುದು, ಮಲವು ಜೀರ್ಣಿಸದಿರುವುದು, ಮನಃಶಾಂತಿಯಿಲ್ಲದಿರುವುದು, ಅಂಗಗಳಲ್ಲಿ ಸ್ಪರ್ಶಜ್ಞಾನವಿಲ್ಲದಿರುವುದು, ಅವಯವಗಳು ಬಿಗಿದುಹಿಡಿದುಕೊಂಡಿರುವುದು, ಮೈಭಾರವಾಗುವುದು, ಅಗ್ನಿಮಾಂದ್ಯವು, ಬಾಯಿಸ್ವಚ್ಛವಾಗಿಲ್ಲದಿರುವುದು (ಮೆತ್ತಿದಂತೆ ತೋರುವುದು), ಸ್ವಲ್ಪ ಆಯಾಸ ತೋರುವುದು, ಜ್ವರವು ಬಲವಾಗಿ ಅನುಸರಿಸಿಕೊಂಡು ಬರುವುದು, ಈ ಲಕ್ಷಣಗಳಿಂದ ಆಮಜ್ವರವೆಂದು ತಿಳಿಯಬೇಕು.

ಸಪ್ತರಾತ್ರಾತ್ಪರಂ ಕೇಚಿನ್ಮನ್ಯನ್ತೇ ದೇಯಮೌಷಧಮ್ ॥೧೧೯॥
ದಶರಾತ್ರಾತ್ಪರಂ ಕೇಚಿದ್ದಾತವ್ಯಮಿತಿ ನಿಶ್ಚಿತಾಃ ।
ಪೈತ್ತಿಕೇ ವಾ ಜ್ವರೇ ದೇಯಮಲ್ಪಕಾಲಸಮುತ್ಥಿತೇ ॥೧೨೦॥
ಅಚಿರಜ್ವರಿತಸ್ಯಾಪಿ ದೇಯಂ ಸ್ಯಾದ್ದೋಷಪಾಕತಃ ।
ಭೇಷಜಂ ಹ್ಯಾಮದೋಷಸ್ಯ ಭೂಯೋ ಜ್ವಲಯತಿ ಜ್ವರಮ್ ।
ಶೋಧನಂ ಶಮನೀಯಂ ತು ಕರೋತಿ ವಿಷಮಜ್ವರಮ್ ॥೧೨೧॥

ಏಳುದಿನಗಳು ಕಳೆದಮೇಲೆ ಕಷಾಯರಸದೌಷಧವನ್ನೂ ಕುಡಿಸಬಹುದೆಂದು ಕೆಲವು ವೈದ್ಯರು ಹೇಳುತ್ತಾರೆ ; ಕಹಿರಸದೌಷಧವನ್ನು ಆಮಾವಸ್ಥೆಯಲ್ಲೂ ಕೊಡಬಹುದು. ಮತ್ತೆ ಕೆಲವರು ಹತ್ತುದಿನಗಳ ಮೇಲೆ ಪಾಪಕಾರ್ಯವು ಮುಗಿದಿರುತ್ತೆಯಾಗಿ ಕಷಾಯದೌಷಧಗಳನ್ನು ಕುಡಿಸಬಹುದೆಂದು ನಿರ್ಧಾರ ಮಾಡಿರುತ್ತಾರೆ ; ಪಿತ್ತಜ್ವರದಲ್ಲಿ ಸ್ವಲ್ಪದೋಷವಿರುವ ಕಾರಣ ಬೇಗ ಪಾಕವಾಗುತ್ತದೆಯಾಗಿ ಜ್ವರಬಂದು ಸ್ವಲ್ಪಕಾಲವಾಗಿದ್ದರೂ ಔಷಧಪ್ರಯೋಗವನ್ನು ಮಾಡಬಹುದು ; ಆಮದೋಷವಿರುವಾಗ ಶೋಧನೌಷಧವನ್ನು ಕುಡಿಸಿದರೆ ಜ್ವರವನ್ನು ಮತ್ತಷ್ಟು ಕೆರಳಿಸುತ್ತದೆ ; ಶಮನೌಷಧವನ್ನು ಪ್ರಯೋಗಿಸಿದರೆ ವಿಷಮ ಜ್ವರವಾಗಿ ಪರಿಣಮಿಸುತ್ತದೆ.

ಚ್ಯವಮಾನಂ ಜ್ವರೋತ್ಕ್ಲಿಷ್ಟಮುಪೇಕ್ಷೇತ ಮಲಂ ಸದಾ ।
ಅತಿಪ್ರವರ್ತಮಾನಂ ಚ ಸಾಧಯೇದತಿಸಾರವತ್ ॥೧೨೨॥

ಜ್ವರವೇಗದಿಂದ ದೋಷಗಳು ತಾವಾಗಿಯೇ ವಮನ ವಿರೇಚನಗಳ ಮೂಲಕ ಹೊರಕ್ಕೆ ಬರುತ್ತಿದ್ದರೆ ಉದಾಸೀನನಾಗಿರಬೇಕು ; ಅವನ್ನು ತಡೆಯಬಾರದು ; ಆಮವಾಗಿಯಾಗಲೀ, ಪಕ್ವವಾಗಿಯಾಗಲೀ ಅತಿಯಾಗಿ ಮಲವು ಹೊರಕ್ಕೆ ಬರುತ್ತಿದ್ದರೆ ಅತಿಸಾರದ ಚಿಕಿತ್ಸೆಯಂತೆಯೇ ಪಾಚನ ಮತ್ತು ಸಂಗ್ರಹಣೌಷಧಿಗಳನ್ನು ಪ್ರಯೋಗಿಸಬೇಕು.

ಯದಾ ಕೋಷ್ಠಾನುಗಾಃ ಪಕ್ವಾ ವಿಬದ್ಧಾಃ ಸ್ರೋತಸಾಂ ಮಲಾಃ ।
ಅಚಿರಜ್ವರಿತಸ್ಯಾಪಿ ತದಾ ದದ್ಯಾದ್ವಿರೇಚನಮ್ ॥೧೨೩॥
ಪಕ್ವೋ ಹ್ಯನಿಃಸೃತೋ ದೋಷೋ ದೇಹೇ ತಿಷ್ಠನ್ ಮಹಾತ್ಯಯಮ್ ॥೧೨೪॥
ತಸ್ಮಾನ್ನಿರ್ಹರಣಂ ಕಾರ್ಯಂ ದೋಷಾಣಾಂ ವಮನಾದಿಭಿಃ ।

ಕೋಷ್ಠದಲ್ಲಿರುವ ಮಲಗಳು ಪಾಕವಾಗಿ ಸ್ರೋತೋಮಾರ್ಗಗಳನ್ನು ತಡೆದರೆ ಜ್ವರಬಂದು ಸ್ವಲ್ಪಕಾಲವಾಗಿದ್ದರೂ ಶೋಧನೌಷಧವನ್ನು ಪ್ರಯೋಗಿಸಬೇಕು ; ದೋಷವು ಪಾಕವಾಗಿ ಹೊರಗಡೆಗೆ ವಿಸರ್ಜನೆಯಾಗದೆ ದೇಹದಲ್ಲೇ ನಿಂತುಬಿಟ್ಟರೆ ತುಂಬಾ ಅಪಾಯವನ್ನುಂಟುಮಾಡುತ್ತದೆ ; ವಿಷಮಜ್ವರವನ್ನಾಗಲೀ ಬಲಹಾನಿಯನ್ನಾಗಲಿ ಉಂಟುಮಾಡುತ್ತದೆ ; ಆದಕಾರಣ ಸಂಚಿತವಾಗಿರುವ ದೋಷಗಳನ್ನು ವಮನಾದಿ ಶೋಧನೌಷಧಗಳಿಂದ ಹೊರಕ್ಕೆ ತೆಗೆದುಬಿಡಬೇಕು.

ಪ್ರಾಕ್ಕರ್ಮ ವಮನಂ ಚಾಸ್ಯ ಕಾರ್ಯಮಾಸ್ಥಾಪನಂ ತಥಾ ।
ವಿರೇಚನಂ ತಥಾ ಕುರ್ಯಾಚ್ಛಿರಸಶ್ಚ ವಿರೇಚನಮ್ ॥೧೨೫॥

ಜ್ವರದಲ್ಲಿ ಮೊದಲು ಲಂಘನವನ್ನು ಮಾಡಿಸಬೇಕೆಂದು ಹೇಳಿದ್ದರೂ ಪ್ರಥಮಾವಸ್ಥೆಯಲ್ಲಿ ವಮನವನ್ನೂ ಹಾಗೆಯೇ ಆಸ್ಥಾಪನವನ್ನೂ, ವಿರೇಚನವನ್ನೂ, ಶಿರೋವಿರೇಚನವನ್ನೂ, ಕ್ರಮವಾಗಿ ಒಂದಾದಮೇಲೊಂದರಂತೆ ನಡೆಸಬೇಕು.

ಕ್ರಮೇಣ ಬಲಿನೇ ದೇಯಂ ವಮನಂ ಶ್ಲೈಷ್ಮಿಕೇ ಜ್ವರೇ ।
ಪಿತ್ತಪ್ರಾಯೇ ವಿರೇಕಸ್ತು ಕಾರ್ಯಃ ಪ್ರಶಿಥಿಲಾಶಯೇ ॥೧೨೬॥
ಸರುಜೇಽನಿಲಜೇ ಕಾರ್ಯಂ ಸೋದಾವರ್ತೇ ನಿರೂಹಣಮ್ ।
ಕಟೀಪೃಷ್ಠಗ್ರಹಾರ್ತಸ್ಯ ದೀಪ್ತಾಗ್ನೇರನುವಾಸನಮ್ ॥೧೨೭॥
ಶಿರೋಗೌರವಶೂಲಘ್ನಮಿನ್ದ್ರಿಯಪ್ರತಿಬೋಧನಮ್ ।
ಕಫಾಭಿಪನ್ನೇ ಶಿರಸಿ ಕಾರ್ಯಂ ಮೂರ್ಧವಿರೇಚನಮ್ ॥೧೨೮॥

ರೋಗಿಯು ಬಲಿಷ್ಠನಾದರೆ ಕ್ರಮವಾಗಿ ಶ್ಲೇಷ್ಮಜ್ವರದಲ್ಲಿ ವಮನವನ್ನೂ ವಿರೇಚನವನ್ನೂ, ಪಿತ್ತಪ್ರಾಯವಾಗಿದ್ದು (ದೋಷಗಳು ಬಿಗಿಯಾಗಿರದೆ ಸಡಿಲಿಸಿದ್ದರೆ) ಉದಾವರ್ತದಿಂದ ಹೊಟ್ಟೆನೋಯುತ್ತಿರುವ ವಾತಜ್ವರದಲ್ಲಿ ನಿರೂಹಬಸ್ತಿಯನ್ನೂ, ಸೊಂಟ, ಬೆನ್ನುಗಳು ಹಿಡಿದುಕೊಂಡು ಅಗ್ನಿದೀಪ್ತಿಯಾಗಿದ್ದರೆ ಅನುವಾಸನಬಸ್ತಿಯನ್ನೂ, ತಲೆಭಾರ,

ಶೂಲೆಗಳಿದ್ದರೆ ಶಿರೋವಿರೇಚನವನ್ನೂ, ಜೀರ್ಣಜ್ವರದಲ್ಲಿಯೂ ಶಿರೋವಿರೇಚನವನ್ನೂ ಮಾಡಿಸಬೇಕು ; ತರುಣಜ್ವರದಲ್ಲಿ ಕೂಡದು ; ಸನ್ನಿಪಾತಜ್ವರ, ಆಮಜ್ವರಗಳಲ್ಲಿ ಶಿರೋವಿರೇಚನವನ್ನು ಮಾಡಿಸಬೇಕು.

ದುರ್ಬಲಸ್ಯ ಸಮಾಧ್ಮಾತಮುದರಂ ಸರುಜಂ ದಿಹೇತ್ ।
ದಾರುಹೈಮವತೀಕುಷ್ಠಶತಾಹ್ವಾಹಿಙ್ಗುಸೈನ್ಧವೈಃ ॥೧೨೯॥
ಅಮ್ಲಪಿಷ್ಟೈಃ ಸುಖೋಷ್ಣೈಶ್ಚ ಪವನೇ ತೂರ್ಧ್ವಮಾಗತೇ ।
ರುದ್ಧಮೂತ್ರಪುರೀಷಾಯ ಗುದೇ ವರ್ತಿಂ ನಿಧಾಪಯೇತ್ ॥೧೩೦॥

ದುರ್ಬಲನಿಗೆ ಹೊಟ್ಟೆಯುಬ್ಬರಿಸಿ ನೋಯುತ್ತಿದ್ದರೆ ಮರದರಿಶಿನ, ಬಜೆ, ಚಂಗಲ್ ಕೋಷ್ಠ, ಸಬ್ಬಶಿಗೆಬೀಜ, ಹಿಂಗು, ಸೈಂಧವಗಳನ್ನು ಮಾದಲಾವ್ಲು, ಹುಳಿ ಕಲಗಚ್ಚುಗಳಿಂದ ನುಣ್ಣಗೆ ಅರೆದು ಸುಖೋಷ್ಣವಾಗಿ ಹೊಟ್ಟೆಯ ಮೇಲೆ ಬಳಿಯಬೇಕು ; ವಾತವು ಮೇಲ್ಗಡೆಗೆ ನುಗ್ಗಿ ಮೂತ್ರವೂ ಮಲವೂ ತಡೆದಿದ್ದರೆ ಮೇಲೆ ಹೇಳಿದವುಗಳನ್ನೇ ಬತ್ತಿಯನ್ನಾಗಿ ಮಾಡಿ ಗುದದ್ವಾರದಲ್ಲಿ ನುಗ್ಗಿಸಬೇಕು ; ಕೆಲವರು ಮಗ್ಗಾರೆಕಾಯಿ, ಸೈಂಧವ, ಹಿಪ್ಪಲಿ ಮೊದಲಾದುವುಗಳಿಂದ ಯೋಗಾನುಸಾರವರ್ತಿಯನ್ನು ಮಾಡಿ ಪ್ರಯೋಗಿಸಬೇಕೆನ್ನುತ್ತಾರೆ.

ಪಿಪ್ಪಲೀ ಪಿಪ್ಪಲೀ ಮೂಲ ಯವಾನೀಚವ್ಯಸಾಧಿತಮ್ ।
ಪಾಯಯೇತ ಯವಾಗೂಂ ವಾ ಮಾರುತಾದ್ಯನುಲೋಮನೀಮ್ ॥೧೩೧॥
ಶುದ್ಧಸ್ಯೋಭಯತೋ ಯಸ್ಯ ಜ್ವರಃ ಶಾನ್ತಿಂ ನ ಗಚ್ಛತಿ ।
ಸಶೇಷದೋಷರೂಕ್ಷಸ್ಯ ತಸ್ಯ ತಂ ಸರ್ಪಿಷಾ ಜಯೇತ್ ॥೧೩೨॥
ಕೃಶಂ ಚೈವಾಲ್ಪದೋಷಂ ಚ ಶಮನೀಯೈರುಪಾಚರೇತ್ ।
ಉಪವಾಸೈರ್ಬಲಸ್ಥಂ ತು ಜ್ವರೇ ಸನ್ತರ್ಪಣೋತ್ಥಿತೇ ॥೧೩೩॥
ಕ್ಲಿನ್ನಾಂ ಯವಾಗೂಂ ಮನ್ದಾಗ್ನಿಂ ತೃಷಾರ್ತಂ ಪಾಯಯೇನ್ನರಮ್ ।

ಹಿಪ್ಪಲಿ, ಮೋಡಿ, ವಾದಕ್ಕಿ, ಚವ್ಯಗಳಿಂದ ತಯಾರಿಸಿದ ಗಂಜಿಯನ್ನು ಕುಡಿಸಿದರೆ ವಾತವು ಅನುಲೋಮನವಾಗುತ್ತದೆ ; ವಮನ ವಿರೇಚನಗಳಿಂದ ದೇಹಶೋಧನೆಯನ್ನು ಮಾಡಿಸಿಕೊಂಡಿರುವ ಮನುಷ್ಯನಿಗೆ ಜ್ವರಶಾಂತಿಯಾಗದಿದ್ದರೆ ಅಥವಾ ದೋಷಶೇಷನಿಂತು ರೂಕ್ಷನಾಗಿದ್ದರೆ ಘೃತಪಾನವನ್ನು ಮಾಡಿಸುವುದರಿಂದ ಗುಣವಾಗುತ್ತದೆ. ಕ್ಷೀಣದೇಹವುಳ್ಳವನಿಗೆ ಅಲ್ಪದೋಷವಿದ್ದರೆ ಪ್ರಯೋಗಿಸಬೇಕು ; ರೋಗಿಯು ಬಲಿಷ್ಠನಾಗಿದ್ದು ಸಂತರ್ಪಣದಿಂದ ಜ್ವರಬಂದಿದ್ದರೆ ಉಪವಾಸದಿಂದಲೂ ಅಗ್ನಿಮಾಂದ್ಯ, ಬಾಯಾರಿಕೆಗಳಿಂದ ಪೀಡಿತನಾದರೆ ಸ್ವಲ್ಪವೇ ಅಗಳಿರುವ ತಿಳಿಗಂಜಿಯನ್ನೂ ಕುಡಿಸಬೇಕು.

ತೃಟ್ಛರ್ದಿದಾಹಘರ್ಮಾರ್ತಂ ಮದ್ಯಪಂ ಲಾಜತರ್ಪಣಮ್ ॥೧೩೪॥
ಸಕ್ಷೌದ್ರಮಮ್ಬುಸಾ ಪಶ್ಚಾಜ್ಜೀರ್ಣೇ ಯೂಷರಸೌದನಮ್ ।

ಉಪವಾಸಶ್ರಮಕೃತೇ ಕ್ಷೀಣಂ ವಾತಾಧಿಕೇ ಜ್ವರೇ ॥೧೩೫॥
ದೀಪ್ತಾಗ್ನಿಂ ಭೋಜಯೇತ್ ಪ್ರಾಜ್ಞೋ ನರಂ ಮಾಂಸರಸೌದನಮ್ ।
ಮುದ್ಗಯೂಷೌದನಶ್ಚಾಪಿ ಹಿತಃ ಕಫಸಮುತ್ಥಿತೇ ॥೧೩೬॥
ಸ ಏವ ಸಿತಯಾ ಯುಕ್ತಃ ಶೀತಃ ಪಿತ್ತಜ್ವರೇ ಹಿತಃ ।

ನೀರಡಿಕೆ, ವಮನ, ಮೈಉರಿತ, ಮೈಸೆಖೆ ಇವುಗಳಿಂದ ಪೀಡಿತನಾಗಿರುವವನಿಗೂ ಮದ್ಯಪಾನಮಾಡುವವನಿಗೂ ಅರಳಿನಿಂದ ತಯಾರಿಸಿದ ತರ್ಪಣಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ನೀರಿನಲ್ಲಿ ಕದರಿ ಕುಡಿಸಿ ಅದು ಜೀರ್ಣವಾದಮೇಲೆ ಹೆಸರುಕಟ್ಟು ಮಾಂಸ ರಸ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು ; ಉಪವಾಸ, ದೇಹಾಯಾಸ ವಾತಾಧಿಕ್ಯತೆಯಿಂದ ಕ್ಷೀಣನಾದವನಿಗೆ ಅಗ್ನಿದೀಪನವಾಗಿದ್ದರೆ ಮಾಂಸರಸಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು ; ಕಫ ಜ್ವರದಲ್ಲಿ ಹೆಸರುಕಟ್ಟು ಮಿಶ್ರಮಾಡಿದ ಅನ್ನವನ್ನೂ ಪಿತ್ತಜ್ವರದಲ್ಲಿ ಹೆಸರುಕಟ್ಟಿಗೆ ಸಕ್ಕರೆಯನ್ನು ಸೇರಿಸಿಯೂ ಅನ್ನವನು ಭೋಜನಮಾಡಿಸಿದರೆ ಹಿತವಾಗುತ್ತದೆ.

ದಾಡಿಮಾಮಲಮುದ್ಗಾನಾಂ ಯೂಷಶ್ಚಾನಿಲಪೈತ್ತಿಕೇ ।
ಹ್ರಸ್ವಮೂಲಕಯೂಷೇಣ ಭೋಜಯೇತ್ಕಫವಾತಿಕೇ ॥೧೩೭॥
ಪಟೋಲನಿಮ್ಬಯೂಷಸ್ತು ಪಥ್ಯಃ ಪಿತ್ತಕಫಾತ್ಮಕೇ ।
ದಾಹಚ್ಛರ್ದಿಯುತಂ ಕ್ಷಾಮಂ ನಿರನ್ನಂ ತೃಷ್ಣಯಾರ್ದಿತಮ್ ॥೧೩೮॥
ಸೀತಾಕ್ಷೌದ್ರಯುತಂ ಲಾಜತರ್ಪಣಂ ಪಾಯಯೇತ ಚ ।

ವಾತಪಿತ್ತಜ್ವರದಲ್ಲಿ ದಾಳಿಂಬೆ, ನೆಲ್ಲೀಕಾಯಿ, ಹೆಸರು ಇವುಗಳ ಯೂಷವನ್ನೂ, ಕಫವಾತಜ್ವರದಲ್ಲಿ ಸಣ್ಣಮೂಲಂಗಿಯ ಕಟ್ಟನ್ನು ಸೇರಿಸಿದ ಅನ್ನವನ್ನೂ ಭೋಜನ ಮಾಡಿಸಬೇಕು. ಪಿತ್ತಕಫಜ್ವರದಲ್ಲಿ ಕಹಿಪಡವಲ, ಬೇವಿನತೊಕ್ಕು, ಹೆಸರು ಇವುಗಳ ಕಟ್ಟನ್ನು ಮಿಶ್ರಮಾಡಿದ ಅನ್ನವನ್ನು ಭೋಜನಮಾಡುವುದು ಹಿತಕರವಾದದ್ದು ; ಮೈ ಉರಿತ ವಮನಗಳುಳ್ಳ ಕೃಶನಾಗಿ ಅನ್ನವನ್ನು ಭೋಜನ ಮಾಡದಿರುವ ಬಾಯಾರಿಕೆ ಯುಳ್ಳ ರೋಗಿಗೆ ಅರಳು ಹಿಟ್ಟನಿಂದ ಮಾಡಿದ ತರ್ಪಣಕ್ಕೆ ಸಕ್ಕರೆ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು, (ಅರಳು ಹಿಟ್ಟಿಗೆ ತುಪ್ಪಮಿಶ್ರಮಾಡಿ ತಣ್ಣೀರನ್ನು ಚುಮುಕಿಸಿ ಅತಿಗಟ್ಟಿಯಾಗದಂತೆಯೂ ಅತಿನೀರಾಗದಂತೆಯೂ ಕಲಸಿದರೆ ಮನ್ಥವೆಂದೂ ; ದ್ರಾಕ್ಷಿ, ದಾಳಿಂಬೆ, ಖರ್ಜೂರಗಳಿಗೆ ಸ್ವಲ್ಪ ನೀರು ಮಿಶ್ರಮಾಡಿ ಕಿವಿಚಿ ಸಕ್ಕರೆ ಅರಳುಹಿಟ್ಟು, ತುಪ್ಪ, ಜೇನುತುಪ್ಪ, ಇವುಗಳನ್ನು ಮಿಶ್ರಮಾಡಿದರೆ "ಸಂತರ್ಪಣ"ವೆಂದೂ ಹೆಸರು.)

ಕಫಪಿತ್ತಪರೀತಸ್ಯ ಗ್ರೀಷ್ಮೇಽಸೃಕ್ಪಿತ್ತಿನಸ್ತಥಾ ॥೧೩೯॥
ಮದ್ಯನಿತ್ಯಸ್ಯ ನ ಹಿತಾ ಯವಾಗೂಸ್ತಮುಪಾಚರೇತ್ ।
ಯೂಷೈರಮ್ಲೈರನಮ್ಲೈರ್ವಾ ಜಾಙ್ಗಲೈರ್ವಾ ರಸೈರ್ಹಿತೈಃ ॥೧೪೦॥

ರಕ್ತಪಿತ್ತವನ್ನು ನಿವಾರಿಸಲು ಯವಾಗುವಿಗೆ ತುಪ್ಪ ಮಿಶ್ರಮಾಡಿ ಕುಡಿಯುವುದು

ಹಿತಕರವಾದಾಗ್ಯೂ, ಕಫಪಿತ್ತಗಳಿಂದ ವ್ಯಾಪ್ತನಾಗಿರುವವನಿಗೂ ಬೇಸಿಗೆಯಲ್ಲೂ ರಕ್ತಪಿತ್ತಪೀಡಿತನಿಗೂ ಮದ್ಯಪಾನವನ್ನು ಅಭ್ಯಾಸಮಾಡಿದವನಿಗೂ ಯವಾಗೂ ಪಾನವು ಹಿತಕರವಲ್ಲ ; ಅಂಥವರಿಗೆ ಹುಳಿಮಿಶ್ರವಾಗಿಯೂ ಮಿಶ್ರ ಮಾಡದೆಯೂ ಹೆಸರು ಕಟ್ಟನ್ನೂ ಹಿತಕರಗಳಾದ ಜಾಂಗಲ ಮೃಗಪಕ್ಷಿಗಳ ಮಾಂಸರಸ ಮಿಶ್ರಮಾಡಿದ ಹೆಸರು ಕಟ್ಟನ್ನೂ ಕುಡಿಸಬೇಕು.

ಮದ್ಯಂ ಪುರಾಣಂ ಮನ್ದಾಗ್ನೇರ್ಯವಾನ್ನೋಪಹಿತಂ ಹಿತಮ್ ।
ಸವ್ಯೋಷಂ ವಿತರೇತ್ ತಕ್ರಂ ಕಫಾರೋಚಕಪೀಡಿತೇ ॥೧೪೧॥

ಅಗ್ನಿಮಾಂದ್ಯವುಳ್ಳವನಿಗೆ ಯವೆಯ ಅನ್ನವನ್ನು ಭೋಜನಮಾಡಿಸಿ ಹಳೆಯ ಮದ್ಯವನ್ನು ಕುಡಿಸಿದರೆ ಹಿತವಾಗುತ್ತದೆ; ಕಫದಿಂದಲೂ ಅರುಚಿಯಿಂದಲೂ ಪೀಡಿತನಾಗಿದ್ದರೆ ತ್ರಿಕಟು ಚೂರ್ಣವನ್ನು ಮಜ್ಜಿಗೆಗೆ ಹಾಕಿ ಕುಡಿಸಬೇಕು.

ಕೃಶೋಽಲ್ಪದೋಷೋ ದೀನಶ್ಚ ನರೋ ಜೀರ್ಣಜ್ವರಾರ್ದಿತಃ ।
ವಿಬದ್ಧ ಸೃಷ್ಟದೋಷಶ್ಚ ರೂಕ್ಷಃ ಪಿತ್ತಾನಿಲಜ್ವರೀ ॥೧೪೨॥
ಪಿಪಾಸಾರ್ತಃ ಸದಾಹೋ ವಾ ಪಯಸಾ ಸಸುಖೀ ಭವೇತ್ ।
ತದೇವ ತು ಪಯಃ ಪೀತಂ ತರುಣೇ ಹನ್ತಿ ಮಾನವಮ್ ॥೧೪೩॥

ಕೃಶನಾಗಿ ಅಲ್ಪದೋಷವುಳ್ಳ ಮನಃಕ್ಲೇಶವುಳ್ಳ ಜೀರ್ಣಜ್ವರಪೀಡಿತನೂ ಮಲಬಂಧಪೀಡಿತನೂ ಮಲಪ್ರವೃತ್ತಿಯಾಗುವವನೂ ರೂಕ್ಷದೇಹವುಳ್ಳ ಪಿತ್ತವಾತ ಜ್ವರವುಳ್ಳವನೂ ಬಾಯಾರಿದವನೂ ಮೈಉರಿಯುಳ್ಳವನೂ ಹಾಲುಕುಡಿದರೆ ಸುಖಿತನಾಗುತ್ತಾನೆ; ತರುಣ ಜ್ವರದಲ್ಲಿ ಹಾಲನ್ನು ಕುಡಿದ ರೋಗಿಯು ಸಾಯುತ್ತಾನೆ.

ಸರ್ವಜ್ವರೇಷು ಸುಲಘು ಮಾತ್ರಾವದ್ಭೋಜನಂ ಹಿತಮ್ ।
ವೇಗಾಪಾಯೇಽನ್ಯಥಾ ತದ್ಧಿ ಜ್ವರವೇಗಾಭಿವರ್ಧನಮ್ ॥೧೪೪॥

ಎಲ್ಲಾ ವಿಧದ ಜ್ವರದಲ್ಲೂ ಜ್ವರವೇಗವು ಶಾಂತವಾದ ಮೇಲೆ ಹಳೆಯದಾದ ಕೆಂಪು ಭತ್ತದ ಅಕ್ಕಿಯ ಅನ್ನವನ್ನು ಅಲ್ಪವಾಗಿ ಭೋಜನಮಾಡಿದರೆ ಹಿತವಾಗುತ್ತದೆ ; ಜ್ವರವೇಗವಿರುವಾಗ ಭೋಜನಮಾಡಿದರೆ ವೇಗವು ಹೆಚ್ಚುತ್ತದೆ.

ಜ್ವರಿತೋ ಹಿತಮಶ್ನೀಯಾದ್ಯದ್ಯಪ್ಯಸ್ಯಾರುಚಿರ್ಭವೇತ್ ।
ಅನ್ನಕಾಲೇಽಹ್ಯಭುಞ್ಜಾನಃ ಕ್ಷೀಯತೇ ಮ್ರಿಯತೇಽಥವಾ ॥೧೪೫॥
ಸ ಕ್ಷೀಣಃ ಕೃಚ್ಛ್ರತಾಂ ಯಾತಿ ಯಾತ್ಯಸಾಧ್ಯತ್ವಮೇವ ಚ ।
ತಸ್ಮಾದ್ರಕ್ಷೇದ್ಬಲಂ ಪುಂಸಾಂ ಬಲೇ ಸತಿ ಹಿ ಜೀವಿತಮ್ ॥೧೪೬॥
ಗುರ್ವಭಿಷ್ಯನ್ದ್ಯಕಾಲೇ ಚ ಜ್ವರೀ ನಾದ್ಯಾತ್ ಕಥಞ್ಚನ ।
ನ ತು ತಸ್ಯಾಹಿತಂ ಭುಕ್ತಮಾಯುಷೇ ವಾ ಸುಖಾಯ ವಾ ॥೧೪೭॥

ಜ್ವರಪೀಡಿತನು ಅರೋಚಕ ಪೀಡಿತನಾಗಿದ್ದರೆ ಹಿತಕರವಾದ ಅನ್ನವನ್ನೇ ಭೋಜನ ಮಾಡಬೇಕು ; ಭೋಜನ ಮಾಡುವ ಕಾಲದಲ್ಲಿ ಆಹಾರವನ್ನು ತಿನ್ನದಿದ್ದರೆ ಕೃಶನಾಗು

ತ್ತಾನೆ ಅಥವಾ ಸಾಯುತ್ತಾನೆ ; ಕ್ಷೀಣನಾದರೆ ವ್ಯಾಧಿಯು ಕಷ್ಟಸಾಧ್ಯವಾಗಿಯೂ ಅಸಾಧ್ಯವಾಗಿಯೂ ತಿರುಗುತ್ತನೆ ; ಆದಕಾರಣ ಮನುಷ್ಯರ ಬಲವನ್ನು ಕಾಪಾಡ ಬೇಕು ; ಬಲವಿದ್ದರೆ ಬದುಕಿರಬಹುದು (ಪ್ರಾಣವಿರುತ್ತದೆ). ಜ್ವರ ಪೀಡಿತನು ಗುರು ವಾಗಿಯೂ ಅಭಿಷ್ಯಂದ (ನೈಭಾರ್ಯಿಸುವಂತಾಗುವ ಪಿಚ್ಛಿಲಪದಾರ್ಥ) ಗಳನ್ನು ಎಂದಿಗೂ ತಿನ್ನಕೂಡದು ; ಅಕಾಲದಲ್ಲಿ ಭೋಜನವನ್ನು ಮಾಡಬಾರದು. ಅಹಿತವಾದ ಆಹಾರ ವನ್ನು ಭೋಜನ ಮಾಡಿದರೆ ಅವನಿಗೆ ಆಯುಸ್ಸು ವೃದ್ಧಿಯಾಗುವುದಿಲ್ಲ. ಸುಖವೂ ಉಂಟಾಗುವುದಿಲ್ಲ. (ದೋಷ, ಧಾತು, ಮಲ, ಸ್ರೋತಸ್ಸುಗಳಲ್ಲಿ ದ್ರವ ಜಿನುಗುವಂತೆ ಮಾಡುವ ಆಹಾರಕ್ಕೆ ಅಭಿಷ್ಯಂದಿಯೆನ್ನುತ್ತಾರೆ.)

ಸಂತತಂ ವಿಷಮಂ ವಾಪಿ ಕ್ಷೀಣಸ್ಯ ಸುಚಿರೋತ್ಥಿತಮ್ ।
ಜ್ವರಂ ಸಭ್ಯೋಜನೈಃ ಪಥ್ಯೈರ್ಲಘುಭಿಃ ಸಮುಪಾಚರೇತ್ ॥೧೪೮॥
ಮುದ್ಗಾನ್ ಮಸೂರಾಂಶ್ಚಣಕಾನ್ ಕುಳತ್ಥಾನ್ ಸಮಕುಷ್ಟಕಾನ್ ।
ಆಹಾರಕಾಲೇ ಯೂಷಾರ್ಥಂ ಜ್ವರಿತಾಯ ಪ್ರದಾಪಯೇತ್ ॥೧೪೯॥
ಪಟೋಲಪತ್ರಂ ವಾರ್ತಾಕಂ ಕಠಿಲ್ಲಂ ಪಾಪಚೇಲಿಕಮ್ ।
ಕರ್ಕೋಟಕಂ ಪರ್ಪಟಕಂ ಗೋಜಿಹ್ವಾಂ ಬಾಲಮೂಲಕಮ್ ॥೧೫೦॥
ಪತ್ರಂ ಗುಡೂಚ್ಯಾಃ ಶಾಕಾರ್ಥೇ ಜ್ವರೀತಾನಾಂ ಪ್ರದಾಪಯೇತ್ ।

ಕ್ಷೀಣದೇಹವುಳ್ಳವನಿಗೆ ಬಲುಕಾಲದಲ್ಲಿ ಹುಟ್ಟಿದ ಸಂತತ ಜ್ವರವಾಗಲೀ ವಿಷಮ ಜ್ವರವಾಗಲೀ ಲಘುವಾದ ಪಥ್ಯಾಹಾರಗಳನ್ನು ಸೇವಿಸುವುದರಿಂದ ನಿವಾರಣೆಯಾಗುತ್ತದೆ; ಜ್ವರಪೀಡಿತನಿಗೆ ಭೋಜನಕಾಲದಲ್ಲಿ ಹೆಸರು, ಸಾರಂಗಿಬೇಳೆ, ಕಡಲೆ, ಹುರುಳಿ, ಕಾಡು ಹೆಸರು, ಇವುಗಳ ಕಟ್ಟುಗಳನ್ನು ಕುಡಿಸಬೇಕು ; ಕಹಿಪಡವಲದಸೊಪ್ಪು, ಬದನೆ ಕಾಯಿ, ಕೊಮ್ಮೆಸೊಪ್ಪು, ಅಗಳುಶುಂಠಿ, ಹಾಗಲಕಾಯಿ, ಪರಪಾಷ್ಟಕ, ಎತ್ತುನಾಲಿಗೆ ಸೊಪ್ಪು, ಎಳೆಯಮೂಲಂಗಿ, ಅಮೃತವಳ್ಳಿಯಸೊಪ್ಪು, ಇವುಗಳ ಪಲ್ಯಗಳನ್ನು ಜ್ವರಬಂದ ವರಿಗೆ ತಿನ್ನಿಸಬೇಕು.

ಲಾವಾನ್ ಕಪಿಞ್ಜಲಾನೇಣಾನ್ ಪೃಷತಾನ್ ಕರಭಾನ್ ಶಶಾನ್ ॥೧೫೧॥
ಕಾಲಪುಚ್ಛಾನ್ ಕುರಂಗಾಂಶ್ಚ ತಥೈವ ಮೃಗಮಾತೃಕಾನ್ ।
ಮಾಂಸಾರ್ಥೇ ಮಾಂಸಸಾತ್ಮ್ಯಾನಾಂ ಜ್ವರಿತಾನಾಂ ಪ್ರದಾಪಯೇತ್ ॥೧೫೨॥
ಸಾರಸಕ್ರೌಞ್ಚಶಿಖಿನಃ ಕುಕ್ಕುಟಾಂಸ್ತಿತ್ತಿರೀಂಸ್ತಥಾ ।
ಗುರೂಷ್ಣತ್ವಾನ್ನ ಶಂಸನ್ತಿ ಜ್ವರೇ ಕೇಚಿಚ್ಚಿಕಿತ್ಸಿತಾಃ ॥೧೫೩॥
ಜ್ವರಿತಾನಾಂ ಪ್ರಕೋಪಂ ತು ಯದಾಯಾತಿ ಸಮೀರಣಃ ।
ತದೈತೇಽಪಿ ಹಿ ಶಸ್ಯನ್ತೇ ಮಾತ್ರಾಕಾಲೋಪಪಾದಿತಾಃ ॥೧೫೪॥

ಲಾವನಹಕ್ಕಿ, ಬಿಳಿವೇದಪಕ್ಷಿ, ಕರಿಹುಲ್ಲೆ, ಅಂಡದಲ್ಲಿ ನೀಲವಾಗಿರುವ ಜಿಂಕೆ, ಲ ಕಾಲಿನ ಒಂಟೆಯಷ್ಟು ಎತ್ತರದ ಚತುಷ್ಪಾದಿ (ಶರಭ) ಮೊಲ, ಕಪ್ಪುಬಾಲದ ಹುಲ್ಲೆ,

ಕೆಂಪುಜಿಂಕೆ (ಳ ಕೊಂಬಿನಜಿಂಕೆ) ಹೀಗೆಯೇ ಕೆಲವು ಕ್ಷುದ್ರ ಮೃಗಗಳು ಇವುಗಳ ಮಾಂಸವನ್ನು ಮಾಂಸಾಹಾರಿಗಳಾದ ಜ್ವರಪೀಡಿತರಿಗೆ ಆಹಾರಾರ್ಥವಾಗಿ ಕೊಡಿಸ ಬೇಕು ; ಕೆಲವು ವೈದ್ಯರು ಸಾರಸ ಪಕ್ಷಿ, ಕ್ರೌಂಚಪಕ್ಷಿ, ನವಿಲು, ಕೋಳಿ, ವೇದಪಕ್ಷಿ, ಇವುಗಳ ಮಾಂಸವು ಗುರುಗುಣ ಉಷ್ಣವೀರ್ಯವುಳ್ಳಕಾರಣ ಜ್ವರಪೀಡಿತರಿಗೆ ಹಿತಕರವಲ್ಲ ವೆಂದು ಹೇಳುತ್ತಾರೆ ; ಜ್ವರಪೀಡಿತರಿಗೆ ವಾತಪ್ರಕೋಪವಾದಾಗ್ಯೆ ಪ್ರಮಾಣ ಕಾಲಗಳನ್ನು ಗಮನಿಸಿ ಉಪಯೋಗಿಸಿದರೆ ಈ ಸಾರಸ ಕ್ರೌಂಚಾದಿ ಪ್ರಾಣಿಗಳ ಮಾಂಸವೂ ಹಿತಕರ ವಾಗುತ್ತದೆ.

ಪರಿಷೇಕಾವಗಾಹಾಂಶ್ಚ ಸ್ನೇಹಾ್ ಸಂಶೋಧನಾನಿ ಚ ।
ಸ್ನಾನಾಭ್ಯಙ್ಗದಿವಾಸ್ವಪ್ನಶೀತವ್ಯಾಯಾಮಯೋಷಿತಃ ॥೧೫೫॥
ಕಷಾಯಗುರುರೂಕ್ಷಾಣಿ ಕ್ರೋಧಾದೀನಿ ತಥೈವ ಚ ।
ಸಾರವನ್ತಿ ಚ ಭೋಜ್ಯಾನಿ ವರ್ಜಯೇತ್ ತರುಣಜ್ವರೀ ॥೧೫೬॥
ತಥೈವ ನವಧಾನ್ಯಾದಿಂ ವರ್ಜಯೇಚ್ಚ ಸಮಾಸತಃ ।

ಮೈಮೇಲೆ ನೀರುಸುರಿಯುವುದು, ನೀರಿನೊಳಗೆ ಮುಳುಗುವುದು, ಸ್ನೇಹಪಾನ, ವಮನ, ವಿರೇಚನಗಳು (ಸಂಶೋಧನೆಗಳು) ಸ್ನಾನ ಅಭ್ಯಂಗ ಹಗಲುನಿದ್ರೆ, ತಣ್ಣೀರು ಕುಡಿಯುವುದು, ತಣ್ಣಗಿರುವ ಹವೆಗಳಲ್ಲಿರುವುದು, ಕಸರತ್ತು ಮಾಡುವುದು, ಸ್ತ್ರೀಸಂಗ, ಕಷಾಯ (ಒಗರು) ರಸ, ಗುರುಪದಾರ್ಥ ರೂಕ್ಷದ್ರವ್ಯ, ಕೋಪ ಕಾಮಾದಿಗಳನ್ನು ಸಾರವತ್ತಾದ ಆಹಾರಗಳು ಅಂದರೆಸ್ನಿಗ್ಧಪಿಚ್ಛಿಲಗಳಾದುವು ಇವು ಸೇವನೆಯನ್ನು ತರುಣ ಜ್ವರದಲ್ಲಿ ತ್ಯಜಿಸಬೇಕು ; ಮತ್ತು ಪ್ರಣಿತೋಪಾಸನಾಧ್ಯಾಯದಲ್ಲಿ ನವಧಾನ್ಯಮಾಷತಿಲ ಕಲಾಯಮೊದಲು ತಕ್ರಾಂತವಾಗಿ ಹೇಳಿರುವ ನವಾಧಾನ್ಯಾದಿ ವರ್ಗದ ದ್ರವ್ಯಗಳನ್ನೆಲ್ಲಾ ಒಟ್ಟಿಗೆ ನವಜ್ವರದಲ್ಲಿ ತ್ಯಜಿಸಿಬಿಡಬೇಕು.

ಅನವಸ್ಥಿತದೋಷಾಗ್ನೇರೇಭಿಃ ಸನ್ಧುಕ್ಷಿತೋ ಜ್ವರಃ ॥೧೫೭॥
ಗಮ್ಭೀರತೀಕ್ಷ್ಣವೇಗತ್ವಂ ಯಾತ್ಯಸಾಧ್ಯತ್ವಮೇವ ಚ ।
ಶೀತತೋಯದಿವಾಸ್ವಪ್ನಕ್ರೋಧವ್ಯಾಯಾಮಯೋಷಿತಃ ॥೧೫೮॥
ನ ಭಜೇತ ಜ್ವರೋತ್ಸೃಷ್ಟೋ ಯಾವನ್ನೋ ಬಲವಾನ್ ಭವೇತ್ ।
ತ್ಯಕ್ತಸ್ಯಾಪಿ ಜ್ವರೇಣಾಶು ದುರ್ಬಲಸ್ಯಾಹಿತೈರ್ಜ್ವರಃ ॥೧೫೯॥
ಪ್ರತ್ಯಾಪನ್ನೋ ದಹೇದ್ದೇಹಂ ಶುಷ್ಕಂ ವೃಕ್ಷಮಿವಾನಿಲಃ ।
ತಸ್ಮಾತ್ಕಾರ್ಯಃ ಪರೀಹಾರೋ ಜ್ವರಮುಕ್ತೈರ್ವಿರಿಕ್ತವತ್ ॥೧೬೦॥
ಯಾವನ್ನ ಪ್ರಕೃತಿಸ್ಥಃ ಸ್ಯಾದ್ದೋಷತಃ ಪ್ರಾಣತಸ್ತಥಾ ।

ಜ್ವರಿತನಿಗೆ ದೋಷಗಳು ವಿಮಾರ್ಗಗಳಲ್ಲಿ ಸಂಚರಿಸುವುದರಿಂದ ಅಗ್ನಿಯು ಹೊರ ಗಡೆಗೆ ನುಗ್ಗಿ ಅವ್ಯವಸ್ಥಿತವಾಗಿರುತ್ತದೆ. (ಸರಿಯಾದ ಸ್ಥಳದಲ್ಲಿರುವುದಿಲ್ಲ.) ಇದರಿಂದ ಜ್ವರವು ವೃದ್ಧಿಯಾಗಿ ಗಂಭೀರಜ್ವರವಾಗಿಯೂ ತೀಕ್ಷ್ಣವೇಗವುಳ್ಳದಾಗಿಯೂ ಅಸಾಧ್ಯತ್ವ

ವನ್ನು ಹೊಂದುತ್ತದೆ ; ಜ್ವರಬಿಟ್ಟ ಮೇಲೂ ಬಲವುಂಟಾಗುವವರೆಗೆ ತಣ್ಣೀರಿನಿಂದ ಸ್ನಾನ ಪಾನಗಳನ್ನೂ ಹಗಲು ನಿದ್ರೆ, ಕೋಪ, ವ್ಯಾಯಾಮ, ಸ್ತ್ರೀಸಂಗ, (ಮೈಥುನ) ಇವನ್ನೂ ಸೇವಿಸಬಾರದು. ಜ್ವರವು ಬಿಟ್ಟರೂ ರೋಗಿಯು ದುರ್ಬಲನಾಗಿ ಅಹಿತಾಹಾರ ವಿಹಾರ ಸೇವನೆ ಮಾಡಿದರೆ ಪುನಃ ಜ್ವರವುಂಟಾಗಿ ಬೆಂಕಿಯು ಒಣಗಿದ ಮರವನ್ನು ಬೇಗನೆ ಸುಟ್ಟುಬಿಡುವಂತೆಯೇ ರೋಗಿಯ ದೇಹವನ್ನು ಕ್ಷೀಣಿಸಿಬಿಡುತ್ತದೆ ; ಆದ ಕಾರಣ ಜ್ವರ ಬಿಟ್ಟವರಿಗೆ ವಿರೇಚಿತರು ಆಚರಿಸುವಂತೆಯೇ ಆಹಾರಾದಿ ಪಥ್ಯಕ್ರಮಗಳನ್ನನುಸರಿಸ ಬೇಕು ; ದೋಷಗಳು ವಿಕಾರ ಹೊಂದದೆ ತಮ್ಮ ತಮ್ಮ ಮಾರ್ಗಗಳಲ್ಲಿ ಸಂಚರಿಸುತ್ತಾ ಆರೋಗ್ಯಪಾಲನೆ ಮಾಡುವಂತಾಗಬೇಕು ; ವ್ಯಾಯಮಾದಿಗಳನ್ನು ಮಾಡಿದರೂ ದೇಹಕ್ಕೆ ಯಾವ ತೊಂದರೆಯೂ ಆಗದಿರುವಷ್ಟು ಕಾಲದವರೆಗೆ ಪಥ್ಯಾಚರಣೆ ಮಾಡ ಬೇಕು.

ಜ್ವರೇ ಪ್ರಮೋಹೋ ಭವತಿ ಸ್ವಲ್ಪೈರಪ್ಯವಚೇಷ್ಟಿತೈಃ ||
ನಿಷಣ್ಣಂ ಭೋಜಯೇತ್ ತಸ್ಮಾನ್ಮೂತ್ರೋಚ್ಚಾರೌ ಚ ಕಾರಯೇತ್ ||೧೬೧||

ಜ್ವರದಿಂದ ಕ್ಷೀಣನಾದವನು ಮೇಲಕ್ಕೆ ಏಳುವುದು, ಅತ್ತಿತ್ತ ಸಂಚರಿಸುವುದು ಇವೇ ಮೊದಲಾದ ಸ್ವಲ್ಪ ಕೆಲಸಮಾಡಿದರೂ ಮೂರ್ಛೆ (ಜ್ಞಾನತಪ್ಪುವುದು) ಯುಂಟಾ ದರೆ ಅಂಥವನನ್ನು ಮಲಗಿಸಿಯೇ ಮಲಮೂತ್ರಗಳನ್ನು ವಿಸರ್ಜಿಸುವಂತೆ ಮಾಡಬೇಕು ; (ಅಂದರೆ ಅತಿಯಾಗಿ ದೌರ್ಬಲ್ಯವಿರುವುದರಿಂದ ಅವನನ್ನು ಸ್ಥಳದಿಂದ ಸ್ವಲ್ಪವೂ ಕದಲಿಸ ಕೂಡದು.)

ಅರೋಚಕೇ ಗಾತ್ರಸಾದೇ ವೈವರ್ಣ್ಯೇಽಙ್ಗಮಲಾದಿಷು ||೧೬೨||
ಶಾನ್ತಜ್ವರೋಽಪಿ ಶೋಧ್ಯಃ ಸ್ಯಾದನುಬನ್ಧಭಯಾನ್ನರಃ |
ನ ಜಾತು ಸ್ನಾಪಯೇತ್ ಪ್ರಾಜ್ಞಃ ಸಹಸಾ ಜ್ವರಕರ್ಶಿತಮ್ ||೧೬೩||
ತೇನ ಸಂದೂಷಿತೋ ಹ್ಯಸ್ಯ ಪುನರೇವ ಭವೇಜ್ಜ್ವರಃ |

ಜ್ವರ ನಿಂತರೂ ಅರುಚಿ, ದೇಹಕೃಶತೆ, ಮೈಬಣ್ಣ ಬದಲಾಗಿರುವುದು, ಮೈ ಕೊಳೆ ಯಾಗಿರುವುದು ಇವುಗಳಿರುವಾಗ ವಮನ ವಿರೇಚನ ಮುಂತಾದುವುಗಳಿಂದ ದೇಹಶುದ್ಧಿ ಮಾಡಿಸಬೇಕು ; ಇಲ್ಲವಾದರೆ ಪುನಃ ಜ್ವರ ಬರುತ್ತದೆ ; ಬುದ್ಧಿವಂತನಾದ ವೈದ್ಯನು ಜ್ವರದಿಂದ ಕ್ಷೀಣನಾಗಿರುವವನಿಗೆ ಥಟ್ಟನೆ ಸ್ನಾನ ಮಾಡಿಸಬಾರದು ; ಅದರಿಂದ ದೋಷ ಗಳು ಕೆಟ್ಟು ಮರುಕಳಿಸಿ ಜ್ವರ ಬರುತ್ತದೆ.

ಚಿಕಿತ್ಸೇಚ್ಚ ಜ್ವರಾರ್ನ್ ಸರ್ವಾನ್ ನಿಮಿತ್ತಾನಾಂ ವಿಪರ್ಯಯೈಃ |
ಶ್ರಮಕ್ಷಯಾಭಿಘಾತೋತ್ಥೇ ಮೂಲವ್ಯಾಧಿಮುಪಾಚರೇತ್ ||೧೬೪||
ಸ್ತ್ರೀಣಾಮಪಪ್ರಜಾತಾನಾಂ ಸ್ತನ್ಯಾವತರಣೇ ಚ ಯಃ |
ತತ್ರ ಸಂಶಮನಂ ಕುರ್ಯಾತ್ ಯಥಾ ದೋಷಂ ವಿಧಾನವಿತ್ ||೧೬೫||

ಅತಃ ಸಂಶಮನೀಯಾನಿ ಕಷಾಯಾಣಿ ನಿಬೋಧ ಮೇ ।
ಸರ್ವಜ್ವರೇಷು ದೇಯಾನಿ ಯಾನಿ ವೈದ್ಯೇನ ಜಾನತಾ ॥೧೬೬॥

ಅತಿ ಭೋಜನದಿಂದ ಜ್ವರಬಂದರೆ ಉಪವಾಸವನ್ನೂ, ಉಪವಾಸದಿಂದ ಜ್ವರ ಬಂದರೆ ತೃಪ್ತಿಯಾಗುವಂತೆ ಭೋಜನವನ್ನೂ ಮಾಡಿಸಬೇಕು ; ಈ ರೀತಿಯಾಗಿ ಜ್ವರ ವುಂಟಾಗುವ ಕಾರಣಗಳಿಗೆ ವಿರುದ್ಧವಾಗಿ ಚಿಕಿತ್ಸೆ ಮಾಡಬೇಕು ; ದೇಹಾಯಾಸ, ಕ್ಷಯ, ಬಾಹ್ಯದ ಅಭಿಘಾತ ಇವುಗಳಿಂದುಂಟಾದ ಜ್ವರಗಳಿಗೆ ಮೂಲಕಾರಣದಿಂದುಂಟಾದ ವ್ಯಾಧಿಗೆ ಚಿಕಿತ್ಸೆಯನ್ನೇ ಮಾಡಬೇಕು ; ಅಕಾಲದಲ್ಲಿ ಪ್ರಸವ ಮಾಡಿದ ಅಂದರೆ ಗರ್ಭ ಪಾತವಾಗಿರುವ ಸ್ತ್ರೀಯರಿಗೂ ಪ್ರಸವಮಾಡಿದ ಸ್ತ್ರೀಗೆ ಹಾಲು ಬಂದಾಗಲೂ ಜ್ವರ ವುಂಟಾದರೆ ದೋಷಪಾಕವಾಗುವ ಔಷಧಗಳನ್ನೇ ಪ್ರಯೋಗಮಾಡಬೇಕು ; ಆದಕಾರಣ ಜ್ವರಗಳಲ್ಲಿ ಸಂಶಮನಕ್ಕಾಗಿ ಕೊಡಬೇಕಾದ ಕಷಾಯಗಳನ್ನು ಹೇಳುತ್ತೇನೆ ; ಗಮನ ವಿಟ್ಟು ಕೇಳುವವನಾಗು.

ಪಿಪ್ಪಲೀಸಾರಿವಾದ್ರಾಕ್ಷಾಶತಪುಷ್ಪಾಹರೇಣುಭಿಃ ।
ಕೃತಃ ಕಷಾಯಃ ಸಗುಡೋ ಹನ್ಯಾಚ್ಛ್ವಸನಜಂ ಜ್ವರಮ್ ॥೧೬೭॥
ಶೃತಂ ಶೀತಕಷಾಯಂ ವಾ ಗುಡೂಚ್ಯಾಃ ಪೇಯಮೇವ ತು ।
ಬಲಾದರ್ಭಶ್ವದಂಷ್ಟ್ರಾಣಾಂ ಕಷಾಯಂ ಪಾದಶೇಷಿತಮ್ ॥೧೬೮॥
ಶರ್ಕರಾಘೃತಸಂಯುಕ್ತಂ ಪಿಬೇದ್ವಾತಜ್ವರಾಪಹಮ್ ।
ಶತಪುಷ್ಪಾವಚಾಕುಷ್ಠದೇವದಾರುಹರೇಣುಕಾಃ ॥೧೬೯॥
ಕುಸ್ತುಂಬುರೂಣಿ ನಳದಂ ಮುಸ್ತಂ ಚೈವಾಪ್ಸು ಸಾಧಯೇತ್ ।
ಕ್ಷೌದ್ರೇಣ ಸಿತಯಾ ಚಾಪಿ ಯುಕ್ತಃ ಕ್ವಾಥೋಽನಿಲಾತ್ಮಕೇ ॥೧೭೦॥
ದ್ರಾಕ್ಷಾಗುಡೂಚೀಕಾಶ್ಮರ್ಯತ್ರಾಯಮಾಣಾಃ ಸಸಾರಿವಾಃ ।
ನಿಃಕ್ವಾಥ್ಯ ಸಗುಡಂ ಕ್ವಾಥಂ ಪಿಬೇದ್ವಾತಕೃತೇ ಜ್ವರೇ ॥೧೭೧॥
ಗುಡೂಚ್ಯಾಃ ಸ್ವರಸೋ ಗ್ರಾಹ್ಯಃ ಶತಾವರ್ಯಾಶ್ಚ ತತ್ಸಮಃ ।
ನಿಹನ್ಯಾತ್ ಸಗುಡಃ ಪೀತಃ ಸದ್ಯೋಽನಿಲಕೃತಂ ಜ್ವರಮ್ ॥೧೭೨॥
ಘೃತಾಭ್ಯಙ್ಗಸ್ವೇದಲೇಪಾನವಸ್ಥಾಸು ಚ ಯೋಜಯೇತ್ ।

ಹಿಪ್ಪಲಿ, ಸೊಗದೇಬೇರು, ದ್ರಾಕ್ಷಿ, ಸಬ್ಬಶಿಗೇಬೀಜ, ರೇಣುಕೇಬೀಜ, ಇವುಗಳ ಕಷಾಯಕ್ಕೆ ಬೆಲ್ಲವನ್ನು ಸೇರಿಸಿ ಕುಡಿಸಿದರೆ ವಾತಜ್ವರವು ನಿವಾರಣೆಯಾಗುತ್ತದೆ. ಅಮೃತವಳ್ಳಿಯನ್ನು ನೀರಿನಲ್ಲಿ ಕುದಿಸಿ ರಾತ್ರಿಯಲ್ಲಿಟ್ಟಿದ್ದು ಬೆಳಗ್ಗೆ ತಣ್ಣಗಾದ ಶೀತ ಕಷಾಯವನ್ನು ಪಿತ್ತಜ್ವರದಲ್ಲಿ ಕುಡಿಸಬೇಕು ; ಕಫದಿಂದ ಕೂಡಿದ ಜ್ವರದಲ್ಲಿ ಆಗ ತಾನೆ ತಯಾರಿಸಿ ಬಿಸಿಯಾಗಿರುವ ಕಷಾಯವನ್ನು ಕುಡಿಸಬೇಕು ; ಕಳ್ಳಂಗಡಲೆ, ದರ್ಭೆ ನೆಗ್ಗಿಲು ಇವುಗಳಿಗೆ ನಾಲ್ಕರಷ್ಟು ನೀರನ್ನು ಹಾಕಿ 1/4 ಭಾಗ ನೀರು ನಿಲ್ಲುವಂತೆ ಕಷಾಯ ವನ್ನು ಕಾಯಿಸಿ ಸಕ್ಕರೆ ತುಪ್ಪಗಳನ್ನು ಮಿಶ್ರಮಾಡಿ ಕುಡಿಸಿದರೆ ವಾತಜ್ವರಹರವಾಗು

ತ್ತದೆ ; ಸಬ್ಬಸಿಗೇಬೀಜ, ಬಜೆ, ಚಂಗಲ್‌ಕೋಷ್ಠ, ದೇವದಾರು, ರೇಣುಕೇಬೀಜ, ಕೊತ್ತುಂಬರಿ, ಜಟಾಮಾಂಸಿ, ಕೊನ್ನಾರಿಗೆಡ್ಡೆ, ಇವುಗಳನ್ನು ಸಮಪ್ರಮಾಣದಿಂದ ಕೂಡಿಸಿ ಇವೆಲ್ಲವುಗಳ ನಾಲ್ಕರಷ್ಟು ನೀರು ಸೇರಿಸಿ ಕುದಿಸಿ 1/4 ಭಾಗ ನೀರುಉಳಿಸಿಕೊಂಡು ಜೇನುತುಪ್ಪ ಸಕ್ಕರೆಗಳನ್ನು ಮಿಶ್ರಮಾಡಿ ಕುಡಿಸಿದರೆ ವಾತಜ್ವರಹರವು ; ದ್ರಾಕ್ಷಿ, ಅಮೃತ ಬಳ್ಳಿ, ಶಿವನಿಹಣ್ಣು, ಕಹಿದಸರಿ, ಸೊಗದೆಬೇರು ಇವುಗಳ ಕಷಾಯಕ್ಕೆ ಬೆಲ್ಲ ಮಿಶ್ರಮಾಡಿ ಕುಡಿಸಿದರೆ ವಾತಜ್ವರ ಹರವಾಗುತ್ತದೆ; ಅಮೃತವಳ್ಳಿಯ ಸ್ವರಸಕ್ಕೆ ಆಷಾಡಿಬೇರಿನ ಸ್ವರಸ ವನ್ನು ಸಮಭಾಗದಿಂದ ಸೇರಿಸಿ ಬೆಲ್ಲ ಮಿಶ್ರಮಾಡಿ ಕುಡಿಸಿದರೆ ವಾತಜ್ವರವು ಕೂಡಲೇ ನಿವಾರಣೆಯಾಗುತ್ತದೆ ; ಜೀರ್ಣಜ್ವರವು ತ್ವಗ್ಗತವಾದರೆ ತುಪ್ಪದಿಂದ ದೇಹಕ್ಕೆ ಅಭ್ಯಂಗ ವನ್ನೂ ಶೀತವುಂಟಾದರೆ ಸ್ವೇದ, ಲೇಪನಗಳನ್ನೂ ಮಾಡಿಸಬೇಕು ; ಈ ರೀತಿಯಾಗಿ ಜ್ವರಬಿಟ್ಟಮೇಲೆ ದೋಷಗಳ ಅವಸ್ಥೆಗೆ ಅನುಸಾರವಾಗಿ ಉಪಚಾರ ಮಾಡಬೇಕು.

ಶ್ರೀಪರ್ಣೀ ಚನ್ದನೋಶೀರಪರೂಷಕ ಮಧೂಕಜಃ ||೧೭೩||
ಶರ್ಕರಾಮಧುರೋ ಹನ್ತಿ ಕಷಾಯಃ ಪೈತ್ತಿಕಂ ಜ್ವರಮ್ ।
ಪೀತಂ ಪಿತ್ತಜ್ವರಂ ಹನ್ಯಾತ್ ಸಾರಿವಾದ್ಯಂ ಸಶರ್ಕರಮ್ ||೧೭೪||
ಸಯಷ್ಟೀಮಧುಕಂ ಹನ್ಯಾತ್ ತಥೈವೋತ್ಪಲಪೂರ್ವಕಮ್ ।
ಶೃತಂ ಶೀತಕಷಾಯಂ ವಾ ಸೋತ್ಪಲಂ ಶರ್ಕರಾಯುತಮ್ ||೧೭೫||
ಗುಡೂಚೀಪದ್ಮರೋಧ್ರಾಣಾಂ ಸಾರಿವೋತ್ಪಲಯೋಸ್ತಥಾಃ ।
ಶರ್ಕರಾಮಧುರಃ ಕ್ವಾಥಃ ಶೀತಃ ಪಿತ್ತಜ್ವರಾಪಹಃ ||೧೭೬||
ದ್ರಾಕ್ಷಾರಗ್ವಧಯೋಶ್ಚಾಪಿ ಕಾಶ್ಮರ್ಯಾಶ್ಚಾಥವಾ ಪುನಃ ।

ಶಿವನಿ, ರಕ್ತ ಚಂದನ, ಲಾಮಂಚ, ದೊಡ್ಡ ಈಚಲು (ದಡಸಲು) ಹಿಪ್ಪೆಹೂವು ಇವುಗಳ ಕಷಾಯವನ್ನು ಸಕ್ಕರೆಯೊಡನೆ ಕುಡಿಸಿದರೆ ಪಿತ್ತಜ್ವರವು ನಿವಾರಣೆಯಾಗುತ್ತದೆ; ಸಾರಿವಾದಿಗಣದ್ರವ್ಯಗಳ ಕಷಾಯಕ್ಕೆ ಸಕ್ಕರೆಯನ್ನು ಸೇರಿಸಿ ಕುಡಿಸಿದರೆ ಪಿತ್ತಜ್ವರಹರ ವಾಗುತ್ತದೆ ; ಉತ್ಪಲಾದಿಗಣದ್ರವ್ಯಗಳೊಡನೆ ಅತಿಮಧುರವನ್ನು ಸೇರಿಸಿ ತಯಾರಿಸಿದ ಕಷಾಯಕ್ಕೆ ಸಕ್ಕರೆಯನ್ನು ಮಿಶ್ರಮಾಡಿ ಕುಡಿಸಿದರೂ ಪಿತ್ತಜ್ವರವಾಗುತ್ತದೆ; ಉತ್ಪಲಾದಿ ಗಣದ್ರವ್ಯಗಳ ಶೀತಕಷಾಯಕ್ಕಾಗಲೀ ಉಷ್ಣ ಕಷಾಯಕ್ಕಾಗಲೀ ಸಕ್ಕರೆಯನ್ನು ಸೇರಿಸಿ ಕುಡಿಸಿದರೆ ಪಿತ್ತಜ್ವರಹರವಾಗುತ್ತದೆ ; ದೇಹದಲ್ಲಿ ಅತಿಯಾಗಿ ದಾಹವಿದ್ದರೆ ಶೀತಕಷಾಯವನ್ನೂ, ಸಾಧಾರಣ ದಾಹವಿದ್ದರೆ ಉಷ್ಣಕಷಾಯಕ್ಕಾಗಲೀ, ಸೊಗದೇ ಬೇರು ನೈದಿಲೆಗೆಡ್ಡೆಗಳ ಕಷಾಯಕ್ಕಾಗಲೀ ಸಕ್ಕರೆಯನ್ನು ಮಿಶ್ರಮಾಡಿ ಬಿಸಿಯಾಗಿ ಅಥವಾ ತಣ್ಣಗೆ ವೈಯ್ಯುರಿಗೆ ತಕ್ಕಂತೆ ನೋಡಿ ಕುಡಿಸಿದರೆ ಪಿತ್ತಜ್ವರಹರವಾಗುತ್ತದೆ ; ದ್ರಾಕ್ಷಿ, ಕಕ್ಕೆ, ಕಾಯಿಮಜ್ಜಾ ಇವೆರಡರ ಕಷಾಯವನ್ನಾಗಲೀ ಶಿವನಿಯ ಹಣ್ಣಿನ ಕಷಾಯವನ್ನಾಗಲೀ ಸಕ್ಕರೆ ಮಿಶ್ರಮಾಡಿ ಕುಡಿಸಿದರೆ ಪಿತ್ತಜ್ವರವು ನಿವಾರಣೆಯಾಗುತ್ತದೆ.

ಸ್ವಾದುತಿಕ್ತಕಷಾಯಾಣಾಂ ಕಷಾಯೈಃ ಶರ್ಕರಾಯುತೈಃ ||೧೭೭||
ಸುಶೀತೈಃ ಶಮಯೇತ್ ತೃಷ್ಣಾಂ ಪ್ರವೃದ್ಧಾಂ ದಾಹಮೇವ ಚ |
ಶೀತಂ ಮಧುಯುತಂ ತೋಯಮಾಕಣ್ಠಾದ್ವಾ ಪಿಪಾಸಿತಮ್ ||೧೭೮||
ವಾಮಯೇತ್ ಪಾಯಯಿತ್ವಾ ತು ತೇನ ತೃಷ್ಣಾ ಪ್ರಶಾಮ್ಯತಿ |
ಕ್ಷೀರೈಃ ಕ್ಷೀರಕಷಾಯೈಶ್ಚ ಸುಶೀತೈಶ್ಚನ್ದನಾಯುತೈಃ ||೧೭೯||
ಕ್ಷೌದ್ರೇಣ ಯುಕ್ತಂ ಪಿಬತೋ ಜ್ವರದಾಹೌ ಪ್ರಶಾಮ್ಯತಃ |

ದ್ರಾಕ್ಷಿ, ಅತಿಮಧುರ ಸೊಗದೇಬೇರು ಮೊದಲಾದ ಮಧುರದ್ರವ್ಯಗಳನ್ನೂ ತುರುಚದಬೇರು, ಪರ್ಪಾಷ್ಟಕ, ನೆಲಬೇವು ಮೊದಲಾದ ಕಹಿರಸದ್ರವ್ಯಗಳನ್ನೂ ತಾವರೆ ಕುಸುಮ, ನೈದಿಲೆಗೆಡ್ಡೆ ಮೊದಲಾದ ಕಷಾಯರಸದ್ರವ್ಯಗಳನ್ನೂ ಮಿಶ್ರಮಾಡಿ ಕಷಾಯ ವನ್ನು ಕಾಯಿಸಿ ಆರಿದಮೇಲೆ ಕುಡಿಸಿದರೆ ಅಧಿಕವಾದ ಬಾಯಾರಿಕೆಯೂ ಮೈಉರಿಯೂ ನಿವಾರಣೆಯಾಗುತ್ತವೆ ; ಅತಿಯಾಗಿ ಬಾಯಾರಿಕೆಯಾದರೆ ತಣ್ಣೀರಿಗೆ ಸ್ವಲ್ಪ ಜೇನು ತುಪ್ಪವನ್ನು ಮಿಶ್ರಮಾಡಿ ಕಂಠಪೂರ್ತಿ ಕುಡಿಸಿ ವಮನ ಮಾಡಿಸಿದರೆ ಬಾಯಾರಿಕೆಯು ಶಮನವಾಗುತ್ತದೆ ; ಕೆಂಪು ಗಂಧವನ್ನು ಮಿಶ್ರಮಾಡಿ ಕ್ಷೀರಪಾಕ ಮಾಡಿಯಾಗಲೀ ; ಕೆಂಪುಗಂಧ, ಅತ್ತಿ, ಆಲ ಮೊದಲಾದ ಕ್ಷೀರವೃಕ್ಷಗಳ ಕಷಾಯವು ತಣ್ಣಗಾದ ಮೇಲೆ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಜ್ವರವೂ, ಉರಿಯೂ ನಿವಾರಣೆಯಾಗುತ್ತವೆ.

ಪದ್ಮಕಂ ಮಧುಕಂ ದ್ರಾಕ್ಷಾಂ ಪುಣ್ಡರೀಕಮಥೋತ್ಪಲಮ್ ||೧೮೦||
ಯವಾ‌ರ್ ಭೃಷ್ಟಾನುಶೀರಾಣಿ ಸಮಙ್ಗಾಂ ಕಾಶ್ಮರೀಫಲಮ್ |
ನಿದಧ್ಯಾದಪ್ಸು ಚಾಲೋಡ್ಯ ನಿಶಾಪರ್ಯುಷಿತಂ ತತಃ ||೧೮೧||
ಕ್ಷೌದ್ರೇಣ ಯುಕ್ತಂ ಪಿಬತೋ ಜ್ವರದಾಹೌ ಪ್ರಶಾಮ್ಯತಃ |
ಜಿಹ್ವಾತಾಲುಗಳಕ್ಲೋಮಶೋಷೇ ಮೂರ್ಧ್ನಿ ಚ ದಾಪಯೇತ್ ||೧೮೨||

ಪದ್ಮಕ, ಅತಿಮಧುರ, ದ್ರಾಕ್ಷಿ, ಬಿಳಿತಾವರೆ, ನೈದಿಲೆ ಕುಸುಮಗಳು, ಹುರಿದ ಯವೆ, ಲಾಮಂಚ, ಮುಟ್ಟಿದರೆ ಮುನಿಯ, ಶಿವನಿಬೀಜದ ತಿರಳು ಇವನ್ನು ನೀರಿನಲ್ಲಿ ಕುದಿಸಿ ಅರ್ಧಪಕ್ವದಲ್ಲಿಳಿಸಿ, ಆರಿದಮೇಲೆ ಕಿವಿಚಿ ರಾತ್ರಿಯಲ್ಲಿರಿಸಿ ಬೆಳಗಾದ ಮೇಲೆ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಜ್ವರವೂ ದಾಹವೂ ನಿವಾರಣೆಯಾಗುತ್ತವೆ. ನಾಲಿಗೆ, (ಅಂಗಳು), ಕಾಲು ಗಂಟಲು, ಕ್ಲೋಮ (ತಿಲಕ, ಆಗ್ನ್ಯಾಶಯಕ್ಕೆ ರಸವನ್ನು ಕೊಡುವ ಗ್ರಂಥಿವಿಶೇಷವು-Pancreas-ಎನ್ನುತ್ತಾರೆ). ಉದಕವಹ ಸ್ರೋತಸ್ಸುಗಳು ಎರಡು. ಅವುಗಳ ತುದಿಗಳು ಕಾಲು ಮತ್ತು ಕ್ಲೋಮ ಎಂದು ಹೇಳಿದೆ (ಶಾ|| ಅ||. ೯. ಶ್ಲೋ|| ೧೨) ಅಂದರೆ ಉದಕವಾಹಿ ಸ್ರೋತಸ್ಸು ತಾಲುವಿನಿಂದ ಕ್ಲೋಮ (ಬಲ ಪುಪ್ಪುಸ)ದ ವರೆಗೂ ವ್ಯಾಪಿಸಿರುತ್ತದೆ.) ಇವು ಒಣಗಿದರೆ ಪದ್ಮಕಾದಿ ದ್ರವ್ಯಗಳ ಕಲ್ಕವನ್ನು ತಲೆಯ ನೆತ್ತಿಗೆ ಬಳಿಯಬೇಕು. ಬಲಗಡೆಯ ಪುಪ್ಪುಸಕ್ಕೆ ಕ್ಲೋಮವೆನ್ನು ತ್ತಾರೆ.

ಕೇಶರಂ ಮಾತುಲುಙ್ಗಸ್ಯ ಮಧುಸೈನ್ಧವಸಂಯುತಮ್ ।
ಶರ್ಕರಾದಾಡಿಮಾಭ್ಯಾಂ ವಾ ದ್ರಾಕ್ಷಾಖರ್ಜೂರಯೋಸ್ತಥಾ ॥೧೮೩॥
ವೈರಸ್ಯೇ ಧಾರಯೇತ್ಕಲ್ಕಂ ಗಣ್ಡೂಷಂ ಚ ತಥಾ ಹಿತಮ್ ।

ಮಾದಳಹಣ್ಣಿನ ತೊಳೆಯಲ್ಲಿರುವ ಕುಸುಮಕ್ಕೆ ಜೇನುತುಪ್ಪವನ್ನೂ, ಸೈಂಧವ ಲವಣವನ್ನೂ ಮಿಶ್ರಮಾಡಿ ಅರೆದ ಕಲ್ಕವನ್ನಾಗಲೀ, ದ್ರಾಕ್ಷಿ, ಖರ್ಜೂರಗಳ ಸಂಗಡ ದಾಳಿಂಬೆಯರಸ ಸಕ್ಕರೆಗಳನ್ನು ಮಿಶ್ರಮಾಡಿ ಅರೆದ ಕಲ್ಕವನ್ನಾಗಲೀ ಮುಖದಲ್ಲಿ ಧರಿಸಬೇಕು ; ಗಂಡೂಷ ಮಾಡಬೇಕೆಂದು ಅರ್ಥ; ಕೆಲವರು ಮೊದಲನೆಯದಾದ ಮಾದಳ ಹಣ್ಣಿನ ಕುಸುಮದೊಡನೆ ಸೈಂಧವ, ಜೇನುತುಪ್ಪಗಳನ್ನು ಸೇರಿಸಿ ಅರೆದ ಕಲ್ಕವನ್ನು ರೋಗಿಯತಲೆಗೆ ಬಳಿದು ದ್ರಾಕ್ಷಾ ಖರ್ಜೂರಗಳೊಡನೆ ಸಕ್ಕರೆ ದಾಳಿಂಬೆ ರಸಗಳಲ್ಲಿ ಅರೆದ ಕಲ್ಕವನ್ನು ಬಾಯಿಯಲ್ಲಿಟ್ಟು ಗಂಡೂಷ ಮಾಡಬೇಕೆನ್ನುತ್ತಾರೆ.

ಸಪ್ತಚ್ಛದಂ ಗುಡೂಚೀಂ ಚ ನಿಮ್ಬಂ ಸ್ಫೂರ್ಜಕಮೇವ ಚ ॥೧೮೪॥
ಕ್ವಾಥಯಿತ್ವಾ ಪಿಬೇತ್ಕ್ವಾಥಂ ಸಕ್ಷೌದ್ರಂ ಕಫಜೇ ಜ್ವರೇ ।
ಕಟುತ್ರಿಕಂ ನಾಗಪುಷ್ಪಂ ಹರಿದ್ರಾ ಕಟುರೋಹಿಣೀ ॥೧೮೫॥
ಕೌಟಜಂ ಚ ಫಲಂ ಹನ್ಯಾತ್ ಸೇವ್ಯಮಾನಂ ಕಫಜ್ವರಮ್ ।
ಹರಿದ್ರಾಂ ಚಿತ್ರಕಂ ನಿಮ್ಬಮುಶೀರಾತಿವಿಷೇ ವಚಾಮ್ ॥೧೮೬॥
ಕುಷ್ಠಮಿನ್ದ್ರಯವಾರ್ನ್ ಮೂರ್ವಾಂ ಪಟೋಲಂ ಚಾಪಿ ಸಾಧಿತಮ್
ಪಿಬೇನ್ಮರಿಚಸಂಯುಕ್ತಂ ಸಕ್ಷೌದ್ರಂ ಕಫಜೇ ಜ್ವರೇ ॥೧೮೭॥

ಮದ್ದಾಲೆ, ಅಮೃತನಳ್ಳಿ, ಬೇವಿನ ತೊಗಟೆ, ಕಾಮಕಸ್ತೂರಿ ಸೊಪ್ಪು ಇವುಗಳ ಸಮ ಭಾಗಕ್ಕೆ ಅದರ ೪ ರಷ್ಟು ನೀರನ್ನು ಸೇರಿಸಿ ¼ ಭಾಗದಷ್ಟು ನೀರು ಉಳಿಯುವಂತೆ ಕಷಾಯವನ್ನು ಕಾಯಿಸಿ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಕಫಜ್ವರದಲ್ಲಿ ಹಿತಕರವು ; ತ್ರಿಕಟು, ನಾಗಕೇಸರಿ, ಅರಿಶಿನ, ಕಟುಕರೋಹಿಣಿ, ಕೊಡಶಿಗೆ ಬೀಜ ಇವುಗಳ ಕಷಾಯವನ್ನು ಕುಡಿಸಿದರೆ ಕಫಜ್ವರಹರವಾಗುತ್ತದೆ ; ಅರಿಶಿನ, ಚಿತ್ರಮೂಲ, ಬೇವಿನ ತೊಗಟೆ, ಲಾಮಂಚ, ಬಜೆ, ಚೆಂಗಲ್‌ಕೋಷ್ಠ, ಕೊಡಶಿಗೇಬೀಜ, ಕೊರಟಿಗೇ ಹಂಬು, ಕಹಿ ಪಡವಲ ಇವುಗಳನ್ನು ಕಷಾಯಮಾಡಿ ಮೆಣಸಿನಪುಡಿ ಮತ್ತು ಜೇನುತುಪ್ಪಗಳನ್ನು ಮಿಶ್ರಮಾಡಿ ಕಫಜ್ವರದಲ್ಲಿ ಕುಡಿಸಬೇಕು.

ಸಾರಿವಾತಿವಿಷಾಕುಷ್ಠಪುರಾಖ್ಯೈಃ ಸದುರಾಲಭೈಃ ।
ಮುಸ್ತೇನ ಚ ಕೃತಃ ಕ್ವಾಥಃ ಪೀತೋ ಹನ್ಯಾತ್ ಕಫಜ್ವರಮ್ ॥೧೮೮॥
ಮುಸ್ತಂ ವೃಕ್ಷಕಬೀಜಾನಿ ತ್ರಿಫಲಾ ಕಟುರೋಹಿಣೀ ।
ಸರೂಪಕಾಣಿ ಚ ಕ್ವಾಥಃ ಕಫಜ್ವರವಿನಾಶನಃ ॥೧೮೯॥
ರಾಜವೃಕ್ಷಾದಿವರ್ಗಸ್ಯ ಕಷಾಯಂ ಮಧುಸಂಯುತಮ್ ।
ಕಫವಾತಜ್ವರಂ ಹನ್ಯಾತ್ ಶೀಘ್ರಂ ಕಾಲೇಽವಚಾರಿತಮ್ ॥೧೯೦॥

ಸೊಗದೆಬೇರು, ಅತಿಬಜೆ, ಚೆಂಗಲ್‌ಕೋಷ್ಠ, ಗುಗ್ಗುಳು, ತುರುಚನ ಬೇರು, ಕೊನ್ನಾರಿಗೆಡ್ಡೆ ಇವುಗಳ ಕಷಾಯವನ್ನು ಕುಡಿಸಿದರೆ ಕಫಜ್ವರಹರವಾಗುತ್ತದೆ ; ಕೊನ್ನಾರಿ ಗೆಡ್ಡೆ, ಕೊಡಶಿಗೇಬೀಜ, ತ್ರಿಫಲೆ, ಕಟುಕರೋಹಿಣಿ, ಬೆಟ್ಟದ ಈಚಲ ಇವುಗಳ ಕಷಾಯ ವನ್ನು ಕುಡಿಸಿದರೆ ಕಫಜ್ವರಹರವಾಗುತ್ತದೆ ; ಅರಗ್ವಧಾದಿ ಗಣದ್ರವ್ಯಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಔಷಧಕಾಲದಲ್ಲಿ ಕುಡಿಸಿದರೆ ಬೇಗನೆ ವಾತಕಫಜ್ವರವು ನಿವಾರಣೆಯಾಗುತ್ತದೆ.

ನಾಗರಂ ಧಾನ್ಯಕಂ ಭಾರ್ಗೀಮಭಯಾಂ ಸುರದಾರು ಚ ।
ವಚಾಂ ಪರ್ಪಟಕಂ ಮುಸ್ತಂ ಭೂತೀಕಮಥ ಕಟ್ಫಲಮ್ ॥೯೧॥
ನಿಃಕ್ವಾಥ್ಯ ಕಫವಾತೋತ್ಥೇ ಕ್ಷೌದ್ರ ಹಿಙ್ಗುಸಮನ್ವಿತಮ್ ।
ಪಾತವ್ಯಂ ಶ್ವಾಸಕಾಸಘ್ನಂ ಶ್ಲೇಷ್ಮೋತ್ಸೇಕೇ ಗಳಗ್ರಹೇ ॥೯೨॥
ಹಿಕ್ಕಾಸು ಕಣ್ಠಶ್ವಯಥೌ ಶೂಲೇ ಹೃದಯಪಾರ್ಶ್ವಜೇ ।

ಶುಂಠಿ, ಕೊತ್ತುಂಬರಿ, ಗಂಟುಪರಂಗಿ, ಅಣಿಲೆಕಾಯಿ ಸಿಪ್ಪೆ, ದೇವದಾರು ; ಬಜೆ, ಪರ್ಪಾಷ್ಟಕ, ಕೊನ್ನಾರಿಗೆಡ್ಡೆ, ಪರಿಮಳಗಂಜಣಿಹುಲ್ಲಿನಬೇರು ಕಾಯಿಫಲ (ಕಿರಿಯ ಶಿವನಿ) ಇವುಗಳನ್ನು ಸಮಭಾಗದಿಂದ ಸೇರಿಸಿ ಕಷಾಯಮಾಡಿ ಜೇನುತುಪ್ಪ ೧ ಕರ್ಷ ಪ್ರಮಾಣದಷ್ಟನ್ನೂ ಹಿಂಗು ೧ ಮಾಷ ಪ್ರಮಾಣದಷ್ಟನ್ನೂ ಸೇರಿಸಿ ಕುಡಿಸಿದರೆ ಕಫ ವಾತಜ್ವರ, ಶ್ವಾಸಕಾಸ, ಗಳಗ್ರಹ, ಬಿಕ್ಕಳಿಕೆ, ಕಂಠಶೋಥ, ಹೃದಯಶೂಲೆ ಪಾರ್ಶ್ವ ಶೂಲೆಗಳು ನಿವಾರಣೆಯಾಗುತ್ತವೆ. (ಹಿಂಗು, ಸೈಂಧವ ೧ ಮಾಷಪ್ರಮಾಣ.)

ಬಲಾಪಟೋಲತ್ರಿಫಲಾ ಯಷ್ಟ್ಯಾಹ್ವಾನಾಂ ವೃಷಸ್ಯ ಚ ॥೯೩॥
ಕ್ವಾಥೋ ಮಧುಯುತಃ ಪೀತೋ ಹನ್ತಿ ಪಿತ್ತಕಫಜ್ವರಮ್ ।
ಕಟುಕಾವಿಜಯಾದ್ರಾಕ್ಷಾ ಮುಸ್ತಪರ್ಪಟಕೈಃ ಕೃತಃ ॥೯೪॥
ಕಷಾಯೋ ನಾಶಯೇತ್ಪೀತಃ ಶ್ಲೇಷ್ಮಪಿತ್ತಭವಂ ಜ್ವರಮ್ ।
ಭಾರ್ಗೀವಚಾಪರ್ಪಟಕ ಧಾನ್ಯಹಿಙ್ಗ್ವಭಯಾಘನೈಃ ॥೯೫॥
ಕಾಶ್ಮರ್ಯನಾಗರೈಃ ಕ್ವಾಥಃ ಸಕ್ಷೌದ್ರಃ ಶ್ಲೇಷ್ಮಪಿತ್ತಜೇ ।
ಸಶರ್ಕರಾಮಕ್ಷಮಾತ್ರಾಂ ಕಟುಕಾಮುಷ್ಣವಾರಿಣಾ ॥೯೬॥
ಪೀತ್ವಾ ಜ್ವರಂ ಜಯೇಜ್ಜನ್ತುಃ ಕಫಪಿತ್ತ ಸಮುದ್ಭವಮ್ ।

ಕಳ್ಳಂಗಡಲೆ, ಕಹಿಪಡವಲ, ತ್ರಿಫಲೆ, ಅತಿಮಧುರ, ಆಡುಸೋಗೆ ಇವುಗಳ ಕಷಾ ಯಕ್ಕೆ ೧ ಕರ್ಷ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಿದರೆ ಪಿತ್ತಕಫಜ್ವರವು ನಿವಾರಣೆ ಯಾಗುತ್ತದೆ ; ಕಟುಕರೋಹಿಣಿ, ಅಣಿಲೆಸಿಪ್ಪೆ, ದ್ರಾಕ್ಷಿ, ಕೊನ್ನಾರೀಗೆಡ್ಡೆ, ಪರ್ಪಾಷ್ಟಕ ಇವುಗಳ ಕಷಾಯವನ್ನು ಕುಡಿಸಿದರೆ ಕಫಪಿತ್ತಜ್ವರವು ನಿವಾರಣೆಯಾಗುತ್ತದೆ ; ಗಂಟು ಪರಂಗಿ, ಬಜೆ, ಪರ್ಪಾಷ್ಟಕ, ಕೊತ್ತುಂಬರಿ, ಹಿಂಗು, ಅಣಿಲೆಕಾಯಿಸಿಪ್ಪೆ, ಕೊನ್ನಾರೀ ಗೆಡ್ಡೆ, ಶಿವನೀಹಣ್ಣು, ಶುಂಠಿ ಇವುಗಳ ಕಷಾಯಕ್ಕೆ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ

ಕಫಪಿತ್ತ ಜ್ವರದಲ್ಲಿ ಹಿತಕರವಾಗುತ್ತದೆ. ೧ ಕರ್ಷ ಪ್ರಮಾಣದಷ್ಟು ಕಟುಕರೋಹಿಣಿಯ ಚೂರ್ಣವನ್ನು ಬಿಸಿನೀರಿನಲ್ಲಿ ಕದರಿ ಸಕ್ಕರೆಯನ್ನು ಸೇರಿಸಿ ಕುಡಿಸಿದರೆ ಕಫಪಿತ್ತಜ್ವರವು ನಿವಾರಣೆಯಾಗುತ್ತದೆ.

ಕಿರಾತತಿಕ್ತಮಮೃತಮ್ ದ್ರಾಕ್ಷಾಮಾಮಲಕಂ ಶಠೀಮ್ ||೧೯೭||
ನಿಃ ಕ್ವಾಥ್ಯ ವಾತಪಿತ್ತೋತ್ಥೇ ತಂ ಕ್ವಾಥಂ ಸಗುಡಂ ಪಿಬೇತ್ |
ರಾಸ್ನಾ ವೃಷೋಽಥ ತ್ರಿಫಲಾ ರಾಜವೃಕ್ಷ ಫಲೈಃ ಸಹ ||೧೯೮||
ಕಷಾಯಃ ಸಾಧಿತಃ ಪೀತೋ ವಾತಪಿತ್ತಜ್ವರಂ ಜಯೇತ್ |
ಸರ್ವದೋಷಸಮುತ್ಥೇ ತು ಸಂಸೃಷ್ಟಾನವಚಾರಯೇತ್ ||೧೯೯||
ಯಥಾದೋಷೋಚ್ಛ್ರಯಂ ಚಾಪಿ ಜ್ವರಾನ್ ಸರ್ವಾನುಪಾಚರೇತ್ |

ನೆಲಬೇವು, ಅಮೃತವಳ್ಳಿ, ದ್ರಾಕ್ಷಿ, ನೆಲ್ಲಿಕಾಯಿ, ಕಚೋರ ಇವುಗಳನ್ನು ಸಮ ಪ್ರಮಾಣದಿಂದ ಸೇರಿಸಿ ಕಷಾಯಮಾಡಿ ಶೋಧಿಸಿದ ಕಷಾಯಕ್ಕೆ ೧ ಕರ್ಷದಷ್ಟು ಬೆಲ್ಲ ವನ್ನು ಸೇರಿಸಿ ಕುಡಿಸಿದರೆ ವಾತಪಿತ್ತಜ್ವರಹರವು. ದುಂಪರಾಸ್ನೆ, ಆಡುಸೋಗೆ ಸೊಪ್ಪು, ತ್ರಿಫಲೆ, ಕಕ್ಕೆಯಕಾಯಿಯ ತಿರುಳು ಇವುಗಳ ಕಷಾಯವನ್ನು ಕುಡಿಸಿದರೆ ವಾತಪಿತ್ತ ಜ್ವರಹರವಾಗುತ್ತದೆ. ತ್ರಿದೋಷದಿಂದುಂಟಾದ ಜ್ವರಕ್ಕೆ ವಾತಾದಿದೋಷಹರಗಳಾದ ಕಷಾಯಗಳನ್ನು ಮಿಶ್ರಮಾಡಿ ಕುಡಿಸಬೇಕು. ಎಲ್ಲಾ ವಿಧಗಳಾದ ವಿಷಮ ಸನ್ನಿಪಾತ ಜ್ವರಗಳಲ್ಲೂ ದೋಷಗಳ ಆಧಿಕ್ಯಕ್ಕೆ ತಕ್ಕಂತೆ ಔಷಧಗಳನ್ನು ಮಿಶ್ರಮಾಡಿ ಪ್ರಯೋಗ ಮಾಡಬೇಕು. ಇದೇ ರೀತಿಯಲ್ಲಿ ಆಗಂತುಜ್ವರದಲ್ಲೂ ಉಲ್ಬಣದೋಷಕ್ಕೆ ಅನುಸಾರ ವಾದ ಕಷಾಯೌಷಧಗಳನ್ನು ಪ್ರಯೋಗಿಸಬೇಕು.

ವೃಶ್ಚೀಕಬಿಲ್ವವರ್ಷಾಭ್ವಃ ಪಯಶ್ಚೋದಕಮೇವ ಚ ||೨೦೦||
ಪಚೇತ್ ಕ್ಷೀರಾವಶಿಷ್ಟಂ ತು ತದ್ಧಿ ಸರ್ವಜ್ವರಾಪಹಮ್ |

ಬಿಳಿಯಕೊಮ್ಮೆ, ಬಿಲ್ವಪತ್ರೆ, ಕೆಂಪುಕೊಮ್ಮೆ ಇವುಗಳ ಬೇರುಗಳನ್ನು ಸಮ ಪ್ರಮಾಣದಿಂದ ಸೇರಿಸಿ ಅವುಗಳ ೮ ರಷ್ಟು ಭಾಗ ಹಾಲನ್ನೂ, ಹಾಲಿನ ೪ ರಷ್ಟು ಭಾಗ ನೀರನ್ನೂ ಕೂಡಿಸಿ ಹಾಲು ಮಾತ್ರ ನಿಲ್ಲುವಂತೆ ಕಷಾಯವನ್ನು ಕುದಿಸಿ ಶೋಧಿಸಿ ಕುಡಿಸಿ ದರೆ ಸಕಲವಿಧ ತ್ರಿದೋಷಜ್ವರವೂ ನಿವಾರಣೆಯಾಗುತ್ತದೆ.

ಉದಕಾಂ ಶಾಸ್ತ್ರಯಃ ಕ್ಷೀರಂ ಶಿಂಶಪಾಸಾರಸಂಯುತಮ್ ||೨೦೧||
ತತ್ ಕ್ಷೀರಶೇಷಂ ಕ್ವಥಿತಂಪೇಯಂ ಸರ್ವಜ್ವರಾಪಹಮ್ |
ನಳವೇತಸಯೋರ್ಮೂಲೇ ಮೂರ್ವಾಯಾಂ ದೇವದಾರುಣಿ ||೨೦೨||
ಕಷಾಯಂ ವಿಧಿವತ್ ಕೃತ್ವಾ ಪೇಯಮೇತಜ್ಜ್ವರಾಪಹಮ್ |
ತ್ರಿಫಲೋ ವಾ ಸಸರ್ಪಿಷ್ಕಃ ಕ್ವಾಥಃ ಪೇಯಸ್ತ್ರಿದೋಷಜೇ ||೨೦೩||

ಬೀಟೆಯ ಮರದ ಸಾರ ೧ ಪಲ, ಹಾಲು ೮ ಪಲ, ನೀರು ೩೪ ಪಲಗಳಷ್ಟನ್ನು ಸೇರಿಸಿ ಹಾಲು ಮಾತ್ರ ನಿಲ್ಲುವಂತೆ ಕಾಯಿಸಿ ಕುಡಿಸಿದರೆ ತ್ರಿದೋಷಜಜ್ವರಹರವು; ದೇವ

ನಾಳ ಮತ್ತು ನೀರಂಜಿಯ ಬೇರುಗಳು, ಕೊನ್ನಾರಿಗೆಡ್ಡೆ, ದೇವದಾರು ಇವು ಸಮ ಭಾಗಕ್ಕೆ ಕೂಡಿಸಿ ಅದರ ೪ ರಷ್ಟು ನೀರನ್ನು ಸೇರಿಸಿ ¼ ಭಾಗ ನಿಲ್ಲುವಂತೆ ಕಷಾಯ ಮಾಡಿ ಕುಡಿಸಿದರೆ ತ್ರಿದೋಷಜಜ್ವರಹರವು ; ತ್ರಿದೋಷಜ ಜ್ವರದಲ್ಲಿ ತ್ರಿಫಲಾ ಕಷಾಯಕ್ಕೆ ತುಪ್ಪ ಮಿಶ್ರಮಾಡಿ ಕುಡಿಸಬೇಕು.

ಅನನ್ತಾಂ ವಾಲಕಂ ಮುಸ್ತಾಂ ನಾಗರಂ ಕಟುರೋಹಿಣೀಮ್ ।
ಸುಖಾಮ್ಬುನಾ ಪ್ರಾಗುದಯಾತ್ ಪಾಯಯೇತಾಕ್ಷಸಮ್ಮಿತಮ್ ॥೨೦೬॥
ಏಷ ಸರ್ವಜ್ವರಾನ್ ಹನ್ತಿ ದೀಪಯತ್ಯಾಶು ಚಾನಲಮ್ ।
ದ್ರವ್ಯಾಣಿ ದೀಪನೀಯಾನಿ ತಥಾ ವೈರೇಚನಾನಿ ಚ ॥೨೦೫॥
ಏಕಶೋ ವಾ ದ್ವಿಶೋ ವಾಪಿ ಜ್ವರಘ್ನಾನಿ ಪ್ರಯೋಜಯೇತ್ ।
ಸರ್ಪಿರ್ಮಧ್ವಭಯಾತೈಲ ಲೇಹೋಽಯಂ ಸರ್ವಜಂ ಜ್ವರಮ್ ॥೨೦೬॥
ಶಾನ್ತಿಂನಯೇತ್ ತ್ರಿವೃಚ್ಚಾಪಿ ಸಕ್ಷೌದ್ರಾ ಪ್ರಬಲಂಜ್ವರಮ್ ।

ತುರುಚದ ಬೇರು, ಮುಡಿವಾಳ, ಕೊನ್ನಾರಿ ಗೆಡ್ಡೆ, ಶುಂಠಿ, ಕಟುಕರೋಹಿಣಿ ಇವುಗಳನ್ನು ಸಮಭಾಗದಿಂದ ಸೇರಿಸಿ ೧ ಕರ್ಷಪ್ರಮಾಣದಷ್ಟು ಕಲ್ಕವನ್ನು ಸುಖೋಷ್ಣವಾಗಿರುವ ನೀರಿನಲ್ಲಿ ಕದರಿ ಪ್ರತಿದಿನ ಸೂರ್ಯೋದಯಕ್ಕೆ ಮುಂಚಿತವಾಗಿ ಕುಡಿಸಿದರೆ ತ್ರಿದೋಷಜಜ್ವರವನ್ನು ನಾಶಮಾಡಿ, ಬೇಗ ಅಗ್ನಿದೀಪನವನ್ನುಂಟುಮಾಡುತ್ತದೆ. ಪಿಪ್ಪಲ್ಯಾದಿ ದೀಪನದ್ರವ್ಯಗಳನ್ನೂ ತಿಗಡೆ, ಅಣಿಲೆಕಾಯಿ ಮೊದಲಾದ ವಿರೇಚನದ್ರವ್ಯಗಳನ್ನೂ ಜೀರ್ಣಜ್ವರಹರಗಳಾದ ದ್ರವ್ಯಗಳನ್ನೂ ದೋಷಬಲಗಳಿಗೆ ತಕ್ಕಂತೆ ಸೇರಿಸಿ ಸನ್ನಿಪಾತಜ್ವರದ ಜೀರ್ಣಾವಸ್ಥೆಯಲ್ಲಿ ಒಂದೊಂದನ್ನಾಗಲೀ, ಎರಡನ್ನಾಗಲೀ ಅಥವಾ ಮೂರನ್ನೂ ಸೇರಿಸಿಯಾಗಲೀ ಪ್ರಯೋಗಿಸಬೇಕು.

ಟಿಪ್ಪಣಿ : ಪಿಪ್ಪಲ್ಯಾದಿ ದ್ರವ್ಯಗಳು ಕಟುರಸ, ಉಷ್ಣವೀರ್ಯಗಳು, ವಿರೇಚನ ದ್ರವ್ಯಗಳು, ಗುರುಗುಣವುಳ್ಳವು ಇವನ್ನು ಜ್ವರದಲ್ಲಿ ಪ್ರಯೋಗಿಸಬಾರದೆಂದು ಕೆಲವರು ಹೇಳುತ್ತಾರೆ. ಪಿಪ್ಪಲ್ಯಾದಿಗಳನ್ನು ಜ್ವರದಲ್ಲಿ ಪ್ರಯೋಗಿಸಬೇಕೆಂದು ಶಾಸ್ತ್ರದಲ್ಲಿ ಹೇಳಿರುವುದು ಅವರಿಗೆ ತಿಳಿದಿಲ್ಲವೆಂದು ಹೇಳಬೇಕಾಗುತ್ತದೆ. ತುಪ್ಪ, ಜೇನುತುಪ್ಪ, ಅಣಿಲೆ ಸಿಪ್ಪೆ (ಚೂರ್ಣ), ತಿಲತೈಲ ಇವುಗಳ ಕಲ್ಕ ಅಥವಾ ಮಿಶ್ರಣವನ್ನು ನೆಕ್ಕಿಸಿದರೆ ತ್ರಿದೋಷ ಜ್ವರವು ಶಾಂತವಾಗುತ್ತದೆ ಅಥವಾ ತಿಗಡೆಪುಡಿಯನ್ನು ನೆಕ್ಕಿಸಿದರೆ ಪ್ರಬಲ ದಾಹಾದಿಗಳಿಂದ ಕೂಡಿದ ಜ್ವರವೂ ನಿವಾರಣೆಯಾಗುತ್ತದೆ. ವಿಷಮಜ್ವರಗಳಲ್ಲಿ ಕಫದೋಷವನ್ನು ವಮನದಿಂದಲೂ ಪಿತ್ತದೋಷವನ್ನು ವಿರೇಚನದಿಂದಲೂ ದೇಹದಿಂದ ಹೊರಕ್ಕೆ ಹೊರಡಿಸಬೇಕು. ವಿಷಮಜ್ವರದಲ್ಲಿ ಸದಾ ಕಫಪಿತ್ತದೋಷಗಳು ಹೆಚ್ಚಿರುತ್ತವೆಯಾಗಿ ವಮನವಿರೇಚನ ಪ್ರಯೋಗವು ಯುಕ್ತವಾದದ್ದು. ಕೆಲವರು ಸಂತತಜ್ವರವನ್ನು ಬಿಟ್ಟು ಉಳಿದ ಸತತಕಾದಿಗಳು ವಿಷಮ ಜ್ವರಗಳಾದಾಗ್ಯೂ ಇಲ್ಲಿನ ಸಂದರ್ಭದಲ್ಲಿ ತೃತೀಯಕ ಮತ್ತು ಚಾತುರ್ಥಿಕ ಜ್ವರಗಳೇ ವಿಷಮಜ್ವರಗಳೆಂದು ತಿಳಿಯಬೇಕು. ಏಕೆಂದರೆ ಈ

ಜ್ವರಗಳಿಗೇ ಸಾಮಾನ್ಯವಾಗಿ ವಾತಾದಿದೋಷಗಳನ್ನು ಶಮನಮಾಡುವುದಕ್ಕಾಗಿ ಆಸ್ಥಾಪನ, ವಿರೇಕ, ವಮನಾದಿ ಕ್ರಿಯೆಗಳು ಯುಕ್ತವಾದುದೆಂದು ಹೇಳುತ್ತಾರೆ.

ವಿಷಮಜ್ವರೇಷು ಕರ್ತವ್ಯಮೂರ್ಧ್ವಂ ಚಾಧಶ್ಚ ಶೋಧನಮ್ ||೨೦೭||
ಘೃತಂ ಪ್ಲೀಹೋದರೋಕ್ತಂ ವಾ ನಿಹನ್ಯಾದ್ವಿಷಮಜ್ವರಮ್ |
ಗುಡಪ್ರಗಾಢಾಂ ತ್ರಿಫಲಾಂ ಪಿಬೇದ್ವಾ ವಿಷಮಾರ್ದಿತಃ ||೨೦೮||
ಗುಡೂಚೀನಿಮ್ಬಧಾತ್ರೀಣಾಂ ಕಷಾಯಂ ವಾ ಸಮಾಕ್ಷಿಕಮ್ |
ಪ್ರಾತಃ ಪ್ರಾತಃ ಸಸರ್ಪಿಷ್ಕಂ ರಸೋನಮುಪಯೋಜಯೇತ್ ||೨೦೯||
ತ್ರಿಚತುರ್ಭಿಃ ಪಿಬೇತ್ಕ್ವಾಥಂ ಪಞ್ಚಭಿರ್ವಾ ಸಮನ್ವಿತೈಃ |
ಮಧುಕಸ್ಯ ಪಟೋಲಸ್ಯ ರೋಹಿಣ್ಯಾ ಮುಸ್ತಕಸ್ಯ ಚ ||೨೧೦||
ಹರೀತಕ್ಯಾಶ್ಚ ಸರ್ವೋಽಯಂ ತ್ರಿವಿಧೋ ಯೋಗ ಇಷ್ಯತೇ |

ಪ್ಲೀಹೋದರೋಕ್ತ ಷಟ್ಪಲಘೃತವನ್ನು ಪ್ರಯೋಗಿಸಿದರೆ ತೀಕ್ಷ್ಣವಾಗಿರುವುದರಿಂದ ಕಫಾಧಿಕವಾದ ವಿಷಮಜ್ವರವನ್ನು ನಿವಾರಣೆ ಮಾಡುತ್ತದೆ. ವಿಷಮ ಜ್ವರ ಪೀಡಿತನಿಗೆ ತ್ರಿಫಲಾಕಷಾಯಕ್ಕೆ ಹೆಚ್ಚಾಗಿ ಬೆಲ್ಲವನ್ನು ಸೇರಿಸಿಯೂ ಅಮೃತವಳ್ಳಿ, ಬೇವಿನ ತೊಗಟೆ, ನೆಲ್ಲಿಚೆಟ್ಟುಗಳ ಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿಯೂ ಕುಡಿಸಬೇಕು ; ಪ್ರತಿದಿನವೂ ಬೆಳಗಿನವೇಳೆಯಲ್ಲಿ ತುಪ್ಪಮಿಶ್ರ ಮಾಡಿದ ಬೆಳ್ಳುಳ್ಳಿಯ ಕಲ್ಕವನ್ನು ಸೇವಿಸಬೇಕು ; ಅತಿಮಧುರ, ಕಹಿಪಡುವಲ, ಕಟುಕರೋಹಿಣಿ, ಕೊನ್ನಾರಿಗೆಡ್ಡೆ, ಅಣಿಲೆಸಿಪ್ಪೆ, ಇವುಗಳ ಪೈಕಿ ೩-೪-೫ ದ್ರವ್ಯಗಳನ್ನು ಸೇರಿಸಿ ೩ ವಿಧ ಕಷಾಯಗಳನ್ನು ತಯಾರಿಸಿ ಯಾವುದನ್ನಾಗಲಿ ಕುಡಿಸಲು ವಿಷಮಜ್ವರವು ನಿವಾರಣೆಯಾಗುತ್ತವೆ.

ಟಿಪ್ಪಣಿ : ಕೆಲವರು "ಮುಸ್ತಕ"ಕ್ಕೆ ಬದಲು "ವತ್ಸಕ"ವೆಂದು ಹೇಳಿ ಅತಿಮಧುರ ಮೊದಲಾಗಿ ಅಣಿಲೆಕಾಯಿವರೆಗಿನ ದ್ರವ್ಯಗಳಲ್ಲಿ ಮೂರುಮೂರು, ನಾಲ್ಕುನಾಲ್ಕು, ಐದು ದ್ರವ್ಯಗಳನ್ನು ಸೇರಿಸಿ ರಸಭೇದದಂತೆ ಕ್ವಾಥಗಳನ್ನು ತಯಾರಿಸಿ ಕುಡಿಸಬೇಕೆಂದು ಹೇಳುತ್ತಾರೆ. ಹೇಗೆಂದರೆ—೩ ದ್ರವ್ಯಗಳಂತೆ ಮಿಶ್ರ ಮಾಡಿದರೆ ೧೦ ವಿಧಗಳು, ೪ ರಂತೆ ೫ ವಿಧಗಳು ೫ ರಂತೆ ೧ ವಿಧವೂ ಒಟ್ಟು ೧೬ ವಿಧ ಕಷಾಯಗಳಾಗುತ್ತವೆಂದು ಹೇಳುತ್ತಾರೆ—

೧.	ಅತಿಮಧುರ	ಪಟೋಲ	ರೋಹಿಣೀ	ವತ್ಸಕ	ಹರೀತಕೀ	■ ದ್ರವಗಳುಗಳು ಸೇರಿವೆ
೧.	ಅತಿಮಧುರ	ಪಟೋಲ	ರೋಹಿಣೀ			೧೦ ಯೋಗಗಳಲ್ಲೂ ೩ ದ್ರವ್ಯಗಳು ಸೇರಿವೆ.
೨.	ಮಧುಕ	ಪಟೋಲ		ವತ್ಸಕ		
೩.	ಮಧುಕ	ಪಟೋಲ			ಹರೀತಕೀ	
೪.	ಮಧುಕ		ರೋಹಿಣೀ	ವತ್ಸಕ		

೫.	ಮಧುಕ		ರೋಹಿಣೀ		ಹರೀತಕೀ
೬.	ಮಧುಕ			ವತ್ಸಕ	ಹರೀತಕೀ
೭.		ಪಟೋಲ	ರೋಹಿಣೀ	ವತ್ಸಕ	
೮.		ಪಟೋಲ		ವತ್ಸಕ	ಹರೀತಕೀ
೯.		ಪಟೋಲ	ರೋಹಿಣೀ		ಹರೀತಕೀ
೧೦.			ರೋಹಿಣೀ	ವತ್ಸಕ	ಹರೀತಕೀ
			೪	ದ್ರವ್ಯಗಳು ಸೇರಿದ ೫ ಯೋಗಗಳು	
೧೧.	ಮಧುಕ	ಪಟೋಲ	ರೋಹಿಣೀ	ವತ್ಸಕ	
೧೨.	ಮಧುಕ	ಪಟೋಲ		ವತ್ಸಕ	ಹರೀತಕೀ
೧೩.		ಪಟೋಲ	ರೋಹಿಣೀ	ವತ್ಸಕ	ಹರೀತಕೀ
೧೪.	ಮಧುಕ	ಪಟೋಲ		ವತ್ಸಕ	ಹರೀತಕೀ
೧೫.	ಮಧುಕ		ರೋಹಿಣೀ	ವತ್ಸಕ	ಹರೀತಕೀ

ಸರ್ಪಿಃ ಕ್ಷೀರಸಿತಾಕ್ಷೌದ್ರಮಾಗಧೀರ್ವಾ ಯಥಾಬಲಮ್ ||೨೧೧||
ದಶಮೂಲೀ ಕಷಾಯೇಣ ಮಾಗಧೀರ್ವಾ ಪ್ರಯೋಜಯೇತ್ ।
ಪಿಪ್ಪಲೀ ವರ್ಧಮಾನಂ ವಾ ಪಿಬೇತ್ ಕ್ಷೀರರಸಾಶನಃ ||೨೧೨||
ತಾಮ್ರಚೂಡಸ್ಯ ಮಾಂಸೇನ ಪಿಬೇದ್ವಾ ಮದ್ಯಮುತ್ತಮಮ್ ।
ಕೋಲಾಗ್ನಿಮಂಥ ತ್ರಿಫಲಾಕ್ವಾಥೇ ದಧ್ನಾ ಘೃತಂ ಪಚೇತ್ ||೨೧೩||
ತಿಲ್ವಕಾವಾಪಮೇತದ್ಧಿ ವಿಷಮಜ್ವರನಾಶನಮ್ ।

ತುಪ್ಪ, ಹಾಲು, ಸಕ್ಕರೆ, ಜೇನುತುಪ್ಪ, ಹಿಪ್ಪಲಿ ಇವುಗಳನ್ನು ಶಕ್ತಿಗೆ ತಕ್ಕಂತೆಯೂ ದಶಮೂಲಗಳ ಕಷಾಯದೊಡನೆ ಹಿಪ್ಪಲಿಯ ಚೂರ್ಣವನ್ನು ಸೇರಿಸಿಯಾಗಲೀ ಪಿಪ್ಪಲಿ, ವರ್ಧಮಾನ ಯೋಗವನ್ನಾಗಲೀ ಕುಡಿಸಿ ಹಾಲು, ಮಾಂಸರಸ ಮಿಶ್ರಮಾಡಿದ ಅನ್ನವನು ಭೋಜನ ಮಾಡಿಸಬೇಕು. ಕೋಳಿಯ ಮಾಂಸರಸವನ್ನು ತಿಂದು ಮದ್ಯವನ್ನಾಗಲೀ ಕುಡಿಯಬೇಕು. ಎಲಚಿಹಣ್ಣು, ತಗ್ಗಿಬೇರು, ತ್ರಿಫಲೆಗಳ ಕಷಾಯದಲ್ಲಿ ಮೊಸರಿನಿಂದ ತೆಗೆದ ಬೆಣ್ಣೆಯೊಡನೆ ರೋಧ್ರಕಲ್ಕವನ್ನು ಪ್ರತೀವಾಪ ಮಾಡಿ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ವಿಷಮಜ್ವರವು ನಾಶವಾಗುತ್ತದೆ.

ಪಿಪ್ಪಲ್ಯತಿವಿಷಾದ್ರಾಕ್ಷಾಸಾರಿವಾಬಿಲ್ವಚಂದನೈಃ ||೨೧೪||
ಕಟುಕೇನ್ದ್ರಯವೋಶೀರಸಿಂಹೀತಾಮಲಕೀಘನೈಃ ।
ತ್ರಾಯಮಾಣಾಸ್ಥಿರಾಧಾತ್ರೀ ವಿಶ್ವಭೇಷಜ ಚಿತ್ರಕೈಃ ||೨೧೫||
ಪಕ್ವಮೇತೈರ್ಘೃತಂ ಪೀತಂ ವಿಜಿತ್ಯ ವಿಷಮಾಗ್ನಿತಾಮ್ ।
ಜೀರ್ಣಜ್ವರಶಿರಃಶೂಲಗುಲ್ಮೋದರಹಲೀಮಕಾ ||೨೧೬||
ಕ್ಷಯಕಾಸಂ ಸಸಂತಾಪಂ ಪಾರ್ಶ್ವಶೂಲಾನಪೋಹತಿ ।

ಹಿಪ್ಪಲಿ, ಅತಿಬಜೆ, ದ್ರಾಕ್ಷಿ, ಸೊಗದೆಬೇರು, ಬಿಲ್ವಪತ್ರೆಬೇರು, ರಕ್ತಚಂದನ, ಕಟುಕರೋಹಿಣಿ, ಕೊಡಶಿಗೆ ಬೀಜ, ಲಾಮಂಚ, ಹೆಗ್ಗುಳ್ಳದ ಬೇರು, ನೆಲನೆಲ್ಲಿ, ಕೊನ್ನಾರಿಗೆಡ್ಡೆ, ಕಹಿದಸರಿ, ಮೂರೆಲೆಹೊನ್ನೆ, ನೆಲ್ಲೀಚೆಟ್ಟು, ಶುಂಠಿ, ಚಿತ್ರಮೂಲ, ಇವೆಲ್ಲವುಗಳನ್ನೂ ಸಮಭಾಗದಿಂದ ಸೇರಿಸಿ ಎಲ್ಲವುಗಳ ೪ ರಷ್ಟು ನೀರನ್ನು ಸೇರಿಸಿ $\frac{1}{4}$ ಭಾಗ ನಿಲ್ಲುವಂತೆ ಕಷಾಯವನ್ನು ಕಾಯಿಸಿ ಶೋಧಿಸಿಕೊಂಡ ಆ ಕಷಾಯಕ್ಕೆ $\frac{1}{4}$ ರಷ್ಟು ಭಾಗ ತುಪ್ಪವನ್ನೂ, ತುಪ್ಪದ $\frac{1}{4}$ ಭಾಗದಷ್ಟು ಅವುಗಳ ಕಲ್ಕವನ್ನೂ ಸೇರಿಸಿ ಘೃತವನ್ನು ತಯಾರಿಸಿ ಕುಡಿಸಿದರೆ ವಿಷಮಾಗ್ನಿ ದೋಷವನ್ನು ನಿವಾರಣೆ ಮಾಡಿ ಹಳೆಯಜ್ವರ, ತಲೆ ಶೂಲೆ, ಗುಲ್ಮರೋಗ, ಉದರರೋಗ, ಹಲೀಮಕ, ಕ್ಷಯ, ಕಾಸ, ಅಂಗೈ ಅಂಗಾಲುಗಳ ಉರಿ, ಪಕ್ಕೆಶೂಲೆಗಳು ನಿವಾರಣೆಯಾಗುತ್ತವೆ.

ಗುಡೂಚೀತ್ರಿಫಲಾವಾಸಾತ್ರಾಯಮಾಣಾಯವಾಸಕೈಃ ॥೨೧೭॥
ಕ್ವಥಿತ್ಯೈರ್ವಿಧಿವತ್ಪಕ್ವಮೇತ್ಯೈಃ ಕಲ್ಕೀಕೃತೈಃ ಸಮೈಃ ।
ದ್ರಾಕ್ಷಾಮಾಗಧಿಕಾಮ್ಭೋದ ನಾಗರೋತ್ಪಲಚಂದನೈಃ ॥೨೧೮॥
ಪೀತಂ ಸರ್ಪಿಃ ಕ್ಷಯಶ್ವಾಸಕಾಸಾಜೀರ್ಣಜ್ವರಾನ್ ಜಯೇತ್ ।

ಅಮೃತಬಳ್ಳಿ, ತ್ರಿಫಲೆ, ಆಡುಸೋಗೆ, ಕಹಿದಸರಿ, ತುರುಚನ ಬೇರು, ಇವುಗಳ ಕಷಾಯ ತುಪ್ಪ, ದ್ರಾಕ್ಷಿ, ಹಿಪ್ಪಲಿ, ಕೊನ್ನಾರಿಗೆಡ್ಡೆ, ಶುಂಠಿ, ನೈದಿಲೆಗೆಡ್ಡೆ, ಕೆಂಪುಗಂಧ, ಇವು ಸಮಪ್ರಮಾಣದ ಕಲ್ಕದೊಡನೆ ತಯಾರಿಸಿದ ಘೃತಪಾನವು, ಕ್ಷಯ, ಶ್ವಾಸ, ಕಾಸ, ಜೀರ್ಣಜ್ವರ ಇವುಗಳನ್ನು ನಾಶಮಾಡುತ್ತದೆ.

ಕಲಶೀಬೃಹತೀದ್ರಾಕ್ಷಾತ್ರಾಯನ್ತೀನಿಮ್ಬಗೋಕ್ಷುರೈಃ ॥೨೧೯॥
ಬಲಾಪರ್ಪಟಕಾಮ್ಭೋದಶಾಲಪರ್ಣೀಯವಾಸಕೈಃ ।
ಪಕ್ವಮುತ್ಕ್ವಥಿತೈಃ ಸರ್ಪಿಃ ಕಲ್ಕೈರೇಭಿಃ ಸಮನ್ವಿತಮ್ ॥೨೨೦॥
ಶಠೀತಾಮಲಕೀಭಾರ್ಗೀಮೇದಾಮಲಕಪೌಷ್ಕರೈಃ ।
ಕ್ಷೀರದ್ವಿಗುಣಸಂಯುಕ್ತಂ ಜೀರ್ಣಜ್ವರಮಪೋಹತಿ ॥೨೨೧॥
ಶಿರಃಪಾರ್ಶ್ವರುಜಾಕಾಸಕ್ಷಯಪ್ರಶಮನಂ ಪರಮ್ ।

ಒಂದೆಲೆಹೊನ್ನೆ, ಹೆಗ್ಗುಳ್ಳದ ಬೇರು, ದ್ರಾಕ್ಷಿ, ಕಹಿದಸರಿ, ಬೇವಿನತೊಕ್ಕು, ನೆಗ್ಗಿಲು ಸಮೂಲ, ಕಳ್ಳಂಡಲೆಬೇರು, ಪರ್ಪಾಟಕ, ಕೊನ್ನಾರಿಗೆಡ್ಡೆ, ೩ ಎಲೆಹೊನ್ನೆ, ತುರುಚನ ಬೇರು, ಇವೆಲ್ಲವನ್ನೂ ಸಮಭಾಗವಾಗಿ ಸೇರಿಸಿ ಅವುಗಳಿಗೆ ೪ ರಷ್ಟು ನೀರು ಹಾಕಿ 1/4 ಭಾಗ ಕಷಾಯ ನಿಲ್ಲುವಂತೆ ಕುದಿಸಿ ಶೋಧಿಸಿದ ಕಷಾಯಕ್ಕೆ ಅದರ 1/4 ಭಾಗ ತುಪ್ಪವನ್ನೂ ತುಪ್ಪದ 1/4 ಭಾಗ ಕರ್ಪೂರ ಶುಂಠಿ, ನೆಲನೆಲ್ಲಿ, ಭಾರ್ಗೀ, ಮೇದೆ, ನೆಲ್ಲಿಚೆಟ್ಟು, ಪುಷ್ಕರಮೂಲ ಇವುಗಳ ಕಲ್ಕವನ್ನು ಕಷಾಯದ ೨ ರಷ್ಟು ಹಾಲನ್ನೂ ಸೇರಿಸಿ ಮಂದಾಗ್ನಿಯಿಂದ ತುಪ್ಪ ನಿಲ್ಲುವಂತೆ ಕಾಯಿಸಿ ಶೋಧಿಸಿಟ್ಟುಕೊಂಡು ಆ ಘೃತವನ್ನು ಪಾನಮಾಡಿಸಿದರೆ ಜೀರ್ಣಜ್ವರವು ನಾಶವಾಗುತ್ತದೆ ; ತಲೆನೋವು, ಪಕ್ಕೆಶೂಲೆ, ಕೆಮ್ಮು, ಕ್ಷಯ ಇವುಗಳನ್ನು ನಾಶಮಾಡಲು ಶ್ರೇಷ್ಠವಾದ ಯೋಗವು ;

ಪಟೋಲೀಪರ್ಪಟಾರಿಷ್ಟಗುಡೂಚೀತ್ರಿಫಲಾವೃಷೈಃ ||೧೧೨||
ಕಟುಕಾಮುಷ್ಟದಭೂನಿಮ್ಬಯಾಸಯಷ್ಟ್ಯಾಹ್ವಚಂದನೈಃ ।
ದಾರ್ವೀಶಕ್ರಯವೋಶೀರತ್ರಾಯಮಾಣಾಕಣೋತ್ಪಲೈಃ ||೧೧೩||
ಧಾತ್ರೀಭೃಙ್ಗರಜೋಽಭೀರುಕಾಕಮಾಚೀರಸೈರ್ಘೃತಮ್ ।
ಸಿದ್ಧಮಾಶ್ವಪಚೀಕಂಷ್ಠಜ್ವರಶುಕ್ರಾರ್ಜುನವ್ರಣಾನ್ ||೧೧೪||
ಹನ್ಯಾನ್ನಯನವದನಕರ್ಣಜಾನ್ ಘ್ರಾಣಜಾನ್ ಗದಾನ್ ।

ಕಹಿಪಡವಲ, ಪರ್ಪಾಷ್ಟಕ, ಬೇವಿನತೊಗಟೆ, ಅಮೃತವಳ್ಳಿ, ತ್ರಿಫಲೆ, ಆಡುಸೋಗೆ, ಕಟುಕರೋಹಿಣಿ, ಕೊನ್ನಾರಿಗೆಡ್ಡೆ, ನೆಲಬೇವು, ತುರುಚಿನಬೇರು ; ಅತಿಮಧುರ, ಕೆಂಪುಗಂಧ, ಮರದರಿಶಿನ, ಕೊಡಶಿಗೆಬೀಜ, ಲಾಮಂಚ, ಕಹಿದಸರಿ, ಹಿಪ್ಪಲಿ, ನೈದಿಲೆಗೆಡ್ಡೆ, ನೆಲ್ಲೀಚೆಟ್ಟು, ಗರುಗದಸೊಪ್ಪು, ಆಷಾಡಿಬೇರು, ಗಣಿಕೆಸೊಪ್ಪು ಇವೆಲ್ಲವನ್ನೂ ಕಷಾಯಮಾಡಿ ಆ ಕಷಾಯದೊಡನೆ ಘೃತಪಾಕಮಾಡಿ ಶೋಧಿಸಿಕೊಂಡು ಪ್ರಯೋಗಿಸಿದರೆ ಬಲುಬೇಗ (ಕೆಲವು ದಿನಗಳಲ್ಲಿಯೇ) ಗಂಡಮಾಲೆ, ಕುಷ್ಠ, ಜ್ವರ, ನೇತ್ರದಶುಕ್ರ, ಅರ್ಜುನವೆಂಬ ನೇತ್ರರೋಗ, ವ್ರಣ ಇವುಗಳನ್ನು ನೇತ್ರ, ಮುಖ, ಕಿವಿ, ಮೂಗುಗಳಲ್ಲಿ ಉಂಟಾಗುವ ರೋಗಗಳೂ ನಾಶವಾಗುತ್ತವೆ.

ವಿಡಙ್ಗತ್ರಿಫಲಾಮುಸ್ತಾಮಞ್ಜಿಷ್ಠಾದಾಡಿಮೋತ್ಪಲೈಃ ||೧೧೫||
ಪ್ರಿಯಙ್ಗ್ವೇಲೈಲವಾಲೂಕಚನ್ದನಾಮರದಾರುಭಿಃ ।
ಬರ್ಹಿಷ್ಠಕುಷ್ಠರಜನೀಪರ್ಣೀನೀಸಾರಿವಾದ್ವಯೈಃ ||೧೧೬||
ಹರೇಣುಕಾತ್ರಿವೃದ್ದನ್ತೀವಚಾತಾಲೀಸಕೇಸರೈಃ ।
ದ್ವಿಕ್ಷೀರಂ ವಿಪಚೇತ್ಸರ್ಪಿರ್ಮಾಲತೀಕುಸುಮೈಃ ಸಹ ||೧೧೭||
ಜೀರ್ಣಜ್ವರಶ್ವಾಸಕಾಸಗುಲ್ಮೋನ್ಮಾದಗರಾಪಹಮ್ ।
ಏತತ್ಕಲ್ಯಾಣಕಂ ನಾಮ ಸರ್ಪಿರ್ಮಾಙ್ಗಲ್ಯಮುತ್ತಮಮ್ ||೧೧೮||
ಅಲಕ್ಷ್ಮೀಗ್ರಹರಕ್ಷೋಽಗ್ನಿಮಾನ್ದ್ಯಾಪಸ್ಮಾರಪಾಪನುತ್ ।
ಶಸ್ಯತೇನಷ್ಟಶುಕ್ರಾಣಾಂ ವನ್ಧ್ಯಾನಾಂ ಗರ್ಭದಂ ಪರಮ್ ||೧೧೯||
ಮೇಧ್ಯಂ ಚಕ್ಷುಷ್ಯಮಾಯುಷ್ಯಂ ರೇತೋಮಾರ್ಗರುಜಾಪಹಮ್ ।

ವಿಡಂಗ, ತ್ರಿಫಲೆ, ಕೊನ್ನಾರಿಗೆಡ್ಡೆ, ಮಂಜಿಷ್ಠೆ, ದಾಳಿಂಬೆತೊಕ್ಕು, ನೈದಿಲೆಗೆಡ್ಡೆ, ನೆಳಲು, ಸಣ್ಣಏಲಕ್ಕಿ, ಏಲಾವಾಲೂಕ (ಕುಷ್ಠಗಂಧಿಕಂ) ರಕ್ತಚಂದನ, ದೇವದಾರು, ಮುಡಿವಾಳ, ಚಂಗಲ್‌ಕೋಷ್ಠ, ಅರಿಶಿನ, ಮರದರಿಶಿನ, ಒಂದೆಲೆಹೊನ್ನೆ, ಮೂರೆಲೆಹೊನ್ನೆ, ಸೊಗದೆಬೇರು, (ಬಿಳಿದು, ಕರಿದು) ರೇಣುಕೆಬೀಜ, ತಿಗಡೆಯಬೇರು, ಜಾಪಾಳದತೊಗಟೆ, ಬಜೆ, ತಾಳೀಸಪತ್ರೆ, ತಾವರೆಕುಸುಮ, ಇವುಗಳನ್ನೆಲ್ಲಾ ಸಮಪ್ರಮಾಣದಿಂದ ಸೇರಿಸಿದಕಲ್ಕ ೮ ಪಲಗಳಷ್ಟಕ್ಕೆ ೧ ಪ್ರಸ್ಥತುಪ್ಪವನ್ನೂ ಹಸು ಮತ್ತು ಆಡಿನ ೧ ಪ್ರಸ್ಥಹಾಲನ್ನೂ ೪ ಪ್ರಸ್ಥ ನೀರನ್ನೂ ಸೇರಿಸಿ ಜಾಜಿಮೊಗ್ಗಿನಕಲ್ಕ ೪ ಪಲಗಳಷ್ಟನ

ಸೇರಿಸಿ ಮಂದಾಗ್ನಿಯಿಂದ ಪಾಕಮಾಡಲು ಇದಕ್ಕೆ ಕಲ್ಯಾಣಕ ಘೃತವೆಂದು ಹೆಸರು ; ಮಂಗಳಕರವು ಶ್ರೇಷ್ಠವಾದದ್ದು ; ಇದರ ಪಾನದಿಂದ ಜೀರ್ಣಜ್ವರ, ಶ್ವಾಸ, ಕಾಸ, ಗುಲ್ಮ, ಉನ್ಮಾದ, ಗರ, (ಕೈ ಮದ್ದು, ದೂಷೀವಿಷ) ಇವುಗಳು ನಿವಾರಣೆಯಾಗುತ್ತವೆ ; ಅಮಂಗಳ, ಗ್ರಹಬಾಧೆ, ರಾಕ್ಷಸಬಾಧೆ, ಅಗ್ನಿಮಾಂದ್ಯ, ಅಪಸ್ಮಾರ, ಪಾಪಕರ್ಮದಫಲ ಇವುಗಳು ನಾಶವಾಗುತ್ತವೆ; ಇದರ ಪಾನದಿಂದ ಪ್ರಶಸ್ತಶುಕ್ರೋತ್ಪತ್ತಿಯಾಗುತ್ತದೆ. ಬಂಜೆಯರು ಕುಡಿದರೆ ಗರ್ಭಧಾರಣೆಯುಂಟಾಗುತ್ತದೆ ; ಮೇಧಾಶಕ್ತಿಯನ್ನೂ ನೇತ್ರಪಾಟವವನ್ನೂ, ಆಯುಸ್ಸನ್ನೂ ವೃದ್ಧಿಗೊಳಿಸಿ ಶುಕ್ರವಾಹಿಸ್ರೋತೋಮಾರ್ಗದಲ್ಲಿನ ನೋವನ್ನು ನಿವಾರಿಸುತ್ತದೆ.

ಏತೈರೇವ ಯಥಾದ್ರವ್ಯೈಃ ಸರ್ವಗನ್ಧೈಶ್ಚ ಸಾಧಿತಮ್ ॥೩೩೦॥
ಕಪಿಲಾಯಾ ಘೃತಪ್ರಸ್ಥಂ ಸುವರ್ಣಮಣಿಸಂಯುತಮ್ ।
ತತ್ ಕ್ಷೀರೇಣ ಸಹೈಕಧ್ಯಂ ಪ್ರಸಾಧ್ಯಕುಸುಮೈರಿಮೈಃ ॥೩೩೧॥
ಸುಮನಶ್ಚಮ್ಪಕಾಶೋಕಶಿರೀಷಕುಸುಮೈರ್ವೃತಮ್ ।
ತಥಾ ನಳದಪದ್ಮಾನಾಂ ಕೇಸರೈರ್ದಾಡಿಮಸ್ಯ ಚ ॥೩೩೨॥
ತಿಥೌ ಪ್ರಶಸ್ತೇ ನಕ್ಷತ್ರೇ ಸಾಧಕಸ್ಯಾತುರಸ್ಯ ಚ ।
ಕೃತಂ ಮನುಷ್ಯದೇವಾಯ ಬ್ರಾಹ್ಮಣೈರಭಿಮನ್ತ್ರಿತಮ್ ॥೩೩೩॥
ದತ್ತಂ ಸರ್ವ ಜ್ವರಾ ಹನ್ತಿ ಮಹಾಕಲ್ಯಾಣಕಂ ಘೃತಮ್ ।
ದರ್ಶನಸ್ಪರ್ಶನಾಭ್ಯಾಂ ತು ಸರ್ವರೋಗಹರಂ ಶಿವಮ್ ॥೩೩೪॥
ಅಧೃಷ್ಯಃ ಸರ್ವಭೂತಾನಾಂ ವಲೀಪಲಿತವರ್ಜಿತಃ ।
ಅಸ್ಯಾಭ್ಯಾಸಾದ್ಘೃತಸ್ಯೇಹ ಜೀವೇದ್ವರ್ಷಶತತ್ರಯಮ್ ॥೩೩೫॥

ಕಲ್ಯಾಣಕಘೃತಕ್ಕೆ ಹೇಳಿದ ವಿಡಂಗತ್ರಿಫಲಾದಿದ್ರವ್ಯಗಳ ಮತ್ತು ಸರ್ವಗಂಧ ದ್ರವ್ಯಗಳ (ಚಾತುರ್ಜಾತಕ; ಕರ್ಪೂರ, ತಕ್ಕೋಲಾ, ಅಗರು, ಕುಂಕುಮ, ಲವಂಗ ಇವು ಸರ್ವಗಂಧದ್ರವ್ಯಗಳು) ಕಲ್ಕ ೪ ಪಲ, ಕಪಿಲವರ್ಣದ ಹಸುವಿನ ತುಪ್ಪ ೧ ಪ್ರಸ್ಥ ಅದರ ಹಾಲು ಒಂದು ಪ್ರಸ್ಥ ನೀರು ೪ ಪ್ರಸ್ಥ, ಸುವರ್ಣ, ಸ್ಫಟಿಕಮಣಿ, ಜಾಜಿ, ಸಂಪಿಗೆ, ಅಶೋಕ, ಬಾಗೆ ಇವುಗಳ ಹೂವು, ಜಟಾಮಾಂಸೀ, ಕೆಂಪುತಾವರೆಹೂವಿನ ಕೇಸರ ದಾಳಿಂಬೆಹೂವು ಇವುಗಳ ಕಲ್ಕ ೪ ಪಲಗಳಷ್ಟನ್ನು ಸೇರಿಸಿ ರೋಗಿಗೂ ವೈದ್ಯನಿಗೂ ಅನುಕೂಲವಾಗಿರುವ ಶುಭದಿನ ಶುಭನಕ್ಷತ್ರದಲ್ಲಿ ತಯಾರಿಸಿ ಬ್ರಾಹ್ಮಣರಿಂದ ಮಂತ್ರಗಳಿಂದ ಅಭಿಮಂತ್ರಿಸಿ ರಾಜನಿಗೆ ಸಮರ್ಪಿಸಬೇಕು ; ಇದಕ್ಕೆ ಮಹಾ ಕಲ್ಯಾಣಕ ಘೃತವೆಂದು ಹೆಸರು ; ಇದನ್ನು ಸೇವಿಸಿದರೆ ಸರ್ವಜ್ವರಗಳೂ ನಾಶವಾಗುತ್ತವೆ ; ಕಣ್ಣಿನಿಂದ ನೋಡಿ ಕೈಯಿಂದ ಮುಟ್ಟಿದರೂ ಸಕಲರೋಗಗಳೂ ನಿವಾರಣೆಯಾಗುತ್ತವೆ; ಮಂಗಳಕರವಾದದ್ದು ; ಭೂತಗ್ರಹ, ಪಿಶಾಚಾದಿಗಳ ಬಾಧೆಯುಂಟಾಗುವುದಿಲ್ಲ, ಮೈಚರ್ಮವು ಸುಕ್ಕುಕಟ್ಟುವುದಿಲ್ಲ, ನರೆತ ಕೂದಲುಗಳನ್ನು ಹೋಗಲಾಡಿಸುತ್ತದೆ ; ಈ ಘೃತಸೇವನೆ

ಯನ್ನು ಅಭ್ಯಾಸಮಾಡಿದವರು ೩೦೦ ವರ್ಷಗಳವರೆಗೆ ಜೀವಿಸುತ್ತಾರೆ. ಅಂದರೆ ದೀರ್ಘ ಕಾಲ ಬದುಕುತ್ತಾರೆಂದು ಅರ್ಥ.

ಗವ್ಯಂ ದಧಿ ಚ ಮೂತ್ರಂ ಚ ಕ್ಷೀರಂ ಸರ್ಪಿಃ ಶಕೃದ್ರಸಃ ||೨೩೬||
ಸಮಭಾಗಾನಿ ಪಾಚ್ಯಾನಿ ಕಲ್ಕಾಂಶ್ಚೈತಾನ್ ಸಮಾವಪೇತ್ ।
ತ್ರಿಫಲಾಂ ಚಿತ್ರಕಂ ಮುಸ್ತಂ ಹರಿದ್ರೇ ದ್ವೇ ವಿಷಾಂ ವಚಾಮ್ ||೨೩೭||
ವಿಡಙ್ಗಂ ತ್ರ್ಯೂಷಣಂ ಚವ್ಯಂ ಸುರದಾರು ತಥೈವ ಚ ।
ಪಞ್ಚಗವ್ಯಮಿದಂ ಪಾನಾದ್ವಿಷಮಜ್ವರನಾಶನಮ್ ||೨೩೮||

ಹಸುವಿನ ಮೊಸರು, ಮೂತ್ರ, ಹಾಲು, ತುಪ್ಪ, ಸಗಣಿಯರಸ ಇವುಗಳನ್ನು ಸಮ ಭಾಗದಿಂದ ಮಿಶ್ರಮಾಡಿ 1/4 ಭಾಗ ನಿಲ್ಲುವಂತೆ ಕುದಿಸಿ ತ್ರಿಫಲೆ, ಚಿತ್ರಮೂಲ, ಕೊನ್ನಾರಿಗೆಡ್ಡೆ, ಅರಿಶಿನ, ಮರದರಿಶಿನ, ಅತಿಬಜೆ, ಬಜೆ, ವಿಡಂಗ, ತ್ರಿಕಟು, ಚವ್ಯ, ದೇವದಾರು ಇವೆಲ್ಲವುಗಳ ಸಮಭಾಗದ ಕಲ್ಕ ತುಪ್ಪದ 1/4 ಭಾಗದಷ್ಟನ್ನೂ ಕಷಾಯದ 1/4 ಭಾಗ ತುಪ್ಪವನ್ನೂ ಸೇರಿಸಿ ಮಂದಾಗ್ನಿಯಿಂದ ತಯಾರಿಸಿದ ಘೃತಕ್ಕೆ "ಪಂಚಗವ್ಯ ಘೃತ"ವೆಂದು ಹೆಸರು ಇದರ ಪಾನದಿಂದ ವಿಷಮ ಜ್ವರವು ನಾಶವಾಗುತ್ತದೆ.

ಪಞ್ಚಗವ್ಯಮೃತೇ ಗರ್ಭಾತ್ಪಾಚ್ಯಮನ್ಯತ್ ವೃಷೇಣ ಚ ।
ಬಲಯಾಥ ಪರಂ ಪಾಚ್ಯಂ ಗುಡೂಚ್ಯಾ ತದ್ವದೇವ ತು ||೨೩೯||
ಜೀರ್ಣಜ್ವರೇ ಚ ಶೋಫೇ ಚ ಪಾಣ್ಡುರೋಗೇ ಚ ಪೂಜಿತಮ್ ।
ಏತೇನೈವ ತು ಕಲ್ಪೇನ ಘೃತಂ ಪಞ್ಚಾವಿಕಂ ಪಚೇತ್ ||೨೪೦||
ಪಞ್ಚಾಜಂ ಪಞ್ಚಮಹಿಷಂ ಚತುರುಷ್ಟ್ರಮಥಾಪಿ ವಾ ।

ಆಡುಸೋಗೆ, ಕಳ್ಳಂಗಡಲೆ, ಅಮೃತವಳ್ಳಿ ಇವುಗಳಲ್ಲೊಂದರ ಕಲ್ಕದೊಡನೆ ಪಂಚಗವ್ಯಘೃತವನ್ನು ತಯಾರಿಸಿ ಜೀರ್ಣಜ್ವರ, ಶೋಫ, ಪಾಂಡುರೋಗಗಳಲ್ಲಿ ಪ್ರಯೋಗಿಸಿದರೆ ಉತ್ತಮ ಫಲದಾಯಕವು. ಇದೇ ಕ್ರಮದಿಂದ ಪಂಚಾವಿಕ, ಪಂಚಾಜ, ಪಂಚಮಾಹಿಷ ಘೃತಗಳನ್ನೂ ಶಕೃದ್ರಸವನ್ನು ಬಿಟ್ಟು ಒಂಟೆಯ ಮೊಸರು, ಮೂತ್ರ, ಹಾಲು, ತುಪ್ಪಗಳಿಂದ ತಯಾರಿಸಿದ ಚತುರುಷ್ಟ್ರ ಘೃತವನ್ನೂ ತಯಾರಿಸಬೇಕು.

ತ್ರಿಫಲೋಶೀರಸಮ್ಪಾಕ ಕಟುಕಾತಿವಿಷಾನ್ವಿತೈಃ (ಘನೈಃ ।)
ಶತಾವರೀಸಪ್ತಪರ್ಣ ಗುಡೂಚೀರಜನೀದ್ವಯೈಃ ||೨೪೧||
ಚಿತ್ರಕತ್ರಿವೃತಾಮೂರ್ವಾಪಟೋಲಾರಿಷ್ಟವಾಲಕೈಃ ।
ಕಿರಾತತಿಕ್ತಕವಚಾ ವಿಶಾಲಾಪದ್ಮಕೋತ್ಪಲೈಃ ||೨೪೨||
ಸಾರಿವಾದ್ವಯಯಷ್ಟ್ಯಾಹ್ವ ಚನ್ದನಿಕಾರಕ್ತಚನ್ದನೈಃ ।
ದುರಾಲಭಾಪರ್ಪಟಕ ತ್ರಾಯಮಾಣಾಟರೂಷಕೈಃ ||೨೪೩||
ರಾಸ್ನಾಕುಙ್ಕುಮಮಞ್ಜಿಷ್ಠಾಮಾಗಧೀನಾಗರೈಸ್ತಥಾ ।
ಧಾತ್ರೀಫಲರಸೈಃಸಮ್ಯಗ್ದ್ವಿಗುಣೈಃ ಸಾಧಿತಂ ಹವಿಃ ||೨೪೪||
ಪರಿಸರ್ಪಜ್ವರಶ್ವಾಸ ಗುಲ್ಮಕುಷ್ಠ ನಿವಾರಣಮ್ ।

ಪಾಣ್ಡುಪ್ಲೀಹಾಗ್ನಿಮಾನ್ದ್ಯೇಭ್ಯ ಏತದೇವ ಪರಂ ಹಿತಮ್ ||೨೪೫||
ಪಟೋಲಕಟುಕಾದಾರ್ವೀನಿಮ್ಬವಾಸಾಫಲತ್ರಿಕಮ್ |
ದುರಾಲಭಾಪರ್ಪಟಕತ್ರಾಯಮಾಣಾಃ ಪಲೋನ್ಮಿತಾಃ ||೨೪೬||
ಪ್ರಸ್ಥಮಾಮಲಕಾನಾಂ ಚ ಕ್ವಾಥಯೇತ್ ಸಲಿಲಾರ್ಮಣೇ |
ತೇನ ಪಾದಾವಶೇಷೇಣ ಘೃತಪ್ರಸ್ಥಂ ವಿಪಾಚಯೇತ್ ||೨೪೭||
"ಕಲ್ಕೈಃ ಕುಟಜಭೂನಿಮ್ಬಘನಯಷ್ಟ್ಯಾಹ್ವಚಂದನೈಃ |
ಸ ಪಿಪ್ಪಲೀಕೈಸ್ತತ್ಸಿದ್ಧಂ ಚಕ್ಷುಷ್ಯಂ ಶುಕ್ಲಯೋರ್ಹಿತಮ್ ||
ಘ್ರಾಣಕರ್ಣಾಕ್ಷಿವದನವರ್ತ್ಮರೋಗ ವ್ರಣಾಪಹಮ್ | (ಪ್ರಕ್ಷಿಪ್ತಾ)"
ರಕ್ತಪಿತ್ತಕಫಸ್ವೇದಕ್ಲೇದಪೂಯಾಜ್ಞ ಶೋಷಣಮ್ |
ಕಾಮಲಾಜ್ವರವೀಸರ್ಪಗಣ್ಡಮಾಲಾಹರಂ ಪರಮ್ ||೨೪೮||

ತ್ರಿಫಲೆ, ಲಾಮಂಚ, ಕಕ್ಕೆಕಾಯಿ, ಕಟುಕರೋಹಿಣಿ, ಅತಿಬಜೆ, (ಮುಸ್ತಾ, ಆಷಾಡಿಬೇರು, ಮದ್ಧಾಲೆತೊಗಟೆ, ಅಮೃತಬಳ್ಳಿ, ಅರಿಶಿನ, ಮರದರಿಶಿನ, ಚಿತ್ರಮೂಲ, ತಿಗಡೆಬೇರು, ಕೊರಟಿಗೆಬೇರು, ಕಹಿಪಡವಲ, ಬೇವಿನತೊಗಟೆ, ಮುಡಿವಾಳ, ನೆಲಬೇವು, ಬಜೆ, ದಾಸಮೆಕ್ಕೆಯಬೇರು, ಪದ್ಮಕ, ನೈದಿಲೆಗೆಡ್ಡೆ, ಬಿಳಿಸೊಗದೆಬೇರು, ಕಪ್ಪುಸೊಗದೇ ಬೇರು, ಅತಿಮಧುರ, ಚವ್ಯ, ಕೆಂಪಿನಗಂಧ, ತುರಿಚನಬೇರು, ಪರ್ಪಾಷ್ಟಕ, ಕಹಿದಸರಿ, ಆಡು ಸೋಗೆಸೊಪ್ಪು, ರಾಸ್ನೆ, ಕುಂಕುಮಕೇಸರಿ, ಮಂಜಿಷ್ಠೆ, ಹಿಪ್ಪಲಿ, ಶುಂಠಿ, ಇವುಗಳ ಕಷಾಯದೊಡನೆ ನೆಲ್ಲೀಕಾಯಿರಸ ಎರಡರಷ್ಟನ್ನೂ ಕಷಾಯದ $\frac{1}{4}$ ಭಾಗ ತುಪ್ಪವನ್ನೂ ಸೇರಿಸಿ ವಿಧಿವತ್ತಾಗಿ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ವಿಸರ್ಪ, ಜ್ವರ, ಗುಲ್ಮ, ಕುಷ್ಠರೋಗ ಇವುಗಳು ನಿವಾರಣೆಯಾಗುತ್ತವೆ ; ಪಾಂಡುರೋಗ, ಪ್ಲೀಹವೃದ್ಧಿ; ಅಗ್ನಿ ಮಾಂದ್ಯ ಪೀಡಿತರಿಗೆ ಈ ಘೃತವನ್ನು ಪಾನಮಾಡಿಸಿದರೆ ಅತ್ಯಂತ ಹಿತವಾಗುತ್ತದೆ ; ಕಹಿಪಡವಲ, ಕಟುಕರೋಹಿಣಿ, ಮರದರಿಶಿನ, ಬೇವಿನತೊಗಟೆ, ಆಡುಸೋಗೆ, ತ್ರಿಫಲೆಯ ಸಿಪ್ಪೆ, ತುರುಚನಬೇರು, ಪರ್ಪಾಷ್ಟಕ, ಕಹಿದಸರಿ ಇವು ಪ್ರತಿಯೊಂದನ್ನೂ ಒಂದೊಂದು ಪಲದಂತೆಯೂ ನೆಲ್ಲೀಕಾಯಿನ ರಸ ೧ ಪ್ರಸ್ಥವನ್ನೂ ೧ ದ್ರೋಣನೀರಿಗೆ ಸೇರಿಸಿ 1/4 ಭಾಗ ನಿಲ್ಲುವಂತೆ ಕಷಾಯಮಾಡಿ ಅದರೊಡನೆ ೧ ಪ್ರಸ್ಥಘೃತವನ್ನು ಸೇರಿಸಿ ಪಾಕಮಾಡಿದ ಈ ಘೃತವನ್ನು ಪಾನಮಾಡಿಸಿದರೆ ರಕ್ತಪಿತ್ತ, ಕಫ, ಸ್ವೇದ, ದ್ರವವು ಸೋರುವುದು, ಕಫ, ಸ್ವೇದ, ದ್ರವವು ಸೋರುವುದು. ಕೀವು ಹರಿಯುವುದು, ಶರೀರ ಕ್ಷೀಣತೆ, ಕಾಮಾಲೆ, ಜ್ವರ, ವಿಸರ್ಪ, (ಹರಿಬಾವು) ಗಂಡಮಾಲೆ ಇವುಗಳು ನಿವಾರಿಸಲ್ಪಡುತ್ತವೆ ; (ಕೊಡಸಿಗೆ ತೊಗಟೆ, ನೆಲಬೇವು, ಕೊನ್ನಾರಿ ಗೆಡ್ಡೆ, ಅತಿಮಧುರ, ರಕ್ತ ಚಂದನ, ಹಿಪ್ಪಲಿ, ಇವುಗಳ ಕಲ್ಕದೊಡನೆ ತಯಾರಿಸಿದ ಘೃತಪಾನವು ಕಣ್ಣಿಗೆ ಮತ್ತು ನೇತ್ರಶುಕ್ರಕ್ಕೆ ಹಿತಕರವು ; ಮೂಗು, ಕಿವಿ, ಕಣ್ಣು, ಮುಖ, ವರ್ತ್ಮರೋಗ, ವ್ರಣಗಳು ನಿವಾರಿಸಲ್ಪಡುತ್ತವೆ.)

ಶೃತಂ ಪಯಃ ಶರ್ಕರಾಚ ಪಿಪ್ಪಲ್ಯೋ ಮಧುಸರ್ಪಿಷೀ ।
ಪಞ್ಚಸಾರಮಿದಂ ಪೇಯಂ ಮಥಿತಂ ವಿಷಮಜ್ವರೇ ॥೨೪೯॥
ಕ್ಷತಕ್ಷೀಣೇ ಕ್ಷಯೇ ಶ್ವಾಸೇ ಹೃದ್ರೋಗೇ ಚೈತದಿಷ್ಯತೇ ।
ಲಾಕ್ಷಾವಿಶ್ವನಿಶಾಮೂರ್ವಾಮಞ್ಜಿಷ್ಠಾಸ್ವರ್ಜಿಕಾಮಯೈಃ ॥೨೫೦॥
ಷಡ್ಗುಣೇನ ಚ ತಕ್ರೇಣ ಸಿದ್ಧಂ ಜ್ವರಾನ್ತಕೃತ್ ।
ಕ್ಷೀರಿವೃಕ್ಷಾಸನಾರಿಷ್ಟಜಮ್ಬೂಬಸಪ್ತಚ್ಛದಾರ್ಜುನೈಃ ॥೨೫೧॥
ಶಿರೀಷಖದಿರಾಸ್ಫೋಟಾ ಮೃತವಲ್ಲ್ಯಟರೂಷಕೈಃ ।
ಕಟುಕಾಪರ್ಪಟೋಶೀರವಚಾತೇಜೋವತೀಘನೈಃ ॥೨೫೨॥
ಸಾಧಿತಂ ತೈಲಮಭ್ಯಙ್ಗಾದಾಶು ಜೀರ್ಣಜ್ವರಾಪಹಮ್ ।

ಕುದಿಸಿದ ಹಾಲು, ಸಕ್ಕರೆ, ಹಿಪ್ಪಲಿಯ ಚೂರ್ಣ, ಜೇನುತುಪ್ಪ, ತುಪ್ಪ ಇವೆಲ್ಲ ವನ್ನೂ ಒಟ್ಟಿಗೆ ಸೇರಿಸಿ ಕಡೆದು (ಕೈಯಲ್ಲಿ ಕಲಕಿ) ವಿಷಮಜ್ವರದಲ್ಲಿ ಕುಡಿಸಬೇಕು, "ಪಂಚಸಾರಪಾನಕ"ವೆಂದು ಹೆಸರು ; ಇದರ ಪಾನದಿಂದ ಕ್ಷತಕ್ಷೀಣತೆ, ಕ್ಷಯ, ಶ್ವಾಸ, ಹೃದ್ರೋಗ ಇವುಗಳು ನಿವಾರಣೆಯಾಗುತ್ತವೆ. ಅರಗು, ಶುಂಠಿ, ಅರಿಶಿನ, ಕೊರಟಿಗೆ ಹಂಬು, ಮಂಜಿಷ್ಠೆ, ಸರ್ಜಕ್ಷಾರ, ಚೆಂಗಲ್‌ಕೋಷ್ಠ, ಇವುಗಳ ಕಲ್ಕ ೮ ಪಲಗಳು ತೈಲದ ೬ ರಷ್ಟು ಮಜ್ಜಿಗೆ ಇವನ್ನು ಸೇರಿಸಿ ತಯಾರಿಸಿದ ತೈಲವನ್ನು ಅಭ್ಯಂಗಮಾಡಿಸಿದರೆ ಶೀತಪೂರ್ವ ದಾಹಪೂರ್ವಜ್ವರಗಳು ನಾಶವಾಗುತ್ತವೆ ; ಆಲ, ಅತ್ತಿ, ಮೊದಲಾದ ಕ್ಷೀರವೃಕ್ಷಗಳ ಕೆಂಪುಹೊನ್ನೆ, ಬೇವು, ನೇರಳೆ, ಮದ್ದಾಲೆ, ಬಿಳಿಮತ್ತಿ, ಬಾಗೆ, ಕಗ್ಗಲಿ, ಬಿಳಿಯಎಕ್ಕ, ಇವುಗಳ ತೊಗಟೆ, ಅಮೃತಬಳ್ಳಿ, ಆಡುಸೋಗೆ, ಕಟುಕರೋಹಿಣಿ, ಪರ್ಪಾಟಕ, ಲಾಮಂಚ, ಬಜೆ, ಗಂಗುಂಡೆ ಬೀಜ, ಕೊನ್ನಾರಿಗೆಡ್ಡೆ ಇವುಗಳ ಕಲ್ಕ ೮ ಪಲ ತೈಲ ೧ ಪ್ರಸ್ಥ ನೀರು ೪ ಪ್ರಸ್ಥಗಳನ್ನು ಸೇರಿಸಿ ಮಂದಾಗ್ನಿಯಿಂದ ಪಾಕಮಾಡಿದ ತೈಲವನ್ನು ಅಭ್ಯಂಗಮಾಡಿಸಿದರೆ ಬೇಗನೆ ಹಳೆಯ ಜ್ವರವು ನಿವಾರಣೆಯಾಗುತ್ತದೆ.

ನಿರ್ವಿಷೈರ್ಭುಜಗೈರ್ನಾಗೈರ್ವಿನೀತೈಃ ಕೃತತಸ್ಕರೈಃ ॥೨೫೩॥
ತ್ರಾಸಯೇದಾಗಮೋ ಚೈನಂ ತದಹರ್ಭೋಜಯೇನ್ನ ಚ ।
ಅತ್ಯಭಿಷ್ಯನ್ದಿಗುರುಭಿರ್ವಾಮಯೇದ್ವಾ ಪುನಃ ಪುನಃ ॥೨೫೪॥
ಮದ್ಯಂ ತೀಕ್ಷ್ಣಂ ಪಾಯಯೇತ ಘೃತಂ ವಾ ಜ್ವರನಾಶನಮ್ ।
ಪುರಾಣಂ ವಾ ಘೃತಂ ಕಾಮಮುದಾರಂ ವಾ ವಿರೇಚನಮ್ ॥೨೫೫॥
ನಿರೂಹಯೇದ್ವಾ ಮತಿಮಾನ್ ಸುಸ್ವಿನ್ನಂ ತದಹರ್ನರಮ್ ।
ಅಜಾವ್ಯೋಶ್ಚರ್ಮ ರೋಮಾಣಿ ವಚಾ ಕುಷ್ಠಂ ಪಲಙ್ಕಷಾ ॥೨೫೬॥
ನಿಮ್ಬಪತ್ರಂ ಮಧುಯುತಂ ಧೂಪನಂ ತಸ್ಯ ದಾಪಯೇತ್
ಬೈಡಾಲಂ ವಾ ಶಕೃದ್ಯೋಜ್ಯಂ ವೇಪಮಾನಸ್ಯ ಧೂಪನಮ್ ॥೨೫೭॥

ವಿಷಮಜ್ವರದಲ್ಲಿ ಭೂತಾಭಿಸಂಗವಿರುತ್ತದೆ. ಅದರ ನಿವಾರಣೆಗಾಗಿ ವಿಷವಿಲ್ಲದ ಡುಂಡುಭ ಅಹಿಪತಾಕ ಮೊದಲಾದ ಹಾವುಗಳಿಂದಲೂ ಪಳಗಿದ ಆನೆಗಳಿಂದಲೂ ಕೃತಕ

ಕಳ್ಳರ ವೇಷವನ್ನು ಧರಿಸಿದ ಜನರಿಂದಲೂ ಹೆದರಿಸಿದರೆ ನಿರ್ವಿಷಸರ್ಪ ಮೊದಲಾದುವುಗಳ ದರ್ಶನದಿಂದ ಭಯಪಟ್ಟ ರೋಗಿಯ ದೇಹದಲ್ಲಿ ವಾತಕೋಪದಿಂದ ಕ್ಷೋಭೆಯುಂಟಾಗಿ ಜ್ವರವೇ ಉಂಟಾಗುವುದಿಲ್ಲ. ಜ್ವರದ ಕಾಲವೂ ಮರೆತುಹೋಗುತ್ತದೆ. ಆ ದಿವಸ ಆ ರೋಗಿಗೆ ಅತಿಯಾಗಿ ಅಭಿಷ್ಯಂದವನ್ನುಂಟುಮಾಡುವ ಗುರುಗುಣವುಳ್ಳ ಆಹಾರವನ್ನು ತಿನ್ನಿಸಿ ವಮನ ಮಾಡಿಸಿ ತೀಕ್ಷ್ಣವಾದ ಮದ್ಯವನ್ನು ಕುಡಿಸಿ ಜ್ವರಹರಗಳಾದ ಪುರಾಣ ಘೃತಪಾನ ಮತ್ತು ಸುಖವಿರೇಚನಗಳನ್ನು ಮಾಡಿಸಬೇಕು. ಆ ದಿನವೇ ರೋಗಿಗೆ ಸ್ವೇದಕರ್ಮ ಮಾಡಿಸಿ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು. ಆಡು-ಕುರಿಗಳ ಚರ್ಮ, ರೋಮಗಳು, ಬಜೆ, ಚಂಗಲ್‌ಕೋಷ್ಠ, ಅರಗು, ಬೇವಿನಸೊಪ್ಪು, ಇವುಗಳಿಗೆ ಜೇನುತುಪ್ಪ ಬಳಿದು ಕೆಂಡದಮೇಲೆ ಹಾಕಿ ಧೂಮವು ಮೈಗೆ ತಾಗುವಂತೆ ಮಾಡಬೇಕು; ರೋಗಿಯು ಜ್ವರದಿಂದ ನಡುಗುತ್ತಿದ್ದರೆ ವೈದ್ಯನು ಬೆಕ್ಕಿನ ಮಲವನ್ನೂ ಧೂಪದೊಡನೆ ಸೇರಿಸಿ ಹೊಗೆಯು ಮೈಗೆ ತಗಲುವಂತೆ ಮಾಡಬೇಕು.

ಪಿಪ್ಪಲೀ ಸೈಂಧವಂ ತೈಲಂ ನೈಪಾಳೀಚೇಕ್ಷಣಾಞ್ಜನಮ್ ।
ಉದರೋಕ್ತಾನಿ ಸರ್ಪೀಂಷಿ ಯಾನ್ಯುಕ್ತಾನಿ ಪುರಾ ಮಯಾ ॥೨೫೮॥
ಕಲ್ಪೋಕ್ತಂ ಚಾಜಿತಂ ಸರ್ಪಿಃ ಸೇವ್ಯಮಾನಂ ಜ್ವರಂ ಜಯೇತ್ ।
ಭೂತವಿದ್ಯಾಸಮುದ್ದಿಷ್ಟೈರ್ಬನ್ಧಾವೇಶನತಾಡನೈಃ ॥೨೫೯॥
ಜಯೇದ್ಭೂತಾಭಿಷಙ್ಗೋತ್ಥಂ ವಿಜ್ಞಾನಾದ್ಯೈಶ್ಚ ಮಾನಸಮ್ ।
ಶ್ರಮಕ್ಷಯೋತ್ಥೇ ಚ ಭುಞ್ಜೀತ ಘೃತಾಭ್ಯಕ್ತೋ ರಸೌದನಮ್ ॥೨೬೦॥
ಅಭಿಶಾಪಾಭಿಚಾರೋತ್ಥೌ ಜ್ವರೌ ಹೋಮಾದಿನಾಜಯೇತ್ ।
ದಾನಸ್ವಸ್ತ್ಯಯನಾತಿಥ್ಯೈರುತ್ಪಾತಗ್ರಹಪೀಡಜೌ ॥೨೬೧॥

ಹಿಪ್ಪಲಿ, ಸೈಂಧವಲವಣ ತೈಲ, ಮಣಶಿಲೆ ಇವನ್ನು ಚೆನ್ನಾಗಿ ರಂಗಳಿಸಿ ಕಣ್ಣಿಗೆ ಹಚ್ಚಬೇಕು. ಉದರರೋಗದಲ್ಲಿ ಹೇಳಿದ ಘೃತಗಳನ್ನೂ, ಕಲ್ಪಸ್ಥಾನದಲ್ಲಿ ಹೇಳಿದ ಅಜಿತಸರ್ಪಿಯನ್ನೂ ಪಾನಮಾಡಿಸಿದರೆ ಜ್ವರನಿವಾರಣೆಯಾಗುತ್ತದೆ; ಭೂತವಿದ್ಯೆಯಲ್ಲಿ ಹೇಳಿರುವ ಬಂಧನ (ಹಗ್ಗದಿಂದ ಬಿಗಿದು) ಮೈಮೇಲೆ ಹಗ್ಗ ಮೊದಲಾದುವುಗಳಿಂದ ಬಿಗಿದುಕಟ್ಟುವುದು, ಮಂತ್ರದಿಂದ ಸಾಸಿವೆಯನ್ನು ಅಭಿಮಂತ್ರಿಸಿ ಎರಚುವುದು, ಚಾವಟಿಯಿಂದ ಹೊಡೆಯುವುದು ಇವುಗಳಿಂದ ಜ್ವರವು ನಿಂತುಬಿಡುತ್ತದೆ. ಮಾನಸಿಕ ಜ್ವರವನ್ನು (ಕಾಮಶೋಕಗಳ ಆಧಿಕ್ಯತೆ) ವಿಜ್ಞಾನ ದೃಷ್ಟಿಯಿಂದಲೇ ನಿವಾರಿಸಬೇಕು; ಆಯಾಸ, ಕ್ಷಯಗಳಿಂದ ಪೀಡಿತರಾದವರಿಗೆ ಸ್ನಿಗ್ಧ ವಸ್ತುಗಳಿಂದ ಮೈಯನ್ನು ತಿಕ್ಕಿಸಿ ಮಾಂಸರಸ ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು; ಋಷಿಗಳ ಶಾಪ, ಶೂನ್ಯ, ಮಾಟ, ಮಾಯಾದಿ ಕೃತ್ಯಗಳಿಂದುಂಟಾದ ಜ್ವರವನ್ನು ಶಾಂತಿ, ಪ್ರಾಯಶ್ಚಿತ್ತ, ಪೂಜೆ, ಬಲಿ, ಹೋಮ ಯಂತ್ರ ತಂತ್ರಾದಿಗಳಿಂದ ನಿವಾರಣೆ ಮಾಡಬೇಕು; ಸಿಡಿಲು, ಮಿಂಚು, ಧೂಮಕೇತು, ಗ್ರಹಣ, ಆದಿತ್ಯಾದಿ ಗ್ರಹಗಳ ಬಾಧೆಯುಂಟಾಗಿ ಜ್ವರ ಬಂದರೆ

ಆಯಾಯ ಗ್ರಹಗಳಿಗೆ ಉಕ್ತವಾದ ದಾನಗಳನ್ನು ಮಾಡಿಸಿ ವೇದಗಳ ಪಠನಮಾಡಿಸಿ ಆಶೀರ್ವಾದವನ್ನು ಪಡೆಯುವುದು, ಅತಿಥಿಪೂಜೆ, ಅನ್ನದಾನ, ಮಹಾನದಿಗಳಲ್ಲಿ ಸ್ನಾನ, ದೇವರ ಸಂದರ್ಶನ ಇವುಗಳಿಂದ ಆಯಾಯ ದೋಷಗಳನ್ನು ನಿವಾರಣೆ ಮಾಡಿಕೊಳ್ಳಬೇಕು.

ಅಭಿಘಾತಜ್ವರೇ ಕುರ್ಯಾತ್ ಕ್ರಿಯಾಮುಷ್ಣವಿವರ್ಜಿತಾಮ್ ।
ಕಷಾಯಮಧುರಾಂ ಸ್ನಿಗ್ಧಾಂ ಯಥಾದೋಷಮಥಾಪಿ ವಾ ॥೨೬೨॥
ಓಷಧೀಗನ್ಧವಿಷಜೌ ವಿಷಪಿತ್ತಪ್ರಸಾಧನೈಃ ।
ಜಯೇತ್ ಕಷಾಯಂ ಚ ಹಿತಂ ಸರ್ವಗನ್ಧಕೃತಂ ತಥಾ ॥೨೬೩॥
ನಿಮ್ಬದಾರುಕಷಾಯಂ ವಾ ಹಿತಂ ಸೌಮನಸಂ ಯಥಾ ।
ಯವಾನ್ನವಿಕೃತಿಃ ಸರ್ಪಿರ್ಮದ್ಯಂ ಚ ವಿಷಮೇ ಹಿತಮ್ ॥೨೬೪॥
ಸಂಪೂಜಯೇದ್ದ್ವಿಜಾ ಗಾಶ್ಚ ದೇವಮೀಶಾನಮಮ್ಬಿಕಾಮ್ ।

ವಾತಪಿತ್ತರಕ್ತದೋಷಗಳು ಅಧಿಕವಾಗಿರುವ ಅಭಿಘಾತಜ್ವರದಲ್ಲಿ ಉಷ್ಣೋಪಚಾರವನ್ನು ಬಿಟ್ಟು ಕಷಾಯ, ಮಧುರ, ಸ್ನಿಗ್ಧ ದ್ರವ್ಯಗಳಿಂದಲೂ ಅಥವಾ ದೋಷಕ್ಕೆ ತಕ್ಕಂತೆಯೂ ಚಿಕಿತ್ಸೆಮಾಡಬೇಕು ; ವಿಷೌಷಧಿಯ ಗಂಧವನ್ನು ಮೂಸಿ ಬಂದಜ್ವರದಲ್ಲೂ ವಿಷದಿಂದುಂಟಾಗುವ ಮತ್ತು ಪಿತ್ತಗಳನ್ನು ನಾಶಮಾಡುವ ಕಷಾಯಪ್ರಯೋಗಗಳೂ ಸರ್ವಗಂಧಗಳ ಕಷಾಯಪಾನವೂ ಹಿತಕರಗಳು ; ಬೇವು, ಮತ್ತು ದೇವದಾರುಗಳ ಕಷಾಯವೂ ಜಾಜಿಸೊಪ್ಪಿನ ಕಷಾಯವೂ ಹಿತಕರಗಳು ; ವಿಷಮಜ್ವರಗಳಲ್ಲಿ ಯವೆಯಅನ್ನ, ಯವೆಯಗಂಜಿ ತುಪ್ಪ, ಮದ್ಯ, ಇವುಗಳೂ ಹಿತಕರವು ; ಪರಮೇಶ್ವರ, ಪಾರ್ವತಿ, ಬ್ರಾಹ್ಮಣರು ಹಸು ಇವುಗಳನ್ನು ಪೂಜಿಸಬೇಕು.

ಕಫವಾತೋತ್ಥಯೋಶ್ಚಾಪಿ ಜ್ವರಯೋಃ ಶೀತಪೀಡಿತಮ್ ॥೨೬೫॥
ದಿಹ್ಯಾದುಷ್ಣೇನ ವರ್ಗೇಣ ಪರಶ್ಚೋಷ್ಣೋ ವಿಧಿರ್ಹಿತಃ ।
ಸಿಞ್ಚೇತ್ಕೋಷ್ಣೈರಾರನಾಳಶುಕ್ತಗೋಮೂತ್ರ ಮಸ್ತುಭಿಃ ॥೨೬೬॥
ದಿಹ್ಯಾತ್ ಪಲಾಶೈರಥವಾ ಸುರಸಾರ್ಜಕಶಿಗ್ರುಜೈಃ ।
ಕ್ಷಾರತೈಲೇನ ಚಾಭ್ಯಙ್ಗಃ ಸಶುಕ್ತೇನ ವಿಧೀಯತೇ ॥೨೬೭॥
ಪಾನಮಾರಗ್ವಧಾದೇಶ್ಚ ಕ್ವಥಿತಸ್ಯ ವಿಶೇಷತಃ ।
ಅವಗಾಹಃ ಸುಖೋಷ್ಣಶ್ಚ ವಾತಘ್ನಕ್ವಾಥಸಂಯುತಃ ॥೨೬೮॥
ಜಿತ್ವಾ ಶೀತಂ ಕ್ರಮೈರೇಭಿಃ ಸುಖೋಷ್ಣಜಲಸೇಚಿತಮ್ ।
ಪ್ರವೇಶ್ಯೋರ್ಣಿಕಕಾರ್ಪಾಸ ಕೌಶೇಯಾಮ್ಬರ ಸಂವೃತಮ್ ॥೨೬೯॥
ಶಾಯಯೇದ್ಗ್ಲಾನದೇಹಂ ಚ ಕಾಲಾಗುರುವಿಭೂಷಿತಮ್ ।
ಸ್ತನಾಢ್ಯಾ ರೂಪಸಂಪನ್ನಾಃ ಕುಶಲಾ ನವಯೌವನಾಃ ॥೨೭೦॥
ಭಜೇಯುಃ ಪ್ರಮದಾ ಗಾತ್ರೈಃ ಶೀತದೈನ್ಯಾಪಹಾರಿಭಿಃ ।

ಶರಚ್ಛಶಾಙ್ಕವದನಾ ನೀಲೋತ್ಪಲದಳೇಕ್ಷಣಾಃ ॥೨೭೧॥
ಸ್ಫುರಿತಭ್ರೂಲತಾಭಙ್ಗಲಲಾಟತಟಕಮ್ಪನಾಃ ।
ಪ್ರಲಮ್ಬಿವಿಲಸತ್ಕಾಞ್ಚೀಬಿಮ್ಬಾಫಲನಿಭಾಧರಾಃ ॥೨೭೨॥
ಕೃತೋದರ್ಯೋಽತಿ ವಿಸ್ತೀರ್ಣಜಘನೋದ್ವಹನಾಲಸಾಃ ।
ಕುಙ್ಕುಮಾಗುರುದಿಗ್ಧಾಙ್ಗ್ಯಃ ಘನತುಙ್ಗಪಯೋಧರಾಃ ॥೨೭೩॥
ಸುಗನ್ಧಿಧೂಪಿತಶ್ಲಕ್ಷ್ಣಪ್ರಸ್ತ್ರಾಂಶುಕ ವಿಭೂಷಣಾಃ ।
ಗಾಢಮಾಲಿಙ್ಗಯೇಯುಸ್ತಂ ನರಂ (ತರುಂ) ವನಲತಾ ಇವ ॥೨೭೪॥
ಪ್ರಹ್ಲಾದಂ ಚಾಸ್ಯ ವಿಜ್ಞಾಯ ತಾಃ ಸ್ತ್ರೀರಪನಯೇತ್ಪುನಃ ।
ತಾಸಾಮಙ್ಗವರಶ್ಲೇಷ (ಪರಿಷ್ವಙ್ಗ) ನಿವಾರಿತಹಿಮಜ್ವರಮ್ ॥೨೭೫॥
ಭೋಜಯೇದ್ಧಿತಮನ್ನಂ ಚ ತಥಾ ಸುಖಮವಾಪ್ನುಯಾತ್ ।

ಕಫಜ್ವರ, ವಾತಜ್ವರಗಳಲ್ಲಿ ಶೀತದಿಂದ ಪೀಡಿತನಾದ ರೋಗಿಗೆ ಭದ್ರದಾರ್ವಾದಿಗಣ ದ್ರವ್ಯಗಳು ಸರಸಾದಿಗಣದ್ರವ್ಯಗಳ ಅಥವಾ ಏಲಾದಿಗಣದ್ರವ್ಯಗಳ ಕಲ್ಕದಿಂದ ಮೈಗೆ ಲೇಪನ ಮಾಡಿಸಬೇಕು; ಉಷ್ಣೋಪಚಾರಗಳು ಹಿತಕರವಾದದ್ದು ; ಸುಖೋಷ್ಣವಾಗಿರುವ ಆರನಾಳ (ಕಲಗಚ್ಚು) ಶುಕ್ತ, ಗೋಮೂತ್ರ, ಮೊಸರಿನ ಕಟ್ಟುಗಳನ್ನು ಮೈಮೇಲೆ ನಿಧಾನವಾಗಿ ಸುರಿಯಬೇಕು; ತುಳಸಿ ಕಾಮುಕಸ್ತೂರಿ ನುಗ್ಗೆ ಸೊಪ್ಪುಗಳ ಕಲ್ಕವನ್ನು ಮೈಗೆ ಲೇಪಿಸಬೇಕು; ಮುತ್ತುಗದ ಕ್ಷಾರವನ್ನು ತಿಲತೈಲದಲ್ಲಿ ರಂಗಳಿಸಿ ಶುಕ್ತಮಿಶ್ರಮಾಡಿ ಮೈಗೆಬಳಿಯಬೇಕು. ಆರಗ್ವಧಾದಿ ಕಷಾಯವನ್ನು ವಿಶೇಷವಾಗಿ ಪಾನಮಾಡಿಸಬೇಕು ಸುಖೋಷ್ಣವಾದ ಭದ್ರದಾರುಗಣದ್ರವ್ಯಗಳ ಕಷಾಯವನ್ನು ತುಂಬಿದ ಕೊಪ್ಪರಿಗೆಯಲ್ಲಿ ಕೂರಿಸಬೇಕು ; ಈ ಕ್ರಮದಿಂದ ಶೀತನಿವಾರಣೆಮಾಡಿ ಸುಖೋಷ್ಣವಾದ ನೀರಿನಿಂದ ಮೈತೊಳೆಸಿ ವಾತಬಾಧೆಯಿಲ್ಲದ ಮನೆಯಲ್ಲಿ ಕೃಶನಾದ ರೋಗಿಯನ್ನು ಕುಳ್ಳಿರಿಸಿ ಕರಿಅಗಿಲು ಗಂಧವನ್ನು ಮೈಗೆ ಲೇಪಿಸಿ ವಿವಿಧ ಕಂಬಳಿಯನ್ನೂ, ಹತ್ತಿಯಬಟ್ಟೆಗಳನ್ನೂ, ರೇಷ್ಮೆ ವಸ್ತ್ರಗಳನ್ನೂ ಹೊದ್ದಿಸಿ ಶಾಖವಾಗಿ ಮೃದುವಾಗಿರುವ ಹಾಸಿಗೆಯಲ್ಲಿ ಮಲಗಿಸಬೇಕು. ಪೀನಸ್ತನಗಳುಳ್ಳ, ಸುರೂಪಿಣಿಯರಾದ, ಜಾಣರಾದ ಯೌವನಸ್ಥೆಯರಾದ ಸ್ತ್ರೀಯರು ಶೀತವನ್ನೂ ದೈನ್ಯವನ್ನೂ ಹೋಗಲಾಡಿಸುತ್ತಾರೆ. ಶರತ್ಕಾಲದ ಚಂದ್ರನಂತೆ ಸ್ವಚ್ಛವಾದ ಮುಖವುಳ್ಳ, ನೈದಿಲೆಹೂವಿನರೇಕಿನಂತೆ ಸುಂದರವಾದ ನೇತ್ರವುಳ್ಳ ಬಳ್ಳಿಯಂತೆ ಮೃದುವಾಗಿಯೂ ವಕ್ರವಾಗಿರುವ ಹುಬ್ಬುಗಳಿರುವ ಹಣೆಯು ಅದುರುತ್ತಿರುವ ನಡುವಿನಪಟ್ಟಿಯು ಜಾರಿನೇತಾಡುತ್ತಲೂ ತೊಂಡೆಹಣ್ಣಿನಂತೆ ಕೆಂಪಾದ ತುಟಿಗಳೂ ಕೃಶವಾದ ಹೊಟ್ಟೆಯೂ ಅತಿ ಅಗಲವಾದ ಜಘನವುಳ್ಳ (ಗುಹ್ಯಪ್ರದೇಶ) (ಚಲನ ವಲನಾದಿಗಳನ್ನು ನಿದಾನವಾಗಿ ಮಾಡುವ) ಕುಂಕುಮಕೇಸರ, ಅಗಿಲುಗಳ ಗಂಧವನ್ನು ಬಳಿದುಕೊಂಡು ದಪ್ಪವಾದ ಎತ್ತರವಾದ ಸ್ತನಗಳು, ಗಂಧದ್ರವ್ಯಗಳನ್ನು ಕೆಂಡದಮೇಲೆ ಉದುರಿಸಿ ಬರುವ ಧೂಮವನ್ನು ತಗುಲಿಸಿ ಘಮಘಮಿಸುವ ವಸ್ತ್ರಗಳನ್ನುಟ್ಟು ವನಲತೆಗಳು ಸಮೀಪದ ಮರಗಳಿಗೆ

ಸುತ್ತಿಕೊಳ್ಳುವಂತೆ ಆ ರೋಗಿಯನ್ನು ಬಿಗಿದು ತಬ್ಬಿಕೊಂಡು ಅವನಿಗೆ ಹರ್ಷವುಂಟಾದರೆ ಕಾಮೋದ್ರಿಕ್ತನಾದನೆಂದುತಿಳಿದು ಅವನನ್ನು ಬಿಟ್ಟು ಬೇರ್ಪಡಬೇಕು. ರತಿಕರ್ಮ ವನ್ನಾಚರಿಸಬಾರದು ಅದರಿಂದ ತುಂಬಾ ಅನರ್ಥವುಂಟಾಗುತ್ತದೆ ; ಆ ಸ್ತ್ರೀಯರ ಮೃದು ದೇಹದ ಆಲಿಂಗನೆಯಿಂದ ಶೀತಜ್ವರವು ನಿವಾರಣೆಯಾದಮೇಲೆ ರೋಗಿಯು ಹಿತಕರಗ ಳಾದ ಆಹಾರಗಳನ್ನು ಭೋಜನಮಾಡಬೇಕು.

ದಾಹಾಭಿಭೂತೇ ತು ವಿಧಿಂ ಕುರ್ಯಾದ್ದಾಹವಿನಾಶನಮ್ ॥೨೭೬॥
ಮಧುಫಾಣಿತಯುಕ್ತೇನ ನಿಮ್ಬಪತ್ರಾಮ್ಬುನಾಪಿ ವಾ ।
ದಾಹಜ್ವರಾರ್ತಂ ಮತಿಮಾನ್ ವಾಮಯೇತ್ ಕ್ಷಿಪ್ರಮೇವ ಚ ॥೨೭೭॥
ಶತಧೌತಘೃತಾಭ್ಯಕ್ತಂ ದಿಹ್ಯಾದ್ವಾ ಯವಸಕ್ತುಭಿಃ ।
ಕೋಲಾಮಲಕಸಂಯುಕ್ತೈಃ ಶೂಕಧಾನ್ಯಾಮ್ಲಸಂಯುತೈಃ ॥೨೭೮॥
ಆಮ್ಲಪಿಷ್ಟೈಃ ಸುಶೀತೈಶ್ಚ ಫೇನಿಲಾಪಲ್ಲವೈಸ್ತಥಾ ।
ಆಮ್ಲಪಿಷ್ಟೈಸ್ತು ಶೀತೈರ್ವಾ ಪಲಾಶತರುಜೈರ್ದಿಹೇತ್ ॥೨೭೯॥
ಬದರೀಪಲ್ಲವೋತ್ಥೇನ ಫೇನೇನಾರಿಷ್ಟಕಸ್ಯ ಚ ।
ಲಿಪ್ತೇಽಙ್ಗೇ ದಾಹತೃಣ್ಮೂರ್ಛಾಃ ಪ್ರಶಾಮ್ಯನ್ತಿ ಚ ಸರ್ವಶಃ ॥೨೮೦॥

ಮೈ ಉರಿತದಿಂದ ಪೀಡಿತರಾಗಿರುವ ಪಿತ್ತ, ವಾತಪಿತ್ತಜ್ವರಪೀಡಿತರಿಗೆ ದಾಹ ನಾಶಕರವಾದ ವಿಧಾನಗಳನ್ನು ಪ್ರಯೋಗಿಸಬೇಕು ; ಜೇನುತುಪ್ಪ, ಫಾಣಿತ (ಎಳೆ ಪಾಕದಬೆಲ್ಲ) ವನ್ನು ಬೇವಿನಸೊಪ್ಪಿನ ಕಷಾಯಕ್ಕೆ ಸೇರಿಸಿಕುಡಿಸಿ ವಮನ ಮಾಡಿಸ ಬೇಕು ; ಶತಧೌತಘೃತವನ್ನು ಮೈಗೆ ಲೇಪಿಸಿ ಯವೆಯಹಿಟ್ಟಿನಿಂದ ತಿಕ್ಕಿಸಬೇಕು ; ಎಲಚಿ, ನೆಲ್ಲಿಕಾಯಿಗಳನ್ನೂ ನವಣೆ, ಯವೆ ಮೊದಲಾದ ಶೂಕಧಾನ್ಯಗಳನ್ನೂ ಸೇರಿಸಿ ತಯಾರಿಸಿದ ಕಾಂಜಿಕವನ್ನು ಹುಳಿಬಂದಮೇಲೆ ಮೈಗೆ ಬಳಿಯಬೇಕು ; ಅಂಟುವಾಳದ ಎಲೆಯನ್ನು (ಕೆಲವರು ಬಸಳೆಸೊಪ್ಪು ಎಂದು ಹೇಳುತ್ತಾರೆ) ಹುಳಿ ಕಲಗಚ್ಚಿನಲ್ಲಿ ಅರೆದು ತಣ್ಣಗಿರುವ ಕಲ್ಕವನ್ನೇ ಮೈಗೆ ಬಳಿಯಬೇಕೆಂದೂ, ಮುತ್ತುಗದ ಎಲೆಯನ್ನು ಹುಳಿ ಕಲ ಗಚ್ಚಿನಲ್ಲಿ ಅರೆದು ಲೇಪಿಸಬೇಕೆಂದೂ, ಎಲಚಿ ಚಿಗರು ಬೇವಿನಚಿಗರುಗಳನ್ನು ಅರೆದು ಕಾಂಜಿಕದಲ್ಲಿ (ಹುಳಿಕಲಗಚ್ಚಿನಲ್ಲಿ) ಕದರಿದರೆ ಮೇಲೆ ತೇಲುವ ನೊರೆಯನ್ನು ಮೈಗೆ ಬಳಿದರೆ ಉರಿತ, ನೀರಡಿಕೆ, ಮೂರ್ಛೆಗಳು ನಾಶವಾಗುತ್ತವೆ.

ಯವಾರ್ಧಕುಡವಂ ಪಿಷ್ಟ್ವಾ ಮಞ್ಜಿಷ್ಠಾರ್ಧಪಲಂ ತಥಾ ।
ಆಮ್ಲಪ್ರಸ್ಥಶತೋನ್ಮಿಶ್ರಂ ತೈಲಪ್ರಸ್ಥಂ ವಿಪಾಚಯೇತ್ ೨೮೧
ಏತತ್ ಪ್ರಹ್ಲಾದದಂ ತೈಲಂ ಜ್ವರದಾಹವಿನಾಶನಮ್ ।

೨ ಪಲ ಯವೆಯನ್ನೂ $\frac{1}{3}$ ಪಲಮಂಜಿಷ್ಠೆಯನ್ನೂ, ಕಲ್ಕಮಾಡಿ ಹುಳಿಕಲಗಚ್ಚು ೧೦೦ ಪ್ರಸ್ಥ ಮತ್ತು ೧ ಪ್ರಸ್ಥತಿಲತೈಲಗಳೊಡನೆ ಪಾಕಮಾಡಿ ಈ ತೈಲವನ್ನು ಮೈಗೆ ಅಭ್ಯಂಗ ಮಾಡಿಸಿದರೆ ಜ್ವರ, ದಾಹಗಳು ನಿವಾರಣೆಯಾಗುತ್ತವೆ.

ನ್ಯಗ್ರೋಧಾದಿರ್ಗಣೋ ಯಸ್ತು ಕಾಕೋಳ್ಯಾದಿಶ್ಚಯೋ ಗಣಃ ||೨೭೨||
ಉತ್ಪಲಾದಿರ್ಗಣೋ ಯಸ್ತು ಪಿಷ್ಟೈರ್ವಾ ತೈ್ರಃ ಪ್ರಲೇಪಯೇತ್ |
ತತ್ಕಷಾಯಾಮ್ಲ ಸಂಸಿದ್ಧಾಃ ಸ್ನೇಹಾಶ್ಚಾಭ್ಯಙ್ಗೇ ಹಿತಾಃ ||೨೭೩||
ತೇಷಾಂ ಶೀತಕಷಾಯೇ ವಾ ದಾಹಾರ್ತಮವಗಾಹಯೇತ್ |
ದಾಹವೇಗೇ ತ್ವತಿಕ್ರಾನ್ತೇ ತಸ್ಮಾದುದ್ಧೃತ್ಯ ಮಾನವಮ್ ||೨೭೪||
ಪರಿಷಿಚ್ಯಾಮ್ಬುಭಿಃ ಶೀತೈಃ ಪ್ರಲಿಮ್ಪೇಚ್ಚನ್ದನಾದಿಭಿಃ |
ಸಾನನ್ದಾ ದೀನಮನಸಮಾಶ್ಲಿಷೇಯುರ್ವರಾಙ್ಗನಾಃ ||೨೭೫||
ಪೇಲವಕ್ಷೌಮಸಂವೀತಾಶ್ಚನ್ದನಾರ್ದ್ರಪಯೋಧರಾಃ |
ಬಿಭ್ರತ್ಯೋಽಬ್ಜಸ್ರಜಶ್ಚಿತ್ರಾ ಮಣಿಹಾರ (ರತ್ನ) ವಿಭೂಷಿತಾಃ ||೨೭೬||
ಭಜೇಯುಸ್ತಾಃ ಸ್ತನೈಃ ಶೀತೈಃ ಸ್ಪೃಶನ್ತ್ಯೋಽಮ್ಬುರುಹೈಃ ಸುಖೈಃ |
ಪ್ರಹ್ಲಾದಂ ಚಾಸ್ಯ ವಿಜ್ಞಾಯ ತಾಃ ಸ್ತ್ರೀರಪನಯೇತ್ ಪುನಃ ||೨೭೭||
ಹಿತಂ ಚ ಭೋಜಯೇದನ್ನಂ ತಥಾಪ್ನೋತಿ ಸುಖಂ ಮಹತ್ |
ಪಿತ್ತಜ್ವರೋಕ್ತಂ ಶಮನಂ ವಿರೇಕೋಽನ್ಯದ್ಧಿತಂ ಚ ಯತ್ ||೨೭೮||
ನಿರ್ಹರೇತ್ಪಿತ್ತಮೇವಾದೌ ಜ್ವರೇಷು ಸಮವಾಯಿಷು |
ದುರ್ನಿವಾರತರಂ ತದ್ಧಿ ಜ್ವರಾರ್ತಾನಾಂ ವಿಶೇಷತಃ ||೨೭೯||
ಛರ್ದಿಮೂರ್ಛಾಪಿಪಾಸಾದೀನವಿರೋಧಾಜ್ಜ್ವರಸ್ಯ ತು |
ಉಪದ್ರವಾ ಜಯೇಚ್ಚಾಪಿ ಪ್ರತ್ಯನೀಕೇನ ಹೇತುನಾ ||೨೮೦||

ನ್ಯಗ್ರೋಧಾದಿಗಣ (ಆಲ ಮೊದಲಾದ) ಕಾಕೋಳ್ಯಾದಿಗಣ ಉತ್ಪಲಾದಿಗಣ ದ್ರವ್ಯಗಳ ಕಲ್ಕವನ್ನು ಮೈಗೆ ಲೇಪನಮಾಡಿಸಬೇಕು ; ಅವುಗಳ ಕಷಾಯದೊಡನೆ ಹುಳಿ ಕಲಗಚ್ಚನ್ನು ಮಿಶ್ರಮಾಡಿ ತಯಾರಿಸಿದ ತೈಲಗಳು ಅಭ್ಯಂಜನಕ್ಕೆ ಹಿತಕರಗಳು. ಅವುಗಳ ಶೀತಕಷಾಯವನ್ನು ಅಗಲವಾದ ಬಾಯುಳ್ಳ ದೊಡ್ಡಕೊಪ್ಪರಿಗೆಗೆ ತುಂಬಿ ಮೈಉರಿಯುವ ರೋಗಿಯನ್ನು ಅದರಲ್ಲಿ ಮೈಮುಳುಗುವಂತೆ ಕೂರಿಸಬೇಕು ; ಉರಿಯು ನಿಂತಮೇಲೆ ರೋಗಿಯನ್ನು ಹೊರಕ್ಕೆ ತೆಗೆದು ತಣ್ಣೀರಿನಿಂದ ಸ್ನಾನಮಾಡಿಸಿ ಕೆಂಪುಗಂಧವನ್ನು ಮೈಗೆ ಲೇಪಿಸಬೇಕು ; ಜ್ವರದಿಂದ ಖಿನ್ನನಾದ ಈ ರೋಗಿಯನ್ನು ಆನಂದಭರಿತರಾಗಿ ತೆಳುವಾದ ರೇಷ್ಮೆಬಟ್ಟೆಯನ್ನುಟ್ಟು (ಸ್ತನಗಳಿಗೆ) ಗಂಧವನ್ನು ಲೇಪಿಸಿ ತಣ್ಣಗೆ ಮಾಡಿಕೊಂಡಿರುವ ತಾವರೆಹೂವಿನಮಾಲೆಯನ್ನು ಕತ್ತಿಗೆ ಹಾಕಿ ರತ್ನದಹಾರಗಳಿಂದ ಅಲಂಕೃತರಾದ ಸುಂದರ ಸ್ತ್ರೀಯರು ಆಲಿಂಗನೆ ಮಾಡಿಕೊಂಡು ತಾವರೆ ಹೂವುಗಳನ್ನು ಸುಖವಾಗಿ ಮುಟ್ಟಿಸುತ್ತಾ ಅವನಿಗೆ ಆನಂದವುಂಟಾಯಿತೆಂದು ತಿಳಿದು ಕೂಡಲೇ ಸಂಭೋಗಕ್ಕೆ ಅವಕಾಶ ತಪ್ಪಿಸಿ ಅವನಿಂದ ಬೇರ್ಪಟ್ಟು, ಹಿತಕರವಾದ ಅನ್ನವನ್ನು ಭೋಜನಮಾಡಿಸಬೇಕು ; ಇದರಿಂದ ರೋಗಿಗೆ ಅತ್ಯಂತ ಸುಖವುಂಟಾಗುತ್ತದೆ ; ಪಿತ್ತಜ್ವರಹರಗಳಾದ ವಿರೇಚನೌಷಧವನ್ನೂ ಇನ್ನೂ ಇತರ ಹಿತಕರ ಚಿಕಿತ್ಸೆಗಳನ್ನೂ ಮಾಡಿ ಶಮನಗೊಳಿಸಬೇಕು. ಸಮದೋಷೋಲ್ಬಣವಿರುವ ದ್ವಂದ್ವಜ ಜ್ವರದಲ್ಲಿ ಮೊದಲು ಪಿತ್ತವನ್ನು ಹೊರಕ್ಕೆ ಹೊರಡಿಸಬೇಕು ;

ಏಕೆಂದರೆ ಜ್ವರಪೀಡಿತರಿಗೆ ಪಿತ್ತದೋಷವನ್ನು ನಿವಾರಿಸುವುದು ಬಲು ಕಷ್ಟತರವು. ವಮನ, ಮೂರ್ಛೆ, ನೀರಡಿಕೆ ಮೊದಲಾದ ಜ್ವರೋಪದ್ರವಗಳಿಗೆ ಜ್ವರಕ್ಕೆ ವಿರೋಧವಾಗ ದಂತೆ ಅಂದರೆ ವಮನಾದಿಗಳಿಗೆ ವಿರುದ್ಧಗಳಾದ ಚಿಕಿತ್ಸೆಗಳನ್ನು ಮಾಡಬೇಕು.

ಟಿಪ್ಪಣಿ : ಜ್ವರದಲ್ಲೂ, ಅತಿಸಾರದಲ್ಲೂ ಎಲ್ಲಾ ದೋಷಗಳಿಗಿಂತಲೂ ಮೊದಲು ಪಿತ್ತಹರಣ ಮಾಡಬೇಕು ; ಸನ್ನಿಪಾತದಲ್ಲಿ ಮೊದಲು ಪಿತ್ತಶಮನ ಮಾಡಬೇಕು, ಅಂದರೆ ಲಂಘನ ಯಾವಾಗೂ ಪಾನಗಳಿಂದ ಪಿತ್ತವನ್ನು ಪ್ರಕೃತಿಸ್ಥಿತಿಗೆ ಬರಮಾಡಬೇಕು ; ಏಕೆಂದರೆ ಅಗ್ನಿಯು ಪಿತ್ತಾಂತರ್ಗತವಾಗಿ ಜ್ವರವನ್ನುಂಟುಮಾಡುತ್ತದೆ. ಆದಕಾರಣ ಮೊದಲು ಪಿತ್ತಶಮನವಾಗಲು ಪ್ರಯತ್ನಿಸಬೇಕು. ಸನ್ನಿಪಾತಜ್ವರದಲ್ಲಿ ಮೊದಲು ಆಮಶೋಧನೆಯಿಂದ ಕಫವು ಕ್ಷೀಣವಾದರೆ ಅನಂತರ ಪಿತ್ತವಾತಗಳನ್ನು ಶಮನ ಮಾಡ ಬೇಕು. ಶಮನವೆಂದರೆ ಪ್ರಕೃತಿಸ್ಥಾಪನವೆಂದರ್ಥ, ನಿರ್ಹರಣ ಮಾಡಬೇಕೆಂಬ ಅರ್ಥವಲ್ಲ. ಸನ್ನಿಪಾತದಲ್ಲಿ ವಾತಕಫಗಳು ದುರ್ನಿವಾರಗಳು ; ಆದರೆ ಪಿತ್ತವು ದುರ್ನಿವಾರತರವೆಂದು ತಿಳಿಯಬೇಕು.

ವಿಶೇಷಮುಪರಂ ಚಾತ್ರ ಶೃಣೂಪದ್ರವನಾಶನಮ್ ।
ಮಧುಕಂ ರಜನೀ ಮುಸ್ತಂ ದಾಡಿಮಂ ಚಾಮ್ಲವೇತಸಮ್ ॥೨೯೧॥
ಅಞ್ಜನಂ ತಿನ್ತ್ರಿಡೀಕಂ ಚ ನಳದಂ ಪತ್ರಮುತ್ಪಲಮ್ ।
ತ್ವಚಂ ವ್ಯಾಘ್ರನಖಂ ಚೈವ ಮಾತುಲುಙ್ಗರಸೋ ಮಧು ॥೨೯೨॥
ದಿಹ್ಯಾದೇಭಿರ್ಜ್ವರಾರ್ತಸ್ಯ ಮಧುಶುಕ್ತಯುತೈಃ ಶಿರಃ ।
ಶಿರೋಭಿತಾಪಸಂಮೋಹವಮಿಹಿಕ್ಕಾ ಪ್ರವೇಪಥೂನ್ ॥೨೯೩॥
ಪ್ರದೇಹೋ ನಾಶಯತ್ಯೇಷ ಜ್ವರಿತಾನಾಮುಪದ್ರವಾನ್ ।

ಜ್ವರೋಪದ್ರವನಾಶಕಗಳಾದ ವಿಶೇಷ ಯೋಗಗಳನ್ನು ಹೇಳುತ್ತೇನೆ–ಕೇಳು. ಅತಿ ಮಧುರ, ಅರಿಶಿನ, ಕೊನ್ನಾರಿಗೆಡ್ಡೆ, ದಾಳಿಂಬೆತೊಕ್ಕು, ಓಟೆಹುಳಿ, ರಸಾಂಜನ, ಹುಣಿಸೇ ಹಣ್ಣು, ಜಟಾಮಾಂಸಿ, ನೈದಿಲೆ, ಲವಂಗಪತ್ರೆ, ದಾಲ್ಚಿನ್ನಿ, ವ್ಯಾಘ್ರನಖ–ಇವೆಲ್ಲವನೂ ಮಾದಳ ರಸದಿಂದ ಅರೆದು ಜೇನುತುಪ್ಪವನ್ನು ಮಿಶ್ರಮಾಡಿ, ಜೇನುತುಪ್ಪ, ಶುಕ್ತ (ಹುಳಿ ಕಾಂಜಿಕ) ಗಳನ್ನು ಸೇರಿಸಿ ತಲೆಗೆ ಲೇಪಿಸಿದರೆ ಜ್ವರಪೀಡಿತರಿಗೆ ಉಂಟಾಗುವ ತಲೆಉರಿತ, ಮೋಹ, ವಮನ, ಬಿಕ್ಕಳಿಕೆ, ನಡುಕ ಇವುಗಳು ನಿವಾರಣೆಯಾಗುತ್ತದೆ.

ಮಧೂಕಮಥ ಹ್ರೀವೇರಮುತ್ಪಲಾನಿ ಮಧೂಲಿಕಾಮ್ ॥೨೯೪॥
ಲೀಢ್ವಾ ಚೂರ್ಣಾನಿ ಮಧುನಾ ಸರ್ಪಿಷಾ ಚ ಜಯೇದ್ವಮಿಮ್ ।
ಕಫಪ್ರಸೇಕಾಸ್ಯಕ್ಲೈತ್ಯಹಿಕ್ಕಾಶ್ವಾಸಾಂಶ್ಚ ದಾರುಣಾನ್ ॥೨೯೫॥
ಲಿಹನ್ ಜ್ವರಾರ್ತಸ್ತ್ರಿಫಲಾಂ ಪಿಪ್ಪಲೀಂ ಚ ಸಮಾಕ್ಷಿಕಾಮ್ ।
ಕಾಸೇ ಶ್ವಾಸೇ ಚ ಮಧುನಾ ಸರ್ಪಿಷಾ ಚ ಸುಖೀ ಭವೇತ್ ॥೨೯೬॥
ವಿದಾರೀ ದಾಡಿಮಂ ಲೋಧ್ರಂ ದಧಿತ್ಥಂ ಬೀಜಪೂರಕಮ್ ।
ಏಭಿಃ ಪ್ರದಿಹ್ಯಾನ್ಮೂರ್ಧಾನಂ ತೃಡ್ದಾಹಾರ್ತಸ್ಯ ದೇಹಿನಃ ॥೨೯೭॥

ಹಿಪ್ಪೆಹೂವು, ಲಾವಂಚ, ನೈದಿಲೆಗೆಡ್ಡೆ, ಅತಿಮಧುರ ಇವುಗಳ ಚೂರ್ಣವನ್ನು ಜೇನುತುಪ್ಪ, ತುಪ್ಪಗಳೊಡನೆ ರಂಗಳಿಸಿ ನೆಕ್ಕಿಸಿದರೆ ವಮನ, ಬಾಯಿನಿಂದ ಕಫವು ಸುರಿಯುವುದು, ರಕ್ತಪಿತ್ತ, ಬಿಕ್ಕಳಿಕೆ, ಅತಿಭಯಂಕರವಾದ ಉಬ್ಬಸ ಇವು ನಿವಾರಣೆಯಾಗುತ್ತವೆ. ಜ್ವರಪೀಡಿತನು ತ್ರಿಫಲೆ, ಹಿಪ್ಪಲಿಗಳ ಚೂರ್ಣವನ್ನು ಜೇನುತುಪ್ಪ, ತುಪ್ಪಗಳಲ್ಲಿ ಕಲಸಿ ನೆಕ್ಕಿದರೆ ಕೆಮ್ಮು ಉಬ್ಬಸಗಳು ನಿಂತು ಸುಖವಾಗುತ್ತದೆ. ನೆಲಗುಂಬಳಗೆಡ್ಡೆ ; ದಾಳಿಂಬೆ ಹಣ್ಣು, ರೋಧ್ರ, ಬೇಲದಹಣ್ಣು ಮಾದಳಹಣ್ಣು ಇವುಗಳ ಕಲ್ಕವನ್ನು ತಲೆಗೆ ಲೇಪಿಸಿದರೆ ನೀರಡಿಕೆ, ಉರಿತಗಳು ನಿವಾರಣೆಯಾಗುತ್ತವೆ.

ದಾಡಿಮಸ್ಯ ಸಿತಾಯಾಶ್ಚ ದ್ರಾಕ್ಷಾಮಲಕಯೋಸ್ತಥಾ ।
ವೈರಸ್ಯೇ ಧಾರಯೇತ್ಕಲ್ಕಂ ಗಣ್ಡೂಷಂ ಚ ಯಥಾಹಿತಮ್ ॥೨೯೮॥
ಕ್ಷೀರೇಕ್ಷುರಸಮಾಧ್ವೀಕಸರ್ಪಿಸ್ತೈಲೋಷ್ಣವಾರಿಭಿಃ ।
ಶೂನ್ಯೇ ಮೂರ್ಧ್ನಿ ಹಿತಂ ನಸ್ಯಂ ಜೀವನೀಯಶೃತಂ ಘೃತಮ್ ॥೨೯೯॥
ಚೂರ್ಣಿತಸ್ತ್ರಿಫಲಾಶ್ಯಾಮಾ ತ್ರಿವೃತ್ಪಿಪ್ಪಲಿಸಂಯುತಃ ।
ಸಕ್ಷೌದ್ರಃ ಶರ್ಕರಾಯುಕ್ತೋ ವಿರೇಕಸ್ತು ಪ್ರಶಸ್ಯತೇ ॥೩೦೦॥
ಪಕ್ವೇ ಪಿತ್ತಜ್ವರೇ ರಕ್ತೇ ಚೋರ್ಧ್ವಗೇ ವೇಪಥೌ ತಥಾ ।
ಕಫವಾತೋತ್ಥಯೋರೇವಂ ಸ್ನೇಹಾಭ್ಯಙ್ಗೈರ್ವಿಶೋಧಯೇತ್ ॥೩೦೧॥
ಹೃತದೋಷೋ ಭ್ರಮಾರ್ತಸ್ತು ಲಿಹ್ಯಾತ್ ಕ್ಷೌದ್ರಸಿತಾಭಯಾಃ ।
ವಾತಘ್ನಮಧುರೈರ್ಯೋಜ್ಯಾ ನಿರೂಹಾ ವಾತಜೇ ಜ್ವರೇ ॥೩೦೨॥
ವಿಭಜ್ಯದೋಷಂ ಪ್ರಾಣಂ ಚ ಯಥಾಸ್ವಂ ವಾನುವಾಸನಮ್ ।

ಆಸ್ಯವೈರಸ್ಯದಲ್ಲಿ (ಬಾಯಿಯ ರುಚಿಯು ವ್ಯತ್ಯಾಸವಾದರೆ) ದಾಳಿಂಬೆಹಣ್ಣು, ಸಕ್ಕರೆ, ದ್ರಾಕ್ಷಿ, ನೆಲ್ಲಿಕಾಯಿ ಇವುಗಳ ಕಲ್ಕವನ್ನು ಬಾಯಿಯಲ್ಲಿಟ್ಟುಕೊಳ್ಳಬೇಕು. ಹಾಲು ಕಬ್ಬಿನರಸ, ಮಾಧ್ವೀಕವೆಂಬ ಮದ್ಯ, ತುಪ್ಪ ತಿಲತೈಲ ಬಿಸಿನೀರು ಇವುಗಳಿಂದ ಗಂಡೂಷ ಮಾಡಿಸಿದರೆ ಹಿತವಾಗುತ್ತದೆ ; ತಲೆಯು ಶೂನ್ಯವಾದಂತೆ ತೋರಿದರೆ (ಬೆಂಡಾದರೆ) ಜೀವನೀಯಗಣದ್ರವ್ಯಗಳಿಂದ ತಯಾರಿಸಿದ ತುಪ್ಪವನ್ನು ನಸ್ಯ ಮಾಡಿಸಿದರೆ ಹಿತವಾಗುತ್ತದೆ ; ತ್ರಿಫಲೆ, ಕರಿಯತಿಗಡೆ ಬಿಳಿಯ ತಿಗಡೆ ಹಿಪ್ಪಲಿ ಇವುಗಳ ಚೂರ್ಣಕ್ಕೆ ಸಕ್ಕರೆಯನ್ನೂ ಜೇನುತುಪ್ಪವನ್ನೂ ಮಿಶ್ರಮಾಡಿ ನೆಕ್ಕಿಸಿದರೆ ಶ್ರೇಷ್ಠವಾಗಿ ವಿರೇಚನವನ್ನು ಮಾಡಿಸುತ್ತದೆ. ಪಕ್ವ ಪಿತ್ತಜ್ವರ, ಊರ್ಧ್ವಗರಕ್ತಪಿತ್ತ, ಮೈನಡುಕಗಳಲ್ಲೂ ಈ ವಿರೇಚನವು ಉತ್ತಮವಾದದ್ದು. ಕಫವಾತಪೀಡಿತರಿಗೆ ಸ್ನೇಹ, ಅಭ್ಯಂಗಗಳನ್ನು ಮಾಡಿಸಿ ಶೋಧನೌಷಧವನ್ನು ಕುಡಿಸಬೇಕು ; ತಲೆತಿರುಗಿನಿಂದ ಪೀಡಿತನಾದವನು ವಮನ ವಿರೇಚನಗಳಿಂದ ದೇಹಶುದ್ಧಿ ಮಾಡಿಕೊಂಡನಂತರ ಜೇನುತುಪ್ಪ, ಸಕ್ಕರೆ, ಅಣಲೆಪುಡಿಗಳನ್ನು ರಂಗಳಿಸಿ ನೆಕ್ಕಬೇಕು. ವಾತಿಕಜ್ವರದಲ್ಲಿ ವಾತಹರಗಳಾದ ಮಧುರದ್ರವ್ಯಗಳಿಂದ ತಯಾರಿಸಿದ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು ; ಮತ್ತು ಕುಪಿತದೋಷಗಳ ಬಲಾಬಲ

ಗಳನ್ನೂ ಅಂದರೆ ಹೀನ, ಮಧ್ಯ, ಉತ್ತಮ ದೋಷಬಲಗಳಿಂದೂ, ಅದಕೆ ತಕ್ಕಂತೆ ಅಲ್ಪ, ಮಧ್ಯಮ, ಉತ್ತಮ ಪ್ರಮಾಣದ ದ್ರವ್ಯಗಳನ್ನು ಪ್ರಯೋಗಿಸಬೇಕು ; ಹಾಗೆಯೇ ವಾತಹರದ್ರವ್ಯಗಳಿಂದ ತಯಾರಿಸಿದ ಅನುವಾಸನಗಳನ್ನೂ ಪ್ರಯೋಗಿಸಬೇಕು.

ಉತ್ಪಲಾದಿ ಕಷಾಯಾಢ್ಯಾಶ್ಚನ್ದನೋಶೀರಸಂಯುತಾಃ ||೩೦೩||
ಶರ್ಕರಾಮಧುರಾಃ ಶೀತಾಃ ಪಿತ್ತಜ್ವರಹರಾಮತಾಃ |
ಆಮದೀನಾಂ ತ್ವಚಂ ಶಙ್ಖಂ ಚನ್ದನಾಮಲಕೋತ್ಪಲಮ್ ||೩೦೪||
ಗೈರಿಕಾಞ್ಜನಮಞ್ಜಿಷ್ಠಾಮೃಣಾಳಾನ್ಯಥ ಪದ್ಮಕಮ್ |
ಶ್ಲಕ್ಷ್ಣಪಿಷ್ಟಂ ತು ಪಯಸಾ ಶರ್ಕರಾಮಧುಸಂಯುತಮ್ ||೩೦೫||
ಸುಪೂತಂ ಶೀತಲಂ ಬಸ್ತಿಂ ದೂಯಮಾನಾಯ ದಾಪಯೇತ್ |
ಜ್ವರದಾಹಾಪಹಂ ತೇಷು ಸಿದ್ಧಂ ಚೈವಾನುವಾಸನಮ್ ||೩೦೬||
ಆರಗ್ವಧಗಣಕ್ವಾಥಾಃ ಪಿಪ್ಪಲ್ಯಾದಿಸಮಾಯುತಾಃ |
ಸಕ್ಷೌದ್ರಾ ಏವದೇಯಾಃಸ್ಯುಃ ಕಫಜ್ವರವಿನಾಶನಾಃ ||೩೦೭||

ಉತ್ಪಲಾದಿ ಗಣದ್ರವ್ಯಗಳ ಕಷಾಯವು ಹೆಚ್ಚಾಗಿದ್ದು ರಕ್ತಗಂಧ, ಲಾಮಂಚ ಸಕ್ಕರೆಗಳನ್ನು ಸೇರಿಸಿ ಸಿಹಿಯಾಗಿ ಮಾಡಿದ ಶೀತ ಕಷಾಯಪಾನಾದಿಗಳು ಪಿತ್ತಜ್ವರಹರಗಳು ; ಮಾವು, ನೇರಳೆ ಮೊದಲಾದುವುಗಳ ತೊಗಟೆ, ಶಂಖ, ರಕ್ತಗಂಧ, ನೆಲ್ಲೀಚೆಟ್ಟು, ನೈದಿಲೆಗೆಡ್ಡೆ, ಕಾವಿ, ರಸಾಂಜನ, ಮಂಜಿಷ್ಠೆ, ತಾವರೆಯದಂಟು ಪದ್ಮಕ, ಇವನ್ನು ಹಾಲಿನಿಂದ ನುಣ್ಣಗೆ ಅರೆದು ಸಕ್ಕರೆ, ಜೇನುತುಪ್ಪಗಳನ್ನು ಸೇರಿಸಿ ಬಟ್ಟೆಯಿಂದ ಬಸಿದು ಶೋಧಿಸಿದ, ಶೀತಲವಾದ ಬಸ್ತಿಯನ್ನು ದಾಹದಿಂದ ನರಳುವವನಿಗೆ ಪ್ರಯೋಗಿಸಬೇಕು ; ಈ ದ್ರವ್ಯಗಳಿಂದಲೇ ತಯಾರಿಸಿದ ಘೃತದಿಂದ ಅನುವಾಸನಬಸ್ತಿಯನ್ನು ಪ್ರಯೋಗಿಸಬೇಕು. ಆರಗ್ವಧಾದಿ ಗಣದ್ರವ್ಯಗಳ ಕಷಾಯದೊಡನೆ ಪಿಪ್ಪಲ್ಯಾದಿ ಗಣದ್ರವ್ಯಗಳ ಕಷಾಯವನ್ನೂ ಜೇನುತುಪ್ಪವನ್ನೂ ಮಿಶ್ರಮಾಡಿ ಬಸ್ತಿಯನ್ನು ಕೊಡಲು ಕಫಜ್ವರವು ನಿವಾರಣೆಯಾಗುತ್ತದೆ.

ಕಫಘ್ನೈರೇವ ಸಂಸಿದ್ಧಾ ದ್ರವ್ಯೈಶ್ಚಾಪ್ಯನುವಾಸನಾಃ |
ಸಂಸರ್ಗೇ ಸಂನಿಪಾತೇ ಚ ಸಂಸೃಷ್ಟಾ ಬಸ್ತಯೋ ಹಿತಾಃ ||೩೦೮||
ಸಂಸೃಷ್ಟೈರೇವ ಸಂಸೃಷ್ಟಾ ದ್ರವ್ಯೈಶ್ಚಾಪ್ಯನುವಾಸನಾಃ |
ವಾತರೋಗಾಪಹಾಃ ಸರ್ವೇ ಸ್ನೇಹಾ ಯೇ ಸಮ್ಯಗೀರಿತಾಃ ||೩೦೯||
ವಿನಾ ತೈಲಂ ತ ಏವ ಸ್ಯುರ್ಯೋಜ್ಯಾ ಮಾರುತಜೇ ಜ್ವರೇ |
ನಿಖಿಲೇನೋಪಯೋಜ್ಯಾಶ್ಚ ತ ಏವಾಭ್ಯಞ್ಜನಾದಿಷು ||೩೧೦||
ಪೈತ್ತಿಕೇ ಮಧುರೈಸ್ತಿಕ್ತೈಃ ಸಿದ್ಧಂ ಸರ್ಪಿಃ ಪ್ರಯುಜ್ಯತೇ |
ಶ್ಲೇಷ್ಮಿಕೇ ಕಟುತಿಕ್ತೈಶ್ಚ ಸಂಸೃಷ್ಟಾ ನೀತರೇಷು ಚ ||೩೧೧||

ಕಫಾಹಾರ ದ್ರವ್ಯಗಳ ಕಷಾಯದಿಂದ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು ; ಸಂಸರ್ಗದೋಷಗಳಲ್ಲಿ ಆಯಾಯ ದೋಷಹರಗಳಾದ ದ್ರವ್ಯಗಳ ಕಷಾಯ

ಗಳನ್ನು ಮಿಶ್ರಮಾಡಿ ಬಸ್ತಿಪ್ರಯೋಗವನ್ನು ಮಾಡಬೇಕು ; ಸಂಸೃಷ್ಟ ದ್ರವ್ಯಗಳ ಕಷಾಯದಿಂದಲೇ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು ; ತೈಲವನ್ನು ಬಿಟ್ಟು ಉಳಿದ ಸ್ನೇಹಗಳನ್ನೂ ವಾತಹರ ದ್ರವ್ಯಗಳನ್ನೂ ಸೇರಿಸಿ ತಯಾರಿಸಿದ ಸ್ನೇಹವನ್ನೇ ಪ್ರಯೋಗಿಸಬೇಕು.

ಟಿಪ್ಪಣಿ : ತುಪ್ಪ, ಮಜ್ಜೆ, ವಸೆ (ಕೊಬ್ಬು) ತೈಲ ಇವುಗಳೆಲ್ಲಾ ಅನುವಾಸನ ಬಸ್ತಿಯಲ್ಲಿ ಪ್ರಯೋಗಿಸಲ್ಪಡುತ್ತವೆ. ಈ ನಾಲ್ಕು ಸ್ನೇಹಗಳಲ್ಲಿ ಒಂದೊಂದಾಗಲೀ ಎರಡೆರಡಾಗಲೀ, ಮೂರಾಗಲೀ, ಎಲ್ಲವೂ ಸೇರಿಯಾಗಲೀ ಇತರ ದ್ರವ್ಯಗಳೊಡನೆ ಸೇರಿಕೊಂಡಾಗಲೀ ಅಥವಾ ಬೇರೆಯಾಗಲಿ ಪ್ರಯೋಗಿಸಲ್ಪಡುತ್ತವೆ ; ಮಧುರ, ತಿಕ್ತದ್ರವ್ಯಗಳಿಂದ ತಯಾರಿಸಿದ ಘೃತವು ಪಿತ್ತಜ್ವರದಲ್ಲಿ ಪ್ರಯೋಗಿಸಲ್ಪಡುತ್ತದೆ ; ಕಫ ಜ್ವರದಲ್ಲಿ ಕಟು, ತಿಕ್ತದ್ರವ್ಯಗಳಿಂದ ತಯಾರಾದ ತುಪ್ಪವೂ ಉಳಿದ ದೋಷಗಳಲ್ಲಿ ಎರಡು, ಮೂರು ಸ್ನೇಹಗಳು ಮಿಶ್ರಗಳಾಗಿಯೇ ಪ್ರಯೋಗಿಸಲ್ಪಡುತ್ತವೆ.

ಹೃತಾವಶೇಷಂ ಪಿತ್ತಂ ತು ತ್ವಕ್ಸ್ಥಂ ಜನಯತಿ ಜ್ವರಮ್ ।
ಪಿಬೇದಿಕ್ಷುರಸಂ ತತ್ರ ಶೀತಂ ವಾ ಶರ್ಕರೋದಕಮ್ ॥೩೧೨॥
ಶಾಲಿಷಷ್ಟಿಕಯೋರನ್ನಮಶ್ನೀಯಾತ್ ಕ್ಷೀರಸಂಪ್ಲುತಮ್ ।
ಕಫವಾತೋತ್ಥಯೋರೇವ ಸ್ವೇದಾಭ್ಯಙ್ಗೌ ಪ್ರಯೋಜಯೇತ್ ॥೩೧೩॥
ಘೃತಂ ದ್ವಾದಶರಾತ್ರಾತ್ತು ದೇಯಂ ಸರ್ವಜ್ವರೇಷು ಚ ।
ತೇನಾನ್ತರೇಣಾಶಯಂ ಸ್ವಂ ಗತ್ವಾ ದೋಷಾ ಭವನ್ತಿ ಹಿ ॥೩೧೪॥
ಧಾತೂರ್ನ್ ಪ್ರಕ್ಷೋಭಯನ್ ದೋಷೋ ಮೋಕ್ಷಕಾಲೇ ಬಲೀಯತೇ ।
ತೇನ ವ್ಯಾಕುಲಚಿತ್ತಸ್ತು ಮ್ರಿಯಮಾಣ ಇವೇಹತೇ ॥೩೧೫॥

ಪಿತ್ತಜ್ವರದಲ್ಲಿ ದೋಷವನ್ನು ಹೊರಕ್ಕೆ ತೆಗೆದಮೇಲೆ ನಿಂತ ಪಿತ್ತವು ಚರ್ಮದಲ್ಲಿ ಜ್ವರವನ್ನುಂಟುಮಾಡಿದರೆ ಕಬ್ಬಿನರಸವನ್ನಾಗಲೀ ಸಕ್ಕರೆ ಬೆರೆಸಿದ ತಣ್ಣಗಿರುವ ನೀರನ್ನಾಗಲಿ ಕುಡಿಸಬೇಕು ; ೬೦ ದಿನದಲ್ಲಿ ಬೆಳೆದ ಅಕ್ಕಿಯ ಅನ್ನಕ್ಕೆ ಹಾಲನ್ನು ಹಾಕಿ ಭೋಜನ ಮಾಡಿಸಬೇಕು ; ಕಫವಾತಜ್ವರದಲ್ಲಿ ದೋಷಹರಣವಾದ ಮೇಲೆ ಸ್ವೇದ, ಅಭ್ಯಂಗಗಳನ್ನು ಮಾಡಿಸಬೇಕು ; ಎಲ್ಲಾ ಜ್ವರಗಳಲ್ಲೂ ೧೨ ದಿನಗಳಾದ ಮೇಲೆ ತುಪ್ಪವನ್ನು ಕೊಡಬೇಕು ; ಅಷ್ಟುಕಾಲದಲ್ಲಿ ವಾತಾದಿಗಳು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಸೇರಿಕೊಳ್ಳುತ್ತವೆ ; ಜ್ವರ ಬಿಡುವಾಗ ದೋಷಗಳು ಧಾತುಗಳನ್ನೆಲ್ಲಾ ಕಲಕಿ (ಕ್ಷೋಭಗೊಳಿಸಿ) ಕ್ಷೀಣಗಳಾಗಿದ್ದರೂ ದೀಪವು ಆರುವಾಗ ಹೆಚ್ಚು ಪ್ರಕಾಶವುಳ್ಳದಾಗಿ ಥಟ್ಟನೆ ಆರಿಹೋಗುವಂತೆಯೇ ತುಂಬಾ ಸಂಕಟವನ್ನುಂಟುಮಾಡಿ ಶಮನಗೊಳ್ಳುತ್ತವೆ ; ಅದರಿಂದ ಮನೋವ್ಯಥೆಯುಂಟಾಗಿ ಸಾಯುವವನಂತೆಯೇ ದೇಹದ ಅವಯವಗಳನ್ನು ಒದರುತ್ತಾನೆ.

ಲಘುತ್ವಂ ಶಿರಸಃ ಸ್ವೇದೋ ಮುಖಮಾಪಾಣ್ಡು ಪಾಕಿ ಚ ।
ಕ್ಷವಥುಶ್ಚಾನ್ನಕಾಙ್ಕ್ಷಾ ಚ ಜ್ವರಮುಕ್ತಸ್ಯ ಲಕ್ಷಣಮ್ ॥೩೧೬॥

ತಲೆ ಹಗುರವಾಗಿರುವುದು ಬೆವರುವುದು ಮುಖಬೆಳ್ಳಗಾಗಿ ಬಾಯಿ ಹುಣ್ಣಾಗುವುದು, ಶೀನುಬರುವುದು, ಅನ್ನತಿನ್ನಬೇಕೆಂದು ಆಶೆಯಾಗುವುದು ಇವು ಜ್ವರ ಬಿಟ್ಟವನ ಲಕ್ಷಣಗಳು.

ಶಮ್ಭುಕ್ರೋಧೋದ್ಭವೋ ಘೋರೋ ಬಲವರ್ಣಾಗ್ನಿಸಾದಕಃ ।
ರೋಗರಾಟ್ ರೋಗಸಂಘಾತೋ ಜ್ವರಇತ್ಯುಪದಿಶ್ಯತೇ ॥೩೧೭॥
ವ್ಯಾಪಿತ್ವಾತ್ಸರ್ವಸಂಸ್ಪರ್ಶಾತ್ ಕೃಚ್ಛ್ರತ್ವಾದನ್ತಸಂಭವಾತ್ ।
ಅನ್ತಕೋ ಹ್ಯೇಷಭೂತಾನಾಂ ಜ್ವರ ಇತ್ಯುಪದಿಶ್ಯತೇ ॥೩೧೮॥

ಈಶ್ವರನ ಕೋಪದಿಂದ ಹುಟ್ಟಿ ಅತಿಭಯಂಕರವಾಗಿ ದೇಹ ಬಲವರ್ಣ, ಅಗ್ನಿಗಳನ್ನು ಕ್ಷೀಣಗೊಳಿಸುವ ರೋಗಗಳಲ್ಲೆಲ್ಲಾ ಅತಿಪ್ರಬಲವಾಗಿ ಅನೇಕ ರೋಗಗಳ ಗುಂಪಿನಿಂದ ಕೂಡಿರುವ (ನಾನಾವ್ಯಥೆಯನ್ನುಂಟುಮಾಡುವ ಕಾರಣ ಜ್ವರವೆಂದು ಹೆಸರು ; ಮನುಷ್ಯಪಶ್ವಾದಿ ಸಕಲ ಪ್ರಾಣಿಗಳನ್ನೂ ವ್ಯಾಪಿಸುವುದರಿಂದಲೂ ಶರೀರೇಂದ್ರಿಯಮನಸ್ಸುಗಳನ್ನೂ ಸಂತಾಪಗೊಳಿಸಿ ಅತಿಘೋರವಾದ ವ್ಯಥೆಯನ್ನುಂಟುಮಾಡುವುದರಿಂದಲೂ, ಇತರ ವ್ಯಾಧಿಗಳಲ್ಲೂ ಜ್ವರವುಂಟಾಗಿ ಮರಣ ಸಂಭವಿಸುವುದರಿಂದಲೂ ಅಂತಕರೂಪಿಯಾಗಿ ಪ್ರಾಣಿಗಳನ್ನು ನಾಶಮಾಡುವುದರಿಂದಲೂ ಈ ವ್ಯಾಧಿಗೆ ಜ್ವರವೆಂದು ಹೆಸರುಂಟಾಗಿರುತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ
ಜ್ವರಪ್ರತಿಷೇಧನಾಮೈಕೋನ ಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾ
ರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ.

ಚತ್ವಾರಿಂಶತ್ತಮೋಽಧ್ಯಾಯಃ

ಅಥಾತೋಽತೀಸಾರಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಅತಿಸಾರ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ : ಜ್ವರಚಿಕಿತ್ಸೆಯಾದನಂತರ ಕ್ರಿಯಾಘಾತಪೂರ್ವಕತ್ವ ಸಾಮಾನ್ಯವಾದ ಕಾರಣ (ಮನುಷ್ಯರು ತಮ್ಮ ಕಾರ್ಯಗಳನ್ನು ಮಾಡಿಕೊಳ್ಳಲು ಅಡ್ಡಿಯುಂಟಾಗುವುದು ಜ್ವರರೋಗದಲ್ಲೂ ಅತಿಸಾರರೋಗದಲ್ಲೂ ಸಾಮಾನ್ಯವಾಗಿ ಸಂಭವಿಸುವುದರಿಂದ)ಅತಿಸಾರರೋಗಚಿಕಿತ್ಸೆಯನ್ನು ಹೇಳಲಾಗುತ್ತದೆ. ಅತಿ ಎಂದರೆ ಅತ್ಯರ್ಥವಾಗಿ ಸರತಿ, ಗತಿಕರ್ಮವುಂಟಾಗುತ್ತದೆ. ಅಧಿಕಗಮನವೆಂದರ್ಥ. ಅತ್ಯಂತ ಸರಣಾದತೀಸಾರವೆಂದು ಹೆಸರು.

ಗುರ್ವತಿಸ್ನಿಗ್ಧರೂಕ್ಷೋಷ್ಣದ್ರವಸ್ಥೂಲಾತಿಶೀತಲೈಃ ।
ವಿರುದ್ಧಾಧ್ಯಶನಾಜೀರ್ಣೈರ್ವಿಷಮೈಶ್ಚಾಪಿ ಭೋಜನೈಃ ||೩||
ಸ್ನೇಹಾದ್ಯೈರತಿಯುಕ್ತೈಶ್ಚ ಮಿಥ್ಯಾಯುಕ್ತೈರ್ವಿಷೈರ್ಭಯೈಃ ।
ಶೋಕಾದ್ದುಷ್ಟಾಮ್ಬುಮದ್ಯಾತಿಪಾನಾತ್ ಸಾತ್ಮ್ಯರ್ತುಪರ್ಯಯಾತ್ ||೪||
ಜಲಾಭಿರಮಣೈರ್ವೇಗವಿಘಾತೈಃ ಕ್ರಿಮಿದೋಷತಃ ।
ನೃಣಾಂ ಭವತ್ಯತೀಸಾರೋ ಲಕ್ಷಣಂ ತಸ್ಯ ವಕ್ಷ್ಯತೇ ||೫||

ಪ್ರಮಾಣ, ಗುಣ, ವಿಪಾಕಗಳಲ್ಲಿ ಗುರುವಾಗಿಯೂ ಅತಿಸ್ನಿಗ್ಧವಾದ ಅತಿರೂಕ್ಷವಾದ, ಅತಿಉಷ್ಣವೀರ್ಯದ ಅತಿಬಿಸಿಯಾದ, ಅತಿದ್ರವರೂಪದ, ಅತಿದಪ್ಪನಾದ, ಅತಿತಣ್ಣಗಿರುವ, ವಿರುದ್ಧ (ಮೀನುಹಾಲು), ಅಧ್ಯಶನ, (ಊಟವಾದಮೇಲೆ ಪುನಃ ಊಟಮಾಡುವುದು, ಅಪಕ್ವಾನ್ನಭೋಜನ, ವಿಷಮಾಶನ (ಅತಿಯಾಗಿ ತಿನ್ನುವುದು ಅಥವಾ ಅತ್ಯಲ್ಪವಾಗಿತಿನ್ನುವುದು) ಈ ವಿಧದ ಆಹಾರಸೇವನೆಯಿಂದಲೂ ಸ್ನೇಹ, ವಮನ ವಿರೇಚನಾದಿಗಳನ್ನು ಅತಿಯಾಗಿಸೇವಿಸುವುದು ಮಿಥ್ಯಾಉಪಯೋಗಮಾಡುವುದು, ವಿಷಸೇವನೆಯಿಂದ ಭಯದಿಂದ, ವ್ಯಸನದಿಂದ, ದುಷ್ಟನೀರು ಮತ್ತು ಮದ್ಯಗಳನ್ನು ಹೆಚ್ಚಾಗಿ ಕುಡಿಯುವುದು, ಒಗ್ಗಿರುವ ಆಹಾರಗಳನ್ನು ಬಿಟ್ಟು ಬೇರೆಯಾದುದನ್ನು ಸೇವಿಸುವುದು. ಋತುಗಳ ನೀಬದಲಾವಣೆ, ರಿನಲ್ಲಿ ಬಹಳಕಾಲ ಕ್ರೀಡಿಸುವುದು, ಮಲಮೂತ್ರಾದಿವೇದನೆಗಳನ್ನು ತಡೆಯುವುದು, ಕ್ರಿಮಿಗಳು ಪ್ರಕೋಪಗೊಳ್ಳುವುದು ಈ ಕಾರಣಗಳಿಂದ ಅತಿಸಾರರೋಗವುಂಟಾಗುತ್ತದೆ ; ಅತಿಸಾರದ ಲಕ್ಷಣವನ್ನು ಹೇಳುತ್ತೇವೆ.

ಸಂಶಮ್ಯಾಪಾಂ ಧಾತುರನ್ತಃ ಕೃಶಾನುಂ ವರ್ಚೋಮಿಶ್ರೋ ಮಾರುತೇನ ಪ್ರಣುನ್ನಃ ।
ವೃದ್ಧೋಽತೀವಾಧಃ ಸರತ್ಯೇವ ಯಸ್ಮಾದ್ವ್ಯಾಧಿಂ ಘೋರಂ ತಂ ತ್ವತೀಸಾರಮಾಹುಃ
॥೬॥

ಏಕೈಕಶಃ ಸರ್ವಶಶ್ಚಾಪಿ ದೋಷೈಃ ಶೋಕೇನಾನ್ಯಃ ಷಷ್ಠ ಆಮೇನ ಚೋಕ್ತಃ ।
ಕೇಚಿತ್ಪ್ರಾಹುರ್ನೈಕರೂಪಪ್ರಕಾರಂ ನೈವೇತ್ಯೇವಂ ಕಾಶಿರಾಜಸ್ತ್ವವೋಚತ್ ॥೭॥
ದೋಷಾವಸ್ಥಾಸ್ತಸ್ಯ ನೈಕಪ್ರಕಾರಾಃ ಕಾಲೇಕಾಲೇ ವ್ಯಾಧಿತಸ್ಯೋದ್ಭವನ್ತಿ ।

ಕಫಪಿತ್ತರಸಾದಿದ್ರವಗಳು ವೃದ್ಧಿಗೊಂಡು ಜಠರಾಗ್ನಿಯನ್ನು ಕ್ಷೀಣಮಾಡಿ ಮಲದೊಡನೆ ಮಿಶ್ರವಾಗಿ ವಾಯುವಿನಿಂದ ಮುಂದಕ್ಕೆ ತಳ್ಳಲ್ಪಟ್ಟು ಅತಿಪ್ರಮಾಣದಲ್ಲಿ ಗುದಮಾರ್ಗದಿಂದ ಹೊರಕ್ಕೆ ಸೋರುವುದರಿಂದ ಈ ಭಯಂಕರವಾದ ರೋಗವನ್ನು "ಅತಿಸಾರ"ವೆನ್ನುತ್ತಾರೆ ; ವಾತಾದಿತ್ರಿದೋಷಗಳು ಸನ್ನಿಪಾತದೋಷ ಶೋಕ ಆಮದೋಷ ಇವುಗಳಿಂದ ಆರುವಿಧ ಅತಿಸಾರಗಳು ಉಂಟಾಗುತ್ತವೆ.

ಟಿಪ್ಪಣಿ : ದ್ವಂದ್ವದೋಷಗಳಿಂದ ಅತಿಸಾರವುಂಟಾಗುವುದಿಲ್ಲ ; ದ್ವಂದ್ವಜ, ರಕ್ತಾತಿಸಾರಭೇದಗಳಿಂದ, ಅನೇಕವಿಧಗಳಾದ ಅತಿಸಾರಗಳಿವೆಯೆಂದು ಕೆಲವರು ಹೇಳುತ್ತಾರೆ. ಆದರೆ ಕಾಶಿರಾಜನಾದ ಧನ್ವಂತರಿಯು ದ್ವಂದ್ವಜಾತಿಸಾರವನ್ನು ಒಪ್ಪುವುದಿಲ್ಲ ; ಮೊದಲನೆಯ ಅವಸ್ಥೆಯೇ ಆಮಾವಸ್ಥೆಯು ; ಹಾಗೆಯೇ ಪಿತ್ತಾತಿಸಾರದಲ್ಲಿ ಅತಿಪಿತ್ತವೃದ್ಧಿಕರವಸ್ತುಗಳನ್ನು ಸೇವಿಸುವುದರಿಂದ ರಕ್ತಾತಿಸಾರದ ಅವಸ್ಥೆಯುಂಟಾಗುತ್ತದೆ ; ಆದ್ದರಿಂದ ಒಂದೇ ದೋಷದ ಅವಸ್ಥೆಯಲ್ಲಿರುವ ಅತಿಸಾರಕ್ಕೆ ಬೇರೆ ದೋಷದ ಸಂಬಂಧವುಂಟಾದರೆ ದ್ವಂದ್ವಜಾವಸ್ಥೆಯಂತೆ ತೋರುತ್ತದೆಯುಂಟಾಗಿ ಆರೇ ವಿಧಗಳಾದ ಅತಿಸಾರರೋಗವೆಂಬುದು ಸ್ಥಿರವಾಯಿತು.

ಹೃನ್ನಾಭಿಪಾಯೂದರಕುಕ್ಷಿತೋದ ಗಾತ್ರಾವಸಾದಾನಿಲಸನ್ನಿರೋಧಾಃ ॥೮॥
ವಿಟ್ಸಙ್ಗ ಆಧ್ಮಾನಮಥಾವಿಪಾಕೋ ಭವಿಷ್ಯತಸ್ತಸ್ಯ ಪುರಃಸರಾಣಿ ।
ಶೂಲಾವಿಷ್ಟಃ ಸಕ್ತಮೂತ್ರೋಽನ್ತ್ರಕೂಜೀ ಸ್ರಸ್ತಾಪಾನಃ ಸನ್ನಕಟ್ಯೂರುಜಙ್ಘಃ ॥೯॥
ವರ್ಚೋ ಮುಞ್ಚತ್ಯಲ್ಪಮಲ್ಪಂ ಸಫೇನಂ ರೂಕ್ಷಂ ಶ್ಯಾವಂ ಸಾನಿಲಂಮಾರುತೇನ ।
ದುರ್ಗನ್ಧ್ಯುಷ್ಣಂ ವೇಗವನ್ಮಾಂಸತೋಯಪ್ರಖ್ಯಂ ಭಿನ್ನಂದೇಹೋಽತಿತೀಕ್ಷ್ಣಮ್
॥೧೦॥
ಪಿತ್ತಾತ್ ಪೀತಂ ನೀಲಮಾಲೋಹಿತಂ ವಾ ತೃಷ್ಣಾಮೂರ್ಛಾದಾಹ ಪಾಕಜ್ವರಾರ್ತಃ ।
ತನ್ದ್ರಾನಿದ್ರಾಗೌರವೋತ್ಕ್ಲೇಶಸಾದೀವೇಗಾಶಙ್ಕೀಸೃಷ್ಟವಿಟ್ಕೋಽಪಿಭೂಯಃ ॥೧೧॥
ಶುಕ್ಲಂ ಸಾನ್ದ್ರಂ ಶ್ಲೇಷ್ಮಣಾ ಶ್ಲೇಷ್ಮಯುಕ್ತಂ ಭಕ್ತದ್ವೇಷೀ ನಿಃಸ್ವನಂ ಹೃಷ್ಟರೋಮಾ ।

ಹೃದಯ, ಹೊಕ್ಕಳು, ಗುದ, ಹೊಟ್ಟೆಗಳಲ್ಲಿ ಚುಚ್ಚಿದಂತೆ ನೋವು ದೇಹಕ್ಷೀಣತೆ ವಾತದತಡೆ (ಅಧೋವಾಯುವಿನ ವಿಸರ್ಜನೆಯಾಗದಿರುವುದು). ಮಲಬಂಧ, ಹೊಟ್ಟೆಯುಬ್ಬರ, ಆಹಾರ ಜೀರ್ಣವಾಗದಿರುವುದು, ಇವು ಅತಿಸಾರದ ಪೂರ್ವರೂಪಗಳು ;

ವಾತಾತಿಸಾರದಲ್ಲಿ ಹೊಟ್ಟೆಶೂಲೆ, ಮೂತ್ರದತಡೆ, ಕರಳಿನಲ್ಲಿ ಶಬ್ದವಾಗುವುದು, ಗುದವು ಹೊರಕ್ಕೆ ಜಾರಿಬರುವುದು, ಸೊಂಟ, ತೊಡೆ, ಮೊಣಕಾಲುಗಳು ಕೃಶವಾಗುವುದು, ಸ್ವಲ್ಪಸ್ವಲ್ಪವಾಗಿ ನೊರೆನೊರೆಯಾಗಿ, ರೂಪವಾಗಿ ಹೊಗೆಯ ಬಣ್ಣದ ಮಲವು ವಾಯುವಿನೊಡನೆ ವಿಸರ್ಜಿಸಲ್ಪಡುತ್ತದೆ ; ಪಿತ್ತಾತಿಸಾರದಲ್ಲಿ ದುರ್ವಾಸನೆಯುಳ್ಳ, ಬಿಸಿಯಾದ ವೇಗದಿಂದ ಕೂಡಿ ಮಾಂಸವನ್ನು ತೊಳೆದ ನೀರಿನಂತೆ ಒಡಕಲು ಒಡಕಲಾದ ಹಳದಿಬಣ್ಣದ, ನೀಲಿಬಣ್ಣದ, ಸ್ವಲ್ಪರಕ್ತಮಿಶ್ರವಾದ ಮಲವು ಸ್ರಾವವಾಗುತ್ತದೆ ; ಮೈ ಬೆವರುತ್ತದೆ, ಅತಿ ಚುರುಕಾಗಿ, ನೀರಡಿಕೆ, ಮೂರ್ಛೆ ಮೈ ಉರಿತ ಗುದಪಾಕಜ್ವರಗಳಿಂದ ಪೀಡಿತನಾಗುತ್ತಾನೆ ; ಕಫಾತಿಸಾರದಲ್ಲಿ ತೂಕಡಿಕೆ, ನಿದ್ರೆ, ಮೈಭಾರ ಬಾಯಿನೀರು ಸೋರುವುದು, ದೇಹಕೃಶವಾಗುವುದು, ಮಲವಿಸರ್ಜನೆಯಾದರೂ ಪುನಃ ವಿಸರ್ಜನೆಯಾದೀತೆಂಬ ಅನುಮಾನದಿಂದ ಕೂಡಿ, ಬೆಳಗ್ಗೆ, ಗಟ್ಟಿಯಾಗಿ, ಕಫಮಿಶ್ರವಾಗಿರುವ ಮಲವನ್ನು ವಿಸರ್ಜಿಸುತ್ತಾನೆ ; ಅನ್ನದ್ವೇಷವಿರುತ್ತದೆ ; ಶಬ್ದವಿಲ್ಲದೆ ಮಲವಿಸರ್ಜನೆಯಾಗುತ್ತದೆ, ಮೈರೋಮಾಂಚವಾಗುತ್ತದೆ.

ತನ್ದ್ರಾಯುಕ್ತೋ ಮೋಹಸಾದಾಸ್ಯಶೋಷೀ ವರ್ಚಃ ಕುರ್ಯಾನ್ನೈಕವರ್ಣಂ
ತೃಷಾರ್ತಃ ॥೧೨॥
ಸರ್ವೋದ್ಭೂತೇ ಸರ್ವಲಿಙ್ಗೋಪಪತ್ತಿಃ ಕೃಚ್ಛ್ರಶ್ಚಾಯಂ ಬಾಲವೃದ್ಧೇಷ್ವಸಾಧ್ಯಃ ।
ತೈಸ್ತೈರ್ಭಾವೈಃ ಶೋಚತೋಽಲ್ಪಾಶನಸ್ಯ ಬಾಷ್ಪಾವೇಗಃ ಪಕ್ತಿಮಾವಿಧ್ಯ ಜನ್ತೋಃ
॥೧೩॥
ಕೋಷ್ಠಂ ಗತ್ವಾ ಕ್ಷೋಭಯತ್ಯಸ್ಯ ರಕ್ತಂ ತಚ್ಚಾಧಸ್ತಾತ್ಕಾಕಣನ್ತೀ ಪ್ರಕಾಶಮ್ ।
ವರ್ಚೋಽನ್ಮಿಶ್ರಂ ನಿಃಪುರೀಷಂ ಸಗನ್ಧಂ ನಿರ್ಗನ್ಧಂ ವಾ ಸಾರ್ಯತೇ ತೇನ ಕೃಚ್ಛ್ರಾತ್
॥೧೪॥
ಶೋಕೋತ್ಪನ್ನೋ ದುಶ್ಚಿಕಿತ್ಸ್ಯೋಽತಿಮಾತ್ರಂ ರೋಗೋ ವೈದ್ಯೈಃ ಕಷ್ಟ ಏಷ
ಪ್ರದಿಷ್ಟಃ ।

ಸನ್ನಿಪಾತಾತಿಸಾರದಲ್ಲಿ ತೂಕಡಿಕೆ, ಮೋಹ (ಮತ್ತತೆಯಾಗಿರುವುದು) ದೇಹಕೃಶತ್ವ, ಮುಖಶೋಷ, ಅನೇಕವರ್ಣದ ಮಲವಿಸರ್ಜನೆ, ನೀರಡಿಕೆ, ಈ ಲಕ್ಷಣಗಳಿರುತ್ತವೆ ; ತ್ರಿದೋಷಲಕ್ಷಣಗಳೂ ಕಂಡುಬಂದರೆ ಕಷ್ಟಸಾಧ್ಯವು, ಬಾಲಕರಿಗೂ ಮುದುಕರಿಗೂ ಉಂಟಾದ ತ್ರಿದೋಷಜನ್ಯ ಅತಿಸಾರವು ಅಸಾಧ್ಯವು. ಧನಹಾನಿ, ಇಷ್ಟಜನರ ಮರಣ ಮೊದಲಾದ ಕಾರಣಗಳಿಂದ ವ್ಯಸನಪಡುವವರು ಅಲ್ಪವಾಗಿ ಆಹಾರವನ್ನು ತಿಂದರೆ ಅವರ ಕೋಷ್ಠಾಗ್ನಿಯು ವೃದ್ಧಿಯಾಗಿ ಕೋಷ್ಠವನ್ನು ಪ್ರವೇಶಿಸಿ ರಕ್ತವನ್ನು ಕೆಡಿಸಿ ಗುಲಗಂಜಿಯ ದುರ್ವಾಸನೆಯುಳ್ಳ ಮಲದೊಡನೆ ಮಿಶ್ರವಾಗಿ ಬರಿಯರಕ್ತವೇ ವಾಸನೆಯಿಲ್ಲದೆಯೂ ಬಲುಕಷ್ಟದಿಂದ ಗುದದ್ವಾರದಿಂದಲೂ, ಸುರಿಯುತ್ತದೆ ; ಈ ರೀತಿ ಶೋಕದಿಂದುಂಟಾದ ಅತಿಸಾರವು ಅತಿಕಷ್ಟಸಾಧ್ಯವೆಂದರಿಯಬೇಕು.

ಆಮಾಜೀರ್ಣೈಃ ಪ್ರದ್ರುತಾಃ ಕ್ಷೋಭಯನ್ತಃ ಕೋಷ್ಠಂ ದೋಷಾಃ ಸಂಪ್ರದುಷ್ಟಾಃ ಸಭಕ್ತಮ್ ।
ನಾನಾವರ್ಣಂ ನೈಕಶಃ ಸಾರಯನ್ತಿ ಕೃಚ್ಛ್ರಾಜ್ಜನ್ತೋಃ ಷಷ್ಠಮೇನಂ ವದನ್ತಿ ॥೧೬॥
ಸಂಸೃಷ್ಟಮೇಭಿರ್ದೋಷೈಸ್ತು ನ್ಯಸ್ತಮಪ್ಸ್ವವಸೀದತಿ ।
ಪುರೀಷಂ ಭೃಶದುರ್ಗನ್ಧಂ ವಿಚ್ಛಿನ್ನಂ ಚಾಮಸಂಜ್ಞಕಮ್ ॥೧೭॥
ಏತಾನ್ಯೇವ ತು ಲಿಙ್ಗಾನಿ ವಿಪರೀತಾನಿ ಯಸ್ಯ ತು ।
ಲಾಘವಂ ಚ ಮನುಷ್ಯಸ್ಯ ತಸ್ಯ ಪಕ್ವಂ ವಿನಿರ್ದಿಶೇತ್ ॥೧೮॥

ಆಮಾಜೀರ್ಣದಿಂದ ದೋಷಗಳು ಕೋಷ್ಠವನ್ನು ಸೇರಿ ಅನ್ನಸಹಿತವಾಗಿ ಬಗೆ ಬಗೆ ಬಣ್ಣದಿಂದ ಅನೇಕಸಾರಿ ವಿಸರ್ಜನೆಯಾಗುತ್ತದೆ ; ಆರನೆಯವಿಧದ ಈ ಅತಿಸಾರವನ್ನು ಅತಿಕಷ್ಟವೆಂದು ಹೇಳುತ್ತಾರೆ ; ಈ ದೋಷಗಳಿಂದ ಕೂಡಿದ ಮಲವನ್ನು ನೀರಿನಲ್ಲಿ ಹಾಕಿ ಅದು ಮುಳುಗಿದರೆ ಮಲವು ಅತಿ ದುರ್ನಾತವುಳ್ಳದಾಗಿ ಒಡಕಲು ಒಡಕಲಾಗಿ ಸ್ರವಿಸಿದರೆ ಆಮಾತಿಸಾರ ವೆನ್ನುತ್ತಾರೆ ; ಈ ಲಕ್ಷಣಗಳಿಗೆ ವಿರುದ್ಧವಾಗಿ ಅಂದರೆ ಮಲವು ನೀರಿನಮೇಲೆ ತೇಲುತ್ತಲೂ ದುರ್ವಾಸನೆಯಿಲ್ಲದೆ ಗಟ್ಟಿಯಾಗಿ ವಿಸರ್ಜನೆಯಾಗಿ ರೋಗಿಯ ದೇಹವು ಹಗುರವಾಗಿದ್ದರೆ ಪಕ್ವಾತಿಸಾರವೆಂದು ನಿರ್ಧರಿಸಬೇಕು.

ಸರ್ಪಿರ್ಮೇದೋ ವೇಸವಾರಾಮ್ಬುತೈಲಮಜ್ಜಕ್ಷೀರಕ್ಷೌದ್ರರೂಪಂ ಸ್ರವೇದ್ಯತ್ ।
ಮಞ್ಜಿಷ್ಠಾಭಂ ಮಸ್ತುಲುಙ್ಗೋಪಮಂ ವಾ ವಿಸ್ರಂ ಶೀತಂ ಪ್ರೇತಗನ್ಧ್ಯಞ್ಜನಾಭಮ್ ॥೧೯॥
ರಾಜೀಮದ್ವಾ ಚಂದ್ರಕೈಃ ಸನ್ತತಂ ವಾ ಪೂಯಪ್ರಖ್ಯಂ ಕರ್ದಮಾಭಂ ಕಥೋಷ್ಣಮ್
ಹನ್ಯಾದೇತದ್ಯತ್ ಪ್ರತೀಪಂ ಭವೇಚ್ಚ ಕ್ಷೀಣಂ ಹನ್ಯುಶ್ಚೋಪಃ ಸರ್ಗಾ ಪ್ರಭೂತಾಃ ॥೨೦॥
ಅಸಂವೃತಗುದಂ ಕ್ಷೀಣಂ ದುರಾಧ್ಮಾತಮುಪದ್ರುತಮ್ ।
ಗುದೇ ಪಕ್ವೇ ಗತೋಷ್ಮಾಣಮತೀಸಾರಕಿಣಂ ತ್ಯಜೇತ್ ॥೨೧॥

ತುಪ್ಪ ಮೇದಸ್ಸು (ಕೊಬ್ಬು) ಮಾಂಸವನ್ನು ತೊಳೆದ ನೀರು ತಿಲತೈಲ ಮಜ್ಜೆ, ಹಾಲು, ಜೇನುತುಪ್ಪ, ಮಂಜಿಷ್ಠೆ, ಮಸ್ತು ಇವುಗಳ ಬಣ್ಣ, ಹಸಿಯಮಾಂಸದ, ತಣ್ಣಗೆ ಇರುವ ಕೊಳೆತ ಹೆಣದ ವಾಸನೆಯುಳ್ಳದಾಗಿ ಸೌವೀರಾಂಜನದ ಬಣ್ಣದಿಂದಕೂಡಿ ಗೆರೆಗೆರೆಯಾಗಿ ಚುಕ್ಕಿಚುಕ್ಕಿಗಳಿಂದ ಕೂಡಿ ಕೀವಿನಂತೆಯೂ, ಕೊಚ್ಚೆಯಂತೆಯೂ ಬಿಸಿಯಾಗಿಯೂ ಆಯಾಯ ದೋಷಲಕ್ಷಣಗಳಿಗೆ ವಿಪರೀತವಾದ ಲಕ್ಷಣಗಳಿದ್ದು ರೋಗಿಯು ಕೃಶನಾಗಿ ಅಧಿಕಉಪದ್ರವಗಳಿಂದ ಕೂಡಿದ್ದರೆ ಸಾಯುತ್ತಾನೆ ; ಗುದದ್ವಾರವು ಅಗಲವಾಗಿ ಬಾಯಿತೆರೆದುಕೊಂಡಿದ್ದು ರೋಗಿಯು ಕೃಶನಾಗಿದ್ದು ಹೊಟ್ಟೆಯುಬ್ಬರಿಸಿ ಗುದದಲ್ಲಿನ ವ್ರಣವು ಪಾಕವಾದರೆ ಅವನ ದೇಹವು ತಣ್ಣಗಾದರೆ ರೋಗಿಯನ್ನು ತ್ಯಜಿಸಬೇಕು.

ಶರೀರಿಣಾಮತೀಸಾರಃ ಸಂಭೂತೋ ಯೇನ ಕೇನಚಿತ್ ।
ದೋಷಾಣಾಮೇವ ಲಿಙ್ಗಾನಿ ಕದಾಚಿನ್ನಾತಿವರ್ತತೇ ॥೨೨॥

ಸ್ನೇಹಾಜೀರ್ಣನಿಮಿತ್ತಸ್ತು ಬಹುಶೂಲಪ್ರವಾಹಿಕಃ ।
ವಿಷೂಚಿಕಾನಿಮಿತ್ತಸ್ತು ಚಾನ್ಯೋऽಜೀರ್ಣನಿಮಿತ್ತಜಃ ।
ವಿಷಾಶಃ ಕ್ರಿಮಿಸಂಭೂತೋ ಯಥಾಸ್ವಂ ದೋಷಲಕ್ಷಣಃ ॥೨೩॥

ಯಾವಕಾರಣದಿಂದಲಾಗಲೀ ಅತೀಸಾರವುಂಟಾದರೆ ದೋಷಲಕ್ಷಣಗಳನ್ನು ಬಿಡುವುದಿಲ್ಲ. ಸ್ನೇಹಾಜೀರ್ಣದಿಂದ ಅತಿಶೂಲೆಯುಳ್ಳ ಆಮಶಂಕೆಯುಂಟಾಗುತ್ತದೆ ; ವಿಷೂಚಿಕಾ ಲಕ್ಷಣವುಳ್ಳ ಅತಿಸಾರವು ಅಜೀರ್ಣಲಕ್ಷಣವುದ್ದು. ವಿಷನಿಮಿತ್ತದಿಂದಲೂ ಕ್ರಿಮಿಗಳಿಂದಲೂ ಅತೀಸಾರವುಂಟಾಗುತ್ತದೆ ; ಅವುಗಳಲ್ಲಿ ದೋಷಪ್ರಕೋಪಕ್ಕೆ ತಕ್ಕಂತೆ ಲಕ್ಷಣಗಳುಂಟಾಗುತ್ತವೆ.

ಆಮಪಕ್ವಕ್ರಮಂ ಹಿತ್ವಾ ನಾತಿಸಾರೇ ಕ್ರಿಯಾ ಯತಃ ।
ಅತಃ ಸರ್ವೇऽತಿಸಾರಾಸ್ತು ಜ್ಞೇಯಾಃ ಪಕ್ವಾಮಲಕ್ಷಣೈಃ ॥೨೪॥
ತತ್ರ ಲಙ್ಘನಮೇವಾದೌ ಪೂರ್ವರೂಪೇಷು ದೇಹಿನಾಮ್ ।
ತತಃ ಪಾಚನಸಂಯುಕ್ತೋ ಯವಾಗ್ವಾದಿಕ್ರಮೋ ಹಿತಃ ॥೨೫॥

ಅತೀಸಾರದಲ್ಲಿ ಆಮಪಕ್ವಾವಸ್ಥೆಗಳನ್ನು ಬಿಟ್ಟು ಬೇರೆ ಚಿಕಿತ್ಸೆಗಳ ಕ್ರಮವಿಲ್ಲದ್ದರಿಂದ ಸಕಲವಿಧಗಳಾದ ಅತೀಸಾರರೋಗಗಳನ್ನೂ ಆಮಲಕ್ಷಣ ಪಕ್ವಲಕ್ಷಣಗಳಿಂದ ಗೊತ್ತು ಮಾಡಬೇಕು; ಆಮಾವಸ್ಥೆಯಲ್ಲಿ ಮೊದಲು ಉಪವಾಸವನ್ನು ಮಾಡಿಸಿ ಅನಂತರ ಪಾಚನೌಷಧಿಮಿಶ್ರಮಾಡಿದ ಯವಾಗೂಪಾನಾದಿ ಕ್ರಮಗಳನ್ನು ಅನುಸರಿಸಬೇಕು.

ಅಥವಾ ವಾಮಯಿತ್ವಾ ತು ಶೂಲಾಧ್ಮಾನನಿಪೀಡಿತಮ್ ।
ಪಿಪ್ಪಲೀಸೈನ್ಧವಾಮ್ಭೋಭಿರ್ಲಙ್ಘನಾದ್ಯೈರುಪಾಚರೇತ್ ॥೨೬॥
ಕಾರ್ಯಂ ಚ ವಮನಸ್ಯಾನ್ತೇ ಪ್ರದ್ರವಂ ಲಘುಭೋಜನಮ್ ।
ಖಡಯೂಷಯವಾಗೂಷು ಪಿಪ್ಪಲ್ಯಾದ್ಯಂ ತು ಯೋಜಯೇತ್ ॥೨೭॥
ಅನೇನ ವಿಧಿನಾ ಚಾಮಂ ಯಸ್ಯ ವೈ ನೋಪಶಾಮ್ಯತಿ ।
ಹರಿದ್ರಾದಿಂ ವಚಾದಿಂ ವಾ ಪಿಬೇತ್ ಪ್ರಾತಃ ಸ ಮಾನವಃ ॥೨೮॥

ಆಮಾತಿಸಾರಿಯು ಶೂಲೆ, ಹೊಟ್ಟೆಯುಬ್ಬರಗಳಿಂದ ಪೀಡಿತನಾದರೆ ಹಿಪ್ಪಲಿ, ಸೈಂಧವಚೂರ್ಣವನ್ನು ಮಿಶ್ರಮಾಡಿದ ನೀರು ಮತ್ತು ಲಂಘನಾದಿಗಳಿಂದಲೂ ಉಪಚರಿಸಬೇಕು. ವಮನ ಮಾಡಿಸಿದ ನಂತರ ದ್ರವಾಧಿಕವಾಧಿಕವಾಗಿ ಲಘುವಾದ ಅನ್ನವನ್ನು ಭೋಜನ ಮಾಡಿಸಬೇಕು. ಖಡ (ಬೇಲ, ದಾಳಿಂಬೆ, ಮೆಣಸುಗಳನ್ನು ಸೇರಿಸಿ ತಯಾರಿಸಿದ ಮಜ್ಜಿಗೆಗೆ ಖಡನೆಂದು ಹೆಸರು–ಮಜ್ಜಿಗೆ ಘಳದ್ಯ), ಹೆಸರು, ಸಾರಂಗಿಬೇಳೆ, ಕಡಲೆ ಇವುಗಳ ಕಟ್ಟು, ಪಂಚಕೋಲವನ್ನು ಸೇರಿಸಿ ಯಾವಾಗಲೂ ಪ್ರಯೋಗಿಸಬೇಕು. ಈ ವಿಧಾನದಿಂದ ಆಮದೋಷನಿವಾರಣೆಯಾಗದಿದ್ದರೆ ಆ ರೋಗಿಗೆ ಬೆಳಗಿನ ಹೊತ್ತು ಹರಿದ್ರಾದಿ ಗಣದ್ರವ್ಯಗಳ ಕಷಾಯವನ್ನಾಗಲೀ ವಚಾತಿಗಣದ್ರವ್ಯಗಳ ಕಷಾಯವನ್ನಾಗಲೀ ಕುಡಿಸಬೇಕು.

ಟಿಪ್ಪಣಿ : ಅತಿಸಾರರೋಗಿಗೆ ದ್ರವ ದ್ರವ್ಯಗಳ ಭೋಜನವು ನಿಷೇಧವೆಂದು ಹೇಳಿರುತ್ತಾರೆ. ಆದರೆ ಸಂಸ್ಕೃತಗಳಾದ ಯವಾಗೂ, ಯೂಷಾದಿಗಳಿಗಲ್ಲ.

ಆಮಾತಿಸಾರಿಣಾಂ ಕಾರ್ಯಂ ನಾದೌ ಸಂಗ್ರಹಣಂ ನೃಣಾಮ್ ।
ತೇಷಾಂ ದೋಷಾ ವಿಬದ್ಧಾಃ ಪ್ರಾಗ್ಜನಯನ್ತ್ಯಾಮಯಾನಿಮಾನ್ ||೨೯||
ಪ್ಲೀಹಪಾಣ್ಡ್ವಾಮಯಾನಾಹಮೇಹಕುಷ್ಠೋದರಜ್ವರಾನ್ ।
ಶೋಫಗುಲ್ಮಗ್ರಹಣ್ಯರ್ಶಃ ಶೂಲಾಲಸಕಹೃದ್ಗ್ರಹಾನ್ ||೩೦||
ಸಶೂಲಂ ಬಹುಶಃ ಕೃಚ್ಛ್ರಾದ್ವಿಬದ್ಧಂ ಯೋಽತಿಸಾರ್ಯತೇ ।
ದೋಷಾನ್ ಸನ್ನಿಚಿತಾನ್ ತಸ್ಯ ಪಥ್ಯಾಭಿಃ ಸಂಪ್ರವರ್ತಯೇತ್ ||೩೧||
ಯೋಽತಿದ್ರವಂ ಪ್ರಭೂತಂ ಚ ಪುರೀಷಮತಿಸಾರ್ಯತೇ ।
ತಸ್ಯಾದೌ ವಮನಂ ಕುರ್ಯಾತ್ ಪಶ್ಚಾಲ್ಲಙ್ಘನಪಾಚನಮ್ ||೩೨||
ಸ್ತೋಕಂ ಸ್ತೋಕಂ ವಿಬದ್ಧಂ ವಾ ಸಶೂಲಂ ಯೋಽತಿಸಾರ್ಯತೇ ।
ಅಭಯಾಪಿಪ್ಪಲೀಕಲ್ಕೈಃ ಸುಖೋಷ್ಣೈಸ್ತಂ ವಿರೇಚಯೇತ್ ||೩೩||
ಆಮೇ ಚ ಲಙ್ಘನಂ ಶಸ್ತಮಾದೌ ಪಾಚನಮೇವ ವಾ ।
ಯೋಗಾಶ್ಚಾತ್ರ ಪ್ರವಕ್ಷ್ಯನ್ತೇ ತ್ವಾಮಾತೀಸಾರನಾಶನಾಃ ||೩೪||

ಆಮಾತಿಸಾರದಲ್ಲಿ ಮೊದಲು ಸಂಗ್ರಹಣೌಷಧಿಗಳಿಂದ ಅತಿಸಾರವನ್ನು ತಡೆಯಬಾರದು ; ವಿರೇಚನವಾಗುವ ಮಲವನ್ನು ತಡೆದರೆ ದೋಷಗಳು ಒಟ್ಟು ಕೂಡಿ ಪ್ಲೀಹವೃದ್ಧಿ, ಪಾಂಡುರೋಗ, ಹೊಟ್ಟೆಯುಬ್ಬರ, ಮೇಹ, ಕುಷ್ಠ, ಉದರರೋಗ, ಜ್ವರ, ಶೋಫ, ಗುಲ್ಮ, ಗ್ರಹಣೀ, ಅರ್ಶಸ್ಸು, ಶೂಲೆ, ಅಲಸಕವೆಂಬ ಅಜೀರ್ಣ, ಹೃದಯಗ್ರಹ ಇವುಗಳನ್ನು ಉಂಟುಮಾಡುತ್ತದೆ. ಹೊಟ್ಟೆನೋವು, ಮಲಬಂಧಗಳಿಂದ ಕೂಡಿ ಸ್ವಲ್ಪ ಸ್ವಲ್ಪವಾಗಿ ಅತಿಕಷ್ಟದಿಂದ ಅತಿಸಾರ ಮಾಡುವವರಿಗೆ ಮೊದಲು ವಮನವನ್ನೂ, ಅನಂತರ ಉಪವಾಸವನ್ನೂ, ಆಮಪಾಚನವನ್ನೂ ಮಾಡಿಸಬೇಕು. ಸ್ವಲ್ಪಸ್ವಲ್ಪವಾಗಿ ತಡೆದು ತಡೆದು ಶೂಲೆಯಿಂದ ಕೂಡಿ ವಿರೇಚನ ಮಾಡಿದರೆ ಅಣಿಲೆಸಿಪ್ಪೆ, ಹಿಪ್ಪಲಿಗಳ ಕಲ್ಕವನ್ನು ಸುಖೋಷ್ಣಜಲದಲ್ಲಿ ಕುಡಿಸಿ ವಿರೇಚನ ಮಾಡಿಸಬೇಕು. ಆಮಾತಿಸಾರದಲ್ಲಿ ಮೊದಲು ಲಂಘನವೂ ಆಮಪಾಚನವೂ ಹಿತಕರವು. ಇನ್ನು ಮುಂದೆ ಆಮಾತಿಸಾರಹರಗಳಾದ ಆಮಪಾಚನಯೋಗಗಳನ್ನು ಹೇಳುತ್ತೇವೆ.

ಕಲಿಙ್ಗಾತಿವಿಷಾಹಿಙ್ಗುಸೌವರ್ಚಲವಚಾಭಯಾಃ ।
ದೇವದಾರು ವಚಾ ಮುಸ್ತಾ ನಾಗರಾತಿವಿಷಾಭಯಾಃ ||೩೫||
ಅಭಯಾಧಾನ್ಯಕಂ ಮುಸ್ತಂ ವಾಲಕಂ ಬಿಲ್ವಮೇವ ಚ ।
ಮುಸ್ತಂ ಪರ್ಪಟಕಂ ಶುಣ್ಠೀ ವಚಾ ಸಾತಿವಿಷಾಭಯಾ ||೩೬||
ಅಭಯಾತಿವಿಷಾಹಿಙ್ಗು ವಚಾ ಸೌವರ್ಚಲಂ ತಥಾ ।
ಚಿತ್ರಕಂ ಪಿಪ್ಪಲೀಮೂಲಂ ವಚಾ ಕಟುಕರೋಹಿಣೀ ||೩೭||
ಪಾಠಾವತ್ಸಕಬೀಜಾನಿ ಹರೀತಕ್ಯೋ ಮಹೌಷಧಮ್ ।

ಮೂರ್ವಾ ನಿರ್ದಹನಃ ಪಾಠಾ ತ್ರ್ಯೂಷಣಂ ಗಜಪಿಪ್ಪಲೀ ||೩೮||
ಸಿದ್ಧಾರ್ಥಕಾ ಭದ್ರದಾರು ಶತಾಹ್ವಾ ಕಟುರೋಹಿಣೀ |
ಏಲಾ ಸಾವರಕಂ ಕುಷ್ಠಂ ಹರಿದ್ರೇ ಕೌಟಜಾ ಯವಾಃ ||೩೯||
ಮೇಷಶೃಙ್ಗೀ ತ್ವಗೇಲೇ ಚ ಕ್ರಿಮಿಘ್ನಂ ವೃಕ್ಷಕಾಣಿ ಚ |
ವೃಕ್ಷಾದನೀ ವೀರತರುರ್ಬೃಹತ್ಯೌ ದ್ವೇ ಸಹೇ ತಥಾ ||೪೦||
ಏರಣ್ಡತ್ವಕ್ಚ ತ್ರೈವೃದ್ಧೀಕೀ ದಾಡಿಮಾ ಕೌಟಜೀ ಶಮಾ |
ಪಾಠಾ ತೇಜೋವತೀ ಮುಸ್ತಂ ಪಿಪ್ಪಲೀ ಕೌಟಜಂ ಫಲಮ್ ||೪೧||
ಪಟೋಲಂ ದೀಪ್ಯಕೋ ಬಿಲ್ವಂ ಹರಿದ್ರೇ ದೇವದಾರು ಚ |
ವಿಡಙ್ಗ ಮಭಯಾಪಾಠಾ ಶೃಙ್ಗವೇರಂ ಘನಂ ವಚಾ ||೪೨||
ವಚಾ ವತ್ಸಕ ಬೀಜಾನಿ ಸೈನ್ಧವಂ ಕಟುರೋಹಿಣೀ |
ಹಿಙ್ಗುರ್ವತ್ಸಕಬೀಜಾನಿ ವಚಾ ಬಿಲ್ವಶಲಾಟು ■ ||೪೩||
ನಾಗರಾತಿವಿಷಾ ಮುಸ್ತಂ ಪಿಪ್ಪಲ್ಯೋ ವಾತ್ಸಕಂ ಫಲಮ್ |
ಮಹೌಷಧಂ ಪ್ರತಿವಿಷಾ ಮುಸ್ತಂ ಚೇತ್ಯಾಮಪಾಚನಾಃ ||೪೪||
ಪ್ರಯೋಜ್ಯಾ ವಿಂಶತಿರ್ಯೋಗಾಃ ಶ್ಲೋಕಾರ್ಧವಿಹಿತಾಸ್ತ್ವಮೇ |
ಧಾನ್ಯಾಮ್ಲೋಷ್ಣಾಮ್ಬುಮದ್ಯಾನಾಂ ಪಿಬೇದನ್ಯತಮೇನ ವಾ ||೪೫||
ನಿಃಕ್ವಾಥಾನ್ವಾ ಪಿಬೇದೇಷಾಂ ಸುಖೋಷ್ಣಾನ್ ಸಾಧು ಸಾಧಿತಾನ್ |
ನಿಖಿಲೇನೋಪದಿಷ್ಟೋಽಯಂ ವಿಧಿರಾಮೋಪಶಾನ್ತಯೇ ||೪೬||
ಹರೀತಕೀಮತಿವಿಷಾಂ ಹಿಙ್ಗು ಸೌವರ್ಚಕಂ ವಚಾಮ್ |
ಪಿಬೇತ್ ಸುಖಾಮ್ಬುನಾ ಜನ್ತುರಾಮಾತೀಸಾರಪೀಡಿತಃ ||೪೭||
ಪಟೋಲಂ ದೀಪ್ಯಕಂ ಬಿಲ್ವಂ ವಚಾ ಪಿಪ್ಪಲಿ ನಾಗರಮ್ |
ಮುಸ್ತಂ ಕುಷ್ಠಂ ವಿಡಙ್ಗಂ ಚ ಪಿಬೇದ್ವಾಪಿ ಸುಖಾಮ್ಬುನಾ ||೪೮||
ಶೃಙ್ಗವೇರಂ ಗುಡೂಚೀಂ ಚ ಪಿಬೇದುಷ್ಣೇನ ವಾರಿಣಾ |
ಲವಣಾನ್ಯಥ ಪಿಪ್ಪಲ್ಯೋ ವಿಡಙ್ಗಾನಿ ಹರೀತಕೀ ||೪೯||
ಚಿತ್ರಕಂ ಶಿಂಶಪಾ ಪಾಠಾ ಶಾಙ್ಗೇಷ್ಟಾ ಲವಣಾನಿ ಚ |
ಹಿಙ್ಗುರ್ವೃಕ್ಷಕಬೀಜಾನಿ ಲವಣಾನಿ ಚ ಭಾಗಶಃ ||೫೦||
ಹಸ್ತಿದನ್ತ್ಯಥ ಪಿಪ್ಪಲ್ಯಃ ಕಲ್ಕಾವಕ್ಷಸಮೌ ಸ್ಮೃತೌ |
ವಚಾಗುಡೂಚೀಕಾಣ್ಡಾನಿ ಯೋಗೋಽಯಂ ಪರಮೋ ಮತಃ ||೫೧||
ಏತೇ ಸುಖಾಮ್ಬುನಾ ಯೋಗಾ ದೇಯಾಃ ಪಞ್ಚ ಸತಾಂ ಮತಾಃ |

ಪಾಚನ ಯೋಗಗಳು : (೧) ಕೋಡಶಿಗೆಬೀಜ, ಅತಿಬಜೆ, ಹಿಂಗು, ಸೌವರ್ಚ ಲವಣ, ಬಜೆ, ಅಣಿಲೆಸಿಪ್ಪೆ ; (೨) ದೇವದಾರು, ಬಜೆ, ಕೊನ್ನಾರಿಗೆಡ್ಡೆ, ಶುಂಠಿ, ಅತಿಬಜೆ, ಅಣಿಲೆ ಸಿಪ್ಪೆ ; (೩) ಅಣಿಲೆ ಸಿಪ್ಪೆ, ಕೊತ್ತುಂಬರಿ, ಕೊನ್ನಾರಿ ಗೆಡ್ಡೆ, ಮುಡಿವಾಳ, ಬಿಲ್ವಪತ್ರೆಯ ಬೇರು ; (೪) ಕೊನ್ನಾರಿಗೆಡ್ಡೆ, ಪರ್ಪಾಟಕ, ಶುಂಠಿ, ಬಜೆ, ಅತಿಬಜೆ,

ಅಣಿಲೆಸಿಪ್ಪೆ ; (೫) ಅಣಿಲೆಸಿಪ್ಪೆ, ಅತಿಬಜೆ, ಹಿಂಗು, ಬಜೆ, ಸೌವರ್ಚಲವಣ ; (೬) ಚಿತ್ರಮೂಲ, ವೋಡಿ, ಬಜೆ, ಕಟುಕರೋಹಿಣಿ, (೭) ಅಗಳುಶುಂಠಿ, ಕೊಡಶಿಗೆ ಬೀಜ, ಅಣಿಲೆ ಸಿಪ್ಪೆ, ಶುಂಠಿ. (೮) ಕೊರಟಗೆ ಹಂಬು, ಚಿತ್ರಮೂಲ, ಅಗಳುಶುಂಠಿ, ತ್ರಿಕಟು, ಗಜಪಿಪ್ಪಲಿ ; (೯) ಬಿಳಿಸಾಸಿವೆ, ದೇವದಾರು, ಸಬ್ಬಶಿಗೆ, ಕಟುಕರೋಹಿಣಿ, (೧೦) ಏಲಕ್ಕಿ, ರೋಧ್ರ, ಚಂಗಲ್‌ಕೋಷ್ಠ, ಅರಿಶಿನ, ಮರದರಿಶಿನ, ಕೊಡಶಿಗೇ ಬೀಜ, (೧೧) ಕರ್ಕಾಟಕ ಶೃಂಗೀ, ದಾಲ್ಚಿನ್ನಿ, ಸಣ್ಣಏಲಕ್ಕಿ, ವಿಡಂಗ, ಕೊಡಶಿಗೇ ಬೀಜ, (೧೨) ಅಶೋಕ, (ಬಂದಣಿಗೆ ?), ಲಾಳ (ಲಾಮಂಜ), ಹೆಗ್ಗುಳ್ಳ, ನೆಲಗುಳ್ಳ, ಕಾಡು ಉದ್ದು, ಕಾಡು ಹೆಸರು. (೧೩) ಹರಳಬೇರಿನ ತೊಗಟೆ, ತೂಪರಚಕ್ಕೆ, ದಾಳಿಂಬೆ ತೊಗಟೆ, ಕೊಡಶಿಗೆತೊಗಟೆ, ಬನ್ನಿಮರದತೊಗಟೆ, (೧೪) ಅಗಳುಶುಂಠಿ, ಗಂಗುಂಗೆ (ಡೆ) ಬೀಜ, ಕೊನ್ನಾರೀಗೆಡ್ಡೆ, ಹಿಪ್ಪಲಿ, ಕೊಡಶಿಗೇ ಬೀಜ, (೧೫) ಕಹಿಪಡವಲ, ವಾದಕ್ಕಿ, ಬಿಲ್ವಪತ್ರೆಬೇರು, ಅರಿಶಿನ, ಮರದರಿಶಿನ, ದೇವದಾರು. (೧೬) ವಿಡಂಗ ಅಣಿಲೆಸಿಪ್ಪೆ, ಅಗಳುಶುಂಠಿ, ಹಸಿಶುಂಠಿ, ಕೊನ್ನಾರೀಗೆಡ್ಡೆ, ಬಜೆ, (೧೭) ಬಜೆ, ಕೊಡಶಿಗೆಬೀಜ, ಸೈಂಧವ, ಕಟುಕರೋಹಿಣಿ, (೧೮) ಹಿಂಗು, ಕೊಡಶಿಗೆಬೀಜ, ಬಜೆ, ಬಿಲ್ವಪತ್ರೆಯ ಹೀಚು (ಎಳೆಕಾಯಿ), (೧೯) ಶುಂಠಿ, ಅತಿಬಜೆ, ಕೊನ್ನಾರೀ ಗೆಡ್ಡೆ, ಹಿಪ್ಪಲಿ, ಕೊಡಶಿಗೆ ಬೀಜ, (೨೦) ಶುಂಠಿ, ಅತಿಬಜೆ, ಕೊನ್ನಾರಿ ಗೆಡ್ಡೆ—ಈ ರೀತಿ ಅರ್ಧಶ್ಲೋಕದಿಂದ ಹೇಳಿದ ೨೧ ಯೋಗಗಳಲ್ಲೊಂದನ್ನು ಪ್ರಯೋಗಿಸಿದರೆ ಆಮದೋಷವು ಪಾಕವಾಗುತ್ತದೆ. ಇವುಗಳ ಚೂರ್ಣವನ್ನು ಕಲಗಚ್ಚು, ಬಿಸಿನೀರು, ಮದ್ಯ ಇವುಗಳಲ್ಲೊಂದರಲ್ಲಿ ಕದರಿ ಕುಡಿಯಬೇಕು ; ಅಥವಾ ಇವುಗಳ ಕಷಾಯವನ್ನಾಗಲೀ ಸುಖೋಷ್ಣವಾಗಿ ಕುಡಿಯ ಬೇಕು. ಆಮದೋಷನಿವಾರಣೆಗಾಗಿ ಈ ಕ್ರಮವು ಪೂರ್ಣವಾಗಿ ಉಪದೇಶಿಸಲ್ಪಟ್ಟಿರುತ್ತೆ. ಆಮಾತಿಸಾರಪೀಡಿತನು ಅಣಿಲೆಸಿಪ್ಪೆ, ಅತಿಬಜೆ, ಹಿಂಗು, ಸೌವರ್ಚಲವಣ, ಬಜೆ ಇವು ಗಳ ಕಲ್ಕವನ್ನು ಸುಖೋಷ್ಣವಾದ ನೀರಿನಲ್ಲಿ ಕದರಿ ಕುಡಿಯಬೇಕು. ಅಥವಾ ಕಹಿಪಡ ವಲ, ವಾದಕ್ಕಿ, ಬಿಲ್ವಪತ್ರೆಯಹೀಚು, (ಎಳೆಯಕಾಯಿ) ಬಜೆ, ಹಿಪ್ಪಲಿ, ಶುಂಠಿ, ಕೊನ್ನಾರಿಗೆಡ್ಡೆ, ಚಂಗುಲ್‌ಕೋಷ್ಠ ವಿಡಂಗಗಳ ಕಲ್ಕವನ್ನಾಗಲೀ ಸುಖೋಷ್ಣವಾದ ನೀರಿ ನಲ್ಲಿ ಕದರಿ ಕುಡಿಯಬೇಕು. (೧) ಪಂಚಲವಣಗಳು, ಹಿಪ್ಪಲಿ, ವಿಡಂಗ, ಅಣಿಲೆಸಿಪ್ಪೆ, (೨) ಚಿತ್ರಮೂಲ, ಬೀಟಿಮರದ ತೊಗಟೆ, ಪಂಚಲವಣಗಳು, (೩) ಹಿಂಗು ಕೊಡಶಿಗೆಯ ಬೀಜ, ಪಂಚಲವಣಗಳು, (೪) ದಾಸಮೆಕ್ಕೇಬೇರು, ಹಿಪ್ಪಲಿ, ಇವುಗಳ ಕಲ್ಕ ೧ ಕರ್ಷ ದಂತೆ, (೫) ಬಜೆ, ಅಮೃತವಳ್ಳಿಬೇರುಗಳ ಕಲ್ಕವು ಉತ್ತಮವಾದ ಯೋಗವು. ಈ ಐದು ಯೋಗಗಳನ್ನೂ ಪ್ರತ್ಯೇಕವಾಗಿ ಬಿಸಿನೀರಿನಲ್ಲಿ ಕದರಿ ಕುಡಿಸಬೇಕು. ಈ ಯೋಗ ಗಳು ಸದ್ವೈದ್ಯರಿಗೆ ಸಮ್ಮತಗಳು.

ಪಯಸ್ಯುತ್ಕ್ವಾಥ್ಯ ಮುಸ್ತಾನಾಂ ವಿಂಶತಿಂ ತ್ರಿಗುಣಾಮ್ಭಸಿ ||೫೨||
ಕ್ಷೀರಾವಶಿಷ್ಟಂ ತತ್ಪೀತಂ ಹನ್ತ್ಯಾಮಂ ಶೂಲಮೇವ ಚ ।
ನಿವೃತ್ತೇಷಾಮಶೂಲೇಷು ಯಸ್ಯ ನ ಪ್ರಗುಣೋಽನಿಲಃ ||೫೩||
ಸ್ತೋಕಂ ಸ್ತೋಕಂ ರುಜಾವಚ್ಚ ಸಶೂಲಂ ಯೋಽತಿಸಾರ್ಯತೇ ।
ಸಕ್ಷಾರಲವಣೈರ್ಯುಕ್ತಂ ಮನ್ದಾಗ್ನಿಃ ಸ ಪಿಬೇದ್ಘೃತಮ್ ||೫೪||
ಕ್ಷೀರ ನಾಗರ ಚಾಙ್ಗೇರೀ ಕೋಲದಧ್ಯಮ್ಲಸಾಧಿತಮ್ ।
ಸರ್ಪಿರಚ್ಛಂ ಪಿಬೇದ್ವಾಪಿ ಶೂಲಾತೀಸಾರಶಾನ್ತಯೇ ||೫೫||
ದಧ್ನಾ ತೈಲಘೃತಂ ಪಕ್ವಂ ಸವ್ಯೋಷಾಜಾತಿಚಿತ್ರಕೈಃ ।
ಸ ಬಿಲ್ವಪಿಪ್ಪಲೀಮೂಲದಾಡಿಮೈರ್ವಾ ರುಗನ್ವಿತೈಃ ||೫೬||
ನಿಖಿಲೋ ವಿಧಿರುಕ್ತೋಽಯಂ ವಾತಶ್ಲೇಷ್ಮೋಪಶಾನ್ತಯೇ ।
ತೀಕ್ಷ್ಣೋಷ್ಣವರ್ಜ್ಯಮೇನಂ ತು ವಿದಧ್ಯಾತ್ಪಿತ್ತಜೇ ಭಿಷಕ್ ||೫೭||

ಕೊನ್ನಾರೀಗೆಡ್ಡೆಗಳು ೨೦, ಅವುಗಳ ಎರಷ್ಟು ಹಾಲಿಗೆಹಾಕಿ ಹಾಲಿನ ೩ ರಷ್ಟು ನೀರನ್ನು ಸೇರಿಸಿ ಹಾಲು ನಿಲ್ಲುವಂತೆ ಕಾಯಿಸಿ ಕುಡಿಸಿದರೆ ಆಮಶೂಲೆಯು ನಿವಾರಣೆಯಾಗುತ್ತದೆ. ವಾತಪ್ರಕೋಪದಿಂದ ಹೊಟ್ಟೆಶೂಲೆ, ಅತಿಸಾರ, ಮಂದಾಗ್ನಿಯುಳ್ಳ ರೋಗಿಗೆ ಕ್ಷಾರಲವಣಯುಕ್ತವಾದ ಹಾಲು, ಶುಂಠಿ, ಪುಳ್ಳಂಪರಚಿ ಸೊಪ್ಪು, ಎಲಚೀ ಹಣ್ಣು, ಹುಳಿ ಮೊಸರು ಇವುಗಳೊಡನೆ ಪಾಕಮಾಡಿದ ಘೃತಪಾನವನ್ನಾಗಲೀ ಮೊಸರು, ತೈಲ, ತುಪ್ಪ, ತ್ರಿಕಟು, ಜಾಯಿಕಾಯಿ, ಚಿತ್ರಮೂಲ, ಬಿಲ್ವಪತ್ರೆಯ ಎಳೆಯಕಾಯಿ, ಮೋಡಿ, ದಾಳಿಂಬೆ ಹಣ್ಣು, ಚಂಗಲ್‌ಕೋಷ್ಠಗಳನ್ನು ಸೇರಿಸಿ ತಯಾರಿಸಿದ ಘೃತವನ್ನಾಗಲೀ ಕುಡಿಸಬೇಕು. ಈ ರೀತಿಯಾಗಿ ವಾತಕಫಹರಗಳಾದ ಸಕಲ ವಿಧಾನಗಳೂ ಹೇಳಲ್ಪಟ್ಟವೆ. ಈ ವಿಧಾನಗಳನ್ನೇ ತೀಕ್ಷ್ಣ ಉಷ್ಣಗಳನ್ನು ಬಿಟ್ಟು ಪಿತ್ತಾತಿಸಾರದಲ್ಲೂ ಆಚರಿಸಬೇಕು.

ಯಥೋಕ್ತಮುಪವಾಸಾನ್ತೇ ಯವಾಗೂಶ್ಚ ಪ್ರಶಸ್ಯತೇ ।
ಬಲಯೋರಂಶುಮತ್ಯಾಂ ಚ ಶ್ವದಂಷ್ಟ್ರಾ ಬೃಹತೀಷು ಚ ||೫೮||
ಶತಾವರ್ಯಾಂ ಚ ಸಂ ಸಿದ್ಧಾಃ ಸುಶೀತಾಮಧುಸಂಯುತಾಃ ।
ಮುದ್ಗಾದಿಷು ಚ ಯೂಷಾಃ ಸ್ಯುರ್ದ್ರವ್ಯೈರೇತೈಃ ಸುಸಂಸ್ಕೃತಾಃ ||೫೯||
ಮೃದುಭಿರ್ದೀಪನೈಸ್ತಿಕ್ತೈರ್ದ್ರವ್ಯೈಃ ಸ್ಯಾದಾಮಪಾಚನಮ್ ।
ಹರಿದ್ರಾತಿವಿಷಾಪಾಠಾ ವತ್ಸಬೀಜರಸಾಞ್ಜನಮ್ ||೬೦||
ರಸಾಞ್ಜನಂ ಹರಿದ್ರೇ ದ್ವೇ ಬೀಜಾನಿ ಕುಟಜಸ್ಯ ಚ ।
ಪಾಠಾ ಗುಡೂಚೀ ಭೂನಿಮ್ಬಸ್ತಥೈವ ಕಟುರೋಹಿಣೀ ||೬೧||
ಏತೈಃ ಶ್ಲೋಕಾರ್ಧನಿರ್ದಿಷ್ಟೈಃ ಕ್ವಾಥಾಃ ಸ್ಯುಃ ಪಿತ್ತಪಾಚನಾಃ ।

ಅತಿಸಾರರೋಗದ ಆಮಾವಸ್ಥೆಯಲ್ಲಿ ಉಪವಾಸವನ್ನು ಮಾಡಿಸಿದ ನಂತರ ಕಳ್ಳಂಗಡಲೆ, ಬೋಳಂಗಡಲೆ, ಮೂರೆಲೆಹೊನ್ನೆ, ಹಗ್ಗುಳ್ಳ, ನೆಗ್ಗಿಲು, ಆಷಾಡೀಬೇರು ಇವುಗಳ

ಕಷಾಯದಿಂದ ತಯಾರಿಸಿದ ಯವಾಗೂವಿಗೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸ ಬೇಕು; ಈ ದ್ರವ್ಯಗಳಿಗೆ ಕಾಡುಹೆಸರು, ಬಟಾಣಿ, ಸಾರಂಗಿಬೇಳೆಗಳನ್ನು ಸೇರಿಸಿ ಕಟ್ಟು ಗಳನ್ನು ತಯಾರಿಸಬೇಕು; ಪಿತ್ತಪ್ರಕೋಪವಾದರೆ ತುರುಚಿ,ಅಮೃತಬಳ್ಳಿ, ಅತಿಬಜೆ, ಮೊದ ಲಾದ ಮೃದುವಾದ ಅಗ್ನಿದೀಪಕವಾದ ಕಹಿರಸವೇ ಅಧಿಕವಾಗಿರುವ ದ್ರವ್ಯಗಳ ಕಷಾಯ ದಿಂದ ಆಮಪಾಚನವಾಗುತ್ತದೆ. ೧. ಅರಿಶಿನ, ಅತಿಬಜೆ, ಅಗಳುಶುಂಠಿ, ಕೊಡಶಿಗೇ ಬೀಜ, ರಸಾಂಜನ ೨. ರಸಾಂಜನ, ಅರಿಶಿನ, ಮರದರಿಶಿನ, ಕೊಡಶಿಗೇಬೀಜ ; ೩. ಅಗಳು ಶುಂಠಿ, ಅಮೃತವಳ್ಳಿ, ನೆಲಬೇವು, ಕಟುಕರೋಹಿಣೀ, ಈ ರೀತಿ ಅರ್ಧಶ್ಲೋಕಗಳಲ್ಲಿ ಹೇಳಿ ರುವ ಕಷಾಯಗಳು ಪಿತ್ತಪಾಚಕಗಳು.

ಮುಸ್ತಂ ಕುಟಜಬೀಜಾನಿ ಭೂನಿಮ್ಬಂ ಸರಸಾಞ್ಜನಮ್ ||೬೨||
ದಾರ್ವೀ ದುರಾಲಭಾ ಬಿಲ್ವಂ ವಾಲಕಂ ರಕ್ತಚನ್ದನಮ್ |
ಚನ್ದನಂ ವಾಲಕಂ ಮುಸ್ತಂ ಭೂನಿಮ್ಬಂ ಸ ದುರಾಲಭಮ್ ||೬೩||
ಮೃಣಾಳಂ ಚನ್ದನಂ ರೋಧ್ರಂ ನಾಗರಂ ನೀಲಮುತ್ಪಲಮ್ |
ಪಾಠಾ ಮುಸ್ತಂ ಹರಿದ್ರೇ ದ್ವೇ ಪಿಪ್ಪಲೀ ಕೌಟಜಂ ಫಲಮ್ ||೬೪||
ಫಲತ್ವಚಂ ವತ್ಸಕಸ್ಯ ಶೃಙ್ಗವೇರಂ ಘನಃ ವಚಾ |
ಷಡೇತೇಽಭಿಹಿತಾ ಯೋಗಾಃ ಪಿತ್ತಾತೀಸಾರನಾಶನಾಃ ||೬೫||
ಬಿಲ್ವಶಕ್ರಯವಾಮ್ಭೋದವಾಲಕಾತಿವಿಷಾಕೃತಃ |
ಕಷಾಯೋ ಹನ್ತ್ಯತೀಸಾರಂ ಸಾಮಂ ಪಿತ್ತಸಮುದ್ಭವಮ್ ||೬೬||

(೧) ಕೊನ್ನಾರೀಗೆಡ್ಡೆ, ಕೊಡಶಿಗೇಬೀಜ ನೆಲಬೇವು ರಸಾಂಜನ ; (೨) ಮರ ದರಿಶಿನ, ತುರುಚನಬೇರು, ಬಿಲ್ವಪತ್ರೆಯಹೀಚು, ಮುಡಿವಾಳ, ಕೆಂಪುಗಂಧ (೩) ಕೆಂಪು ಗಂಧ, ಮುಡಿವಾಳ, ಕೊನ್ನಾರೀಗೆಡ್ಡೆ, ನೆಲಬೇವು, ತುರುಚನಬೇರು (೪) ತಾವರೆ ದಂಟು, ಕೆಂಪುಗಂಧ, ರೋಧ್ರ, ಶುಂಠಿ, ನೈದಿಲೆಗೆಡ್ಡೆ, (೫) ಅಗಳುಶುಂಠಿ, ಕೊನ್ನಾರೀ ಗೆಡ್ಡೆ, ಅರಿಶಿನ, ಮರದರಿಶಿನ, ಹಿಪ್ಪಲಿ, ಕೊಡಶಿಗೇಬೀಜ, ಮತ್ತು ತೊಗಟೆ ಹಶಿಶುಂಠಿ, ಕೊನ್ನಾರೀಗೆಡ್ಡೆ, ಬಜೆ, ಈ ೬ ಯೋಗಗಳೂ ಪಿತ್ತಾತಿಸಾರವನ್ನು ನಿವಾರಣೆಮಾಡು ತ್ತವೆ ; ಬಿಲ್ವಪತ್ರೆಯಹೀಚು, ಕೊಡಶಿಗೆಬೀಜ, ಕೊನ್ನಾರೀಗೆಡ್ಡೆ, ಮುಡಿವಾಳ, ಅತಿಬಜೆ ಗಳ ಕಷಾಯವು ಪಿತ್ತಜ ಆಮಾತಿಸಾರಹರವು.

ಮಧುಕೋತ್ಪಲಬಿಲ್ವಾಬ್ದಹ್ರೀಬೇರೋಶೀರನಾಗರೈಃ |
ಕೃತಃ ಕ್ವಾಥೋ ಮಧುಯುತಃ ಪಿತ್ತಾತೀಸಾರನಾಶನಃ ||೬೭||
ಯದಾಪಕ್ವೋಽಪ್ಯತೀಸಾರಃ ಸರತ್ಯೇವ ಮುಹುರ್ಮುಹುಃ |
ಗ್ರಹಣ್ಯಾ ಮಾರ್ದವಾಜ್ಜನ್ತೋಸ್ತತ್ರ ಸಂಸ್ತಮ್ಭನಂ ಹಿತಮ್ ||೬೮||

ಅತಿಮಧುರ, ನೈದಿಲೆಗೆಡ್ಡೆ, ಬಿಲ್ವಪತ್ರೆಯಹೀಚು ಕಾಯಿ, ಕೊನ್ನಾರೀಗೆಡ್ಡೆ, ಮುಡಿವಾಳ, ಲಾಮಂಚ, ಶುಂಠಿ, ಇವುಗಳ ಕಷಾಯಕ್ಕೆ ಜೇನುತುಪ್ಪವನ್ನು ಬೆರಸಿ ಕುಡಿಸಿದರೆ ಪಿತ್ತಾತಿಸಾರಹರವು. ಪಕ್ವಾತಿಸಾರದಲ್ಲಿ ಗ್ರಹಣಿಯು ಮೃದುವಾಗಿರುವ

ಕಾರಣ ಆಗಾಗ್ಗೆ ಮಲಸ್ರಾವವಾಗುತ್ತಿದ್ದರೆ ಆಗ ಸ್ತಂಭನೌಷಧವನ್ನು ಪ್ರಯೋಗಿಸಿದರೆ ಹಿತಕರವಾಗುತ್ತದೆ.

ಸಮಙ್ಗಾ ಧಾತಕೀಪುಷ್ಪಂ ಮಞ್ಜಿಷ್ಠಾ ಲೋಧ್ರ ಮುಸ್ತಕಮ್ ।
ಶಾಲ್ಮಲೀವೇಷ್ಟಕಂ ರೋಧ್ರಂ ವೃಕ್ಷದಾಡಿಮಯೋಸ್ತ್ವ ಚೌ ॥೧೯॥
ಆಮ್ರಾಸ್ಥಿಮಧ್ಯಂ ಲೋಧ್ರಂ ಚ ಬಿಲ್ವಮಧ್ಯಂ ಪ್ರಿಯಙ್ಗವಃ ।
ಮಧುಕಂ ಶೃಙ್ಗವೇರಂ ಚ ದೀರ್ಘವೃನ್ತತ್ವಗೇವ ಚ ॥೨೦॥
ಚತ್ವಾರ ಏತೇ ಯೋಗಾಃ ಸ್ಯುಃ ಪಕ್ವಾತೀಸಾರನಾಶನಾಃ ।
ಉಕ್ತಾ ಯ ಉಪಯೋಜ್ಯಾಸ್ತೇ ಸಕ್ಷೌದ್ರಾಸ್ತಣ್ಡುಲಾಮ್ಬು ನಾ ॥೨೧॥
ಮೌಸ್ತಂ ಕಷಾಯಮೇಕಂ ವಾ ಪೇಯಂ ಮಧುಸಮಾಯುತಮ್ ।
ಲೋಧ್ರಾಮ್ಬಷ್ಠಾ ಪ್ರಿಯಙ್ಗ್ವಾದೀರ್ ಗಣಾನೇವಂ ಪ್ರಯೋಜಯೇತ್ ॥೨೨॥

(೧) ಮುಟ್ಟಿದರೆಮುನಿ (ನಾಚಿಕೆಸೊಪ್ಪು), ಧಾತಕೀಕುಸುಮ, ಮಂಜಿಷ್ಠ ಲೋಧ್ರ, ಕೊನ್ನಾರೀಗೆಡ್ಡೆ (೨) ಬೂರಗದನೇಣ, ರೋಧ್ರ, ಕೊಡಶಿಗೇತೊಗಟೆ, ದಾಳಿಂಬೇಸಿಪ್ಪೆ, (೩) ಮಾವಿನಬೀಜ, ಲೋಧ್ರ, ಬಿಲ್ವಪತ್ರೆ ಹಣ್ಣಿನ ತಿರಳು, ನೆಳಲು (೪) ಅತಿಮಧುರ, ಹಶಿಶುಂಠಿ, ಹೆಮ್ಮರದ ತೊಗಟೆ ಈ ೪ ಯೋಗಗಳು. ಪ್ರತಿ ಯೋಗದದ್ರವ್ಯಗಳನ್ನೂ ಕಲಗಚ್ಚಿನಲ್ಲಿ ಕದರಿ ಜೇನುತುಪ್ಪ ಸೇರಿಸಿ ಕುಡಿಸಿದರೆ ಪಕ್ವಾತೀಸಾರವು ನಿವಾರಣೆಯಾಗುತ್ತದೆ ; ಕೊನ್ನಾರೀಗೆಡ್ಡೆಯ ಕಷಾಯವೊಂದನ್ನೇ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಪಕ್ವಾತಿಸಾರಹರವು, ಲೋಧ್ರ, ಅಗಳುಶಂಠಿ, ನೆಳಲು ಮೊದಲಾದುವನ್ನು ಅಂದರೆ ಲೋಧ್ರಾದಿಗಣದ್ರವ್ಯಗಳನ್ನೂ, ಅಂಬಷ್ಠಾದಿಗಣದ್ರವ್ಯವನ್ನೂ ಪ್ರಿಯಂಗ್ವಾದಿಗಣದ್ರವ್ಯಗಳನ್ನೂ ಪ್ರತ್ಯೇಕವಾಗಿ ಜೇನುತುಪ್ಪಮಿಶ್ರಮಾಡಿ ಸೇವಿಸಿದರೆ ಪಕ್ವಾತಿಸಾರಹರವು.

ಪದ್ಮಾಂ ಸಮಙ್ಗಾಂ ಮಧುಕಂ ಬಿಲ್ವಜಮ್ಬೂಶಲಾಟು ವಾ ।
ಪಿಬೇತ್ ತಣ್ಡುಲತೋಯೇನ ಸಕ್ಷೌದ್ರಮುಗದಂಕರಮ್ ॥೨೩॥
ಕಚ್ಚುರಾಮೂಲಕಲ್ಕಂ ವಾ ಉದುಮ್ಬರಫಲೋಪಮಮ್ ।
ಪಯಸ್ಯಾ ಚನ್ದನಂ ಪದ್ಮಾ ಸಿತಾ ಮುಸ್ತಾಬ್ಜಕೇಸರಮ್ ॥೨೪॥
ಪಕ್ವಾತಿಸಾರಂ ಯೋಗೋಽಯಂ ಜಯೇತ್ಪೀತಃ ಸಶೋಣಿತಮ್ ।
ನಿರಾಮರೂಪಂ ಶೂಲಾರ್ತಂ ಲಙ್ಘನಾದ್ಯೈಶ್ಚ ಕರ್ಶಿತಮ್ ॥೨೫॥
ನರಂ ರೂಕ್ಷಮವೇಕ್ಷ್ಯಾಗ್ನಿಂ ಸಕ್ಷಾರಂ ಪಾಯಯೇದ್ಘೃತಮ್ ।
ಬಲಾ ಬೃಹತ್ಯಂಶುಮತೀ ಕಚ್ಚುರಾಮೂಲಸಾಧಿತಮ್ ॥೨೬॥
ಮಧೂಕ್ಷಿತಂ ಸಮಧುಕಂ ಪಿಬೇಚ್ಛೂಲೈರಭಿದ್ರುತಃ ।

ಗಂಟುಪರಂಗಿ, ಮುಟ್ಟಿದರೆಮುನಿ, ಅತಿಮಧುರ, ಬಿಲ್ವಪತ್ರೆಯ ಹೀಚುಕಾಯಿ, ನೇರಳೇಕಾಯಿ, ಇವುಗಳ ಕಲ್ಕವನ್ನು ಕಲಗಚ್ಚಿನಲ್ಲಿ ಕದರಿ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಪಕ್ವಾತಿಸಾರಹರವು ; ತುರುಚದಬೇರಿನ ಕಲ್ಕ ೧ ಕರ್ಷದಷ್ಟನ್ನು ಕಲಗಚ್ಚಿ

ನಲ್ಲಿ ಕದರಿ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಪಿತ್ತವಾದ ಪಕ್ವಾತಿಸಾರಹರವಾಗುತ್ತದೆ ; ಕ್ಷೀರಕಾಕೋಳಿ, ರಕ್ತಚಂದನ, ಗಂಟುಪರಂಗಿ, ಸಕ್ಕರೆ, ಕೊನಾರೀಗೆಡ್ಡೆ, ತಾವರೆಕುಸುಮ, ಇವುಗಳ ಕಲ್ಕವನ್ನು ಕಲಗಚ್ಚಿನಲ್ಲಿ ಕದರಿ ಜೇನುತುಪ್ಪವನ್ನು ಬೆರೆಸಿ ಕುಡಿಸಿದರೆ ರಕ್ತಮಿಶ್ರವಾದ ಪಕ್ವಾತಿಸಾರವು ನಿವಾರಣೆಯಾಗುತ್ತದೆ ; ಆಮಾವಸ್ಥೆಯನ್ನು ಮೀರಿ ಪಕ್ವಾವಸ್ಥೆಯನ್ನು ಹೊಂದಿ ಶೂಲೆಯಿಂದ ಕೂಡಿದ್ದು ಲಂಘನಾದಿಕ್ರಮಗಳಿಂದ ಕೃಶನಾಗಿರುವ ರೋಗಿಗೆ ರೂಕ್ಷನಾಗಿ ಅಗ್ನಿವೃದ್ಧಿಯಾಗಿರುವಾಗ ಕ್ಷಾರಮಿಶ್ರ ಮಾಡಿದ ಘೃತಪಾನವನ್ನು ಮಾಡಿಸಬೇಕು ; ಹೊಟ್ಟೆನೋವಿನಿಂದಕೂಡಿದ ಪಕ್ವಾತಿಸಾರ ರೋಗಿಗೆ ಕಳ್ಳಂಗಡಲೆ, ಹೆಗ್ಗುಳ, ಮೂರೆಲೆಹೊನ್ನೆ ತುರುಚದಬೇರು, ಇವುಗಳೊಡನೆ ಅತಿಮಧುರವನ್ನು ಸೇರಿಸಿ ಕಷಾಯಮಾಡಿ ಸ್ವಲ್ಪ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಗುಣವಾಗುತ್ತದೆ.

ದಾರ್ವೀ ಬಿಲ್ವ ಕಣಾ ದ್ರಾಕ್ಷಾ ಕಟುಕೇನ್ದ್ರಯವೈರ್ಘೃತಮ್ ॥೭೭॥
ಸಾಧಿತಂ ಹನ್ತ್ಯತೀಸಾರಂ ವಾತಪಿತ್ತ ಕಫಾತ್ಮಕಮ್ ।
ದಧ್ನಾ ಚಾಮ್ಲೇನ ಸಂಪಕ್ವಂ ಸವ್ಯೋಷಾಜಾಜಿಚಿತ್ರಕಮ್ ॥೭೮॥
ಸ ಚವ್ಯ ಪಿಪ್ಪಲೀಮೂಲಂ ದಾಡಿಮೈರ್ವಾ ರುಗರ್ದಿತಃ ।
ಪಯೋ ಘೃತಂ ಚ ಮಧು ಚ ಪಿಬೇಚ್ಛೂಲೈರಭಿದ್ರುತಃ ॥೭೯॥
ಸಿತಾಜಮೋದಕಟ್ವಙ್ಗಮಧುಕೈರವಚೂರ್ಣಿತಮ್ ।

ಮರದರಿಶಿನ, ಬಿಲ್ವಪತ್ರೆಯಹೀಚು (ಎಳಸಾದಕಾಯಿ) ಹಿಪ್ಪಲಿ, ದ್ರಾಕ್ಷಿ, ಕಟುಕರೋಹಿಣೀ, ಕೊಡಶಿಗೆಬೀಜ, ಇವುಗಳ ಕಲ್ಕದೊಡನೆ ತಯಾರಿಸಿದ ಘೃತವು ವಾತಕಫಾತ್ಮಕವಾದ ಅತೀಸಾರವನ್ನು ನಿವಾರಣೆಮಾಡುತ್ತದೆ ; ಅತಿಸಾರಪೀಡಿತನಿಗೆ ಹುಳಿಮೊಸರಿಗೆ ತ್ರಿಕಟು, ಜೀರಿಗೆ, ಚಿತ್ರಮೂಲ, ಚವ್ಯ, ಮೋಡಿ, ದಾಳಿಂಬೆರಸ ಇವನ್ನು ಸೇರಿಸಿ ಪಕ್ವಮಾಡಿ ಕುಡಿಸಬೇಕು. ಶೂಲೆಯಿಂದ ಪೀಡಿತನಾದರೆ ಹಾಲು, ತುಪ್ಪ, ಜೇನುತುಪ್ಪಗಳಿಗೆ ಸಕ್ಕರೆ, ಓಮು, ಹೆಮ್ಮರದತೊಗಟೆ, ಅತಿಮಧುರಗಳ ಚೂರ್ಣವನ್ನು ಮಿಶ್ರಮಾಡಿ ಕುಡಿಸಿದರೆ ಹಿತಕರವಾಗುತ್ತದೆ.

ಅವೇದನಂ ಸುಸಂಪಕ್ವಂ ದೀಪ್ತಾಗ್ನೇಃ ಸುಚಿರೋತ್ಥಿತಮ್ ॥೮೦॥
ನಾನಾವರ್ಣಮತೀಸಾರಂ ಪುಟಪಾಕೈರುಪಾಚರೇತ್ ।
ತ್ವಕ್ಪಿಣ್ಡಂ ದೀರ್ಘವೃನ್ತಸ್ಯ ಪದ್ಮಕೇಸರಸಂಯುತಮ್ ॥೮೧॥
ಕಾಶ್ಮರೀಪದ್ಮಪತ್ರೈಶ್ಚಾವೇಷ್ಟ್ಯ ಸೂತ್ರೇಣ ತಂ ದೃಢಮ್ ।
ಮೃದಾವಲಿಪ್ತಂ ಸುಕೃತಮಙ್ಗಾರೇಷ್ವವಕೂಲಯೇತ್ ॥೮೨॥
ಸ್ವಿನ್ನಮುದ್ಧೃತ್ಯ ನಿಷ್ಪೀಡ್ಯ ರಸಮಾದಾಯ ತಂ ತತಃ ।
ಶೀತಂ ಮಧುಯುತಂ ಕೃತ್ವಾ ಪಾಯಯೇತೋದರಾಮಯೇ ॥೮೩॥
ಜೀವನ್ತೀ ಮೇಷಶೃಙ್ಗ್ಯಾದಿಷ್ವೇವಂ ದ್ರವ್ಯೇಷು ಸಾಧಯೇತ್ ।

ನೋವಿಲ್ಲದೆ ದೀಪ್ತಾಗ್ನಿಗೆ ಬಹಳ ಕಾಲದಿಂದ ನಾನಾಬಣ್ಣಗಳಿಂದ ಅತಿಸಾರವಾಗುತ್ತಿದ್ದರೆ ಪುಟಪಾಕದಿಂದುಪಚರಿಸಬೇಕು. ಹೆಮ್ಮರದ ತೊಗಟೆಯ ಕಲ್ಕವನ್ನು ತಾವರೆ ಕುಸುಮದೊಡನೆ ಶಿವನಿ ಅಥವಾ ತಾವರೆ ಎಲೆಗಳಲ್ಲಿಟ್ಟು ಮುದುರಿ ದಾರದಿಂದ ಬಿಗಿದು ಜೇಡಿಮಣ್ಣನ್ನು ಬಳಿದು ಒಣಗಿಸಿ ಬೆಂಕಿಯ ಕೆಂಡದಲ್ಲಿಟ್ಟು ಮೆತ್ತಗೆ ಬೆಂದಮೇಲೆ ಆ ಉಂಡೆಯನ್ನು ಹೊರಕ್ಕೆ ತೆಗೆದುಕೊಂಡು ಬಟ್ಟೆಯಲ್ಲಿಟ್ಟು ಬಲವಾಗಿ ಹಿಂಡಿ ಬಂದ ರಸವು ತಣ್ಣಗಾದ ಮೇಲೆ ಜೇನುತುಪ್ಪವನ್ನು ಬೆರೆಸಿ ಅತಿಸಾರರೋಗಿಗೆ ಕುಡಿಸಬೇಕು. ಇದೇ ರೀತಿಯಾಗಿ ಪುಟಪಾಕವಿಧಾನದಿಂದ ಸಿಹಿಹಾಲೆ, ಕರ್ಕಾಟಕಶೃಂಗಿ ಮೊದಲಾದ ದ್ರವ್ಯಗಳಿಂದಲೂ ರಸವನ್ನು ತಯಾರಿಸಿ ಕುಡಿಸಬೇಕು.

ತಿತ್ತಿರಿಂ ಲುಞ್ಚಿತಂ ಸಮ್ಯಕ್‌ನಿಃಕೃಷ್ಟಾನ್ತ್ರಂ ತು ಪೂರಯೇತ್ ||೮೪||
ನ್ಯಗ್ರೋಧಾದಿತ್ವಚಾಂ ಕಲ್ಕೈಃ ಪೂರ್ವವಚ್ಚಾವಕಲ್ಪಯೇತ್ |
ರಸಮಾದಾಯ ತಸ್ಮಾಥ ಸುಸ್ವಿನ್ನಸ್ಯ ಸಮಾಕ್ಷಿಕಮ್ ||೮೫||
ಶರ್ಕರೋಪಹಿತಂ ಶೀತಂ ಪಾಯಯೇಚ್ಛೋದರಾಮಯೇ |

ಕರಿಯತಿತ್ತಿರಿ (ವೇದಪಕ್ಷಿ) ಯ ರೆಕ್ಕೆಗಳು, ಕೊಕ್ಕು, ಕಾಲಿನ ಉಗುರು ಇವುಗಳನ್ನು ಕತ್ತರಿಸಿ ಕರಳನ್ನು ಹೊರಕ್ಕೆ ತೆಗೆದು ಆಲ ಮೊದಲಾದ ಪಂಚಕ್ಷೀರವೃಕ್ಷಗಳ ತೊಗಟೆಯ ಕಲ್ಕವನ್ನು ಅದರೊಳಗೆ ತುಂಬಿ ಶಿವನಿ ಎಲೆ ಅಥವಾ ತಾವರೆ ಎಲೆಗಳನ್ನು ಮುಚ್ಚಿ ದರ್ಭೆಗಳಿಂದ ಸುತ್ತಿ ಮಣ್ಣು ಬಳಿದು ಒಣಗಿಸಿ ಕಗ್ಗಲಿಯ ಕೆಂಡದಲ್ಲಿಟ್ಟು ಚೆನ್ನಾಗಿ ಬೆಂದು ಆರಿದುದನ್ನು ಬಟ್ಟೆಯಲ್ಲಿಟ್ಟು ಹಿಂಡಿ ಆ ರಸಕ್ಕೆ ಜೇನುತುಪ್ಪವನ್ನೂ ಸಕ್ಕರೆಯನ್ನೂ ಮಿಶ್ರಮಾಡಿ ಅತಿಸಾರರೋಗಿಗೆ ಕುಡಿಸಬೇಕು.

ಲೋಧ್ರ ಚಂದನ ಯಷ್ಟ್ಯಾಹ್ವದಾರ್ವೀಪಾಠಾಸಿತೋತ್ಪಲಾನ್ ||೮೬||
ತಂಡುಲೋದಕಸಂಪಿಷ್ಟಾನ್ ದೀರ್ಘವೃನ್ತತ್ವಗನ್ವಿತಾನ್ |
ಪೂರ್ವವತ್ಕೂಲ್ಕಿತಾತ್ ತಸ್ಮಾತ್ ರಸಮಾದಾಯ ಶೀತಲಮ್ ||೮೭||
ಮಧ್ವಾಕ್ತಂ ಪಾಯಯೇಚ್ಛ್ಲೈತತ್ಕಫಪಿತ್ತೋದರಾಮಯೇ |
ಏವಂ ಪ್ರರೋಹೈಃ ಕುರ್ವೀತ ವಟಾದೀನಾಂ ವಿಧಾನವಿತ್ ||೮೮||
ಪುಟಪಾಕಾನ್ ಯಥಾಯೋಗಂ ಜಾಙ್ಗಲೋಪಹಿತಾನ್ ಶುಭಾನ್ |

ಲೋಧ್ರ, ರಕ್ತಚಂದನ, ಅತಿಮಧುರ, ಮರದರಿಶಿನ, ಅಗಳುಶುಂಠಿ, ಬಿಳಿಯ ನೈದಿಲೆ ಗೆಡ್ಡೆ, ಹೆಮ್ಮರದ ತೊಗಟೆ ಇವೆಲ್ಲವನ್ನೂ ಕಲಗಚ್ಚಿನಿಂದ ಅರೆದು ಉಂಡೆಮಾಡಿ ಪುಟಪಾಕ ವಿಧಾನದಿಂದ ಬೇಯಿಸಿ ಹೊರಕ್ಕೆ ತೆಗೆದು ಹಿಂಡಿ ಶೋಧಿಸಿದ ಆ ರಸವು ತಣ್ಣಗಾದಮೇಲೆ ಜೇನುತುಪ್ಪವನ್ನು ಹಾಕಿ ಕಫಪಿತ್ತಾತಿಸಾರಗಳಲ್ಲಿ ಕುಡಿಸಬೇಕು. ಈ ರೀತಿ ಪುಟಪಾಕ ವಿಧಾನವನ್ನು ತಿಳಿದ ಪಂಡಿತನು ಆಲ ಮೊದಲಾದ ಕ್ಷೀರವೃಕ್ಷಗಳ ಅಂಕುರ (ಚಿಗುರುಗಳ ತುದಿಭಾಗ)ಗಳ ಕಲ್ಕವನ್ನು ಲಾವ, ಕಪಿಂಜಲಾದಿ ಜಾಂಗಲಪಕ್ಷಿಗಳ ದೇಹದೊಳಕ್ಕೆ ತುಂಬಿ ಪುಟಪಾಕವಿಧಾನದಿಂದ ಪಾಕಮಾಡಿ ದೋಷಾನುಸಾರ ಕುಡಿಸಬೇಕು.

ಬಹುಶ್ಲೇಷ್ಮಸರಕ್ತಂ ಚ ಮನ್ದವಾತಂ ಚಿರೋತ್ಥಿತಮ್ ||೮೯||
ಕೌಟಜಂ ಫಾಣಿತಂ ವಾಪಿ ಹನ್ತ್ಯತೀಸಾರಮೋಜಸಾ ।
ಅಮ್ಬಷ್ಠಾದಿರ್ಮಧುಯುತಂ ಪಿಪ್ಪಲಾದಿಸಮನ್ವಿತಮ್ ||೯೦||

ಕಫಾಧಿಕವಾಗಿ ರಕ್ತಮಿಶ್ರವಾಗಿ ಸ್ವಲ್ಪವಾತವುಳ್ಳ ಬಲುಕಾಲದಿಂದ ಪೀಡಿಸುವ ಅತಿಸಾರವನ್ನುಕೊಡಶಿಗೆತೊಗಟೆಯಿಂದ ತಯಾರಿಸಿದ ರಸಕ್ರಿಯೆಯುಪಾನವು ನಿವಾರಣೆ ಮಾಡುತ್ತದೆ. ರಸಕ್ರಿಯೆಯನ್ನು ತಯಾರಿಸುವ ವಿಧಾನವು ಹೇಗೆಂದರೆ:—ದಪ್ಪಕಾಯಿ ಬಿಳಿಯ ಹೂವುಳ್ಳ ಗಂಡುಜಾತಿಯ ಕೊಡಶಿಗೆ ತೊಗಟೆಗೆ ೧೬, ೮, ೪, ರಷ್ಟು ನೀರನ್ನು ಸೇರಿಸಿ ಅರ್ಧ ಕಷಾಯವು ನಿಲ್ಲುವಂತೆ ಕಾಯಿಸಿ ಶೋಧಿಸಿದ ಆ ಕಷಾಯಕ್ಕೆ ಅಗಳುಶುಂಠಿ ಮತ್ತು ಪಿಪ್ಪಲ್ಯಾದಿ ಗಣದ್ರವ್ಯಗಳ ಚೂರ್ಣವನ್ನು ಹಾಕಿ ರಸ ಕ್ರಿಯೆಯಂತೆ ಆಗುವವರೆಗೂ ಮಂದಾಗ್ನಿಯಿಂದ ಕಾಯಿಸಬೇಕು; ಕೆಲವು ವೈದ್ಯರು ಕೊಡಶಿಗೆ ತೊಗಟೆಯನ್ನು ಕಷಾಯ ಮಾಡಿ ಶೋಧಿಸಿ ಪುನಃ ಫಾಣಿತವಾಗುವವರೆಗೂ ಕಾಯಿಸಬೇಕೆಂದು ಹೇಳುತ್ತಾರೆ.

ಪೃಶ್ನಿಪರ್ಣೀಬಲಾಬಿಲ್ವವಾಲಕೋತ್ಪಲಧಾನ್ಯಕೈಃ ।
ಸನಾಗರೈಃ ಪಿಬೇತ್ಪೇಯಾಂ ಸಾಧಿತಾಮುದರಾಮಯೀ ||೯೧||
ಅರಲುತ್ವಕ್ಪ್ರಿಯಙ್ಗುಂ ಚ ಮಧುಕಂ ದಾಡಿಮಾಙ್ಕುರಾನ್ ।
ಆವಾಪ್ಯ ಪಿಷ್ಟ್ವಾ ದಧ್ನಿ ಯವಾಗೂಂ ಸಾಧಯೇದ್ದ್ರವಾಮ್ ||೯೨||
ಏಷಾ ಸರ್ವಾನತೀಸಾರಾನ್ ಹನ್ತಿ ಪಕ್ವಾನಸಂಶಯಮ್ ।

ಒಂದೆಲೆಹೊನ್ನೆ, ಕಳ್ಳಂಗಡಲೆ, ಬಿಲ್ವಪತ್ರೆ, ಮುಡಿವಾಳ, ನೈದಿಲೇಗೆಡ್ಡೆ, ಕೊತ್ತಂಬರಿ, ಶುಂಠಿ, ಇವುಗಳ ಕಷಾಯದಿಂದ ತಯಾರಿಸಿದ ಗಂಜಿಯನ್ನು ಪಕ್ವಾತೀಸಾರಿಯು ಕುಡಿಯಬೇಕು ; ಹೆಮ್ಮರದ ತೊಗಟೆ, (ಪ್ರೇಂಖಣ) ನೆಳಲು, ಅತಿಮಧುರ, ದಾಳಿಂಬೆ ಚಿಗುರುಗಳನ್ನು ಮೊಸರಿನಿಂದ ಅರೆದ ನೀರಾಗಿ ಯವಾಗೂವನ್ನು ತಯಾರಿಸಿ ಕುಡಿಸಿದರೆ ಎಲ್ಲಾ ವಿಧದ ಪಕ್ವಾತೀಸಾರಗಳು ಸಂದೇಹವಿಲ್ಲದೆ ಗುಣವಾಗುತ್ತವೆ.

ರಸಾಞ್ಜನಂ ಸಾತಿವಿಷಂ ತ್ವಗ್ಬೀಜಂ ಕೌಟಜಂ ತಥಾ ||೯೩||
ಧಾತಕೀ ನಾಗರಂ ಚೈವ ಪಾಯಯೇತ್ ತಂಡುಲಾಮ್ಬುನಾ ।
ಸಶೂಲಂ ರಕ್ತಜಂ ಘ್ನನ್ತಿ ಏತೇ ಮಧುಸಮನ್ವಿತಾಃ ||೯೪||
ಮಧುಕಂ ಬಿಲ್ವಪೇಶೀ ಚ ಶರ್ಕರಾ ಮಧು ಸಂಯುತಾ ।
ಅತೀಸಾರಂ ನಿಹನ್ತ್ಯಾಶು ಶಾಲಿಷಷ್ಟಿಕಯೋಃ ಕಣಾಃ ||೯೫||
ತದ್ವಲ್ಲೀಢಂ ಮಧುಯುತಂ ಬದರೀಮೂಲಮೇವ ತು ।
ಬದರ್ಯರ್ಜುನಜಮ್ಬ್ವಾಮ್ರಶಲ್ಲಕೀವೇತಸತ್ವಚಃ ||೯೬||
ಶರ್ಕರಾ ಕ್ಷೌದ್ರಸಂಯುಕ್ತಾಃ ಪೀತಾ ಘ್ನನ್ತ್ಯುದರಾಮಯಮ್ ।
ಏತೈರೇವ ಯವಾಗೂಂಶ್ಚ ಷಡಾರ್ಯೂಷಾಂಶ್ಚ ಕಾರಯೇತ್ ||೯೭||
ಪಾನೀಯಾನಿ ಚ ತೃಷ್ಣಾಸು ದ್ರವ್ಯೇಷ್ವೇತೇಷು ಬುದ್ಧಿಮಾನ್ ।

ಕೃತಂ ಶಾಲ್ಮಲಿವೃನ್ತೇಷು ಕಷಾಯಂ ಹಿಮಸಂಜ್ಞಕಮ್ ||೯೮||
ನಿಶಾಪರ್ಯುಷಿತಂ ಪೇಯಂ ಸಕ್ಷೌದ್ರಂ ಮಧುಕಾನ್ವಿತಮ್ |

ರಸಾಂಜನ, ಅತಿಬಜೆ, ಕೊಡಶಿಗೆತೊಗಟೆ ಕೊಡಶಿಗೇಬೀಜ, ಧಾತಕೀ, ಕುಸುಮ, ಶುಂಠಿ, ಇವುಗಳ ಕಲ್ಕವನ್ನು ಅಕ್ಕಿ ತೊಳೆದ ನೀರಿನಲ್ಲಿ ಕದರಿ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಶೂಲೆಯಿಂದ ಕೂಡಿದ ರಕ್ತಾತಿಸಾರವು ನಿವಾರಣೆಯಾಗುತ್ತದೆ ; ಅತಿಮಧುರ, ಬಿಲ್ವಪತ್ರೆಯಹೀಚು, ಸಕ್ಕರೆ ಪಷ್ಟಿಕಶಾಲಿ ಇವುಗಳನ್ನು ಕಲಗಚ್ಚಿನಲ್ಲಿ ಅರೆದು ಕದರಿ ಜೇನುತುಪ್ಪದಿಂದ ರಂಗಳಿಸಿ ಕುಡಿಸಿದರೆ ಬೇಗನೆ ಅತಿಸಾರವು ನಿವಾರಣೆಯಾಗುತ್ತದೆ ; ಇದೇ ರೀತಿಯಾಗಿ ಎಲಚೀಬೇರಿನ ತೊಗಟೆಯನ್ನು ಕಲಗಚ್ಚಿನಲ್ಲಿ ಅರೆದು ಕದರಿ ಜೇನುತುಪ್ಪವನ್ನು ಬೆರೆಸಿ ಕುಡಿಸಿದರೆ ಪಕ್ವಾತಿಸಾರಹರವಾಗುತ್ತದೆ ; ಎಲಚೀ, ಮತ್ತಿ, ನೇರಳೆ, ಮಾವು, ನಾಯಿಬೇಲ, ನೀರಂಜಿ, ಇವುಗಳ ತೊಗಟೆಗಳನ್ನು ಕಲಗಚ್ಚಿನಲ್ಲರೆದು ಕಲ್ಕಮಾಡಿ ಕದರಿ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಿದರೆ ಅತೀಸಾರವು ನಿವಾರಣೆಯಾಗುತ್ತದೆ ; ಬುದ್ಧಿವಂತನಾದ ವೈದ್ಯನು ಈ ದ್ರವ್ಯಗಳಿಂದಲೇ ಯವಾಗೂ, ಖಡ, ಯೂಷ, ಪಾನೀಯಗಳನ್ನು ತಯಾರಿಸಿ ಕುಡಿಸಿದರೆ ನೀರಡಿಕೆಯು ನಿವಾರಣೆಯಾಗುತ್ತದೆ ; ಬೂರಗದ ಮೊಗ್ಗಿನ ತೊಟ್ಟುಗಳಿಂದ ಶೀತಕಷಾಯವನ್ನು ತಯಾರಿಸಿ ರಾತ್ರಿಯಲ್ಲಿಟ್ಟು ಅತಿಮಧುರದಚೂರ್ಣ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಿದರೆ ಅತಿಸಾರಹರವು.

ಶೀತಕಷಾಯ ವಿಧಾನ—ಉಪಯೋಗಿಸುವ ಚೂರ್ಣದ ೪ ಪಲದ್ರವ್ಯಗಳನ್ನು ೪ ಪಲಪ್ರಮಾಣ ನೀರಿನಲ್ಲಿ ಕದರಿ ರಾತ್ರಿಯವೇಳೆಯೆಲ್ಲಾ ಇಟ್ಟದ್ದು ಬೆಳಗಾದಮೇಲೆ ಚೆನ್ನಾಗಿ ಹಿಸುಕಿ ಬಟ್ಟೆಯಲ್ಲಿ ಹಾಕಿ ಹಿಂಡಿದ ಕಷಾಯ ೪ ಪಲಕ್ಕೆ ಅತಿಮಧುರದ ಪುಡಿ ಮತ್ತು ಜೇನುತುಪ್ಪಗಳನ್ನು ಒಂದೊಂದುಕರ್ಷ ಪ್ರಮಾಣದಷ್ಟು ಸೇರಿಸಿ ಕುಡಿಸಿದರೆ ಪಕ್ವಾತೀಸಾರ ಹರವಾಗುತ್ತದೆ.

ವಿಬದ್ಧವಾತವಿಟ್‌ಶೂಲಪರೀತಃ ಸಪ್ರವಾಹಿಕಃ ||೯೯||
ಸರಕ್ತಪಿತ್ತಶ್ಚಪಯಃ ಪಿಬೇತ್ ತೃಷ್ಣಾ ಸಮನ್ವಿತಃ |
ಯಥಾಮೃತಂ ತಥಾಕ್ಷೀರಮತೀಸಾರೇಷು ಪೂಜಿತಮ್ ||೧೦೦||
ಚಿರೋತ್ಥಿತೇಷು ತತ್ಪೇಯಮಪಾಂ ಭಾಗೈಸ್ತ್ರಿಭಿಃ ಶೃತಮ್ |
ದೋಷಶೇಷಂ ಹರೇತ್ತದ್ಧಿ ತಸ್ಮಾತ್ ಪಥ್ಯತಮಂ ಸ್ಮೃತಮ್ ||೧೦೧||
ಹಿತಃ ಸ್ನೇಹವಿರೇಕೋ ವಾ ಬಸ್ತಯಃ ಪಿಚ್ಛಿಲಾಶ್ಚ ಯೇ |
ಪಿಚ್ಛಿಲಸ್ವರಸೇ ಸಿದ್ಧಂ ಹಿತಂ ಚ ಘೃತಮುಚ್ಯತೇ ||೧೦೨||

ವಾತವೂ ಮಲವೂ ತಡೆಯಲ್ಪಟ್ಟು ಶೂಲೆಯಿಂದ ಕೂಡಿ ಪ್ರವಾಹಿಕೆಯೊಡನೆಯೂ (ಆನುಶಂಕೆಯಿಂದ ಕೂಡಿ) ರಕ್ತಪಿತ್ತದಿಂದಲೂ ಪಿಚ್ಛಾಬಸ್ತಿಯಿಂದಲೂ ಪೀಡಿತನಾದ ಅತಿಸಾರರೋಗಿಗೆ ಅಮೃತಪಾನದಂತೆ ಹಾಲಿಗೆ ೩ ರಷ್ಟು ನೀರನ್ನು ಮಿಶ್ರ

ಮಾಡಿ ಕಾಯಿಸಿ ಕುಡಿಸಿದರೆ ಹಳೆಯದಾದ ಆಮದೋಷಗಳ ಶೇಷಗಳೆಲ್ಲವನ್ನೂ ನಿವಾರಿಸುತ್ತದೆ. ಅತ್ಯಂತ ಪಥ್ಯಕರವಾದ ವಿರೇಚನ ದ್ರವ್ಯಗಳೊಡನೆ ತಯಾರಿಸಿದ ಘೃತ ಸ್ನೇಹಗಳೂ, ಪಿಚ್ಛಾಬಸ್ತಿಯೂ, ಪಿಚ್ಛಿಲ ದ್ರವ್ಯಗಳನ್ನು ಸೇರಿಸಿ ತಯಾರಿಸಿದ ಘೃತಗಳೂ ಅತಿಸಾರವನ್ನು ನಿವಾರಣೆ ಮಾಡುತ್ತವೆ.

ಶಕೃತಾ ಯಸ್ತು ಸಂಸೃಷ್ಟಮತಿಸಾರ್ಯೇತ ಶೋಣಿತಮ್ ।
ಪ್ರಾಕ್‌ಪಶ್ಚಾದ್ವಾ ಪುರೀಷಸ್ಯ ಸರುಕ್ ಸಪರಿಕರ್ತಿಕಃ ॥೧೦೩॥
ಕ್ಷೀರಿಶುಙ್ಗಾಶೃತಂಸರ್ಪಿಃ ಪಿಬೇತ್ ಸಕ್ಷೌದ್ರಶರ್ಕರಮ್ ।
ದಾರ್ವೀತ್ವಕ್ಪಿಪ್ಪಲೀ ಶುಂಠೀ ಲಾಕ್ಷಾ ಶಕ್ರಯವೈರ್ಘೃತಮ್ ॥೧೦೪॥
ಸಂಯುಕ್ತಂ ಭದ್ರರೋಹಿಣ್ಯಾ ಪಕ್ವಂ ಪೇಯಾದಿಮಿಶ್ರಿತಮ್ ।
ತ್ರಿದೋಷಮಪ್ಯತೀಸಾರಂ ಪೀತಂ ಹನ್ತಿ ಸುದಾರುಣಮ್ ॥೧೦೫॥
ಗೌರವೇ ವಮನಂ ಪಥ್ಯಂ ಯಸ್ಯ ಸ್ಯಾತ್ಪ್ರಬಲಃ ಕಫಃ ।
ಜ್ವರೇ ದಾಹೇ ಸವಿಡ್ಬನ್ಧೇ ಮಾರುತಾದ್ರಕ್ತಪಿತ್ತವತ್ ॥೧೦೬॥
ಸಂಪಕ್ವೇ ಬಹುದೋಷೇ ಚ ವಿಬನ್ಧೇ ಮೂತ್ರಶೋಧನೈಃ ।
ಕಾರ್ಯಮಾಸ್ಥಾಪನಂ ಕ್ಷಿಪ್ರಂ ತಥಾ ಚೈವಾನುವಾಸನಮ್ ॥೧೦೭॥
ಪ್ರವಾಹಣೇ ಗುದಭ್ರಂಶೇ ಮೂತ್ರಾಘಾತೇ ಕಟಿಗ್ರಹೇ ।
ಮಧುರಾಮ್ಲಶೃತಂ ತೈಲಂ ಸರ್ಪಿರ್ವಾಪ್ಯನುವಾಸನಮ್ ॥೧೦೮॥

ಯಾರಿಗೆ ಮಲದೊಡನೆ ರಕ್ತಮಿಶ್ರವಾಗಿಯಾಗಲೀ, ಮಲಕ್ಕಿಂತ ಮುಂಚೆಯಾಗಲೀ ಮಲವಿಸರ್ಜನೆಯಾದಮೇಲಾಗಲೀ ನೋವಿನಿಂದ ಕೂಡಿ ರಕ್ತಸ್ರಾವವಾದರೆ ಮತ್ತು ಬಸ್ತಿಗುದಮೇಢ್ರಗಳಲ್ಲಿ ಚುಚ್ಚಿದಂತೆ ವಾತವೇದನೆಯುಂಟಾದರೆ (ಇದಕ್ಕೆ 'ಪರಿಕರ್ತಿಕ' ವೆಂದು ಹೆಸರು) ಇದಕ್ಕೆ ಆಲ, ಅರಳಿ ಮೊಗ್ಗು, ಚಿಗುರೆಲೆಗಳಿಂದ ತಯಾರಿಸಿದ ತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು. ಮರದರಿಶಿನದ ತೊಗಟೆ, ಹಿಪ್ಪಲಿ, ಶುಂಠಿ, ಅರಗು, ಕೊಡಶಿಗೆ ಬೀಜ, ಕಟುಕರೋಹಿಣಿಗಳೊಡನೆ ತಯಾರಿಸಿದ ತುಪ್ಪವನ್ನು ಪೇಯಾ, ವಿಲೇಪೀ ಮೊದಲಾದುವುಗಳೊಡನೆ ಮಿಶ್ರ ಮಾಡಿ ಕುಡಿಸಿದರೆ ಅತಿ ಭಯಂಕರವಾದ ತ್ರಿದೋಷಾತಿಸಾರವೂ ನಿವಾರಣೆಯಾಗುತ್ತದೆ. ಕಫವು ಅಧಿಕವಾಗಿ ಹೊಟ್ಟೆಭಾರವಾಗಿದ್ದರೆ ಅಧೋಗರಕ್ತಪಿತ್ತದ ಚಿಕಿತ್ಸೆಯಂತೆಯೇ ವಮನೌಷಧಿಯನ್ನು ಪ್ರಯೋಗಿಸಬೇಕು. ಜ್ವರ ಮೈ ಉರಿತ ವಾತಪ್ರಕೋಪದಿಂದುಂಟಾದ ಮಲಬಂಧ ಇವುಗಳಲ್ಲಿ ಕಫವೃದ್ಧಿಯಾಗಿದ್ದರೆ ಅಧೋಗತ ರಕ್ತಪಿತ್ತದಲ್ಲಿ ಮಾಡುವಂತೆಯೇ ಕಫಹರಣ ಮಾಡಲು ವಮನೌಷಧ ಪ್ರಯೋಗವು ಹಿತಕರವು. ಪಕ್ವಾತಿಸಾರದಲ್ಲಿ ಬಹುದೋಷಯುಕ್ತವಾದ ಮಲಬಂಧವಿದ್ದರೆ, ಮೂತ್ರಶೋಧಕಗಳಾದ ತೃಣಪಂಚಮೂಲಾದಿ ಕಷಾಯಗಳಿಂದ ಆಸ್ಥಾಪನಬಸ್ತಿ ಅನುವಾಸನಬಸ್ತಿಗಳನ್ನು ಪ್ರಯೋಗಿಸಬೇಕು. ಆಮಶಂಕೆ (ಮುಲಿಕಿ ಮಲವಿಸರ್ಜನೆ ಮಾಡುವುದು), ಗುದಭ್ರಂಶ, ಮೂತ್ರಾಘಾತ, ಸೊಂಟ ಹಿಡಿದು

ಕೊಂಡಿರುವಾಗ ಮಧುರಗಣದ್ರವ್ಯಗಳಿಂದಲೂ ಆಮ್ಲಗಣದ್ರವ್ಯಗಳಿಂದಲೂ ತಯಾರಿಸಿದ ತೈಲದಿಂದಾಗಲೀ ಅನುವಾಸನಬಸ್ತಿಯನ್ನು ಪ್ರಯೋಗಿಸಬೇಕು.

ಗುದಪಾಕಸ್ತು ಪಿತ್ತೇನ ಯಸ್ಯಸ್ಯಾದಹಿತಾಶಿನಃ ।
ತಸ್ಯ ಪಿತ್ತಹರಾಃ ಸೇಕಾಸ್ತತ್ಸಿದ್ಧಾಶ್ಚಾನುವಾಸನಾಃ ॥೧೦೯॥
ದಧಿಮಣ್ಡಸುರಾಬಿಲ್ವಸಿದ್ಧಂ ತೈಲಂ ಸ ಮಾರುತೇ ।
ಭೋಜನೇ ಚ ಹಿತಂ ಕ್ಷೀರಂ ಕಚ್ಛುರಾಮೂಲಸಾಧಿತಮ್ ॥೧೧೦॥
ಅಲ್ಪಾಲ್ಪಂ ಬಹುಶೋ ರಕ್ತ ಸರುಕ್ ಯ ಉಪವೇಶ್ಯತೇ ।
ಯದಾ ವಾಯುರ್ವಿಬದ್ಧಶ್ಚ ಪಿಚ್ಛಾಬಸ್ತಿಸ್ತದಾ ಹಿತಃ ॥೧೧೧॥
ಪ್ರಾಯೇಣ ಗುದದೌರ್ಬಲ್ಯಂ ದೀರ್ಘಕಾಲಾತಿಸಾರಿಣಾಮ್ ।
ಭವೇತ್ ತಸ್ಮಾದ್ಧಿತಂ ತೇಷಾಂ ಗುದೇ ತೈಲಾವಚಾರಣಮ್ ॥೧೧೨॥
ಕಪಿತ್ಥಶಾಲ್ಮಲೀಫಞ್ಜೀವನಕಾರ್ಪಾಸಿದಾಡಿಮಾಃ ।
ಯೂಥಿಕಾಕಚ್ಛುರಾ ಶೇಲುಃ ಶಣಶ್ಚ ಚ್ಛೂಃ ಸದಾಧಿಕಾಃ ॥೧೧೩॥

ಅಹಿತಾಹಾರವನ್ನು ಸೇವಿಸುವವನಿಗೆ ಪಿತ್ತದೋಷದಿಂದ ಗುದಪಾಕವುಂಟಾದರೆ ಪಿತ್ತಹರದ್ರವ್ಯಗಳ ಕಷಾಯದಿಂದ ಸೇಚನೆ ಮಾಡಬೇಕು ; ಅವುಗಳಿಂದ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು ; ವಾತದಿಂದುಂಟಾದ ಗುದಪಾಕದಲ್ಲಿ ಮೊಸರಿನಕಟ್ಟು, ಮದ್ಯ, ಬಿಲ್ವಪತ್ರೆಯ ಹೀಚುಗಳನ್ನು ಸೇರಿಸಿ ತಯಾರಿಸಿದ ತೈಲವನ್ನೂ ನಸುಗುನ್ನಿಯ ಬೇರನ್ನು ಸೇರಿಸಿ ತಯಾರಿಸಿದ ಕ್ಷೀರವನ್ನೂ ಅನ್ನಕ್ಕೆ ಹಾಕಿಕೊಂಡು ಭೋಜನ ಮಾಡಬೇಕು ; ಸ್ವಲ್ಪ ಸ್ವಲ್ಪ ರಕ್ತಮಿಶ್ರವಾಗಿ ನೋವಿನಿಂದ ಕೂಡಿ ಅನೇಕಸಾರಿ ಮಲ ಪ್ರವರ್ತಿಯೂ ಅಧೋವಾಯುವಿನ ತಡೆತವೂ ಇದ್ದರೆ ಪಿಚ್ಛಾಬಸ್ತಿಯು ಹಿತಕರವು ; ಬಹುಕಾಲದ ಅತಿಸಾರ ರೋಗಿಗೆ ಪ್ರಾಯಿಕವಾಗಿ ಗುದವು ಬಲಹೀನವಾಗಿರುತ್ತದೆಯಾಗಿ ಅಂತಹವರಿಗೆ ತೈಲದಿಂದ ಗುದದೊಳಕ್ಕೆ ಅಭ್ಯಂಗಮಾಡಿಸಿ ಬೇಲ, ಬೂರಗದತ್ವಕ್, ಗಂಟುಪರಂಗಿ, ಕಾಡುಹತ್ತಿ, ದಾಳಿಂಬೆಸಿಪ್ಪೆ, ಮೊಲ್ಲೆಮೊಗ್ಗು, ನಸುಗುನ್ನಿಯಬೇರು, ಚಳ್ಳೆಯತೊಕ್ಕು, ಶಣಬಿನ ಬೀಜ, ಚಂಚುಳಿಕೆಸೊಪ್ಪು, ಇವುಗಳ ಕಲ್ಕವನ್ನು ಮೊಸರಿನಲ್ಲಿ ಕದರಿ ಕುಡಿಸಿದರೆ ಹಿತಕರವು.

ಶಾಲಿಪರ್ಣೀ ಪೃಷ್ನಿಪರ್ಣೀ ಬೃಹತೀ ಕಣ್ಟಕಾರಿಕಾ ।
ಬಲಾಶ್ವದಂಷ್ಟ್ರಾಬಿಲ್ವಾನಿ ಪಾಠಾನಾಗರಧಾನ್ಯಕಮ್ ॥೧೧೪॥
ಏಷ ಆಹಾರಸಂಯೋಗೇ ಹಿತಃ ಸರ್ವಾತಿಸಾರಿಣಾಮ್ ।
ತಿಲಕಲ್ಕೋ ಹಿತಶ್ಚಾತ್ರ ಮೌದ್ಗೋ ಮುದ್ಗರಸಸ್ತಥಾ ॥೧೧೫॥

ಮೂರಿಲೆಹೊನ್ನೆ, ಒಂದೆಲೆಹೊನ್ನೆ, ಹೆಗ್ಗುಳ್ಳ, ನೆಲಗುಳ್ಳ, ಕಳ್ಳಂಗಡಲೆ, ನೆಗ್ಗಿಲು, ಬಿಲ್ವಪತ್ರೆಯಹೀಚು, ಅಗಳುಶುಂಠಿ, ಶುಂಠಿ, ಕೊತ್ತುಂಬರಿ ಇವುಗಳು ಆಹಾರದೊಡನೆ ಸೇರಿದರೆ ಎಲ್ಲಾ ಅತಿಸಾರಿಗಳಿಗೂ ಹಿತಕರವಾಗುತ್ತದೆ. ಎಳ್ಳಿನ ಕಲ್ಕವೂ, ಹೆಸರು ಕಲ್ಕವೂ ಮತ್ತು ಹೆಸರುಕಟ್ಟೂ ಅತಿಸಾರಿಗಳಿಗೆ ಹಿತಕರಗಳು.

ಪಿತ್ತಾತಿಸಾರೀ ಯೋ ಮರ್ತ್ಯಃ ಪಿತ್ತಲಾನ್ಯತಿಸೇವತೇ ।
ಪಿತ್ತಂ ಪ್ರದುಷ್ಟಂ ತಸ್ಯಾಶು ರಕ್ತಾತಿಸಾರಮಾವಹೇತ್ ॥೧೧೬॥
ಜ್ವರಂ ಶೂಲಂ ತೃಷಾಂ ದಾಹಂ ಗುದಪಾಕಂ ಚ ದಾರುಣಮ್ ।

ಪಿತ್ತಾತಿಸಾರಿಯು ಅತಿಯಾಗಿ ಪಿತ್ತವರ್ಧಕಗಳಾದ ವಸ್ತುಗಳನ್ನೇ ಸೇವಿಸಿದರೆ ಅವನ ದೇಹದಲ್ಲಿ ಪಿತ್ತವು ದೂಷಿಸಲ್ಪಟ್ಟು ಜ್ವರ, ಮೈಉರಿತ, ಹೊಟ್ಟೆನೋವು, ಬಾಯಾರಿಕೆ ಇವುಗಳಿಂದ ಕೂಡಿದ ಅತಿಭಯಂಕರವಾದ ರಕ್ತಾತಿಸಾರವನ್ನುಂಟು ಮಾಡುತ್ತದೆ.

ಯೋ ರಕ್ತಂ ಶಕೃತಃ ಪೂರ್ವಂ ಪಶ್ಚಾದ್ವಾ ಪ್ರತಿಸಾರ್ಯತೇ ॥೧೧೭॥
ಸಪಲ್ಲವೈರ್ವಟಾದೀನಾಂ ಸಸರ್ಪಿಃ ಸಾಧಿತಂ ಪಯಃ ।
ಪಿಬೇತ್ ಸಶರ್ಕರಾಕ್ಷೌದ್ರಮಥವಾಪ್ಯಭಿಮಥ್ಯ ತತ್ ॥೧೧೮॥
ನವನೀತಮಥೋ ಲಿಹ್ಯಾತ್ ತಕ್ರಂ ಚಾನುಪಿಬೇತ್ತತಃ ।
ಪಿಯಾಲಶಾಲ್ಮಲೀಪ್ಲಕ್ಷಶಲ್ಲಕೀ ತಿನಿಶತ್ವಚಃ ॥೧೧೯॥
ಕ್ಷೀರೇ ವಿಮೃದಿತಾಃ ಪೀತಾಃ ಸಕ್ಷೌದ್ರಾ ರಕ್ತನಾಶನಾ ।
ಮಧುಕಂ ಶರ್ಕರಾಂ ರೋಧ್ರಂ ಪಯಸ್ಯಾಮಥ ಸಾರಿವಾಮ್ ॥೧೨೦॥
ಪಿಬೇಚ್ಛಾಗೇನ ಪಯಸಾ ಸಕ್ಷೌದ್ರಂ ರಕ್ತನಾಶನಮ್ ।
ಮಞ್ಜಿಷ್ಠಾಂ ಸಾರಿವಾಂ ಲೋಧ್ರಂ ಪದ್ಮಕಂ ಕುಮುದೋತ್ಪಲಮ್ ॥೧೨೧॥
ಪಿಬೇತ್ ಪದ್ಮಾಂ ಚ ದುಗ್ಧೇನ ಛಾಗೇನಾಸೃಕ್ ಪ್ರಶಾನ್ತಯೇ ।

ಮಲಪ್ರವರ್ತಿಗೆ ಮುಂಚೆಯಾಗಲೀ ಅನಂತರವಾಗಲೀ ರಕ್ತಸ್ರಾವವಾಗುತ್ತಿರುವವರಿಗೆ ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಚಿಗುರುಗಳೊಡನೆ ತಯಾರಿಸಿದ ತುಪ್ಪವನ್ನು ಮಿಶ್ರಮಾಡಿದ ಹಾಲನ್ನು ಸಕ್ಕರೆ ಜೇನುತುಪ್ಪಗಳೊಡನೆ ಕುಡಿಸಬೇಕು. ಅಥವಾ ಆ ಹಾಲನ್ನು ಕಡೆದು ಅದರಿಂದ ಬಂದ ಬೆಣ್ಣೆಯನ್ನು ತಿನ್ನಿಸಿ, ಆ ಮಜ್ಜಿಗೆಯನ್ನು ಕುಡಿಸಬೇಕು. ಚಾರುಪೊಪ್ಪು, ಬೂರಗದ ಗೋಂದು, ಗೋಣಿ, ತಿಂಡಿಶ (ರಥವೃಕ್ಷ)ಗಳ ತೊಗಟೆಗಳನ್ನು ಹಾಲಿನಲ್ಲಿ ಕಿವಿಚಿ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಿದರೆ ರಕ್ತಾತಿಸಾರ ಹರವಾಗುತ್ತದೆ. ಅತಿಮಧುರ, ರೋಧ್ರ, ಸಕ್ಕರೆ, ಕಾಕೋಳಿ (ನೆಲಗುಂಬಳಗೆಡ್ಡೆ) ಸೊಗದೇಬೇರು ಇವುಗಳ ಕಲ್ಕವನ್ನು ಆಡಿನ ಹಾಲಿನಲ್ಲಿ ಕದರಿ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ರಕ್ತಾತಿಸಾರಹರವು. ಮಂಜಿಷ್ಠೆ, ಸೊಗದೇಬೇರು, ರೋಧ್ರ, ಪದ್ಮಕ, ನೈದಿಲೆ ಗೆಡ್ಡೆ, ತಾವರೆಗೆಡ್ಡೆ, ಗಂಟು ಪರಂಗಿ ಇವುಗಳ ಕಲ್ಕವನ್ನು ಆಡಿನಹಾಲಿನಲ್ಲಿ ಕುಡಿಸಿದರೆ ರಕ್ತಾತಿಸಾರಹರವು.

ಶರ್ಕರೋತ್ಪಲರೋಧ್ರಾಣಿ ಸಮಙ್ಗಾಮಧುಕಂ ತಿಲಾಃ ॥೧೨೨॥
ತಿಲಾಃ ಕೃಷ್ಣಾಃ ಸಯಷ್ಟ್ಯಾಹ್ವಾ ಸಮಙ್ಗಾ ಚೋತ್ಪಲಾನಿ ಚ ।
ತಿಲಾ ಮೋಚರಸೋ ಲೋಧ್ರಂ ತಥೈವ ಮಧುಕೋತ್ಪಲಮ್ ॥೧೨೩॥

ಕಚ್ಛುರಾ ತಿಲಕಲ್ಕಶ್ಚ ಯೋಗಾಃಶ್ಚತ್ವಾರ ಏವ ಚ ।
ಅಜೇನ ಪಯಸಾ ಪೇಯಾಃ ಸರಕ್ತೇ ಮಧುಸಂಯುತಾಃ ॥೧೨೪॥
ದ್ರವೇ ಸರಕ್ತೇ ಸ್ರವತಿ ಬಾಲಬಿಲ್ವಂ ಸಫಾಣಿತಮ್ ।
ಸಕ್ಷೌದ್ರ ತೈಲಂ ಪ್ರಾಗೇವ ಲಿಹ್ಯಾದಾಶು ಹಿತಂ ಹಿ ತತ್ ॥೧೨೫॥

(೧) ಸಕ್ಕರೆ, ನೈದಿಲೆಗೆಡ್ಡೆ, ರೋಧ್ರ, ಮುಟ್ಟಿದರೆ ಮುನಿಯ, ಅತಿಮಧುರ, ಎಳ್ಳು (೨) ಕರಿಎಳ್ಳು, ಅತಿಮಧುರ, ಲಜ್ಜಾಲು [ಮುಟ್ಟಿದರೆ ಮುನಿಯ], ನೈದಿಲೆಗೆಡ್ಡೆ ; (೩) ಎಳ್ಳು, ಬೂರಗದ ಮೇಣ, ಲೋಧ್ರ, ಅತಿಮಧುರ, ನೈದಿಲೆಗೆಡ್ಡೆ, (೪) ತುರುಚನ ಬೇರು, ಎಳ್ಳಿನಕಲ್ಕ ಈ ೪ ಯೋಗಗಳ ಪೈಕಿ ಒಂದನ್ನು ಆಡಿನಹಾಲಿನಲ್ಲಿ ಕದರಿ ಜೇನು ತುಪ್ಪ ಮಿಶ್ರಮಾಡಿ ಕುಡಿಸಿದರೆ ರಕ್ತಾತಿಸಾರಹರವಾಗುತ್ತದೆ. ರಕ್ತಮಿಶ್ರವಾಗಿ ಅಬ್ಧಾ ತುವು ಅತಿಸಾರವಾಗುತ್ತಿದ್ದರೆ ಬಿಲ್ವಪತ್ರೆಯ ಹೀಚನ್ನು ಬೆಲ್ಲದೊಡನೆ ಕಲ್ಕವನ್ನು ಮಾಡಿ ಜೇನುತುಪ್ಪ, ಎಳ್ಳೆಣ್ಣೆ ಮಿಶ್ರಮಾಡಿ ಊಟಕ್ಕೆ ಮುಂಚಿತವಾಗಿಯೇ ನೆಕ್ಕಿಸಿದರೆ ಹಿತಕರ ವಾಗುತ್ತದೆ.

ಕೋಶಕಾರಂ ಘೃತೇ ಭೃಷ್ಟಂ ಲಾಜಚೂರ್ಣಂ ಸಿತಾ ಮಧು ।
ಸಶೂಲಂ ರಕ್ತಪಿತ್ತೋತ್ಥಂ ಲೀಢಂ ಹನ್ತ್ಯುದರಾಮಯಮ್ ॥೧೨೬॥
ಬಿಲ್ವಮಧ್ಯಂ ಸಮಧುಕಂ ಶರ್ಕರಾಕ್ಷೌದ್ರಸಂಯುತಮ್ ।
ತಣ್ಡುಲಾಮ್ಬುಯುತೋ ಯೋಗಃ ಪಿತ್ತರಕ್ತೋತ್ಥಿತಂ ಜಯೇತ್ ॥೧೨೭॥
ಗುದಪಾಕೇ ಚ ಯೇ ಉಕ್ತಾಸ್ತೇsತ್ರಾಪಿ ವಿಧಯಃ ಸ್ಮೃತಾಃ ।
ರುಜಾಯಾಂ ವಾ ಪ್ರಶಾನ್ತ್ಯಾಂ ಚ ಪಿಚ್ಛಾಬಸ್ತಿರ್ಹಿತೋ ಭವೇತ್ ॥೧೨೮॥

ಕೋಶಕಾರವೆಂಬ ಜಾತಿಯ ಕಬ್ಬಿನ ಸಣ್ಣ ತುಂಡುಗಳನ್ನು ತುಪ್ಪದಲ್ಲಿ ಹುರಿದು ಅರೆದು ಅರಳಿನ ಚೂರ್ಣಕ್ಕೆ ಹಿಂಡಿ ಸಕ್ಕರೆ ಜೇನುತುಪ್ಪಗಳನ್ನು ಮಿಶ್ರಮಾಡಿ ನೆಕ್ಕಿಸಿದರೆ ಶೂಲೆಯಿಂದಲೂ ರಕ್ತಪಿತ್ತದಿಂದಲೂ ಉಂಟಾದ ಅತಿಸಾರವು ನಿವಾರಣೆಯಾಗುತ್ತದೆ. ಬಿಲ್ವಪತ್ರೆಯ ತಿರುಳು, ಅತಿಮಧುರಗಳನ್ನು ಕಲಗಚ್ಚಿನಲ್ಲಿ ಅರೆದು ಕದರಿ ಸಕ್ಕರೆ ಜೇನು ತುಪ್ಪಗಳನ್ನು ಮಿಶ್ರಮಾಡಿ ಕುಡಿಸಿದರೆ ಪಿತ್ತರಕ್ತಗಳಿಂದುಂಟಾದ ಅತಿಸಾರವು ನಿವಾರಣೆ ಯಾಗುತ್ತದೆ. ಪಿತ್ತರಕ್ತದಿಂದುಂಟಾದ ಅತಿಸಾರದಲ್ಲಿಯೂ ಗುದಪಾಕದಲ್ಲಿ ಹೇಳಿದ ಸೇಕಾದಿಗಳನ್ನು ಮಾಡಿದರೆ ಹಿತವಾಗುತ್ತದೆ. ನೋವು ಕಡಿಮೆಯಾಗದೆ (ನಿಲ್ಲದೆ) ಇದ್ದರೆ ಪಿಚ್ಛಾಬಸ್ತಿಯನ್ನು ಪ್ರಯೋಗಿಸಿದರೆ ಹಿತವಾಗುತ್ತದೆ.

ಸಕೃದ್ವಿಟ್ ದೋಷಬಹುಳಂ ದೀಪ್ತಾಗ್ನಿರ್ಯೋsತಿಸಾರ್ಯತೇ ।
ವಿಡಙ್ಗತ್ರಿಫಲಾಕೃಷ್ಣಾ ಕಷಾಯೈಸ್ತಂ ವಿರೇಚಯೇತ್ ॥೧೨೯॥
ಅಥವೈರಣ್ಡಸಿದ್ಧೇನ ಪಯಸಾ ಕೇವಲೇನ ವಾ ।
ಯವಾಗೂರ್ವಿತರೇಚ್ಚಾಸ್ಯ ವಾತಘ್ನೈರ್ದೀಪನೈಃ ಕೃತಾಃ ॥೧೩೦॥

ಅಗ್ನಿದೀಪ್ತಿಯಾಗಿರುವವನು ಮಲವು ತಡೆದು ತಡೆದು ದೋಷಾಧಿಕನಾಗಿ ಅತಿಸಾರ ಮಾಡುತ್ತಿದ್ದರೆ ವಿಡಂಗ ತ್ರಿಫಲೆ ಹಿಪ್ಪಲಿಗಳ ಕಷಾಯವನ್ನು ಕುಡಿಸಿ ವಿರೇಚನ ಮಾಡಿಸ

ಬೇಕು ; ಅಥವಾ ಹರಳಬೇರಿನೊಡನೆ ತಯಾರಿಸಿದ ಹಾಲಿನಿಂದಾಗಲೀ ಬರಿಯ ಹಾಲಿನಿಂದಾಗಲೀ ಭದ್ರದಾರು ಮೊದಲಾದ ವಾತಹರದ್ರವ್ಯಗಳನ್ನೂ ಪಿಪ್ಪಲ್ಯಾದಿ ಅಗ್ನಿದೀಪನಕರದ್ರವ್ಯಗಳನ್ನೂ ಸೇರಿಸಿ ತಯಾರಿಸಿದ ಯವಾಗೂವನ್ನು ಕುಡಿಸಬೇಕು ;

ದೀಪ್ತಾಗ್ನಿರ್ನಿಃಪುರೀಷೋ ಯಃ ಸಾರ್ಯತೇ ಫೇನಿಲಂ ಶಕೃತ್ ।
ಸಪಿಬೇತ್ ಫಾಣಿತಂ ಶುಣ್ಠೀದಧಿತೈಲಪಯೋಘೃತಮ್ ॥೧೩೧॥
ಸ್ವಿನ್ನಾನಿ ಗುಡತೈಲಾಭ್ಯಾಂ ಭಕ್ಷಯೇದ್ಬದರಾಣಿ ಚ ।
ಸ್ವಿನ್ನಾನಿ ಪಿಷ್ಟವದ್ವಾಪಿ ಸಮಂ ಬಿಲ್ವಶಲಾಟುಭಿಃ ॥೧೩೨॥
ದಧ್ನೋಪಯುಜ್ಯ ಕುಲ್ಮಾಷಾಞ್ ಶ್ವೇತಾಮನುಪಿಬೇತ್ ಸುರಾಮ್ ।
ಶಶಮಾಂಸಂ ಸರುಧಿರಂ ಸಮಜ್ಜಂ ಸಘೃತಂ ದಧಿ ॥೧೩೩॥
ಖಾದೇದ್ವಿಪಾಚ್ಯ ಸೇವೇತ ವೃದ್ವನ್ನಂ ಶಕೃತಃ ಕ್ಷಯೇ ।
ಸಂಸ್ಕೃತೋ ಯಮಕೇ ಮಾಷಯವಕೋಲರಸಃ ಶುಭಃ ॥೧೩೪॥
ಭೋಜನಾರ್ಥಂ ಚ ದಾತವ್ಯೋ ದಧಿದಾಡಿಮಸಾಧಿತಃ ।
ಬಿಡಂ ಬಿಲ್ವಶಲಾಟೂನಿ ನಾಗರಂ ಚಾಮ್ಲಪೇಷಿತಮ್ ॥೧೩೫॥
ದಧ್ನಃ ಸರಶ್ಚ ಯಮಕೇ ಭೃಷ್ಟೋ ವರ್ಚಃ ಕ್ಷಯೇ ಹಿತಃ ।
ಸಶೂಲಂ ಕ್ಷೀಣವರ್ಚಾ ಯೋ ದೀಪ್ತಾಗ್ನಿರತಿಸಾರ್ಯತೇ ॥೧೩೬॥
ಸಪಿಬೇದ್ದೀಪನೈರ್ಯುಕ್ತಂ ಸರ್ಪಿಃ ಸಂಗ್ರಾಹಕೈಃ ಸಹ ।

ಅಗ್ನಿದೀಪನವುಳ್ಳವನು ಮಲವಿಲ್ಲದೆ ನೊರೆಯಾಗಿ ಮಲವನ್ನು ವಿಸರ್ಜಿಸಿದರೆ ಅವನಿಗೆ ಕಾಕಂಬಿ, ಶುಂಠಿಪುಡಿ, ಮೊಸರು, ತಿಲತೈಲ, ಹಾಲು ತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು ; ಎಲಚಿಹಣ್ಣುಗಳನ್ನು ಬೆಲ್ಲ ತೈಲಗಳೊಡನೆ ಬೇಯಿಸಿ ತಿನ್ನಿಸಬೇಕು ; ಬಿಲ್ವಪತ್ರೆಯ ಎಳಸು ಕಾಯಿಗಳನ್ನೂ ಎಲಚಿಹಣ್ಣುಗಳನ್ನೂ ಅರೆದು ಪುಟಪಾಕವಿಧಾನದಿಂದ ಬೇಯಿಸಿ ತೆಗೆದು ಆರಿದ ಮೇಲೆ ಬೆಲ್ಲವನ್ನೂ ಎಳ್ಳೆಣ್ಣೆಯನ್ನೂ ಸೇರಿಸಿ ನೆಕ್ಕಿಸಬೇಕು ; ಯವೆಯ ಹಿಟ್ಟನ್ನು ಹವೆಯಲ್ಲಿ ಪಾಕಮಾಡಿ ಮೊಸರಿನೊಡನೆ ಭೋಜನಮಾಡಿ ಅನಂತರ ಪಿಷ್ಟಮಯದ್ರವ್ಯದಿಂದ ತಯಾರಿಸಿದ ಮದ್ಯವನ್ನು ಪಾನಮಾಡಿಸಬೇಕು ; ಮಲವು ಕ್ಷೀಣವಾಗಿದ್ದರೆ ಮೊಲದ ಮಾಂಸ, ರಕ್ತ, ಮುಟ್ಟೆದರೆ ಮುನಿಯ ಇವುಗಳ ಕಲ್ಕ, ತುಪ್ಪ, ಮೊಸರು ಇವನ್ನು ಮಿಶ್ರಮಾಡಿ ಪಕ್ವಮಾಡಿ ಸೇವಿಸಬೇಕು ; ಉದ್ದು ಮೊದಲಾದ ಮಲವರ್ಧಕ ದ್ರವ್ಯಗಳೊಡನೆ ಅನ್ನವನ್ನು ಭೋಜನಮಾಡಬೇಕು ; ತುಪ್ಪ, ಮಜ್ಜೆ ಮೊದಲಾದ ಯಮಕ ಸ್ನೇಹದಿಂದ ಮಿಶ್ರಮಾಡಿದ ಯವೆ, ಉದ್ದು, ಎಲಚೀಹಣ್ಣುಗಳ ಕಷಾಯದಿಂದಲೂ ಮೊಸರು ದಾಳಿಂಬೆ ರಸಗಳಿಂದಲೂ ಮಿಶ್ರಮಾಡಿ ತಯಾರಿಸಿದ ಯೂಷಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು ; ಬಿಡಲವಣ, ಬಿಲ್ವಪತ್ರೆಯ ಹೀಚುಕಾಯಿ, ಶುಂಠಿ, ಇವನ್ನು ಹುಳಿಕಲಗಚ್ಚಿನಲ್ಲಿ ಅರೆದು ಮೊಸರುಕಟ್ಟನ್ನು ಮಿಶ್ರಮಾಡಿ ಯಮಕಸ್ನೇಹದಿಂದ ಹುರಿದು (ಒಗ್ಗರಣೆಹಾಕಿ) ಸೇವಿಸಿದರೆ ಪುರೀಷಕ್ಷಯದಲ್ಲಿ

ಹಿತವಾಗುತ್ತದೆ ; ಅಗ್ನಿ ದೀಪನವುಳ್ಳವನು ಮಲಕ್ಷೀಣನಾಗಿದ್ದು ಹೊಟ್ಟೆಶೂಲೆಯೊಡನೆ ಅತಿಸಾರ ಮಾಡುತ್ತಿದ್ದರೆ ಚಿತ್ರಕಾದಿ ದೀಪನದ್ರವ್ಯಗಳನ್ನೂ ಧಾತಕೀಕುಸುಮ, ಬಿಲ್ವ ಪತ್ರೆಯ ಹೀಚು ಮೊದಲಾದ ಸಂಗ್ರಾಹಿದ್ರವ್ಯಗಳನ್ನೂ ಬರಿಯತುಪ್ಪದಲ್ಲಿ ಕಲಸಿ ಸೇವಿಸ ಬೇಕು.

ವಾಯುಃ ಪ್ರವೃದ್ಧೋ ನಿಚಿತಂ ಬಲಾಸಂ ನುದತ್ಯಧಸ್ತಾದ ಹಿತಾಶನಸ್ಯ ।
ಪ್ರವಾಹಮಾಣಸ್ಯ ಮುಹುರ್ಮಲಾಕ್ತಂ ಪ್ರವಾಹಿಕಾಂ ತಾಂ ಪ್ರವದನ್ತಿತಜ್ಞಾಃ ॥೧೩೭॥
ಪ್ರವಾಹಿಕಾ ವಾತಕೃತಾ ಸಶೂಲಾ ಪಿತ್ತಾತ್ ಸದಾಹಾ ಸಕಫಾ ಕಫಾಚ್ಚ ।
ಸಶೋಣಿತಾ ಶೋಣಿತಸಂಭವಾ ತು ತಾಃ ಸ್ನೇಹರೂಕ್ಷಪ್ರಭವಾ ಮತಾಸ್ತು ॥೧೩೮॥
ತಾಸಾಮತೀಸಾರವದಾದಿಶೇಚ್ಚ ಲಿಙ್ಗಂ ಕ್ರಮಂ ಚಾಮವಿಪಕ್ವತಾಂ ಚ ।

ಪ್ರವಾಹಿಕವೆಂಬ ಅತಿಸಾರವನ್ನು ವಿವರಿಸುತ್ತಾರೆ : ಪ್ರಕುಪಿತವಾತವು ಪ್ರವೃದ್ಧ ವಾಗಿರುವ ಕಫವನ್ನು ಅಹಿತಾಹಾರಸೇವಿಸುವವನ ದೇಹದಲ್ಲಿ ಕೆಳಮುಖಕ್ಕೆ ತಳ್ಳುತ್ತದೆ. ಅವನು ಪದೇಪದೇ ಮುಲುಕುತ್ತಾ ಗುದದ್ವಾರದಿಂದ ಹೊರಕ್ಕೆ ಮಲದಿಂದ ಬಳದಿರುವ ಕಫವನ್ನು ವಿಸರ್ಜಿಸುತ್ತಾನೆ ; ಹೀಗೆಯೇ ಪಿತ್ತವನ್ನೂ ರಕ್ತವನ್ನೂ ವಾಯುವು ಕೆಳಕ್ಕೆ ತಳ್ಳಿ ಗುದದ್ವಾರದಿಂದ ಹೊರಕ್ಕೆ ನೂಕುತ್ತದೆಂದು ತಿಳಿಯಬೇಕು ; ವಾತಕೃತವಾದ ಪ್ರವಾಹಿಕೆಯಲ್ಲಿ ಹೊಟ್ಟೆಯನೋವಿರುತ್ತದೆ, ಪಿತ್ತದಿಂದ ಉರಿಯುಂಟಾಗುತ್ತದೆ ; ಕಫ ದಿಂದ ಕಫವು ಹೊರಕ್ಕೆ ಬರುತ್ತದೆ ; ರಕ್ತದಿಂದ ರಕ್ತಮಿಶ್ರವಾದ ಮಲವು ಪ್ರವರ್ತಿಯಾಗು ತ್ತದೆ ; ಅವು ಸ್ನೇಹದಿಂದ ಕೂಡಿದ್ದರೆ ಕಫ ಕಫಪಿತ್ತ, ಕಫರಕ್ತಜಗಳೆಂದೂ, ರೂಕ್ಷವಾಗಿ ದ್ದರೆ ವಾತ, ವಾತಪಿತ್ತಜಗಳೆಂದೂ ತಿಳಿಯಬೇಕು ; ಇವುಗಳ ಲಕ್ಷಣ, ಚಿಕಿತ್ಸೆ, ಆಮ, ಪಕ್ವಸ್ಥಿತಿಗಳನ್ನು ಅತೀಸಾರ ರೋಗದ ಲಕ್ಷಣಾದಿಗಳಂತೆಯೇ ಎಂದು ತಿಳಿಯಬೇಕು.

ನಶಾನ್ತಿಮಾಯಾತಿ ವಿಲಙ್ಘನೈರ್ಯಾ ಯೋಗೈರುದೀರ್ಣಾ ಯದಿಪಾಚನೈರ್ವಾ ॥೧೩೯॥
ತಾಂ ಕ್ಷೀರಮೇವಾಶು ಶೃತಂ ನಿಹನ್ತಿತೈಲಂ ತಿಲಾಃ ಪಿಚ್ಛಿಲಬಸ್ತಯಸ್ಯ ।
ಆರ್ದ್ರೈಃ ಕುಶೈಃ ಸಂಪರಿವೇಷ್ಟಿತಾನಿ ವೃನ್ತಾನ್ಯಥಾರ್ದ್ರಾಣಿ ಹಿ
ಶಾಲ್ಮಲೀನಾಮ್ ॥೧೪೦॥
ಪಕ್ವಾನಿ ಸಮ್ಯಕ್ ಪುಟಪಾಕಯೋಗೇನಾಪೋಹ್ಯ ತೇಭ್ಯೋ ರಸಮಾದದೀತ ।
ಕ್ಷೀರಂ ಶೃತಂ ತೈಲಹವಿರ್ವಿಮಿಶ್ರಂ ಕಲ್ಕೇನ ಯಷ್ಟೀ ಮಧುಕಸ್ಯವಾಪಿ ॥೧೪೧॥
ಬಸ್ತಿಂ ವಿದಧ್ಯಾದ್ಭಿಷಗಪ್ರಮತ್ತಃ ಪ್ರವಾಹಿಕಾ ಮೂತ್ರಪುರೀಷಸಙ್ಗೇ ।

ಉಪವಾಸದಿಂದಲೂ ಪಾಚನೌಷಧಗಳನ್ನು ಸೇವಿಸುವುದರಿಂದಲೂ ಪ್ರವಾಹಿಕಾತಿ ಸಾರವು ಯಾರಿಗೆ ನಿವಾರಣೆಯಾಗುವುದಿಲ್ಲವೋ ಅದನ್ನು ಕಾದಹಾಲಿನ ಪಾನದಿಂದಲೂ ತೈಲಪಾನದಿಂದಲೂ ತಿಲಕಲ್ಕವನ್ನು ಸೇವಿಸುವುದರಿಂದಲೂ ಪಿಚ್ಛಾಬಸ್ತಿಪ್ರಯೋಗ ದಿಂದಲೂ ಬೇಗ ನಿವಾರಿಸಲಾಗುತ್ತದೆ ; ಬೂರಗದ ಹೂವುಗಳ ತೊಟ್ಟುಗಳನ್ನು ಹಸಿಯ ದರ್ಭೆಯಪಿಂಜಿಗಳಲ್ಲಿಟ್ಟು ಪೊಟ್ಟಣಕಟ್ಟಿ ಪುಟಪಾಕ ವಿಧಾನದಿಂದ ಪಕ್ವಮಾಡಿ ತೆಗೆದು ಜಜ್ಜಿ

ಬಟ್ಟೆಯಲ್ಲಿಟ್ಟು ಹಿಂಡಿದ ರಸ ಅತಿಮಧುರಗಳನ್ನು ಹಾಲಿನಲ್ಲಿ ಕಾಯಿಸಿ ತಿಲತೈಲ ಮತ್ತು ತುಪ್ಪಗಳನ್ನು ಮಿಶ್ರಮಾಡಿ ಬಸ್ತಿಯನ್ನು ಸಾವಧಾನದಿಂದ ಪ್ರಯೋಗಮಾಡಿದರೆ ಮೂತ್ರ ಪುರೀಷಗಳ ತಡೆತದಿಂದ ಉಂಟಾಗಿರುವ ಪ್ರವಾಹಿಕಾತಿಸಾರವು ನಿವಾರಣೆಯಾಗುತ್ತದೆ.

ದ್ವಿಪಞ್ಚಮೂಲೀಕ್ವಥಿತೇನ ಶೂಲೇ ಪ್ರವಾಹಮಾಣಸ್ಯ ಸಮಾಕ್ಷಿಕೇಣ ||೧೪೨||
ಕ್ಷೀರೇಣ ಚಾಸ್ಥಾಪನಮಗ್ರ್ಯಮುಕ್ತಂ ತೈಲೇನ ಯುಞ್ಜ್ಯಾದನುವಾಸನಂ ಚ ।
ವಾತಘ್ನವರ್ಗೇ ಲವಣೇಷು ಚೈವ ತೈಲಂ ಚ ಸಿದ್ಧಂ ಹಿತಮನ್ನಪಾನೇ ||೧೪೩||
ಲೋಧ್ರಂ ಬಿಡಂ ಬಿಲ್ವಶಲಾಟು ಚೈವ ಲಿಹ್ಯಾಚ್ಚ ತೈಲೇನ ಕಟುತ್ರಿಕಾಢ್ಯಮ್ ।
ದಧ್ನಾ ಸಸಾರೇಣ ಸಮಾಕ್ಷಿಕೇಣ ಭುಞ್ಜೀತ ನಿಶ್ಚಾರಕಪೀಡಿತಸ್ತು ||೧೪೪||
ಸುತಪ್ತಕುಪ್ಯಕ್ವಥಿತೇನ ವಾಪಿ ಕ್ಷೀರೇಣ ಶೀತೇನ ಮಧುಪ್ಲುತೇನ ।
ಶೂಲಾರ್ದಿತೋಽಪ್ಯೇಷ ವಿದಾರಿಗನ್ಧಾ ಸಿದ್ಧೇನ ದುಗ್ಧೇನ ಹಿತಾಯ ಭೋಜ್ಯಃ
||೧೪೫||

ಪ್ರವಾಹಿಕಾತಿಸಾರದಲ್ಲಿ ಹೊಟ್ಟೆ ಶೂಲೆಯಿದ್ದರೆ ದಶಮೂಲದೊಡನೆ ಪಾಕ ಮಾಡಿದ ಹಾಲಿಗೆ ಜೇನುತುಪ್ಪ ಮಿಶ್ರಮಾಡಿ ಆಸ್ಥಾಪನವಸ್ತಿಯನ್ನೂ ತೈಲ ಮಿಶ್ರ ಮಾಡಿದ ಅನುವಾಸನಬಸ್ತಿಯನ್ನೂ ಪ್ರಯೋಗಿಸಬೇಕು ; ವಿದಾರಿಗಂಧಾದಿಗಣ ದ್ರವ್ಯ ಗಳೊಡನೆ ತಯಾರಿಸಿ ಲವಣವರ್ಗದಿಂದ ಪ್ರತೀವಾಪ ಮಾಡಿ ತಯಾರಿಸಿದ ತೈಲವನ್ನು ಅನ್ನಪಾನಗಳಮೂಲಕ ಉಪಯೋಗಿಸಬೇಕು. ಲೋಧ್ರ, ಬಿಡಲವಣ, ಬಿಲ್ವಪತ್ರೆಯ ಹೀಚು ಕಾಯಿಗಳಕಲ್ಕಕ್ಕೆ ತಿಲತೈಲವನ್ನೂ ತ್ರಿಕಟುಕ ಚೂರ್ಣವನ್ನೂ ಮಿಶ್ರಮಾಡಿ ನೆಕ್ಕಿಸಬೇಕು ; ಪುರೀಷಕ್ಷಯದಿಂದ ಉಂಟಾದ ನಿಶ್ಚಾರಕವೆಂಬ ಅತಿಸಾರ ರೋಗದಲ್ಲಿ ಕೆನೆಮೊಸರಿಗೆ ಜೇನುತುಪ್ಪಗಳನ್ನು ಮಿಶ್ರಮಾಡಿದ ಅನ್ನವನ್ನು ಭೋಜನ ಮಾಡಿಸಬೇಕು; ಕೆಂಪಗೆಕಾದ ಬೆಳ್ಳಿಯ ಗಟ್ಟಿಯನ್ನು ಹಾಲಿನಲ್ಲಿ ಮುಳುಗಿಸುವುದರಿಂದ ಕಾದಹಾಲನ್ನು ಆರಿಸಿ ಜೇನುತುಪ್ಪಮಿಶ್ರಮಾಡಿ ಅನ್ನವನ್ನು ಭೋಜನ ಮಾಡಿಸಿದರೆ ಅಥವಾ ತ್ರಿಕಟು ಹ್ರಸ್ವಪಂಚಮೂಲಗಳೊಡನೆ ಕಾಯಿಸಿದ ಹಾಲಿನೊಡನೆ ಅನ್ನವನ್ನು ಭೋಜನ ಮಾಡಿಸಿ ದರೆ ನಿಶ್ಚಾರಕವು ನಿವಾರಣೆಯಾಗುತ್ತದೆ.

ವಾತಘ್ನಸಾಂಗ್ರಾಹಿಕದೀಪನೀಯೈಃ ಕೃತಾರ್ನ್ ಷಡಾಂಶ್ಚಾಪ್ಯಪ ಭೋಜಯೇಚ್ಚ ।
ಖಾದೇಚ್ಚ ಮತ್ಸ್ಯಾನ್ ರಸಮಾಪ್ನುಯಾಚ್ಚ ವಾತಘ್ನಸಿದ್ಧಂ ಸಘೃತಂ ಸತೈಲಮ್
||೧೪೬||
ಏಣಾವ್ಯಜಾನಾಂ ತು ವಟಪ್ರವಾಳೈಃ ಸಿದ್ಧಾನಿ ಸಾರ್ಧಂ ಪಿಶಿತಾನಿ ಖಾದೇತ್ ।
ಮೇಧ್ಯಸ್ಯ ಸಿದ್ಧಂ ತ್ವಥವಾಪಿ ರಕ್ತಂ ಬಸ್ತಸ್ಯ ದಧ್ನಾಘೃತತೈಲ ಯುಕ್ತಮ್ ||೧೫೭||
ಖಾದೇತ್ ಪ್ರದೇಹೈಃ ಶಿಖಿಲಾವಜೈರ್ವಾ ಭುಞ್ಜೀತ ಯೂಷೈರ್ದಧಿಭಿಶ್ಚ ಮುಖ್ಯೈಃ ।
ಮಾಷಾನ್ ಸುಸಿದ್ಧಾನ್ ಘೃತಮಂಡಯುಕ್ತಾನ್ ಖಾದೇಚ್ಚ ದಧ್ನಾ ಮರಿಚೋಪದಂಶಾನ್
||೧೪೮||

ಲಘುಪಂಚಮೂಲ ಅಥವಾ ದೇವದಾರ್ವಾದಿವಾತಹರ ಗಣದ್ರವ್ಯಗಳ, ಬಿಲ್ವ, ಪಾಠಾ, ಚಾಂಗೇರಿ ಮೊದಲಾದ ಸಾಂಗ್ರಾಹಿಕದ್ರವ್ಯಗಳ, ಚಿತ್ರಕಾದಿ ಅಗ್ನಿದೀಪಕ ದ್ರವ್ಯಗಳಿಂದ ತಯಾರಿಸಿದ ಖಡವನ್ನು (ಮಜ್ಜಿಗೆಫಳದ್ಯದಂತಹವು) ಮಿಶ್ರಮಾಡಿದ ಅನ್ನವನ್ನೂ ಮೀನಿನ ಮಾಂಸವನ್ನೂ ವಾತಹರಗಳಾದ ದಶಮೂಲ, ದೇವದಾರ್ವಾದಿ ಗಣದ್ರವ್ಯಗಳೊಡನೆ ತಯಾರಿಸಿದ ಮಾಂಸರಸಕ್ಕೆ ತುಪ್ಪವನ್ನೂ ಎಣ್ಣೆಯನ್ನೂ ಮಿಶ್ರಮಾಡಿ ಕುಡಿಸಬೇಕು. ಕರಿಹುಲ್ಲೆ, ಕುರಿ-ಆಡುಗಳ ಮಾಂಸದೊಡನೆ ಆಲದಚಿಗುರನ್ನು ಸೇರಿಸಿ ತಯಾರಿಸಿದ ಕಟ್ಟಿನೊಡನೆಯೂ (ಕೊಬ್ಬಿದ) ಆಡಿನ ಮಾಂಸರಸ, ಮೊಸರು, ತುಪ್ಪ, ಎಣ್ಣೆಗಳೊಡನೆ ಅನ್ನವನ್ನು ತಿನ್ನಬೇಕು. ನವಿಲು ಮತ್ತು ಲಾವನ ಹಕ್ಕಿಯ ಮಾಂಸರಸವನ್ನು ಕುಡಿಸಿ ಘಟ್ಟ ಮಾಡಿದರೆ ಪ್ರದೇಹವೆಂದು ಹೆಸರು. ಇವುಗಳನ್ನೂ ಮೊಸರನ್ನೂ ಸೇರಿಸಿ ಅನ್ನವನ್ನು ಭೋಜನ ಮಾಡಿಸಿಬೇಕು. ಉದ್ದನ್ನು ಚೆನ್ನಾಗಿ ಬೇಯಿಸಿ ತುಪ್ಪದ ತಿಳಿಯನ್ನು ಮಿಶ್ರಮಾಡಿದ ಅನ್ನವನ್ನು ಭೋಜನ ಮಾಡಿಸಬೇಕು. ಇದರ ಜೊತೆಗೆ ಮೆಣಸಿನೊಡನೆ ತಯಾರಿಸಿದ ವ್ಯಂಜನಗಳನ್ನೂ ಸೇವಿಸಬೇಕು ಅಂದರೆ ಉದ್ದಿನೊಡನೆ ತುಪ್ಪದ ತಿಳಿಯನ್ನೂ ತ್ರಿಕಟುಚೂರ್ಣವನ್ನೂ ಮಿಶ್ರಮಾಡಿ ತಿನ್ನಬೇಕೆಂದು ಮುಖ್ಯಾರ್ಥವು.

ಮಹಾರುಜೇ ಮೂತ್ರಕೃಚ್ಛ್ರೇ ಭಿಷಗ್ಬಸ್ತಿಂ ಪ್ರದಾಪಯೇತ್ ।
ಪಯೋಮಧುಘೃತೋನ್ಮಿಶ್ರಂ ಮಧುಕೋತ್ಪಲಸಾಧಿತಮ್ ॥೧೪೯॥
ಸಬಸ್ತಿಃ ಶಮಯೇತ್ತಸ್ಯ ರಕ್ತಂ ದಾಹಮಥೋ ಜ್ವರಮ್ ।
ಮಧುರೌಷಧಿಸಿದ್ಧಂ ಚ ಹಿತಂ ತಸ್ಯಾನುವಾಸನಮ್ ॥೧೫೦॥
ರಾತ್ರಾವಹನಿ ವಾ ನಿತ್ಯಂ ಖುಜಾರ್ತೋ ಯೋ ಭವೇನ್ನರಃ ।
ಯಥಾ ಯಥಾ ಸತೈಲಃ ಸ್ಯಾದ್ವಾತಶಾನ್ತಿಸ್ತಥಾ ತಥಾ ॥೧೫೧॥
ಪ್ರಶಾನ್ತೇ ಮಾರುತೇ ಚಾಪಿ ಶಾನ್ತಿಂ ಯಾತಿ ಪ್ರವಾಹಿಕಾ ।
ತಸ್ಮಾತ್ ಪ್ರವಾಹಿಕಾರೋಗೇ ಮಾರುತಂ ಶಮಯೇದ್ಭಿಷಕ್ ॥೧೫೨॥

ಅತಿನೋವಿನಿಂದ ಕೂಡಿದ ಮೂತ್ರಕೃಚ್ಛ್ರದಲ್ಲಿ ವೈದ್ಯನು ಅತಿಮಧುರ, ನೈದಿಲೆ ಗೆಡ್ಡೆಗಳ ಕಷಾಯಕ್ಕೆ ಹಾಲು ಜೇನುತುಪ್ಪ, ತುಪ್ಪ ಮಿಶ್ರಮಾಡಿ ಬಸ್ತಿಯನ್ನು ಪ್ರಯೋಗ ಮಾಡಿದರೆ ಆ ರೋಗಿಯ ರಕ್ತಸ್ರಾವವೂ ಉರಿಯೂ ಜ್ವರವೂ ನಿವಾರಣೆಯಾಗುತ್ತವೆ. ಆ ರೋಗಿಗೆ ನೋವಿದ್ದರೆ ಕಾಕೋಳ್ಯಾದಿ ಮಧುರಗಣೌಷಧಿಗಳಿಂದ ತಯಾರಿಸಿದ ಅನುವಾಸನಬಸ್ತಿಯನ್ನು ಹಗಲಲ್ಲಾಗಲೀ ರಾತ್ರಿಯಲ್ಲಾಗಲೀ ಪ್ರಯೋಗಿಸಬೇಕು. ಹೇಗೆ ಹೇಗೆ ತೈಲಮಿಶ್ರಮಾಡಿದ ಅನುವಾಸನದಿಂದ ವಾತ ಶಮನವಾಗುತ್ತಾ ಬರುವಂತೆಯೇ ಪ್ರವಾಹಿಕಾತಿಸಾರವೂ ಶಾಂತಿ ಹೊಂದುತ್ತದೆ. ಆದಕಾರಣ ವೈದ್ಯನು ಪ್ರವಾಹಿಕಾತಿಸಾರದಲ್ಲಿ ವಾತವನ್ನು ಶಮನಗೊಳಿಸಬೇಕು.

ಪಾಠಾಜಮೋದಾಕುಟಜೋತ್ಪಲಾ ಚ ಶುಣ್ಠೀಸಮಾಮಾಗಧಿಕಾಶ್ಚ ಪಿಷ್ಟಾಃ ।
ಸುಖಾಮ್ಬುಪೀತಾಃ ಶಮಯನ್ತಿ ರೋಗಂ ಮೇಧ್ಯಾಣ್ಡಸಿದ್ಧಂ ಸಘೃತಂ ಪಯೋವಾ ॥೧೫೩॥

ಶುಣ್ಠೀ ಘೃತಂ ಸಕ್ಷವಕಂ ಸತೈಲಂ ವಿಪಾಚ್ಯಲೀಢ್ವಾಮಯಮಾಶು ಹನ್ಯಾತ್ ।
ಗಜಾಶನಾಕುಮ್ಭಿಕದಾಡಿಮಾನಾಂ ರಸೈಃ ಕೃತಾ ತೈಲಘೃತೇ ಸದಧ್ನಿ ॥೧೫೪॥
ಬಿಲ್ವಾನ್ವಿತಾ ಪಥ್ಯತಮಾ ಯವಾಗೂರ್ಧಾರೋಷ್ಣದುಗ್ಧಸ್ಯ ತಥಾ ಚ ಪಾನಮ್ ।
ಲಘೂನಿ ಪಥ್ಯಾನ್ಯಥ ದೀಪನಾನಿ ಸ್ನಿಗ್ಧಾನಿ ಭೋಜ್ಯಾನ್ಯುದರಾಮಯೇಷು ॥೧೫೫॥
ಹಿತಾಯ ನಿತ್ಯಂ ವಿತರೇದ್ಭಿಷಜ್ಯ ಯೋಗಾಂಶ್ಚ ತಾಸ್ತಾನ್ ಭಿಷಗಪ್ರಮತ್ತಃ ॥೧೫೬॥

ಅಗಳುಶುಂಠಿ, ಓಮು, ಕೊಡಶಿಗೆತೊಗಟೆ, ನೈದಿಲೆಗೆಡ್ಡೆ, ಶುಂಠೀ, ಹಿಪ್ಪಲಿ, ಇವೆಲ್ಲ ವನ್ನೂ ಸಮಭಾಗದಿಂದ ಕಲ್ಕಮಾಡಿ ಸುಖೋಷ್ಣವಾದ ನೀರಿನಲ್ಲಿ ಕದರಿ, ಕುಡಿಸಿದರೆ ಅಥವಾ ಆಡಿನವೃಷಣವನ್ನೂ ಹಾಲನ್ನೂ ಸೇರಿಸಿ ಕಾಯಿಸಿ ಶೋಧಿಸಿ ತುಪ್ಪವನ್ನು ಮಿಶ್ರ ಮಾಡಿ ಕುಡಿಸಿದರೆ ಪಕ್ವಾತಿಸಾರ ರೋಗವು ನಿವಾರಣೆಯಾಗುತ್ತದೆ ; ಶುಂಠೀ, ತುಪ್ಪ, ನಕಚಿಕನಿಯ ಸಮೂಲ ತಿಲತೈಲ ಇವುಗಳನ್ನು ಸೇರಿಸಿ ಪಾಕಮಾಡಿ ನೆಕ್ಕಿಸಿದರೆ ಅತಿಸಾರ ಹರವಾಗುತ್ತದೆ ; ನಾಯಿಬೇಲದತೊಗಟೆ ಜಲಕುಂಭೀ ದಾಳಿಂಬೆತೊಗಟೆ ಇವುಗಳ ಕಷಾಯ ತಿಲತೈಲ, ತುಪ್ಪ, ಮೊಸರು, ಬಿಲ್ವಪತ್ರೆಯಹೀಚು, ಕಾಯಿನಕಲ್ಕ ಇವುಗಳೊ ಡನೆ ತಯಾರಿಸಿದ ಯವಾಗೂವನ್ನು ಕುಡಿಸಿದರೆ ಅತಿಸಾರರೋಗಹರವು ; ಹಾಗೆಯೇ ಆಗತಾನೇ ಕರೆದು ಬಿಸಿಯಾಗಿರುವ ಹಾಲನ್ನು ಕುಡಿಸಿದರೂ ಅತಿಸಾರರೋಗವು ನಿವಾರಣೆ ಯಾಗುತ್ತದೆ. ಅತಿಸಾರರೋಗಿಗಳಿಗೆ ಲಘುವಾಗಿ, ಅಗ್ನಿದೀಪನಗಳಾಗಿ, ಸ್ನೇಹಮಿಶ್ರಿತ ಗಳಾಗಿರುವ ಅನ್ನಗಳು ಹಿತಕರಗಳು. ವೈದ್ಯನು ಜಾಗರೂಕತೆಯಿಂದ ಆಯಾಯ ಹಿತ ಕರಗಳಾದ ಔಷಧಯೋಗಗಳನ್ನು ಪ್ರಯೋಗಿಸಬೇಕು.

ತೃಷ್ಣಾಪನಯನೀ ಲಘ್ವೀ ದೀಪನೀ ಬಸ್ತಿಶೋಧನೀ ।
ಜ್ವರೇ ಚೈವಾತಿಸಾರೇ ಚ ಯವಾಗೂಃ ಸರ್ವದಾ ಹಿತಾ ॥೧೫೭॥
ರೌಕ್ಷ್ಯಜಾತೇ ಕ್ರಿಯಾ ಸ್ನಿಗ್ಧಾ ರೂಕ್ಷಾ ಸ್ನೇಹನಿಮಿತ್ತಜೇ ।
ಭಯಜೇ ಸಾನ್ತ್ವನಾಪೂರ್ವಾ ಶೋಕಜೇ ಶೋಕನಾಶಿನೀ ॥೧೫೮॥
ವಿಷಾರ್ಶಃಕ್ರಿಮಿಸಂಭೂತೇ ಹಿತಾ ಚೋಭಯಶರ್ಮದಾ ।

ಯವಾಗೂಪಾನವು ಬಾಯಾರಿಕೆಯನ್ನು ನಿವಾರಿಸುತ್ತದೆ; ಲಘುವಾದ ಕಾರಣ ಸುಲಭವಾಗಿ ಅರಗುತ್ತದೆ; ಅಗ್ನಿದೀಪನವನ್ನೂ, ಬಸ್ತಿಶೋಧನವನ್ನೂ, ಮಾಡುತ್ತದೆ; ಜ್ವರದಲ್ಲೂ ಅತಿಸಾರದಲ್ಲೂ ಸರ್ವದಾ ಹಿತಕರವಾದದ್ದು ; ರೂಕ್ಷಾಹಾರವಿಹಾರಗ ಳಿಂದುಂಟಾದ ಅತಿಸಾರರೋಗಿಗೆ ಸ್ನಿಗ್ಧಕ್ರಿಯೆಗಳನ್ನೂ ಸ್ನೇಹಕಾರಣದಿಂದುಂಟಾದರೆ ರೂಕ್ಷಚಿಕಿತ್ಸೆಯನ್ನೂ ಭಯದಿಂದ ಅತಿಸಾರವುಂಟಾದರೆ ಸಮಾಧಾನ ವಚನಗಳಿಂದ ಮನಃಶಾಂತಿಯನ್ನುಂಟುಮಾಡಿಯೂ, ವ್ಯಸನದಿಂದುಂಟಾದರೆ ವ್ಯಸನ ಪರಿಹಾರವಾಗು ವಂತೆ ಕಾರ್ಯಾಚರಣೆಮಾಡಿಯೂ, ವಿಷಪ್ರಯೋಗ, ಅರ್ಶಸ್ಸಿನ ಕ್ರಿಮಿಗಳಿಂದ ಅತಿಸಾರ

ವುಂಟಾದರೆ ವಿಷ, ಅರ್ಶಸ್ಸು ಕ್ರಿಮಿಹರಗಳಾದ ಚಿಕಿತ್ಸೆಗಳನ್ನುಮಾಡಿಸಿಯೂ ಸುಖ ವನ್ನುಂಟುಮಾಡಬೇಕು. ಅಂದರೆ ಹೇತುವ್ಯಾಧಿಗಳೆರಡಕ್ಕೂ ವಿರುದ್ಧವಾಗಿ ಚಿಕಿತ್ಸೆಮಾಡ ಬೇಕು.

ಛರ್ದಿಮೂರ್ಛಾತೃಡಾದ್ಯಾಂಶ್ಚ ಸಾಧಯೇದವಿರೋಧತಃ ॥೧೫೯॥
ಸಮವಾಯೇ ತು ದೋಷಾಣಾಂ ಪೂರ್ವಂ ಪಿತ್ತಮುಪಾಚರೇತ್ ।
ಜ್ವರೇ ಚೈವಾತಿಸಾರೇ ಚ ಸರ್ವತ್ರಾನ್ಯತ್ರ ಮಾರುತಮ್ ॥೧೬೦॥

ವಮನ, ಮೂರ್ಛೆ, (ಬುದ್ಧಿ ಅಥವಾ ಪ್ರಜ್ಞೆತಪ್ಪುವಿಕೆ) ಬಾಯಾರಿಕೆ ಮೊದಲಾದು ವನ್ನು ಪರಸ್ಪರವಿರೋಧವಾಗದಂತೆ ಚಿಕಿತ್ಸೆಮಾಡಬೇಕು ; ಮೂರುದೋಷಗಳೂ ಸಮ ವಾಗಿ ಪ್ರಕೋಪವಾಗಿದ್ದರೆ ಮೊದಲು ಪಿತ್ತದೋಷಕ್ಕೆ ಚಿಕಿತ್ಸೆಮಾಡಿ ಶಮನಮಾಡಬೇಕು, ಜ್ವರದಲ್ಲೂ ಅತಿಸಾರದಲ್ಲೂ ಪಿತ್ತಾಧಿಕ್ಯವನ್ನು ತಗ್ಗಿಸಬೇಕು ಉಳಿದ ಎಲ್ಲಾ ರೋಗ ಗಳಲ್ಲೂ ವಾತವನ್ನು ನಿವಾರಣೆ ಮಾಡುವುದೇ ಮೊದಲನೇ ಕರ್ತವ್ಯವು ; ಕೆಲವು ತಂತ್ರ ಗಳಲ್ಲಿ ಅತಿಸಾರರೋಗದಲ್ಲಿ ಮೊದಲು ವಾತವನ್ನು ಶಮನಗೊಳಿಸಬೇಕೆನ್ನುತ್ತಾರೆ. ಏಕೆಂದರೆ ಅತಿಸಾರದಲ್ಲಿ ಕಫವಾತಗಳ ಸಂಯೋಗವಿದ್ದರೆ ಮೊದಲು ವಾತವನ್ನು ಚಿಕಿತ್ಸೆಯಿಂದ ತಗ್ಗಿಸಬೇಕು, ಪಾಚನೌಷಧದಿಂದ ಆಮಕಫಗಳು ಕ್ಷೀಣಿಸಿ ವಾತವೃದ್ಧಿಯಾಗುತ್ತದೆ.

ಯಸ್ಯೋಚ್ಚಾರಂ ವಿನಾ ಮೂತ್ರಂ ಸಮ್ಯಗ್ವಾಯುಶ್ಚ ಗಚ್ಛತಿ ।
ದೀಪ್ತಾಗ್ನೇರ್ಲಘುಕೋಷ್ಠಸ್ಯ ಸ್ಥಿತಸ್ತಸ್ಯೋದರಾಮಯಃ ॥೧೬೧॥
ಕರ್ಮಜಾ ವ್ಯಾಧಯಃ ಕೇಚಿದ್ದೋಷಜಾಃ ಸನ್ತಿ ಚಾಪರೇ ।
ಕರ್ಮದೋಷೋದ್ಭವಾಶ್ಚಾನ್ಯೇ ಕರ್ಮಜಾಸ್ತೇಷ್ವಹೇತುಕಾಃ ॥೧೬೨॥
ನಶ್ಯನ್ತಿ ತ್ವಕ್ರಿಯಾಭಿಸ್ತೇ ಕ್ರಿಯಾಭಿಃ ಕರ್ಮಸಂಕ್ಷಯೇ ।
ಶಾಮ್ಯನ್ತಿ ದೋಷಸಮ್ಭೂತಾ ದೋಷಸಂಕ್ಷಯಹೇತುಭಿಃ ॥೧೬೩॥
ತೇಷಾಮಲ್ಪನಿದಾನಾ ಯೇ ಪ್ರತಿಕಷ್ಟಾ ಭವನ್ತಿ ಚ ।
ಮೃದವೋ ಬಹುದೋಷಾ ವಾ ಕರ್ಮದೋಷೋದ್ಭವಾಸ್ತು ತೇ ॥೧೬೪॥
ಕರ್ಮದೋಷಕ್ಷಯಕೃತಾ ತೇಷಾಂ ಸಿದ್ಧಿರ್ವಿಧೀಯತೇ ।
ದುಷ್ಕೃತಿ ಗ್ರಹಧೀ ಜನ್ತೋರಗ್ನಿಸಾದನ ಹೇತುಭಿಃ ॥೧೬೫॥

ಅತಿಸಾರ ನಿವಾರಣೆಯಾದರೆ ಕಾಣುವ ಲಕ್ಷಣ :—ಮೇಲೆ ಹೇಳಿದ ಚಿಕಿತ್ಸೆ ಯಿಂದ ಮಲವು ವಿಸರ್ಜನೆಯಾಗದೆ ಸರಿಯಾಗಿ ಮೂತ್ರವೂ ಅಧೋವಾತವೂ ವಿಸರ್ಜನೆ ಯಾಗುತ್ತಲೂ ಅಗ್ನಿದೀಪನವಾಗಿ ಕೋಷ್ಠವು ಲಘುವಾದರೆ ಅತಿಸಾರ ರೋಗವು ನಿವೃತ್ತಿಯಾಯಿತೆಂದು ತಿಳಿಯಬೇಕು. ವ್ಯಾಧಿಗಳು ಕರ್ಮಜಗಳು, ದೋಷಜಗಳು, ಕರ್ಮದೋಷಜಗಳೆಂದು ಮೂರು ಪ್ರಕಾರಗಳಾಗಿವೆ. ಹೇಗೆಂದರೆ—ಪಥ್ಯಾಹಾರ ವಿಹಾರ ಗಳನ್ನಾಚರಿಸುವವರಿಗೂ ಹೇಮಂತ ಶಿಶಿರಗಳಲ್ಲಿ ರಕ್ತಪಿತ್ತಾದಿರೋಗಗಳೂ, ವಸಂತ ಋತುವಿನಲ್ಲಿ ವಾತರೋಗಗಳೂ, ಪ್ರಾವೃಟ್ಕಾಲ (ಮಳೆಗಾಲ) ದಲ್ಲಿ ಶ್ಲೇಷ್ಮರೋಗಗಳೂ, ಕಾರಣವಿಲ್ಲದೆ ಉಂಟಾದರೆ ಅವು "ಕರ್ಮಜವ್ಯಾಧಿ" ಗಳೆನಿಸುತ್ತವೆ. ಶಾಸ್ತ್ರವಿರುದ್ಧವಾದ

ಆಹಾರಾಚಾರಗಳನ್ನು ಸೇವಿಸುವವರಿಗೆ ದೇಹದಲ್ಲಿ ದೋಷಗಳು ಪ್ರಕೋಪ ಹೊಂದಿ ರೋಗಗಳನ್ನುಂಟುಮಾಡಿದರೆ ಇವು "ದೋಷಜವ್ಯಾಧಿ" ಗಳೆನಿಸುತ್ತವೆ. ಈ ಎರಡು ವಿಧ ಕಾರಣಗಳಿಂದುಂಟಾಗುವ ರೋಗಗಳು "ಕರ್ಮದೋಷಜ" ಗಳೆನಿಸುತ್ತವೆ. ಕರ್ಮಜ ರೋಗಗಳಿಗೆ ಕಾರಣವೇ ಇಲ್ಲ. ಅಂದರೆ ದೋಷಗಳ ಪ್ರಕೋಪಕ್ಕೆ ಕಾರಣಗಳೇ ಇಲ್ಲ. ಆಗಂತು ಕಾರಣವೂ ಇರುವುದಿಲ್ಲ ; ಇವು ಚಿಕಿತ್ಸೆಗಳಿಂದ ನಿವಾರಣೆಯಾಗುವುದಿಲ್ಲ. ಪ್ರಾಯಶ್ಚಿತ್ತ, ಜಪ, ಹೋಮ, ಬಲಿದಾನ ಮೊದಲಾದುವುಗಳಿಂದ ನಿವಾರಣೆಯಾಗುತ್ತವೆ. ಅಂದರೆ ವ್ಯಾಧಿಜನಕಕರ್ಮವು ಕ್ಷೀಣವಾದರೆ ಕರ್ಮಜವ್ಯಾಧಿಗಳೂ ನಿವಾರಣೆಯಾಗುತ್ತವೆ ; ದೋಷಗಳಿಂದುಂಟಾದ ರೋಗಗಳು ದೋಷಶಮನ ಚಿಕಿತ್ಸೆಗಳಿಂದ ನಿವಾರಣೆಯಾಗುತ್ತವೆ ; ಸ್ವಲ್ಪಕಾರಣದಿಂದುಂಟಾಗಿ ಚಿಕಿತ್ಸೆಮಾಡುವುದು ಅತಿಕಷ್ಟವಾಗಿ ಪರಿಣಮಿಸಿದರೆ ಅಥವಾ ಬಹು ದೋಷಪ್ರಕೋಪದಿಂದುಂಟಾದರೂ ಸುಖಸಾಧ್ಯವಾಗಿ ಪರಿಣಮಿಸಿದರೆ ಆ ರೋಗಗಳು ಕರ್ಮಜ, ದೋಷಜಗಳೆಂಬ ಎರಡು ಕಾರಣಗಳಿಂದುಂಟಾದ ರೋಗಗಳೆಂದು ತಿಳಿಯತಕ್ಕದ್ದು ; ಇವುಗಳಿಗೆ ಯಾಗ, ದಾನ, ಮಂತ್ರೋಚ್ಚಾರಣೆ, ಬಲಿಹರಣ, ದೇವತಾರಾಧನೆ, ಗುರುದ್ವಿಜರು ವೃದ್ಧರುಗಳ ಪೂಜೆ ಇವೇ ಮೊದಲಾದ ಉಪಾಯಗಳಿಂದ ಕರ್ಮಕ್ಷಯವೂ ಸ್ನೇಹ ಸ್ವೇದ ವಮನ ವಿರೇಚನ ಮೊದಲಾದ ಚಿಕಿತ್ಸೆಗಳಿಂದ ದೋಷಕ್ಷಯವೂ ಉಂಟಾಗುತ್ತದೆ. ಪ್ರಾಣಿಗಳಿಗೆ ಅತಿಸಾರವುಂಟಾಗದಿದ್ದರೂ ಗ್ರಹಣಿಯು (ಪಿತ್ತಧರಾ ಎಂಬ ಕಲಾವಿಶೇಷವು ಅಗ್ನಿಗೆ ಆಶ್ರಯ) ಇರುತ್ತದೆ, ಅಗ್ನಿಶಕ್ತಿಯನ್ನು ಕಡಿಮೆಮಾಡುವ ಆಹಾರ ವಿಹಾರಗಳಿಂದ ದೂಷಿಸಲ್ಪಡುತ್ತದೆ.

ಅತಿಸಾರೇ ನಿವೃತ್ತೇಽಪಿ ಮನ್ದಾಗ್ನೇರಹಿತಾಶಿನಃ ।
ಭೂಯಃ ಸಂದೂಷಿತೋವಹ್ನಿರ್ಗ್ರಹಣೀಮಭಿದೂಷಯೇತ್ ॥೧೬೬॥
ತಸ್ಮಾತ್ಕಾರ್ಯಃ ಪರೀಹಾರಸ್ತ್ವತೀಸಾರೇ ವಿರಿಕ್ತವತ್ ।
ಯಾವನ್ನ ಪ್ರಕೃತಿಸ್ಥಃ ಸ್ಯಾದ್ದೋಷತಃ ಪ್ರಾಣತಸ್ತಥಾ ॥೧೬೭॥

ಅತಿಸಾರದಲ್ಲಿ ಗ್ರಹಣಿಯೆಂಬ ಅಗ್ನ್ಯಾಶಯವು ಆಮದೋಷದಿಂದ ದೂಷಿಸಲ್ಪಡುತ್ತದೆಯಾಗಿ ಅತಿಸಾರವಿರುವಾಗಲೂ ಅತಿಸಾರ ನಿಂತಮೇಲೂ ಸಹಾ ಅಗ್ನಿಯು ದೂಷಿಸಲ್ಪಟ್ಟು ಗ್ರಹಣಿಯನ್ನೂ ಪೂರ್ತಿಯಾಗಿ ಕೆಡಿಸುತ್ತದೆಯಾಗಿ ಅತೀಸಾರ ರೋಗದಲ್ಲಿ ವಿರೇಚನ ಪ್ರಯೋಗಮಾಡಿದ ರೋಗಿಗೆ ಹೇಳಿದಂತೆಯೇ ಅವನ ದೋಷಗಳು ಸಮಸ್ಥಿತಿಗೆಬಂದು ಅವನಿಗೆ ಮೊದಲಿನಂತೆ ದೇಹಬಲವು ಉಂಟಾಗುವವರೆಗೂ ಉಷ್ಣೋದಕೋಪಚಾರಮಾಡಿಕೊಂಡು ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ರಾತ್ರಿಕಾಲದಲ್ಲಿ ನಿದ್ರಿಸಬೇಕು ಇವೇ ಮೊದಲಾದ ನಿಯಮಗಳನ್ನು ಆಚರಿಸಿಕೊಂಡು ಬರಬೇಕು.

ಷಷ್ಠೀ ಪಿತ್ತಧರಾ ನಾಮ ಯಾ ಕಲಾ ಪರಿಕೀರ್ತಿತಾ ।
ಪಕ್ವಾಮಾಶಯಮಧ್ಯಸ್ಥಾ ಗ್ರಹಣೀ ಸಾ ಪ್ರಕೀರ್ತಿತಾ ॥೧೬೮॥

ಗರ್ಭವ್ಯಾಕರಣ ಶಾರೀರಾಧ್ಯಾಯದಲ್ಲಿ ಪಿತ್ತಧರಾಕಲಾ ಎಂದು ವಿವರಿಸಿರುವ ಪಕ್ವಾಶಯಕ್ಕೂ ಆಮಾಶಯಕ್ಕೂ ಮಧ್ಯದಲ್ಲಿರುವ ಕಲೆಯು ಗ್ರಹಣೀ ಎಂದು ಪ್ರಸಿದ್ಧ ವಾಗಿದೆ.

ಗ್ರಹಣ್ಯಾ ಬಲಮಗ್ನಿರ್ಹಿ ಸಚಾಪಿ ಗ್ರಹಣೀಂ ಶ್ರಿತಃ ।
ತಸ್ಮಾತ್ ಸಂದೂಷಿತೇ ವಹ್ನೌ ಗ್ರಹಣೀ ಸಂಪ್ರದುಷ್ಯತೆ ॥೧೯॥
ಏಕಶಃ ಸರ್ವಶಶ್ಚೈವ ದೋಷೈರತ್ಯರ್ಥಮೂರ್ಛಿತೈಃ ।
ಸಾ ದುಷ್ಟಾ ಬಹುಶೋ ಭುಕ್ತಮಾಮಮೇವ ವಿಮುಞ್ಚತಿ ॥೨೦॥
ಪಕ್ವಂ ವಾ ಸರುಜಂ ಪೂತಿ ಮುಹುರ್ಬದ್ಧಂ ಮುಹುರ್ದ್ರವಮ್ ।
ಗ್ರಹಣೀರೋಗಮಾಹುಸ್ತಮಾಯುರ್ವೇದವಿದೋ ಜನಾಃ ॥೨೧॥

ಅಗ್ನ್ಯಧಿಷ್ಠಾನ ಭೂತವಾದ ಗ್ರಹಣೀ ಎಂಬಕಲೆಗೆ ಅಗ್ನಿಯೇ ಬಲವನ್ನು ಉಂಟು ಮಾಡುತ್ತದೆ; ಅಗ್ನಿಯು ಗ್ರಹಣಿಯನ್ನು ಆಶ್ರಯಿಸಿಕೊಂಡಿರುತ್ತದೆಯಾಗಿ ಅಗ್ನಿಯು ದೋಷ ದಿಂದ ದೂಷಿಸಲ್ಪಟ್ಟರೆ ಗ್ರಹಣಿಯೂ ಕೆಡುತ್ತದೆ ; ಅತ್ಯಂತ ವೃದ್ಧಿಹೊಂದಿದ ವಾತ, ಪಿತ್ತ, ಕಫಗಳು ಒಂದೊಂದಾಗಿಯೂ ಎರಡೆರಡಾಗಿಯೂ ಎಲ್ಲವೂ ಒಟ್ಟಿಗೆ ಸೇರಿಯೂ ಬಹುಪ್ರಕಾರದಿಂದ ಕೆಡಿಸಲ್ಪಟ್ಟ ಗ್ರಹಣೀ ಎಂಬ ಕಲೆಯು ಭೋಜನಮಾಡಿದ ಆಹಾರ ವನ್ನು ಆಮವಾಗಿಯೇ ಹೊರಕ್ಕೆ ನೂಕಿ ಬಿಡುತ್ತದೆ. ಪಕ್ವವಾದ ಮಲವನ್ನು ನೋವಿನಿಂದ ಕೂಡಿಯೂ ದುರ್ವಾಸನೆಯುಳ್ಳದಾಗಿಯೂ ಆಗಾಗ್ಯೆ ಗಟ್ಟಿಗಟ್ಟಿಯಾಗಿಯೂ ಆಗಾಗ್ಯೆ ನೀರಾಗಿರುವಂತೆಯೂ ವಿಸರ್ಜನೆ ಮಾಡಿಸುತ್ತದೆ ; ಅಷ್ಟಾಂಗ ಆಯುರ್ವೇದಜ್ಞರಾದ ವೈದ್ಯರು ಈ ರೋಗಕ್ಕೆ "ಗ್ರಹಣೀರೋಗ" ವೆಂದು ಹೇಳುತ್ತಾರೆ.

ತಸ್ಯೋತ್ಪತ್ತೌ ವಿದಾಹೋಽನ್ನೇ ಸದನಾಲಸ್ಯತೃಟ್‌ಕ್ಲಮಾಃ ।
ಬಲಕ್ಷಯೋಽರುಚಿಃ ಕಾಸಃ ಕರ್ಣಕ್ಷ್ವೇಡೋಽನ್ತ್ರಕೂಜನಮ್ ॥೨೨॥

ಪೂರ್ವರೂಪ :—ತಿಂದ ಆಹಾರವು ಅರ್ಧಪಕ್ವವಾಗುತ್ತದೆ ; ದೇಹಕ್ಷೀಣತೆ ಆಯಾಸ, ನೀರಡಿಕೆ, ಬಳಲಿಕೆ, ಬಲಹಾನಿ, ಅರುಚಿ, ಕಾಸ, ಅನೇಕವಿಧ ಹುಂಕಾರಾದಿ ಶಬ್ದಗಳು ಕಿವಿಯಲ್ಲಿ ಕೇಳಿಸುವುದು, ಕರುಳಿನಲ್ಲಿ ಶಬ್ದವಾಗುವುದು ಕೇಳಿಸುವುದು ಈ ಲಕ್ಷಣ ಗಳು ಕಂಡು ಬಂದರೆ ಗ್ರಹಣಿ ರೋಗದ ಪೂರ್ವರೂಪಗಳೆಂದು ತಿಳಿದುಕೊಳ್ಳಬೇಕು.

ಅಥ ಜಾತೇ ಭವೇಜ್ಜನ್ತುಃ ಶೂನಪಾದಕರಃ ಕೃಶಃ ।
ಪರ್ವರುಗ್ಲೌಲ್ಯತೃಟ್ ಛರ್ದಿಜ್ವರಾರೋಚಕ ದಾಹವಾನ್ ॥೨೩॥
ಉದ್ಗಿರೇಚ್ಛುಕ್ತತಿಕ್ತಾಮ್ಲ ಲೋಹಧೂಮಾಮಗನ್ಧಿಕಮ್ ।
ಪ್ರಸೇಕಮುಖವೈರಸ್ಯತಮಕಾರುಚಿ ಪೀಡಿತಃ ॥೨೪॥

ರೂಪ :—ಗ್ರಹಣಿ ರೋಗವುಂಟಾದರೆ ರೋಗಿಗೆ ಕೈಕಾಲು ಊದಿರುತ್ತವೆ, ಮೈ ಕೃಶವಾಗಿರುತ್ತದೆ, ಬೆರಳುಗಿಣ್ಣುಗಳಲ್ಲಿ ನೋವು ಎಲ್ಲಾ ರಸಗಳಲ್ಲೂ ತಿನ್ನಬೇಕೆಂಬ ಇಚ್ಛೆ ನೀರಡಿಕೆ, ವಮನ, ಜ್ವರ, ಅರುಚಿ, ಮೈಉರಿವುದೂ ಹುಳಿಹುಳಿಯಾಗಿಯೂ ಕಹಿ

ಯಾಗಿಯೂ, ಕಬ್ಬಿಣದ ವಾಸನೆಯುಳ್ಳದ್ದಾಗಿಯೂ ಹಸಿಮಾಂಸದ ವಾಸನೆಯುಳ್ಳಂತೆಯೂ ತೇಗುಬರುತ್ತದೆ. ಬಾಯಿನಿಂದ ಜೊಲ್ಲು ಸೋರುತ್ತದೆ, ಮುಖದಲ್ಲಿ ರುಚಿ ಬದಲಾಗುತ್ತದೆ ರೋಗಿಯು ತಮಕಶ್ವಾಸ, ಅರೋಚಕತೆಗಳಿಂದ ಪೀಡಿತನಾಗಿರುತ್ತಾನೆ; ಈ ರೋಗದವರಿಗೆ ಅರುಚಿಯು ಅವಶ್ಯಕವಾಗಿ ಇದ್ದೇಇರುತ್ತದೆಂದು ತಿಳಿಯಬೇಕು; ನಿರ್ಮಾಂಸ ಎಂದರೆ ಅತ್ಯಂತ ಕ್ಷೀಣ ಮಾಂಸವುಳ್ಳವನೆಂದೂ ಕೃಶನೆಂದರೆ ಅಲ್ಪಮಾಂಸವುಳ್ಳವನೆಂದೂ ತಿಳಿಯಬೇಕು.

ವಾತಾಚ್ಛೂಲಾಧಿಕ್ಯೈಃ ಪಾಯುಹೃತ್ಪಾರ್ಶ್ವೋದರಮಸ್ತಕೈಃ ।
ಪಿತ್ತಾತ್ ಸದಾಹೈರ್ಗುರುಭಿಃ ಕಫಾತ್ ತ್ರಿಭ್ಯಸ್ತ್ರಿಲಕ್ಷಣೈಃ ॥೧೭೫॥
ದೋಷವರ್ಣೈರ್ನಖೈಸ್ತದ್ವದ್ವಿಣ್ಮೂತ್ರನಯನಾನನೈಃ ।
ಹೃತ್ಪಾಣ್ಡ್ವದರಗುಲ್ಮಾರ್ಶಃ ಪ್ಲೀಹಾಶಙ್ಕೀ ಚ ಮಾನವಃ ॥೧೭೬॥

ವಾತಗ್ರಹಣಿರೋಗದಲ್ಲಿ ಗುದ, ಹೃದಯಗಳು ಹೊಟ್ಟೆ, ತಲೆ ಇವುಗಳಲ್ಲಿ ಅಧಿಕವಾದ ನೋವಿರುತ್ತದೆ. ಪಿತ್ತಗೃಹಣಿಯಲ್ಲಿ ಗುದ, ಹೃದಯಾದಿಗಳಲ್ಲಿ ಉರಿಯುಂಟಾಗಿರುತ್ತದೆ ; ಕಫಗ್ರಹಣಿಯಲ್ಲಿ ಗುದ, ಹೃದಯಾದಿಗಳು ಭಾರವಾಗಿರುತ್ತವೆ. ತ್ರಿದೋಷಜ ಗ್ರಹಣೀರೋಗದಲ್ಲಿ ಗುದ ಹೃದಯಾದಿಗಳಲ್ಲಿ ಶೂಲೆಯೂ ಉರಿಯೂ, ಭಾರವೂ ಅಧಿಕವಾಗಿರುತ್ತವೆ. ಇವುಗಳಲ್ಲದೆ ವಾತಪಿತ್ತ ಕಫದೋಷಗಳಿಗೆ ಅನುಗುಣವಾಗಿ ಉಗುರು, ಮಲ, ಮೂತ್ರ, ಕಣ್ಣುಗಳು, ಬಾಯಿಕಪ್ಪು, ಕೆಂಪು ಮಿಶ್ರವಾದ ಬಿಳುಪು (ಅರುಣ) ನೀಲಿ, ಹಳದಿ, ಕೆಂಪು, ಕಪ್ಪು, ಬಿಳುಪು, ಬಣ್ಣವುಳ್ಳವಾಗಿರುತ್ತವೆ. ರೋಗಿಯು ಹೃದ್ರೋಗ, ಉದರ, ಪಾಂಡು, ಗುಲ್ಮ, ಅರ್ಶಸ್ಸು, ಪ್ಲೀಹವೃದ್ಧಿ ಈ ರೋಗಗಳಿಂದ ಪೀಡಿತನಾಗಿರುವನೆಂದು ಶಂಕಿಸುತ್ತಾನೆ.

ಯಥಾ ದೋಷೋಚ್ಛ್ರಯಂ ತಸ್ಯ ವಿಶುದ್ಧಸ್ಯ ಯಥಾಕ್ರಮಮ್ ।
ಪೇಯಾದಿಂ ವಿತರೇತ್ ಸಮ್ಯಗ್ದೀಪನೀಯೋಪಸಂಭೃತಮ್ ॥೧೭೭॥
ತತಃ ಪಾಚನಸಂಗ್ರಾಹಿದೀಪನೀಯಗಣತ್ರಯಮ್ ।
ಪಿಬೇತ್ ಪ್ರಾತಃ ಸುರಾರಿಷ್ಟಸ್ನೇಹಮೂತ್ರ ಸುಖಾಮ್ಬುಭಿಃ ॥೧೭೮॥
ತಕ್ರೇಣ ವಾಥ ತಕ್ರಂ ವಾ ಕೇವಲಂ ಹಿತಮುಚ್ಯತೇ ।
ಕ್ರಿಮಿಗುಲ್ಮೋದರಾರ್ಶೋಘ್ನೀಃ ಕ್ರಿಯಾಶ್ಚಾತ್ರಾವಚಾರಯೇತ್ ॥
ಚೂರ್ಣಂ ಹಿಙ್ಗ್ವಾದಿಕಂ ಚಾತ್ರ ಘೃತಂ ವಾ ಪ್ಲೀಹನಾಶನಮ್ ॥೧೭೯॥

ದೋಷಾನುಸಾರ ದೇಹವು ಶುದ್ಧವಾದನಂತರ ಕ್ರಮವಾಗಿ ದೀಪನೀಯಗಣ ದ್ರವ್ಯಗಳನ್ನು ಸೇರಿಸಿ ಪೇಯಾ, ವಿಲೇಪಿ ಮೊದಲಾದ ಉಪಚಾರಕ್ರಮಗಳನ್ನು ಆಚರಿಸಬೇಕು. ಅನಂತರ ಪಂಚಕೋಲಾದಿ ದೀಪನಗಣ, ಹರಿದ್ರಾದಿ ಪಾಚನಗಣ, ಅಂಬಷ್ಠಾದಿ ಸಂಗ್ರಾಹಿಗಣ, ದ್ರವ್ಯಗಳ ಚೂರ್ಣಗಳನ್ನು ಸುರಾ ಎಂಬ ಮದ್ಯವಿಶೇಷ ಅರಿಷ್ಟ, ಸ್ನೇಹ, ಮೂತ್ರ, ಸುಖೋಷ್ಣಜಲ, ಮಜ್ಜಿಗೆ ಇವುಗಳೊಂದರಲ್ಲಿ ಕದರಿ, ದೋಷ, ಕಾಲ, ಸಾತ್ಮ್ಯಾದಿಗಳಿಗೆ

ತಕ್ಕಂತೆ ಪ್ರಾತಃಕಾಲದಲ್ಲಿ ಕುಡಿಸಬೇಕು. ಬರಿಯ ಮಜ್ಜಿಗೆಯನ್ನಾಗಲೀ ಕುಡಿಸಬೇಕು. ಕ್ರಿಮಿ, ಗುಲ್ಮ, ಉದರ, ಅರ್ಶಸ್ಸುಹರಗಳಾದ ಚಿಕಿತ್ಸೆಗಳನ್ನೂ ಮಾಡಬೇಕು. ಹಿಂಗ್ವಾಷ್ಟಿಚೂರ್ಣವನ್ನೂ ಪ್ಲೀಹಹರವಾದ ಷಟ್ಪಲಘೃತವನ್ನೂ ಸೇವಿಸಬೇಕು.

ಕಲ್ಕೇನ ಮಗಧಾದೇಶ್ಚ ಚಾಙ್ಗೇರೀಸ್ವರಸೇನ ವಾ |
ಚತುರ್ಗುಣೇನ ದಧ್ನಾ ಚ ಘೃತಂ ಸಿದ್ಧಂ ಹಿತಂ ಭವೇತ್ ||೧೮೦||
ಸರ್ವಥಾ ದೀಪನಂ ಸರ್ವಂ ಗ್ರಹಣೀರೋಗಿಣಾಂ ಹಿತಮ್ |

ಪಿಪ್ಪಲ್ಯಾದಿ ಗಣದ್ರವ್ಯಗಳ ಕಲ್ಕ $\frac{1}{4}$ ಭಾಗಕ್ಕೆ ಪುಳ್ಳಂಪರಚಿ (ಹುಳಿಹುಂಚಿ)ಯ ಸೊಪ್ಪಿನ ಸ್ವರಸ ೧ ಭಾಗ, ಮೊಸರು ೪ ಭಾಗ, ತುಪ್ಪ ೧ ಭಾಗ ಮಿಶ್ರಮಾಡಿ ಘೃತವನ್ನು ತಯಾರಿಸಿ ಸೇವಿಸಬೇಕು. ಗ್ರಹಣೀರೋಗಿಗಳಿಗೆ ಎಲ್ಲಾ ವಿಧಗಳಾದ ದೀಪನೌಷಧಗಳೇ ಹಿತವು.

ಜ್ವರಾದೀನವಿರೋಧಾಚ್ಚ ಸಾಧಯೇತ್ ಸ್ವೈಶ್ಚಿಕಿತ್ಸಿತೈಃ ||೧೮೧||

ಗ್ರಹಣೀರೋಗದವರಿಗೆ ಉಂಟಾಗುವ ಜ್ವರ, ಅರೋಚಕತೆ, ಶೂಲೆ, ಕೈಕಾಲು ಶೋಫೆ ಮೊದಲಾದ ಉಪದ್ರವಗಳಿಗೆ ಗ್ರಹಣೀರೋಗಕ್ಕೆ ವಿರೋಧವಾಗದಂತೆ ಚಿಕಿತ್ಸೆ ಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ ಅತೀಸಾರಪ್ರತಿಷೇಧನಾಮಕ ಚತ್ವಾರಿಂಶತ್ತಮೋಽಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ

ಏಕಚತ್ವಾರಿಂಶತ್ತಮೋಽಧ್ಯಾಯಃ

ಅಥಾತಃ ಶೋಷಪ್ರತಿಷೇಧಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಶೋಷರೋಗದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ : ಶೋಷರೋಗದಲ್ಲಿ ಅತಿಸಾರವುಂಟಾಗುತ್ತದೆ ; ಅಥವಾ ಜ್ವರಾತಿಸಾರಗಳಿಂದ ಶೋಷವುಂಟಾಗುತ್ತದೆಯಾಗಿ ಅತಿಸಾರ ಚಿಕಿತ್ಸೆಯಾದನಂತರ ಶೋಷ ಚಿಕಿತ್ಸೆಯನ್ನು ವಿವರಿಸಬೇಕಾದದ್ದೇ ಯುಕ್ತವು.

ಅನೇಕರೋಗಾನುಗತೋ ಬಹುರೋಗಪುರೋಗಮಃ ।
ದುರ್ವಿಜ್ಞೇಯೋ ದುರ್ನಿವಾರೋ ಶೋಷೋ ವ್ಯಾಧಿರ್ಮಹಾಬಲಃ ॥೩॥
ಸಂಶೋಷಣಾದ್ರಸಾದೀನಾಂ ಶೋಷ ಇತ್ಯಭಿಧೀಯತೇ ।
ಕ್ರಿಯಾಕ್ಷಯಕರತ್ವಾಚ್ಚ ಕ್ಷಯ ಇತ್ಯುಚ್ಯತೇ ಪುನಃ ॥೪॥
ರಾಜ್ಞಶ್ಚನ್ದ್ರಮಸೋ ಯಸ್ಮಾದಭೂದೇಷ ಕಿಲಾಮಯಃ ।
ತಸ್ಮಾತ್ತಂ ರಾಜಯಕ್ಷ್ಮೇತಿ ಕೇಚಿದಾಹುರ್ಮನೀಷಿಣಃ ॥೫॥

ಅನೇಕ ಉಪದ್ರವಗಳಿಂದ ಕೂಡಿ ಮಹಾ ಬಲವಾದ ಶೋಷರೋಗವನ್ನು ಗೊತ್ತು ಮಾಡುವುದೂ ಮತ್ತು ಅದನ್ನು ನಿವಾರಣೆ ಮಾಡುವುದೂ ಅತಿ ಕಷ್ಟಕರವು ; ರಸಾದಿ ಧಾತುಗಳನ್ನು ಕ್ಷೀಣಗೊಳಿಸುವ ಕಾರಣ ಶೋಷವೆಂದೂ ಕಾಯ ವಾಕ್ ಮನಸ್ಸುಗಳ ವ್ಯಾಪಾರಗಳನ್ನು ಕ್ಷೀಣಗೊಳಿಸುವುದರಿಂದ ಕ್ಷಯರೋಗವೆಂದೂ ನಕ್ಷತ್ರಗಳಿಗೆ ರಾಜನಾದ ಚಂದ್ರನಿಗೆ ಪ್ರಾಪ್ತವಾಗಿದ್ದು ರೋಗಗಳಿಗೆಲ್ಲಾ ಪ್ರಧಾನವಾದ ಕಾರಣ "ರಾಜಯಕ್ಷ್ಮ" ವೆಂದೂ ವ್ಯವಹರಿಸಲ್ಪಡುತ್ತದೆ.

ಟಿಪ್ಪಣಿ :—ಚಂದ್ರನಿಗೆ ಕ್ಷಯರೋಗವು ಪ್ರಾಪ್ತವಾದ ವಿಚಾರವಾಗಿ (ಪುರಾಣಗಳಲ್ಲಿ) ಹೇಳುವುದೇನೆಂದರೆ ದಕ್ಷಪ್ರಜಾಪತಿಯು ತನ್ನ ೨೭ ಜನ ಹೆಣ್ಣು ಮಕ್ಕಳನ್ನೂ ಚಂದ್ರನಿಗೆ ಕೊಟ್ಟು ಮದುವೆಮಾಡಿ ಎಲ್ಲಾ ಕನ್ಯೆಯರಲ್ಲೂ ಸಮಾನ ಪ್ರೀತಿಯುಳ್ಳವನಾಗಿರಬೇಕೆಂದು ಸೂಚಿಸಿದ್ದನು ; ಆದರೆ ಚಂದ್ರನು ಹಾಗೆ ಮಾಡದೆ ರೋಹಿಣಿಯಲ್ಲಿ ಮಾತ್ರವೇ ಅನುರಾಗಾಧಿಕ್ಯತೆಯಿಂದ ವರ್ತಿಸುತ್ತಾ ಇತರರನ್ನು ಉದಾಸೀನತೆಯಿಂದ ದೂರದಲ್ಲಿಟ್ಟಿದ್ದನು ; ಅವರು ವ್ಯಸನದಿಂದ ಈ ವಿಚಾರವನ್ನು ತಮ್ಮ ತಂದೆಯಲ್ಲಿ ಹೇಳಿಕೊಳ್ಳಲು ದಕ್ಷನು ಚಂದ್ರನನ್ನು ಕರೆಸಿ ತನ್ನ ಎಲ್ಲಾ ಹೆಣ್ಣು ಮಕ್ಕಳಲ್ಲೂ ಒಂದೇ ಸಮವಾಗಿ ಅನುರಾಗದಿಂದಿರಬೇಕೆಂದು ನಿರ್ಬಂಧಪಡಿಸಿದನು ; ಆದರೆ ಚಂದ್ರನು ಅವನ

ಅಪ್ಪಣೆಯನ್ನು ಉಲ್ಲಂಘಿಸಿ ಮೊದಲಿನಂತೆಯೇ ರೋಹಿಣಿಯೊಬ್ಬಳಲ್ಲೇ ಕ್ರೀಡಿಸುತ್ತಿದ್ದನು. ಇದರಿಂದ ದಕ್ಷನಿಗೆ ಕೋಪ ಬಂದು ಕ್ರೋಧಾಗ್ನಿಯು ಯಕ್ಷ್ಮ ರೂಪದಿಂದ ಚಂದ್ರನಿಗೆ ತಗಲಿ ಅವನು ಪ್ರಭೆ, ಉತ್ಸಾಹಗಳಿಂದ ಹೀನವಾಗಿ ಗುರುವಾದ ದಕ್ಷನ ಮಾತನ್ನುಉಲ್ಲಂಘಿಸಿದ ಕಾರಣ ಈ ರೋಗವುಂಟಾಯಿತೆಂದು ಪಶ್ಚಾತ್ತಾಪಪಟ್ಟು ಪುನಃ ದಕ್ಷನನ್ನೇ ಮರೆಹೋಗಲು ಅತನು ದೇವ ವೈದ್ಯರಾದ ಅಶ್ವಿನೀದೇವತೆಗಳಿಂದ ಚಂದ್ರನಿಗೆ ಚಿಕಿತ್ಸೆಯನ್ನು ಮಾಡಿಸಿದನು ; ಹೀಗೆ ಗುರುವಿನಿಂದ ಅನುಗ್ರಹಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದಿದ ಕಾರಣ ಚಂದ್ರನಿಗೆ ಅಧಿಕ ಬಲವುಂಟಾಗಿ ಅತ್ಯಂತಕಾಂತಿಯುಳ್ಳವನಾದನು ; ಇದರಿಂದ ಈ ವ್ಯಾಧಿಯು ಕರ್ಮದೋಷಗಳೆರಡರಿಂದಲೂ ಉಂಟಾಗಿರುತ್ತೆಂದು ತಿಳಿಸಿದಂತಾಯಿತು.

ಸಮಸ್ತೈರ್ಜಾಯತೇ ದೋಷೈರಿತಿ ಕೇಚಿದ್ವದನ್ತಿ ಹಿ ।
ಏಕಾದಶಾನಾಮೇಕಸ್ಮಿನ್ ಸಾನ್ನಿಧ್ಯಾತ್ ತನ್ತ್ರಯುಕ್ತಿತಃ ॥೬॥
ಕ್ರಿಯಾಣಾಂ ಚಾವಿಭಾಗೇನ ಪ್ರಾಗೇಕೋತ್ಪಾದನೇನ ಚ ।
ಏಕ ಏವ ಮತಃ ಶೋಷಃ ಸನ್ನಿಪಾತಾತ್ಮಕೋ ಹ್ಯತಃ ॥೭॥
ಉದ್ರೇಕಾತ್ ತತ್ರ ಲಿಙ್ಗಾನಿ ದೋಷಾಣಾಂ ನಿಪತನ್ತಿ ಹಿ ।

ಪ್ರತ್ಯೇಕಗಳಾದ ವಾತ ಪಿತ್ತ, ಕಫಗಳಿಂದ ರಾಜಯಕ್ಷ್ಮರೋಗವು ಉಂಟಾಗುತ್ತೆಂದು ಕೆಲವು ವೈದ್ಯರ ಅಭಿಮತವು ; ೧೧ ಲಕ್ಷಣಗಳೂ ರಾಜಯಕ್ಷ್ಮರೋಗವೊಂದರಲ್ಲೇ ಅಡಗಿರುತ್ತವೆಯಾಗಿ ತನ್ತ್ರಯುಕ್ತಿಯಿಂದಲೂ ಕ್ರಿಯೆಗಳನ್ನು ವಿಭಾಗಮಾಡದೇ ಒಂದೇ ಶೋಷರೋಗವು ಸನ್ನಿಪಾತಾತ್ಮಕವೆಂದು ತಿಳಿದು ಬರುತ್ತದೆ. ಮೊದಲು ದಕ್ಷ ಕೋಪವೆಂಬ ಒಂದೇ ಹೇತುವಿನಿಂದ ಉತ್ಪತ್ತಿಯಾದರೂ ಸನ್ನಿಪಾತಾತ್ಮಕವಾದದ್ದೆಂಬುದೇ ಸಮ್ಮತವಾದದ್ದು ; ಒಂದೇ ವ್ಯಾಧಿಯಾದರೂ ಇದರಲ್ಲಿ ದೋಷಾಧಿಕ್ಯತೆಯಿಂದ ತ್ರಿದೋಷಲಕ್ಷಣಗಳೂ ಕಂಡು ಬರುತ್ತವೆ.

ಕ್ಷಯಾದ್ವೇಗಪ್ರತೀಘಾತಾದಾಘಾತಾದ್ವಿಷಮಾಶನಾತ್ ॥೮॥
ಜಾಯತೇ ಕುಪಿತೈರ್ದೋಷೈರ್ವ್ಯಾಪ್ತದೇಹಸ್ಯ ದೇಹಿನಃ ।
ಕಫಪ್ರಧಾನೈರ್ದೋಷೈರ್ಹಿ ರುದ್ಧೇಷು ರಸವರ್ತ್ಮಸು ॥೯॥
ಅತಿವ್ಯವಾಯಿನೋ ವಾಪಿ ಕ್ಷೀಣೇ ರೇತಸ್ಯನನ್ತರಮ್ ।
ಕ್ಷೀಯನ್ತೇ ಧಾತವಃ ಸರ್ವೇ ತತಃ ಶುಷ್ಯತಿ ಮಾನವಃ ॥೧೦॥

ರಸಾದಿಶುಕ್ರಾಂತವಾದ ಧಾತುಗಳು ಕ್ಷೀಣಿಸುವುದರಿಂದಲೂ, ವಾತಮೂತ್ರ ಪುರೀಷಾದಿವೇಗಗಳನ್ನು ತಡೆಯುವುದರಿಂದಲೂ, ಸಾಹಸಕಾರ್ಯಗಳನ್ನು ಮಾಡುವುದರಿಂದಲೂ ದೇಹದ ಬಹಿರ್ಭಾಗದಲ್ಲಿ ಪೆಟ್ಟುಬೀಳುವುದರಿಂದಲೂ, ವಿಷಮಾಹಾರ ಸೇವನೆಯಿಂದಲೂ (ಭೋಜನ ಕಾಲಕ್ಕೆ ಮುಂಚಿತವಾಗಿಯಾಗಲೀ ಕಾಲಮೀರಿಯಾಗಲೀ ಅಧಿಕ ಪ್ರಮಾಣದಿಂದಾಗಲೀ ಅಲ್ಪಪ್ರಮಾಣದಿಂದಾಗಲೀ ಭೋಜನ ಮಾಡಿದರೆ ವಿಷಮಾಶನವೆಂದು ಹೆಸರು) ಪ್ರಕುಪಿತಗಳಾದ ದೋಷಗಳು ಶರೀರವನ್ನೆಲ್ಲಾ ವ್ಯಾಪಿಸಿ ಕ್ಷಯರೋಗವನ್ನುಂಟುಮಾಡುತ್ತವೆ.

ಸಂಪ್ರಾಪ್ತಿ :—ಕಫವೇ ಅಧಿಕಪ್ರಮಾಣದಿಂದ ಸೇರಿ ರಸಾದಿಧಾತುಗಳನ್ನು ವಹನಮಾಡುವ ಸ್ರೋತಸ್ಸುಗಳು ತಡೆಯಲ್ಪಡುವುದರಿಂದಲೂ ಅತಿಯಾಗಿ ಸ್ತ್ರೀಸಂಗ ದಿಂದ ಶುಕ್ರಧಾತುವು ಕ್ಷೀಣವಾದರೆ ಹಿಂದಿನ ಇತರ ಧಾತುಗಳೂ ಕ್ಷೀಣವಾಗುತ್ತವೆಯಾಗಿ ಆ ಮನುಷ್ಯನಿಗೆ ದೇಹಕ್ಷೀಣತೆಯುಂಟಾಗುತ್ತದೆ.

ಟಿಪ್ಪಣಿ :—ರಸಧಾತುವು ಸಂಚರಿಸುವ ಸ್ರೋತಸ್ಸುಗಳು ಕಫದಿಂದ ತಡೆಯಲ್ಪಡುವುದರಿಂದ ರಸವು ರಕ್ತಕ್ಕೆ ಪೋಷಕಸಾಮಗ್ರಿಗಳನ್ನು ಒದಗಿಸದಕಾರಣ ರಕ್ತ ಧಾತುವು ಕ್ಷೀಣವಾಗುತ್ತದೆ. ರಕ್ತವು ಕ್ಷೀಣಿಸುವುದರಿಂದ ಮಾಂಸಧಾತುವಿಗೆ ಪೋಷಣ ಸಾಮಗ್ರಿಯು ಒದಗುವುದಿಲ್ಲವಾದ್ದರಿಂದ ಅದು ವೃದ್ಧಿಯಾಗುವುದಿಲ್ಲ. ಹೀಗೆಯೇ ಮುಂದು ಮುಂದಿನ ಧಾತುಗಳನ್ನೂ ಊಹಿಸಬೇಕು. ರಸಕ್ಷೀಣವಾದರೆ ರಕ್ತಾದಿಧಾತುಗಳು ಕ್ಷೀಣಿಸುವುದು ಸಹಜವಷ್ಟೆ. ಶುಕ್ರಧಾತುವು ಕ್ಷೀಣಿಸಿದರೆ ಹಿಂದಿನ ಧಾತುಗಳು ಕ್ಷೀಣಿಸುವುದೇಕೆ ? ಎಂದು ಶಂಕೆಯಾದರೆ ಮಹಾಜಲಾಧಾರವಾದ ಕೆರೆ, ಸರೋವರ ಮೊದಲಾದುವುಗಳು ಒಣಗಿ ಹೋದರೆ ಅವುಗಳಲ್ಲಿರುವ ಜನ್ತುಗಳೂ ನಾಶವಾಗುನಂತೆಯೇ ಎಲ್ಲಾ ಧಾತುಗಳ ಸಾರಭೂತವಾದ ಶುಕ್ರಧಾತುವು ಕ್ಷೀಣವಾದರೆ ಅದರ ಪೋಷಕಗಳಾದ ರಸಾದಿಗಳೂ ಬೇಗ ಬೇಗ ಕ್ಷೀಣಸುತ್ತವೆ. ರಸಧಾತುವು ತನ್ನಸ್ರೋತಸ್ಸಿನಲ್ಲಿ ತಡೆಯಲ್ಪಟ್ಟು ಹೃದಯಕ್ಕೆ ಬಂದು ವಿದಾಹವನ್ನು ಹೊಂದುತ್ತದೆ. ಅನಂತರ ವೇಗವಾಗಿ ಕೆಮ್ಮು ಉಂಟಾಗಿ ಗರಣೆ ಗರಣೆಯಾಗಿ ಮಾಂಸದ ವಾಸನೆಯುಳ್ಳದಾಗಿ ಹಸರು, ಹಳದಿ, ಬಿಳುಪುವರ್ಣದ ಕಫವು ಮುಖದಿಂದ ಹೊರಕ್ಕೆ ಬಂದುಬಿಡುತ್ತದೆ.

ಭಕ್ತದ್ವೇಷೋ ಜ್ವರಃ ಶ್ವಾಸಃ ಕಾಸಃ ಶೋಣಿತದರ್ಶನಮ್ ।
ಸ್ವರಭೇದಶ್ಚ ಜಾಯನ್ತೇ ಷಡ್ರೂಪೇ ರಾಜಯಕ್ಷ್ಮಣಿ ॥೧೧॥

ಮಧ್ಯಬಲದೋಷದಿಂದುಂಟಾದ ಕ್ಷಯದಲ್ಲಿ ಆರು ರೂಪಗಳಿರುತ್ತವೆ. ಅನ್ನ ದ್ವೇಷ, ಜ್ವರ, ಶ್ವಾಸ, ಕಾಸ, ರಕ್ತದರ್ಶನ (ಕೆಮ್ಮುವಾಗ ಕಫದೊಡನೆ ರಕ್ತವು ಮಿಶ್ರ ವಾಗಿ ಹೊರಕ್ಕೆ ಬರುತ್ತದೆ.) ಸ್ವರಭೇದ (ಧ್ವನಿಯೊಡೆಯುವುದು) ಈ ಆರು ರೂಪಗಳೂ ಮಧ್ಯದೋಷಬಲವುಳ್ಳ ಕ್ಷಯದಲ್ಲಿ ಕಂಡುಬರುತ್ತದೆ.

ಸ್ವರಭೇದೋಽನಿಲಾಚ್ಛೂಲಂ ಸಂಲೋ (ಕೋ) ಚಶ್ಚಾಂಸ ಪಾರ್ಶ್ವಯೋಃ ।
ಜ್ವರೋ ದಾಹೋಽತಿಸಾರಶ್ಚ ಪಿತ್ತಾದ್ರಕ್ತಸ್ಯ ಚಾಗಮಃ । ॥೧೨॥
ಶಿರಸಃ ಪರಿಪೂರ್ಣತ್ವಮಭಕ್ತಚ್ಛನ್ದ ಏವ ಚ ।
ಕಾಸಃ ಕಣ್ಠಸ್ಯ ಚೋಧ್ವಂಸೋ ವಿಜ್ಞೇಯಃ ಕಫಕೋಪತಃ ॥೧೩॥
ಏಕಾದಶಭಿರೇಭಿರ್ವಾ ಷಡ್ಭಿರ್ವಾಪಿ ಸಮನ್ವಿತಮ್ ।
ಕಾಸಾತೀಸಾರಪಾರ್ಶ್ವಾರ್ತಿಸ್ವರಭೇದಾರುಚಿಜ್ವರೈಃ ॥೧೪॥
ತ್ರಿಭಿರ್ವಾ ಪೀಡಿತಂ ಲಿಙ್ಗೈರ್ಜ್ವರಕಾಸಾಸೃಗಾಮಯೈಃ ।
ಜಹ್ಯಾಚ್ಛೋಷಾರ್ದಿತಂ ಜನ್ತುಮಿಚ್ಛನ್ ಸುವಿಪುಲಂ ಯಶಃ ॥೧೫॥

ವಾತಪ್ರಕೋಪದಿಂದ ಸ್ವರಭೇದ, ಹೊಟ್ಟೆನೋವು, ಹೆಗಲುಗಳಲ್ಲೂ ಪಕ್ಕೆಗಳಲ್ಲೂ ಕೀಳುವಂತೆ (ಸೇದಿಕೊಂಡಂತೆ) ನೋವು, ಪಿತ್ತಪ್ರಕೋಪದಿಂದ ಜ್ವರ, ಮೈಉರಿತ, ಅತಿಸಾರ, ರಕ್ತದರ್ಶನ ಅಂದರೆ ಕಫಮಿಶ್ರವಾಗಿಯಾಗಲೀ ಬರಿಯ ರಕ್ತವಾಗಲೀ, ವಮನವಾಗುವುದು ಅಥವಾ ಕೆಮ್ಮುವಾಗ ರಕ್ತವು ಹೊರಕ್ಕೆ ಬರುವುದು. ಕಫಕೋಪದಿಂದ ತಲೆಯೊಳಗೆ ಕಫವು ತುಂಬಿಕೊಂಡಂತೆ ಭಾರವಾಗುವುದು, ಅನ್ನದಲ್ಲಿ ರುಚಿಯಿಲ್ಲದಿರುವಿಕೆ, ಕೆಮ್ಮು, ಕಂಠದಲ್ಲಿ ಸ್ವರಹಾನಿಯಾಗುವುದು, ಈ ರೀತಿ ಹನ್ನೊಂದು ಲಕ್ಷಣಗಳೂ ಒಟ್ಟಾಗಿದ್ದರೆ ಅತ್ಯಂತ ಪ್ರಕುಪಿತಗಳಾದ ತ್ರಿದೋಷಗಳಿಂದ ಉಂಟಾದ ರಾಜಯಕ್ಷ್ಮವೆಂದೂ, ಕಾಸ, ಅತಿಸಾರ, ಪಾರ್ಶ್ವಶೂಲೆ, ಸ್ವರಭೇದ, ಅರೋಚಕತೆ, ಜ್ವರ ಈ ೬ ಲಕ್ಷಣಗಳೂ ಇದ್ದರೆ ಮಧ್ಯಬಲದಿಂದ ಕುಪಿತಗಳಾದ ತ್ರಿದೋಷಜ ರಾಜಯಕ್ಷ್ಮವೆಂದೂ, ಜ್ವರ, ಕಾಸ, ರಕ್ತಸ್ರಾವಗಳೆಂಬ ಮೂರು ವಿಧ ಲಕ್ಷಣಗಳಿದ್ದರೆ ಅಲ್ಪಬಲವುಳ್ಳ ತ್ರಿದೋಷಜನಿತರಾಜಯಕ್ಷ್ಮವೆಂದೂ ತಿಳಿಯಬೇಕು. ಶುದ್ಧವಾದ ಯಶಸ್ಸನ್ನು ಪಡೆಯಬೇಕೆಂದಿರುವ ವೈದ್ಯನು ದೇಹಬಲ, ಅಗ್ನಿಬಲ, ವ್ಯಾಧಿಕಾಲಗಳನ್ನು ಗಮನಿಸಿ ೧೧ ಲಕ್ಷಣಗಳುಳ್ಳದ್ದು ಅಸಾಧ್ಯವೆಂದೂ ೬ ಲಕ್ಷಣಗಳುಳ್ಳದ್ದು ಕೃಚ್ಛ್ರಸಾಧ್ಯವೆಂತಲೂ ೩ ಲಕ್ಷಣಗಳಿದ್ದು ಸ್ವಲ್ಪಕಾಲದಲ್ಲುಂಟಾದರೆ ಸಾಧ್ಯವೆಂದೂ ತಿಳಿದು ಅಸಾಧ್ಯವಾದುದನ್ನು ತ್ಯಜಿಸಬೇಕು. ಅಲ್ಲದೆ ನಿರ್ಮಲವಾದ ಯಶಸ್ಸನ್ನು ಪಡೆಯಲಿಚ್ಛಿಸುವ ವೈದ್ಯನು ಅಗ್ನಿಮಾಂದ್ಯ ಬಲ ಮಾಂಸ ಕ್ಷಯಗಳಿರುವ ರಾಜಯಕ್ಷ್ಮರೋಗಿಗೆ ಜ್ವರ, ಕಾಸ, ರಕ್ತಸ್ರಾವಗಳೆಂಬ ೩ ಲಕ್ಷಣಗಳಿದ್ದಾಗ್ಯೂ ಚಿಕಿತ್ಸೆಮಾಡದೆ ತ್ಯಜಿಸಿಬಿಡಬೇಕು.

ವ್ಯವಾಯಃಶೋಕಸ್ಥಾವಿರ್ಯವ್ಯಾಯಾಮಾಧ್ವೋಪವಾಸತಃ ।
ವ್ರಣೋರಕ್ಷತಪೀಡಾಭ್ಯಾಂ ಶೋಷಾನನ್ಯೇ ವದನ್ತಿ ಹಿ ॥೧೬॥
ವ್ಯವಾಯಶೋಷೀ ಶುಕ್ರಸ್ಯ ಕ್ಷಯಲಿಙ್ಗೈರುಪದ್ರುತಃ ।
ಪಾಣ್ಡು ದೇಹೋ ಯಥಾಪೂರ್ವಂ ಕ್ಷೀಯನ್ತೇ ಚಾಸ್ಯ ಧಾತವಃ ॥೧೭॥
ಪ್ರಧ್ಯಾನಶೀಲಃ ಸ್ರಸ್ತಾಙ್ಗಃ ಶೋಕಶೋಷ್ಯಪಿ ತಾದೃಶಃ ।
ವಿನಾ ಶುಕ್ರಕ್ಷಯಕೃತೈರ್ವಿಕಾರೈರಭಿಲಕ್ಷಿತಃ ॥೧೮॥

ಸ್ತ್ರೀಸಂಗ, ದುಃಖ, ಮುದಿತನ, ವ್ಯಾಯಾಮ, ದಾರಿನಡೆಯುವುದು, ಉಪವಾಸ, ವ್ರಣ, ಎದೆಯಲ್ಲಿ ಘಾಯವಾಗುವುದು ಇವೇ ಮೊದಲಾದುವುಗಳಿಂದಲೂ ಕ್ಷಯವುಂಟಾಗುತ್ತೆಂದು ಕೆಲವರು ಅಭಿಪ್ರಾಯಪಡುತ್ತಾರೆ ; ಸ್ತ್ರೀಸಂಗದಿಂದುಂಟಾದ ಕ್ಷಯದಲ್ಲಿ ಶುಕ್ರಧಾತುವಿನ ಕ್ಷಯದಿಂದುಂಟಾಗುವ ಲಕ್ಷಣಗಳಿಂದ ಪೀಡಿತನಾದ ರೋಗಿಗೆ ದೇಹವು ಬೆಳ್ಳಗಾಗಿರುತ್ತದೆ ; ಅವನ ಮಜ್ಜೆ ಅಸ್ಥಿ ಮೊದಲಾದ ಹಿಂದೆ ಹಿಂದಿನ ಧಾತುಗಳೆಲ್ಲಾ ಕ್ರಮವಾಗಿ ಕ್ಷೀಣಿಸಿರುತ್ತವೆ ; ಚಿಂತಾಪರನಾಗುತ್ತಾನೆ ; (ಸದಾ ಯೋಚನೆ ಮಾಡುತ್ತಲೇ ಇರುತ್ತಾನೆ.) ಅವಯವಗಳೆಲ್ಲಾ ಶಿಥಿಲವಾಗಿ ಸಂಧಿಗಳು ಸಡಿಲಿಸಿರುತ್ತವೆ ; ಶುಕ್ರಕ್ಷಯಲಕ್ಷಣಗಳಿಲ್ಲದಿದ್ದರೂ ದೇಹವು ಬೆಳ್ಳಗೇ ಕಾಣಿಸುತ್ತದೆ.

ಜರಾಶೋಷೀ ಕೃಶೋ ಮನ್ದವೀರ್ಯಬುದ್ಧಿಬಲೇನ್ದ್ರಿಯಃ ।
ಶ್ವಸನೋಽರುಚಿಮಾನ್ ಭಿನ್ನಕಾಂಸ್ಯಪಾತ್ರಹತಸ್ವರಃ ॥೧೯॥
ಷ್ಠೀವತಿ ಶ್ಲೇಷ್ಮಣಾ ಹೀನಂ ತಥೈವಾರತಿಪೀಡಿತಃ ।
ಸಂಪ್ರಸ್ರುತಾಸ್ಯನಾಸಾಕ್ಷಃ ಶುಷ್ಕರೂಕ್ಷಮಲಚ್ಛವಿಃ ॥೨೦॥

ಮುದಿತನದಿಂದ ಕೃಶನಾಗಿ ವೀರ್ಯ, ಬಲ, ಬುದ್ಧಿ, ಇಂದ್ರಿಯಗಳು ಕಳೆಗುಂದಿ ಹೀನಶಕ್ತಿಯುಳ್ಳವನಾಗಿರುತ್ತಾನೆ; ಶ್ವಾಸವನ್ನು ಬೇಗ ಬೇಗ ಬಿಡುತ್ತಾ ಅರೋಚಕತೆಯಿಂದ ಪೀಡಿತನಾಗುತ್ತಾನೆ ; ಒಡೆದ ಕಂಚಿನ ಪಾತ್ರೆಯ ಶಬ್ದದಂತೆ ಕ್ಷೀಣಸ್ವರವುಳ್ಳವನಾಗುತ್ತಾನೆ ; ಕಫವಿಲ್ಲದೆ ಸದಾ ಕ್ಯಾಕರಿಸುತ್ತಾನೆ ಮನಃಶಾನ್ತಿಯಿಲ್ಲದೆ ಸದಾ ದುಃಖಪಡುತ್ತಲೇ ಇರುತ್ತಾನೆ ; ಬಾಯಿ, ಮೂಗು, ಕಣ್ಣುಗಳಿಂದ ಸದಾ ಸ್ರಾವವಾಗುತ್ತಲೇ ಇರುತ್ತದೆ ; ದೇಹದ ಬಣ್ಣವು ಒಣಗಿ ರೂಕ್ಷವಾದ ಮಲದಂತೆ ಕಾಂತಿ ಹೀನವಾಗಿರುತ್ತದೆ.

ಅಧ್ವಪ್ರಶೋಷೀ ಸ್ರಸ್ತಾಙ್ಗಃ ಸಂಭೃಷ್ಟಪುರುಷಚ್ಛವಿಃ ।
ಪ್ರಸುಪ್ತಗಾತ್ರಾವಯವಃ ಶುಷ್ಕಕ್ಲೋಮಗಲಾನನಃ ॥೨೧॥
ವ್ಯಾಯಾಮಶೋಷೀ ಭೂಯಿಷ್ಠಮೇಭಿರೇವ ಸಮನ್ವಿತಃ ।
ಉರಃ ಕ್ಷತಕೃತೈರ್ಲಿಙ್ಗೈಃ ಸಂಯುಕ್ತಶ್ಚ ಕ್ಷತಾದ್ವಿನಾ ॥೨೨॥
ರಕ್ತಕ್ಷಯಾದ್ವೇದನಾಭಿಸ್ತಥೈವಾಹಾರಯನ್ತ್ರಣಾತ್ ।
ವ್ರಣಿತಸ್ಯ ಭವೇಚ್ಛೋಷಃ ಸ ಚಾಸಾಧ್ಯತಮಃ ಸ್ಮೃತಃ ॥೨೩॥

ದಾರಿ ನಡೆದು ನಡೆದು ಕ್ಷೀಣನಾಗಿರುವವನಿಗೆ ಅಂಗಗಳೆಲ್ಲಾ ಜಾರಿರುತ್ತವೆ ; (ಬೆಂಕಿ ತಗಲಿಸುಟ್ಟ) ಶರೀರದಂತೆ ಕಾಂತಿಹೀನನಾಗಿರುತ್ತಾನೆ ; ಶರೀರದ ಅವಯವಗಳನ್ನು (ಬಲಪುಪ್ಫುಸ) ಜಿಗುಟಿದರೂ ನೋವು ತಿಳಿಯುವುದಿಲ್ಲ ಕ್ಲೋಮದ ಮುಖವು ಒಣಗಿರುತ್ತದೆ ; ವ್ಯಾಯಾಮದಿಂದ ಕ್ಷೀಣನಾದವನಿಗೂ ಇದೇ ಲಕ್ಷಣಗಳು ಹೆಚ್ಚಾಗಿರುತ್ತವೆ ; ಘಾಯವಿಲ್ಲದ ಉರಃಕ್ಷತಲಕ್ಷಣಗಳಿಂದ ಕೂಡಿರುತ್ತಾನೆ ; ವ್ರಣದಿಂದ ಕ್ಷೀಣನಾಗಿರುವವನು ರಕ್ತಕ್ಷಯದಿಂದಲೂ ವೇದನೆಗಳಿಂದಲೂ ಪಥ್ಯಾದಿ ಆಹಾರನಿಯಮಗಳಿಂದಲೂ ದೇಹಕ್ಷೀಣನಾಗಿರುವ ಕಾರಣ ಅಸಾಧ್ಯವೆಂದು ತಿಳಿಯಬೇಕು ;

ವ್ಯಾಯಾಮಭಾರಾಧ್ಯಯನೈರಭಿಘಾತಾತಿ ಮೈಥುನೈಃ ।
ಕರ್ಮಣಾ ಚಾಪ್ಯುರಸ್ಯೇನ ವಕ್ಷೋ ಯಸ್ಯ ವಿದಾರಿತಮ್ ॥
ತಸ್ಯೋರಸಿ ಕ್ಷತೇ ರಕ್ತಂ ಪೂಯಃ ಶ್ಲೇಷ್ಮಾ ಚ ಗಚ್ಛತಿ ॥೨೪॥
ಕಾಸಮಾನಶ್ಛರ್ದಯೇಚ್ಚ ಪೀತರಕ್ತಾಸಿತಾರುಣಮ್ ।
ಸಂತಪ್ತವಕ್ಷಾಃ ಸೋಽತ್ಯರ್ಥಂ ದೂಯನಾತ್ಪರಿತಾಮ್ಯತಿ ॥೨೫॥
ದುರ್ಗನ್ಧವದನೋಚ್ಛ್ವಾಸೋ ಭಿನ್ನವರ್ಣಸ್ವರೋ ನರಃ ॥೨೬॥
ಕೇಷಾಂಚಿದೇವ ಶೋಷೋಹಿ ಕಾರಣೈರ್ಭೇದಮಾಗತಃ ।
ನ ತತ್ರ ದೋಷಲಿಙ್ಗಾನಾಂ ಸಮಸ್ತಾನಾಂ ನಿಪಾತನಮ್ ॥೨೭॥

ಕ್ಷಯಾ ಏವ ಹಿ ತೇ ಜ್ಞೇಯಾಃ ಪ್ರತ್ಯೇಕಂ ಧಾತುಸಂಜ್ಞಿಕಾಃ ।
ಚಿಕಿತ್ಸಿತಂ ತು ತೇಷಾಂ ಹಿ ಪ್ರಾಗುಕ್ತಂ ಧಾತುಸಂಕ್ಷಯೇ ॥೨೮॥

ವ್ಯಾಯಾಮಮಾಡುವುದು, ಮೂಟೆಹೊರುವುದು, ಘಟ್ಟಿಯಾಗಿ ವೇದಮಂತ್ರಾದಿಗಳನ್ನು ಉಚ್ಚರಿಸುವುದು. ಎದೆಗೆ ಪೆಟ್ಟುಬೀಳುವುದು, ಅತಿಯಾಗಿ ಮೈಥುನಕ್ರಿಯೆ ಮಾಡುವುದು, ಇತ್ಯಾದಿಗಳಿಂದ ಎದೆಯಲ್ಲಿ ಘಾಯವಾಗಿ ರಕ್ತವೂ, ಕೀವೂ, ಕಫವೂ, ಸುರಿಯುತ್ತಲೂ, ಕೆಮ್ಮುಬಂದಾಗ ಹಳದಿ, ಕೆಂಪು, ಕಪ್ಪು, ಅರುಣಬಣ್ಣದ ರಕ್ತಮಿಶ್ರಿತ ಕಫವನ್ನು ವಮನಮಾಡಿ ಆತನು ಎದೆಯುರಿತದಿಂದ ಅತಿಯಾಗಿ ವ್ಯಥೆಪಡುತ್ತಾ ಮುಖವು ದುರ್ವಾಸನೆಯುಳ್ಳದಾಗಿಯೂ ನಿಶ್ವಾಸಯುಕ್ತನಾಗಿಯೂ ಇರುತ್ತಾನೆ. ಶರೀರದ ಬಣ್ಣವು ಕೆಟ್ಟು ಗಂಟಲಸ್ವರವೂ ಒಡಿದುಹೋಗಿರುತ್ತದೆ. ಕೆಲವರು ಕಾರಣಭೇದಗಳಿಂದ ಎಲ್ಲಾ ಕ್ಷಯಲಕ್ಷಣಗಳೂ ಇರುವುದಿಲ್ಲವೆಂದೂ ಆದ್ದರಿಂದಲೇ ವ್ಯವಾಯಾದಿ ಭಿನ್ನ ಭಿನ್ನ ವಿಧಗಳಿಲ್ಲದೆ ಶೋಷವು ಒಂದೇ ವಿಧವಾದದ್ದು ಎನ್ನುತ್ತಾರೆ. ಅತಿವ್ಯವಾಯ ದಿಂದುಂಟಾದ ಕ್ಷಯವನ್ನೂ ಧಾತುಕ್ಷಯವೆಂದೇ ತಿಳಿಯಬೇಕು. ಏಕೆಂದರೆ ಶುಕ್ರಧಾತು ಮೊದಲುಮಾಡಿ ಹಿಂದೆ ಹಿಂದಿನ ರಸಧಾತುವಿನವರೆಗೂ ಇರುವ ಧಾತುಗಳು ಕ್ಷೀಣ ಹೊಂದುತ್ತವೆ. ಮತ್ತು ಹಿಂದೆಯೇ ದೋಷಧಾತುಮಲಕ್ಷಯವೃದ್ಧಿವಿಜ್ಞಾನೀಯಾಧ್ಯಾಯದಲ್ಲಿ ಧಾತುಕ್ಷಯ ಚಿಕಿತ್ಸೆಯನ್ನೂ ಹೇಳಲಾಗಿದೆ.

ಶ್ವಾಸಾಙ್ಗಸಾದಕಫಸಂಸ್ರವತಾಲುಶೋಷಚ್ಛರ್ದ್ಯಗ್ನಿಸಾದಮದಪೀನಸಕಾಸನಿದ್ರಾಃ ।
ಶೋಷೇ ಭವಿಷ್ಯತಿ ಭವನ್ತಿ ಸ ಚಾಪಿ ಜನ್ತುಃ ಶುಕ್ಲೇಕ್ಷಣೋ ಭವತಿ ಮಾಂಸಪರೋ ರಿರಂಸುಃ ॥೨೯॥

ಸ್ವಪ್ನೇಷು ಕಾಕಶುಕಶಲ್ಲಕಿನೀಲಕಣ್ಠಗೃಧ್ರಾಸ್ತಥೈವ ಕಪಯಃ ಕೃಕಲಾಸಕಾಶ್ಚ ।
ತಂ ವಾಹಯನ್ತಿ ಸನದೀರ್ವಿಜಲಾಶ್ಚ ಪಶ್ಯೇತ್ ಶುಷ್ಕಾಂಸ್ತರೂನ್ ಪವನಧೂಮದವಾರ್ದಿತಾಂಶ್ಚ ॥೩೦॥

ಮಹಾಶನಂ ಕ್ಷೀಯಮಾಣಮತೀಸಾರನಿಪೀಡಿತಮ್ ।
ಶೂನಮುಷ್ಕೋದರಂ ಚೈವ ಯಕ್ಷ್ಮಿಣಂ ಪರಿವರ್ಜಯೇತ್ ।
ಉಪಾಚರೇದಾತ್ಮವನ್ತಂ ದೀಪ್ತಾಗ್ನಿಮಕೃಶಂ ನರಮ್ ।

ಉಬ್ಬಸ, ದೇಹಕಾರ್ಶ್ಯ, ಕಫಸ್ರಾವ, ಅಂಗಗಳು ಕ್ಷಯಿಸುವುದು, ವಮನ, ಅಗ್ನಿಮಾಂದ್ಯ, ಮೋಹ, ನೆಗಡಿ (ಪೀನಸಜಾಡ್ಯ) ಕೆಮ್ಮು, ಅತಿನಿದ್ರೆ ಇವು ಕ್ಷಯದ ಪೂರ್ವರೂಪಗಳು, ರೋಗಿಯ ಕಣ್ಣುಗಳು ಬೆಳ್ಳಗಿರುತ್ತವೆ. ಮಾಂಸವನ್ನು ತಿನ್ನ ಬೇಕೆಂದು ಅಪೇಕ್ಷಿಸುತ್ತಾನೆ. ಸ್ತ್ರೀಸಂಗಮಾಡಲು ಆಸೆಪಡುತ್ತಾನೆ. ಅವನು ಸ್ವಪ್ನದಲ್ಲಿ ಕಾಗೆ, ಗಿಳಿ, ಮುಳ್ಳುಹಂದಿ, ನವಿಲು, ಹದ್ದು, ಕಪಿ, ಹೆಂಟೆಗೊದ್ದ ಇವುಗಳ ಮೇಲೆ ಕೂತಂತೆಯೂ, ನದಿಗಳಲ್ಲಿ ನೀರು ಬತ್ತಿಹೋದಂತೆಯೂ, ಮರಗಳು ಒಣಗಿ ಹೋದಂತೆಯೂ, ಬಿರುಗಾಳಿ, ಹೊಗೆಯಪುಂಜ, ಕಾಡ್ಗಿಚ್ಚುಗಳಿಗೆ ಸಿಕ್ಕಿ ಪೀಡಿತನಾ

ದಂತೆಯೂ ಕಾಣುತ್ತಾನೆ. ಅತಿಯಾಗಿ ಊಟಮಾಡಿದರೂ ಕ್ಷೀಣನಾಗುತ್ತಲೂ, ಅತಿಸಾರ ಪೀಡಿತನಾಗಿಯೂ, ಅಂಡಕೋಶವೂ, ಉದರವೂ ಊದಿರುವ ಕ್ಷಯರೋಗಿಯನ್ನು ತ್ಯಜಿಸಬೇಕು. ಜಿತೇಂದ್ರಿಯನಾಗಿ ಅಗ್ನಿದೀಪನವುಳ್ಳ ದೇಹಕೃಶನಾಗದಿರುವ ಕ್ಷಯರೋಗಿಗೆ ಚಿಕಿತ್ಸೆಯನ್ನು ಮಾಡಬೇಕು. (ಹೊಸದಾಗಿರುವ ಕ್ಷಯರೋಗಕ್ಕೆ ಚಿಕಿತ್ಸೆ ಮಾಡಬೇಕೆಂದು ಕೆಲವರ ಮತವು.)

ಸ್ಥಿರಾದಿವರ್ಗಸಿದ್ಧೇನ ಘೃತೇನಾಜಾವಿಕೇನ ಚ ||೩೨||
ಸ್ನಿಗ್ಧಸ್ಯ ಮೃದುಕರ್ತವ್ಯಮೂರ್ಧ್ವಂ ಚಾಧಶ್ಚ ಶೋಧನಮ್ |
ಆಸ್ಥಾಪನಂ ತಥಾ ಕಾರ್ಯಂ ಶಿರಸಶ್ಚ ವಿರೇಚನಮ್ ||೩೩||
ಯವಗೋಧೂಮಶಾಲೀಂಶ್ಚ ರಸೈರ್ಭುಞ್ಜೀತ ಶೋಧಿತಃ |
ದೃಢೇಗ್ನೌ ಬೃಂಹಯೇಚ್ಚಾಪಿ ನಿವೃತ್ತೋಪದ್ರವಂ ನರಮ್ ||೩೪||
ವ್ಯವಾಯ.ಶೋಷಿಣಂ ಪ್ರಾಯೋ ಭಜನ್ತೇ ವಾತಜಾ ಗದಾಃ |
ಬೃಂಹಣೀಯೋ ವಿಧಿಸ್ತಸ್ಮೈ ಹಿತಃ ಸ್ನಿಗ್ಧೋಽನಿಲಾಪಹಃ ||೩೫||

ಮೂರೆಲೆಹೊನ್ನೆ, ಒಂದೆಲೆಹೊನ್ನೆ ಮೊದಲಾದ ದ್ರವ್ಯಗಳೊಡನೆ ಆಡಿನ ಮತ್ತು ಕುರಿಯ ತುಪ್ಪವನ್ನು ಸೇರಿಸಿ ತಯಾರಿಸಿದ ಘೃತವನ್ನು ಪಾನಮಾಡಿಸಿದ ಕ್ಷಯರೋಗಿಗೆ ಮೃದುವಾದ ವಮನವಿರೇಕಗಳಿಂದ ದೇಹಶುದ್ಧಿ ಮಾಡಿಸಿ ಮೃದುವಾದ ನಿರೂಹಬಸ್ತಿಯನ್ನೂ ಶಿರೋವಿರೇಚನವನ್ನೂ ಮಾಡಿಸಿ ಯವೆಗೋಧಿ, ೬೦ ದಿನಗಳಲ್ಲಿ ಬೆಳೆಯುವ ಭತ್ತದ ಅಕ್ಕಿಯ ಅನ್ನವನ್ನು ಮಾಂಸರಸಮಿಶ್ರಮಾಡಿ ತಿನ್ನಿಸಬೇಕು. ಅಗ್ನಿಯು ದೃಢವಾಗಿ ವೃದ್ಧಿಯಾಗಿ ಉಪದ್ರವಗಳು ನಿವಾರಣೆಯಾದರೆ ಬೃಂಹಣ ಚಿಕಿತ್ಸೆಯನ್ನು ಮಾಡಬೇಕು. ಸ್ತ್ರೀಸಂಗ ಮಾಡಿ ಧಾತುಕ್ಷೀಣನಾದ ರೋಗಿಗೆ ಪ್ರಾಯಿಕವಾಗಿ ವಾತರೋಗಗಳೇ ಪೀಡಿಸುತ್ತವೆಯಾಗಿ ಅವನಿಗೆ ಸ್ನಿಗ್ಧವಾದ ವಾತಹರಗಳಾದ ಬೃಂಹಣ ಚಿಕಿತ್ಸೆಯೇ ಹಿತಕರವಾದದ್ದು.

ಕಾಕಾನುಲೂಕಾನ್ನಕುಲಾನ್ ಬಿಡಾಲಾನ್ ಗಂಡೂಪದಾನ್ ವ್ಯಾಳಬಿಲೇಶಯಾಖೂನ್ |
ಗೃಧ್ರಾಂಶ್ಚ ದದ್ಯಾದ್ವಿವಿಧೈಃಪ್ರಕಾರೈಃ ಸಸೈನ್ಧವಾನ್ ಸರ್ಷಪತೈಲ ಭೃಷ್ಟಾನ್ ||೩೬||
ದೇಯಾನಿ ಮಾಂಸಾನಿ ಚ ಜಾಂಗಲಾನಿ ಮುದ್ಗಾಢಕೀಸೂಪರಸಾಶ್ಚ ಹೃದ್ಯಾಃ |
ಖರೋಷ್ಟ್ರನಾಗಾಶ್ವತರಾಶ್ವಜಾನಿ ದೇಯಾನಿ ಮಾಂಸಾನಿ ಸುಕಲ್ಪಿತಾನಿ ||೩೭||
ಮಾಂಸೋಪದಂಶಾಂಶ್ಚ ಪಿಬೇದರಿಷ್ಟಾನ್ ಮಾಧ್ವೀಕಯುಕ್ತಾ ಮದಿರಾಶ್ಚ ಸೇವ್ಯಾಃ |
ಅರ್ಕಾಮೃತಾಕ್ಷಾರಜಲೋಷಿತೇಭ್ಯಃ ಕೃತ್ವಾ ಯವೇಭ್ಯೋ ವಿವಿಧಾಂಶ್ಚ ಭಕ್ಷ್ಯಾನ್ ||೩೮||
ಖಾದೇತ್ಪಿಬೇತ್ ಸರ್ಪಿರಜಾವಿಕಂ ವಾ ಕೃಶೋ ಯವಾಗ್ವಾ ಸಹಭಕ್ತಕಾಲೇ |
ಸರ್ಪಿರ್ಮಧುಭ್ಯಾಂ ತ್ರಿಕಟು ಪ್ರಲಿಹ್ಯಾಚ್ಚವ್ಯಾವಿಡಙ್ಗೋಪಹಿತಂ ಕ್ಷಯಾರ್ತಃ ||೩೯||

ಕಾಗೆ, ಗೂಬೆ, ಮುಂಗಸಿ, ಬೆಕ್ಕು, ಮಣ್ಣುಹುಳು, ಹುಲಿ ಮೊದಲಾದ ಮಾಂಸಾಹಾರಿ ಪ್ರಾಣಿಗಳು, ಬಿಲದಲ್ಲಿ ವಾಸಮಾಡುವ ಮೊಲ ಮೊದಲಾದುವು, ಇಲಿ, ಹದ್ದು ಇವುಗಳ ಮಾಂಸವನ್ನು ಸಾಸಿವೆತ್ತೈಲದಲ್ಲಿ ಹುರಿದು ಸೈಂಧವ ಮಿಶ್ರಣಮಾಡಿ ನಾನಾ ಉಪಾಯಗಳಿಂದ ಕ್ಷಯರೋಗಿಗೆ ತಿನ್ನಿಸಬೇಕು. ಜಾಂಗಲದೇಶದ ಮೃಗ ಪಕ್ಷಿಗಳ ಮಾಂಸವನ್ನೂ, ಹೃದ್ಯವಾದ ಹೆಸರು, ತೊಗರಿಗಳ ತೊವ್ವೆಗಳನ್ನೂ, ಮಾಂಸರಸವನ್ನೂ ಕುಡಿಸಬೇಕು. ಚೆನ್ನಾಗಿ ತಯಾರಿಸಿದ ಕತ್ತೆ, ಒಂಟೆ, ಆನೆ, ಹೇಸರಕತ್ತೆ, ಕುದುರೆ ಇವುಗಳ ಮಾಂಸವನ್ನು ತಿಂದಮೇಲೆ ಮಧ್ಯೆ ರುಚಿಯುಂಟಾಗಲು ಅಭಯಾರಿಷ್ಟ, ದ್ರಾಕ್ಷಾಸವ ಮಿಶ್ರಮಾಡಿದ ಮದ್ಯ ಇವುಗಳನ್ನು ಪಾನ ಮಾಡಿಸಬೇಕು. ಅರ್ಕಕ್ಷಾರ, ಅಮೃತವಳ್ಳಿ ಕ್ಷಾರಗಳನ್ನು ಕದರಿದ ನೀರಿನಲ್ಲಿ ನೆನೆಸಿದ ಯವೆಯಿಂದ ತಯಾರಿಸಿದ ಅನೇಕ ಪ್ರಕಾರದ ಭಕ್ಷ್ಯಗಳನ್ನು ತಿನ್ನಿಸಬೇಕು ; ರೋಗಿಯು ಕೃಶನಾಗಿದ್ದರೆ ಭೋಜನಕಾಲದಲ್ಲಿ ಆಡಿನತುಪ್ಪ, ಕುರಿಯತುಪ್ಪವನ್ನು ಯವಾಗೂವಿನೊಡನೆ ಸೇರಿಸಿ ಕುಡಿಸಬೇಕು ; ತ್ರಿಕಟು ಚವ್ಯ, ವಿಡಂಗ, ಇವುಗಳ ಚೂರ್ಣವನ್ನು ತುಪ್ಪ, ಜೇನುತುಪ್ಪಗಳಿಂದ ರಂಗಳಿಸಿ ನೆಕ್ಕಿಸಬೇಕು.

ಟಿಪ್ಪಣಿ : ಗ್ರಾಮ್ಯ, ವನ್ಯ, ತೋಯಜ, ಪಕ್ಷಿಮಾರ್ಜಾರ, ವಿಜ್ಜಳ, ಸುಗಂಧ ವೃಷಣ, ಎಂದು ಆರುವಿಧ ಬೆಕ್ಕುಗಳುಂಟು. ಇಲ್ಲಿ ಕ್ಷಯರೋಗಿಗೆ ಮರದಮೇಲಿನ ಇಲಿಯು ಉತ್ತಮವಾದದ್ದು.; ತಿತ್ತಿರಿಮಾಂಸವೆಂದು ಹೇಳಿ ಕಾಗೆಯ ಮಾಂಸವನ್ನೂ, ಮೀನಿನ ಮಾಂಸವನ್ನೂ, ಮೀನಿನ ಮಾಂಸವೆಂದು ಹೇಳಿ ಹಾವಿನ ಮಾಂಸವನ್ನೂ ತಿನ್ನಿಸಿದರೆ ರೋಗಿಗೆ ಜುಗುಪ್ಸೆಯುಂಟಾಗುವುದಿಲ್ಲ, ವಮನವಾಗುವುದೂ ಇಲ್ಲ. ಕ್ಷಾರೋದಕ:— ಕ್ಷಾರ ೧ ಭಾಗಕ್ಕೆ ೪ ಭಾಗ ನೀರನ್ನು ಸೇರಿಸಿ ೨ ಭಾಗಕ್ಕೆ ಕಷಾಯವು ನಿಲ್ಲುವಂತೆ, ಕಾಯಿಸಬೇಕು.

ಮಾಂಸಾದಮಾಂಸೇಷು ಘೃತಂ ಚ ಸಿದ್ಧಂ ಶೋಷಾಪಹಂ ಕ್ಷೌದ್ರ ಕಣಾಸಮೇತಮ್ ।
ದ್ರಾಕ್ಷಾಸಿತಾಮಾಗಧಿಕಾವಲೇಹಃ ಸಕ್ಷೌದ್ರತೈಲಃ ಕ್ಷಯರೋಗಘಾತೀ ॥೪೦॥
ಘೃತೇನ ಚಾಜೇನ ಸಮಾಕ್ಷಿಕೇಣ ತುರಙ್ಗಗನ್ಧಾ ತಿಲಮಾಷಚೂರ್ಣಾಮ್ ।
ಸಿತಾಶ್ವಗಂಧಾಮಗಧೋದ್ಭವಾನಾಂ ಚೂರ್ಣಂ ಘೃತಕ್ಷೌದ್ರಯುತಂ ಪ್ರಲಿಹ್ಯಾತ್ ॥೪೧॥
ಕ್ಷೀರಂ ಪಿಬೇದ್ವಾಪ್ಯಥ ವಾಜಿಗನ್ಧಾವಿಪಕ್ವಮೇವಂ ಲಭತೇಽಙ್ಗಪುಷ್ಟಿಮ್ ।
ತದುತ್ಥಿತಂ ಕ್ಷೀರಘೃತಂ ಸಿತಾಢ್ಯಂ ಪ್ರಾತಃ ಪಿಬೇದ್ವಾಥ ಪಯೋಽನುಪಾನಮ್ ॥೪೨॥
ಉತ್ಸಾದನೇ ಚಾಪಿ ತುರಙ್ಗಗನ್ಧಾ ಯೋಜ್ಯಾ ಯವಾಶ್ಚೈವ ಪುನರ್ನವೇ ಚ।
ಕೃತ್ಸ್ನೇಽ ವೃಷೇ ತತ್ಕುಸುಮೈಶ್ಚ ಸಿದ್ಧಂ ಸರ್ಪಿಃ ಪಿಬೇತ್ ಕ್ಷೌದ್ರಯುತಂ ಹಿತಾಶೀ ॥೪೩॥
ಯಕ್ಷ್ಮಾಣಮೇತತ್ ಪ್ರಬಲಂ ಚ ಕಾಸಂ ಶ್ವಾಸಂ ಚ ಹನ್ಯಾದಪಿ ಪಾಣ್ಡುತಾಂ ಚ ।

ಹುಲಿ, ಚಿರತೆ ಮೊದಲಾದ ಮಾಂಸಾಹಾರಿ ಪ್ರಾಣಿಗಳ ಮಾಂಸದೊಡನೆ ತಯಾರಿಸಿದ ಘೃತಕ್ಕೆ ಜೇನುತುಪ್ಪ ಮತ್ತು ಹಿಪ್ಪಲಿಯ ಪುಡಿಯನ್ನು ಮಿಶ್ರಮಾಡಿ ಪಾನಮಾಡಿಸಿದರೆ ಕ್ಷಯಹರವು. ದ್ರಾಕ್ಷಿ, ಸಕ್ಕರೆ, ಹಿಪ್ಪಲಿಗಳಿಂದ ತಯಾರಿಸಿದ ಅವಲೇಹನಕ್ಕೆ ತಿಲತೈಲವನ್ನೂ ಜೇನುತುಪ್ಪವನ್ನೂ ಮಿಶ್ರಮಾಡಿ ನೆಕ್ಕಿಸಿದರೆ ಕ್ಷಯರೋಗಹರವು. ಆಡಿನ ತುಪ್ಪದಲ್ಲಿ ಜೇನುತುಪ್ಪ, ಅಶ್ವಗಂಧಿಯ ಚೂರ್ಣ, ಎಳ್ಳು, ಉದ್ದಿನಹಿಟ್ಟುಗಳನ್ನು ಮಿಶ್ರಮಾಡಿಯೂ, ಸಕ್ಕರೆ, ಅಶ್ವಗಂಧಿಯ ಚೂರ್ಣ, ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿಯೂ ನೆಕ್ಕಿಸಬೇಕು ; ಅಥವಾ ಅಶ್ವಗಂಧಿಯೊಡನೆ ಕ್ಷೀರಪಾಕ ಮಾಡಿ ಕುಡಿಸಿದರೆ ದೇಹಪುಷ್ಟಿಯಾಗುತ್ತದೆ ; ಅಶ್ವಗಂಧಿಯೊಡನೆ ತಯಾರಿಸಿದ ಹಾಲಿನಿಂದ ಬೆಣ್ಣೆಯನ್ನು ತೆಗೆದು ಕಾಸಿದ ತುಪ್ಪ ಮತ್ತು ಹಾಲಿನೊಡನೆ ಸಕ್ಕರೆಯನ್ನು ಸೇರಿಸಿ ಬೆಳಗಿನ ಹೊತ್ತು ಪಾನಮಾಡಿಸಿ ಹಾಲನ್ನೇ ಅನುಪಾನ ಮಾಡಿಸಬೇಕು. ಅಶ್ವಗಂಧ, ಯವಚೂರ್ಣ, ಕೊನ್ನೆಬೇರು ಇವುಗಳ ಚೂರ್ಣದಿಂದ ನ್ಯೆಯನ್ನು ತಿಕ್ಕಬೇಕು. ಸಮೂಲಪತ್ರೆಗಳಿಂದ ಕೂಡಿದ ಆಡುಸೋಗೆಯ ಕಷಾಯದೊಡನೆ ತುಪ್ಪವನ್ನೂ, ಆಡುಸೋಗೆ ಹೂವಿನ ಕಲ್ಕವನ್ನೂ ಸೇರಿಸಿ ತಯಾರಿಸಿದ ತುಪ್ಪವನ್ನು ಜೇನುತುಪ್ಪ ಮಿಶ್ರಮಾಡಿ ನೆಕ್ಕಿಸಿ ಹಿತಾಹಾರವನ್ನು ಸೇವಿಸಿದರೆ ಪ್ರಬಲವಾದ ಕ್ಷಯರೋಗವೂ, ಕಾಸ, ಶ್ವಾಸ, ಪಾಂಡು ರೋಗಗಳೂ ನಾಶಗೊಳ್ಳುತ್ತವೆ.

ಶಕೃದ್ರಸೋ ಗೋಽಶ್ವಗಜಾವ್ಯಜಾನಾಂ ಕ್ವಾಥ್ಯಂ ಮಿತಾಶ್ಚಾಪಿ ತಥೈವ ಭಾಗೈಃ ||೪೪||
ಮೂರ್ವಾಹರಿದ್ರಾಖದಿರದ್ರುಮಾಣಾಂ ಕ್ಷೀರಸ್ಯ ಭಾಗಸ್ತ್ವಪರೋಘೃತಸ್ಯ |
ಭಾರ್ಗ್ಯಾ ದಶೈರ್ತಾ ವಿಪಚೇದ್ವಿಧಿಜ್ಞೋದತ್ವಾ ತ್ರಿವರ್ಗಂ ಮಧುರಂ ಚ ಕೃತ್ಸ್ನಮ್ ||೪೫||

ಕಟುತ್ರಿಕಂ ಚೈವ ಸಭದ್ರದಾರುಘೃತೋತ್ತಮಂ ಯಕ್ಷ್ಮನಿವಾರಣಾಯ |
ದ್ವೇ ಪಞ್ಚಮೂಲ್ಯೌ ವರುಣಂ ಕರಞ್ಜಂ ಭಲ್ಲಾತಕಂ ಬಿಲ್ವಪುನರ್ನವೇ ಚ ||೪೬||
ಯವಾನ್ ಕುಳತ್ಥಾನ್ ಬದರಾಣಿ ಭಾರ್ಗೀಂ ಪಾಠಾಂ ಹುತಾಶಂ ಸಮಹೀಕದಮ್ಬಮ್ |
ಕೃತ್ವಾ ಕಷಾಯಂ ವಿಪಚೇದ್ಧಿ ತಸ್ಯ ಷಡ್ಭಿರ್ಹಿ ಪಾತ್ರೈರ್ಘೃತ ಪಾತ್ರಮೇಕಮ್ ||೪೭||
ವ್ಯೋಷಂ ಮಹಾವೃಕ್ಷಪಯೋಽಭಯಾಂ ಚ ಚವ್ಯಂ ಸುರಾಖ್ಯಂ ಲವಣೋತ್ತಮಂ ಚ |
ಏತದ್ಧಿ ಶೋಷಂ ಜಠರಾಣಿ ಚೈವ ಹನ್ಯಾತ್ ಪ್ರಮೇಹಾಂಶ್ಚ ಸಹಾನಿಲೇನ ||೪೮||

ಹಸು, ಕುದುರೆ, ಆನೆ, ಕುರಿ, ಆಡುಗಳ ಮಲದರಸಗಳನ್ನು ಸಮಭಾಗದಿಂದ ಕೂಡಿಸಿ ಕೊರಟಿಗೆ, ಅರಿಶಿನ, ಕಗ್ಗಲಿಚೂರ್ಣ ಇವುಗಳ ಸಮಭಾಗವನ್ನು ಸೇರಿಸಿ ಹಾಲಿನ ಭಾಗ ೧, ತುಪ್ಪದ ಭಾಗ ೧೦ ಇವೆಲ್ಲವನ್ನೂ ಹಾಕಿ ಮಂದಾಗ್ನಿಯಿಂದ ಕಾಯಿಸಿ ತ್ರಿಫಲ, ಕಾಕೋಳ್ಯಾದಿ ಗಣದ್ರವ್ಯಗಳನ್ನೂ ಕಲ್ಕವನ್ನೂ ಸೇರಿಸಿ ತ್ರಿಕಟು, ದೇವದಾರುಗಳ ಚೂರ್ಣ, ಘೃತದ $\frac{1}{4}$ ಭಾಗದಷ್ಟನ್ನೂ ಸೇರಿಸಿ ಘೃತವನ್ನು ತಯಾರಿಸಿ ಕುಡಿಸಿದರೆ ಕ್ಷಯರೋಗ ನಿವಾರಣೆಯಾಗುತ್ತದೆ. ದಶಮೂಲಗಳು, ಮಟ್ಟಮಾವು ; ಹೊಂಗೆಬೀಜ,

ಬಿಲ್ವಪತ್ರೆಯ ಬೇರು, ಕೊಮ್ಮೆಯಬೇರು, ಯವಧಾನ್ಯ, ಹುರುಳಿ, ಎಲಚಿಹಣ್ಣು, ಗಂಡು ಪರಂಗಿ, ಅಗಳುಶುಂಠಿ, ಚಿತ್ರಮೂಲ, ನೆಲ ಈಚಲು ಇವುಗಳನ್ನೆಲ್ಲಾ ಸಮಭಾಗವಾಗಿ ಅವುಗಳೆಲ್ಲದರ ೪ ರಷ್ಟು ನೀರಿಗೆ ಸೇರಿಸಿ $\frac{1}{4}$ ಭಾಗ ಕಷಾಯ ನಿಲ್ಲುವಂತೆ ಕಾಯಿಸಿ ಶೋಧಿಸಿಕೊಂಡು ಅದರ ೬ ಭಾಗವನ್ನೂ ಒಂದು ಭಾಗ ತುಪ್ಪವನ್ನೂ ಮಿಶ್ರಮಾಡಿ ತ್ರಿಕಟು, ಮುಂಡುಗಳ್ಳಿಯ ಹಾಲು, ಅಣಿಲೆ ಶಿಪ್ಪೆಯ ಪುಡಿ, ಚವ್ಯ, ದೇವದಾರು, ಸೈಂಧವ ಲವಣಗಳ ಕಲ್ಕ ಘೃತದ $\frac{1}{4}$ ಭಾಗದಷ್ಟನ್ನು ಮಿಶ್ರಮಾಡಿ ತಯಾರಿಸಿದ ಘೃತ ವನ್ನು ಕುಡಿಸಿದರೆ ಕ್ಷಯ, ಜಠರವ್ಯಾಧಿ, ಅಸಾಧ್ಯ ಪ್ರಮೇಹಗಳು ನಿವಾರಣೆಯಾಗುತ್ತವೆ.

ಗೋಽಶ್ವಾವ್ಯಜೇಭೈಣ ಖರೋಷ್ಟ್ರಜಾತೈಃ ಶಕೃದ್ರಸಕ್ಷೀರರಸಕ್ಷತೋತ್ಥೈಃ ।
ದ್ರಾಕ್ಷಾಶ್ವಗನ್ಧಾಮಗಧಾಸಿತಾಭಿಃ ಸಿದ್ಧಂ ಘೃತಂ ಯಕ್ಷ್ಮವಿಕಾರಹಾರಿ ॥೪೯॥

ಹಸು, ಕುದುರೆ, ಕುರಿ, ಆಡು, ಆನೆ, ಜಿಂಕೆ, ಕತ್ತೆ, ಒಂಟೆಗಳ ಮಲದ ರಸ, ಹಾಲು, ಮಾಂಸರಸ, ರಕ್ತ ಇವುಗಳೊಡನೆ ದ್ರಾಕ್ಷಿ, ಅಶ್ವಗಂಧಿಬೇರು, ಹಿಪ್ಪಲಿ, ಸಕ್ಕರೆ ಗಳನ್ನು ಮಿಶ್ರಮಾಡಿ ತಯಾರಿಸಿದ ಘೃತವನ್ನು ಸೇವಿಸಿದರೆ ರಾಜಯಕ್ಷ್ಮಹರವಾಗುತ್ತದೆ.

ಏಲಾಜಮೋದಾಮಲಕಾಭಯಾಕ್ಷಗಾಯತ್ರ್ಯರಿಷ್ಟಾಸನಶಾಲಸಾರಾ ।
ವಿಡಙ್ಗಭಲ್ಲಾತಕಚಿತ್ರಕೋಗ್ರಾಕಟುತ್ರಿಕಾಲ್ಬೋದಸುರಾಷ್ಟ್ರಜಾಂಶ್ಚ ॥೫೦॥
ಪಕ್ತ್ವಾ ಜಲೇ ತೇನಪಚೇದ್ಧಿ ಸರ್ಪಿಸ್ತಸ್ಮಿನ್ ಸುಸಿದ್ಧೇ ತ್ವವತಾರಿತೇ ಚ ।
ತ್ರಿಂಶತ್ಪಲಾನ್ಯತ್ರ ಸಿತೋಪಲಾಯಾ ದತ್ವಾ ತುಗಾಕ್ಷೀರಪಲಾನಿ ಷಟ್ಚ ॥೫೧॥
ಪ್ರಸ್ಥೇ ಘೃತಸ್ಯದ್ವಿಗುಣಂ ಚ ದದ್ಯಾತ್ ಕ್ಷೌದ್ರಂ ತತೋಮನ್ಥಹತಂ ವಿದಧ್ಯಾತ್ ।
ಪಲಂ ಪಲಂ ಪ್ರಾತರತಃ ಪ್ರಲಿಹ್ಯ ಪಶ್ಚಾತ್ಪಿಬೇತ್ ಕ್ಷೀರಮತನ್ದ್ರಿತಶ್ಚ ॥೫೨॥
ಏತದ್ಧಿ ಮೇಧ್ಯಂ ಪರಮಂ ಪವಿತ್ರಂ ಚಕ್ಷುಷ್ಯಮಾಯುಷ್ಯ ಮಥೋ ಯಶಸ್ಯಮ್ ।
ಯಕ್ಷ್ಮಾಣಮಾಶು ವ್ಯಪಹನ್ತಿ ಚೈತತ್ ಪಾಣ್ಡ್ವಾಮಯಂ ಚೈವ ಭಗಂದರಂ ಚ ॥೫೩॥
ಶ್ವಾಸಂ ಚ ಹನ್ತಿಸ್ವರಭೇದಕಾಸಹೃತ್ಪ್ಲೀಹಗುಲ್ಮಗ್ರಹಣೀಗದಾಂಶ್ಚ ।
ನ ಚಾತ್ರ ಕಿಞ್ಚಿತ್ ಪರಿವರ್ಜನೀಯಂ ರಸಾಯನಂ ಚೈತದಪಾಸ್ಯಮಾನಮ್ ॥೫೪॥

ಏಲಕ್ಕಿ, ವಾದಕ್ಕಿ, ತ್ರಿಫಲೆ, ಕಗ್ಗಲಿತೊಗಟೆ, ಬೇವಿನತೊಗಟೆ, ಕೆಂಪುಹೊನ್ನೆ, ಶಾಲವೃಕ್ಷದ ಗೋಂದು, ವಿಡಂಗ, ಗೇರುಬೀಜ, ಚಿತ್ರಮೂಲ, ಬಜೆ, ತ್ರಿಕಟುಕ, ಕೊನ್ನಾರಿ ಗಡ್ಡೆ , ತುವರೆಮಣ್ಣು (ಪಟಿಕ) ಇವುಗಳನ್ನು ಸಮಭಾಗವಾಗಿ ಸೇರಿಸಿ, ಎಲ್ಲವು ಗಳ ೪ ರಷ್ಟು ನೀರುಹಾಕಿ ಒಂದು ಭಾಗದಷ್ಟು ನಿಲ್ಲುವಂತೆ ಕಷಾಯ ಮಾಡಿ ಶೋಧಿಸಿ ಕೊಂಡು ಕಷಾಯದ $\frac{1}{4}$ ಭಾಗದಷ್ಟು ತುಪ್ಪವನ್ನು ಸೇರಿಸಿ ಪಾಕಮಾಡಿ ಶೋಧಿಸಿದ ಘೃತ ೧ ಪ್ರಸ್ಥದಷ್ಟು ಜೇನುತುಪ್ಪವನ್ನು ಸೇರಿಸಿ ಕಡೆಗೋಲಿನಿಂದ ಕಡೆದು ಶೇಖರಿಸಿಟ್ಟು ಕೊಂಡು ಪ್ರತಿನಿತ್ಯ ಬೆಳಗಿನ ಹೊತ್ತು ಒಂದೊಂದು ಪಲದಷ್ಟು ಘೃತವನ್ನು ಪಾನಮಾಡಿಸಿ ಹಾಲನ್ನು ಪಾನ ಮಾಡಿಸಿದರೆ ಮೇಧಾ ಜನಕವು, ಪರಮ ಶ್ರೇಷ್ಠವಾದದ್ದು, ಆಯುರ್ವರ್ಧ ಕವು, ಯಶಸ್ಕರವು; ಈ ಘತವನ್ನು ಸೇವಿಸಿದರೆ ಅತಿಬೇಗನೆ ಕ್ಷಯಹರವಾಗುತ್ತದೆ; ಪಾಂಡು

ರೋಗ, ಭಗಂದರ, ಶ್ವಾಸ ಸ್ವರಭೇದ, ಕಾಸ, ಹೃದ್ರೋಗ, ಪ್ಲೀಹವೃದ್ಧಿ, ಗುಲ್ಮ, ಗ್ರಹಣೀ ರೋಗ ಇವುಗಳು ನಿವಾರಿಸಲ್ಪಡುತ್ತವೆ. ಈ ರಸಾಯನವನ್ನು ಸೇವಿಸತಕ್ಕವರಿಗೆ ಆಹಾರವಿಹಾರಗಳಲ್ಲಿ ನಿರ್ಬಂಧವಿಲ್ಲ.

ಪ್ಲೀಹೋದರೋಕ್ತಂ ವಿಹಿತಂ ಚ ಸರ್ಪಿಸ್ತ್ರೀಣ್ಯೇವ ಚಾನ್ಯಾನಿ ಹಿತಾನಿಚಾತ್ರ ।
ಉಪದ್ರವಾಂಶ್ಚ ಸ್ವರವೈಕೃತಾದೀ‌ನ್ ಜಯೇದ್ಯಥಾಸ್ವಂ ಪ್ರಸಮೀಕ್ಷ್ಯಶಾಸ್ತ್ರಮ್ ॥೫೫॥

ಅಜಾಶಕೃನ್ಮೂತ್ರಪಯೋಘೃತಾಸೃಙ್ಮಾಂಸಾಲಯಾನಿ ಪ್ರತಿಸೇವ ಮಾನವಃ ।
ಸ್ನಾನಾದಿ ನಾನಾವಿಧಿನಾ ಜಹಾತಿಮಾಸಾದಶೇಷಂ ನಿಯಮೇನ ಶೋಷಮ್ ॥೫೬॥
ರಸೋನಯೋಗಂ ವಿಧಿವತ್ ಕ್ಷಯಾರ್ತಃ ಕ್ಷೀರೇಣ ವಾ ನಾಗಬಲಾ ಪ್ರಯೋಗಮ್ ।
ಸೇವೇತವಾ ಮಾಗಧಿಕಾವಿಧಾನಂ ತಥೋಪಯೋಗಂ ಜತುನೋಽಶ್ಮಜಸ್ಯ ॥೫೭॥

ಪ್ಲೀಹೋದರ ಚಿಕಿತ್ಸೆಯಲ್ಲಿ ಹೇಳಿರುವ "ಷಟ್ಪಲಘೃತವನ್ನೂ", ಇನ್ನೂ ಇತರ ಮೂರು ವಿಧಗಳಾದ ಘೃತಗಳನ್ನೂ (೧. ಹರೀತಕೀಚೂರ್ಣಪ್ರಸ್ಥಂ ಇತ್ಯಾದಿ ಘೃತವು, ೨. ಹಸುವಿನ ಹಾಲಿನಲ್ಲಿ ಮುಂಡಗಳ್ಳಿಯ ಹಾಲನ್ನು ಸೇರಿಸಿ ತಯಾರಿಸಿದ ಘೃತವು, ೩. ಚವ್ಯ, ಚಿತ್ರಕ, ದಂತೀ, ಅತಿವಿಷಾದಿಗಳಿಂದ ತಯಾರಿಸಿದ ಘೃತವು) ಸ್ರೋತೋವರೋಧವನ್ನೂ ನಿವಾರಿಸುವ ಕಾರಣ ಈ ಕ್ಷಯರೋಗದಲ್ಲಿ ಹಿತಕರವಾದುವುಗಳೆಂದು ತಿಳಿಯಬೇಕು. ಶಾಸ್ತ್ರದಲ್ಲಿ ಹೇಳಿರುವ ಸ್ವರಭೇದಾದಿ ಉಪದ್ರವಗಳನ್ನು ನಿವಾರಣೆ ಮಾಡುತ್ತವೆ. ಆಡಿನ ಹಿಕ್ಕೆ, ಗಂಜಳ, ಹಾಲು, ತುಪ್ಪ, ರಕ್ತಮಾಂಸ ಇವುಗಳನ್ನು ಸ್ನಾನ, ಪಾನ, ಲೇಪನಗಳಿಗೆ ಉಪಯೋಗಿಸುತ್ತಲೂ, ಆಡುಗಳನ್ನು ಕೂಡುವ ದೊಡ್ಡಿಯಲ್ಲಿ ಮಲಗುತ್ತಲೂ ಬಂದರೆ ಒಂದು ಮಾಸದಲ್ಲೇ ಸಕಲವಿಧ ಕ್ಷಯವೂ ನಾಶವಾಗುತ್ತದೆ. ಕ್ಷಯಪೀಡಿತನು ನಿಯಮಾನುಸಾರ ಬೆಳ್ಳುಳ್ಳಿಯ ಸೇವನೆಯನ್ನೂ, ತುರುಬೆಯ ಕಲ್ಕವನ್ನು ಹಾಲನಲ್ಲಿ ಕದರಿ ಕುಡಿಯುತ್ತಲೂ, ಹಿಪ್ಪಲಿವರ್ಧಮಾನದ ಯೋಗವನ್ನೂ, ಶಿಲಾಜತುವಿನ ಪ್ರಯೋಗವನ್ನೂ ಸೇವಿಸುತ್ತಾ ಬರಬೇಕು.

ಶೋಕಂ ಸ್ತ್ರಿಯಂ ಕ್ರೋಧಮಸೂಯನಂ ಚ
ತ್ಯಜೇದುದಾರಾ‌ನ್ ವಿಷಯಾ‌ನ್ ಭಜೇತ ।
ವೈದ್ಯಾ‌ನ್ ದ್ವಿಜಾತೀಂ ಸ್ತ್ರಿದಶಾ‌ನ್ ಗುರೂಂಶ್ಚ
ವಾಚಶ್ಚ ಪುಣ್ಯಾಃ ಶೃಣುಯಾದ್ದ್ವಿಜೇಭ್ಯಃ ॥೫೮॥

ವ್ಯಸನ, ಸ್ತ್ರೀಸಂಗ, ಕೋಪ, ಅಸೂಯೆ (ಪರಗುಣದಲ್ಲಿ ದೋಷಾರೋಪಣೆ ಮಾಡುವುದು) ಇವುಗಳನ್ನು ತ್ಯಜಿಸಬೇಕು. ಧರ್ಮಕ್ಕೆ ವಿರುದ್ಧವಲ್ಲದ ಮನಸ್ಸಿಗೆ ಹಿತಕರಗಳಾದ ಶಬ್ದ, ಸ್ಪರ್ಶ, ಗಂಧ, ರಸ ಸ್ಪರ್ಶಗಳೆಂಬ ವಿಷಯಗಳನ್ನು ಸೇವಿಸಬೇಕು. ವೈದ್ಯರನ್ನೂ, ದ್ವಿಜರನ್ನೂ, ದೇವತೆಗಳನ್ನೂ, ಗುರುಗಳನ್ನೂ ಸೇವಿಸಬೇಕು. ವೇದೋಕ್ತ

ಗಳಾದ ರುದ್ರಸ್ತುತಿ ಮೊದಲಾದ ಪುಣ್ಯಕರಗಳಾದ ವಾಕ್ಯಗಳನ್ನು ದ್ವಿಜರಿಂದ ಪಠಣ ಮಾಡಿಸಿ ಕೇಳಬೇಕು. (ದೈವವ್ಯಪಾಶ್ರಯ ಚಿಕಿತ್ಸೆಯು.)

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾ ತನ್ತ್ರೇ ಶೋಷಪ್ರತಿಷೇಧನಾಮಕ ಏಕಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ.

ದ್ವಿಚತ್ವಾರಿಂಶತ್ತಮೋಽಧ್ಯಾಯಃ

ಅಥಾತೋ ಗುಲ್ಮ ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಗುಲ್ಮ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಯಥೋಕ್ತೈಃ ಕೋಪನೈರ್ದೋಷಾಃ ಕುಪಿತಾಃ ಕೋಷ್ಠಮಾಗತಾಃ |
ಜನಯನ್ತಿ ನೃಣಾಂ ಗುಲ್ಮಂ ಸಪಞ್ಚವಿಧ ಉಚ್ಯತೇ ||೩||

ವ್ರಣಪ್ರಶ್ನೆಯ ಅಧ್ಯಾಯದಲ್ಲಿ ಹೇಳಿರುವಂತೆ ಬಲಿಷ್ಠರೊಡನೆ ಯುದ್ಧಮಾಡುವುದು, ಕೋಪ, ದಿವಾಸ್ವಪ್ನಾದಿಗಳಿಂದ ದೋಷವು ಪ್ರಕೋಪಿಸಿ ಆಮಾಶಯ, ಅಗ್ನ್ಯಾಶಯ, ಹೃದಯ, ಮಲಾಶಯ, ಪುಪ್ಫುಸಗಳಲ್ಲಿ ಜಮಾವಣೆಯಾಗಿ, ಮೂರು ದೋಷಗಳಿಂದಲೂ ಪ್ರತ್ಯೇಕವಾಗಿ ಮೂರುವಿಧ, ಮೂರು ಒಟ್ಟಿಗೆಸೇರಿ ಒಂದುವಿಧ, ಈ ರೀತಿಯಾಗಿ [illegible] ವಿಧ ಗುಲ್ಮಗಳುಂಟಾಗುತ್ತವೆ. ಎರಡೆರಡು ದೋಷಗಳು ಸೇರಿ ಮೂರುವಿಧಗಳೆಂದೂ ವ್ರಣಪ್ರಶ್ನೆದಲ್ಲಿ ಹೇಳಿರುವಂತೆ ವ್ರಣವುಪ್ರಸಾರವಾಗಿ ೧೫ ಪ್ರಕಾರಗಳಾಗುತ್ತವೆಂದು ಕೆಲವರ ಮತವು. ವ್ರಣಕೋಪನ್ನ ಕಾರಣಗಳೇ ಗುಲ್ಮಕ್ಕೆ ಕಾರಣಗಳು. ದೋಷಗಳು ಪ್ರಕೋಪಗೊಂಡು ಕೋಷ್ಠಕ್ಕೆ ಬರುವುದೇ ಸಂಪ್ರಾಪ್ತಿಯು. ೫ ವಿಧಗಳೆಂಬುದು ಸಂಖ್ಯೆ.

ಹೃದ್ಬಸ್ತ್ಯೋರನ್ತರೇ ಗ್ರನ್ಥಿಃ ಸಂಚಾರೀ ಯದಿ ವಾ ಚಲಃ |
ಚಯಾಪಚಯವಾನ್ ವೃತ್ತಃ ಸ ಗುಲ್ಮ ಇತಿ ಕೀರ್ತಿತಃ ||೪||

ಹೃದಯ ಮತ್ತು ಬಸ್ತಿಗಳ ಮಧ್ಯದಲ್ಲಿ ವಾತಾಧಿಕ್ಯತೆಯಿಂದ ಚಲಿಸುತ್ತಲೂ, ಅಲ್ಪ ವಾತವಿದ್ದರೆ ಸ್ಥಿರವಾಗಿ ಒಂದೇಕಡೆ ಇದ್ದು ಗುಂಡಿಗೆ ವೃದ್ಧಿಯಾಗುತ್ತಲೂ ಕ್ಷೀಣವಾಗುತ್ತಲೂ ಇರುವ ಗ್ರಂಥಿ ವಿಶೇಷಕ್ಕೆ ಗುಲ್ಮವೆಂದು ಹೆಸರು.

ಪಞ್ಚ ಗುಲ್ಮಾಶ್ರಯಾ ನೃಣಾಂ ಪಾರ್ಶ್ವೇ ಹೃನ್ನಾಭಿಬಸ್ತಯಃ |
ಕುಪಿತಾನಿಲಮೂಲತ್ವಾದ್ಗೂಢಮೂಲೋದಯಾದಪಿ ||೫||
ಗುಲ್ಮವದ್ವಾ ವಿಶಾಲತ್ವಾದ್ಗುಲ್ಮ ಇತ್ಯಭಿಧೀಯತೇ |
ಸ ಯಸ್ಮಾದಾತ್ಮನಿ ಚಯಂ ಗಚ್ಛತ್ಯಪ್ಸಿವ ಬುದ್ಬುದಃ ||೬||
ಅನ್ತಃ ಸರತಿ ಯಸ್ಮಾಚ್ಚ ನಪಾಕಮುಪಯಾತ್ಯತಃ |

ಎರಡು ಪಕ್ಕೆಗಳು, ಹೃದಯ, ನಾಭಿ, ಬಸ್ತಿ, ಈ ೫ ಸ್ಥಾನಗಳು ಗುಲ್ಮಕ್ಕೆ ಆಶ್ರಯವಾಗಿವೆ. ಪ್ರಕುಪಿತವಾಯುವೇ ಗುಲ್ಮದ ಉತ್ಪತ್ತಿಗೆ ಕಾರಣವು ; ಕಂದಾದಿಗಳು ಹೇಗೆ

ಭೂಮಿಯೊಳಗೆ ಅಡಗಿ ಹೊರಕ್ಕೆ ಕಂಡುಬರುವುದಿಲ್ಲವೋ ಅದೇ ರೀತಿಯಲ್ಲಿ ವಾಯುವಿಗೆ ಆವರಣವಿರುವುದು ಗೊತ್ತಾಗುವುದಿಲ್ಲ ; ಲತೆಗಳು ಸುತ್ತಲೂ ಹರಡಿಕೊಂಡು ಮಧ್ಯ ಭಾಗದಲ್ಲಿ ಟೊಳ್ಳಾಗಿರುವುದರಿಂದಲೇ ಗುಲ್ಮವೆಂದು ಹೆಸರಾಗಿದೆ ; ನೀರಿನಮೇಲೆ ಗುಳ್ಳೆಗಳೇಳುವಂತೆ ದೋಷಗಳು ಸ್ವಸ್ಥಾನದಲ್ಲೇ ಚಯವಾಗಿ ಗುಲ್ಮವಾಗಿ ಪರಿಣಮಿಸಿ ಉದರಗುಹೆಯಲ್ಲೇ ಓಡಾಡುತ್ತಾ ಮುಂದೆ ಮುಂದೆ ನುಗ್ಗುವುದರಿಂದ ಗುಲ್ಮವು ಪಾಕವಾಗುವುದಿಲ್ಲ.

ಟಿಪ್ಪಣಿ : ನೀರಿನ ಮೇಲೆ ವೇಗವಾಗಿ ಗಾಳಿ ಬೀಸುವುದರಿಂದ ನೀರು ಮೇಲಕ್ಕೆ ಉಬ್ಬಿ ಗುಳ್ಳೆಯ ಆಕಾರವನ್ನು ಹೊಂದುವಂತೆಯೇ ದೋಷಗಳು ತಮ್ಮ ತಮ್ಮ ಆಶ್ರಯ ಸ್ಥಾನಗಳಲ್ಲೇ ವೃದ್ಧಿಯಾಗಿ ತಾವೇ ಮೇಲಕ್ಕೆ ಉಬ್ಬಿಕೊಂಡು ಒಳಗೆ ಟೊಳ್ಳಾಗಿರುತ್ತವೆ ; ಇವು ಪಾಕವಾಗುವುದಿಲ್ಲ. ಕೆಲವು ವೇಳೆ ಪ್ರಕುಪಿತದೋಷಗಳು ರಕ್ತಾದಿಧಾತುಗಳನ್ನು ಆಶ್ರಯಿಸಿದರೆ ಗುಲ್ಮವು ಪಾಕವಾಗುತ್ತದೆ. ಅಂತರ್ವಿದ್ರಧಿಯು ಬೇಗ ಪಾಕವಾತ್ತದೆ. ಗುಲ್ಮವು ಅತಿ ನಿಧಾನವಾಗಿ ಪಾಕವಾಗುವುದುಂಟು. ಇದೇ ಇವೆರಡಕ್ಕೂ ಇರುವ ವ್ಯತ್ಯಾಸವು.

ಸ ವ್ಯಸ್ತೈರ್ಜಾಯತೇ ದೋಷೈಃ ಸಮಸ್ತೈರಪಿ ಚೋಚ್ಛ್ರಿತೈಃ ||೭||
ಪುರುಷಾಣಾಂ ತಥಾ ಸ್ತ್ರೀಣಾಂ ತಥಾ ರಕ್ತೇನ ಚಾಪರಃ |

ಗುಲ್ಮದಲ್ಲಿ ಪ್ರಕುಪಿತಗಳಾದ ವಾತ, ಪಿತ್ತ, ಕಫಗಳಿಂದ ಪ್ರತ್ಯೇಕವಾಗಿ ಮೂರು ವಿಧಗಳೂ, ತ್ರಿದೋಷಗಳೂ ಒಟ್ಟಿಗೆ ಸೇರಿ ಒಂದು ವಿಧವೂ ಆರ್ತವ ರಕ್ತದಿಂದ ಒಂದು ವಿಧವೂ ಈ ರೀತಿ ಗುಲ್ಮವು ೫ ವಿಧಗಳಾಗುತ್ತದೆ ; ಧಾತುರಕ್ತದಿಂದ ಗಂಡಸರಿಗೂ ಹೆಂಗಸರಿಗೂ ಗುಲ್ಮವುಂಟಾಗುತ್ತದೆಯಾದರೂ ಪಿತ್ತಗುಲ್ಮಕ್ಕೆ ಸಮಾನವಾದ ಲಕ್ಷಣಗಳಿರುವ ಕಾರಣ ಇದೂ ಪಿತ್ತಗುಲ್ಮದಲ್ಲೇ ಅಡಕಮಾಡಲ್ಪಟ್ಟಿರುತ್ತದೆ.

ಸದನಂ ಮನ್ದತಾ ವಹ್ನೇರಾಟೋಪೋಽನ್ತ್ರವಿಕೂಜನಮ್ ||೮||
ವಿಣ್ಮೂತ್ರಾನಿಲಸಙ್ಗಶ್ಚ ಸೌಹಿತ್ಯಾಸಹತಾ ತಥಾ |
ದ್ವೇಷೋಽನ್ನೇ ವಾಯುರೂರ್ಧ್ವಂ ಚ ಪೂರ್ವರೂಪೇಷು ಗುಲ್ಮಿನಾಮ್ ||೯||

ದೋಷಗಳು ಹೊಟ್ಟೆಯಲ್ಲಿ ಓಡಾಡುವಂತೆ ಗಡಬಿಡಿ ಶಬ್ದನಿರುತ್ತದೆ. ದೇಹ ಕ್ಷೀಣತೆ, ಅಗ್ನಿಮಾಂದ್ಯ, ಮಲ, ಮೂತ್ರ, ಅಪಾನವಾತಗಳು ತಡೆಯಲ್ಪಡುತ್ತವೆ ; ತೃಪ್ತಿಯಾಗುವಷ್ಟು ಆಹಾರವನ್ನು ತಿಂದರೂ ತಡೆಯಲಾರದಷ್ಟು ವ್ಯಥೆಯೂ, ಅನ್ನ ದ್ವೇಷವೂ ತೇಗುಬರುವುದೂ ಇವು ಗುಲ್ಮರೋಗದ ಪೂರ್ವರೂಪಗಳು.

ಹೃತ್ಕುಕ್ಷಿಶೂಲಂ ಮುಖಕಂಠಶೋಷೋ ವಾಯೋರ್ನಿರೋಧೋ ವಿಷಮಾಗ್ನಿತಾ ಚ |
ತೇ ತೇ ವಿಕಾರಾಃ ಪವನಾತ್ಮಕಾಶ್ಚ ಭವನ್ತಿ ಗುಲ್ಮೇಽನಿಲಸಂಭವೇ ತು ||೧೦||
ಸ್ವೇದ ಜ್ವರಾಹಾರ ವಿದಾಹದಾಹಾಸ್ತೃಷ್ಣಾಙ್ಗರಾಗಃ ಕಟುವಕ್ತ್ರತಾ ಚ |
ಪಿತ್ತಸ್ಯ ಲಿಙ್ಗಾನ್ಯಖಿಲಾನಿ ಯಾನಿ ಪಿತ್ತಾತ್ಮಕೇ ತಾನಿ ಭವನ್ತಿ ಗುಲ್ಮೇ ||೧೧||
ಸ್ತೈಮಿತ್ಯಮನ್ನೇಽರುಚಿರಙ್ಗಸಾದಶ್ಛರ್ದಿಃ ಪ್ರಸೇಕೋಮಧುರಾಸ್ಯತಾ ಚ |
ಕಫಸ್ಯ ಲಿಙ್ಗಾನಿ ಚ ಯಾನಿ ತಾನಿ ಭವನ್ತಿ ಗುಲ್ಮೇ ಕಫಸಂಭವೇ ತು ||೧೨||

ವಾತಗುಲ್ಮದಲ್ಲಿ ಹೃದಯ ಮತ್ತು ಹೊಟ್ಟೆಯಲ್ಲಿ ಶೂಲೆಯೂ ; ಮುಖವೂ ಕಂಠವೂ ಒಣಗಿ ದ್ರವರಹಿತಗಳಾಗಿಯೂ ; ಅಪಾನವಾಯುವಿನ ತಡೆಯೂ ; ಕೆಲವುವೇಳೆ ಹಸಿನೆಯಾಗುತ್ತದೆ; ಕೆಲವುವೇಳೆ ಹಸಿವೆಯೇಆಗುವುದಿಲ್ಲ; ಮತ್ತು ಸ್ತಂಭನ ಕಂಪನ ಮೊದಲಾದ ವಾತವಿಕಾರಗಳೂ ಕಾಣುತ್ತವೆ; ಪಿತ್ತಗುಲ್ಮದಲ್ಲಿ ಮೈಬೆವರುತ್ತದೆ. ಶಿಂದ ಆಹಾರವು ಹುಳಿ ತೇಗನ್ನುಂಟುಮಾಡುತ್ತದೆ. ಜ್ವರ ಮೈಉರಿತ ಬಾಯಾರಿಕೆ; ಮೈಕೆಂಪುಬಣ್ಣಕ್ಕೆ ತಿರುಗಿ, ಬಾಯಿಕಹಿ, ಖಾರವಾಗಿಯೂ, ತಲೆತಿರುಗು, ಮತ್ತು ಜ್ಞಾನತಪ್ಪುವುದು ಇವೇ ಮೊದಲಾದ ಪಿತ್ತವಿಕಾರಗಳುಂಟಾಗುತ್ತವೆ; ಕಫಗುಲ್ಮದಲ್ಲಿ ಮೈಭಾರ ಅನ್ನಾರುಚಿ ಮೈಕ್ಷೀಣತೆ, ವಮನ, ಬಾಯಿನೀರು ಸೋರುವುದು, ಬಾಯಿ ಸಿಹಿಯಾಗಿರುವುದು, ಗೌರವ, ಶೈತ್ಯ ಮೊದಲಾದ ಕಫ ವಿಕಾರಗಳು ಕಂಡುಬರುತ್ತವೆ.

ಸರ್ವಾತ್ಮಕಃ ಸರ್ವವಿಕಾರಯುಕ್ತಃ ಸೋಽಸಾಧ್ಯ ಉಕ್ತಃ ಕ್ಷತಜಂ ಪ್ರವಕ್ಷ್ಯೇ ।
ನವಪ್ರಸೂತಾಹಿತಭೋಜನಾ ಯಾ ಯಾ ಚಾಮಗರ್ಭಂ ವಿಸೃಜೇದೃತೌ ವಾ ॥೧೩॥
ವಾಯುರ್ಹಿ ತಸ್ಯಾಃ ಪರಿಗೃಹ್ಯ ರಕ್ತಂ ಕರೋತಿ ಗುಲ್ಮಂ ಸರುಜಂ ಸದಾಹಮ್ ।
ಪೈತ್ತಸ್ಯ ಲಿಙ್ಗೇನ ಸಮಾನಲಿಙ್ಗಂ ವಿಶೇಷಣಂ ಚಾಪ್ಯಪರಂ ನಿಬೋಧ ॥೧೪॥
ನ ಸ್ಪನ್ದತೇ ನೋದರಮೇತಿ ವೃದ್ಧಿಂ ಭವನ್ತಿ ಲಿಙ್ಗಾನಿ ಚ ಗರ್ಭಿಣೀನಾಮ್ ।
ತಂ ಗರ್ಭಕಾಲಾತಿಗಮೇ ಚಿಕಿತ್ಸ್ಯಮಸೃಗ್ಭವಂ ಗುಲ್ಮಮುಶನ್ತಿ ತಜ್ಜ್ಞಾಃ ॥೧೫॥

ತ್ರಿದೋಷಜಗುಲ್ಮದಲ್ಲಿ ಮೂರು ದೋಷಗಳ ಲಕ್ಷಣಗಳೂ ಮಿಶ್ರವಾಗಿ ಇರುವ ಕಾರಣ ಅಸಾಧ್ಯವು. ಇನ್ನು ರಕ್ತಗುಲ್ಮವನ್ನು ಹೇಳುತ್ತೇನೆ ; ಪ್ರಸವವಾದ ಮೇಲೆಯೂ ೭ ತಿಂಗಳಿಗೆ ಮುಂಚಿತವಾಗಿ ಗರ್ಭಪಾತ ಅಥವಾ ಗರ್ಭಸ್ರಾವವಾದ ಸ್ತ್ರೀಯೂ ಋತುಮತಿಯಾದವಳೂ ಸಹ ಅಹಿತಾಹಾರ ವಿಹಾರಗಳನ್ನು ಸೇವಿಸುವುದರಿಂದ ವಾತವು ಪ್ರಕೋಪವಾಗಿ ಅವಳ ದೇಹದಲ್ಲಿರುವ ಆರ್ತವರಕ್ತವನ್ನು ಸೇರಿ ನೋವಿನಿಂದಲೂ ಉರಿತದಿಂದಲೂ ಕೂಡಿದ ಗುಲ್ಮವನ್ನುಂಟುಮಾಡುತ್ತದೆ ; ಉರಿತ ಶಾಖ ಮೊದಲಾದ ಪಿತ್ತಲಕ್ಷಣಗಳಿರುತ್ತವೆ ; ಆರ್ತವ ರಕ್ತದಿಂದುತ್ಪನ್ನವಾದ ಗುಲ್ಮವು ಅಂಗಗಳಿಲ್ಲದ ಗರ್ಭಸ್ಥಶಿಶುವಿನಂತೆ ಅದುರುವುದಿಲ್ಲ; ಗರ್ಭಿಣಿಗಿರುವಂತೆ ಹೊಟ್ಟೆಯು ಉಬ್ಬಿರುವುದಿಲ್ಲ; ಆದರೆ ಗರ್ಭಿಣಿಯರಿಗೆ ಇರುವಂತೆಯೇ ಶ್ರಮ, ಹೃಲ್ಲಾಸ, ವಮನ, ದೇಹಕಾರ್ಶ್ಯತೆ ಮೊದಲಾದ ಲಕ್ಷಣಗಳು ವ್ಯಾಧಿ ಸ್ವಭಾವದಿಂದುಂಟಾಗುತ್ತವೆ, ಈ ರಕ್ತಗುಲ್ಮವನ್ನು ಗರ್ಭಪ್ರಸವಕಾಲ ಕಳೆದನಂತರ ಅಂದರೆ ೯ ಮಾಸ ಕಳೆದ ನಂತರ ೧೦ ನೆಯ ಮಾಸದಲ್ಲಿ ಚಿಕಿತ್ಸೆ ಮಾಡಬೇಕು ; ಪ್ರಸವ ಕಾಲಕ್ಕಿಂತ ಮೊದಲೇ ಔಷಧಾದಿಗಳಿಂದ ಗುಲ್ಮಭೇದನ ಮಾಡಿದರೆ ಗರ್ಭಾಶಯಕ್ಕೆ ಹಿಂಸೆಯಾಗುತ್ತದೆ. ಪ್ರಸವಕಾಲ ಕಳೆದರೆ ಗುಲ್ಮವು ಪಿಂಡೀಭೂತವಾಗುವುದರಿಂದ ಸ್ನೇಹಸ್ವೇದಗಳಿಂದ ಉಪಚರಿಸಿ ಸುಖವಾಗಿ ಗುಲ್ಮಹರಣ ಮಾಡಲು ಅನುಕೂಲವಾಗುತ್ತದೆ ; ರಕ್ತಗುಲ್ಮವು ಸರಿಯಾಗಿ ವೃದ್ಧಿಯಾಗಿದ್ದರೆ ಗರ್ಭಪ್ರಸವ ಕಾಲಕ್ಕಿಂತಲೂ ಮುಂಚಿತವಾಗಿಯೇ ಚಿಕಿತ್ಸೆಮಾಡಬಹುದು ಎಂದು ಕೆಲವರು ಅಭಿಪ್ರಾಯಪಡುತ್ತಾರೆ.

ವಾತಗುಲ್ಮಾರ್ದಿತಂ ಸ್ನಿಗ್ಧಂ ಯುಕ್ತಂ ಸ್ನೇಹವಿರೇಚನೈಃ ।
ಉಪಾಚರೇದ್ಯಥಾಕಾಲಂ ನಿರೂಹೈಃ ಸಾನುವಾಸನೈಃ ॥೧೬॥
ಪಿತ್ತಗುಲ್ಮಾರ್ದಿತಂ ಸ್ನಿಗ್ಧಂ ಕಾಕೋಲ್ಯಾದಿಘೃತೇನ ತು ।
ವಿರಿಕ್ತಂ ಮಧುರೈರ್ಯೋಗೈರ್ನಿರೂಹೈಃ ಸಮುಪಾಚರೇತ್ ॥೧೭॥
ಶ್ಲೇಷ್ಮಗುಲ್ಮಾರ್ದಿತಂ ಸ್ನಿಗ್ಧಂ ಪಿಪ್ಪಲ್ಯಾದಿಘೃತೇನ ತು ।
ತೀಕ್ಷ್ಣೈರ್ವಿರಿಕ್ತಂ ತದ್ರೂಪೈರ್ನಿರೂಹೈಃ ಸಮುಪಾಚರೇತ್ ॥೧೮॥
ಸನ್ನಿಪಾತೋತ್ಥಿತೇ ಗುಲ್ಮೇ ತ್ರಿದೋಷಘ್ನೋ ವಿಧಿರ್ಹಿತಃ ।

ವಾತಗುಲ್ಮಪೀಡಿತನನ್ನು ಸ್ನಿಗ್ಧನನ್ನಾಗಿ ಮಾಡಿ ಸ್ನೇಹವಿರೇಚನಗಳಿಂದಲೂ ನಿರೂಹ ಅನುವಾಸನ ಬಸ್ತಿಪ್ರಯೋಗಗಳಿಂದಲೂ ಚಿಕಿತ್ಸೆಮಾಡಬೇಕು ; ಪಿತ್ತಗುಲ್ಮ ರೋಗಿಯನ್ನು ಕಾಕೋಲ್ಯಾದಿ ಘೃತದಿಂದ ಸ್ನಿಗ್ಧನನ್ನಾಗಿ ಮಾಡಿ ಮಧುರದ್ರವ್ಯಗಳೊಡನೆ ಮಿಶ್ರಮಾಡಿದ ವಿರೇಚನ ಮತ್ತು ನಿರೂಹ ಬಸ್ತಿಗಳಿಂದ ಚಿಕಿತ್ಸೆ ಮಾಡಬೇಕು ; ಶ್ಲೇಷ್ಮಗುಲ್ಮಪೀಡಿತನನ್ನು ಪಿಪ್ಪಲ್ಯಾದಿಘೃತಪಾನವನ್ನು ಮಾಡಿಸಿ ಸ್ನಿಗ್ಧನಾದಮೇಲೆ ತೀಕ್ಷ್ಣದ್ರವ್ಯಗಳಿಂದ ವಿರೇಚನವನ್ನೂ ನಿರೂಹಬಸ್ತಿಯನ್ನೂ ಪ್ರಯೋಗಿಸಿ ಚಿಕಿತ್ಸೆಮಾಡಬೇಕು; ಸನ್ನಿಪಾತದೋಷದಿಂದುಂಟಾದ ಗುಲ್ಮರೋಗಿಗೆ ತ್ರಿದೋಷಹರಗಳಾದ ಚಿಕಿತ್ಸಾಕ್ರಮಗಳಿಂದುಪಚರಿಸಬೇಕು.

ಪಿತ್ತವದ್ರಕ್ತಗುಲ್ಮಿನ್ಯಾ ನಾರ್ಯಾಃ ಕಾರ್ಯಃ ಕ್ರಿಯಾವಿಧಿಃ ॥೧೯॥
ವಿಶೇಷಮಪರಂ ಚಾಸ್ಯಾಃ ಶೃಣು ರಕ್ತವಿಭೇದನಮ್ ।
ಪಲಾಶಕ್ಷಾರತೋಯೇನ ಸಿದ್ಧಂ ಸರ್ಪಿಃ ಪ್ರಯೋಜಯೇತ್ ॥೨೦॥
ದದ್ಯಾದುತ್ತರಬಸ್ತಿಂ ಚ ಪಿಪ್ಪಲ್ಯಾದಿಘೃತೇನ ತು ।
ಉಷ್ಣೈರ್ವಾ ಭೇದಯೇದ್ಭಿನ್ನೇ ವಿಧಿರಾಸೃಗ್ದರೋ ಹಿತಃ ॥೨೧॥

ರಕ್ತಗುಲ್ಮದಲ್ಲಿ ಪಿತ್ತಗುಲ್ಮದ ಚಿಕಿತ್ಸೆಯನ್ನೇ ಮಾಡಬೇಕು. ರಕ್ತಗುಲ್ಮವುಳ್ಳ ಸ್ತ್ರೀಗೆ ರಕ್ತ ಭೇದಿಸುವಂತೆ ಮುತ್ತುಗದ ಕ್ಷಾರದಿಂದ ತಯಾರಿಸಿದ ತುಪ್ಪವನ್ನು ಕುಡಿಸಿ ಪಿಪ್ಪಲ್ಯಾದಿ ಗಣದ್ರವ್ಯಗಳ ಕಲ್ಕಕಷಾಯಗಳೊಡನೆ ಪಿಪ್ಪಲ್ಯಾದಿ ಘೃತವನ್ನು ಮಿಶ್ರಮಾಡಿ ಉತ್ತರ ಬಸ್ತಿಯನ್ನು ಪ್ರಯೋಗಿಸಿ ಉಷ್ಣೋಪಚಾರಗಳಿಂದ ಗುಲ್ಮವನ್ನು ಭೇದಿಸಿ ಅಧೋಗ ರಕ್ತಪಿತ್ತರೋಗಿಗೆ ಮಾಡುವಂತೆಯೇ ಉಪಚರಿಸಬೇಕು.

ಆನೂಪೌದಕಮಜ್ಜಾನೋ ವಸಾ ತೈಲಂ ಘೃತಂ ದಧಿ ।
ವಿಪಕ್ವಮೇಕತಃ ಶಸ್ತಂವಾತಗುಲ್ಮೇಽನುವಾಸನಮ್ ॥೨೨॥
ಜಾಙ್ಗಲೈಕಶಫಾನಾಂ ತು ವಸಾ ಸರ್ಪಿಶ್ಚ ಪೈತ್ತಿಕೇ ।
ತೈಲಂ ಜಾಙ್ಗಲಮಜ್ಜಾನ ಏವಂ ಗುಲ್ಮೇ ಕಫೋತ್ಥಿತೇ ॥೨೩॥

ಹಂದಿ ಮೊದಲಾದ ಅನೂಪದೇಶದ ಮತ್ತು ಜಲಚರಗಳ ಪ್ರಾಣಿಗಳ ಮಜ್ಜೆ, ಕೊಬ್ಬು, ತೈಲ, ತುಪ್ಪ, ಮೊಸರು ಇವೆಲ್ಲವನ್ನೂ ಒಟ್ಟಿಗೆ ಪಾಕಮಾಡಿ ಅನುವಾಸನ ಬಸ್ತಿ

ಯನ್ನು ಪ್ರಯೋಗಿಸಿದರೆ ವಾತಗುಲ್ಮ ಹರವಾಗುತ್ತದೆ. ಆಡು ಮೊದಲಾದ ಬಯಲು ದೇಶದ ಪ್ರಾಣಿಗಳ ಕುದುರೆ ಮೊದಲಾದ ಒಂದೇ ಗೊರಸುಳ್ಳ ಪ್ರಾಣಿಗಳ ವಸೆ, ತುಪ್ಪಗಳಿಂದ ಅನುವಾಸನ ಮಾಡಿದರೆ ಪಿತ್ತಗುಲ್ಮ ಹರವಾಗುತ್ತದೆ. ತಿಲತೈಲ ಮತ್ತು ಜಾಂಗಲ ಪ್ರಾಣಿಗಳ ಮಜ್ಜೆಯಿಂದ ಅನುವಾಸನ ಬಸ್ತಿಯನ್ನು ಪ್ರಯೋಗಿಸಿದರೆ ಕಫಗುಲ್ಮ ಹರವಾಗುತ್ತದೆ.

ಧಾತ್ರೀಫಲಾನಾಂ ಸ್ವರಸೇ ಷಡಙ್ಗಂ ವಿಪಚೇದ್ಘೃತಮ್ ।
ಶರ್ಕರಾಸೈನ್ಧವೋಪೇತು ತದ್ಧಿತಂ ವಾತಗುಲ್ಮಿನೇ ॥೨೪॥
ಚಿತ್ರಕವ್ಯೋಷಸಿನ್ಧೂತ್ಥಪೃಥ್ವೀಕಾಚವ್ಯದಾಡಿಮೈಃ ।
ದೀಪ್ಯಕಗ್ರನ್ಥಿಕಾಜಾಜೀಹಪುಷಾಧಾನ್ಯಕೈಃ ಸಮೈಃ ॥೨೫॥
ದಧ್ಯಾರನಾಳಬದರಮೂಲಕಸ್ವರಸೈರ್ಘೃತಮ್ ।
ತತ್ಪಿಬೇದ್ವಾಗುಲ್ಮಾಗ್ನಿದೌರ್ಬಲ್ಯಾಟೋಪಶೂಲನುತ್ ॥೨೬॥
ಹಿಙ್ಗುಸೌವರ್ಚಲಾಜಾಜೀಬಿಡದಾಡಿಮದೀಪ್ಯಕೈಃ ।
ಪುಷ್ಕರವ್ಯೋಷಧಾನ್ಯಾಮ್ಲವೇತಸಕ್ಷಾರಚಿತ್ರಕೈಃ ॥೨೭॥
ಶಠೀವಚಾಜಗನ್ಧೈಲಾಸುರಸೈಶ್ಚ ವಿಪಾಚಿತಮ್ ।
ಶೂಲಾನಾಹಹರಂ ಸರ್ಪಿರ್ದಧ್ನಾ ಚಾನಿಲಗುಲ್ಮಿನಾಮ್ ॥೨೮॥

ನೆಲ್ಲೀಕಾಯಿ ಸ್ವರಸ ೪ ಭಾಗ, ತುಪ್ಪ ೧ ಭಾಗ, ಪಂಚಕೋಲ ಮತ್ತು ಯವಕ್ಷಾರಗಳು ತುಪ್ಪದ $\frac{1}{4}$ ಭಾಗ, ಸಕ್ಕರೆ, ಸೈಂಧವ ಲವಣಗಳು ಯವಕ್ಷಾರ ಭಾಗದಷ್ಟನ್ನು ಸೇರಿಸಿ ತಯಾರಿಸಿದ ಘೃತವನ್ನು ಪಾನ ಮಾಡಿಸಿದರೆ ವಾತಗುಲ್ಮ ಹರವು. ಚಿತ್ರಮೂಲ, ತ್ರಿಕಟು ಸೈಂಧವ, ದಪ್ಪಜೀರಿಗೆ, ಚವ್ಯ, ದಾಳಿಂಬೆತೊಗಟೆ, ವಾದಕ್ಕಿ, ತಗರ, ಜೀರಿಗೆ, ಹೆಬ್ಬೆ, ಕೊತ್ತುಂಬರಿ, ಇವುಗಳ ಸಮಭಾಗ ಕಲ್ಕಕ್ಕೆ ೪ ರಷ್ಟು ತುಪ್ಪವನ್ನೂ ಮೊಸರು ಕಲಗಚ್ಚು, ಎಲಚಿಹಣ್ಣಿನ ಸ್ವರಸ, ಮೂಲಂಗಿ ಸ್ವರಸ ಇವು ಪ್ರತಿಯೊಂದೂ ತುಪ್ಪದಷ್ಟೇ ಇರಬೇಕು. ಇವೆಲ್ಲವನ್ನೂ ಸೇರಿಸಿ ಪಾಕ ಮಾಡಿದ ಘೃತವನ್ನು ಕುಡಿಸಿದರೆ ವಾತಗುಲ್ಮ, ಅಗ್ನಿಮಾಂದ್ಯ, ಹೊಟ್ಟೆಯಲ್ಲಿ ಶಬ್ದಮಾಡುತ್ತಾ ಓಡಾಡುವವಾತ, ಹೊಟ್ಟೆಶೂಲೆ ಇವುಗಳ ನಿವಾರಣೆಯಾಗುತ್ತವೆ. ಹಿಂಗು, ಸೌವರ್ಚಲವಣ, ಜೀರಿಗೆ, ಬಿಡಲವಣ, ದಾಳಿಂಬೆಶಿಪ್ಪೆ, ವಾದಕ್ಕಿ, ಪುಷ್ಕರ, ಮೂಲ, ತ್ರಿಕಟು, ಕೊತ್ತುಂಬರಿ ಓಟೆಹುಳಿ, ಯವಕ್ಷಾರ, ಚಿತ್ರಮೂಲ, ಕಪೂರ್ರ, ಶುಂಠಿ ಬಜೆ, ನಾರಂಬೇಳೆ, ಸಣ್ಣ ಏಲಕ್ಕಿ, ತುಳಸಿ ಇವುಗಳ ಕಲ್ಕಕ್ಕೆ ೪ ಭಾಗ ತುಪ್ಪವನ್ನೂ ತುಪ್ಪದ ೪ ಭಾಗ ಮೊಸರನ್ನೂ ಸೇರಿಸಿ ತಯಾರಿಸಿದ ಘೃತವನ್ನು ಕುಡಿಸಿದರೆ ವಾತಗುಲ್ಮವನ್ನೂ ಹೊಟ್ಟೆಶೂಲೆಯನ್ನೂ ಉಬ್ಬರವನ್ನೂ ನಾಶಮಾಡುತ್ತದೆ.

ಬಿಡದಾಡಿಮಸಿನ್ಧೂತ್ಥಹುತಭುಗ್ವ್ಯೋಷಜೀರಕೈಃ ।
ಹಿಙ್ಗುಸೌವರ್ಚಲಕ್ಷಾರರುಗ್ವೃಕ್ಷಾಮ್ಲಾಮ್ಲವೇತಸೈಃ ॥೨೯॥
ಬೀಜಪೂರರಸೋಪೇತಂ ಸರ್ಪಿರ್ದಧಿಚತುರ್ಗುಣಮ್ ।
ಸಾಧಿತಂ ದಾಧಿಕಂ ನಾಮ ಗುಲ್ಮಹೃತ್ಪ್ಲೀಹಶೂಲಜಿತ್ ॥೩೦॥

ಬಿಡಲವಣ, ದಾಳಿಂಬೆ ಶಿಪ್ಪೆ, ಸೈಂಧವ, ಚಿತ್ರಮೂಲ, ತ್ರಿಕಟು, ಜೀರಿಗೆ, ಹಿಂಗು ಸೌವರ್ಚಲವಣ, ಯವಕ್ಷಾರ, ಚಂಗಲ್‌ಕೋಷ್ಠ, ಮುರ್ಗಿನ ಹುಳಿ, ಓಟೆಹುಳಿ, ಮಾದಳ ರಸ, ಇವೆಲ್ಲವನ್ನೂ ಇವುಗಳ ೪ ರಷ್ಟು ತುಪ್ಪವನ್ನೂ ತುಪ್ಪದ ೪ ರಷ್ಟು ಭಾಗ ಮೊಸ ರನ್ನೂ ಸೇರಿಸಿ ತಯಾರಿಸಿದರೆ ದಾಧಿಕ ಘೃತವೆಂದು ಹೆಸರು ; ಇದರ ಸೇವನೆಯಿಂದ ಗುಲ್ಮ, ಪ್ಲೀಹವೃದ್ಧಿ ಶೂಲೆಗಳು ನಾಶವಾಗುತ್ತವೆ.

ರಸೋನಸ್ವರಸೇ ಸರ್ಪಿಃ ಪಞ್ಚಮೂಲರಸಾನ್ವಿತಮ್ ।
ಸುರಾರನಾಳದಧ್ಯಮ್ಲಮೂಲಕಸ್ವರಸೈಃ ಸಹ ॥೩೧॥
ವ್ಯೋಷದಾಡಿಮವೃಕ್ಷಾಮ್ಲಯವಾನೀ ಚವ್ಯಸೈನ್ಧವೈಃ ।
ಹಿಙ್ಗ್ವಮ್ಲವೇತಸಾಜಾಜೀದೀಪ್ಯಕೈಶ್ಚ ಸಮಾಂಶಕೈಃ ॥೩೨॥
ಸಿದ್ಧಂ ಗುಲ್ಮಗ್ರಹಣ್ಯರ್ಶಃ ಶ್ವಾಸೋನ್ಮಾದಕ್ಷಯಜ್ವರಾ ।
ಕಾಸಾಪಸ್ಮಾರಮನ್ದಾಗ್ನಿಪ್ಲೀಹಶೂಲಾನಿಲಾ ಜಯೇತ್ ॥೩೩॥

ಬೆಳ್ಳುಳ್ಳಿಸ್ವರಸ, ತುಪ್ಪ, ಬಿಲ್ವಾದಿಪಂಚಮೂಲಗಳ ಕಷಾಯ, ಮದ್ಯ, ಕಲಗಚ್ಚು, ಮೊಸರಿನ ಕಟ್ಟು, ಮೂಲಂಗಿಯಸ್ವರಸ ಇವೆಲ್ಲವನ್ನೂ ಸಮಭಾಗದಿಂದ ಸೇರಿಸಿ ತ್ರಿಕಟು, ದಾಳಿಂಬೆಸಿಪ್ಪೆ, ಮುರ್ಗಿನ ಹುಳಿ, ವಾದಕ್ಕಿ, ಚವ್ಯ, ಸೈಂಧವ, ಹಿಂಗು, ಓಟೆಹುಳಿ, ಜೀರಿಗೆ, ಓಮು ಇವೆಲ್ಲಾ ಸಮಭಾಗ ಸೇರಿ ತುಪ್ಪದ $\frac{1}{4}$ ಭಾಗದಷ್ಟು ಕಲ್ಕವನ್ನು ಸೇರಿಸಿ ತಯಾರಿಸಿದ ಘೃತವನ್ನು ಸೇವಿಸಿದರೆ ಗುಲ್ಮ, ಗ್ರಹಣಿ, ಅರ್ಶಸ್ಸು, ಶ್ವಾಸ, ಉನ್ಮಾದ, ರಾಜಯಕ್ಷ್ಮ, ಜ್ವರ, ಕಾಸ, ಅಪಸ್ಮಾರ, ಅಗ್ನಿಮಾಂದ್ಯ, ಪ್ಲೀಹವೃದ್ಧಿ, ಶೂಲೆ, ವಾತ ಪ್ರಕೋಪ ಇವುಗಳು ನಾಶಹೊಂದುತ್ತವೆ.

ದಧಿಸೌವೀರಕಂ ಸರ್ಪಿಃ ಕ್ವಾಥೌ ಮುದ್ಗಕುಳತ್ಥಜೌ ।
ಪಞ್ಚಾಢಕಾನಿ ವಿಪಚೇದಾವಾಪ್ಯ ದ್ವಿಪಲಾನ್ಯಥ ॥೩೪॥
ಸೌವರ್ಚಲಂ ಸ್ವರ್ಜಿಕಾಂ ಚ ದೇವದಾರ್ವಥ ಸೈನ್ಧವಮ್ ।
ವಾತಗುಲ್ಮಾಪಹಂ ಸರ್ಪಿರೇತದ್ದೀಪನಮೇವ ಚ ॥೩೫॥

ಮೊಸರು, ಕಲಗಚ್ಚು, ತುಪ್ಪ, ಹೆಸರುಕಟ್ಟು, ಹುರುಳಿಯಕಟ್ಟು, ಇವು ಪ್ರತಿ ಯೊಂದೂ ಒಂದೊಂದು ಆಢಕದಷ್ಟಕ್ಕೆ (ಅಳತೆಯ ೨ ಸೇರಿನಷ್ಟು) ಸೌವರ್ಚಲವಣ, ಸರ್ಜಕ್ಷಾರ, ದೇವದಾರು, ಸೈಂಧವ, ಇವು ಪ್ರತಿಯೊಂದನ್ನೂ ಎರಡೆರಡು ಪಲಗಳಂತೆ ಸೇರಿಸಿ ತಯಾರಿಸಿದ ಘೃತವು ವಾತಗುಲ್ಮಹರವು ಮುತ್ತು ಅಗ್ನಿದೀಪ್ತಿಕರವು.

ತೃಣಮೂಲಕಷಾಯೇ ತು ಜೀವನೀಯೈಃ ಪಚೇದ್ಘೃತಮ್ ।
ನ್ಯಗ್ರೋಧಾದಿಗಣೇ ವಾಪಿ ಗಣೇ ವಾಪ್ಯುತ್ಪಲಾದಿಕೇ ॥೩೬॥
ರಕ್ತಪಿತ್ತೋತ್ಥಿತಂ ಘ್ನನ್ತಿ ಘೃತಾನ್ಯೇತಾನ್ಯಸಂಶಯಮ್ ।

ತೃಣಪಂಚಮೂಲ, ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಅಥವಾ ಉತ್ಪಲಾದಿ ಗಣದ್ರವ್ಯಗಳ ಕಷಾಯದಲ್ಲಿ ಕಾಕೋಳ್ಯಾದಿ ಮಧುರೌಷಧ ಗಣದ್ರವ್ಯಗಳ ಕಲ್ಕವನ್ನೂ

ಅದರ ೪ ರಷ್ಟು ತುಪ್ಪವನ್ನೂ ಸೇರಿಸಿ ತಯಾರಿಸಿದ ಘೃತವನ್ನು ಸೇವಿಸಿದರೆ ರಕ್ತಪಿತ್ತೋತ್ಥ ಗುಲ್ಮಗಳು ಖಂಡಿತವಾಗಿಯೂ ನಿವಾರಣೆಯಾಗುತ್ತವೆ.

ಆರಗ್ವಧಾದೌ ವಿಪಚೇದ್ದೀಪನೀಯಯುತಂ ಘೃತಮ್ ||೩೭||
ಕ್ಷಾರವರ್ಗೇ ಪಚೇಚ್ಚಾನ್ಯತ್ ಪಚೇನ್ಮೂತ್ರಗಣೇಽಪರಮ್ ।
ಘ್ನನ್ತಿ ಗುಲ್ಮಂ ಕಫೋದ್ಭೂತಂ ಘೃತಾನ್ಯೇತಾನ್ಯಸಂಶಯಮ್ ||೩೮||

ಆರಗ್ವಧಾದಿ ಗಣದ್ರವ್ಯಗಳ ಕಷಾಯದಲ್ಲಾಗಲೀ, ಮುಳ್ಳು ಮುತ್ತುಗದಕ್ಷಾರ, ಹೀರೆಬಳ್ಳಿ ಮತ್ತು ಕಾಯಿಗಳ ಕ್ಷಾರ ಜಲದಲ್ಲಾಗಲೀ, ಹಸು, ಆಡು ಮೊದಲಾದ ೮ ಪ್ರಾಣಿಗಳ ಮೂತ್ರದಲ್ಲಾಗಲೀ ಅವುಗಳ $\frac{1}{4}$ ಭಾಗ ತುಪ್ಪವನ್ನೂ ತುಪ್ಪದ $\frac{1}{4}$ ಭಾಗ ಪಿಪ್ಪಲ್ಯಾದಿ ದೀಪನೀಯ ಗಣದ್ರವ್ಯಗಳ ಕಲ್ಕವನ್ನೂ ಸೇರಿಸಿ ತಯಾರಿಸಿದ ಘೃತಗಳು (೩ ವಿಧ) ಪ್ರತಿಯೊಂದೂ ಖಂಡಿತವಾಗಿಯೂ ಕಫಜನಿತಗುಲ್ಮವನ್ನು ನಿವಾರಣೆ ಮಾಡುತ್ತವೆ.

ಯಥಾ ದೋಷೋಚ್ಛ್ರಯಂ ಚಾಪಿ ಚಿಕಿತ್ಸೇತ್ಸಾನ್ನಿಪಾತಿಕಮ್ ।
ಚೂರ್ಣಂ ಹಿಙ್ಗ್ವಾದಿಕಂವಾಪಿ ಘೃತಂ ವಾ ಪ್ಲೀಹನಾಶನಮ್ ||೩೯||
ಪಿಬೇದ್ಗುಲ್ಮಾಪಹಂ ಕಾಲೇ ಸರ್ಪಿಸ್ತೈಲ್ವಕಮೇವ ವಾ ।

ಸನ್ನಿಪಾತಜಗುಲ್ಮದಲ್ಲಿ ದೋಷೋಲ್ಬಣಕ್ಕೆ ತಕ್ಕಂತೆ ಚಿಕಿತ್ಸೆಮಾಡಬೇಕು ; ಹಿಂಗ್ವಾದಿ ಚೂರ್ಣವನ್ನಾಗಲೀ ಪ್ಲೀಹಹರವಾದ ಷಟ್ಪಲಘೃತಪಾನವನ್ನಾಗಲೀ, ವಾತರೋಗದಲ್ಲಿ ಹೇಳಿದ ತಿಲ್ವಕ ಘೃತವನ್ನಾಗಲೀ ಗುಲ್ಮವು ಪ್ರಾರಂಭವಾದ ಕೂಡಲೇ ಪಾನಮಾಡಿಸಿದರೆ ಗುಲ್ಮರೋಗವು ನಿವಾರಣೆಯಾಗುತ್ತದೆ ; ಈ ಘೃತಗಳು ಕಫಗುಲ್ಮಕ್ಕೆ ಹೇಳಿದ್ದರೂ ಪ್ರಭಾವದಿಂದ ವಾತಗುಲ್ಮಹರಗಳು.

ತಿಲೇಕ್ಷುರಕಪಾಲಾಶಸಾರ್ಷಪಂ ಯಾವನಾಳಜಮ್ ||೪೦||
ಭಸ್ಮಮೂಲಕಜಂ ಚಾಪಿ ಗೋಜಾವಿಖರಹಸ್ತಿನಾಮ್ ।
ಮೂತ್ರೇಣ ಮಹಿಷೀಣಾಂ ಚ ಪಾಲಿಕೈಶ್ಚಾವಚೂರ್ಣಿತೈಃ ||೪೧||
ಕುಷ್ಠಸೈನ್ಧವಯಷ್ಟ್ಯಾಹ್ವನಾಗರಕ್ರಿಮಿಘಾತಿಭಿಃ ।
ಸಾಜಮೋದೈಶ್ಚದಶಭಿಃ ಸಾಮುದ್ರಾಖ್ಯಪಲೈರ್ಯುತಮ್ ||೪೨||
ಅಯಃ ಪಾತ್ರೇಽಗ್ನಿನಾಲ್ಪೇನ ಪಕ್ತ್ವಾ ಲೇಹ್ಯಮಥೋದ್ಧರೇತ್ ।
ತಸ್ಯ ಮಾತ್ರಾಂ ಪಿಬೇದ್ದಧ್ನಾ ಸುರಯಾ ಸರ್ಪಿಷಾಪಿ ವಾ ||೪೩||
ಧಾನ್ಯಾಮ್ಲೇನೋಷ್ಣತೋಯೇನ ಕೌಳತ್ಥೇನ ರಸೇನ ವಾ ।
ಗುಲ್ಮಾನ್ ವಾತವಿಕಾರಾಂಶ್ಚ ಕ್ಷಾರೋಽಯಂ ಹನ್ತ್ಯಸಂಶಯಮ್ ||೪೪||
ಸ್ವರ್ಜಿಕಾಕುಷ್ಠಸಹಿತಃ ಕ್ಷಾರಃ ಕೇತಕಿಜೋಽಪಿ ವಾ ।
ತೈಲೇನ ಶಮಯೇತ್ ಪೀತೋ ಗುಲ್ಮಂ ಪವನಸಂಭವಮ್ ||೪೫||
ಪೀತಂ ಸುಖಮ್ಬುನಾ ವಾಪಿ ಸ್ವರ್ಜಿಕಾಕುಷ್ಠಸೈನ್ಧವಮ್ ।

ಎಳ್ಳುಕಡ್ಡಿ, ಕೊಳವಳಿಕೆಕಡ್ಡಿ, ಮುತ್ತುಗದಕಡ್ಡಿ, ಸಾಸಿವೆಕಡ್ಡಿ, ಯವೆಯ ಕಡ್ಡಿ, ಒಣಗಿದ ಮೂಲಂಗಿ ಇವುಗಳನ್ನು ಸುಟ್ಟು ಭಸ್ಮವನ್ನು ತಯಾರಿಸಿ ಹಸು, ಆಡು, ಕುರಿ, ಕತ್ತೆ, ಆನೆ, ಎಮ್ಮೆ, ಇವುಗಳ ಮೂತ್ರಗಳನ್ನು ಸೇರಿಸಿ ಆ ಭಸ್ಮಗಳನ್ನು ಅವುಗಳಲ್ಲಿ ಕದರಿ ಕಬ್ಬಿಣದ ಪಾತ್ರೆಗೆ ತುಂಬಿ ಚಂಗಲ್‌ಕೋಷ್ಠ, ಸೈಂಧವ, ಅತಿ ಮಧುರ, ಶುಂಠಿ, ವಿಡಂಗ, ಅಜವೋದ (ವಾದಕ್ಕಿ) ಇವು ಪ್ರತಿಯೊಂದೂ ಒಂದೊಂದುಪಲ ಸಮುದ್ರಲವಣ ೧೦ ಪಲಗಳನ್ನು ಸೇರಿಸಿ ಮಂದಾಗ್ನಿಯಿಂದ ಪಾಕಮಾಡಿ ಲೇಹ್ಯದಂತೆ ಆದಮೇಲೆ ಬೆಂಕಿಯಿಂದ ಕೆಳಕ್ಕೆ ಇಳಿಸಿಕೊಳ್ಳಬೇಕು ; ಈ ಪಾನೀಯ ಕ್ಷಾರವನ್ನು ದೋಷ, ಕಾಲ, ಅಗ್ನಿ ಬಲಗಳಿಗೆ ತಕ್ಕಂತೆ ಮೊಸರು, ಮದ್ಯ, ತುಪ್ಪ, ಕಲಗಚ್ಚು, ಬಿಸಿನೀರು, ಹುರುಳಿಕಟ್ಟು ಇವುಗಳಲ್ಲೊಂದರಲ್ಲಿ ಕದರಿ ಕುಡಿಸಿದರೆ ಗುಲ್ಮಗಳೂ ವಾತರೋಗಗಳೂ ಖಂಡಿತವಾಗಿಯೂ ನಾಶವಾಗುತ್ತವೆ ; ಸರ್ಜಕ್ಷಾರ, ಚಂಗಲ್‌ಕೋಷ್ಠಗಳೊಡನೆ ತಾಳೆಗಿಡದ (ಕೇತಕೀ ಹೂವು) ಕ್ಷಾರವನ್ನು ತಿಲತೈಲದಲ್ಲಿ ಕದರಿ ಕುಡಿಸಿದರೆ ವಾತಗುಲ್ಮವು ಶಮನಗೊಳ್ಳುತ್ತದೆ ; ಅಥವಾ ಬಿಸಿ ನೀರಿನಲ್ಲಿ ಸರ್ಜಕ್ಷಾರ, ಚಂಗಲ್‌ಕೋಷ್ಠ, ಸೈಂಧವಗಳನ್ನು ಕದರಿ ಕುಡಿಸಿದರೂ ಗುಲ್ಮಹರವಾಗುತ್ತದೆ.

ವೃಶ್ಚೀವಮುರುಬೂಕಂ ಚ ವರ್ಷಾಭೂ ಬೃಹತೀದ್ವಯಮ್ ॥೪೬॥
ಚಿತ್ರಕಂ ಚ ಜಲದ್ರೋಣೇ ಪಕ್ತ್ವಾ ಪಾದಾವಶೇಷಿತಮ್ ।
ಮಾಗಧೀ ಚಿತ್ರಕಕ್ಷೌದ್ರಲಿಪ್ತೇ ಕುಮ್ಭೇ ನಿಧಾಪಯೇತ್ ॥೪೭॥
ಮಧುನಃ ಪ್ರಸ್ಥಮಾವಾಪ್ಯ ಪಥ್ಯಾಚೂರ್ಣಾರ್ಧಸಂಯುತಮ್ ।
ಬುಸೋಷಿತಂ ದಶಾಹಂ ತು ಜೀರ್ಣಭಕ್ತಃ ಪಿಬೇನ್ನರಃ ॥೪೮॥
ಅರಿಷ್ಟೋsಯಂ ಜಯೇದ್ಗುಲ್ಮಮವಿಪಾಕಮರೋಚಕಮ್ ।

ಬಿಳಿಕೊಮ್ಮೆ, ಬಿಳಿಹರಳು, ಕೆಂಪುಕೊಮ್ಮೆ, ಹೆಗ್ಗುಳ್ಳ, ನೆಲಗುಳ್ಳ, ಚಿತ್ರಮೂಲ, ಇವುಗಳ ಬೇರು ಒಟ್ಟು ೧ ಆಢಕದಷ್ಟನ್ನು (೧೦೦ ಪಲವೆಂದು ಕೆಲವರು) ೧ ದ್ರೋಣ ನೀರಿನಲ್ಲಿ ತುಂಬಿ ೧ ಆಢಕ ನಿಲ್ಲುವಂತೆ ಕಾಯಿಸಿ ಶೋಧಿಸಿದ ಕಷಾಯವನ್ನು ಹಿಪ್ಪಲಿ, ಚಿತ್ರಮೂಲಗಳ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ಬಳಿದಿರುವ ದೊಡ್ಡ ಗುಡಾಣಕ್ಕೆ ತುಂಬಿ ಅದಕ್ಕೆ ೧ ಪ್ರಸ್ಥ ಜೇನುತುಪ್ಪದಲ್ಲಿ ಅರ್ಧಪ್ರಸ್ಥ ಅಣಲೆಸಿಪ್ಪೆಯಪುಡಿಯನ್ನೂ ಮಿಶ್ರಮಾಡಿ ಚಿನರು ಮಾಡಿದ ಗುಡಾಣವನ್ನು ಹೊಟ್ಟಿನರಾಶಿಯಲ್ಲಿ ಹೂಳಿಟ್ಟು ೧೦ ದಿನಗಳಮೇಲೆ ಅನ್ನಜೀರ್ಣವಾದನಂತರ ಬೆಳಗಿನ ಹೊತ್ತು ಕುಡಿಯಬೇಕು ; ಈ ಪುನರ್ನವಾರಿಷ್ಟವನ್ನು ಕುಡಿದರೆ ಗುಲ್ಮ, ಅಜೀರ್ಣ, ಅರುಚಿಗಳು ನಿವಾರಣೆಯಾಗುತ್ತವೆ.

ಪಾಠಾನಿಕುಮ್ಭರಜನಿತ್ರಿಕಟುತ್ರಿಫಲಾಗ್ನಿಕಮ್ ॥೪೯॥
ಲವಣಂ ವೃಕ್ಷಬೀಜಂ ಚ ತುಲ್ಯಂ ಸ್ಯಾದನವಂ ಗುಡಮ್ ।
ಪಥ್ಯಾಭಿರ್ವಾ ಯುತಂ ಚೂರ್ಣಂ ಗವಾಂ ಮೂತ್ರಯುತಂ ಪಚೇತ್ ॥೫೦॥
ಗುಟಿಕಾಸ್ತದ್ಘನೀಭೂತಂ ಕೃತ್ವಾ ಖಾದೇದಭುಕ್ತವಾನ್ ।

ಗುಲ್ಮಪ್ಲೀಹಾಗ್ನಿಸಾದಾಂಸ್ತನ್ನಾಶಯೇಯುರಶೇಷತಃ ||೫೧||
ಹೃದ್ರೋಗಂ ಗ್ರಹಣೀದೋಷಂ ಪಾಣ್ಡುರೋಗಂ ಚ ದಾರುಣಮ್ |

ಅಗಳುಶುಂಠಿ, ಜಾಪಾಳದತೊಗಟೆ, ಅರಿಶಿನ, ತ್ರಿಕಟು, ತ್ರಿಫಲೆ, ಚಿತ್ರಮೂಲ ಸೈಂಧವ, ಕೊಡಶಿಗೆಬೀಜ, ಇವುಗಳೆಲ್ಲಕ್ಕೂ ಸಮಭಾಗ ಹಳೆಬೆಲ್ಲ ಇವನ್ನು ತಿನ್ನಬೇಕು ಅಥವಾ ಸಮಭಾಗ ಆಣೆಲೆಕಾಯಿ ಚೂರ್ಣದೊಡನೆ ಮಿಶ್ರಮಾಡಿ ಗೋಮೂತ್ರದಲ್ಲಿ ಕುದಿಸಿ ಗಟ್ಟಿಯಾದಮೇಲೆ ಗುಳಿಗೆಗಳನ್ನಾಗಿ ಮಾಡಿಟ್ಟುಕೊಂಡು ಭೋಜನಕ್ಕೆ ಮೊದಲು ತಿನ್ನಬೇಕು ; ಇವುಗಳ ಉಪಯೋಗದಿಂದ ಗುಲ್ಮ, ಪ್ಲೀಹ, ಅಗ್ನಿಮಾಂದ್ಯ, ಹೃದ್ರೋಗ, ಗ್ರಹಣಿದೋಷ, ಭಯಂಕರವಾದ ಪಾಣ್ಡುರೋಗ ಇವುಗಳ ನಿವಾರಣೆಯಾಗುತ್ತವೆ.

ಸಶೂಲೇ ಸೋನ್ನತೇಽಸ್ಪನ್ದೇ ದಾಹಪಾಕರುಗನ್ವಿತೇ ||೫೨||
ಗುಲ್ಮೇ ರಕ್ತಂ ಜಲೌಕೋಭಿಃ ಸಿರಾಮೋಕ್ಷೇಣ ವಾ ಹರೇತ್ |
ಸುಖೋಷ್ಣಾ ಜಾಙ್ಗಲರಸಾಃ ಸುಸ್ನಿಗ್ಧಾ ವ್ಯಕ್ತಸೈನ್ಧವಾಃ ||೫೩||
ಕಟುತ್ರಿಕಸಮಾಯುಕ್ತಾ ಹಿತಾಃ ಪಾನೇಷು ಗುಲ್ಮಿನಾಮ್ |
ಪೇಯಾ ವಾತಹರೈಃ ಸಿದ್ಧಾಃ ಕೌಳತ್ಥಾಃ ಸಂಸ್ಕೃತಾರಸಾಃ ||೫೪||
ಖಲಾಃ ಸಪಞ್ಚಮೂಲಾಶ್ಚ ಗುಲ್ಮಿನಾಂ ಭೋಜನೇ ಹಿತಾಃ |
ಬದ್ಧವರ್ಚೋಽನಿಲಾನಾಂ ತು ಸಾರ್ದ್ರಕಂ ಕ್ಷೀರಮಿಷ್ಯತೇ ||೫೫||
ಕುಮ್ಭಪಿಣ್ಡೇಷ್ಟಿಕಾಸ್ವೇದಾನ್ ಕಾರಯೇತ್ಕುಶಲೋ ಭಿಷಕ್ |
ಗುಲ್ಮಿನಃ ಸರ್ವಏವೋಕ್ತಾ ದುರ್ವಿರೇಚ್ಯತಮಾ ಭೃಶಮ್ ||೫೬||
ಅತಶ್ಚೈತಾಂಸ್ತು ಸುಸ್ವಿನ್ನಾನ್ ಸ್ರಂಸನೇನೋಪಪಾದಯೇತ್ |

ಶೂಲೆಯಿಂದ ಕೂಡಿ ಚಲನೆಯಾಗದೆ ಮೇಲಕ್ಕೆ ಉಬ್ಬಿ ಉರಿತ, ಪಾಕ ನೋವುಗಳಿಂದ ಕೂಡಿದ ಗುಲ್ಮರೋಗದಲ್ಲಿ ಜಿಗುಳೆಯನ್ನು ಕಚ್ಚಿಸಿಯಾಗಲೀ ಸಿರಾಮೋಕ್ಷಣದಿಂದಾಗಲೀ ರಕ್ತಸ್ರಾವವನ್ನು ಮಾಡಿಸಬೇಕು ; ಗುಲ್ಮರೋಗಿಗಳಿಗೆ ಸುಖೋಷ್ಣವಾದ ಜಾಂಗಲಪ್ರಾಣಿಗಳ ಮಾಂಸರಸವನ್ನು ಸ್ನೇಹ, ಸೈಂಧವ, ತ್ರಿಕಟುಗಳನ್ನೂ ಮಿಶ್ರಮಾಡಿ ಕುಡಿಸಿದರೆ ಹಿತವಾಗುತ್ತದೆ. ಭದ್ರದಾರ್ವಾದಿಗಣದ್ರವ್ಯಗಳೊಡನೆ ತಯಾರಿಸಿದ ಹುರುಳಿ ಕಟ್ಟನ್ನು ಸ್ನೇಹಮಿಶ್ರಮಾಡಿ ಕುಡಿಸಬೇಕು ; ಬೇಲದಹಣ್ಣು, ದಾಳಿಂಬೇಹಣ್ಣು, ಮಜ್ಜಿಗೆ ಶಾಖಗಳಿಂದ ಸಂಸ್ಕರಿಸಲ್ಪಟ್ಟ ಖಡ (ಬಜ್ಜಿ, ಗೊಜ್ಜು ಮೊದಲಾದ ವ್ಯಂಜನಗಳು) ವನ್ನೂ ದಶಮೂಲಕಷಾಯದೊಡನೆ ಅನ್ನವನ್ನು ಭೋಜನ ಮಾಡಿಸಲು ಹಿತಕರವು ; ಮಲವೂ ಅಪಾನವಾತವೂ ತಡೆಯಲ್ಪಟ್ಟರೆ ಹಸೀಶುಂಠಿ ರಸವನ್ನು ಮಿಶ್ರಮಾಡಿದ ಹಾಲನ್ನು ಕುಡಿಸಬೇಕು ; ಮತ್ತು ಜಾಣನಾದ ವೈದ್ಯನು ಕುಂಭೀಸ್ವೇದವನ್ನು ಪಿಂಡ ಸ್ವೇದ, ಇಷ್ಟಿಕಾಸ್ವೇದವನ್ನು ಮಾಡಿಸಬೇಕು ; ಎಲ್ಲಾ ವಿಧದ ಗುಲ್ಮರೋಗಿಗಳಿಗೂ ವಿರೇಚನೌಷಧಪ್ರಯೋಗದಿಂದಲೂ ಸರಿಯಾಗಿ ಮಲ ಪ್ರವೃತ್ತಿಯಾಗುವುದಿಲ್ಲವಾಗಿ ಅವರಿಗೆ ಚೆನ್ನಾಗಿ ಸ್ವೇದಕರ್ಮವನ್ನು ಮಾಡಿಸಿ ವಿರೇಚನೌಷಧ ಪ್ರಯೋಗ ಮಾಡಬೇಕು.

ವಿಮ್ಲಾಪನಾಭ್ಯಞ್ಜನಾನಿ ತಥಾ ಸಂತರ್ಪ್ಯೈವ ದಹನಾನಿ ಚ ||೫೭||
ಉಪನಾಹಾಶ್ಚ ಕರ್ತವ್ಯಾಃ ಸುಖೋಷ್ಣಾಃ ಶಾಲ್ವಣಾದಯಃ |
ಉದರೋಕ್ತಾನಿ ಸರ್ಪಿಂಷಿ ಚೂರ್ಣವರ್ತಿಕ್ರಿಯಾಸ್ತಥಾ ||೫೮||
ಲವಣಾನಿ ಚ ಯೋಜ್ಯಾನಿ ಯಾನ್ಯುಕ್ತಾನ್ಯುದರಾಮಯೇ |
ವಾತವರ್ಚೋನಿರೋಧೇ ತು ಸಾಮುದ್ರಾರ್ದ್ರಕಸರ್ಷಪೈಃ ||೫೯||
ಕೃತ್ವಾ ಪಾಯೌ ವಿಧಾತವ್ಯಾ ವರ್ತಯೋ ಮರಿಚೋತ್ತರಾಃ |
ದನ್ತೀಚಿತ್ರಕಮೂಲೇಷು ತಥಾ ವಾತಹರೇಷು ಚ ||೬೦||
ಕುರ್ಯಾದರಿಷ್ಟಾನ್ ಸರ್ವಾಂಶ್ಚ ಶ್ಲೋಕಸ್ಥಾನೇ ಯಥೇರಿತಾನ್ |

ಕೈ ಬೆರಳಿನಿಂದ ಗುಲ್ಮವನ್ನು ಮರ್ದನೆ ಮಾಡುವುದು, ತೈಲವನ್ನು ಉಜ್ಜುವುದು ಕಾಲಿನಿಂದ ಹಿತವಾಗಿ ಅಮುಕುವುದು ಸುಖೋಷ್ಣಗಳಾದ ಶಾಲ್ವನಾದಿ ಉಪನಾಹ ಸ್ವೇದಗಳನ್ನು ಮಾಡಿಸುವುದು, ಉದರರೋಗದಲ್ಲಿ ಹೇಳಿರುವ ಘೃತಪಾನ ಮೂತ್ರವರ್ತಿಗಳನ್ನು ತಯಾರಿಸಿ ಗುದದ್ವಾರದಲ್ಲಿಡುವುದು ಲವಣಪ್ರಯೋಗವನ್ನು ಮಾಡುವುದು (ಪತ್ರಲವಣ, ಸ್ನೇಹಲವಣ, ಕಲ್ಯಾಣಲವಣಗಳನ್ನು ಪ್ರಯೋಗಿಸುವುದು ; ಮಲವೂ ಅಪಾನವಾತವೂ ತಡೆಯಲ್ಪಟ್ಟರೆ ಸಮುದ್ರಲವಣ ಹಶಿಶುಂಠಿಯರಸ, ಸಾಸಿವೆ ಚೂರ್ಣಗಳಿಗೆ ಹೆಚ್ಚಾಗಿ ಮೆಣಸನ್ನು ಸೇರಿಸಿ ತಯಾರಿಸಿದ ಬತ್ತಿಯನ್ನು ಗುದದಲ್ಲಿಡುವುದು ; ಜಾಪಾಳದತೊಗಟೆ, ಚಿತ್ರಮೂಲ, ಮತ್ತು ವಾತಹರದ್ರವ್ಯಗಳಿಂದ ಸೂತ್ರಸ್ಥಾನದಲ್ಲಿ ಹೇಳಿರುವಂತೆ ಆಸವಾರಿಷ್ಟಗಳನ್ನು ತಯಾರಿಸಿ ಪ್ರಯೋಗಿಸುವುದು ಇವು ಹಿತಕರಗಳು. ಬಿಳಿಕೊಮ್ಮೆಯಬೇರು ಮೊದಲಾದುವುಗಳಿಂದ ಅರಿಷ್ಟವನ್ನು ತಯಾರಿಸುವಂತೆಯೇ ಧಾನ್ಯಾದಿಕಷಾಯದಲ್ಲಿ ಜೇನುತುಪ್ಪ ಅಣಿಲೆ ಪುಡಿಯನ್ನು ಸೇರಿಸಿ ಅರಿಷ್ಟವನ್ನು ತಯಾರಿಸಬೇಕು ; ಅಥವಾ ಸೂತ್ರಸ್ಥಾನದಲ್ಲಿ ಹೇಳಿರುವ ಕ್ರಮದಂತೆಯೇ ಆಸವವನ್ನೂ ತಯಾರಿಸಬೇಕು.

ಖಾದೇದ್ವಾಪ್ಯಙ್ಕುರಾನ್ ಭೃಷ್ಟಾನ್ ಪೂತೀಕನೃಪವೃಕ್ಷಯೋಃ ||೬೧||
ಊರ್ಧ್ವವಾತಂ ಮನುಷ್ಯಂ ಚ ಗುಲ್ಮಿನಂ ನ ನಿರೂಹಯೇತ್ |

ತವಸದಚಿಗುರುಗಳನ್ನೂ ತಿನ್ನಬೇಕು ; ಊರ್ಧ್ವವಾತವಿರುವ (ಬರತೇಗಿರುವ) ಗುಲ್ಮರೋಗಿಗೆ ನಿರೂಹಬಸ್ತಿಯನ್ನು ಪ್ರಯೋಗಿಸಕೂಡದು.

ಪಿಬೇತ್ ತ್ರಿವೃನ್ನಾಗರಂ ವಾ ಸಗುಡಾಂ ವಾ ಹರೀತಕೀಮ್ ||೬೨||
ಗುಗ್ಗುಳುಂ ತ್ರಿವೃತಾಂ ದನ್ತೀಂ ದ್ರವನ್ತೀಂ ಸೈನ್ಧವಂ ವಚಾಮ್ |
ಮೂತ್ರಮದ್ಯಪಯೋದ್ರಾಕ್ಷಾರಸೈರ್ವೀಕ್ಷ್ಯ ಬಲಾಬಲಮ್ ||೬೩||
ಏವಂ ಪೀಲೂನಿ ಪಿಷ್ಟಾನಿ ಪಿಬೇತ್ ಸಲವಣಾನಿ ತು |
ಪಿಪ್ಪಲೀ ಪಿಪ್ಪಲೀ ಮೂಲ ಚವ್ಯ ಚಿತ್ರಕಸೈನ್ಧವೈಃ ||೬೪||
ಯುಕ್ತಾ ಹನ್ತಿ ಸುರಾ ಗುಲ್ಮಂ ಶೀಘ್ರಂ ಕಾಲೇ ಪ್ರಯೋಜಿತಾ |

ತಿಗಡೆ ಮತ್ತು ಶುಂಠಿಗಳಪುಡಿ, ಬೆಲ್ಲ ಮತ್ತು ಅಣಿಲೆಕಾಯಿಚೂರ್ಣ, ಗುಗ್ಗುಳು, ತಿಗಡೆ, ಜಾಪಾಳದತೊಗಟೆ, ಇಲಿಕಿವಿಸೊಪ್ಪು, ಸೈಂಧವ, ಬಜೆ, ಇವುಗಳಲ್ಲೊಂದನ್ನು ರೋಗಿಯ ಮತ್ತು ವ್ಯಾಧಿಯ ಬಲಾ ಬಲಗಳನ್ನು ನಿರ್ಧರಿಸಿ ಗೋಮೂತ್ರ ಮದ್ಯ, ಹಾಲು, ದ್ರಾಕ್ಷಿಕಷಾಯ ಇವುಗಳೊಂದರಲ್ಲಿ ಸೇರಿಸಿ ಕುಡಿಸಬೇಕು ; ಹೀಗೆಯೇ ಬಗಿನಿಯ ಮೂಲವನ್ನು ಜಜ್ಜಿ ಗೋಮೂತ್ರಾದಿಗಳೊಂದರಿಂದ ಸೈಂಧವ ಮಿಶ್ರಮಾಡಿ ಕುಡಿಸಬೇಕು; ಹಿಪ್ಪಲಿ, ಮೋಡಿ, ಚವ್ಯ ಚಿತ್ರಮೂಲ, ಸೈಂಧವಲವಣ ಇವುಗಳ ಚೂರ್ಣವನ್ನು ಮಿಶ್ರ ಮಾಡಿದ ಸುರಾ ಎಂಬ ಮಧ್ಯವನ್ನು ಹೊಟ್ಟೆಯುಬ್ಬರ ಮೊದಲಾದ ಉಪದ್ರವಗಳಿರುವಾಗ ಕುಡಿಸಬೇಕು.

ಬದ್ಧವಿಣ್ಮಾರುತೋ ಗುಲ್ಮೀ ಭುಞ್ಜೀತ ಪಯಸಾ ಯವಾನ್ ||೬೫||
ಕುಲ್ಮಾಷಾನ್ ವಾ ಬಹುಸ್ನೇಹಾನ್ ಭಕ್ಷಯೇಲ್ಲವಣೋತ್ತರಾನ್ ।
ಅಥಾ ಸ್ಯೋಪದ್ರವಃ ಶೂಲಃ ಕಥಂಚಿದುಪಜಾಯತೇ ||೬೬||
ಶೂಲಂ ನಿಖಾನಿತಮಿವಾಸುಖಂ ಯೇ ನ ತುವೇತ್ತ್ಯಸೌ ।
ತತ್ರ ವಿಣ್ಮೂತ್ರ ಸಂರೋಧಃ ಕೃಚ್ಛ್ರೋಚ್ಛ್ವಾಸಃ ಸ್ಥಿರಾಙ್ಗತಾ ||೬೭||
ತೃಷ್ಣಾದಾಹೋ ಭ್ರಮೋಽನ್ನಸ್ಯ ವಿದಗ್ಧಪರಿವೃದ್ಧಿತಾ ।
ರೋಮಹರ್ಷೋಽರುಚಿಶ್ಛರ್ದಿರ್ಭುಕ್ತೇವೃದ್ಧಿಜಡಾಙ್ಗತಾ ||೬೮||
ವಾಯ್ವಾದಿಭಿರ್ಯಥಾ ಸಂಖ್ಯಂ ಮಿಶ್ರೈರ್ವಾ ವೀಕ್ಷ್ಯಯೋಜಯೇತ್ ।

ಮಲವು ಅಪಾನವಾತವು ತಡೆಯಲ್ಪಟ್ಟಿರುವ ಗುಲ್ಮರೋಗಿಯು ಹಾಲಿನೊಡನೆ ಯವೆಯ ಅನ್ನವನ್ನು ಭೋಜನ ಮಾಡಬೇಕು ; ಅಥವಾ ಹೆಚ್ಚು ಸ್ನೇಹಮಿಶ್ರಮಾಡಿದ ಕುಲ್ಮಾಷ (ಯವೆಯ ಹಿಟ್ಟಿನಿಂದ ಮಾಡಿದ ಭಕ್ಷಗಳು)ಕ್ಕೆ ಸ್ವಲ್ಪ ಹೆಚ್ಚಾಗಿ ಸೈಂಧವ ಮಿಶ್ರಮಾಡಿ ತಿನ್ನಬೇಕು ; ಗುಲ್ಮಕ್ಕೆ ಶೂಲೆಯು ಉಪದ್ರವ ; ಶೂಲಾಯುಧದಿಂದ ಚುಚ್ಚಲ್ಪಟ್ಟಂತೆ ವ್ಯಥೆಯುಂಟಾಗಿ ಮಲಮೂತ್ರಗಳ ತಡೆಯೂ ಕಷ್ಟದಿಂದ ಶ್ವಾಸೋಚ್ಛ್ವಾಸಗಳುಂಟಾಗುವುದು. ಮೈಬಿಗಿತ, ಬಾಯಾರಿಕೆ, ಮೈ ಉರಿತ, ತಲೆತಿರುಗುವಿಕೆ, ಅನ್ನವು ವಿದಗ್ಧಪಾಕವಾಗುವುದು ರೋಮಾಂಚವಾಗುವುದು ಅರೋಚಕತೆ ವಮನ, ಊಟ ಮಾಡಿದ ಕೂಡಲೇ ಶೂಲೆಯು ಹೆಚ್ಚಾಗುವುದು ಅಂಗಗಳೆಲ್ಲಾ ಜಡವಾಗುವುದು ಈ ಲಕ್ಷಣಗಳಿರುತ್ತವೆ ; ಇವುಗಳಲ್ಲಿ ಮಲಮೂತ್ರರೋಗ ಮೊದಲಾದುವು ವಾತಶೂಲೆಯ ಲಕ್ಷಣಗಳು ; ತೃಷ್ಣಾದಾಹ ಮೊದಲಾದುವು ಪಿತ್ತಶೂಲದ ಲಕ್ಷಣಗಳು ; ರೋಮಾಂಚವಾಗುವುದು ; ಅರುಚಿ ಮೊದಲಾದುವು ಕಫಶೂಲೆಯ ಲಕ್ಷಣಗಳು ; ದ್ವಿದೋಷಲಕ್ಷಣಗಳಿದ್ದರೆ ದ್ವನ್ದ್ವದೋಷಜಗುಲ್ಮ ; ಮೂರು ದೋಷಗಳ ಲಕ್ಷಣಗಳೂ ಇದ್ದರೆ ಸನ್ನಿಪಾತಜ ಗುಲ್ಮವೆಂದು ನಿರ್ಧರಿಸಬೇಕು.

ಪಥ್ಯಾ ತ್ರಿಲವಣಂ ಕ್ಷಾರಂ ಹಿಙ್ಗು ತುಮ್ಬುರುಪೌಷ್ಕರಮ್ ||೬೯||
ಯವಾನ್ಯಥ ಹರಿದ್ರಾ ಚ ವಿಡಙ್ಗಾನ್ಯಮ್ಲವೇತಸಮ್ ।
ವಿದಾರೀ ತ್ರಿಫಲಾ ಭೀರು ಶೃಙ್ಗಾಟೀ ಗುಡಶರ್ಕರಾ ||೭೦||

ಕಾಶ್ಮರೀಫಲಯಷ್ಟ್ಯಾಹ್ವ ಪರೂಷಕಹಿಮಾನಿಚ ।
ಷಡ್ಗ್ರನ್ಥಾತಿವಿಷಾದಾರುಪಥ್ಯಾಪರಿಚವೃಕ್ಷಕರ್ಾ ॥೭೧॥
ಕೃಷ್ಣಾಮೂಲಕಚವ್ಯಂ ಚ ಸಾಗರಕ್ಷಾರಚಿತ್ರಕರ್ಾ ।
ಉಷ್ಣಾಮ್ಲಕಾಞ್ಜಿಕಕ್ಷೀರತೋಯೈಃ ಶ್ಲೋಕಸಮಾಪನರ್ಾ ॥೭೨॥
ಯಥಾಕ್ರಮಂ ವಿಮಿಶ್ರಾಂಶ್ಚ ದ್ವನ್ದ್ವೇ ಸರ್ವಾಂಶ್ಚ ಸರ್ವಜೇ ।

ವಾತಾದಿಶೂಲೆಯ ಭೇದಗಳನ್ನು ನಿರ್ಧರಿಸಿ ಅಣಿಲೆಕಾಯಿ, ಸೈಂಧವ, ಸೌವರ್ಚಲ ಮತ್ತು ಬಿಡಲವಣಗಳು, ಯವಕ್ಷಾರ, ಹಿಂಗು, ಗೌಳದಬೀಜ, ಪುಷ್ಕರಮೂಲ, ವಾದಕ್ಕಿ, ಅರಿಶಿನ, ವಿಡಂಗ, ಓಟೆಹುಳಿ ಇವುಗಳ ಚೂರ್ಣವನ್ನು ವಾತಿಕ ಗುಲ್ಮಶೂಲೆಯಲ್ಲಿ ಬಿಸಿಯಾದ ಹುಳಿ ಕಲಗಚ್ಚಿನಲ್ಲೂ ; ನೆಲಗುಂಬಳದಗೆಡ್ಡೆ ತ್ರಿಫಲೆ, ಆಷಾಡಿಬೇರು, ಶಿಂಗಾಡೆಯೆಂಬ ಮೂರುಮೂಲೆಕಾಯಿಗೆಡ್ಡೆ, ಗುಡಶರ್ಕರೆಯೆಂದರೆ, ಕಳ್ಳಂಗಡಲೆ (ಗುಂಗೇಫಲವೆಂದೂ ಹೇಳುತ್ತಾರೆ) ಶಿವನಿಹಣ್ಣು, ಅತಿಮಧುರ, ಬೆಟ್ಟದ ಈಚಲು, ಶ್ರೀಗಂಧ ಇವುಗಳ ಕಲ್ಕವನ್ನು ಹಾಲಿನಲ್ಲಿ ಕದರಿ ಕುಡಿಸಿದರೆ ಪಿತ್ತಗುಲ್ಮಶೂಲೆಯೂ, ಬಜೆ, ಅತಿಬಜೆ, ದೇವದಾರು, ಅಣಿಲೆಕಾಯಿಸಿಪ್ಪೆ, ಮೆಣಸು, ಕೊಡಶಿಗೆಬೀಜ, ನೋಡಿ, ಚವ್ಯ, ಶುಂಠಿ, ಯವಕ್ಷಾರ, ಚಿತ್ರಮೂಲ ಇವುಗಳ ಚೂರ್ಣವನ್ನು ನೀರಿನಲ್ಲಿ ಕದರಿ ಕುಡಿಸಿದರೆ ಕಫಗುಲ್ಮಶೂಲೆಯೂ ಈ ರೀತಿ ಮೂರು ಪದ್ಯಗಳಲ್ಲಿ ಹೇಳಿರುವ ದ್ರವ್ಯಗಳು ಕ್ರಮವಾಗಿ ಮೂರು ದೋಷಗಳಿಂದುಂಟಾದ ಗುಲ್ಮಶೂಲೆಯನ್ನೂ ನಿವಾರಣೆ ಮಾಡುತ್ತವೆ ; ಹೀಗೆಯೇ ಪಥ್ಯಾದಿ ಮತ್ತು ವಿದಾರ್ಯಾದಿಗಣದ್ರವ್ಯಗಳು ವಾತಪಿತ್ತಜಗುಲ್ಮಶೂಲೆಯನ್ನೂ ಪಥ್ಯಾದಿ ಮತ್ತು ಷಡ್ಗ್ರಂಥಾದಿಗಳು ವಾತಕಫಜಗುಲ್ಮಶೂಲೆಯನ್ನೂ ಮತ್ತು ಇವು ಮೂರೂ ತ್ರಿದೋಷಜಗುಲ್ಮಶೂಲೆಯನ್ನೂ ನಿವಾರಿಸುತ್ತವೆ.

ತಥೈವ ಸೇಕಾವಗಾಹಪ್ರದೇಹಾಭ್ಯಙ್ಗ ಭೋಜನಮ್ ॥೭೩॥
ಶಿಶಿರೋದಕಪೂರ್ಣಾನಾಂ ಭಾಜನಾನಾಂ ಚ ಧಾರಣಮ್ ।
ವಮನೋನ್ಮರ್ದನಸ್ವೇದಲಙ್ಘನಕ್ಷಪಣ ಕ್ರಿಯಾಃ ॥೭೪॥
ಸ್ನೇಹಾದಿಶ್ಚ ಕ್ರಮಃ ಸರ್ವೋ ವಿಶೇಷೇಣೋಪದಿಶ್ಯತೇ ।

ಇದೇ ರೀತಿಯಾಗಿ ಸೇಕ, ಅವಗಾಹಸ್ನಾನ, ಮೈಗೆ ಲೇಪ, ತೈಲಾಭ್ಯಂಗ, ಭೋಜನಗಳನ್ನು ವಾತಿಕಗುಲ್ಮಶೂಲೆಯಲ್ಲೂ, ತಣ್ಣೀರು ತುಂಬಿದತಾಮ್ರ, ಹಿತ್ತಾಳೆ, ಕಂಚು ಮೊದಲಾದ ಲೋಹಪಾತ್ರೆಗಳನ್ನು ದೇಹದಮೇಲೆ ತಗಲಿಸುವುದು ಪೈತ್ತಿಕಗುಲ್ಮಶೂಲೆಯಲ್ಲೂ, ವಮನ, ಮೈಹಿಸುಕುವುದು, ಸ್ವೇದಮಾಡಿಸುವುದು, ಉಪವಾಸ, ದೇಹಕರ್ಶನ ಮಾಡುವ ಆಹಾರವಿಹಾರಸೇವನೆಗಳನ್ನು ಕಫಜಗುಲ್ಮಶೂಲೆಯಲ್ಲೂ, ದ್ವಂದ್ವ ಚಿಕಿತ್ಸೆಯನ್ನು ದ್ವಂದ್ವದೋಷಜನಿತಗುಲ್ಮಶೂಲೆಯಲ್ಲೂ ಮೂರು ವಿಧ ಚಿಕಿತ್ಸೆಯನ್ನೂ ಮಿಶ್ರಮಾಡಿ ತ್ರಿದೋಷಜಗುಲ್ಮಶೂಲೆಯಲ್ಲೂ ಪ್ರಯೋಗಿಸಬೇಕು ; ಎಲ್ಲಾ ವಿಧಗುಲ್ಮಗಳಲ್ಲೂ ಸ್ನೇಹಸ್ವೇದಾದಿಕ್ರಿಯೆಗಳನ್ನು ವಿಶೇಷವಾಗಿ ಅನುಸರಿಸಬೇಕು.

ವಲ್ಲೂರಂ ಮೂಲಕಂ ಮತ್ಸ್ಯಾನ್ ಶುಷ್ಕಶಾಕಾನಿ ವೈದಲಮ್ ॥೭೫॥
ನ ಖಾದೇದಾಲುಕಂ ಗುಲ್ಮೀ ಮಧುರಾಣಿ ಫಲಾನಿ ಚ ।

ಒಣಗಿದಮಾಂಸ, ಮೂಲಂಗಿ, ಮೀನುಗಳು, ಒಣಗಿದ ಕಾಯಿಪಲ್ಯಗಳು, ಹೆಸರು, ಕಾಡುಹೆಸರು ಮೊದಲಾದ ಬೇಳೆಗಳು, ಗೆಣಸು ಮೊದಲಾದ ವಿವಿಧ ಗೆಡ್ಡೆಗಳು, ಮಧುರಗಳಾದ ಕ್ಷೀರವೃಕ್ಷಗಳ ಹಣ್ಣುಗಳು, ಬಾಳೆಹಣ್ಣು ಇವು ಗುಲ್ಮಕ್ಕೆ ಅಹಿತಗಳು.

ಟಿಪ್ಪಣಿ : ಲಘುಸ್ನಿಗ್ಧ, ದೀಪನಕರ ಉಷ್ಣವೀರ್ಯ ವಾತಾನುಲೋಮನ ಬೃಂಹಣವಾದ ಅನ್ನಪಾನಗಳೆಲ್ಲಾ ಗುಲ್ಮರೋಗಿಗೆ ಹಿತಕರಗಳು ; ರಕ್ತಸ್ರಾವ, ತೋಳಿನ ಮಧ್ಯದ ಸಿರಾವ್ಯಧೆ, ಸ್ವೇದಕರ್ಮ, ಅನುಲೋಮನ ಕ್ರಿಯೆ ಇವುಗಳು ಎಲ್ಲಾ ವಿಧಗಳಾದ ಗುಲ್ಮಶೂಲೆಗಳಲ್ಲೂ ಹಿತಕರವೆಂದು ತಿಳಿಯಬೇಕು.

ವಿನಾ ಗುಲ್ಮೇನ ಯಚ್ಛೂಲಂ ಗುಲ್ಮಸ್ಥಾನೇಷು ಜಾಯತೇ ॥೭೬॥
ನಿದಾನಂ ತಸ್ಯ ವಕ್ಷ್ಯಾಮಿ ರೂಪಂ ಚ ಸ ಚಿಕಿತ್ಸಿತಮ್ ।

ಗುಲ್ಮವಿಲ್ಲದೆಯೇ ಗುಲ್ಮಸ್ಥಾನಗಳಲ್ಲುಂಟಾಗುವ ಶೂಲೆಯನಿದಾನ, ರೂಪ, ಚಿಕಿತ್ಸೆಗಳನ್ನು ಹೇಳುತ್ತೇವೆ.

ವಾತಮೂತ್ರಪುರೀಷಾಣಾಂ ನಿಗ್ರಹಾದತಿಭೋಜನಾತ್ ॥೭೭॥
ಅಜೀರ್ಣಾಧ್ಯಶನಾಯಾಸವಿರುದ್ಧಾನ್ನೋಪಸೇವನಾತ್ ।
ಪಾನೀಯಪಾನಾತ್ ಕ್ಷುತ್ಕಾಲೇ ವಿರೂಢಾನಾಂ ಚ ಸೇವನಾತ್ ॥೭೮॥
ಪಿಷ್ಟಾನ್ನಶುಷ್ಕಮಾಂಸಾನಾಮುಪಯೋಗಾತ್ತಥೈವ ಚ ।
ಏವಂ ವಿಧಾನಾಂ ದ್ರವ್ಯಾಣಾಮನ್ಯೇಷಾಂ ಚೋಪಸೇವನಾತ್ ॥೭೯॥
ವಾಯುಃ ಪ್ರಕುಪಿತಃ ಕೋಷ್ಠೇ ಶೂಲಂ ಸಂಜನಯೇದ್ಭೃಶಮ್ ।
ನಿರುಚ್ಛ್ವಾಸೋ ಭವೇತ್ತೇನ ವೇದನಾಪೀಡಿತೋ ನರಃ ॥೮೦॥
ಶಙ್ಕುಸ್ಫೋಟನವತ್ತಸ್ಯ ಯಸ್ಮಾತ್ ತೀವ್ರಾಶ್ಚ ವೇದನಾಃ ।
ಶೂಲಾಸಕ್ತಸ್ಯ ಲಕ್ಷ್ಯನ್ತೇ ತಸ್ಮಾಚ್ಛೂಲಮಿಹೋಚ್ಯತೇ ॥೮೧॥

ಅಪಾನವಾತ, ಮೂತ್ರ, ಪುರೀಷವೇಗಗಳನ್ನು ತಡೆಯುವುದು, ಅತಿಭೋಜನ ; ಅಜೀರ್ಣಭೋಜನ, ಅಧ್ಯಶನ (ಊಟವಾದಮೇಲೆ ಪುನಃ ಊಟ), ಆಯಾಸ, ವಿರುದ್ಧಾಹಾರಗಳನ್ನು ಸೇವಿಸುವುದು, ಹಸಿದಿರುವಾಗ ನೀರನ್ನು ಕುಡಿಯುವುದು, ಮೊಳಕೆಬಂದ ಧಾನ್ಯಗಳನ್ನು ಸೇವಿಸುವುದು ; ಹಿಟ್ಟಿನ ಪದಾರ್ಥಗಳನ್ನೂ ಒಣಗಿದ ಮಾಂಸಗಳನ್ನೂ ತಿನ್ನುವುದು ಇವುಗಳಿಂದ ವಾಯುವು ಪ್ರಕೋಪಹೊಂದಿ ಕೋಷ್ಠದಲ್ಲಿ ಅಧಿಕವಾದ ಶೂಲೆಯನ್ನುಂಟುಮಾಡುತ್ತದೆ ; ಈ ಶೂಲದಬಾಧೆಯಿಂದ ಪೀಡಿತನಾದ ರೋಗಿಯು ಉಚ್ಛ್ವಾಸವು ತಡೆಯಲ್ಪಡುವುದರಿಂದ ವ್ಯಥೆಪಡುತ್ತಾನೆ. ಇಲ್ಲಿ ವೇಗನಿಗ್ರಹಾದಿಗಳು ಹೇತುವು, ವಾಯು ಪ್ರಕೋಪದಿಂದ ಶೂಲೆಯಾಗುವುದು ಸಂಪ್ರಾಪ್ತಿ. ಶಂಕುವನ್ನು (ಗೂಟವನ್ನು) ಕೊಡಚಿಯಿಂದ ಕುಟ್ಟಿದಂತೆ ವ್ಯಥೆಯುಂಟಾಗುವುದು ಲಕ್ಷಣ. ಇವುಗಳಿಂದ ಶೂಲೆಯೆಂದು ಹೆಸರು ಬಂದಿರುತ್ತದೆ.

ನಿರಾಹಾರಸ್ಯ ಯಸ್ಯೈವಂ ತೀವ್ರಂ ಶೂಲಮುದೀರ್ಯತೇ ।
ಪ್ರಸ್ತಬ್ಧಗಾತ್ರೋ ಭವತಿ ಕೃಚ್ಛ್ರೇಣೋಚ್ಛ್ವಸತೀವ ಚ ||೮೨||
ವಾತಮೂತ್ರಪುರೀಷಾಣಿ ಕೃಚ್ಛ್ರೇಣ ಕುರುತೇ ನರಃ ।
ಏತೈರ್ಲಿಙ್ಗೈರ್ವಿಜಾನೀಯಾತ್ ಶೂಲಂ ವಾತ ಸಮುದ್ಭವಮ್ ||೮೩||

ಆಹಾರವಿಲ್ಲದವನಿಗೆ ಈ ರೀತಿಯಾಗಿ ತೀವ್ರಶೂಲೆಯುಂಟಾಗಿ ದೇಹವು ಬಿಗಿದು ಹಿಡಿದಂತಾಗಿ ಬಲುಕಷ್ಟದಿಂದ ಉಚ್ಛ್ವಾಸಮಾಡುತ್ತಾ ಅಪಾನವಾತಮೂತ್ರ ಮಲಗಳನ್ನು ಬಲುಕಷ್ಟದಿಂದ ವಿಸರ್ಜನೆಮಾಡಿದರೆ ಈ ಲಕ್ಷಣಗಳಿಂದ ವಾತಶೂಲೆಯೆಂದು ತಿಳಿದುಕೊಳ್ಳಬೇಕು.

ತೃಷ್ಣಾದಾಹೋಮದೋಮೂರ್ಛಾತೀವ್ರಂ ಶೂಲಂ ತಥೈವ ಚ ।
ಶೀತಾಭಿಕಾಮೋ ಭವತಿ ಶೀತೇನೈವ ಪ್ರಶಾಮ್ಯತಿ ||೮೪||
ಏತೈರ್ಲಿಙ್ಗೈರ್ವಿಜಾನೀಯಾಚ್ಛೂಲಂ ಪಿತ್ತಸಮುದ್ಭವಮ್ ।

ನೀರಡಿಕೆ, ಮೈಉರಿತ ಮತ್ತು ಮತ್ತತೆಯುಂಟಾಗುವುದು, ಜ್ಞಾನತಪ್ಪುವುದು, ತೀವ್ರವಾದ ಶೂಲೆ, ಶೀತೋಪಚಾರಗಳಲ್ಲಿ ಇಚ್ಛೆಯುಂಟಾಗಿ ಶೀತಚಿಕಿತ್ಸೆಯಿಂದಲೆ ಶಮನವಾಗುತ್ತದೆ ; ಈ ಲಕ್ಷಣಗಳಿಂದ ಪಿತ್ತಶೂಲೆಯೆಂದು ತಿಳಿಯಬೇಕು.

ಶೂಲೇನೋತ್ಪೀಡ್ಯಮಾನಸ್ಯ ಹೃಲ್ಲಾಸ ಉಪಜಾಯತೇ ||೮೫||
ಅತೀವಪೂರ್ಣಕೋಷ್ಠತ್ವಂ ತಥೈವ ಗುರುಗಾತ್ರತಾ ।
ಏತಚ್ಛ್ಲೇಷ್ಮಸಮುತ್ಥಸ್ಯ ಶೂಲಸ್ಯೋಕ್ತಂ ನಿದರ್ಶನಮ್ ||೮೬||
ಸರ್ವಾಣಿ ದೃಷ್ಟ್ವಾ ರೂಪಾಣಿ ನಿರ್ದಿಶೇತ್ಸಾನ್ನಿಪಾತಿಕಮ್ ।
ಸನ್ನಿಪಾತಸಮುತ್ಥಾನಮಸಾಧ್ಯಂ ತಂ ವಿನಿರ್ದಿಶೇತ್ ||೮೭||

ಶೂಲಪೀಡಿತನಿಗೆ ಹೃಲ್ಲಾಸವುಂಟಾಗಿ (ಬಾಯಿನಿಂದ ದ್ರವವು ಸೋರುತ್ತದೆ) ಕೋಷ್ಠವು ತುಂಬಿದಂತೆಯೂ ಮೈಭಾರವೂ ಉಂಟಾದರೆ ಈ ಲಕ್ಷಣಗಳೇ ಕಫಶೂಲೆಯೆಂದೂ ಎಲ್ಲಾ ಲಕ್ಷಣಗಳಿದ್ದರೆ ಸನ್ನಿಪಾತಶೂಲೆಯೆಂದೂ ನಿರ್ಧರಿಸಬೇಕು. ಸನ್ನಿಪಾತ ಶೂಲೆಯು ಅಸಾಧ್ಯವಾದದ್ದು.

ಶೂಲಾನಾಂ ಲಕ್ಷಣಂ ಪ್ರೋಕ್ತಂ ಚಿಕಿತ್ಸಾಂ ತು ನಿಬೋಧ ಮೇ ।
ಆಶುಕಾರೀ ಹಿ ಪವನಸ್ತಸ್ಮಾತ್ತಂ ತ್ವರಯಾ ಜಯೇತ್ ||೮೮||
ತಸ್ಯ ಶೂಲಾಭಿಪನ್ನಸ್ಯ ಸ್ವೇದವಿವಸುಖಾವಹಃ ।
ಪಾಯಸೈಃ ಕೃಶರಾಪಿಣ್ಡೈಃ ಸ್ನಿಗ್ಧೈರ್ವಾ ಪಿಶಿತೈರ್ಹಿತಃ ||೮೯||
ತ್ರಿವೃಚ್ಛಾಕೇನ ವಾ ಸ್ನಿಗ್ಧಮುಷ್ಣಂ ಭುಞ್ಜೀತ ಭೋಜನಮ್ ।
ಬಿರಬಿಲ್ವಾಙ್ಕುರಾನ್ವಾಪಿ ತೈಲಭೃಷ್ಟಾಂಸ್ತು ಭಕ್ಷಯೇತ್ ||೯೦||
ವೈಹಙ್ಗಾಂಶ್ಚ ರಸಾನ್ ಸ್ನಿಗ್ಧಾನ್ ಜಾಙ್ಗಲಾನ್ ಶೂಲಪೀಡಿತಃ ।
ಯಥಾಲಾಭಂ ನಿಷೇವೇತ ಮಾಂಸಾನಿ ಬಿಲಶಾಯಿನಾಮ್ ||೯೧||
ಸುರಾಸೌವೀರಕಂ ಶುಕ್ತಂ ಮಸ್ತ್ವಾದಶ್ಚಿತ್ತಥಾ ದಧಿ ।

ಸಕಾಲಲವಣಂ ಪೇಯಂ ಶೂಲೇ ವಾತಸಮುದ್ಭವೇ ||೯೨||
ಕುಳತ್ಥಯೂಷೋ ಯುಕ್ತಾವ್ಲೋ ಲಾವಕೀಯೂಷಸಂಸ್ಕೃತಃ |
ಸಸೈನ್ಧವಃ ಸಮರಿಚೋ ವಾತಶೂಲವಿನಾಶನಃ ||೯೩||
ವಿಡಙ್ಗಶಿಗ್ರುಕಪ್ಪಿಲ್ಲಪಥ್ಯಾಶ್ಯಾಮಾಮ್ಲವೇತಸಾಃ |

ಶೂಲೆಗಳಲಕ್ಷಣಗಳನ್ನು ಹೇಳಿದ್ದಾಯಿತು. ಅವುಗಳ ಚಿಕಿತ್ಸೆಯನ್ನು ಹೇಳುತ್ತೇನೆ ಕೇಳು ; ಪ್ರಕುಪಿತ ವಾಯುವು ಶೀಘ್ರದಲ್ಲೇ ಮರಣವನ್ನುಂಟುಮಾಡುವ ಕಾರಣ ಅದನ್ನು ಅತಿತ್ವರಿತವಾಗಿ ನಿವಾರಣೆಮಾಡಬೇಕು ; ಶೂಲೆಯಿಂದ ಕೂಡಿದ ವಾತದೋಷಕ್ಕೆ ಸ್ವೇದಕರ್ಮವೇ ಸುಖವನ್ನುಂಟುಮಾಡುತ್ತದೆ ; ಪಾಯಸ, ಕೃಶರದಮುದ್ದೆ, ಸ್ನಿಗ್ಧವಾದ ಮಾಂಸ ಇವುಗಳಿಂದ ಸ್ವೇದಮಾಡಿಸಿದರೆ ಹಿತಕರವಾಗುತ್ತದೆ ; ತಿಗಡೆಯ ಚಿಗುರುಗಳನ್ನು ತುಪ್ಪದಿಂದ ಹುರಿದು ಬಿಸಿಯಾದ ಅನ್ನದೊಡನೆ ಸೇರಿಸಿಯೂ ಹೊಂಗೆಚಿಗರುಗಳನ್ನು ತೈಲದಿಂದ ಹುರಿದೂ ತಿನ್ನಿಸಬೇಕು ; ಶೂಲ ಪೀಡಿತನು ಜಾಂಗಲಪಕ್ಷಿಗಳ ಮಾಂಸರಸಕ್ಕೆ ತುಪ್ಪಮಿಶ್ರಮಾಡಿ ಕುಡಿಯಬೇಕು ; ಮುಳ್ಳುಹಂದಿ ಕಾಡುಹಂದಿ ಮೊದಲಾದ ಬಿಲೇಶಯ ಪ್ರಾಣಿಗಳ ಮಾಂಸವನ್ನು (ಲಭ್ಯವಾದಷ್ಟನ್ನು) ಸೇವಿಸಬೇಕು ; ಮದ್ಯ, ಕಲಗಚ್ಚು, ಶುಕ್ತ, ಮೊಸರಿನಕಟ್ಟು, ಅರ್ಧನೀರು ಮಿಶ್ರಮಾಡಿದ ಮೊಸರು, ಮೊಸರು ಇವುಗಳಿಗೆ ಸೌವರ್ಚಲವಣವನ್ನು ಮಿಶ್ರಮಾಡಿ ಕುಡಿಸಿದರೆ ವಾತಶೂಲೆಯು ನಿವಾರಣೆಯಾಗುತ್ತದೆ ; ಹುರುಳಿಯ ಕಟ್ಟಿಗೆ ಲಾವ ಪಕ್ಷಿಯಮಾಂಸರಸವನ್ನೂ ದಾಡಿಮಾಮ್ಲವನ್ನೂ ಸೇರಿಸಿ ಸೈಂಧವ. ಲವಣ ಮೆಣಸಿನ ಚೂರ್ಣಗಳೊಡನೆ ಕುಡಿಸಿದರೆ ವಾತಶೂಲೆಯು ನಿವಾರಣೆಯಾಗುತ್ತದೆ

ಸುರಸಾಮುಶ್ವರ್ಣಂ ಚ ಸೌವರ್ಚಲಯುತಾಂ ಪಿಬೇತ್ ||೯೪||
ಮದ್ಯೇನ ವಾತಜಂ ಶೂಲಂ ಕ್ಷಿಪ್ರಮೇವ ಪ್ರಶಾಮ್ಯತಿ |
ಪೃಥ್ವೀಕಾಜಾಜಿ ಚವಿಕಾಯವಾನೀವ್ಯೋಷ ಚಿತ್ರಕಾಃ ||೯೫||
ಪಿಪ್ಪಲ್ಯಃ ಪಿಪ್ಪಲೀಮೂಲಂ ಸೈನ್ಧವಂ ಚೇತಿ ಚೂರ್ಣಯೇತ್ |
ತಾನಿ ಚೂರ್ಣಾನಿ ಪಯಸಾ ಪಿಬೇತ್ಕಾಂಬಳಿಕೇನ ವಾ ||೯೬||
ಮಧ್ವಾಸವೇನ ಚುಕ್ರೇಣ ಸುರಾಸೌವೀರಕೇಣ ವಾ |
ಅಥವೈತಾನಿ ಚೂರ್ಣಾನಿ ಮಾತುಲುಙ್ಗರಸೇನ ವಾ ||೯೭||
ತಥಾ ಬದರಯೂಷೇಣ ಭಾವಿತಾನಿ ಪುನಃ ಪುನಃ |
ತಾನಿ ಹಿಙ್ಗುಪ್ರಗಾಢಾನಿ ಸಹಶರ್ಕರಯಾ ಪಿಬೇತ್ ||೯೮||
ಸಹ ದಾಡಿಮಸಾರೇಣ ವರ್ತಿಃ ಕಾರ್ಯಾ ಭಿಷಗ್ವಿದಾ |
ಸಾ ವರ್ತಿರ್ವಾತಿಕಂ ಶೂಲಂ ಕ್ಷಿಪ್ರಮೇವವ್ಯಪೋಹತಿ ||೯೯||
ಗುಡತೈಲೇನ ವಾ ಲೀಢಾ ಪೀತಾಮದ್ಯೇನ ವಾ ಪುನಃ |

ವಿಡಂಗ, ನುಗ್ಗೇಬೀಜ, ಕಪಿಲೆಹಿಟ್ಟು, ಅಣಿಲೆಕಾಯಿ, ತಿಗಡೆ, ಓಟೆಹುಳಿ, ತುಳಸಿ, ಧೂಪದಮರದತೊಗಟೆ, ಸೌವರ್ಚಲವಣ ಇವುಗಳನ್ನು ಮಿಶ್ರಮಾಡಿ ಮದ್ಯದಲ್ಲಿ

ಕದರಿಕುಡಿಸಿದರೆ ವಾತಶೂಲೆಯು ಅತಿಕ್ಷಿಪ್ರವಾಗಿ ನಿವಾರಣೆಯಾಗುತ್ತದೆ ; ದಪ್ಪಜೀರಿಗೆ, ಸಣ್ಣ ಜೀರಿಗೆ, ಚವ್ಯ, ವಾದಕ್ಕಿ, ತ್ರಿಕಟು, ಚಿತ್ರಮೂಲ, ಹಿಪ್ಪಲಿ, ಮೋಡಿ, ಸೈಂಧವ, ಇವುಗಳ ಚೂರ್ಣವನ್ನು ಹಾಲಿನಲ್ಲಿ ಹಾಕಿಯಾಗಲೀ ಕಾಂಬಳಿಕದೊಡನೆಯಾಗಲೀ ಮಧ್ವಾಸವ,ಚುಕ್ರಸುರಾ ಎಂಬ ಮದ್ಯ, ಕಲಗಚ್ಚು, ಮಾದಳರಸ, ಎಲಚಿಹಣ್ಣಿನ ಕಷಾಯ ಇವುಗಳಲ್ಲಿಪುನಃ ಪುನಃ ಭಾವನೆಮಾಡಿ ಹೆಚ್ಚಾಗಿ ಹಿಂಗು ಮಿಶ್ರಮಾಡಿ ಸಕ್ಕರೆ ಸಹಿತವಾಗಿ ಕುಡಿಸಬೇಕು ; ದಾಳಿಂಬೆಯರಸದಲ್ಲದ್ದಿದ ಬತ್ತಿಯನ್ನು ಗುದದಲ್ಲಿಟ್ಟರೆ ಅಥವಾ ಬೆಲ್ಲವನ್ನು ತಿಲತೈಲಗಳೊಡನೆ ಕಲಸಿ ಅಥವಾ ಮದ್ಯದಲ್ಲಿ ಕದರಿ ಕುಡಿಸಿದರೆ ಬೇಗನೆ ಶೂಲ ನಿವಾರಣೆ ಯಾಗುತ್ತದೆ.

ಬುಭುಕ್ಷಾಪ್ರಭವೇ ಶೂಲೇ ಲಘುಸಂತರ್ಪಣಂ ಹಿತಮ್ ||೧೦೦||
ಉಷ್ಣೈಃ ಕ್ಷೀರೈರ್ಯವಾಗೂಭಿಃ ಸ್ನಿಗ್ಧೈರ್ಮಾಂಸರಸೈಸ್ತಥಾ |
ವಾತಶೂಲೇ ಸಮುತ್ಪನ್ನೇ ರೂಕ್ಷಂ ಸ್ನಿಗ್ಧೇನ ಭೋಜಯೇತ್ ||೧೦೧||
ಸುಸಂಸ್ಕೃತಾಃ ಪ್ರದೇಯಾಸ್ಯುರ್ಘೃತಪೂರಾ ವಿಶೇಷತಃ |
ವಾರುಣೀಂ ಚ ಪಿಬೇಜ್ಜನ್ತುಸ್ತಥಾ ಸಂಪದ್ಯತೇ ಸುಖೀ ||೧೦೨||
ಏತದ್ವಾತಸಮುತ್ಥಸ್ಯ ಶೂಲಸ್ಯೋಕ್ತಂ ಚಿಕಿತ್ಸಿತಮ್ |

ಶೂಲೆಯಲ್ಲಿ ಹಶಿವೆಯಿಂದುಂಟಾದ ಲಘು ಪದಾರ್ಥಗಳಿಂದ ತಯಾರಿಸಿದ ಹಾಲು ಯವಾಗೂ ಸ್ನಿಗ್ಧವಾದ ಮಾಂಸರಸಗಳ ಪಾನಮಾಡಿಸಬೇಕು ; ವಾತಶೂಲೆಯಲ್ಲಿ (ರೂಕ್ಷನಾದರೋಗಿಗೆ) ಸ್ನಿಗ್ಧವಾದ ಆಹಾರವನ್ನು ಭೋಜನಮಾಡಿಸಿ ಸರಿಯಾಗಿ ತಯಾರಿಸಿದ ಘೃತಪೂರಗಳನ್ನು ಹೆಚ್ಚಾಗಿ ಸೇವಿಸಿ ವಾರುಣೀಮದ್ಯವನ್ನು ಕುಡಿಸಿದರೆ ರೋಗಿಗೆ ಸುಖವುಂಟಾಗುತ್ತದೆ ; ಇವು ವಾತಶೂಲದ ಚಿಕಿತ್ಸೆಗಳು.

ಅಥ ಪಿತ್ತಸಮುತ್ಥಸ್ಯ ಕ್ರಿಯಾಂ ವಕ್ಷ್ಯಾಮ್ಯತಃ ಪರಮ್ ||೧೦೩||
ಸ ಸುಖಂ ಛರ್ದಯಿತ್ವಾತು ಪೀತ್ವಾ ಶೀತೋದಕಂ ನರಃ |
ಶೀತಲಾನಿ ಚ ಸೇವೇತ ಸರ್ವಾಣ್ಯುಷ್ಣಾನಿ ವರ್ಜಯೇತ್ ||೧೦೪||
ಮಣಿರಾಜತತಾಮ್ರಾಣಿ ಭಾಜನಾನಿ ಚ ಸರ್ವಶಃ |
ವಾರಿಪೂರ್ಣಾನಿ ತಾನ್ಯಸ್ಯ ಶೂಲಸ್ಯೋಪರಿ ನಿಃಕ್ಷಿಪೇತ್ ||೧೦೫||
ಗುಡಶಾಲಿಯವಾಃ ಕ್ಷೀರಂ ಸರ್ಪಿಃಪಾನಂ ವಿರೇಚನಮ್ |
ಜಾಙ್ಗಲಾನಿ ಚ ಮಾಂಸಾನಿ ಭೇಷಜಂ ಪಿತ್ತಶೂಲಿನಾಮ್ ||೧೦೬||
ರಸಾ್ ಸೇವೇತ ಪಿತ್ತಘ್ನಾನ್ ಪಿತ್ತಲಾನಿ ವಿವರ್ಜಯೇತ್ |
ಪಾಲಾಶಂ ಧಾನ್ವನಂ ವಾಪಿ ಪಿಬೇದ್ಯೂಷಂ ಸಶರ್ಕರಮ್ ||೧೦೭||
ಪರೂಷಕಾಣಿ ಮದ್ವೀಕಾಖರ್ಜೂರೋದಕಜಾನ್ಯಪಿ |
ತತ್ಪಿಬೇಚ್ಛರ್ಕರಾಯುಕ್ತಂ ಪಿತ್ತಶೂಲನಿವಾರಣಮ್ ||೧೦೮||

ಇನ್ನುಮುಂದೆ ಪಿತ್ತಶೂಲೆಗೆ ಚಿಕಿತ್ಸೆಯನ್ನು ಹೇಳುತ್ತೇನೆ ; ಪಿತ್ತಶೂಲೆಯಿಂದ ಪೀಡಿತನಾದವನು ಸುಖವಾಗಿ ವಮನಮಾಡಿ ತಣ್ಣೀರನ್ನು ಕುಡಿದು ಶೀತಲವಾದ

ಆಹಾರವಿಹಾರಗಳನ್ನು ಸೇವಿಸಬೇಕು; ಪಿತ್ತಕರಗಳಾದ ಆಹಾರವಿಹಾರಗಳನ್ನು ತ್ಯಜಿಸಬೇಕು; ರತ್ನಮಣಿಖಚಿತವಾದ ಬೆಳ್ಳಿ ತಾಮ್ರದ ಪಾತ್ರೆಗಳಿಗೆ ತಣ್ಣೀರನ್ನು ತುಂಬಿ ಶೂಲಪೀಡಿತನಾದ ರೋಗಿಯ ಶರೀರದಮೇಲೆ ಇಡಬೇಕು; ಬೆಲ್ಲ, ಅಕ್ಕಿ, ಯವೆ, ಹಾಲು, ತುಪ್ಪಗಳನ್ನು ಪಾನಮಾಡಿಸಿ ವಿರೇಚನೌಷಧವನ್ನು ಪ್ರಯೋಗಿಸಿ ಜಾಂಗಲಪ್ರಾಣಿಗಳ ಮಾಂಸವನ್ನು ತಿನ್ನಿಸಬೇಕು. ಪಿತ್ತಹರಗಳಾದ ರಸಗಳನ್ನು ಸೇವಿಸಬೇಕು ; ಪಿತ್ತಕರಗಳಾದುವನ್ನು ತ್ಯಜಿಸಬೇಕು; ಮಾಂಸಾಹಾರಿಪ್ರಾಣಿಗಳ ಮತ್ತು ಜಾಂಗಲ ಪ್ರಾಣಿಗಳ ಮಾಂಸರಸವನ್ನು ಸಕ್ಕರೆಮಿಶ್ರಮಾಡಿ ಬೆಟ್ಟದಈಚಲು, ದ್ರಾಕ್ಷಿ, ಖರ್ಜೂರ, ತಾವರೆ ಮೊದಲಾದುವುಗಳ ಶೀತಕಷಾಯಗಳನ್ನು ಸಕ್ಕರೆ ಮಿಶ್ರಮಾಡಿ ಕುಡಿಸಬೇಕು;

ಅಶನೇ ಭುಕ್ತಮಾತ್ರೇ ತು ಪ್ರಕೋಪಃ ಶ್ಲೇಷ್ಮಿಕಸ್ಯ ಚ ।
ವಮನಂ ಕಾರಯೇತ್ತತ್ರ ಪಿಪ್ಪಲೀವಾರಿಣಾ ಭಿಷಕ್ ॥೧೦೯॥
ರೂಕ್ಷಃ ಸ್ವೇದಃ ಪ್ರಯೋಜ್ಯಃ ಸ್ಯಾದನ್ಯಾಶ್ಚೋಷ್ಣಾಃ ಕ್ರಿಯಾಹಿತಾಃ ।
ಪಿಪ್ಪಲೀಶೃಙ್ಗವೇರಂ ಚ ಶ್ಲೇಷ್ಮಶೂಲೇ ಭಿಷಗ್ಜಿತಮ್ ॥೧೧೦॥
ಪಾಠಾಂ ವಚಾಂ ತ್ರಿಕಟುಕಂ ತಥಾ ಕಟುಕರೋಹಿಣೀಮ್ ।
ಚಿತ್ರಕಸ್ಯ ಚ ನಿರ್ಯೂಹಂ ಪಿಬೇದ್ಯೂಷಂ ಸಹರ್ಜಕಮ್ ॥೧೧೧॥

ಯಾರಿಗೆ ಊಟಮಾಡಿದ ಕೂಡಲೇ ಕಫ ಪ್ರಕೋಪವಾಗಿ ಶೂಲೆಯುಂಟಾದರೆ ವೈದ್ಯನು ಆ ರೋಗಿಗೆ ಹಿಪ್ಪಲಿಯ ಕಷಾಯವನ್ನು ಕುಡಿಸಿ ವಮನವನ್ನು ಮಾಡಿಸಬೇಕು ; ರೂಕ್ಷಸ್ವೇದಮಾಡಿಸಿ 'ಇತರ ಉಷ್ಣಚಿಕಿತ್ಸೆಗಳನ್ನು ಮಾಡಿಸುವುದು ಹಿತಕರವು ; ಹಿಪ್ಪಲಿ ಹಶಿಶುಂಠಿಗಳನ್ನು ಪ್ರಯೋಗಿಸಿದರೆ ಕಫಶೂಲಹರವು ; ಅಗಳುಶುಂಠಿ, ಬಜೆ, ತ್ರಿಕಟು, ಕಟುಕರೋಹಿಣಿ, ಚಿತ್ರಮೂಲ ಇವುಗಳ ಕಷಾಯ ಮತ್ತು ಹೆಸರು ಮೊದಲಾದ ಶಿಂಬಿಧಾನ್ಯಗಳೊಡನೆ ಕಾಮುಕಸ್ತೂರಿಯ ಸೊಪ್ಪನ್ನು ಸೇರಿಸಿ ತಯಾರಿಸಿದ ಕಟ್ಟು ಈ ಎರಡು ಯೋಗಗಳೂ ಕಫಶೂಲಹರಗಳು.

ಏರಣ್ಡಫಲಮೂಲಾನಿ ಮೂಲಂ ಗೋಕ್ಷುರಕಸ್ಯ ಚ ।
ಶಾಲಪರ್ಣೀಂ ಪೃಶ್ನಪರ್ಣೀಂ ಬೃಹತೀಂ ಕಣ್ಟಕಾರಿಕಾಮ್ ॥೧೧೨॥
ದಧ್ಯಾಚ್ಛೃಗಾಲವಿನ್ನಾಂ ಚ ಸಹದೇವಾಂ ತಥೈವ ಚ ।
ಮಹಾಸಹಾಂ ಕ್ಷುದ್ರಸಹಾಂ ಮೂಲಂ ಚೇಕ್ಷುರಕಸ್ಯ ಚ ॥೧೧೩॥
ಏತತ್ ಸಂಭೃತ್ಯ ಸಂಭಾರಂ ಜಲದ್ರೋಣೇ ವಿಪಾಚಯೇತ್ ।
ಚತುರ್ಭಾಗಾವಶೇಷಂ ತು ಯವಕ್ಷಾರಯುತಂ ಪಿಬೇತ್ ॥೧೧೪॥
ವಾತಿಕಂ ಪೈತ್ತಿಕಂ ವಾಪಿ ಶ್ಲೇಷ್ಮಿಕಂ ಸಾನ್ನಿಪಾತಿಕಮ್ ।
ಪ್ರಸಹ್ಯ ನಾಶಯೇಚ್ಛೂಲಂ ಭಿನ್ನಾಭ್ರಮಿವಮಾರುತಃ ॥೧೧೫॥
ಪಿಪ್ಪಲೀ ಸ್ವರ್ಜಿಕಾಕ್ಷಾರೋ ಯವಾಶ್ಚಿತ್ರಕಏವ ಚ ।
ಸೇವ್ಯಂ ಚೈತತ್ ಸಮಾನೀಯ ಭಸ್ಮ ಕುರ್ಯಾದ್ವಿಚಕ್ಷಣಃ ॥೧೧೬॥
ತದುಷ್ಣವಾರಿಣಾ ಪೀತಂ ಶ್ಲೇಷ್ಮಶೂಲೇ ಭಿಷಗ್ಜಿತಮ್ ।

ರುಣದ್ಧಿ ಮಾರುತಂ ಶ್ಲೇಷ್ಮಾ ಕುಕ್ಷಿಪಾರ್ಶ್ವವ್ಯವಸ್ಥಿತಃ ॥೧೧೭॥
ಸ ಸಂರುದ್ಧಃ ಕರೋತ್ಯಾಶು ಸಾಧ್ಮಾನಂ ಗುಡಗುಡಾಯನಮ್ ।
ಸೂಚೀಭಿರಿವ ನಿಸ್ತೋದಃ ಕೃಚ್ಛ್ರೋಚ್ಛ್ವಸಿತದಾ ನರಃ । ॥೧೧೮॥
ನಾನ್ನಂ ವಾಞ್ಛತಿ ನೋ ನಿದ್ರಾಮುಪೈತ್ಯರ್ತಿಪೀಡಿತಃ ।
ಪಾರ್ಶ್ವಶೂಲಃ ಸವಿಜ್ಞೇಯಃ ಕಫಾನಿಲಸಮುದ್ಭವಃ ॥೧೧೯॥

ಹರಳುಬೀಜ ಮತ್ತು ಬೇರು, ನೆಗ್ಗಿಲಸಮೂಲ, ಮೂರೆಲೆಹೊನ್ನೆ, ಒಂದೆಲೆ ಹೊನ್ನೆ, ಹೆಗ್ಗುಳ್ಳ, ನೆಲಗುಳ್ಳ, ನರಿಬಾಲದಹೊನ್ನೆ, ಸಹದೇವಿ, ಕಾಡುಉದ್ದು, ಕಾಡು ಹೆಸರು, ಕೊಳವಳಿಕೆಯಬೇರು, ಇವೆಲ್ಲವನ್ನೂ ಸಮಭಾಗವಾಗಿ ೧ ದ್ರೋಣ ನೀರಿನಲ್ಲಿ ಹಾಕಿ ¼ ಭಾಗದಷ್ಟು ನೀರು ನಿಲ್ಲುವಂತೆ ಕಷಾಯ ಕಾಯಿಸಿ ಶೋಧಿಸಿ ಯವಕ್ಷಾರವನ್ನು ಸೇರಿಸಿ ಪಾನಮಾಡಿಸಿದರೆ ವಾತವು ತುಂಡುಮೋಡಗಳನ್ನು ನಾಶಮಾಡುವಂತೆಯೇ ವಾತಪಿತ್ತ, ಕಫ, ಸನ್ನಿಪಾತಶೂಲೆಗಳನ್ನು ನಿವಾರಿಸುತ್ತವೆ ; ಬುದ್ಧಿವಂತನಾದ ವೈದ್ಯನು ಹಿಪ್ಪಲಿ, ಸರ್ಜಕ್ಷಾರ, ಯವಧಾನ್ಯ, ಲಾಮಂಚ, ಚಿತ್ರಮೂಲಗಳನ್ನು ಭಸ್ಮಮಾಡಿ ಸೇರಿಸಿ ಬಿಸಿನೀರಿನಲ್ಲಿ ಕದರಿ ಕುಡಿಸಿದರೆ ಕಫಶೂಲೆಯು ನಿವಾರಿಸಲ್ಪಡುತ್ತದೆ ; ಶೂಲೆಗಳು ನಾಲ್ಕು ವಿಧಗಳಾದರೂ ದೋಷ ಧಾತುಮಲಗಳೊಡನೆ ಮಿಶ್ರಣವಾಗುವುದರಿಂದಲೂ ಸ್ಥಾನ ಭೇದಗಳಿಂದಲೂ ಕಾರಣ ಭೇದಗಳಿಂದಲೂ ಬೇರೆ ಬೇರೆ ಶೂಲೆಗಳುಂಟಾಗುತ್ತ ವೆಂದು ತಿಳಿಸುತ್ತಾರೆ ; ಹೊಟ್ಟೆಯ ಪಕ್ಕಗಳಲ್ಲಿ ವೃದ್ಧಿಯಾದ ಕಫವು ಅಪಾನವಾತವನ್ನು ತಡೆದು ಹೊಟ್ಟೆಯುಬ್ಬರವನ್ನೂ ಗುಡ್‌ಗುಡ್ ಎಂದು ಶಬ್ದವನ್ನೂ ಉಂಟುಮಾಡಿ ರೋಗಿಗೆ ಸೂಜಿಯಿಂದ ಚುಚ್ಚಿದಂತೆ ನೋವನ್ನುಂಟುಮಾಡುತ್ತದೆ. ಮತ್ತು ಉಸಿ ರಾಡುವುದು ತುಂಬಾ ಕಷ್ಟವಾಗುತ್ತದೆ ; ಅನ್ನಬೇಕಾಗುವುದಿಲ್ಲ, ನಿದ್ರೆಬರುವುದಿಲ್ಲ, ಇದಕ್ಕೆಕಫದಿಂದುಂಟಾದ ಪಾರ್ಶ್ವಶೂಲೆಯೆಂದು ಹೇಳುತ್ತಾರೆ.

ತತ್ರ ಪುಷ್ಕರಮೂಲಾನಿ ಹಿಙ್ಗುಸೌವರ್ಚಲಂ ಬಿಡಮ್ ।
ಸೈನ್ಧವಂ ತುಮ್ಬುರುಂ ಪಥ್ಯಾಂ ಚೂರ್ಣಂ ಕೃತ್ವಾತು ಪಾಯಯೇತ್ ॥೧೨೦॥
ಪಾರ್ಶ್ವಹೃದ್ಬಸ್ತಿಶೂಲೇಷು ಯವಕ್ವಾಥೇನ ಸಂಯುತಮ್ ।
ಸರ್ಪಿಃ ಪ್ಲೀಹೋದರೋಕ್ತಂ ವಾ ಘೃತಂ ವಾ ಹಿಙ್ಗುಸಂಯುತಮ್ ॥೧೨೧॥
ಬೀಜಪೂರಕಸಾರಂ ವಾ ಪಯಸಾ ಸಹ ಸಾಧಿತಮ್ ।
ಏರಣ್ಡತೈಲಮಥವಾ ಮದ್ಯಮಸ್ತು ಪಯೋರಸೈಃ ॥೧೨೨॥
ಭೋಜಯೇಚ್ಚಾಪಿ ಪಯಸಾ ಜಾಙ್ಗಲೇನ ರಸೇನ ವಾ ।

ಪಾರ್ಶ್ವಶೂಲೆಗೆ ಚಿಕಿತ್ಸೆ :—ಪುಷ್ಕರಮೂಲ, ಹಿಂಗು, ಸೌವರ್ಚಲವಣ, ಬಿಡಲವಣ, ಸೈಂಧವ, ಗೌಳದಬೀಜ, ಅಣಿಲೆಕಾಯಿಸಿಪ್ಪೆ ಇವುಗಳನ್ನು ಚೂರ್ಣಿಸಿ ಯವಧಾನ್ಯದ ಕಷಾಯದಲ್ಲಿ ಕದರಿ ಕುಡಿಸಬೇಕು ; ಪ್ಲೀಹೋದರದಲ್ಲಿ ಹೇಳಿರುವ "ಷಟ್ಪಲ ಘೃತವನ್ನಾಗಲೀ" ಬರಿಯ ತುಪ್ಪಕ್ಕೆ ಹಿಂಗಿನ ಪುಡಿಯನ್ನು ಮಿಶ್ರಮಾಡಿ

ಯಾಗಲೀ ಮಾದಳ ಬೀಜವನ್ನು ಹಾಕಿ ಕಾಯಿಸಿದ ಹಾಲನ್ನಾಗಲೀ ಮದ್ಯ, ಮೊಸರಿನ ಕಟ್ಟು, ಹಾಲು, ಮಾಂಸರಸಗಳೊಡನೆ ಪ್ರಾತಃಕಾಲದಲ್ಲಿ ದೋಷಾನುಸಾರವಾಗಿ ಹರಳೆಣ್ಣೆಯನ್ನು ಮಿಶ್ರಮಾಡಿ ಕುಡಿಸಿ ಅದು ಜೀರ್ಣಿಸಿದ ಮೇಲೆ ಹಾಲು ಮಿಶ್ರಮಾಡಿ ಯಾಗಲೀ ಜಾಂಗಲ ಪ್ರಾಣಿಗಳ ಮಾಂಸರಸದೊಡನೆಯಾಗಲೀ ಅನ್ನವನ್ನು ಭೋಜನ ಮಾಡಿಸಬೇಕು.

ಪ್ರಕುಪ್ಯತಿ ಯದಾ ಕುಕ್ಷೌ ವಹ್ನಿಮಾಕ್ರಮ್ಯ ಮಾರುತಃ ||೧೨೩||
ತದಾಸ್ಯ ಭೋಜನಂ ಭುಕ್ತಂ ಸೋಪಸ್ತಮ್ಭಂ ನ ಪಚ್ಯತೇ |
ಉಚ್ಛ್ವಸಿತ್ಯಾಮಶಕೃತಾ ಶೂಲೇನಾಹನ್ಯತೇ ಮುಹುಃ ||೧೨೪||
ನೈವಾಸನೇ ನ ಶಯನೇ ತಿಷ್ಠನ್ನ ಲಭತೇ ಸುಖಮ್ |
ಕುಕ್ಷಿಶೂಲ ಇತಿ ಖ್ಯಾತೋ ವಾತಾದಾಮಸಮುದ್ಭವಃ ||೧೨೫||
ವಮನಂ ಕಾರಯೇತ್ತತ್ರ ಲಙ್ಘಯೇದ್ವಾ ಯಥಾ ಬಲಮ್ |
ಸಂಸರ್ಗಪಾಚನಂ ಕುರ್ಯಾದಮ್ಲೈರ್ದೀಪನ ಸಂಯುತೈಃ ||೧೨೬||

ಹೊಟ್ಟೆಯಲ್ಲಿ (ಉದರಗುಹೆಯಲ್ಲಿ) ವಾಯುವು ಪ್ರಕೋಪಿಸಿ ಅಗ್ನಿಯನ್ನು ಆಕ್ರಮಿಸಿದರೆ ಆ ರೋಗಿಗೆ ಭೋಜನಮಾಡಿದ ಅನ್ನವು ಹೊಟ್ಟೆಯಲ್ಲಿ ತಡೆಯಲ್ಪಟ್ಟು ಪಾಕವಾಗುವುದಿಲ್ಲ (ಜೀರ್ಣಿಸುವುದಿಲ್ಲ) ; ಉಸಿರುಬಿಟ್ಟರೆ ಆಮಮಿಶ್ರಿತಮಲದ ವಾಸನೆ ಬರುತ್ತದೆ ; ಆಗಾಗ್ಗೆ ಹೊಟ್ಟೆನೋಯುತ್ತಲೇ ಇರುತ್ತದೆ ; ಕೂತರೂ, ಮಲಗಿದರೂ, ನಿಂತರೂ ಸುಖವಾಗುವುದಿಲ್ಲ ; ಈ ರೋಗಕ್ಕೆ ಆಮರಸಮಿಶ್ರಿತ ವಾತದಿಂದುಂಟಾದ ಕುಕ್ಷಿಶೂಲವೆನ್ನುತ್ತಾರೆ (ಹೊಟ್ಟೆನೋವು) ; ಇದರಲ್ಲಿ ರೋಗಿಗೆ ವಮನಮಾಡಿಸಬೇಕು ; ಅಥವಾ ಶಕ್ತ್ಯನುಸಾರವಾಗಿ ಉಪವಾಸವನ್ನು ಮಾಡಿಸಬೇಕು ; ಆಮ್ಲರಸವನ್ನೂ ದೀಪನೌಷಧವನ್ನೂ ಮಿಶ್ರಮಾಡಿದ ಪೇಯಾದಿ ಕ್ರಮದಿಂದ ಆಮಪಾಚನ ಮಾಡಿಸಬೇಕು ; ದಾಡಿಮತಕ್ರವನ್ನು ಆಮ್ಲರಸಗಳು, ಪಂಚಕೋಲ (ಇವು ದೀಪನಗಳು) ಇವುಗಳನ್ನು ಪೇಯಾ ವಿಲೇಪೀ ಕ್ರಮಗಳನ್ನು ಅಭ್ಯಾಸಮಾಡಿಸಬೇಕು.

ನಾಗರಂ ದೀಪ್ಯಕಂ ಚವ್ಯಂ ಹಿಙ್ಗು ಸೌವರ್ಚಲಂ ಬಿಡಮ್ |
ಮಾತುಲುಙ್ಗಸ್ಯ ಬೀಜಾನಿ ತಥಾ ಶ್ಯಾಮೋರುಭೂಕಯೋಃ ||೧೨೭||
ಬೃಹತ್ಯಾಃ ಕಣ್ಟಕಾರ್ಯಾಶ್ಚ ಕ್ವಾಥಂ ಶೂಲಹರಂ ಪಿಬೇತ್ |
ವಚಾ ಸೌವರ್ಚಲಂ ಹಿಙ್ಗು ಕುಷ್ಠಂ ಸಾತಿವಿಷಾಭಯಾ ||೧೨೮||
ಕುಟಜಸ್ಯ ಚ ಬೀಜಾನಿ ಸದ್ಯಃ ಶೂಲಹರಾಣಿ ತು |
ವಿರೇಚನಂ ಪ್ರಯುಞ್ಜೀತ ಜ್ಞಾತ್ವಾ ದೋಷಬಲಾಬಲಮ್ ||೧೨೯||
ಸ್ನೇಹಬಸ್ತೀನ್ನಿರೂಹಾಂಶ್ಚ ಕುರ್ಯಾದ್ದೋಷನಿಬರ್ಹಣಾನ್ |
ಉಪನಾಹಾಃ ಸ್ನೇಹಸೇಕಾ ಧಾನ್ಯಾಮ್ಲಪರಿಷೇಚನಮ್ ||೧೩೦||
ಅವಗಾಹಾಶ್ಚ ಶಸ್ಯನ್ತೇ ಯಚ್ಚಾನ್ಯದಪಿ ತದ್ಧಿತಮ್ |

ಶುಂಠಿ, ವಾದಕ್ಕಿ, ಚವ್ಯ, ಹಿಂಗು, ಸೌವರ್ಚಲವಣ, ಬಿಡಲವಣ, ಮಾದಳ ಬೀಜ, ಕರಿತಿಗಡೆ, ಹರಳಬೀಜ, ಹೆಗ್ಗುಳ್ಳದಬೀಜ, ನೆಲಗುಳ್ಳದಬೀಜ ಇವುಗಳ ಕಷಾಯವನ್ನು ಕುಡಿಸಿದರೆ ಶೂಲಹರವಾಗುತ್ತದೆ ; ಬಜೆ, ಸೌವರ್ಚಲವಣ, ಹಿಂಗು, ಚೆಂಗಲ್ ಕೋಷ್ಠ, ಅತಿಬಜೆ, ಅಣಲೆಕಾಯಿಸಿಪ್ಪೆ, ಕೊಡಶಿಗೇಬೀಜ ಇವುಗಳ ಕಷಾಯವನ್ನು ಕುಡಿಸಿದರೆ ಸಧ್ಯದಲ್ಲೇ ಶೂಲಹರವಾಗುತ್ತದೆ. ದೋಷಗಳ ಬಲಾಬಲಗಳಿಗೆ ತಕ್ಕಂತೆ ವಿರೇಚನವನ್ನು ಸ್ನೇಹಬಸ್ತಿ ನಿರೂಹಬಸ್ತಿಗಳನ್ನು ಪ್ರಯೋಗಿಸಿ ದೋಷನಿರ್ಹರಣೆ ಮಾಡಬೇಕು ; ಉಪನಾಹಸ್ವೇದ, ಸ್ನೇಹಸೇಚನೆ, ಹುಳಿಕಲಗಚ್ಚನ್ನು ಅಭಿಷೇಕಮಾಡುವುದು, ಅವಗಾಹನ ಸ್ನಾನ, ಮತ್ತು ನೋವನ್ನು ನಿಲ್ಲಿಸುವ 'ಚಿಕಿತ್ಸೆಗಳನ್ನು ಮಾಡಿಸಿದರೆ ಹಿತವಾಗುತ್ತದೆ.

ಕಫಪಿತ್ತಾವರುದ್ಧಸ್ತು ಮಾರುತೋ ರಸಮೂರ್ಛಿತಃ ॥೧೩೧॥
ಹೃದಿಸ್ಥಃ ಕುರುತೇ ಶೂಲಮುಚ್ಛ್ವಾಸಾರೋಧಕಂ ಪರಮ್ ।
ಸ ಹೃಚ್ಛೂಲ ಇತಿಖ್ಯಾತೋ ರಸಮಾರುತಸಂಭವಃ ॥೧೩೨॥
ತತ್ರಾಪಿ ಕರ್ಮಾಭಿಹಿತಂ ಯದುಕ್ತಂ ಹೃದ್ವಿಕಾರಿಣಾಮ್ ।

ರಸ ಧಾತುವಿನೊಡನೆ ಮಿಶ್ರವಾದ ವಾತವು ಕಫಪಿತ್ತಗಳಿಂದ ತಡೆಯಲ್ಪಟ್ಟು ಹೃದಯದಲ್ಲಿ ಶೂಲೆಯನ್ನುಂಟುಮಾಡಿ, ಉಚ್ಛ್ವಾಸವನ್ನು ತಡೆಯುತ್ತದೆ. ಇದಕ್ಕೆ ರಸ ಮತ್ತು ವಾತಗಳಿಂದುಂಟಾದ ಹೃಚ್ಛೂಲವೆಂದು ಹೆಸರು. ಈ ಹೃಚ್ಛೂಲೆಯಲ್ಲೂ ಹೃದ್ರೋಗದಲ್ಲಿ ಹೇಳಿರುವ ಚಿಕಿತ್ಸೆಯನ್ನೇ ಮಾಡಬೇಕು. ಸಂಪ್ರಾಪ್ತಿ ಮತ್ತು ಲಕ್ಷಣಗಳಲ್ಲಿ ಹೃದ್ರೋಗಕ್ಕೂ ಹೃಚ್ಛೂಲೆಗೂ ವ್ಯತ್ಯಾಸವಿರುವುದರಿಂದ ಇವೆರಡಕ್ಕೂ ಬೇರೆಬೇರೆ ರೋಗಗಳೆಂದು ತಿಳಿಯಬೇಕು.

ಸಂರೋಧಾತ್ಕುಪಿತೋ ವಾಯುರ್ಬಸ್ತಿಮಾವೃತ್ಯ ತಿಷ್ಠತಿ ॥೧೩೩॥
ಬಸ್ತಿವಙ್ಕ್ಷಣನಾಭೀಷು ತತಃ ಶೂಲೋಽಸ್ಯ ಜಾಯತೇ ।
ವಿಣ್ಮೂತ್ರವಾತಸಂರೋಧೀ ಬಸ್ತಿಶೂಲಃ ಸಮಾರುತಾತ್ ॥೧೩೪॥

ವಾತಮೂತ್ರಪುರೀಷಗಳ ವೇಗವನ್ನು ತಡೆಯುವುದರಿಂದ ವಾತವು ಪ್ರಕೋಪವಾಗಿ ಬಸ್ತಿಯನ್ನು (ಮೂತ್ರಾಶಯ) ಸೇರಿ ಮೂತ್ರಾಶಯ, ತೊಡೆಯಸಂಧಿ, ಹೊಕ್ಕಳುಗಳಲ್ಲಿ ಶೂಲೆಯನ್ನುಂಟುಮಾಡುತ್ತದೆ ; ಈ ರೀತಿ ಕುಪಿತವಾತದಿಂದ ಮಲಮೂತ್ರ ಅಪಾನ ವಾತಗಳು ತಡೆಯಲ್ಪಟ್ಟರೆ ಬಸ್ತಿಶೂಲವೆಂದು ಹೆಸರು ;

ನಾಭ್ಯಾವಙ್ಕ್ಷಣಪಾರ್ಶ್ವೇಷು ಕುಕ್ಷೌ ಮೇಢ್ರಾನ್ತಮರ್ದಕಃ ।
ಮೂತ್ರಮಾವೃತ್ಯ ಗೃಹ್ಣಾತಿ ಮೂತ್ರಶೂಲಃ ಸಮಾರುತಾತ್ ॥೧೩೫॥

ಪ್ರಕುಪಿತವಾತವು ಹೊಕ್ಕಳು, ತೊಡೆಸಂಧಿ, ಪಕ್ಕೆಗಳಲ್ಲಿ ಹೊಟ್ಟೆ ಇವುಗಳಲ್ಲಿ ಸೇರಿ ಮೇಢ್ರವನ್ನೂ ಅಂಶವನ್ನೂ ಪೀಡಿಸುತ್ತಾ ಮೂತ್ರವನ್ನು ತಡೆದು ಶೂಲವನ್ನುಂಟು ಮಾಡುವುದರಿಂದ ಮೂತ್ರಶೂಲೆಯೆಂದು ಹೆಸರು.

ವಾಯುಃ ಪ್ರಕುಪಿತೋ ಯಸ್ಯ ರೂಕ್ಷಾಹಾರಸ್ಯ ದೇಹಿನಃ ।
ಮಲಂ ರುಣದ್ಧಿ ಕೋಷ್ಠಸ್ಥಂ ಮನ್ದೀಕೃತ್ಯ ತು ಪಾವಕಮ್ ॥೧೩೬॥
ಶೂಲಂ ಸಂಜನಯಂಸ್ತೀವ್ರಂ ಸ್ರೋತಾಂಸ್ಯಾವೃತ್ಯ ತಸ್ಯ ಹಿ ।
ದಕ್ಷಿಣಂ ಯದಿ ವಾ ವಾಮಂ ಕುಕ್ಷಿಮಾದಾಯ ಜಾಯತೇ ॥೧೩೭॥
ಸರ್ವತ್ರ ವರ್ಧತೇ ಕ್ಷಿಪ್ರಂ ಭ್ರಮನ್ನಥ ಸಘೋಷವಾನ್ ।
ಪಿಪಾಸಾ ವರ್ಧತೇ ತೀವ್ರಾ ಭ್ರಮೋ ಮೂರ್ಛಾ ಚ ಜಾಯತೇ ॥೧೩೮॥
ಉಚ್ಚಾರಿತೋ ಮೂತ್ರಿತಶ್ಚ ನ ಶಾನ್ತಿಮಧಿಗಚ್ಛತಿ ।
ವಿಟ್‌ಶೂಲಮೇತಜ್ಜಾನೀಯಾದ್ಭಿಷಕ್ಪರಮದಾರುಣಮ್ ॥೧೩೯॥
ಕ್ಷಿಪ್ರಂ ದೋಷಹರಂ ಕಾರ್ಯಂ ಭಿಷಜಾ ಸಾಧು ಜಾನತಾ ।
ಸ್ವೇದನಂ ವಮನಂ ಚೈವ ನಿರೂಹಾಃ ಸ್ನೇಹಬಸ್ತಯಃ ॥೧೪೦॥
ಪೂರ್ವೋದ್ದಿಷ್ಟಾನ್ ಪಾಯಯೇತ ಯೋಗಾನ್ ಕೋಷ್ಠ ವಿಶೋಧನಾನ್ ।
ಉದಾವರ್ತಹರಾಂಶ್ಚಾಸ್ಯ ಕ್ರಿಯಾಃ ಸರ್ವಾಃ ಸುಖಾವಹಾಃ ॥೧೪೧॥

ರೂಕ್ಷಾಹಾರವನ್ನು ಸೇವಿಸುವ ಮನುಷ್ಯನಿಗೆ ವಾಯುವು ಪ್ರಕೋಪಿಸಿ ಕೋಷ್ಠಾಂಗವಾದ ಉಂಡುಕದಲ್ಲಿ (ಮಲಾಶಯ) ಮಲವನ್ನು ತಡೆದು ಅಗ್ನಿಮಾಂದ್ಯವನ್ನುಂಟುಮಾಡಿ ಅವನ ಸ್ರೋತಸ್ಸುಗಳನ್ನಾಕ್ರಮಿಸಿ ತೀವ್ರಶೂಲೆಯನ್ನುಂಟುಮಾಡುತ್ತದೆ. ಈ ಶೂಲೆಯು ಬಲಗಡೆಯ ಅಥವಾ ಎಡಗಡೆಯ ಹೊಟ್ಟೆಯಲ್ಲಿ ಪ್ರಾರಂಭವಾಗಿ ಬಲುಬೇಗ ಹೊಟ್ಟೆಯಲ್ಲೆಲ್ಲಾ ಶಬ್ದದೊಡನೆ ತಿರುಗುತ್ತಾ ಅತ್ಯಧಿಕವಾದ ನೀರಡಿಕೆ, ತಲೆತಿರುಗು, ಮೂರ್ಛೆ ಇವುಗಳನ್ನುಂಟುಮಾಡುತ್ತದೆ. ಮಲಮೂತ್ರಗಳು ಪ್ರವೃತ್ತಿಯಾದರೂ ಶೂಲೆಯು ಕಡಿಮೆಯಾಗುವುದಿಲ್ಲ. ಬುದ್ಧಿವಂತನಾದ ವೈದ್ಯನು ಈ ಭಯಂಕರ ವ್ಯಾಧಿಯನ್ನು ವಿಟ್‌ಶೂಲೆಯೆಂದು ತಿಳಿದು ಕೂಡಲೇ ದೋಷಹರಗಳಾದ ಸ್ವೇದಕರ್ಮ, ವಮನ, ನಿರೂಹ, ಸ್ನೇಹಬಸ್ತಿಗಳನ್ನು ಕೋಷ್ಠಶೋಧನ ಮಾಡುವ ಹಿಂದೆ ಹೇಳಿರುವ ವಮನ ವಿರೇಚನೌಷಧಯೋಗಗಳನ್ನು ಉದಾವರ್ತಹರಗಳಾದ ಎಲ್ಲಾ ವಿಧ ಚಿಕಿತ್ಸೆಗಳನ್ನೂ ಮಾಡಿದರೆ ಸುಖವುಂಟಾಗುತ್ತದೆ.

ಅತಿಮಾತ್ರಂ ಯದಾ ಭುಕ್ತಂ ಪಾವಕೇ ಮೃದುತಾಂ ಗತೇ ।
ಸ್ಥಿರೀಭೂತಂ ತು ತತ್ಕೋಷ್ಠೇ ವಾಯುರಾವೃತ್ಯ ತಿಷ್ಠತಿ ॥೧೪೨॥
ಅವಿಪಾಕಗತಂ ಹ್ಯನ್ನಂ ಶೂಲಂ ತೀವ್ರಂ ಕರೋತ್ಯತಿ ।
ಮೂರ್ಛಾಧ್ಮಾನಂ ವಿದಾಹಶ್ಚ ಹೃದುತ್ಕ್ಲೇಶೋ ವಿಲಮ್ಬಿಕಾ ॥೧೪೩॥
ವಿರಿಚ್ಯತೇ ಛರ್ದಯತಿ ಕಮ್ಪತೇಽಥ ವಿಮುಹ್ಯತಿ ।
ಅವಿಪಾಕಾದ್ಭವೇಚ್ಛೂಲಸ್ತ್ವನ್ನದೋಷಸಮುದ್ಭವಃ ॥೧೪೪॥

ಅಗ್ನಿಮಾಂದ್ಯವಿರುವಾಗ ಅತಿಮಾತ್ರದಿಂದ ಭೋಜನಮಾಡಿದರೆ ಆಹಾರವು ಕೋಷ್ಠದಲ್ಲಿ ಸ್ಥಿರವಾಗಿ ನಿಂತು ಪ್ರಕುಪಿತವಾದ ವಾತದಿಂದ ಆಕ್ರಮಿಸಲ್ಪಟ್ಟು ತೀವ್ರ ಶೂಲೆಯನ್ನುಂಟುಮಾಡುತ್ತದೆ. ಮೂರ್ಛೆ, ಹೊಟ್ಟೆಯುಬ್ಬರ, ಎದೆಯುರಿತ, ಹೃದಯ

ರಸವು ಬಾಯಿನಿಂದ ಸೋರುವುದು (ಉತ್ಕ್ಲೇಶ) ವಿಲಂಬಿಕಾಜೀರ್ಣ, ವಿರೇಚನ, ವಮನ, ವ್ಯೈನಡುಕ, ಜ್ಞಾನತಪ್ಪುವುದು ಈ ತೊಂದರೆಗಳನ್ನುಂಟುಮಾಡುತ್ತದೆ.

ವಮನಂ ಲಙ್ಘನಂ ಸ್ವೇದಃ ಪಾಚನಂ ಫಲವರ್ತಯಃ ।
ಕ್ಷಾರಾಶ್ಚೂರ್ಣಾನಿ ಗುಟಿಕಾಃ ಶಸ್ಯನ್ತೇ ಶೂಲನಾಶನಾಃ ॥೧೪೫॥
ಗುಲ್ಮಾವಸ್ಥಾಃ ಕ್ರಿಯಾಃ ಕಾರ್ಯಾ ಯಥಾವತ್ಸರ್ವಶೂಲಿನಾಮ್ ॥೧೪೬॥

ವಮನ, ಉಪವಾಸ, ಸ್ವೇದಕರ್ಮ, ಆಮಪಾಚನ, ಫಲವರ್ತಿಗಳನ್ನು ಗುದದಲ್ಲಿಟ್ಟು ಮಲವನ್ನೂ ಅಪಾನವಾತವನ್ನೂ ಅನುಲೋಮಗೊಳಿಸುವುದು, ಶೂಲಹರಗಳಾದ ಕ್ಷಾರ, ಚೂರ್ಣ, ಗುಳಿಗೆಗಳ ಪ್ರಯೋಗ ಇವು ಗುಲ್ಮರೋಗ ಚಿಕಿತ್ಸಾ ವಿಧಾನಗಳು. ಎಲ್ಲಾ ಶೂಲರೋಗಿಗಳಿಗೂ ಗುಲ್ಮರೋಗದ ಅವಸ್ಥೆಗಳಿಗೆ ತಕ್ಕಂತೆ ಮಾಡುವ ಚಿಕಿತ್ಸೆಗಳನ್ನೇ ಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರ ತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ ಗುಲ್ಮಪ್ರತಿಷೇಧನಾಮಕ ದ್ವಿಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ.

ತ್ರಿಚತ್ವಾರಿಂಶತ್ತಮೋಽಧ್ಯಾಯಃ

ಅಥಾತೋ ಹೃದ್ರೋಗ ಪ್ರತಿಷೇಧಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಗುಲ್ಮಚಿಕಿತ್ಸಾನಂತರ ಸ್ಥಾನಸಾಮೀಪ್ಯ ಕಾರಣದಿಂದ ಹೃದ್ರೋಗ ಚಿಕಿತ್ಸೆಯನ್ನು ವಿವರಿಸುತ್ತೇವೆ.

ವೇಗಾಘಾತೋಷ್ಣರೂಕ್ಷಾನ್ನೈರತಿಮಾತ್ರೋಪಸೇವಿತೈಃ ।
ವಿರುದ್ಧಾಧ್ಯಶನಾಜೀರ್ಣೈರಸಾತ್ಮ್ಯೈಶ್ಚಾಪಿ ಭೋಜನೈಃ ॥೩॥
ದೂಷಯಿತ್ವಾ ರಸಂ ದೋಷಾ ವಿಗುಣಾ ಹೃದಯಂಗತಾಃ ।
ಕುರ್ವನ್ತಿ ಹೃದಯೇ ಬಾಧಾಂ ಹೃದ್ರೋಗಂ ತಂ ಪ್ರಚಕ್ಷತೇ ॥೪॥

ಸ್ವಾಭಾವಿಕಗಳಾದ ವಾತ, ಮೂತ್ರ, ಪುರೀಷಾದಿ ವೇಗಗಳನ್ನು ತಡೆಯುವುದು, ಶರೀರದ ಮೇಲೆ ಕತ್ತಿ, ದೊಣ್ಣೆ ಮೊದಲಾದುವುಗಳಿಂದ ಪೆಟ್ಟಾಗುವುದು ಉಷ್ಣ ರೂಕ್ಷಗಳಾದ ಅನ್ನಪಾನಗಳನ್ನೂ, ವಿರುದ್ಧಾಶನ, ಅಧ್ಯಶನ, ಅಜೀರ್ಣಾಶನ, ಅಸಾತ್ಮ್ಯಾಹಾರಗಳನ್ನೂ ಸೇವಿಸುವುದರಿಂದಲೂ ದೋಷಗಳು ಪ್ರಕೋಪಗೊಂಡು ರಸಧಾತುವನ್ನು ಕೆಡಿಸಿ ಹೃದಯವನ್ನು ಸೇರಿಸಿ ಪೀಡಿಸಿ ಹೃದ್ರೋಗವನ್ನುಂಟುಮಾಡುತ್ತವೆ. ಹೃದ್ರೋಗವೆಂದರೆ ಹೃದಯದಲ್ಲುಂಟಾಗುವ ಬಾಧೆಗಳೆಂದೂ ಹೃದಯವನ್ನು ಬಾಧೆಪಡಿಸುವ ರೋಗಗಳೆಂದೂ ಅರ್ಥಮಾಡುತ್ತಾರೆ.

ಚತುರ್ವಿಧಃ ಸದೋಷೈಃ ಸ್ಯಾತ್ ಕ್ರಿಮಿಭಿಶ್ಚ ಪೃಥಕ್ ಪೃಥಕ್ ।
ಲಕ್ಷಣಂ ತಸ್ಯ ವಕ್ಷ್ಯಾಮಿ ಚಿಕಿತ್ಸಿತಮನಂತರಮ್ ॥೫॥

ಹೃದ್ರೋಗವು ತ್ರಿದೋಷಗಳಿಂದಲೂ ಕ್ರಿಮಿಗಳಿಂದಲೂ ಕೂಡಿ ೪ ವಿಧಗಳು ; ಅವುಗಳ ಲಕ್ಷಣವನ್ನೂ ಚಿಕಿತ್ಸೆಯನ್ನೂ ಹೇಳುತ್ತೇವೆ.

ಆಯಮ್ಯತೇ ಮಾರುತಜೇ ಹೃದಯಂ ತುದ್ಯತೇ ತಥಾ ।
ನಿರ್ಮಥ್ಯತೇ ದೀರ್ಯತೇ ಚ ಸ್ಫೋಟ್ಯತೇ ಪಾಟ್ಯತೇಽಪಿ ಚ ॥೬॥
ತೃಷ್ಣೋಷ್ಣಾದಾಹಚೋಷಾಃ ಸ್ಯುಃ ಪೈತ್ತಿಕೇ ಹೃದಯಕ್ಲಮಃ ।
ಧೂಮಾಯನಂ ಚ ಮೂರ್ಛಾ ಚ ಸ್ವೇದಃ ಶೋಷೋ ಮುಖಸ್ಯ ಚ ॥೭॥
ಗೌರವಂ ಕಫಸಂಸ್ರಾವೋಽರುಚಿಃ ಸ್ತಮ್ಭೋಽಗ್ನಿಮಾರ್ದವಮ್ ।
ಮಾಧುರ್ಯಮಪಿ ಚಾಸ್ಯಸ್ಯ ಬಲಾಸಾವತತೇ ಹೃದಿ ॥೮॥
ಉತ್ಕ್ಲೇಶಃ ಷ್ಠೀವನಂ ತೋದಃ ಶೂಲೋ ಹೃಲ್ಲಾಸಕಸ್ತಮಃ ।

ಅರುಚಿಃ ಶ್ಯಾವನೇತ್ರತ್ವಂ ಶೋಷಶ್ಚ ಕ್ರಿಮಿಜೇ ಭವೇತ್ ||೯||
ಭ್ರಮಕ್ಲಮೌ ಸಾದಶೋಷೌ ಜ್ಞೇಯಾ ಸ್ತೇಷಾಮುಪದ್ರವಾಃ ।
ಕ್ರಿಮಿಜೇ ಕ್ರಿಮಿಜಾತೀನಾಂ ಶ್ಲೈಷ್ಮಿಕೇಣಾಂ ಚ ಯೇ ಮತಾಃ ||೧೦||

ವಾತಜಹೃದ್ರೋಗದಲ್ಲಿ ಹೃದಯವು ಉದ್ದವಾದಂತೆಯೂ, ಚುಚ್ಚಿದಂತೆಯೂ, ಕಲಕಿದಂತೆಯೂ, ಹರಿದು ಶೀಳಿದಂತೆಯೂ, ಬೀರಿದಂತೆಯೂ, ಎರಡು ಭಾಗವಾಗಿ ಒಡೆದಂತೆಯೂ ತೋರುತ್ತದೆ; (ರೋಗಿಯ ಮನಸ್ಸಿಗೆ ಗೊತ್ತಾಗುತ್ತದೆ.) ಪೈತ್ತಿಕ ಹೃದ್ರೋಗದಲ್ಲಿ ನೀರಡಿಕೆ, ಮೈಉರಿತ, ಚುರುಗುಟ್ಟಿದಂತೆ ನೋವು, ಹೃದಯದಲ್ಲಿ ಆಯಾಸ, ಬಾಯಿನಿಂದ ಹೊಗೆ ಹೊರಟು ಬಂದಂತೆ ತೋರುತ್ತದೆ, ಜ್ಞಾನತಪ್ಪುತ್ತದೆ, ಮೈಬೆವರುತ್ತದೆ, ಮುಖವು ಒಣಗುತ್ತದೆ; ಕಫಜ ಹೃದ್ರೋಗದಲ್ಲಿ ಮೈಭಾರವಾಗಿಯೂ, ಬಾಯಿನಿಂದ ಕಫಸ್ರಾವವಾಗುತ್ತಲೂ, ಅರುಚಿಯುಂಟಾಗಿ ಶರೀರದ ಅವಯವಗಳು ಬಿಗಿದು ಹಿಡಿದಂತೆಯೂ, ಆಗುತ್ತವೆ. ಅಗ್ನಿಮಾಂದ್ಯ, ಬಾಯಿಸಿಹಿಯಾಗಿ ರುಚಿತೋರುತ್ತದೆ; ತ್ರಿದೋಷಜನಿತ ಹೃದ್ರೋಗದಲ್ಲಿ ಚಿಲಚಿಲನೆ ಬಾಯಿನಲ್ಲಿ ನೀರುತುಂಬಿ, ಕಫವನ್ನು ಕೇಕರಿಸಿ ಉಗುಳುತ್ತಾನೆ; ಹೃದಯದಲ್ಲಿ ಚುಚ್ಚಿದಂತೆ ನೋವೂ, ಒಡೆತವೂ, ಇರುತ್ತದೆ; ಬಾಯಿನಿಂದ ಜೊಲ್ಲು ಸುರಿಯುತ್ತದೆ; ಕಣ್ಣು ಕತ್ತಲಾಗುತ್ತದೆ; ಕ್ರಿಮಿಜ ಹೃದ್ರೋಗದಲ್ಲಿ ಅರೋಚಕತೆ, ಕಣ್ಣು ಹೊಗೆಯ ಬಣ್ಣಕ್ಕೆ ತಿರುಗಿರುತ್ತದೆ; ಮುಖಶೋಷವುಂಟಾಗುತ್ತದೆ; ತ್ರಿದೋಷಜ ಹೃದ್ರೋಗದಲ್ಲಿ ದುಷ್ಟ ಆಹಾರವನ್ನು ಸೇವಿಸುವುದರಿಂದ ಕ್ರಿಮಿಗಳುಂಟಾಗುತ್ತವೆಯಾಗಿ ಕ್ರಿಮಿಜಹೃದ್ರೋಗವೆಂಬ ಬೇರೆ ವಿಧವಿಲ್ಲದ ಕಾರಣ ಒಟ್ಟು ಹೃದ್ರೋಗವು ನಾಲ್ಕೇ ವಿಧವೆಂದು ತಿಳಿಯಬೇಕು; ವಾತದಿಂದ ತೋದಶೂಲೆಗಳೂ, ಪಿತ್ತದಿಂದ ತಮಃಪ್ರವೇಶವೂ, ಕಫದಿಂದ ಬಾಯಿನಿಂದ ಜೊಲ್ಲು ಸುರಿಯುವುದೂ ಷ್ಠೀವನಗಳೂ ಉಂಟಾಗುತ್ತವೆ; ತಲೆತಿರುಗುವುದು, ಬಳಲಿಕೆ, ದೇಹ ಕ್ಷೀಣತೆ, ಮುಖಶೋಷ ಧಾತುಶೋಷ ಇವುಗಳೇ ಅದರ ಉಪದ್ರವಗಳು; ಕಫಜಹೃದ್ರೋಗದ ತೊಂದರೆಗಳೇ ಕ್ರಿಮಿಜಹೃದ್ರೋಗದ ಉಪದ್ರವಗಳು;

ವಾತೋಪಸೃಷ್ಟೇ ಹೃದಯೇ ವಾಮಯೇತ್ ಸ್ನಿಗ್ಧಮಾತುರಮ್ ।
ದ್ವಿಪಞ್ಚಮೂಲಕ್ವಾಥೇನ ಸಸ್ನೇಹಲವಣೇನ ತು ||೧೧||
ಪಿಪ್ಪಲ್ಯೇಲಾವಚಾ ಹಿಙ್ಗುಯವಭಸ್ಮಾನಿ ಸೈನ್ಧವಮ್ ।
ಸೌವರ್ಚಲಮಥೋ ಶುಂಠೀಮಜಮೋದಾಂ ಚ ಚೂರ್ಣಿತಮ್ ||೧೨||
ಫಲಧಾನ್ಯಾಮ್ಲ ಕೌಳತ್ಥದಧಿಮಧ್ವಾಸವಾದಿಭಿಃ ।
ಪಾಯಯೇತ ವಿಶುದ್ಧಂ ಚ ಸ್ನೇಹೇನಾನ್ಯತಮೇನ ವಾ ||೧೩||
ಭೋಜಯೇಜ್ಜೀರ್ಣಶಾಲ್ಯನ್ನಂ ಜಾಙ್ಗಲೈಃ ಸಘೃತೈರಸೈಃ ।
ವಾತಘ್ನಸಿದ್ಧಂ ತೈಲಂ ಚ ದದ್ಯಾದ್ಬಸ್ತಿಂ ಪ್ರಮಾಣತಃ ||೧೪||

ವಾತಜ ಹೃದ್ರೋಗದಲ್ಲಿ ರೋಗಿಗೆ ಸ್ನೇಹಪಾನ ಮಾಡಿಸಿ ದಶಮೂಲ ಕಷಾಯಕ್ಕೆ ತುಪ್ಪವನ್ನೂ ಸೈಂಧವವನ್ನೂ ಮಿಶ್ರಮಾಡಿ ವಮನ ಮಾಡಿಸಬೇಕು. ಕುಡಿಸಿ ಹಿಪ್ಪಲಿ,

ಏಲಕ್ಕಿ, ಬಜೆ, ಹಿಂಗು, ಯವೆಯ ಭಸ್ಮ, ಸೈಂಧವ, ಸೌವರ್ಚಲವಣ, ಶುಂಠಿ, ಅಜ ಮೋದ ಇವುಗಳ ಚೂರ್ಣವನ್ನು ದಾಳಿಂಬೆರಸ, ಕಲಗಚ್ಚು, ಹುರುಳಿಕಟ್ಟು, ಮೊಸರು, ಮಧ್ವಾಸವ ಇವುಗಳ ಪೈಕಿ ಯಾವುದಾದರೊಂದಕ್ಕೆ ಸೇರಿಸಿ ಕುಡಿಸಬೇಕು ಅಥವಾ ೪ ವಿಧ ಸ್ನೇಹಗಳ ಪೈಕಿ ಯಾವುದಾದರೊಂದರಲ್ಲಿ ಮಿಶ್ರಮಾಡಿ ನೆಕ್ಕಿಸಬೇಕು. ಹಳೆ ಅಕ್ಕಿಯ ಅನ್ನಕ್ಕೆ ಜಾಂಗಲಪ್ರಾಣಿಗಳ ಮಾಂಸರಸ ಮತ್ತು ಘೃತಗಳನ್ನು ಮಿಶ್ರಮಾಡಿ ಭೋಜನ ಮಾಡಿಸಬೇಕು. ದೇವದಾರ್ವಾದಿ ಕಷಾಯದಿಂದ ತಯಾರಿಸಿದ ತೈಲದಿಂದ ಬಸ್ತಿಪ್ರಯೋಗವನ್ನು ಮಾಡಿಸಬೇಕು.

ಶ್ರೀಪರ್ಣೀ ಮಧುಕಕ್ಷೌದ್ರಸಿತೋತ್ಪಲಜಲೈರ್ವಮೇತ್ ।
ಪಿತ್ತೋಪಸೃಷ್ಟೇ ಹೃದಯೇ ಸೇವೇತ ಮಧುರೈಃ ಶೃತಮ್ ॥೧೫॥
ಘೃತಮ್ ಕಷಾಯಾಂಶ್ಚೋದ್ದಿಷ್ಟಾನ್ ಪಿತ್ತಜ್ವರವಿನಾಶನಾನ್ ।
ತೃಪ್ತಸ್ಯ ಚ ರಸೈರ್ಮುಖ್ಯೈರ್ಮಧುರೈಃ ಸಘೃತೈರ್ಭಿಷಕ್ ॥೧೬॥
ಸಕ್ಷೌದ್ರಂ ವಿತರೇದ್ಬಸ್ತೌ ತೈಲಂ ಮಧುಕಸಾಧಿತಮ್ ।

ಪಿತ್ತಹೃದ್ರೋಗದಲ್ಲಿ ಶಿವನೀಹಣ್ಣು ತೊಗಟೆ, ಅತಿಮಧುರ, ಜೇನುತುಪ್ಪ, ಸಕ್ಕರೆ, ನೈದಿಲೆಗೆಡ್ಡೆ, ಕೊನ್ನಾರಿಗೆಡ್ಡೆಗಳ ಕಷಾಯಕ್ಕೆ ಸಕ್ಕರೆ, ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಿ ವಮನ ಮಾಡಿಸಬೇಕು. ಕಾಕೋಳ್ಯಾದಿ ದ್ರವ್ಯಗಳಿಂದ ತಯಾರಿಸಿದ ಘೃತ ವನ್ನೂ, ರಕ್ತಚಂದನ, ಲಾಮಂಚ, ಶಿವನಿ ಮೊದಲಾದ ಪಿತ್ತಜ್ವರಹರಗಳಾದ ಕಷಾಯ ಗಳನ್ನೂ ಕುಡಿಸಬೇಕು. ಏಣ, ಹರಿಣಾದಿಗಳ ಮಾಂಸರಸಕ್ಕೆ ಘೃತವನ್ನು ಮಿಶ್ರಮಾಡಿ ಕುಡಿಸುವುದರಿಂದಲೂ, ಕಾಕೋಳ್ಯಾದಿ ಮಧುರೌಷಧಗಳಿಂದ ತಯಾರಿಸಿದ ಘೃತಪಾನ ದಿಂದಲೂ ತೃಪ್ತನಾದ ಹೃದ್ರೋಗಿಗೆ ಅತಿಮಧುರದೊಡನೆ ತಯಾರಾದ ತೈಲಕ್ಕೆ ಜೇನು ತುಪ್ಪವನ್ನು ಸೇರಿಸಿ ಬಸ್ತಿಯನ್ನು ಪ್ರಯೋಗಿಸಬೇಕು.

ವಚಾನಿಮ್ಬಕಷಾಯಾಭ್ಯಾಂ ವಾನ್ತಂ ಹೃದಿ ಕಫಾತ್ಮಕೇ ॥೧೭॥
ಚೂರ್ಣಂ ತು ಪಾಯಯೇತೋಕ್ತಂ ವಾತಜೇ ಭೋಜಯೇಚ್ಚತಮ್ ।
ಫಲಾದಿಮಥ ಮುಸ್ತಾದಿಂ ತ್ರಿಫಲಾಂ ವಾ ಪಿಬೇನ್ನರಃ ॥೧೮॥
ಶ್ಯಾಮತ್ರಿವೃತ್ಕಲ್ಕಯುತಂ ಘೃತಂ ವಾಪಿ ವಿರೇಚನಮ್ ।
ಬಲಾತೈಲೈರ್ವಿದಧ್ಯಾಚ್ಚ ಬಸ್ತಿಂ.ಬಸ್ತಿವಿಶಾರದಃ ॥೧೯॥

ಕಫಹೃದ್ರೋಗದಲ್ಲಿ ಬಜೆ ಮತ್ತು ಬೇವುಗಳ ಕಷಾಯದಿಂದ ವಮನ ಮಾಡಿಸಿ ವಾತಹೃದ್ರೋಗದಲ್ಲಿ ಹೇಳಿರುವ ಹಿಪ್ಪಲಿ, ಏಲಕ್ಕಿ, ಬಜೆ, ಮೊದಲಾದುವುಗಳ ಚೂರ್ಣ ವನ್ನು ಕುಡಿಸಿ, ಆ ಚೂರ್ಣವನ್ನೇ ಅನ್ನದೊಡನೆ ಮಿಶ್ರಮಾಡಿ ಭೋಜನ ಮಾಡಿಸ ಬೇಕು ; ಮಗ್ಗಾರೆಕಾಯಿ ಮೊದಲಾದ ಸಂಶೋಧನ ಸಂಶಮನ ಗಣ ಮತ್ತು ಮುಸ್ತಾದಿ ಗಣದ್ರವ್ಯಗಳ ಕಷಾಯ ತ್ರಿಫಲಾ ಕಷಾಯ ಇವುಗಳಲ್ಲೊಂದನ್ನು ಕುಡಿಸಬೇಕು ; ಕರಿ ತಿಗಡೆ ಬಿಳಿತಿಗಡೆಗಳ ಚೂರ್ಣವನ್ನು ತುಪ್ಪದೊಡನೆ ತಿನ್ನಿಸಿ ವಿರೇಚನ ಮಾಡಿಸಬೇಕು ;

ಮತ್ತು ಕುಶಲನಾದ ವೈದ್ಯನು ಬಲಾತೈಲದಿಂದ ಬಸ್ತಿಯನ್ನು ಕೊಡಿಸಬೇಕು.

ಕ್ರಿಮಿಹೃದ್ರೋಗಿಣಂ ಸ್ನಿಗ್ಧಂ ಭೋಜಯೇತ್ಪಿಶಿತೌದನಮ್ ।
ದಧ್ನಾ ಚ ಪಲಲೋಪೇತಂ ತ್ರ್ಯಹಂ ಪಶ್ಚಾದ್ವಿರೇಚಯೇತ್ ॥೨೦॥
ಸುಗನ್ಧಿಭಿಃ ಸಲವಣೈರ್ಯೋಗೈಃ ಸಾಜಾಜಿಶರ್ಕರೈಃ ।
ವಿಡಙ್ಗಗಾಢಂ ಧಾನ್ಯಾಮ್ಲಂ ಪಾಯಯೇತಾಪ್ಯನನ್ತರಮ್ ॥೨೧॥
ಹೃದಯಸ್ಥಾಃ ಪತನ್ತ್ಯೇವ ಮಧಸ್ತಾತ್ ಕ್ರಿಮಯೋ ನೃಣಾಮ್ ।
ಯವಾನ್ನಂ ವಿತರೇಚ್ಚಾಸ್ಯ ಸವಿಡಙ್ಗಮತಃ ಪರಮ್ ॥೨೨॥

ಕ್ರಿಮಿಜಹೃದ್ರೋಗ ಪೀಡಿತನಿಗೆ ಮೂರು ದಿನಗಳವರೆಗೆ ಮಾಂಸದೊಡನೆ ಅನ್ನವನ್ನು ಮಿಶ್ರಮಾಡಿ ಮೊಸರು, ಹುರಿದಎಳ್ಳಿನ ಚೂರ್ಣಗಳನ್ನು ಸೇರಿಸಿ ಭೋಜನಮಾಡಿಸಿದರೆ ಕ್ರಿಮಿಗಳು ಕೆರಳುತ್ತವೆ; ಅನಂತರ ಲವಣಗಳನ್ನಾಗಲೀ ಜೀರಿಗೆ ಮತ್ತು ಸಕ್ಕರೆಯನ್ನಾಗಲೀ ಸೇರಿಸಿದ ಸುಗಂಧ ದ್ರವ್ಯವನ್ನೂ ವಿರೇಚನೌಷಧವನ್ನೂ ಪ್ರಯೋಗಿಸಿದನಂತರ ವಿಡಂಗಚೂರ್ಣವನ್ನು ಹೆಚ್ಚಾಗಿ ಸೇರಿಸಿದ ಕಲಗಚ್ಚನ್ನು ಕುಡಿಸಿದರೆ ಹೃದಯಗತ ಕ್ರಿಮಿಗಳೆಲ್ಲಾ ಗುದದ್ವಾರದಿಂದ ಹೊರಕ್ಕೆ ಬಂದು ಬೀಳುತ್ತವೆ; ಅನಂತರ ವಿಡಂಗ ಚೂರ್ಣವನ್ನು ಮಿಶ್ರಮಾಡಿದ ಯವಧಾನ್ಯದ ಅನ್ನವನ್ನು ಭೋಜನಮಾಡಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ
ಹೃದ್ರೋಗಪ್ರತಿಷೇಧನಾಮಕ ತ್ರಿಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ
ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ
ಕೃತ ಕರ್ಣಾಟಕ ಭಾಷಾವಿವೃತಿಃ.

ಚತುಶ್ಚತ್ವಾರಿಂಶತ್ತಮೋಽಧ್ಯಾಯಃ

ಅಥಾತಃ ಪಾಣ್ಡು ರೋಗಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಪಾಂಡುರೋಗ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ :—ಪಾಂಡ್ವಾದಿ ರೋಗಾದಿ ಪ್ರತಿಷೇಧವೆಂದು ಎರಡು "ಆದಿ" ಶಬ್ದಗಳು ಲೋಪವಾಗಿವೆ ; ಮೊದಲನೆಯ "ಆದಿ" ಶಬ್ದದಿಂದ ಪಾಂಡು, ಕೃಷ್ಣ, ಪೀತ, ಮಿಶ್ರ ವರ್ಣಗಳೆಂದೂ ಎರಡನೆಯ "ಆದಿ" ಶಬ್ದದಿಂದ ಪಾಂಡು, ಕಾಮಲಾ, ಹಲೀಮಕಾದಿ, ರೋಗ ಪ್ರತಿಷೇಧವೆಂದೂ ತಿಳಿಯಬೇಕು ; ಮತ್ತೆ ಕೆಲವರು ಪಾಂಡುವರ್ಣವೇ ಅಧಿಕವಾಗಿರುವ ಎಲ್ಲಾ ಪಾಂಡು ರೋಗಗಳೂ ಎಂದು ತಿಳಿದು ಒಂದೇ "ಆದಿ" ಪದಲೋಪವೆಂದೂ ಇನ್ನು ಕೆಲವರು ಕಾಮಲಾದಿಗಳೂ ಪಾಂಡುರೋಗದಲ್ಲೇ ಅಡಗಿಕೊಂಡಿರುವುದರಿಂದ "ಆದಿ" ಶಬ್ದವನ್ನು ಪ್ರಯೋಗಿಸದಿದ್ದರೂ ಕಾಮಲಾದಿ ರೋಗಗಳೂ ಹೇಳಿದಂತಾಗಿರುತ್ತದೆ ಎಂದೂ ಅಭಿಪ್ರಾಯ ಪಡುತ್ತಾರೆ.

ವ್ಯವಾಯಮಮ್ಲಂ ಲವಣಾನಿ ಮದ್ಯಂ ಮೃದಂ ದಿವಾಸ್ವಪ್ನ ಮತೀವ ತೀಕ್ಷ್ಣಮ್ ।
ನಿಷೇವಮಾಣಸ್ಯ ವಿದೂಷ್ಯ ರಕ್ತಂ ಕುರ್ವನ್ತಿ ದೋಷಾಸ್ತ್ವಚಿ ಪಾಣ್ಡುಭಾವಮ್ ||೩||

ಪಾಣ್ಡ್ವಾಮಯೋಽಷ್ಟಾರ್ಧವಿಧಃ ಪ್ರದಿಷ್ಟಃ ಪೃಥಕ್ ಸಮಸ್ತೈರ್ಯುಗಪಚ್ಚ ದೋಷೈಃ ।
ಸರ್ವೇಷು ಚೈತೇಷ್ವಿಹ ಪಾಣ್ಡುಭಾವೋ ಯತೋಽಧಿಕೋಽತಃ ಖಲುಪಾಣ್ಡುರೋಗಃ ||೪||

ತ್ವಕ್‌ಸ್ಫೋಟನಂ ಷ್ಠೀವನಗಾತ್ರಸಾದೌ ಮೃದ್ಭಕ್ಷಣಂ ಪ್ರೇಕ್ಷಣ ಕೂಟಶೋಥಃ ।
ವಿಣ್ಮೂತ್ರಪೀತತ್ವಮಥಾವಿಪಾಕೋ ಭವಿಷ್ಯತಸ್ತಸ್ಯ ಪುರಃಸರಾಣಿ ||೫||

ಸ್ತ್ರೀಸಂಗ, ಆಮ್ಲ, ಲವಣದ್ರವ್ಯಗಳನ್ನೂ, ಮದ್ಯವನ್ನೂ, ಮೃತ್ತಿಕೆ, ಮಣ್ಣನ್ನೂ, ಹಗಲು ನಿದ್ರೆಯನ್ನೂ, ಅತ್ಯಂತ ತೀಕ್ಷ್ಣದ್ರವ್ಯಗಳನ್ನೂ ಸೇವಿಸುವವನಿಗೆ ಮೂರು ದೋಷಗಳೂ ಪ್ರಕೋಪಗೊಂಡು ರಕ್ತವನ್ನು ಕೆಡಿಸಿ ಚರ್ಮವನ್ನು ಬೆಳ್ಳಗೆ ಮಾಡುತ್ತವೆ ; ವಾತ, ಪಿತ್ತ, ಕಫಗಳು ಪ್ರತ್ಯೇಕವಾಗಿ ಮೂರು ವಿಧಗಳಿಂದಲೂ ಮತ್ತು ಅವು ಮೂರೂ ಒಟ್ಟಿಗೆ ಸೇರಿ ಒಂದು ವಿಧದಿಂದಲೂ ಪಾಂಡುರೋಗವನ್ನುಂಟುಮಾಡುತ್ತವೆ ; ಇವೆಲ್ಲಾ ವಿಧಗಳಲ್ಲೂ ಪಾಂಡು ವರ್ಣವೇ ಹೆಚ್ಚಾಗಿರುವ ಕಾರಣ ಪಾಂಡುರೋಗವೆಂಬ ಹೆಸರು ; ಚರ್ಮವು ಬಿರಿಯುವುದು, ಕಫವನ್ನು ಕ್ಯಾಕರಿಸಿ ಉಗುಳುವುದು, ದೇಹಕ್ಷೀಣತೆ,

ಮಣ್ಣನ್ನು ತಿನ್ನಬೇಕೆಂಬ ಇಚ್ಛೆ, ಅಕ್ಷಿಕೂಟಗಳು ಊದಿರುವುದು ಮಲಮೂತ್ರಗಳು ಹಳದಿಬಣ್ಣಕ್ಕೆ ತಿರುಗಿರುವುದು ತಿಂದ ಆಹಾರವು ಜೀರ್ಣವಾಗದಿರುವುದು ಇವು ಪಾಂಡು ರೋಗದ ಪೂರ್ವರೂಪಗಳು.

ಸಕಾಮಲಾಪಾನಕಿಪಾಣ್ಡುರೋಗಃ ಕುಮ್ಭಾಹ್ವಯೋ ಲಾಘರ ಕೋಲಸಾಖ್ಯಃ ।
ವಿಭಾವ್ಯತೇ ಲಕ್ಷಣಮಸ್ಯ ಕೃತ್ಸ್ನಂ ನಿಬೋಧವಕ್ಷ್ಯಾಮ್ಯನುಪೂರ್ವಶಸ್ತತ್ ॥೬॥

ಈ ಪಾಂಡುರೋಗವನ್ನೇ ಕಾಮಲಾ, ಪಾನಕಿ, ಪಾಂಡುರೋಗಃ ಕುಂಭಸಾಹ್ವಃ, ಎಂಬ ವಿವಿಧ ಹೆಸರಿನಿಂದ ವ್ಯವಹರಿಸುತ್ತಾರೆ ; ಅವುಗಳ ಲಕ್ಷಣಗಳನ್ನು ಹೇಳುತ್ತೇವೆ ಕೇಳು.

ಕೃಷ್ಣೇಕ್ಷಣಂ ಕೃಷ್ಣಸಿರಾವನದ್ಧಂ ತದ್ವರ್ಣವಿಣ್ಮೂತ್ರನಖಾನನಂಚ ।
ವಾತೇನ ಪಾಣ್ಡುಂ ಮನುಜಂ ವ್ಯವಸ್ಯೇದ್ಯುಕ್ತಂ ತಥಾನ್ಯೈಸ್ತದುಪದ್ರವೈಶ್ಚ ॥೭॥
ಪೀತೇಕ್ಷಣಂ ಪೀತಸಿರಾವನದ್ಧಂ ತದ್ವರ್ಣವಿಣ್ಮೂತ್ರನಖಾನನಂ ಚ ।
ಪಿತ್ತೇನ ಪಾಣ್ಡುಂ ಮನುಜಂ ವ್ಯವಸ್ಯೇದ್ಯುಕ್ತಂ ತಥಾನ್ಯೈಸ್ತದುಪದ್ರವೈಶ್ಚ ॥೮॥
ಶುಕ್ಲೇಕ್ಷಣಂ ಶುಕ್ಲಸಿರಾವನದ್ಧಂ ತದ್ವರ್ಣವಿಣ್ಮೂತ್ರನಖಾನನಂ ಚ ।
ಕಫೇನ ಪಾಣ್ಡುಂ ಮನುಜಂ ವ್ಯವಸ್ಯೇದ್ಯುಕ್ತಂ ತಥಾನ್ಯೈಸ್ತದುಪದ್ರವೈಶ್ಚ ॥೯॥

ಕಣ್ಣುಗುಡ್ಡೆಗಳು ಕಪ್ಪಾಗಿಯೂ ಶರೀರದ ಮೇಲೆ ಕಪ್ಪುಸಿರೆಗಳಿದ್ದು ಬಿಗಿದಿರುವಂತೆ ಕಾಣುವುದೂ ಮಲಮೂತ್ರ ಉಗರು ಮುಖಗಳು ಕಪ್ಪಾಗಿ ಕಾಣುವುದೂ, ಸ್ರಂಸವ್ಯಾಸಾದಿವಾತೋಪದ್ರವಗಳಿಂದ ಪೀಡಿತನಾಗುವುದೂ ಈ ಲಕ್ಷಣಗಳಿಂದ ವಾತಿಕ ಪಾಂಡುರೋಗನೆಂದೂ, ಕಣ್ಣುಗುಡ್ಡೆಗಳು ಹಳದಿಬಣ್ಣವುಳ್ಳವಾಗಿ ಮೈಮೇಲೆ ಹಳದಿ ಬಣ್ಣದ ಸಿರೆಗಳಿದ್ದು ಬಿಗಿತದಿಂದಿದ್ದು, ಮಲಮೂತ್ರ ಉಗುರು ಮುಖಗಳು ಹಳದಿಬಣ್ಣವಾಗಿ ಉರಿತ, ನೀರಡಿಕೆ ಮೊದಲಾದ ಪಿತ್ತೋಪದ್ರವಗಳಿಂದ ಪೀಡಿತನಾದರೆ ಪಿತ್ತಪಾಂಡುವೆಂದೂ ಕಣ್ಣುಗುಡ್ಡೆಗಳು ಬೆಳ್ಳಗೆ ಕಾಣುತ್ತಾ ಮೈಮೇಲೆ ಬಿಳಿಯ ಸಿರೆಗಳಿದ್ದು ಬಿಗಿಯುತ್ತಾ ಮಲಮೂತ್ರ ಉಗುರು ಮುಖಗಳು ಬಿಳುಪಾಗಿ ಮೈಭಾರ ಬಾಯಿನಿಂದ ಜೊಲ್ಲುಸುರಿಯೋಣ ಇವೇ ಮೊದಲಾದ ಕಫದ ಉಪದ್ರವಗಳಿದ್ದರೆ ಕಫಜಪಾಂಡುವೆಂದೂ ತಿಳಿಯಬೇಕು.

ಸರ್ವಾತ್ಮಕೇ ಸರ್ವಮಿದಂ ವ್ಯವಸ್ಯೇದ್ವಕ್ಷ್ಯಾಮಿ ಲಿಙ್ಗಾನ್ಯಥಕಾಮಲಾಯಾಃ ।
ಯೋ ಹ್ಯಾಮಯಾನ್ತೇ ಸಹಸಾನ್ನಮಮ್ಲಮದ್ಯಾದಪಥ್ಯಾನಿ ಚ ತಸ್ಯ ಪಿತ್ತಮ್ ॥೧೦॥
ಕರೋತಿ ಪಾಣ್ಡುಂ ವದನಂ ವಿಶೇಷಾತ್ ಪೂರ್ವೇರಿತೌ ತನ್ದ್ರಬಲ ಕ್ಷಯೌ ಚ ।
ಭೇದಸ್ತು ತಸ್ಯಾಃ ಖಲು ಕುಮ್ಭಸಾಹ್ವಃ ಶೋಫೋ ಮಹಾಂಸ್ತತ್ರ ಚ ಪರ್ವಭೇದಃ ॥೧೧॥
ಜರಾಙ್ಗಮರ್ದಭ್ರಮಸಾದತನ್ದ್ರಾಕ್ಷಯಾನ್ವಿತೋ ಲಾಘರಕೋಲಸಾಖ್ಯಃ ।
ತಂ ವಾತಪಿತ್ತಾದ್ಧರಿಪೀತನೀಲಂ ಹಲೀಮಕಂ ನಾಮ ವದನ್ತಿ ತಜ್ಜ್ಞಾಃ ॥೧೨॥

ಸನ್ನಿಪಾತಜನಿತಪಾಂಡುರೋಗದಲ್ಲಿ ವಾತಾದಿ ಮೂರು ದೋಷಗಳ ಲಕ್ಷಣಗಳೂ ಒಟ್ಟು ಸೇರಿರುತ್ತವೆ ; ಇನ್ನುಮುಂದೆ ಕಾಮಲಾಲಕ್ಷಣಗಳನ್ನು ಹೇಳುತ್ತೇವೆ ; ಪಾಂಡು ರೋಗದ ಪರ್ಯಾಯವೇ, ಕಾಮಲಾರೋಗವೆಂದಮೇಲೆ ಪ್ರತ್ಯೇಕವಾಗಿ ಕಾಮಲಾ ಲಕ್ಷಣಗಳನ್ನೇಕೆ ಹೇಳಬೇಕು ಎಂದು ಶಂಕೆಯುಂಟಾದರೆ ವಾತಾದಿ ಪಾಂಡುರೋಗ ಗಳಿಗೆ ಪ್ರತ್ಯೇಕ ಲಕ್ಷಣಗಳಿರುವಂತೆಯೇ ಕಾಮಲಾದಿಗಳಲ್ಲೂ ಪಾಂಡುರೋಗ ಲಕ್ಷಣಗಳೇ ಇರುವ ಕಾರಣ ಕಾಮಲಾದಿ ಸಂಜ್ಞೆಗಳಿಗೆ ವಿಶಿಷ್ಟ ಅವಸ್ಥಾ ಪರಿಜ್ಞಾನಕ್ಕಾಗಿ ಅವುಗಳ ಲಕ್ಷಣಗಳನ್ನು ಹೇಳುತ್ತೇವೆ. ಪಾಂಡುರೋಗ ಅಥವಾ ಇತರ ರೋಗಗಳು ನಿವಾರಣೆ ಯಾದನಂತರ ಹಠಾತ್ತಾಗಿ ಹುಳಿರಸ ಮಿಶ್ರಮಾಡಿದ ಅಥವಾ ಅಪಥ್ಯಗಳಾದ ಅನ್ನಪಾನ ಗಳನ್ನು ಸೇವಿಸಿದರೆ ಪಿತ್ತವು ಪ್ರಕೋಪಗೊಂಡು ಅವನ ದೇಹವನ್ನು ಬೆಳ್ಳಗೆ ಮಾಡುತ್ತದೆ. ಅವನಿಗೆ ತೂಕಡಿಕೆ ಬಲಹಾನಿಗಳುಂಟಾಗುತ್ತವೆ. (ಗರ್ಭವ್ಯಾಕರಣಾಧ್ಯಾಯದಲ್ಲಿ ತಂದ್ರಾಲಕ್ಷಣವೂ ಸೂತ್ರಸ್ಥಾನದ ದೋಷಾದಿಕ್ಷಯವೃದ್ಧಿ ಅಧ್ಯಾಯದಲ್ಲಿ ಬಲಕ್ಷಯ ಲಕ್ಷಣಗಳೂ ಹೇಳಲ್ಪಟ್ಟಿರುತ್ತೆ) ; ಕುಂಭಸಾಹ್ವಕ ತಂತ್ರಾಂತರಗಳಲ್ಲಿ ಕುಂಭಕಾಮಲಾ ಎಂದು ಹೆಸರು. ಅಧಿಕವಾಗಿ ಶೋಫವಿರುತ್ತದೆ. ಬೆರಳ ಗಿಣ್ಣುಗಳಲ್ಲಿ ನೋವೂ ಜ್ವರ ಅಂಗಮರ್ದ, ತಲೆತಿರುಗು, ಕಾರ್ಶ ತೂಕಡಿಕೆ, ಧಾತುಕ್ಷಯ ಇವುಗಳಿದ್ದರೆ ಲಾಘರಕ ಅಥವಾ ಆಲಸವೆಂದೂ ಹೇಳುತ್ತಾರೆ ; ಈ ಕುಂಭಸಾಹ್ವರೋಗವೇ ವಾತಪಿತ್ತಗಳಿಂದ ಹಸುರು, ಹಳದಿ, ನೀಲಿ, ಬಣ್ಣಗಳಿಗೆ ತಿರುಗಿದರೆ ಹಲೀಮಕವೆಂದು ಕಾಯ ಚಿಕಿತ್ಸಕರು ಹೇಳುತ್ತಾರೆ.

ಟಿಪ್ಪಣಿ :—ಪಾಂಡುರೋಗ, ಕಾಮಲಾ, ಕುಭಸಾಹ್ವಃ, (ಕುಂಭಕಾಮಾಲೆ) ಲಾಘರಕ, ಅಲಸ, ಹಲೀಮಕ ಎಂಬವು ಪಾಂಡುರೋಗದ ಪರ್ಯಾಯಗಳಾದರೂ ಮೇಲೆ ಹೇಳಿದ ಲಕ್ಷಣ ಭೇದಗಳಿಂದ ಅವುಗಳನ್ನು ನಿರ್ಧರಿಸಬೇಕು.

> ಉಪದ್ರವಾಸ್ತೇಷ್ವರುಚಿಃ ಪಿಪಾಸಾ ಛರ್ದಿರ್ಜ್ವರೋ ಮೂರ್ಧರುಜಾಗ್ನಿಸಾದಃ ।
> ಶೋಫಸ್ತಥಾ ಕಣ್ಠಗತೋಽಬಲತ್ವಂ ಮೂರ್ಛಾಕ್ಲಮೋಹೃದ್ಯವಪೀಡನಂ ಚ ॥೧೩॥
> ಸಾಧ್ಯಂ ತು ಪಾಣ್ಡ್ವಾಮಯಿನಂ ಸಮೀಕ್ಷ್ಯ ಸ್ನಿಗ್ಧಂಘೃತೇನೋರ್ಧ್ವಮಧಶ್ಚ ಶುದ್ಧಮ್ ।
> ಸಂಪಾದಯೇತ್ಕ್ಷೌದ್ರಘೃತಪ್ರಗಾಢೈರ್ಹರೀತಕೀಚೂರ್ಣಯುತೈಃ ಪ್ರಯೋಗೈಃ ॥೧೪॥
> ಪಿಬೇದ್ಘೃತಂ ವಾ ರಜನೀವಿಪಕ್ವಂ ಯತ್ತ್ರೈಫಲಂ ತೈಲ್ವಕಮೇವ ವಾಪಿ ।
> ವಿರೇಚನದ್ರವ್ಯಕೃತಂ ಪಿಬೇದ್ವಾ ಯೋಗಾಂಶ್ಚವೈರೇಚನಿಕಾನ್ಘೃತೇನ ॥೧೫॥

ಅರುಚಿ, ನೀರಡಿಕೆ, ವಮನ, ಜ್ವರ, ತಲೆನೋವು, ಅಗ್ನಿಮಾಂದ್ಯ, ಕಂಠಶೋಫ ದೌರ್ಬಲ್ಯ ಪ್ರಜ್ಞೆ ತಪ್ಪುವುದು, ಆಯಾಸ, (ಬಳಲಿಕೆ) ಹೃದಯವು ಹಿಂಡಿದಂತೆ ನೋಯು-ವುದು ಇವು ಪಾಂಡುರೋಗದಲ್ಲಿ ಕಂಡುಬರುವ ಉಪದ್ರವಗಳು ಇವುಗಳಿಂದ ಸಾಧ್ಯಾಸಾಧ್ಯ ತ್ವವನ್ನು ನಿರ್ಧರಿಸಬೇಕು; ಸಾಧ್ಯ ಲಕ್ಷಣಗಳುಳ್ಳ ಪಾಂಡುರೋಗಿಗೆ ಸ್ನೇಹಪಾನಮಾಡಿಸಿ ವಮನವಿರೇಚನಗಳಿಂದದೇಹಶುದ್ಧಿ ಮಾಡಿಸಿ ಅಣಿಲೆಕಾಯಿಚೂರ್ಣಕ್ಕೆ ತುಂಬಾತುಪ್ಪವನ್ನೂ

ಜೇನುತುಪ್ಪವನ್ನೂ ಮಿಶ್ರಮಾಡಿ ಪ್ರಯೋಗಿಸಬೇಕು.; ಹರಿದ್ರಾಘೃತ, ತ್ರಿಫಲಾಘೃತ ರೋದ್ರಘೃತ ಇವುಗಳಲ್ಲೊಂದನ್ನಾಗಲೀ ವಿರೇಚನ ದ್ರವ್ಯಗಳಿಂದ ತಯಾರಿಸಿದ ಔಷದ ಗಳನ್ನು ತುಪ್ಪದೊಡನೆಯಾಗಲೀ ಕುಡಿಸಬೇಕು.

ಮೂತ್ರೇ ನಿಕುಮ್ಭಾರ್ಧಪಲಂ ವಿಪಾಚ್ಯ ಪಿಬೇದಭೀಕ್ಷ್ಣಂ ಕುಡವಾರ್ಧಮಾತ್ರಮ್ |
ಖಾದೇದ್ಗುಡಂ ವಾಪ್ಯಭಯಾ ವಿಮಿಶ್ರಮಾರಗ್ವಧಾದಿ ಕ್ವಥಿತಂ ಪಿಬೇದ್ವಾ ||೧೬||
ಅಯೋರಜೋ ವ್ಯೋಷವಿಡಙ್ಗ ಚೂರ್ಣಂ ಲಿಹ್ಯಾದ್ಧರಿದ್ರಾಂ ತ್ರಿಫಲಾನ್ವಿತಾಂ ವಾ |
ಸರ್ಪಿರ್ಮಧುಭ್ಯಾಂ ವಿದಧೀತ ವಾಪಿ ಶಾಸ್ತ್ರಪ್ರದೇಶಾಭಿಹಿತಾಂಶ್ಚ ಯೋಗಾನ್ ||೧೭||
ಹರೇಚ್ಚ ದೋಷಾನ್ ಬಹುಶೋಽಲ್ಪಮಾತ್ರಾನ್ ಶಯೇದ್ಧಿ ದೋಷೇಷ್ವತಿನಿರ್ಹೃತೇಷು |
ಧಾತ್ರೀಫಲಾನಾಂರಸಮಿಕ್ಷುಜಂ ಚ ಮನ್ಥಂ ಪಿಬೇತ್ ಕ್ಷೌದ್ರಯುತಂ ಹಿತಾಶೀ ||೧೮||

ಅರ್ಧಪಲ ಜಾಪಾಳದ ತೊಗಟೆಯನ್ನು ೧೬ ರಷ್ಟು ಎಮ್ಮೆಯ ಮೂತ್ರದಲ್ಲಿ ಕುದಿಸಿ ¼ ಭಾಗಕ್ಕೆ ಉಳಿಸಿ ಶೋಧಿಸಿ ೨ ಪಲದಷ್ಟು ಕಷಾಯವನ್ನು ಕುಡಿಸಬೇಕು ; ಅಣಿಲೆಕಾಯಿ ಚೂರ್ಣ ಮಿಶ್ರಮಾಡಿದ ಬೆಲ್ಲವನ್ನೂ ಅಥವಾ ಕಕ್ಕೆಯ ಕಷಾಯವನ್ನಾ ಗಲೀ ಕುಡಿಸಬೇಕು ; ಕಬ್ಬಿಣದ ಅರಪುಡಿ, ತ್ರಿಕಟು ವಿಡಂಗಗಳ ಚೂರ್ಣವನ್ನಾಗಲೀ ತ್ರಿಫಲಾಚೂರ್ಣದೊಡನೆ ಅರಿಶಿನದ ಪುಡಿಯನ್ನು ಸೇರಿಸಿ ತುಪ್ಪ, ಜೇನುತುಪ್ಪಗಳಲ್ಲಿ ರಂಗಳಿಸಿಯಾಗಲೀ ತಿನ್ನಿಸಬೇಕು ; ಚಿಕಿತ್ಸೆಯಲ್ಲಿ ಹೇಳಿರುವ ನವಾಯಸಚೂರ್ಣಯೋಗ ವನ್ನೂ ಪ್ರಯೋಗಿಸಬೇಕು ; ಒಂದೇ ಸಾರಿ ಅಧಿಕ ಪ್ರಮಾಣದಿಂದ ವಿರೇಚನ ಮಾಡಿಸಿ ದರೆ ಶೋಥವುಂಟಾಗಿ ರೋಗವು ಅಸಾಧ್ಯವಾಗುತ್ತದೆ. ನೆಲ್ಲೀಕಾಯಿರಸ, ಕಬ್ಬಿನರಸ ಗಳಿಗೆ ಅರಳುಹಿಟ್ಟು, ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ಮಂಥವನ್ನು ತಯಾರಿಸಿ ಕುಡಿಸಿ ಹಿತಾಹಾರವನ್ನು ಭೋಜನ ಮಾಡಿಸಬೇಕು.

ಉಭೇ ಬೃಹತ್ಯೌ ರಜನೀಂ ಶುಕಾಖ್ಯಾಂ ಕಾಕಾದನೀಂ ಚಾಪಿ ಸಕಾಕಮಾಚೀಮ್ |
ಆದಾರಿಶಿಮ್ಬ್ಯಾಂ ಸಕದಮ್ಬಪುಷ್ಪೀಂ ವಿಪಾಚ್ಯ ಸರ್ಪಿರ್ವಿಪಚೇತ್ಕಷಾಯೇ ||೧೯||
ತತ್ಪಾಣ್ಡುತಾಂ ಹನ್ತ್ಯುಪಯುಜ್ಯಮಾನಂ ಕ್ಷೀರೇಣ ವಾ ಮಾಗಧಿಕಾ ಯಥಾಗ್ನಿ |
ಹಿತಂ ಚ ಯಷ್ಟೀಮಧುಜಂ ಕಷಾಯಂ ಚೂರ್ಣಂ ಸಮಂ ವಾ ಮಧುನಾವಲಿಹ್ಯಾತ್ ||೨೦||

ಗೋಮೂತ್ರಯುಕ್ತಂ ತ್ರಿಫಲಾದಳಾನಾಂ ದತ್ವಾಯಸಂ ಚೂರ್ಣ ಮನಲ್ಪಕಾಲಮ್ |
ಪ್ರವಾಳಮುಕ್ತಾಞ್ಜನಶಙ್ಖಚೂರ್ಣಂ ಲಿಹ್ಯಾತ್ತಥಾ ಕಾಞ್ಚನಗೈರಿಕೋತ್ಥಮ್ ||೨೧||
ಆಜಂ ಶಕೃತ್ಸ್ಯಾತ್ಕುಡವ ಪ್ರಮಾಣಂ ಬಿಡಂ ಹರಿದ್ರಾಲವಣೋತ್ತಮಂ ಚ |
ಪೃಥಕ್ ಪಲಾಂಶಾನಿ ಸಮಗ್ರಮೇತಚ್ಚೂರ್ಣಂ ಹಿತಾಶೀ ಮಧುನಾವಲಿಹ್ಯಾತ್ ||೨೨||

ಹೆಗ್ಗುಳ್ಳ, ನೆಲಗುಳ್ಳ, ಅರಿಶಿನ, ಬಾಗೆತೊಗಟೆ, ಕಾಗೆತೊಂಡೆ, ಗಣಿಕೆಸೊಪ್ಪು, ವಡಿವಾರ, ಬೋಳದರಗ, ಇವುಗಳ ಕಷಾಯದೊಡನೆ ಘೃತಪಾಕಮಾಡಿ ಕುಡಿಸಿದರೆ ಪಾಂಡುರೋಗಹರಣವಾಗುತ್ತದೆ ಅಥವಾ ಅಗ್ನಿಬಲಕ್ಕೆ ತಕ್ಕಂತೆ ಹಿಪ್ಪಲಿಚೂರ್ಣವನ್ನು ಹಾಲಿನಲ್ಲಿ ಕದರಿ ಕುಡಿಸಬೇಕು. ಅತಿಮಧುರದ ಕಷಾಯಕ್ಕೆ ಜೇನುತುಪ್ಪ ಬೆರೆಸಿ

ಕುಡಿಸಬೇಕು. ಅತಿಮಧುರದ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಸಿ ನೆಕ್ಕಿಸಬೇಕು. ತ್ರಿಫಲಾಚೂರ್ಣ ಮತ್ತು ಕಬ್ಬಿಣದ ಅರಪುಡಿಗಳನ್ನು ಗೋಮೂತ್ರದಲ್ಲಿ ಕದರಿ ಬಲುಕಾಲ ದವರೆಗೆ ಕುಡಿಸಬೇಕು. (ಕೆಲವರು ಗೋಮೂತ್ರದಲ್ಲಿ ಭಾವನೆ ಮಾಡಿದ ತ್ರಿಫಲಾ ತೊಗಟೆಯೆನ್ನುತ್ತಾರೆ.) ಹವಳ, ಮುತ್ತು, ರಸಾಂಜನ ಇವುಗಳ ಚೂರ್ಣವನ್ನೂ ಗೋಮೂತ್ರದಲ್ಲಿ ಕದರಿ ಕುಡಿಸಬೇಕು. ಕಾವಿಮಟ್ಟಿಯ ಪುಡಿಯನ್ನೂ ಗೋಮೂತ್ರದಲ್ಲಿ ಕದರಿ ಕುಡಿಸಬೇಕು. ಆಡಿನಹಿಕ್ಕೆ ೧ ಕುಡವ, ಬಿಡಲವಣ, ಅರಿಶಿನ, ಸೈಂಧವ ಇವು ಪ್ರತ್ಯೇಕ ಒಂದೊಂದು ಪಲದಂತೆ ಎಲ್ಲವನ್ನೂ ಚೂರ್ಣಮಾಡಿ ಜೇನುತುಪ್ಪದಲ್ಲಿ ರಂಗಳಿಸಿ ನೆಕ್ಕಿಸಿ ಪಥ್ಯಾಹಾರ ಭೋಜನ ಮಾಡಿಸಬೇಕು.

ಮಣ್ಡೂರಲೋಹಾಗ್ನಿವಿಡಂಗಪಥ್ಯಾವ್ಯೋಷಾಂಶಕಃ ಸರ್ವಸಮಾನತಾಪ್ಯಃ ।
ಮೂತ್ರಾಸುತೋಽಯಂ ಮಧುನಾವಲೇಹಃ ಪಾಣ್ಡ್ವಾಮಯಂ ಹನ್ತ್ಯಚಿರೇಣ ಘೋರಮ್ ॥೨೩॥

ವಿಭೀತಕಾಯೋಮಲನಾಗರಾಣಾಂ ಚೂರ್ಣಂ ತಿಲಾನಾಂ ಚ ಗುಡಶ್ಚ ಮಂಖ್ಯಃ ।
ತಕ್ರಾನುಪಾನೋ ವಟಕಃ ಪ್ರಯುಕ್ತಃ ಕ್ಷಿಣೋತಿ ಘೋರಾನಪಿ ಪಾಣ್ಡುರೋಗಾನ್ ॥೨೪॥

ಲೋಹದಮಲ (ಕಿಟ್ಟ), ಚಿತ್ರಮೂಲ, ತ್ರಿಕಟುಕ, ವಿಡಂಗ, ಅಣಲೆಸಿಪ್ಪೆ, ಇವು ಒಂದೊಂದು ಭಾಗಕ್ಕೆ ಇವೆಲ್ಲವುಗಳ ಸಮಭಾಗ ಹೇಮಮಾಕ್ಷಿಕವನ್ನು ಪುಡಿಮಾಡಿ ಗೋಮೂತ್ರದಲ್ಲಿ ನೆನೆಹಾಕಿ ಸಂಧಾನವಾದಮೇಲೆ ಜೇನುತುಪ್ಪವನ್ನು ಮಿಶ್ರಮಾಡಿ ಸೇವಿಸಿದರೆ ಅತಿಭಯಂಕರವಾದ ಪಾಂಡುರೋಗವೂ ಕ್ಷಿಪ್ರಕಾಲದಲ್ಲೇ ನಾಶಗೊಳ್ಳುತ್ತದೆ. ತಾರೆಕಾಯಿ, ಮಂಡೂರ, ಶುಂಠಿ, ಹುರಿದಎಳ್ಳು ಇವುಗಳನ್ನು ಚೂರ್ಣಮಾಡಿ ಎಲ್ಲಕ್ಕೂ ಸಮಭಾಗ ಬೆಲ್ಲವನ್ನು ಸೇರಿಸಿ ವಟಕಗಳನ್ನಾಗಿ ಮಾಡಿಟ್ಟುಕೊಂಡು ತಿನ್ನಿಸಿ ಮಜ್ಜಿಗೆಯನ್ನು ಅನುಪಾನ ಮಾಡಿಸಿದರೆ ಅತಿದುಸ್ತರವಾದ ಪಾಂಡುರೋಗವನ್ನೂ ನಾಶಮಾಡುತ್ತದೆ.

ಸೌವರ್ಚಲಂ ಹಿಙ್ಗು ಕಿರಾತತಿಕ್ತಂ ಕಲಾಯಮಾತ್ರಾಣಿ ಸುಖಾಮ್ಬುನಾ ವಾ ।
ಮೂರ್ವಾಹರಿದ್ರಾಮಲಕಂ ಚ ಲಿಹ್ಯಾತ್ ಸ್ಥಿತಂ ಗವಾಂ ಸಪ್ತ ದಿನಾನಿ ಮೂತ್ರೇ ॥೨೫॥

ಮೂಲಂ ಬಲಾಚಿತ್ರಕಯೋಃ ಪಿಬೇದ್ವಾ ಪಾಣ್ಡ್ವಾಮಯಾರ್ತೋಽಕ್ಷಸಮಂ ಹಿತಾಶೀ ।
ಸುಖಾಮ್ಬುನಾ ವಾ ಲವಣೇನ ತುಲ್ಯಂ ಶೀಗ್ರೋಃ ಫಲಂ ಕ್ಷೀರ ಭುಜೋಪಯೋಜ್ಯಮ್ ॥೨೬॥

ಸೌವರ್ಚಲವಣ, ಹಿಂಗು, ನೆಲಬೇವು ಇವು ಪ್ರತಿಯೊಂದನ್ನೂ ಬಟಾಣಿಯಷ್ಟು ಗಾತ್ರ ಮಿಶ್ರಮಾಡಿದ ಕಲ್ಕವನ್ನು ಬಿಸಿನೀರಿನಲ್ಲಿ ಕದರಿ ಕುಡಿಸಬೇಕು ; ಕೊರಟಿಗೆ ಹಂಬು, ಅರಿಶಿನ, ನೆಲ್ಲೀಕಾಯಿ, ಇವುಗಳ ಚೂರ್ಣವನ್ನು ಗೋಮೂತ್ರದಲ್ಲಿ ಕದರಿ ೭ ದಿನಗಳ ವರೆಗೆ ಇಟ್ಟದ್ದು ೧ ಕರ್ಷದಷ್ಟನ್ನು ಗೋಮೂತ್ರದಲ್ಲಾಗಲೀ ಬಿಸಿನೀರಿನಲ್ಲಾಗಲೀ ಕದರಿ

ಕುಡಿಸಬೇಕು ; ಕಳ್ಳಿಂಗಡಲೆ ಮತ್ತು ಚಿತ್ರಮೂಲಗಳ ಕಲ್ಕ ೧ ಕರ್ಷ ಪ್ರಮಾಣದಷ್ಟನ್ನು ಸೈಂಧವ ಲವಣದೊಡನೆ ಮಿಶ್ರಮಾಡಿಸಿ ಬಿಸಿನೀರಿನಲ್ಲಿ ಕದರಿ ಕುಡಿಸಿ ಹಿತವಾದ ಆಹಾರ ವನ್ನು ಭೋಜನಮಾಡಿಸಿದರೆ ಪಾಂಡುರೋಗ ಹರವಾಗುತ್ತದೆ ; ನುಗ್ಗೇಕಾಯನ್ನು ಸೈಂಧವದೊಡನೆ ಸಮಪ್ರಮಾಣದಿಂದ ಸೇರಿಸಿ ಕಲ್ಕಮಾಡಿ ಸುಖೋಷ್ಣೋದಕದಲ್ಲಿ ಕದರಿ ಕುಡಿಸಿ ಹಾಲು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಿದರೆ ಪಾಂಡುರೋಗವು ನಿವಾರಣೆಯಾಗುತ್ತದೆ.

ನ್ಯಗ್ರೋಧವರ್ಗಸ್ಯ ಪಿಬೇತ್ಕಷಾಯಂ ಶೀತಂ ಸಿತಾಕ್ಷೌದ್ರಯುತಂ ಹಿತಾಶೀ |
ಶಾಲಾದಿಕಂ ಚಾಪ್ಯಥ ಸಾರಚೂರ್ಣಂ ಧಾತ್ರೀಫಲಂ ವಾ ಮಧುನಾವಲಿಹ್ಯಾತ್ ||೨೭||
ವಿಡಙ್ಗ ಮುಸ್ತತ್ರಿಫಲಾಜಮೋದಪರೂಷಕವ್ಯೋಷವಿನಿರ್ದಹನ್ಯಃ |
ಚೂರ್ಣೀಕೃತಾ ವಾ ಗುಡಶರ್ಕರೇ ಚ ತಥೈವ ಸರ್ಪಿರ್ಮಧುನೀ ಶುಭೇ ಚ ||೨೮||
ಸಂಭಾರಮೇತದ್ವಿಪಚೇನ್ನಿಧಾಯ ಸಾರೋದಕೇ ಸಾರವತೋ ಗಣಸ್ಯ |
ಜಾತಂ ಚ ಲೇಹ್ಯಂ ಮತಿರ್ಮಾನ್ ವಿದಿತ್ವಾ ನಿಧಾಪಯೇನ್ಮೋಕ್ಷಕಜೇ ಸಮುದ್ಗೇ ||೨೯||
ಹನ್ತ್ಯೇಷ ಲೇಹಃ ಖಲು ಪಾಣ್ಡುರೋಗಂ ಸಶೋಥಮುಗ್ರಾಮಪಿ ಕಾಮಲಾಂ ಚ |

ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಕಷಾಯವನ್ನು ತಣ್ಣಗೆಮಾಡಿ ಸಕ್ಕರೆ, ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಿ ಹಿತಾಹಾರ ಮಾಡಿಸಬೇಕು ; ಶಾಲಸಾರಗಳ ಕಷಾಯಕ್ಕೆ ಅಥವಾ ನೆಲ್ಲೀಕಾಯಿ ಚೂರ್ಣಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ನೆಕ್ಕಿಸ ಬೇಕು ; ವಿಡಂಗ, ಕೊನ್ನಾರಿಗೆಡ್ಡೆ, ತ್ರಿಫಲೆ, ಅಜಮೋದ, ಕಾಡುಖರ್ಜೂರ, ತ್ರಿಕಟುಕ, ಚಿತ್ರಮೂಲ, ಇವುಗಳನ್ನು ಸಮಪ್ರಮಾಣದಿಂದ ಚೂರ್ಣಮಾಡಿ ಬೆಲ್ಲ ಸಕ್ಕರೆಗಳನ್ನೂ ಸೇರಿಸಿ ಶಾಲಸಾರಾದಿಗಳ ಕಷಾಯ ೪ ರಷ್ಟರಲ್ಲಿ ಹಾಕಿ ಪಾಕಮಾಡಿ ತಣ್ಣಗಾದ ಮೇಲೆ ಜೇನುತುಪ್ಪವನ್ನು ಬೆರೆಸಿ ಮುಳ್ಳು ಮುತ್ತುಗದ ತೊಗಟೆಯ ಕಲ್ಕದಿಂದ ಮಾಡಿದ ಶ್ರಾವೆ ಯಲ್ಲಿಟ್ಟದ್ದು ಸೇವಿಸಿದರೆ ಪಾಂಡುರೋಗವನ್ನೂ ಶೋಥಯುಕ್ತವಾದ ಕ್ರೂರವಾದ ಕಾಮಾಲೆಯನ್ನೂ ನಾಶಮಾಡುತ್ತದೆ.

ಸಶರ್ಕರಾ ಕಾಮಲಿನಾಂ ತ್ರಿಭಣ್ಡೀ ಹಿತಾ ಗವಾಕ್ಷೀ ಸಗುಡಾ ಚ ಶುಣ್ಠೀ ||೩೦||
ಕಾಲೇಯಕೇ ಚಾಪಿ ಘೃತಂ ವಿಪಕ್ವಂ ಹಿತಂ ಚ ತತ್ಸ್ಯಾದ್ರಜನೀ ವಿಮಿಶ್ರಮ್ |
ಧಾತುಂ ನದೀಜಂ ಜತುಶೈಲಜಂ ವಾ ಕುಮ್ಭಾಹ್ವಯೇ ಮೂತ್ರಯುತಂ ಪಿಬೇದ್ವಾ ||೩೧||
ಮೂತ್ರೇ ಸ್ಥಿತಂ ಸೈನ್ಧವಸಂಪ್ರಯುಕ್ತಂ ಮಾಸಂ ಪಿಬೇದ್ವಾಪಿ ಹಿ ಲೋಹಕಿಟ್ಟಮ್ |

ತಿಗಡೇಪುಡಿ, ಸಕ್ಕರೆಗಳನ್ನಾಗಲೀ ದಾಸಮೆಕ್ಕೆ ಕಲ್ಕಕ್ಕೆ ಬೆಲ್ಲಮಿಶ್ರಮಾಡಿಯಾಗಲೀ, ಬೆಲ್ಲ, ಶುಂಠೀಪುಡಿಗಳನ್ನಾಗಲೀ ಸೇವಿಸಿದರೆ ಕಾಮಾಲೆಯು ನಿವಾರಣೆಯಾಗುತ್ತದೆ. ಮರದರಿಶಿನ ಅರಿಶಿನದ ಚೂರ್ಣಗಳೊಡನೆ ತಯಾರಿಸಿದ ಘೃತವು ಕಾಮಾಲೆಯನ್ನು ನಿವಾರಣೆಮಾಡುತ್ತದೆ. ಸುವರ್ಣಮಾಕ್ಷಿಕದ ಚೂರ್ಣವನ್ನಾಗಲೀ ಗೋಮೂತ್ರದಲ್ಲಿ

ಕದರಿ ಕುಡಿಸಿದರೆ ಕುಂಭಕಾಮಾಲೆಯು ನಿವಾರಣೆಯಾಗುತ್ತದೆ. ಗೋಮೂತ್ರದಲ್ಲಿ (ಮಂಡೂರವನ್ನು) ಲೋಹಕಿಟ್ಟವನ್ನು ೧ ಮಾಸದವರೆಗಿಟ್ಟು ಸೈಂಧವ ಮಿಶ್ರಮಾಡಿ ಗೋಮೂತ್ರದಲ್ಲಿ ಕದರಿ ಕುಡಿಸಿದರೆ ಕುಂಭಕಾಮಾಲೆಯು ನಿವಾರಣೆಯಾಗುತ್ತದೆ.

ದಗ್ಧ್ವಾ ವೃಕ್ಷಕಾಷ್ಠೈರ್ಮಲಮಾಯಸಂ ವಾ ಗೋಮೂತ್ರನಿರ್ವಾಪಿತಮಷ್ಟವಾರಾನ್ ||೩೨||
ವಿಚೂರ್ಣ್ಯ ಲೀಢಂ ಮಧುನಾಽಚಿರೇಣ ಕುಮ್ಭಾಹ್ವಯಂ ಪಾಣ್ಡುಗದಂ ನಿಹನ್ಯಾತ್ |
ಸಿನ್ಧೂದ್ಭವಂ ವಾಗ್ನಿಸಮಂ ಚ ಕೃತ್ವಾ ಕ್ಷಿಪ್ತ್ವಾ ಚ ಮೂತ್ರೇ ಸಕೃದೇವ ತಪ್ತಮ್ ||೩೩||

ಲೌಹಂ ಚ ಕಿಟ್ಟಂ ಬಹುಶಶ್ಚ ತಪ್ತ್ವಾ ನಿರ್ವಾಪ್ಯ ಮೂತ್ರೇ ಬಹುಶಸ್ತಥೈವ |
ಏಕೀಕೃತಂ ಗೋಜಲಪಿಷ್ಟಮೇತದ್ಯೈಕಥ್ಯಮಾವಾಪ್ಯಪಚೇದುಖಾಯಾಮ್ ||೩೪||
ಯಥಾ ನ ದಹ್ಯೇತ ತಥಾ ವಿಶುಷ್ಕಂ ಚೂರ್ಣೀಕೃತಂ ಪೇಯಮುದಿಶ್ವಿತಾ ತತ್ |
ತಕ್ರೌದನಾಶೀ ವಿಜಯೇತ ರೋಗಂ ಪಾಣ್ಡ್ವಂ ತಥಾದೀಪಯತೇಽನಲಂ ಚ ||೩೫||

ಮಂಡೂರವನ್ನು ತಾರೆಗಿಡದ ಕೆಂಡದಲ್ಲಿಟ್ಟು ಕೆಂಪಗೆ ಕಾಯಿಸಿ ೮ ಸಾರಿ ಗೋಮೂತ್ರದಲ್ಲಿ ಮುಳುಗಿಸಿ ಚೂರ್ಣಮಾಡಿ ಜೇನುತುಪ್ಪದಿಂದ ರಂಗಳಿಸಿ ನೆಕ್ಕಿಸಿದರೆ ಬಲು ಬೇಗನೇ ಕುಂಭಕಾಮಿಲಾ ಎಂಬ ಪಾಂಡುರೋಗವು ನಾಶವಾಗುತ್ತದೆ. ಸೈಂಧವಲವಣವನ್ನು ಬೆಂಕಿಯಲ್ಲಿಟ್ಟು ಕೆಂಪಗೆ ಕಾಯಿಸಿ ಒಂದೇ ಸಾರಿ ಗೋಮೂತ್ರದಲ್ಲಿ ಅದ್ದಿ ಕರಗಿಸಿ ಅನೇಕಸಾರಿ ಕೆಂಪಗೆ ಕಾಯಿಸಿದ ಮಂಡೂರವನ್ನು ಈ ಗೋಮೂತ್ರದಲ್ಲಿ ಅದ್ದಿ ಗೋಮೂತ್ರದಿಂದ ಅರೆದು ಸ್ಥಾಲಿಯಲ್ಲಿ ತುಂಬಿ ಒಲೆಯಮೇಲಿಟ್ಟು ತಳ ಸೀದುಹೋಗದಂತೆ ಉರಿಹಾಕಿ ತೆಗೆದು ಅರೆದು ನುಣ್ಣಗೆ ಚೂರ್ಣಮಾಡಿ ಅರ್ಧ ನೀರು ಮಿಶ್ರಮಾಡಿದ ಮಜ್ಜಿಗೆಯಲ್ಲಿ ಕದರಿ ಕುಡಿಸಿ ಮಜ್ಜಿಗೆಯ ಅನ್ನವನ್ನೇ ಭೋಜನ ಮಾಡಿಸುತ್ತಾ ಬಂದರೆ ಪಾಂಡುರೋಗ ನಿವಾರಣೆಯಾಗುತ್ತದಲ್ಲದೆ ಜಾಠರಾಗ್ನಿಯು ದೀಪನಗೊಳ್ಳುತ್ತದೆ.

ದ್ರಾಕ್ಷಾಗುಡೂಚ್ಯಾಮಲಕೀರಸೈಶ್ಚ ಸಿದ್ಧಂ ಘೃತಂ ಲಾಘರಕೇಹಿತಂ ಚ |
ಗೌಡಾನರಿಷ್ಟಾನ್ಮಧುಶರ್ಕರಾಶ್ಚ ಮೂತ್ರಾಸವಾನ್ ಕ್ಷಾರಕೃತಾಂ ಸ್ತಥೈವ ||೩೬||
ಸ್ನಿಗ್ಧಾನ್ ರಸಾನಾಮಲಕೈರುಪೇತಾನ್ ಕೋಲ್ವಾನಿತಾನ್ ವಾಪಿ ಹಿ ಜಾಙ್ಗಲಾನಾಮ್ |
ಸೇವೇತ ಶೋಫಾಭಿಹಿತಾಂಶ್ಚ ಯೋಗಾನ್ ಪಾಣ್ಡ್ವಾಮಯೀ ಶಾಲಿಯವಾಂಶ್ಚ ನಿತ್ಯಮ್ ||೩೭||

ದ್ರಾಕ್ಷಿ, ಅಮೃತಬಳ್ಳಿ, ನೆಲ್ಲೀಕಾಯಿ ರಸಗಳೊಡನೆ ಪಾಕಮಾಡಿದ ಘೃತವನ್ನು ಕುಡಿಸಿದರೆ ಲಾಘರಕವೆಂಬ ಪಾಂಡುರೋಗವು ನಿವಾರಣೆಯಾಗುತ್ತದೆ. ಅಭಯಾರಿಷ್ಟ, ಮಧ್ವಾಸವ, ಲೋಹಾರಿಷ್ಟ, ಶರ್ಕರಾಸವ, ಕುಷ್ಠಚಿಕಿತ್ಸೆಯಲ್ಲಿ ಹೇಳಿರುವ ಮೂತ್ರಾಸವ, ಶ್ಲೀಪಾದರೋಗಕ್ಕೆ ಹೇಳಿದ ಕ್ಷಾರಾಸವ, ಸ್ನೇಹದಿಂದ ಒಗ್ಗರಣೆಹಾಕಿ ತಯಾರಿಸಿದ ಜಾಂಗಲ ಪ್ರಾಣಿಗಳ ಮಾಂಸರಸಕ್ಕೆ ನೆಲ್ಲೀಕಾಯಿ ಚೂರ್ಣವನ್ನು ಮಿಶ್ರಮಾಡಿಯೂ, ಎಲಚಿಯ ಹಣ್ಣುಗಳನ್ನು ಮಿಶ್ರಮಾಡಿದ ಜಾಂಗಲಪ್ರಾಣಿಗಳ ಮಾಂಸರಸವೂ, ಶೋಫ

ರೋಗದಲ್ಲಿ ಹೇಳಿರುವ ದೇವದಾರು ಶುಂಠೀರಸಾದಿ ಯೋಗಗಳೂ, ಭೋಜನಕ್ಕೆ ಅರವತ್ತು ದಿನಗಳಲ್ಲಿ ಬೆಳೆಯುವ ಶಾಲಿ ಮತ್ತು ಯವಧಾನ್ಯಗಳೂ ಇವುಗಳನ್ನು ಪಾಂಡುರೋಗಿಯು ಸರ್ವದಾ ಸೇವಿಸಬೇಕು.

ಶ್ವಾಸಾತಿಸಾರಾರುಚಿಕಾಸಮೂರ್ಛಾತೃಟ್‌ಛರ್ದಿಶೂಲಜ್ವರಶೋಫ ದಾಹಾ |
ತಥಾವಿಪಾಕಸ್ವರಭೇದಸಾದಾ ಜಯೇದ್ಯಥಾಸ್ವಂ ಪ್ರಸಮೀಕ್ಷ್ಯ ಶಾಸ್ತ್ರಮ್ ||೩೮||

ಪಾಂಡುರೋಗದಲ್ಲಿ ಶ್ವಾಸ, ಅತಿಸಾರ, ಅರೋಚಕತೆ, ಕಾಸ, ಮೂರ್ಛೆ, ನೀರಡಿಕೆ, ವಮನ, ಶೂಲೆ, ಜ್ವರ, ಶೋಫ, ದಾಹ, ಆಹಾರವು ಪಾಕವಾಗದಿರುವುದು (ಅಜೀರ್ಣ, ಸ್ವರಕುಗ್ಗುವುದು, ಈ ಉಪದ್ರವಗಳುಂಟಾದರೆ ಆಯಾಯ ರೋಗಗಳಿಗೆ ಹೇಳಿರುವ ಮೇರೆಗೆ ಶಾಸ್ತ್ರಕ್ಕೆ ಅನುಸಾರವಾಗಿ ಯೋಚಿಸಿ ಚಿಕಿತ್ಸೆ ಮಾಡಬೇಕು.

ಅನ್ಯೇಷು ಶೂನಂ ಪರಿಹೀನಮಧ್ಯಂ ಮ್ಲಾನಂ ತಥಾನ್ಯೇಷು ಚ ಮಧ್ಯಶೂನಮ್ |
ಗುದೇಽಥ ಶೇಫಸ್ಯಥ ಮುಷ್ಕಯೋಶ್ಚ ಶೂನಂ ಪ್ರತಾಮ್ಯನ್ತಮ ಸಂಜ್ಞಕಲ್ಪಮ್ ||೩೯||
ವಿವರ್ಜಯೇತ್ ಪಾಣ್ಡುಕಿನಂ ಯಶೋಽರ್ಥೀ ತಥಾತಿಸಾರಜ್ವರ ಪೀಡಿತಂ ಚ ||೪೦||

ಕೈಕಾಲು ಮುಖಗಳು ಊದಿಯೂ, ಮಧ್ಯಶರೀರವು ಕ್ಷೀಣಿಸಿಯೂ, ಕೃಶದೇಹವುಳ್ಳ, ಕೈಕಾಲುಮುಖಗಳು ಕ್ಷೀಣವಾಗಿ ಶರೀರದ ಮಧ್ಯಭಾಗವೂ, ಗುದ, ಶಿಶ್ನ, ಯೋನಿ, ಅಂಡಗಳೂ ಊದಿ, ಪ್ರಜ್ಞೆ ತಪ್ಪುತ್ತಿರುವ ಪ್ರಾಣವಿಲ್ಲದಂತೆ ಕಾಣುವ, ಅತಿಸಾರ, ಜ್ವರಗಳಿಂದ ಪೀಡಿತನಾದ ಪಾಂಡುರೋಗಿಯನ್ನು ಯಶಸ್ಸುಂಟಾಗಬೇಕೆಂದು ಅಪೇಕ್ಷಿಸುವ ವೈದ್ಯನು ಚಿಕಿತ್ಸೆಮಾಡದೆ ತ್ಯಜಿಸಿಬಿಡಬೇಕು. (ಅಸಾಧ್ಯವು)

ಟಿಪ್ಪಣಿ : ಮಧ್ಯಶೂನನೆಂದರೆ ಗುದ, ಶೇಫಸ್ಸು, ಮುಷ್ಕಗಳು ಊದಿರುತ್ತೆಂದು ಅರ್ಥವಾದರೂ ಗುದ, ಶೇಫಸ್ಸು, ಮುಷ್ಕಗಳಲ್ಲಿ ಶೋಫವಿದ್ದರೆ ಎಂದು ಹೇಳಿರುವುದು, ಹಸ್ತ, ಪಾದ, ಮುಖಗಳಲ್ಲಿ ಶೋಫವಿಲ್ಲದೆ ಬಾಡಿಹೋಗದಿದ್ದರೂ ಗುದ, ಮುಷ್ಕಾದಿಗಳಲ್ಲಿ ಶೋಫವಿದ್ದರೂ ತ್ಯಜಿಸಿಬಿಡಬೇಕೆಂದು ಸೂಚಿಸುತ್ತದೆ. ಮೂರ್ಛೆಯಿಂದಲೇ ಸಂಜ್ಞಾನಾಶತ್ವವೂ ತಿಳಿಯಬರುತ್ತದೆ. ವಿಸಂಜ್ಞಕಲ್ಪನೆಂದು ಹೇಳಿರುವುದು ವಿಶೇಷವಾಗಿ ಅಸಾಧ್ಯಲಕ್ಷಣಗಳೆಂದು ದೃಢಪಡಿಸುವುದಕ್ಕೆಂದು ತಿಳಿಯಬೇಕು ; ಪಾನಕೀ ಹಲೀಮಕ ರೋಗಗಳಿಗೆ ಚಿಕಿತ್ಸೆಯನ್ನು ಇಲ್ಲಿ ಹೇಳಿಲ್ಲವಾದರೂ ಅವುಗಳಿಗೂ ಪಾಂಡುರೋಗದಂತೆಯೇ ಚಿಕಿತ್ಸೆಯನ್ನು ಮಾಡಬೇಕೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ ಪಾಂಡುರೋಗಪ್ರತಿಷೇಧನಾಮಕ ಚತುಶ್ಚತ್ವಾರಿಂಶತ್ತಮೋಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತಕರ್ಣಾಟಕ ಭಾಷಾ ವಿವೃತಿಃ

ಪಞ್ಚಚತ್ವಾರಿಂಶತ್ತಮೋಽಧ್ಯಾಯಃ

ಅಥಾತೋ ರಕ್ತಪಿತ್ತಪ್ರತಿಷೇಧಂ ವ್ಯಾಖ್ಯಾಸ್ಯಾಮಃ ॥೧॥

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ರಕ್ತಪಿತ್ತ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಕ್ರೋಧಶೋಕಭಯಾಯಾಸ ವಿರುಧ್ಧಾನ್ನಾತಪಾನಲಾನ್ ।
ಕಟ್ವಮ್ಲಲವಣಕ್ಷಾರತೀಕ್ಷ್ಣೋಷ್ಣಾತಿ ವಿದಾಹಿನಃ ॥೩॥
ನಿತ್ಯಮಭ್ಯಸತೋ ದುಷ್ಟೋ ರಸಃ ಪಿತ್ತಂ ಪ್ರಕೋಪಯೇತ್ ।
ವಿದಗ್ಧಂ ಸ್ವಗುಣೈಃ ಪಿತ್ತಂ ವಿದಹತ್ಯಾಶು ಶೋಣಿತಮ್ ॥೪॥
ತತಃ ಪ್ರವರ್ತತೇ ರಕ್ತಮೂರ್ಧ್ವಂ ಚಾಧೋದ್ವಿಧಾಪಿ ವಾ ।

ಕೋಪ, ವ್ಯಸನ, ಹೆದರಿಕೆ, ಆಯಾಸ, ವಿರುದ್ಧಾನ್ನಭೋಜನ, ಬಿಸಿಲು, ಬೆಂಕಿಗಳನ್ನು ಸೇವಿಸುವುದರಿಂದಲೂ ಖಾರ, ಹುಳಿ, ಉಪ್ಪು, ಕ್ಷಾರ, ಅತಿಚುರುಕಾದ ಮತ್ತು ಅತಿ ಉಷ್ಣವಾದ, ಅತಿಯಾಗಿ ಎದೆಯುರಿಯನ್ನುಂಟುಮಾಡುವ ಅರ್ಥಬೆಂದ ಪದಾರ್ಥಗಳನ್ನಾಗಲೀ ಎಣ್ಣೆಯಲ್ಲಿ ಹುರಿದ ಪದಾರ್ಥಗಳನ್ನಾಗಲೀ ನಿತ್ಯವೂ ಸೇವಿಸುವವರಿಗೆ ರಸಧಾತುವು ಕೆಟ್ಟು ಪಿತ್ತವನ್ನೂ ವಿದಗ್ಧವಾಗಿ ರಕ್ತವನ್ನೂ ಬಲುಬೇಗ ಕೆಡಿಸುತ್ತದೆ. ಈ ರೀತಿ ಕೆಟ್ಟುಹೋದ ರಕ್ತವು ಮೇಲ್ಮುಖವಾಗಿ ಬಾಯಿನಿಂದಲೂ ಕೆಳಮುಖವಾಗಿ ಗುದಶಿಶ್ನಗಳಿಂದಲೂ ಕೆಲವು ವೇಳೆ ಈ ಎರಡು ಮಾರ್ಗಗಳಿಂದಲೂ ಹೊರಕ್ಕೆ ಹೊರಟು ಬರುತ್ತದೆ.

ಆಮಾಶಯಾದ್ವ್ರಜೇದೂರ್ಧ್ವಮಧಃ ಪಕ್ವಾಶಯಾದ್ವ್ರಜೇತ್ ॥೫॥
ವಿದಗ್ಧಯೋರ್ದ್ವಯೋಶ್ಚಾಪಿ ದ್ವಿಧಾಭಾಗಂ ಪ್ರವರ್ತತೇ ।
ಕೇಚಿತ್ಸಯಕೃತಃ ಪ್ಲೀಹ್ನಃ ಪ್ರವದನ್ತ್ಯಸೃಜೋಗತಿಮ್ ॥೬॥

ದುಷ್ಟರಕ್ತವು ಆಮಾಶಯದಿಂದ ಬಾಯಿಯ ಮೂಲಕವಾಗಿಯೂ ಪಕ್ವಾಶಯದಿಂದ ಗುದ, ಶಿಶ್ನಗಳ ಮೂಲಕವಾಗಿಯೂ ಆಮಪಕ್ವಾಶಯಗಳೆರಡೂ ದುಷ್ಟವಾದರೆ ಎರಡು ಕಡೆಗಳಿಂದಲೂ ಹೊರಕ್ಕೆ ಸುರಿಯುತ್ತದೆ ; ಕೆಲವರು ಯಕೃತ್ತು ಪ್ಲೀಹಗಳಿಂದಲೇ ಆಮಪಕ್ವಾಶಯಗಳ ಮೂಲಕ ದುಷ್ಟರಕ್ತವು ಸ್ರಾವವಾಗುತ್ತದೆಯೆಂದು ಹೇಳುತ್ತಾರೆ ; ಯಕೃತ್ಪ್ಲೀಹಗಳೇ ರಕ್ತದ ಸ್ಥಾನಗಳಾದ ಕಾರಣ ಅವುಗಳಿಂದ ರಕ್ತಸ್ರಾವವಾಗುವುದೇ ಸಂಗತವಾಗದ್ದು.

ಊರ್ಧ್ವಂ ಸಾಧ್ಯಮಧೋಯಾಪ್ಯಮಸಾಧ್ಯಂ ಯುಗಪದ್ಗತಮ್ ।
ಸದನಂ ಶೀತಕಾಮಿತ್ವಂ ಕಣ್ಠಧೂಮಾಯನಂ ವಮಿಃ ॥೭॥
ಲೋಹಗನ್ಧಿಶ್ಚ ನಿಃಶ್ವಾಸೋ ಭವತ್ಯಸ್ಮಿನ್ ಭವಿಷ್ಯತಿ ।
ಬಾಹ್ಯಾಸೃಗ್ಲಕ್ಷಣೈಸ್ತಸ್ಯ ಸಂಖ್ಯಾದೋಷೋಚ್ಛ್ರಿತೀರ್ವಿದುಃ ॥೮॥

ಊರ್ಧ್ವಗರಕ್ತಪಿತ್ತವು ದೌರ್ಗಂಧ್ಯಶ್ವಾಸಕಾಸಾದಿ ಉಪದ್ರವಗಳಿಲ್ಲದೆ ಮಾಂಸ ತೊಳೆದ ನೀರಿನಂತೆ ಸ್ರಾವಾದಿ ಅಸಾಧ್ಯ ಲಕ್ಷಣಗಳಿಲ್ಲದಿದ್ದರೆ ಒಂದೇ ದೋಷವನ್ನಾಶ್ರಯಿಸಿದ್ದರೆ ಸುಖಸಾಧ್ಯವೆಂದೂ ತನಗೆ ತಾನೇ ನಿಂತು ಪುನಃ ಬೇರೆ ಮಾರ್ಗದಿಂದ ಹೊರಕ್ಕೆ ಬಂದರೆ ಅಲ್ಪೋಪದ್ರವಗಳಿದ್ದು ಸ್ವಲ್ಪಮಟ್ಟಿಗೆ ಅಸಾಧ್ಯ ಲಕ್ಷಣಗಳಿದ್ದು ಎರಡು ದೋಷಗಳನ್ನಾಶ್ರೈಸಿದ್ದರೆ ಯಾಪ್ಯವೆಂದೂ ; ಅನೇಕ ಉಪದ್ರವಗಳಿಂದಲೂ ಅನೇಕ ಅಸಾಧ್ಯ ಲಕ್ಷಣಗಳಿಂದ ಕೂಡಿ ತ್ರಿದೋಷಗಳನ್ನಾಶ್ರೈಸಿದ್ದರೆ ಅಸಾಧ್ಯವೆಂದೂ ತಿಳಿಯಬೇಕು ; ಅಧೋಗ ರಕ್ತಪಿತ್ತದಲ್ಲಿ ಸ್ವಲ್ಪವೇ ಉಪದ್ರವಗಳಿದ್ದು ಅಸಾಧ್ಯ ಲಕ್ಷಣಗಳಿಲ್ಲದೆ ಎರಡು ದೋಷಗಳನ್ನಾಶ್ರೈಸಿದ್ದರೆ ಯಾಪ್ಯವು ; ತ್ರಿದೋಷಗಳನ್ನಾಶ್ರೈಸಿದ್ದರೆ ಅಸಾಧ್ಯವು ; ಊರ್ಧ್ವಾಧೋಮಾರ್ಗಗಳೆರಡರಿಂದಲೂ ಸ್ರಾವವಾಗುವ ರಕ್ತಪಿತ್ತವು ಮೂರು ದೋಷಗಳನ್ನಾಶ್ರೈಸಿದ್ದರೆ ಅಸಾಧ್ಯವು ; ಹಾಗಿಲ್ಲದೆ ಎರಡು ದೋಷಗಳನ್ನಾಶ್ರೈಸಿ ಸ್ವಲ್ಪವೇ ಅಸಾಧ್ಯ ಲಕ್ಷಣಗಳಿದ್ದರೆ ಯಾಪ್ಯವೆಂದು ತಿಳಿಯಬೇಕು ; ದೇಹಕ್ಷೀಣತೆ ಶೀತಪದಾರ್ಥ ಶೀತೋಪಚಾರಗಳಲ್ಲಿ ಪ್ರೀತಿಯೂ, ಗಂಟಲಿನಲ್ಲಿ ಹೊಗೆ ಹೊರಟಂತೆ ವೇದನೆಯೂ, ವಮನವಾಗುವುದು, ಕಬ್ಬಿಣದ ವಾಸನೆಯುಳ್ಳ ನಿಃಶ್ವಾಸವಿರುವುದು ಇವು ರಕ್ತಪಿತ್ತದ ಪೂರ್ವರೂಪಗಳೆಂದು ತಿಳಿಯಬೇಕು ; ರಕ್ತವರ್ಣನಾಧ್ಯಾಯದಲ್ಲಿ ಹೇಳಿರುವಂತೆ ನೊರೆನೊರೆಯಾಗಿ ಬಿಳುಪು ಮಿಶ್ರವಾದ ಕೆಂಪುಬಣ್ಣವುಳ್ಳ ರಕ್ತವು ವಾತದೂಷಿತವಾದದ್ದು ಇತ್ಯಾದಿ ಬಹಿರ್ಭಾಗದ ರಕ್ತಲಕ್ಷಣಗಳಿಂದಲೇ ರಕ್ತಪಿತ್ತದ ೭ ವಿಧ ದೋಷೋಲ್ಬಣ ಸ್ಥಿತಿಗಳನ್ನೂ ತಿಳಿಯಬೇಕು ; ವಿದಗ್ಧರಕ್ತವು ಬೇರೆ ರಕ್ತದೊಡನೆ ಮಿಶ್ರವಾದರೆ ಪಿತ್ತಕ್ಕಿಂತಲೂ ಬೇರೆಯಾಗಿರುತ್ತದೆ ; ಅಂದರೆ ಅಧಿಕದೋಷವುಳ್ಳದ್ದೆಂದು ತಿಳಿಯಬೇಕು.

ದೌರ್ಬಲ್ಯಶ್ವಾಸಕಾಸಜ್ವರವಮಥುಮದಾಃ ಪಾಣ್ಡುತಾದಾಹ ಮೂರ್ಛಾ ಭುಕ್ತೇಚಾನ್ನೇ
ವಿದಾಹಸ್ತ್ವಧೃತಿರಪಿ ಸದಾ ಹೃದ್ಯ ತುಲ್ಯಾ ಚ ಪೀಡಾ ।
ತೃಷ್ಣಾ ಕಣ್ಠಸ್ಯ ಭೇದಃ ಶಿರಸಿ ಚ ವದನಂ ಪೂತಿನಿಷ್ಠೀವನಂ ಚ ದ್ವೇಷೋ ಭು (ಭ)
ಕ್ತೇಽವಿಪಾಕೋ ವಿರತಿರಪಿ ರತೇ ರಕ್ತಪಿತ್ತೋಪಸರ್ಗಾಃ ॥೯॥
ಮಾಂಸಪ್ರಕ್ಷಾಳನಾಭಂ ಕ್ವಥಿತಮಿವ ಚ ಯತ್ಕರ್ದಮಾಮ್ಭೋನಿಭಂ ವಾ ಮೇದಃ ಪೂಯಾ
ಸ್ರಕಲ್ಪಂ ಯಕೃದಿವ ಯದಿ ವಾ ಪಕ್ವ ಜಮ್ಬೂಫಲಾಭಮ್ ।
ಯತ್ಕೃಷ್ಣಂ ಯಚ್ಚ ನೀಲಂ ಭೃಶಮತಿ ಕುಣಪಂ ಯತ್ರಚೋಕ್ತಾ ವಿಕಾರಾಸ್ತದ್ವರ್ಜಂ
ರಕ್ತಪಿತ್ತಂ ಸುರಪತಿಧನುಷಾ ಯಚ್ಚ ತುಲ್ಯಂ ವಿಭಾತಿ ॥೧೦॥

ರಕ್ತಪಿತ್ತದ ಉಪದ್ರವಗಳು ದೌರ್ಬಲ್ಯ, ಶ್ವಾಸ, ಕಾಸ, ಜ್ವರ, ವಮನ, ಅಡಿಕೆ

ತಿಂದರೆ ಉಂಟಾಗುವಂತೆ ಸೊಕ್ಕಿಬಿಡುವುದು ಅನ್ನವನ್ನು ತಿಂದರೆ ಎದೆ ಒತ್ತುವುದು ; (ಅನ್ನ ಅರ್ಧ ಪಾಕವಾಗುತ್ತದೆ). ಧೈರ್ಯ ಕುಂದುವುದು (ಸಂತೋಷವಿರುವುದಿಲ್ಲ.) ಸದಾಕಾಲದಲ್ಲೂ ಹೃದಯದಲ್ಲಿ ನೋವೂ, ನೀರಡಿಕೆ, ಗಂಟಲು ಕೆರೆತ, ತಲೆಯಲ್ಲಿ ಭುಗ್‌ಭುಗ್‌ನೆಂದು ಉರಿಕಾಣುವುದು; ಕೇಕರಿಸಿದರೆ ದುರ್ವಾಸನೆಯುಳ್ಳ ಕಫವು ಬೀಳುವುದು, ಅನ್ನದ್ವೇಷ, ಅನ್ನಪಾಕವಾಗದೆ ಸುಖವೇ ಇಲ್ಲದಿರುವುದು ; ಇವೆಲ್ಲಾ ರಕ್ತ ಪಿತ್ತರೋಗದ ಉಪದ್ರವಗಳು. ಮಾಂಸವನ್ನು ತೊಳೆದನೀರಿನಂತೆಯೂ ಕಷಾಯ ಬಣ್ಣ ದಂತೆಯೂ, ಕೆಸರಿನ ಕೊಳೆ ನೀರಿನಂತೆಯೂ, ಕೊಬ್ಬು, ಕೀವು, ರಕ್ತಬೆಂದ ಕಾಲಖಂಡದ ದ್ರವದಂತೆಯೂ, ಕಪ್ಪಾಗಿಯೂ, ಹೊಗೆಯಬಣ್ಣದಂತೆಯೂ, ಕೊಳೆತ ಹೆಣದ ವಾಸನೆ ಯುಳ್ಳುದಾಗಿಯೂ, ರಕ್ತಸ್ರಾವವಾದರೆ ರೋಗಿಯು ಹಿಂದೆಹೇಳಿದ ದೌರ್ಬಲ್ಯ ಶ್ವಾಸ ಕಾಸಾದಿ ಉಪದ್ರವಗಳಿಂದ ಪೀಡಿತನಾಗಿ ಕಾಮನಬಿಲ್ಲಿನಂತೆ ನಾನಾ ಬಣ್ಣಗಳಿಂದ ಕೂಡಿದ ರಕ್ತವು ಸ್ರಾವವಾದರೆ ತ್ಯಜಿಸಬೇಕು;

ನಾದೌ ಸಂಗ್ರಾಹ್ಯಮುದ್ರಿಕ್ತಂ ಯದಸೃಗ್ಬಲಿನೋಽಶ್ನತಃ ।
ತತ್ ಪಾಣ್ಡುಗ್ರಹಣೀಕುಷ್ಠಪ್ಲೀಹಗುಲ್ಮಜ್ವರಾವಹಮ್ ॥೧೧॥
ಅಧಃ ಪ್ರವೃತ್ತಂ ವಮನೈರೂರ್ಧ್ವಗಂ ಚ ವಿರೇಚನೈಃ ।
ಜಯೇದನ್ಯತರದ್ವಾಪಿ ಕ್ಷೀಣಸ್ಯ ಶಮನೈರಸೃಕ್ ॥೧೨॥
ಅತಿಪ್ರವೃದ್ಧದೋಷಸ್ಯ ಪೂರ್ವಂ ಲೋಹಿತಪಿತ್ತಿನಃ ।
ಅಕ್ಷೀಣಬಲಮಾಂಸಾಗ್ನೇಃ ಕರ್ತವ್ಯಮಪತರ್ಪಣಮ್ ॥೧೩॥
ಲಙ್ಘಿತಸ್ಯ ತತಃ ಪೇಯಾಂ ವಿದಧ್ಯಾತ್ ಸ್ವಲ್ಪತಣ್ಡುಲಾಮ್ ।
ತರ್ಪಣಂ ಪಾಚನಂ ಲೇಹಾನ್ ಸರ್ಪೀಂಷಿ ವಿವಿಧಾನಿ ಚ ॥೧೪॥
ದ್ರಾಕ್ಷಾಮಧುಕಕಾಶ್ಮರ್ಯಸಿತಾಯುಕ್ತಂ ವಿರೇಚನಮ್ ।
ಯಷ್ಟೀಮಧುಕಯುಕ್ತಂ ಚ ಸಕ್ಷೌದ್ರಂ ವಮನಂ ಹಿತಮ್ ॥೧೫॥

ಬಲಶಾಲಿಯಾಗಿದ್ದು ಭೋಜನಮಾಡುವ ರೋಗಿಗೆ ಅತಿಯಾಗಿ ವೃದ್ಧಿಯಾಗಿ ರುವ ರಕ್ತಪಿತ್ತರೋಗವನ್ನು ಸಂಗ್ರಾಹಿಗಳಾದ ಔಷಧಗಳ ಪ್ರಯೋಗದಿಂದ ತಡೆದರೆ ಪಾಂಡು, ಗ್ರಹಣೀ, ಕುಷ್ಠ, ಪ್ಲೀಹವೃದ್ಧಿ, ಗುಲ್ಮ, ಜ್ವರ ಈ ರೋಗಗಳುಂಟಾಗುತ್ತವೆ ; ರೋಗಿಯು ಬಲಶಾಲಿಯಾಗಿದ್ದರೆ ಅಧೋಮಾರ್ಗದಿಂದ ಹರಿಯುವ ರಕ್ತ ಪಿತ್ತದಲ್ಲಿ ವಮ ನೌಷಧವನ್ನೂ ಊರ್ಧ್ವಮಾರ್ಗದಿಂದ ಹರಿದು ಬರುವ ರಕ್ತಪಿತ್ತದಲ್ಲಿ ವಿರೇಚನೌಷಧವನ್ನೂ ಪ್ರಯೋಗಿಸಬೇಕು ; ರೋಗಿಯು ದುರ್ಬಲನಾಗಿ ಕೃಶನಾಗಿದ್ದರೆ ಶಮನೌಷಧವನ್ನು ಪ್ರಯೋಗಿಸಬೇಕು ; ಅತಿಯಾಗಿ ದೋಷಗಳು ಪ್ರಕೋಪಗೊಂಡಿದ್ದು ರೋಗಿಗೆ ಬಲವೂ, ಮಾಂಸವೂ, ಜೀರ್ಣಶಕ್ತಿಯೂ ಕ್ಷೀಣವಾಗದಿದ್ದರೆ ಉಪವಾಸವನ್ನು ಮಾಡಿಸಿ ಸ್ವಲ್ಪವೇ ಅಕ್ಕಿಯನ್ನು ಸೇರಿಸಿ ತಯಾರಿಸಿದ ಪೇಯಾವನ್ನೂ, ತರ್ಪಣವನ್ನೂ, ಪಾಚನವನ್ನೂ, ಲೇಹಗಳನ್ನೂ, ವಿವಿಧ ಘೃತಗಳನ್ನೂ ಪ್ರಯೋಗಿಸಬೇಕು ; ದ್ರಾಕ್ಷಿ, ಅತಿಮಧುರ,

ಶಿವಸಿಹಣ್ಣು ಸಕ್ಕರೆಗಳನ್ನು ಮಿಶ್ರಮಾಡಿದ ವಿರೇಚನೌಷಧವನ್ನೂ ಅತಿಮಧುರದ ಕಷಾಯ ಮಿಶ್ರಮಾಡಿ ಜೇನುತುಪ್ಪವನ್ನು ಸೇರಿಸಿ ಮೃದು ವಮನವನ್ನೂ ದೋಷಾನುಸಾರವಾಗಿ ಪ್ರಯೋಗಿಸಬೇಕು.

ಟಿಪ್ಪಣಿ: ದ್ರಾಕ್ಷಿ, ಅತಿಮಧುರಗಳ ಕಷಾಯಕ್ಕೆ ಸಕ್ಕರೆ, ಅರಳಹಿಟ್ಟು, ತುಪ್ಪ, ಜೇನುತುಪ್ಪಗಳನ್ನು ಕದರಿ ತಯಾರಿಸಿದ ತರ್ಪಣವೂ, ಮುಡಿವಾಳ, ರಕ್ತಚಂದನ, ಲಾಮಂಚ, ಪರ್ಪಾಷ್ಟಕ, ಕೊನ್ನಾರಿಗೆಡ್ಡೆಗಳನ್ನು ಹಾಕಿ ಕುದಿಸಿದ ನೀರು ಪಾಚನಗಳು ; ಹಿಪ್ಪೆಹೂವು, ನುಗ್ಗೆಹೂವುಗಳೊಡನೆ ತುಪ್ಪ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಲೇಹಗಳು ; ವಾಸಾದಿಘೃತ, ಇವನ್ನು ದೋಷ ರೋಗಭೇದ, ಕಾಲಭೇದಗಳಿಗೆ ತಕ್ಕಂತೆ ಪ್ರಯೋಗಿಸಬೇಕು ; ಅಧೋಗರಕ್ತಪಿತ್ತದಲ್ಲಿ ವಾತವು ಬಲವಾಗಿಲ್ಲದಿದ್ದರೆ ಪೇಯಾಪಾನವು ಹಿತಕರವು ; ವಾತವೇ ಬಲವಾಗಿದ್ದರೆ ಮಾಂಸರಸವೂ ಊರ್ಧ್ವಗ ರಕ್ತಪಿತ್ತದಲ್ಲಿ ತರ್ಪಣವೂ ಹಿತಕರಗಳು.

ಪಯಾಂಸೀ ಶೀತಾನಿ ರಸಾಶ್ಚ ಜಾಙ್ಗಲಾಃ ಸತೀನಯೂಷಾಶ್ಚ ಸಶಾಲಿಷಷ್ಟಿಕಾಃ ।
ಪಟೋಲತೇಲೂಸುನಿಷಣ್ಣಯೂಥಿಕಾ ವಟಾತಿಮುಕ್ತಾಙ್ಕುರಸಿನ್ದುವಾರಜಮ್ ॥೧೬॥
ಹಿತಂ ಚಶಾಕೇ ಘೃತಸಂಸ್ಕೃತಂ ಸದಾ ತಥೈವ ಧಾತ್ರೀಫಲದಾಡಿಮಾನ್ವಿತಮ್ ।
ರಸಾಶ್ಚ ಪಾರಾವತಶಙ್ಖಕೂರ್ಮಜಾಸ್ತಥಾ ಯವಾಗೂಽಭಿಹಿತಾ ಘೃತೋತ್ತರಾಃ ॥೧೭॥
ಸನ್ತಾನಿಕಾಶ್ಚೋತ್ಪಲವರ್ಗಸಾಧಿತೇ ಕ್ಷೀರೇ ಪ್ರಶಸ್ತಾ ಮಧುಶರ್ಕರೋತ್ತಮಾಃ ।
ಹಿಮಾಃ ಪ್ರದೇಹಾ ಮಧುರಾ ಗಣಾಶ್ಚಯೇ ಘೃತಾನಿ ಪಥ್ಯಾನಿ ಚ ರಕ್ತಪಿತ್ತಿನಾಮ್ ॥೧೮॥

ನೈದಿಲೆ ಮೊದಲಾದ ದ್ರವ್ಯಗಳಿಂದ ತಯಾರಿಸಿದ ಹಾಲನ್ನು ತಣ್ಣಗಿರುವ ಪಿತ್ತಾಧಿಕವಾಗಿರುವ ರಕ್ತಪಿತ್ತರೋಗಿಗೆ ಕುಡಿಸಬೇಕು ; ಏಣ, ಲಾವ, ಮೊದಲಾದ ಜಾಂಗಲ ಮೃಗಪಕ್ಷಿಗಳ ಮಾಂಸರಸವು ವಾತಾಧಿಕ ರಕ್ತಪಿತ್ತದಲ್ಲೂ ; ಬಟ್ಟಕಡಲೆಯ (ಬಟಾಣಿ) ಕಷಾಯ ಮಿಶ್ರಮಾಡಿದ ಷಷ್ಠಿಕಶಾಲಿಯ ಅನ್ನವನ್ನು ಕಫಾಧಿಕ ರಕ್ತಪಿತ್ತರೋಗಿಗೂ ಕುಡಿಸಬೇಕು ; ಮತ್ತು ಕಹಿಪಡವಲ, ಚಳ್ಳೆ, ಅಣ್ಣೆಸೊಪ್ಪು, ಮೊಲ್ಲೆಸೊಪ್ಪು, ಆಲ, ಇರುವಂತಿಗೆ (ಅತಿಮುಕ್ತಕ), ಲಕ್ಕಿ ಇವುಗಳ ಚಿಗುರಲೆಗಳನ್ನು ತುಪ್ಪದಿಂದ ಹುರಿದು ದಾಳಿಂಬೆರಸ, ನೆಲ್ಲೀಕಾಯಿರಸಗಳನ್ನು ಮಿಶ್ರಮಾಡಿ ಕಫಾಧಿಕ ರಕ್ತಪಿತ್ತಿಗೆ ಕುಡಿಸಬೇಕು ; ಪಾರಿವಾಳ, ಶಂಖದಹುಳು ಆಮೆ ಇವುಗಳ ಮಾಂಸರಸ ತುಪ್ಪವನ್ನು ಹೆಚ್ಚಾಗಿ ಸೇರಿಸಿ ತಯಾರಿಸಿದ ಯವಾಗೂವನ್ನೂ ಕುಡಿಸಬೇಕು ; ಹೆತ್ತ ತುಪ್ಪವನ್ನು ತಾವರೆ ಹೂವುಗಳು ಮತ್ತು ಉತ್ಪಲಾದಿಗಣದ್ರವ್ಯಗಳಿಂದ ತಯಾರಿಸಿದ ಹಾಲನ್ನು ತಣ್ಣಗೆಮಾಡಿ ಜೇನುತುಪ್ಪ ಸಕ್ಕರೆಗಳನ್ನು ಸೇರಿಸಿಯೂ ಕುಡಿಸಿದರೆ ಉತ್ತಮವು ; ರಕ್ತಪಿತ್ತರೋಗಿಗಳಿಗೆ ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ತೊಗಟೆಯ ಕಲ್ಕದಿಂದ ಲೇಪನಮಾಡಿಸಬೇಕು ; ಕಾಕೋಳ್ಯಾದಿ ಮಧುರದ್ರವ್ಯಗಳಿಂದ ತಯಾರಿಸಿದ ಘೃತಪಾನವು ಹಿತಕರವು.

ಮಧೂಕಶೋಭಾಞ್ಜನಕೋವಿದಾರಜೈಃ ಪ್ರಿಯಙ್ಗುಕಾಯಾಃ ಕುಸುಮೈಶ್ಚ ಚೂರ್ಣಿತೈಃ ।
ಭಿಷಗ್ವಿದಧ್ಯಾಚ್ಚತುರಃ ಸಮಾಕ್ಷಿಕಾನ್ ಹಿತಾಯ ಲೇಹಾನಸೃಜಃ ಪ್ರಶಾನ್ತಯೇ ॥೧೯॥
ಲಿಹ್ಯಾಚ್ಚ ದೂರ್ವಾವಟಜಾಂಶ್ಚ ಪಲ್ಲವಾನ್ ಮಧುದ್ವಿತೀಯಾನ್ ಸಿತಕರ್ಣಿಕಸ್ಯ ಚ ।
ಹಿತಂ ಚ ಖರ್ಜೂರಫಲಂ ಸಮಾಕ್ಷಿಕಂ ಫಲಾನಿ ಚಾನ್ಯಾನ್ಯಪಿ ತದ್ಗುಣಾನ್ಯಥ ॥೨೦॥

ಹಿಪ್ಪೆ, ನುಗ್ಗೆ, ಕಂಚುವಾಳ, ಪ್ರಿಯಂಗು (ನೆಕಲು) ಈ ಪುಷ್ಪಗಳ ಚೂರ್ಣಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ನೆಕ್ಕಿಸಿದರೆ ರಕ್ತಪಿತ್ತವು ಶಮನವಾಗುತ್ತದೆ. ಎಳೆಯ ಗರಿಕೆ, ಆಲದ ಚಿಗುರೆಲೆ, ಬಿಳಿಹೂವಿನಕಕ್ಕೆಚಿಗುರೆಲೆ, ಇವುಗಳ ಕಲ್ಕಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ನೆಕ್ಕಿಸಬೇಕು ; ಖರ್ಜೂರದ ಮತ್ತು ಶಿವನಿಯ ಹಣ್ಣುಗಳನ್ನು ಕಲ್ಕಮಾಡಿ ಜೇನುತುಪ್ಪ ಮಿಶ್ರಮಾಡಿ ನೆಕ್ಕಿಸಬೇಕು.

ರಕ್ತಾತಿಸಾರಪ್ರೋಕ್ತಾಂಶ್ಚ ಯೋಗಾನತ್ರಾಪಿ ಯೋಜಯೇತ್ ।
ಶುದ್ಧೇಕ್ಷುಕಾಣ್ಡಮಾಪೋಥ್ಯ ನವೇ ಕುಮ್ಭೇ ಹಿಮಾಮ್ಭಸಾ ॥೨೧॥
ಯೋಜಯಿತ್ವಾ ಕ್ಷಿಪೇದ್ರಾತ್ರಾವಾಕಾಶೇ ಸೋತ್ಪಲಂ ತು ತತ್ ।
ಪ್ರಾತಃ ಸ್ರುತಂ ಕ್ಷೌದ್ರಯುತಂ ಪಿಬೇಚ್ಛೋಣಿತಪಿತ್ತವಾನ್ ॥೨೨॥
ಪಿಬೇಚ್ಛೀತಕಷಾಯಂ ವಾ ಜಂಬ್ವಾಮ್ರಾರ್ಜುನಸಂಭವಮ್ ।
ಉದುಮ್ಬರಫಲಂ ಪಿಷ್ಟ್ವಾ ಪಿಬೇತ್ತದ್ರಸಮೇವ ವಾ ॥೨೩॥

ಪ್ರಿಯಾಲ ಶಾಲ್ಮಲೀ ಮೊದಲಾದ ರಕ್ತಾತಿಸಾರಹಿತಗಳಾದ ಔಷಧಯೋಗಗಳನ್ನು ರಕ್ತಪಿತ್ತರೋಗಿಗೂ ಪ್ರಯೋಗಿಸಬೇಕು ; ಕಬ್ಬಿನ ಜಲ್ಲೆಯನ್ನು ಸಿಪ್ಪೆ ತೆಗೆದು ಜಜ್ಜಿ ಹೊಸಗುಡಾಣಕ್ಕೆ ತುಂಬಿ ತಣ್ಣೀರನ್ನು ಬೆರೆಸಿ ನೈದಿಲೆ ಹೂವುಗಳನ್ನು ಸೇರಿಸಿ ಎತ್ತರವಾದ ತೊಲೆಗೆ ತೂಗುಕಟ್ಟಿ ಬೆಳಗಾದ ಮೇಲೆ ಅದರ ನೀರನ್ನು ಶೋಧಿಸಿ ಜೇನುತುಪ್ಪವನ್ನು ಮಿಶ್ರಮಾಡಿ ರಕ್ತಪಿತ್ತರೋಗಿಗೆ ಕುಡಿಸಬೇಕು ; ನೇರಳೆ, ಮಾವು, ಮತ್ತಿ, ಇವುಗಳ ಶೀತಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು ; ಅತ್ತಿಯ ಹಣ್ಣನ್ನು ನೀರಿನಲ್ಲಿ ಹಿಸುಕಿ ಜೇನುತುಪ್ಪವನ್ನು ಸೇರಿಸಿ ಕುಡಿಸಬೇಕು.

ತ್ರಪುಸೀಮೂಲಕಲ್ಕಂ ವಾ ಸಕ್ಷೌದ್ರಂ ತಣ್ಡುಲಾಮ್ಬುನಾ ।
ಪಿಬೇದಕ್ಷಸಮಂ ಕಲ್ಕಂ ಯಷ್ಟೀಮಧುಕಮೇವ ವಾ ॥೨೪॥
ಚಂದನಂ ಮಧುಕಂ ರೋಧ್ರಮೇವಮೇವ ಸಮಂ ಪಿಬೇತ್ ।
ಕರಞ್ಜಬೀಜಮೇವಂ ವಾ ಸಿತಾಕ್ಷೌದ್ರಯುತಂ ಪಿಬೇತ್ ॥೨೫॥
ಮಜ್ಜಾನಮಿಙ್ಗುದಸ್ಯೈವಂ ಪಿಬೇನ್ಮಧುಕಸಂಯುತಮ್ ।
ಸುಖೋಷ್ಣಂ ಲವಣಂ ಬೀಜಂ ಕಾರಞ್ಜಂ ದಧಿಮಸ್ತುನಾ ॥೨೬॥
ಪಿಬೇದ್ವಾಪಿ ತ್ರ್ಯಹಂ ಮರ್ತ್ಯೋ ರಕ್ತಪಿತ್ತಾಭಿಪೀಡಿತಃ ।
ರಕ್ತಪಿತ್ತಹರಾಃ ಶಸ್ತಾಃ ಷಡೇತೇ ಯೋಗಸತ್ತಮಾಃ ॥೨೭॥

ಮಿಣಿಕೆಯ ಬೇರಿನ ಕಲ್ಕ ಕರ್ಷ ಪ್ರಮಾಣದಷ್ಟನ್ನು ಕಲಗಚ್ಚಿನಲ್ಲಿ ಕದರಿ ಜೇನುತುಪ್ಪಬೆರೆಸಿ ಕುಡಿಸಬೇಕು ; ಅಥವಾ ಅತಿಮಧುರದ ಕಲ್ಕ ಕರ್ಷ ಪ್ರಮಾಣದಷ್ಟನ್ನು ಕಲ

ಗಚ್ಚಿನಲ್ಲಿ ಕದರಿ ಜೇನುತುಪ್ಪ ಬೆರೆಸಿ ಕುಡಿಸಬೇಕು ; ಇದೇ ರೀತಿಯಾಗಿ ರಕ್ತಚಂದನ, ಅತಿ ಮಧುರ, ರೋಧ್ರಗಳ ಕಲ್ಕವನ್ನು ಕಲಗಚ್ಚಿನಲ್ಲಿ ಕದರಿ ಜೇನುತುಪ್ಪ ಮಿಶ್ರಮಾಡಿ ಕುಡಿಸ ಬೇಕು ; ೧ ಕರ್ಷದಷ್ಟು ಹೊಂಗೆಯ ಬೀಜದ ಕಲ್ಕವನ್ನು ಕಲಗಚ್ಚಿನಲ್ಲಿ ಕದರಿ ಸಕ್ಕರೆ ಜೇನುತುಪ್ಪಗಳೊಡನೆ ಕುಡಿಸಬೇಕು ; ಇಂಗಳದ ಕಲ್ಕಕ್ಕೆ ಅತಿಮಧುರವನ್ನು ಸೇರಿಸಿ ಕಲ ಗಚ್ಚಿನಲ್ಲಿ ಕದರಿ ಸಕ್ಕರೆ ಮತ್ತು ಜೇನುತುಪ್ಪಗಳನ್ನು ಬೆರೆಸಿಕುಡಿಸಬೇಕು ; ಸೈಂಧವ ಮಿಶ್ರಮಾಡಿ ಹೊಂಗೆಬೀಜದ ಕಲ್ಕವನ್ನು ಮೊಸರಿನ ಕಟ್ಟಿನಲ್ಲಿ ಕದರಿ ಸುಖೋಷ್ಣವಾಗಿ ಮೂರು ದಿನಗಳು ಕುಡಿಸಬೇಕು ; ಈ ರೀತಿ ರಕ್ತಪಿತ್ತಹರಗಳಾದ ೬ ವಿಧ ಶ್ರೇಷ್ಠ ಔಷಧ ಯೋಗಗಳನ್ನು ಹೇಳಲಾಗಿದೆ.

ಪಥ್ಯಾಶ್ಚೈವಾವಪೀಡೇಷು ಘ್ರಾಣತಃ ಪ್ರಸ್ರುತೇಽಸೃಜಿ ।
ಅತಿನಿಃಸ್ರುತರಕ್ತೋ ವಾ ಕ್ಷೌದ್ರಯುಕ್ತಂ ಪಿಬೇದಸೃಕ್ ॥
ಯಕೃದ್ವಾ ಭಕ್ಷಯೇದಾಜಮಾಮಂ ಪಿತ್ತಸಮಾಯುತಮ್ ॥೨೮॥

ಮೂಗಿನಿಂದ ರಕ್ತಸ್ರಾವವಾದರೆ ಮೇಲೆ ಹೇಳಿದ ೬ ವಿಧಯೋಗಗಳನ್ನೂ ಅವ ಪೀಡನಸ್ಯವಿಧಾನದಿಂದ ಪ್ರಯೋಗಿಸಬೇಕು ; ಅತಿಪ್ರಮಾಣದಿಂದ ರಕ್ತಸ್ರಾವವಾದರೆ ಮನುಷ್ಯರ ಶರೀರಕ್ಕೆ ಸಮನಾದ ಶರೀರಧಾತುಗಳುಳ್ಳ ಹುಲ್ಲೆ ಜಿಂಕೆ ಮೊದಲಾದುವುಗಳ ರಕ್ತಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು ; ಅಥವಾ ಆಡಿನ ಯಕೃತ್ತು ಮತ್ತು ಪಿತ್ತಗಳನ್ನು ತಿನ್ನಿಸಬೇಕು.

ಪಲಾಶವೃಕ್ಷಸ್ವರಸೇ ವಿಪಕ್ವಂ ಸರ್ಪಿಃ ಪಿಬೇತ್ ಕ್ಷೌದ್ರಯುತಂ ಸುಶೀತಮ್ ।
ವನಸ್ಪತೀನಾಂ ಸ್ವರಸೈಃ ಕೃತಂ ವಾ ಸಶರ್ಕರಂ ಕ್ಷೀರಘೃತಂ ಪಿಬೇದ್ವಾ ॥೨೯॥
ದ್ರಾಕ್ಷಾಮಶೀರಾಣ್ಯಥ ಪದ್ಮಕಂ ಸಿತಾಪೃಥಕ್ಪಲಾಂಶಾನ್ಯುದಕೇ ಸಮಾವಪೇತ್ ।
ಸಿತಂ ನಿಶಾಂ ತದ್ರುಧಿರಾಮಯಾರ್ತಾ ಜಯೇತ್ಪ್ರೀತಂ ಪಯೋವಾಮ್ಬು ಸಮಂ ಹಿತಾಶಿನಃ ॥೩೦॥
ತುರಙ್ಗವಚಃ ಸ್ವರಸಂ ಸಮಾಕ್ಷಿಕಂ ಪಿಬೇತ್ಸಿತಾಕ್ಷೌದ್ರಯುತಂ ವೃಷಸ್ಯ ವಾ ।
ಲಿಹೇತ್ತಥಾ ವಾಸ್ತುಕಬೀಜಚೂರ್ಣಂ ಕ್ಷೌದ್ರಾನ್ವಿತಂ ತಣ್ಡುಲಸಾಹ್ವಯಂ ವಾ ॥೩೧॥
ಲಿಹ್ಯಾಚ್ಚ ಲಾಜಾಞ್ಜನಚೂರ್ಣಮೇಕಮೇವಂ ಸಿತಾಕ್ಷೌದ್ರಯುತಾಂ ತುಗಾಖ್ಯಾಮ್ ।
ದ್ರಾಕ್ಷಾಂ ಸಿತಾಂ ತಿಕ್ತಕರೋಹಿಣೀಂ ಚ ಹಿಮಾಮ್ಬುನಾ ವಾ ಮಧುಕೇನಯುಕ್ತಾಮ್ ॥೩೨॥
ಪಥ್ಯಾಮಹಿಂಸ್ರಾಂ ರಜನೀಂ ಘೃತಂ ಚ ಲಿಹ್ಯಾತ್ತಥಾ ಶೋಣಿತ ಪಿತ್ತರೋಗೀ ।

ಮುತ್ತುಗದ ತೊಗಟೆಯ ಸ್ವರಸದೊಡನೆ ತಯಾರಿಸಿದ ಘೃತಕ್ಕೆ ಜೇನುತುಪ್ಪ ವನ್ನು ಮಿಶ್ರಮಾಡಿ ತಣ್ಣಗೆ ಮಾಡಿ ಕುಡಿಸಬೇಕು ; ಆಲ, ಅತ್ತಿ, ಮೊದಲಾದ ಕ್ಷೀರವೃಕ್ಷ ಗಳ ಕಷಾಯದೊಡನೆ ತಯಾರಿಸಿದ ಘೃತ ಮತ್ತು ಹಾಲಿಗೆ ಸಕ್ಕರೆಯನ್ನು ಸೇರಿಸಿ ಕುಡಿಸ ಬೇಕು ; ದ್ರಾಕ್ಷಿ, ಲಾಮಂಚ, ಪದ್ಮಕ, ಸಕ್ಕರೆ ಇವು ಪ್ರತಿಯೊಂದೂ ಒಂದೊಂದು ಪಲ ದಷ್ಟನ್ನು ನೀರಿನಲ್ಲಿ ರಾತ್ರಿ ಕಾಲ ಕಳೆದು ಬೆಳಗಾದ ಮೇಲೆ ಅದರ ನೀರನ್ನು ಸಮ

ಪ್ರಮಾಣ ಹಾಲಿನೊಡನೆ ಕುಡಿಸಿದರೆ ರಕ್ತಪಿತ್ತಹರವಾಗುತ್ತದೆ; ಕುದುರೆ ಲದ್ದಿಯ ಅಥವಾ ಗೂಳಿಯ ಸಗಣಿಯ ರಸಕ್ಕೆ ಅಥವಾ ತೋಟದ ಚಕ್ಕೋತದ ಬೀಜದ ಚೂರ್ಣವಾಗಲೀ ಅಥವಾ ಕಿರಕುಸಾಲೆಯಸ್ವರಸಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿಯಾಗಲೀ ಕುಡಿಸಬೇಕು ; ಭತ್ತದ ಅರಳುಪುಡಿ, ರಸಾಂಜನದ ಪುಡಿಗಳಿಗೆ ಜೇನುತುಪ್ಪವನ್ನು ಮಿಶ್ರಮಾಡಿಯೂ ಬಿದರುಪ್ಪಿನ ಚೂರ್ಣಕ್ಕೆ ಸಕ್ಕರೆ ಜೇನುತುಪ್ಪಗಳನ್ನು ಸೇರಿಸಿಯೂ ಅಥವಾ ದ್ರಾಕ್ಷಿ, ಸಕ್ಕರೆ, ಕಟುಕರೋಹಿಣೀ ಚೂರ್ಣಗಳನ್ನು ತಣ್ಣೀರಿಗೆ ಹಾಕಿ ಅತಿಮಧುರದೊಡನೆಯೂ ಸೇವಿಸಬೇಕು ; ಅಣಿಲೆಕಾಯಿ, ಜಟಾಮಾಂಸಿ, ಅರಿಶಿನ ಇವುಗಳ ಚೂರ್ಣವನ್ನು ತುಪ್ಪದೊಡನೆ ರಂಗಳಿಸಿ ನೆಕ್ಕಿಸಬೇಕು. ಇವೆಲ್ಲವೂ ರಕ್ತಪಿತ್ತಹರಗಳು.

ವಾಸಾಕಷಾಯೋತ್ಪಲಮೃತ್ಪ್ರಿಯಙ್ಗುರೋಧ್ರಾಞ್ಜನಾಮ್ಭೋರುಹಕೇಸರಾಣಿ ॥೩೩॥
ಪೀತ್ವಾ ಸಿತಾಕ್ಷೌದ್ರಯುತಾನಿ ಜಹ್ಯಾತ್ಪಿತ್ತಾಸೃಜೋವೇಗಮುದೀರ್ಣಮಾಶು ।
ಗಾಯತ್ರಿಜಮ್ಬ್ವರ್ಜುನಕೋವಿದಾರಶಿರೀಷರೋಧ್ರಾಸನಶಾಲ್ಮಲೀನಾಮ್ ॥೩೪॥
ಪುಷ್ಪಾಣಿ ಶಿಗ್ರೋಶ್ಚ ವಿಚೂರ್ಣ್ಯ ಲೇಹೋ ಮಧ್ವನ್ವಿತಃ ಶೋಣಿತ ಪಿತ್ತರೋಗೇ ।
ಸಕ್ಷೌದ್ರಮಿನ್ದೀವರಭಸ್ಮವಾರಿ ಕರಞ್ಜ ಬೀಜಂ ಮಧುಸರ್ಪಿಷೀ ಚ ॥೩೫॥
ಜಮ್ಬ್ವರ್ಜುನಾಮ್ರಕ್ವಥಿತಂ ಚ ತೋಯಂ ಘ್ನನ್ತಿ ತ್ರಯಃ ಪಿತ್ತಮಸೃಕ್ಚ ಯೋಗಾಃ ।

ಆಡುಸೋಗೆ ಸೊಪ್ಪಿನ ಕಷಾಯಕ್ಕೆ ನೈದಿಲೆಗೆಡ್ಡೆ, ಕೆಂಪಿನಮಣ್ಣು, ತಾವರೆ ಕುಸುಮ, ನೆಳಲು, ರೋಧ್ರ, ರಸಾಂಜನ ಇವುಗಳ ಕಲ್ಕವನ್ನು ಕದರಿ ಸಕ್ಕರೆ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಿದರೆ ವೇಗದಿಂದ ಸ್ರಾವವಾಗುತ್ತಿರುವ ರಕ್ತಪಿತ್ತವನ್ನು ಬೇಗನೆ ತಡೆಯುತ್ತದೆ ; ಕಗ್ಗಲಿ, ನೇರಳೆ ಮತ್ತು ಕಂಚುವಾಳ, ಬಾಗೆ, ರೋಧ್ರ, ಕೆಂಪುಹೊನ್ನೆ, ಬೂರಗ, ನುಗ್ಗೆಗಿಡ ಇವುಗಳ ಹೂವುಗಳನ್ನು ಚೂರ್ಣಮಾಡಿ ಜೇನುತುಪ್ಪದಲ್ಲಿ ರಂಗಳಿಸಿ ನೆಕ್ಕಿಸಿದರೆ ರಕ್ತಪಿತ್ತರೋಗಹರವಾಗುತ್ತದೆ ; (೧) ನೈದಿಲೆಹೂವಿನ ಭಸ್ಮ (೨) ಹೊಂಗೆಬೀಜದಕಲ್ಕ (೩) ನೇರಳೆ, ಮಾವು, ಮತ್ತಿ, ತೊಗಟೆಗಳ ಕಷಾಯ ಈ ಮೂರು ಯೋಗಗಳೂ ರಕ್ತಪಿತ್ತಹರಗಳು ; ಇವುಗಳ ಪೈಕಿ ೨–೩ ನೆಯ ಯೋಗಗಳು ಗಂಟಲೊಳಗಿರುವ ರಕ್ತಪಿತ್ತಹರಗಳು ; ಇವುಗಳಿಗೆ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು.

ಮೂಲಾನಿ ಪುಷ್ಪಾಣಿ ಚ ಮಾತುಲುಙ್ಗ್ಯಾಃ ಪಿಷ್ಟ್ವಾ ಪಿಬೇತ್ತಣ್ಡುಲಧಾವನೇನ ॥೩೬॥
ಘ್ರಾಣಪ್ರವೃತ್ತೇ ಜಲಮಾಶು ದೇಯಂ ಸಶರ್ಕರಂ ದ್ರಾಕ್ಷಿಕಯಾ ಪಯೋ ವಾ ।
ದ್ರಾಕ್ಷಾರಸಂ ಕ್ಷೀರಘೃತಂ ಪಿಬೇದ್ವಾ ಸಶರ್ಕರಂ ಚೇಕ್ಷುರಸಂ ಹಿಮಂ ವಾ ॥೩೭॥
ಶೀತೋಪಚಾರಂ ಮಧುರಂ ಚ ಕುರ್ಯಾದ್ವಿಶೇಷತಃ ಶೋಣಿತ ಪಿತ್ತರೋಗೇ ।
ದ್ರಾಕ್ಷಾಘೃತಕ್ಷೌದ್ರಸಿತಾಯುತೇನ ವಿದಾರಿಗನ್ಧಾದಿ ವಿಪಾಚಿತೇನ ॥೩೮॥
ಕ್ಷೀರೇಣ ಚಾಸ್ಥಾಪನಮಗ್ರ್ಯಮುಕ್ತಂ ಹಿತಂ ಘೃತಂ ಚಾಪ್ಯನುವಾಸನಾರ್ಥಮ್ ।

ಮಾದಳದ ಬೇರು ಮತ್ತು ಹೂವುಗಳ ಕಲ್ಕವನ್ನು ಅಕ್ಕಿತೊಳೆದ ನೀರಿನಲ್ಲಿ ಕದರಿ

ಕುಡಿಸಿದರೆ ರಕ್ತಪಿತ್ತಹರವಾಗುತ್ತದೆ. ಮೂಗಿನಿಂದ ರಕ್ತ ಹರಿದು ಬಂದರೆ ಸಕ್ಕರೆ ಕದರಿದ ನೀರನ್ನಾಗಲೀ ಹಾಲನ್ನಾಗಲೀ ಮೂಗಿನಿಂದ ಕುಡಿಸಬೇಕು ; ದ್ರಾಕ್ಷಿಯ ಕಷಾಯ, ಹಾಲು ತುಪ್ಪಗಳನ್ನಾಗಲೀ ಕಬ್ಬಿನರಸಕ್ಕೆ ಸಕ್ಕರೆ ಸೇರಿಸಿ ತಣ್ಣಗೆ ಮಾಡಿಯಾಗಲೀ ಕುಡಿಸಬೇಕು ; ಮುಖ್ಯವಾಗಿ ರಕ್ತಪಿತ್ತರೋಗದಲ್ಲಿ ಮಧುರವಾಗಿಯೂ, ಶೀತವಾಗಿಯೂ ಇರುವ ಉಪಚಾರಗಳನ್ನೇ ಮಾಡಬೇಕು ; ದ್ರಾಕ್ಷಿ, ತುಪ್ಪ, ಜೇನುತುಪ್ಪ, ಸಕ್ಕರೆಗಳನ್ನು ಲಘುಪಂಚಮೂಲದೊಡನೆ ಪಾಕಮಾಡಿದ ಹಾಲಿಗೆ ಸೇರಿಸಿ ಕುಡಿಸಬೇಕು ; ಹಾಲಿನಿಂದ ಆಸ್ಥಾಪನಬಸ್ತಿಯನ್ನು ಪ್ರಯೋಗಿಸುವುದು ಉತ್ತಮವಾದದ್ದು. ಘೃತವನ್ನು ಸೇರಿಸಿದ ಅನುವಾಸನಬಸ್ತಿಯನ್ನೂ ಸೇವಿಸಬೇಕು.

ಪ್ರಿಯಙ್ಗುರೋಧ್ರಾಞ್ಜನಗೈರಿಕೋತ್ಪಲೈಃ ಸುವರ್ಣಕಾಲೀಯಕ ರಕ್ತಚನ್ದನೈಃ ||೩೯||
ಸಿತಾಶ್ವಗನ್ಧಾಮ್ಬುದಯಷ್ಟಿಕಾಹ್ವಯೈರ್ಮೃಣಾಳಸೌಗನ್ಧಿಕ ತುಲ್ಯ ಪೇಷಿತೈಃ |
ನಿರುಹ್ಯ ಚೈನಂ ಪಯಸಾ ಸಮಾಕ್ಷಿಕೈರ್ಘೃತಪ್ಲುತೇಃ ಶೀತಜಲಾವಸೇಚಿತಮ್ ||೪೦||
ಕ್ಷೀರೌದನಂ ಭುಕ್ತಮಥಾನುವಾಸಯೇದ್ಘೃತೇನ ಯಷ್ಟೀಮಧು ಸಾಧಿತೇನ ಚ |
ಅಧೋವಹಂ ಶೋಣಿತಮಾಶು ನಾಶಯೇತ್ತಥಾತಿಸಾರಂ ರುಧಿರಸ್ಯ ದುಸ್ತರಮ್ ||೪೧||
ವಿರೇಕಯೋಗೇಪ್ಯತಿ ಚೈವ ಶಸ್ಯತೇ ವಾಮ್ಯಶ್ಚ ರಕ್ತೇ ವಿಜಿತೇ ಬಲಾನ್ವಿತಃ ||೪೨||
ಏವಂ ವಿಧಾ ಉತ್ತರಬಸ್ತಯಶ್ಚ ಮೂತ್ರಾಶಯಸ್ಥೇ ರುಧಿರೇ ವಿಧೇಯಾಃ |
ಪ್ರವೃತ್ತರಕ್ತೇಷು ಚ ಪಾಯುಜೇಷು ಕುರ್ಯಾದ್ವಿಧಾನಂ ಖಲು ರಕ್ತಪೈತ್ತಮ್ ||೪೩||

ನೆಳಲು, ರೋಧ್ರ, ಸೌವೀರಾಂಜನ, ಕಾವಿಮಣ್ಣು, ನೈದಿಲೆಗೆಡ್ಡೆ, ಸುವರ್ಣಗೈರಿಕ, ಅಗಿಲು, ಕೆಂಪುಗಂಧ, ಸಕ್ಕರೆ, ಅಶ್ವಗಂಧಿಬೇರು, ಕೊನ್ನಾರಿಗೆಡ್ಡೆ, ಅತಿಮಧುರ, ತಾವರೆದಂಟು, ಸೌಗಂಧಿಕವೆಂಬ ನೈದಿಲೆಯ ಭೇದ (ಕಲ್ಹಾರಪುಷ್ಪ) ಇವೆಲ್ಲವನ್ನೂ ಸಮಪ್ರಮಾಣದಿಂದ ಸೇರಿಸಿ ಕಲ್ಕಮಾಡಿ ಹಾಲಿನಲ್ಲಿ ಕದರಿ ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ನಿರೂಹಬಸ್ತಿಯನ್ನೂ ಪ್ರಯೋಗಮಾಡಿ ತಣ್ಣೀರನ್ನು ಮೈಮೇಲೆ ಸುರಿದು ಹಾಲು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಿ ಅತಿಮಧುರದೊಡನೆ ತಯಾರಿಸಿದ ಘೃತದಿಂದ ಅನುವಾಸನಬಸ್ತಿಯನ್ನು ಪ್ರಯೋಗಿಸಿದರೆ ಅಧೋಗರಕ್ತಪಿತ್ತವು ಬೇಗ ನಿವಾರಣೆಯಾಗುತ್ತದೆ ಮತ್ತು ಅತಿ ಪ್ರಬಲವಾದ ರಕ್ತಾತಿಸಾರವೂ ವಿರೇಚನಾತಿಯೋಗವೂ ನಿಲ್ಲುತ್ತದೆ ; ರಕ್ತಸ್ರಾವವು ನಿಂತು ಬಲಬಂದ ರೋಗಿಗೆ ವಮನಮಾಡಿಸಬೇಕು ; ಬಸ್ತಿಗತರಕ್ತಪಿತ್ತದಲ್ಲೂ ಮೂತ್ರಸ್ರೋತಸ್ಸಿನಲ್ಲಿ ಹರಿದು ಬರುವ ರಕ್ತಪಿತ್ತದಲ್ಲೂ ಮೇಲೆ ಹೇಳಿದ ಆಸ್ಥಾಪನಾನುವಾಸನ ದ್ರವ್ಯಗಳಿಂದಲೇ ಉತ್ತರಬಸ್ತಿಯನ್ನೂ ಪ್ರಯೋಗಿಸಬೇಕು ; ಅರ್ಶೋರೋಗಗಳಲ್ಲೂ ರಕ್ತಸ್ರಾವವಾಗುತ್ತಿದ್ದರೆ ರಕ್ತಪಿತ್ತಚಿಕಿತ್ಸಾವಿಧಾನಗಳನ್ನೇ ಪ್ರಯೋಗಿಸಬೇಕು.

ವಿಧಿಶ್ಚಾಸೃಗ್ದರೇಽಪ್ಯೇಷ ಸ್ತ್ರೀಣಾಂ ಕಾರ್ಯೋಽವಿಜಾನತಾ |
ಶಸ್ತ್ರಕರ್ಮಣಿ ರಕ್ತಂ ಚ ಯಸ್ಯಾತೀವ ಪ್ರವರ್ತತೇ ||೪೪||

ತಿಳುವಳಿಕೆಯುಳ್ಳ ವೈದ್ಯನು ಸ್ತ್ರೀಯರ ಪ್ರದರರೋಗದಲ್ಲೂ ಮೇಲೆ ಹೇಳಿದ ಅಧೋಗರಕ್ತಪಿತ್ತಕ್ಕೆ ಮಾಡುವ ಚಿಕಿತ್ಸಾವಿಧಾನಗಳನ್ನೇ ಪ್ರಯೋಗಿಸಬೇಕು ; ಮತ್ತು ಶಸ್ತ್ರಕರ್ಮದಿಂದ ಅತಿಯಾಗಿ ರಕ್ತವು ಸ್ರಾವವಾಗುವವರಿಗೂ ಈ ಅಧೋಗ ರಕ್ತಪಿತ್ತದ ಚಿಕಿತ್ಸಾ ವಿಧಾನವನ್ನೇ ಪ್ರಯೋಗಿಸಬೇಕು.

ಟಿಪ್ಪಣಿ : **ಅಸೃಗ್ದರಲಕ್ಷಣ :** ತೊಡೆಯ ಸಂಧಿ, ಸೊಂಟ, ಬೆನ್ನು, ವೃಕ್ಕಗಳಲ್ಲಿ ಉರಿಯೂ ರಕ್ತಸ್ರಾವವೂ ಗರ್ಭಾಶಯದಲ್ಲಿ ಅತಿಯಾಗಿ ನೋವೂ ಉಂಟಾಗುತ್ತದೆ. ಈ ರೋಗಕ್ಕೆ "ಅಸೃಗ್ದರವೆಂದು" ಹೆಸರು.

ತ್ರಯಾಣಾಮಪಿ ದೋಷಾಣಾಂ ಶೋಣಿತೇಽಪಿ ಚ ಸರ್ವಶಃ ।
ಲಿಙ್ಗಾನ್ಯಾಲೋಕ್ಯ ಕರ್ತವ್ಯಂ ಚಿಕಿತ್ಸಿತಮನನ್ತರಮ್ ॥೪೫॥

ಶೋಣಿತ ವರ್ಣನೀಯಾಧ್ಯಾಯದಲ್ಲಿ ಹೇಳಿರುವ ಪ್ರತಿದೋಷದ ಲಕ್ಷಣಗಳನ್ನೂ ರಕ್ತದಲ್ಲಿ ಪರಿಶೀಲಿಸಿ ಅನಂತರ ಚಿಕಿತ್ಸೆಮಾಡಬೇಕು ; ಹೀಗೆಯೇ ಶಸ್ತ್ರಕರ್ಮದಲ್ಲಿ ಅತಿಯಾಗಿ ರಕ್ತಸ್ರಾವವಾದರೂ ರಕ್ತದಲ್ಲಿನ ದೋಷಲಕ್ಷಣಗಳನ್ನು ಚೆನ್ನಾಗಿ ಪರಿಶೀಲಿಸಿ ರಕ್ತಪಿತ್ತ ಚಿಕಿತ್ಸೆಯನ್ನು ಪ್ರಯೋಗಮಾಡಬೇಕು ; ಸನ್ನಿಪಾತ ದೋಷದಲ್ಲಿ ಬಲ, ಅಗ್ನಿ, ಮಾಂಸಗಳು ಕ್ಷೀಣವಾಗದಿದ್ದರೆ ಯಾಪ್ಯವೆಂದು ತಿಳಿಯಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ ರಕ್ತಪಿತ್ತಪ್ರತಿಷೇಧನಾಮಕ ಪಞ್ಚಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ.

ಷಟ್‌ಚತ್ವಾರಿಂಶತ್ತಮೋಽಧ್ಯಾಯಃ

ಅಥಾತೋ ಮೂರ್ಛಾಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿ ದಂತೆಯೇ ಮೂರ್ಛಾ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಕ್ಷೀಣಸ್ಯ ಬಹುದೋಷಸ್ಯ ವಿರುದ್ಧಾಹಾರಸೇವಿನಃ |
ವೇಗಾಘಾತಾದಭಿಘಾತಾದ್ಧೀನಸತ್ವಸ್ಯ ವಾ ಪುನಃ ||೩||
ಕರಣಾಯತನೇಷೂಗ್ರಾ ಬಾಹ್ಯೇಷ್ವಾಭ್ಯನ್ತರೇಷು ಚ |
ನಿವಿಶನ್ತೇ ಯದಾ ದೋಷಾಸ್ತದಾ ಮೂರ್ಛನ್ತಿ ಮಾನವಾಃ ||೪||
ಹೃತ್ಪೀಡಾ ಜೃಮ್ಭಣಂ ಗ್ಲಾನಿಃ ಸಂಜ್ಞಾನಾಶೋ ಬಲಸ್ಯ ಚ |
ಸರ್ವಾಸಾಂ ಪೂರ್ವರೂಪಾಣಿ ಯಥಾಸ್ವಂ ತಾ ವಿಭಾವಯೇತ್ ||೫||

ಕ್ಷೀಣದೇಹವುಳ್ಳ ಬಹುದೋಷದಿಂದ ಕೂಡಿರುವ ಮನುಷ್ಯನು ವಿರುದ್ಧಾಹಾರ ವಿಹಾರಗಳನ್ನು ಸೇವಿಸುವುದರಿಂದಲೂ ವಾತ ಮೂತ್ರ ಪುರೀಷಾದಿ ವೇಗಗಳನ್ನು ತಡೆಯು ವುದರಿಂದಲೂ ಬಾಹ್ಯ ಅಭಿಘಾತದಿಂದಲೂ ಬಲಹೀನನಾಗಿ ಶರೀರದ ಬಹಿರ್ಭಾಗದ ಕರ್ಮೇಂದ್ರಿಯ ಮತ್ತು ಮನೋಬುದ್ಧಿ, ಅಹಂಕಾರ ಚಿತ್ತಗಳೆಂಬ ಅಂತರಿಂದ್ರಿಯ ಗಳನ್ನೂ ಅತಿ ಪ್ರಕುಪಿತಗಳಾದ ದೋಷಗಳು ಆಕ್ರಮಿಸಿದರೆ ಪ್ರಜ್ಞೆ ತಪ್ಪುತ್ತದೆ; ಹೃದಯದಲ್ಲಿ ನೋವೂ, ಆಕಳಿಕೆ, ಇಂದ್ರಿಯ ದೌರ್ಬಲ್ಯ, ಜ್ಞಾನ ಶೂನ್ಯತೆ, ಬಲಹಾನಿ ಇವುಗಳುಂಟಾಗುತ್ತವೆ ; ಇವು ಎಲ್ಲಾ ವಿಧದ ಮೂರ್ಛೆಗಳಿಗೂ ಪೂರ್ವರೂಪಗಳು, ದೋಷಗಳಿಗೆ ತಕ್ಕಂತೆ ಅವುಗಳನ್ನು ವಿಭಾಗಮಾಡಬೇಕು.

ಟಿಪ್ಪಣಿ : ಅಂತಃಕರಣೇಂದ್ರಿಯವೂ ಹೃದಯವೂ ಒಂದೇ ಆದರೂ ಅಂತಃ ಸಂಜ್ಞಾವಹನಾಡಿಗಳಿಗೆ ಅಂತಃಕರಣೇಂದ್ರಿಯಗಳೆಂದು ಪ್ರತೀತಿಯುಂಟಾಗಿರುತ್ತದೆ.

ಸಂಜ್ಞಾವಹಾಸು ನಾಡೀಷು ಪಿಹಿತಾಸ್ವನಿಲಾದಿಭಿಃ |
ತಮೋಽಭ್ಯುಪೈತಿ ಸಹಸಾ ಸುಖದುಃಖವ್ಯಪೋಹಕೃತ್ ||೬||
ಸುಖದುಃಖವ್ಯಪೋಹಾಚ್ಚ ನರಃ ಪತತಿ ಕಾಷ್ಠವತ್ |
ಮೋಹೋ ಮೂರ್ಛೇತಿ ತಾಂ ಪ್ರಾಹುಃ ಷಡ್ವಿಧಾ ಸಾ ಪ್ರಕೀರ್ತಿತಾ ||೭||
ವಾತಾದಿಭಿಃ ಶೋಣಿತೇನ ಮದ್ಯೇನ ಚ ವಿಷೇಣ ಚ |
ಷಟ್ಸ್ವಪ್ಯೇತಾಸು ಪಿತ್ತಂ ಹಿ ಪ್ರಭುತ್ವೇನಾವತಿಷ್ಠತೇ ||೮||

ವಾತದಿದೋಷಗಳು ಪ್ರಕೋಪಗೊಂಡು ಸಂಜ್ಞಾವಹನಾಡಿಗಳನ್ನು ಪ್ರವೇಶಿಸಿ ಅವು

ಗಳ ಮುಖಗಳನ್ನು ಮುಚ್ಚಿಬಿಡುವುದರಿಂದ ಸಂಜ್ಞಾನಾಶವಾಗಿ ಸುಖದುಃಖಗಳ ಅನುಭವವುಂಟಾಗುತ್ತದೆ. ಆ ಮನುಷ್ಯನು ಕಾಷ್ಠದಂತೆ ಬಿದ್ದುಕೊಳ್ಳುತ್ತಾನೆ; ಈ ಸ್ಥಿತಿಗೆ ಮೋಹ (ಮೂರ್ಛೆ) ಎಂದು ಹೇಳುತ್ತಾರೆ; ಈ ಮೂರ್ಛೆಯು ವಾತ, ಪಿತ್ತ, ಕಫ ಭೇದಗಳಿಂದ ೩ ವಿಧಗಳು; ರಕ್ತದಿಂದ, ಮದ್ಯದಿಂದ, ವಿಷದಿಂದ ಒಂದೊಂದು ವಿಧವು; ಈ ೯ ವಿಧ ಮೂರ್ಛೆಗಳಲ್ಲೂ ಪಿತ್ತವೇ ಇತರ ದೋಷಗಳನ್ನು ಆಕ್ರಮಿಸಿಕೊಂಡು ಪ್ರಧಾನವಾಗಿರುತ್ತದೆ.

ಅಪಸ್ಮಾರೋಕ್ತಲಿಙ್ಗಾನಿ ತಾಸಾಮುಕ್ತಾನಿ ತತ್ತ್ವತಃ ।
ಪೃಥಿವ್ಯಮ್ಬುಸ್ತಮೋರೂಪಂ ರಕ್ತಗನ್ಧಶ್ಚ ತನ್ಮಯಃ ॥೯॥
ತಸ್ಮಾದ್ರಕ್ತಸ್ಯ ಗನ್ಧೇನ ಮೂರ್ಛನ್ತಿ ಭುವಿ ಮಾನವಾಃ ।
ದ್ರವ್ಯಸ್ವಭಾವ ಇತ್ಯೇಕೇ ದೃಷ್ಟ್ವಾ ಯದಭಿಮುಹ್ಯತಿ ॥೧೦॥

ಹಲ್ಲು, ಉಗುರುಗಳನ್ನು ಅಗಿಯುವುದು, ಕಣ್ಣಿನಿಂದ ವಿಕಾರವಾಗಿ ನೋಡುವುದು ಬಾಯಿನಿಂದ ಜೊಲ್ಲನ್ನು ಸುರಿಸುವುದು ಇವೇ ಮೊದಲಾದ ಅಪಸ್ಮಾರದ ದುರ್ಲಕ್ಷಣಗಳು ಈ ಮೂರ್ಛೆಯಲ್ಲೂ ಕಂಡುಬರುತ್ತವೆ; ಆದರೆ ಅಪಸ್ಮಾರದ ಬೀಭತ್ಸಲಕ್ಷಣಗಳಿರುವುದಿಲ್ಲ; ಪೃಥಿವೀ ಮತ್ತು ನೀರುಗಳಲ್ಲಿ ತಮೋಗುಣವೇ ಪ್ರಧಾನವಾಗಿರುತ್ತದೆ; ರಕ್ತದ ಗಂಧವೂ ತಮೋಮಯವಾಗಿರುತ್ತದೆ. ಆದ್ದರಿಂದ ಮನುಷ್ಯರು ರಕ್ತಗಂಧದಿಂದ ಮೂರ್ಛಿತರಾಗುತ್ತಾರೆ; ರಕ್ತವನ್ನು ನೋಡಿ ಮೋಹಗೊಳ್ಳುವುದು (ಮೂರ್ಛಿತರಾಗುವುದು.) ದ್ರವ್ಯದ ಸ್ವಭಾವವೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಟಿಪ್ಪಣಿ:—ತಮೋಬಹುಳಾಪೃಥಿವೀ, ಸತ್ವತಮೋಬಹುಳಾಆಪಃ ಎಂದೂ ರಕ್ತದಲ್ಲಿರುವ ಗಂಧಗುಣವು ಪೃಥಿವಿಯದು, ದ್ರವತ್ವವು ಅಪ್ಪಿನದು; ಆದ್ದರಿಂದ ಗಂಧಕೆ ತಮೋಗುಣವೇ ಅಧಿಕವಾಗಿರುತ್ತದೆ; ರಕ್ತಗಂಧವು ಮೂರ್ಛೆಯನ್ನುಂಟುಮಾಡುವುದಾದರೂ ಎಲ್ಲರಿಗೂ ಮೂರ್ಛೆ ಬರುವುದಿಲ್ಲ; ಹೀನ ಸತ್ವಗುಣವುಳ್ಳವರಿಗೆ ರಕ್ತದರ್ಶನವಾದ ಕೂಡಲೇ ಜ್ಞಾನತಪ್ಪಿ ಹೋಗುತ್ತದೆ; ರಕ್ತವು ತಮೋಗುಣಾಧಿಕ್ಯತೆಯುಳ ಕಾರಣ ಮನುಷ್ಯರು ರಕ್ತವನ್ನು ಮೂಸಿದರೆ ಹೃದಯದಲ್ಲಿರುವ ತಮೋಗುಣವು ವೃದ್ಧಿಯಾಗಿ ಮೂರ್ಛೆಯನ್ನುಂಟುಮಾಡುತ್ತದೆ; ತಮೋಭೂಯಿಗಷ್ಠಳಾದ ಈ ಪೃಥಿವೀ ಅಪ್ಪುಗಳು ಸಾತ್ಮ್ಯದಿಂದಲೂ ಸ್ವರೂಪದಿಂದಲೂ ಮೂರ್ಛೆಯನ್ನುಂಟುಮಾಡುವುದಿಲ್ಲ. ಸತ್ವರಜಸ್ತಮಸ್ಸುಗಳೆಂಬ ಗುಣತ್ರಯಗಳೂ ರಕ್ತದಲ್ಲಿರುತ್ತವೆ; ಪೃಥಿವ್ಯಂಭಸ್ತಮೋ ಲಕ್ಷಣವುಳ್ಳ ರಕ್ತಕ್ಕೆ ತಮೋಗುಣಾಧಿಕ್ಯದಿಂದ ತಮೋಗುಣದಿಂದ ಮನುಷ್ಯರಿಗೆ ಮೂರ್ಛೆ ಬರುತ್ತದೆ.

ಗುಣಾಸ್ತೀವ್ರತರತ್ವೇನ ಸ್ಥಿತಾಸ್ತು ವಿಷಮದ್ಯಯೋಃ ।
ತ ಏವ ತಸ್ಮಾಜ್ಜಾಯೇತ ತಾಭ್ಯಾಂ ಮೋಹೋ ಯಥೇರಿತಃ ॥೧೧॥
ಸ್ತಬ್ಧಾಙ್ಗದೃಷ್ಟಿಸ್ತ್ವಸೃಜಾ ಗೂಢೋಚ್ಛ್ವಾಸಶ್ಚ ಮೂರ್ಛಿತಃ ।

ಮದ್ಯೇನ ವಿಲಪಂಶ್ಶೇತೇ ನಷ್ಟವಿಭ್ರಾನ್ತಮಾನಸಃ ||೧೨||
ಗಾತ್ರಾಣಿ ವಿಕ್ಷಿಪರ್ಣ ಭೂಮೌ ಜರಾಂ ಯಾವನ್ನಯಾತಿ ತತ್ |
ವೇಪಥುಃ ಸ್ವಪ್ನತೃಷ್ಣಾಃ ಸ್ಯುಃ ಸ್ತಮ್ಭಶ್ಚ ವಿಷಮೂರ್ಛಿತೇ ||
ವೇದಿತವ್ಯಂ ತೀವ್ರತರಂ ಯಥಾಸ್ವಂ ವಿಷಲಕ್ಷಣೈಃ ||೧೩||

ವಿಷಮದ್ಯಗಳಲ್ಲಿ ಈ ಗುಣಗಳು ತೀವ್ರತರವಾಗಿರುವುದರಿಂದಲೇ ಅವುಗಳೆರಡರಿಂದಲೂ ಮೋಹವುಂಟಾಗುತ್ತದೆ; ರಕ್ತದಿಂದ ಅಂಗಗಳೂ ದೃಷ್ಟಿಯೂ ಬಿಗಿದು ಹಿಡಿಯಲ್ಪಟ್ಟ ಮನುಷ್ಯನು ಅತಿಮೆಲ್ಲಗೆ ಉಚ್ಛ್ವಾಸಮಾಡುತ್ತಾ ಪ್ರಜ್ಞೆತಪ್ಪಿರುತ್ತಾನೆ; ಮದ್ಯಪಾನ ಮಾಡಿದವನೂ ಮನಸ್ಸು ಚಂಚಲಗೊಳಿಸಲ್ಪಟ್ಟಿರುವ ಕಾರಣ ಅಸಂಬದ್ಧವಾಗಿ ಮಾತನಾಡುತ್ತಾ ಮಲಗಿರುತ್ತಾನೆ; ಕೈಕಾಲುಗಳನ್ನು ಅತ್ತಿತ್ತ ಚಾಚಿಕೊಂಡು ಮನಃಕ್ಷೋಭೆಯಾಗಿರುವುದರಿಂದ ಮದ್ಯವು ಜೀರ್ಣಿಸುವವರೆಗೂ ಮಲಗೇ ಇರುತ್ತಾನೆ, ಮೈನಡುಕ, ನಿದ್ರೆ, ಬಾಯಾರಿಕೆ, ಮೈಬಿಗಿತ, ಇವು ಮೂರ್ಛಿತನ ಲಕ್ಷಣಗಳು. ಈ ಲಕ್ಷಣಗಳೇ ವಿಷಪೀಡಿತನಿಗೂ ಅಧಿಕವಾಗಿರುತ್ತವೆ.

ಸೇಕಾವಗಾಹೌ ಮಣಯಃ ಸಹಾರಾಃ ಶೀತಾಃ ಪ್ರದೇಹಾಃ ವ್ಯಜನಾನಿಲಾಶ್ಚ |
ಶೀತಾನಿ ಪಾನಾನಿ ಚ ಗನ್ಧವನ್ತಿ ಸರ್ವಾಸು ಮೂರ್ಛಾಸ್ವನಿವಾರಿತಾನಿ ||೧೪||
ಸಿತಾಪ್ರಿಯಾಳೇಕ್ಷು ರಸಪ್ಲುತಾನಿ ದ್ರಾಕ್ಷಾಮಧೂಕಸ್ವರಸಾನ್ವಿತಾನಿ |
ಖರ್ಜೂರಕಾಶ್ಮರ್ಯರಸೈಃ ಶೃತಾನಿ ಪಾನಾನಿ ಸರ್ಪೀಂಷಿ ಚ ಜೀವನಾನಿ ||೧೫||
ಸಿದ್ಧಾನಿ ವರ್ಗೇ ಮಧುರೇ ಪಯಾಂಸಿ ಸದಾಡಿಮಾಜಾಙ್ಗಲಜಾ ರಸಾಶ್ಚ |
ತಥಾ ಯವಾ ಲೋಹಿತಶಾಲಯಶ್ಚ ಮೂರ್ಛಾಸು ಪಥ್ಯಾಶ್ಚ ಸದಾ ಸತೀನಾಃ ||೧೬||

ಶೀತಲಕಷಾಯದಿಂದ ಮೈಮೇಲೆ ಸೇಚನೆ ಮಾಡುವುದು, ಶೀತವಾದ ನೀರಿನಲ್ಲಿ ಮುಳುಗಿಸಿರುವುದು, ಮುಕ್ತಾಹಾರಗಳನ್ನೂ ತಣ್ಣಗಿರುವ ಪುಷ್ಪಮಾಲಿಕೆಗಳನ್ನೂ ಕತ್ತಿನಲ್ಲಿ ಧರಿಸುವುದು, ಶೀತಲಗಂಧದ್ರವ್ಯಗಳನ್ನು ಮೈಗೆ ಬಳಿದುಕೊಳ್ಳುವುದು; ಬೀಸಣಿಗೆಯಿಂದ ತಂಗಾಳಿಯನ್ನು ಬೀಸಿಕೊಳ್ಳುವುದು, ಸುಗಂಧವಾದ ಶೀತಲ ಪಾನೀಯಗಳನ್ನು ಕುಡಿಯುವುದು; ಇವು ಎಲ್ಲಾ ವಿಧದ ಮೂರ್ಛೆಯಲ್ಲೂ ಅನಿವಾರ್ಯವಾದದ್ದು, (ಅತ್ಯವಶ್ಯಕವು.) ಸಕ್ಕರೆ, ಚಾರುಪೊಪ್ಪು, ಕಬ್ಬಿನರಸ ಇವುಗಳಿಂದ ನೆನಸಿರುವ ದ್ರಾಕ್ಷಿ, ಹಿಪ್ಪೆಹೂವುಗಳ ಸ್ವರಸವನ್ನು ಮಿಶ್ರಮಾಡಿ ಖರ್ಜೂರ ಶಿವನಿಹಣ್ಣುಗಳನ್ನು ಸೇರಿಸಿ ಕಾಯಿಸಿದ ಪಾನಗಳನ್ನೂ ಜೀವನೀಯದ್ರವ್ಯಗಳಿಂದ ತಯಾರಿಸಿದ ಘೃತ ಇವುಗಳನ್ನೂ ಪಾನಮಾಡಿಸಬೇಕು; ಕಾಕೋಳ್ಯಾದಿಗಣದ್ರವ್ಯಗಳೊಡನೆ ಕಾಯಿಸಿದ ಹಾಲು, ದಾಳಿಂಬೆ ರಸ ಮಿಶ್ರಮಾಡಿದ ಜಾಂಗಲಪ್ರಾಣಿಗಳ ಮಾಂಸರಸ, ಯವಧಾನ್ಯ ರಕ್ತಶಾಲಿಗಳು, ಬಟಾಣಿಕಾಳುಗಳು, ಇವೆಲ್ಲಾ ಮೂರ್ಛೆಯಲ್ಲಿ ಹಿತಕರಗಳೆಂದು ತಿಳಿಯಬೇಕು; ಮೂರ್ಛಿತನಿಗೆ ಎಲ್ಲಾ ಪ್ರಾಣಿಗಳ ಹಾಲೂ ಹಿತಕರವಾದದ್ದು.

ಭುಜಂಗಪುಷ್ಪಂ ಮರಿಚಾನ್ಯುಶೀರಂ ಕೋಲಸ್ಯ ಮದ್ಯಂ ಚ ಪಿಬೇತ್ ಸಮಾನಿ |
ಶೀತೇನ ತೋಯೇನ ಬಿಸಂ ಮೃಣಾಳಂ ಕ್ಷೌದ್ರೇಣ ಕೃಷ್ಣಾಂ ಸಿತಯಾ ಚ ಪಥ್ಯಾಮ್ ||೧೭||

ಕುರ್ಯಾಚ್ಚ ನಾಸಾವದನಾವರೋಧಂ ಕ್ಷೀರಂ ಪಿಬೇದ್ವಾಪ್ಯಥಮಾನುಷೀಣಾಮ್ ।
ಮೂರ್ಛಾಂ ಪ್ರಸಕ್ತಾಂ ತು ಶಿರೋವಿರೇಕೈರ್ಜಯೇದಭೀಕ್ಷ್ಣಂ ಪವ-ನೈಶ್ಚ ತೀಕ್ಷ್ಣೈಃ ॥೧೮॥

ಹರೀತಕೀಕ್ವಾಥಶೃತಂ ಘೃತಂ ವಾ ಧಾತ್ರೀಫಲಾನಾಂ ಸ್ವರಸೈಃ ಕೃತಂ ವಾ ।
ದ್ರಾಕ್ಷಾಸಿತಾದಾಡಿಮಲಾಜವನ್ತಿ ಶೀತಾನಿ ನೀಲೋತ್ಪಲ ಪದ್ಮವನ್ತಿ ॥೧೯॥
ಪಿಬೇತ್ ಕಷಾಯಾಣಿ ಚ ಗನ್ಧವನ್ತಿ ಪಿತ್ತಜ್ವರಂ ಯಾನಿ ಶಮಂ ನಯನ್ತಿ ।

ನಾಗಕೇಸರಿ, ಮೆಣಸು, ಲಾಮಂಚ, ಎಲಚಿಯತಿರಳು, ಇವುಗಳನ್ನು ಸಮ ಭಾಗದಿಂದ ಸೇರಿಸಿ ತಣ್ಣೀರಿನಲ್ಲಿ ಕಿವಿಚಿ ಕುಡಿಸಬೇಕು; ತಾವರೆಗೆಡ್ಡೆ ಮತ್ತು ದಂಟು ಗಳನ್ನು ತಣ್ಣೀರಿನಲ್ಲಿ ಕಿವಿಚಿ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು, ಹಿಪ್ಪಲಿಯ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ತಣ್ಣೀರಿನಲ್ಲಿ ಕದರಿ ಕುಡಿಸಬೇಕು ; ಅಣಿಲೇ ಕಾಯಿ ಚೂರ್ಣಕ್ಕೆ ಸಕ್ಕರೆ ಮಿಶ್ರಮಾಡಿ ತಣ್ಣೀರಿನಲ್ಲಿ ಕದರಿ ಕುಡಿಸಬೇಕು ; ಮೂಗು ಬಾಯಿಗಳನ್ನು ಸ್ವಲ್ಪಹೊತ್ತು ಮುಚ್ಚಿಸಬೇಕು; ಹೆಂಗಸರಸ್ತನ್ಯವನ್ನು ಕುಡಿಸಬೇಕು ; ಮೂಗು ಬಾಯಿಗಳ ದ್ವಾರವನ್ನು ಮುಚ್ಚಿದರೆ ವಾಯುವು ಒಳಕ್ಕೆನುಗ್ಗಿ ತಡೆದಿರುವ ಸ್ರೋತೋಮಾರ್ಗಗಳನ್ನು ಅಗಲಿಸಿ ಮೂರ್ಛೆಯನ್ನು ಹೋಗಲಾಡಿಸುತ್ತದೆ ; ತಡೆದು ತಡೆದು ಬರುವ ಮೂರ್ಛೆಯಲ್ಲಿ ಪುನಃ ಪುನಃ ಶಿರೋವಿರೇಚನವನ್ನೂತೀಕ್ಷ್ಣ ನವಮನೌಷಧಗಳನ್ನೂ ಪ್ರಯೋಗಮಾಡಿ ಮೂರ್ಛೆಯನ್ನು ನಿವಾರಣೆಮಾಡಬೇಕು ; ಅಣಿಲೇಕಾಯಿನ ಕಷಾಯದೊಡನೆಯಾಗಲೀ ನೆಲ್ಲಿಕಾಯಿನ ಸ್ವರಸದೊಡನೆಯಾಗಲೀ, ತಯಾರಿಸಿದ ಘೃತವನ್ನಾಗಲೀ, ದ್ರಾಕ್ಷಿ, ಸಕ್ಕರೆ, ದಾಳಿಂಬೆರಸ, ಅರಳು ಚೂರ್ಣ ಇವು ಗಳನ್ನು ಹೆಚ್ಚಾಗಿ ಸೇರಿಸಿದ ಶಿವನಿಹಣ್ಣು ಮೊದಲಾದ ಪಿತ್ತಜ್ವರಹರ ಕಷಾಯವನ್ನಾಗಲೀ, ಅದೇ ಪಿತ್ತಜ್ವರಹರ ಕಷಾಯಕ್ಕೆ ನೈದಿಲೆ, ತಾವರೆ, ಕುಸುಮಗಳನ್ನೂ ಸೇರಿಸಿ ತಯಾರಿಸಿ ತಣ್ಣಗೆ ಮಾಡಿಯೂ ಗಂಧದ್ರವ್ಯಗಳನ್ನು ಮಿಶ್ರಮಾಡಿಯೂ ಕುಡಿಸಬೇಕು.

ಪ್ರಭೂತದೋಷಸ್ತಮಸೋಽತಿರೇಕಾತ್ ಸಂಮೂರ್ಛಿತೋ ನೈವವಿಬುಧ್ಯತೇ ಯಃ ॥೨೦॥
ಸಂನ್ಯಸ್ತಸಂಜ್ಞೋ ಭೃಶದುಶ್ಚಿಕಿತ್ಸ್ಯೋ ಜ್ಞೇಯಸ್ತದಾಬುದ್ಧಿಮತಾ ಮನುಷ್ಯಃ ।
ಯಥಾಮಲೋಷ್ಟಂ ಸಲಿಲೇ ನಿಷಿಕ್ತಂ ಸಮುದ್ಧರೇದಾಶ್ವವಿಲೀನಮೇವ ॥೨೧॥
ತದ್ವಚ್ಚಿಕಿತ್ಸೇತ್ತ್ವರಯಾಭಿಷಕ್ತಮಸ್ವೇದನಂ ಮೃತ್ಯುವಶಂ ಪ್ರಯಾತಮ್ ।
ತೀಕ್ಷ್ಣಾಂಜನಾಭ್ಯಂಜನಧೂಮಯೋಗೈಸ್ತಥಾ ನಖಾಭ್ಯನ್ತರತೋತ್ರಪಾತ್ಯೈಃ ॥೨೨॥
ವಾದಿತ್ರಗೀತಾನುನಯೈರಪೂರ್ವೈರ್ವಿಘಟ್ಟನೈರ್ಗುಪ್ತಫಲಾವಘರ್ಷೈಃ ।
ಅಭಿಃ ಕ್ರಿಯಾಭಿಶ್ಚ ನ ಲಬ್ಧಸಂಜ್ಞಃ ಸಾನಾಹಲಾಶ್ವಸನಶ್ಚ ವರ್ಜ್ಯಃ ॥೨೩॥

ಅಧಿಕ ದೋಷವುಳ್ಳವನ್ನು ಅತ್ಯಂತ ತಮೋಗುಣಾಧಿಕ್ಯತೆಯಿಂದ ಪ್ರಜ್ಞೆ ತಪಿದ್ದರೆ ಬುದ್ಧಿವಂತನಾದ ವೈದ್ಯನು ಅತ್ಯಂತಕಷ್ಟಸಾಧ್ಯವಾದ ಸನ್ನ್ಯಾಸರೋಗವೆಂದು ತಿಳಿಯ ಬೇಕು ; (ಮರಣಾವಸ್ಥೆಯಲ್ಲಿರುವ ಕಾರಣ ಸನ್ನ್ಯಾಸವೆಂದು ಹೆಸರು.) ಒಣಗಿದ ಮಣ್ಣು

ಹೆಂಟೆಯು ನೀರಿಗೆ ಬಿದ್ದು ಮುಳುಗುತ್ತಿರುವಾಗಲೇ ಅದನ್ನು ಕರಗಿಹೋಗದಂತೆ ಹೊರಕ್ಕೆ ತೆಗೆದು ಬಿಡುವಂತೆಯೇ ಮರಣಾವಸ್ಥೆಯಲ್ಲಿರುವ ಸನ್ನ್ಯಾಸರೋಗಿಗೆ ತೀಕ್ಷ್ಣ ಕರಗಳಾದ ಅಂಜನ, ಅಭ್ಯಂಗ, ಧೂಮಗಳನ್ನು ಮೂಗು ಬಾಯಿಗಳ ಮೂಲಕ ನುಗ್ಗು ವಂತೆ ಮಾಡುವುದರಿಂದಲೂ, ಸೂಜಿಯಿಂದ ಉಗುರಕಣ್ಣುಗಳನ್ನು ಚುಚ್ಚುವುದರಿಂದಲೂ, ಘಟ್ಟಿಯಾಗಿ ವಾದ್ಯಗಳನ್ನು ಬಾರಿಸುವುದು, ಸಂಗೀತ ಹೇಳುವುದು, ಸಮಾಧಾನವಾದ ಮಾತುಗಳನ್ನಾಡುವುದು, ಶರೀರದ ಅವಯವಗಳನ್ನು ಅತ್ತಿತ್ತ ಕಡೆಗೆ ಚಲಿಸುವುದು ನಸು ಗುನ್ನಿಯ ಕಾಯನ್ನು ಮೈಗೆ ತಿಕ್ಕುವುದು. (ಕೆಲವರು ರೋಗಿಯ ವೃಷಣವನ್ನು ಹಿಸು ಗುವುದೆನ್ನುತ್ತಾರೆ) ; ಇವುಗಳಿಂದ ರೋಗಿಗೆ ಎಚ್ಚರವಾಗುವವರೆಗೂ ಉಪಚರಿಸಬೇಕು ; ಈ ಎಲ್ಲಾ ವಿಧಗಳಿಂದಲೂ ಎಚ್ಚರಿಕೆಬಾರದೆ ಹೊಟ್ಟೆಯುಬ್ಬರ, ಮುಖದಿಂದ ಜೊಲ್ಲು ಸೋರುತ್ತಿರುವುದು, ಮೇಲೆ ಉಸಿರುಬಿಡುವುದು ಈ ಲಕ್ಷಣಗಳುಂಟಾದರೆ ತ್ಯಜಿಸಬೇಕು.

ಪ್ರಬುದ್ಧಸಂಜ್ಞಂ ವಮನಾನುಲೋಮೈಸ್ತೀಕ್ಷ್ಣೈರ್ವಿಶುದ್ಧಂಲಘುಪಥ್ಯಭುಕ್ತಮ್ ।
ಫಲತ್ರಿಕೈಶ್ಚಿತ್ರಕನಾಗರಾಢ್ಯೈಸ್ತಥೋಽತ್ಮಜಾತಾಜ್ಜತುನಃ ಪ್ರಯೋಗೈಃ ॥
ಸಶರ್ಕರೈರ್ಮಾಸಮುಪಕ್ರಮೇತ ವಿಶೇಷತೋ ಜೀರ್ಣಘೃತಂ ಸಪಾಯ್ಯಃ ॥೨೪॥
ಯಥಾಸ್ವಂ ಚ ಜ್ವರಘ್ನಾನಿ ಕಷಾಯಾಣ್ಯುಪಯೋಜಯೇತ್ ।
ಸರ್ವಮೂರ್ಛಾಪರೀತಾನಾಂ ವಿಷಜಾಯಾಂ ವಿಷಾಪಹಮ್ ॥೨೫॥

ತೀಕ್ಷ್ಣಾಂಜನಾದಿ ಚಿಕಿತ್ಸೆಗಳಿಂದ ಜ್ಞಾನ ಬಂದಮೇಲೆ ತೀಕ್ಷ್ಣಗಳಾದ ವಮನ ವಿರೇಚನಗಳಿಂದ ದೇಹಶುದ್ಧಿಯನ್ನೂ ಲಘುವಾದ ಪಥ್ಯವಾದ ಆಹಾರವನ್ನು ಭೋಜನ ವನ್ನೂ ಮಾಡಿಸಿ ತ್ರಿಫಲಾ, ಚಿತ್ರಮೂಲ, ಶುಂಠಿ ಇವುಗಳ ಚೂರ್ಣವನ್ನು ಶಿಲಾಜತು ಮತ್ತು ಸಕ್ಕರೆಗಳೊಡನೆ ೧ ತಿಂಗಳವರೆಗೂ ಪ್ರಯೋಗಿಸಬೇಕು ; ಮುಖ್ಯವಾಗಿ ೧೦ ವರ್ಷಗಳ ಹಿಂದಿನ ತುಪ್ಪವನ್ನು ಕುಡಿಸಬೇಕು ; ಎಲ್ಲಾ ವಿಧಗಳಾದ ಮೂರ್ಛೆಯಲ್ಲೂ ದೋಷಾನುಸಾರ ತಯಾರಿಸಿದ ಜ್ವರಹರಗಳಾದ ಕಷಾಯಗಳನ್ನೇ ಕುಡಿಸಬೇಕು ; ವಿಷ ದಿಂದುಂಟಾದ ಮೂರ್ಛೆಯಲ್ಲಿ ಕಲ್ಪಸ್ಥಾನದಲ್ಲಿ ಹೇಳಿದ ವಿಷಹರಗಳಾದ ನಸ್ಯಾಂಜನಾದಿ ಗಳನ್ನು ಪ್ರಯೋಗಿಸಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ ಮೂರ್ಛಾಪ್ರತಿಷೇಧನಾಮಕ ಷಟ್ಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾ ಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ.

ಸಪ್ತಚತ್ವಾರಿಂಶತ್ತಮೋಽಧ್ಯಾಯಃ

ಅಥಾತಃ ಪಾನಾತ್ಯಯಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಪಾನಾತ್ಯಯ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ :—ಮೂರ್ಛೆಯಲ್ಲಿ ಪಿತ್ತದೋಷವೇ ಪ್ರಬಲವಾಗಿರುತ್ತದೆ ; ಪಾನಾತ್ಯಯದಲ್ಲೂ ಪಿತ್ತಾಧಿಕ್ಯತೆಯಿರುತ್ತದೆ; ಪ್ರಜ್ಞಾನಾಶವು ಇವೆರಡರಲ್ಲೂ ಸಮಾನವಾದ ಕಾರಣ, ಮೂರ್ಛಾರೋಗ ಚಿಕಿತ್ಸೆಯಾದ ಮೇಲೆ ಪಾನಾತ್ಯಯರೋಗ ಚಿಕಿತ್ಸೆಯನ್ನು ಹೇಳುವುದು ಯುಕ್ತವಾದದ್ದು ; ಆದಿಶಬ್ದವು ಲೋಪವಾಗಿರುತ್ತೆಯಾಗಿ ಪರಮದಾದಿಗಳನ್ನೂ ತಿಳಿಸುತ್ತೇವೆಂದು ಅರ್ಥಮಾಡಿಕೊಳ್ಳಬೇಕು.

ಮದ್ಯಮುಷ್ಣಂ ತಥಾ ತೀಕ್ಷ್ಣಂ ಸೂಕ್ಷ್ಮಂ ವಿಶದಮೇವ ಚ ।
ರೂಕ್ಷಮಾಶುಕರಂ ಚೈವ ವ್ಯವಾಯಿ ಚ ವಿಕಾಸಿ ಚ ||೩||
ಔಷ್ಣ್ಯಾಚ್ಛೀತೋಪಚಾರಂ ತತ್ತೈಕ್ಷ್ಣ್ಯಾದ್ಧನ್ತಿ ಮನೋಗತಿಮ್ ।
ವಿಶತ್ಯವಯವಾನ್ ಸೌಕ್ಷ್ಮ್ಯಾದ್ವೈಶದ್ಯಾತ್ ಕಫಶುಕ್ರನುತ್ ||೪||
ಮಾರುತಂ ಕೋಪಯೇದ್ರೌಕ್ಷ್ಯಾದಾಶುತ್ವಾಚ್ಚಾಶುಕರ್ಮಕೃತ್ ।
ಹರ್ಷದಂ ಚ ವ್ಯವಾಯಿತ್ವಾದ್ವಿಕಾಸಿತ್ವಾದ್ವಿಸರ್ಪತಿ ||೫||
ತದಮ್ಲಂ ರಸತಃ ಪ್ರೋಕ್ತಂ ಲಘು ರೋಚನದೀಪನಮ್ ।
ಕೇಚಿಲ್ಲವಣವರ್ಜ್ಯಾಂಸ್ತು ರಸಾನತ್ರಾದಿಶನ್ತಿ ಹಿ ||೬||

ಸೂತ್ರಸ್ಥಾನದಲ್ಲಿ ಮದ್ಯದ ಗುಣಗಳು ಹೇಳಲ್ಪಟ್ಟಿವೆಯಾದರೂ ಅದರ ಗುಣಗಳನ್ನು ಹೆಚ್ಚಾಗಿ ತಿಳಿಸುವುದಕ್ಕಾಗಿ ಪುನಃ ಇಲ್ಲಿ ಹೇಳುತ್ತೇವೆ ; ಮದ್ಯವು ಉಷ್ಣವೀರ್ಯವುಳ್ಳದ್ದು, ಚುರುಕಾದದ್ದು, ಅತಿಸೂಕ್ಷ್ಮವಾದ ಸ್ರೋತಸ್ಸುಗಳಲ್ಲೂ ನುಗ್ಗುತ್ತದೆ, ಅತಿ ತಿಳಿಯಾದದ್ದು, ರೂಕ್ಷಗುಣವುಳ್ಳದ್ದು, ಅತಿಶೀಘ್ರಕಾರಿಯು, ಬಲುಬೇಗನೆ ಶರೀರದಲ್ಲೆಲ್ಲಾ ಹರಡಿ ಅನಂತರ ಪಾಕವಾಗುತ್ತದೆ ; ಸಂಧಿಬಂಧಗಳನ್ನು ಸಡಿಲಿಸುತ್ತದೆ. ಉಷ್ಣವೀರ್ಯವುಳ್ಳ ಕಾರಣ ಪಿತ್ತವರ್ಧಕವು ; ಶೀತೋಪಚಾರವನ್ನು ಮಾಡಬೇಕಾಗುತ್ತದೆ ; ಚುರುಕಾದ್ದರಿಂದ ಮನಸ್ಸನ್ನು ಚಂಚಲಗೊಳಿಸಿ ಮನಸ್ಸಿನ ವ್ಯಾಪಾರವನ್ನು ನಾಶಗೊಳಿಸುತ್ತದೆ. ಸೂಕ್ಷ್ಮಗುಣದಿಂದ ಶರೀರದ ಅವಯವಗಳನ್ನೆಲ್ಲಾ ವ್ಯಾಪಿಸುತ್ತದೆ ; ವಿಶದಗುಣದಿಂದ ಕಫವನ್ನೂ ಶುಕ್ರವನ್ನೂ ಕ್ಷೀಣಗೊಳಿಸುತ್ತದೆ ; ರೂಕ್ಷತೆಯಿಂದ ವಾತವೃದ್ಧಿಯನ್ನುಂಟು

ಮಾಡುತ್ತದೆ ; ಆಶುಗುಣದಿಂದ ಬೇಗನೆ ಕೆಲಸಮಾಡುತ್ತದೆ ; (ಚಟುವಟಿಕೆಯನ್ನುಂಟು ಮಾಡುತ್ತದೆ.) ವ್ಯವಾಯಿಗುಣದಿಂದ ಮನಸ್ಸಿಗೆ ಹರ್ಷವನ್ನು (ಉಲ್ಲಾಸ) ಉಂಟು ಮಾಡುತ್ತದೆ ; (ಶುಕ್ರಹರವಾದ ಕಾರಣ ಪುಂಸ್ತ್ವವನ್ನುಂಟುಮಾಡುವುದಿಲ್ಲ ;) ವಿಕಾಸಿ ಗುಣದಿಂದ ಶರೀರದಲ್ಲೆಲ್ಲಾ ಹರಡಿಕೊಳ್ಳುತ್ತವೆ ; ರುಚಿಯಲ್ಲಿ ಹುಳಿಯಾಗಿ ಲಘುಗುಣ ವುಳ್ಳದ್ದು, ಆಹಾರದಲ್ಲಿ ರುಚಿಯನ್ನೂ ಅಗ್ನಿದೀಪನವನ್ನೂ ಉಂಟುಮಾಡುತ್ತದೆ ; ಕೆಲ ವರು ಮದ್ಯದಲ್ಲಿ ಉಪ್ಪುವಿನಃ ಬಾಕಿಯ ರಸಗಳೆಲ್ಲಾ ಇವೆಯೆಂದು ಹೇಳುತ್ತಾರೆ.

ಸ್ನಿಗ್ಧೈಸ್ತದನ್ನೈರ್ಮಾಂಸೈಶ್ಚ ಭಕ್ಷ್ಯೈಶ್ಚ ಸಹ ಸೇವಿತಮ್ ।
ಭವೇದಾಯುಃ ಪ್ರಕರ್ಷಾಯಬಲಾಯೋಪಚಯಾಯ ಚ ॥೭॥

ಕಾಮ್ಯತಾ ಮನಸಸ್ತುಷ್ಟಿರ್ಧೈರ್ಯಂ ತೇಜೋಽತಿವಿಕ್ರಮಃ ।
ವಿಧಿವತ್ ಸೇವ್ಯಮಾನೇ ತು ಮದ್ಯೇ ಸನ್ನಿಹಿತಾ ಗುಣಾಃ ॥೮॥

ತದೇವಾನನ್ನ ಮಜ್ಞೇನ ಸೇವ್ಯಮಾನಮಮಾತ್ರಯಾ ।
ಕಾಯಾಗ್ನಿನಾಹ್ಯಗ್ನಿಸಮಂ ಸಮೇತ್ಯ ಕುರುತೇ ಮದಮ್ ॥೯॥

ಸ್ನಿಗ್ಧವಾದ ಅನ್ನ, ಮಾಂಸ, ಭಕ್ಷ್ಯಗಳೊಡನೆಯೂ ಮದ್ಯವಿಪರೀತಗುಣಗಳುಳ್ಳ ಶೀತೋಪಚಾರಗಳಿಂದ ಕೂಡಿ ಮದ್ಯವನ್ನು ಸೇವಿಸಿದರೆ ಆಯುರ್ವೃದ್ಧಿಯೂ ಬಲವೂ, ದೇಹಪುಷ್ಟಿಯೂ ಉಂಟಾಗುತ್ತವೆ ; ಈ ರೀತಿ ಮದ್ಯಸೇವನೆಮಾಡಿದರೆ ಸೌಂದರ್ಯವೂ, ಮನಸ್ಸಿಗೆ ತೃಪ್ತಿಯೂ, ಧೈರ್ಯವೂ, ತೇಜಸ್ಸೂ, ಪರಾಕ್ರಮವೂ ಲಭ್ಯವಾಗುತ್ತವೆ; ಅವಿ ವೇಕಿಯಾದವನು ಅನ್ನವನ್ನು ತಿನ್ನದೆ ಅತಿಪ್ರಮಾಣದಿಂದ ಮದ್ಯವನ್ನು ಸೇವಿಸಿದರೆ ಅದು ಜಠರಾಗ್ನಿಯೊಡನೆ ಸೇರಿ ಮತ್ತತೆಯನ್ನುಂಟುಮಾಡುತ್ತದೆ.

ಮದೇನ ಕರಣಾನಾಂ ತು ಭಾವಾನ್ಯತ್ವೇ ಕೃತೇ ಸತಿ ।
ನಿಗೂಢಮಪಿ ಭಾವಂ ಸ್ವಂ ಪ್ರಕಾಶೀಕುರುತೇಽವಶಃ ॥೧೦॥

ಮದದಿಂದ ಮನೋಬುದ್ಧಿಗಳ ಸ್ವರೂಪಗಳು ಬದಲಾವಣೆಯಾಗುವುದರಿಂದ ರಹಸ್ಯ ವಾದ ತನ್ನ ಮನೋಭಿಪ್ರಾಯಗಳನ್ನೂ ಪ್ರಕಾಶಗೊಳಿಸುತ್ತಾನೆ.

ತ್ರ್ಯವಸ್ಥಶ್ಚ ಮದೋ ಜ್ಞೇಯಃ ಪೂರ್ವೋ ಮಧ್ಯೋಽಥಪಶ್ಚಿಮಃ ।
ಪೂರ್ವೇ ವೀರ್ಯರತಿಪ್ರೀತಿ ಹರ್ಷಭಾಷ್ಯಾದಿ ವರ್ಧನಮ್ ॥೧೧॥

ಪ್ರಲಾಪೋ ಮಧ್ಯಮೇ ಮೋಹೋ ಯುಕ್ತಾಯುಕ್ತ ಕ್ರಿಯಾಸ್ತಥಾ ।
ವಿಸಂಜ್ಞಃ ಪಶ್ಚಿಮೇ ಶೇತೇ ನಷ್ಟಕರ್ಮಕ್ರಿಯಾಗುಣಃ ॥೧೨॥

ಶ್ಲೈಷ್ಮಿಕಾನಲ್ಪಪಿತ್ತಾಂಶ್ಚ ಸ್ನಿಗ್ಧಾ ಮಾತ್ರೋಪಸೇವಿನಃ ।
ಪಾನಂ ನ ಬಾಧತೇಽತ್ಯರ್ಥಂ ವಿಪರೀತಾಂಸ್ತು ಬಾಧತೇ ॥೧೩॥

ಮದ್ಯಪಾನಮಾಡುವವರಿಗೆ ಪ್ರಥಮ, ಮಧ್ಯಮ, ತೃತೀಯ ಮದಗಳೆಂಬ ಮೂರು ಅವಸ್ಥೆಗಳುಂಟಾಗುತ್ತವೆ; ಮೊದಲನೆಯ ಅವಸ್ಥೆಯಲ್ಲಿ ಉತ್ಸಾಹ ಲಕ್ಷಣವೂ (ವೀರ್ಯವೂ), ಹರ್ಷವೂ, ಮನಸ್ತೃಪ್ತಿಯೂ ಭಾಷಣೆ, ಹಾಸ್ಯ, ಗೀತಾದಿಗಳೂ ಹೆಚ್ಚು

ತ್ತವೆ ; ಎರಡನೆಯ ವೇಗದಲ್ಲಿ ಅಸಂಬದ್ಧವಾಗಿ ಮಾತನಾಡುವುದು, ಅಜ್ಞಾನವೂ, ಕೆಲವು ಉಚಿತಕಾರ್ಯಗಳನ್ನೂ ಕೆಲವು ಅಯೋಗ್ಯ ರೀತಿಯ ಕಾರ್ಯಗಳನ್ನೂ ಮಾಡುವುದು ; ಮೂರನೆಯ ಅವಸ್ಥೆಯಲ್ಲಿ ಪ್ರಜ್ಞೆ ತಪ್ಪಿ ಕರ್ಮಗಳೆಲ್ಲಾ ನಾಶವಾಗುತ್ತವೆ; ಶ್ಲೇಷ್ಮ ಪ್ರಕೃತಿ ಯುವರೂ ಅಲ್ಪಪಿತ್ತವುಳ್ಳವರೂ ಸ್ನಿಗ್ಧದೇಹವುಳ್ಳವರೂ, ಅಲ್ಪಮಾತ್ರೆಯಿಂದ ಸೇವಿಸು ವವರೂ ಇವರುಗಳಿಗೆ ಮದ್ಯಪಾನದಿಂದ ತೊಂದರೆಯುಂಟಾಗುವುದಿಲ್ಲ ; ಇದಕ್ಕೆ ಬದಲಾಗಿ ಪಿತ್ತಾಧಿಕರಿಗೆ ರೂಕ್ಷಾಹಾರ ಮಾಡುವವರಿಗೆ ಅತಿಪ್ರಮಾಣದಿಂದ ಮದ್ಯಪಾನಮಾಡುವ ವರಿಗೆ ತೊಂದರೆಯುಂಟಾಗುತ್ತದೆ.

ನಿರ್ಭಕ್ತಮೇಕಾನ್ತತಏವ ಮದ್ಯಂ ನಿಷೇವ್ಯಮಾಣಂ ಮನುಜೇನ ನಿತ್ಯಮ್ ।
ಉತ್ಪಾದಯೇತ್ಕಷ್ಟತಮಾನ್ ವಿಕಾರಾನಾಪಾದಯೇಚ್ಚಾಪಿ ಶರೀರ ಭೇದಮ್ ॥೧೪॥
ಕ್ರುದ್ಧೇನ ಭೀತೇನ ಪಿಪಾಸಿತೇನ ಶೋಕಾಭಿತಪ್ತೇನ ಬುಭುಕ್ಷಿತೇನ ।
ವ್ಯಾಯಾಮಭಾರಾಧ್ವಪರಿಕ್ಷತೇನ ವೇಗಾವರೋಧಾಭಿಹತೇನ ಚಾಪಿ ॥೧೫॥
ಅತ್ಯಮ್ಲಭಕ್ಷ್ಯಾವತತೋದರೇಣ ಸಾಜೀರ್ಣಭಕ್ತೇನ ತಥಾಬಲೇನ ।
ಉಷ್ಣಾಭಿತಪ್ತೇನ ಚ ಸೇವ್ಯಮಾನಂ ಕರೋತಿ ಮದ್ಯಂ ವಿವಿಧಾನ್ ವಿಕಾರಾನ್ ॥೧೬॥
ಪಾನಾತ್ಯಯಂ ಪರಮದಂ ಪಾನಾಜೀರ್ಣಮಥಾಪಿ ವಾ ।
ಪಾನವಿಭ್ರಮಮುಗ್ರಂ ವಾ ತೇಷಾಂ ವಕ್ಷ್ಯಾಮಿ ಲಕ್ಷಣಮ್ ॥೧೭॥

ಸರ್ವದಾ ಆಹಾರವಿಲ್ಲದೆ ಏಕಾಂಗಿಯಾಗಿದ್ದು ಮದ್ಯಪಾನಮಾಡಿದ ಮನುಷ್ಯನಿಗೆ ಅತ್ಯಂತ ಕಷ್ಟಗಳಾದ ರೋಗಗಳುಂಟಾಗಿ ಶರೀರ ನಾಶವಾಗುತ್ತದೆ ; ಕೋಪ, ಭಯ, ಬಾಯಾರಿಕೆ, ವ್ಯಸನ, ಹಸಿವೆ ಇವುಗಳಿಂದ ಪೀಡಿತನಾಗಿರುವಾಗಲೂ ವ್ಯಾಯಾಮ, ಭಾರಹೊರುವುದು, ದಾರಿ ನಡೆಯುವುದು ಇವುಗಳಿಂದ ಬಳಲಿರುವಾಗಲೂ ಮಲ ಮೂತ್ರಾದಿ ವೇಗಗಳನ್ನು ತಡೆದಿರುವಾಗಲೂ ಅತಿಹುಳಿಯಾದ ಆಹಾರ ಮತ್ತು ಭಕ್ಷ್ಯ ಗಳನ್ನು ತಿಂದು ಹೊಟ್ಟೆ ತುಂಬಿರುವಾಗಲೂ ಆಹಾರವು ಜೀರ್ಣವಾಗದೆ ಇರುವಾಗಲೂ ದುರ್ಬಲನಾಗಿಯೂ ಉಷ್ಣಪೀಡಿತನಾಗಿಯೂ ಇರುವಾಗಲೂ ಮದ್ಯಪಾನ ಮಾಡಿದರೆ ಪಾನಾತ್ಯಯ, ಪರಮದ, ಪಾನಾಜೀರ್ಣ, ಅತಿಭಯಂಕರವಾದ ಪಾನವಿಭ್ರಮಗಳೆಂಬ ಅನೇಕ ರೋಗಗಳುಂಟಾಗುತ್ತವೆ ; ಅವುಗಳ ಲಕ್ಷಣಗಳನ್ನು ಹೇಳುತ್ತೇವೆ.

ಸ್ತಮ್ಭಾಙ್ಗಮರ್ದಹೃದಯಗ್ರಹ ತೋದಕಮ್ಪಾಃ ಪಾನಾತ್ಯಯೇಽನಿಲಕೃತೇ ಶಿರಸೋರು ಜಶ್ಚ ।
ಸ್ವೇದ ಪ್ರಲಾಪಮುಖಶೋಷಣದಾಹಮೂರ್ಛಾಃ ಪಿತ್ತಾತ್ಮಕೇ ವದನಲೋಚನ ಪೀತತಾ ಚ ॥೧೮॥
ಶ್ಲೇಷ್ಮಾತ್ಮಕೇ ವಮಥುಶೀತಕಫಪ್ರಸೇಕಾಃ ಸರ್ವಾತ್ಮಕೇ ಭವತಿ ಸರ್ವವಿಕಾರಸಂಪತ್ ।
ಊಷ್ಮಾ ಶರೀರಗುರುತಾ ವಿರಸಾನನತ್ವಂ ಶ್ಲೇಷ್ಮಾಧಿಕತ್ವಮರುಚಿರ್ಮಲಮೂತ್ರಸಙ್ಗಃ ॥೧೯॥
ಲಿಙ್ಗಂ ಪರಸ್ಯ ತುಮದಸ್ಯ ವದನ್ತಿ ತಜ್ಞಾಸ್ತೃಷ್ಣಾರುಜಾಶಿರಸಿ ಸನ್ಧಿಷು ಚಾಪಿ ಭೇದಃ ।

ಶರೀರದಲ್ಲಿ ಬಿಗಿತವೂ ಮೈಕತ್ತರಿಸಿದಂತೆ ವ್ಯಥೆಯೂ, ಹೃದಯವು ಬಿಗಿದಂತೆಯೂ ಚುಚ್ಚಿದಂತೆ ನೋಯುವುದು, ಮೈನಡುಕ, ತಲೆನೋವು ಇವು ವಾತಜಪಾನಾತ್ಯಯದ ಲಕ್ಷಣಗಳು ; ಮೈಬೆವರುವುದು ; ಅಸಂಬದ್ಧವಾದ ಮಾತುಗಳನ್ನಾಡುವುದು, ಮುಖ ಒಣಗುವುದು, ಮೈಉರಿತ, ಜ್ಞಾನತಪ್ಪುವುದು, ಮುಖವೂ ಕಣ್ಣುಗಳೂ ಹಳದಿ ಬಣ್ಣವಾಗುವುದು ; ಇವು ಪೈತ್ತಿಕ ಪಾನಾತ್ಯಯದ ಲಕ್ಷಣಗಳು ; ಕಫಾತ್ಮಕ ಪಾನಾತ್ಯಯದಲ್ಲಿ ವಮನ, ತಣ್ಣಗಿರುವ ಕಫವನ್ನು ಬಾಯಿನಿಂದ ಸುರಿಸುವುದೂ ; ಸರ್ವಾತ್ಮಕದಲ್ಲಿ ತ್ರಿದೋಷಲಕ್ಷಣಗಳೂ ಕಂಡುಬರುತ್ತವೆ ; ಮೈಬಿಸಿಯಾಗುವುದು ಮತ್ತು ಭಾರವಾಗುವುದು, ಬಾಯಿಗೆ ರುಚಿಯಲ್ಲಿ ವ್ಯತ್ಯಾಸ ತೋರುವುದು, ಕಫಾಧಿಕ್ಯತೆಯಿರುವುದು, ಅರೋಚಕತೆ ಮಲಮೂತ್ರಗಳು ತಡೆಯಲ್ಪಡುವುದು, ಬಾಯಾರಿಕೆ, ತಲೆಶೂಲೆ ಮತ್ತು ಅಸ್ಥಿಸಂಧಿಗಳಲ್ಲಿ ಒಡೆತವಿರುವುದು ಇವು ಪರಮದದ ಲಕ್ಷಣಗಳು ;

ಅಧ್ಮಾನಮುದ್ಗಿರಣಮಮ್ಲರಸೋವಿದಾಹೋsಜೀರ್ಣಸ್ಯಪಾನ ಜನಿತಸ್ಯ ವದನ್ತಿ ಲಿಙ್ಗಮ್ ||೨೦||

ಜ್ಞೇಯಾನಿ ತತ್ರ ಭಿಷಜಾ ಸುವಿನಿಶ್ಚಿತಾನಿ ಪಿತ್ತಪ್ರಕೋಪಜನಿತಾನಿ ಚ ಕಾರಣಾನಿ ।
ಹೃದ್ಗಾತ್ರತೋದವಮಥುಜ್ವರಕಣ್ಠಧೂಮಮೂರ್ಛಾಕಫಸ್ರವಣ ಮೂರ್ಧರುಜೋ ವಿದಾಹಃ ||೨೧||

ದ್ವೇಷಃ ಸುರಾನ್ನವಿಕೃತೇಷು ಚ ತೇಷು ತೇಷು ತಂ ಪಾನವಿಭ್ರಮ ಮುಶನ್ತ್ಯಖಿಲೇನ ಧೀರಾಃ ।
ಹೀನೋತ್ತರೌಷ್ಠಮತಿಶೀತಮಮನ್ದದಾಹಂ ತೈಲಪ್ರಭಾಸ್ಯಮತಿ ಪಾನಹತಂ ವಿಜಹ್ಯಾತ್ ||೨೨||

ಜಿಹ್ವೌಷ್ಠದನ್ತಮಸಿತಂ ತ್ವಥವಾಪಿ ನೀಲಂ ಪೀತೇ ಚ ಯಸ್ಯ ನಯನೇ ರುಧಿರಪ್ರಭೇ ಚ।
ಹಿಕ್ಕಾಜ್ವರೌ ವಮಥುವೇಪಥುಪಾರ್ಶ್ವಶೂಲಾಃ ಕಾಸಭ್ರಮಾವಪಿ ಚ ಪಾನಹತಂ ಭಜನ್ತೇ ||೨೩||

ತೇಷಾಂ ನಿವಾರಣಮಿದಂ ಹಿ ಮಯೋಚ್ಯಮಾನಂ ವ್ಯಕ್ತಾಭಿಧಾನ ಮಖಿಲೇನ ವಿಧಿಂ ನಿಬೋಧ ।

ಹೊಟ್ಟೆಯುಬ್ಬರ, ವಮನ, ಹುಳಿತೇಗು, ಎದೆಯುರಿತ ಇವು ಪಾನಾಜೀರ್ಣದ ಲಕ್ಷಣಗಳು ; ಪಿತ್ತಪ್ರಕೋಪವನ್ನುಂಟುಮಾಡುವ ಕಾರಣಗಳೇ ಪಾನಾಜೀರ್ಣಕ್ಕೂ ಕಾರಣಗಳೆಂದು ಖಂಡಿತವಾಗಿಯೂ ತಿಳಿಯಬೇಕು ; ಹೃದಯಶೂಲೆ, ಮೈಚುಚ್ಚುವಂತೆ ನೋವು, ವಮನ, ಜ್ವರ, ಗಂಟಲಿನಿಂದ ಹೊಗೆ ಹೊರಡುವಂತೆ ವ್ಯಥೆಯಾಗುವುದು, ಜ್ಞಾನ ತಪ್ಪುವುದು, ಕಫವು ಬಾಯಿನಿಂದ ಸುರಿಯುವುದು, ತಲೆನೋವು, ಎದೆಯುರಿತ, ಮದ್ಯದ ಅನ್ನದಲ್ಲೂ ದ್ವೇಷವಾಗುವುದು ಈ ಲಕ್ಷಣಗಳಿದ್ದರೆ ಪಾನವಿಭ್ರಮವೆನ್ನುತ್ತಾರೆ ; ಮೇಲಿನ ತುಟಿಯು ಚಿಕ್ಕದಾಗಿ ಬಿಡುವುದು, ಅತಿಶೀತನಾಗಿ ಕೆಲವು ಸಾರಿಯೂ

ಅತಿಬಿಸಿಯಾಗಿ ಕೆಲವು ಸಾರಿಯೂ ಆಗೋಣ, ಮುಖವು ಎಣ್ಣೆ ಬಳಿದಂತೆ ಮಿಂಚು ತ್ತಿರುವುದು, ಈ ಲಕ್ಷಣಗಳಿರುವ ಪಾನಹತರೋಗಿಯನ್ನು ತ್ಯಜಿಸಬೇಕು ; ನಾಲಿಗೆ, ತುಟಿಗಳು ಹಲ್ಲುಗಳೂ ಕಪ್ಪಾಗಿ ಅಥವಾ ನೀಲವಾಗಿಯೂ ಕಣ್ಣುಗಳು ಹಳದಿ ಅಥವಾ ರಕ್ತಬಣ್ಣವಿದ್ದರೆ ಅವನನ್ನು ತ್ಯಜಿಸಬೇಕು ; ಬಿಕ್ಕಳಿಕೆ, ಜ್ವರ, ವಮನ, ಮೈನಡುಕ, ಪಕ್ಕೆಶೂಲೆ, ಕಾಸ, ತಲೆತಿರುಗು ಇವು ಪಾನಹತ ರೋಗಿಯ ಉಪದ್ರವಗಳು ; ಪಾನಾತ್ಯ ಯಾದಿಗಳಿಗೆ ಸ್ಪಷ್ಟವಾಗಿ ಚಿಕಿತ್ಸಾ ವಿಧಾನಗಳನ್ನು ಹೇಳುತ್ತೇವೆ ಕೇಳು ;

ಮದ್ಯಂ ತು ಚುಕ್ರಮರಿಚಾರ್ದ್ರಕದೀಪ್ಯಕುಷ್ಠಸೌವರ್ಚಲಾಯುತ ಮಲಂ ಪವನಸ್ಯ ಶಾನ್ತ್ಯೈ ॥೨೪॥

ಪೃಥ್ವೀಕದೀಪ್ಯಕಮಹೌಷಧಹಿಙ್ಗುಭಿರ್ವಾಸೌವರ್ಚಲೇನ ಯುತಂ ವಿತರೇತ್ ಸುಖಾಯ ।
ಆಮ್ರಾತಕಾಮ್ರಫಲದಾಡಿಮಮಾತುಲುಙ್ಗೈಃ ಕುರ್ಯಾಚ್ಛುಭಾನ್ಯಪಿ ಚ ಷಾಡವ ಪಾನ ಕಾನಿ ॥೨೫॥

ಸೇವೇತ ವಾ ಫಲರಸೋಪಹಿತಾನ್ ರಸಾದೀನಾನೂಪವರ್ಗಪಿಶಿತಾನ್ಯಪಿ ಗನ್ಧವನ್ತಿ ।

ಹುಳಿಕಲಗಚ್ಚು (ಕಂದಮೂಲ ಫಲಾದಿಗಳಿಂದ ಸಂಧಾನ ಮಾಡಿದ ಪಾನೀಯ ವಿಶೇಷವು) ಮೆಣಸಿನಪುಡಿ, ಹಶಿಶುಂಠಿರಸ, ವಾದಕ್ಕಿ, ಚಂಗಲ್‌ಕೋಷ್ಠ ಇವುಗಳಚೂರ್ಣ ಮತ್ತು ಸೌವರ್ಚಲವಣಗಳನ್ನು ಮಿಶ್ರಮಾಡಿದ ಅಥವಾ ದಪ್ಪಜೀರಿಗೆ, ವಾದಕ್ಕಿ, ಹಶಿ ಶುಂಠಿ, ಹಿಂಗು, ಸೌವರ್ಚಲವಣಗಳನ್ನು ಮಿಶ್ರಮಾಡಿದ ಮದ್ಯವನ್ನುಕುಡಿದರೆ ವಾತಜ ಪಾನಾತ್ಯಯದಲ್ಲಿ ಸುಖವುಂಟಾಗುತ್ತದೆ ; ಅಮಟೆ, ಮಾವಿನಹಣ್ಣು, ದಾಳಿಂಬೆಹಣ್ಣು, ಮಾದಳದ ಹಣ್ಣುಗಳಾದ ಶುಭಕರಗಳಾದ ಷಾಡವಗಳನ್ನಾಗಲೀ ಪಾನಕಗಳನ್ನಾಗಲೀ ಮಾದಳರಸ ಮಿಶ್ರಿತವಾದ ಮಾಂಸರಸ ಮತ್ತು ಯೂಷಗಳನ್ನೂ ಅಧಿಕವಾಗಿ ಹಿಂಗು, ಜೀರಿಗೆ ಮೊದಲಾದುವುಗಳಿಂದ ಸುವಾಸನೆಯುಳ್ಳದ್ದಾಗಿ ಮಾಡಿದ ಆನೂಪಪ್ರಾಣಿಗಳ ಮಾಂಸರಸಗಳನ್ನಾಗಲೀ ಕುಡಿಸಬೇಕು.

ಪಿತ್ತಾತ್ಮಕೇ ಮಧುರವರ್ಗಕಷಾಯಮಿಶ್ರಂ ಮದ್ಯಂಹಿತಂ ಸಮಧುಶರ್ಕರಮಿಷ್ಟಗನ್ಧಮ್ ॥೨೬॥

ಪೀತ್ವಾ ಚ ಮದ್ಯಮಪಿ ಚೇಕ್ಷುರಸಪ್ರಗಾಢಂ ನಿಃಶೇಷತಃ ಕ್ಷಣಮವಸ್ಥಿತಮುಲ್ಲಿಖೇಚ್ಚ ।
ಲಾವೈಣತಿತ್ತಿರಿರಸಾಂಶ್ಚ ಪಿಬೇದನಮ್ಲಾನ್ ಮುದ್ಗಾನ್ ಸುಖಾಯ ಸಘೃತಾನ್ ಸಸಿತಾಂಶ್ಚ ಯೂಷಾನ್ ॥೨೭॥

ಪಿತ್ತದಿಂದುಂಟಾದ ಪಾನಾತ್ಯಯಾದಿಗಳಲ್ಲಿ ಕಾಕೋಳ್ಯಾದಿ ಮಧುರ ಗಣದ್ರವ್ಯಗಳ ಕಷಾಯವನ್ನು ಮಿಶ್ರಮಾಡಿದ ಮದ್ಯಕ್ಕೆ ಜೇನುತುಪ್ಪ ಮತ್ತು ಸಕ್ಕರೆಯನ್ನು ತ್ರಿಜಾತ ಕಾದಿಸುಗಂಧ ಚೂರ್ಣವನ್ನು ಮಿಶ್ರಮಾಡಿ ಕುಡಿಸಬೇಕು ; ಕಬ್ಬಿನರಸವನ್ನು ಮಿಶ್ರ ಮಾಡಿದ ಮದ್ಯವನ್ನು ಕುಡಿಸಿ ಸ್ವಲ್ಪಕಾಲದನಂತರ ಪೂರ್ತಿಯಾಗಿ ವಮನಮಾಡಿಸ ಬೇಕು ; ಲಾವನಹಕ್ಕಿ, ಹುಲ್ಲೆ, ತಿತ್ತಿರಿಪಕ್ಷಿಗಳ ಮಾಂಸರಸವನ್ನು ಹುಳಿಮಿಶ್ರಮಾಡದೆ

ಕುಡಿಸಬೇಕು ; ಹೆಸರು ಕಟ್ಟಿಗೆ ತುಪ್ಪವನ್ನೂ ಸಕ್ಕರೆಯನ್ನೂ ಮಿಶ್ರಮಾಡಿ ಕುಡಿಸಿದರೆ ಸುಖವಾಗುತ್ತದೆ.

ಪಾನಾತ್ಯಯೇ ಕಫಕೃತೇ ಕಫಮುಲ್ಲಿಖೇಚ್ಚ ಮದ್ಯೇನ ಬಿಲ್ವವಿದುಳೋದಕಸಂಯುತೇನ ।
ಸೇವೇತ ತಿಕ್ತಕಟುಕಾಂಶ್ಚ ರಸಾನುದಾರಾನ್ ಯೂಷಾಂಶ್ಚ ತಿಕ್ತಕಟುಕೋಪಹಿತಾನ್ ಹಿತಾಯ ॥೨೮॥

ಪಥ್ಯಂ ಯವಾನ್ನವಿಕೃತಾನಿ ಚ ಜಾಙ್ಗಲಾನಿ ಶ್ಲೇಷ್ಮಘ್ನಮನ್ಯದಪಿ ಯಚ್ಚ ನಿರತ್ಯಯಂ ಸ್ಯಾತ್ ।
ಕುರ್ಯಾಚ್ಚ ಸರ್ವಮಥ ಸರ್ವಭವೇ ವಿಧಾನಂ ದ್ವನ್ದ್ವೋದ್ಭವೇ ದ್ವಯಮವೇಕ್ಷ್ಯ ಯಥಾಪ್ರಧಾನಮ್ ॥೨೯॥

ಸಾಮಾನ್ಯಮನ್ಯದಪಿ ಯಚ್ಚ ಸಮಗ್ರಮಗ್ರ್ಯಂ ವಕ್ಷ್ಯಾಮಿ ಯಚ್ಚ ಮನಸೋ ಮದಕೃತ್ ಸುಖಂ ಚ ।

ಕಫಜನಿತ ಪಾನಾತ್ಯಯದಲ್ಲಿ ತೊಂಡೆ ಮತ್ತು ಹೆಬ್ಬೆಗಳ ಕಷಾಯವನ್ನು ಮಿಶ್ರ ಮಾಡಿದ ಮದ್ಯವನ್ನು ಕುಡಿಸಿ ಕಫವನ್ನು ವಮನ ಮಾಡಿಸಬೇಕು. ಕಹಿ ಮತ್ತು ಖಾರ ರಸಗಳನ್ನು ಮಿಶ್ರಮಾಡಿದ ಜಾಂಗಲಪ್ರಾಣಿಗಳ ಮಾಂಸರಸವನ್ನೂ, ಕಹಿ, ಖಾರ ರಸ ಮಿಶ್ರವಾದ ಹೆಸರುಕಟ್ಟನ್ನೂ ಕುಡಿಸಿದರೆ ಹಿತವಾಗುತ್ತದೆ. ಯವೆಯ ಅನ್ನವನ್ನು ಅದರ ಗಂಜಿ ಮೊದಲಾದುವನ್ನೂ, ಜಾಂಗಲಮಾಂಸವನ್ನೂ, ಕಫಹರಗಳಾದ ಅಪಾಯವಿಲ್ಲದ ಇತರ ಔಷಧಿಗಳನ್ನೂ ಸೇವಿಸಬೇಕು. ತ್ರಿದೋಷಜ ಪಾನಾತ್ಯಯದಲ್ಲಿ ತ್ರಿದೋಷಹರ ಚಿಕಿತ್ಸೆಯನ್ನೂ ದ್ವಂದ್ವದೋಷಗಳಲ್ಲಿ ಯಾವ ದೋಷಗಳು ಮುಖ್ಯವೋ ಅವುಗಳಿಗೆ ತಕ್ಕ ಚಿಕಿತ್ಸಾಕ್ರಮಗಳನ್ನೂ ಅನುಸರಿಸಬೇಕು. ಮನಸ್ಸಿಗೆ ಹರ್ಷವನ್ನುಂಟುಮಾಡುವ ಎಲ್ಲಕ್ಕೂ ಸಮಾನವಾಗಿ ಶ್ರೇಷ್ಠ ಕಾರ್ಯಕಾರಿಗಳಾದ ಮುಂದಿನ ಯೋಗಗಳನ್ನು ಸೇವಿಸಿದರೆ ಸುಖವುಂಟಾಗುತ್ತವೆ.

ತ್ವಙ್ನಾಗಪುಷ್ಪಮಗಧೈಲಮಧೂಕಧಾನ್ಯೈಃ ಶ್ಲಕ್ಷ್ಣೈರಜಾಜಿಮರಿಚೈಶ್ಚ ಕೃತಂ ಸಮಾಂಶೈಃ ॥೩೦॥

ಪಾನಂ ಕಪಿತ್ಥರಸವಾರಿಪರೂಷಕಾಢ್ಯಂ ಪಾನಾತ್ಯಯೇಷು ವಿಧಿವತ್ ಸ್ರುತಮಮ್ಬರಾನ್ತೇ ।
ಹ್ರೀವೇರಪದ್ಮಪರಿಪೇಲವಸಂಪ್ರಯುಕ್ತೈಃ ಪುಷ್ಪೈಃ ಪ್ರಲಿಪ್ಯ ಕರವೀರಜಲೋದ್ಭವೈಶ್ಚ ॥೩೧॥

ಪಿಷ್ಟೈಃ ಸಪದ್ಮಕಯುತೈರಪಿ ಸಾರಿವಾದ್ಯೈಃ ಸೇಕಂ ಜಲೈಶ್ಚ ವಿತರೇದಮಲೈಃ ಸುಶೀತೈಃ ।
ತ್ವಕ್ಪತ್ರಚೋಚಮರಿಚೈಲಭುಜಙ್ಗಪುಷ್ಪಶ್ಲೇಷ್ಮಾತಕಪ್ರಸವಕಲ್ಕಗುಡೈರುಪೇತಮ್ ॥೩೨॥

ದ್ರಾಕ್ಷಾಯುತಂ ಹೃತಮಲಂ ಮದಿರಾಮಯಾರ್ತೈಸ್ತತ್ಪಾನಕಂ ಶುಚಿಸುಗನ್ಧಿ ನರೈರ್ನಿಷೇವ್ಯಮ್ ।

ಪಿಪ್ಪಲ್ಯ ಪಿಬೇಚ್ಚ ಮಧುಕಂ ಕಟುರೋಹಿಣೀಂ ಚ ದ್ರಾಕ್ಷಾಂ ಚ ಮೂಲಮುಸಕೃತ್

ತ್ರಪುಸೀಭವಂ ಯತ್ ||೩೩||

ಕಾರ್ಪಾಸಿನೀಮಥ ಚ ನಾಗಬಲಾಂ ಚ ತುಲ್ಯಾಂ ಪೀತ್ವಾ ಸುಖೀ ಭವತಿ ಸಾಧು ಸುವರ್ಚಲಾಂ ಚ ।

ದಾಲ್ಚಿನ್ನಿ, ನಾಗಕೇಸರಿ, ಹಿಪ್ಪಲಿ, ಸಣ್ಣ ಏಲಕ್ಕಿ, ಹಿಪ್ಪೆಹೂವು, ಕೊತ್ತುಂಬರೀಬೀಜ ಜೀರಿಗೆ, ಮೆಣಸು ಇವುಗಳನ್ನು ಸಮಭಾಗವಾಗಿ ಚೂರ್ಣಿಸಿ ಬೇಲದಹಣ್ಣಿನ ರಸ, ನೀರು, ಬೆಟ್ಟದ ಖರ್ಜೂರಗಳೊಡನೆ ಆಲೋಚನೆ ಮಾಡಿ (ಕೈಯಿಂದಹಿಸುಕಿ) ಬಟ್ಟೆಯಿಂದ ಶೋಧಿಸಿ ಕುಡಿಸಬೇಕು. ಮುಡಿವಾಳ, ತಾವರೆಯ ಕುಸುಮ, ಪರಿಪೇಲವ (ನಾಗರಮುಸ್ತೆ) ತಾವರೆಹೂವು, ಇವುಗಳನ್ನು ಕಣಿಗಲ ಕಷಾಯದಿಂದ ಅರೆದು ರೋಗಿಯಮೈಗೆ ಬಳಿದು ಪದ್ಮಕ ಮತ್ತು ಸಾರಿವಾದಿಗಣದ್ರವ್ಯಗಳಿಂದ ತಯಾರಿಸಿದ ಕಷಾಯದಿಂದ ಸ್ನಾನ ಮಾಡಿಸಬೇಕು. ದಾಲ್ಚಿನ್ನಿ, ಲವಂಗಪತ್ರೆ ಎಳನೀರಿನ ಬಂಬಲು, ಮೆಣಸು, ಏಲಕ್ಕಿ, ನಾಗಕೇಸರಿ, ಬಳೆಹೂವು, ಬೆಲ್ಲ, ದ್ರಾಕ್ಷಿ ಇವುಗಳ ಕಲ್ಕವನ್ನು ಸೇರಿಸಿ ಶೋಧಿಸಿದ ಪಾನಕವನ್ನು ಕುಡಿಸಬೇಕು. ಅತಿಮಧುರ, ಕಟುಕರೋಹಿಣಿ, ದ್ರಾಕ್ಷಿ, ಮೆಕ್ಕೆಬೇರು, ಕಾಡು ಹತ್ತಿಯಹೂವು, ತುರುಬಿಬೇರು, ಸೂರ್ಯಕಾಂತಿ ಇನೆಲ್ಲವನ್ನೂ ಸಮಭಾಗದಿಂದ ಸೇರಿಸಿ ನುಣ್ಣಗೆ ಅರೆದ ಕಲ್ಕವನ್ನು ನೀರಿನಲ್ಲಿ ಕದರಿ ಕುಡಿಸಿದರೆ ಪಾನಾತ್ಯಯರೋಗವು ನಿವಾರಣೆಯಾಗುತ್ತದೆ.

ಕಾಶ್ಮರ್ಯದಾರುಬಿಡದಾಡಿಮಪಿಪ್ಪಲೀಷು ದ್ರಾಕ್ಷಾನ್ವಿತಾಸು ಕೃತಮಮ್ಬುನಿ ಪಾನಕಂ ಯತ್ ||೩೪||

ತದ್ಬೀಜಪೂರಕರಸಾಯುತಮಾತು ಪೀತಂ ಶಾನ್ತಿಂ ಪರಾಂ ಮದಗದೇಷ್ವಚಿರಾತ್ಕರೋತಿ ।

ದ್ರಾಕ್ಷಾಸಿತ ಮಧುಕಜೀರಕಧಾನ್ಯಕೃಷ್ಣಾಸ್ವೇವಂ ಕೃತಂ ತ್ರಿವೃತಯಾ ಚ ಪಿಬೇತ್ತಥೈವ ||೩೫||

ಸೌವರ್ಚಲಾಯುತಮುದಾರರಸಂ ಫಲಾಮ್ಲಂ ಭಾರ್ಗೀಶೃತೇನ ಚ ಜಲೇನ ಹಿತೋಽವಸೇಕಃ ||೩೬||

ಶಿವನಿಹಣ್ಣು, ದೇವದಾರು, ಬಿಡಲವಣ, ದಾಳಿಂಬೆಹಣ್ಣು, ಹಿಪ್ಪಲಿ, ದ್ರಾಕ್ಷಿ ಇವುಗಳನ್ನು ನೀರಿನಲ್ಲಿ ಕಿವಿಚಿ ಮಾದಳದಹಣ್ಣಿನ ರಸವನ್ನು ಸೇರಿಸಿ ಮಾಡಿದ ಪಾನಕವನ್ನು ಕುಡಿಸಿದರೆ ಪರಮದವು ಬೇಗ ಶಮನವಾಗುತ್ತದೆ; ದ್ರಾಕ್ಷಿ, ಸಕ್ಕರೆ, ಅತಿಮಧುರ, ಜೀರಿಗೆ, ಕೊತ್ತುಂಬರಿ, ಹಿಪ್ಪಲಿ, ತಿಗಡೆ, ಮುಡಿವಾಳ ಇವುಗಳ ಚೂರ್ಣವನ್ನು ನೀರಿನಲ್ಲಿ ಕದರಿ ಮಾಡಿದ ಪಾನಕವನ್ನೂ ಕುಡಿಸಬೇಕು; ಜಾಂಗಲ ಪಕ್ಷಿಗಳ, ಮೃಗಗಳ ಮಾಂಸ ರಸಕ್ಕೆ ಸ್ವಲ್ಪ ಸೌವರ್ಚಲವಣ ಮತ್ತು ದಾಡಿಮಾ ರಸಗಳನ್ನು ಮಿಶ್ರಮಾಡಿ ಕುಡಿಸಬೇಕು. ಗಂಟುಪರಂಗಿ ಕಷಾಯದಿಂದ ಸೇಚನಮಾಡಿಸಿದರೆ ಪರಮದವು ಪರಿಹಾರವಾಗುತ್ತದೆ.

ಇಕ್ಷ್ವಾಕುಧಾಮಾರ್ಗಪವೃಕ್ಷಕಾಣಿ ಕಾಕಾಹ್ವಯೋದುಮ್ಬರಿಕಾಶ್ಚದುಗ್ಧೇ ।

ವಿಪಾಚ್ಯ ತಸ್ಮಾಞ್ಜಲಿನಾ ವಮೇದ್ಧಿ ಮದ್ಯಂ ಪಿಬೇದಹ್ನಿಗತೇತ್ವ ಜೀರ್ಣೇ ||೩೭||

ತ್ವಕ್ಪಿಪ್ಪಲೀಭುಜಗಪುಷ್ಪಬಿಡೈರುಪೇತಂ ಸೇವೇತ ಹಿಙ್ಗುಮರಿಚೈಲಯುತಂ ಫಲಾಮ್ಲಮ್ ।
ಉಷ್ಣಾಮ್ಬುಸೈನ್ಧವಯುತಾಸ್ತ್ವಥವಾ ವಿಡತ್ವಕ್‌ಚವ್ಯೈಲಹಿಙ್ಗುಮಗಧಾಫಲಮೂಲ ಶುಣ್ಠೀಃ ॥೩೮॥

ಹೃದ್ಯೈಃ ಖಡ್ವೈರಪಿ ಚ ಭೋಜನಮತ್ರ ಶಸ್ತಂ ದ್ರಾಕ್ಷಾಕಪಿತ್ಥಫಲದಾಡಿಮಪಾನಕಂ ಯತ್ ।
ತತ್‌ಪಾನವಿಭ್ರಮಹರಂ ಮಧುಶರ್ಕರಾಢ್ಯಮಾಮ್ರಾತಕೋಲರಸ ಪಾನಕಮೇವ ವಾಪಿ ॥೩೯॥

ಖರ್ಜೂರವೇತ್ರಕಕರೀರಪರೂಷಕೇಷು ದ್ರಾಕ್ಷಾತ್ರಿವೃತ್ಸು ಚ ಕೃತಂ ಸಸಿತಂ ಹಿತಂ ವಾ ।
ಶ್ರೀಪರ್ಣಿಯುಕ್ತಮಥವಾ ತು ಪಿಬೇದಿಮಾನಿ ಯಷ್ಟ್ಯಾಹ್ವಯೋತ್ಪಲಹಿಮಾಮ್ಬುವಿಮಿಶ್ರಿತಾನಿ ॥೪೦॥

ಕ್ಷೀರಿಪ್ರವಾಳಬಿಸಜೀರಕನಾಗಪುಷ್ಪಪತ್ರೈಲವಾಲುಸಿತಸಾರಿವಪದ್ಮಕಾನಿ ।
ಆಮ್ರಾತಭವ್ಯಕರಮರ್ದಕಪಿತ್ಥಕೋಲವೃಕ್ಷಾಮ್ಲವೇತ್ರಫಲಜೀರಕದಾಡಿಮಾನಿ ॥೪೧॥

ಕಹಿಸೋರೆ, ಕಹಿಹೀರೆ, ಕೊಡಶಿಗೆ, ಕಾಕೋದುಂಬರಿಕಾ (ಗರಗತ್ತಿಹಣ್ಣು) ಇವೆಲ್ಲವನ್ನೂ ಹಾಲಿನಲ್ಲಿ ಕಾಯಿಸಿ ೪ ಪಲ ಹಾಲನ್ನು ಕುಡಿಸಿ ವಮನಮಾಡಿಸಿ ಸಂಧ್ಯಾ ಕಾಲದಲ್ಲಿ ಅಗ್ನಿವೃದ್ಧಿಗಾಗಿ ಮದ್ಯವನ್ನು ಅಥವಾ ದಾಲ್ಚಿನ್ನಿ, ಹಿಪ್ಪಲಿ, ನಾಗಕೇಸರಿ, ಬಿಡ ಲವಣ, ಹಿಂಗು, ಮೆಣಸು, ಏಲಕ್ಕಿ, ದಾಳಿಂಬೆರಸ, ಬಿಸಿನೀರು, ಸೈಂಧವ, ಇವನ್ನು ಕದರಿ ಕುಡಿಸಬೇಕು. ಬಿಡಲವಣ, ದಾಲ್ಚಿನ್ನಿ, ಚವ್ಯ, ಏಲಕ್ಕಿ, ಹಿಂಗು, ಹಿಪ್ಪಲಿ, ಮೋಡಿ, ಶುಂಠಿ ಇವುಗಳನ್ನು ಸೇರಿಸಿ ಮೊಸರಿನಿಂದ ತಯಾರಿಸಿದ ಖಡ (ಮಜ್ಜಿಗೆಹುಳಿ) ವನ್ನು ಮಿಶ್ರಮಾಡಿದ ಅನ್ನವನ್ನು ಭೋಜನಮಾಡಿಸಬೇಕು. ದ್ರಾಕ್ಷಿ, ಬೇಲದಹಣ್ಣು ದಾಳಿಂಬೆಹಣ್ಣಿನರಸ, ಇವುಗಳ ಪಾನಕಕ್ಕೆ ಜೇನುತುಪ್ಪ ಮತ್ತು ಸಕ್ಕರೆಯನ್ನು ಮಿಶ್ರ ಮಾಡಿ ಅಮಟೆಕಾಯಿ, ಎಲಚಿಹಣ್ಣುಗಳನ್ನು ಸೇರಿಸಿ ತಯಾರಿಸಿದ ಪಾನಕವನ್ನಾಗಲೀ, ಖರ್ಜೂರ, ಬೆತ್ತದ ಬೇರು, ಬಿದರುಕಳಲೆ, ಕಾಡುಖರ್ಜೂರ, ದ್ರಾಕ್ಷಿ, ತಿಗಡೆಕಡ್ಡಿ, ಸಕ್ಕರೆ, ನೀರು ಇವುಗಳನ್ನು ಮಿಶ್ರಮಾಡಿದ ಶೀತ ಕಷಾಯವನ್ನಾಗಲೀ, ಶಿವನಿಯಹಣ್ಣು, ಅತಿಮಧುರ, ನೈದಿಲೆಗೆಡ್ಡೆ, ತಣ್ಣೀರು ಇವುಗಳಿಂದ ತಯಾರಿಸಿದ ಕಷಾಯವನ್ನಾಗಲೀ, ಆಲ, ಅತ್ತಿ ಮೊದಲಾದ ಕ್ಷೀರವೃಕ್ಷಗಳ ಚಿಗುರುಗಳು, ತಾವರೆದಂಟು, ಜೀರಿಗೆ, ನಾಗ ಕೇಸರಿ, ಲವಂಗಪತ್ರೆ, ಏಲಾವಾಲು, ಸಕ್ಕರೆ, ಸೊಗದೆಬೇರು, ಪದ್ಮಕ, ಅಮಟೆ, ಸಿಹಿ ಕಮರಕ, ಹುಳಿಕಮರಕದಹಣ್ಣು, ಬೇಲದಹಣ್ಣು, ಎಲಚಿಹಣ್ಣು, ಮುರ್ಗಿನಹುಳಿ, ಬೆತ್ತದಬೇರು, ಮಗ್ಗಾರೆಬೀಜ, ಜೀರಿಗೆ, ದಾಳಿಂಬೆ, ಇವುಗಳ ಕಷಾಯವನ್ನೂ ಪಾನ ಮಾಡಿಸಿದರೆ ಮದ್ಯಪಾನದ ದೋಷ ನಿವಾರಣೆಯಾಗುತ್ತದೆ.

ಸೇವೇದ್ರಸಾನ್ ಮರಿಚಜೀರಕನಾಗಪುಷ್ಪತ್ವಕ್ಪತ್ರ ವಿಶ್ವಚವಿಕೈಲಯುತಾನ್ ಸಮಗ್ರಾನ್ ।
ಸೂಕ್ಷ್ಮಾಮ್ಬರಸ್ರುತಹಿಮಾಂಶ್ಚ ಸುಗನ್ಧಿಗನ್ಧಾನ್ ಪಾನೋದ್ಭವಾನನುದತಿ ಸಪ್ತಗದಾನಶೇಷಾನ್ ॥೪೨॥

ಮಾಂಸರಸಕ್ಕೆ ಮೆಣಸು, ಜೀರಿಗೆ, ನಾಗಕೇಸರಿ, ದಾಲ್ಚಿನ್ನಿ, ಲವಂಗ, ಪತ್ರೆ, ಶುಂಠಿ, ಚವ್ಯ, ಇವುಗಳ ಚೂರ್ಣವನ್ನು ಮಿಶ್ರಮಾಡಿ ತೆಳ್ಳಗಿರುವ ಬಟ್ಟೆಯಿಂದ ಶೋಧಿಸಿ ಅಗುರ್ವಾದಿಗಂಧಗಳನ್ನು ಸೇರಿಸಿ ತಣ್ಣಗೆ ಪಾನಮಾಡಿಸಿದರೆ ಮದ್ಯಪಾನದಿಂದುಂಟಾಗುವ ೭ ರೋಗಗಳನ್ನು (೪ ವಿಧ ಮದಾತ್ಯಯಗಳು ಪರಮದ, ಪಾನಾಜೀರ್ಣ, ಪಾನವಿಭ್ರಮಗಳೆಂಬ ಮೂರು) ನಿಶ್ಶೇಷ ಮಾಡುತ್ತದೆ.

ಪಞ್ಚೇನ್ದ್ರಿಯಾರ್ಥವಿಷಯಾಮೃದುಪಾನಯೋಗಾ ಹೃದ್ಯಾಃ ಸುಖಾಶ್ಚ ಮನಸಃ
ಸತತಂ ನಿಷೇವ್ಯಾಃ ।
ಪಾನಾತ್ಯಯೇಷು ವಿಕಟೋರುನಿತಮ್ಬವತ್ಯಃ ಪೀನೋನ್ನತಸ್ತನಭರಾ ನತಮಧ್ಯದೇಶಾಃ
॥೪೩॥
ಪ್ರೌಢಾಃ ಸ್ತ್ರಿಯೋಽಭಿನವಯೌವನಪೀನಗಾತ್ರ್ಯಃ ಸೇವ್ಯಾಶ್ಚ ಪಞ್ಚವಿಷಯಾತಿಶಯ
ಸ್ವಭಾವಾಃ ॥೪೪॥

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚೇಂದ್ರಿಯಾರ್ಥಗಳಿಗೆ ಉತ್ತೇಜಕವಾದ ಪೈಷ್ಟಿಕ, ಗೌಡಿಕ, ಮಾಧ್ವೀಕ ಮೊದಲಾದ ಮೃದುವಾದ ಮದ್ಯಯೋಗಗಳನ್ನು ಸೇವಿಸಿದರೆ ಹೃದಯ ಹಿತಗಳು ಮತ್ತು ಮನಸ್ಸಿಗೆ ಸುಖವನ್ನುಂಟುಮಾಡುವ ಕಾರಣ ಸರ್ವಕಾಲದಲ್ಲೂ ಸೇವಿಸಲು ಯೋಗ್ಯವಾಗಿರುತ್ತವೆ; ಇವುಗಳ ಅತಿಯೋಗದಿಂದುಂಟಾಗುವ ದೋಷಗಳನ್ನು ನಿವಾರಣೆಮಾಡಲು ದಪ್ಪತೊಡೆ, ಸೊಂಟವುಳ್ಳ (ಪುಷ್ಟವಾಗಿ ಬೆಳೆದು ಸುಂದರವಾಗಿಯೂ ಮೃದುವಾಗಿಯೂ ಇರುವ) ದಪ್ಪವಾಗಿ ಎತ್ತರವಾಗಿರುವ ಸ್ತನಗಳ ಭಾರದಿಂದ ಬಗ್ಗಿರುವ ಮಧ್ಯಭಾಗವುಳ್ಳ (ನಿತಂಬ ಗುಹ್ಯಃಪ್ರದೇಶ) ರತಿಕರ್ಮಕ್ಕೆ ಅರ್ಹರಾದ ಯೌವನವತಿಯರಾದ ದಪ್ಪದೇಹದ ಕಾಮವಿಕಾರವುಳ್ಳ ಸ್ತ್ರೀಯರನ್ನು ಸೇವಿಸಬೇಕು.

ಪಿಬೇದ್ರಸಂ ಪುಷ್ಪಫಲೋದ್ಭವಂ ವಾ ಸಿತಾಮಧೂಕತ್ರಿಸುಗನ್ಧಿಯುಕ್ತಮ್ ।
ಸಂಚೂರ್ಣ್ಯ ಸಂಯೋಜ್ಯ ಚ ನಾಗಪುಷ್ಪೈರಜಾಜಿಕೃಷ್ಣಾಮರಿಚೈಶ್ಚ ತುಲ್ಯೈಃ ॥೪೫॥
ಮರ್ಷಾಭೂಯಷ್ಟ್ಯಹ್ವಮಧೂಕಲಾಕ್ಷಾತ್ವಕ್ಕರ್ಬುದಾರಾಙ್ಕುರ ಜೀರಕಾಣಿ ।
ದ್ರಾಕ್ಷಾಂ ಚ ಕೃಷ್ಣಾಮಥಕೇಶರಂ ಚ ಕ್ಷೀರೇ ಸಮಾಲೋಡ್ಯ ಪಿಬೇತ್ ಸುಖೇಪ್ಸುಃ
॥೪೬॥
ಭವೇಚ್ಚ ಮದ್ಯೇನ ತು ಯೇನ ಪಾತಿತಃ ಪ್ರಕಾಮಪೀತೇನ ಸುರಾಸವಾದಿನಾ ।
ತದೇವ ತಸ್ಮೈ ವಿಧಿವತ್ ಪ್ರದಾಪಯೇತ್ ವಿಪರ್ಯಯೇ ಭ್ರಂಶಮವಶ್ಯಮೃಚ್ಛತಿ
॥೪೭॥
ಯಥಾ ನರೇನ್ದ್ರೋಪಹತಸ್ಯ ಕಸ್ಯಚಿದ್ಭವೇತ್ ಪ್ರಸಾದಸ್ತತ ಏವ ನಾನ್ಯತಃ ।
ಧ್ರುವಂ ತಥಾ ಮದ್ಯಹತಸ್ಯ ದೇಹಿನೋ ಭವೇತ್ಪ್ರಸಾದಸ್ತತ ಏವ ನಾನ್ಯತಃ ॥೪೮॥

ಬೂದಿಕುಂಬಳದ ಹೂವು ಕಾಯಿಗಳ ರಸಕ್ಕೆ, ಸಕ್ಕರೆ, ಹಿಪ್ಪೆಹೂವು, ಏಲಕ್ಕಿ ದಾಲ್ಚಿನ್ನಿ, ಲವಂಗಪತ್ರೆ, ನಾಗಕೇಸರಿ, ಜೀರಿಗೆ, ಹಿಪ್ಪಲಿ, ಮೆಣಸು ಇವುಗಳನ್ನು ಸಮ

ಭಾಗದಿಂದ ಚೂರ್ಣಿಸಿ ಮಿಶ್ರಮಾಡಿಸಿ ಅಥವಾ ಕೊಮ್ಮೆಬೇರು, ಅತಿಮಧುರ, ಹಿಪ್ಪೆ ಹೂವು, ಅರಗು, ದಾಲ್ಚಿನ್ನಿ, ಚಳ್ಳೆಚಿಗುರು, ಜೀರಿಗೆ, ದ್ರಾಕ್ಷಿ, ನಾಗಕೇಸರಿ, ಹಿಪ್ಪಲಿ ಇವುಗಳನ್ನು ಚೂರ್ಣಮಾಡಿ ಹಾಲಿಗೆ ಹಾಕಿ ಕದರಿಯಾಗಲೀ ಕುಡಿಸಿದರೆ ಪಾನಾತ್ಯಯವು ನಿವಾರಣೆಯಾಗುತ್ತದೆ. ಸುರೆ, ಆಸವ ಮೊದಲಾದುವನ್ನು ಹೆಚ್ಚಾಗಿ ಕುಡಿದು ಪ್ರಜ್ಞೆಯಿಲ್ಲದೆ ಬೀಳುವವನಿಗೆ ಅದೇ ಮದ್ಯಕ್ಕೆ ಸೌವರ್ಚಲಾದಿ ಲವಣಗಳನ್ನು ಉಚಿತ ಪ್ರಮಾಣದಿಂದ ಸೇರಿಸಿ ಅಲ್ಪಪ್ರಮಾಣದಿಂದ ಕುಡಿಸಿದರೆ ಅನುಕೂಲವಾಗುತ್ತದೆ ; ಇಲ್ಲದಿದ್ದರೆ ಅಪಾಯವುಂಟಾಗುತ್ತದೆ. ರಾಜಕೋಪದಿಂದ ಪೀಡಿತನಾದವನೊಬ್ಬನು ಪುನಃ ಅದೇ ರಾಜನನ್ನು ಆಶ್ರಯಿಸಿಪ್ರಸನ್ನತೆಯನ್ನುಂಟುಮಾಡಿಕೊಂಡರೆ ಹೇಗೆ ರಾಜನ ಕೃಪೆಯುಂಟಾಗುತ್ತದೆಯೋ ಹಾಗೆಯೇ ಅತಿಮದ್ಯಪಾನದಿಂದ ಮತ್ತತೆಯುಂಟಾಗಿ ಬಿದ್ದ ಜನರಿಗೆ ಅದೇ ಮದ್ಯವನ್ನು ಅಲ್ಪಪ್ರಮಾಣದಿಂದ ಸೇವಿಸಿದರೆ ಲಾಭವುಂಟಾಗುತ್ತದೆ. (ಕೊಂಚಕಾಲದಲ್ಲೇ ಪ್ರಜ್ಞೆಯುಂಟಾಗುತ್ತದೆ.)

ವಿಚ್ಛಿನ್ನಮದ್ಯಃ ಸಹಸಾ ಯೋಽತಿಮದ್ಯಂ ನಿಷೇವತೇ ।
ತಸ್ಯ ಪಾನಾತ್ಯಯೋದ್ದಿಷ್ಟಾ ವಿಕಾರಾಃ ಸಂಭವನ್ತಿ ಹಿ ॥೪೯॥

ಮದ್ಯಪಾನವನ್ನು ತ್ಯಜಿಸಿಬಿಟ್ಟವನು ಯೋಚನೆ ಮಾಡದೆ ಇದ್ದಕ್ಕಿದ್ದಂತೆಯೇ ಅತಿಯಾಗಿ ಮದ್ಯಪಾನ ಮಾಡಿದರೆ ಅವನಿಗೆ ಪಾನಾತ್ಯಯದಲ್ಲಿ ಹೇಳಿರುವ ಧ್ವಂಸಕ ವಿಟ್‌ಕ್ಷಯಗಳೆಂಬ ರೋಗಗಳುಂಟಾಗುತ್ತವೆ.

ಮದ್ಯಸ್ಯಾಗ್ನೇಯವಾಯವ್ಯೌ ಗುಣಾವಮ್ಬುವಹಾನಿ ತು ।
ಸ್ರೋತಾಂಸಿ ಶೋಷಯೇಯಾತಾಂ ತೇನ ತೃಷ್ಣಾ ಪ್ರಜಾಯತೇ ॥೫೦॥
ಪಾಟಲೋತ್ಪಲಕನ್ದೇಷು ಮುದ್ಗಪರ್ಣ್ಯಾಂ ಚ ಸಾಧಿತಮ್ ।
ಪಿಬೇನ್ಮಾಗಧಿಕೋನ್ಮಿಶ್ರಂ ತತ್ರಾಮ್ಭೋ ಹಿಮಶೀತಲಮ್ ॥೫೧॥

ಮದ್ಯಪಾನದಿಂದ ತೃಷ್ಣೋತ್ಪತ್ತಿಯಾಗುವ ಕ್ರಮವು : ಮದ್ಯದ ಆಗ್ನೇಯ ಮತ್ತು ವಾಯವ್ಯ ಗುಣಗಳು ಉದಕವಾಹಿ ಸ್ರೋತಸ್ಸುಗಳನ್ನು ಒಣಗಿಸುತ್ತವೆಯಾಗಿ ನೀರಡಿಕೆಯುಂಟಾಗುತ್ತದೆ ; ಪಾದರಿಯ ತೊಗಟೆ, ನೈದಿಲೆಗೆಡ್ಡೆ, ಕಾಡುಹೆಸರು ಇವುಗಳ ಕಷಾಯಕ್ಕೆ ಹಿಪ್ಪಲಿಯ ಚೂರ್ಣವನ್ನು ಮಿಶ್ರಮಾಡಿ ಕುಡಿಸಿದರೆ ನೀರಡಿಕೆಯು ನಿವಾರಣೆಯಾಗುತ್ತದೆ.

ಸರ್ಪಿಸ್ತೈಲವಸಾಮಜ್ಜದಧಿಭೃಙ್ಗರಸೈರ್ಯುತಮ್ ।
ಕ್ವಾಥೇನ ಬಿಲ್ವಯವಯೋಃ ಸರ್ವಗಂಧೈಶ್ಚ ಪೇಷಿತೈಃ ॥೫೨॥
ಪಕ್ವಮಭ್ಯಞ್ಜನೇ ಶ್ರೇಷ್ಠಂ ಸೇಕೇ ಕ್ವಾಥಃ ಸುಶೀಲತಃ ।
ರಸವನ್ತಿ ಚ ಭೋಜ್ಯಾನಿ ಯಥಾಸ್ವಮವಚಾರಯೇತ್ ॥೫೩॥
ಪಾನಕಾನಿ ಸುಶೀತಾನಿ ಹೃದ್ಯಾನಿ ಸುರಭೀಣಿ ಚ ।

ತುಪ್ಪ, ಎಣ್ಣೆ, ವಸಾ, ಮಜ್ಜೆಗಳು ಸಮಭಾಗ, ಮೊಸರು, ಗರುಗದಸೊಪ್ಪಿನರಸ

ಇವು ಅವೆಲ್ಲವುಗಳ ೨ ರಷ್ಟು ಭಾಗ, ಬಿಲ್ವಪತ್ರೆಯ ಹಣ್ಣು ಯವೆಗಳ ಕಷಾಯ ೮ ರಷ್ಟು ಭಾಗಗಳನ್ನು ಸೇರಿಸಿ ಏಲಾದಿಗಣದಲ್ಲಿ ಹೇಳಿದ ಸರ್ವಗಂಧದ್ರವ್ಯಗಳ ಕಲ್ಕ ಸ್ನೇಹದ $\frac{1}{4}$ ಭಾಗದಷ್ಟನ್ನು ಸೇರಿಸಿ ತಯಾರು ಮಾಡಿದ ಸ್ನೇಹವನ್ನು ಅಭ್ಯಂಗಮಾಡಿಸಿದರೆ ತೃಷ್ಣಾ ಹರವು ; ಮಧುರ ಶೀತಲದ್ರವ್ಯಗಳ ಕಷಾಯವನ್ನು ತಣ್ಣಗೆಮಾಡಿ ಸ್ನಾನಮಾಡಿಸಬೇಕು; ಆಯಾಯ ದೋಷಹರ ರಸದ್ರವ್ಯಗಳಿಂದ ತಯಾರಿಸಿದ ಆಹಾರಗಳನ್ನೂ ದ್ರಾಕ್ಷಿ, ದಾಳಿಂಬೆರಸ, ಖರ್ಜೂರ ಮೊದಲಾದುವುಗಳಿಂದ ತಯಾರಿಸಿ ಮನಸ್ಸಿಗೆ ಹಿತವಾದ ಕರ್ಪೂರ, ಏಲಕ್ಕಿ, ಮೊದಲಾದ ಸುಗಂಧ ದ್ರವ್ಯಗಳನ್ನು ಮಿಶ್ರಮಾಡಿದ ಪಾನಕಗಳನ್ನು ಕುಡಿಸಬೇಕು.

ತ್ವಚಂ ಪ್ರಾಪ್ತಃ ಸಪಾನೋಷ್ಮಾ ಪಿತ್ತರಕ್ತಾಭಿಮೂರ್ಛಿತಃ ।
ದಾಹಂ ಪ್ರಕುರುತೇ ಘೋರಂ ಪಿತ್ತವತ್ತತ್ರ ಭೇಷಜಮ್ ॥೫೪॥

ಮದ್ಯಪಾನದಿಂದುಂಟಾದ ಶರೀರದ ಹಬೆಯು ಪಿತ್ತರಕ್ತಗಳೊಡನೆ ಕಲೆತು ಅತಿ ತೀವ್ರವಾದ ಉರಿತವನ್ನುಂಟುಮಾಡುತ್ತದೆಯಾಗಿ ಅದರ ನಿವಾರಣೆಗಾಗಿ ಪಿತ್ತಹರಗಳಾದ ಶೀತಲ ಮತ್ತು ಮಧುರ ಚಿಕಿತ್ಸೆಗಳನ್ನು ಮಾಡಬೇಕು.

ಶೀತಂ ವಿಧಾನಮತ ಊರ್ಧ್ವಮಹಂ ಪ್ರವಕ್ಷ್ಯೇ ದಾಹಪ್ರಶಾನ್ತಿಕರಮೃದ್ಧಿಮತಾಂ ನರಾಣಾಮ್ ।
ತತ್ರಾದಿತೋ ಮಲಯಜೇನ ಹಿತಃ ಪ್ರದೇಹಶ್ಚನ್ದ್ರಾಂಶುಹಾರತುಹಿನೋದಕಶೀತಲೇನ ॥೫೫॥

ಶೀತಾಮ್ಬು ಶೀತಲತರೈಶ್ಚ ಶಯಾನಮೇವಂ ಹಾರೈರ್ಮೃಣಾಳವಲಯೈರಬಲಾಃ ಸ್ಪೃಶೇಯುಃ ।
ಭಿನ್ನೋತ್ಪಲೋಜ್ವಲಹಿಮೇ ಶಯನೇ ಶಯೀತ ಪತ್ರೇಷುವಾ ಸಜಲಬಿನ್ದುಷು ಪದ್ಮಿನೀನಾಮ್ ॥೫೬॥

ಆಸ್ವಾದಯೇತ್ ಪವನಮಾಹೃತಮಙ್ಗನಾಭಿಃ ಕಲ್ಹಾರಪದ್ಮದಳಶೈವಲಸಂಚಯೇಭ್ಯಃ ।
ಕಾನ್ತೈರ್ವನಾನ್ತಪವನೈಃ ಪರಿಮೃಶ್ಯಮಾನಃ ಶಕ್ತಶ್ಚರೇದ್ಭವನ ಕಾನನದೀರ್ಘಿಕಾಸು ॥೫೭॥

ದಾಹಾಭಿಭೂತಮಥವಾ ಪರಿಷೇಚಯೇತ್ತು ಶೀತೈರುಶೀರಜಲಚನ್ದನತೋಯತೋಯೈಃ।
ವಿಸ್ರಾವಿತಾಂ ಹೃತಮಲಾಂ ನವವಾರಿಪೂರ್ಣಾಂ ಪದ್ಮೋತ್ಪಲಾಕುಲಜಲಾಮಧಿವಾಸಿತಾಂ ಚ ॥೫೮॥

ವಾಪೀಂ ಭಜೇತ ಹರಿಚನ್ದನಭೂಷಿತಾಙ್ಗಃ ಕಾನ್ತಾಕರಸ್ಪೃಶನ ಕರ್ಕಶರೋಮಕೂಪಃ ।
ತತ್ರೈ ನಮಮ್ಬುರುಹಪತ್ರಸಮೈಃ ಸ್ಪೃಶನ್ತ್ಯಃ ಶೀತೈಃ ಕರೋರು ವದನೈಃ ಕಠಿನೈಃ ಸ್ತನೈಶ್ಚ ॥೫೯॥

ತೋಯಾವಗಾಹಕುಶಲಾಃ ಮಧುರಸ್ವಭಾವಾಃ ಸಂಹರ್ಷಯೇಯುರಬಲಾಃ ಸುಕಲೈಃ ಪ್ರಲಾಪೈಃ ।

ದಾಹವನ್ನು ಹೋಗಲಾಡಿಸುವ ಮತ್ತು ಜನರಿಗೆ ಸಮೃದ್ಧಿಯನ್ನುಂಟುಮಾಡುವ ಶೀತಲಚಿಕಿತ್ಸಾಕ್ರಮವನ್ನು ಇನ್ನು ಮೇಲೆ ವಿವರಿಸುತ್ತೇವೆ ; ಮೊದಲು ಶ್ರೀಗಂಧದಿಂದ ಮೈಗೆ ಲೇಪನಮಾಡಿಸಿ ಚಂದ್ರಕಿರಣದಂತೆ ಮನೋಹರವಾದ ಮಂಜಿನ ನೀರಿನಂತೆ ತಣ್ಣಗಿರುವ ಮುತ್ತಿನ ಹಾರವನ್ನು ಕೊರಳಿಗೆ ಹಾಕಿಸಬೇಕು ; ಅರಳಿದ ನೈದಿಲೆಗಳನ್ನೂ ತಾವರೆ ಎಲೆಗಳನ್ನೂ ಹರಡಿ ನೀರು ಚುಮುಕಿಸಿ ತಣ್ಣಗೆಮಾಡಿರುವ ಹಾಸಿಗೆಯಲ್ಲಿ ದಾಹಪೀಡಿತ ರೋಗಿಯನ್ನು ಮಲಗಿಸಿ ತಣ್ಣೀರಿನಲ್ಲಿ ಅದ್ದಿ ತಣ್ಣಗಿರುವ ಮುತ್ತಿನಹಾರವನ್ನು ಕತ್ತಿನಲ್ಲಿ ಧರಿಸಿ ತಾವರೆದಂಟನ್ನು ಕಡಗದಂತೆ ಕೈಗೆತೊಟ್ಟಿರುವ ಸ್ತ್ರೀಯರು ಮುಟ್ಟಿ ಉಪಚರಿಸಬೇಕು ; ಮನೆಯ ತೋಟದಲ್ಲಿ ಕೊಳದೊಳಗೆ ಸೌಗಂಧಿಕಾ, ತಾವರೆ, ಪಾಚಿಗಳಿಂದ ತುಂಬಿದ ನೀರಿನ ಮೇಲೆ ಬೀರುವ ಮಂದ ಮಾರುತವು ಇವನ ಮೇಲೆ ಬೀಸುವಂತೆ ಆ ಕೊಳದ ಹತ್ತಿರದಲ್ಲೇ ಮೇಲೆ ಹೇಳಿದಂತೆ ನೈದಿಲೆಗಳ ಅಥವಾ ತಾವರೆ ಎಲೆಗಳಿಂದ ಮಾಡಿದ ತಣ್ಣಗಿರುವ ಹಾಸಿಗೆಯಲ್ಲಿ ಮಲಗಿಕೊಂಡು ಮೇಲೆ ಹೇಳಿದ ಚಂದ್ರಹಾರಧಾರಿಗಳಾಗಿ ಕೈಗಳಿಗೆ ತಾವರೆ ಬಳ್ಳಿಗಳ ಬಳೆಗಳನ್ನು ತೊಟ್ಟಿರುವ ಸ್ತ್ರೀಯರು ತಾವರೆ ಕಲ್ಹಾರಪುಷ್ಪಗಳಿಂದ ಇವನ ಮೇಲೆ ಗಾಳಿಬೀಸುವಂತೆ ಮಾಡಬೇಕು ; ಶಕ್ತಿಯಿದ್ದರೆ ಆ ಕೊಳದ ಸುತ್ತಲೂ ಸಂಚರಿಸಬೇಕು ; ಅಥವಾ ದಾಹಪೀಡಿತನಿಗೆ ಲಾಮಂಚ, ಶ್ರೀಗಂಧ, ಮುಡಿವಾಳ ಇವುಗಳ ಕಷಾಯವನ್ನು ತಣ್ಣಗೆಮಾಡಿ ಮೈಮೇಲೆ ಸುರಿಸಬೇಕು ; ಭಾವಿಯ ಹಳೆಯ ನೀರನ್ನು ಕೆಳಗಿರುವ ಕೆಸರನ್ನು ತೆಗೆದು ಹಾಕಿ ಹೊಸ ನೀರು ತುಂಬಿ ತಾವರೆ ನೈದಿಲೆ ಹೂವುಗಳಿಂದ ತುಂಬಿರುವ ಭಾವಿಯೊಳಗೆ ರಕ್ತಗಂಧವನ್ನು ಮೈಗೆ ಲೇಪಿಸಿಕೊಂಡಿರುವ ರೋಗಿಯು ಆ ನೀರಿನಲ್ಲಿಳಿದು ಸ್ನಾನಮಾಡಬೇಕು ; ಪ್ರಿಯಸ್ತ್ರೀಯಳು ಇವನನ್ನು ಸ್ಪರ್ಶಮಾಡಿದ್ದರಿಂದ ಮೈರೋಮಾಂಚದ ನಂತರ ಭಾವಿಯಲ್ಲಿಳಿಸಿ ಸ್ನಾನಮಾಡಿಸಿದ ತಾವರೆಹೂವಿನ ಎಲೆಯಂತೆ ಸುಂದರಮುಖವುಳ್ಳ ತಣ್ಣಗಿರುವ ಕೈ, ಮುಖ, ತೊಡೆಗಳು ಮತ್ತು ಕಠಿಣವಾದ ಸ್ತನಗಳುಳ್ಳ ಸ್ತ್ರೀಯರು ಆಲಿಂಗಿಸಿ ದಾಹವನ್ನು ನಿವಾರಿಸುತ್ತಾರೆ. ನೀರಿನಲ್ಲಿ ಸ್ನಾನಮಾಡಲು ಅಭ್ಯಾಸವಿರುವ ಮಧುರ ಸ್ವಭಾವದ ಸ್ತ್ರೀಯರು ಚಾತುರ್ಯವಾದ ಸಲ್ಲಾಪಗಳಿಂದಲೂ, ಮಧುರಗಾನಗಳಿಂದಲೂ ಸಂತೋಷವನ್ನುಂಟುಮಾಡುತ್ತಾರೆ.

ಧಾರಾಗೃಹೇ ಪ್ರಗಳಿತೋದಕದುರ್ದಿನಾಭೇ ಕ್ಲಾನ್ತಃ ಶಯೀತ ಸಲಿಲಾನಿಲಶೀತಕುಕ್ಷೌ ॥೬೦॥

ಗನ್ಧೋದಕೈಃ ಸುಕುಸುಮೈರುಪಸಿಕ್ತಭೂಮೌ ಪತ್ರಾಮ್ಬು ಚನ್ದನ ರಸೈರುಪಲಿಪ್ತಕುಡ್ಯೇ ।
ಜಾತ್ಯುತ್ಪಲಪ್ರಿಯಕಕೇಶರಪುಣ್ಡರೀಕೇ ಪುನ್ನಾಗನಾಗಕರವೀರ ಕೃತೋಪಚಾರೇ ॥೬೧॥
ತಸ್ಮಿನ್ ಗೃಹೇ ಕಮಲರೇಣ್ವರುಣೇ ಶಯೀತ ಯತ್ನಾಹೃತಾನಿಲವಿಕಮ್ಪಿತಪುಷ್ಪದಾಮ್ನಿ ।

ನೀರಿನ ಬುಗ್ಗೆಯಿಂದ ನೀರು ಮೇಲೆ ಚಿಮ್ಮುತ್ತ ನೀರಿನಿಂದಲೂ ತಂಗಾಳಿಯಿಂದಲೂ ಪೂರ್ಣವಾದ ಗೃಹದಲ್ಲಿ ದುರ್ದಿನದಲ್ಲಿ ಮೋಡಗವಿದ ಸೂರ್ಯನಂತೆ ಮೊಬ್ಬಾಗಿರುವ

ವಾತಾವರಣದಿಂದಲೂ ಪರಿಮಳಗಂಧವನ್ನೂ ಪುಷ್ಪಗಳನ್ನೂ ನೆಲದಮೇಲೆ ಚುಮುಕಿಸಿ ಗೋಡೆಗಳಿಗೆ ಲವಂಗಪತ್ರೆ, ಮುಡಿವಾಳ, ಶ್ರೀಗಂಧಗಳಿಂದ ಲೇಪಿಸಿರುವ ಮನೆಯಲ್ಲಿ ಜಾಜಿ, ನೈದಿಲೆ, ಅಶೋಕ, ನಾಗಕೇಸರ, ಬಿಳಿಯಕಮಲ, ಸುರಹೊನ್ನೆ, ಕೆಂಪುಕಣಿಗಲೆ ಹೂವುಗಳಿಂದ ಅಲಂಕರಿಸಿ ತಾವರೆ ಪರಾಗದಂತೆ ಕೆಂಪಾಗಿ ಮಾಡಿದ ನೆಲದ ಮೇಲೆ ಮಲಗಿಕೊಂಡು ಹೂವಿನ ಸರಗಳ ಮೇಲೆ ಬೀಸುತ್ತಾ ಬರುವ ತಂಗಾಳಿಯನ್ನು ಸೇವಿಸಬೇಕು.

ಹೇಮನ್ತವಿನ್ಧ್ಯಹಿಮವನ್ಮಲಯಾಚಲಾನಾಂ ಶೀತಾಮ್ಬುಸಾಂ ಸಕದಳೀಹರಿತದ್ರುಮಾ
ಣಾಮ್ ||೬೨||
ಉದ್ಭಿನ್ನನೀಲನಳಿನಾಮ್ಬುರುಹಾಕರಾಣಾಂ ಚಂದ್ರೋದಯಸ್ಯ ಚ ಕಥಾಃ ಶೃಣುಯಾನ್ಮ
ನೋಜ್ಞಾಃ ।
ಮ್ಲಾನಂ ಪ್ರತಾನಮನಸಂ ಮನಸೋನುಕೂಲಾಃ ಪೀನಸ್ತನೋರು ಜಘನಾಃ ಪರಿಚನ್ದ
ನಾಙ್ಗ್ಯಃ ||೬೩||
ತಾ ಏನಮಾರ್ದ್ರವಸನಾಃ ಸಹಸಂವಿಶೇಯುಃ ಶ್ಲಿಷ್ಟ್ವಾಬಲಾಃ ಶಿಥಿಲಮೇಖಲ ಹಾರ
ಯಷ್ಟ್ಯಃ ।
ಹರ್ಷಯೇಯುಃ ಪುನರ್ನಾರ್ಯಃ ಸ್ವಗುಣೈರಹಸಿಸ್ಥಿತಾಃ ।
ತಾಃ ಶೈತ್ಯಾಚ್ಛಮಯೇಯುಶ್ಚ ಪಿತ್ತಪಾನಾತ್ಯಯಾನ್ತರಮ್ ||೬೪||
ತೃಷ್ಣಾಹರಕ್ತಪಿತ್ತೇಷು ಕಾರ್ಯೋಽಯಂ ಭೇಷಜಕ್ರಮಃ ।
ಸಾಮಾನ್ಯತೋ ವಿಶೇಷಂ ತು ಶೃಣು ದಾಹೇಷ್ವಶೇಷತಃ ||೬೫||

ಹೇಮಂತರ್ತುವಿನಲ್ಲಿ ವಿಂಧ್ಯಪರ್ವತ, ಮಲಯ, ಹಿಮಾಲಯ ಪರ್ವತಗಳ ತಪ್ಪಲು ಗಳಲ್ಲಿ ಹರಿಯುವ ತಣ್ಣೀರಿನ ಪ್ರವಾಹದ ಬಾಳೇತೋಟಗಳು, ಹಸುರೆಲೆಗಳುಳ್ಳ ಮರಗಳ, ಅರಳಿದ ನೈದಿಲೆ, ತಾವರೆಹೂವುಗಳಿಂದ ಭರಿತವಾದ ಸರೋವರಗಳ ಚಂದ್ರೋದಯಕಾಲದ ಕಥೆಗಳನ್ನು ಮನೋಹರವಾಗುವಂತೆ ಹೇಳಿಸಿ ಕೇಳಬೇಕು. ಗ್ಲಾನಿಯಿಂದಕೂಡಿ ದೈನ್ಯ ಮನಸ್ಸುಳ್ಳ ಮದ್ಯೋತ್ಥದಾಹದಿಂದ ಪೀಡಿತನಾದ ಮನುಷ್ಯನನ್ನು ಪ್ರಿಯರಾದ ದಪ್ಪಸ್ತನ, ತೊಡೆ, ಸೊಂಟ, ಪಿರ್ರೆಗಳುಳ್ಳ ರಕ್ತಚಂದನವನ್ನು ಬಳಿದುಕೊಂಡಿರುವ ಸ್ತ್ರೀಯರು ಒದ್ದೆ ಸೀರೆಯನ್ನುಟ್ಟು ನಡುವಿನ ಒಡ್ಯಾಣ (ಡಾಬು) ಗಳನ್ನೂ, ಕತ್ತಿನ ಮುತ್ತಿನಸರಗಳನ್ನೂ ಸಡಿಲಿಸಿ ರಹಸ್ಯಸ್ಥಾನದಲ್ಲಿ ಮಲಗಿ ಆಲಿಂಗನ ಮಾಡಿಕೊಂಡು ತಮ್ಮ ಪ್ರಿಯಹಿತಮಧುರ ಮುಗ್ಧಭಾಷಣಗಳಿಂದ ಹರ್ಷಗೊಳಿಸಿ ಪಿತ್ತದಿಂದುಂಟಾದ ಪಾನಾತ್ಯಯದ ಸಂತಾಪವನು ಶಮನಗೊಳಿಸುತ್ತಾರೆ. ಬಾಯಾರಿಕೆ, ಮೈಉರಿತ, ರಕ್ತಪಿತ್ತರೋಗಗಳಲ್ಲಿ ಸಾಮಾನ್ಯ ವಾಗಿ ಈ ರೀತಿಯಾದ ಚಿಕಿತ್ಸಾಕ್ರಮಗಳಿಂದ ಉಪಚರಿಸಬೇಕು. ವಿಶೇಷವಾಗಿ ದಾಹ ಉಂಟಾದವರಿಗೆ ಮಾಡಬೇಕಾದ ಪೂರ್ಣ ಚಿಕಿತ್ಸಾ ವಿಧಾನಗಳನ್ನು ಹೇಳುತ್ತೇನೆ ಕೇಳು.

ಕೃತ್ಸ್ನದೇಹಾನುಗಂ ರಕ್ತಮುದ್ರಿಕ್ತಂ ದಹತಿಹ್ಯತಿ ।
ಸಂಚೂಷ್ಯತೇ ದಹ್ಯತೇ ಚ ತಾಮ್ರಾಭಸ್ತಾಮ್ರಲೋಚನಃ ॥೧೭॥
ಲೋಹಗನ್ಧಾಙ್ಗವದನೋ ವಹ್ನಿನೇವಾವಕೀರ್ಯತೇ ।
ತಂ ವಿಲಙ್ಘ್ಯ ವಿಧಾನೇನ ಸಂಸೃಷ್ಟಾಹಾರಮಾಚರೇತ್ ॥೧೮॥
ಅಪ್ರಶಾಮ್ಯತಿ ದಾಹೇ ಚ ರಸೈಸ್ತೃಪ್ತಸ್ಯ ಜಾಙ್ಗಲೈಃ ।
ಶಾಖಾಶ್ರಯಾ ಯಥಾನ್ಯಾಯಂ ರೋಹಿಣೀರ್ವ್ಯಧಯೇತ್ಸಿರಾಃ ॥೧೯॥
ಪಿತ್ತಜ್ವರಸಮಃ ಪಿತ್ತಾತ್ ಸ ಚಾಪ್ಯಸ್ಯ ವಿಧಿರ್ಹಿತಃ ।
ತೃಷ್ಣಾನಿರೋಧಾದಬ್ಧಾತೌ ಕ್ಷೀಣೇ ತೇಜಃ ಸಮುದ್ಧತಮ್ ॥೨೦॥
ಸ ಬಾಹ್ಯಾಭ್ಯನ್ತರಂ ದೇಹಂ ದಹೇದ್ವೈ ಮನ್ದಚೇತಸಃ ।
ಸಂಶುಷ್ಕಗಳತಾಲ್ವೋಷ್ಠೋ ಜಿಹ್ವಾಂ ನಿಃಕೃಷ್ಯ ಚೇಷ್ಟತೇ ॥೨೧॥

ದೇಹದ ಸಕಲಭಾಗಗಳನ್ನೂ ವ್ಯಾಪಿಸಿ ಪ್ರವೃದ್ಧವಾದ ರಕ್ತವು ಅತಿಯಾಗಿ ಸುಡುತ್ತಾ ಉರಿಯುವಂತೆ ತೋರುತ್ತದೆ. ಮೈ ತಾಮ್ರದ ಬಣ್ಣದಂತಾಗಿ ನೇತ್ರಗಳು ಕೆಂಪಾಗುತ್ತವೆ. ಮೈಬಾಯಿಗಳಿಂದ ಕಬ್ಬಿಣದ ವಾಸನೆ ಬರುತ್ತದೆ. ಮೈಮೇಲೆ ಬೆಂಕಿಯ ಕೆಂಡಗಳನ್ನು ಹರಡಿದಂತೆ ವ್ಯಥೆಯಾಗುತ್ತದೆ. ಆ ರೋಗಿಗೆ ವಿವಿಧ ರೀತಿಯಿಂದ ಉಪವಾಸ ಮಾಡಿಸಿ ಕ್ರಮವಾಗಿ ತರ್ಪಣಾದಿಕ್ರಮಗಳನ್ನು ಪ್ರಯೋಗಿಸಬೇಕು. ದಾಹವು ಶಾಂತವಾಗದಿದ್ದರೆ ಜಾಂಗಲಮಾಂಸದಿಂದ ತೃಪ್ತನನ್ನಾಗಿ ಮಾಡಿ ತೋಳು, ತೊಡೆಗಳಲ್ಲಿರುವ ರೋಹಿಣೀ ಎಂಬ ಕೆಂಪುಸಿರೆಗಳನ್ನು ವೇಧಿಸಿ ರಕ್ತವನ್ನು ಸ್ರಾವ ಮಾಡಿಸಬೇಕು ; ಪಿತ್ತದಿಂದುಂಟಾದ ದಾಹರೋಗಿಗೆ ಪಿತ್ತಜ್ವರದ ಚಿಕಿತ್ಸೆಯನ್ನು ಮಾಡಬೇಕು ; ಬಾಯಾರಿಕೆಯನ್ನು ತಡೆಯುವುದರಿಂದ ಅಬ್ಧಾತುವು ಕ್ಷೀಣಿಸುತ್ತದೆ ; ಇದರ ಫಲವಾಗಿ ತೇಜೋಧಾತುವು ಅಭಿವೃದ್ಧಿಯಾಗಿ ಶರೀರದ ಒಳಗೂ ಹೊರಗೂ ಸುಟ್ಟುಬಿಡುತ್ತದೆ ; ದುರ್ಬಲನಾದ ಆ ರೋಗಿಯ ಗಂಟಲು, ತಾಲುಪ್ರದೇಶ, ತುಟಿಗಳು ಒಣಗುತ್ತವೆಯಾಗಿ ನಾಲಿಗೆಯನ್ನು ಹೊರಕ್ಕೆ ನೀಡಿ ಕೈಕಾಲುಗಳನ್ನು ಒದರುತ್ತಾನೆ ; (ಕೆಲವರು ರೋಗಿಯು ನಾಲಿಗೆಯನ್ನು ಹೊರಕ್ಕೆ ಚಾಚಿಬಿಟ್ಟು ನಡುಗುತ್ತಾನೆ ಎಂದು ಹೇಳುತ್ತಾರೆ.)

ತತ್ರೋಪಶಮಯೇತ್ತೇಜಸ್ತ್ವಬ್ಧಾತುಂ ಚ ವಿವರ್ಧಯೇತ್ ।
ಪಾಯಯೇತ್ಕಾಮಮಮ್ಭಶ್ಚ ಶರ್ಕರಾಢ್ಯಂ ಪಯೋಽಪಿ ವಾ ॥೨೨॥
ಶೀತಮಿಕ್ಷುರಸಂ ಮನ್ಥಂ ವಿತರೇಚ್ಚೇರಿತಂ ವಿಧಿಮ್ ।
ಅಸೃಜಃ ಪೂರ್ಣಕೋಷ್ಠಸ್ಯ ದಾಹೋಽನ್ಯಃ ಸ್ಯಾತ್ ಸುದುಸ್ತರಃ ॥೨೩॥
ವಿಧಿಃ ಸದ್ಯೋವ್ರಣೀಯೋಕ್ತಸ್ತಸ್ಯ ಲಕ್ಷಣಮೇವ ಚ ।
ಧಾತುಕ್ಷಯೋಕ್ತೋ ಯೋದಾಹಸ್ತೇನ ಮೂರ್ಛಾತೃಷಾನ್ವಿತಃ ॥೨೪॥
ಕ್ಷಾಮಸ್ವರಃ ಕ್ರಿಯಾಹೀನೋ ಭೃಶಂ ಸೀದತಿ ಪೀಡಿತಃ ।
ರಕ್ತಪಿತ್ತವಿಧಿಸ್ತಸ್ಯ ಹಿತಃಸ್ನಿಗ್ಧೋಽನಿಲಾಪಹಃ ॥೨೫॥

ನೀರಡಿಕೆಯನ್ನು ತಡೆಯುವುದರಿಂದುಂಟಾದ ದಾಹದಲ್ಲಿ ಪಿತ್ತದ ಉರಿಯನ್ನು ಶಮನಗೊಳಿಸಿ ದೇಹದಲ್ಲಿ ಅಬ್ಧಾತುವನ್ನು ಹೆಚ್ಚಿಸಬೇಕು ; ಸಕ್ಕರೆ ಮಿಶ್ರಮಾಡಿದ ನೀರನ್ನಾಗಲೀ ಹಾಲನ್ನಾಗಲೀ ಬೇಕಾದಷ್ಟನ್ನು ಕುಡಿಸಬೇಕು ; ಶೀತಲವಾದ ಕಬ್ಬಿನ ರಸವನ್ನೂ ಮಂಥವನ್ನೂ ಕುಡಿಸಿ ಪಿತ್ತಜ್ವರಹರಗಳಾದ ಚಿಕಿತ್ಸಾ ವಿಧಾನಗಳನ್ನು ಪ್ರಯೋಗಿಸಬೇಕು ; ಕೋಷ್ಠದಲ್ಲಿ ರಕ್ತ ತುಂಬಿದ್ದರೆ ಅತಿಭಯಂಕರವಾದ ಉರಿತವುಂಟಾಗುತ್ತದೆ ; ಈ ದಾಹದಲ್ಲಿ ಸದ್ಯೋವ್ರಣದಲ್ಲಿ ಮಾಡಬೇಕಾದ ಚಿಕಿತ್ಸಾವಿಧಾನಗಳನ್ನೇ ಅನುಸರಿಸಬೇಕು. ಧಾತುಕ್ಷೀಣತೆಯಿಂದುಂಟಾದ ದಾಹರೋಗದಲ್ಲಿ ರೋಗಿಯು ಮೂರ್ಛೆಯಿಂದಲೂ ನೀರಡಿಕೆಯಿಂದಲೂ ಪೀಡಿತನಾಗಿ ದುರ್ಬಲಸ್ವರವುಳ್ಳವನಾಗಿ ಶಾರೀರಕ ಮತ್ತು ಮಾನಸಿಕ ಚೇಷ್ಟೆಯಿಲ್ಲದವನಾಗಿ ದೇಹಕ್ಷೀಣತೆಯಿಂದ ಬಾಧೆಪಡುತ್ತಾನೆ ; ಅವನಿಗೆ ವಾತಹರಗಳಾದ ಸ್ನಿಗ್ಧವಾದ ರಕ್ತಪಿತ್ತಹರಗಳಾದ ಚಿಕಿತ್ಸಾವಿಧಾನಗಳನ್ನು ಮಾಡಿಸಬೇಕು.

ಕ್ಷತಜೇನಾಶ್ನತಶ್ಚಾನ್ಯೈಃ ಶೋಚತೋವಾಪ್ಯನೇಕಧಾ ।
ತೇನಾನ್ತರ್ದಹ್ಯತೇಽತ್ಯರ್ಥಂ ತೃಷ್ಣಾ ಮೂರ್ಛಾಪ್ರಲಾಪವಾ ॥೭೬॥
ತಮಿಷ್ಟವಿಷಯೋಪೇತಂ ಸುಹೃದ್ಭಿರಭಿಸಂವೃತಮ್ ।
ಕ್ಷೀರಮಾಂಸರಸಾಹಾರಂ ವಿಧಿನೋಕ್ತೇನ ಸಾಧಯೇತ್ ॥೭೭॥

ರಕ್ತಮಿಶ್ರಮಾಡಿದ ಅನ್ನವನ್ನು ತಿನ್ನುವವನಿಗೂ ಅನೇಕವಿಧ ದುಃಖದಿಂದ ಪೀಡಿತನಾದವನಿಗೂ ದಾಹವೂ ದೇಹದ ಒಳಗಡೆ ಉರಿತವೂ ಉಂಟಾಗುತ್ತದೆ; ಪ್ರಜ್ಞೆ ತಪ್ಪುತ್ತದೆ, ಬಾಯಾರಿಕೆಯುಂಟಾಗುತ್ತದೆ ; ಅಸಂಬದ್ಧವಾಗಿ ಮಾತನ್ನಾಡುತ್ತಾನೆ ; ಅವನಿಗೆ ಇಷ್ಟವಾದ ಶಬ್ದಸ್ಪರ್ಶಾದಿ ವಿಷಯುಗಳನ್ನೊದಗಿಸಿಕೊಟ್ಟು, ಇಷ್ಟ ಮಿತ್ರರೊಡನೆ ಕೂಡಿರುತ್ತಾ ಹಾಲು, ಮಾಂಸರಸಗಳನ್ನು ಮಿಶ್ರಮಾಡಿದ ಆಹಾರವನ್ನು ಭೋಜನ ಮಾಡಿಸಿ ಹಿಂದೆ ಹೇಳಿದಂತೆ ದಾಹನಾಶಕಗಳಾದ ಚಿಕಿತ್ಸಾವಿಧಾನಗಳಿಂದ ಉಪಚರಿಸಬೇಕು.

ಮರ್ಮಾಭಿಘಾತಜೋಽಪ್ಯಸ್ತಿ ಸಚಾಸಾಧ್ಯತಮೋ ಮತಃ ।
ಸರ್ವ ಏವ ಚ ವರ್ಜ್ಯಾಃ ಸ್ಯುಃ ಶೀತಗಾತ್ರೇಷು ದೇಹಿಶು ॥೭೮॥
ಏವಂ ವಿಧೋ ಭವೇದ್ಯಸ್ತು ಮದಿರಾಮಯಪೀಡಿತಃ ।
ಪ್ರಶಾನ್ತೋಪದ್ರವೇ ಚಾಪಿ ಶೋಧನಂ ಪ್ರಾಪ್ತಮಾಚರೇತ್ ॥೭೯॥

ಸದ್ಯಃಪ್ರಾಣಹರ, ಕಾಲಾಂತರಪ್ರಾಣಹರ ಮರ್ಮಗಳಿಗೆ ಪೆಟ್ಟುಬಿದ್ದರೆ ಆಗಲೂ ದಾಹವುಂಟಾಗುತ್ತದೆ ; ಅದು ಅತ್ಯಂತ ಅಸಾಧ್ಯವೆಂದು ತಿಳಿಯಬೇಕು ; ಈ ರೀತಿ ಎಲ್ಲಾ ವಿಧಗಳಾದ ದಾಹರೋಗಗಳಲ್ಲಿಯೂ ದೇಹವು ತಣ್ಣಗಿದ್ದವರನ್ನು ತ್ಯಜಿಸಬೇಕು ; ದಾಹರೋಗವು ನಿವೃತ್ತಿಯಾದರೂ ಪಿತ್ತಾಧಿಕ್ಯತೆಯುಂಟಾಗದಂತೆ ಆಗಾಗ ಪಿತ್ತಹರಗಳಾದ

ವಿರೇಚನೌಷಧಗಳನ್ನು ಪ್ರಯೋಗಿಸಬೇಕು ; ಉರಿತವನ್ನುಂಟುಮಾಡುವ ಪಿತ್ತವು ಕಫ ಸ್ಥಾನದಲ್ಲಿದ್ದರೆ ವಮನಮಾಡಿಸಬೇಕು.

ಸಜೀರಕಾಣ್ಯಾರ್ದ್ರಕಶೃಙ್ಗವೇರ ಸೌವರ್ಚಲಾನ್ಯರ್ಧಜಲಪ್ಲುತಾನಿ ।
ಮದ್ಯಾನಿಹೃದ್ಯಾನ್ಯಥಗನ್ಧವನ್ತಿಪೀತಾನಿಸದ್ಯಃ ಶಮಯನ್ತಿ ತೃಷ್ಣಾಮ್ ॥೮೦॥

ಜೀರಿಗೆ, ಹಶಿಶುಂಠಿ, ಶುಂಠಿ, ಸೌವರ್ಚಲವಣಗಳ ಚೂರ್ಣ ಮತ್ತು ಅರ್ಧ ನೀರು ಇವುಗಳನ್ನು ಮಿಶ್ರಮಾಡಿ ಹೃದಯಕ್ಕೆ ಹಿತವಾದ ಸುವಾಸನೆಯುಳ್ಳ ಮದ್ಯವನ್ನು ಕುಡಿಸಿದರೆ ಕೂಡಲೇ ಬಾಯಾರಿಕೆಯು ಶಮನವಾಗುತ್ತದೆ.

ಜಲಪ್ಲುತಶ್ಚನ್ದನಭೂಷಿತಾಙ್ಗಃ ಸ್ರಗ್ವೀಸಭಕ್ತಾಂ ಪಿಶಿತೋಪದಂಶಾಮ್ ।
ಪಿಬನ್ ಸುರಾಂ ನೈವಲಭೇತ ರೋಗಾನ್ ಮನೋಽನುವಿಘ್ನಂ ಚ ಮದಂ ನ ಯಾತಿ ॥೮೧॥

ತಣ್ಣೀರಿನಲ್ಲಿ ಸ್ನಾನಮಾಡಿ ಮೈತಣ್ಣಗಿರುವಾಗ ಶ್ರೀಗಂಧವನ್ನು ಮೈಗೆ ಲೇಪನ ಮಾಡಿಕೊಂಡು ಪುಷ್ಪಮಾಲೆಯನ್ನು ಕತ್ತಿಗೆ ಧರಿಸಿಕೊಂಡು ಅನ್ನದೊಡನೆ ಮಾಂಸ ವನ್ನು ಭಕ್ಷಣೆಮಾಡಿ ಮದ್ಯವನ್ನು ಪಾನಮಾಡುವವನಿಗೆ ಮನಸ್ಸು ಬುದ್ಧಿಗಳೆರಡನ್ನೂ ಮೋಹಗೊಳಿಸುವ ಮದವುಂಟಾಗುವುದಿಲ್ಲ.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ ಪಾನಾತ್ಯಯಪ್ರತಿಷೇಧನಾಮಕ ಸಪ್ತಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ಅಷ್ಟಚತ್ವಾರಿಂಶತ್ತಮೋಽಧ್ಯಾಯಃ

ಅಥಾತಸ್ತೃಷ್ಣಾಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಪಾನಾತ್ಯಯ ಚಿಕಿತ್ಸೆಯನ್ನು ಹೇಳಿದನೇಲೆ ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಮದ್ಯಪಾನದಿಂದುಂಟಾಗುವ ತೃಷ್ಣಾ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಸತತಂ ಯಃ ಪಿಬೇದ್ವಾರಿ ನ ತೃಪ್ತಿಮಧಿಗಚ್ಛತಿ |
ಪುನಃ ಕಾಙ್ಕ್ಷತಿ ತೋಯಂ ಚ ತಂ ತೃಷ್ಣಾರ್ದಿತಮಾದಿಶೇತ್ ||೩||

ನೀರನ್ನು ಕುಡಿಯುತ್ತಾ ಕುಡಿಯುತ್ತಾ ಯಾರಿಗೇ ತೃಪ್ತಿಯೇ ಉಂಟಾಗದೇ ಪುನಃ ನೀರನ್ನು ಕುಡಿಯಬೇಕೆಂದು ಅಪೇಕ್ಷೆಯುಂಟಾಗುತ್ತದೆಯೋ ಅವರನ್ನು ತೃಷ್ಣಾಪೀಡಿತ ರೆಂದು ತಿಳಿಯಬೇಕು.

ಸಂಕ್ಷೋಭಶೋಕಶ್ರಮಮದ್ಯಪಾನಾದ್ರೂಕ್ಷಾಮ್ಲ ಶುಷ್ಕೋಷ್ಣ ಕಟೂಪಯೋಗಾತ್ |
ಧಾತುಕ್ಷಯಾಲ್ಲಙ್ಘನ ಸೂರ್ಯತಾಪಾತ್ ಪಿತ್ತಂ ಚ ವಾತಶ್ಚ ಭೃಶಂ ಪ್ರವೃದ್ಧೌ ||೪||
ಸ್ರೋತಾಂಸಿ ಸಂದೂಷಯತಃ ಸಮೇತೌ ಯಾನ್ಯಮ್ಬುವಾಹೀನಿ ಶರೀರಿಣಾಂ ಹಿ |
ಸ್ರೋತಃಸ್ವಪಾಂವಾಹಿಷು ದೂಷಿತೇಷು ಜಾಯೇತ ತೃಷ್ಣಾ ಪ್ರಬಲಾ ತತಸ್ತು ||೫||

ಅತಿಯಾಗಿ ದಾರಿನಡೆಯುವುದು, ವ್ಯಸನ, ಆಯಾಸ, ಮದ್ಯಪಾನ ಇವುಗಳಿಂದಲೂ, ರೂಕ್ಷ, ಹುಳಿ, ಒಣಗಿರುವ, ಬಿಸಿಯಾದ ಖಾರದ ಪದಾರ್ಥಗಳ ಸೇವನೆ, ಧಾತುಕ್ಷಯ, ಉಪವಾಸ, ಬಸಿಲಿನತಾಪ ಇವುಗಳ ಸೇವನೆಯಿಂದ ಅತಿಪ್ರಕೋಪಹೊಂದಿದ ಪಿತ್ತವಾತಗಳು ಮನುಷ್ಯಶರೀರದಲ್ಲಿರುವ ಜಲವಾಹಿ ಸ್ರೋತಸ್ಸುಗಳನ್ನು ದೂಷಿಸುವುದರಿಂದ ಅತಿಬಲವಾದ ಬಾಯಾರಿಕೆಯುಂಟಾಗುತ್ತದೆ, ಸಂತಾಪ ಮೊದಲು ಬಿಸಿಲಿನ ತಾಪದವರೆಗಿನವು ಹೇತುವು, ಪಿತ್ತವಾತಗಳು ಸೇರಿ ಜಲವಾಹಿಸ್ರೋತಸ್ಸುಗಳನ್ನು ಕೆಡಿಸಿ ತೃಷ್ಣೆಯನ್ನುಂಟುಮಾಡುತ್ತವೆ, ಇವು ಸಂಪ್ರಾಪ್ತಿಯು, ನಾಲಗೆ, ಗಂಟಲು, ತಾಲು, ಅಂಗಳು, ಕ್ಲೋಮಗಳಿಂದ ಹೊರಡುವ ಧಮನಿಗಳೂ ಅಂಬುವಹಗಳು.

ತ್ರಿಸ್ರಃ ಸ್ಮೃತಾಸ್ತಾಃ ಕ್ಷತಜಾ ಚತುರ್ಥೀ ಕ್ಷಯಾತ್ತಥಾನ್ಯಾಮ ಸಮುದ್ಭವಾ ಚ |
ಸ್ಯಾತ್ಸಪ್ತಮಿ ಭಕ್ತನಿಮಿತ್ತಜಾ ತು ನಿಬೋಧಲಿಙ್ಗಾನ್ಯನುಪೂರ್ವಶಸ್ತು ||೬||
ತಾಲ್ವೋಷ್ಠಕಣ್ಠಾಸ್ಯವಿಶೋಷದಾಹಾಃ ಸಂತಾಪಮೋಹಭ್ರಮವಿಪ್ರಲಾಪಾಃ |
ಪೂರ್ವಾಣಿ ರೂಪಾಣಿ ಭವನ್ತಿ ತಾಸಾಮುತ್ಪತ್ತಿಕಾಲೇಷು ವಿಶೇಷತೋಹಿ ||೭||
ಶುಷ್ಕಾಸ್ಯತಾ ಮಾರುತಸಂಭವಾಯಾಂ ತೋದಸ್ತಥಾ ಶಙ್ಖಶಿರಸ್ಸು ಚಾಪಿ |

ಸ್ರೋತೋನಿರೋಧೋ ವಿರಸಂ ಚ ವಕ್ತ್ರಂ ಶೀತಾಭಿರದ್ಭಿಶ್ಚ ವಿವೃದ್ಧಿಮೇತಿ ||೮||
ಮೂರ್ಛಾಪ್ರಲಾಪಾರುಚಿವಕ್ತ್ರಶೋಷಾಃ ಪೀತೇಕ್ಷಣತ್ವಂ ಪ್ರತತಶ್ಚ ದಾಹಃ |
ಶೀತಾಭಿಕಾಂಕ್ಷಾಮುಖತಿಕ್ತತಾ ಚ ಪಿತ್ತಾತ್ಮಿಕಾಯಾಂ ಪರಿಧೂಪನಂ ಚ ||೯||

ವಾತ, ಪಿತ್ತ, ಕಫ, ವ್ರಣ, ಕ್ಷಯ, ಆಮ, ಅನ್ನರಸಗಳಿಂದ ೭ ವಿಧ ತೃಷ್ಣಾಗಳುಂಟಾಗುತ್ತವೆ ; ಅವುಗಳ ಲಕ್ಷಣಗಳನ್ನು ಕ್ರಮವಾಗಿ ಹೇಳುತ್ತೇನೆ, ಕೇಳು ; ಅಂಗಳು, ತುಟಿಗಳು, ಗಂಟಲು, ಬಾಯಿ, ಇವುಗಳು ಒಣಗುವುದು ಮೈಉರಿತ ಶರೀರ ಮನಸ್ಸುಗಳಲ್ಲಿ ಶಾಖ ತೋರುವುದು ಮೋಹ, (ಮತ್ತತೆ), ತಲೆತಿರುಗು, ವಿಶೇಷವಾಗಿ ಅಸಂಬದ್ಧವಾಗಿ ಮಾತನಾಡುವುದು ಇವು ತೃಷ್ಣೆಯ ಪೂರ್ವರೂಪಗಳು ; ವಾತಜತೃಷ್ಣೆಯಲ್ಲಿ ಬಾಯಿ ಒಣಗುತ್ತದೆ ; ಕೆನ್ನೆ ತಲೆಗಳಲ್ಲಿ ಒಡೆತ ಸ್ರೋತಸ್ಸುಗಳ ಮಾರ್ಗದಲ್ಲಿ ತಡೆಯುಂಟಾಗುವುದು. ಬಾಯಿರುಚಿ ಬದಲಾಗುವುದು ತಣ್ಣೀರು ಕುಡಿದರೆ ಮತ್ತಷ್ಟು ಹೆಚ್ಚಾಗಿ ಬಾಯಾರುವುದೂ, ಪಿತ್ತಜತೃಷ್ಣಾರೋಗದಲ್ಲಿ ಪ್ರಜ್ಞೆ ತಪ್ಪುತ್ತದೆ ; ಅಸಂಬದ್ಧವಾಗಿ ಮಾತನಾಡುವುದು ಅರೋಚಕತೆ ಬಾಯಿ ಒಣಗುವುದು, ಕಣ್ಣು ಹಳದಿ ಬಣ್ಣವಾಗುವುದು, ಅಧಿಕವಾದ ಉರಿತ ತಣ್ಣಗಿರುವ ವಸ್ತುಗಳಲ್ಲಿ ಪ್ರೀತಿಯುಂಟಾಗುವುದು, ಬಾಯಿ ಕಹಿಯಾಗುವುದು, ಬಾಯಿನಿಂದ ಹೊಗೆ ಹೊರಡುವಂತೆ ವ್ಯಥೆಯಾಗುವುದು, ಈ ಲಕ್ಷಣಗಳಿರುತ್ತವೆ.

ಕಫಾವೃತಾಭ್ಯಾಮನಿಲಾನಲಾಭ್ಯಾಂ ಕಫೋಽಪಿ ಶುಷ್ಕಃ ಪ್ರಕರೋತಿ ತೃಷ್ಣಾಮ್ |
ನಿದ್ರಾ ಗುರುತ್ವಂ ಮಧುರಾಸ್ಯತಾ ಚ ತಥಾರ್ದಿತಃ ಶುಷ್ಯತಿ ಚಾತಿಮಾತ್ರಮ್ ||೧೦||
ಕಣ್ಠೋಪಲೇಪೋ ಮುಖಪಿಚ್ಛಿಲತ್ವಂ ಶೀತಜ್ವರಚ್ಛರ್ದಿರರೋಚಕಶ್ಚ |
ಕಫಾತ್ಮಿಕಾಯಾಂ ಗುರುಗಾತ್ರತಾ ಚ ಶಾಖಾಸು ಶೋಫಸ್ತ್ವವಿಪಾಕ ಏವ |
ಏತಾನಿ ರೂಪಾಣಿ ಭವನ್ತಿ ತಸ್ಯಾಂ ತಯಾರ್ದಿತಃ ಕಾಙ್ಕ್ಷತಿನಾತಿಚಾಮ್ಬು ||೧೧||

ವಾತಪಿತ್ತಗಳನ್ನು ಆವರಿಸಿದ ಕಫವು ಒಣಗಿ ಬಾಯಾರಿಕೆಯನ್ನುಂಟುಮಾಡುತ್ತದೆ ; ನಿದ್ರೆ, ಹೊಟ್ಟೆಭಾರ, ಬಾಯಿ ಸಿಹಿ ಸಿಹಿಯಾಗಿರುವುದು ಈ ಲಕ್ಷಣಗಳಿರುತ್ತವೆ ; ಈ ಕಫಜತೃಷ್ಣೆಯಿಂದ ಪೀಡಿತನಾದವನಿಗೆ ಗಂಟಲಿನಲ್ಲಿ ಮಲವೃದ್ಧಿಯಾಗಿ ಬಾಯಿಯಲ್ಲಿ ಕಫವು ಮೆತ್ತಿರುತ್ತದೆ, ಶೀತಪೂರ್ವಕವಾಗಿ ಜ್ವರ ಬರುತ್ತದೆ; ವಮನ, ಅರುಚಿ, ಕೈಕಾಲು, ತಲೆಗಳಲ್ಲಿ ಭಾರವೂ, ಕೈಕಾಲುಗಳು ಊದಿಯೂ, ಆಹಾರಪಾಕವಾಗುವುದಿಲ್ಲ. ಈ ಲಕ್ಷಣಗಳಿರುತ್ತವೆ ; ನೀರನ್ನೂ ಹೆಚ್ಚಾಗಿ ಕುಡಿಯುವುದಿಲ್ಲ.

ಕ್ಷತಸ್ಯ ರುಕ್ ಶೋಣಿತನಿರ್ಗಮಾಭ್ಯಾಂ ತೃಷ್ಣಾ ಚತುರ್ಥೀ ಕ್ಷತಜಾ ಮತಾ ತು |
ತಯಾಭಿಭೂತಸ್ಯ ನಿಶಾದಿನಾನಿ ಗಚ್ಛನ್ತಿ ದುಃಖಂ ಪಿಬತೋಽಪಿ ತೋಯಮ್ ||೧೨||
ರಸಕ್ಷಯಾದ್ಯಾ ಕ್ಷಯಜಾ ಮತಾ ಸಾ ತಯಾರ್ದಿತಃ ಶುಷ್ಯತಿ ದಹ್ಯತೇ ಚ |
ಅತ್ಯರ್ಥಮಾಕಾಙ್ಕ್ಷತಿ ಚಾಪಿ ತೋಯಂ ತಾಂ ಸನ್ನಿಪಾತಾದಿತಿ ಕೇಚಿದಾಹುಃ ||೧೩||
ರಸಕ್ಷಯೋಕ್ತಾನಿ ಚ ಲಕ್ಷಣಾನಿ ತಸ್ಯಾಮಶೇಷೇಣ ಭಿಷಗ್ವ್ಯವಸ್ಯೇತ್ |

ತ್ರಿದೋಷಲಿಙ್ಗಾ ಮಸಮುದ್ಭವಾ ಚ ಹೃಚ್ಛೂಲನಿಷ್ಠೀವನಸಾದ ಯುಕ್ತಾ ||೧೪||
ಸ್ನಿಗ್ಧಂ ತಥಾಮ್ಲಂ ಲವಣಂ ಚ ಭುಕ್ತಂ ಗುರ್ವನ್ನಮೇವಾಶು ತೃಷಾಂ ಕರೋತಿ ।
ಕ್ಷೀಣಂ ವಿಚಿತ್ತಂ ಬಧಿರಂ ತೃಷಾರ್ತಂ ವಿವರ್ಜಯೇನ್ನಿರ್ಗತ ಜಿಹ್ವಮಾಶು ||೧೫||

ವ್ರಣದ ನೋವಿನಿಂದಲೂ ಮತ್ತು ರಕ್ತವು ಸ್ರಾವವಾಗುವುದರಿಂದಲೂ ೪ ನೆಯದಾದ ಕ್ಷತಜತೃಷ್ಣೆಯುಂಟಾಗಿ ಇದರಿಂದ ವ್ರಣ ಪೀಡಿತನಿಗೆ ನೀರನ್ನು ಕುಡಿದರೂ ಹಗಲೂ ರಾತ್ರಿಯೂ ಕಾಲಕಳೆಯುವುದು ಅತಿಕಷ್ಟವಾಗುತ್ತದೆ ; ರಸಧಾತುವಿನ ಕ್ಷಯದಿಂದುಂಟಾದ ತೃಷ್ಣಾರೋಗದಲ್ಲಿ (ಇದಕ್ಕೆ ಧಾತು ಕ್ಷಯಜ ತೃಷ್ಣಾ ರೋಗವೆನ್ನುತ್ತಾರೆ ;) ರೋಗಿಯು ಕ್ಷೀಣ ದೇಹವುಳ್ಳವನಾಗುತ್ತಾನೆ; ಮೈಯ್ಯುರಿಯುತ್ತದೆ. ನೀರನ್ನು ಹೆಚ್ಚಾಗಿ ಕುಡಿಯಬೇಕೆಂದು ಆಶೆಪಡುತ್ತಾನೆ; ಕೆಲವರು ಇದನ್ನೇ ತ್ರಿದೋಷಜ ತೃಷ್ಣೆಯೆನ್ನುತ್ತಾರೆ ; ಇದರಲ್ಲಿ ರಸಕ್ಷಯದ ಲಕ್ಷಣಗಳೇ ಹೆಚ್ಚಾಗಿ ಕಾಣುತ್ತವೆ; ತ್ರಿದೋಷಜ ಮತ್ತು ಆಮದೋಷದಿಂದುಂಟಾದ ತೃಷ್ಣೆಯಲ್ಲಿ ಹೃದಯಶೂಲೆ, ಕ್ಯಾಕರಿಸಿ ಕಫವನ್ನು ಉಗುಳುವುದು ; ದೇಹಕೃಶತೆ ಇವುಗಳಿರುತ್ತವೆ ; ಸ್ನಿಗ್ಧ, ಅಮ್ಲ, ಲವಣ ಮತ್ತು ಗುರುವಾದ ಆಹಾರಗಳನ್ನು ತಿಂದರೆ ಅವನಿಗೆ ಬಲು ಬೇಗನೆ ನೀರಡಿಕೆಯು ಉಂಟಾಗುತ್ತದೆ ; ಕೃಶವಾದ ಮನಸ್ಸು ಕೆಟ್ಟಿರುವ ಕಿವುಡರಾದ ತೃಷ್ಣಾಪೀಡಿತರನ್ನೂ ನಾಲಿಗೆಯು ಹೊರಗಡೆಗೆ ಹೊರಟುಕೊಂಡಿದ್ದವನನ್ನೂ ತ್ಯಜಿಸಬೇಕು.

ತೃಷ್ಣಾಭಿವೃದ್ಧಾವುದರೇ ಚ ಪೂರ್ಣೇ ತಂ ವಾಮಯೇನ್ಮಾಗಧಿಕೋದಕೇನ ।
ವಿಲೋಭನಂ ಚಾತ್ರ ಹಿತಂ ವಿಧೇಯಂ ಸ್ಯಾದ್ದಾಡಿಮಾಮ್ರಾತಕಮಾತುಲುಙ್ಗೈಃ ||೧೬||
ಶಿಪ್ರಃ ಪ್ರಯೋಗೈರಿಹ ಸನ್ನಿವಾರ್ಯಾ ಶೀತೈಶ್ಚ ಸಮ್ಯಗ್ರಸವೀರ್ಯಜಾತೈಃ ।
ಗಣ್ಡೂಷಮಮ್ಲೈರ್ವಿರಸೇ ಚ ವಕ್ತ್ರೇ ಕುರ್ಯಾಚ್ಚಭೈರಾಮಲಕಸ್ಯ ಚೂರ್ಣೈಃ ||೧೭||
ಸುವರ್ಣರೂಪ್ಯಾದಿಭಿರಗ್ನಿತಪ್ತೈರ್ಲೋಷ್ಟೈಃ ಕೃತಂ ವಾ ಸಿಕತಾದಿಭಿರ್ವಾ ।
ಜಲಂ ಸುಖೋಷ್ಣಂ ಶಮಯೇತ್ತು ತೃಷ್ಣಾಂ ಸಶರ್ಕರಂ ಕ್ಷೌದ್ರಯುತಂ ಹಿಮಂ ವಾ ||೧೮||
ಪಞ್ಚಾಙ್ಗಕಾಃ ಪಞ್ಚಗಣಾ ಯ ಉಕ್ತಾಸ್ತೇಷ್ವಮ್ಬು ಸಿದ್ಧಂ ಪ್ರಥಮೇಗಣೇ ವಾ ।
ಪಿಬೇತ್ ಸುಖೋಷ್ಣಂ ಮನುಜೋಽಚಿರೇಣ ತೃಷೋವಿಮುಚ್ಯೇತ ಹಿ ವಾತಜಾಯಾಃ ||೧೯||
ಪಿತ್ತಘ್ನವರ್ಗೇಣ ಕೃತಃ ಕಷಾಯಃ ಸಶರ್ಕರಃ ಕ್ಷೌದ್ರಯುತಃ ಸುಶೀತಃ ।
ಪೀತಸ್ತೃಷಾಂ ಪಿತ್ತಕೃತಾಂ ನಿಹನ್ತಿ ಕ್ಷೀರಂ ಶೃತಂ ವಾಪ್ಯಥ ಜೀವನೀಯೈಃ ||೨೦||
ಬಿಲ್ವಾಢಕೀಕನ್ಯಸಪಞ್ಚಮೂಲೀದರ್ಭೇಷು ಸಿದ್ಧಂ ಕಫಜಾಂ ನಿಹನ್ತಿ ।
ಹಿತಂ ಭವೇಚ್ಛರ್ದನಮೇವ ಚಾತ್ರತಪ್ತೇನ ನಿಮ್ಬಪ್ರಸವೋದಕೇನ ||೨೧||
ಸರ್ವಾಸು ತೃಷ್ಣಾಸ್ವಥವಾಪಿ ಪೈತ್ತಂ ಕುರ್ಯಾದ್ವಿಧಿಂ ತು ನ ಹಿತಾನ ಸನ್ತಿ ।

ನೀರಡಿಕೆಯು ಹೆಚ್ಚಾಗಿ, ಹೊಟ್ಟೆಯಲ್ಲಿ ನೀರು ತುಂಬಿಕೊಂಡರೆ ಆ ರೋಗಿಗೆ

ಹಿಪ್ಪಲಿಯ ಚೂರ್ಣವನ್ನು ಕದರಿದ ನೀರನ್ನು ಕುಡಿಸಿ ವಮನ ಮಾಡಿಸಬೇಕು ; ಅವನ ಮುಂದೆ ಒಬ್ಬರು ಕೂತು ದಾಳಿಂಬೆ, ಅಮಟೆ, ಮಾದಳ ಮೊದಲಾದ ಹುಳಿರಸವುಳ್ಳ ಹಣ್ಣುಗಳನ್ನು ತಿನ್ನುತ್ತಿದ್ದರೆ ಆ ತೃಷ್ಣಾರೋಗಿಯ ಬಾಯಲ್ಲಿ ನೀರೂರುವುದರಿಂದ ವಾತ, ಪಿತ್ತ, ಕಫಜ ತೃಷ್ಣೆಗಳು ಸುಖವಾಗಿ ನಿವಾರಣೆಯಾಗುತ್ತವೆ ; ರಸ, ಗುಣವೀರ್ಯಗಳಿಗೆ ತಕ್ಕಂತೆ ಶೀತಲಗಳಾದ ಹುಳಿರಸವೇ ಹೆಚ್ಚಾಗಿರುವ ಗಂಡೂಷ, ಕವಳಗ್ರಹಗಳನ್ನು ಮಾಡಿಸಬೇಕು. ಜೇನುತುಪ್ಪದೊಡನೆ ನೆಲ್ಲೀಕಾಯಿ ಚೂರ್ಣವನ್ನು ರಂಗಳಿಸಿ ನಾಲಿಗೆಗೂ ತುಟಿಗಳಿಗೂ ಲೇಪನಮಾಡಿ ಬಾಯಿಮುಕ್ಕುಳಿಸಿದರೆ ರುಚಿಯುಂಟಾಗುತ್ತದೆ ; ಕೆಂಪಗೆ ಕಾದ ಚಿನ್ನ, ಬೆಳ್ಳಿ, ಮಣ್ಣಿನಹೆಂಟೆ, ಮರಳನ್ನು ಅದ್ದಿದತಣ್ಣೀರನ್ನೂ ಮಣ್ಣು ಹೆಂಟೆ, ಮರಳು ಇವನ್ನೂ ಬೆಂಕಿಯ ಕೆಂಡದಲ್ಲಿಟ್ಟು ಕಾಸಿದ ನಂತರ ನೀರಿಗೆ ಅದ್ದಿ ಬಿಸಿಯಾದ ಆ ನೀರಿಗೆ ಸಕ್ಕರೆ, ಜೇನುತುಪ್ಪಗಳನ್ನು ಮಿಶ್ರಮಾಡಿ ತಣ್ಣಗೆಮಾಡಿಯೂ ಕುಡಿಸಿದರೆ ತೃಷ್ಣೆಯು ನಿವಾರಣೆಯಾಗುತ್ತದೆ ; ೫ ವಿಧಗಳಾದ ಪಂಚಮೂಲಗಳ ಅಥವಾ ಮೊದಲನೆಯದಾದ ಬಿಲ್ವಾದಿ ಮಹಾಪಂಚಮೂಲದ ಕಷಾಯವನ್ನು ಸುಖೋಷ್ಣವಾಗಿ ಕುಡಿಸಿದರೆ ಬಲುಬೇಗನೆ ವಾತದಿಂದುಂಟಾದ ಬಾಯಾರಿಕೆಯು ಶಮನವಾಗುತ್ತದೆ ; ಉತ್ಪಲಾದಿಗಣ, ಸಾರಿವಾದಿಗಣ, ಕಾಕೋಳ್ಯಾದಿಗಣದ್ರವ್ಯಗಳ ಕಷಾಯಗಳನ್ನು ತಣ್ಣಗೆ ಮಾಡಿ ಸಕ್ಕರೆ, ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಿದರೆ ಪಿತ್ತದಿಂದುಂಟಾದ ಬಾಯಾರಿಕೆಯು ಶಮನವಾಗುತ್ತದೆ ; ಕಾಕೋಳ್ಯಾದಿ ಮಧುರ ದ್ರವ್ಯಗಳೊಡನೆ ತಯಾರಿಸಿದ ಹಾಲನ್ನು ತಣ್ಣಗೆಮಾಡಿ ಕುಡಿಸಿದರೂ ಹಿತವಾಗುತ್ತದೆ ; ಬಿಲ್ವಪತ್ರೆಯಬೇರು, ತೊಗರಿ ಕಡ್ಡಿಯಬೇರು, ಮೂರೆಲೆಹೊನ್ನೆ ಮೊದಲಾದ ಲಘುಪಂಚಮೂಲಗಳು ಮತ್ತು ದರ್ಭೆ ಮೊದಲಾದ ತೃಣಪಂಚಮೂಲಗಳ ಕಷಾಯದ ಪಾನದಿಂದ ಕಫಜ ತೃಷ್ಣೆಯನ್ನು ನಿವಾರಣೆಮಾಡಬೇಕು ; ಈ ಕಫಜ ತೃಷ್ಣೆಯಲ್ಲಿ ಬೇವಿನಸೊಪ್ಪಿನ ; ಕಷಾಯವನ್ನು ಕುಡಿಸಿ ವಮನ ಮಾಡಿಸುವುದೇ ಹಿತಕರವು ; ಎಲ್ಲಾ ವಿಧದ ತೃಷ್ಣಾರೋಗಗಳಲ್ಲೂ ಮುಂದೆ ಹೇಳುವ ಮಧುರ ಶೀತಾದಿ ದ್ರವ್ಯಗಳಿಂದ ರೋಗಿಗೆ ಪಾನ, ಲೇಪ, ಪರಿಷೇಕಾದಿ ಪಿತ್ತಹರ ಚಿಕಿತ್ಸಾಕ್ರಮಗಳನ್ನೂ ಆಚರಿಸಿದರೆ ಬಾಯಾರಿಕೆಯೇ ಉಂಟಾಗುವುದಿಲ್ಲ. (ನಿವಾರಣೆಯಾಗುತ್ತವೆ.)

ಪರ್ಯಾಗತೋದುಮ್ಬರಜೋ ರಸಸ್ತು ಸಶರ್ಕರಸ್ತ ತ್ಕ್ವಥಿತೋದಕಂ ವಾ ||೨೨||
ವರ್ಗಸ್ಯ ಸಿದ್ಧಸ್ಯ ಚ ಸಾರಿವಾದೇಃ ಪಾತ್ಯಮಮ್ಬುಃ ಶಿಶಿರಂ ತೃಷಾರ್ತೈಃ ।
ಕಶೇರು ಶೃಙ್ಗಾಟಕಪದ್ಮಮೋಚಬಿಸೇಕ್ಷುಸಿದ್ಧಂ ಕ್ಷತಜಾಂ ನಿಹನ್ತಿ ||೨೩||
ಲಾಜೋತ್ಪಲೋಶೀರ ಕುಚನ್ದನಾನಿ ದತ್ವಾಪ್ರವಾತೇನಿಶಿ ವಾಸಯೇತ್ತು ।
ತದುತ್ತಮಂ ತೋಯಮುದಾರಗನ್ಧಿ ಸಿತಾಯುತಂ ಕ್ಷೌದ್ರಯುತಂ ವದನ್ತಿ ||೨೪||
ದ್ರಾಕ್ಷಾಪ್ರಗಾಢಂ ಚ ಹಿತಾಯ ವೈದ್ಯಸ್ತೃಷ್ಣಾರ್ದಿತೇಭ್ಯೋವಿತರೇನ್ನರೇಭ್ಯಃ ||

ಪಕ್ವವಾದ ಅತ್ತಿಯ ಹಣ್ಣಿನ ರಸಕ್ಕಾಗಲೀ ಅದನ್ನು ಕಾಯಿಸಿದ ಕಷಾಯಕ್ಕಾಗಲೀ

ಸಕ್ಕರೆಯನ್ನು ಸೇರಿಸಿಯಾಗಲೀ ಸಾರಿವಾದಿಗಣದ್ರವ್ಯಗಳ ಕಷಾಯವನ್ನಾಗಲೀ ಕುಡಿಸಿದರೆ ನೀರಡಿಕೆಯು ನಿವಾರಣೆಯಾಗುತ್ತದೆ; ಕೊತ್ತಿಗೆಡ್ಡೆ, ಮುಮ್ಮೊಲೆಗೆಡ್ಡೆ, ಬಾಳೆಗಿಡದ ಹೂವೂ, ತಾವರೆಗೆಡ್ಡೆ, ಕಬ್ಬಿನಬೇರು ಇವುಗಳ ಕಷಾಯವನ್ನು ಕುಡಿಸಿದರೆ ಕ್ಷತದಿಂದುಂಟಾದ ಬಾಯಾರಿಕೆಯು ನಿವಾರಣೆಯಾಗುತ್ತದೆ ; ಬತ್ತದ ಅರಳು, ನೈದಿಲೆಗೆಡ್ಡೆ, ಲಾಮಂಚ, (ಮುಡಿವಾಳ) ಪತಂಗದ ಚಕ್ಕೆ, ಇವುಗಳನ್ನು ಜಜ್ಜಿ ನೀರು ಮಿಶ್ರಮಾಡಿ ಗಾಳಿಬೀಸುವ ಸ್ಥಳದಲ್ಲಿ ರಾತ್ರಿ ಕಾಲವೆಲ್ಲಾ ಇಟ್ಟದ್ದು ಬೆಳಗಾದ ಮೇಲೆ ಅದನ್ನು ಶೋಧಿಸಿ ಸಕ್ಕರೆ, ಜೇನುತುಪ್ಪಗಳನ್ನು ಬೆರೆಸಿ ಸುಗಂಧವುಳ್ಳ ಜಾಜಿ ಪಾದರಿ ಮೊದಲಾದ ಹೂವುಗಳನ್ನು ಹಾಕಿ ಸುವಾಸನೆಯುಳ್ಳುದನ್ನಾಗಿಮಾಡಿ ಕುಡಿಸಿದರೆ ಕ್ಷತಜತೃಷ್ಣೆಯು ಪರಿಹಾರವಾಗುತ್ತದೆ ; ಇದನ್ನು ಉತ್ತಮವಾದ ಪಾನೀಯವೆಂದು ಹೇಳುತ್ತಾರೆ ; ಮೇಲೆ ಹೇಳಿದ ಕಶೇರು ಶೃಂಗಾಟಕಾದಿ ಕಷಾಯಕ್ಕೆ ಅರಳು, ಉತ್ಪಲಾದಿ ಚೂರ್ಣವನ್ನೂ ದ್ರಾಕ್ಷಿಯನ್ನು ಅಧಿಕವಾಗಿ ಮಿಶ್ರಮಾಡಿ ರಾತ್ರಿಯೆಲ್ಲಾ ಹೆಚ್ಚಾಗಿ ಗಾಳಿಬೀಸುವ ಸ್ಥಳದಲ್ಲಿಟ್ಟದ್ದು ಬೆಳಗಾದ ಮೇಲೆ ಶೋಧಿಸಿ ಸಕ್ಕರೆ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಿದರೆ ಕ್ಷತದಿಂದುಂಟಾದ ತೃಷ್ಣೆಯು ನಿವಾರಣೆಯಾಗುತ್ತದೆ.

ಸಸಾರಿವಾದೌ ತೃಣಪಞ್ಚಮೂಲೇ ತಥೋತ್ಪಲಾದೌ ಮಧುರೇ (ಪ್ರಥಮೇ) ಗಣೇ ಚ ||೨೫||
ಕುರ್ಯಾತ್ ಕಷಾಯಂ ಚ ಯಥೇರಿತೇನ ಮಧೂಕ ಪುಷ್ಪಾದಿಷು ಚಾಪರೇಷು |
ರಾಜಾದನಕ್ಷೀರಿ ಕಪೀತನೇಷು ಷಟ್ಪಾನಕಾನ್ಯತ್ರ ಹಿತಾನಿ ಚ ಸ್ಯುಃ ||೨೬||
ಸತುಣ್ಡಿಕೇರಾಣ್ಯಥವಾ ಪಿಬೇತ್ತು ಪಿಷ್ಟಾನಿಕಾರ್ಪಾಸ ಸಮುದ್ಭವಾನಿ |
ಕ್ಷತೋದ್ಭವಾಂ ರುಗ್ವಿನಿವಾರಣೇನ ಜಯೇದ್ರಸಾನಾಮಸೃಜಶ್ಚ ಪಾನೈಃ ||೨೭||
ಕ್ಷಯೋತ್ಥಿತಾಂ ಕ್ಷೀರಘೃತಂ ನಿಹನ್ಯಾನ್ಮಾಂಸೋದಕಂ ವಾ ಮಧುಕೋದಕಂ ವಾ |

ಸಾರಿವಾದಿಗಣದ್ರವ್ಯಗಳೊಡನೆ ತೃಣಪಂಚಮೂಲಗಳನ್ನಾಗಲೀ ಉತ್ಪಲಾದಿ ಗಣದ್ರವ್ಯಗಳನ್ನಾಗಲೀ, ಲಘುಪಂಚಮೂಲಗಳನ್ನಾಗಲೀ ಸೇರಿಸಿ ತಯಾರಿಸಿದ ಕಷಾಯಕ್ಕೆ ಅರಳು, ನೈದಿಲೆಗೆಡ್ಡೆ ಮೊದಲಾದುವನ್ನು ಮಿಶ್ರಮಾಡಿ ರಾತ್ರಿಯ ಕಾಲದಲ್ಲಿ ಗಾಳಿಬೀಸುವ ಸ್ಥಳದಲ್ಲಿಟ್ಟದ್ದು ಬೆಳಗಾದ ಮೇಲೆ ಸಕ್ಕರೆ ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು; ಹಿಪ್ಪೆಹೂವು, ದ್ರಾಕ್ಷಿ, ಶಿವನಿಹಣ್ಣು, ಖರ್ಜೂರಗಳೆಂಬ ರಕ್ತಪಿತ್ತಹರಗಳಾದ ೪ ದ್ರವ್ಯಗಳಿಂದೂ ಮತ್ತೆ ಕೆಲವರು ಹಿಪ್ಪೆಹೂವು,ನುಗ್ಗೆಹೂವು, ನೆಲಗುಂಬಳದಹೂವು, ಪ್ರಿಯಂಗು, (ನೆಳಲು) ಹೂವುಗಳೆಂಬ ೪ ದ್ರವ್ಯಗಳಿಂದೂ ಹೇಳುತ್ತಾರೆ; 'ಇವುಗಳ ಸಂಗಡ ರಾಜಾದನ, (ಚಾರಪೊಪ್ಪು), ಕ್ಷೀರಿಕ ಪೀತನ (ಹಶಿಯದಾದ ನುಗ್ಗೆ) ಇವು ಸೇರಿದರೆ ೬ ದ್ರವ್ಯಗಳಾಗುತ್ತವೆ; ಇವುಗಳ ಕಷಾಯಗಳನ್ನೂ ಕುಡಿಸಿದರೆ ಕ್ಷತಜತೃಷ್ಣಾಹರವಾಗುತ್ತದೆ; ಕಾಡು ಹತ್ತಿಯಕಾಯಿ ಮತ್ತು ಸಾಮಾನ್ಯ ಹತ್ತಿಯ ಕಾಯಿಗಳನ್ನು ಕಲ್ಕಮಾಡಿ ನೀರಿನಲ್ಲಿ ಕದರಿ ಕುಡಿಸಲು ಕ್ಷತಜತೃಷ್ಣೆಯು ನಿವಾರಣೆಯಾಗುತ್ತದೆ; ಕ್ಷತಘಾಯದಿಂದುಂಟಾದ

ಬಾಯಾರಿಕೆಯಲ್ಲಿ ನೋವನ್ನು ಪರಿಹಾರಮಾಡಿದ ಮೇಲೆ ಮಾಂಸರಸವನ್ನಾಗಲೀ ಹುಲ್ಲೆ, ಜಿಂಕೆ ಮೊದಲಾದುವುಗಳ ರಕ್ತವನ್ನಾಗಲೀ ಕುಡಿಸಬೇಕು; ಕ್ಷಯದಿಂದುಂಟಾದ ತೃಷ್ಣೆಯಲ್ಲಿ ಹಾಲಿನಿಂದ ತೆಗೆದ ಬೆಣ್ಣೆಯನ್ನು ಕಾಯಿಸಿ ಬಂದ ತುಪ್ಪವನ್ನಾಗಲೀ ಹಾಲಿಗೆ ತುಪ್ಪವನ್ನು ಮಿಶ್ರಮಾಡಿಯಾಗಲೀ ; ಮಾಂಸರಸದ ತಿಳಿಯನ್ನಾಗಲೀ ಅತಿಮಧುರದ ಕಷಾಯವನ್ನಾಗಲೀ ಕುಡಿಸಬೇಕು; ಕೆಲವರು ಉದ್ದಿನ ಕಟ್ಟನ್ನು ಕುಡಿಸಬೇಕು ಎನ್ನುತ್ತಾರೆ.

ಆಮೋದ್ಭವಾಂ ಬಿಲ್ವವಚಾಯುತೈಸ್ತು ಜಯೇತ್ಕಷಾಯೈರಥ ದೀಪನೀಯೈಃ ||೨೮||
ಆಮ್ರಾತಫಲ್ಲಾತಬಲಾಯುತಾನಿ ಪಿಬೇತ್ ಕಷಾಯಾಣ್ಯಥ ದೀಪನಾನಿ |
ಗುರ್ವನ್ನಜಾತಾಂ ವಮನೈರ್ಜಯೇಚ್ಚ ಕ್ಷಯಾದೃತೇ ಸರ್ವಕೃತಾಂ ಚ ತೃಷ್ಣಾಮ್ ||೨೯||
ಆಮೋದ್ಭವಾಂ ಮಾಂಸರಸೋ ನಿಹನ್ತಿ ಗುಡೋದಕಂ ವಾಪ್ಯಥವಾಪಿ ಮನ್ಥಃ |
ಭಕ್ತೇಪರೋಧಾತ್ತೃಷಿತೋ ಯವಾಗೂಮುಷ್ಣಾಂ ಪಿಬೇನ್ಮನ್ಥಮಥೋ ಹಿಮಂ ಚ ||೩೦||
ಯಾ ಸ್ನೇಹಪೀತಸ್ಯ ಭವೇಚ್ಚ ತೃಷ್ಣಾ ತತೋಽಷ್ಣಮಮ್ಬು ಪ್ರಪಿಬೇನ್ಮನುಷ್ಯಃ |
ಮದ್ಯೋದ್ಭವಾಮರ್ಧಜಲಂ ನಿಹನ್ತಿ ಮದ್ಯಂ ತೃಷಾಂ ಯಾಪಿ ಹಿ ಮದ್ಯಪಸ್ಯ ||೩೧||
ಉಷ್ಣೋದ್ಭವಾಂ ಹನ್ತಿ ಜಲಂ ಸುಶೀತಂ ಸಶರ್ಕರಂ ಸೇಕ್ಷುರಸಂ ತಥಾಮ್ಬುಃ |
ಸ್ವೈಃ ಸ್ವೈಃ ಕಷಾಯೈರ್ವಮನಾನಿ ತಾಸಾಂ ತಥಾ ಜ್ವರೋಕ್ತಾನಿ ಚ ಪಾಚನಾನಿ ||೩೨||

ಆಮರಸದಿಂದುಂಟಾದ ಬಾಯಾರಿಕೆಗೆ ಬಿಲ್ವಪತ್ರೆ ಮತ್ತು ಬಜೆ ಇವುಗಳ ಚೂರ್ಣವನ್ನೂ ಮಿಶ್ರಮಾಡಿದ ಪಂಚಕೋಲ ಮೊದಲಾದ ದೀಪನ ಕಷಾಯಗಳನ್ನೂ ಅಮಟೆಕಾಯಿ, ಗೇರುಬೀಜ, ಕಳ್ಳಂಗಡಲೆಬೇರು, ಇವುಗಳ ಕಷಾಯವನ್ನೂ ದೀಪನೀಯಗಳಾದ ಪಂಚಕೋಲ ಕಷಾಯವನ್ನೂ ಕುಡಿಸಬೇಕು ; ಗುರುವಾದ ಅನ್ನಭೋಜನದಿಂದುಂಟಾದ ತೃಷ್ಣೆಯಲ್ಲೂ ಕ್ಷಯದಿಂದುಂಟಾದದ್ದು ವಿನಃ ಉಳಿದ ಎಲ್ಲಾ ವಿಧದ ತೃಷ್ಣೆಯಲ್ಲೂ ವಮನ ಮಾಡಿಸಬೇಕು ; ಆಮದಿಂದುಂಟಾದ ತೃಷ್ಣೆಯನ್ನು ಮಾಂಸರಸ, ಬೆಲ್ಲದನೀರು ಅಥವಾ ಲಾಜಮಂಥಗಳನ್ನು ಪಾನಮಾಡಿಸಿ ನಿವಾರಣೆಮಾಡಬೇಕು ; ಆಹಾರವು ತಡೆದು ತೃಷ್ಣೆಯುಂಟಾದರೆ ಬಿಸಿಯಾಗಿರುವ ಯವಾಗೂವನ್ನು ಪಾನಮಾಡಿಸಿ ತಣ್ಣಗಿರುವ ಮಂಥವನ್ನು ಕುಡಿಸಬೇಕು ; ಸ್ನೇಹ ಪಾನಮಾಡಿದವರಿಗೆ ತೃಷ್ಣೆಯುಂಟಾದರೆ ಬಿಸಿನೀರನ್ನು ಕುಡಿಸಬೇಕು ; ಮದ್ಯಪಾನ ಮಾಡುವವನಿಗೆ ಮದ್ಯಪಾನದಿಂದ ತೃಷ್ಣೆಯುಂಟಾದರೆ ಅರ್ಧನೀರು ಮಿಶ್ರಮಾಡಿದ ಮದ್ಯವನ್ನು ಪಾನಮಾಡಿಸಬೇಕು ; ಬಿಸಿಲು ಬೆಂಕಿ ಮೊದಲಾದುವನ್ನು ಕಾಯುವುದರಿಂದ ಬಾಯಾರಿಕೆಯುಂಟಾದರೆ ತಣ್ಣೀರಿಗೆ ಸಕ್ಕರೆ ಬೆರೆಸಿಯಾಗಲೀ ಕಬ್ಬಿನರಸವನ್ನಾಗಲೀ, ಬರಿಯ ತಣ್ಣೀರನ್ನಾಗಲೀ ಕುಡಿಸಬೇಕು ; ವಮನರೋಗದಲ್ಲಿ ಯಾವ ಯಾವ ಕಷಾಯಗಳು ಹೇಳಿವೆಯೋ ಅವುಗಳೊಡನೆ ವಮನ

ದ್ರವ್ಯಗಳನ್ನು ಮಿಶ್ರಮಾಡಿ ಕುಡಿಸಿದರೆ ಆಯಾಯ ವಿಧದ ತೃಷ್ಣೆಯು ನಿವಾರಣೆಯಾಗುತ್ತದೆ ; ಅವುಗಳಿಗೆ ಜ್ವರರೋಗದಲ್ಲಿ ಹೇಳಿದ ಪಾಚನೌಷಧಗಳನ್ನೂ ಕುಡಿಸಬೇಕು.

ಲೇಪಾವಗಾಹೌ ಪರಿಷೇಚನಾನಿ ಕುರ್ಯಾತ್ತಥಾ ಶೀತಗೃಹಾಣಿ ಚಾಪಿ ।
ಸಂಶೋಧನಂ ಕ್ಷೀರರಸೌ ಘೃತಾನಿ ಸರ್ವಾಸು ಲೇಹಾಂ ಮಧುರಾಂಹಿಮಾಂಶ್ಚ ॥೩೩॥

ಎಲ್ಲಾ ವಿಧದ ತೃಷ್ಣಾರೋಗಗಳಲ್ಲೂ ಪಿತ್ತಹರಣಮಾಡತಕ್ಕ ಲೇಪಗಳು ಅವಗಾಹನ (ನೀರಿನಲ್ಲಿ ಮುಳುಗಿರುವುದು). ಕಷಾಯವನ್ನು ಸುರಿಯುವುದು ಶೀತಲವಾದ ಧಾರಾಗೃಹಗಳಲ್ಲಿ ವಾಸಮಾಡುವುದು, ವಿರೇಚನೌಷಧವನ್ನು ಪ್ರಯೋಗಿಸುವುದು, ಹಾಲು ಮತ್ತು ಮಾಂಸರಸಗಳನ್ನು ಕುಡಿಸುವುದು, ಮಧುರವಾಗಿಯೂ ತಣ್ಣಗೂ ಇರುವ ಲೇಹಗಳನ್ನು ನೆಕ್ಕಿಸುವುದು, ಇವುಗಳಿಂದ ಸುಖವುಂಟಾಗುತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ ತೃಷ್ಣಾಪ್ರತಿಷೇಧನಾಮಕಾಷ್ಟಚತ್ವಾರಿಂಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾ ವಿವೃತಿಃ

ಏಕೋನಪಞ್ಚಾಶತ್ತಮೋऽಧ್ಯಾಯಃ

ಅಥಾತಶ್ಛರ್ದಿಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ತೃಷ್ಣಾರೋಗ ಚಿಕಿತ್ಸೆಯಿಂದ ವಮನವಾಗುವ ಸಂಭವವಿರುವುದರಿಂದ ತೃಷ್ಣಾ ಚಿಕಿತ್ಸೆಯಾದ ಮೇಲೆ ಛರ್ದಿ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಅತಿದ್ರವೈರತಿಸ್ನಿಗ್ಧೈರಹೃದ್ಯೈರ್ಲವಣೈರತಿ ।
ಅಕಾಲೇ ಚಾತಿಮಾತ್ರೈಶ್ಚ ತಥಾಸಾತ್ಮ್ಯೈಶ್ಚ ಭೋಜನೈಃ ॥೩॥
ಶ್ರಮಾತ್ ಕ್ಷಯಾತ್ತಥೋದ್ವೇಗಾದಜೀರ್ಣಾತ್ ಕ್ರಿಮಿದೋಷತಃ ॥
ನಾರ್ಯಾಶ್ಚಾಪನ್ನಸತ್ವಾಯಾಸ್ತಥಾತಿದ್ರುತಮಶ್ನತಃ ॥೪॥
ಅತ್ಯನ್ನಾಮಪರೀತಸ್ಯ ಛರ್ದೇರ್ವೈಸಂಭವೋ ಧ್ರುವಮ್ ।
(ಬೀಭತ್ಸೈರ್ಹೇತುಭಿಶ್ಚಾನ್ಯೈರ್ದ್ರುತಮುತ್ಕ್ಲೇಶಿತೋ ಬಲಾತ್) ॥೫॥

ವಮನನಿದಾನವು:—ಅತಿನೀರಾಗಿ, ಅತಿಜಿಡ್ಡಾಗಿ, ಹೃದಯಕ್ಕೆ ಹಿತವಲ್ಲದ, ಅತಿ ಉಪ್ಪು ಮಿಶ್ರವಾದ, ಅಕಾಲದಲ್ಲಿ, ಅತಿಯಾಗಿ, ದೇಹಕ್ಕೆ ಒಗ್ಗದಿರುವ ಆಹಾರವನ್ನು ಸೇವಿಸುವುದರಿಂದಲೂ, ಶ್ರಮ, ಕ್ಷಯ, ಉದ್ವೇಗ, ದಿಗಿಲು, (ಗಾಭರಿ,) ಅಜೀರ್ಣ, ಕ್ರಿಮಿ ಇವುಗಳಿಂದಲೂ ಗರ್ಭಿಣಿಗೂ, ಅತಿಬೇಗ ಭೋಜನಮಾಡುವವರಿಗೂ, ಅತಿಯಾಗಿ ಆಮದೋಷ ಪೀಡಿತರಿಗೂ ವಮನವುಂಟಾಗುತ್ತದೆ; ಉದ್ವೇಗವೆಂದರೆ ಚಂಚಲ ಮನಸ್ಸಿನಿಂದ ನಡುಗುವುದು, ಬೀಭತ್ಸವೆಂದರೆ ಕೀವು, ಅಮೇಧ್ಯಗಳನ್ನು ನೋಡಿಯೂ, ಕೊಳೆತ ಹೆಣ ಮುಂತಾದುವುಗಳ ಕೆಟ್ಟ ವಾಸನೆಯಿಂದಲೂ ಮನಸ್ಸಿಗೆ ಜುಗುಪ್ಸೆಯುಂಟಾಗಿ ಇದ್ದಕ್ಕಿದ್ದಂತೆಯೇ ಬಾಯಿ ನೀರುಸೋರಿ ವಮನವಾಗುತ್ತದೆ.

ಛಾದಯನ್ನಾನನಂ ವೇಗೈರರ್ದಯೇನಙ್ಗಭಞ್ಜನೈಃ ।
ನಿರುಚ್ಯತೇ ಛರ್ದಿರಿತಿ ದೋಷೋ ವಕ್ತ್ರಾದ್ವಿನಿಶ್ಚರನ್ ॥೬॥
ದೋಷಾನುದೀರಯನ್ ವೃದ್ಧಾನುದಾನೋ ವ್ಯಾನ ಸಂಗತಃ ।
ಊರ್ಧ್ವಮಾಗಚ್ಛತಿ ಭೃಶಂ ವಿರುದ್ಧಾಹಾರಸೇವನಾತ್ ॥೭॥
ಪ್ರಸೇಕೋ ಹೃದಯೋತ್ಕ್ಲೇಶೋ ಭಕ್ತಸ್ಯಾನಭಿನಂದನಮ್ ।
ಪೂರ್ವರೂಪಂ ಮತಂ ಛರ್ದ್ಯಾಯಥಾಸ್ವಂ ಚ ವಿಭಾವಯೇತ್ ॥೮॥

ಛರ್ದಿಯನಿರುಕ್ತಿಯು :—ಪ್ರಕುಪಿತ ದೋಷಗಳು ವೇಗದಿಂದ ಬಾಯಿಗೆ ತುಂಬಿಕೊಂಡು, ಮೈ ಕೈ ನೋವನ್ನುಂಟುಮಾಡಿ ಹೊರಕ್ಕೆ ಸುರಿದರೆ "ಛರ್ದಿ" ಎಂದು

ವ್ಯವಹಾರವುಂಟಾಗುತ್ತದೆ. ಸಂಪ್ರಾಪ್ತಿಯು ವಿರುದ್ಧಾಹಾರಸೇವನೆಯಿಂದ ಉದಾನ ವಾಯುವು ವ್ಯಾನವಾಯುವಿನೊಡನೆ ಸೇರಿ ಅಧಿಕವಾಗಿ ದೋಷಗಳನ್ನು ಕೆರಳಿಸಿ ಮೇಲ್ಮುಖವಾಗಿ ಬರುತ್ತದೆ. ಬಾಯಿನಿಂದ ನೀರು ಸುರಿಯುವುದು, ಎದೆಯೊತ್ತಿ ಜೊಲ್ಲು ಬರುವುದು ಅನ್ನದಲ್ಲಿ ಇಚ್ಛೆಯಾಗದಿರುವುದು ಇವನ್ನು ವಮನದ ಪೂರ್ವರೂಪಗಳೆಂದು ತಿಳಿಯಬೇಕು. ಈ ಪೂರ್ವರೂಪ ಲಕ್ಷಣಗಳೇ ಸ್ಪಷ್ಟವಾಗಿ ಕಂಡುಬಂದರೆ ರೂಪವೆಂದು ತಿಳಿಯಬೇಕು. ಬಾಯಿನಿಂದ ಸುರಿಯುವ ದ್ರವವು ಕಷಾಯ, ಅಮ್ಲ, ಮಧುರರಸವುಳ್ಳದಾಗಿದ್ದರೆ ಕ್ರಮವಾಗಿ ವಾತ, ಪಿತ್ತ, ಕಫಗಳು ಉಲ್ಬಣವಾಗಿವೆಯೆಂದು ತಿಳಿಯಬೇಕು.

ಪ್ರಚ್ಛರ್ದಯೇತ್ ಫೇನಿಲಮಲ್ಪಮಲ್ಪಂ ಶೂಲಾರ್ದಿತೋಽಭ್ಯರ್ದಿತಪಾರ್ಶ್ವಪೃಷ್ಠಃ ।
ಶ್ರಾನ್ತಃ ಸಘೋಷಂ ಬಹುಶಃ ಕಷಾಯಂ ಜೀರ್ಣೇಽಧಿಕಂ ಸಾನಿಲಜಾ ವಮಿಸ್ತು ॥೯॥
ಯೋಽಮ್ಲಂ ಭೃಶಂ ವಾ ಕಟುತಿಕ್ತವಕ್ತ್ರಃ ಪೀತಂ ಸರಕ್ತಂ ಹರಿತಂ ವಮೇದ್ವಾ ।
ಸದಾಹಚೋಷಜ್ವರವಕ್ತ್ರಶೋಷ ಮೂರ್ಛಾನ್ವಿತಃ ಪಿತ್ತನಿಮಿತ್ತಜಾ ಸಾ ॥೧೦॥
ಯೋಹೃಷ್ಟರೋಮಾ ಮಧುರಂ ಪ್ರಭೂತಂ ಶುಕ್ಲಂ ಹಿಮಂ ಸಾನ್ದ್ರಕಫಾನುವಿದ್ಧಮ್ ।
ಅಭಕ್ತರುಗ್ಗೌರವಸಾದಯುಕ್ತೋ ವಮೇದ್ವಮಿಃ ಸಾ ಕಫಕೋಪಜಾಸ್ಯಾತ್ ॥೧೧॥
ಸರ್ವಾಣಿ ರೂಪಾಣಿ ಭವನ್ತಿ ಯಸ್ಯಾಂ ಸಾ ಸರ್ವದೋಷಪ್ರಭವಾ ಮತಾ ತು ।

ಹೊಟ್ಟೆಯಲ್ಲೂ ಪಕ್ಕೆಗಳಲ್ಲೂ ಬೆನ್ನಿನಲ್ಲೂ ನೋವು, ನೊರೆನೊರೆಯಾಗಿ ಸ್ವಲ್ಪ ಸ್ವಲ್ಪವಾಗಿ ಶಬ್ದಮಾಡಿಕೊಂಡು ಒಗರುರಸದ ವಾಂತಿಯಾದರೆ ಮತ್ತು ಆಹಾರವು ಜೀರ್ಣವಾಗಿ ಹೆಚ್ಚಾಗಿ ವಾಂತಿಯಾದರೆ ವಾತಿಕಛರ್ದಿಯೆಂದೂ ಹುಳಿಹುಳಿಯಾಗಿ ಅಧಿಕ ಪ್ರಮಾಣದಿಂದ ಕಹಿ, ಖಾರವಾಗಿ ಬಾಯಿ ರುಚಿಯುಂಟಾಗಿ ಅರಿಶಿನ ಬಣ್ಣ, ರಕ್ತಬಣ್ಣ ಮಿಶ್ರವಾಗಿ, ಹಸುರಾಗಿ ವಾಂತಿ ಮಾಡುತ್ತಾ ಮೈ ಉರಿತ, ಮೈಬಿಸಿ, ಜ್ವರ, ಮುಖಬಾಡುವುದು, ಜ್ಞಾನತಪ್ಪುವುದು ಈ ಲಕ್ಷಣಗಳಿದ್ದರೆ ಪಿತ್ತಜಛರ್ದಿಯೆಂದೂ ಮೈರೋಮಗಳೆದ್ದು, ಸಿಹಿಯಾಗಿ, ಅತಿಬಿಳುಪಾಗಿ, ತಣ್ಣಗೆ, ದಪ್ಪವಾಗಿ ಕಫಮಿಶ್ರವಾಗಿ ವಮನ ಮಾಡುವುದೂ, ಅನ್ನಾರುಚಿ, ಮೈಭಾರ, ದೇಹಕಾರ್ಶ್ಯಗಳಿದ್ದರೆ ಕಫಛರ್ದಿಯೆಂದೂ, ಮೇಲಿನ ಎಲ್ಲಾ ಲಕ್ಷಣಗಳೂ ಕಂಡುಬಂದರೆ ತ್ರಿದೋಷಜ ಛರ್ದಿಯೆಂದೂ ತಿಳಿಯಬೇಕು

ಬೀಭತ್ಸಜಾ ದೌಹೃದಜಾಮಜಾ ಚ ಸಾತ್ಮ್ಯಪ್ರಕೋಪಾತ್ ಕ್ರಿಮಿಜಾ ಚ ಯಾ ಹಿ ।
ಸಾ ಪಞ್ಚಮೀ ತಾಂ ಚ ವಿಭಾವಯೇತ್ತು ದೋಷೋಚ್ಛ್ರಯೇಣೈವ ಯಥೋಕ್ತಮಾದೌ ॥೧೨॥
ಶೂಲಹೃಲ್ಲಾಸ ಬಹುಲಾ ಕ್ರಿಮಿಜಾ ಚ ವಿಶೇಷತಃ ।
ಕ್ರಿಮಿಹೃದ್ರೋಗತುಲ್ಯೇನ ಲಕ್ಷಣೇನ ಚ ಲಕ್ಷಿತಾ ॥೧೩॥

ವಿಷ, ಅಶುಚಿ, ಕೊಳೆಪದಾರ್ಥ, ಅಮೇಧ್ಯ ಮೊದಲಾದ ಮನಸ್ಸಿಗೆ ಅಸಹ್ಯವನ್ನುಂಟುಮಾಡುವ ವಸ್ತುಗಳನ್ನು ನೋಡುವುದು, ಗರ್ಭಿಣಿಗೆ ಬಯಕೆಯನ್ನು ಪೂರ್ತಿ ಮಾಡದಿರುವುದು, ವಿಷೂಚೀ ಮೊದಲಾದ ಆಮದೋಷಗಳು ಇದ್ದಕಿದ್ದಹಾಗೆ ಒಗ್ಗಿದ

ಆಹಾರಾದಿಗಳನ್ನು ತ್ಯಜಿಸುವುದು, ಕ್ರಿಮಿಗಳುವೃದ್ಧಿಯಾಗಿರುವುದು ಇವುಗಳಿಂದುಂಟಾಗುವ ವಮನಗಳನ್ನು ಹಿಂದೆಹೇಳಿದಂತೆ ದೋಷೋಲ್ಬಣ ಲಕ್ಷಣಗಳಿಂದಲೇ ನಿರ್ಧರಿಸಬೇಕು; ಹೊಟ್ಟೆಶೂಲೆ, ಹೃಲ್ಲಾಸ (ಕ್ಯಾಕರಿಸಿ ಕಫವನ್ನು ಉಗುಳುವುದು, ಥೂಕರಿಸುವುದು) ಇವು ಅಧಿಕವಾಗಿದ್ದು ಕ್ರಿಮಿಹೃದ್ರೋಗದ ಲಕ್ಷಣಗಳಿದ್ದರೆ ಕ್ರಿಮಿಜಚ್ಛರ್ದಿಯೆಂದು ತಿಳಿಯ ಬೇಕು.

ಕ್ಷೀಣಸ್ಯೋಪದ್ರವೈರ್ಯುಕ್ತಾಂ ಸಾಸ್ರಪೂಯಾಂ ಸಚನ್ದ್ರಿಕಾಮ್ ।
ಛರ್ದಿಂ ಪ್ರಸಕ್ತಾಂ ಕುಶಲೋ ನಾರಭೇತ ಚಿಕಿತ್ಸಿತುಮ್ ॥೧೪॥

ಕ್ಷೀಣದೇಹವುಳ್ಳ ಉಪದ್ರವಗಳಿಂದ ಕೂಡಿದ ರಕ್ತ ಕೀವು ಮಿಶ್ರವಾಗಿ ಚುಕ್ಕೆ ಚುಕ್ಕೆಗಳಿಂದ ಕೂಡಿ ಸದಾ ವಮನಮಾಡುವ ರೋಗಿಗೆ ಚಿಕಿತ್ಸೆಮಾಡಬಾರದು.

ಆಮಾಶಯೋತ್ಕ್ಲೇಶ ಭವಾ ಹಿ ಸರ್ವಾಸ್ಛರ್ದ್ಯೋ ಮತಾಲಙ್ಘನಮೇವತಾಸು ॥೧೫॥
ವಮಿಷು ಬಹುದೋಷಾಸು ಛರ್ದನಂ ಹಿತಮುಚ್ಯತೇ ।
ವಿರೇಚನಂ ವಾ ಕುರ್ವೀತ ಯಥಾದೋಷೋಚ್ಛ್ರಯಂ ಭಿಷಕ್ ॥೧೬॥
ಸಂಸರ್ಗಾಶ್ಚಾನುಪೂರ್ವೇಣ ಯಥಾಸ್ವ ಭೇಷಜಾಯುತಾ೯ ।
ಲಘೂನಿ ಪರಿಶುಷ್ಕಾಣಿ ಸಾತ್ಮ್ಯಾನ್ಯನ್ನಾನಿ ಚಾಚರೇತ್ ॥೧೭॥
ಯಥಾಸ್ವಂ ಚ ಕಷಾಯಾಣಿ ಜ್ವರಘ್ನಾನಿ ಪ್ರಯೋಜಯೇತ್ ॥

ಆಮಾಶಯದಲ್ಲಿ ದೋಷಗಳು ಕೆರಳುವುದರಿಂದ ಎಲ್ಲಾ ವಿಧಗಳಾದ ಛರ್ದಿಗಳೂ ಉಂಟಾಗುತ್ತವೆಯಾಗಿಅವುಗಳಿಂದ ಪೀಡಿತನಾದ ರೋಗಿಗೆ ಲಂಘನವೆ ಹಿತಕರವಾದದ್ದೆಂದು ತಿಳಿಯಬೇಕು; ಕಫವೇ ಹೆಚ್ಚಾಗಿದ್ದು ವಮನವಾಗುತ್ತಿದ್ದರೆ ಮತ್ತಷ್ಟು ವಮನವಾಗು ವಂತೆ ಮಾಡುವುದು ಒಳ್ಳೆಯದು; ಅಥವಾ ಉಲ್ಬಣದೋಷಕ್ಕೆ ತಕ್ಕಂತೆ ವಿರೇಚನೌಷಧ ವನ್ನಾದರೂ ಪ್ರಯೋಗಿಸಬೇಕು; ಪೇಯಾ ವಿಲೇಪೀ ಮೊದಲಾದುವುಗಳೊಡನೆ ವಾತಾದಿದೋಷಗಳಿಗೆ ಅನುಗುಣವಾಗಿರುವ ಔಷಧಗಳನ್ನು ಮಿಶ್ರಮಾಡಿ ಪಥ್ಯಕ್ರಮ ವನ್ನು ಆಚರಿಸಬೇಕು; ಲಘುವಾಗಿ ಶುಷ್ಕಗಳಾದ ಚಕ್ಕುಲಿ ಮೊದಲಾದುವನ್ನೂ ಅಭ್ಯಾಸವಾಗಿ ಒಗ್ಗಿರುವ ವ್ಯಾಧಿಹರಗಳಾದ ಅನ್ನಪಾನಗಳನ್ನೂ ಭೋಜನ ಮಾಡಿಸ ಬೇಕು. ವಾತಾದಿಜ್ವರಹರಕಷಾಯಗಳನ್ನು ದೋಷಗಳಿಗೆ ತಕ್ಕಂತೆ ಆಯಾಯವಿಧದ ಛರ್ದಿಗಳಲ್ಲಿ ಉಪಯೋಗಿಸಬೇಕು.

ಹನ್ಯಾತ್ ಕ್ಷೀರಘೃತಂ ಪೀತಂ ಛರ್ದಿಂ ಪವನ ಸಂಭವಾಮ್ ॥೧೮॥
ಮುದ್ಗಾಮಲಕಯೂಷೋ ವಾ ಸಸರ್ಪಿಷ್ಕಃ ಸಸೈನ್ಧವಃ ।
ಯವಾಗೂಂ ಮಧುಮಿಶ್ರಾಂ ವಾ ಪಞ್ಚಮೂಲೀಕೃತಾಂ ಪಿಬೇತ್ ॥೧೯॥
ಪಿಬೇದ್ವಾ ವ್ಯಕ್ತಸಿನ್ಧೂತ್ಥ ಫಲಾಮ್ಲಂ ವೈಷ್ಕಿರಂ ರಸಮ್ ।
ಸುಖೋಷ್ಣ ಲವಣಂ ಚಾತ್ರ ಹಿತಂ ಸ್ನೇಹವಿರೇಚನಮ್ ॥೨೦॥

ಹಾಲನ್ನು ಕಡೆದು ತೆಗೆದ ಬೆಣ್ಣೆಯಿಂದ ತಯಾರಿಸಿದ ತುಪ್ಪವನ್ನಾಗಲೀ ಹಾಲು

ತುಪ್ಪಗಳನ್ನು ಮಿಶ್ರಮಾಡಿಯಾಗಲೀ ಕುಡಿಸಿದರೆ ವಾತದಿಂದುಂಟಾದ ವಮನವು ನಾಶವಾಗುತ್ತದೆ ; ಹೆಸರು ನೆಲ್ಲಿಕಾಯಿಗಳ ಕಟ್ಟು, ಸೈಂಧವ, ತುಪ್ಪಗಳನ್ನು ಮಿಶ್ರಮಾಡಿಯಾಗಲೀ ಲಘುಪಂಚಮೂಲದ ಅಥವಾ ಬೃಹತ್‌ಪಂಚಮೂಲದ ಕಷಾಯದಿಂದ ತಯಾರಿಸಿದ ಯವಾಗೂವಿಗೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು. ಲಾವನ ಹಕ್ಕಿ ಮೊದಲಾದ ವಿಷ್ಕಿರಪ್ರಾಣಿಗಳ ಮಾಂಸರಸಕ್ಕೆ ದಾಳಿಂಬೆ, ಮಾದಳ ಮೊದಲಾದ ಹಣ್ಣುಗಳ ರಸವನ್ನೂ, ಸ್ವಲ್ಪ ಸೈಂಧವವನ್ನೂ ಮಿಶ್ರಮಾಡಿ ಕುಡಿಸಬೇಕು. ಲವಣ ಮಿಶ್ರಮಾಡಿ ಸುಖೋಷ್ಣವಾಗಿರುವ ಸ್ನೇಹ ವಿರೇಚನವನ್ನು ಪ್ರಯೋಗಿಸಿದರೆ ಹಿತಕರವು.

ಪಿತ್ತೋಪಶಮನೀಯಾನಿ ಪಾಕ್ಯಾನಿ ಶಿಶಿರಾಣಿ ಚ ।
ಕಷಾಯಾಣ್ಯುಪಯುಕ್ತಾನಿ ಘ್ನನ್ತಿ ಪಿತ್ತಕೃತಾಂ ವಮಿಮ್ ॥೨೧॥
ಶೋಧನಂ ಮಧುರೈಶ್ಚಾತ್ರ ದ್ರಾಕ್ಷಾರಸಸಮಾಯುತೈಃ ।
ಬಲವತ್ಯಾಂ ಪ್ರಶಂಸನ್ತಿ ಸರ್ಪಿಸ್ತೈಲ್ವಕಮೇವ ಚ ॥೨೨॥
ಆರಗ್ವಧಾದಿಭಿರ್ಯೂಷಂ ದಶಾಙ್ಗ ಯೋಗಮೇವ ಚ ।
ಪಾಯಯೇತಾಥ ಸಕ್ಷೌದ್ರಂ ಕಫಜಾಯಾಂ ಚಿಕಿತ್ಸಕಃ ॥೨೩॥
ಕೃತಂ ಗುಡೂಚ್ಯಾ ವಿಧಿವತ್ಕಷಾಯಂ ಹಿಮಸಂಜ್ಞಕಮ್।
ತಿಸೃಷ್ವಪಿ ಭವೇತ್ಪಥ್ಯಂ ಮಾಕ್ಷಿಕೇಣ ಸಮನ್ವಿತಮ್ ॥೨೪॥

ಪಿತ್ತಛರ್ದಿಯಲ್ಲಿ ಪಿತ್ತಜ್ವರಹರಗಳಾದ ಕಷಾಯಗಳನ್ನು ತಣ್ಣಗೆ ಆರಿಸಿಯೂ, ಮಧುರಗಣದ್ರವ್ಯಗಳಿಂದ ತಯಾರಿಸಿದ ವಮನವಿರೇಚನೌಷಧಗಳಿಗೆ ದ್ರಾಕ್ಷಿಯರಸವನ್ನು ಸೇರಿಸಿಯೂ ಪ್ರಯೋಗಿಸಬೇಕು. ದೋಷೋಲ್ಬಣವಾಗಿದ್ದರೆ ತಿಲ್ವಕ್ಕ ಘೃತದಿಂದ ವಿರೇಚನ ಮಾಡಿಸುವುದು ಹಿತಕರವೆಂದು ಹೊಗಳುತ್ತಾರೆ. ಆರಗ್ವಧಾದಿ ಗಣದ್ರವ್ಯಗಳ ಕಟ್ಟಿಗೆ ಜೇನುತುಪ್ಪ ಮಿಶ್ರಮಾಡಿಯೂ, ದಶಾಂಗ ಯೋಗವನ್ನಾಗಲೀ (ಶುಂಠಿ, ಕೊತ್ತುಂಬರಿ, ಗಂಟುಪರಂಗಿ, ಅಣಿಲೆಕಾಯಿ, ದೇವದಾರು, ಬಜೆ, ಪರ್ಪಾಟಕ ಕೊನ್ನಾರಿಗೆಡ್ಡೆ, ಗಂಜಣಿಯಹುಲ್ಲು, ಕಿರಿಶಿವನಿ (ಕಾಯಫಲ) ಇವುಗಳ ಕಷಾಯಕ್ಕೆ ದಶಾಂಗಯೋಗವೆಂದು ಹೆಸರು.) ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಕಫದಿಂದುಂಟಾದ ವಮನಹರವಾಗುತ್ತದೆ. ಕ್ರಮವಾಗಿ ತಯಾರಿಸಿದ ಅಮೃತವಳ್ಳಿಯ ಶೀತಕಷಾಯಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಿದರೆ ತ್ರಿದೋಷದಿಂದುಂಟಾದ ವಮನವು ನಿವಾರಣೆಯಾಗುತ್ತದೆ (ಹಿತಕರವಾದದ್ದು).

ಟಿಪ್ಪಣಿ : ಹಸಿಯದ್ರವ್ಯವನ್ನು ಜಜ್ಜಿ ನಾಲ್ಕರಷ್ಟು ನೀರನ್ನು ಸೇರಿಸಿ ಕುದಿಸಿ $\frac{1}{4}$ ಭಾಗಕ್ಕೆ ನಿಲ್ಲಿಸಿ ತಣ್ಣಗಾದ ಕಷಾಯವನ್ನು ಪ್ರಾತಃಕಾಲ ಪ್ರಯೋಗಿಸಿದರೆ ಶೀತಕಷಾಯದ ಪ್ರಯೋಗವೆನಿಸುತ್ತದೆ; ಅಮೃತವಳ್ಳಿಯು ಪಿತ್ತಕಫಹರವಾದರೂ ಜೇನುತುಪ್ಪವನ್ನು ಮಿಶ್ರಮಾಡಿದರೆ ತ್ರಿದೋಷಹರವಾಗುತ್ತದೆ. ಚರಕಸಂಹಿತೆಯಲ್ಲಿ ಅಮೃತಬಳ್ಳಿಯು ವಾತಹರವೆಂದು ಹೇಳಿರುತ್ತದೆ.

ಬೀಭತ್ಸಜಾ ಹೃದ್ಯತಮೈರ್ದೌರ್ಹೃದೀಂ ಕಾಂಕ್ಷಿತೈಃ ಫಲೈಃ ।
ಲಜ್ಘನೈರ್ವಮನೈಶ್ಚಾಮಾಂ ಸಾತ್ಮ್ಯೈಶ್ಚಾಸಾತ್ಮ್ಯಕೋಪಜಾಮ್ ||೨೫||
ಕ್ರಿಮಿಹೃದ್ರೋಗವಚ್ಚಾಪಿ ಕ್ರಿಮಿಜಾಂ ಸಾಧಯೇದ್ವಮೀಮ್ ।
ವಿತರೇಚ್ಚ ಯಥಾದೋಷಂ ಶಸ್ತಂ ವಿಧಿಮನನ್ತರಮ್ ||೨೬||

ಮನಸ್ಸಿಗೆ ಅಸಹ್ಯವಾದ ದ್ರವ್ಯಗಳನ್ನು ನೋಡುವುದರಿಂದಲೂ, ಅಮೇಧ್ಯಾದಿಗಳ ವಾಸನೆಯಿಂದಲೂ ಉಂಟಾದ ವಮನದಲ್ಲಿ ಮನಸ್ಸಿಗೆ ಹಿತವಾಗುವಂತಹ ದ್ರವ್ಯಗಳನ್ನು ಸೇವಿಸಬೇಕು. ಗರ್ಭಿಣಿಯರ ಬಯಕೆಯನ್ನು ಸಲ್ಲಿಸದೆ ವಮನವಾದರೆ ಅವರು ಅಪೇಕ್ಷಿಸುವ ಹಣ್ಣುಗಳನ್ನು ಕೊಡಬೇಕು. ಆಮದೋಷದಿಂದುಂಟಾದ ವಮನಕ್ಕೆ ಉಪವಾಸ, ವಮನಗಳನ್ನು ಮಾಡಿಸಬೇಕು. ಅಭ್ಯಾಸವಿಲ್ಲದ ವಸ್ತುಗಳನ್ನು ಸೇವಿಸುವುದರಿಂದುಂಟಾದ ವಮನದಲ್ಲಿ ಹಿತಕರಗಳಾದ ಪದಾರ್ಥಗಳನ್ನು ಕೊಡಬೇಕು. ಕ್ರಿಮಿಯಿಂದುಂಟಾದ ವಮನದಲ್ಲಿ ಕ್ರಿಮಿಹೃದ್ರೋಗಚಿಕಿತ್ಸೆಯನ್ನು ಮಾಡಿಸಬೇಕು. ವಮನಹರೌಷಧಗಳನ್ನು ಪ್ರಯೋಗಿಸಿ ವಮನ ನಿಂತಮೇಲೆ ದೋಷಕೋಪಕ್ಕೆ ತಕ್ಕಂತೆ ಸರಿಯಾದ ಔಷಧಗಳನ್ನು ಪ್ರಯೋಗಿಸಬೇಕು.

ದಧಿತ್ಥರಸಸಂಸಕ್ತಾಂ ಪಿಪ್ಪಲೀಂ ಮಾಕ್ಷಿಕಾನ್ವಿತಾಮ್ ।
ಮುಹುರ್ಮುಹುರ್ನರೋ ಲೀಢ್ವಾ ಛರ್ದಿಭ್ಯಃ ಪ್ರವಿಮುಚ್ಯತೇ ||೨೭||
ಸಮಾಕ್ಷಿಕಾ ಮಧುರಸಾ ಪೀತಾ ವಾ ತಣ್ಡುಲಾಮ್ಬುನಾ ।
ತರ್ಪಣಂ ವಾ ಮಧುಯುತಂ ತಿಸೃಣಾಮಪಿ ಭೇಷಜಮ್ ||೨೮||
ಸ್ವಯಂಗುಪ್ತಾಂ ಸಯಷ್ಟ್ಯಾಹ್ವಾಂ ತಣ್ಡುಲಾಮ್ಬು ಮಧುದ್ರವಾಮ್ ।
ಪಿಬೇದ್ಯವಾಗೂಮಥವಾ ಸಿದ್ಧಾಂ ಪತ್ರೈಃ ಕರಞ್ಜಜೈಃ ||೨೯||
ಯುಕ್ತಾಮ್ಲಲವಣಾಃ ಪಿಷ್ಟಾಃ ಕುಸ್ತುಮ್ಬುರ್ಯೋಽಥವಾ ಹಿತಾಃ ।
ತಣ್ಡುಲಾಮ್ಬುಯುತಂ ಖಾದೇತ್ಕಪಿತ್ಥಂ ತ್ರ್ಯೂಷಣೇನ ವಾ ||೩೦||
ಸಿತಾಚನ್ದನಮಧ್ವಾಕ್ತಂ ಲಿಹ್ಯಾದ್ವಾ ಮಕ್ಷಿಕಾಶಕೃತ್ ।
ಪಿಬೇತ್ಪಯೋಽಗ್ನಿತಪ್ತಂ ಚ ನಿರ್ವಾಪ್ಯ ಗೃಹಗೋಧಿಕಾಮ್ ||೩೧||
ಸರ್ಪಿಃ ಕ್ಷೌದ್ರಯುತಂ ವಾಪಿ ಲಾಜಶಕ್ತೂನ್ ಪಿಬೇತ್ತಥಾ ।
ಸರ್ಪಿಃ ಕ್ಷೌದ್ರಸಿತೋಪೇತಾಂ ಮಾಗಧೀಂ ವಾ ಲಿಹೇತ್ತಥಾ ||೩೨||
ಧಾತ್ರೀರಸೇ ಚನ್ದನಂ ವಾ ಶೃತಂ ಮುದ್ಗದಳಾಮ್ಬು ವಾ ।
ಕೋಲಾಮಲಕಮಜ್ಜಾನಂ ಲಿಹ್ಯಾದ್ವಾ ತ್ರಿಸುಗನ್ಧಿಕಮ್ ||೩೩||
ಸಕ್ಷೌದ್ರಾಂ ಶಾಲಿಲಾಜಾನಾಂ ಯವಾಗೂಂ ವಾ ಪಿಬೇನ್ನರಃ ।
ಘ್ರೇಯಾಣ್ಯುಪಹರೇಚ್ಚಾಪಿ ಮನೋಘ್ರಾಣಸುಖಾನಿ ಚ ||೩೪||
ಜಾಙ್ಗಲಾನಿ ಚ ಮಾಂಸಾನಿ ಸ್ವಾದುವತ್ಪಾನಕಾನಿ ಚ ।
ಭೋಜನಾನಿ ವಿಚಿತ್ರಾಣಿ ಕುರ್ಯಾತ್ಸರ್ವಾಸ್ವತಂದ್ರಿತಃ ||೩೫||

ಛರ್ದಿಸಾಮಾನ್ಯ ಚಿಕಿತ್ಸೆ—ಬೇಲದಹಣ್ಣಿನ ರಸದೊಡನೆ ಹಿಪ್ಪಲಿಯ ಚೂರ್ಣವನ್ನೂ ಜೇನುತುಪ್ಪವನ್ನೂ ಮಿಶ್ರಮಾಡಿ ಆಗಾಗ್ಯೆ ನೆಕ್ಕಿಸುತ್ತಿದ್ದರೆ ಛರ್ದಿಯಿಂದ ಬಿಡಲ್ಪಡುತ್ತಾನೆ (ವಮನವು ನಿಂತುಬಿಡುತ್ತದೆ). ಕೊರಟಿಗೆಯ ರಸ ಅಥವಾ ಕಲ್ಕವನ್ನು ಕಲಗಚ್ಚಿನಲ್ಲಿ ಕದರಿ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು. ಅರಳುಪುಡಿಗೆ ದಾಳಿಂಬೆರಸ, ಸಕ್ಕರೆ, ತುಪ್ಪ, ನೀರು ಚುಮುಕಿಸಿ ತಯಾರಿಸಿದ ತರ್ಪಣವನ್ನು ಜೇನುತುಪ್ಪದೊಡನೆ ಮಿಶ್ರಮಾಡಿ ನೆಕ್ಕಿಸಿದರೆ ತ್ರಿದೋಷಜನಿತವಮನವು ನಿವಾರಣೆಯಾಗುತ್ತದೆ. ನಸುಗುನ್ನಿಯ ಬೀಜ ಮತ್ತು ಅತಿಮಧುರಗಳ ಕಲ್ಕಕ್ಕೆ ಕಲಗಚ್ಚು, ಜೇನುತುಪ್ಪಗಳನ್ನು ಮಿಶ್ರಮಾಡಿದ ಯವಾಗುವನ್ನಾಗಲೀ ಹೊಂಗೆ ಚಿಗುರುಗಳಿಂದ ತಯಾರಿಸಿದ ಯವಾಗೂವಿಗೆ ದಾಡಿಮಾದಿಗಳನ್ನೂ, ಸೈಂಧವವನ್ನೂ ಮಿಶ್ರಮಾಡಿಯೂ ಕುಡಿಸಿದರೆ ಹಿತವಾಗುತ್ತದೆ ; ಅಥವಾ, ಕೊತ್ತುಂಬರಿಯ ಕಲ್ಕಕ್ಕೆ ದಾಳಿಂಬೆರಸ, ಸೈಂಧವಗಳನ್ನು ಮಿಶ್ರಮಾಡಿ ಕುಡಿಸಬೇಕು. ಅಥವಾ ಬೇಲದ ಹಣ್ಣಿಗೆ ತ್ರಿಕಟುಚೂರ್ಣವನ್ನು ಮಿಶ್ರಮಾಡಿ ಕಲಗಚ್ಚಿನಲ್ಲಿ ಕದರಿ ಕುಡಿಸಿದರೆ ವಮನಹರವು. ಸಕ್ಕರೆ, ಕೆಂಪುಗಂಧದ ಕಲ್ಕ, ಜೇನುತುಪ್ಪಗಳಿಗೆ ನೋಣದ ಮಲವನ್ನು ಸೇರಿಸಿ ನೆಕ್ಕಿಸಬೇಕು. ಹಲ್ಲಿಯನ್ನು ಕೆಂಡದಲ್ಲಿ ಸುಟ್ಟು ನೀರಿನಲ್ಲಿಟ್ಟು ಶೋಧಿಸಿದ ನೀರನ್ನು ಕುಡಿಸಬೇಕು. ತುಪ್ಪ, ಜೇನುತುಪ್ಪಗಳೊಡನೆ ಭತ್ತದ ಅರಳುಹಿಟ್ಟನ್ನು ನೀರಿನಲ್ಲಿ ಕಿವಿಚಿ ಕುಡಿಸಬೇಕು. ಇದೇರೀತಿಯಾಗಿ ಹಿಪ್ಪಲಿಪುಡಿಯನ್ನು ತುಪ್ಪ, ಜೇನುತುಪ್ಪ, ಸಕ್ಕರೆಗಳೊಡನೆ ಮಿಶ್ರಮಾಡಿ ನೆಕ್ಕಿಸಬೇಕು. ನೆಲ್ಲಿರಸದಲ್ಲಿ ಕೆಂಪುಗಂಧವನ್ನು ಕದರಿಯಾಗಲೀ ಹೆಸರುಬೇಳೆಯಕಟ್ಟನ್ನು ಮಿಶ್ರಮಾಡಿಯಾಗಲೀ ಕುಡಿಸಬೇಕು. ಎಲಚಿಯ ಹಣ್ಣಿನ ತಿರುಳು ಮತ್ತು ನೆಲ್ಲಿಕಾಯಿಸಿಪ್ಪೆಗಳೊಡನೆ ತ್ರಿಸುಗಂಧ (ತ್ರಿಜಾತ) ಚೂರ್ಣವನ್ನು ಕಲಿಸಿ ನೆಕ್ಕಿಸಬೇಕು. ಅಕ್ಕಿಯ ಮತ್ತು ಬತ್ತದ ಅರಳಿನ ಯವಾಗೂವನ್ನು ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು. ಮೂಗು ಬಾಯಿಗಳ ಮೂಲಕ ಧೂಮವನ್ನು ನುಗ್ಗಿಸಿ ಮನಸ್ಸಿಗೂ ಹೃದಯಕ್ಕೂ ಸಂತೋಷವಾಗುವಂತೆ ಮಾಡಬೇಕು. ತ್ರಿದೋಷಜ ವಮನದಲ್ಲಿ ಜಾಂಗಲಪ್ರಾಣಿಗಳ ಮಾಂಸವನ್ನು ತಂತಿಗೆ ಚುಚ್ಚಿ ಬೆಂಕಿಯಿಂದ ಸುಟ್ಟು ತಿನ್ನಿಸಿ ಸಾಧುಪದಾರ್ಥಗಳಿಂದ ತಯಾರಿಸಿದ ಪಾನಕವನ್ನು ಕುಡಿಸಿ, ನಾನಾಪ್ರಕಾರಗಳಾದ ಭೋಜನಗಳನ್ನು ತಿನ್ನಿಸಬೇಕು. ಈ ವಿಚಾರದಲ್ಲಿ ವೈದ್ಯರು ಬಲು ಎಚ್ಚರಿಕೆಯಿಂದ ಚಿಕಿತ್ಸೆ ಮಾಡಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ ಛರ್ದಿ ಪ್ರತಿಷೇಧನಾಮಕ್ಯೆಕೋನ ಪಞ್ಚಾಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಪಞ್ಚಾಶತ್ತಮೋಽಧ್ಯಾಯಃ

ಅಥಾತೋ ಹಿಕ್ಕಾಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿದಂತೆಯೇ ಹಿಕ್ಕಾಚಿಕಿತ್ಸೆಯನ್ನು ವಿವರಿಸುತ್ತೇವೆ.

ವಿದಾಹಿಗುರುವಿಷ್ಟಮ್ಭಿ ರೂಕ್ಷಾಭಿಷ್ಯನ್ದಿಭೋಜನೈಃ ।
ಶೀತಪಾನಾಸನಸ್ಥಾನರಜೋಧೂಮಾತಪಾನಲೈಃ ||೩||
ವ್ಯಾಯಾಮಕರ್ಮಭಾರಾಧ್ವ ವೇಗಾಘಾತಾಪತರ್ಪಣೈಃ ।
ಆಮದೋಷಾಭಿಘಾತಸ್ತ್ರೀ ಕ್ಷಯರೋಗಪ್ರಪೀಡನೈಃ ||೪||
ವಿಷಮಾಶನಾಧ್ಯಶನೈಸ್ತಥಾ ಸಂಶಮನೈರಪಿ ।
ಹಿಕ್ಕಾ ಶ್ವಾಸಶ್ಚ ಕಾಸಶ್ಚ ನೃಣಾಂ ಸಮುಪಜಾಯತೇ ||೫||

ಮೆಣಸು, ಸಾಸಿವೆ, ಮದ್ಯ ಮೊದಲಾದ ವಿದಾಹದ್ರವ್ಯಗಳನ್ನೂ ಗುಣದಿಂದಲೂ ಪಾಕದಿಂದಲೂ ಗುರುವಾದುವನ್ನೂ, ಬಿದರು, ಕಳಲೆ ಮೊದಲಾದ ಮಲಬಂಧಕರ ದ್ರವ್ಯಗಳನ್ನೂ ಕಡಲೆ ಮೊದಲಾದ ರೂಕ್ಷಪದಾರ್ಥಗಳನ್ನೂ, ಮೀನು, ಉದ್ದು ಮೊದಲಾದ ಅಭಿಷ್ಯಂದಕರ (ಮೈ ಭಾರೈಸುವ) ಗಳಾದುವನ್ನೂ ಊಟಮಾಡುವುದರಿಂದಲೂ, ತಣ್ಣಗಿರುವ ದ್ರವದ್ರವ್ಯಗಳನ್ನು ಕುಡಿಯುವುದೂ, ತಣ್ಣಗಿರುವ ಆಸನಗಳ ಮೇಲೆ ಕೂಡುವುದೂ, ಒದ್ದೆನೆಲದಲ್ಲಿ ಮಲಗುವುದೂ, ಧೂಳು ಹೊಗೆಗಳು ಮೂಗು ಬಾಯಿಗಳಿಂದ ಒಳಕ್ಕೆ ನುಗ್ಗುವುದೂ, ಬಿಸಿಲು ಬೆಂಕಿಗಳನ್ನು ಸೇವಿಸುವುದು, ಧನುಸ್ಸನ್ನು ಬಗ್ಗಿಸುವುದು ಮೊದಲಾದ ವ್ಯಾಯಾಮಕರ್ಮಗಳನ್ನೂ, ಭಾರವನ್ನು ಹೊರುವುದು, ದಾರಿ ನಡೆಯುವುದು ಮೊದಲಾದ ಸಾಹಸಕಾರ್ಯಗಳನ್ನು ಮಾಡುವುದು, ಮಲಮೂತ್ರಾದಿ ವೇಗಗಳನ್ನು ತಡೆಯುವುದು-ಉಪವಾಸ ಮಾಡುವುದು, ಆಮದೋಷ, ಮೈಮೇಲೆ ಪೆಟ್ಟು ಬೀಳುವುದು, ಸ್ತ್ರೀಸಂಗ ಮಾಡುವುದು, ಕ್ಷಯರೋಗ ಇವುಗಳಿಂದಲೂ ವಿಷಮಾಶನ ಮತ್ತು ಅಧ್ಯಶನಗಳಿಂದಲೂ, ಸಂಶಮನೌಷಧಗಳನ್ನೇ ಸೇವಿಸುವುದರಿಂದಲೂ ಬಿಕ್ಕಳಿಕೆ, ಉಬ್ಬಸ, ಕೆಮ್ಮು ಈ ಮೂರು ರೋಗಗಳೂ ಉಂಟಾಗುತ್ತವೆ.

ಮುಹುರ್ಮುಹುರ್ವಾಯುರುದೇತಿ ಸಸ್ವನೋ ಯಕೃತ್ಪ್ಲಿಹಾನ್ತ್ರಾಣಿ ಮುಖಾದಿವಾ ಕ್ಷಿಪನ್ ।
ಸ ಘೋಷವಾನಾಶು ಹಿನಸ್ತ್ಯಸೂನ್ ಯತಸ್ತತಸ್ತು ಹಿಕ್ಕೇತಿ ಭಿಷಗ್ಭಿರುಚ್ಯತೇ ||೬||

ಉದಾನಸಹಿತವಾಗಿ ಪ್ರಾಣವಾಯುವು ಪ್ರಕೋಪಹೊಂದಿ ಶಬ್ದಮಾಡುತ್ತಾ

ಪ್ರಾಣ, ಉದಕ, ಅನ್ನವಾಹಿ ಸ್ರೋತಸ್ಸುಗಳ ಮೂಲಕ ಯಕೃತ್ತು, ಪ್ಲೀಹ, ಕರುಳು ಗಳನ್ನು ಬಾಯಿನಿಂದ ಹೊರಕ್ಕೆ ಕಿತ್ತೊಗೆದುಬಿಡುವಂತೆ ಪದೇಪದೇ ಮೇಲ್ಮುಖವಾಗಿ ಹೊರಟು ಬೇಗನೆ ಪ್ರಾಣನಾಶ ಮಾಡುವುದರಿಂದಲೂ, ಆ ಶಬ್ದವು ಹಿಕ್-ಹಿಕ್ ಎಂದು ಅನುಕರಣೆ ಮಾಡುವುದರಿಂದಲೂ ಈ ರೋಗಕ್ಕೆ ಹಿಕ್ಕಾ (ಬಿಕ್ಕಳಿಕೆ) ಎಂದು ಹೆಸರಾಗಿದೆ.

ಅನ್ನಜಾಂ ಯಮಳಾಂ ಕ್ಷುದ್ರಾಂ ಗಮ್ಭೀರಾಂ ಮಹತೀಂ ತಥಾ ।
ಕಫೇನಾನುಗತೋ ವಾಯುಃ ಪಞ್ಚ ಹಿಕ್ಕಾಃ ಕರೋತಿ ಹಿ ॥೭॥

ಪ್ರಾಣವಾಯುವು ಕಫದೊಡನೆ ಸಂಚರಿಸುತ್ತಾ ಅನ್ನಜ, ಯಮಳ, ಕ್ಷುದ್ರ, ಗಮ್ಭೀರ, ಮಹತೀ (ಮಹಾ) ಎಂಬ ೫ ವಿಧಗಳಾದ ಹಿಕ್ಕಾರೋಗಗಳನ್ನುಂಟುಮಾಡು ತ್ತದೆ. ಅನ್ನಪಾನಗಳು ಜೀರ್ಣವಾಗಿ ಬಿಕ್ಕಳಿಕೆಯುಂಟಾದರೆ ಅದಕ್ಕೆ "ವ್ಯಪೇತವೆಂದು" ಚರಕಸಂಹಿತೆಯಲ್ಲಿ ಹೇಳಿರುತ್ತೆ. ಇಲ್ಲಿ "ಯಮಳಹಿಕ್ಕಾ" ಎಂದು ಹೆಸರು.

ಮುಖಂ ಕಷಾಯಮರತಿರ್ಗೌರವಂ ಕಣ್ಠವಕ್ಷಸೋಃ ।
ಪೂರ್ವರೂಪಾಣಿ ಹಿಕ್ಕಾನಾಮಾಟೋಪೋ ಜಠರಸ್ಯ ಚ ॥೮॥

ಮುಖವು ಕಷಾಯರಸವಾಗುವುದು, ಮನಸ್ಸಿಗೆ ಶಾಂತತೆಯಿಲ್ಲದಿರುವುದು, (ದುಃಖ), ಗಂಟಲು, ಎದೆಗಳಲ್ಲಿ ಭಾರ ಕಾಣುವುದು, ಹೊಟ್ಟೆಯಲ್ಲಿ ಗಡಬಡ ಶಬ್ದ ಮಾಡುತ್ತಾ ಸಂಚರಿಸುವುದು ಇವು ಹಿಕ್ಕೆಯ ಪೂರ್ವರೂಪಗಳೆಂದು ತಿಳಿಯಬೇಕು.

ತ್ವರಮಾಣಸ್ಯ ಚಾಹಾರಂ ಭುಞ್ಜಾನಸ್ಯಾಥವಾ ಘನಮ್ ।
ವಾಯುರನ್ನೈರವಸ್ತೀರ್ಣಃ ಕಟುಕೈರರ್ದಿತೋ ಭೃಶಮ್ ॥೯॥
ಹಿಕ್ಕಯತ್ಯೂರ್ಧ್ವಗೋಭೂತ್ವಾ ತಾಂ ವಿದ್ಯಾದನ್ನಜಾಂ ಭಿಷಕ್ ।
ಚಿರೇಣ ಯಮಳೈರ್ವೇಗೈರ್ಯಾ ಹಿಕ್ಕಾ ಸಂಪ್ರವರ್ತತೇ ॥೧೦॥
ಕಮ್ಪಯನ್ತೀ ಶಿರೋಗ್ರೀವಂ ಯಮಳಾಂ ತಾ ವಿನಿರ್ದಿಶೇತ್ ।

ಬೇಗಬೇಗನೆ ಆಹಾರವನ್ನು ತಿನ್ನುವುದರಿಂದಲೂ ಗಟ್ಟಿಯಾದ (ಘನಭಾಗ) ಕಟು ರಸದ್ರವ್ಯಗಳನ್ನು ಹೆಚ್ಚಾಗಿ ತಿನ್ನುವುದರಿಂದಲೂ ಪೀಡಿತವಾದ ಪ್ರಾಣವಾಯುವು ಮೇಲ್ಮು ಖಕ್ಕೆ ತಿರುಗಿ ಬಿಕ್ಕಳಿಕೆಯನ್ನುಂಟುಮಾಡುತ್ತದೆ. ಇದಕ್ಕೆ ಅನ್ನಜಹಿಕ್ಕೆ ಎಂದು ಹೆಸರು. ಬಿಕ್ಕಳಿಕೆಗೆ ವಾಯುವು ಕಾರಣವಾದರೂ ಆಹಾರವು ವಾಯುವನ್ನು ಪೀಡಿಸುವುದರಿಂದ ಅನ್ನಜವೆಂದು ಹೆಸರು. ಬಹಳಹೊತ್ತು ಬಿಟ್ಟು ಹಿಕ್-ಹಿಕ್ ಎಂದು ಎರಡೆರಡು ಸಾರಿ ಶಬ್ದಮಾಡುತ್ತಾ ತಲೆಯನ್ನೂ ಕತ್ತನ್ನೂ ನಡುಗುವಂತೆ ಮಾಡಿದರೆ ಯಮಳಹಿಕ್ಕೆಯೆಂದು ಹೆಸರು. ಇದರಿಂದ ಚರಕಸಂಹಿತೆಯಲ್ಲಿ ಹೇಳಿರುವ ಪ್ರಲಾಪ, ವಮನ, ನೀರಡಿಕೆ, ವೈಚಿತ್ರ್ಯ (ಬುದ್ಧಿವಿಕಲ್ಪ), ಆಕಳಿಕೆ, ಕಣ್ಣೀರು ಸೋರುವುದು, ಬಾಯಿ ಒಣಗುವುದು ಮೊದಲಾದ ಚಿಹ್ನೆಗಳೂ ಇರುತ್ತವೆಂಬುದನ್ನು ಗಮನಿಸಬೇಕೆಂದುಗಯದಾಸಾಚಾರ್ಯನು

ಹೇಳುತ್ತಾನೆ. ಇದು ಅಸಾಧ್ಯರೋಗವಾದರೂ ಸ್ಥಿರಧಾತ್ವಿಂದ್ರಿಯ ಮನಸ್ಸುಳ್ಳವರಿಗೆ ಸಾಧ್ಯವಾಗುತ್ತದೆಂದು ತಿಳಿಯಬೇಕು.

ವಿಕೃಷ್ಟಕಾಲೈರ್ಯಾ ವೇಗೈರ್ಮನ್ದೈಃ ಸಮಭಿವರ್ತತೇ ||೧೧||
ಕ್ಷುದ್ರಿಕಾ ನಾಮ ಸಾ ಹಿಕ್ಕಾ ಜತ್ರುಮೂಲಾತ್ ಪ್ರಧಾವಿತಾ |

ಬಹಳಕಾಲಬಿಟ್ಟು ಜತ್ರುವಿನ ಬುಡದಿಂದ ಮಂದವೇಗದಿಂದ ಮೇಲಕ್ಕೆ ಬರುವ ಬಿಕ್ಕಳಿಕೆಗೆ ಕ್ಷುದ್ರಹಿಕ್ಕಾ ಎಂದು ಹೆಸರು. ಜತ್ರು ಎಂಬುದರಿಂದ ಹೃದಯ, ಕ್ಲೋಮ, ಕಂಠಗಳನ್ನೂ ಪರಿಗ್ರಹಿಸಬೇಕೆಂದು ಗಯದಾಸನ ಮತವು.

ನಾಭಿಪ್ರವೃತ್ತಾ ಯಾ ಹಿಕ್ಕಾ ಘೋರಾಗಮ್ಭೀರನಾದಿನೀ ||೧೨||
ಶುಷ್ಕೌಷ್ಠಕಣ್ಠಜಿಹ್ವಾಸ್ಯ ಶ್ವಾಸಪಾರ್ಶ್ವರುಜಾಕರೀ |
ಅನೇಕೋಪದ್ರವಯುತಾ ಗಮ್ಭೀರಾ ನಾಮ ಸಾ ಸ್ಮೃತಾ ||೧೩||

ಹೊಕ್ಕಳಿಂದ ಹೊರಟು ಆಳದಿಂದಲೇ ಶಬ್ದಮಾಡುತ್ತಾ ಜ್ವರ, ಶ್ವಾಸ, ತೃಷೆ ಮೊದಲಾದ ಅನೇಕ ಉಪದ್ರವಗಳಿಂದ ಕೂಡಿ, ತುಟಿಗಳನ್ನು ಒಣಗಿಸಿ, ಕಂಠ, ನಾಲಿಗೆ, ಬಾಯಿ, ಪಕ್ಕೆಗಳಲ್ಲಿ ನೋವನ್ನುಂಟುಮಾಡುತ್ತಾ ಊರ್ಧ್ವಶ್ವಾಸದಿಂದ ಪೀಡಿಸುವ ಕಾರಣ ಗಂಭೀರಹಿಕ್ಕಾ ಎಂದು ಹೆಸರು. ಇದು ಅಸಾಧ್ಯವಾದದ್ದು.

ಮರ್ಮಾಣ್ಯಾಪೀಡಯನ್ತೀವ ಸತತಂ ಯಾ ಪ್ರವರ್ತತೇ |
ದೇಹಮಾಯಮ್ಯ ವೇಗೇನ ಘೋಷಯತ್ಯತಿತೃಷ್ಯತಃ ||೧೪||
ಮಹಾಹಿಕ್ಕೇತಿ ಸಾ ಜ್ಞೇಯಾ ಸರ್ವಗಾತ್ರಪ್ರಕಮ್ಪಿನೀ ||೧೫||

ಬಸ್ತಿ, ಹೃದಯ, ಶಿರಸ್ಸುಗಳೆಂಬ ಮರ್ಮಗಳನ್ನು (ಕೆಲವರು ನಾಭಿ, ಹೃದಯ ಸ್ತನಮೂಲಗಳೆನ್ನುತಾರೆ) ಪೀಡಿಸಿ, ಶಬ್ದಮಾಡುತ್ತಾ ವೇಗದಿಂದ ದೇಹವನ್ನು ಬಗ್ಗಿಸಿ ಅತಿಯಾಗಿ ಬಾಯಾರಿಕೆಯನ್ನುಂಟುಮಾಡಿ ದೇಹವನ್ನೆಲ್ಲಾ ಅದುರುವಂತೆ ಮಾಡಿದರೆ ಮಹಾಹಿಕ್ಕಾ ಎಂದು ಹೆಸರು. ಇದೂ ಅಸಾಧ್ಯವು.

ಆಯಮ್ಯತೇ ಹಿಕ್ಕತೋಽಙ್ಗಾನಿ ಯಸ್ಯ ದೃಷ್ಟಿಶ್ಚೋರ್ಧ್ವಂ ತಾಮ್ಯತೇಯಸ್ಯ ಗಾಢಮ್ |
ಕ್ಷೀಣೋಽನ್ನದ್ವಿಟ್ ಕಾಸತೇ ಯಶ್ಚ ಹಿಕ್ಕೀತೌ ದ್ವಾವಪ್ಯೇತೌ
ವರ್ಜಯೇದ್ಧಿಕ್ಕಮಾನೌ ||೧೬||

ಯಾರಿಗೆ ಬಿಕ್ಕಳಿಸಿದಾಗ ದೇಹವು ಉದ್ದವಾಗಿ, ಕಣ್ಣುಗುಡ್ಡೆಗಳು ಮೇಲಕ್ಕೆ ಸಿಕ್ಕಿಕೊಳ್ಳುತ್ತದೋ, ತುಂಬಾ ಬಳಲುತ್ತಾ, ಕೃಶನಾಗಿ ಅನ್ನವನ್ನು ದ್ವೇಷಮಾಡುತ್ತಾ ಕೆಮ್ಮುತ್ತಾನೋ ಆ ಹಿಕ್ಕಾ ರೋಗಪೀಡಿತನನ್ನೂ (ಅಂದರೆ ಸಾಧ್ಯವಾದ ಬಿಕ್ಕಳಿಕೆ ಯಲ್ಲೂ ಈ ಲಕ್ಷಣಗಳುಂಟಾದರೆ ಆ ರೋಗಿಯನ್ನು) ಕಡೆಯದಾದ ಗಂಭೀರ ಮಹಾಹಿಕ್ಕೆಗಳೆಂಬ ಎರಡನ್ನೂ ತ್ಯಜಿಸಬೇಕು.

ಪ್ರಾಣಾಯಾಮೋದ್ವೇಜನ ತ್ರಾಸನಾನಿ ಚೂಚೀತೋದೈಃ ಸಂಭ್ರಮಶ್ಚಾತ್ರಶಸ್ತಃ |
ಯಷ್ಟ್ಯಾಹ್ವಂ ವಾ ಮಾಕ್ಷಿಕೇಣಾವಪೀಡಃ ಪಿಪ್ಪಲ್ಯೋವಾ
ಶರ್ಕರಾಚೂರ್ಣಯುಕ್ತಾಃ ||೧೭||

ಸರ್ಪಿಃ ಕೋಷ್ಣಂ ಕ್ಷೀರಮಿಕ್ಷೋರಸೋವಾ ನಾತಿಕ್ಷೀಣಂ ಛರ್ದನಂ ಶಾನ್ತಿಹೇತೋಃ ।
ನಾರೀಪಯಃ ಪಿಷ್ಟಮಶುಕ್ಲಚಂದನಂ ಘೃತಂ ಸುಖೋಷ್ಣಂ ಚ ಸಸೈನ್ಧವಂ ತಥಾ ॥೧೭॥
ಚೂರ್ಣಿಕೃತಂ ಸೈನ್ಧವಮಮ್ಬುನಾ ತಥಾ ನಿಹನ್ತಿ ಹಿಕ್ಕಾಂ ಚ ಹಿತಂ ಚ ನಸ್ಯತಃ ।

ರೇಚಕ, ಪೂರಕ, ಕುಂಭಕ, ಸಾತವಾಹಿ, ಭೇದಗಳಿಂದ ಪ್ರಾಣವಾಯುವಿನ ನಿರೋಧವು ೪ ವಿಧಗಳಾಗಿದ್ದರೂ ವಾಯುವಿನ ಊರ್ಧ್ವಗತಿಯನ್ನು ತಡೆಯುವ ಕುಂಭಕ ವಿಧಾನದಿಂದ ಪ್ರಾಣವಾಯುವನ್ನು ತಡೆಗಟ್ಟುವುದು, ಕಠಿನ ವಚನಗಳಿಂದ ಗದರಿಸಿ ದಿಗಿಲುಪಡಿಸುವುದು, ಹೆದರಿಸುವುದು, ಸೂಜಿಯಿಂದ ಚುಚ್ಚಿ ಮನಸ್ಸಿಗೆ ವ್ಯಥೆಯನ್ನುಂಟು ಮಾಡುವುದು, ಇವು ಕ್ಷುದ್ರಹಿಕ್ಕೆಯಲ್ಲೂ ಅನ್ನಜಹಿಕ್ಕೆಯಲ್ಲೂ ಹಿತಕರವು; ಅತಿ ಮಧುರದ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ಅವಪೀಡನಸ್ಯ ಮಾಡಿಸಬೇಕು; ಹಿಪ್ಪಲಿಯ ಚೂರ್ಣಕ್ಕೆ ಸಕ್ಕರೆಯನ್ನು ಸೇರಿಸಿಯಾಗಲೀ ಬಿಸಿತುಪ್ಪವನ್ನು ಸುಖೋಷ್ಣವಾಗಿರುವ ಹಾಲು, ಕಬ್ಬಿನ ರಸಕ್ಕೆ ಇವನ್ನು ಅತಿಕ್ಷೀಣನಲ್ಲದವನಿಗೆ ಕುಡಿಸಿ ವಮನಮಾಡಿಸಿದರೆ ಬಿಕ್ಕಳಿಕೆಯು ನಿಲ್ಲುತ್ತದೆ ; ಮೊಲೆಹಾಲಿನಲ್ಲಿ ರಕ್ತಗಂಧವನ್ನು ತೇದು ಕದರಿ ಕುಡಿಸಿಯೂ ಸುಖೋಷ್ಣವಾದ ತುಪ್ಪಕ್ಕೆ ಸ್ವಲ್ಪ ಸೈಂಧವವನ್ನು ಮಿಶ್ರಮಾಡಿಯೂ, ಅಥವಾ ಸೈಂಧವ ಚೂರ್ಣವನ್ನು ನೀರಿನಲ್ಲಿ ಕದರಿಯೂ ನಸ್ಯಮಾಡಿಸಿದರೆ ಬಿಕ್ಕಳಿಕೆಯು ಶಮನವಾಗುತ್ತದೆ.

ಯುಞ್ಜ್ಯಾದ್ಧೂಮಂ ಶಾಲನಿರ್ಯಾಸಜಾತಂ ನೈಪಾಲಂ ವಾ
ಗೋವಿಷಾಣೋದ್ಭವಂ ವಾ ॥೧೮॥
ಸರ್ಪಿಃ ಸ್ನಿಗ್ಧೈಶ್ಚರ್ಮ ಬಾಲೈಃ ಕೃತಂ ವಾ ಹಿಕ್ಕಾಸ್ಥಾನೇ
ಸ್ವೇದನಂ ಚಾಪಿ ಕಾರ್ಯಮ್ ।
ಕ್ಷೌದ್ರೋಪೇತಂ ಗೈರಿಕಂ ಕಾಞ್ಚನಾಹ್ವಂ ಲಿಹ್ಯಾದ್ಭಸ್ಮ
ಗ್ರಾಮ್ಯಸತ್ವಾಸ್ಥಿಜಂ ವಾ ॥೧೯॥
ತದ್ವಚ್ಛ್ವಾವಿನ್ಮೇಷಗೋಶಲ್ಯಕಾನಾಂ ರೋಮಾಣ್ಯನ್ತ ರ್ಧೂಮದಗ್ಧಾನಿ ಚಾತ್ರ ।
ಮಧ್ವಾಜ್ಯಾಕ್ತಂ ಬರ್ಹಿಪತ್ರ ಪ್ರಸೂತಮೇವಂ ಭಸ್ಮೌದುಮ್ಬರಂ ತೈಲ್ವಕಂ ವಾ ॥೨೦॥
ಸ್ವರ್ಜಿಕ್ಷಾರಂಬೀಜಪೂರಾದ್ರಸೇನ ಕ್ಷೌದ್ರೋಪೇತಂ ಹನ್ತಿಲೀಢಾಶು ಹಿಕ್ಕಾಮ್ ।
ಸರ್ಪಿಃ ಸ್ನಿಗ್ಧ ಘ್ನನ್ತಿ ಹಿಕ್ಕಾಂ ಯವಾಗ್ವಃ ಕೋಷ್ಣಗ್ರಾಸಾಃ
ಪಾಯಸೋವಾಸುಖೋಷ್ಣಃ ॥೨೧॥
ಶುಣ್ಠೀತೋಯೇ ಸಾಧಿತಂ ಕ್ಷೀರಮಾಜಂ ತದ್ವತ್ಪೀತಂ ಶರ್ಕರಾಸಂಯುತಂ ವಾ ।
ಆತೃಪ್ತೇರ್ವಾ ಸೇವ್ಯಮಾನಂ ನಿಹನ್ಯಾತ್ ಘ್ರಾತಂ ಹಿಕ್ಕಾಮಾಶು
ಮೂತ್ರಂ ತ್ವಜಾವ್ಯೋಃ ॥೨೨॥

ಸರ್ಜರಸ, ಮಣಶಿಲೆ, ಹಸುವಿನ ಕೊಂಬು ಇವುಗಳನ್ನು ಸುಟ್ಟುಬಂದ ಹೊಗೆಯನ್ನು ಪಾನಮಾಡಿಸಿದರೆ ಬಿಕ್ಕಳಿಕೆಯೂ ನಿವಾರಣೆಯಾಗುತ್ತದೆ; ಕತ್ತು ಮತ್ತು ಸ್ತನಗಳ ಮಧ್ಯದೇಹ ಭಾಗದಲ್ಲಿ ದನದತೊಗಲು ಬಾಲದ ಕೂದಲುಗಳನ್ನು ತುಪ್ಪದಲ್ಲಿ ಅದಿ

ಸ್ವೇದವನ್ನಾಡಿಸಬೇಕು ; ಸುವರ್ಣಗೈರಿಕದ ಪುಡಿಯನ್ನು ಜೇನುತುಪ್ಪದಲ್ಲಿ ಕದರಿ ನೆಕ್ಕಿಸಬೇಕು ; ಹಸು ಮೊದಲಾದ ಗ್ರಾಮ್ಯ ಪ್ರಾಣಿಗಳ ಮೂಳೆಯನ್ನು ಸುಟ್ಟು ಬಂದ ಭಸ್ಮವನ್ನೂ, ಮುಳ್ಳುಹಂದಿ, ಆಡು, ಹಸು, ಕಾಡುಹಂದಿಗಳ ಕೂದಲನ್ನು ಮಡಕೆಯಲ್ಲಿ ತುಂಬಿ ಮಡಕೆಯ ಬಾಯಿಗೆ ಚೀರುಮಾಡಿ ಒಲೆಯ ಮೇಲಿಟ್ಟು ಸುಟ್ಟು ಬಂದ ಭಸ್ಮವನ್ನೂ, ನವಿಲಗರಿಯ ಭಸ್ಮವನ್ನೂ ಅತ್ತಿಮರದ ತೊಗಟೆ ಮತ್ತು ಲೋಧ್ರವನ್ನು ಸುಟ್ಟು ಬಂದ ಭಸ್ಮವನ್ನೂ ಸಮಭಾಗ ತುಪ್ಪ, ಜೇನುತುಪ್ಪಗಳನ್ನೂ ಸೇರಿಸಿ ರೋಗಿಗೆ ನೆಕ್ಕಿಸಿದರೆ ಬಿಕ್ಕಳಿಕೆ ನಿವಾರಣೆಯಾಗುತ್ತದೆ. ಸರ್ಜಕ್ಷಾರವನ್ನು ಮಾದಳಹಣ್ಣಿನ ರಸದಲ್ಲಿ ಕದರಿ ಜೇನುತುಪ್ಪ ಮಿಶ್ರಮಾಡಿ ನೆಕ್ಕಿಸಿದರೂ ಬಿಕ್ಕಳಿಕೆಯು ನಿವಾರಣೆಯಾಗುತ್ತದೆ. ಯವಾಗೂ ಅಥವಾ ತುಪ್ಪವನ್ನು ಸೇರಿಸಿ ಸುಖೋಷ್ಣವಾಗಿರುವ ಪಾಯಸವನ್ನಾಗಲಿ ಅಥವಾ ಆಡಿನ ಹಾಲಿಗೆ ಶುಂಠಿಪುಡಿಯನ್ನೂ ನೀರನ್ನೂ ಮಿಶ್ರ ಮಾಡಿ ನೀರು ಇಂಗುವವರೆಗೂ ಕಾಯಿಸಿ ಸಕ್ಕರೆಯನ್ನು ಬೆರೆಸಿ ಕಂಠಪೂರ್ತಿ ಕುಡಿಸಿದಮೇಲೆ ಆಡಿನ ಮತ್ತು ಕುರಿಯ ಮೂತ್ರಗಳನ್ನು ಮೂಸಿಸಿದರೆ ಬಿಕ್ಕಳಿಕೆಯು ನಿವಾರಣೆಯಾಗುತ್ತದೆ.

ಸಪೂತಿಕೀಟಂ ಲಶುನೋಗ್ರಗನ್ಧಾ ಹಿಙ್ಗ್ವಬ್ಜಮಾ ಚೂರ್ಣ ಸುಭಾವಿತಂ ತತ್ ।
ಕ್ಷೌದ್ರಂ ಸಿತಾಂ ವಾ ರೇಣುಕೇಸರಂ ಚ ಪಿಬೇದ್ರಸೇನೇಕ್ಷುಮಧೂಕಜೇನ ॥೨೩॥
ಪಿಬೇತ್ಪಲಂ ವಾ ಲವಣೋತ್ತಮಸ್ಯ ದ್ವಾಭ್ಯಾಂ ಪಲಾಭ್ಯಾಂ ಹವಿಷಃ ಸಮಗ್ರಮ್ ।
ಹರೀತಕೀಂ ಕೋಷ್ಣಜಲಾನುಪಾನಾಂ ಪಿಬೇದ್ಘೃತಂ ಕ್ಷಾರಮಧುಪ್ರಪನ್ನಮ್ ॥೨೪॥
ರಸಂ ಕಪಿತ್ಥಾನ್ಮಧು ಪಿಪ್ಪಲೀಭ್ಯಾಂ ಪಾಣಿ ಪ್ರಮಾಣಂ ಪ್ರಪಿಬೇತ್ ಸುಖಾಯ ॥೨೫॥
ಕೃಷ್ಣಾಂ ಸಿತಾಂ ಚಾಮಲಕಂ ಚ ಲೀಢ್ವಾ ಸ ಶೃಙ್ಗವೇರಂ ಮಧುನಾಥವಾಪಿ ।
ಕೋಲಾಸ್ಥಿಮಜ್ಜಾಞ್ಜನಲಾಜ ಚೂರ್ಣಂ ಹಿಕ್ಕಾಂ ನಿಹನ್ಯಾನ್ಮಧುನಾವಲೀಢಮ್ ॥೨೬॥

ದುರ್ವಾಸನೆಯುಳ್ಳ (ಹಿಂ. ಭೋಂದುಲಿಕಾತೆಲಿಸೀ) ಎನ್ನುವ ಹುಳುವನ್ನೂ, ಬೆಳ್ಳುಳ್ಳಿ, ಬಜೆ, ಹಿಂಗು, ತಾವರೆದಂಟು ಇವುಗಳನ್ನೂ ಚೂರ್ಣಮಾಡಿ ಆಡು ಕುರಿಗಳ ಮೂತ್ರದಲ್ಲಿ ಚೆನ್ನಾಗಿ ಭಾವನೆ ಮಾಡಿ ವಾಸನೆ ಮಾಡಿಸಿದರೆ (ಆಘ್ರಾಣಮಾಡಿಸಿದರೆ) ಹಿಕ್ಕಾ ನಿವಾರಣೆಯಾಗುತ್ತದೆ. ೧ ಪಲ ಸೈಂಧವಲವಣವನ್ನು ಚೂರ್ಣಮಾಡಿ ೨ ಪಲ ತುಪ್ಪದಲ್ಲಿ ಕಲಸಿ ನೆಕ್ಕಿಸಬೇಕು. ಇದು ಉತ್ತಮಪ್ರಮಾಣವು. ಹೀನ, ಮಧ್ಯಮ ಬಲಗಳನ್ನು ನಿರ್ಧರಿಸಿ ತಕ್ಕಷ್ಟು ಪ್ರಮಾಣವನ್ನು ವೈದ್ಯನೇ ನಿಷ್ಕರ್ಷಿಸಬೇಕು. ತುಪ್ಪವನ್ನು ಸುಖೋಷ್ಣವಾಗಿ ಕಾಯಿಸಿ ಯವಕ್ಷಾರ, ಜೇನುತುಪ್ಪಗಳೊಡನೆ ಮಿಶ್ರಮಾಡಿ ಕುಡಿಸಬೇಕು. ಇದರಿಂದ ಬಿಕ್ಕಳಿಕೆ ನಿಲ್ಲುತ್ತದೆ. ಜೇನುತುಪ್ಪ ಮತ್ತು ಪಿಪ್ಪಲೀ ಚೂರ್ಣಗಳು ಕರ್ಷಪ್ರಮಾಣದಷ್ಟು. ಹಿಪ್ಪಲೀಪುಡಿ, ಸಕ್ಕರೆ, ನೆಲ್ಲೀಕಾಯಿಗಳ ಕಲ್ಕವನ್ನು ಹಶಿಶುಂಠಿಯ ರಸ ಮತ್ತು ಜೇನುತುಪ್ಪಗಳೊಡನೆ ಬೆರೆಸಿಯಾಗಲೀ ಅಥವಾ ಎಲಚೀಹಣ್ಣಿನ ಬೀಜ, ಸೌವೀರಾಂಜನ, ಭತ್ತದ ಅರಳು ಇವನ್ನು ಪುಡಿಮಾಡಿ ಜೇನುತುಪ್ಪದಲ್ಲಿ ಕಲಸಿ ನೆಕ್ಕಿಸಿದರೆ ಬಿಕ್ಕಳಿಕೆಯು ನಿವಾರಣೆಯಾಗುತ್ತದೆ.

ಪಾಟಲ್ಯಾಯಾಃ ಫಲಂ ಪುಷ್ಪಂ ಗೈರಿಕಂ ಕಟುರೋಹಿಣೀ ।
ಖರ್ಜೂರಮಧ್ಯಂ ಮಾಗಧ್ಯಃ ಕಾಸೀಸಂ ದಧಿನಾಮ ಚ ॥೨೭॥
ಚತ್ವಾರೋ ಯೂಪಯೋಗಾಃ ಸ್ಯುಃ ಪ್ರತಿಪಾದ ಪ್ರದರ್ಶಿತಾಃ ।
ಮಧುದ್ವಿತೀಯಾಃ ಕರ್ತವ್ಯಾಸ್ತೇ ಹಿಕ್ಕಾಸು ವಿಜಾನತಾ ॥೨೮॥

೧. ಪಾದರೀಕಾಯಿ ಮತ್ತು ಹೂವುಗಳು, ೨. ಕಾವಿಮಣ್ಣು, ಕಟುಕ ರೋಹಿಣಿ, ೩. ಖರ್ಜೂರಮಸ್ತಕದ ಮಧ್ಯಭಾಗ ಮತ್ತು ಹಿಪ್ಪಲಿಪುಡಿ ೪. ಅನ್ನ ಭೇದಿ ಬೇಲದ ಹಣ್ಣು. ಈ ಶ್ಲೋಕಪಾದ (¼ ಅಂಶ) ದಿಂದ ಹೇಳಿದ ನಾಲ್ಕುಯೋಗ ದ್ರವ್ಯಗಳ ಕಟ್ಟಿಗೆ ಜೇನುತುಪ್ಪ ಮಿಶ್ರಮಾಡಿ ಕುಡಿಸಿದರೆ ಪ್ರತಿಯೊಂದೂ ಬಿಕ್ಕಳಿಕೆ ಯನ್ನು ನಿವಾರಣೆ ಮಾಡುತ್ತದೆ.

ಕಪೋತ ಪಾರಾವತಲಾವಶಲ್ಯಕಶ್ವದಂಷ್ಟ್ರಗೋಧಾವೃಷದಂಶಜಾನ್ರಸಾನ್ ।
ಪಿಬೇತ್ ಫಲಾಮ್ಲಾನಹಿಮಾನ್ ಸ್ನಿಗ್ಧಾಂಸ್ತಥೈವಪಥ್ಯಾನ್ಮೃಗದ್ವಿಜೋದ್ಭವಾನ್ ॥೨೯॥
ವಿರೇಚನಂ ಪಥ್ಯತಮಂ ಸಸೈನ್ಧವಂ ಘೃತಂ ಸುಖೋಷ್ಣಂ ಚ ಸಿತೋಪಲಾಯುತಮ್ ।
ಸದಾಗತಾವೂರ್ಧ್ವಗತೇಽನುವಾಸನಂ ವದನ್ತಿ ಕೇಚಿಚ್ಚ ಹಿತಾಯ ಹಿಕ್ಕಿನಾಮ್ ॥೩೦॥

ಪಾರಿವಾಳ, ಲಾವ, ಮುಳ್ಳುಹಂದಿ, ಹುಲಿ, ಉಡ, ಕಾಡುಬೆಕ್ಕು, ಇವುಗಳ ಮಾಂಸರಸಕ್ಕೆ ದಾಳಿಂಬೆರಸ, ಮಾದಳದರಸಗಳನ್ನೂ ಸೈಂಧವವನ್ನೂ ಘೃತವನ್ನೂ ಮಿಶ್ರ ಮಾಡಿ ಕುಡಿಸಬೇಕು. ಹಿಕ್ಕಾರೋಗಿಗಳಿಗೆ ವಿರೇಚನವು ಅತ್ಯಂತ ಉತ್ತಮವು. ಸೈಂಧವ ಮಿಶ್ರಮಾಡಿದ ಬಿಸಿತುಪ್ಪವನ್ನು ಸಕ್ಕರೆ ಮಿಶ್ರಮಾಡಿ ತಿಂದರೆ ಹಿತಕರವು; ವಾತವು ಊರ್ಧ್ವಗತಿಯಾಗಿದ್ದಾಗ ಅನುವಾಸನ ಬಸ್ತಿಯು ಹಿತಕರವೆಂದು ಕೆಲವು ವೈದ್ಯರು ಅಭಿಪ್ರಾಯಪಡುತ್ತಾರೆ.

ಇತಿ ಶ್ರೀಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ ಹಿಕ್ಕಾಪ್ರತಿಷೇಧನಾಮಕ ಪಞ್ಚಾಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ ನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ ಭಾಷಾವಿವೃತಿಃ.

ಏಕಪಞ್ಚಾಶತ್ತಮೋಧ್ಯಾಯಃ

ಅಥಾತ ಶ್ವಾಸಪ್ರತಿಷೇಧಂ ವ್ಯಾಖ್ಯಾಸ್ಯಾಮಃ ||೧

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯ ನಿಸುತಶಗೆ ಉಪದೇಶಮಾಡಿದಂತೆಯೇ ಶ್ವಾಸಚಿಕಿತ್ಸೆಯನ್ನು ವಿವರಿಸುತ್ತೇವೆ.

ಯೈರೇವ ಕಾರಣೈರ್ಹಿಕ್ಕಾ ಬಹುಭಿಃ ಸಂಪ್ರವರ್ತತೇ |

ತೈರೇವ ಕಾರಣೈಃ ಶ್ವಾಸೋ ಘೋರೋ ಭವತಿ ದೇಹಿನಾಮ್ ||೩|

ಬಿಕ್ಕಳಿಕೆಗೆ ಕಾರಣಗಳಾದ ವಿದಾಹ್ಯಾದಿಗಳ ಸೇವನೆಯೇ ಅತಿಭಯಂಕರವಾದ ಶ್ವಾಸರೋಗವನ್ನೂ ಉಂಟುಮಾಡುವುದರಿಂದ ಇವೆರಡು ರೋಗಗಳಿಗೂ ಒಂದೇ ವಿಧವಾದ ಚಿಕಿತ್ಸಾಕ್ರಮಗಳನ್ನೇ ಅನುಸರಿಸಬೇಕು.

ವಿಹಾಯ ಪ್ರಕೃತಿಂ ವಾಯುಃ ಪ್ರಾಣೋಽಥ ಕಫಸಂಯುತಃ |

ಶ್ವಾಸಯತ್ಯೂರ್ಧ್ವಗೋ ಭೂತ್ವಾ ತಂ ಶ್ವಾಸಂ ಪರಿಚಕ್ಷತೇ ||೪||

ಕ್ಷುದ್ರಕಸ್ತಮಶ್ಛಿನ್ನೋ ಮಹಾನೂರ್ಧ್ವಶ್ಚ ಪಞ್ಚಧಾ |

ಭಿದ್ಯತೇ ಸಮಹಾವ್ಯಾಧಿಃ ಶ್ವಾಸ ಏಕೋ ವಿಶೇಷತಃ ||೫||

ಪ್ರಾಣವಾಯುವು ಪ್ರಕೋಪಗೊಂಡು ಕಫದೊಡನೆ ಮಿಶ್ರವಾಗಿ ಮೇಲಕ್ಕೆ ನುಗ್ಗುವುದರಿಂದ ಶ್ವಾಸವೆನ್ನುತ್ತಾರೆ ; ಈ ಶ್ವಾಸರೋಗವು ಕ್ಷುದ್ರಕ, ತಮಕ, ಛಿನ್ನ, ಮಹಾನ್ ಊರ್ಧ್ವಗವೆಂಬ ■ ಪ್ರಕಾರವಾಗಿದ್ದರೂ ಶ್ವಾಸವೆಂಬ ಮಹಾರೋಗವು ಒಂದೇ ವಿಧವಾದದ್ದು.

ಪ್ರಾಗ್ರೂಪಂ ತಸ್ಯ ಹೃತ್ಪೀಡಾ ಭಕ್ತದ್ವೇಷೋಽರತಿಃ ಪರಾ |

ಅನಾಹಃ ಪಾರ್ಶ್ವಯೋಃ ಶೂಲಂ ವೈರಸ್ಯಂ ವದನಸ್ಯ ಚ ||೬||

ಕಿಞ್ಚಿದಾರಭಮಾಣಸ್ಯ ಯಸ್ಯ ಶ್ವಾಸಃ ಪ್ರವರ್ತತೇ |

ನಿಷಣ್ಣಸ್ಯೈತಿ ಶಾನ್ತಿಂ ಚ ಸ ಕ್ಷುದ್ರ ಇತಿ ಸಂಜ್ಞಿತಃ ||೭||

ಹೃದಯದಲ್ಲಿ ನೋವು ಅನ್ನದಲ್ಲಿ ಇಚ್ಛೆ ಇಲ್ಲದಿರುವಿಕೆ ಅಧಿಕವಾಗಿ ಮನಶ್ಚಾಂಚಲ್ಯ ಹೊಟ್ಟೆಯುಬ್ಬರ ಪಾರ್ಶ್ವಗಳಲ್ಲಿ ಶೂಲೆ ಬಾಯಿರುಚಿಯು ಬದಲಾಗುವುದು ಇವು ಶ್ವಾಸರೋಗದ ಪೂರ್ವರೂಪಗಳು ; ಯಾವುದಾದರೊಂದು ಕೆಲಸವನ್ನು ಪ್ರಾರಂಭಿಸುವಾಗಲೇ ಶ್ವಾಸವುಂಟಾಗಿ ಶಾಂತವಾದರೆ ಅದಕ್ಕೆ ಕ್ಷುದ್ರಶ್ವಾಸವೆಂದು ಹೆಸರು.

ತೃಟ್ಸ್ವೇದವಮಥುಪ್ರಾಯಃ ಕಣ್ಠಘುರ್ಘುರಿಕಾನ್ವಿತಃ |

ವಿಶೇಷಾದ್ದುರ್ದಿನೇ ತಾಮ್ಯೇತ್ ಶ್ವಾಸಃ ಸ ತಮಕೋ ಮತಃ ||೮||

ಘೋರೇಣಮಹತಾವಿಷ್ಟಃ ಸಕಾಸಃ ಸಕಫೋ ನರಃ ।
ಯಃ ಶ್ವಸಿತ್ಯಬಲೋಽನ್ನದ್ವಿಟ್ ಸುಪ್ತ್ಯೈಪ್ತಸ್ತಮಕ ಪೀಡಿತಃ ||೯||
ಸ ಶಾಮ್ಯತಿ ಕಫೇ ಹೀನೇ ಟ್ವೈಪತಶ್ಚ ವಿವರ್ಧತೇ ।
ಮೂರ್ಛಾಜ್ವರಾಭಿಭೂತಸ್ಯ ಜ್ಞೇಯಃ ಪ್ರತಮಕಸ್ತು ಸಃ ||೧೦||

ನೀರಡಿಕೆ, ಮೈಬೆವರುವುದು ವಮನ, ಇವು ಅಧಿಕವಾಗಿದ್ದು ಗಂಟಲಿನಲ್ಲಿ ಗರ್ ಗರ್ ಎಂದು ಶಬ್ದಮಾಡುತ್ತಾ ಮೋಡವೂ ಮಳೆಯು ಇರುವ ಹಾಗೆ ಅಧಿಕವಾಗಿ ಬಳಲಿಕೆಯಾದರೆ ಅದಕ್ಕೆ ತಮಕಶ್ವಾಸವೆಂದು ಹೆಸರು ; ಅತಿಯಾಗಿ ಶಬ್ದಮಾಡುತ್ತಾ ಕಫಮಿಶ್ರವಾಗಿ ಕೆಮ್ಮುತ್ತಾ ಯಾವನು ಶ್ವಾಸಪೀಡಿತನಾಗಿ ದುರ್ಬಲನಾಗಿ ಅನ್ನದ್ವೇಷ ಮಾಡುತ್ತಾ ತಮಕಪೀಡಿತನಾಗಿ ಮಲಗಿರುತ್ತಾನೋ ಕಫವು ಕಡಮೆಯಾದರೆ ಶ್ವಾಸವು ಶಮನವಾಗಿ ಮಲಗಿದರೆ ಹೆಚ್ಚುತ್ತಾ ಮೂರ್ಛೆಜ್ವರಗಳಿಂದ ಪೀಡಿತನಾಗುತ್ತಾನೆ. ಅದಕ್ಕೆ ಪ್ರತಮಕವೆನ್ನುತ್ತಾರೆ ; ಇದು ತಮಕಶ್ವಾಸದ ಭೇದವು ಆದ್ದರಿಂದ ೫ ಶ್ವಾಸಗಳೆಂದು ಹೇಳಿರುವ ಸಂಖ್ಯಾಸಂಪ್ರಾಪ್ತಿಗೆ ಯಾವ ಬಾಧಕವು ಉಂಟಾಗಲಿಲ್ಲ.

ಆಧ್ಮಾತೋ ದಹ್ಯಮಾನೇನ ಬಸ್ತಿನಾ ಸರುಜಂ ನರಃ ।
ಸರ್ವಪ್ರಾಣೇನ ವಿಚ್ಛಿನ್ನಂ ಶ್ವಸ್ಯಾಚ್ಛಿನ್ನಂ ತಮಾದಿಶೇತ್ ||೧೧||
ವಿಸಂಜ್ಞಃ ಪಾರ್ಶ್ವಶೂಲಾರ್ತಃ ಶುಷ್ಕಕಣ್ಠೋಽತಿಘೋಷವಾ ।
ಸಂರಬ್ಧನೇತ್ರಸ್ತ್ವಾಯಮ್ಯ ಯಃ ಶ್ವಸ್ಯಾತ್ ಮಹಾ ಸ್ಮೃತಃ ||೧೨||
ಮರ್ಮಸ್ವಾಯಮ್ಯಮಾನೇಷು ಶ್ವಸ ಮೂಢೋ ಮುಹುಶ್ಚಯಃ ।
ಊರ್ಧ್ವಪ್ರೇಕ್ಷೀ ಹತರವಸ್ತಮೂರ್ಧ್ವಶ್ವಾಸ ಮಾದಿಶೇತ್ ||೧೩||
ಕ್ಷುದ್ರಃ ಸಾಧ್ಯತಮಸ್ತೇಷಾಂ ತಮಕಃ ಕೃಚ್ಛ್ರ ಉಚ್ಯತೇ ।
ತ್ರಯಃ ಶ್ವಾಸಾ ನ ಸಿಧ್ಯನ್ತಿ ತಮಕೋ ದುರ್ಬಲಸ್ಯ ಚ ||೧೪||

ಹೊಟ್ಟೆಯುಬ್ಬರಿಸಿ ಬಸ್ತ್ಯಾಶಯವು ಉರಿಯುತ್ತಾ ನೋವಿನಿಂದಕೂಡಿ ತನ್ನ ಬಲವನ್ನೆಲ್ಲಾ ಪ್ರಯೋಗಿಸಿ ತಡೆದು ತಡೆದು ಶ್ವಾಸಮಾಡಿದರೆ ಆ ರೋಗಕ್ಕೆ ಛಿನ್ನಶ್ವಾಸವೆಂದು ಹೆಸರು ; ಪ್ರಜ್ಞೆತಪ್ಪಿ ಪಕ್ಕೆಶೂಲೆಯಿಂದ ಪೀಡಿತನಾಗಿ ಗಂಟಲೊಣಗಿ ಕಣ್ಣಿನ ಗುಡ್ಡೆಗಳು ಬಿಗಿದುಹಿಡಿದುಕೊಂಡಿದ್ದು ಮೈಯನ್ನು ನೀಡುತ್ತಾ (ಉದ್ದಮಾಡಿ) ಉಸಿರು ಬಿಟ್ಟರೆ ಮಹಾಶ್ವಾಸವೆಂದು ಹೆಸರು ; ಹೃದಯ ಬಸ್ತಿ ಶಿರಸ್ಸುಗಳೆಂಬ ಮರ್ಮಸ್ಥಾನಗಳನ್ನು ಮೇಲಕ್ಕೆಳೆಯುತ್ತಾ ಪದೇ ಪದೇ ಉಸಿರಾಡುತ್ತಾ ಮೋಹ ಪಡುತ್ತಾ ಮೇಲ್ಗಡೆ ನೋಡುತ್ತಾ ಶಬ್ದ (ಧ್ವನಿ) ನಾಶವಾದರೆ ಊರ್ಧ್ವಶ್ವಾಸವೆನ್ನುತ್ತಾರೆ. ಇವುಗಳಲ್ಲಿ ಕ್ಷುದ್ರಶ್ವಾಸವು ಸುಲಭಸಾಧ್ಯವಾದದ್ದು. ತಮಕಶ್ವಾಸವು ಕೃಚ್ಛ್ರಸಾಧ್ಯವು; ಆದರೆ ರೋಗಿಯು ದುರ್ಬಲನಾದರೆ ತಮಕವು ಅಸಾಧ್ಯವಾಗುತ್ತದೆ ; ಊರ್ಧ್ವ, ಛಿನ್ನ, ಮಹಾ, ಎಂಬ ಮೂರುವಿಧ ಶ್ವಾಸಗಳು ಅಸಾಧ್ಯವಾದುವೆಂದು ತಿಳಿಯಬೇಕು.

ಸ್ನೇಹಬಸ್ತಿಂ ವಿನಾ ಕೇಚಿದೂರ್ಧ್ವಂ ಚಾಧಶ್ಚ ಶೋಧನಮ್ ।
ಮೃದು ಪ್ರಾಣವತಾಂ ಶ್ರೇಷ್ಠಂ ಶ್ವಾಸಿನಾಮಾದಿಶನ್ತಿ ಹಿ ॥೧೫॥
ಶ್ವಾಸೇ ಕಾಸೇ ಚ ಹಿಕ್ಕಾಯಾಂ ಹೃದ್ರೋಗೇ ಚಾಪಿ ಪೂಜಿತಮ್ ।
ಘೃತಂ ಪುರಾಣಂ ಸಂಸಿದ್ಧಮಭಯಾಬಿಡರಾಮಠೈಃ ॥೧೬॥
ಸೌವರ್ಚಲಾಭಯಾಬಿಲ್ವೈಃ ಸಂಸ್ಕೃತಂ ವಾ ನವಂ ಘೃತಮ್ ।
ಪಿಪ್ಪಲ್ಯಾದಿ ಪ್ರತೀವಾಪಂ ಸಿದ್ಧಂ ವಾ ಪ್ರಥಮೇ ಗಣೇ ॥೧೭॥
ಸಪಞ್ಚಲವಣಂ ಸರ್ಪಿಃ ಶ್ವಾಸಕಾಸೌ ವ್ಯಪೋಹತಿ ।

ಶ್ವಾಸರೋಗಿಗಳು ಬಲಿಷ್ಠರಾಗಿದ್ದರೆ ಸ್ನೇಹಬಸ್ತಿಪ್ರಯೋಗವನ್ನು ಬಿಟ್ಟು ಮೃದುವಾದ ವಮನವಿರೇಚನೌಷಧಗಳನ್ನು ಪ್ರಯೋಗಿಸಬೇಕೆಂದು ಕೆಲವು ವೈದ್ಯರು ಅಭಿಪ್ರಾಯಪಡುತ್ತಾರೆ ; ಶ್ವಾಸ, ಕಾಸ, ಬಿಕ್ಕಳಿಕೆ ಹೃದ್ರೋಗಗಳಲ್ಲಿ ಅಣಿಲೆಕಾಯಿ ಬಿಡಲವಣ ಹಿಂಗುಗಳನ್ನು ಹಳೆಯತುಪ್ಪದೊಡನೆ (೧೦ ವರ್ಷಗಳು ಕಳೆದಿರಬೇಕು). ಕುಡಿಸಿದರೆ ಹಿತವೆಂದು ಹೇಳುತ್ತಾರೆ; ಸೌವರ್ಚಲವಣ ಅಣಿಲೆಕಾಯಿ ಬಿಲ್ವಪತ್ರೆಕಾಯಿಗಳನ್ನು ಸೇರಿಸಿ ತಯಾರಿಸಿದ ಘೃತವು ಶ್ವಾಸಕಾಸಗಳಿಗೆ ಹಿತಕರವು ; ಅಥವಾ ವಿದಾರಿಗಂಧಾದಿದ್ರವ್ಯಗಳ ಕಷಾಯ, ಪಿಪ್ಪಲ್ಯಾದಿ ಗಣದ್ರವ್ಯಗಳ ಕಲ್ಕವನ್ನೂ ಪಂಚಲವಣಗಳನ್ನೂ ಸೇರಿಸಿ ತಯಾರಿಸಿದ ಘೃತವು ಶ್ವಾಸಕಾಸಗಳನ್ನು ನಿವಾರಣೆಮಾಡುತ್ತದೆ.

ಹಿಂಸ್ರಾವಿಡಂಗಪೂತೀಕ ತ್ರಿಫಲಾವ್ಯೋಷಚಿತ್ರಕೈಃ ॥೧೮॥
ದ್ವಿಕ್ಷೀರಂ ಸಾಧಿತಂ ಸರ್ಪಿಶ್ಚತುರ್ಗುಣಜಲಾಪ್ಲುತಮ್ ।
ಕೋಲಮಾತ್ರೈಃ ಪಿಬೇತ್ತದ್ಧಿ ಶ್ವಾಸಕಾಸೌ ವ್ಯಪೋಹತಿ ॥೧೯॥
ಅರ್ಶಾಂಸ್ಯರೋಚಕಂ ಗುಲ್ಮಂ ಶಕೃದ್ಭೇದಂ ಕ್ಷಯಂ ತಥಾ ।
ಕೃತ್ಸ್ನೇ ವೃಷಕಷಾಯೇ ವಾ ಪಿಬೇತ್ಸರ್ಪಿಶ್ಚತುರ್ಗುಣೇ ॥೨೦॥
ತನ್ಮೂಲ ಕುಸುಮಾವಾಪಂ ಶೀತಂ ಕ್ಷೌದ್ರೇಣ ಯೋಜಯೇತ್ ।

ಜಟಾಮಾಂಸಿ, ವಿಡಂಗ, ತಪಸಿತೊಗಟೆ, ತ್ರಿಫಲೆ, ತ್ರಿಕಟು, ಚಿತ್ರಮೂಲ ಇವುಗಳ ಕಲ್ಕ ೪ ಪಲ, ತುಪ್ಪ ೧ ಪ್ರಸ್ಥ, ಹಾಲು ೨ ಪ್ರಸ್ಥ, ನೀರು ೪ ಪ್ರಸ್ಥ ಇವೆಲ್ಲವನ್ನೂ ಸೇರಿಸಿ ತಯಾರಿಸಿದ ತುಪ್ಪ ೧ ಕೋಲಪ್ರಮಾಣದಷ್ಟನ್ನು ತಿನ್ನುತ್ತಾ ಬಂದರೆ ಶ್ವಾಸಕಾಸಗಳು ನಿವಾರಣೆಯಾಗುತ್ತವೆ ; ಮತ್ತು ಅರ್ಶೋರೋಗ, ಅರೋಚಕ, ಗುಲ್ಮ, ಮಲಭೇದ, ಕ್ಷಯರೋಗ ಇವೆಲ್ಲಾ ನಿವಾರಣೆಯಾಗುತ್ತವೆ ; ಬರಿಯ ಆಡುಸೋಗೆಯ ಕಷಾಯ ೪ ಪ್ರಸ್ಥ ತುಪ್ಪ ೧ ಪ್ರಸ್ಥ, ಆಡುಸೋಗೆಯುಬೇರು ಮತ್ತು ಹೂವುಗಳ ಕಲ್ಕವನ್ನು ಸೇರಿಸಿ ಘೃತವನ್ನು ಕಾಯಿಸಿ ತಣ್ಣಗಾದಮೇಲೆ ಜೇನುತುಪ್ಪ ಮಿಶ್ರಮಾಡಿ ಕುಡಿಸಬೇಕು.

ಶೃಙ್ಗೀಮಧೂಳಿಕಾಭಾರ್ಗೀಶುಣ್ಠೀತಾರ್ಕ್ಷ್ಯಸೀತಾಮ್ಬುದೈಃ ॥೨೧॥
ಸಹರಿದ್ರೈಃ ಸಯುಷ್ಟ್ಯಾಹ್ವೈಃ ಸವ್ಯೈರಾವಾಪ್ಯ ಯೋಗತಃ ।

ಘೃತಪ್ರಸ್ಥಂ ಪಚೇದ್ಧೀಮಾನ್ ಶೀತತೋಯೇ ಚತುರ್ಗುಣೇ ॥೨೨॥
ಶ್ವಾಸಂ ಕಾಸಂ ತಥಾ ಹಿಕ್ಕಾಂ ಸರ್ಪಿರೇತನ್ನಿಯಚ್ಛತಿ ।

ಕರ್ಕಾಟಕಶೃಂಗೀ, ಕೊರಟಿಗೆಯಹಂಬು, ಗಂಟುಪರಂಗಿ, ಶುಂಠಿ, ರಸಾಂಜನ ಸಕ್ಕರೆ, ಕೊನ್ನಾರಿಗೆಡ್ಡೆ, ಅರಿಶಿನ, ಅತಿಮಧುರ ಇವುಗಳನ್ನು ಸಮಪ್ರಮಾಣದಿಂದ ಸೇರಿಸಿ ಅದರ ೪ರಷ್ಟು ತುಪ್ಪವನ್ನೂ ತುಪ್ಪದ ೪ರಷ್ಟು ತಣ್ಣೀರನ್ನೂ ಸೇರಿಸಿ ತಯಾರಿಸಿದ ಘೃತವನ್ನು ಪ್ರಯೋಗಿಸಿದರೆ ಶ್ವಾಸ, ಕಾಸ, ಬಿಕ್ಕಳಿಕೆಗಳು ನಿವಾರಣೆಯಾಗುತ್ತವೆ.

ಸುವಹಾ ಸಾಳಿಕಾ ಭಾರ್ಗೀ ಶುಕಾಖ್ಯಾನೈಚುಲಂ ಫಲಮ್ ॥೨೩॥
ಕಾಕಾದನೀ ಶೃಙ್ಗಬೇರಂ ವರ್ಷಾಭೂಬೃಹತೀದ್ವಯಮ್ ।
ಕೋಲಮಾತ್ರೈಘೃತಪ್ರಸ್ಥಂ ಪಚೇದೇಭಿರ್ಜಲದ್ವಿಕಮ್ ॥೨೪॥
ಕಟೂಷ್ಣಂ ಪೀತಮೇತದ್ಧಿ ಶ್ವಾಸಾಮಯವಿನಾಶನಮ್ ।
ಸೌವರ್ಚಲಯವಕ್ಷಾರ ಕಟುಕಾವ್ಯೋಷ ಚಿತ್ರಕೈಃ ॥೨೫॥
ವಚಾಭಯಾವಿಡಙ್ಗೈಶ್ಚ ಸಾಧಿತಂ ಶ್ವಾಸಶಾನ್ತಯೇ ।
ಗೋಪವಲ್ಲ್ಯುದಕೇ ಸಿದ್ಧಂ ಸ್ಯಾದನ್ಯದ್ವಿಗುಣೇ ಘೃತಮ್ ॥೨೬॥
ಪಞ್ಚೈತಾನಿ ಹವೀಂಷ್ಯಾಹುರ್ಭಿಷಜಃ ಶ್ವಾಸಕಾಸಯೋಃ ।

ಮುಟ್ಟಿದರೆಮುನಿಗಿಡ, ಜಟಾಮಾಂಸಿ (ಜೀರಿಗೆ ಎಂದು ಕೆಲವರು) ಗಂಟು ಪರಂಗಿ ಬಾಗೆತೊಗಟೆ, ಹಬ್ಬೆಕಾಯಿ, ಕಾಗೆತೊಂಡೆ, ಹಸಿಶುಂಠಿ, ಕೊಮ್ಮೆಬೇರು, ಹೆಗ್ಗುಳ್ಳ, ನೆಲಗುಳ್ಳ ಇವು ಪ್ರತಿಯೊಂದು ೧ ಕೋಲದಷ್ಟನ್ನು ಸೇರಿಸಿ ಚೂರ್ಣಮಾಡಿ ೧ ಪ್ರಸ್ಥ ತುಪ್ಪವನ್ನೂ ೨ ಪ್ರಸ್ಥ ನೀರನ್ನೂ ಸೇರಿಸಿ ಪಾಕಮಾಡಿ (ಕಟುರಸ ಉಷ್ಣವೀರ್ಯವುಳ್ಳ) ಶ್ವಾಸಕಾಸಗಳನ್ನು ನಾಶಮಾಡುತ್ತದೆ ; ಸೌವರ್ಚಲವಣ, ಯವಕ್ಷಾರ, ಕಟುಕರೋಹಿಣಿ, ತ್ರಿಕಟು, ಚಿತ್ರಮೂಲ, ಬಜೆ, ಅಣಿಲೆಕಾಯಿ, ವಿಡಂಗ ಇವುಗಳನ್ನುಸಮಪ್ರಮಾಣದಿಂದ ಚೂರ್ಣಮಾಡಿ ಸೊಗದೇಬೇರಿನ ಕಷಾಯದಲ್ಲಿ (ಚೂರ್ಣದ ೪ ರಷ್ಟು ತುಪ್ಪ ತುಪ್ಪದ ೨ ರಷ್ಟು ಸೊಗದೆಕಷಾಯ) ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ಶ್ವಾಸಕಾಸಗಳು ಪರಿಹಾರವಾಗುತ್ತವೆ ; ಮೇಲೆ ಹೇಳಿದ ಹಿಂಸ್ರಾದಿ ಶುಂಠಿ ಸುವಹಾದಿ ಸುವರ್ಚಲಾದಿ ಗೋಪವಲ್ಲ್ಯಾದಿ ೫ ವಿಧಗಳಾದ ಘೃತಯೋಗಗಳೂ ಶ್ವಾಸಕಾಸಹರಗಳೆಂದು ಹೇಳಲ್ಪಡುತ್ತವೆ.

ತಾಳೀಸತಾಮಲಕ್ಯುಗ್ರಾಜೀವನ್ತೀಕುಷ್ಠಸೈನ್ಧವೈಃ ।
ಬಿಲ್ವಪುಷ್ಕರ ಭೂತೀಕ ಸೌವರ್ಚಲಕಣಾಗ್ನಿಭಿಃ ॥೨೭॥
ಪಥ್ಯಾತೇಜೋವತೀಯುಕ್ತೈಃ ಸರ್ಪಿರ್ಜಲಚತುರ್ಗುಣಮ್ ।
ಹಿಙ್ಗುಪಾದಯುತಂ ಸಿದ್ಧಂ ಸರ್ವಶ್ವಾಸಹರಂ ಪರಮ್ ॥೨೮॥
ವಾಸಾಘೃತಂ ಷಟ್ಪಲಂ ವಾ ಘೃತಂ ಚಾತ್ರ ಹಿತಂ ಭವೇತ್
ತೈಲಂ ದಶಗುಣೇ ಸಿದ್ಧಂ ಭೃಙ್ಗರಾಜರಸೇ ಶುಭೇ ॥೨೯॥
ಸೇವ್ಯಮಾನಂ ಯಥಾನ್ಯಾಯಂ ಶ್ವಾಸಕಾಸೌ ವ್ಯಪೋಹತಿ ।

ಫಲಾಮ್ಲಾ ವಿಷ್ಕಿರರಸಾಃ ಸ್ನಿಗ್ಧಾಃ ಪ್ರವ್ಯಕ್ತಸೈನ್ಧವಾಃ ||೩೦||
ಏಣಾದೀನಾಂ ಶಿರೋಭಿರ್ವಾ ಕೌಳತ್ಥಾ ವಾ ಸುಸಂಸ್ಕೃತಾಃ |
ಹನ್ಯುಃ ಶ್ವಾಸಂ ಚ ಕಾಸಂ ಚ ಸಂಸ್ಕೃತಾನಿ ಪಯಾಂಸಿ ಚ ||೩೧||

ತಾಳೀಸಪತ್ರೆ, ನೆಲನೆಲ್ಲಿ, ಬಜೆ, ಸಿಹಿಹಾಲೆ, ಚಂಗಲ್‌ಕೋಷ್ಠ, ಸ್ಯೆಂಧವ, ಬಿಲ್ವಪತ್ರೆತೊಗಟೆ, ಪುಷ್ಕರಮೂಲ, ಮಜ್ಜಿಗೆಹುಲ್ಲು, ಸೌವರ್ಚಲವಣ, ಹಿಪ್ಪಲಿ, ಚಿತ್ರಮೂಲ, ಅಣಿಲೆಕಾಯಿಸಿಪ್ಪೆ, ಗಂಗುಂಗೇಬೀಜ, ಇವುಗಳನ್ನು ಸಮಪ್ರಮಾಣದಿಂದ ಚೂರ್ಣಮಾಡಿ ಇವುಗಳ ೪ ರಷ್ಟು ತುಪ್ಪ ತುಪ್ಪದ ೪ ರಷ್ಟು ನೀರನ್ನು ಸೇರಿಸಿ ಮೇಲೆ ಹೇಳಿದ ಒಂದು ದ್ರವ್ಯದಪ್ರಮಾಣದ $\frac{1}{4}$ ರಷ್ಟು ಹಿಂಗನ್ನು ಸೇರಿಸಿ ತಯಾರಿಸಿದ ತುಪ್ಪವನ್ನು ಪ್ರಯೋಗಿಸಿದರೆ ಸಕಲವಿಧ ಶ್ವಾಸರೋಗಗಳು ನಿವಾರಣೆಯಾಗುತ್ತವೆ ; ವಾಸಘೃತ, ಷಟ್ಪಲಘೃತಗಳನ್ನೂ ಈ ಶ್ವಾಸರೋಗದಲ್ಲಿ ಉಪಯೋಗಿಸಬೇಕು ; ೧ ಭಾಗತಿಲತೈಲಕ್ಕೆ ೧೦ ಭಾಗ ಗರುಗದ ಸೊಪ್ಪಿನ ರಸವನ್ನು ಸೇರಿಸಿ ತಯಾರಿಸಿದ ತೈಲವನ್ನು ಸೇವನೆಮಾಡಿಸಿದರೆ ಶ್ವಾಸಕಾಸಗಳು ನಿವಾರಣೆಯಾಗುತ್ತವೆ ; ದಾಳಿಂಬೆ ಮಾದಳ ಮೊದಲಾದ ಹಣ್ಣುಗಳ ಹುಳಿರಸವನ್ನು ಮಿಶ್ರಮಾಡಿದ ಲಾವಾದಿ ವಿಷ್ಕಿರಗಳ ಮಾಂಸರಸಕ್ಕೆ ಘೃತಮಿಶ್ರಮಾಡಿ ಸ್ಪಷ್ಟವಾಗಿ ಕಾಣುವಂತೆ ಸ್ಯೆಂಧವವನ್ನು ಸೇರಿಸಿಯಾಗಲೀ, ಕರಿಹುಲ್ಲೆ ಮೊದಲಾದವುಗಳ ತಲೆಯ ಮಸ್ತಲುಂಗವನ್ನಾಗಲಿ ಸರಿಯಾಗಿ ಸಂಸ್ಕಾರಮಾಡಿದ ಹುರುಳಿಕಟ್ಟಾಗಲೀ, ವಾತಹರಗಳಾದ ಪಂಚಮೂಲಗಳೊಡನೆ ತಯಾರಿಸಿದ ಹಾಲನ್ನಾಗಲಿ ಪ್ರಯೋಗಮಾಡಿದರೆ ಶ್ವಾಸಕಾಸಗಳು ನಾಶವಾಗುತ್ತವೆ.

ತಿಮಿರಸ್ಯ ತಿನಿಶಸ್ಯ ಚ ಬೀಜಾನಿ ಕರ್ಕಟಾಖ್ಯಾ ಸುವರ್ಚಿಕಾ |
ದುರಾಲಭಾಥ ಪಿಪ್ಪಲ್ಯಃ ಕಟುಕಾಖ್ಯಾ ಹರೀತಕೀ ||೩೨||
ಶ್ವಾವಿನ್ಮಯೂರ ರೋಮಾಣಿ ಕೋಲಾಮಾಗಧಿಕಾ ಕಣಾಃ |
ಭಾರ್ಗೀತ್ವಕ್ ಶೃಙ್ಗವೇರಂ ಚ ಶರ್ಕರಾ ಶಲ್ಲಕಾಙ್ಗಜಮ್ ||೩೩||
ನೃತ್ತಕೌಣ್ಡಕ ಬೀಜಾನಿ ಚೂರ್ಣಿತಾನಿ ತು ಕೇವಲಮ್ |
ಪಞ್ಚಶ್ಲೋಕಾರ್ಧಿಕಾಸ್ತ್ವೇತೇ ಲೇಹಾ ಯೇ ಸಮ್ಯಗೀರಿತಾಃ ||೩೪||
ಸರ್ಪಿರ್ಮಧುಭ್ಯಾಂ ತೇ ಲೇಹ್ಯಾಃ ಕಾಸಶ್ವಾಸಾರ್ದಿತೈರ್ನರೈಃ |
ಸಪ್ತಚ್ಛದಸ್ಯ ಪುಷ್ಪಾಣಿ ಪಿಪ್ಪಲೀಶ್ಚಾಪಿ ಮಸ್ತುನಾ |
ಪಿಬೇತ್ ಸಂಚೂರ್ಣ್ಯ ಮಧುನಾ ಧಾನಾಶ್ಚಾಪ್ಯಥ ಭಕ್ಷಯೇತ್ ||೩೫||

ತ್ಯಾರಣದಬೀಜ (ರಥವೃಕ್ಷವೆಂದುಕೆಲವರು) ಕರ್ಕಾಟಕಶೃಂಗಿ ಸುವರ್ಚಲವಣ ; ತುರುಚದಬೇರು, ಹಿಪ್ಪಲಿ, ಕಟುಕರೋಹಿಣಿ, ಅಣಿಲೆಕಾಯಿ ; ಮುಳ್ಳು ಹಂದಿಯ ಮುಳ್ಳು, ನವಿಲಗರಿ, ಎಲಚಿಹಣ್ಣು, ಹಿಪ್ಪಲಿ, ಮೆಣಸು; ಗಂಟುಪರಂಗಿ, ಶುಂಠಿ, ದಾಲ್ಚಿನ್ನಿ, ಸಕ್ಕರೆ, ಮುಳ್ಳುಹಂದಿಯಮುಳ್ಳು, ನಸುಗುನ್ನಿಯಬೀಜ; ಈ ಅರ್ಧ ಶ್ಲೋಕಗಳಲ್ಲಿ ಹೇಳಿರುವ ೫ ಯೋಗಗಳನ್ನೂ ಪ್ರತ್ಯೇಕವಾಗಿ ಚೂರ್ಣಿಸಿ ತುಪ್ಪ, ಜೇನುತುಪ್ಪಗಳಿಂದ ರಂಗಳಿಸಿ ನೆಕ್ಕಿ

ಸಿದರೆ ಕಾಸಶ್ವಾಸಗಳು ನಿವಾರಣೆಯಾಗುತ್ತವೆ ; ಮದ್ದಾಲೆಯಹೂವುಗಳನ್ನೂ ಹಿಪ್ಪಲಿಯನ್ನೂ ಚೂರ್ಣಿಸಿ ಜೇನುತುಪ್ಪದಲ್ಲಿ ಕದರಿ ಕುಡಿಸಿ ಹುರಿದ ಯವೆಯಪುಡಿಯನ್ನು ತಿನ್ನಬೇಕು.

ಅರ್ಕಾಙ್ಕುರೈರ್ಭಾವಿತಾನಾಂ ಯವಾನಾಂ ಸಾಧ್ವನೇಕಶಃ ।
ತರ್ಪಣಂ ವಾ ಪಿಬೇದೇಷಾಂ ಸಕ್ಷೌದ್ರಂ ಶ್ವಾಸಪೀಡಿತಃ ॥೩೭॥
ಶಿರೀಷಕದಳೀಕುನ್ದಪುಷ್ಪಂ ಮಾಗಧಿಕಾಯುತಂ ।
ತಣ್ಡುಲಾಮ್ಬುಯುತಂ ಪೀತ್ವಾ ಜಯೇಚ್ಛ್ವಾಸಾನಶೇಷತಃ ॥೩೭॥
ಕೋಲಮಜ್ಜಾಂ ತಾಲಮೂಲಮ್ಯೃಷ್ಯಚರ್ಮಮಸೀಮಪಿ ।
ಲಿಹ್ಯಾತ್ ಕ್ಷೌದ್ರೇಣ ಭಾರ್ಗೀಂ ವಾ ಸರ್ಪಿರ್ಮಧುಸಮಾಯುತಾಮ್ ॥೩೮॥
ನೀಚೈಃ ಕದಮ್ಬಬೀಜಂ ವಾ ಸ ಕ್ಷೌದ್ರಂ ತಣ್ಡುಲಾಮ್ಬುನಾ ।

ಎಕ್ಕದ ಚಿಗರು ಮತ್ತು ಹೂವುಗಳ ಕಷಾಯದಲ್ಲಿ ಅನೇಕಸಾರಿ ನೆನೆಸಿ ಬಿಸಿಲಿನಲ್ಲಿ ಒಣಗಿಸಿದ ಯವೆಯನ್ನು ಹುರಿದು ಪುಡಿಮಾಡಿ ತರ್ಪಣವನ್ನು ತಯಾರಿಸಿ ಜೇನುತುಪ್ಪವನ್ನು ಮಿಶ್ರಮಾಡಿ ಶ್ವಾಸರೋಗಿಗೆ ಕುಡಿಸಬೇಕು ; ಬಾಗೆ, ಬಾಳೆ, ಮೊಲ್ಲೆ ಹೂವುಗಳಿಗೆ ಹಿಪ್ಪಲಿಯನ್ನು ಸೇರಿಸಿ ಕಲಗಚ್ಚಿನಲ್ಲರೆದು ಕುಡಿಸಿದರೆ ನಿಶ್ಶೇಷವಾಗಿ ನಿವಾರಣೆಯಾಗುತ್ತದೆ ; ಎಲಚಿಹಣ್ಣಿನತಿರುಳು, ನೆಲತಾಳೆಗೆಡ್ಡೆ, ಕರಿಹುಲ್ಲೆಯ ಚರ್ಮವನ್ನು ಸುಟ್ಟಮಸಿ ಇವನ್ನು ಜೇನುತುಪ್ಪದಲ್ಲಿ ರಂಗಳಿಸಿ ಅಥವಾ ಗಂಟು ಪರಂಗಿಯ ಚೂರ್ಣವನ್ನು ತುಪ್ಪ, ಜೇನುತುಪ್ಪಗಳೊಡನೆ ರಂಗಳಿಸಿಯಾಗಲೀ ಸಣ್ಣ ಈಚಲಿನ ಪಕ್ವವಾದ ಹಣ್ಣಿಗೆ ಜೇನುತುಪ್ಪವನ್ನು ಮಿಶ್ರಮಾಡಿ ಅಕ್ಕಿತೊಳೆದ ನೀರಿನಲ್ಲಿ ಕದರಿಯಾಗಲೀ ಕುಡಿಸಿದರೆ ಶ್ವಾಸಕಾಸಹರವು.

ದ್ರಾಕ್ಷಾಂ ಹರೀತಕೀಂ ಕೃಷ್ಣಾಂ ಕರ್ಕಟಾಖ್ಯಾಂ ದುರಾಲಭಾಮ್ ॥೩೯॥
ಸರ್ಪಿರ್ಮಧುಭ್ಯಾಂ ವಿಲಿಹನ್ ಹನ್ತಿ ಶ್ವಾಸಾನ್ ಸುದಾರುಣಾನ್ ।
ಹರಿದ್ರಾಂ ಮರಿಚಂ ದ್ರಾಕ್ಷಾಂ ಗುಡಂ ರಾಸ್ನಾಂ ಕಣಾಂ ಶಠೀಮ್ ॥೪೦॥
ಲಿಹ್ಯಾತ್ ತೈಲೇನ ತುಲ್ಯಾನಿ ಶ್ವಾಸಾರ್ತೋ ಹಿತಭೋಜನಃ ।

ದ್ರಾಕ್ಷಿ, ಅಣಿಲೆಕಾಯಿ, ಶುಂಠಿ, ಕರ್ಕಾಟಕಶೃಂಗಿ, ತುರುಚದಬೇರು, ಇವುಗಳ ಚೂರ್ಣವನ್ನು ತುಪ್ಪ ಜೇನುತುಪ್ಪಗಳೊಡನೆ ರಂಗಳಿಸಿ ನೆಕ್ಕಿಸಿದರೆ ಅತಿ ಕಠಿನವಾದ ಶ್ವಾಸವು ನಿವಾರಣೆಯಾಗುತ್ತದೆ ; ಅರಿಶಿನ, ಮೆಣಸು, ರಾಸ್ಮೆ, ದ್ರಾಕ್ಷಿ, ಬೆಲ್ಲ, ಹಿಪ್ಪಲಿ, ಕರ್ಪೂರಶುಂಠಿ ಇವುಗಳನ್ನು ಸಮಭಾಗದಿಂದ ಸೇರಿಸಿ ಚೂರ್ಣಮಾಡಿ ತಿಲತೈಲದಲ್ಲಿ ಕದರಿಕುಡಿಸಿ ಮಿತವಾದ ಆಹಾರವನ್ನು ಭೋಜನಮಾಡಲು ಶ್ವಾಸಹರವು.

ಗವಾಂ ಪುರೀಷಸರಸಂ ಮಧುಸರ್ಪಿಃ ಕಣಾಯುತಮ್ ॥೪೧॥
ದದ್ಯಾತ್ ಶ್ವಾಸೇಷು ಕಾಸೇಷು ವಾಜಿನಾಂ ವಾ ಶಕೃದ್ರಸಮ್ ।

ಪಾಂಡುರೋಗೇಷು ಶೋಥೇಷು ಯೇ ಯೋಗಾಃ ಸಂಪ್ರಕೀರ್ತಿತಾಃ ||೪೨||
ಶ್ವಾಸಕಾಸಾಪಹಾಸ್ತೇಽಪಿ ಕಾಸಘ್ನಾಯೇ ಚ ಕೀರ್ತಿತಾಃ |

ಹಸುವಿನ ಸಗಣಿಯ ಅಥವಾ ಕುದುರೆಯಲದ್ದಿಯ ರಸಕ್ಕೆ ಜೇನುತುಪ್ಪ, ತುಪ್ಪ ಹಿಪ್ಪಲಿಯ ಚೂರ್ಣವನ್ನು ಮಿಶ್ರಮಾಡಿ ಶ್ವಾಸ ಕಾಸರೋಗಿಗೆ ನೆಕ್ಕಿಸಬೇಕು ; ಪಾಂಡು ರೋಗ, ಶೋಥಕಾಸರೋಗಗಳಲ್ಲಿ ಹೇಳಿರುವ ಔಷಧಯೋಗಗಳೂ ಶ್ವಾಸ ಕಾಸಗಳನ್ನೂ ನಿವಾರಣೆ ಮಾಡುತ್ತವೆ.

ಭಾರ್ಗೀತ್ವಕ್ ತ್ರೂಷಣಂ ತೈಲಂ ಹರಿದ್ರಾಂ ಕಟುರೋಹಿಣೀಮ್ ||೪೩||
ಪಿಪ್ಪಲೀಂ ಮರಿಚಂ ಚಣ್ಡಾಂ ಗೋಶಕೃದ್ರಸಮೇವ ಚ |
ತಲಕೋಟಸ್ಯ ಬೀಜೇಷು ಪಚೇದುತ್ಕಾರಿಕಾಂ ಶುಭಾಮ್ ||೪೪||
ಸೇವ್ಯಮಾನಾ ನಿಹನ್ತ್ಯೇಷಾ ಶ್ವಾಸಾನಾಶು ಸುದುಸ್ತರಾನ್ |

ಗಂಟುಪರಂಗಿ, ದಾಲ್ಚಿನ್ನಿ, ತ್ರಿಕಟು, ತಿಲತೈಲ, ಅರಿಶಿನ, ಕಟುಕರೋಹಿಣಿ, ಹಿಪ್ಪಲಿ, ಮೆಣಸು, ಕಚೋರ, ಹಸುವಿನ ಸಗಣಿಯ ರಸ, ಆವರಿಕೆಯ ಬೀಜಗಳನ್ನು ಸೇರಿಸಿ ಹೋಳಿಗೆಯನ್ನು ಬೇಯಿಸಿ ಸೇವನೆಮಾಡಿದರೆ ಘೋರವಾದ ಶ್ವಾಸಕಾಸರೋಗ ಗಳೂ ಅತಿಕ್ಷಿಪ್ರಕಾಲದಲ್ಲೇ ಗುಣವಾಗುತ್ತವೆ.

ಪುರಾಣಸರ್ಪಿಃ ಪಿಪ್ಪಲ್ಯಃ ಕೌಳತ್ಥಾ ಜಾಙ್ಗಲಾ ರಸಾಃ ||೪೫||
ಸುರಾ ಸೌವೀರಕಂ ಹಿಙ್ಗು ಮಾತುಲುಙ್ಗರಸೋ ಮಧು |
ದ್ರಾಕ್ಷಾಮಲಕಬಿಲ್ವಾನಿ ಶಸ್ತಾನಿ ಶ್ವಾಸಹಿಕ್ಕಿನಾಮ್ ||೪೬||

೧೦ ವರ್ಷದಹಿಂದಿನತುಪ್ಪ, ಹಿಪ್ಪಲಿ, ಹುರುಳಿಕಟ್ಟು, ಜಾಂಗಲಪ್ರಾಣಿಗಳ ಮಾಂಸರಸ, ಮದ್ಯ, ಕಲಗಚ್ಚು, ಹಿಂಗು, ಮಾದಳರಸ, ಜೇನುತುಪ್ಪ, ದ್ರಾಕ್ಷಿ, ನೆಲ್ಲಿಕಾಯಿ, ಬಿಲ್ವಪತ್ರೆಯಹಣ್ಣು, ಇವು ಶ್ವಾಸಕಾಸರೋಗಿಗಳಿಗೆ ಹಿತಕರವಾದವು.

ಶ್ವಾಸಹಿಕ್ಕಾಪರಿಗತಂ ಸ್ನಿಗ್ಧೈಃ ಸ್ವೇದೈರುಪಾಚರೇತ್ |
ಯುಕ್ತೈರ್ಲವಣತೈಲಾಭ್ಯಾಂ ತೈರಸ್ಯ ಗ್ರಥಿತಃ ಕಫಃ ||೪೭||
ಖಸ್ರೋತೋ ವಿಲಯನಂ ಯಾತಿ ಮಾರುತಶ್ಚ ಪ್ರಶಾಮ್ಯತಿ |

ಶ್ವಾಸಹಿಕ್ಕಾರೋಗ ಪೀಡಿತರನ್ನು ಸೈಂಧವಲವಣ ತಿಲತೈಲಗಳಿಂದ ಸ್ನಿಗ್ಧರನ್ನಾಗಿ ಮಾಡಿ (ಲೇಪಿಸಿ) ಸ್ವೇದಮಾಡಿಸಿದರೆ (ಸ್ರೋತಸ್ಸುಗಳಲ್ಲಿ ಘಟ್ಟಿಯಾಗಿ ಮೆತ್ತಿದ ಕಫವು ಕರಗುವುದರಿಂದ) ತಡೆಯಲ್ಪಟ್ಟಿದ್ದ ವಾತವು ಶಮನವಾಗಿ ಶ್ವಾಸಹಿಕ್ಕಾರೋಗಗಳ ಬಾಧೆಯು ಪರಿಹಾರವಾಗುತ್ತದೆ ;

ಸ್ನಿಗ್ಧಂ ಕೃತ್ವಾ ತತಶ್ಚೈವ ಭೋಜಯಿತ್ವಾ ರಸೌದನಮ್ ||೪೮||
ವಾತಶ್ಲೇಷ್ಮವಿಬನ್ಧೇ ವಾ ಭಿಷಗ್ಧೂಮಂ ಪ್ರಯೋಜಯೇತ್ |
ಮನಃಶಿಲಾದೇವದಾರುಹರಿದ್ರಾಪತ್ರಚ್ಛದನಾಮಿಷೈಃ ||೪೯||
ಲಾಕ್ಷೋರುಬೂಕಮೂಲೈಶ್ಚ ಕೃತ್ವಾ ವರ್ತೀರ್ವಿಧಾನತಃ |
ಸರ್ಜಿಯರ್ಜವಮಧೂಚ್ಛಿಷ್ಟಶಾಲನಿರ್ಯಾಸಜಂ ತಥಾ ||೫೦||

ಸ್ನಿಗ್ಧನನ್ನಾಗಿಮಾಡಿ ಸ್ವೇದಮಾಡಿಸಿದರೂ ವಾತಕಫಾನುಬಂಧವು ಶಮನವಾಗ ದಿದ್ದರೆ ಮಾಂಸರಸೌದನವನ್ನು ಭೋಜನಮಾಡಿಸಿ ಧೂಮಪ್ರಯೋಗವನ್ನು ಮಾಡಿಸ ಬೇಕು ; ಮಣಶಿಲೆ, ದೇವದಾರು, ಲವಂಗಪತ್ರೆ, ಗುಗ್ಗುಳು, ಅರಗು, ಹರಳು ಬೇರು ಇವುಗಳನ್ನು ಸೇರಿಸಿ ತಯಾರಿಸಿದ ಬತ್ತಿಗಳಿಂದಾಗಲೀ ತುಪ್ಪ, ಯವಧಾನ್ಯ, ಮದನ ಫಲ, ಸರ್ಜರಸ ಇವುಗಳ ಧೂಮವನ್ನಾಗಲೀ ಉಪಯೋಗಿಸಬೇಕು.

ಶೃಙ್ಗವಾಲಖುರಶ್ನಾಯುತ್ವಕ್ ಸಮಸ್ತಾಃ ಗವಾಮಪಿ ।
ತುರುಷ್ಕಶಲ್ಲಕೀನಾಂ ಚ ಗುಗ್ಗುಲೋಃ ಪದ್ಮಕಸ್ಯ ಚ ॥೫೧॥
ಏತೇ ಸರ್ವೇ ಸಸರ್ಪಿಷ್ಕಾ ಧೂಮಾಃ ಕಾರ್ಯಾ ವಿಜಾನತಾ ।
ಬಲೀಯಸಿ ಕಫಗ್ರಸ್ತೇ ವಮನಂ ಸವಿರೇಚನಮ್ ॥೫೨॥
ದುರ್ಬಲೇ ಚೈವ ರೂಕ್ಷೇ ಚ ತರ್ಪಣಂ ಹಿತಮುಚ್ಯತೇ ।
ಜಾಙ್ಗಲೋರಭ್ರಜೈರ್ಮಾಂಸೈರಾನೂಪೈರ್ವಾ ಸುಸಂಸ್ಕೃತೈಃ ॥೫೩॥

ಹಸುವಿನಕೊಂಬು, ಬಾಲ, ಗೊರಸು, ನರ, ಚರ್ಮ, ಇವುಗಳೆಲ್ಲವನ್ನೂ ಹಾಲು ಮಡ್ಡಿ, ನಾಯಿಬೇಲದಗೋಂದು, ಗುಗ್ಗುಳು, ಪದ್ಮಕ ಇವೆಲ್ಲವನ್ನೂ ಸೇರಿಸಿ ತುಪ್ಪಮಿಶ್ರ ಮಾಡಿ ಕೆಂಡದಮೇಲೆಹಾಕಿ ಬಂದ ಧೂಮವನ್ನು (ಹೊಗೆಯನ್ನು) ಪಾನಮಾಡಿಸಬೇಕು ; ರೋಗಿಯು ಬಲಿಷ್ಠನಾಗಿದ್ದು ಕಫಗ್ರಸ್ತನಾಗಿದ್ದರೆ ವಮನವನ್ನೂ ವಿರೇಚನವನ್ನೂ ಮಾಡಿಸಬೇಕು ; ದುರ್ಬಲನಾಗಿ ರೂಕ್ಷನಾಗಿದ್ದರೆ ತರ್ಪಣಮಾಡಿಸುವುದು ಹಿತಕರವು ; ಜಾಂಗಲಪ್ರಾಣಿಗಳ (ಕುರಿಗಳ) ಮತ್ತು ಅನೂಪ ಪ್ರಾಣಿಗಳ ಮಾಂಸಗಳನ್ನು ಸರಿಯಾಗಿ ಸಂಸ್ಕರಿಸಿ ಪ್ರಯೋಗಿಸಬೇಕು.

ನಿದಿಗ್ಧಿಕಾಂ ಚಾಮಲಕಪ್ರಮಾಣಂ ಹಿಙ್ಗ್ವರ್ಧಯುಕ್ತಾಂ ಮಧುನಾ ಸಯುಕ್ತಾಮ್ ।
ಲಿಹನ್ನರಃ ಶ್ವಾಸನಿಪೀಡಿತೋ ಹಿ ಶ್ವಾಸಸ್ಯ ನಿಹತ್ಯೇವ ಬಲಾತ್ ತ್ರಯಹೇಣ ॥೫೪॥

ನೆಲಗುಳ್ಳದಕಲ್ಕಕ್ಕೆ ನೆಲ್ಲಿಕಾಯಿನಷ್ಟುಗಾತ್ರದ ಅರ್ಧದಷ್ಟು ಹಿಂಗು ಜೇನುತುಪ್ಪ ವನ್ನೂ ಮಿಶ್ರಮಾಡಿ ಮೂರುದಿನಗಳವರೆಗೆ ಪ್ರಯೋಗಮಾಡಿದರೆ ಬಲಾತ್ಕಾರದಿಂದ ಶ್ವಾಸ ರೋಗವು ನಿವಾರಣೆಯಾಗುತ್ತದೆ.

ಯಥಾಗ್ನಿರಿದ್ಧಃ ಪವನಾನುವಿದ್ಧೋ ವಜ್ರಂ ಯಥಾ ವಾ ಸುರರಾಜ ಮುಕ್ತಮ್ ।
ರೋಗಾಸ್ತಥೈತೇ ಖಲು ದುರ್ನಿವಾರಾಃ ಶ್ವಾಸಶ್ಚ ಕಾಸಶ್ಚ ವಿಲಮ್ಬಿಕಾಚ ॥೫೫॥

ಜಾಠರಾಗ್ನಿಯುದೀಪ್ತಿಯಾಗಿದ್ದು ವಾತದೊಡನೆಸೇರಿದರೆ ಅದರ (ವೇಗವನ್ನು) ತೀಕ್ಷ್ಣತೆಯನ್ನು ತಡೆಯುವುದು ಹೇಗೆ ಅಸಾಧ್ಯವೊ, ಇಂದ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧದ ವೇಗವನ್ನು ತಡೆಯುವುದು ಹೇಗೆ ಅಸಾಧ್ಯವೋ ಅದೇರೀತಿಯಲ್ಲಿ ಶ್ವಾಸ, ಕಾಸ, ವಿಲಂಬಿಕಾ ರೋಗಗಳನ್ನು ನಿವಾರಣೆಮಾಡುವುದೂ ಅಷ್ಟೇ ಅಸಾಧ್ಯವೆಂದು ತಿಳಿಯಬೇಕು.

ಇತಿ ಶ್ರೀಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ
ಶ್ವಾಸಪ್ರತಿಷೇಧನಾಮೈಕಪಞ್ಚಾಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪ
ನಾಮಕ ಶ್ರೀಲಕ್ಷ್ಮೀನೃಸಿಂಹಕೃತಕರ್ಣಾಟಕ ಭಾಷಾವಿವೃತಿಃ

ದ್ವಿಪಞ್ಚಾಶತ್ತಮೋಽಧ್ಯಾಯಃ

ಅಥಾತಃ ಕಾಸಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ॥೧॥

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಕಾಸಚಿಕಿತ್ಸೆಯನ್ನು ವಿವರಿಸುತ್ತೇವೆ.

ಉಕ್ತಾ ಯೇ ಹೇತವೋ ನೃಣಾಂ ರೋಗಯೋಃ ಶ್ವಾಸಹಿಕ್ಕಯೋಃ ।
ಕಾಸಸ್ಯಾಪಿ ಚ ವಿಜ್ಞೇಯಾ ಸ್ತ ಏವೋತ್ಪತ್ತಿಹೇತವಃ ॥೩॥

ಶ್ವಾಸ ಮತ್ತು ಹಿಕ್ಕಾರೋಗಗಳುಂಟಾಗುವ ಕಾರಣಗಳಿಂದಲೇ ಕಾಸರೋಗವೂ ಉಂಟಾಗುತ್ತದೆಂದು ತಿಳಿಯಬೇಕು.

(ಧೂಮೋಪಘಾತಾದ್ರಜಸಸ್ತಥೈವ ವ್ಯಾಯಾಮರೂಕ್ಷಾನ್ನನಿಷೇವಣಾಚ್ಚ ।
ವಿಮಾರ್ಗಗತ್ವಾದಪಿ ಭೋಜನಸ್ಯ ವೇಗಾವರೋಧಾತ್ ಕ್ಷವಥೋ ಸ್ತಥೈವ ॥)
ಪ್ರಾಣೋಹ್ಯುದಾನಾನುಗತಃ ಪ್ರದುಷ್ಟಃ ಸಂಭಿನ್ನಕಾಂಸ್ಯಸ್ವನತುಲ್ಯ ಘೋಷಃ ।
ನಿರೇತಿ ವಕ್ತ್ರಾತ್ ಸಹಸಾ ಸದೋಷಃ ಕಾಸಃ ಸ ವಿದ್ವದ್ಭಿರುದಾಹೃತಸ್ತು ॥೪॥
ಸ ವಾತಪಿತ್ತಪ್ರಭವಃ ಕಫಾಚ್ಚ ಕ್ಷತಾತ್ ತಥಾನ್ಯಃ ಕ್ಷಯಜೋಽಪರಶ್ಚ ।
ಪಞ್ಚಪ್ರಕಾರಃ ಕಥಿತೋ ಭಿಷಗ್ಭಿರ್ವಿವರ್ಧಿತೋ ಯಕ್ಷ್ಮವಿಕಾರ ಕೃತ್ ಸ್ಯಾತ್ ॥೫॥

ಹೊಗೆಯೂ ಧೂಳೂ ಮೂಗು ಮತ್ತು ಬಾಯಿಗಳಿಂದ ಶರೀರದೊಳಗೆ ಪ್ರವೇಶಿಸುವಾಗ ತಡೆಯುಂಟಾಗುವುದರಿಂದಲೂ ವ್ಯಾಯಾಮ ರೂಕ್ಷವಾದ ಅನ್ನಗಳನ್ನು ಸೇವಿಸುವುದರಿಂದಲೂ ತಿಂದ ಅನ್ನವು ಅನ್ನನಾಳದ ಮೂಲಕ ಬರದೆ ಶ್ವಾಸನಾಳಕ್ಕೆ ಪ್ರವೇಶಿಸುವುದರಿಂದಲೂ ಮಲಮೂತ್ರಾದಿಗಳ ವೇಗಗಳನ್ನೂ ಹಾಗೆಯೇ ಶೀನನ್ನು ತಡೆಯುವುದರಿಂದಲೂ (ಕಾರಣಗಳಿಂದ) ಪ್ರಕುಪಿತವಾದ ಪ್ರಾಣವಾಯುವು ಉದಾನದೊಡನೆ ಸೇರಿ ಸೇರಿ ಒಡೆದುಹೋದ ಕಂಚಿನಪಾತ್ರೆಯನ್ನು ಬಡಿದರೆ ಉಂಟಾಗುವಂತೆ ಧ್ವನಿಮಾಡುತ್ತಾ ದೋಷಸಹಿತವಾಗಿ ಮುಖದಿಂದ ಹೊರಕ್ಕೆ ಹೊರಟುಬಂದರೆ ವೈದ್ಯಶ್ರೇಷ್ಠರು ಈ ವ್ಯಾಧಿಗೆ "ಕಾಸರೋಗ"ವೆಂದು ಹೇಳುತ್ತಾರೆ.

ಭವಿಷ್ಯತಸ್ತಸ್ಯ ತು ಕಣ್ಠಕಣ್ಡೂರ್ಭೋಜ್ಯೋಪರೋಧೋ ಗಳತಾಲು ಲೇಪಃ ।
ಸ ಶಬ್ದವೈಷಮ್ಯಮರೋಚಕೋಽಗ್ನಿಸಾದಶ್ಚ ಲಿಙ್ಗಾನಿ ಭವನ್ತ್ಯಮೂನಿ ॥೬॥
ಹೃಚ್ಛಙ್ಖಮೂರ್ಧೋದರಪಾರ್ಶ್ವಶೂಲೀ ಕ್ಷಾಮಾನನಃ ಕ್ಷೀಣ ಬಲಸ್ವರೋಜಾಃ ।
ಪ್ರಸಕ್ತಮನ್ತಃ ಕಫಮೀರಣೇನ ಕಾಸೇತ್ತುಶುಷ್ಕಂ ಸ್ವರಭೇದ ಯುಕ್ತಃ ॥೭॥
ಉರೋವಿದಾಹಜ್ವರವಕ್ತ್ರಶೋಷೈರಭ್ಯರ್ದಿತಸ್ತಿಕ್ತಮುಖಸ್ತೃಷಾರ್ತಃ ।

ಪಿತ್ತೇನ ಪೀತಾನಿ ವಮೇತ್ಕಟೂನಿ ಕಾಸೇತ್ಸಪಾಣ್ಡುಃ ಪರಿದಹ್ಯಮಾನಃ ॥೮॥
ಪ್ರಲಿಪ್ಯಮಾನೇನ ಮುಖೇನ ಸೀದೇ ಶಿರೋರುಜಾರ್ತಃ ಕಫ ಪೂರ್ಣದೇಹಃ ।
ಅಭಕ್ತರುಗ್ಗೌರವಸಾದಯುಕ್ತಃ ಕಾಸೇನ ನಾ ಸಾನ್ದ್ರಕಫಂ ಕಫೇನ ॥೯॥

ಗಂಟಲೊಳಗೆ ಕೆರೆತವಾಗುವುದು ತಿಂದ ಆಹಾರವು ಗಂಟಲಿನಲ್ಲಿ ನಿಲ್ಲುವುದು, ಗಂಟಲಲ್ಲೂ, ಅಂಗಳಲ್ಲೂ, ಕಫಮೆತ್ತಿಕೊಂಡಿರುವುದು, ಸ್ವಾಭಾವಿಕವಾದ ಧ್ವನಿಯು ಬದಲಾಗುವುದು, ಅರುಚಿ, ಅಗ್ನಿಮಾಂದ್ಯ ಇವು ಕಾಸರೋಗದ ಪೂರ್ವರೂಪಗಳೆಂದು ತಿಳಿಯುಬೇಕು ; ಹೃದಯ ಕೆನ್ನೆ (ಶಂಖದೇಶ) ತಲೆ, ಹೊಟ್ಟೆ, ಪಕ್ಕೆಗಳಲ್ಲಿ ಶೂಲೆಯಾಗುವುದೂ ಮುಖಬಲ ಸ್ವರ ಮತ್ತು ಓಜಸ್ಸುಗಳು ಕ್ಷೀಣಿಸುವುದು ; ಕಫವು ಒಣಗಿ ಬರಿಕೆಮ್ಮು ಬರುವುದು ಸ್ವರಭೇದ ಇವು ವಾತಕಾಸದ ಲಕ್ಷಣಗಳು, ಎದೆಯುರಿತ ಜ್ವರ ಮುಖಶೋಷ ಬಾಯಿಕಹಿ ನೀರಡಿಕೆ ಹಳತಿಬಣ್ಣ ಮತ್ತು ಕಟುರಸವುಳ್ಳ ಕಫವನ್ನು ವಮನಮಾಡುತ್ತಾ ಮೈ ಬೆಳ್ಳಗಾಗಿ ಮೈ ಉರಿಯುತ್ತಿದ್ದರೆ ಪಿತ್ತಕಾಸದ ಲಕ್ಷಣಗಳೆಂದೂ ಮುಖದಲ್ಲಿ ಕಫವು ಮೆತ್ತಿಕೊಂಡು ಬಳಲಿಕೆ ತಲೆನೋವಿನಿಂದ ಪೀಡಿತನಾಗಿ ದೇಹದಲ್ಲಿ ಕಫತುಂಬಿದವನಾಗಿ ಆಹಾರದಲ್ಲಿ ಅರೋಚಕತೆಯು ಮೈಭಾರವೂ ಮೈಕ್ಷೀಣತೆಯೂ ಕೆಮ್ಮಿದರೆ ಗಟ್ಟಿಯಾದ ಕಫದಮುದ್ದೆಯನ್ನೆ ಉಗುಳುತ್ತಿದ್ದರೆ ಕಫಾಕಾಸದ ಲಕ್ಷಣಗಳೆಂದೂ ತಿಳಿಯಬೇಕು.

ವಕ್ಷೋಽತಿಮಾತ್ರಂ ವಿಹತಂ ತು ಯಸ್ಯ ವ್ಯಾಯಾಮಭಾರಾಧ್ಯಯನಾಭಿಘಾತೈಃ ।
ವಿಶ್ಲಿಷ್ಟವಕ್ಷಾಃ ಸನರಃ ಸರಕ್ತಂ ಷ್ಠೀವತ್ಯಭೀಕ್ಷ್ಣಂ ಕ್ಷತಜಂ ತಮಾಹುಃ ॥೧೦॥
ಸಗಾತ್ರಶೂಲಜ್ವರದಾಹಮೋಹಾ ಪ್ರಾಣಕ್ಷಯಂ ಚಾಪಿ ಲಭೇತ ಕಾಸೀ ।
ಶುಷ್ಕ ವಿನಿಷ್ಠೀವತಿ ದುರ್ಬಲಸ್ತು ಪ್ರಕ್ಷೀಣಮಾಂಸೋರುಧಿರಂ ಸಪೂಯಮ್ ॥೧೧॥
ಸಸರ್ವಲಿಙ್ಗಂ ಭೃಶದುಶ್ಚಿಕಿತ್ಸ್ಯಂ ಚಿಕಿತ್ಸಿತಜ್ಞಾಃ ಕ್ಷಯಜಂ ವದನ್ತಿ,
ವೃದ್ಧತ್ವಮಾಸಾದ್ಯ ಭವತ್ಯಥೋಯೈ ಯಾಪ್ಯಂ ತಮಾಹುರ್ಭಿಸ ಜಸ್ತು ಕಾದಮ್
॥೧೨॥

ಕೆಲವರು ಜತ್ರು ಕತ್ತು ಪಕ್ಕೆಗಳ ಮಧ್ಯಭಾಗಕ್ಕೆ ವಕ್ಷಸ್ಸೆನ್ನುತ್ತಾರೆ. ಯಾವ ಮನುಷ್ಯನಿಗೆ ಎದೆಗೆ ಅತಿಯಾಗಿ ಪೆಟ್ಟುಬೀಳುವುದು ವ್ಯಾಯಾಮ ಹೊರೆಯನ್ನು ಹೊರುವುದು ಗಟ್ಟಿಯಾಗಿ ಅಧ್ಯಯನಮಾಡುವುದು ಇವುಗಳಿಂದ ಎದೆಯೊಡೆದು ಕಫಮಿಶ್ರವಾಗಿ ರಕ್ತವನ್ನೇ ಕ್ಯಾಕರಿಸಿ ಉಗುಳಿದರೆ ಕ್ಷತಜಕಾಸವೆಂದು ಹೇಳುತ್ತಾರೆ ; ಈ ರೋಗಿಗೆ ಮೈಶೂಲೆ, ಉರಿತ, ಜ್ಞಾನತಪ್ಪುವುದು ಈ ಲಕ್ಷಣಗಳಿದ್ದರೆ ಪ್ರಾಣನಾಶವಾಗುತ್ತದೆ. ದುರ್ಬಲನಾಗಿ, ಕೃಶನಾಗಿ, ಕ್ಷೀಣವಾದ ರಕ್ತಮಾಂಸಧಾತುಗಳುಳ್ಳವನಾಗಿ ಕೀವುಮಿಶ್ರವಾದ ರಕ್ತವನ್ನು ಉಗುಳುತ್ತಿದ್ದರೆ ತ್ರಿದೋಷಲಕ್ಷಣಗಳುಳ್ಳ ಕಾಸವೆಂದೂ ದುಃಚಿಕಿತ್ಸೆಯುಳ್ಳ ಕ್ಷಯಕಾಸವೆಂದೂ ವೃದ್ಧರಿಗೆ ಉಂಟಾದ ಈ ಕಾಸರೋಗವು ಯಾಪ್ಯವೆಂದೂ ವೈದ್ಯರ ಮತವು.

ಶೃಙ್ಗೀವಚಾಕಟ್ಫಲಕತ್ತೃಣಾಬ್ದಧಾನ್ಯಾಭಯಾಭಾರ್ಗ್ಯಮರಾಹ್ವವಿಶ್ವಮ್ ।
ಉಷ್ಣಾಮ್ಬುನಾ ಹಿಙ್ಗುಯುತಂ ತು ಪೀತ್ವಾಬದ್ಧಾಸ್ಯಮುಪ್ಯಾಶು ಜಹಾತಿ ಕಾಸಮ್ ॥೧೩॥

ಫಲತ್ರಿಕವ್ಯೋಷವಿಡಙ್ಗಶೃಙ್ಗೀ ರಾಸ್ನಾ ವಚಾ ಪದ್ಮಕದೇವಕಾಷ್ಠೈಃ ।
ಲೇಹಃ ಸಮೈಃ ಕ್ಷೌದ್ರಸಿತಾಘೃತಾಕ್ತಃ ಕಾಸಂ ನಿಹನ್ಯಾದಚಿರಾದುದೀರ್ಣಮ್ ॥೧೪॥

ಕರ್ಕಾಟಕಶೃಂಗಿ, ಬಜೆ, ಕಿರಿಯಶಿವನಿ (ಕಾಯಫಲ) ಪರಿಮಳಗಂಜಣಿ, ಕೊನ್ನಾರಿಗೆಡ್ಡೆ, ಕೊತ್ತುಂಬರಿಬೀಜ, ಅಣಿಲೆಕಾಯಿ, ಗಂಟುಪರಂಗಿ, ದೇವದಾರು, ಶುಂಠಿ, ಇವುಗಳ ಚೂರ್ಣವನ್ನು ಸ್ವಲ್ಪ ಹಿಂಗಿನೊಡನೆ ಬಿಸಿನೀರಿನಲ್ಲಿ ಕದರಿಕುಡಿಸಿದರೆ ಬಲುಕಾಲ ದಿಂದಪೀಡಿಸುತ್ತಿದ್ದ ಕಾಸರೋಗವೂ ಬಲುಬೇಗನಿವಾರಣೆಯಾಗುತ್ತದೆ ; ತ್ರಿಫಲೆ, ತ್ರಿಕಟು, ವಿಡಂಗ, ಕರ್ಕಾಟಕಶೃಂಗಿ, ರಾಶ್ಮೆ, ಬಜೆ, ಪದ್ಮಕ, ದೇವದಾರು, ಇವುಗಳನ್ನು ಸಮಭಾಗ ದಿಂದ ಚೂರ್ಣಮಾಡಿ ಸಕ್ಕರೆ, ಜೇನುತುಪ್ಪ, ತುಪ್ಪಗಳನ್ನು ಮಿಶ್ರಮಾಡಿ ನೆಕ್ಕಿಸಿದರೆ ಸ್ವಲ್ಪಕಾಲದಲ್ಲೇ ಅತಿಯಾಗಿ ಕೆರಳಿದ ಕಾಸವು ನಾಶವಾಗುತ್ತದೆ.

ಪಥ್ಯಾಂ ಸಿತಾಮಾಮಲಕಾನಿ ಲಾಜಾಂ ಸಮಾಗಧೀಂ ಚಾಪಿ ವಿಚೂರ್ಣ್ಯಶುಣ್ಠೀಮ್ ।
ಸರ್ಪಿರ್ಮಧುಭ್ಯಾಂ ವಿಲಿಹೀತ ಕಾಸೀ ಸಸೈನ್ಧವಾಂ ಪ್ರೋಷ್ಣಜಲೇನ ಕೃಷ್ಣಾಮ್ ॥೧೫॥
ಖಾದೇದ್ಗುಡಂ ನಾಗರಪಿಪ್ಪಲೀಭ್ಯಾಂ ದ್ರಾಕ್ಷಾಂ ಚ ಸರ್ಪಿರ್ಮಧುನಾವಲಿಹ್ಯಾತ್ ।
ದ್ರಾಕ್ಷಾಂ ಸಿತಾಂ ಮಾಗಧಿಕಾಂ ಚ ತುಲ್ಯಾಂ ಸಶೃಙ್ಗವೇರಂ ಮಧುಕಂ ತುಗಾಂ ಚ ॥೧೬॥

ಲಿಹ್ಯಾದ್ಘೃತಕ್ಷೌದ್ರಯುತಂ ಸಮಾಂಶಂ ಸಿತೋಪಲಾಂ ವಾ ಮರಿಚಾಂಶಯುಕ್ತಾಮ್ ।
ಧಾತ್ರೀಕಣಾವಿಶ್ವಸಿತೋಪಲಾಶ್ಚ ಸಂಚೂರ್ಣ್ಯ ಮಣ್ಡೇನ ಪಿಬೇಚ್ಚ ದಧ್ನಃ ॥೧೭॥

ಅಣಿಲೆಕಾಯಿ, ಸಕ್ಕರೆ, ನೆಲ್ಲಿಕಾಯಿ, ಭತ್ತದ ಅರಳು, ಹಿಪ್ಪಲಿ, ಶುಂಠಿ, ಇವುಗಳನ್ನು ಸಮಭಾಗದಿಂದ ಸೇರಿಸಿ ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ಕಾಸ ರೋಗಿಗೆ ತಿನ್ನಿಸಬೇಕು ; ಹಿಪ್ಪಲಿಯಚೂರ್ಣಕ್ಕೆ ಸೈಂಧವವನ್ನು ಮಿಶ್ರಮಾಡಿ ಬಿಸಿ ನೀರಿನಲ್ಲಿ ಕದರಿ ಕುಡಿಸಬೇಕು ; ದ್ರಾಕ್ಷಿ, ಶುಂಠಿ, ಅತಿಮಧುರ, ಬಿದರುಪ್ಪು, ಇವುಗಳನ್ನು ಸಮಭಾಗದಿಂದ ಕುಡಿಸಿ ತುಪ್ಪ ಮತ್ತು ಜೇನುತುಪ್ಪಗಳಿಂದ ರಂಗಳಿಸಿಯೂ ಅಥವಾ ಸಕ್ಕರೆಮೆಣಸುಗಳನ್ನು ಸಮಭಾಗದಿಂದ ಚೂರ್ಣಿಸಿ ತುಪ್ಪ, ಜೇನುತುಪ್ಪಗಳೊಡನೆ ಕಲಸಿಯೂ, ನೆಲ್ಲಿಕಾಯಿ, ಹಿಪ್ಪಲಿ, ಶುಂಠಿ, ಸಕ್ಕರೆ ಇವುಗಳನ್ನು ಸಮಭಾಗ ಮಿಶ್ರಮಾಡಿ ಚೂರ್ಣಿಸಿ ಮೊಸರಿನ ಮೇಲಿನ ತಿಳಿನೀರಿನಿಂದ (ಮಸ್ತು) ಕದರಿ ಕುಡಿಸಿಯೂ ಪ್ರಯೋಗಿಸಿದರೆ ಕಾಸರೋಗವು ನಿವಾರಣೆಯಾಗುತ್ತದೆ. (ಈ ೪ ಯೋಗಗಳನ್ನೂ ಪ್ರತ್ಯೇಕವಾಗಿ ಕಾಸಹರಗಳೆಂದು ತಿಳಿಯಬೇಕು).

ಹರೇಣುಕಾಂ ಮಾಗಧಿಕಾಂ ಚ ತುಲ್ಯಾಂ ದಧ್ನಾ ಪಿಬೇತ್ ಕಾಸ ಗದಾಭಿಭೂತಃ ।
ಉಭೇ ಹರಿದ್ರೇ ಸುರದಾರು ಶುಣ್ಠೀಂ ಗಾಯತ್ರಿಸಾರಂ ಚ ಪಿಬೇತ್ ಸಮಾಂಶಮ್ ॥೧೮॥

ಬಸ್ತಸ್ಯ ಮೂತ್ರೇಣ ಸುಖಾಮ್ಬುನಾ ವಾ ದನ್ತೀಂ ದ್ರವನ್ತೀಂಚ ಸತಿಲ್ವಕಾಂಶಾಮ್ ।
ಭೃಷ್ಟಾನಿ ಸರ್ಪಿಷ್ಯಥ ಬಾದರಾಣಿ ಖಾದೇತ್ ಪಲಾಶಾನಿ ಸಸೈನ್ಧವಾನಿ ॥೧೯॥
ಕೋಲಪ್ರಮಾಣಂ ಪ್ರಪಿಬೇದ್ಧಿ ಹಿಙ್ಗು ಸೌವೀರಕೇಣಾಮ್ಲ ರಸೇನವಾಪಿ ।
ಕ್ಷೌದ್ರೇಣ ಲಿಹ್ಯಾನ್ಮರಿಚಾನಿ ವಾಪಿ ಭಾರ್ಗೀ ವಚಾಹಿಙ್ಗುಕೃತಾ ಚ ವರ್ತಿಃ ॥೨೦॥
ಧೂಮೇ ಪ್ರಶಸ್ತಾ ಘೃತಸಂಪ್ರಯುಕ್ತಾ ವೇಣುತ್ವಗೆಲಾಲವಣೈಃ ಕೃತಾ ವಾ ।

ರೇಣುಕೇಬೀಜ, ಹಿಪ್ಪಲಿಗಳನ್ನು ಸಮಭಾಗ ಚೂರ್ಣಿಸಿ ಮೊಸರಿನಲ್ಲಿ ಕದರಿಯಾಗಲೀ, ಅರಿಶಿನ, ಮರದರಿಶಿನ, ದೇವದಾರು, ಶುಂಠಿ, ಕಾಂಚು ಇವುಗಳ ಸಮಭಾಗ ಚೂರ್ಣವನ್ನು ಆಡಿನಮೂತ್ರ ಅಥವಾ ಬಿಸಿನೀರಿನಲ್ಲೂ, ಜಾಪಾಳದ ತೊಗಟೇ ಇಲಿಕಿವಿ ಸೊಪ್ಪು, ಲೋಧ್ರಗಳ ಸಮಭಾಗ ಕಲ್ಕವನ್ನು ಬಿಸಿನೀರಿನಲ್ಲಿಯೂ ಕದರಿ ಕುಡಿಸಬೇಕು. ಬೋರೆಸೊಪ್ಪನ್ನು ತುಪ್ಪದಲ್ಲರೆದು ಸೈಂಧವಮಿಶ್ರಮಾಡಿ ತಿನ್ನಿಸಬೇಕು. ೧ ಕರ್ಷ ಪ್ರಮಾಣದಷ್ಟು ಹಿಂಗನ್ನು ಕಲಗಚ್ಚಿನಲ್ಲಿ ಅಥವಾ ಮಾದಳದ ಹುಳಿರಸದಲ್ಲಿ ಕದರಿ ಕುಡಿಸಬೇಕು. ಮೆಣಸಿನ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ನೆಕ್ಕಿಸಿದರೆ ಕಾಸ ಹರವಾಗುತ್ತದೆ. ಗಂಟುಪುರಂಗಿ, ಬಜೆ, ಹಿಂಗು ಇವುಗಳನ್ನು ಅರೆದು ತಯಾರಿಸಿದ ಬತ್ತಿಗೆ ತುಪ್ಪವನ್ನು ಬಳಿದು ಬೆಂಕಿಯಿಂದ ಹತ್ತಿಸಿ ಬರುವ ಹೊಗೆಯನ್ನು ಕಾಸರೋಗದಲ್ಲಿ ಧೂಮ ಪಾನ ಮಾಡಿದರೆ ಹಿತಕರವು. ಬಿದರುಕಳಲೆ, ದಾಲ್ಚಿನ್ನಿ, ಏಲಕ್ಕಿ, ಸೈಂಧವಗಳಿಂದ ತಯಾರಿಸಿದ ಬತ್ತಿಗೆ ತುಪ್ಪವನ್ನು ಬಳಿದು ಬೆಂಕಿಯನ್ನು ಹೊತ್ತಿಸಿ ಬರುವ ಹೊಗೆಯನ್ನು ಧೂಮಪಾನ ಮಾಡಲು ಕಾಸಹರವಾಗುತ್ತದೆ.

ಮಃಸ್ತೇಙ್ಗುದೀತ್ವಙ್ಮಧುಕಾಹ್ವಮಾಂಸೀ ಮನಃ ಶಿಲಾಲೈಶ್ಚಗಲಾಮ್ಬುಪಿಷ್ಟೈಃ ॥೨೧॥
ವಿಧಾಯ ವರ್ತೀಃ ಸಪಯೋಽನುಪಾನಂ ಧೂಮಂ ಪಿಬೇತ್ ವಾತ ಬಲಾಸಕಾಸೀ ।
ಪಿಬೇಚ್ಚ ಸೀಧುಂ ಮರಿಚಾನ್ವಿತಂ ವಾ ತೇನಾಶು ಕಾಸಂ ಜಯತಿ ಪ್ರಸಹ್ಯ ॥೨೨॥
ದ್ರಾಕ್ಷಾಮ್ಬು ಮಞ್ಜಿಷ್ಠ ಪುರಾಹ್ವಯಾಭಿಃ ಕ್ಷೀರಂ ಶೃತಂಮಾಕ್ಷಿಕಸಂಪ್ರಯುಕ್ತಮ್ ।
ನಿದಿಗ್ಧಿಕಾನಾಗರಪಿಪ್ಪಲೀಭಿಃ ಖಾದೇಚ್ಚಮುದ್ಗಾರ್ಮಧುನಾ ಸುಸಿದ್ಧಾನ್ ॥೨೩॥

ಕೊನ್ನಾರಿಗೆಡ್ಡೆ, ಇಂಗಳದಹಣ್ಣು, ದಾಲ್ಚಿನ್ನಿ, ಅತಿಮಧುರ, ಜಟಾಮಾಂಸಿ, ಮಣಶಿಲೆ, ಅರಿದಳ ಇವನ್ನು ಆಡಿನ ಮೂತ್ರದಲ್ಲರೆದು ಬತ್ತಿಯನ್ನು ಮಾಡಿ ಹತ್ತಿಸಿ ಧೂಮ ಪಾನ ಮಾಡಿಸಿ ಹಾಲನ್ನು ಕುಡಿಸಿದರೆ ವಾತಕಫಕಾಸಹರವು. ಮೆಣಸಿನ ಚೂರ್ಣವನ್ನು ಸೀಧುವೆಂಬ ಮದ್ಯಕ್ಕೆ ಸೇರಿಸಿ ಕುಡಿಸಿದರೆ ಬಲವಂತದಿಂದ ಕಾಸವು ಶಮನಗೊಳ್ಳುತ್ತದೆ. ದ್ರಾಕ್ಷಿ, ಮುಡಿವಾಳ, ಮಂಜಿಷ್ಠೆ, ಗುಗ್ಗುಳುಗಳನ್ನು ಸೇರಿಸಿ ತಯಾರಿಸಿದ ಹಾಲಿಗೆ ಜೇನುತುಪ್ಪ ಮಿಶ್ರಮಾಡಿ ಕುಡಿಸಿ, ನೆಲಗುಳ್ಳದ ಬೇರು, ಶುಂಠಿ, ಹಿಪ್ಪಲಿಗಳ ಚೂರ್ಣವನ್ನು ಮಿಶ್ರಮಾಡಿದ ಹೆಸರುತೊವ್ವೆಯನ್ನು ತಿನ್ನಿಸಬೇಕು.

ಉತ್ಕಾರಿಕಾಂ ಸರ್ಪಿಷಿ ನಾಗರಾಢ್ಯಾಂ ಪಕ್ತ್ವಾ ಸಮೂಲೈಸ್ತ್ರುಟಿ ಕೋಲಪತ್ರೈಃ ।
ಏಭಿರ್ನಿಷೇವೇತ ಕೃತಾಂ ಚ ಪೇಯಾಂ ತನ್ವೀಂ ಸುಶೀತಾಂ ಮಧುನಾ ವಿಮಿಶ್ರಾಮ್ ॥೨೪॥

ಯತ್ ಪ್ಲೀಹ್ನಿ ಸರ್ಪಿರ್ವಿಹಿತಂ ಷಡಙ್ಗಂ ತದಾ ತದ್ವಾತಕಾಸಂ ಜಯತಿ ಪ್ರಸಹ್ಯ ।
ವಿದಾರಿಗನ್ಧಾದಿಕೃತಂ ಘೃತಂ ವಾ ರಸೇನ ವಾ ವಾಸಕಜೇನ ಪಕ್ವಮ್ ॥೨೫॥

ವೋಡಿ, ಏಲಕ್ಕಿ, ಎಲಚಿಸೊಪ್ಪುಗಳನ್ನೂ ಹೆಚ್ಚಾಗಿ ಶುಂಠಿಯನ್ನೂ ಸೇರಿಸಿ ತುಪ್ಪದಲ್ಲಿ ಕರಿದ ಹೋಳಿಗೆಯನ್ನು ತಿನ್ನಿಸಿ, ಈ ದ್ರವ್ಯಗಳ ಕಷಾಯದಿಂದ ಪೇಯಾವನ್ನು ತಯಾರಿಸಿ ನೀರಾಗಿಯೂ ತಣ್ಣಗೂ ಜೇನುತುಪ್ಪ ಮಿಶ್ರಮಾಡಿಯೂ ಕುಡಿಸಬೇಕು. ಪ್ಲೀಹರೋಗದಲ್ಲಿ ಹೇಳಿದ ಷಟ್ಪಲಘೃತವನ್ನು ಕುಡಿಸಿದರೆ ವಾತಕಾಸವು ನಿವಾರಣೆಯಾಗುತ್ತದೆ. ಅಥವಾ ವಿದಾರಿಗಂಧಾದಿ ಗಣದ್ರವ್ಯಗಳಿಂದ ತಯಾರಿಸಿದ ಘೃತವನ್ನಾಗಲೀ ಕುಡಿಸಬೇಕು.

ವಿರೇಚನಂ ಸ್ನೇಹಿಕಮತ್ರ ಚೋಕ್ತಮಾಸ್ಥಾಪನಂ ಚಾಪ್ಯನುವಾಸನಂ ಚ ।
ಧೂಮಂ ಪಿಬೇತ್ ಸ್ನೈಹಿಕಪ್ರಮತ್ತಃ ಪಿಬೇತ್ ಸುಖೋಷ್ಣಂ ಘೃತಮೇವ ಚಾತ್ರ ॥೨೬॥

ಹಿತಾ ಯವಾಗ್ವಶ್ಚ ರಸೇಷು ಸಿದ್ಧಾಃ ಪಯಾಂಸಿ ಲೇಹಾಃ ಸಘೃತಾಸ್ತಥೈವ ।
ಪ್ರಚ್ಛರ್ದನಂ ಕಾಯಶಿರೋವಿರೇಕಾಸ್ತಥೈವ ಧೂಮಾಃ ಕವಳ ಗ್ರಹಾಶ್ಚ ॥೨೭॥
ಉಷ್ಣಾಶ್ಚ ಲೇಹಾಃ ಕಟುಕಾಶ್ಚ ಹನ್ಯುಃ ಕಫಂ ವಿಶೇಷೇಣ ವಿಶೋಷಣಂ ಚ ।
ಕಟುತ್ರಿಕಂ ಚಾಪಿ ವದನ್ತಿ ಪಥ್ಯಂ ಘೃತಂ ಕ್ರಿಮಿಘ್ನಸ್ವರಸೇ ವಿಪಕ್ವಮ್ ॥೨೮॥
ನಿರ್ಗುಣ್ಡಿಪತ್ರಸ್ವರಸೇ ಚ ಪಕ್ವಂ ಸರ್ಪಿಃ ಕಫೋತ್ಥಂ ವಿನಿಹನ್ತಿ ಕಾಸಮ್ ।
ಪಾಠಾಬಿಡವ್ಯೋಷವಿಡಙ್ಗಸಿನ್ಧು ತ್ರಿಕಣ್ವರಾಸ್ನಾಹುತಭುಗ್ಬಲಾಭಿಃ ॥೨೯॥
ಶೃಙ್ಗೀವಚಾಮ್ಭೋಧರದೇವದಾರು ದುರಾಲಭಾಭಾರ್ಗ್ಯ ಭಯಾಶಟೀಭಿಃ ।
ಸಮ್ಯಗ್ವಿಪಕ್ವಂ ದ್ವಿಗುಣೇನ ಸರ್ಪಿರ್ನಿದಿಗ್ಧಿಕಾಯಾಃ ಸ್ವರಸೇನ ಚೈತತ್ ॥೩೦॥
ಶ್ವಾಸಾಗ್ನಿಸಾದಸ್ವರಭೇದಭಿನ್ನಾನ್ನಿಹನ್ತ್ಯುದೀರ್ಣಾನಪಿ ಪಞ್ಚಕಾಸಾನ್ ।

ವಾತಕಾಸದಲ್ಲಿ ಸ್ನೇಹಮಿಶ್ರಮಾಡಿದ ವಿರೇಚನೌಷಧವನ್ನೂ ಆಸ್ಥಾಪನ ಅನುವಾಸನ ಬಸ್ತಿಗಳನ್ನೂ ಪ್ರಯೋಗಿಸಬೇಕು ; ಜಾಗರೂಕತೆಯಿಂದ ಸ್ನೇಹಿಕ ಧೂಮನವನ್ನು ಪಾನಮಾಡಿಸಬೇಕು ; ಸುಖೋಷ್ಣವಾದ ಘೃತಪಾನವೂ ; ಮಾಂಸರಸದಿಂದ ತಯಾರಿಸಿದ ಯವಾಗೂಪಾನವೂ ಹಿತವಾದದ್ದು ; ವಾತಹರದ್ರವ್ಯಗಳೊಡನೆ ತಯಾರಿಸಿದ ಹಾಲನ್ನು ಕುಡಿಸಬೇಕು ; ವಾತಹರದ್ರವ್ಯಗಳೊಡನೆ ಕಾಸಿದ ಘೃತವನ್ನು ನೆಕ್ಕಿಸಬೇಕು ; ವಮನ, ವಿರೇಚನ, ಶಿರೋವಿರೇಚನ ಧೂಮಪಾನ ಕವಳಗ್ರಹ, ಕಟುದ್ರವ್ಯಗಳಿಂದ ತಯಾರುಮಾಡಿದ ಲೇಹಗಳು, ಮುಖ್ಯವಾಗಿ ಕಫವನ್ನು ಶೋಷಣೆಮಾಡುವ (ಒಣಗಿಸುವ) ಲೇಹಗಳು ಕಫಕಾಸವನ್ನು ನಾಶಮಾಡುತ್ತವೆ. ಲಘು, ರೂಕ್ಷ, ಅಲ್ಪಭೋಜನ

ಗಳು ಹಿತಕರಗಳು ; ತ್ರಿಕಟುಚೂರ್ಣವು ಹಿತಕರವು ; ವಿಡಂಗದ ಕಷಾಯದಲ್ಲಿ ತಯಾರಿಸಿದ ಘೃತವು ಹಿತವಾದದ್ದು ; ಲಕ್ಕಿಸೊಪ್ಪಿನರಸದೊಡನೆ ತಯಾರಿಸಿದ ಘೃತವನ್ನು ಪಾನ ಮಾಡಿಸಿದರೆ ಕಫಕಾಸವು ನಿವಾರಣೆಯಾಗುತ್ತದೆ; ಅಗಳುಶುಂಠಿ, ಬಿಡಲವಣ, ವಿಡಂಗ, ಸೈಂಧವ, ನೆಗ್ಗಲು ಸಮೂಲ, ರಾಶ್ನೆ, ಚಿತ್ರಮೂಲ, ಕಳ್ಳಂಗಡಲೆಬೇರು, ಕರ್ಕಾಟಕ ಶೃಂಗಿ, ಬಜೆ, ಕೊನ್ನಾರಿಗೆಡ್ಡೆ, ದೇವದಾರು, ತುರುಚನಬೇರು, ಗಂಟುಪರಂಗಿ, ಅಣಿಲೆ ಕಾಯಿ, ಕರ್ಪೂರಶುಂಠಿ, ಇವುಗಳ ಕಲ್ಕಕ್ಕೆ ೪ ರಷ್ಟು ತುಪ್ಪವನ್ನೂ ತುಪ್ಪದ ೨ ರಷ್ಟು ನೆಲಗುಳ್ಳದ ಕಷಾಯವನ್ನೂ ಸೇರಿಸಿ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ಶ್ವಾಸ, ಅಗ್ನಿಮಾಂದ್ಯ, ಸ್ವರಭೇದ ೫ ವಿಧಕಾಸಗಳೂ ನಿವಾರಣೆಯಾಗುತ್ತವೆ. ಮುಖ್ಯವಾಗಿ ಕಫಕಾಸಹರವಾಗುತ್ತದೆ.

ಟಿಪ್ಪಣಿ : ವಾತಕಾಸಚಿಕಿತ್ಸೆಯನ್ನು ಹೇಳಿದನಂತರ ಪಿತ್ತಕಾಸಚಿಕಿತ್ಸೆಯನ್ನು ಹೇಳುವುದು ಯುಕ್ತವಾದಕ್ರಮವು ; ಹಾಗೆ ಪಿತ್ತಕಾಸಚಿಕಿತ್ಸೆಯನ್ನು ವಿವರಿಸದೆ ಕಫ ಕಾಸಚಿಕಿತ್ಸೆಯನ್ನು ಹೇಳಿರುವುದು ಕ್ಷಯಕಾಸಕ್ಕೆ ಹಿತವಾದುದೆಂದು ತಿಳಿಸುವುದಕ್ಕಾಗಿ ಎಂದು ತಿಳಿಯಬೇಕು.

ವಿದಾರಿಗನ್ಧೋತ್ಪಲಸಾರಿವಾದೀ ನಿಃಕ್ವಾಥ್ಯ ವರ್ಗಂ ಮಧುರಂ ಚ ಕೃತ್ಸ್ನಮ್ ||೩೧||
ಘೃತಂ ಪಚೇದಿಕ್ಷುರಸಾಮ್ಬುದುಗ್ಧೈಃ ಕಾಕೋಲಿವರ್ಗೇ ಚ ಸಶರ್ಕರಂ ತತ್ ।
ಪ್ರಾತಃ ಪಿಬೇತ್ ಪಿತ್ತಕೃತೇಚಕಾಸೇರಪ್ರಸೂತೇಕ್ಷತಜೇ ಚ ಕಾಸೇ ||೩೨||
ಖರ್ಜೂರಭಾರ್ಗೀಮಗಧಾಪ್ರಿಯಾಳ ಮಧೂಳಿಕೈಲಾಮಲಕೈಃ ಸಮಾಂಶೈಃ ।
ಚೂರ್ಣಂ ಸಿತಾಕ್ಷೌದ್ರಘೃತಪ್ರಗಾಢಂ ತ್ರೀನ್ ಹನ್ತಿ ಕಾಸಾನ್ಯುಪಯುಜ್ಯಮಾನಮ್||೩೩||

ಮೂರೆಲೆಹೊನ್ನೆ, ನೆಲಗೆಡ್ಡೆ, ಸಾರಿವಾದಿಗಣದ್ರವ್ಯಗಳನ್ನೂ ಕಾಕೋಳ್ಯಾದಿ ಮಧುರದ್ರವ್ಯಗಳನ್ನೂ ಕಷಾಯಮಾಡಿ ಶೋಧಿಸಿ ಆ ಕಷಾಯಕ್ಕೆ ಕಬ್ಬಿನರಸ, ಹಾಲು, ನೀರುಗಳನ್ನು ಸಮಭಾಗದಿಂದ ಸೇರಿಸಿ, ಕಾಕೋಳ್ಯಾದಿ ಗಣದ್ರವ್ಯಗಳ ಕಲ್ಕವನ್ನು ಪ್ರತೀ ವಾಪಮಾಡಿ ತಯಾರಿಸಿದ ಘೃತದೊಡನೆ ಸಕ್ಕರೆಯನ್ನು ಮಿಶ್ರಮಾಡಿ ಪ್ರಾತಃಕಾಲದಲ್ಲಿ ಸೇವಿಸಿದರೆ ಪಿತ್ತದಿಂದಲೂ, ಸ್ತ್ರೀಸಂಗದಿಂದಲೂ ಮತ್ತು ವ್ರಣದಿಂದಲೂ ಉಂಟಾಗುವ ಕಾಸರೋಗವು ನಿವಾರಣೆಯಾಗುತ್ತದೆ. ಖರ್ಜೂರ, ಗಂಟುಪರಂಗಿ, ಹಿಪ್ಪಲಿ, ಚಾರ ಪೊಪ್ಪು, ಕೊರಟಿಗೆ ಹಂಬು, ನೆಲ್ಲಿಕಾಯಿಗಳನ್ನು ಸಮಭಾಗದಿಂದ ಚೂರ್ಣಮಾಡಿ ಸಕ್ಕರೆ, ಜೇನುತುಪ್ಪ, ತುಪ್ಪಗಳನ್ನು ಅಧಿಕ ಪ್ರಮಾಣದಿಂದ ಮಿಶ್ರಮಾಡಿ ಪ್ರಯೋಗಿಸಿ ದರೆ ಪಿತ್ತಕಾಸ, ಉರಃಕ್ಷತ, ಕ್ಷಯಜಕಾಸಗಳು (೨ ವಿಧ ಕಾಸಗಳು) ನಿವಾರಣೆಯಾಗು ತ್ತವೆ.

ರಕ್ತಾಹರಿದ್ರಾಞ್ಜನವಹ್ನಿಪಾಠಾಮೂರ್ವೋಪಕುಲ್ಯಾವಿಲಿಹೇತ್ ಸಮಾಂಶಾಃ ।
ಕ್ಷೌದ್ರೇಣ ಕಾಸೇಕ್ಷತಜೇ ಕ್ಷಯೋತ್ಥೇ ಪಿಬೇದ್ಘೃತಂ ಚೇಕ್ಷುರಸೇ ವಿಪಕ್ವಮ್ ||೩೪||
ಚೂರ್ಣಂ ಪಿಬೇಚ್ಚಾಮಲಕಸ್ಯ ವಾಪಿ ಕ್ಷೀರೇಣ ಪಕ್ವಂ ಸಘೃತಂ ಹಿತಾಶೀ ।

ಚೂರ್ಣಾನಿ ಗೋಧೂಮಯವೋದ್ಭವಾನಿ ಕಾಕೋಳಿವರ್ಗಶ್ಚ ಕೃತಃ ಸುಸೂಕ್ಷ್ಮಃ ॥೩೫॥
ಕಾಸೇಷು ಪೇಯಸ್ತ್ರಿಷು ಕಾಸವದ್ಭಿಃ ಕ್ಷೀರೇಣ ಸಕ್ಷೌದ್ರಘೃತೇನ ವಾಪಿ ।
ಗಂಡೋದಕಂ ವಾ ಕ್ವಥಿತಂ ಪಿಬೇದ್ಧಿ ಕ್ಷೌದ್ರೇಣ ಶೀತಂ ಮರಿಚೋಪದಂಶಮ್ ॥೩೬॥

ಮಂಜಿಷ್ಠೆ, ಅರಿಶಿನ, ಸೌವೀರಾಂಜನ, ಚಿತ್ರಮೂಲ, ಅಗಳುಶುಂಠಿ, ಕೊರಟಗೆ, ಹಿಪ್ಪಲಿ, ಇವುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಸಿ ನೆಕ್ಕಿಸಿದರೆ ಕ್ಷತಜಕಾಸವು ನಿವಾರಣೆಯಾಗುತ್ತದೆ. ಕ್ಷಯಕಾಸದಲ್ಲಿ ಕಬ್ಬಿನಹಾಲಿನಲ್ಲಿ ತಯಾರಿಸಿದ ಘೃತವನ್ನು ಕುಡಿಸಬೇಕು. ನೆಲ್ಲಿಕಾಯಿಚೂರ್ಣವನ್ನು ಹಾಲಿನೊಡನೆಯೂ ತುಪ್ಪದೊಡನೆಯೂ ಕಾಯಿಸಿ ಕುಡಿಸಿ ಹಿತಾಹಾರವನ್ನು ಭೋಜನ ಮಾಡಿಸಬೇಕು. ಗೋಧೂಮಚೂರ್ಣವನ್ನೂ, ಯವೆಯಚೂರ್ಣವನ್ನೂ ಕಾಕೋಳ್ಯಾದಿ ಗಣದ್ರವ್ಯಗಳ ಚೂರ್ಣವನ್ನೂ ಮಿಶ್ರಮಾಡಿ ಹಾಲು, ತುಪ್ಪಗಳೊಡನೆ ಸೇವಿಸಲು ಮೂರುವಿಧ ಕಾಸಗಳೂ (ಪಿತ್ತಜ, ಉರಃಕ್ಷತಜ, ಕ್ಷಯಜ ಕಾಸಗಳು) ನಿವಾರಣೆಯಾಗುತ್ತವೆ ; ಮೆಣಸಿನ ಕಾಳನ್ನು ಅಗಿದು ತಿಂದು ಬೆಲ್ಲದಕಷಾಯವನ್ನು ತಣ್ಣಗೆಮಾಡಿ ಜೇನುತುಪ್ಪವನ್ನು ಮಿಶ್ರ ಮಾಡಿಸಬೇಕು.

ಪ್ರಸ್ಥತ್ರಯೇಣಾಮಲಕೀರಸಸ್ಯ ಶುದ್ಧಸ್ಯ ದತ್ವಾರ್ಧತುಲಾಂ ಗುಡಸ್ಯ ॥೩೭॥
ಚೂರ್ಣೀಕೃತೈರ್ಗ್ರನ್ಥಿಕ ಚವ್ಯ ಜೀರವ್ಯೋಷೇಭ ಕೃಷ್ಣಾ ಹಪುಷಾಜಮೋದೈಃ ।
ವಿಡಙ್ಗ ಸಿನ್ಧು ತ್ರಿಫಲಾಯವಾನೀಪಾಠಾಗ್ನಿ ಧಾನ್ಯೈಶ್ಚ ಪಿಚುಪ್ರಮಾಣೈಃ ॥೩೮॥
ದತ್ವಾ ತ್ರಿವೃಚ್ಚೂರ್ಣಪಲಾನಿ ಚಾಷ್ಟಾವಷ್ಟೌ ಚ ತೈಲಸ್ಯ ಪಚೇದ್ಯಥಾವತ್ ।
ತಂ ಭಕ್ಷಯೇದಕ್ಷಫಲಪ್ರಮಾಣಂ ಯಥೇಷ್ಟಚೇಷ್ಟ ಸ್ತ್ರಿಸುಗನ್ಧಿಯುಕ್ತಮ್ ॥೩೯॥
ಅನೇನ ಸರ್ವೇ ಗ್ರಹಣೀವಿಕಾರಾಃ ಸ್ವಶ್ವಾಸಕಾಸಸ್ವರಭೇದ ಶೋಥಾಃ ।
ಶಾಮ್ಯನ್ತಿ ಚಾಯಂ ಚಿರಮನ್ತರಗ್ನೇರ್ಹತಸ್ಯ ಪುಂಸ್ತ್ವಸ್ಯ ಚ ವೃದ್ಧಿಹೇತುಃ ॥೪೦॥
ಸ್ತ್ರೀಣಾಂ ಚವನ್ಧ್ಯಾಮಯನಾಶನಃ ಸ್ಯಾತ್ಕಲ್ಯಾಣಕೋನಾಮ ಗುಡಃ ಪ್ರತೀತಃ ॥

ಕಲ್ಯಾಣಗುಡಯೋಗವು : ಶೋಧಿಸಿದ ನೆಲ್ಲಿಕಾಯಿರಸಕ್ಕೆ (ಮೂರುಪ್ರಸ್ಥ) ೫೦ ಪಲ ಬೆಲ್ಲವನ್ನೂ ೧ ಕರ್ಷದಂತೆ ಮೋಡಿ, ಚವ್ಯ, ಜೀರಿಗೆ, ತ್ರಿಕಟು, ಗಜಹಿಪ್ಪಲಿ, ಹಬ್ಬೆಬೇರು, ಅಜಮೋದ, ವಿಡಂಗ, ಸೈಂಧವ ತ್ರಿಫಲೆ, ವಾದಕ್ಕಿ, ಅಗಳುಶುಂಠಿ, ಚಿತ್ರಮೂಲ, ಕೊತ್ತುಂಬರಿಬೀಜ, ತಿಗಡೆ, ತ್ರಿಸುಗಂಧಿಯನ್ನೂ ೮ ಪಲಗಳು ಇವೆಲ್ಲವನ್ನೂ ಸೂಕ್ಷ್ಮಚೂರ್ಣಮಾಡಿ ೮ ಪಲ ತಿಲತೈಲವನ್ನು ಹಾಕಿ ಮಂದಾಗ್ನಿಯಿಂದ ಪಾಕಮಾಡಿ ಕರ್ಷಪ್ರಮಾಣದಷ್ಟನ್ನು ತಿಂದು ಇಷ್ಟಾನುಸಾರ ವರ್ತಿಸಬಹುದು ; ಇದರ ಸೇವನೆಯಿಂದ ಎಲ್ಲಾ ವಿಧದ ಗ್ರಹಣೀರೋಗಗಳು, ಶ್ವಾಸ, ಕಾಸ, ಸ್ವರಭೇದ, ಶೋಥಗಳೂ ಶಮನವಾಗುತ್ತವೆ ; ಅಂತರಾಗ್ನಿಯೂ ಶುಕ್ರಧಾತುವೂ ವೃದ್ಧಿಯಾಗುತ್ತದೆ ; ಸ್ತ್ರೀಯರಿಗೆ ಬಂಜೆತನವನ್ನು ನಾಶಗೊಳಿಸಿ ಪುತ್ರವತಿಯರನ್ನಾಗಿ ಮಾಡುತ್ತದೆ ; ಕಲ್ಯಾಣ (ಮಂಗಳ) ವನ್ನುಂಟುಮಾಡುವುದರಿಂದ ಇದಕ್ಕೆ "ಕಲ್ಯಾಣಕಗುಡ" ವೆಂಬ ಹೆಸರುಂಟಾಗಿರುತ್ತದೆ.

||೪೧||
ದ್ವಿಪಞ್ಚಮೂಲೇಭಕಣಾತ್ಮಗುಪ್ತಾ ಭಾರ್ಗೀಶಠೀಪುಷ್ಕರ ಮೂಲವಿಶ್ವಾಃ
ಪಾಠಾವೃತಾಗ್ರನ್ಥಿಕ ಶಙ್ಖಪುಷ್ಪೀರಾಸ್ನಾಗ್ನ್ಯಪಾಮಾರ್ಗ ಬಲಾಯವಾಸಾಃ । ||೪೨||
ದ್ವಿಪಾಲಿಕಾನ್ನ್ಯಸ್ಯಯವಾಢಕಂ ಚ ಹರಿತಕೀನಾಂ ಚ ಶತಂ ಗುರೂಣಾಮ್
ದ್ರೋಣೇ ಜಲಸ್ಯಾಢಕ ಸಂಯುತೇ ಚ ಕ್ವಾಥೇ ಕೃತೇ ಪೂತಚತುರ್ಥಭಾಗೇ । ||೪೩||
ಪಚೇತ್ತುಲಾಂ ಶುದ್ಧಗುಡಸ್ಯ ದತ್ವಾಪೃಥಕ್ ಚ ತೈಲಾತ್ ಕುಡುವಂ ಘೃತಾಚ್ಚ
ಚೂರ್ಣಂ ಚ ತಾವನ್ಮಗಧೋದ್ಭವಾಯಾ ದೇಯಂ ಚ ತಸ್ಮಿನ್ ಮಧು ಸಿದ್ಧಶೀತೇ ।
ರಸಾಯನಾತ್ ಕಲ್ಕಮತೋ ವಿಲಿಹ್ಯಾದ್ದ್ವೇಚಾಭಯೇ ನಿತ್ಯಮಥಾಶು ಹನ್ಯಾತ್
||೪೪||

ತದ್ರಾಜಯಕ್ಷ್ಮಗ್ರಹಣೀಪ್ರದೋಷಶೋಫಾಗ್ನಿಮಾಂದ್ಯ ಸ್ವರಭೇದಕಾಸಾಃ ।
ಪಾಣ್ಡ್ವಾಮಯಶ್ವಾಸಶಿರೋವಿಕಾರಾಃ ಹೃದ್ರೋಗ ಹಿಕ್ಕಾ ವಿಷಮಜ್ವರಾಂಶ್ಚ ||೪೫||
ಮೇಧಾಬಲೋತ್ಸಾಹಮತಿಪ್ರದಂ ಚ ಚಕಾರ ಚೈತದ್ಭಗವಾನಗಸ್ತ್ಯಃ ।

ಅಗಸ್ತ್ಯಾವಲೇಹ :—ದಶಮೂಲ, ಗಜಹಿಪ್ಪಲಿ, ನಸುಗುನ್ನಿಬೀಜ, ಗಂಟು ಪರಂಗಿ, ಕರ್ಪೂರಶುಂಠಿ, ಪುಷ್ಕರಮೂಲ, ಶುಂಠಿ, ಆಗಳುಶುಂಠಿ, ಅಮೃತವಳ್ಳಿ, ವೋಡಿ, ಬಿಳಿಗಿರಿಕರ್ಣಿಕೆ, ರಾಸ್ನೆ, ಚಿತ್ರಮೂಲ, ಉತ್ತರಣೆಬೇರು, ಕಳ್ಳಂಗಡಲೆ ಬೇರು, ತುರುಚನ ಬೇರು, ಪ್ರತಿಯೊಂದೂ ಎರಡೆರಡು ಪಲಗಳು ಯವಧಾನ್ಯ ೧ ಆಢಕದಷ್ಟು ಭಾರವಾದ ೧೦೦ ಅಣಿಲೆಕಾಯಿಗಳು ೧ ದ್ರೋಣ (ಅಳತೆಯ ೮ ಸೇರಿನಷ್ಟು) ನೀರನ್ನು ಸೇರಿಸಿ ೧ ಆಢಕದಷ್ಟು ನಿಲ್ಲುವಂತೆ ಕಷಾಯವನ್ನು ಕಾಯಿಸಿ ಶೋಧಿಸಿದ ಕಷಾಯಕ್ಕೆ ೧೦೦ ಪಲ ದಷ್ಟು ಶುದ್ಧವಾದ ಬೆಲ್ಲವನ್ನೂ ತಿಲತೈಲ ೧ ಕುಡುವ, ತುಪ್ಪ ೧ ಕುಡುವದಷ್ಟನ್ನೂ ಹಿಪ್ಪಲಿಯ ಚೂರ್ಣ ೪ ಪಲಗಳಷ್ಟನ್ನೂ ಹಾಕಿ ಪಾಕಮಾಡಿ ಆರಿದಮೇಲೆ ೨ ಕುಡುವ ದಷ್ಟು ಜೇನು ತುಪ್ಪವನ್ನೂ ಹಾಕಿ ಚೆನ್ನಾಗಿ ತೊಳಸಿ ಪ್ರತಿದಿನವೂ ಅರ್ಧಪಲದಷ್ಟು ಈ ರಸಾಯನವನ್ನು ಸೇವನೆ ಮಾಡಿದರೆ ರಾಜಯಕ್ಷ್ಮ, ಗ್ರಹಣೀ, ಶೋಫೆ, ಅಗ್ನಿಮಾಂದ್ಯ, ಸ್ವರಭೇದ, ಕಾಸ, ಪಾಂಡುರೋಗ, ಶ್ವಾಸ, ಶಿರೋವಿಕಾರಗಳು, ಹೃದ್ರೋಗ, ಬಿಕ್ಕಳಿಕೆ, ವಿಷಮಜ್ವರ ಇವುಗಳು ನಿವಾರಣೆಯಾಗುತ್ತವೆ. ಮೇಧಾ, ಬಲ, ಉತ್ಸಾಹ, ಬುದ್ಧಿಶಕ್ತಿಗಳನ್ನು ಉಂಟುಮಾಡುತ್ತದೆ ; ಇದಕ್ಕೆ ಅಗಸ್ತ್ಯರಸಾಯನವೆನ್ನುತ್ತಾರೆ.

ಕುಳೀರಶುಕ್ತೀ ಚಟಕೈಣಲಾವಾಃ ನಿಃಕ್ವಾಥ್ಯವರ್ಗೈರ್ಮಧುರೈ ಸ್ತಥಾನ್ಯೈಃ ||೪೬||
ಪಚೇದ್ಘೃತಂ ತತ್ತು ನಿಷೇವ್ಯಮಾಣಂ ಹನ್ಯಾತ್ ಕ್ಷತೋತ್ಥಂ ಕ್ಷಯಜಂ ಚ ಕಾಸಮ್ ।
ಶತಾವರೀಕಲ್ಕಬಲಾವಿಪಕ್ವಂ ಘೃತಂ ವಿಧೇಯಂ ಚ ಹಿತಾಯ ಕಾಸಿನಾಮ್ ||೪೭||

ನಳ್ಳಿ, ಕಪ್ಪೆಚಿಪ್ಪಿನ ಹುಳು, ಗುಬ್ಬಚ್ಚಿ, ಕರಿಯಹುಲ್ಲೆ, ಲಾವನಹಕ್ಕಿ ಇವುಗಳ ಮಾಂಸವನ್ನೂ ಕಾಕೋಳ್ಯಾದಿ ಮಧುರ ದ್ರವ್ಯಗಳ ಕಷಾಯವನ್ನೂ ಸೇರಿಸಿ ಪಾಕ ಮಾಡಿದ ಈ ಘೃತವನ್ನು ಸೇವಿಸಿದರೆ ಕ್ಷತಜ ಮತ್ತು ಕ್ಷಯಜಕಾಸಗಳು ನಾಶಹೊಂದು

ತ್ರವೆ ; ಬಲಾಕಷಾಯದೊಡನೆ ಆಷಾಡಿಬೇರಿನ ಕಲ್ಕವನ್ನೂ ಘೃತವನ್ನೂ ಸೇರಿಸಿ ಪಾಕಮಾಡಿ ಸೇವಿಸಿದರೆ ಕಾಸರೋಗಹರವಾಗುತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ
ಕಾಸಪ್ರತಿಷೇಧನಾಮಕ ದ್ವಿಪಞ್ಚಾಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾ
ಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ
ಕರ್ಣಾಟಕ ಭಾಷಾವಿವೃತಿಃ.

ತ್ರಿಪಞ್ಚಾಶತ್ತಮೋಽಧ್ಯಾಯಃ

ಅಥಾತಃ ಸ್ವರಭೇದ ಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿ ದಂತೆಯೇ ಸ್ವರಭೇದ ಚಿಕಿತ್ಸೆಯನ್ನು ವಿವರಿಸುತ್ತೇವೆ ; ಜತ್ರುವಿನ ಮೇಲ್ಭಾಗದಲ್ಲೇ ಶ್ವಾಸಕಾಸ ಸ್ವರಭೇದಾದಿಗಳು ಸಂಭವಿಸುತ್ತವೆಯಾಗಿ ಶ್ವಾಸಕಾಸ ಚಿಕಿತ್ಸೆಯಾದ ನಂತರ ಸ್ವರಭೇದ ಚಿಕಿತ್ಸೆಯನ್ನು ಹೇಳುವುದು ಯುಕ್ತವಾದದ್ದು.

ಅತ್ಯುಚ್ಚಭಾಷಣ ವಿಷಾಧ್ಯಯನಾತಿಗೀತ ಶೀತಾದಿಭಿಃ ಪ್ರಕುಪಿತಾಃ ಪವನಾದಯಸ್ತು ।
ಸ್ರೋತಸ್ಸು ತೇ ಸ್ವರವಹೇಷು ಗತಾಃ ಪ್ರತಿಷ್ಠಾ ಹನ್ಯುಃ ಸ್ವರಂ ಭವತಿ ಚಾಪಿ ಹಿ ಷಡ್ವಿಧಃ ಸಃ ||೩||

ಅತಿಘಟ್ಟಿಯಾಗಿ ಮಾತಾಡುವುದು, ವಿಷಸೇರಿಕೊಂಡಿರುವ, ಅಧ್ಯಶನ ಅತಿಯಾಗಿ ವೇದಾದಿಗಳನ್ನು ಪಠನಮಾಡುವುದು, ಸಂಗೀತಹಾಡುವುದು. ಶೀತವಾತ ನೀರು ಮೊದ ಲಾದುವನ್ನು ಸೇವಿಸುವುದು, ಇವುಗಳಿಂದ ವಾತಾದಿದೋಷಗಳು ಪ್ರಕೋಪಗೊಂಡು ಸ್ವರವಾಹಿ ಸ್ರೋತಸ್ಸುಗಳಲ್ಲಿ ಸೇರಿ ಸ್ವರಭಂಗವನ್ನುಂಟುಮಾಡುತ್ತವೆ ; ಈ ಸ್ವರಭೇದವು ; ವಾತ, ಪಿತ್ತ, ಕಫ, ಸನ್ನಿಪಾತ, ಮೇದಸ್ಸು, ಕ್ಷಯಭೇದಗಳಿಂದ ೬ ವಿಧಗಳಾಗಿವೆ ; ಅತ್ಯುಚ್ಚಭಾಷಣಾದಿಗಳು ಹೇತುವು, ಪ್ರಕುಪಿತವಾತಾದಿಗಳು ಸ್ವರವಾಹಿ ಸ್ರೋತಸ್ಸು ಗಳಲ್ಲಿ ಹೋಗಿ ನಿಲ್ಲುವುದು ಸಂಪ್ರಾಪ್ತಿ, ೬ ವಿಧಗಳು ಸಂಖ್ಯೆಗಳು.

ವಾತೇನ ಕೃಷ್ಣನಯನಾನನಮೂತ್ರವರ್ಚಾಭಿನ್ನ ಶ್ಯನೈರ್ವದರೆ ಗದ್ಗದವತ್ ಸ್ವರಂಚ ।
ಪಿತ್ತೇನ ಪೀತವದನಾಕ್ಷಿಪುರೀಷಮೂತ್ರೋ ಬ್ರೂಯಾದ್ಗಳೇನ ಚ ವಿದಾಹಸಮನ್ವಿತೇನ ||೪||
ಕೃಚ್ಛ್ರಾತ್ ಕಫೇನ ಸತತಂ ಕಫರುದ್ಧಕಣ್ಠೋ ಮನ್ದಂ ಶನೈರ್ವದತಿ ಚಾಪಿ ದಿವಾ ವಿಶೇಷಃ ।
ಸರ್ವಾತ್ಮಕೇ ಭವತಿ ಸರ್ವವಿಕಾರಸಂಪದವ್ಯಕ್ತತಾ ಚ ವಚಸಸ್ತಮಸಾಧ್ಯಮಾಹುಃ ||೫||

ವಾತಜಸ್ವರಭಂಗದಲ್ಲಿ ಕಣ್ಣುಗಳು, ಮುಖ, ಮೂತ್ರ, ಮಲಗಳು ಕಪ್ಪಾಗಿರುತ್ತವೆ ; ಬಾರಿ ಬಾರಿಗೂ ತೊದಲುತ್ತಾ ಮಾತನಾಡುತ್ತಾನೆ ; ಪಿತ್ತಜಸ್ವರ ಭಂಗದಲ್ಲಿ ಮುಖ, ಕಣ್ಣುಗಳು ಮಲಮೂತ್ರಗಳು ಹಳದಿಯಾಗಿರುತ್ತವೆ ; ಎದೆಯ ಉರಿತ ಮತ್ತು ವ್ಯಥೆ ಗಳಿಂದ ಕೂಡಿ ಮಾತನಾಡುತ್ತಾನೆ ; ಕಫಜಸ್ವರಭೇದದಲ್ಲಿ ಸದಾ ಕಫವು ಗಂಟಲಿನಲ್ಲಿ ತಡೆ ದಿರುವ ಕಾರಣ ಆಗಾಗ್ಯೆ ಮೆತ್ತಗೆ ಮಾತನಾಡುತ್ತಾನೆ ; ಹಗಲು ಹೊತ್ತಿನಲ್ಲಿ ಹೆಚ್ಚಾಗಿ

ಬಾಧೆಯಿರುತ್ತದೆ. ಸನ್ನಿಪಾತಾತ್ಮಕಸ್ವರಭಂಗದಲ್ಲಿ ಮೇಲಿನ ಎಲ್ಲಾ ಲಕ್ಷಣಗಳೂ ಕಾಣಿಸುತ್ತವೆ ; ಅಸ್ಪಷ್ಟವಾಗಿ ಮಾತು ಹೊರಡುತ್ತದೆ ; ಇದನ್ನು ಅಸಾಧ್ಯವೆನ್ನುತ್ತಾರೆ.

ಧೂಪ್ಯೇತ ವಾಕ್ ಕ್ಷಯಕೃತೇ ಕ್ಷಯಮಾಪ್ನುಯಾಚ್ಚ ವಾಗೇಷಚಾಪಿ ಹತವಾಕ್ ಪರಿವರ್ಜನೀಯಃ ||
ಅನ್ತರ್ಗಳಂ ಸ್ವರ್ಯಮಲಕ್ಷಪದಂ ಚಿರೇಣ ಮೇದಶ್ಚ (ದೋಸ್ವ) ಯಾದ್ವದತಿ ದಿಗ್ಧಗಲಾಷ್ವತಾಲುಃ ||೬||

ಕ್ಷೀಣಸ್ಯ ವೃದ್ಧಸ್ಯ ಕೃಶಸ್ಯ ಚಾಪಿ ಚಿರೋತ್ಥಿತೋ ಯಶ್ಚ ಸಹೋಪಜಾತಃ |
ಮೇದಸ್ವಿನಃ ಸರ್ವಸಮುದ್ಭವಶ್ಚ ಸ್ವರಾಮಯೋ ಯೋ ನ ಸ ಸಿದ್ಧಿಮೇತಿ ||೭||

ಕ್ಷಯಜಸ್ವರಭೇದದಲ್ಲಿ ಬಾಯಿನಿಂದ ಹೊಗೆ ಹೊರಕ್ಕೆ ನುಗ್ಗುವಂತೆ ಮಾತನಾಡುತ್ತಾ ಕಡೆಗೆ ಮುಂದಕ್ಕೆ ಮಾತೇ ಹೊರಡದೆ ನಿಂತು ಹೋಗುತ್ತದೆ ; ಈ ರೋಗಿಯನ್ನು ಚಿಕಿತ್ಸೆಮಾಡದೆ ತ್ಯಜಿಸಿಬಿಡಬೇಕು ; ಮೇದೋಜಸ್ವರಭೇದದಲ್ಲಿ ಗಂಟಲೊಳಗೇ ಮಾತನಾಡುತ್ತಾನೆಯಾಗಿ ಬಲುಹೊತ್ತಾದ ಮೇಲೆ ಮಾತು ಸ್ಪಷ್ಟವಾಗಿ ಕೇಳಿಸುವುದಿಲ್ಲ; ಮೇದಸ್ಸು ಚಯವಾಗಿ ಗಂಟಲು, ತುಟಿಗಳು, ಅಂಗಳುಗಳಲ್ಲಿ ಅಂಟಿಕೊಂಡು ಇರುವ ಕಾರಣ ಮಾತು ಸ್ಪಷ್ಟವಾಗಿ ಹೊರಡುವುದಿಲ್ಲ ; ಕ್ಷೀಣನಿಗೂ, ವೃದ್ಧನಿಗೂ, ಕೃಶನಿಗೂ, ಉಂಟಾದ ಸ್ವರಭೇದವೂ, ಬಲುಕಾಲದಿಂದಿರುವುದೂ, ಸಹಜವಾಗಿರುವ (ಹುಟ್ಟಿದಾಗಿನಿಂದ ಬಂದಿರುವ) ಮೇದಸ್ಸು ವೃದ್ಧಿಯಾಗಿರುವವನಿಗೆ ಉಂಟಾದದ್ದೂ, ತ್ರಿದೋಷದಿಂದುಂಟಾದ ಸ್ವರಭೇದವೂ ಅಸಾಧ್ಯಗಳೆಂದು ತಿಳಿಯಬೇಕು.

ಸ್ನಿಗ್ಧಾ್ಸ ಸ್ವರಾತುರನರಾನಪಕೃಷ್ಟದೋಷಾನ್ ನ್ಯಾಯೇನತಾನ್ ವಮನರೇಚನ ಬಸ್ತಿಭಿಶ್ಚ |
ನಸ್ಯಾವಪೀಡ ಮುಖಧಾವನ ಧೂಮಲೇಹ್ಯೈಃ ಸಂಪಾದಯೇಚ್ಚ ವಿವಿಧೈಃ ಕವಳಗ್ರಹೈಶ್ಚ ||೮||

ಯಃ ಶ್ವಾಸಕಾಸವಿಧಿರಾದಿತ ಏವ ಚೋಕ್ತಸ್ತಂ ಚಾಪ್ಯಶೇಷಮವತಾರಯಿತುಂ ಯತೇತ |
ವೈಶೇಷಿಕಂ ಚ ವಿಧಿಮೂರ್ಧ್ವಮತೋ ವದಾಮಿ ತಂ ವೈಸ್ವರಾತುರಹಿತಂ ನಿಖಿಲಂ ನಿಬೋಧ ||೯||

ಸ್ವರಭೇದಪೀಡಿತರಾದ ರೋಗಿಗಳನ್ನು ಸ್ನೇಹಪಾನದಿಂದ ಸ್ನಿಗ್ಧರನ್ನಾಗಿ ಮಾಡಿ ವಮನ, ವಿರೇಚನ, ಬಸ್ತಿಪ್ರಯೋಗ, ಅವಪೀಡನಸ್ಯ, ಮುಖಧಾವನ, (ಗಂಡೂಷ) ಧೂಮಪಾನ ಮತ್ತು ವಿವಿಧ ಕಬಳಗ್ರಹಗಳನ್ನು ಪ್ರಯೋಗಿಸಿ ದೋಷಗಳನ್ನು ಹೊರಕ್ಕೆ ಹೊರಡಿಸಬೇಕು ; ಸಕಲ ಶ್ವಾಸಕಾಸಚಿಕಿತ್ಸಾ ವಿಧಾನಗಳನ್ನೂ ಪ್ರಯೋಗಿಸಬೇಕು ; ಇನ್ನು ಮುಂದೆ ಸ್ವರಭೇದರೋಗಿಗಳಿಗೆ ಮಾಡಬೇಕಾದ ವಿಶೇಷ ಚಿಕಿತ್ಸೆಗಳನ್ನು ಹೇಳುತ್ತೇನೆ ಕೇಳು !

ಸ್ವರೋಪಘಾತೇऽನಿಲಜೇ ಭುಕ್ತ್ವೋಪರಿ ಘೃತಂ ಪಿಬೇತ್ |
ಕಾಸಮರ್ದಕವಾರ್ತಾಕಮಾರ್ಕವಸ್ವರಸೇ ಶೃತಮ್ ||೧೦||
ಪೀತಂ ಘೃತಂ ಹನ್ತ್ಯನಿಲಂ ಸಿದ್ಧಮಾರ್ತಗಳೇ ರಸೇ |

ಯವಕ್ಷಾರಾಜಮೋದಾಭ್ಯಾಂ ಚಿತ್ರಕಾಮಲಕೇಷು ವಾ ||೧೧||
ದೇವದಾರ್ವಗ್ನಿಕಾಭ್ಯಾಂ ವಾ ಸಿದ್ಧಮಾಜಂ ಸಮಾಕ್ಷಿಕಮ್ |
ಸುಖೋದಕಾನುಪಾನೇ ವಾ ಸಸರ್ಪಿಷ್ಕೋ ಗುಡೌದನಃ ||೧೨||
ಕ್ಷೀರಾನುಪಾನಂ ಪಿತ್ತೇ ತು ಪಿಬೇತ್ಸರ್ಪಿರತನ್ದ್ರಿತಃ |
ಅಶ್ನೀಯಾಚ್ಚ ಸಸರ್ಪಿಷ್ಕಂ ಯಷ್ಟೀಮಧುಕಪಾಯಸಮ್ ||೧೩||

ವಾತಜಸ್ವರೋಪಘಾತರೋಗದಲ್ಲಿ ಎಸಗಳೆಯಸೊಪ್ಪು, ಬದನೆಯಸೊಪ್ಪು, ಗರುಗದಸೊಪ್ಪು ಇವುಗಳ ಸ್ವರಸದೊಡನೆ ತಯಾರಿಸಿದ ಘೃತವನ್ನು ಭೋಜನವಾದ ನಂತರ ಕುಡಿಸಬೇಕು ; ಮತ್ತಿತೊಗಟೆಯೊಡನೆ ತಯಾರಿಸಿದ ಘೃತವನ್ನು (ಆರ್ತಗಳೆಂದರೆ ಮುಳ್ಳುಗೋರಂಟಿಸೊಪ್ಪು ಎಂದು ಕೆಲವರ ಮತ) ಪಾನಮಾಡಿಸಿದರೆ ವಾತ ನಿವಾರಣೆಯಾಗುತ್ತದೆ ; ಯವಕ್ಷಾರ, ಅಜಮೋದ, ಚಿತ್ರಮೂಲ, ನೆಲ್ಲಿಕಾಯಿ, ದೇವದಾರು, ವಾದಕ್ಕಿ, ಇವುಗಳೊಡನೆ ಆಡಿನಹಾಲಿನಲ್ಲಿ ತಯಾರಿಸಿದ ಘೃತಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿ ಕುಡಿಸಿದರೆ ವಾತಹರವಾಗುತ್ತದೆ ; ಬೆಲ್ಲದ ಅನ್ನಕ್ಕೆ ತುಪ್ಪ ಮಿಶ್ರಮಾಡಿ ಭೋಜನಮಾಡಿಸಿ ಸುಖೋಷ್ಣವಾದ ನೀರನ್ನು ಕುಡಿಸಬೇಕು ; ಪಿತ್ತದಿಂದುಂಟಾದ ಸ್ವರಭೇದದಲ್ಲಿ ಹಾಲಿನೊಡನೆ ಮೇಲೆ ಹೇಳಿದ ತುಪ್ಪವನ್ನು ಕುಡಿಯಬೇಕು ; ಅತಿಮಧುರದಕಷಾಯದಲ್ಲಿ ಅಕ್ಕಿಯನ್ನು ಬೇಯಿಸಿ ತಯಾರಿಸಿದ ಪಾಯಸಕ್ಕೆ ತುಪ್ಪವನ್ನು ಮಿಶ್ರಮಾಡಿ ಕುಡಿಸಬೇಕು.

ಲಿಹ್ಯಾನ್ಮಧುರಕಾಣಾಂ ವಾ ಚೂರ್ಣಂ ಮಧುಘೃತಾಪ್ಲುತಮ್ |
ಶತಾವರೀಚೂರ್ಣಯೋಗಂ ಬಲಾಚೂರ್ಣಮಥಾಪಿ ವಾ ||೧೪||

ಕಾಕೋಲ್ಯಾದಿಮಧುರಗಣದ್ರವ್ಯಗಳ ಚೂರ್ಣವನ್ನಾಗಲೀ, ಆಷಾಡಿಬೇರಿನ ಚೂರ್ಣವನ್ನಾಗಲೀ, ಕಳ್ಳಂಗಡಲೆಯ ಚೂರ್ಣವನ್ನಾಗಲೀ ತುಪ್ಪ, ಜೇನುತುಪ್ಪಗಳೊಡನೆ ಮಿಶ್ರಮಾಡಿ ನೆಕ್ಕಿಸಬೇಕು.

ಪಿಬೇತ್ ಕಟೂನಿ ಮೂತ್ರೇಣ ಕಫಜೇ ಸ್ವರಸಂಕ್ಷಯೇ |
ಲಿಹ್ಯಾದ್ವಾ ಮಧುತೈಲಾಭ್ಯಾಂ ಭುಕ್ತ್ವಾ ಖಾದೇತ್ ಕಟೂನಿ ವಾ ||೧೫||
ಸ್ವರೋಪಘಾತೇ ಮೇದೋಜೇ ಕಫವದ್ವಿಧಿರಿಷ್ಯತೇ |
ಸರ್ವಜೇ ಕ್ಷಯಜೇ ಚಾಪಿ ಪ್ರತ್ಯಾಖ್ಯಾಯಾಚರೇತ್ ಕ್ರಿಯಾಮ್ ||೧೬||

ಕಫಜಸ್ವರಭೇದಪೀಡಿತನಿಗೆ ಗೋಮೂತ್ರದಲ್ಲಿ ಕಟುದ್ರವ್ಯಗಳ ಚೂರ್ಣವನು (ಪಿಪ್ಪಲ್ಯಾದಿಗಳನ್ನು) ಕದರಿಕುಡಿಸಬೇಕು ; ಭೋಜನವಾದಮೇಲೆ ಜೇನುತುಪ್ಪ ತಿಲತೈಲಗಳೊಡನೆ ತ್ರಿಕಟುಮೊದಲಾದ ಕಟುದ್ರವ್ಯಗಳನ್ನು ರಂಗಳಿಸಿ ನೆಕ್ಕಿಸಬೇಕು ; ಮೇದೋಜನಿತಸ್ವರೋಪಘಾತದಲ್ಲಿ ಕಫಜಸ್ವರಘಾತಚಿಕಿತ್ಸೆಯಂತೆಯೇ ಉಪಚರಿಸಬೇಕು ; ತ್ರಿದೋಷಜ ಮತ್ತು ಕ್ಷಯಜಸ್ವರಭೇದಗಳು ಅಸಾಧ್ಯವೆಂದು ತಿಳಿಸಿ ಅನಂತರ ಚಿಕಿತ್ಸೆ ಮಾಡಬೇಕು.

ಶರ್ಕರಾಮಧುಮಿಶ್ರಾಣಿ ಶೃತಾನಿ ಮಧುರೈಃ ಸಹ ।
ಪಿಬೇತ್ ಪಯಾಂಸಿ ಯಸ್ಯೋಚ್ಚೈರ್ವದತೋಽಭಿಹತಃ ಸ್ವರಃ ॥೧೭॥

ಘಟ್ಟಿಯಾಗಿ ಕೂಗುವವನಿಗೆ ಸ್ವರಭೇದವುಂಟಾದರೆ ಮಧುರಗಣ ದ್ರವ್ಯಗಳೊಡನೆ ತಯಾರಿಸಿದ ಹಾಲಿಗೆ ಸಕ್ಕರೆ ಮತ್ತು ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸಬೇಕು.

ಇತಿ ಶ್ರೀಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ
ಸ್ವರಭೇದಪ್ರತಿಷೇಧನಾಮಕ ತ್ರಿಪಞ್ಚಾಶತ್ತಮಾಧ್ಯಾಯಸ್ಯ ಶ್ರೀಭಟ್ಟಾ
ಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತ
ಕರ್ಣಾಟಕಭಾಷಾ ವಿವೃತಿಃ

ಚತುಃಪಞ್ಚಾಶತ್ತಮೋಽಧ್ಯಾಯಃ

ಅಥಾತಃ ಕ್ರಿಮಿರೋಗಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಕ್ರಿಮಿಚಿಕಿತ್ಸೆಯನ್ನು ವಿವರಿಸುತ್ತೇವೆ.

ಅಜೀರ್ಣಾಧ್ಯಶನಾಸಾತ್ಮ್ಯವಿರುದ್ಧ ಮಲಿನಾಶನೈಃ ।
ಅವ್ಯಾಯಾಮ ದಿವಾಸ್ವಪ್ನಗುರ್ವತಿಸ್ನಿಗ್ಧಶೀತಲೈ ಃ ||೩||
ಮಾಷಪಿಷ್ಟಾನ್ನವಿದಳ ಬಿಸಶಾಲೂಕ ಸೇರುಕೈಃ ।
ಪರ್ಣಶಾಕ ಸುರಾಶುಕ್ತದಧಿಕ್ಷೀರಗುಡೇಕ್ಷುಭಿಃ ||೪||
ಪಲಲಾನೂಪಪಿಶಿತಪಿಣ್ಯಾಕಪೃಥುಕಾದಿಭಿಃ ।
ಸ್ವಾದ್ವಮ್ಲದ್ರವಪಾನೈಶ್ಚ ಶ್ಲೇಷ್ಮಾ ಪಿತ್ತಂ ಚ ಕುಪ್ಯತಿ ||೫||
ಕ್ರಿಮೀನ್ ಬಹುವಿಧಾಕಾರಾನ್ ಕರೋತಿ ವಿವಿಧಾಶ್ರಯಾನ್ ।
ಆಮಪಕ್ವಾಶಯೇ ತೇಷಾಂ ಪ್ರಸವಃ ಪ್ರಾಯಶಃ ಸ್ಮೃತಃ ||೬||

ಆಮ, ವಿದಗ್ಧ (ಅರ್ಧಬೆಂದ) ಪುನಃತಿನ್ನುವ ಅಭ್ಯಾಸವಿಲ್ಲದ ವಿರುದ್ಧವಾದ ಕೊಳಕಾದ ಆಹಾರಗಳನ್ನು ಸೇವಿಸುವುದು ಅಂಗಸಾಧನೆ ಮಾಡದಿರುವುದು ಹಗಲು ನಿದ್ರಿಸುವುದು, ಗುರುವಾದ, ಅತಿ ತಣ್ಣಗಿರುವ ಆಹಾರಗಳನ್ನು ತಿನ್ನುವುದು, ಉದ್ದು ಹಿಟ್ಟು, ಸಾರಂಗಿಬೇಳೆ, ಮೊದಲಾದ ದ್ವಿದಳಧಾನ್ಯಗಳನ್ನೂ, ತಾವರೆಗೆಡ್ಡೆ, ತಾವರೆ ದಂಟು, ಕೊತ್ತಿಗೆಡ್ಡೆ ಸೊಪ್ಪುಗಳನ್ನು ಮದ್ಯ, ಸಂಧಾನದ್ರವ್ಯಗಳು ಮೊಸರು, ಹಾಲು, ಬೆಲ್ಲ, ಕಬ್ಬಿನರಸ, ಹುರಿದ ಎಳ್ಳಿನಚೂರ್ಣ, ಅನೂಪಮಾಂಸ, ಎಳ್ಳಿನಹಿಂಡಿ, ಅವಲಕ್ಕಿ, ಮೊದಲಾದುವುಗಳನ್ನು ಸೇವಿಸುವುದರಿಂದಲೂ ಸಿಹಿ, ಹುಳಿ, ದ್ರವವಸ್ತುಗಳನ್ನು ಕುಡಿಯುವುದರಿಂದಲೂ ಕಫವೂ, ಪಿತ್ತವೂ ಪ್ರಕೋಪವಾಗಿ ಅನೇಕ ವಿಧಗಳಾದ ಅನೇಕಾಕೃತಿಯುಳ್ಳ ಕ್ರಿಮಿಗಳನ್ನುಂಟುಮಾಡುತ್ತವೆ. ಆಮಾಶಯ ಮತ್ತು ಪಕ್ವಾಶಯಗಳೇ ಅವುಗಳ ಉತ್ಪತ್ತಿಗೆ ಮುಖ್ಯಸ್ಥಾನಗಳು.

ವಿಂಶತೇಃ ಕ್ರಿಮಿಜಾತೀನಾಂ ತ್ರಿವಿಧಃ ಸಂಭವಃ ಸ್ಮೃತಃ ।
ಪುರೀಷ ಕಫರಕ್ತಾನಿ ತಾಸಾಂ ವಕ್ಷ್ಯಾಮಿ ವಿಸ್ತರಮ್ ||೭||

ಅಸಂಖ್ಯಾಕಗಳಾದ ಕ್ರಿಮಿಗಳನ್ನೂ ೨೦ ಭೇದಗಳನ್ನಾಗಿಮಾಡಿ ಅವುಗಳಿಗೆ ಪುರೀಷ ಕಫ, ರಕ್ತಗಳೆಂಬ ಮೂರು ಉತ್ಪತ್ತಿಸ್ಥಾನಗಳೆಂದು ನಿರ್ಧರಿಸಿರುತ್ತಾರೆ ; ಅವುಗಳನ್ನು ವಿಸ್ತಾರವಾಗಿ ಹೇಳುತ್ತೇವೆ.

ಅಜವಾ ಓಯುವಾಃ ಕಿಪ್ಯಾಶ್ಚಿಪ್ಯಾ ಗಣ್ಡೂಪದಾ ಸ್ತಥಾ ।
ಚುರವೋ ದ್ವಿಮುಖಾಶ್ಚೈವಸಪ್ತೈವೇತೇ ಪುರೀಷಜಾಃ ॥೮॥

ಅಜವಾ, ವಿಯುವ, ಕಿಪ್ಯ, ಚಿಪ್ಯ, ಗಂಡೂಪದ (ಮಣ್ಣುಹುಳು), ದ್ವಿಮುಖ, ಚುರವಗಳೆಂಬ ೭ ವಿಧ ಕ್ರಿಮಿಗಳು ಪುರೀಷದಿಂದ ಹುಟ್ಟುತ್ತವೆ.

ಶ್ವೇತಾಃ ಸೂಕ್ಷ್ಮಾಸ್ತುದನ್ತ್ಯೇತೇ ಗುದಂ ಪ್ರತಿಸರನ್ತಿಚ ।
ತೇಷಾಮೇವಾಪರೇಪುಚ್ಛೈಃ ಪೃಥವಶ್ಚ ಭವನ್ತಿ ಹಿ ॥೯॥
ಶೂಲಾಗ್ನಿಮಾಂದ್ಯಪಾಣ್ಡುತ್ವವಿಷ್ಟಮ್ಭಬಲಸಂಕ್ಷಯಾಃ ।
ಪ್ರಸೇಕಾರುಚಿ ಹೃದ್ರೋಗವಿಡ್ಭೇದಾಸ್ತು ಪುರೀಷಜೈಃ ॥೧೦॥

ಈ ೭ ವಿಧ ಕ್ರಿಮಿಗಳಲ್ಲಿ ಕೆಲವು ಬೆಳ್ಳಗೂ, ಸೂಕ್ಷ್ಮಗಳಾಗಿಯೂ ಅಕಸ್ಮಾತ್ತಾಗಿ ಗುದದಲ್ಲಿ ಚುಚ್ಚಿದಂತೆ ನೋವನ್ನುಂಟುಮಾಡಿ ಹೊರಗೆ ಬರುತ್ತವೆ. ಮತ್ತೆ ಕೆಲವು ಬಾಲದಲ್ಲಿ ದಪ್ಪವಾಗಿರುತ್ತವೆ. ಹೊಟ್ಟೆನೋವು, ಅಗ್ನಿಮಾಂದ್ಯ, ಮೈ ಬಿಳುಪಾಗಿರುವುದು, ಮಲಬಂಧ (ಹೊಟ್ಟೆಯಲ್ಲಿ ಗುಡಗುಡೆಂದು ಶಬ್ದವಾಗುವುದು), ಬಲಹಾನಿ, ಬಾಯಿನಿಂದ ನೀರು ಸುರಿಯುವುದು, ಅರೋಚಕತೆ, ಹೃದಯಶೂಲೆ, ಮಲವು ನೀರಾಗಿ ಪ್ರವರ್ತಿಸುವುದು ಇವು ಪುರೀಷಕ್ರಿಮಿಗಳಿಂದುಂಟಾಗುವ ಚಿಹ್ನೆಗಳೆಂದು ತಿಳಿಯಬೇಕು.

ರಕ್ತಾ ಗಂಡೂಪದಾ ದೀರ್ಘಾ ಗುದಕಣ್ಡೂನಿಪಾತಿನಃ ।
ಶೂಲಾಟೋಪಶಕೃದ್ಭೇದಪಕ್ತಿನಾಶಕರಾಶ್ಚ ತೇ ॥೧೧॥

ಕೆಂಪುಬಣ್ಣದ ಉದ್ದವಾದ ಕ್ರಿಮಿಗಳು ಗುದದಲ್ಲಿ ನವೆಯನ್ನುಂಟುಮಾಡಿ ಹೊರಕ್ಕೆ ಬೀಳುತ್ತವೆ. ಅವುಗಳಿಂದ ಶೂಲೆ, ಹೊಟ್ಟೆಯಲ್ಲಿ ಗುಡಗುಡಶಬ್ದ, ಮಲವು ನೀರಾಗಿ ಪ್ರವರ್ತಿಸುವುದು ಮತ್ತು ಅಗ್ನಿಮಾಂದ್ಯಗಳುಂಟಾಗುತ್ತವೆ. ಅವುಗಳಿಗೆ ಗಂಡೂಪದಗಳೆಂದು (ಮಣ್ಣುಜಲ್ಲಿಯಂತಿರುವ ಜಂತುಹುಳುಗಳೆಂದು) ಹೆಸರು.

ದರ್ಭಪುಷ್ಪಾ ಮಹಾಪುಷ್ಪಾಃ ಪ್ರಲೂನಾಶ್ಚಿಪಿಟಾಸ್ತಥಾ ।
ಪಿಪೀಲಿಕಾ ದಾರುಣಾಶ್ಚ ಕಫಕೋಪಸಮುದ್ಭವಾಃ ॥೧೨॥

ದರ್ಭಪುಷ್ಪ, ಮಹಾಪುಷ್ಪ, ಪ್ರಲೂನ, ಚಿಪಿಟ, ಪಿಪೀಲಿಕ, ದಾರುಣಗಳೆಂಬ ೬ ವಿಧ ಕ್ರಿಮಿಗಳು ಕಫಕೋಪದಿಂದ ಹುಟ್ಟುತ್ತವೆ.

ರೋಮಶಾ ರೋಮಮೂರ್ಧಾನಃ ಸಪುಚ್ಛಾಃ ಶ್ಯಾವಮಣ್ಡಲಾಃ ।
ರೂಢಧಾನ್ಯಾಙ್ಕುರಾಕಾರಾಃ ಶುಕ್ಲಾಸ್ತೇ ತನವಸ್ತಥಾ ॥೧೩॥

ಶರೀರ ಮತ್ತು ತಲೆಗಳಲ್ಲಿ ರೋಮವುಳ್ಳ, ಕಪ್ಪುಬಾಲವೂ, ಗುಂಡುಮಚ್ಚೆಯುಳ್ಳವಾಗಿ ಧಾನ್ಯದ ಮೊಳಕೆಯಂತೆ ಬೆಳ್ಳಗೂ, ಸಣ್ಣಗೂ ಇರುತ್ತವೆ.

ಮಜ್ಜಾದಾ ನೇತ್ರಲೇಢಾರಸ್ತಾಲು ಶ್ರೋತುಭುಜಸ್ತಥಾ ।
ಶಿರೋ ಹೃದ್ರೋಗವಮಥುಪ್ರತಿಶ್ಯಾಯಕರಾಶ್ಚ ತೇ ॥೧೪॥

ಅವುಗಳಲ್ಲಿ ಕೆಲವು ಮಜ್ಜಧಾತುವನ್ನೂ, ಕೆಲವು ಕಣ್ಣನ್ನೂ, ಕೆಲವು ಅಂಗಗಳನ್ನೂ, ಕಿವಿಯನ್ನೂ ತಿಂದುಬಿಡುತ್ತವೆ. ಅವುಗಳು ತಲೆನೋವು, ಹೃದ್ರೋಗ, ವಮನ, ನೆಗಡಿಗಳನ್ನುಂಟುಮಾಡುತ್ತವೆ.

ಕೇಶರೋಮನಖಾದಾಶ್ಚ ದನ್ತಾದಾ ಕಿಕ್ಕಿಶಾಸ್ತಥಾ ।
ಕುಷ್ಠಜಾಶ್ಚ ಪರೀಸರ್ಪಾಜ್ಞೇಯಾಃ ಶೋಣಿತಸಂಭವಾಃ ॥೧೫॥
ತೇ ಸರಕ್ತಾಶ್ಚ ಕೃಷ್ಣಾಶ್ಚ ಸ್ನಿಗ್ಧಾಶ್ಚ ಪೃಥವಸ್ತಥಾ ।
ರಕ್ತಾಧಿಷ್ಠಾನಜಾನ್ ಪ್ರಾಯೋ ವಿಕಾರಾನ್ ಜನಯನ್ತಿ ತೇ ॥೧೬॥

ದುಷ್ಟರಕ್ತದಿಂದ ಹುಟ್ಟಿದ ಕ್ರಿಮಿಗಳು ತಲೆಕೂದಲು, ಮೈರೋಮಗಳು, ಉಗುರುಗಳು, ಮತ್ತು ಹಲ್ಲುಗಳನ್ನು ತಿನ್ನುತ್ತವೆ ಕಿಕ್ಕಿಸ (ಎದೆಯೊಳಗೆ ನವೆಯಾಗುವುದು), ಕುಷ್ಠ, ವಿಸರ್ಪಗಳನ್ನುಂಟುಮಾಡುತ್ತವೆ. ಅವು ಸ್ವಲ್ಪ ರಕ್ತ ಮತ್ತು ಕಪ್ಪು ಬಣ್ಣವುಳ್ಳವಾಗಿ ಸ್ನಿಗ್ಧವಾಗಿರುತ್ತವೆ ಮತ್ತು ಪ್ರಾಯಿಕವಾಗಿ ರಕ್ತಾಶಯದಲ್ಲಿ ಹುಟ್ಟುವ ವ್ಯಾಧಿಸಮುದ್ದೇಶೀಯಾಧ್ಯಾಯದಲ್ಲಿ ಹೇಳಿರುವಂತೆ ಕುಷ್ಠ, ವಿಸರ್ಪ, ಪಿಡಕೆ ಮೊದಲಾದ ರೋಗಗಳನ್ನುಂಟುಮಾಡುತ್ತವೆ.

ಮಾಷಪಿಷ್ಟಾನ್ನವಿದಳಪರ್ಣಶಾಕೈಃ ಪುರೀಷಜಾಃ ।
ಮಾಂಸಮಾಷಗುಡಕ್ಷೀರದಧಿತೈಲೈಃ ಕಫೋದ್ಭವಾಃ ॥೧೭॥
ವಿರುದ್ಧಾಜೀರ್ಣಶಾಕಾದ್ಯೈಃ ಶೋಣಿತೋತ್ಥಾ ಭವನ್ತಿ ಹಿ ।
(ಜ್ವರೋ ವಿವರ್ಣತಾ ಶೂಲಂ ಹೃದ್ರೋಗಃ ಸದನಂ ಭ್ರಮಃ ॥೧೮॥
ಭಕ್ತದ್ವೇಷೋಽವಿಪಾಕಶ್ಚ ಸಂಜಾತಕ್ರಿಮಿಲಕ್ಷಣಮ್ ।)

ಉದ್ದು, ಹಿಟ್ಟಿನ ಅನ್ನ, ಬೇಳೆಗಳು, ಎಲೆ, ಸೊಪ್ಪುಗಳ ಸೇವನೆಯಿಂದ ಪುರೀಷಜ ಕ್ರಿಮಿಗಳೂ, ಮಾಂಸ, ಉದ್ದು, ಬೆಲ್ಲ, ಹಾಲು, ಮೊಸರು, ಎಣ್ಣೆಗಳ ಸೇವನೆಯಿಂದ ಕಫಜಕ್ರಿಮಿಗಳೂ, ವಿರುದ್ಧಾಹಾರ, ಅಜೀರ್ಣಭೋಜನ, ಶಾಕಾಹಾರಗಳ ಸೇವನೆಯಿಂದ ರಕ್ತಜಕ್ರಿಮಿಗಳು ಉಂಟಾಗುತ್ತವೆ. (ಜ್ವರ, ಶರೀರದಬಣ್ಣ ಬದಲಾವಣೆ, ಹೊಟ್ಟೆ ಶೂಲೆ, ಹೃದ್ರೋಗ, ಕೃಶತ್ವ, ತಲೆತಿರುಗುವಿಕೆ, ಅನ್ನದ್ವೇಷ, ಆಹಾರವು ಜೀರ್ಣವಾಗದಿರುವಿಕೆ ಇವು ಕ್ರಿಮಿಗಳು ಉತ್ಪತ್ತಿಯಾಗಿರುವುದಕ್ಕೆ ಗುರ್ತುಗಳು.)

ದೃಶ್ಯಾಸ್ತ್ರಯೋದಶಾದ್ಯಾಸ್ತು ಕ್ರಿಮೀಣಾಂ ಪರಿಕೀರ್ತಿತಾಃ ॥೧೯॥
ಕೇಶಾದಾದ್ಯಾಸ್ತ್ವದೃಶ್ಯಾಸ್ತೇ ದ್ವಾವಾದ್ಯೌ ಪರಿವರ್ಜಯೇತ್ ।
ಏಷಾಮನ್ಯತಮಂ ಜ್ಞಾತ್ವಾ ಜಿಘಾಂಸುಃ ಸ್ನಿಗ್ಧಮಾತುರಮ್ ॥೨೦॥
ಸುರಸಾದಿವಿಪಕ್ವೇನ ಸರ್ಪಿಷಾ ವಾನ್ತಮಾದಿತಃ ।
ವಿರೇಚಯೇತ್ ತೀಕ್ಷ್ಣತರೈರ್ಯೋಗೈರಾಸ್ಥಾಪಯೇಚ್ಚ ತಮ್ ॥೨೧॥
ಯವ ಕೋಲಕುಳತ್ಥಾನಾಂ ಸುರಸಾದೇರ್ಗಣಸ್ಯ ಚ ।
ವಿಡಙ್ಗಸ್ನೇಹಯುಕ್ತೇನ ಕ್ವಾಥೇನ ಲವಣೇನ ಚ ॥೨೨॥

ಮೊದಲನೆಯ ೧೩ ವಿಧ ಕ್ರಿಮಿಗಳು ಕಾಣಿಸುತ್ತವೆ. ಕೇಶಾದಾ ಮೊದಲಾದ ೭ ವಿಧ ಕ್ರಿಮಿಗಳು ಕಣ್ಣಿಗೆ ಕಾಣಿಸುವುದಿಲ್ಲ. ಕೇಶಾದಾ ರೋಮಾದಗಳ ಕ್ರಿಮಿಗಳನ್ನು ತ್ಯಜಿಸಬೇಕು. ಕ್ರಿಮಿಗಳನ್ನು ನಾಶಮಾಡಬೇಕಾದರೆ ವೈದ್ಯನು ರೋಗಿಗೆ ಸ್ನೇಹನ ಮಾಡಿಸಿ ಸುರಸಾದಿ ಗಣದ್ರವ್ಯಗಳಿಂದ ತಯಾರಿಸಿದ ತುಪ್ಪವನ್ನು ಕುಡಿಸಿ ವಮನವನ್ನೂ ತೀಕ್ಷ್ಣದ್ರವ್ಯಗಳಿಂದ ವಿರೇಚನವನ್ನೂ ಮಾಡಿಸಿ ಯವೆ, ಎಲಚಿ, ಹುರುಳಿ ಮತ್ತು ಸುರಸಾದಿ ಗಣದ್ರವ್ಯಗಳ ಕಷಾಯಕ್ಕೆ ವಿಡಂಗದಿಂದ ತಯಾರಿಸಿದ ಸ್ನೇಹವನ್ನೂ ಲವಣವನ್ನೂ ಮಿಶ್ರಮಾಡಿ ಆಸ್ಥಾಪನ ಬಸ್ತಿಯನ್ನು ಪ್ರಯೋಗಿಸಬೇಕು.

ಪ್ರತ್ಯಾಗತೇ ನಿರೂಹೇ ತು ನರಂ ಸ್ನಾತಂ ಸುಖಾಮ್ಬುನಾ ।
ಯುಞ್ಜ್ಯಾತ್ ಕ್ರಿಮಿಘ್ನೈರಶನೈಸ್ತತಃ ಶೀಘ್ರಂ ಭಿಷಗ್ವರಃ ॥೨೩॥
ಸ್ನೇಹೇನೋಕ್ತೇನ ಚೈನಂ ತು ಯೋಜಯೇತ್ ಸ್ನೇಹ ಬಸ್ತಿನಾ ।
ತತಃ ಶಿರೀಷಕಿಣಿಹೀರಸಂ ಕ್ಷೌದ್ರಯುತಂ ಪಿಬೇತ್ ॥೨೪॥
ಕೇವುಕಸ್ವರಸಂ ವಾಽಪಿ ಪೂರ್ವವತ್ತೀಕ್ಷ್ಣಭೋಜನಃ ।
ಪಲಾಶಬೀಜಸ್ವರಸಂ ಕಲ್ಕಂ ವಾ ತಣ್ಡುಲಾಮ್ಬುನಾ ॥೨೫॥
ಪಾರಿಭದ್ರಕಪತ್ರಾಣಾಂ ಕ್ಷೌದ್ರೇಣ ಸ್ವರಸಂ ಪಿಬೇತ್ ।
ಪತ್ತೂರಸ್ವರಸಂ ವಾಪಿ ಪಿಬೇದ್ವಾ ಸುರಸಾದಿಜಮ್ ॥೨೬॥

ನಿರೂಹದ್ರವ್ಯವು ಹೊರಕ್ಕೆ ಬಂದಮೇಲೆ ರೋಗಿಯನ್ನು ಸುಖೋಷ್ಣವಾಗಿರುವ ನೀರಿನಿಂದ ಸ್ನಾನಮಾಡಿಸಿ ಕ್ರಿಮಿಹರಗಳಾದ ವಿಡಂಗಾದಿ ಘೃತಗಳನ್ನು ಮಿಶ್ರಮಾಡಿದ ಆಹಾರವನ್ನು ಭೋಜನಮಾಡಿಸಿ ವಿಡಂಗಾದಿಗಳಿಂದ ತಯಾರಿಸಿದ ತುಪ್ಪವನ್ನು ಮಿಶ್ರಮಾಡಿದ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕು. ಅನಂತರ ಬಾಗೆ, ಉತ್ತರಣೆಗಳ ಸ್ವರಸಕ್ಕೆ ಜೇನುತುಪ್ಪ ಮಿಶ್ರಮಾಡಿಯೂ ಅಥವಾ ಕೇವುಕದ (ಕೆಂಪುಮೂಲಂಗಿ) ಸ್ವರಸಕ್ಕೆ ಜೇನುತುಪ್ಪವನ್ನು ಮಿಶ್ರಮಾಡಿಯೂ ಕುಡಿಸಬೇಕು. ಅನಂತರ ತೀಕ್ಷ್ಣಾಹಾರವನ್ನು ಭೋಜನ ಮಾಡಿಸಿ ಮುತ್ತುಗದ ಬೀಜದ ಸ್ವರಸವನ್ನಾಗಲೀ, ಕಲ್ಕವನ್ನಾಗಲೀ ಕಲಗಚ್ಚಿನಲ್ಲಿ ಕದರಿಯೂ ಪಾರಿವಾಣದಸೊಪ್ಪಿನ ಸ್ವರಸಕ್ಕೆ ಜೇನುತುಪ್ಪವನ್ನು ಸೇರಿಸಿಯಾಗಲೀ ಹೊಮ್ಮಗಳ ಸ್ವರಸವನ್ನಾಗಲೀ, ಸುರಸಾದಿ ಗಣದ್ರವ್ಯಗಳ ಕಷಾಯವನ್ನಾಗಲೀ ಕುಡಿಸಬೇಕು.

ಲಿಹ್ಯಾದಶ್ವಶಕೃಚ್ಚೂರ್ಣಂ ವೈಡಙ್ಗಂ ವಾ ಸಮಾಕ್ಷಿಕಮ್ ।
ಪತ್ರೈರ್ಮೂರ್ಷಿಕಪರ್ಣ್ಯಾ ವಾ ಸುಪಿಷ್ಟೈಃ ಪಿಷ್ಟಮಿಶ್ರಿತೈಃ ॥೨೭॥
ಖಾದೇತ್ ಪೂಪಲಿಕಾಃ ಪಕ್ವಾ ಧಾನ್ಯಾಮ್ಲಂ ಚ ಪಿಬೇದನು ।
ಸುರಸಾದಿಗಣೇ ತೈಲಂ ಪಕ್ವಂ ವಾ ಪಾನಮಿಷ್ಯತೇ ॥೨೮॥
ವಿಡಙ್ಗಚೂರ್ಣಯುಕ್ತೈರ್ವಾ ಪಿಷ್ಟೈರ್ಭಕ್ಷ್ಯಾಂಸ್ತು ಕಾರಯೇತ್ ॥
ತತ್ಕಷಾಯಪ್ರಪೀತಾನಾಂ ತಿಲಾನಾಂ ಸ್ನೇಹಮೇವ ವಾ ॥೨೯॥

ಶ್ವಾವಿಧಃ ಶಕೃತಶ್ಚೂರ್ಣಂ ಸಪ್ತಕೃತಃ ಸುಭಾವಿತಮ್ ।
ವಿಡಙ್ಗಾನಾಂ ಕಷಾಯೇಣ ತ್ರೈಫಲೇನ ತಥೈವ ಚ ॥೩೦॥
ಕ್ಷೌದ್ರೇಣ ಲೀಢ್ವಾನುಪಿಬೇದ್ರಸಮಾಮಲಕೋದ್ಭವಮ್ ।
ಅಕ್ಷಾಭಯಾರಸಂ ಚಾಪಿ ವಿಧಿರೇಷೋಽಯಸಾಮಪಿ ॥೩೧॥

ಕುದುರೆಯ ಲದ್ದಿಯ ಚೂರ್ಣವನ್ನಾಗಲೀ ವಿಡಂಗದ ಚೂರ್ಣವನ್ನಾಗಲೀ ಜೇನುತುಪ್ಪ ಮಿಶ್ರಮಾಡಿ ನೆಕ್ಕಿಸಬೇಕು. ಇಲಿಕಿವಿಗಿಡದ ಎಲೆಗಳೊಡನೆ ಯವೆಯ ಹಿಟ್ಟನ್ನು ಮಿಶ್ರಮಾಡಿ ಕಡಬು ಬೇಯಿಸಿ ತಿನ್ನಿಸಿ ಕಲಗಚ್ಚನ್ನು ಕುಡಿಸಬೇಕು. ಸುರಸಾದಿಗಣದ್ರವ್ಯಗಳನ್ನು ಸೇರಿಸಿ ತೈಲಪಾಕಮಾಡಿ ಕುಡಿಸಬೇಕು. ವಿಡಂಗಚೂರ್ಣ ವನ್ನು ಯವೆಗೋಧಿಗಳ ಹಿಟ್ಟಿನೊಡನೆ ತಯಾರಿಸಿದ ಭಕ್ಷ್ಯಗಳನ್ನು ತಿನ್ನಿಸಬೇಕು. ವಿಡಂಗದ ಕಷಾಯದಲ್ಲಿ ಭಾವನೆಮಾಡಿದ ಎಳ್ಳಿನಿಂದ ತೈಲವನ್ನು ತೆಗೆಸಿ ಕುಡಿಸಬೇಕು. ಮುಳ್ಳುಹಂದಿಯ ಮಲವನ್ನು ವಿಡಂಗದ ಕಷಾಯದಿಂದಲಾಗಲೀ ತ್ರಿಫಲಾಕಷಾಯ ದಿಂದಾಗಲೀ ೭ ಸಾರಿ ಭಾವನೆಮಾಡಿ ಜೇನುತುಪ್ಪ ಮಿಶ್ರಮಾಡಿ ತಿನ್ನಿಸಿ ನೆಲ್ಲಿಕಾಯಿಯ ರಸವನ್ನಾಗಲೀ ತಾರೆಕಾಯಿ, ಅಣಿಲೆಕಾಯಿಗಳ ಕಷಾಯವನ್ನಾಗಲೀ ಅನುಪಾನಮಾಡಿಸ ಬೇಕು. ಶ್ವಾವಿಚ್ಛಕೃಚ್ಚೂರ್ಣಪ್ರಯೋಗದ ವಿಧಾನವನ್ನೇ ತವರ, ಸೀಸ, ತಾಮ್ರ, ರಜತ ಕೃಷ್ಣಲೋಹಗಳ ಪ್ರತ್ಯೇಕ ಪ್ರಯೋಗದಲ್ಲೂ ಅನುಸರಿಸಬೇಕು.

ಪೂತೀಕಸ್ವರಸಂ ವಾಪಿ ಪಿಬೇದ್ವಾ ಮಧುನಾ ಸಹ ।
ಪಿಬೇದ್ವಾ ಪಿಪ್ಪಲೀಮೂಲಮಜಾಮೂತ್ರೇಣ ಸಂಯುತಮ್ ॥೩೨॥
ಸಪ್ತರಾತ್ರಂ ಪಿಬೇದ್ಘೃಷ್ಟಂ ತ್ರಪುವಾ ದಧಿಮಸ್ತುನಾ ।
ಪುರೀಷಜಾನ್ ಕಫೋತ್ಥಾಂಶ್ಚ ಹನ್ಯಾದೇವಂ ಕ್ರಿಮೀನ್ ಭಿಷಕ್ ॥೩೩॥

ತವಸದ ತೊಗಟೆಯ ಸ್ವರಸಕ್ಕೆ ಜೇನುತುಪ್ಪ ಮಿಶ್ರಮಾಡಿಯಾಗಲೀ ಅಥವಾ ಮೋಡಿಯ ಚೂರ್ಣವನ್ನು ಆಡಿನ ಮೂತ್ರದಲ್ಲಿಯಾಗಲೀ ಕದರಿ ಕುಡಿಸಬೇಕು. ಮೊಸರು ಕಟ್ಟಿನಿಂದ ತವರವನ್ನು ಉಜ್ಜಿದ ಗಂಧವನ್ನು ಕದರಿ ೭ ದಿನ ಕುಡಿಸಿದರೆ ಪುರೀಷದಿಂದ ಹುಟ್ಟಿದ ಮತ್ತು ಕಫಜನಿತ ಕ್ರಿಮಿಗಳು ಸಾಯುತ್ತವೆ.

ಶಿರೋಹೃದ್ಘ್ರಾಣವಕ್ತ್ರಾಕ್ಷಿಸಂಶ್ರಿತಾಂಶ್ಚ ಪೃಥಗ್ವಿಧಾನ್ ।
ವಿಶೇಷೇಣಾಞ್ಜನೈರ್ನಸ್ಯೈರವಪೀಡೈಶ್ಚ ಸಾಧಯೇತ್ ॥೩೪॥

ತಲೆ, ಹೃದಯ, ಮೂಗು, ಬಾಯಿ, ಕಣ್ಣುಗಳಲ್ಲಿ ಸೇರಿರುವ ಬೇರೆ ಬೇರೆ ವಿಧದ ಕ್ರಿಮಿಗಳನ್ನು ಮುಖ್ಯವಾಗಿ ಅಂಜನ, ನಸ್ಯ, ಅವಪೀಡಗಳಿಂದ ಪರಿಹರಿಸಬೇಕು. ಆದರೂ ಕಣ್ಣಿನ ಕ್ರಿಮಿಗಳಿಗೆ ಅಂಜನವನ್ನೂ ಮೂಗು ತಲೆಗಳನ್ನಾಯಿಸಿರುವುದನ್ನು ನಸ್ಯ, ಅವ ಪೀಡಗಳಿಂದಲೂ ಹೃದಯ ಮತ್ತು ಕಿವಿಗಳನ್ನಾಶ್ರಯಿಸಿರುವ ಕ್ರಿಮಿಗಳಿಗೆ ಕ್ರಿಮಿಜಹೃದ್ರೋಗ ಕ್ರಿಮಿಕರ್ಣಚಿಕಿತ್ಸೆಗಳಿಂದಲೂ ಶಿರಃಸ್ಥಿತಕ್ರಿಮಿಯನ್ನು ಕ್ರಿಮಿಜಶಿರೋರೋಗ ಚಿಕಿತ್ಸೆ ಯಂತೆಯೂ ಚಿಕಿತ್ಸೆಮಾಡಬೇಕು.

ಶಕೃದ್ರಸಂ ತುರಙ್ಗಸ್ಯ ಸುಶುಷ್ಕಂ ಭಾವಯೇದತಿ ।
ನಿಃಕ್ವಾಥೇನ ವಿಡಙ್ಗಾನಾಂ ಚೂರ್ಣಂ ಪ್ರಧಮನಂ ತು ತತ್ ॥೩೫॥

ಕುದುರೆಯ ಹೊಸಲದ್ದಿಯನ್ನು ಹಿಂಡಿದ ರಸವನ್ನು ಒಣಗಿಸಿ ಚೂರ್ಣಿಸಿ ವಿಡಂಗದ ಕಷಾಯದಿಂದ ಭಾವನೆಮಾಡಿ ಬಿಸಿಲಿನಲ್ಲಿ ಒಣಗಿಸಿ ಪುಡಿಮಾಡಿ ಮೂಗಿಗೆ ಮುಖವಾಯು ವಿನಿಂದ ಊದಿದರೆ ಕ್ರಿಮಿಹರವು. ಅಯಶ್ಚೂರ್ಣವನ್ನು ಇದೇ ವಿಧಾನದಿಂದ ನಸ್ಯ ಮಾಡಿಸಬೇಕು.

ಅಯಶ್ಚೂರ್ಣಾನ್ಯನೇನೈವ ವಿಧಿನಾ ಯೋಜಯೇದ್ಭಿಷಕ್ ।
ಸಕಾಂಸ್ಯನೀಲಂತೈಲಂ ಚ ನಸ್ಯಂ ಸ್ಯಾತ್ಸುರಸಾದಿಕೇ ॥೩೬॥
ಇನ್ದ್ರಲುಪ್ತವಿಧಿಶ್ಚಾಪಿ ವಿಧೇಯೋರೋಮಭೋಜಿಷು ।
ದನ್ತಾದೀನಾಂ ಸಮುದ್ದಿಷ್ಟಂ ವಿಧಾನಂ ಮುಖರೋಗಿಕಮ್ ॥೩೭॥
ರಕ್ತಜಾನಾಂ ಪ್ರತೀಕಾರಂ ಕುರ್ಯಾತ್ ಕುಷ್ಠಚಿಕಿತ್ಸಿತೇ ।
ಸುರಸಾದಿಂ ತು ಸರ್ವೇಷು ಸರ್ವಥೈವೋಪಯೋಜಯೇತ್ ॥೩೮॥
ಪ್ರವ್ಯಕ್ತತಿಕ್ತಕಟುಕಂ ಭೋಜನಂ ಚ ಹಿತಂ ಭವೇತ್ ।
ಕುಳತ್ಥಕ್ಷಾರಸಂಸೃಷ್ಟಂ ಕ್ಷಾರಪಾನಂ ಚ ಪೂಜಿತಮ್ ॥೩೯॥

ಸುರಸಾದಿ ಗಣೋಕ್ತದ್ರವ್ಯಗಳ ಕಷಾಯದೊಡನೆ ಕಂಚನ್ನು ಉಜ್ಜಿದರೆ ಬರುವ ಕಾಡಿಗೆಯನ್ನೂ (ಕಪ್ಪುಮಲವನ್ನೂ) ತೈಲವನ್ನೂ ಸೇರಿಸಿ ತಯಾರಿಸಿದ ತೈಲವನ್ನೂ, ಇಂದ್ರಲುಪ್ತ ಚಿಕಿತ್ಸೆಯನ್ನೂ ಕೂದಲನ್ನು ತಿನ್ನುವ ಕ್ರಿಮಿಗಳಿಗೆ ಉಪಯೋಗಿಸಬೇಕು. ದಂತಕ್ರಿಮಿಗಳಿಗೆ ಮುಖರೋಗದ ಚಿಕಿತ್ಸೆಯನ್ನು ಮಾಡಬೇಕು. ರಕ್ತದಿಂದುಂಟಾದ ಕ್ರಿಮಿಗಳಿಗೆ ಕುಷ್ಠರೋಗದಲ್ಲಿ ಹೇಳಿರುವಂತೆಯೇ ಚಿಕಿತ್ಸೆ ಮಾಡಬೇಕು. ಸುರಸಾದಿ ಗಣದ್ರವ್ಯಗಳ ಕಷಾಯವೊಂದನ್ನೇ ಸಕಲ ವಿಧದ ಕ್ರಿಮಿರೋಗಗಳಲ್ಲೂ ಪ್ರಯೋಗಮಾಡ ಬೇಕು. ತಿಕ್ತರಸ ಕಟುರಸಗಳೇ ಹೆಚ್ಚಾಗಿರುವ ಆಹಾರವನ್ನು ತಿನ್ನಿಸಬೇಕು. ಹುರುಳಿ ಯನ್ನು ಸುಟ್ಟು ಬಂದ ಭಸ್ಮದೊಡನೆ ಯವಕ್ಷಾರವನ್ನೂ ನೀರಿನಲ್ಲಿ ಕದರಿ ಬಂದ ಕ್ಷಾರೋ ದಕವನ್ನು ಕುಡಿಸಿದರೆ ಹಿತವಾಗುತ್ತದೆ.

ಕ್ಷೀರಾಣಿ ಮಾಂಸಾನಿ ಘೃತಾನಿ ಚೈವ ದಧೀನಿ ಶಾಕಾನಿ ಚ ಪರ್ಣವನ್ತಿ ।
ಸಮಾಸತೋಽಮ್ಲಾನ್ ಮಧುರಾನ್ ಹಿಮಾಂಶ್ಚ ಕ್ರಿಮೀನ್ ಜಿಘಾಂಸುಃ ಪರಿವರ್ಜಯೇತ್ತು ॥೪೦॥

ಕ್ರಿಮಿಗಳನ್ನು ನಾಶಪಡಿಸಬೇಕೆಂದು ಅಪೇಕ್ಷಿಸುವ ಮನುಷ್ಯನು ಹಾಲು, ಮೊಸರು, ಮಾಂಸ, ತುಪ್ಪ, ಸೊಪ್ಪುಗಳು, ಎಲೆಗಳು, ಒಟ್ಟಿನಲ್ಲಿ ಹುಳಿ, ಸಿಹಿರಸವುಳ್ಳ ಪದಾರ್ಥ ಗಳನ್ನೂ ತಣ್ಣಗಿರುವ ವಸ್ತುಗಳನ್ನೂ ತ್ಯಜಿಸಿಬಿಡಬೇಕು.

ಇತಿ ಶ್ರೀಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ
ಕ್ರಿಮಿರೋಗಪ್ರತಿಷೇಧನಾಮಕಚತುಃಪಞ್ಚಾಶತ್ತಮಾಧ್ಯಾಯಸ್ಯ ಶ್ರೀಭಟ್ಟಾ
ಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ
ಕೃತಕರ್ಣಾಟಕ ಭಾಷಾವಿವೃತಿಃ.

ಪಞ್ಚಪಞ್ಚಾಶತ್ತಮೋಽಧ್ಯಾಯಃ

ಅಥಾತ ಉದಾವರ್ತಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಉದಾವರ್ತಚಿಕಿತ್ಸೆಯನ್ನು ವಿವರಿಸುತ್ತೇವೆ.

ಅಧಶ್ಚೋರ್ಧ್ವಂ ಚ ಭಾವಾನಾಂ ಪ್ರವೃತ್ತಾನಾಂ ಸ್ವಭಾವತಃ |
ನ ವೇಗಾನ್ ಧಾರಯೇತ್ ಪ್ರಾಜ್ಞೋ ವಾತಾದೀನಾಂ ಜಿಜೀವಿಷುಃ ||೩||

ದೀರ್ಘಕಾಲ ಜೀವಿಸಿರಬೇಕೆಂದು ಆಶಿಸುವ ಮನುಷ್ಯನು ಮೂತ್ರಾದಿ ಅಧೋವೇಗಗಳನ್ನೂ ಉದ್ಗಾರಾದಿ ಊರ್ಧ್ವವೇಗಗಳನ್ನೂ ತಡೆಯಬಾರದು.

ವಾತವಿಣ್ಮೂತ್ರಜೃಮ್ಭಾ ಶ್ರುಕ್ಷವೋದ್ಗಾರವಮೀನ್ದ್ರಿಯೈಃ |
ವ್ಯಾಹನ್ಯಮಾನೈರುದಿತೈರುದಾವರ್ತೋ ನಿರುಚ್ಯತೇ ||೪||
ಕ್ಷುತ್ತೃಷ್ಣಾಶ್ವಾಸನಿದ್ರಾಣಾಮುದಾವರ್ತೋ ವಿಧಾರಣಾತ್ |
ತಸ್ಯಾಭಿಧಾಸ್ಯೇ ವ್ಯಾಸೇನ ಲಕ್ಷಣಂ ಚ ಚಿಕಿತ್ಸಿತಮ್ ||೫||
ತ್ರಯೋದಶವಿಧಶ್ಚಾಸೌ ಭಿನ್ನ ಏತೈಸ್ತು ಕಾರಣೈಃ |
ಅಪಥ್ಯ ಭೋಜನಾಚ್ಚಾಪಿ ವಕ್ಷ್ಯತೇ ಚ ತಥಾಪರಃ ||೬||

ಅಪಾನವಾತ, ಮಲ, ಮೂತ್ರ, ಆಕಳಿಕೆ, ಕಣ್ಣೀರು, ಶೀನು, ತೇಗು, ವಮನ, ಶುಕ್ರಸ್ರಾವ, ಹಸಿವು, ಬಾಯಾರಿಕೆ, ಶ್ವಾಸ, ನಿದ್ರೆ ಇವುಗಳ ವೇಗಗಳನ್ನು ತಡೆಯುವುದರಿಂದ ದೋಷಗಳು ಮೇಲ್ಗಡೆಗೆ ತಿರುಗಿ ೧೩ ವಿಧ ಉದಾವರ್ತನವನ್ನುಂಟುಮಾಡುತ್ತವೆ. ವಿಸ್ತಾರವಾಗಿ ಅದರ ಲಕ್ಷಣಗಳನ್ನೂ ಚಿಕಿತ್ಸೆಯನ್ನೂ ಹೇಳುತ್ತೇನೆ; ಇವುಗಳಲ್ಲದೆ ಅಪಥ್ಯಭೋಜನದಿಂದುಂಟಾಗುವ ಮತ್ತೊಂದು ವಿಧವು ಹೇಳಲ್ಪಡುತ್ತದೆ.

ಆಧ್ಮಾನಶೂಲೌ ಹೃದಯೋಪರೋಧಂ ಶಿರೋರುಜಂ ಶ್ವಾಸಮತೀವ ಹಿಕ್ಕಾಮ್ |
ಕಾಸಪ್ರತಿಶ್ಯಾಯಗಳಗ್ರಹಾಂಶ್ಚ ಬಲಾಸಪಿತ್ತಪ್ರಸರಂ ಚ ಘೋರಮ್ ||೭||
ಕುರ್ಯಾದಪಾನೋಽಭಿಹತಃ ಸ್ವಮಾರ್ಗೇ ಹನ್ಯಾತ್ಪುರೀಷಂ ಮುಖತಃ ಕ್ಷಿಪೇದ್ವಾ |
ಆಟೋಪಶೂಲೌ ಪರಿಕರ್ತನಂ ಚ ಸಙ್ಗಃ ಪುರೀಷಸ್ಯ ತಥೋರ್ಧ್ವವಾತಃ ||೮||
ಪುರೀಷಮಾಸ್ಯಾದಪಿ ವಾ ನಿರೇತಿ ಪುರೀಷವೇಗೇಽಭಿಹತೇ ನರಸ್ಯ |
ಮೂತ್ರಸ್ಯ ವೇಗೇಽಭಿಹತೇ ನರಸ್ತು ಕೃಚ್ಛ್ರೇಣ ಮೂತ್ರಂ ಕುರುತೇಽಲ್ಪಮಲ್ಪಮ್ ||೯||
ಮೇಢ್ರೇಗುದೇವಙ್ಕ್ಷಣಬಸ್ತಿಮುಷ್ಕನಾಭಿಪ್ರದೇಶೇಷ್ವಥವಾಪಿ ಮೂರ್ಧ್ನಿ |
ಆನದ್ಧಬಸ್ತಿಶ್ಚ ಭವನ್ತಿ ತೀವ್ರಾಃ ಶೂಲಾಶ್ಚ ಶೂಲೈರಿವ ಭಿನ್ನಮೂರ್ತೇಃ ||೧೦||

ಅಪಾನವಾತವು ಗುದದಲ್ಲಿ ತಡೆಯಲ್ಪಟ್ಟರೆ ಹೊಟ್ಟೆಯುಬ್ಬರ ಮತ್ತು ಹೊಟ್ಟೆನೋವೂ, ಹೃದಯದಲ್ಲಿ ತಡೆತವೂ, ತಲೆನೋವೂ, ಅತಿಯಾಗಿಶ್ವಾಸವೂ, ಬಿಕ್ಕಳಿಕೆಯೂ, ಕೆಮ್ಮು, ನೆಗಡಿಯೂ, ಗಂಟಲುಹಿಡಿಯುವುದೂ, ಕಫಪಿತ್ತಗಳು ವೇಗವಾಗಿ ಮುಂದೆ ನುಗ್ಗುವಿಕೆ ಮಲಕ್ಷಯ ಇವುಗಳುಂಟಾಗುತ್ತವೆಯಲ್ಲದೆ ಮುಖದಿಂದ ಪುರೀಷವೂ ಹೊರಕ್ಕೆ ಬೀಳುತ್ತದೆ ; ಮಲದವೇಗವನ್ನು ತಡೆದರೆ ಹೊಟ್ಟೆಯಲ್ಲಿ ಮಲವುತುಂಬಿ ಗುಡಗುಡವೆಂಬ ಶಬ್ದವಾಗುತ್ತದೆ, ಗುದ, ಶಿಶ್ನ, ಬಸ್ತಿ ಮೊದಲಾದ ಪ್ರದೇಶಗಳು ಕತ್ತರಿಸಿದಂತೆ ನೋಯುತ್ತವೆ ; ಮಲವು ತಡೆಯಲ್ಪಡುತ್ತದೆ ; ಅತಿಯಾಗಿ ತೇಗುಬರುತ್ತದೆ ; ಬಾಯಿನಿಂದಲೇ ಪುರೀಷವು ಹೊರಕ್ಕೆಬಂದು ಬೀಳುವ ಸಂಭವವೂ ಉಂಟು ಪರಿಕರ್ತನಂಚ ಎಂದಿರುವುದರಿಂದ ಮೊಣಕಾಲಿನವಿಾನುತತ್ತಿಗಳು (ಮಾಂಸಖಂಡಗಳು) ಬಿಗಿದುಹಿಡಿದುನೋಯುತ್ತವೆಂದು ಅರ್ಥವು. ಮೂತ್ರದ ವೇಗವನ್ನು ತಡೆದರೆ ಆ ರೋಗಿಯು ಬಲು ಕಷ್ಟಪಟ್ಟು ಸ್ವಲ್ಪಸ್ವಲ್ಪ ಮೂತ್ರವನ್ನು ವಿಸರ್ಜನೆಮಾಡುತ್ತಾನೆ ; ಶಿಶ್ನ. ಗುದ, ತೊಡೆಸಂದು, ಮೂತ್ರಬಸ್ತಿ, ಅಂಡಕೋಶ, ಹೊಕ್ಕಳು, ತಲೆ ಇವುಗಳಲ್ಲಿ ನೋವುಂಟಾಗುತ್ತದೆ ; ಮೂತ್ರತುಂಬಿ ಬಸ್ತ್ಯಾಶಯವು ಉಬ್ಬುತ್ತದೆ; ಶೂಲಾಯುಧದಿಂದ ಚುಚ್ಚಿದಂತೆ ದೇಹಕ್ಕೆ ವ್ಯಥೆಯುಂಟಾಗುತ್ತದೆ.

ಮನ್ಯಾಗಳಸ್ತಮ್ಭಶಿರೋವಿಕಾರಾ ಜೃಮ್ಭೋಪಘಾತಾತ್ಪವನಾತ್ಮಕಾಃಸ್ಯುಃ ।
ಶ್ರೋತ್ರಾನನಘ್ರಾಣ ವಿಲೋಚನೋತ್ಥಾ ಭವನ್ತಿ ತೀವ್ರಾಶ್ಚತಥಾ ವಿಕಾರಾಃ ||೧೧||

ಆಕಳಿಕೆಯನ್ನು ತಡೆಯುವುದರಿಂದ ಹೆಕ್ಕತ್ತುಗಳ (ಕತ್ತು) ಬಿಗಿದು ಹಿಡಿದು ಬಿಡುತ್ತವೆ ; ತಲೆನೋವೂ ಸೂರ್ಯಾವರ್ತಾದಿಶೂಲೆಗಳೂ, ವೈನಡುಕ ಸ್ಪರ್ಶಹಾನಿ ಮೊದಲಾದ ವಾತವಿಕಾರಗಳೂ, ಅರುಚಿ, ತಲೆತಿರುಗು ಮತ್ತು ಅತ್ಯಂತಕಠಿನಗಳಾದ ಕಿವಿ, ಬಾಯಿ, ಮೂಗು, ಕಣ್ಣುಗಳ ರೋಗಗಳೂ ಉಂಟಾಗುತ್ತವೆ.

ಆನನ್ದಜಂ ಶೋಕಸಮುದ್ಭವಂ ವಾ ನೇತ್ರೋದಕಂ ಪ್ರಾಪ್ತಮಮುಞ್ಚತೋಹಿ ।
ಶಿರೋಗುರುತ್ವಂ ನಯನಾಮಯಾಶ್ಚ ಭವನ್ತಿ ತೀವ್ರಾಸ್ಸಹಪೀನಸೇನ ||೧೨||
ಭವನ್ತಿ ಗಾಢಂ ಕ್ಷವಥೋರ್ವಿಘಾತಾಚ್ಛಿರೋಕ್ಷಿನಾಸಾಶ್ರವಣೇಷು ರೋಗಾಃ ।
ಕರ್ಣಾಸ್ಯಪೂರ್ಣತ್ವಮತೀವ ತೋದಃ ಕೂಜಶ್ಚ ವಾಯೋರುತವಾಪ್ರವೃತ್ತಿಃ ||೧೩||
ಉದ್ಗಾರವೇಗೇಽಭಿಹತೇ ಭವನ್ತಿ ಘೋರಾವಿಕಾರಾಃ ಪವನಪ್ರಸೂತಾಃ ।
ಛರ್ದೇರ್ವಿಘಾತೇನ ಭವೇಚ್ಚ ಕುಷ್ಠಂ ಯೇನೈವದೋಷೇಣ ವಿದಗ್ಧಮನ್ನಮ್ ||೧೪||

ಸಂತೋಷದಿಂದಾಗಲೀ, ವ್ಯಸನದಿಂದಾಗಲೀ, ಹೊರಕ್ಕೆಬರುವ ಕಣ್ಣೀರನ್ನು ತಡೆದರೆ ತಲೆಭಾರವೂ ಅತಿಭಯಂಕರ ನೇತ್ರರೋಗಗಳೂ ನೆಗಡಿಯೂ ಉಂಟಾಗುತ್ತವೆ ; ಶೀನುಬರುವುದನ್ನು ತಡೆದರೆ ಅತಿಕಷ್ಟವಾದ ತಲೆನೋವು, ಕಣ್ಣುನೋವು, ಮೂಗುಕಿವಿಗಳಲ್ಲಿ ವ್ಯಥೆಯೂ ಉಂಟಾಗಿ ಗಂಟಲುಬಾಯಿಗಳಲ್ಲಿ ವಾಯುವುತುಂಬಿ ಅತಿಯಾಗಿಚುಚ್ಚುವುದು ಅಸ್ಪಷ್ಟವಾದಮಾತು ; ಉಚ್ಛ್ವಾಸದ ತಡೆಯು ಉಂಟಾಗುತ್ತದೆ ; ತೇಗುವುದನ್ನು

ತಡೆದರೆ ಅತಿಭಯಂಕರಗಳಾದ ಕಂಪ, ಹಿಕ್ಕಾ, ಹೃದಯ ಬಂಧ ಮೊದಲಾದ ವಾತ ವಿಕಾರಗಳುಂಟಾಗುತ್ತವೆ ; ವಮನವೇಗವನ್ನು ತಡೆದರೆ ಶೀತಪಿತ್ತಕೋಪ ಮತ್ತು ಅನ್ನ ವಿದಾಹವುಂಟಾಗಿ ಕುಷ್ಠರೋಗವುಂಟಾಗುತ್ತದೆ.

ಮೂತ್ರಾಶಯೇ ಪಾಯುನಿ ಮುಷ್ಕಯೋಶ್ಚ ಶೋಫೋರುಜೋ ಮೂತ್ರವಿನಿಗ್ರಹಶ್ಚ ।
ಶುಕ್ರಾಶ್ಮರೀ ತತ್ಸ್ರವಣಂ ಭವೇದ್ವಾ ತೇ ತೇ ವಿಕಾರಾ ವಿಹತೇ ತು ಶುಕ್ರೇ ॥೧೫॥

ಶುಕ್ರಧಾತುವಿನ ವೇಗವನ್ನು ತಡೆದರೆ ಮೂತ್ರಾಶಯ, ಗುದ, ಅಂಡಕೋಶಗಳಲ್ಲಿ ಶೋಥವು ನೋವು ಮೂತ್ರದ ತಡೆ, ಶುಕ್ರಾಶ್ಮರೀರೋಗವೂ ; ಶುಕ್ರಸ್ರಾವ, ಹೃತ್ಪೀಡೆ, ಅಂಗಮರ್ದ ಮೊದಲಾದ ರೋಗಗಳೂ ಉಂಟಾಗುತ್ತವೆ.

ತನ್ದ್ರಾಙ್ಗಮರ್ದಾರುಚಿವಿಭ್ರಮಾಃ ಸ್ಯುಃ ಕ್ಷುಧೋಽಭಿಘಾತಾತ್ ಕೃಶತಾ ಚ ದೃಷ್ಟೇಃ ।
ಕಣ್ಠಾಸ್ಯಶೋಷಃ ಶ್ರವಣಾವರೋಧಸ್ತೃಷ್ಣಾಭಿಘಾತಾದ್ಧೃದಯೇ ವ್ಯಥಾ ಚ ॥೧೬॥
ಶ್ರಾನ್ತಸ್ಯನಿಃಶ್ವಾಸವಿನಿಗ್ರಹೇಣ ಹೃದ್ರೋಗಮೋಹಾವಥವಾಪಿ ಗುಲ್ಮಃ ।
ಜೃಮ್ಭಾಙ್ಗಮರ್ದೋಽಙ್ಗಶಿರೋಽಕ್ಷಿ ಜಾಡ್ಯಂ ನಿದ್ರಾಭಿಘಾತಾದಥವಾಪಿ ತನ್ದ್ರಾ ॥೧೭॥

ಹಸಿವೆಯನ್ನು ತಡೆದರೆ ತೂಕಡಿಕೆ, ಮೈಕೈನೋವು, ಅರೋಚಕತೆ ತಲೆತಿರುಗುವಿಕೆ, ದೃಷ್ಟಿಮಾಂದ್ಯ, ದೌರ್ಬಲ್ಯಾದಿಗಳುಂಟಾಗುತ್ತವೆ; ಬಾಯಾರಿಕೆಯನ್ನು ತಡೆದರೆ ಗಂಟಲೂ ಬಾಯಿಯೂ ಒಣಗುತ್ತವೆ. ಕಿವಿಕೇಳಿಸುವುದಿಲ್ಲ, ಹೃದಯದಲ್ಲಿ ನೋವು ಉಂಟಾಗುತ್ತದೆ. ಬೇಗದಾರಿನಡೆಯುವುದು ಮೊದಲಾದಕಷ್ಟಕೆಲಸಮಾಡಿದಾಗ ಬರುವ ಮೇಲುಸುರನ್ನು ತಡೆದರೆ (ಆರೋಗ್ಯವುಳ್ಳವನು ಶ್ವಾಸಧಾರಣೆಮಾಡಿದರೆ ತೊಂದರೆಯುಂಟಾಗುವುದಿಲ್ಲ) ಹೃದ್ರೋಗವೂ, ಚಿತ್ತಬದಲಾವಣೆಯೂ, ಗುಲ್ಮರೋಗವೂ, ಉಂಟಾಗುತ್ತವೆ; ನಿದ್ರೆಯನ್ನು ತಡೆದರೆ ಆಕಳಿಕೆಯೂ ಮೈಕೈಗಳಲ್ಲಿ ನೋವೂ, ಮೈ ತಲೆ, ಕಣ್ಣುಗಳು ಭಾರವಾಗಿ ತೂಕಡಿಕೆಯುಂಟಾಗುತ್ತದೆ.

ತೃಷ್ಣಾರ್ದಿತಂ ಪರಿಕ್ಲಿಷ್ಟಂ ಕ್ಷೀಣಂ ಶೂಲೈರಭಿದ್ರುತಮ್ ।
ಶಕೃದ್ವಮನ್ತಂ ಮತಿಮಾನುದಾವರ್ತಿನ ಮುತ್ಸೃಜೇತ್ ॥೧೮॥
ಸರ್ವೇಷ್ವೇತೇಷು ವಿಧಿವದುದಾವರ್ತೇಷು ಕೃತ್ಸ್ನಶಃ ।
ವಾಯೋಃ ಕ್ರಿಯಾ ವಿಧಾತವ್ಯಾ ಸ್ವಮಾರ್ಗಪ್ರತಿಪತ್ತಯೇ ॥೧೯॥
ಸಾಮಾನ್ಯತಃ ಪೃಥಕ್ತ್ವೇನ ಕ್ರಿಯಾಂ ಭೂಯೋ ನಿಬೋಧ ಮೇ ।

ನೀರಡಿಕೆಯಿಂದ ಪೀಡಿತನಾಗಿ ಅತಿಯಾಗಿಬಳಲಿ ಕ್ಷೀಣನಾದ ಶೂಲೆಯಿಂದಪೀಡಿತನಾಗಿ ಪುರೀಷವನ್ನೇ ವಮನಮಾಡುವ ಉದಾವರ್ತಪೀಡಿತನನ್ನು ತ್ಯಜಿಸಬೇಕು; ಎಲ್ಲಾ ಉದಾವರ್ತರೋಗಗಳಲ್ಲೂ ಬುದ್ಧಿವಂತನಾದ ವೈದ್ಯನು ವಾಯುವು ಅನುಲೋಮವಾಗಿ ಸ್ವಮಾರ್ಗದಲ್ಲಿ ಸಂಚರಿಸುವಂತೆಮಾಡುವುದೇ ಸಾಮಾನ್ಯಚಿಕಿತ್ಸೆಯೆಂದು ತಿಳಿಯಬೇಕು ; ಇನ್ನುಅವುಗಳಿಗೆಲ್ಲಾ ಪ್ರತ್ಯೇಕವಾಗಿ ಮಾಡಬೇಕಾದ ವಿಶೇಷಚಿಕಿತ್ಸೆಗಳನ್ನು ಹೇಳುತ್ತೇನೆ ಕೇಳು.

ಆಸ್ಥಾಪನಂ ಮಾರುತಜೇ ಸ್ನಿಗ್ಧಸ್ವಿನ್ನೇ ವಿಶಿಷ್ಯತೇ ||೨೦||
ಪುರೀಷಜೇತು ಕರ್ತವ್ಯೋ ವಿಧಿರಾನಾಹಿಕೋ ಭವೇತ್ |

ವಾತದಿಂದುಂಟಾದ ಉದಾವರ್ತದಲ್ಲಿ ರೋಗಿಗೆ ಸ್ನೇಹಸ್ವೇದಗಳನ್ನು ಮಾಡಿಸಿ ಆಸ್ಥಾಪನಬಸ್ತಿಯನ್ನು ಪ್ರಯೋಗಮಾಡುವುದೇ ವಿಶೇಷ ಪ್ರಯೋಜನಕಾರಿಯು. ಪುರೀಷದಿಂದುಂಟಾದ ಉದಾವರ್ತಕ್ಕೆ ಆನಾಹನಿವಾರಣವಾಗುವಂತೆ ವಾತವ್ಯಾಧಿಯಲ್ಲಿ ಹೇಳಿರುವ ಫಲವರ್ತ್ಯಾದಿಗಳನ್ನು ಪ್ರಯೋಗಿಸಬೇಕು.

ಸೌವರ್ಚಲಾಢ್ಯಾಂ ಮದಿರಾಂ ಮೂತ್ರೇತ್ವಭಿಹತೇ ಪಿಬೇತ್ ||೨೧||
ಏಲಾಂ ವಾಪ್ಯಥ ಮದ್ಯೇನ ಕ್ಷೀರಂ ವಾಪಿ ಪಿಬೇನ್ನರಃ |
ಧಾತ್ರೀಫಲಾನಾಂ ಸ್ವರಸಂ ಸಜಲಂ ವಾ ಪಿಬೇತ್ತ್ರ್ಯಹಮ್ ||೨೨||
ರಸಮಶ್ವ ಪುರೀಷಸ್ಯ ಗರ್ದಭಸ್ಯಾಥವಾ ಪಿಬೇತ್ |
ಮಾಂಸೋಪದಂಶಂ ಮಧು ವಾ ಪಿಬೇದ್ವಾ ಸೀಧು ಗೌಡಿಕಮ್ ||೨೩||
ಭದ್ರದಾರು ಘನಂ ಮೂರ್ವಾ ಹರಿದ್ರಾಮಧುಕಂ ತಥಾ |
ಕೋಲಪ್ರಮಾಣಾನಿ ಪಿಬೇದಂತರಿಕ್ಷೇಣ ವಾರಿಣಾ ||೨೪||
ದುಸ್ಪರ್ಶಾಸ್ವರಸಂ ವಾಪಿ ಕಷಾಯಂ ಕುಙ್ಕುಮಸ್ಯ ಚ
ಏರ್ವಾರುಬೀಜಂ ತೋಯೇನ ಪಿಬೇದ್ವಾ ಲವಣೀಕೃತಮ್ ||೨೫||
ಪಞ್ಚಮೂಲೀಕೃತಂ ಕ್ಷೀರಂ ದ್ರಾಕ್ಷಾರಸಮಥಾಪಿ ವಾ |

ಮೂತ್ರದ ತಡೆಯಿಂದುಂಟಾದ ಉದಾವರ್ತದಲ್ಲಿ ಮದ್ಯಕ್ಕೆ ಸೌವರ್ಚಲವಣವನ್ನು ಹೆಚ್ಚಾಗಿ ಸೇರಿಸಿ ಅಥವಾ ಮದ್ಯಕ್ಕೆ ಏಲಕ್ಕಿಯ ಚೂರ್ಣವನ್ನು ಸೇರಿಸಿ ಹಾಲನ್ನಾಗಲೀ ಕುಡಿಸಬೇಕು. ನೆಲ್ಲಿಯಕಾಯಿನ ಸ್ವರಸಕ್ಕೆ ನೀರು ಮಿಶ್ರಮಾಡಿ ಅಥವಾ ಕುದುರೆಲದ್ದಿ ಅಥವಾ ಕತ್ತೆಲದ್ದಿಯ ಸ್ವರಸವನ್ನಾಗಲೀ ೩ ದಿವಸ ಕುಡಿಸಬೇಕು. ಮಾಂಸವನ್ನು ತಿಂದು ಮದ್ಯವನ್ನಾಗಲೀ, ದ್ರಾಕ್ಷಾರಸವನ್ನಾಗಲೀ, ಗುಡಕೃತಸೀಧುವನ್ನಾಗಲೀ ಕುಡಿಸಬೇಕು. ಮಳೆಯನೀರಿನಲ್ಲಿ ದೇವದಾರು, ಕೊನ್ನಾರಿಗೆಡ್ಡೆ, ಕೊರಟಗೆ, ಅರಿಶಿನ, ಅತಿಮಧುರ ಇವುಗಳಲ್ಲೊಂದರ ಚೂರ್ಣವನ್ನು ಕೋಲ ಪ್ರಮಾಣ ($\frac{1}{2}$ ಕರ್ಷ)ದಷ್ಟನ್ನು ಸೇರಿಸಿ ಕುಡಿಸಬೇಕು. ತುರುಚದ ಬೇರಿನ ಸ್ವರಸವನ್ನಾಗಲೀ ಕುಂಕುಮಕೇಸರದ ಕಲ್ಕವನ್ನು ನೀರಿನಲ್ಲಿ ಕದರಿಯಾಗಲೀ, ಬೇಸಿಗೆಯ ಸೌತೇಬೀಜದ ಕಲ್ಕವನ್ನು ಉಪ್ಪುಸೇರಿಸದೆ ನೀರಿನಲ್ಲಿ ಕದರಿಯಾಗಲೀ, ಲಘುಪಂಚಮೂಲಗಳೊಡನೆ ತಯಾರಿಸಿದ ಹಾಲನ್ನಾಗಲೀ, ದ್ರಾಕ್ಷಾರಸವನ್ನಾಗಲೀ ಕುಡಿಸಬೇಕು.

ಯೋಗಾಂಶ್ಚ ವಿತರೇದತ್ರ ಪೂರ್ವೋಕ್ತಾನಶ್ಮರೀಭಿದಃ ||೨೬||
ಮೂತ್ರಕೃಚ್ಛ್ರಕ್ರಮಂ ವಾಪಿ ಕುರ್ಯಾನ್ನಿರವಶೇಷತಃ |
ಭೂಯೋ ವಕ್ಷ್ಯಾಮಿ ಯೋಗಾನ್ ಯಾನ್ ಮೂತ್ರಾಘಾತೋಪಶಾನ್ತಯೇ ||೨೭||
ಸ್ನೇಹೈಃ ಸ್ವೇದೈರುದಾವರ್ತಂ ಜೃಮ್ಭಾಜಂ ಸಮುಪಾಚರೇತ್ |

ಅಶ್ರುಮೋಕ್ಷೋಽಶ್ರುಜೇಕಾರ್ಯಃ ಸ್ನಿಗ್ಧಸ್ವಿನ್ನಸ್ಯ ದೇಹಿನಃ ||೨೮||
ತೀಕ್ಷ್ಣಾಞ್ಜನಾವಪೀಡಾಭ್ಯಾಂ ತೀಕ್ಷ್ಣಗನ್ಧೋಪಜಿಘ್ರಣೈಃ |
ವರ್ತಿಪ್ರಯೋಗೈರಥವಾ ಕ್ಷವಸಕ್ತಿಂ ಪ್ರವರ್ತಯೇತ್ ||೨೯||
(ತೀಕ್ಷ್ಣೌಷಧಪ್ರಧಮನೈರಥವಾದಿತ್ಯರಶ್ಮಿಭಿಃ |)
ಉದ್ಗಾರಜೇ ಕ್ರಮೋಪೇತಾಂ ಸ್ನೈಹಿಕಂ ಧೂಮಮಾಚರೇತ್ ||೩೦||
ಸುರಾಂ ಸೌವರ್ಚಲವತೀಂ ಬೀಜಪೂರರಸಾನ್ವಿತಾಮ್ |
ಛರ್ದ್ಯಾಘಾತಂ ಯಥಾದೋಷಂ ಸಮ್ಯಕ್ ಸ್ನೇಹಾದಿಭಿರ್ಜಯೇತ್ ||೩೧||
ಸಕ್ಷಾರಲವಣೋಪೇತಮಭ್ಯಙ್ಗಂ ಚಾತ್ರ ದಾಪಯೇತ್ |

ಹಿಂದೆ ಹೇಳಿದ ಆಶ್ಮರೀಭೇದಕಗಳಾದ ಯೋಗಗಳನ್ನೂ ಮೂತ್ರ ಕೃಚ್ಛ್ರ ಚಿಕಿತ್ಸಾ ಕ್ರಮವನ್ನೂ ಸಂಪೂರ್ಣವಾಗಿ ಉದಾವರ್ತರೋಗದಲ್ಲೂ ಪ್ರಯೋಗಿಸಬೇಕು. ಮೂತ್ರಾಘಾತಶಮನಕ್ಕಾಗಿ ಇನ್ನೂ ಯೋಗಗಳನ್ನು ಹೇಳುತ್ತೇವೆ. ಆಕಳಿಕೆಯನ್ನು ತಡೆದು ಉಂಟಾದ ಉದಾವರ್ತರೋಗಿಯನ್ನು ಸೇಹಸ್ವೇದಗಳಿಂದ ಉಪಚರಿಸಬೇಕು. ಕಣ್ಣೀರನ್ನು ತಡೆಯುವುದರಿಂದುಂಟಾದ ಉದಾವರ್ತರೋಗದಲ್ಲಿ ರೋಗಿಗೆ ಸ್ನೆಹಸ್ವೇದಗಳನ್ನು ಮಾಡಿಸಿ ಕಣ್ಣೀರು ಸುರಿಯುವಂತೆ ಮಾಡಬೇಕು. ಶೀನು ತಡೆದುಬಂದ ಉದಾವರ್ತದಲ್ಲಿ ತೀಕ್ಷ್ಣಾಂಜನ, ತೀಕ್ಷ್ಣ ಅವಪೀಡನಸ್ಯಗಳನ್ನು ಪ್ರಯೋಗಿಸುವುದರಿಂದಲೂ ತೀಕ್ಷ್ಣ ಗಂಧಗಳನ್ನು ಮೂಸಿಸುವುದರಿಂದಲೂ ವರ್ತಿಯನ್ನು ಪ್ರಯೋಗಿಸಿಯೂ ಶೀನು ಬರುವಂತೆ ಮಾಡಬೇಕು (ತೀಕ್ಷ್ಣೌಷಧಗಳ ಚೂರ್ಣವನ್ನು ಮೂಗಿಗೆ ಊದುವುದರಿಂದಲೂ ಶೀನುಬರುವಂತೆ ಮಾಡಬೇಕು.) ತೇಗನ್ನು ತಡೆದು ಉದಾವರ್ತವುಂಟಾದರೆ ಸ್ನೇಹಸ್ವೇದಗಳನ್ನು ಮಾಡಿಸಿ ಸ್ನೇಹಧೂಮಪಾನವನ್ನು ಮಾಡಿಸಬೇಕು. ಸೌವರ್ಚಲವಣಮಿಶ್ರವಾದ ಮದ್ಯಕ್ಕೆ ಮಾದಳರಸವನ್ನು ಮಿಶ್ರಮಾಡಿ ಕುಡಿಸಬೇಕು. ವಮನವೇಗವನ್ನು ತಡೆದು ಉಂಟಾಗುವ ಉದಾವರ್ತದಲ್ಲಿ ದೋಷಾನುಸಾರವಾಗಿ ಸ್ನೇಹಸ್ವೇದಾದಿ ಕ್ರಮಗಳಿಂದಲೂ, ಕ್ಷಾರ, ಲವಣಗಳನ್ನು ಮಿಶ್ರಮಾಡಿದ ತೈಲದಿಂದ ಅಭ್ಯಂಗವನ್ನೂ ಮಾಡಿಸಿ ನಿವಾರಣೆ ಮಾಡಬೇಕು.

ಬಸ್ತಿಶುದ್ಧಿಕರಾವಾಪಂ ಚತುರ್ಗುಣ ಜಲಂಪಯಃ ||೩೨||
ಆವಾರಿನಾಶಾತ್ಕ್ವಥಿತಂ ಪೀತವನ್ತಂ ಪ್ರಕಾಮತಃ |
ರಮಯೇಯುಃ ಪ್ರಿಯಾನಾರ್ಯಃ ಶುಕ್ರೋದಾವರ್ತಿನಂ ನರಮ್ ||೩೩||

ಶುಕ್ರವೇಗವನ್ನು ತಡೆಯುವುದರಿಂದುಟಾದ ಉದಾವರ್ತಪೀಡಿತನಿಗೆ ಬಸ್ತಿಶುದ್ಧಿಕರಗಳಾದ ಬೂದುಗುಂಬಳದ ತಿರುಳು ಮತ್ತು ತೃಣಪಂಚಮೂಲಗಳಿಗೆ ೮ ರಷ್ಟು ಹಾಲನ್ನು ಸೇರಿಸಿ ಹಾಲಿನ ೪ ರಷ್ಟು ನೀರನ್ನು ಸೇರಿಸಿ ನೀರು ಇಂಗುವವರೆಗೂ ಕಾಯಿಸಿದ ಹಾಲನ್ನು ಬೇಕಾಗುವಷ್ಟು ಕುಡಿಸಿ ಪ್ರಿಯರಾದ ಸ್ತ್ರೀಯರು ಆಲಿಂಗನಾದಿಗಳಿಂದ ಹರ್ಷವನ್ನುಂಟು

ಮಾಡಿ (ಧ್ವಜೋಚ್ಛ್ರಾಯವಾದ ನಂತರ) ರಮಿಸಬೇಕು. ಸ್ತ್ರೀಯರೇ ಅಲಿಂಗನಾದಿ ಗಳಿಂದ ಶುಕ್ರವು ಚಲಿಸುವಂತೆ ಮಾಡಬೇಕೆಂದು ಅಭಿಪ್ರಾಯವು.

ಕ್ಷುದ್ವಿಘಾತೇ ಹಿತಂ ಸ್ನಿಗ್ಧಮುಷ್ಣಮಲ್ಪಂ ಚ ಭೋಜನಮ್ ।
ತೃಷ್ಣಾಘಾತೇ ಪಿಬೇನ್ಮನ್ಥಂ ಯವಾಗೂಂ ವಾ ಪಿ ಶೀತಲಾಮ್ ||೩೪||
ಭೋಜ್ಯೋ ರಸೇನ ವಿಶ್ರಾನ್ತಃ ಶ್ರಮಶ್ವಾಸಾತುರೋ ನರಃ ।
ನಿದ್ರಾಘಾತೇ ಪಿಬೇತ್ ಕ್ಷೀರಂ ಸ್ವಪ್ಯಾಚ್ಚೇಷ್ಟಕಥಾ ನರಃ ||೩೫||
ಆಧ್ಮಾನಾದ್ಯೇಷು ರೋಗೇಷು ಯಥಾಸ್ವಂ ಪ್ರಯತೇತ ಹಿ ।
ಯಚ್ಚ ಯತ್ರ ಭವೇತ್ಪ್ರಾಪ್ತಂ ತಚ್ಚ ತಸ್ಮಿನ್ ಪ್ರಯೋಜಯೇತ್ ||೩೬||

ಹಸಿವೆಯನ್ನು ತಡೆಯುವುದರಿಂದ ಉದಾವರ್ತವುಂಟಾದರೆ ಸ್ನಿಗ್ಧವಾಗಿ ಬಿಸಿ ಯಾಗಿರುವ ಆಹಾರವನ್ನು ಸ್ವಲ್ಪಪ್ರಮಾಣದಿಂದ ಭೋಜನ ಮಾಡಬೇಕು. ಬಾಯಾರಿಕೆ ಯನ್ನು ತಡೆದು ಉದಾವರ್ತವುಂಟಾಗಿದ್ದರೆ ತಣ್ಣಗಿರುವ ಮಂಥವನ್ನಾಗಲೀ, ಯವಾಗು ವನ್ನಾಗಲೀ ಕುಡಿಸಬೇಕು. ಶ್ರಮಶ್ವಾಸವನ್ನು ತಡೆದು ಉದಾವರ್ತವುಂಟಾಗಿದ್ದರೆ ವಿಶ್ರಾಂತಿಹೊಂದಿ ಮಾಂಸರಸಮಿಶ್ರವಾದ ಅನ್ನವನ್ನು ಭೋಜನ ಮಾಡಿಸಬೇಕು. ನಿದ್ರೆ ಯನ್ನು ತಡೆಯುವುದರಿಂದುಂಟಾದ ಉದಾವರ್ತದಲ್ಲಿ ಸುಖೋಷ್ಣವಾಗಿರುವ ಹಾಲನ್ನು ಕುಡಿಸಿ ಹಿತವಾದ ಕಥೆಗಳನ್ನು ಕೇಳಿಸುತ್ತಾ ಮಲಗಿಸಬೇಕು. ಅಧ್ಮಾನ, ಪರಿಕರ್ತಿಕ, ಮಲಸಂಗ ಮೊದಲಾದ ರೋಗಗಳಲ್ಲಿ ಅವುಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಬೇಕು. ಯಾವ ರೋಗದಲ್ಲಿ ಯಾವ ಔಷಧವು ಹಿತಕರವೋ ಅದನ್ನೇ ಪರಿಶೀಲಿಸಿ ಪ್ರಯೋಗಿಸಬೇಕು.

ವಾಯುಃ ಕೋಷ್ಠಾನುಗೋ ರೂಕ್ಷೈಃ ಕಷಾಯಕಟುತಿಕ್ತಕೈಃ ।
ಭೋಜನೈಃ ಕುಪಿತಃ ಸದ್ಯ ಉದಾವರ್ತಂ ಕರೋತಿ ಹಿ ||೩೭||
ವಾತಮೂತ್ರಪುರೀಷಾಸೃಕ್ಕಫಮೇದೋವಹಾನಿ ವೈ ।
ಸ್ರೋತಾಂಸ್ಯುದಾವರ್ತಯತಿ ಪುರೀಷಂ ಚಾತಿ ವರ್ತಯೇತ್ ||೩೮||
ತತೋ ಹೃದ್ಬಸ್ತಿಶೂಲಾರ್ತೋ ಗೌರವಾರುಚಿಪೀಡಿತಃ ।
ವಾತಮೂತ್ರ ಪುರೀಷಾಣಿ ಕೃಚ್ಛ್ರೇಣ ಕುರುತೇ ನರಃ ||೩೯||
ಶ್ವಾಸಕಾಸಪ್ರತಿಶ್ಯಾಯ ದಾಹಮೋಹವಮಿಜ್ವರಾನ್ ।
ತೃಷ್ಣಾ ಹಿಕ್ಕಾಶಿರೋರೋಗಮನಃ ಶ್ರವಣವಿಭ್ರಮಾನ್ ||೪೦||
ಲಭತೇ ಚ ಬಹೂನನ್ಯಾನ್ ವಿಕಾರಾನ್ ವಾತಕೋಪಜಾನ್ ।

ರೂಕ್ಷವಾದಕಷಾಯ, ಕಟು, ಕಹಿರಸವುಳ್ಳಆಹಾರವನ್ನು ಭೋಜನಮಾಡಿ ವಾತವುಪ್ರಕೋಪಹೊಂದಿ ಕೂಡಲೇ ಉದಾವರ್ತನವನ್ನುಂಟುಮಾಡುತ್ತದೆ. ವಾತ, ಮೂತ್ರ, ಪುರೀಷ, ರಕ್ತ, ಕಫ, ಮೇದಸ್ಸುಗಳು ಸಂಚರಿಸುವ ಸ್ರೋತಸ್ಸುಗಳನ್ನು ತಡೆದು ಮಲವು ಒಂಟೆ, ಆಡು, ಮೊದಲಾದುವುಗಳ ಪುರೀಷದಂತೆ ಗಟ್ಟಿಯಾಗುತ್ತದೆ ; ಇದರಿಂದ ಹೃದಯ ಬಸ್ತಿಗಳು ನೋವು ಮೈಭಾರ ಅರೋಚಕತೆಗಳಿಂದ ಪೀಡಿತನಾಗುತ್ತಾನೆ.

ವಾತಮೂತ್ರಪುರೀಷಗಳನ್ನು ಬಲುಕಷ್ಟದಿಂದ ವಿಸರ್ಜಿಸುತ್ತಾನೆ; ಶ್ವಾಸ, ಕೆಮ್ಮು, ಎದೆ ಶೂಲೆ, ನೆಗಡಿ, ಮೈಉರಿತ, ಅಜ್ಞಾನ, ವಮನ, ಜ್ವರ ಇವುಗಳಿಂದ ಪೀಡಿತನಾಗುತ್ತಾನೆ. ನೀರಡಿಕೆ, ಬಿಕ್ಕಳಿಕೆ, ತಲೆಶೂಲೆ, ಬುದ್ಧಿವಿಕಲ್ಪ, ಕಿವಿಕೇಳದಂತೆ ಆಗುವುದು, ತಲೆತಿರುಗು ಮೊದಲಾದುವುಗಳೂ ಮತ್ತು ವಾತಕೋಪದಿಂದುಂಟಾಗುವ ಇತರ ಉಪದ್ರವಗಳೂ ಉಂಟಾಗುತ್ತವೆ.

ತಂ ತೈಲಲವಣಾಭ್ಯಕ್ತಂ ಸ್ನಿಗ್ಧಂ ಸ್ವಿನ್ನಂ ನಿರೂಹಯೇತ್ ||೪೧||
ದೋಷತೋ ಭಿನ್ನವರ್ಚಸ್ಕಂ ಭುಕ್ತಂ ಚಾಪ್ಯನುವಾಸಯೇತ್ |
ನ ಚೇಚ್ಛಾನ್ತಿಂ ವ್ರಜತ್ಯೇವಮುದಾವರ್ತಃ ಸುದಾರುಣಃ ||೪೨||
ಅಥೈನಂ ಬಹುಶಃ ಸ್ವಿನ್ನಂ ಯುಞ್ಜ್ಯಾತ್ ಸ್ನೇಹವಿರೇಚನೈಃ |

ಉದಾವರ್ತರೋಗಿಯನ್ನು ತೈಲಲವಣಗಳಿಂದ ಅಭ್ಯಂಗಮಾಡಿಸಿ ಸ್ನಿಗ್ಧಸ್ವಿನ್ನನಾದ ರೋಗಿಗೆ ಬಸ್ತಿಯನ್ನು ಪ್ರಯೋಗಿಸಬೇಕು ; ಒಡೆದುಹೋದ ಮಲವುಳ್ಳವನಾದರೆ ಭೋಜನಮಾಡಿಸಿ ಸ್ನೇಹಬಸ್ತಿಯನ್ನು ಪ್ರಯೋಗಿಸಬೇಕು ; ಅತಿಭಯಂಕರವಾದ ಉದಾವರ್ತವು ಇವುಗಳಿಂದ ಶಾಂತವಾಗದಿದ್ದರೆ ಅವನಿಗೆ ತುಂಬಾ ಸ್ವೇದ ಮಾಡಿಸಿ ಸ್ನೇಹಮಿಶ್ರಮಾಡಿದ ವಿರೇಚನವನ್ನು ಪ್ರಯೋಗಿಸಬೇಕು.

ಪಾಯಯೇತ ತ್ರಿವೃತ್ಪೀಲು ಯವಾನೀರಮ್ಲಪಾಚನೈಃ ||೪೩||
ಹಿಙ್ಗುಕುಷ್ಠವಚಾಸ್ವರ್ಜಿವಿಡಙ್ಗಂ ವಾ ದ್ವಿರುತ್ತರಮ್ |
ಯೋಗಾವೇತಾವುದಾವರ್ತಂ ಶೂಲಂ ಚಾನಿಲಜಂ ಹತಃ ||೪೪||
ದೇವದಾರ್ವಗ್ನಿಕೌ ಕುಷ್ಠಂ ಶುಣ್ಠೀಂ ಪಥ್ಯಾಂ ಪಲಙ್ಕಷಾಮ್ |
ಪೌಷ್ಕರಾಣಿ ಚ ಮೂಲಾನಿ ತೋಯಸ್ಯಾರ್ಧಾಢಕೇ ಪಚೇತ್ ||೪೫||
ಪಾದಾವಶಿಷ್ಟಂ ತತ್ ಪೀತಮುದಾವರ್ತಮಪೋಹತಿ |

ತಿಗಡೆ, ಬಗಿನಿ, ವಾದಕ್ಕಿ, ಕಾಂಜಿಕ, ಚಿತ್ರಮೂಲಗಳನ್ನು ಕಾಯಿಸಿ ಕುಡಿಸಬೇಕು, ಹಿಂಗು, ಚಂಗಲ್‌ಕೋಷ್ಠ, ಬಜೆ, ಸರ್ಜಕ್ಷಾರ, ವಿಡಂಗ ಇವುಗಳಲ್ಲಿ ಹಿಂಗು, ಮೊದಲಾಗಿ ಉತ್ತರೋತ್ತರ ಎರಡೆರಡುಭಾಗ ವೃದ್ಧಿಮಾಡಿಕೊಂಡು ಒಟ್ಟಿಗೆ ಸೇರಿಸಿ ಪ್ರಯೋಗಿಸಬೇಕು ; ಈ ಎರಡುಯೋಗಗಳೂ ಉದಾವರ್ತನವನ್ನೂ ವಾತಶೂಲೆಗಳನ್ನೂ ನಿವಾರಣೆ ಮಾಡುತ್ತವೆ ; ದೇವದಾರು, ಚಿತ್ರಮೂಲ, ಚಂಗಲ್‌ಕೋಷ್ಠ, ಶುಂಠಿ, ಅಣಿಲೆಕಾಯಿ, ಅರಗು, ಪುಷ್ಕರಮೂಲ, ಇವುಗಳನ್ನು ಅರ್ಧಾಡಕ ನೀರಿನಲ್ಲಿ ಕುದಿಸಿ $\frac{1}{4}$ ಭಾಗಕ್ಕೆ ಉಳಿಸಿಕೊಂಡು ಕುಡಿಸಿದರೆ ಉದಾವರ್ತಹರವು.

ಮೂಲಕಂ ಶುಷ್ಕಮಾರ್ದ್ರಂ ಚ ವರ್ಷಾಭೂಃ ಪಞ್ಚಮೂಲಕಮ್ ||೪೬||
ಆರೇವತಫಲಂ ಚಾಪ್ಸು ಪಕ್ತ್ವಾ ತೇನ ಘೃತಂ ಪಚೇತ್ |
ತತ್ಪೀಯಮಾನಂ ಶಮಯತ್ಯುಗ್ರಮುದಾವರ್ತಮಶೇಷತಃ ||೪೭||
ವಚಾಮತಿವಿಷಾಂ ಕುಷ್ಠಂ ಯವಕ್ಷಾರಂ ಹರೀತಕೀಮ್ |
ಕೃಷ್ಣಾಂ ನಿರ್ದಹನೀಂ ಚಾಪಿ ಪಿಬೇದುಷ್ಣೇನ ವಾರಿಣಾ ||೪೮||

ಹಸಿಯಾದ ಮತ್ತು ಒಣಗಿದ ಮೂಲಂಗಿ, ಕೊಮ್ಮೆಬೇರು, ಬಿಲ್ವಾದಿಪಂಚಮೂಲ, ಕಕ್ಕೆಕಾಯಿ ಇವುಗಳ ಕಷಾಯದೊಡನೆ ತಯಾರಿಸಿದ ಘೃತವನ್ನು ಕುಡಿಸಿದರೆ ಅತಿ ಕಷ್ಟವಾದ ಉದಾವರ್ತವೂ ನಿರ್ಮೂಲವಾಗುತ್ತದೆ. ಬಜೆ, ಅತಿಬಜೆ, ಚಂಗಲ್ ಕೋಷ್ಠ, ಯವಕ್ಷಾರ, ಅಣಿಲೆಕಾಯಿ, ಹಿಪ್ಪಲಿ, ತಗ್ಗಿಗಿಡ ಇವುಗಳ ಚೂರ್ಣವನ್ನು ಬಿಸಿ ನೀರನಲ್ಲಿ ಕದರಿ ಕುಡಿಸಿದರೆ ಉದಾವರ್ತಹರವಾಗುತ್ತದೆ.

ಇಕ್ಷ್ವಾಕುಮೂಲಂ ಮದನಂ ವಿಶಲ್ಯಾತಿವಿಷೇ ವಚಾಮ್ ।
ಕುಷ್ಠಂ ಕಿಣ್ವಾಗ್ನಿಕೌ ಚೈವ ಪಿಬೇತ್ತುಲ್ಯಾನಿ ಪೂರ್ವವತ್ ॥೪೯॥
ಮೂತ್ರೇಣ ದೇವದಾರ್ವಗ್ನಿತ್ರಿಫಲಾಬೃಹತೀಃ ಪಿಬೇತ್ ।

ಕಹಿಸೋರೇಬೇರು, ಮಗ್ಗಾರೆಕಾಯಿ, ಹಾವುನೆಕ್ಕೆ, ಅತಿಬಜೆ, ಬಜೆ, ಚಂಗಲ್ ಕೋಷ್ಠ, ಮದ್ಯದಮಡ್ಡಿ (ಚಿತ್ರಮೂಲ), ಅಜಮೋದ, ಇವುಗಳ ಚೂರ್ಣವನ್ನು ಬಿಸಿ ನೀರಿನಲ್ಲಿ ಕದರಿ ಕುಡಿಸಬೇಕು.

ಯವಪ್ರಸ್ಥಂ ಫಲೈಃ ಸಾರ್ಧಂ ಕಣ್ಟಕಾರ್ಯಾಜಲಾಢಕೇ ॥೫೦॥
ಪಕ್ತ್ವಾರ್ಧಪ್ರಸ್ಥಶೇಷಂ ತಂ ಪಿಬೇದ್ಧಿಙ್ಗುಸಮನ್ವಿತಮ್ ।
ಮದನಾಲಾಬುಬೀಜಾನಿ ಪಿಪ್ಪಲೀಂ ಸನಿದಿಗ್ಧಿಕಾಮ್ ॥೫೧॥
ಸಂಚೂರ್ಣ್ಯ ಪ್ರಧಮೇನ್ನಾಡ್ಯಾ ವಿಶತ್ಯೇತದ್ಯಥಾ ಗುದಮ್ ।
ಚೂರ್ಣಂ ನಿಕುಮ್ಭಕಮ್ಪಿಲ್ಲ ಶ್ಯಾಮೇಕ್ಷ್ವಾಕ್ವಗ್ನಿಕೋದ್ಭವಮ್ ॥೫೨॥
ಕೃತವೇಧನಮಾಗಧ್ಯೋರ್ಲವಣಾನಾಂ ಚ ಸಾಧಯೇತ್ ।
ಗವಾಂ ಮೂತ್ರೇಣ ತಾ ವರ್ತೀಃ ಕಾರಯೇತ್ತು ಗುದಾನುಗಾಃ ॥
ಸದ್ಯಃ ಶರ್ಮಕರಾವೇತೌ ಯೋಗಾವಮೃತಸಮ್ಮಿತೌ ॥೫೩॥

ಯವಧಾನ್ಯ ಮತ್ತು ನೆಲಗುಳ್ಳದಹಣ್ಣುಗಳು ಸೇರಿ ೧ ಪ್ರಸ್ಥಪ್ರಮಾಣಕ್ಕೆ ನೀರು ೧ ಅಢಕದಷ್ಟನ್ನು ಸೇರಿಸಿ ಅರ್ಧಪ್ರಸ್ಥನಿಲ್ಲುವಂತೆ ಕಷಾಯವನ್ನು ಕಾಯಿಸಿ ಶೋಧಿಸಿ ಹಿಂಗು ಮಿಶ್ರಮಾಡಿ ಕುಡಿಸಬೇಕು. ಮಗ್ಗಾರೆಕಾಯಿ, ಸೋರೆಬೀಜ, ಹಿಪ್ಪಲಿ, ನೆಲಗುಳ್ಳ ಇವನ್ನು ಸಣ್ಣಗೆ ಚೂರ್ಣಿಸಿ ನಳಿಕೆಯಲ್ಲಿ ತುಂಬಿ ಗುದಕ್ಕೆ ನುಗ್ಗಿಸಿ ಘಟ್ಟಿಯಾಗಿ ಮುಖ ವಾಯುವಿನಿಂದ ಊದಬೇಕು. ಜಾಪಾಳದ ತೊಗಟೆ, ಕಪಿಲೆಹಿಟ್ಟು, ಕರಿಯತಿಗಡೆ, ಕಹಿಸೋರೆಬೇರು, ಅಜಮೋದ, ಹೀರೆಕಾಯಿ, ಹಿಪ್ಪಲಿ, ೫ ಲವಣಗಳು ಇವನ್ನು ಹಸುವಿನ ಗಂಜಳದಲ್ಲಿ ಕಾಯಿಸಿ ಗುದದ್ವಾರದಲ್ಲಿ ನುಗ್ಗುವಷ್ಟು ದಪ್ಪವಿರುವ ಬತ್ತಿಗಳನ್ನಾಗಿ ಮಾಡಿಟ್ಟುಕೊಂಡು ಪ್ರಯೋಗಿಸಬೇಕು. ರೋಗ ನಿವಾರಣೆಮಾಡಿ ಸುಖವನ್ನುಂಟುಮಾಡುವ ಕಾರಣ ಇವನ್ನು ಅಮೃತಸಮಾನಗಳೆಂದು ತಿಳಿಯಬೇಕು.

ಟಿಪ್ಪಣಿ:—ಮದನ, ಅಲಾಬು ಮೊದಲು ನಿದಿಗ್ಧಿಕಾವರೆಗಿನ ದ್ರವ್ಯಗಳ ಯೋಗ ಒಂದು, ನಿಕುಂಭ ಮೊದಲಾಗಿ ಲವಣಾಂಶವಾಗಿರುವ ದ್ರವ್ಯಗಳ ಚೂರ್ಣವನ್ನು ಗೋ

ಮೂತ್ರದಲ್ಲಿಹಾಕಿ ರಸಕ್ರಿಯೆಮಾಡಿ, ಅನಂತರ ವರ್ತಿಮಾಡಬೇಕು. ಇದು ಇನ್ನೊಂದು ಯೋಗ. ಈ ಎರಡು ಯೋಗಗಳೂ ಶ್ರೇಷ್ಠವಾದ ಉದಾವರ್ತಹರಗಳು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಕಾಯಚಿಕಿತ್ಸಾಯಾಂ
ಉದಾವರ್ತಪ್ರತಿಷೇಧನಾಮಕ ಪಞ್ಚಪಞ್ಚಾಶತ್ತಮೋಽಧ್ಯಾಯಸ್ಯ
ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀಲಕ್ಷ್ಮೀನೃಸಿಂಹಶರ್ಮ ಕೃತಕರ್ಣಾಟಕ
ಭಾಷಾವಿವೃತಿಃ

ಷಟ್‌ಪಞ್ಚಾಶತ್ತಮೋಽಧ್ಯಾಯಃ

ಅಥಾತೋ ವಿಷೂಚಿಕಾಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ವಿಷೂಚಿಕಾಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ :—ಉದಾವರ್ತರೋಗದಲ್ಲಿ ವಾತಪ್ರತಿಲೋಮನದಿಂದ ಅಗ್ನಿ ಮಾಂದ್ಯವು ಉಂಟಾಗಿ ವಿಷೂಚಿಕಾರೋಗವನ್ನುಂಟುಮಾಡುವುದರಿಂದ ಅದರ ನಿವಾರಣೆಯನ್ನೂ ಆದಿ ಶಬ್ದಲೋಪವಾಗಿರುವುದರಿಂದ ಅಲಸಕವಿಲಂಬಿಕಾರೋಗಗಳ ಚಿಕಿತ್ಸೆಯನ್ನೂ ತಿಳಿಸಬೇಕಾದ್ದು ಆವಶ್ಯಕವು.

ಅಜೀರ್ಣಮಾಮಂ ವಿಷ್ಟಬ್ಧಂ ವಿದಗ್ಧಂ ಚ ಯದೀರಿತಮ್ ।
ವಿಷೂಚ್ಯಲಸಕೌ ತಸ್ಮಾದ್ಭವೇಚ್ಚಾಪಿ ವಿಲಮ್ಬಿಕಾ ||೩||

ಸೂಚೀಭಿರಿವ ಗಾತ್ರಾಣಿ ತುದನ್ ಸಂತಿಷ್ಠತೇಽನಿಲಃ ।
ಯಸ್ಯಾಜೀರ್ಣೇನ ಸಾ ವೈದ್ಯೈರುಚ್ಯತೇತಿ ವಿಷೂಚಿಕಾ ||೪||

ಆಮ, ವಿಷ್ಟಬ್ಧ, ವಿದಗ್ಧಗಳೆಂದು ಹೇಳಿದ ಅಜೀರ್ಣಗಳಿಂದಲೇ ವಿಷೂಚಿಕಾ ಅಲಸಕಾ, ವಿಲಂಬಿಕಾ ಎಂಬ ರೋಗಗಳುಂಟಾಗುತ್ತವೆ. ಇವುಗಳ ಪೈಕಿ ವಿಲಂಬಿಕಾಜೀರ್ಣವು ಅಸಾಧ್ಯವಾದದ್ದು. ವಿಷೂಚೀ, ಅಲಸಕಗಳು ಕೃಚ್ಛ್ರಸಾಧ್ಯಗಳೆಂದು ತಿಳಿಯಬೇಕು. ಯಾವ ಅಜೀರ್ಣದ ಅವಸ್ಥೆಯಲ್ಲಿ ವಾಯುವು ಸೂಜಿಯಿಂದ ದೇಹವನ್ನು ಚುಚ್ಚಿದಂತೆ ನೋವನ್ನುಂಟುಮಾಡುತ್ತಾ ಅಡಗಿರುತ್ತದೋ ಅದನ್ನು ವೈದ್ಯರು ವಿಷೂಚಿಕಾ ಎಂದು ಕರೆಯುತ್ತಾರೆ.

ನ ತಾಂ ಪರಿಮಿತಾಹಾರಾ ಲಭನ್ತೇ ವಿದಿತಾಗಮಾಃ ।
ಮೂಢಾಸ್ತಾಮಜಿತಾತ್ಮಾನೋ ಲಭನ್ತೇ ಕಲುಷಾಶಯಾಃ ||೫||

ನಿಷಿದ್ಧಾಹಾರಗಳನ್ನು ತ್ಯಜಿಸಿ ಭೋಜನಕ್ರಮಗಳನ್ನು ತಿಳಿದು ಅಭ್ಯಾಸ ಮಾಡಿರುವ ಬುದ್ಧಿವಂತರಿಗೆ ಈ ವಿಷೂಚಿಕಾರೋಗವುಂಟಾಗುವುದೇ ಇಲ್ಲ. ಈ ಆಹಾರವನ್ನು ತಿನ್ನಬೇಕು, ಇದನ್ನು ತ್ಯಜಿಸಬೇಕು ಎಂಬ ವಿವೇಕವಿಲ್ಲದ ಜಿಹ್ವಾಚಾಪಲ್ಯರು ದುಷ್ಟಾನ್ನ ಸಂಪರ್ಕದಿಂದ ಆಮಾಶಯವನ್ನು ದೋಷಯುಕ್ತವಾದುದನ್ನಾಗಿ ಮಾಡಿ ವಿಷೂಚಿಕಾ ರೋಗಪೀಡಿತರಾಗುತ್ತಾರೆ.

ಮೂರ್ಛಾತಿಸಾರೌ ವಮಥುಃ ಪಿಪಾಸಾ ಶೂಲಂ ಭ್ರಮೋದ್ವೇಷ್ಟನಜೃಮ್ಭದಾಹಾಃ
ವೈವರ್ಣ್ಯಕಮ್ಪೌ ಹೃದಯೇ ರುಜಶ್ಚ ಭವನ್ತಿ ತಸ್ಯಾಂ ಹೃದಯಸ್ಯ ಭೇದಃ ||೬||

ವಿಸೂಚಿಕಾಲಕ್ಷಣವು:—ಪ್ರಜ್ಞೆತಪ್ಪುವುದು, ಅತಿಸಾರ, ವಮನ, ನೀರಡಿಕೆ, ಹೊಟ್ಟೆನೋವು, ತಲೆತಿರುಗು, ಮೊಣಕಾಲು ಮೊದಲಾದ ಅವಯವಗಳ ಸೆಳೆತ, ಆಕಳಿಕೆ, ಮೈ ಕೈ ಉರಿತವಾಗುವುದು, ಮುಖದ ಬಣ್ಣ ಬದಲಾಗುವುದು, ಹೃದಯಶೂಲೆ, ತಲೆ ಯೊಡೆತ ಇವು ವಿಸೂಚಿಕಾರೋಗದ ಲಕ್ಷಣಗಳು.

ಕುಕ್ಷಿರಾನಹ್ಯತೇಽತ್ಯರ್ಥಂ ಪ್ರತಾಮ್ಯತಿ ವಿಕೂಜತಿ ।
ನಿರುದ್ಧೋ ಮಾರುತಶ್ಚಾಪಿ ಕುಕ್ಷೌ ವಿಪರಿಧಾವತಿ ॥೭॥
ವಾತವರ್ಚೋನಿರೋಧಶ್ಚ ಕುಕ್ಷೌ ಯಸ್ಯ ಭೃಶಂ ಭವೇತ್ ।
ತಸ್ಯಾಲಸಕಮಾಚಷ್ಟೇ ತೃಷ್ಣೋದ್ಗಾರಾವರೋಧಕೌ ॥೮॥

ಬಾಯಾರಿಕೆಯನ್ನೂ, ತೇಗನ್ನೂ ತಡೆದರೆ ಅಪಾನವಾತವೂ ಮಲವು ಹೊರಕ್ಕೆ ಬಾರದೇ ಅತಿಯಾಗಿ ಹೊಟ್ಟೆಯುಬ್ಬರಿಸಿ, ರೋಗಿಯು ಬಳಲುತ್ತಾ "ಕೂ" ಎಂಬ ಕಂಠ ಶಬ್ದವನ್ನು ಮಾಡುತ್ತಾನೆ. ಹೊಟ್ಟೆಯೊಳಗೆ ವಾತವು ವಿಶೇಷವಾಗಿ ಓಡಾಡುತ್ತದೆ. ಈ ರೋಗಕ್ಕೆ ಅಲಸಕವೆನ್ನುತ್ತಾರೆ.

ದುಷ್ಟಂಚ ಭುಕ್ತಂ ಕಫಮಾರುತಾಭ್ಯಾಂ ಪ್ರವರ್ತತೇ ನೋರ್ಧ್ವಮಧಶ್ಚ ಯಸ್ಯ ।
ವಿಲಮ್ಬಿಕಾಂ ತಾಂ ಭೃಶದುಶ್ಚಿಕಿತ್ಸ್ಯಮಾಚಕ್ಷತೇ ಶಾಸ್ತ್ರವಿದಃ ಪುರಾಣಾಃ ॥೯॥
ಯತ್ರಸ್ಥಮಾಮಂ ವಿರುಜೇತ್ತಮೇವ ದೇಶಂ ವಿಶೇಷೇಣ ವಿಕಾರಜಾತೈಃ ।
ದೋಷೇಣ ಯೇನಾವತತಂ ಸ್ವಲಿಙ್ಗೈಸ್ತಂ ಲಕ್ಷಯೇದಾಮ ಸಮುದ್ಭವೈಶ್ಚ ॥೧೦॥

ತಿಂದ ಆಹಾರವು ಕಫ ಮತ್ತು ವಾತಗಳಿಂದ ದೂಷಿತವಾಗಿ ಮೇಲ್ಮುಖವಾಗಿ ವಮನದಿಂದಲೂ ಬರುವುದಿಲ್ಲ, ಕೆಳಮುಖವಾಗಿ ವಿರೇಚನದಿಂದಲೂ ಬರುವುದಿಲ್ಲವಾಗಿ ಈ ವ್ಯಾಧಿಗೆ ಚಿಕಿತ್ಸೆಮಾಡುವುದು ಅಸಾಧ್ಯವಾದದ್ದು, ಪೂರ್ವಿಕರಾದ ವೈದ್ಯರು, ಇದನ್ನು ವಿಲಂಬಿಕಾಜೀರ್ಣವೆನ್ನುತ್ತಾರೆ. ಆಮದೋಷವಿರುವ ದೇಹಭಾಗದಲ್ಲಿ ತೋದ, ಭೇದ ಮೊದಲಾದ ದೋಷಲಕ್ಷಣಗಳೂ ಸ್ತಂಭ ಅಧ್ಮಾನ ಮೊದಲಾದ ಆಮಲಕ್ಷಣಗಳೂ ಪೀಡಿಸುತ್ತಿದ್ದರೆ ಆಯಾಯ ಬಾಧೆಗಳಿಗೆ ತಕ್ಕಂತೆಯೇ ದೋಷಗಳನ್ನು ನಿರ್ಧರಿಸಬೇಕು.

ಯಃ ಶ್ಯಾವದನ್ತೌಷ್ಠನಖೋಽಲ್ಪಸಂಜ್ಞಶ್ಛರ್ದ್ಯರ್ದಿತೋಽಭ್ಯನ್ತರಯಾತನೇತ್ರಃ ।
ಕ್ಷಾಮಸ್ವರಃ ಸರ್ವವಿಮುಕ್ತಸನ್ಧಿರ್ಯಾಯಾನ್ನರಃ ಸೋಽಪುನರಾಗಮಾಯ ॥೧೧॥
ಸಾಧ್ಯಾಸು ಪಾರ್ಷ್ಣ್ಯೋರ್ದಹನಂ ಪ್ರಶಸ್ತಮಗ್ನಿಪ್ರತಾಪೋ ವಮನಂ ಚ ತೀಕ್ಷ್ಣಮ್ ।
ಪಕ್ವೇ ತತೋಽನ್ನೇ ತು ವಿಲಙ್ಘನಂ ಸ್ಯಾತ್ ಸಂಪಾಚನಂ ಚಾಪಿ ವಿರೇಚನಂ ಚ ॥೧೨॥

ಹಲ್ಲು, ತುಟಿ ಉಗುರುಗಳು ಹೊಗೆಯಬಣ್ಣಕ್ಕೆ ತಿರುಗಿರುವ ಸ್ವಲ್ಪವೇ ಎಚ್ಚರಿಕೆ ಯುಳ್ಳ ವಮನ, ಕಣ್ಣುಗುಡ್ಡೆಗಳು ಹಳ್ಳಕ್ಕೆ ಬಿದ್ದಿರುವುದು ಸಂಧಿಚ್ಯುತಿ ಸ್ವರಹಾನಿ ಈ ಲಕ್ಷಣಗಳುಳ್ಳ ವಿಲಂಬಿಕಾಜೀರ್ಣ ರೋಗಿಯು ಬದುಕುವುದಿಲ್ಲವೆಂದು ತಿಳಿಯಬೇಕು ; ಸಾಧ್ಯವಾದ ಆಮದೋಷಗಳಲ್ಲಿ ಶಲಾಕೆಯನ್ನು ಕಾಯಿಸಿ ಹಿಮ್ಮಡಿಯ ಕೆಳಭಾಗಕ್ಕೆ ಬರೆಹಾಕಬೇಕು ; ಬೆಂಕಿಯನ್ನು ಕಾಯಿಸಬೇಕು ; ತೀಕ್ಷ್ಣದ್ರವ್ಯಗಳಿಂದ ವಮನ

ಮಾಡಿಸಬೇಕು ; ಆಹಾರಪಾಕವಾದರೆ ಉಪವಾಸ ಪಾಚನ ಮತ್ತು ವಿರೇಚನೌಷಧ ಗಳನ್ನು ಪ್ರಯೋಗಿಸಬೇಕು.

ವಿಶುದ್ಧದೇಹಸ್ಯ ಹಿ ಸದ್ಯ ಏವ ಮೂರ್ಛಾತಿಸಾರಾದಿರುಪೈತಿ ಶಾನ್ತಿಮ್ ।
ಆಸ್ಥಾಪನಂ ಚಾಪಿ ವದನ್ತಿ ಪಥ್ಯಂ ಸರ್ವಾಸು ಯೋಗಾನಪರಾನ್ನಿಬೋಧ ॥೧೩॥
ಪಥ್ಯಾವಚಾಹಿಙ್ಗು ಕಳಿಂಗಗೃಞ್ಜ ಸೌವರ್ಚಲೈಃ ಸಾತಿವಿಷೈಶ್ಚ ಚೂರ್ಣಮ್ ।
ಸುಖಾಮ್ಬುಪೀತಂ ವಿನಿಹನ್ತ್ಯಜೀರ್ಣಂ ಶೂಲಂ ವಿಷೂಚೀಮರುಚಿಂ ಚ ಸದ್ಯಃ ॥೧೪॥

ವಿಷೂಚಿಕಾ ರೋಗದಲ್ಲಿ ವಮನವಿರೇಚನಗಳಿಂದ ದೇಹಶುದ್ಧಿಯಾದರೆ ಕೂಡಲೇ ಮೂರ್ಛೆ ಅತಿಸಾರಾದಿಗಳು ಶಾಂತವಾಗುತ್ತವೆ ; ಅಜೀರ್ಣರೋಗದಲ್ಲಿ ಆಸ್ಥಾಪನಬಸ್ತಿ ಯನ್ನು ಪ್ರಯೋಗಿಸುವುದು ನಿಷೇಧವಾದರೂ ಆಹಾರವು ಪಾಕವಾಗಿ ಮಲಬಂಧ ನಿವಾರಣೆಗಾಗಿ ಪಾಚನಪೂರ್ವಕವಾದ ಆಸ್ಥಾಪನಬಸ್ತಿಪ್ರಯೋಗವು ಶ್ರೇಷ್ಠವಾದದ್ದು ; ಎಲ್ಲಾ ವಿಷೂಚಿಕಾರೋಗಗಳಿಗೂ ಯೋಗ್ಯವಾದ ಔಷಧಯೋಗಗಳನ್ನು ಹೇಳುತ್ತೇವೆ ಕೇಳು ; ಅಣಿಲೆಕಾಯಿ, ಬಜೆ, ಹಿಙ್ಗು, ಕೊಡಶೀಗೆಬೀಜ, ಬೆಳ್ಳುಳ್ಳಿ, ಗೃಂಜನ (ಬೆಳ್ಳುಳ್ಳಿ ಭೇದ) ಸೌವರ್ಚಲವಣ, ಅತಿಬಜೆ, ಇವುಗಳ ಚೂರ್ಣವನ್ನು ಬಿಸಿ ನೀರಿನಲ್ಲಿ ಕದರಿ ಕುಡಿಸಿದರೆ ಕೂಡಲೇ ಅಜೀರ್ಣವೂ, ಹೊಟ್ಟೆನೋವೂ, ವಿಷೂಚಿಕೆಯೂ, ಅರೋಚ ಕವೂ, ನಿವಾರಣೆಯಾಗುತ್ತವೆ.

ಕ್ಷಾರಾಗದಂ ವಾ ಲವಣಂ ಬಿಡಂ ವಾ ಗುಡಪ್ರಗಾಢಾನಥಸರ್ಷಪಾನ್ ವಾ ।
ಅಮ್ಲೇನ ವಾ ಸೈನ್ಧವಹಿಙ್ಗುಯುಕ್ತಾ ಸಬೀಜಪೂರ್ಣಾಸಫ್ಯತ್ರಿವರ್ಗಾ ॥೧೫॥
ಕಟುತ್ರಿಕಂ ವಾ ಲವಣೈರುಪೇತಂ ಪಿಬೇತ್ಸ್ನುಹೀಕ್ಷೀರವಿಮಿಶ್ರಿತಂ ತು ।
ಕಲ್ಯಾಣಕಂ ವಾ ಲವಣಂ ಪಿಬೇತ್ತು ಯದುಕ್ತಮಾದಾವನಿಲಾಮಯೇಷು ॥೧೬॥

ಧನಾಶ್ವಕರ್ಣೇತ್ಯಾದಿ ದುಂದುಭಿಸ್ವನೀಯಾಧ್ಯಾಯದಲ್ಲಿ ಹೇಳಿದ ಕ್ಷಾರಾಗದ ವನ್ನಾಗಲೀ ಬಿಡಲವಣವನ್ನಾಗಲೀ ಹೆಚ್ಚಾಗಿಬೆಲ್ಲವನ್ನು ಸೇರಿಸಿದ ಸಾಸಿವೆಯನ್ನಾಗಲೀ (ಹುಳಿಗಂಜಿ) ಕಲಗಚ್ಚಿಗೆ ಸೈಂಧವಮಾದಳರಸಗಳನ್ನು ಮಿಶ್ರಮಾಡಿ ಸಮಪ್ರಮಾಣದಿಂದ ತ್ರಿಫಲಾ ಮತ್ತು ತ್ರಿಕಟುಗಳ ಚೂರ್ಣವನ್ನು ಸೇರಿಸಿಕುಡಿಸಬೇಕು; ೫ ಲವಣಗಳೊಡನೆ ತ್ರಿಕಟುಮುಂಡುಗಳ್ಳಿಯ ಹಾಲನ್ನು ಮಿಶ್ರಮಾಡಿಯಾಗಲೀ ವಾತವ್ಯಾಧಿಚಿಕಿತ್ಸೆಯಲ್ಲಿ ಹೇಳಿರುವ ಗಂಡೀರ ಪಲಾಶಾದಿಗಳಿಂದ ತಯಾರಿಸಿದ ಕಲ್ಯಾಣಕಲವಣವನ್ನಾಗಲೀ ಹುಳಿಕಲಗಚ್ಚಿನಲ್ಲಿ ಕದರಿ ಕುಡಿಸಬೇಕು.

ಕೃಷ್ಣಾಜಮೋದಕ್ಷವಕಾಣಿ ವಾಪಿ ತುಲ್ಯಾ ಪಿಬೇದ್ವಾಮಗಧಾನಿಕುಮ್ಬಾ ।
ದನ್ತೀಯುತಂ ವಾ ಮಗಧೋದ್ಭವಾನಾಂ ಕಲ್ಕಂ ಪಿಬೇತ್ಕೋಷವತೀರಸೇನ ॥೧೭॥
ಉಷ್ಣಾಭಿರದ್ಭಿರ್ಮಗಧೋದ್ಭವಾನಾಂ ಕಲ್ಕಂ ಪಿಬೇನ್ನಾಗರಕಲ್ಕಯುಕ್ತಮ್ ।
ವ್ಯೋಷಂ ಕರಞ್ಜಸ್ಯ ಫಲಂ ಹರಿದ್ರೇ ಮೂಲಂ ಸಮಂ ಚಾಪ್ಯಥ
ಮಾತುಲುಙ್ಗ್ಯಾಃ ॥೧೮॥
ಛಾಯಾವಿಶುಷ್ಕಾ ಗುಟಿಕಾಃ ಕೃತಾಸ್ತಾ ಹನ್ಯುರ್ವಿಷೂಚೀಂನಯನಾಞ್ಜನೇನ ।

ಹಿಪ್ಪಲಿ, ಅಜಮೋದ, ನಕಚಿಕಿನಿ (ಫಣಿಜ್ಜಕಾಕಾರದ ಸಣ್ಣಗಿಡ) ಇವುಗಳ ಚೂರ್ಣವನ್ನೂ, ಹಿಪ್ಪಲಿ, ಜಾಪಾಳದ ತೊಗಟೆಯನ್ನು ಸಮಭಾಗದಿಂದ ಚೂರ್ಣಿಸಿಯೂ, ಹುಳಿಕಲಗಚ್ಚಿನಲ್ಲಿ ಕದರಿಯೂ ಅಥವಾ ಜಾಪಾಳದ ತೊಗಟೆ, ಹಿಪ್ಪಲಿಗಳ ಚೂರ್ಣವನ್ನು ಹೀರೆಸೊಪ್ಪಿನರಸದಲ್ಲಿ ಕದರಿಯೂ ಶುಂಠಿಯ ಕಲ್ಕದೊಡನೆ ಹಿಪ್ಪಲಿಯ ಚೂರ್ಣವನ್ನು ಸೇರಿಸಿ ಬಿಸಿನೀರಿನಲ್ಲಿ ಕದರಿಯೂ ಕುಡಿಸಬೇಕು. ತ್ರಿಕಟುಕ, ಹೊಂಗೆಬೀಜ, ಅರಿಶಿನ, ಮರದರಿಶಿನ ಮಾದಳದಬೇರುಗಳನ್ನು ಸಮಭಾಗದಿಂದ ಸೇರಿಸಿ ಚೂರ್ಣಮಾಡಿ ಕಲಗಚ್ಚಿನಿಂದ ಅರೆದು ಗುಳಿಗೆಗಳನ್ನು ಮಾಡಿ ನೆರಳಿನಲ್ಲಿರಿಸಿ ಒಣಗಿಸಿಟ್ಟುಕೊಂಡು ಕಣ್ಣಿಗಚ್ಚಿದರೆ ಪ್ರಮೀಲಕ (ತಂದ್ರಾ) ತಲೆನೋವು, ಮೊದಲಾದ ವಿಷೂಚಿಕಾರೋಗವು ಉಪದ್ರವಗಳು ನಿವಾರಿಸಲ್ಪಡುತ್ತವೆ ಅಥವಾ ಅಂಜನದ ಪ್ರಭಾವದಿಂದ ವಿಷೂಚಿಕಾರೋಗವು ನಿವಾರಣೆಯಾಗುತ್ತದೆ.

ಸುವಾಮಿತಂ ಸಾಧುವಿರೇಚಿತಂ ವಾ ಸುಲಙ್ಘಿತಂ ವಾ ಮನುಜಂ ವಿದಿತ್ವಾ ||೧೯||
ಪೇಯಾದಿಭಿರ್ದೀಪನಪಾಚನೀಯೈಃ ಸಮ್ಯಕ್ ಕ್ಷುಧಾರ್ತಂ ಸಮುಪಕ್ರಮೇತ |

ವಮನ, ವಿರೇಚನಗಳಿಂದ ಚೆನ್ನಾಗಿ ದೇಹಶುದ್ಧಿಯಾಗಿ ಉಪವಾಸ ಮಾಡಿಸಿದ ಮೇಲೆ ರೋಗಿಗೆ ಸರಿಯಾಗಿ ಹಸಿವೆಯಾದರೆ ದೀಪನ, ಪಾಚನೌಷಧಗಳನ್ನು ಮಿಶ್ರಮಾಡಿ ಪೇಯಾದಿಕ್ರಮದಿಂದ ಉಪಚರಿಸಬೇಕು.

ಆಮಂ ಶಕೃದ್ವಾ ನಿಚಿತಂ ಕ್ರಮೇಣ ಭೂಯೋ ವಿಬದ್ಧಂ ವಿಗುಣಾನಿಲೇನ ||೨೦||
ಪ್ರವರ್ತಮಾನಂ ನ ಯಥಾಸ್ವಮೇನಂ ವಿಕಾರಮಾನಾಹ ಮುದಾಹರನ್ತಿ |
ತಸ್ಮಿನ್ ಭವನ್ತ್ಯಾಮಸಮುದ್ಭವೇ ತು ತೃಷ್ಣಾ ಪ್ರತಿಶ್ಯಾಯ ಶಿರೋವಿದಾಹಾಃ ||೨೧||
ಆಮಾಶಯೇ ಶೂಲಮಥೋ ಗುರುತ್ವಂ ಹೃಲ್ಲಾಸ ಉದ್ಗಾರ ವಿಘಾತನಂ ಚ |
ಸ್ತಮ್ಭಃ ಕಟೀಪೃಷ್ಠ ಪುರೀಷಮೂತ್ರೇ ಶೂಲೋಽಥ ಮೂರ್ಛಾಸಶಕೃದ್ವಮೇಚ್ಚ
||೨೨||
ಶ್ವಾಸಶ್ಚ ಪಕ್ವಾಶಯಜೇ ಭವನ್ತಿ ಲಿಙ್ಗಾನಿ ಚಾತ್ರಾಲಸಕೋದ್ಭವಾನಿ |

ವಿಷೂಚಿಕಾಚಿಕಿತ್ಸೆಯಂತೆಯೇ ಚಿಕಿತ್ಸೆಮಾಡಬೇಕಾಗುವ ಮತ್ತು ವಿಷೂಚಿಕೆಯ ಉಪದ್ರವವಾದ ಅನಾಹರೋಗವನ್ನು ವಿವರಿಸಲಾಗುತ್ತದೆ. ಅಪಕ್ವವಾದ ಅನ್ನರಸವೂ ಪುರೀಷವೂ, ಸಂಚಿತವಾಗಿ ಉನ್ಮಾರ್ಗವಾಗಿ ಸಂಚರಿಸುವ ವಾಯುವಿನಿಂದ ಅಕ್ರಮಿಸಿ ತಡೆಯಲ್ಪಟ್ಟು ಗುದದ್ವಾರದಿಂದ ಸುಲಭವಾಗಿ ಹೊರಕ್ಕೆ ಬರದಿದ್ದರೆ ಅನಾಹವೆನ್ನುತ್ತಾರೆ. ಆಮದೋಷವು ಸಂಚಿತವಾಗಿ ಅನಾಹವುಂಟಾದರೆ, ನೀರಡಿಕೆ, ನೆಗಡಿ, ತಲೆಉರಿತ, ಈ ಲಕ್ಷಣಗಳುಂಟಾಗುತ್ತವೆ. ಆಮಾಶಯದಲ್ಲಿ ಶೂಲೆಯೂ, ಭಾರವೂ, ಹೃದಯದಲ್ಲಿ ನೋವೂ (ಬಾಯಿ ನೀರುಸುರಿಯುವುದು), ತೇಗುವುದಕ್ಕೆ ಅಡ್ಡಿಯೂ ಉಂಟಾಗುತ್ತವೆ. ಮಲವೃದ್ಧಿಯಿಂದುಂಟಾಗುವ ಅನಾಹದಲ್ಲಿ ಸೊಂಟ ಮತ್ತು ಬೆನ್ನುಗಳ ಹಿಡಿತ, ಮಲಮೂತ್ರಗಳ ತಡೆತ, ಸೊಂಟ ಬೆನ್ನುಗಳಲ್ಲಿ ನೋವೂ, ಪ್ರಜ್ಞೆತಪ್ಪುವುದೂ, ಬಾಯಿನಿಂದ ಮಲವು

ಹೊರಕ್ಕೆಬೀಳುವುದು, ಪಕ್ವಾಶಯದಲ್ಲಿ ಮಲವು ತಡೆಯಲ್ಪಟ್ಟರೆ ಶ್ವಾಸವೂ ಅಲಸಕ ಲಕ್ಷಣಗಳೂ ಇರುತ್ತವೆ.

ಆಮೋಧ್ಭವೇ ವಾನ್ತಮುಪಕ್ರಮೇತ ಸಂಸರ್ಗಭಕ್ತಕ್ರಮ ದೀಪನೀಯೈಃ ||೨೩||
ಅಥೇತರಂ ಯೋ ನಶಕೃದ್ಭವೇತ್ತಮಾಮಂ ಜಯೇತ್ ಸ್ವೇದನಪಾಚನೈಶ್ಚ |
ವಿಷೂಚಿಕಾಯಾಂ ಪರಿಕೀರ್ತಿತಾನಿ ದ್ರವ್ಯಾಣಿವೈರೇಚನಿಕಾನಿಯಾನಿ ||೨೪||
ತಾನ್ಯೇವ ವರ್ತೀರ್ವಿರಚೇದ್ವಿಚೂರ್ಣ್ಯ ಮಹಿಷ್ಯಜಾವಿಭಗವಾಂ ತು ಮೂತ್ರೈಃ |
ಸ್ವಿನ್ನಸ್ಯ ಪಾಯೌ ವಿನಿವೇಶ್ಯ ತಾಶ್ಚ ಚೂರ್ಣಾನಿ ಚೈಷಾಂ ಪ್ರಧಮೇತ್ತು ನಾಡ್ಯಾ ||೨೫||

ಆಮದೋಷದಿಂದುಂಟಾದ ಆನಾಹದಲ್ಲಿ ವಮನ ಮಾಡಿಸಿ ಪೇಯಾವಿಲೇಪೀ ಮೊದಲಾದ ಅಗ್ನಿದೀಪನಗಳಾದ ಆಹಾರಕ್ರಮಗಳಿಂದುಪಚರಿಸಬೇಕು. ಮಲವೃದ್ಧಿಯಿಂದುಂಟಾದ ಆನಾಹದಲ್ಲಿ ಸ್ವೇದನ ಪಾಚನ ಕ್ರಮಗಳಿಂದ ಆಮದೋಷವನ್ನು ಪರಿಹರಿಸಬೇಕು. ವಿಷೂಚಿಕಾ ರೋಗದಲ್ಲಿ ಹೇಳಿರುವ ವಿರೇಚನ ದ್ರವ್ಯಗಳನ್ನು ಎಮ್ಮೆ, ಆಡು, ಕುರಿ, ಆನೆ, ಹಸು ಇವುಗಳ ಮೂತ್ರದಿಂದ ಅರೆದ ಫಲ ವರ್ತಿಗಳನ್ನು ರೋಗಿಯ ಗುದಕ್ಕೆ ಸ್ವೇದ ಮಾಡಿಸಿ ಪ್ರಯೋಗಿಸಬೇಕು ಮತ್ತು ಆ ಚೂರ್ಣಗಳನ್ನೇ ಕೊಳವೆಗಳಿಗೆ ತುಂಬಿ ಗುದದೊಳಕ್ಕೆ ಮುಖವಾಯುವಿನಿಂದ ಊದಿನೂಕಬೇಕು.

ಮೂತ್ರೇಷು ಸಂಸಾಧ್ಯ ಯಥಾವಿಧಾನಂ ದ್ರವ್ಯಾಣಿ ಯಾನ್ಯೂರ್ಧ್ವಮಧಶ್ಚ ಯಾನ್ತಿ |
ಕ್ವಾಥೇನ ತೇನಾಶು ನಿರೂಹಯೇಚ್ಚ ಮೂತ್ರಾರ್ಧಯುಕ್ತೇನ ಸನಮಾಕ್ಷಿಕೇಣ ||೨೬||
ತ್ರಿಭಣ್ಡಿಯುಕ್ತಂ ಲವಣಪ್ರಕುಞ್ಚಂ ದತ್ವಾವಿರಿಕ್ತಕ್ರಮಮಾಚರೇಚ್ಚ |
ಏಷ್ವೇವ ತೈಲೇನ ಚ ಸಾಧಿತೇನ ಪ್ರಾಪ್ತಂ ಯದಿ ಸ್ಯಾದನುವಾಸಯೇಚ್ಚ ||೨೭||

ವಮನ, ವಿರೇಚನ ದ್ರವ್ಯಗಳನ್ನು ಎಮ್ಮೆ, ಆಡು ಮೊದಲಾದುವುಗಳ ಮೂತ್ರಗಳಿಗೆ ಸೇರಿಸಿ ಕ್ರಮವಾಗಿ ಕಷಾಯಮಾಡಿ ಶೋಧಿಸಿದ ಕಷಾಯಕ್ಕೆ ಅರ್ಧದಷ್ಟು ಗೋಮೂತ್ರವನ್ನೂ ಸ್ವಲ್ಪ ಜೇನುತುಪ್ಪವನ್ನೂ, ತಿಗಡೆಪುಡಿಯನ್ನೂ ಸೈಂಧವವನ್ನೂ ಮಿಶ್ರಮಾಡಿ ಆಮಪಾಚನವಾದಮೇಲೆ ನಿರೂಹಬಸ್ತಿಯ ಮೂಲಕ ಪ್ರಯೋಗಿಸಬೇಕು. ಅನಂತರ ವಿರೇಚನೌಷಧ ಸೇವಿಸಿದ ರೋಗಿಯಂತೆ ಪಥ್ಯಕ್ರಮವನ್ನು ಆಚರಿಸಬೇಕು. ಈ ದ್ರವ್ಯಗಳಿಂದಲೇ ತಯಾರಿಸಿದ ತೈಲದಿಂದ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾಗರ್ತ ಕಾಯಚಿಕಿತ್ಸಾಯಾಂ
ವಿಷೂಚಿಕಾಪ್ರತಿಷೇಧನಾಮಕ ಷಟ್‌ಪಞ್ಚಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾ
ಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಭಾಷಾಕರ್ಣಾಟಕವಿವೃತಿಃ

ಸಪ್ತಪಞ್ಚಾಶತ್ತಮೋಽಧ್ಯಾಯಃ

ಅಥಾತೋಽರೋಚಕಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಅರೋಚಕ ಚಿಕಿತ್ಸೆಯನ್ನು ವಿವರಿಸುತ್ತೇವೆ ; ವಿಷೂಚಿಕಾಚಿಕಿತ್ಸೆಯಾದನಂತರ ಆಮ ದೋಷದಿಂದಲೂ ಅಗ್ನಿಮಾಂದ್ಯದಿಂದಲೂ ಅರೋಚಕತೆಯುಂಟಾಗುವುದು ಸ್ವಾಭಾವಿಕ ವಾದಕಾರಣ ಅದರಚಿಕಿತ್ಸೆಯನ್ನು ವಿವರಿಸುವುದು ಯುಕ್ತವು.

ದೋಷೈಃ ಪೃಥಕ್ ಸಹ ಚ ಚಿತ್ತ ವಿಪರ್ಯಯಾಚ್ಚ ಭಕ್ತಾಯನೇಷು ಹೃದಿ ಚಾವತತೇ ಪ್ರಗಾಢಮ್ ।
ನಾನ್ನೇರುಚಿರ್ಭವತಿ ತಂ ಭಿಷಜೋ ವಿಕಾರಂ ಭಕ್ತೋಪಘಾತ ಮಿಹ ಪಞ್ಚವಿಧಂ ವದನ್ತಿ ||೩||

ದುಷ್ಟವಾದ ಆಹಾರಗಳನ್ನು ಸೇವಿಸುವುದರಿಂದಲೂ ಕಾಮಶೋಕಾದಿಗಳಿಂದ ಮನಸ್ಸುಪೀಡಿತವಾಗುವುದರಿಂದಲೂ ಅನ್ನವಾಹಿಸ್ರೋತಸ್ಸು ಕೆಡುವುದರಿಂದ ಅನ್ನದಲ್ಲಿ ರುಚಿಯುಂಟಾಗುವುದಿಲ್ಲ ; ವೈದ್ಯರು ಈ ರೋಗಕ್ಕೆ ಅರೋಚಕವೆಂದು ಹೇಳುತ್ತಾರೆ ; ವಾತಿಕ, ಪೈತ್ತಿಕ, ಶ್ಲೈಷ್ಮಿಕ, ತ್ರಿದೋಷಜ, ಮತ್ತು ಚಿತ್ರವಿಭ್ರಮ ಭೇದಗಳಿಂದ ಅರೋಚಕವು ೫ ವಿಧಗಳಾಗಿದೆ.

ಟಿಪ್ಪಣಿ :—ಅರೋಚಕಾ, ಭಕ್ತಾಚ್ಛಂದ, ಅನ್ನದ್ವೇಷಗಳು ಪರ್ಯಾಯ ಪದ ಗಳು. ಆದರೆ ಕೆಲವರು ಇವುಗಳಿಗೆ ಪರಸ್ಪರಭೇದಗಳಿವೆ ಎಂದು ಹೇಳುತ್ತಾರೆ. ಹೇಗೆಂದರೆ ಬಾಯಿಗೆ ಹಾಕಿಕೊಂಡ ಅನ್ನವು ರುಚಿಸದಿದ್ದರೆ ಅರೋಚಕವೆನ್ನುತ್ತಾರೆ. ಮನಸ್ಸಿನಲ್ಲಿ ಯೋಚಿಸುತ್ತಾ ಅನ್ನವನ್ನೂ ಕಂಡರೂ ಜ್ಞಾಪಿಸಿಕೊಂಡರೂ ದ್ವೇಷವುಂಟಾದರೆ ಅನ್ನ ದ್ವೇಷವೆಂದೂ ಅನ್ನವನ್ನು ತಿನ್ನಬೇಕೆಂಬ ಇಚ್ಛೆಯು ಉಂಟಾಗದಿದ್ದರೆ ಅಭಕ್ತಚ್ಛಂದ ವೆಂದೂ ಹೇಳುತ್ತಾರೆ.

ಹೃಚ್ಛೂಲಪೀಡನಯುತಂ ವಿರಸಾನನತ್ವಂ ವಾತಾತ್ಮಕೇ ಭವತಿ ಲಿಙ್ಗಮರೋಚಕೇ ತು ।
ಹೃದ್ದಾಹಚೋಷಬಹುತಾ ಮುಖತಿಕ್ತತಾ ಚ ಮೂರ್ಛಾ ಸತೃಟ್ ಭವತಿ ಪಿತ್ತಕೃತೇ ತಥೈವ ||೪||
ಕಣ್ಡೂಗುರುತ್ವಕಫಸಂಸ್ರವಸಾದತನ್ದ್ರಾಃ ಶ್ಲೇಷ್ಮಾತ್ಮಕೇ ಮಧುರಮಾಸ್ಯ ಮರೋಚಕೇ ತು ।

ಸರ್ವಾತ್ಮಕೇ ಪವನಪಿತ್ತ ಕಫಾ ಬಹೂನಿ ರೂಪಾಣ್ಯಥಾಸ್ಯ ಹೃದಯೇ
ಸಮುದೀರಯಂತಿ ||೫||
ಸಂರಾಗಶೋಕಭಯವಿಪ್ಲುತಚೇತಸಸ್ತು ಚಿನ್ತಾಕೃತೊ ಭವತಿ ಸೋಽಶುಚಿದರ್ಶನಾಚ್ಚ |

ವಾತಿಕಅರೋಚಕದಲ್ಲಿ ಹೃದಯಶೂಲೆಯೂ ವ್ಯಥೆಯೂ ಮತ್ತು ಮುಖದ ರುಚಿಯಲ್ಲಿ ವ್ಯತ್ಯಾಸವೂ, ಪೈತ್ತಿಕಾರೋಚಕದಲ್ಲಿ ಎದೆಯುರಿಯೂ ಬಿಸಿಯು ಬಾಯಿ ಕಹಿಯಾಗಿಯೂ ಪ್ರಜ್ಞೆತಪ್ಪುವುದೂ, ನೀರಡಿಕೆಯೂ ಉಂಟಾಗುತ್ತವೆ ; ಶ್ಲೈಷ್ಮಿಕಾರೋಚಕದಲ್ಲಿ ಹೃದಯದಲ್ಲಿ ನವೆಯೂ, ಭಾರವೂ, ಬಾಯಿನಿಂದ ಕಫ ಸ್ರಾವವೂ, ದೇಹಕಾರ್ಶ್ಯವೂ ತೂಕಡಿಕೆಯೂ, ಬಾಯಿಸಿಹಿಯಾಗಿಯೂ, ತ್ರಿದೋಷಜಾರೋಚಕದಲ್ಲಿ ಮುಖದಲ್ಲೂ ಹೃದಯದಲ್ಲೂ ತ್ರಿದೋಷಗಳೇ ಅನೇಕ ಪ್ರಕಾರವಾದ ಲಕ್ಷಣಗಳನ್ನು ತೋರಿಸುತ್ತವೆ ; ಕಾಮ, ಶೋಕ, ಭಯಗಳಿಂದ ವ್ಯಾಪ್ತವಾದ ಮನಸ್ಸುಳ್ಳವನಿಗೆ ಅಮೇಧ್ಯವಸ್ತುಗಳನ್ನು ನೋಡುವುದರಿಂದ ವಾತಾದಿದೋಷಗಳು ಪ್ರಕೋಪಗೊಂಡು ವಾತದಿಂದ ರುಚಿ ವ್ಯತ್ಯಾಸವೂ, ಪಿತ್ತದಿಂದ ಬಾಯಿರುಚಿಯು, ಕಹಿ, ಮತ್ತು ಖಾರವಾಗಿಯೂ, ಕಫದಿಂದ ಸಿಹಿಯಾಗಿಯೂ, ತ್ರಿದೋಷಗಳಿಂದ ಎಲ್ಲಾ ರಸಗಳೂ ತೋರುತ್ತವೆ ; ಶೋಕದಿಂದ ದೈನ್ಯವುಂಟಾಗುತ್ತದೆ.

ವಾತೇ ವಚಾಮ್ಬುವಮನಂ ಕೃತವಾ್ ಪಿಬೇಚ್ಚ ಸ್ನೇಹೈಃ ಸುರಾಭಿರಥವೋಷ್ಣಜಲೇನ
ಚೂರ್ಣಮ್ ||೬||
ಕೃಷ್ಣಾವಿಡಙ್ಗ ಯವಭಸ್ಮಹರೇಣು ಭಾರ್ಗೀರಾಸ್ನೈಲಹಿಙ್ಗುಲವಣೋತ್ತಮನಾಗ
ರಾಣಾಮ್ |
ಪಿತ್ತೇ ಗುಡಾಮ್ಬುಮಧುರೈರ್ವಮನಂ ಪ್ರಶಸ್ತಂ ಸ್ನೇಹಃ ಸಸೈನ್ಧವ ಸಿತಾಮಧುಸರ್ಪಿ
ರಿಷ್ಟಃ ||೭||
ನಿಮ್ಬಾಮ್ಬು ವಾಮಿತವತಃ ಕಫಜೇಽನುಪಾನಂ ರಾಜದ್ರುಮಾಮ್ಬು ಮಧುನಾತು ಸದೀ
ಪ್ಯಕಂ ಸ್ಯಾತ್ |
ಚೂರ್ಣಂ ಯದುಕ್ತಮಥವಾನಿಲಜೇ ತದೇವ ಸರ್ವೈಶ್ಚ ಸರ್ವ ಕೃತಮೇವಮುಪ
ಕ್ರಮೇತ ||೮||

ವಾತಿಕಾರೋಚಕದಲ್ಲಿ ಬಜೆಯ ಕಷಾಯವನ್ನು ಕುಡಿಸಿ ವಮನಮಾಡಿಸಿದ ರೋಗಿಗೆ ಹಿಪ್ಪಲಿ, ವಿಡಂಗ, ಯವಕ್ಷಾರ, ರೇಣುಕೆಬೀಜ, ಗಂಟುಪರಂಗಿ, ರಾಸ್ನೆ, ಏಲಕ್ಕಿ, ಹಿಂಗು, ಸೈಂಧವ, ಶುಂಠಿ, ಇವುಗಳ ಚೂರ್ಣವನ್ನು ಸ್ನೇಹ, ಮದ್ಯ, ಬಿಸಿನೀರು ಇವುಗಳೊಂದರಲ್ಲಿ ಕದಡಿಕುಡಿಸಬೇಕು ; ಪೈತ್ತಿಕಾರೋಚಕದಲ್ಲಿ ಕಾಕೋಲ್ಯಾದಿ ಮಧುರ ದ್ರವ್ಯಗಳ ಕಷಾಯದಿಂದಾಗಲೀ ಬೆಲ್ಲಕದರಿದ ನೀರನ್ನು ಕುಡಿಸಿಯಾಗಲೀ ವಮನಮಾಡಿಸಿ ಸೈಂಧವ, ಸಕ್ಕರೆ, ಜೇನು-ತುಪ್ಪ, ತುಪ್ಪ ಇವುಗಳನ್ನು ಮಿಶ್ರಮಾಡಿ ಪಾನಮಾಡಿಸುವುದು ಹಿತಕರವು ; ಶ್ಲೈಷ್ಮಿಕಾರೋಚಕದಲ್ಲಿ ಬೇವಿನ ಕಷಾಯವನ್ನು ಕುಡಿಸಿ ವಮನಮಾಡಿ

ಸಿದ ರೋಗಿಗೆ ಕಕ್ಕೆತೊಗಟೆ ಮತ್ತು ಕಾಯಿಗಳ ಕಷಾಯಕ್ಕೆ ಅಜಮೋದಚೂರ್ಣ (ಕೆಲವರು ವಾದಕ್ಕಿಯೆನ್ನುತ್ತಾರೆ) ಮತ್ತು ಜೇನುತುಪ್ಪಗಳನ್ನು ಮಿಶ್ರಮಾಡಿ ಕುಡಿಸ ಬೇಕು ; ಅಥವಾ ವಾತಿಕಾರೋಚಕಕ್ಕೆ ಹೇಳಿದ ಹಿಪ್ಪಲಿ, ವಿಡಂಗ ಮೊದಲಾದುವುಗಳ ಚೂರ್ಣವನ್ನೇ ಪ್ರಯೋಗಿಸಬೇಕು ; ತ್ರಿದೋಷಜಾರೋಚಕದಲ್ಲಿ ಮೇಲೆ ಹೇಳಿದ ತ್ರಿದೋಷಗಳ ಚಿಕಿತ್ಸೆಯನ್ನೇ ಮಾಡಬೇಕು.

ದ್ರಾಕ್ಷಾಪಟೋಲಬಿಡವೇತ್ರಕರೀರನಿಮ್ಬಮೂರ್ವಾಭಯಾಕ್ಷಬದರಾಮಲಕೇನ್ದ್ರವೃಕ್ಷೈಃ ।
ಬೀಜೈಃ ಕರಞ್ಜನೃಪವೃಕ್ಷಭವೈಶ್ಚ ಪಿಷ್ಟೈರ್ಲೇಹಂ ಪಚೇತ್ ಸುರಭಿಮೂತ್ರಯುತಂ ಯಥಾವತ್ ॥೯॥
ಮುಸ್ತಾಂ ವಚಾಂ ತ್ರಿಕಟುಕಂ ರಜನೀದ್ವಯಂ ಚ ಭಾರ್ಗೀಂ ಚ ಕುಷ್ಠಮಥ ನಿರ್ದಹನೀಂ ಚ ಪಿಷ್ಟ್ವಾ ।
ಮೂತ್ರೇಽವಿಜೇ ದ್ವಿರದ ಮೂತ್ರಯುತೇ ಪಚೇದ್ವಾಪಾಠಾಂತಃಗಾ ಮತಿವಿಷಾಂ ರಜನೀಂ ಚ ಮುಖ್ಯಾಮ್ ॥೧೦॥
ಮಣ್ಡೂಕಿಮರ್ಕಮಮೃತಾಂ ಚಸಲಾಙ್ಗಲಾಖ್ಯಾಂ ಮೂತ್ರೇ ಪಚೇತ್ತು ಮಹಿಷಸ್ಯ ವಿಧಾನವಿಧ್ವಾ ।
ಏತಾನ್ನಸನ್ತಿ ಚತುರೋ ಲಿಹತಸ್ತು ಲೇಹಾನ್ ಗುಲ್ಮಾರುಚಿಶ್ವಸನ ಕಣ್ಠಹೃದಾಮಯಾಶ್ಚ ॥೧೧॥

ದ್ರಾಕ್ಷಿ, ಕಹಿಪಡವಲ, ಬಿಡಲವಣ, ಬೆತ್ತದಬೇರು, ಬಿದರುಕಳಲೆ, ಬೇವಿನ ತೊಗಟೆ, ಕೊರಟಿಗೆಹಂಬು, ಅಣಿಲೆಕಾಯಿ, ತಾರೆಕಾಯಿ, ಎಲಚಿಹಣ್ಣು, ನೆಲ್ಲಿಕಾಯಿ, ಕೊಡಶಿಗೆ ತೊಗಟೆ, ಹೊಂಗೆಬೀಜ, ಕಕ್ಕೆಬೀಜ, ಇವುಗಳನ್ನೆಲ್ಲಾ ಕಲ್ಕಮಾಡಿ ಗೋಮೂತ್ರದಲ್ಲಿಪಾಕ ಮಾಡಬೇಕು. ಕೊನ್ನಾರಿಗೆಡ್ಡೆ, ಬಜೆ, ತ್ರಿಕಟು, ಅರಿಶಿನ, ಮರದರಿಶಿನ, ಗಂಟುಪರಂಗಿ, ಚೆಂಗಲ್‌ಕೋಷ್ಠ, ಚಿತ್ರಮೂಲ, (ಅಜಮೋದವೆಂದು ಕೆಲವರಮತ) ಇವುಗಳ ಕಲ್ಕವನ್ನು ಕುರಿಯಮೂತ್ರದಲ್ಲಿ ಪಾಕಮಾಡಬೇಕು ; ಅಗಳ ಶುಂಠಿ, ಬಿದರುಪ್ಪು, ಅತಿಬಜೆ, ಅರಿಶಿನ (ಪಿಂಡಹರಿದ್ರಾ) ಇವುಗಳ ಕಲ್ಕವನ್ನು ಆನೆಯಮೂತ್ರದಲ್ಲಿ ಪಾಕಮಾಡಬೇಕು ; ಒಂದೆಲಗದಸೊಪ್ಪು, ಎಕ್ಕದಚಿಗುರು, ಅಮೃತವಳ್ಳಿ, ಕೋಳಿಕುಟುಮನ ಗಡ್ಡೆಗಳ ಕಲ್ಕ ವನ್ನು ಎಮ್ಮೆಯಮೂತ್ರದಲ್ಲಿ ಪಾಕಮಾಡಬೇಕು ; ಈ ೪ ವಿಧಲೇಹಗಳನ್ನೂ, ಸೇವಿಸುವ ವರಿಗೆ (ಅಂದರೆ ಯಾವುದಾದರೊಂದನ್ನಾದರೂ ಸೇವಿಸಿದರೆ) ಗುಲ್ಮ, ಅರೋಚಕತೆ, ಶ್ವಾಸ, ಕಂಠರೋಗ, ಹೃದ್ರೋಗಗಳುಂಟಾಗುವುದಿಲ್ಲ.

ಟಿಪ್ಪಣಿ :—ಮೇಲ್ಕಂಡ ೪ ವಿಧಲೇಹಗಳನ್ನು ಮಾಡಬೇಕಾದರೆ ಪ್ರತಿಯೊಂದು ಯೋಗದಲ್ಲಿ ಹೇಳಿರುವ ದ್ರವ್ಯಗಳ ಕಲ್ಕವನ್ನು ಅವುಗಳ (೪) ರಷ್ಟು ಆಯಾಯ ಯೋಗ ಗಳಲ್ಲಿ ಹೇಳಿರುವ ಮೂತ್ರಗಳೊಡನೆ ಮಿಶ್ರಮಾಡಿ ಮಂದಾಗ್ನಿಯಿಂದ ತಳ ಸೀದು ಹೋಗ ದಂತೆ ಪಾಕಮಾಡಬೇಕು.

ಸಾತ್ಮ್ಯೈಸ್ಸ್ವದೇಶರಚಿತೈರ್ವಿವಿಧಾಂಶ್ಚ ಭಕ್ಷ್ಯೈಃ ಪಾನಾನಿ ಮೂಲ ಫಲ ಷಾಡವ ರಾಗಯೋಗಾನ್ ।
ಆದ್ಯಾದ್ರಸಾಂಶ್ಚ ವಿವಿಧಾನ್ ವಿವಿಧೈಃ ಪ್ರಕಾರೈರ್ಭುಞ್ಜೀತವಾಪಿ ಲಘುರೂಕ್ಷಮನಃ ಸುಖಾನಿ ॥೧೨॥

ಸುಖವಾಗಿ ಜೀರ್ಣಿಸುವ ಸ್ವಕೀಯದೇಶದ ಜನರು ಸಾಮಾನ್ಯವಾಗಿ ಬಳಕೆಯಾಗಿ ಸೇವಿಸುವ ವಿವಿಧಭಕ್ಷ್ಯಗಳನ್ನೂ ಪಾನಗಳನ್ನು ಗೆಡ್ಡೆಗಳನ್ನೂ, ಹಣ್ಣುಗಳನ್ನೂ ಶೀಕರಣೆಗಳನ್ನೂ, ಬೇಲದಹಣ್ಣಿನಿಂದ ಮಾಡಿದ ಪಾನಕಗಳನ್ನೂ, ವಿವಿಧಮಾಂಸ ರಸಗಳನ್ನೂ ಸೇರಿಸಿಕೊಂಡು ಲಘುವಾಗಿಯೂ, ರೂಕ್ಷವಾಗಿಯೂ, ಮನೋಹರಗಳಾಗಿಯೂ, ಇರುವ ಅನ್ನಗಳನ್ನು ಭೋಜನಮಾಡಬೇಕು ; ಅರೋಚಕವು, ಕಫಸ್ಥಾನ ದುಷ್ಟಿಯಿಂದುಂಟಾಗುತ್ತದೆ ; ಲಘುರೂಕ್ಷ ಭೋಜನವು ಕಫಹರವಾದ ಕಾರಣ ಅರೋಚಕಹರವು.

ಟಿಪ್ಪಣಿ :—ದಾಳಿಂಬೆರಸ ಮೊದಲಾದ ಹುಳಿರಸಕ್ಕೆ ಸಕ್ಕರೆ, ಪಚ್ಚಕರ್ಪೂರ, ದಾಲ್ಚಿನ್ನಿ, ಏಲಕ್ಕಿ, ಲವಂಗಪತ್ರೆ, ನಾಗಕೇಸರಗಳ ಚೂರ್ಣವನ್ನು ಮಿಶ್ರಮಾಡಿ ಕುಡಿದರೆ ಹಿತವಾಗುತ್ತದೆ ; ಸಕ್ಕರೆ, ಕೃಷ್ಣಲವಣ, ಸೈಂಧವ, ಮುರ್ಗಿನಹುಳಿ, ಬೆಟ್ಟದ ಈಚಲು (ಕಾಡುಖರ್ಜೂರ) ನೇರಳೆಹಣ್ಣಿನರಸ, ಸಾಸಿವೆಪುಡಿ ಇವುಗಳನ್ನು ಮಿಶ್ರಮಾಡಿ ತಯಾರಿಸಿದ (ಸಿಹಿ, ಹುಳಿ, ಖಾರಮಿಶ್ರವಾದರಸಗಳಿಂದ) ಪಾನಕವಿಶೇಷಕ್ಕೆ ಷಾಡವನೆನ್ನುತ್ತಾರೆ ; ಮತ್ತೆ ಕೆಲವರು ರಾಗವೆಂದರೆ ದ್ರಾಕ್ಷಿ, ದಾಡಿಮುಗಳನ್ನು ಮಿಶ್ರಮಾಡಿದ ಹೆಸರುಕಟ್ಟೆಂದು ಹೇಳುತ್ತಾರೆ.

ಆಸ್ಥಾಪನಂ ವಿಧಿವದತ್ರ ವಿರೇಚನಂ ಚ ಕುರ್ಯಾನ್ಮೃದೂನಿ ಶಿರಸಶ್ಚ ವಿರೇಚನಾನಿ ।
ತ್ರೀಣ್ಯೂಷಣಾನಿ ರಜನೀತ್ರಿಫಲಾಯುತಾನಿ ಚೂರ್ಣೀಕೃತಾನಿ ಯವಶೂಕವಿಮಿಶ್ರಿತಾನಿ ॥೧೩॥

ಕ್ಷೌದ್ರಾಯುತಾನಿ ವಿತರೇನ್ಮುಖಧಾವನಾರ್ಥಮನ್ಯಾನಿ ತಿಕ್ತಕಟುಕಾನಿ ಚ ಭೇಷಜಾನಿ ।
ಮುಸ್ತಾದಿರಾಜತರುವರ್ಗದಶಾಙ್ಗಸಿದ್ಧೈಃ ಕ್ವಾಥೈರ್ಜಯೇನ್ಮಧುಯುತೈರ್ವಿವಿಧೈಶ್ಚ ಲೇಹ್ಯೈಃ ॥೧೪॥

ಮೂತ್ರಾಸವೈರ್ಗುಡಕೃತೈಶ್ಚ ತಥಾತ್ವರಿಷ್ಟೈಃ ಕ್ಷಾರಾಸವೈಶ್ಚ ಮಧು ಮಾಧವ ತುಲ್ಯಗನ್ಧೈಃ ।
ಸ್ಯಾದೇಷಏವ ಕಫವಾತಹತೇವಿಧಿಶ್ಚ ಶಾನ್ತಿಂ ಗತೇ ಹುತಭುಜಿ ಪ್ರಶಮಾಯ ತಸ್ಯ ॥೧೫॥

ಈ ಅರೋಚಕದಲ್ಲಿ ನಿರೂಹಬಸ್ತಿಯು ನಿಷೇಧವಾದರೂ ವಮನಾದಿಗಳಿಂದ ವಾತ ಪ್ರಕೋಪವಾದರೆ ಮಾತ್ರ ಪ್ರಯೋಗಿಸಬೇಕು. ವಮನಾದಿ ಪ್ರಯೋಗ ಮಾಡುವುದಕ್ಕೆ ಮುಂಚಿತವಾಗಿ ಕೊಡದು ; ಆದಕಾರಣ ಕ್ರಮಪ್ರಕಾರ ನಿರೂಹವನ್ನೂ ವಿರೇಚನವನ್ನೂ ಮೃದುದ್ರವ್ಯಗಳಿಂದ ಶಿರೋವಿರೇಚನವನ್ನೂ ಪ್ರಯೋಗಮಾಡಬೇಕು. ತ್ರಿಕಟು, ಅರಶಿನ, ತ್ರಿಫಲೆಗಳ ಚೂರ್ಣಕ್ಕೆ ಯವಕ್ಷಾರವನ್ನು ಮಿಶ್ರಮಾಡಿ ಜೇನುತುಪ್ಪದಿಂದ ರಂಗಳಿಸಿ

ನೆಕ್ಕಿಸಿದರೆ ಮುಖಧಾವನವಾಗಿ ಅರುಚಿ ನಿವಾರಣೆಯಾಗುತ್ತದೆ. ಇತರ ಕಹಿ, ಖಾರ ಪದಾರ್ಥಗಳನ್ನು ಪ್ರಯೋಗಿಸಬೇಕು. ಮುಸ್ತಾ, ಕುಷ್ಠ, ಹರಿದ್ರಾದಿ ದ್ರವ್ಯಗಳೂ, ಅರಗ್ವಧಾದಿ ಗಣದ್ರವ್ಯಗಳೂ, ದಶಮೂಲ ಇವುಗಳಿಂದ ತಯಾರಿಸಿದ ಕಷಾಯಗಳಿಗೆ ಜೇನುತುಪ್ಪ ಮಿಶ್ರಮಾಡಿಯೂ ಕುಡಿಸಬೇಕು. ವಿವಿಧ ಲೇಹಗಳಿಂದಲೂ, ಮೂತ್ರಾಸವ ಗಳಿಂದಲೂ ಬೆಲ್ಲ ಮಿಶ್ರಮಾಡಿ ತಯಾರಿಸಿದ ಆಸವ, ಅರಿಷ್ಟ, ಕ್ಷಾರಾಸವ ಮೊದಲಾದ ಜೇನುತುಪ್ಪದ ಮತ್ತು ಮಧ್ವಾಸವದ ವಾಸನೆಗೆ ಸಮನಾದ ಗಂಧವುಳ್ಳ ಅಸವಗಳಿಂದಲೂ ಅರೋಚಕವನ್ನು ನಿವಾರಣೆ ಮಾಡಬೇಕು. ಕಫವಾತಗಳಿಂದ ಜಾಠರಾಗ್ನಿಯು ಮಾಂದ್ಯ ವಾದರೆ ಈ ಮೇಲಿನ ವಿಧಾನಗಳೇ ಅರುಚಿ ಪರಿಹಾರಕಗಳಾಗುತ್ತವೆ.

ಟಿಪ್ಪಣಿ :—ಇಲ್ಲಿ ಕಫವಾತದಿಂದ ಅಗ್ನಿಮಾಂದ್ಯವಾಗುತ್ತದೆಂದೂ, ಪಿತ್ತವಾತ ದಿಂದಲ್ಲವೆಂದೂ ಸೂಚಿಸುವುದಕ್ಕಾಗಿ "ಕಫವಾತಹತೇ ಹುತಭುಜಿ ಏಷವಿಧಿಃ ತಸ್ಯ ಪ್ರಶಮಾಯಸ್ಯಾತ್" ಎಂದು ಹೇಳಿರುತ್ತಾರೆ. ಇಲ್ಲಿ ತಸ್ಯ ಎಂದರೆ ಆರೋಚಕದ ಎಂದು ಹೇಳಬೇಕು. ಅಗ್ನಿಮಾಂದ್ಯಕ್ಕೆಂದಲ್ಲ ಎಂಬುದು ಕಾರ್ತಿಕುಂಡನ ಮತವು. ಯಾರು ಅಗ್ನಿಮಾಂದ್ಯದಲ್ಲಿ ಈ ವಿಧಾನವನ್ನು ಅನುಸರಿಸಬೇಕೆನ್ನುತ್ತಾರೋ ಅವರ ಮತದಂತೆ ಈ ಅಧ್ಯಾಯದಲ್ಲಿ ಅವಿಪಾಕವನ್ನು ಹೇಳಬಾರದು.

ಇಷ್ಟಾಭಿಘಾತ ಭಯಶೋಕಹತೇಽನ್ತರಗ್ನೌ ಭಾರ್ವಾ ಭವಾಯ ವಿತರೇತ್ ಖಲ ಶರ್ಕರೂಪಾಂ ।
ಅರ್ಥೇಷು ಚಾಪ್ಯಪಚಿತೇಷು ಪುನರ್ಭವಾಯ ಪೌರಾಣಿಕೈಃ ಶ್ರುತಿ ಶತೈರನುಮಾನ ಯೇತ್ತಮ್ ॥೧೬॥
ದೈನ್ಯಂ ಗತೇ ಮನಸಿ ಬೋಧನಮತ್ರ ಶಸ್ತಂ ಯದ್ಯತ್ಪ್ರಿಯಂ ತದುಪಸೇವ್ಯಮ ರೋಚಕೇ ತಂ ॥೧೭॥

ಐದನೆಯದಾದ ಮನೋಭಿಘಾತದಿಂದುಂಟಾದ ಅರೋಚಕಕ್ಕೆ ಚಿಕಿತ್ಸೆಯನ್ನು ವಿವರಿಸುತ್ತಾರೆ :—ಮನಸ್ಸಿನಿಂದ ಅಪೇಕ್ಷಿಸಿದ ವಸ್ತುಗಳು ದೊರೆಯದಿದ್ದ ಕಾರಣದಿಂದಲೂ ಭಯದಿಂದಲೂ ವ್ಯಸನದಿಂದಲೂ ಜಾಠರಾಗ್ನಿಯು ಮಾಂದ್ಯವಾಗುವ ಕಾರಣ ಅರೋಚ ಕತೆಯುಂಟಾದರೆ ದೊರೆಯುವುವುಗಳನ್ನು ತಂದೊದಗಿಸಿ ಮನಸ್ಸಿಗೆ ಹರ್ಷವನ್ನುಂಟುಮಾಡ ಬೇಕು. ನಷ್ಟವಾದ ಪದಾರ್ಥಗಳಲ್ಲಿ (ಪತ್ನೀಪುತ್ರೇಷ್ಟ ಜನರ ಮೃತಿ ಚಿಂತೆಯಿಂದ) ಉಂಟಾದ ಅರೋಚಕದಲ್ಲಿ ಪೌರಾಣಿಕ ಶ್ರುತಿವಾಕ್ಯಗಳಿಂದ (ನಳ, ಶ್ರೀರಾಮ, ಹರಿಶ್ಚಂದ್ರ, ಧರ್ಮರಾಯ ಮೊದಲಾದವರ ಶ್ರೇಷ್ಠ ಆಚರಣೆಗಳನ್ನು ಉದಾಹರಿಸಿ ಸಮಾಧಾನ ಪಡಿಸುವುದರ ಮೂಲಕ) ವಿವೇಕವುಂಟಾಗುವಂತೆ ಪ್ರಯತ್ನಿಸಬೇಕು. ಮನಸ್ಸು ಪರಿತಾಪ ದಿಂದ ಕ್ಲೇಶ ಪಡುತ್ತಿದ್ದರೆ ಹಿತೋಪದೇಶಗಳಿಂದ ಸಮಾಧಾನಪಡಿಸಿ ಕ್ಲೇಶ ನಿವಾರಣೆ

ಯಾಗುವಂತೆ ಮಾಡಬೇಕು. ಯಾವ ಯಾವ ಉಪಚಾರಗಳೂ ಉಪಾಯಗಳೂ ಆವಶ್ಯಕವಾದುವೋ ಅವುಗಳನ್ನು ಅನುಷ್ಠಾನ ಮಾಡಬೇಕು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾ ಮರೋಚಕ ಪ್ರತಿಷೇಧನಾಮಕ ಸಪ್ತಪಞ್ಚಾಶತ್ತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಅಷ್ಟಪಞ್ಚಾಶತ್ತಮೋಽಧ್ಯಾಯಃ

ಅಥಾತೋ ಮೂತ್ರಾಘಾತಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯ ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಮೂತ್ರಾಘಾತಚಿಕಿತ್ಸೆಯನ್ನು ವಿವರಿಸುತ್ತೇವೆ. ಮೂತ್ರಾಘಾತವೆಂದರೆ ಮೂತ್ರದತಡೆ. ಕೆಲವರು ಮೂತ್ರದುಷ್ಟಿಯೆಂದೂ ಅವರೋಧವಲ್ಲವೆಂದೂ ಹೇಳುತ್ತಾರೆ ; ಮೂತ್ರಶುಕ್ರ ಮೂತ್ರಾಸಾಧಾನಗಳಲ್ಲಿ ಮೂತ್ರಾವರೋಧವುಂಟಾಗುವುದಿಲ್ಲ.

ವಾತಕುಣ್ಡಲಿಕಾಷ್ಠೀಲಾ ವಾತ ಬಸ್ತಿಸ್ತಥೈವ ಚ ।
ಮೂತ್ರಾತೀತಃ ಸಜಠರೋ ಮೂತ್ರೋತ್ಸಙ್ಗಃ ಕ್ಷಯಸ್ತಥಾ ||೩||
ಮೂತ್ರಗ್ರನ್ಥಿರ್ಮೂತ್ರ ಶುಕ್ರ ಮುಷ್ಣವಾತಸ್ತಥೈವ ಚ ।
ಮೂತ್ರೌಕಸಾದೌ ದ್ವೌ ಚಾಪಿ ರೋಗಾ ದ್ವಾದಶ ಕೀರ್ತಿತಾಃ ||೪||

ವಾತಕುಂಡಲಿಕಾ, ವಾತಷ್ಠೀಲಾ, ವಾತಬಸ್ತಿಃ, ಮೂತ್ರಾತೀತಃ, ಮೂತ್ರ ಜಠರಃ, ಮೂತ್ರೋತ್ಸಂಗಃ, ಮೂತ್ರಸಂಕ್ಷಯಃ, ಮೂತ್ರಗ್ರಂಥಿ, ಮೂತ್ರಶುಕ್ರಃ, ಉಷ್ಣ ವಾತಃ, ಮೂತ್ರೌಕಸಾದಃ (ಪಿತ್ತಜ, ಕಫಜಗಳೆಂದು ೨ ವಿಧ) ಈ ರೀತಿಯಾಗಿ ಮೂತ್ರಾ ಘಾತವು ೧೨ ಪ್ರಕಾರಗಳಾಗುತ್ತದೆ.

ರೌಕ್ಷ್ಯಾದ್ವೇಗವಿಘಾತಾದ್ವಾ ವಾಯುರನ್ತರಮಾಶ್ರಿತಃ ।
ಮೂತ್ರಂ ಚರತಿ ಸಂಗೃಹ್ಯ ವಿಗುಣಃ ಕುಣ್ಡಲೀಕೃತಃ ||೫||
ಸೃಜೇದಲ್ಪಾಲ್ಪಮಥವಾ ಸರುಜಸ್ಕಂ ಶನೈಃ ಶನೈಃ ।
ವಾತಕುಣ್ಡಲಿಕಾಂ ತಂ ತು ವ್ಯಾಧಿಂ ವಿದ್ಯಾತ್ ಸುದಾರುಣಮ್ ||೬||

ರೂಕ್ಷವಾದ ಆಹಾರವಿಹಾರಗಳನ್ನು ಸೇವಿಸುವುದರಿಂದಲೂ ವಾತಮೂತ್ರ ಪುರೀಷ ಗಳ ವೇಗಗಳನ್ನು ತಡೆಯುವುದರಿಂದಲೂ ಪ್ರಕುಪಿತವಾದ ಅಪಾನವಾತವು ಬಸ್ತ್ಯಾಶಯ ದೊಳಗೆ ಪ್ರವೇಶಿಸಿ ಮೂತ್ರವನ್ನು ಆವರಿಸಿ ಗುಂಡಾಗಿ ತಿರುಗಿಸುತ್ತಾ ಆಗಾಗ ನೋವಿ ನಿಂದಕೂಡಿ ಮೂತ್ರವನ್ನು ಸ್ವಲ್ಪಸ್ವಲ್ಪವಾಗಿ ವಿಸರ್ಜಿಸುವಂತೆ ಮಾಡುತ್ತದೆ ; ಅತಿ ಭಯಂಕರವಾದ ಈ ವ್ಯಾಧಿಗೆ ವಾತಕುಂಡಲಿಕಾ ಎಂದು ಹೆಸರು ; ಎಲ್ಲಾ ಮೂತ್ರಾ ಘಾತರೋಗಭೇದಗಳಲ್ಲೂ ವಾತವೇ ಪ್ರಧಾನವಾದುದೆಂದು ತಿಳಿಯಬೇಕು ; ಈ ರೀತಿ ಯಲ್ಲಿ ಹೇತು, ಸಂಪ್ರಾಪ್ತಿ, ಲಕ್ಷಣಗಳನ್ನು ಹೇಳಿರುತ್ತದೆ.

ಶಕೃನ್ಮಾರ್ಗಸ್ಯ ಬಸ್ತೇಶ್ಚ ವಾಯುರನ್ತರಮಾಶ್ರಿತಃ ।
ಅಷ್ಠೀಲಾವದ್ಘನಂ ಗ್ರಂಥಿಂ ಕರೋತ್ಯಚಲಮುನ್ನತಮ್ ||೭||

ವಿಣ್ಮೂತ್ರಾನಿಲಸಙ್ಗಶ್ಚ ತತ್ರಾಧ್ಮಾನಂ ಚ ಜಾಯತೇ ।
ವೇದನಾ ಚ ಪರಾ ಬಸ್ತೌ ವಾತಾಷ್ಠೀಲೇತಿ ತಾಂ ವಿದುಃ ॥೮॥

ಮಲಾಶಯದಿಂದ ಗುದದವರೆಗಿರುವ ಸ್ರೋತಸ್ಸಿಗೂ ಮೂತ್ರಾಶಯಕ್ಕೂ (ಬಸ್ತಿಗೂ) ಮಧ್ಯದಲ್ಲಿ ಪ್ರಕುಪಿತವಾದ ಅಪಾನವಾಯುವು ಉದ್ದವಾಗಿ ಗುಂಡಾದ (ಮೋಚಿಗಳು ತಮ್ಮ ಚೂರಿಯನ್ನು ಜ್ಞಲು ಉಪಯೋಗಿಸುವ ಕಲ್ಲಿಗೆ ಅಷ್ಠೀಲವೆನ್ನುತ್ತಾರೆ.) ಗ್ರಂಥಿಯನ್ನುಂಟುಮಾಡುತ್ತದೆ ; ಅದುಸ್ವಲ್ಪವೆ ಚಲಿಸುತ್ತದೆ, ಎತ್ತರವಾಗಿರುತ್ತದೆ ; ಈ ಗ್ರಂಥಿಯಿಂದ ಮಲ, ಮೂತ್ರ, ಅಪಾನವಾತಗಳ ಪ್ರವರ್ತನೆಗೆ ತಡೆಯುಂಟಾಗಿ ಹೊಟ್ಟೆ ಯುಬ್ಬರ ; ಬಸ್ತ್ಯಾಶಯದಲ್ಲಿ ಅತ್ಯಧಿಕವಾಗಿ ನೋವುಂಟಾಗುತ್ತದೆ ; ಈ ರೋಗವನ್ನು "ವಾತಷ್ಠೀಲ"ವೆಂದು ಕರೆಯುತ್ತಾರೆ.

ವೇಗಂ ವಿಧಾರಯೇದ್ಯಸ್ತು ಮೂತ್ರಸ್ಯಾಕುಶಲೋ ನರಃ ।
ನಿರುಣದ್ಧಿ ಮುಖಂ ತಸ್ಯ ಬಸ್ತೇರ್ಬಸ್ತಿಗತೋಽನಿಲಃ ॥೯॥
ಮೂತ್ರಸಙ್ಗೋ ಭವೇತ್ತೇನ ಬಸ್ತಿಕುಕ್ಷಿನಿಪೀಡಿತಃ ।
ವಾತಬಸ್ತಿಃ ಸವಿಜ್ಞೇಯೋ ವ್ಯಾಧಿಃ ಕೃಚ್ಛ್ರಪ್ರಸಾದನಃ ॥೧೦॥

ಮೂತ್ರವೇಗವನ್ನು ತಡೆದರೆ ಪ್ರಕುಪಿತವಾದ ವಾತವು ಬಸ್ತ್ಯಾಶಯದ ಮುಖವನ್ನು ತಡೆದು ಬಸ್ತಿಯ ಒಳಭಾಗವು ಹಿಂಡಿದಂತೆ ವೇದನೆಯನ್ನೂ ಮೂತ್ರವಿಸರ್ಜನೆಗೆ ತಡೆಯನ್ನೂ ಉಂಟುಮಾಡುತ್ತದೆ. ಈ ರೋಗಕ್ಕೆ ವಾತಬಸ್ತಿ ಎಂದು ಹೆಸರು. ಇದು ಕಷ್ಟಸಾಧ್ಯವಾದ ರೋಗವು. ಇದರಲ್ಲಿ ವೇಗವನ್ನು ತಡೆಯುವುದೇ ಹೇತುವು, ಬಸ್ತಿ ಮುಖವನ್ನು ತಡೆದು ಮೂತ್ರವಿಸರ್ಜನೆಗೆ ತಡೆಯುಂಟಾಗುವುದು ಸಂಪ್ರಾಪ್ತಿಯು, ಬಸ್ತಿಯೊಳಭಾಗವನ್ನು ಹಿಂಡಿದಂತೆ ವೇದನೆಯಾಗುವುದೇ ಲಕ್ಷಣವು.

ಸನ್ಧಾರ್ಯ ವೇಗಂ ಮೂತ್ರಸ್ಯ ಯೋ ಭೂಯಃ ಸ್ರಷ್ಟುಮಿಚ್ಛತಿ ।
ತಸ್ಯ ನಾಭ್ಯೇತಿ ಯದಿ ವಾ ಕಥಞ್ಚಿತ್ಸಂಪ್ರವರ್ತತೇ ॥೧೧॥
ಪ್ರವಾಹತೋ ಮನ್ದರುಜಮಲ್ಪಮಲ್ಪಂ ಪುನಃ ಪುನಃ ।
ಮೂತ್ರಾತೀತಂ ತು ತಂ ವಿದ್ಯಾನ್ಮೂತ್ರವೇಗವಿಘಾತಜಮ್ ॥೧೨॥

ಮೂತ್ರದ ವೇಗವನ್ನು ತಡೆದು ಪುನಃ ಮುಕ್ಕರಿಸಿ ವಿಸರ್ಜಿಸುವಾಗ ಮೂತ್ರವು ಬರದೆ ಅಥವಾ ನೋವಿನಿಂದ ಪದೇ ಪದೇ ಸ್ವಲ್ಪಸ್ವಲ್ಪವಾಗಿ ಸ್ರಾವವಾದರೆ "ಮೂತ್ರಾತೀತ"ವೆಂದು ಹೆಸರು.

ಮೂತ್ರಸ್ಯ ವಿಹತೇ ವೇಗೇ ತದುದಾವರ್ತಹೇತುನಾ ।
ಅಪಾನಃ ಕುಪಿತೋ ವಾಯುರುದರಂ ಪೂರಯೇದ್ಭೃಶಮ್ ॥೧೩॥
ನಾಭೇರಧಸ್ತಾದಾಧ್ಮಾನಂ ಜನಯೇತ್ತೀವ್ರವೇದನಮ್ ।
ತಂ ಮೂತ್ರಜಠರಂ ವಿದ್ಯಾದಧಃ ಸ್ರೋತೋನಿರೋಧನಮ್ ॥೧೪॥

ಮೂತ್ರದ ವೇಗವು ತಡೆಯಲ್ಪಟ್ಟರೆ ಮೂತ್ರವು ಹಿಂದಕ್ಕೆ ನುಗ್ಗುವುದು. ಅಪಾನ

ವಾತವು ಪ್ರಕೋಪಿಸಿ ಉದರಗುಹೆಯ ತುಂಬಾ ತುಂಬಿಕೊಂಡು ಹೊಕ್ಕಳಿನ ಕೆಳಭಾಗದಲ್ಲಿ ಅತ್ಯಂತ ನೋವಿನಿಂದ ಕೂಡಿದ ಹೊಟ್ಟೆಯುಬ್ಬರವನ್ನುಂಟುಮಾಡುತ್ತದೆ ; ಅಧೋಮಾರ್ಗದಸ್ರೋತಸ್ಸುಗಳಾದ ಮೂತ್ರಮಾರ್ಗ ಮಲಮಾರ್ಗಗಳನ್ನು ತಡೆಯುವ ಈ ವ್ಯಾಧಿಗೆ "ಮೂತ್ರ ಜಠರ"ವೆಂದು ಹೆಸರು ; ಇಲ್ಲಿ ಮೂತ್ರ ವೇಗವನ್ನು ತಡೆಯುವುದು ಹೇತುವು, ಅಪಾನವು ಉದರಗುಹೆಯನ್ನು ತುಂಬುವುದು, ಸಂಪ್ರಾಪ್ತಿಯು ಹೊಟ್ಟೆಯುಬ್ಬರ, ನೋವು ಇವು ಲಕ್ಷಣಗಳು.

ಬಸ್ತೌವಾಪ್ಯಥವಾ ನಾಳೇ ಮಣೌ ವಾ ಯಸ್ಯ ದೇಹಿನಃ ।
ಮೂತ್ರಂ ಪ್ರವೃತ್ತಂ ಸಜ್ಜೇತ ಸರಕ್ತಂ ವಾ ಪ್ರವಾಹತಃ ॥೧೫॥
ಸ್ರವೇಚ್ಛನೈರಲ್ಪಮಲ್ಪಂ ಸರುಜಂ ವಾಥ ನೀರುಜಮ್ ।
ವಿಗುಣಾನಿಲಜೋ ವ್ಯಾಧಿಃ ಸಮೂತ್ರೋತ್ಸಙ್ಗಸಂಜ್ಞಿತಃ ॥೧೬॥

ಬಸ್ತ್ಯಾಶಯದಲ್ಲಾಗಲೀ, ಮೂತ್ರಸ್ರೋತಸ್ಸಿನಲ್ಲಾಗಲೀ, ಶಿಶ್ನದಮುಂದಿರುವ ಮಣಿಯಲ್ಲಾಗಲೀ, ಮೂತ್ರವು ತಡೆಯಲ್ಪಟ್ಟರೆ ಅಥವಾ ಮುಲುಕುವಾಗ ಬೇಗಬೇಗನೆ ಸ್ವಲ್ಪಸ್ವಲ್ಪವಾಗಿಯಾಗಲೀ, ರಕ್ತಮಿಶ್ರವಾಗಿಯಾಗಲೀ, ನೋವಿನಿಂದ ಕೂಡಿಯಾಗಲೀ, ನೋವಿಲ್ಲದೆಯಾಗಲಿ, ಪ್ರವರ್ತಿಸಿದರೆ ವಿಗುಣಾಪಾನದಿಂದುಂಟಾದ ಈ ವ್ಯಾಧಿಗೆ ಮೂತ್ರೋತ್ಸಂಗವೆಂದು ಹೆಸರು.

ರೂಕ್ಷಸ್ಯ ಕ್ಲಾನ್ತದೇಹಸ್ಯ ಬಸ್ತಿಸ್ಥೌ ಪಿತ್ತಮಾರುತೌ ।
ಸದಾಹವೇದನಂ ಕೃಚ್ಛ್ರಂ ಕುರ್ಯಾತಾಂ ಮೂತ್ರ ಸಂಕ್ಷಯಮ್ ॥೧೭॥

ರೂಕ್ಷದೇಹವುಳ್ಳ ಬಳಲಿದ ಶರೀರವುಳ್ಳ, ಪುರುಷನ ಬಸ್ತ್ಯಾಶಯದಲ್ಲಿ ಪಿತ್ತವಾತಗಳು ಸೇರಿ ಉರಿಯನ್ನೂ ನೋವನ್ನೂ ಅತಿಕಷ್ಟದಿಂದ ಮೂತ್ರವಿಸರ್ಜನೆಯನ್ನೂ ಉಂಟುಮಾಡಿದರೆ ಈ ವ್ಯಾಧಿಗೆ "ಮೂತ್ರಕ್ಷಯ" ವೆಂದು ಹೆಸರು. ಮೂತ್ರವು ಶೋಷಣೆಯಾಗಿ ಮೂತ್ರಕ್ಷಯವುಂಟಾಗುತ್ತದೆ.

ಅಭ್ಯನ್ತರೇ ಬಸ್ತಿಮುಖೇ ವೃತ್ತೋಽಲ್ಪಃ ಸ್ಥಿರ ಏವ ಚ ।
ವೇದನಾವಾನತಿ ಸದಾ ಮೂತ್ರಮಾರ್ಗನಿರೋಧನಃ ॥೧೮॥
ಜಾಯತೇ ಸಹಸಾ ಯಸ್ಯ ಗ್ರನ್ಥಿರಶ್ಮರಿಲಕ್ಷಣಃ ।
ಸ ಮೂತ್ರಗ್ರನ್ಥಿರಿತ್ಯೇವಮುಚ್ಯತೇ ವೇದನಾದಿಭಿಃ ॥೧೯॥

ಬಸ್ತ್ಯಾಶಯದ ಒಳಗೆ ಅಂದರೆ ಮುಖದಲ್ಲಿ ಹಠಾತ್ತಾಗಿ ಗುಂಡಾಗಿ ಗಟ್ಟಿಯಾಗಿ ಚಲನವಾಗದೆ ನೋಯುತ್ತಿರುವ ಮಾಂಸಗ್ರಂಥಿಯುಂಟಾಗಿ ಸದಾಕಾಲದಲ್ಲೂ ಮೂತ್ರನಾಳವನ್ನು ಮುಚ್ಚುತ್ತಾ ಅಶ್ಮರಿಯಂತೆ ವೇದನೆಯನ್ನುಂಟುಮಾಡಿದರೆ ಮೂತ್ರಗ್ರಂಥಿಯೆಂದು ಹೇಳುತ್ತಾರೆ. ಅಶ್ಮರಿಗೆ ರಕ್ತದಸಂಬಂಧವೇ ಇರುವುದಿಲ್ಲ. ಮೂತ್ರಗ್ರಂಥಿಗೆ ರಕ್ತಸಂಬಂಧವುಂಟು. ಉಷ್ಣವಾತಕ್ಕೆ ಕಾರಣವಾದ ಪಿತ್ತವೇ ಇದಕ್ಕೂ ಕಾರಣವೆಂದು ತಿಳಿಯಬೇಕು.

ಪ್ರತ್ಯುಪಸ್ಥಿತಮೂತ್ರಸ್ತು ಮೈಥುನಂ ಯೋಽಭಿನನ್ದತಿ ।
ತಸ್ಯ ಮೂತ್ರಯುತಂ ರೇತಃ ಸಹಸಾ ಸಂಪ್ರವರ್ತತೇ ॥೨೦॥
ಪುರಸ್ತಾದ್ವಾಪಿ ಮೂತ್ರಸ್ಯ ಪಶ್ಚಾದ್ವಾಪಿ ಕದಾಚನ ।
ಭಸ್ಮೋದಕಪ್ರತೀಕಾಶಂ ಮೂತ್ರಶುಕ್ರಂ ತದುಚ್ಯತೇ ॥೨೧॥

ಮೂತ್ರವೇಗವುಂಟಾಗಿರುವಾಗ ಯಾವ ಪುರುಷನು ಸ್ತ್ರೀಯೊಡನೆ ಮೈಥುನ ಕರ್ಮವನ್ನು ನಡೆಸುತ್ತಾನೋ ಅವನಿಗೆ ಕೂಡಲೇ ಮೂತ್ರಮಿಶ್ರವಾದ ರೇತಸ್ಸು ಸ್ರಾವ ವಾಗುತ್ತದೆ. ಒಂದೊಂದುವೇಳೆ ಮೂತ್ರಪ್ರವರ್ತಿಯಾಗುವುದಕ್ಕೆ ಮೊದಲಾಗಲೀ ಒಂದೊಂದುವೇಳೆ ಮೂತ್ರವಿಸರ್ಜನೆಯಾದ ಮೇಲಾಗಲೀ ಬೂದಿಕದರಿದ ನೀರಿನಂತೆ ಶುಕ್ರಸ್ರಾವವಾಗುತ್ತದೆ. ಇದಕ್ಕೆ " ಮೂತ್ರಶುಕ್ರ"ವೆಂದು ಹೆಸರು.

ವ್ಯಾಯಾಮಾಧ್ವಾತಪೈಃ ಪಿತ್ತಂ ಬಸ್ತಿಂ ಪ್ರಾಪ್ಯಾನಿಲಾವೃತಮ್ ।
ಬಸ್ತಿಂ ಮೇಢ್ರಂ ಗುದಂ ಚೈವ ಪ್ರದಹನ್ ಸ್ರಾವಯೇದಧಃ ॥೨೨॥
ಮೂತ್ರಂ ಹಾರಿದ್ರಮಥವಾ ಸರಕ್ತಂ ರಕ್ತಮೇವವಾ ।
ಕೃಚ್ಛ್ರಾತ್ ಪ್ರವರ್ತತೇ ಜನ್ತೋರುಷ್ಣವಾತಂ ವದನ್ತಿತಮ್ ॥೨೩॥

ವ್ಯಾಯಾಮ, ದಾರಿನಡೆಯುವುದು, ಬಿಸಿಲನ್ನು ಕಾಯುವುದು, ಈ ಕಾರಣಗಳಿಂದ ಪ್ರಕುಪಿತವಾದ ವಾಯುವಿನಿಂದ ಆವರಿಸಲ್ಪಟ್ಟ ಪಿತ್ತವು ಬಸ್ತ್ಯಾಶಯವನ್ನು ಸೇರಿ ಬಸ್ತಿ, ಶಿಶ್ನ, ಗುದಗಳನ್ನು ಸುಡುವಂತೆಮಾಡಿ ಬಲುಕಷ್ಟದಿಂದ ಹಳದಿಬಣ್ಣದ ರಕ್ತಮಿಶ್ರವಾದ ಅಥವಾ ಕೇವಲ ರಕ್ತವನ್ನೇ ಸುರಿಸುತ್ತದೆ ; ಇದಕ್ಕೆ ಉಷ್ಣವಾತವೆನ್ನುತ್ತಾರೆ ; ಮೂತ್ರ ಕ್ಷಯಕ್ಕೆ ಕಾರಣಗಳಾದ ವಾತಪಿತ್ತಗಳೇ ಉಷ್ಣವಾತಕ್ಕೂ ಕಾರಣಗಳು ; ಮೂತ್ರ ಗ್ರಂಥಿಯಲ್ಲಿ ಕೇವಲಪಿತ್ತವೂ ಉಷ್ಣವಾತದಲ್ಲಿ ಮೂತ್ರಕ್ಷಯವೂ ಉಂಟಾಗುತ್ತದೆಂದು ತಿಳಿಯಬೇಕು.

ವಿಶದಂ ಪೀತಕಂ ಮೂತ್ರಂ ಸದಾಹಂ ಬಹುಳಂ ತಥಾ ।
ಶುಷ್ಕಂ ಭವತಿ ಯಚ್ಚಾಪಿ ರೋಚನಾಚೂರ್ಣಸನ್ನಿಭಮ್ ॥೨೪॥
ಮೂತ್ರೌಕಸಾದಂ ತಂ ವಿದ್ಯಾದ್ರೋಗಂ ಪಿತ್ತಕೃತಂ ಬುಧಃ ।
ಪಿಚ್ಛಿಲಂ ಸಂಹತಂ ಶ್ವೇತಂ ತಥಾ ಕೃಚ್ಛ್ರಪ್ರವರ್ತನಮ್ ॥೨೫॥
ಶುಷ್ಕಂ ಭವತಿ ಯಚ್ಚಾಪಿ ಶಙ್ಖಚೂರ್ಣಪ್ರಪಾಂಡುರಮ್ ।
ಮೂತ್ರೌಕಸಾದಂ ತಂ ವಿದ್ಯಾದಾಮಯಂ ದ್ವಾದಶಂ ಕಫಾತ್ ॥೨೬॥

ಅತಿದ್ರವವಾಗಿ, ಹಳದಿಬಣ್ಣದ ಮೂತ್ರವು ಉರಿಯುಳ್ಳದಾಗಿ ಮಂದವಾಗಿ (ಘನ ವಾಗಿ) ಯೂ, ಬಿಸಿಲುಕಾದು ಒಣಗಿ ಗೋರೋಚನಚೂರ್ಣದಂತೆಯೂ ಆದರೆ ಈ ರೋಗಕ್ಕೆ ಪಿತ್ತದೋಷದಿಂದುಂಟಾದ ಮೂತ್ರೌಕಸಾದವೆಂದೂ, ಗರಣೆ ಗರಣೆಯಾಗಿ, ಗಟ್ಟಿಯಾಗಿ, ಬಲುಕಷ್ಟದಿಂದ ಬಿಸಿಲಿನಿಂದ ಒಣಗಿ ಶಂಖ ಚೂರ್ಣದಂತೆ ಬೆಳ್ಳಗೆ ಸ್ರಾವ ವಾದರೆ ಈ ೧೨ ನೆಯ ವಿಧದ ರೋಗವನ್ನು ಕಫದೋಷದಿಂದುಂಟಾದ ಮೂತ್ರೌಕಸಾದ

ವೆಂದೂ ತಿಳಿಯಬೇಕು ; ಅಜ್ಞರಿಗೆ ಸುಲಭವಾಗಿ ತಿಳಿಯಪಡಿಸುವುದಕ್ಕಾಗಿ ಈ ಎರಡು ವಿಧದ ಮೂತ್ರೌಕಸಾದವನ್ನೂ ವಿವರಿಸಲಾಗಿದೆ.

ಕಷಾಯಕಲ್ಕಸರ್ಪೀಂಷಿಭಕ್ಷ್ಯಲೇಹ್ಯಪಯಾಂಸಿ ಚ |
ಕ್ಷಾರಮದ್ಯಾಸವಸ್ವೇದಾನ್ ಬಸ್ತೀಂಶ್ಚೋತ್ತರ ಸಂಜ್ಞಿತಾನ್ ||೨೭||
ವಿದಧ್ಯಾನ್ಮತಿಮಾಂಸ್ತತ್ರ ವಿಧಿಂ ಚಾಶ್ಮರಿನಾಶನಮ್ |
ಮೂತ್ರೋದಾವರ್ತಯೋಗಾಂಶ್ಚ ಕಾರ್ತ್ಸ್ನ್ಯೇನಾತ್ರ ಪ್ರಯೋಜಯೇತ್ ||೨೮||

ಊಹಾಪೋಹ ಜ್ಞಾನವುಳ್ಳ ವೈದ್ಯನು ಮೂತ್ರಾಘಾತರೋಗದಲ್ಲಿ ಕ್ರಮವರಿತು ಯೋಗ್ಯಗಳಾದ ಕಷಾಯ, ಕಲ್ಕ, ಘೃತ, ವಿವಿಧೌಷದಗಳಿಂದ ತಯಾರಿಸಿದ ಭಕ್ಷ್ಯಗಳನ್ನೂ, ಲೇಹ್ಯಗಳನ್ನೂ ಹಾಲನ್ನು, ಕ್ಷಾರಗಳನ್ನೂ, ಮದ್ಯಗಳನ್ನೂ, ಆಸವಗಳನ್ನೂ ಉಪನಾಹಾದಿಸ್ವೇದಗಳನ್ನೂ, ಉತ್ತರಬಸ್ತಿಯನ್ನೂ, ಸ್ನೇಹವಿರೇಚನಗಳನ್ನೂ, ಮತ್ತು ಅಶ್ಮರಿಚಿಕಿತ್ಸೆಯಲ್ಲಿ ಹೇಳಿದ ವಿಧಾನಗಳನ್ನು ಆಚರಿಸಬೇಕು ; ಇವುಗಳಲ್ಲದೆ ರೋಗದ ಅವಸ್ಥೆಗಳಿಗೆ ಅನುಸಾರವಾಗಿ ಸೌವರ್ಚಲವಣವನ್ನು ಹೆಚ್ಚುಪ್ರಮಾಣದಿಂದ ಸೇರಿಸಿದ ಮದ್ಯವನ್ನು ಕುಡಿಸಬೇಕು ಎಂಬಿವೇಮೊದಲಾದ ಮೂತ್ರೋದಾವರ್ತರೋಗಕ್ಕೆ ಪ್ರತಿಷೇಧಗಳಾದ ಚಿಕಿತ್ಸೆಗಳನ್ನೂ ಮಾಡಬೇಕು.

ಟಿಪ್ಪಣಿ :—ಮೂತ್ರಾಘಾತದಲ್ಲಿ ವಾತಾದಿ ಭೇದಗಳಿರುತ್ತವೆಯೆಂದು ಹೇಳಿರುತ್ತದಷ್ಟೆ, ಅದರಂತೆ ಚಿಕಿತ್ಸೆಯನ್ನೂ ವಾತಾದಿ ಭೇದಗಳಿಗೆ ತಕ್ಕಂತೆಯೇ ಹೇಳುವುದು ನ್ಯಾಯ ; ಆದರೆ ಸಾಮಾನ್ಯ ಚಿಕಿತ್ಸೆಯನ್ನೇ ಹೇಳಿರುವುದೇಕೆ ? ಎಂದರೆ ಎಲ್ಲಾ ವಿಧಗಳಾದ ಮೂತ್ರಾಘಾತಗಳಲ್ಲೂ ವಾತವೇ ಪ್ರಧಾನವು. ಪಿತ್ತಕಫಗಳು ಆರಂಭಕಗಳೆಂದು ನಿರ್ದೇಶಿಸಲ್ಪಟ್ಟಿವೆ ; ಬುದ್ಧಿವಂತನಾದ ವೈದ್ಯನು ದೋಷಕಾಲಾದಿಗಳ ಬಲಾಬಲಗಳಿಗೆ ಅನುಸಾರವಾಗಿ ದ್ರವ್ಯತತ್ವಗಳನ್ನು ಊಹಾಪೋಹಗಳಿಂದ ವಿಭಾಗಮಾಡಿ ಪ್ರಯೋಗ ಮಾಡಬೇಕು.

ಕಲ್ಕಮೇರ್ವಾರುಬೀಜಾನಾಮಕ್ಷಮಾತ್ರಂ ಸ ಸೈನ್ಧವಮ್ |
ಧಾನ್ಯಾಮ್ಲಯುಕ್ತಂ ಪೀತ್ವೈವ ಮೂತ್ರಕೃಚ್ಛ್ರಾತ್ ಪ್ರಮುಚ್ಯತೇ ||೨೯||
ಸುರಾಂ ಸೌವರ್ಚಲವತೀಂ ಮೂತ್ರಕೃಚ್ಛ್ರೀ ಪಿಬೇನ್ನರಃ |
ಮಧುಮಾಂಸೋಪದಂಶಂ ವಾ ಪಿಬೇದ್ವಾಪ್ಯಥ ಗೌಡಿಕಾಮ್ ||೩೦||
ಪಿಬೇತ್ ಕುಂಕುಮಕರ್ಷಂ ವಾ ಮಧೂದಕಸಮಾಯುತಮ್ |
ರಾತ್ರಿ ಪರ್ಯುಷಿತಂ ಪ್ರಾತಸ್ತಥಾ ಸುಖಮವಾಪ್ನುಯಾತ್ ||೩೧||
ದಾಡಿಮಾಮ್ಲಾಂ ಯುತಾಂ ಮುಖ್ಯಾಮೇಲಾಜೀರಕನಾಗರೈಃ |
ಪೀತ್ವಾ ಸುರಾಂ ಸಲವಣಾಂ ಮೂತ್ರಕೃಚ್ಛ್ರಾತ್ ಪ್ರಮುಚ್ಯತೇ ||೩೨||

ಸೌತೆಬೀಜದಕಲ್ಕ (ಗ್ರೀಷ್ಮಕರ್ಕಟಿ) ೧ ಅಕ್ಷಪ್ರಮಾಣದಷ್ಟನ್ನು ಸ್ವಲ್ಪ ಸೈಂಧವ ಮಿಶ್ರಮಾಡಿ ಕಲಗಚ್ಚಿನಲ್ಲಿ ಕದರಿ ಕುಡಿಸಿದರೆ ಮೂತ್ರಕೃಚ್ಛ್ರಹರವಾಗುತ್ತದೆ ; ಮದ್ಯಕ್ಕೆ

ಸೌವರ್ಚಲವಣವನ್ನು ಮಿಶ್ರಮಾಡಿ ಮೂತ್ರಕೃಚ್ಛ್ರರೋಗಿಗೆ ಕುಡಿಸಬೇಕು ; ಮಾಂಸವನ್ನು ತಿನ್ನಿಸಿ ಜೇನುತುಪ್ಪವನ್ನಾಗಲೀ, ಮಧ್ವಾಸವವನ್ನಾಗಲೀ, ಗುಡಕೃತಮದ್ಯವನ್ನಾಗಲೀ, ಕುಡಿಸಬೇಕು ; ತಣ್ಣೀರಿಗೆ ೧ ಕರ್ಷ ಕುಂಕುಮಕೇಸರವನ್ನು ಕದರಿ ಜೇನುತುಪ್ಪಮಿಶ್ರಮಾಡಿ ರಾತ್ರಿಯೆಲ್ಲಾ ಇಟ್ಟಿದ್ದು ಬೆಳಗಾದಮೇಲೆ ಕುಡಿಸಿದರೆ ಸುಖವಾಗುತ್ತದೆ. ಅಕ್ಕಿಹಿಟ್ಟಿನಮದ್ಯಕ್ಕೆ ದಾಳಿಂಬೆಹಣ್ಣಿನ ರಸವನ್ನೂ, ಏಲಕ್ಕಿ, ಜೀರಿಗೆ, ಶುಂಠಿಗಳಚೂರ್ಣವನ್ನೂ ಸ್ವಲ್ಪಸೈಂಧವವನ್ನೂ ಮಿಶ್ರಮಾಡಿ ಕುಡಿಸಿದರೆ ಮೂತ್ರಕೃಚ್ಛ್ರಹರವು.

ಪೃಥಕ್ಪರ್ಣ್ಯಾದಿವರ್ಗಸ್ಯ ಮೂಲಂ ಗೋಕ್ಷುರಕಸ್ಯ ಚ ।
ಅರ್ಧಪ್ರಸ್ಥೇನ ತೋಯಸ್ಯ ಪಚೇತ್ ಕ್ಷೀರಂ ಚತುರ್ಗುಣಮ್ ॥೩೩॥
ಕ್ಷೀರಾವಶಿಷ್ಟಂ ತಚ್ಛೀತಂ ಸಿತಾಕ್ಷೌದ್ರಯುತಂ ಪಿಬೇತ್ ।
ನರೋ ಮಾರುತಪಿತ್ತೋತ್ಥಮೂತ್ರಾಘಾತನಿವಾರಣಮ್ ॥೩೪॥

೧೧ ಫಲ ಲಘುಪಂಚಮೂಲ ಮತ್ತು ನೆಗ್ಗಿಲುಗಳೊಡನೆ $\frac{1}{3}$ ಪ್ರಸ್ಥನೀರನ್ನೂ ೪ರಷ್ಟು ಹಾಲನ್ನೂ ಸೇರಿಸಿ ಹಾಲುನಿಲ್ಲುವಂತೆ ಕುದಿಸಿ ಶೋಧಿಸಿಕೊಂಡು ಆರಿದ ಮೇಲೆ ಸಕ್ಕರೆ ಜೇನುತುಪ್ಪಗಳನ್ನು ಮಿಶ್ರಮಾಡಿ ವಾತಪಿತ್ತದಿಂದುಂಟಾದ ಮೂತ್ರಾಘಾತರೋಗಿಗೆ ಕುಡಿಸಿದರೆ ರೋಗನಿವಾರಣೆಯಾಗುತ್ತದೆ.

ನಿಷ್ಪೀಡ್ಯ ವಾಸಸಾ ಸಮ್ಯಗ್ಗರ್ದಭೀರಾಸಭವಾಜಿನೋ ।
ರಸಸ್ಯ ಕುಡವಂ ತಸ್ಯ ಪಿಬೇನ್ಮೂತ್ರರುಜಾಪಹಮ್ ॥೩೫॥
ಮುಸ್ತಾಭಯಾದೇವದಾರು ಮೂರ್ವಾಣಾಂ ಮಧುಕಸ್ಯ ಚ ।
ಪಿಬೇದಕ್ಷಸಮಂ ಕಲ್ಕಂ ಮೂತ್ರದೋಷನಿವಾರಣಮ್ ॥೩೬॥

ಕತ್ತೆ ಮತ್ತು ಕುದುರೆಗಳ ಲದ್ದಿಯನ್ನು ಬಟ್ಟೆಯಲ್ಲಿಟ್ಟು ಹಿಂಡಿಬಂದರಸ ೧ ಕುಡವದಷ್ಟನ್ನು ಕುಡಿಸಿದರೆ ಮೂತ್ರಕೃಚ್ಛ್ರರೋಗವು ನಿವಾರಣೆಯಾಗುತ್ತದೆ; ಕೊನ್ನಾರಿಗೆಡ್ಡೆ, ಅಣಿಲೆಕಾಯಿ, ದೇವದಾರು, ಕೊರಟಿಗೆ, ಅತಿಮಧುರ, ಇವುಗಳ ಕಲ್ಕ ೧ ಕರ್ಷಪ್ರಮಾಣದಷ್ಟನ್ನು ನೀರಿನಲ್ಲಿ ಕದರಿ ಕುಡಿಸಿದರೆ ಮೂತ್ರದೋಷವು ನಿವಾರಣೆಯಾಗುತ್ತದೆ.

ಅಭಯಾಮಲಕಾಕ್ಷಾಣಾಂ ಕಲ್ಕಂ ಬದರಸಮ್ಮಿತಮ್ ।
ಅಮ್ಬುಸಾ ಲವಣೋಪೇತಂ ಪಿಬೇನ್ಮೂತ್ರರುಜಾಪಹಮ್ ॥೩೭॥
ಉದುಮ್ಬರಸಮಂ ಕಲ್ಕಂ ದ್ರಾಕ್ಷಾಯಾಜಲಸಂಯುತಮ್ ।
ಪಿಬೇತ್ ಪರ್ಯುಷಿತಂ ವಾರಿಶೀತಂ ಮೂತ್ರರುಜಾಪಹಮ್ ॥೩೮॥
ನಿದಿಗ್ಧಿಕಾಯಾಃ ಸ್ವರಸಂ ಪಿಬೇತ್ ಕುಡವ ಸಂಮಿತಮ್ ।
ಮೂತ್ರದೋಷಹರಂ ಕಲ್ಕಮಥವಾ ಕ್ಷೌದ್ರಸಂಯುತಮ್ ॥೩೯॥
ಪ್ರಪೀಡ್ಯಾಮಲಕಾನಾಂ ತು ರಸಂ ಕುಡವಸಮ್ಮಿತಮ್ ।
ಪೀತ್ವಾಗದೀ ಭವೇಜ್ಜನ್ತುಮೂತ್ರದೋಷರುಜಾತುರಃ ॥೪೦॥

ಎಲಚಿಯಹಣ್ಣಿನಷ್ಟು ಗಾತ್ರ ತ್ರಿಫಲೆಯ ಕಲ್ಕವನ್ನು ನೀರಿನಲ್ಲಿ ಕದರಿ ಸೈಂಧವವನ್ನು ಸೇರಿಸಿ ಕುಡಿಸಿದರೆ ಮೂತ್ರರೋಗವು ನಿವಾರಣೆಯಾಗುತ್ತದೆ. ರಾತ್ರಿಯಲ್ಲಿ ೧ ಪಲದಷ್ಟು ದ್ರಾಕ್ಷಿಯ ಕಲ್ಕವನ್ನು ನೀರಿನಲ್ಲಿ ಕದರಿ ಬೆಳಗಾದಮೇಲೆ ತಣ್ಣಗಿರುವ ಅದನ್ನು ಕುಡಿಸಿದರೆ ಮೂತ್ರರೋಗಹರವು. ೧ ಕುಡುವದಷ್ಟು ನೆಲಗುಳ್ಳದ ಸ್ವರಸವನ್ನು ರಾತ್ರಿಯಲ್ಲಿ ನೀರಿನೊಡನೆ ಕದರಿಟ್ಟು ಬೆಳಗಾದಮೇಲೆ ಜೇನುತುಪ್ಪ ಮಿಶ್ರಮಾಡಿ ಕುಡಿದರೆ ಮೂತ್ರರೋಗಹರವು. ನೆಲ್ಲಿಕಾಯಿಗಳನ್ನು ಜಜ್ಜಿ ಹಿಂಡಿದ ರಸ ೧ ಕುಡವದಷ್ಟನ್ನು ಕುಡಿದ ಮೂತ್ರರೋಗಿಯು ಆರೋಗ್ಯವಂತನಾಗುತ್ತಾನೆ.

ಧಾತ್ರೀಫಲರಸೇನೈವಂ ಸೂಕ್ಷ್ಮೈಲಾಂ ವಾ ಪಿಬೇನ್ನರಃ ।
ಪಿಪ್ಪಾಸ್ವಥವಾ ಸುಶೀತೇನ ಶಾಲಿತಣ್ಡುಲವಾರಿಣಾ ॥೪೧॥
ತಾಲಸ್ಯ ತರುಣಂ ಮೂಲಂ ತ್ರಪುಸಸ್ವರಸಂ ತಥಾ ।
ಶ್ವೇತಂ ಕರ್ಕಟಕಂ ಚೈವ ಪ್ರಾತಸ್ತು ಪಯಸಾ ಪಿಬೇತ್ ॥೪೨॥
ಶೃತಂ ವಾ ಮಧುರೈಃ ಕ್ಷೀರಂ ಸರ್ಪಿರ್ಮಿಶ್ರಂ ಪಿಬೇನ್ನರಃ ।
ಮೂತ್ರದೋಷವಿಶುದ್ಧ್ಯರ್ಥಂ ತಥೈವಾಶ್ಮರಿನಾಶನಮ್ ॥೪೩॥

ನೆಲ್ಲಿಕಾಯಿ ಸ್ವರಸವಿಧಾನದಂತೆಯೇ ಏಲಕ್ಕಿಯ ಕಲ್ಕವನ್ನೂ ತಾಳೇಗಿಡ, ಮಿಣಕೆ, ಸೌತೆ, ಬಿಳಿಯ ಸೌತೆ ಇವುಗಳ ಬೇರಿನ ಕಲ್ಕವನ್ನೂ ನೀರು, ಹಾಲುಗಳಲ್ಲಿ ಕದರಿ ಬೆಳಗಿನ ಹೊತ್ತು ಕುಡಿಸಿದರೆ ಮೂತ್ರಕೃಚ್ಛ್ರಹರವಾಗುತ್ತದೆ. ಕಾಕೋಳ್ಯಾದಿ ಮಧುರೌಷಧ ಗಣದ್ರವ್ಯಗಳೊಡನೆ ಪಾಕಮಾಡಿದ ಹಾಲಿಗೆ ತುಪ್ಪ ಮಿಶ್ರಮಾಡಿ ಕುಡಿಸಿದರೆ ಮೂತ್ರದೋಷವೂ ಮೂತ್ರಾಶ್ಮರಿಯೂ ನಿವಾರಣೆಯಾಗುತ್ತವೆ. ಈ ಯೋಗವು ಮೂತ್ರಶುಕ್ರ ರೋಗದಲ್ಲಿ ಬಹು ಪ್ರಯೋಜನಕಾರಿಯು.

ಬಲಾಶ್ವದಂಷ್ಟ್ರಾಕ್ರೌಞ್ಚಾಸ್ಥಿ ಕೋಕಿಲಾಕ್ಷಕತಣ್ಡುಲಾನ್ ।
ಶತಪರ್ವಕಮೂಲಂ ಚ ದೇವದಾರು ಸಚಿತ್ರಕಮ್ ॥೪೪॥
ಅಕ್ಷಬೀಜಂ ಚ ಸುರಯಾ ಕಲ್ಕೀಕೃತ್ಯ ಪಿಬೇನ್ನರಃ ।
ಮೂತ್ರದೋಷವಿಶುದ್ಧ್ಯರ್ಥಂ ತಥೈವಾಶ್ಮರಿಶೋಧನಮ್ ॥೪೫॥

ಕಳ್ಳಂಗಡಲೆಬೇರು, ಕ್ರೌಂಚಪಕ್ಷಿಯ ಮೂಳೆ, ಕೊಳವಳಿಕೆಬೀಜ, ಅಕ್ಕಿ, ನೆಗ್ಗಿಲ ಬೇರು, ಕಬ್ಬಿನಬೇರು, ದೇವದಾರು, ಚಿತ್ರಮೂಲ, ತಾರೆಕಾಯಿನ ಬೀಜ ಇವೆಲ್ಲವುಗಳನ್ನೂ ಕಲ್ಕಮಾಡಿ ಸುರೆ ಎಂಬ ಮದ್ಯದಲ್ಲಿ ಕದರಿ ಕುಡಿಸಿದರೆ ಮೂತ್ರದೋಷವೂ ಮೂತ್ರಾಶ್ಮರಿಯೂ ನಿವಾರಣೆಯಾಗುತ್ತವೆ.

ಪಾಟಲಾಕ್ಷಾರಮಾಹೃತ್ಯ ಸಪ್ತಕೃತ್ವಃ ಪರಿಸ್ರುತಮ್ ।
ಪಿಬೇನ್ಮೂತ್ರವಿಕಾರಘ್ನಂ ಸಂಸೃಷ್ಟಂ ತೈಲಮಾತ್ರಯಾ ॥೪೬॥
ನಳಾಶ್ಮಭೇದದರ್ಭೇಕ್ಷುತ್ರಪುಸೈರ್ವಾರುಬೀಜಕಾನ್ ।
ಕ್ಷೀರೇ ಪರಿಶೃತಾನ್ ತತ್ರ ಪಿಬೇತ್ ಸರ್ಪಿಃ ಸಮಾಯುತಾನ್ ॥೪೭॥
ಪಾಟಲ್ಯಾ ಯಾವಶೂಕಾಚ್ಚ ಪಾರಿಭದ್ರಾತ್ ತಿಲಾದಪಿ ।

ಕ್ಷಾರೋದಕೇನ ಮತಿಮಾನ್ ತ್ವಗೇಲೋಕ್ಷಣಚೂರ್ಣಕಮ್ ||೪೮||
ಪಿಬೇದ್ಗುಡೇನ ಮಿಶ್ರಂ ವಾ ಲಿಹ್ಯಾಲ್ಲೇಹಾನ್ ಪೃಥಕ್ ಪೃಥಕ್ ।

ಪಾದರಿಗಿಡದ ಕ್ಷಾರವನ್ನು ೭ ಸಾರಿ ನೀರಿನಲ್ಲಿ ಕದರಿ ಶೋಧಿಸಿ ಸ್ವಲ್ಪ ತೈಲವನ್ನು ಮಿಶ್ರಮಾಡಿ ಕುಡಿಸಿದರೆ ಮೂತ್ರದೋಷಹಗವಾಗುತ್ತದೆ. ದೇವನಾಳ, ಹಿಟ್ಟುಳಿಕ, ದರ್ಭೆ ಮತ್ತು ಕಬ್ಬಿನ ಬೇರುಗಳು, ವಿಣಿಕೆ, ಸೌತೆಬೀಜಗಳು ಇವೆಲ್ಲವನ್ನೂ ಹಾಲಿನಲ್ಲಿ ಪಾಕ ಮಾಡಿ ತುಪ್ಪ ಮಿಶ್ರಮಾಡಿ ಕುಡಿಸಬೇಕು. ಪಾದರಿತೊಗಟೆ, ಯವಕ್ಷಾರ, ಬೆಟ್ಟಬೇವು (ಕೆಲವರು ಕೆಂಪುಹಾಲಿವಾಣವೆನ್ನುತ್ತಾರೆ), ಎಳ್ಳುಕಡ್ಡಿ ಇವುಗಳನ್ನು ಸುಟ್ಟು ಬಂದ ಬೂದಿಯನ್ನು ನೀರಿನಲ್ಲಿ ಕದರಿ ಶೋಧಿಸಿದ ನೀರಿಗೆ ದಾಲ್ಚಿನ್ನಿ, ಏಲಕ್ಕಿ, ಹಿಪ್ಪಲಿಗಳ ಚೂರ್ಣವನ್ನು ಮಿಶ್ರಮಾಡಿ ಕುಡಿಸಬೇಕು ಅಥವಾ ಬೆಲ್ಲ ಮಿಶ್ರಮಾಡಿದ ಅವಲೇಹವನ್ನು ಬೇರೆ ಬೇರೆ ತಯಾರಿಸಿ ನೆಕ್ಕಿಸಬೇಕು.

ಅತಊರ್ಧ್ವಂ ಪ್ರವಕ್ಷ್ಯಾಮಿ ಮೂತ್ರದೋಷೇ ಕ್ರಮಂ ಹಿತಮ್ ||೪೯||
ಸ್ನೇಹಸ್ವೇದೋಪಪನ್ನಾನಾಂ ಹಿತಂ ತೇಷು ವಿರೇಚನಮ್ ।
ತತಃ ಸಂಶುದ್ಧದೇಹಾನಾಂ ಹಿತಃಶ್ಚೋತ್ತರಬಸ್ತಯಃ ||೫೦||

ಇನ್ನುಮುಂದೆ ಮೂತ್ರದೋಷದಲ್ಲಿ ಹಿತವಾದ ಚಿಕಿತ್ಸಾಕ್ರಮವನ್ನು ಹೇಳುತ್ತೇವೆ. ಮೂತ್ರದೋಷವಿರುವವರಿಗೆ ಸ್ನೇಹಸ್ವೇದಗಳನ್ನು ಮಾಡಿಸಿ ವಿರೇಚನೌಷಧವನ್ನು ಪ್ರಯೋಗಿಸಿ ದೇಹಶುದ್ಧಿಯಾದ ನಂತರ ಉತ್ತರಬಸ್ತಿಯನ್ನು ಪ್ರಯೋಗಿಸಿದರೆ ಹಿತವಾಗುತ್ತದೆ.

ಸ್ತ್ರೀಣಾಮತಿಪ್ರಸಂಗೇನ ಶೋಣಿತಂ ಯಸ್ಯ ದೃಶ್ಯತೇ ।
ಮೈಥುನೋಪರಮಸ್ತಸ್ಯ ಬೃಂಹಣಶ್ಚ ವಿಧಿಃ ಸ್ಮೃತಃ ||೫೧||
ತಾಮ್ರಚೂಡವಸಾ ತೈಲಂ ಹತಂ ಚೋತ್ತರಬಸ್ತಿಷು ।
ವಿಧಾನಂ ತಸ್ಯ ಪೂರ್ವಂ ಹಿ ವ್ಯಾಸತಃ ಪರಿಕೀರ್ತಿತಮ್ ||೫೨||

ಅತಿಯಾಗಿ ಸ್ತ್ರೀರತಿ ಮಾಡಿದ್ದರಿಂದ ಮೂತ್ರಮಾರ್ಗದಿಂದ ರಕ್ತವು ಸ್ರಾವವಾದರೆ ಸ್ತ್ರೀಸಂಗವನ್ನು ತ್ಯಜಿಸಿ ಬೃಂಹಣ ಚಿಕಿತ್ಸೆಯನ್ನು ಮಾಡಿಸಬೇಕು. ಕೋಳಿಯವಸೆಯೂ, ತೈಲವೂ ಮಿಶ್ರವಾಗಿರುವ ಉತ್ತರ ಬಸ್ತಿಯನ್ನು ಪ್ರಯೋಗಿಸಬೇಕು. ಉತ್ತರಬಸ್ತಿಯನ್ನು ಪ್ರಯೋಗ ಮಾಡುವ ವಿಧಾನವು ಆ ಚಿಕಿತ್ಸೆಯಲ್ಲಿಯೇ ವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತದೆ.

ಕ್ಷಾದ್ರಾರ್ಧಪಾತ್ರಂ ದತ್ವಾ ಚ ಪಾತ್ರಂ ತು ಕ್ಷೀರಸರ್ಪಿಷಃ ।
ಶರ್ಕರಾಯಾಶ್ಚ ಚೂರ್ಣಂ ಚ ದ್ರಾಕ್ಷಾಚೂರ್ಣಞ್ಚ ತತ್ಸಮಮ್ ।
ಸ್ವಯಂಗುಪ್ತಾಫಲಂ ಚೈವ ತಥೈವೇಕ್ಷುರಕಸ್ಯ ಚ ||೫೩||
ಪಿಪ್ಪಲೀಚೂರ್ಣಸಂಯುಕ್ತಮರ್ಧಭಾಗಂ ಪ್ರದಾಪಯೇತ್ ।
ತದೈಕಧ್ಯಂ ಸಮಾನೀಯ ಖಜೇನಾಭಿಪ್ರಮನ್ಥಯೇತ್ ||೫೪||

ತತಃ ಪಾಣಿತಲಂ ಚೂರ್ಣಂ ಲೀಢ್ವಾ ಕ್ಷೀರಂ ತತಃ ಪಿಬೇತ್ ।
ಏತತ್ಸರ್ಪಿಃ ಪ್ರಯುಞ್ಜಾನಃ ಶುದ್ಧದೇಹೋ ನರಃ ಸದಾ ॥೫೫॥
ಮೂತ್ರದೋಷಾನ್ ಜಯೇತ್ಸರ್ವಾನನ್ಯಯೋಗೈಃ ಸುದುರ್ಜಯಾನ್ ।
ಜಯೇಚ್ಛೋಣಿತದೋಷಾಂಶ್ಚ ವನ್ಧ್ಯಾ ಗರ್ಭಂ ಲಭೇತ ಚ ॥೫೬॥
ನಾರೀ ಚೈತತ್ಪ್ರಯುಞ್ಜಾನಾ ಯೋನಿದೋಷಾತ್ಪ್ರಮುಚ್ಯತೇ ।

ಜೇನುತುಪ್ಪ ಅರ್ಧಾಡಕ, ಹಾಲು, ತುಪ್ಪ ೧–೧ ಆಢಕದಷ್ಟು ಪ್ರಮಾಣ, ಸಕ್ಕರೆಪುಡಿ, ದ್ರಾಕ್ಷಿಯ ಚೂರ್ಣ ಸಮಭಾಗ ಸೇರಿಸಿ, ನಸುಗುನ್ನಿಯ ಬೀಜ, ಹಿಪ್ಪಲಿಯ ಚೂರ್ಣ ಇವೆಲ್ಲಾ ಅರ್ಧಭಾಗದಷ್ಟನ್ನು ದೊಡ್ಡಪಾತ್ರೆಯಲ್ಲಿ ತುಂಬಿ ಮಂದಾಗ್ನಿಯಿಂದ ಪಾಕ ಮಾಡಿ ಸೌಟಿನಿಂದ ತೊಳೆಸುತ್ತಾ ತಳ ಸೀದುಹೋಗದಂತೆ ಜಾಗರೂಕತೆಯಿಂದ ಪಾಕ ಮಾಡಿಟ್ಟುಕೊಳ್ಳಬೇಕು. ೧ ಕರ್ಷದಷ್ಟು ಈ ಲೇಹವನ್ನು ತಿನ್ನಿಸಿ ಬಿಸಿ ಹಾಲನ್ನು ಕುಡಿಸಬೇಕು. ಈ ಘೃತವನ್ನು ಪ್ರಯೋಗಿಸಿದ ಮನುಷ್ಯನು ಶುದ್ಧದೇಹವುಳ್ಳವನಾಗಿರುತ್ತಾನೆ. ಇತರ ಯೋಗಗಳಿಂದಲೂ ಶುದ್ಧಿಯಾಗದಿರುವ ಮೂತ್ರದೋಷಗಳನ್ನೆಲ್ಲಾ ಜಯಿಸಿಕೊಳ್ಳುತ್ತಾನೆ. ವಂಧ್ಯಾ ಸ್ತ್ರೀಯು ಇದನ್ನು ಸೇವಿಸಿದರೆ ಆರ್ತವ ರಕ್ತದೋಷಗಳೆಲ್ಲಾ ನಿವಾರಣೆಯಾಗಿ ಗರ್ಭಿಣಿಯಾಗುತ್ತಾಳೆ. ಹೆಂಗಸರು ಇದನ್ನು ಸೇವಿಸಿದರೆ ಯೋನಿದೋಷಗಳೆಲ್ಲಾ ನಾಶವಾಗುತ್ತವೆ.

ಬಲಾಕೋಲಾಸ್ಥಿಮಧುಕಂ ಶ್ವದಂಷ್ಟ್ರಾಥ ಶತಾವರೀ ॥೫೭॥
ಮೃಣಾಳಞ್ಚ ಕಸೇರುಶ್ಚ ಬೀಜಾನೀಕ್ಷುರಕಸ್ಯ ಚ ।
ಸಹಸ್ರವೀರ್ಯಾಂಶುಮತೀಪಯಸ್ಯಾಸಹ ಕಾಲಯಾ ॥೫೮॥
ಶೃಗಾಲವಿನ್ನಾತಿಬಲಾ ಬೃಂಹಣೀಯೋಗಣಸ್ತಥಾ ।
ಏತಾನಿ ಸಮಭಾಗಾನಿ ಮತಿಮಾನ್ ಸಹ ಸಾಧಯೇತ್ ॥೫೯॥
ಚತುರ್ಗುಣೇನ ಪಯಸಾ ಗುಡಸ್ಯ ತುಲಯಾ ಸಹ ।
ದ್ರೋಣಾವಶಿಷ್ಟಂ ತತ್ ಪೂತಂ ಪಚೇತ್ತೇನ ಘೃತಾಢಕಮ್ ॥೬೦॥
ತತ್ಸಿದ್ಧಂ ಕಲಶೇ ಸ್ಥಾಪ್ಯಂ ಕ್ಷೌದ್ರಪ್ರಸ್ಥೇನ ಸಂಯುತಮ್ ।
ಸರ್ಪಿರೇತತ್ ಪ್ರಯುಞ್ಜಾನೋಮೂತ್ರದೋಷಾತ್ ಪ್ರಮುಚ್ಯತೇ ॥೬೧॥

ಕಳ್ಳಂಗಡಲೆ, ಎಲಚಿತಿರುಳು, ಅತಿಮಧುರ, ನೆಗ್ಗಿಲು, ಆಷಾಢಿಬೇರು, ತಾವರೆದಂಟು, ಕೊತ್ತಿಗೆಡ್ಡೆ, ಕೊಳವಳಿಕೆಬೀಜ, ಗರಿಕೆ, ಮೂರೆಲೆಹೊನ್ನೆ, .ಕಾಕೋಳಿ ಕರಿಅಗಿಲು, ಒಂದೆಲೆಹೊನ್ನೆ, ಬೋಳಂಗಡಲೆ, ಮಧುರವರ್ಗ, (ಕಾಕೋಳ್ಯಾದಿಗಣ) ಎಲ್ಲವನ್ನೂ ಸಮಭಾಗದಿಂದಲೂ ಇವುಗಳ ೪ ರಷ್ಟು ಹಾಲನ್ನೂ ಹಾಲಿನ ೪ ರಷ್ಟು ನೀರನ್ನೂ ೧೦೦ ಪಲ ಬೆಲ್ಲವನ್ನೂ ಸೇರಿಸಿ ೧ ದ್ರೋಣ ನೀರು ನಿಲ್ಲುವಂತೆ ಕಷಾಯಮಾಡಿ ಶೋಧಿಸಿದ ಕಷಾಯಕ್ಕೆ ೧ ಆಢಕತುಪ್ಪವನ್ನು ಸೇರಿಸಿ ಪಾಕಮಾಡಿ ತಣ್ಣಗಾದ ಮೇಲೆ ೧ ಪ್ರಸ್ಥ ಜೇನುತುಪ್ಪವನ್ನು ಮಿಶ್ರಮಾಡಿ ಒಂದು ದೊಡ್ಡ ಗುಡಾಣ (ಪಳಗಿದ ಮಡಕೆ)

ದಲ್ಲಿ ತುಂಬಿಟ್ಟು ಪ್ರಯೋಗಿಸಿದರೆ ಸಕಲವಿಧಗಳಾದ ಮೂತ್ರದೋಷಗಳೂ ನಿವಾರಣೆ ಯಾಗುತ್ತವೆ.

(ತುಗಾಕ್ಷೀರ್ಯಾಶ್ಚ ಚೂರ್ಣಾನಿ ಶರ್ಕರಾಯಾಸ್ತಥೈವ ಚ ।
ಕ್ಷೌದ್ರೇಣ ತುಲ್ಯಾನಾಲೋಡ್ಯಪ್ರಶಸ್ತೇಽಹನಿಲೇಹಯೇತ್ ॥
ತಸ್ಯ ಖಾದೇದ್ಯಥಾಶಕ್ತಿ ಮಾತ್ರಾಂ ಕ್ಷೀರಂ ತತಃ ಪಿಬೇತ್ ।
ಶುಕ್ರದೋಷಾ ಜಯೇನ್ಮರ್ತ್ಯಃ ಪ್ರಾಶ್ಯಸಮ್ಯಕ್‌ಸುಯನ್ತ್ರಿತಃ॥
ವ್ಯವಾಯಕ್ಷೀಣರೇತಾಸ್ತು ಸದ್ಯಃ ಸಂಲಭತೇ ಸುಖಮ್ ।
ಓಜಸ್ವೀ ಬಲವಾ ಮರ್ತ್ಯಃ ಪಿಬನ್ನೇವ ಚ ಹೃಷ್ಯತಿ ॥)

ಬಿದರುಪ್ಪು, ಸಕ್ಕರೆ ಇವುಗಳನ್ನು ಸಮಭಾಗದಿಂದ ಸೇರಿಸಿ ಚೂರ್ಣಿಸಿ ಸಮಭಾಗ ಜೇನುತುಪ್ಪವನ್ನು ಮಿಶ್ರಮಾಡಿ, ಶುಭದಿವಸ ಶಕ್ತಿಯಿದ್ದಷ್ಟು ಪ್ರಮಾಣ ತಿಂದು ಹಾಲನ್ನು ಕುಡಿದು ಪಥ್ಯಕ್ರಮದಿಂದಿದ್ದರೆ ಶುಕ್ರದೋಷಗಳನ್ನೆಲ್ಲಾ ನಿವಾರಣೆ ಮಾಡಿ ಕೊಂಡು ಮೈಥುನದಿಂದ ಕ್ಷೀಣಿಸಿದ ವೀರ್ಯವನ್ನು ಸದ್ಯದಲ್ಲೇ ಹೊಂದಿ ಸುಖವನ್ನು ಪಡೆಯುತ್ತಾನೆ (ಶುಕ್ರವೃದ್ಧಿಯುಂಟಾಗುತ್ತದೆ.)

ಚಿತ್ರಕಃ ಸಾರಿವಾಚೈವ ಬಲಾಕಾಲಾನುಸಾರಿವಾ ।
ದ್ರಾಕ್ಷಾವಿಶಾಲಾಪಿಪ್ಪಲ್ಯಸ್ತಥಾ ಚಿತ್ರಫಲಾಭವೇತ್ ॥೬೨॥
ತಥೈವಮಧುಕಂಪಥ್ಯಾಂ ದದ್ಯಾದಾಮಲಕಾನಿ ಚ ।
ಘೃತಾಢಕಂ ಪಚೇದೇಭಿಃ ಕಲ್ಕೈಃ ಕರ್ಷಸಮನ್ವಿತೈಃ ॥೬೩॥
ಕ್ಷೀರದ್ರೋಣೇ ಜಲದ್ರೋಣೇ ತತ್ಸಿದ್ಧಮವತಾರಯೇತ್ ।
ಶೀತಂ ಪರಿಸ್ರುತಂ ಚೈವ ಶರ್ಕರಾಪ್ರಸ್ಥಸಂಯುತಮ್ ॥೬೪॥
ತುಗಾಕ್ಷೀರ್ಯಾಶ್ಚ ತತ್ಸರ್ವಂ ಮತಿಮಾ ಪರಿಮಿಶ್ರಯೇತ್ ।
ತತೋ ಮಿತಂ ಪಿಬೇತ್ಕಾಲೇ ಯಥಾದೋಷಂ ಯಥಾಬಲಮ್ ॥೬೫॥
ವಾತರೇತಾಃ ಶ್ಲೇಷ್ಮರೇತಾಃ ಪಿತ್ತರೇತಾಸ್ತು ಯೋ ಭವೇತ್ ।
ರಕ್ತರೇತಾ ಗ್ರನ್ಥಿರೇತಾಃ ಪಿಬೇದಿಚ್ಛನ್ನರೋಗತಾಮ್ ॥೬೬॥
ಜೀವನೀಯಂ ಚ ವೃಷ್ಯಂ ಚ ಸರ್ಪಿರೇತದ್ಬಲಾವಹಮ್ ।
ಪ್ರಜಾಹಿತಂ ಚ ಧನ್ಯಂ ಚ ಸರ್ವರೋಗಾಪಹಂ ಶಿವಮ್ ॥೬೭॥
ಸರ್ಪಿರೇತತ್ಪ್ರಯುಞ್ಜಾನಾ ಸ್ತ್ರೀಗರ್ಭಂ ಲಭತೇಽಚಿರಾತ್ ।
ಅಸೃಗ್ದೋಷಾ ಜಯೇಚ್ಚಾಪಿ ಯೋನಿದೋಷಾಂಶ್ಚ ಸಂಹತಾ ॥೬೮॥
ಮೂತ್ರದೋಷೇಷು ಸರ್ವೇಷು ಕುರ್ಯಾದೇತಚ್ಚಿಕಿತ್ಸಿತಮ್ ।

ಮಹಾಬಲಾಘೃತಮ್ : ಚಿತ್ರಮೂಲ, ಸೊಗದೆಬೇರು, ಕಳ್ಳಂಗಡಲೆ ಬೇರು, ಅಗಿಲು, ದ್ರಾಕ್ಷಿ, ದಾಸವಾಳ, ಹಿಪ್ಪಲಿ, ಬಿಳಿಹೂವಿನ ದಾಸವಾಳ, ಅತಿಮಧುರ, ಅಣಲೆ ಕಾಯಿ, ನೆಲ್ಲಿಕಾಯಿ, ಇವುಗಳನ್ನು ಪ್ರತಿಯೊಂದನ್ನೂ ಒಂದೊಂದು ಕರ್ಷದಂತೆ ಕಲ್ಕ ಮಾಡಿ ೧ ಆಢಕತುಪ್ಪ, ೧ ದ್ರೋಣಹಾಲು, ೧ ದ್ರೋಣನೀರು ಇವೆಲ್ಲವನ್ನೂ ದೊಡ್ಡ

ಗುಡಾಣಕ್ಕೆ ತುಂಬಿ ಮಂದಾಗ್ನಿಯಿಂದ ಪಾಕಮಾಡಿ ತಯಾರಾದ ಘೃತವನ್ನು ಶೋಧಿಸಿ ಅದು ತಣ್ಣಗಾದ ಮೇಲೆ ೧ ಪ್ರಸ್ಥ ಸಕ್ಕರೆ ಮತ್ತು ೧ ಪ್ರಸ್ಥ ಬಿದುರುಪ್ಪು ಚೂರ್ಣಗಳನ್ನು ಮಿಶ್ರಮಾಡಿಟ್ಟುಕೊಂಡು ಪ್ರಾತಃಕಾಲದಲ್ಲಿ ದೋಷಕ್ಕೆ ತಕ್ಕಂತೆಯೂ ಜೀರ್ಣಶಕ್ತಿಗೆ ತಕ್ಕಂತೆಯೂ ಯೋಗ್ಯವಾದ ಪ್ರಮಾಣದಿಂದ ಕುಡಿಸಿದರೆ ವಾತ, ಪಿತ್ತ, ಕಫ, ರಕ್ತ, ಗ್ರಂಥಿ ದೋಷಗಳಿಂದು ಕೆಟ್ಟುಹೋದ ಶುಕ್ರವು ಶುದ್ಧಿಯಾಗಿ ಆರೋಗ್ಯವುಂಟಾಗುತ್ತದೆ. ಈ ಘೃತವು ಜೀವನಪ್ರದವು, ವೀರ್ಯವರ್ಧಕವು, ಬಲಕಾರಿಯು, ಪ್ರಜ್ಞೆಯನ್ನು ಹೆಚ್ಚಿಸುತ್ತದೆ. ಧನ್ಯವಾದದ್ದು, ಸಕಲರೋಗಹರವು, ಮಂಗಳಕರವು. ಈ ಘೃತವನ್ನು ಸೇವಿಸಿದ ಸ್ತ್ರೀಗೆ ಬೇಗನೆ ಗರ್ಭಧಾರಣೆಯುಂಟಾಗುತ್ತದೆ. ಆರ್ತವದೋಷ, ಯೋನಿದೋಷ, ಮೂತ್ರದೋಷಗಳಲ್ಲೆಲ್ಲಾ ಈ ಚಿಕಿತ್ಸೆಯನ್ನೇ ಮಾಡಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಕಾಯಚಿಕಿತ್ಸಾಯಾಂ ಮೂತ್ರಾಘಾತಪ್ರತಿಷೇಧನಾಮಕ ಅಷ್ಟಪಞ್ಚಾಶತ್ತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕ ಭಾಷಾವಿವೃತಿಃ.

ಊನಷಷ್ಟಿತಮೋಽಧ್ಯಾಯಃ

ಅಥಾತೋ ಮೂತ್ರಕೃಚ್ಛ್ರಪ್ರತಿಷೇಧಾಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಮೂತ್ರಕೃಚ್ಛ್ರ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ : ಮೂತ್ರಕೃಚ್ಛ್ರವೆಂದರೆ ಬಲುಕಷ್ಟದಿಂದ ಮೂತ್ರವನ್ನು ವಿಸರ್ಜಿಸುವುದು. ಅಶ್ಮರೀ, ಮೂತ್ರಾಘಾತ, ಉದಾವರ್ತಾದಿ ರೋಗಗಳಲ್ಲಿ ಮೂತ್ರಕೃಚ್ಛ್ರವನ್ನು ಹೇಳಿರುತ್ತದೆಯಾದರೂ ಚಿಕಿತ್ಸಾ ಭೇದದಿಂದಲೂ ಸಮಾನತಂತ್ರಗಳಲ್ಲಿ ಮೂತ್ರಕೃಚ್ಛ್ರ ರೋಗವನ್ನೇ ಪ್ರತ್ಯೇಕವಾಗಿ ಹೇಳಿರುವುದರಿಂದಲೂ ಪುನಃ ಆ ರೋಗವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗುತ್ತದೆ.

ವಾತೇನ ಪಿತ್ತೇನ ಕಫೇನ ಸರ್ವೈಸ್ತಥಾಭಿಘಾತೈಃ ಶಕೃದಶ್ಮರೀಭ್ಯಾಮ್ |
ತಥಾಪರಃ ಶರ್ಕರಯಾ ಸುಕಷ್ಟೋ ಮೂತ್ರೋಪಘಾತಃ ಕಥಿತೋಽಷ್ಟಮಸ್ತು ||೩||

ವಾತ, ಪಿತ್ತ, ಕಫ, ಸನ್ನಿಪಾತ, ಅಭಿಘಾತ, ಮಲಬಂಧ, ಅಶ್ಮರಿ, ಮೂತ್ರ ಶರ್ಕರೆ ಇವುಗಳಿಂದ ೮ ವಿಧಗಳಾದ ಮೂತ್ರಕೃಚ್ಛ್ರಗಳುಂಟಾಗುತ್ತವೆ. ಇವುಗಳ ಪೈಕಿ ಶರ್ಕರಾಮೂತ್ರಕೃಚ್ಛ್ರವು ಅತಿಕಷ್ಟಸಾಧ್ಯವೆಂದು ತಿಳಿಯಬೇಕು.

ಅಲ್ಪಮಲ್ಪಂ ಸಮುತ್ಪೀಡ್ಯ ಮುಷ್ಕಮೇಹನಬಸ್ತಿಭಿಃ |
ಫಲದ್ಭಿರಿವ ಕೃಚ್ಛ್ರೇಣ ವಾತಾಘಾತೇನ ಮೇಹತಿ ||೪||
ಹಾರಿದ್ರಮುಷ್ಣಂ ರಕ್ತಂ ವಾ ಮುಷ್ಕಮೇಹನಬಸ್ತಿಭಿಃ |
ಅಗ್ನಿನಾ ದಹ್ಯಮಾನಾಭೈಃ ಪಿತ್ತಘಾತೇನ ಮೇಹತಿ ||೫||
ಸ್ನಿಗ್ಧಂ ಶುಕ್ಲಮನುಷ್ಣಂ ಚ ಮುಷ್ಕಮೇಹನಬಸ್ತಿಭಿಃ |
ಸಂಹೃಷ್ಟರೋಮಾ ಗುರುಭಿಃ ಶ್ಲೇಷ್ಮಘಾತೇನ ಮೇಹತಿ ||೬||
ದಾಹಶೀತರುಜಾವಿಷ್ಟೋ ನಾನಾವರ್ಣಂ ಮುಹುರ್ಮುಹುಃ |
ತಾಮ್ಯಮಾನಸ್ತು ಕೃಚ್ಛ್ರೇಣ ಸನ್ನಿಪಾತೇನ ಮೇಹತಿ ||೭||

ವಾತದೋಷದಿಂದುಂಟಾದ ಮೂತ್ರಾಘಾತದಲ್ಲಿ ಅಂಡಕೋಶ, ಶಿಶ್ನ, ಮೂತ್ರಾಶಯ (ಬಸ್ತಿ) ಗಳು ಬಿರಿಯುತ್ತವೆಯೋ ಎನ್ನುವಂತೆ ನೋವಿನಿಂದ ಕೂಡಿ ತಡೆದುತಡೆದು ಸ್ವಲ್ಪಸ್ವಲ್ಪವೇ ಮೂತ್ರವಿಸರ್ಜನೆಯಾಗುತ್ತದೆ. ಪಿತ್ತದೋಷದಿಂದುಂಟಾದ ಮೂತ್ರಾಘಾತ ರೋಗದಲ್ಲಿ ಅಂಡಕೋಶ, ಶಿಶ್ನ, ಬಸ್ತಿಗಳು ಬೆಂಕಿಯಿಂದ ಸುಟ್ಟಹಾಗೆ ಉರಿಯುತ್ತಾ ಹಳದಿ ಅಥವಾ ಕೆಂಪುಬಣ್ಣದ ಬಿಸಿಯಾದ ಮೂತ್ರವು ವಿಸರ್ಜಿಸಲ್ಪಡುತ್ತದೆ.

ಶ್ಲೈಷ್ಮಿಕ ಮೂತ್ರಾಘಾತದಲ್ಲಿ ಮೈ ರೋಮಗಳು ಎದ್ದುನಿಲ್ಲುತ್ತವೆ. ಅಂಡಗಳೂ, ಶಿಶ್ನವೂ, ಬಸ್ತಿಯೂ ಭಾರವಾಗಿ ಜಿಡ್ಡುಜಿಡ್ಡಾಗಿ, ಬಿಳುಪಾಗಿ, ಬಿಸಿಯಿಲ್ಲದ ಮೂತ್ರವು ವಿಸರ್ಜನೆಯಾಗುತ್ತದೆ. ತ್ರಿದೋಷಗಳಿಂದ ಉಂಟಾದ ಮೂತ್ರಾಘಾತದಲ್ಲಿ ರೋಗಿಯು ತುಂಬಾ ಬಳಲಿರುತ್ತಾನೆ. ಉರಿಯಾಗಿ, ತಣ್ಣಗೆ, ನೋವಿನಿಂದ ಕೂಡಿದ ಬಗೆಬಗೆಯ ಬಣ್ಣದ ಮೂತ್ರವನ್ನು ಬಲು ಕಷ್ಟದಿಂದ ಆಗಾಗ್ಗೆ ವಿಸರ್ಜನೆ ಮಾಡುತ್ತಾನೆ.

ಮೂತ್ರವಾಹಿಷು ಶಲ್ಯೇನ ಕ್ಷತೇಷ್ವಭಿಹತೇಷು ಚ ।
ಸ್ರೋತಸ್ಸು ಮೂತ್ರಘಾತಸ್ತು ಜಾಯತೇ ಭೃಶವೇದನಃ ॥೮॥
ವಾತಬಸ್ತೇಸ್ತು ತುಲ್ಯಾನಿ ತಸ್ಯ ಲಿಙ್ಗಾನಿ ಲಕ್ಷಯೇತ್ ।
ಶಕೃತಸ್ತು ಪ್ರತೀಘಾತಾದ್ವಾಯುರ್ವಿಗುಣತಾಂ ಗತಃ ॥೯॥
ಆಧ್ಮಾನಂ ಚ ಸಶೂಲಂ ಚ ಮೂತ್ರಸಂಗಂ ಕರೋತಿ ಹಿ ।
ಅಶ್ಮರೀ ಹೇತುಕಃ ಪೂರ್ವಂ ಮೂತ್ರಾಘಾತ ಉದಾಹೃತಃ ॥೧೦॥

ಮೂತ್ರವಹ ಸ್ರೋತಸ್ಸುಗಳು ಶಲ್ಯದಿಂದ ಘಾಯ ಮಾಡಲ್ಪಟ್ಟರೂ ಅಥವಾ ಹೊರಗಿನಿಂದ ಪೆಟ್ಟಾದರೂ ತುಂಬಾ ನೋವುಂಟಾಗಿ ಮೂತ್ರವು ತಡೆಯಲ್ಪಟ್ಟು ವಾತ ಬಸ್ತಿಯ ಲಕ್ಷಣಗಳುಂಟಾಗುತ್ತವೆ, ಪುರೀಷವು ತಡೆಯಲ್ಪಟ್ಟರೆ ಅಪಾನ ವಾಯುವು ವಿಲೋಮವಾಗಿ ಹೊಟ್ಟೆಯುಬ್ಬರ, ಹೊಟ್ಟೆಶೂಲೆಯುಂಟಾಗಿ ಮೂತ್ರವು ತಡೆಯಲ್ಪಡುತ್ತದೆ. ನಿದಾನಸ್ಥಾನದಲ್ಲಿ ಅಶ್ಮರಿಯಿಂದುಂಟಾಗುವ ವಿಧಾನವು ವಿವರಿಸಲ್ಪಟ್ಟಿರುತ್ತದೆ.

ಅಶ್ಮರೀ ಶರ್ಕರಾಚೈವ ತುಲ್ಯೇ ಸಮ್ಭವಲಕ್ಷಣೈಃ ।
ಶರ್ಕರಾಯಾ ವಿಶೇಷಂ ತು ಶೃಣು ಕೀರ್ತಯತೋ ಮಮ ॥೧೧॥
ಪಚ್ಯಮಾನಸ್ಯ ಪಿತ್ತೇನ ಭಿದ್ಯಮಾನಸ್ಯ ವಾಯುನಾ ।
ಶ್ಲೇಷ್ಮಣೋಽವಯವಾ ಭಿನ್ನಾಃ ಶರ್ಕರಾ ಇತಿ ಸಂಜ್ಞಿತಾಃ ॥೧೨॥
ಹೃತ್ಪೀಡಾ ವೇಪಥುಃ ಶೂಲಂ ಕುಕ್ಷೌ ವಹ್ನಿಃ ಸುದುರ್ಬಲಃ ।
ತಾಭಿರ್ಭವತಿ ಮೂರ್ಛಾ ಚ ಮೂತ್ರಾಘಾತಶ್ಚ ದಾರುಣಃ ॥೧೩॥
ಮೂತ್ರವೇಗನಿರಸ್ತಾಸು ತಾಸು ಶಾಮ್ಯತಿ ವೇದನಾ ।
ಯಾವದಸ್ಯಾಪುನಸ್ನೈತಿಃ ಗುಡಿಕಾ ಸ್ರೋತಸೋ ಮುಖಮ್ ॥೧೪॥
ಶರ್ಕರಾಸಂಭವಸ್ಯೈತನ್ಮೂತ್ರಾಘಾತಸ್ಯ ಲಕ್ಷಣಮ್ ।

ಅಶ್ಮರಿಯೂ, ಶರ್ಕರೆಯೂ ಸಮಾನಕಾರಣಗಳಿಂದ ಹುಟ್ಟುತ್ತವೆ. ಇವೆರಡರಲ್ಲೂ ಸಮಾನ ಲಕ್ಷಣಗಳೇ ಇರುತ್ತವೆ. ಆದರೆ ಅವೆರಡಕ್ಕೂ ಇರುವ ವ್ಯತ್ಯಾಸವನ್ನು ಹೇಳುತ್ತೇನೆ ಕೇಳು :—ಕಫದ ಅವಯವಗಳು ಪಿತ್ತದಿಂದ ಪಕ್ವಮಾಡಲ್ಪಟ್ಟು ವಾಯುವಿನಿಂದ ಬೇರೆಬೇರೆ ಮಾಡಲ್ಪಡುತ್ತವೆಯಾಗಿ ಶರ್ಕರಾ ಎಂಬುದಾಗಿ ಕರೆಯಲ್ಪಡುತ್ತವೆ (ಶರ್ಕರಾ ಎಂದು ಹೆಸರು). ಇವುಗಳಿಂದ ಹೃದಯಶೂಲೆ, ಮೈನಡುಕ, ಹೊಟ್ಟೆ ನೋವೂ, ಅಗ್ನಿಮಾಂದ್ಯ ಇವುಗಳುಂಟಾಗುತ್ತವೆಯಲ್ಲದೆ, ಪ್ರಜ್ಞೆತಪ್ಪುತ್ತದೆ ; ಅತಿಕಷ್ಟ

ಕರವಾದ ಮೂತ್ರಘಾತವೂ ಉಂಟಾಗುತ್ತದೆ ; ಮೂತ್ರವು ವಿಸರ್ಜನೆಯಾಗುವಾಗ ಅದರೊಡನೆ ಈ ಶರ್ಕರೆಗಳೂ ಕೆಳಕ್ಕಿಳಿದು ಹೊರಕ್ಕೆ ಬಿದ್ದುಹೋದರೆ ನೋವು ಶಮನವಾಗುತ್ತದೆ ; ಮತ್ತೊಂದು ಶರ್ಕರೆಯು ಮೂತ್ರಮಾರ್ಗದಲ್ಲಿ ಬಂದು ಸಿಕ್ಕಿಕೊಂಡರೆ ಪುನಃ ಮೂತ್ರವು ತಡೆಯಲ್ಪಟ್ಟು (ವಿಸರ್ಜನೆಯಾಗದೆ) ವೇದನೆಯೂ ಉಂಟಾದರೆ ; ಶರ್ಕರೆಯಿಂದುಂಟಾದ ಮೂತ್ರಾಘಾತದ ಲಕ್ಷಣವೆಂದು ತಿಳಿಯಬೇಕು. ಅಂದರೆ ಅಶ್ಮರಿಯು ಪಿತ್ತದಿಂದ ಪಾಕವಾಗಿ ವಾತದಿಂದ ಛಿದ್ರಛಿದ್ರಮಾಡಲ್ಪಟ್ಟರೆ ಶರ್ಕರಾ ಎಂಬುದಾಗಿ ವ್ಯವಹರಿಸಲ್ಪಡುತ್ತದೆ.

ಚಿಕಿತ್ಸಿತಮಥೈತೇಷಾಮಷ್ಟಾನಾಮಪಿ ವಕ್ಷ್ಯತೇ ॥೧೫॥
ಅಶ್ಮರೀಂ ಚ ಸಮಾಹೃತ್ಯ ಯದುಕ್ತಂ ಪ್ರಸಮೀಕ್ಷ್ಯ ಯತ್ ।
ಯಥಾದೋಷಂ ಪ್ರಯುಞ್ಜೀತ ಸ್ನೇಹಾದಿಕಮಪಿ ಕ್ರಮಮ್ ॥೧೬॥

ಈ ೮ ವಿಧಗಳಾದ ಮೂತ್ರಕೃಚ್ಛ್ರಗಳಿಗೂ ಚಿಕಿತ್ಸೆಗಳನ್ನು ಹೇಳುತ್ತೇನೆ. ಹಿಂದೆ ಅಶ್ಮರಿಯ ಚಿಕಿತ್ಸೆಯಲ್ಲಿ ವಾತಾದಿಭೇದಗಳಿಗೆ ಅನುಸಾರವಾಗಿ ಹೇಳಿರುವ ಕ್ರಮಗಳನ್ನೂ, ಸ್ನೇಹಸ್ವೇದಾದಿ ವಿಧಾನಗಳನ್ನೂ ಮೂತ್ರಾಘಾತ ಚಿಕಿತ್ಸೆಯ ವಿಧಾನಗಳನ್ನೂ ಈ ಮೂತ್ರಶರ್ಕರ ರೋಗದಲ್ಲಿಯೂ ಪ್ರಯೋಗಿಸಬೇಕು.

ಶ್ವದಂಷ್ಟ್ರಾಶ್ಮಭಿದೌ ಕುಮ್ಭೀಂ ಹಪುಷಾಂ ಕಣ್ಟಕಾರಿಕಾಮ್ ।
ಬಲಾಂ ಶತಾವರೀಂ ರಾಸ್ನಾಂ ವರುಣಂ ಗಿರಿಕರ್ಣಿಕಾಮ್ ॥೧೭॥
ತಥಾ ವಿದಾರಿಗನ್ಧಾದಿಂ ಸಂಹೃತ್ಯ ತ್ರ್ಯೃವೃತಂ ಪಚೇತ್
ತೈಲಂ ಘೃತಂ ವಾ ತತ್ಪೇಯಂ ತೇನ ವಾಪ್ಯನುವಾಸನಮ್ ॥೧೮॥
ದದ್ಯಾದುತ್ತರಬಸ್ತಿಂ ಚ ವಾತಕೃಚ್ಛ್ರೋಪಶಾನ್ತಯೇ ।
ಶ್ವದಂಷ್ಟ್ರಾಸ್ವರಸೇ ತೈಲಂ ಸಗುಡಕ್ಷೀರನಾಗರಮ್ ॥೧೯॥
ಪಕ್ತ್ವಾ ತತ್ಪೂರ್ವವದ್ಯೋಜ್ಯಂ ತಚ್ಚಾನಿಲರುಜಾಪಹಮ್ ।

ನೇಗಿಲು, ಹಿಟ್ಟುಳಿಕ, ಜಾಪಾಳದತೊಗಟೆ (ಸ್ಥಳಕುಂಭೀ ಎಂದೂ ಹೇಳುತ್ತಾರೆ. ಅದರ ತೊಗಟೆಯು ಡೊಂಕಾಗಿರುತ್ತದೆ.) ಹಬ್ಬೆಬೇರು, ನೆಲಗುಳ್ಳ, ಕಳ್ಳಂಗಡಲೆ, ಆಷಾಡಿಬೇರು, ರಾಸ್ನೆ, ಮದಬಸಲೆ (ಮಟ್ಟಿಮಾವು) ಗಿರಿಕರ್ಣಿಕೆಯಬೇರು, ವಿದಾರಿ ಗಂಧಾದಿ (ಹ್ರಸ್ವಪಂಚಮೂಲ) ಗಣದ್ರವ್ಯಗಳನ್ನೂ ತುಪ್ಪ, ಎಳ್ಳೆಣ್ಣೆ, ವಸೆ ಎಂಬ ತ್ರಿವೃತ್‌ಸ್ನೇಹಗಳನ್ನು ಮಿಶ್ರಮಾಡಿ ನೀರನ್ನೂ ಸೇರಿಸಿ ಮಂದಾಗ್ನಿಯಿಂದ ಪಾಕಮಾಡಿಟ್ಟುಕೊಂಡು ಈ ತೈಲಘೃತಗಳನ್ನು ಪಾನಮಾಡಿಸಬೇಕು ; ಇದನ್ನು ಮಿಶ್ರಮಾಡಿ ಅನುವಾಸನಬಸ್ತಿಯನ್ನೂ ಉತ್ತರಬಸ್ತಿಯನ್ನೂ ಪ್ರಯೋಗಿಸಿದರೆ ವಾತಿಕ ಮೂತ್ರಕೃಚ್ಛ್ರವು ನಿವಾರಣೆಯಾಗುತ್ತದೆ.

ತೃಣೋತ್ಪಲಾದಿಕಾಕೋಲೀನ್ಯಗ್ರೋಧಾದಿಗಣೇ ಕೃತಮ್ ॥೨೦॥
ಶೀತಂ ಘೃತಂ ಪಿತ್ತಕೃಚ್ಛ್ರಂ ನಾಶಯೇತ್ ಕ್ಷೀರಮೇವ ವಾ ।

ದದ್ಯಾದುತ್ತರಬಸ್ತಿಂ ಚ ಪಿತ್ತಕೃಚ್ಛ್ರೋಪಶಾನ್ತಯೇ ||೨೧||
ಏಭಿರೇವ ಕೃತಃ ಸ್ನೇಹಸ್ತ್ರಿವಿಧೇಷ್ವಪಿ ಬಸ್ತಿಷು |
ಹಿತಂ ವಿರೇಚನಂ ಚೇಕ್ಷುಕ್ಷೀರದ್ರಾಕ್ಷಾರಸೈರ್ಯುತಮ್ ||೨೨||

ತೃಣಪಂಚಮೂಲ, ಉತ್ಪಲಾದಿ, ಕಾಕೋಳ್ಯಾದಿ, ನ್ಯಗ್ರೋಧಾದಿ ಗಣೋಕ್ತ ದ್ರವ್ಯಗಳ ಕಷಾಯದೊಡನೆ ತಯಾರಿಸಿದ ಘೃತವನ್ನಾಗಲೀ ಹಾಲನ್ನಾಗಲೀ ಪಾನ ಮಾಡಿಸಿದರೆ ಪಿತ್ತದೋಷದಿಂದುಂಟಾದ ಮೂತ್ರಕೃಚ್ಛ್ರವು ನಿವಾರಣೆಯಾಗುತ್ತದೆ. ಈ ಘೃತವನ್ನು ಸೇರಿಸಿ ಉತ್ತರಬಸ್ತಿಯನ್ನು ಪ್ರಯೋಗಿಸಿದರೆ ಪಿತ್ತಜನಿತ ಮೂತ್ರ ಕೃಚ್ಛ್ರವು ನಿವಾರಣೆಯಾಗುತ್ತದೆ ; ಇವುಗಳಿಂದಲೇ ತಯಾರಿಸಿದ ಘೃತದಿಂದ ಆಸ್ಥಾಪನ, ಅನುವಾಸನ, ಉತ್ತರಬಸ್ತಿಗಳನ್ನು ಪ್ರಯೋಗಿಸಿದರೆ ಹಿತಕರವು ; ಕಬ್ಬಿನರಸ, ಹಾಲು, ದ್ರಾಕ್ಷಾಕಷಾಯಗಳೊಡನೆ ವಿರೇಚನೌಷಧಗಳನ್ನು ಮಿಶ್ರಮಾಡಿ ಪ್ರಯೋಗಿಸಲು ಹಿತವುಂಟಾಗುತ್ತದೆ.

ಸುರಸೋಷಕಮುಸ್ತಾದೌ ವರುಣಾದೌ ಚ ಯತ್ಕೃತಮ್ |
ತೈಲಂ ತಥಾ ಯವಾಗ್ವಾದಿ ಕಫಕೃಚ್ಛ್ರೇ ಪ್ರಶಸ್ಯತೇ ||೨೩||

ಸುರಸಾದಿ, ಉಷಕಾದಿ, ಮುಸ್ತಾದಿ, ವರುಣಾದಿಗಣದ್ರವ್ಯಗಳೊಡನೆ ತಯಾರಿಸಿದ ತೈಲಗಳನ್ನಾಗಲೀ ಯವಾಗೂಗಳನ್ನಾಗಲೀ ಕುಡಿಸಿದರೆ ಕಫಜಮೂತ್ರಕೃಚ್ಛ್ರದಲ್ಲಿ ಹಿತವಾಗುತ್ತದೆ.

ಯಥಾದೋಷೋಚ್ಛ್ರಯಂ ಕುರ್ಯಾದೇತಾನೇವ ಚ ಸರ್ವಜೇ |
ಫಲ್ಗುವೃಶ್ಚೀವದರ್ಭಾಶ್ಮಸಾರಚೂರ್ಣಂ ಚ ವಾರಿಣಾ ||೨೪||
ಸುರೇಕ್ಷುರಸದರ್ಭಾಮ್ಬುಪೀತಂ ಕೃಚ್ಛ್ರರುಜಾಪಹಮ್ |
ತಥಾಭಿಘಾತಜೇ ಕುರ್ಯಾತ್ ಸದ್ಯೋವ್ರಣ ಚಿಕಿತ್ಸಿತಮ್ ||೨೫||

ತ್ರಿದೋಷದಿಂದುಂಟಾದ ಮೂತ್ರಕೃಚ್ಛ್ರದಲ್ಲಿ ದೋಷಾಧಿಕ್ಯತೆಗೆ ತಕ್ಕಂತೆ ಈ ಔಷಧಗಳನ್ನೇ ಮಿಶ್ರಮಾಡಿ ಪ್ರಯೋಗಿಸಬೇಕು. ಕಲ್ಲತ್ತಿ ಮರದ ತೊಗಟೆಯ ಚೂರ್ಣ, ಬಿಳಿಕೊನ್ನೆಬೇರಿನ ಚೂರ್ಣ,ದರ್ಭೆಯ ಬೇರಿನ ಚೂರ್ಣ, ಕರ್ಪೂರಶಿಲಾಜತು ಚೂರ್ಣ ಇವುಗಳನ್ನು ದೋಷವೃದ್ಧಿಗೆ ತಕ್ಕಂತೆ ನೋಡಿ ಬಿಸಿನೀರು, ಮದ್ಯ, ಕಬ್ಬಿನರಸ, ದರ್ಭೆಯ ಕಷಾಯಗಳೊಡನೆ ಕದರಿ ಕುಡಿಸಿದರೆ ಸನ್ನಿಪಾತಜನಿತ ಮೂತ್ರವು ನಿವಾರಣೆಯಾಗುತ್ತದೆ. ಅಭಿಘಾತದಿಂದುಂಟಾದ ಮೂತ್ರಕೃಚ್ಛ್ರದಲ್ಲಿ ಸದ್ಯೋವ್ರಣ ಚಿಕಿತ್ಸೆಯನ್ನು ಮಾಡಬೇಕು.

ಮೂತ್ರಕೃಚ್ಛ್ರೇ ಶಕೃಜ್ಜಾತೇ ಕಾರ್ಯಾ ವಾತಹರೀ ಕ್ರಿಯಾ |
ಸ್ವೇದಾವಗಾಹಾವಭ್ಯಙ್ಗಾ ಬಸ್ತಿಚೂರ್ಣಕ್ರಿಯಾಸ್ತಥಾ ||೨೬||
ಯೇದ್ವೇ ಽಸ್ಮೇ ತು ತಥಾ ಕೃಚ್ಛ್ರೇ ತಯೋಃ ಪ್ರೋಕ್ತಃ ಕ್ರಿಯಾವಿಧಿಃ ||೨೭||

ಮಲರೋಧದಿಂದುಂಟಾದ ಮೂತ್ರಕೃಚ್ಛ್ರರೋಗದಲ್ಲಿ ವಾತಹರಗಳಾದ ಸ್ವೇದ ಕರ್ಮ, ಅವಗಾಹಸ್ನಾನ, ವಾತಹರತೈಲದಿಂದ ಅಭ್ಯಂಗ, ಬಸ್ತಿಕರ್ಮ ವಾತಹರಗಳಾದ ಚೂರ್ಣವನ್ನು ಸೇವಿಸುವುದು ಇವು ಹಿತಕರಗಳು. ಅಶ್ಮರಿ ಮತ್ತು ಶರ್ಕರೆಗಳಿಂದುಂಟಾದ ಮೂತ್ರಕೃಚ್ಛ್ರಗಳಿಗೆ ಕ್ರಮವಾಗಿ ಅಶ್ಮರೀ ಮತ್ತು ಶರ್ಕರಾ ಚಿಕಿತ್ಸೆಗಳಲ್ಲಿ ಕ್ರಿಯಾಕ್ರಮ ಗಳನ್ನು ವಿವರಿಸಲಾಗಿದೆ.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾಗ್ರತ ಕಾಯಚಿಕಿತ್ಸಾಯಾಂ ಮೂತ್ರಕೃಚ್ಛ್ರಪ್ರತಿಷೇಧನಾಮಕ ಊನಷಷ್ಟಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಷಷ್ಟಿತಮೋಽಧ್ಯಾಯಃ

ಅಥಾತೋಽಮಾನುಷೋಪಸರ್ಗಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ಅಮಾನುಷೋಪಸರ್ಗಚಿಕಿತ್ಸೆಯನ್ನು ವಿವರಿಸುತ್ತೇವೆ.

ಟಿಪ್ಪಣಿ :—ಕಾಯಚಿಕಿತ್ಸಾನಂತರ ಭೂತವಿದ್ಯೆಯನ್ನು ಉಪದೇಶ ಮಾಡಬೇಕು. ಮೂತ್ರಕೃಚ್ಛ್ರರೋಗದಲ್ಲಿ ಪ್ರತಿಕ್ಷಣವೂ ಸ್ವಲ್ಪಸ್ವಲ್ಪವಾಗಿ ಮೂತ್ರವಿಸರ್ಜನೆ ಮಾಡುತ್ತಾ ಸರಿಯಾಗಿ ಪ್ರಕ್ಷಾಳನಾದಿಗಳನ್ನು ಮಾಡದೆ ಅಶುಚಿಯಾಗಿರುವಾಗ ದೇವಾದಿಗ್ರಹಗಳ ಪೀಡೆಯುಂಟಾಗುವುದು ಸಹಜವಾದುದ್ದು ; ಇವುಗಳ ನಿವಾರಣೋಪಾಯವನ್ನು ವಿವರಿಸುವುದು ಅತ್ಯಾವಶ್ಯಕವಾದದ್ದು. ಕೆಲವರು "ಅಮಾನುಷಾಬಾಧಾ" ಎಂದು ಹೇಳುತ್ತಾರೆ. "ಅಮಾನುಷಾಣಿ, ಭೂತಾನಿ, ತೇಷಾಂ ಆಬಾಧಾ, ಪೀಡಾ" ಎಂದು ಅರ್ಥ ಮಾಡುತ್ತಾರೆ.

ನಿಶಾಚರೇಭ್ಯೋ ರಕ್ಷ್ಯಸ್ತು ನಿತ್ಯಮೇವ ಕ್ಷತಾತುರಃ ।
ಇತಿ ಯತ್ಪ್ರಾಗಭಿಹಿತಂ ವಿಸ್ತರಸ್ತಸ್ಯ ವಕ್ಷ್ಯತೇ ||೩||

ವ್ರಣಪೀಡಿತರನ್ನು ಮಾಂಸಭೋಜಿಗಳಾದ ರಾತ್ರಿವೇಳೆಯಲ್ಲಿ ಸಂಚರಿಸುವ ದೇವಾದಿ ಗ್ರಹಗಳ ಬಾಧೆಗೆ ಸಿಕ್ಕದಂತೆ ಸದಾ ಸಂರಕ್ಷಿಸಬೇಕೆಂದು ಹಿಂದೆ ದ್ವಿವ್ರಣೀಯ ಚಿಕಿತ್ಸೆಯಲ್ಲಿ ಹೇಳಿರುವುದನ್ನೇ ಈಗ ವಿಸ್ತಾರವಾಗಿ ತಿಳಿಸುತ್ತೇವೆ.

ಗುಹ್ಯಾನಾಗತವಿಜ್ಞಾನಮನವಸ್ಥಾ ಸಹಿಷ್ಣುತಾ ।
ಕ್ರಿಯಾ ವಾ ಮಾನುಷೀ ಯಸ್ಮಿನ್ ಸಗ್ರಹಃ ಪರಿಕೀರ್ತ್ಯತೇ ||೪||

ರಹಸ್ಯವಾದ ಮತ್ತು ಮುಂದೆ ಸಂಭವಿಸುವ ವಿಚಾರಗಳನ್ನು ತಿಳಿಯುವ ಚಂಚಲ ಮನಸ್ಸುಳ್ಳ, ಕ್ರೋಧಸ್ವಭಾವದ ವರದಾನಾದಿ ಅಮಾನುಷ ಕಾರ್ಯಗಳನ್ನು ಮಾಡಬಲ್ಲ ಪುರುಷನಿಗೆ ದೇವಾದಿಗ್ರಹಗಳಲ್ಲೊಂದು ಆವರಿಸಿರುತ್ತದೆಂದು ತಿಳಿಯಬೇಕು.

ಅಶುಚಿಂ ಭಿನ್ನಮರ್ಯಾದಂ ಕ್ಷತಂ ವಾ ಯದಿವಾಕ್ಷತಮ್ ।
ಹಿಂಸ್ಯುರ್ಹಿಂಸಾವಿಹಾರಾರ್ಥಂ ಸತ್ಕಾರಾರ್ಥಮಥಾಪಿ ವಾ ||೫||

ಅಸಂಖ್ಯೇಯಾ ಗ್ರಹಗಣಾ ಗ್ರಹಾಧಿಪತಯಸ್ತು ಯೇ ।
ವ್ಯಜ್ಯನ್ತೇ ವಿವಿಧಾಕಾರಾ ಭಿದ್ಯನ್ತೇ ತೇ ತಥಾಷ್ಟಧಾ ||೬||

ಶುಚಿಯಿಲ್ಲದ, ಅಭಕ್ಷ್ಯಭಕ್ಷಣ, ಅಗಮ್ಯಾಗಮನ, ಹಿಂಸಾದಿ ಕಾರ್ಯಗಳಲ್ಲಿ ಪ್ರವರ್ತಿಸುವ, ಅನ್ಯಾಯಸ್ವಭಾವದ ವ್ರಣರೋಗಿಗಳನ್ನೂ ಅಥವಾ ರೋಗಿಗಳಲ್ಲದವ

ರನ್ನೂ, ಹಿಂಸೆಮಾಡುವುದಕ್ಕಾಗಿಯೂ, ಹಿಂಸೆಮಾಡುವುದರಲ್ಲಿ ಇಷ್ಟವುಳ್ಳ ಅಥವಾ ಬಲಿ, ಹೋಮಾದಿಗಳನ್ನು ಹೊಂದುವುದಕ್ಕಾಗಿಯೂ, ದೇವಾದಿಗ್ರಹಗಳು ಮನುಷ್ಯರನ್ನು ಪೀಡಿಸುತ್ತವೆ ; ಗ್ರಹಗಳು ಅಸಂಖ್ಯೇಯಗಳಾಗಿದ್ದರೂ ತಮ್ಮ ತಮ್ಮ ಗ್ರಹಾಧಿಪತಿಗಳಿಗೆ ತಕ್ಕಂತೆ ೮ ವಿಧಗಳಾಗಿ ವಿವಿಧಲಕ್ಷಣಗಳಿಂದ ವ್ಯಕ್ತವಾಗುತ್ತವೆ.

ದೇವಾಸ್ತಥಾ ಶತ್ರುಗಣಾಶ್ಚ ತೇಷಾಂ ಗನ್ಧರ್ವಯಕ್ಷಾಃ ಪಿತರೋಭುಜಙ್ಗಾಃ ।
ರಕ್ಷಾಂಸಿ ಯಾ ಚಾಪಿ ಪಿಶಾಚಜಾತಿರೇಷೋಽಷ್ಟಕೋ ದೇವಗಣೋಗ್ರಹಾಖ್ಯಃ ॥೭॥

ದೇವ, ದೈತ್ಯ, ಹಾ ಹಾ ಹೂ ಹೂ ಮೊದಲಾದ ದೇವಗಾಯಕರು (ಗಂಧರ್ವರು) ಕುಬೇರಾದಿಯ ಕ್ಷರು, ಅಗ್ನಿಷ್ವಾತ್ತಾದಿಪಿತೃಗಳು, ವಾಸುಕಿಮೊದಲಾದ ಭುಜಂಗಗಳು, ಮನುಷ್ಯರನ್ನೇ ತಿನ್ನುವ ಹೇತಿಪ್ರಹೇತಿಗಳವಂಶದಲ್ಲಿ ಹುಟ್ಟಿದ ರಾಕ್ಷಸರು, ಮಾಂಸಾಹಾರ ಮಾಡುವ ಪಿಶಾಚಿಗಳೆಂದು ಗ್ರಹಗಳಲ್ಲಿ ೮ ವಿಭಾಗಗಳಿವೆ.

ಸಂತುಷ್ಟಃ ಶುಚಿರಪಿ ಚೇಷ್ಟಗನ್ಧಮಾಲ್ಯೋ ನಿಸ್ತನ್ದ್ರೋಽಹ್ಯವಿತಥ ಸಂಸ್ಕೃತಪ್ರಭಾಷೀ ।
ತೇಜಸ್ವೀ ಸ್ಥಿರನಯನೋ ವರಪ್ರದಾತಾ ಬ್ರಹ್ಮಣ್ಯೋ ಭವತಿ ನರಃ ಸ ದೇವಜುಷ್ಟಃ ॥೮॥

ಸದಾಕಾಲದಲ್ಲೂ ಮನಸ್ಸಿನಲ್ಲಿ ತೃಪ್ತಿಯುಳ್ಳವನಾಗಿಯೂ ಶುಚಿಯಾಗಿ ಆಚಾರ ವಂತನಾಗಿಯೂ, ಕೇಸರಿ, ಗಂಧಗಳನ್ನು ಮೈಗೆಬಳಿದುಕೊಂಡು ಮಲ್ಲಿಗೆ ಜಾಜಿ, ಮೊದ ಲಾದ ಪುಷ್ಪಮಾಲಿಕೆಗಳನ್ನು ಧರಿಸಿ ಜಾಗರೂಕನಾಗಿಯೂ, ನಿಜವನ್ನೇ ಹೇಳುತ್ತಲೂ, ಸಂಸ್ಕೃತಭಾಷೆಯಿಂದಲೇ, ಸುಬದ್ಧವಾಕ್ಯಗಳನ್ನು ಹೇಳುತ್ತಾ ತೇಜಸ್ಸಿನಿಂದ ಮುಖಕಾಂತಿ ಯುಳ್ಳವನಾಗಿಯೂ, ರೆಪ್ಪೆಯನ್ನು ಅಲ್ಲಾಡಿಸದೇ (ಎವೆಯಿಕ್ಕದೆ) ನೋಡುತ್ತಲೂ, ಬೇಡಿದವರಗಳನ್ನು ಕೊಡುವವನಾಗಿ ಬ್ರಾಹ್ಮಣಪ್ರಿಯನಾಗಿದ್ದರೆ ದೇವಗ್ರಹದಿಂದ ಆವರಿಸಲ್ಪಟ್ಟಿರುತ್ತಾನೆಂದು ತಿಳಿಯಬೇಕು.

ಸಂಸ್ವೇದೀ ದ್ವಿಜಗುರುದೇವದೋಷವಕ್ತಾ ಜಿಂಹ್ವಾಕ್ಷೋವಿಗತ ಭಯೋ ವಿಮಾರ್ಗ ದೃಷ್ಟಿಃ ।
ಸನ್ತುಷ್ಟೋ ಭವತಿ ನ ಚಾನ್ನಪಾನಜಾತೈರ್ದುಷ್ಟಾತ್ಮಾ ಭವತಿ ಚ ದೇವಶತ್ರುಜುಷ್ಟಃ ॥೯॥

ಸದಾ ಮೈಬೆವರುತ್ತಲೂ, ದ್ವಿಜ, ಗುರು, ದೇವತೆಗಳನ್ನು ದೂರುತ್ತಾವಕ್ರನೋಟ ವುಳ್ಳವನಾಗಿ ಯಾರಿಗೂ ಹೆದರದೆ ನಾಸ್ತಿಕ್ಯ ಬುದ್ಧಿಯುಳ್ಳವನಾಗಿ ಎಷ್ಟು ಊಟಮಾಡಿ ಪಾನಮಾಡಿದರೂ ತೃಪ್ತಿಯೇ ಇಲ್ಲದೆ ದುಷ್ಟಸ್ವಭಾವವುಳ್ಳವನಾದರೆ ದೈತ್ಯಗ್ರಹವು ಆವರಿ ಸಿರುತ್ತೆಂದು ತಿಳಿಯಬೇಕು.

ಹೃಷ್ಟಾತ್ಮಾ ಪುಳಿನವನಾನ್ತರೋಪಸೇವೀ ಸ್ವಾಚಾರಃ ಪ್ರಿಯಪರಿಗೀತಗನ್ಧಮಾಲ್ಯಃ ।
ನೃತ್ಯನ್ವೈ ಪ್ರಹಸತಿ ಚಾರುಚಾಲ್ಪಶಬ್ದಂ ಗನ್ಧರ್ವಗ್ರಹಪರಿಪೀಡಿತೋ ಮನುಷ್ಯಃ ॥೧೦॥

ಹರ್ಷಚಿತ್ತವುಳ್ಳವನಾಗಿ ನದಿಯ ಮರಳಿನ ಮೇಲೂ ಉದ್ಯಾನವನಗಳಲ್ಲೂ ಕ್ರೀಡಿಸುತ್ತಾ ಆಚಾರವಂತನಾಗಿ ಇಷ್ಟವಾದಸಂಗೀತವನ್ನು ಹಾಡುತ್ತಾ ಗಂಧಮಾಲ್ಯಗಳನ್ನು ಸೇವಿಸುತ್ತಾ ನರ್ತನ ಮಾಡುತ್ತಲೂ ಮನೋಹರವಾಗಿ ಸ್ವಲ್ಪ ಶಬ್ದಮಾಡುತ್ತಾ ನಗುತ್ತಾ ಇರುವ ರೋಗಿಯನ್ನು ಗಂಧರ್ವ ಗ್ರಹವು ಆವರಿಸಿರುತ್ತೆಂದು ತಿಳಿಯಬೇಕು.

ತಾಮ್ರಾಕ್ಷಃ ಪ್ರಿಯತನುರಕ್ತವಸ್ತ್ರಧಾರೀ ಗಮ್ಭೀರೋ ದ್ರುತಮತಿರಲ್ಪವಾಕ್ ಸಹಿಷ್ಣುಃ ।
ತೇಜಸ್ವೀ ವದತಿ ಚ ಕಿಂದದಾಮಿ ಕಸ್ಮೈ ಯೋ ಯಕ್ಷಗ್ರಹಪರಿಪೀಡಿತೋ ಮನುಷ್ಯಃ ॥೧೧॥

ಕಣ್ಣುಗಳು ತಾಮ್ರವರ್ಣವಾಗಿಯೂ ಸುಂದರವಾದ ತೆಳುವಾದ ಕೆಂಪು ಬಣ್ಣದ ವಸ್ತ್ರವನ್ನು ಧರಿಸಿ ಗಂಭೀರಸ್ವಭಾವವುಳ್ಳವನಾಗಿ (ಸ್ಥಿರಸತ್ವವುಳ್ಳವನಾಗಿ) ಭ್ರಾಂತಚಿತ್ತನಾಗಿ ಸ್ವಲ್ಪವಾಗಿ ಮಾತನಾಡುತ್ತಾ ಸಹನಶೀಲನಾಗಿಯೂ ಮುಖದಲ್ಲಿ ತೇಜಸ್ಸುಳ್ಳವನಾಗಿ ಯಾರಿಗೆ ಏನನ್ನು ಕೊಡಲೀ ಎಂದು ಹೇಳುತ್ತಿದ್ದರೆ ಆ ರೋಗಿಯನ್ನು ಗಂಧರ್ವ ಗ್ರಹವು ಆವರಿಸಿರುತ್ತೆಂದು ತಿಳಿಯಬೇಕು.

ಪ್ರೇತೇಭ್ಯೋ ವಿಸೃಜತಿ ಸಂಸ್ತರೇಷು ಪಿಣ್ಡಾನ್ ಶಾನ್ತಾತ್ಮಾ ಜಲಮಪಿ ಚಾಪಸವ್ಯವಸ್ತ್ರಃ ।
ಮಾಂಸೇಪ್ಸುಸ್ತಿಲಗುಡಪಾಯಸಾಭಿಕಾಮಸ್ತದ್ಭಕ್ತೋ ಭವತಿ ಪಿತೃಗ್ರಹಾಭಿಭೂತಃ ॥೧೨॥

ಮೃತರಾದ ಪಿತೃಗಳಿಗೆ ದರ್ಭೆಯ ಆಸನದಲ್ಲಿ ಪಿಂಡಪ್ರದಾನ ಮಾಡುತ್ತಲೂ ಶಾಂತಚಿತ್ತನಾಗಿ ವಸ್ತ್ರವನ್ನು ಎಡಕ್ಕೆ ಹೊದ್ದುಕೊಂಡೇ ತಿಲೋದಕವನ್ನು ತರ್ಪಣವಾಗಿ ಕೊಡುತ್ತಲೂ, ಮಾಂಸದಲ್ಲಿ ಪ್ರೀತಿಯುಕ್ತನಾಗಿ, ಎಳ್ಳು, ಬೆಲ್ಲ, ಹಾಲು, ಸಕ್ಕರೆಗಳಿಂದ ಅನ್ನ ಮಿಶ್ರಮಾಡಿದ ಪಾಯಸವನ್ನು ಪ್ರೀತಿಸುತ್ತಲೂ, ಎಳ್ಳು, ಬೆಲ್ಲ ಮಿಶ್ರ ಮಾಡಿದ ಅನ್ನವನ್ನು ಭೋಜನ ಮಾಡಿದರೆ ಪಿತೃಗ್ರಹವು ಆವರಿಸಿರುತ್ತೆಂದು ತಿಳಿಯಬೇಕು.

ಭೂಮೌ ಯಃ ಪ್ರಸರತಿ ಸರ್ಪವತ್ ಕದಾಚಿತ್ ಸೃಕ್ಕಿಣ್ಯೌ ವಿಲಿಹತಿ ಜಿಹ್ವಯಾ ಪ್ರಸಕ್ತಮ್ ।
ನಿದ್ರಾಲುರ್ಗುಡಮಧುದುಗ್ಧಪಾಯಸೇಪ್ಸುರ್ವಿಜ್ಞೇಯೋ ಭವತಿ ಭುಜಙ್ಗಮೇನಜುಷ್ಟಃ ॥೧೩॥

ನೆಲದಲ್ಲಿ ಎದೆಯನ್ನು ಚಾಚಿ ಹಾವಿನಂತೆ ಹರಿದಾಡುತ್ತಲೂ ಕೆಲವುವೇಳೆ ನಾಲಿಗೆಯನ್ನು ಮುಂದಕ್ಕೆ ನೀಡಿ ತುಟಿಗಳನ್ನು ನೆಕ್ಕುತ್ತಲೂ, ಸದಾನಿದ್ರಿಸುತ್ತಾ ಬೆಲ್ಲ, ಜೇನು ತುಪ್ಪ, ಹಾಲು, ಪಾಯಸಗಳಲ್ಲಿ ಪ್ರೀತಿಯುಳ್ಳವನಾಗಿಯೂ ಇದ್ದರೆ ಭುಜಂಗಗ್ರಹವು ಆವರಿಸಿರುತ್ತೆಂದು ತಿಳಿಯಬೇಕು.

ಮಾಂಸಾಸೃಗ್ವಿವಿಧಸುರಾವಿಕಾರಲಿಪ್ಸುರ್ನಿರ್ಲಜ್ಜೋ ಭೃಶಮತಿನಿಷ್ಠುರೋಽತಿಶೂರಃ ।
ಕ್ರೋಧಾಲುರ್ವಿಪುಲಬಲೋ ನಿಶಾವಿಹಾರೀ ಶೌಚದ್ವಿಟ್ ಭವತಿ ಚ ರಕ್ಷಸಾ ಗೃಹೀತಃ ॥೧೪॥

ಮಾಂಸ, ರಕ್ತ, ಅನೇಕವಿಧದ ಮದ್ಯ ಇವುಗಳನ್ನು ಪ್ರೀತಿಸುತ್ತಲೂ, ನಾಚಿಕೆಯಿಲ್ಲದವನಾಗಿ ಅತಿನಿಷ್ಠೂರದ ಮಾತುಗಳನ್ನಾಡುತ್ತಾ ಅತಿಶೂರನಾಗಿಯೂ ಕೋಪಿಷ್ಠನಾಗಿಯೂ, ಬಲಿಷ್ಠನಾಗಿಯೂ ರಾತ್ರಿಯವೇಳೆ ಸಂಚರಿಸುತ್ತಾ ಕೊಳಕುದೇಹವುಳ್ಳವನಾಗಿ ಕೊಳಕುವಸ್ತ್ರಗಳನ್ನುಡುವ ರಾಕ್ಷಸಗ್ರಹವು ಆವರಿಸಿರುತ್ತೆಂದು ತಿಳಿಯಬೇಕು.

ಉದ್ಧಸ್ತಃ ಕೃಶಪರುಷಶ್ಚಿರಪ್ರಲಾಪೀ ದುರ್ಗನ್ಧೋ ಭೃಶಮಶುಚಿಸ್ತಥಾತಿ ಲೋಲಃ ।
ಬಹ್ವಾಶೀ ವಿಜನಹಿಮಾಮ್ಬುರಾತ್ರಿಸೇವೀ ವ್ಯಾವಿಗ್ನೋ ಭ್ರಮತಿ ರುದನ್ ಪಿಶಾಚದುಷ್ಟಃ ॥೧೫॥

ವಿಕಾರವಾದ ಮುಖ ಕಣ್ಣುಗಳುಳ್ಳವನಾಗಿ (ಕೈ ಮೇಲೆತ್ತಿಕೊಂಡು) ಕೃಶದೇಹವುಳ್ಳ ಕಠಿಣವಾದ ಪದಗಳಿಂದ ಬಲುಕಾಲ ಮಾತನಾಡುತ್ತಾ ದುರ್ವಾಸನೆ ತುಂಬಾ ಕೊಳಕುದೇಹ ಅತಿಚಪಲಚಿತ್ತ ಅತಿಯಾಗಿ ಭೋಜನಮಾಡುತ್ತಲೂ, ನಿರ್ಜನ ಪ್ರದೇಶದಲ್ಲಿದ್ದು ತಣ್ಣೀರು ಕುಡಿಯುತ್ತಲೂ ರಾತ್ರಿಯಲ್ಲಿ ಸಂಚರಿಸುತ್ತಲೂ ಅಳುತ್ತಲೂ ಅತಿ ಗಾಬರಿಪಡುತ್ತ ಇರುವವನು ಪಿಶಾಚಗ್ರಸ್ತನೆಂದು ತಿಳಿಯಬೇಕು.

ಸ್ಥೂಲಾಕ್ಷಸ್ತ್ವರಿತಗತಿಃ ಸ್ವಫೇನ ಲೇಹೀ ನಿದ್ರಾಲುಃ ಪತತಿ ಚ ಕಮ್ಪತೇ ಚ ಯೋಽತಿ ।
ಯಶ್ಚಾದ್ರಿದ್ವಿರದನಗಾದಿವಿಚ್ಯುತಃ ಸ್ಯಾತ್ ಸಂಸೃಷ್ಟೋ ನ ಭವತಿ ವಾರ್ಧಕೇನ ಜುಷ್ಟಃ ॥೧೬॥

ಅಸಾಧ್ಯ ಲಕ್ಷಣಗಳನ್ನು ಹೇಳುತ್ತಾರೆ : ಅಗಲವಾಗಿರುವ ಕಣ್ಣುಗಳುಳ್ಳವನೂ ವೇಗವಾಗಿ ನಡೆಯುವನೂ ತನ್ನ ಬಾಯಿನಿಂದ ನೀರು ಸುರಿಯುವ ಜೊಲ್ಲನ್ನೇ ನೆಕ್ಕುವವನೂ, ನಿದ್ರೆಯಿಂದ ಪೀಡಿತನೂ, ಕೆಳಗೆ ಬಿದ್ದು ನಡುಗುವವನೂ, ಬೆಟ್ಟ, ಆನೆ, ಮರಗಳಿಂದ ಕೆಳಕ್ಕೆ ಬಿದ್ದವನು ಇವರಿಗೆ ಗ್ರಹಗಳು ಆವರಿಸಿದರೆ ಆ ರೋಗಿಯು ಬದುಕುವುದಿಲ್ಲವೆಂದು ತಿಳಿಯಬೇಕು.

ಟಿಪ್ಪಣಿ : ವರ್ಧಕೇನ ಎಂದರೆ ಹಿಂಸಾತ್ಮಕಗಳೆಂದೂ ವೃದ್ಧಗೃಹಗಳೆಂದೂ ಉಲ್ಬಣವಾದ ಸ್ಥಿತಿಯಲ್ಲಿರುವ ಗ್ರಹಗಳೆಂದೂ ಅರ್ಥಮಾಡುತ್ತಾರೆ. ವಿದೇಹನು, ಶಿಶ್ನ, ಕಣ್ಣು ಮೂಗುಗಳಿಂದ ರಕ್ತಸ್ರಾವವಾಗುವುದೂ, ನಾಲಿಗೆಯು ರೂಕ್ಷವಾಗಿರುವುದೂ, ದುರ್ವಾಸನೆ ಬರುವುದು, ಮಾತುನಿಂತುಬಿಡುವುದು, ಅತಿದೌರ್ಬಲ್ಯವುಂಟಾಗುವುದು ಎಂಬ ದುರ್ಲಕ್ಷಣಗಳನ್ನು ಹೇಳುತ್ತಾನೆ ; ಇವು ಅಸಾಧ್ಯವು.

ದೇವಗ್ರಹಾಃ ಪೌರ್ಣಮಾಸ್ಯಾಮಸುರಾಃ ಸನ್ಧ್ಯಯೋರಪಿ ।
ಗನ್ಧರ್ವಾಃ ಪ್ರಾಯಶೋಽಷ್ಟಮ್ಯಾಂ ಯಕ್ಷಾಶ್ಚ ಪ್ರತಿಪದ್ಯಥ ॥೧೭॥
ಕೃಷ್ಣಪಕ್ಷೇ ಚ ಪಿತರಃ ಪಞ್ಚಮ್ಯಾಮಪಿ ಚೋರಗಾಃ ।
ರಕ್ಷಾಂಸಿ ನಿಶಿ ಪೈಶಾಚಶ್ಚತುರ್ದಶ್ಯಾಂ ವಿಶನ್ತಿ ಚ ॥೧೮॥
ದರ್ಪಣಾದೀನ್ ಯಥಾ ಛಾಯಾ ಶೀತೋಷ್ಣಂ ಪ್ರಾಣಿನೋಯಥಾ ।
ಸ್ವಮಣಿಂ ಭಾಸ್ಕರಸ್ಯೋಸ್ರಾ ಯಥಾ ದೇಹಂ ಚ ದೇಹಧೃಕ್ ॥೧೯॥
ವಿಶನ್ತಿ ಚ ನ ದೃಶ್ಯನ್ತೇ ಗ್ರಹಾಸ್ತದ್ವಚ್ಛರೀರಿಣಮ್ ।

ದೇವಗ್ರಹಗಳು ಪೌರ್ಣಿಮೆಯ ದಿನದಲ್ಲೂ ಅಸುರಗ್ರಹಗಳು ಸಂಧ್ಯಾಕಾಲಗಳಲ್ಲೂ, ಗಂಧರ್ವಗ್ರಹಗಳು ಪ್ರಾಯಶಃ ಅಷ್ಟಮಿಯಲ್ಲೂ ಯಕ್ಷಗ್ರಹಗಳು ಪಾಡ್ಯದದಿನವೂ, ಕೃಷ್ಣಪಕ್ಷದಲ್ಲಿ ಪಿತೃಗ್ರಹಗಳೂ, ಉರಗಗ್ರಹಗಳು ಪಂಚಮಿಯಲ್ಲೂ ರಾಕ್ಷಸರು ರಾತ್ರಿಯ ಕಾಲದಲ್ಲೂ ಪಿಶಾಚಿಗಳು ಚತುರ್ದಶಿಯಲ್ಲೂ ಮನುಷ್ಯರ ದೇಹವನ್ನು ಆವರಿಸುತ್ತವೆ ; ಸೂರ್ಯರಶ್ಮಿಯೂ ಕನ್ನಡಿ ಮೊದಲಾದುವನ್ನೂ, ಶೀತೋಷ್ಣಗಳು ಪ್ರಾಣಿಗಳ ದೇಹವನ್ನೂ ಸೂರ್ಯಕಿರಣಗಳು ಸೂರ್ಯಕಾಂತಮಣಿಯನ್ನೂ ಜೀವಾತ್ಮನೂ (ಲಿಂಗಶರೀರವು ಸೂಕ್ಷ್ಮದೇಹವು) ಈ ಸ್ಥೂಲಶರೀರವನ್ನೂ ಹೇಗೆ ಪ್ರವೇಶಿಸುತ್ತಾರೋ (ಆದರೆ ಅವು ಪ್ರವೇಶಿಸುವ ವಿಧಾನವು ನಮಗೆ ಹೇಗೆ ಗೋಚರಿಸುವುದಿಲ್ಲವೋ) ಹಾಗೆಯೇ ದೇವಾದಿ ಗ್ರಹಗಳೂ ಮನುಷ್ಯರ ದೇಹವನ್ನು ಪ್ರವೇಶಿಸುತ್ತಾರೆ, ಆದರೆ ಪ್ರವೇಶಿಸುವ ವಿಧಾನವು ನಮಗೆ ಕಾಣಿಸುವುದಿಲ್ಲ.

ತಪಾಂಸಿ ತೀವ್ರಾಣಿ ತಥೈವ ದಾನಂ ವ್ರತಾನಿ ಧರ್ಮೋ ನಿಯಮಾಶ್ಚ ಸತ್ಯಮ್ ।
ಗುಣಾಸ್ತಥಾಷ್ಟಾವಪಿ ತೇಷು ನಿತ್ಯಾ ವ್ಯಸ್ತಾಃ ಸಮಸ್ತಾಶ್ಚ ಯಥಾ ಪ್ರಭಾವಮ್ ॥೨೦॥

ಉಗ್ರತಪಸ್ಸು, ದಾನ, ಉಪವಾಸ ಮೊದಲಾದ ನಿಯಮಗಳು, ಧರ್ಮಾನುಷ್ಠಾನಗಳು, ಕಾಯವಾಕ್ಕು ಮನಸ್ಸುಗಳಿಂದ ಚರಿತ್ರೆಗಳನ್ನು ಅಭ್ಯಾಸಮಾಡುವುದು ಸತ್ಯವನ್ನೇ ಹೇಳುವುದು ಅಣಿಮಾದಿ ೮ ವಿಧ ಐಶ್ವರ್ಯಗಳು ಇವೆಲ್ಲವೂ ಆ ಗ್ರಹಗಳಲ್ಲಿ ಸ್ವಭಾವವಾಗಿಯೇ ಇರುತ್ತವೆ ; ಗ್ರಹಗಳ ಪ್ರಭಾವಕ್ಕೆ ತಕ್ಕಂತೆಯೇ ಈ ಗುಣಗಳು ಒಂದೊಂದೇ ಅಥವಾ ಎಲ್ಲವೂ ಇರುತ್ತವೆ ; ಅಸುರಾದಿ ನೀಚಗ್ರಹಗಳಲ್ಲಿ ಒಂದೊಂದೆ ಗುಣಗಳೂ, ದೇವಗ್ರಹದಲ್ಲಿ ಎಲ್ಲಾ ಗುಣಗಳೂ ಇರುತ್ತವೆಂಬುದೇ ಇದಕ್ಕೆ ಉದಾಹರಣೆಯಾಗಿದೆ.

ನ ತೇ ಮನುಷ್ಯೈಃ ಸಹ ಸಂವಿಶನ್ತಿ ನ ವಾ ಮನುಷ್ಯಾನ್ ಕ್ವಚಿದಾವಿಶನ್ತಿ ।
ಯೇ ತ್ವಾವಿಶನ್ತೀತಿ ವದನ್ತಿ ಮೋಹಾತ್ತೇ ಭೂತವಿದ್ಯಾವಿಷಯಾದಪೋಹ್ಯಾಃ ॥೨೧॥
ತೇಷಾಂ ಗ್ರಹಾಣಾಂ ಪರಿಚಾರಕಾ ಯೇ ಕೋಟೀ ಸಹಸ್ರಾಯುತ ಪದ್ಮಸಂಖ್ಯಾಃ ।
ಅಸೃಗ್ವಸಾಮಾಂಸಭುಜಃ ಸುಭೀಮಾ ನಿಶಾವಿಹಾರಾಶ್ಚ ತಮಾ ವಿಶನ್ತಿ ॥೨೨॥

ತಪೋನಿಯಮಾದಿಗಳಿಂದ ಕೂಡಿದ ದೇವಾದಿಗ್ರಹಗಳೆಂದಿಗೂ ಅಶುಚಿಯಾದ ಮನುಷ್ಯದೇಹವನ್ನೂ ಪ್ರವೇಶಿಸುವುದಿಲ್ಲ ; ದೇವಾದಿಗ್ರಹಗಳು ಮನುಷ್ಯರೊಡನೆ ಒಟ್ಟಿಗೆ ಸೇರುವುದಿಲ್ಲ. ಅಜ್ಞಾನದಿಂದ ಯಾರು ದೇವಾದಿಗ್ರಹಗಳು ಮನುಷ್ಯರ ದೇಹದೊಳಕ್ಕೆ ಪ್ರವೇಶಿಸುತ್ತವೆಂದು ಹೇಳುತ್ತಾರೆಯೋ ಅವರಿಗೆ ಭೂತವಿದ್ಯಾವಿಚಾರವೇ ಗೊತ್ತಿಲ್ಲವಾದ ಕಾರಣ ಅವರ ಮಾತಿನಲ್ಲಿ ವಿಶ್ವಾಸಮಾಡಕೂಡದು ; ದೇವಾದಿಗ್ರಹಗಳ ಸೇವಕರು ರಕ್ತ ಮಾಂಸ, ವಸೆಗಳನ್ನು ಭಕ್ಷಿಸುತ್ತಾ ಅತಿಭಯಂಕರ ಆಕಾರವುಳ್ಳವರಾಗಿ ರಾತ್ರಿಯಹೊತ್ತು ಸಂಚಾರಮಾಡುತ್ತಾ ಹತ್ತುಸಾವಿರ ಕೋಟಿಸಂಖ್ಯೆಗಳಿಂದ ಪ್ರಪಂಚವನ್ನು ವ್ಯಾಪಿಸಿ ಮನುಷ್ಯರನ್ನು ಆವರಿಸುತ್ತಾರೆ ; ಹಿಂದೆ ಗ್ರಹಗಳು ಅಸಂಖ್ಯಾತಗಳೆಂದು ಇಲ್ಲಿ ಹತ್ತು

ಸಾವಿರ ಕೋಟಿಸಂಖ್ಯೆ ಎಂದು ಹೇಳಿರುವುದು ದೇವಾದಿಗ್ರಹಗಳಿಗೆ ಪರಸ್ಪರ ವ್ಯತ್ಯಾಸವನ್ನು ತಿಳಿಸುವುದಕ್ಕೆಂದು ತಿಳಿಯಬೇಕು.

ನಿಶಾಚರಾಣಾಂ ತೇಷಾಂ ಹಿ ಯೇ ದೇವಗಣಸಂಸ್ಕೃತಾಮಾಶ್ರಿತಾಃ |
ತೇತು ತತ್ಸತ್ವಸಂಸರ್ಗಾದ್ವಿಜ್ಞೇಯಾಸ್ತು ತದಞ್ಜನಾಃ ||೨೩||

ರಾತ್ರಿಸಂಚಾರಿಗಳಾದ ದೇವಾದಿಗ್ರಹಗಳ ಅನುಚರರು ತಮ್ಮ ತಮ್ಮ ಒಡೆಯರಾದ ದೇವಾದಿಗ್ರಹಗಳ ಲಕ್ಷಣಗಳನ್ನೇ ಅನುಕರಣಮಾಡುತ್ತಾರೆ ; ಏಕೆಂದರೆ ಅವರು ಸದಾ ತಮ್ಮ ಸ್ವಾಮಿಗಳಾದ ಮೂಲಗ್ರಹಗಳನ್ನೇ ಸೇವಿಸುತ್ತಾ ಕಾಲಯಾಪನೆ ಮಾಡುತ್ತಾರಾದ ಕಾರಣ ಅವರ ನಡೆ, ನುಡಿ ಆಚಾರಾದಿಗಳನ್ನೇ ಅನುಕರಣಮಾಡುವುದು ಯುಕ್ತವಾದದ್ದು.

ದೇವಗ್ರಹಾ ಇತಿ ಪುನಃ ಪ್ರೋಚ್ಯನ್ತೇ ಶುಚಯಶ್ಚ ಯೇ |
ದೇವವಚ್ಚ ನಮಸ್ಯನ್ತೇ ಪ್ರತ್ಯರ್ಥ್ಯನ್ತೇ ಚ ದೇವವತ್ ||೨೪||

ದೇವಾದಿಗ್ರಹಗಳ ಅನುಚರರೂ ಕೂಡ ದೇವಾದಿ ಗ್ರಹಗಳೊಡನೆ ಸಂಸರ್ಗ ಮಾಡುತ್ತಾ ಶುಚಿರ್ಭೂತರಾಗಿರುವ ಕಾರಣ ದೇವಾದಿಗ್ರಹಗಳಂತೆಯೇ ಮನುಷ್ಯರಿಂದ ನಮಸ್ಕರಿಸಲ್ಪಡುತ್ತಾರೆ ; ಮನುಷ್ಯರು ಅವರನ್ನು ಪ್ರಾರ್ಥಿಸಿ ವರವನ್ನೂ ಬೇಡುತ್ತಾರೆ ; ಈ ಅನುಚರರನ್ನೂ ದೇವಗ್ರಹಗಳೆಂದೇ ವ್ಯವಹರಿಸುತ್ತಾರೆ.

ಸ್ವಾಮಿಶೀಲಕ್ರಿಯಾಚಾರಾಃ ಕ್ರಮ ಏಷ ಸುರಾದಿಷು |
ನೈಋತೇಯಾರ್ದುಹಿತರಸ್ತಾಸಾಂ ಸಪ್ರಸವಃ ಸ್ಮೃತಃ ||೨೫||

ದೇವಗ್ರಹಗಳೆಂದು ವ್ಯವಹರಿಸಲ್ಪಡುವ ಮೇಲೆ ಹೇಳಿದ ದೇವಗ್ರಹಗಳ ಅನುಚರರೂ ತಮ್ಮ ತಮ್ಮ ಸ್ವಾಮಿಗಳಾದ ದೇವಾದಿಗ್ರಹಗಳ ಶೀಲ, ಕ್ರಿಯೆ, ಆಚಾರಗಳನ್ನೆ ಅನುಕರಣೆ ಮಾಡುವುದೇ ಪದ್ಧತಿಯಾಗಿದ್ದರೂ ರಾಕ್ಷಸರ ಪಿತಾಮಹನಾದ ನಿರರುತಿಯ ಹೆಣ್ಣು ಮಕ್ಕಳ ಸಂತಾನವೇ ಈ ದೇವಾನುಚರಣಗಳೆಂದು ತಿಳಿಯಬೇಕು. ರಾಕ್ಷಸಾಂಶವಿದ್ದೇ ಇರುತ್ತೆಂಬುದು ಸಿದ್ಧವು.

ಸತ್ಯತ್ವಾದಪವೃತ್ತೇಷು ವೃತ್ತಸ್ತೇಷಾಂ ಗಣೈಃ ಕೃತಾ |

ಈ ಗ್ರಹಗಳಿಗೆ ಶಾಸ್ತ್ರಾಚಾರಗಳಿಗೆ ವಿರುದ್ಧವಾಗಿ ನಡೆಯುವ ಜನರಿಂದಲೇ ಜೀವಿಕೆಯು ಏರ್ಪಡಿಸಲ್ಪಟ್ಟಿತು. ಅಂದರೆ ಅನಾಚಾರಿಗಳಿಂದ ಆಗ್ರಹಗಣಗಳಿಗೆ ಜೀವಿಕೆಯುಂಟಾಗಿರುತ್ತದೆ.

ಹಿಂಸಾವಿಹರಾ ಯೇ ಕೇಚಿದ್ದೇವಭಾವಮುಪಾಶ್ರಿತಾಃ ||೨೬||
ಭೂತಾನೀತಿ ಕೃತಾ ಸಂಜ್ಞಾ ತೇಷಾಂ ಸಂಜ್ಞಾಪ್ರವಕ್ಷ್ಯಭಿ |
ಗ್ರಹಸಂಜ್ಞಾನಿ ಭೂತಾನಿ ಯಸ್ಮಾದ್ವೇತ್ತ್ಯನಯಾ ಭಿಷಕ್ ||೨೭||
ವಿದ್ಯಯಾ ಭೂತವಿದ್ಯಾತ್ವಮತ ಏವ ನಿರುಚ್ಯತೇ |
ತೇಷಾಂ ಶಾನ್ತ್ಯರ್ಥಮನ್ವಿಚ್ಛ್ ವೈದ್ಯಸ್ತು ಸುಸಮಾಹಿತಃ ||೨೮||
ಜಪ್ಯೈಃ ಸನಿಯಮೈರ್ಹೋಮೈರಾರಭೇತ ಚಿಕಿತ್ಸಿತುಮ್ |

ದೇವರೂಪಧಾರಿಗಳಾದ ಈ ಗ್ರಹಗಳಲ್ಲಿ ಪ್ರಾಣಿವಧ ಮಾಡುವುದೇ ತಮ್ಮ ವಿಹಾರವೆಂದು ಭಾವಿಸಿರುವ ಕೆಲವು ಗ್ರಹಗಳಿಗೆ "ಭೂತಗಳೆಂದು" ಸಂಜ್ಞೆ. ಸಂಜ್ಞೆಗಳನ್ನು ಗೊತ್ತುಮಾಡುವ ಪ್ರಧಾನ ವೈದ್ಯರಿಂದ ಈ "ಭೂತ" ಸಂಜ್ಞೆಯುಂಟಾಯಿತು ; ಇದರಿಂದ ಭೂತಗಳೆಂದರೆ ಗ್ರಹಗಳೆಂದೂ ಈ ಗ್ರಹಗಳನ್ನು ನಿವಾರಣೆಮಾಡುವ ಕ್ರಮಗಳನ್ನು ಬೋಧಿಸುವ ಶಾಸ್ತ್ರಕ್ಕೆ "ಭೂತವಿದ್ಯೆ" ಎಂದೂ ಹೇಳುತ್ತಾರೆ ; ಈ ದೇವಾದಿ ಅನುಚರಗ್ರಹಗಳು ಮನುಷ್ಯರನ್ನಾಕ್ರಮಿಸಿ ಹಿಂಸಿಸುವುದನ್ನು ನಿವಾರಿಸುವುದಕ್ಕಾಗಿ ಸಾವಧಾನಚಿತ್ತದಿಂದ ವೈದ್ಯನು ತನ್ನನ್ನು ರಕ್ಷಿಸಿಕೊಂಡು ಜಪಗಳಿಂದಲೂ (ಓಂಕಾರಪೂರ್ವಕವಾಗಿ ಗಾಯತ್ರ್ಯಾದಿಮಂತ್ರ ಪುನಶ್ಚರಣೆಗಳಿಂದ) ಸ್ನಾನಸಂಧ್ಯಾದಿಕರ್ಮಗಳಿಂದಲೂ ಶುದ್ಧದೇಹಮನುಸ್ಸುಳ್ಳವನಾಗಿ ಲಕ್ಷ, ಕೋಟಿ, ಸಂಖ್ಯೆಗಳ ಹೋಮದಿಂದಲೂ ಚಿಕಿತ್ಸೆ ಮಾಡಲು ಪ್ರಾರಂಭಿಸಬೇಕು ; ಈ ವಿಧಾನಕ್ಕೆ "ದೈವವ್ಯಪಾಶ್ರಯ ಚಿಕಿತ್ಸೆ"ಯೆಂದು ಹೆಸರು.

ರಕ್ತಾನಿ ಗನ್ಧಮಾಲ್ಯಾನಿ ಬೀಜಾನಿ ಮಧುಸರ್ಪಿಷೀ ||೨೯||
ಭಕ್ಷ್ಯಾಶ್ಚ ಸರ್ವೇ ಸರ್ವೇಷಾಂ ಸಾಮಾನ್ಯೋ ವಿಧಿರುಚ್ಯತೇ ।
ವಸ್ತ್ರಾಣಿ ಗನ್ಧಮಾಲ್ಯಾನಿ ಮಾಂಸಾನಿ ರುಧಿರಾಣಿ ಚ ||೩೦||
ಯಾನಿ ಯೇಷಾಂ ಯಥೇಷ್ಟಾನಿ ತಾನಿ ತೇಭ್ಯಃ ಪ್ರದಾಪಯೇತ್ ।
ಹಿಂಸನ್ತಿ ಮನುಜಾನ್ ಯೇಷು ಪ್ರಾಯಶೋ ದಿವಸೇಷು ತು ||೩೧||
ದಿನೇಷು ತೇಷು ದೇಯಾನಿ ತದ್ಭೂತವಿನಿವೃತ್ತಯೇ ।
ದೇವಗ್ರಹೇ ದೇವ ಗೃಹೇ ಹುತ್ವಾಗ್ನಿಂ ಪ್ರಾಪಯೇದ್ಬಲಿಮ್ ||೩೨||
ಕುಶಸ್ವಸ್ತಿಕಪೂಪಾಜ್ಯಚ್ಛತ್ರಪಾಯಸ ಸಂಭೃತಮ್ ।

ಕುಂಕುಮಕೇಸರಿ, ಕೆಂಪುಕಣಿಗಲೆಹೂವು, ಸಾಸಿವೆ, ಉದ್ದು, ಯವಧಾನ್ಯ, ಜೇನುತುಪ್ಪ, ತುಪ್ಪ, ಲಡ್ಡುಕ, ಕರಿಗಡಬು, ತಂಬಿಟ್ಟು, (ಅಕ್ಕಿ ಬೆಲ್ಲಗಳನ್ನು ಸೇರಿಸಿ ತಯಾರಿಸಿದ ಭಕ್ಷ್ಯ) ಇವು ಸಕಲಗ್ರಹಗಳಿಗೂ ಮಾಡತಕ್ಕ ಸಾಮಾನ್ಯ ಪೂಜಾವಿಧಾನವೆಂದು ತಿಳಿಯಬೇಕು ; (ಬೀಜಾಣಿ ಎಂದರೆ ಯಂತ್ರದಲ್ಲಿ ಬರೆದ ಬೀಜಾಕ್ಷರಗಳೆಂದು ಕೆಲವರ ಮತ) ದೇವಾದಿಗ್ರಹಗಳ ಅನುಚರಗ್ರಹಗಳಲ್ಲಿ ಯಾವುವುಗಳಿಗೆ ಯಾವವಿಧಗಳಾದ ವಸ್ತ್ರಮಾಲ್ಯಾಹಾರಾದಿಗಳು ಇಷ್ಟವೊ ಅವುಗಳನ್ನೇ ತಯಾರಿಸಿ ಪೂಜಿಸಬೇಕು ; ವಸ್ತ್ರಗಳು, ಮದ್ಯಮಾಂಸಗಳು, ಕ್ಷೀರಗಳೆಂದು ಕೆಲವರ ಮತ. ಆಯಾಯ ಗ್ರಹಗಳಿಗೆ ಇಷ್ಟಗಳಾದ ವಸ್ತ್ರಗಳು ಮದ್ಯಮಾಂಸ, ಕ್ಷೀರಾದಿಗಳಿಂದ ತೃಪ್ತಿಪಡಿಸಬೇಕು ; ಯಾವ ಗ್ರಹಗಳು ಹಗಲುಹೊತ್ತಿನಲ್ಲಿ ಹಿಂಸಿಸುತ್ತವೋ ಆ ಭೂತ ನಿವಾರಣೆಗಾಗಿ ಹಗಲಿನಲ್ಲೇ ಆಯಾಯ ಬಲಿಗಳನ್ನು ಸಮರ್ಪಿಸಬೇಕು ; ದೇವಗ್ರಹಗಳಾದರೆ ದೇವರಮನೆಯಲ್ಲಿಯೇ ಹೋಮಮಾಡಿಸಿ ದರ್ಭೆಸ್ವಸ್ತಿಕ ಚಕ್ರದಂತೆ ರಂಗೋಲಿಯಿಂದ ಹಸೆಬರೆಸಿ ಬಾಳೆಲೆಹಾಸಿ ಅಪೂಪ (ಹೋಳಿಗೆ) ತುಪ್ಪ, ಛತ್ರ, ಪಾಯಸಗಳಿಂದ ಕೂಡಿದ ಭೂತಬಲಿಯನ್ನು

ಹಾಕಬೇಕು (ಗ್ರಹಗಳಿಗೆ ತಕ್ಕಂತೆ ಹುಗ್ಗಿ ಅಂದರೆ ಹೆಸರು ಅಕ್ಕಿಗಳನ್ನು ಸೇರಿಸಿ ತಯಾರಿಸಿದ ಅನ್ನ) ರಕ್ತಾನ್ನ, ಹರಿದ್ರಾನ್ನಗಳಿಂದ ಬಲಿದಾನಮಾಡಬೇಕು. ಕೆಲವರು ಸ್ವಸ್ತಿಕವೆಂದರೆ ಯವೆಯಹಿಟ್ಟಿನಿಂದ ಮಾಡಿದ ಭಕ್ಷ್ಯ ವಿಶೇಷವೆಂದೂ ಇದು ಕೆಳಗೆ ಅಗಲವಾಗಿ ಮಧ್ಯೆ ಮೂರುಪದರುಳ್ಳುದಾಗಿ ತುದಿನೊಸಚಾಗಿರಬೇಕೆಂದು ಹೇಳುತ್ತಾರೆ.

ಆಸುರಾಯ ಯಥಾಕಾಲಂ ವಿದಧ್ಯಾಚ್ಚತ್ವರಾದಿಷು ||೩೩||
ಗನ್ಧರ್ವಸ್ಯ ಗವಾಂ ಮಧ್ಯೇ ಮದ್ಯಮಾಂಸಾಮ್ಬುಜಾಙ್ಗಲಮ್ ।
ಹೃದ್ಯೇ ವೇಶ್ಮನಿ ಯಕ್ಷಸ್ಯ ಕುಲ್ಮಾಷಾಸ್ರಕ್ಸುರಾದಿಭಿಃ ||೩೪||
ಅತಿಮುಕ್ತಕಕುನ್ದಾಬ್ಜಪುಷ್ಪೈಶ್ಚ ವಿತರೇದ್ಬಲಿಮ್ ।
ನದ್ಯಾಂ ಪಿತೃಗ್ರಹಾಯೇಷ್ಟಂ ಕುಶಾಸ್ತರಣಭೂಷಿತಮ್ ||೩೫||
ತತ್ರೈವೋಪಹರೇಚ್ಚಾಪಿ ನಾಗಾಯ ವಿವಿಧಂ ಬಲಿಮ್ ।
ಚತುಷ್ಪಥೇ ರಾಕ್ಷಸಸ್ಯ ಭೀಮೇಷು ಗಹನೇಷು ವಾ ||೩೬||
ಶೂನ್ಯಾಗಾರೇ ಪಿಶಾಚಸ್ಯ ತೀವ್ರಂ ಬಲಿಮುಪಾಹರೇತ್ ।
ಪೂರ್ವಮಾಚರಿತೈರ್ಮನ್ತ್ರೈರ್ಭೂತವಿದ್ಯಾನಿದರ್ಶಿತೈಃ ||೩೭||
ನ ಶಕ್ಯಾ ಬಲಿಭಿರ್ಜೇತುಂ ಯೋಗೈಸ್ತಾನ್ ಸಮುಪಾಚರೇತ್ ।

ಅಸುರಗ್ರಹಗಳಿಗೆ ಆದರ ಕಾಲದಲ್ಲಿ ನಾಲ್ಕುದಾರಿಗಳು ಕೂಡುವ ಜಾಗದಲ್ಲಿ ಬಲಿದಾನಮಾಡಬೇಕು ; ಗಂಧರ್ವಗ್ರಹಗಳಿಗೆ ಹಸುಗಳನ್ನು ಕಟ್ಟುವಸ್ಥಳದಲ್ಲೂ (ದನದ ಕೊಟ್ಟಿಗೆ), ಮದ್ಯ, ಮಾಂಸ, ನೀರು, ಜಾಂಗಲಮಾಂಸ ಇವುಗಳನ್ನು (ಮನೆಯಲ್ಲಿ) ಬೆಂದ ತಡುಗುಣಿಕಾಳು, ರಕ್ತ, ಸುರೆಗಳಿಂದ ಕೂಡಿದ ಅನ್ನವನ್ನು ಬಲಿದಾನಮಾಡಬೇಕು. ಅದರೊಡನೆ ಅತಿಮುಕ್ತ (ಇರುವಂತಿಗೆ) ಮೊಲ್ಲೆ, ತಾವರೆ, ಹೂವುಗಳಿಂದ ಬಲಿಯನ್ನು ಅಲಂಕರಿಸಬೇಕು ; ಪಿತೃಗ್ರಹಾನುಚರರಿಗೆ ಹೊಳೆಯದಡದಲ್ಲಿ ದರ್ಭೆಯನ್ನು ಹಾಸಿದ ಭೂಮಿಯಲ್ಲಿ ಪಿಂಡದಾನಮಾಡಬೇಕು ; ನಾಗಾನುಚರಗ್ರಹಗಳಿಗೂ ಹೊಳೆಯದಡದಲ್ಲೇ ವಿವಿಧಪ್ರಕಾರದ ಬಲಿದಾನಮಾಡಬೇಕು ; ರಾಕ್ಷಸಾನುಚರರಿಗೆ ನಾಲ್ಕುದಾರಿ ಸೇರುವ ಸ್ಥಳದಲ್ಲೂ, ದಟ್ಟವಾದ ಕಾಡಿನಮಧ್ಯದಲ್ಲೂ ಬಲಿದಾನ ಮಾಡಬೇಕು ; ಪಿಶಾಚಗ್ರಹಗಳ ಅನುಚರರಿಗೆ ಶೂನ್ಯವಾದ (ವಾಸಮಾಡದಿರುವ) ಮನೆಯಲ್ಲಿ ಉಗ್ರವಾದ ಬಲಿದಾನವನ್ನು ಮಾಡಬೇಕು ; ಭೂತವಿದ್ಯೆಯಲ್ಲಿ ನಿರ್ದೇಶ ಮಾಡಿರುವ ಮಂತ್ರಗಳನ್ನು ಮೊದಲೇ ಜಪಮಾಡುತ್ತಾ ಬಲಿಹರಣಮಾಡಬೇಕು ; ಹಿಂದೆ ಹೇಳಿದ ಈ ವಿಧಾನಗಳಿಂದ ಗ್ರಹಗಳ ಪೀಡೆಯನ್ನು ನಿವಾರಿಸಲಾಗದಿದ್ದರೆ ಈ ಕೆಳಗೆ ಹೇಳುವ ಔಷಧಯೋಗಗಳಿಂದ ಉಪಚರಿಸಬೇಕು.

ಅಜರ್ಕ್ಷಚರ್ಮರೋಮಾಣಿ ಶಲ್ಯಕೋಲೂಕಯೋಸ್ತಥಾ ||೩೮||
ಹಿಙ್ಗು ಮೂತ್ರಂ ಚ ಬಸ್ತಸ್ಯಧೂಮಮಸ್ಯ ಪ್ರಯೋಜಯೇತ್ ।
ಏತೇನ ಶಾಮ್ಯತಿ ಕ್ಷಿಪ್ರಂ ಬಲವಾನಪಿ ಯೋ ಗ್ರಹಃ ||೩೯||

ಗಜಾಹ್ವಪಿಪ್ಪಲೀ ಮೂಲವ್ಯೋಷಾಮಲಕಸರ್ಷಪಾಃ ।
ಗೋಧಾನಕುಲಮಾರ್ಜಾರಋಷ್ಯಪಿತ್ತಪ್ರಪೇಷಿತಾಃ ॥೪೦॥
ನಸ್ಯಾಭ್ಯಞ್ಜನಸೇಕೇಷು ವಿದಧ್ಯಾದ್ಯೋಗತತ್ತ್ವವಿತ್ ।
ಖರಾಶ್ವಾಶ್ವತರೋಲೂಕಕರಭಶ್ವಶೃಗಾಲಜಮ್ ॥೪೧॥
ಪುರೀಷಂ ಗೃಧ್ರಕಾಕಾನಾಂ ವರಾಹಸ್ಯ ಚ ಪೇಷಯೇತ್ ।
ಬಸ್ತಮೂತ್ರೇಣ ತತ್ಸಿದ್ಧಂ ತೈಲಂ ಸ್ಯಾತ್ ಪೂರ್ವವದ್ಧಿತಮ್ ॥೪೨॥

ಆಡು, ಕರಡಿಗಳ ಚರ್ಮ ಮತ್ತು ರೋಮಗಳನ್ನು, ಮುಳ್ಳುಹಂದಿಯ ಮುಳ್ಳು ಮತ್ತು ಚರ್ಮ, ಮತ್ತು ಗೂಬೆಯಗರಿ ಮತ್ತು ಚರ್ಮಗಳನ್ನೂ, ಹಿಂಗು, ಆಡಿನಮೂತ್ರಗಳನ್ನೂ, ಕೂಡಿಸಿ ಕೆಂಡದಮೇಲೆಹಾಕಿ ಬರುವಹೊಗೆಯನ್ನು ಗ್ರಹಪೀಡಿತನ ಶರೀರಕ್ಕೆ ತಗುಲಿಸಿದರೆ ಬಲಿಷ್ಠವಾದಗ್ರಹಬಾಧೆಯೂ ಕ್ಷಿಪ್ರದಲ್ಲೇ ನಿಂತುಬಿಡುತ್ತದೆ ; ಗಜಹಿಪ್ಪಲಿ, ಮೋಡಿ, ತ್ರಿಕಟು, ನೆಲ್ಲಿಕಾಯಿ, ಸಾಸಿವೆ, ಉಡ, ಮುಂಗಿಸಿ, ಬೆಕ್ಕು, ಕರಿಹುಲ್ಲೇ, ಇವುಗಳ ಪಿತ್ತವನ್ನೂ ಅರೆದುಕಲ್ಕಮಾಡಿ ಶಾಸ್ತ್ರಕುಶಲನಾದ ವೈದ್ಯನು ನಸ್ಯ, ಅಂಜನ, ಸ್ವೇಚನೆಗಳನ್ನು ಮಾಡಿಸಿದರೆ ಗ್ರಹಬಾಧೆಯು ನಿವಾರಣೆಯಾಗುತ್ತದೆ ; ಕತ್ತೆ, ಕುದುರೆ, ಹೇಸರಕತ್ತೆ, ಗೂಬೆ, ಒಂಟೆ, ನಾಯಿ, ನರಿ, ಹದ್ದು, ಕಾಗೆ, ಹಂದಿ, ಇವುಗಳ ಪುರೀಷಗಳನ್ನು ಆಡಿನ ಮೂತ್ರದೊಡನೆ ತೈಲಪಾಕಮಾಡಿ, ನಸ್ಯ, ಅಂಜನ, ಸೇಕಗಳಿಂದ ಪ್ರಯೋಗಿಸಿದರೆ ಪಿಶಾಚಾದಿಗ್ರಹಗಳ ಬಾಧೆಯು ನಿವಾರಣೆಯಾಗುತ್ತದೆ.

ಶಿರೀಷಬೀಜಂ ಲಶುನಂ ಶುಂಠೀಂ ಸಿದ್ಧಾರ್ಥಕಂ ವಚಾಮ್ ।
ಮಞ್ಜಿಷ್ಠಾಂ ರಜನೀಂ ಕೃಷ್ಣಾಂ ಬಸ್ತಮೂತ್ರೇಣ ಪೇಷಯೇತ್ ॥೪೩॥
ವರ್ತ್ಯಶ್ಛಾಯಾವಿಶುಷ್ಕಾಸ್ತಾಃ ಸಪಿತ್ತಾ ನಯನಾಞ್ಜನಮ್ ।
ನಕ್ತಮಾಲಫಲಂ ವ್ಯೋಷಂ ಮೂಲಂ ಸ್ಯೋನಾಕಬಿಲ್ವಯೋಃ ॥೪೪॥
ಹರಿದ್ರೇ ಚ ಕೃತಾ ವರ್ತ್ಯಃ ಪೂರ್ವವನ್ನಯನಾಞ್ಜನಮ್ ।
ಯೇ ಯೇ ಗ್ರಹಾ ನಸಿಧ್ಯನ್ತಿ ಸರ್ವೇಷಾಂ ನಯನಾಞ್ಜನಮ್ ॥೪೫॥
ಸೈನ್ಧವಂ ಕಟುಕಾಂ ಹಿಙ್ಗುಂ ವಯಸ್ಥಾಂ ಚ ವಚಾಮಪಿ ।
ಬಸ್ತಮೂತ್ರೇಣ ಸಂಪಿಷ್ಟಂ ಮತ್ಸ್ಯಪಿತ್ತೇನ ಪೂರ್ವವತ್ ॥೪೬॥

ಬಾಗೆಯಬೀಜ, ಬೆಳ್ಳುಳ್ಳಿ, ಶುಂಠಿ, ಬಿಳಿಯಸಾಸಿವೆ, ಬಜೆ, ಮಂಜಿಷ್ಠೆ, ಅರಿಶಿನ, ಹಿಪ್ಪಲಿ, ಗೋರೋಚನವನ್ನು ಆಡಿನಮೂತ್ರದಿಂದ ಅರೆದು ಬತ್ತಿಗಳನ್ನು ಮಾಡಿನೆರಳಿನಲ್ಲಿಟ್ಟು ಒಣಗಿಸಿ ಕಣ್ಣಿಗೆ ಅಂಜನಹಾಕಬೇಕು ; ಹೊಂಗೆಯಬೀಜ, ತ್ರಿಕಟು, ಹೆಮ್ಮರದ ಬೇರು, ಬಿಲ್ವಪತ್ರೆಯಬೇರು, ಅರಿಶಿನ, ಇವುಗಳನ್ನು ಆಡಿನ ಗಂಜಳದಲ್ಲರೆದು ನೆರಳಿನಲ್ಲಿ ಒಣಗಿಸಿದ ಬತ್ತಿಯನ್ನು ಕಣ್ಣಿಗೆಚ್ಚಿದರೆ ಹಿತಕರವು ; ಯಾವಗ್ರಹಗಳು ಮೇಲಿನ ಚಿಕಿತ್ಸಾಕ್ರಮಗಳಿಂದ ಶಾಂತವಾಗುವುದಿಲ್ಲವೋ ಅವೆಲ್ಲವುಗಳಿಗೂ ಸೈಂಧವ, ಕಟುಕರೋಹಿಣಿ, ಹಿಂಗು, ಅಮೃತವಳ್ಳಿಯಬೇರು, ಬಜೆ, ಇವುಗಳನ್ನು ಹಿಂದೆ ಹೇಳಿದಂತೆ ಆಡಿನಮೂತ್ರ

ದಿಂದಾಗಲೀ ಮೀನಿನ ಪಿತ್ತದಿಂದಾಗಲೀ ಅರೆದು ಬತ್ತಿಗಳನ್ನು ಮಾಡಿ ನೆರಳಿನಲ್ಲಿ ಒಣಗಿಸಿ ಅಂಜನ ಹಾಕಬೇಕು.

ಪುರಾಣಸರ್ಪಿರ್ಲಶುನಂ ಹಿಙ್ಗು ಸಿದ್ಧಾರ್ಥಕಂ ವಚಾ ।
ಗೋಲೋಮೀ ಚಾಜಲೋಮೀ ಚ ಭೂತಕೇಶೀ ಜಟಾ ತಥಾ ॥೪೭॥
ಕುಕ್ಕುಟೀ ಸರ್ಪಗನ್ಧಾ ಚ ತಥಾ ಕಾಣವಿಕಾಣಿಕೇ ।
ವಜ್ರಪ್ರೋಕ್ತಾವಯಸ್ಥಾ ಚ ಶೃಙ್ಗೀ ಮೋಹನವಲ್ಲಿಕಾ ॥೪೮॥
ಅರ್ಕಮೂಲಂ ತ್ರಿಕಟುಕಂ ಲತಾಸ್ರೋತೋಜಮಞ್ಜನಮ್ ।
ನೈಪಾಳೀ ಹರಿತಾಳಂ ಚ ರಕ್ಷೋಘ್ನಾ ಯೇ ಚ ಕೀರ್ತಿತಾಃ ॥೪೯॥
ಸಿಂಹವ್ಯಾಘ್ರರ್ಕ್ಷಮಾರ್ಜಾರದ್ವೀಪಿವಾಜಿಗವಾಂ ತಥಾ ।
ಶ್ವಾವಿಚ್ಛಲ್ಲಕಗೋಧಾನಾಮುಷ್ಟ್ರಸ್ಯ ನಕುಲಸ್ಯ ಚ ॥೫೦॥
ವಿಟ್ತ್ವಗ್ರೋಮವಸಾಮೂತ್ರ ರಕ್ತಪಿತ್ತ ನಖಾದಯಃ ।
ಅಸ್ಮಿನ್ ವರ್ಗೇ ಭಿಷಕ್ ಕುರ್ಯಾತ್ ತೈಲಾನಿ ಚ ಘೃತಾನಿ ಚ ॥೫೧॥
ಪಾನಾಭ್ಯಞ್ಜನ ನಸ್ಯೇಷು ತಾನಿಯೋಜ್ಯಾನಿ ಜಾನತಾ ।
ಅವಪೀಡೇಽಞ್ಜನೇ ಚೈವ ವಿದಧ್ಯಾದ್ಗುಟಿಕೀಕೃತಮ್ ॥೫೨॥
ವಿದಧೀತ ಪರೀಷೇಕೇ ಕ್ವಥಿತಂ ಚೂರ್ಣಿತಂ ತಥಾ ।
ಉದ್ಧೂಳನೇ ಶ್ಲಕ್ಷ್ಣಪಿಷ್ಟಂ ಪ್ರದೇಹೇ ಚಾವಚಾರಯೇತ್ ॥೫೩॥
ಏಷ ಸರ್ವವಿಕಾರಾಂಸ್ತು ಮಾನಸಾನಪರಾಜಿತಃ ।
ಹನ್ಯಾದಲ್ಪೇನ ಕಾಲೇನ ಸ್ನೇಹಾದಿರಪಿ ಚ ಕ್ರಮಃ ॥೫೪॥

ಹಳೆಯತುಪ್ಪ (೧೦ ವರ್ಷಕ್ಕೆ ಹಿಂದಿನದು), ಬೆಳ್ಳುಳ್ಳಿ, ಹಿಂಗು, ಬಿಳಿಯಸಾಸಿವೆ ಬಜೆ, ಗರಿಕೆ, ಬಿಳಿಯಗರಿಕೆ, ಜಟಾಮಾಂಸೀ, ಗಂಧಮಾಂಸೀ, ಕುಕ್ಕುಟದಂತೆ ಇರುವ ಗೆಡ್ಡೆ, (ಅಣ್ಣೆಸೊಪ್ಪು) ಸರ್ಪಗಂಧಾ, (ಆಡುಮುಟ್ಟದಗಿಡ ?) ಕಾಕೋಳೀ, ಕ್ಷೀರಕಾಕೋಳೀ, ವಜ್ರಕಂದ (ಮಂಗರವಳ್ಳಿ ?) ಅಮೃತವಳ್ಳಿ, ಕರ್ಕಾಟಕಶೃಂಗಿ, ವಟಪ್ರತಿ (ಹಿಟ್ಟಳಿಕ ?) ಎಕ್ಕದಬೇರು, ತ್ರಿಕಟು, ನೆಳಲು, ಸ್ರೋತೋಂಜನ, ಮಣಶಿಲೆ, ಅರಿದಾಳ, ಬಿಳಿಯಸಾಸಿವೆ, ಸಿಂಹ, ಹುಲಿ, ಕರಡಿ, ಬೆಕ್ಕು, ಚಿತ್ರವರ್ಣದಹುಲಿ (ಕಿರುಬ) ಕುದುರೆ, ಹಸು, ಕಾಡುಹಂದಿ, ಮುಳ್ಳುಹಂದಿ, ಉಡ, ಒಂಟೆ ಮುಂಗಿಸಿ, ಇವುಗಳ ಮಲ, ಚರ್ಮ, ರೋಮಗಳು, ವಸಾ, ಮೂತ್ರಾ, ರಕ್ತ, ಪಿತ್ತ, ಉಗುರುಮೊದಲಾದುವುಗಳು ; ಈ ವರ್ಗಕ್ಕೆ "ಅಪರಾಜಿತಯೋಗವೆಂದು" ಹೆಸರು ; ಎಲ್ಲಾ ಪದಾರ್ಥಗಳನ್ನಾಗಲೀ ಅವಶ್ಯಕವಾಗಿ ದೊರಕಿದಷ್ಟನ್ನೇ ಆಗಲಿ ಶೇಖರಿಸಿ ತೈಲಗಳನ್ನೂ ಘೃತಗಳನ್ನೂ ತಯಾರಿಸಿ ಪಾನ ಅಭ್ಯಂಗ (ಅಂಜನ) ನಸ್ಯ ಕರ್ಮಗಳಿಂದ ಪ್ರಯೋಗಿಸಬೇಕು ; ವರ್ತಿಗಳನ್ನಾಗಿ ಮಾಡಿ ಅವಪೀಡನಸ್ಯ ನೇತ್ರಾಂಜನಗಳಾಗಿಯೂ, ಕಷಾಯಮಾಡಿ ಮೈಮೇಲೆ ಸೇಚನೆ ಮಾಡುವುದಕ್ಕೂ ಚೂರ್ಣಮಾಡಿಮೈಮೇಲೆ ಉದುರಿಸುವುದಕ್ಕೂ, ನುಣ್ಣಗೆ ಅರೆದು ಕಲ್ಕಮಾಡಿಮೈಗೆ ಲೇಪಿಸುವುದಕ್ಕೂ ಉಪಯೋಗಮಾಡಬೇಕು ; ಇತರವಿಧಗಳಾದ

ಔಷಧಪ್ರಯೋಗಗಳಿಂದಲೂ ನಿವಾರಣೆಯಾಗದಿರುವ ಸಕಲವಿಧಗಳಾದ ಮನೋವಿಕಾರಗಳನ್ನೂ ಸ್ವಲ್ಪ ಕಾಲದಲ್ಲೇ ನಾಶಮಾಡುವುದರಿಂದ ಇದಕ್ಕೆ "ಅಪರಾಜಿತಯೋಗ"ವೆಂದು ಹೆಸರು. ಸ್ನೇಹ, ಸ್ವೇದ, ವಮನ, ವಿರೇಕಾದಿಕ್ರಮಗಳನ್ನು ಅನುಸರಿಸಬೇಕು.

ನ ಚಾ ಚೌಕ್ಷಂ ಪ್ರಯುಞ್ಜೀತ ಪ್ರಯೋಗಂ ದೇವತಾಗ್ರಹೇ ।
ಋತೇ ಪಿಶಾಚಾದನ್ಯೇಷು ಪ್ರತಿಕೂಲಂ ನ ಚಾಚರೇತ್ ॥೫೫॥
ವೈದ್ಯಾತುರೌ ನಿಹನ್ಯುಸ್ತೇ ಧ್ರುವಂ ಕ್ರುದ್ಧಾ ಮಹೌಜಸಃ ।
ಹಿತಾಹಿತೀಯೇ ಯಚ್ಚೋಕ್ತಂ ನಿತ್ಯಮೇವ ಸಮಾಚರೇತ್ ॥೫೬॥
ತತಃ ಪ್ರಾಪ್ಸ್ಯತಿ ಸಿದ್ಧಿಂ ಚ ಯಶಸ್ಚ ವಿಪುಲಂ ಭಿಷಕ್ ॥೫೭॥

ದೇವಗ್ರಹಗಳು ಆವೇಶವಾಗಿರುವಾಗ ಅಶುಚಿಗಳಾದ ಕ್ರಿಯೆಗಳನ್ನು ಆಚರಿಸಬಾರದು ಪಿಶಾಚಗ್ರಹಗಳನ್ನು ಬಿಟ್ಟು ಇತರ ಗ್ರಹಾವೇಶಗಳಲ್ಲಿ ವಿರುದ್ಧಾಚರಣೆಗಳನ್ನು ಮಾಡಕೂಡದು ; ಮಹಾಪರಾಕ್ರಮಿಗಳಾದ ಗ್ರಹಗಳಿಗೆ ಕೋಪವುಂಟಾದರೆ ಖಂಡಿತವಾಗಿಯೂ ರೋಗಿಯನ್ನೂ ವೈದ್ಯನನ್ನೂ ಕೊಂದುಬಿಡುತ್ತವೆ ; ಹಿತಾಹಿತೀಯಾಧ್ಯಾಯದಲ್ಲೂ ವ್ರಣಿತೋಪಾಸನೀಯಾಧ್ಯಾಯದಲ್ಲೂ ವಿವರಿಸಿರುವಂತೆ ರಕ್ತಶಾಲ್ಯೋದನಾದಿಗಳನ್ನೂ ಉಷ್ಣೋದಕೋಪಚಾರ ಬ್ರಹ್ಮಚರ್ಯಪಾಲನಾದಿ ಕ್ರಮಗಳನ್ನೂ ಅನುಸರಿಸಬೇಕು ; ಇದರಿಂದ ವೈದ್ಯನಿಗೆ ಕ್ರಿಯಾಸಿದ್ಧಿಯೂ ಅಧಿಕವಾದ ಯಶಸ್ಸೂ ಲಭಿಸುತ್ತದೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಭೂತವಿದ್ಯಾಯಾ
ಮಮಾನುಷೋಪಸರ್ಗಪ್ರತಿಷೇಧನಾಮಕ ಷಷ್ಟಿತಮಾಧ್ಯಾಯಸ್ಯ ಶ್ರೀ ಭಟ್ಟಾ
ಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ
ಕರ್ಣಾಟಕ ಭಾಷಾವಿವೃತಿಃ.

ಏಕಷಷ್ಠಿತಮೋಽಧ್ಯಾಯಃ

ಅಥಾತೋಽಪಸ್ಮಾರಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ (ಸ್ಮರಣೆತಪ್ಪಿದ ಕಾರಣ) ಅಪಸ್ಮಾರವೆಂಬ ಮಾನಸರೋಗದ ಚಿಕಿತ್ಸೆಯನ್ನು ವಿವರಿಸುತ್ತೇವೆ.

ಸ್ಮೃತಿರ್ಭೂತಾರ್ಥವಿಜ್ಞಾನಮಪಶ್ಚ ಪರಿವರ್ಜನೇ ।
ಅಪಸ್ಮಾರ ಇತಿ ಪ್ರೋಕ್ತಸ್ತತೋಽಯಂ ವ್ಯಾಧಿರನ್ತಕೃತ್ ||೩||

ಕಳೆದುಹೋದವಿಚಾರಗಳು ಮರೆತುಹೋದರೆ ಅಂದರೆ ಸ್ಮೃತಿತಪ್ಪುವುದಕ್ಕೆ ಅಪಸ್ಮಾರವೆಂದು ಹೇಳುತ್ತಾರೆ; ಈ ವ್ಯಾಧಿಯು ಜ್ಞಾನಶೂನ್ಯನಾಗಿರುವ ಮನುಷ್ಯನನ್ನು ನೀರಿನಲ್ಲಿ ಮುಳುಗುವಂತಾಗಲೀ ಬೆಂಕಿಯ ಜ್ವಾಲೆಯಲ್ಲಿ ಧುಮಿಕಿ ಸುಟ್ಟುಹೋಗುವಂತಾಗಲೀ ಮಾಡಿ ಸಾಯಿಸುವಕಾರಣ ವಿನಾಶಕರವಾದುದೆಂದು ತಿಳಿಯಬೇಕು.

ಮಿಥ್ಯಾತಿಯೋಗೇನ್ದ್ರಿಯಾರ್ಥ ಕರ್ಮಣಾಮಭಿಸೇವನಾತ್ ।
ವಿರುದ್ಧಮಲಿನಾಹಾರವಿಹಾರ ಕುಪಿತೈರ್ಮಲೈಃ ||೪||
ವೇಗನಿಗ್ರಹಶೀಲಾನಾಮಹಿತಾಶುಚಿಭೋಜಿನಾಮ್ ।
ರಜಸ್ತಮೋಽಭಿಭೂತಾನಾಂ ಗಚ್ಛತಾಂ ಚ ರಜಸ್ವಲಾಮ್ ||೫||
ತಥಾ ಕಾಮಭಯೋದ್ವೇಗಕ್ರೋಧಶೋಕಾದಿಭಿರ್ಭೃಶಮ್ ।
ಚೇತಸ್ಯುಪಹತೇ ಪುಂಸಾಮಪಸ್ಮಾರೋಽಭಿಜಾಯತೇ ||೬||

ಹೀನಯೋಗ, ಅತಿಯೋಗ, ಮಿಥ್ಯಾಯೋಗಗಳಿಂದ ಇಂದ್ರಿಯಾರ್ಥ ಸಂಯೋಗ ಶರೀರ ಮತ್ತು ಮನಸ್ಸಿನ ಕಾರ್ಯಗಳುಂಟಾಗುವುದು, ವಿರುದ್ಧವಾದ ಕೊಳಕಾದ ಆಹಾರಾಚಾರಗಳ ಸೇವನೆಯಿಂದಲೂ ವಾತಾದಿವೇಗಗಳನ್ನು ತಡೆಯುವ ರಜೋಗುಣ ತಮೋಗುಣಗಳೇ ಅಧಿಕವಾಗಿರುವ, ರಜಸ್ವಲೆಯೊಡನೆ ಮೈಥುನ ಮಾಡುವ ಪುರುಷರಿಗೆ ಕಾಮ, ದುಃಖ, ಭಯ, ಕೋಪ ಇವುಗಳಿಂದ ಮನಸ್ಸು ಪೀಡಿತವಾಗಿ ಸ್ಮರಣಶಕ್ತಿನಾಶವಾಗುತ್ತದೆ ; ಇದಕ್ಕೆ ಅಪಸ್ಮಾರವೆನ್ನುತ್ತಾರೆ.

ಟಿಪ್ಪಣಿ :—ಕಠಿನವಚನ, ಇಷ್ಟವಸ್ತುವಿನ ನಾಶವನ್ನು ಕೇಳುವುದು, ಶ್ರವಣೇಂದ್ರಿಯದ ಮಿಥ್ಯಾಯೋಗವು ; ಭೇರಿ ಮೊದಲಾದುವುಗಳ ಶಬ್ದವನ್ನು ಹೆಚ್ಚಾಗಿ ಕೇಳುವುದು ಅತಿಯೋಗವು, ಯಾವಶಬ್ದವನ್ನೂ ಕೇಳದೇ ಇರುವುದು ಅಯೋಗವು ; ಶೀತಾದಿಗಳಿಗೆ ವಿರುದ್ಧವಾದುದನ್ನು ಸೇವಿಸುವುದು ಸ್ಪರ್ಶನೇಂದ್ರಿಯದ ಮಿಥ್ಯಾಯೋಗ ;

ಅತಿಶೀತಾದಿಗಳನ್ನು ಅತಿಯಾಗಿ ಸೇವಿಸುವುದು ಅತಿಯೋಗವು ಸ್ವಲ್ಪವೂ ಸೇವಿಸದಿದ್ದರೆ ಅಯೋಗವು ; ಅತಿವಿಕಾರವಾದ ರೂಪನ್ನು ನೋಡುವುದು ದರ್ಶನೇಂದ್ರಿಯದ ಮಿಥ್ಯಾಯೋಗವು ; ಅತಿಪ್ರಕಾಶವಸ್ತುಗಳನ್ನು ಅತಿಯಾಗಿ ನೋಡುವುದು ಅತಿಯೋಗವು ಅಯೋಗ್ಯರಸಗಳನ್ನು ಸೇವಿಸುವುದು ಮಿಥ್ಯಾಯೋಗವು ; ಇಷ್ಟರಸಗಳನ್ನು ಅತಿಯಾಗಿ ಸೇವಿಸುವುದು ಅತಿಯೋಗವು ; ಸ್ವಲ್ಪವೂ ಸೇವಿಸದೇ ಇರುವುದು ಅಯೋಗವು ; ದುರ್ಗಂಧ ಸೇವನೆಯು ಘ್ರಾಣೇಂದ್ರಿಯದ ಮಿಥ್ಯಾಯೋಗವು ; ಚುರುಕಾದ ಗಂಧವನ್ನು ಅತಿಸೇವಿಸುವುದು ಅತಿಯೋಗವು ; ಸ್ವಲ್ಪವೂ ವಾಸನೆಯನ್ನೇ ಸೇವಿಸದಿರುವುದು ಅಯೋಗವು ; ವ್ಯಾಯಾಮಾದಿ ಕಾರ್ಯಗಳನ್ನು ನಿಷಿದ್ಧಕಾಲದಲ್ಲಿ ಮಾಡುವುದು ಕರ್ಮದ ಮಿಥ್ಯಾಯೋಗವು ; ಅತಿಯಾಗಿಸೇವಿಸುವುದು ಅತಿಯೋಗವು; ಸ್ವಲ್ಪ ಮಟ್ಟಿಗೂ ಸೇವಿಸದಿರುವುದು ಅಯೋಗವು ; ಕಠಿನ ಮತ್ತು ಅಸತ್ಯಮಾತುಗಳನ್ನಾಡುವುದು ವಚನ ಮಿಥ್ಯಾಯೋಗವು ; ಅತಿಮಾತನಾಡುವುದು ಅತಿಯೋಗವು. ಮಾತನ್ನೆ ಆಡದೆ ಮೌನವಾಗಿದ್ದರೆ ಅಯೋಗವು ; ದುಃಖಸ್ನೇಹಾದಿಗಳನ್ನು ಯೋಚಿಸುವುದು ಮನಸ್ಸಿನ ಮಿಥ್ಯಾಯೋಗವು. ಅತಿಯಾಗಿ ಯೋಚಿಸುವುದು ವಿಷಾದಪಡುವುದು ಅತಿಯೋಗವು, ಸ್ವಲ್ಪವೂ ಯೋಚಿಸದಿರುವುದು ಅಯೋಗವು ; ಹಳಸಿದ, ದ್ವೇಷಮಾಡಿದ, ಕೊಳಕಾದ, ತಂಗಳು ಈ ವಿಧದ ಅನ್ನಗಳನ್ನು ಸೇವಿಸುವುದು. ರಜಸ್ವಲೆ ಎಂದು ಹೇಳಿದ್ದು ದುಷ್ಟಾರ್ತವವುಳ್ಳ ಸ್ತ್ರೀಯೆಂದರ್ಥವು.

ಹೃತ್ಕಮ್ಪಃ ಶೂನ್ಯತಾ ಸ್ವೇದೋ ಧ್ಯಾನಂ ಮೂರ್ಛಾ ಪ್ರಮೂಢತಾ
ನಿದ್ರಾನಾಶಶ್ಚ ತಸ್ಮಿಂಸ್ತು ಭವಿಷ್ಯತಿ ಭವನ್ತ್ಯಥ ॥೭॥

ಎದೆನಡುಕ, ಹೃದಯಶೂನ್ಯತೆ, ಮೈ ಬೆವರುವುದು, ಎಲ್ಲವನ್ನೂ ಮರೆತು ಬಿಡುವುದು, ಜ್ಞಾನನಾಶ, ಇಂದ್ರಿಯಾರ್ಥ ಜ್ಞಾನವಿಲ್ಲದಿರುವಿಕೆ, ನಿದ್ರೆಯಿಲ್ಲದಿರುವುದು ಈ ಲಕ್ಷಣಗಳು ಅಪಸ್ಮಾರ ರೋಗದ ಪೂರ್ವರೂಪಗಳು.

ಸಂಜ್ಞಾವಹೇಷು ಸ್ರೋತಃಸು ದೋಷವ್ಯಾಪ್ತೇಷು ಮಾನವಃ ।
ರಜಸ್ತಮಃ ಪರೀತೇಷು ಮೂಢೋ ಭ್ರಾನ್ತೇನ ಚೇತಸಾ ॥೮॥
ವಿಕ್ಷಿಪನ್ ಹಸ್ತಪಾದೌ ಚ ವಿಜಿಹ್ಮಭ್ರೂರ್ವಿಲೋಚನಃ ।
ದನ್ತಾನ್ ಖಾದನ್ ವಮನ್ ಫೇನಂ ವಿವೃತಾಕ್ಷಃ ಪತೇತ್ ಕ್ಷಿತೌ ॥೯॥
ಅಲ್ಪಕಾಲಾನ್ತರಂ ಚಾಪಿ ಪುನಃ ಸಂಜ್ಞಾಂ ಲಭೇತ ಸಃ ।
ಸೋಽಪಸ್ಮಾರ ಇತಿ ಪ್ರೋಕ್ತಃ ಸ ಚ ದುಷ್ಟಃ ಚತುರ್ವಿಧಃ ॥೧೦॥
ವಾತಪಿತ್ತಕಫೈರ್ನೃಣಾಂ ಚತುರ್ಥಃ ಸನ್ನಿಪಾತತಃ ।

ಸಂಜ್ಞಾವಾಹಿ ಸ್ರೋತಸ್ಸುಗಳು ರಜಸ್ತಮೋ ಗುಣಗಳಿಂದ ಪೂರ್ಣವಾಗಿ ವ್ಯಾಪಿಸಲ್ಪಡುವ ಕಾರಣ ಮೋಹದಿಂದ ಕೂಡಿದ ಆ ರೋಗಿಯು ಚಿತ್ತಪಲ್ಲಟದಿಂದ ಕೈಕಾಲುಗಳನ್ನು ಅತ್ತಿತ್ತ ಕಡೆಗೆ ಚಾಚುತ್ತಾ ಹುಬ್ಬುಗಳನ್ನೂ, ಕಣ್ಣುಗಳನ್ನೂ ಸೊಟ್ಟ

ಮಾಡಿಕೊಂಡು ಹಲ್ಲುಗಳನ್ನು ಕಡಿಯುತ್ತ ನೊರೆನೊರೆಯಾಗಿ ಕಫವನ್ನು ವಮನ ಮಾಡುತ್ತಾ ಕಣ್ಣುಗಳನ್ನು ಅಗಲಿಸುತ್ತಾನೆ, ನೆಲದಮೇಲೆ ಬೀಳುತ್ತಾನೆ; ಸ್ವಲ್ಪ ಹೊತ್ತಿನ ಮೇಲೆ ಜ್ಞಾನಬರುತ್ತದೆ ; ಈ ರೋಗಕ್ಕೆ ಅಪಸ್ಮಾರವೆಂದು ಹೆಸರು. ಈ ದುಷ್ಟ ರೋಗವು ವಾತ, ಪಿತ್ತ, ಕಫ, ಸನ್ನಿಪಾತಗಳೆಂಬ ೪ ಭೇದಗಳನ್ನುಳ್ಳದ್ದು.

ವೇಪಮಾನೋ ದಶೇದ್ದನ್ತಾಞ್ ಶ್ವಸನ್ ಫೇನಂ ವಮನ್ನಪಿ ॥೧೧॥
ಯೋಬ್ರೂಯಾದ್ವಿಕೃತಂ ಸತ್ವಂ ಕೃಷ್ಣಂ ಮಾಮನುಧಾವತಿ ।
ತತೋ ಮೇ ಚಿತ್ತನಾಶಃ ಸ್ಯಾತ್ಸೋಽಪಸ್ಮಾರೋಽನಿಲಾತ್ಮಕಃ ॥೧೨॥
ತೃಟ್ತಾಪಸ್ವೇದಮೂರ್ಛಾರ್ತೋ ಧುನ್ವನ್ನಙ್ಗಾನಿ ವಿಹ್ವಲಃ ।
ಯೋ ಬ್ರೂಯಾದ್ವಿಕೃತಂ ಸತ್ವಂ ಪೀತಂ ಮಾಮನುಧಾವತಿ ॥೧೩॥
ತತೋ ಮೇ ಚಿತ್ತನಾಶಃ ಸ್ಯಾತ್ಸ ಪಿತ್ತಭವ ಉಚ್ಯತೇ ।
ಶೀತಹೃಲ್ಲಾಸನಿದ್ರಾರ್ತಃ ಪತನ್ ಭೂಮೌ ವಮನ್ ಕಫಮ್ ॥೧೪॥
ಯೋ ಬ್ರೂಯಾದ್ವಿಕೃತಂ ಸತ್ವಂ ಶುಕ್ಲಂ ಮಾಮನುಧಾವತಿ ।
ತತೋ ಮೇ ಚಿತ್ತನಾಶಃ ಸ್ಯಾತ್ಸೋಽಪಸ್ಮಾರಃ ಕಫಾತ್ಮಕಃ ॥೧೫॥

ನಡುಗುತ್ತಲೂ ಹಲ್ಲುಗಳನ್ನು ಕಡಿಯುತ್ತಲೂ ಊರ್ಧ್ವಶ್ವಾಸವನ್ನು ಬಿಡುತ್ತಲೂ ನೊರೆಯನ್ನು ಉಗುಳುತ್ತಲೂ, ಕಪ್ಪುಬಣ್ಣದ ವಿಕಾರರೂಪದ ಪ್ರಾಣಿಯು ನನ್ನನ್ನು ಅಟ್ಟಿಕೊಂಡು ಬರುತ್ತಿದೆ. ಆದರಿಂದ ನನಗೆ ಬುದ್ಧಿನಾಶವಾಗಿರುತ್ತೆಂದು ಹೇಳಿದರೆ ಅದು ವಾತಿಕಾಪಸ್ಮಾರವೆಂದೂ, ಬಾಯಾರಿಕೆ, ಮೈ ಉರಿತ, ಬೆವರುವುದು, ಜ್ಞಾನತಪ್ಪುವುದು, ಮೈಕೊಡವುತ್ತಾ ವ್ಯಥೆಪಡುತ್ತಾ ಹಳದಿಯ ಬಣ್ಣದ ಪ್ರಾಣಿಯು ನನ್ನನ್ನು ಅಟ್ಟಿಕೊಂಡು ಬರುತ್ತಿದೆ, ಆದರಿಂದ ನನಗೆ ಬುದ್ಧಿನಾಶವಾಗಿರುತ್ತೆಂದು ಹೇಳಿದರೆ ಅದು ಪೈತ್ತಿಕಾಪಸ್ಮಾರವೆಂದೂ, ಮೈತಣ್ಣಗೂ, ಬಾಯಿನಿಂದ ನೀರು ಸುರಿಯುವುದು, ನಿದ್ರೆ ಮಾಡುತ್ತಲೇ ಇರುವುದು, ನೆಲಕ್ಕೆ ಬೀಳುತ್ತಲೂ, ಕಫವನ್ನು ವಮನಮಾಡುತ್ತಲೂ, ಬಿಳಿ ಬಣ್ಣದ ವಿಕಾರಮುಖದ ಪ್ರಾಣಿಯು ನನ್ನನ್ನು ಅಟ್ಟಿಸಿಕೊಂಡು ಬರುತ್ತಿದೆ, ಆದರಿಂದ ನನಗೆ ಬುದ್ಧಿಕೆಟ್ಟಿರುತ್ತೆಂದು ಹೇಳಿದರೆ ಅದು ಕಫಜ ಅಪಸ್ಮಾರವೆಂದೂ ತಿಳಿಯಬೇಕು.

ಹೃದಿತೋದಸ್ತೃಡುತ್ಕ್ಲೇದಸ್ತ್ರಿಷ್ವಪ್ಯೇತೇಷು ಸಙ್ಖ್ಯಯಾ ।
ಪ್ರಲಾಪಃ ಕೂಜನಂ ಕ್ಲೇಶಃ ಪ್ರತ್ಯೇಕಂ ತು ಭವೇದಿಹ ॥೧೬॥

ವಾತಜಾಪಸ್ಮಾರದವರಿಗೆ ಹೃದಯಶೂಲೆಯೂ, ಪೈತ್ತಿಕದಲ್ಲಿ ಬಾಯಾರಿಕೆಯೂ, ಕಫಜಾಪಸ್ಮಾರದಲ್ಲಿ ಬಾಯಿನಿಂದ ನೀರು ಕಾರುವುದೂ ಈ ರೀತಿಯಾಗಿ ದೋಷಗಳಿಗೆ ತಕ್ಕ ಲಕ್ಷಣಗಳುಂಟಾಗುತ್ತವೆ. ಅಸಂಬದ್ಧವಾದ ಮಾತುಗಳನ್ನಾಡುವುದು, ಗಂಟಲೊಳಗೆ 'ಕೂ' ಎಂದು ಶಬ್ದಮಾಡುವುದು, ಆಯಾಸಪಡುವುದು, ಇವು ಎಲ್ಲಾ ವಿಧದ ಅಪಸ್ಮಾರಗಳಲ್ಲೂ ಇರುವ ಸಾಮಾನ್ಯ ಲಕ್ಷಣಗಳೆಂದು ತಿಳಿಯಬೇಕು.

ಸರ್ವಲಿಙ್ಗಸಮವಾಯಃ ಸರ್ವದೋಷಪ್ರಕೋಪಜೇ ।
ಅನಿಮಿತ್ತಾಗಮಾದ್ವ್ಯಾಧೇರ್ಗಮನಾದಕೃತೇಽಪಿ ಚ ॥೧೭॥
ಆಗಮಾಚ್ಚಾಪ್ಯಪಸ್ಮಾರಂ ವದನ್ತ್ಯನ್ಯೇನ ದೋಷಜಮ್ ।

ತ್ರಿದೋಷಗಳ ಪ್ರಕೋಪದಿಂದ ಮೂರು ದೋಷಗಳ ಲಿಂಗಗಳೂ ಮಿಶ್ರವಾಗಿರುವುದು ಕಂಡುಬರುತ್ತದೆ. ಕಾರಣವಿಲ್ಲದೆ ಉತ್ಪನ್ನವಾಗುತ್ತಲೂ, ಚಿಕಿತ್ಸೆಮಾಡದಿದ್ದರೂ ವ್ಯಾಧಿನಿವಾರಣೆಯಾಗುವುದೆಂದು ತಮ್ಮ ಶಾಸ್ತ್ರದಲ್ಲಿ ಹೇಳಿರುವುದರಿಂದಲೂ ಅಪಸ್ಮಾರವು ದೋಷಜನಿತವಾದ ರೋಗವಲ್ಲವೆಂದೂ ಆಗಂತುರೋಗವೆಂದೂ ಸುಶ್ರುತಭಿನ್ನ ವೈದ್ಯರು ಹೇಳುತ್ತಾರೆ. ಶಾರೀರ ದೋಷಗಳಾದ ವಾತಪಿತ್ತಕಫಗಳು ಮಾನಸಿಕಗಳಾದ ರಜಸ್ಸ ತಮಸ್ಸುಗಳನ್ನು ದೂಷಿಸುತ್ತವೆ ಮತ್ತು ರಜಸ್ತಮಸ್ಸುಗಳು ಶರೀರ ದೋಷಗಳನ್ನು ಪ್ರಕೋಪಗೊಳಿಸುತ್ತವೆಂದು ತಿಳಿಯಬೇಕು.

ಕ್ರಮೋಪಯೋಗಾದ್ದೋಷಾಣಾಂ ಕ್ಷಣಿಕತ್ವಾತ್ತಥೈವ ಚ ॥೧೮॥
ಆಗಮಾದ್ವೈಶ್ವರೂಪಾಚ್ಚ ಸ ತು ನಿರ್ವರ್ಣ್ಯತೇ ಬುಧೈಃ ।
ವರ್ಷತ್ಯಪಿ ಯಥಾ ದೇವೇ ಭೂಮೌ ಬೀಜಾನಿ ಕಾನಿಚಿತ್ ॥೧೯॥
ಶರದಿ ಪ್ರತಿರೋಹನ್ತಿ ತಥಾ ವ್ಯಾಧಿಸಮುದ್ಭವಃ ।
ಸ್ಥಾಯಿನಃ ಕೇಚಿದಲ್ಪೇನ ಕಾಲೇನಾಭಿಪ್ರವರ್ಧಿತಾಃ ॥೨೦॥
ದರ್ಶಯನ್ತಿ ವಿಕಾರಾಂಸ್ತು ವಿಶ್ವರೂಪಾನ್ನಿಸರ್ಗತಃ ।
ಅಪಸ್ಮಾರೋ ಮಹಾವ್ಯಾಧಿಸ್ತಸ್ಮಾದ್ದೋಷಜ ಏವ ತು ॥೨೧॥

ಅಪಸ್ಮಾರವು ದೋಷ ಪ್ರಕೋಪದಿಂದುಂಟಾಗುವ ವ್ಯಾಧಿಯೇ ಹೊರತು ಭೂತಾವೇಶಭಯದಿಂದುಂಟಾಗತಕ್ಕದ್ದಲ್ಲವೆಂದು ಸ್ವಮತವನ್ನು ಸಾಧನೆಮಾಡಿ ಪರಮತವನ್ನು ಖಂಡನೆಮಾಡುತ್ತಾರೆ. ದೋಷಗಳು ಸಂಚಯ, ಪ್ರಕೋಪ, ಪ್ರಸರಣಾದಿ ಕ್ರಮಗಳಿಂದ ರೋಗೋತ್ಪಾದನೆಯನ್ನುಂಟುಮಾಡುತ್ತವೆ ; ವಾತಾದಿಗಳು ಕ್ಷಣಿಕಗಳು, ಸುಶ್ರುತ ಗ್ರಂಥದಲ್ಲೂ, ಇತರ ಗ್ರಂಥಗಳಲ್ಲೂ, ಅಪಸ್ಮಾರವು ೪ ವಿಧವೆಂದೇ ಉಕ್ತವಾಗಿರುತ್ತದೆ ; ದೋಷಯುಕ್ತವಾದ್ದರಿಂದ ಅಪಸ್ಮಾರವು ನಾನಾರೂಪದಿಂದ ಸಂಭವಿಸುತ್ತದೆ ; ಈ ಕಾರಣಗಳಿಂದ ವಿದ್ವಾಂಸರು ಅಪಸ್ಮಾರವು ದೋಷಗಳ ಪ್ರಕೋಪದಿಂದುಂಟಾಗುವ ವ್ಯಾಧಿಯೆಂದು ಸಿದ್ಧಾಂತಮಾಡಿರುತ್ತಾರೆ ; ವಾತಪಿತ್ತಶ್ಲೇಷ್ಮಗಳು ಸರ್ವಕಾಲದಲ್ಲೂ ದೇಹದಲ್ಲೇ ಇರುತ್ತವೆಯಷ್ಟೆ. ಅಪಸ್ಮಾರವೂ ಸಂತತವಾಗಿಯೇ ಇರಲಿ ಎಂದು ಹೇಳುವುದಾದರೆ ಭೂಮಿಯನ್ನು ಉತ್ತು ಗೊಬ್ಬರವನ್ನು ಹರಡಿ ಸಿದ್ಧಮಾಡಿ ಬೀಜ ಬಿತ್ತಿ ದೇವೇಂದ್ರನು ಮಳೆಯನ್ನು ಹುಯ್ದರೂ ಕೆಲವು ಬೀಜಗಳು ಶರತ್ಕಾಲದಲ್ಲೇ ಅಂಕುರವನ್ನು ಪ್ರದರ್ಶಿಸುತ್ತವೆ (ಮೊಳಕೆ ಬರುತ್ತದೆ). ಹಾಗೆಯೇ ಸಕಲ ರೋಗಕಾರಣಗಳಾದ ವಾತಾದಿ ದೋಷಗಳು ಅಪಸ್ಮಾರ ರೋಗಕಾರಣಗಳಾದರೂ ರಸಾದಿದೂಷ್ಯಗಳೊಡನೆ ಸಂಸರ್ಗವಾಗದಿದ್ದರೆ ವ್ಯಾಧಿಯನ್ನುಂಟುಮಾಡುವುದಿಲ್ಲ. ಶರೀರದಲ್ಲೇ ಸರ್ವದಾವ್ಯಾಪಿಸಿರುವ

ಶರೀರದೂಷಣ ಸ್ವಭಾವವುಳ್ಳ ವಾತಾದಿಗಳು ಕೆಲವು ವೇಳೆ ಸ್ವಲ್ಪ ಕಾಲದಲ್ಲೇ ಪ್ರಕೋಪ ಹೊಂದಿ ನಾನಾರೂಪಗಳುಳ್ಳ ರೋಗಗಳನ್ನುಂಟುಮಾಡುತ್ತವೆ ; ಹೇಗೆ ಮಳೆ ಬರದಿದ್ದರೂ ಶರತ್ಕಾಲದಲ್ಲಿ ಭೂಮಿಯನ್ನು ಅಗೆದು ಗೊಬ್ಬರ ಹಾಕಿ ಸಿದ್ಧ ಮಾಡದಿದ್ದರೂ ಕೆಲವು ಬೀಜಗಳು ಮೊಳಕೆಯನ್ನು ಬಿಟ್ಟೇ ಬಿಡುತ್ತವೆ (ಅಂಕುರಿಸುತ್ತವೆ) ಹಾಗೆಯೇ ಶರೀರದಲ್ಲಿರುವ ದೋಷಗಳೇ ಪ್ರಕೋಪಹೊಂದಿ ಸ್ವಲ್ಪ ಕಾಲದಲ್ಲೇ ರೋಗವನ್ನುಂಟುಮಾಡುತ್ತವೆಂದು ತಿಳಿಯಬೇಕು ; ಈ ಮೇಲ್ಕಂಡ ಕಾರಣಗಳಿಂದ ಮಹಾವ್ಯಾಧಿಯಾದ ಅಪಸ್ಮಾರವು ದೋಷಜನ್ಯರೋಗವೇ ವಿನಾ ಭೂತಾವೇಶದಿಂದುಂಟಾದ ರೋಗವಲ್ಲವೆಂದು ಸಿದ್ಧವಾಯಿತು.

ತಸ್ಯ ಕಾರ್ಯೋ ವಿಧಿಃ ಸರ್ವೋ ಯ ಉನ್ಮಾದೇಷು ವಕ್ಷ್ಯತೇ ।
ಪುರಾಣಸರ್ಪಿಷಃ ಪಾನಮಭ್ಯಙ್ಗಶ್ಚೈವ ಪೂಜಿತಃ ॥೨೨॥
ಉಪಯೋಗೋ ಗ್ರಹೋಕ್ತಾನಾಂ ಯೋಗಾನಾಂ ತು ವಿಶೇಷತಃ ।
ಶಿಗ್ರುಕಟ್ವಙ್ಗಕಿಣಿಹಿನಿಮ್ಬತ್ವಗ್ರಸಸಾಧಿತಮ್ ॥೨೩॥
ಚತುರ್ಗುಣೇ ಗವಾಂ ಮೂತ್ರೇ ತೈಲಮಭ್ಯಞ್ಜನೇ ಹಿತಮ್ ।

ಅಪಸ್ಮಾರಕ್ಕೆ ಉನ್ಮಾದರೋಗದಲ್ಲಿ ಹೇಳುವ ಸಕಲ ಚಿಕಿತ್ಸಾ ವಿಧಾನಗಳನ್ನೂ ಮಾಡಬೇಕು ; ಪುರಾಣಘೃತವನ್ನು ಪಾನಾಭ್ಯಂಗಗಳಿಗೆ ಉಪಯೋಗಿಸಬೇಕು ; ವಿಶೇಷವಾಗಿ ಗ್ರಹನಿವಾರಣೆಗೆ ಹೇಳಿರುವ ಯೋಗಗಳನ್ನು ಪ್ರಯೋಗಿಸಬೇಕು, ನುಗ್ಗೆ ತೊಗಟೆ, ಹೆನ್ಮರದತೊಗಟೆ, ಬಿಳಿಹೂವಿನ ಗಿರಿಕರ್ಣಿಕೆ, ಬೇವಿನತೊಗಟೆ, ಇವುಗಳ ಕಲ್ಕಸ್ವರಸಗಳೊಡನೆ ಇವುಗಳ ನಾಲ್ಕರಷ್ಟು ಗೋಮೂತ್ರವನ್ನೂ ಗೋಮೂತ್ರದ $\frac{1}{4}$ ಭಾಗದಷ್ಟು ತಿಲತೈಲವನ್ನೂ ಸೇರಿಸಿ ತಯಾರಿಸಿದ ತೈಲದಿಂದ ಅಭ್ಯಂಗಮಾಡುವುದು ಹಿತಕರವು.

ಗೋಧಾನಕುಲನಾಗಾನಾಂ ಪೃಷತರ್ಷಗವಾಮಪಿ ॥೨೪॥
ಪಿತ್ತೇಷು ಸಿದ್ಧಂ ತೈಲಂ ಚ ಪಾನಾಭ್ಯಙ್ಗೇಷು ಪೂಜಿತಮ್ ।
ತೀಕ್ಷ್ಣೈರುಭಯತೋ ಭಾಗೈಃ ಶಿರಸಶ್ಚಾಪಿ ವಿಶೋಧಯೇತ್ ॥೨೫॥

ಉಡ, ಮುಂಗುಸಿ, ಆನೆ, ಚಿತ್ರಬಣ್ಣದ ಜಿಂಕೆ, ಕರಡಿ, ಹಸು ಇವುಗಳ ಪಿತ್ತಗಳನ್ನು ಪ್ರತ್ಯೇಕವಾಗಿ ಸ್ನೇಹಕ್ಕೆ ಸಮವಾಗಿಯೂ ಪ್ರತಿಯೊಂದು ಪ್ರಾಣಿಯ ಪಿತ್ತವನ್ನೂ ಸಮಪ್ರಮಾಣದಿಂದ ಇವೆಲ್ಲಕ್ಕೂ ಸಮಪ್ರಮಾಣ ತೈಲವನ್ನು ಮಿಶ್ರಮಾಡಿ ತೈಲದ ೪ ರಷ್ಟು (ಗೋಮೂತ್ರವನ್ನು) ಸೇರಿಸಿ ತಯಾರಿಸಿದ ತೈಲವನ್ನು ಪಾನಕ್ಕೂ, ಅಭ್ಯಂಗಕ್ಕೂ, ಉಪಯೋಗಿಸುವುದು ಶ್ರೇಷ್ಠವಾದದ್ದು ; ತೀಕ್ಷ್ಣೌಷಧಿಗಳಿಂದ ವಮನ, ವಿರೇಚನ, ಶಿರೋವಿರೇಚನಗಳನ್ನು ಮಾಡಿಸಬೇಕು.

ಪೂಜಾಂ ರುದ್ರಸ್ಯ ಕುರ್ವೀತ ತದ್ಗಣಾನಾಂ ಚ ನಿತ್ಯಶಃ ।
ವಾತಿಕಂ ಬಸ್ತಿಭಿಶ್ಚಾಪಿ ಪೈತ್ತಿಕಂ ಚ ವಿರೇಚನೈಃ ॥೨೬॥
ಕಫಜಂ ವಮನೈರ್ಧೀಮಾನಪಸ್ಮಾರಮುಪಾಚರೇತ್ ।

ಕುಳತ್ಥಯವಕೋಲಾನಿ ಶಣಬೀಜಂ ಪಲಂಕಷಾಮ್ ||೨೭||
ಜಟಿಲಾಂ ಪಞ್ಚಮೂಲ್ಯೌ ದ್ವೇ ಪಥ್ಯಾಂ ಚೋತ್ಕ್ವಾಥ್ಯ ಯತ್ನತಃ ।
ಬಸ್ತಮೂತ್ರಯುತಂ ಸರ್ಪಿಃ ಪಿಬೇತ್ತದ್ವಾತಿಕೇ ಹಿತಮ್ ||೨೮||
ಕಾಕೋಳ್ಯಾದಿ ಪ್ರತೀಪಾಪಂ ಸಿದ್ಧಂ ವಾ ಪ್ರಥಮೇ ಗಣೇ ।
ಪಯೋಮಧುಸಿತಾಯುಕ್ತಂ ಘೃತಂ ಯತ್ಪೈತ್ತಿಕೇ ಹಿತಮ್ ||೨೯||
ಕೃಷ್ಣಾವಚಾಮಸ್ತಕಾದ್ಯೈರ್ಯುಕ್ತಮಾರಗ್ವಧಾದಿಕೇ ।
ಪಕ್ವಂ ತನ್ಮೂತ್ರವರ್ಗೇಷು ಶ್ಲೇಷ್ಮಾಪಸ್ಮಾರಿಣೇ ಹಿತಮ್ ||೩೦||

ಪ್ರತಿದಿನವೂ ಪರಮೇಶ್ವರನಿಗೂ ಪ್ರಥಮಗಣಗಳಿಗೂ ಪೂಜೆಮಾಡಬೇಕು ; ವಾತಿಕಾಪಸ್ಮಾರಕ್ಕೆ ಬಸ್ತಿಪ್ರಯೋಗವನ್ನೂ ಪಿತ್ತಜದಲ್ಲಿ ವಿರೇಚನವನ್ನೂ ಕಫಜದಲ್ಲಿ ವಮನೌಷಧವನ್ನೂ ಪ್ರಯೋಗಿಸಬೇಕು ; ಹುರುಳಿ, ಯವಧಾನ್ಯ, ಎಲಚಿಹಣ್ಣು, ಶಣಬಿನಬೀಜ, ಅರಗು, ಜಟಾಮಾಂಸಿ, ದಶಮೂಲ, ಅಣಿಲೆಕಾಯಿ, ಇವನ್ನು ೪ ರಷ್ಟು ನೀರಿನಲ್ಲಿ ಕಷಾಯಮಾಡಿ $\frac{1}{4}$ ಭಾಗಕ್ಕೆ ನಿಲ್ಲುವಂತೆ ಕಾಯಿಸಿದ ಕಷಾಯವನ್ನು ಶೋಧಿಸಿಕೊಂಡು ಅದರ $\frac{1}{4}$ ಭಾಗದಷ್ಟು ತುಪ್ಪವನ್ನೂ, ತುಪ್ಪದಷ್ಟೇ ಆಡಿನಮೂತ್ರವನ್ನೂ ಸೇರಿಸಿ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ವಾತಿಕಾಪಸ್ಮಾರವು ನಿವಾರಣೆಯಾಗುತ್ತದೆ ; ಲಘುಪಂಚಮೂಲದ ಕಷಾಯ ೪ ಭಾಗ, ತುಪ್ಪ ೧ ಭಾಗ, ಕಾಕೋಳ್ಯಾದಿಗಣದ್ರವ್ಯಗಳ ಕಲ್ಕ ತುಪ್ಪದ $\frac{1}{4}$ ಭಾಗದಷ್ಟನ್ನು ಸೇರಿಸಿ ತಯಾರಿಸಿದ ಘೃತದೊಡನೆ ಹಾಲು, ಸಕ್ಕರೆ, ಜೇನುತುಪ್ಪಗಳನ್ನು ಸೇರಿಸಿ ಪಾನಮಾಡಿಸಿದರೆ ಪಿತ್ತಾಪಸ್ಮಾರಹರವಾಗುತ್ತದೆ ; ಹಿಪ್ಪಲಿ, ಬಜೆ, ಕೊನ್ನಾರಿಗೆಡ್ಡೆ, ಮೊದಲಾದುವುಗಳ ಕಲ್ಕ ೧ ಭಾಗ ತುಪ್ಪ ೪ ಭಾಗ ೮ ಮೂತ್ರಗಳೂ ಒಟ್ಟುಸೇರಿ ತುಪ್ಪದ ೪ ರಷ್ಟು ಇವೆಲ್ಲವನ್ನೂ ಒಟ್ಟುಗೂಡಿಸಿ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ಕಫಜನಿತ ಅಪಸ್ಮಾರಹರವಾಗುತ್ತದೆ ; ಕೆಲವರು ಮನೋವಿಕಾರಹರಕ್ಕಾಗಿ ಆಡು, ಕುರಿ, ಆನೆಗಳ ಮೂತ್ರಗಳನ್ನು ಸೇವಿಸಬೇಕೆನ್ನುತ್ತಾರೆ.

ಸುರದ್ರುಮವಚಾಕುಷ್ಠಸಿದ್ಧಾರ್ಥವ್ಯೋಷಹಿಙ್ಗುಭಿಃ ।
ಮಞ್ಜಿಷ್ಠಾರಜನೀಯುಗ್ಮಸಮಙ್ಗಾತ್ರಿಫಲಾಮ್ಬುದೈಃ ||೩೧||
ಕರಞ್ಜಬೀಜಶ್ವೈರೀಷಗಿರಿಕರ್ಣೀಪುತಾಶನೈಃ ।
ಸಿದ್ಧಂ ಸಿದ್ಧಾರ್ಥಕಂನಾಮ ಸರ್ಪಿರ್ಮೂತ್ರಚತುರ್ಗುಣಮ್ ||೩೨||
ಕ್ರಿಮಿಕುಷ್ಠಗರಶ್ವಾಸಬಲಾಸವಿಷಮಜ್ವರಾನ್ ।
ಸರ್ವಭೂತಗ್ರಹೋನ್ಮಾದಾನಪಸ್ಮಾರಾಂಶ್ಚ ನಾಶಯೇತ್ ||೩೩||

ಸಿದ್ಧಾರ್ಥಕಸರ್ಪಿಃ :—ದೇವದಾರು, ಬಜೆ, ಚಂಗಲ್‌ಕೋಷ್ಟ, ಬಿಳಿಯ ಸಾಸಿವೆ, ತ್ರಿಕಟು, ಹಿಂಗು, ಮಂಜಿಷ್ಠೆ, ಅರಿಶಿನ, ಮುಟ್ಟಿದರೆಮುನಿಗಿಡ, ತ್ರಿಫಲೆ, ಕೊನ್ನಾರಿಗೆಡ್ಡೆ, ಹೊಂಗೆಬೀಜ, ಗಿರಿಕರ್ಣಿಕೆ, ಚಿತ್ರಮೂಲ, ಇವುಗಳ ಕಲ್ಕ ೧ ಭಾಗ ತುಪ್ಪ ೪ ಭಾಗ, ತುಪ್ಪದ ೪ ರಷ್ಟು ಗೋಮೂತ್ರ ಇವನ್ನು ಸೇರಿಸಿ ತಯಾರಿಸಿದ ಘೃತ

ವನ್ನು ಪಾನಮಾಡಿಸಿದರೆ ಕ್ರಿಮಿ, ಕುಷ್ಟ, ಕೃಮುಸಗು, (ಕೃತ್ರಿಮುವಿಷ) ಶ್ವಾಸ, ಕಫ, ವಿಷಮಜ್ವರ, ಸಕಲಭೂತಗ್ರಹಗಳ ಬಾಧೆ, ಉನ್ಮಾದ, ಅಪಸ್ಮಾರ ಇವುಗಳು ನಿವಾರಣೆಯಾಗುತ್ತವೆ.

ದಶಮೂಲೇನ್ದ್ರವೃಕ್ಷತ್ವಜೂ ತ್ರಿವಾರ್ಭಾರ್ಗೀಫಲತ್ರಯೈಃ !
ಸಂಪಾಕಶ್ರೇಯಸೀ ಸಪ್ತಪರ್ಣಾಪಾಮಾರ್ಗಫಲ್ಗುಭಿಃ ||೩೪||
ಶೃತೈಃ ಕಲ್ಕೈಶ್ಚ ಭೂನಿಮ್ಬಪೂತೀಕವ್ಯೋಷ ಚಿತ್ರಕೈಃ ।
ತ್ರಿವೃತ್ಪಾಠಾನಿಶಾಯುಗ್ಮಸಾರಿವಾದ್ವಯಪೌಷ್ಕರೈಃ ||೩೫||
ಕಟುಕಾಮದಯನ್ತ್ಯಗ್ರಾನೀಲಿನೀಕ್ರಿಮಿಶತ್ರುಭಿಃ ।
ಸರ್ಪಿರೇಭಿಶ್ಚ ಗೋಕ್ಷೀರದಧಿಮೂತ್ರಶಕೃದ್ರಸೈಃ ||೩೬||
ಸಾಧಿತಂ ಪಞ್ಚಗವ್ಯಾಖ್ಯಂ ಸರ್ವಾಪಸ್ಮಾರಭೂತನುತ್ ।
ಚಾತುರ್ಥಕಕ್ಷಯಶ್ವಾಸಾನುನ್ಮಾದಾಂಶ್ಚ ನಿಯಚ್ಛತಿ ||೩೭||

ದಶಮೂಲ, ಕೊಡಶಿಗೆ ತೊಗಟೆ, ಕೊರಟಗೆಹಂಬು, ಗಂಟುಪರಂಗಿ, ತ್ರಿಫಲೆ, ಕಕ್ಕೆಕಾಯಿ, ಗಜಹಿಪ್ಪಲಿ, ಮದ್ದಾಲೆತೊಗಟೆ, ಉತ್ತರಣೆಯಸಮೂಲ, ಕಲ್ಲತ್ತಿತೊಗಟೆ ಇವುಗಳನ್ನು ಸಮಭಾಗದಿಂದಲೂ ೪ ರಷ್ಟು ನೀರನ್ನು ಸೇರಿಸಿ $\frac{1}{4}$ ಭಾಗ ಉಳಿಯುವಂತೆ ಕಷಾಯವನ್ನು ಕಾಯಿಸಿ ಶೋಧಿಸಿದ ಕಷಾಯ ೪ ಭಾಗಕ್ಕೆ ಹಸುವಿನ ತುಪ್ಪ ೧ ಭಾಗವನ್ನೂ ನೆಲಬೇವು, ತವಸದತೊಗಟೆ, ತ್ರಿಕಟು, ಚಿತ್ರಮೂಲ, ತಿಗಡೆ, ಅಗಳುಶುಂಠಿ, ಅರಶಿನ, ಮರದರಿಶಿನ, ಸೊಗದೆಹಂಬು, (ಬಿಳಿದು, ಕರಿಯದು) ಪುಷ್ಕರಮೂಲ, ಕಟುಕರೋಹಿಣಿ, ವೊಲ್ಲೆಮೊಗ್ಗು, ಬಜೆ, ನೀಲಿ, ವಿಡಂಗ ಇವುಗಳ ಕಲ್ಕ ತುಪ್ಪದ 1/4 ಭಾಗದಷ್ಟನ್ನೂ ಸೇರಿಸಿ ಹಸುವಿನ ಹಾಲು, ಮೊಸರು, ಗಂಜಳ, ಸಗಣಿಯನ್ನು ಹಿಂಡಿ ಬಂದ ರಸ ಇವು ಪ್ರತಿಯೊಂದೂ ತುಪ್ಪದಷ್ಟೇ ಪ್ರಮಾಣದಿಂದ ಸೇರಿಸಿ ಹದದಿಂದ ತಯಾರಿಸಿದ ಈ ಘೃತಕ್ಕೆ "ಪಂಚಗವ್ಯಘೃತ" ವೆಂದು ಹೆಸರು ; ಇದನ್ನು ಪಾನಮಾಡಿಸಿದರೆ ಸಕಲವಿಧಗಳಾದ ಅಪಸ್ಮಾರರೋಗಗಳೂ ನಿವಾರಣೆಯಾಗುತ್ತವೆ ; ಮತ್ತು ಚಾತುರ್ಥಿಕಜ್ವರ, ಕ್ಷಯ, ಶ್ವಾಸ, ಉನ್ಮಾದರೋಗಗಳು ನಾಶವಾಗುತ್ತವೆ.

ಭಾರ್ಗೀಶೃತೇಪಚೇತ್ ಕ್ಷೀರೇ ಶಾಲಿತಣ್ಡುಲಪಾಯಸಮ್ ।
ತ್ರ್ಯಹಂ ಶುದ್ಧಾಯ ತದ್ಭೋಜ್ಯಂ ವರಾಹಾಯೋಪಕಲ್ಪಯೇತ್ ||೩೮||
ಜಗ್ಧ್ವಾ ಚ ಮಧುರೀಭೂತಂ ತಂ ವಿಶಸ್ಯತದುದ್ಧರೇತ್ ।
ತ್ರೀನ್ ಭಾಗಾನ್ ತಸ್ಯ ಚೂರ್ಣಸ್ಯ ಕಿಣ್ವಭಾಗೇನ ಸಂಸೃಜೇತ್ ||೩೯||
ಮಣ್ಡೋದಕಾರ್ಥೇ ದೇಯಶ್ಚ ಭಾರ್ಗೀಕ್ವಾಥಃ ಸುಶೀತಲಃ ।
ಶುದ್ಧೇ ಕುಮ್ಭೇ ನಿದಧ್ಯಾಚ್ಚ ಸಂಭಾರಂ ತಂ ಸುರಾಂ ತತಃ ||೪೦||
ಜಾತಗನ್ಧಂ ಜಾತರಸಾಂ ಪಾಯಯೇದಾತುರಂ ಭಿಷಕ್ ।
ಸಿರಾಂ ವಿಧ್ಯೇದಥಪ್ರೋಕ್ತಾಮಜ್ಗ (ಕ್ಯಾಣಿ)ಲ್ಯಾನಿ ಚ ಧಾರಯೇತ್ ||೪೧||

ಗಂಟುಪರಂಗಿ ಚೂರ್ಣ ೧ಭಾಗಕ್ಕೆ ೪ರಷ್ಟು ಹಾಲನ್ನೂ ,ಹಾಲಿನ ೪ರಷ್ಟು ನೀರನ್ನೂ ಸೇರಿಸಿ ಹಾಲು ಉಳಿಯುವಂತೆ ಕಾಯಿಸಿ ಇದರೊಡನೆ ಅಕ್ಕಿಯನ್ನು ಹಾಕಿಬೇಯಿಸಿ ಪಾಯಸವನ್ನುಕಾಯಿಸಿ ಮೂರುದಿನಗಳತನಕ ಉಪವಾಸವಿಟ್ಟದ್ದ ಹಂದಿಗೆ ಕುಡಿಸಬೇಕು; ಈ ಪಾಯಸವು ಮಧುರವಿಪಾಕವಾದುದನ್ನು ತಿಳಿದು (ಹಂದಿಯ ಜೊಲ್ಲಿನ ಸಂಗಡ ಅದರ ಹೊಟ್ಟೆಗೆ ಸೇರಿ ವಿದಗ್ಧ ಪಾಕವಾಗುವುದಕ್ಕೆ ಮುಂಚಿತವಾಗಿಯೇ) (ಕೆಲವರು ಮಧುರೀಭೂತಂ ಎಂದರೆ ವಿಷವಾಗಿ ಪರಿಣಮಿಸಿದನಂತರವೆನ್ನುತ್ತಾರೆ ಹಂದಿಯ ಬಾಯಿನಿಂದ ಜೊಲ್ಲುಸುರಿಯೋಣ ಪ್ರಜ್ಞೆ ತಪ್ಪಿರೋಣ ಇವು ವಿಷಲಿಂಗಗಳೆಂದು ತಿಳಿಯಬೇಕು.) ಆ ಹಂದಿಯನ್ನು ಕೊಂದು ಅದರ ಹೊಟ್ಟೆಯನ್ನು ಸೀಳಿ ಅಲ್ಲಿರುವ ಅನ್ನವನ್ನು ತೆಗೆದು ಒಣಗಿಸಿ ಚೂರ್ಣಮಾಡಿ ಮೂರು ಭಾಗಕ್ಕೆ ಒಂದು ಭಾಗದಷ್ಟು ಮದ್ಯದ ಗಷ್ಟನ್ನು ಸೇರಿಸಿ ಒಂದು ಗುಡಾಣಕ್ಕೆ ಹಾಕಿ ಗಂಟುಪರಂಗಿ ಕಷಾಯವನ್ನು ತಣ್ಣಗೆಮಾಡಿ ಸುರಿದು ಬಾಯಿಕಟ್ಟು ಬಿಗಿಯಬೇಕು; ಇವುಗಳನ್ನುಹಾಕುವುದಕ್ಕೆ ಮೊದಲೇ ಆ ಗುಡಾಣದ ಒಳಭಾಗಕ್ಕೆ ಚಾತುರ್ಜಾತ ತುಪ್ಪ, ಜೇನುತುಪ್ಪ, ಹಿಪ್ಪಲಿ ಇವುಗಳ ಕಲ್ಕದಿಂದ ಲೇಪಿಸಿ ಪಳಗಿಸಿರಬೇಕು ; ಈ ರೀತಿ ಸಂಧಾನವಾದ ಮೇಲೆ (ಮದ್ಯತಯಾರಾದ ಲಕ್ಷಣಗಳುಂಟಾಗಿ ಸರಿಯಾದ ವಾಸನೆಯೂ, ರುಚಿಯೂ ಉಂಟಾದ ಮೇಲೆ) ರೋಗಿಗೆ ಕುಡಿಸಬೇಕು ; ಹಣೆಯ ಮೇಲಿನ ಸಿರೆಯನ್ನು ವ್ಯಧೆಮಾಡಿ (ಕೆಲವರು ಹನುಸಂಧಿಯ ಮಧ್ಯದಲ್ಲಿ ಉಬ್ಬಿರುವ ಸಿರೆಯನ್ನು ವ್ಯಧೆಮಾಡಬೇಕೆನ್ನುತ್ತಾರೆ.) ಪ್ರಣಿತೋಪಾಸನೀಯಾಧ್ಯಾಯದಲ್ಲಿ ಹೇಳಿರುವಂತೆ ಛತ್ರಾತಿಛತ್ರಾದಿ ಮೂಲಿಕೆಗಳನ್ನು ಧರಿಸಬೇಕು ; ಕೆಲವರು ಅಥರ್ವವೇದದಲ್ಲಿ ಹೇಳಿರುವಂತೆ ಹೋಮಜಪಗಳನ್ನು ಮಾಡಿಸಬೇಕು ಎನ್ನುತ್ತಾರೆ.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತಭೂತವಿದ್ಯಾಯಾಮಪಸ್ಮಾರ ಪ್ರತಿಷೇಧನಾಮಕ್ಕೆಕಷಷ್ಟಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರಿಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ದ್ವಿಷಷ್ಟಿತಮೋಽಧ್ಯಾಯಃ

ಅಥಾತ ಉನ್ಮಾದಪ್ರತಿಷೇಧಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||
ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಮನೋಗತಸಾಮ್ಯವಾದ್ದರಿಂದಲೂ ಸಮಾನಚಿಕಿತ್ಸೆಯುಳ್ಳಕಾರಣವೂ ಅಪಸ್ಮಾರಚಿಕಿತ್ಸೆಯನ್ನು ಹೇಳಿದಮೇಲೆ ಉನ್ಮಾದಚಿಕಿತ್ಸೆಯನ್ನು ವಿವರಿಸುತ್ತೇವೆ.

ಮದಯನ್ತ್ಯುದ್ಧತಾ ದೋಷಾ ಯಸ್ಮಾದುನ್ಮಾರ್ಗಮಾಶ್ರಿತಾಃ |
ಮಾನಸೋಽಯಮತೋ ವ್ಯಾಧಿರುನ್ಮಾದ ಇತಿ ಕೀರ್ತಿತಃ ||೩||

ಪ್ರಕುಪಿತದೋಷಗಳು ಮನೋವಹಸ್ರೋತಸ್ಸುಗಳನ್ನು ಆಕ್ರಮಿಸಿ ಮನಸ್ಸನ್ನು ಚಂಚಲಗೊಳಿಸುವುದರಿಂದುಂಟಾಗುವ ಮನೋವಿಕಾರವ್ಯಾಧಿಗೆ ಉನ್ಮಾದವೆಂದು ಹೆಸರು ; 'ಮದಯಂತಿ' ಎಂದರೆ ಹೃದಯದೂಷಣೆಯೂ ಮನೋಮೋಹವೂ ಉಂಟಾಗುತ್ತೆಂದು ತಿಳಿಯಬೇಕು ; ಬುದ್ಧಿಭ್ರಮಣೆ, ಚಿತ್ತವಿಭ್ರಂಶ, ಉನ್ಮಾದ ಇವು ಒಂದೇ ಅರ್ಥವುಳ ಪದಗಳು ; ಅಪಸ್ಮಾರಹೇತುಗಳೇ ಉನ್ಮಾದಕ್ಕೂ ಹೇತುಗಳೆಂದು ತಿಳಿಯಬೇಕು.

ಏಕೈಕಶಃ ಸಮಸ್ತೈಶ್ಚ ದೋಷೈರತ್ಯರ್ಥಮೂರ್ಛಿತೈಃ |
ಮಾನಸೇನ ಚ ದುಃಖೇನ ಸ ಪಞ್ಚ ವಿಧ ಉಚ್ಯತೇ ||೪||
ವಿಷಾದ್ಭವತಿ ಷಷ್ಠಶ್ಚ ಯಥಾಸ್ವಂ ತತ್ರ ಭೇಷಜಮ್ |
ಸ ಚಾಪ್ರವೃದ್ಧಸ್ತರುಣೋ ಮದಸಂಜ್ಞಾಂ ಬಿಭರ್ತಿ ಚ ||೫||

ಉನ್ಮಾದರೋಗವು ವಾತ, ಪಿತ್ತ, ಕಫಜಭೇದಗಳಿಂದ ಮೂರುವಿಧವು. ಮೂರು ದೋಷಗಳೂ ಒಟ್ಟುಸೇರಿ ಒಂದು ವಿಧ, ಮನೋದುಃಖದಿಂದ ಒಂದುವಿಧ ಈ ರೀತಿ ಒಟ್ಟು [illegible] ವಿಧಗಳು ; ವಿಷದೋಷದಿಂದ ಆರನೆಯ ಭೇದದ ಉನ್ಮಾದವುಂಟಾಗುತ್ತದೆ. ಇದಕ್ಕೆ ಬೇರೆ ವಿಧವಾದ ಚಿಕಿತ್ಸೆಯಿಲ್ಲದ ಕಾರಣ ಅಂದರೆ ಮೇಲೆ ಹೇಳಿದ ದೋಷಗಳಿಗೆ ಮಾಡುವಂತೆಯೇ ಇದಕ್ಕೂ ಚಿಕಿತ್ಸೆ ಮಾಡಬೇಕಾಗುವುದರಿಂದ ವಿಷಜ ಉನ್ಮಾದವನ್ನು ಪ್ರಕೋಪವಾದ ಒಂದು ವಿಧವೆಂದು ಪರಿಗಣಿಸುವುದಿಲ್ಲ ; ಉನ್ಮಾದರೋಗವನ್ನು ಪ್ರಾರಂಭದಲ್ಲಿ ಮದವೆಂದು ಹೇಳುತ್ತಾರೆ ; ಕೆಲವರು ಮದವೆಂದರೆ ಮದ್ಯದ ಮೊದಲನೆಯ ವೇಗವೆಂದು ಅರ್ಥಮಾಡುತ್ತಾರೆ.

ಮೋಹೋದ್ವೇಗೌ ಸ್ವನಃ ಶ್ರೋತ್ರೇ ಗಾತ್ರಾಣಾಮಪಕರ್ಷಣಮ್ |
ಅತ್ಯುತ್ಸಾಹೋಽರುಚಿಶ್ಚಾನ್ನೇ ಸ್ವಪ್ನೇ ಕಲುಷಭೋಜನಮ್ ||೬||

ವಾಯುನ್ಮೋನ್ಮಥನಂ ಚಾಪಿ ಭ್ರಮಶ್ಚ ಕ್ರಮತಸ್ತಥಾ ।
ಯಸ್ಯ ಸ್ಯಾದಚಿರೇಣೈವ ಉನ್ಮಾದಂ ಸೋಽಧಿಗಚ್ಛತಿ ॥೭॥

ಉನ್ಮಾದದ ಪೂರ್ವರೂಪ:—ಸ್ಥಿರಬುದ್ಧಿ ಇಲ್ಲದೆ ಗಾಬರಿಯಾಗಿ (ಆತುರವಾಗಿ ದಿಗಿಲುಪಡುತ್ತಾ ಮಾತಾಡುವುದು) ಕಿವಿಯಲ್ಲಿ ಶಬ್ದ ಕೇಳಿಸುವುದು ದೇಹದಲ್ಲಿ ದೌರ್ಬಲ್ಯ ವುಂಟಾಗುವುದು ಅತಿಯಾಗಿ ಉತ್ಸಾಹವನ್ನು ಹೊಂದುವುದು ಅನ್ನದಲ್ಲಿ ರುಚಿ ಹೋಗಿ ಬಿಡುವುದು, ಕೊಳೆಮಿಶ್ರಮಾಡಿ ಅನ್ನವನ್ನುಂಡಂತೆಯೂ ವಾಯುವಿನಿಂದ ಪೀಡೆಯುಂಟಾದಂತೆಯೂ ಸ್ವಪ್ನಕಾಣುವುದು, ನಡೆಯುತ್ತಿರುವಾಗ ಮುರಿದ ಚಕ್ರದ ಮೇಲೆ ಕೂತು ಸುತ್ತುತ್ತಿರುವಂತೆ ತಲೆತಿರುಗುವುದು ಈ ಲಕ್ಷಣಗಳು ಉಂಟಾದವರಿಗೆ ಅತಿ ಶೀಘ್ರದಲ್ಲೇ ಉನ್ಮಾದರೋಗವು ಬರುತ್ತೆಂದು ತಿಳಿಯಬೇಕು.

ರೂಕ್ಷಚ್ಛವಿಃ ಪರುಷವಾಗ್ಧಮನೀತತೋವಾ ಶ್ವಾಸಾತುರಃ ಕೃಶತನುಃ ಸ್ಫುರಿತಾಙ್ಗಸನ್ಧಿಃ ।
ಆಸ್ಫೋಟಯನ್ನಟತಿ ಗಾಯತಿ ನೃತ್ಯಶೀಲೋ ವಿಕ್ರೋಶತಿ ಭ್ರಮತಿ ಚಾಪ್ಯನಿಲಪ್ರಕೋಪಾತ್ ॥೮॥

ತೃಟ್‌ಸ್ವೇದದಾಹಬಹುಳೋ ಬಹುಭುಗ್ವಿನಿದ್ರಶ್ಛಾಯಾಹಿಮಾನಿಲಜಲಾನ್ತವಿಹಾರಸೇವೀ ।
ತೀಕ್ಷ್ಣೋ ಹಿಮಾಮ್ಬುನಿಚಯೇಽಪಿ ಸ ವಹ್ನಿಶಙ್ಕೀ ಪಿತ್ತಾದ್ದಿವಾ ನಭಸಿ ಪಶ್ಯತಿ ತಾರಕಾಶ್ಚ ॥೯॥

ಛರ್ದ್ಯಗ್ನಿಸಾದಸದನಾರುಚಿಕಾಸಯುಕ್ತೋ ಯೋಷಿದ್ವಿವಿಕ್ತರತಿರಲ್ಪಮತಿಪ್ರಚಾರಃ ।
ನಿದ್ರಾಪರೋಽಲ್ಪಕಥನೋಽಲ್ಪಭುಗುಷ್ಣಸೇವೀ ರಾತ್ರೌ ಭೃಶಂ ಭವತಿ ಚಾಪಿ ಕಫಪ್ರಕೋಪಾತ್ ॥೧೦॥

ಸರ್ವಾತ್ಮಕೇ ಪವನಪಿತ್ತಕಫಾ ಯಥಾಸ್ವಂ ಸಂಹರ್ಷಿತಾ ಇವ ಚ ಲಿಙ್ಗಮುದೀರಯನ್ತಿ ॥೧೧॥

ಮೈ ರೂಕ್ಷವಾಗಿರುತ್ತೆ, ಕರ್ಕಶವಚನವನ್ನಾಡುತ್ತಾನೆ ; ಮೈಮೇಲೆ ಧಮನಿಗಳು ಉಬ್ಬಿರುತ್ತವೆ ; ಮೇಲೆಮೇಲೆ ಉಸಿರು ಬಿಡುತ್ತಾನೆ. ದೇಹವು ಕ್ಷೀಣಿಸುತ್ತದೆ. ಎಲುಬಿನ ಸಂಧಿಗಳು (ಮಾಂಸಕ್ಷೀಣತೆಯಿಂದ) ಸ್ಪಷ್ಟವಾಗಿ ಕಾಣಿಸುತ್ತವೆ ; ಭಾಂಡಾದಿಗಳನ್ನೆತ್ತಿ ಒಡೆಯುತ್ತಾನೆ, ತಿರುಗುತ್ತಲೇ ಹಾಡುತ್ತಾನೆ, ಕುಣಿಯುತ್ತಾನೆ, ಅಳುತ್ತಾನೆ, ನಡುಗುತ್ತಾನೆ ; ಇವನ್ನು ವಾತಿಕೋನ್ಮಾದದ ಲಕ್ಷಣಗಳೆಂದು ತಿಳಿಯಬೇಕು ; ಪಿತ್ತೋನ್ಮಾದದಲ್ಲಿ ಬಾಯಾರಿಕೆ, ಬೆವರು, ಮೈಉರಿತ ಇವು ಹೆಚ್ಚಾಗಿರುತ್ತವೆ. ಅತಿಯಾಗಿ ಊಟಮಾಡುತ್ತಾನೆ. ನಿದ್ರೆಬರುವುದಿಲ್ಲ. ನೆರಳು, ತಂಗಾಳಿ, ನೀರಿನತಡಿಗಳಲ್ಲಿ ಅಲೆದಾಡುತ್ತಾನೆ ; ಅತಿಕೋಪಿಷ್ಠನು, ತಣ್ಣೀರಿನ ಮಧ್ಯನಲ್ಲಿದ್ದರೂ ಬೆಂಕಿಯಿಂದ ಆವರಿಸಲ್ಪಟ್ಟಿರುವಂತೆ ಶಂಕೆಪಡುತ್ತಾನೆ ; ಹಗಲಿನಲ್ಲಿ ಅಂತರಿಕ್ಷದಲ್ಲಿರುವ ನಕ್ಷತ್ರಗಳನ್ನು ನೋಡುತ್ತಾನೆ ; ಕಫೋನ್ಮಾದರೋಗಿಯು ವಮನ, ಅಗ್ನಿಮಾಂದ್ಯ, ದೇಹಕೃಶತ್ವ, ಅರೋಚಕತೆ ಕಾಸ ಇವುಗಳಿಂದ ಪೀಡಿತನಾಗಿ (ಯಾರೂ ಇಲ್ಲದ) ನಿರ್ಜನಪ್ರದೇಶದಲ್ಲಿ ಸ್ತ್ರೀಸಂಭೋಗಮಾಡ

ಲಿಚ್ಛೆಯುಳ್ಳವನಾಗಿ ಅಲ್ಪಬುದ್ಧಿಯುಳ್ಳವನಾಗಿ ಸ್ವಲ್ಪವಾಗಿ ಮಾತನಾಡುತ್ತಾನೆ ; ಹೆಚ್ಚಾಗಿ ನಿದ್ರೆಮಾಡುತ್ತಾನೆ ; ಸ್ವಲ್ಪವಾಗಿಯೇ ಭೋಜನಮಾಡುತ್ತಾನೆ ; ಉಷ್ಣ ಪದಾರ್ಥಗಳನ್ನು ಸೇವಿಸಲು ಇಷ್ಟಪಡುತ್ತಾನೆ ; ರಾತ್ರಿ ವೇಳೆಯಲ್ಲೂ ಊಟಮಾಡಿದ ಮೇಲೂ ಉನ್ಮಾದವು ಹೆಚ್ಚಾಗುತ್ತದೆ ; ಸನ್ನಿಪಾತಿಕೋನ್ಮಾದದಲ್ಲಿ ವಾತಾದಿ ಮೂರು ದೋಷಗಳೂ ತಮ್ಮ ತಮ್ಮ ಪ್ರಕೋಪಣ ಕಾರಣಗಳಿಂದ ವೃದ್ಧಿಹೊಂದಿ ಪರಸ್ಪರ ಸ್ಪರ್ಧಿಸುವಂತೆ ತಮ್ಮ ತಮ್ಮ ಲಿಂಗಗಳನ್ನು ವ್ಯಕ್ತಪಡಿಸುತ್ತವೆ.

ಚೋರೈರ್ನರೇನ್ದ್ರಪುರುಷೈರರಿಭಿಸ್ತಥಾನ್ಯೈರ್ವಿತ್ರಾಸಿತಸ್ಯ ಧನಬಾನ್ಧವ ಸಂಕ್ಷಯಾದ್ವಾ ।
ಗಾಢಂ ಕ್ಷತೇ ಮನಸಿ ಚ ಪ್ರಿಯಯಾರಿರಂಸೋರ್ಜಾಯೇತ ಚೋತ್ಕಟತರೋ ಮನಸೋ ವಿಕಾರಃ ॥೧೨॥
ಚಿತ್ರಂ ಸ ಜಲ್ಪತಿ ಮನೋನುಗತಂ ವಿಸಂಜ್ಞೋ ಗಾಯತ್ಯಥೋ ಹಸತಿ ರೋದಿತಿ ಚಾಪಿ ಮೂಢಃ ।
ರಕ್ತೇಕ್ಷಣೋ ಹತಬಲೇನ್ದ್ರಿಯಭಾಃ ಸುದೀನಃ ಶ್ಯಾವಾನನೋ ವಿಷಕೃತೇಽಥ ಭವೇತ್ ಪರಾಸುಃ ॥೧೩॥

ಕಳ್ಳರು, ರಾಜಪುರುಷರು, ಶತ್ರುಗಳು, ಅಕಾರಣ ವೈರಿಗಳಾದ ಹುಲಿಸಿಂಹಾದಿ ಕ್ಷುದ್ರಮೃಗಗಳು ಇವುಗಳಿಂದ ಅತಿಯಾಗಿ ಹೆದರಿಸಲ್ಪಡುವುದರಿಂದಲೂ ಧನವೂ, ಬಂಧುಗಳೂ ನಾಶವಾಗುವುದರಿಂದಲೂ, ಪ್ರಿಯಸ್ತ್ರೀಯೊಡನೆ ರತಿಕ್ರೀಡೆಮಾಡಲಪೇಕ್ಷೆಯಿರುವಾಗ ಆ ಪ್ರಿಯಳ ವಿಯೋಗವುಂಟಾಗುವುದರಿಂದ ಮನಸ್ಸಿಗೆ ಅತ್ಯಂತ ವ್ಯಸನವುಂಟಾದರೂ ಅತಿ ಘೋರತರವಾದ ಮನಸೋನ್ಮಾದವುಂಟಾಗುತ್ತದೆ ; ತನ್ನ ಮನಸ್ಸಿನಲ್ಲುಂಟಾದ ವ್ಯಸನವನ್ನೇ ಬುದ್ಧಿಪೂರ್ವಕವಾಗಿ ನಾನಾಪ್ರಕಾರದಿಂದ ವರ್ಣಿಸುತ್ತಾನೆ. ಜ್ಞಾನವಿರುವುದಿಲ್ಲ ಭ್ರಾಂತಚಿತ್ತನಾಗಿ ಗಾನಮಾಡುತ್ತಾನೆ, ನಗುತ್ತಾನೆ, ಅಳುತ್ತಾನೆ, ವಿಷಭಕ್ಷಣೆಮಾಡಿದವನಿಗೆ ಕಣ್ಣುಗಳು ಕೆಂಪಾಗುತ್ತವೆ ; ಉತ್ಸಾಹೋಪಚಯಲಕ್ಷಣ ರೂಪವಾದ ಶಕ್ತಿಯೂ ಚಕ್ಷುರಾದಿ ಇಂದ್ರಿಯಗಳ ಶಕ್ತಿಯೂ ಶರೀರದ ಥಾಳಥಾಳ್ಯವೂ ನಷ್ಟವಾಗಿ ದೈನ್ಯದಿಂದ ಕೂಡಿರುತ್ತಾನೆ ; ಮುಖವೆಲ್ಲಾ ಹೊಗೆಯಬಣ್ಣಕ್ಕೆ ತಿರುಗುತ್ತದೆ ; ಚಿಕಿತ್ಸೆಮಾಡದೆ ಉಪೇಕ್ಷಿಸಿದರೆ ಸಾಯುತ್ತಾನೆ.

ಸ್ನಿಗ್ಧಂ ಸ್ವಿನ್ನಂ ತು ಮನುಜಮುನ್ಮಾದಾರ್ತಂ ವಿಶೋಧಯೇತ್ ।
ತೀಕ್ಷ್ಣೈರುಭಯತೋ ಭಾಗೈಃ ಶಿರಸಶ್ಚ ವಿರೇಚನೈಃ ॥೧೪॥
ವಿವಿಧೈರವಪೀಡೈಶ್ಚ ಸರ್ಷಪಸ್ನೇಹಸಂಯುತೈಃ ।
ಯೋಜಯಿತ್ವಾ ತು ತಚ್ಚೂರ್ಣಂ ಘ್ರಾಣೇ ನಸ್ಯಂ ತು ಯೋಜಯೇತ್ ॥೧೫॥
ಸತತಂ ಧೂಪಯೇಚ್ಚೈನಂ ಶ್ವಗೋಮಾಂಸೈಃ ಸುಪೂತಿಭಿಃ ।
ಸರ್ಷಪಾಣಾಂ ಚ ತೈಲೇನ ನಸ್ಯಾಭ್ಯಙ್ಗೌ ಹಿತೌ ಸದಾ ॥೧೬॥

ಉನ್ಮಾದಚಿಕಿತ್ಸೆ : ಉನ್ಮಾದರೋಗಿಗೆ ಸ್ನೇಹಸ್ವೇದಕರ್ಮಗಳನ್ನೂ ತೀಕ್ಷ್ಣ

ದ್ರವ್ಯಗಳಿಂದ ವಮನ, ವಿರೇಚನ, ಶಿರೋವಿರೇಚನಗಳನ್ನೂ ಮಾಡಿಸಬೇಕು ; ಸಾಸಿವೆಯ ಎಣ್ಣೆ ಮಿಶ್ರಮಾಡಿದ ವಿವಿಧ ಮನೋವಿಕಾರಹರಗಳಾದ ಅಮಾನುಷೋಪಸರ್ಗ ಪ್ರತಿಷೇಧದಲ್ಲಿ ಹೇಳಿರುವ ಚೂರ್ಣವನ್ನು ಸಾಸಿವೆ ಎಣ್ಣೆಯಲ್ಲಿ ರಂಗಳಿಸಿ ನಸ್ಯಮಾಡಿಸಬೇಕು ; ಕೊಳೆತನಾಯಿ, ದನದಮಾಂಸಗಳನ್ನು ಬೆಂಕಿಗೆಹಾಕಿ ಬರುವಹೊಗೆಯನ್ನು ಉನ್ಮಾದ ರೋಗಿಯ ಮೈಮೇಲೆ ತಾಕುವಂತೆ ಮಾಡಬೇಕು ; ದ್ರವ್ಯಸಂಯೋಗಪ್ರಭಾವದಿಂದ ಮನಸ್ಸು ಶಾಂತವಾಗಿ ಪ್ರಕೃತಸ್ಥಿತಿಯನ್ನು ಪಡೆಯುತ್ತದೆ ; ಸಾಸಿವೆಯ ಎಣ್ಣೆಯಿಂದ ಸದಾ ನಸ್ಯಾಭ್ಯಂಗಗಳನ್ನು ಮಾಡಿಸುವುದು ಹಿತಕರವು.

ದರ್ಶಯೇದದ್ಭುತಾನ್ಯಸ್ಯ ವದೇನ್ನಾಶಂ ಪ್ರಿಯಸ್ಯ ಚ ।
ಭೀಮಾಕಾರೈರ್ನರೈರ್ನಾಗೈರ್ದಾನ್ತೈರ್ವ್ಯಾಲೈಶ್ಚ ನಿರ್ವಿಷೈಃ ॥೧೭॥
ಭೀಷಯೇತ್ಸಂಯುತಂ ಪಾಶೈಃ ಕಶಾಭಿರ್ವಾಥ ತಾಡಯೇತ್ ।
ಯನ್ತ್ರಯಿತ್ವಾ ಸುಸುಪ್ತಂ ವಾ ತ್ರಾಸಯೇತ್ತಂ ತೃಣಾಗ್ನಿನಾ ॥೧೮॥
ಪ್ರತುದೇದಾರಯಾ ಚೈನಂ ಮರ್ಮಾಘಾತಂ ವಿವರ್ಜಯೇತ್ ।
ವೇಶ್ಮನೋಽನ್ತಃ ಪ್ರವಿಶ್ಯೈನಂ ರಕ್ಷನ್ ತದ್ವೇಶ್ಮ ದೀಪಯೇತ್ ॥೧೯॥
ಸಾಪಿಧಾನೇ ಜರತ್ಕೂಪೇ ಸತತಂ ವಾ ನಿವಾಸಯೇತ್ ।

ಹಿಂದೆ ನೋಡದಿರುವ ಭಯಂಕರರೂಪಗಳನ್ನು ತೋರಿಸಿ ; ಇಷ್ಟವಸ್ತು ನಾಶವನ್ನು ತಿಳಿಸಬೇಕು ; ಭಯಂಕರಾಕಾರವುಳ್ಳ ಮನುಷ್ಯ, ಪಳಗಿದ ಆನೆಗಳು ಮತ್ತು ವಿಷದ ಹಲ್ಲನ್ನು ಕಿತ್ತಿರುವ ಸರ್ಪಗಳ ಮುಂದೆನಿಲ್ಲಿಸಿ ಭಯಪಡಿಸಬೇಕು ; ಬೇಡಿ, ಸರಪಣಿಗಳಿಂದ ಕೈಕಾಲುಗಳನ್ನು ಬಿಗಿದು ಕೊರಡೆಯಿಂದ ಹೊಡಿಸಬೇಕು ; ಮಲಗಿರುವಾಗ ಹುಲ್ಲನ್ನು ಬೆಂಕಿಯಿಂದ ಹತ್ತಿಸಿ ಹೆದರಿಸಬೇಕು ; ಮೊನೆಯಾದ ಶಲಾಕೆಯಿಂದ ಮರ್ಮಸ್ಥಾನಗಳನ್ನು ಬಿಟ್ಟು ಬಾಕಿ ಶರೀರಭಾಗವನ್ನು ಚುಚ್ಚಬೇಕು ; ಮನೆಯೊಳಗೆ ಈ ರೋಗಿಯನ್ನು ಕೂಡಿ ಒಳಗಿನ ಭಾಗವು ಹತ್ತಿಕೊಳ್ಳದಂತೆ ಏರ್ಪಡಿಸಿ ಮಧ್ಯದಲ್ಲಿ ಬೆಂಕಿ ಹತ್ತಿಸಬೇಕು ; ನೀರಿಲ್ಲದ ಹಳೆಯ ಭಾವಿಯಲ್ಲಿ ಸದಾ ಕೂಡಿಸಿರಬೇಕು.

ತ್ರ್ಯಹಾತ್ತ್ರ್ಯಹಾದ್ಯವಾಗೂಶ್ಚ ತರ್ಪಣಾನ್ವಾ ಪ್ರದಾಪಯೇತ್ ॥೨೦॥
ಕೇವಲಾನಮ್ಬುಯುಕ್ತಾನ್ ವಾ ಕುಲ್ಮಾಷಾನ್ ವಾ ಬಹುಶ್ರುತಃ ।
ಹೃದ್ಯಂ ಯದ್ದೀಪನೀಯಂ ಚ ತತ್ಪಥ್ಯಂ ತಸ್ಯ ಭೋಜಯೇತ್ ॥೨೧॥
ವಿಡಙ್ಗತ್ರಿಫಲಾಮುಸ್ತಮಂಜಿಷ್ಠಾದಾಡಿಮೋತ್ಪಲೈಃ ।
ಶ್ಯಾಮೈಲವಾಲುಕೈಲಾಭಿಶ್ಚನ್ದನಾಮರದಾರುಭಿಃ ॥೨೨॥
ಬರ್ಹಿಷ್ಠರಜನೀಕುಷ್ಠಪರ್ಣಿನೀಸಾರಿವಾಹ್ವಯೈಃ ।
ಹರೇಣುಕಾತ್ರಿವೃದ್ದನ್ತೀವಚಾತಾಲೀಸಕೇಶರೈಃ ॥೨೩॥
ದ್ವಿಕ್ಷೀರಂ ಸಾಧಿತಂ ಸರ್ಪಿರ್ಮಾಲತೀಕುಸುಮೈಃ ಸಹ ।
ಗುಲ್ಮಕಾಸಜ್ವರಶ್ವಾಸಕ್ಷಯೋನ್ಮಾದನಿವಾರಣಮ್ ॥೨೪॥
ಏತದೇವ ಹಿ ಸಂಪಕ್ವಂ ಜೀವನೀಯೋಪಸಂಭೃತಮ್ ।

ಚತುರ್ಗುಣೇನ ದುಗ್ಧೇನ ಮಹಾಕಲ್ಯಾಣಮುಚ್ಯತೇ ॥೨೫॥
ಅಪಸ್ಮಾರಂ ಗ್ರಹಂ ಶೋಷಂ ಕ್ಲೈಬ್ಯಂ ಕಾರ್ಶ್ಯಮಬೀಜತಾಮ್ ।
ಘೃತಮೇತನ್ನಿಹನ್ತ್ಯಾಶು ಯೇ ಚಾದೌ ಗದಿತಾಗದಾಃ ॥೨೬॥
ಬರ್ಹಿಷ್ಠ ಕುಷ್ಠಮಂಜಿಷ್ಠಾಕಟು ಕೈಲಾನಿಶಾಹ್ವಯೈಃ ।
ತೇನೇದಂ ತ್ರಿಫಲಾಹಿಙ್ಗು ವಾಜಿಗನ್ಧಾ ಮರದ್ರುಮೈಃ ॥೨೭॥
ವಚಾಜಮೋದಾಃಕಾಕೋಳೀಮೇದಾವಃಧುಕಪದ್ಮಕೈಃ ।
ಸಶರ್ಕರಾಂ ಹಿತಂ ಸರ್ಪಿಃ ಪಕ್ವಂ ಕ್ಷೀರಚತುರ್ಗುಣಮ್ ॥೨೮॥
ಬಾಲಾನಾಂ ಗ್ರಹಜುಷ್ಟಾನಾಂ ಪುಂಸಾಂ ದುಷ್ಟಾಲ್ಪರೇತಸಾಮ್ ।
ಖ್ಯಾತಂ ಫಲಘೃತಂ ಸ್ತ್ರೀಣಾಂ ವನ್ಧ್ಯಾನಾಂ ಚಾಶು ಗರ್ಭದಮ್ ॥೨೯॥

ಚಿಕಿತ್ಸಾಕುಶಲನಾದ ವೈದ್ಯನು ಉನ್ಮಾದ ರೋಗಿಗೆ ಅಗ್ನಿಬಲಾನುಸಾರವಾಗಿ ಮೂರುದಿನಗಳಿಗೊಂದುಸಾರಿ ಯವಾಗೂವನ್ನಾಗಲೀ, ಬರೀನೀರಿನಲ್ಲಿ ಕದರಿದ ಅರಳು ಹಿಟ್ಟನ್ನಾಗಲೀ, ಯವೆಯ ಹಿಟ್ಟಿನಿಂದ ಮಾಡಿದ ಭಕ್ಷ್ಯಗಳನ್ನಾಗಲೀ (ಕುಲ್ಮಾಷ್ಗ,) ಕುಡಿಸಬೇಕು; ಹೃದಯಕ್ಕೆ ಬಲವನ್ನುಂಟುಮಾಡುವ ಮತ್ತು ಅಗ್ನಿದೀಪನವನ್ನುಂಟು ಮಾಡುವ ಹಿತಕರಗಳಾದ ಆಹಾರವನ್ನು ಆತನಿಗೆ ತಿನ್ನಿಸಬೇಕು; ವಿಡಂಗ, ತ್ರಿಫಲೆ ಕೊನ್ನಾರಿಗೆಡ್ಡೆ, ಮಂಜಿಷ್ಠೆ, ದಾಳಿಂಬೆ, ನೈದಿಲೆಗೆಡ್ಡೆ, ತಿಗಡೆಬೇರು, ಏಲಾವಾಲುಕ ಏಲಕ್ಕಿ, ರಕ್ತಚಂದನ, ದೇವದಾರು, ಬರ್ಹಿಷ್ಠ (ಮಾಚಿಪತ್ರೆ), ಅರಿಶಿನ, ಚಂಗಲ್ ಕೋಷ್ಠ, ಮೂರಿಲೆಹೊನ್ನೆ, ಸೊಗಡೆಬೇರು, ರೇಣುಕೆಬೀಜ, ತಿಗಡೆ, ಜಾಪಾಳದ ತೊಗಟೆ, ಬಜೆ, ತಾಳೀಸಪತ್ರೆ, ನಾಗಕೇಸರಿ, ಇವುಗಳ ಕಷಾಯ ೪ ಪ್ರಸ್ಥ, ಹಾಲು ೨ ಪ್ರಸ್ಥ, ಹಸುವಿನ ತುಪ್ಪ ೧ ಪ್ರಸ್ಥ, ಜಾಜಿ ಹೂವಿನಕಲ್ಕ ೧ ಕುಡುವದಷ್ಟು ಇವನ್ನು ಸೇರಿಸಿ ಮಂದಾಗ್ನಿಯಿಂದ ತಯಾರಿಸಿದ ಘೃತಪಾನದಿಂದ ಗುಲ್ಮ, ಕಾಸ, ಜ್ವರ, ಶ್ವಾಸ, ಕ್ಷಯ, ಉನ್ಮಾದ ಈ ರೋಗಗಳು ನಿವಾರಣೆಯಾಗುತ್ತವೆ; ಮೇಲೆ ಹೇಳಿದ ದ್ರವ್ಯಗಳೊಡನೆ ಕಾಕೋಳ್ಯಾದಿಗಣದ್ರವ್ಯಗಳನ್ನೂ ೪ ರಷ್ಟು ಹಾಲನ್ನೂ ಸೇರಿಸಿ ತಯಾರಿಸಿದರೆ "ಮಹಾಕಲ್ಯಾಣಕ ಘೃತ"ವೆನ್ನುತ್ತಾರೆ; ಇದು ಅಪಸ್ಮಾರ, ಗ್ರಹಬಾಧೆ, ಕ್ಷಯ ಷಂಡತ್ವ, ಕಾರ್ಶ್ಯ, (ದೇಹಕ್ಷೀಣತೆ) ಶುಕ್ರಕ್ಷೀಣತೆ (ಅಬೀಜತೆ) ಮತ್ತು ಹಿಂದೆ ಹೇಳಿದ ಕಾಸಜ್ವರಾದಿರೋಗಗಳನ್ನೂ ನಿವಾರಿಸುತ್ತದೆ; ಮಾಚಿಪತ್ರೆ, ಚಂಗಲ್‌ಕೊಷ್ಠ, ಮಂಜಿಷ್ಠ ಕಟುರೋಹಿಣಿ, ಏಲಕ್ಕಿ, ಅರಿಶಿನ, ತ್ರಿಫಲೆ, ಹಿಂಗು, ಅಶ್ವಗಂಧಿಬೇರು, ದೇವದಾರು, ಬಜೆ, ಅಜವೋದ, ಕಾಕೋಳಿ, ಮೇದೆ, ಅತಿಮಧುರ, ಪದ್ಮಕ, ಸಕ್ಕರೆ ಇವುಗಳ ಕಲ್ಕಕ್ಕೆ ೪ ರಷ್ಟು ತುಪ್ಪವನ್ನೂ ತುಪ್ಪದ ೪ ರಷ್ಟು ಹಾಲನ್ನೂ ಸೇರಿಸಿ ತಯಾರಿಸಿದ ಘೃತಕ್ಕೆ "ಫಲಘೃತ" ವೆಂದುಹೆಸರು; ಬಾಲಕರು, ಗ್ರಹಪೀಡಿತರು, ದುಷ್ಟಶುಕ್ರವುಳ್ಳವರು ಅಲ್ಪಶುಕ್ರವುಳ್ಳವರು ಈ ಘೃತವನ್ನು ಸೇವಿಸಿದರೆ ಹಿತವಾಗುತ್ತದೆ, ಬಂಜೆಯರಿಗೆ ಇದರ ಸೇವನೆಯಿಂದ ಬೇಗನೆ ಗರ್ಭೋತ್ಪತ್ತಿಯುಂಟಾಗುತ್ತದೆ.

ಬ್ರಾಹ್ಮೀಮೈನ್ದ್ರೀಂ ವಿಡಙ್ಗಾನಿ ವ್ಯೋಷಂ ಹಿಙ್ಗುಂ ಸುರಾಂಜಟಾಮ್ ।
ವಿಷಘ್ನೀಂ ಲಶುನಂರಾಸ್ನಾಂ ವಿಶಲ್ಯಾಂ ಸುರಸಾಂ ವಚಾಮ್ ॥೩೦॥
ಜ್ಯೋತಿಷ್ಮತೀಂ ನಾಗರಂ ಚ ಆನನ್ತಾಮಭಯಾಂ ತಥಾ ।
ಸೌರಾಷ್ಟ್ರೀಂ ಚ ಸಮಾಂಶಾನಿ ಗಜಮೂತ್ರೇಣ ಪೇಷಯೇತ್ ॥೩೧॥
ಛಾಯಾ ವಿಶುಷ್ಕಾಸ್ತದ್ವರ್ತೀರ್ಯೋಜಯೇದ್ವಿಧಿಕೋವಿದಃ ।
ಅವಪೀಡೇಽಞ್ಜನೇಽಭ್ಯಙ್ಗೇನಸ್ಯೇ ಧೂಮೇಪ್ರಲೇಪನೇ ॥೩೨॥

ಒಂದೆಲಗ, ಹಾವುನೆಕ್ಕೆಬೇರು, ವಿಡಂಗ, ತ್ರಿಕಟು, ಹಿಂಗು, ಮದ್ಯ,(ಗಂಧಮಾಂಸಿ) ಜಟಾಮಾಂಸಿ, ಅರಿಶಿನ, ಬೆಳ್ಳುಳ್ಳಿ, ರಾಸ್ನೆ, ಅಮೃತವಳ್ಳಿ, ತುಳಸಿ, ಬಜೆ, ಗಂಗುಂಗೆಬೀಜ, (ಕಾಕಮರ್ದನಿ ಎಂದು ಕೆಲವರಮತ) ಶುಂಠಿ, ಸೊಗದೆಬೇರು, ಅಣಿಲೆಕಾಯಿ, ಪಟಿಕ, (ತುವರಿಮಣ್ಣು) ಇವೆಲ್ಲವನ್ನೂ ಸಮಭಾಗದಿಂದ ಸೇರಿಸಿ ಆನೆಯಮೂತ್ರದಲ್ಲಿ ಅರೆದು ಬತ್ತಿಗಳನ್ನು ಮಾಡಿ ನೆರಳಿನಲ್ಲಿ ಒಣಗಿಸಿ ಶಾಸ್ತ್ರೀಯ ವಿಧಾನದಿಂದ ಅವಪೀಡನಸ್ಯ,ನೇತ್ರಾಂಜನ, ಅಭ್ಯಂಗ, ನಸ್ಯ, ಧೂಮಪಾನ, ಲೇಪನಗಳ ಮೂಲಕ ಪ್ರಯೋಗಿಸಿದರೆ ಹಿತಕರವಾಗುತ್ತದೆ.

ಉರೋಪಾಙ್ಗಲಲಾಟೇಷು ಸಿರಾಶ್ಚಾಸ್ಯ ವಿಮೋಕ್ಷಯೇತ್ ।
ಅಪಸ್ಮಾರಕ್ರಿಯಾಂ ಚಾಪಿ ಗ್ರಹೋದ್ದಿಷ್ಟಾಂ ಚ ಕಾರಯೇತ್ ॥೩೩॥
ಶಾನ್ತದೋಷಂ ವಿಶುದ್ಧಂ ಚ ಸ್ನೇಹಬಸ್ತಿಭಿರಾಚರೇತ್ ।

ಎದೆ, ಕಡೆಗಣ್ಣು, ಹಣೆಗಳಲ್ಲಿ ಸಿರಾಮೋಕ್ಷಣ ಮತ್ತು ರಕ್ತಸ್ರಾವಗಳನ್ನೂ ಅಪಸ್ಮಾರ ಮತ್ತು ಗ್ರಹಾವೇಶರೋಗಗಳಲ್ಲಿ ಚಿಕಿತ್ಸೆಗಳನ್ನು ಮಾಡಿಸಬೇಕು ; ದೋಷ ಶಮನವಾಗಿ ವಿಶುದ್ಧನಾದಮೇಲೆ ಸ್ನೇಹಬಸ್ತಿಯನ್ನು ಪ್ರಯೋಗ ಮಾಡಿಸಬೇಕು.

ಉನ್ಮಾದೇಷು ಚ ಸರ್ವೇಷು ಕುರ್ಯಾಚ್ಚಿತ್ತಪ್ರಸಾದನಮ್ । ॥೩೪॥
ಮೃದುಪೂರ್ವಂ ಮದೇಽಪ್ಯೇವಂ ಕ್ರಿಯಾಂ ವೃದ್ಧಿಂ ಪ್ರಯೋಜಯೇತ್
ಶೋಕಾಧಿಕರ್ಷ ವ್ಯಪನಯೇದುನ್ಮಾದೇ ಪಞ್ಚಮೇ ಭಿಷಕ್ ।
ವಿಷಜೇ ಮೃದುಪೂರ್ವಾಂ ಚ ವಿಷಘ್ನೀಂ ಕಾರಯೇತ್ ಕ್ರಿಯಾಮ್ ॥೩೫॥

ಎಲ್ಲಾ ವಿಧದ ಉನ್ಮಾದರೋಗಗಳಲ್ಲೂ, ಮದದಲ್ಲೂ, ಮೃದುದ್ರವ್ಯಗಳಿಂದಲೇ ವಮನವಿರೇಕಾಂಜನಾದಿ ಸಕಲಕ್ರಿಯೆಗಳನ್ನೂ ಮಾಡಿಸಿ ಮನಃಶಾಂತಿಮಾಡಬೇಕು ; ಇಷ್ಟವಸ್ತುಗಳನ್ನು ಕೊಟ್ಟು ಮನಸ್ಸಿನವ್ಯಥೆ ಮೊದಲಾದ ವಿಷಜದಲ್ಲಿ ವಿಷಹರಗಳಾದ ಮೃದು ಚಿಕಿತ್ಸೆಗಳನ್ನೂ ಮಾಡಿಸಬೇಕು.

ಇತಿ ಶ್ರೀ ಸುಶ್ರುತ ಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ಭೂತವಿದ್ಯಾಯಾಂ ಉನ್ಮಾದ ಪ್ರತಿಷೇಧನಾಮಕ ದ್ವಿಷಷ್ಟಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ತ್ರಿಷಷ್ಟಿತಮೋಽಧ್ಯಾಯಃ

ಅಥಾತೋ ರಸಭೇದವಿಕಲ್ಪಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ರಸಭೇದವಿಭಾಗಗಳನ್ನು ವಿವರಿಸುತ್ತೇವೆ.

ಟಿಪ್ಪಣಿ : ಹಿಂದೆ ಹೇಳಿದ ಮಧುರಾದಿಷಡ್ರಸಗಳನ್ನೂ ೨-೩ ಮೊದಲಾಗಿ ರಸಗಳನ್ನು ಸೇರಿಸಿ ವಿಭಾಗಮಾಡುವುದು ಅಥವಾ ದೋಷಭೇದಗಳಿಗೆ ಅನುಸಾರವಾಗಿ ವಿಭಾಗಮಾಡಿದರೆ ರಸಭೇದವಿಕಲ್ಪವೆಂದು ಹೆಸರು.

ದೋಷಾಣಾಂ ಪಞ್ಚದಶಧಾ ಪ್ರಸರೋಽಭಿಹಿತಸ್ತ್ವಯಃ |
ತ್ರಿಷಷ್ಟ್ಯಾ ರಸಭೇದಾನಾಂ ತತ್ಪ್ರಯೋಜನಮುಚ್ಯತೇ ||೩||

ವ್ರಣಪ್ರಶ್ನಾಧ್ಯಾಯದಲ್ಲಿ ೧೫ ವಿಧ ದೋಷಪ್ರಸರಗಳೆಂದು ಹೇಳಿದೆ ; ಅವುಗಳಲ್ಲಿ ೬೩ ವಿಧ ದೋಷಭೇದಗಳೂ ಅಡಗಿವೆ. ಈ ೬೩ ವಿಧಗಳಾದ ದೋಷಭೇದಗಳ ಉಪಯೋಗಕ್ಕಾಗಿಯೇ ರಸಭೇದಗಳೂ ಹೇಳಲ್ಪಡುತ್ತವೆ.

ಅವಿದಗ್ಧಾ ವಿದಗ್ಧಾಶ್ಚ ಭಿದ್ಯನ್ತೇ ತೇ ತ್ರಿಷಷ್ಟಿಧಾ |
(ರಸಭೇದತ್ರಿಷಷ್ಟಿಂ ತು ವೀಕ್ಷ್ಯ ವೀಕ್ಷ್ಯಾವಚಾರಯೇತ್) ||೪||

ರಸಗಳು ಒಂದೊಂದಾಗಿಯೂ, ಎರಡು ಎರಡು, ಮೂರು ಮೂರು, ನಾಲ್ಕು ನಾಲ್ಕು, ಐದು ಐದು, ಆರು ಆರು, ಈ ರೀತಿ ಸೇರಿಯೂ ೬೩ ವಿಧಗಳಾಗುತ್ತವೆ. ಇದೇ ರೀತಿ ವಾತ, ಪಿತ್ತ, ಕಫಗಳೂ ಸಾಮ್ಯಾವಸ್ಥೆಯಿಂದಲೂ ಪ್ರಕೋಪಕ್ಷೀಣಾವಸ್ಥೆಗಳಿಂದಲೂ ಕ್ರಮವಾಗಿ ೬೩ ಭೇದಗಳಾಗುತ್ತವೆಂಬುದನ್ನು ತಿಳಿಸಿರುತ್ತದೆಯಷ್ಟೆ ; ಪ್ರಕುಪಿತದೋಷಗಳಿಗೆ ತಕ್ಕಂತೆ ಚಿಕಿತ್ಸೆಯನ್ನು ಮಾಡಲು ಮೇಲಿನ ಭೇದಗಳನ್ನು ಸಾವಧಾನವಾಗಿ ಪರಿಶೀಲಿಸಬೇಕು. ಎರಡು ರಸಗಳು ಸೇರಿರುವ ದ್ರವ್ಯಗಳು ೧. ಎಲಚಿ, ಬೇಲದಹಣ್ಣುಗಳು, ಮಧುರಾಮ್ಲಗಳು. ೨. ಒಂಟೆಯಹಾಲು, ಕುರಿ ಮತ್ತು ಮೀನಿನ ಮಾಂಸಗಳು, ಮಧುರಲವಣಗಳು. ೩. ನಾಯಿ ಮತ್ತು ನರಿಗಳಮಾಂಸವು, ಮಧುರಕಟುಗಳು. ೪. ಧೂಪ (ಸಾಂಬ್ರಾಣಿ) ಸರ್ಜರಸಾದಿಗಳು, ಮಧುರತಿಕ್ತಗಳು. ೫. ತಿಲತೈಲ ಮೊದಲಾದವು ಮಧುರಕಷಾಯಗಳು. ೬ ಚೌಳುಪ್ಪು ಮೊದಲಾದುವು, ಮಧುರಲವಣಗಳು ; ೭. ಚುಕ್ರ (ಕಲಗಚ್ಚು) ಮೊದಲಾದುವು, ಆಮ್ಲಕಟುಗಳು. ೮. ಸುರೆಮೊದಲಾದ, ಮದ್ಯಗಳು, ಆಮ್ಲತಿಕ್ತಗಳು. ೯. ಆನೆಯಮೊಸರು ಮತ್ತು ಗಿಣಿಯಮಾಂಸಗಳು, ಅಮ್ಲಕಷಾಯಗಳು. ೧೦. ತವರಸೀಸಗಳು, ಲವಣತಿಕ್ತಗಳು.

೧೧. ಗೋಮೂತ್ರಸರ್ಜಕ್ಷಾರಗಳು, ಲವಣಕಟುಗಳು. ೧೨. ಸಮುದ್ರನೊರೆ, ಲವಣಕಷಾಯಗಳು ೧೩. ಕರ್ಪೂರಜಾಜಿಕಾಯಿಗಳು, ತಿಕ್ತಕಟುಗಳು. ೧೪. ಲವಲೀಫಲ ? ಹೆಣ್ಣು ಆನೆಯ ಮೂತ್ರಗಳು, ತಿಕ್ತಕಷಾಯಗಳು. ೧೫. ಗೇರುಬೀಜದತಿರುಳು, ಹರಿತಾಳಗಳು, ಕಟುಕಷಾಯಗಳು, ಈ ರೀತಿಯಾಗಿ ಎರಡೆರಡು ರಸಗಳುಳ್ಳ ದ್ರವ್ಯಗಳು ೧೫ ವಿಧಗಳೆಂದು ತಿಳಿಸಲಾಯಿತು. ಇನ್ನು ಮೂರು ಮೂರು ರಸಭೇದಗಳುಳ್ಳ ದ್ರವ್ಯಗಳನ್ನು ಹೇಳಲಾಗುತ್ತದೆ ಹೇಗೆಂದರೆ ೧. ಆನೆ ಮೊದಲಾದುವು, ಮಧುರಾಮ್ಲಲವಣಗಳು. ೨. ಮುಳ್ಳುಹಂದಿಯಮಾಂಸವು, ಮಧುರಾಮ್ಲಕಟುವು ೩. ಗೋಧೂಮದಿಂದ ತಯಾರಿಸಿದ ಸುರೆಯು, ಮಧುರಾಮ್ಲತಿಕ್ತವು. ೪. ಮೊಸರಿನಕಟ್ಟು, ಮಜ್ಜಿಗೆ ಮೊದಲಾದುವು, ಮಧುರಾಮ್ಲಕಷಾಯಗಳು. ೫. ಕೊಗಿರಹಕ್ಕಿ (ಬಾವಲಿ)ಯ ಮಾಂಸವು, ಮಧುರಲವಣಕಟುವು. ೬. ತಾವರೆಗೆಡ್ಡೆಯು ಮಧುರಲವಣಕಷಾಯವು ; ೭. ಹೇಮಮಾಕ್ಷಿಕ, ಅಸ್ನಭೇದಿ, ಇವುಗಳೂ ಮಧುರಲವಣಕಷಾಯಗಳು. ೮. ತೃಣಶೂನ್ಯಾಫಲ ? ಕೊತ್ತುಂಬರಿ ಮೊದಲಾದುವು, ಮಧುರಕಟುತಿಕ್ತರಸಗಳು. ೯. ಉಡದಮಾಂಸ, ಹರಳೆಣ್ಣೆಗಳು, ಮಧುರಕಟುಕಷಾಯಗಳು. ೧೦. ಅಮೃತಬಳ್ಳಿ, ಕೋತಿಯಮಾಂಸ, ಕೆಂಪುಸಾಸಿವೆಎಣ್ಣೆ ಮೊದಲಾದುವು, ಮಧುರತಿಕ್ತಕಷಾಯಗಳು ೧೧. ಬೆಳ್ಳಿ, ಶಿಲಾಜತುಗಳು ಆಮ್ಲಲವಣಕಟುರಸಗಳು. ೧೨. ಆನೆಯ ಮೂತ್ರಾದಿಗಳು ಆಮ್ಲಲವಣತಿಕ್ತಗಳು. ೧೩. ರೋಮಕಲವಣ, ಆನೆಯಮೊಸರುಗಳು, ಅಮ್ಲಲವಣಕಷಾಯಗಳು. ೧೪. ಮೆಣಸಿನಿಂದ ಸಂಸ್ಕರಿಸಿದ ಸುರೆಯು ಅಮ್ಲಕಟುತಿಕ್ತವು. ೧೫. ಓಟೆಹುಳಿಯು, ಅಮ್ಲಕಟುಕಷಾಯವು ; ೧೬. ಗಿಣಿಯ ಮಾಂಸ ಸುರೆ ಮೊದಲಾದುವು ಅಮ್ಲತಿಕ್ತಕಷಾಯಗಳು. ೧೭. ಕುರಿಯಮೂತ್ರಾದಿಗಳು, ಲವಣ, ಕಟುತಿಕ್ತರಸಗಳು ; ೧೮. ಗೇರಿನಆಸವ ರೋಮಲವಣಗಳು, ಲವಣ ಕಟುಕಷಾಯಗಳು. ೧೯. ಸಮುದ್ರದ ನೊರೆ ಮೊದಲಾದುವು, ಲವಣತಿಕ್ತಕಷಾಯಗಳು. ೨೦. ಕರಿಅಗಿಲು, ದೇವದಾರು ಸ್ನೇಹಗಳು, ಅರ್ಘ್ಯಾದಿ (ಜೇನುತುಪ್ಪ) ಗಳು, ಕಟುತಿಕ್ತಕಷಾಯಗಳು, ಈ ರೀತಿ ಮೂರುಮೂರು ರಸಗಳು ಸೇರಿರುವ ದ್ರವ್ಯಗಳಲ್ಲಿ ೨೦ ವಿಧಗಳನ್ನು ಹೇಳಿದಂತಾಯಿತು ; ಇನ್ನುಮುಂದೆ ೪ ರಸಗಳು ಸೇರಿರುವ ೧೫ ಭೇದಗಳನ್ನು ವಿವರಿಸಲಾಗುತ್ತದೆ ೧. ಗೋಮೂತ್ರಶಿಲಾಜಿತುವಿನಲ್ಲಿ, ಮಧುರಾಮ್ಲಲವಣಕಟುಕಗಳು. ೨. ಗೋಮೂತ್ರ ಮತ್ತು ಒಂದೇಗೊರಸುಳ್ಳ ಕುದುರೆ, ಕತ್ತೆ, ಮೊದಲಾದ ಪ್ರಾಣಿಗಳ ಹಾಲು, ಮೊದಲಾದುವುಗಳಲ್ಲಿ ಮಧುರಾಮ್ಲಲವಣತಿಕ್ತಗಳು. ೩. ಸೈಂಧವಮಿಶ್ರಮಾಡಿದ ತಕ್ರಾದಿಗಳಲ್ಲಿ ಮಧುರಾಮ್ಲಲವಣ ಕಷಾಯಗಳು. ೪. ಬೆಳ್ಳುಳ್ಳಿ ಮಿಶ್ರಮಾಡಿದ ಸುರೆಯಲ್ಲಿ, ಮಧುರಾಮ್ಲ ಕಟುತಿಕ್ತಗಳು. ೫. ಕಾಂಜಿಕ ಮಿಶ್ರವಾದ ಹರಳೆಣ್ಣೆ ಮತ್ತು ಖದಿರಮಿಶ್ರಮಾಡಿದ ಶಿಲಾಜತು ಮೊದಲಾದುವು, ಮಧುರಾಮ್ಲಕಟುಕಷಾಯವುಳ್ಳವು. ೬. ಉದುಂಬರಫಲಕ್ಕೆ ತರುಚದ ಸಕ್ಕರೆ ಮಿಶ್ರಮಾಡಿದರೆ, ಮಧುರಾಮ್ಲತಿಕ್ತಕಷಾಯಗಳು. ೭.

ಬದನೆಕಾಯಿ ಮೊದಲಾದುವು, ಮಧುರಲವಣತಿಕ್ತಕಟುರಸಗಳುಳ್ಳವು. ೮. ಗೋಮೂತ್ರಮಿಶ್ರಮಾಡಿದ ತೈಲಾದಿಗಳಲ್ಲಿ, ಮಧುರಲವಣಕಟುಕಷಾಯಗಳು. ೯. ಎಳ್ಳು ಮತ್ತು ಗುಗ್ಗುಳು ಮೊದಲಾದುವುಗಳಲ್ಲಿ ಮಧುರಕಟುತಿಕ್ತಕಷಾಯಗಳು. ೧೦. ಸಮುದ್ರದನೊರೆ, ಸಕ್ಕರೆ, ಚಿತ್ರಮೂಲ, ಎಲಚಿಹಣ್ಣುಗಳು ಸೇರಿದರೆ, ಮಧುರಲವಣತಿಕ್ತಕಷಾಯಗಳು. ೧೧. ಸೈಂಧವಸುವರ್ಚಲಗಳನ್ನು ಆನೆಯ ಮೊಸರಿಗೆ ಸೇರಿಸಿ ತಯಾರಿಸಿದ ಸುರೆಯಲ್ಲಿ ಅಮ್ಲಲವಣಕಟುತಿಕ್ತರಸಗಳಿವೆ. ೧೨. ಸೌವರ್ಚಲಲವಣಮಿಶ್ರವಾದ ಆನೆಯಮೊಸರಿನಲ್ಲಿ ಅಮ್ಲಲವಣಕಟುಕಷಾಯಗಳಿವೆ. ೧೩. ಉದ್ಭಿದಲವಣವನ್ನು ಮಿಶ್ರಮಾಡಿದ ಗಿಣಿಯಮಾಂಸದಲ್ಲಿ, ಅಮ್ಲಲವಣತಿಕ್ತಕಷಾಯಗಳಿವೆ. ೧೪. ಎಳೆಯ ಮೂಲಂಗಿಯನ್ನು ಸೇರಿಸಿದ ಆನೆಯಮೊಸರಿನಲ್ಲಿ ಅಮ್ಲತಿಕ್ತಕಟುಕಷಾಯಗಳಿವೆ. ೧೫. ರೋಮಕಲವಣಮಿಶ್ರಮಾಡಿದ ಬಾಲಬಿಲ್ವ ಫಲದಲ್ಲಿ ಲವಣಕಟುತಿಕ್ತಕಷಾಯಗಳಿವೆ. ಇನ್ನುಮುಂದೆ ಐದು ರಸಮಿಶ್ರಿತಗಳಾದ ೬ ಸಂಯೋಗಗಳನ್ನು ಹೇಳಲಾಗುತ್ತದೆ. ಹೇಗೆಂದರೆ ೧ ಎಳಸಾದ (ಕಮರಕ)ದೊಡನೆ ಹುರಿಬದನೆಕಾಯನ್ನು ಸೇರಿಸಿದರೆ ಮಧುರ ಅಮ್ಲಲವಣಕಟುತಿಕ್ತಗಳಿರುತ್ತವೆ. ೨. ತ್ರಿಕಟುಮಿಶ್ರಮಾಡಿದ ಮಜ್ಜಿಗೆಯಲ್ಲಿ ಮಧುರಾಮ್ಲಲವಣ ಕಟುಕಷಾಯಗಳಿರುತ್ತವೆ ; ೩ ಉದ್ಭಿದಲವಣಮಿಶ್ರಮಾಡಿದ ಮಜ್ಜಿಗೆಯಲ್ಲಿ ಮಧುರಾಮ್ಲಲವಣತಿಕ್ತಕಷಾಯಗಳಿರುತ್ತವೆ, ೪. ಅಣಿಲೆಕಾಯಿ, ನೆಲ್ಲಿಕಾಯಿಗಳಲ್ಲಿ ಮಧುರಾಮ್ಲಕಟುತಿಕ್ತಕಷಾಯಗಳಿರುತ್ತವೆ; ೫. ಗೇರು, ಬೆಳ್ಳಿ, ಶಿಲಾಜತುಗಳನ್ನು ಮಿಶ್ರಮಾಡಿದ ಹಸುವಿನ ಹಾಲಿನಲ್ಲಿ, ಅಮ್ಲಲವಣಕಟುತಿಕ್ತಕಷಾಯಗಳಿರುತ್ತವೆ ; ಒಂದು ವಿಧದ ಜಿಂಕೆಯ ಮಾಂಸದಲ್ಲಿ ೬ ರಸಗಳೂ ಸೇರಿವೆ. ಮಧುರಾಮ್ಲ ಲವಣಕಟುತಿಕ್ತ ಕಷಾಯಗಳಿರುತ್ತವೆ ; ಇನ್ನು ಒಂದೇ ರಸವುಳ್ಳ ದ್ರವ್ಯಗಳನ್ನು ಹೇಳುತ್ತಾರೆ. ೧. ಹಾಲಿನ ಕೆನೆ ಮತ್ತು ಹಸುವಿನ ಹಾಲುಗಳು ಮಧುರವಾಗಿವೆ, ೨. ಮಾವಿನ ಕಾಯಿಯೂ ಕಮರಕಕಾಯೂ ಹುಳಿರಸವುಳ್ಳವು ; ೩. ರೋಮಕ ಸೈಂಧವಗಳಲ್ಲಿ ಲವಣರಸವಿದೆ, ೪. ಚವ್ಯಾದಿಗಳು ಕಟುರಸಗಳು ; ೫. ಬೇವು, ಪರ್ಪಾಟಕಗಳು ತಿಕ್ತರಸವು, ೬. ಆಲ ಮೊದಲಾದುವುಗಳ ಚಿಗುರು ಕಷಾಯವು, ಈ ರೀತಿಯಾಗಿ ೬೩ ವಿಧರಸಭೇದಗಳನ್ನು ವಿವರಿಸಿದ್ದಾಯಿತು.

ಏಕೈಕೇನಾನುಗಮನಂ ಭಾಗಶೋಯದುದಿರೀತಮ್ ।
ದೋಷಾಣಾಂ ತತ್ರಮತಿರ್ವಾ ತ್ರಿಷಷ್ಟಿಂ ತಾಂ ಪ್ರಯೋಜಯೇತ್ ॥೫॥

ಹೇಗೆ ದೋಷಗಳು ಹೀನಾಧಿಕಭಾವದಿಂದ ಮಿಶ್ರವಾಗಿ ೬೩ ಪ್ರಕಾರಗಳಾಗುತ್ತವೆಯೋ ಹಾಗೆಯೇ ಮೇಲೆ ಹೇಳಿದ ರಸ ಭೇದಗಳನ್ನೂ ವಿಂಗಡಿಸಿ ಬುದ್ಧಿವಂತನಾದ ವೈದ್ಯನು ಔಷಧ ಪ್ರಯೋಗಮಾಡಬೇಕು.

ಯಥಾಕ್ರಮಮ್ ಪ್ರವೃತ್ತಾನಾಂ ದ್ವಿಕೇಷು ಮಧುರೋರಸಃ ।
ಪಞ್ಚಾನಾಕ್ರಮತೇ ಯೋಗಾನಮ್ಲಶ್ಚತುರಏವಚ ॥೬॥

ತ್ರೀಂಶ್ಚಾನುಗಚ್ಛತಿ ರಸೋಲವಣಃ ಕಟುಕೋದ್ವಯಮ್ |
ತಿಕ್ತಃ ಕಷಾಯಮನ್ವೇತಿ ತೇದ್ವಿಕಾ ದಶಪಞ್ಚ ಚ ||೭||

ಮಧುರಾದಿಕ್ರಮದಿಂದ ಸಂಯೋಗವಾಗುವರಸಗಳಲ್ಲಿ ಎರಡೆರಡು ರಸಗಳ ಸಂಯೋಗದಲ್ಲಿ ಮಧುರಸ ಸಂಯೋಗವು [illegible] ವಿಧ ಆಮ್ಲರಸ ಸಂಯೋಗವು ೪ ವಿಧ, ಲವಣರಸ ಸಂಯೋಗವು ೩ ವಿಧವು ; ಕಟುರಸ ಸಂಯೋಗವು ೨ ವಿಧ, ತಿಕ್ತರಸ ಸಂಯೋಗವು ೧ ವಿಧ ಈ ರೀತಿ ಎರಡೆರಡುರಸಗಳ ಸಂಯೋಗದಿಂದ ೧೫ ವಿಧಗಳಾಗುತ್ತವೆ.

ತದ್ಯಥಾ–ಮಧುರಾಮ್ಲಃ, ಮಧುರಲವಣಃ, ಮಧುರತಿಕ್ತಃ, ಮಧುರಕಟುಕಃ, ಮಧುರಕಷಾಯಃ, ಏತೇ ಪಞ್ಚಾನುಕ್ರಾನ್ತಾ ಮಧುರೇಣ ; ಆಮ್ಲಲವಣಃ, ಅಮ್ಲಕಟುಕಃ, ಅಮ್ಲತಿಕ್ತಃ, ಅಮ್ಲಕಷಾಯಃ, ಏತೇ ಚತ್ವಾರೋನುಕಾನ್ತಾ ಅಮ್ಲೇನ ; ಲವಣಕಟುಕಃ, ಲವಣತಿಕ್ತಃ, ಲವಣಕಷಾಯಃ ಏತೇ ತ್ರಯೋಽನುಕ್ರಾನ್ತಾ ಲವಣೇನ ; ಕಟುತಿಕ್ತಃ, ಕಟುಕಷಾಯಃ, ದ್ವಾವೇತಾವನುಕಾನ್ತೌ ಕಟುಕೇನ ; ತಿಕ್ತಕಷಾಯಂ ಏವಾನುಕ್ರಾನ್ತಸ್ತಿಕ್ತೇನ ; ಏವಂ ಪಞ್ಚದಶದ್ವಿಕಸಂಯೋಗಾ ವ್ಯಾಖಾತಾಃ ||೮||

ಹೇಗೆಂದರೆ, ಮಧುರಾಮ್ಲ, ಮಧುರಲವಣ, ಮಧುರತಿಕ್ತ, ಮಧುರಕಟಕ, ಮಧುರಕಷಾಯಗಳೆಂಬ [illegible] ಮಧುರರಸದೊಡನೆ ಸಂಯೋಗವು ; ಆಮ್ಲಲವಣ, ಆಮ್ಲಕಟುಕ, ಅಮ್ಲತಿಕ್ತ, ಅಮ್ಲಕಷಾಯಗಳೆಂಬ ೪ ಅಮ್ಲರಸದೊಡನೆ ಸಂಯೋಗವು ; ಲವಣಕಟುಕ, ಲವಣತಿಕ್ತ, ಲವಣಕಷಾಯಗಳೆಂಬ ೩ ಲವಣರಸದೊಡನೆ ಸಂಯೋಗವು ; ಕಟುತಿಕ್ತ, ಕಟುಕಷಾಯಗಳೆಂಬ ೨ ಕಟುರಸದೊಡನೆ ಸಂಯೋಗವು ; ತಿಕ್ತಕಷಾಯವೆಂಬ ಒಂದೇ ತಿಕ್ತರಸ ಸಂಯೋಗವು. ಈ ರೀತಿ ಎರಡು ಎರಡು ರಸಗಳು ಸಂಯೋಗವಾಗಿ ೧೫ ವಿಧಗಳಾಗುತ್ತವೆ.

ತ್ರಿಕಾನ್ ವಕ್ಷ್ಯಾಮಃ—ಆದೌಪ್ರಯುಜ್ಯಮಾನಸ್ತು ಮಧುರೋದಶ ಗಚ್ಛತಿ |
ಷಡಮ್ಲೋ ಲವಣಸ್ತಸ್ಮಾದರ್ಧಂ ತ್ವೇಕಂ ತಥಾ ಕಟುಃ ||೯||

ತದ್ಯಥಾ—ಮಧುರಾಮ್ಲಲವಣಃ, ಮಧುರಾಮ್ಲಕಟುಕಃ, ಮಧುರಾಮ್ಲತಿಕ್ತಃ, ಮಧುರಲವಣತಿಕ್ತಃ, ಮಧುರಲವಣಕಷಾಯಃ, ಮಧುರಕಟುತಿಕ್ತಃಮಧುರ; ಕಟು ಕಷಾಯಃ, ಮಧುರತಿಕ್ತ ಕಷಾಯಃ ಏವಮೇಷಾಂ ತ್ರಿಕಸಂಯೋಗಾನಾಂ ದಶಾನಾ ಮಾದೌ ಮಧುರಃ ಪ್ರಯುಜ್ಯತೇ ; ಆಮ್ಲಲವಣ ಕಟುಕಃ, ಅಮ್ಲಲವಣತಿಕ್ತಃ, ಅಮ್ಲಲವಣಕಷಾಯಃ, ಅಮ್ಲಕಟುಕಷಾಯಃ, ಅಮ್ಲಕಟುತಿಕ್ತಃ, ಆಮ್ಲತಿಕ್ತಕಷಾಯಃ, ಏವಮೇಷಾಂಷಣ್ಣಾಮಾದಾವಮ್ಲಃ ಪ್ರಯುಜ್ಯತೇ ; ಲವಣಕಟುಕಷಾಯಃ, ಲವಣತಿಕ್ತಕಷಾಯಃ, ಏವಮೇಷಾಂತ್ರಯಾಣಾಮಾದೌ ಲವಣಃ ಪ್ರಯುಜ್ಯತೇ ; ಕಟುತಿಕ್ತಕಷಾಯಃ, ಏವಮೇಕಸ್ಯಾದೌ ಕಟುಕಃ ಪ್ರಯುಜ್ಯತೇ ; ಏವಮೇತೇತ್ರಿಕಸಂಯೋಗಾ ವಿಂಶತಿರ್ವ್ಯಾಖ್ಯಾತಾಃ ||೧೦||

ಮೂರುಮೂರು ರಸಗಳ ಸಂಯೋಗವನ್ನು ಹೇಳುತ್ತೇವೆ. ಮಧುರವನ್ನು ಮೊದಲು ಸೇರಿಸಿ ೧೦ ವಿಧಗಳಾಗುತ್ತವೆ ; ಅಮ್ಲರಸವನ್ನು ಮೊದಲು ಸೇರಿಸಿ ೬ ವಿಧಗಳೂ, ಲವಣವನ್ನು ಮೊದಲು ಸೇರಿಸಿ ೩ ವಿಧಗಳೂ, ಕಟುರಸವನ್ನು ಮೊದಲು ಸೇರಿಸಿ ಒಂದು ವಿಧವೂ ಆಗುತ್ತದೆ. ಹೇಗೆಂದರೆ-೧ ಮಧುರಾಮ್ಲಲವಣ, ೨. ಮಧುರಾಮ್ಲ ಕಟುಕ, ೩. ಮಧುರಾಮ್ಲತಿಕ್ತ, ೪. ಮಧುರಾಮ್ಲಕಷಾಯ, ೫. ಮಧುರಲವಣ ಕಟುಕ, ೬. ಮಧುರಲವಣತಿಕ್ತ, ೭. ಮಧುರಲವಣಕಷಾಯ, ೮. ಮಧುರ ಕಟುತಿಕ್ತ, ೯. ಮಧುರಕಟುಕಷಾಯ, ೧೦. ಮಧುರತಿಕ್ತಕಷಾಯ, ಈ ೧೦ ವಿಧ ತ್ರಿರಸಸಂಯೋಗದಲ್ಲಿ ಮೊದಲು ಮಧುರರಸವು ಸೇರಿರುತ್ತದೆ ; ೧೧. ಅಮ್ಲಲವಣ ಕಟುಕ, ೧೨. ಅಮ್ಲ ಲವಣತಿಕ್ತ, ೧೩. ಅಮ್ಲಲವಣಕಷಾಯ, ೧೪. ಅಮ್ಲಕಟು ಕಷಾಯ, ೧೫. ಅಮ್ಲ ಕಟುತಿಕ್ತ. ೧೬. ಅಮ್ಲತಿಕ್ತಕಷಾಯ. ಈ ಆರು ಸಂಯೋಗಗಳಲ್ಲಿ ಮೊದಲು ಅಮ್ಲ ರಸವು ಸೇರಿರುತ್ತದೆ. ೧೭. ಲವಣಕಟುತಿಕ್ತ, ೧೮. ಲವಣತಿಕ್ತ ಕಷಾಯ ಈ ೨ ವಿಧ ಸಂಯೋಗಗಳಲ್ಲೂ ಮೊದಲು ಲವಣರಸವು ಸೇರಿರುತ್ತದೆ. ೧೯. ಕಟುತಿಕ್ತ ಕಷಾಯ ಈ ಒಂದು ತ್ರಿರಸಸಂಯೋಗದಲ್ಲಿ ಕಟುಕವೇ ಮೊದಲು ಸೇರಿರುತ್ತದೆ ; ಈ ರೀತಿಯಾಗಿ ಮೂರು ಮೂರು ರಸಗಳ ಸಂಯೋಗದಿಂದ ೨೦ ಭೇದಗಳುಂಟಾಗುತ್ತವೆಂದು ವಿವರಿಸಲ್ಪಟ್ಟಿತು.

ಚತುಷ್ಕಾಂಸ್ತು ಪ್ರವಕ್ಷ್ಯಾಮಃ—ಚತುಷ್ಕ ರಸಸಂಯೋಗಾನ್ಮಧುರೋದಶ ಗಚ್ಛತಿ ।
ಚತುರೋಽಮ್ಲೋಽನುಗಚ್ಛೇಚ್ಚ ಲವಣಸ್ತ್ವೇಕಮೇವ ತು ॥೧೧॥

ನಾಲ್ಕು ನಾಲ್ಕು ರಸಸಂಯೋಗವುಳ್ಳ ದ್ರವ್ಯಗಳನ್ನು ಹೇಳುತ್ತೇವೆ. ಮಧುರ ರಸವೇ ಮೊದಲು ಮಾಡಿಕೊಂಡು ೪ ರಸಗಳ ಸಂಯೋಗದಿಂದ ೧೦ ಭೇದಗಳೂ ಅಮ್ಲ ರಸವನ್ನು ಮೊದಲುಮಾಡಿ ೪ ಭೇದಗಳೂ ಲವಣರಸವನ್ನು ಮೊದಲುಮಾಡಿ ಒಂದೂ ಈ ರೀತಿ ೧೫ ಭೇದಗಳಾಗುತ್ತವೆ. ಹೇಗೆಂದರೆ ೧. ಮಧುರಾಮ್ಲಲವಣಕಟುಕ, ೨. ಮಧುರಾಮ್ಲಲವಣತಿಕ್ತ, ೩. ಮಧುರಾಮ್ಲಲವಣಕಷಾಯ, ೪. ಮಧುರಾಮ್ಲಕಟುತಿಕ್ತ, ೫. ಮಧುರಾಮ್ಲಕಟುಕಷಾಯ, ೬. ಮಧುರಾಮ್ಲ ತಿಕ್ತಕಷಾಯ, ೭. ಮಧುರ ಲವಣತಿಕ್ತಕಟುಕ, ೮. ಮಧುರಲವಣಕಷಾಯತಿಕ್ತ, ೯. ಮಧುರತಿಕ್ತಕಟುಕಷಾಯ, ೧೦. ಮಧುರಲವಣಕಟುಕಷಾಯ ಈ ರೀತಿ ನಾಲ್ಕು ನಾಲ್ಕು ರಸಗಳ ಸಂಯೋಗದಲ್ಲಿ ಮಧುರವೇ ಮೊದಲು ಸೇರುವ ೧೦ ಭೇದಗಳೂ, ೧೧. ಅಮ್ಲಲವಣಕಟುತಿಕ್ತ, ೧೨. ಅಮ್ಲಲವಣಕಟುಕಷಾಯ, ೧೩. ಅಮ್ಲಲವಣತಿಕ್ತಕಷಾಯ, ೧೪. ಅಮ್ಲಕಟುತಿಕ್ತ ಕಷಾಯ ಈ ರೀತಿ ಅಮ್ಲವೇ ಮೊದಲು ಸೇರಿದ ೪ ಭೇದಗಳೂ, ೧೫. ಲವಣತಿಕ್ತಕಟು ಕಷಾಯ ಎಂಬ ಲವಣರಸವೇ ಆದಿಯಲ್ಲಿ ಸೇರಿದ ೧ ವಿಧವೂ ಸೇರಿ ನಾಲ್ಕು ನಾಲ್ಕು ರಸಸಂಯೋಗದ ೧೫ ಭೇದಗಳಾದುವು.

ಪಞ್ಚಕಾಂ ವಕ್ಷ್ಯಾಮಃ :—ಪಞ್ಚಕಾಂ ಪಞ್ಚಮಧುರ ಏಕ,ಮಮ್ಲಸ್ತು ಗಚ್ಛತಿ ||೧೩||

೫ ರಸ ಸಂಯೋಗದ ದ್ರವ್ಯಭೇದಗಳನ್ನು ಹೇಳುತ್ತೇವೆ—೫ ರಸಗಳು ಸೇರಿ ಆಗುವ ದ್ರವ್ಯಗಳಲ್ಲಿ ಮಧುರರಸವೇ ಮೊದಲಾಗಿರುವ ೫ ಭೇದಗಳೂ ಅಮ್ಲರಸವೇ ಮೊದಲಲ್ಲಿರುವ ೧ ಯೋಗವೂ ಸೇರಿ ೬ ವಿಧಗಳಾಗಿವೆ. ಹೇಗೆಂದರೆ ೧. ಮಧುರಾಮ್ಲಲವಣ ೨. ಮಧುರಾಮ್ಲಲವಣಕಟುಕಷಾಯ ೩. ಮಧುರಾಮ್ಲ ಲವಣತಿಕ್ತ ಕಷಾಯ ೪. ಮಧುರಲವಣಕಟುತಿಕ್ತ ಕಷಾಯ ಈ ರೀತಿ ೫ ೫ ರಸ ಸಂಯೋಗಗಳಲ್ಲಿ ಮೊದಲು ಅಮ್ಲ ರಸವುಳ್ಳ ೧ ಭೇದವೂ ಸೇರಿ ೬ ಭೇದಗಳು ವಿವರಿಸಲ್ಪಟ್ಟಿವೆ.

ಷಟ್ಕಮೇಕಂವಕ್ಷ್ಯಾಮಃ—ಏಕಸ್ತು ಷಟ್ಕಸಂಯೋಗಃ-ಮಧುರಾಮ್ಲ ಲವಣಕಟುತಿಕ್ತ ಕಷಾಯಃ ।
ಏವಮಯಮೇಕಃ ಷಟ್ ಸಂಯೋಗಃ ||೧೫||
ಏಕೈಕಶ್ಚ ಷಡ್ರಸಾಭವನ್ತಿ-ಮಧುರೋಽಮ್ಲೋಲವಣಃ ಕಟುಕಸ್ತಿಕ್ತಃ ಕಷಾಯ ಇತಿ ||೧೬||

ಆರುರಸಗಳೂ ಮಿಶ್ರವಾದ ಒಂದು ಭೇದವನ್ನು ಹೇಳುತ್ತೇವೆ—ಷಡ್ರಸಗಳೂ ಮಿಶ್ರವಾದ ೧ ಯೋಗವುಂಟು. ಮಧುರ ಅಮ್ಲಲವಣಕಟಕತಿಕ್ತಕಷಾಯ-ಎಂದು ಒಂದೇ ಷಡ್ರಸಸಂಯೋಗಭೇದವು. ಒಂದೊಂದು ರಸವುಳ್ಳ ದ್ರವ್ಯಗಳು ೬ ಭೇದಗಳಾಗಿರುತ್ತವೆ—ಮಧುರ, ಅಮ್ಲ, ಲವಣ, ಕಟು, ತಿಕ್ತ, ಕಷಾಯ ಎಂಬುದಾಗಿ.

ಭವತಿಚಾತ್ರ-ಏಷಾತ್ರಿಷಷ್ಟಿರ್ವ್ಯಾಖ್ಯಾತಾ ರಸಾನಾಂ ರಸಚಿನ್ತಕೈಃ ।
ದೋಷಭೇದತ್ರಿಷಷ್ಟ್ಯಾ ತು ಪ್ರಯೋಕ್ತವ್ಯಾ ವಿಚಕ್ಷಣೈಃ ||೧೭||

ಈ ವಿಚಾರದಲ್ಲಿ ಆಧಾರಶ್ಲೋಕವಿದೆ. ಅದರ ಅರ್ಥವೇನೆಂದರೆ-ರಸಜ್ಞಾನವುಳ್ಳ ವೈದ್ಯರು ಪರಸ್ಪರಭಿನ್ನರಸಗಳು ಅನೇಕವಾಗಿದ್ದರೂ ವಾತಾದಿದೋಷಭೇದಗಳು ಅನೇಕ ವಿಧಗಳಾಗಿದ್ದರೂ ೩ ಭೇದಗಳನ್ನು ಮೀರುವುದಿಲ್ಲನೆಂಬುದು ಹೇಗೋ ಆದೇರೀತಿ ರಸಗಳೂ ೬ ವಿಧಗಳನ್ನು ಮೀರಿರುವುದಿಲ್ಲವೆಂದು ನಿರ್ಧಾರವು.

ಇತಿ ಶ್ರೀಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ತನ್ತ್ರಭೂಷಣೇ ರಸಭೇದ ವಿಕಲ್ಪನಾಮಕ ತ್ರಿಷಷ್ಟಿತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮ ಶ್ರೀಲಕ್ಷ್ಮೀ ನೃಸಿಂಹಶರ್ಮ ಕೃತ ಕರ್ಣಾಟಕಭಾಷಾ ವಿವೃತಿಃ.

ಚತುಃಷಷ್ಟಿತಮೋಽಧ್ಯಾಯಃ

ಅಥಾತಾಃ ಸ್ವಸ್ಥವೃತ್ತಮಧ್ಯಾಯಂ ವ್ಯಾಖ್ಯಾಸ್ಯಾಮಃ ॥೧॥
ಯಥೋವಾಚ ಭಗವಾನ್ ಧನ್ವಂತರಿಃ (ಸುಶ್ರುತಾಯ) ॥೨॥

ಈ ಅಧ್ಯಾಯದಲ್ಲಿ ಶ್ರೀಧನ್ವಂತರಿಯು ಶಿಷ್ಯಸುಶ್ರುತನಿಗೆ ಉಪದೇಶಮಾಡಿದಂತೆಯೇ ಸ್ವಸ್ಥವೃತ್ತವನ್ನು ವಿವರಿಸುತ್ತೇನೆ.

ಸೂತ್ರಸ್ಥಾನೇ ಸಮಾದಿಷ್ಟಃ ಸ್ವಸ್ಥೋ ಭವತಿ ಯಾದೃಶಃ ।
ತಸ್ಯಾದಿತೋ ರಕ್ಷಣಂ ಹಿ ಚಿಕಿತ್ಸಾಯಾಂ ಮಯೋದಿತಮ್ ॥೩॥
ತಸ್ಮಿನ್ನರ್ಥಾಃ ಸಮಾಸೋಕ್ತಾ ವಿಸ್ತರೇಣೇಹ ವಕ್ಷ್ಯತೇ ।
ಯಸ್ಮಿನ್ ಯಸ್ಮಿನ್ನೃತೌ ಯೇ ಯೇ ದೋಷಾಃ ಕುಪ್ಯನ್ತಿ ದೇಹಿನಾಮ್ ॥೪॥
ತೇಷು ತೇಷು ಪ್ರದಾತವ್ಯಾಃ ರಸಾಸ್ತೇ ತೇ ವಿಜಾನತಾ ।

ಸೂತ್ರಸ್ಥಾನದಲ್ಲಿ ದೋಷಧಾತುಮಲಗಳ ಕ್ಷಯವೃದ್ಧಿ ಅಧ್ಯಾಯದಲ್ಲಿ ಸಮಧಾತು ಸಮಾಗ್ನಿ ಮೊದಲಾದ ಲಕ್ಷಣಗಳಿಂದ ಸ್ವಸ್ಥಮನುಷ್ಯನ ಲಕ್ಷಣಗಳನ್ನು ಹೇಳಿ ಅವನ ಸ್ವಸ್ಥರಕ್ಷಣೆಯ ವಿಧಾನಗಳನ್ನು ಚಿಕಿತ್ಸೆಗಳಲ್ಲಿ ಸಂಕ್ಷೇಪವಾಗಿ ಹೇಳಿರುತ್ತದೆ. ಈ ಅಧ್ಯಾಯದಲ್ಲಿ ಅವನ್ನೇ ವಿಸ್ತಾರವಾಗಿ ಹೇಳುತ್ತೇವೆ. ಮನುಷ್ಯರಿಗೆ ಯಾವಯಾವ ಋತುಗಳಲ್ಲಿ ಯಾವ ಯಾವ ದೋಷಗಳು ಪ್ರಕೋಪಗೊಳ್ಳುತ್ತವೆಯೋ ಆಯಾಯ ಋತುಗಳಲ್ಲಿ ಆಯಾಯ ದೋಷಗಳನ್ನು ನಿವಾರಣೆ ಮಾಡತಕ್ಕ ರಸಗಳನ್ನುಳ್ಳ ದ್ರವ್ಯಗಳನ್ನೇ ಪ್ರಯೋಗಿಸಬೇಕು.

ಪ್ರಕ್ಲಿನ್ನತ್ವಾಚ್ಛರೀರಾಣಾಂ ವರ್ಷಾಸು ಖಲು ದೇಹಿನಾಮ್ ॥೫॥
ಮನ್ದೇಽಗ್ನೌ ಕೋಪಮಾಯಾನ್ತಿ ಸರ್ವೇಷಾಂ ಮಾರುತಾದಯಃ ।
ತಸ್ಮಾತ್ ಕ್ಲೇದವಿಶುದ್ಧ್ಯರ್ಥಂ ದೋಷಸಂಗ್ರಹಣಾಯ ಚ ॥೬॥
ಕಷಾಯತಿಕ್ತಕಟುಕೈ ರಸೈರ್ಯುಕ್ತಮಥೋ ದ್ರವಮ್ ।
ನಾತಿಸ್ನಿಗ್ಧಂ ನಾತಿರೂಕ್ಷಮುಷ್ಣಂ ದೀಪನಪಾಚನಮ್ ॥೭॥
ದೇಯಮನ್ನಂ ನೃಪತಯೇ ಯಜ್ಜಲಂ ಚೋಕ್ತಮಾದಿತಃ ।
ತಪ್ತಾವರತಮಮ್ಭೋ ವಾ ಪಿಬೇನ್ಮಧುಸಮಾಯುತಮ್ ॥೮॥
ಅಭ್ರ ಮೇಘಾನಿಲಾವಿಷ್ಟೇಽತ್ಯರ್ಥಶೀತಾಮ್ಬುಸಂಕುಲೇ ।
ತರುಣತ್ವಾದ್ದಿವಾದಾಹಂ ಚ ಗಚ್ಛನ್ತ್ಯೋಷಧಯಸ್ತದಾ ॥೯॥
ಮತಿಮಾಂಸ್ತನ್ನಿವೃತ್ತಂ ಚ ನಾತಿವ್ಯಾಯಾಮಮಾಚರೇತ್ ।
ಆತ್ಮಮ್ಬುಪಾನವಶ್ಯಾಯಗ್ರಾಮ್ಯಧರ್ಮಾತಪಾಂಸ್ತ್ಯಜೇತ್ ॥೧೦॥

ಭೂಬಾಷ್ಪ ಪರಿಹಾರಾರ್ಥಂ ಶಯೀತ ಚ ವಿಹಾಯಸಿ ।
ಶೀತೇಸಾಗ್ನೌ ನಿವಾತೇ ಚ ಗುರುಪ್ರಾವರಣೇ ಗೃಹೇ ॥೧೧॥
ಯಾಯಾತ್ಸಙ್ಗಂ ವಧೂಭಿಶ್ಚ ಪ್ರಶಸ್ತಾಗುರುಭೂಷಿತಃ ।
ದಿವಾಸ್ವಪ್ನಮಜೀರ್ಣಂ ಚ ವರ್ಜಯೇತ್ತತ್ರ ಯತ್ನತಃ ॥೧೨॥

ವರ್ಷರ್ತುವಿನಲ್ಲಿ ಮನುಷ್ಯರ ದೇಹದ ಮೇಲೆ ಮಳೆಹನಿಗಳಿಂದ ಕೂಡಿದ ವಾತವು ಬೀಸಿ, ಅಗ್ನಿಮಾಂದ್ಯ ಪಿತ್ತಸಂಚಯ ತ್ರಿದೋಷಗಳು ಉಂಟಾಗಿ ಪ್ರಕೋಪಗೊಳ್ಳುತ್ತವೆಯಾದ ಕಾರಣ ಕ್ಲೇದ ಮತ್ತು ದೋಷಗಳ ನಾಶಕ್ಕಾಗಿ ಕಷಾಯತಿಕ್ತ, ಕಟುರಸಮಿಶ್ರವಾದ ದ್ರವರೂಪದ, ಅತಿಸ್ನಿಗ್ಧವಾಗಿಯೂ ಅತಿರೂಕ್ಷವಾಗಿಯೂ ಇರದೆ ಬಿಸಿಯಾಗಿರುವ ದೀಪನಪಾಚನಗಳಾದ ಅನ್ನಪಾನಗಳನ್ನು ರಾಜನಿಗೆ ಕೊಡಬೇಕು (ಸ್ವಸ್ಥವೃತ್ತವನ್ನು ರಾಜನಿಗೆ ಹೇಳಿದಂತೆಯೇ ಇತರರೂ ಆಚರಿಸಬೇಕೆಂದು ಅರ್ಥ) ಹಿಂದೆ ಹೇಳಿದಂತೆ ಅಂತರಿಕ್ಷದಿಂದ ಬೀಳುವ ಮಳೆಯನೀರು ; ಅಥವಾ ಕುದಿಸಿ ತಣ್ಣಗಾದ ಜೇನುತುಪ್ಪ ಮಿಶ್ರ ಮಾಡಿದ ನೀರನ್ನಾಗಲೀ ಕುಡಿಯಬೇಕು ; ಹಗಲು ಹೊತ್ತಿನಲ್ಲಿ ಮೋಡಗಳು ಅಂತರಿಕ್ಷವನ್ನು ಮುಚ್ಚಿಕೊಂಡಿರುತ್ತವೆ. ತಣ್ಣೀರಿನಹನಿಗಳಿಂದ ತುಂಬಿದ ಔಷಧಿಗಳು ಸರಿಯಾಗಿ ಪಾಕವಾಗದೆ ಹುಳಿತೇಗನ್ನು ಎದೆಯೊತ್ತುವುದನ್ನು ಉಂಟುಮಾಡುತ್ತವೆ ಯಾಗಿ ಅತಿ ವ್ಯಾಯಾಮವನ್ನುಮಾಡಬಾರದು. ಅತಿಯಾಗಿನೀರನ್ನುಕುಡಿಯುವುದು,ಮಳೆಯಹನಿಗಳಿರುವಾಗ ಸಂಚರಿಸುವುದು, ಸ್ತ್ರೀಸಂಗ ಮತ್ತು ಬಿಸಿಲು ಸೇವಿಸುವುದನ್ನು ತ್ಯಜಿಸಿಬಿಡಬೇಕು ; ನೆಲದಿಂದ ಮೇಲಕ್ಕೇಳುವ ಹಬೆಯ ನಿವಾರಣೆಗಾಗಿ ಮಹಡಿಯಮೇಲಾಗಲೀ, ಮಂಚದ ಮೇಲಾಗಲೀ ಮಲಗಿರಬೇಕು ; ಶೀತವಾತವು ಹೆಚ್ಚಾಗಿ ಬೀಸದಿರುವ, ಬೆಂಕಿಯ ಕೆಂಡಗಳನ್ನು ಅಗ್ಗಿಷ್ಟಿಕೆಯಲ್ಲಿಟ್ಟು ಹೊಗೆಹೊರಡುವಂತೆಮಾಡಿ ಬಿಸಿಯಾದಗಾಳಿ ಬೀಸುತ್ತಿರುವ ಕೊಠಡಿಯಲ್ಲಿ ಮಲಗಿರಬೇಕು ; ಅಗಿಲುಗಂಧವನ್ನು ಮೈಗೆಬಳಿದುಕೊಂಡು ಯೋಗ್ಯಸ್ತ್ರೀಯರ ಆಲಿಂಗನದಿಂದ ಆಯಾಸವನ್ನು ನಿವಾರಿಸಿಕೊಳ್ಳಬೇಕು. ಹಗಲುನಿದ್ರೆ, ಅಜೀರ್ಣ, ಭೋಜನ ಇವುಗಳನ್ನು ತ್ಯಜಿಸಿಬಿಡಬೇಕು.

ಸೇವ್ಯಾಃ ಶರದಿ ಯತ್ನೇನ ಕಷಾಯಸ್ವಾದುತಿಕ್ತಕಾಃ ।
ಕ್ಷೀರೇಕ್ಷುವಿಕೃತಿಕ್ಷೌದ್ರಶಾಲಿಮುದ್ಗಾದಿ ಜಾಙ್ಗಲಾಃ ॥೧೩॥
ಸಲಿಲಂ ಚ ಪ್ರಸನ್ನತ್ವಾತ್ ಸರ್ವಮೇವ ಸದಾಹಿತಮ್ ।
ಸರಃಸ್ವಾಪ್ಲವನಂ ಚೈವ ಕಮಲೋತ್ಪಲಶಾಲಿಷು ॥೧೪॥
ಪ್ರದೋಷೇ ಶಶಿನಃ ಪಾದಾಶ್ಚನ್ದನಂ ಚಾನುಲೇಪನಮ್ ।
ತಿಕ್ತಸ್ಯ ಸರ್ಪಿಷಃ ಪಾನೈರಸೃಕ್‌ಸ್ರಾವೈಶ್ಚ ಯುಕ್ತಿತಃ ॥೧೫॥
ವರ್ಷಾಸೂಪಚಿತಂ ಪಿತ್ತಂ ಹರೇಚ್ಚಾಪಿ ವಿರೇಚನೈಃ ।

ಶರದೃತುವಿನಲ್ಲಿ ಕಷಾಯಸ್ವಾದುತಿಕ್ತರಸದ್ರವ್ಯಗಳನ್ನು ಹಾಲು, ಬೆಲ್ಲದ ಪದಾರ್ಥಗಳನ್ನೂ ಜೇನುತುಪ್ಪ, ೬೦ ದಿನಗಳಲ್ಲಿ ಬೆಳೆಯುವ ಭತ್ತದ ಅಕ್ಕಿಯ ಅನ್ನ ಹೆಸರು,

ಜಾಂಗಲಮಾಂಸ ಇವುಗಳನ್ನೂ ಸೇವಿಸಬೇಕು. ಶರದೃತುವಿನಲ್ಲಿ ಎಲ್ಲವೂ ನಿರ್ಮಲ ವಾಗಿರುವುದರಿಂದ ನೀರೂ ಪರಿಶುದ್ಧವಾಗಿರುತ್ತದೆ ; ತಾವರೆ ನೈದಿಲೆಗಳು ಬೆಳೆದು ಮನೋ ಹರವಾಗಿರುವ ಕೊಳಗಳಲ್ಲೂ ಕೆರೆ, ಸರೋವರಗಳಲ್ಲೂ ಈಜಾಡಿ ಸ್ನಾನಮಾಡಬೇಕು. ಸಂಧ್ಯಾಕಾಲದಲ್ಲಿ ಅಂದರೆ ರಾತ್ರಿಯ ಮೊದಲಯಾಮದಲ್ಲಿನ ಅರ್ಧಕಾಲದಲ್ಲಿ ಚಂದ್ರ ಕಿರಣವನ್ನು ಸೇವಿಸಬೇಕು (ಅರ್ಧರಾತ್ರಿಯಲ್ಲಿ ಚಂದ್ರಕಿರಣವನ್ನು ಸೇವನೆ ಮಾಡಿದರೆ ಕಫವೃದ್ಧಿಯಾಗಿ ಅಭಿಷ್ಯಂದವುಂಟಾಗುತ್ತದೆ) ಮೈಗೆ ಗಂಧ ಲೇಪನ, ತಿಕ್ತಘೃತಪಾನ ಸುಯಕ್ತಿಯಿಂದ ರಕ್ತ ಮೋಕ್ಷಣೆ ವಿರೇಚನೌಷಧಪ್ರಯೋಗ ಇವುಗಳಿಂದ ವರ್ಷರ್ತುವಿ ನಲ್ಲಿ ಸಂಚಿತವಾದ ಪಿತ್ತವನ್ನು ಹೊರಡಿಸಬೇಕು.

ನೋಪೇಯಾತ್ತೀಕ್ಷ್ಣಮಮ್ಲೋಷ್ಣಂ ಕ್ಷಾರಂ ಸ್ವಪ್ನಂ ದಿವಾತಪಮ್ ॥೧೬॥
ರಾತ್ರೌ ಜಾಗರಣಂ ಚೈವ ಮೈಥುನಂ ಚಾಪಿ ವರ್ಜಯೇತ್ ।
ಸ್ವಾದುಶೀತಜಲಂ ಮದ್ಯಂ (ಮೇಧ್ಯಂ) ಶುಚಿಸ್ಫಟಿಕನಿರ್ಮಲಮ್ ॥೧೭॥
ಶರಚ್ಚನ್ದ್ರಾಂಶುನಿರ್ಧೌತಮಗಸ್ತ್ಯೋದಯನಿರ್ವಿಷಮ್ ।
ಪ್ರಸನ್ನತ್ವಾಚ್ಚ ಸಲಿಲಂ ಸರ್ವಮೇವ ತದಾ ಹಿತಮ್ ॥೧೮॥
ಸಚನ್ದನಂ ಸಕರ್ಪೂರಂ ವಾಸಶ್ಚಾಮಲಿನಂ ಲಘು ।
ಭಜೇಚ್ಚ ಶಾರದಂ ಮಾಲ್ಯಂ ಸೀಧೋಃ ಪಾನಂ ಚ ಯುಕ್ತಿತಃ ॥೧೯॥
ಪಿತ್ತಪ್ರಶಮನಂ ಯಚ್ಚ ತಚ್ಚ ಸರ್ವಂ ಸಮಾಚರೇತ್ ।

ಚುರುಕಾದ, ಹುಳಿಯಾದ, ಉಷ್ಣವಾದ ಪದಾರ್ಥಗಳನ್ನೂ ಕಾರವನ್ನೂ ಹಗಲು ನಿದ್ರೆಯನ್ನೂ ಬಿಸಿಲನ್ನೂ ರಾತ್ರಿಯಕಾಲದಲ್ಲಿ ಎಚ್ಚರವಾಗಿರುವುದನ್ನೂ ಮೈಥುನಕ್ರಿಯೆ ಯನ್ನೂ ತ್ಯಜಿಸಬೇಕು ; ಮಧುರವಾಗಿ ತಣ್ಣಗಿರುವ ಪರಿಶುದ್ಧವಾದ ಸ್ಫಟಿಕಮಣಿಯಂತೆ ಸ್ವಚ್ಛವಾಗಿರುವ ನೀರನ್ನು ಕುಡಿಯುವುದಕ್ಕೂ, ಸ್ನಾನಮಾಡುವುದಕ್ಕೂ ಉಪಯೋಗಿಸ ಬೇಕು ; ಶರದೃತುವಿನಲ್ಲಿ ಚಂದ್ರಕಿರಣಗಳು ಬಿದ್ದು ನೀರೆಲ್ಲಾ ಶುದ್ಧವಾಗುತ್ತದೆ. ಧೂಳು, ಮಣ್ಣು, ಕೊಳೆ ಇವೆಲ್ಲಾ (ನೀರಿನಬುಡಕ್ಕೆ) ಬಿದ್ದು ನೀರುತಿಳಿಯಾಗಿ ಅಗಸ್ತ್ಯೋದಯ (ಅಂತರಿಕ್ಷದಲ್ಲಿಅಗಸ್ತ್ಯನಕ್ಷತ್ರವು ಶರದೃತುವಿನಲ್ಲಿ ಉದಯವಾಗುತ್ತದೆ) ದಿಂದ ನೀರಿನಲ್ಲಿರುವ ವಿಷದೋಷವು ನಿವಾರಣೆಯಾಗಿ ನೀರು ಶುದ್ಧವಾಗುತ್ತದೆಯಾಗಿ ವಾಪಿಕೂಪತಟಾ ಕಾದಿಗಳೆಂಬ ಎಲ್ಲಾ ವಿಧದ ನೀರೂ ಹಿತಕರವಾದುದೆಂದು ತಿಳಿಯಬೇಕು ; ಪಚ್ಚ ಕರ್ಪೂರಮಿಶ್ರವಾದಗಂಧವನ್ನು ಮೈಗೆ ಲೇಪಿಸಿಕೊಳ್ಳಬೇಕು ; ಕೊಳೆಯಿಲ್ಲದ ಹಗುರ ವಾದ ವಸ್ತ್ರಗಳನ್ನೇ ಧರಿಸಬೇಕು ; ಯುಕ್ತಿಪೂರ್ವಕವಾಗಿ ಸೀಧುವೆಂಬ ಮದ್ಯವನ್ನೂ ಪಿತ್ತನಿವಾರಕಗಳಾದ ಎಲ್ಲಾವಿಧ ಆಹಾರ ವಿಹಾರಗಳನ್ನೂ ಸೇವಿಸಬೇಕು.

ಹೇಮನ್ತಃ ಶೀತಲೋ ರೂಕ್ಷೋ ಮನ್ದಸೂರ್ಯೋಽನಿಲಾಕುಲಃ ॥೨೦॥
ತತಸ್ತು ಶೀತಮಾಸಾದ್ಯ ವಾಯುಸ್ತತ್ರ ಪ್ರಕುಪ್ಯತಿ ।
ಕೋಷ್ಠಸ್ಥಃ ಶೀತಸಂಸ್ಪರ್ಶಾದನ್ತಃ ಪಿಣ್ಡೀಕೃತೋಽನಲಃ ॥೨೧॥

ರಸಮುಚ್ಛೋಷಯತ್ಯಾಶು ತಸ್ಮಾತ್ ಸ್ನಿಗ್ಧಂ ತದಾ ಹಿತಮ್ ।
ಹೇಮನ್ತೇ ಲವಣಕ್ಷಾರತಿಕ್ತಾಮ್ಲ ಕಟುಕೋತ್ಕಟಮ್ ॥೨೨॥
ಸಸರ್ಪಿಸ್ತೈಲಮುಷ್ಣಮಶನಂ ಹಿತಮುಚ್ಯತೇ ।
ತೀಕ್ಷ್ಣಾನ್ಯಪಿ ಚ ಪಾನಾನಿ ಪಿಬೇದಗುರುಭೂಷಿತಃ ॥೨೩॥
ತೈಲಾಭ್ಯಕ್ತಃ ಸುಖೋಷ್ಣೇ ಚ ವಾರಿಕೋಷ್ಠೇಽವಗಾಹಯೇತ್ ।
ಸಾಙ್ಗಾರಯಾನೇ ಮಹತಿ ಕೌಶೇಯಾಸ್ತರಣಾಸ್ತೃತೇ ॥೨೪॥
ಶಯೀತ ಶಯನೇ ತೈಸ್ತೈರ್ವೃತೋ ಗರ್ಭಗೃಹೋದರೇ ।
ಸ್ತ್ರೀಃ ಶ್ಲಿಷ್ಟಾಗುರುಧೂಪಾಢ್ಯಾ ಪೀನೋರುಜಘನಸ್ತನೀಃ ॥೨೫॥
ಪ್ರಕಾಮಂ ಚ ನಿಷೇವೇತ ಮೈಥುನಂ ತರ್ಪಿತೋ ನೃಪಃ ।
ಮಧುರಂ ತಿಕ್ತಕಟುಕಮಮ್ಲಂ ಲವಣಮೇವ ಚ ॥೨೬॥
ಅನ್ನಪಾನಂ ತಿಲಾನ್ ಮಾಷಾನ್ ಶಾಕಾನಿ ಚ ದಧೀನಿ ಚ ।
ತಥೇಕ್ಷುವಿಕೃತೀಃ ಶಾಲೀನ್ ಸುಗನ್ಧಾಂಶ್ಚ ನವಾನಪಿ ॥೨೭॥
ಪ್ರಸಹಾನೂಪಮಾಂಸಾನಿ ಕ್ರವ್ಯಾದಬಿಲಶಾಯಿನಾಮ್ ।
ಔದಕಾನಾಂ ಪ್ಲವಾನಾಂ ಚ ಪಾದಿನಾಂ ಚೋಪಸೇವಯೇತ್ ॥೨೮॥
ಮದ್ಯಾನಿ ಚ ಪ್ರಸನ್ನಾನಿ ಯಚ್ಚ ಕಿಞ್ಚಿದ್ಬಲಪ್ರದಮ್ ।
ಕಾಮತಸ್ತನ್ನಿಷೇವೇತ ಪುಷ್ಟಿಮಿಚ್ಛನ್ ಹಿಮಾಗಮೇ ॥೨೯॥
ಏಷ ಏವ ವಿಧಿಃ ಕಾರ್ಯಃ ಶಿಶಿರೇ ಸಮುದಾಹೃತಃ ।
ಹೇಮನ್ತೇ ನಿಚಿತಃ ಶ್ಲೇಷ್ಮಾ ಶೈತ್ಯಾಚ್ಛೀತಶರೀರಿಣಾಮ್ ॥೩೦॥
ಔಷ್ಣ್ಯಾದ್ವಸನ್ತೇ ಕುಪಿತಃ ಕುರುತೇ ಚ ಗದಾನ್ ಬಹೂನ್ ।
ತತೋಽಮ್ಲ ಮಧುರಸ್ನಿಗ್ಧ ಲವಣಾನಿ ಗುರೂಣಿ ಚ ॥೩೧॥
ವರ್ಜಯೇದನ್ನಪಾನಾನಿ ಕರ್ಮಾಣ್ಯಪಿ ಚ ಕಾರಯೇತ್ ।

ಹೇಮಂತಚರ್ಯೆಯನ್ನು ವಿವರಿಸುತ್ತಾರೆ :— ಹೇಮಂತರ್ತುವಿನಲ್ಲಿ ವಾಯುವು ತಣ್ಣಗೂ ರೂಕ್ಷಗುಣವುಳ್ಳದಾಗಿಯೂ ಸೂರ್ಯರಶ್ಮಿಯು ಅತಿಪ್ರಕಾಶವಿಲ್ಲದ ವಾತದಿಂದ ಆವೃತವಾಗಿರುತ್ತದೆ ; ವಾಯುವು ಶೀತದಿಂದ ಪ್ರಕೋಪವಾಗುತ್ತದೆ ಕೋಷ್ಠಾಗ್ನಿಯು ಶೀತಸ್ಪರ್ಶದಿಂದ ಸಂಕೋಚಹೊಂದಿ ದೇಹದಲ್ಲಿರುವ ದ್ರವವನ್ನೇ ಬೇಗನೆ ಹೀರುತ್ತದೆ ; ಆದರಿಂದ ಹೇಮಂತಕಾಲದಲ್ಲಿ ಸ್ನಿಗ್ಧವಾದ ಲವಣ, ಕ್ಷಾರ, ಕಹಿ, ಹುಳಿ, ಖಾರರಸಗಳೇ ಹೆಚ್ಚಾಗಿರುವ, ತುಪ್ಪ, ತಿಲತೈಲಗಳಿಂದ ಮಿಶ್ರವಾದ ಬಿಸಿಯಾದ ಭೋಜನವೂ ತೀಕ್ಷ್ಣಕರವಾದ ಪಾನಗಳೂ ಹಿತಕರಗಳು. ಅಗಿಲುಗಂಧವನ್ನು ಮೈಗೆಲೇಪಿಸಿಕೊಂಡು ತೈಲದಿಂದ ಅಭ್ಯಂಗವನ್ನೂ ಸುಖೋಷ್ಣವಾದ ನೀರುತುಂಬಿದ ಕೊಪ್ಪರಿಗೆಯಲ್ಲಿ ಕೂತು ಅವಗಾಹಸ್ನೇಹವನ್ನೂ ಕುಂಮಟಿಯಲ್ಲಿ (ಬೆಂಕಿಯನ್ನು ತುಂಬಿದ ಅಗ್ಗಿಷ್ಟಿಕೆ) ಬೆಂಕಿಯಕೆಂಡವನ್ನು ತುಂಬಿ ಮುಚ್ಚಳವನ್ನು ಮುಚ್ಚಿ ಪಟ್ಟೆ ವಸ್ತ್ರಗಳನ್ನು ಹಾಸಿರುವ ಹಾಸಿಗೆಯ ಹತ್ತಿರದಲ್ಲಿಟ್ಟುಕೊಂಡು ಗೃಹಮಧ್ಯಭಾಗದಲ್ಲಿ ಮಲಗಬೇಕು ; ರಾಜನು

ವೃಷ್ಯರಸಾಯನಗಳನ್ನು ಸೇವಿಸಿ ಬೃಂಹಿತನಾಗಿ ಅಗುರುಧೂಪದಿಂದ ಧೂಪಿತರಾದ ದಪ್ಪವಾದ ತೊಡೆ ಗುಹ್ಯಪ್ರದೇಶ ಸ್ತನಗಳನ್ನುಳ್ಳ ಪ್ರಿಯ ಸ್ತ್ರೀಯರನ್ನು ತಬ್ಬಿಕೊಂಡು ಮನಸ್ಸಿಗೆ ತೃಪ್ತಿಯುಂಟಾಗುವಷ್ಟು ಮೈಥುನಕ್ರಿಯೆಯನ್ನು ಆಚರಿಸಬೇಕು ; ಮಧುರ, ಕಹಿ, ಖಾರ, ಹುಳಿ, ಉಪ್ಪು ರಸಗಳಿಂದ ಕೂಡಿದ ಅನ್ನಪಾನಗಳು, ಎಳ್ಳು, ಉದ್ದು, ವಿವಿಧಶಾಕಗಳು ಮೊಸರು, ಬೆಲ್ಲದಿಂದ ಮಾಡಿದ ಭಕ್ಷಗಳು, ರಕ್ತಶಾಲಿ, ಸುಗಂಧಶಾಲಿಗಳ ಹೊಸ ಅಕ್ಕಿಯ ಅನ್ನ ಮತ್ತು ಕೋಳಿ ಮೊದಲಾದ ಪ್ರಸಹಪ್ರಾಣಿಗಳ, ಹಂದಿ ಮೊದಲಾದ ಅನೂಪಪ್ರಾಣಿಗಳ, ಮಾಂಸಾಹಾರ ಮಾಡುವ ಹುಲಿ, ಚಿರತೆ, ಮೊದಲಾದುವುಗಳ, ಮೊಲ ಮೊದಲಾದ ಸ್ಥಳದಲ್ಲಿ ವಾಸಮಾಡುವ, ನೀರಿನಲ್ಲಿವಾಸಿಸುವ ಆಮೆ, ಮೀನು ಮೊದಲಾದುವುಗಳ, ನೀರಿನಲ್ಲಿ ತೇಲಾಡುವ ಬಾತು ಹಂಸ, ಸಾರಸಪಕ್ಷಿ ಇವುಗಳ ಮಾಂಸಗಳನ್ನು ಸೇವಿಸಬೇಕು; ತಿಳಿಯಾದ ಬಲಕರಗಳಾದ ಮದ್ಯವಿಶೇಷಗಳನ್ನೂ ತನಗೆ ತೃಪ್ತಿಯಾಗುವಂತೆ ಕುಡಿಯಬೇಕು ; ಈ ಹೇಮಂತಕಾಲದಲ್ಲಿ ವಿವರಿಸುವ ಆಹಾರಾಚಾರಗಳನ್ನೇ ಶಿಶಿರಋತುವಿನಲ್ಲೂ ಆಚರಿಸಬೇಕಾದ್ದರಿಂದ ಶಿಶಿರಋತುವಿನ ದಿನ ಚರ್ಯೆಗಳನ್ನು ಪ್ರತ್ಯೇಕವಾಗಿ ವಿವರಿಸಿರುವುದಿಲ್ಲ ; ಇನ್ನು ವಸಂತರ್ತುವಿನ ಆಹಾರಾಚಾರಗಳನ್ನು ವಿವರಿಸುತ್ತಾರೆ. ಹೇಮಂತಕಾಲದಲ್ಲಿ ಶೀತಪೀಡಿತರಾದ ಮನುಷ್ಯರ ದೇಹದಲ್ಲಿ ಸಂಚಿತವಾದ ಕಫವು ವಸಂತರ್ತುವಿನಲ್ಲಿ ಉಷ್ಣಸ್ವಭಾವದ ಹವೆಯಿಂದ (ಕೆರಳಿ)ಪ್ರಕೋಪವಾಗುವುದರಿಂದ ಅನೇಕವಿಧಗಳಾದ ರೋಗಗಳನ್ನುಂಟುಮಾಡುವುದರಿಂದ ಹುಳಿ, ಮಧುರ, ಸ್ನಿಗ್ಧ, ಲವಣರಸ ಮತ್ತು ಗುರುಗುಣವುಳ್ಳ ದ್ರವ್ಯಗಳನ್ನು ತ್ಯಜಿಸಬೇಕು ; ವಮನ ಮೊದಲಾದ ಕಫಹರ ಕ್ರಿಯೆಗಳನ್ನು ಆಚರಿಸಬೇಕು.

ಟಿಪ್ಪಣಿ:—ಗರ್ಭಗೃಹೋದರೇ–ದೊಡ್ಡಮನೆಯ ಮಧ್ಯೆಇರುವ ಸಣ್ಣಮನೆಯಮಧ್ಯದಲ್ಲಿ (ಹೊರಗಿನಗಾಳಿ, ಧೂಳು, ಹೊಗೆ, ಬಿಸಿಲುಗಳು ಪ್ರವೇಶಿಸಲು ಅವಕಾಶವಿರುವುದಿಲ್ಲ ಬೆಚ್ಚಗಿರುತ್ತದೆ) ಅಥವಾ ನೆಲಮಾಳಿಗೆ ಎಂದೂ ಅರ್ಥವಾಗುತ್ತದೆ ; ಪೀನಂ–ಮಾಂಸಲವಾದ; ಗೋರಸಾದಿಗಳೂ, ಇಕ್ಷು ವಿಕಾರಗಳೂ, ಹೇಮಂತದಲ್ಲಿ ಹೇಳಿರುತ್ತವೆ ; ಶಿಶಿರರ್ತುವಿನಲ್ಲಿ ಈ ವಿಧವಾದ ವಿಶೇಷಾಹಾರಗಳನ್ನು ಹೇಳದೆ ಸಾಧಾರಣವಿಧಾನಗಳನ್ನು ಮಾತ್ರವೇ ಆಚರಿಸಬೇಕೆಂದುತಿಳಿಸಿರುತ್ತೆ. ಏಕೆಂದರೆ,ಹೇಮಂತದಲ್ಲಿ ಚಯವಾಗುವ ಕಫದ ಶೈತ್ಯದಿಂದ ಪ್ರಕುಪಿತವಾದ ವಾತವನ್ನು ಶಮನಗೊಳಿಸುವುದಕ್ಕಾಗಿ ಸಾಮಾನ್ಯವಿಧಿಗಳನ್ನುಹೇಳಿರುತ್ತೆ. ತಂತ್ರಾಂತರಗಳಲ್ಲಿ ಇಲ್ಲಿ ಹೇಳಿರುವುದಕ್ಕಿಂತ ವಿಶೇಷವಾದ ಆಹಾರಗಳನ್ನು ಹೇಳಿರುವ ಉದ್ದೇಶವೇನೆಂದರೆ ಹೇಮಂತ ಋತುವಿನಲ್ಲಿ ತಂಗಾಳಿಯ ಸ್ಪರ್ಶದಿಂದ ಅಡಗಿರುವ ಪ್ರಬಲವಾದಅಗ್ನಿಯು ಮೇಲೆ ಹೇಳಿರುವ ಪ್ರಬಲತರ ಸ್ನಿಗ್ಧಗುರುಗುಣವುಳ್ಳ ಆಹಾರವನ್ನು ಸೇವಿಸದಿದ್ದರೆ ಧಾತುಕ್ಷಯವುಂಟಾಗಿ ತೀವ್ರವಾದ ವಾತಪ್ರಕೋಪವುಂಟಾದೀತೆಂಬ ಭಯದಿಂದ ವಿವರಿಸಿರುತ್ತಾರೆ.

ಷಷ್ಟಿಕಾನ್ನಂ ಯವಾ೯ ಶೀತಾ೯ ಮುದ್ಗಾ೯ ನೀವಾರಕೋದ್ರವಾ೯ ||೩೨||
ಲಾವಾದಿ ವಿಷ್ಕಿರರಸೈರ್ದದ್ಯಾದ್ಯೂಷೈಶ್ಚ ಯುಕ್ತಿತಃ |
ಪಟೋಲನಿಮ್ಬವಾರ್ತಾಕತಿಕ್ತೈಶ್ಚ ಹಿಮಾತ್ಯಯೇ ||೩೩||
ಸೇವೇನ್ಮಧ್ವಾಸವಾರಿಷ್ಟಾ೯ ಸೀಧುಮಾಧ್ವೀಕ ಮಾಧವಾ೯ |
ವ್ಯಾಯಾಮಮಞ್ಜನಂ ಧೂಮಂ ತೀಕ್ಷ್ಣಂ ಚ ಕಬಳಗ್ರಹಮ್ ||೩೪||
ಸುಖಾಮ್ಬುನಾ ಚ ಸರ್ವಾರ್ಥಾ೯ ಸೇವೇತ ಕುಸುಮಾಗಮೇ |
ತೀಕ್ಷ್ಣರೂಕ್ಷಕಟುಕ್ಷಾರಕಷಾಯಂ ಕೋಷ್ಣಮದ್ರವಮ್ ||೩೫||
ಯವಮುದ್ಗಮಧುಪ್ರಾಯಂ ವಸನ್ತೇ ಭೋಜನಂ ಹಿತಮ್ |
ವ್ಯಾಯಾಮೋಽತ್ರ ನಿಯುದ್ಧಾಧ್ವಶಿಲಾನಿರ್ಘಾತಜೋ ಹಿತಃ ||೩೬||
ಉತ್ಸಾದನಂ ತಥಾ ಸ್ನಾನಂ ವನಿತಾಃ ಕಾನನಾನಿ ಚ |
ಸೇವೇತ ನಿರ್ಹರೇಚ್ಚಾಪಿ ಹೇಮನ್ತೋಪಚಿತಂ ಕಫಮ್ ||೩೭||
ಶಿರೋವಿರೇಕವಮನನಿರೂಹಕಬಳಾದಿಭಿಃ |
ವರ್ಜಯೇನ್ಮಧುರಸ್ನಿಗ್ಧದಿವಾಸ್ವಪ್ನಗುರುದ್ರವಾ೯ ||೩೮||

೬೦ ದಿನದಲ್ಲಿ ಬೆಳೆಯುವ ಭತ್ತದ ಅನ್ನವನ್ನೂ ಯವಧಾನ್ಯವನ್ನೂ ಶೀತವೀರ್ಯ ದ್ರವ್ಯಗಳನ್ನೂ ಹೆಸರು, ಸಾವೆ, ಹಾರಕಗಳನ್ನೂ, ಲಾವನಹಕ್ಕಿ ಮೊದಲಾದ ವಿಷ್ಕಿರ ಪಕ್ಷಿಗಳ ಮಾಂಸರಸ, ಹುರುಳಿ ಹೆಸರು ಮೊದಲಾದುವುಗಳ ಕಟ್ಟುಗಳು, ಕಹಿಪಡವಲ, ಬೇವು, ಬದನೆಕಾಯಿ ಮೊದಲಾದ ಕಹಿರಸ ದ್ರವ್ಯಗಳು ಇವನ್ನು ವಸಂತರ್ತುವಿನಲ್ಲಿ ಸೇವಿಸಬೇಕು ; ಮಧ್ವಾಸವ, ಮಧ್ವರಿಷ್ಟ, ಸೀಧು, ಮಾಧ್ವೀಕ, ಮಾಧವ ಮೊದಲಾದ ಮದ್ಯಗಳನ್ನೂ ವ್ಯಾಯಾಮ, ಅಂಜನ, ತೀಕ್ಷ್ಣ ಧೂಮ ಕಬಳಗ್ರಹಗಳನ್ನೂ ಸ್ನಾನ ಪಾನಾದಿಶೌಚಕಾರ್ಯಗಳಿಗೆ ಸುಖೋಷ್ಣೋದಕವನ್ನೂ ಉಪಯೋಗಿಸಬೇಕು ; ಚುರುಕಾದ, ರೂಕ್ಷಗಳಾದ, ಕಟು, ಕಷಾಯ, ಕ್ಷಾರಗಳನ್ನೂ, ಉಗುರುಬೆಚ್ಚಗಿರುವ; ದ್ರವವಲ್ಲದ ಯವಧಾನ್ಯ, ಹೆಸರು, ಜೇನುತುಪ್ಪಗಳು ಹೆಚ್ಚಾಗಿ ಸೇರಿರುವ ಆಹಾರವನ್ನೂ ಭೋಜನ ಮಾಡಬೇಕು. ಈ ವಸಂತರ್ತುವಿನಲ್ಲಿ ವ್ಯಾಯಾಮವೆಂದರೆ ಬಾಹು ಯುದ್ಧ (ಜಟ್ಟಿಯ ಕಾಳಗ) ದಾರಿನಡೆಯುವುದು ಕಲ್ಲನ್ನು ಕೈಯಿಂದ ದೂರಕ್ಕೆ ಬಿಸಾಡುವುದು ಇವುಗಳು ಹಿತಕರಗಳು ; ಹಿಟ್ಟುಗಳಿಂದ ಮೈತಿಕ್ಕಿ ಸ್ನಾನಮಾಡುವುದು, ಪ್ರಿಯ ಸ್ತ್ರೀಯರನ್ನಾಲಿಂಗನೆ ಮಾಡುವುದು, ಉದ್ಯಾನವನಗಳನ್ನು ವಿಹರಿಸುವುದು ಇವು ಹಿತಕರಗಳು. ಹೇಮಂತರ್ತುವಿನಲ್ಲಿ ಸಂಚಿತವಾದ ಕಫವನ್ನು ಶಿರೋವಿರೇಚನ ವಮನ ನಿರೂಹ ಕಬಳಗ್ರಹ ಮೊದಲಾದುವುಗಳಿಂದ ಹೊರಕ್ಕೆ ಹೊರಡಿಸಬೇಕು ; ಮಧುರ ಸ್ನಿಗ್ಧಗುರುಗುಣವುಳ್ಳ ದ್ರವವಸ್ತುಗಳನ್ನೂ ಹಗಲು ನಿದ್ರೆಯನ್ನೂ ತ್ಯಜಿಸಬೇಕು.

ವ್ಯಾಯಾಮಮುಷ್ಣಮಾಯಾಸಂ ಮೈಥುನಂ ಪರಿಶೋಷಿ ಚ |
ರಸಾಂಶ್ಚಾಗ್ನಿಗುಣೋದ್ರಿಕ್ತಾ೯ ನಿದಾಘೇ ಪರಿವರ್ಜಯೇತ್ ||೩೯||

ವ್ಯಾಯಾಮ, ಉಷ್ಣವೀರ್ಯದ್ರವ್ಯಗಳು, ಆಯಾಸ, ಮೈಥುನಗಳನ್ನೂ ಉಳಿದಿರುವ ಶರೀರಶೋಷಣಾತ್ಮಕವಾದ ಅಗ್ನಿಗುಣವರ್ಧಕಗಳಾದ ಕಟು, ಆಮ್ಲ, ಲವಣರಸ ದ್ರವ್ಯಗಳನ್ನೂ ಬೇಸಿಗೆಯಲ್ಲಿ (ಗ್ರೀಷ್ಮರ್ತುವಿನಲ್ಲಿ) ತ್ಯಜಿಸಬೇಕು.

ಸರಾಂಸಿಸರಿತೋ ವಾಪೀರ್ವನಾನಿ ರುಚಿರಾಣಿ ಚ ।
ಚನ್ದನಾನಿ ಪರಾರ್ಧ್ಯಾನಿ ಸ್ರಜಃ ಸಕಮಲೋತ್ಪಲಾಃ ॥೪೦॥
ತಾಲವೃನ್ತಾನಿಲಾಹಾರಾಂಸ್ತಥಾ ಶೀತಗೃಹಾಣಿ ಚ ।
ಘರ್ಮಕಾಲೇ ನಿಷೇವೇತ ವಾಸಾಂಸಿ ಸುಲಘೂನಿ ಚ ॥೪೧॥
ಶರ್ಕರಾಖಣ್ಡದಿಗ್ಧಾನಿ ಸುಗನ್ಧೀನಿ ಹಿಮಾನಿ ಚ ।
ಪಾನಕಾನಿ ಚ ಸೇವೇತ ಮನ್ಥಾಂಶ್ಚಾಪಿ ಸಶರ್ಕರಾನ್ ॥೪೨॥
ಭೋಜನಂ ಚ ಹಿತಂ ಶೀತಂ ಸಘೃತಂ ಮಧುರದ್ರವಮ್ ।
ಶೃತೇನ ಪಯಸಾ ರಾತ್ರೌ ಶರ್ಕರಾಮಧುರೇಣ ಚ ॥೪೩॥
ಪ್ರತ್ಯಗ್ರಕುಸುಮಾಕೀರ್ಣಶಯನೇ ಹರ್ಮ್ಯಸಂಸ್ಥಿತೇ ।
ಶಯೀತ ಚನ್ದನಾರ್ದ್ರಾಙ್ಗಃ ಸ್ಪೃಶ್ಯಮಾ (ಣೋ) ನೋಽನಿಲೈಃ ಸುಖೈಃ ॥೪೪॥

ಬೇಸಿಗೆಯಲ್ಲಿ (ಗ್ರೀಷ್ಮರ್ತುವಿನಲ್ಲಿ) ಸರೋವರ, ನದಿ, ಬಾವಿ, ಮೊದಲಾದ ಮನೋಹರವಾದ ಜಲಾಶಯಗಳನ್ನೂ, ಶ್ರೇಷ್ಠವಾದ ಗಂಧಲೇಪನಗಳು, ತಾವರೆ, ನೈದಿಲೆ ಪುಷ್ಪಗಳ ಹಾರಗಳ ಧಾರಣೆ, ತಾಳಿಗರಿಯ ಬೀಸಣಿಗೆಯಿಂದ ಬೀಸುವ ವಾತವನ್ನು ಸೇವಿಸುವುದು. ತಣ್ಣೀರಿನಿಂದ ತಣ್ಣಗೆ ಮಾಡಲ್ಪಟ್ಟ ಮನೆಯಲ್ಲಿ ವಾಸವನ್ನೂ, ಅತಿ ಹಗುರವಾದ (ತೆಳುವಾದ) ವಸ್ತ್ರಧಾರಣೆಯನ್ನೂ ಮಾಡಬೇಕು ; ಕಲ್ಲುಸಕ್ಕರೆಯನ್ನು ಸೇರಿಸಿದ ಸುವಾಸನೆಯುಳ್ಳ ತಣ್ಣಗಿರುವ ಪಾನಕಗಳು, ಸಕ್ಕರೆ ಮಿಶ್ರವಾದ ಮಂಥಗಳೂ, ತುಪ್ಪ, ಸಿಹಿಮಿಶ್ರಮಾಡಿದ ದ್ರವವಾದ ತಣ್ಣಗಿರುವ ಆಹಾರವು ಹಿತಕರವಾದದ್ದು ; ರಾತ್ರಿಯವೇಳೆ ಕಾದಹಾಲಿಗೆ ಸಕ್ಕರೆಯನ್ನು ಬೆರೆಸಿ ಕುಡಿದು (ಮಹಡಿಯಮೇಲೆ) ಹೊಸದಾದ :ಹೂವುಗಳಿಂದ ಮಾಡಿದ ಹಾಸಿಗೆಯಲ್ಲಿ (ಗಂಧವನ್ನು ಮೈಗೆ ತೊಡೆದುಕೊಂಡು) ಮಲಗಿ ಪಂಖದಿಂದ ತಣ್ಣಗಿರುವ ಗಾಳಿಯು ಮೈಮೇಲೆ ಬೀಸುವಂತೆ ಮಾಡಬೇಕು.

ತಾಪಾತ್ಯಯೇ ಹಿತಾ ನಿತ್ಯಂ ರಸಾ ಯೇ ಗುರುವಸ್ತ್ರಯಃ ।
ಪಯೋ ಮಾಂಸರಸಾಃ ಕೋಷ್ಣಾಸ್ತೈಲಾನಿ ಚ ಘೃತಾನಿ ಚ ॥೪೫॥
ಬೃಂಹಣಂ ಚಾಪಿ ಯತ್ಕಿಞ್ಚಿದಭಿಷ್ಯನ್ದಿ ತಥೈವ ಚ ।
ನಿದಾಘೋಪಚಿತಂ ಚೈವ ಪ್ರಕುಪ್ಯನ್ತಂ ಸಮೀರಣಮ್ ॥೪೬॥
ನಿಹನ್ಯಾದನಿಲಘ್ನೇನ ವಿಧಿನಾ ವಿಧಿಕೋವಿದಃ ।
ನದೀಜಲಂ ರೂಕ್ಷಮುಷ್ಣಮುದಮನ್ಥಂ ತಥಾತಪಮ್ ॥೪೭॥
ವ್ಯಾಯಾಮಂ ಚ ದಿವಾಸ್ವಪ್ನಂ ವ್ಯವಾಯಂ ಚಾತ್ರ ವರ್ಜಯೇತ್ ।
ಯವಷಷ್ಟಿಕ ಗೋಧೂಮಾನ್ ಶಾಲೀಂಶ್ಚಾಪ್ಯನವಾಂಸ್ತಥಾ ॥೪೮॥
ಹರ್ಮ್ಯಮಧ್ಯೇ ನಿವಾತೇ ಚ ಭಜೇಚ್ಛಯ್ಯಾಂ ಮೃದೂತ್ತರಾಮ್ ।

ಸವಿಷಪ್ರಾಣಿವಿಣ್ಮೂತ್ರಲಾಲಾದಿಷ್ಠೀವನಾದಿಭಿಃ ||೪೯||
ಸಮಾಪ್ಲುತಂ ತದಾ ತೋಯಮಾನ್ತರಿಕ್ಷಂ ವಿಷೋಪಮಮ್ |
ವಾಯುನಾ ವಿಷದುಷ್ಟೇನ ಪ್ರಾವೃಷ್ಯೇಣ ಚ ದೂಷಿತಮ್ ||೫೦||
ತದ್ಧಿ ಸರ್ವೋಪಯೋಗೇಷು ತಸ್ಮಿನ್ ಕಾಲೇ ವಿವರ್ಜಯೇತ್ |
ನಿರೂಹೈರ್ಬಸ್ತಿಭಿಶ್ಚಾನ್ಯೈಸ್ತಥಾನ್ಯೈರ್ಮಾರುತಾಪಹೈಃ ||೫೧||
ಕುಪಿತಂ ಶಮಯೇದ್ವಾಯುಂ ವಾರ್ಷಿಕಂ ಚಾಚರೇದ್ವಿಧಿಮ್ |

ಗ್ರೀಷ್ಮರ್ತುವು ಕಳೆದ ಮೇಲೆ ಬರುವ ಪ್ರಾವೃಡೃತುವಿನಲ್ಲಿ ಮಧುರ, ಅಮ್ಲ, ಲವಣಗಳೆಂಬ ಗುರುಗುಣವುಳ್ಳ ಮೂರು ರಸಗಳೂ, ಹಾಲು, ಮಾಂಸರಸಗಳೂ, ಉಷ್ಣ ವೀರ್ಯದ್ರವ್ಯಗಳೂ, ತೈಲ, ಘೃತಗಳೂ, ಬೃಂಹಣ ಮತ್ತು ಅಭಿಷ್ಯಂದಕರಗಳು ಹಿತಕರ ಗಳು ; ಗ್ರೀಷ್ಮರ್ತುವಿನಲ್ಲಿ ಸಂಚಯುವಾದ ಪ್ರಾವೃಟ್ಕಾಲದಲ್ಲಿ ಪ್ರಕೋಪವಾಗುವ ವಾತ ದೋಷವನ್ನು ವಾತಹರಗಳಾದ ನಿರೂಹದಿಂದ ನಿವಾರಿಸಬೇಕು ; ಹೊಳೆಯನೀರು, ರೂಕ್ಷ ಉಷ್ಣದ್ರವ್ಯಗಳು, ನೀರಿನಿಂದ ಕದರಿದ ಅರಳುಹಿಟ್ಟು, ಬಿಸಿಲು ವ್ಯಾಯಾಮ, ಹಗಲುನಿದ್ರೆ, ಸ್ತ್ರೀಸಂಗ ಇವುಗಳನ್ನೂ , ಹೊಸದಾದ ಯವಧಾನ್ಯ ೬೦ ದಿನದ ಭತ್ತ, ಗೋಧಿ, ರಕ್ತಶಾಲಿ ಇವುಗಳನ್ನೂ ಬಿಟ್ಟುಬಿಡಬೇಕು ; ಮಹಡಿಯ ಮಧ್ಯದಲ್ಲಿ ಗಾಳಿಬೀಸ ದಿರುವ ಸ್ಥಳದಲ್ಲಿ ಮೆತ್ತಗಿರುವ ಹಾಸಿಗೆಯಲ್ಲಿ ಮಲಗಬೇಕು ; ಆಗ ಮಳೆಯನೀರು ವಿಷ ಪ್ರಾಣಿಗಳ ಮಲಮೂತ್ರ, ಜೊಲ್ಲು, ಕ್ಯಾಕರಿಸಿದ ಕಫವೊದಲಾದುವುಗಳಿಂದ ಕೆಡಿಸ ಲ್ಪಟ್ಟು ವಿಷಸಮಾನವಾಗಿಯೂ, ಪ್ರಾವೃಟ್ಕಾಲಿಕ ವಾಯುವಿನಿಂದಲೂ ಕೆಟ್ಟಿರುವ ಕಾರಣ ಇಂತಹ ನೀರನ್ನು ಸ್ನಾನಪಾನಾದಿಗಳಿಗೆ ಸರ್ವಥಾ ಉಪಯೋಗಿಸಬಾರದು ; ಈ ಕಾಲ ದಲ್ಲಿ ಪ್ರಕುಪಿತ ವಾಯುವನ್ನು ನಿರೂಹಬಸ್ತಿಗಳಿಂದಲೂ ವಾತಹರಗಳಾದ ಇತರಬಸ್ತಿ ಕ್ರಿಯೆಗಳಿಂದಲೂ, ಶಮನಗೊಳಿಸಿ ವರ್ಷರ್ತುವಿನ ವಿಧಾನಗಳನ್ನೂ ಆಚರಿಸಬೇಕು.

ಋತಾವೃತೌ ಯ ಏತೇನ ವಿಧಿನಾ ವರ್ತತೇ ನರಃ |
ಘೋರಾನ್ ಋತುಕೃತಾನ್ ರೋಗಾನ್ನಾಪ್ನೋತಿ ಸ ಕದಾಚನ ||೫೨||

ಯಾವ ಪುರುಷನು ಮೇಲೆ ವಿವರಿಸಿದ ಋತುವಿಧಾನಗಳಿಗೆ ತಕ್ಕಂತೆ ಪ್ರತಿಋತು ಗಳಲ್ಲಿಯೂ ಆಹಾರಾಚಾರಗಳನ್ನು ಅನುಸರಿಸುತ್ತಾನೋ ಅವನಿಗೆ ಋತುಸಂಬಂಧ ದಿಂದುಂಟಾಗುವ ರೋಗಗಳೆಂದಿಗೂ ಉಂಟಾಗುವುದಿಲ್ಲ.

ಅತ ಊರ್ಧ್ವಂ ದ್ವಾದಶಾಶನಪ್ರವಿಚಾರಾನ್ ವಕ್ಷ್ಯಾಮಃ |
ತತ್ರ ಶೀತೋಷ್ಣಸ್ನಿಗ್ಧರೂಕ್ಷದ್ರವಶುಷ್ಕೈಕಕಾಲಿಕದ್ವಿಕಾಲಿಕೌಷಧ ಯುಕ್ತಮಾತ್ರಾಹೀನ ದೋಷಪ್ರಶಮನವೃತ್ತ್ಯರ್ಥಾಃ ||೫೩||

ಇನ್ನುಮುಂದೆ ಶೀತ, ಉಷ್ಣ, ಸ್ನಿಗ್ಧ, ಶುಷ್ಕ, ಏಕಕಾಲಿಕ, ದ್ವಿಕಾಲಿಕ, ಔಷಧ ಯುಕ್ತ, ಹೀನಮಾತ್ರ, ದೋಷಪ್ರಶಮನ, ವೃತ್ತ್ಯರ್ಥಾ, ಅಶನಗಳೆಂಬ ೧೨ ವಿಧಗಳಾದ ಆಹಾರವಿಚಾರಗಳನ್ನು ಹೇಳುತ್ತೇವೆ.

ತೃಷ್ಣೋಷ್ಣಮದದಾಹಾರ್ತಾ ರಕ್ತಪಿತ್ತವಿಷಾತುರಾ |
ಮೂರ್ಛಾರ್ತಾ ಸ್ತ್ರೀಷು ಚ ಕ್ಷೀಣಾ ಶೀತೈರನ್ನೈರುಪಾಚರೇತ್ ||೫೪||

ಬಾಯಾರಿಕೆ, ಉಷ್ಣಾಧಿಕ್ಯತೆ, ಮದ್ಯವಿಕಾರ, ಮೈಉರಿತ, ರಕ್ತಪಿತ್ತ, ವಿಷ ಮೂರ್ಛೆ, ಇವುಗಳಿಂದ ಪೀಡಿತರು ಸ್ತ್ರೀರತಿಯಿಂದ ಕ್ಷೀಣಿತರು ಇವರನ್ನು ಶೀತಸ್ಪರ್ಶ ಗಳಾದ, ಶೀತವೀರ್ಯಗಳಾದ ಅನ್ನಪಾನಗಳಿಂದ ಉಪಚರಿಸಬೇಕು.

ಕಫವಾತಾಮಯಾವಿಷ್ಟಾ ವಿರಿಕ್ತಾ ಸ್ನೇಹಪಾಯಿನಃ |
ಪ್ರಕ್ಲಿನ್ನದೇಹಾಂಶ್ಚ ನರಾನುಷ್ಣೈರನ್ನೈರುಪಾಚರೇತ್ ||೫೫||

ಕಫವಾತರೋಗಪೀಡಿತರು, ವಿರೇಚನಮಾಡಿ ಬಳಲಿರುವವರು, ಸ್ನೇಹಪಾನ ಮಾಡಿ ದವರು, ಕಾರಣಾಂತರಗಳಿಂದ ಮೈಯಿಂದ ದ್ರವವು ಜಿನುಗುತ್ತಿರುವವರು ಇವರುಗಳನ್ನು ಉಷ್ಣಸ್ಪರ್ಶಗಳಾಗಿಯೂ, ಉಷ್ಣವೀರ್ಯಗಳಾಗಿಯೂ, ಬಿಸಿಯಾಗಿಯೂ ಇರುವ ಅನ್ನ ಪಾನಗಳಿಂದ ಉಪಚರಿಸಬೇಕು.

ವಾತಿಕಾ ರೂಕ್ಷದೇಹಾಂಶ್ಚ ವ್ಯಾಯಾಮೋಪಹತಾಂಸ್ತಥಾ |
ವ್ಯಾಯಾಮಿನಶ್ಚಾಪಿ ನರಾ ಸ್ನಿಗ್ಧೈರನ್ನೈರುಪಾಚರೇತ್ ||೫೬||

ವಾತಪ್ರಕೃತಿಯವರೂ ಪಿತ್ತ, ಕಫಪ್ರಕೃತಿಯವರೂ, ರೂಕ್ಷದೇಹವುಳ್ಳವರು, ವ್ಯಾಯಾಮದಿಂದ ಪೀಡಿತರಾದವರು, ವ್ಯಾಯಾಮಮಾಡುವವರು, ಇವರುಗಳನ್ನು ಸ್ನಿಗ್ಧವಾದ ಅನ್ನಪಾನಾದಿಗಳಿಂದ ಉಪಚರಿಸಬೇಕು.

ಮೇದಸಾಭಿಪರೀತಾಂಸ್ತು ಸ್ನಿಗ್ಧಾನ್ಮೇಹಾತುರಾನಪಿ |
ಕಫಾಭಿಪನ್ನದೇಹಾಂಶ್ಚ ರೂಕ್ಷೈರನ್ನೈರುಪಾಚರೇತ್ ||೫೭||
ಶುಷ್ಕದೇಹಾ ಪಿಪಾಸಾರ್ತಾ ದುರ್ಬಲಾನಪಿ ಚ ದ್ರವೈಃ |
ಪ್ರಕ್ಲಿನ್ನಕಾಯಾ ವ್ರಣಿನಃ ಶುಷ್ಕೈರ್ಮೇಹಿನಮೇವ ಚ ||೫೮||

ಮೇದಸ್ಸಿನಿಂದ ವ್ಯಾಪಿಸಿದ ಶರೀರವುಳ್ಳವರು (ಅತಿಯಾಗಿ ಬೊಜ್ಜು ಬಂದು ದೇಹವು ಅತಿದಪ್ಪವಾಗಿರುವವರು) ಸ್ನಿಗ್ಧರಾದವರು, ಮೇಹರೋಗಿಗಳು, ಕಫಗ್ರಸ್ತರು ಇವರುಗಳನ್ನು ರೂಕ್ಷವಾದ ಅನ್ನಪಾನಗಳಿಂದ ಉಪಚರಿಸಬೇಕು ; ಒಣಗಿದ (ಶುಷ್ಕ) ದೇಹವುಳ್ಳವರು, ಬಾಯಾರಿದವರು, ದುರ್ಬಲರು ಇವರಿಗೆ ದ್ರವಾಹಾರವನ್ನು ಕೊಡಿಸ ಬೇಕು ; ಧಾತುವೃದ್ಧಿಯಾಗಿ ದೇಹದಿಂದ ದ್ರವಜಿನುಗುತ್ತಿರುವವರು ಅಥವಾ ಕುಷ್ಠ ಮೊದಲಾದ ರೋಗಗಳಿಂದ ಕೀವುರಕ್ತಾದಿಗಳು, ಸ್ರವಿಸುತ್ತಿರುವವರು, ವ್ರಣಪೀಡಿತರು, ಮೇಹರೋಗಿಗಳು, ಇವರಿಗೆ ಶುಷ್ಕಾಹಾರವನ್ನೇ ಕೊಟ್ಟು ಉಪಚರಿಸಬೇಕು.

ಏಕಕಾಲಂ ಭವೇದ್ದೇಯೋ ದುರ್ಬಲಾಗ್ನಿವಿವೃದ್ಧಯೇ |
ಸಮಾಗ್ನಯೇ ತಥಾಹಾರೋ ದೇಯಃ ಕಾಲಮಥೋಭಯಮ್ ||೫೯||
ಔಷಧದ್ವೇಷಿಣೇ ದೇಯಸ್ತಥೌಷಧಸಮಾಯುತಃ |
ಮಂದಾಗ್ನಯೇ ರೋಗಿಣೇ ಚ ಮಾತ್ರಾಹೀನಃ ಪ್ರಶಸ್ಯತೇ ||೬೦||
ಯಥರ್ತುದತ್ತಶ್ಚಾಹಾರೋ ದೋಷಪ್ರಶಮನಃ ಸ್ಮೃತಃ |

ದುರ್ಬಲರಿಗೆ ಅಗ್ನಿಮಾಂದ್ಯಪರಿಹಾರವಾಗಿ ಅಗ್ನಿವೃದ್ಧಿಯಾಗುವುದಕ್ಕಾಗಿ ಒಂದೇ ಭೋಜನಕಾಲದಲ್ಲಿ ಹೀನಪ್ರಮಾಣದಿಂದ ಆಹಾರವನ್ನು ಕೊಡಬೇಕು ; ಸಮಾಗ್ನಿಯುಳ್ಳವರಿಗೆ ಪ್ರತಿದಿನವೂ ಎರಡುವೇಳೆ ಆಹಾರವನ್ನು ಕೊಡಬೇಕು ; ಔಷಧವನ್ನು ದ್ವೇಷಿಸುವವರಿಗೆ ಔಷಧವನ್ನು ಸೇರಿಸಿದ ಆಹಾರವನ್ನು ಕೊಡಬೇಕು ; ಅಗ್ನಿಮಾಂದ್ಯವುಳ್ಳವರಿಗೂ ರೋಗಿಗಳಿಗೂ ಒಂದೇಹೊತ್ತು ಕಡಮೆ ಪ್ರಮಾಣ ಆಹಾರವು ಹಿತಕರವು. ಋತುಗಳಿಗೆ ತಕ್ಕಂತೆ ಶಾಸ್ತ್ರವಿಹಿತವಾದ ಆಹಾರವನ್ನು ಭೋಜನಮಾಡುವುದರಿಂದ ದೋಷಗಳು ಶಮನವಾಗುತ್ತವೆ ಎಂದು ತಿಳಿಯಬೇಕು.

ಅತಃ ಪರಂ ತು ಸ್ವಸ್ಥಾನಾಂ ವೃತ್ತ್ಯರ್ಥಂ ಸರ್ವಮೇವ ಚ ।
ಪ್ರವಿಚಾರಾನಿಮಾನೇವಂ ದ್ವಾದಶಾತ್ರ ಪ್ರಯೋಜಯೇತ್ ॥೬೨॥

ಇನ್ನು ಮುಂದೆ ಸಮಧಾತುಗಳುಳ್ಳ ಸಮದೋಷಪ್ರಕೃತಿಗಳಿಂದ ಕೂಡಿದ ಸ್ವಸ್ಥರಿಗೆ ಶರೀರಧಾರಣಮಾಡಿಕೊಂಡು ಜೀವಿಸುವುದಕ್ಕಾಗಿ ಸಕಲರಸಗಳೂ ಸಮವಾಗಿರುವಂತೆ ತಯಾರಿಸಿದ ಆಹಾರವನ್ನು ಕೊಟ್ಟು ಭೋಜನ ಮಾಡಿಸಬೇಕು.

ಅತಊರ್ಧ್ವಂದಶೌಷಧಕಾಲಾನ್ ವಕ್ಷ್ಯಾಮಃ । ತತ್ರಾಭಕ್ತಂ ಪ್ರಾಗ್ಭಕ್ತಮಧೋಭಕ್ತಂ ಮಧ್ಯೇಭಕ್ತಮನ್ತರಾಭಕ್ತಂ ಸಭಕ್ತಂ ಸಾಮುದ್ಗಂ ಮುಹುರ್ಮುಹುರ್ಗ್ರಾಸಂ ಗ್ರಾಸಾನ್ತರಂ ಚೇತಿ ದಶೌಷಧಕಾಲಾಃ ॥೬೩॥

ಇನ್ನುಮುಂದೆ ಔಷಧವನ್ನು ಸೇವಿಸಬೇಕಾದ ೧೦ ವಿಧ ಕಾಲಗಳನ್ನು ವಿವರಿಸುತ್ತೇವೆ—ಅವುಗಳಲ್ಲಿ ೧. ಅಭಕ್ತ (ಭೋಜನಕ್ಕಿಂತ ಮುಂಚಿತವಾಗಿ) ಔಷಧವು ಸೇವನೆ ಮಾಡಿ ಜೀರ್ಣಿಸಿದಮೇಲೆ ಭೋಜನಮಾಡುವುದು ಆಹಾರವಿಲ್ಲದೆ ಬರಿಯ ಹೊಟ್ಟೆಗೆ ಔಷಧವನ್ನು ತುಂಬುವುದು ೨. ಪ್ರಾಗ್ಭಕ್ತ (ಔಷಧಸೇವನೆ ಮಾಡಿದ ಕೂಡಲೇ ಭೋಜನ ಮಾಡುವುದು) ೩. ಅಧೋಭಕ್ತ, ೪. ಮಧ್ಯಭಕ್ತ, ೫. ಅಂತರಾಭಕ್ತ, ೬. ಸಭಕ್ತ, ೭. ಸಮುದ್ಗ ೮. ಮುಹುರ್ಮುಹುಃ, ೯. ಗ್ರಾಸ, ೧೦. ಗ್ರಾಸಾಂತರಗಳೆಂದು ೧೦ ವಿಧ ಔಷಧಕಾಲಗಳನ್ನು ನಿರ್ದೇಶಿಸುತ್ತಾರೆ.

ತತ್ರಾಭಕ್ತಂ ತು ಯತ್ಕೇವಲಮೇವೌಷಧಮುಪಯುಜ್ಯತೇ ॥೬೪॥
ವೀರ್ಯಾಧಿಕಂ ಭವತಿ ಭೇಷಜಮನ್ನಹೀನಂ ಹನ್ಯಾತ್ತಥಾ
ಮಯಮಸಂಶಯಮಾಶು ಚೈವ ।
ತದ್ಬಾಲವೃದ್ಧಯುವತೀಮೃದವೋಽಥ ಪೀತ್ವಾ ಗ್ಲಾನಿಂ ಪರಾಂ
ಸಮುಪಯಾನ್ತಿ ಬಲಕ್ಷಯಂ ಚ ॥೬೫॥

ಇವುಗಳ ಪೈಕಿ ಆಹಾರವಿಲ್ಲದೆ ಬರಿಯಹೊಟ್ಟೆಗೆ ಔಷಧವನ್ನು ತುಂಬುವುದು ಅಭಕ್ತ ಅಥವಾ ನಿರ್ಭಕ್ತ ವೆನ್ನುತ್ತಾರೆ ; ಆಹಾರವಿಲ್ಲದೆ ಬರಿಯ ಔಷಧವನ್ನೇ ಸೇವಿಸಿದರೆ ಹೆಚ್ಚು ವೀರ್ಯವುಳ್ಳದ್ದಾಗುತ್ತದೆ ; ಅನುಮಾನವಿಲ್ಲದೆ ಬಲುಬೇಗನೆ ರೋಗಗಳನ್ನು ನಾಶಮಾಡುತ್ತದೆ ; ಈ ರೀತಿ ಆಹಾರವನ್ನು ಸೇವನೆಮಾಡದೆ ಬರಿಯ ಔಷಧವನ್ನೇ

ಬಾಲಕರು, ಮುದುಕರು ಯುವತಿಸ್ತ್ರೀಯರು, ಮೃದುಶರೀರವುಳ್ಳವರು, (ಸುಕುಮಾರರು) ಸೇವನೆಮಾಡಿದರೆ ಅಧಿಕವಾಗಿ ಬಳಲುತ್ತಾರೆ, ಬಲಕ್ಷಯವನ್ನೂ ಹೊಂದುತ್ತಾರೆಂದು ತಿಳಿಯಬೇಕು.

ಪ್ರಾಗ್ಭಕ್ತಂನಾಮ ಯತ್ಪ್ರಾಗ್ಭಕ್ತಸ್ಯೋಪಯುಜ್ಯತೇ ||೬೬||
ಶೀಘ್ರಂ ವಿಪಾಕಮುಪಯಾತಿ ಬಲಂ ನ ಹಿಂಸ್ಯಾದನ್ನಾವೃತಂ ನ ಚ ಮುಹುರ್ವದನಾನ್ನಿರೇತಿ ।
ಪ್ರಾಗ್ಭಕ್ತಸೇವಿತಮಥೌಷಧಮೇತದೇವ ದದ್ಯಾಚ್ಚ ವೃದ್ಧಶಿಶು ಭೀರುವರಾಙ್ಗನಾಭ್ಯಃ ||೬೭||

ಆಹಾರಸೇವನೆಗಿಂತ ಮುಂಚೆ ಸೇವಿಸುವ ಔಷಧಕ್ಕೆ "ಪ್ರಾಗ್ಭಕ್ತ"ವೆನ್ನುತ್ತಾರೆ ಊಟಕ್ಕೆ ಮುಂಚಿತವಾಗಿ ಸೇವಿಸಿದ ಔಷಧವು ಬೇಗನೆ ಜೀರ್ಣವಾಗುತ್ತದೆ. ಬಲವನ್ನು ಕಮ್ಮಿಮಾಡುವುದಿಲ್ಲ ; ಅನ್ನದಿಂದ ಮುಚ್ಚಿಕೊಳ್ಳುತ್ತದೆಯಾಗಿ ಬಾಯಿನಿಂದ ಹೊರಕ್ಕೆ ವಮನವಾಗಿ ಬರುವುದಿಲ್ಲ ; ಇದನ್ನು ಮುದುಕರು, ಎಳೆಯಮಕ್ಕಳು, ಅಂಜುಪುರುಕರು, ಸ್ತ್ರೀಯರು, ಇವರುಗಳಿಗೆ ಪ್ರಯೋಗಿಸಬೇಕು.

ಅಧೋಭಕ್ತಂನಾಮ ಯದ್ಭುಕ್ತ್ವಾ ಪೀಯತೇ ||೬೮||
ಮಧ್ಯೇಭಕ್ತಂನಾಮ ಯನ್ಮಧ್ಯೇ ಭಕ್ತಸ್ಯ ಪೀಯತೇ ||೬೯||
ಪೀತಂ ಯದನ್ನಮುಪಯುಜ್ಯ ತದೂರ್ಧ್ವಕಾಯೇ ಹನ್ಯಾದ್ಗದಾನ್ ಬಹುವಿಧಾಂಶ್ಚ ಬಲಂ ದಧಾತಿ ।
ಮಧ್ಯೇ ತು ಪೀತಮುಪಹನ್ತ್ಯವಿಸಾರಿಭಾವಾದ್ಯೇ ಮಧ್ಯದೇಹಮಭಿಭೂಯ ಭವನ್ತಿ ರೋಗಾಃ ||೭೦||

ಆಹಾರವನ್ನು ಭೋಜನಮಾಡಿದಮೇಲೆ ಸೇವಿಸುವ ಔಷಧಕ್ಕೆ ಅಧೋಭಕ್ತವೆಂದೂ ಆಹಾರದಮಧ್ಯೆ ಮಧ್ಯೆ ಸೇವಿಸಿದರೆ ಮಧ್ಯಭಕ್ತವೆಂದೂ ಹೆಸರು ; ಆಹಾರವನ್ನೂ ಭೋಜನ ಮಾಡಿದಮೇಲೆ ಸೇವಿಸಿದ ಔಷಧವು ಊರ್ಧ್ವದೇಹದಲ್ಲಿರುವ ಅನೇಕ ರೋಗಗಳನ್ನು (ಅಂದರೆ ನೇತ್ರ, ಕರ್ಣ, ನಾಸಿಕ, ಮುಖರೋಗಗಳನ್ನು) ನಾಶಮಾಡಿ ಬಲವನ್ನುಂಟುಮಾಡುತ್ತದೆ ; ಆಹಾರವನ್ನು ತಿನ್ನುವಾಗ ಮಧ್ಯದಲ್ಲಿ ಸೇವಿಸಿದ ಔಷಧವು ಕೆಳಗಡೆಗೆ ನುಗ್ಗುವ ಸ್ವಭಾವವುಳ್ಳಕಾರಣ ಕೋಷ್ಠವನ್ನು ವ್ಯಾಪಿಸಿ ಅಲ್ಲಿರುವ ರೋಗಗಳನ್ನು ನಿವಾರಿಸುತ್ತದೆ (ವಿರೇಚನವಾಗುತ್ತದೆ.)

ಅನ್ತರಾಭಕ್ತಂನಾಮ ಯದನ್ತರಾಪೀಯತೇ ಪೂರ್ವಾಪರಯೋರ್ಭಕ್ತಯೋಃ ||೭೧||
ಹೃದ್ಯಂ ಮನೋಬಲಕರಂ ತ್ವಗ್ನಿದೀಪನೀಯಂ ಪಥ್ಯಂ ಸದಾ ಭವತಿ ಚಾನ್ತರಭಕ್ತಮೇತತ್ ||೭೨||

ಪೂರ್ವದ (ಮೊದಲಿನ) ಆಹಾರಕ್ಕೂ ಕಡೆಯ ಆಹಾರಕ್ಕೂ ಮಧ್ಯಕಾಲದಲ್ಲಿ ಸೇವಿಸಿದ ಔಷಧಕ್ಕೆ ಅಂತರಾ ಭಕ್ತವೆಂದು ಹೆಸರು ; ಇದು ಹೃದಯಕ್ಕೂ ಮನಸ್ಸಿಗೂ

ಬಲವನ್ನುಂಟುಮಾಡುತ್ತದೆ ; ಅತಿಯಾಗಿ ಅಗ್ನಿದೀಪನವನ್ನುಂಟುಮಾಡುತ್ತದೆ ; ಸದಾ ಪಥ್ಯವಾದದ್ದು.

ಸಭಕ್ತಂನಾಮ ಔಷಧೇಷು ಯತ್ಸಾಧ್ಯತೇಭಕ್ತಮ್ ||೭೩||

ಪಥ್ಯಂ ಸಭಕ್ತಮಬಲಾಬಲಯೋರ್ಹಿತಂ ಹಿ ತದ್ದ್ವೇಷಿಣಾಮಪಿ ತಥಾ ಶಿಶುವೃದ್ಧಯೋಶ್ಚ ||೭೪||

ಔಷಧದೊಡನೆ ತಯಾರಿಸಿದ ಅನ್ನವನ್ನು ಸೇವಿಸಿದರೆ ಸಭಕ್ತವೆಂದು ಹೆಸರು ; ಇದು ಸ್ತ್ರೀಯರಿಗೂ, ದುರ್ಬಲರಿಗೂ, ಔಷಧದ್ವೇಷಿಗಳಿಗೂ, ಬಾಲಕರು, ವೃದ್ಧರು ಮೊದಲಾದವರಿಗೂ ಹಿತಕರವಾದದ್ದು.

ಸಾಮುದ್ಗಂನಾಮ ಯದ್ಭುಕ್ತಸ್ಯಾದಾವನ್ತೇ ಚ ಪೀಯತೇ ||೭೫||

ದೋಷೇ ದ್ವಿಧಾ ಪ್ರವಿಸೃತೇ ತು ಸಮುದ್ಗಸಂಜ್ಞಮಾದ್ಯನ್ತಯೋರ್ಯದಶನಸ್ಯ ನಿಷೇವ್ಯತೇ ತು ||೭೬||

ಭೋಜನಕ್ಕೆ ಮೊದಲೂ ಭೋಜನವಾದಮೇಲೆಯೂ ಔಷಧವನ್ನು ಸೇವಿಸಿದರೆ ಸಮುದ್ಗವೆಂದು ಹೆಸರು ; ದೋಷಗಳು ಶರೀರದಮೇಲ್ಭಾಗಕ್ಕೂ, ಕೆಳಭಾಗಕ್ಕೂ ಹರಡಿ ಕೊಂಡಿದ್ದರೆ ಆ ಆಹಾರಕ್ಕೆ ಮೊದಲೂ ಆಹಾರವಾದನಂತರವೂ ಸೇವಿಸುವ ಸಮುದ್ಗವೆಂಬ ಸಂಜ್ಞೆಯುಳ್ಳ ಔಷಧವನ್ನು ಪ್ರಯೋಗಿಸಬೇಕು.

ಮುಹುರ್ಮುಹುರ್ನಾಮ ಸಭಕ್ತಮಭಕ್ತಂ ವಾ ಯದೌಷಧಂ ಮುಹುರ್ಮುಹುರುಪಯುಜ್ಯತೇ ||೭೭||

ಶ್ವಾಸೇ ಮುಹುರ್ಮುಹುರತಿಪ್ರಸೃತೇ ಚ ಕಾಸೇ ಹಿಕ್ಕಾವಮೀಷು ಸವದನ್ನ್ಯಪಯೋಜ್ಯಮೇತತ್ ||೭೮||

ಆಹಾರದೊಡನೆಯೂ, ಆಹಾರ ಮಿಶ್ರಮಾಡದೆ ಬರಿಯ ಔಷಧವನ್ನೇ ಪದೇ ಪದೇ ಸೇವಿಸಿದರೆ ಮುಹುರ್ಮುಹುರೂಪಯೋಗವೆಂದು ಹೆಸರು ; ಶ್ವಾಸರೋಗ ಅತಿಯಾಗಿ ಹರಡಿರುವಕಾಸ, ಬಿಕ್ಕಳಿಕೆ, ವಮನರೋಗಗಳಲ್ಲಿ ತಕ್ಕಔಷಧವನ್ನು ಪದೇ ಪದೇ ಉಪಯೋಗಿಸಬೇಕು.

ಗ್ರಾಸಾನ್ತರಂ ನಾಮ ಯತ್ಪಿಣ್ಡವ್ಯಾಮಿಶ್ರಮ್ ||೭೯||

ಗ್ರಾಸಾನ್ತರೇಷು ವಿತರೇದ್ವಮನೀಯಧೂಮಾ ಶ್ವಾಸಾದಿಷು ಪ್ರಥಿತದೃಷ್ಟಗುಣಾಂಶ್ಚ ಲೇಹಾ ||೮೦||

ಏವಮೇತೇ ದಶೌಷಧಕಾಲಾಃ ||೮೧||

ಆಹಾರದ ಕವಳವನ್ನು ಸ್ವೀಕಾರಮಾಡಿ ಔಷಧವನ್ನು ಸೇವನೆಮಾಡಿದರೆ ಗ್ರಾಸಾಂತರವೆನ್ನುತ್ತಾರೆ ; ನರಗಳು ಗೋರಸುಗಳಿಂದ ತಯಾರಿಸಿದ ಧೂಮವನ್ನು ಶ್ವಾಸಾದಿರೋಗಗಳಲ್ಲಿ ಆಹಾರದ ಒಂದು ತುತ್ತನ್ನು ತಿಂದನಂತರ ಪಾನಮಾಡುವುದರಿಂದಾಗಲೀ ಪ್ರಸಿದ್ಧವಾಗಿ ದೃಷ್ಟಫಲಕಾರಿಗಳಾದ ಲೇಹಗಳನ್ನು ಸೇವಿಸುವುದರಿಂದಾಗಲಿ ಔಷಧಪ್ರಯೋಗ

ಮಾಡಿದರೆ ಗ್ರಾಸಾಂತರವೆನ್ನುತ್ತಾರೆ ; ಈ ರೀತಿಯಾಗಿ ಹತ್ತುವಿಧ ಔಷಧಪ್ರಯೋಗಕಾಲಗಳನ್ನು ವಿವರಿಸಲಾಯಿತು.

ವಿಸೃಷ್ಟೇ ವಿಣ್ಮೂತ್ರೇ ವಿಶದಕರಣೇ ದೇಹೇ ಚ ಸುಲಘೌ ವಿಶುದ್ಧೇ ಚೋದ್ಗಾರೈ ಹೃದಿಸುವಿಮಲೇ ವಾತೇ ಚ ಸರತಿ ।
ತಥಾನ್ನಶ್ರದ್ಧಾಯಾಂ ಕಮಪರಿಶಮೇ ಕುಕ್ಷೌ ಚ ಶಿಥಿಲೇ ಪ್ರದೇಯಸ್ತ್ವಾಹಾರೋ ಭವತಿ ಭಿಷಜಾಂ ಕಾಲಃ ಸ ತು ಮತಃ ॥೮೨॥

ಪ್ರತಿಯೊಂದು ಋತುವಿನಲ್ಲೂ ನಿರ್ದಿಷ್ಟವಾದ ಆಹಾರವನ್ನು ನಿರ್ದಿಷ್ಟವಾದ ಕಾಲದಲ್ಲಿ ಸೇವಿಸಿದರೆ ಸುಖವನ್ನುಂಟುಮಾಡುತ್ತದೆ. ಆ ಕಾಲವಾವುದೆಂದರೆ-ಯಾಂಗೆ ಮಲಮೂತ್ರಗಳು ಸರಿಯಾಗಿ ವಿಸರ್ಜನೆಯಾಗಿ ಮತ್ತು ಇಂದ್ರಿಯಗಳು ಸ್ಫುಟವಾಗಿ ತಮ್ಮ ತಮ್ಮ ವ್ಯಾಪಾರಗಳನ್ನು ನಡೆಸುತ್ತಾ ದೇಹವು ಹಗುರವಾಗಿ ಮಧುರಾಮ್ಲ ಧೂಮಗಂಧಗಳಿಲ್ಲದೆ ತೇಗುಬರುತ್ತಾ ಮನಸ್ಸಿಗೆ ಯಾವ ಆತಂಕವೂ ಇಲ್ಲದೆ ಹರ್ಷವೂ, ಅಪಾನವಾತವು ಗುದದ್ವಾರದ ಮೂಲಕ ಹೊರಕ್ಕೆ ಯಾವ ತಡೆಯೂ ಇಲ್ಲದೆ ಹೊರಟು ಬರುತ್ತದೋ, ಅನ್ನವನ್ನು ತಿನ್ನಬೇಕೆಂದು ಆಶೆಯುಂಟಾಗಿ ಆಯಾಸವಿಲ್ಲದೆ ಸುಖಾನುಭವವುಂಟಾಗಿ ಹಸಿವೆಯುಂಟಾಗಿ ಹೊಟ್ಟೆಯು ಕೆಳಕ್ಕೆ ಇಳಿದಿರುವಾಗ ಒಳ್ಳೆಯ ಆಹಾರವನ್ನು ಭೋಜನಮಾಡಲು ಯೋಗ್ಯವಾದ ಕಾಲವೆಂದು ತಿಳಿಯಬೇಕು. ಇದು ವೈದ್ಯರಿಗೆ ಸಮ್ಮತವಾದ ಭೋಜನಕಾಲವು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರಾನ್ತರ್ಗತ ತನ್ತ್ರಭೂಷಣವಿಭಾಗೇ ಸ್ವಸ್ಥವೃತ್ತನಾಮಕ ಚತುಃಷಷ್ಟಿತಮಾಧ್ಯಾಯಸ್ಯ ಶ್ರೀಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ

ಪಞ್ಚಷಷ್ಠಿತಮೋऽಧ್ಯಾಯಃ

ಅಥಾತಸ್ತನ್ತ್ರಯುಕ್ತಿಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶಮಾಡಿದಂತೆಯೇ ತಂತ್ರಯುಕ್ತಿಯನ್ನು ವಿವರಿಸುತ್ತೇವೆ.

ಟಿಪ್ಪಣಿ : ತಾಯತೇಶರೀರಮನೇನೇತಿತನ್ತ್ರಂ ಚಿಕಿತ್ಸಾಶಾಸ್ತ್ರಂ ; ಯುಕ್ತಿಃ- ಯೋಜನೆಯು. ತಂತ್ರ ಯೋಜನೆಯು ೨ ವಿಧ, ಅರ್ಥಯೋಜನೆ, ವಾಕ್ಯಯೋಜನೆ. ವಾಕ್ಯಯೋಜನೆಯೆಂದರೆ ಯೋಗ, ಉದ್ದೇಶ, ನಿರ್ದೇಶಾದಿಗಳು ; ಅರ್ಥ ಯೋಜನೆ ಯೆಂದರೆ, ಅಧಿಕರಣ, ಪದಾರ್ಥಾದಿಗಳು ಎಂದು ತಿಳಿಯಬೇಕು.

ದ್ವಾತ್ರಿಂಶತ್ತನ್ತ್ರಯುಕ್ತಯುಕ್ತಯೋ ಭವನ್ತಿಶಾಸ್ತ್ರೇ । ತದ್ಯಥಾ—ಅಧಿಕರಣಂ ಯೋಗಃ, ಪದಾರ್ಥೋ, ಹೇತ್ವರ್ಥೋ, ಉದ್ದೇಶೋ, ನಿರ್ದೇಶ, ಉಪದೇಶೋऽಪದೇಶಃ ಪ್ರದೇಶೋತಿ ದೇಶೋऽಪವರ್ಜೋ, ವಾಕ್ಯಶೇಷೋऽರ್ಥಾಪತ್ತಿರ್ವಿಪರ್ಯಯಃ, ಪ್ರಸಙ್ಗ, ಏಕಾನ್ತೋऽನೇಕಾನ್ತೋಃ, ಪೂರ್ವಪಕ್ಷೋನಿರ್ಣಯೋऽನುಮತಂ, ವಿಧಾನಮನಾಗತಾವೇಕ್ಷಣಮತಿಕ್ರಾನ್ತಾವೇಕ್ಷಣಂ ಸಂಶಯೋ, ವ್ಯಾಖ್ಯಾನಂ, ಸ್ವಸಂಜ್ಞಾ, ನಿರ್ವಚನಂ, ನಿದರ್ಶನಂ, ನಿಯೋಗೋ, ವಿಕಲ್ಪಃ, ಸಮುಚ್ಚಯ, ಊಹ್ಯಮಿತಿ ||೩||

ಶಾಸ್ತ್ರದಲ್ಲಿ ೩೨ ತಂತ್ರಯುಕ್ತಿಗಳು ಹೇಳಿರುತ್ತದೆ ; ಅವುಗಳಾವುವೆಂದರೆ—ಅಧಿಕರಣ, ಯೋಗ, ಪದಾರ್ಥ, ಹೇತ್ವರ್ಥ, ಉದ್ದೇಶ, ನಿರ್ದೇಶ, ಉಪದೇಶ, ಅಪದೇಶ, ಪ್ರದೇಶ, ಅತಿದೇಶ, ಅಪವರ್ಜ್ಯ, ವಾಕ್ಯಶೇಷ, ಅರ್ಥಾಪತ್ತಿ, ವಿಪರ್ಯಯ, ಪ್ರಸಂಗಿ, ಏಕಾಂತ, ಅನೇಕಾಂತ, ಪೂರ್ವಪಕ್ಷ, ನಿರ್ಣಯ, ಅನುಮತ, ವಿಧಾನ, ಅನಾಗತಾವೇಕ್ಷಣ, ಅತಿಕ್ರಾಂತಾವೇಕ್ಷಣ, ಸಂಶಯ, ವ್ಯಾಖ್ಯಾನ, ಸ್ವಸಂಜ್ಞಾ, ನಿರ್ವಚನ, ನಿದರ್ಶನ, ನಿಯೋಗ, ವಿಕಲ್ಪ, ಸಮುಚ್ಚಯ, ಊಹ್ಯ ಎಂಬುದಾಗಿ.

ಅತ್ರಾಸಾಂ ತನ್ತ್ರಯುಕ್ತೀನಾಂ ಕಿಂ ಪ್ರಯೋಜನಮಿತ್ಯುಚ್ಯತೇ—ವಾಕ್ಯಯೋಜನಮರ್ಥಯೋಜನಂ ಚ ||೪|| ಭವನ್ತಿ ಚಾತ್ರ ಶ್ಲೋಕಾಃ

ಅಸ್ವದಾದಿ ಪ್ರಯುಕ್ತಾನಾಂ ವಾಕ್ಯಾನಾಂ ಪ್ರತಿಷೇಧನಮ್ ।
ಸ್ವವಾಕ್ಯಸಿದ್ಧಿರಪಿ ಚ ಕ್ರಿಯತೇ ತನ್ತ್ರಯುಕ್ತಿತಃ ||೫||
ವ್ಯಕ್ತಾ ನೋಕ್ತಾಶ್ಚ ಯೇ ಹ್ಯರ್ಥಾ ಲೀನಾ ಯೇ ಚಾಪ್ಯ ನಿರ್ಮಲಾಃ ।

ಲೇಶೋಕ್ತಾ ಯೇ ಕ್ವಚಿತ್ತನ್ತ್ರೇ ತೇಷಾಂ ಚಾಪಿ ಪ್ರಸಾಧನಮ್ ||೬||
ಯಥಾಮ್ಬುಜವನಸ್ಯಾರ್ಕಃ ಪ್ರದೀಪೋ ವೇಶ್ಮನೋ ಯಥಾ |
ಪ್ರಬೋಧಸ್ಯ ಪ್ರಕಾಶಾರ್ಥಾಸ್ತಥಾ ತನ್ತ್ರಸ್ಯ ಯುಕ್ತಯಃ ||೭||

ಇಲ್ಲಿ ಈ ತಂತ್ರಯುಕ್ತಿಗಳಿಂದ ಏನು ಪ್ರಯೋಜನವಾಗುತ್ತದೆಂಬುದನ್ನು ಹೇಳುತ್ತೇವೆ-ವಾಕ್ಯಗಳನ್ನು ಕೂಡಿಸುವುದು, ಅರ್ಥಗಳನ್ನು ಕೂಡಿಸುವುದು ಇವೆರಡೇ ತಂತ್ರಯುಕ್ತಿಗಳಿಂದಾಗುವ ಪ್ರಯೋಜನಗಳು ಈ ವಿಷಯದಲ್ಲಿ ಆಧಾರವಾಗಿರುವ ಶ್ಲೋಕಗಳ ಅರ್ಥವೇನೆಂದರೆ—ಎದುರಾಳಿಗಳು ಹೇಳುವ ದೋಷಗಳನ್ನು ತಂತ್ರಯುಕ್ತಿಗಳಿಂದ ಖಂಡನೆ ಮಾಡಿ (ಅಲ್ಲಗಳೆದು) ತಮ್ಮ ಸಿದ್ಧಾಂತ ವಾಕ್ಯಗಳನ್ನು ನಿರ್ಣಯವೆಂಬ ತಂತ್ರಯುಕ್ತಿಯ ಮೂಲಕ ಸ್ಥಿರಪಡಿಸುವುದು ; ಹೇಗೆಂದರೆ "೬ ರಸಗಳಲ್ಲಿ ಪ್ರತಿರಸವೂ ವಿಪಾಕಹೊಂದುತ್ತದೆ" ಎಂಬ ಪರಮತವನ್ನು ಅಪದೇಶವೆಂಬ ತಂತ್ರಯುಕ್ತಿಯಿಂದ ಖಂಡಿಸಿ (ದೂಷಿಸಿ) ರಸಪಾಕವು ಎರಡೇ ವಿಧವಾಗಿ ಆಗುತ್ತದೆ ಎಂಬುದನ್ನು ಸ್ವಸಿದ್ಧಾಂತ (ನಿರ್ಣಯ) ವೆಂಬ ತಂತ್ರಯುಕ್ತಿಯಿಂದ ಸ್ಥಾಪನೆ ಮಾಡುವುದು ; ಹಲವು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳದೆ ಇರುವ ವಿಚಾರಗಳನ್ನೂ ಅಲ್ಲಲ್ಲೇ ಅಡಗಿಕೊಂಡಿರುವ ಮತ್ತು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಿ ವಿಚಾರಗಳನ್ನೂ ದೃಷ್ಟಾಂತವಾಗಿ ಔಷಧಯೋಗಗಳಿಂದ ದೃಢಪಡಿಸುವುದು ಇವು ತಂತ್ರಯುಕ್ತಿಗಳಿಂದ ಸಾಧ್ಯವಾಗುತ್ತವೆ ; ತಾವರೆಹೂವುಗಳು ಅರಳಿ ಸೌಂದರ್ಯವುಂಟಾಗಲು ಸೂರ್ಯನು ಹೇಗೆ ಮುಖ್ಯವೋ, ದೀಪವು ಮನೆಯನ್ನು ಹೇಗೆ ಪ್ರಕಾಶಗೊಳಿಸುತ್ತದೋ ಹಾಗೆಯೇ ತಂತ್ರಯುಕ್ತಿಗಳ ಸಹಾಯದಿಂದ ಯಥಾರ್ಥವಾದ ಶಾಸ್ತ್ರಜ್ಞಾನವುಂಟಾಗುತ್ತದೆ.

ತತ್ರ ಯಮರ್ಥಮಧಿಕೃತ್ಯೋಚ್ಯತೇ ತದಧಿಕರಣಂ, ಯಥಾರಸಂ ದೋಷಂ ವಾ ||೮||

ಈ ೩೨ ತಂತ್ರಯುಕ್ತಿಗಳ ಪೈಕಿ ಯಾವುದೋ ಒಂದು ವಿಚಾರವನ್ನು ಕುರಿತು ಜಿಜ್ಞಾಸೆಮಾಡುತ್ತಿರುವಾಗ ಬೇರೊಂದು ವಿಚಾರವೂ ಪ್ರಸ್ತಾಪಿಸಲ್ಪಟ್ಟರೆ ಆದಕ್ಕೆ 'ಅಧಿಕರಣ' ವೆಂದು ಹೆಸರು ; ಉದಾ:— ರಸ ದೋಷ ಎಂದು ಹೇಳಿದ್ದರಿಂದ ರಸವಿಚಾರವನ್ನು ರಸವಿಜ್ಞಾನದಲ್ಲೂ, ದೋಷದ ವಿಚಾರವನ್ನು ದೋಷವಿಜ್ಞಾನಾಧ್ಯಾಯದಲ್ಲೂ ವಿವರಿಸುತ್ತೇವೆಂದು ತಿಳಿದುಕೊಳ್ಳಬೇಕು.

ಯೇನ ವಾಕ್ಯಂ ಯುಜ್ಯತೇ ಸ ಯೋಗಃ | ಯಥಾತೈಲಂ ಪಿಬೇಚ್ಚಾಮೃತವಲ್ಲಿನಿಮ್ಬಹಿಂಸ್ರಾಭಯಾವೃಕ್ಷಕ ಪಿಪ್ಪಲಿಭಿಃ | ಸಿದ್ಧಂ ಬಲಾಭ್ಯಾಂ ಚ ಸ ದೇವದಾರು ಹಿತಾಯ ನಿತ್ಯಂ ಗಳಗಣ್ಡರೋಗೇ ||೯|| ಸಿದ್ಧಂ ಪಿಬೇದಿತಿ ಪ್ರಥಮಂ ವಕ್ತವ್ಯೇ ತೃತೀಯ ಪಾದೇ ಸಿದ್ಧಂ ಪ್ರಯುಕ್ತಂ ಏವಂ ದೂರಸ್ಥಾನಾಮಪಿ ಪದಾನಾಮೇಕೀಕರಣಂ ಯೋಗಃ ||೧೦||

ಹತ್ತಿರ, ದೂರಗಳಲ್ಲಿರುವ ಪದಗಳನ್ನು ಸರಿಯಾದ ಅರ್ಥಜ್ಞಾನವುಂಟಾಗುವಂತೆ ಜೋಡಿಸುವ ವಿಧಾನಕ್ಕೆ "ಯೋಗವೆಂದು" ಹೆಸರು ; ಹಿಂದು ಮುಂದಾಗಿ ಪ್ರಯೋಗಿಸಿ

ರುವ ಕೃತ, ಕರ್ಮ, ಕ್ರಿಯಾದಿಪದಗಳ ಸಮೂಹವನ್ನು ಕ್ರಮವರಿತು ಜೋಡಿಸುವ ವಿಧಾನಕ್ಕೆ ಯೋಗವೆನ್ನುತ್ತಾರೆ. ಹೇಗೆಂದರೆ ಅಮೃತವಲ್ಲಿ, ಬೇವು, ನೆಲಗುಳ್ಳ, ಅಣಲೆ ಕಾಯಿ, ಕೊಡಶಿಗೆತೊಗಟೆ, ಹಿಪ್ಪಲಿ, ಕಳ್ಳಂಗಡಲೆ, ಬೋಳಂಗಡಲೆ, ದೇವದಾರು ಇವು ಗಳೊಡನೆ ತಯಾರಿಸಿದ ತೈಲವನ್ನು ಗಳಗಂಡರೋಗದಲ್ಲಿ ಕುಡಿಸಬೇಕು. ಶ್ಲೋಕದ ೧ನೆಯ ಪಾದದಲ್ಲಿರುವ "ಪಿಬೇತ್" ಎಂದು ಹೇಳಿರುವುದನ್ನು "ಸಿದ್ಧಪ್ರಯುಕ್ತಮ್" ಎಂದು ದೂರದಲ್ಲಿ ಅಂದರೆ ಶ್ಲೋಕದ ೩ನೆಯ ಪಾದದಲ್ಲಿ ಹೇಳಿರುವ ಪದಗಳೊಡನೆ ಒಟ್ಟು ಕೂಡಿಸುವ ಈ ಕ್ರಮಕ್ಕೆ ಯೋಗವೆಂದು ಹೆಸರು.

ಯೋಽರ್ಥೋಽಭಿಹಿತ ಸೂತ್ರೇ ಪದೇ ವಾ ಸಪದಾರ್ಥ, ಅಪರಿಮಿತಾಶ್ಚ ಪದಾರ್ಥಾಃ ।
ಯಥಾ—ಸ್ನೇಹಸ್ವೇದಾಞ್ಜನೇಷು
ನಿರ್ದಿಷ್ಟೇಷು ದ್ವಯೋಸ್ತ್ರಯಾಣಾಮರ್ಥಾನಾಮುಪಪತ್ತಿರ್ದೃಶ್ಯತೇ, ತತ್ರಯೋಽರ್ಥಃ ಪೂರ್ವಾಪರಯೋಗಸಿದ್ಧೋ ಭವತಿ ಸಗ್ರಹೀತವ್ಯಃ; ಯಥಾ—ವೇದೋತ್ಪತ್ತಿಂ ವ್ಯಾಖ್ಯಾಸ್ಯಾಮ ಇತ್ಯುಕ್ತೇ ಸನ್ದಿಹ್ಯತೇ ಬುದ್ಧಿಃ—ಕತಮಸ್ಯ ವೇದಸ್ಯಾಯಮುತ್ಪತ್ತಿಂ ವಕ್ಷ್ಯತೀತಿ ; ಋಗ್ವೇದಾದಯಸ್ತು ವೇದಾಃ ತತ್ರಪೂರ್ವಾಪರಯೋಗಮುಪಲಭ್ಯ (ವಿದವಿದ್ಲೃ ಇತ್ಯೇತಯೋಶ್ಚ ಧಾತ್ವೋರನೇಕಾರ್ಥಯೋಃ ಪ್ರಯೋಗಃ) ಪಶ್ಚಾತ್ ಪ್ರತಿಪತ್ತಿರ್ಭವತಿ ಆಯುರ್ವೇದೋತ್ಪತ್ತಿಮಯಂ ವಿವಕ್ಷುರಿತ್ಯೇವಂ ಪದಾರ್ಥಃ ॥೧೧॥

ಪದಾರ್ಥವೆಂಬ ತಂತ್ರಯುಕ್ತಿಯನ್ನು ವಿವರಿಸುತ್ತಾರೆ :—ಯಾವುದರಿಂದ ಒಂದು ವಸ್ತುವಿನ ಸೂತ್ರದ ವಿಷಯವು ತಿಳಿಯಲ್ಪಡುತ್ತದೆಯೋ ಅದಕ್ಕೆ ಪದಾರ್ಥವೆನ್ನುತ್ತಾರೆ ; ಪದಾರ್ಥಗಳು ಅಪರಿಮಿತಗಳಾಗಿವೆ. ಹೇಗೆಂದರೆ ಸ್ನೇಹ, ಸ್ವೇದ, ಅಂಜನಗಳನ್ನು ನಿರ್ದೇಶಿಸುವಾಗ ೨ ಅಥವಾ ೩ ಅರ್ಥಗಳು ತೋರುತ್ತವೆ ; ಅವುಗಳಲ್ಲಿ ಯಾವುದು ಪೂರ್ವಾಪರ ವಿಷಯಗಳಿಗೆ ಸರಿಹೋಗುತ್ತದೆಯೋ ಅದನ್ನೇ ಪರಿಗ್ರಹಿಸಬೇಕು ; ಹೇಗೆಂದರೆ—ವೇದೋತ್ಪತ್ತಿಯನ್ನು ವಿವರಿಸುತ್ತೇವೆ ಎಂದರೆ ಯಾವ ವೇದದ ಉತ್ಪತ್ತಿ ಯನ್ನು ವಿವರಿಸುತ್ತೇವೆ ಎಂದರೆ ಯಾವ ವೇದದ ಉತ್ಪತ್ತಿಯನ್ನು ಹೇಳುತ್ತಾರೆಂದು ಮನಸ್ಸಿನಲ್ಲಿ ಸಂದೇಹವುಂಟಾಗುತ್ತದೆ ; ಋಗ್ವೇದಾದಿಗಳು ವೇದಗಳು ಅವುಗಳ ಪೈಕಿ ಪೂರ್ವಾಪರ ಸಂಬಂಧವನ್ನು ಪರಿಶೀಲಿಸಿದ (ವಿದ, ವಿದ್ಲೃಗಳೆಂಬ ಧಾತುಗಳಿಗೆ ಅನೇಕಾರ್ಥ ಪ್ರಯೋಗಗಳಿರುತ್ತದೆ) ಅನಂತರ ನಿಶ್ಚಯಜ್ಞಾನವುಂಟಾಗುತ್ತದೆ; ಇವನು ಆಯು ರ್ವೇದೋತ್ಪತ್ತಿಯನ್ನು ಹೇಳಬಯಸುತ್ತಾನೆಂಬುವುದೇ ಪದಾರ್ಥವೆಂದು ಸಿದ್ಧವಾಗುತ್ತದೆ.

ಯದನ್ಯದುಕ್ತಮನ್ಯಾರ್ಥಸಾಧಕಂ ಭವತಿ ಸ ಹೇತ್ವರ್ಥಃ । ಯಥಾಮೃತ್ಪಿಣ್ಡೋಽದ್ಭಿಃ ಪ್ರಕ್ಲಿದ್ಯತೇ ತಥಾ ಮಾಷ ದುಗ್ಧ ಪ್ರಭೃತಿಭಿರ್ವ್ರಣಃ ಪಪ್ರಕ್ಲಿದ್ಯತ ಇತಿ ॥೧೨॥

ಹೇತ್ವರ್ಥವೆಂದರೆ ಒಂದರ ವಿಚಾರವಾಗಿ ಚರ್ಚಿಸುವಾಗ ಮತ್ತೊಂದರ ವಿಚಾರವು ಸಿದ್ಧವಾದರೆ (ಸ್ಪಷ್ಟವಾಗಿ ತಿಳಿದರೆ) ಹೇಗೆಂದರೆ ಮಣ್ಣಿನಹೆಂಟೆಯನ್ನು ನೀರಿನಲ್ಲಿ ಹಾಕಿದರೆ ಜಿನುಗಿಬಿಡುವಂತೆಯೇ ಉದ್ದು, ಹಾಲು ಮೊದಲಾದುವನ್ನು ಸೇವಿಸಿದರೆ ವ್ರಣವು

ನೀರಾಡುತ್ತದೆ. ಅಂದರೆ ವ್ರಣವು ಕ್ಲೇದಭಾವವನ್ನು ಹೊಂದಿ ಒಳನೀರನ್ನು ಸುರಿಸುತ್ತದೆ; ಇಲ್ಲಿ ಹೊರಗಿನ ಮೃತ್ಪಿಂಡ ದೃಷ್ಟಾಂತದಿಂದ ಶರೀರದೊಳಗಿನ ವ್ರಣವು ಕ್ಲೇದ ಭಾವವನ್ನು ಹೊಂದುತ್ತದೆಂಬ ಅರ್ಥಸಾಧನೆಯಾಗುತ್ತದೆ.

ಸಮಾಸಕಥನಮುದ್ದೇಶಃ । ಯಥಾ—ಶಲ್ಯಮಿತಿ ॥೧೩॥

ಸಂಕ್ಷೇಪವಾಗಿ ಹೇಳುವುದು. ಉದ್ದೇಶವು ಉದಾ. ಶಲ್ಯವೆಂದು ಹೇಳಿದರೆ ಶರೀರ ಮನಸ್ಸುಗಳನ್ನು ಬಾಧಿಸುವ ವಿಚಾರಕ್ಕೆ ಶಲ್ಯವೆಂದು ಸಾಮಾನ್ಯಾರ್ಥವು ಆದರೆ ಶಾರೀರ ಆಗಂತುಭೇದಗಳಿಂದ ಯೋಚಿಸಬೇಕಾದ ವ್ಯಾಧಿಯನ್ನಲ್ಲ.

ವಿಸ್ತರವಚನಂ ನಿರ್ದೇಶಃ ಯಥಾ—ಶಾರೀರಮಾಗನ್ತು ಚೇತಿ ॥೧೪॥

ವಿಸ್ತಾರವಾಗಿ ಭಾಷಣಮಾಡಿದರೆ ನಿರ್ದೇಶವೆನ್ನುತ್ತಾರೆ: ಉದಾ :—ಶಾರೀರ ವ್ರಣ ಮತ್ತು ಮಾನಸಿಕವ್ರಣ ಎಂದು ವ್ರಣದಲ್ಲಿ ಎರಡು ಭೇದಗಳಿವೆ.

ಏವಮಿತ್ಯುಪದೇಶಃ । ಯಥಾ—'ತಥಾ ನ ಜಾಗೃಯಾದ್ರಾತ್ರೌ ದಿವಾಸ್ವಪ್ನಂ ಚ ವರ್ಜಯೇತ್' ಇತಿ ॥೧೫॥

ಹೀಗೆ ಮಾಡಬೇಕು ಎನ್ನುವುದು ಉಪದೇಶವು. ಉದಾ :—ರಾತ್ರಿಯವೇಳೆ ಎಚ್ಚರಗೊಂಡಿರಬಾರದು, ಹಗಲುನಿದ್ರೆಯನ್ನು ತ್ಯಜಿಸಬೇಕು, ಎಂಬುದು ಉಪದೇಶ.

ಟಿಪ್ಪಣಿ :—ಉಪದೇಶ ನಿರ್ದೇಶಗಳಿಗೆ ಭೇದವೇನು ? ರಾತ್ರಿಯವೇಳೆ ಎಚ್ಚರ ಗೊಂಡಿರಬೇಡವೆಂದು ಪ್ರಾಯಿಕವಾಗಿ ಹೇಳುತ್ತಾರೆ, ಕಫಾದಿಗಳಿಂದ ಪೀಡಿತರಾದರೆ ರಾತ್ರಿ ಜಾಗರಣೆಯೂ ಹಿತಕರವಾಗುತ್ತದೆ; ಹಾಗೆಯೇ ದಿವಾಸ್ವಪ್ನವನ್ನು ಮಾಡಬಾರದೆಂದು ಪ್ರಾಯಿಕವಾಗಿ ಹೇಳುತ್ತಾರೆ. ಬೇಸಿಗೆಯಲ್ಲಿಯೂ ತೃಷ್ಣಾದಿಗಳಿಂದ ಪೀಡಿತರಾಗಿರುವಾಗಲೂ ಹಗಲು ನಿದ್ರೆಮಾಡುವುದು ಹಿತಕರವಾದದ್ದು ; ಆದರೆ ನಿಯೋಗವು ನಿಷ್ಕರ್ಷೆಯಾದ ಉಪದೇಶವು, ಅಪ್ರಾಯಿಕವು. ಉದಾ :—ಪಥ್ಯವನ್ನೇ ಭೋಜನ ಮಾಡಬೇಕು ಎಂದು ಹೇಳಿ ಅರೋಚಕವಿದ್ದಾಗ ಜ್ವರಿತನು ಅಪಥ್ಯ ಭೋಜನ ಮಾಡಬೇಕೆಂದು ಹೇಳಿರುವುದು, ಆಗ ಮಾಡುವ ಅಪಥ್ಯಸೇವನವು ಪಥ್ಯವಾಗಿ ಪರಿಣಮಿಸುವುದರಿಂದ ನಿಯೋಗಕ್ಕೆ ವ್ಯಭಿಚಾರವಿಲ್ಲ (ಪ್ರಾಯಿಕತ್ವವಿಲ್ಲ).

ಅನೇನ ಕಾರಣೇನೇತ್ಯಪದೇಶಃ ಯಥೋಪದಿಶ್ಯತೇ ಮಧುರೇಣ ಶ್ಲೇಷ್ಮಾಭಿವರ್ಧತ ಇತಿ ॥೧೬॥

ಈ ಕಾರಣದಿಂದ ಈ ಕಾರ್ಯವುಂಟಾಗುತ್ತೆಂದು ಕಾರಣವನ್ನು ಹೇಳುವುದಕ್ಕೆ ಅಪದೇಶವೆಂದು ಹೆಸರು. ಉದಾಹರಣೆಗಾಗಿ ಮಧುರರಸ ಸೇವನೆಯಿಂದ ಶ್ಲೇಷ್ಮ ವೃದ್ಧಿಯಾಗುತ್ತದೆ ಎಂಬಲ್ಲಿ ಮಧುರತ್ವದಿಂದ ಎಂಬುವುದು ಅಪದೇಶವೆನಿಸುತ್ತದೆ.

ಪ್ರಕೃತಸ್ಯಾತಿಕ್ರಾನ್ತೇನ ಸಾಧನಂ ಪ್ರದೇಶಃ । ಯಥಾ—ದೇವದತ್ತ ಸ್ಯಾನೇನ ಶಲ್ಯ ಮುದ್ಧೃತಂ ತಸ್ಮಾದ್ಯಜ್ಞದತ್ತಸ್ಯಾಪ್ಯಯಮೇವೋದ್ಧರಿಷ್ಯತೀತಿ ॥೧೭॥

ಕಳೆದುಹೋದ ವಿಚಾರದಿಂದ ಈಗಿನ ವಿಚಾರವನ್ನು ಸಾಧಿಸುವ ವಿಧಾನಕ್ಕೆ ಪ್ರದೇಶವೆಂಬ ಸಂಜ್ಞೆಯು. ಹೇಗೆಂದರೆ ಈಗ ನಡೆಯಬೇಕಾದದ್ದು "ಯಜ್ಞದತ್ತನ ಶಲ್ಯೋದ್ಧರಣವು" ಹಿಂದೆ ಯಾವ ಶಸ್ತ್ರದಿಂದ ದೇವದತ್ತನ ಶಲ್ಯೋದ್ಧರಣವಾಗಿರುತ್ತದೋ (ಕಳೆದುಹೋದ ಕಾಲದಲ್ಲಿ ಉಪಯೋಗಿಸಿದ್ದ ಸಾಧನದಿಂದಲೇ) ಈಗಲೂ ಅದೇ ಸಾಧನದಿಂದಲೇ ಶಲ್ಯೋದ್ಧರಣ ಮಾಡಬೇಕು.

ಪ್ರಕೃತಸ್ಯಾನಾಗತಸ್ಯ ಸಾಧನಮತಿದೇಶಃ । ಯಥಾ—ಅನೇನಾಸ್ಯವಾಯುರೂರ್ಧ್ವಮುತ್ತಿಷ್ಠತೇ ತೇನೋದಾವರ್ತಃ ಸ್ಯಾದಿತಿ ॥೧೮॥

ಈಗ ಸಂಭವಿಸಿರುವ ವಿಚಾರದಿಂದ ಮುಂದೆ ಸಂಭವಿಸತಕ್ಕದ್ದನ್ನು ಸಾಧಿಸುವುದಕ್ಕೆ "ಅತಿದೇಶ"ವೆಂಬ ಸಂಜ್ಞೆಯು. ಹೇಗೆಂದರೆ ಈಗ ಈ ಪ್ರಕೃತದ್ರವ್ಯ ಸೇವನೆಯಿಂದ ವಾಯುವು ಊರ್ಧ್ವಮುಖಕ್ಕೆ ನುಗ್ಗುತ್ತದೆ; ಹೀಗೆ ನುಗ್ಗುವುದರಿಂದ ಉದಾವರ್ತವುಂಟಾಗುವುದು. ಈ ರೀತಿಯಾಗಿ ಉದಾವರ್ತಸಾಧನೆ ಮಾಡುವ ವಿಚಾರಕ್ಕೆ "ಅತಿದೇಶ"ವೆನ್ನುತ್ತಾರೆ.

ಅಭಿವ್ಯಾಪ್ಯಕರ್ಷಣಮಪಯೋಗಃ । ಯಥಾ—ಅಸ್ವೇದ್ಯಾವಿಷೋಪಸೃಷ್ಟಾ ಅನ್ಯತ್ರ ಕೀಟವಿಷಾದಿತಿ ॥೧೯॥

ಒಂದು ವಸ್ತುವನ್ನು, ಗುಣಕ್ರಿಯೆಗಳಿಂದ ಬೇರ್ಪಡಿಸುವುದಕ್ಕೆ "ಅಪಯೋಗ" ವೆಂಬ ಸಂಜ್ಞೆಯು. ಹೇಗೆಂದರೆ ಉತ್ಸರ್ಗರೂಪದಿಂದ ವಿಷೋಪಸೃಷ್ಟರನ್ನು ಸ್ವೇದಮಾಡಿಸಬಾರದೆಂದು ತಿಳಿಸಿ ಅಪವಾದ ರೂಪದಿಂದ ಕೀಟವಿಷ ಪೀಡಿತರನ್ನು ಬಿಟ್ಟುಬಿಡಬೇಕೆನ್ನುತ್ತಾರೆ.

ಯೇನ ಪದೇನಾನುಕ್ತೇನ ವಾಕ್ಯಂ ಸಮಾಪ್ಯೇತ ಸ ವಾಕ್ಯಶೇಷಃ । ಯಥಾ—ಶಿರಃಪಾಣಿಪಾದ ಪಾರ್ಶ್ವಪೃಷ್ಠೋದರೋರಸಾಮಿತ್ಯುಕ್ತೇ ಪುರುಷಗ್ರಹಣಂ ವಿನಾಪಿ ಗಮ್ಯತೇ ಪುರುಷ ಏವೋಕ್ತ ಇತಿ ॥೨೦॥

ಪ್ರಯೋಗಮಾಡದಿರುವ ಒಂದು ಪದದಿಂದ ಒಂದುವಾಕ್ಯವು ಪೂರ್ಣವಾಗಬೇಕಾಗಿರುವುದಾದರೆ ಅದಕ್ಕೆ ವಾಕ್ಯಶೇಷ ವೆಂಬ ಸಂಜ್ಞೆಯು. ಹೇಗೆಂದರೆ ತಲೆ, ಕೈಕಾಲುಗಳು, ಪಾರ್ಶ್ವ, ಬೆನ್ನು, ಹೊಟ್ಟೆ, ಎದೆ ಎಂದು "ಪುರುಷ"ವೆಂಬ ಪದದ ಪ್ರಯೋಗವಿಲ್ಲದೆ ಇದ್ದರೂ ಪುರುಷಸಂಬಂಧಿ ಅವಯುವಗಳೆಂದೇ ಅರ್ಥವಾಗುತ್ತದೆ. ಇದಕ್ಕೆ ವಾಕ್ಯಶೇಷ ವೆಂಬ ಸಂಕೇತವು.

ಯದಕೀರ್ತಿತಮರ್ಥಾದಾಪದ್ಯತೇ ಸಾರ್ಥಾಪತ್ತಿಃ । ಯಥೌದನಂ ಭೋಕ್ಷ್ಯೇ ಇತ್ಯುಕ್ತೇಽರ್ಥಾಪನ್ನಂ ಭವತಿ ನಾಯಂ ಪಿಪಾಸುರ್ಯವಾಗೂಮಿತಿ ॥೨೧॥

ಹೇಳದಿದ್ದರೂ ಸಂದರ್ಭವಶದಿಂದ ತಿಳಿದುಬರುವ ವಿಚಾರಕ್ಕೆ ಅರ್ಥಾಪತ್ತಿಯೆಂಬ ಸಂಜ್ಞೆಯು. ಹೇಗೆಂದರೆ—ಅನ್ನವನ್ನು ತಿನ್ನುತ್ತೇನೆಂದು ಹೇಳಿದರೆ ಬಾಯಾರಿಕೆಯಿಲ್ಲ ಗಂಜಿಯನ್ನು ಕುಡಿಯುವುದಿಲ್ಲ ಎಂಬರ್ಥವು ಸ್ವತಃ ಗೊತ್ತಾಗುತ್ತದೆ.

ಯದತ್ರಾಭಿಹಿತಂ ತಸ್ಯ ಪ್ರಾತಿಲೋಮ್ಯಂ ವಿಪರ್ಯಯಃ। ಯಥಾ ಕೃಶಾಲ್ಪಪ್ರಾಣ ಭೀರವೋ ದುಶ್ಚಿಕಿತ್ಸ್ಯಾ ಇತ್ಯುಕ್ತೇ ವಿಪರೀತಂ ಗೃಹ್ಯತೇ ದೃಢಾದಯಃ ಸುಚಿಕಿತ್ಸ್ಯಾಃ ಇತಿ ||೨೨||

ಉಕ್ತವಿಚಾರಕ್ಕೆ ಪ್ರತಿಯಾಗಿ ಹೇಳುವುದಕ್ಕೆ ವಿಪರ್ಯಯವೆಂಬ ಸಂಜ್ಞೆ. ಹೇಗೆಂದರೆ—"ಕೃಶ, ದುರ್ಬಲ, ಭೀರುಗಳಿಗೆ ಚಿಕಿತ್ಸೆಮಾಡುವುದು ಬಲುಕಷ್ಟ ಎಂದು ಹೇಳಿದರೆ ಅದಕ್ಕೆ ವಿರುದ್ಧವಾಗಿ ದೃಢದೇಹ, ಬಲಶಾಲಿ, ಧೈರ್ಯವಂತರಿಗೆ ಚಿಕಿತ್ಸೆಮಾಡುವುದು ಅತಿಸುಲಭ ಎಂದು ಸ್ವತಃ ಅರ್ಥವಾಗುತ್ತದೆ.

ಪ್ರಕರಣಾನ್ತರೇಣ ಸಮಾಪನಂ ಪ್ರಸಙ್ಗಃ। ಯಥಾ—ಪ್ರಕರಣಾನ್ತರಿತೋಯೋಽರ್ಥೋಽಸಕೃದುಕ್ತಃ ಸಮಾಪ್ಯತೇ ಸಪ್ರಸಙ್ಗಃ। ಯಥಾ—ಮಹಾಭೂತ ಶರೀರ ಸಮವಾಯಃ ಪುರುಷಸ್ತಸ್ಮಿನ್ ಕ್ರಿಯಾ ಸೋಽಧಿಷ್ಠಾನಮಿತಿ ವೇದೋತ್ಪತ್ತಾವಭಿದಾಯ ಭೂತ ಚಿನ್ತಾಯಾಂ ಪುನುರುಕ್ತಂ ಯತೋಽಭಿಹಿತಂ ಪಞ್ಚಮಹಾಭೂತ ಶರೀರಿಸಮವಾಯಃ ಪುರುಷ ಇತಿ ಸ ಖಲ್ವೇಷ ಕರ್ಮಪುರುಷಃ ಚಿಕಿತ್ಸಾಯಾಮಧಿಕೃತ ಇತಿ ||೨೩||

ಪ್ರಸ್ತಾಪಿಸುತ್ತಿರುವ ವಿಚಾರವನ್ನೇ ಪುನಃ ಹೇಳಿ ಮುಗಿಸಿಬಿಡುವುದಕ್ಕೆ ಪ್ರಸಂಗವೆಂದು ಸಂಜ್ಞೆ. ಹೇಗೆಂದರೆ—ಮಹಾಭೂತ ಶರೀರ ಮತ್ತು ಜೀವಾತ್ಮರ ಸಂಯೋಗಕ್ಕೆ ಪುರುಷನೆಂದೂ, ಅವನಿಗೇ ಚಿಕಿತ್ಸೆಯೂ, ಅವನೇ ಅಧಿಷ್ಠಾನ (ಚಿಕಿತ್ಸೆಗೆ ಯೋಗ್ಯವಾದ ವಸ್ತುವು) ಎಂದೂ ಆಯುರ್ವೇದಾವತರಣ ಪ್ರಸಂಗದಲ್ಲಿ ಹೇಳಿ ಭೂತಚಿಂತಾ ಶಾರೀರವನ್ನು ಪ್ರಸ್ತಾಪಿಸುವ ಸಂದರ್ಭದಲ್ಲೂ ಪಂಚಮಹಾಭೂತಾತ್ಮಕ ಜೀವರುಗಳ ಸಂಯೋಗವೇ ಪುರುಷನೆಂದೂ ಈ ಕರ್ಮಪುರುಷನೇ ಚಿಕಿತ್ಸೆಗೆ ಒಳಪಟ್ಟವನು ಎಂದೂ ಪುನಃ ಹೇಳಿ ಪ್ರಕರಣವನ್ನು ಮುಗಿಸಿರುತ್ತೆಯಾಗಿ ಇದಕ್ಕೆ ಪ್ರಸಂಗವೆಂದು ಹೇಳುತ್ತಾರೆ. ಕೆಲವರು ಪ್ರಸ್ತಾಪದಲ್ಲಿ ಹೇಳಿದ್ದನ್ನೇ ಪುನಃ ಹೇಳಿ ಮುಗಿಸುವುದಕ್ಕೆ ಪ್ರಸಂಗವೆಂದು ಹೇಳಿ ನವಜ್ವರದಲ್ಲಿ ಸ್ನೇಹ ವಿರೇಚನಗಳನ್ನು ನಿಷೇಧಿಸಿರುತ್ತೆ ; ಪುನಃ ಜ್ವರಚಿಕಿತ್ಸೆಯಲ್ಲಿ ತರುಣ ಜ್ವರದಲ್ಲಿ ಸ್ನೇಹ ಶೋಧನೆಗಳನ್ನು ನಿಷೇಧಿಸುತ್ತಾರೆ.

ಯದವಧಾರಣೇನೋಚ್ಯತೇ ಸ ಏಕಾನ್ತಃ। ಯಥಾ—ತ್ರಿವೃದ್ವಿರೇಚಯಂತಿ, ಮದನಫಲಂ ವಾಮಯತೀತಿ ||೨೪||

ಅನುಮಾನವಿಲ್ಲದೆ ಸ್ಪಷ್ಟವಾಗಿ ನಿರ್ಧರಿಸಿ ಹೇಳಿದರೆ "ಏಕಾಂತವೆಂಬ ಸಂಜ್ಞೆ." ಹೇಗೆಂದರೆ ತಿಗಡೆಯು ವಿರೇಚನಕಾರಿಯು, ಮಗ್ಗಾರೆಕಾಯಿಯು, ವಮನಕಾರಿಯು ಎಂದು.

ಕ್ವಚಿತ್ತಥಾ ಕ್ವಚಿದನ್ಯಥೇತಿ ಯಃ ಸೋಽನೇಕಾರ್ಥಃ। ಯಥಾ—ಕೇಚಿದಾಚಾರ್ಯಾ ಬ್ರುವತೇ ದ್ರವ್ಯಂ ಪ್ರಧಾನಂ, ಕೇಚಿದ್ರಸಂ, ಕೇಚಿದ್ವೀರ್ಯಂ ಕೇಚಿದ್ವಿಪಾಕಮಿತಿ ||೨೫||

ಕೆಲವರು ಹೀಗೆಂದೂ ಮತ್ತೆ ಕೆಲವರು ಬೇರೆ ವಿಧವೆಂದೂ ಹೇಳಿದರೆ "ಅನೇಕಾರ್ಥ"ವೆನ್ನುತ್ತಾರೆ. ಹೇಗೆಂದರೆ ಕೆಲವು ವೈದ್ಯರು ದ್ರವ್ಯವೇ ಪ್ರಧಾನವೆಂದೂ ಕೆಲವರು ವೀರ್ಯವು ಪ್ರಧಾನವೆಂದೂ ಮತ್ತೆ ಕೆಲವರು ವಿಪಾಕವು ಪ್ರಧಾನವೆಂದೂ ಹೇಳುತ್ತಾರೆ. ಇದಕ್ಕೆ ಅನೇಕಾರ್ಥವೆನ್ನುತ್ತಾರೆ.

ಅಕ್ಷೇಪಪೂರ್ವಕಃ ಪ್ರಶ್ನಃ ಪೂರ್ವಪಕ್ಷಃ । ಯಥಾ—ಕಥಂ ವಾತ ನಿಮಿತ್ತಾಶ್ಚತ್ವಾರಃ ಪ್ರಮೇಹಾ ಅಸಾಧ್ಯಾ ಭವನ್ತೀತಿ ॥೨೬॥

ಅಕ್ಷೇಪಣೆಯೊಡನೆ ಪ್ರಶ್ನೆ ಮಾಡುವುದಕ್ಕೆ ಪೂರ್ವಪಕ್ಷವೆನ್ನುತ್ತಾರೆ. ಹೇಗೆಂದರೆ ವಾತ ಸಂಬಂಧವಾದ ೪ ವಿಧ ಪ್ರಮೇಹಗಳೂ ಹೇಗೆ ಅಸಾಧ್ಯಗಳಾಗುತ್ತವೆ ? ಎಂದು.

ತಸ್ಯೋತ್ತರಂ ನಿರ್ಣಯಃ । ಯಥಾ—ಶರೀರಂ ಪ್ರಪೀಡ್ಯ ಪಶ್ಚಾದಧೋಗತ್ವಾ ವಸಾಮೇದೋಮಜ್ಜಾನುವಿದ್ಧಂ ಮೂತ್ರಂ ವಿಸೃಜತಿ ವಾತ ಏವಮಸಾಧ್ಯಾವಾತಜಾ ಇತಿ ॥೨೭॥ ಯಥಾಚೋಕ್ತಮ್ ಕೃತ್ಸ್ನಂ ಶರೀರಂ ನಿಷ್ಪೀಡ್ಯ ಮೇದೋಮಜ್ಜಾವಸಾಯುತಃ । ಅಧಃ ಪ್ರಕುಪ್ಯತೇ ವಾಯುಸ್ತೇನಾಸಾಧ್ಯಾಸು ವಾತಜಾಃ ॥೨೮॥

ಪೂರ್ವಪಕ್ಷಕ್ಕೆ ಹೇಳುವ ಉತ್ತರಕ್ಕೆ ನಿರ್ಣಯವೆಂಬ ಸಂಜ್ಞೆಯು. ಪ್ರಕುಪಿತ ವಾತವು ಶರೀರವನ್ನು ಬಾಧಿಸಿ ಕೆಳಗಡೆಗೆ ನುಗ್ಗಿ ವಸೆ, ಮೇದಸ್ಸು, ಮತ್ತು ಮಜ್ಜೆಗಳಿಂದ ಮಿಶ್ರವಾದ ಮೂತ್ರವನ್ನು ವಿಸರ್ಜಿಸುವ ಕಾರಣ ವಾತ ಪ್ರಮೇಹಗಳು ಅಸಾಧ್ಯಗಳೆಂದು ತಿಳಿಯಬೇಕು ; ಶಾಸ್ತ್ರದಲ್ಲೂ ಹೇಳಿರುವುದೇನೆಂದರೆ ಪ್ರಕುಪಿತ ವಾಯುವು ಸಕಲ ದೇಹವನ್ನೂ ಪೀಡಿಸಿ ಮೇದಸ್ಸು ಮಜ್ಜೆ, ವಸೆಗಳೊಡನೆ ಸೇರಿ ಕೆಳಗಡೆಗೆ ನುಗ್ಗುವ ಕಾರಣ ವಾತಜ ಪ್ರಮೇಹಗಳು ಅಸಾಧ್ಯಗಳೆಂದು ತಿಳಿಯಬೇಕು.

ಪರಮತಮಪ್ರತಿಷಿದ್ಧಮನುಮತಮ್ । ಯಥಾ—ಕಶ್ಚಿದ್ಬ್ರೂಯಾತ್ಸಪ್ತರಸಾಇತಿ, ತಚ್ಚಾಪ್ರತಿಷಾದ್ಯಾನುಮನ್ಯತೇ ಕಥಂಚಿದಿತಿ ॥೨೯॥

ಪರಮತವನ್ನು ನಿಷೇಧಿಸದಿದ್ದರೆ ನಾವು ಒಪ್ಪಿದಂತೆಯೇ ಆಗುತ್ತದೆ ಇದಕ್ಕೆ "ಅನುಮತ"ವೆಂಬ ಸಂಜ್ಞೆಯು ; ಹೇಗೆಂದರೆ ಒಬ್ಬರು ವೈದ್ಯರು ೭ ರಸಗಳಿವೆ ಎಂದು ಹೇಳುತ್ತಾರೆ ; ಅದನ್ನು ಆಕ್ಷೇಪಣೆ ಮಾಡದೆ ಒಪ್ಪಿಕೊಳ್ಳುವುದಕ್ಕೆ ಅನುಮತವೆನ್ನುತ್ತಾರೆ.

ಪ್ರಕರಣಾನುಪೂರ್ವ್ಯಾಭಿಹಿತಂ ವಿಧಾನಮ್ । ಯಥಾ—ಸಕ್ಥಿಮರ್ಮಾಣ್ಯೇಕಾದಶ ಪ್ರಕರಣಾನುಪೂರ್ವ್ಯಾಭಿಹಿತಾನಿ ॥೩೦॥

ಯಥಾಕ್ರಮವಾಗಿ ವಿವರಿಸಿದರೆ "ವಿಧಾನ"ವೆಂಬ ಸಂಜ್ಞೆಯು. ಹೇಗೆಂದರೆ ಕ್ರಮಪ್ರಾಪ್ತವಾಗಿ ಬಂದ ಸಕ್ಥಿ ಮರ್ಮಗಳು ೧೧ ಎಂಬುದಾಗಿ ವಿವರಿಸಲಾಗಿರುತ್ತೆ.

ಏವಂ ವಕ್ಷ್ಯತೀತ್ಯನಾಗತಾವೇಕ್ಷಣಮ್ । ಯಥಾ—ಶ್ಲೋಕ ಸ್ಥಾನೇ ಬ್ರೂಯಾತ್ ಚಿಕಿತ್ಸಿತೇಷು ವಕ್ಷ್ಯಾಮೀತಿ ॥೩೧॥

ಮುಂದಿನ ಸಂದರ್ಭದಲ್ಲಿ (ಭವಿಷ್ಯ ಕಾಲದಲ್ಲಿ) ಉಂಟಾಗುವ ವಿಚಾರಗಳನ್ನು ವರ್ತಮಾನ ಕಾಲದಲ್ಲೇ ಕಾರ್ಯಾರ್ಥಗಳಿಂದ ತಿಳಿದು ಹೇಳಿದರೆ "ಅನಾಗತ ವೇಕ್ಷಣ"

ವೆಂಬ ತಂತ್ರಯುಕ್ತಿ ಸಂಜ್ಞೆಯು. ಹೇಗೆಂದರೆ ಸೂತ್ರಸ್ಥಾನದಲ್ಲಿ, ಚಿಕಿತ್ಸಾಸ್ಥಾನದಲ್ಲಿ, ಈ ವಿಚಾರವನ್ನು ಪ್ರಸ್ತಾಪಿಸುತ್ತೇವೆ, ಎಂದು ಹೇಳುವುದು ಅನಾಗತಾವೇಕ್ಷಣವು.

ಯದುಕ್ತಮಿತ್ಯತಿಕ್ರಾನ್ತಾವೇಕ್ಷಣಮ್ । ಯಥಾ—ಚಿಕಿತ್ಸಿತೇಷು ಬ್ರೂಯಾತ್ ಶ್ಲೋಕ ಸ್ಥಾನೇ ಯದೀರಿತಮಿತಿ ||೩೨||

ಹಿಂದೆ ಕಳೆದುಹೋದ ವಿಚಾರವನ್ನು ಪುನಃ ಜ್ಞಾಪಕಕ್ಕೆ ತರುವುದಕ್ಕೆ "ಅತಿಕ್ರಾಂತ ವೇಕ್ಷಣ"ವೆಂಬ ಸಂಜ್ಞೆಯು ; ಹೇಗೆಂದರೆ ಚಿಕಿತ್ಸಾ ಸ್ಥಾನದಲ್ಲಿ "ಸೂತ್ರಸ್ಥಾನದಲ್ಲಿ ಹೇಳಿರುವುದನ್ನು ಗಮನಿಸಿ" ಎಂದು ಹೇಳುವುದಕ್ಕೆ ಅತಿಕ್ರಾಂತ ವೇಕ್ಷಣವೆಂಬ ಸಂಜ್ಞೆಯು.

ಉಭಯಹೇತುದರ್ಶನಂ ಸಂಶಯಃ । ಯಥಾ—ತಲಹೃದಯಾಭಿಘಾತಃ ಪ್ರಾಣಹರಃ ಪಾಣಿಪಾದಚ್ಛೇದನಮಪ್ರಾಣಹರಮಿತಿ ||೩೩||

ಪರಸ್ಪರ ವಿರುದ್ಧಗಳಾದ ಎರಡು ಕಾರ್ಯಗಳ ಹೇತುಗಳನ್ನು ಗೊತ್ತುಮಾಡುವುದು ಸಂಶಯವೆಂದು ಸಂಜ್ಞೆ. ಹೇಗೆಂದರೆ—ತಲಹೃದಯ ಮರ್ಮಕ್ಕೆ ಪೆಟ್ಟಾದರೆ ಮರಣವುಂಟಾಗುತ್ತದೆ ಕೈಕಾಲುಗಳನ್ನು ಭೇದಿಸಿದರೆ (ಪ್ರಾಣಹರಣ) ಮರಣವಾಗುವುದಿಲ್ಲವೆಂದು ಹೇಳಿರುತ್ತದೆ ; ಇಲ್ಲಿ ತಲಹೃದಯಾಭಿಘಾತದಿಂದ ಮರಣವೋ ಪಾಣಿಪಾದಚ್ಛೇದದಿಂದ ಬದುಕುವುದೋ ಎಂದು ಸಂಶಯವುಂಟಾಗುತ್ತದೆ.

ತನ್ತ್ರೇತಿಶಯೋಪವರ್ಣನಂ ವ್ಯಾಖ್ಯಾನಮ್ । ಯಥೇಹ ಪಞ್ಚವಿಂಶತಿಕಃ ಪುರುಷೋ ವ್ಯಾಖ್ಯಾಯತೇ, ಅನ್ಯೇಷ್ವಾಯುರ್ವೇದ ತನ್ತ್ರೇಷು ಭೂತಾದಿ ಪ್ರಕೃತ್ಯಾರಬ್ಧ ಚಿನ್ತಾ ||೩೪||

ಶಾಸ್ತ್ರದಲ್ಲಿ ವಿಶೇಷ ವಿಷಯಗಳನ್ನು ವಿವರಿಸುವುದಕ್ಕೆ ವ್ಯಾಖ್ಯಾನವೆಂದು ಸಂಜ್ಞೆ ; ಹೇಗೆಂದರೆ—ಈ ಶಾಸ್ತ್ರದಲ್ಲಿ ಅವ್ಯಕ್ತ ಮೊದಲಾದ ೮ ಪ್ರಕೃತಿಗಳೂ ೧೬ ವಿಕಾರಗಳೂ ಸೇರಿ ೨೪ ತತ್ವಗಳೆಂದೂ, ಕ್ಷೇತ್ರಜ್ಞನೇ ೨೫ ನೆಯ ತತ್ವವೆಂದೂ ವಿವರಿಸಲಾಗಿರುತ್ತದೆ ; ಇತರ ಆಯುರ್ವೇದ ತಂತ್ರಗಳಲ್ಲಿ ಭೂತಾದಿಗಳನ್ನಾರಂಭಿಸಿ (ತಾಮಸಾಹಂಕಾರವನ್ನಾರಂಭಿಸಿ) ಸೃಷ್ಟಿಯು ವಿವರಿಸಲ್ಪಡುತ್ತದೆ.

ಅನ್ಯಶಾಸ್ತ್ರಾಸಾಮಾನ್ಯಾ ಸ್ವಸಂಜ್ಞಾ । ಯಥಾ—ಮಿಥುನಮಿತಿ ಮಧುಸರ್ಪಿಷೋರ್ಗ್ರಹಣಂ ; ವಾಲೋಕೇ ಪ್ರಥಿತಮುದಾಹರಣಮ್ ||೩೫||

ವ್ಯಾಕರಣಾದಿ ಆಯುರ್ವೇದ ಭಿನ್ನಶಾಸ್ತ್ರಗಳಲ್ಲಿ ಪ್ರಯೋಗಿಸಲ್ಪಡದ, ಕೇವಲ ಆಯುರ್ವೇದಶಾಸ್ತ್ರದಲ್ಲೇ ಪ್ರಯೋಗಿಸಲ್ಪಡುವ ಪಾರಿಭಾಷಿಕ ಪದಗಳಿಗೆ "ಸ್ವಸಂಜ್ಞಾ" ಎಂದು ಹೆಸರು. ಉದಾಹರಣೆ—ಮಿಥುನವೆಂದರೆ ಮಧುಸರ್ಪಿಗಳೆಂದು ತಿಳಿಯಬೇಕು. ಲೋಕದಲ್ಲಾದರೂ ಸ್ತ್ರೀಪುರುಷ ಯುಗ್ಮವೆಂದರ್ಥವು.

ನಿಶ್ಚಿತಂ ವಚನಂ ನಿರ್ವಚನಮ್ । ಯಥಾ—ಆಯುರ್ವಿದ್ಯತೇಽಸ್ಮಿನ್ ಅನೇನ ವಾ ಆಯುರ್ವಿನ್ದತೀತ್ಯಾಯುರ್ವೇದಃ ||೩೬||

ಯಥಾರ್ಥ ವಾಕ್ಯಕ್ಕೆ ನಿರ್ವಚನವೆಂದು ಸಂಜ್ಞೆ ; ಹೇಗೆಂದರೆ—ಈ ಶಾಸ್ತ್ರ ದಲ್ಲಿ ಆಯುಸ್ಸುಂಟಾಗುವ ವಿಚಾರಗಳುಂಟು ಅಥವಾ ಇದರಲ್ಲಿ ಹೇಳಿರುವಂತೆ ನಡೆದು ಕೊಂಡರೆ ಆಯುಸ್ಸನ್ನು ಪಡೆಯುತ್ತಾನೆ, ಆದಕಾರಣ ಆಯುರ್ವೇದವೆಂಬ ಸಂಜ್ಞೆ ಯುಂಟಾಯಿತು.

(ದೃಷ್ಟಾನ್ತೇನದರ್ಶನಂ ನಿದರ್ಶನಮಿತಿ ಪಾಠಾನ್ತರಮ್) ದೃಷ್ಟಾನ್ತವ್ಯಕ್ತಿರ್ನಿದರ್ಶನಮ್। ಯಥಾ—ಅಗ್ನಿರ್ವಾಯುನಾ ಸಹಿತಃ ಕುಕ್ಷೇವೃದ್ಧಿಂ ಗಚ್ಛತಿ ತಥಾ ವಾತಪಿತ್ತ ಕಫ ದುಷ್ಟೋ ವ್ರಣ ಇತಿ ॥೩೭॥

ದೃಷ್ಟಾಂತದಿಂದ ಉಕ್ತವಿಚಾರವು ಸ್ಪಷ್ಟಪಡಿಸಲ್ಪಡುತ್ತದೆಯಾದರೆ ನಿದರ್ಶನ ವೆಂಬ ಸಂಜ್ಞೆಯು ; ಹೇಗೆಂದರೆ-ಅಗ್ನಿಯು ವಾಯುವಿನೊಡನೆ ಒಣಗಿದ ಹುಲ್ಲುಗಳ ಪೊದೆಗೆ ತಗುಲಿದರೆ ವೃದ್ಧಿಯಾಗುವಂತೆಯೇ ಪ್ರಕುಪಿತಗಳಾದ ವಾತ, ಪಿತ್ತ ಕಫಗಳಿಂದ ವ್ರಣವು ವೃದ್ಧಿಯಾಗುತ್ತದೆಂದು ತಿಳಿಯಬೇಕು.

ಇದಮೇವ ಕರ್ತವ್ಯಮಿತಿ ನಿಯೋಗಃ। ಯಥಾ ಪಥ್ಯಮೇವ ಭೋಕ್ತವ್ಯಮಿತಿ ॥೩೮॥

ಇದನ್ನೇ ಮಾಡತಕ್ಕದ್ದೆಂದು ನಿರ್ಧರಿಸುವುದಕ್ಕೆ ನಿಯೋಗವೆಂಬ ಸಂಜ್ಞೆಯು. ಹೇಗೆಂದರೆ—ಪಥ್ಯಾಹಾರವನ್ನೇ ಭೋಜನ ಮಾಡಬೇಕು ; ಕೆಲವುವೇಳೆ ಈ ನಿಯೋಗವು ಬದಲಾಗುವುದುಂಟು. ಹೇಗೆಂದರೆ ಜ್ವರಿತನಿಗೆ ಅರೋಚಕವಿದ್ದರೆ ಅಪಥ್ಯವನ್ನಾದರೂ ಕೊಟ್ಟು ಭೋಜನ ಮಾಡಿಸಬೇಕು ; ಭೋಜನ ಕಾಲದಲ್ಲಿ ಊಟ ಮಾಡದಿದ್ದರೆ ಕ್ಷೀಣಿ ಸುತ್ತಾನೆ ಇಲ್ಲವೇ ಸತ್ತುಹೋಗುತ್ತಾನೆ.

ಇದಂ ಚೇದಂ ಚೇತಿ ಸಮುಚ್ಚಯಃ। ಯಥಾ, ಮಾಂಸವರ್ಗೇ ಏಣಹರಿಣ ಲಾವ ತಿತ್ತಿರಿ ಶಾರಙ್ಗಾಃ ಪ್ರಧಾನಮಿತಿ ॥೩೯॥

ಪ್ರತಿಯೊಂದನ್ನೂ ಒಟ್ಟುಗೂಡಿಸುವುದಕ್ಕೆ ಸಮುಚ್ಚಯವೆಂಬ ಸಂಜ್ಞೆಯು ಹೇಗೆಂದರೆ—ಮಾಂಸವರ್ಗದಲ್ಲಿ ಚಿಂಕೆಯೂ, ಕರಿಹುಲ್ಲೆಯೂ, ಲಾವನಹಕ್ಕಿಯೂ, ವೇದಪಕ್ಷಿಯೂ, ಕೋಡುಳ್ಳಸಾಗರವೂ, ಮುಖ್ಯವಾದವುಗಳು.

ನೇದಂ ವೇತಿ ವಿಕಲ್ಪಃ। ಯಥಾ—ರಸೌದನಃ ಸಘೃತಾಯವಾಗೂರ್ವಾ ॥೪೦॥

ಪ್ರತಿಯೊಂದಕ್ಕೂ ವಿಕಲ್ಪ ಭೇದಕವಾದ 'ವಾ' ಎಂಬ ಪದವನ್ನು ಹೇಳದಿದ್ದರೂ ಕಡೆಯ ಶಬ್ದದ ಮುಂದೆ ಹೇಳಿರುವ ವಾ ಶಬ್ದದಿಂದಲೇ ಎಲ್ಲವುಗಳಿಗೂ ವಿಕಲ್ಪವನ್ನೂ ಹೇಳಿದಂತೆಯೇ ಆಗುತ್ತದೆ ; ಹೇಗೆಂದರೆ-ರಸೌದನವನ್ನಾಗಲೀ ತುಪ್ಪ ಮಿಶ್ರಮಾಡಿದ ಯವಾಗೂವನ್ನಾಗಲೀ ಪಾನಮಾಡಬೇಕು.

ಯದನಿರ್ದಿಷ್ಟಂ ಬುದ್ಧ್ಯಾವಗಮ್ಯತೇ ತದೂಹ್ಯಮ್। ಯಥಾ, ಅಭಿಹಿತಮನ್ನಪಾನ ವಿಧೌ ಚತುರ್ವಿಧಮನ್ನಪಾನಮುಪದಿಶ್ಯತೇ ಭಕ್ಷ್ಯಂ, ಭೋಜ್ಯಂ, ಲೇಹ್ಯಂ, ಪೇಯ ಮಿತಿ ; ಏವಂ ಚತುರ್ವಿಧೇ ವಕ್ತವ್ಯೇ ದ್ವಿವಿಧಮಭಿಹಿತಂ ತತ್ರೋಹ್ಯಮಿತಿ। ಅನ್ನ ಪಾನೇ ವಿಶಿಷ್ಟೇ ದ್ವಯೋರ್ಗ್ರಹಣೇಕೃತೇ ಚತುರ್ಣಾಮಪಿ ಗ್ರಹಣಂ ಭವತೀತಿ,

ಚತುರ್ವಿಧಶ್ಚಾಹಾರಃ ಪ್ರಾಯೇಣ ದ್ವಿವಿಧಃ ಪ್ರಸಿದ್ಧ ಇತಿ । ಕಿಞ್ಚಾನ್ಯತ್, ಅನ್ನೇನ ಭಕ್ಷ್ಯಮಾಪರುದ್ಧಮ್, ಅನ್ನಸಾಧರ್ಮ್ಯಾತ್ ; ಪೇಯೇನ ಲೇಹ್ಯಮ್, ದ್ರವಸಾಧರ್ಮ್ಯಾತ್ ||೪೧||

ಸಾಕ್ಷಾತ್ತಾಗಿ ಇಂಥಾದ್ದೆಂದು ನಿರ್ದೇಶ ಮಾಡಿದ್ದರೂ ಬುದ್ಧಿಬಲದಿಂದ ಯಾವುದು ನಿರ್ಧರಿಸಲ್ಪಡುತ್ತದೆಯೋ ಅದಕ್ಕೆ ಊಹ್ಯ ವೆಂಬ ಸಂಜ್ಞೆಯು ; ಹೇಗೆಂದರೆ—ಅನ್ನಪಾನ ವಿಧಾನದಲ್ಲಿ ಅನ್ನವನ್ನು ಭಕ್ಷ್ಯ, ಭೋಜ್ಯ, ಲೇಹ್ಯ, ಪೇಯಗಳೆಂದು ೪ ಪ್ರಕಾರವಾಗಿ ವಿಭಾಗಮಾಡಿರುತ್ತೆ ; ಹೀಗೆ ೪ ವಿಧಗಳನ್ನು ಹೇಳುವ ಸಂದರ್ಭದಲ್ಲಿ ೨ ವಿಧಗಳನ್ನೇ ಹೇಳಿದರೆ ಉಳಿದ ೨ ವಿಧಗಳನ್ನು ಬುದ್ಧಿಬಲದಿಂದ ಊಹಿಸಿ ತಿಳಿದುಕೊಳ್ಳಬೇಕು ; ಅನ್ನಪಾನ ವಿಧಾನಗಳಲ್ಲಿ ೨ ವಿಧಗಳನ್ನು ಹೇಳದಿದ್ದರೆ ೨ ವಿಧಗಳಿಂದಲೇ ೪ ವಿಧಾನಗಳನ್ನೂ ಹೇಳಿರುತ್ತೆಂದೇ ತಿಳಿಯಬೇಕು ; ೪ ವಿಧಗಳಾದ ಆಹಾರಗಳೂ ಪ್ರಾಯಿಕವಾಗಿ ೨ ವಿಧಗಳಾಗಿಯೇ ಪ್ರಸಿದ್ಧಗಳಾಗಿವೆ ; ಇದಲ್ಲದೆ ಅನ್ನದಲ್ಲೇ ಭಕ್ಷ್ಯವೂ ಅನ್ನಸಾಮಾನ್ಯವಾದ ಕಾರಣ ಐಕ್ಯ ಹೊಂದಿತು ; ಹಾಗೆಯೇ ದ್ರವ ಸಾಮಾನ್ಯದಿಂದ ಪೇಯಾದಲ್ಲಿ ಲೇಹ್ಯವೂ ಐಕ್ಯಹೊಂದಿತು.

ಭವನ್ತಿಚಾತ್ರ ಸಾಮಾನ್ಯ ಲಕ್ಷಣೇನೈತಾವ್ಯಾಸತಃ ಸಂಪ್ರದರ್ಶಿತಾಃ ।
ವಿಶೇಷಸ್ತು ಯಥಾ ಯೋಗಮುಪಧಾರ್ಯೋ ವಿಪಶ್ಚಿತಾ ||೪೨||
ದ್ವಾತ್ರಿಂಶದ್ಯುಕ್ತಯೋ ಹ್ಯೇತಾಸ್ತನ್ತ್ರಸಾರಗವೇಷಣೇ ।
ಮಯಾ ಸಮ್ಯಗ್ವಿನಿಹಿತಾಃ ಶಬ್ದನ್ಯಾಯಾರ್ಥ ಸಂಯುತಾಃ ||೪೩||
ಯೋ ಹ್ಯೇತಾ ವಿಧಿವದ್ವೇತ್ತಿ ದೀಪಭೂತಾಸ್ತು ಬುದ್ಧಿಮಾನ್ ।
ಸಪೂಜಾರ್ಹೋ ಭಿಷಕ್ ಶ್ರೇಷ್ಠ ಇತಿ ಧನ್ವನ್ತರೇರ್ಮತಮ್ ||೪೪||

ಈ ವಿಚಾರವಾದ ಶ್ಲೋಕಗಳ ತಾತ್ಪರ್ಯವೇನೆಂದರೆ—ಈ ತಂತ್ರಯುಕ್ತಿಗಳು ಸಾಮಾನ್ಯ ವಿಶೇಷ ಲಕ್ಷಣಗಳಿಂದ ವಿವರಿಸಲ್ಪಟ್ಟಿರುತ್ತವೆ ; ಬುದ್ಧಿವಂತರು ಇವುಗಳ ವಿಶೇಷಾರ್ಥಗಳನ್ನು ಆಯಾಯ ಸಂದರ್ಭಗಳಲ್ಲಿ ಯೋಚಿಸಿ ತಿಳಿದುಕೊಳ್ಳಬೇಕು ; ಈ ೩೨ ತಂತ್ರ ಯುಕ್ತಿಗಳನ್ನೂ ಅವುಗಳ ಹೆಸರಿಗೆ ನ್ಯಾಯವಾಗಿ ಸಲ್ಲುವ ಅರ್ಥಗಳಿಂದ ಕೂಡಿಸಿ ಈ ಶ್ರುತ ತಂತ್ರವನ್ನು ಸಾರವತ್ತಾಗಿ ಮಾಡುವ ನಿಮಿತ್ತದಿಂದ ಚೆನ್ನಾಗಿ ಪರಿಶೀಲಿಸಿ ಸರಿಯಾಗಿ ಜೋಡಿಸಿರುತ್ತೇನೆ ; ದೀಪವು ಯಾವ ರೀತಿಯಾಗಿ ವಸ್ತುಗಳ ಸ್ವರೂಪವನ್ನು ತಿಳಿದುಕೊಳ್ಳಲು ಸಾಧಕವಾದದ್ದೋ ಅದೇ ರೀತಿಯಲ್ಲಿ ಜ್ಞಾನ ಬೋಧಕಗಳಾದ ಈ ತಂತ್ರ ಯುಕ್ತಿಗಳನ್ನು ಕ್ರಮವಾಗಿ ಯಾವ ಬುದ್ಧಿಶಾಲಿಯಾದ ವೈದ್ಯನು ಅಭ್ಯಾಸಮಾಡಿ ತಿಳಿದುಕೊಳ್ಳುತ್ತಾನೆಯೋ ಅವನು ಪೂಜ್ಯನು, ಉತ್ತಮ ವೈದ್ಯನೆಂಬುದು ಧನ್ವಂತರಿಯ ಮತವು.

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರೇ ತನ್ತ್ರಯುಕ್ತಿನಾಮಕ ಪಞ್ಚಷಷ್ಠಿತಮಾಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮಕೃತ ಕರ್ಣಾಟಕ ಭಾಷಾವಿವೃತಿಃ.

ಷಟ್‌ಷಷ್ಟಿತಮೋಽಧ್ಯಾಯಃ

ಅಥಾತೋ ದೋಷ ಭೇದವಿಕಲ್ಪಮಧ್ಯಾಯಂ ವ್ಯಾಖ್ಯಾಸ್ಯಾಮಃ ||೧||

ಯಥೋವಾಚ ಭಗವಾನ್ ಧನ್ವನ್ತರಿಃ (ಸುಶ್ರುತಾಯ) ||೨||

ಈ ಅಧ್ಯಾಯದಲ್ಲಿ ಶ್ರೀ ಧನ್ವಂತರಿಯು ಶಿಷ್ಯ ಸುಶ್ರುತನಿಗೆ ಉಪದೇಶ ಮಾಡಿ ದಂತೆಯೇ ದೋಷಭೇದ ವಿಕಲ್ಪವನ್ನು ವಿವರಿಸುತ್ತೇವೆ.

ಅಷ್ಟಾಙ್ಗವೇದವಿದ್ವಾಂಸಂ ದಿವೋದಾಸಂ ಮಹೌಜಸಮ್ |
ಭಿನ್ನಶಾಸ್ತ್ರಾರ್ಥಸಂದೇಹಂ ಸೂಕ್ಷ್ಮಾಗಾಧಾಗಮೋದಧಿಮ್ ||೩||
ವಿಶ್ವಾಮಿತ್ರಸುತಃ ಶ್ರೀಮಾನ್ ಸುಶ್ರುತಃ ಪರಿಪೃಚ್ಛತಿ |

ಸಮುದ್ರದಂತೆ ಅತಿವಿಶಾಲವಾಗಿ ಗಂಭೀರವಾದ ಅರ್ಥವುಳ್ಳ ಶಲ್ಯ ಶಾಲಾಕ್ಯಾದಿ ಎಂಟು ವಿಭಾಗಗಳನ್ನೊಳಗೊಂಡಿರುವ ಆಯುರ್ವೇದ ಶಾಸ್ತ್ರಪಾರಂಗತನಾದ ಶಾಸ್ತ್ರಾರ್ಥ ಸಂಶಯಗಳನ್ನೆಲ್ಲಾ ಪರಿಹರಿಸಲು ಸಮರ್ಥನಾದ ಮಹಾ ಪ್ರಭಾವಶಾಲಿಯಾದ ಕಾಶಿ ರಾಜನಾದ ದಿವೋದಾಸನನ್ನು ಕುರಿತು ಶಿಷ್ಯನಾದ ವಿಶ್ವಾಮಿತ್ರನ ಮಗನಾದ ಸುಶ್ರುತನು ಪ್ರಶ್ನೆಮಾಡುತ್ತಾನೆ.

ಟಿಪ್ಪಣಿ : ಶ್ರೀಮಾನ್ ರಾಜಸಂಪತ್ತು, ಬ್ರಾಹ್ಮ್ಯಸಂಪತ್ತು ಇವೆರಡೂ ಸುಶ್ರುತ ನಿಗೆ ಲಭ್ಧವಾಗಿತ್ತು. ಹೇಗೆಂದರೆ ಸುಶ್ರುತನ ತಂದೆಯಾದ ವಿಶ್ವಾಮಿತ್ರನು ಗಾಧಿಪುತ್ರ ನಾಗಿದ್ದು ರಾಜ್ಯಭಾರವನ್ನು ಮಾಡಿ ಕಡೆಗೆ ತಪಸ್ಸಿನಿಂದ ಬ್ರಾಹ್ಮಣ್ಯವನ್ನು ಪಡೆದಿದ್ದು ಸುಪ್ರಸಿದ್ಧವಾದ ವಿಚಾರವು ; ಕೆಲವರು ಕ್ಷತ್ರಿಯರು ಬ್ರಹ್ಮರ್ಷಿಗಳಿಂದ ಹುಟ್ಟಿದ ಕಾರಣ ರಾಜ್ಯ ಸಂಪತ್ತೂ ಮತ್ತು ಬ್ರಾಹ್ಮಸಂಪತ್ತೂ ಇವೆರಡೂ ಲಭ್ಯವಾಗುತ್ತವೆಂದೂ ಮತ್ತೆ ಕೆಲವರು ವೈದ್ಯವಿದ್ಯಾ ಸಮಾಪ್ತಿಯಾದ ಮೇಲೆ ಬ್ರಾಹ್ಮ್ಯಸಂಪತ್ತು ಸ್ವತಃ ಉಂಟಾಗು ತ್ತದೆಂದು ಶಾಸ್ತ್ರಾಧಾರವಿರುವುದಾಗಿಯೂ ಪ್ರತಿಪಾದಿಸುತ್ತಾರೆ.

ದ್ವಿಷಷ್ಟಿರ್ದೋಷಭೇದಾ ಯೇ ಪುರಸ್ತಾತ್ ಪರಿಕೀರ್ತಿತಾಃ ||೪||
ಕತಿ ತತ್ರೈಕಶೋ ಜ್ಞೇಯಾ ದ್ವಿಶೋ ವಾಪ್ಯಥವಾ ತ್ರಿಶಃ |
ತಸ್ಯ ತದ್ವಚನಂ ಶ್ರುತ್ವಾ ಸಂಶಯಚ್ಛಿನ್ಮಹಾತಪಾಃ ||೫||
ಪ್ರೀತಾತ್ಮಾ ನೃಪಶಾರ್ದೂಲಃ ಸುಶ್ರುತಾಯಾಹ ತತ್ತ್ವತಃ |
ತ್ರಯೋ ದೋಷಾಧಾತವಶ್ಚ ಪುರೀಷಂ ಮೂತ್ರಮೇವ ಚ ||೬||
ದೇಹಂ ಸನ್ಧಾರಯನ್ತ್ಯೇತೇಹ್ಯವ್ಯಾಪನ್ನಾ ರಸೈರ್ಹಿತೈಃ |

ಹಿಂದೆಹೇಳಿದ ೬೨ ದೋಷಭೇದಗಳಲ್ಲಿ ಒಂದೊಂದಾಗಿಯೂ ಎರಡೆರಡಾಗಿಯೂ ಮೂರುಮೂರಾಗಿಯೂ ಎಷ್ಟು ವಿಭಾಗಗಳುಂಟಾಗುತ್ತವೆಂದು ಪ್ರಶ್ನಿಸಲು ಮಹಾ ತಪಸ್ವಿ

ಯಾದ ಅನುಮಾನಗಳನ್ನು ಪರಿಹರಿಸಬಲ್ಲ (ತರ್ಕ ಶಕ್ತಿಯುಳ್ಳ) ರಾಜಶ್ರೇಷ್ಠನಾದ ದಿವೋದಾಸನು ಸಂತುಷ್ಟಚಿತ್ತನಾಗಿ ಸುಶ್ರುತನಿಗೆ ಶಾಸ್ತ್ರೋಕ್ತವಾಗಿ ಖಂಡಿತವಾಗಿಯೂ ೩ ದೋಷಗಳೂ ೭ ಧಾತುಗಳೂ, ಮಲ, ಮೂತ್ರಗಳು ಹಿತಕರಗಳಾದ ಮಧುರಾದಿ ಆರು ರಸಗಳ ಸೇವನೆಯಿಂದ ಪ್ರಕೋಪ ಹೊಂದದೆ ದೇಹವನ್ನು ಧಾರಣೆ ಮಾಡಿಕೊಂಡಿರುತ್ತವೆ ಎಂಬ ನಿಶ್ಚಯವಾದ ಸಿದ್ಧಾಂತವನ್ನು ಉಪದೇಶ ಮಾಡಿದನು.

ಟಿಪ್ಪಣಿ : ಏಕಶೋದ್ವಿಶೋತ್ರಿಶಃ ಕತಿ ಎಂದು ಪ್ರಶ್ನೆಗೆ ಕ್ರಮವಾಗಿ ಉತ್ತರ ಕೊಡದೆ ೩ ದೋಷಗಳು ೭ ಧಾತುಗಳು ಇತ್ಯಾದಿ ರೀತಿಯಲ್ಲಿ ಉತ್ತರ ಕೊಡಲು ಕಾರಣವೇನೆಂದು ಶಂಕಿಸಬಹುದು ; ಧಾತುಗಳೊಡನೆಯೂ ಮಲಗಳೊಡನೆಯೂ ವಾತಾದಿ ದೋಷಗಳು ಮಿಶ್ರವಾದರೆ ಆಗ ದೋಷವೆಂಬ ವ್ಯವಹಾರವುಂಟಾಗುತ್ತದೆಂದು ತಿಳಿಸುವುದಕ್ಕಾಗಿ ಪ್ರತ್ಯೇಕವಾಗಿ ೩ ಧಾತುಗಳು ಇತ್ಯಾದಿಯಾಗಿ ಹೇಳಿರುತ್ತಾರೆ ; ರಕ್ತದೊಡನೆ ೧೫ ವಿಧ ದೋಷ ಪ್ರಸರಗಳನ್ನು ಹಿಂದೆ ನಮೂದಿಸಿರುತ್ತೆ ; ಆದರೆ ಮಾಂಸಾದಿಗಳೊಡನೆ ದೋಷ ಪ್ರಸರವನ್ನು ಹೇಳಿರುವುದಿಲ್ಲ ; ಏಕೆಂದರೆ ಮಾಂಸಾದಿಗಳೊಡನೆ ದೋಷಗಳು ಪ್ರಸರವಾದರೆ ಅವು ಗಣನೆ ಮಾಡುವುದಕ್ಕೆ ಅಸಾಧ್ಯವಾಗುವಷ್ಟು ಭೇದಗಳಾಗುವುದರಿಂದ ಅವನ್ನು ನಿರ್ದೇಶಮಾಡಿರುವುದಿಲ್ಲವಾದರೂ ದೋಷಲಿಂಗಗಳಿಂದಲೇ ಅವನ್ನು ಗೊತ್ತು ಮಾಡಿಕೊಳ್ಳಬೇಕು ; "ದೋಷಧಾತುಮಲಮೂಲಂ ಹಿ ಶರೀರಂ" ಎಂದು ಹೇಳಿರುವುದರಿಂದಲೇ ದೋಷಾದಿಗಳ ಕಾರ್ಯವೂ ಹೇಳಿದಂತಾಯಿತು ; ಶರೀರ, ದೇಹಗಳೆರಡೂ ಪರ್ಯಾಯಪದಗಳಾದರೂ ಇಲ್ಲಿ ದೇಹವೆಂದರೆ ಚಿಕಿತ್ಸೆಗೆ ಅಧಿಕೃತನಾದ ಕರ್ಮಪುರುಷನೆಂಬುದನ್ನು ಜ್ಞಾಪಿಸುವುದಕ್ಕಾಗಿ "ಏತೇದೇಹಂಧಾರಯನ್ತಿ" ಎಂದು ಪ್ರಯೋಗಿಸಿರುತ್ತಾರೆ.

ಪುರುಷಃ ಷೋಡಶಕಲಃ ಪ್ರಾಣಾಶ್ಚೈಕಾದಶೈವ ಯೇ ||೭||
ರೋಗಾಣಾಂ ತು ಸಹಸ್ರಂ ಯಚ್ಛತಂ ವಿಂಶತಿರೇವ ಚ ।
(ಶತಂ ಚ ಪಞ್ಚ ದ್ರವ್ಯಾಣಾಂ ತ್ರಿ ಸಪ್ತತ್ಯಧಿಕೋತ್ತರಮ್ । ||೮||
ವ್ಯಾಸತಃ ಕೀರ್ತಿತಂ ತದ್ಧಿ ಭಿನ್ನಾದೋಷಾಸ್ತ್ರಯೋಗುಣಾಃ ।
ದ್ವಿಷಷ್ಟಿಧಾ ಭವನ್ತ್ಯೇತೇ ಭೂಯಿಷ್ಠಮಿತಿ ನಿಶ್ಚಯಃ ||೯||

ಕರ್ಮಪುರುಷನು ೧೬ ಕಲೆಗಳುಳ್ಳವನು, ಪ್ರಾಣಗಳು ೧೧, ರೋಗಗಳು ೧೧೨೧, ದ್ರವ್ಯಗಳು ೫೭೩, ಎಂದು ವಿಸ್ತಾರವಾಗಿ ಹೇಳಲ್ಪಟ್ಟಿದೆ ; ರಜಃ, ಸತ್ವ, ತಮೋಗುಣಾಧಿಕಗಳಾದ ವಾತ, ಪಿತ್ತ, ಕಫಗಳು ಸಂಸರ್ಗ ಸನ್ನಿಪಾತಭೇದಗಳಿಂದಲೂ ವೃದ್ಧಕ್ಷೀಣ, ತರ, ತಮಗಳೆಂಬ ವ್ಯತ್ಯಾಸಗಳಿಂದಲೂ ಪರಸ್ಪರ ಸೇರಿಕೊಂಡು ೬೨ ಭೇದಗಳಾಗುತ್ತವೆ.

ಟಿಪ್ಪಣಿ : ೧೬ ಕಲಾ ಎಂದರೆ, ೫ ಭೂತಗಳೂ, ೧೧ ಇಂದ್ರಿಯಗಳೂ ಸೇರಿ ಆಗುವ ೧೬ ವಿಕಾರಗಳೆಂದು ಕೆಲವು ವೈದ್ಯರ ಮತವು ; ಮತ್ತೆ ಕೆಲವರು ಕಲಾ ಎಂದರೆ ಅಂಗಪ್ರತ್ಯಂಗಗಳನ್ನು ಗಣನೆ ಮಾಡಿ, ೧ ತಲೆ, ೧ ಕತ್ತು, ೨ ಸ್ಕಂಧಗಳು (ಹೆಗಲು)

೨ ಬಾಹುಗಳು, ೨ ಕಟಿ ಭಾಗಗಳು, ೧ ಬೆನ್ನು, ೬ ತೊಡೆಗಳೂ ಕಾಲುಗಳೂ ಸೇರಿದವು, ೧ ಗುದ, ೧, ಉದರ, ೧ ಲಿಂಗ (ಶಿಶ್ನ), ೨ ಹೆಜ್ಜೆಗಳು ಎನ್ನುತ್ತಾರೆ ; ಮತ್ತೆ ಕೆಲವರು ಕಲಾ ಎಂದರೆ ಸರ್ವಭೂತ ಚಿಂತಾಶಾರೀರಾಧ್ಯಾಯದಲ್ಲಿ ಹೇಳಿದಂತೆ ಶರೀರಾತ್ಮಗಳನ್ನು ಕೂಡಿಸುವ ಮನಸ್ಸಿನೊಡನೆ ಸಂಯೋಗವಾದ ಕರ್ಮಪುರುಷನಿಗೆ ಉಂಟಾಗುವ ಸುಖ ದುಃಖ, ಇಚ್ಛಾ, ದ್ವೇಷ, ಪ್ರಯತ್ನ, ಪ್ರಾಣವಾಯುವಿನೊಡನೆ ಮತ್ತು ಅಪಾನವಾಯು ವಿನೊಡನೆ ಸೇರುವುದು ರೆಪ್ಪೆಗಳನ್ನು ಮುಚ್ಚಿಕೊಳ್ಳುವುದೂ ತೆರೆಯುವುದೂ ಬುದ್ಧಿ ಮನಸ್ಸು ಕಾರ್ಯ ವಿಚಾರಣಾ (ಊಹಾಪೋಹಗಳಿಂದ ವಸ್ತು ವಿಮರ್ಶನೆ ಮಾಡುವುದು, ಸ್ಮೃತಿ (ಸ್ಮರಣೆ), ವಿಜ್ಞಾನ, ಅಧ್ಯವಸಾಯ ಬುದ್ಧಿಯ ವ್ಯಾಪಾರ), ವಿಷಯೋಪಲಬ್ಧಿ (ಶಬ್ದಾದಿಗಳು ಬೋಧೆಯಾಗುವಿಕೆ) ಎಂಬ ೧೬ ಗುಣಗಳೆಂದು ಹೇಳುತ್ತಾರೆ ; ಮತ್ತೆ ಕೆಲವರು ಚರಕಾಚಾರ್ಯರು ಹೇಳುವ ೪ ಪಾದ ೧೬ ಕಲೆಗಳುಳ್ಳ ಭೇಷಜ ಗುಣಗಳೆನ್ನು ತ್ತಾರೆ ; ಪ್ರಾಣಗಳು, ಅಗ್ನಿ, ಸೋಮ, ವಾಯು, ಸತ್ವ, ರಜಸ್ಸು, ತಮಸ್ಸು, ಪಂಚೇಂದ್ರಿ ಯಗಳು (ತ್ವಕ್, ಚಕ್ಷುಸ್ಸು, ಶ್ರೋತ್ರ, ನೇತ್ರ, ಘ್ರಾಣ)ಇವುಗಳೊಡನೆ ಕೂಡಿದ ಭೂತಾ ತ್ಮನೂ ಎಂದು ತಿಳಿಯಬೇಕು. ರೋಗಗಳು ೧೧೨೧ ಎಂದು ಹೇಳಿರುತ್ತದೆಯಷ್ಟೆ; ಇವು ಗಳನ್ನು ಸುಶ್ರುತ ಸಂಹಿತೆಯ ೬ ಸ್ಥಾನಗಳಲ್ಲಿ ನಿರ್ದೇಶಿಸಿರುವ ರೋಗಗಳೊಡನೆ ಸಮತೋ ಲನೆ ಮಾಡೋಣ.

ಸುಶ್ರುತಸಂಹಿತೆಯ ೬ ಸ್ಥಾನಗಳಲ್ಲೂ ನಿರ್ದೇಶಿಸಿರುವ ರೋಗಗಳ ವಿವರಣೆ :—

(ಅ) **ಸೂತ್ರಸ್ಥಾನ ೬೦ ರೋಗಗಳು**

			ವಿಧಗಳು
೧.	ಕ್ಷಾರದಗ್ಧ ವ್ರಣಗಳು, ಹೀನದಗ್ಧ, ಅತಿದಗ್ಧ ಭೇದಗಳಿಂದ ೨ ವಿಧಗಳು	....	೨
೨.	ಅಗ್ನಿದಗ್ಧ ವ್ರಣಗಳು ಪ್ಲುಷ್ಟ, ಅತಿದಗ್ಧ, ದುರ್ದಗ್ಧ, ಸಮ್ಯಗ್ದಗ್ಧಗಳೆಂದು, ಅಂದರೆ (ಸ್ನಿಗ್ಧದ್ರವ್ಯಾಶ್ರಿತಃ, ರೂಕ್ಷದ್ರವ್ಯಾಶ್ರಿತಃ ಅಗ್ನಿರ್ದಹತೀತಿ)	....	೪
೩.	ದೋಷಜಗಳು ವಾತ, ಪಿತ್ತ, ಕಫ, ಸನ್ನಿಪಾತ ರಕ್ತದೋಷಗಳೆಂದು	....	೪
೪.	ದೋಷಧಾತು ಮಲಗಳ ಕ್ಷಯ ವೃದ್ಧಿಗಳಿಂದ	....	೩೨
೫.	ಸ್ಥೌಲ್ಯ ಕಾರ್ಶ್ಯಗಳು	....	೨
೬.	ವಿಸ್ರಂಸಾದಿ ಬಲಕ್ಷಯಗಳು	....	೩
೭.	ಶೋಫರೋಗ	....	೬
೮.	ಅಗ್ನಿದೋಷದಿಂದುಂಟಾಗುವ (ಜಾಠರಾಗ್ನಿಯ ದೋಷಗಳು) ಅಜೀರ್ಣ ರೋಗಗಳು (ಆಮ, ವಿದಗ್ಧ, ವಿಷ್ಟಬ್ಧ)	....	೩
		ಒಟ್ಟು	೬೦

(ಅ) ನಿದಾನಸ್ಥಾನ: ೩೪೬ ರೋಗಗಳು

೯.	ಆಮಾಶಯ, ಪಕ್ವಾಶಯ, (ಚರ್ಮ ಶ್ರೋತ್ರ, ನೇತ್ರ, ನಾಸಾ, ಮುಖ, ತ್ವಕ್, ಎಂಬ [illegible] ಇಂದ್ರಿಯಗಳು) ಮಾಂಸ, ಸಿರೆ, ಸ್ನಾಯು, ಸಂಧಿ, ಅಸ್ಥಿ, ಮಜ್ಜೆ, ಶುಕ್ರ, ಏಕಾಂಗ, ಸರ್ವಾಂಗ ವಾತಗಳು	....	೧೭
೧೦.	ಪಿತ್ತ, ಕಫಾವೃತ ವಾತದೋಷಗಳು	....	೧೩
೧೧.	ವಾತರಕ್ತ	....	೪
೧೨.	ಆಕ್ಷೇಪಕಃ, ಅಪತಾನತಃ, ಪಕ್ಷಾಘಾತಃ, ಅಪತಂತ್ರಃ, ಮನ್ಯಾಸ್ತಂಭಃ, ಅರ್ದಿತಃ, ಗೃಧ್ರಸೀ, ವಿಶ್ವಾಚೀ, ಕ್ರೋಷ್ಟುಕಶಿರಃ (ಖಂಜಃ, ಪಂಗುಃ, ಕಲಾಯಖಂಜಃ) ಕಂಟಕಃ, ಪಾದದಾಹಃ, ಪಾದಹರ್ಷಃ, ಅವಬಾಹುಕಃ, (ಮೂಕಮಿಣ್ಮಿಣಿ, ಗದ್ಗದಾಃ) (ತೂನೀ, ಪ್ರತಿತೂನೀ) ಆಧ್ಮಾನದ್ವಯೇ, ಅಷ್ಠೀಲಾದ್ವಯಮ್	....	೨೦
೧೩.	ಅರ್ಶಾಂಸಿ	....	೬
			೬೨

೧೪.	ಚರ್ಮಕೀಲಗಳು	೬	೨೯.	ಅಪಚೀ.	೧
೧೫.	ಅಶ್ಮರಿಗಳು	೪	೩೦.	ಅರ್ಬುದಗಳು	೭
೧೬.	ಭಗಂದರಗಳು	೫	೩೧.	ಗಳಗಂಡಗಳು	೩
೧೭.	ಕುಷ್ಠಗಳು	೧೮	೩೨.	ವೃದ್ಧಿರೋಗಗಳು	೭
೧೮.	ಕಿಲಾಸಗಳು	೩	೩೩.	ಉಪದಂಶಗಳು	೫
೧೯.	ಪ್ರಮೇಹಗಳು	೨೦	೩೪.	ಶ್ಲೀಪದಗಳು	೩
೨೦.	ಪ್ರಮೇಹ ಪಿಡಕೆಗಳು	೯	೩೫.	ಕ್ಷುದ್ರರೋಗಗಳು	೪೪
೨೧.	ಉದರ ರೋಗಗಳು	೮			
೨೨.	ಮೂಢಗರ್ಭ ದೋಹಗಳು	೮			೨೪೫

೨೩.	ಬಾಹ್ಯ ವಿದ್ರಧಿಗಳು	೬	೩೬.	ಶೂಕದೋಷಗಳು	೧೮
೨೪.	ಅಂತರ್ವಿದ್ರಧಿಗಳು	೬	೩೭.	ಭಗ್ನರೋಗಗಳು	೧೮
೨೫.	ವಿಸರ್ಪಗಳು	[illegible]	೩೮.	ಓಷ್ಠರೋಗಗಳು	೮
೨೬.	ನಾಡೀವ್ರಣಗಳು	೫	೩೯.	ದಂತಮೂಲ ರೋಗಗಳು	೧೫
೨೭.	ಸ್ತನರೋಗಗಳು	೫	೪೦.	ದಂತ ರೋಗಗಳು	೮
೨೮.	ಗ್ರಂಥಿರೋಗಗಳು	೫	೪೧.	ಜಿಹ್ವಾರೋಗಗಳು	೫

೪೨. ತಾಲು ರೋಗಗಳು ೯
೪೩. ಕಂಠರೋಗಗಳು ೧೭
೪೪. ಸ್ವರವಿಕಾರಗಳು ೩
—
ಮುಖರೋಗಗಳು ೬೫
೩೪೬

(ಇ) ಶಾರೀರಸ್ಥಾನ—೨೮ ರೋಗಗಳು

೪೫. (ಶುಕ್ರಗತ ರೋಗಗಳು)
ಶುಕ್ರ ದೋಷಗಳು ೮
೪೬. ಆರ್ತವ ದೋಷಗಳು ೮
೪೭. ಅಸೃಗ್ದರ ರೋಗಗಳು ೪
೪೮. ಕ್ಲೈಬ್ಯ ರೋಗಗಳು ೫
೪೯. ಮಕ್ಕಲ್ಲ ಶೂಲ ೧
೫೦. ನೈಗಮೇಷಾಹೃತವು ೨
೫೧. ನಾಗೋದರ ೧
ಒಟ್ಟು ೨೮
—

(ಈ) ಚಿಕಿತ್ಸಾಸ್ಥಾನ—೯೮ ರೋಗಗಳು

೫೨. ಆಢ್ಯವಾತ ೧
೫೩. ಸರ್ವಾಂಗಶೋಫ ೫
೫೪. ಕರ್ಣಪಾಳಿ ರೋಗಗಳು ೫
೫೫. ಕ್ಲೈಬ್ಯರೋಗಗಳು ೫
೫೬. ವಮನ ವಿರೇಚನ
ವ್ಯಾಪದ್ರೋಗಗಳು ೧೫
೩೧
೫೭. ಬಸ್ತಿನೇತ್ರಪ್ರಣಿಧಾನ
ದೋಷಗಳು ೬
೫೮. ಬಸ್ತಿನೇತ್ರ ದೋಷಗಳು ೧೧
೫೯. ಬಸ್ತಿಯಂತ್ರ ದೋಷಗಳು ೫
೬೦. ಬಸ್ತಿಪೀಡನ ದೋಷಗಳು ೪
೬೧. ಬಸ್ತಿದ್ರವ್ಯ ಕೃತ
ದೋಷಗಳು ೧೧
೬೨. ಶಯ್ಯಾದೋಷಗಳು ೭
ವೈದ್ಯನಿಂದುಂಟಾಗುವ
ದೋಷಗಳು ೭
—
೪೪
೬೩. ರೋಗಿಯ ಕ್ರೋಧಾದಿ
ಗಳಿಂದುಂಟಾಗುವ
ದೋಷಗಳು ೧೫
೬೪. ಬಸ್ತಿಯಿಂದ ಪ್ರಯೋಗಿ
ಸಿದ ಸ್ನೇಹವು ಹೊರಗೆ
ಬರದಿರುವುದರಿಂದ
ಉಂಟಾಗುವ
ದೋಷಗಳು ೮
ಬಸ್ತಿನೇತ್ರಾದಿಗಳಿಂದುಂಟಾಗುವ
ದೋಷಗಳು ೬೭
ವಿಧಗಳು
ಈ ರೀತಿಯಾಗಿ ಚಿಕಿತ್ಸಿತ ಸ್ಥಾನ
ದಲ್ಲುಂಟಾಗುವ ದೋಷಗಳ
ಒಟ್ಟು ಸಂಖ್ಯೆ ೯೮
—

(ಉ) ಕಲ್ಪಸ್ಥಾನ ರೋಗಗಳು
ಒಟ್ಟು ೩೪೭

೬೫. (a) ಉಪಾನತ್, ಪಾದುಕಾ
ಪಾದಪೀಠ ಆಭರಣಾದಿ
ಗಳಿಂದ
೪ ವಿಧ ಭೇದಗಳು
೬೬. ಅನ್ನ ಮೊದಲು ಅಞ್ಜನ
ಪೂರ್ತಿಯಾಗಿ ವಿಷ
ದಿಂದುಂಟಾಗುವ
ದೋಷಗಳು ೨೦

೬೭.	ಸ್ಥಾವರವಿಷ ವೇಗಗಳು	೭
೬೮.	ದರ್ವೀಕರವಿಷ ,,	೭
೬೯.	ಮಂಡಲಿವಿಷ ,,	೭
೭೦.	ರಾಜಿಲವಿಷ ,,	೭
೭೧.	ವೈಕರಂಜವಿಷ ,,	೭
೭೨.	ಮೂಷಿಕವಿಷ ,,	೧೮
೭೩.	ಅಲರ್ಕವಿಷ ,,	೧
೭೪.	ಕೀಟವಿಷ ಭೇದಗಳು	೧೬೭
೭೫.	ವಿಷದಿಗ್ಧಶಲ್ಯವಿದ್ಧವಿಷ	೧
೭೬.	ದೂಷೀವಿಷದ ಭೇದ	೧
	ಒಟ್ಟು	೨೪೭

(ಊ) ಉತ್ತರಸ್ಥಾನ ೧೦೪ ರೋಗಗಳು

೭೭.	ನೇತ್ರರೋಗಗಳು	೭೬
	ಸಂಧ್ಯಾಶ್ರಯಗಳು	೯
	ವರ್ತ್ಮಜಗಳು	೨೧
	ಶುಕ್ಲಗತಗಳು	೧೧
	ಕೃಷ್ಣಗತಗಳು	೪
	ಸರ್ವನೇತ್ರಗತಗಳು	೧೭
	ದೃಷ್ಟಿಗತಗಳು	೧೨
	ಬಾಹ್ಯಜಗಳು	೨
		೭೬
೭೮.	ಕರ್ಣಗತ ರೋಗಗಳು	೨೮
	ಒಟ್ಟು	೧೦೪

ಉತ್ತರತಂತ್ರ ರೋಗಗಳು
(ನೇತ್ರಾದಿ)

		೧೦೪
೭೯.	ಘ್ರಾಣ ರೋಗಗಳು	೩೧
೮೦.	ಶಿರೋರೋಗಗಳು	೧೧
	ಶಾಲಾಕ್ಯತಂತ್ರಸಂಬದ್ಧಗಳು	೧೪೬
೮೧.	ಬಾಲಗ್ರಹಗಳು	೯
೮೨.	ಯೋನಿವ್ಯಾಪತ್ತುಗಳು	೨೦
೮೩.	ಕುಮಾರತಂತ್ರೋಕ್ತ (ಬಾಲರೋಗಗಳು)	೨೯
೮೪.	ಜ್ವರಗಳು	೮
೮೫.	ಅತಿಸಾರ	೬
೮೬.	ಪ್ರವಾಹಿಕಾ ರೋಗ	೪
೮೭.	ಗ್ರಹಣೀ ದೋಷಗಳು	೪
೮೮.	ಯಕ್ಷ್ಮರೋಗ	೧
೮೯.	ಗುಲ್ಮರೋಗಗಳು	೫
೯೦.	ಹೃದ್ರೋಗಗಳು	೫
೯೧.	ಪಾಂಡುರೋಗಗಳು	೬
೯೨.	ಕಾಮಿಲಾರೋಗಗಳು	೨
೯೩.	ಹಲೀಮಕವು	೧
೯೪.	ಪಾನಕೀ	೧
೯೫.	ರಕ್ತಪಿತ್ತ	೬
೯೬.	ಮೂರ್ಛಾರೋಗ	೭
೯೭.	ಮದ್ಯವಿಕಾರಗಳು	೭
೯೮.	ದಾಹರೋಗಗಳು	೫
		೬೩
೯೯.	ತೃಷ್ಣಾರೋಗ	೭
೧೦೦.	ಛರ್ದಿರೋಗ	೫

೧೦೧.	ಹಿಕ್ಕಾರೋಗ	೫	ಅಪಸ್ಮಾರಗಳು	೪
೧೦೨.	ಶ್ವಾಸರೋಗ	೫	ಉನ್ಮಾದಗಳು	೬
೧೦೩.	ಕಾಸರೋಗ	೫		—
೧೦೪.	ಸ್ವರಭೇದಗಳು	೬		೧೮
೧೦೫.	ಕ್ರಿಮಿರೋಗಗಳು	೨೦		—
೧೦೬.	ಉದಾವರ್ತಗಳು	೯	ಸೂತ್ರಸ್ಥಾನದಲ್ಲಿ	೬೦
೧೦೭.	ವಿಷೂಚಿಕಾರೋಗ	೩	ನಿದಾನ ,,	೩೪೬
೧೦೮.	ಆನಾಹಗಳು	೨	ಶಾರೀರ ,,	೨೮
೧೦೯.	ಅರೋಚಕಗಳು	೫	ಚಿಕಿತ್ಸಾ ,,	೯೮
೧೧೦.	ಮೂತ್ರಾಘಾತಗಳು	೧೨	ಕಲ್ಪ ,,	೨೪೩
		—		
	ಕಾಯಚಿಕಿತ್ಸೆ	೧೭೪	ಉತ್ತರತಂತ್ರದಲ್ಲಿ	೩೬೯
		—		
೧೧೨.	ಭೂತ ವಿದ್ಯೆಯಲ್ಲಿ	೧೮	ಒಟ್ಟು	೧೧೪೮ ರೋಗಗಳು
	ದೇವ, ದಾನವ, ಗಂಧರ್ವ,			
	ಯಕ್ಷ, ಪಿತೃ, ರಕ್ಷಃ, ಪಿಶಾಚಿ			
	ಅಭಿಷಂಗಜಾ	೮		

ಈ ರೀತಿಯಾಗಿ ಸುಶ್ರುತಸಂಹಿತೆಯಲ್ಲಿ ಕಾಶಿರಾಜನಾದ ದಿವೋದಾಸನಿಂದ ೧೧೪೮ ರೋಗಗಳು ಹೇಳಲ್ಪಟ್ಟಿರುತ್ತವೆ.

ತ್ರಯ ಏವ ಪೃಥಕ್ ದೋಷಾಃ ದ್ವಿಶೋ ನವ ಸಮಾಧಿಕೈಃ ।
ತ್ರಯೋದಶಾಧಿಕೈಕದ್ವಿಸಮಮಧ್ಯೋಽಲ್ಪಣೈಸ್ತ್ರಿಶಃ ॥೧೦॥
ಪಞ್ಚಾಶದೇವಂ ತು ಸಹ ಭವನ್ತಿ ಕ್ಷಯಮಾಗತೈಃ ।
ಕ್ಷೀಣಮಧ್ಯಾಧಿಕಕ್ಷೀಣ ಕ್ಷೀಣವೃದ್ಧ್ಯಸ್ತಥಾಪರೈಃ ॥೧೧॥
ದ್ವಾದಶೈವಂ ಸಮಾಖ್ಯಾತಾಸ್ತ್ರಯೋದೋಷಾ ದ್ವಿಷಷ್ಟಿಧಾ ।
ಮಿಶ್ರಾ ಧಾತುಮಲೈರ್ದೋಷಾ ಯಾನ್ತ್ಯಸಙ್ಖ್ಯೇಯತಾಂ ಪುನಃ ॥೧೨॥
ತಸ್ಮಾತ್ ಪ್ರಸಙ್ಗಂ ಸಂಯಮ್ಯ ದೋಷಭೇದವಿಕಲ್ಪನೈಃ ।
ರೋಗಂ ವಿದಿತ್ವೋಪಚರೇದ್ರಸಭೇದೈರ್ಯಥೇರಿತೈಃ ॥೧೩॥
ಭಿಷಕ್ ಕರ್ತಾಥ ಕರಣಂ ರಸಾ ದೋಷಾಸ್ತು ಕಾರಣಮ್ ।
ಕಾರ್ಯಮಾರೋಗ್ಯಮೇವೈಕಮನಾರೋಗ್ಯಮತೋಽನ್ಯಥಾ ॥೧೪॥
ಅಧ್ಯಾಯಾನಾಂ ತು ಷಟ್ಷಷ್ಟ್ಯಾ ಗ್ರಥಿತಾರ್ಥಪದಕ್ರಮಮ್ ।

ಏವಮೇತದಶೇಷೇಣ ತನ್ತ್ರಮುತ್ತರಮೃದ್ಧಿಮತ್ ||೧೫||
ಸ್ಪಷ್ಟಗೂಢಾರ್ಥವಿಜ್ಞಾನಮಗಾಧಮನ್ಧ ಚೇತಸಾಮ್ |
ಯಥಾವಿಧಿ ಯಥಾಪ್ರಶ್ನಂ ಭವತಾಂ ಪರಿಕೀರ್ತಿತಮ್ ||೧೬||
ಸಹೋತ್ತರಂ ತ್ವೇತದಧೀತ್ಯ ಸರ್ವಂ ಬ್ರಾಹ್ಮಂ ವಿಧಾನೇನ ಯಥೋದಿತೇನ |
ನ ಹೀಯತೇಽರ್ಥಾನ್ಮನಸೋಽಭ್ಯುಪೇತಾದೇತದ್ವಚೋ ಬ್ರಾಹ್ಮಮತೀವ ಸತ್ಯಮ್ ||೧೭||

ಇತಿ ಸೌಶ್ರುತೇ ಆಯುರ್ವೇದಶಾಸ್ತ್ರೇ ಉತ್ತರಸ್ಥಾನಂ ಸಮಾಪ್ತಮ್

ಪ್ರತ್ಯೇಕವಾಗಿ (ಒಂದೊಂದಾಗಿ) ಪ್ರಕೋಪವಾದ ವಾತ, ಪಿತ್ತ, ಕಫಗಳಿಂದ ೩ ಭೇದಗಳಾಗುತ್ತವೆ; ಉಳಿದ ಎರಡು ದೋಷಗಳೂ ಸ್ವಸ್ಥಗಳಾಗಿರುತ್ತವೆ. ಎರಡೆರಡು ಸಮವೃದ್ಧ ದೋಷಗಳೂ ಒಂದೂ ಸ್ವಸ್ಥ ದೋಷವೂ ಕೂಡಿ (೯) ಭೇದಗಳನ್ನುಂಟು ಮಾಡುತ್ತವೆ; ಮೂರು ದೋಷಗಳಲ್ಲಿ ಒಂದು ಸಮ ಒಂದು ಮಧ್ಯವೃದ್ಧ ಮತ್ತೊಂದು ಅಧಿಕವೃದ್ಧ, ಈ ರೀತಿ ೧೩ (ಪ್ರಕಾರ) ಭೇದಗಳಾಗುತ್ತವೆ ; ಹೀಗೆಯೇ ಕ್ಷೀಣ ಸಮ ದೋಷಗಳಿಂದಲೂ ಕ್ಷೀಣ, ಕ್ಷೀಣಮಧ್ಯ, ಕ್ಷೀಣಾಧಿಕಗಳೆಂದು ೨೫ ಪ್ರಕಾರಗಳು ಸೇರಿ ಒಟ್ಟು ೫೦ ಭೇದಗಳಾಗುತ್ತವೆ; ಕ್ಷೀಣ, ಮಧ್ಯ, ಅಧಿಕಗಳೆಂದು ಕ್ಷೀಣ, ವೃದ್ಧ, ಸಮಗಳೆಂದೂ ೧೨ ಭೇದಗಳಾಗುತ್ತವೆ ; ಈ ದೋಷಗಳು ಧಾತುಗಳೊಡನೆಯೂ, ಮಲಗಳೊಡನೆಯೂ ಸೇರಿಕೊಂಡರೆ ಅಸಂಖ್ಯಾತಗಳಾಗುತ್ತವೆ. ಆದಕಾರಣ ದೋಷ, ಧಾತು, ಮಲಗಳ ಸಂಸರ್ಗವನ್ನು ಸಂಕೋಚ ಮಾಡಿ (ಹೆಚ್ಚು ಗಮನಿಸದೆ) ದೋಷಭೇದ ವಿಕಲ್ಪಗಳಿಂದ ರೋಗ ಭೇದಗಳನ್ನು ನಿರ್ಧರಿಸಿ ಅವುಗಳನ್ನು ನಿವಾರಣೆ ಮಾಡುವ ರಸ ಭೇದಗಳನ್ನು ಕಲ್ಪಿಸಿ ಪ್ರಯೋಗಿಸಬೇಕು ; (ಭಿಷಕ್) ವೈದ್ಯನು ಚಿಕಿತ್ಸೆಯನ್ನು ಮಾಡುವವನು. ರಸಗಳ ಕರಣಗಳು (ರೋಗನಿವಾರಕ ಸಾಮಗ್ರಿಗಳು) ದೋಷಗಳು ರೋಗ ಕಾರಣಗಳು ಆರೋಗ್ಯವನ್ನುಂಟು ಮಾಡುವುದೇ ಮುಖ್ಯ ಕಾರ್ಯವು. ಇದಕ್ಕೆ ವಿರುದ್ಧವಾದದ್ದೇ ಅನಾರೋಗ್ಯವು (ವ್ಯಾಧಿಯು). ಯಥಾಕ್ರಮವಾಗಿ ವಿಂಗಡಿಸಿದ ಚಿಕಿತ್ಸಾ ವಿಧಾನಗಳುಳ್ಳ ೬೬ ಅಧ್ಯಾಯಗಳಿಂದ ಈ ಉತ್ತರತಂತ್ರವೆಂಬ ಭಾಗವು ಪೂರ್ತಿಯಾಗಿರುತ್ತದೆ ; ಪಂಡಿತೋತ್ತಮರಾದ ನಿಮಗೆ ಮನಸ್ಸಿನ ಸಂದೇಹ ನಿವೃತ್ತಿಗಾಗಿ ರಹಸ್ಯ ವಿಷಯಗಳನ್ನೂ ಸ್ಪಷ್ಟೋಕ್ತಿಯಿಂದ ನಿಮ್ಮ ಪ್ರಶ್ನೆಗಳಿಗೆ ಅನುಸಾರವಾಗಿ ವಿಶದಪಡಿಸಿರುತ್ತೇವೆ ; ಪರಬ್ರಹ್ಮನಿಂದ ಉಕ್ತವಾದ ಉತ್ತರತಂತ್ರ ಸಹಿತವಾದ ಸಮಗ್ರವಾದ ಈ ಸುಶ್ರುತ ಸಂಹಿತೆಯನ್ನು ನಿಮಗೆ ಉಪದೇಶ ಮಾಡಿರುವಂತೆಯೇ ಅಧ್ಯಯನ ಮಾಡಿ ಪ್ರಯೋಗಿಸಿದ್ದರೆ ಮನಸ್ಸಿನಲ್ಲಿ ಉದ್ದೇಶ ಮಾಡಿದಂತೆಯೇ ಚಿಕಿತ್ಸಾ ಸಿದ್ಧಿಯನ್ನು ತಪ್ಪದೆ ಪಡೆಯಲಾಗುತ್ತದೆ. ಈ ವಾಕ್ಯವು ಪರಬ್ರಹ್ಮನಿಂದ ಹೇಳಿದ್ದು ಅತಿ ಸತ್ಯವಾದದ್ದೆಂದು ತಿಳಿಯಬೇಕು.

ಟಿಪ್ಪಣಿ :—೬೨ ವಿಧಗಳಾದ ವಾತ, ಪಿತ್ತ, ಕಫ ದೋಷಗಳನ್ನು ವಿವರಿಸಲಾಗುತ್ತದೆ.

ಸಂಖ್ಯೆ	ವಾತಃ	ಪಿತ್ತಂ	ಕಫಃ	ಸಂಖ್ಯೆ	ವಾತಃ	ಪಿತ್ತಂ	ಕಫಃ
೧.	ವೃದ್ಧಃ	ಸಮಃ	ಸಮಃ	೨೫.	ವೃದ್ಧತರಃ	ವೃದ್ಧಂ	ವೃದ್ಧತರಃ
೨.	ಸಮಃ	ವೃದ್ಧಂ	ಸಮಃ				
೩.	ಸಮಃ	ಸಮಃ	ವೃದ್ಧಃ	೨೬.	ಕ್ಷೀಣಃ	ಕ್ಷೀಣಂ	ಸಮಃ
೪.	ವೃದ್ಧಃ	ವೃದ್ಧಂ	ಸಮಃ	೨೭.	ಕ್ಷೀಣಃ	ಸಮಃ	ಕ್ಷೀಣಃ
೫.	ವೃದ್ಧಃ	ಸಮಂ	ವೃದ್ಧಃ	೨೮.	ಸಮಃ	ಕ್ಷೀಣಂ	ಕ್ಷೀಣಃ
೬.	ಸಮಃ	ವೃದ್ಧಂ	ವೃದ್ಧಃ	೨೯.	ಕ್ಷೀಣತರಃ	ಕ್ಷೀಣಂ	ಸಮಃ
೭.	ವೃದ್ಧತರಃ	ವೃದ್ಧಂ	ಸಮಃ	೩೦.	ಕ್ಷೀಣಃ	ಕ್ಷೀಣತರಂ	ಸಮಃ
೮.	ವೃದ್ಧತರಃ	ಸಮಂ	ವೃದ್ಧಂ	೩೧.	ಕ್ಷೀಣತರಃ	ಸಮಂ	ಕ್ಷೀಣಃ
೯.	ಸಮಃ	ವೃದ್ಧಂ	ವೃದ್ಧತರಃ	೩೨.	ಕ್ಷೀಣಃ	ಸಮಂ	ಕ್ಷೀಣತರಃ
೧೦.	ಸಮಃ	ವೃದ್ಧತರಃ	ವೃದ್ಧಃ	೩೩.	ಸಮಃ	ಕ್ಷೀಣತರಂ	ಕ್ಷೀಣಃ
೧೧.	ವೃದ್ಧಃ	ವೃದ್ಧತರಂ	ಸಮಃ	೩೪.	ಸಮಃ	ಕ್ಷೀಣಂ	ಕ್ಷೀಣ
೧೨.	ವೃದ್ಧಃ	ಸಮಂ	ವೃದ್ಧತರಃ	೩೫.	ಕ್ಷೀಣಃ	ಕ್ಷೀಣತರಂ	ಕ್ಷೀಣತಮಃ
೧೩.	ವೃದ್ಧಃ	ವೃದ್ಧತರಂ	ವೃದ್ಧತಮಃ	೩೬.	ಕ್ಷೀಣಃ	ಕ್ಷೀಣತಮಂ	ಕ್ಷೀಣತರಃ
೧೪.	ವೃದ್ಧತರಃ	ವೃದ್ಧಂ	ವೃದ್ಧತಮಃ	೩೭.	ಕ್ಷೀಣತರಃ	ಕ್ಷೀಣಂ	ಕ್ಷೀಣತಮಃ
೧೫.	ವೃದ್ಧತಮಃ	ವೃದ್ಧತರಂ	ವೃದ್ಧಃ	೩೮.	ಕ್ಷೀಣತರಃ	ಕ್ಷೀಣತಮಂ	ಕ್ಷೀಣಃ
೧೬.	ವೃದ್ಧಃ	ವೃದ್ಧತಮಂ	ವೃದ್ಧ	೩೯.	ಕ್ಷೀಣತಮಃ	ಕ್ಷೀಣತರಂ	ಕ್ಷೀಣಃ
೧೭.	ವೃದ್ಧತರಃ	ವೃದ್ಧತಮಂ	ವೃದ್ಧಃ	೪೦.	ಕ್ಷೀಣತಮಃ	ಕ್ಷೀಣಂ	ಕ್ಷೀಣಃ ತರ
೧೮.	ವೃದ್ಧತಮಃ	ವೃದ್ಧಂ	ವೃದ್ಧತರಃ	೪೧.	ಕ್ಷೀಣಃ	ಸಮಂ	ಸಮ
೧೯.	ವೃದ್ಧಃ	ವೃದ್ಧಂ	ವೃದ್ಧಃ	೪೨.	ಸಮಃ	ಕ್ಷೀಣಂ	ಸಮಃ
೨೦.	ವೃದ್ಧತರಃ	ವೃದ್ಧಂ	ವೃದ್ಧಃ	೪೩.	ಸಮಃ	ಸಮಂ	ಕ್ಷೀಣಃ
೨೧.	ವೃದ್ಧಃ	ವೃದ್ಧತರಂ	ವೃದ್ಧಃ	೪೪.	ಕ್ಷೀಣಃ	ಸಮಂ	ಕ್ಷೀಣತರಃ
೨೨.	ವೃದ್ಧಃ	ವೃದ್ಧಂ	ವೃದ್ಧಃ				
೨೩.	ವೃದ್ಧತರಃ	ವೃದ್ಧತರಂ	ವೃದ್ಧಃ	೪೫.	ಕ್ಷೀಣಃ	ಕ್ಷೀಣಂ	ಕ್ಷೀಣಃ
೨೪.	ವೃದ್ಧಃ	ವೃದ್ಧತರಂ	ವೃದ್ಧತರಃ	೪೬.	ಕ್ಷೀಣತರಃ	ಕ್ಷೀಣಂ	ಕ್ಷೀಣಃ
				೪೭.	ಕ್ಷೀಣಃ	ಕ್ಷೀಣತರಂ	ಕ್ಷೀಣಃ

	ವಾತಃ	ಪಿತ್ತಂ	ಕಫಃ
೪೮.	ಕ್ಷೀಣಃ	ಕ್ಷೀಣಂ	ಕ್ಷೀಣತರಃ
೪೯.	ಕ್ಷೀಣತರಃ	ಕ್ಷೀಣತರಂ	ಕ್ಷೀಣಃ
೫೦.	ಕ್ಷೀಣಃ	ಕ್ಷೀಣತರಂ	ಕ್ಷೀಣತರಃ
೫೧.	ಕ್ಷೀಣತರಃ	ಕ್ಷೀಣಂ	ಕ್ಷೀಣ
೫೨.	ಕ್ಷೀಣಃ	ವೃದ್ಧಂ	ಸಮಃ
೫೩.	ವೃದ್ಧಃ	ಸಮಂ	ಕ್ಷೀಣಃ
೫೪.	ಸಮಃ	ಪಿತ್ತಂ	ಕಫಂ

	ವಾತಃ	ಪಿತ್ತಂ	ಕಫಃ
೫೫.	ವೃದ್ಧಃ	ಕ್ಷೀಣಂ	ಸಮಃ
೫೬.	ಸಮಃ	ವೃದ್ಧಂ	ಕ್ಷೀಣಃ
೫೭.	ಕ್ಷೀಣಃ	ಸಮಂ	ವೃದ್ಧಂ
೫೮.	ವೃದ್ಧಃ	ವೃದ್ಧಂ	ಕ್ಷೀಣಃ
೫೯.	ಕ್ಷೀಣಃ	ವೃದ್ಧಂ	ವೃದ್ಧಃ
೬೦.	ಕ್ಷೀಣಃ	ಕ್ಷೀಣಂ	ವೃದ್ಧಃ
೬೧.	ವೃದ್ಧಃ	ಕ್ಷೀಣಂ	ಕ್ಷೀಣಃ
೬೨.	ಕ್ಷೀಣಃ	ಕ್ಷೀಣಂ	ವೃದ್ಧಃ
೬೩.	ಸಮಃ	ಸಮಂ	ಸಮಃ

ಇತಿ ಶ್ರೀ ಸುಶ್ರುತಸಂಹಿತಾಯಾಂ ಉತ್ತರತನ್ತ್ರೇ ದೋಷಭೇದವಿಕಲ್ಪ ನಾಮಕ
ಷಟ್‌ಷಷ್ಟಿತಮೋಽಧ್ಯಾಯಸ್ಯ ಶ್ರೀ ಭಟ್ಟಾಚಾರ್ಯೋಪನಾಮಕ
ಶ್ರೀ ಲಕ್ಷ್ಮೀನೃಸಿಂಹಶರ್ಮ ಕೃತ ಕರ್ಣಾಟಕ ಭಾಷಾವಿವೃತಿಃ

ಇತಿ ಶ್ರೀ ಸೌಶ್ರುತೇ ಆಯುರ್ವೇದಶಾಸ್ತ್ರೇ ಸಮಾಪ್ತಮಿದಮುತ್ತರತನ್ತ್ರಮ್
ಶ್ರೀಮತ್ತ್ರಿಮುಕೂಟಪುರವಾಸ್ತವ್ಯದೀಕ್ಷಿತ ನಂಜುಂಡಭಟ್ಟ ಪುತ್ರ
ಶ್ರೀ ಭಟ್ಟಾಚಾರ್ಯೋಪನಾಮಕ ಶ್ರೀ ಲಕ್ಷ್ಮೀನೃಸಿಂಹಶರ್ಮ
ಕೃತ ಕರ್ಣಾಟಕಭಾಷಾವಿವೃತಿಃ ಪರಿಸಮಾಪ್ತಿಮಗಮತ್.

ಸಂಪೂರ್ಣಮ್

Sushruta Samhita, Vol II. Ed. by Pandit N.L. Bhattacharya

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೨